॥ ಶ್ರೀಹರಿಃ ॥

ಶ್ರೀಮದ್ಭಾಗವತದ ವಿಷಯಾನುಕ್ರಮಣಿಕೆ

ಪ್ರಥಮ ಖಂಡ

ಅಧ್ಯಾಯ | ವಿಷಯ | ಪುಟ

ಸಪ್ತಮ ಸ್ಕಂಧ

ಅಷ್ಟಮ ಸ್ಕಂಧ

॥ ಓಂ ನಮೋ ಭಗವತೇ ವಾಸುದೇವಾಯ ॥

ಶ್ರೀಮದ್ಭಾಗವತ ಪೂಜಾವಿಧಿ - ವಿನಿಯೋಗ, ನ್ಯಾಸ - ಧ್ಯಾನ

ಪ್ರಾತಃಕಾಲ ಸ್ನಾನ - ಸಂಧ್ಯಾವಂದನಾದಿ ನಿತ್ಯಕರ್ಮಗಳನ್ನು ಮುಗಿಸಿಕೊಂಡು ಶ್ರೀ ಭಗವಂತನಿಗೆ ನಮಸ್ಕಾರ ಮಾಡಿ "ಓಂ ಭದ್ರಂ ಕರ್ಣೇಭಿಃ ಶೃಣುಯಾಮ ದೇವಾಃ" ಇತ್ಯಾದಿ ಶಾಂತಿ ಮಂತ್ರಗಳನ್ನು ಪಠಿಸಬೇಕು. ಅನಂತರ ಶ್ರೀಕೃಷ್ಣ ಪರಮಾತ್ಮನಿಗೂ, ಶ್ರೀ ವೇದವ್ಯಾಸರಿಗೂ, ಶ್ರೀಶುಕ ಮಹರ್ಷಿಗಳಿಗೂ, ಶ್ರೀಮದ್ಭಾಗವತ ಗ್ರಂಥಕ್ಕೂ ಧ್ಯಾನ - ಆವಾಹನಾದಿ ಷೋಡಶೋಪಚಾರ ಪೂಜೆಯನ್ನು ಸಮರ್ಪಿಸಬೇಕು. ಶ್ರೀಪುರುಷಸೂಕ್ತದ ಋಕ್ಕುಗಳಿಂದ ಪೂಜೆಯನ್ನು ಸಲ್ಲಿಸ ಬೇಕು.

ಅದಕ್ಕಾಗಿ ಪವಿತ್ರಪಾಣಿಯಾಗಿ ಪ್ರಾಣಾಯಾಮ ಮಾಡಿ ಸಂಕಲ್ಪವನ್ನು ಹೇಳಬೇಕು. "ಹರಿಃ ಓಂ ತತ್ಸತ್ ಅದ್ಯ ಬ್ರಹ್ಮಣಃ ದ್ವಿತೀಯ ಪರಾರ್ಧೇ ಅಮುಕ ಸಂವತ್ಸರೇ ಆಯನೇ ಋತೌ ಮಾಸೇ ಪಕ್ಷೇ ಶುಭತಿಥೌ ವಾಸರಯುಕ್ತಾಯಾಂ ನಕ್ಷತ್ರ ಯುಕ್ತಾಯಾಂ ಶುಭ ತಿಥೌ ಗೋತ್ರಸ್ಯ ಶರ್ಮಣಃ/ವರ್ಮಣಃ / ಗುಪ್ತಸ್ಯ / ಮಮ ಸಕುಟುಂಬಸ್ಯ ಸಪರಿವಾರಸ್ಯ ಶ್ರೀಗೋವರ್ಧನಧಾರಣಚರಣಾರವಿಂದಪ್ರಸಾದಾತ್ ಸರ್ವ ಸಮೃದ್ಧ್ಯಾಪ್ತ್ಯರ್ಥಂ ಶ್ರೀಭಗವದನುಗ್ರಹ ಪೂರ್ವಕ ಭಾಗವತೀಯ ಪ್ರೇಮೋಪ ಲಬ್ಧಯೇ ಚ ಶ್ರೀಭಾಗವನ್ನಾಮಾತ್ಮಕ ಭಗವತ್ಸ್ವರೂಪ ಶ್ರೀಭಾಗವತಸ್ಯ ಪಾಠೇ ಅಧಿಕಾರ ಸಿದ್ಧ್ಯರ್ಥಂ ಶ್ರೀಕೃಷ್ಣ ಪರಮಾತ್ಮನಃ ಶ್ರೀವ್ಯಾಸ ಮಹರ್ಷೇಃ ಶ್ರೀಶುಕಮಹರ್ಷೇಃ ಶ್ರೀಭಗವನ್ನಾಮಾತ್ಮಕ ಸ್ವರೂಪ ಶ್ರೀಭಾಗವತಸ್ಯ ಪುರುಷಸೂಕ್ತ ವಿಧಾನೇನ ಪೂಜಾಂ ಕರಿಷ್ಯೇ" ಇತ್ಯಾದಿಯಾಗಿ ಸಂಕಲ್ಪ ಮಾಡುವುದು.

ಓಂ ತದಸ್ತು ಮಿತ್ರಾ ವರುಣಾ ತದಗ್ನೇ
ಶಂಯೋಽಸ್ಮಭ್ಯಮಿದಮಸ್ತು ಶಸ್ತಮ್ ।
ಅಶೀಮಹಿ ಗಾಧಮುತ ಪ್ರತಿಷ್ಠಾಂ
ನಮೋ ದಿವೇ ಬೃಹತೇ ಸಾಧನಾಯ ॥

ಎಂಬ ಮಂತ್ರದಿಂದ ಪೂಜ್ಯ ವಸ್ತುವನ್ನು ದಿವ್ಯ ಪೀಠದ ಮೇಲೆ ಪ್ರತಿಷ್ಠೆ ಮಾಡುವುದು. "ಓಂ ಸಹಸ್ರಶೀರ್ಷಾ ಪುರುಷಃ... ದ್ದಶಾಂಗುಲಮ್" ಶ್ರೀಕೃಷ್ಣಪರಮಾತ್ಮನೇ ಶ್ರೀವೇದವ್ಯಾಸ ಶ್ರೀಶುಕಮಹರ್ಷಯೇ ಶ್ರೀಭಗವನ್ನಾಮಾತ್ಮಕ ಸ್ವರೂಪಿಣೇ ಶ್ರೀಮದ್ಭಾಗವತಾಯ ನಮಃ ಆವಾಹಯಾಮಿ" ಇತ್ಯಾದಿ ವಿಧಾನಗಳಿಂದ ಪುರುಷಸೂಕ್ತದ ಹದಿನಾರು ಅಥವಾ ಹದಿನೆಂಟು ಋಕ್ಕುಗಳಿಂದ ಶ್ರೀಕೃಷ್ಣ ಪರಮಾತ್ಮನಿಗೂ, ಶ್ರೀವೇದವ್ಯಾಸಗುರುದೇವರಿಗೂ, ಶ್ರೀಕೃಷ್ಣಮಹಾಮುನಿಗಳಿಗೂ, ಶ್ರೀಮದ್ಭಾಗವತಕ್ಕೂ ಪೂಜೆಯನ್ನು ಭಕ್ತಿಯಿಂದ ಸಮರ್ಪಿಸಬೇಕು.

ಪ್ರಾರ್ಥನೆ :

ವಂದೇ ಶ್ರೀಕೃಷ್ಣದೇವಂ ಮುರನರಕಭಿದಂ ವೇದವೇದಾಂತವೇದ್ಯಂ
ಲೋಕೇ ಭಕ್ತಿಪ್ರಸಿದ್ಧ್ಯೈ ಯದುಕುಲಜಲಧೌ ಪ್ರಾದುರಾಸೀದಪಾರೇ ।
ಯಸ್ಯಾಸೀದ್ರೂಪಮೇವಂ ತ್ರಿಭುವನತರಣೇ ಭಕ್ತಿವಚ್ಚ ಸ್ವತಂತ್ರಂ
ಶಾಸ್ತ್ರಂ ರೂಪಂ ಚ ಲೋಕೇ ಪ್ರಕಟಯತಿ ಮುದಾ
ಯಃ ಸ ನೋ ಭೂತಿಹೇತುಃ ॥

ಶ್ರೀ ಕೃಷ್ಣಪರಮಾತ್ಮನಿಗೆ ಪ್ರಣಾಮಗಳು. ಮುರ - ನರಕಾಸುರರನ್ನು ಸಂಹರಿಸಿದವನೂ, ವೇದ-ವೇದಾಂತಗಳಿಂದಲೇ ತಿಳಿಯಲ್ಪಡಲು ಯೋಗ್ಯನಾದವನೂ, ಭಕ್ತಿಯಿಂದಲೇ ಹೊಂದಲ್ಪಡುವವನೂ, ಅಪಾರವಾದ ಯದುಕುಲ ಮಹಾಂಬುಧಿಯಲ್ಲಿ ಈ ಲೋಕದಲ್ಲಿ ಪ್ರಕಟಗೊಂಡವನೂ ಆದ ಸ್ವಾಮಿ ಶ್ರೀಕೃಷ್ಣನಿಗೆ ನಮಸ್ಕಾರಗಳು. ಈ ಲೋಕದಲ್ಲಿ ತನ್ನ ಸ್ವರೂಪವನ್ನು ಮತ್ತು ಶಾಸ್ತ್ರವನ್ನೂ ಪ್ರಕಟಪಡಿಸುವ ಮತ್ತು ಮೂರುಲೋಕಗಳ ಜೀವಗಳನ್ನು ದಾಟಿಸಲು ಭಕ್ತಿಯಂತೆಯೇ ಸ್ವತಂತ್ರವಾದ ನೌಕೆಯಂತಿರುವ ಆ ಶ್ರೀಭಗವಂತನು ನಮ್ಮೆಲ್ಲರಿಗೂ ಮಂಗಳವನ್ನುಂಟುಮಾಡಲಿ.

ನಮಃ ಕೃಷ್ಣಪದಾಬ್ಜಾಯ ಭಕ್ತಾಭೀಷ್ಟಪ್ರದಾಯಿನೇ ।
ಆರಕ್ತಂ ರೋಚಯೇಚ್ಛಶ್ವನ್ ಮಾಮಕೇ ಹೃದಯಾಂಬುಜೇ ॥

ಕೆಂದಾವರೆಯಂತೆ ಕಂಗೊಳಿಸುತ್ತಾ ನನ್ನ ಹೃದಯ ಕಮಲದಲ್ಲಿ ಸದಾ ಪ್ರಕಾಶವನ್ನು ಚೆಲ್ಲುತ್ತಿರುವ ಮತ್ತು ಭಕ್ತ ಜನರ ಅಭೀಷ್ಟಗಳನ್ನು ಈಡೇರಿಸುವ ಶ್ರೀಕೃಷ್ಣಪರಮಾತ್ಮನ ಪೊನ್ನಡಿಗಳಿಗೆ ಪುನಃ ಪುನಃ ಪ್ರಣಾಮ ಮಾಡುತ್ತೇನೆ.

ಶ್ರೀಭಾಗವತರೂಪಂ ತತ್ಪೂಜಯೇದ್ಭಕ್ತಿಪೂರ್ವಕಮ್ ।
ಅರ್ಚಕಾಯಾಖಿಲಾನ್ಕಾಮಾನ್ ಪ್ರಯಚ್ಛತಿ ನ ಸಂಶಯಃ ॥

ಶ್ರೀಮದ್ಭಾಗವತವು ಆ ಶ್ರೀಭಗವತ್‌ಸ್ವರೂಪವೇ ಆಗಿದೆ. ಅದನ್ನು ಭಕ್ತಿಪೂರ್ವಕವಾಗಿ ಭಜಿಸಬೇಕು. ಅದು ಪೂಜಕರ ಎಲ್ಲ ಇಷ್ಟಾರ್ಥಗಳನ್ನೂ ಈಡೇರಿಸುತ್ತದೆ ಎಂಬುದರಲ್ಲಿ ಸಂಶಯವೇ ಇಲ್ಲ.

ಋಷಿ - ದೇವತೆ - ಛಂದಸ್ಸುಗಳು :

ಓಂ ಅಸ್ಯ ಶ್ರೀಮದ್ಭಾಗವತಾಖ್ಯಸ್ತೋತ್ರಮಹಾಮಂತ್ರಸ್ಯ । ಶ್ರೀನಾರದೋ ಭಾಗವಾನೃಷಿಃ । ಬೃಹತೀ ಛಂದಃ । ಶ್ರೀಕೃಷ್ಣಪರಮಾತ್ಮಾ ದೇವತಾ । ಓಂ ಬ್ರಹ್ಮ ಬೀಜಂ । ಭಕ್ತಿಃ ಶಕ್ತಿಃ । ಜ್ಞಾನ ವೈರಾಗ್ಯೇ ಕೀಲಕಂ । ಮಮ ಶ್ರೀಮದ್ಭಗವತ್ಪ್ರಸಾದಸಿದ್ಧ್ಯರ್ಥೇ ಪಾಠೇ ವಿನಿಯೋಗಃ ॥

ಋಷ್ಯಾದಿನ್ಯಾಸಗಳು :

ಓಂ ನಾರದ ಮಹರ್ಷಯೇ ನಮಃ – ಶಿರಸಿ । ಓಂ ಬೃಹತೀ ಛಂದಸೇ ನಮಃ–ಮುಖೇ । ಓಂ ಶ್ರೀಕೃಷ್ಣಪರಮಾತ್ಮ ದೇವತಾಯೈ ನಮಃ – ಹೃದಯೇ । ಓಂ ಬ್ರಹ್ಮ ಬೀಜಾಯ ನಮಃ ಗುಹ್ಯೇ । ಓಂ ಭಕ್ತಿಶಕ್ತಯೇ ನಮಃ – ಪಾದಯೋಃ । ಓಂ ಜ್ಞಾನ ವೈರಾಗ್ಯಕೀಲಕಾಭ್ಯಾಂ ನಮಃ – ನಾಭೌ । ಓಂ ವಿನಿಯೋಗಾಯ ನಮಃ – ಸರ್ವಾಂಗೇ ॥

ಕರನ್ಯಾಸ :

ಓಂ ನಮೋ ಭಗವತೇ ವಾಸುದೇವಾಯ

ಓಂ ಓಂ ಓಂ ನಮೋ ದಕ್ಷಿಣತರ್ಜನ್ಯಾಂ । ಓಂ ನಂ ಓಂ ನಮೋ ದಕ್ಷಿಣಮಧ್ಯಮಾಯಾಂ । ಓಂ ಮೋಂ ಓಂ ನಮೋ ದಕ್ಷಿಣಾನಾಮಿಕಾಯಾಂ । ಓಂ ಭಂ ಓಂ ನಮೋ ದಕ್ಷಿಣಕನಿಷ್ಠಿಕಾಯಾಂ । ಓಂ ಗಂ ಓಂ ನಮೋ ವಾಮಕನಿಷ್ಠಿಕಾಯಾಂ । ಓಂ ವಂ ಓಂ ನಮೋ ವಾಮನಾಮಿಕಾಯಾಂ । ಓಂ ತೇಂ ಓಂ ನಮೋ ವಾಮಮಧ್ಯಮಾಯಾಮ್ । ಓಂ ವಾಂ ಓಂ ನಮೋ ವಾಮತರ್ಜನ್ಯಾಮ್ । ಓಂ ಸುಂ ಓಂ ನಮಃ ಓಂ ದೇಂ ಓಂ ನಮೋ ದಕ್ಷಿಣಾಂಗುಷ್ಠ ಪರ್ವಣೋಃ । ಓಂ ವಾಂ ಓಂ ನಮಃ ಓಂ ಯಂ ಓಂ ನಮೋ ವಾಮಾಂಗುಷ್ಠ ಪರ್ವಣೋಃ ।

ಎಂದು ಕರದ ಆಯಾ ನಿರ್ದಿಷ್ಟ ಭಾಗಗಳಲ್ಲಿ ದ್ವಾದಶಾಕ್ಷರ ಮಹಾ ಮಂತ್ರದ ಅವಯವಗಳನ್ನು ನ್ಯಾಸ ಮಾಡಬೇಕು.

ಅಂಗನ್ಯಾಸ :

ಓಂ ನಮೋ ನಮೋ ಹೃದಯಾಯ ನಮಃ । ಓಂ ಭಗವತೇ ನಮಃ ಶಿರಸೇ ಸ್ವಾಹಾ । ಓಂ ವಾಸುದೇವಾಯ ನಮಃ ಶಿಖಾಯೈ ವಷಟ್ । ಓಂ ನಮೋ ನಮಃ ಕವಚಾಯ ಹುಂ । ಓಂ ಭಗವತೇ ನಮಃ ನೇತ್ರತ್ರಯಾಯ ವೌಷಟ್ । ಓಂ ವಾಸುದೇವಾಯ ನಮಃ ಅಸ್ತ್ರಾಯ ಫಟ್ ॥

ಹೀಗೆ ಹೃದಯಾದಿ ಸ್ಥಾನಗಳಲ್ಲಿ ನ್ಯಾಸಮಾಡಬೇಕು.

ಧ್ಯಾನಂ :

ಕಿರೀಟಕೇಯೂರಮಹಾರ್ಹನಿಷ್ಕೈ –
ರ್ಮಣ್ಯುತ್ತಮಾಲಂಕೃತಸರ್ವಗಾತ್ರಮ್ ।
ಪೀತಾಂಬರಂ ಕಾಂಚನಚಿತ್ರನದ್ಧ –
ಮಾಲಾಧರಂ ಕೇಶವಮಭ್ಯುಪೈಮಿ ॥

ಮಸ್ತಕದಲ್ಲಿ ಕಿರೀಟವನ್ನೂ, ತೋಳುಗಳಲ್ಲಿ ತೋಳ್ಬಳೆಗಳನ್ನೂ ಕೊರಳಿನಲ್ಲಿ ಬಹುಮೂಲ್ಯ ಹಾರಗಳನ್ನೂ, ಎಲ್ಲ ಅಂಗಗಳಲ್ಲಿಯೂ ಮಣಿಗಳ ಸುಂದರ ಆಭರಣಗಳನ್ನೂ ಧರಿಸಿ, ಕಂಗೊಳಿಸುತ್ತಿರುವ, ಪೀತಾಂಬರಧಾರಿಯೂ ವನಮಾಲಾವಿಭೂಷಿತನೂ ಆದ ಶ್ರೀಕೇಶವ ಸ್ವಾಮಿಯನ್ನು ಧ್ಯಾನ ಸಮಾಧಿಯಿಂದ ಹೊಂದುವೆನು.

ಶ್ರೀಮದ್ಭಾಗವತ ಸಪ್ತಾಹ ಆಚಾರಣೆಗೆ ಅವಶ್ಯಕವಾದ ಕೆಲವು ಮುಖ್ಯ ವಿಧಿಗಳು :

ಮುಹೂರ್ತ ವಿಚಾರ : ವಿದ್ವಾಂಸರಾದ ಜ್ಯೋತಿಷಿಗಳನ್ನು ಕರೆಸಿ, ಅವರೊಡನೆ ವಿಚಾರ ಮಾಡಿ ಸಪ್ತಾಹಕ್ಕೆ ಬೇಕಾಗುವ ಶುಭ ಮುಹೂರ್ತವನ್ನು ನಿಶ್ಚಯಿಸಬೇಕು. ನಕ್ಷತ್ರಗಳಲ್ಲಿ ಹಸ್ತ, ಚಿತ್ತೆ, ಸ್ವಾತಿ, ವಿಶಾಖೆ, ಅನುರಾಧೆ, ಪುನರ್ವಸು, ಪುಷ್ಯ, ರೇವತಿ, ಅಶ್ವಿನಿ, ಮೃಗಶಿರೆ, ಶ್ರವಣ, ಧನಿಷ್ಠ ಮತ್ತು ಪೂರ್ವಾಭಾದ್ರ ಇವು ಶ್ರೇಷ್ಠ ತಿಥಿಗಳಲ್ಲಿ ದ್ವಿತೀಯೇ, ತೃತೀಯೇ, ಪಂಚಮೀ, ಷಷ್ಠೀ, ದಶಮೀ, ಏಕಾದಶೀ ಮತ್ತು ದ್ವಾದಶೀ – ಇವು ಪ್ರಶಸ್ತ. ಸೋಮ, ಬುಧ, ಗುರು ಮತ್ತು ಶುಕ್ರ – ಇವು ಸರ್ವೋತ್ಕೃಷ್ಟವಾದ ವಾರಗಳು. ತಿಥಿ–ವಾರ–ನಕ್ಷತ್ರಗಳನ್ನು ವಿಚಾರ ಮಾಡುವುದರ ಜೊತೆಗೆ ಗುರು–ಶುಕ್ರಗ್ರಹಗಳು ಅಸ್ತ, ಬಾಲ ಅಥವಾ ವೃದ್ಧ ಸ್ಥಿತಿಯಲ್ಲಿ ಇವೆಯೇ ಎಂಬುದನ್ನು ಗಮನಿಸಬೇಕು. ಆ ಗ್ರಹಾಸ್ತ ಮುಂತಾದವು ಇರಬಾರದು. ಭದ್ರಾದಿದೋಷಗಳೂ ಕಥಾರಂಭಕಾಲದಲ್ಲಿ ಇರಕೂಡದು. ಆ ದಿವಸ ವೃದ್ಧಿಯು ಜಾಗ್ರತವಾಗಿರಬೇಕು. ಪ್ರವಚನ ಕರ್ತೃ ಮತ್ತು ಪ್ರಧಾನ ಶ್ರೋತೃಗಳಿಗೆ ಚಂದ್ರಬಲ ಸರಿಯಾಗಿರಬೇಕು. ಲಗ್ನದಲ್ಲಿ ಶುಭಗ್ರಹಗಳ ಯೋಗ ಅಥವಾ ದೃಷ್ಟಿ ಇರಬೇಕು. ಶುಭಗ್ರಹಗಳ ಸ್ಥಿತಿಯು ಕೇಂದ್ರದಲ್ಲಿ ಅಥವಾ ತ್ರಿಕೋಣದಲ್ಲಿ ಇದ್ದರೆ ಉತ್ತಮ. ಆಷಾಢ, ಶ್ರಾವಣ, ಭಾದ್ರಪದ, ಆಶ್ವಯುಜ, ಕಾರ್ತಿಕ ಮತ್ತು ಮಾರ್ಗಶಿರ–ಇಷ್ಟು ಮಾಸಗಳೂ ಕಥಾರಂಭಕ್ಕೆ ಪ್ರಶಸ್ತ. ಹಲವು ವಿದ್ವಾಂಸರ ಅಭಿಪ್ರಾಯದಲ್ಲಿ ಚೈತ್ರ ಮತ್ತು ಪೌಷವನ್ನು ಬಿಟ್ಟು ಉಳಿದ ಎಲ್ಲ ಮಾಸಗಳೂ ಕಥಾ ಪ್ರಾರಂಭಕ್ಕೆ ಆಗಬಹುದು.

ಯಾವ ಸ್ಥಾನಲ್ಲಿ ಕಥೆ ನಡೆಯಬೇಕು ?

ಶ್ರೀಮದ್ಭಾಗವತ ಸಪ್ತಾಹಕ್ಕೆ ಉತ್ತಮವೂ, ಪವಿತ್ರವೂ ಆದ ಸ್ಥಾನ ವ್ಯವಸ್ಥೆ ಅವಶ್ಯಕ. ಹೆಚ್ಚು ಜನರು ಸೌಕರ್ಯವಾಗಿ ಕುಳಿತುಕೊಳ್ಳಲು ಅನುಕೂಲವಾದ ಜಾಗದಲ್ಲಿ ಕಥೆಯನ್ನು ಏರ್ಪಡಿಸುವುದು ಉತ್ತಮ. ನದಿಯ ದಡ, ಉಪವನ, ದೇವಾಲಯ ಅಥವಾ ಸ್ವಗೃಹ – ಇವುಗಳೆಲ್ಲಾ ಸಪ್ತಾಹ ಕಥೆಗೆ ತಕ್ಕ ಸ್ಥಾನಗಳು. ಜಾಗವನ್ನು ಗುಡಿಸಿ, ಸಾರಿಸಿ ಸ್ವಚ್ಛವಾಗಿರಿಸಬೇಕು. ನೆಲವನ್ನು ಗೋಮಯ ಮತ್ತು ಹಳದಿಮಣ್ಣಿನಿಂದ ಸಾರಿಸಿ ಲೇಪಿಸಿರಬೇಕು ಅಥವಾ ದೃಢವಾದ ಅಂಗಳವಾಗಿದ್ದರೆ ಅದನ್ನು ಚೆನ್ನಾಗಿ ತೊಳೆಯಿಸಿ ಪವಿತ್ರವೂ ಸುಂದರವೂ ಆದ ಆಸನಗಳನ್ನು ಅಲ್ಲಿ ಹಾಕಬೇಕು. ಮೇಲುಗಡೆ ಚಪ್ಪರಗಳನ್ನು ಕಟ್ಟಬೇಕು. ಆದರೆ ಚಪ್ಪರ–ಛಾವಣಿ ಮುಂತಾದ ಯಾವುದೇ ಅಲಂಕಾರಕ್ಕಾಗಲೀ, ಉಪಕರಣಗಳಿಗಾಗಲೀ ನೀಲಿ ಬಣ್ಣದ ವಸ್ತುವನ್ನು ಬಳಸಬಾರದು. ಯಜಮಾನನ ಕೈಯ್ಯ ಹದಿನಾರು ಹಸ್ತಗಳಷ್ಟು ಉದ್ದವಾಗಿ ಮತ್ತು ಅಷ್ಟೇ ಅಗಲವಾಗಿರುವಂತೆ ಕಥಾಮಂಟಪವನ್ನು ನಿರ್ಮಿಸಬೇಕು ಅದನ್ನು ಬಾಳೆಯ ಕಂಬಗಳಿಂದ ಸಿಂಗರಿಸಬೇಕು. ಹಸಿರಾಗಿರುವ ಬಿದಿರಿನ ಕಂಬಗಳನ್ನು ನೆಡಬೇಕು. ಹೊಸ ತಳಿರು ತೋರಣಗಳಿಂದಲೂ, ಪುಷ್ಪಮಾಲೆಗಳಿಂದಲೂ, ಧ್ವಜಪತಾಕೆಗಳಿಂದಲೂ ಮಂಟಪವನ್ನು ಚೆನ್ನಾಗಿ

॥ ಓಂ ನಮೋ ಭಗವತೇ ವಾಸುದೇವಾಯ ॥

ಶ್ರೀಮದ್ಭಾಗವತಮಾಹಾತ್ಮ್ಯಮ್

ಕೃಷ್ಣಂ ನಾರಾಯಣಂ ವಂದೇ ಕೃಷ್ಣಂ ವಂದೇ ವ್ರಜಪ್ರಿಯಮ್ ।
ಕೃಷ್ಣಂ ದ್ವೈಪಾಯನಂ ವಂದೇ ಕೃಷ್ಣಂ ವಂದೇ ಪೃಥಾಸುತಮ್ ॥

ಮೊದಲನೆಯ ಅಧ್ಯಾಯ

ಭಕ್ತಿದೇವಿಯೊಂದಿಗೆ ದೇವರ್ಷಿ ನಾರದರ ಭೇಟಿ

ಸಚ್ಚಿದಾನಂದರೂಪಾಯ ವಿಶ್ವೋತ್ಪತ್ತ್ಯಾದಿಹೇತವೇ ।
ತಾಪತ್ರಯವಿನಾಶಾಯ ಶ್ರೀಕೃಷ್ಣಾಯ ವಯಂ ನುಮಃ ॥ ೧ ॥

ಯಂ ಪ್ರವ್ರಜಂತಮನುಪೇತಮಪೇತಕೃತ್ಯಂ
ದ್ವೈಪಾಯನೋ ವಿರಹಕಾತರ ಆಜುಹಾವ ।
ಪುತ್ರೇತಿ ತನ್ಮಯತಯಾ ತರವೋಽಭಿನೇದು-
ಸ್ತಂ ಸರ್ವಭೂತಹೃದಯಂ ಮುನಿಮಾನತೋಽಸ್ಮಿ ॥ ೨ ॥

ನೈಮಿಷೇ ಸೂತಮಾಸೀನಮಭಿವಾದ್ಯ ಮಹಾಮತಿಮ್ ।
ಕಥಾಮೃತರಸಾಸ್ವಾದಕುಶಲಃ ಶೌನಕೋಽಬ್ರವೀತ್ ॥ ೩ ॥

ಶೌನಕ ಉವಾಚ

ಅಜ್ಞಾನಧ್ವಾಂತವಿಧ್ವಂಸಕೋಟಿಸೂರ್ಯಸಮಪ್ರಭ ।
ಸೂತಾಖ್ಯಾಹಿ ಕಥಾಸಾರಂ ಮಮ ಕರ್ಣರಸಾಯನಮ್ ॥ ೪ ॥

ಭಕ್ತಿಜ್ಞಾನವಿರಾಗಾಪ್ತೋ ವಿವೇಕೋ ವರ್ಧತೇ ಮಹಾನ್ ।
ಮಾಯಾಮೋಹನಿರಾಸಶ್ಚ ವೈಷ್ಣವೈಃ ಕ್ರಿಯತೇ ಕಥಮ್ ॥ ೫ ॥

ಇಹ ಘೋರೇ ಕಲೌ ಪ್ರಾಯೋ ಜೀವಶ್ಚಾಸುರತಾಂ ಗತಃ ।
ಕ್ಲೇಶಾಕ್ರಾಂತಸ್ಯ ತಸ್ಯೈವ ಶೋಧನೇ ಕಿಂ ಪರಾಯಣಮ್ ॥ ೬ ॥

ಶ್ರೇಯಸಾಂ ಯದ್ಭವೇಚ್ಛ್ರೇಯಃ ಪಾವನಾನಾಂ ಚ ಪಾವನಮ್ ।
ಕೃಷ್ಣಪ್ರಾಪ್ತಿಕರಂ ಶಶ್ವತ್ಸಾಧನಂ ತದ್ವದಾಧುನಾ ॥ ೭ ॥

ಸಚ್ಚಿದಾನಂದಸ್ವರೂಪನಾದ ಭಗವಾನ್ ಶ್ರೀಕೃಷ್ಣನಿಗೆ ನಾವು ನಮಸ್ಕರಿಸುತ್ತೇವೆ. ಅವನು ಜಗತ್ತಿನ ಉತ್ಪತ್ತಿ, ಸ್ಥಿತಿ, ವಿನಾಶ ಮಾಡಲು ಹಾಗೂ ಆಧ್ಯಾತ್ಮಿಕ, ಆಧಿದೈವಿಕ, ಆಧಿಭೌತಿಕ ತ್ರಿತಾಪಗಳನ್ನು ನಾಶಮಾಡುವಂತಹವನಾಗಿದ್ದಾನೆ. ॥ ೧ ॥

ಶ್ರೀಶುಕಮಹಾಮುನಿಗಳು ಉಪನಯನವೇ ಆಗದಿದ್ದರೂ ನೈಸರ್ಗಿಕವಾಗಿಯೇ ಬ್ರಹ್ಮಜ್ಞಾನ ಸಂಪನ್ನರಾಗಿದ್ದರು. ಆದ್ದರಿಂದ ಅವರಿಗೆ ಏನನ್ನೂ ಮಾಡುವುದೂ ಬಾಕಿ ಇರಲಿಲ್ಲ. ಇಂತಹ ಬ್ರಹ್ಮನಿಷ್ಠ ಪುತ್ರನು ಮನೆ ಬಿಟ್ಟು ಹೊರಟು ಹೋಗುವಾಗ ಅವನ ತಂದೆ ವೇದವ್ಯಾಸರು ವ್ಯಾಕುಲರಾಗಿ ಮಗೂ! ಮಗನೇ! ಎಂದು ಕರೆಯ ತೊಡಗಿದರು. ಶುಕಮಹಾಮುನಿಗಳಿಗೆ ಸರ್ವಾತ್ಮಭಾವ ಉಂಟಾದ್ದರಿಂದ ಚರಾಚರಗಳೆಲ್ಲಾ ಏಕಾಕಾರವಾಗಿ ಹೋಗಿದ್ದರಿಂದ ಆ ಕಾಡಿನ ವೃಕ್ಷಗಳೇ ಅವರ ವತಿಯಿಂದ ಉತ್ತರಿಸತೊಡಗಿದವು. ಅಂತಹ ಸರ್ವಭೂತರ ಆತ್ಮ ಸ್ವರೂಪರಾದ ಶ್ರೀಶುಕಮುನಿಗಳಿಗೆ ಸಾಷ್ಟಾಂಗನಮಸ್ಕಾರ ಮಾಡುತ್ತೇನೆ. ॥ ೨ ॥

ಒಮ್ಮೆ ಭಗವತ್ಕಥಾಮೃತದ ರಸಾಸ್ವಾದದಲ್ಲಿ ಕುಶಲರಾದ ಮುನಿವರ ಶೌನಕರು ನೈಮಿಷಾರಣ್ಯ ಕ್ಷೇತ್ರದಲ್ಲಿ ವಿರಾಜಮಾನರಾದ ಮಹಾಮತಿವಂತ ಸೂತಪುರಾಣಿಕರಿಗೆ ನಮಸ್ಕರಿಸಿ, ಅವರಲ್ಲಿ ಕೇಳಿದರು ॥ ೩ ॥

ಶೌನಕರು ಹೇಳಿದರು – ಸೂತಪುರಾಣಿಕರೇ! ನೀವು ಅಜ್ಞಾನಾಂಧಕಾರವನ್ನುನಾಶಮಾಡುವುದರಲ್ಲಿ ಕೋಟಿಸೂರ್ಯರಿಗೆ ಸಮಾನರಾಗಿದ್ದೀರಿ. ನೀವು ನಮ್ಮಗಳಿಗೆ ಕರ್ಣರಸಾಯನವಾದ ಅಮೃತ ಸ್ವರೂಪವಾದ ಸಾರಗರ್ಭಿತವಾದ ಕಥೆಯನ್ನು ಹೇಳಿರಿ. ॥ ೪ ॥

ಭಕ್ತಿ, ಜ್ಞಾನ, ವೈರಾಗ್ಯಗಳಿಂದ ದೊರೆಯುವ ಮಹಾನ್ ವಿವೇಕದ ವೃದ್ಧಿ ಹೇಗಾದೀತು? ಹಾಗೂ ವೈಷ್ಣವರು ಈ ಮಾಯಾ ಮೋಹದಿಂದ ಹೇಗೆ ಪಾರಾಗಬಲ್ಲರು? ॥ ೫ ॥ ಈ ಘೋರವಾದ ಕಲಿಕಾಲದಲ್ಲಿ ಜೀವರು ಪ್ರಾಯಶಃ ಆಸುರೀ ಸ್ವಭಾವದವರಾಗಿದ್ದಾರೆ. ವಿವಿಧ ಕ್ಲೇಶಗಳಿಂದ ಆಕ್ರಾಂತರಾದ ಈ ಜೀವರನ್ನು ಶುದ್ಧ (ದೈವೀಶಕ್ತಿ ಸಂಪನ್ನ)ರಾಗಿಸುವ ಸರ್ವಶ್ರೇಷ್ಠವಾದ ಉಪಾಯವೇನು? ॥ ೬ ॥

ಎಲ್ಲಕ್ಕಿಂತ ಹೆಚ್ಚಾದ ಶ್ರೇಯಸ್ಕರವೂ, ಪವಿತ್ರವೂ ಮಾಡುವುದರಲ್ಲಿ ಪವಿತ್ರನಾಗಿರುವ, ಭಗವಾನ್ ಶ್ರೀಕೃಷ್ಣನ ಪ್ರಾಪ್ತಿಯಾಗಿಸುವ ಶಾಶ್ವತವಾದ ಸಾಧನೆಯನ್ನು ನೀವು ನಮಗೆ ತಿಳಿಸಿರಿ. ॥ ೭ ॥

ಚಿಂತಾಮಣಿರ್ಲೋಕಸುಖಂ ಸುರದ್ರುಃ ಸ್ವರ್ಗಸಂಪದಮ್ ।
ಪ್ರಯಚ್ಛತಿ ಗುರುಃ ಪ್ರೀತೋ ವೈಕುಂಠಂ ಯೋಗಿದುರ್ಲಭಮ್ ॥ ೮ ॥

ಸೂತ ಉವಾಚ

ಪ್ರೀತಿಃ ಶೌನಕ ಚಿತ್ತೇ ತೇ ಹ್ಯತೋ ವಚ್ಮಿ ವಿಚಾರ್ಯ ಚ ।
ಸರ್ವಸಿದ್ಧಾಂತ ನಿಷ್ಪನ್ನಂ ಸಂಸಾರಭಯನಾಶನಮ್ ॥ ೯ ॥

ಭಕ್ತ್ಯೋಘವರ್ಧನಂ ಯಚ್ಚ ಕೃಷ್ಣಸಂತೋಷಹೇತುಕಮ್ ।
ತದಹಂ ತೇಽಭಿಧಾಸ್ಯಾಮಿ ಸಾವಧಾನತಯಾ ಶೃಣು ॥ ೧೦ ॥

ಕಾಲವ್ಯಾಲಮುಖಗ್ರಾಸತ್ರಾಸನಿರ್ಣಾಶಹೇತವೇ ।
ಶ್ರೀಮದ್ಭಾಗವತಂ ಶಾಸ್ತ್ರಂ ಕಲೌ ಕೀರೇಣ ಭಾಷಿತಮ್ ॥ ೧೧ ॥

ಏತಸ್ಮಾದಪರಂ ಕಿಂಚಿನ್ಮನಃಶುದ್ಧ್ಯೈ ನ ವಿದ್ಯತೇ ।
ಜನ್ಮಾಂತರೇ ಭವೇತ್ ಪುಣ್ಯಂ ತದಾ ಭಾಗವತಂ ಲಭೇತ್ ॥ ೧೨ ॥

ಪರೀಕ್ಷಿತೇ ಕಥಾಂ ವಕ್ತುಂ ಸಭಾಯಾಂ ಸಂಸ್ಥಿತೇ ಶುಕೇ ।
ಸುಧಾಕುಂಭಂ ಗೃಹೀತ್ವೈವ ದೇವಾಸ್ತತ್ರ ಸಮಾಗಮನ್ ॥ ೧೩ ॥

ಶುಕಂ ನತ್ವಾವದನ್ ಸರ್ವೇ ಸ್ವಕಾರ್ಯಕುಶಲಾಃ ಸುರಾಃ ।
ಕಥಾಸುಧಾಂ ಪ್ರಯಚ್ಛಸ್ವ ಗೃಹೀತ್ವೈವ ಸುಧಾಮಿಮಾಮ್ ॥ ೧೪ ॥

ಏವಂ ವಿನಿಮಯೇ ಜಾತೇ ಸುಧಾ ರಾಜ್ಞಾ ಪ್ರಪೀಯತಾಮ್ ।
ಪ್ರಪಾಸ್ಯಾಮೋ ವಯಂ ಸರ್ವೇ ಶ್ರೀಮದ್ಭಾಗವತಾಮೃತಮ್ ॥ ೧೫ ॥

ಕ್ವ ಸುಧಾ ಕ್ವ ಕಥಾ ಲೋಕೇ ಕ್ವ ಕಾಚಃ ಕ್ವ ಮಣಿರ್ಮಹಾನ್ ।
ಬ್ರಹ್ಮರಾತೋ ವಿಚಾರ್ಯೈವಂ ತದಾ ದೇವಾಂಜಹಾಸಹ ॥ ೧೬ ॥

ಅಭಕ್ತಾಂಸ್ತಾಂಶ್ಚ ವಿಜ್ಞಾಯ ನ ದದೌ ಸ ಕಥಾಮೃತಮ್ ।
ಶ್ರೀಮದ್ಭಾಗವತೀ ವಾರ್ತಾ ಸುರಾಣಾಮಪಿ ದುರ್ಲಭಾ ॥ ೧೭ ॥

ರಾಜ್ಞೋ ಮೋಕ್ಷಂ ತಥಾ ವೀಕ್ಷ್ಯ ಪುರಾ ಧಾತಾಪಿ ವಿಸ್ಮಿತಃ ।
ಸತ್ಯಲೋಕೇ ತುಲಾಂ ಬದ್ಧ್ವಾತೋಲಯತ್ಸಾಧನಾನ್ಯಜಃ ॥ ೧೮ ॥

ಲಘೂನ್ಯನ್ಯಾನಿ ಜಾತಾನಿ ಗೌರವೇಣ ಇದಂ ಮಹತ್ ।
ತದಾ ಋಷಿಗಣಾಃ ಸರ್ವೇ ವಿಸ್ಮಯಂ ಪರಮಂ ಯಯುಃ ॥ ೧೯ ॥

ಮೇನಿರೇ ಭಗವದ್ರೂಪಂ ಶಾಸ್ತ್ರಂ ಭಾಗವತಂ ಕಲೌ ।
ಪಠನಾಚ್ಛ್ರವಣಾತ್ಸದ್ಯೋ ವೈಕುಂಠಫಲದಾಯಕಮ್ ॥ ೨೦ ॥

ಚಿಂತಾಮಣಿಯು ಕೇವಲ ಲೌಕಿಕ ಸುಖವನ್ನೀಡಬಲ್ಲದು.ಕಲ್ಪವೃಕ್ಷವು ಹೆಚ್ಚೆಂದರೆ ಸ್ವರ್ಗದ ಸಂಪತ್ತನ್ನು ಕೊಡಬಲ್ಲದು. ಆದರೆ ಸದ್ಗುರುಗಳು ಪ್ರಸನ್ನರಾದರೆ ಯೋಗಿಗಳಿಗೆ ದುರ್ಲಭವಾದ ಭಗವಂತನ ವೈಕುಂಠಧಾಮವನ್ನೇ ಕೊಡುತ್ತಾರೆ. ॥ ೮ ॥

ಸೂತಪುರಾಣಿಕರು ಹೇಳಿದರು – ಶೌನಕರೇ! ನಿಮ್ಮ ಹೃದಯದಲ್ಲಿ ಭಗವಂತನ ಪ್ರೇಮ ತುಂಬಿದೆ. ಅದಕ್ಕಾಗಿ ನಾನು ವಿಚಾರಗೈದು ಜನ್ಮ-ಮೃತ್ಯುವಿನ ಭಯವನ್ನು ನಾಶಮಾಡುವಂತಹ ಸಮಸ್ತ ಸಿದ್ಧಾಂತಗಳ ನಿಷ್ಕರ್ಷವನ್ನು ನಿಮಗೆ ಹೇಳುತ್ತೇನೆ. ॥ ೯ ॥

ಭಕ್ತಿಯ ಪ್ರವಾಹವನ್ನು ಹೆಚ್ಚಿಸುವ, ಭಗವಾನ್ ಶ್ರೀಕೃಷ್ಣನ ಪ್ರಸನ್ನತೆಯ ಪ್ರಧಾನ ಕಾರಣವಾದ ಸಾಧನೆಯನ್ನು ನಾನು ನಿಮಗೆ ಹೇಳುವೆನು. ಅದನ್ನು ದತ್ತಚಿತ್ತರಾಗಿ ಕೇಳಿರಿ. ॥ ೧೦ ॥ ಶ್ರೀಶುಕ ಮಹಾಮುನಿಗಳು ಕಲಿಯುಗದಲ್ಲಿ ಜೀವರು ಕಾಲರೂಪವಾದ ಸರ್ಪಕ್ಕೆ ತುತ್ತಾಗುವ ದುಃಖವನ್ನು ಪೂರ್ಣವಾಗಿ ನಾಶಮಾಡಲಿಕ್ಕಾಗಿ ಶ್ರೀಮದ್ಭಾಗವತ ಶಾಸ್ತ್ರವನ್ನು ಹೇಳಿರುವರು. ॥ ೧೧ ॥ ಮನಸ್ಸಿನ ಶುದ್ಧಿಗಾಗಿ ಇದರಿಂದ ಮಿಗಿಲಾದ ಯಾವ ಸಾಧನೆಯೂ ಇಲ್ಲ. ಮನುಷ್ಯನ ಜನ್ಮ-ಜನ್ಮಾಂತರದ ಪುಣ್ಯವು ಉದಯಿಸಿದಾಗಲೇ ಅವನಿಗೆ ಈ ಭಾಗವತಶಾಸ್ತ್ರವು ದೊರೆಯುತ್ತದೆ. ॥ ೧೨ ॥ ಶ್ರೀಶುಕಮಹಾಮುನಿಗಳು ಪರೀಕ್ಷಿತನಿಗೆ ಈ ಕಥೆಯನ್ನು ಹೇಳಲು ಸಭೆಯಲ್ಲಿ ವಿರಾಜಮಾನರಾಗಿದ್ದಾಗ ದೇವತೆಗಳು ಅಮೃತ ಕಲಶವನ್ನೆತ್ತಿಕೊಂಡು ಅವರ ಬಳಿಗೆ ಬಂದರು. ॥ ೧೩ ॥ ದೇವತೆಗಳು ತಮ್ಮ ಕಾರ್ಯಸಾಧನೆಯಲ್ಲಿ ತುಂಬಾ ಕುಶಲರಾಗಿರುತ್ತಾರೆ. ಅದ್ದರಿಂದ ಇಲ್ಲಿಯೂ ಎಲ್ಲರು ಶುಕಮಹಾಮುನಿಗಳಿಗೆ ನಮಸ್ಕರಿಸಿ ಹೇಳಿದರು–"ನೀವು ಈ ಅಮೃತಕಲಶವನ್ನು ಸ್ವೀಕರಿಸಿ, ಬದಲಿಗೆ ನಮಗೆ ಕಥಾಮೃತದ ದಾನವನ್ನು ಕೊಡಿರಿ. ॥ ೧೪ ॥ ಹೀಗೆ ಪರಸ್ಪರ ವಿನಿಮಯವಾದಾಗ ರಾಜಾಪರೀಕ್ಷಿತನು ಅಮೃತವನ್ನು ಪಾನ ಮಾಡುವನು ಹಾಗೂ ನಾವೆಲ್ಲರೂ ಶ್ರೀಮದ್ಭಾಗವತ ರೂಪವಾದ ಅಮೃತವನ್ನು ಪಾನ ಮಾಡುವೆವು." ॥ ೧೫ ॥ ಈ ಪ್ರಪಂಚದಲ್ಲಿ ಗಾಜಿನತುಂಡೆಲ್ಲಿ, ಮಹಾಮೂಲ್ಯ ವಜ್ರವೆಲ್ಲಿ? ಎಲ್ಲಿ ಸುಧೆ ಮತ್ತು ಎಲ್ಲಿ ಹರಿಕಥೆ ? ಹೀಗೆ ಯೋಚಿಸಿ ಶ್ರೀಶುಕ ಮುನಿಗಳು ಆಗ ದೇವತೆಗಳನ್ನು ಪರಿಹಾಸ್ಯ ಮಾಡಿದರು. ॥ ೧೬ ॥ ಅವರನ್ನು ಭಕ್ತಿ ಶೂನ್ಯ (ಕಥೆಯ ಅನಧಿಕಾರಿ)ರೆಂದು ತಿಳಿದು ಕಥಾಮೃತವನ್ನು ದಾನ ಮಾಡಲಿಲ್ಲ. ಹೀಗೆ ಈ ಶ್ರೀಮದ್ಭಾಗವತದ ಕಥೆ ದೇವತೆಗಳಿಗೂ ದುರ್ಲಭವಾಗಿದೆ. ॥ ೧೭ ॥

ಹಿಂದೆ ಶ್ರೀಮದ್ಭಾಗವತದ ಶ್ರವಣದಿಂದಲೇ ರಾಜಾ ಪರೀಕ್ಷಿತನು ಮುಕ್ತನಾದುದನ್ನು ನೋಡಿ ಬ್ರಹ್ಮದೇವರಿಗೆ ಭಾರೀ ಆಶ್ಚರ್ಯವಾಗಿತ್ತು. ಅವರು ಸತ್ಯಲೋಕದಲ್ಲಿ ತಕ್ಕಡಿ ಹಿಡಿದು ಎಲ್ಲ ಸಾಧನೆಗಳನ್ನು ತೂಕಮಾಡಿದರು. ॥ ೧೮ ॥ ಬೇರೆ ಎಲ್ಲ ಸಾಧನೆಗಳು ತೂಕದಲ್ಲಿ ಹಗುರವಾಗಿ, ಭಾಗವತವು ಎಲ್ಲಕ್ಕಿಂತ ಭಾರವಾಯಿತು. ಇದನ್ನು ನೋಡಿ ಎಲ್ಲ ಋಷಿಗಳಿಗೆ ಭಾರೀ ವಿಸ್ಮಯವಾಯಿತು. ಅವರೆಲ್ಲರೂ ಕಲಿಯುಗದಲ್ಲಿ ಈ ಭಗವದ್ರೂಪವಾದ ಭಾಗವತ ಶಾಸ್ತ್ರದ ಶ್ರವಣ-ಪಾರಾಯಣವು ಕೂಡಲೇ ಮೋಕ್ಷ ಕೊಡುವಂತಹುದು ಎಂದು ನಿಶ್ಚಯಿಸಿದರು. ॥ ೧೯-೨೦ ॥

ಸಪ್ತಾಹೇನ ಶ್ರುತಂ ಚೈತತ್ಸರ್ವಥಾ ಮುಕ್ತಿದಾಯಕಮ್ ।
ಸನಕಾದ್ಯೈಃ ಪುರಾ ಪ್ರೋಕ್ತಂ ನಾರದಾಯ ದಯಾಪರೈಃ ॥ ೨೧ ॥

ಯದ್ಯಪಿ ಬ್ರಹ್ಮಸಂಬಂಧಾಚ್ಛ್ರುತಮೇತತ್ಸುರರ್ಷಿಣಾ ।
ಸಪ್ತಾಹಶ್ರವಣವಿಧಿಃ ಕುಮಾರೈಸ್ತಸ್ಯ ಭಾಷಿತಃ ॥ ೨೨ ॥

ಶೌನಕ ಉವಾಚ

ಲೋಕವಿಗ್ರಹಮುಕ್ತಸ್ಯ ನಾರದಸ್ಯಾಸ್ಥಿರಸ್ಯ ಚ ।
ವಿಧಿಶ್ರವೇ ಕುತಃ ಪ್ರೀತಿಃ ಸಂಯೋಗಃ ಕುತ್ರ ತೈಃ ಸಹ ॥ ೨೩ ॥

ಸೂತ ಉವಾಚ

ಅತ್ರ ತೇ ಕೀರ್ತಯಿಷ್ಯಾಮಿ ಭಕ್ತಿಯುಕ್ತಂ ಕಥಾನಕಮ್ ।
ಶುಕೇನ ಮಮ ಯತ್ಪ್ರೋಕ್ತಂ ರಹಃ ಶಿಷ್ಯಂ ವಿಚಾರ್ಯ ಚ ॥ ೨೪ ॥

ಏಕದಾ ಹಿ ವಿಶಾಲಾಯಾಂ ಚತ್ವಾರ ಋಷಯೋಽಮಲಾಃ ।
ಸತ್ಸಂಗಾರ್ಥಂ ಸಮಾಯಾತಾ ದದೃಶುಸ್ತತ್ರ ನಾರದಮ್ ॥ ೨೫ ॥

ಕುಮಾರಾ ಊಚುಃ

ಕಥಂ ಬ್ರಹ್ಮನ್ ದೀನಮುಖಃ ಕುತಶ್ಚಿಂತಾತುರೋ ಭವಾನ್ ।
ತ್ವರಿತಂ ಗಮ್ಯತೇ ಕುತ್ರ ಕುತಶ್ಚಾಗಮನಂ ತವ ॥ ೨೬ ॥

ಇದಾನೀಂ ಶೂನ್ಯಚಿತ್ತೋಽಸಿ ಗತವಿತ್ತೋ ಯಥಾ ಜನಃ ।
ತವೇದಂ ಮುಕ್ತಸಂಗಸ್ಯ ನೋಚಿತಂ ವದ ಕಾರಣಮ್ ॥ ೨೭ ॥

ನಾರದ ಉವಾಚ

ಅಹಂ ತು ಪೃಥಿವೀಂ ಯಾತೋ ಜ್ಞಾತ್ವಾ ಸರ್ವೋತ್ತಮಾಮಿತಿ ।
ಪುಷ್ಕರಂ ಚ ಪ್ರಯಾಗಂ ಚ ಕಾಶೀಂ ಗೋದಾವರೀಂ ತಥಾ ॥ ೨೮ ॥

ಹರಿಕ್ಷೇತ್ರಂ ಕುರುಕ್ಷೇತ್ರಂ ಶ್ರೀರಂಗಂ ಸೇತುಬಂಧನಮ್ ।
ಏವಮಾದಿಷು ತೀರ್ಥೇಷು ಭ್ರಮಮಾಣ ಇತಸ್ತತಃ ॥ ೨೯ ॥

ನಾಪಶ್ಯಂ ಕುತ್ರಚಿಚ್ಛರ್ಮ ಮನಸ್ಸಂತೋಷಕಾರಕಮ್ ।
ಕಲಿನಾಧರ್ಮಮಿತ್ರೇಣ ಧರೇಯಂ ಬಾಧಿತಾಧುನಾ ॥ ೩೦ ॥

ಸತ್ಯಂ ನಾಸ್ತಿ ತಪಃ ಶೌಚಂ ದಯಾ ದಾನಂ ನ ವಿದ್ಯತೇ ।
ಉದರಂಭರಿಣೋ ಜೀವಾ ವರಾಕಾಃ ಕೂಟಭಾಷಿಣಃ ॥ ೩೧ ॥

ಮಂದಾಃ ಸುಮಂದಮತಯೋ ಮಂದಭಾಗ್ಯಾ ಹ್ಯುಪದ್ರುತಾಃ ।
ಪಾಖಂಡನಿರತಾಃ ಸಂತೋ ವಿರಕ್ತಾಃ ಸಪರಿಗ್ರಹಾಃ ॥ ೩೨ ॥

ತರುಣೀಪ್ರಭುತಾ ಗೇಹೇ ಶ್ಯಾಲಕೋ ಬುದ್ಧಿದಾಯಕಃ ।
ಕನ್ಯಾವಿಕ್ರಯಿಣೋ ಲೋಭಾದ್ದಂಪತೀನಾಂ ಚ ಕಲ್ಪನಮ್ ॥ ೩೩ ॥

ಶ್ರೀಮದ್ಭಾಗವತವನ್ನು ಸಪ್ತಾಹ ವಿಧಿಯಿಂದ ಶ್ರವಣಿಸಿದಾಗ ನಿಶ್ಚಯವಾಗಿಯೂ ಭಕ್ತಿಯು ಲಭಿಸುತ್ತದೆ. ಹಿಂದೆ ಇದನ್ನು ದಯಾಪರಾಯಣರಾದ ಸನಕಾದಿಗಳು ದೇವರ್ಷಿ- ನಾರದರಿಗೆ ಹೇಳಿದ್ದರು. ॥ ೨೧ ॥ ದೇವರ್ಷಿನಾರದರು ಮೊದಲು ಬ್ರಹ್ಮದೇವರಿಂದ ಇದನ್ನು ಶ್ರವಣಿಸಿದ್ದರೂ ಕೂಡ ಸಪ್ತಾಹ ಶ್ರವಣದ ವಿಧಿಯನ್ನಾದರೋ ಅವರಿಗೆ ಸನಕಾದಿಗಳೇ ತಿಳಿಸಿದ್ದರು. ॥ ೨೨ ॥

ಶೌನಕರು ಕೇಳಿದರು – ಪ್ರಾಪಂಚಿಕದಿಂದ ಮುಕ್ತರೂ, ವಿಚರಣಶೀಲರೂ ಆದ ನಾರದರಿಗೆ ಸನಕಾದಿಗಳೊಂದಿಗೆ ಸಂಯೋಗ ಎಲ್ಲಿ ಉಂಟಾಯಿತು ? ಹಾಗೂ ವಿಧಿ-ವಿಧಾನದಿಂದ ಶ್ರವಣಿಸುವ ಪ್ರೀತಿ ಅವರಿಗೆ ಹೇಗೆ ಉಂಟಾಯಿತು ? ॥ ೨೩ ॥

ಸೂತಪುರಾಣಿಕರು ಹೇಳಿದರು – ಶ್ರೀಶುಕಮಹಾಮುನಿಗಳು ನನ್ನನ್ನು ತಮ್ಮ ಅನನ್ಯ ಶಿಷ್ಯನೆಂದು ತಿಳಿದು ಏಕಾಂತದಲ್ಲಿ ಹೇಳಿದ ಭಕ್ತಿಪೂರ್ಣ ಕಥಾನಕವನ್ನು ನಿಮಗೆ ಹೇಳುತ್ತೇನೆ. ॥ ೨೪ ॥ ಒಂದು ದಿನ ವಿಶಾಲಾಪುರಿಗೆ ಸತ್ಸಂಗಕ್ಕಾಗಿ ಬಂದಿರುವ ಸನಕಾದಿ ನಾಲ್ವರು ನಿರ್ಮಲ ಋಷಿಗಳು ನಾರದರನ್ನು ನೋಡಿದರು. ॥ ೨೫ ॥

ಸನಕಾದಿಗಳು ಕೇಳಿದರು – ಬ್ರಹ್ಮನ್ ! ನಿಮ್ಮ ಮುಖ ಏಕೆ ಬಾಡಿದೆ ? ನೀವು ಚಿಂತಾತುರ ಹೇಗಾದಿರಿ ? ಇಷ್ಟು ಆತುರವಾಗಿ ಯಾವ ಕಡೆಗೆ ಹೋಗುತ್ತಿರುವಿರಿ ? ನಿಮ್ಮ ಆಗಮನ ಯಾವ ಕಡೆಯಿಂದಾಯಿತು ? ॥ ೨೬ ॥ ಈಗಲಾದರೋ ನೀವು ಎಲ್ಲ ಧನವನ್ನು ಕಳಕೊಂಡ ಮನುಷ್ಯನಂತೆ ವ್ಯಾಕುಲರಾಗಿರುವಿರಿ ಎಂದು ಕಾಣುತ್ತದೆ. ನಿಮ್ಮಂತಹ ಆಸಕ್ತಿರಹಿತ ಪುರುಷರಿಗೆ ಇದು ಉಚಿತವಲ್ಲ, ಇದರ ಕಾರಣವನ್ನು ಹೇಳಿರಿ. ॥ ೨೭ ॥

ನಾರದರು ಹೇಳಿದರು – ನಾನು ಸರ್ವೋತ್ತಮಲೋಕವೆಂದು ಎಣಿಸಿ ಪೃಥ್ವಿಗೆ ಬಂದೆ. ಇಲ್ಲಿ ಪುಷ್ಕರ, ಪ್ರಯಾಗ, ಕಾಶೀ, ಗೋದಾವರಿ (ನಾಸಿಕ), ಹರಿದ್ವಾರ, ಕುರುಕ್ಷೇತ್ರ, ಶ್ರೀರಂಗ, ಸೇತುಬಂಧ (ರಾಮೇಶ್ವರ) ಮುಂತಾದ ಅನೇಕ ತೀರ್ಥಗಳಲ್ಲಿ ಅತ್ತ-ಇತ್ತ ಅಲೆಯುತ್ತಿದ್ದೆ; ಆದರೆ ಮನಸ್ಸಿಗೆ ಸಂತೋಷವೀಯುವಂತಹ ಶಾಂತಿಯು ನನಗೆ ಸಿಗಲಿಲ್ಲ. ಈಗ ಅಧರ್ಮದ ಸಹಾಯಕ ಕಲಿಯುಗವು ಇಡೀ ಪೃಥಿವಿಯನ್ನು ಬಾಧಿಸುತ್ತಿದೆ. ॥ ೨೮-೩೦ ॥ ಈಗ ಇಲ್ಲಿ ಸತ್ಯ, ತಪಸ್ಸು, ಶೌಚ (ಒಳ-ಹೊರಗಿನ ಪವಿತ್ರತೆ), ದಯೆ, ದಾನ, ಇವುಗಳು ಏನೂ ಉಳಿಯಲಿಲ್ಲ. ಬಡಪಾಯಿ ಜೀವರು ಕೇವಲ ಹೊಟ್ಟೆ ಹೊರೆಯುವುದರಲ್ಲೇ ತೊಡಗಿರುವರು. ಅವರು ಸುಳ್ಳನ್ನಾಡುವವರೂ, ಆಲಸಿಗಳೂ, ಮಂದಬುದ್ಧಿಯವರೂ, ಭಾಗ್ಯಹೀನರೂ, ಉಪದ್ರವಗ್ರಸ್ತರೂ ಆಗಿದ್ದಾರೆ. ಹೊರಗಿನ ವೇಷಮಾತ್ರ ಸಾಧು-ಸಂತರು ಪೂರ್ಣ ಪಾಷಂಡಿಗಳಾಗಿದ್ದಾರೆ. ನೋಡಲು ವಿರಕ್ತರಂತೆ ಕಂಡು ಬಂದರೂ ಸ್ತ್ರೀ, ಸಂಪತ್ತು ಎಲ್ಲವನ್ನೂ ಪರಿಗ್ರಹಿಸುತ್ತಾರೆ. ಮನೆಗಳಲ್ಲಿ ಸ್ತ್ರೀಯರ ರಾಜ್ಯವೇ ನಡೆಯುತ್ತಿದೆ. ಭಾವ ಮೈದುನರೇ ಸಲಹೆಗಾರರಾಗಿದ್ದಾರೆ. ಲೋಭದಿಂದ ಜನರು ಹೆಣ್ಣುಮಕ್ಕಳನ್ನು ಮಾರುತ್ತಿದ್ದಾರೆ. ಗಂಡ-ಹೆಂಡಿರಲ್ಲಿ ನಿತ್ಯ ಜಗಳ ನಡೆಯುತ್ತಾ ಇದೆ. ॥ ೩೧-೩೩ ॥

ಆಶ್ರಮಾ ಯವನೈ ರುದ್ಧಾಸ್ತೀರ್ಥಾನಿ ಸರಿತಸ್ತಥಾ ।
ದೇವತಾಯತನಾನ್ಯತ್ರ ದುಷ್ಟೈರ್ನಷ್ಟಾನಿ ಭೂರಿಶಃ ॥ ೩೪ ॥

ನ ಯೋಗೀ ನೈವ ಸಿದ್ಧೋ ವಾ ನ ಜ್ಞಾನೀ ಸತ್ಕ್ರಿಯೋ ನರಃ ।
ಕಲಿದಾವಾನಲೇನಾದ್ಯ ಸಾಧನಂ ಭಸ್ಮತಾಂ ಗತಮ್ ॥ ೩೫ ॥

ಅಟ್ಟಶೂಲಾ ಜನಪದಾಃ ಶಿವಶೂಲಾ ದ್ವಿಜಾತಯಃ ।
ಕಾಮಿನ್ಯಃ ಕೇಶಶೂಲಿನ್ಯಃ ಸಂಭವಂತಿ ಕಲಾವಿಹ ॥ ೩೬ ॥

ಏವಂ ಪಶ್ಯನ್ ಕಲೇರ್ದೋಷಾನ್ ಪರ್ಯಟನ್ನವನೀಮಹಮ್ ।
ಯಾಮುನಂ ತಟಮಾಪನ್ನೋ ಯತ್ರ ಲೀಲಾ ಹರೇರಭೂತ್ ॥ ೩೭ ॥

ತತ್ರಾಶ್ಚರ್ಯಂ ಮಯಾ ದೃಷ್ಟಂ ಶ್ರೂಯತಾಂ ತನ್ಮುನೀಶ್ವರಾಃ ।
ಏಕಾ ತು ತರುಣೀ ತತ್ರ ನಿಷಣ್ಣಾ ಖಿನ್ನಮಾನಸಾ ॥ ೩೮ ॥

ವೃದ್ಧೌ ದ್ವೌ ಪತಿತೌ ಪಾರ್ಶ್ವೇ ನಿಃಶ್ವಸಂತಾವಚೇತನೌ ।
ಶುಶ್ರೂಷಂತೀ ಪ್ರಬೋಧಂತೀ ರುದತೀ ಚ ತಯೋಃ ಪುರಃ ॥ ೩೯ ॥

ದಶದಿಕ್ಷು ನಿರೀಕ್ಷಂತೀ ರಕ್ಷಿತಾರಂ ನಿಜಂ ವಪುಃ ।
ವೀಜ್ಯಮಾನಾ ಶತಸ್ತ್ರೀಭಿರ್ಬೋಧ್ಯಮಾನಾ ಮುಹುರ್ಮುಹುಃ ॥ ೪೦ ॥

ದೃಷ್ಟ್ವಾ ದೂರಾದ್ಗತಃ ಸೋಽಹಂ ಕೌತುಕೇನ ತದಂತಿಕಮ್ ।
ಮಾಂ ದೃಷ್ಟ್ವಾ ಚೋತ್ಥಿತಾ ಬಾಲಾ ವಿಹ್ವಲಾ ಚಾಬ್ರವೀದ್ವಚಃ ॥ ೪೧ ॥

ಬಾಲೋವಾಚ

ಭೋ ಭೋಃ ಸಾಧೋ ಕ್ಷಣಂ ತಿಷ್ಠ ಮಚ್ಚಿಂತಾಮಪಿ ನಾಶಯ ।
ದರ್ಶನಂ ತವ ಲೋಕಸ್ಯ ಸರ್ವಥಾಘಹರಂ ಪರಮ್ ॥ ೪೨ ॥

ಬಹುಧಾ ತವ ವಾಕ್ಯೇನ ದುಃಖಶಾಂತಿರ್ಭವಿಷ್ಯತಿ ।
ಯದಾ ಭಾಗ್ಯಂ ಭವೇದ್ಭೂರಿ ಭವತೋ ದರ್ಶನಂ ತದಾ ॥ ೪೩ ॥

ನಾರದ ಉವಾಚ

ಕಾಸಿ ತ್ವಂ ಕಾವಿಮೌ ಚೇಮಾ ನಾರ್ಯಃ ಕಾಃ ಪದ್ಮಲೋಚನಾಃ ।
ವದ ದೇವಿ ಸವಿಸ್ತಾರಂ ಸ್ವಸ್ಯ ದುಃಖಸ್ಯ ಕಾರಣಮ್ ॥ ೪೪ ॥

ಬಾಲೋವಾಚ

ಅಹಂ ಭಕ್ತಿರಿತಿ ಖ್ಯಾತಾ ಇಮೌ ಮೇ ತನಯೌ ಮತೌ ।
ಜ್ಞಾನವೈರಾಗ್ಯನಾಮಾನೌ ಕಾಲಯೋಗೇನ ಜರ್ಜರೌ ॥ ೪೫ ॥

ಮಹಾತ್ಮರ ಆಶ್ರಮ, ತೀರ್ಥಗಳು, ನದಿಗಳು ಇವುಗಳ ಮೇಲೆ ಯವನರು ಅಧಿಕಾರ ನಡೆಸುತ್ತಿದ್ದಾರೆ. ಆ ದುಷ್ಟರು ಅನೇಕ ದೇವಾಲಯಗಳನ್ನು ನಾಶಮಾಡಿರುವರು. ॥ ೩೪ ॥ ಈಗಲಂತೂ ಇಲ್ಲಿ ಯೋಗಿಗಳೂ, ಸಿದ್ಧರೂ, ಜ್ಞಾನಿಗಳೂ ಯಾರೂ ಇಲ್ಲ, ಸತ್ಕರ್ಮ ಮಾಡುವವರು ಯಾರೂ ಇಲ್ಲ. ಎಲ್ಲ ಸಾಧನೆಗಳು ಈಗ ಕಲಿಯುಗರೂಪಿ ದಾವಾನಲದಿಂದ ಸುಟ್ಟು ಭಸ್ಮವಾಗಿ ಹೋಗಿವೆ. ॥ ೩೫ ॥ ಈ ಕಲಿಕಾಲದಲ್ಲಿ ಎಲ್ಲೆಡೆ ಪೇಟೆಯಲ್ಲಿ ಅನ್ನವನ್ನು ಮಾರುತ್ತಿದ್ದಾರೆ. ಬ್ರಾಹ್ಮಣರು ಹಣ ಪಡೆದು ವೇದವನ್ನು ಕಲಿಸುತ್ತಿದ್ದಾರೆ. ಸ್ತ್ರೀಯರು ಸದಾಚಾರ ಹೀನರಾಗಿದ್ದಾರೆ. ॥ ೩೬ ॥

ಈ ವಿಧವಾಗಿ ಕಲಿಯುಗದ ದೋಷಗಳನ್ನು ನೋಡುತ್ತಾ ಪೃಥ್ವಿಯಲ್ಲಿ ಸಂಚರಿಸುತ್ತಾ ನಾನು ಯಮುನಾ ತೀರಕ್ಕೆ ಬಂದೆ. ಅಲ್ಲಿ ಭಗವಾನ್ ಶ್ರೀಕೃಷ್ಣನ ಅನೇಕ ಲೀಲೆಗಳು ನಡೆದಿದ್ದವು. ॥ ೩೭ ॥ ಮುನಿವರ್ಯರೇ! ಕೇಳಿರಿ. ಅಲ್ಲಿ ನಾನು ಬಹುದೊಡ್ಡ ಆಶ್ಚರ್ಯವನ್ನು ನೋಡಿದೆ. ಅಲ್ಲಿ ಓರ್ವ ಯುವತಿಸ್ತ್ರೀಯು ಖಿನ್ನ ಮನಸ್ಕಳಾಗಿ ಕುಳಿತಿದ್ದಳು. ॥ ೩೮ ॥ ಅವಳ ಬಳಿಯಲ್ಲಿ ಇಬ್ಬರು ವೃದ್ಧಪುರುಷರು ಅಚೇತನರಾಗಿ ಬಿದ್ದು ಜೋರಾಗಿ ಉಸಿರಾಡುತ್ತಿದ್ದರು. ಆ ತರುಣಿಯು ಅವರ ಸೇವೆ ಮಾಡುತ್ತಾ, ಕೆಲವೊಮ್ಮೆ ಅವರನ್ನು ಎಚ್ಚರಿಸಲು ಪ್ರಯತ್ನಿಸಿದರೆ, ಕೆಲವೊಮ್ಮೆ ಅವರ ಮುಂದೆ ಅಳುತ್ತಿದ್ದಳು. ॥ ೩೯ ॥ ಅವಳು ತನ್ನ ಶರೀರದ ರಕ್ಷಕನಾದ ಪರಮಾತ್ಮನನ್ನು ಹತ್ತು ದಿಕ್ಕುಗಳಲ್ಲಿಯೂ ನೋಡುತ್ತಿದ್ದಳು. ಅವಳ ಸುತ್ತಲೂ ನೂರಾರು ಸ್ತ್ರೀಯರು ಅವಳಿಗೆ ಗಾಳಿ ಬೀಸುತ್ತಾ ಪದೇ-ಪದೇ ಸಮಾಧಾನ ಪಡಿಸುತ್ತಿದ್ದರು. ॥ ೪೦ ॥ ದೂರದಿಂದಲೇ ಇವೆಲ್ಲವನ್ನು ನೋಡಿ ನಾನು ಕುತೂಹಲದಿಂದ ಅವಳ ಬಳಿಗೆ ಹೋದೆ. ನನ್ನನ್ನು ನೋಡುತ್ತಲೇ ಆ ಯುವತಿಯು ಎದ್ದು ನಿಂತು ಬಹು ವ್ಯಾಕುಲತೆಯಿಂದ ಹೇಳ ತೊಡಗಿದಳು. ॥ ೪೧ ॥

ಯುವತಿಯು ಹೇಳಿದಳು – ಮಹಾತ್ಮರೇ! ಒಂದು ಕ್ಷಣ ನಿಂತುಕೊಳ್ಳಿ, ಹಾಗೂ ನನ್ನ ಚಿಂತೆಯನ್ನು ದೂರಮಾಡಿರಿ. ನಿಮ್ಮ ದರ್ಶನವಾದರೋ ಪ್ರಪಂಚದ ಸಮಸ್ತ ಪಾಪಗಳನ್ನು ಸರ್ವಥಾ ನಾಶ ಮಾಡುವುದಾಗಿದೆ. ॥ ೪೨ ॥ ನಿಮ್ಮ ಮಾತಿನಿಂದ ನನ್ನ ದುಃಖವು ಶಾಂತವಾದೀತು. ಮನುಷ್ಯನಿಗೆ ಭಾಗ್ಯವು ಒದಗಿದಾಗಲೇ ನಿಮ್ಮ ದರ್ಶನವಾಗುತ್ತದೆ. ॥ ೪೩ ॥

ನಾರದರು ಹೇಳುತ್ತಾರೆ – ಆಗ ನಾನು ಆ ಸ್ತ್ರೀಯ ಬಳಿ ಕೇಳಿದೆ – ದೇವಿ! ನೀನು ಯಾರು? ಇವರಿಬ್ಬರು ಪುರುಷರು ನಿನಗೇನಾಗಬೇಕು? ನಿನ್ನ ಬಳಿಯಲ್ಲಿ ಕಮಲನಯನೆಯರಾದ ಈ ದೇವಿಯರು ಯಾರು? ನೀನು ನನಗೆ ವಿವರವಾಗಿ ನಿನ್ನ ದುಃಖದ ಕಾರಣವನ್ನು ಹೇಳು. ॥ ೪೪ ॥

ಯುವತಿಯು ಹೇಳಿದಳು – ನನ್ನ ಹೆಸರು ಭಕ್ತಿಯೆಂದು. ಇವರಿಬ್ಬರೂ ಜ್ಞಾನ ಮತ್ತು ವೈರಾಗ್ಯರೆಂಬ ನನ್ನ ಮಕ್ಕಳಾಗಿದ್ದಾರೆ. ಕಾಲದ ಮಹಿಮೆಯಿಂದ ಇವರು ಹೀಗೆ ಜರ್ಜರಿತರಾಗಿದ್ದಾರೆ. ॥ ೪೫ ॥ ಈ ದೇವಿಯರು ಗಂಗಾದಿ ನದಿಗಳು. ಇವರೆಲ್ಲರೂ ನನ್ನ

ಗಂಗಾದ್ಯಾಃ ಸರಿತಶ್ಚೇಮಾ ಮತ್ಸೇವಾರ್ಥಂ ಸಮಾಗತಾಃ ।
ತಥಾಪಿ ನ ಚ ಮೇ ಶ್ರೇಯಃ ಸೇವಿತಾಯಾಃ ಸುರೈರಪಿ ॥ ೪೬ ॥

ಇದಾನೀಂ ಶೃಣು ಮದ್ವಾರ್ತಾಂ ಸಚಿತ್ತಸ್ತ್ವಂ ತಪೋಧನ ।
ವಾರ್ತಾ ಮೇ ವಿತತಾಪ್ಯಸ್ತಿ ತಾಂ ಶ್ರುತ್ವಾ ಸುಖಮಾವಹ ॥ ೪೭ ॥

ಉತ್ಪನ್ನಾ ದ್ರವಿಡೇ ಸಾಹಂ ವೃದ್ಧಿಂ ಕರ್ಣಾಟಕೇ ಗತಾ ।
ಕ್ವಚಿತ್ಕ್ವಚಿನ್ಮಹಾರಾಷ್ಟ್ರೇ ಗುರ್ಜರೇ ಜೀರ್ಣತಾಂ ಗತಾ ॥ ೪೮ ॥

ತತ್ರ ಘೋರಕಲೇರ್ಯೋಗಾತ್ಪಾಖಂಡೈಃ ಖಂಡಿತಾಂಗಕಾ ।
ದುರ್ಬಲಾಹಂ ಚಿರಂ ಯಾತಾ ಪುತ್ರಾಭ್ಯಾಂ ಸಹ ಮಂದತಾಮ್ ॥ ೪೯ ॥

ವೃಂದಾವನಂ ಪುನಃ ಪ್ರಾಪ್ಯ ನವೀನೇವ ಸುರೂಪಿಣೀ ।
ಜಾತಾಹಂ ಯುವತೀ ಸಮ್ಯಕ್ ಪ್ರೇಷ್ಠರೂಪಾ ತು ಸಾಂಪ್ರತಮ್ ॥ ೫೦ ॥

ಇಮೌ ತು ಶಯಿತಾವತ್ರ ಸುತೌ ಮೇ ಕ್ಲಿಶ್ಯತಃ ಶ್ರಮಾತ್ ।
ಇದಂ ಸ್ಥಾನಂ ಪರಿತ್ಯಜ್ಯ ವಿದೇಶಂ ಗಮ್ಯತೇ ಮಯಾ ॥ ೫೦ ॥

ಜರಠತ್ವಂ ಸಮಾಯಾತೌ ತೇನ ದುಃಖೇನ ದುಃಖಿತಾ ।
ಸಾಹಂ ತು ತರುಣೀ ಕಸ್ಮಾತ್ ಸುತೌ ವೃದ್ಧಾವಿಮೌ ಕುತಃ ॥ ೫೨ ॥

ತ್ರಯಾಣಾಂ ಸಹಚಾರಿತ್ವಾದ್ವೈಪರೀತ್ಯಂ ಕುತಃ ಸ್ಥಿತಮ್ ।
ಘಟತೇ ಜರಠಾ ಮಾತಾ ತರುಣೌ ತನಯಾವಿತಿ ॥ ೫೩ ॥

ಅತಃ ಶೋಚಾಮಿ ಚಾತ್ಮಾನಂ ವಿಸ್ಮಯಾವಿಷ್ಟಮಾನಸಾ ।
ವದ ಯೋಗನಿಧೇ ಧೀಮನ್ ಕಾರಣಂ ಚಾತ್ರ ಕಿಂ ಭವೇತ್ ॥ ೫೪ ॥

ನಾರದ ಉವಾಚ

ಜ್ಞಾನೇನಾತ್ಮನಿ ಪಶ್ಯಾಮಿ ಸರ್ವಮೇತತ್ತವಾನಘೇ ।
ನ ವಿಷಾದಸ್ತ್ವಯಾ ಕಾರ್ಯೋ ಹರಿಃ ಶಂ ತೇ ಕರಿಷ್ಯತಿ ॥ ೫೫ ॥

ಸೂತ ಉವಾಚ

ಕ್ಷಣಮಾತ್ರೇಣ ತಜ್ಜ್ಞಾತ್ವಾ ವಾಕ್ಯಮೂಚೇ ಮುನೀಶ್ವರಃ ॥ ೫೬ ॥

ನಾರದ ಉವಾಚ

ಶೃಣುಷ್ವಾವಹಿತಾ ಬಾಲೇ ಯುಗೋಽಯಂ ದಾರುಣಃ ಕಲಿಃ ।
ತೇನ ಲುಪ್ತಃ ಸದಾಚಾರೋ ಯೋಗಮಾರ್ಗಸ್ತಪಾಂಸಿ ಚ ॥ ೫೭ ॥

ಜನಾ ಅಘಾಸುರಾಯಂತೇ ಶಾಠ್ಯದುಷ್ಕರ್ಮಕಾರಿಣಃ ।
ಇಹ ಸಂತೋ ವಿಷೀದಂತಿ ಪ್ರಹೃಷ್ಯಂತಿ ಹ್ಯಸಾಧವಃ ।
ಧತ್ತೇ ಧೈರ್ಯಂ ತು ಯೋ ಧೀಮಾನ್ಸ ಧೀರಃ ಪಂಡಿತೋಽಥವಾ ॥ ೫೮ ॥

ಸೇವೆ ಮಾಡಲೆಂದು ಬಂದಿರುವರು. ಹೀಗೆ ಸಾಕ್ಷಾತ್ ದೇವಿಯರಿಂದ ಸೇವಿತಳಾಗಿದ್ದರೂ ನನಗೆ ಸುಖ-ಶಾಂತಿ ಇಲ್ಲ. ॥ ೪೬ ॥ ತಪೋಧನರೇ! ಮನಸ್ಸಿಟ್ಟು ನನ್ನ ವೃತ್ತಾಂತವನ್ನು ಕೇಳಿರಿ. ನನ್ನ ಕಥೆಯಾದರೋ ಪ್ರಸಿದ್ಧವೇ ಇದೆ, ಆದರೂ ಕೂಡ ಅದನ್ನು ಕೇಳಿ ನೀವು ನನಗೆ ಶಾಂತಿಯನ್ನು ಕರುಣಿಸಿರಿ. ॥ ೪೭ ॥

ನಾನು ದ್ರವಿಡ ದೇಶದಲ್ಲಿ ಹುಟ್ಟಿದೆ. ಕರ್ನಾಟಕದಲ್ಲಿ ಬೆಳೆದೆ. ಮಹಾರಾಷ್ಟ್ರದ ಕೆಲವೆಡೆ ಸಮ್ಮಾನಿತಳಾದೆ. ಆದರೆ ಗುಜರಾತದಲ್ಲಿ ನನಗೆ ವೃದ್ಧಾಪ್ಯವು ಆವರಿಸಿತು. ॥ ೪೮ ॥ ಅಲ್ಲಿ ಘೋರಕಲಿಯುಗದ ಪ್ರಭಾವದಿಂದ ಪಾಷಂಡಿಗಳು ನನ್ನ ಅಂಗ ಭಂಗಮಾಡಿಬಿಟ್ಟರು. ಅನೇಕ ಕಾಲದವರೆಗೆ ಈ ಅವಸ್ಥೆಯಲ್ಲೇ ಇದ್ದ ಕಾರಣ ನಾನು ನನ್ನ ಪುತ್ರರೊಂದಿಗೆ ದುರ್ಬಲಳಾಗಿ ನಿಸ್ತೇಜಳಾಗಿಹೋದೆ. ॥ ೪೯ ॥ ನಾನು ವೃಂದಾವನಕ್ಕೆ ಬಂದಂದಿನಿಂದ ಪುನಃ ಪರಮ ಸುಂದರ ರೂಪವತಿಯೂ, ನವಯುವತಿಯೂ ಆದೆ. ॥ ೫೦ ॥ ಆದರೆ ಎದುರಿಗೆ ಬಿದ್ದಿರುವ ಇವರಿಬ್ಬರೂ ನನ್ನ ಪುತ್ರರು ಬಳಲಿ ದುಃಖಿತರಾಗಿದ್ದಾರೆ. ಈಗ ನಾನು ಈ ಸ್ಥಾನವನ್ನು ಬಿಟ್ಟು ಬೇರೆಲ್ಲಾದರೂ ಹೋಗಲು ಬಯಸುತ್ತಿರುವೆನು. ॥ ೫೧ ॥ ಇವರಿಬ್ಬರೂ ಮುದುಕರಾಗಿದ್ದಾರೆ. ಇದರಿಂದಲೇ ನಾನು ದುಃಖಿತಳಾಗಿದ್ದೇನೆ. ನಾನು ತರುಣಿಯಾಗಿದ್ದು, ಇವರಿಬ್ಬರು ಪುತ್ರರೂ ಮುದುಕರೇಕೆ? ॥ ೫೨ ॥ ನಾವು ಮೂವರೂ ಜೊತೆ-ಜೊತೆಯಾಗಿ ಇರುವವರು. ಆದರೂ ಹೀಗೆ ವಿಪರೀತವೇಕೆ? ತಾಯಿ ವೃದ್ಧಳಾಗಿದ್ದು, ಪುತ್ರರು ತರುಣರಾಗಬೇಕಾಗಿತ್ತು. ॥ ೫೩ ॥ ಇದರಿಂದ ನಾನು ಆಶ್ಚರ್ಯಚಕಿತಳಾಗಿ ನನ್ನ ಈ ಅವಸ್ಥೆಯ ಕುರಿತು ಶೋಕಿಸುತ್ತಿದ್ದೇನೆ. ನೀವು ಪರಮ ಬುದ್ಧಿವಂತರೂ, ಯೋಗನಿಧಿಗಳೂ ಆಗಿರುವಿರಿ. ಆದ್ದರಿಂದ ಇದರ ಕಾರಣವೇನಿರಬಹುದು? ಎಂಬುದನ್ನು ಹೇಳಿರಿ. ॥ ೫೪ ॥

ನಾರದರೆಂದರು – ಸಾಧ್ವಿ! ನಾನು ನನ್ನ ಹೃದಯದಲ್ಲಿ ಜ್ಞಾನ ದೃಷ್ಟಿಯಿಂದ ನಿನ್ನ ಎಲ್ಲ ದುಃಖದ ಕಾರಣವನ್ನು ನೋಡುತ್ತಿದ್ದೇನೆ. ನೀನು ವಿಷಾದಿಸಬಾರದು. ಶ್ರೀಹರಿಯು ನಿನ್ನ ಕಲ್ಯಾಣ ಮಾಡುವನು. ॥ ೫೫ ॥

ಸೂತಪುರಾಣಿಕರು ಹೇಳುತ್ತಾರೆ – ಮುನಿವರ್ಯರಾದ ನಾರದರು ಒಂದು ಕ್ಷಣದಲ್ಲೇ ಅವಳ ಕಾರಣವನ್ನು ತಿಳಿದುಕೊಂಡು ಹೇಳಿದರು– ॥ ೫೬ ॥

ನಾರದರೆಂದರು – ದೇವಿ! ಎಚ್ಚರಿಕೆಯಿಂದ ಕೇಳು. ಇದು ದಾರುಣವಾದ ಕಲಿಯುಗವಾಗಿದೆ. ಅದರಿಂದಾಗಿ ಈಗ ಸದಾಚಾರ, ಯೋಗಮಾರ್ಗ, ತಪಸ್ಸು ಮೊದಲಾದವುಗಳೆಲ್ಲ ಲುಪ್ತವಾಗಿ ಹೋದುವು. ॥ ೫೭ ॥ ಜನರು ಶಠರಾಗಿ ದುಷ್ಕರ್ಮದಲ್ಲಿ ತೊಡಗಿ ಅಘಾಸುರರಂತಾಗಿದ್ದಾರೆ. ಪ್ರಪಂಚದಲ್ಲಿ ಎಲ್ಲಿ ನೋಡಿದರಲ್ಲಿ ಸತ್ಪುರುಷರು ದುಃಖದಿಂದ ಮ್ಲಾನರಾಗಿದ್ದಾರೆ ಹಾಗೂ ದುಷ್ಟರು ಸುಖಿಗಳಾಗುತ್ತಿದ್ದಾರೆ. ಇಂತಹ ಕಾಲದಲ್ಲಿ ಬುದ್ಧಿವಂತರಾದ ಧೈರ್ಯವುಳ್ಳ ಪುರುಷರೇ ಜ್ಞಾನಿಗಳು ಅಥವಾ ಪಂಡಿತರಾಗಿದ್ದಾರೆ. ॥ ೫೮ ॥ ಭೂಮಿಯು ಕ್ರಮಶಃ ಪ್ರತಿವರ್ಷ ಶೇಷನಿಗೆ

ಅಸ್ಪೃಶ್ಯಾನವಲೋಕ್ಯೇಯಂ ಶೇಷಭಾರಕರೀ ಧರಾ ।
ವರ್ಷೇ ವರ್ಷೇ ಕ್ರಮಾಜ್ಜಾತಾ ಮಂಗಲಂ ನಾಪಿ ದೃಶ್ಯತೇ ॥ ೫೯ ॥

ನ ತ್ವಾಮಪಿ ಸುತೈಃ ಸಾಕಂ ಕೋಽಪಿ ಪಶ್ಯತಿ ಸಾಂಪ್ರತಮ್ ।
ಉಪೇಕ್ಷಿತಾನುರಾಗಾಂಧ್ಯೈರ್ಜರ್ಜರತ್ವೇನ ಸಂಸ್ಥಿತಾ ॥ ೬೦ ॥

ವೃಂದಾವನಸ್ಯ ಸಂಯೋಗಾತ್ ಪುನಸ್ತ್ವಂ ತರುಣೀ ನವಾ ।
ಧನ್ಯಂ ವೃಂದಾವನಂ ತೇನ ಭಕ್ತಿರ್ನೃತ್ಯತಿ ಯತ್ರ ಚ ॥ ೬೧ ॥

ಅತ್ರೇಮೌ ಗ್ರಾಹಕಾಭಾವಾನ್ನ ಜರಾಮಪಿ ಮುಂಚತಃ ।
ಕಿಂಚಿದಾತ್ಮಸುಖೇನೇಹ ಪ್ರಸುಪ್ತಿರ್ಮನ್ಯತೇಽನಯೋಃ ॥ ೬೨ ॥

ಭಕ್ತಿರುವಾಚ

ಕಥಂ ಪರೀಕ್ಷಿತಾ ರಾಜ್ಞಾ ಸ್ಥಾಪಿತೋ ಹ್ಯಶುಚಿಃ ಕಲಿಃ ।
ಪ್ರವೃತ್ತೇ ತು ಕಲೌ ಸರ್ವಸಾರಃ ಕುತ್ರ ಗತೋ ಮಹಾನ್ ॥ ೬೩ ॥

ಕರುಣಾಪರೇಣ ಹರಿಣಾಪ್ಯಧರ್ಮಃ ಕಥಮೀಕ್ಷ್ಯತೇ ।
ಇಮಂ ಮೇ ಸಂಶಯಂ ಛಿಂಧಿ ತ್ವದ್ವಾಚಾ ಸುಖಿತಾಸ್ಮ್ಯಹಮ್ ॥ ೬೪ ॥

ನಾರದ ಉವಾಚ

ಯದಿ ಪೃಷ್ಟಸ್ತ್ವಯಾ ಬಾಲೇ ಪ್ರೇಮತಃ ಶ್ರವಣಂ ಕುರು ।
ಸರ್ವಂ ವಕ್ಷ್ಯಾಮಿ ತೇ ಭದ್ರೇ ಕಶ್ಮಲಂ ತೇ ಗಮಿಷ್ಯತಿ ॥ ೬೫ ॥

ಯದಾ ಮುಕುಂದೋ ಭಗವಾನ್ ಕ್ಷ್ಮಾಂ ತ್ಯಕ್ತ್ವಾ ಸ್ವಪದಂ ಗತಃ ।
ತದ್ದಿನಾತ್ಕಲಿರಾಯಾತಃ ಸರ್ವಸಾಧನಬಾಧಕಃ ॥ ೬೬ ॥

ದೃಷ್ಟೋ ದಿಗ್ವಿಜಯೇ ರಾಜ್ಞಾ ದೀನವಚ್ಛರಣಂ ಗತಃ ।
ನ ಮಯಾ ಮಾರಣೀಯೋಽಯಂ ಸಾರಂಗ ಇವ ಸಾರಭುಕ್ ॥ ೬೭ ॥

ಯತ್ಫಲಂ ನಾಸ್ತಿ ತಪಸಾ ನ ಯೋಗೇನ ಸಮಾಧಿನಾ ।
ತತ್ಫಲಂ ಲಭತೇ ಸಮ್ಯಕ್ಕಲೌ ಕೇಶವಕೀರ್ತನಾತ್ ॥ ೬೮ ॥

ಏಕಾಕಾರಂ ಕಲಿಂ ದೃಷ್ಟ್ವಾ ಸಾರವತ್ಸಾರನೀರಸಮ್ ।
ವಿಷ್ಣುರಾತಃ ಸ್ಥಾಪಿತವಾನ್ ಕಲಿಜಾನಾಂ ಸುಖಾಯ ಚ ॥ ೬೯ ॥

ಕುಕರ್ಮಾಚರಣಾತ್ಸಾರಃ ಸರ್ವತೋ ನಿರ್ಗತೋಽಧುನಾ ।
ಪದಾರ್ಥಾಃ ಸಂಸ್ಥಿತಾ ಭೂಮೌ ಬೀಜಹೀನಾಸ್ತುಷಾ ಯಥಾ ॥ ೭೦ ॥

ವಿಪ್ರೈರ್ಭಾಗವತೀ ವಾರ್ತಾ ಗೇಹೇ ಗೇಹೇ ಜನೇ ಜನೇ ।
ಕಾರಿತಾ ಕಣಲೋಭೇನ ಕಥಾಸಾರಸ್ತತೋ ಗತಃ ॥ ೭೧ ॥

ಭಾರವಾಗಿ ತೋರಿದೆ. ಈಗ ಇದನ್ನು ಮುಟ್ಟುವುದಿರಲಿ, ನೋಡಲೂ ಕೂಡ ಯೋಗ್ಯವಾಗಿ ಉಳಿದಿಲ್ಲ. ಇದರಲ್ಲಿ ಎಲ್ಲಿಯೂ ಮಂಗಳವು ಕಂಡುಬರುವುದೇ ಇಲ್ಲ. ॥ ೫೯ ॥ ಈಗ ಯಾರಿಗೂ ಪುತ್ರರೊಂದಿಗೆ ನಿನ್ನ ದರ್ಶನವೂ ಆಗುತ್ತಿಲ್ಲ. ವಿಷಯಾನುರಾಗದ ಕಾರಣ ಅಂಧರಾದ ಜೀವಿಗಳಿಂದ ಉಪೇಕ್ಷಿತಳಾಗಿ ನೀನು ಜರ್ಜರಿತಳಾಗಿ ಹೋಗಿರುವೆ. ॥ ೬೦ ॥ ವೃಂದಾವನದ ಸಂಯೋಗದಿಂದ ನೀನು ಮತ್ತೆ ನವತರುಣಿಯಾಗಿರುವೆ. ಈ ವೃಂದಾವನ ಧಾಮವು ಧನ್ಯವಾಗಿದೆ. ಏಕೆಂದರೆ, ಇಲ್ಲಿ ಸರ್ವತ್ರ ಭಕ್ತಿಯು ನೃತ್ಯಮಾಡುತ್ತಿದೆ. ॥ ೬೧ ॥ ಆದರೆ ನಿನ್ನ ಈ ಇಬ್ಬರು ಪುತ್ರರನ್ನು ಇಲ್ಲಿ ಬಯಸುವವರೇ ಇಲ್ಲ. ಅದಕ್ಕಾಗಿ ಇವರ ಮುದಿತನವು ಕಳೆದು ಹೋಗಿಲ್ಲ. ಇಲ್ಲಿ ಇವರಿಗೆ ಸ್ವಲ್ಪ ಆತ್ಮಸುಖ (ಭಗವತ್ ಆನಂದ)ದ ಪ್ರಾಪ್ತಿಯಾದ್ದರಿಂದ ಇವರು ಮಲಗಿದಂತೆ ಕಂಡು ಬರುತ್ತಿದ್ದಾರೆ. ॥ ೬೨ ॥

ಭಕ್ತಿಯು ಹೇಳಿದಳು – ರಾಜಾ ಪರೀಕ್ಷಿತನು ಈ ಪಾಪೀ ಕಲಿಯುಗವನ್ನು ಇಲ್ಲಿ ಏಕೆ ಇರಲು ಬಿಟ್ಟನು ? ಅದು ಬರುತ್ತಲೇ ಎಲ್ಲ ವಸ್ತುಗಳ ಸಾರವು ಎಲ್ಲಿಗೆ ಹೊರಟು ಹೋಯಿತೋ ತಿಳಿಯದು. ॥ ೬೩ ॥ ಕರುಣಾಮಯನಾದ ಶ್ರೀಹರಿಯು ಈ ಅಧರ್ಮವನ್ನು ಹೇಗೆ ನೋಡುತ್ತಾನೆ ? ಮುನಿವರ್ಯ ! ನನ್ನ ಈ ಸಂದೇಹವನ್ನು ದೂರಮಾಡಿರಿ. ನಿಮ್ಮ ಮಾತುಗಳಿಂದ ನನಗೆ ಬಹಳ ಶಾಂತಿ ದೊರೆತಿದೆ. ॥ ೬೪ ॥

ನಾರದರೆಂದರು – ಎಲೈ ಭಕ್ತಿಯೇ ! ನೀನು ಕೇಳಿದ್ದರಿಂದ ಪ್ರೇಮದಿಂದ ಆಲಿಸು. ಶುಭಪ್ರದಳೇ ! ನಾನೆಲ್ಲವನ್ನು ಹೇಳುವೆನು. ಇದರಿಂದ ನಿನ್ನ ದುಃಖವು ದೂರವಾಗುವುದು. ॥ ೬೫ ॥ ಭಗವಾನ್ ಶ್ರೀಕೃಷ್ಣನು ಈ ಭೂಲೋಕವನ್ನು ಬಿಟ್ಟು ತನ್ನ ಪರಮ ಧಾಮಕ್ಕೆ ಹೊರಟು ಹೋದಂದಿನಿಂದ ಇಲ್ಲಿ ಸಮಸ್ತ ಸಾಧನೆಗಳಲ್ಲಿ ಬಾಧೆಯನ್ನೊಡ್ಡುವ ಕಲಿಯುಗವು ಆವರಿಸಿಬಿಟ್ಟಿದೆ. ॥ ೬೬ ॥ ದಿಗ್ವಿಜಯದ ಸಮಯದಲ್ಲಿ ರಾಜಾ ಪರೀಕ್ಷಿತನ ದೃಷ್ಟಿಯು ಕಲಿಯುಗದ ಮೇಲೆ ಬಿದ್ದಾಗ ಅದು ದೀನವಾಗಿ ಅವನಿಗೆ ಶರಣಾಯಿತು. ಭ್ರಮರದಂತೆ ಸಾರಗ್ರಾಹಿಯಾದ ರಾಜನು ಇದನ್ನು ನಾನು ಕೊಲ್ಲಬಾರದು ಎಂದು ನಿಶ್ಚಯಿಸಿದನು. ॥ ೬೭ ॥ ಏಕೆಂದರೆ, ತಪಸ್ಸು, ಯೋಗ, ಸಮಾಧಿಯಿಂದಲೂ ಸಿಗದಿರುವ ಫಲವು ಕಲಿಯುಗದಲ್ಲಿ ಶ್ರೀಹರಿಯ ಕೀರ್ತನೆಯಿಂದಲೇ ಸುಲಭವಾಗಿ ದೊರೆಯುತ್ತದೆ. ॥ ೬೮ ॥ ಈ ಪ್ರಕಾರ ಸಾರಹೀನವಾದರೂ ಅದನ್ನು ಇದೊಂದೇ ದೃಷ್ಟಿಯಿಂದ ಸಾರಯುಕ್ತವೆಂದರಿತು ಅವನು ಕಲಿಯುಗದಲ್ಲಿ ಹುಟ್ಟುವ ಜೀವಿಗಳ ಸುಖಕ್ಕಾಗಿಯೇ ಅದನ್ನು ಇರಲು ಬಿಟ್ಟನು. ॥ ೬೯ ॥

ಈಗ ಜನರಲ್ಲಿ ಕುಕರ್ಮದಲ್ಲಿ ಪ್ರವೃತ್ತಿಯಿರುವ ಕಾರಣ ಎಲ್ಲ ವಸ್ತುಗಳ ಸಾರವು ಹೊರಟು ಹೋಗಿದೆ. ಪೃಥಿವಿಯ ಎಲ್ಲ ಪದಾರ್ಥಗಳು ಬೀಜಹೀನವಾದ ಹೊಟ್ಟಿಗೆ ಸಮಾನವಾಗಿವೆ. ॥ ೭೦ ॥ ಬ್ರಾಹ್ಮಣರು ಕೇವಲ ಧನ-ಧಾನ್ಯದ ಲೋಭದಿಂದ ಮನೆ-ಮನೆಗಳಲ್ಲಿ ಹಾಗೂ ಎಲ್ಲ ಜನರಿಗೆ (ಅಭಕ್ತರಿಗೆ, ಅಪಾತ್ರರಿಗೆ) ಭಾಗವತದ ಕಥೆಯನ್ನು ಹೇಳತೊಡಗಿರುವರು. ಇದರಿಂದ ಕಥೆಯ ಸಾರವು ಹೊರಟು ಹೋಯಿತು. ॥ ೭೧ ॥

ಅತ್ಯುಗ್ರಭೂರಿಕರ್ಮಾಣೋ ನಾಸ್ತಿಕಾ ರೌರವಾ ಜನಾಃ ।
ತೇಽಪಿ ತಿಷ್ಠಂತಿ ತೀರ್ಥೇಷು ತೀರ್ಥಸಾರಸ್ತತೋ ಗತಃ
॥ ೬೨ ॥

ಕಾಮಕ್ರೋಧಮಹಾಲೋಭತೃಷ್ಣಾ ವ್ಯಾಕುಲಚೇತಸಃ ।
ತೇಽಪಿ ತಿಷ್ಠಂತಿ ತಪಸಿ ತಪಸ್ಸಾರಸ್ತತೋ ಗತಃ
॥ ೬೩ ॥

ಮನಸಶ್ಚಾಜಯಾಲ್ಲೋಭಾದ್ದಂಭಾತ್ಪಾಖಂಡ ಸಂಶ್ರಯಾತ್ ।
ಶಾಸ್ತ್ರಾನಭ್ಯಸನಾಚ್ಚೈವ ಧ್ಯಾನಯೋಗಫಲಂ ಗತಮ್
॥ ೬೪ ॥

ಪಂಡಿತಾಸ್ತು ಕಲತ್ರೇಣ ರಮಂತೇ ಮಹಿಷಾ ಇವ ।
ಪುತ್ರಸ್ಯೋತ್ಪಾದನೇ ದಕ್ಷಾ ಅದಕ್ಷಾ ಮುಕ್ತಿ ಸಾಧನೇ
॥ ೬೫ ॥

ನ ಹಿ ವೈಷ್ಣವತಾ ಕುತ್ರ ಸಂಪ್ರದಾಯಪುರಸ್ಸರಾ ।
ಏವಂ ಪ್ರಲಯತಾಂ ಪ್ರಾಪ್ತೋ ವಸ್ತುಸಾರಃ ಸ್ಥಲೇ ಸ್ಥಲೇ
॥ ೬೬ ॥

ಅಯಂ ತು ಯುಗಧರ್ಮೋ ಹಿ ವರ್ತತೇ ಕಸ್ಯ ದೂಷಣಮ್ ।
ಅತಸ್ತು ಪುಂಡರೀಕಾಕ್ಷಃ ಸಹತೇ ನಿಕಟೇ ಸ್ಥಿತಃ
॥ ೬೭ ॥

ಸೂತ ಉವಾಚ

ಇತಿ ತದ್ವಚನಂ ಶ್ರುತ್ವಾ ವಿಸ್ಮಯಂ ಪರಮಂ ಗತಾ ।
ಭಕ್ತಿರೂಚೇ ವಚೋ ಭೂಯಃ ಶ್ರೂಯತಾಂ ತಚ್ಚ ಶೌನಕ
॥ ೬೮ ॥

ಭಕ್ತಿರುವಾಚ

ಸುರರ್ಷೇ ತ್ವಂ ಹಿ ಧನ್ಯೋಽಸಿ ಮದ್ಭಾಗ್ಯೇನ ಸಮಾಗತಃ ।
ಸಾಧೂನಾಂ ದರ್ಶನಂ ಲೋಕೇ ಸರ್ವಸಿದ್ಧಿ ಕರಂ ಪರಮ್
॥ ೬೯ ॥

ಜಯತಿ ಜಗತಿ ಮಾಯಾಂ ಯಸ್ಯ ಕಾಯಾಧವಸ್ತೇ
ವಚನರಚನಮೇಕಂ ಕೇವಲಂ ಚಾಕಲಯ್ಯ ।
ಧ್ರುವಪದಮಪಿ ಯಾತೋ ಯತ್ಕೃಪಾತೋ ಧ್ರುವೋಽಯಂ
ಸಕಲಕುಶಲಪಾತ್ರಂ ಬ್ರಹ್ಮಪುತ್ರಂ ನತಾಸ್ಮಿ ॥ ೭೦ ॥

ತೀರ್ಥಗಳಲ್ಲಿ ಅನೇಕ ಪ್ರಕಾರದ ಅತ್ಯಂತ ಘೋರ ಕರ್ಮ ಮಾಡುವವರೂ, ನಾಸ್ತಿಕರೂ, ನರಕ ಭಾಜನರೂ ಆದ ಜನರೇ ಇರತೊಡಗಿದ್ದಾರೆ. ಆದ್ದರಿಂದ ತೀರ್ಥಗಳ ಪ್ರಭಾವವೂ ಹೊರಟು ಹೋಗುತ್ತಾ ಇದೆ. ॥ ೬೨ ॥ ಕಾಮ, ಕ್ರೋಧ, ಮಹಾನ್ ಲೋಭ, ತೃಷ್ಣೆ ಇವುಗಳಿಂದ ನಿರಂತರ ಚಿತ್ತವ್ಯಾಕುಲಗೊಳ್ಳುವವರೂ ಕೂಡ ತಪಸ್ಸಿನ ಅಣಕಮಾಡ ತೊಡಗಿದರು. ಆದ್ದರಿಂದ ತಪಸ್ಸಿನ ಸಾರವೂ ಹೊರಟು ಹೋಯಿತು. ॥ ೬೩ ॥ ಮನಸ್ಸಿನ ಮೇಲೆ ಹತೋಟಿ ಇಲ್ಲದ್ದರಿಂದ ಲೋಭ, ದಂಭ, ಪಾಖಂಡತನವನ್ನು ಆಶ್ರಯಿಸಿದ್ದರಿಂದ ಹಾಗೂ ಶಾಸ್ತ್ರದ ಅಭ್ಯಾಸ ಮಾಡದೇ ಇರುವುದರಿಂದ ಧ್ಯಾನಯೋಗದ ಫಲವೂ ಮುಗಿದು ಹೋಯಿತು. ॥ ೬೪ ॥ ಪಂಡಿತರಾದವರು ತಮ್ಮ ಪತ್ನಿಯರೊಂದಿಗೆ ಕೋಣಗಳಂತೆ ರಮಿಸುತ್ತಾರೆ. ಅವರಲ್ಲಿ ಸಂತಾನವನ್ನು ಉತ್ಪಾದಿಸುವುದರಲ್ಲಿ ಕುಶಲತೆ ಕಂಡು ಬರುತ್ತದೆ. ಆದರೆ ಮುಕ್ತಿ ಸಾಧನೆಯಲ್ಲಿ ಅವರು ಅಕುಶಲರಾಗಿದ್ದಾರೆ. ॥ ೬೫ ॥ ಸಂಪ್ರದಾಯಕ್ಕನುಸಾರ ಪ್ರಾಪ್ತವಾದ ವೈಷ್ಣವತ್ವ ಎಲ್ಲಿಯೂ ಕಂಡುಬರುವುದಿಲ್ಲ. ಹೀಗೆ ಎಲ್ಲೆಡೆ ಎಲ್ಲ ವಸ್ತುಗಳ ಸಾರವು ಉಡುಗಿ ಹೋಗಿದೆ. ॥ ೬೬ ॥ ಇದಾದರೋ ಈ ಯುಗದ ಸ್ವಭಾವವೇ ಆಗಿದೆ. ಇದರಲ್ಲಿ ಯಾರ ದೋಷವೂ ಇಲ್ಲ. ಇದರಿಂದಲೇ ಭಗವಾನ್ ಪುಂಡರೀಕಾಕ್ಷನು ಅತಿಸಮೀಪ ಇದ್ದರೂ ಇವೆಲ್ಲವನ್ನು ಸಹಿಸುತ್ತಿರುವನು. ॥ ೬೭ ॥

ಸೂತಪುರಾಣಿಕರು ಹೇಳುತ್ತಾರೆ - ಶೌನಕರೇ! ಹೀಗೆ ದೇವರ್ಷಿ ನಾರದರ ಮಾತನ್ನು ಕೇಳಿ, ಭಕ್ತಿಗೆ ಅತ್ಯಂತ ಆಶ್ಚರ್ಯವಾಯಿತು. ಮತ್ತೆ ಅವಳು ಹೇಳಿದುದನ್ನು ಮುಂದೆ ಕೇಳಿರಿ. ॥ ೬೮ ॥

ಭಕ್ತಿಯು ಹೇಳಿದಳು - ದೇವರ್ಷಿಗಳೇ! ನೀವು ಧನ್ಯರಾಗಿದ್ದೀರಿ. ನಿಮ್ಮ ಸಮಾಗಮವಾದುದು ನನ್ನ ದೊಡ್ಡ ಸೌಭಾಗ್ಯವೇ ಸರಿ! ಜಗತ್ತಿನಲ್ಲಿ ಸಾಧುಗಳ ದರ್ಶನವೇ ಸಮಸ್ತ ಸಿದ್ಧಿಗಳ ಪರಮ ಕಾರಣವಾಗಿದೆ. ॥ ೬೯ ॥ ಕೇವಲ ಒಮ್ಮೆಯೇ ನಿಮ್ಮ ಉಪದೇಶವನ್ನು ಕೇಳಿದ ಕಯಾಧು ಕುಮಾರ ಪ್ರಹ್ಲಾದನು ಮಾಯೆಯನ್ನು ಗೆದ್ದಿರುವನು. ಧ್ರುವನೂ ಕೂಡ ನಿಮ್ಮ ಕೃಪೆಯಿಂದಲೇ ಧ್ರುವ ಪದವನ್ನು ಪಡೆದು ಕೊಂಡಿದ್ದನು. ನೀವು ಸರ್ವ ಮಂಗಲ ಮಯರೂ, ಬ್ರಹ್ಮದೇವರ ಪುತ್ರರೂ ಆಗಿರುವಿರಿ. ನಿಮಗೆ ನಾನು ನಮಸ್ಕರಿಸುತ್ತೇನೆ ॥ ೭೦ ॥

ಮೊದಲನೆಯ ಅಧ್ಯಾಯವು ಮುಗಿಯಿತು. ॥ ೧ ॥

ಇತಿ ಶ್ರೀಪದ್ಮಪುರಾಣೇ ಉತ್ತರಖಂಡೇ ಶ್ರೀಮದ್ಭಾಗವತಮಾಹಾತ್ಮ್ಯೇ ಭಕ್ತಿನಾರದಸಮಾಗಮೋ ನಾಮ ಪ್ರಥಮೋಽಧ್ಯಾಯಃ ॥ ೧ ॥

ಎರಡನೆಯ ಅಧ್ಯಾಯ

ಭಕ್ತಿದೇವಿಯ ದುಃಖವನ್ನು ದೂರಗೊಳಿಸಲು ನಾರದರ ಪ್ರಯತ್ನ

ನಾರದ ಉವಾಚ

ವೃಥಾ ಖೇದಯಸೇ ಬಾಲೇ ಅಹೋ ಚಿಂತಾತುರಾ ಕಥಮ್ ।
ಶ್ರೀಕೃಷ್ಣಚರಣಾಂಭೋಜಂ ಸ್ಮರ ದುಃಖಂ ಗಮಿಷ್ಯತಿ ॥ ೧ ॥

ದ್ರೌಪದೀ ಚ ಪರಿತ್ರಾತಾ ಯೇನ ಕೌರವಕಶ್ಮಲಾತ್ ।
ಪಾಲಿತಾ ಗೋಪಸುಂದರ್ಯಃ ಸ ಕೃಷ್ಣಃ ಕ್ವಾಪಿ ನೋ ಗತಃ ॥ ೨ ॥

ತ್ವಂ ತು ಭಕ್ತಿಃ ಪ್ರಿಯಾ ತಸ್ಯ ಸತತಂ ಪ್ರಾಣತೋಽಧಿಕಾ ।
ತ್ವಯಾಽಽಹೂತಸ್ತು ಭಗವಾನ್ ಯಾತಿ ನೀಚಗೃಹೇಷ್ವಪಿ ॥ ೩ ॥

ಸತ್ಯಾದಿತ್ರಿಯುಗೇ ಬೋಧವೈರಾಗ್ಯೌ ಮುಕ್ತಿಸಾಧಕೌ ।
ಕಲೌ ತು ಕೇವಲಾ ಭಕ್ತಿರ್ಬ್ರಹ್ಮಸಾಯುಜ್ಯಕಾರಿಣೀ ॥ ೪ ॥

ಇತಿ ನಿಶ್ಚಿತ್ಯ ಚಿದ್ರೂಪಃ ಸದ್ರೂಪಾಂ ತ್ವಾಂ ಸಸರ್ಜ ಹ ।
ಪರಮಾನಂದಚಿನ್ಮೂರ್ತಿಃ ಸುಂದರೀಂ ಕೃಷ್ಣವಲ್ಲಭಾಮ್ ॥ ೫ ॥

ಬದ್ಧ್ವಾಂಜಲಿಂ ತ್ವಯಾ ಪೃಷ್ಟಂ ಕಿಂ ಕರೋಮೀತಿ ಚೈಕದಾ ।
ತ್ವಾಂ ತದಾಽಽಜ್ಞಾಪಯತ್ಕೃಷ್ಣೋ ಮದ್ಭಕ್ತಾನ್ ಪೋಷಯೇತಿ ಚ ॥ ೬ ॥

ಅಂಗೀಕೃತಂ ತ್ವಯಾ ತದ್ವೈ ಪ್ರಸನ್ನೋಽಭೂದ್ಧರಿಸ್ತದಾ ।
ಮುಕ್ತಿಂ ದಾಸೀಂ ದದೌ ತುಭ್ಯಂ ಜ್ಞಾನವೈರಾಗ್ಯಕಾವಿಮೌ ॥ ೭ ॥

ಪೋಷಣಂ ಸ್ವೇನ ರೂಪೇಣ ವೈಕುಂಠೇ ತ್ವಂ ಕರೋಷಿ ಚ ।
ಭೂಮೌ ಭಕ್ತವಿಪೋಷಾಯ ಛಾಯಾರೂಪಂ ತ್ವಯಾ ಕೃತಮ್ ॥ ೮ ॥

ಮುಕ್ತಿಂ ಜ್ಞಾನಂ ವಿರಕ್ತಿಂ ಚ ಸಹ ಕೃತ್ವಾ ಗತಾ ಭುವಿ ।
ಕೃತಾದಿದ್ವಾಪರಸ್ಯಾಂತಂ ಮಹಾನಂದೇನ ಸಂಸ್ಥಿತಾ ॥ ೯ ॥

ಕಲೌ ಮುಕ್ತಿಃ ಕ್ಷಯಂ ಪ್ರಾಪ್ತಾ ಪಾಖಂಡಾಮಯಪೀಡಿತಾ ।
ತ್ವದಾಜ್ಞಯಾ ಗತಾ ಶೀಘ್ರಂ ವೈಕುಂಠಂ ಪುನರೇವ ಸಾ ॥ ೧೦ ॥

ಸ್ಮೃತಾ ತ್ವಯಾಪಿ ಚಾತ್ರೈವ ಮುಕ್ತಿರಾಯಾತಿ ಯಾತಿ ಚ ।
ಪುತ್ರೀಕೃತ್ಯ ತ್ವಯೇಮೌ ಚ ಪಾರ್ಶ್ವೇ ಸ್ವಸ್ಯೈವ ರಕ್ಷಿತೌ ॥ ೧೧ ॥

ನಾರದರು ಹೇಳುತ್ತಾರೆ – ಎಲೈ ಭಕ್ತಿಯೇ! ನೀನು ವ್ಯರ್ಥವಾಗಿ ಏಕೆ ದುಃಖಿಸುತ್ತಿರುವೆ ? ನೀನು ಇಷ್ಟು ಚಿಂತಾತುರ ಏಕೆ ಆಗಿರುವೆ ? ಭಗವಾನ್ ಶ್ರೀಕೃಷ್ಣನ ಚರಣಕಮಲಗಳನ್ನು ಚಿಂತಿಸು. ಅವನ ಕೃಪೆಯಿಂದ ನಿನ್ನ ದುಃಖವೆಲ್ಲವೂ ದೂರವಾದೀತು. ॥ ೧ ॥ ಆ ಕೃಷ್ಣನು ಕೌರವರ ಅತ್ಯಾಚಾರದಿಂದ ದ್ರೌಪದಿಯನ್ನು ರಕ್ಷಿಸಿದ್ದನು. ಗೋಪಸುಂದರಿಯರನ್ನು ಸನಾಥಗೊಳಿಸಿದ್ದನು. ಅವನು ದೂರ ಎಲ್ಲಿಗಾದರೂ ಹೋಗಿರುವನೇನು ? ॥ ೨ ॥ ಅದರಲ್ಲಿಯೂ ನೀನು ಭಕ್ತಿಯಾಗಿರುವೆ ಹಾಗೂ ಯಾವಾಗಲೂ ಅವನಿಗೆ ಪ್ರಾಣಕ್ಕಿಂತಲೂ ಹೆಚ್ಚು ಪ್ರಿಯಳಾಗಿರುವೆ. ನೀನು ಕರೆದಾಗಲಾದರೋ ಭಗವಂತನು ನೀಚರ ಮನೆಗಳಿಗೂ ಹೊರಟುಹೋಗುತ್ತಾನೆ. ॥ ೩ ॥ ಕೃತ, ತ್ರೇತಾ, ದ್ವಾಪರ – ಈ ಮೂರು ಯುಗಗಳಲ್ಲಿ ಜ್ಞಾನ, ವೈರಾಗ್ಯಗಳು ಮುಕ್ತಿಯ ಸಾಧನಗಳಾಗಿದ್ದವು. ಆದರೆ ಕಲಿಯುಗದಲ್ಲಾದರೋ ಕೇವಲ ಭಕ್ತಿಯೇ ಬ್ರಹ್ಮಸಾಯುಜ್ಯ (ಮೋಕ್ಷ)ವನ್ನು ಕರುಣಿಸುವಂತಹುದಾಗಿದೆ. ॥ ೪ ॥ ಇದನ್ನು ಯೋಚಿಸಿಯೇ ಪರಮಾನಂದ ಚಿನ್ಮೂರ್ತಿ ಜ್ಞಾನಸ್ವರೂಪ ಶ್ರೀಹರಿಯು ತನ್ನ ಸತ್ಸ್ವರೂಪದಿಂದಲೇ ನಿನ್ನನ್ನು ರಚಿಸಿರುವನು. ನೀನು ಸಾಕ್ಷಾತ್ ಶ್ರೀಕೃಷ್ಣಚಂದ್ರನ ಪ್ರಿಯೆಯಾಗಿದ್ದು ಪರಮ ಸುಂದರಳಾಗಿರುವೆ. ॥ ೫ ॥ ಒಮ್ಮೆ ನೀನು ಭಗವಂತನಲ್ಲಿ 'ನಾನೇನು ಮಾಡಲಿ' ಎಂದು ಕೈಜೋಡಿಸಿಕೊಂಡು ಕೇಳಿದಾಗ, ಅವನು 'ನನ್ನ ಭಕ್ತರನ್ನು ಪೋಷಿಸು' ಎಂದು ನಿನಗೆ ಆಜ್ಞಾಪಿಸಿದ್ದನು. ॥ ೬ ॥ ನೀನು ಭಗವಂತನ ಆ ಆಜ್ಞೆಯನ್ನು ಸ್ವೀಕರಿಸಿದ್ದರಿಂದ ನಿನ್ನ ಮೇಲೆ ಶ್ರೀಹರಿಯು ಬಹುವಾಗಿ ಪ್ರಸನ್ನನಾಗಿ, ನಿನ್ನ ಸೇವೆಗಾಗಿ ಮುಕ್ತಿಯನ್ನು ನಿನಗೆ ದಾಸಿಯಾಗಿ ಒಪ್ಪಿಸಿದ್ದನು ಮತ್ತು ಈ ಜ್ಞಾನ, ವೈರಾಗ್ಯರನ್ನೂ ಪುತ್ರರಾಗಿ ಕರುಣಿಸಿದ್ದನು. ॥ ೭ ॥ ನೀನು ನಿನ್ನ ಸಾಕ್ಷಾತ್ ಸ್ವರೂಪದಿಂದ ವೈಕುಂಠಧಾಮದಲ್ಲಿಯೇ ಭಕ್ತರನ್ನು ಪೋಷಿಸುತ್ತಿರುವೆ. ಭೂಲೋಕದಲ್ಲಾದರೋ ನೀನು ಅವರ ಪುಷ್ಟಿಗಾಗಿ ಕೇವಲ ಛಾಯಾರೂಪವನ್ನು ಧರಿಸಿರುವೆ. ॥ ೮ ॥

ಆಗ ನೀನು ಮುಕ್ತಿ, ಜ್ಞಾನ, ವೈರಾಗ್ಯ ಇವರೊಂದಿಗೆ ಭೂಲೋಕಕ್ಕೆ ಬಂದೆ ಹಾಗೂ ಕೃತಯುಗದಿಂದ ದ್ವಾಪರದವರೆಗೆ ಬಹಳ ಆನಂದದಿಂದ ವಾಸಿಸಿದೆ. ॥ ೯ ॥ ಕಲಿಯುಗದಲ್ಲಿ ನಿನ್ನ ದಾಸಿಯಾದ ಮುಕ್ತಿಯು ಪಾಖಂಡರೂಪೀ ರೋಗದಿಂದ ಪೀಡಿತಳಾಗಿ ಕ್ಷೀಣವಾಗತೊಡಗಿದ್ದಳು. ಇದರಿಂದ ಅವಳಾದರೋ ಕೂಡಲೇ ನಿನ್ನ ಅಪ್ಪಣೆಯಂತೆ ವೈಕುಂಠಲೋಕಕ್ಕೆ ಹೊರಟು ಹೋದಳು. ॥ ೧೦ ॥ ಈ ಲೋಕದಲ್ಲಿಯೂ ನೀನು ನೆನೆದಾಗಲೇ ಅವಳು ಬರುತ್ತಾಳೆ, ಮತ್ತೆ ಪುನಃ ಹೊರಟುಹೋಗುತ್ತಾಳೆ. ಆದರೆ ಈ ಜ್ಞಾನ ವೈರಾಗ್ಯರನ್ನು ನೀನು ಪುತ್ರರೆಂದು ಬಗೆದು ನಿನ್ನ ಬಳಿಯಲ್ಲೇ ಇರಿಸಿಕೊಂಡಿರುವೆ. ॥ ೧೧ ॥ ಈ ಕಲಿಯುಗದಲ್ಲಿ ಜನರ ಉಪೇಕ್ಷೆ

ಉಪೇಕ್ಷಾತಃ ಕಲೌ ಮಂದೌ ವೃದ್ಧೌ ಜಾತೌ ಸುತೌ ತವ ।
ತಥಾಪಿ ಚಿಂತಾಂ ಮುಂಚ ತ್ವಮುಪಾಯಂ ಚಿಂತಯಾಮ್ಯಹಮ್
॥ ೧೨ ॥

ಕಲಿನಾ ಸದೃಶಃ ಕೋಽಪಿ ಯುಗೋ ನಾಸ್ತಿ ವರಾನನೇ ।
ತಸ್ಮಿಂಸ್ತ್ವಾಂ ಸ್ಥಾಪಯಿಷ್ಯಾಮಿ ಗೇಹೇ ಗೇಹೇ ಜನೇ ಜನೇ
॥ ೧೩ ॥

ಅನ್ಯಧರ್ಮಾಂಸ್ತಿರಸ್ಕೃತ್ಯ ಪುರಸ್ಕೃತ್ಯ ಮಹೋತ್ಸವಾನ್ ।
ತದಾ ನಾಹಂ ಹರೇರ್ದಾಸೋ ಲೋಕೇ ತ್ವಾಂ ನ ಪ್ರವರ್ತಯೇ
॥ ೧೪ ॥

ತ್ವದನ್ವಿತಾಶ್ಚ ಯೇ ಜೀವಾ ಭವಿಷ್ಯಂತಿ ಕಲಾವಿಹ ।
ಪಾಪಿನೋಽಪಿ ಗಮಿಷ್ಯಂತಿ ನಿರ್ಭಯಂ ಕೃಷ್ಣಮಂದಿರಮ್
॥ ೧೫ ॥

ಯೇಷಾಂ ಚಿತ್ತೇ ವಸೇದ್ಭಕ್ತಿಃ ಸರ್ವದಾ ಪ್ರೇಮರೂಪಿಣೀ ।
ನ ತೇ ಪಶ್ಯಂತಿ ಕೀನಾಶಂ ಸ್ವಪ್ನೇಽಪ್ಯಮಲಮೂರ್ತಯಃ
॥ ೧೬ ॥

ನ ಪ್ರೇತೋ ನ ಪಿಶಾಚೋ ವಾ ರಾಕ್ಷಸೋ ವಾಸುರೋಽಪಿ ವಾ ।
ಭಕ್ತಿಯುಕ್ತಮನಸ್ಕಾನಾಂ ಸ್ಪರ್ಶನೇ ನ ಪ್ರಭುರ್ಭವೇತ್
॥ ೧೭ ॥

ನ ತಪೋಭಿರ್ನ ವೇದೈಶ್ಚ ನ ಜ್ಞಾನೇನಾಪಿ ಕರ್ಮಣಾ ।
ಹರಿರ್ಹಿ ಸಾಧ್ಯತೇ ಭಕ್ತ್ಯಾ ಪ್ರಮಾಣಂ ತತ್ರ ಗೋಪಿಕಾಃ
॥ ೧೮ ॥

ನೃಣಾಂ ಜನ್ಮ ಸಹಸ್ರೇಣ ಭಕ್ತೌ ಪ್ರೀತಿರ್ಹಿ ಜಾಯತೇ ।
ಕಲೌ ಭಕ್ತಿಃ ಕಲೌ ಭಕ್ತಿರ್ಭಕ್ತ್ಯಾ ಕೃಷ್ಣಃ ಪುರಃ ಸ್ಥಿತಃ
॥ ೧೯ ॥

ಭಕ್ತಿ ದ್ರೋಹಕರಾ ಯೇ ಚ ತೇ ಸೀದಂತಿ ಜಗತ್ತ್ರಯೇ ।
ದುರ್ವಾಸಾ ದುಃಖಮಾಪನ್ನಃ ಪುರಾ ಭಕ್ತವಿನಿಂದಕಃ
॥ ೨೦ ॥

ಅಲಂ ವ್ರತೈರಲಂ ತೀರ್ಥೈರಲಂ ಯೋಗೈರಲಂ ಮಖೈಃ ।
ಅಲಂ ಜ್ಞಾನಕಥಾಲಾಪೈರ್ಭಕ್ತಿರೇಕೈವ ಮುಕ್ತಿದಾ
॥ ೨೧ ॥

ಸೂತ ಉವಾಚ

ಇತಿ ನಾರದನಿರ್ಣೀತಂ ಸ್ವಮಾಹಾತ್ಮ್ಯಂ ನಿಶಮ್ಯ ಸಾ ।
ಸರ್ವಾಂಗ ಪುಷ್ಟಿ ಸಂಯುಕ್ತಾ ನಾರದಂ ವಾಕ್ಯಮಬ್ರವೀತ್
॥ ೨೨ ॥

ಭಕ್ತಿರುವಾಚ

ಅಹೋ ನಾರದ ಧನ್ಯೋಽಸಿ ಪ್ರೀತಿಸ್ತೇ ಮಯಿ ನಿಶ್ಚಲಾ ।
ನ ಕದಾಚಿದ್ವಿಮುಂಚಾಮಿ ಚಿತ್ತೇ ಸ್ಥಾಸ್ಯಾಮಿ ಸರ್ವದಾ
॥ ೨೩ ॥

ದಿಂದಾಗಿ ನಿನ್ನ ಈ ಪುತ್ರರು ಉತ್ಸಾಹಹೀನರಾಗಿ ವೃದ್ಧರಾಗಿದ್ದಾರೆ. ಹೀಗಿದ್ದರೂ ನೀನು ಚಿಂತಿಸಬೇಡ. ನಾನು ಇವರ ನವಜೀವನದ ಉಪಾಯವನ್ನು ಯೋಚಿಸುತ್ತೇನೆ. ॥ ೧೨ ॥ ಸುಂದರೀ! ಕಲಿಯುಗಕ್ಕೆ ಸಮಾನವಾದ ಯುಗವು ಬೇರೊಂದಿಲ್ಲ. ಈ ಯುಗದಲ್ಲಿ ನಾನು ನಿನ್ನನ್ನು ಮನೆ-ಮನೆಗಳಲ್ಲಿ, ಪ್ರತಿಯೊಬ್ಬ ಮನುಷ್ಯನ ಹೃದಯದಲ್ಲಿ ಸ್ಥಾಪಿಸುತ್ತೇನೆ. ॥ ೧೩ ॥ ನೋಡುತ್ತಿರು. ಬೇರೆ ಎಲ್ಲ ಧರ್ಮಗಳನ್ನು ಅದುಮಿ, ಭಕ್ತಿವಿಷಯವಾದ ಮಹೋತ್ಸವಗಳನ್ನು ಮುಂದೆ ಮಾಡಿ ನಾನು ಲೋಕದಲ್ಲಿ ನಿನ್ನ ಪ್ರಚಾರಮಾಡದಿದ್ದರೆ ನಾನು ಶ್ರೀಹರಿಯ ದಾಸನೇ ಅಲ್ಲ. ॥ ೧೪ ॥ ಈ ಕಲಿಯುಗದಲ್ಲಿ ನಿನ್ನಿಂದ ಯುಕ್ತರಾದ ಜೀವಿಗಳು ಪಾಪಿಗಳಾಗಿದ್ದರೂ ನಿರ್ಭಯವಾಗಿ ಭಗವಾನ್ ಶ್ರೀಕೃಷ್ಣನ ಅಭಯಧಾಮವನ್ನು ಪಡೆದುಕೊಳ್ಳುವರು. ॥ ೧೫ ॥ ಹೃದಯದಲ್ಲಿ ನಿರಂತರ ಪ್ರೇಮ ಸ್ವರೂಪೀ ಭಕ್ತಿಯು ವಾಸಿಸುವ ಶುದ್ಧಾಂತಃಕರಣ ಪುರುಷರು ಸ್ವಪ್ನದಲ್ಲಿಯೂ ಯಮರಾಜನನ್ನು ನೋಡಲಾರರು. ॥ ೧೬ ॥ ಹೃದಯದಲ್ಲಿ ಭಕ್ತಿಯು ವಾಸಿಸುವವರನ್ನು ಪ್ರೇತ, ಪಿಶಾಚ, ರಾಕ್ಷಸ, ದೈತ್ಯ ಮೊದಲಾದವರು ಮುಟ್ಟಲೂ ಕೂಡ ಸಮರ್ಥರಾಗಲಾರರು. ॥ ೧೭ ॥ ಭಗವಂತನನ್ನು ತಪಸ್ಸು, ವೇದಾಧ್ಯಯನ, ಜ್ಞಾನ, ಕರ್ಮ ಮುಂತಾದ ಯಾವ ಸಾಧನೆಗಳಿಂದಲೂ ವಶಪಡಿಸಿಕೊಳ್ಳಲಾಗದು. ಅವನು ಕೇವಲ ಭಕ್ತಿಯಿಂದಲೇ ವಶೀಭೂತನಾಗುತ್ತಾನೆ. ಇದರಲ್ಲಿ ವ್ರಜದ ಗೋಪಿಯರೇ ಪ್ರಮಾಣರಾಗಿದ್ದಾರೆ. ॥ ೧೮ ॥ ಮನುಷ್ಯರ ಸಾವಿರಾರು ಜನ್ಮಗಳ ಪುಣ್ಯ-ಪ್ರಭಾವದಿಂದಲೇ ಭಕ್ತಿಯಲ್ಲಿ ಪ್ರೀತಿ ಉಂಟಾಗುತ್ತದೆ. ಕಲಿಯುಗದಲ್ಲಿ ಖಂಡಿತವಾಗಿ ಭಕ್ತಿಯೇ ಸಾರವಾಗಿದೆ. ಭಕ್ತಿಯಿಂದಲಾದರೋ ಸಾಕ್ಷಾತ್ ಶ್ರೀಕೃಷ್ಣಚಂದ್ರನು ಇದಿರಿಗೆ ಉಪಸ್ಥಿತನಾಗುತ್ತಾನೆ. ॥ ೧೯ ॥ ಭಕ್ತಿಯೊಂದಿಗೆ ದ್ರೋಹಮಾಡುವವರು ಮೂರೂ ಲೋಕಗಳಲ್ಲಿ ದುಃಖವೇ-ದುಃಖವನ್ನು ಪಡೆಯುತ್ತಾರೆ. ಹಿಂದೆ ಭಕ್ತ ಅಂಬರೀಷನ ತಿರಸ್ಕಾರ ಮಾಡಿದ್ದರಿಂದ ದುರ್ವಾಸ ಋಷಿಯು ಬಹಳ ಕಷ್ಟಪಡಬೇಕಾಯಿತು. ॥ ೨೦ ॥ ವ್ರತ, ತೀರ್ಥ, ಯೋಗ, ಯಜ್ಞ, ಜ್ಞಾನಚರ್ಚೆ ಇವೆಲ್ಲವನ್ನು ಸಾಕು. ಇಂತಹ ಅನೇಕ ಸಾಧನೆಗಳ ಆವಶ್ಯಕತೆ ಇಲ್ಲ. ಏಕಮಾತ್ರ ಭಕ್ತಿಯೇ ಮುಕ್ತಿಯನ್ನು ಕೊಡುವಂತಹುದಾಗಿದೆ. ॥ ೨೧ ॥

ಸೂತಪುರಾಣಿಕರು ಹೇಳುತ್ತಾರೆ – ಹೀಗೆ ನಾರದರು ನಿರ್ಣಯಿಸಿರುವ ತನ್ನ ಮಾಹಾತ್ಮ್ಯವನ್ನು ಕೇಳಿ ಭಕ್ತಿಯ ಸರ್ವಾಂಗಗಳು ಹೃಷ್ಟ-ಪುಷ್ಟವಾದುವು. ಅವಳು ನಾರದರಲ್ಲಿ ಹೇಳತೊಡಗಿದಳು ॥ ೨೨ ॥

ಭಕ್ತಿಯು ಇಂತೆಂದಳು – ಓ ನಾರದರೇ! ನೀವು ಧನ್ಯರಾಗಿರುವಿರಿ. ನಿಮಗೆ ನನ್ನಲ್ಲಿ ನಿಶ್ಚಲವಾದ ಪ್ರೀತಿ ಇದೆ. ನಾನು ಎಂದಾಗಲೂ ನಿಮ್ಮ ಹೃದಯದಲ್ಲಿ ಇರುವೆನು. ಎಂದೆಂದಿಗೂ ನಿಮ್ಮನ್ನು ಬಿಟ್ಟು ಹೋಗಲಾರೆನು. ॥ ೨೩ ॥ ಸಾಧುಗಳೇ! ನೀವು ತುಂಬಾ ಕೃಪಾಳುಗಳಾಗಿದ್ದೀರಿ. ನೀವು ಕ್ಷಣಮಾತ್ರದಲ್ಲಿ ನನ್ನ ದುಃಖವೆಲ್ಲವನ್ನು ದೂರಮಾಡಿದಿರಿ. ಆದರೆ ನನ್ನ ಪುತ್ರರಲ್ಲಿ ಇನ್ನೂ ಚೈತನ್ಯ

ಕೃಪಾಲುನಾ ತ್ವಯಾ ಸಾಧೋ ಮದ್ಭಾಗ್ಯಾ ದ್ದೃಷ್ಟಿನಾ ಕ್ಷಣಾತ್ ।
ಪುತ್ರಯೋಶ್ಚೇತನಾ ನಾಸ್ತಿ ತತೋ ಬೋಧಯ ಬೋಧಯ ॥ ೨೪ ॥

ಸೂತ ಉವಾಚ

ತಸ್ಯಾ ವಚಃ ಸಮಾಕರ್ಣ್ಯ ಕಾರುಣ್ಯಂ ನಾರದೋ ಗತಃ ।
ತಯೋರ್ಬೋಧನಮಾರೇಭೇ ಕರಾಗ್ರೇಣ ವಿಮರ್ದಯನ್ ॥ ೨೫ ॥

ಮುಖಂ ಸಂಯೋಜ್ಯ ಕರ್ಣಾಂತೇ ಶಬ್ದಮುಚ್ಚೈಃ ಸಮುಚ್ಚರನ್ ।
ಜ್ಞಾನ ಪ್ರಬುಧ್ಯತಾಂ ಶೀಘ್ರಂ ರೇ ವೈರಾಗ್ಯ ಪ್ರಬುಧ್ಯತಾಮ್ ॥ ೨೬ ॥

ವೇದವೇದಾಂತಘೋಷೈಶ್ಚ ಗೀತಾಪಾಠೈರ್ಮುಹುರ್ಮುಹುಃ ।
ಬೋಧ್ಯಮಾನೌ ತದಾ ತೇನ ಕಥಂಚಿಚ್ಚೋತ್ಥಿತೌ ಬಲಾತ್ ॥ ೨೭ ॥

ನೇತ್ರೈರನವಲೋಕಂತೌ ಜೃಂಭಂತೌ ಸಾಲಸಾವುಭೌ ।
ಬಕವತ್ಪಲಿತೌ ಪ್ರಾಯಃ ಶುಷ್ಕಕಾಷ್ಠಸಮಾಂಗಕೌ ॥ ೨೮ ॥

ಕ್ಷುತ್ಕ್ಷಾಮೌ ತೌ ನಿರೀಕ್ಷ್ಯೈವ ಪುನಃ ಸ್ವಾಪಪರಾಯಣೌ ।
ಋಷಿಶ್ಚಿಂತಾಪರೋ ಜಾತಃ ಕಿಂ ವಿಧೇಯಂ ಮಯೇತಿ ಚ ॥ ೨೯ ॥

ಅಹೋ ನಿದ್ರಾ ಕಥಂ ಯಾತಿ ವೃದ್ಧತ್ವಂ ಚ ಮಹತ್ತರಮ್ ।
ಚಿಂತಯನ್ನಿತಿ ಗೋವಿಂದಂ ಸ್ಮಾರಯಾಮಾಸ ಭಾರ್ಗವ ॥ ೩೦ ॥

ವ್ಯೋಮವಾಣೀ ತದೈವಾಭೂನ್ಮಾ ಋಷೇ ಖಿದ್ಯತಾಮಿತಿ ।
ಉದ್ಯಮಃ ಸಫಲಸ್ತೇಯಂ ಭವಿಷ್ಯತಿ ನ ಸಂಶಯಃ ॥ ೩೧ ॥

ಏತದರ್ಥಂ ತು ಸತ್ಕರ್ಮ ಸುರರ್ಷೇ ತ್ವಂ ಸಮಾಚರ ।
ತತ್ತೇ ಕರ್ಮಾಭಿಧಾಸ್ಯಂತಿ ಸಾಧವಃ ಸಾಧುಭೂಷಣಾಃ ॥ ೩೨ ॥

ಸತ್ಕರ್ಮಣಿ ಕೃತೇ ತಸ್ಮಿನ್ ಸನಿದ್ರಾ ವೃದ್ಧತಾನಯೋಃ ।
ಗಮಿಷ್ಯತಿ ಕ್ಷಣಾದ್ಭಕ್ತಿಃ ಸರ್ವತಃ ಪ್ರಸರಿಷ್ಯತಿ ॥ ೩೩ ॥

ಇತ್ಯಾಕಾಶವಚಃ ಸ್ಪಷ್ಟಂ ತತ್ಸರ್ವೈರಪಿ ವಿಶ್ರುತಮ್ ।
ನಾರದೋ ವಿಸ್ಮಯಂ ಲೇಭೇ ನೇದಂ ಜ್ಞಾತಮಿತಿ ಬ್ರುವನ್ ॥ ೩೪ ॥

ನಾರದ ಉವಾಚ

ಅನಯಾಕಾಶವಾಣ್ಯಾಪಿ ಗೋಪ್ಯತ್ವೇನ ನಿರೂಪಿತಮ್ ।
ಕಿಂ ವಾ ತತ್ಸಾಧನಂ ಕಾರ್ಯಂ ಯೇನ ಕಾರ್ಯಂ ಭವೇತ್ತಯೋಃ ॥ ೩೫ ॥

ಬಂದಿಲ್ಲವಲ್ಲ! ನೀವು ಇವರನ್ನು ಬೇಗನೇ ಎಚ್ಚರಿಸಿ, ಸಚೇತನರಾಗಿಸಿರಿ. ॥ ೨೪ ॥

ಸೂತಪುರಾಣಿಕರು ಹೇಳುತ್ತಾರೆ – ಭಕ್ತಿಯ ಈ ಮಾತುಗಳನ್ನು ಕೇಳಿ ನಾರದರಿಗೆ ತುಂಬಾ ಕರುಣೆ ಉಂಟಾಗಿ, ಅವರು ಜ್ಞಾನ, ವೈರಾಗ್ಯ ಇವರನ್ನು ಕೈಯಿಂದ ಅಲುಗಾಡಿಸುತ್ತಾ ಎಚ್ಚರಿಸತೊಡಗಿದರು. ॥ ೨೫ ॥ ಮತ್ತೆ ಅವರ ಕಿವಿಗೆ ಬಾಯಿಹಚ್ಚಿ ಜೋರಾಗಿ ಎಲೈ ಜ್ಞಾನವೇ! ಬೇಗನೇ ಎಚ್ಚರನಾಗು, ಎಲೈ ವೈರಾಗ್ಯವೇ! ಬೇಗನೇ ಎಚ್ಚರವಾಗು ಎಂದು ಹೇಳಿದರು. ॥ ೨೬ ॥ ಬಳಿಕ ಅವರು ವೇದಧ್ವನಿ, ವೇದಾಂತಘೋಷ, ಪುನಃ-ಪುನಃ ಗೀತೆಯನ್ನು ಪಠಿಸಿ ಅವರನ್ನು ಎಚ್ಚರಿಸಿದರು. ಇದರಿಂದ ಅವರು ಹೇಗಾದರೂ ಬಲವಂತವಾಗಿ ಎಚ್ಚರಗೊಂಡರು. ॥ ೨೭ ॥ ಆದರೆ ಆಲಸ್ಯದ ಕಾರಣ ಅವರಿಬ್ಬರೂ ಆಕಳಿಸುತ್ತಾ, ಕಣ್ಣುಬಿಟ್ಟು ನೋಡದಾದರು. ಅವರ ಕೂದಲು ಕೊಕ್ಕರೆಯಂತೆ ಬೆಳ್ಳಗಾಗಿದ್ದವು. ಅವರ ಅಂಗಾಂಗಗಳು ಒಣಗಿದ ಕಟ್ಟಿಗೆಯಂತಾಗಿ ನಿಸ್ತೇಜ ಹಾಗೂ ಕಠೋರವಾಗಿದ್ದವು. ॥ ೨೮ ॥ ಹೀಗೆ ಹಸಿವು-ಬಾಯಾರಿಕೆಯಿಂದ ಅತ್ಯಂತ ದುರ್ಬಲರಾಗಿದ್ದ ಕಾರಣ ಅವರು ಪುನಃ ಮಲಗುವುದನ್ನು ಕಂಡು ನಾರದರಿಗೆ ಬಹಳ ಚಿಂತೆಯಾಯಿತು. 'ಈಗ ನಾನು ಏನು ಮಾಡಬೇಕು?' ಎಂದು ಯೋಚಿಸತೊಡಗಿದರು. ॥ ೨೯ ॥ ಇವರ ಈ ನಿದ್ದೆ ಮತ್ತು ಇದರಿಂದಲೂ ಹೆಚ್ಚಾಗಿ ಇವರ ವೃದ್ಧಾವಸ್ಥೆ ಹೇಗೆ ದೂರವಾಗಬಹುದು? ಶೌನಕರೇ! ಈ ಪ್ರಕಾರ ಚಿಂತಿಸುತ್ತಾ ಅವರು ಭಗವಂತನನ್ನು ಸ್ಮರಿಸತೊಡಗಿದರು. ॥ ೩೦ ॥ ಆಗಲೇ ಆಕಾಶವಾಣಿಯೊಂದು ನುಡಿಯಿತು – "ಓ ಮುನಿಯೇ! ದುಃಖಿಸಬೇಡ. ನಿನ್ನ ಈ ಉದ್ಯೋಗವು ನಿಸ್ಸಂದೇಹವಾಗಿ ಸಫಲವಾದೀತು. ॥ ೩೧ ॥ ದೇವರ್ಷಿಯೇ! ಇದಕ್ಕಾಗಿ ನೀನು ಒಂದು ಸತ್ಕರ್ಮವನ್ನು ಮಾಡು. ಆ ಕರ್ಮವನ್ನು ನಿನಗೆ ಸಂತಶಿರೋಮಣಿ ಮಹಾನುಭಾವರು ತಿಳಿಸುವರು. ॥ ೩೨ ॥ ಆ ಸತ್ಕರ್ಮದ ಅನುಷ್ಠಾನವನ್ನು ಮಾಡುತ್ತಲೇ ಕ್ಷಣಾರ್ಧದಲ್ಲಿ ಇವರ ನಿದ್ದೆ ಮತ್ತು ವೃದ್ಧಾವಸ್ಥೆಯು ಹೊರಟುಹೋದೀತು. ಎಲ್ಲೆಡೆ ಭಕ್ತಿಯ ಪ್ರಸಾರವಾದೀತು." ॥ ೩೩ ॥ ಈ ಆಕಾಶವಾಣಿಯು ಅಲ್ಲಿ ಎಲ್ಲರಿಗೆ ಸ್ಪಷ್ಟವಾಗಿ ಕೇಳಿಸಿತು. ಇದರಿಂದ ನಾರದರಿಗೆ ತುಂಬಾ ವಿಸ್ಮಯವಾಗಿ 'ನನಗಾದರೋ ಇದರ ಅರ್ಥ ಏನೂ ಅರಿವಾಗಲಿಲ್ಲ' ಎಂದು ಹೇಳತೊಡಗಿದರು. ॥ ೩೪ ॥

ನಾರದರು ಹೇಳಿದರು – ಈ ಆಕಾಶವಾಣಿಯೂ ಗುಪ್ತವಾಗಿಯೇ ನುಡಿದಿದೆ. ಯಾವ ಸಾಧನ ಮಾಡಿದರೆ ಇವರ ಕಾರ್ಯಸಿದ್ಧವಾದೀತೆಂಬುದನ್ನು ಇದು ಹೇಳಲಿಲ್ಲ. ॥ ೩೫ ॥ ಆ ಸಂತರು ಎಲ್ಲಿ ಸಿಗಬಲ್ಲರೋ ತಿಳಿಯದು. ಯಾವ ವಿಧದಿಂದ ಸಾಧನೆಯನ್ನು ತಿಳಿಸುವರು? ಈಗ ಆಕಾಶವಾಣಿಯು ಏನೆಲ್ಲ ಹೇಳಿತೋ ಅದರ ಅನುಸಾರ ನಾನು ಏನು ಮಾಡಬೇಕು? ॥ ೩೬ ॥

ಸೂತಪುರಾಣಿಕರು ಹೇಳುತ್ತಾರೆ – ಶೌನಕರೇ! ಆಗ ಜ್ಞಾನ, ವೈರಾಗ್ಯರಿಬ್ಬರನ್ನು ಅಲ್ಲೇ ಬಿಟ್ಟು ನಾರದ ಮುನಿಗಳು ಅಲ್ಲಿಂದ

ಷ್ಠ ಭವಿಷ್ಯತಿ ಸಂತಸ್ತೇ ಕಥಂ ದಾಸ್ಯಂತಿ ಸಾಧನಮ್ ।
ಮಯಾತ್ರ ಕಿಂ ಪ್ರಕರ್ತವ್ಯಂ ಯದುಕ್ತಂ ವ್ಯೋಮಭಾಷಯಾ ॥ ೩೬ ॥

ಸೂತ ಉವಾಚ

ತತ್ರ ದ್ವಾವಪಿ ಸಂಸ್ಥಾಪ್ಯ ನಿರ್ಗತೋ ನಾರದೋ ಮುನಿಃ ।
ತೀರ್ಥಂ ತೀರ್ಥಂ ವಿನಿಷ್ಕ್ರಮ್ಯ ಪೃಚ್ಛನ್ಮಾರ್ಗೇ ಮುನೀಶ್ವರಾನ್ ॥ ೩೭ ॥

ವೃತ್ತಾಂತಃ ಶ್ರೂಯತೇ ಸರ್ವೈಃ ಕಿಂಚಿನ್ನಿಶ್ಚಿತ್ಯ ನೋಚ್ಯತೇ ।
ಅಸಾಧ್ಯಂ ಕೇಚನ ಪ್ರೋಚುರ್ದುರ್ಜ್ಞೇಯಮಿತಿ ಚಾಪರೇ ।
ಮೂಕೀಭೂತಾಸ್ತಥಾನ್ಯೇ ತು ಕಿಯಂತಸ್ತು ಪಲಾಯಿತಾಃ ॥ ೩೮ ॥

ಹಾಹಾಕಾರೋ ಮಹಾನಾಸೀತ್ ತ್ರೈಲೋಕ್ಯೇ ವಿಸ್ಮಯಾವಹಃ ।
ವೇದವೇದಾಂತಘೋಷೈಶ್ಚ ಗೀತಾಪಾಠೈರ್ವಿಬೋಧಿತಮ್ ॥ ೩೯ ॥

ಭಕ್ತಿಜ್ಞಾನವಿರಾಗಾಣಾಂ ನೋದತಿಷ್ಠತ್ತ್ರಿಕಂ ಯದಾ ।
ಉಪಾಯೋ ನಾಪರೋಽಸ್ತೀತಿ ಕರ್ಣೇ ಕರ್ಣೇಽಜಪಂಜನಾಃ ॥ ೪೦ ॥

ಯೋಗಿನಾ ನಾರದೇನಾಪಿ ಸ್ವಯಂ ನ ಜ್ಞಾಯತೇ ತು ಯತ್ ।
ತತ್ಕಥಂ ಶಕ್ಯತೇ ವಕ್ತುಮಿತರೈರಿಹ ಮಾನುಷೈಃ ॥ ೪೧ ॥

ಏವಮೃಷಿಗಣೈಃ ಪೃಷ್ಟೈರ್ನಿರ್ಣೀಯೋಕ್ತಂ ದುರಾವಹಮ್ ॥ ೪೨ ॥

ತಚ್ಚಿಂತಾತುರಃ ಸೋಽಥ ಬದರೀವನಮಾಗತಃ ।
ತಪಶ್ಚರಾಮಿ ಚಾತ್ರೇತಿ ತದರ್ಥಂ ಕೃತನಿಶ್ಚಯಃ ॥ ೪೩ ॥

ತಾವದ್ದದರ್ಶ ಪುರತಃ ಸನಕಾದೀನ್ ಮುನೀಶ್ವರಾನ್ ।
ಕೋಟಿಸೂರ್ಯಸಮಾಭಾಸಾನುವಾಚ ಮುನಿಸತ್ತಮಃ ॥ ೪೪ ॥

ನಾರದ ಉವಾಚ

ಇದಾನೀಂ ಭೂರಿಭಾಗ್ಯೇನ ಭವದ್ಭಿಃ ಸಂಗಮೋಽಭವತ್ ।
ಕುಮಾರಾ ಬ್ರುವತಾಂ ಶೀಘ್ರಂ ಕೃಪಾಂ ಕೃತ್ವಾ ಮಮೋಪರಿ ॥ ೪೫ ॥

ಭವಂತೋ ಯೋಗಿನಃ ಸರ್ವೇ ಬುದ್ಧಿಮಂತೋ ಬಹುಶ್ರುತಾಃ ।
ಪಂಚಹಾಯನಸಂಯುಕ್ತಾಃ ಪೂರ್ವೇಷಾಮಪಿ ಪೂರ್ವಜಾಃ ॥ ೪೬ ॥

ಸದಾ ವೈಕುಂಠನಿಲಯಾ ಹರಿಕೀರ್ತನತತ್ಪರಾಃ ।
ಲೀಲಾಮೃತರಸೋನ್ಮತ್ತಾಃ ಕಥಾಮಾತ್ರೈಕಜೀವಿನಃ ॥ ೪೭ ॥

ಹರಿಃ ಶರಣಮೇವಂ ಹಿ ನಿತ್ಯಂ ಯೇಷಾಂ ಮುಖೇ ವಚಃ ।
ಅತಃ ಕಾಲಸಮಾದಿಷ್ಟಾ ಜರಾ ಯುಷ್ಮಾನ್ನ ಬಾಧತೇ ॥ ೪೮ ॥

ಹೊರಟುಬಿಟ್ಟರು. ಪ್ರತಿಯೊಂದು ತೀರ್ಥಕ್ಷೇತ್ರಕ್ಕೆ ಹೋಗಿ, ಮಾರ್ಗದಲ್ಲಿ ಸಿಗುವ ಮುನೀಶ್ವರರಲ್ಲಿ ಆ ಸಾಧನೆಯ ಕುರಿತು ಕೇಳತೊಡಗಿದರು. ॥ ೩೭ ॥ ಅವರ ಮಾತನ್ನು ಎಲ್ಲರೂ ಕೇಳುತ್ತಿದ್ದರು. ಆದರೆ ಅದರ ವಿಷಯದಲ್ಲಿ ಯಾರೂ ನಿಶ್ಚಿತವಾದ ಉತ್ತರವನ್ನು ಕೊಡದಾದರು. ಕೆಲವರು ಇದು ಅಸಾಧ್ಯವೆಂದು ಹೇಳಿದರು. ಕೆಲವರಂತೂ – ಇದನ್ನು ಸರಿಯಾಗಿ ತಿಳಿಯುವುದು ಕಠಿಣವಾಗಿದೆ. ಕೆಲವರು ಕೇಳಿ ಸುಮ್ಮನಾದರೆ. ಕೆಲ-ಕೆಲವರು ಅಲ್ಲಿಂದಲೇ ಸುಮ್ಮನೆ ಪಲಾಯನ ಮಾಡಿದರು. ॥ ೩೮ ॥ ತ್ರೈಲೋಕ್ಯದಲ್ಲಿ ಆಶ್ಚರ್ಯಜನಕ ಮಹಾನ್ ಹಾಹಾಕಾರವೆದ್ದಿತು. ಜನರು ಪರಸ್ಪರ ಮಾತಾಡತೊಡಗಿದರು. ಅಯ್ಯೋ! ವೇದವೇದಾಂತಘೋಷ, ಪದೇ-ಪದೇ ಗೀತಾ-ಪಾರಾಯಣ ಕೇಳಿಯೂ ಕೂಡ ಭಕ್ತಿ, ಜ್ಞಾನ, ವೈರಾಗ್ಯ ಇವು ಮೂವರು ಎಚ್ಚರಗೊಳ್ಳದಿರುವಾಗ ಬೇರೆ ಯಾವ ಉಪಾಯವೂ ಇಲ್ಲ. ॥ ೩೯-೪೦ ॥ ಸಾಕ್ಷಾತ್ ಯೋಗಿರಾಜ ನಾರದರಿಗೂ ತಿಳಿಯದಿರುವುದನ್ನು ಬೇರೆ ಸಾಮಾನ್ಯ ಜನರು ಹೇಗೆ ತಿಳಿಸಬಲ್ಲರು? ॥ ೪೧ ॥ ಈ ಪ್ರಕಾರ ದೊಡ್ಡ-ದೊಡ್ಡ ಋಷಿಗಳ ಬಳಿ ಇದರ ವಿಷಯದಲ್ಲಿ ಕೇಳಲಾಯಿತೋ ಅವರೆಲ್ಲರೂ 'ಇದು ದುಸ್ಸಾಧ್ಯವಾಗಿದೆ' ಎಂದು ನಿರ್ಣಯಿಸಿ, ಹೇಳಿಬಿಟ್ಟರು. ॥ ೪೨ ॥

ಆಗ ನಾರದರು ತುಂಬಾ ಚಿಂತಾತುರರಾಗಿ ಬದರೀವನಕ್ಕೆ ಬಂದರು. ಜ್ಞಾನ, ವೈರಾಗ್ಯರನ್ನು ಎಚ್ಚರಿಸಲು ನಾನು ಇಲ್ಲಿ ತಪಸ್ಸನ್ನು ಮಾಡುವೆನೆಂದು ನಿಶ್ಚಯಿಸಿದರು. ॥ ೪೩ ॥ ಆಗಲೇ ಕೋಟಿ ಸೂರ್ಯರಂತೆ ತೇಜಸ್ವಿಗಳಾದ ಸನಕಾದಿ ಮುನೀಶ್ವರರು ಅವರಿಗೆ ಇದಿರಿಗಡೆ ಕಂಡುಬಂದರು. ಅವರನ್ನು ನೋಡಿ ಆ ಮುನಿ ಶ್ರೇಷ್ಠರಾದ ನಾರದರು ಕೇಳತೊಡಗಿದರು. ॥ ೪೪ ॥

ನಾರದರೆಂದರು – ಓ ಮಹಾತ್ಮರೇ! ಈಗ ಮಹದ್ಭಾಗ್ಯದಿಂದ ನನಗೆ ನಿಮ್ಮೊಂದಿಗೆ ಸಮಾಗಮವಾಗಿದೆ. ನೀವು ನನ್ನಮೇಲೆ ಕೃಪೆ ಮಾಡಿ ಬೇಗನೆ ಆ ಸಾಧನೆಯನ್ನು ಹೇಳಿರಿ. ॥ ೪೫ ॥ ನೀವೆಲ್ಲರೂ ಮಹಾಯೋಗಿಗಳೂ, ಬುದ್ಧಿವಂತರೂ, ವಿದ್ವಾಂಸರೂ ಆಗಿದ್ದೀರಿ. ನೀವು ನೋಡಲು ಐದುವರ್ಷದ ಬಾಲಕರಂತೆ ಕಂಡುಬಂದರೂ ನೀವು ಪೂರ್ವಜರಿಗೂ ಪೂರ್ವಜರಾಗಿದ್ದೀರಿ. ॥ ೪೬ ॥ ನೀವುಗಳು ಸದಾಕಾಲ ವೈಕುಂಠ ಧಾಮದಲ್ಲೇ ವಾಸಿಸುತ್ತೀರಿ. ನಿರಂತರ ಹರಿಕೀರ್ತನೆಯಲ್ಲೇ ತತ್ಪರರಾಗಿರುವಿರಿ. ಭಗವಲ್ಲೀಲಾಮೃತದ ರಸಾಸ್ವಾದ ಮಾಡುತ್ತಾ ಸದಾ ಅದರಲ್ಲೇ ಉನ್ಮತ್ತರಾಗಿರುವಿರಿ. ಭಗವತ್ಕಥೆಯೇ ನಿಮ್ಮ ಜೀವನದ ಏಕಮಾತ್ರ ಆಧಾರವಾಗಿದೆ ॥ ೪೭ ॥ 'ಹರಿಃ ಶರಣಮ್' ಎಂಬ ವಾಕ್ಯ (ಮಂತ್ರ) ಯಾವಾಗಲೂ ನಿಮ್ಮ ಬಾಯಲ್ಲಿರುತ್ತದೆ. ಇದರಿಂದ ಕಾಲಪ್ರೇರಿತ ವೃದ್ಧಾವಸ್ಥೆಯೂ ನಿಮ್ಮನ್ನು ಬಾಧಿಸುವುದಿಲ್ಲ. ॥ ೪೮ ॥ ಹಿಂದಿನ ಕಾಲದಲ್ಲಿ ನಿಮ್ಮ ಭ್ರೂಭಂಗಮಾತ್ರದಿಂದಲೇ ಭಗವಾನ್ ವಿಷ್ಣುವಿನ ದ್ವಾರಪಾಲಕರಾದ ಜಯ-ವಿಜಯರು ಕೂಡಲೇ ಭೂಮಿಗೆ ತಳ್ಳಲ್ಪಟ್ಟರು. ಮತ್ತೆ ನಿಮ್ಮ ಕೃಪೆಯಿಂದಲೇ ಅವರು ಪುನಃ ವೈಕುಂಠ

ಯೇಷಾಂ ಭ್ರೂಭಂಗಮಾತ್ರೇಣ ದ್ವಾರಪಾಲೌ ಹರೇಃ ಪುರಾ ।
ಭೂಮೌ ನಿಪಾತಿತೌ ಸದ್ಯೋ ಯತ್ಕೃಪಾತಃ ಪುರಂ ಗತೌ ॥ ೨೯ ॥

ಅಹೋ ಭಾಗ್ಯಸ್ಯ ಯೋಗೇನ ದರ್ಶನಂ ಭವತಾಮಿಹ ।
ಅನುಗ್ರಹಸ್ತು ಕರ್ತವ್ಯೋ ಮಯಿ ದೀನೇ ದಯಾಪರೈಃ ॥ ೩೦ ॥

ಅಶರೀರಗಿರೋಕ್ತಂ ಯತ್ತತ್ಕಿಂ ಸಾಧನಮುಚ್ಯತಾಮ್ ।
ಅನುಷ್ಠೇಯಂ ಕಥಂ ತಾವತ್ಪ್ರಬ್ರುವಂತು ಸವಿಸ್ತರಮ್ ॥ ೩೧ ॥

ಭಕ್ತಿಜ್ಞಾನವಿರಾಗಾಣಾಂ ಸುಖಮುತ್ಪದ್ಯತೇ ಕಥಮ್ ।
ಸ್ಥಾಪನಂ ಸರ್ವವರ್ಣೇಷು ಪ್ರೇಮಪೂರ್ವಂ ಪ್ರಯತ್ನತಃ ॥ ೩೨ ॥

ಕುಮಾರಾ ಊಚುಃ

ಮಾ ಚಿಂತಾಂ ಕುರು ದೇವರ್ಷೇ ಹರ್ಷಂ ಚಿತ್ತೇ ಸಮಾವಹ ।
ಉಪಾಯಃ ಸುಖಸಾಧ್ಯೋಽತ್ರ ವರ್ತತೇ ಪೂರ್ವ ಏವ ಹಿ ॥ ೩೩ ॥

ಅಹೋ ನಾರದ ಧನ್ಯೋಽಸಿ ವಿರಕ್ತಾನಾಂ ಶಿರೋಮಣಿಃ ।
ಸದಾ ಶ್ರೀಕೃಷ್ಣದಾಸಾನಾಮಗ್ರಣೀರ್ಯೋಗಭಾಸ್ಕರಃ ॥ ೩೪ ॥

ತ್ವಯಿ ಚಿತ್ರಂ ನ ಮಂತವ್ಯಂ ಭಕ್ತ್ಯರ್ಥಮನುವರ್ತಿನಿ ।
ಘಟತೇ ಕೃಷ್ಣದಾಸಸ್ಯ ಭಕ್ತೇಃ ಸಂಸ್ಥಾಪನಾ ಸದಾ ॥ ೩೫ ॥

ಋಷಿಭಿರ್ಬಹವೋ ಲೋಕೇ ಪಂಥಾನಃ ಪ್ರಕಟೀಕೃತಾಃ ।
ಶ್ರಮಸಾಧ್ಯಾಶ್ಚ ತೇ ಸರ್ವೇ ಪ್ರಾಯಃ ಸ್ವರ್ಗಫಲಪ್ರದಾಃ ॥ ೩೬ ॥

ವೈಕುಂಠಸಾಧಕಃ ಪಂಥಾ ಸ ತು ಗೋಪ್ಯೋ ಹಿ ವರ್ತತೇ ।
ತಸ್ಯೋಪದೇಷ್ಟಾ ಪುರುಷಃ ಪ್ರಾಯೋ ಭಾಗ್ಯೇನ ಲಭ್ಯತೇ ॥ ೩೭ ॥

ಸತ್ಕರ್ಮ ತವ ನಿರ್ದಿಷ್ಟಂ ವ್ಯೋಮವಾಚಾ ತು ಯತ್ಪುರಾ ।
ತದುಚ್ಯತೇ ಶೃಣುಷ್ವಾದ್ಯ ಸ್ಥಿರಚಿತ್ತಃ ಪ್ರಸನ್ನಧೀಃ ॥ ೩೮ ॥

ದ್ರವ್ಯಯಜ್ಞಾಸ್ತಪೋಯಜ್ಞಾ ಯೋಗಯಜ್ಞಾಸ್ತಥಾಪರೇ ।
ಸ್ವಾಧ್ಯಾಯಜ್ಞಾನಯಜ್ಞಾಶ್ಚ ತೇ ತು ಕರ್ಮವಿಸೂಚಕಾಃ ॥ ೩೯ ॥

ಸತ್ಕರ್ಮಸೂಚಕೋ ನೂನಂ ಜ್ಞಾನಯಜ್ಞಃ ಸ್ಮೃತೋ ಬುಧೈಃ ।
ಶ್ರೀಮದ್ಭಾಗವತಾಲಾಪಃ ಸ ತು ಗೀತಃ ಶುಕಾದಿಭಿಃ ॥ ೪೦ ॥

ಭಕ್ತಿಜ್ಞಾನವಿರಾಗಾಣಾಂ ತದ್ಘೋಷೇಣ ಬಲಂ ಮಹತ್ ।
ವ್ರಜಿಷ್ಯತಿ ದ್ವಯೋಃ ಕಷ್ಟಂ ಸುಖಂ ಭಕ್ತೇರ್ಭವಿಷ್ಯತಿ ॥ ೪೧ ॥

ಲೋಕವನ್ನು ಸೇರಿದರು. ॥ ೨೯ ॥ ಈಗ ನಿಮ್ಮಗಳ ದರ್ಶನವು ದೊಡ್ಡ ಭಾಗ್ಯದಿಂದಲೇ ಆಗಿದೆ. ನಾನು ಧನ್ಯನಾದೆನು. ಆದರೆ ನಾನು ತುಂಬಾ ದೀನನಾಗಿದ್ದೇನೆ ಹಾಗೂ ನೀವುಗಳು ಸ್ವಭಾವದಿಂದಲೇ ದಯಾಳುಗಳಾಗಿದ್ದೀರಿ. ಅದಕ್ಕಾಗಿ ನನ್ನ ಮೇಲೆ ನೀವು ಅವಶ್ಯವಾಗಿ ಕೃಪೆ ಮಾಡಬೇಕು. ॥ ೩೦ ॥ ಆಕಾಶವಾಣಿಯು ಹೇಳಿದ ವಿಷಯದ ಆ ಸಾಧನೆಯು ಯಾವುದು? ನಾನು ಯಾವ ಪ್ರಕಾರದಿಂದ ಅದನ್ನು ಅನುಷ್ಠಾನ ಮಾಡಬೇಕು? ಎಂಬುದನ್ನು ವಿಸ್ತಾರವಾಗಿ ತಿಳಿಸಿರಿ ॥ ೩೧ ॥ ಭಕ್ತಿ, ಜ್ಞಾನ, ವೈರಾಗ್ಯ ಇವರಿಗೆ ಹೇಗೆ ಸುಖ ಸಿಗಬಲ್ಲದು? ಯಾವ ರೀತಿಯಲ್ಲಿ ಇವನ್ನು ಪ್ರೇಮಪೂರ್ವಕ ಎಲ್ಲ ವರ್ಣದವರಲ್ಲಿ ಪ್ರತಿಷ್ಠಾಪಿಸಬಹುದು? ॥ ೩೨ ॥

ಸನಕಾದಿಗಳು ಹೇಳಿದರು – ದೇವ ಋಷಿಗಳೇ! ನೀವು ಚಿಂತಿಸಬೇಡಿ. ಮನಸ್ಸಿನಲ್ಲಿ ಪ್ರಸನ್ನರಾಗಿರಿ. ಅವರ ಉದ್ಧಾರದ ಒಂದು ಸರಳವಾದ ಉಪಾಯವು ಮೊದಲಿನಿಂದಲೇ ವಿದ್ಯಮಾನವಿದೆ. ॥ ೩೩ ॥ ನಾರದರೇ! ನೀವು ಧನ್ಯರಾಗಿರುವಿರಿ. ನೀವಾದರೋ ವಿರಕ್ತರ ಶಿರೋಮಣಿಯಾಗಿದ್ದೀರಿ. ಶ್ರೀಕೃಷ್ಣನ ದಾಸರಿಗೆ ಶಾಶ್ವತವಾದ ಪಥಪ್ರದರ್ಶಕರಾಗಿದ್ದು ಭಕ್ತಿಯೋಗದ ಭಾಸ್ಕರರಾಗಿರುವಿರಿ ॥ ೩೪ ॥ ನೀವು ಭಕ್ತಿಗಾಗಿ ಮಾಡುತ್ತಿರುವ ಉದ್ಯೋಗವು ನಿಮಗೆ ಇದು ಆಶ್ಚರ್ಯದ ಮಾತಲ್ಲವೆಂದು ತಿಳಿಯಬೇಕು. ಭಗವಂತನ ಭಕ್ತನಾದವರೋ ಭಕ್ತಿಯನ್ನು ಚೆನ್ನಾಗಿ ಸ್ಥಾಪಿಸುವುದು ಸದಾ ಉಚಿತವೇ ಆಗಿದೆ. ॥ ೩೫ ॥ ಪ್ರಪಂಚದಲ್ಲಿ ಋಷಿಗಳು ಅನೇಕ ಮಾರ್ಗಗಳನ್ನು ಪ್ರಕಟಿಸಿರುವರು. ಆದರೆ ಅವೆಲ್ಲವೂ ಕಷ್ಟಸಾಧ್ಯವಾಗಿವೆ. ಪ್ರಾಯಶಃ ಪರಿಣಾಮದಲ್ಲಿ ಸ್ವರ್ಗವನ್ನೇ ದೊರಕಿಸಿಕೊಡುವಂತಹವುಗಳು. ॥ ೩೬ ॥ ಇಂದಿನವರೆಗೆ ಭಗವಂತನ ಪ್ರಾಪ್ತಿಯಾಗಿಸುವ ಮಾರ್ಗವು ಗುಪ್ತವೇ ಆಗಿದೆ. ಅದನ್ನು ಉಪದೇಶಿಸುವ ಪುರುಷನು ಪ್ರಾಯಶಃ ಭಾಗ್ಯದಿಂದಲೇ ದೊರಕುತ್ತಾನೆ. ॥ ೩೭ ॥ ಆಕಾಶವಾಣಿಯು ನಿಮಗೆ ಹೇಳಿದ ಸತ್ಕರ್ಮದ ಸಂಕೇತವನ್ನು ನಾವು ತಿಳಿಸುತ್ತೇವೆ. ನೀವು ಪ್ರಸನ್ನ ಸ್ಥಿರಚಿತ್ತರಾಗಿ ಕೇಳಿರಿ. ॥ ೩೮ ॥

ನಾರದರೇ! ದ್ರವ್ಯಯಜ್ಞ, ತಪೋಯಜ್ಞ, ಯೋಗಯಜ್ಞ, ಸ್ವಾಧ್ಯಾಯರೂಪೀ ಜ್ಞಾನಯಜ್ಞ, ಇವೆಲ್ಲವುಗಳಾದರೋ ಸ್ವರ್ಗಾದಿಗಳನ್ನು ದೊರಕಿಸಿಕೊಡುವ ಕರ್ಮದ ಕಡೆಗೇ ಸಂಕೇತ ಮಾಡುತ್ತವೆ. ॥ ೩೯ ॥ ಆದರೆ ಪಂಡಿತರು ಜ್ಞಾನಯಜ್ಞವನ್ನೇ ಸತ್ಕರ್ಮ (ಮುಕ್ತಿದಾಯಕ ಕರ್ಮ)ದ ಸೂಚಕವೆಂದು ಒಪ್ಪಿರುವರು. ಅದು ಶ್ರೀಮದ್ಭಾಗವತದ ಪಾರಾಯಣವೇ ಆಗಿದೆ. ಅದನ್ನು ಶುಕಾದಿ ಮಹಾನುಭಾವರು ಹಾಡಿರುವರು. ॥ ೪೦ ॥ ಅದರ ಶಬ್ದ ಕೇಳುತ್ತಲೇ ಭಕ್ತಿ, ಜ್ಞಾನ, ವೈರಾಗ್ಯ ಇವುಗಳಿಗೆ ಹೆಚ್ಚಿನ ಬಲ ದೊರೆಯಬಹುದು. ಇದರಿಂದ ಜ್ಞಾನ, ವೈರಾಗ್ಯಗಳ ಕಷ್ಟ ಅಳಿದು ಹೋಗಿ ಭಕ್ತಿಗೆ ಆನಂದ ಸಿಗಬಹುದು. ॥ ೪೧ ॥ ಸಿಂಹದ ಗರ್ಜನೆಯನ್ನು ಕೇಳುತ್ತಲೇ ನರಿಗಳು ಓಡಿಹೋಗುವಂತೆ ಶ್ರೀಮದ್ಭಾಗವತದ

ಪ್ರಲಯಂ ಹಿ ಗಮಿಷ್ಯಂತಿ ಶ್ರೀಮದ್ಭಾಗವತಧ್ವನೇಃ ।
ಕಲೇರ್ದೋಷಾ ಇಮೇ ಸರ್ವೇ ಸಿಂಹಶಬ್ದಾದ್ ವೃಕಾ ಇವ ॥ ೧೨ ॥

ಜ್ಞಾನವೈರಾಗ್ಯಸಂಯುಕ್ತಾ ಭಕ್ತಿಃ ಪ್ರೇಮರಸಾವಹಾ ।
ಪ್ರತಿಗೇಹಂ ಪ್ರತಿಜನಂ ತತಃ ಕ್ರೀಡಾಂ ಕರಿಷ್ಯತಿ ॥ ೧೩ ॥

ನಾರದ ಉವಾಚ

ವೇದವೇದಾಂತಘೋಷೈಶ್ಚ ಗೀತಾಪಾಠೈಃ ಪ್ರಬೋಧಿತಮ್ ।
ಭಕ್ತಿಜ್ಞಾನವಿರಾಗಾಣಾಂ ನೋದತಿಷ್ಠತ್ತ್ರಿಕಂ ಯದಾ ॥ ೧೪ ॥

ಶ್ರೀಮದ್ಭಾಗವತಾಲಾಪಾತ್ತತ್ಕಥಂ ಬೋಧಮೇಷ್ಯತಿ ।
ತತ್ಕಥಾಸು ತು ವೇದಾರ್ಥಃ ಶ್ಲೋಕೇ ಶ್ಲೋಕೇ ಪದೇ ಪದೇ ॥ ೧೫ ॥

ಛಿಂದಂತು ಸಂಶಯಂ ಹ್ಯೇನಂ ಭವಂತೋಽಮೋಘದರ್ಶನಾಃ ।
ವಿಲಂಬೋ ನಾತ್ರ ಕರ್ತವ್ಯಃ ಶರಣಾಗತವತ್ಸಲಾಃ ॥ ೧೬ ॥

ಕುಮಾರಾ ಊಚುಃ

ವೇದೋಪನಿಷದಾಂ ಸಾರಾಜ್ಜಾತಾ ಭಾಗವತೀ ಕಥಾ ।
ಅತ್ಯುತ್ತಮಾ ತತೋ ಭಾತಿ ಪೃಥಗ್ಭೂತಾ ಫಲಾಕೃತಿಃ ॥ ೧೭ ॥

ಆಮೂಲಾಗ್ರಂ ರಸಸ್ತಿಷ್ಠನ್ನಾಸ್ತೇ ನ ಸ್ವಾದ್ಯತೇ ಯಥಾ ।
ಸ ಭೂಯಃ ಸಂಪೃಥಗ್ಭೂತಃ ಫಲೇ ವಿಶ್ವಮನೋಹರಃ ॥ ೧೮ ॥

ಯಥಾ ದುಗ್ಧೇ ಸ್ಥಿತಂ ಸರ್ಪಿರ್ನ ಸ್ವಾದಾಯೋಪಕಲ್ಪತೇ ।
ಪೃಥಗ್ಭೂತಂ ಹಿ ತದ್ಗವ್ಯಂ ದೇವಾನಾಂ ರಸವರ್ಧನಮ್ ॥ ೧೯ ॥

ಇಕ್ಷೂಣಾಮಪಿ ಮಧ್ಯಾಂತಂ ಶರ್ಕರಾ ವ್ಯಾಪ್ಯ ತಿಷ್ಠತಿ ।
ಪೃಥಗ್ಭೂತಾ ಚ ಸಾ ಮಿಷ್ಟಾ ತಥಾ ಭಾಗವತೀ ಕಥಾ ॥ ೨೦ ॥

ಇದಂ ಭಾಗವತಂ ನಾಮ ಪುರಾಣಂ ಬ್ರಹ್ಮಸಮ್ಮಿತಮ್ ।
ಭಕ್ತಿಜ್ಞಾನವಿರಾಗಾಣಾಂ ಸ್ಥಾಪನಾಯ ಪ್ರಕಾಶಿತಮ್ ॥ ೨೧ ॥

ವೇದಾಂತವೇದಸುಸ್ನಾತೇ ಗೀತಾಯಾ ಅಪಿ ಕರ್ತರಿ ।
ಪರಿತಾಪವತಿ ವ್ಯಾಸೇ ಮುಹ್ಯತ್ಯಜ್ಞಾನಸಾಗರೇ ॥ ೨೨ ॥

ತದಾ ತ್ವಯಾ ಪುರಾ ಪ್ರೋಕ್ತಂ ಚತುಃಶ್ಲೋಕಸಮನ್ವಿತಮ್ ।
ತದೀಯಶ್ರವಣಾತ್ಸದ್ಯೋ ನಿರ್ಬಾಧೋ ಬಾದರಾಯಣಃ ॥ ೨೩ ॥

ತತ್ರ ತೇ ವಿಸ್ಮಯಃ ಕೇನ ಯತಃ ಪ್ರಶ್ನಕರೋ ಭವಾನ್ ।
ಶ್ರೀಮದ್ಭಾಗವತಂ ಶ್ರಾವ್ಯಂ ಶೋಕದುಃಖವಿನಾಶನಮ್ ॥ ೨೪ ॥

ಧ್ವನಿಯಿಂದ ಕಲಿಯುಗದ ದೋಷಗಳೆಲ್ಲ ನಾಶವಾಗಿ ಹೋಗುತ್ತವೆ. ॥ ೧೨ ॥ ಆಗ ಪ್ರೇಮರಸವನ್ನು ಪ್ರವಹಿಸುವ ಭಕ್ತಿಯು ಜ್ಞಾನ-ವೈರಾಗ್ಯಗಳೊಡನೆ ಪ್ರತಿಯೊಂದು ಮನೆ ಮತ್ತು ಜನರ ಹೃದಯದಲ್ಲಿ ಕ್ರೀಡಿಸುವಳು. ॥ ೧೩ ॥

ನಾರದರು ಹೇಳಿದರು – ನಾನು ವೇದ-ವೇದಾಂತದ ಧ್ವನಿಗೈದು, ಗೀತಾಪಾರಾಯಣ ಮಾಡಿ ಅವರನ್ನು ತುಂಬಾ ಎಚ್ಚರಿಸಿದೆ. ಆದರೂ ಭಕ್ತಿ, ಜ್ಞಾನ, ವೈರಾಗ್ಯ ಇವರು ಎಚ್ಚರಗೊಳ್ಳಲಿಲ್ಲ. ॥ ೧೪ ॥ ಇಂತಹ ಸ್ಥಿತಿಯಲ್ಲಿ ಶ್ರೀಮದ್ಭಾಗವತವನ್ನು ಕೇಳುವುದರಿಂದ ಅವರು ಹೇಗೆ ಎಚ್ಚರಗೊಳ್ಳುವರು? ಏಕೆಂದರೆ, ಆ ಕಥೆಯ ಪ್ರತಿಯೊಂದು ಶ್ಲೋಕ ಮತ್ತು ಪದಗಳಲ್ಲಿ ವೇದಗಳ ಸಾರಾಂಶವೇ ಇದೆ ತಾನೇ! ॥ ೧೫ ॥ ನೀವುಗಳು ಶರಣಾಗತ ವತ್ಸಲರಾಗಿದ್ದೀರಿ. ನಿಮ್ಮ ದರ್ಶನವು ಎಂದೂ ವ್ಯರ್ಥವಾಗುವುದಿಲ್ಲ. ಅದಕ್ಕಾಗಿ ಈ ಕಾರ್ಯದಲ್ಲಿ ವಿಳಂಬಿಸದೆ ನನ್ನ ಈ ಸಂದೇಹವನ್ನು ಕಳೆಯಿರಿ. ॥ ೧೬ ॥

ಸನಕಾದಿಗಳು ಹೇಳಿದರು – ಶ್ರೀಮದ್ಭಾಗವತದ ಕಥೆಯು ವೇದ-ಉಪನಿಷತ್ತುಗಳ ಸಾರದಿಂದಲೇ ರಚಿತವಾಗಿದೆ. ಅದಕ್ಕಾಗಿ ಅವುಗಳಿಂದ ಬೇರೆಯಾಗಿ ಇದರ ಫಲಸ್ವರೂಪವಿರುವ ಕಾರಣ ಇದು ತುಂಬಾ ಉತ್ತಮವೆಂದು ತೋರಿಬರುತ್ತದೆ. ॥ ೧೭ ॥ ಮರದ ರಸವು ಬೇರಿನಿಂದ ಹಿಡಿದು ಕೊಂಬೆಯ ತುದಿಯವರೆಗೆ ಇರುತ್ತದೆ. ಆದರೆ ಈ ಸ್ಥಿತಿಯಲ್ಲಿ ಅದನ್ನು ಆಸ್ವಾದಿಸಲಾಗುವುದಿಲ್ಲ. ಆದರೆ ಅದೇ ಬೇರೆಯಾಗಿ ಫಲದ ರೂಪದಲ್ಲಿ ಬಂದಾಗ ಜಗತ್ತಿನಲ್ಲಿ ಎಲ್ಲರಿಗೆ ಪ್ರಿಯವೆನಿಸುತ್ತದೆ. ॥ ೧೮ ॥ ಹಾಲಿನಲ್ಲಿ ತುಪ್ಪ ಇರುತ್ತದೆ. ಆದರೆ ಆಗ ಅದರ ಬೇರೆಯಾದ ರುಚಿ ಸಿಗುವುದಿಲ್ಲ. ಅದು ಹಾಲಿನಿಂದ ಬೇರೆಯಾದಾಗ ದೇವತೆಗಳಿಗೂ ಕೂಡ ಸ್ವಾದ ವರ್ಧಕವಾಗುತ್ತದೆ. ॥ ೧೯ ॥ ಸಕ್ಕರೆಯು ಕಬ್ಬಿನಲ್ಲಿ ತುದಿ-ಬುಡ ನಡುವೆ ಎಲ್ಲೆಡೆ ವ್ಯಾಪ್ತವಾಗಿರುತ್ತದೆ. ಆದರೆ ಬೇರೆಯಾದಾಗಲೇ ಅದರ ಸಿಹಿ ಬೇರೆಯೇ ಆಗುತ್ತದೆ. ಹೀಗೆಯೇ ಈ ಭಾಗವತದ ಕಥೆಯಾಗಿದೆ. ॥ ೨೦ ॥ ಈ ಭಾಗವತ ಪುರಾಣವು ವೇದಗಳಿಗೆ ಸಮಾನವಾಗಿದೆ. ಶ್ರೀವೇದವ್ಯಾಸ ದೇವರು ಇದನ್ನು ಭಕ್ತಿ, ಜ್ಞಾನ, ವೈರಾಗ್ಯದ ಸ್ಥಾಪನೆಗಾಗಿಯೇ ಪ್ರಕಾಶಿತಗೊಳಿಸಿದ್ದಾರೆ. ॥ ೨೧ ॥ ಹಿಂದೊಮ್ಮೆ ವೇದ-ವೇದಾಂತದ ಪಾರಂಗತರೂ, ಗೀತೆಯನ್ನು ರಚಿಸಿದವರೂ ಆದ ಭಗವಾನ್ ಶ್ರೀವೇದವ್ಯಾಸರು ಖಿನ್ನರಾಗಿ ಅಜ್ಞಾನಸಾಗರದಲ್ಲಿ ಮುಳುಗಿದ್ದಾಗ ನೀವೇ ಅವರಿಗೆ ನಾಲ್ಕು ಶ್ಲೋಕಗಳಲ್ಲಿ ಇದನ್ನು ಉಪದೇಶಿಸಿದ್ದಿರಿ. ಅದನ್ನು ಕೇಳುತ್ತಲೇ ಅವರ ಎಲ್ಲ ಚಿಂತೆಗಳು ದೂರವಾಗಿದ್ದವು. ॥ ೨೨-೨೩ ॥ ಮತ್ತೆ ಇದರಲ್ಲಿ ನಿಮಗೆ ಏಕೆ ಆಶ್ಚರ್ಯವಾಗುತ್ತಿದೆ? ನೀವು ನಮ್ಮಲ್ಲಿ ಪ್ರಶ್ನಿಸುತ್ತಿರುವಿರಲ್ಲ! ನೀವು ಅವರಿಗೆ ದುಃಖ-ಶೋಕವನ್ನು ನಾಶ ಮಾಡುವಂತಹ ಶ್ರೀಮದ್ಭಾಗವತ ಪುರಾಣವನ್ನು ಹೇಳಿರಿ. ॥ ೨೪ ॥

ನಾರದ ಉವಾಚ

ಯದ್ದರ್ಶನಂ ಚ ವಿನಿಹಂತ್ಯ ಶುಭಾನಿ ಸದ್ಯಃ
ಶ್ರೇಯಸ್ತನೋತಿ ಭವದುಃಖದವಾರ್ದಿತಾನಾಮ್ ।
ನಿಃಶೇಷಶೇಷಮುಖಗೀತಕಥೈಕಪಾನಾಃ
ಪ್ರೇಮಪ್ರಕಾಶಕೃತಯೇ ಶರಣಂ ಗತೋಽಸ್ಮಿ ॥ ೨೪ ॥

ಭಾಗ್ಯೋದಯೇನ ಬಹುಜನ್ಮಸಮರ್ಜಿತೇನ
ಸತ್ಸಂಗಮಂ ಚ ಲಭತೇ ಪುರುಷೋ ಯದಾ ವೈ ।
ಅಜ್ಞಾನಹೇತುಕೃತಮೋಹಮದಾಂಧಕಾರ-
ನಾಶಂ ವಿಧಾಯ ಹಿ ತದೋದಯತೇ ವಿವೇಕಃ ॥ ೨೫ ॥

ನಾರದರು ಹೇಳಿದರು - ಸನಕಾದಿಗಳೇ ! ನಿಮ್ಮ ದರ್ಶನವು ಜೀವಿಯ ಸಮಸ್ತ ಪಾಪಗಳನ್ನು ತತ್ಕಾಲ ನಾಶಮಾಡಿ ಬಿಡುತ್ತದೆ. ಸಾಂಸಾರಿಕ ದುಃಖರೂಪವಾದ ದಾವಾನಲದಿಂದ ಬೇಯುತ್ತಿರುವವರ ಮೇಲೆ ಬೇಗನೇ ಶಾಂತಿಯ ಮಳೆಗರೆಯುತ್ತದೆ. ನೀವು ನಿರಂತರ ಆದಿಶೇಷನ ಸಾವಿರ ಹೆಡೆಗಳಿಂದ ಹಾಡಲ್ಪಟ್ಟ ಭಗವತ್ ಕಥಾಮೃತವನ್ನು ಪಾನಮಾಡುತ್ತಾ ಇರುತ್ತೀರಿ. ನಾನು ಪ್ರೇಮಲಕ್ಷಣಾ ಭಕ್ತಿಯನ್ನು ಪ್ರಕಾಶಗೊಳಿಸುವ ಉದ್ದೇಶದಿಂದ ತಮ್ಮಲ್ಲಿ ಶರಣಾಗಿದ್ದೇನೆ. ॥ ೨೪ ॥ ಅನೇಕ ಜನ್ಮಗಳ ಸಂಚಿತ ಪುಣ್ಯ ಪುಂಜದ ಉದಯವಾದಾಗ ಮನುಷ್ಯನಿಗೆ ಸತ್ಸಂಗವು ಲಭಿಸುತ್ತದೆ. ಆಗ ಅದು ಅವನ ಅಜ್ಞಾನಜನಿತ ಮೋಹ, ಮದ ರೂಪವಾದ ಅಂಧಕಾರವನ್ನು ನಾಶಗೊಳಿಸಿ, ವಿವೇಕದ ಉದಯವಾಗುತ್ತದೆ. ॥ ೨೫ ॥

ಎರಡನೆಯ ಅಧ್ಯಾಯವು ಮುಗಿಯಿತು. ॥ ೨ ॥

ಇತಿ ಶ್ರೀಪದ್ಮಪುರಾಣೇ ಉತ್ತರಖಂಡೇ ಶ್ರೀಮದ್ಭಾಗವತಮಾಹಾತ್ಮ್ಯೇ ಕುಮಾರನಾರದಸಂವಾದೋ ನಾಮ ದ್ವಿತೀಯೋಽಧ್ಯಾಯಃ ॥ ೨ ॥

ಮೂರನೆಯ ಅಧ್ಯಾಯ

ಭಕ್ತಿದೇವಿಯ ಕಷ್ಟದ ನಿವೃತ್ತಿ

ನಾರದ ಉವಾಚ

ಜ್ಞಾನಯಜ್ಞಂ ಕರಿಷ್ಯಾಮಿ ಶುಕಶಾಸ್ತ್ರಕಥೋಜ್ಜ್ವಲಮ್ ।
ಭಕ್ತಿಜ್ಞಾನವಿರಾಗಾಣಾಂ ಸ್ಥಾಪನಾರ್ಥಂ ಪ್ರಯತ್ನತಃ ॥ ೧ ॥

ಕುತ್ರ ಕಾರ್ಯೋ ಮಯಾ ಯಜ್ಞಃ ಸ್ಥಲಂ ತದ್ವಾಚ್ಯತಾಮಿಹ ।
ಮಹಿಮಾ ಶುಕಶಾಸ್ತ್ರಸ್ಯ ವಕ್ತವ್ಯೋ ವೇದಪಾರಗೈಃ ॥ ೨ ॥

ಕಿಯದ್ಭಿರ್ದಿವಸೈಃ ಶ್ರಾವ್ಯಾ ಶ್ರೀಮದ್ಭಾಗವತೀ ಕಥಾ ।
ಕೋ ವಿಧಿಸ್ತತ್ರ ಕರ್ತವ್ಯೋ ಮಮೇದಂ ಬ್ರುವತಾಮಿತಃ ॥ ೩ ॥

ಕುಮಾರಾ ಊಚುಃ

ಶೃಣು ನಾರದ ವಕ್ಷ್ಯಾಮೋ ವಿನಮ್ರಾಯ ವಿವೇಕಿನೇ ।
ಗಂಗಾದ್ವಾರಸಮೀಪೇ ತು ತಟಮಾನಂದನಾಮಕಮ್ ॥ ೪ ॥

ನಾನಾಋಷಿಗಣೈರ್ಜುಷ್ಟಂ ದೇವಸಿದ್ಧನಿಷೇವಿತಮ್ ।
ನಾನಾತರುಲತಾಕೀರ್ಣಂ ನವಕೋಮಲವಾಲುಕಮ್ ॥ ೫ ॥

ರಮ್ಯಮೇಕಾಂತದೇಶಸ್ಥಂ ಹೇಮಪದ್ಮಸುಸೌರಭಮ್ ।
ಯತ್ಸಮೀಪಸ್ಥಜೀವಾನಾಂ ವೈರಂ ಚೇತಸಿ ನ ಸ್ಥಿತಮ್ ॥ ೬ ॥

ಜ್ಞಾನಯಜ್ಞಸ್ತ್ವಯಾ ತತ್ರ ಕರ್ತವ್ಯೋ ಹ್ಯಪ್ರಯತ್ನತಃ ।
ಅಪೂರ್ವರಸರೂಪಾ ಚ ಕಥಾ ತತ್ರ ಭವಿಷ್ಯತಿ ॥ ೭ ॥

ನಾರದರು ಹೇಳುತ್ತಾರೆ - ಸನಕಾದಿಗಳೇ ! ಭಕ್ತಿ, ಜ್ಞಾನ, ವೈರಾಗ್ಯ ಇವುಗಳನ್ನು ಸ್ಥಾಪಿಸಲು ನಾನು ಪ್ರಯತ್ನಪೂರ್ವಕ ಶ್ರೀಶುಕಮುನಿಗಳು ಹೇಳಿರುವ ಭಾಗವತ ಶಾಸ್ತ್ರವನ್ನು ಕಥೆಯ ಮೂಲಕ ಉಜ್ವಲವಾದ ಜ್ಞಾನ ಯಜ್ಞವನ್ನು ಮಾಡುವೆನು. ॥ ೧ ॥ ಆ ಯಜ್ಞವನ್ನು ನಾನು ಎಲ್ಲಿ ಮಾಡಬೇಕು ? ನೀವು ಇದಕ್ಕಾಗಿ ಯಾವುದಾದರೂ ಸ್ಥಾನವನ್ನು ತಿಳಿಸಿರಿ. ನೀವುಗಳು ವೇದಗಳಲ್ಲಿ ಪಾರಂಗತರಾಗಿರುವಿರಿ. ಆದರಿಂದ ನನಗೆ ಈ ಶುಕಶಾಸ್ತ್ರದ ಮಹಿಮೆಯನ್ನು ಹೇಳಿರಿ. ॥ ೨ ॥ ಈ ಶ್ರೀಮದ್ಭಾಗವತದ ಕಥೆಯನ್ನು ಎಷ್ಟು ದಿನಗಳಲ್ಲಿ ಹೇಳಬೇಕು ? ಅದನ್ನು ಕೇಳುವ ವಿಧಾನವೇನು ? ಇದನ್ನೂ ಕೂಡ ತಿಳಿಸಿರಿ. ॥ ೩ ॥

ಸನಕಾದಿಗಳು ಹೇಳಿದರು - ನಾರದರೇ ! ನೀವು ತುಂಬಾ ವಿನೀತರೂ, ವಿವೇಕಿಗಳೂ ಆಗಿರುವಿರಿ. ನಾವು ನಿಮಗೆ ಇದೆಲ್ಲವನ್ನು ತಿಳಿಸುತ್ತೇವೆ, ಕೇಳಿರಿ. ಹರಿದ್ವಾರದ ಬಳಿಯಲ್ಲಿ ಆನಂದವೆಂಬ ಒಂದು ಘಟ್ಟವಿದೆ. ॥ ೪ ॥ ಅಲ್ಲಿ ಅನೇಕ ಋಷಿಗಳು ವಾಸಿಸುತ್ತಾರೆ ಹಾಗೂ ದೇವತೆಗಳೂ, ಸಿದ್ಧರೂ ಕೂಡ ಅದನ್ನು ಸೇವಿಸುತ್ತಿರುವರು. ಅಲ್ಲಿ ನಾನಾರೀತಿಯ ವೃಕ್ಷ-ಲತೆಗಳು ದಟ್ಟವಾಗಿ ಬೆಳೆದಿವೆ. ಅಲ್ಲಿ ತುಂಬಾ ಕೋಮಲ ಹೊಸದಾದ ಮರಳು ಹಾಸಿದ್ದಿದೆ. ॥ ೫ ॥ ಆ ಘಟ್ಟವು ಬಹಳ ರಮ್ಯ ಮತ್ತು ಏಕಾಂತ ಪ್ರದೇಶವಾಗಿದೆ. ಅಲ್ಲಿ ಯಾವಾಗಲೂ ಸ್ವರ್ಣಕಮಲಗಳ ಸುಗಂಧ ಬರುತ್ತಿರುತ್ತದೆ. ಅದರ ಸಮೀಪದಲ್ಲಿ ವಾಸಿಸುವ ಸಿಂಹ, ಆನೆ ಮುಂತಾದ ಪರಸ್ಪರ ವಿರೋಧಿ ಜೀವಿಗಳ ಚಿತ್ತದಲ್ಲಿಯೂ ವೈರಭಾವವಿರುವುದಿಲ್ಲ. ॥ ೬ ॥ ಅಲ್ಲಿ ನೀವು ಜ್ಞಾನಯಜ್ಞವನ್ನು ಪ್ರಾರಂಭಿಸಿರಿ. ಯಾವುದೇ ವಿಶೇಷ ಪ್ರಯತ್ನವಿಲ್ಲದೆ ಆ ಜಾಗದಲ್ಲಿ ಕಥೆಯ ಅಪೂರ್ವ ರಸವು ಉದಯವಾದೀತು. ॥ ೭ ॥

ಪುರಸ್ತಾನ್ನಿರ್ಬಲಂ ಚೈವ ಜರಾಜೀರ್ಣಕಲೇವರಮ್ ।
ತದ್ದ್ವಯಂ ಚ ಪುರಸ್ಕೃತ್ಯ ಭಕ್ತಿಸ್ತತ್ರಾಗಮಿಷ್ಯತಿ ॥ ೮ ॥

ಯತ್ರ ಭಾಗವತೀ ವಾರ್ತಾ ತತ್ರ ಭಕ್ತ್ಯಾದಿಕಂ ವ್ರಜೇತ್ ।
ಕಥಾಶಬ್ದಂ ಸಮಾಕರ್ಣ್ಯ ತತ್ತ್ರಿಕಂ ತರುಣಾಯತೇ ॥ ೯ ॥

ಸೂತ ಉವಾಚ

ಏವಮುಕ್ತ್ವಾ ಕುಮಾರಾಸ್ತೇ ನಾರದೇನ ಸಮಂ ತತಃ ।
ಗಂಗಾತಟಂ ಸಮಾಜಗ್ಮುಃ ಕಥಾಪಾನಾಯ ಸತ್ವರಾಃ ॥ ೧೦ ॥

ಯದಾ ಯಾತಾಸ್ತಟಂ ತೇ ತು ತದಾ ಕೋಲಾಹಲೋಽಪ್ಯಭೂತ್ ।
ಭೂರ್ಲೋಕೇ ದೇವಲೋಕೇ ಚ ಬ್ರಹ್ಮಲೋಕೇ ತಥೈವ ಚ ॥ ೧೧ ॥

ಶ್ರೀಭಾಗವತಪೀಯೂಷಪಾನಾಯ ರಸಲಂಪಟಾಃ ।
ಧಾವಂತೋಽಪ್ಯಾಯಯುಃ ಸರ್ವೇ ಪ್ರಥಮಂ ಯೇ ಚ ವೈಷ್ಣವಾಃ ॥ ೧೨ ॥

ಭೃಗುರ್ವಸಿಷ್ಠಶ್ಚ್ಯವನಶ್ಚ ಗೌತಮೋ
ಮೇಧಾತಿಥಿರ್ದೇವಲದೇವರಾತೌ ।
ರಾಮಸ್ತಥಾ ಗಾಧಿಸುತಶ್ಚ ಶಾಕಲೋ
ಮೃಕಂಡುಪುತ್ರಾತ್ರಿಜಪಿಪ್ಪಲಾದಾಃ ॥ ೧೩ ॥

ಯೋಗೇಶ್ವರೌ ವ್ಯಾಸಪರಾಶರೌ ಚ
ಛಾಯಾಶುಕೋ ಜಾಜಲಿಜಹ್ನುಮುಖ್ಯಾಃ ।
ಸರ್ವೇಽಪ್ಯಮೀ ಮುನಿಗಣಾಃ ಸಹಪುತ್ರಶಿಷ್ಯಾಃ
ಸ್ವಸ್ತ್ರೀಭಿರಾಯಯುರತಿಪ್ರಣಯೇನ ಯುಕ್ತಾಃ ॥ ೧೪ ॥

ವೇದಾಂತಾನಿ ಚ ವೇದಾಶ್ಚ ಮಂತ್ರಾಸ್ತಂತ್ರಾಃ ಸಮೂರ್ತಯಃ ।
ದಶಸಪ್ತಪುರಾಣಾನಿ ಷಟ್‌ಶಾಸ್ತ್ರಾಣಿ ತಥಾಯಯುಃ ॥ ೧೫ ॥

ಗಂಗಾದ್ಯಾಃ ಸರಿತಸ್ತತ್ರ ಪುಷ್ಕರಾದಿಸರಾಂಸಿ ಚ ।
ಕ್ಷೇತ್ರಾಣಿ ಚ ದಿಶಃ ಸರ್ವಾ ದಂಡಕಾದಿವನಾನಿ ಚ ॥ ೧೬ ॥

ನಗಾದಯೋ ಯಯುಸ್ತತ್ರ ದೇವಗಂಧರ್ವದಾನವಾಃ ।
ಗುರುತ್ವಾತ್ತತ್ರ ನಾಯಾತಾನ್ ಭೃಗುಃ ಸಂಬೋಧ್ಯ ಚಾನಯತ್ ॥ ೧೭ ॥

ದೀಕ್ಷಿತಾ ನಾರದೇನಾಥ ದತ್ತಮಾಸನಮುತ್ತಮಮ್ ।
ಕುಮಾರಾ ವಂದಿತಾಃ ಸರ್ವೈರ್ನಿಷೇದುಃ ಕೃಷ್ಣತತ್ಪರಾಃ ॥ ೧೮ ॥

ವೈಷ್ಣವಾಶ್ಚ ವಿರಕ್ತಾಶ್ಚ ನ್ಯಾಸಿನೋ ಬ್ರಹ್ಮಚಾರಿಣಃ ।
ಮುಖಭಾಗೇ ಸ್ಥಿತಾಸ್ತೇ ಚ ತದಗ್ರೇ ನಾರದಃ ಸ್ಥಿತಃ ॥ ೧೯ ॥

ಭಕ್ತಿಯೂ ಕೂಡ ನಿಮ್ಮ ಕಣ್ಮುಂದೆಯೇ ನಿರ್ಬಲ, ಜರಾ-ಜೀರ್ಣ ಅವಸ್ಥೆಯಲ್ಲಿರುವ ಜ್ಞಾನ, ವೈರಾಗ್ಯರನ್ನು ಕರೆದುಕೊಂಡು ಅಲ್ಲಿಗೆ ಬರುವಳು. ॥ ೮ ॥ ಏಕೆಂದರೆ, ಎಲ್ಲೇ ಆಗಲಿ ಶ್ರೀಮದ್ಭಾಗವತದ ಕಥೆ ನಡೆಯುವಲ್ಲಿಗೆ ಭಕ್ತಿಯೇ ಮೊದಲಾದವರು ತಾನೇ-ತಾನಾಗಿ ಬಂದು ಬಿಡುತ್ತಾರೆ. ಅಲ್ಲಿ ಕಥೆಯ ಶಬ್ದ ಕಿವಿಗೆ ಬೀಳುತ್ತಲೇ ಅವರು ಮೂವರೂ ತರುಣರಾಗಿ ಹೋಗುವರು. ॥ ೯ ॥

ಸೂತಪುರಾಣಿಕರು ಹೇಳುತ್ತಾರೆ – ಹೀಗೆ ಹೇಳಿ ನಾರದರೊಂದಿಗೆ ಸನಕಾದಿಗಳೂ ಕೂಡ ಶ್ರೀಮದ್ಭಾಗವತ ಕಥಾಮೃತವನ್ನು ಪಾನಮಾಡಲು ಅಲ್ಲಿಂದ ಕೂಡಲೇ ಹೊರಟು ಗಂಗಾ ತೀರಕ್ಕೆ ಬಂದರು. ॥ ೧೦ ॥ ಅವರು ಗಂಗಾತೀರಕ್ಕೆ ತಲುಪುತ್ತಲೇ ಭೂಲೋಕ, ದೇವಲೋಕ, ಬ್ರಹ್ಮಲೋಕ ಹೀಗೆ ಎಲ್ಲೆಡೆ ಈ ಕಥೆಯ ಗದ್ದಲ ಉಂಟಾಯಿತು. ॥ ೧೧ ॥ ಭಗವದ್ರಸಿಕರಾದ ವಿಷ್ಣು-ಭಕ್ತರೆಲ್ಲರೂ ಶ್ರೀಮದ್ಭಾಗವತಾಮೃತವನ್ನು ಪಾನಮಾಡಲು ಎಲ್ಲರಿಗಿಂತ ಮುಂಚಿತವಾಗಿ ಅಲ್ಲಿಗೆ ಓಡೋಡಿ ಬರತೊಡಗಿದರು. ॥ ೧೨ ॥ ಭೃಗು, ವಸಿಷ್ಠ, ಚ್ಯವನ, ಗೌತಮ, ಮೇಧಾತಿಥಿ, ದೇವಲ, ದೇವರಾತ, ಪರಶುರಾಮ, ವಿಶ್ವಾಮಿತ್ರ, ಶಾಕಲ, ಮಾರ್ಕಂಡೇಯ, ದತ್ತಾತ್ರೇಯ, ಪಿಪ್ಪಲಾದ, ಯೋಗೇಶ್ವರರಾದ ವ್ಯಾಸರು, ಪರಾಶರ, ಛಾಯಾಶುಕ, ಜಾಜಲಿ, ಜಹ್ನು ಮುಂತಾದ ಎಲ್ಲ ಪ್ರಧಾನ-ಪ್ರಧಾನ ಮುನಿಗಣವು ತಮ್ಮ-ತಮ್ಮ ಪುತ್ರರು, ಶಿಷ್ಯರು, ಪತ್ನಿಯರೊಂದಿಗೆ ತುಂಬಾ ಪ್ರೇಮದಿಂದ ಅಲ್ಲಿಗೆ ಬಂದರು. ॥ ೧೩-೧೪ ॥ ಇವರಲ್ಲದೆ ವೇದ, ವೇದಾಂತ (ಉಪನಿಷತ್ತು), ಮಂತ್ರ, ತಂತ್ರ, ಹದಿನೇಳು ಪುರಾಣಗಳು, ಆರು ಶಾಸ್ತ್ರಗಳು ಮೂರ್ತೀಭವಿಸಿ ಅಲ್ಲಿ ಉಪಸ್ಥಿತರಾದರು. ॥ ೧೫ ॥

ಗಂಗಾದಿ ನದಿಗಳೂ, ಪುಷ್ಕರವೇ ಮುಂತಾದ ಸರೋವರಗಳೂ, ಕುರುಕ್ಷೇತ್ರಾದಿ ಸಮಸ್ತ ಕ್ಷೇತ್ರಗಳೂ, ಎಲ್ಲ ದಿಕ್ಕುಗಳೂ, ದಂಡಕವೇ ಮುಂತಾದ ವನಗಳೂ, ಹಿಮಾಲಯಾದಿ ಪರ್ವತಗಳೂ, ದೇವತೆಗಳೂ, ಗಂಧರ್ವರೂ, ದಾನವರೇ ಆದಿ ಎಲ್ಲರೂ ಕಥೆ ಕೇಳಲು ಹೊರಟು ಬಂದರು. ತಮ್ಮ ಗೌರವದಿಂದಾಗಿ ಬಾರದವರನ್ನು ಮಹರ್ಷಿ ಭೃಗುಗಳು ತಿಳಿಹೇಳಿ ಕರೆದುಕೊಂಡು ಬಂದರು. ॥ ೧೬-೧೭ ॥

ಆಗ ಕಥೆ ಹೇಳಲು ದೀಕ್ಷಿತರಾಗಿ ಶ್ರೀಕೃಷ್ಣಪರಾಯಣರಾದ ಸನಕಾದಿಗಳು ನಾರದರಿತ್ತ ಶ್ರೇಷ್ಠ ಆಸನದಲ್ಲಿ ವಿರಾಜಮಾನರಾದರು. ಆಗ ಎಲ್ಲ ಶ್ರೋತೃಗಳು ಅವರನ್ನು ವಂದಿಸಿದರು. ॥ ೧೮ ॥ ಶ್ರೋತೃಗಳಲ್ಲಿ ವೈಷ್ಣವರೂ, ವಿರಕ್ತರೂ, ಸಂನ್ಯಾಸಿಗಳೂ, ಬ್ರಹ್ಮಚಾರಿಗಳೂ ಮುಂದೆ ಕುಳಿತರು. ಅವರೆಲ್ಲರ ಮುಂದುಗಡೆ ನಾರದರು ಆಸೀನರಾದರು. ॥ ೧೯ ॥ ಒಂದು ಕಡೆ ಋಷಿಗಳು, ಒಂದುಕಡೆ ದೇವತೆಗಳು, ವೇದ, ಉಪನಿಷತ್ತುಗಳೂ ಹಾಗೂ ತೀರ್ಥಗಳೂ ಕುಳಿತವು. ಮತ್ತೊಂದೆಡೆ ಸ್ತ್ರೀಯರು

ಏಕಭಾಗೇ ಋಷಿಗಣಾಸ್ತದನ್ಯತ್ರ ದಿವೌಕಸಃ ।
ವೇದೋಪನಿಷದೋಽನ್ಯತ್ರ ತೀರ್ಥಾನ್ಯತ್ರ ಸ್ತ್ರಿಯೋಽನ್ಯತಃ ॥ ೨೦ ॥

ಜಯಶಬ್ದೋ ನಮಃಶಬ್ದಃ ಶಂಖಶಬ್ದಸ್ತಥೈವ ಚ ।
ಚೂರ್ಣಲಾಜಪ್ರಸೂನಾನಾಂ ನಿಕ್ಷೇಪಃ ಸುಮಹಾನಭೂತ್ ॥ ೨೧ ॥

ವಿಮಾನಾನಿ ಸಮಾರುಹ್ಯ ಕಿಯಂತೋ ದೇವನಾಯಕಾಃ ।
ಕಲ್ಪವೃಕ್ಷಪ್ರಸೂನೈಸ್ತಾನ್ ಸರ್ವಾಂಸ್ತತ್ರ ಸಮಾಕಿರನ್ ॥ ೨೨ ॥

ಸೂತ ಉವಾಚ

ಏವಂ ತೇಷ್ವೇಕಚಿತ್ತೇಷು ಶ್ರೀಮದ್ಭಾಗವತಸ್ಯ ಚ ।
ಮಾಹಾತ್ಮ್ಯಮೂಚಿರೇ ಸ್ಪಷ್ಟಂ ನಾರದಾಯ ಮಹಾತ್ಮನೇ ॥ ೨೩ ॥

ಕುಮಾರಾ ಊಚುಃ

ಅಥ ತೇ ವರ್ಣ್ಯತೇಽಸ್ಮಾಭಿರ್ಮಹಿಮಾ ಶುಕಶಾಸ್ತ್ರಜಃ ।
ಯಸ್ಯ ಶ್ರವಣಮಾತ್ರೇಣ ಮುಕ್ತಿಃ ಕರತಲೇ ಸ್ಥಿತಾ ॥ ೨೪ ॥

ಸದಾ ಸೇವ್ಯಾ ಸದಾ ಸೇವ್ಯಾ ಶ್ರೀಮದ್ಭಾಗವತೀ ಕಥಾ ।
ಯಸ್ಯಾಃ ಶ್ರವಣಮಾತ್ರೇಣ ಹರಿಶ್ಚಿತ್ತಂ ಸಮಾಶ್ರಯೇತ್ ॥ ೨೫ ॥

ಗ್ರಂಥೋಽಷ್ಟಾದಶಸಾಹಸ್ರೋ ದ್ವಾದಶಸ್ಕಂಧ ಸಮ್ಮಿತಃ ।
ಪರೀಕ್ಷಿಚ್ಛುಕಸಂವಾದಃ ಶೃಣು ಭಾಗವತಂ ಚ ತತ್ ॥ ೨೬ ॥

ತಾವತ್ಸಂಸಾರಚಕ್ರೇಽಸ್ಮಿನ್ ಭ್ರಮತೇಽಜ್ಞಾನತಃ ಪುಮಾನ್ ।
ಯಾವತ್ಕರ್ಣಗತಾ ನಾಸ್ತಿ ಶುಕಶಾಸ್ತ್ರಕಥಾ ಕ್ಷಣಮ್ ॥ ೨೭ ॥

ಕಿಂ ಶ್ರುತೈರ್ಬಹುಭಿಃ ಶಾಸ್ತ್ರೈಃ ಪುರಾಣೈಶ್ಚ ಭ್ರಮಾವಹೈಃ ।
ಏಕಂ ಭಾಗವತಂ ಶಾಸ್ತ್ರಂ ಮುಕ್ತಿದಾನೇನ ಗರ್ಜತಿ ॥ ೨೮ ॥

ಕಥಾ ಭಾಗವತಸ್ಯಾಪಿ ನಿತ್ಯಂ ಭವತಿ ಯದ್ಗೃಹೇ ।
ತದ್ಗೃಹಂ ತೀರ್ಥರೂಪಂ ಹಿ ವಸತಾಂ ಪಾಪನಾಶನಮ್ ॥ ೨೯ ॥

ಅಶ್ವಮೇಧಸಹಸ್ರಾಣಿ ವಾಜಪೇಯಶತಾನಿ ಚ ।
ಶುಕಶಾಸ್ತ್ರಕಥಾಯಾಶ್ಚ ಕಲಾಂ ನಾರ್ಹಂತಿ ಷೋಡಶೀಮ್ ॥ ೩೦ ॥

ತಾವತ್ಪಾಪಾನಿ ದೇಹೇಽಸ್ಮಿನ್ನಿವಸಂತಿ ತಪೋಧನಾಃ ।
ಯಾವನ್ನ ಶ್ರೂಯತೇ ಸಮ್ಯಕ್ ಶ್ರೀಮದ್ಭಾಗವತಂ ನರೈಃ ॥ ೩೧ ॥

ನ ಗಂಗಾ ನ ಗಯಾ ಕಾಶೀ ಪುಷ್ಕರಂ ನ ಪ್ರಯಾಗಕಮ್ ।
ಶುಕಶಾಸ್ತ್ರಕಥಾಯಾಶ್ಚ ಫಲೇನ ಸಮತಾಂ ನಯೇತ್ ॥ ೩೨ ॥

ಕುಳಿತರು. ॥ ೨೦ ॥ ಆಗ ಎಲ್ಲೆಡೆ ಜಯಕಾರ, ನಮಸ್ಕಾರ, ಶಂಖ ಧ್ವನಿ ಆಗತೊಡಗಿದವು. ಅಬೀರ ಗುಲಾಲು, ಅರಳು, ಹೂವುಗಳೂ ಇವುಗಳ ಮಳೆಯೇ ಸುರಿಯತೊಡಗಿತು. ॥ ೨೧ ॥ ಕೆಲ ಕೆಲ ದೇವ ಶ್ರೇಷ್ಠರಾದರೋ ವಿಮಾನಗಳನ್ನೇರಿ ಅಲ್ಲಿ ಕುಳಿತ ಎಲ್ಲ ಜನರ ಮೇಲೆ ಕಲ್ಪವೃಕ್ಷದ ಹೂವುಗಳನ್ನು ಮಳೆಗರೆದರು. ॥ ೨೨ ॥

ಸೂತಪುರಾಣಿಕರು ಹೇಳುತ್ತಾರೆ – ಈ ಪ್ರಕಾರ ಪೂಜೆಯು ಮುಗಿದ ಮೇಲೆ ಎಲ್ಲ ಜನರು ಏಕಾಗ್ರ ಚಿತ್ತರಾದಾಗ ಸನಕಾದಿ ಋಷಿಗಳು ಮಹಾತ್ಮ ನಾರದರಿಗೆ ಶ್ರೀಮದ್ಭಾಗವತದ ಮಾಹಾತ್ಮ್ಯವನ್ನು ಸ್ಪಷ್ಟಪಡಿಸುತ್ತಾ ಹೇಳತೊಡಗಿದರು. ॥ ೨೩ ॥

ಸನಕಾದಿಗಳು ಹೇಳಿದರು – ಈಗ ನಾವು ನಿಮಗೆ ಈ ಭಾಗವತ ಶಾಸ್ತ್ರದ ಮಹಿಮೆಯನ್ನು ಹೇಳುತ್ತೇವೆ. ಇದರ ಶ್ರವಣ ಮಾತ್ರದಿಂದ ಮುಕ್ತಿಯು ಕರತಲವಾಗುತ್ತದೆ. ॥ ೨೪ ॥ ಶ್ರೀಮದ್ಭಾಗವತ ಕಥೆಯನ್ನು ಸದಾ-ಸರ್ವದಾ ಸೇವಿಸಬೇಕು. ಆಸ್ವಾದಿಸಬೇಕು. ಇದರ ಶ್ರವಣಮಾತ್ರದಿಂದ ಶ್ರೀಹರಿಯು ಹೃದಯದಲ್ಲಿ ಬಂದು ನೆಲೆಸುವನು. ॥ ೨೫ ॥ ಈ ಗ್ರಂಥದಲ್ಲಿ ಹದಿನೆಂಟು ಸಾವಿರ ಶ್ಲೋಕಗಳು ಮತ್ತು ಹನ್ನೆರಡು ಸ್ಕಂಧಗಳಿವೆ. ಶ್ರೀಶುಕಮಹಾಮುನಿಗಳ ಹಾಗೂ ಪರೀಕ್ಷಿತರ ಸಂವಾದವಿದೆ. ನೀವೆಲ್ಲ ಈ ಭಾಗವತ ಶಾಸ್ತ್ರವನ್ನು ಗಮನವಿಟ್ಟು ಕೇಳಿರಿ. ॥ ೨೬ ॥ ಒಂದು ಕ್ಷಣವಾದರೂ ಈ ಶುಕಶಾಸ್ತ್ರದ ಕಥೆಯು ಕಿವಿಗೆ ಬೀಳುವ ತನಕ ಈ ಜೀವಿಯು ಅಜ್ಞಾನವಶನಾಗಿ ಸಂಸಾರ ಚಕ್ರದಲ್ಲಿ ಅಲೆಯುತ್ತಾ ಇರುತ್ತಾನೆ. ॥ ೨೭ ॥ ಅನೇಕ ಶಾಸ್ತ್ರಗಳು, ಪುರಾಣಗಳು ಕೇಳುವುದರಿಂದ ಯಾವ ಲಾಭವಿದೆ? ಇದರಿಂದ ವ್ಯರ್ಥವಾದ ಭ್ರಮೆಯೇ ಬೆಳೆಯುತ್ತದೆ. ಮುಕ್ತಿಕರುಣಿಸಲೋಸುಗವಾದರೋ ಏಕಮಾತ್ರ ಭಾಗವತ ಶಾಸ್ತ್ರವೇ ಸಾಕಾಗಿದೆ. ॥ ೨೮ ॥ ಪ್ರತಿದಿನವೂ ಶ್ರೀಮದ್ಭಾಗವತದ ಕಥೆ ನಡೆಯುವ ಮನೆಯು ತೀರ್ಥಸ್ವರೂಪವಾಗುತ್ತದೆ. ಅದರಲ್ಲಿ ವಾಸಿಸುವವರ ಎಲ್ಲ ಪಾಪಗಳು ನಾಶವಾಗಿ ಹೋಗುತ್ತವೆ. ॥ ೨೯ ॥ ಸಾವಿರಾರು ಅಶ್ವಮೇಧಗಳು, ನೂರಾರು ವಾಜಪೇಯ ಯಜ್ಞಗಳು ಈ ಶುಕಶಾಸ್ತ್ರದ ಕಥೆಯ ಹದಿನಾರನೆಯ ಒಂದು ಅಂಶವೂ ಆಗಲಾರವು. ॥ ೩೦ ॥ ತಪೋಧನರೇ! ಜನರು ಚೆನ್ನಾಗಿ ಶ್ರೀಮದ್ಭಾಗವತದಕಥೆಯನ್ನು ಶ್ರವಣಿಸುವ ತನಕ ಅವರ ಶರೀರದಲ್ಲಿ ಪಾಪಗಳು ವಾಸಿಸುತ್ತವೆ. ॥ ೩೧ ॥ ಫಲದ ದೃಷ್ಟಿಯಿಂದ ಈ ಶುಕಶಾಸ್ತ್ರಕಥೆಗೆ ಗಂಗೆ, ಯಮುನೆ, ಕಾಶೀ, ಪುಷ್ಕರ, ಪ್ರಯಾಗ ಮುಂತಾದ ತೀರ್ಥಕ್ಷೇತ್ರಗಳು ಸಾಟಿಯಾಗಲಾರವು. ಅರ್ಥಾತ್ ಇವೆಲ್ಲಕ್ಕಿಂತ ಭಾಗವತ ಕಥೆ ಶ್ರೇಷ್ಠವಾಗಿದೆ. ॥ ೩೨ ॥

ನಿಮಗೆ ಪರಮಗತಿಯ ಇಚ್ಛೆ ಇದ್ದರೆ, ಸ್ವಮುಖದಿಂದ ಶ್ರೀಮದ್ಭಾಗವತದ ಅರ್ಧ ಅಥವಾ ಕಾಲು ಶ್ಲೋಕವನ್ನಾದರೂ

ಶ್ಲೋಕಾರ್ಧಂ ಶ್ಲೋಕಪಾದಂ ವಾ ನಿತ್ಯಂ ಭಾಗವತೋದ್ಭವಮ್ ।
ಪಠಸ್ವ ಸ್ವಮುಖೇನೈವ ಯದೀಚ್ಛಸಿ ಪರಾಂ ಗತಿಮ್ ॥ ೩೩ ॥

ವೇದಾದಿರ್ವೇದಮಾತಾ ಚ ಪೌರುಷಂ ಸೂಕ್ತಮೇವ ಚ ।
ತ್ರಯೀ ಭಾಗವತಂ ಚೈವ ದ್ವಾದಶಾಕ್ಷರ ಏವ ಚ ॥ ೩೪ ॥

ದ್ವಾದಶಾತ್ಮಾ ಪ್ರಯಾಗಶ್ಚ ಕಾಲಃ ಸಂವತ್ಸರಾತ್ಮಕಃ ।
ಬ್ರಾಹ್ಮಣಾಶ್ಚಾಗ್ನಿಹೋತ್ರಂ ಚ ಸುರಭಿರ್ದ್ವಾದಶೀ ತಥಾ ॥ ೩೫ ॥

ತುಲಸೀ ಚ ವಸಂತಶ್ಚ ಪುರುಷೋತ್ತಮ ಏವ ಚ ।
ಏತೇಷಾಂ ತತ್ತ್ವತಃ ಪ್ರಾಜ್ಞೈರ್ನ ಪೃಥಗ್ಭಾವ ಇಷ್ಯತೇ ॥ ೩೬ ॥

ಯಶ್ಚ ಭಾಗವತಂ ಶಾಸ್ತ್ರಂ ವಾಚಯೇದರ್ಥತೋಽನಿಶಮ್ ।
ಜನ್ಮಕೋಟಿಕೃತಂ ಪಾಪಂ ನಶ್ಯತೇ ನಾತ್ರ ಸಂಶಯಃ ॥ ೩೭ ॥

ಶ್ಲೋಕಾರ್ಧಂ ಶ್ಲೋಕಪಾದಂ ವಾ ಪಠೇದ್ಭಾಗವತಂ ಚ ಯಃ ।
ನಿತ್ಯಂ ಪುಣ್ಯಮವಾಪ್ನೋತಿ ರಾಜಸೂಯಾಶ್ವಮೇಧಯೋಃ ॥ ೩೮ ॥

ಉಕ್ತಂ ಭಾಗವತಂ ನಿತ್ಯಂ ಕೃತಂ ಚ ಹರಿಚಿಂತನಮ್ ।
ತುಲಸೀಪೋಷಣಂ ಚೈವ ಧೇನೂನಾಂ ಸೇವನಂ ಸಮಮ್ ॥ ೩೯ ॥

ಅಂತಕಾಲೇ ತು ಯೇನೈವ ಶ್ರೂಯತೇ ಶುಕಶಾಸ್ತ್ರವಾಕ್ ।
ಪ್ರೀತ್ಯಾ ತಸ್ಯೈವ ವೈಕುಂಠಂ ಗೋವಿಂದೋಽಪಿ ಪ್ರಯಚ್ಛತಿ ॥ ೪೦ ॥

ಹೇಮಸಿಂಹಯುತಂ ಚೈತದ್ವೈಷ್ಣವಾಯ ದದಾತಿ ಚ ।
ಕೃಷ್ಣೇನ ಸಹ ಸಾಯುಜ್ಯಂ ಸ ಪುಮಾಂಲ್ಲಭತೇ ಧ್ರುವಮ್ ॥ ೪೧ ॥

ಆಜನ್ಮಮಾತ್ರಮಪಿ ಯೇನ ಶಠೇನ ಕಿಂಚಿ-
ಚ್ಚಿತ್ತಂ ವಿಧಾಯ ಶುಕಶಾಸ್ತ್ರಕಥಾ ನ ಪೀತಾ ।
ಚಾಂಡಾಲವಚ್ಚ ಖರವದ್ಬತ ತೇನ ನೀತಂ
ಮಿಥ್ಯಾ ಸ್ವಜನ್ಮ ಜನನೀಜನಿದುಃಖಭಾಜಾ ॥ ೪೨ ॥

ಜೀವಚ್ಛವೋ ನಿಗದಿತಃ ಸ ತು ಪಾಪಕರ್ಮಾ
ಯೇನ ಶ್ರುತಂ ಶುಕಕಥಾವಚನಂ ನ ಕಿಂಚಿತ್ ।
ಧಿಕ್ ತಂ ನರಂ ಪಶುಸಮಂ ಭುವಿ ಭಾರರೂಪ-
ಮೇವಂ ವದಂತಿ ದಿವಿ ದೇವಸಮಾಜಮುಖ್ಯಾಃ ॥ ೪೩ ॥

ದುರ್ಲಭೈವ ಕಥಾ ಲೋಕೇ ಶ್ರೀಮದ್ಭಾಗವತೋದ್ಭವಾ ।
ಕೋಟಿಜನ್ಮಸಮುತ್ಥೇನ ಪುಣ್ಯೇನೈವ ತು ಲಭ್ಯತೇ ॥ ೪೪ ॥

ತೇನ ಯೋಗನಿಧೇ ಧೀಮನ್ ಶ್ರೋತವ್ಯಾ ಸಾ ಪ್ರಯತ್ನತಃ ।
ದಿನಾನಾಂ ನಿಯಮೋ ನಾಸ್ತಿ ಸರ್ವದಾ ಶ್ರವಣಂ ಮತಮ್ ॥ ೪೫ ॥

ಪ್ರತಿದಿನ ನಿಯಮಪೂರ್ವಕ ಪಠಿಸಬೇಕು. ॥ ೩೩ ॥ ಓಂಕಾರ, ಗಾಯತ್ರೀ, ಪುರುಷಸೂಕ್ತ, ಮೂರೂ ವೇದಗಳು, ಶ್ರೀಮದ್ಭಾಗವತ, 'ಓಂ ನಮೋ ಭಗವತೇ ವಾಸುದೇವಾಯ' ಈ ದ್ವಾದಶಾಕ್ಷರ ಮಂತ್ರ, ದ್ವಾದಶಾತ್ಮಕ ಭಗವಾನ್ ಭಾಸ್ಕರ, ಪ್ರಯಾಗ, ಸಂವತ್ಸರರೂಪೀ ಕಾಲ, ಬ್ರಾಹ್ಮಣ, ಅಗ್ನಿಹೋತ್ರ, ಗೋವು, ದ್ವಾದಶೀ ತಿಥಿ, ತುಲಸೀ, ವಸಂತ ಋತು ಮತ್ತು ಭಗವಾನ್ ಪುರುಷೋತ್ತಮ ಇವೆಲ್ಲವುಗಳಲ್ಲಿ ಬುದ್ಧಿವಂತರು ಯಾವುದೇ ಭೇದವೆಣಿಸುವುದಿಲ್ಲ. ॥ ೩೪-೩೬ ॥ ಹಗಲು-ರಾತ್ರಿ ಅರ್ಥಸಹಿತ ಶ್ರೀಮದ್ಭಾಗವತ ಶಾಸ್ತ್ರವನ್ನು ಪಾರಾಯಣ ಮಾಡುವವನ ಕೋಟಿ ಜನ್ಮಗಳ ಪಾಪಗಳೂ ನಾಶವಾಗಿ ಹೋಗುತ್ತವೆ. ಇದರಲ್ಲಿ ಕಿಂಚಿತ್ತಾದರೂ ಸಂದೇಹವಿಲ್ಲ. ॥ ೩೭ ॥ ಪ್ರತಿದಿನವೂ ಭಾಗವತದ ಅರ್ಧ ಅಥವಾ ಕಾಲು ಶ್ಲೋಕವನ್ನಾದರೂ ಪಠಿಸುವವನಿಗೆ ರಾಜಸೂಯ, ಅಶ್ವಮೇಧ ಯಜ್ಞಗಳ ಫಲಗಳು ದೊರೆಯುತ್ತವೆ. ॥ ೩೮ ॥ ನಿತ್ಯವೂ ಭಾಗವತ ಪಾರಾಯಣ ಮಾಡುವುದು, ಭಗವಂತನನ್ನು ಚಿಂತಿಸುವುದು, ತುಲಸಿಗೆ ನೀರೆರೆಯುವುದು, ಗೋಪೂಜೆ ಮಾಡುವುದು ಇವು ನಾಲ್ಕೂ ಸಮಾನವಾಗಿವೆ. ॥ ೩೯ ॥ ಅಂತ್ಯಸಮಯದಲ್ಲಿ ಶ್ರೀಮದ್ಭಾಗವತ ವಾಕ್ಯವನ್ನು ಕೇಳುವವನ ಮೇಲೆ ಭಗವಂತನು ಪ್ರಸನ್ನನಾಗಿ, ವೈಕುಂಠಧಾಮವನ್ನು ಕರುಣಿಸುತ್ತಾನೆ. ॥ ೪೦ ॥ ಈ ಭಾಗವತವನ್ನು ಸ್ವರ್ಣಸಿಂಹಾಸನದಲ್ಲಿಟ್ಟು ವಿಷ್ಣುಭಕ್ತನಿಗೆ ದಾನ ಮಾಡುವವನು ನಿಶ್ಚಿತವಾಗಿ ಭಗವಂತನ ಸಾಯುಜ್ಯವನ್ನು ಪಡೆಯುತ್ತಾನೆ. ॥ ೪೧ ॥ ಜೀವನದ ಆಯುಷ್ಯದಲ್ಲಿ ಚಿತ್ತವನ್ನು ಏಕಾಗ್ರ ಮಾಡಿ ಶ್ರೀಮದ್ಭಾಗವತದ ಸ್ವಲ್ಪವಾದರೂ ರಸಾಸ್ವಾದ ಮಾಡದಿರುವ ದುಷ್ಟನು ತನ್ನ ಜನ್ಮವನ್ನು ಚಾಂಡಾಲ, ಕತ್ತೆಯಂತೆ ವ್ಯರ್ಥವಾಗಿ ಕಳೆದಿರುವನು. ಅವನಾದರೋ ತನ್ನ ತಾಯಿಗೆ ಪ್ರಸವ ವೇದನೆಯನ್ನು ಕೊಡಲೆಂದೇ ಹುಟ್ಟಿರುವನು. ॥ ೪೨ ॥ ಈ ಶುಕಶಾಸ್ತ್ರವನ್ನು ಸ್ವಲ್ಪವೂ ಕೇಳದ ಪಾಪಾತ್ಮನು ಬದುಕಿದ್ದರೂ ಶವದಂತೆ ಇದ್ದಾನೆ. 'ಭೂಮಿಗೆ ಭಾರವಾದ ಆ ಪಶುವಿನಂತಿರುವವನಿಗೆ ಧಿಕ್ಕಾರವಿರಲಿ' ಎಂದು ಸ್ವರ್ಗದಲ್ಲಿ ಇಂದ್ರಾದಿ ಪ್ರಧಾನ ದೇವತೆಗಳು ಹೇಳುತ್ತಿರುತ್ತಾರೆ. ॥ ೪೩ ॥

ಪ್ರಪಂಚದಲ್ಲಿ ಶ್ರೀಮದ್ಭಾಗವತದ ಕಥೆಯು ದೊರೆಯುವುದು ನಿಶ್ಚಿತವಾಗಿ ಕಠಿಣವಾಗಿದೆ. ಕೋಟಿ ಜನ್ಮಗಳ ಪುಣ್ಯವು ಇದ್ದಾಗಲೇ ಇದು ಪ್ರಾಪ್ತಿಯಾಗುತ್ತದೆ. ॥ ೪೪ ॥ ನಾರದರೇ! ನೀವು ಬಹಳ ಬುದ್ಧಿವಂತರು ಹಾಗೂ ಯೋಗನಿಧಿಗಳಾಗಿರುವಿರಿ. ನೀವು ಪ್ರಯತ್ನಪೂರ್ವಕ ಈ ಕಥೆಯನ್ನು ಶ್ರವಣಿಸಿರಿ. ಇದನ್ನು ಕೇಳಲು ಯಾವುದೇ ದಿನಗಳ ನಿಯಮವಿಲ್ಲ. ಇದನ್ನಾದರೋ ಯಾವಾಗಲೂ ಕೇಳುವುದು ಒಳ್ಳೆಯದೆ. ॥ ೪೫ ॥ ಇದನ್ನು ಸತ್ಯಭಾಷಣ ಮತ್ತು ಬ್ರಹ್ಮಚರ್ಯಪಾಲನೆಯೊಂದಿಗೆ ಯಾವಾಗಲೂ ಕೇಳುವುದು ಶ್ರೇಷ್ಠವೆಂದು ತಿಳಿಯಲಾಗಿದೆ. ಆದರೆ ಕಲಿಯುಗದಲ್ಲಿ ಹೀಗಾಗುವುದು ಕಷ್ಟವಾಗಿದೆ. ಆದಕ್ಕಾಗಿ ಶುಕಮಹಾಮುನಿಗಳು ತಿಳಿಸಿರುವ ವಿಧಿಯನ್ನು ತಿಳಿದು ಕೊಳ್ಳಬೇಕು. ॥ ೪೬ ॥

ನೈಕೇನ ಬ್ರಹ್ಮಚರ್ಯೇಣ ಸರ್ವದಾ ಶ್ರವಣಂ ಮತಮ್ ।
ಅಶಕ್ಯತ್ವಾತ್ಕಲೌ ಬೋಧ್ಯೋ ವಿಶೇಷೋಽತ್ರ ಶುಕಾಜ್ಞಯಾ ॥ ೨೬ ॥

ಮನೋವೃತ್ತಿಜಯಶ್ಚೈವ ನಿಯಮಾಚರಣಂ ತಥಾ ।
ದೀಕ್ಷಾಂ ಕರ್ತುಮಶಕ್ಯತ್ವಾತ್ಸಪ್ತಾಹಶ್ರವಣಂ ಮತಮ್ ॥ ೨೭ ॥

ಶ್ರದ್ಧಾತಃ ಶ್ರವಣೇ ನಿತ್ಯಂ ಮಾಘೇ ತಾವದ್ಧಿ ಯತ್ಫಲಮ್ ।
ತತ್ಫಲಂ ಶುಕದೇವೇನ ಸಪ್ತಾಹಶ್ರವಣೇ ಕೃತಮ್ ॥ ೨೮ ॥

ಮನಸಶ್ಚಾಜಯಾದ್ರೋಗಾತ್ಪುಂಸಾಂ ಚೈವಾಯುಷಃ ಕ್ಷಯಾತ್ ।
ಕಲೇರ್ದೋಷಬಹುತ್ವಾಚ್ಚ ಸಪ್ತಾಹಶ್ರವಣಂ ಮತಮ್ ॥ ೨೯ ॥

ಯತ್ಫಲಂ ನಾಸ್ತಿ ತಪಸಾ ನ ಯೋಗೇನ ಸಮಾಧಿನಾ ।
ಅನಾಯಾಸೇನ ತತ್ಸರ್ವಂ ಸಪ್ತಾಹಶ್ರವಣೇ ಲಭೇತ್ ॥ ೩೦ ॥

ಯಜ್ಞಾದ್ಗರ್ಜತಿ ಸಪ್ತಾಹಃ ಸಪ್ತಾಹೋ ಗರ್ಜತಿ ವ್ರತಾತ್ ।
ತಪಸೋ ಗರ್ಜತಿ ಪ್ರೋಚ್ಚೈಸ್ತೀರ್ಥಾನ್ನಿತ್ಯಂ ಹಿ ಗರ್ಜತಿ ॥ ೩೧ ॥

ಯೋಗಾದ್ಗರ್ಜತಿ ಸಪ್ತಾಹೋ ಧ್ಯಾನಾಜ್ಜ್ಞಾನಾಚ್ಚ ಗರ್ಜತಿ ।
ಕಿಂ ಬ್ರೂಮೋ ಗರ್ಜನಂ ತಸ್ಯ ರೇ ರೇ ಗರ್ಜತಿ ಗರ್ಜತಿ ॥ ೩೨ ॥

ಶೌನಕ ಉವಾಚ

ಸಾಶ್ಚರ್ಯಮೇತತ್ಕಥಿತಂ ಕಥಾನಕಂ
ಜ್ಞಾನಾದಿಧರ್ಮಾನ್ವಿಗಣಯ್ಯ ಸಾಂಪ್ರತಮ್ ।
ನಿಶ್ರೇಯಸೇ ಭಾಗವತಂ ಪುರಾಣಂ
ಜಾತಂ ಕುತೋ ಯೋಗವಿದಾದಿಸೂಚಕಮ್ ॥ ೩೩ ॥

ಸೂತ ಉವಾಚ

ಯದಾ ಕೃಷ್ಣೋ ಧರಾಂ ತ್ಯಕ್ತ್ವಾ ಸ್ವಪದಂ ಗಂತುಮುದ್ಯತಃ ।
ಏಕಾದಶಂ ಪರಿಶ್ರುತ್ಯಾಪ್ಯುದ್ಧವೋ ವಾಕ್ಯಮಬ್ರವೀತ್ ॥ ೩೪ ॥

ಉದ್ಧವ ಉವಾಚ

ತ್ವಂ ತು ಯಾಸ್ಯಸಿ ಗೋವಿಂದ ಭಕ್ತಕಾರ್ಯಂ ವಿಧಾಯ ಚ ।
ಮಚ್ಚಿತ್ತೇ ಮಹತೀ ಚಿಂತಾ ತಾಂ ಶ್ರುತ್ವಾ ಸುಖಮಾವಹ ॥ ೩೫ ॥

ಆಗತೋಽಯಂ ಕಲಿರ್ಘೋರೋ ಭವಿಷ್ಯಂತಿ ಪುನಃ ಖಲಾಃ ।
ತತ್ಸಂಗೇನೈವ ಸಂತೋಽಪಿ ಗಮಿಷ್ಯಂತ್ಯುಗ್ರತಾಂ ಯದಾ ॥ ೩೬ ॥

ತದಾ ಭಾರವತೀ ಭೂಮಿರ್ಗೋರೂಪೇಯಂ ಕಮಾಶ್ರಯೇತ್ ।
ಅನ್ಯೋ ನ ದೃಶ್ಯತೇ ತ್ರಾತಾ ತ್ವತ್ತಃ ಕಮಲಲೋಚನ ॥ ೩೭ ॥

ಕಲಿಯುಗದಲ್ಲಿ ಅನೇಕ ದಿನಗಳವರೆಗೆ ಚಿತ್ತವೃತ್ತಿಗಳನ್ನು ವಶದಲ್ಲಿಡುವುದು, ನಿಯಮಗಳಿಂದ ಬಂಧಿತನಾಗುವುದು, ಯಾವುದೇ ಪುಣ್ಯ ಕಾರ್ಯಕ್ಕಾಗಿ ದೀಕ್ಷಿತನಾಗಿರುವುದು ಕಠಿಣವಾಗಿದೆ. ಅದಕ್ಕಾಗಿ ಸಪ್ತಾಹ ಶ್ರವಣದ ವಿಧಿ ಇದೆ. ॥೨೭॥ ಶ್ರದ್ಧೆಯಿಂದ ಯಾವಾಗಲೂ ಶ್ರವಣಿಸುವುದರಿಂದ ಅಥವಾ ಮಾಘಮಾಸದಲ್ಲಿ ಶ್ರವಣಿಸುವುದರಿಂದ ಉಂಟಾಗುವ ಫಲವನ್ನು ಶ್ರೀಶುಕದೇವರು ಸಪ್ತಾಹ ಶ್ರವಣದಲ್ಲಿ ನಿರ್ಧರಿಸಿರುವರು. ॥ ೨೮ ॥ ಮನಸ್ಸಿನ ಅಸಂಯಮ, ರೋಗಗಳ ಹೆಚ್ಚಳ, ಆಯುಸ್ಸಿನ ಅಲ್ಪತೆ ಇವುಗಳ ಕಾರಣ ಹಾಗೂ ಕಲಿಯುಗದ ಅನೇಕ ದೋಷಗಳಿಂದಾಗಿಯೇ ಸಪ್ತಾಹ ಶ್ರವಣದ ವಿಧಾನವನ್ನು ಮಾಡಲಾಗಿದೆ. ॥ ೨೯ ॥ ತಪಸ್ಸು, ಯೋಗ, ಸಮಾಧಿ ಇವುಗಳಿಂದ ದೊರೆಯದಿರುವ ಫಲವು ಸರ್ವಾಂಗವಾಗಿ ಸಪ್ತಾಹ ಶ್ರವಣದಿಂದ ಸುಲಭವಾಗಿ ದೊರೆಯುತ್ತದೆ. ॥ ೩೦ ॥ ಸಪ್ತಾಹ ಶ್ರವಣವು ಯಜ್ಞದಿಂದ, ವ್ರತದಿಂದ, ತಪಸ್ಸಿನಿಂದ ಹೆಚ್ಚಿನದಾಗಿದೆ. ತೀರ್ಥ ಸೇವನೆಯಿಂದಲಾದರೋ ಸದಾ ಹೆಚ್ಚಿಗೆಯೇ ಇದೆ. ಯೋಗದಿಂದಲೂ ಮಿಗಿಲಾಗಿದೆ. ಎಲ್ಲಿಯವರೆಗೆಂದರೆ ಧ್ಯಾನ, ಜ್ಞಾನದಿಂದಲೂ ಮಿಗಿಲಾಗಿದೆ. ಅಯ್ಯಾ! ಇದರ ವಿಶೇಷತೆ ಎಲ್ಲಿಯವರೆಗೆ ಹೇಳಲಿ? ಇದಾದರೋ ಎಲ್ಲಕ್ಕಿಂತ ಶ್ರೇಷ್ಠವೇ ಆಗಿದೆ. ॥ ೩೦-೩೨ ॥

ಶೌನಕರು ಕೇಳಿದರು – ಸೂತರೇ! ಇದಾದರೋ ನೀವು ತುಂಬಾ ಆಶ್ಚರ್ಯದ ಮಾತನ್ನಾಡಿದಿರಿ. ಅವಶ್ಯವಾಗಿಯೇ ಈ ಭಾಗವತ ಪುರಾಣವು ಯೋಗವೇತ್ತರಾದ ಬ್ರಹ್ಮದೇವರಿಗೂ ಆದಿ ಕಾರಣನಾದ ಶ್ರೀನಾರಾಯಣನನ್ನೇ ನಿರೂಪಿಸುತ್ತದೆ. ಆದರೆ ಇದು ಮೋಕ್ಷದ ಪ್ರಾಪ್ತಿಯಲ್ಲಿ ಜ್ಞಾನಾದಿ ಎಲ್ಲ ಸಾಧನೆಗಳನ್ನು ಹಿಂದಕ್ಕೆ ಹಾಕಿ, ಈ ಯುಗದಲ್ಲಿ ಅದರಿಂದಲೂ ಹೆಚ್ಚು ಹೇಗೆ ಹಿರಿದಾಯಿತು? ॥ ೩೩ ॥

ಸೂತಪುರಾಣಿಕರು ಹೇಳಿದರು – ಭಗವಾನ್ ಶ್ರೀಕೃಷ್ಣನು ಈ ಧರಾತಲವನ್ನು ಬಿಟ್ಟು ತನ್ನ ನಿಜಧಾಮಕ್ಕೆ ಹೋಗುವಾಗ ಅವನ ಮುಖಾರವಿಂದದಿಂದ ಏಕಾದಶ ಸ್ಕಂಧದ ಜ್ಞಾನೋಪದೇಶವನ್ನು ಕೇಳಿದ ಉದ್ಧವನೂ ಇದನ್ನೇ ಕೇಳಿದ್ದನು. ॥ ೩೪ ॥

ಉದ್ಧವನೆಂದನು – ಗೋವಿಂದಾ! ಈಗ ನೀನು ಭಕ್ತರ ಕಾರ್ಯಗಳನ್ನು ಮಾಡಿ ಪರಮಧಾಮಕ್ಕೆ ತೆರಳಲು ಬಯಸುತ್ತಿರುವಿ. ಆದರೆ ನನ್ನ ಮನಸ್ಸಿನಲ್ಲಿ ಒಂದು ಹಿರಿದಾದ ಚಿಂತೆ ಇದೆ. ಅದನ್ನು ಕೇಳಿ ನೀನು ನನ್ನನ್ನು ಶಾಂತಗೊಳಿಸು. ॥ ೩೫ ॥ ಈಗ ಘೋರ ಕಲಿಕಾಲವು ಬಂದಿತೆಂದೇ ತಿಳಿ. ಆದರಿಂದ ಪ್ರಪಂಚದಲ್ಲಿ ಪುನಃ ಅನೇಕ ದುಷ್ಟರು ಪ್ರಕಟರಾಗುವರು. ಅವರ ಸಂಸರ್ಗದಿಂದ ಅನೇಕ ಸತ್ಪುರುಷರು ಉಗ್ರ ಪ್ರಕೃತಿಯವರಾದಾಗ, ಅವರ ಭಾರದಿಂದ ಕಂಗೆಟ್ಟ ಈ ಗೋರೂಪೀ ಪೃಥ್ವಿಯು ಯಾರಿಗೆ ಶರಣು ಹೋಗಬೇಕು? ಕಮಲನಯನಾ! ನನಗಾದರೋ ನಿನ್ನನ್ನು ಬಿಟ್ಟು ಇದನ್ನು ರಕ್ಷಿಸುವವರು ಬೇರೆ ಯಾರೂ ಕಾಣುವುದಿಲ್ಲ. ॥ ೩೬-೩೭ ॥

ಅತಃ ಸ್ವಸ್ಯ ದಯಾಂ ಕೃತ್ವಾ ಭಕ್ತವತ್ಸಲ ಮಾ ವ್ರಜ।
ಭಕ್ತಾರ್ಥಂ ಸಗುಣೋ ಜಾತೋ ನಿರಾಕಾರೋಽಪಿ ಚಿನ್ಮಯಃ
॥ ೫೮ ॥

ತ್ವದ್ವಿಯೋಗೇನ ತೇ ಭಕ್ತಾಃ ಕಥಂ ಸ್ಥಾಸ್ಯಂತಿ ಭೂತಲೇ।
ನಿರ್ಗುಣೋಪಾಸನೇ ಕಷ್ಟಮತಃ ಕಿಂಚಿದ್ವಿಚಾರಯ
॥ ೫೯ ॥

ಇತ್ಯುದ್ಧವವಚಃ ಶ್ರುತ್ವಾ ಪ್ರಭಾಸೇಽಚಿಂತಯದ್ಧರಿಃ।
ಭಕ್ತಾವಲಂಬನಾರ್ಥಾಯ ಕಿಂ ವಿಧೇಯಂ ಮಯೇತಿ ಚ
॥ ೬೦ ॥

ಸ್ವಕೀಯಂ ಯದ್ಭವೇತ್ತೇಜಸ್ತಚ್ಚ ಭಾಗವತೇಽದಧಾತ್।
ತಿರೋಧಾಯ ಪ್ರವಿಷ್ಟೋಽಯಂ ಶ್ರೀಮದ್ಭಾಗವತಾರ್ಣವಮ್
॥ ೬೧ ॥

ತೇನೇಯಂ ವಾಙ್ಮಯೀ ಮೂರ್ತಿಃ ಪ್ರತ್ಯಕ್ಷಾ ವರ್ತತೇ ಹರೇಃ।
ಸೇವನಾಚ್ಛ್ರವಣಾತ್ಪಾಠಾದ್ದರ್ಶನಾತ್ಪಾಪನಾಶಿನೀ
॥ ೬೨ ॥

ಸಪ್ತಾಹಶ್ರವಣಂ ತೇನ ಸರ್ವೇಭ್ಯೋಽಪ್ಯಧಿಕಂ ಕೃತಮ್।
ಸಾಧನಾನಿ ತಿರಸ್ಕೃತ್ಯ ಕಲೌ ಧರ್ಮೋಽಯಮೀರಿತಃ
॥ ೬೩ ॥

ದುಃಖದಾರಿದ್ರ್ಯದೌರ್ಭಾಗ್ಯಪಾಪಪ್ರಕ್ಷಾಲನಾಯ ಚ।
ಕಾಮಕ್ರೋಧಜಯಾರ್ಥಂ ಹಿ ಕಲೌ ಧರ್ಮೋಽಯಮೀರಿತಃ
॥ ೬೪ ॥

ಅನ್ಯಥಾ ವೈಷ್ಣವೀ ಮಾಯಾ ದೇವೈರಪಿ ಸುದುಸ್ತ್ಯಜಾ।
ಕಥಂ ತ್ಯಾಜ್ಯಾ ಭವೇತ್ಪುಂಭಿಃ ಸಪ್ತಾಹೋಽತಃ ಪ್ರಕೀರ್ತಿತಃ
॥ ೬೫ ॥

ಸೂತ ಉವಾಚ

ಏವಂ ನಗಾಹಶ್ರವಣೋರುಧರ್ಮೇ
ಪ್ರಕಾಶ್ಯಮಾನೇ ಋಷಿಭಿಃ ಸಭಾಯಾಮ್ ।
ಆಶ್ಚರ್ಯಮೇಕಂ ಸಮಭೂತ್ತದಾನೀಂ
ತದುಚ್ಯತೇ ಸಂಶೃಣು ಶೌನಕ ತ್ವಮ್ ॥ ೬೬ ॥

ಭಕ್ತಿಃ ಸುತೌ ತೌ ತರುಣೌ ಗೃಹೀತ್ವಾ
ಪ್ರೇಮೈಕರೂಪಾ ಸಹಸಾಽಽವಿರಾಸೀತ್ ।
ಶ್ರೀಕೃಷ್ಣ ಗೋವಿಂದ ಹರೇ ಮುರಾರೇ
ನಾಥೇತಿ ನಾಮಾನಿ ಮುಹುರ್ವದಂತೀ ॥ ೬೭ ॥

ತಾಂ ಚಾಗತಾಂ ಭಾಗವತಾರ್ಥಭೂಷಾಂ
ಸುಚಾರುವೇಷಾಂ ದದೃಶುಃ ಸದಸ್ಯಾಃ।
ಕಥಂ ಪ್ರವಿಷ್ಟಾ ಕಥಮಾಗತೇಯಂ
ಮಧ್ಯೇ ಮುನೀನಾಮಿತಿ ತರ್ಕಯಂತಃ ॥ ೬೮ ॥

ಅದಕ್ಕಾಗಿ ಓ ಭಕ್ತವತ್ಸಲ! ನೀನು ಸಾಧುಗಳ ಮೇಲೆ ಕೃಪೆಮಾಡಿ ಇಲ್ಲಿಂದ ಹೋಗಬೇಡ. ಭಗವಂತಾ! ನೀನು ನಿರಾಕಾರ, ಚಿನ್ಮಾತ್ರನಾಗಿದ್ದರೂ ಕೂಡ ಭಕ್ತರಿಗಾಗಿಯೇ ಈ ಸಗುಣ ರೂಪವನ್ನು ಧರಿಸಿರುವೆ. ॥ ೫೮ ॥ ಮತ್ತೆ ನಿನ್ನ ವಿಯೋಗವಾದಾಗ ಆ ಭಕ್ತರು ಭೂಮಿಯಲ್ಲಿ ಹೇಗೆ ಇರಬಲ್ಲರು? ನಿರ್ಗುಣೋಪಾಸನೆಯಲ್ಲಾದರೋ ತುಂಬಾ ಕಠಿಣತೆ ಇದೆ. ಆದ್ದರಿಂದ ವಿಚಾರಮಾಡಿ ಬೇರೆ ಉಪಾಯ ಮಾಡು. ॥ ೫೯ ॥

ಪ್ರಭಾಸ ಕ್ಷೇತ್ರದಲ್ಲಿ ಉದ್ಧವನ ಈ ಮಾತನ್ನು ಕೇಳಿ ಭಗವಂತನು – 'ಭಕ್ತರ ಅವಲಂಬನೆಗಾಗಿ ನಾನು ಯಾವ ವ್ಯವಸ್ಥೆ ಮಾಡಲಿ' ಎಂದು ಯೋಚಿಸ ತೊಡಗಿದನು. ॥ ೬೦ ॥ ಶೌನಕರೇ! ಆಗ ಭಗವಂತನು ತನ್ನ ಎಲ್ಲ ಶಕ್ತಿಯನ್ನು ಭಾಗವತದಲ್ಲಿ ಇರಿಸಿದನು. ಅವನು ಅಂತರ್ಧಾನನಾಗಿ ಈ ಭಾಗವತ ಸಮುದ್ರದಲ್ಲಿ ಪ್ರವೇಶಿಸಿದನು. ॥ ೬೧ ॥ ಅದರಿಂದ ಇದು ಭಗವಂತನ ಸಾಕ್ಷಾತ್ ಶಬ್ದಮಯ ಮೂರ್ತಿಯಾಗಿದೆ. ಇದರ ಸೇವನೆಯಿಂದ, ಶ್ರವಣ, ಪಾರಾಯಣದಿಂದ, ಅಥವಾ ದರ್ಶನದಿಂದಲೇ ಮನುಷ್ಯನ ಪಾಪಗಳೆಲ್ಲವೂ ನಾಶವಾಗಿ ಹೋಗುತ್ತವೆ. ॥ ೬೨ ॥ ಇದರಿಂದಲೇ ಇದರ ಸಪ್ತಾಹಶ್ರವಣವು ಎಲ್ಲಕ್ಕಿಂತ ಹಿರಿದೆಂದು ತಿಳಿಯಲಾಗಿದೆ. ಕಲಿಯುಗದಲ್ಲಾದರೋ ಬೇರೆ ಎಲ್ಲ ಸಾಧನೆಗಳನ್ನು ಬಿಟ್ಟು ಇದೇ ಪ್ರಧಾನ ಧರ್ಮವೆಂದು ಹೇಳಲಾಗಿದೆ. ॥ ೬೩ ॥ ಕಲಿಯುಗದಲ್ಲಿ ದುಃಖ, ದಾರಿದ್ರ್ಯ, ದುರ್ಭಾಗ್ಯ ಮತ್ತು ಪಾಪಗಳನ್ನು ಇಲ್ಲವಾಗಿಸುವ, ಕಾಮ-ಕ್ರೋಧಾದಿ ಶತ್ರುಗಳ ಮೇಲೆ ವಿಜಯ ಸಾಧಿಸುವಂತಹ ಧರ್ಮವು ಇದೊಂದೇ ಆಗಿದೆ. ॥ ೬೪ ॥ ಇದಲ್ಲದೆ ಭಗವಂತನ ಈ ವಿಷ್ಣು ಮಾಯೆಯಿಂದ ಬಿಡಿಸಿಕೊಳ್ಳುವುದು ದೇವತೆಗಳಿಗೂ ಕಠಿಣವಾಗಿದೆ. ಮನುಷ್ಯನಾದರೋ ಇದರಿಂದ ಹೇಗೆ ಪಾರಾಗಬಲ್ಲನು? ಅದ್ದರಿಂದ ಮಾಯೆಯಿಂದ ಬಿಡುಗಡೆ ಹೊಂದಲು ಸಪ್ತಾಹ ಶ್ರವಣದ ವಿಧಾನ ಮಾಡಲಾಗಿದೆ. ॥ ೬೫ ॥

ಸೂತರು ಹೇಳುತ್ತಾರೆ – ಶೌನಕರೇ! ಸನಕಾದಿ ಮುನೀಶ್ವರರು ಹೀಗೆ ಸಪ್ತಾಹಶ್ರವಣದ ಮಹಿಮೆಯನ್ನು ಹೊಗಳುತ್ತಿದ್ದಾಗ ಆ ಸಭೆಯಲ್ಲಿ ಒಂದು ಬಹುದೊಡ್ಡ ಆಶ್ಚರ್ಯ ನಡೆಯಿತು. ಅದನ್ನು ನಿನಗೆ ಹೇಳುತ್ತೇನೆ ಕೇಳಿರಿ. ॥ ೬೬ ॥ ಅಲ್ಲಿ ತರುಣಾವಸ್ಥೆಯನ್ನು ಹೊಂದಿದ ತನ್ನ ಇಬ್ಬರೂ ಪುತ್ರರೊಂದಿಗೆ ವಿಶುದ್ಧ ಪ್ರೇಮರೂಪೀ ಭಕ್ತಿಯು ಪದೇ-ಪದೇ 'ಶ್ರೀಕೃಷ್ಣ! ಗೋವಿಂದ! ಹರೇ! ಮುರಾರೇ! ಹೇನಾಥ! ನಾರಾಯಣ! ವಾಸುದೇವ!' ಮುಂತಾದ ಭಗವನ್ನಾಮಗಳನ್ನು ಉಚ್ಚರಿಸುತ್ತಾ ಅಕಸ್ಮಾತ್ ಪ್ರಕಟಗೊಂಡಳು. ॥ ೬೭ ॥ ಪರಮ ಸುಂದರಿಯಾದ ಭಕ್ತಿಯು ಭಾಗವತದ ಅರ್ಥಗಳನ್ನು ಆಭೂಷಣಗಳನ್ನಾಗಿ ತೊಟ್ಟು ಅಲ್ಲಿಗೆ ಬಂದಿರುವುದನ್ನು ಸದಸ್ಯರೆಲ್ಲರೂ ನೋಡಿದರು. ಮುನಿಗಳ ಈ ಸಭೆಯಲ್ಲಿ ಇವಳು ಇಲ್ಲಿಗೆ ಹೇಗೆ ಬಂದಳು? ಹೇಗೆ ಪ್ರವಿಷ್ಟಳಾದಳು? ಎಂದು ತರ್ಕ ವಿತರ್ಕಗಳನ್ನು ಮಾಡತೊಡಗಿದರು. ॥ ೬೮ ॥ ಆಗ ಸನಕಾದಿಗಳು ಹೇಳಿದರು – 'ಈ ಭಕ್ತಿದೇವಿಯು ಈಗಲೇ ಕಥೆಯ

ಊಚುಃ ಕುಮಾರಾ ವಚನಂ ತದಾನೀಂ
ಕಥಾರ್ಥತೋ ನಿಷ್ಪತಿತಾಧುನೇಯಮ್ ।
ಏವಂ ಗಿರಃ ಸಾ ಸಸುತಾ ನಿಶಮ್ಯ
ಸನತ್ಕುಮಾರಂ ನಿಜಗಾದ ನಮ್ರಾ ॥ ೬೯ ॥

ಭಕ್ತಿರುವಾಚ

ಭವದ್ಭಿರದ್ಯೈವ ಕೃತಾಸ್ಮಿ ಪುಷ್ಟಾ
ಕಲಿಪ್ರಣಷ್ಟಾಪಿ ಕಥಾರಸೇನ ।
ಕ್ವಾಹಂ ತು ತಿಷ್ಠಾಮ್ಯಧುನಾ ಬ್ರುವಂತು
ಬ್ರಾಹ್ಮಾ ಇದಂ ತಾಂ ಗಿರಮೂಚಿರೇ ತೇ ॥ ೭೦ ॥

ಭಕ್ತೇಷು ಗೋವಿಂದ ಸ್ವರೂಪಕರ್ತ್ರೀ
ಪ್ರೇಮೈಕಧರ್ತ್ರೀ ಭವರೋಗಹಂತ್ರೀ ।
ಸಾ ತ್ವಂ ಚ ತಿಷ್ಠ ಸ್ವಸುಧೈರ್ಯಸಂಶ್ರಯಾ
ನಿರಂತರಂ ವೈಷ್ಣವಮಾನಸಾನಿ ॥ ೭೧ ॥

ತತೋಽಪಿ ದೋಷಾಃ ಕಲಿಜಾ ಇಮೇ ತ್ವಾಂ
ದ್ರಷ್ಟುಂ ನ ಶಕ್ತಾಃ ಪ್ರಭವೋಽಪಿ ಲೋಕೇ ।
ಏವಂ ತದಾಜ್ಞಾವಸರೇಽಪಿ ಭಕ್ತಿ-
ಸ್ತದಾ ನಿಷಣ್ಣಾ ಹರಿದಾಸಚಿತ್ತೇ ॥ ೭೨ ॥

ಸಕಲಭುವನಮಧ್ಯೇ ನಿರ್ಧನಾಸ್ತೇಽಪಿ ಧನ್ಯಾ
ನಿವಸತಿ ಹೃದಿ ಯೇಷಾಂ ಶ್ರೀಹರೇರ್ಭಕ್ತಿರೇಕಾ ।
ಹರಿರಪಿ ನಿಜಲೋಕಂ ಸರ್ವಥಾತೋ ವಿಹಾಯ
ಪ್ರವಿಶತಿ ಹೃದಿ ತೇಷಾಂ ಭಕ್ತಿಸೂತ್ರೋಪನದ್ಧಃ ॥ ೭೩ ॥

ಬ್ರೂಮೋಽದ್ಯ ತೇ ಕಿಮಧಿಕಂ ಮಹಿಮಾನಮೇವಂ
ಬ್ರಹ್ಮಾತ್ಮಕಸ್ಯ ಭುವಿ ಭಾಗವತಾಭಿಧಸ್ಯ ।
ಯತ್ಸಂಶ್ರಯಾನ್ನಿಗದಿತೇ ಲಭತೇ ಸುವಕ್ತಾ
ಶ್ರೋತಾಪಿ ಕೃಷ್ಣಸಮತಾಮಲಮನ್ಯಧರ್ಮೈಃ ॥ ೭೪ ॥

ಅರ್ಥದಿಂದ ಮುಂದಿರುವಳು' ಅವರ ಈ ವಚನಗಳನ್ನು ಕೇಳಿ ಭಕ್ತಿಯು ತನ್ನ ಪುತ್ರರೊಂದಿಗೆ ಅತ್ಯಂತ ವಿನಮ್ರಳಾಗಿ ಸನತ್ಕುಮಾರರಲ್ಲಿ ಹೇಳಿದಳು. ॥ ೬೯ ॥

ಭಕ್ತಿಯು ಹೇಳಿದಳು – ನಾನು ಕಲಿಯುಗದಲ್ಲಿ ನಷ್ಟಪ್ರಾಯಳಾಗಿದ್ದೆ. ತಾವು ಕಥಾಮೃತವನ್ನು ಸಿಂಪಡಿಸಿ ನನ್ನನ್ನು ಪುನಃ ಪುಷ್ಟಗೊಳಿಸಿರುವಿರಿ. 'ಈಗ ನಾನು ಎಲ್ಲಿರಲಿ' ಎಂಬುದನ್ನು ತಾವು ತಿಳಿಸಿರಿ. ಇದನ್ನು ಕೇಳಿ ಸನಕಾದಿಗಳು ಅವಳಲ್ಲಿ ಹೇಳಿದರು ॥ ೭೦ ॥ 'ನೀನು ಭಕ್ತರಿಗೆ ಭಗವಂತನ ಸ್ವರೂಪವನ್ನು ಕರುಣಿಸುವವಳೂ, ಅನನ್ಯ ಪ್ರೇಮವನ್ನು ಸಂಪಾದಿಸಿ ಕೊಡುವವಳೂ, ಸಂಸಾರ ರೋಗವನ್ನು ನಿರ್ಮೂಲನ ಮಾಡುವವಳೂ ಆಗಿರುವೆ. ಅದ್ದರಿಂದ ಧೈರ್ಯವಹಿಸಿ ನೀನು ನಿತ್ಯ-ನಿರಂತರ ವಿಷ್ಣು ಭಕ್ತರ ಹೃದಯದಲ್ಲೇ ವಾಸಿಸು. ॥ ೭೧ ॥ ಇದೀ ಜಗತ್ತಿನಲ್ಲಿ ಕಲಿಯುಗದ ದೋಷಗಳು ಎಷ್ಟೇ ಪ್ರಭಾವ ಬೀರಲಿ, ಆದರೆ ಅಲ್ಲಿ ಇವುಗಳ ದೃಷ್ಟಿಯು ನಿನ್ನ ಮೇಲೆ ಬೀಳಲಾರದು' ಹೀಗೆ ಅವರ ಅಪ್ಪಣೆ ಪಡೆಯುತ್ತಲೇ ಭಕ್ತಿಯೂ ಕೂಡಲೇ ಭಗವದ್ಭಕ್ತರ ಹೃದಯಗಳಲ್ಲಿ ವಿರಾಜಮಾನಳಾದಳು. ॥ ೭೨ ॥

ಹೃದಯದಲ್ಲಿ ಏಕಮಾತ್ರ ಶ್ರೀಹರಿಯ ಭಕ್ತಿಯು ವಾಸಿಸುವವರು ಮೂರು ಲೋಕಗಳಲ್ಲಿ ನಿರ್ಧನರಾಗಿದ್ದರೂ ಪರಮಧನ್ಯರಾಗಿದ್ದಾರೆ. ಏಕೆಂದರೆ, ಈ ಭಕ್ತಿಯೆಂಬ ಹಗ್ಗದಿಂದ ಬಂಧಿತನಾಗಿ ಸಾಕ್ಷಾತ್ ಭಗವಂತನು ತನ್ನ ಪರಮಧಾಮ ವೈಕುಂಠವನ್ನು ಬಿಟ್ಟು ಬಂದು ಅವರ ಹೃದಯದಲ್ಲಿ ನೆಲೆಸಿಬಿಡುತ್ತಾನೆ. ॥ ೭೩ ॥ ಭೂಲೋಕದಲ್ಲಿ ಈ ಭಾಗವತವು ಸಾಕ್ಷಾತ್ ಪರಬ್ರಹ್ಮನ ವಿಗ್ರಹವಾಗಿದೆ. ನಾವು ಇದರ ಮಹಿಮೆಯನ್ನು ಎಷ್ಟೆಂದು ಹೇಳಲಿ ? ಇದರ ಆಶ್ರಯಪಡೆದು ಇದನ್ನು ಹೇಳುವುದರಿಂದ ಕೇಳುವವರು ಮತ್ತು ಹೇಳುವವರಿಬ್ಬರಿಗೂ ಭಗವಾನ್ ಶ್ರೀಕೃಷ್ಣನ ಸಾರೂಪ್ಯ ಪ್ರಾಪ್ತಿಯಾಗುತ್ತದೆ. ಆದ್ದರಿಂದ ಇದನ್ನು ಬಿಟ್ಟು ಬೇರೆ ಧರ್ಮಗಳಿಂದ ಏನು ಪ್ರಯೋಜನವಿದೆ ? ॥ ೭೪ ॥

ಮೂರನೆಯ ಅಧ್ಯಾಯವು ಮುಗಿಯಿತು. ॥ ೩ ॥

ಇತಿ ಶ್ರೀಪದ್ಮಪುರಾಣೇ ಉತ್ತರಖಂಡೇ ಶ್ರೀಮದ್ಭಾಗವತಮಾಹಾತ್ಮ್ಯೇ ಭಕ್ತಿಕಷ್ಟನಿವರ್ತನಂ ನಾಮ ತೃತೀಯೋಽಧ್ಯಾಯಃ ॥ ೩ ॥

ನಾಲ್ಕನೆಯ ಅಧ್ಯಾಯ

ಗೋಕರ್ಣೋಪಾಖ್ಯಾನ

ಸೂತ ಉವಾಚ

ಅಥ ವೈಷ್ಣವಚಿತ್ತೇಷು ದೃಷ್ಟ್ವಾ ಭಕ್ತಿಮಲೌಕಿಕೀಮ್ ।
ನಿಜಲೋಕಂ ಪರಿತ್ಯಜ್ಯ ಭಗವಾನ್ ಭಕ್ತವತ್ಸಲಃ ॥ ೧ ॥

ಸೂತಪುರಾಣಿಕರು ಹೇಳುತ್ತಾರೆ – ಮುನಿವರ್ಯರೇ ! ಆಗ ತನ್ನ ಭಕ್ತರ ಚಿತ್ತದಲ್ಲಿ ಅಲೌಕಿಕ ಭಕ್ತಿಯ ಪ್ರಾದುರ್ಭಾವವಾಗಿರುವುದನ್ನು ಕಂಡು ಭಕ್ತವತ್ಸಲ ಭಗವಂತನು ತನ್ನ ಧಾಮವನ್ನು ಬಿಟ್ಟು ಅಲ್ಲಿಗೆ ಬಂದನು. ॥ ೧ ॥ ಅವನ ಕೊರಳಲ್ಲಿ ವನಮಾಲೆಯು ಶೋಭಿಸುತ್ತಿತ್ತು. ಶ್ರೀಅಂಗವು ಸಜಲ ಮೇಘದಂತೆ ಶ್ಯಾಮಲ

ವನಮಾಲೀ ಘನಶ್ಯಾಮಃ ಪೀತವಾಸಾ ಮನೋಹರಃ ।
ಕಾಂಚೀಕಲಾಪರುಚಿರೋ ಲಸನ್ಮುಕುಟಕುಂಡಲಃ ॥ ೨ ॥

ತ್ರಿಭಂಗಲಲಿತಶ್ಚಾರುಕೌಸ್ತುಭೇನ ವಿರಾಜಿತಃ ।
ಕೋಟಿಮನ್ಮಥಲಾವಣ್ಯೋ ಹರಿಚಂದನಚರ್ಚಿತಃ ॥ ೩ ॥

ಪರಮಾನಂದಚಿನ್ಮೂರ್ತಿರ್ಮಧುರೋ ಮುರಲೀಧರಃ ।
ಆವಿವೇಶ ಸ್ವಭಕ್ತಾನಾಂ ಹೃದಯಾನ್ಯಮಲಾನಿ ಚ ॥ ೪ ॥

ವೈಕುಂಠವಾಸಿನೋ ಯೇ ಚ ವೈಷ್ಣವಾ ಉದ್ಧವಾದಯಃ ।
ತತ್ಕಥಾಶ್ರವಣಾರ್ಥಂ ತೇ ಗೂಢರೂಪೇಣ ಸಂಸ್ಥಿತಾಃ ॥ ೫ ॥

ತದಾ ಜಯಜಯಾರಾವೋ ರಸಪುಷ್ಟಿರಲೌಕಿಕೀ ।
ಚೂರ್ಣಪ್ರಸೂನವೃಷ್ಟಿಶ್ಚ ಮುಹುಃ ಶಂಖರವೋಽಪ್ಯಭೂತ್ ॥ ೬ ॥

ತತ್ಸಭಾಸಂಸ್ಥಿತಾನಾಂ ಚ ದೇಹಗೇಹಾತ್ಮವಿಸ್ಮೃತಿಃ ।
ದೃಷ್ಟ್ವಾ ಚ ತನ್ಮಯಾವಸ್ಥಾಂ ನಾರದೋ ವಾಕ್ಯಮಬ್ರವೀತ್ ॥ ೭ ॥

ಅಲೌಕಿಕೋಽಯಂ ಮಹಿಮಾ ಮುನೀಶ್ವರಾಃ
ಸಪ್ತಾಹಜನ್ಯೋಽದ್ಯ ವಿಲೋಕಿತೋ ಮಯಾ ।
ಮೂಢಾಃ ಶಠಾ ಯೇ ಪಶುಪಕ್ಷಿಣೋಽತ್ರ
ಸರ್ವೇಽಪಿ ನಿಷ್ಪಾಪತಮಾ ಭವಂತಿ ॥ ೮ ॥

ಅಹೋ ನೃಲೋಕೇ ನನು ನಾಸ್ತಿ ಕಿಂಚಿ-
ಚ್ಚಿತ್ತಸ್ಯ ಶೋಧಾಯ ಕಲೌ ಪವಿತ್ರಮ್ ।
ಅಘೌಘವಿಧ್ವಂಸಕರಂ ತಥೈವ
ಕಥಾಸಮಾನಂ ಭುವಿ ನಾಸ್ತಿ ಚಾನ್ಯತ್ ॥ ೯ ॥

ಕೇ ಕೇ ವಿಶುಧ್ಯಂತಿ ವದಂತು ಮಹ್ಯಂ
ಸಪ್ತಾಹಯಜ್ಞೇನ ಕಥಾಮಯೇನ ।
ಕೃಪಾಲುಭಿರ್ಲೋಕಹಿತಂ ವಿಚಾರ್ಯ
ಪ್ರಕಾಶಿತಃ ಕೋಽಪಿ ನವೀನಮಾರ್ಗಃ ॥ ೧೦ ॥

ಕುಮಾರಾ ಊಚುಃ

ಯೇ ಮಾನವಾಃ ಪಾಪಕೃತಸ್ತು ಸರ್ವದಾ
ಸದಾ ದುರಾಚಾರರತಾ ವಿಮಾರ್ಗಗಾಃ ।
ಕ್ರೋಧಾಗ್ನಿದಗ್ಧಾಃ ಕುಟಿಲಾಶ್ಚ ಕಾಮಿನಃ
ಸಪ್ತಾಹಯಜ್ಞೇನ ಕಲೌ ಪುನಂತಿ ತೇ ॥ ೧೧ ॥

ಸತ್ಯೇನ ಹೀನಾಃ ಪಿತೃಮಾತೃದೂಷಕಾ-
ಸ್ತೃಷ್ಣಾಕುಲಾಶ್ಚಾಶ್ರಮಧರ್ಮವರ್ಜಿತಾಃ ।
ಯೇ ದಾಂಭಿಕಾ ಮತ್ಸರಿಣೋಽಪಿ ಹಿಂಸಕಾಃ
ಸಪ್ತಾಹಯಜ್ಞೇನ ಕಲೌ ಪುನಂತಿ ತೇ ॥ ೧೨ ॥

ವಾಗಿತ್ತು. ಮನೋಹರ ಪೀತಾಂಬರವನ್ನು ಧರಿಸಿದ್ದನು. ಕಟಿಯಲ್ಲಿ ರತ್ನಖಚಿತ ಉಡಿದಾರವಿದ್ದು, ಶಿರದಲ್ಲಿ ಮುಕುಟ, ಕಿವಿಗಳಲ್ಲಿ ಮಕರಾಕೃತಿಯ ಕುಂಡಲಗಳು ಶೋಭಿಸುತ್ತಿದ್ದವು. ॥ ೨ ॥ ಅವನ ತ್ರಿಭಂಗಿಮುದ್ರೆಯು ನಿಬಿಡ ಚಿತ್ತವನ್ನು ಅಪಹರಿಸುತ್ತಿತ್ತು. ವಕ್ಷಸ್ಥಳದಲ್ಲಿ ಕೌಸ್ತುಭ ಮಣಿಯು ವಿರಾಜಿಸುತ್ತಿತ್ತು. ಅವನ ಶ್ರೀಅಂಗಾಂಗಗಳು ಚಂದನ ಚರ್ಚಿತವಾಗಿದ್ದು, ಕೋಟಿಮನ್ಮಥರ ಲಾವಣ್ಯವನ್ನು ಅಪಹರಿಸುತ್ತಿತ್ತು. ॥ ೩ ॥ ಆ ಪರಮಾನಂದ ಚಿನ್ಮೂರ್ತಿ, ಅತಿಮಧುರ ಮುರಲೀಧರನು ತನ್ನ ಅನುಪಮ ಕಾಂತಿಯಿಂದ ತನ್ನ ಭಕ್ತರ ನಿರ್ಮಲ ಹೃದಯದಲ್ಲಿ ಆವಿರ್ಭವಿಸಿದನು. ॥ ೪ ॥ ಭಗವಂತನ ನಿತ್ಯಲೋಕ ನಿವಾಸಿ ಲೀಲಾಪರಿಕರ ಉದ್ಧವಾದಿಗಳು ಅಲ್ಲಿ ಗುಪ್ತ ರೂಪದಿಂದ ಆ ಕಥೆಯನ್ನು ಕೇಳಲು ಆಗಮಿಸಿದ್ದರು. ॥ ೫ ॥ ಪ್ರಭುವು ಪ್ರಕಟವಾಗುತ್ತಲೇ ಎಲ್ಲೆಡೆ ಜಯ ಜಯಕಾರ ಧ್ವನಿ ಮೊಳಗಿತು. ಆಗ ಭಕ್ತಿರಸದ ಅದ್ಭುತ ಪ್ರವಾಹವೇ ಹರಿಯಿತು. ಮತ್ತೆ-ಮತ್ತೆ ಅಬೀರ-ಗುಲಾಲ ಹಾಗೂ ಪುಷ್ಪಗಳ ವೃಷ್ಟಿಯಾಯಿತು. ಶಂಖ ಧ್ವನಿ ಉಲಿಯಿತು. ॥ ೬ ॥ ಆ ಸಭೆಯಲ್ಲಿ ಕುಳಿತವರಿಗೆ ತಮ್ಮ ದೇಹ, ಗೇಹ ಹಾಗೂ ಆತ್ಮನ ಎಚ್ಚರ ಕೂಡ ಇರಲಿಲ್ಲ. ಅವರ ಇಂತಹ ತನ್ಮಯತೆಯನ್ನು ಕಂಡು ನಾರದರು ಹೇಳತೊಡಗಿದರು- ॥ ೭ ॥

ಮುನೀಶ್ವರರೇ! ಇಂದು ಸಪ್ತಾಹ ಶ್ರವಣದ ಅಲೌಕಿಕ ಮಹಿಮೆಯನ್ನು ನಾನು ನೋಡಿದೆನು. ಇಲ್ಲಿರುವ ಮಹಾ ಮೂರ್ಖರೂ, ದುಷ್ಟರೂ, ಪಶು-ಪಕ್ಷಿಗಳೂ ಕೂಡ ಎಲ್ಲರೂ ಅತ್ಯಂತ ನಿಷ್ಪಾಪಿಗಳಾಗಿ ಹೋದರು. ॥ ೮ ॥ ಆದ್ದರಿಂದ ಕಲಿಕಾಲದಲ್ಲಿ ಚಿತ್ತದ ಶುದ್ಧಿಗಾಗಿ ಈ ಭಾಗವತ ಕಥೆಗೆ ಸಮಾನವಾಗಿ ಮರ್ತ್ಯಲೋಕದಲ್ಲಿ ಪಾಪಪುಂಜವನ್ನು ನಾಶಮಾಡುವಂತಹ ಇನ್ನೊಂದು ಪವಿತ್ರ ಸಾಧನ ಇಲ್ಲ ಎಂಬುದರಲ್ಲಿ ಸಂದೇಹವೇ ಇಲ್ಲ. ॥ ೯ ॥ ಮುನಿವರ್ಯರೇ! ನೀವುಗಳು ಬಹಳ ಕೃಪಾಳುಗಳಾಗಿದ್ದೀರಿ. ನೀವು ಜಗತ್ತಿನ ಹಿತದ ವಿಚಾರಗೈದು ನಿಶ್ಚಿತವಾದ ಹೊಸದಾದ ಮಾರ್ಗವನ್ನು ಪ್ರಕಾಶಗೊಳಿಸಿರುವಿರಿ. ಈ ಕಥಾರೂಪಿ ಸಪ್ತಾಹ ಯಜ್ಞದ ಮೂಲಕ ಜಗತ್ತಿನಲ್ಲಿ ಯಾರು-ಯಾರು ಪವಿತ್ರರಾಗಿ ಹೋಗಿದ್ದಾರೆಂಬುದನ್ನು ದಯಮಾಡಿ ತಿಳಿಸಿರಿ. ॥ ೧೦ ॥

ಸನಕಾದಿಗಳು ಹೇಳಿದರು - ಸದಾಕಾಲ ನಾನಾರೀತಿಯ ಪಾಪಗಳನ್ನು ಮಾಡುವವರೂ, ನಿರಂತರ ದುರಾಚಾರದಲ್ಲಿ ತತ್ಪರರಾಗಿರುವವರೂ, ಶಾಸ್ತ್ರ ವಿರುದ್ಧವಾಗಿ ನಡೆಯುವವರೂ, ಕ್ರೋಧಾಗ್ನಿಯಲ್ಲಿ ಬೇಯುತ್ತಿರುವವರೂ, ಕುಟಿಲರೂ, ಕಾಮಪರಾಯಣರೂ ಹೀಗೆ ಇವರೆಲ್ಲರೂ ಈ ಕಲಿಯುಗದಲ್ಲಿ ಸಪ್ತಾಹ ಯಜ್ಞದಿಂದ ಪವಿತ್ರರಾಗಿಹೋಗುತ್ತಾರೆ. ॥ ೧೧ ॥ ಸತ್ಯದಿಂದ ಚ್ಯುತರಾದವರೂ, ತಂದೆ-ತಾಯಿಯರನ್ನು ನಿಂದಿಸುವವರೂ, ತೃಷ್ಣೆಯಿಂದ ವ್ಯಾಕುಲರಾದವರೂ, ಆಶ್ರಮಧರ್ಮದಿಂದ ರಹಿತರೂ, ಡಾಂಭಿಕರೂ, ಬೇರೆಯವರ ಉನ್ನತಿಯನ್ನು ನೋಡಿ ಮತ್ಸರಪಡುವವರೂ, ಬೇರೆಯವರಿಗೆ ದುಃಖ ಕೊಡುವವರೂ, ಇವರೆಲ್ಲರೂ ಕಲಿಯುಗದಲ್ಲಿ ಸಪ್ತಾಹ ಯಜ್ಞದಿಂದ ಪವಿತ್ರರಾಗುತ್ತಾರೆ. ॥ ೧೨ ॥

ಪಂಚೋಗ್ರಪಾಪಾಶ್ಛಲಛದ್ಮಕಾರಿಣಃ
ಕ್ರೂರಾಃ ಪಿಶಾಚಾ ಇವ ನಿರ್ದಯಾಶ್ಚ ಯೇ ।
ಬ್ರಹ್ಮಸ್ವಪುಷ್ಟಾ ವ್ಯಭಿಚಾರಕಾರಿಣಃ
ಸಪ್ತಾಹಯಜ್ಞೇನ ಕಲೌ ಪುನಂತಿ ತೇ ॥ ೧೩ ॥

ಕಾಯೇನ ವಾಚಾ ಮನಸಾಪಿ ಪಾತಕಂ
ನಿತ್ಯಂ ಪ್ರಕುರ್ವಂತಿ ಶಠಾ ಹಠೇನ ಯೇ ।
ಪರಸ್ವಪುಷ್ಟಾ ಮಲಿನಾ ದುರಾಶಯಾಃ
ಸಪ್ತಾಹಯಜ್ಞೇನ ಕಲೌ ಪುನಂತಿ ತೇ ॥ ೧೪ ॥

ಅತ್ರ ತೇ ಕೀರ್ತಯಿಷ್ಯಾಮ ಇತಿಹಾಸಂ ಪುರಾತನಮ್ ।
ಯಸ್ಯ ಶ್ರವಣಮಾತ್ರೇಣ ಪಾಪಹಾನಿಃ ಪ್ರಜಾಯತೇ ॥ ೧೫ ॥

ತುಂಗಭದ್ರಾತಟೇ ಪೂರ್ವಮಭೂತ್ಪತ್ತನಮುತ್ತಮಮ್ ।
ಯತ್ರ ವರ್ಣಾಃ ಸ್ವಧರ್ಮೇಣ ಸತ್ಯಸತ್ಕರ್ಮತತ್ಪರಾಃ ॥ ೧೬ ॥

ಆತ್ಮದೇವಃ ಪುರೇ ತಸ್ಮಿನ್ ಸರ್ವವೇದವಿಶಾರದಃ ।
ಶ್ರೌತಸ್ಮಾರ್ತೇಷು ನಿಷ್ಣಾತೋ ದ್ವಿತೀಯ ಇವ ಭಾಸ್ಕರಃ ॥ ೧೭ ॥

ಭಿಕ್ಷುಕೋ ವಿತ್ತವಾಂಲ್ಲೋಕೇ ತತ್ಪ್ರಿಯಾ ಧುಂಧುಲೀ ಸ್ಮೃತಾ ।
ಸ್ವವಾಕ್ಯಸ್ಥಾಪಿಕಾ ನಿತ್ಯಂ ಸುಂದರೀ ಸುಕುಲೋದ್ಭವಾ ॥ ೧೮ ॥

ಲೋಕವಾರ್ತಾರತಾ ಕ್ರೂರಾ ಪ್ರಾಯಶೋ ಬಹುಜಲ್ಪಿಕಾ ।
ಶೂರಾ ಚ ಗೃಹಕೃತ್ಯೇಷು ಕೃಪಣಾ ಕಲಹಪ್ರಿಯಾ ॥ ೧೯ ॥

ಏವಂ ನಿವಸತೋಃ ಪ್ರೇಮ್ಣಾ ದಂಪತ್ಯೋ ರಮಮಾಣಯೋಃ ।
ಅರ್ಥಾಃ ಕಾಮಾಸ್ತಯೋರಾಸನ್ನ ಸುಖಾಯ ಗೃಹಾದಿಕಮ್ ॥ ೨೦ ॥

ಪಶ್ಚಾದ್ಧರ್ಮಾಃ ಸಮಾರಬ್ಧಾಸ್ತಾಭ್ಯಾಂ ಸಂತಾನಹೇತವೇ ।
ಗೋಭೂಹಿರಣ್ಯವಾಸಾಂಸಿ ದೀನೇಭ್ಯೋ ಯಚ್ಛತಿ ಸದಾ ॥ ೨೧ ॥

ಧನಾರ್ಧಂ ಧರ್ಮಮಾರ್ಗೇಣ ತಾಭ್ಯಾಂ ನೀತಂ ತಥಾಪಿ ಚ ।
ನ ಪುತ್ರೋ ನಾಪಿ ವಾ ಪುತ್ರೀ ತತಶ್ಚಿಂತಾತುರೋ ಭೃಶಮ್ ॥ ೨೨ ॥

ಏಕದಾ ಸ ದ್ವಿಜೋ ದುಃಖಾದ್ಗೃಹಂ ತ್ಯಕ್ತ್ವಾ ವನಂ ಗತಃ ।
ಮಧ್ಯಾಹ್ನೇ ತೃಷಿತೋ ಜಾತಸ್ತಡಾಗಂ ಸಮುಪೇಯಿವಾನ್ ॥ ೨೩ ॥

ಪೀತ್ವಾ ಜಲಂ ನಿಷಣ್ಣಸ್ತು ಪ್ರಜಾದುಃಖೇನ ಕರ್ಶಿತಃ ।
ಮುಹೂರ್ತಾದಪಿ ತತ್ರೈವ ಸಂನ್ಯಾಸೀ ಕಶ್ಚಿದಾಗತಃ ॥ ೨೪ ॥

ಸುರಾಪಾನ, ಬ್ರಹ್ಮಹತ್ಯೆ, ಚಿನ್ನವನ್ನು ಕದಿಯುವುದು, ಗುರುಪತ್ನೀ ಗಮನ, ವಿಶ್ವಾಸಘಾತ ಈ ಪಂಚ ಮಹಾಪಾತಕಿಗಳೂ, ಛಲ ಕಪಟಪರಾಯಣರೂ, ಕ್ರೂರರೂ, ಪಿಶಾಚಿಗಳಂತೆ ನಿರ್ದಯರೂ, ಬ್ರಾಹ್ಮಣರ ಹಣವನ್ನು ಕಬಳಿಸುವವರೂ, ವ್ಯಭಿಚಾರಿಗಳೂ ಹೀಗೆ ಇವರೆಲ್ಲರೂ ಕಲಿಯುಗದಲ್ಲಿ ಸಪ್ತಾಹ ಯಜ್ಞದಿಂದ ಪವಿತ್ರರಾಗುತ್ತಾರೆ. ॥ ೧೩ ॥ ದುಷ್ಟರೂ, ಹಠದಿಂದ ಸದಾಕಾಲ ಮನಸ್ಸು, ಮಾತು, ಶರೀರದಿಂದ ಪಾಪಮಾಡುತ್ತಿರುವವರೂ, ಪರರ ಧನದಿಂದ ಪುಷ್ಟರಾದವರೂ, ಮಲಿನ ಮನಸ್ಸಿನವರೂ, ದುಷ್ಟಹೃದಯವುಳ್ಳವರೂ ಇವರೂ ಕೂಡ ಕಲಿಯುಗದಲ್ಲಿ ಸಪ್ತಾಹ ಯಜ್ಞದಿಂದ ಪವಿತ್ರರಾಗುತ್ತಾರೆ. ॥ ೧೪ ॥

ನಾರದರೇ! ಈಗ ನಿಮಗೆ ಈ ಕುರಿತು ಒಂದು ಪ್ರಾಚೀನ ಇತಿಹಾಸವನ್ನು ಹೇಳುವೆನು. ಅದನ್ನು ಕೇಳುವುದರಿಂದ ಎಲ್ಲ ಪಾಪಗಳೂ ನಾಶವಾಗಿ ಹೋಗುತ್ತವೆ. ॥ ೧೫ ॥ ಹಿಂದೆ ತುಂಗಭದ್ರಾ ನದೀ ತೀರದಲ್ಲಿ ಒಂದು ಅನುಪಮವಾದ ನಗರವು ನೆಲೆಸಿತ್ತು. ಅದರಲ್ಲಿ ಎಲ್ಲ ವರ್ಣದವರೂ ತಮ್ಮ-ತಮ್ಮ ಧರ್ಮಗಳನ್ನು ಆಚರಿಸುತ್ತಾ ಸತ್ಯ ಮತ್ತು ಸತ್ಕರ್ಮದಲ್ಲಿ ತತ್ಪರರಾಗಿ ವಾಸಿಸುತ್ತಿದ್ದರು. ॥ ೧೬ ॥ ಆ ನಗರದಲ್ಲಿ ಸಮಸ್ತ ವೇದಗಳ ವಿಶೇಷಜ್ಞನೂ, ಶ್ರೌತ-ಸ್ಮಾರ್ತ ಕರ್ಮಗಳಲ್ಲಿ ನಿಪುಣನೂ ಆದ ಆತ್ಮದೇವನೆಂಬ ಬ್ರಾಹ್ಮಣನು ಇರುತ್ತಿದ್ದನು. ಅವನು ಸಾಕ್ಷಾತ್ ಸೂರ್ಯನಂತೆ ತೇಜಸ್ವಿಯಾಗಿದ್ದನು. ॥ ೧೭ ॥ ಅವನು ಪೌರೋಹಿತ್ಯ ವೃತ್ತಿಯಿಂದ ಜೀವಿಸುವವನಾಗಿದ್ದನು. ಮತ್ತು ಧನವಂತನಾಗಿದ್ದನು. ಅವನ ಪ್ರಿಯಪತ್ನೀ ಧುಂಧುಲಿ ಎಂಬುವಳು ಕುಲೀನಳೂ, ಸುಂದರಿಯೂ ಆಗಿದ್ದರೂ ಹಟಮಾರಿಯಾಗಿದ್ದಳು. ॥ ೧೮ ॥ ಬೇರೆಯವರ ವಿಷಯದಲ್ಲಿ ಮಾತಾಡುವುದರಲ್ಲೇ ಅವಳು ರತಳಾಗಿದ್ದು ಯಾವಾಗಲೂ ಹರಟುತ್ತಲೇ ಇರುತ್ತಿದ್ದಳು. ಕ್ರೂರಸ್ವಭಾವದವಳಾಗಿದ್ದರೂ, ಮನೆಕೆಲಸದಲ್ಲಿ ನಿಪುಣೆಯಾಗಿದ್ದಳು. ಲೋಭಿಯಾಗಿದ್ದು, ಜಗಳಗಂಟಿಯಾಗಿದ್ದಳು. ॥ ೧೯ ॥ ಹೀಗೆ ಈ ಬ್ರಾಹ್ಮಣ ದಂಪತಿಗಳು ಪ್ರೇಮದಿಂದ ಮನೆಯಲ್ಲಿದ್ದು ವಿಹರಿಸುತ್ತಿದ್ದರು. ಅವರ ಬಳಿ ಧನ, ಭೋಗವಿಲಾಸದ ಸಾಮಗ್ರಿ ಬಹಳವಾಗಿತ್ತು. ಮನೆ ಸುಂದರವಾಗಿದ್ದರೂ ಅವರಿಗೆ ಸಂತಾನಸುಖವಿರಲಿಲ್ಲ. ॥ ೨೦ ॥ ಪ್ರಾಯ ಸಂದುಹೋಗುತ್ತಿರುವಂತೆ ಅವರು ಸಂತಾನ ಪಡೆಯಲು ಬಗೆ-ಬಗೆಯ ಪುಣ್ಯಕಾರ್ಯಗಳನ್ನು ಪ್ರಾರಂಭಿಸಿದರು. ಅವರು ದೀನ-ದುಃಖಿಗಳಿಗೆ ಗೋವು, ಸುವರ್ಣ, ಭೂಮಿ, ವಸ್ತ್ರ ಮುಂತಾದವುಗಳನ್ನು ದಾನಮಾಡಿದರು. ॥ ೨೧ ॥ ಈ ಪ್ರಕಾರ ಧರ್ಮಕಾರ್ಯದಲ್ಲಿ ಅವರ ಅರ್ಧಭಾಗ ಧನವು ಮುಗಿದು ಹೋದರೂ ಅವರಿಗೆ ಗಂಡು ಅಥವಾ ಹೆಣ್ಣು ಮಕ್ಕಳ ಮುಖದರ್ಶನ ಭಾಗ್ಯ ಬಂದಿಲ್ಲ. ಇದರಿಂದ ಆ ಬ್ರಾಹ್ಮಣನು ಬಹಳ ಚಿಂತಾತುರನಾದನು. ॥ ೨೨ ॥

ಒಂದು ದಿನ ಆ ಬ್ರಾಹ್ಮಣನು ತುಂಬಾ ದುಃಖಿತನಾಗಿ ಮನೆಯಿಂದ ಹೊರಟು ಕಾಡಿಗೆ ಹೋದನು. ಮಧ್ಯಾಹ್ನದ ಸಮಯ ಬಾಯಾರಿದ್ದರಿಂದ ಒಂದು ಸರೋವರದ ಬಳಿಗೆ ಬಂದನು. ॥ ೨೩ ॥ ಸಂತಾನವಿಲ್ಲದ ದುಃಖದಿಂದ ಅವನ ಶರೀರವು ಮೊದಲೇ

ದೃಷ್ಟ್ವಾ ಶ್ಲಥಜಲಂ ತಂ ತು ವಿಪ್ರೋ ಯಾತಸ್ತದಂತಿಕಮ್ ।
ನತ್ವಾ ಚ ಪಾದಯೋಸ್ತಸ್ಯ ನಿಃಶ್ವಸನ್ ಸಂಸ್ಥಿತಃ ಪುರಃ ॥ ೨೫ ॥

ಯತಿರುವಾಚ

ಕಥಂ ರೋದಿಷಿ ವಿಪ್ರ ತ್ವಂ ಕಾ ತೇ ಚಿಂತಾ ಬಲೀಯಸೀ ।
ವದ ತ್ವಂ ಸತ್ವರಂ ಮಹ್ಯಂ ಸ್ವಸ್ಯ ದುಃಖಸ್ಯ ಕಾರಣಮ್ ॥ ೨೬ ॥

ಬ್ರಾಹ್ಮಣ ಉವಾಚ

ಕಿಂ ಬ್ರವೀಮಿ ಋಷೇ ದುಃಖಂ ಪೂರ್ವಪಾಪೇನ ಸಂಚಿತಮ್ ।
ಮದೀಯಾಃ ಪೂರ್ವಜಾಸ್ತೋಯಂ ಕವೋಷ್ಣಮುಪಭುಂಜತೇ ॥ ೨೭ ॥

ಮದ್ದತ್ತಂ ನೈವ ಗೃಹ್ಣಂತಿ ಪ್ರೀತ್ಯಾ ದೇವಾ ದ್ವಿಜಾತಯಃ ।
ಪ್ರಜಾದುಃಖೇನ ಶೂನ್ಯೋಽಹಂ ಪ್ರಾಣಾಂಸ್ತ್ಯಕ್ತುಮಿಹಾಗತಃ ॥ ೨೮ ॥

ಧಿಗ್ಜೀವಿತಂ ಪ್ರಜಾಹೀನಂ ಧಿಗ್ಗೃಹಂ ಚ ಪ್ರಜಾಂ ವಿನಾ ।
ಧಿಗ್ಧನಂ ಚಾನಪತ್ಯಸ್ಯ ಧಿಕ್ಕುಲಂ ಸಂತತಿಂ ವಿನಾ ॥ ೨೯ ॥

ಪಾಲ್ಯತೇ ಯಾ ಮಯಾ ಧೇನುಃ
ಸಾ ವಂಧ್ಯಾ ಸರ್ವಥಾ ಭವೇತ್ ।
ಯೋ ಮಯಾ ರೋಪಿತೋ ವೃಕ್ಷಃ
ಸೋಽಪಿ ವಂಧ್ಯತ್ವಮಾಶ್ರಯೇತ್ ॥ ೩೦ ॥

ಯತ್ಫಲಂ ಮದ್ಗೃಹಾಯಾತಂ ತಚ್ಚ ಶೀಘ್ರಂ ವಿನಶ್ಯತಿ ।
ನಿರ್ಭಾಗ್ಯಸ್ಯಾನಪತ್ಯಸ್ಯ ಕಿಮತೋ ಜೀವಿತೇನ ಮೇ ॥ ೩೧ ॥

ಇತ್ಯುಕ್ತ್ವಾ ಸ ರುರೋದೋಚ್ಚೈಸ್ತತ್ಪಾರ್ಶ್ವೇ ದುಃಖಪೀಡಿತಃ ।
ತದಾ ತಸ್ಯ ಯತೇಶ್ಚಿತ್ತೇ ಕರುಣಾಭೂದ್ಗರೀಯಸೀ ॥ ೩೨ ॥

ತದ್ಭಾಲಾಕ್ಷರಮಾಲಾಂ ಚ ವಾಚಯಾಮಾಸ ಯೋಗವಾನ್ ।
ಸರ್ವಂ ಜ್ಞಾತ್ವಾ ಯತಿಃ ಪಶ್ಚಾದ್ದ್ವಿಜಮೂಚೇ ಸವಿಸ್ತರಮ್ ॥ ೩೩ ॥

ಯತಿರುವಾಚ

ಮುಂಚಾಜ್ಞಾನಂ ಪ್ರಜಾರೂಪಂ ಬಲಿಷ್ಠಾ ಕರ್ಮಣೋ ಗತಿಃ ।
ವಿವೇಕಂ ತು ಸಮಾಸಾದ್ಯ ತ್ಯಜ ಸಂಸಾರವಾಸನಾಮ್ ॥ ೩೪ ॥

ಶೃಣು ವಿಪ್ರ ಮಯಾ ತೇಽದ್ಯ ಪ್ರಾರಬ್ಧಂ ತು ವಿಲೋಕಿತಮ್ ।
ಸಪ್ತಜನ್ಮಾವಧಿ ತವ ಪುತ್ರೋ ನೈವ ಚ ನೈವ ಚ ॥ ೩೫ ॥

ಸಂತತೇಃ ಸಗರೋ ದುಃಖಮವಾಪಾಂಗಃ ಪುರಾ ತಥಾ ।
ರೇ ಮುಂಚಾದ್ಯ ಕುಟುಂಬಾಶಾಂ ಸಂನ್ಯಾಸೇ ಸರ್ವಥಾ ಸುಖಮ್ ॥ ೩೬ ॥

ಕೃಶವಾಗಿತ್ತು. ಅದರಿಂದ ಬಳಲಿದ ಅವನು ನೀರು ಕುಡಿದು ಅಲ್ಲೇ ಕುಳಿತುಬಿಟ್ಟನು. ಎರಡು ಗಳಿಗೆ ಕಳೆಯುವಷ್ಟರಲ್ಲಿ ಓರ್ವ ಸಂನ್ಯಾಸಿಯು ಅಲ್ಲಿಗೆ ಬಂದನು. ॥ ೨೪ ॥ ಅವರು ನೀರು ಕುಡಿದಾದ ಬಳಿಕ ಬ್ರಾಹ್ಮಣನು ಅವರ ಬಳಿಗೆ ಹೋಗಿ ಚರಣಗಳಲ್ಲಿ ವಂದಿಸಿಕೊಂಡು, ಎದುರಿಗೆ ನಿಂತು ನಿಟ್ಟುಸಿರುಬಿಡತೊಡಗಿದನು. ॥ ೨೫ ॥

ಸಂನ್ಯಾಸಿಯು ಕೇಳಿದರು - ಎಲೈ ಬ್ರಾಹ್ಮಣನೇ ! ಏಕೆ ಅಳುತ್ತಿರುವೆ? ನಿನಗೆ ಅಂತಹ ಚಿಂತೆ ಏನಿದೆ? ನಿನ್ನ ದುಃಖದ ಕಾರಣವನ್ನು ನನ್ನಲ್ಲಿ ಬೇಗನೇ ಹೇಳು. ॥ ೨೬ ॥

ಬ್ರಾಹ್ಮಣನು ಹೇಳಿದನು - ಸ್ವಾಮಿ ! ನಾನು ಹಿನ್ನ ಪೂರ್ವಜನ್ಮದ ಪಾಪಗಳ ಸಂಚಿತ ದುಃಖವನ್ನು ಏನೆಂದು ಹೇಳಲಿ ? ಈಗ ನನ್ನ ಪಿತೃಗಳು ನಾನು ಕೊಟ್ಟ ತರ್ಪಣಾದಿಗಳ ನೀರನ್ನು ತಮ್ಮ ಚಿಂತೆಯೆಂಬ ಶ್ವಾಸದಿಂದ ಬಿಸಿಯಾಗಿಸಿಕೊಂಡು ಕುಡಿಯುತ್ತಾರೆ. ॥ ೨೭ ॥ ದೇವತೆಗಳು, ಬ್ರಾಹ್ಮಣರು ನಾನು ಕೊಟ್ಟಿರುವುದನ್ನು ಪ್ರೇಮದಿಂದ ಸ್ವೀಕರಿಸುವುದಿಲ್ಲ. ಸಂತಾನವಿಲ್ಲದ್ದರಿಂದ ನನಗೆ ಎಲ್ಲವೂ ಶೂನ್ಯದಂತೆ ಕಾಣುತ್ತದೆ. ನಾನು ಪ್ರಾಣತ್ಯಾಗ ಮಾಡಲು ಇಲ್ಲಿಗೆ ಬಂದಿರುವೆನು.॥ ೨೮ ॥ ಸಂತಾನ ಹೀನವಾದ ಜೀವನಕ್ಕೆ ಧಿಕ್ಕಾರವಿರಲಿ. ಸಂತಾನ ರಹಿತವಾದ ಮನೆ, ಧನ, ಕುಲ ಇವುಗಳಿಗೆ ಧಿಕ್ಕಾರವಿರಲಿ. ॥ ೨೯ ॥ ನಾನು ಸಾಕಿದ ಹಸುವೂ ಕೂಡ ಗೊಡ್ಡಾಗುತ್ತದೆ. ನಾನು ನೆಟ್ಟಮರದಲ್ಲಿಯೂ ಹೂವು-ಹಣ್ಣು ಬಿಡುವುದಿಲ್ಲ. ॥ ೩೦ ॥ ನಮ್ಮ ಮನೆಗೆ ತಂದಿರುವ ಹಣ್ಣುಗಳೂ ಕೂಡ ಬೇಗನೇ ಕೊಳೆತುಹೋಗುತ್ತವೆ. ಇಂತಹ ಪುತ್ರಹೀನ ನಿರ್ಭಾಗ್ಯನಾಗಿರುವಾಗ ನಾನು ಬದುಕಿ ಏನು ಪ್ರಯೋಜನ? ॥ ೩೧ ॥ ಹೀಗೆ ಹೇಳುತ್ತಾ ಆ ಬ್ರಾಹ್ಮಣನು ದುಃಖದಿಂದ ವ್ಯಾಕುಲನಾಗಿ ಆ ಸಂನ್ಯಾಸೀ ಮಹಾತ್ಮರ ಬಳಿ ಬಿಕ್ಕಿ-ಬಿಕ್ಕಿ ಅಳತೊಡಗಿದನು. ಆಗ ಆ ಋಷಿಯ ಹೃದಯದಲ್ಲಿ ತುಂಬಾ ಕರುಣೆ ಉಂಟಾಯಿತು. ॥ ೩೨ ॥ ಅವರು ಯೋಗ ನಿಷ್ಠರಾಗಿದ್ದರು. ಬ್ರಾಹ್ಮಣನ ಹಣೆಯ ಬರಹವನ್ನು ಅರಿತುಕೊಂಡು ಎಲ್ಲ ವೃತ್ತಾಂತವನ್ನು ತಿಳಿದು ಕೊಂಡರು. ಮತ್ತೆ ಅವನಿಗೆ ವಿಸ್ತಾರವಾಗಿ ಹೇಳತೊಡಗಿದರು. ॥ ೩೩ ॥

ಸಂನ್ಯಾಸಿಯು ಹೇಳಿದರು - ಎಲೈ ಬ್ರಾಹ್ಮಣನೇ! ಈ ಸಂತಾನ ಪ್ರಾಪ್ತಿಯ ಮೋಹವನ್ನು ಬಿಟ್ಟುಬಿಡು. ಕರ್ಮದ ಗತಿಯು ಪ್ರಬಲವಾಗಿದೆ. ವಿವೇಕವನ್ನು ಆಶ್ರಯಿಸಿ ಸಂಸಾರದ ವಾಸನೆ (ಇಚ್ಛೆ)ಯನ್ನು ತ್ಯಜಿಸು. ॥ ೩೪ ॥ ವಿಪ್ರವರ್ಯ ! ಕೇಳು. ನಾನು ಈಗ ನಿನ್ನ ಪ್ರಾರಬ್ಧವನ್ನು ನೋಡಿ ನಿಶ್ಚಯಿಸಿರುವೆನು. ಏಳು ಜನ್ಮಗಳವರೆಗೂ ನಿನಗೆ ಯಾವುದೇ ಸಂತಾನವು ಯಾವ ವಿಧದಿಂದಲೂ ಆಗಲಾರದು. ॥ ೩೫ ॥ ಹಿಂದಿನಕಾಲದಲ್ಲಿ ರಾಜಾ ಸಗರನಿಗೆ ಹಾಗೂ ಅಂಗರಾಜನಿಗೆ ಸಂತಾನದಿಂದಾಗಿ ದುಃಖ ಭೋಗಿಸಬೇಕಾಯಿತು. ಬ್ರಾಹ್ಮಣನೇ! ಈಗ ನೀನು ಕುಟುಂಬದ ಆಸೆಯನ್ನು ಬಿಟ್ಟು ಬಿಡು. ಸಂನ್ಯಾಸದಲ್ಲೇ ಎಲ್ಲ ವಿಧವಾದ ಸುಖವಿದೆ. ॥ ೩೬ ॥

ಬ್ರಾಹ್ಮಣ ಉವಾಚ

ವಿವೇಕೇನ ಭವೇತ್ಕಿಂ ಮೇ ಪುತ್ರಂ ದೇಹಿ ಬಲಾದಪಿ ।
ನೋ ಚೇತ್ತ್ಯಜಾಮ್ಯಹಂ ಪ್ರಾಣಾಂಸ್ತ್ವದಗ್ರೇ ಶೋಕಮೂರ್ಛಿತಃ ॥ ೩೭ ॥

ಪುತ್ರಾದಿಸುಖಹೀನೋಽಯಂ ಸಂನ್ಯಾಸಃ ಶುಷ್ಕ ಏವ ಹಿ ।
ಗೃಹಸ್ಥಃ ಸರಸೋ ಲೋಕೇ ಪುತ್ರಪೌತ್ರಸಮನ್ವಿತಃ ॥ ೩೮ ॥

ಇತಿ ವಿಪ್ರಾಗ್ರಹಂ ದೃಷ್ಟ್ವಾ ಪ್ರಾಬ್ರವೀತ್ಸ ತಪೋಧನಃ ।
ಚಿತ್ರಕೇತುರ್ಗತಃ ಕಷ್ಟಂ ವಿಧಿಲೇಖವಿಮಾರ್ಜನಾತ್ ॥ ೩೯ ॥

ನ ಯಾಸ್ಯಸಿ ಸುಖಂ ಪುತ್ರಾದ್ಯಥಾ ದೈವಹತೋದ್ಯಮಃ ।
ಅತೋ ಹಠೇನ ಯುಕ್ತೋಽಸಿ ಹ್ಯರ್ಥಿನಂ ಕಿಂ ವದಾಮ್ಯಹಮ್ ॥ ೪೦ ॥

ತಸ್ಯಾಗ್ರಹಂ ಸಮಾಲೋಕ್ಯ ಫಲಮೇಕಂ ಸ ದತ್ತವಾನ್ ।
ಇದಂ ಭಕ್ಷಯ ಪತ್ನ್ಯಾ ತ್ವಂ ತತಃ ಪುತ್ರೋ ಭವಿಷ್ಯತಿ ॥ ೪೧ ॥

ಸತ್ಯಂ ಶೌಚಂ ದಯಾ ದಾನಮೇಕಭಕ್ತಂ ತು ಭೋಜನಮ್ ।
ವರ್ಷಾವಧಿ ಸ್ತ್ರಿಯಾ ಕಾರ್ಯಂ ತೇನ ಪುತ್ರೋಽತಿನಿರ್ಮಲಃ ॥ ೪೨ ॥

ಏವಮುಕ್ತ್ವಾ ಯಯೌ ಯೋಗೀ ವಿಪ್ರಸ್ತು ಗೃಹಮಾಗತಃ ।
ಪತ್ನ್ಯಾಃ ಪಾಣೌ ಫಲಂ ದತ್ತ್ವಾ ಸ್ವಯಂ ಯಾತಸ್ತು ಕುತ್ರಚಿತ್ ॥ ೪೩ ॥

ತರುಣೀ ಕುಟಿಲಾ ತಸ್ಯ ಸಖ್ಯಗ್ರೇ ಚ ರುರೋದ ಹ ।
ಅಹೋ ಚಿಂತಾ ಮಮೋತ್ಪನ್ನಾ ಫಲಂ ಚಾಹಂ ನ ಭಕ್ಷಯೇ ॥ ೪೪ ॥

ಫಲಭಕ್ಷೇಣ ಗರ್ಭಃ ಸ್ಯಾದ್ಗರ್ಭೇಣೋದರವೃದ್ಧಿತಾ ।
ಸ್ವಲ್ಪಭಕ್ಷ್ಯಂ ತತೋಽಶಕ್ತಿರ್ಗೃಹಕಾರ್ಯಂ ಕಥಂ ಭವೇತ್ ॥ ೪೫ ॥

ದೈವಾದ್ಧಾಟೀ ವ್ರಜೇದ್ಗ್ರಾಮೇ ಪಲಾಯೇದ್ಗರ್ಭಿಣೀ ಕಥಮ್ ।
ಶುಕವನ್ನಿವಸೇದ್ಗರ್ಭಸ್ತಂ ಕುಕ್ಷೇಃ ಕಥಮುತ್ಸೃಜೇತ್ ॥ ೪೬ ॥

ತಿರ್ಯಕ್ಚೇದಾಗತೋ ಗರ್ಭಸ್ತದಾ ಮೇ ಮರಣಂ ಭವೇತ್ ।
ಪ್ರಸೂತೌ ದಾರುಣಂ ದುಃಖಂ ಸುಕುಮಾರೀ ಕಥಂ ಸಹೇ ॥ ೪೭ ॥

ಮಂದಾಯಾಂ ಮಯಿ ಸರ್ವಸ್ವಂ ನನಾಂದಾ ಸಂಹರೇತ್ತದಾ ।
ಸತ್ಯಶೌಚಾದಿನಿಯಮೋ ದುರಾರಾಧ್ಯಃ ಸ ದೃಶ್ಯತೇ ॥ ೪೮ ॥

ಬ್ರಾಹ್ಮಣನೆಂದನು – ಮಹಾತ್ಮರೇ! ನಿಮ್ಮ ಜ್ಞಾನೋಪದೇಶದಿಂದ ನನಗೇನು ಪ್ರಯೋಜನ? ನನಗಾದರೋ ಬಲವಂತವಾಗಿ ಓರ್ವ ಪುತ್ರನನ್ನು ಕರುಣಿಸಿರಿ. ಇಲ್ಲವಾದರೆ ನಾನು ನಿಮ್ಮ ಮುಂದೆಯೇ ಶೋಕಮೂರ್ಛಿತನಾಗಿ ಪ್ರಾಣಗಳನ್ನು ತ್ಯಜಿಸಿ ಬಿಡುತ್ತೇನೆ. ॥ ೩೭ ॥ ಹೆಂಡತಿ ಮಕ್ಕಳು ಮುಂತಾದವುಗಳು ಇಲ್ಲದ ಸಂನ್ಯಾಸವು ಸರ್ವಥಾ ನೀರಸವಾಗಿದೆ. ಜಗತ್ತಿನಲ್ಲಿ ಮಕ್ಕಳು- ಮೊಮ್ಮಕ್ಕಳು ತುಂಬಿ-ತುಳುಕುವ ಗೃಹಸ್ಥಾಶ್ರಮವೇ ಸರಸವಾಗಿದೆ. ॥ ೩೮ ॥

ಬ್ರಾಹ್ಮಣನ ಇಂತಹ ಆಗ್ರಹವನ್ನು ನೋಡಿ ಆ ತಪೋಧನರು ಹೇಳಿದರು – 'ವಿಧಾತನ ಬರಹವನ್ನು ಅಳಿಸುವ ಹಠವನ್ನು ಮಾಡಿ ರಾಜಾ ಚಿತ್ರಕೇತುವಿಗೆ ಬಹಳ ಕಷ್ಟ ಸಹಿಸ ಬೇಕಾಯಿತು. ॥ ೩೯ ॥ ದೈವವು ಯಾರ ಉದ್ಯೋಗವನ್ನು ಕೆಡಿಸಿಬಿಟ್ಟಿದೆಯೋ ಅವನಂತೆ ನೀನಗೂ ಸುಖಸಿಗಲಾರದು. ನೀನಾದರೋ ಭಾರೀ ಹಠವನ್ನು ತೊಟ್ಟಿರುವೆ ಹಾಗೂ ಅರ್ಥಿಯಾಗಿ ನನ್ನೆದುರಿಗೆ ನಿಂತಿರುವೆ. ಇಂತಹ ಸ್ಥಿತಿಯಲ್ಲಿ ನಾನೇನು ಹೇಳಲಿ ನಿನಗೆ? ॥ ೪೦ ॥

ಅವನು ಯಾವ ವಿಧದಿಂದಲೂ ತನ್ನ ಆಗ್ರಹವನ್ನು ಬಿಡದಿರುವುದನ್ನು ನೋಡಿ ಮಹಾತ್ಮರು ಅವನಿಗೆ ಒಂದು ಫಲವನ್ನಿತ್ತು ಹೇಳಿದರು - ಇದನ್ನು ನೀನು ನಿನ್ನ ಪತ್ನಿಗೆ ತಿನ್ನಿಸು. ಇದರಿಂದ ಓರ್ವ ಪುತ್ರನಾಗುವನು. ॥ ೪೧ ॥ ನಿನ್ನ ಪತ್ನಿಯು ಒಂದು ವರ್ಷದವರೆಗೆ ಸತ್ಯ, ಶೌಚ, ದಯಾ, ದಾನ ಮತ್ತು ಒಪ್ಪೊತ್ತು ಊಟದ ನಿಯಮ ವಿರಿಸಬೇಕು. ಅವಳು ಹೀಗೆ ಮಾಡಿದರೆ ಬಹು ಶುದ್ಧಸ್ವಭಾವದ ಬಾಲಕನು ಹುಟ್ಟುವನು. ॥ ೪೨ ॥

ಹೀಗೆ ಹೇಳಿ ಆ ಯೋಗಿಗಳು ಹೊರಟುಹೋದರು. ಬ್ರಾಹ್ಮಣನೂ ತನ್ನ ಮನೆಗೆ ಮರಳಿದನು. ಮನೆಗೆ ಬಂದು ಅವನು ಆ ಫಲವನ್ನು ತನ್ನ ಪತ್ನಿಯ ಕೈಯಲ್ಲಿತ್ತು, ಸ್ವತಃ ಎಲ್ಲಿಗೋ ಹೊರಟು ಹೋದನು. ॥ ೪೩ ॥ ಅವನ ಹೆಂಡತಿಯಾದರೋ ಕುಟಿಲ ಸ್ವಭಾವದವಳಾಗಿದ್ದಳು. ಅವಳು ಅಳುತ್ತಾ ತನ್ನ ಗೆಳತಿಯಲ್ಲಿ ಹೇಳ ತೊಡಗಿದಳು – ಎಲೆ! ನನಗಾದರೋ ಭಾರೀ ಚಿಂತೆ ಇಟ್ಟುಕೊಂಡಿದೆ. ನಾನು ಈ ಫಲವನ್ನು ತಿನ್ನುವುದಿಲ್ಲ. ॥ ೪೪ ॥ ಈ ಫಲವನ್ನು ತಿನ್ನುವುದರಿಂದ ನಾನು ಗರ್ಭವತಿಯಾಗುವೆನು. ಅದರಿಂದ ಹೊಟ್ಟೆ ಬೆಳೆದೀತು. ಮತ್ತೆ ಏನನ್ನೂ ತಿನ್ನಲು ಕುಡಿಯಲು ಆಗದು. ಇದರಿಂದ ನನ್ನ ಶಕ್ತಿಯು ಕ್ಷೀಣಿಸಿದಾಗ ಮನೆಯ ಕೆಲಸ ಹೇಗೆ ನಡೆಯುವುದು? ॥ ೪೫ ॥ ದೈವಯೋಗದಿಂದ ಊರಿನಲ್ಲಿ ದರೋಡೆಕೋರರ ಆಕ್ರಮಣವಾದರೆ ಗರ್ಭಿಣಿ ಸ್ತ್ರೀಯು ಹೇಗೆ ಓಡಿಹೋಗಬಲ್ಲಳು? ಶುಕದೇವರಂತೆ ಈ ಗರ್ಭವು ಹೊಟ್ಟೆಯಲ್ಲೇ ಉಳಿದು ಬಿಟ್ಟರೆ ಅದನ್ನು ಹೇಗೆ ಹೊರಗೆ ತೆಗೆಯಲಾದೀತು. ॥ ೪೬ ॥ ಎಲ್ಲಾದರು ಹೆರಿಗೆಯ ಕಾಲದಲ್ಲಿ ಅದು ಅಡ್ಡವಾದರೆ ಮತ್ತೆ ಪ್ರಾಣವೇ ಹೊರಟು ಹೋದೀತು. ಅದಲ್ಲದೆ ಪ್ರಸವ ಕಾಲದಲ್ಲಿ ಭಯಂಕರ ನೋವು ಉಂಟಾಗುತ್ತದೆ. ಸುಕುಮಾರಿಯಾದ ನಾನು ಇದನ್ನು ಹೇಗೆ ಸಹಿಸಬಹುದು? ॥ ೪೭ ॥ ನಾನು ದುರ್ಬಲಳಾದಾಗ ನಾದಿನಿಯು ಬಂದು ಮನೆಯ ಎಲ್ಲ ಪದಾರ್ಥಗಳನ್ನು ಸಾಗಿಸಿ ಬಿಟ್ಟಾಳು ಹಾಗೂ ಸತ್ಯ ಶೌಚಾದಿ ನಿಯಮಗಳನ್ನು ನನ್ನಿಂದ ಪಾಲಿಸುವುದು ಕಷ್ಟವೆಂದೇ ತೋರುತ್ತದೆ. ॥ ೪೮ ॥

ಲಾಲನೇ ಪಾಲನೇ ದುಃಖಂ ಪ್ರಸೂತಾಯಾಶ್ಚ ವರ್ತತೇ ।
ವಂಧ್ಯಾ ವಾ ವಿಧವಾ ನಾರೀ ಸುಖಿನೀ ಚೇತಿ ಮೇ ಮತಿಃ ॥ ೪೯ ॥

ಏವಂ ಕುತರ್ಕಯೋಗೇನ ತತ್ಫಲಂ ನೈವ ಭಕ್ಷಿತಮ್ ।
ಪತ್ಯಾ ಪೃಷ್ಟಂ ಫಲಂ ಭುಕ್ತಂ ಭುಕ್ತಂ ಚೇತಿ ತಯೇರಿತಮ್ ॥ ೫೦ ॥

ಏಕದಾ ಭಗಿನೀ ತಸ್ಯಾಸ್ತದ್ಗೃಹಂ ಸ್ವೇಚ್ಛಯಾಗತಾ ।
ತದಗ್ರೇ ಕಥಿತಂ ಸರ್ವಂ ಚಿಂತೇಯಂ ಮಹತೀ ಹಿ ಮೇ ॥ ೫೧ ॥

ದುರ್ಬಲಾ ತೇನ ದುಃಖೇನ ಹ್ಯನುಜೇ ಕರವಾಣಿ ಕಿಮ್ ।
ಸಾಬ್ರವೀನ್ಮಮ ಗರ್ಭೋಽಸ್ತಿ ತಂ ದಾಸ್ಯಾಮಿ ಪ್ರಸೂತಿತಃ ॥ ೫೨ ॥

ತಾವತ್ಕಾಲಂ ಸಗರ್ಭೇವ ಗುಪ್ತಾ ತಿಷ್ಠ ಗೃಹೇ ಸುಖಮ್ ।
ವಿತ್ತಂ ತ್ವಂ ಮತ್ಪತೇರ್ಯಚ್ಛ ಸ ತೇ ದಾಸ್ಯತಿ ಬಾಲಕಮ್ ॥ ೫೩ ॥

ಷಾಣ್ಮಾಸಿಕೋ ಮೃತೋ ಬಾಲ ಇತಿ ಲೋಕೋ ವದಿಷ್ಯತಿ ।
ತಂ ಬಾಲಂ ಪೋಷಯಿಷ್ಯಾಮಿ ನಿತ್ಯಮಾಗತ್ಯ ತೇ ಗೃಹೇ ॥ ೫೪ ॥

ಫಲಮರ್ಪಯ ಧೇನ್ವೈ ತ್ವಂ ಪರೀಕ್ಷಾರ್ಥಂ ತು ಸಾಂಪ್ರತಮ್ ।
ತತ್ತದಾಚರಿತಂ ಸರ್ವಂ ತಥೈವ ಸ್ತ್ರೀಸ್ವಭಾವತಃ ॥ ೫೫ ॥

ಅಥ ಕಾಲೇನ ಸಾ ನಾರೀ ಪ್ರಸೂತಾ ಬಾಲಕಂ ತದಾ ।
ಆನೀಯ ಜನಕೋ ಬಾಲಂ ರಹಸ್ಯೇ ಧುಂಧುಲೀಂ ದದೌ ॥ ೫೬ ॥

ತಯಾ ಚ ಕಥಿತಂ ಭರ್ತ್ರೇ ಪ್ರಸೂತಃ ಸುಖಮರ್ಭಕಃ ।
ಲೋಕಸ್ಯ ಸುಖಮುತ್ಪನ್ನಮಾತ್ಮದೇವಪ್ರಜೋದಯಾತ್ ॥ ೫೭ ॥

ದದೌ ದಾನಂ ದ್ವಿಜಾತಿಭ್ಯೋ ಜಾತಕರ್ಮ ವಿಧಾಯ ಚ ।
ಗೀತವಾದಿತ್ರಘೋಷೋಽಭೂತ್ತದ್ದ್ವಾರೇ ಮಂಗಲಂ ಬಹು ॥ ೫೮ ॥

ಭರ್ತುರಗ್ರೇಽಬ್ರವೀದ್ವಾಕ್ಯಂ ಸ್ತನ್ಯಂ ನಾಸ್ತಿ ಕುಚೇ ಮಮ ।
ಅನ್ಯಸ್ತನ್ಯೇನ ನಿರ್ದುಗ್ಧಾ ಕಥಂ ಪುಷ್ಣಾಮಿ ಬಾಲಕಮ್ ॥ ೫೯ ॥

ಮತ್ಸ್ವಸುಶ್ಚ ಪ್ರಸೂತಾಯಾ ಮೃತೋ ಬಾಲಸ್ತು ವರ್ತತೇ ।
ತಾಮಾಕಾರ್ಯ ಗೃಹೇ ರಕ್ಷ ಸಾ ತೇಽರ್ಭಂ ಪೋಷಯಿಷ್ಯತಿ ॥ ೬೦ ॥

ಪತಿನಾ ತತ್ಕೃತಂ ಸರ್ವಂ ಪುತ್ರರಕ್ಷಣಹೇತವೇ ।
ಪುತ್ರಸ್ಯ ಧುಂಧುಕಾರೀತಿ ನಾಮ ಮಾತ್ರಾ ಪ್ರತಿಷ್ಠಿತಮ್ ॥ ೬೦ ॥

ಮಗುವನ್ನು ಹಡೆದ ಸ್ತ್ರೀಗೆ ಮಗುವಿನ ಲಾಲನೆ ಪಾಲನೆಯಲ್ಲಿ ತುಂಬಾ ಕಷ್ಟವಾಗುತ್ತದೆ. ನನ್ನ ವಿಚಾರದಲ್ಲಿ ಬಂಜೆಯರು ಅಥವಾ ವಿಧವೆಯರೇ ಸುಖಿಗಳಾಗಿದ್ದಾರೆ. ॥ ೪೯ ॥

ಮನಸ್ಸಿನಲ್ಲಿ ಇಂತಹ ನಾನಾ ಕುತರ್ಕಗಳನ್ನು ಮಾಡುತ್ತಾ ಅವಳು ಆ ಫಲವನ್ನು ತಿನ್ನಲಿಲ್ಲ. ಗಂಡನು – 'ಫಲವನ್ನು ತಿಂದೆಯಾ?' ಎಂದು ಕೇಳಿದಾಗ ಹೌದು ತಿಂದೆ ಎಂದು ಹೇಳಿದಳು. ॥ ೫೦ ॥ ಒಂದು ದಿನ ಅವಳ ತಂಗಿಯು ತಾನಾಗಿಯೇ ಇವಳ ಮನೆಗೆ ಬಂದಿದ್ದಳು. ಇವಳು ತನ್ನ ತಂಗಿಗೆ ಎಲ್ಲ ವೃತ್ತಾಂತವನ್ನು ತಿಳಿಸುತ್ತಾ ನನ್ನ ಮನಸ್ಸಿನಲ್ಲಿ ಇದರ ಕುರಿತು ದೊಡ್ಡ ಚಿಂತೆ ಇಟ್ಟುಕೊಂಡಿದೆ ಎಂದು ಹೇಳಿದಳು. ॥ ೫೧ ॥ ನಾನು ಈ ದುಃಖದಿಂದ ಪ್ರತಿದಿನ ಸೊರಗುತ್ತಿದ್ದೇನೆ. ತಂಗೀ! ನಾನೇನು ಮಾಡಲಿ? ಆಗ ಅವಳೆಂದಳು – 'ನನ್ನ ಹೊಟ್ಟೆಯಲ್ಲಿ ಮಗು ಬೆಳೆಯುತ್ತಿದೆ. ಹೆರಿಗೆಯಾದಾಕ್ಷಣ ಆ ಮಗುವನ್ನು ನಿನಗೆ ಕೊಡುತ್ತೇನೆ. ॥ ೫೨ ॥ ಅಲ್ಲಿಯವರೆಗೆ ನೀನು ಗರ್ಭಿಣಿಯಂತೆ ಮನೆಯಲ್ಲೇ ಅಡಗಿಕೊಂಡಿರು. ನೀನು ನನ್ನ ಪತಿಗೆ ಸ್ವಲ್ಪ ಹಣವನ್ನು ಕೊಟ್ಟರೆ ಅವರು ನಿನಗೆ ತನ್ನ ಮಗುವನ್ನು ಕೊಟ್ಟು ಬಿಡುವರು. ॥ ೫೩ ॥ (ನಾವು ಒಂದು ಯುಕ್ತಿಮಾಡುವೆವು) ಇವಳ ಮಗು ಆರು ತಿಂಗಳಾದಾಗ ಸತ್ತು ಹೋಯಿತು ಎಂದು ಎಲ್ಲರೂ ಹೇಳುವರು. ನಾನು ಪ್ರತಿದಿನ ನಿನ್ನ ಮನೆಗೆ ಬಂದು ಆ ಮಗುವಿನ ಪಾಲನೆ-ಪೋಷಣೆ ಮಾಡುತ್ತಾ ಇರುವೆನು. ॥ ೫೪ ॥ ನೀನು ಈಗ ಇವನ್ನು ಪರೀಕ್ಷಿಸಲು ಈ ಫಲವನ್ನು ಹಸುವಿಗೆ ತಿನ್ನಿಸಿ ಬಿಡು.' ಬ್ರಾಹ್ಮಣಿಯು ಸ್ತ್ರೀ ಸ್ವಭಾವಕ್ಕನುಸಾರ ತಂಗಿಯು ಹೇಳಿದಂತೆಯೇ ಎಲ್ಲವನ್ನು ಮಾಡಿದಳು. ॥ ೫೫ ॥

ಇದಾದ ಬಳಿಕ ಸಮಯಕ್ಕೆ ಸರಿಯಾಗಿ ತಂಗಿಗೆ ಮಗು ಹುಟ್ಟಿದಾಗ, ಅವಳ ಗಂಡನು ಯಾರಿಗೂ ತಿಳಿಯದಂತೆ ಅದನ್ನು ಧುಂಧುಲಿಗೆ ತಂದು ಕೊಟ್ಟನು. ॥ ೫೬ ॥ ಮತ್ತೆ ಅವಳು ಆತ್ಮದೇವನಿಗೆ – 'ನನಗೆ ಸುಖವಾಗಿ ಮಗುವು ಹುಟ್ಟಿತು' ಎಂದು ಸೂಚಿಸಿದಳು. ಹೀಗೆ ಆತ್ಮದೇವನಿಗೆ ಪುತ್ರನಾದುದನ್ನು ತಿಳಿದು ಎಲ್ಲರಿಗೂ ಬಹಳ ಸಂತೋಷವಾಯಿತು. ॥ ೫೭ ॥ ಬ್ರಾಹ್ಮಣನು ಮಗುವಿನ ಜಾತಕರ್ಮ ಸಂಸ್ಕಾರ ಗೈದು, ಬ್ರಾಹ್ಮಣರಿಗೆ ದಾನಗಳನ್ನು ಕೊಟ್ಟನು. ಮನೆಯಲ್ಲಿ ವಾದ್ಯ-ಹಾಡುಗಳು ಹಾಗೂ ಅನೇಕ ಮಾಂಗಲಿಕ ಕೃತ್ಯಗಳು ನಡೆದುವು. ॥ ೫೮ ॥ ಧುಂಧುಲಿಯು ಗಂಡನ ಬಳಿ ಹೇಳಿದಳು – 'ನನ್ನ ಎದೆಯಲ್ಲಿ ಹಾಲೇ ಇಲ್ಲ, ಮತ್ತೆ ಹಸುವಿನ ಹಾಲಿನಿಂದಲೇ ಈ ಬಾಲಕನನ್ನು ಹೇಗೆ ಸಾಕಲಿ? ನನ್ನ ತಂಗಿಗೆ ಈಗ ತಾನೆ ಮಗು ಹುಟ್ಟಿತು. ಅದು ಸತ್ತು ಹೋಯಿತು. ಅವಳನ್ನು ಕರೆಸಿ ಮನೆಯಲ್ಲಿರಿಸಿಕೊಂಡರೆ ಅವಳು ನಿಮ್ಮ ಈ ಮಗುವನ್ನು ಸಾಕುವಳು'. ॥ ೫೯–೬೦ ॥ ಆಗ ಮಗುವಿನ ಪಾಲನೆಗಾಗಿ ಆತ್ಮದೇವನು ಹಾಗೇ ಮಾಡಿದನು. ತಾಯಿಯಾದ ಧುಂಧುಲಿಯು ಆ ಮಗುವಿಗೆ 'ಧುಂಧುಕಾರಿ' ಎಂದು ಹೆಸರಿಟ್ಟಳು. ॥ ೬೦ ॥

ತ್ರಿಮಾಸೇ ನಿರ್ಗತೇ ಚಾಥ ಸಾ ಧೇನುಃ ಸುಷುವೇಽರ್ಭಕಮ್ ।
ಸರ್ವಾಂಗಸುಂದರಂ ದಿವ್ಯಂ ನಿರ್ಮಲಂ ಕನಕಪ್ರಭಮ್ ॥ ೩೨ ॥

ದೃಷ್ಟ್ವಾ ಪ್ರಸನ್ನೋ ವಿಪ್ರಸ್ತು ಸಂಸ್ಕಾರಾನ್ ಸ್ವಯಮಾದಧೇ ।
ಮತ್ವಾಶ್ಚರ್ಯಂ ಜನಾಃ ಸರ್ವೇ ದಿದೃಕ್ಷಾರ್ಥಂ ಸಮಾಗತಾಃ ॥ ೩೩ ॥

ಭಾಗ್ಯೋದಯೋಽಧುನಾ ಜಾತ ಆತ್ಮದೇವಸ್ಯ ಪಶ್ಯತ ।
ಧೇನ್ವಾ ಬಾಲಃ ಪ್ರಸೂತಸ್ತು ದೇವರೂಪೀತಿ ಕೌತುಕಮ್ ॥ ೩೪ ॥

ನ ಜ್ಞಾತಂ ತದ್ರಹಸ್ಯಂ ತು ಕೇನಾಪಿ ವಿಧಿಯೋಗತಃ ।
ಗೋಕರ್ಣಂ ತಂ ಸುತಂ ದೃಷ್ಟ್ವಾ ಗೋಕರ್ಣಂ ನಾಮ ಚಾಕರೋತ್ ॥ ೩೫ ॥

ಕಿಯತ್ಕಾಲೇನ ತೌ ಜಾತೌ ತರುಣೌ ತನಯಾವುಭೌ ।
ಗೋಕರ್ಣಃ ಪಂಡಿತೋ ಜ್ಞಾನೀ ಧುಂಧುಕಾರೀ ಮಹಾಖಲಃ ॥ ೩೬ ॥

ಸ್ನಾನಶೌಚಕ್ರಿಯಾಹೀನೋ ದುರ್ಭಕ್ಷೀ ಕ್ರೋಧವರ್ಧಿತಃ ।
ದುಷ್ಪರಿಗ್ರಹಕರ್ತಾ ಚ ಶವಹಸ್ತೇನ ಭೋಜನಮ್ ॥ ೩೭ ॥

ಚೌರಃ ಸರ್ವಜನದ್ವೇಷೀ ಪರವೇಶ್ಮಪ್ರದೀಪಕಃ ।
ಲಾಲನಾಯಾರ್ಭಕಾನ್ ಧೃತ್ವಾ ಸದ್ಯಃ ಕೂಪೇ ನ್ಯಪಾತಯತ್ ॥ ೩೮ ॥

ಹಿಂಸಕಃ ಶಸ್ತ್ರಧಾರೀ ಚ ದೀನಾಂಧಾನಾಂ ಪ್ರಪೀಡಕಃ ।
ಚಾಂಡಾಲಾಭಿರತೋ ನಿತ್ಯಂ ಪಾಶಹಸ್ತಃ ಶ್ವಸಂಗತಃ ॥ ೩೯ ॥

ತೇನ ವೇಶ್ಯಾಕುಸಂಗೇನ ಪಿತ್ರ್ಯಂ ವಿತ್ತಂ ತು ನಾಶಿತಮ್ ।
ಏಕದಾ ಪಿತರೌ ತಾಡ್ಯ ಪಾತ್ರಾಣಿ ಸ್ವಯಮಾಹರತ್ ॥ ೪೦ ॥

ತತ್ಪಿತಾ ಕೃಪಣಃ ಪ್ರೋಚ್ಚೈರ್ಧನಹೀನೋ ರುರೋದ ಹ ।
ವಂಧ್ಯತ್ವಂ ತು ಸಮೀಚೀನಂ ಕುಪುತ್ರೋ ದುಃಖದಾಯಕಃ ॥ ೪೧ ॥

ಕ್ವ ತಿಷ್ಠಾಮಿ ಕ್ವ ಗಚ್ಛಾಮಿ ಕೋ ಮೇ ದುಃಖಂ ವ್ಯಪೋಹಯೇತ್ ।
ಪ್ರಾಣಾಂಸ್ತ್ಯಜಾಮಿ ದುಃಖೇನ ಹಾ ಕಷ್ಟಂ ಮಮ ಸಂಸ್ಥಿತಮ್ ॥ ೪೨ ॥

ಇದಾದ ಬಳಿಕ ಮೂರು ತಿಂಗಳು ಕಳೆದಾಗ ಆ ಹಸುವಿಗೂ ಒಂದು ಮನುಷ್ಯಾಕಾರದ ಮಗು ಹುಟ್ಟಿತು. ಅದು ಸರ್ವಾಂಗ ಸುಂದರ, ದಿವ್ಯ, ನಿರ್ಮಲವಾಗಿದ್ದು ಬಂಗಾರದ ಕಾಂತಿಯಿಂದ ಒಳಗೊಂಡಿತ್ತು. ॥ ೩೨ ॥ ಅದನ್ನು ನೋಡಿ ಬ್ರಾಹ್ಮಣನು ಸಂತೋಷಗೊಂಡು ಸ್ವತಃ ತಾನೇ ಅದರ ಎಲ್ಲ ಸಂಸ್ಕಾರಗಳನ್ನು ಮಾಡಿದನು. ಈ ಸಮಾಚಾರದಿಂದ ಎಲ್ಲ ಜನರಿಗೂ ತುಂಬಾ ಆಶ್ಚರ್ಯವಾಯಿತು ಹಾಗೂ ಅವರೆಲ್ಲರೂ ಬಾಲಕನನ್ನು ನೋಡಲು ಬಂದರು. ॥ ೩೩ ॥ ಅಯ್ಯಾ! ನೋಡಿರಿಯಾ! ಈಗ ಆತ್ಮದೇವನ ಭಾಗ್ಯ ಹೇಗೆ ಉದಯಿಸಿತು. ಹಸುವಿನಲ್ಲಿಯೂ ಇಂತಹ ದಿವ್ಯ ಬಾಲಕನು ಹುಟ್ಟುವುದು ಎಷ್ಟು ಆಶ್ಚರ್ಯವಾಗಿದೆ ಎಂದು ತಮ್ಮ-ತಮ್ಮಲ್ಲೇ ಹೇಳಿಕೊಂಡರು.॥ ೩೪ ॥ ದೈವಯೋಗದಿಂದ ಈ ಗುಪ್ತ ರಹಸ್ಯವು ಯಾರಿಗೂ ತಿಳಿಯಲಿಲ್ಲ. ಆತ್ಮದೇವನು ಆ ಬಾಲಕನಿಗೆ ಗೋವಿನಂತೆ ಕಿವಿಗಳಿರುವುದನ್ನು ನೋಡಿ ಅವನಿಗೆ 'ಗೋಕರ್ಣ' ಎಂದು ಹೆಸರಿಟ್ಟನು. ॥ ೩೫ ॥

ಕೆಲ ಕಾಲಾನಂತರದಲ್ಲಿ ಆ ಇಬ್ಬರೂ ಬಾಲಕರು ತರುಣರಾದರು. ಅವರಲ್ಲಿ ಗೋಕರ್ಣನಾದರೋ ದೊಡ್ಡ ಪಂಡಿತ ಜ್ಞಾನಿಯಾದನು. ಆದರೆ ಧುಂಧುಕಾರಿಯು ಭಾರೀ ದುಷ್ಟನಾದನು. ॥ ೩೬ ॥ ಧುಂಧುಕಾರಿಯಲ್ಲಿ ಸ್ನಾನ ಶೌಚಾದಿ ಬ್ರಾಹ್ಮಣೋಚಿತ ಆಚಾರಗಳ ಹೆಸರೇ ಇರಲಿಲ್ಲ. ಊಟ-ತಿಂಡಿಯಲ್ಲಿಯೂ ನಿಯಮವಿರಲಿಲ್ಲ. ಅವನಲ್ಲಿ ಸಿಟ್ಟು ಬಹಳವಾಗಿ ಬೆಳೆದಿತ್ತು. ಅವನು ಕೆಟ್ಟ-ಕೆಟ್ಟ ವಸ್ತುಗಳನ್ನು ಸಂಗ್ರಹಿಸುತ್ತಿದ್ದನು. ಹೆಣ ಮುಟ್ಟಿದ ಅನ್ನವನ್ನೂ ಕೂಡ ಅವನು ತಿಂದು ಬಿಡುತ್ತಿದ್ದನು. ॥ ೩೭ ॥ ಬೇರೆಯವರ ವಸ್ತುಗಳನ್ನು ಕದಿಯುವುದು ಹಾಗೂ ಎಲ್ಲರನ್ನು ದ್ವೇಷಿಸುವುದು ಅವನ ಸ್ವಭಾವವೇ ಆಗಿ ಹೋಗಿತ್ತು. ಅಡಗಿಕೊಂಡು ಅವನು ಬೇರೆಯವರ ಮನೆಗಳಿಗೆ ಬೆಂಕಿ ಹಚ್ಚುತ್ತಿದ್ದನು. ಬೇರೆಯವರ ಮಕ್ಕಳನ್ನು ಆಡಿಸಲು ಎತ್ತಿಕೊಂಡು, ಅವನ್ನು ಸಟ್ಟನೆ ಬಾವಿಗೆ ಎಸೆದು ಬಿಡುತ್ತಿದ್ದನು. ॥ ೩೮ ॥ ಅವನಿಗೆ ಹಿಂಸೆಯ ಗೀಳೇ ಹತ್ತಿತ್ತು. ಯಾವಾಗಲೂ ಆಯುಧಗಳನ್ನು ಧರಿಸಿಕೊಂಡೇ ಇರುತ್ತಿದ್ದನು. ಬಡಪಾಯಿ ಕುರುಡರು, ದೀನ-ದುಃಖಿಗಳನ್ನು ವ್ಯರ್ಥವಾಗಿ ಸತಾಯಿಸುತ್ತಿದ್ದನು. ಚಾಂಡಾಲರೊಂದಿಗೆ ಅವನಿಗೆ ವಿಶೇಷ ಪ್ರೇಮವಿತ್ತು. ಸದಾ ಕೈಯಲ್ಲಿ ಬಲೆ ಹಿಡಿದುಕೊಂಡು ನಾಯಿಗಳ ಗುಂಪಿನೊಂದಿಗೆ ಬೇಟೆಗೂ ಹೋಗುತ್ತಿದ್ದನು. ॥ ೩೯ ॥ ವೇಶ್ಯೆಯರ ಜಾಲದಲ್ಲಿ ಸಿಲುಕಿಕೊಂಡು ಅವನು ತನ್ನ ತಂದೆಯ ಎಲ್ಲ ಸಂಪತ್ತನ್ನು ನಾಶ ಮಾಡಿಬಿಟ್ಟನು. ಒಂದು ದಿನ ತಂದೆ-ತಾಯಿಯರನ್ನು ಹೊಡೆದು-ಬಡಿದು ಮನೆಯ ಎಲ್ಲ ಪಾತ್ರೆ-ಪಗಡೆಗಳನ್ನು ಎತ್ತಿಕೊಂಡು ಹೋದನು. ॥ ೪೦ ॥

ಹೀಗೆ ಎಲ್ಲ ಸಂಪತ್ತು ಕಳೆದು ಹೋದಾಗ ಅವನ ಲೋಭೀ ತಂದೆಯು ಎದೆ ಬಡಿದುಕೊಂಡು ಅಳತೊಡಗಿದನು. ಇದಕ್ಕಿಂತ ಇವನ ತಾಯಿಯು ಬಂಜೆಯಾಗಿದ್ದರೂ ಚೆನ್ನಾಗಿತ್ತು. ಕುಪುತ್ರನಾದರೋ ಬಹಳ ದುಃಖದಾಯಕನಾಗುತ್ತಾನೆ ಎಂದು ಹೇಳತೊಡಗಿದನು. ॥ ೪೧ ॥ ಅಯ್ಯೋ! ಈಗ ನಾನು ಎಲ್ಲಿರಲಿ? ಎಲ್ಲಿಗೆ ಹೋಗಲಿ? ನನ್ನ ಈ ಕಷ್ಟವನ್ನು ಯಾರು ಕಳೆಯುವರು? ನನ್ನ ಮೇಲೆ ದೊಡ್ಡ ವಿಪತ್ತೇ ಬಂದೊದಗಿತಲ್ಲ! ಈ ದುಃಖದಿಂದ ನಾನು ಖಂಡಿತವಾಗಿ ಸಾಯುವೆನು. ॥ ೪೨ ॥

ತದಾನೀಂ ತು ಸಮಾಗತ್ಯ ಗೋಕರ್ಣೋ ಜ್ಞಾನಸಂಯುತಃ ।
ಬೋಧಯಾಮಾಸ ಜನಕಂ ವೈರಾಗ್ಯಂ ಪರಿದರ್ಶಯನ್
॥ ೭೩ ॥

ಅಸಾರಃ ಖಲು ಸಂಸಾರೋ ದುಃಖರೂಪೀ ವಿಮೋಹಕಃ ।
ಸುತಃ ಕಸ್ಯ ಧನಂ ಕಸ್ಯ ಸ್ನೇಹವಾನ್ ಜ್ವಲತೇಽನಿಶಮ್
॥ ೭೪ ॥

ನ ಚೇಂದ್ರಸ್ಯ ಸುಖಂ ಕಿಂಚಿನ್ನ ಸುಖಂ ಚಕ್ರವರ್ತಿನಃ ।
ಸುಖಮಸ್ತಿ ವಿರಕ್ತಸ್ಯ ಮುನೇರೇಕಾಂತಜೀವಿನಃ
॥ ೭೫ ॥

ಮುಂಚಾಜ್ಞಾನಂ ಪ್ರಜಾರೂಪಂ ಮೋಹತೋ ನರಕೇ ಗತಿಃ ।
ನಿಪತಿಷ್ಯತಿ ದೇಹೋಽಯಂ ಸರ್ವಂ ತ್ಯಕ್ತ್ವಾ ವನಂ ವ್ರಜ
॥ ೭೬ ॥

ತದ್ವಾಕ್ಯಂ ತು ಸಮಾಕರ್ಣ್ಯ ಗಂತುಕಾಮಃ ಪಿತಾಬ್ರವೀತ್ ।
ಕಿಂ ಕರ್ತವ್ಯಂ ವನೇ ತಾತ ತತ್ತ್ವಂ ವದ ಸವಿಸ್ತರಮ್
॥ ೭೭ ॥

ಅಂಧಕೂಪೇ ಸ್ನೇಹಪಾಶೇ ಬದ್ಧಃ ಪಂಗುರಹಂ ಶಠಃ ।
ಕರ್ಮಣಾ ಪತಿತೋ ನೂನಂ ಮಾಮುದ್ಧರ ದಯಾನಿಧೇ
॥ ೭೮ ॥

ಗೋಕರ್ಣ ಉವಾಚ

ದೇಹೇಽಸ್ಥಿಮಾಂಸರುಧಿರೇಽಭಿಮತಿಂ ತ್ಯಜ ತ್ವಂ
ಜಾಯಾಸುತಾದಿಷು ಸದಾ ಮಮತಾಂ ವಿಮುಂಚ ।
ಪಶ್ಯಾನಿಶಂ ಜಗದಿದಂ ಕ್ಷಣಭಂಗನಿಷ್ಠಂ
ವೈರಾಗ್ಯರಾಗರಸಿಕೋ ಭವ ಭಕ್ತಿನಿಷ್ಠಃ ॥ ೭೯ ॥

ಧರ್ಮಂ ಭಜಸ್ವ ಸತತಂ ತ್ಯಜ ಲೋಕಧರ್ಮಾನ್
ಸೇವಸ್ವ ಸಾಧುಪುರುಷಾಂಜಹಿ ಕಾಮತೃಷ್ಣಾಮ್ ।
ಅನ್ಯಸ್ಯ ದೋಷಗುಣಚಿಂತನಮಾಶು ಮುಕ್ತ್ವಾ
ಸೇವಾಕಥಾರಸಮಹೋ ನಿತರಾಂ ಪಿಬ ತ್ವಮ್ ॥ ೮೦ ॥

ಏವಂ ಸುತೋಕ್ತಿವಶತೋಽಪಿ ಗೃಹಂ ವಿಹಾಯ
ಯಾತೋ ವನಂ ಸ್ಥಿರಮತಿರ್ಗತಷಷ್ಟಿವರ್ಷಃ ।
ಯುಕ್ತೋ ಹರೇರನುದಿನಂ ಪರಿಚರ್ಯಯಾಸೌ
ಶ್ರೀಕೃಷ್ಣಮಾಪ ನಿಯತಂ ದಶಮಸ್ಯ ಪಾಠಾತ್ ॥ ೮೧ ॥

ಆಗಲೇ ಪರಮ ಜ್ಞಾನಿಯಾದ ಗೋಕರ್ಣನು ಅಲ್ಲಿಗೆ ಬಂದನು. ಅವನು ತಂದೆಗೆ ವೈರಾಗ್ಯವನ್ನು ಉಪದೇಶಿಸಿ ಬಹಳವಾಗಿ ಸಮಾಧಾನಪಡಿಸಿದನು. ॥ ೭೩ ॥ ಗೋಕರ್ಣನೆಂದನು – ಅಪ್ಪಾ! ಈ ಪ್ರಪಂಚವು ಅಸಾರವಾಗಿದೆ. ಇದು ಅತ್ಯಂತ ದುಃಖರೂಪಿಯಾಗಿದ್ದು ಮೋಹ ಪಡಿಸತಕ್ಕದ್ದಾಗಿದೆ. ಯಾರು ಮಗ? ಯಾರ ಧನ? ಆಸಕ್ತಿ ಯುಳ್ಳವನು ಹಗಲು-ರಾತ್ರಿ ದೀಪದಂತೆ ಸುಡುತ್ತಿರುತ್ತಾನೆ. ॥ ೭೪ ॥ ಸುಖವಾದರೋ ಇಂದ್ರನಿಗಿಲ್ಲ, ಚಕ್ರವರ್ತಿಗಳಿಗೂ ಇಲ್ಲ. ಸುಖವು ಕೇವಲ ವಿರಕ್ತ ಏಕಾಂತವಾಸಿಯಾದ ಮುನಿಗಳಿಗಿದೆ. ॥ ೭೫ ॥ ಈ ಮಗನು ನನ್ನವನಾಗಿದ್ದಾನೆ. ಈ ಅಜ್ಞಾನವನ್ನು ಬಿಟ್ಟುಬಿಡಿರಿ. ಮೋಹದಿಂದ ನರಕದ ಪ್ರಾಪ್ತಿ ಯಾಗುತ್ತದೆ. ಈ ಶರೀರವಾದರೋ ನಾಶವಾಗಿಯೇ ಆಗುವುದು. ಅದಕ್ಕಾಗಿ ಎಲ್ಲವನ್ನು ಬಿಟ್ಟು ತಪಸ್ಸಿಗಾಗಿ ಕಾಡಿಗೆ ಹೊರಟು ಹೋಗಿರಿ. ॥ ೭೬ ॥

ಗೋಕರ್ಣನ ಮಾತನ್ನು ಕೇಳಿ ಆತ್ಮದೇವನು ಕಾಡಿಗೆ ಹೋಗಲು ಸಿದ್ಧನಾದನು. ಅವನೆಂದ – ಮಗು! ವನದಲ್ಲಿದ್ದು ನಾನು ಏನು ಮಾಡಬೇಕು? ಅದನ್ನು ವಿಸ್ತಾರವಾಗಿ ನನಗೆ ಹೇಳು. ॥ ೭೭ ॥ ನಾನು ಬಹಳ ಮೂರ್ಖನಾಗಿದ್ದೇನೆ. ಇಂದಿನವರೆಗೆ ಕರ್ಮವಶನಾಗಿ ಸ್ನೇಹ ಪಾಶದಲ್ಲಿ ಬಂಧಿತನಾಗಿ, ಹೆಳವನಂತೆ ಈ ಮನೆಯೆಂಬ ಕತ್ತಲೆಯ ಬಾವಿಯಲ್ಲಿ ಬಿದ್ದಿರುವೆನು. ನೀನು ತುಂಬಾ ದಯಾಳುವಾಗಿರುವೆ. ಆದ್ದರಿಂದ ನನ್ನ ಉದ್ಧಾರಮಾಡು. ॥ ೭೮ ॥

ಗೋಕರ್ಣನು ಹೇಳಿದನು – ತಂದೆಯೇ! ಈ ಶರೀರವು ಎಲುಬು, ಮಾಂಸ, ರಕ್ತದ ಪಿಂಡವಾಗಿದೆ. ಇದನ್ನು 'ನಾನು' ಎಂಬುದನ್ನು ನೀವು ಮರೆತುಬಿಡಿರಿ. ಪತ್ನೀ-ಪುತ್ರರನ್ನು 'ನನ್ನವರು' ಎಂದು ಎಂದಿಗೂ ತಿಳಿಯಬೇಡಿರಿ. ಈ ಪ್ರಪಂಚವನ್ನು ಹಗಲು ರಾತ್ರಿ ಕ್ಷಣಭಂಗುರವೆಂದು ತಿಳಿಯಿರಿ, ಇದರಲ್ಲಿ ಯಾವ ವಸ್ತುವನ್ನೂ ಸ್ಥಾಯಿಯೆಂದು ತಿಳಿದು ಅನುರಾಗವನ್ನು ಇಡಬೇಡಿರಿ. ಸಾಕು, ಏಕಮಾತ್ರ ವೈರಾಗ್ಯರಸದ ರಸಿಕರಾಗಿ ಭಗವಂತನ ಭಕ್ತಿಯಲ್ಲಿ ತೊಡಗಿರಿ. ॥ ೭೯ ॥ ಭಗವದ್ಭಜನೆಯೇ ಎಲ್ಲಕ್ಕಿಂತ ದೊಡ್ಡ ಧರ್ಮವಾಗಿದೆ. ನಿರಂತರ ಅದನ್ನೇ ಆಶ್ರಯಿಸಿಕೊಂಡಿರಿ, ಉಳಿದ ಎಲ್ಲ ಲೌಕಿಕ ಧರ್ಮಗಳಿಂದ ಪರಾಙ್ಮುಖರಾಗಿರಿ. ಸದಾ ಕಾಲ ಸಾಧುಗಳ ಸೇವೆಮಾಡಿರಿ. ಭೋಗಗಳ ಲಾಲಸೆ ಹತ್ತಿರ ಸುಳಿಯಗೊಡಬೇಡಿ. ಆದಷ್ಟು ಬೇಗ ಬೇರೆಯವರ ಗುಣ ದೋಷಗಳ ವಿಚಾರ ಬಿಟ್ಟು ಏಕಮಾತ್ರ ಭಗವತ್ಸೇವೆ ಹಾಗೂ ಭಗವಂತನ ಕಥೆಗಳ ರಸಪಾನಮಾಡಿರಿ. ॥ ೮೦ ॥

ಹೀಗೆ ಪುತ್ರನ ಮಾತಿನಿಂದ ಪ್ರಭಾವಿತನಾಗಿ ಆತ್ಮದೇವನು ಮನೆಯನ್ನು ಬಿಟ್ಟು ಕಾಡಿಗೆ ತೆರಳಿದನು. ಆಗ ಅವನ ವಯಸ್ಸು ಅರವತ್ತಾಗಿದ್ದರೂ ಬುದ್ಧಿಯಲ್ಲಿ ಪೂರ್ಣವಾಗಿ ದೃಢತೆ ಇತ್ತು. ಅಲ್ಲಿ ಹಗಲು-ಇರುಳು ಭಗವಂತನ ಸೇವೆ-ಪೂಜೆ ಮಾಡುವುದರಿಂದ ಹಾಗೂ ನಿಯಮಪೂರ್ವಕ ಭಾಗವತದ ದಶಮಸ್ಕಂಧವನ್ನು ಪಾರಾಯಣೆ ಮಾಡುವುದರಿಂದ ಅವನು ಭಗವಾನ್ ಶ್ರೀಕೃಷ್ಣನನ್ನು ಪಡೆದು ಕೊಂಡನು. ॥ ೮೧ ॥

ನಾಲ್ಕನೆಯ ಅಧ್ಯಾಯವು ಮುಗಿಯಿತು. ॥ ೪ ॥

ಇತಿ ಶ್ರೀಪದ್ಮಪುರಾಣೇ ಉತ್ತರಖಂಡೇ ಶ್ರೀಮದ್ಭಾಗವತಮಾಹಾತ್ಮ್ಯೇ ವಿಪ್ರಮೋಕ್ಷೋ ನಾಮ ಚತುರ್ಥೋಽಧ್ಯಾಯಃ ॥ ೪ ॥

ಐದನೆಯ ಅಧ್ಯಾಯ

ಧುಂಧುಕಾರಿಗೆ ಪ್ರೇತಯೋನಿ ಪ್ರಾಪ್ತಿ ಮತ್ತು ಅದರಿಂದ ಉದ್ಧಾರ

ಸೂತ ಉವಾಚ

ಪಿತರ್ಯುಪರತೇ ತೇನ ಜನನೀ ತಾಡಿತಾ ಭೃಶಮ್ ।
ಕ್ವ ವಿತ್ತಂ ತಿಷ್ಠತಿ ಬ್ರೂಹಿ ಹನಿಷ್ಯೇ ಲತ್ತಯಾ ನ ಚೇತ್ ॥ ೧ ॥

ಇತಿ ತದ್ವಾಕ್ಯಸಂತ್ರಾಸಾಜ್ಜನನ್ಯಾ ಪುತ್ರದುಃಖತಃ ।
ಕೂಪೇ ಪಾತಃ ಕೃತೋ ರಾತ್ರೌ ತೇನ ಸಾ ನಿಧನಂ ಗತಾ ॥ ೨ ॥

ಗೋಕರ್ಣಸ್ತೀರ್ಥಯಾತ್ರಾರ್ಥಂ ನಿರ್ಗತೋ ಯೋಗಸಂಸ್ಥಿತಃ ।
ನ ದುಃಖಂ ನ ಸುಖಂ ತಸ್ಯ ನ ವೈರೀ ನಾಪಿ ಬಾಂಧವಃ ॥ ೩ ॥

ಧುಂಧುಕಾರೀ ಗೃಹೇಽತಿಷ್ಠತ್ಪಂಚಪಣ್ಯವಧೂವೃತಃ ।
ಅತ್ಯುಗ್ರಕರ್ಮಕರ್ತಾ ಚ ತತ್ಪೋಷಣವಿಮೂಢಧೀಃ ॥ ೪ ॥

ಏಕದಾ ಕುಲಟಾಸ್ತಾಸ್ತು ಭೂಷಣಾನ್ಯಭಿಲಿಪ್ಸವಃ ।
ತದರ್ಥಂ ನಿರ್ಗತೋ ಗೇಹಾತ್ಕಾಮಾಂಧೋ ಮೃತ್ಯುಮಸ್ಮರನ್ ॥ ೫ ॥

ಯತಸ್ತತಶ್ಚ ಸಂಹೃತ್ಯ ವಿತ್ತಂ ವೇಶ್ಮ ಪುನರ್ಗತಃ ।
ತಾಭ್ಯೋಽಯಚ್ಛತ್ಸುವಸ್ತ್ರಾಣಿ ಭೂಷಣಾನಿ ಕಿಯಂತಿ ಚ ॥ ೬ ॥

ಬಹುವಿತ್ತಚಯಂ ದೃಷ್ಟ್ವಾ ರಾತ್ರೌ ನಾರ್ಯೋ ವ್ಯಚಾರಯನ್ ।
ಚೌರ್ಯಂ ಕರೋತ್ಯಸೌ ನಿತ್ಯಮತೋ ರಾಜಾ ಗ್ರಹೀಷ್ಯತಿ ॥ ೭ ॥

ವಿತ್ತಂ ಹೃತ್ವಾ ಪುನಶ್ಚೈನಂ ಮಾರಯಿಷ್ಯತಿ ನಿಶ್ಚಿತಮ್ ।
ಅತೋಽರ್ಥಗುಪ್ತಯೇ ಗೂಢಮಸ್ಮಾಭಿಃ ಕಿಂ ನ ಹನ್ಯತೇ ॥ ೮ ॥

ನಿಹತ್ಯೈನಂ ಗೃಹೀತ್ವಾರ್ಥಂ ಯಾಸ್ಯಾಮೋ ಯತ್ರ ಕುತ್ರಚಿತ್ ।
ಇತಿ ತಾ ನಿಶ್ಚಯಂ ಕೃತ್ವಾ ಸುಪ್ತಂ ಸಂಬದ್ಧ್ಯ ರಶ್ಮಿಭಿಃ ॥ ೯ ॥

ಪಾಶಂ ಕಂಠೇ ನಿಧಾಯಾಸ್ಯ ತನ್ಮೃತ್ಯುಮುಪಚಕ್ರಮುಃ ।
ತ್ವರಿತಂ ನ ಮಮಾರಾಸೌ ಚಿಂತಾಯುಕ್ತಾಸ್ತದಾಭವನ್ ॥ ೧೦ ॥

ತಪ್ತಾಂಗಾರಸಮೂಹಾಂಶ್ಚ ತನ್ಮುಖೇ ಹಿ ವಿಚಿಕ್ಷಿಪುಃ ।
ಅಗ್ನಿಜ್ವಾಲಾತಿದುಃಖೇನ ವ್ಯಾಕುಲೋ ನಿಧನಂ ಗತಃ ॥ ೧೧ ॥

ಸೂತಪುರಾಣಿಕರು ಹೇಳುತ್ತಾರೆ – ಶೌನಕರೇ ! ತಂದೆಯು ಕಾಡಿಗೆ ಹೋದ ಮೇಲೆ ಧುಂಧುಕಾರಿಯು ಒಂದು ದಿನ ತನ್ನ ತಾಯಿಗೆ ತುಂಬಾ ಹೊಡೆದು ಕೇಳಿದನು – 'ಧನವನ್ನು ಎಲ್ಲಿ ಇಟ್ಟಿರುವೆ ಹೇಳು. ಇಲ್ಲದಿದ್ದರೆ ಉರಿಯುತ್ತಿರುವ ಕಟ್ಟಿಗೆಯಿಂದ ನಿನ್ನನ್ನು ಮುಗಿಸಿ ಬಿಡುವೆನು. ॥ ೧ ॥ ಅವನು ಹೀಗೆ ಗದರಿಸಲು ಹೆದರಿ, ಮಗನ ಉಪದ್ರವದಿಂದ ದುಃಖಿತಳಾಗಿ ಅವಳು ರಾತ್ರಿ ಬಾವಿಗೆ ಹಾರಿಕೊಂಡಳು. ಹೀಗೆ ಅವಳ ಮೃತ್ಯುವಾಯಿತು. ॥ ೨ ॥ ಯೋಗನಿಷ್ಠ ಗೋಕರ್ಣನು ತೀರ್ಥಯಾತ್ರೆಗಾಗಿ ಹೊರಟು ಹೋದನು. ಅವನಿಗೆ ಈ ಘಟನೆಯಿಂದ ದುಃಖವಾಗಲೀ, ಸುಖವಾಗಲೀ ಆಗಲಿಲ್ಲ, ಏಕೆಂದರೆ ಅವನಿಗೆ ಯಾರೂ ಮಿತ್ರರು, ಶತ್ರುಗಳು ಇರಲಿಲ್ಲ. ॥ ೩ ॥

ಧುಂಧುಕಾರಿಯು ಐದು ಮಂದಿ ವೇಶ್ಯೆಯರೊಂದಿಗೆ ಮನೆಯಲ್ಲೇ ಇರತೊಡಗಿದನು. ಅವರಿಗಾಗಿ ಭೋಗ-ಸಾಮಗ್ರಿಗಳನ್ನು ಒದಗಿಸುವ ಚಿಂತೆಯಿಂದ ಅವನ ಬುದ್ಧಿಯು ನಷ್ಟವಾಯಿತು. ಅವನು ಅನೇಕ ರೀತಿಯ ಕ್ರೂರ ಕರ್ಮಗಳನ್ನು ಮಾಡತೊಡಗಿದನು. ॥ ೪ ॥ ಒಂದು ದಿನ ಆ ಕುಲಟೆಯರು ಇವನ ಬಳಿಯಲ್ಲಿ ಅನೇಕ ಒಡವೆಗಳನ್ನು ಬೇಡಿದರು. ಅವನಾದರೋ ಕಾಮದಿಂದ ಕುರುಡನಾಗಿ ಹೋಗಿದ್ದನು. ಸಾವಿನ ನೆನಪೇ ಅವನಿಗಿರಲಿಲ್ಲ. ಸರಿ, ಒಡವೆಗಳನ್ನು ಒದಗಿಸಲು ಅವನು ಮನೆಯಿಂದ ಹೊರಬಿದ್ದನು. ॥ ೫ ॥ ಅವನು ಅಲ್ಲಿ-ಇಲ್ಲಿ ಹೇರಳ ಧನವನ್ನು ಕದ್ದು ಮನೆಗೆ ಬಂದು, ಅವರಿಗೆ ಸುಂದರ ವಸ್ತ್ರ-ಒಡವೆಗಳನ್ನು ತಂದು ಕೊಟ್ಟನು. ॥ ೬ ॥ ಕಳ್ಳತನದ ಅನೇಕ ವಸ್ತುಗಳನ್ನು ನೋಡಿ ಆ ಸ್ತ್ರೀಯರು ರಾತ್ರೆ ವಿಚಾರಮಾಡಿದರು- 'ಇವನು ಪ್ರತಿದಿನ ಕಳ್ಳತನ ಮಾಡುತ್ತಾನೆ. ಆದರಿಂದ ಒಂದಲ್ಲ ಒಂದು ದಿನ ಖಂಡಿತವಾಗಿ ರಾಜನು ಇವನನ್ನು ಹಿಡಿದುಕೊಂಡು ಹೋದಾನು. ॥ ೭ ॥ ರಾಜನು ಇದೆಲ್ಲ ಸಂಪತ್ತನ್ನು ಕಸಿದುಕೊಂಡು ಇವನಿಗೆ ಪ್ರಾಣದಂಡನೆ ವಿಧಿಸುವುದು ನಿಶ್ಚಿತ. ಒಂದಲ್ಲ ಒಂದು ದಿನ ಇವನಿಗೆ ಸಾಯುವುದೇ ಇದೆಯಾದರೆ ಧನದ ರಕ್ಷಣೆಗಾಗಿ ಗುಪ್ತವಾಗಿ ಇವನನ್ನು ನಾವೇ ಏಕೆ ಕೊಲ್ಲಬಾರದು ?॥ ೮ ॥ ಇವನನ್ನು ಕೊಂದು ನಾವು ಇವನ ಸಂಪತ್ತೆಲ್ಲವನ್ನು ಎತ್ತಿಕೊಂಡು ಎಲ್ಲಾದರೂ ಹೊರಟು ಹೋಗೋಣ.' ಹೀಗೆ ನಿಶ್ಚಯಿಸಿ ಅವರು ಮಲಗಿರುವ ಧುಂಧುಕಾರಿಯನ್ನು ಹಗ್ಗದಿಂದ ಕಟ್ಟಿ, ಕತ್ತಿಗೆ ಉರುಳನ್ನು ಬಿಗಿದು ಸಾಯಿಸಲು ಪ್ರಯತ್ನಿಸಿದರು. ಇದರಿಂದ ಅವನು ಬೇಗನೇ ಸಾಯದಿದ್ದಾಗ ಅವರಿಗೆ ಭಾರೀ ಚಿಂತೆ ಇಟ್ಟುಕೊಂಡಿತು. ॥ ೯-೧೦ ॥ ಆಗ ಅವರು ಅವನ ಬಾಯಿಯಲ್ಲಿ ಉರಿಯುವ ಕೆಂಡವನ್ನು ಸುರಿದರು. ಇದರಿಂದ ಅವನು ಬೆಂಕಿಯ ಜ್ವಾಲೆಯಿಂದ ತುಂಬಾ ನರಳುತ್ತಾ ಸತ್ತು ಹೋದನು. ॥ ೧೧ ॥ ಅವರು ಇವನ ಶರೀರವನ್ನು ಒಂದು

ತಂ ದೇಹಂ ಮುಮುಚುರ್ಗರ್ತೇ ಪ್ರಾಯಃ ಸಾಹಸಿಕಾಃ ಸ್ತ್ರಿಯಃ ।
ನ ಜ್ಞಾತಂ ತದ್ರಹಸ್ಯಂ ತು ಕೇನಾಪೀದಂ ತಥೈವ ಚ ॥ ೧೨ ॥

ಲೋಕೈಃ ಪೃಷ್ಟಾ ವದಂತಿ ಸ್ಮ ದೂರಂ ಯಾತಃ ಪ್ರಿಯೋ ಹಿ ನಃ ।
ಆಗಮಿಷ್ಯತಿ ವರ್ಷೇಽಸ್ಮಿನ್ ವಿತ್ತಲೋಭವಿಕರ್ಷಿತಃ ॥ ೧೩ ॥

ಸ್ತ್ರೀಣಾಂ ನೈವ ತು ವಿಶ್ವಾಸಂ ದುಷ್ಟಾನಾಂ ಕಾರಯೇದ್ಬುಧಃ ।
ವಿಶ್ವಾಸೇ ಯಃ ಸ್ಥಿತೋ ಮೂಢಃ ಸ ದುಃಖೈಃ ಪರಿಭೂಯತೇ ॥ ೧೪ ॥

ಸುಧಾಮಯಂ ವಚೋ ಯಾಸಾಂ ಕಾಮಿನಾಂ ರಸವರ್ಧನಮ್ ।
ಹೃದಯಂ ಕ್ಷುರಧಾರಾಭಂ ಪ್ರಿಯಃ ಕೋ ನಾಮ ಯೋಷಿತಾಮ್ ॥ ೧೫ ॥

ಸಂಹೃತ್ಯ ವಿತ್ತಂ ತಾ ಯಾತಾಃ ಕುಲಟಾ ಬಹುಭರ್ತೃಕಾಃ ।
ಧುಂಧುಕಾರೀ ಬಭೂವಾಥ ಮಹಾನ್ ಪ್ರೇತಃ ಕುಕರ್ಮತಃ ॥ ೧೬ ॥

ವಾತ್ಯಾರೂಪಧರೋ ನಿತ್ಯಂ ಧಾವನ್ ದಶದಿಶೋಽನ್ತರಮ್ ।
ಶೀತಾತಪಪರಿಕ್ಲಿಷ್ಟೋ ನಿರಾಹಾರಃ ಪಿಪಾಸಿತಃ ॥ ೧೭ ॥

ನ ಲೇಭೇ ಶರಣಂ ಕ್ವಾಪಿ ಹಾ ದೈವೇತಿ ಮುಹುರ್ವದನ್ ।
ಕಿಯತ್ಕಾಲೇನ ಗೋಕರ್ಣೋ ಮೃತಂ ಲೋಕಾದಬುಧ್ಯತ ॥ ೧೮ ॥

ಅನಾಥಂ ತಂ ವಿದಿತ್ವೈವ ಗಯಾಶ್ರಾದ್ಧಮಚೀಕರತ್ ।
ಯಸ್ಮಿಂಸ್ತೀರ್ಥೇ ತು ಸಂಯಾತಿ ತತ್ರ ಶ್ರಾದ್ಧಮವರ್ತಯತ್ ॥ ೧೯ ॥

ಏವಂ ಭ್ರಮನ್ ಸ ಗೋಕರ್ಣಃ ಸ್ವಪುರಂ ಸಮುಪೇಯಿವಾನ್ ।
ರಾತ್ರೌ ಗೃಹಾಂಗಣೇ ಸ್ವಪ್ತುಮಾಗತೋಽಲಕ್ಷಿತಃ ಪರೈಃ ॥ ೨೦ ॥

ತತ್ರ ಸುಪ್ತಂ ಸ ವಿಜ್ಞಾಯ ಧುಂಧುಕಾರೀ ಸ್ವಬಾಂಧವಮ್ ।
ನಿಶೀಥೇ ದರ್ಶಯಾಮಾಸ ಮಹಾರೌದ್ರತರಂ ವಪುಃ ॥ ೨೧ ॥

ಸಕೃನ್ಮೇಷಃ ಸಕೃದ್ದನ್ತೀ ಸಕೃಚ್ಚ ಮಹಿಷೋಽಭವತ್ ।
ಸಕೃದಿಂದ್ರಃ ಸಕೃಚ್ಚಾಗ್ನಿಃ ಪುನಶ್ಚ ಪುರುಷೋಽಭವತ್ ॥ ೨೨ ॥

ವೈಪರೀತ್ಯಮಿದಂ ದೃಷ್ಟ್ವಾ ಗೋಕರ್ಣೋ ಧೈರ್ಯಸಂಯುತಃ ।
ಅಯಂ ದುರ್ಗತಿಕಃ ಕೋಽಪಿ ನಿಶ್ಚಿತ್ಯಾಥ ತಮಬ್ರವೀತ್ ॥ ೨೩ ॥

ಗೋಕರ್ಣ ಉವಾಚ

ಕಸ್ತ್ವಮುಗ್ರತರೋ ರಾತ್ರೌ ಕುತೋ ಯಾತೋ ದಶಾಮಿಮಾಮ್ ।
ಕಿಂ ವಾ ಪ್ರೇತಃ ಪಿಶಾಚೋ ವಾ ರಾಕ್ಷಸೋಽಸೀತಿ ಶಂಸ ನಃ ॥ ೨೪ ॥

ಹೊಂಡದಲ್ಲಿ ಹೂತು ಬಿಟ್ಟರು. ಸ್ತ್ರೀಯರು ಪ್ರಾಯಶಃ ಭಾರೀ ದುಸ್ಸಾಹಸಿಗಳಾಗುತ್ತಾರೆಂಬುದು ನಿಜವಾಗಿದೆ. ಅವರ ಈ ಕೃತ್ಯವು ಯಾರಿಗೂ ತಿಳಿಯದೇ ಹೋಯಿತು. ॥ ೧೨ ॥ ಜನರು ಕೇಳಿದಾಗ ಹೇಳುತ್ತಿದ್ದರು – ನಮ್ಮ ಪ್ರಿಯತಮನು ಹಣದ ಲೋಭದಿಂದ ಈ ಬಾರಿ ಎಲ್ಲೋ ಬಹುದೂರ ಹೋಗಿರುವನು. ಇದೇ ವರ್ಷಾಂತ್ಯದಲ್ಲಿ ಬರುವನು. ॥ ೧೩ ॥ ಬುದ್ಧಿವಂತರಾದವರು ದುಷ್ಟಸ್ತ್ರೀಯರ ಮೇಲೆ ಎಂದೂ ವಿಶ್ವಾಸವಿಡಬಾರದು. ವಿಶ್ವಾಸವಿಟ್ಟ ಮೂರ್ಖನಿಗೆ ದುಃಖಿಯಾಗಬೇಕಾಗುತ್ತದೆ. ॥ ೧೪ ॥ ಅವರ ಮಾತುಗಳು ಅಮೃತದಂತೆ ಕಾಮುಕರ ಹೃದಯದಲ್ಲಿ ರಸವನ್ನು ಹೆಚ್ಚಿಸುತ್ತವೆ. ಆದರೆ ಅವರ ಹೃದಯ ಕತ್ತಿಯ ಅಲಗಿನಂತೆ ಹರಿತವಾಗಿರುತ್ತದೆ. ಇಂತಹ ಸ್ತ್ರೀಯರನ್ನು ಯಾರು ತಾನೇ ಪ್ರೇಮಿಸಬಲ್ಲರು ? ॥ ೧೫ ॥

ಆ ಕುಲಟೆಯರು ಧುಂಧುಕಾರಿಯ ಸಂಪತ್ತೆಲ್ಲವನ್ನು ದೋಚಿಕೊಂಡು ಪರಾರಿಯಾದರು. ಅವರಿಗೆ ಇಂತಹ ವಿಟರು ಎಷ್ಟಿದ್ದರೋ ಯಾರು ಬಲ್ಲರು ? ಧುಂಧುಕಾರಿಯು ತನ್ನ ಕುಕರ್ಮದಿಂದಾಗಿ ಭಯಂಕರ ಪ್ರೇತವಾದನು. ॥ ೧೬ ॥ ಅವನು ಬಿರುಗಾಳಿಯಾಗಿ ಯಾವಾಗಲೂ ಹತ್ತು ದಿಕ್ಕುಗಳಲ್ಲಿ ಅಲೆಯುತ್ತಿದ್ದನು. ಬಿಸಿಲು, ಛಳಿಯಿಂದ ಭಾರಿ ಕಷ್ಟಪಡುತ್ತಾ ಹಸಿವು-ಬಾಯಾರಿಕೆಗಳಿಂದ ದುಃಖಿತನಾಗಿ ಅಯ್ಯೋ ದೈವವೇ ! ಎಂದು ಕೂಗುತ್ತಿದ್ದನು. ಆದರೆ ಅವನಿಗೆ ಎಲ್ಲಿಯೂ ಯಾವುದೇ ಆಸರೆ ದೊರೆಯಲಿಲ್ಲ. ಕೆಲಕಾಲ ಕಳೆದ ಬಳಿಕ ಗೋಕರ್ಣನು ಜನರ ಬಾಯಿಂದ ಧುಂಧುಕಾರಿಯ ಮರಣದ ಸಮಾಚಾರವನ್ನು ಕೇಳಿದನು. ॥ ೧೭-೧೮ ॥ ಆಗ ಅವನು ಅವನನ್ನು ಅನಾಥನೆಂದರಿತು ಗಯೆಯಲ್ಲಿ ಅವನ ಶ್ರಾದ್ಧ ಮಾಡಿದನು. ಅವನು ಹೋದ ಎಲ್ಲ ತೀರ್ಥಗಳಲ್ಲಿಯೂ ಅವನ ಶ್ರಾದ್ಧಮಾಡುತ್ತಿದ್ದನು. ॥ ೧೯ ॥

ಹೀಗೆ ತಿರುಗುತ್ತಾ-ತಿರುಗುತ್ತಾ ಗೋಕರ್ಣನು ತನ್ನ ಊರಿಗೆ ಬಂದನು. ರಾತ್ರಿಯಲ್ಲಿ ಬೇರೆಯವರ ಕಣ್ಣುತಪ್ಪಿಸಿ ನೇರವಾಗಿ ತನ್ನ ಮನೆಯ ಅಂಗಳದಲ್ಲಿ ಮಲಗಲು ಬಂದನು. ॥ ೨೦ ॥ ಅಲ್ಲಿ ತನ್ನ ತಮ್ಮನು ಮಲಗಿರುವುದನ್ನು ಕಂಡು ನಡುರಾತ್ರಿಯಲ್ಲಿ ಧುಂಧುಕಾರಿಯು ತನ್ನ ಭಾರೀ ವಿಕರಾಳ ರೂಪವನ್ನು ತೋರಿದನು. ॥ ೨೧ ॥ ಅವನು ಕೆಲವೊಮ್ಮೆ ಆಡು, ಕೆಲವೊಮ್ಮೆ ಆನೆ, ಕೆಲವೊಮ್ಮೆ ಕೋಣ, ಕೆಲವೊಮ್ಮೆ ಇಂದ್ರ, ಕೆಲವೊಮ್ಮೆ ಅಗ್ನಿಯಾಗಿ ತೋರುತ್ತಿದ್ದನು. ಕೊನೆಗೆ ಅವನು ಮನುಷ್ಯನ ಆಕಾರದಲ್ಲಿ ಪ್ರಕಟನಾದನು. ॥ ೨೨ ॥ ಈ ವಿಪರೀತ ಅವಸ್ಥೆಯನ್ನು ನೋಡಿ ಗೋಕರ್ಣನು ಇವನು ಯಾರೋ ದುರ್ಗತಿಯನ್ನು ಪಡೆದ ಜೀವಿಯಾಗಿದ್ದಾನೆ ಎಂದು ನಿಶ್ಚಯಿಸಿ ಅವನು ಅವನಲ್ಲಿ ಧೈರ್ಯದಿಂದ ಕೇಳಿದನು. ॥ ೨೩ ॥

ಗೋಕರ್ಣನು ಕೇಳಿದನು - ನೀನು ಯಾರು ? ರಾತ್ರಿಯಲ್ಲಿ ಇಂತಹ ಭಯಾನಕ ರೂಪವನ್ನು ಏಕೆ ತೋರುತ್ತಿರುವೆ ? ಇಂತಹ ಸ್ಥಿತಿಯು ನಿನಗೆ ಹೇಗೆ ಉಂಟಾಯಿತು ? ನೀನು ಪ್ರೇತವೋ, ಪಿಶಾಚಿಯೋ, ಅಥವಾ ಯಾವುದಾದರೂ ರಾಕ್ಷಸನೋ ? ನನಗೆ ಹೇಳು. ॥ ೨೪ ॥

ಸೂತ ಉವಾಚ

ಏವಂ ಪೃಷ್ಟಸ್ತದಾ ತೇನ ರುರೋದೋಚ್ಚೈಃ ಪುನಃ ಪುನಃ ।
ಅಶಕ್ತೋ ವಚನೋಚ್ಚಾರೇ ಸಂಜ್ಞಾಮಾತ್ರಂ ಚಕಾರ ಹ ॥ ೨೫ ॥

ತತೋಽಞ್ಜಲೌ ಜಲಂ ಕೃತ್ವಾ ಗೋಕರ್ಣಸ್ತಮುದೈರಯತ್ ।
ತತ್ಸೇಕಹತಪಾಪೋಽಸೌ ಪ್ರವಕ್ತುಮುಪಚಕ್ರಮೇ ॥ ೨೬ ॥

ಪ್ರೇತ ಉವಾಚ

ಅಹಂ ಭ್ರಾತಾ ತ್ವದೀಯೋಽಸ್ಮಿ ಧುಂಧುಕಾರೀತಿ ನಾಮತಃ ।
ಸ್ವಕೀಯೇನೈವ ದೋಷೇಣ ಬ್ರಹ್ಮತ್ವಂ ನಾಶಿತಂ ಮಯಾ ॥ ೨೭ ॥

ಕರ್ಮಣೋ ನಾಸ್ತಿ ಸಂಖ್ಯಾ ಮೇ ಮಹಾಜ್ಞಾನೇ ವಿವರ್ತಿನಃ ।
ಲೋಕಾನಾಂ ಹಿಂಸಕಃ ಸೋಽಹಂ ಸ್ತ್ರೀಭಿರ್ದುಃಖೇನ ಮಾರಿತಃ ॥ ೨೮ ॥

ಅತಃ ಪ್ರೇತತ್ವಮಾಪನ್ನೋ ದುರ್ದಶಾಂ ಚ ವಹಾಮ್ಯಹಮ್ ।
ವಾತಾಹಾರೇಣ ಜೀವಾಮಿ ದೈವಾಧೀನಫಲೋದಯಾತ್ ॥ ೨೯ ॥

ಅಹೋ ಬಂಧೋ ಕೃಪಾಸಿಂಧೋ ಭ್ರಾತರ್ಮಾಮಾಶು ಮೋಚಯ ।
ಗೋಕರ್ಣೋ ವಚನಂ ಶ್ರುತ್ವಾ ತಸ್ಮೈ ವಾಕ್ಯಮಥಾಬ್ರವೀತ್ ॥ ೩೦ ॥

ಗೋಕರ್ಣ ಉವಾಚ

ತ್ವದರ್ಥಂ ತು ಗಯಾಪಿಂಡೋ ಮಯಾ ದತ್ತೋ ವಿಧಾನತಃ ।
ತತ್ಕಥಂ ನೈವ ಮುಕ್ತೋಽಸಿ ಮಮಾಶ್ಚರ್ಯಮಿದಂ ಮಹತ್ ॥ ೩೧ ॥

ಗಯಾಶ್ರಾದ್ಧಾನ್ನ ಮುಕ್ತಿಶ್ಚೇದುಪಾಯೋ ನಾಪರಸ್ತ್ವಿಹ ।
ಕಿಂ ವಿಧೇಯಂ ಮಯಾ ಪ್ರೇತ ತತ್ತ್ವಂ ವದ ಸವಿಸ್ತರಮ್ ॥ ೩೨ ॥

ಪ್ರೇತ ಉವಾಚ

ಗಯಾಶ್ರಾದ್ಧಶತೇನಾಪಿ ಮುಕ್ತಿರ್ಮೇ ನ ಭವಿಷ್ಯತಿ ।
ಉಪಾಯಮಪರಂ ಕಂಚಿತ್ತ್ವಂ ವಿಚಾರಯ ಸಾಂಪ್ರತಮ್ ॥ ೩೩ ॥

ಇತಿ ತದ್ವಾಕ್ಯಮಾಕರ್ಣ್ಯ ಗೋಕರ್ಣೋ ವಿಸ್ಮಯಂ ಗತಃ ।
ಶತಶ್ರಾದ್ಧೈರ್ನ ಮುಕ್ತಿಶ್ಚೇದಸಾಧ್ಯಂ ಮೋಚನಂ ತವ ॥ ೩೪ ॥

ಇದಾನೀಂ ತು ನಿಜಂ ಸ್ಥಾನಮಾತಿಷ್ಠ ಪ್ರೇತ ನಿರ್ಭಯಃ ।
ತ್ವನ್ಮುಕ್ತಿಸಾಧಕಂ ಕಿಂಚಿದಾಚರಿಷ್ಯೇ ವಿಚಾರ್ಯ ಚ ॥ ೩೫ ॥

ಧುಂಧುಕಾರೀ ನಿಜಸ್ಥಾನಂ ತೇನಾದಿಷ್ಟಸ್ತತೋ ಗತಃ ।
ಗೋಕರ್ಣಶ್ಚಿಂತಯಾಮಾಸ ತಾಂ ರಾತ್ರಿಂ ನ ತದಧ್ಯಗಾತ್ ॥ ೩೬ ॥

ಸೂತರು ಹೇಳುತ್ತಾರೆ – ಗೋಕರ್ಣನು ಹೀಗೆ ಕೇಳಲಾಗಿ ಅವನು ಪದೇ-ಪದೇ ಜೋರಾಗಿ ಅಳತೊಡಗಿದನು. ಅವನಲ್ಲಿ ಮಾತನಾಡಲೂ ಶಕ್ತಿ ಇರಲಿಲ್ಲ. ಅದಕ್ಕಾಗಿ ಅವನು ಕೇವಲ ಸಂಕೇತಮಾತ್ರ ಮಾಡಿದನು. ॥ ೨೫ ॥ ಆಗ ಗೋಕರ್ಣನು ಬೊಗಸೆಯಲ್ಲಿ ನೀರು ತುಂಬಿ ಅದನ್ನು ಅಭಿಮಂತ್ರಿಸಿ ಅವನ ಮೇಲೆ ಪ್ರೋಕ್ಷಿಸಿದನು. ಇದರಿಂದ ಅವನ ಪಾಪಗಳು ಸ್ವಲ್ಪ ಕಮ್ಮಿಯಾಗಿ ಅವನು ಈ ರೀತಿ ಹೇಳತೊಡಗಿದನು. ॥ ೨೬ ॥

ಪ್ರೇತವೆಂದಿತು - ನಾನು ನಿನ್ನ ಸಹೋದರನಾಗಿರುವೆನು. ಧುಂಧುಕಾರಿ ಎಂದು ನನ್ನ ಹೆಸರು. ನಾನು ನನ್ನದೇ ದೋಷಗಳಿಂದ ನನ್ನ ಬ್ರಾಹ್ಮಣತ್ವವನ್ನು ನಾಶಮಾಡಿಕೊಂಡೆ. ॥ ೨೭ ॥ ನನ್ನ ಕುಕರ್ಮಗಳು ಎಣಿಸಲಾರದಷ್ಟಿವೆ. ನಾನಾದರೋ ಮಹಾನ್ ಅಜ್ಞಾನದಲ್ಲಿ ತೊಳಲಾಡುತ್ತಿದ್ದೆ. ಇದರಿಂದ ನಾನು ಜನರನ್ನು ತುಂಬಾ ಹಿಂಸಿಸಿದೆ. ಕೊನೆಗೆ ಕುಲಟೆಯರಾದ ಸ್ತ್ರೀಯರು ನನ್ನನ್ನು ನರಳಾಡಿಸಿ ಕೊಂದುಬಿಟ್ಟರು. ॥ ೨೮ ॥ ಇದರಿಂದ ಈಗ ಪ್ರೇತಯೋನಿ ಪಡೆದು ಈ ದುರ್ದಶೆಯನ್ನು ಅನುಭವಿಸುತ್ತಿದ್ದೇನೆ. ಈಗ ದೈವವಶಾತ್ ಕರ್ಮಫಲವು ಉದಯಿಸಿದ್ದರಿಂದ ನಾನು ಕೇವಲ ಗಾಳಿಯನ್ನು ಕುಡಿಯುತ್ತಾ ಬದುಕಿದ್ದೇನೆ. ॥ ೨೯ ॥ ಅಯ್ಯಾ ತಮ್ಮನೇ ! ನೀನು ದಯಾಸಮುದ್ರನಾಗಿರುವಿ. ಈಗ ಹೇಗಾದರೂ ಬೇಗನೇ ನನ್ನನ್ನು ಈ ಪ್ರೇತಯೋನಿಯಿಂದ ಬಿಡಿಸು. ಗೋಕರ್ಣನು ಧುಂಧುಕಾರಿಯ ಎಲ್ಲ ಮಾತುಗಳನ್ನು ಕೇಳಿ ಅವನಲ್ಲಿ ಹೇಳಿದನು. ॥ ೩೦ ॥

ಗೋಕರ್ಣನೆಂದನು - ಸಹೋದರಾ ! ನಾನು ನಿನಗಾಗಿ ವಿಧಿಪೂರ್ವಕ ಗಯೆಯಲ್ಲಿ ಪಿಂಡದಾನ ಮಾಡಿದೆ. ಆದರೂ ನೀನು ಪ್ರೇತಯೋನಿಯಿಂದ ಮುಕ್ತನಾಗಲಿಲ್ಲ ಏಕೆ ಎಂಬುದು ನನಗೆ ಆಶ್ಚರ್ಯವಾಗುತ್ತಿದೆ. ॥ ೩೧ ॥ ಗಯಾ ಶ್ರಾದ್ಧದಿಂದಲೂ ನಿನ್ನ ಮುಕ್ತಿಯಾಗದಿದ್ದಾಗ ಇದಕ್ಕೆ ಬೇರೆ ಯಾವ ಉಪಾಯವೂ ಇಲ್ಲ. ಸರಿ, ನೀನು ಎಲ್ಲ ಮಾತನ್ನು ಬಿಚ್ಚಿಹೇಳು. ಈಗ ನಾನು ಏನು ಮಾಡಬೇಕು. ? ॥ ೩೨ ॥

ಪ್ರೇತವೆಂದಿತು - ನೂರಾರು ಗಯಾ ಶ್ರಾದ್ಧಗಳನ್ನು ಮಾಡಿದರೂ ನನ್ನ ಮುಕ್ತಿಯು ಆಗಲಾರದು. ಈಗಾದರೋ ನೀನು ಇದಕ್ಕಾಗಿ ಬೇರೆ ಯಾವುದಾದರೂ ಉಪಾಯವನ್ನು ಯೋಚಿಸು. ॥ ೩೩ ॥

ಪ್ರೇತದ ಈ ಮಾತನ್ನು ಕೇಳಿ ಗೋಕರ್ಣನಿಗೆ ಬಹಳ ಆಶ್ಚರ್ಯವಾಯಿತು. ಅವನೆಂದನು ನೂರಾರು ಗಯಾ ಶ್ರಾದ್ಧಗಳಿಂದಲೂ ನಿನ್ನ ಮುಕ್ತಿಯು ಆಗದಿದ್ದರೆ, ನಿನ್ನ ಮುಕ್ತಿಯು ಅಸಂಭವವೆಂದೇ ತೋರುತ್ತದೆ. ॥ ೩೪ ॥ ಇರಲಿ, ಈಗ ನೀನು ನಿರ್ಭಯನಾಗಿ ತನ್ನ ಸ್ಥಾನದಲ್ಲಿ ಇರು. ನಾನು ವಿಚಾರಗೈದು ನಿನ್ನ ಮುಕ್ತಿಗಾಗಿ ಯಾವುದಾದರೂ ಬೇರೆ ಉಪಾಯ ಮಾಡುವೆನು. ॥ ೩೫ ॥

ಗೋಕರ್ಣನ ಅಪ್ಪಣೆ ಪಡೆದು ಧುಂಧುಕಾರಿಯು ಅಲ್ಲಿಂದ ಹೊರಟು ತನ್ನ ಸ್ಥಾನಕ್ಕೆ ಹೋದನು. ಇತ್ತ ಗೋಕರ್ಣನು ರಾತ್ರಿಯಿಡೀ ವಿಚಾರ ಮಾಡಿದರೂ ಅವನಿಗೆ ಯಾವ ಉಪಾಯವೂ ಹೊಳೆಯಲಿಲ್ಲ. ॥ ೩೬ ॥ ಬೆಳಿಗ್ಗೆ ಅವನು ಬಂದಿರುವುದನ್ನು

ಪ್ರಾತಸ್ತಮಾಗತಂ ದೃಷ್ಟ್ವಾ ಲೋಕಾಃ ಪ್ರೀತ್ಯಾ ಸಮಾಗತಾಃ ।
ತತ್ಸರ್ವಂ ಕಥಿತಂ ತೇನ ಯಜ್ಜಾತಂ ಚ ಯಥಾ ನಿಶಿ
॥ ೬೭ ॥

ವಿದ್ವಾಂಸೋ ಯೋಗನಿಷ್ಠಾಶ್ಚ ಜ್ಞಾನಿನೋ ಬ್ರಹ್ಮವಾದಿನಃ ।
ತನ್ಮುಕ್ತಿಂ ನೈವ ತೇಽಪಶ್ಯನ್ ಪಶ್ಯಂತಃ ಶಾಸ್ತ್ರಸಂಚಯಾನ್
॥ ೬೮ ॥

ತತಃ ಸರ್ವೈಃ ಸೂರ್ಯವಾಕ್ಯಂ ತನ್ಮುಕ್ತೌ ಸ್ಥಾಪಿತಂ ಪರಮ್ ।
ಗೋಕರ್ಣಃ ಸ್ತಂಭನಂ ಚಕ್ರೇ ಸೂರ್ಯವೇಗಸ್ಯ ವೈ ತದಾ
॥ ೬೯ ॥

ತುಭ್ಯಂ ನಮೋ ಜಗತ್ಸಾಕ್ಷಿನ್ ಬ್ರೂಹಿ ಮೇ ಮುಕ್ತಿಹೇತುಕಮ್ ।
ತಚ್ಛ್ರುತ್ವಾ ದೂರತಃ ಸೂರ್ಯಃ ಸ್ಫುಟಮಿತ್ಯಭ್ಯಭಾಷತ
॥ ೭೦ ॥

ಶ್ರೀಮದ್ಭಾಗವತಾನ್ಮುಕ್ತಿಃ ಸಪ್ತಾಹಂ ವಾಚನಂ ಕುರು ।
ಇತಿ ಸೂರ್ಯವಚಃ ಸರ್ವೈರ್ಧರ್ಮರೂಪಂ ತು ವಿಶ್ರುತಮ್
॥ ೭೧ ॥

ಸರ್ವೇಽಬ್ರುವನ್ ಪ್ರಯತ್ನೇನ ಕರ್ತವ್ಯಂ ಸುಕರಂ ತ್ವಿದಮ್ ।
ಗೋಕರ್ಣೋ ನಿಶ್ಚಯಂ ಕೃತ್ವಾ ವಾಚನಾರ್ಥಂ ಪ್ರವರ್ತಿತಃ
॥ ೭೨ ॥

ತತ್ರ ಸಂಶ್ರವಣಾರ್ಥಾಯ ದೇಶಗ್ರಾಮಾಜ್ಜನಾ ಯಯುಃ ।
ಪಂಗ್ವಂಧವೃದ್ಧಮಂದಾಶ್ಚ ತೇಽಪಿ ಪಾಪಕ್ಷಯಾಯ ವೈ
॥ ೭೩ ॥

ಸಮಾಜಸ್ತು ಮಹಾಂಜಾತೋ ದೇವವಿಸ್ಮಯಕಾರಕಃ ।
ಯದೈವಾಸನಮಾಸ್ಥಾಯ ಗೋಕರ್ಣೋಽಕಥಯತ್ಕಥಾಮ್
॥ ೭೪ ॥

ಸ ಪ್ರೇತೋಽಪಿ ತದಾಯಾತಃ ಸ್ಥಾನಂ ಪಶ್ಯನ್ನಿತಸ್ತತಃ ।
ಸಪ್ತಗ್ರಂಥಿಯುತಂ ತತ್ರಾಪಶ್ಯತ್ಕೀಚಕಮುಚ್ಛ್ರಿತಮ್
॥ ೭೫ ॥

ತನ್ಮೂಲಚ್ಛಿದ್ರಮಾವಿಶ್ಯ ಶ್ರವಣಾರ್ಥಂ ಸ್ಥಿತೋ ಹ್ಯಸೌ ।
ವಾತರೂಪೀ ಸ್ಥಿತಿಂ ಕರ್ತುಮಶಕ್ತೋ ವಂಶಮಾವಿಶತ್
॥ ೭೬ ॥

ವೈಷ್ಣವಂ ಬ್ರಾಹ್ಮಣಂ ಮುಖ್ಯಂ ಶ್ರೋತಾರಂ ಪರಿಕಲ್ಪ್ಯ ಸಃ ।
ಪ್ರಥಮಸ್ಕಂಧತಃ ಸ್ಪಷ್ಟಮಾಖ್ಯಾನಂ ಧೇನುಜೋಽಕರೋತ್
॥ ೭೭ ॥

ದಿನಾಂತೇ ರಕ್ಷಿತಾ ಗಾಥಾ ತದಾ ಚಿತ್ರಂ ಬಭೂವ ಹ ।
ವಂಶೈಕಗ್ರಂಥಿಭೇದೋಽಭೂತ್ಸಶಬ್ದಂ ಪಶ್ಯತಾಂ ಸತಾಮ್
॥ ೭೮ ॥

ದ್ವಿತೀಯೇಽಹ್ನಿ ತಥಾ ಸಾಯಂ ದ್ವಿತೀಯಗ್ರಂಥಿಭೇದನಮ್ ।
ತೃತೀಯೇಽಹ್ನಿ ತಥಾ ಸಾಯಂ ತೃತೀಯಗ್ರಂಥಿಭೇದನಮ್
॥ ೭೯ ॥

ನೋಡಿ ಜನರು ಪ್ರೇಮದಿಂದ ಅವನನ್ನು ಭೆಟ್ಟಿಯಾಗಲು ಬಂದರು. ಆಗ ಗೋಕರ್ಣನು ರಾತ್ರಿಯಲ್ಲಿ ನಡೆದುದೆಲ್ಲವನ್ನು ಅವರಿಗೆ ತಿಳಿಸಿದನು. ॥ ೬೭ ॥ ಅವರಲ್ಲಿದ್ದ ವಿದ್ವಾಂಸರೂ, ಯೋಗನಿಷ್ಠರೂ, ಜ್ಞಾನಿಗಳೂ, ವೇದಜ್ಞರೂ ಹೀಗೆ ಎಲ್ಲರೂ ಅನೇಕ ಶಾಸ್ತ್ರಗಳನ್ನು ತಿರುವಿಹಾಕಿದರು. ಆದರೂ ಅವನ ಮುಕ್ತಿಯ ಉಪಾಯವನ್ನು ತಿಳಿಯಲಿಲ್ಲ. ॥ ೬೮ ॥ ಕೊನೆಗೆ ಈ ವಿಷಯದಲ್ಲಿ ಭಗವಾನ್ ಭಾಸ್ಕರನು ಏನು ಅಪ್ಪಣೆ ಕೊಡುವನೋ ಅದನ್ನೇ ಮಾಡುವುದೆಂದು ಎಲ್ಲರೂ ನಿಶ್ಚಯಿಸಿದರು. ಗೋಕರ್ಣನು ತನ್ನ ತಪೋಬಲದಿಂದ ಸೂರ್ಯನ ಗತಿಯನ್ನು ತಡೆಹಿಡಿದನು. ॥ ೬೯ ॥ ಅವನು ಸ್ತುತಿಸಿದನು - 'ಭಗವಂತಾ! ನೀನು ಜಗತ್ಸಾಕ್ಷಿಯಾಗಿರುವೆ. ನಾನು ನಿನಗೆ ನಮಸ್ಕರಿಸುತ್ತೇನೆ. ನೀನು ದಯಮಾಡಿ ಧುಂಧುಕಾರಿಯ ಮುಕ್ತಿಯ ಸಾಧನವನ್ನು ನನಗೆ ತಿಳಿಸು.' ಗೋಕರ್ಣನ ಈ ಪ್ರಾರ್ಥನೆಯನ್ನು ಕೇಳಿ ಸೂರ್ಯನಾರಾಯಣನು ದೂರದಿಂದಲೇ ಸ್ಪಷ್ಟವಾಗಿ ಹೇಳಿದನು – 'ಶ್ರೀಮದ್ಭಾಗವತದಿಂದ ಮುಕ್ತಿಯಾಗಬಲ್ಲದು. ಆದ್ದರಿಂದ ನೀನು ಅದನ್ನು ಸಪ್ತಾಹ ವಿಧಿಯಿಂದ ಪಾರಾಯಣ ಮಾಡು' ಸೂರ್ಯನ ಈ ಧರ್ಮಮಯ ವಚನವನ್ನು ಅಲ್ಲಿ ನೆರೆದವರೆಲ್ಲರೂ ಕೇಳಿದರು. ॥ ೭೦-೭೧ ॥ ಆಗ ಎಲ್ಲರೂ 'ಈ ಸಾಧನವು ತುಂಬಾ ಸರಳವಾಗಿದೆ. ಇದನ್ನು ಪ್ರಯತ್ನಪೂರ್ವಕ ಮಾಡು' ಎಂದು ಹೇಳಿದರು. ಆದ್ದರಿಂದ ಗೋಕರ್ಣನೂ ಹಾಗೆಯೇ ನಿಶ್ಚಯಿಸಿ ಕಥೆಯನ್ನು ಹೇಳಲು ಸಿದ್ಧನಾದನು. ॥ ೭೨ ॥

ಅನೇಕ ಊರುಗಳಿಂದ, ಗ್ರಾಮಗಳಿಂದ ಅನೇಕ ಜನರು ಕಥೆ ಕೇಳಲು ಆಗಮಿಸಿದರು. ಬಹಳಷ್ಟು ಕುಂಟರೂ, ಕುರುಡರೂ, ಮುದುಕರೂ, ಮಂದಬುದ್ಧಿಯುವರೂ ಹೀಗೆ ತಮ್ಮ ಪಾಪಗಳನ್ನು ಕಳೆದುಕೊಳ್ಳುವ ಉದ್ದೇಶದಿಂದ ಅಲ್ಲಿ ಬಂದು ಸೇರಿದರು. ॥ ೭೩ ॥ ಹೀಗೆ ಅಲ್ಲಿ ನೆರೆದ ಜನಸಮುದಾಯವನ್ನು ನೋಡಿ ದೇವತೆಗಳಿಗೂ ಆಶ್ಚರ್ಯವಾಯಿತು. ಗೋಕರ್ಣನು ವ್ಯಾಸಪೀಠದಲ್ಲಿ (ವೇದಿಕೆಯಲ್ಲಿ) ಕುಳಿತು ಕಥೆ ಹೇಳಲು ತೊಡಗಿದಾಗ ಧುಂಧುಕಾರಿಯ ಪ್ರೇತವು ಅಲ್ಲಿಗೆ ಬಂದು ಕುಳಿತುಕೊಳ್ಳಲು ಅಲ್ಲಿ-ಇಲ್ಲಿ ಜಾಗ ಹುಡುಕತೊಡಗಿತು. ಅಷ್ಟರಲ್ಲಿ ಏಳು ಗಂಟುಗಳಿದ್ದ ಒಂದು ನೇರವಾದ ಬಿದಿರಿನ ಮೇಲೆ ಅದರ ದೃಷ್ಟಿ ಬಿತ್ತು. ॥ ೭೪-೭೫ ॥ ಅದರ ಕೆಳಗಿನ ರಂಧ್ರದಲ್ಲಿ ಹೊಕ್ಕು ಅದು ಕಥೆ ಕೇಳಲು ಕುಳಿತುಕೊಂಡಿತು. ವಾಯುರೂಪದಿಂದ ಇದ್ದ ಕಾರಣ ಅದಕ್ಕೆ ಹೊರಗೆಲ್ಲೂ ಕುಳಿತುಕೊಳ್ಳಲಾರದೆ, ಬಿದಿರಿನಲ್ಲಿ ಹೊಕ್ಕಿತು. ॥ ೭೬ ॥

ಗೋಕರ್ಣನು ಒಬ್ಬ ವೈಷ್ಣವ ಬ್ರಾಹ್ಮಣನನ್ನು ಮುಖ್ಯ ಶ್ರೋತೃವಾಗಿ, ಪ್ರಥಮಸ್ಕಂಧದಿಂದಲೇ ಸ್ಪಷ್ಟವಾಗಿ, ಮಧುರ ಸ್ವರದಿಂದ ಕಥೆ ಹೇಳಲು ಪ್ರಾರಂಭಿಸಿದನು. ॥ ೭೭ ॥ ಸಾಯಂಕಾಲ ಅಂದಿನ ಕಥೆಯನ್ನು ಮುಗಿಸಿದಾಗ ಒಂದು ವಿಚಿತ್ರವಾದ ಸಂಗತಿ ನಡೆಯಿತು. ಅಲ್ಲಿ ಸಭಿಕರು ನೋಡು-ನೋಡುತ್ತಿರುವಂತೆ ಆ ಬಿದಿರಿನ ಒಂದು ಗಂಟು ಫಟಾರೆಂದು ಶಬ್ದಮಾಡುತ್ತಾ ಒಡೆದು ಹೋಯಿತು. ॥ ೭೮ ॥ ಹೀಗೆಯೇ ಎರಡನೆ ದಿನ ಸಂಜೆ ಎರಡನೆಯ ಗಂಟು, ಮೂರನೆಯ ದಿನ ಮೂರನೆಯ ಗಂಟು ಒಡೆದು ಹೋಯಿತು. ॥ ೭೯ ॥

ಏವಂ ಸಪ್ತದಿನೈಶ್ಚೈವ ಸಪ್ತಗ್ರಂಥಿವಿಭೇದನಮ್ ।
ಕೃತ್ವಾ ಸ ದ್ವಾದಶಸ್ಕಂಧ ಶ್ರವಣಾತ್ಪ್ರೇತತಾಂ ಜಹೌ ॥ ೫೦ ॥

ದಿವ್ಯರೂಪಧರೋ ಜಾತಸ್ತುಲಸೀದಾಮಮಂಡಿತಃ ।
ಪೀತವಾಸಾ ಘನಶ್ಯಾಮೋ ಮುಕುಟೀ ಕುಂಡಲಾನ್ವಿತಃ ॥ ೫೧ ॥

ನನಾಮ ಭ್ರಾತರಂ ಸದ್ಯೋ ಗೋಕರ್ಣಮಿತಿ ಚಾಬ್ರವೀತ್ ।
ತ್ವಯಾಹಂ ಮೋಚಿತೋ ಬಂಧೋ ಕೃಪಯಾ ಪ್ರೇತಕಶ್ಮಲಾತ್ ॥ ೫೨ ॥

ಧನ್ಯಾ ಭಾಗವತೀ ವಾರ್ತಾ ಪ್ರೇತಪೀಡಾವಿನಾಶಿನೀ ।
ಸಪ್ತಾಹೋಽಪಿ ತಥಾ ಧನ್ಯಃ ಕೃಷ್ಣಲೋಕಫಲಪ್ರದಃ ॥ ೫೩ ॥

ಕಂಪಂತೇ ಸರ್ವಪಾಪಾನಿ ಸಪ್ತಾಹಶ್ರವಣೇ ಸ್ಥಿತೇ ।
ಅಸ್ಮಾಕಂ ಪ್ರಲಯಂ ಸದ್ಯಃ ಕಥಾ ಚೇಯಂ ಕರಿಷ್ಯತಿ ॥ ೫೪ ॥

ಆರ್ದ್ರಂ ಶುಷ್ಕಂ ಲಘು ಸ್ಥೂಲಂ ವಾಙ್ಮನಃಕರ್ಮಭಿಃ ಕೃತಮ್ ।
ಶ್ರವಣಂ ವಿದಹೇತ್ಪಾಪಂ ಪಾವಕಃ ಸಮಿಧೋ ಯಥಾ ॥ ೫೫ ॥

ಅಸ್ಮಿನ್ವೈ ಭಾರತೇ ವರ್ಷೇ ಸೂರಿಭಿರ್ದೇವಸಂಸದಿ ।
ಅಕಥಾಶ್ರಾವಿಣಾಂ ಪುಂಸಾಂ ನಿಷ್ಫಲಂ ಜನ್ಮ ಕೀರ್ತಿತಮ್ ॥ ೫೬ ॥

ಕಿಂ ಮೋಹತೋ ರಕ್ಷಿತೇನ ಸುಪುಷ್ಟೇನ ಬಲೀಯಸಾ ।
ಅಧ್ರುವೇಣ ಶರೀರೇಣ ಶುಕಶಾಸ್ತ್ರಕಥಾಂ ವಿನಾ ॥ ೫೭ ॥

ಅಸ್ಥಿಸ್ತಂಭಂ ಸ್ನಾಯುಬದ್ಧಂ ಮಾಂಸಶೋಣಿತಲೇಪಿತಮ್ ।
ಚರ್ಮಾವನದ್ಧಂ ದುರ್ಗಂಧಂ ಪಾತ್ರಂ ಮೂತ್ರಪುರೀಷಯೋಃ ॥ ೫೮ ॥

ಜರಾಶೋಕವಿಪಾಕಾರ್ತಂ ರೋಗಮಂದಿರಮಾತುರಮ್ ।
ದುಷ್ಪೂರಂ ದುರ್ಧರಂ ದುಷ್ಟಂ ಸದೋಷಂ ಕ್ಷಣಭಂಗುರಮ್ ॥ ೫೯ ॥

ಕೃಮಿವಿಡ್ಭಸ್ಮಸಂಜ್ಞಾಂತಂ ಶರೀರಮಿತಿ ವರ್ಣಿತಮ್ ।
ಅಸ್ಥಿರೇಣ ಸ್ಥಿರಂ ಕರ್ಮ ಕುತೋಽಯಂ ಸಾಧಯೇನ್ನ ಹಿ ॥ ೬೦ ॥

ಯತ್ಪ್ರಾತಃ ಸಂಸ್ಕೃತಂ ಚಾನ್ನಂ ಸಾಯಂ ತಚ್ಚ ವಿನಶ್ಯತಿ ।
ತದೀಯರಸಸಂಪುಷ್ಟೇ ಕಾಯೇ ಕಾ ನಾಮ ನಿತ್ಯತಾ ॥ ೬೧ ॥

ಈ ವಿಧವಾಗಿ ಏಳು ದಿನಗಳಲ್ಲಿ ಏಳೂ ಗಂಟುಗಳು ಒಡೆದು ಧುಂಧುಕಾರಿಯು ಹನ್ನೆರಡೂ ಸ್ಕಂಧಗಳನ್ನು ಕೇಳಿದ್ದರಿಂದ ಪವಿತ್ರನಾಗಿ, ಪ್ರೇತಯೋನಿಯಿಂದ ಮುಕ್ತನಾಗಿ, ದಿವ್ಯ ರೂಪವನ್ನು ಧರಿಸಿ ಎಲ್ಲರೆದುರಿಗೆ ಪ್ರಕಟನಾದನು. ಅವನ ಶರೀರವು ಮೇಘದಂತೆ ಶ್ಯಾಮಲವಾಗಿದ್ದು, ಪೀತಾಂಬರ, ತುಳಸೀಮಾಲೆಗಳಿಂದ ಸುಶೋಭಿತವಾಗಿತ್ತು. ತಲೆಯ ಮೇಲೆ ಮನೋಹರವಾದ ಕಿರೀಟವಿದ್ದು, ಕಿವಿಗಳಲ್ಲಿ ಕಮನೀಯ ಕುಂಡಲಗಳು ಓಲಾಡುತ್ತಿದ್ದವು. ॥ ೫೦-೫೧ ॥ ಅವನು ಕೂಡಲೇ ಸಹೋದರ ಗೋಕರ್ಣನಿಗೆ ವಂದಿಸಿ ಹೇಳಿದನು- ಸೋದರಾ! ನೀನು ಕೃಪೆಗೈದು ನನ್ನನ್ನು ಪ್ರೇತ ಯೋನಿಯ ದುಃಖದಿಂದ ಬಿಡಿಸಿದೆ. ॥ ೫೨ ॥ ಈ ಪ್ರೇತಪೀಡೆಯನ್ನು ನಾಶಗೊಳಿಸುವಂತಹ ಶ್ರೀಮದ್ಭಾಗವತ ಕಥೆಯು ಧನ್ಯವಾಗಿದೆ. ಶ್ರೀಕೃಷ್ಣಚಂದ್ರನ ಧಾಮವನ್ನು ದೊರಕಿಸುವಂತಹ ಇದರ ಸಪ್ತಾಹ ಪಾರಾಯಣವೂ ಧನ್ಯವಾಗಿದೆ. ॥ ೫೩ ॥ ಸಪ್ತಾಹ ಶ್ರವಣದ ಯೋಗವು ಒದಗಿದಾಗ ಎಲ್ಲ ಪಾಪಗಳು ನಡುಗಿ ಈಗ ಈ ಭಾಗವತದ ಕಥೆಯು ಬೇಗನೇ ನಮ್ಮನ್ನು ಮುಗಿಸಿಬಿಟ್ಟೀತು ಎಂದು ಹೆದರಿ ಓಡಿ ಹೋಗುವವು. ॥ ೫೪ ॥ ಬೆಂಕಿಯು ಒಣಗಿದ-ಹಸಿ, ದೊಡ್ಡ-ಸಣ್ಣ ಎಲ್ಲ ರೀತಿಯ ಕಟ್ಟಿಗೆಗಳನ್ನು ಸುಟ್ಟುಬಿಡುವಂತೆ ಈ ಸಪ್ತಾಹ ಶ್ರವಣವು ಮನ, ವಚನ, ಕರ್ಮಗಳ ಮೂಲಕ ಮಾಡಿದ ಎಲ್ಲ ಪ್ರಕಾರದ ಸಣ್ಣ-ದೊಡ್ಡ ಪಾಪಗಳನ್ನು ಭಸ್ಮವಾಗಿಸಿ ಬಿಡುತ್ತದೆ. ॥ ೫೫ ॥

ದೇವತೆಗಳ ಸಭೆಯಲ್ಲಿ ವಿದ್ವಾಂಸರು ಹೇಳುತ್ತಾರೆ - ಈ ಭಾರತವರ್ಷದಲ್ಲಿ ಶ್ರೀಮದ್ಭಾಗವತದ ಕಥೆಯನ್ನು ಕೇಳದವನ ಜನ್ಮವು ವ್ಯರ್ಥವೇ ಆಗಿದೆ. ॥ ೫೬ ॥ ಮೋಹದಿಂದ ಸಾಕಿ-ಸಲಹಿ ಈ ಅನಿತ್ಯ ಶರೀರವನ್ನು ಹೃಷ್ಟ-ಪುಷ್ಟ ಬಲಿಷ್ಠವಾಗಿಸಿಕೊಂಡರೂ ಶ್ರೀಮದ್ಭಾಗವತದ ಕಥೆ ಕೇಳದಿದ್ದರೆ ಏನು ಲಾಭವಾದಂತಾಯಿತು? ॥ ೫೭ ॥ ಅಸ್ಥಿಗಳೇ ಈ ಶರೀರದ ಆಧಾರ ಸ್ತಂಭಗಳು. ನರಗಳಿಂದ ಬಿಗಿದು, ಇದರ ಮೇಲೆ ರಕ್ತ-ಮಾಂಸವನ್ನು ಮೆತ್ತಿ, ಚರ್ಮದಿಂದ ಮುಚ್ಚಲಾಗಿದೆ. ಇದರ ಪ್ರತಿಯೊಂದು ಅವಯವದಿಂದಲೂ ದುರ್ಗಂಧ ಬರುತ್ತದೆ. ಏಕೆಂದರೆ, ಇದಾದರೋ ಮಲ-ಮೂತ್ರದ ಭಂಡಾರವೇ ಆಗಿದೆ. ॥ ೫೮ ॥ ವೃದ್ಧಾವಸ್ಥೆ ಮತ್ತು ಶೋಕದ ಕಾರಣ ಪರಿಣಾಮದಲ್ಲಿ ಇದು ದುಃಖಮಯವೇ ಆಗಿದೆ. ರೋಗಗಳ ಆಗರವಾಗಿದೆ. ಇದು ಯಾವಾಗಲೂ ಒಂದಲ್ಲ-ಒಂದು ಕಾಮನೆಯಿಂದ ಪೀಡಿತವಾಗಿರುತ್ತದೆ. ಎಂದೂ ಇದರ ತೃಪ್ತಿಯಾಗುವುದಿಲ್ಲ. ಇದನ್ನು ಧರಿಸಿಕೊಂಡಿರುವುದೂ ಒಂದು ಭಾರವೆ. ಕ್ಷಣಭಂಗುರವಾದ ಇದರ ರೋಮ-ರೋಮಗಳಲ್ಲಿ ದೋಷಗಳೇ ತುಂಬಿವೆ. ॥ ೫೯ ॥ ಕೊನೆಗೆ ಇಟ್ಟರೆ ಹುಳಗಳ ರಾಶಿ, ಸುಟ್ಟರೆ ಎರಡು ಹಿಡಿ ಬೂದಿ, ಪ್ರಾಣಿಗಳು ತಿಂದರೆ ಲದ್ದಿಯಾಗಿ ಹೋಗುವ ಇದರ ಮೂರೇಗತಿಯನ್ನು ಹೇಳುವರು. ಇಂತಹ ಅಸ್ಥಿರ ಶರೀರದಿಂದ ಮನುಷ್ಯನು ಅವಿನಾಶಿಯಾದ ಫಲವನ್ನು ಕೊಡುವ ಕೆಲಸವನ್ನು ಏಕೆ ಸಾಧಿಸಿಕೊಳ್ಳುವುದಿಲ್ಲ? ॥ ೬೦ ॥ ಬೆಳಿಗ್ಗೆ ಬೇಯಿಸಿದ ಅನ್ನವು ಸಂಜೆಗೆ ಕೆಟ್ಟು ಹೋಗುತ್ತದೆ. ಮತ್ತೆ ಅದೇ ರಸದಿಂದ ಪುಷ್ಟವಾದ ಶರೀರದ ನಿತ್ಯತೆ ಎಲ್ಲಿದೆ? ॥ ೬೧ ॥

ಸಪ್ತಾಹಶ್ರವಣಾಲ್ಲೋಕೇ ಪ್ರಾಪ್ಯತೇ ನಿಕಟೇ ಹರಿಃ ।
ಅತೋ ದೋಷನಿವೃತ್ತ್ಯರ್ಥಮೇತದೇವ ಹಿ ಸಾಧನಮ್ ॥ ೬೨ ॥

ಬುದ್ಬುದಾ ಇವ ತೋಯೇಷು ಮಶಕಾ ಇವ ಜಂತುಷು ।
ಜಾಯಂತೇ ಮರಣಾಯೈವ ಕಥಾಶ್ರವಣವರ್ಜಿತಾಃ ॥ ೬೩ ॥

ಜಡಸ್ಯ ಶುಷ್ಕವಂಶಸ್ಯ ಯತ್ರ ಗ್ರಂಥಿ ವಿಭೇದನಮ್ ।
ಚಿತ್ರಂ ಕಿಮು ತದಾ ಚಿತ್ತಗ್ರಂಥಿಭೇದಃ ಕಥಾಶ್ರವಾತ್ ॥ ೬೪ ॥

ಭಿದ್ಯತೇ ಹೃದಯಗ್ರಂಥಿಶ್ಛಿದ್ಯಂತೇ ಸರ್ವಸಂಶಯಾಃ ।
ಕ್ಷೀಯಂತೇ ಚಾಸ್ಯ ಕರ್ಮಾಣಿ ಸಪ್ತಾಹಶ್ರವಣೇ ಕೃತೇ ॥ ೬೫ ॥

ಸಂಸಾರಕರ್ದಮಾಲೇಪಪ್ರಕ್ಷಾಲನಪಟೀಯಸಿ ।
ಕಥಾತೀರ್ಥೇ ಸ್ಥಿತೇ ಚಿತ್ತೇ ಮುಕ್ತಿರೇವ ಬುಧೈಃ ಸ್ಮೃತಾ ॥ ೬೬ ॥

ಏವಂ ಬ್ರುವತಿ ವೈ ತಸ್ಮಿನ್ವಿಮಾನಮಾಗಮತ್ತದಾ ।
ವೈಕುಂಠವಾಸಿಭಿರ್ಯುಕ್ತಂ ಪ್ರಸ್ಫುರದ್ದೀಪ್ತಿಮಂಡಲಮ್ ॥ ೬೭ ॥

ಸರ್ವೇಷಾಂ ಪಶ್ಯತಾಂ ಭೇಜೇ ವಿಮಾನಂ ಧುಂಧುಲೀಸುತಃ ।
ವಿಮಾನೇ ವೈಷ್ಣವಾನ್ವೀಕ್ಷ್ಯ ಗೋಕರ್ಣೋ ವಾಕ್ಯಮಬ್ರವೀತ್ ॥ ೬೮ ॥

ಗೋಕರ್ಣ ಉವಾಚ

ಅತ್ರೈವ ಬಹವಃ ಸಂತಿ ಶ್ರೋತಾರೋ ಮಮ ನಿರ್ಮಲಾಃ ।
ಆನೀತಾನಿ ವಿಮಾನಾನಿ ನ ತೇಷಾಂ ಯುಗಪತ್ಕುತಃ ॥ ೬೯ ॥

ಶ್ರವಣಂ ಸಮಭಾಗೇನ ಸರ್ವೇಷಾಮಿಹ ದೃಶ್ಯತೇ ।
ಫಲಭೇದಃ ಕುತೋ ಜಾತಃ ಪ್ರಬ್ರುವಂತು ಹರಿಪ್ರಿಯಾಃ ॥ ೭೦ ॥

ಹರಿದಾಸಾ ಊಚುಃ

ಶ್ರವಣಸ್ಯ ವಿಭೇದೇನ ಫಲಭೇದೋಽತ್ರ ಸಂಸ್ಥಿತಃ ।
ಶ್ರವಣಂ ತು ಕೃತಂ ಸರ್ವೈರ್ನ ತಥಾ ಮನನಂ ಕೃತಮ್ ।
ಫಲಭೇದಸ್ತತೋ ಜಾತೋ ಭಜನಾದಪಿ ಮಾನದ ॥ ೭೧ ॥

ಸಪ್ತರಾತ್ರಮುಪೋಷ್ಯೈವ ಪ್ರೇತೇನ ಶ್ರವಣಂ ಕೃತಮ್ ।
ಮನನಾದಿ ತಥಾ ತೇನ ಸ್ಥಿರಚಿತ್ತೇ ಕೃತಂ ಭೃಶಮ್ ॥ ೭೨ ॥

ಅದೃಢಂ ಚ ಹತಂ ಜ್ಞಾನಂ ಪ್ರಮಾದೇನ ಹತಂ ಶ್ರುತಮ್ ।
ಸಂದಿಗ್ಧೋ ಹಿ ಹತೋ ಮಂತ್ರೋ ವ್ಯಗ್ರಚಿತ್ತೋ ಹತೋ ಜಪಃ ॥ ೭೩ ॥

ಈ ಲೋಕದಲ್ಲಿ ಸಪ್ತಾಹ ಶ್ರವಣದಿಂದ ಬೇಗನೇ ಭಗವಂತನ ಪ್ರಾಪ್ತಿಯಾಗುತ್ತದೆ. ಆದ್ದರಿಂದ ಎಲ್ಲ ಪ್ರಕಾರದ ದೋಷಗಳ ನಿವೃತ್ತಿಗಾಗಿ ಏಕಮಾತ್ರ ಸಾಧನ ಇದೇ ಆಗಿದೆ. ॥ ೬೨ ॥ ಭಗವಂತನ ಕಥೆಯಿಂದ ವಂಚಿತರಾದ ಜನರಾದರೋ ನೀರಿನಲ್ಲಿನ ಗುಳ್ಳೆಯಂತೆ, ಜೀವಿಗಳಲ್ಲಿ ಸೊಳ್ಳೆಗಳಂತೆ ಕೇವಲ ಸಾಯಲೆಂದೇ ಹುಟ್ಟುವವರು. ॥ ೬೩ ॥ ಯಾವುದರ ಪ್ರಭಾವದಿಂದ ಜಡವಾದ ಒಣಗಿದ ಬಿದಿರಿನ ಗಂಟುಗಳೇ ಒಡೆದು ಹೋಗುವಾಗ ಈ ಭಾಗವತಕಥೆಯ ಶ್ರವಣದಿಂದ ಚಿತ್ತದ ಗಂಟು ಬಿಚ್ಚಿಹೋಗುವುದು ಯಾವ ದೊಡ್ಡ ಮಾತಾಗಿದೆ? ॥ ೬೪ ॥ ಸಪ್ತಾಹ ಶ್ರವಣದಿಂದ ಮನುಷ್ಯನ ಹೃದಯದ ಗಂಟು ಬಿಚ್ಚಿಬಿಟ್ಟು ಸಮಸ್ತ ಸಂಶಯಗಳು ಛಿನ್ನ-ಭಿನ್ನವಾಗಿ ಹೋಗುತ್ತವೆ. ಎಲ್ಲ ಕರ್ಮಗಳು ಕ್ಷೀಣವಾಗುತ್ತವೆ. ॥ ೬೫ ॥ ಈ ಭಾಗವತಕಥಾ ರೂಪೀ ತೀರ್ಥವು ಸಂಸಾರದ ಕೆಸರನ್ನು ತೊಳೆಯಲು ಪ್ರಧಾನವಾಗಿದೆ. ಇದು ಹೃದಯದಲ್ಲಿ ನೆಲೆಸಿದಾಗ ಮನುಷ್ಯನ ಮುಕ್ತಿಯು ನಿಶ್ಚಿತವೆಂದೇ ವಿದ್ವಾಂಸರು ಹೇಳುತ್ತಾರೆ. ॥ ೬೬ ॥

ಧುಂಧುಕಾರಿಯು ಇದೆಲ್ಲವನ್ನು ಹೇಳುತ್ತಿರುವಾಗ ಅವನಿಗಾಗಿ ವೈಕುಂಠವಾಸೀ ಪಾರ್ಷದರ ಸಹಿತ ಒಂದು ದಿವ್ಯವಾದ ವಿಮಾನವು ಇಳಿದು ಬಂತು. ಎಲ್ಲೆಡೆ ಅದರ ಪ್ರಕಾಶ ಮಂಡಲಾಕಾರವಾಗಿ ಹರಡಿಕೊಂಡಿತು. ॥ ೬೭ ॥ ಎಲ್ಲರೆದುರಿಗೇ ಧುಂಧುಕಾರಿಯು ಆ ವಿಮಾನವನ್ನು ಹತ್ತಿದನು. ಆಗ ಆ ವಿಮಾನದಲ್ಲಿ ಬಂದಿರುವ ಪಾರ್ಷದರನ್ನು ನೋಡಿ ಗೋಕರ್ಣನು ಹೀಗೆಂದನು ॥ ೬೮ ॥

ಗೋಕರ್ಣನು ಕೇಳಿದನು – ಓ ಭಗವಂತನ ಪ್ರಿಯ ಪಾರ್ಷದರೇ! ಇಲ್ಲಿ ನಮ್ಮ ಅನೇಕ ಶುದ್ಧ ಹೃದಯ ಶ್ರೋತೃಗಳಿದ್ದಾರೆ. ಅವರೆಲ್ಲರಿಗಾಗಿ ನೀವು ಒಟ್ಟಿಗೆ ಅನೇಕ ವಿಮಾನಗಳನ್ನು ಏಕೆ ತರಲಿಲ್ಲ? ಇಲ್ಲಿ ಎಲ್ಲರೂ ಸಮಾನವಾಗಿ ಕಥೆ ಕೇಳಿದರು, ಇದನ್ನು ನಾವು ನೋಡುತ್ತೇವೆ. ಹಾಗಿರುವಾಗ ಫಲದಲ್ಲಿ ಈ ಪ್ರಕಾರದ ಭೇದ ಏಕಾಯಿತು? ತಿಳಿಸಿ. ॥ ೬೯-೭೦ ॥

ಪಾರ್ಷದರಾದ ಹರಿದಾಸರೆಂದರು – ಎಲೈ ಮಾನ್ಯವರ! ಈ ಫಲಭೇದದ ಕಾರಣ ಇದರ ಶ್ರವಣದ ಭೇದವೇ ಆಗಿದೆ. ಶ್ರವಣವಾದರೋ ಎಲ್ಲರೂ ಮಾಡಿದರು ಸರಿಯೇ. ಆದರೆ ಇವನಂತೆ ಮನನ ಮಾಡಲಿಲ್ಲ. ಇದರಿಂದ ಒಟ್ಟಿಗೆ ಭಜನೆ ಮಾಡಿದರೂ ಅದರ ಫಲದಲ್ಲಿ ಭೇದ ಉಳಿಯಿತು. ॥ ೭೧ ॥ ಈ ಪ್ರೇತವು ಏಳು ದಿನಗಳವರೆಗೆ ನಿರಾಹಾರವಿದ್ದು ಶ್ರವಣಗೈಯಿತು. ಕೇಳಿದ ವಿಷಯವನ್ನು ಸ್ಥಿರಚಿತ್ತದಿಂದ ತುಂಬಾ ಮನನ-ನಿದಿಧ್ಯಾಸನವನ್ನು ಮಾಡುತ್ತಿತ್ತು. ॥ ೭೨ ॥ ದೃಢವಾಗದಿರುವ ಜ್ಞಾನವು ವ್ಯರ್ಥವೇ ಆಗುತ್ತದೆ. ಹೀಗೆಯೇ ಲಕ್ಷ್ಯಕೊಡದೇ ಇರುವುದರಿಂದ ಶ್ರವಣವು, ಸಂದೇಹದಿಂದ ಮಂತ್ರವು, ಚಿತ್ತವು ಅತ್ತ-ಇತ್ತ ಅಲೆದಾಡುವುದರಿಂದ ಜಪವು ಫಲಿಸುವುದಿಲ್ಲ. ॥ ೭೩ ॥

ಅವೈಷ್ಣವೋ ಹತೋ ದೇಶೋ ಹತಂ ಶ್ರಾದ್ಧಮಪಾತ್ರಕಮ್ ।
ಹತಮಶ್ರೋತ್ರಿಯೇ ದಾನಮನಾಚಾರಂ ಹತಂ ಕುಲಮ್ ॥ ೭೪ ॥

ವಿಶ್ವಾಸೋ ಗುರುವಾಕ್ಯೇಷು ಸ್ವಸ್ಮಿಂದೀನತ್ವಭಾವನಾ ।
ಮನೋದೋಷಜಯಶ್ಚೈವ ಕಥಾಯಾಂ ನಿಶ್ಚಲಾ ಮತಿಃ ॥ ೭೫ ॥

ಏವಮಾದಿ ಕೃತಂ ಚೇತ್ಸ್ಯಾತ್ತದಾ ವೈ ಶ್ರವಣೇ ಫಲಮ್ ।
ಪುನಃ ಶ್ರವಾಂತೇ ಸರ್ವೇಷಾಂ ವೈಕುಂಠೇ ವಸತಿರ್ಧ್ರುವಮ್ ॥ ೭೬ ॥

ಗೋಕರ್ಣ ತವ ಗೋವಿಂದೋ ಗೋಲೋಕಂ ದಾಸ್ಯತಿ ಸ್ವಯಮ್ ।
ಏವಮುಕ್ತ್ವಾ ಯಯುಃ ಸರ್ವೇ ವೈಕುಂಠಂ ಹರಿಕೀರ್ತನಾಃ ॥ ೭೭ ॥

ಶ್ರಾವಣೇ ಮಾಸಿ ಗೋಕರ್ಣಃ ಕಥಾಮೂಚೇ ತಥಾ ಪುನಃ ।
ಸಪ್ತರಾತ್ರವತೀಂ ಭೂಯಃ ಶ್ರವಣಂ ತೈಃ ಕೃತಂ ಪುನಃ ॥ ೭೮ ॥

ಕಥಾಸಮಾಪ್ತೌ ಯಜ್ಜಾತಂ ಶ್ರೂಯತಾಂ ತಚ್ಚ ನಾರದ ॥ ೭೯ ॥

ವಿಮಾನೈಃ ಸಹ ಭಕ್ತೈಶ್ಚ ಹರಿರಾವಿರ್ಬಭೂವ ಹ ।
ಜಯಶಬ್ದಾ ನಮಃ ಶಬ್ದಾಸ್ತತ್ರಾಸನ್ ಬಹವಸ್ತದಾ ॥ ೮೦ ॥

ಪಾಂಚಜನ್ಯಧ್ವನಿಂ ಚಕ್ರೇ ಹರ್ಷಾತ್ತತ್ರ ಸ್ವಯಂ ಹರಿಃ ।
ಗೋಕರ್ಣಂ ತು ಸಮಾಲಿಂಗ್ಯಾಕರೋತ್ಸ್ವಸದೃಶಂ ಹರಿಃ ॥ ೮೧ ॥

ಶ್ರೋತೄನ್ಯಾನ್ ಘನಶ್ಯಾಮಾನ್ ಪೀತಕೌಶೇಯವಾಸಸಃ ।
ಕಿರೀಟಿನಃ ಕುಂಡಲಿನಸ್ತಥಾ ಚಕ್ರೇ ಹರಿಃ ಕ್ಷಣಾತ್ ॥ ೮೨ ॥

ತದ್ಗ್ರಾಮೇ ಯೇ ಸ್ಥಿತಾ ಜೀವಾ ಆಶ್ವಚಾಂಡಾಲಜಾತಯಃ ।
ವಿಮಾನೇ ಸ್ಥಾಪಿತಾಸ್ತೇಽಪಿ ಗೋಕರ್ಣಕೃಪಯಾ ತದಾ ॥ ೮೩ ॥

ಪ್ರೇಷಿತಾ ಹರಿಲೋಕೇ ತೇ ಯತ್ರ ಗಚ್ಛಂತಿ ಯೋಗಿನಃ ।
ಗೋಕರ್ಣೇನ ಸ ಗೋಪಾಲೋ ಗೋಲೋಕಂ ಗೋಪವಲ್ಲಭಮ್ ।
ಕಥಾಶ್ರವಣತಃ ಪ್ರೀತೋ ನಿರ್ಯಯೌ ಭಕ್ತವತ್ಸಲಃ ॥ ೮೪ ॥

ಅಯೋಧ್ಯಾವಾಸಿನಃ ಪೂರ್ವಂ ಯಥಾ ರಾಮೇಣ ಸಂಗತಾಃ ।
ತಥಾ ಕೃಷ್ಣೇನ ತೇ ನೀತಾ ಗೋಲೋಕಂ ಯೋಗಿದುರ್ಲಭಮ್ ॥ ೮೫ ॥

ಯತ್ರ ಸೂರ್ಯಸ್ಯ ಸೋಮಸ್ಯ ಸಿದ್ಧಾನಾಂ ನ ಗತಿಃ ಕದಾ ।
ತಂ ಲೋಕಂ ಹಿ ಗತಾಸ್ತೇ ತು ಶ್ರೀಮದ್ಭಾಗವತಶ್ರವಾತ್ ॥ ೮೬ ॥

ವೈಷ್ಣವರಿಲ್ಲದ ದೇಶ, ಅಪಾತ್ರನಿಗೆ ನೀಡಿದ ಶ್ರಾದ್ಧ ಭೋಜನ, ಶ್ರೋತ್ರಿಯನಲ್ಲದವನಿಗೆ ಕೊಟ್ಟ ದಾನ, ಆಚಾರಹೀನ ಕುಲ, ಇವೆಲ್ಲವೂ ನಾಶವಾಗಿ ಹೋಗುತ್ತವೆ. ॥ ೭೪ ॥ ಗುರುವಚನದಲ್ಲಿ ವಿಶ್ವಾಸ, ದೀನತೆಯ ಭಾವ, ಮನದ ದೋಷಗಳ ಮೇಲೆ ವಿಜಯ, ಕಥೆಯಲ್ಲಿ ಏಕಾಗ್ರ ಚಿತ್ತ ಮುಂತಾದ ನಿಯಮಗಳನ್ನು ಪಾಲಿಸಿದರೆ ಶ್ರವಣದ ನಿಜವಾದ ಫಲ ಸಿಗುತ್ತದೆ. ಈ ಶ್ರೋತೃಗಳು ಪುನಃ ಶ್ರೀಮದ್ಭಾಗವತದ ಕಥೆಯನ್ನು ಕೇಳಿದರೆ ನಿಶ್ಚಯವಾಗಿಯೂ ಇವರಿಗೆಲ್ಲ ವೈಕುಂಠ ಪ್ರಾಪ್ತವಾದೀತು. ॥ ೭೫-೭೬ ॥ ಎಲೈ ಗೋಕರ್ಣನೇ! ನಿನಗಾದರೋ ಭಗವಂತನು ಸ್ವತಃ ಬಂದು ಗೋಲೋಕಧಾಮಕ್ಕೆ ಕೊಂಡುಹೋಗುವನು. ಹೀಗೆ ಹೇಳಿ ಆ ಪಾರ್ಷದರೆಲ್ಲರೂ ಹರಿಕೀರ್ತನೆ ಮಾಡುತ್ತಾ ವೈಕುಂಠ ಲೋಕಕ್ಕೆ ಹೊರಟು ಹೋದರು. ॥ ೭೭ ॥

ಶ್ರಾವಣ ಮಾಸದಲ್ಲಿ ಗೋಕರ್ಣನು ಪುನಃ ಹಾಗೆಯೇ ಸಪ್ತಾಹ ಕ್ರಮದಿಂದ ಕಥೆ ಹೇಳಿದನು. ಅದೇ ಶ್ರೋತೃಗಳು ಅದನ್ನು ಮತ್ತೆ ಕೇಳಿದರು. ॥ ೭೮ ॥ ನಾರದರೇ! ಈ ಕಥೆಯ ಸಮಾಪ್ತಿಯಲ್ಲಿ ನಡೆದುದನ್ನು ಕೇಳಿರಿ. ॥ ೭೯ ॥ ಅಲ್ಲಿ ಭಕ್ತರಿಂದ ತುಂಬಿದ ವಿಮಾನಗಳೊಂದಿಗೂಡಿ ಭಗವಂತನು ಪ್ರಕಟನಾದನು. ಎಲ್ಲೆಡೆ ಜಯ ಜಯಕಾರ ನಡೆದು, ನಮಸ್ಕಾರಗಳ ಧ್ವನಿಗಳು ತುಂಬಿ ಹೋದುವು. ॥ ೮೦ ॥ ಭಗವಂತನು ಹರ್ಷಿತನಾಗಿ ತನ್ನ ಪಾಂಚಜನ್ಯವನ್ನು ಊದತೊಡಗಿದನು. ಅವನು ಗೋಕರ್ಣನನ್ನು ಆಲಿಂಗಿಸಿಕೊಂಡು ತನ್ನಂತೆಯೇ ಮಾಡಿದನು. ॥ ೮೧ ॥ ಅವನು ಕ್ಷಣಾರ್ಧದಲ್ಲಿ ಬೇರೆ ಎಲ್ಲ ಶ್ರೋತೃಗಳನ್ನು ಮೇಘಶ್ಯಾಮವರ್ಣ, ರೇಷ್ಮೆ ಪೀತಾಂಬರ, ಕಿರೀಟ, ಕುಂಡಲಾದಿಗಳಿಂದ ವಿಭೂಷಿತಗೊಳಿಸಿದನು. ॥ ೮೨ ॥ ಆ ಊರಿನಲ್ಲಿದ್ದ ನಾಯಿಗಳು, ಚಾಂಡಾಲರವರೆಗಿನ ಜೀವಿಗಳೆಲ್ಲರನ್ನೂ ಗೋಕರ್ಣನ ಕೃಪೆಯಿಂದ ವಿಮಾನಗಳಲ್ಲಿ ಹತ್ತಿಸಿಕೊಳ್ಳಲಾಯಿತು. ॥ ೮೩ ॥ ಯೋಗಿಗಳು ತಲುಪುವ ಭಗವದ್ಧಾಮಕ್ಕೆ ಅವರೆಲ್ಲರನ್ನು ಕಳುಹಿಸಿಕೊಡಲಾಯಿತು. ಹೀಗೆ ಭಕ್ತವತ್ಸಲ ಭಗವಾನ್ ಶ್ರೀಕೃಷ್ಣನು ಕಥಾಶ್ರವಣದಿಂದ ಪ್ರಸನ್ನನಾಗಿ ಗೋಕರ್ಣನನ್ನು ಜೊತೆಗೆ ಕರೆದುಕೊಂಡು ಗ್ವಾಲಬಾಲಕರ ಪ್ರಿಯವಾದ ಗೋಲೋಕಕ್ಕೆ ಹೊರಟುಹೋದನು. ॥ ೮೪ ॥ ಹಿಂದಿನ ಕಾಲದಲ್ಲಿ ಅಯೋಧ್ಯಾವಾಸಿಗಳು ಭಗವಾನ್ ಶ್ರೀರಾಮನೊಂದಿಗೆ ಸಾಕೇತಧಾಮಕ್ಕೆ ತೆರಳಿದಂತೆ ಭಗವಾನ್ ಶ್ರೀಕೃಷ್ಣನು ಅವರೆಲ್ಲರನ್ನು ಯೋಗಿದುರ್ಲಭವಾದ ಗೋಲೋಕಧಾಮಕ್ಕೆ ಕೊಂಡು ಹೋದನು. ॥ ೮೫ ॥ ಯಾವ ಲೋಕದಲ್ಲಿ ಸೂರ್ಯ, ಚಂದ್ರ, ಸಿದ್ಧರೂ ಕೂಡ ಎಂದೂ ತಲುಪಲಾರರೋ, ಅಲ್ಲಿಗೆ ಅವರೆಲ್ಲರೂ ಶ್ರೀಮದ್ಭಾಗವತ ಶ್ರವಣದಿಂದ ಹೊರಟುಹೋದರು. ॥ ೮೬ ॥

ನಾರದರೇ! ಸಪ್ತಾಹಯಜ್ಞದ ಮೂಲಕ ಕಥಾಶ್ರವಣ ಮಾಡುವುದರಿಂದ ಉಂಟಾಗುವ ಉಜ್ವಲವಾದ ಫಲವು ಸಂಚಿತ-

ಬ್ರೂಮೋಽತ್ರ ತೇ ಕಿಂ ಫಲವೃಂದಮುಜ್ಜ್ವಲಂ
ಸಪ್ತಾಹಯಜ್ಞೇನ ಕಥಾಸು ಸಂಚಿತಮ್ ।
ಕರ್ಣೇನ ಗೋಕರ್ಣಕಥಾಕ್ಷರೋ ಯೈಃ
ಪೀತಶ್ಚ ತೇ ಗರ್ಭಗತಾ ನ ಭೂಯಃ ॥ ೭೭ ॥

ವಾತಾಂಬುಪರ್ಣಾಶನದೇಹಶೋಷಣೈ-
ಸ್ತಪೋಭಿರುಗ್ರೈಶ್ಚಿರಕಾಲಸಂಚಿತೈಃ ।
ಯೋಗೈಶ್ಚ ಸಂಯಾಂತಿ ನ ತಾಂ ಗತಿಂ ವೈ
ಸಪ್ತಾಹಗಾಥಾಶ್ರವಣೇನ ಯಾಂತಿ ಯಾಮ್ ॥ ೭೮ ॥

ಇತಿಹಾಸಮಿಮಂ ಪುಣ್ಯಂ ಶಾಂಡಿಲ್ಯೋಽಪಿ ಮುನೀಶ್ವರಃ ।
ಪಠತೇ ಚಿತ್ರಕೂಟಸ್ಥೋ ಬ್ರಹ್ಮಾನಂದಪರಿಪ್ಲುತಃ ॥ ೭೯ ॥

ಆಖ್ಯಾನಮೇತತ್ಪರಮಂ ಪವಿತ್ರಂ
ಶ್ರುತಂ ಸಕೃದ್ವೈ ವಿದಹೇದಘೌಘಮ್ ।
ಶ್ರಾದ್ಧೇ ಪ್ರಯುಕ್ತಂ ಪಿತೃತೃಪ್ತಿಮಾವಹೇ-
ನ್ನಿತ್ಯಂ ಸುಪಾಠಾದಪುನರ್ಭವಂ ಚ ॥ ೮೦ ॥

ಹಾಗುತ್ತದೆ. ಅದರ ವಿಷಯದಲ್ಲಿ ನಾವು ನಿಮ್ಮಲ್ಲಿ ಏನೆಂದು ಹೇಳಲಿ? ಅಯ್ಯಾ! ಯಾರು ತಮ್ಮ ಕರ್ಣಪುಟದಿಂದ ಗೋಕರ್ಣನ ಮೂಲಕ ಹೇಳಿದ ಭಾಗವತ ಕಥೆಯ ಒಂದು ಅಕ್ಷರವನ್ನಾದರೂ ಪಾನಮಾಡಿದ್ದಾರೋ ಅವರಿಗೆ ಮತ್ತೆ ಗರ್ಭವಾಸ ಉಂಟಾಗಲಿಲ್ಲ. ॥ ೭೭ ॥ ಜನರು ಗಾಳಿ, ನೀರು, ಎಲೆ ತಿಂದುಕೊಂಡು, ಶರೀರವನ್ನು ಸೊರಗಿಸಿ, ಅನೇಕ ಕಾಲದವರೆಗೆ ಮಾಡಿದ ಘೋರತಪಸ್ಸಿನಿಂದ, ಯೋಗಾಭ್ಯಾಸದಿಂದ ಪಡೆಯಲಾರದ ಗತಿಯನ್ನು ಅವರು ಸಪ್ತಾಹ ಶ್ರವಣದಿಂದ ಸಹಜವಾಗಿಯೇ ಪಡೆದುಕೊಳ್ಳುತ್ತಾರೆ. ॥ ೭೮ ॥ ಈ ಪವಿತ್ರ ಇತಿಹಾಸದ ಪಾರಾಯಣೆಯನ್ನು ಚಿತ್ರಕೂಟದಲ್ಲಿ ವಿರಾಜಮಾನ ಮುನೀಶ್ವರ ಶಾಂಡಿಲ್ಯರೂ ಬ್ರಹ್ಮಾನಂದದಲ್ಲಿ ಮಗ್ನರಾಗಿ ಮಾಡುತ್ತಿರುತ್ತಾರೆ. ॥ ೭೯ ॥ ಈ ಕಥೆಯು ತುಂಬಾ ಪವಿತ್ರವಾಗಿದೆ. ಒಮ್ಮೆ ಶ್ರವಣದಿಂದಲೇ ಸಮಸ್ತ ಪಾಪರಾಶಿಯನ್ನು ಸುಟ್ಟುಬಿಡುತ್ತದೆ. ಇದನ್ನು ಶ್ರಾದ್ಧದಲ್ಲಿ ಪಾರಾಯಣ ಮಾಡಿದರೆ ಇದರಿಂದ ಪಿತೃಗಳಿಗೆ ತುಂಬಾ ತೃಪ್ತಿಯಾಗುತ್ತದೆ. ಪ್ರತಿದಿನವೂ ಪಾರಾಯಣ ಮಾಡುವುದರಿಂದ ಮೋಕ್ಷದ ಪ್ರಾಪ್ತಿಯಾಗುತ್ತದೆ. ॥ ೮೦ ॥

ಐದನೆಯ ಅಧ್ಯಾಯವು ಮುಗಿಯಿತು. ॥ ೫ ॥

ಇತಿ ಶ್ರೀಪದ್ಮಪುರಾಣೇ ಉತ್ತರಖಂಡೇ ಶ್ರೀಮದ್ಭಾಗವತಮಾಹಾತ್ಮ್ಯೇ ಗೋಕರ್ಣಮೋಕ್ಷವರ್ಣನಂ ನಾಮ ಪಂಚಮೋಽಧ್ಯಾಯಃ ॥ ೫ ॥

ಆರನೆಯ ಅಧ್ಯಾಯ

ಸಪ್ತಾಹ ಯಜ್ಞದ ವಿಧಿ

ಕುಮಾರಾ ಊಚುಃ

ಅಥ ತೇ ಸಂಪ್ರವಕ್ಷ್ಯಾಮಃ ಸಪ್ತಾಹಶ್ರವಣೇ ವಿಧಿಮ್ ।
ಸಹಾಯೈರ್ವಸುಭಿಶ್ಚೈವ ಪ್ರಾಯಃ ಸಾಧ್ಯೋ ವಿಧಿಃ ಸ್ಮೃತಃ ॥ ೧ ॥

ದೈವಜ್ಞಂ ತು ಸಮಾಹೂಯ ಮುಹೂರ್ತಂ ಪೃಚ್ಛ್ಯ ಯತ್ನತಃ ।
ವಿವಾಹೇ ಯಾದೃಶಂ ವಿತ್ತಂ ತಾದೃಶಂ ಪರಿಕಲ್ಪಯೇತ್ ॥ ೨ ॥

ನಭಸ್ಯ ಆಶ್ವಿನೋರ್ಜೌ ಚ ಮಾರ್ಗಶೀರ್ಷಃ ಶುಚಿರ್ನಭಾಃ ।
ಏತೇ ಮಾಸಾಃ ಕಥಾರಂಭೇ ಶ್ರೋತೄಣಾಂ ಮೋಕ್ಷಸೂಚಕಾಃ ॥ ೩ ॥

ಮಾಸಾನಾಂ ವಿಪ್ರ ಹೇಯಾನಿ ತಾನಿ ತ್ಯಾಜ್ಯಾನಿ ಸರ್ವಥಾ ।
ಸಹಾಯಾಶ್ಚೇತರೇ ತತ್ರ ಕರ್ತವ್ಯಾಃ ಸೋದ್ಯಮಾಶ್ಚ ಯೇ ॥ ೪ ॥

ದೇಶೇ ದೇಶೇ ತಥಾ ಸೇಯಂ ವಾರ್ತಾ ಪ್ರೇಷ್ಯಾ ಪ್ರಯತ್ನತಃ ।
ಭವಿಷ್ಯತಿ ಕಥಾ ಚಾತ್ರ ಆಗಂತವ್ಯಂ ಕುಟುಂಬಿಭಿಃ ॥ ೫ ॥

ಸನಕಾದಿಗಳು ಹೇಳುತ್ತಾರೆ – ಓ ನಾರದರೇ! ಈಗ ನಾವು ನಿಮಗೆ ಸಪ್ತಾಹ ಶ್ರವಣದ ವಿಧಿಯನ್ನು ಹೇಳುವೆವು. ಈ ವಿಧಿಯು ಪ್ರಾಯಶಃ ಜನರ ಸಹಾಯದಿಂದ ಮತ್ತು ಧನದಿಂದ ಸಾಧ್ಯವೆಂದು ಹೇಳಲಾಗಿದೆ. ॥ ೧ ॥ ಮೊಟ್ಟಮೊದಲಿಗೆ ಜ್ಯೋತಿಷಿಯನ್ನು ಕರೆದು ಮುಹೂರ್ತವನ್ನು ಕೇಳಬೇಕು. ಬಳಿಕ ವಿವಾಹಕ್ಕಾಗಿ ಹಣದ ವ್ಯವಸ್ಥೆ ಮಾಡಿಕೊಂಡಂತೆ ಪ್ರಯತ್ನಪೂರ್ವಕವಾಗಿ ಹಣದ ವ್ಯವಸ್ಥೆ ಮಾಡಿಕೊಳ್ಳಬೇಕು. ॥ ೨ ॥ ಕಥೆಯನ್ನು ಪ್ರಾರಂಭಿಸಲು ಭಾದ್ರಪದ, ಆಶ್ವಿನ, ಕಾರ್ತಿಕ, ಮಾರ್ಗಶೀರ್ಷ, ಆಷಾಢ ಮತ್ತು ಶ್ರಾವಣ ಈ ಆರು ತಿಂಗಳು ಶ್ರೋತೃಗಳಿಗಾಗಿ ಮೋಕ್ಷದ ಪ್ರಾಪ್ತಿಯ ಕಾರಣವಾಗಿದೆ. ॥ ೩ ॥ ದೇವರ್ಷಿಗಳೇ! ಈ ತಿಂಗಳಲ್ಲಿಯೂ ಭದ್ರಾ-ವ್ಯತೀಪಾತ ಮುಂತಾದ ಕುಯೋಗಗಳನ್ನು ಸರ್ವಥಾ ತ್ಯಜಿಸಬೇಕು. ಬೇರೆ ಉತ್ಸಾಹೀ ಜನರನ್ನು ತನ್ನ ಸಹಾಯಕರನ್ನಾಗಿಸಿ ಕೊಳ್ಳಬೇಕು. ॥ ೪ ॥ ಮತ್ತೆ 'ಇಲ್ಲಿ ಕಥೆ ನಡೆಯುವುದು. ಎಲ್ಲರೂ ಸಪರಿವಾರ ಆಗಮಿಸಬೇಕು' ಎಂದು ಎಲ್ಲ ಊರುಗಳಿಗೂ ಪ್ರಯತ್ನ ಪೂರ್ವಕವಾಗಿ ಆಮಂತ್ರಣ ಕಳಿಸಬೇಕು. ॥ ೫ ॥

ದೂರೇ ಹರಿಕಥಾಃ ಕೇಚಿ-
ದ್ದೂರೇ ಚಾಚ್ಯುತಕೀರ್ತನಾಃ ।
ಸ್ತ್ರಿಯಃ ಶೂದ್ರಾದಯೋ ಯೇ ಚ
ತೇಷಾಂ ಬೋಧೋ ಯತೋ ಭವೇತ್ ॥ ೬ ॥

ದೇಶೇ ದೇಶೇ ವಿರಕ್ತಾ ಯೇ ವೈಷ್ಣವಾಃ ಕೀರ್ತನೋತ್ಸುಕಾಃ ।
ತೇಷ್ವೇವ ಪತ್ರಂ ಪ್ರೇಷ್ಯಂ ಚ ತಲ್ಲೇಖನಮಿತೀರಿತಮ್ ॥ ೭ ॥

ಸತಾಂ ಸಮಾಜೋ ಭವಿತಾ ಸಪ್ತರಾತ್ರಂ ಸುದುರ್ಲಭಃ ।
ಅಪೂರ್ವರಸರೂಪೈವ ಕಥಾ ಚಾತ್ರ ಭವಿಷ್ಯತಿ ॥ ೮ ॥

ಶ್ರೀಭಾಗವತಪೀಯೂಷಪಾನಾಯ ರಸಲಂಪಟಾಃ ।
ಭವಂತಶ್ಚ ತಥಾ ಶೀಘ್ರಮಾಯಾತ ಪ್ರೇಮತತ್ಪರಾಃ ॥ ೯ ॥

ನಾವಕಾಶಃ ಕದಾಚಿಚ್ಚೇದ್ದಿನಮಾತ್ರಂ ತಥಾಪಿ ತು ।
ಸರ್ವಥಾಗಮನಂ ಕಾರ್ಯಂ ಕ್ಷಣೋಽತ್ರೈವ ಸುದುರ್ಲಭಃ ॥ ೧೦ ॥

ಏವಮಾಕಾರಣಂ ತೇಷಾಂ ಕರ್ತವ್ಯಂ ವಿನಯೇನ ಚ ।
ಆಗಂತುಕಾನಾಂ ಸರ್ವೇಷಾಂ ವಾಸಸ್ಥಾನಾನಿ ಕಲ್ಪಯೇತ್ ॥ ೧೧ ॥

ತೀರ್ಥೇ ವಾಪಿ ವನೇ ವಾಪಿ ಗೃಹೇ ವಾ ಶ್ರವಣಂ ಮತಮ್ ।
ವಿಶಾಲಾ ವಸುಧಾ ಯತ್ರ ಕರ್ತವ್ಯಂ ತತ್ಕಥಾಸ್ಥಲಮ್ ॥ ೧೨ ॥

ಶೋಧನಂ ಮಾರ್ಜನಂ ಭೂಮೇರ್ಲೇಪನಂ ಧಾತುಮಂಡನಮ್ ।
ಗೃಹೋಪಸ್ಕರಮುದ್ಧೃತ್ಯ ಗೃಹಕೋಣೇ ನಿವೇಶಯೇತ್ ॥ ೧೩ ॥

ಅರ್ವಾಕ್ಪಂಚಾಹತೋ ಯತ್ನಾದಾಸ್ತೀರ್ಣಾನಿ ಪ್ರಮೇಲಯೇತ್ ।
ಕರ್ತವ್ಯೋ ಮಂಡಪಃ ಪ್ರೋಚ್ಚೈಃ ಕದಲೀಖಂಡ ಮಂಡಿತಃ ॥ ೧೪ ॥

ಫಲಪುಷ್ಪದಲೈರ್ವಿಷ್ವಗ್ವಿತಾನೇನ ವಿರಾಜಿತಃ ।
ಚತುರ್ದಿಕ್ಷು ಧ್ವಜಾರೋಪೋ ಬಹುಸಂಪದ್ವಿರಾಜಿತಃ ॥ ೧೫ ॥

ಊರ್ಧ್ವಂ ಸಪ್ತೈವ ಲೋಕಾಶ್ಚ ಕಲ್ಪನೀಯಾಃ ಸವಿಸ್ತರಮ್ ।
ತೇಷು ವಿಪ್ರಾ ವಿರಕ್ತಾಶ್ಚ ಸ್ಥಾಪನೀಯಾಃ ಪ್ರಬೋಧ್ಯ ಚ ॥ ೧೬ ॥

ಪೂರ್ವಂ ತೇಷಾಮಾಸನಾನಿ ಕರ್ತವ್ಯಾನಿ ಯಥೋತ್ತರಮ್ ।
ವಕ್ತುಶ್ಚಾಪಿ ತದಾ ದಿವ್ಯಮಾಸನಂ ಪರಿಕಲ್ಪಯೇತ್ ॥ ೧೭ ॥

ಉದಙ್ಮುಖೋ ಭವೇದ್ವಕ್ತಾ ಶ್ರೋತಾ ವೈ ಪ್ರಾಙ್ಮುಖಸ್ತದಾ ।
ಪ್ರಾಙ್ಮುಖಶ್ಚೇದ್ಭವೇದ್ವಕ್ತಾ ಶ್ರೋತಾ ಚೋದಙ್ಮುಖಸ್ತದಾ ॥ ೧೮ ॥

ಭಾಗವತ್ಕಥೆ, ಸಂಕೀರ್ತನೆಗಳಿಂದ ದೂರವಾದ ಸ್ತ್ರೀ, ಶೂದ್ರಾದಿಗಳಿಗೂ ಕೂಡ ಸೂಚನೆ ಸಿಗುವಂತೆ ಪ್ರಯತ್ನಿಸಬೇಕು. ॥ ೬ ॥ ಊರು-ಊರುಗಳಲ್ಲಿರುವ ವಿರಕ್ತ ವೈಷ್ಣವರಿಗೆ, ಹರಿಕೀರ್ತನೆಯ ಪ್ರೇಮಿಗಳಿಗೆ ಆಮಂತ್ರಣವನ್ನು ಅವಶ್ಯವಾಗಿ ಕಳಿಸಬೇಕು. ಅದನ್ನು ಬರೆಯುವ ವಿಧಿಯನ್ನು ಈ ರೀತಿಯಾಗಿ ತಿಳಿಸಲಾಗಿದೆ. ॥ ೭ ॥ "ಮಹನೀಯರೇ! ಇಲ್ಲಿ ಏಳು ದಿನಗಳವರೆಗೆ ಬಹಳ ದುರ್ಲಭವಾದ ಸತ್ಪುರುಷರ ಸಭೆ ಸೇರುವುದು ಮತ್ತು ಅಪೂರ್ವರಸಮಯವಾದ ಶ್ರೀಮದ್ಭಾಗವತದ ಕಥಾ ಪ್ರವಚನ ನಡೆಯುವುದು. ॥ ೮ ॥ ಶ್ರೀಮದ್ಭಾಗವತ ಕಥಾಮೃತವನ್ನು ಪಾನಮಾಡುವ ರಸಿಕಭಕ್ತರಾದ ತಾವು ಪ್ರೇಮದಿಂದ ಶೀಘ್ರವಾಗಿ ದಯಮಾಡಿಸಬೇಕು. ॥ ೯ ॥ ತಮಗೆ ಹೆಚ್ಚು ಅವಕಾಶವಿಲ್ಲದಿದ್ದರೆ ಒಂದು ದಿನವಾದರೂ ಇಲ್ಲಿಗೆ ಅವಶ್ಯವಾಗಿ ಆಗಮಿಸಬೇಕು. ಏಕೆಂದರೆ, ಇಲ್ಲಿಯ ಪ್ರತಿಕ್ಷಣವೂ ಅತ್ಯಂತ ದುರ್ಲಭವಾಗಿದೆ. ॥ ೧೦ ॥ ಹೀಗೆ ಎಲ್ಲರಿಗೂ ವಿನಯಪೂರ್ವಕವಾಗಿ ಆಮಂತ್ರಣವನ್ನು ಕಳಿಸಬೇಕು. ಬಂದವರೆಲ್ಲರಿಗೂ ವಾಸಮಾಡಲು ಯಥೋಚಿತ ಜಾಗವನ್ನು ಏರ್ಪಡಿಸಬೇಕು. ॥ ೧೧ ॥

ಕಥಾ ಶ್ರವಣವನ್ನು ಯಾವುದಾದರೂ ತೀರ್ಥಕ್ಷೇತ್ರದಲ್ಲಾಗಲೀ, ವನದಲ್ಲಾಗಲೀ, ತನ್ನ ಮನೆಯಲ್ಲೇ ಆಗಲಿ ಏರ್ಪಡಿಸುವುದು ಒಳ್ಳೆಯದೆಂದು ತಿಳಿಯಲಾಗಿದೆ. ಉದ್ದ-ಅಗಲ ವಿಶಾಲವಾಗಿರುವ ಜಾಗದಲ್ಲೇ ಕಥಾ ಸ್ಥಳವನ್ನು ಏರ್ಪಡಿಸಬೇಕು. ॥ ೧೨ ॥ ಆ ಭೂಮಿಯನ್ನು ಗುಡಿಸಿ, ಸಾರಿಸಿ, ರಂಗವಲ್ಲಿಗಳಿಂದ ಅಲಂಕರಿಸಬೇಕು. ಮನೆಯ ಸಾಮಾನುಗಳನ್ನೆಲ್ಲ ತೆಗೆದು ಒಂದು ಮೂಲೆಯಲ್ಲಿ ಇರಿಸಬೇಕು. ॥ ೧೩ ॥ ಐದು ದಿನಗಳ ಮೊದಲಿಂದಲೇ ಹಾಸುವ ಬಟ್ಟೆಗಳನ್ನು ಪ್ರಯತ್ನಪೂರ್ವಕ ಸಂಗ್ರಹಿಸಿಡಬೇಕು. ಬಾಳೆಯ ಕಂಬಗಳಿಂದ ಅಲಂಕೃತವಾದ ಒಂದು ಎತ್ತರವಾದ ಮಂಟಪವನ್ನು ಸಿದ್ಧಗೊಳಿಸಬೇಕು. ॥ ೧೪ ॥ ಅದನ್ನು ಎಲ್ಲ ಕಡೆಗಳಲ್ಲಿಯೂ ಹಣ್ಣು, ಹೂವು, ಪತ್ರ, ತಳಿರು ತೋರಣಗಳಿಂದ ಅಲಂಕರಿಸಬೇಕು. ಸುತ್ತಲೂ ಬಹುಸಂಪತ್ತಿನಿಂದ ಶೋಭಿಸುವ ಧ್ವಜ-ಪತಾಕೆಗಳಿಂದ ಸಜ್ಜುಗೊಳಿಸಬೇಕು. ॥ ೧೫ ॥ ಮಂಟಪದಲ್ಲಿ ಸ್ವಲ್ಪ ಎತ್ತರವಾದ ಜಾಗದಲ್ಲಿ ವಿಶಾಲವಾದ ಸಪ್ತ ಲೋಕಗಳ ಕಲ್ಪನೆಮಾಡಿ, ಅದರಲ್ಲಿ ವಿರಕ್ತರಾದ ಬ್ರಾಹ್ಮಣರನ್ನು ಕರೆದು ಕೂರಿಸಬೇಕು. ॥ ೧೬ ॥ ಅವರಿಗೆ ಮುಂದುಗಡೆಯಲ್ಲಿ ಯಥೋಚಿತವಾದ ಪೀಠಗಳನ್ನು ಹಾಕಿರಬೇಕು. ಅದರ ಮುಂದೆ ಪ್ರವಚನಕಾರರಿಗೂ ದಿವ್ಯವಾದ ಪೀಠವನ್ನು ವ್ಯವಸ್ಥೆ ಮಾಡಬೇಕು. ॥ ೧೭ ॥ ಪ್ರವಚನಕಾರರು ಉತ್ತರಾಭಿಮುಖರಾಗಿದ್ದರೆ ಮುಖ್ಯ ಶ್ರೋತೃವು ಪೂರ್ವಾಭಿಮುಖವಾಗಿ ಕುಳಿತಿರಬೇಕು. ಪ್ರವಚನಕಾರರು ಪೂರ್ವಾಭಿಮುಖರಾಗಿದ್ದರೆ ಮುಖ್ಯ ಶ್ರೋತೃವು ಉತ್ತರಾಭಿಮುಖವಾಗಿ ಕುಳಿತಿರಬೇಕು. ॥ ೧೮ ॥ ಅಥವಾ ಪೂಜ್ಯನಾದ ಪ್ರವಚನಕಾರ ಮತ್ತು ಪೂಜಕನಾದ ಶ್ರೋತೃವು ಇವರ ಮಧ್ಯೆ ಇರುವುದೇ ಪೂರ್ವದಿಕ್ಕು ಎಂದು ಭಾವಿಸಬಹುದು. ಪೂಜ್ಯನು

ಅಥವಾ ಪೂರ್ವದಿಗ್ಜ್ಞೇಯಾ ಪೂಜ್ಯಪೂಜಕಮಧ್ಯತಃ ।
ಶ್ರೋತೃಣಾಮಾಗಮೇ ಪ್ರೋಕ್ತಾ ದೇಶಕಾಲಾದಿಕೋವಿದೈಃ ॥ ೧೯ ॥

ವಿರಕ್ತೋ ವೈಷ್ಣವೋ ವಿಪ್ರೋ ವೇದಶಾಸ್ತ್ರವಿಶುದ್ಧಿಕೃತ್ ।
ದೃಷ್ಟಾಂತಕುಶಲೋ ಧೀರೋ ವಕ್ತಾ ಕಾರ್ಯೋಽತಿನಿಸ್ಪೃಹಃ ॥ ೨೦ ॥

ಅನೇಕಧರ್ಮವಿಭ್ರಾಂತಾಃ ಸ್ತ್ರೈಣಾಃ ಪಾಖಂಡವಾದಿನಃ ।
ಶುಕಶಾಸ್ತ್ರಕಥೋಚ್ಚಾರೇ ತ್ಯಾಜ್ಯಾಸ್ತೇ ಯದಿ ಪಂಡಿತಾಃ ॥ ೨೧ ॥

ವಕ್ತುಃ ಪಾರ್ಶ್ವೇ ಸಹಾಯಾರ್ಥಮನ್ಯಃ ಸ್ಥಾಪ್ಯಸ್ತಥಾವಿಧಃ ।
ಪಂಡಿತಃ ಸಂಶಯಚ್ಛೇತ್ತಾ ಲೋಕಬೋಧನತತ್ಪರಃ ॥ ೨೨ ॥

ವಕ್ತ್ರಾ ಕ್ಷೌರಂ ಪ್ರಕರ್ತವ್ಯಂ ದಿನಾದರ್ವಾಗ್ ವ್ರತಾಪ್ತಯೇ ।
ಅರುಣೋದಯೇಽಸೌ ನಿರ್ವರ್ತ್ಯ ಶೌಚಂ ಸ್ನಾನಂ ಸಮಾಚರೇತ್ ॥ ೨೩ ॥

ನಿತ್ಯಂ ಸಂಕ್ಷೇಪತಃ ಕೃತ್ವಾ ಸಂಧ್ಯಾದ್ಯಂ ಸ್ವಂ ಪ್ರಯತ್ನತಃ ।
ಕಥಾವಿಘ್ನವಿಘಾತಾಯ ಗಣನಾಥಂ ಪ್ರಪೂಜಯೇತ್ ॥ ೨೪ ॥

ಪಿತೄನ್ ಸಂತರ್ಪ್ಯ ಶುದ್ಧ್ಯರ್ಥಂ ಪ್ರಾಯಶ್ಚಿತ್ತಂ ಸಮಾಚರೇತ್ ।
ಮಂಡಲಂ ಚ ಪ್ರಕರ್ತವ್ಯಂ ತತ್ರ ಸ್ಥಾಪ್ಯೋ ಹರಿಸ್ತಥಾ ॥ ೨೫ ॥

ಕೃಷ್ಣಮುದ್ದಿಶ್ಯ ಮಂತ್ರೇಣ ಚರೇತ್ಪೂಜಾವಿಧಿಂ ಕ್ರಮಾತ್ ।
ಪ್ರದಕ್ಷಿಣನಮಸ್ಕಾರಾನ್ ಪೂಜಾಂತೇ ಸ್ತುತಿಮಾಚರೇತ್ ॥ ೨೬ ॥

ಸಂಸಾರಸಾಗರೇ ಮಗ್ನಂ ದೀನಂ ಮಾಂ ಕರುಣಾನಿಧೇ ।
ಕರ್ಮಮೋಹಗೃಹೀತಾಂಗಂ ಮಾಮುದ್ಧರ ಭವಾರ್ಣವಾತ್ ॥ ೨೭ ॥

ಶ್ರೀಮದ್ಭಾಗವತಸ್ಯಾಪಿ ತತಃ ಪೂಜಾ ಪ್ರಯತ್ನತಃ ।
ಕರ್ತವ್ಯಾ ವಿಧಿನಾ ಪ್ರೀತ್ಯಾ ಧೂಪದೀಪಸಮನ್ವಿತಾ ॥ ೨೮ ॥

ತತಸ್ತು ಶ್ರೀಫಲಂ ಧೃತ್ವಾ ನಮಸ್ಕಾರಂ ಸಮಾಚರೇತ್ ।
ಸ್ತುತಿಃ ಪ್ರಸನ್ನಚಿತ್ತೇನ ಕರ್ತವ್ಯಾ ಕೇವಲಂ ತದಾ ॥ ೨೯ ॥

ಶ್ರೀಮದ್ಭಾಗವತಾಖ್ಯೋಽಯಂ ಪ್ರತ್ಯಕ್ಷಃ ಕೃಷ್ಣ ಏವ ಹಿ ।
ಸ್ವೀಕೃತೋಽಸಿ ಮಯಾ ನಾಥ ಮುಕ್ತ್ಯರ್ಥಂ ಭವಸಾಗರೇ ॥ ೩೦ ॥

ಮನೋರಥೋ ಮದೀಯೋಽಯಂ ಸಫಲಃ ಸರ್ವಥಾ ತ್ವಯಾ ।
ನಿರ್ವಿಘ್ನೇನೈವ ಕರ್ತವ್ಯೋ ದಾಸೋಽಹಂ ತವ ಕೇಶವ ॥ ೩೧ ॥

ಪೂರ್ವಾಭಿಮುಖನಾಗಿ ಕುಳಿತಿರುತ್ತಾನೆ. ಆಗ ಪೂಜಕನು ಆ ಪೂಜ್ಯನಿಗೆ ಅಭಿಮುಖನಾಗಿದ್ದರೆ ಅವನಿಗೆ ಅದೇ ಪೂರ್ವದಿಕ್ಕು. ದೇಶ-ಕಾಲ ಇವುಗಳನ್ನು ಅರಿತಿರುವ ವಿದ್ವಾಂಸರು ಶ್ರೋತೃವಿಗೆ ಶಾಸ್ತ್ರದಲ್ಲಿ ಇದೇ ನಿಯಮವನ್ನು ತಿಳಿಸಿರುವರು. ॥ ೧೯ ॥ ಯಾರು ವೇದ-ಶಾಸ್ತ್ರಗಳನ್ನು ಸ್ಪಷ್ಟವಾಗಿ ವ್ಯಾಖ್ಯಾನ ಮಾಡುವುದರಲ್ಲಿ ಸಮರ್ಥನೋ, ನಾನಾ ರೀತಿಯ ದೃಷ್ಟಾಂತಗಳನ್ನು ಕೊಡಬಲ್ಲನೋ, ವಿವೇಕಿ ಹಾಗೂ ನಿಸ್ಪೃಹನೋ ಅಂತಹ ವಿರಕ್ತ, ವಿಷ್ಣುಭಕ್ತ ಬ್ರಾಹ್ಮಣನನ್ನು ಪ್ರವಚನ ಕಾರನನ್ನಾಗಿಸಬೇಕು. ॥ ೨೦ ॥ ಪಂಡಿತರೇ ಆಗಿದ್ದು ಯಾರು ಅನೇಕ ಧರ್ಮಗಳ ಬಗ್ಗೆ ಭ್ರಮೆಯನ್ನು ಹೊಂದಿರುವರೋ, ಸ್ತ್ರೀಲಂಪಟರಾಗಿರುವರೋ ಪಾಖಂಡ ಮತವನ್ನು ಸಾರಿ ಹೇಳುತ್ತಾರೋ ಅಂತಹವರನ್ನು ಶ್ರೀಮದ್ಭಾಗವತದ ಪ್ರವಚನಕ್ಕೆ ನಿಯೋಜಿಸಬಾರದು. ॥ ೨೧ ॥ ಪ್ರವಚನಕಾರನ ಬಳಿಯಲ್ಲೇ ಅವನಿಗೆ ಸಹಾಯಕನಾದ ಅಂತಹವನೇ ಇನ್ನೊಬ್ಬ ವಿದ್ವಾಂಸನನ್ನು ನೇಮಿಸಬೇಕು. ಅವನೂ ಕೂಡ ಎಲ್ಲ ಬಗೆಯ ಸಂಶಯಗಳನ್ನು ಹೋಗಲಾಡಿಸುವುದರಲ್ಲಿ ಸಮರ್ಥನಾಗಿದ್ದು ಜನರಿಗೆ ತಿಳಿಸುವುದರಲ್ಲಿ ಕುಶಲನಾಗಿರಬೇಕು. ॥ ೨೨ ॥

ಕಥೆಯನ್ನು ಪ್ರಾರಂಭಿಸುವ ಹಿಂದಿನ ದಿನವೇ ವ್ರತಗ್ರಹಣಕ್ಕಾಗಿ ಪ್ರವಚನಕಾರನು ಕ್ಷೌರಮಾಡಿಸಿಕೊಳ್ಳಬೇಕು. ಅರುಣೋದಯ ಸಮಯದಲ್ಲಿ ಶೌಚಾನಂತರ ಸ್ನಾನಮಾಡಬೇಕು. ॥ ೨೩ ॥ ಆತನು ಸಂಧ್ಯಾವಂದನಾದಿ ನಿತ್ಯಕರ್ಮಗಳನ್ನು ಪ್ರಯತ್ನಪೂರ್ವಕ ಸಂಕ್ಷೇಪವಾಗಿ ಮುಗಿಸಿಕೊಂಡು, ಕಥೆಗೆ ಒದಗಬಹುದಾದ ವಿಘ್ನಗಳ ಪರಿಹಾರಕ್ಕಾಗಿ ಗಣಪತಿಯನ್ನು ಪೂಜಿಸಬೇಕು. ॥ ೨೪ ॥ ಅನಂತರ ಪಿತೃಗಳಿಗೆ ತರ್ಪಣ ಕೊಟ್ಟು ಹಿಂದಿನ ಪಾಪಗಳ ಶುದ್ಧಿಗಾಗಿ ಪ್ರಾಯಶ್ಚಿತ್ತಮಾಡಿಕೊಳ್ಳಬೇಕು. ಒಂದು ಮಂಡಲವನ್ನು ರಚಿಸಿ ಅದರಲ್ಲಿ ಶ್ರೀಹರಿಯನ್ನು ಪ್ರತಿಷ್ಠಾಪಿಸಬೇಕು. ॥ ೨೫ ॥ ಮತ್ತೆ ಭಗವಾನ್ ಶ್ರೀಕೃಷ್ಣನನ್ನು ಕುರಿತು ಮಂತ್ರೋಚ್ಚಾರಣಪೂರ್ವಕ ಷೋಡಶೋಪಚಾರ ಪೂಜೆಯನ್ನು ಆಚರಿಸಿ, ಪ್ರದಕ್ಷಿಣ ನಮಸ್ಕಾರಗಳನ್ನು ಮಾಡಿ ಹೀಗೆ ಪ್ರಾರ್ಥಿಸಬೇಕು. ॥ ೨೬ ॥ ಹೇ ಕರುಣಾನಿಧೇ! ಸಂಸಾರ ಸಾಗರದಲ್ಲಿ ಮುಳುಗಿರುವ ದೀನನು ನಾನು. ಕರ್ಮಗಳ ಮೋಹವೆಂಬ ಮೊಸಳೆಯು ನನ್ನನ್ನು ಹಿಡಿದುಕೊಂಡಿದೆ. ನೀನು ಈ ಭವಾರ್ಣವದಿಂದ ನನ್ನನ್ನು ಪಾರು ಮಾಡು. ॥ ೨೭ ॥ ಬಳಿಕ ಶ್ರೀಮದ್ಭಾಗವತಕ್ಕೂ ಧೂಪ-ದೀಪಾದಿ ಪೂಜಾಸಾಮಗ್ರಿಗಳಿಂದ ಅತ್ಯಂತ ಉತ್ಸಾಹ ಪ್ರೀತಿಪೂರ್ವಕವಾಗಿ ವಿಧಿಪೂರ್ವಕ ಪೂಜೆಮಾಡಬೇಕು. ॥ ೨೮ ॥ ಮತ್ತೆ ಆ ಪುಸ್ತಕದ ಮುಂದೆ ತೆಂಗಿನ ಕಾಯಿಯನ್ನು ಇಟ್ಟು ನಮಸ್ಕರಿಸಿ ಪ್ರಸನ್ನವಾದ ಮನಸ್ಸಿನಿಂದ ಹೀಗೆ ಸ್ತುತಿಸಬೇಕು. ॥ ೨೯ ॥ ಹೇ ನಾಥಾ! ಶ್ರೀಮದ್ಭಾಗವತ ರೂಪದಲ್ಲಿರುವ ಸಾಕ್ಷಾತ್ ಶ್ರೀಕೃಷ್ಣ ಪರಮಾತ್ಮನಾಗಿ ನೀನೇ ಬೆಳಗುತ್ತಿದ್ದೀಯೆ. ಭವಸಾಗರದಿಂದ ಪಾರಾಗಲು ನಿನ್ನಲ್ಲಿ ಶರಣಾಗಿದ್ದೇನೆ. ॥ ೩೦ ॥ ನನ್ನ ಈ ಮನೋರಥವನ್ನು ಯಾವ ವಿಘ್ನಬಾಧೆಗಳು ಬಾರದಂತೆ ಸಾಂಗೋಪಾಂಗವಾಗಿ ನೆರವೇರಿಸು. ಕೇಶವಾ! ನಾನು ನಿನ್ನ ದಾಸನಾಗಿರುವೆನು. ॥ ೩೧ ॥

ಏವಂ ದೀನವಚಃ ಪ್ರೋಚ್ಯ ವಕ್ತಾರಂ ಚಾಥ ಪೂಜಯೇತ್ ।
ಸಂಪೂಜ್ಯ ವಸ್ತ್ರಭೂಷಾದ್ಯೈಃ ಪೂಜಾಂತೇ ತಂ ಚ ಸಂಸ್ತವೇತ್ ॥ ೩೨ ॥

ಶುಕರೂಪ ಪ್ರಬೋಧಜ್ಞ ಸರ್ವಶಾಸ್ತ್ರ ವಿಶಾರದ ।
ಏತತ್ಕಥಾಪ್ರಕಾಶೇನ ಮದಜ್ಞಾನಂ ವಿನಾಶಯ ॥ ೩೩ ॥

ತದಗ್ರೇ ನಿಯಮಃ ಪಶ್ಚಾತ್ಕರ್ತವ್ಯಃ ಶ್ರೇಯಸೇ ಮುದಾ ।
ಸಪ್ತರಾತ್ರಂ ಯಥಾಶಕ್ತ್ಯಾ ಧಾರಣೀಯಃ ಸ ಏವ ಹಿ ॥ ೩೪ ॥

ವರಣಂ ಪಂಚವಿಪ್ರಾಣಾಂ ಕಥಾಭಂಗನಿವೃತ್ತಯೇ ।
ಕರ್ತವ್ಯಂ ತೈರ್ಹರೇರ್ಜಾಪ್ಯಂ ದ್ವಾದಶಾಕ್ಷರವಿದ್ಯಯಾ ॥ ೩೫ ॥

ಬ್ರಾಹ್ಮಣಾನ್ ವೈಷ್ಣವಾಂಶ್ಚಾನ್ಯಾಂಸ್ತಥಾ ಕೀರ್ತನಕಾರಿಣಃ ।
ನತ್ವಾ ಸಂಪೂಜ್ಯ ದತ್ತಾಜ್ಞಃ ಸ್ವಯಮಾಸನಮಾವಿಶೇತ್ ॥ ೩೬ ॥

ಲೋಕವಿತ್ತಧನಾಗಾರಪುತ್ರಚಿಂತಾಂ ವ್ಯುದಸ್ಯ ಚ ।
ಕಥಾಚಿತ್ತಃ ಶುದ್ಧಮತಿಃ ಸ ಲಭೇತ್ಫಲಮುತ್ತಮಮ್ ॥ ೩೭ ॥

ಆಸೂರ್ಯೋದಯಮಾರಭ್ಯ ಸಾರ್ಧತ್ರಿಪ್ರಹರಾಂತಕಮ್ ।
ವಾಚನೀಯಾ ಕಥಾ ಸಮ್ಯಗ್ಧೀರಕಂಠಂ ಸುಧೀಮತಾ ॥ ೩೮ ॥

ಕಥಾವಿರಾಮಃ ಕರ್ತವ್ಯೋ ಮಧ್ಯಾಹ್ನೇ ಘಟಿಕಾದ್ವಯಮ್ ।
ತತ್ಕಥಾಮನು ಕಾರ್ಯಂ ವೈ ಕೀರ್ತನಂ ವೈಷ್ಣವೈಸ್ತದಾ ॥ ೩೯ ॥

ಮಲಮೂತ್ರಜಯಾರ್ಥಂ ಹಿ ಲಘ್ವಾಹಾರಃ ಸುಖಾವಹಃ ।
ಹವಿಷ್ಯಾನ್ನೇನ ಕರ್ತವ್ಯೋ ಹ್ಯೇಕವಾರಂ ಕಥಾರ್ಥಿನಾ ॥ ೪೦ ॥

ಉಪೋಷ್ಯ ಸಪ್ತರಾತ್ರಂ ವೈ ಶಕ್ತಿಶ್ಚೇಚ್ಛೃಣುಯಾತ್ತದಾ ।
ಘೃತಪಾನಂ ಪಯಃಪಾನಂ ಕೃತ್ವಾ ವೈ ಶೃಣುಯಾತ್ಸುಖಮ್ ॥ ೪೧ ॥

ಫಲಾಹಾರೇಣ ವಾ ಭಾವ್ಯಮೇಕಭುಕ್ತೇನ ವಾ ಪುನಃ ।
ಸುಖಸಾಧ್ಯಂ ಭವೇದ್ಯತ್ತು ಕರ್ತವ್ಯಂ ಶ್ರವಣಾಯ ತತ್ ॥ ೪೨ ॥

ಭೋಜನಂ ತು ವರಂ ಮನ್ಯೇ ಕಥಾಶ್ರವಣಕಾರಕಮ್ ।
ನೋಪವಾಸೋ ವರಃ ಪ್ರೋಕ್ತಃ ಕಥಾವಿಘ್ನಕರೋ ಯದಿ ॥ ೪೩ ॥

ಸಪ್ತಾಹವ್ರತಿನಾಂ ಪುಂಸಾಂ ನಿಯಮಾನ್ ಶೃಣು ನಾರದ ।
ವಿಷ್ಣುದೀಕ್ಷಾವಿಹೀನಾನಾಂ ನಾಧಿಕಾರಃ ಕಥಾಶ್ರವೇ ॥ ೪೪ ॥

ಹೀಗೆ ದೈನ್ಯದ ಮಾತುಗಳನ್ನು ಹೇಳಿ ಮತ್ತೆ ಪ್ರವಚನಕಾರನನ್ನು ಪೂಜಿಸಬೇಕು. ಆತನನ್ನು ಸುಂದರ ವಸ್ತ್ರ- ಆಭರಣ ಮುಂತಾದವುಗಳಿಂದ ಅಲಂಕರಿಸಿ ಪೂಜೆಮಾಡಿ ಕೊನೆಯಲ್ಲಿ ಆತನನ್ನು ಸ್ತುತಿಸಬೇಕು. ॥ ೩೨ ॥

'ಎಲೈ ಶುಕರೂಪಿಯಾದ ಜ್ಞಾನ ಶ್ರೇಷ್ಠರೇ! ನೀವು ಉಪದೇಶ ಮಾಡುವುದರಲ್ಲಿ ಕುಶಲರಾಗಿದ್ದು, ಸರ್ವ ಶಾಸ್ತ್ರಗಳಲ್ಲಿ ಪಾರಂಗತರಾಗಿರುವಿರಿ. ದಯಮಾಡಿ ಈ ಕಥೆಯನ್ನು ಪ್ರಕಾಶಪಡಿಸಿ ನನ್ನ ಅಜ್ಞಾನವನ್ನು ದೂರಗೊಳಿಸಿರಿ' ॥ ೩೩ ॥ ಆತನ ಮುಂದೆ ಮತ್ತೆ ತನ್ನ ಶ್ರೇಯಸ್ಸಿಗಾಗಿ ಪ್ರಸನ್ನತೆಯಿಂದ ನಿಯಮ-ಗ್ರಹಣಮಾಡಿ, ಏಳು ದಿನಗಳವರೆಗೆ ಯಥಾಶಕ್ತಿಯಾಗಿ ಅದನ್ನು ಪಾಲಿಸಬೇಕು. ॥ ೩೪ ॥ ಕಥೆಯಲ್ಲಿ ವಿಘ್ನವು ಉಂಟಾಗದಿರಲಿ ಎಂದು ಐದು ಮಂದಿ ಬ್ರಾಹ್ಮಣರನ್ನು ವರಣಮಾಡಬೇಕು. ಅವರು ದ್ವಾದಶಾಕ್ಷರ ಮಹಾಮಂತ್ರದ ಮೂಲಕ ಭಗವಂತನ ನಾಮಗಳನ್ನು ಜಪಿಸಬೇಕು. ॥ ೩೫ ॥ ವಿಷ್ಣುಭಕ್ತರಾದ ಬ್ರಾಹ್ಮಣರನ್ನು ಇತರ ಸಂಕೀರ್ತನ ಕಾರರನ್ನು ನಮಸ್ಕರಿಸಿ, ಪೂಜಿಸಿ, ಅವರ ಅನುಮತಿಯನ್ನು ಪಡೆದು ಸ್ವತಃ ಆಸನದ ಮೇಲೆ ಕುಳಿತುಕೊಳ್ಳಬೇಕು. ॥ ೩೬ ॥ ಲೋಕಗಳು, ಸಂಪತ್ತು, ಧನ, ಮನೆ, ಪುತ್ರಾದಿಗಳ ಚಿಂತೆಯನ್ನು ಬಿಟ್ಟು ಶುದ್ಧಚಿತ್ತದಿಂದ ಕೇವಲ ಕಥೆಯಲ್ಲೇ ಲಕ್ಷ್ಯವಿಡುವವನಿಗೆ ಇದರ ಶ್ರವಣದ ಉತ್ತಮ ಫಲವು ದೊರೆಯುತ್ತದೆ. ॥ ೩೭ ॥ ಧೀಮಂತನಾದ ಪ್ರವಚನಕಾರನು ಸೂರ್ಯೋದಯದಿಂದ ಕಥೆಯನ್ನು ಪ್ರಾರಂಭಿಸಿ ಮೂರೂವರೆ ಪ್ರಹರದವರೆಗೆ ಮಧ್ಯಮ ಸ್ವರದಿಂದ ಚೆನ್ನಾಗಿ ಕಥಾವಾಚನ ಮಾಡಬೇಕು. ॥ ೩೮ ॥ ಮಧ್ಯಾಹ್ನದಲ್ಲಿ ಎರಡು ಗಳಿಗೆಯವರೆಗೆ ವಾಚನವನ್ನು ನಿಲ್ಲಿಸಬೇಕು. ಆ ಸಮಯದಲ್ಲಿ ವಿಷ್ಣು ಭಕ್ತರು ಕಥಾ ಪ್ರಸಂಗಕ್ಕನುಸಾರ ಭಗವಂತನ ಗುಣಗಳನ್ನು ಕೀರ್ತನೆ ಮಾಡುತ್ತಿರಬೇಕು. ವ್ಯರ್ಥವಾದ ಮಾತುಗಳನ್ನು ಆಡಬಾರದು. ॥ ೩೯ ॥ ಕಥಾಶ್ರವಣದ ಕಾಲದಲ್ಲಿ ಮಲ-ಮೂತ್ರಗಳ ವೇಗವನ್ನು ಹತೋಟಿಯಲ್ಲಿಟ್ಟುಕೊಳ್ಳುವುದಕ್ಕಾಗಿ ಅಲ್ಪಾಹಾರ ಸುಖಕರವಾಗಿರುತ್ತದೆ. ಇದಕ್ಕಾಗಿ ಶ್ರೋತೃವು ಒಪ್ಪೊತ್ತು ಹವಿಷ್ಯಾನ್ನವನ್ನು ಸ್ವೀಕರಿಸಬೇಕು. ॥ ೪೦ ॥ ಶಕ್ತಿಯಿದ್ದರೆ ಏಳು ದಿನಗಳೂ ಉಪವಾಸವಿದ್ದು ಕಥಾ ಶ್ರವಣ ಮಾಡಬೇಕು. ಅಥವಾ ಕೇವಲ ತುಪ್ಪವನ್ನೋ, ಹಾಲನ್ನೋ ಕುಡಿದು ಸುಖವಾಗಿ ಕಥೆಯನ್ನು ಶ್ರವಣಿಸಬೇಕು. ॥ ೪೧ ॥ ಅಥವಾ ಫಲಾಹಾರವನ್ನೋ, ಒಪ್ಪೊತ್ತು ಭೋಜನವನ್ನೋ ಮಾಡಲಿ. ಈ ಆಹಾರ ನಿಯಮದಲ್ಲಿ ಸುಲಭವಾಗಿ ಅನುಸರಿಸಲು ಸಾಧ್ಯವಾಗುವುದನ್ನು ಅನುಸರಿಸುತ್ತಾ ಕಥಾ ಶ್ರವಣಮಾಡಬೇಕು. ॥ ೪೨ ॥ ಉಪವಾಸಕ್ಕಿಂತ ಒಪ್ಪೊತ್ತು ಭೋಜನ ಮಾಡುವುದೇ ಉತ್ತಮವೆಂದು ನಾನು ತಿಳಿಯುತ್ತೇನೆ. ಅದು ಕಥಾ ಶ್ರವಣದಲ್ಲಿ ಸಹಾಯಕವಾದೀತು. ಉಪವಾಸದಿಂದ ಶ್ರವಣದಲ್ಲಿ ಅಡ್ಡಿಯುಂಟಾದರೆ ಆ ಉಪವಾಸವು ಖಂಡಿತವಾಗಿ ಉತ್ತಮವಲ್ಲ. ॥ ೪೩ ॥

ನಾರದರೇ! ನಿಯಮದಿಂದ ಸಪ್ತಾಹ ಶ್ರವಣ ಮಾಡುವವರು ಅನುಸರಿಸಬೇಕಾದ ನಿಯಮಗಳನ್ನು ಕೇಳಿರಿ. ವಿಷ್ಣುವಿನಲ್ಲಿ ಏಕಭಕ್ತಿಯ ದೀಕ್ಷೆಯಿಲ್ಲದವನಿಗೆ ಈ ಕಥಾ ಶ್ರವಣದಲ್ಲಿ ಅಧಿಕಾರವಿಲ್ಲ. ॥ ೪೪ ॥ ಕಥಾವ್ರತಿಯು ಬ್ರಹ್ಮಚರ್ಯದಿಂದ ಇರಬೇಕು. ನೆಲದ

ಬ್ರಹ್ಮಚರ್ಯಮಧಃಸುಪ್ತಿಃ ಪತ್ರಾವಲ್ಯಾಂ ಚ ಭೋಜನಮ್ ।
ಕಥಾಸಮಾಪ್ತೌ ಭುಕ್ತಿಂ ಚ ಕುರ್ಯಾನ್ನಿತ್ಯಂ ಕಥಾವ್ರತೀ ॥ ೨೫ ॥

ದ್ವಿದಲಂ ಮಧು ತೈಲಂ ಚ ಗರಿಷ್ಠಾನ್ನಂ ತಥೈವ ಚ ।
ಭಾವದುಷ್ಟಂ ಪರ್ಯುಷಿತಂ ಜಹ್ಯಾನ್ನಿತ್ಯಂ ಕಥಾವ್ರತೀ ॥ ೨೬ ॥

ಕಾಮಂ ಕ್ರೋಧಂ ಮದಂ ಮಾನಂ ಮತ್ಸರಂ ಲೋಭಮೇವ ಚ ।
ದಂಭಂ ಮೋಹಂ ತಥಾ ದ್ವೇಷಂ ದೂರಯೇಚ್ಚ ಕಥಾವ್ರತೀ ॥ ೨೭ ॥

ವೇದವೈಷ್ಣವವಿಪ್ರಾಣಾಂ ಗುರುಗೋವ್ರತಿನಾಂ ತಥಾ ।
ಸ್ತ್ರೀರಾಜಮಹತಾಂ ನಿಂದಾಂ ವರ್ಜಯೇದ್ಯಃ ಕಥಾವ್ರತೀ ॥ ೨೮ ॥

ರಜಸ್ವಲಾಂತ್ಯಜಮ್ಲೇಚ್ಛಪತಿತವ್ರಾತ್ಯಕೈಸ್ತಥಾ ।
ದ್ವಿಜದ್ವಿಡ್ವೇದಬಾಹ್ಯೈಶ್ಚ ನ ವದೇದ್ಯಃ ಕಥಾವ್ರತೀ ॥ ೨೯ ॥

ಸತ್ಯಂ ಶೌಚಂ ದಯಾಂ ಮೌನಮಾರ್ಜವಂ ವಿನಯಂ ತಥಾ ।
ಉದಾರಮಾನಸಂ ತದ್ವದೇವಂ ಕುರ್ಯಾತ್ಕಥಾವ್ರತೀ ॥ ೩೦ ॥

ದರಿದ್ರಶ್ಚ ಕ್ಷಯೀ ರೋಗೀ ನಿರ್ಭಾಗ್ಯಃ ಪಾಪಕರ್ಮವಾನ್ ।
ಅನಪತ್ಯೋ ಮೋಕ್ಷಕಾಮಃ ಶೃಣುಯಾಚ್ಚ ಕಥಾಮಿಮಾಮ್ ॥ ೩೧ ॥

ಅಪುಷ್ಪಾ ಕಾಕವಂಧ್ಯಾ ಚ ವಂಧ್ಯಾ ಯಾ ಚ ಮೃತಾರ್ಭಕಾ ।
ಸ್ರವದ್ಗರ್ಭಾ ಚ ಯಾ ನಾರೀ ತಯಾ ಶ್ರಾವ್ಯಾ ಪ್ರಯತ್ನತಃ ॥ ೩೨ ॥

ಏತೇಷು ವಿಧಿನಾ ಶ್ರಾವೇ ತದಕ್ಷಯತರಂ ಭವೇತ್ ।
ಅತ್ಯುತ್ತಮಾ ಕಥಾ ದಿವ್ಯಾ ಕೋಟಿಯಜ್ಞಫಲಪ್ರದಾ ॥ ೩೩ ॥

ಏವಂ ಕೃತ್ವಾ ವ್ರತವಿಧಿಮುದ್ಯಾಪನಮಥಾಚರೇತ್ ।
ಜನ್ಮಾಷ್ಟಮೀವ್ರತಮಿವ ಕರ್ತವ್ಯಂ ಫಲಕಾಂಕ್ಷಿಭಿಃ ॥ ೩೪ ॥

ಅಕಿಂಚನೇಷು ಭಕ್ತೇಷು ಪ್ರಾಯೋ ನೋದ್ಯಾಪನಾಗ್ರಹಃ ।
ಶ್ರವಣೇನೈವ ಪೂತಾಸ್ತೇ ನಿಷ್ಕಾಮಾ ವೈಷ್ಣವಾ ಯತಃ ॥ ೩೫ ॥

ಏವಂ ನಗಾಹಯಜ್ಞೇಽಸ್ಮಿನ್ ಸಮಾಪ್ತೇ ಶ್ರೋತೃಭಿಸ್ತದಾ ।
ಪುಸ್ತಕಸ್ಯ ಚ ವಕ್ತುಶ್ಚ ಪೂಜಾ ಕಾರ್ಯಾತಿಭಕ್ತಿತಃ ॥ ೩೬ ॥

ಪ್ರಸಾದತುಲಸೀಮಾಲಾ ಶ್ರೋತೃಭ್ಯಶ್ಚಾಥ ದೀಯತಾಮ್ ।
ಮೃದಂಗತಾಲಲಲಿತಂ ಕರ್ತವ್ಯಂ ಕೀರ್ತನಂ ತತಃ ॥ ೩೭ ॥

ಜಯಶಬ್ದಂ ನಮಃಶಬ್ದಂ ಶಂಖಶಬ್ದಂ ಚ ಕಾರಯೇತ್ ।
ವಿಪ್ರೇಭ್ಯೋ ಯಾಚಕೇಭ್ಯಶ್ಚ ವಿತ್ತಮನ್ನಂ ಚ ದೀಯತಾಮ್ ॥ ೩೮ ॥

ಮೇಲೆ ಮಲಗಬೇಕು. ಪ್ರತಿದಿನವೂ ಕಥಾ ಸಮಾಪ್ತವಾದ ಮೇಲೆಯೇ ಎಲೆಯಲ್ಲಿ ಊಟ ಮಾಡಬೇಕು. ॥ ೨೫ ॥ ಅವನು ದ್ವಿದಳಧಾನ್ಯ, ಜೇನು, ತುಪ್ಪ, ಎಣ್ಣೆ, ಗರಿಷ್ಠವಾದ ಆಹಾರ, ಭಾವದುಷ್ಟ ಪದಾರ್ಥಗಳು ಹಾಗೂ ಹಳಸಿದ ಅನ್ನವನ್ನು ಸದಾ ತ್ಯಾಗ ಮಾಡಬೇಕು. ॥ ೨೬ ॥ ಕಾಮ, ಕ್ರೋಧ, ಮದ, ಮಾನ, ಮತ್ಸರ, ಲೋಭ, ಮೋಹ, ದಾಂಭಿಕತೆ, ದ್ವೇಷ ಇವುಗಳನ್ನು ದೂರವಾಗಿಸಬೇಕು. ॥ ೨೭ ॥ ವೇದಗಳು, ವಿಷ್ಣುಭಕ್ತರು, ವಿಪ್ರರು, ಗುರುಭಕ್ತರು, ಗೋಸೇವಕರು, ಸ್ತ್ರೀಯರು, ರಾಜರು, ಮಹಾಪುರುಷರು ಇವರ ನಿಂದೆಯನ್ನು ಅವನು ಸರ್ವಥಾ ತ್ಯಜಿಸಬೇಕು. ॥ ೨೮ ॥ ರಜಸ್ವಲೆಯರು, ಚಾಂಡಾಲರು, ಮ್ಲೇಚ್ಛರು, ಪತಿತರು, ವ್ರತಭ್ರಷ್ಟರು, ಬ್ರಹ್ಮದ್ವೇಷಿಗಳು, ವೈದಿಕ ಮತಕ್ಕೆ ಹೊರಗಾದವರು ಇಂತಹವರ ಜೊತೆ ಮಾತನಾಡಬಾರದು. ॥ ೨೯ ॥ ಸದಾಕಾಲ ಸತ್ಯ, ಶೌಚ, ದಯೆ, ಮೌನ, ಸರಳತೆ, ವಿನಯ, ಔದಾರ್ಯ ಇವುಗಳಿಂದ ವರ್ತಿಸಬೇಕು. ॥ ೩೦ ॥ ಬಡವನು, ಕ್ಷಯವೇ ಮೊದಲಾದ ರೋಗಗಳಿಂದ ಪೀಡಿತನಾದವನು, ಭಾಗ್ಯಹೀನ, ಪಾಪ ಕರ್ಮಿ, ಸಂತಾನಹೀನ, ಮುಮುಕ್ಷು, ಇವರುಗಳೂ ಕೂಡ ಈ ಕಥೆಯನ್ನು ಕೇಳಬೇಕು. ॥ ೩೧ ॥ ರಜೋದರ್ಶನ ನಿಂತು ಹೋದ ಸ್ತ್ರೀಯು, ಹುಟ್ಟಿದೊಡನೆಯೇ ಸಾಯುವ ಮಕ್ಕಳುಳ್ಳವಳು, ಗರ್ಭಸ್ರಾವ ಆಗುವವಳು, ಇವರೂ ಕೂಡ ಪ್ರಯತ್ನಪೂರ್ವಕ ಕಥೆಯನ್ನು ಕೇಳಬೇಕು. ॥ ೩೨ ॥ ಇವರೆಲ್ಲರೂ ವಿಧಿಪೂರ್ವಕ ಕಥಾ ಶ್ರವಣ ಮಾಡಿದರೆ ಅವರಿಗೆ ಅಕ್ಷಯವಾದ ಫಲವು ದೊರೆಯುತ್ತದೆ. ಈ ಅತ್ಯುತ್ತಮವಾದ ದಿವ್ಯಕಥೆಯು ಕೋಟಿಯಜ್ಞಗಳ ಫಲವನ್ನೀಯುತ್ತದೆ. ॥ ೩೩ ॥

ಈ ರೀತಿಯಲ್ಲಿ ವ್ರತದ ವಿಧಿಗಳನ್ನು ಪಾಲಿಸಿ ಕೊನೆಗೆ ವ್ರತದ ಉದ್ಯಾಪನೆಯನ್ನು ಮಾಡಬೇಕು. ಫಲಾಪೇಕ್ಷೆಯುಳ್ಳವರು ಜನ್ಮಾಷ್ಟಮಿ ವ್ರತದಂತೆ ಈ ಕಥಾವ್ರತದ ಉದ್ಯಾಪನೆ ಮಾಡಲಿ. ॥ ೩೪ ॥ ಆದರೆ ಫಲಾಪೇಕ್ಷೆಯಿಲ್ಲದ ವಿರಕ್ತ ಭಕ್ತರಿಗೆ ಈ ಉದ್ಯಾಪನೆಯು ಕಡ್ಡಾಯವಿಲ್ಲ. ಅವರು ಕಥಾ ಶ್ರವಣದಿಂದಲೇ ಪವಿತ್ರರಾಗಿರುತ್ತಾರೆ. ಏಕೆಂದರೆ ಅವರು ನಿಷ್ಕಾಮಿಗಳಾದ ವಿಷ್ಣುಭಕ್ತರು. ॥ ೩೫ ॥

ಹೀಗೆ ಸಪ್ತಾಹಯಜ್ಞವು ಸಮಾಪ್ತವಾದಾಗ ಶ್ರೋತೃಗಳು ಶ್ರೀಮದ್ಭಾಗವತ ಪುಸ್ತಕವನ್ನು, ಪ್ರವಚನಕಾರರನ್ನೂ ಅತ್ಯಂತ ಭಕ್ತಿಯಿಂದ ಪೂಜಿಸಬೇಕು. ॥ ೩೬ ॥ ಅನಂತರ ಪ್ರವಚನಕಾರನು ಶ್ರೋತೃಗಳಿಗೆ ಪ್ರಸಾದ, ತುಳಸೀ, ಪುಷ್ಪಮಾಲೆ ಮುಂತಾದವುಗಳನ್ನು ಅನುಗ್ರಹಿಸಬೇಕು. ಎಲ್ಲರೂ ತಾಳ-ಮೃದಂಗಗಳೊಡನೆ ಸುಂದರ ಧ್ವನಿಯಿಂದ ಸಂಕೀರ್ತನೆ ಮಾಡಬೇಕು. ॥ ೩೭ ॥ ಜಯ ಜಯ ನಮೋ ನಮಃ ಎಂಬ ಧ್ವನಿಗಳೊಡನೆ ಶಂಖಧ್ವನಿಗೈದು ಬ್ರಾಹ್ಮಣರಿಗೂ, ಯಾಚಕರಿಗೂ ಅನ್ನದಾನ ಮಾಡಬೇಕು. ॥ ೩೮ ॥ ಶ್ರೋತೃವು ವಿರಕ್ತನಾಗಿದ್ದರೆ ಮರುದಿನ ಕರ್ಮಶಾಂತಿಗಾಗಿ ಗೀತಾ ಪಾರಾಯಣ ಮಾಡಬೇಕು. ಗೃಹಸ್ಥನಾಗಿದ್ದರೆ

ವಿರಕ್ತಶ್ಚೇದ್ಭವೇಚ್ಛ್ರೋತಾ ಗೀತಾ ವಾಚ್ಯಾ ಪರೇಽಹನಿ ।
ಗೃಹಸ್ಥಶ್ಚೇತ್ತದಾ ಹೋಮಃ ಕರ್ತವ್ಯಃ ಕರ್ಮಶಾಂತಯೇ ॥ ೩೯ ॥

ಪ್ರತಿಶ್ಲೋಕಂ ತು ಜುಹುಯಾದ್ವಿಧಿನಾ ದಶಮಸ್ಯ ಚ ।
ಪಾಯಸಂ ಮಧು ಸರ್ಪಿಶ್ಚ ತಿಲಾನ್ನಾದಿಕಸಂಯುತಮ್ ॥ ೪೦ ॥

ಅಥವಾ ಹವನಂ ಕುರ್ಯಾದ್ಗಾಯತ್ರ್ಯಾ ಸುಸಮಾಹಿತಃ ।
ತನ್ಮಯತ್ವಾತ್ಪುರಾಣಸ್ಯ ಪರಮಸ್ಯ ಚ ತತ್ತ್ವತಃ ॥ ೪೧ ॥

ಹೋಮಾಶಕ್ತೌ ಬುಧೋ ಹೌಮ್ಯಂ ದದ್ಯಾತ್ತತ್ಫಲಸಿದ್ಧಯೇ ।
ನಾನಾಛಿದ್ರನಿರೋಧಾರ್ಥಂ ನ್ಯೂನತಾಧಿಕತಾನಯೋಃ ॥ ೪೨ ॥

ದೋಷಯೋಃ ಪ್ರಶಮಾರ್ಥಂ ಚ ಪಠೇನ್ನಾಮಸಹಸ್ರಕಮ್ ।
ತೇನ ಸ್ಯಾತ್ಸಫಲಂ ಸರ್ವಂ ನಾಸ್ತ್ಯಸ್ಮಾದಧಿಕಂ ಯತಃ ॥ ೪೩ ॥

ದ್ವಾದಶ ಬ್ರಾಹ್ಮಣಾನ್ ಪಶ್ಚಾದ್ಭೋಜಯೇನ್ಮಧುಪಾಯಸೈಃ ।
ದದ್ಯಾತ್ಸುವರ್ಣಂ ಧೇನುಂ ಚ ವ್ರತಪೂರ್ಣತ್ವಹೇತವೇ ॥ ೪೪ ॥

ಶಕ್ತೌ ಪಲತ್ರಯಮಿತಂ ಸ್ವರ್ಣಸಿಂಹಂ ವಿಧಾಯ ಚ ।
ತತ್ರಾಸ್ಯ ಪುಸ್ತಕಂ ಸ್ಥಾಪ್ಯಂ ಲಿಖಿತಂ ಲಲಿತಾಕ್ಷರಮ್ ॥ ೪೫ ॥

ಸಂಪೂಜ್ಯಾವಾಹನಾದ್ಯೈಸ್ತದುಪಚಾರೈಃ ಸದಕ್ಷಿಣಮ್ ।
ವಸ್ತ್ರಭೂಷಣಗಂಧಾದ್ಯೈಃ ಪೂಜಿತಾಯ ಯತಾತ್ಮನೇ ॥ ೪೬ ॥

ಆಚಾರ್ಯಾಯ ಸುಧೀರ್ದತ್ತ್ವಾ ಮುಕ್ತಃ ಸ್ಯಾದ್ಭವಬಂಧನೈಃ ।
ಏವಂ ಕೃತೇ ವಿಧಾನೇ ಚ ಸರ್ವಪಾಪನಿವಾರಣೇ ॥ ೪೭ ॥

ಫಲದಂ ಸ್ಯಾತ್ಪುರಾಣಂ ತು ಶ್ರೀಮದ್ಭಾಗವತಂ ಶುಭಮ್ ।
ಧರ್ಮಕಾಮಾರ್ಥಮೋಕ್ಷಾಣಾಂ ಸಾಧನಂ ಸ್ಯಾನ್ನ ಸಂಶಯಃ ॥ ೪೮ ॥

ಕುಮಾರಾ ಊಚುಃ

ಇತಿ ತೇ ಕಥಿತಂ ಸರ್ವಂ ಕಿಂ ಭೂಯಃ ಶ್ರೋತುಮಿಚ್ಛಸಿ ।
ಶ್ರೀಮದ್ಭಾಗವತೇನೈವ ಭುಕ್ತಿಮುಕ್ತೀ ಕರೇ ಸ್ಥಿತೇ ॥ ೪೯ ॥

ಸೂತ ಉವಾಚ

ಇತ್ಯುಕ್ತ್ವಾ ತೇ ಮಹಾತ್ಮಾನಃ ಪ್ರೋಚುರ್ಭಾಗವತೀಂ ಕಥಾಮ್ ।
ಸರ್ವಪಾಪಹರಾಂ ಪುಣ್ಯಾಂ ಭುಕ್ತಿಮುಕ್ತಿಪ್ರದಾಯಿನೀಮ್ ॥ ೫೦ ॥

ಶೃಣ್ವತಾಂ ಸರ್ವಭೂತಾನಾಂ ಸಪ್ತಾಹಂ ನಿಯತಾತ್ಮನಾಮ್ ।
ಯಥಾವಿಧಿ ತತೋ ದೇವಂ ತುಷ್ಟುವುಃ ಪುರುಷೋತ್ತಮಮ್ ॥ ೫೧ ॥

ಹೋಮಮಾಡಬೇಕು. ॥ ೩೯ ॥ ಆ ಹೋಮದಲ್ಲಿ ದಶಮ ಸ್ಕಂಧದ ಒಂದೊಂದು ಶ್ಲೋಕವನ್ನು ಪಠಿಸಿ ವಿಧಿಪೂರ್ವಕವಾಗಿ ಪಾಯಸ, ಜೇನು, ತುಪ್ಪ ಎಳ್ಳು, ಅನ್ನ ಇತ್ಯಾದಿಗಳಿಂದ ಆಹುತಿ ಕೊಡಬೇಕು. ॥ ೪೦ ॥

ಅಥವಾ ಏಕಾಗ್ರಚಿತ್ತದಿಂದ ಗಾಯತ್ರೀ ಮಂತ್ರದ ಮೂಲಕ ಹೋಮಮಾಡಬೇಕು. ಏಕೆಂದರೆ ಈ ಶ್ರೀಮದ್ಭಾಗವತ ಮಹಾ-ಪುರಾಣವು ತಾತ್ತ್ವಿಕವಾಗಿ ಗಾಯತ್ರೀಸ್ವರೂಪವೇ ಆಗಿದೆ. ॥ ೪೧ ॥ ಹೋಮಮಾಡುವ ಶಕ್ತಿ ಇಲ್ಲದಿದ್ದರೆ ಹೋಮಫಲವನ್ನು ಪಡೆಯುವುದಕ್ಕಾಗಿ ಬ್ರಾಹ್ಮಣರಿಗೆ ಹೋಮದ್ರವ್ಯಗಳನ್ನು ದಾನ ಮಾಡಬೇಕು. ಸಪ್ತಾಹಶ್ರವಣದಲ್ಲಿ ಸಂಭವಿಸಬಹುದಾದ ಬಗೆ-ಬಗೆಯ ಛಿದ್ರಗಳನ್ನು ಪೂರಣಮಾಡಲು ಮತ್ತು ವಿಧಿಯಲ್ಲಿ ನ್ಯೂನಾಧಿಕ್ಯ ಆಗಿರುವ ದೋಷಗಳ ಶಾಂತಿಗಾಗಿ ವಿಷ್ಣುಸಹಸ್ರ-ನಾಮವನ್ನು ಪಾರಾಯಣಮಾಡಬೇಕು. ಅದರಿಂದ ಎಲ್ಲ ಕರ್ಮ-ಗಳು ಸಫಲವಾಗುತ್ತವೆ. ಏಕೆಂದರೆ, ಅದಕ್ಕಿಂತ ಶ್ರೇಷ್ಠವಾದ ಕರ್ಮವು ಮತ್ತೊಂದಿಲ್ಲ. ॥ ೪೨-೪೩ ॥

ಅನಂತರ ಹನ್ನೆರಡು ಮಂದಿ ಬ್ರಾಹ್ಮಣರಿಗೆ ಪಾಯಸ, ಜೇನು ತುಪ್ಪ ಮುಂತಾದವುಗಳಿಂದ ಭೋಜನ ಮಾಡಿಸಬೇಕು. ವ್ರತದ ಪೂರ್ತಿಗಾಗಿ ಗೋದಾನ-ಸುವರ್ಣದಾನಗಳನ್ನು ಮಾಡಬೇಕು. ॥ ೪೪ ॥ ಸಾಮರ್ಥ್ಯವಿದ್ದರೆ ಮೂರು ತೊಲ ಸುವರ್ಣದಿಂದ ಒಂದು ಸಿಂಹಾಸನವನ್ನು ಮಾಡಿಸಿ, ಅದರಲ್ಲಿ ಸುಂದರವಾದ ಅಕ್ಷರಗಳಿಂದ ಬರೆದ ಶ್ರೀಮದ್ಭಾಗವತ ಗ್ರಂಥವನ್ನಿಟ್ಟು, ಅದನ್ನು ಆವಾಹನಾದಿ ಷೋಡಶೋಪಚಾರ ಪೂಜೆಯನ್ನು ಸಲ್ಲಿಸಿ, ಜಿತೇಂದ್ರಿಯನಾದ ಆಚಾರ್ಯನನ್ನು ವಸ್ತ್ರ-ಭೂಷಣ-ಗಂಧಾದಿಗಳಿಂದ ಪೂಜಿಸಿ, ದಕ್ಷಿಣೆ ಸಹಿತ ಸಮರ್ಪಿಸಬೇಕು. ॥ ೪೫-೪೬ ॥ ಹೀಗೆ ದಾನಮಾಡಿದ ಬುದ್ಧಿವಂತನಾದ ದಾತೃವು ಭವಬಂಧನದಿಂದ ಬಿಡುಗಡೆ ಹೊಂದುವನು. ಈ ಸಪ್ತಾಹಪಾರಾಯಣದ ವಿಧಿಯು ಎಲ್ಲ ಪಾಪಗಳನ್ನು ಕಳೆಯುವಂತಹುದಾಗಿದೆ. ಇದನ್ನು ಈ ಪ್ರಕಾರ ಸರಿಯಾಗಿ ಪಾಲಿಸುವುದರಿಂದ ಈ ಮಂಗಲಮಯ ಭಾಗವತ ಪುರಾಣವು ಅಭೀಷ್ಟಫಲವನ್ನು ಕೊಡುತ್ತದೆ. ಧರ್ಮ, ಅರ್ಥ, ಕಾಮ, ಮೋಕ್ಷ ಎಂಬ ನಾಲ್ಕು ಪುರುಷಾರ್ಥಗಳನ್ನು ಅನುಗ್ರಹಿಸುವ ಸಾಧನ ಇದು. ಇದರಲ್ಲಿ ಸಂದೇಹವೇ ಇಲ್ಲ. ॥ ೪೭-೪೮ ॥

ಸನಕಾದಿಗಳು ಹೇಳುತ್ತಾರೆ – ನಾರದರೇ! ಈ ರೀತಿಯಾಗಿ ಈ ಸಪ್ತಾಹವಿಧಿಯನ್ನು ನಿಮಗೆ ಪೂರ್ಣವಾಗಿ ತಿಳಿಸಿದ್ದೇವೆ. ಈಗ ಇನ್ನೇನು ಕೇಳ ಬಯಸುತ್ತೀರಿ? ಈ ಶ್ರೀಮದ್ಭಾಗವತದಿಂದಲೇ ಭೋಗ ಮತ್ತು ಮೋಕ್ಷ ಎರಡೂ ಕೈವಶವಾಗುತ್ತವೆ. ॥ ೪೯ ॥

ಸೂತ ಪುರಾಣಿಕರು ಹೇಳುತ್ತಾರೆ – ಶೌನಕಾದಿಗಳೇ! ಹೀಗೆ ಹೇಳಿ ಮಹಾತ್ಮರಾದ ಸನಕಾದಿಗಳು ನಿಯಮಪೂರ್ವಕವಾಗಿ ಸರ್ವ ಪಾಪನಾಶಿನಿಯೂ, ಪರಮ ಪವಿತ್ರವೂ, ಭುಕ್ತಿ-ಮುಕ್ತಿ-ಪ್ರದಾಯಕವೂ ಆದ ಶ್ರೀಮದ್ಭಾಗವತ ಕಥೆಯನ್ನು ಸಪ್ತಾಹ ವಿಧಿ ಪೂರ್ವಕ ಪ್ರವಚನ ಮಾಡಿದರು. ಅನಂತರ ದೇವದೇವನಾದ ಪುರುಷೋತ್ತಮನನ್ನು ಯಥಾವಿಧಿಯಾಗಿ ಸ್ತೋತ್ರಮಾಡಿದರು. ॥ ೫೦-೫೧ ॥ ಕಥಾ ಶ್ರವಣಮಾಡಿದ ಕೊನೆಯಲ್ಲಿ ಜ್ಞಾನ, ಭಕ್ತಿ,

ತದಂತೇ ಜ್ಞಾನವೈರಾಗ್ಯಭಕ್ತೀನಾಂ ಪುಷ್ಟತಾ ಪರಾ ।
ತಾರುಣ್ಯಂ ಪರಮಂ ಚಾಭೂತ್ಸರ್ವಭೂತಮನೋಹರಮ್ ॥ ೭೨ ॥

ನಾರದಶ್ಚ ಕೃತಾರ್ಥೋಽಭೂತ್ಸಿದ್ಧೇ ಸ್ವೀಯೇ ಮನೋರಥೇ ।
ಪುಲಕೀಕೃತಸರ್ವಾಂಗಃ ಪರಮಾನಂದಸಂಭೃತಃ ॥ ೭೩ ॥

ಏವಂ ಕಥಾಂ ಸಮಾಕರ್ಣ್ಯ ನಾರದೋ ಭಗವತ್ಪ್ರಿಯಃ ।
ಪ್ರೇಮಗದ್ಗದಯಾ ವಾಚಾ ತಾನುವಾಚ ಕೃತಾಂಜಲಿಃ ॥ ೭೪ ॥

ನಾರದ ಉವಾಚ

ಧನ್ಯೋಽಸ್ಮ್ಯನುಗೃಹೀತೋಽಸ್ಮಿ ಭವದ್ಭಿಃ ಕರುಣಾಪರೈಃ ।
ಅದ್ಯ ಮೇ ಭಗವಾಂಲ್ಲಬ್ಧಃ ಸರ್ವಪಾಪಹರೋ ಹರಿಃ ॥ ೭೫ ॥

ಶ್ರವಣಂ ಸರ್ವಧರ್ಮೇಭ್ಯೋ ವರಂ ಮನ್ಯೇ ತಪೋಧನಾಃ ।
ವೈಕುಂಠಸ್ಥೋ ಯತಃ ಕೃಷ್ಣಃ ಶ್ರವಣಾದ್ಯಸ್ಯ ಲಭ್ಯತೇ ॥ ೭೬ ॥

ಸೂತ ಉವಾಚ

ಏವಂ ಬ್ರುವತಿ ವೈ ತತ್ರ ನಾರದೇ ವೈಷ್ಣವೋತ್ತಮೇ ।
ಪರಿಭ್ರಮನ್ ಸಮಾಯಾತಃ ಶುಕೋ ಯೋಗೇಶ್ವರಸ್ತದಾ ॥ ೭೭ ॥

ತತ್ರಾಯಯೌ ಷೋಡಶವಾರ್ಷಿಕಸ್ತದಾ
ವ್ಯಾಸಾತ್ಮಜೋ ಜ್ಞಾನಮಹಾಬ್ಧಿಚಂದ್ರಮಾಃ ।
ಕಥಾವಸಾನೇ ನಿಜಲಾಭಪೂರ್ಣಃ
ಪ್ರೇಮ್ಣಾ ಪಠನ್ ಭಾಗವತಂ ಶನೈಃ ಶನೈಃ ॥ ೭೮ ॥

ದೃಷ್ಟ್ವಾ ಸದಸ್ಯಾಃ ಪರಮೋರುತೇಜಸಂ
ಸದ್ಯಃ ಸಮುತ್ಥಾಯ ದದುರ್ಮಹಾಸನಮ್ ।
ಪ್ರೀತ್ಯಾ ಸುರರ್ಷಿಸ್ತಮಪೂಜಯತ್ಸುಖಂ
ಸ್ಥಿತೋಽವದತ್ಸಂಶೃಣುತಾಮಲಾಂ ಗಿರಮ್ ॥ ೭೯ ॥

ಶ್ರೀಶುಕ ಉವಾಚ

ನಿಗಮಕಲ್ಪತರೋರ್ಗಲಿತಂ ಫಲಂ
ಶುಕಮುಖಾದಮೃತದ್ರವಸಂಯುತಮ್ ।
ಪಿಬತ ಭಾಗವತಂ ರಸಮಾಲಯಂ
ಮುಹುರಹೋ ರಸಿಕಾ ಭುವಿ ಭಾವುಕಾಃ ॥ ೮೦ ॥

ವೈರಾಗ್ಯಗಳು ಎಲ್ಲ ಭಕ್ತರಿಗೂ ಆಕರ್ಷಕವಾದ ಪುಷ್ಟಿಯನ್ನು, ತಾರುಣ್ಯವನ್ನು ಪಡೆದು ಕಂಗೊಳಿಸಿದುವು. ॥ ೭೨ ॥ ತನ್ನ ಮನೋರಥವು ಈಡೇರಿದ್ದರಿಂದ ನಾರದರು ಪರಮಾನಂದ ಪೂರ್ಣರಾಗಿ ಪುಳಕಿತರಾದರು. ॥ ೭೩ ॥ ಹೀಗೆ ಕಥೆಯನ್ನು ಶ್ರವಣಿಸಿದ ಭಗವಂತನ ಪ್ರಿಯರಾದ ನಾರದರು ಕೈ ಮುಗಿದುಕೊಂಡು ಪ್ರೇಮ ಗದ್ಗದ ವಾಣಿಯಿಂದ ಸನಕಾದಿಗಳಲ್ಲಿ ಹೀಗೆ ವಿಜ್ಞಾಪಿಸಿಕೊಂಡರು. ॥ ೭೪ ॥

ನಾರದರೆಂದರು – ಓ ಮಹಾತ್ಮರೇ! ಕರುಣಾಪರರಾದ ನಿಮ್ಮಿಂದ ನಾನು ಧನ್ಯನಾದೆನು. ನಿಮ್ಮಿಂದ ಮಹಾನುಗ್ರಹ ವಾಯಿತು. ಈಗ ನನಗೆ ಸರ್ವಪಾಪಹರನಾದ ಭಗವಾನ್ ಶ್ರೀಹರಿಯು ಪ್ರಾಪ್ತಿಯಾಯಿತು. ॥ ೭೫ ॥ ತಪೋಧನರೇ! ಶ್ರೀಮದ್ಭಾಗವತ ಶ್ರವಣವನ್ನೇ ಸರ್ವಶ್ರೇಷ್ಠವಾದ ಧರ್ಮವೆಂದು ನಾನು ತಿಳಿಯುತ್ತೇನೆ. ಏಕೆಂದರೆ, ಇದರ ಶ್ರವಣದಿಂದ ವೈಕುಂಠ ನಿವಾಸಿಯಾದ ಶ್ರೀಕೃಷ್ಣನ ಪ್ರಾಪ್ತಿಯಾಗುತ್ತದೆ. ॥ ೭೬ ॥

ಸೂತರು ಹೇಳುತ್ತಾರೆ – ಶೌನಕರೇ! ವೈಷ್ಣವ ಶ್ರೇಷ್ಠರಾದ ನಾರದರು ಹೀಗೆ ಹೇಳುತ್ತಿರುವಂತೆಯೇ ಸುತ್ತಾಡುತ್ತಾ ಯೋಗೇಶ್ವರರಾದ ಶುಕಮಹಾಮುನಿಗಳು ಅಲ್ಲಿಗೆ ಬಂದರು. ॥ ೭೭ ॥ ಹದಿನಾರು ವಯಸ್ಸಿನ ಹರೆಯದಲ್ಲಿದ್ದರೂ ಮಹಾಜ್ಞಾನಿಗಳಾಗಿ ಜ್ಞಾನರೂಪೀ ಮಹಾಸಮುದ್ರಕ್ಕೆ ಚಂದ್ರನಂತಿರುವ, ಆತ್ಮಲಾಭದಿಂದ ಕೃತಕೃತ್ಯರಾಗಿದ್ದ ಶ್ರೀವೇದವ್ಯಾಸರ ಸುಪುತ್ರರಾದ ಶುಕಮುನೀಂದ್ರರು ಪರಮ ಪ್ರೇಮದಿಂದ ಮೆಲ್ಲ-ಮೆಲ್ಲನೆ ಶ್ರೀಭಾಗವತವನ್ನು ಪಠಿಸುತ್ತಾ ಕಥಾ ಸಪ್ತಾಹದ ಕೊನೆಯಲ್ಲಿ ಅಲ್ಲಿಗೆ ಆಗಮಿಸಿದರು. ॥ ೭೮ ॥ ಪರಮ ತೇಜಸ್ವಿಗಳಾದ ಶುಕಮಹಾಮುನಿಗಳನ್ನು ಕಂಡು ಎಲ್ಲ ಸಭಾಸದರು ಭಕ್ತಿ ಸಂಭ್ರಮದಿಂದ ಎದ್ದು ನಿಂತು, ಅವರಿಗೆ ಉನ್ನತವಾದ ಮಹಾಸನವನ್ನು ನೀಡಿದರು. ದೇವರ್ಷಿಗಳಾದ ನಾರದರು ಅವರನ್ನು ಪ್ರೇಮದಿಂದ ಪೂಜಿಸಿದರು. ಅವರು ಸುಖಾಸೀನರಾಗಿ 'ನನ್ನ ನಿರ್ಮಲ ವಾಣಿಯನ್ನು ಕೇಳಿರಿ' ಎಂದು ಪ್ರಾರಂಭಿಸಿ ಅನುಗ್ರಹ ಮಾತನ್ನು ಹೇಳಿದರು. ॥ ೭೯ ॥

ಶ್ರೀಶುಕಮಹಾಮುನಿಗಳು ಹೇಳಿದರು – 'ಓ ರಸಿಕ ಭಾವುಕ ಜನರೇ! ಈ ಶ್ರೀಮದ್ಭಾಗವತವು ವೇದರೂಪೀ ಕಲ್ಪವೃಕ್ಷದ ಪರಿಪಕ್ವವಾದ ಫಲವಾಗಿದೆ. ಶ್ರೀಶುಕನೆಂಬ ಶುಕಪಕ್ಷಿಯ ಮುಖದ ಸಂಯೋಗದಿಂದ ಅಮೃತರಸದಿಂದ ಪರಿಪೂರ್ಣವಾಗಿದೆ. ಇದರಲ್ಲಿ ಸಿಪ್ಪೆ ಗೊರಟು ಇಲ್ಲದ ರಸವೇ-ರಸವು ತುಂಬಿದೆ. ಇದು ಇದೇ ಲೋಕದಲ್ಲಿ ಸುಲಭವಾಗಿ ದೊರೆತಿದೆ. ಶರೀರದಲ್ಲಿ ಚೈತನ್ಯ ಇರುವ ತನಕ ನೀವೆಲ್ಲರೂ ಇದನ್ನು ಪದೇ-ಪದೇ ಪಾನಮಾಡುತ್ತಾ ಇರಿ. ॥ ೮೦ ॥ ಈ ಶ್ರೀಮದ್ಭಾಗವತದಲ್ಲಿ ನಿಷ್ಕಪಟ, ನಿಷ್ಕಾಮ ಪರಮಧರ್ಮವು ನಿರೂಪಿತವಾಗಿದೆ. ಇದು ಪ್ರತಿಪಾದನೆ ಮಾಡುವ ವಸ್ತು ಮಾತ್ಸರ್ಯರಹಿತರಾದ ಸಜ್ಜನರಿಗೆ ವೇದ್ಯವಾದ ಪರಮಸತ್ಯವು. ಇದು ಆಧ್ಯಾತ್ಮಿಕ, ಆಧಿದೈವಿಕ, ಆಧಿಭೌತಿಕಗಳೆಂಬ ಮೂರು ತಾಪಗಳನ್ನು ನಿರ್ಮೂಲನ ಗೊಳಿಸುವುದು. ಪರಮ ಮಂಗಳಕರವಾದುದು. ಮಹಾಮುನಿಗಳಾದ ವೇದವ್ಯಾಸರ

ಧರ್ಮಃ ಪ್ರೋಜ್ಝಿತಕೈತವೋಽತ್ರ ಪರಮೋ
ನಿರ್ಮತ್ಸರಾಣಾಂ ಸತಾಂ
ವೇದ್ಯಂ ವಾಸ್ತವಮತ್ರ ವಸ್ತು ಶಿವದಂ
ತಾಪತ್ರಯೋನ್ಮೂಲನಮ್ ।
ಶ್ರೀಮದ್ಭಾಗವತೇ ಮಹಾಮುನಿಕೃತೇ
ಕಿಂ ವಾ ಪರೈರೀಶ್ವರಃ
ಸದ್ಯೋ ಹೃದ್ಯವರುಧ್ಯತೇಽತ್ರ ಕೃತಿಭಿಃ
ಶುಶ್ರೂಷುಭಿಸ್ತತ್ಕ್ಷಣಾತ್ ॥ ೮೧ ॥

ಶ್ರೀಮದ್ಭಾಗವತಂ ಪುರಾಣತಿಲಕಂ
ಯದ್ವೈಷ್ಣವಾನಾಂ ಧನಂ
ಯಸ್ಮಿನ್ಪಾರಮಹಂಸ್ಯಮೇವಮಮಲಂ
ಜ್ಞಾನಂ ಪರಂ ಗೀಯತೇ ।
ಯತ್ರ ಜ್ಞಾನವಿರಾಗಭಕ್ತಿಸಹಿತಂ
ನೈಷ್ಕರ್ಮ್ಯಮಾವಿಷ್ಕೃತಂ
ತಚ್ಛೃಣ್ವನ್ಪ್ರಪಠನ್ ವಿಚಾರಣಪರೋ
ಭಕ್ತ್ಯಾ ವಿಮುಚ್ಯೇನ್ನರಃ ॥ ೮೨ ॥

ಸ್ವರ್ಗೇ ಸತ್ಯೇ ಚ ಕೈಲಾಸೇ ವೈಕುಂಠೇ ನಾಸ್ತ್ಯಯಂ ರಸಃ ।
ಅತಃ ಪಿಬಂತು ಸದ್ಭಾಗ್ಯಾ ಮಾ ಮಾ ಮುಂಚತ ಕರ್ಹಿಚಿತ್
॥ ೮೩ ॥

ಸೂತ ಉವಾಚ

ಏವಂ ಬ್ರುವಾಣೇ ಸತಿ ಬಾದರಾಯಣೌ
ಮಧ್ಯೇ ಸಭಾಯಾಂ ಹರಿರಾವಿರಾಸೀತ್ ।
ಪ್ರಹ್ಲಾದಬಲ್ಯುದ್ಧವಫಾಲ್ಗುನಾದಿಭಿ –
ರ್ವೃತಃ ಸುರರ್ಷಿಸ್ತಮಪೂಜಯಚ್ಚ ತಾನ್ ॥ ೮೪ ॥

ದೃಷ್ಟ್ವಾ ಪ್ರಸನ್ನಂ ಮಹದಾಸನೇ ಹರಿಂ
ತೇ ಚಕ್ರಿರೇ ಕೀರ್ತನಮಗ್ರತಸ್ತದಾ ।
ಭವೋ ಭವಾನ್ಯಾ ಕಮಲಾಸನಸ್ತು
ತತ್ರಾಗಮತ್ಕೀರ್ತನದರ್ಶನಾಯ ॥ ೮೫ ॥

ಪ್ರಹ್ಲಾದಸ್ತಾಲಧಾರೀ ತರಲಗತಿತಯಾ
ಚೋದ್ಧವಃ ಕಾಂಸ್ಯಧಾರೀ
ವೀಣಾಧಾರೀ ಸುರರ್ಷಿಃ ಸ್ವರಕುಶಲತಯಾ
ರಾಗಕರ್ತಾರ್ಜುನೋಽಭೂತ್ ।
ಇಂದ್ರೋಽವಾದೀನ್ಮೃದಂಗಂ ಜಯಜಯಸುಕರಾಃ
ಕೀರ್ತನೇ ತೇ ಕುಮಾರಾ
ಯತ್ರಾಗ್ರೇ ಭಾವವಕ್ತಾ ಸರಸರಚನಯಾ
ವ್ಯಾಸಪುತ್ರೋ ಬಭೂವ ॥ ೮೬ ॥

ರಚಿಸಿರುವ ಇಂತಹ ಶ್ರೀಮದ್ಭಾಗವತವು ಇರುವಾಗ ಬೇರೆ ಶಾಸ್ತ್ರಗಳು, ಸಾಧನೆಗಳ ಆವಶ್ಯಕತೆ ಇರುವುದಿಲ್ಲ. ಸುಕೃತಿಗಳು ಇದನ್ನು ಕೇಳಬೇಕೆಂಬ ಇಚ್ಛೆಯನ್ನು ಪ್ರಕಟಿಸಿದರೂ ಸಾಕು, ಒಡನೆಯೇ ಭಗವಂತನು ಅವರ ಹೃದಯದಲ್ಲಿ ಬಂದು ನೆಲೆಸಿ ಅಲ್ಲಿಯೇ ಸ್ಥಾಯಿಯಾಗುತ್ತಾನೆ. ॥ ೮೧ ॥ ಈ ಶ್ರೀಮದ್ಭಾಗವತವು ಪುರಾಣಗಳಿಗೆ ಶಿರೋಮಣಿಯಾಗಿದ್ದು, ವೈಷ್ಣವರಿಗೆ ಪರಮ ಧನವಾಗಿದೆ. ಇದರಲ್ಲಿ ಪರಮಹಂಸರಿಗೆ ಪ್ರಾಪ್ಯವಾಗಿರುವ ವಿಶುದ್ಧವಾದ ಜ್ಞಾನವೇ ವರ್ಣಿತವಾಗಿದೆ. ಜ್ಞಾನ, ವೈರಾಗ್ಯ, ಭಕ್ತಿಗಳಿಂದ ಕೂಡಿದ ನಿವೃತ್ತಿಮಾರ್ಗವನ್ನು ಇಲ್ಲಿ ಪ್ರಕಾಶಪಡಿಸಿದೆ. ಇದರ ಶ್ರವಣ, ಪಾರಾಯಣ, ಮನನಗಳಲ್ಲಿ ಆಸಕ್ತನಾದವನು ಮುಕ್ತನಾಗಿ ಬಿಡುತ್ತಾನೆ. ॥ ೮೨ ॥ ಈ ರಸವು ಸ್ವರ್ಗದಲ್ಲಾಗಲೀ, ಸತ್ಯಲೋಕದಲ್ಲಾಗಲೀ, ಕೈಲಾಸದಲ್ಲಾಗಲೀ, ವೈಕುಂಠದಲ್ಲಾಗಲೀ ಎಲ್ಲಿಯೂ ಇಲ್ಲ. ಆದುದರಿಂದ ಎಲೈ ಭಾಗ್ಯವಂತರಾದ ಶ್ರೋತೃಗಳೇ! ನೀವು ಇದನ್ನು ಪಾನಮಾಡಿರಿ, ಸವಿಯಿರಿ ಇದನ್ನು ಎಂದೂ ಬಿಡಬೇಡಿರಿ. ಖಂಡಿತವಾಗಿ ಬಿಡಬೇಡಿರಿ. ॥ ೮೩ ॥

ಸೂತಪುರಾಣಿಕರು ಹೇಳುತ್ತಾರೆ – ಬಾದರಾಯಣ ಪುತ್ರರಾದ ಶ್ರೀಶುಕರು ಹೀಗೆ ಹೇಳುತ್ತಿರುವಂತೆ ಸಭೆಯ ಮಧ್ಯದಲ್ಲಿ ಪ್ರಹ್ಲಾದ, ಬಲಿ, ಉದ್ಧವ, ಅರ್ಜುನ ಮುಂತಾದ ಪಾರ್ಷದರೊಂದಿಗೆ ಸಾಕ್ಷಾತ್ ಶ್ರೀಹರಿಯು ಪ್ರಕಟನಾದನು. ಆಗ ದೇವಋಷಿ ನಾರದರು ಭಗವಂತನನ್ನು ಹಾಗೂ ಅವನ ಭಕ್ತರನ್ನು ಯಥೋಚಿತವಾಗಿ ಪೂಜಿಸಿದರು. ॥ ೮೪ ॥ ದೊಡ್ಡ ಆಸನದಲ್ಲಿ ವಿರಾಜಮಾನನಾಗಿ ಪ್ರಸನ್ನನಾದ ಶ್ರೀಹರಿಯನ್ನು ಕಂಡು ಅವರೆಲ್ಲರೂ ಅವನ ಮುಂದೆ ಸಂಕೀರ್ತನೆಯನ್ನು ಪ್ರಾರಂಭಿಸಿದರು. ಆ ಸಂಕೀರ್ತನೆಯನ್ನು ನೋಡಲು ಪಾರ್ವತಿಸಮೇತನಾದ ಮಹಾದೇವನೂ, ಬ್ರಹ್ಮದೇವರೂ ಅಲ್ಲಿಗೆ ದಯಮಾಡಿಸಿದರು. ॥ ೮೫ ॥ ಸಂಕೀರ್ತನೆ ಪ್ರಾರಂಭವಾಯಿತು. ಅದರಲ್ಲಿ ಪಟುವಾದ ಗತಿಯುಳ್ಳ ಪ್ರಹ್ಲಾದರು ಕರತಾಳ ನುಡಿಸ ತೊಡಗಿದರು. ಉದ್ಧವರು ಕಂಚಿನ ತಾಳವನ್ನೆತ್ತಿಕೊಂಡು ನುಡಿಸಿದರು. ನಾರದರು ವೀಣೆಯನ್ನು ನುಡಿಸಿದರು. ಸ್ವರ ವಿಜ್ಞಾನ ಕುಶಲನಾದ ಅರ್ಜುನನು ರಾಗಾಲಾಪನೆ ಮಾಡತೊಡಗಿದನು. ಇಂದ್ರನು ಮೃದಂಗ ನುಡಿಸಿದನು. ಸನಕಾದಿಗಳು ನಡು-ನಡುವೆ ಜಯ-ಜಯಕಾರ ಮಾಡುತ್ತಿದ್ದರು. ಇವರೆಲ್ಲರ ಮುಂದೆ ಶುಕಮಹಾಮುನಿಗಳು ಬಗೆ-ಬಗೆಯ ರಸಮಯವಾದ ಅಂಗಭಂಗಿಗಳಿಂದ ಭಾವಗಳನ್ನು ಪ್ರದರ್ಶಿಸುತ್ತಿದ್ದರು. ॥ ೮೬ ॥ ಅವರೆಲ್ಲರ ನಡುವೆ ಪರಮ ತೇಜೋನಿಧಿಗಳಾದ ಭಕ್ತಿ, ಜ್ಞಾನ, ವೈರಾಗ್ಯಗಳು ನಟರಂತೆ ನರ್ತಿಸತೊಡಗಿದರು. ಇಂತಹ ಅಲೌಕಿಕವಾದ ಕೀರ್ತನವನ್ನು ನೋಡಿ ಭಗವಂತನು ತುಂಬಾ ಪ್ರಸನ್ನನಾಗಿ ಹೀಗೆ ಹೇಳತೊಡಗಿದನು. ॥ ೮೭ ॥ ನಿಮ್ಮ ಈ ಕಥಾಕೀರ್ತನದಿಂದ ನಾನು

ನರ್ತನ ಮಧ್ಯೇ ತ್ರಿಕಮೇವ ತತ್ರ
ಭಕ್ತ್ಯಾದಿಕಾನಾಂ ನಟವತ್ಸುತೇಜಸಾಮ್ ।
ಅಲೌಕಿಕಂ ಕೀರ್ತನಮೇತದೀಕ್ಷ್ಯ
ಹರಿಃ ಪ್ರಸನ್ನೋಽಪಿ ವಚೋಽಬ್ರವೀತ್ತತ್ ॥ ೮೭ ॥

ಮತ್ತೋ ವರಂ ಭಾವವೃತಾದ್ ವೃಣುಧ್ವಂ
ಪ್ರೀತಃ ಕಥಾಕೀರ್ತನತೋಽಸ್ಮಿ ಸಾಂಪ್ರತಮ್ ।
ಶ್ರುತ್ವೇತಿ ತದ್ವಾಕ್ಯಮತಿಪ್ರಸನ್ನಾಃ
ಪ್ರೇಮಾರ್ದ್ರಚಿತ್ತಾ ಹರಿಮೂಚಿರೇ ತೇ ॥ ೮೮ ॥

ಭಾಗವತಗಾಥಾಸು ಚ ಸರ್ವಭಕ್ತೈ-
ರೇಭಿಸ್ತ್ವಯಾ ಭಾವ್ಯಮಿತಿ ಪ್ರಯತ್ನಾತ್ ।
ಮನೋರಥೋಽಯಂ ಪರಿಪೂರಣೀಯ-
ಸ್ತಥೇತಿ ಚೋಕ್ತ್ವಾಂತರಧೀಯತಾಚ್ಯುತಃ ॥ ೮೯ ॥

ತತೋಽನಮತ್ತಚ್ಚರಣೇಷು ನಾರದ-
ಸ್ತಥಾ ಶುಕಾದೀನಪಿ ತಾಪಸಾಂಶ್ಚ ।
ಅಥ ಪ್ರಹೃಷ್ಟಾಃ ಪರಿನಷ್ಟಮೋಹಾಃ
ಸರ್ವೇ ಯಯುಃ ಪೀತಕಥಾಮೃತಾಸ್ತೇ ॥ ೯೦ ॥

ಭಕ್ತಿಃ ಸುತಾಭ್ಯಾಂ ಸಹ ರಕ್ಷಿತಾ ಸಾ
ಶಾಸ್ತ್ರೇ ಸ್ವಕೀಯೇಽಪಿ ತದಾ ಶುಕೇನ ।
ಅತೋ ಹರಿರ್ಭಾಗವತಸ್ಯ ಸೇವನಾ-
ಚ್ಚಿತ್ತಂ ಸಮಾಯಾತಿ ಹಿ ವೈಷ್ಣವಾನಾಮ್ ॥ ೯೧ ॥

ದಾರಿದ್ರ್ಯದುಃಖಜ್ವರದಾಹಿತಾನಾಂ
ಮಾಯಾಪಿಶಾಚೀಪರಿಮರ್ದಿತಾನಾಮ್ ।
ಸಂಸಾರಸಿಂಧೌ ಪರಿಪಾತಿತಾನಾಂ
ಕ್ಷೇಮಾಯ ವೈ ಭಾಗವತಂ ಪ್ರಗರ್ಜತಿ ॥ ೯೨ ॥

ಶೌನಕ ಉವಾಚ

ಶುಕೇನೋಕ್ತಂ ಕದಾ ರಾಜ್ಞೇ ಗೋಕರ್ಣೇನ ಕದಾ ಪುನಃ ।
ಸುರರ್ಷಯೇ ಕದಾ ಬ್ರಾಹ್ಮೈಶ್ಛಿಂಧಿ ಮೇ ಸಂಶಯಂ ತ್ವಿಮಮ್
॥ ೯೩ ॥

ಸೂತ ಉವಾಚ

ಆಕೃಷ್ಣನಿರ್ಗಮಾತ್ತ್ರಿಂಶದ್ವರ್ಷಾಧಿಕಗತೇ ಕಲೌ ।
ನವಮೀತೋ ನಭಸ್ಯೇ ಚ ಕಥಾರಂಭಂ ಶುಕೋಽಕರೋತ್
॥ ೯೪ ॥

ಪರೀಕ್ಷಿಚ್ಛ್ರವಣಾಂತೇ ಚ ಕಲೌ ವರ್ಷಶತದ್ವಯೇ ।
ಶುದ್ಧೇ ಶುಚೌ ನವಮ್ಯಾಂ ಚ ಧೇನುಜೋಽಕಥಯತ್ಕಥಾಮ್
॥ ೯೫ ॥

ಬಹಳ ಪ್ರಸನ್ನನಾಗಿರುವೆನು. ನಿಮ್ಮ ಭಕ್ತಿ ಭಾವಕ್ಕೆ ನಾನು ವಶನಾಗಿ ಬಿಟ್ಟಿದ್ದೇನೆ. ನಿಮಗೆ ಬೇಕಾದ ವರವನ್ನು ಕೇಳಿರಿ ಭಗವಂತನ ಈ ಮಾತನ್ನು ಕೇಳಿ ಎಲ್ಲ ಜನರೂ ಸಂತಸಗೊಂಡು ಪ್ರೇಮಾರ್ದ್ರ ಚಿತ್ತದಿಂದ ಭಗವಂತನಲ್ಲಿ ಬೇಡಿದರು. ॥ ೮೮ ॥ 'ಪ್ರಭೋ! ಮುಂದೆಯೂ ಕೂಡ ಎಲ್ಲೆಲ್ಲಿ ಸಪ್ತಾಹಕಥೆ ನಡೆಯುತ್ತದೋ ಅಲ್ಲೆಲ್ಲ ನೀನು ಈ ಪಾರ್ಷದರೊಡನೆ ಅವಶ್ಯವಾಗಿ ದಯಮಾಡಿಸಬೇಕು. ಈ ನಮ್ಮ ಮನೋರಥವನ್ನು ನೀನು ಈಡೇರಿಸಿಕೊಡು." ಎಂದು ಬೇಡಿಕೊಂಡರು. ಭಗವಂತನು 'ತಥಾಸ್ತು' ಹಾಗೆಯೇ ಆಗಲಿ ಎಂದು ಹೇಳಿ ಅಂತರ್ಧಾನನಾದನು. ॥ ೮೯ ॥

ಅನಂತರ ನಾರದ ಮಹರ್ಷಿಗಳು ಭಗವಂತನ ಹಾಗೂ ಆತನ ಪಾರ್ಷದರ ಪಾದಪದ್ಮಗಳಿಗೆ ಪ್ರಣಾಮಮಾಡಿದರು. ಮತ್ತೆ ಶುಕ ಮಹಾಮುನಿಗಳೇ ಮುಂತಾದ ತಪಸ್ವಿಗಳಿಗೂ ನಮಸ್ಕರಿಸಿದರು. ಕಥಾಮೃತವನ್ನು ಪಾನಮಾಡಿದ್ದರಿಂದ ಎಲ್ಲರಿಗೂ ಪರಮಾನಂದ ಪ್ರಾಪ್ತವಾಯಿತು. ಅವರ ಮೋಹವೆಲ್ಲ ನಾಶವಾಯಿತು. ಮತ್ತೆ ಅವರೆಲ್ಲರೂ ತಮ್ಮ-ತಮ್ಮ ಸ್ಥಾನಗಳಿಗೆ ತೆರಳಿದರು. ॥ ೯೦ ॥ ಆಗ ಶುಕಮುನಿಗಳು ಪುತ್ರರಸಹಿತ ಭಕ್ತಿಯನ್ನು ತಮ್ಮ ಶಾಸ್ತ್ರವಾದ ಶ್ರೀಮದ್ಭಾಗವತದಲ್ಲಿ ಸ್ಥಾಪಿಸಿದರು. ಆದರಿಂದಲೇ ಭಾಗವತವನ್ನು ಸೇವಿಸಿದರೆ ಶ್ರೀಹರಿಯು ವಿಷ್ಣುಭಕ್ತರ ಹೃದಯದಲ್ಲಿ ಬಂದು ವಿರಾಜಿಸುತ್ತಾನೆ. ॥ ೯೧ ॥ ದಾರಿದ್ರ್ಯವೆಂಬ ದುಃಖಜ್ವರದ ಜ್ವಾಲೆಯಿಂದ ಬೆಂದು ಹೋದವರು, ಮಾಯಾ ಪಿಶಾಚಿಯಿಂದ ಪೀಡಿಸಲ್ಪಟ್ಟವರು, ಸಂಸಾರ ಸಾಗರದಲ್ಲಿ ಮುಳುಗಿರುವವರು ಇವರೆಲ್ಲರ ಶ್ರೇಯಸ್ಸನ್ನು ಮಾಡುವುದಕ್ಕಾಗಿ ಶ್ರೀಮದ್ಭಾಗವತವು ಸಿಂಹನಾದ ಮಾಡುತ್ತಿದೆ. ॥ ೯೨ ॥

ಶೌನಕರು ಕೇಳಿದರು – ಸೂತಪುರಾಣಿಕರೇ! ಶುಕಮುನಿಗಳು ರಾಜಾಪರೀಕ್ಷಿತನಿಗೆ, ಗೋಕರ್ಣನು ಧುಂಧುಕಾರಿಗೆ, ಸನಕಾದಿಗಳು ನಾರದರಿಗೆ ಯಾವ-ಯಾವ ಸಮಯದಲ್ಲಿ ಈ ಗ್ರಂಥವನ್ನು ಉಪದೇಶಿಸಿದರು ? ನನ್ನ ಈ ಸಂಶಯವನ್ನು ಪರಿಹರಿಸಿರಿ ॥ ೯೩ ॥

ಸೂತಪುರಾಣಿಕರು ಹೇಳಿದರು – ಶ್ರೀಕೃಷ್ಣ ಪರಮಾತ್ಮನು ಸ್ವಧಾಮಗಮನದ ಬಳಿಕ ಕಲಿಯುಗದ ಮೂವತ್ತು ವರ್ಷಗಳಿಂದ ಸ್ವಲ್ಪ ಹೆಚ್ಚು ಕಾಲ ಕಳೆದ ಮೇಲೆ ಭಾದ್ರಪದ ಮಾಸದ ಶುಕ್ಲ ನವಮಿಯಿಂದ ಶುಕಮಹರ್ಷಿಗಳು ಕಥಾ ಪ್ರವಚನವನ್ನು ಪರೀಕ್ಷಿದ್ರಾಜನ ಮುಂದೆ ಪ್ರಾರಂಭಿಸಿದ್ದರು. ॥ ೯೪ ॥ ರಾಜಾ ಪರೀಕ್ಷಿತನು ಕಥೆ ಕೇಳಿದ ಅನಂತರ ಕಲಿಯುಗದ ಇನ್ನೂರು ವರ್ಷಗಳು ಕಳೆದ ಮೇಲೆ ಆಷಾಢ ಶುಕ್ಲ ನವಮಿಯಿಂದ ಗೋಕರ್ಣನು ಈ ಕಥೆಯನ್ನು ಪ್ರವಚನ ಮಾಡಿದ್ದನು. ॥ ೯೫ ॥ ಅದಕ್ಕೆ ಹಿಂದೆ ಕಲಿಯುಗದ ಮೂವತ್ತು ವರ್ಷಗಳು ಕಳೆದು ಹೋದಾಗ ಕಾರ್ತಿಕ ಶುಕ್ಲ ನವಮಿಯಿಂದ ಬ್ರಹ್ಮಮಾನಸ ಪುತ್ರರಾದ ಸನಕಾದಿಗಳು ಇದನ್ನು ನಾರದರಿಗೆ ಉಪದೇಶಿಸಿದ್ದರು. ॥ ೯೬ ॥ ಪುಣ್ಯಾತ್ಮರಾದ ಶೌನಕರೇ! ನೀವು ಕೇಳಿದುದಕ್ಕೆ ನಾನು

ತಸ್ಮಾದಪಿ ಕಲೌ ಪ್ರಾಪ್ತೇ ತ್ರಿಂಶದ್ವರ್ಷಗತೇ ಸತಿ ।
ಊಚುರೂರ್ಜೇ ಸಿತೇ ಪಕ್ಷೇ ನವಮ್ಯಾಂ ಬ್ರಹ್ಮಣಃ ಸುತಾಃ ॥ ೯೬ ॥

ಇತ್ಯೇತತ್ತೇ ಸಮಾಖ್ಯಾತಂ ಯತ್ಪೃಷ್ಟೋಽಹಂ ತ್ವಯಾನಘ ।
ಕಲೌ ಭಾಗವತೀ ವಾರ್ತಾ ಭವರೋಗವಿನಾಶಿನೀ ॥ ೯೭ ॥

ಕೃಷ್ಣಪ್ರಿಯಂ ಸಕಲಕಲ್ಮಷನಾಶನಂ ಚ
ಮುಕ್ತ್ಯೇಕಹೇತುಮಿಹ ಭಕ್ತಿವಿಲಾಸಕಾರಿ ।
ಸಂತಃ ಕಥಾನಕಮಿದಂ ಪಿಬತಾದರೇಣ
ಲೋಕೇ ಹಿ ತೀರ್ಥಪರಿಶೀಲನಸೇವಯಾ ಕಿಮ್ ॥ ೯೮ ॥

ಸ್ವಪುರುಷಮಪಿ ವೀಕ್ಷ್ಯ ಪಾಶಹಸ್ತಂ
ವದತಿ ಯಮಃ ಕಿಲ ತಸ್ಯ ಕರ್ಣಮೂಲೇ ।
ಪರಿಹರ ಭಗವತ್ಕಥಾಸು ಮತ್ತಾನ್
ಪ್ರಭುರಹಮನ್ಯನೃಣಾಂ ನ ವೈಷ್ಣವಾನಾಮ್ ॥ ೯೯ ॥

ಅಸಾರೇ ಸಂಸಾರೇ ವಿಷಯವಿಷಸಂಗಾಕುಲಧಿಯಃ
ಕ್ಷಣಾರ್ಧಂ ಕ್ಷೇಮಾರ್ಥಂ ಪಿಬತ ಶುಕಗಾಥಾತುಲಸುಧಾಮ್ ।
ಕಿಮರ್ಥಂ ವ್ಯರ್ಥಂ ಭೋ ವ್ರಜತ ಕುಪಥೇ ಕುತ್ಸಿತಕಥೇ
ಪರೀಕ್ಷಿತ್ಸಾಕ್ಷೀ ಯಚ್ಛ್ರವಣಗತಮುಕ್ತ್ಯುಕ್ತಿಕಥನೇ ॥ ೧೦೦ ॥

ರಸಪ್ರವಾಹಸಂಸ್ಥೇನ ಶ್ರೀಶುಕೇನೇರಿತಾ ಕಥಾ ।
ಕಂಠೇ ಸಂಬಧ್ಯತೇ ಯೇನ ಸ ವೈಕುಂಠಪ್ರಭುರ್ಭವೇತ್ ॥ ೧೦೦ ॥

ಇತಿ ಚ ಪರಮಗುಹ್ಯಂ ಸರ್ವಸಿದ್ಧಾಂತಸಿದ್ಧಂ
ಸಪದಿ ನಿಗದಿತಂ ತೇ ಶಾಸ್ತ್ರಪುಂಜಂ ವಿಲೋಕ್ಯ ।
ಜಗತಿ ಶುಕಕಥಾತೋ ನಿರ್ಮಲಂ ನಾಸ್ತಿ ಕಿಂಚಿತ್
ಪಿಬ ಪರಸುಖಹೇತೋರ್ದ್ವಾದಶಸ್ಕಂಧಸಾರಮ್ ॥ ೧೦೨ ॥


ಏತಾಂ ಯೋ ನಿಯತತಯಾ ಶೃಣೋತಿ ಭಕ್ತ್ಯಾ
ಯಶ್ಚೈನಾಂ ಕಥಯತಿ ಶುದ್ಧವೈಷ್ಣವಾಗ್ರೇ ।
ತೌ ಸಮ್ಯಗ್ವಿಧಿಕರಣಾತ್ಫಲಂ ಲಭೇತೇ
ಯಾಥಾರ್ಥ್ಯಾನ್ನಹಿ ಭುವನೇ ಕಿಮಪ್ಯಸಾಧ್ಯಮ್ ॥ ೧೦೩ ॥

ಉತ್ತರ ಕೊಟ್ಟಾಯಿತು. ಈ ಕಲಿಯುಗದಲ್ಲಿ ಶ್ರೀಮದ್ಭಾಗವತ ಕಥೆಯೇ ಭವರೋಗಕ್ಕೆ ರಾಮಬಾಣ ಔಷಧವಾಗಿದೆ. ॥ ೯೭ ॥

ಎಲೈ ಸತ್ಪುರುಷರೇ! ನೀವೆಲ್ಲ ಈ ಕಥಾಮೃತವನ್ನು ಆದರದಿಂದ ಪಾನಮಾಡಿರಿ. ಇದು ಶ್ರೀಕೃಷ್ಣನಿಗೆ ಅತ್ಯಂತ ಪ್ರಿಯವಾದುದು. ಸಕಲ ಪಾಪನಾಶ ಮಾಡುವಂತಹುದು ಮುಕ್ತಿಕೊಡುವಂಥದು ಭಕ್ತಿಯ ವಿಲಾಸವನ್ನು ಹೆಚ್ಚಿಸುವಂತಹುದು. ಲೋಕದಲ್ಲಿ ಇತರ ಶ್ರೇಯಸ್ಸಿನ ಸಾಧನೆಗಳನ್ನು ವಿಚಾರಮಾಡುವುದರಿಂದ ತೀರ್ಥಗಳನ್ನು ಸೇವಿಸುವುದರಿಂದ ಏನಾದೀತು? ॥ ೯೮ ॥ ಕೈಯಲ್ಲಿ ಪಾಶವನ್ನು ಹಿಡಿದು ಕೊಂಡಿರುವ ತನ್ನ ದೂತರನ್ನು ನೋಡಿ ಯಮಧರ್ಮನು ಅವರ ಕಿವಿಯಲ್ಲಿ ಹೇಳಿದನು- ನೋಡಿ, ಶ್ರೀಭಗವಂತನ ಕಥೆಗಳಿಂದ ಉನ್ಮತ್ತರಾಗಿರುವವರಿಂದ ದೂರವಿರಿ. ಇತರರಿಗೆ ದಂಡವನ್ನು ವಿಧಿಸುವ ಶಕ್ತಿ ನನಗುಂಟು, ಆದರೆ ವಿಷ್ಣುಭಕ್ತರ ಮೇಲೆ ನಮಗೆ ಅಧಿಕಾರ ಇಲ್ಲ. ॥ ೯೯ ॥ ಅಸಾರವಾದ ಸಂಸಾರದಲ್ಲಿ ವಿಷಯರೂಪೀ ವಿಷದ ಆಸಕ್ತಿಯ ಕಾರಣ ವ್ಯಾಕುಲವಾದ ಬುದ್ಧಿಯುಳ್ಳವರೇ! ನಿಮ್ಮ ಆತ್ಮಕಲ್ಯಾಣಕ್ಕೋಸ್ಕರ ಅರ್ಧಕ್ಷಣಕಾಲವಾದರೂ ಶುಕರು ಅನುಗ್ರಹಿಸಿದ ಶ್ರೀಭಾಗವತ ಕಥೆಯೆಂಬ ಅಮೃತವನ್ನು ಪಾನಮಾಡಿರಿ. ಎಲೈ ಜನರಿರಾ! ನಿಂದಿತವಾದ ಕಥೆಗಳಿಂದ ಕೂಡಿದ ಕುಮಾರ್ಗದಲ್ಲಿ ವ್ಯರ್ಥವಾಗಿ ಏಕೆ ಅಲೆದಾಡುತ್ತಿದ್ದೀರಿ? ಈ ಕಥೆಯು ಕಿವಿಗೆ ಪ್ರವೇಶ ಮಾಡಿದ್ದರಿಂದಲೇ ಮುಕ್ತಿಯು ದೊರೆಯುವುದು. ಇದಕ್ಕೆ ರಾಜಾ ಪರೀಕ್ಷಿತನೇ ಸಾಕ್ಷಿ. ॥ ೧೦೦ ॥ ಶ್ರೀಶುಕಮಹಾ ಮುನಿಗಳು ಪ್ರೇಮರಸ ಪ್ರವಾಹದಲ್ಲಿ ಮುಳುಗಿ ಈ ಕಥೆಯನ್ನು ಉಪದೇಶಿಸಿದರು. ಯಾರ ಕಂಠದಿಂದ ಈ ಕಥೆಯು ಮೊಳಗುತ್ತದೋ ಅವರು ವೈಕುಂಠಕ್ಕೆ ಅಧಿಕಾರಿಗಳಾಗಿ ಬಿಡುತ್ತಾರೆ. ॥ ೧೦೧ ॥ ಶೌನಕರೇ! ನಾನು ಅನೇಕ ಶಾಸ್ತ್ರಗಳನ್ನು ನೋಡಿ ಸಿದ್ಧವಾದ ಗೋಪ್ಯವಾದ ಈ ರಹಸ್ಯವನ್ನು ನಿನಗೆ ಅರುಹಿದ್ದೇನೆ. ಇದು ಎಲ್ಲ ಶಾಸ್ತ್ರಗಳ ಸಿದ್ಧಾಂತಗಳ ಸಾರವಾಗಿದೆ. ಜಗತ್ತಿನಲ್ಲಿ ಈ ಶುಕಶಾಸ್ತ್ರಕ್ಕಿಂತಲೂ ಪವಿತ್ರವಾದ ವಸ್ತು ಇನ್ನೊಂದಿಲ್ಲ. ಆದ್ದರಿಂದ ನೀವೆಲ್ಲರೂ ಪರಮಾನಂದದ ಪ್ರಾಪ್ತಿಗಾಗಿ ಈ ದ್ವಾದಶಸ್ಕಂಧ ರೂಪವಾದ ರಸವನ್ನು ಪಾನಮಾಡಿರಿ, ಸವಿಯಿರಿ. ॥೧೦೨॥ ನಿಯಮಪೂರ್ವಕ ಈ ಕಥೆಯನ್ನು ಭಕ್ತಿ-ಭಾವದಿಂದ ಶ್ರವಣಿಸುವವನು, ಶುದ್ಧಾಂತಃಕರಣ ಭಗವದ್ಭಕ್ತರ ಮುಂದೆ ಪ್ರವಚನ ಮಾಡುವವನು, ಹೀಗೆ ಇಬ್ಬರೂ ಶಾಸ್ತ್ರವಿಧಿಯನ್ನು ಪೂರ್ಣವಾಗಿ ಪಾಲಿಸಿದ್ದರಿಂದ ಇದರ ಪಾರಮಾರ್ಥಿಕ ಫಲವನ್ನು ಪಡೆಯುತ್ತಾರೆ. ಅವರಿಗೆ ಮೂರು ಲೋಕಗಳಲ್ಲಿಯೂ ಅಸಾಧ್ಯವಾದುದು ಯಾವುದೂ ಇರುವುದಿಲ್ಲ. ॥ ೧೦೩ ॥


ಇತಿ ಶ್ರೀಪದ್ಮಪುರಾಣೇ ಉತ್ತರಖಂಡೇ ಶ್ರೀಮದ್ಭಾಗವತಮಾಹಾತ್ಮ್ಯೇ ಶ್ರವಣವಿಧಿಕಥನಂ ನಾಮ ಷಷ್ಠೋಽಧ್ಯಾಯಃ ॥ ೬ ॥

ಇಲ್ಲಿಗೆ ಶ್ರೀಪದ್ಮಪುರಾಣದ ಉತ್ತರಖಂಡದ ಶ್ರೀಮದ್ಭಾಗವತಮಾಹಾತ್ಮ್ಯೆಯಲ್ಲಿ ಸಪ್ತಾಹ ಶ್ರವಣವಿಧಿಯನ್ನು ಹೇಳುವ ಆರನೆಯ ಅಧ್ಯಾಯವು ಮುಗಿಯಿತು. ॥ ೬ ॥



भगवान् व्यासका पुराण-प्रवचन

Vyāsa discourses on Purāṇas





भगवान् नारायणके नाभि-कमलसे लोकपितामह ब्रह्माकी उत्पत्ति

Brahmā emanates from the navel-lotus of Nārāyaṇa



देवों तथा ऋषिगणोंको भगवान् वराहके दिव्य दर्शन

Vision of Lord Varāha to Gods and Ṛṣis




माता देवहूतिको भगवान् कपिलका तत्त्वोपदेश

Kapila preaches knowledge to mother Devahūti



बालक ध्रुवपर भगवान्‌का अनुग्रह

The grace of Lord descends on Dhruva



भक्तिके नौ प्रकार

Ninefold devotion



भगवान् विष्णु वामन-रूपमें

Lord Viṣṇu as a Dwarf

॥ ಓಂ ನಮೋ ಭಗವತೇ ವಾಸುದೇವಾಯ ॥

ಶ್ರೀಮದ್ಭಾಗವತಮಹಾಪುರಾಣಮ್

ಪ್ರಥಮಃ ಸ್ಕಂಧಃ

ಮೊದಲನೆಯ ಅಧ್ಯಾಯ

ಶ್ರೀಸೂತಪುರಾಣಿಕರಲ್ಲಿ ಶೌನಕಾದಿ ಋಷಿಗಳ ಪ್ರಶ್ನೆ

ಮಂಗಲಾಚರಣೆ

ಜನ್ಮಾದ್ಯಸ್ಯ ಯತೋಽನ್ವಯಾದಿತರತ-
ಶ್ಚಾರ್ಥೇಷ್ವಭಿಜ್ಞಃ ಸ್ವರಾಟ್
ತೇನೇ ಬ್ರಹ್ಮ ಹೃದಾ ಯ ಆದಿಕವಯೇ
ಮುಹ್ಯಂತಿ ಯತ್ಸೂರಯಃ ।
ತೇಜೋವಾರಿಮೃದಾಂ ಯಥಾ ವಿನಿಮಯೋ
ಯತ್ರ ತ್ರಿಸರ್ಗೋಽಮೃಷಾ
ಧಾಮ್ನಾ ಸ್ವೇನ ಸದಾ ನಿರಸ್ತಕುಹಕಂ
ಸತ್ಯಂ ಪರಂ ಧೀಮಹಿ ॥ ೧ ॥

ಪರಮ ಸತ್ಯ ಸ್ವರೂಪನಾದ ಪರಬ್ರಹ್ಮ ಪರಮಾತ್ಮನೇ! ನಿನಗೆ ನಮಸ್ಕಾರವು. ನಿನ್ನಿಂದಲೇ ಈ ಚರಾಚರ ಜಗತ್ತಿನ ಉತ್ಪತ್ತಿ, ಸ್ಥಿತಿ, ಪ್ರಳಯಗಳು ಆಗುತ್ತಾ ಇರುತ್ತವೆ. ನೀನು ನಿನ್ನ ಸಂಕಲ್ಪದಿಂದಲೇ ಅನೇಕ ವಿಧದ ಪ್ರಾಣಿಗಳನ್ನು ನಿರ್ಮಾಣಮಾಡಿ ಅವರಿಗೆ ಉಪಯೋಗಿಯಾದ ವಿವಿಧ ಪದಾರ್ಥಗಳನ್ನೂ ಉಂಟುಮಾಡಿದೆ. ಅನ್ವಯರೂಪದಿಂದ ನೀನೇ ಸಮಗ್ರ ವಿಶ್ವದಲ್ಲಿ ತುಂಬಿರುವೆ. ಹಾಗೆಯೇ ವ್ಯತಿರೇಕ ಕ್ರಮದಿಂದಲೂ 'ನೇತಿ-ನೇತಿ' ಈ ಉಪನಿಷದ್ ವಾಕ್ಯಗಳಿಂದ ಸಮಸ್ತ ವಿಶ್ವದ ನಿರಾಕರಣ ಮಾಡಿದರೂ ಶೇಷವಾಗಿ ಉಳಿಯುವವನು ನೀನೇ. ಹೀಗೆ ಆದಿ-ಮಧ್ಯಾಂತಗಳಲ್ಲಿ ನೀನೇ ಇರುವೆ. (ವಾಸುದೇವಃ ಸರ್ವಮ್). ನೀನು ಶುದ್ಧ ಜ್ಞಾನಸ್ವರೂಪನೂ, ಸ್ವಯಂ ಪ್ರಕಾಶನೂ ಆಗಿರುವೆ. ಚತುರ್ಮುಖ ಬ್ರಹ್ಮದೇವರಿಗೆ ನೀನೇ ತನ್ನ ಸಂಕಲ್ಪದಿಂದ ವೇದಜ್ಞಾನವನ್ನೂ ಪ್ರದಾನ ಮಾಡಿರುವೆ. ನಿನ್ನಿಂದ ಸೃಷ್ಟಿಸಲ್ಪಟ್ಟ ಈ ವಿಶ್ವನಿರ್ಮಾಣದ ಕೌಶಲ್ಯದ ಕುರಿತು ಹಾಗೂ ವೇದಗಳ ತಾತ್ಪರ್ಯವನ್ನು ಅರಿಯುವುದರಲ್ಲಿ ವಿದ್ವಾಂಸರೂ ಮೋಹಿತರಾಗುತ್ತಾರೆ. ನೀನು ವಿಶ್ವಸಂಕಲ್ಪವನ್ನು ಮಾಡಿದಾಗ ತ್ರಿಗುಣಾತ್ಮಕವಾದ ಪ್ರಕೃತಿಯಲ್ಲಿ ಕ್ಷೋಭ ಉಂಟಾಗಿ ಚರಾಚರ ಜಗತ್ತು ಉತ್ಪನ್ನವಾಯಿತು. ನೀನೇ ಅದಕ್ಕೆ ಪರಮಾಧಾರನಾಗಿರುವೆ. ನಿಜವಾಗಿ ಈ ವಿಶ್ವದ ರೂಪದಲ್ಲಿ ನೀನೇ ಆಗಿದ್ದರೂ, ಸೂರ್ಯನ ಪ್ರಕಾಶಕಿರಣಗಳಿಂದ ಮರುಭೂಮಿಯಲ್ಲಿ ನೀರು ಮತ್ತು ನೀರಿನಲ್ಲಿ ನೆಲದ ಭ್ರಮೆ ಉಂಟಾಗುವಂತೆಯೇ, ನಿನ್ನ ಮಾಯೆಯ ಪ್ರಭಾವದಿಂದ ನಿತ್ಯವಲ್ಲದ ಸೃಷ್ಟಿಯು ಸತ್ಯದಂತೆ ಭಾಸವಾಗುತ್ತದೆ. ನಿನ್ನ ಸ್ವರೂಪವು ಮಾಯೆಯ ಪರದೆಯಿಂದಾಗಿ ಅಡಗಿರುತ್ತದೆ. ಮಾಯೆಯಾದರೋ ನಿನಗೆ ಹೆದರಿಕೊಂಡೇ ಇರುತ್ತದೆ. ಪ್ರಭೋ! ನೀನೇ ದಯೆಮಾಡಿ ಈ ಮಾಯೆಯ ಆವರಣವನ್ನು ದೂರಗೊಳಿಸಿ, ನಿನ್ನ ನಿಜಸ್ವರೂಪದ ದರ್ಶನವನ್ನು ಮಾಡಿಸು ಎಂದು ನಾವು ಪ್ರಾರ್ಥಿಸುತ್ತೇವೆ. ನಾವು ನಿನ್ನ ಸತ್ಯಸ್ವರೂಪವನ್ನು ಧ್ಯಾನಿಸುತ್ತೇವೆ. ॥ ೧ ॥

ಧರ್ಮಃ ಪ್ರೋಜ್ಝಿತಕೈತವೋಽತ್ರ ಪರಮೋ
ನಿರ್ಮತ್ಸರಾಣಾಂ ಸತಾಂ
ವೇದ್ಯಂ ವಾಸ್ತವಮತ್ರ ವಸ್ತು ಶಿವದಂ
ತಾಪತ್ರಯೋನ್ಮೂಲನಮ್ ।
ಶ್ರೀಮದ್ಭಾಗವತೇ ಮಹಾಮುನಿಕೃತೇ
ಕಿಂ ವಾ ಪರೈರೀಶ್ವರಃ
ಸದ್ಯೋ ಹೃದ್ಯವರುಧ್ಯತೇಽತ್ರ ಕೃತಿಭಿಃ
ಶುಶ್ರೂಷುಭಿಸ್ತತ್ಕ್ಷಣಾತ್ ॥ ೨ ॥

ಮಹಾಮುನಿಗಳಾದ ವೇದವ್ಯಾಸದೇವರಿಂದಲೇ ನಿರ್ಮಿತವಾದ ಈ ಶ್ರೀಮದ್ಭಾಗವತ ಮಹಾಪುರಾಣದಲ್ಲಿ ಕಪಟರಹಿತವಾದ ಪರಮಧರ್ಮವು ನಿರೂಪಿತವಾಗಿದೆ. ಇದರಲ್ಲಿ ಮಾತ್ಸರ್ಯರಹಿತರಾದ ಸಜ್ಜನರಿಗೆ ವೇದ್ಯವಾಗುವ ಪರಮಸತ್ಯವೇ ಪ್ರತಿಪಾದಿತವಾಗಿದೆ. ಪರಮ ಮಂಗಳಕರವಾಗಿದೆ. ಆಧ್ಯಾತ್ಮಿಕ, ಆಧಿದೈವಿಕ, ಆಧಿಭೌತಿಕಗಳೆಂಬ ತಾಪತ್ರಯಗಳನ್ನು ನಿರ್ಮೂಲನ ಮಾಡುವಂತಹುದು. ಇಂತಹ ಭಾಗವತ ಶಾಸ್ತ್ರವಿರುವಾಗ ಬೇರೆ ಸಾಧನ, ಶಾಸ್ತ್ರಗಳ ಪ್ರಯೋಜನವೇನು ? ಸುಕೃತಿಗಳು ಇದನ್ನು ಕೇಳಬೇಕೆಂದು ಇಚ್ಛಿಸಿದರೆ ಸಾಕು, ತತ್ಕ್ಷಣದಲ್ಲೇ ಶ್ರೀಭಗವಂತನು ಅವರ ಹೃದಯವನ್ನು ಪ್ರವೇಶಿಸಿ ಅಲ್ಲಿಯೇ ಉಳಿದು ಬಿಡುವನು. ॥ ೨ ॥ ರಸಿಕ ಮರ್ಮಜ್ಞ ಭಕ್ತರೇ ! ಈ ಶ್ರೀಮದ್ಭಾಗವತವು ವೇದರೂಪೀ ಕಲ್ಪವೃಕ್ಷದ ಪಕ್ವವಾದ ಫಲವು. ಇದು ಶ್ರೀಶುಕಮುನಿಯೆಂಬ ಶುಕಪಕ್ಷಿಯ ಮುಖದ ಸಂಬಂಧದಿಂದ ಪರಮಾನಂದಾಮೃತ ದ್ರವದಿಂದ ಪೂರ್ಣವಾದ ಈ ಹಣ್ಣು ಸಿಪ್ಪೆ, ತಿರುಳು ಮುಂತಾದವುಗಳಿಲ್ಲದೆ ಕೇವಲ ರಸರೂಪವೇ ಆಗಿದೆ. ಭೂಮಿಯಲ್ಲಿ ಸುಲಭವಾಗಿ ದೊರಕಿದ ಈ ಫಲದ ದಿವ್ಯ ಭಗವದ್ರಸವನ್ನು ದೇಹಲಯವಾಗುವವರೆಗೂ, ಸಮಾಧಿಯಲ್ಲಿ ಮನೋಲಯವಾಗುವವರೆಗೂ, ಮತ್ತೆಯೆಲ್ಲಾ ಕೂಡ ಕುಡಿಯುತ್ತಾ ಇರಿ. ॥ ೩ ॥

ನಿಗಮಕಲ್ಪತರೋರ್ಗಲಿತಂ ಫಲಂ
ಶುಕಮುಖಾದಮೃತದ್ರವಸಂಯುತಮ್ ।
ಪಿಬತ ಭಾಗವತಂ ರಸಮಾಲಯಂ
ಮುಹುರಹೋ ರಸಿಕಾ ಭುವಿ ಭಾವುಕಾಃ ॥ ೩ ॥

ಕಥಾ ಪ್ರಾರಂಭ

ನೈಮಿಷೇಽನಿಮಿಷಕ್ಷೇತ್ರೇ ಋಷಯಃ ಶೌನಕಾದಯಃ ।
ಸತ್ರಂ ಸ್ವರ್ಗಾಯ ಲೋಕಾಯ ಸಹಸ್ರಸಮಮಾಸತ ॥ ೪ ॥

ತ ಏಕದಾ ತು ಮುನಯಃ ಪ್ರಾತರ್ಹುತಹುತಾಗ್ನಯಃ ।
ಸತ್ಕೃತಂ ಸೂತಮಾಸೀನಂ ಪಪ್ರಚ್ಛುರಿದಮಾದರಾತ್ ॥ ೫ ॥

ಋಷಯ ಊಚುಃ

ತ್ವಯಾ ಖಲು ಪುರಾಣಾನಿ ಸೇತಿಹಾಸಾನಿ ಚಾನಘ ।
ಆಖ್ಯಾತಾನ್ಯಪ್ಯಧೀತಾನಿ ಧರ್ಮಶಾಸ್ತ್ರಾಣಿ ಯಾನ್ಯುತ ॥ ೬ ॥

ಯಾನಿ ವೇದವಿದಾಂ ಶ್ರೇಷ್ಠೋ ಭಗವಾನ್ ಬಾದರಾಯಣಃ ।
ಅನ್ಯೇ ಚ ಮುನಯಃ ಸೂತ ಪರಾವರವಿದೋ ವಿದುಃ ॥ ೭ ॥

ವೇತ್ಥ ತ್ವಂ ಸೌಮ್ಯ ತತ್ಸರ್ವಂ ತತ್ತ್ವತಸ್ತದನುಗ್ರಹಾತ್ ।
ಬ್ರೂಯುಃ ಸ್ನಿಗ್ಧಸ್ಯ ಶಿಷ್ಯಸ್ಯ ಗುರವೋ ಗುಹ್ಯಮಪ್ಯುತ ॥ ೮ ॥

ತತ್ರ ತತ್ರಾಂಜಸಾಽಽಯುಷ್ಮನ್ ಭವತಾ ಯದ್ವಿನಿಶ್ಚಿತಮ್ ।
ಪುಂಸಾಮೇಕಾಂತತಃ ಶ್ರೇಯಸ್ತನ್ನಃ ಶಂಸಿತುಮರ್ಹಸಿ ॥ ೯ ॥

ಒಮ್ಮೆ ಶೌನಕಾದಿ ಮಹರ್ಷಿಗಳು ಶಾಶ್ವತಸುಖಮಯ ಭಗವಂತನ ಪ್ರಾಪ್ತಿಯ ಇಚ್ಛೆಯಿಂದ ದೇವತಾ ಕ್ಷೇತ್ರವಾದ ನೈಮಿಷಾರಣ್ಯದಲ್ಲಿ ಸಾವಿರಾರುವರ್ಷ ನಡೆಯಬೇಕಾದ ಒಂದು ಸತ್ರಯಾಗವನ್ನು ಕೈಗೊಂಡರು. ॥ ೪ ॥ ಒಂದು ದಿನ ಅವರೆಲ್ಲರೂ ಪ್ರಾತಃ ಕಾಲದ ಅಗ್ನಿಹೋತ್ರಾದಿ ನಿತ್ಯಕರ್ಮಗಳಿಂದ ನಿವೃತ್ತರಾಗಿ ಸೂತಪುರಾಣಿಕರನ್ನು ಪೂಜಿಸಿ, ಸತ್ಕರಿಸಿ, ಸುಖಾಸೀನದಲ್ಲಿ ಕುಳ್ಳಿರಿಸಿ ಅವರ ಬಳಿ ಹೀಗೆ ಪ್ರಶ್ನಿಸಿದರು. ॥ ೫ ॥

ಋಷಿಗಳು ಹೇಳಿದರು – ಪುಣ್ಯಾತ್ಮರಾದ ಸೂತ ಪುರಾಣಿಕರೇ ! ನೀವು ಎಲ್ಲ ಪುರಾಣಗಳನ್ನೂ, ಇತಿಹಾಸ ಧರ್ಮ ಶಾಸ್ತ್ರಗಳನ್ನೂ, ವಿಧಿಪೂರ್ವಕವಾಗಿ ಅಧ್ಯಯನ ಮಾಡಿರುವಿರಿ. ಅವುಗಳನ್ನು ಚೆನ್ನಾಗಿ ವ್ಯಾಖ್ಯಾನವನ್ನೂ ಮಾಡಿರುವಿರಿ. ॥ ೬ ॥ ಭಗವಂತನ ಸಗುಣ-ನಿರ್ಗುಣ ರೂಪವನ್ನು ಬಲ್ಲವರೂ, ವೇದಜ್ಞರಲ್ಲಿ ಶ್ರೇಷ್ಠರೂ ಆದ ಭಗವಾನ್ ಬಾದರಾಯಣರು ಹಾಗೂ ಪರಮಾತ್ಮ ತತ್ತ್ವವನ್ನರಿತ ಇತರ ಮುನಿಗಳು ಅರಿತಿರುವುದೆಲ್ಲವನ್ನು ನೀವು ಅವರ ಅನುಗ್ರಹದಿಂದ ಯಥಾವತ್ತಾಗಿ ತಿಳಿದಿರುವಿರಿ. ಶುದ್ಧಾತ್ಮರಾದ ನೀವು ಅವರ ಪ್ರಿಯಶಿಷ್ಯರು. ಗುರುಗಳು ತಮ್ಮ ಪ್ರಿಯಶಿಷ್ಯರಿಗೆ ಎಲ್ಲ ಪರಮ ರಹಸ್ಯವನ್ನು ಹೇಳಿಬಿಡುತ್ತಾರೆ. ॥ ೭-೮ ॥ ಆಯುಷ್ಮಂತನೇ ! ಆ ಎಲ್ಲ ಶಾಸ್ತ್ರಗಳಲ್ಲಿ, ಗುರುಜನರ ಉಪದೇಶಗಳಲ್ಲಿ ಯಾವುದನ್ನು ಕಲಿಯುಗದ ಜೀವರಿಗೆ ಪರಮಶ್ರೇಯಸ್ಸಿನ ಸುಲಭಸಾಧನವೆಂದು ನೀವು ನಿಶ್ಚಯಿಸಿರುವಿರೋ ಅದನ್ನು ದಯಮಾಡಿ ನಮಗೆ ಹೇಳಿರಿ. ॥ ೯ ॥

ಪ್ರಾಯೇಣಾಲ್ಪಾಯುಷಃ ಸಭ್ಯ ಕಲಾವಸ್ಮಿನ್ ಯುಗೇ ಜನಾಃ ।
ಮಂದಾಃ ಸುಮಂದಮತಯೋ ಮಂದಭಾಗ್ಯಾ ಹ್ಯುಪದ್ರುತಾಃ
॥ ೧೦ ॥

ಭೂರೀಣಿ ಭೂರಿಕರ್ಮಾಣಿ ಶ್ರೋತವ್ಯಾನಿ ವಿಭಾಗಶಃ ।
ಅತಃ ಸಾಧೋಽತ್ರ ಯತ್ಸಾರಂ ಸಮುದ್ಧೃತ್ಯ ಮನೀಷಯಾ ।
ಬ್ರೂಹಿ ನಃ ಶ್ರದ್ದಧಾನಾನಾಂ ಯೇನಾತ್ಮಾ ಸಂಪ್ರಸೀದತಿ
॥ ೧೧ ॥

ಸೂತ ಜಾನಾಸಿ ಭದ್ರಂ ತೇ ಭಗವಾನ್ ಸಾತ್ವತಾಂ ಪತಿಃ ।
ದೇವಕ್ಯಾಂ ವಸುದೇವಸ್ಯ ಜಾತೋ ಯಸ್ಯ ಚಿಕೀರ್ಷಯಾ
॥ ೧೨ ॥

ತನ್ನಃ ಶುಶ್ರೂಷಮಾಣಾನಾಮರ್ಹಸ್ಯಂಗಾನುವರ್ಣಿತುಮ್ ।
ಯಸ್ಯಾವತಾರೋ ಭೂತಾನಾಂ ಕ್ಷೇಮಾಯ ಚ ಭವಾಯ ಚ
॥ ೧೩ ॥

ಆಪನ್ನಃ ಸಂಸೃತಿಂ ಘೋರಾಂ ಯನ್ನಾಮ ವಿವಶೋ ಗೃಣನ್ ।
ತತಃ ಸದ್ಯೋ ವಿಮುಚ್ಯೇತ ಯದ್ಬಿಭೇತಿ ಸ್ವಯಂ ಭಯಮ್
॥ ೧೪ ॥

ಯತ್ಪಾದಸಂಶ್ರಯಾಃ ಸೂತ ಮುನಯಃ ಪ್ರಶಮಾಯನಾಃ ।
ಸದ್ಯಃ ಪುನಂತ್ಯುಪಸ್ಪೃಷ್ಟಾಃ ಸ್ವರ್ಧುನ್ಯಾಪೋಽನುಸೇವಯಾ
॥ ೧೫ ॥

ಕೋ ವಾ ಭಗವತಸ್ತಸ್ಯ ಪುಣ್ಯಶ್ಲೋಕೇಡ್ಯಕರ್ಮಣಃ ।
ಶುದ್ಧಿಕಾಮೋ ನ ಶೃಣುಯಾದ್ಯಶಃ ಕಲಿಮಲಾಪಹಮ್
॥ ೧೬ ॥

ತಸ್ಯ ಕರ್ಮಾಣ್ಯುದಾರಾಣಿ ಪರಿಗೀತಾನಿ ಸೂರಿಭಿಃ ।
ಬ್ರೂಹಿ ನಃ ಶ್ರದ್ದಧಾನಾನಾಂ ಲೀಲಯಾ ದಧತಃ ಕಲಾಃ
॥ ೧೭ ॥

ಅಥಾಖ್ಯಾಹಿ ಹರೇರ್ಧೀಮನ್ ಅವತಾರಕಥಾಃ ಶುಭಾಃ ।
ಲೀಲಾ ವಿದಧತಃ ಸ್ವೈರಮೀಶ್ವರಸ್ಯಾತ್ಮಮಾಯಯಾ
॥ ೧೮ ॥

ಓ ವಿದ್ವಾಂಸರೇ! ಈ ಕಲಿಯುಗದಲ್ಲಿ ಜನರು ಸಾಮಾನ್ಯವಾಗಿ ಅಲ್ಪಾಯುಸ್ಸುಳ್ಳವರು, ಸೋಮಾರಿಗಳು, ಮೂಢಬುದ್ಧಿಯುಳ್ಳವರು, ಭಾಗ್ಯಹೀನರು, ಬಗೆ-ಬಗೆಯ ಪೀಡೆಗಳಿಗೆ ತುತ್ತಾಗಿ ನರಳುತ್ತಿದ್ದಾರೆ. ॥ ೧೦ ॥ ಇಷ್ಟೇ ಅಲ್ಲ, ಸಾಧುಗಳಾದ ಸೂತ ಪುರಾಣಿಕರೇ! ಶಾಸ್ತ್ರಗಳು ಬಹಳಷ್ಟು ಇವೆ. ಆದರೆ ಅವುಗಳಲ್ಲಿ ನಿಶ್ಚಿತವಾದ ಒಂದು ಸಾಧನ ಯಾವುದು ಎಂಬುದು ಅರಿವಿಗೆ ಬರುವುದಿಲ್ಲ. ಅನೇಕ ಪ್ರಕಾರದ ಕರ್ಮಗಳು ಮತ್ತು ಅವುಗಳ ಸಾಧನಗಳ ವರ್ಣನೆಯೂ ಇದೆ. ಅವುಗಳಲ್ಲಿ ಅನೇಕ ರೀತಿಯ ಮಾತುಗಳು ಕೇಳಲು ಸಿಗುತ್ತವೆ. ತಾವು ತಮ್ಮ ಬುದ್ಧಿ-ವಿವೇಕದಿಂದ ಅವುಗಳಲ್ಲಿನ ಸಾರವಾದ ಮಾತನ್ನು ತೆಗೆದು ಆರಿಸಿಟ್ಟು ನಮಗೆ ಹೇಳಿರಿ ಎಂದು ವಿನಂತಿಸುತ್ತೇವೆ. ಅದರಿಂದ ನಮ್ಮ ಅಂತಃಕರಣಕ್ಕೆ ಆಧ್ಯಾತ್ಮಿಕ ಶಾಂತಿ ಹಾಗೂ ಪರಮಾನಂದ ಪ್ರಾಪ್ತಿ ಉಂಟಾಗಲಿ. ಇದನ್ನು ತಮ್ಮಿಂದ ತಿಳಿಯುವುದರಲ್ಲಿ ನಮಗೆ ಅತ್ಯಂತ ಶ್ರದ್ಧೆಯಿದೆ. ॥ ೧೧ ॥

ನಿಮಗೆ ಮಂಗಳವಾಗಲಿ, ಸೂತಪುರಾಣಿಕರೇ! ಯದುವಂಶೀಯರ ರಕ್ಷಕನೂ, ಭಕ್ತವತ್ಸಲನೂ ಆದ ಭಗವಾನ್ ಶ್ರೀಕೃಷ್ಣನು ಏನನ್ನು ಮಾಡಬೇಕೆಂಬ ಇಚ್ಛೆಯಿಂದ ವಸುದೇವನ ಧರ್ಮಪತ್ನಿಯಾದ ದೇವಕಿಯಲ್ಲಿ ಅವತರಿಸಿದನು ? ಎಂಬುದು ನಿಮಗೆ ತಿಳಿದೇ ಇದೆ. ॥ ೧೨ ॥ ನಾವು ಅದನ್ನು ಕೇಳಬೇಕೆಂದು ಬಯಸುತ್ತಿದ್ದೇವೆ. ದಯಮಾಡಿ ತಿಳಿಸಿರಿ. ಭಗವಂತನ ಅವತಾರವು ಜೀವಿಗಳ ಪರಮಶ್ರೇಯಸ್ಸಿಗಾಗಿ ಮತ್ತು ಅವರ ಭಗವತ್ಪ್ರೇಮಮಯ ಸಮೃದ್ಧಿಗಾಗಿಯೇ ಆಗುತ್ತದೆ. ॥ ೧೩ ॥ ಈ ಘೋರವಾದ ಸಂಸಾರಚಕ್ರದಲ್ಲಿ ಸಿಕ್ಕಿಹಾಕಿಕೊಂಡಿರುವ ಜೀವನು ಭಗವಂತನ ಮಂಗಳಮಯವಾದ ನಾಮವನ್ನು ಯಾವುದೇ ಸ್ಥಿತಿಯಲ್ಲಿ ಉಚ್ಚರಿಸಿದರೂ ಅವನು ಒಡನೆಯೇ ಅದರಿಂದ ಬಿಡುಗಡೆ ಹೊಂದುತ್ತಾನೆ. ಏಕೆಂದರೆ, ಆ ಭಗವಂತನಿಗೆ ಭಯವೇ ಭಯಪಡುತ್ತದೆ. ॥ ೧೪ ॥ ಸೂತಪುರಾಣಿಕರೇ ! ಪರಮವಿರಕ್ತರೂ, ಪ್ರಶಾಂತರೂ ಆದ ಮುನಿಗಳು ಆ ಭಗವಂತನ ಚರಣಾರವಿಂದಗಳನ್ನು ಆಶ್ರಯಿಸಿ ಪವಿತ್ರರಾಗಿ, ತಮ್ಮ ಸ್ಪರ್ಶಮಾತ್ರದಿಂದ ಇತರರನ್ನು ಕೂಡಲೇ ಪವಿತ್ರರಾಗಿಸುತ್ತಾರೆ. ಗಂಗಾತೀರ್ಥವಾದರೋ ಬಹಳ ದಿನಗಳವರೆಗೆ ಸೇವಿಸಿದರೆ ಮಾತ್ರ ಪವಿತ್ರತೆಯನ್ನು ಉಂಟುಮಾಡುವುದು. ॥ ೧೫ ॥ ಪುಣ್ಯಕೀರ್ತಿಯಾದ ಸ್ತೋತ್ರಾರ್ಹವಾದ ದಿವ್ಯಲೀಲೆಗಳನ್ನು ನಡೆಸುವಂತಹ ಭಗವಂತನ ಕಲಿಕಲ್ಮಷಹರವಾದ ಪವಿತ್ರಕೀರ್ತಿಯನ್ನು ಆತ್ಮಶುದ್ಧಿಯನ್ನು ಬಯಸುವವರು ಯಾರುತಾನೇ ಶ್ರವಣ ಮಾಡುವುದಿಲ್ಲ? ॥ ೧೬ ॥ ಭಗವಂತನು ಲೀಲೆಯಿಂದಲೇ ಅವತರಿಸುತ್ತಾನೆ. ನಾರದಾದಿ ಮಹಾತ್ಮರು ಆತನ ಉದಾರ ಕೀರ್ತಿಯನ್ನು ಹಾಡಿ ಹೊಗಳಿದ್ದಾರೆ. ಶ್ರದ್ಧಾಳುಗಳಾದ ನಮಗೆ ಅದನ್ನು ನೀವು ವರ್ಣಿಸಿರಿ. ॥ ೧೭ ॥

ಓ ಧೀಮಂತರೇ! ಸರ್ವಸಮರ್ಥನಾದ ಆ ಪ್ರಭುವು ತನ್ನ ಯೋಗಮಾಯೆಯಿಂದ ಸ್ವೇಚ್ಛೆಯಿಂದಲೇ ಈ ಲೀಲೆಗಳನ್ನು ಮಾಡುತ್ತಾನೆ. ಆ ಶ್ರೀಹರಿಯ ಮಂಗಳಮಯ ಅವತಾರ ಕಥೆಗಳನ್ನು ಈಗ ನೀವು ವರ್ಣಿಸುವವರಾಗಿರಿ. ॥ ೧೮ ॥

ವಯಂ ತು ನ ವಿತೃಪ್ಯಾಮ ಉತ್ತಮಶ್ಲೋಕವಿಕ್ರಮೇ ।
ಯಚ್ಛೃಣ್ವತಾಂ ರಸಜ್ಞಾನಾಂ ಸ್ವಾದು ಸ್ವಾದು ಪದೇ ಪದೇ ॥ ೧೯ ॥

ಕೃತವಾನ್ ಕಿಲ ವೀರ್ಯಾಣಿ ಸಹ ರಾಮೇಣ ಕೇಶವಃ ।
ಅತಿಮರ್ತ್ಯಾನಿ ಭಗವಾನ್ ಗೂಢಃ ಕಪಟಮಾನುಷಃ ॥ ೨೦ ॥

ಕಲಿಮಾಗತಮಾಜ್ಞಾಯ ಕ್ಷೇತ್ರೇಽಸ್ಮಿನ್ ವೈಷ್ಣವೇ ವಯಮ್ ।
ಆಸೀನಾ ದೀರ್ಘಸತ್ರೇಣ ಕಥಾಯಾಂ ಸಕ್ಷಣಾ ಹರೇಃ ॥ ೨೦ ॥

ತ್ವಂ ನಃ ಸಂದರ್ಶಿತೋ ಧಾತ್ರಾ ದುಸ್ತರಂ ನಿಸ್ತಿತೀರ್ಷತಾಮ್ ।
ಕಲಿಂ ಸತ್ತ್ವಹರಂ ಪುಂಸಾಂ ಕರ್ಣಧಾರ ಇವಾರ್ಣವಮ್ ॥ ೨೨ ॥

ಬ್ರೂಹಿ ಯೋಗೇಶ್ವರೇ ಕೃಷ್ಣೇ ಬ್ರಹ್ಮಣ್ಯೇ ಧರ್ಮವರ್ಮಣಿ ।
ಸ್ವಾಂ ಕಾಷ್ಠಾಮಧುನೋಪೇತೇ ಧರ್ಮಃ ಕಂ ಶರಣಂ ಗತಃ ॥ ೨೩ ॥

ಪುಣ್ಯ-ಶ್ಲೋಕನಾದ ಭಗವಂತನ ದಿವ್ಯವಿಕ್ರಮ ಕಥೆಗಳನ್ನು ಎಷ್ಟು ಕೇಳಿದರೂ ನಮಗೆ ಸಾಕೆನಿಸುವುದಿಲ್ಲ, ಏಕೆಂದರೆ, ರಸಜ್ಞರಾದ ಶ್ರೋತೃಗಳಿಗೆ ಅವನ ದಿವ್ಯಲೀಲೆಗಳಲ್ಲಿ ಹೆಜ್ಜೆ-ಹೆಜ್ಜೆಗೆ ಹೊಸ-ಹೊಸ ರಸಾನುಭವ ಉಂಟಾಗುತ್ತದೆ. ॥ ೧೯ ॥ ಭಗವಾನ್ ಶ್ರೀಕೃಷ್ಣನು ತನ್ನ ನಿಜಸ್ವರೂಪವನ್ನು ಮರೆಮಾಡಿಕೊಂಡು ಜನರೆದುರಿಗೆ ಮನುಷ್ಯನಂತೆ ನಟಿಸುತ್ತಿದ್ದನು. ಆದರೆ ಆ ಕೇಶವನು ಬಲರಾಮನೊಂದಿಗೆ ಕೂಡಿ ಅತಿಮಾನುಷವಾದ ಅನೇಕ ಲೀಲಾ-ಪರಾಕ್ರಮಗಳನ್ನು ಪ್ರಕಟಿಸಿದ್ದನು. ಅವುಗಳನ್ನು ನಮಗೆ ವರ್ಣಿಸಿ ಹೇಳಿರಿ.॥ ೨೦ ॥ ಕಲಿಯುಗವು ಬಂದಿರುವುದನ್ನು ಗಮನಿಸಿ ನಾವು ಈ ವೈಷ್ಣವಕ್ಷೇತ್ರದಲ್ಲಿ ದೀರ್ಘಕಾಲೀನ ಒಂದು ಸತ್ರದ ಸಂಕಲ್ಪ ಗೈದು ಕುಳಿತಿದ್ದೇವೆ. ಶ್ರೀಹರಿಯ ಕಥೆಯನ್ನು ಕೇಳಲು ನಮಗೆ ಬಹಳವಾದ ಉತ್ಕಂಠತೆ ಉಂಟಾಗಿದೆ; ಅವಕಾಶವೂ ಪ್ರಾಪ್ತವಾಗಿದೆ.॥ ೨೧ ॥ ಈ ಕಲಿಯುಗವು ಮನುಷ್ಯರ ಅಂತಃಕರಣದ ಪಾವಿತ್ರ್ಯವನ್ನು ಶಕ್ತಿಯನ್ನು ನಾಶಮಾಡುವಂತಹುದು. ಇದನ್ನು ದಾಟಿ ಹೋಗುವುದು ತುಂಬಾ ಕಷ್ಟ. ಸಮುದ್ರವನ್ನು ದಾಟುವವನಿಗೆ ನಾವಿಕನು ಸಿಗುವಂತೆ ಇದನ್ನು ದಾಟಲು ಇಚ್ಛಿಸುವ ನಮಗೆ ಬ್ರಹ್ಮದೇವರೇ ನಿಮ್ಮನ್ನು ತೋರಿಸಿ ಕೊಟ್ಟಿರುವರು. ॥ ೨೨ ॥ ಧರ್ಮರಕ್ಷಕನೂ, ಬ್ರಾಹ್ಮಣಭಕ್ತನೂ, ಯೋಗೇಶ್ವರನೂ ಆದ ಭಗವಾನ್ ಶ್ರೀಕೃಷ್ಣನು ತನ್ನ ಧಾಮಕ್ಕೆ ತೆರಳಿದ ಬಳಿಕ ಧರ್ಮವು ಯಾರನ್ನು ಶರಣು ಹೊಂದಿತು ? ಇದನ್ನು ತಿಳಿಸಿರಿ. ॥ ೨೩ ॥

ಮೊದಲನೆಯ ಅಧ್ಯಾಯವು ಮುಗಿಯಿತು. ॥ ೧ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಪ್ರಥಮಸ್ಕಂಧೇ
ನೈಮಿಷೀಯೋಪಾಖ್ಯಾನೇ ಪ್ರಥಮೋಽಧ್ಯಾಯಃ ॥ ೧ ॥

ಎರಡನೆಯ ಅಧ್ಯಾಯ

ಭಗವತ್ಕಥೆ ಮತ್ತು ಭಗವದ್ಭಕ್ತಿಯ ಮಾಹಾತ್ಮ್ಯ

ವ್ಯಾಸ ಉವಾಚ

ಇತಿ ಸಂಪ್ರಶ್ನಸಂಹೃಷ್ಟೋ ವಿಪ್ರಾಣಾಂ ರೌಮಹರ್ಷಣಿಃ ।
ಪ್ರತಿಪೂಜ್ಯ ವಚಸ್ತೇಷಾಂ ಪ್ರವಕ್ತುಮುಪಚಕ್ರಮೇ ॥ ೧ ॥

ಸೂತ ಉವಾಚ

ಯಂ ಪ್ರವ್ರಜಂತಮನುಪೇತಮಪೇತಕೃತ್ಯಂ
ದ್ವೈಪಾಯನೋ ವಿರಹಕಾತರ ಆಜುಹಾವ ।
ಪುತ್ರೇತಿ ತನ್ಮಯತಯಾ ತರವೋಽಭಿನೇದು-
ಸ್ತಂ ಸರ್ವಭೂತಹೃದಯಂ ಮುನಿಮಾನತೋಽಸ್ಮಿ ॥ ೨ ॥

ಶ್ರೀವ್ಯಾಸರು ಹೇಳುತ್ತಾರೆ – ಶೌನಕಾದಿ ಬ್ರಹ್ಮವಾದಿಗಳಾದ ಮಹರ್ಷಿಗಳ ಈ ಪ್ರಶ್ನೆಯನ್ನು ಕೇಳಿ ರೋಮಹರ್ಷಣ ಪುತ್ರರಾದ ಉಗ್ರಶ್ರವ ಪೌರಾಣಿಕರಿಗೆ ಬಹಳ ಆನಂದವಾಯಿತು. ಅವರು ಋಷಿಗಳ ಈ ಮಂಗಳಮಯ ಪ್ರಶ್ನೆಯನ್ನು ಅಭಿನಂದಿಸಿ ಶ್ರೀಗುರುದೇವತಾ ನಮಸ್ಕಾರಪೂರ್ವಕ ಹೀಗೆ ಹೇಳಲುಪಕ್ರಮಿಸಿದರು. ॥ ೧ ॥

ಸೂತಪೌರಾಣಿಕರು ಹೇಳಿದರು – ಸಮಸ್ತ ಪ್ರಾಣಿಗಳ ಆತ್ಮಸ್ವರೂಪರಾದ ಶ್ರೀಶುಕಮಹಾಮುನಿಗೆ ನಮಸ್ಕಾರವು. ಸಂಸಾರ ಸಂಬಂಧವನ್ನು ಕೂಡಿಕೊಳ್ಳದೆ ಎಲ್ಲ ಕರ್ಮಗಳಿಂದಲೂ ಬಿಡುಗಡೆಹೊಂದಿ ಕೃತಕೃತ್ಯರಾಗಿದ್ದ, ಜ್ಞಾನ-ವೈರಾಗ್ಯನಿಧಿಗಳಾದ ಈ ಮಹಾತ್ಮರು ಸರ್ವಸಂಗ ಪರಿತ್ಯಾಗಮಾಡಿ ಒಬ್ಬಂಟಿಗನಾಗಿ ಮನೆಯಿಂದ ಹೊರಟುಬಿಟ್ಟಾಗ ತಂದೆಯಾದ ವೇದವ್ಯಾಸರು ಪುತ್ರವಿಯೋಗದಿಂದ ತಲ್ಲಣಿಸುತ್ತಾ ಓ ಪುತ್ರಾ! ಓ ಪುತ್ರಾ! ಎಂದು

ಯಃ ಸ್ವಾನುಭಾವಮಖಿಲಶ್ರುತಿಸಾರಮೇಕ-
ಮಧ್ಯಾತ್ಮದೀಪಮತಿತಿತೀರ್ಷತಾಂ ತಮೋಽಂಧಮ್ ।
ಸಂಸಾರಿಣಾಂ ಕರುಣಯಾಽಽಹ ಪುರಾಣಗುಹ್ಯಂ
ತಂ ವ್ಯಾಸಸೂನುಮುಪಯಾಮಿ ಗುರುಂ ಮುನೀನಾಮ್ ॥ ೩ ॥

ನಾರಾಯಣಂ ನಮಸ್ಕೃತ್ಯ ನರಂ ಚೈವ ನರೋತ್ತಮಮ್ ।
ದೇವೀಂ ಸರಸ್ವತೀಂ ವ್ಯಾಸಂ ತತೋ ಜಯಮುದೀರಯೇತ್ ॥ ೪ ॥

ಮುನಯಃ ಸಾಧು ಪೃಷ್ಟೋಽಹಂ ಭವದ್ಭಿರ್ಲೋಕಮಂಗಲಮ್ ।
ಯತ್ಕೃತಃ ಕೃಷ್ಣಸಂಪ್ರಶ್ನೋ ಯೇನಾತ್ಮಾ ಸುಪ್ರಸೀದತಿ ॥ ೫ ॥

ಸ ವೈ ಪುಂಸಾಂ ಪರೋ ಧರ್ಮೋ ಯತೋ ಭಕ್ತಿರಧೋಕ್ಷಜೇ ।
ಅಹೈತುಕ್ಯಪ್ರತಿಹತಾ ಯಯಾಽಽತ್ಮಾ ಸಂಪ್ರಸೀದತಿ ॥ ೬ ॥

ವಾಸುದೇವೇ ಭಗವತಿ ಭಕ್ತಿಯೋಗಃ ಪ್ರಯೋಜಿತಃ ।
ಜನಯತ್ಯಾಶು ವೈರಾಗ್ಯಂ ಜ್ಞಾನಂ ಚ ಯದಹೈತುಕಮ್ ॥ ೭ ॥

ಧರ್ಮಃ ಸ್ವನುಷ್ಠಿತಃ ಪುಂಸಾಂ ವಿಷ್ವಕ್ಸೇನಕಥಾಸು ಯಃ ।
ನೋತ್ಪಾದಯೇದ್ಯದಿ ರತಿಂ ಶ್ರಮ ಏವ ಹಿ ಕೇವಲಮ್ ॥ ೮ ॥

ಧರ್ಮಸ್ಯ ಹ್ಯಾಪವರ್ಗ್ಯಸ್ಯ ನಾರ್ಥೋಽರ್ಥಾಯೋಪಕಲ್ಪತೇ ।
ನಾರ್ಥಸ್ಯ ಧರ್ಮೈಕಾಂತಸ್ಯ ಕಾಮೋ ಲಾಭಾಯ ಹಿ ಸ್ಮೃತಃ ॥ ೯ ॥

ಹೋಗತೊಡಗಿದನು. ಆಗ ಅಲ್ಲಿದ್ದ ವೃಕ್ಷಗಳೇ ತನ್ಮಯತೆಯಿಂದ ಕೂಡಿ ಅವನ ಪರವಾಗಿ 'ಓಹೋ!' ಎಂದು ಓಗೊಟ್ಟವು. ಇಂತಹ ಎಲ್ಲರ ಹೃದಯದಲ್ಲಿ ವಿರಾಜಮಾನರಾಗಿ ಆತ್ಮರೂಪರಾಗಿರುವ ಗುರು ಶ್ರೀಶುಕಮಹಾಮುನಿಗೆ ನಾನು ವಂದಿಸುತ್ತೇನೆ. ॥ ೨ ॥ ಈ ಶ್ರೀಮದ್ಭಾಗವತವು ಅತ್ಯಂತ ಗೋಪನೀಯ – ರಹಸ್ಯಾತ್ಮಕ ಪುರಾಣವಾಗಿದೆ. ಇದು ಭಗವತ್ಸ್ವರೂಪದ ಅನುಭವ ಮಾಡಿಸುವಂತಹುದು ಹಾಗೂ ಸಮಸ್ತ ವೇದಗಳ ಸಾರವಾಗಿದೆ. ಸಂಸಾರ ಚಕ್ರದಲ್ಲಿ ಸಿಕ್ಕಿಕೊಂಡು ಘೋರ ಅಜ್ಞಾನಾಂಧಕಾರದಿಂದ ದಾಟಿ ಹೋಗಲೂ ಬಯಸುವ ಜನರಿಗಾಗಿ ಇದು ಆಧ್ಯಾತ್ಮಿಕ ತತ್ತ್ವಗಳನ್ನು ಪ್ರಕಾಶಿಸುವ ಒಂದು ಅದ್ವಿತೀಯ ದೀಪವಾಗಿದೆ. ನಿಜವಾಗಿ ಅಂತಹವರ ಮೇಲೆ ಕರುಣೆತೋರಿ ದೊಡ್ಡ-ದೊಡ್ಡ ಮುನಿಗಳಿಗೂ ಆಚಾರ್ಯರಾದ ಶ್ರೀಶುಕಮಹರ್ಷಿಗಳು ಇದನ್ನು ವರ್ಣಿಸಿರುವರು. ನಾನು ಅವರನ್ನು ಶರಣುಹೊಂದುತ್ತೇನೆ. ॥ ೩ ॥ ಮನುಷ್ಯರಲ್ಲಿ ಸರ್ವಶ್ರೇಷ್ಠರಾದ ಭಗವದವತಾರಗಳಾದ ನರ-ನಾರಾಯಣ ಋಷಿಗಳನ್ನೂ, ಸರಸ್ವತೀ ದೇವಿಯನ್ನೂ, ಗುರುಗಳಾದ ವೇದವ್ಯಾಸರನ್ನೂ ನಮಸ್ಕರಿಸಿ ಅನಂತರ ಸಂಸಾರ ಮತ್ತು ಅಂತಃಕರಣದ ಸಮಸ್ತ ವಿಕಾರಗಳ ಮೇಲೆ ವಿಜಯ ಪಡೆಯುವಂತಹ ಶ್ರೀಮದ್ಭಾಗವತ ಮಹಾಪುರಾಣವನ್ನು ವಾಚನ ಮಾಡಬೇಕು. ॥ ೪ ॥

ಮಹರ್ಷಿಗಳೇ! ನೀವು ಸಮಸ್ತ ವಿಶ್ವದ ಮಂಗಳಕ್ಕಾಗಿಯೇ ಈ ಸುಂದರವಾದ ಪ್ರಶ್ನೆಯನ್ನು ಕೇಳಿರುವಿರಿ. ಏಕೆಂದರೆ, ನೀವು ಶ್ರೀಕೃಷ್ಣನ ವಿಷಯವಾಗಿ ಪ್ರಶ್ನಿಸಿರುವಿರಿ. ಇದರಿಂದ ಆತ್ಮ-ಮನೋಬುದ್ಧಿಗಳೆಲ್ಲವೂ ಪರಿಶುದ್ಧವಾಗಿ ಪ್ರಸನ್ನವಾಗುವುವು. ॥ ೫ ॥ ಭಗವಾನ್ ಶ್ರೀಕೃಷ್ಣನಲ್ಲಿ ಭಕ್ತಿ ಉಂಟಾಗುವಂತಹ ಧರ್ಮವೇ ಮನುಷ್ಯರಿಗೆ ಸರ್ವಶ್ರೇಷ್ಠವಾಗಿದೆ. ನಿಷ್ಕಾಮವೂ, ನಿತ್ಯನಿರಂತರವೂ ಆದ ದೃಢ ಭಕ್ತಿಯಿಂದಲೇ ಹೃದಯವು ಆನಂದಸ್ವರೂಪೀ ಪರಮಾತ್ಮನ ಪ್ರಾಪ್ತಿಮಾಡಿಕೊಂಡು ಕೃತಕೃತ್ಯವಾಗುತ್ತದೆ. ॥ ೬ ॥ ಭಗವಾನ್ ಶ್ರೀಕೃಷ್ಣನಲ್ಲಿ ಭಕ್ತಿಯುಂಟಾಗುತ್ತಲೇ, ಅನನ್ಯ ಪ್ರೇಮದಿಂದ ಚಿತ್ತವು ಅದರಲ್ಲಿ ತೊಡಗಿದಾಗಲೇ ಭಗವತ್ಕೃಪೆಯಿಂದ ನಿಷ್ಕಾಮ ಜ್ಞಾನವೂ, ವೈರಾಗ್ಯವೂ ಆವಿರ್ಭವಿಸುತ್ತದೆ. ॥ ೭ ॥ ಧರ್ಮವನ್ನು ಸರಿಯಾಗಿ ಅನುಷ್ಠಾನ ಮಾಡಿದ ಮೇಲೆಯೂ ಮನುಷ್ಯನ ಹೃದಯದಲ್ಲಿ ಭಗವಂತನ ಲೀಲಾಕಥೆಗಳಲ್ಲಿ ಅನುರಾಗವು ಉದಯಿಸದಿದ್ದರೆ ಅದು ಧರ್ಮವೇ ಅಲ್ಲ, ಕೇವಲ ಶ್ರಮವಷ್ಟೇ. ॥ ೮ ॥ ಕೆಲವು ಜನರು ತಮ್ಮ ಕಾಮನೆಯನ್ನೇ ಲಕ್ಷ್ಯದಲ್ಲಿಟ್ಟುಕೊಂಡು ಧರ್ಮವನ್ನು ಆಚರಿಸುತ್ತಾರೆ; ಆದರೆ ಯಾವುದನ್ನೂ ಬಯಸದೆ, ನಿಷ್ಕಾಮಭಾವದಿಂದ ಭಗವತ್ ಪ್ರೀತ್ಯರ್ಥವಾಗಿ ಮಾಡಿದ ಧರ್ಮಾಚರಣೆಯೇ ಮೋಕ್ಷಪ್ರದವಾಗಿದೆ. ಹಾಗೆಯೇ ಇನ್ನೂ ಕೆಲವರು ತಮ್ಮ ಅರ್ಥ(ಧನ)ವನ್ನು ತಮ್ಮ ಕಾಮನೆಯ ಪೂರ್ತಿಗಾಗಿ ವ್ಯಯಿಸುತ್ತಾರೆ; ಅದೂ ಸರಿಯಲ್ಲ. ಅದನ್ನು ಲೋಕಕಲ್ಯಾಣಕ್ಕಾಗಿ ಅರ್ಥಾತ್ ಇತರ ಜನರ ಸೇವೆಯಲ್ಲಿ ಭಗವತ್ಪ್ರೀತ್ಯರ್ಥ ಸದ್ವಿನಿಯೋಗ ಮಾಡಿದರೆ ಅದೇ ಧನವು ಮೋಕ್ಷಪ್ರದವಾಗುವುದು. ಆದ್ದರಿಂದ ಧರ್ಮಾನುಷ್ಠಾನವನ್ನು ಭಗವತ್ ಪ್ರೀತ್ಯರ್ಥವಾಗಿ ಆಚರಿಸಿ, ದ್ರವ್ಯವನ್ನು ಸತ್ಕಾರ್ಯಗಳಲ್ಲಿ ಜನತಾ-ಜನಾರ್ದನನ ಸೇವೆಯಲ್ಲಿ ತೊಡಗಿಸಬೇಕು. ॥ ೯ ॥

ಕಾಮಸ್ಯ ನೇಂದ್ರಿಯಪ್ರೀತಿರ್ಲಾಭೋ ಜೀವೇತ ಯಾವತಾ ।
ಜೀವಸ್ಯ ತತ್ತ್ವಜಿಜ್ಞಾಸಾ ನಾರ್ಥೋ ಯಶ್ಚೇಹ ಕರ್ಮಭಿಃ ॥ ೧೦ ॥

ವದಂತಿ ತತ್ತತ್ತ್ವವಿದಸ್ತತ್ತ್ವಂ ಯಜ್ಜ್ಞಾನಮದ್ವಯಮ್ ।
ಬ್ರಹ್ಮೇತಿ ಪರಮಾತ್ಮೇತಿ ಭಗವಾನಿತಿ ಶಬ್ದ್ಯತೇ ॥ ೧೧ ॥

ತಚ್ಛ್ರದ್ದಧಾನಾ ಮುನಯೋ ಜ್ಞಾನವೈರಾಗ್ಯಯುಕ್ತಯಾ ।
ಪಶ್ಯಂತ್ಯಾತ್ಮನಿ ಚಾತ್ಮಾನಂ ಭಕ್ತ್ಯಾ ಶ್ರುತಗೃಹೀತಯಾ ॥ ೧೨ ॥

ಅತಃ ಪುಂಭಿರ್ದ್ವಿಜಶ್ರೇಷ್ಠಾ ವರ್ಣಾಶ್ರಮವಿಭಾಗಶಃ ।
ಸ್ವನುಷ್ಠಿತಸ್ಯ ಧರ್ಮಸ್ಯ ಸಂಸಿದ್ಧಿರ್ಹರಿತೋಷಣಮ್ ॥ ೧೩ ॥

ತಸ್ಮಾದೇಕೇನ ಮನಸಾ ಭಗವಾನ್ ಸಾತ್ವತಾಂ ಪತಿಃ ।
ಶ್ರೋತವ್ಯಃ ಕೀರ್ತಿತವ್ಯಶ್ಚ ಧ್ಯೇಯಃ ಪೂಜ್ಯಶ್ಚ ನಿತ್ಯದಾ ॥ ೧೪ ॥

ಯದನುಧ್ಯಾಸಿನಾ ಯುಕ್ತಾಃ ಕರ್ಮಗ್ರಂಥಿನಿಬಂಧನಮ್ ।
ಛಿಂದಂತಿ ಕೋವಿದಾಸ್ತಸ್ಯ ಕೋ ನ ಕುರ್ಯಾತ್ಕಥಾರತಿಮ್ ॥ ೧೫ ॥

ಶುಶ್ರೂಷೋಃ ಶ್ರದ್ದಧಾನಸ್ಯ ವಾಸುದೇವಕಥಾರುಚಿಃ ।
ಸ್ಯಾನ್ಮಹತ್ಸೇವಯಾ ವಿಪ್ರಾಃ ಪುಣ್ಯತೀರ್ಥನಿಷೇವಣಾತ್ ॥ ೧೬ ॥

ಶೃಣ್ವತಾಂ ಸ್ವಕಥಾಂ ಕೃಷ್ಣಃ ಪುಣ್ಯಶ್ರವಣಕೀರ್ತನಃ ।
ಹೃದ್ಯಂತಃಸ್ಥೋ ಹ್ಯಭದ್ರಾಣಿ ವಿಧುನೋತಿ ಸುಹೃತ್ಸತಾಮ್ ॥ ೧೭ ॥

ನಷ್ಟಪ್ರಾಯೇಷ್ವಭದ್ರೇಷು ನಿತ್ಯಂ ಭಾಗವದಾಶ್ರಯಾತ್ ।
ಭಗವತ್ಯುತ್ತಮಶ್ಲೋಕೇ ಭಕ್ತಿರ್ಭವತಿ ನೈಷ್ಠಿಕೀ ॥ ೧೮ ॥

ತದಾ ರಜಸ್ತಮೋಭಾವಾಃ ಕಾಮಲೋಭಾದಯಶ್ಚ ಯೇ ।
ಚೇತ ಏತೈರನಾವಿದ್ಧಂ ಸ್ಥಿತಂ ಸತ್ತ್ವೇ ಪ್ರಸೀದತಿ ॥ ೧೯ ॥

ಏವಂ ಪ್ರಸನ್ನಮನಸೋ ಭಗವದ್ಭಕ್ತಿಯೋಗತಃ ।
ಭಗವತ್ತತ್ತ್ವವಿಜ್ಞಾನಂ ಮುಕ್ತಸಂಗಸ್ಯ ಜಾಯತೇ ॥ ೨೦ ॥

ಭೋಗವಿಲಾಸದ ಫಲವು ಇಂದ್ರಿಯಗಳನ್ನು ತೃಪ್ತಿಪಡಿಸುವುದಷ್ಟೇ ಅಲ್ಲ, ಕೇವಲ ಜೀವನ ನಿರ್ವಾಹವೇ ಅದರ ಪ್ರಯೋಜನ. ಜೀವನದ ಫಲವು ತತ್ತ್ವಜಿಜ್ಞಾಸೆಯೇ ಆಗಿದೆ. ಅನೇಕ ಕರ್ಮಗಳನ್ನಾಚರಿಸಿ ಸ್ವರ್ಗಾದಿಗಳನ್ನು ಪಡೆಯುವುದು ಜೀವನದ ಗುರಿಯಲ್ಲ. ॥ ೧೦ ॥ ಜ್ಞಾತಾ, ಜ್ಞೇಯ ಇವುಗಳ ಭೇದರಹಿತವಾದ ಅಖಂಡ ಅದ್ವಿತೀಯ ಸಚ್ಚಿದಾನಂದ ಪರಬ್ರಹ್ಮಸ್ವರೂಪದ ಅದ್ವೈತ ಜ್ಞಾನವನ್ನೇ ಜ್ಞಾನವೆಂದು ತತ್ತ್ವಜ್ಞರು ಹೇಳುತ್ತಾರೆ. ಅದನ್ನೇ ಕೆಲವರು ಬ್ರಹ್ಮವೆಂದೂ, ಕೆಲವರು ಪರಮಾತ್ಮನೆಂದೂ, ಕೆಲವರು ಭಗವಂತನೆಂದೂ ಹೇಳುತ್ತಾರೆ. ॥ ೧೧ ॥ ■ ಪರಮಾತ್ಮತತ್ತ್ವದಲ್ಲಿ ಶ್ರದ್ಧೆಯುಳ್ಳ ಮುನಿಗಳು ಭಾಗವತ-ಶ್ರವಣದಿಂದ ಪ್ರಾಪ್ತವಾದ ಜ್ಞಾನ-ವೈರಾಗ್ಯ ಯುಕ್ತ ಭಕ್ತಿಯ ಮೂಲಕ ತಮ್ಮ ಹೃದಯದಲ್ಲಿ ಆ ಪರಮಾತ್ಮನನ್ನು ಕಂಡುಕೊಳ್ಳುತ್ತಾರೆ. ॥ ೧೨ ॥ ಶೌನಕಾದಿ ಋಷಿಗಳಿರಾ! ಆದ್ದರಿಂದ ತಮ್ಮ-ತಮ್ಮ ವರ್ಣಾಶ್ರಮಗಳನುಸಾರವಾಗಿ ಮನುಷ್ಯರು ಆಚರಿಸುವ ಧರ್ಮದ ಅನುಷ್ಠಾನದ ಪೂರ್ಣ ಸಿದ್ಧಿಯು ಭಗವಂತನು ಪ್ರಸನ್ನನಾಗುವುದರಲ್ಲೇ ಇದೆ. ॥ ೧೩ ॥ ಆದುದರಿಂದ ಏಕಾಗ್ರ ಮನಸ್ಸಿನಿಂದ ಭಕ್ತವತ್ಸಲನಾದ ಭಗವಂತನನ್ನೇ ನಿತ್ಯ-ನಿರಂತರ ಶ್ರವಣ, ಕೀರ್ತನ, ಮತ್ತು ಧ್ಯಾನದ ಮೂಲಕ ಆರಾಧಿಸಬೇಕು. ॥ ೧೪ ॥ ಕರ್ಮಗಳ ಕಗ್ಗಂಟು ಬಹಳ ಬಿಗಿಯಾದುದು. ಆದರೆ ವಿಚಾರವಂತ ಪುರುಷರು ಭಗವಂತನ ಧ್ಯಾನವೆಂಬ ಕತ್ತಿಯಿಂದ ಅದನ್ನು ಕತ್ತರಿಸಿಬಿಡುತ್ತಾರೆ. ಇಂತಹ ಭಗವಂತನ ಪುಣ್ಯಮಯ ಕಥೆಯಲ್ಲಿ ಜ್ಞಾನಿಗಳು ಪ್ರೇಮವಿರಿಸದೆ ಇರುವರೇ? ಅಂದರೆ, ಅವರು ನಿರಂತರ ಕಥಾಮೃತವನ್ನೇ ಪಾನ ಮಾಡುತ್ತಾ ಅದರಲ್ಲೇ ಮಗ್ನರಾಗಿರುತ್ತಾರೆ. ॥ ೧೫ ॥

ಶೌನಕಾದಿ ಮಹರ್ಷಿಗಳಿರಾ! ಪವಿತ್ರ ತೀರ್ಥಗಳ ಸೇವನೆಯಿಂದ ಮಹಾತ್ಮರ ಸೇವೆ ದೊರೆಯುತ್ತದೆ. ಮತ್ತೆ ಶ್ರವಣದ ಇಚ್ಛೆ, ಬಳಿಕ ಶ್ರದ್ಧೆ, ಅನಂತರ ವಾಸುದೇವನ ಕಥೆಯಲ್ಲಿ ರುಚಿ ಉಂಟಾಗುತ್ತದೆ. ॥ ೧೬ ॥ ಭಗವಾನ್ ಶ್ರೀಕೃಷ್ಣನ ಕಥೆಗಳ ಶ್ರವಣ-ಕೀರ್ತನಗಳು ಅತ್ಯಂತ ಪುಣ್ಯಕರವಾದುವು. ಅವುಗಳನ್ನು ಕೇಳುವ ಸುಕೃತಿಗಳ ಹೃದಯದೊಳಗೆ ಸತ್ಪುರುಷರ ಸುಹೃತ್ತಾಗಿರುವ ಸ್ವಾಮಿಯು ಕುಳಿತು ಅವರ ಎಲ್ಲ ಅಶುಭಗಳನ್ನು ನಾಶಮಾಡಿಬಿಡುತ್ತಾನೆ. ॥ ೧೭ ॥ ಶ್ರೀಮದ್ಭಾಗವತವನ್ನು ಅಥವಾ ಭಗವದ್ಭಕ್ತರನ್ನು ನಿರಂತರ ಸೇವಿಸುವುದರಿಂದ ಅಶುಭಗಳೆಲ್ಲವೂ ನಾಶವಾದಾಗ ಪುಣ್ಯಕೀರ್ತಿಯಾದ ಶ್ರೀಕೃಷ್ಣಪರಮಾತ್ಮನಲ್ಲಿ ಸ್ಥಿರವಾದ ಭಕ್ತಿಯುಂಟಾಗುವುದು. ॥ ೧೮ ॥ ಆಗ ರಜೋಗುಣ- ತಮೋಗುಣಗಳ ಭಾವಗಳಾದ ಕಾಮ, ಕ್ರೋಧ, ಲೋಭ ಮುಂತಾದ ಎಲ್ಲ ವಿಕಾರಗಳು ಕಳಕೊಂಡ ಚಿತ್ತವು ಸತ್ತ್ವಗುಣದಲ್ಲಿ ಸ್ಥಿತವಾಗಿ ನಿರ್ಮಲವಾಗುತ್ತದೆ. ॥ ೧೯ ॥ ಹೀಗೆ ಭಗವಂತನ ಭಕ್ತಿಯೋಗದಿಂದ ಮನಸ್ಸು ಪ್ರಸನ್ನವಾಗಿ ನಿಸ್ಸಂಗನಾದವನಿಗೆ ಶ್ರೀಭಗವತ್ತತ್ತ್ವದ ಅನುಭವ ಜ್ಞಾನವು ತಾನಾಗಿಯೇ ಉಂಟಾಗುವುದು. ॥ ೨೦ ॥ ಆತ್ಮಸ್ವರೂಪೀ ಭಗವಂತನ ಸಾಕ್ಷಾತ್ಕಾರವಾಗುತ್ತಲೇ ಹೃದಯದ

ಭಿದ್ಯತೇ ಹೃದಯಗ್ರಂಥಿಶ್ಛಿದ್ಯಂತೇ ಸರ್ವಸಂಶಯಾಃ ।
ಕ್ಷೀಯಂತೇ ಚಾಸ್ಯ ಕರ್ಮಾಣಿ ದೃಷ್ಟ ಏವಾತ್ಮನೀಶ್ವರೇ
॥ ೨೧ ॥

ಅತೋ ವೈ ಕವಯೋ ನಿತ್ಯಂ ಭಕ್ತಿಂ ಪರಮಯಾ ಮುದಾ ।
ವಾಸುದೇವೇ ಭಗವತಿ ಕುರ್ವಂತ್ಯಾತ್ಮಪ್ರಸಾದನೀಮ್
॥ ೨೨ ॥

ಸತ್ತ್ವಂ ರಜಸ್ತಮ ಇತಿ ಪ್ರಕೃತೇರ್ಗುಣಾಸ್ತೈ-
ರ್ಯುಕ್ತಃ ಪರಃ ಪುರುಷ ಏಕ ಇಹಾಸ್ಯ ಧತ್ತೇ ।
ಸ್ಥಿತ್ಯಾದಯೇ ಹರಿವಿರಿಂಚಿಹರೇತಿ ಸಂಜ್ಞಾಃ
ಶ್ರೇಯಾಂಸಿ ತತ್ರ ಖಲು ಸತ್ತ್ವತನೋರ್ನೃಣಾಂ ಸ್ಯುಃ ॥ ೨೩ ॥

ಪಾರ್ಥಿವಾದ್ದಾರುಣೋ ಧೂಮಸ್ತಸ್ಮಾದಗ್ನಿಸ್ತ್ರಯೀಮಯಃ ।
ತಮಸಸ್ತು ರಜಸ್ತಸ್ಮಾತ್ಸತ್ತ್ವಂ ಯದ್ಬ್ರಹ್ಮದರ್ಶನಮ್
॥ ೨೪ ॥

ಭೇಜಿರೇ ಮುನಯೋಽಥಾಗ್ರೇ ಭಗವಂತಮಧೋಕ್ಷಜಮ್ ।
ಸತ್ತ್ವಂ ವಿಶುದ್ಧಂ ಕ್ಷೇಮಾಯ ಕಲ್ಪಂತೇ ಯೇಽನು ತಾನಿಹ
॥ ೨೫ ॥

ಮುಮುಕ್ಷವೋ ಘೋರರೂಪಾನ್ ಹಿತ್ವಾ ಭೂತಪತೀನಥ ।
ನಾರಾಯಣಕಲಾಃ ಶಾಂತಾ ಭಜಂತಿ ಹ್ಯನಸೂಯವಃ
॥ ೨೬ ॥

ರಜಸ್ತಮಃಪ್ರಕೃತಯಃ ಸಮಶೀಲಾ ಭಜಂತಿ ವೈ ।
ಪಿತೃಭೂತಪ್ರಜೇಶಾದೀನ್ ಶ್ರಿಯೈಶ್ವರ್ಯಪ್ರಜೇಪ್ಸವಃ
॥ ೨೭ ॥

ವಾಸುದೇವಪರಾ ವೇದಾ ವಾಸುದೇವಪರಾ ಮಖಾಃ ।
ವಾಸುದೇವಪರಾ ಯೋಗಾ ವಾಸುದೇವಪರಾಃ ಕ್ರಿಯಾಃ
॥ ೨೮ ॥

ವಾಸುದೇವಪರಂ ಜ್ಞಾನಂ ವಾಸುದೇವಪರಂ ತಪಃ ।
ವಾಸುದೇವಪರೋ ಧರ್ಮೋ ವಾಸುದೇವಪರಾ ಗತಿಃ
॥ ೨೯ ॥

ಗಂಟು ಕತ್ತರಿಸಿ ಹೋಗುತ್ತದೆ. ಎಲ್ಲ ಸಂಶಯಗಳೂ ಹರಿದು ಹೋಗುತ್ತವೆ. ಅವನ ಕರ್ಮಬಂಧನಗಳೆಲ್ಲವೂ ನಶಿಸಿಹೋಗುವುವು. ॥ ೨೧ ॥ ಆದ್ದರಿಂದಲೇ ಬುದ್ಧಿವಂತರು ನಿತ್ಯ-ನಿರಂತರ ಬಹಳ ಆನಂದದಿಂದ ಭಗವಾನ್ ಶ್ರೀಕೃಷ್ಣನಲ್ಲಿ ಪ್ರೇಮಾಭಕ್ತಿಯನ್ನು ಆಚರಿಸುತ್ತ ಆತ್ಮಿಕ ಪ್ರಸನ್ನತೆಯನ್ನು ಪಡೆದುಕೊಳ್ಳುತ್ತಾರೆ. ॥ ೨೨ ॥

ಸತ್ತ್ವ, ರಜ, ತಮ ಎಂಬ ಪ್ರಕೃತಿಯ ಮೂರು ಗುಣಗಳು. ಇವುಗಳನ್ನು ಸ್ವೀಕರಿಸಿ ಪರಮಪುರುಷ ಪರಮಾತ್ಮನೇ ಈ ವಿಶ್ವದ ಸೃಷ್ಟಿ, ಸ್ಥಿತಿ, ಪ್ರಳಯ ಕಾರ್ಯಗಳನ್ನು ಮಾಡುವುದಕ್ಕಾಗಿ ಕ್ರಮವಾಗಿ ವಿಷ್ಣು, ಬ್ರಹ್ಮ ಮತ್ತು ರುದ್ರ ಎಂಬ ಹೆಸರನ್ನು ಹೊಂದುತ್ತಾನೆ. ಆದರೂ ಅವುಗಳಲ್ಲಿ ಸತ್ತ್ವಗುಣವನ್ನು ಸ್ವೀಕರಿಸುವ ಶ್ರೀಹರಿಯಿಂದಲೇ ಮನುಷ್ಯರಿಗೆ ಪರಮಶ್ರೇಯಸ್ಸು ಉಂಟಾಗುವುದು. ॥ ೨೩ ॥ ಭೂಮಿಯ ವಿಕಾರವಾದ ಕಟ್ಟಿಗೆಗಿಂತಲೂ ಅದರಿಂದುಂಟಾದ ಹೊಗೆಯು ಶ್ರೇಷ್ಠ. ಅದಕ್ಕಿಂತಲೂ ಅಗ್ನಿಯು ಶ್ರೇಷ್ಠವಾದುದು. ಏಕೆಂದರೆ, ವೇದೋಕ್ತ ಯಜ್ಞ-ಯಾಗಾದಿಗಳ ಮೂಲಕ ಅಗ್ನಿಯು ಸದ್ಗತಿ ಕೊಡುವಂತಹುದು. ಹಾಗೆಯೇ ತಮೋಗುಣಕ್ಕಿಂತ ರಜೋಗುಣವು ಶ್ರೇಷ್ಠ. ರಜೋಗುಣಕ್ಕಿಂತಲೂ ಸತ್ತ್ವಗುಣವು ಶ್ರೇಷ್ಠವಾದುದು. ಏಕೆಂದರೆ ಅದು ಬ್ರಹ್ಮಸಾಕ್ಷಾತ್ಕಾರಕ್ಕೆ ಕಾರಣವಾಗುವುದು. ॥ ೨೪ ॥ ಪ್ರಾಚೀನಯುಗದಲ್ಲಿ ಮಹಾತ್ಮರು ತಮ್ಮ ಶ್ರೇಯಸ್ಸಿಗಾಗಿ ಶುದ್ಧಸತ್ತ್ವಮಯನಾದ ಭಗವಾನ್ ವಿಷ್ಣುವನ್ನು ಆರಾಧಿಸುತ್ತಿದ್ದರು. ಈಗಲೂ ಆ ಋಷಿಗಳನ್ನು ಅನುಸರಿಸುವ ಜನರು ಅವರಂತೆಯೇ ಆತ್ಮಕಲ್ಯಾಣಕ್ಕೆ ಭಾಗಿಗಳಾಗುತ್ತಾರೆ. ॥ ೨೫ ॥ ಈ ಸಂಸಾರ ಸಾಗರವನ್ನು ದಾಟಲು ಬಯಸುವವರು ಯಾರನ್ನೂ ನಿಂದಿಸದೆ, ಯಾರಲ್ಲಿಯೂ ದೋಷವನ್ನು ನೋಡದೆ ಘೋರರೂಪವುಳ್ಳ ತಮೋಗುಣೀ-ರಜೋಗುಣೀ ಭೈರವಾದಿ ಭೂತಪತಿಗಳನ್ನು ಉಪಾಸನೆ ಮಾಡದೆ, ಸತ್ತ್ವಗುಣೀ ಭಗವಾನ್ ವಿಷ್ಣುವನ್ನು ಮತ್ತು ಅವನ ಅಂಶಕಲಾ ಸ್ವರೂಪಗಳನ್ನೇ ಭಜಿಸುತ್ತಾರೆ. ಅವರ ಚಿತ್ತವು ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರಾದಿಗಳಿಂದ ರಹಿತವಾಗಿ ಪರಮ ಶಾಂತಿಯನ್ನು ಪಡೆಯುತ್ತದೆ. ॥ ೨೬ ॥ ಆದರೆ ರಜೋಗುಣೀ, ತಮೋಗುಣೀ ಸ್ವಭಾವವುಳ್ಳವರು ಧನ, ಐಶ್ವರ್ಯ, ಸಂತಾನದ ಕಾಮನೆಯಿಂದ ಭೂತಗಳು, ಪಿತೃಗಳು, ಪ್ರಜಾಪತಿಗಳು ಇವರನ್ನು ಉಪಾಸಿಸುತ್ತಾರೆ. ಏಕೆಂದರೆ, ಈ ಜನರ ಸ್ವಭಾವವೂ ಅವರಂತೇ (ಭೂತಾದಿ) ಇರುತ್ತದೆ. ॥ ೨೭ ॥ ವೇದಗಳ ತಾತ್ಪರ್ಯ ವಾಸುದೇವ ಶ್ರೀಕೃಷ್ಣನೇ ಆಗಿದ್ದಾನೆ. ಯಜ್ಞಗಳ ಉದ್ದೇಶವೂ ಶ್ರೀಕೃಷ್ಣನೇ ಆಗಿದ್ದಾನೆ. ಯೋಗಗಳು ಶ್ರೀಕೃಷ್ಣನಿಗಾಗಿಯೇ ಮಾಡಲಾಗುತ್ತವೆ. ಸಮಸ್ತ ಕರ್ಮಗಳ ಪರಿಸಮಾಪ್ತಿಯು ವಾಸುದೇವ ಶ್ರೀಕೃಷ್ಣನಲ್ಲೇ ಇದೆ. ॥ ೨೮ ॥ ಜ್ಞಾನದಿಂದ ವಾಸುದೇವ ಶ್ರೀಕೃಷ್ಣನ ಪ್ರಾಪ್ತಿಯೇ ಆಗುತ್ತದೆ. ತಪಸ್ಸು ಶ್ರೀಕೃಷ್ಣನ ಪ್ರಸನ್ನತೆಗಾಗಿಯೇ ಮಾಡಲಾಗುತ್ತದೆ. ಶ್ರೀಕೃಷ್ಣನಿಗಾಗಿಯೇ ಧರ್ಮಗಳ ಅನುಷ್ಠಾನ ನಡೆಯುತ್ತದೆ. ಎಲ್ಲ ಗತಿಗಳು ಶ್ರೀಕೃಷ್ಣನಲ್ಲೇ ಸೇರಿ ಹೋಗುವುವು. ॥ ೨೯ ॥ ತ್ರಿಗುಣಾ

ಸ ಏವೇದಂ ಸಸರ್ಜಾಗ್ರೇ ಭಗವಾನಾತ್ಮಮಾಯಯಾ ।
ಸದಸದ್ರೂಪಯಾ ಚಾಸೌ ಗುಣಮಯ್ಯಾಗುಣೋ ವಿಭುಃ ॥ ೩೦ ॥

ತಯಾ ವಿಲಸಿತೇಷ್ವೇಷು ಗುಣೇಷು ಗುಣವಾನಿವ ।
ಅಂತಃಪ್ರವಿಷ್ಟ ಆಭಾತಿ ವಿಜ್ಞಾನೇನ ವಿಜೃಂಭಿತಃ ॥ ೩೧ ॥

ಯಥಾ ಹ್ಯವಹಿತೋ ವಹ್ನಿರ್ದಾರುಷ್ವೇಕಃ ಸ್ವಯೋನಿಷು ।
ನಾನೇವ ಭಾತಿ ವಿಶ್ವಾತ್ಮಾ ಭೂತೇಷು ಚ ತಥಾ ಪುಮಾನ್ ॥ ೩೨ ॥

ಅಸೌ ಗುಣಮಯೈರ್ಭಾವೈರ್ಭೂತಸೂಕ್ಷ್ಮೇಂದ್ರಿಯಾತ್ಮಭಿಃ ।
ಸ್ವನಿರ್ಮಿತೇಷು ನಿರ್ವಿಷ್ಟೋ ಭುಂಕ್ತೇ ಭೂತೇಷು ತದ್ಗುಣಾನ್ ॥ ೩೩ ॥

ಭಾವಯತ್ಯೇಷ ಸತ್ತ್ವೇನ ಲೋಕಾನ್ ವೈ ಲೋಕಭಾವನಃ ।
ಲೀಲಾವತಾರಾನುರತೋ ದೇವತಿರ್ಯಙ್ನರಾದಿಷು ॥ ೩೪ ॥

ತೀತನಾದ ಭಗವಾನ್ ಶ್ರೀಕೃಷ್ಣನೇ ಹಿಂದೆ ವ್ಯಕ್ತಾವ್ಯಕ್ತ ಸ್ವರೂಪವಾದ ತ್ರಿಗುಣಾತ್ಮಕವಾದ ತನ್ನ ಮಾಯೆಯಿಂದ ಈ ಜಗತ್ತನ್ನು ಸೃಷ್ಟಿ ಮಾಡಿದನು. ॥ ೩೦ ॥ ತನ್ನ ಆ ಮಾಯಾಪ್ರಕೃತಿಯಿಂದ ವಿಕಾಸಗೊಂಡ ಈ ತ್ರಿಗುಣಗಳಲ್ಲಿ ಸೇರಿದ್ದರೂ ಅವನು ಗುಣಾತೀತನಾಗಿದ್ದು ಗುಣಯುಕ್ತನಾಗಿರುವಂತೆ ತೋರುತ್ತಾನೆ. ನಿಜವಾಗಿಯಾದರೋ ಅವನು ಪರಿಪೂರ್ಣ ವಿಜ್ಞಾನಾನಂದಘನನಾಗಿದ್ದಾನೆ. ॥ ೩೧ ॥ ಅಗ್ನಿಯಾದರೋ ವಸ್ತುತಃ ಒಂದೇ ಆಗಿದೆ; ಆದರೆ ಅದು ಅನೇಕ ರೀತಿಯ ಕಟ್ಟಿಗೆಗಳಲ್ಲಿರುವಾಗ ಅನೇಕವಿರುವಂತೆ ತಿಳಿಯುತ್ತದೆ. ಹಾಗೆಯೇ ಎಲ್ಲ ಆತ್ಮರೂಪೀ ಭಗವಂತನಾದರೋ ಒಬ್ಬನೇ ಇದ್ದು, ಪ್ರಾಣಿಗಳ ಅನೇಕತೆಯಿಂದಾಗಿ ಅವುಗಳ ಅಂತರ್ಯಾಮಿಯಾಗಿರುವುದರಿಂದ ಅನೇಕದಂತೆ ಕಂಡುಬರುತ್ತಾನೆ. ॥ ೩೨ ॥ ಭಗವಂತನೇ ಸೂಕ್ಷ್ಮಭೂತ-ತನ್ಮಾತ್ರೆ, ಇಂದ್ರಿಯಗಳು ಮತ್ತು ಅಂತಃಕರಣ ಮುಂತಾದ ಗುಣಗಳ ವಿಕಾರಭೂತ ಭಾವಗಳ ಮೂಲಕ ನಾನಾ ಪ್ರಕಾರದ ಯೋನಿಗಳನ್ನು ನಿರ್ಮಿಸುತ್ತಾನೆ ಮತ್ತು ಅವುಗಳಲ್ಲಿ ಬೇರೆ-ಬೇರೆ ಜೀವಿಗಳ ರೂಪದಲ್ಲಿ ಪ್ರವೇಶಿಸಿ, ಆಯಾಯಾ ಯೋನಿಗಳನುರೂಪವಾಗಿ ವಿಷಯಗಳನ್ನು ಭೋಗಿಸುವಂತೆ ಕಾಣುತ್ತಾನೆ. ॥ ೩೩ ॥ ಅವನೇ ಸಮಸ್ತ ಲೋಕಗಳನ್ನು ರಚಿಸುತ್ತಾನೆ ಹಾಗೂ ದೇವತೆ, ಪಶು-ಪಕ್ಷಿ, ಮನುಷ್ಯಾದಿ ಯೋನಿಗಳಲ್ಲಿ ಲೀಲಾವತಾರವನ್ನು ಎತ್ತಿ ಸತ್ತ್ವಗುಣದ ಮೂಲಕ ಜೀವಿಗಳನ್ನು ಪಾಲಿಸಿ-ಪೋಷಿಸುತ್ತಾನೆ. (ಅವನ ಅವತಾರಧಾರಣದ ಲೀಲೆಗಳನ್ನು ಗಾಯನ, ಚಿಂತನೆ, ಸ್ಮರಣೆಮಾಡುತ್ತಾ ಜೀವನು ತದ್ರೂಪನಾಗುತ್ತಾನೆ. ತನ್ನ ಲಕ್ಷ್ಯವಾದ ಪರಮಾತ್ಮನ ಸಾಕ್ಷಾತ್ಕಾರವನ್ನು ಪಡೆಯುತ್ತಾನೆ. ಇದು ಭಗವಂತನ ಪರಮಾನುಗ್ರಹವಾಗಿದೆ. ಭಗವಂತನ ಎಲ್ಲ ಲೀಲೆಗಳು ಲೋಕಕಲ್ಯಾಣಕ್ಕಾಗಿಯೇ ಇರುತ್ತವೆ.) ॥ ೩೪ ॥

ಎರಡನೆಯ ಅಧ್ಯಾಯವು ಮುಗಿಯಿತು. ॥ ೨ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಪ್ರಥಮಸ್ಕಂಧೇ
ನೈಮಿಷೀಯೋಪಾಖ್ಯಾನೇ ದ್ವಿತೀಯೋಽಧ್ಯಾಯಃ ॥ ೨ ॥

ಮೂರನೆಯ ಅಧ್ಯಾಯ

ಭಗವಂತನ ಅವತಾರಗಳ ವರ್ಣನೆ

ಸೂತ ಉವಾಚ

ಜಗೃಹೇ ಪೌರುಷಂ ರೂಪಂ ಭಗವಾನ್ಮಹದಾದಿಭಿಃ ।
ಸಂಭೂತಂ ಷೋಡಶಕಲಮಾದೌ ಲೋಕಸಿಸೃಕ್ಷಯಾ ॥ ೧ ॥

ಸೂತಪುರಾಣಿಕರು ಹೇಳುತ್ತಾರೆ – ಸೃಷ್ಟಿಯ ಆದಿಯಲ್ಲಿ ಭಗವಂತನಿಗೆ ಲೋಕಗಳನ್ನು ಸೃಷ್ಟಿಸಬೇಕೆಂಬ ಇಚ್ಛೆ ಉಂಟಾಯಿತು. ಒಡನೆಯೇ ಅವನು ಮಹತ್ತತ್ತ್ವ, ಅಹಂಕಾರ ಮತ್ತು ಪಂಚತನ್ಮಾತ್ರೆಗಳಿಂದ ನಿರ್ಮಿತವಾದ ಹತ್ತು ಇಂದ್ರಿಯಗಳು, ಮನಸ್ಸು ಪಂಚ-ಭೂತಗಳು ಹೀಗೆ ಹದಿನಾರು ಕಲೆಗಳಿಂದ ಕೂಡಿದ ವಿರಾಟ್‌ರೂಪವನ್ನು ಸ್ವೀಕರಿಸಿದನು. ॥ ೧ ॥ ಸೃಷ್ಟಿಕಾರಣವಾದ ಜಲದಲ್ಲಿ ಪವಡಿಸಿ ಯೋಗನಿದ್ರೆಯನ್ನು ಮಾಡುತ್ತಿದ್ದ ಅವನ

ಯಸ್ಯಾಂಭಸಿ ಶಯಾನಸ್ಯ ಯೋಗನಿದ್ರಾಂ ವಿತನ್ವತಃ ।
ನಾಭಿಹ್ರದಾಂಬುಜಾದಾಸೀದ್ ಬ್ರಹ್ಮಾ ವಿಶ್ವಸೃಜಾಂ ಪತಿಃ ॥ ೨ ॥

ಯಸ್ಯಾವಯವಸಂಸ್ಥಾನೈಃ ಕಲ್ಪಿತೋ ಲೋಕವಿಸ್ತರಃ ।
ತದ್ವೈ ಭಗವತೋ ರೂಪಂ ವಿಶುದ್ಧಂ ಸತ್ತ್ವಮೂರ್ಜಿತಮ್ ॥ ೩ ॥

ಪಶ್ಯನ್ತ್ಯದೋ ರೂಪಮದಭ್ರಚಕ್ಷುಷಾ
ಸಹಸ್ರಪಾದೋರುಭುಜಾನನಾದ್ಭುತಮ್ ।
ಸಹಸ್ರಮೂರ್ಧಶ್ರವಣಾಕ್ಷಿನಾಸಿಕಂ
ಸಹಸ್ರಮೌಲ್ಯಂಬರಕುಂಡಲೋಲ್ಲಸತ್ ॥ ೪ ॥

ಏತನ್ನಾನಾವತಾರಾಣಾಂ ನಿಧಾನಂ ಬೀಜಮವ್ಯಯಮ್ ।
ಯಸ್ಯಾಂಶಾಂಶೇನ ಸೃಜ್ಯಂತೇ ದೇವತಿರ್ಯಙ್ನರಾದಯಃ ॥ ೫ ॥

ಸ ಏವ ಪ್ರಥಮಂ ದೇವಃ ಕೌಮಾರಂ ಸರ್ಗಮಾಶ್ರಿತಃ ।
ಚಚಾರ ದುಶ್ಚರಂ ಬ್ರಹ್ಮಾ ಬ್ರಹ್ಮಚರ್ಯಮಖಂಡಿತಮ್ ॥ ೬ ॥

ದ್ವಿತೀಯಂ ತು ಭವಾಯಾಸ್ಯ ರಸಾತಲಗತಾಂ ಮಹೀಮ್ ।
ಉದ್ಧರಿಷ್ಯನ್ನುಪಾದತ್ತ ಯಜ್ಞೇಶಃ ಸೌಕರಂ ವಪುಃ ॥ ೭ ॥

ತೃತೀಯಮೃಷಿಸರ್ಗಂ ಚ ದೇವರ್ಷಿತ್ವಮುಪೇತ್ಯ ಸಃ ।
ತಂತ್ರಂ ಸಾತ್ವತಮಾಚಷ್ಟ ನೈಷ್ಕರ್ಮ್ಯಂ ಕರ್ಮಣಾಂ ಯತಃ ॥ ೮ ॥

ತುರ್ಯೇ ಧರ್ಮಕಲಾಸರ್ಗೇ ನರನಾರಾಯಣಾವೃಷೀ ।
ಭೂತ್ವಾಽಽತ್ಮೋಪಶಮೋಪೇತಮಕರೋದ್ ದುಶ್ಚರಂ ತಪಃ ॥ ೯ ॥

ನಾಭಿಸರೋವರದಲ್ಲಿ ಹುಟ್ಟಿದ ಕಮಲದಿಂದಲೇ ಪ್ರಜಾಪತಿಗಳಿಗೆ ಅಧಿಪತಿಯಾದ ಬ್ರಹ್ಮದೇವರು ಹುಟ್ಟಿದರು. ॥ ೨ ॥ ಭಗವಂತನ ಆ ವಿರಾಟ್‌ರೂಪದ ಅಂಗ-ಉಪಾಂಗಗಳಲ್ಲಿಯೇ ಸಮಸ್ತ ಲೋಕಗಳ ಕಲ್ಪನೆ ಮಾಡಲಾಯಿತು. ಈ ಪ್ರಕಾರದಿಂದ ಈ ವಿಶ್ವಬ್ರಹ್ಮಾಂಡವು ಭಗವಂತನದೇ ಸ್ಥೂಲ ಆಕಾರರೂಪವಾಗಿದೆ. ಭಗವಂತನ ವಿಶುದ್ಧ ಸತ್ತ್ವಮಯ ಆ ವಿರಾಟ್‌ರೂಪವು ಪರಮಶ್ರೇಷ್ಠವಾದುದು. ॥ ೩ ॥ ಈ ಶ್ರೇಷ್ಠ ವಿಶ್ವವನ್ನು ಜ್ಞಾನಿಗಳು ತಮ್ಮ ದಿವ್ಯ ಜ್ಞಾನಸಂಪನ್ನ ದೃಷ್ಟಿಯಿಂದ ಭಗವಂತನದೇ ಸ್ವರೂಪವೆಂದು ಭಾವಿಸುತ್ತಾರೆ. 'ವಾಸುದೇವಃ ಸರ್ವಮ್' ಹೀಗೆ ಅನೇಕ ರೂಪಗಳಲ್ಲಿ ಒಬ್ಬನೇ ಭಗವಂತನನ್ನು ದರ್ಶಿಸುತ್ತಾ ಆನಂದಪಡುತ್ತಾರೆ. ಭಗವಂತನು ಎಂತಹ ಲೀಲೆಯನ್ನು ಮಾಡಿರುವನು, ಎಂದು ಅನುಭವಿಸುತ್ತಾರೆ. ಭಗವಂತನ ಆ ವಿರಾಟ್‌ರೂಪವು ಸಾವಿರಾರು ಪಾದಗಳಿಂದ, ತೊಡೆಗಳಿಂದ ತೋಳುಗಳಿಂದ ಮತ್ತು ಮುಖಗಳಿಂದ ಕೂಡಿ ಅದ್ಭುತವಾಗಿತ್ತು. ಅದರಲ್ಲಿ ಸಾವಿರಾರು ತಲೆಗಳು, ಕಿವಿಗಳು, ಕಣ್ಣುಗಳು, ಮೂಗುಗಳು ಇವುಗಳಿಂದ ವಿರಾಜಮಾನವಾಗಿ ಸಾವಿರಾರು ಕಿರೀಟಗಳು, ವಸ್ತ್ರಗಳು, ಕುಂಡಲಗಳು ಇವುಗಳಿಂದ ಕಂಗೊಳಿಸುತ್ತಿರುವುದು. ಹಾಗೂ ಐಶ್ವರ್ಯಮಯವಾಗಿ ನಾನಾ ವಸ್ತುಗಳನ್ನು, ಭೋಗಗಳನ್ನು ಅನುಭವಿಸುತ್ತಾನೆ. ॥ ೪ ॥ ಹೀಗೆ ಪರಮಾತ್ಮನೇ ಈ ವಿಶ್ವದ ಅವಿನಾಶಿ ಬೀಜ ಅರ್ಥಾತ್ ಕಾರಣನಾಗಿದ್ದಾನೆ. ಅವನೇ ಅನೇಕ ಅವತಾರಗಳನ್ನು ಧರಿಸುತ್ತಾನೆ. ಇದು ಅವನಿಗೆ ಒಂದು ಲೀಲೆಯೇ ಆಗಿದೆ. ಅವನ ಈ ರೂಪವು ಸಮಸ್ತ ಅವತಾರಗಳ ಗಣಿಯಾಗಿದೆ. ಅವನು ತನ್ನ ಒಂದಂಶದಿಂದಲೇ ದೇವತೆ, ತಿರ್ಯಗ್, ಮನುಷ್ಯ ಮೊದಲಾದವರನ್ನು ನಿರ್ಮಿಸುತ್ತಾನೆ (ಅವನ ಸಂಕಲ್ಪ ಮಾತ್ರದಿಂದಲೇ ಅನಂತಕೋಟಿ ಬ್ರಹ್ಮಾಂಡಗಳು ಉಂಟಾಗುತ್ತವೆ. ಅನಂತನಾದ ಅವನನ್ನು ಯಾರಾದರೂ ಹೇಗೆ ವರ್ಣಿಸಬಲ್ಲರು ?) ॥ ೫ ॥

ಆ ಮಹಾಪ್ರಭುವೇ ಮೊದಲು 'ಕೌಮಾರ' ಎಂಬ ಸೃಷ್ಟಿಯನ್ನು ಕೈಗೊಂಡು ಸನಕ, ಸನಂದನ, ಸನಾತನ, ಸನತ್ಕುಮಾರರೆಂಬ ಬ್ರಾಹ್ಮಣರೂಪದಲ್ಲಿ ಅವತರಿಸಿ, ಅತ್ಯಂತ ಕಠಿಣವೂ, ಅಖಂಡವೂ ಆದ ಬ್ರಹ್ಮಚರ್ಯವನ್ನು ಆಚರಿಸಿದನು. ॥ ೬ ॥ ಎರಡನೆಯ ಅವತಾರವಾಗಿ ಆ ಯಜ್ಞೇಶನು ಲೋಕಕಲ್ಯಾಣಕ್ಕಾಗಿ ರಸಾತಳದಲ್ಲಿ ಹುದುಗಿದ್ದ ಭೂಮಿಯನ್ನು ಉದ್ಧರಿಸುವುದಕ್ಕಾಗಿ ವರಾಹರೂಪವನ್ನು ತಾಳಿದನು. ॥ ೭ ॥ ಋಷಿಸೃಷ್ಟಿಯಲ್ಲಿ ಅವನು ದೇವರ್ಷಿ ನಾರದರ ರೂಪದಲ್ಲಿ ಮೂರನೆಯ ಬಾರಿ ಅವತರಿಸಿ, ನಿಷ್ಕಾಮ ಕರ್ಮದ ಆಚರಣೆಯಿಂದ ಮುಕ್ತಿಯನ್ನು ಬೋಧಿಸುವ 'ನಾರದ ಪಾಂಚರಾತ್ರ' ಎಂದು ಪ್ರಸಿದ್ಧವಾಗಿರುವ ಸಾತ್ವತ ತಂತ್ರವನ್ನು ಉಪದೇಶಿಸಿದನು. ॥ ೮ ॥ ನಾಲ್ಕನೆಯದಾದ ಧರ್ಮಕಲಾ ಎಂಬ ಸೃಷ್ಟಿಯಲ್ಲಿ ಭಗವಂತನು ಧರ್ಮನ ಪತ್ನಿಯಾದ ಮೂರ್ತಿಯ ಗರ್ಭದಿಂದ ನರ-ನಾರಾಯಣ ಮಹರ್ಷಿಗಳ ರೂಪದಲ್ಲಿ ಅವತರಿಸಿದನು. ಈ ಅವತಾರದಲ್ಲಿ ಅವನು ಮನಸ್ಸು-ಇಂದ್ರಿಯಗಳ ಸಂಯಮದ ಆತ್ಮಶಾಂತಿಯೊಡನೆ ಅತಿಕಠಿಣವಾದ ತಪಸ್ಸನ್ನು ಮಾಡಿತೋರಿದನು. ॥ ೯ ॥ ಐದನೇ ಅವತಾರದಲ್ಲಿ ಸ್ವಾಮಿಯು

ಪಂಚಮಃ ಕಪಿಲೋ ನಾಮ ಸಿದ್ಧೇಶಃ ಕಾಲವಿಪ್ಲುತಮ್ ।
ಪ್ರೋವಾಚಾಸುರಯೇ ಸಾಂಖ್ಯಂ ತತ್ತ್ವಗ್ರಾಮವಿನಿರ್ಣಯಮ್
॥ ೧೦ ॥

ಷಷ್ಠೇ ಅತ್ರೇರಪತ್ಯತ್ವಂ ವೃತಃ ಪ್ರಾಪ್ತೋಽನಸೂಯಯಾ ।
ಆನ್ವೀಕ್ಷಿಕೀಮಲರ್ಕಾಯ ಪ್ರಹ್ಲಾದಾದಿಭ್ಯ ಊಚಿವಾನ್
॥ ೧೧ ॥

ತತಃ ಸಪ್ತಮ ಆಕೂತ್ಯಾಂ ರುಚೇರ್ಯಜ್ಞೋಽಭ್ಯಜಾಯತ ।
ಸ ಯಾಮಾದ್ಯೈಃ ಸುರಗಣೈರಪಾತ್ಸ್ವಾಯಂಭುವಾಂತರಮ್
॥ ೧೨ ॥

ಅಷ್ಟಮೇ ಮೇರುದೇವ್ಯಾಂ ತು ನಾಭೇರ್ಜಾತ ಉರುಕ್ರಮಃ ।
ದರ್ಶಯನ್ ವರ್ತ್ಮ ಧೀರಾಣಾಂ ಸರ್ವಾಶ್ರಮನಮಸ್ಕೃತಮ್
॥ ೧೩ ॥

ಋಷಿಭಿರ್ಯಾಚಿತೋ ಭೇಜೇ ನವಮಂ ಪಾರ್ಥಿವಂ ವಪುಃ ।
ದುಗ್ಧೇಮಾಮೋಷಧೀರ್ವಿಪ್ರಾಸ್ತೇನಾಯಂ ಸ ಉಶತ್ತಮಃ
॥ ೧೪ ॥

ರೂಪಂ ಸ ಜಗೃಹೇ ಮಾತ್ಸ್ಯಂ ಚಾಕ್ಷುಷೋದಧಿಸಂಪ್ಲವೇ ।
ನಾವ್ಯಾರೋಪ್ಯ ಮಹೀಮಯ್ಯಾಮಪಾದ್ವೈವಸ್ವತಂ ಮನುಮ್
॥ ೧೫ ॥

ಸುರಾಸುರಾಣಾಮುದಧಿಂ ಮಥ್ನತಾಂ ಮಂದರಾಚಲಮ್ ।
ದಧ್ರೇ ಕಮಠರೂಪೇಣ ಪೃಷ್ಠ ಏಕಾದಶೇ ವಿಭುಃ
॥ ೧೬ ॥

ಧಾನ್ವಂತರಂ ದ್ವಾದಶಮಂ ತ್ರಯೋದಶಮಮೇವ ಚ ।
ಅಪಾಯಯತ್ಸುರಾನನ್ಯಾನ್ಮೋಹಿನ್ಯಾ ಮೋಹಯನ್ ಸ್ತ್ರಿಯಾ
॥ ೧೭ ॥

ಚತುರ್ದಶಂ ನಾರಸಿಂಹಂ ಬಿಭ್ರದ್ದೈತ್ಯೇಂದ್ರಮೂರ್ಜಿತಮ್ ।
ದದಾರ ಕರಜೈರ್ವಕ್ಷಸ್ಯೇರಕಾಂ ಕಟಕೃದ್ಯಥಾ
॥ ೧೮ ॥

ಸಿದ್ಧರ ಒಡೆಯನಾದ ಕಪಿಲರೂಪದಿಂದ ಅವತರಿಸಿ ಕಾಲಮಹಿಮೆಯಿಂದ ಲುಪ್ತವಾಗಿ ಹೋಗಿದ್ದ ತತ್ತ್ವಸಮೂಹಗಳ ಸ್ವರೂಪವನ್ನು ನಿರ್ಣಯಿಸುವ ಸಾಂಖ್ಯವೆಂಬ ಶಾಸ್ತ್ರವನ್ನು ವರ್ಣಿಸಿ, ಅದನ್ನು 'ಆಸುರಿ' ಎಂಬ ಬ್ರಾಹ್ಮಣನಿಗೆ ಉಪದೇಶಿಸಿದನು. ॥ ೧೦ ॥ ಅನಸೂಯೆಯು ಬೇಡಿದ ವರವನ್ನು ಈಡೇರಿಸಲು ಆರನೆಯ ಅವತಾರದಲ್ಲಿ ಭಗವಂತನು ಅತ್ರಿಪುತ್ರ ದತ್ತಾತ್ರೇಯನಾಗಿ ಅವತರಿಸಿದನು. ಇದರಲ್ಲಿ ಅವನು ಅಲರ್ಕ, ಪ್ರಹ್ಲಾದ ಮುಂತಾದವರಿಗೆ ಬ್ರಹ್ಮಜ್ಞಾನವನ್ನು ಉಪದೇಶಿಸಿದನು. ॥ ೧೧ ॥ ಏಳನೆಯ ಅವತಾರ ಯಜ್ಞಾವತಾರ. ರುಚಿಯೆಂಬ ಪ್ರಜಾಪತಿಯ ಪತ್ನಿ ಆಕೂತಿಯ ಗರ್ಭದಿಂದ ಜನಿಸಿ, ತನ್ನ ಪುತ್ರರಾದ 'ಯಾಮ' ಮುಂತಾದ ದೇವತೆಗಳೊಡನೆ ಸ್ವಾಯಂಭುವ ಮನ್ವಂತರವನ್ನು ರಕ್ಷಿಸಿದನು. ॥ ೧೨ ॥ ಎಂಟನೆಯ ಬಾರಿ ಭಗವಂತನು ನಾಭಿರಾಜನ ಪತ್ನಿಯಾದ ಮೇರುದೇವಿಯಲ್ಲಿ ಋಷಭದೇವನ ರೂಪದಲ್ಲಿ ಅವತರಿಸಿ, ಎಲ್ಲ ಆಶ್ರಮಗಳಿಗೂ ವಂದನೀಯವಾಗಿರುವ ಪರಮಹಂಸ ಮಾರ್ಗವನ್ನು ಆಚರಿಸಿ, ತೋರಿಸಿಕೊಟ್ಟನು. ॥ ೧೩ ॥ ಋಷಿಗಳ ಪ್ರಾರ್ಥನೆಯಂತೆ ಅವನು ತನ್ನ ಒಂಭತ್ತನೆಯ ಅವತಾರವಾಗಿ ಪೃಥು ಮಹಾರಾಜನ ರೂಪದಲ್ಲಿ ಕಾಣಿಸಿಕೊಂಡನು. ಶೌನಕಾದಿ ಋಷಿಗಳೇ! ಈ ಅವತಾರದಲ್ಲಿ ಅವನು ಪೃಥ್ವಿಯಿಂದ ಸಮಸ್ತ ಓಷಧಿಗಳನ್ನು ಕರೆದು ಜಗತ್ತಿಗೆ ಅತ್ಯಂತ ಕಲ್ಯಾಣವನ್ನುಂಟು ಮಾಡಿದನು. ॥ ೧೪ ॥ ಚಾಕ್ಷುಷ ಮನ್ವಂತರದ ಕೊನೆಯಲ್ಲಿ ತ್ರಿಲೋಕಗಳು ಸಮುದ್ರದಲ್ಲಿ ಮುಳುಗಿಹೋಗಿದ್ದಾಗ ಆತನು ಮತ್ಸ್ಯರೂಪದಲ್ಲಿ ಹತ್ತನೆಯ ಅವತಾರವನ್ನು ಕೈಗೊಂಡನು. ಇದರಲ್ಲಿ ಭಗವಂತನು ಮುಂದಿನ ಮನ್ವಂತರದ ಅಧಿಪತಿಯಾದ ವೈವಸ್ವತಮನುವನ್ನು ಪೃಥ್ವಿರೂಪವಾದ ನೌಕೆಯಲ್ಲಿ ಕುಳ್ಳಿರಿಸಿ ಕಾಪಾಡಿದನು. ॥ ೧೫ ॥ ದೇವ-ದಾನವರು ಸಮುದ್ರವನ್ನು ಕಡೆಯುತ್ತಿದ್ದಾಗ ಭಗವಂತನು ಹನ್ನೊಂದನೆಯ ಅವತಾರವಾಗಿ 'ಕೂರ್ಮ' ರೂಪದಲ್ಲಿ ಕಾಣಿಸಿಕೊಂಡು ಮಂದರಪರ್ವತವನ್ನು ತನ್ನ ಬೆನ್ನಮೇಲೆ ಹೊತ್ತನು. ॥ ೧೬ ॥ ಹನ್ನೆರಡನೆಯ ಬಾರಿ ಧನ್ವಂತರಿ ರೂಪದಲ್ಲಿ ಅಮೃತವನ್ನೆತ್ತಿಕೊಂಡು ಸಮುದ್ರದಿಂದ ಅವತರಿಸಿದನು. ಹದಿಮೂರನೆಯ ಅವತಾರವಾಗಿ ಮೋಹಿನೀ ರೂಪದಲ್ಲಿ ಕಾಣಿಸಿಕೊಂಡು ದೈತ್ಯರನ್ನು ಮೋಹಿತರನ್ನಾಗಿ ಮಾಡಿ, ದೇವತೆಗಳಿಗೆ ಅಮೃತವನ್ನು ಕುಡಿಸಿದನು. ॥ ೧೭ ॥ ಹದಿನಾಲ್ಕನೆಯ ಅವತಾರದಲ್ಲಿ ಅವನು ನರಸಿಂಹರೂಪದಲ್ಲಿ ಪ್ರಕಟನಾಗಿ ಮಹಾಬಲಶಾಲಿಯಾದ ದೈತ್ಯರಾಜ ಹಿರಣ್ಯಕಶಿಪುವಿನ ಎದೆಯನ್ನು ಚಾಪೆಯನ್ನು ಹೆಣೆಯುವವರು ಜೊಂಡನ್ನು ಸೀಳುವಂತೆ – ತನ್ನ ಉಗುರುಗಳಿಂದ ಅನಾಯಾಸವಾಗಿ ಸೀಳಿಹಾಕಿದನು. ॥ ೧೮ ॥ ಹದಿನೈದನೆಯ ಅವತಾರದಲ್ಲಿ ಭಗವಂತನು ವಾಮನರೂಪವನ್ನು ಧರಿಸಿ, ಸ್ವರ್ಗದ ರಾಜ್ಯವನ್ನು ದೇವತೆಗಳಿಗೆ ಹಿಂದಕ್ಕೆ ಕೊಡಿಸಲು ಚಕ್ರವರ್ತಿ ಬಲಿರಾಜನ ಯಜ್ಞಭೂಮಿಗೆ ಹೋಗಿ, ಮೂರು ಹೆಜ್ಜೆ ಭೂಮಿಯನ್ನು ಬೇಡಿ ಬಲಿಯಿಂದ ಸ್ವರ್ಗದ ರಾಜ್ಯವನ್ನು ಇಂದ್ರನಿಗೆ ದಯಪಾಲಿಸಿದನು. (ಬಲಿಚಕ್ರವರ್ತಿಯೂ, ಆತ್ಮನಿವೇದನ ಗೈದು ಭಗವಂತನ ಅಖಂಡ ಭಕ್ತಿಯನ್ನು ಪಡೆದನು.

ಪಂಚದಶಂ ವಾಮನಕಂ ಕೃತ್ವಾಗಾದಧ್ವರಂ ಬಲೇಃ ।
ಪದತ್ರಯಂ ಯಾಚಮಾನಃ ಪ್ರತ್ಯಾದಿತ್ಸುಸ್ತ್ರಿವಿಷ್ಟಪಮ್ ॥ ೧೯ ॥

ಅವತಾರೇ ಷೋಡಶಮೇ ಪಶ್ಯನ್ ಬ್ರಹ್ಮದ್ರುಹೋ ನೃಪಾನ್ ।
ತ್ರಿಃಸಪ್ತಕೃತ್ವಃ ಕುಪಿತೋ ನಿಃಕ್ಷತ್ರಾಮಕರೋನ್ಮಹೀಮ್ ॥ ೨೦ ॥

ತತಃ ಸಪ್ತದಶೇ ಜಾತಃ ಸತ್ಯವತ್ಯಾಂ ಪರಾಶರಾತ್ ।
ಚಕ್ರೇ ವೇದತರೋಃ ಶಾಖಾ ದೃಷ್ಟ್ವಾ ಪುಂಸೋಽಲ್ಪಮೇಧಸಃ ॥ ೨೧ ॥

ನರದೇವತ್ವಮಾಪನ್ನಃ ಸುರಕಾರ್ಯಚಿಕೀರ್ಷಯಾ ।
ಸಮುದ್ರನಿಗ್ರಹಾದೀನಿ ಚಕ್ರೇ ವೀರ್ಯಾಣ್ಯತಃ ಪರಮ್ ॥ ೨೨ ॥

ಏಕೋನವಿಂಶೇ ವಿಂಶತಿಮೇ ವೃಷ್ಣಿಷು ಪ್ರಾಪ್ಯ ಜನ್ಮನೀ ।
ರಾಮಕೃಷ್ಣಾವಿತಿ ಭುವೋ ಭಗವಾನಹರದ್ಭರಮ್ ॥ ೨೩ ॥

ತತಃ ಕಲೌ ಸಂಪ್ರವೃತ್ತೇ ಸಮ್ಮೋಹಾಯ ಸುರದ್ವಿಷಾಮ್ ।
ಬುದ್ಧೋ ನಾಮ್ನಾಜನಸುತಃ ಕೀಕಟೇಷು ಭವಿಷ್ಯತಿ ॥ ೨೪ ॥

ಅಥಾಸೌ ಯುಗಸಂಧ್ಯಾಯಾಂ ದಸ್ಯುಪ್ರಾಯೇಷು ರಾಜಸು ।
ಜನಿತಾ ವಿಷ್ಣುಯಶಸೋ ನಾಮ್ನಾ ಕಲ್ಕಿರ್ಜಗತ್ಪತಿಃ ॥ ೨೫ ॥

ಅವತಾರಾ ಹ್ಯಸಂಖ್ಯೇಯಾ ಹರೇಃ ಸತ್ತ್ವನಿಧೇರ್ದ್ವಿಜಾಃ ।
ಯಥಾವಿದಾಸಿನಃ ಕುಲ್ಯಾಃ ಸರಸಃ ಸ್ಯುಃ ಸಹಸ್ರಶಃ ॥ ೨೬ ॥

ಋಷಯೋ ಮನವೋ ದೇವಾ ಮನುಪುತ್ರಾ ಮಹೌಜಸಃ ।
ಕಲಾಃ ಸರ್ವೇ ಹರೇರೇವ ಸಪ್ರಜಾಪತಯಸ್ತಥಾ ॥ ೨೭ ॥

ಹೀಗೆ ಪುತ್ರ ಭಕ್ತನಾದ ಭಗವಂತನು ತನ್ನ ಪ್ರೇಮೀಭಕ್ತ ಬಲಿಗೆ ಎಂತಹ ಗೌರವ ಕೊಡಿಸಿದನು. 'ಪುಣ್ಯಶ್ಲೋಕೋ ಬಲೀರಾಜಾ' ಹೀಗೆ ಅವನು ಪ್ರಸಿದ್ಧನಾದನು.) ॥ ೧೯ ॥ ಹದಿನಾರನೆಯ ಪರಶುರಾಮಾವತಾರದಲ್ಲಿ ರಾಜರು ಬ್ರಾಹ್ಮಣದ್ರೋಹಿಗಳಾಗಿರುವುದನ್ನು ನೋಡಿ ಕ್ರುದ್ಧನಾಗಿ ಅವನು ಪೃಥ್ವಿಯನ್ನು ಇಪ್ಪತ್ತೊಂದು ಬಾರಿ ದುಷ್ಟ ಕ್ಷತ್ರಿಯಶೂನ್ಯವಾಗುವಂತೆ ಮಾಡಿದನು. ॥ ೨೦ ॥ ಇದಾದ ಬಳಿಕ ಹದಿನೇಳನೆಯ ಅವತಾರದಲ್ಲಿ ಅವನು ಪರಾಶರರ ಮೂಲಕ ಸತ್ಯವತೀದೇವಿಯ ಗರ್ಭದಿಂದ ವೇದವ್ಯಾಸರೂಪದಲ್ಲಿ ಕಾಣಿಸಿಕೊಂಡನು. ಆಗ ಜನರ ಜ್ಞಾನ ಮತ್ತು ಧಾರಣಾಶಕ್ತಿಯು ಕಡಿಮೆಯಾಗಿರುವುದನ್ನು ನೋಡಿ ವೇದವೃಕ್ಷವನ್ನು ನಾನಾ ಶಾಖೆಗಳ ರೂಪದಲ್ಲಿ ವಿಂಗಡಿಸಿದನು. ॥ ೨೧ ॥ ಹದಿನೆಂಟನೆಯ ಬಾರಿ ಭಗವಂತನು ದೇವತೆಗಳ ಕಾರ್ಯವನ್ನು ನೆರವೇರಿಸಲು ರಾಜನಾಗಿ ರಾಮರೂಪದಿಂದ ಅವತರಿಸಿ, ಸೇತುಬಂಧನ, ರಾವಣವಧೆ ಮುಂತಾದ ಪರಾಕ್ರಮಪೂರ್ಣ ಅನೇಕ ಲೀಲೆಗಳನ್ನು ಮಾಡಿದನು. (ಅವುಗಳನ್ನು ಹಾಡಿಕೊಂಡು ಜನರು ಭಕ್ತಿಯನ್ನು ಪಡೆದು ಭಗವದ್ಧಾಮಕ್ಕೆ ಸೇರುತ್ತಾರೆ.) ॥ ೨೨ ॥ ಹತ್ತೊಂಭತ್ತನೆಯ ಮತ್ತು ಇಪ್ಪತ್ತನೆಯ ಅವತಾರಗಳಲ್ಲಿ ಅವನು ಯದುವಂಶದಲ್ಲಿ ಬಲರಾಮ ಹಾಗೂ ಶ್ರೀಕೃಷ್ಣ ಎಂಬ ಹೆಸರುಗಳಿಂದ ಪ್ರಕಟಗೊಂಡು ಭೂಮಿಯ ಭಾರವನ್ನು ಇಳಿಸಿದನು. ॥ ೨೩ ॥ ಮತ್ತೆ ಕಲಿಯುಗವು ಬಂದಾಗ ಅವನು ಮಗಧ ದೇಶದಲ್ಲಿ ದೇವದ್ವೇಷಿಗಳಾದ ದೈತ್ಯರನ್ನು ಮೋಹಗೊಳಿಸುವುದಕ್ಕಾಗಿ ಅಜನ ಎಂಬುವನಲ್ಲಿ ಪುತ್ರರೂಪದಲ್ಲಿ ಬುದ್ಧಾವತಾರವನ್ನು ತಾಳುವನು. ॥ ೨೪ ॥ ಇದು ಕಳೆದು ಬಹಳ ದಿನಗಳ ಬಳಿಕ ಕಲಿಯುಗದ ಕೊನೆಯಲ್ಲಿ ರಾಜರೆಲ್ಲರೂ ಸಾಮಾನ್ಯವಾಗಿ ಲೂಟಿಗಾರರಾಗುವರು. ಆಗ ಜಗತ್ತಿನ ರಕ್ಷಕನಾದ ಭಗವಂತನು ವಿಷ್ಣುಯಶನೆಂಬ ಬ್ರಾಹ್ಮಣನ ಮನೆಯಲ್ಲಿ ಕಲ್ಕಿಯ ರೂಪದಲ್ಲಿ ಅವತಾರ ಮಾಡುವನು. * ॥ ೨೫ ॥

ಶೌನಕಾದಿ ಮಹರ್ಷಿಗಳೇ! ಇಷ್ಟು ಮಾತ್ರವೇ ಅವನ ಅವತಾರಗಳೆಂದು ತಿಳಿಯಬೇಡಿರಿ. ವಾಸ್ತವವಾಗಿ ಭಗವಂತನ ಅವತಾರಗಳಿಗೆ ಲೆಕ್ಕವೇ ಇಲ್ಲ. ಎಂದಿಗೂ ಬತ್ತದೆ ಇರುವ ಅಗಾಧ ಸರೋವರದಿಂದ ಸಾವಿರಾರು ಕಾಲುವೆಗಳು ಹರಿದುಬರುವಂತೆ ಸತ್ತ್ವಗುಣಕ್ಕೆ ನಿಧಿಯಾದ ಶ್ರೀಹರಿಯಿಂದ ಅಸಂಖ್ಯ ಅವತಾರಗಳು ಉಂಟಾಗುತ್ತಾ ಇರುತ್ತವೆ. ॥ ೨೬ ॥ ಋಷಿಗಳು, ಮನುಗಳು, ದೇವತೆಗಳು, ಪ್ರಜಾಪತಿಗಳು, ಮನುಪುತ್ರರು ಹಾಗೂ ಮಹಾಶಕ್ತಿಶಾಲಿಗಳು ಯಾರು-ಯಾರುಂಟೋ ಇವರೆಲ್ಲರೂ ಕೂಡ ಶ್ರೀಹರಿಯ ವಿಭೂತಿಗಳೇ, ಅಂಶಗಳೇ ಆಗಿವೆ. ॥ ೨೭ ॥ ಇವೆಲ್ಲ ಅವತಾರಗಳಾದರೋ ಭಗವಂತನ ಅಂಶಾವತಾರ ಅಥವಾ ಕಲಾವತಾರಗಳು.

* ಇಲ್ಲಿ ಇಪ್ಪತ್ತೆರಡು ಅವತಾರಗಳನ್ನು ಮಾತ್ರ ಲೆಕ್ಕಿಸಿದೆ. ಆದರೆ ಭಗವಂತನ ಅವತಾರಗಳು ಇಪ್ಪತ್ತನಾಲ್ಕೆಂದು ಪ್ರಸಿದ್ಧವಾಗಿದೆ. ಹಾಗಾದರೆ ಉಳಿದ ಎರಡು ಅವತಾರಗಳಾವುವು? ಎಂದರೆ ಹಂಸ ಮತ್ತು ಹಯಗ್ರೀವ ಅವತಾರಗಳು. (ಕೆಲವು ವಿದ್ವಾಂಸರ ಅಭಿಪ್ರಾಯದಲ್ಲಿ ಮೇಲ್ಕಂಡ ಇಪ್ಪತ್ತೆರಡು ಅವತಾರಗಳಲ್ಲಿ ರಾಮ-ಕೃಷ್ಣರನ್ನು ಬಿಟ್ಟು ಉಳಿದ ಇಪ್ಪತ್ತು ಅವತಾರಗಳೊಡನೆ ಅವತಾರಮೂಲವಾದ ಶ್ರೀಕೃಷ್ಣಪರಮಾತ್ಮನ ಕೇಶಾವತಾರ, ಧರ್ಮ ಮತ್ತು ಪೃಥ್ವೀದೇವಿಯನ್ನು ಅನುಗ್ರಹಿಸಿದ ಅವತಾರ. ಬಲರಾಮಾವತಾರ ಮತ್ತು ಪರಬ್ರಹ್ಮಾವತಾರ ಎಂಬ ನಾಲ್ಕು ಅವತಾರಗಳನ್ನು ಸೇರಿಸಿ ಇಪ್ಪತ್ತನಾಲ್ಕು ಅವತಾರಗಳ ಪರಿಗಣನೆ ಮಾಡಿದ್ದಾರೆ. ಶ್ರೀಕೃಷ್ಣನು ಅವತಾರವೇ ಅಲ್ಲ, ಅವನು ಸಾಕ್ಷಾತ್ ಪರಬ್ರಹ್ಮಪರಮಾತ್ಮ ವಾಸುದೇವ.)

ಏತೇ ಚಾಂಶಕಲಾಃ ಪುಂಸಃ ಕೃಷ್ಣಸ್ತು ಭಗವಾನ್ ಸ್ವಯಮ್ ।
ಇಂದ್ರಾರಿವ್ಯಾಕುಲಂ ಲೋಕಂ ಮೃಡಯಂತಿ ಯುಗೇ ಯುಗೇ ॥ ೨೮ ॥

ಜನ್ಮ ಗುಹ್ಯಂ ಭಗವತೋ ಯ ಏತತ್ಪ್ರಯತೋ ನರಃ ।
ಸಾಯಂ ಪ್ರಾತರ್ಗೃಣನ್ ಭಕ್ತ್ಯಾ ದುಃಖಗ್ರಾಮಾದ್ವಿಮುಚ್ಯತೇ ॥ ೨೯ ॥

ಏತದ್ರೂಪಂ ಭಗವತೋ ಹ್ಯರೂಪಸ್ಯ ಚಿದಾತ್ಮನಃ ।
ಮಾಯಾಗುಣೈರ್ವಿರಚಿತಂ ಮಹದಾದಿಭಿರಾತ್ಮನಿ ॥ ೩೦ ॥

ಯಥಾ ನಭಸಿ ಮೇಘೌಘೋ ರೇಣುರ್ವಾ ಪಾರ್ಥಿವೋಽನಿಲೇ ।
ಏವಂ ದ್ರಷ್ಟರಿ ದೃಶ್ಯತ್ವಮಾರೋಪಿತಮಬುದ್ಧಿಭಿಃ ॥ ೩೦ ॥

ಅತಃ ಪರಂ ಯದವ್ಯಕ್ತಮವ್ಯೂಢಗುಣಬೃಂಹಿತಮ್ ।
ಅದೃಷ್ಟಾಶ್ರುತವಸ್ತುತ್ವಾತ್ ಸ ಜೀವೋ ಯತ್ಪುನರ್ಭವಃ ॥ ೩೨ ॥

ಯತ್ರೇಮೇ ಸದಸದ್ರೂಪೇ ಪ್ರತಿಷಿದ್ಧೇ ಸ್ವಸಂವಿದಾ ।
ಅವಿದ್ಯಯಾಽಽತ್ಮನಿ ಕೃತೇ ಇತಿ ತದ್ಬ್ರಹ್ಮದರ್ಶನಮ್ ॥ ೩೩ ॥

ಯದ್ಯೇಷೋಪರತಾ ದೇವೀ ಮಾಯಾ ವೈಶಾರದೀ ಮತಿಃ ।
ಸಂಪನ್ನ ಏವೇತಿ ವಿದುರ್ಮಹಿಮ್ನಿ ಸ್ವೇ ಮಹೀಯತೇ ॥ ೩೪ ॥

ಏವಂ ಜನ್ಮಾನಿ ಕರ್ಮಾಣಿ ಹ್ಯಕರ್ತುರಜನಸ್ಯ ಚ ।
ವರ್ಣಯಂತಿ ಸ್ಮ ಕವಯೋ ವೇದಗುಹ್ಯಾನಿ ಹೃತ್ಪತೇಃ ॥ ೩೫ ॥

ಸ ವಾ ಇದಂ ವಿಶ್ವಮಮೋಘಲೀಲಃ
ಸೃಜತ್ಯವತ್ಯತ್ತಿ ನ ಸಜ್ಜತೇಽಸ್ಮಿನ್ ।
ಭೂತೇಷು ಚಾಂತರ್ಹಿತ ಆತ್ಮತಂತ್ರಃ
ಷಾಡ್ವರ್ಗಿಕಂ ಜಿಘ್ರತಿ ಷಡ್ಗುಣೇಶಃ ॥ ೩೬ ॥

ಆದರೆ ಭಗವಾನ್ ಶ್ರೀಕೃಷ್ಣನಾದರೋ ಅವತಾರಮಾಡಿದ ಸಾಕ್ಷಾತ್ ಭಗವಂತನೇ ಆಗಿದ್ದಾನೆ. ದೈತ್ಯರ ಅತ್ಯಾಚಾರಗಳಿಂದ ಜನರು ಪೀಡಿತರಾದಾಗ ಯುಗ-ಯುಗಗಳಲ್ಲಿ ಅನೇಕ ರೂಪಗಳಿಂದ ಪ್ರಕಟಗೊಂಡು ಅವರನ್ನು ರಕ್ಷಿಸುವನು. ॥ ೨೮ ॥ ಭಗವಂತನ ದಿವ್ಯ ಜನ್ಮಗಳ ಈ ಕಥೆಯು ಅತ್ಯಂತ ರಹಸ್ಯಮಯ – ಗೋಪನೀಯವಾಗಿದೆ. ಏಕಾಗ್ರಚಿತ್ತದಿಂದ ಸಾಯಂಕಾಲ-ಬೆಳಗ್ಗೆ ಪ್ರೇಮದಿಂದ ಪಠಿಸುವವರು ಎಲ್ಲ ದುಃಖಗಳಿಂದ ಬಿಡುಗಡೆಹೊಂದುವರು. ॥ ೨೯ ॥ ಪ್ರಾಕೃತ ಸ್ವರೂಪರಹಿತ ಚಿನ್ಮಯ ಭಗವಂತನ ಈ ಸ್ಥೂಲ ಜಗದಾಕಾರವಾದ ರೂಪವು ಅವನ ಮಾಯೆಯ ಮಹತ್ತತ್ತ್ವಾದಿ ಗುಣಗಳಿಂದ ಭಗವಂತನಲ್ಲೇ ಕಲ್ಪಿತವಾಗಿದೆ. ॥ ೩೦ ॥ ಆಕಾಶದಲ್ಲಿ ಉಂಟಾದ ಮೋಡಗಳು ಆಕಾಶವನ್ನೇ ಮುಚ್ಚಿಬಿಡುವವು. ಗಾಳಿಯಿಂದ ಎದ್ದ ಧೂಳು ಗಾಳಿಯನ್ನೇ ಧೂಳಿಧೂಸರಿತವಾಸುತ್ತದೆ. ಹಾಗೆಯೇ ಆತ್ಮನಿಂದ ಉತ್ಪನ್ನವಾದ ದೃಶ್ಯಪ್ರಪಂಚವು ವಾಸ್ತವವಾಗಿ ಪರಮಾತ್ಮನ ಸಗುಣ ರೂಪವೇ ಆಗಿದೆ. ಹೀಗಿದ್ದರೂ ಅವಿವೇಕೀ ಜನರು ಎಲ್ಲರ ಸಾಕ್ಷಿಯಾದ ಆತ್ಮನಲ್ಲಿ ಸ್ಥೂಲವಾದ ದೃಶ್ಯ ಜಗತ್ತನ್ನು ಆರೋಪಿಸುತ್ತಾರೆ. ॥ ೩೦ ॥ ಈ ಸಗುಣಾದಿಂದ ಅತೀತವಾದ ಪರಮಾತ್ಮನ ನಿರ್ಗುಣ ನಿರಾಕಾರ ಸ್ವರೂಪದೊಂದಿಗೆ ಗುಣಗಳ ಯಾವುದೇ ಸಂಪರ್ಕವಿಲ್ಲ. ಹಾಗೂ ಅವನಿಗೆ ಕರಚರಣಾದಿ ಅವಯವಗಳೂ ಇಲ್ಲ. ಜೀವನೂ ಕೂಡ ಪರಮಾತ್ಮನದೇ ಅಂಶವಾದ ವಾಸ್ತವವಾಗಿ ನಿರ್ಗುಣನೇ ಆಗಿದ್ದಾನೆ. ಆದರೆ ಮಾಯೆಯಿಂದ ಭ್ರಮಿತನಾಗಿದ್ದರಿಂದ ಅವನು ಜನ್ಮ - ಮರಣಾದ ಚಕ್ರದಲ್ಲಿ ಸಿಲುಕಿಕೊಳ್ಳುವನು ॥ ೩೨ ॥ ಜೀವಿಗೆ ಸ್ವಸ್ವರೂಪ ಜ್ಞಾನ ಉಂಟಾದಾಗ, ಅಜ್ಞಾನದಿಂದಾಗಿ ಪರಮಾತ್ಮನಲ್ಲಿ ಕಂಡು ಬರುತ್ತಿದ್ದ ಜಗತ್ತು ಇಲ್ಲವಾಗುತ್ತದೆ. ಜೊತೆಗೆ ಸರ್ವತ್ರ ಪರಮಾತ್ಮನ ದರ್ಶನವೇ ಆಗುತ್ತದೆ. ಈ ಸ್ಥಿತಿಯಲ್ಲಿ ಮಾಯೆ ಮತ್ತು ಅದರ ಅಂಶಭೂತ ಜಗತ್ತಿನ ಅಸ್ತಿತ್ವವೂ ಇರುವುದಿಲ್ಲ. ಜೀವನು ಸ್ವಯಂ ಬ್ರಹ್ಮಸ್ವರೂಪನಾಗುತ್ತಾನೆ. ॥ ೩೩ ॥ ಬ್ರಹ್ಮಸ್ವರೂಪವಾದ ಬಳಿಕ ಸಂಸಾರ ಚಕ್ರದಲ್ಲಿ ಸುತ್ತಿಸುತ್ತಿರುವ ಮಾಯೆ ನಿವೃತ್ತವಾಗುತ್ತದೆ. ಇದರಿಂದ ಜೀವನು ಪರಮಾನಂದಮಯನಾಗಿ ತನ್ನ ವಾಸ್ತವಿಕ ಸ್ವರೂಪದಲ್ಲಿ ಪ್ರತಿಷ್ಠಿತನಾಗುತ್ತಾನೆ. ॥ ೩೪ ॥ ಪರಮಾತ್ಮನು ವಾಸ್ತವವಾಗಿ ಅಜನ್ಮಾ ಹಾಗೂ ಅಕರ್ತನಾಗಿದ್ದರೂ ಕೂಡ ಅವನ ಜನ್ಮ - ಕರ್ಮಗಳ ರಹಸ್ಯವು ವೇದಗಳಿಗೂ ಅತ್ಯಂತ ರಹಸ್ಯ ಮಯವಾಗಿದೆ, ಅರ್ಥಾತ್ ಅಗಮ್ಯವಾಗಿದೆ ಎಂದು ತತ್ತ್ವಜ್ಞಾನಿಗಳು ಅವರನ್ನು ವರ್ಣಿಸುತ್ತಾರೆ. ॥ ೩೫ ॥

ಜ್ಞಾನ, ಬಲ, ಐಶ್ವರ್ಯ, ವೀರ್ಯ, ಶಕ್ತಿ, ತೇಜಸ್ಸುಗಳೆಂಬ ಆರು ಅಸಾಧಾರಣ ಗುಣಗಳಿಂದ ಸಂಪನ್ನನಾಗಿ ಅಮೋಘವಾದ ಲೀಲೆಗಳನ್ನು ನಡೆಸುವ ಭಗವಂತನೇ ಲೀಲಾಜಾಲವಾಗಿ ಈ ವಿಶ್ವವೆಲ್ಲವನ್ನೂ ಸೃಷ್ಟಿಸುತ್ತಾನೆ, ರಕ್ಷಿಸುತ್ತಾನೆ, ಸಂಹರಿಸುತ್ತಾನೆ. ಆದರೂ ಇದರಲ್ಲಿ ಅಂಟಿಕೊಳ್ಳುವುದಿಲ್ಲ, ಅವನು ಪರಮ ಸ್ವತಂತ್ರನು. ಪ್ರಾಣಿಗಳ ಹೃದಯದಲ್ಲಿ ಅಡಗಿದ್ದು ಆರು ಇಂದ್ರಿಯಗಳ ವಿಷಯಗಳನ್ನು ಅವನೇ ಅನುಭವಿಸುತ್ತಿದ್ದರೂ ಅದರಿಂದ ಲಿಪ್ತನಾಗುವುದಿಲ್ಲ ॥ ೩೬ ॥ ಇಂದ್ರಜಾಲಿಕನು ಅಥವಾ ನಟನು

ನ ಚಾಸ್ಯ ಕಶ್ಚಿನ್ನಿಪುಣೇನ ಧಾತು-
ರವೈತಿ ಜಂತುಃ ಕುಮನೀಷ ಊತೀಃ ।
ನಾಮಾನಿ ರೂಪಾಣಿ ಮನೋವಚೋಭಿಃ
ಸಂತನ್ವತೋ ನಟಚರ್ಯಾಮಿವಾಜ್ಞಃ ॥ ೩೭ ॥

ಸ ವೇದ ಧಾತುಃ ಪದವೀಂ ಪರಸ್ಯ
ದುರಂತ ವೀರ್ಯಸ್ಯ ರಥಾಂಗಪಾಣೇಃ ।
ಯೋಽಮಾಯಯಾ ಸಂತತಯಾನುವೃತ್ತ್ಯಾ
ಭಜೇತ ತತ್ಪಾದಸರೋಜಗಂಧಮ್ ॥ ೩೮ ॥

ಅಥೇಹ ಧನ್ಯಾ ಭಗವಂತ ಇತ್ಥಂ
ಯದ್ವಾಸುದೇವೇಽಖಿಲಲೋಕನಾಥೇ ।
ಕುರ್ವಂತಿ ಸರ್ವಾತ್ಮಕಮಾತ್ಮಭಾವಂ
ನ ಯತ್ರ ಭೂಯಃ ಪರಿವರ್ತ ಉಗ್ರಃ ॥ ೩೯ ॥

ಇದಂ ಭಾಗವತಂ ನಾಮ ಪುರಾಣಂ ಬ್ರಹ್ಮಸಮ್ಮಿತಮ್ ।
ಉತ್ತಮಶ್ಲೋಕಚರಿತಂ ಚಕಾರ ಭಗವಾನೃಷಿಃ ॥ ೪೦ ॥

ನಿಃಶ್ರೇಯಸಾಯ ಲೋಕಸ್ಯ ಧನ್ಯಂ ಸ್ವಸ್ತ್ಯಯನಂ ಮಹತ್ ।
ತದಿದಂ ಗ್ರಾಹಯಾಮಾಸ ಸುತಮಾತ್ಮವತಾಂ ವರಮ್ ॥ ೪೧ ॥

ಸರ್ವವೇದೇತಿಹಾಸಾನಾಂ ಸಾರಂ ಸಾರಂ ಸಮುದ್ಧೃತಮ್ ।
ಸ ತು ಸಂಶ್ರಾವಯಾಮಾಸ ಮಹಾರಾಜಂ ಪರೀಕ್ಷಿತಮ್ ॥ ೪೨ ॥

ಪ್ರಾಯೋಪವಿಷ್ಟಂ ಗಂಗಾಯಾಂ ಪರೀತಂ ಪರಮರ್ಷಿಭಿಃ ।
ಕೃಷ್ಣೇ ಸ್ವಧಾಮೋಪಗತೇ ಧರ್ಮಜ್ಞಾನಾದಿಭಿಃ ಸಹ ॥ ೪೩ ॥

ಕಲೌ ನಷ್ಟದೃಶಾಮೇಷ ಪುರಾಣಾರ್ಕೋಽಧುನೋದಿತಃ ।
ತತ್ರ ಕೀರ್ತಯತೋ ವಿಪ್ರಾ ವಿಪ್ರರ್ಷೇರ್ಭೂರಿತೇಜಸಃ ॥ ೪೪ ॥

ಅಹಂ ಚಾಧ್ಯಗಮಂ ತತ್ರ ನಿವಿಷ್ಟಸ್ತದನುಗ್ರಹಾತ್ ।
ಸೋಽಹಂ ವಃ ಶ್ರಾವಯಿಷ್ಯಾಮಿ ಯಥಾಧೀತಂ ಯಥಾಮತಿ ॥ ೪೫ ॥

ತನ್ನ ಸಂಕಲ್ಪದಿಂದಲೂ, ಮಾತುಗಳಿಂದಲೂ ಮಾಡುವ ಅದ್ಭುತ ಚಮತ್ಕಾರಗಳನ್ನು ಮೂರ್ಖಮನುಷ್ಯನು ಅರಿಯಲಾರನು. ಹಾಗೆಯೇ ಮಂದಬುದ್ಧಿಯುಳ್ಳ ಜನರು ಭಗವಂತನು ತನ್ನ ಸಂಕಲ್ಪದಿಂದಲೂ, ವೇದವಾಣಿಗಳಿಂದಲೂ ಪ್ರಕಟಪಡಿಸುವ ನಾನಾ ನಾಮಗಳನ್ನೂ, ರೂಪಗಳನ್ನೂ, ಲೀಲೆಗಳನ್ನೂ ತಮ್ಮ ಮನಸ್ಸು ಮಾತುಗಳಿಂದಲೂ ಬುದ್ಧಿ ತರ್ಕಗಳಿಂದಲೂ ಅರಿಯಲಾರರು. ॥ ೩೭ ॥ ಚಕ್ರಪಾಣಿ ಭಗವಂತನ ಶಕ್ತಿ, ಪರಾಕ್ರಮಗಳು ಅನಂತವಾಗಿವೆ. ಅದರ ಆಳವನ್ನು ಯಾರೂ ತಿಳಿಯಲಾರರು. ಅವನು ಇಡೀ ಜಗತ್ತಿನ ನಿರ್ಮಾತೃವಾಗಿದ್ದರೂ ಅದರಿಂದ ಸರ್ವಥಾ ಅತೀತನಾಗಿದ್ದಾನೆ. ಅವನ ಸ್ವರೂಪವನ್ನು ಅಥವಾ ಅವನ ಲೀಲೆಗಳ ರಹಸ್ಯವನ್ನು – ನಿತ್ಯ ನಿರಂತರವಾಗಿ ನಿಷ್ಕಪಟ ಭಾವದಿಂದ ಅವನ ಅಡಿದಾವರೆಗಳ ಗಂಧವನ್ನು ಸೇವಿಸುವವನು – ನಿಷ್ಕಪಟವಾದ ಸೇವಾ ಭಾವದಿಂದ ಅವನ ಚರಣಗಳನ್ನು ಚಿಂತಿಸುತ್ತಿರುವ ಭಕ್ತನೊಬ್ಬನೇ ಅರಿಯಬಲ್ಲನು. ॥ ೩೮ ॥ ಶೌನಕಾದಿ ಋಷಿಗಳಿರಾ! ಈ ಲೋಕದಲ್ಲಿ ಪೂಜ್ಯರಾದ ನೀವೇ ಧನ್ಯರು, ಸೌಭಾಗ್ಯಶಾಲಿಗಳು. ಏಕೆಂದರೆ, ನೀವು ಅಖಿಲಲೋಕಗಳಿಗೂ ಒಡೆಯನಾದ ಆ ಪರವಾಸುದೇವನಲ್ಲೇ ಸರ್ವಪ್ರಕಾರಗಳಿಂದಲೂ, ಆತ್ಮಭಾವವನ್ನು ಸಮರ್ಪಣೆ ಮಾಡಿರುವಿರಿ. ಹೀಗೆ ಮಾಡುವವರಿಗೆ ಈ ಭಯಂಕರವಾದ ಸಂಸಾರದಲ್ಲಿ ಮತ್ತೆ ಹುಟ್ಟಬೇಕಾಗುವುದಿಲ್ಲ. ॥ ೩೯ ॥

ಭಗವಾನ್ ವೇದವ್ಯಾಸರು ವೇದಗಳಿಗೆ ಸಮಾನವಾಗಿರುವ, ಪುಣ್ಯಶ್ಲೋಕನಾದ ಪರಮಾತ್ಮನ ಚರಿತ್ರೆಯಿಂದ ಪರಿಪೂರ್ಣವಾದ ಈ ಭಾಗವತವೆಂಬ ಪುರಾಣವನ್ನು ರಚಿಸಿದರು. ॥ ೪೦ ॥ ಅವರು ಅತ್ಯಂತ ಮಹತ್ತ್ವಪೂರ್ಣವೂ, ಮಂಗಳಕರವೂ ಆದ ಈ ಧನ್ಯವಾದ ಗ್ರಂಥರತ್ನವನ್ನು ಲೋಕದ ಪರಮ ಕಲ್ಯಾಣಕ್ಕಾಗಿ ಆತ್ಮಜ್ಞಾನಿಗಳಲ್ಲಿ ಶ್ರೇಷ್ಠರಾದ ತಮ್ಮ ಪುತ್ರರಾದ ಶುಕಮಹರ್ಷಿಗಳಿಗೆ ಬೋಧಿಸಿದರು. ॥ ೪೧ ॥ ಇದರಲ್ಲಿ ಎಲ್ಲ ವೇದ-ಇತಿಹಾಸಗಳ ಸಾರಸಂಗ್ರಹವಾಗಿದೆ. ಶುಕಮಹಾಮುನಿಗಳು ರಾಜಾ ಪರೀಕ್ಷಿತನಿಗೆ ಇದನ್ನು ಶ್ರವಣಮಾಡಿಸಿದರು. ॥ ೪೨ ॥ ಆ ಸಮಯದಲ್ಲಿ ಅವನು ಮಹರ್ಷಿಗಳಿಂದ ಸುತ್ತುವರಿಯಲ್ಪಟ್ಟು ಆಮರಣ ನಿರಶನ ವ್ರತವನ್ನು ಕೈಗೊಂಡು ಗಂಗಾತೀರದಲ್ಲಿ ಕುಳಿತಿದ್ದನು. ಭಗವಾನ್ ಶ್ರೀಕೃಷ್ಣನು ಧರ್ಮ, ಜ್ಞಾನಾದಿಗಳೊಂದಿಗೆ ತನ್ನ ಪರಮಧಾಮಕ್ಕೆ ತೆರಳಿದಾಗ ಈ ಕಲಿಯುಗದಲ್ಲಿ ಅಜ್ಞಾನರೂಪೀ ಅಂಧಕಾರದಿಂದ ಕುರುಡಾಗಿದ್ದ ಜನರಿಗಾಗಿ ಈ ಪುರಾಣರೂಪೀ ಸೂರ್ಯನು ಅಲ್ಲಿ ಪ್ರಕಟಗೊಂಡನು. ಶೌನಕಾದಿ ಮಹರ್ಷಿಗಳಿರಾ – ಮಹಾತೇಜಸ್ವೀ ಶ್ರೀಶುಕಮಹಾಮುನಿಗಳು ಅಲ್ಲಿ ಈ ಪುರಾಣದ ಕಥೆಯನ್ನು ಹೇಳುತ್ತಿದ್ದಾಗ ನಾನೂ ಅಲ್ಲಿ ಕುಳಿತಿದ್ದೆ. ಅಲ್ಲೇ ನಾನು ಅವರ ಕೃಪಾಪೂರ್ಣ ಅನುಮತಿಯಿಂದ ಇದರ ಅಧ್ಯಯನ ಮಾಡಿದೆ. ನಾನು ಅದನ್ನು ಅಲ್ಲಿ ಹೇಗೆ ಅಧ್ಯಯನ ಮಾಡಿದ್ದೇನೋ ಹಾಗೆಯೇ ನಿಮಗೆ ಯಥಾಮತಿಯಾಗಿ ಹೇಳುವೆನು; ಕೇಳಿರಿ. ॥ ೪೩-೪೫ ॥

ಮೂರನೆಯ ಅಧ್ಯಾಯವು ಮುಗಿಯಿತು. ॥ ೩ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಪ್ರಥಮಸ್ಕಂಧೇ
ನೈಮಿಷೀಯೋಪಾಖ್ಯಾನೇ ತೃತೀಯೋಽಧ್ಯಾಯಃ ॥ ೩ ॥

ನಾಲ್ಕನೆಯ ಅಧ್ಯಾಯ

ಮಹರ್ಷಿ ವೇದವ್ಯಾಸರ ವಿಷಾದ – ಅವರ ಬಳಿಗೆ ನಾರದರ ಆಗಮನ

ವ್ಯಾಸ ಉವಾಚ

ಇತಿ ಬ್ರುವಾಣಂ ಸಂಸ್ತೂಯ ಮುನೀನಾಂ ದೀರ್ಘಸತ್ರಿಣಾಮ್ ।
ವೃದ್ಧಃ ಕುಲಪತಿಃ ಸೂತಂ ಬಹ್ವೃಚಃ ಶೌನಕೋಽಬ್ರವೀತ್ ॥ ೧ ॥

ಶೌನಕ ಉವಾಚ

ಸೂತ ಸೂತ ಮಹಾಭಾಗ ವದ ನೋ ವದತಾಂ ವರ ।
ಕಥಾಂ ಭಾಗವತೀಂ ಪುಣ್ಯಾಂ ಯದಾಹ ಭಗವಾನ್ ಶುಕಃ ॥ ೨ ॥

ಕಸ್ಮಿನ್ ಯುಗೇ ಪ್ರವೃತ್ತೇಯಂ ಸ್ಥಾನೇ ವಾ ಕೇನ ಹೇತುನಾ ।
ಕುತಃ ಸಂಚೋದಿತಃ ಕೃಷ್ಣಃ ಕೃತವಾನ್ ಸಂಹಿತಾಂ ಮುನಿಃ ॥ ೩ ॥

ತಸ್ಯ ಪುತ್ರೋ ಮಹಾಯೋಗೀ ಸಮದೃಙ್ನಿರ್ವಿಕಲ್ಪಕಃ ।
ಏಕಾಂತಮತಿರುನ್ನಿದ್ರೋ ಗೂಢೋ ಮೂಢ ಇವೇಯತೇ ॥ ೪ ॥

ದೃಷ್ಟ್ವಾನುಯಾಂತಮೃಷಿಮಾತ್ಮಜಮಪ್ಯನಗ್ನಂ
ದೇವ್ಯೋ ಹ್ರಿಯಾ ಪರಿದಧುರ್ನ ಸುತಸ್ಯ ಚಿತ್ರಮ್ ।
ತದ್ವೀಕ್ಷ್ಯ ಪೃಚ್ಛತಿ ಮುನೌ ಜಗದುಸ್ತವಾಸ್ತಿ
ಸ್ತ್ರೀಪುಂಭಿದಾ ನ ತು ಸುತಸ್ಯ ವಿವಿಕ್ತದೃಷ್ಟೇಃ ॥ ೫ ॥

ಕಥಮಾಲಕ್ಷಿತಃ ಪೌರೈಃ ಸಂಪ್ರಾಪ್ತಃ ಕುರುಜಾಂಗಲಾನ್ ।
ಉನ್ಮತ್ತಮೂಕಜಡವದ್ವಿಚರನ್ ಗಜಸಾಹ್ವಯೇ ॥ ೬ ॥

ಕಥಂ ವಾ ಪಾಂಡವೇಯಸ್ಯ ರಾಜರ್ಷೇರ್ಮುನಿನಾ ಸಹ ।
ಸಂವಾದಃ ಸಮಭೂತ್ತಾತ ಯತ್ರೈಷಾ ಸಾತ್ವತೀ ಶ್ರುತಿಃ ॥ ೭ ॥

ಶ್ರೀವೇದವ್ಯಾಸರು ಹೇಳುತ್ತಾರೆ – ಆ ದೀರ್ಘಕಾಲದ ಸತ್ರ ಯಾಗದಲ್ಲಿ ನೆರೆದಿದ್ದ ಮುನಿಗಳಲ್ಲಿ ಜ್ಞಾನದಲ್ಲೂ, ವಯಸ್ಸಿನಲ್ಲೂ ವೃದ್ಧರಾದ ಋಗ್ವೇದೀ ಕುಲಪತಿ ಶೌನಕರು ಅಲ್ಲಿ ಪ್ರವಚನ ಮಾಡುತ್ತಿದ್ದ ಸೂತ ಪುರಾಣಿಕರನ್ನು ಅಭಿನಂದಿಸಿ ಹೀಗೆ ಪ್ರಾರ್ಥಿಸಿ ಕೊಂಡರು. ॥ ೧ ॥

ಶೌನಕರು ಕೇಳಿದರು – (ಅವರು ಹೆಚ್ಚಿನ ಆದರಭಾವದಿಂದ ಎರಡುಬಾರಿ ಸಂಬೋಧಿಸಿ ಹೇಳುತ್ತಾರೆ) ಸೂತಪುರಾಣಿಕರೇ! ಸೂತರೇ! ನೀವು ಪ್ರವಚನ ಮಾಡುವವರಲ್ಲಿ ಶ್ರೇಷ್ಠರಾಗಿದ್ದು ಮಹಾಭಾಗ್ಯಶಾಲಿಗಳಾಗಿದ್ದೀರಿ. ಭಗವಾನ್ ಶ್ರೀಶುಕಮಹಾಮುನಿಗಳು ಹೇಳಿರುವ ಭಗವಂತನ ಪುಣ್ಯಮಯ ಕಥೆಯನ್ನು ದಯ ಮಾಡಿ ನಮಗೆ ಹೇಳಿರಿ. ॥ ೨ ॥ ಆ ಕಥೆಯು ಯಾವ ಯುಗದಲ್ಲಿ, ಯಾವ ಸ್ಥಾನದಲ್ಲಿ, ಯಾವ ಕಾರಣದಿಂದ ನಡೆದಿತ್ತು? ಯಾರ ಪ್ರೇರಣೆಯಿಂದ ಮುನಿಶ್ರೇಷ್ಠರಾದ ಶ್ರೀಕೃಷ್ಣದ್ವೈಪಾಯನರು ಈ ಪರಮಹಂಸರ ಪುರಾಣಸಂಹಿತೆಯನ್ನು ರಚಿಸಿದರು? ॥ ೩ ॥ ಅವರ ಪುತ್ರರಾದ ಶುಕಮಹಾಮುನಿಗಳು ದೊಡ್ಡ ಯೋಗಿಗಳೂ, ಸಮದೃಷ್ಟಿಯುಳ್ಳವರೂ, ಭೇದಭಾವರಹಿತರೂ, ಅಜ್ಞಾನ-ನಿದ್ರೆಯಿಂದ ಎಚ್ಚತ್ತವರೂ, ನಿರಂತರ ಏಕಮಾತ್ರ ಪರಮಾತ್ಮನಲ್ಲಿ ಸ್ಥಿತರಾಗಿರುವವರೂ ಆಗಿದ್ದಾರೆ. ತನ್ನ ಮಹಿಮೆಯನ್ನು ಪ್ರಕಟಪಡಿಸಿಕೊಳ್ಳದೆ ಮೂಢನಂತೆ ಕಂಡುಬರುತ್ತಾರೆ. ॥ ೪ ॥ ಅವರು ಪರಿವ್ರಾಜಕರಾಗಿ ಮನೆಯಿಂದ ಹೊರಟುಬಿಟ್ಟಾಗ ತಂದೆ ವೇದವ್ಯಾಸರು ಅವರನ್ನು ಅಗಲಿರಲಾರದೆ ಹಿಂಬಾಲಿಸಿದರು. ಮಾರ್ಗದಲ್ಲಿ ಆಗ ಸ್ತ್ರೀಯರು ಸ್ನಾನಮಾಡುತ್ತಿದ್ದರು. ಶುಕಮಹರ್ಷಿಯು ದಿಗಂಬರನಾಗಿ ಹೋಗುತ್ತಿದ್ದರೂ ಆ ಸ್ತ್ರೀಯರು ಬಟ್ಟೆಯನ್ನುಟ್ಟುಕೊಳ್ಳಲಿಲ್ಲ. ಆದರೆ ವಸ್ತ್ರಧರಿಸಿದ್ದ ವೃದ್ಧರಾದ ವ್ಯಾಸರನ್ನು ನೋಡಿದೊಡನೆಯೇ ಲಜ್ಜೆಯಿಂದ ಅವರು ಬಟ್ಟೆಗಳನ್ನು ಧರಿಸಿದ್ದರು. ಈ ಆಶ್ಚರ್ಯವನ್ನು ನೋಡಿ ವ್ಯಾಸರು ಆ ಸ್ತ್ರೀಯರಲ್ಲಿ ಇದರ ಕಾರಣ ಕೇಳಿದಾಗ ಅವರು ಉತ್ತರಿಸಿದರು – 'ಮಹಾತ್ಮರೇ! ನಿಮ್ಮ ದೃಷ್ಟಿಯಲ್ಲಿ ಇನ್ನೂ ಸ್ತ್ರೀ-ಪುರುಷರೆಂಬ ಭೇದವಿದೆ, ಅರ್ಥಾತ್ ದ್ವೈತಬುದ್ಧಿ ಇದೆ. ಆದರೆ ನಿಮ್ಮ ಪುತ್ರರ ಶುದ್ಧದೃಷ್ಟಿಯಲ್ಲಿ ಈ ಭೇದವು ಇಲ್ಲವಲ್ಲ! ಅವರು ಬ್ರಹ್ಮಮಯ ದೃಷ್ಟಿಯಿಂದ ಎಲ್ಲದರಲ್ಲಿ ಏಕಮಾತ್ರ ಪರಬ್ರಹ್ಮನನ್ನೇ ನೋಡುತ್ತಾರೆ.' ॥ ೫ ॥ ಇಂತಹ ಅದ್ವೈತ ದೃಷ್ಟಿಯುಳ್ಳ ಮಹಾತ್ಮನು ಹುಚ್ಚನಂತೆಯೂ, ಮೂಗನಂತೆಯೂ, ಜಡನಂತೆಯೂ ಕುರುಜಾಂಗಲ ದೇಶವನ್ನು ಸೇರಿ ಹಸ್ತಿನಾಪುರದಲ್ಲಿ ಓಡಾಡುತ್ತಿದ್ದಾಗ ಅಲ್ಲಿನ ಪುರವಾಸಿಗಳು ಇವರನ್ನು ಹೇಗೆ ಗುರುತಿಸಿದರು? ॥ ೬ ॥ ಪಾಂಡವನಂದನ ರಾಜರ್ಷಿ ಪರೀಕ್ಷಿತನಿಗೆ ಈ ಮೌನೀ ಶುಕಯೋಗಿಗಳಲ್ಲಿ ಹೇಗೆ ಸಂವಾದ ನಡೆಯಿತು? ಅವರಿಂದ ಈ ಭಾಗವತಸಂಹಿತೆ ಹೇಗೆ ಹೇಳಲ್ಪಟ್ಟಿತು? ॥ ೭ ॥ ಆ ಮಹಾಪುರುಷ ಶುಕಮಹಾಮುನಿಗಳು

ಸ ಗೋದೋಹನಮಾತ್ರಂ ಹಿ ಗೃಹೇಷು ಗೃಹಮೇಧಿನಾಮ್ ।
ಅವೇಕ್ಷತೇ ಮಹಾಭಾಗಸ್ತೀರ್ಥೀಕುರ್ವಂಸ್ತದಾಶ್ರಮಮ್ ॥ ೮ ॥

ಅಭಿಮನ್ಯುಸುತಂ ಸೂತ ಪ್ರಾಹುರ್ಭಾಗವತೋತ್ತಮಮ್ ।
ತಸ್ಯ ಜನ್ಮ ಮಹಾಶ್ಚರ್ಯಂ ಕರ್ಮಾಣಿ ಚ ಗೃಣೀಹಿ ನಃ ॥ ೯ ॥

ಸ ಸಮ್ರಾಟ್ ಕಸ್ಯ ವಾ ಹೇತೋಃ ಪಾಂಡೂನಾಂ ಮಾನವರ್ಧನಃ ।
ಪ್ರಾಯೋಪವಿಷ್ಟೋ ಗಂಗಾಯಾಮನಾದೃತ್ಯಾಧಿರಾಟ್ ಶ್ರಿಯಮ್ ॥ ೧೦ ॥

ನಮಂತಿ ಯತ್ಪಾದನಿಕೇತಮಾತ್ಮನಃ
ಶಿವಾಯ ಹಾನೀಯ ಧನಾನಿ ಶತ್ರವಃ ।
ಕಥಂ ಸ ವೀರಃ ಶ್ರಿಯಮಂಗ ದುಸ್ತ್ಯಜಾಂ
ಯುವೈಷತೋತ್ಸ್ರಷ್ಟುಮಹೋ ಸಹಾಸುಭಿಃ ॥ ೧೧ ॥

ಶಿವಾಯ ಲೋಕಸ್ಯ ಭವಾಯ ಭೂತಯೇ
ಯ ಉತ್ತಮಶ್ಲೋಕಪರಾಯಣಾ ಜನಾಃ ।
ಜೀವಂತಿ ನಾತ್ಮಾರ್ಥಮಸೌ ಪರಾಶ್ರಯಂ
ಮುಮೋಚ ನಿರ್ವಿದ್ಯ ಕುತಃ ಕಲೇವರಮ್ ॥ ೧೨ ॥

ತತ್ಸರ್ವಂ ನಃ ಸಮಾಚಕ್ಷ್ವ ಪೃಷ್ಟೋ ಯದಿಹ ಕಿಂಚನ ।
ಮನ್ಯೇ ತ್ವಾಂ ವಿಷಯೇ ವಾಚಾಂ ಸ್ನಾತಮನ್ಯತ್ರ ಛಾಂದಸಾತ್ ॥ ೧೩ ॥

ಸೂತ ಉವಾಚ

ದ್ವಾಪರೇ ಸಮನುಪ್ರಾಪ್ತೇ ತೃತೀಯೇ ಯುಗಪರ್ಯಯೇ ।
ಜಾತಃ ಪರಾಶರಾದ್ಯೋಗೀ ವಾಸವ್ಯಾಂ ಕಲಯಾ ಹರೇಃ ॥ ೧೪ ॥

ಸ ಕದಾಚಿತ್ಸರಸ್ವತ್ಯಾ ಉಪಸ್ಪೃಶ್ಯ ಜಲಂ ಶುಚಿಃ ।
ವಿವಿಕ್ತದೇಶ ಆಸೀನ ಉದಿತೇ ರವಿಮಂಡಲೇ ॥ ೧೫ ॥

ಪರಾವರಜ್ಞಃ ಸ ಋಷಿಃ ಕಾಲೇನಾವ್ಯಕ್ತರಂಹಸಾ ।
ಯುಗಧರ್ಮವ್ಯತಿಕರಂ ಪ್ರಾಪ್ತಂ ಭುವಿ ಯುಗೇ ಯುಗೇ ॥ ೧೬ ॥

ಭೌತಿಕಾನಾಂ ಚ ಭಾವಾನಾಂ ಶಕ್ತಿಹ್ರಾಸಂ ಚ ತತ್ಕೃತಮ್ ।
ಅಶ್ರದ್ದಧಾನಾನ್ನಿಃಸತ್ತ್ವಾನ್ ದುರ್ಮೇಧಾನ್ ಹ್ರಸಿತಾಯುಷಃ ॥ ೧೭ ॥

ದುರ್ಭಗಾಂಶ್ಚ ಜನಾನ್ ವೀಕ್ಷ್ಯ ಮುನಿರ್ದಿವ್ಯೇನ ಚಕ್ಷುಷಾ ।
ಸರ್ವವರ್ಣಾಶ್ರಮಾಣಾಂ ಯದ್ದಧ್ಯೌ ಹಿತಮಮೋಘದೃಕ್ ॥ ೧೮ ॥

ಗೃಹಸ್ಥರ ಮನೆಗಳನ್ನು ತೀರ್ಥ-ಸ್ವರೂಪವನ್ನಾಗಿಸಲು ಹಸುವು ಹಾಲು ಕರೆಯುವಷ್ಟು ಹೊತ್ತು ಮಾತ್ರ ಅಲ್ಲಿ ನಿಲ್ಲುತ್ತಿದ್ದರು. ॥ ೮ ॥ ಸೂತಪುರಾಣಿಕರೇ! ಅಭಿಮನ್ಯುಸುತನ ರಾಜಾಪರೀಕ್ಷಿತನು ಪರಮಭಾಗವತೋತ್ತಮನಾಗಿದ್ದನೆಂದು ನಾವು ಕೇಳಿದ್ದೇವೆ. ಅವನ ಅದ್ಭುತ ಆಶ್ಚರ್ಯಮಯ ಜನ್ಮ ಮತ್ತು ಕರ್ಮಗಳನ್ನೂ ಕೂಡ ವರ್ಣಿಸುವವರಾಗಿರಿ. ॥ ೯ ॥ ಅವನಾದರೋ ಪಾಂಡವ ವಂಶದ ಗೌರವವನ್ನು ಹೆಚ್ಚಿಸುವವನಾಗಿದ್ದ ಸಾಮ್ರಾಟನಾಗಿದ್ದನು. ಅವನು ಯಾವ ಕಾರಣಕ್ಕಾಗಿ ಸಾಮ್ರಾಜ್ಯ ಲಕ್ಷ್ಮಿಯನ್ನು ಪರಿತ್ಯಜಿಸಿ ಗಂಗಾ ತೀರದಲ್ಲಿ ಆಮರಣಾಂತ ನಿರಶನ ವ್ರತವನ್ನು ಕೈಗೊಂಡು ಏಕೆ ಕುಳಿತಿದ್ದನು? ॥ ೧೦ ॥ ಶತ್ರುರಾಜರು ತಮ್ಮ ಹಿತಕ್ಕಾಗಿ ರಾಶಿ-ರಾಶಿಯಾದ ಧನವನ್ನು ತಂದೊಪ್ಪಿಸಿ ಅವನ ಪಾದಪೀಠಕ್ಕೆ ನಮಸ್ಕರಿಸುತ್ತಿದ್ದರು. ಇನ್ನೂ ಪ್ರಾಯದ ತರುಣ್ಯದಲ್ಲಿದ್ದ ಮಹಾವೀರನು ಹೀಗಿದ್ದರೂ ತೊರೆಯಲು ಕಷ್ಟವಾದ ಆ ಐಶ್ವರ್ಯವನ್ನು ತನ್ನ ಪ್ರಾಣವನ್ನೂ ತೊರೆದುಬಿಡಲು ಅವನು ಏಕೆ ನಿಶ್ಚಯಿಸಿದನು? ॥ ೧೧ ॥ ಭಗವಂತನಲ್ಲಿ ಆಶ್ರಿತರಾದ ಸತ್ಪುರುಷರು ಜಗತ್ತಿನ ಪರಮ ಮಂಗಳ, ಶ್ರೇಯಸ್ಸು ಅಭ್ಯುದಯಕ್ಕಾಗಿಯೇ ಬಾಳುವರು. ಅವರಿಗೆ ಅದರಲ್ಲಿ ಯಾವ ಸ್ವಾರ್ಥವೂ ಇರುವುದಿಲ್ಲ. ಹೀಗೆ ಪರೋಪಕಾರಕ್ಕಾಗಿಯೇ ಮೀಸಲಾಗಿದ್ದ ತನ್ನ ಪವಿತ್ರವಾದ ದೇಹದಲ್ಲಿಯೂ ವಿರಕ್ತನಾಗಿ ಅದನ್ನು ಏಕೆ ತ್ಯಾಗ ಮಾಡಿದನು? ॥ ೧೨ ॥ ವೇದಭಾಗವನ್ನೊಂದನ್ನು ಬಿಟ್ಟು ಬೇರೆ ಎಲ್ಲ ಶಾಸ್ತ್ರಗಳಲ್ಲಿಯೂ ನೀವು ಪಾರಂಗತರಾಗಿರುವಿರಿ. ಸೂತಪುರಾಣಿಕರೇ! ನಮ್ಮ ಎಲ್ಲ ಪ್ರಶ್ನೆಗಳಿಗೆ ದಯಮಾಡಿ ಉತ್ತರಿಸುವವರಾಗಿರಿ. ॥ ೧೩ ॥

ಸೂತಪುರಾಣಿಕರು ಹೇಳಿದರು - ಮಹರ್ಷಿಗಳೇ! ಈ ಚತುರ್ಯುಗಚಕ್ರದಲ್ಲಿ ಮೂರನೆಯದಾದ ದ್ವಾಪರಯುಗದಲ್ಲಿ ಶ್ರೀಭಗವಂತನ ಕಲಾವತಾರವಾದ ಮಹಾಯೋಗಿ ವೇದವ್ಯಾಸರು ಪರಾಶರ-ಸತ್ಯವತಿಯರಲ್ಲಿ ಆವಿರ್ಭವಿಸಿದರು. ॥ ೧೪ ॥ ಒಂದು ದಿನ ಅವರು ಸೂರ್ಯೋದಯದಲ್ಲಿ ಸರಸ್ವತೀ ನದಿಯ ಪವಿತ್ರವಾದ ತೀರ್ಥದಲ್ಲಿ ಸ್ನಾನಾಹ್ನಿಕಗಳನ್ನು ಪೂರೈಸಿಕೊಂಡು, ಪವಿತ್ರವಾದ ಏಕಾಂತಸ್ಥಾನದಲ್ಲಿ ಕುಳಿತಿದ್ದರು. ॥ ೧೫ ॥ ಪರಾವರತತ್ತ್ವಗಳನ್ನೂ ಭೂತ-ಭವಿಷ್ಯಗಳನ್ನೂ ಅರಿತಿದ್ದ ಆ ಮಹರ್ಷಿಗಳು - ಕಾಲದ ವೇಗದಿಂದ ಪ್ರತಿಯೊಂದು ಯುಗಗಳಲ್ಲಿಯೂ ಧರ್ಮ-ಸಾಂಕರ್ಯವುಂಟಾಗುತ್ತಿರುವುದನ್ನು, ಇದರ ಪ್ರಭಾವದಿಂದ ಭೌತಿಕವಸ್ತುಗಳಲ್ಲಿ ಸಹಜ ಶಕ್ತಿಯು ಕುಂದುತ್ತಿರುವುದನ್ನು, ಮನುಷ್ಯರಲ್ಲಿ ಅಶ್ರದ್ಧೆ, ಸತ್ತ್ವಹೀನತೆ, ಬುದ್ಧಿಹೀನತೆ, ಅಲ್ಪಾಯು ಭಾಗ್ಯಹೀನತೆಗಳುಂಟಾಗುತ್ತಿರುವುದನ್ನು ತಮ್ಮ ದಿವ್ಯಜ್ಞಾನ ದೃಷ್ಟಿಯಿಂದ ಅರಿತುಕೊಂಡು, ಎಲ್ಲ ವರ್ಣಗಳ, ಆಶ್ರಮಗಳ ಜನರಿಗೆ ಹೇಗೆ ಹಿತವುಂಟಾದೀತು? ಎಂದು ಆಲೋಚಿಸತೊಡಗಿದರು. ॥ ೧೬-೧೮ ॥ ವೇದೋಕ್ತವಾಗಿ ನಾಲ್ಕು ಹೋತೃಗಳಿಂದ ಕೂಡಿದ ಯಜ್ಞಕರ್ಮವನ್ನು ಆಚರಿಸಿದರೆ ಜನರ ಹೃದಯ ಶುದ್ಧವಾಗುತ್ತದೆ ಎಂದು ಯೋಚಿಸಿದ ಅವರು ಯಜ್ಞಗಳನ್ನು ವಿಸ್ತಾರವಾಗಿ ಅನುಷ್ಠಾನಕ್ಕೆ ತರಲು ಸಹಾಯಕವಾಗುವಂತೆ

ಚಾತುರ್ಹೋತ್ರಂ ಕರ್ಮ ಶುದ್ಧಂ ಪ್ರಜಾನಾಂ ವೀಕ್ಷ್ಯ ವೈದಿಕಮ್ ।
ವ್ಯದಧಾದ್ಯಜ್ಞಸಂತತ್ಯೈ ವೇದಮೇಕಂ ಚತುರ್ವಿಧಮ್ ॥ ೧೯ ॥

ಋಗ್ಯಜುಸ್ಸಾಮಾಥರ್ವಾಖ್ಯಾ ವೇದಾಶ್ಚತ್ವಾರ ಉದ್ಧೃತಾಃ ।
ಇತಿಹಾಸಪುರಾಣಂ ಚ ಪಂಚಮೋ ವೇದ ಉಚ್ಯತೇ ॥ ೨೦ ॥

ತತ್ರರ್ಗ್ವೇದಧರಃ ಪೈಲಃ ಸಾಮಗೋ ಜೈಮಿನಿಃ ಕವಿಃ ।
ವೈಶಂಪಾಯನ ಏವೈಕೋ ನಿಷ್ಣಾತೋ ಯಜುಷಾಮುತ ॥ ೨೧ ॥

ಅಥರ್ವಾಂಗಿರಸಾಮಾಸೀತ್ಸುಮಂತುರ್ದಾರುಣೋ ಮುನಿಃ ।
ಇತಿಹಾಸಪುರಾಣಾನಾಂ ಪಿತಾ ಮೇ ರೋಮಹರ್ಷಣಃ ॥ ೨೨ ॥

ತ ಏತ ಋಷಯೋ ವೇದಂ ಸ್ವಂ ಸ್ವಂ ವ್ಯಸ್ಯನ್ನನೇಕಧಾ ।
ಶಿಷ್ಯೈಃ ಪ್ರಶಿಷ್ಯೈಸ್ತಚ್ಛಿಷ್ಯೈರ್ವೇದಾಸ್ತೇ ಶಾಖಿನೋಽಭವನ್ ॥ ೨೩ ॥

ತ ಏವ ವೇದಾ ದುರ್ಮೇಧೈರ್ಧಾರ್ಯಂತೇ ಪುರುಷೈರ್ಯಥಾ ।
ಏವಂ ಚಕಾರ ಭಗವಾನ್ ವ್ಯಾಸಃ ಕೃಪಣವತ್ಸಲಃ ॥ ೨೪ ॥

ಸ್ತ್ರೀಶೂದ್ರದ್ವಿಜಬಂಧೂನಾಂ ತ್ರಯೀ ನ ಶ್ರುತಿಗೋಚರಾ ।
ಕರ್ಮಶ್ರೇಯಸಿ ಮೂಢಾನಾಂ ಶ್ರೇಯ ಏವಂ ಭವೇದಿಹ ।
ಇತಿ ಭಾರತಮಾಖ್ಯಾನಂ ಕೃಪಯಾ ಮುನಿನಾ ಕೃತಮ್ ॥ ೨೫ ॥

ಏವಂ ಪ್ರವೃತ್ತಸ್ಯ ಸದಾ ಭೂತಾನಾಂ ಶ್ರೇಯಸಿ ದ್ವಿಜಾಃ ।
ಸರ್ವಾತ್ಮಕೇನಾಪಿ ಯದಾ ನಾತುಷ್ಯದ್ಧೃದಯಂ ತತಃ ॥ ೨೬ ॥

ನಾತಿಪ್ರಸೀದದ್ಧೃದಯಃ ಸರಸ್ವತ್ಯಾಸ್ತಟೇ ಶುಚೌ ।
ವಿತರ್ಕಯನ್ ವಿವಿಕ್ತಸ್ಥ ಇದಂ ಪ್ರೋವಾಚ ಧರ್ಮವಿತ್ ॥ ೨೭ ॥

ಧೃತವ್ರತೇನ ಹಿ ಮಯಾ ಛಂದಾಂಸಿ ಗುರವೋಽಗ್ನಯಃ ।
ಮಾನಿತಾ ನಿರ್ವ್ಯಲೀಕೇನ ಗೃಹೀತಂ ಚಾನುಶಾಸನಮ್ ॥ ೨೮ ॥

ಭಾರತವ್ಯಪದೇಶೇನ ಹ್ಯಾಮ್ನಾಯಾರ್ಥಶ್ಚ ದರ್ಶಿತಃ ।
ದೃಶ್ಯತೇ ಯತ್ರ ಧರ್ಮಾದಿ ಸ್ತ್ರೀಶೂದ್ರಾದಿಭಿರಪ್ಯುತ ॥ ೨೯ ॥

ತಥಾಪಿ ಬತ ಮೇ ದೈಹ್ಯೋ ಹ್ಯಾತ್ಮಾ ಚೈವಾತ್ಮನಾ ವಿಭುಃ ।
ಅಸಂಪನ್ನ ಇವಾಭಾತಿ ಬ್ರಹ್ಮವರ್ಚಸ್ಯಸತ್ತಮಃ ॥ ೩೦ ॥

ಅಖಂಡವಾಗಿದ್ದ ವೇದವನ್ನು – ಋಕ್, ಯಜುಸ್ಸು, ಸಾಮ ಮತ್ತು ಅಥರ್ವ ಎಂಬ ನಾಲ್ಕು ವಿಭಾಗಗಳನ್ನಾಗಿ ವಿಂಗಡಿಸಿದರು. ಇತಿಹಾಸ ಮತ್ತು ಪುರಾಣಗಳನ್ನು ಐದನೆಯ ವೇದವೆಂದು ಹೇಳಲಾಗುತ್ತದೆ. ॥ ೧೯-೨೦ ॥ ಇವುಗಳಲ್ಲಿ ಋಗ್ವೇದವನ್ನು ಪೈಲರು ಅಧ್ಯಯನ ಮಾಡಿ ಅದರ ಪ್ರವರ್ತಕರಾದರು. ಯಜುರ್ವೇದವನ್ನು ವೈಶಂಪಾಯನರೊಬ್ಬರೇ ಅಧ್ಯಯನಗೈದು ಅದರಲ್ಲಿ ಪಾರಂಗತರಾದರು. ವಿದ್ವಾಂಸರಾದ ಜೈಮಿನಿ ಮಹರ್ಷಿಗಳು ಸಾಮವೇದದಲ್ಲಿ ನಿಷ್ಣಾತರಾದರು. ॥ ೨೧ ॥ ದರುಣಪುತ್ರರಾದ ಸುಮಂತು ಮುನಿಗಳು ಅಥರ್ವವೇದದಲ್ಲಿ ಪ್ರವೀಣರಾಗಿ ಅದರ ಪ್ರವರ್ತಕರಾದರು. ನನ್ನ ತಂದೆಯವರಾದ ರೋಮಹರ್ಷಣರು ಇತಿಹಾಸ ಮತ್ತು ಪುರಾಣಗಳಲ್ಲಿ ಪ್ರಾವೀಣ್ಯವನ್ನು ಪಡೆದು ಪ್ರವರ್ತಕರಾದರು. ॥ ೨೨ ॥ ಇವರೆಲ್ಲ ಋಷಿಗಳು ತಮ್ಮ-ತಮ್ಮ ವೇದಶಾಖೆಗಳನ್ನು ಇನ್ನೂ ಅನೇಕ ಶಾಖೆಗಳನ್ನಾಗಿ ವಿಭಜಿಸಿದರು. ಹೀಗೆ ಶಿಷ್ಯ-ಪ್ರಶಿಷ್ಯರು ಮತ್ತು ಅವರ ಶಿಷ್ಯರ ಮೂಲಕ ವೇದಗಳಿಗೆ ಬಹು ಶಾಖೆಗಳಾದುವು. ॥ ೨೩ ॥ ದೀನವತ್ಸಲರೂ, ಪರಮ ಪೂಜ್ಯರೂ ಆದ ಭಗವಾನ್ ವೇದವ್ಯಾಸರು ಸ್ಮರಣ-ಧಾರಣೆಗಳ ಶಕ್ತಿಯು ಅತಿ ಕಡಿಮೆಯಾಗಿರುವ ಜನರೂ ಕೂಡ ಅವುಗಳನ್ನು ಧರಿಸಿ ಕೃತಾರ್ಥರಾಗುವಂತೆ ವೇದವಾಙ್ಮಯವನ್ನು ವಿಭಾಗ ಮಾಡಿದರು. ॥ ೨೪ ॥

ಸ್ತ್ರೀಯರು, ಶೂದ್ರರು, ಪತಿತದ್ವಿಜರು ವೇದಶ್ರವಣಕ್ಕೆ ಅಧಿಕಾರಿಗಳಲ್ಲವಾದ್ದರಿಂದ ಅವರು ಶ್ರೇಯಸ್ಕರವಾದ ವೈದಿಕ ಶಾಸ್ತ್ರೋಕ್ತ ಕರ್ಮಗಳ ಆಚರಣೆಗಳಲ್ಲಿ ತಪ್ಪುಮಾಡಿ ಬಿಡುತ್ತಾರೆ. ಈಗ ಅವರಿಗೂ ಕೂಡ ಇದರ ಮೂಲಕ ಶ್ರೇಯಸ್ಸು ಉಂಟಾಗಲೆಂದು ಯೋಚಿಸಿ ಪರಮಕರುಣೆಯಿಂದ ವ್ಯಾಸಮುನೀಂದ್ರರು ಮಹಾಭಾರತವೆಂಬ ಇತಿಹಾಸವನ್ನು ರಚಿಸಿದರು. ॥ ೨೫ ॥ ಶೌನಕಾದಿ ಮಹರ್ಷಿಗಳೇ! ಹೀಗೆ ಅವರು ತಮ್ಮ ಸರ್ವಶಕ್ತಿಗಳಿಂದ ಸದಾಕಾಲ ಪ್ರಾಣಿಗಳ ಶ್ರೇಯಸ್ಸಿಗಾಗಿಯೇ ತತ್ಪರರಾಗಿದ್ದರೂ ಕೂಡ ಅವರ ಹೃದಯಕ್ಕೆ ಪೂರ್ಣವಾದ ನೆಮ್ಮದಿ ಉಂಟಾಗಲಿಲ್ಲ. ॥ ೨೬ ॥ ಅವರ ಮನಸ್ಸು ಸ್ವಲ್ಪ ಖಿನ್ನವಾದಂತಾಯಿತು. ಸರಸ್ವತೀ ನದಿಯ ತೀರದ ಏಕಾಂತದಲ್ಲಿ ಕುಳಿತುಕೊಂಡು ವಿಚಾರ-ಚಿಂತನೆ ಮಾಡುತ್ತಾ ಹೀಗೆ ಹೇಳಿಕೊಂಡರು – ॥ ೨೭ ॥ "ನಾನು ನಿಷ್ಕಪಟಭಾವದಿಂದ ಬ್ರಹ್ಮಚರ್ಯಾದಿ ವ್ರತಗಳನ್ನು ಪಾಲಿಸುತ್ತಾ ವೇದಗಳನ್ನೂ, ಗುರು-ಜನರನ್ನೂ, ಅಗ್ನಿಯನ್ನೂ ಗೌರವದಿಂದ ಉಪಾಸನೆ ಮಾಡಿದ್ದೇನೆ. ಅವರ ಆಜ್ಞೆಯನ್ನೂ ಶಿರಸಾವಹಿಸಿದ್ದೇನೆ. ॥ ೨೮ ॥ ಮಹಾಭಾರತವನ್ನು ರಚಿಸುವುದರ ಮೂಲಕ ಸ್ತ್ರೀಯರು, ಶೂದ್ರಾದಿಗಳೂ ಕೂಡ ತಮ್ಮ-ತಮ್ಮ ಧರ್ಮಕರ್ಮಗಳ ಅರಿವನ್ನು ಪಡೆಯುವಂತೆ ವೇದಾರ್ಥಗಳನ್ನು ಪ್ರಕಾಶಪಡಿಸಿದ್ದೇನೆ. ॥ ೨೯ ॥ ನಾನು ಬ್ರಹ್ಮತೇಜದಿಂದ ಸಂಪನ್ನನೂ, ಸಮರ್ಥನೂ ಆಗಿದ್ದರೂ ನನ್ನ ದೇಹದಲ್ಲಿರುವ ಆತ್ಮವು ಪೂರ್ಣ ತೃಪ್ತಿಯನ್ನು ಪಡೆದಿಲ್ಲವೆಂದೇ ಅನುಭವವಾಗುತ್ತದೆಯಲ್ಲ! ॥ ೩೦ ॥ ಪ್ರಾಯಶಃ ನಾನು ಪರಮಹಂಸರಿಗೆ

ಕಿಂ ವಾ ಭಾಗವತಾ ಧರ್ಮಾ ನ ಪ್ರಾಯೇಣ ನಿರೂಪಿತಾಃ ।
ಪ್ರಿಯಾಃ ಪರಮಹಂಸಾನಾಂ ತ ಏವ ಹ್ಯಚ್ಯುತಪ್ರಿಯಾಃ ॥ ೩೧ ॥

ತಸ್ಯೈವಂ ಖಿಲಮಾತ್ಮಾನಂ ಮನ್ಯಮಾನಸ್ಯ ಖಿದ್ಯತಃ ।
ಕೃಷ್ಣಸ್ಯ ನಾರದೋಽಭ್ಯಾಗಾದಾಶ್ರಮಂ ಪ್ರಾಗುದಾಹೃತಮ್ ॥ ೩೨ ॥

ತಮಭಿಜ್ಞಾಯ ಸಹಸಾ ಪ್ರತ್ಯುತ್ಥಾಯಾಗತಂ ಮುನಿಃ ।
ಪೂಜಯಾಮಾಸ ವಿಧಿವನ್ನಾರದಂ ಸುರಪೂಜಿತಮ್ ॥ ೩೩ ॥

ಪ್ರಿಯವಾಗಿರುವ ಭಾಗವತ ಧರ್ಮಗಳನ್ನು ಪ್ರತಿಪಾದನೆ ಮಾಡಿಲ್ಲ, ಆ ಧರ್ಮಗಳು ಹಾಗೆ ಅಚ್ಯುತನಿಗೂ ಪ್ರಿಯವಾಗಿರುವುದು। ಇವುಗಳನ್ನು ಪ್ರಧಾನವಾಗಿ ಪ್ರತಿಪಾದನೆ ಮಾಡದೇ ಇರುವುದೇ ನನ್ನ ಅತೃಪ್ತಿಗೆ ಕಾರಣವಿರಬಹುದೇ ?" ॥ ೩೧ ॥ ಹೀಗೆ ತಮ್ಮನ್ನು ಅಪೂರ್ಣರೆಂಬಂತೆ ಭಾವಿಸಿಕೊಂಡು ಶ್ರೀಕೃಷ್ಣದ್ವೈಪಾಯನರು ಖೇದಪಡುತ್ತಿರುವಾಗ ಆ ಆಶ್ರಮಕ್ಕೆ ದೇವಋಷಿ ನಾರದರು ದಯಮಾಡಿಸಿದರು. ॥ ೩೨ ॥ ಹೀಗೆ ಆಗಮಿಸಿದ ಅವರನ್ನು ಕಂಡೊಡನೆಯೇ ವ್ಯಾಸಮುನೀಂದ್ರರು ಸಂಭ್ರಮದಿಂದ ಎದ್ದು ನಿಂತು ದೇವತೆಗಳಿಂದಲೂ ಪೂಜಿತರಾದ ದೇವರ್ಷಿ ನಾರದರನ್ನು ವಿಧಿಪೂರ್ವಕವಾಗಿ ಪೂಜಿಸಿದರು. ॥ ೩೩ ॥

ನಾಲ್ಕನೆಯ ಅಧ್ಯಾಯವು ಮುಗಿಯಿತು. ॥ ೪ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಪ್ರಥಮಸ್ಕಂಧೇ
ನೈಮಿಷೀಯೋಪಾಖ್ಯಾನೇ ಚತುರ್ಥೋಽಧ್ಯಾಯಃ ॥ ೪ ॥

ಐದನೆಯ ಅಧ್ಯಾಯ

ವ್ಯಾಸ-ನಾರದರ ಸಂವಾದ, ಭಗವಂತನ ಯಶ ಕೀರ್ತನೆಯ ಮಹಿಮೆ, ನಾರದರ ಪೂರ್ವಜನ್ಮ ವೃತ್ತಾಂತ

ಸೂತ ಉವಾಚ

ಅಥ ತಂ ಸುಖಮಾಸೀನ ಉಪಾಸೀನಂ ಬೃಹಚ್ಛ್ರವಾಃ ।
ದೇವರ್ಷಿಃ ಪ್ರಾಹ ವಿಪ್ರರ್ಷಿಂ ವೀಣಾಪಾಣಿಃ ಸ್ಮಯನ್ನಿವ ॥ ೧ ॥

ನಾರದ ಉವಾಚ

ಪಾರಾಶರ್ಯ ಮಹಾಭಾಗ ಭವತಃ ಕಚ್ಚಿದಾತ್ಮನಾ ।
ಪರಿತುಷ್ಯತಿ ಶಾರೀರ ಆತ್ಮಾ ಮಾನಸ ಏವ ವಾ ॥ ೨ ॥

ಜಿಜ್ಞಾಸಿತಂ ಸುಸಂಪನ್ನಮಪಿ ತೇ ಮಹದದ್ಭುತಮ್ ।
ಕೃತವಾನ್ ಭಾರತಂ ಯಸ್ತ್ವಂ ಸರ್ವಾರ್ಥಪರಿಬೃಂಹಿತಮ್ ॥ ೩ ॥

ಜಿಜ್ಞಾಸಿತಮಧೀತಂ ಚ ಯತ್ತದ್ಬ್ರಹ್ಮ ಸನಾತನಮ್ ।
ತಥಾಪಿ ಶೋಚಸ್ಯಾತ್ಮಾನಮಕೃತಾರ್ಥ ಇವ ಪ್ರಭೋ ॥ ೪ ॥

ವ್ಯಾಸ ಉವಾಚ

ಅಸ್ತ್ಯೇವ ಮೇ ಸರ್ವಮಿದಂ ತ್ವಯೋಕ್ತಂ
ತಥಾಪಿ ನಾತ್ಮಾ ಪರಿತುಷ್ಯತೇ ಮೇ ।
ತನ್ಮೂಲಮವ್ಯಕ್ತಮಗಾಧಬೋಧಂ
ಪೃಚ್ಛಾಮಹೇ ತ್ವಾಽಽತ್ಮಭವಾತ್ಮಭೂತಮ್ ॥ ೫ ॥

ಸೂತಪುರಾಣಿಕರು ಹೇಳುತ್ತಾರೆ – ಅನಂತರ ಮಹಾಯಶಸ್ವಿಗಳಾದ, ವೀಣಾಪಾಣಿಗಳಾದ ದೇವಋಷಿ ನಾರದರು ನಸುನಗುತ್ತಾ ಸುಖಾಸೀನರಾಗಿ, ತಮ್ಮ ಬಳಿಯಲ್ಲಿ ಕುಳಿತುಕೊಂಡ ಬ್ರಹ್ಮರ್ಷಿ ವೇದವ್ಯಾಸರನ್ನು ಹೀಗೆ ಕೇಳಿದರು – ॥ ೧ ॥

ನಾರದರು ಪ್ರಶ್ನಿಸಿದರು – ಮಹಾಭಾಗರಾದ ಪರಾಶರಪುತ್ರರೇ! ನಿಮ್ಮ ಶರೀರ-ಮನಸ್ಸುಗಳು ತಮ್ಮ ಕರ್ಮಗಳಿಂದ, ಚಿಂತನದಿಂದ ಸಂತುಷ್ಟವಾಗಿವೆಯಷ್ಟೆ? ॥ ೨ ॥ ಏಕೆಂದರೆ, ನೀವು ಎಲ್ಲ ಪುರುಷಾರ್ಥಗಳಿಂದಲೂ ಪರಿಪೂರ್ಣವಾಗಿರುವ ಪರಮಾದ್ಭುತವಾದ ಮಹಾಭಾರತವನ್ನು ರಚಿಸಿರುವಿರಿ. ಇದರಿಂದ ನಿಮ್ಮ ಆಕಾಂಕ್ಷೆಯು ಪೂರ್ಣವಾಗಿ ಕೈಗೂಡಿರಬೇಕಲ್ಲ! ॥ ೩ ॥ ಇದಲ್ಲದೆ ನೀವು ಸನಾತನವಾದ ಬ್ರಹ್ಮತತ್ತ್ವವನ್ನು ಕುರಿತು ವೇದಾಂತಸೂತ್ರಗಳಲ್ಲಿ ಬಹಳಷ್ಟು ವಿಚಾರಮಾಡಿ, ಅದನ್ನು ಚೆನ್ನಾಗಿ ಅರಿತುಕೊಂಡಿರುವಿರಿ. ಹಾಗಿದ್ದರೂ ನೀವು ಓರ್ವ ಕೃತಕೃತ್ಯರಾಗದೇ ಇರುವ ಸಾಧಾರಣ ಮನುಷ್ಯನಂತೆ ಸ್ವವಿಷಯದಲ್ಲಿ ಏಕೆ ಶೋಕಿಸುತ್ತಿದ್ದೀರಿ? ॥ ೪ ॥

ವೇದವ್ಯಾಸರು ಹೇಳಿದರು – ನಾರದರೇ! ನೀವು ನನ್ನ ವಿಷಯದಲ್ಲಿ ಹೇಳಿರುವುದೆಲ್ಲವೂ ನಿಜವೇ. ಇದರಲ್ಲಿ ಸಂದೇಹವೇ ಇಲ್ಲ. ಆದರೂ ನನ್ನ ಹೃದಯವು ಸಂತುಷ್ಟವಾಗಿಲ್ಲ. ಇದಕ್ಕೇನು ಕಾರಣವೆಂಬುದು ತಿಳಿಯುತ್ತಿಲ್ಲ. ನಿಮ್ಮ ಜ್ಞಾನವು ಅಗಾಧವಾಗಿದೆ. ತಾವು ಸಾಕ್ಷಾತ್ ಬ್ರಹ್ಮದೇವರ ಮಾನಸಪುತ್ರರು. ಅದಕ್ಕಾಗಿ ನಾನು ನಿಮ್ಮಲ್ಲೇ ಇದರ ಕಾರಣವನ್ನು ಕೇಳುತ್ತಿದ್ದೇನೆ. ತಾವು ಅದನ್ನು ತಿಳಿಸಬೇಕು. ॥ ೫ ॥ ದೇವರ್ಷಿಗಳೇ! ತಾವು ಎಲ್ಲ ರಹಸ್ಯಗಳನ್ನು ಬಲ್ಲವರು. ಏಕೆಂದರೆ, ಕಾರ್ಯಕಾರಣಗಳಿಗೆ ನಿಯಾಮಕನಾದ ಭಗವಂತನು ಪ್ರಪಂಚದ ಸೃಷ್ಟಿ, ಸ್ಥಿತಿ, ಲಯಗಳನ್ನು ಅವರ

ಸ ವೈ ಭವಾನ್ ವೇದ ಸಮಸ್ತಗುಹ್ಯ-
ಮುಪಾಸಿತೋ ಯತ್ಪುರುಷಃ ಪುರಾಣಃ ।
ಪರಾವರೇಶೋ ಮನಸೈವ ವಿಶ್ವಂ
ಸೃಜತ್ಯವತ್ಯತ್ತಿ ಗುಣೈರಸಂಗಃ ॥ ೬ ॥

ತ್ವಂ ಪರ್ಯಟನ್ನರ್ಕ ಇವ ತ್ರಿಲೋಕೀ-
ಮಂತಶ್ಚರೋ ವಾಯುರಿವಾತ್ಮಸಾಕ್ಷೀ ।
ಪರಾವರೇ ಬ್ರಹ್ಮಣಿ ಧರ್ಮತೋ ವ್ರತೈಃ
ಸ್ನಾತಸ್ಯ ಮೇ ನ್ಯೂನಮಲಂ ವಿಚಕ್ಷ್ವ ॥ ೭ ॥

ಶ್ರೀನಾರದ ಉವಾಚ

ಭವತಾನುದಿತಪ್ರಾಯಂ ಯಶೋ ಭಗವತೋಽಮಲಮ್ ।
ಯೇನೈವಾಸೌ ನ ತುಷ್ಯೇತ ಮನ್ಯೇ ತದ್ದರ್ಶನಂ ಖಿಲಮ್ ॥ ೮ ॥

ಯಥಾ ಧರ್ಮಾದಯಶ್ಚಾರ್ಥಾ ಮುನಿವರ್ಯಾನುಕೀರ್ತಿತಾಃ ।
ನ ತಥಾ ವಾಸುದೇವಸ್ಯ ಮಹಿಮಾ ಹ್ಯನುವರ್ಣಿತಃ ॥ ೯ ॥

ನ ಯದ್ವಚಶ್ಚಿತ್ರಪದಂ ಹರೇರ್ಯಶೋ
ಜಗತ್ಪವಿತ್ರಂ ಪ್ರಗೃಣೀತ ಕರ್ಹಿಚಿತ್ ।
ತದ್ವಾಯಸಂ ತೀರ್ಥಮುಶಂತಿ ಮಾನಸಾ
ನ ಯತ್ರ ಹಂಸಾ ನಿರಮಂತ್ಯುಶಿಕ್ಕ್ಷಯಾಃ ॥ ೧೦ ॥

ತದ್ವಾಗ್ವಿಸರ್ಗೋ ಜನತಾಘವಿಪ್ಲವೋ
ಯಸ್ಮಿನ್ಪ್ರತಿಶ್ಲೋಕಮಬದ್ಧವತ್ಯಪಿ ।
ನಾಮಾನ್ಯನಂತಸ್ಯ ಯಶೋಽಂಕಿತಾನಿ ಯತ್
ಶೃಣ್ವಂತಿ ಗಾಯಂತಿ ಗೃಣಂತಿ ಸಾಧವಃ ॥ ೧೧ ॥

ನೈಷ್ಕರ್ಮ್ಯಮಪ್ಯಚ್ಯುತಭಾವವರ್ಜಿತಂ
ನ ಶೋಭತೇ ಜ್ಞಾನಮಲಂ ನಿರಂಜನಮ್ ।
ಕುತಃ ಪುನಃ ಶಶ್ವದಭದ್ರಮೀಶ್ವರೇ
ನ ಚಾರ್ಪಿತಂ ಕರ್ಮ ಯದಪ್ಯಕಾರಣಮ್ ॥ ೧೨ ॥

ಗುಣಗಳಿಗೆ ಅಂಟಿಕೊಳ್ಳದೆಯೇ ತನ್ನ ಸಂಕಲ್ಪಮಾತ್ರದಿಂದಲೇ ಮಾಡುತ್ತಿರುವ ಪುರಾಣಪುರುಷನನ್ನು ನೀವು ಉಪಾಸಿಸಿದ್ದೀರಿ. ॥ ೬ ॥ ನೀವು ಸೂರ್ಯನಂತೆ ತ್ರಿಲೋಕಗಳಲ್ಲಿ ಸಂಚರಿಸುತ್ತಿರುವಿರಿ. ಯೋಗಬಲದಿಂದ ಪ್ರಾಣವಾಯುವಿನಂತೆ ಎಲ್ಲರ ಒಳಗಡೆಯೂ ಇದ್ದು ಅಂತಃಕರಣಗಳ ಸಾಕ್ಷಿಯಾಗಿರುವಿರಿ. ಧಾರ್ಮಿಕವಾದ ವ್ರತ-ನಿಯಮ-ನಿಷ್ಠೆಗಳಿಂದ ಪರಬ್ರಹ್ಮ ಮತ್ತು ಶಬ್ದಬ್ರಹ್ಮ ಇವೆರಡರಲ್ಲೂ ನಿಷ್ಣಾತನಾಗಿರುವ ನಾನು ಪರಮಾನಂದದಲ್ಲಿ ಮುಳುಗಿರಬೇಕಾಗಿತ್ತು. ಆದರೆ ಹೀಗೆ ನನಗೆ ಅನುಭವವೇಕೆ ಆಗುತ್ತಿಲ್ಲ! ನನ್ನಲ್ಲಿರುವ ಈ ಕೊರತೆಯನ್ನು ತಾವೇ ದಯಮಾಡಿ ತಿಳಿಸಿರಿ. ॥ ೭ ॥

ಶ್ರೀನಾರದರೆಂದರು – ವೇದವ್ಯಾಸರೇ! ನೀವು ಬಹುಮಟ್ಟಿಗೆ ಶ್ರೀಭಗವಂತನ ಪರಿಶುದ್ಧವಾದ ಕೀರ್ತಿಯನ್ನು ವರ್ಣಿಸಿಲ್ಲವೆಂದೇ ತೋರುತ್ತದೆ. ಭಗವಂತನು ಸಂತೋಷಪಡುವುದು ಅವನ ಕೀರ್ತಿಯ ವರ್ಣನೆಯಿಂದಲೇ. ಅದನ್ನು ಬಿಟ್ಟು ಬೇರೆ ಯಾವ ದರ್ಶನದಿಂದಲೂ ಅವನಿಗೆ ಸಂತೋಷವಾಗುವುದಿಲ್ಲ, ಅವನಿಗೆ ಸಂತೋಷವಾಗದಿರುವ ದರ್ಶನಗಳೆಲ್ಲವೂ ಶೂನ್ಯವೆಂದೇ ನನ್ನ ಭಾವನೆ. ॥ ೮ ॥ ಮುನಿವರ್ಯರೇ! ನೀವು ಧರ್ಮವೇ ಮುಂತಾದ ಪುರುಷಾರ್ಥಗಳನ್ನು ಎಷ್ಟು ವಿಸ್ತಾರವಾಗಿ ವರ್ಣಿಸಿರುವಿರೋ, ಅಷ್ಟು ವಿಸ್ತಾರವಾಗಿ ವಾಸುದೇವನ ಮಹಿಮೆಯನ್ನು ವರ್ಣಿಸಿಲ್ಲವಷ್ಟೆ! ॥ ೯ ॥ ಒಂದು ಸಾಹಿತ್ಯವು ಪದ, ಅಕ್ಷರ ವಿನ್ಯಾಸ, ರಸ, ಅಲಂಕಾರ ಇವುಗಳಿಂದ ಕೂಡಿ ಅತ್ಯಂತ ಆಕರ್ಷಕವಾಗಿರಬಹುದು. ಆದರೆ ಜಗತ್ತನ್ನೇ ಪಾವನಗೊಳಿಸುವ ಪರಮಾತ್ಮನ ಕೀರ್ತಿಯನ್ನು ಎಲ್ಲಿಯೂ ಕೊಂಡಾಡದೆ ಇದ್ದರೆ ಅದು ಅಪವಿತ್ರವೇ. ಯಾವ ಜಲಾಶಯದಲ್ಲಿ ಮಾನಸ ಸರೋವರದ ಹಂಸಗಳು ವಿಹರಿಸುವುದಿಲ್ಲವೋ ಅದನ್ನು ಕಾಕತೀರ್ಥವೆಂದು ಭಾವಿಸುತ್ತಾರೆ. ಭಾವುಕರಾದ ಪರಮಹಂಸರು ರಮಿಸದೇ ಇರುವ ಸಾಹಿತ್ಯವು ಅದಕ್ಕೆ ಸಮಾನವೆನಿಸುವುದು. ॥ ೧೦ ॥ ಇದಕ್ಕೆ ಪ್ರತಿಯಾಗಿ ಯಾವುದಾದರೂ ವಾಕ್ಯರಚನೆಯಲ್ಲಿ, ಲೋಕದೃಷ್ಟಿಯಿಂದ ಪ್ರತಿಶ್ಲೋಕದಲ್ಲಿ ಅಚ್ಯುತನ ಕೀರ್ತಿಯನ್ನು ಸೂಚಿಸುವ ನಾಮಗಳಿದ್ದರೆ ಆ ವಾಣಿಯು ಜನರ ಎಲ್ಲ ಪಾಪಗಳನ್ನು ನಾಶಮಾಡಿಬಿಡುತ್ತದೆ. ಏಕೆಂದರೆ, ಸತ್ಪುರುಷರು ಇಂತಹ ವಾಣಿಯನ್ನೇ ಶ್ರವಣ, ಕೀರ್ತನ, ಗಾಯನ ಮಾಡುತ್ತಾರೆ. ॥ ೧೧ ॥ ನಾವು ಸಂಧ್ಯಾವಂದನಾದಿ ಕರ್ಮಗಳನ್ನು ಕರ್ತವ್ಯವೆಂದು ಭಾವಿಸಿಯೇ ಮಾಡುತ್ತೇವೆ. ಜೊತೆಗೆ ಕರ್ತೃತ್ವದ ಭಾವವೂ ಇರುವುದಿಲ್ಲ, ಆದರೆ ಅದೂ ಕೂಡ ಭಗವಂತನ ಭಕ್ತಿಭಾವದಿಂದ ರಹಿತವಾಗಿದ್ದರೆ ಶೋಭಿಸುವುದಿಲ್ಲ. ಇದೇ ರೀತಿಯಿಂದ ಶಾಸ್ತ್ರ ಜ್ಞಾನದಲ್ಲಿಯೂ ಕೂಡ ಭಗವಂತನ ಭಕ್ತಿಯ ಭಾವನೆಯಿಲ್ಲದಿದ್ದರೆ ಅದೂ ಕೂಡ ಶೋಭಿಸುವುದಿಲ್ಲ. ಆದ್ದರಿಂದ ತನ್ನ ಎಲ್ಲ ಕರ್ಮಗಳು ಹಾಗೂ ಶಾಸ್ತ್ರಗಳ ಅಭ್ಯಾಸವನ್ನು ಭಗವದ್ಭಕ್ತಿಯಿಂದ ಕೂಡಿಯೇ ಮಾಡಬೇಕು. ಭಕ್ತಿಯುಕ್ತ ಕರ್ಮ ಮತ್ತು ಜ್ಞಾನವು ಅನಂತ ಫಲವನ್ನು ಕೊಡುವುದಾಗಿದೆ. ಮತ್ತೆ ಕಾಮನೆಯಿಂದ ಮಾಡಲಾಗುವ ಕರ್ಮವಾದರೋ ಯಾವಾಗಲೂ ಅಶುಭವೆಂದೇ ತಿಳಿಯಲಾಗಿದೆ; ಅದರ ಕುರಿತು ಹೇಳುವುದೇನಿದೆ? ಹೀಗೆಯೇ

ಅಥೋ ಮಹಾಭಾಗ ಭವಾನಮೋಘದೃಕ್
ಶುಚಿಶ್ರವಾಃ ಸತ್ಯರತೋ ಧೃತವ್ರತಃ ।
ಉರುಕ್ರಮಸ್ಯಾಖಿಲಬಂಧಮುಕ್ತಯೇ
ಸಮಾಧಿನಾನುಸ್ಮರ ತದ್ವಿಚೇಷ್ಟಿತಮ್ ॥ ೧೩ ॥

ತತೋಽನ್ಯಥಾ ಕಿಂಚನ ಯದ್ವಿವಕ್ಷತಃ
ಪೃಥಗ್ದೃಶಸ್ತತ್ಕೃತರೂಪನಾಮಭಿಃ ।
ನ ಕುತ್ರಚಿತ್ ಕ್ವಾಪಿ ಚ ದುಃಸ್ಥಿತಾ ಮತಿ-
ರ್ಲಭೇತ ವಾತಾಹತನೌರಿವಾಸ್ಪದಮ್ ॥ ೧೪ ॥

ಜುಗುಪ್ಸಿತಂ ಧರ್ಮಕೃತೇಽನುಶಾಸತಃ
ಸ್ವಭಾವರಕ್ತಸ್ಯ ಮಹಾನ್ ವ್ಯತಿಕ್ರಮಃ ।
ಯದ್ವಾಕ್ಯತೋ ಧರ್ಮ ಇತೀತರಃ ಸ್ಥಿತೋ
ನ ಮನ್ಯತೇ ತಸ್ಯ ನಿವಾರಣಂ ಜನಃ ॥ ೧೫ ॥

ವಿಚಕ್ಷಣೋಽಸ್ಯಾರ್ಹತಿ ವೇದಿತುಂ ವಿಭೋ-
ರನಂತಪಾರಸ್ಯ ನಿವೃತ್ತಿತಃ ಸುಖಮ್ ।
ಪ್ರವರ್ತಮಾನಸ್ಯ ಗುಣೈರನಾತ್ಮನ-
ಸ್ತತೋ ಭವಾಂದರ್ಶಯ ಚೇಷ್ಟಿತಂ ವಿಭೋಃ ॥ ೧೬ ॥

ತ್ಯಕ್ತ್ವಾ ಸ್ವಧರ್ಮಂ ಚರಣಾಂಬುಜಂ ಹರೇ-
ರ್ಭಜನ್ನಪಕ್ವೋಽಥ ಪತೇತ್ತತೋ ಯದಿ ।
ಯತ್ರ ಕ್ವ ವಾಭದ್ರಮಭೂದಮುಷ್ಯ ಕಿಂ
ಕೋ ವಾರ್ಥ ಆಪ್ತೋಽಭಜತಾಂ ಸ್ವಧರ್ಮತಃ ॥ ೧೭ ॥

ನಿಷ್ಕಾಮಭಾವದಿಂದ ಮಾಡಿದ ಕರ್ಮವೂ ಕೂಡ ಭಗವಂತನಿಗೆ ಅರ್ಪಿಸದಿದ್ದರೆ ಶೋಭಿಸುವುದಿಲ್ಲ. ಆದ್ದರಿಂದ ಸಾಧಕನು ಮಾಡುವ ಎಲ್ಲ ಕ್ರಿಯೆಗಳನ್ನು ಭಗವಂತನ ಭಕ್ತಿಯಿಂದ ಭಾವಿತನಾಗಿ ಮಾಡಬೇಕು. ॥ ೧೨ ॥ ಮಹಾಭಾಗರೇ! ತಾವು ಅಮೋಘವಾದ ದೃಷ್ಟಿಯುಳ್ಳವರು. ಪವಿತ್ರವಾದ ಕೀರ್ತಿಯನ್ನು ಗಳಿಸಿದವರು. ಸತ್ಯಪರಾಯಣರೂ, ದೃಢವ್ರತಶಾಲಿಗಳೂ ಆಗಿದ್ದೀರಿ. ಆದುದರಿಂದ ಸಮಸ್ತ ಜೀವಿಗಳನ್ನು ಬಂಧಮುಕ್ತಗೊಳಿಸಲಿಕ್ಕಾಗಿ ಆ ಅಚಿಂತ್ಯ ಶಕ್ತಿಯುಳ್ಳ ಭಗವಂತನ ಲೀಲೆಗಳನ್ನು ಸಮಾಧಿಯಿಂದ ಅನುಸಂಧಾನ ಮಾಡಿರಿ. ॥ ೧೩ ॥ ಭಗವಂತನನ್ನು ವರ್ಣಿಸದೆ ಬೇರೆ ಯಾವುದನ್ನೋ ವರ್ಣಿಸಲು ಬಯಸುವವನು ತನ್ನ ಆ ಇಚ್ಛೆಯಿಂದ ನಿರ್ಮಿತವಾದ ಅನೇಕ ನಾಮರೂಪಗಳ ಸುಳಿಗೆ ಸಿಕ್ಕಿಹಾಕಿಕೊಳ್ಳುವನು. ಅವನ ಬುದ್ಧಿಯು ಭೇದ-ಭಾವದಿಂದ ಭ್ರಾಂತವಾಗುವುದು. ಅದು ಮೋಹಕ್ಕೆ ಒಳಗಾಗಿ ಬಿರುಗಾಳಿಗೆ ಸಿಕ್ಕಿದ ಹಡಗಿನಂತೆ ಎಂದೂ, ಎಲ್ಲಿಯೂ ನೆಲೆಯನ್ನು ಕಾಣದೆ ಹೋಗುವುದು. ॥ ೧೪ ॥ ಸಂಸಾರಿಗಳಾದ ಜನರು ಸ್ವಾಭಾವಿಕವಾಗಿಯೇ ವಿಷಯಗಳಲ್ಲಿ ಆಸಕ್ತರಾಗಿರುತ್ತಾರೆ. ಧರ್ಮದ ಹೆಸರಿನಲ್ಲಿ ನೀವು ಅವರಿಗೆ ನಿಂದಿತ (ಪಶುಹಿಂಸಾಯುಕ್ತ) ಸಕಾಮಕರ್ಮ ಮಾಡಲು ಆಜ್ಞೆಯನ್ನು ಕೊಟ್ಟಿರುವಿರಿ. ಈ ಮಾತು ವಿಪರೀತವಾಯಿತು. ಏಕೆಂದರೆ, ಮೂರ್ಖ ಜನರು ನಿಮ್ಮ ವಚನಗಳಿಂದ ಹಿಂದೆ ಹೇಳಿದ ನಿಂದಿತ ಕರ್ಮವನ್ನೇ ಧರ್ಮವೆಂದು ತಿಳಿದುಕೊಂಡು 'ಇದೇ ಧರ್ಮವಾಗಿದೆ' ಹೀಗೆ ನಿಶ್ಚಯಿಸಿಕೊಂಡು, ಅದರ ನಿಷೇಧ ಮಾಡುವ ವಚನಗಳನ್ನು ಸರಿಯಾಗಿ ತಿಳಿಯುವುದಿಲ್ಲ. ॥ ೧೫ ॥ ತಾವು ವಿದ್ವಾಂಸರಾಗಿದ್ದೀರಿ. ಅನಂತವೀರ್ಯನಾದ ಭಗವಂತನ ಅಲೌಕಿಕ ಲೀಲೆಗಳ ಕುರಿತು ತಾವು ತಿಳಿದೇ ಇದ್ದೀರಿ. ಜೊತೆಗೆ ವೈರಾಗ್ಯದಿಂದ ಉಂಟಾಗುವ ಆನಂದಾನುಭವದ ಕುರಿತು ನಿಮಗೆ ಜ್ಞಾನವಿದೆ. ಆದ್ದರಿಂದ ಸ್ವರೂಪಜ್ಞಾನಕ್ಕೆ ಬಾಧಕವಾದ ಗುಣಗಳಲ್ಲೇ ಪ್ರವೃತ್ತರಾದ ಸಂಸಾರೀಜನರ ಮೇಲೆ ಕರುಣೆದೋರಿ ಭಗವಂತನ ಅಲೌಕಿಕ ಲೀಲೆಗಳ ವರ್ಣನ ಮಾಡಿರಿ. ಇದರಿಂದ ಅವರು ಭಗವಂತನ ಭಕ್ತಿಯಲ್ಲಿ ತೊಡಗಿ ತಮ್ಮ ಆತ್ಮಸ್ವರೂಪದ ಸಾಕ್ಷಾತ್ಕಾರಮಾಡಿಕೊಳ್ಳುವರು. ॥ ೧೬ ॥ ಯಾವನಾದರೂ ಮನುಷ್ಯನು ಕಾಮ್ಯಕರ್ಮಗಳ ಅನುಷ್ಠಾನವನ್ನು ಬಿಟ್ಟು ಭಗವಂತನ ಭಕ್ತಿಯನ್ನು ಆಚರಿಸುತ್ತಾ ಇರುವಾಗ, ಆ ಭಕ್ತಿಯು ಪರಿಪಕ್ವವಾಗದೆ ನಡುವಿನಲ್ಲೇ ದೇಹಪಾತವಾದರೂ ಆ ಭಕ್ತನಿಗೆ ಅಮಂಗಲವಾಗಬಲ್ಲುದೇ ? ಅರ್ಥಾತ್ – ಸರ್ವಥಾ ಅವನಿಗೆ ಶುಭವೇ ಆಗುತ್ತದೆ. ಹೀಗೆಯೇ ಯಾರಾದರೂ ಕಾಮ್ಯಕರ್ಮವನ್ನು ಅನುಷ್ಠಾನ ಮಾಡುತ್ತಾ ಭಗವಂತನಿಂದ ವಿಮುಖನಾದರೆ ಅವನಿಗೆ ಏನಾದರೂ ವಿಶೇಷ ಲಾಭವಾಗಿದೆಯೇ ? ಅರ್ಥಾತ್ – ನಿಷ್ಕಾಮ ಭಾವದಿಂದ ಭಗವಂತನ ಭಕ್ತಿಯನ್ನು ಮಾಡುವುದು ಮತ್ತು ಭಗವಂತನ ಲೀಲೆಗಳನ್ನು ಚಿಂತಿಸುವುದು ಶ್ರೇಯಸ್ಸಿನ ಉಪಾಯವಾಗಿದೆ. ಇದರಿಂದ ಭಗವಂತನ ಸ್ಮೃತಿ ನಿರಂತರ ಇರಬಲ್ಲದು ಎಂಬುದೂ ತಾವು ತಿಳಿದಿರುವಿರಿ. ಆದ್ದರಿಂದ ಜನರ ಪರಮಶ್ರೇಯಸ್ಸಿಗಾಗಿ ನೀವು ಭಗವಂತನ ಲೀಲೆಗಳನ್ನೇ ಗಾನಮಾಡಿರಿ. ಇದೇ ಲೋಕಕ್ಕೆ ಮಂಗಳಕರವಾಗಿದೆ. ॥ ೧೭ ॥

ತಸ್ಯೈವ ಹೇತೋಃ ಪ್ರಯತೇತ ಕೋವಿದೋ
ನ ಲಭ್ಯತೇ ಯದ್ಭ್ರಮತಾಮುಪರ್ಯಧಃ ।
ತಲ್ಲಭ್ಯತೇ ದುಃಖವದನ್ಯತಃ ಸುಖಂ
ಕಾಲೇನ ಸರ್ವತ್ರ ಗಭೀರರಂಹಸಾ ॥ ೧೮ ॥

ನ ವೈ ಜನೋ ಜಾತು ಕಥಂಚನಾವ್ರಜೇ-
ನ್ಮುಕುಂದಸೇವ್ಯನ್ಯವದಂಗ ಸಂಸೃತಿಮ್ ।
ಸ್ಮರನ್ಮುಕುಂದಾಙ್ಘ್ರ್ಯುಪಗೂಹನಂ ಪುನ-
ರ್ವಿಹಾತುಮಿಚ್ಛೇನ್ನ ರಸಗ್ರಹೋ ಯತಃ ॥ ೧೯ ॥

ಇದಂ ಹಿ ವಿಶ್ವಂ ಭಗವಾನಿವೇತರೋ
ಯತೋ ಜಗತ್ಸ್ಥಾನನಿರೋಧಸಂಭವಾಃ ।
ತದ್ಧಿ ಸ್ವಯಂ ವೇದ ಭವಾಂಸ್ತಥಾಪಿ ವೈ
ಪ್ರಾದೇಶಮಾತ್ರಂ ಭವತಃ ಪ್ರದರ್ಶಿತಮ್ ॥ ೨೦ ॥

ತ್ವಮಾತ್ಮನಾಽಽತ್ಮಾನಮವೇಹ್ಯಮೋಘದೃಕ್
ಪರಸ್ಯ ಪುಂಸಃ ಪರಮಾತ್ಮನಃ ಕಲಾಮ್ ।
ಅಜಂ ಪ್ರಜಾತಂ ಜಗತಃ ಶಿವಾಯ ತ-
ನ್ಮಹಾನುಭಾವಾಭ್ಯುದಯೋಽಧಿಗಣ್ಯತಾಮ್ ॥ ೨೧ ॥

ಇದಂ ಹಿ ಪುಂಸಸ್ತಪಸಃ ಶ್ರುತಸ್ಯ ವಾ
ಸ್ವಿಷ್ಟಸ್ಯ ಸೂಕ್ತಸ್ಯ ಚ ಬುದ್ಧಿದತ್ತಯೋಃ ।
ಅವಿಚ್ಯುತೋಽರ್ಥಃ ಕವಿಭಿರ್ನಿರೂಪಿತೋ
ಯದುತ್ತಮಶ್ಲೋಕಗುಣಾನುವರ್ಣನಮ್ ॥ ೨೨ ॥

ಅಹಂ ಪುರಾತೀತಭವೇಽಭವಂ ಮುನೇ
ದಾಸ್ಯಾಸ್ತು ಕಸ್ಯಾಶ್ಚನ ವೇದವಾದಿನಾಮ್ ।
ನಿರೂಪಿತೋ ಬಾಲಕ ಏವ ಯೋಗಿನಾಂ
ಶುಶ್ರೂಷಣೇ ಪ್ರಾವೃಷಿ ನಿರ್ವಿವಿಕ್ಷತಾಮ್ ॥ ೨೩ ॥

ಬ್ರಹ್ಮಲೋಕದಿಂದ ಕೆಳಗಿನ ಲೋಕಗಳವರೆಗೆ ಎಲ್ಲೇ ಸುತ್ತಾಡುತ್ತಾ ಇದ್ದರೂ ಅವರಿಗೆ ಪರಮಾನಂದದ ಸುಖವು ದೊರೆಯಲಾರದು. (ಆದರೆ, ಗೋಪಿಯರು ಭಗವಂತನನ್ನು ಪಡೆಯಲು ಅವನ ಭಜನೆಯನ್ನೇ ಮಾಡಿದರು. ಮನೆ ವಾರ್ತೆಗಳನ್ನು ಬಿಟ್ಟುಬಿಟ್ಟರು. ಭಗವಂತನಲ್ಲಿ ಅವರಿಗೆ ತದಾಕಾರ ವೃತ್ತಿಉಂಟಾಯಿತು. ಈ ವಿಧವಾಗಿ ಭಗವಂತನ ಭಜನೆ ಮಾಡುವವರೇ ಶ್ರೇಷ್ಠರಾಗಿರುತ್ತಾರೆ.) ಸಂಸಾರದ ಸುಖ-ದುಃಖಗಳಾದರೋ ಕಾಲಗತಿಯ ಪ್ರಭಾವದಿಂದ ಒಂದಾದಮೇಲೊಂದರಂತೆ ತಾನಾಗಿಯೇ ಬಂದುಹೋಗುತ್ತಾ ಇರುತ್ತವೆ. ಅವುಗಳಿಗಾಗಿ ಯಾವುದೇ ವಿಶೇಷ ಪ್ರಯತ್ನಮಾಡದೆ, ಬುದ್ಧಿವಂತರಾದವರು ಭಗವಂತನ ಭಕ್ತಿಯನ್ನು ಮಾಡಬೇಕು. ॥ ೧೮ ॥ ಮಹರ್ಷಿಗಳೇ! ಶ್ರೀಕೃಷ್ಣಪರಮಾತ್ಮನ ಪಾದಾರವಿಂದಗಳನ್ನು ಸೇವಿಸುವವನು ಎಂದಿಗೂ ಯಾವ ರೀತಿಯಲ್ಲೂ ಇತರ ಕರ್ಮಿಗಳಂತೆ ಈ ಸಂಸಾರ ಬಂಧನದಲ್ಲಿ ಬೀಳುವುದಿಲ್ಲ. ಒಂದು ಸಲ ಭಕ್ತಿರಸದ ಸವಿಯನ್ನು ಅನುಭವಿಸಿದವನು ಭಗವಂತನ ಚರಣಕಮಲಗಳ ಆಲಿಂಗನವನ್ನು ಸ್ಮರಿಸುತ್ತಾ ಮತ್ತೆ ಅದನ್ನು ಬಿಡದೆ ಪರಮಾನಂದದ ಸಾಗರದಲ್ಲೇ ಯಾವಾಗಲೂ ಮುಳುಗಿರುತ್ತಾನೆ. ॥ ೧೯ ॥ ಈ ವಿಶ್ವವು ಭಗವಂತನದೇ ಸಾಕಾರ ಸ್ವರೂಪವಾಗಿದೆ. ಎಲ್ಲ ಪ್ರಾಣಿಗಳ ರೂಪದಲ್ಲಿ ಅವನೇ ಇರುವನು. ಹೀಗಿದ್ದರೂ ಅವನು ಇದರಿಂದ ಮೇಲೆ ಅರ್ಥಾತ್ ಅತೀತನಾಗಿದ್ದಾನೆ. ಅವನಿಂದಲೇ ಈ ವಿಶ್ವದ ಉತ್ಪತ್ತಿ, ಸ್ಥಿತಿ, ಸಂಹಾರ ಲೀಲೆಯು ನಡೆಯುತ್ತಾ ಇದೆ. ನೀವಾದರೋ ಆ ಪ್ರಭುವಿನ ಕುರಿತು ಎಲ್ಲವನ್ನು ಬಲ್ಲವರಾಗಿದ್ದೀರಿ. ಹೀಗಿದ್ದರೂ ನಾನು ನಿಮಗೆ ಸಂಕೇತಮಾತ್ರ ಮಾಡಿರುವೆನು. ಆದ್ದರಿಂದ ನೀವು ಭಗವಂತನ ಲೀಲೆಗಳನ್ನು ಹಾಗೂ ಅವನ ಗುಣಗಳನ್ನು ವರ್ಣಿಸಿರಿ. ॥ ೨೦ ॥ ಮಹಾಮುನಿಗಳೇ! ನಿಮ್ಮ ದೃಷ್ಟಿಯು ಅಮೋಘವಾದುದು. ನೀವು ಪರಮಪುರುಷ- ಪರಮಾತ್ಮನ ಕಲಾವತಾರವೇ ಆಗಿದ್ದೀರಿ; ಇದನ್ನು ತಾವು ಅರಿತುಕೊಳ್ಳಿ. ಜನ್ಮರಹಿತವಾಗಿದ್ದರೂ ತಾವು ಜಗತ್ತಿನ ಕಲ್ಯಾಣಕ್ಕಾಗಿ ಜನ್ಮವನ್ನು ಪಡೆದಿರುವಿರಿ. ಆದರಿಂದ ನೀವು ವಿಶೇಷವಾಗಿ ಭಗವಂತನ ಲೀಲೆಗಳನ್ನು ಕೀರ್ತನೆಮಾಡಿರಿ. ॥ ೨೧ ॥ ಪುಣ್ಯಕೀರ್ತಿಯಾದ ಶ್ರೀಭಗವಂತನ ದಿವ್ಯಗುಣಗಳನ್ನು, ಲೀಲೆಗಳನ್ನು ವರ್ಣನೆ ಮಾಡುವುದೇ – ಮನುಷ್ಯರು ಆಚರಿಸುವ ತಪಸ್ಸು, ವೇದಾಧ್ಯಯನ, ಯಜ್ಞಾನುಷ್ಠಾನ, ಸ್ವಾಧ್ಯಾಯ, ಜ್ಞಾನ ಮತ್ತು ದಾನ ಇವೆಲ್ಲಕ್ಕೂ ಪರಮ ಪ್ರಯೋಜನವೆಂದು ಜ್ಞಾನಿಗಳು ನಿರೂಪಿಸಿದ್ದಾರೆ. ॥ ೨೨ ॥

ಮಹಾಮುನಿಗಳೇ! (ಭಗವಂತನ ಗುಣಗಾನ, ಶ್ರವಣ ಮುಂತಾದವುಗಳಿಂದಲೇ ಆ ಪರಮಾತ್ಮನ ಪ್ರಾಪ್ತಿಯಾಗುತ್ತದೆ ಎಂಬುದಕ್ಕೆ ನನ್ನ ಚರಿತ್ರೆಯೇ ಒಂದು ಉದಾಹರಣೆಯಾಗಿದೆ.) ಹಿಂದಿನ ಕಲ್ಪದಲ್ಲಿ, ನನ್ನ ಹಿಂದಿನ ಜೀವನದಲ್ಲಿ ನಾನು ವೇದವಾದಿಗಳಾದ ಬ್ರಾಹ್ಮಣರ ಓರ್ವ ದಾಸಿಯ ಪುತ್ರನಾಗಿದ್ದೆನು. ಆ ಯೋಗಿಗಳು ವರ್ಷಾ ಋತುವಿನಲ್ಲಿ ಒಂದೆಡೆ ಚಾತುರ್ಮಾಸ್ಯ ಮಾಡುತ್ತಿದ್ದರು. ನಾನು ಬಾಲಕನಾಗಿರುವಾಗಲೇ ನನ್ನ ತಾಯಿಯು ಆ ಯೋಗಿಗಳ ಶುಶ್ರೂಷೆಯಲ್ಲಿ ನನ್ನನ್ನು ನೇಮಿಸಿದ್ದಳು. ॥ ೨೩ ॥

ತೇ ಮಯ್ಯಪೇತಾಖಿಲಚಾಪಲೇಽರ್ಭಕೇ
ದಾಂತೇಽಧೃತಕ್ರೀಡನಕೇಽನುವರ್ತಿನಿ ।
ಚಕ್ರುಃ ಕೃಪಾಂ ಯದ್ಯಪಿ ತುಲ್ಯದರ್ಶನಾಃ
ಶುಶ್ರೂಷಮಾಣೇ ಮುನಯೋಽಲ್ಪಭಾಷಿಣಿ ॥ ೨೪ ॥

ಉಚ್ಛಿಷ್ಟಲೇಪಾನನುಮೋದಿತೋ ದ್ವಿಜೈಃ
ಸಕೃತ್ಸ್ಮ ಭುಂಜೇ ತದಪಾಸ್ತಕಿಲ್ಬಿಷಃ ।
ಏವಂ ಪ್ರವೃತ್ತಸ್ಯ ವಿಶುದ್ಧಚೇತಸ-
ಸ್ತದ್ಧರ್ಮ ಏವಾತ್ಮರುಚಿಃ ಪ್ರಜಾಯತೇ ॥ ೨೫ ॥

ತತ್ರಾನ್ವಹಂ ಕೃಷ್ಣಕಥಾಃ ಪ್ರಗಾಯತಾ-
ಮನುಗ್ರಹೇಣಾಶೃಣವಂ ಮನೋಹರಾಃ ।
ತಾಃ ಶ್ರದ್ಧಯಾ ಮೇಽನುಪದಂ ವಿಶೃಣ್ವತಃ
ಪ್ರಿಯಶ್ರವಸ್ಯಂಗ ಮಮಾಭವದ್ರುಚಿಃ ॥ ೨೬ ॥

ತಸ್ಮಿಂಸ್ತದಾ ಲಬ್ಧರುಚೇರ್ಮಹಾಮುನೇ
ಪ್ರಿಯಶ್ರವಸ್ಯಸ್ಖಲಿತಾ ಮತಿರ್ಮಮ ।
ಯಯಾಹಮೇತತ್ಸದಸತ್ಸ್ವಮಾಯಯಾ
ಪಶ್ಯೇ ಮಯಿ ಬ್ರಹ್ಮಣಿ ಕಲ್ಪಿತಂ ಪರೇ ॥ ೨೭ ॥

ಇತ್ಥಂ ಶರತ್ಪ್ರಾವೃಷಿಕಾವೃತೂ ಹರೇ-
ರ್ವಿಶೃಣ್ವತೋ ಮೇಽನುಸವಂ ಯಶೋಽಮಲಮ್ ।
ಸಂಕೀರ್ತ್ಯಮಾನಂ ಮುನಿಭಿರ್ಮಹಾತ್ಮಭಿ-
ರ್ಭಕ್ತಿಃ ಪ್ರವೃತ್ತಾತ್ಮರಜಸ್ತಮೋಪಹಾ ॥ ೨೮ ॥

ತಸ್ಯೈವಂ ಮೇಽನುರಕ್ತಸ್ಯ ಪ್ರಶ್ರಿತಸ್ಯ ಹತೈನಸಃ ।
ಶ್ರದ್ದಧಾನಸ್ಯ ಬಾಲಸ್ಯ ದಾಂತಸ್ಯಾನುಚರಸ್ಯ ಚ ॥ ೨೯ ॥

ಜ್ಞಾನಂ ಗುಹ್ಯತಮಂ ಯತ್ತತ್ಸಾಕ್ಷಾದ್ಭಗವತೋದಿತಮ್ ।
ಅನ್ವವೋಚನ್ ಗಮಿಷ್ಯಂತಃ ಕೃಪಯಾ ದೀನವತ್ಸಲಾಃ ॥ ೩೦ ॥

ಯೇನೈವಾಹಂ ಭಗವತೋ ವಾಸುದೇವಸ್ಯ ವೇಧಸಃ ।
ಮಾಯಾನುಭಾವಮವಿದಂ ಯೇನ ಗಚ್ಛಂತಿ ತತ್ಪದಮ್ ॥ ೩೦ ॥

ನಾನು ಬಾಲಕನಾಗಿದ್ದರೂ ಚಾಪಲ್ಯರಹಿತನಾಗಿದ್ದು, ಜಿತೇಂದ್ರಿಯನಾಗಿದ್ದೆ. ಆಟಗಳಲ್ಲಿ ಆಸಕ್ತಿಯಿಲ್ಲದೆ, ಮಿತಭಾಷಿಯಾಗಿದ್ದು ಅವರ ಆಜ್ಞಾನುಸಾರ ಸೇವೆ ಮಾಡುತ್ತಿದ್ದೆ. ನನ್ನ ಈ ಶೀಲ-ಸ್ವಭಾವವನ್ನು ನೋಡಿ ಸಮದರ್ಶಿಗಳಾದ ಮುನಿಗಳು ಸೇವಕನಾದ ನನ್ನಮೇಲೆ ಪರಮಾನುಗ್ರಹ ಮಾಡಿದರು. ॥ ೨೪ ॥ ನಾನು ಅವರ ಅನುಮತಿಪಡೆದು ಅವರ ಪಾತ್ರೆಯಲ್ಲಿ ಅಂಟಿಕೊಂಡಿದ್ದ ಪ್ರಸಾದವನ್ನು ಪ್ರಸಾದವೆಂದು ಭಾವಿಸಿ ದಿನಕ್ಕೆ ಒಂದು ಬಾರಿ ಮಾತ್ರ ಸೇವಿಸುತ್ತಿದ್ದೆ. ಅದರಿಂದ ನನ್ನ ಪಾಪಗಳೆಲ್ಲವೂ ತೊಳೆದು ಹೋದುವು. ಹೀಗೆ ಅವರ ಸೇವೆಮಾಡುತ್ತಾ-ಮಾಡುತ್ತಾ ನನ್ನ ಹೃದಯವು ಶುದ್ಧವಾಗಿ ಆ ಯೋಗಿಗಳು ಹೇಗೆ ಭಜನೆ-ಪೂಜೆ ಮಾಡುತ್ತಿದ್ದರೋ ಅದರಲ್ಲೇ ನನಗೂ ಅಭಿರುಚಿ ಉಂಟಾಯಿತು. ॥ ೨೫ ॥ ವ್ಯಾಸಮಹರ್ಷಿಗಳೇ! ಆ ಸತ್ಸಂಗದಲ್ಲಿ ಲೀಲಾಗಾನ ಪರಾಯಣರಾದ ಮಹಾತ್ಮರ ಅನುಗ್ರಹದಿಂದ ಪ್ರತಿದಿನವೂ ನಾನು ಶ್ರೀಕೃಷ್ಣನ ಮನೋಹರ ಕಥೆಗಳನ್ನು ಕೇಳುತ್ತಿದ್ದೆ. ಶ್ರದ್ಧಾಪೂರ್ವಕ ಒಂದೊಂದು ಪದವನ್ನು ಶ್ರವಣಿಸುತ್ತಾ ಇರುವಾಗ ಪ್ರಿಯಕೀರ್ತಿಯುಳ್ಳ, ಸ್ತೋತ್ರಪ್ರಿಯನಾದ ಭಗವಂತನಲ್ಲಿ ನನಗೆ ಅಭಿರುಚಿ ಉಂಟಾಯಿತು. ಹೀಗೆ ಮಹಾನುಭಾವರ ಸತ್ಸಂಗದಿಂದ ನನಗೆ ಅಮೃತಲಾಭವಾಯಿತು. ಇದೆಲ್ಲವೂ ಮಹಾತ್ಮರ ಅಸೀಮಕೃಪೆಯಿಂದ ನಾನು ಭಾವಿಸುತ್ತೇನೆ. ॥ ೨೬ ॥ ಮಹಾಮುನೇ! ಭಗವಂತನಲ್ಲಿ ಅಭಿರುಚಿ ಉಂಟಾದಾಗ ಮನೋಹರ ಕೀರ್ತಿಯುಳ್ಳ ಪ್ರಭುವಿನಲ್ಲಿ ನನ್ನ ಬುದ್ಧಿಯು ನಿಶ್ಚಲವಾಗಿ ನೆಲೆಸಿತು. ಬುದ್ಧಿಯಿಂದ ನಾನು ಈ ಸದಸದಾತ್ಮಕವಾದ ಜಗತ್ತೆಲ್ಲವೂ ಪರಬ್ರಹ್ಮಸ್ವರೂಪೀ ನನ್ನ ಆತ್ಮನಲ್ಲೇ ಮಾಯೆಯಿಂದ ಕಲ್ಪಿತವಾಗಿದುವಂತೆ ನೋಡತೊಡಗಿದೆನು. ॥ ೨೭ ॥ ಹೀಗೆ ಶರದ್‌ಋತು ಮತ್ತು ವರ್ಷಾಋತುವಿನ ನಾಲ್ಕುತಿಂಗಳುಗಳ ಅವಧಿಯಲ್ಲಿ ಪ್ರತಿದಿನವೂ ಮೂರೂ ಹೊತ್ತು ಆ ಮಹಾತ್ಮರಾದ ಮುನಿಗಳು ಶ್ರೀಹರಿಯ ನಿರ್ಮಲವಾದ ಕೀರ್ತಿಯನ್ನು ಸಂಕೀರ್ತನ ಮಾಡುತ್ತಿದ್ದರು. ಪ್ರೇಮದಿಂದ ಪ್ರತಿಯೊಂದು ಮಾತನ್ನು ಕೇಳುತ್ತಿದ್ದ ನನ್ನ ಹೃದಯದಲ್ಲಿ ರಜೋಗುಣ, ತಮೋಗುಣಗಳನ್ನು ನಾಶಮಾಡುವಂತಹ ಭಕ್ತಿಯು ಉದಯಿಸಿತು. ॥ ೨೮ ॥ ನಾನು ಆ ಯೋಗಿಗಳಲ್ಲಿ ಅತ್ಯಂತ ಅನುರಕ್ತನಾಗಿದ್ದೆನು. ವಿನಯಶಾಲಿಯಾಗಿದ್ದೆನು. ಅವರ ಸೇವೆಯಿಂದ ನನ್ನ ಪಾಪಗಳೆಲ್ಲವೂ ನಾಶಹೊಂದಿದವು. ನನ್ನ ಹೃದಯದಲ್ಲಿ ಶ್ರದ್ಧೆಯೂ, ಇಂದ್ರಿಯಗಳಲ್ಲಿ ಸಂಯಮವೂ ಇದ್ದು, ದೇಹ, ವಾಣಿ, ಮನಸ್ಸುಗಳಿಂದ ನಾನು ಅವರ ಆಜ್ಞಾಕಾರಿಯಾಗಿದ್ದೆ. ॥ ೨೯ ॥ ಆ ದೀನವತ್ಸಲರಾದ ಮಹಾತ್ಮರು ಅಲ್ಲಿಂದ ಹೊರಡುವಾಗ – ಸ್ವಯಂ ಭಗವಂತನೇ ತನ್ನ ಶ್ರೀಮುಖದಿಂದ ಉಪದೇಶಮಾಡಿದ್ದ ರಹಸ್ಯವಾದ ಜ್ಞಾನವನ್ನು ನನಗೆ ಪರಮಕೃಪೆಯಿಂದ ಉಪದೇಶಿಸಿದರು. ॥ ೩೦ ॥ ಆ ಉಪದೇಶದಿಂದಲೇ ಜಗತ್ತಿನ ನಿರ್ಮಾತೃವಾದ ಭಗವಾನ್ ಶ್ರೀಕೃಷ್ಣನ ಮಾಯೆಯ ಪ್ರಭಾವವನ್ನು ನಾನು ಅರಿಯುವಂತಾಯಿತು. ಅದನ್ನರಿತರೆ ಅವನ ಪರಮಪದದ ಪ್ರಾಪ್ತಿಯಾಗುವುದು. ಆತ್ಮಸ್ವರೂಪದ ಜ್ಞಾನ ಉಂಟಾಗುವುದು. ॥ ೩೧ ॥

ಏತತ್ಸಂಸೂಚಿತಂ ಬ್ರಹ್ಮಂಸ್ತಾಪತ್ರಯಚಿಕಿತ್ಸಿತಮ್ ।
ಯದೀಶ್ವರೇ ಭಗವತಿ ಕರ್ಮ ಬ್ರಹ್ಮಣಿ ಭಾವಿತಮ್ ॥ ೩೨ ॥

ಆಮಯೋ ಯಶ್ಚ ಭೂತಾನಾಂ ಜಾಯತೇ ಯೇನ ಸುವ್ರತ ।
ತದೇವ ಹ್ಯಾಮಯಂ ದ್ರವ್ಯಂ ನ ಪುನಾತಿ ಚಿಕಿತ್ಸಿತಮ್ ॥ ೩೩ ॥

ಏವಂ ನೃಣಾಂ ಕ್ರಿಯಾಯೋಗಾಃ ಸರ್ವೇ ಸಂಸೃತಿಹೇತವಃ ।
ತ ಏವಾತ್ಮವಿನಾಶಾಯ ಕಲ್ಪಂತೇ ಕಲ್ಪಿತಾಃ ಪರೇ ॥ ೩೪ ॥

ಯದತ್ರ ಕ್ರಿಯತೇ ಕರ್ಮ ಭಗವತ್ಪರಿತೋಷಣಮ್ ।
ಜ್ಞಾನಂ ಯತ್ತದಧೀನಂ ಹಿ ಭಕ್ತಿಯೋಗಸಮನ್ವಿತಮ್ ॥ ೩೫ ॥

ಕುರ್ವಾಣಾ ಯತ್ರ ಕರ್ಮಾಣಿ ಭಗವಚ್ಛಿಕ್ಷಯಾಸಕೃತ್ ।
ಗೃಣಂತಿ ಗುಣನಾಮಾನಿ ಕೃಷ್ಣಸ್ಯಾನುಸ್ಮರಂತಿ ಚ ॥ ೩೬ ॥

ನಮೋ ಭಗವತೇ ತುಭ್ಯಂ ವಾಸುದೇವಾಯ ಧೀಮಹಿ ।
ಪ್ರದ್ಯುಮ್ನಾಯಾನಿರುದ್ಧಾಯ ನಮಃ ಸಂಕರ್ಷಣಾಯ ಚ ॥ ೩೭ ॥

ಇತಿ ಮೂರ್ತ್ಯಭಿಧಾನೇನ ಮಂತ್ರಮೂರ್ತಿಮಮೂರ್ತಿಕಮ್ ।
ಯಜತೇ ಯಜ್ಞಪುರುಷಂ ಸ ಸಮ್ಯಗ್ದರ್ಶನಃ ಪುಮಾನ್ ॥ ೩೮ ॥

ಇಮಂ ಸ್ವನಿಗಮಂ ಬ್ರಹ್ಮನ್ನವೇತ್ಯ ಮದನುಷ್ಠಿತಮ್ ।
ಅದಾನ್ಮೇ ಜ್ಞಾನಮೈಶ್ವರ್ಯಂ ಸ್ವಸ್ಮಿನ್ ಭಾವಂ ಚ ಕೇಶವಃ ॥ ೩೯ ॥

ತ್ವಮಪ್ಯದಭ್ರಶ್ರುತ ವಿಶ್ರುತಂ ವಿಭೋಃ
ಸಮಾಪ್ಯತೇ ಯೇನ ವಿದಾಂ ಬುಭುತ್ಸಿತಮ್ ।
ಆಖ್ಯಾಹಿ ದುಃಖೈರ್ಮುಹುರರ್ದಿತಾತ್ಮನಾಂ
ಸಂಕ್ಲೇಶನಿರ್ವಾಣಮುಶಂತಿ ನಾನ್ಯಥಾ ॥ ೪೦ ॥

ಬ್ರಹ್ಮರ್ಷಿಗಳೇ! ಪುರುಷೋತ್ತಮನಾದ ಭಗವಾನ್ ಶ್ರೀಕೃಷ್ಣನ ಕುರಿತು ಸಮಸ್ತ ಕರ್ಮಗಳನ್ನು ಸಮರ್ಪಿಸುವುದೇ ನಮ್ಮ ತಾಪತ್ರಯಗಳನ್ನು ನಾಶಪಡಿಸುವ ದಿವ್ಯೌಷಧವು. ಈ ರಹಸ್ಯವನ್ನು ನಾನು ತಿಳಿದು ನಿಮಗೂ ಸೂಚಿಸುತ್ತೇನೆ. ॥ ೩೨ ॥ ಸಾಧುಶಿರೋಮಣಿಗಳೇ! ಪ್ರಾಣಿಗಳಿಗೆ ಯಾವ ಪದಾರ್ಥದ ಸೇವನೆಯಿಂದ ಯಾವ ರೋಗ ಉಂಟಾಗುವುದೋ, ಅದೇ ಪದಾರ್ಥವನ್ನು ಚಿಕಿತ್ಸಾವಿಧಿಗೆ ಅನುಸಾರವಾಗಿ ಪ್ರಯೋಗಿಸಿದರೆ ಆ ರೋಗವನ್ನು ದೂರಮಾಡುವುದಲ್ಲ! ॥ ೩೩ ॥ ಹೀಗೆಯೇ ಎಲ್ಲ ಕರ್ಮಗಳು ಮನುಷ್ಯನನ್ನು ಜನ್ಮ-ಮರಣಗಳ ಸಂಸಾರಚಕ್ರದಲ್ಲಿ ಕೆಡಹುವುದಿದ್ದರೂ, ಅವುಗಳನ್ನೂ ಭಗವಂತನಿಗೆ ಸಮರ್ಪಿಸಿದಾಗ ಅವುಗಳ ಕರ್ಮತ್ವವೇ ಕಳೆದುಹೋಗುತ್ತದೆ. ಮತ್ತೆ ಕರ್ಮಗಳು ಜೀವನನ್ನು ಬಂಧಿಸಲಾರವು. ॥ ೩೪ ॥ ಆದ್ದರಿಂದ ಭಗವತ್ಪ್ರೀತ್ಯರ್ಥವಾಗಿ ಮಾಡಲಾಗುವ ಕರ್ಮದಿಂದ ಜ್ಞಾನ ಮತ್ತು ಭಕ್ತಿ ಎರಡೂ ಪ್ರಾಪ್ತವಾಗುತ್ತವೆ. ಆ ಜ್ಞಾನವನ್ನು ಭಕ್ತಿಯೋಗಯುಕ್ತಜ್ಞಾನ ಎಂದು ಹೇಳಲಾಗಿದೆ. ॥ ೩೫ ॥ ಆ ಭಗವದರ್ಥ ಕರ್ಮಮಾರ್ಗದಲ್ಲಿ ಭಗವಂತನ ಆಜ್ಞಾನುಸಾರವಾಗಿ ಆಚರಣೆಯಿಟ್ಟುಕೊಂಡು ಜನರು ಪದೇ-ಪದೇ ಭಗವಾನ್ ಶ್ರೀಕೃಷ್ಣನ ಗುಣ-ನಾಮಗಳನ್ನು ಕೀರ್ತಿಸುತ್ತಾ, ಸ್ಮರಿಸುತ್ತಾ ಇರುತ್ತಾರೆ. ॥ ೩೬ ॥ ಹಾಗೂ ಆಗಾಗ ಭಗವಂತನನ್ನು ಹೀಗೆ ಸ್ತುತಿಸುತ್ತಾ ಇರುತ್ತಾರೆ – ಪ್ರಭೋ! ಭಗವಾನ್ ವಾಸುದೇವನಾದ ನಿನಗೆ ನಮಸ್ಕಾರವು. ನಾವು ನಿನ್ನನ್ನೇ ಧ್ಯಾನಿಸುತ್ತೇವೆ. ಪ್ರದ್ಯುಮ್ನನೂ, ಅನಿರುದ್ಧನೂ, ಸಂಕರ್ಷಣನೂ ಆಗಿರುವ ನಿನಗೆ ನಮೋ ನಮಃ ॥ ೩೭ ॥ ಹೀಗೆ ಭಗವಂತನ ಚತುರ್ವ್ಯೂಹಮೂರ್ತಿಗಳ ನಾಮ ಸಂಕೀರ್ತನೆಯನ್ನು ಮಾಡುತ್ತಾ, ಪ್ರಾಕೃತಮೂರ್ತಿ ರಹಿತನೂ, ಅಪ್ರಾಕೃತ ಮಂತ್ರಮೂರ್ತಿಯೂ ಆಗಿರುವ ಭಗವಾನ್ ಯಜ್ಞಪುರುಷನನ್ನು ಪೂಜೆಮಾಡುವವನೇ ಯಥಾರ್ಥ ಜ್ಞಾನಿಯು. ॥ ೩೮ ॥ ಬ್ರಹ್ಮರ್ಷಿಗಳೇ! ಹೀಗೆ ನಾನು ಭಗವಂತನ ಆಜ್ಞೆಯಂತೆ ಭಕ್ತಿಭಾವದಿಂದ ನಡೆದುಕೊಂಡೆನು. ಅವನಿಗೆ ಅರ್ಪಿತವಾಗಿ ಕರ್ಮಗಳನ್ನು ಆಚರಿಸಿದೆನು. ಇದರಿಂದ ಪ್ರಸನ್ನಗೊಂಡ ಭಗವಾನ್ ಕೇಶವನು ನನಗೆ ಆತ್ಮಜ್ಞಾನ, ಐಶ್ವರ್ಯ ಮತ್ತು ತನ್ನ ಭಾವರೂಪೀ ಪ್ರೇಮಾಭಕ್ತಿಯನ್ನು ಕರುಣಿಸಿದನು. ॥ ೩೯ ॥ ಜ್ಞಾನನಿಧಿಗಳೇ! ನಿಮ್ಮ ಜ್ಞಾನವು ಪೂರ್ಣವಾಗಿದೆ. ನೀವು ಭಗವಂತನದೇ ಕೀರ್ತಿಯನ್ನೂ, ಅವನ ಪ್ರೇಮಮಯ ದಿವ್ಯಲೀಲೆಗಳನ್ನು ವರ್ಣಿಸಿರಿ. ಅವನ ಸ್ಮರಣ-ಕೀರ್ತನೆ-ಚಿಂತನೆ ಮಾಡುತ್ತಾ ಇರುವುದರಿಂದ ತಿಳಿದುಕೊಳ್ಳಬೇಕಾದುದು ಯಾವುದೂ ಉಳಿಯುವುದಿಲ್ಲ. ಇದರಿಂದ ದೊಡ್ಡ-ದೊಡ್ಡ ಜ್ಞಾನಿಗಳ ಜಿಜ್ಞಾಸೆಯೂ ಪೂರ್ಣವಾಗುತ್ತದೆ. ನಾನಾ ದುಃಖಗಳಿಂದ ಮತ್ತೆ-ಮತ್ತೆ ಸಂಕಷ್ಟಕ್ಕೆ ಈಡಾಗುವವರ ದುಃಖಗಳು ಇದರಿಂದ ಶಮನವಾಗುವುವು. ಇದನ್ನು ಬಿಟ್ಟರೆ ನಮ್ಮಲ್ಲಿಗೆ ಬೇರೆ ಯಾವ ಉಪಾಯವೂ ಇಲ್ಲ. ॥ ೪೦ ॥

ಐದನೆಯ ಅಧ್ಯಾಯವು ಮುಗಿಯಿತು. ॥ 5 ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಪ್ರಥಮಸ್ಕಂಧೇ
ವ್ಯಾಸನಾರದಸಂವಾದೇ ಪಂಚಮೋಽಧ್ಯಾಯಃ ॥ ೫ ॥

ಆರನೆಯ ಅಧ್ಯಾಯ

ನಾರದರ ಪೂರ್ವಚರಿತ್ರೆಯು ಮುಂದುವರಿದುದು

ಸೂತ ಉವಾಚ

ಏವಂ ನಿಶಮ್ಯ ಭಗವಾನ್ದೇವರ್ಷೇರ್ಜನ್ಮ ಕರ್ಮ ಚ ।
ಭೂಯಃ ಪಪ್ರಚ್ಛ ತಂ ಬ್ರಹ್ಮನ್ ವ್ಯಾಸಃ ಸತ್ಯವತೀಸುತಃ ॥ ೧ ॥

ವ್ಯಾಸ ಉವಾಚ

ಭಿಕ್ಷುಭಿರ್ವಿಪ್ರವಸಿತೇ ವಿಜ್ಞಾನಾದೇಷ್ಟೃಭಿಸ್ತವ ।
ವರ್ತಮಾನೋ ವಯಸ್ಯಾದ್ಯೇ ತತಃ ಕಿಮಕರೋದ್ಭವಾನ್ ॥ ೨ ॥

ಸ್ವಾಯಂಭುವ ಕಯಾ ವೃತ್ತ್ಯಾ ವರ್ತಿತಂ ತೇ ಪರಂ ವಯಃ ।
ಕಥಂ ಚೇದಮುದಸ್ರಾಕ್ಷೀಃ ಕಾಲೇ ಪ್ರಾಪ್ತೇ ಕಲೇವರಮ್ ॥ ೩ ॥

ಪ್ರಾಕ್ಕಲ್ಪವಿಷಯಾಮೇತಾಂ ಸ್ಮೃತಿಂ ತೇ ಸುರಸತ್ತಮ ।
ನ ಹ್ಯೇಷ ವ್ಯವಧಾತ್ಕಾಲ ಏಷ ಸರ್ವನಿರಾಕೃತಿಃ ॥ ೪ ॥

ನಾರದ ಉವಾಚ

ಭಿಕ್ಷುಭಿರ್ವಿಪ್ರವಸಿತೇ ವಿಜ್ಞಾನಾದೇಷ್ಟೃಭಿರ್ಮಮ ।
ವರ್ತಮಾನೋ ವಯಸ್ಯಾದ್ಯೇ ತತ ಏತದಕಾರಷಮ್ ॥ ೫ ॥

ಏಕಾತ್ಮಜಾ ಮೇ ಜನನೀ ಯೋಷಿನ್ಮೂಢಾ ಚ ಕಿಂಕರೀ ।
ಮಯ್ಯಾತ್ಮಜೇಽನನ್ಯಗತೌ ಚಕ್ರೇ ಸ್ನೇಹಾನುಬಂಧನಮ್ ॥ ೬ ॥

ಸಾಸ್ವತಂತ್ರಾ ನ ಕಲ್ಪಾಽಽಸೀದ್ಯೋಗಕ್ಷೇಮಂ ಮಮೇಚ್ಛತೀ ।
ಈಶಸ್ಯ ಹಿ ವಶೇ ಲೋಕೋ ಯೋಷಾ ದಾರುಮಯೀ ಯಥಾ ॥ ೭ ॥

ಅಹಂ ಚ ತದ್ಬ್ರಹ್ಮಕುಲೇ ಊಷಿವಾಂಸ್ತದಪೇಕ್ಷಯಾ ।
ದಿಗ್ದೇಶಕಾಲಾವ್ಯುತ್ಪನ್ನೋ ಬಾಲಕಃ ಪಂಚಹಾಯನಃ ॥ ೮ ॥

ಏಕದಾ ನಿರ್ಗತಾಂ ಗೇಹಾದ್ದುಹಂತೀಂ ನಿಶಿ ಗಾಂ ಪಥಿ ।
ಸರ್ಪೋಽದಶತ್ಪದಾ ಸ್ಪೃಷ್ಟಃ ಕೃಪಣಾಂ ಕಾಲಚೋದಿತಃ ॥ ೯ ॥

ತದಾ ತದಹಮೀಶಸ್ಯ ಭಕ್ತಾನಾಂ ಶಮಭೀಪ್ಸತಃ ।
ಅನುಗ್ರಹಂ ಮನ್ಯಮಾನಃ ಪ್ರಾತಿಷ್ಠಂ ದಿಶಮುತ್ತರಾಮ್ ॥ ೧೦ ॥

ಸೂತಪುರಾಣಿಕರು ಹೇಳುತ್ತಾರೆ – ಶೌನಕಾದಿಗಳೇ! ದೇವರ್ಷಿ ನಾರದರ ಜನ್ಮ-ಕರ್ಮಗಳ ವಿಷಯವನ್ನು ಕೇಳಿದ ಸತ್ಯವತೀನಂದನ ಭಗವಾನ್ ಶ್ರೀವೇದವ್ಯಾಸರು ಮತ್ತೆ ಅವರನ್ನು ಇಂತು ಪ್ರಶ್ನಿಸಿದರು. ॥ ೧ ॥

ಶ್ರೀವೇದವ್ಯಾಸರು ಕೇಳುತ್ತಾರೆ – ದೇವರ್ಷಿಗಳೇ! ತಮಗೆ ಜ್ಞಾನೋಪದೇಶ ಮಾಡಿದ ಯತಿಗಳು ಹೋದ ಬಳಿಕ ನೀವೇನು ಮಾಡಿದಿರಿ? ಆಗ ತಾವಿನ್ನೂ ತುಂಬಾ ಬಾಲ್ಯಾವಸ್ಥೆಯಲ್ಲಿದ್ದೀರಲ್ಲವೇ? ॥ ೨ ॥ ಸ್ವಾಯಂಭುವ! ನಿಮ್ಮ ಆಯುಷ್ಯದ ಉಳಿದ ಭಾಗವನ್ನು ಹೇಗೆ ಕಳೆದಿರಿ? ಮತ್ತೆ ಮೃತ್ಯುವಿನ ಸಮಯದಲ್ಲಿ ನೀವು ಯಾವ ವಿಧದಿಂದ ಶರೀರವನ್ನು ತ್ಯಜಿಸಿದಿರಿ? ॥ ೩ ॥ ದೇವರ್ಷಿ ಮುನಿಶ್ರೇಷ್ಠರೇ! ಕಾಲವಾದರೋ ಎಲ್ಲ ವಸ್ತುಗಳನ್ನು ನಾಶಮಾಡಿ ಬಿಡುತ್ತದೆ. ಹಾಗಿದ್ದರೂ ನಿಮ್ಮ ಜನ್ಮಾಂತರದ ನೆನಪನ್ನು ಅಳಿಸದೆ ಹೇಗೆ ಬಿಟ್ಟಿತು? ॥ ೪ ॥

ನಾರದರು ಹೇಳಿದರು – ನನಗೆ ಜ್ಞಾನೋಪದೇಶ ಮಾಡಿದ ಯೋಗಿಗಳು ಹೊರಟುಹೋದಾಗ ಇನ್ನೂ ಬಾಲ್ಯಾವಸ್ಥೆಯಲ್ಲಿದ್ದ ನಾನು ಹೇಗೆ ಜೀವನ ನಡೆಸಿದೆನೆಂಬುದನ್ನು ಕೇಳಿ – ॥ ೫ ॥ ನನ್ನ ತಾಯಿಗೆ ನಾನೊಬ್ಬನೇ ಮಗನು. ಆಕೆಯು ಹೆಂಗಸಾಗಿದ್ದು, ಜೊತೆಗೆ ತಿಳುವಳಿಕೆ ಇಲ್ಲದವಳೂ, ದಾಸಿಯೂ ಆಗಿದ್ದಳು. ನನಗೂ ಆಕೆಯನ್ನು ಬಿಟ್ಟು ಬೇರಾವ ಗತಿಯೂ ಇರಲಿಲ್ಲ. ಅವಳು ನನ್ನನ್ನು ತನ್ನ ಸ್ನೇಹಪಾಶದಿಂದ ಕಟ್ಟಿಹಾಕಿದ್ದಳು. ॥ ೬ ॥ ಅವಳು ನನ್ನ ಯೋಗ-ಕ್ಷೇಮದ ಕುರಿತು ಬಹಳ ಚಿಂತಿಸುತ್ತಿದ್ದರೂ ಪರಾಧೀನಳಾದ ಕಾರಣ ಏನನ್ನೂ ಮಾಡಲಾರದವಳಾಗಿದ್ದಳು. ಸೂತ್ರದ ಗೊಂಬೆಯು ಕುಣಿಸುವವನ ಅಧೀನವಿದ್ದು; ಅವನ ಇಚ್ಛೆಯಂತೆ ಕುಣಿಯುವ ಹಾಗೆಯೇ ಈ ಇಡೀ ಪ್ರಪಂಚವು ಈಶ್ವರನ ಅಧೀನವಾಗಿದೆ. ॥ ೭ ॥ ನಾನೂ ಕೂಡ ನನ್ನ ತಾಯಿಯ ಸ್ನೇಹಬಂಧನದಲ್ಲಿ ಬಂಧಿತನಾಗಿ ಆ ಬ್ರಾಹ್ಮಣರ ವಸತಿಯಲ್ಲೇ ಇರುತ್ತಿದ್ದೆ. ಐದು ವರ್ಷ ವಯಸ್ಸಾದಾಗ ನನಗೆ ದಿಕ್-ದೇಶ-ಕಾಲ ಸಂಬಂಧವಾಗಿ ಏನೂ ಅರಿವಿರಲಿಲ್ಲ. ॥ ೮ ॥ ಹೀಗಿರುವಾಗ ಒಂದು ದಿನ ರಾತ್ರಿ ನನ್ನ ತಾಯಿಯು ಹಾಲುಕರೆಯಲು ಮನೆಯಿಂದ ಹೊರಗೆ ಹೋದಾಗ ದಾರಿಯಲ್ಲಿ ಆಕೆಯ ಕಾಲು ಒಂದು ಹಾವಿಗೆ ತಗುಲಿತು. ಅದು ಆ ಬಡಪಾಯಿಯನ್ನು ಕಚ್ಚಿಬಿಟ್ಟಿತು. ಇದರಲ್ಲಿ ಸರ್ಪದ್ದೇನು ತಪ್ಪಿದೆ? ಮೃತ್ಯುವಿನ ಪ್ರೇರಣೆಯೇ ಹೀಗಿತ್ತು. ॥ ೯ ॥ ಭಕ್ತರ ಮಂಗಳವನ್ನೇ ಬಯಸುವ ಭಗವಂತನು ಹೀಗೆ ಅನುಗ್ರಹವೇ ಮಾಡಿರುವನು ಎಂದು ನಾನು ತಿಳಿದು ಉತ್ತರ ದಿಕ್ಕಿನ ಕಡೆಗೆ ಹೊರಟುಬಿಟ್ಟೆನು. ॥ ೧೦ ॥ ಹೀಗೆ ಒಬ್ಬಂಟಿಗನಾಗಿ ಹೋಗುತ್ತಿದ್ದ ನನಗೆ ದಾರಿಯಲ್ಲಿ ಅನೇಕ ಧನ-ಧಾನ್ಯ ಸಂಪನ್ನದೇಶಗಳೂ, ನಗರಗಳೂ, ಗ್ರಾಮಗಳೂ, ಗೊಲ್ಲರ ದೊಡ್ಡಿಗಳೂ, ಬಗೆ-ಬಗೆಯ

ಸ್ಫೀತಾಂಜನಪದಾಂಸ್ತತ್ರ ಪುರಗ್ರಾಮವ್ರಜಾಕರಾನ್ ।
ಖೇಟಖರ್ವಟವಾಟೀಶ್ಚ ವನಾನ್ಯುಪವನಾನಿ ಚ ॥ ೧೧ ॥

ಚಿತ್ರಧಾತುವಿಚಿತ್ರಾದ್ರೀನಿಭಭಗ್ನಭುಜದ್ರುಮಾನ್ ।
ಜಲಾಶಯಾನ್ ಶಿವಜಲಾನ್ನಲಿನೀಃ ಸುರಸೇವಿತಾಃ ॥ ೧೨ ॥

ಚಿತ್ರಸ್ವನೈಃ ಪತ್ರರಥೈರ್ವಿಭ್ರಮದ್ಭ್ರಮರಶ್ರಿಯಃ ।
ನಲವೇಣುಶರಸ್ತಂಬಕುಶಕೀಚಕಗಹ್ವರಮ್ ॥ ೧೩ ॥

ಏಕ ಏವಾತಿಯಾತೋಽಹಮದ್ರಾಕ್ಷಂ ವಿಪಿನಂ ಮಹತ್ ।
ಘೋರಂ ಪ್ರತಿಭಯಾಕಾರಂ ವ್ಯಾಲೋಲೂಕಶಿವಾಜಿರಮ್ ॥ ೧೪ ॥

ಪರಿಶ್ರಾಂತೇಂದ್ರಿಯಾತ್ಮಾಹಂ ತೃಟ್ಪರೀತೋ ಬುಭುಕ್ಷಿತಃ ।
ಸ್ನಾತ್ವಾ ಪೀತ್ವಾ ಹ್ರದೇ ನದ್ಯಾ ಉಪಸ್ಪೃಷ್ಟೋ ಗತಶ್ರಮಃ ॥ ೧೫ ॥

ತಸ್ಮಿನ್ನಿರ್ಮನುಜೇಽರಣ್ಯೇ ಪಿಪ್ಪಲೋಪಸ್ಥ ಆಶ್ರಿತಃ ।
ಆತ್ಮನಾಽಽತ್ಮಾನಮಾತ್ಮಸ್ಥಂ ಯಥಾಶ್ರುತಮಚಿಂತಯಮ್ ॥ ೧೬ ॥

ಧ್ಯಾಯತಶ್ಚರಣಾಂಭೋಜಂ ಭಾವನಿರ್ಜಿತಚೇತಸಾ ।
ಔತ್ಕಂಠ್ಯಾಶ್ರುಕಲಾಕ್ಷಸ್ಯ ಹೃದ್ಯಾಸೀನ್ಮೇ ಶನೈರ್ಹರಿಃ ॥ ೧೭ ॥

ಪ್ರೇಮಾತಿಭರನಿರ್ಭಿನ್ನಪುಲಕಾಂಗೋಽತಿನಿರ್ವೃತಃ ।
ಆನಂದಸಂಪ್ಲವೇ ಲೀನೋ ನಾಪಶ್ಯಮುಭಯಂ ಮುನೇ ॥ ೧೮ ॥

ರೂಪಂ ಭಗವತೋ ಯತ್ತನ್ಮನಃಕಾಂತಂ ಶುಚಾಪಹಮ್ ।
ಅಪಶ್ಯನ್ ಸಹಸೋತ್ತಸ್ಥೇ ವೈಕ್ಲವ್ಯಾದ್ದುರ್ಮನಾ ಇವ ॥ ೧೯ ॥

ದಿದೃಕ್ಷುಸ್ತದಹಂ ಭೂಯಃ ಪ್ರಣಿಧಾಯ ಮನೋ ಹೃದಿ ।
ವೀಕ್ಷಮಾಣೋಽಪಿ ನಾಪಶ್ಯಮವಿತೃಪ್ತ ಇವಾತುರಃ ॥ ೨೦ ॥

ಗಣಿಗಳೂ, ರೈತರ ಕೊಪ್ಪಲೂ, ನದಿಗಳೂ, ಪರ್ವತ ತಪ್ಪಲಿನ ಸಣ್ಣ ಊರುಗಳೂ, ಶಿಬಿರಗಳೂ, ದೊಡ್ಡ ಮರಗಳ ತೋಪುಗಳೂ, ಅರಣ್ಯಗಳೂ, ಉದ್ಯಾನವನಗಳೂ, ಬಣ್ಣ-ಬಣ್ಣದ ಧಾತುಗಳಿಂದ ಕಂಗೊಳಿಸುವ ವಿಚಿತ್ರವಾದ ಪರ್ವತಗಳೂ ಕಾಣಿಸಿದವು. ಕೆಲವು ಕಡೆಗಳಲ್ಲಿ ಆನೆಗಳಿಂದ ಮುರಿಯಲ್ಪಟ್ಟ ರೆಂಬೆಗಳುಳ್ಳ ಕಾಡು ಮರಗಳನ್ನೂ ನೋಡಿದೆನು. ಬಗೆ-ಬಗೆಯ ಚಿಲಿಪಿಲಿಗುಟ್ಟುವ ಪಕ್ಷಿಗಳಿಂದಲೂ, ಝೇಂಕರಿಸುವ ದುಂಬಿಗಳಿಂದಲೂ ಕೂಡಿದ, ದೇವತಾಪೂಜೆಗೆ ಉಪಯೋಗಿಯಾದ ಕಮಲಪುಷ್ಪಗಳಿಂದ ನಳನಳಿಸುತ್ತಿದ್ದ ತಣ್ಣೀರಿನಿಂದ ತುಂಬಿದ ತಾವರೆಕೊಳಗಳೂ ನನಗೆ ಸಿಕ್ಕಿದವು. ಇದೆಲ್ಲವನ್ನೂ ನೋಡುತ್ತಾ ನಾನು ಬಹಳ ದೂರ ಸಾಗಿದಾಗ ನನಗೆ ಒಂದು ಘೋರವಾದ ಗೊಂಡಾರಣ್ಯವು ಸಿಕ್ಕಿತು. ಅದರಲ್ಲಿ ಬಗೆ-ಬಗೆಯ ಜೊಂಡು ಹುಲ್ಲುಗಳು, ಬೆತ್ತಗಳೂ, ದರ್ಭೆಗಳ ಪೊದೆಗಳು, ಗಾಳಿಗೆ ಶಬ್ದಮಾಡುತ್ತಿದ್ದ ಬಿದಿರುಮೆಳೆಗಳು ಇವುಗಳಿಂದ ದಟ್ಟವಾಗಿ, ಭೀಕರವಾಗಿ ಕಾಣುತ್ತಿತ್ತು. ಭಯಂಕರ ಆಕಾರದ ಹಾವುಗಳು, ಗೂಬೆ, ನರಿಗಳು ಮುಂತಾದವುಗಳ ವಾಸಸ್ಥಳವಾದ ಭಯಾನಕ ಗೊಂಡಾರಣ್ಯವನ್ನು ಕಂಡೆನು. ॥ ೧೧-೧೪ ॥ ನನ್ನ ದೇಹೇಂದ್ರಿಯಗಳು ನಡೆದು-ನಡೆದು ಬಳಲಿಹೋಗಿದ್ದವು. ಜೊತೆಗೆ ತಡೆಯಲಾರದಷ್ಟು ಹಸಿವು-ಬಾಯಾರಿಕೆಗಳು ನನ್ನನ್ನು ಬಾಧಿಸುತ್ತಿದ್ದವು. ಆಗ ಅಲ್ಲಿದ್ದ ನದಿಯೊಂದರಲ್ಲಿ ಸ್ನಾನಮಾಡಿ, ನೀರುಕುಡಿದು, ಆಚಮನಮಾಡಿ ಆಯಾಸವನ್ನು ಪರಿಹರಿಸಿಕೊಂಡೆ. ॥ ೧೫ ॥ ಅನಂತರ ■ ನಿರ್ಜನವಾದ ಅರಣ್ಯದಲ್ಲಿ ಒಂದು ಅರಳೀಮರದ ಬುಡದಲ್ಲಿ ಕುಳಿತು ಅಂತರ್ಯಾಮಿಯಾದ ಪರಮಾತ್ಮನ ಸ್ವರೂಪವನ್ನು ಆ ಯೋಗಿಗಳಿಂದ ಕೇಳಿದ ರೀತಿಯಲ್ಲೇ ಧ್ಯಾನಮಾಡತೊಡಗಿದೆನು. ॥ ೧೬ ॥ ಭಾವಪೂರ್ಣವಾಗಿ ಏಕಾಗ್ರಚಿತ್ತದಿಂದ ಭಗವಂತನ ಪಾದಾರವಿಂದಗಳನ್ನು ಧ್ಯಾನಿಸುತ್ತಿರುವಾಗ ಆತನ ದರ್ಶನದ ಉತ್ಕಂಠತೆಯಿಂದ ಕಣ್ಣುಗಳಲ್ಲಿ ಆನಂದಾಶ್ರುಗಳು ತುಂಬಿಬಂದವು. ಆಗಲೇ ನನ್ನ ಹೃದಯದಲ್ಲಿ ಬೇಗನೆ ಶ್ರೀಹರಿಯು ಪ್ರಕಟನಾದನು. ॥ ೧೭ ॥ ಮಹರ್ಷಿಯೇ! ಆಗ ಪ್ರೇಮಭಾವದ ಉದ್ರೇಕದಿಂದ ನಾನು ರೋಮಾಂಚಿತನಾಗಿ ಅನಿರ್ವಚನೀಯವಾದ ಸುಖವನ್ನು ಅನುಭವಿಸಿದೆನು. ಆನಂದದ ಪ್ರವಾಹದಲ್ಲಿ ಮುಳುಗಿ ಹೋಗಿದ್ದ ನನಗೆ ಒಳಗೂ-ಹೊರಗೂ ಏನೂ ಕಾಣಿಸದೆ ಹೋಯಿತು. ತದಾಕಾರ ವೃತ್ತಿಯುಂಟಾಯಿತು. ॥ ೧೮ ॥ ಆಗ ಮನಸ್ಸಿಗೆ ಅತ್ಯಂತ ರಮಣೀಯವಾದ, ಸರ್ವಶೋಕಗಳನ್ನು ಹೋಗಲಾಡಿಸುವ ಶ್ರೀಭಗವಂತನ ಆ ರೂಪವು ಇದ್ದಕ್ಕಿದ್ದಂತೆ ಕಣ್ಮರೆಯಾಗಲು ನನಗೆ ಬಹಳ ಕಳವಳವುಂಟಾಯಿತು. ನಾನು ತಡೆಯಲಾರದ ಬೇಗುದಿಯಿಂದ ಥಟ್ಟನೆ ಮೇಲೆದ್ದು ನಿಂತೆ. ॥ ೧೯ ॥

■ ದಿವ್ಯ ಮಂಗಳರೂಪವನ್ನು ಮತ್ತೆ ದರ್ಶಿಸಬೇಕೆಂದು ಬಯಸಿದೆ. ಆದರೆ ಮನಸ್ಸನ್ನು ಹಿಂದಿನಂತೆ ಹೃದಯದಲ್ಲಿ ನೆಲೆಗೊಳಿಸಿ ಪದೇ-ಪದೇ ದರ್ಶನಕ್ಕಾಗಿ ಪ್ರಯತ್ನಿಸಿದರೂ ನಾನು ಅವನನ್ನು ನೋಡದೆ ಹೋದಾಗ ಅತೃಪ್ತನಂತೆ, ರೋಗ ಬಂದವನಂತೆ ನರಳತೊಡಗಿದೆ. ॥ ೨೦ ॥ ಹೀಗೆ ನಿರ್ಜನವಾದ ಅರಣ್ಯದಲ್ಲಿ

ಏವಂ ಯತಂತಂ ವಿಜನೇ ಮಾಮಾಹಾಗೋಚರೋ ಗಿರಾಮ್ ।
ಗಂಭೀರಶ್ಲಕ್ಷ್ಣಯಾ ವಾಚಾ ಶುಚಃ ಪ್ರಶಮಯನ್ನಿವ
॥ ೨೧ ॥

ಹಂತಾಸ್ಮಿಂಜನ್ಮನಿ ಭವಾನ್ಮಾ ಮಾಂ ದ್ರಷ್ಟುಮಿಹಾರ್ಹತಿ ।
ಅವಿಪಕ್ವಕಷಾಯಾಣಾಂ ದುರ್ದರ್ಶೋಽಹಂ ಕುಯೋಗಿನಾಮ್
॥ ೨೨ ॥

ಸಕೃದ್ಯದ್ದರ್ಶಿತಂ ರೂಪಮೇತತ್ಕಾಮಾಯ ತೇಽನಘ ।
ಮತ್ಕಾಮಃ ಶನಕೈಃ ಸಾಧುಃ ಸರ್ವಾನ್ಮುಂಚತಿ ಹೃಚ್ಛಯಾನ್
॥ ೨೩ ॥

ಸತ್ಸೇವಯಾಽದೀರ್ಘಯಾ ತೇ ಜಾತಾ ಮಯಿ ದೃಢಾ ಮತಿಃ ।
ಹಿತ್ವಾವದ್ಯಮಿಮಂ ಲೋಕಂ ಗಂತಾ ಮಜ್ಜನತಾಮಸಿ
॥ ೨೪ ॥

ಮತಿರ್ಮಯಿ ನಿಬದ್ಧೇಯಂ ನ ವಿಪದ್ಯೇತ ಕರ್ಹಿಚಿತ್ ।
ಪ್ರಜಾಸರ್ಗನಿರೋಧೇಽಪಿ ಸ್ಮೃತಿಶ್ಚ ಮದನುಗ್ರಹಾತ್
॥ ೨೫ ॥

ಏತಾವದುಕ್ತ್ವೋಪರರಾಮ ತನ್ಮಹದ್
ಭೂತಂ ನಭೋಲಿಂಗಮಲಿಂಗಮೀಶ್ವರಮ್ ।
ಅಹಂ ಚ ತಸ್ಮೈ ಮಹತಾಂ ಮಹೀಯಸೇ
ಶೀರ್ಷ್ಣಾವನಾಮಂ ವಿದಧೇಽನುಕಂಪಿತಃ ॥ ೨೬ ॥

ನಾಮಾನ್ಯನಂತಸ್ಯ ಹತತ್ರಪಃ ಪಠನ್
ಗುಹ್ಯಾನಿ ಭದ್ರಾಣಿ ಕೃತಾನಿ ಚ ಸ್ಮರನ್ ।
ಗಾಂ ಪರ್ಯಟಂಸ್ತುಷ್ಟಮನಾ ಗತಸ್ಪೃಹಃ
ಕಾಲಂ ಪ್ರತೀಕ್ಷನ್ವಿಮದೋ ವಿಮತ್ಸರಃ ॥ ೨೭ ॥

ಏವಂ ಕೃಷ್ಣಮತೇರ್ಬ್ರಹ್ಮನ್ನಾಸಕ್ತಸ್ಯಾಮಲಾತ್ಮನಃ ।
ಕಾಲಃ ಪ್ರಾದುರಭೂತ್ಕಾಲೇ ತಡಿತ್ಸೌದಾಮನೀ ಯಥಾ
॥ ೨೮ ॥

ಪ್ರಯುಜ್ಯಮಾನೇ ಮಯಿ ತಾಂ ಶುದ್ಧಾಂ ಭಾಗವತೀಂ ತನುಮ್ ।
ಆರಬ್ಧಕರ್ಮನಿರ್ವಾಣೋ ನ್ಯಪತತ್ಪಾಂಚಭೌತಿಕಃ
॥ ೨೯ ॥

ಕಲ್ಪಾಂತ ಇದಮಾದಾಯ ಶಯಾನೇಽಂಭಸ್ಯುದನ್ವತಃ ।
ಶಿಶಯಿಷೋರನುಪ್ರಾಣಂ ವಿವಿಶೇಽಂತರಹಂ ವಿಭೋಃ
॥ ೩೦ ॥

ರಹಸ್ಯ ದರ್ಶನಕ್ಕಾಗಿ ಪುನಃ-ಪುನಃ ಪ್ರಯತ್ನಿಸುತ್ತಿದ್ದ ನನ್ನನ್ನು ಕುರಿತು ಮಾತಿಗೆ ನಿಲುಕದ ಪರಮಾತ್ಮನು ನನ್ನ ಶೋಕವನ್ನು ಶಮನಗೊಳಿಸಲು ಗಂಭೀರವಾದ, ಮಧುರವಾದ ಆ ಮಾತಿನಿಂದ ಹೀಗೆಂದನು – ॥ ೨೧ ॥ "ಅಪ್ಪಾ! ಇದೇ ಜನ್ಮದಲ್ಲಿ ನೀನು ಮತ್ತೊಮ್ಮೆ ನನ್ನ ದರ್ಶನ ಮಾಡಲಾರೆ. ಏಕೆಂದರೆ, ಮನಸ್ಸಿನ ವಾಸನೆಗಳು ಶಾಂತವಾಗದೇ ಇರುವ ಅಪಕ್ವವಾದ ಮನಸ್ಸುಳ್ಳ ಯೋಗಿಗಳಿಗೆ ನನ್ನ ದರ್ಶನವು ಅತ್ಯಂತ ದುರ್ಲಭವು. ॥ ೨೨ ॥ ಪುಣ್ಯಾತ್ಮನಾದ ಬಾಲಕನೇ! ನಿನ್ನ ಹೃದಯದಲ್ಲಿ ನನ್ನನ್ನು ಪಡೆಯುವ ಹಂಬಲವನ್ನು ಜಾಗ್ರತವಾಗಿಸಲೆಂದೇ ನಾನು ಒಂದು ಬಾರಿ ನಿನಗೆ ನನ್ನ ರೂಪವನ್ನು ತೋರಿದ್ದೆ. ನನ್ನನ್ನು ಪಡೆಯಬೇಕೆಂಬ ಉತ್ಕಟವಾದ ಆಕಾಂಕ್ಷೆಯಿಂದ ಸಾಧಕನ ಹೃದಯದಲ್ಲಿ ಹುದುಗಿದ್ದ ಎಲ್ಲ ವಾಸನೆಗಳು ಸ್ವಲ್ಪ-ಸ್ವಲ್ಪವಾಗಿ ತೊಲಗಿಹೋಗುತ್ತವೆ. ಅನಂತರ ನನ್ನ ಪ್ರಾಪ್ತಿಯಲ್ಲಿ ವಿಳಂಬವಾಗುವುದಿಲ್ಲ. ॥ ೨೩ ॥ ನೀನು ಸ್ವಲ್ಪಕಾಲ ಮಾಡಿದ ಸಾಧು-ಸಂತರ ಸೇವೆಯಿಂದ ನಿನ್ನ ಚಿತ್ತವು ನನ್ನಲ್ಲಿ ಸ್ಥಿರಗೊಂಡಿದೆ. ಈಗ ನೀನು ಈ ಪ್ರಾಕೃತ ಶರೀರವನ್ನು ತ್ಯಜಿಸಿ, ನನ್ನ ಕೃಪೆಯಿಂದ ಬೇಗನೇ ನನ್ನ ಪಾರ್ಷದನಾಗಿ ಬಿಡುವೆ. ॥ ೨೪ ॥ ನನ್ನನ್ನು ಪಡೆಯಬೇಕೆಂಬ ನಿನ್ನಲ್ಲಿ ನೆಲೆಸಿದ ಈ ದೃಢನಿಶ್ಚಯವು ಎಂದಿಗೂ ಕದಲಲಾರದು. ಸಮಸ್ತ ಸೃಷ್ಟಿಯು ಪ್ರಳಯವಾಗಿ ಹೋದರೂ ನನ್ನ ಕೃಪೆಯಿಂದ ನಿನ್ನಲ್ಲಿರುವ ನನ್ನ ಸ್ಮೃತಿಯು ಹಾಗೆಯೇ ಇರುವುದು." ॥ ೨೫ ॥ ಇಷ್ಟು ಹೇಳಿ ಆಕಾಶದಂತೆ ಅವ್ಯಕ್ತ ಸರ್ವಶಕ್ತಿಯುಳ್ಳ ಮಹಾನ್ ಪರಮಾತ್ಮನು ಮೌನವಾದನು. ನಾನೂ ಕೂಡ ■ ಪರಮಕೃಪೆಯನ್ನು ಮನಗಂಡು ಮಹತೋಮಹಿಮನಾದ ■ ಭಗವಂತನಿಗೆ ತಲೆಬಾಗಿ ನಮಸ್ಕರಿಸಿದೆನು. ॥ ೨೬ ॥ ಅಂದಿನಿಂದ ನಾನು ನಾಚಿಕೆ-ಸಂಕೋಚ ಬಿಟ್ಟು ಶ್ರೀಭಗವಂತನ ರಹಸ್ಯಮಯವೂ, ಮಂಗಳಮಯವೂ ಆದ ನಾಮಗಳನ್ನು, ಲೀಲೆಗಳನ್ನು ಕೀರ್ತಿಸುತ್ತಾ, ಸ್ಮರಿಸುತ್ತಾ ಭೂಮಿಯಲ್ಲಿ ಸಂಚರಿಸುತ್ತಾ, ಮದ-ಮಾತ್ಸರ್ಯ, ಆಸೆಗಳನ್ನು ತೊರೆದು ಸಂತುಷ್ಟ ಮನಸ್ಸಿನಿಂದ ಕೂಡಿ ಕಾಲವನ್ನು ಎದುರುನೋಡುತ್ತಾ ಇರತೊಡಗಿದೆನು. ॥ ೨೭ ॥

ಬ್ರಹ್ಮರ್ಷಿಗಳೇ! ಹೀಗೆ ಶ್ರೀಕೃಷ್ಣಭಾವದಿಂದ ತುಂಬಿದ ಮತಿಯುಳ್ಳವನಾಗಿ, ನಿರ್ಲಿಪ್ತನಾಗಿ, ಪರಿಶುದ್ಧವಾದ ಹೃದಯದಿಂದ ಕಾಲಕಳೆಯುತ್ತಿರುವಾಗಲೇ ವರ್ಷಾಕಾಲದಲ್ಲಿ ದಿಢೀರನೆ ಸುಳಿಯುವ ಮಿಂಚಿನಂತೆ ನಾನು ನಿರೀಕ್ಷಿಸುತ್ತಿದ್ದ ಕಾಲವು ಬಂದೇ ಬಿಟ್ಟಿತು. ॥ ೨೮ ॥ ಪರಿಶುದ್ಧವಾದ ಶ್ರೀಭಗವಂತನ ಪಾರ್ಷದ ಶರೀರವನ್ನು ಹೊಂದುವ ಸಮಯ ಬಂದೊಡನೆಯೇ ಪ್ರಾರಬ್ಧ ಕರ್ಮವು ಕಳೆದುಹೋದುದರಿಂದ ಪಾಂಚಭೌತಿಕ ಶರೀರವು ಕಳಚಿ ಬಿದ್ದುಹೋಯಿತು. ॥ ೨೯ ॥ ಆ ಕಲ್ಪದ ಕೊನೆಯಲ್ಲಿ ಭಗವಂತನಾದ ಶ್ರೀಮನ್ನಾರಾಯಣನು ಪ್ರಳಯಕಾಲದ ಸಮುದ್ರಜಲದಲ್ಲಿ ನಿದ್ರೆ ಮಾಡಲು ಸಂಕಲ್ಪಿಸಿದನು. ಆಗ ಬ್ರಹ್ಮದೇವರು ತನ್ನ ಸೃಷ್ಟಿಯನ್ನು ಉಪಸಂಹರಿಸಿದ್ದು ಪರಮಾತ್ಮನಲ್ಲಿ ಸೇರಿಕೊಳ್ಳುವಾಗ ನಾನೂ ಅವರ ಉಸಿರಿನೊಡನೆ ಉಸಿರಾಗಿ ಭಗವಂತನ ಹೃದಯವನ್ನು ಪ್ರವೇಶಿಸಿಬಿಟ್ಟೆನು. ॥ ೩೦ ॥ ಒಂದುಸಾವಿರ ಚತುರ್ಯುಗಗಳು ಕಳೆದ ಬಳಿಕ ಬ್ರಹ್ಮನು ಎಚ್ಚರಗೊಂಡು ಪುನಃ ಸೃಷ್ಟಿಯನ್ನು

ಸಹಸ್ರಯುಗಪರ್ಯಂತೇ ಉತ್ಥಾಯೇದಂ ಸಿಸೃಕ್ಷತಃ ।
ಮರೀಚಿಮಿಶ್ರಾ ಋಷಯಃ ಪ್ರಾಣೇಭ್ಯೋಽಹಂ ಚ ಜಜ್ಞಿರೇ ॥ ೩೦ ॥

ಅಂತರ್ಬಹಿಶ್ಚ ಲೋಕಾಂಸ್ತ್ರೀನ್ಪರ್ಯೇಮ್ಯಸ್ಕಂದಿತವ್ರತಃ ।
ಅನುಗ್ರಹಾನ್ಮಹಾವಿಷ್ಣೋರವಿಘಾತಗತಿಃ ಕ್ವಚಿತ್ ॥ ೩೧ ॥

ದೇವದತ್ತಾಮಿಮಾಂ ವೀಣಾಂ ಸ್ವರಬ್ರಹ್ಮವಿಭೂಷಿತಾಮ್ ।
ಮೂರ್ಛಯಿತ್ವಾ ಹರಿಕಥಾಂ ಗಾಯಮಾನಶ್ಚರಾಮ್ಯಹಮ್ ॥ ೩೨ ॥

ಪ್ರಗಾಯತಃ ಸ್ವವೀರ್ಯಾಣಿ ತೀರ್ಥಪಾದಃ ಪ್ರಿಯಶ್ರವಾಃ ।
ಆಹೂತ ಇವ ಮೇ ಶೀಘ್ರಂ ದರ್ಶನಂ ಯಾತಿ ಚೇತಸಿ ॥ ೩೩ ॥

ಏತದ್ಧ್ಯಾತುರಚಿತ್ತಾನಾಂ ಮಾತ್ರಾಸ್ಪರ್ಶೇಚ್ಛಯಾ ಮುಹುಃ ।
ಭವಸಿಂಧುಪ್ಲವೋ ದೃಷ್ಟೋ ಹರಿಚರ್ಯಾನುವರ್ಣನಮ್ ॥ ೩೪

ಯಮಾದಿಭಿರ್ಯೋಗಪಥೈಃ ಕಾಮಲೋಭಹತೋ ಮುಹುಃ ।
ಮುಕುಂದಸೇವಯಾ ಯದ್ವತ್ತಥಾಽಽತ್ಮಾದ್ಧಾ ನ ಶಾಮ್ಯತಿ ॥ ೩೫ ॥

ಸರ್ವಂ ತದಿದಮಾಖ್ಯಾತಂ ಯತ್ಪೃಷ್ಟೋಽಹಂ ತ್ವಯಾನಘ ।
ಜನ್ಮಕರ್ಮರಹಸ್ಯಂ ಮೇ ಭವತಶ್ಚಾತ್ಮತೋಷಣಮ್ ॥ ೩೬ ॥

ಸೂತ ಉವಾಚ

ಏವಂ ಸಂಭಾಷ್ಯ ಭಗವಾನ್ನಾರದೋ ವಾಸವೀಸುತಮ್ ।
ಆಮಂತ್ರ್ಯ ವೀಣಾಂ ರಣಯನ್ ಯಯೌ ಯಾದೃಚ್ಛಿಕೋ ಮುನಿಃ ॥ ೩೭ ॥

ಅಹೋ ದೇವರ್ಷಿರ್ಧನ್ಯೋಽಯಂ ಯತ್ಕೀರ್ತಿಂ ಶಾರ್ಙ್ಗಧನ್ವನಃ ।
ಗಾಯನ್ಮಾದ್ಯನ್ನಿದಂ ತಂತ್ರ್ಯಾ ರಮಯತ್ಯಾತುರಂ ಜಗತ್ ॥ ೩೮ ॥

ಮಾಡಲು ಇಚ್ಛಿಸಿದಾಗ ಅವನ ಪ್ರಾಣಗಳ ಮೂಲಕ ಮರೀಚ್ಯಾದಿ ಋಷಿಗಳೊಂದಿಗೆ ನಾನೂ ಪ್ರಕಟಗೊಂಡೆನು. ॥ ೩೦ ॥ ಅಂದಿನಿಂದ ನಾನು ಭಗವಂತನ ಕೃಪೆಯಿಂದ ಮೂರು ಲೋಕಗಳಲ್ಲಿಯೂ ಒಳಗೂ, ಹೊರಗೂ ಯಾವ ಅಡೆ-ತಡೆಯಿಲ್ಲದೆ ಸಂಚರಿಸುತ್ತಿರುವೆನು. ಭಗವದ್ಭಜನರೂಪೀ ಜೀವನದ ನನ್ನ ವ್ರತವು ಅಖಂಡವಾಗಿ ನಡೆಯುತ್ತಾ ಇದೆ. ॥ ೩೧ ॥ ಭಗವಂತನು ಅನುಗ್ರಹಿಸಿರುವ ನಾದಬ್ರಹ್ಮದಿಂದ ಅಲಂಕೃತವಾದ ಈ 'ಮಹತೀ' ಎಂಬ ವೀಣೆಯನ್ನು ನುಡಿಸುತ್ತಾ ಶ್ರೀಹರಿಯ ದಿವ್ಯ ಲೀಲಾಕಥೆಗಳನ್ನು ಹಾಡುತ್ತಾ ಸಂಚರಿಸುತ್ತಿದ್ದೇನೆ. ॥ ೩೨ ॥ ಸ್ತೋತ್ರಪ್ರಿಯನೂ, ತೀರ್ಥಗಳಿಗೆ ಆಶ್ರಯವಾದ ಪವಿತ್ರಪಾದನೂ ಆಗಿರುವ ಶ್ರೀಭಗವಂತನ ಅದ್ಭುತವಾದ ಲೀಲಾವಿಲಾಸಗಳನ್ನು ನಾನು ಗಾನ ಮಾಡತೊಡಗಿದಾಗ ಆ ಪ್ರಭುವು ಕೂಗಿ ಕರೆಯಲ್ಪಟ್ಟವನಂತೆ – ಒಡನೆಯೇ ನನ್ನ ಹೃದಯಕ್ಕೆ ಬಂದು ದಿವ್ಯ ದರ್ಶನವನ್ನು ದಯಪಾಲಿಸುತ್ತಾನೆ. ॥ ೩೩ ॥ ನಿರಂತರ ವಿಷಯ ಭೋಗಗಳ ಕಾಮನೆಯಿಂದ ಚಿತ್ತವು ಆತುರವಾದ ಜನರಿಗಾಗಿ ಭಗವಂತನ ಲೀಲೆಗಳ ಕೀರ್ತನೆಯು ಸಂಸಾರ ಸಾಗರದಿಂದ ಪಾರಾಗಿ ಹೋಗಲು ಹಡಗಿನಂತಿದೆ. ಇದು ನನ್ನ ಅನುಭವವಾಗಿದೆ. ॥ ೩೪ ॥ ಕಾಮ-ಲೋಭಾದಿ ಏಟುಗಳಿಂದ ಪದೇ-ಪದೇ ಗಾಯಗೊಂಡ ಹೃದಯವು ಶ್ರೀಕೃಷ್ಣನ ಸೇವೆಯಿಂದ ಪ್ರತ್ಯಕ್ಷ ಶಾಂತಿಯನ್ನು ಅನುಭವಿಸುವುದು. ಯಮ-ನಿಯಮಾದಿ ಯೋಗಮಾರ್ಗದಿಂದಲೂ ಅಂತಹ ಶಾಂತಿಯು ದೊರೆಯಲಾರದು. ॥ ೩೫ ॥ ಪುಣ್ಯಾತ್ಮರೇ ನಿಮ್ಮ ಪ್ರಶ್ನೆಗಳಿಗೆ ಉತ್ತರವಾಗಿ ನನ್ನ ಜನ್ಮ-ಕರ್ಮ ಮತ್ತು ಸಾಧನೆಯ ರಹಸ್ಯಗಳನ್ನು ನಿರೂಪಿಸಿದ್ದೇನೆ. ನಿಮ್ಮ ಆತ್ಮತುಷ್ಟಿಗೆ ಉಪಾಯವನ್ನೂ ತಿಳಿಸಿರುವೆನು. ॥ ೩೬ ॥

ಸೂತಪುರಾಣಿಕರು ಹೇಳುತ್ತಾರೆ – ಶೌನಕಾದಿ ಋಷಿಗಳೇ! ಹೀಗೆ ಪರಮಪೂಜ್ಯರಾದ ದೇವಋಷಿ ನಾರದರು ವ್ಯಾಸರೊಡನೆ ಸಂಭಾಷಣೆ ನಡೆಸಿ, ಅವರ ಅನುಮತಿಯನ್ನು ಪಡೆದುಕೊಂಡು, ವೀಣೆಯನ್ನು ನುಡಿಸುತ್ತಾ ಇಷ್ಟ ಬಂದಲ್ಲಿಗೆ ಸಂಚರಿಸಲು ಹೊರಟುಹೋದರು. ॥ ೩೭ ॥ ಆಹಾ! ದೇವರ್ಷಿ ನಾರದರು ಎಷ್ಟು ಧನ್ಯರು!! ಯಾವಾಗಲೂ ತಮ್ಮ ದಿವ್ಯ ವೀಣೆಯ ಮೂಲಕ ಶಾರ್ಙ್ಗಪಾಣಿಯಾದ ಭಗವಂತನ ಕೀರ್ತನೆಯನ್ನು ಹಾಡುತ್ತಾ ತಾವು ಆನಂದಮಗ್ನರಾಗುವುದಲ್ಲದೆ – ತಾಪತ್ರಯಗಳಿಂದ ಬೆಂದು ಬಳಲಿದ ಜಗತ್ತನ್ನು ಆನಂದಪರವಶವನ್ನಾಗಿ ಮಾಡುತ್ತಿದ್ದಾರಲ್ಲವೇ ? ॥ ೩೮ ॥

ಆರನೆಯ ಅಧ್ಯಾಯವು ಮುಗಿಯಿತು. ॥ ೬ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಪ್ರಥಮಸ್ಕಂಧೇ ವ್ಯಾಸನಾರದಸಂವಾದೇ ಷಷ್ಠೋಽಧ್ಯಾಯಃ ॥ ೬ ॥

ಏಳನೆಯ ಅಧ್ಯಾಯ

ಶ್ರೀಮದ್ಭಾಗವತದ ರಚನೆ, ದ್ರೌಪದೀಪುತ್ರರನ್ನು ಕೊಲೆಮಾಡಿದ ಅಶ್ವತ್ಥಾಮನಿಗೆ ಶಿಕ್ಷೆ

ಶೌನಕ ಉವಾಚ

ವಿನಿರ್ಗತೇ ನಾರದೇ ಸೂತ ಭಗವಾನ್ ಬಾದರಾಯಣಃ ।
ಶ್ರುತವಾಂಸ್ತದಭಿಪ್ರೇತಂ ತತಃ ಕಿಮಕರೋದ್ವಿಭುಃ ॥ ೧ ॥

ಸೂತ ಉವಾಚ

ಬ್ರಹ್ಮನದ್ಯಾಂ ಸರಸ್ವತ್ಯಾಮಾಶ್ರಮಃ ಪಶ್ಚಿಮೇ ತಟೇ ।
ಶಮ್ಯಾಪ್ರಾಸ ಇತಿ ಪ್ರೋಕ್ತ ಋಷೀಣಾಂ ಸತ್ರವರ್ಧನಃ ॥ ೨ ॥

ತಸ್ಮಿನ್ ಸ್ವ ಆಶ್ರಮೇ ವ್ಯಾಸೋ ಬದರೀಷಂಡಮಂಡಿತೇ ।
ಆಸೀನೋಽಪ ಉಪಸ್ಪೃಶ್ಯ ಪ್ರಣಿದಧ್ಯೌ ಮನಃ ಸ್ವಯಮ್ ॥ ೩ ॥

ಭಕ್ತಿಯೋಗೇನ ಮನಸಿ ಸಮ್ಯಕ್ ಪ್ರಣಿಹಿತೇಽಮಲೇ ।
ಅಪಶ್ಯತ್ಪುರುಷಂ ಪೂರ್ವಂ ಮಾಯಾಂ ಚ ತದಪಾಶ್ರಯಾಮ್ ॥ ೪ ॥

ಯಯಾ ಸಮ್ಮೋಹಿತೋ ಜೀವ ಆತ್ಮಾನಂ ತ್ರಿಗುಣಾತ್ಮಕಮ್ ।
ಪರೋಽಪಿ ಮನುತೇಽನರ್ಥಂ ತತ್ಕೃತಂ ಚಾಭಿಪದ್ಯತೇ ॥ ೫ ॥

ಅನರ್ಥೋಪಶಮಂ ಸಾಕ್ಷಾದ್ಭಕ್ತಿಯೋಗಮಧೋಕ್ಷಜೇ ।
ಲೋಕಸ್ಯಾಜಾನತೋ ವಿದ್ವಾಂಶ್ಚಕ್ರೇ ಸಾತ್ವತಸಂಹಿತಾಮ್ ॥ ೬ ॥

ಯಸ್ಯಾಂ ವೈ ಶ್ರೂಯಮಾಣಾಯಾಂ ಕೃಷ್ಣೇ ಪರಮಪೂರುಷೇ ।
ಭಕ್ತಿರುತ್ಪದ್ಯತೇ ಪುಂಸಃ ಶೋಕಮೋಹಭಯಾಪಹಾ ॥ ೭ ॥

ಸ ಸಂಹಿತಾಂ ಭಾಗವತೀಂ ಕೃತ್ವಾನುಕ್ರಮ್ಯ ಚಾತ್ಮಜಮ್ ।
ಶುಕಮಧ್ಯಾಪಯಾಮಾಸ ನಿವೃತ್ತಿನಿರತಂ ಮುನಿಃ ॥ ೮ ॥

ಶೌನಕ ಉವಾಚ

ಸ ವೈ ನಿವೃತ್ತಿನಿರತಃ ಸರ್ವತ್ರೋಪೇಕ್ಷಕೋ ಮುನಿಃ ।
ಕಸ್ಯ ವಾ ಬೃಹತೀಮೇತಾಮಾತ್ಮಾರಾಮಃ ಸಮಭ್ಯಸತ್ ॥ ೯ ॥

ಸೂತ ಉವಾಚ

ಆತ್ಮಾರಾಮಾಶ್ಚ ಮುನಯೋ ನಿರ್ಗ್ರಂಥಾ ಅಪ್ಯುರುಕ್ರಮೇ ।
ಕುರ್ವಂತ್ಯಹೈತುಕೀಂ ಭಕ್ತಿಮಿತ್ಥಂಭೂತಗುಣೋ ಹರಿಃ ॥ ೧೦ ॥

ಶೌನಕರು ಕೇಳಿದರು – ಸೂತಪುರಾಣಿಕರೇ! ಸರ್ವಜ್ಞರೂ, ಸರ್ವಶಕ್ತಿಸಂಪನ್ನರೂ ಆದ ಭಗವಾನ್ ವೇದವ್ಯಾಸರು ನಾರದರ ಅಭಿಪ್ರಾಯವನ್ನು ಅರಿತುಕೊಂಡು ಅವರು ಹೊರಟು ಹೋದ ಬಳಿಕ ಏನುಮಾಡಿದರು? ॥ ೧ ॥

ಸೂತಪುರಾಣಿಕರು ಹೇಳುತ್ತಾರೆ – ಶೌನಕಾದಿಗಳೇ! ಬ್ರಹ್ಮನದಿಯೆನಿಸಿದ ಸರಸ್ವತಿಯ ಪಶ್ಚಿಮತೀರದಲ್ಲಿ ಋಷಿಗಳಿಗೆ ಯಜ್ಞ-ಯಾಗಾದಿಗಳನ್ನು ನಡೆಸಲು ಅನುಕೂಲಕರವಾದ ಶಮ್ಯಾಪ್ರಾಸವೆಂಬ ಆಶ್ರಮವೊಂದುಂಟು. ॥ ೨ ॥ ಅಲ್ಲಿಯೇ ವೇದವ್ಯಾಸರ ಆಶ್ರಮವೂ ಇದೆ. ಸುತ್ತಲೂ ಬದರೀವೃಕ್ಷಗಳ ಸುಂದರ ವನವಿದೆ. ಆ ಆಶ್ರಮದಲ್ಲಿ ಕುಳಿತುಕೊಂಡು ಅವರು ಆಚಮನಮಾಡಿ ಸ್ಥಿರವಾದ ಮನಸ್ಸಿನಿಂದ ಧ್ಯಾನಾರೂಢರಾದರು. ॥ ೩ ॥ ತಮ್ಮ ಏಕಾಗ್ರವೂ, ಅತಿನಿರ್ಮಲವೂ ಆದ ಮನಸ್ಸಿನಲ್ಲಿ ಅವರು ಭಕ್ತಿಯೋಗದಿಂದ ಆದಿಪುರುಷನಾದ ಭಗವಂತನನ್ನು ಮತ್ತು ಅವನನ್ನಾಶ್ರಯಿಸಿ ಅವನಿಗೆ ಅಧೀನವಾಗಿರುವ ಮಾಯೆಯನ್ನು ಸಂದರ್ಶಿಸಿದರು. ॥ ೪ ॥ ಜೀವನು ಸ್ವತಃ ತ್ರಿಗುಣಾತೀತನಾಗಿದ್ದರೂ ಈ ಮಾಯೆಯಿಂದ ಮೋಹಿತನಾಗಿ ತನ್ನನ್ನು ತ್ರಿಗುಣಾತ್ಮಕನೆಂದು ಭಾವಿಸಿಕೊಳ್ಳುವನು. ಈ ಭಾವನೆಯಿಂದಲೇ ಉಂಟಾಗುವ ಅನರ್ಥಗಳನ್ನು ಭೋಗಿಸಬೇಕಾಗುತ್ತದೆ. ॥ ೫ ॥ ಈ ಅನರ್ಥಗಳ ಉಪಶಮನಕ್ಕೆ ಸಾಕ್ಷಾತ್ತಾದ ಸಾಧನವೆಂದರೆ ಶ್ರೀಹರಿಯ ಭಕ್ತಿಯೋಗವೊಂದೇ. ಇದನ್ನರಿಯದೆ ತೊಳಲಾಡುತ್ತಿರುವ ಪ್ರಪಂಚದ ಜನರಿಗಾಗಿ ಪರಮಜ್ಞಾನಿಗಳಾದ ವ್ಯಾಸರು ಈ 'ಸಾತ್ವತ ಸಂಹಿತೆ'ಯೆನಿಸಿದ ಶ್ರೀಮದ್ಭಾಗವತವನ್ನು ರಚಿಸಿದರು. ॥ ೬ ॥ ಇದರ ಶ್ರವಣಮಾತ್ರದಿಂದಲೇ ಪರಮಪುರುಷನಾದ ಶ್ರೀಕೃಷ್ಣನಲ್ಲಿ ಪರಮಭಕ್ತಿಯುಂಟಾಗುವುದು. ಅದರಿಂದ ಜೀವಿಗಳ ಶೋಕ, ಮೋಹ, ಭಯ ಇವುಗಳು ತೊಲಗಿ ಹೋಗುವುವು. ॥ ೭ ॥ ಪರಮಹಂಸ ಸಂಹಿತೆಯಾದ ಈ ಭಾಗವತವನ್ನು ರಚಿಸಿ, ಪರಿಶೋಧಿಸಿದ ಬಳಿಕ ಅದನ್ನು ಅವರು ನಿವೃತ್ತಿಧರ್ಮಪರಾಯಣರಾಗಿದ್ದ ತಮ್ಮ ಪುತ್ರರಾದ ಶುಕ ಮಹಾಮುನಿಗಳಿಗೆ ಉಪದೇಶಿಸಿದರು. ॥ ೮ ॥

ಶೌನಕರು ಕೇಳಿದರು – ಸೂತಪುರಾಣಿಕರೇ! ಶುಕಮಹಾಮುನಿಗಳಾದರೋ ನಿವೃತ್ತಿಧರ್ಮದಲ್ಲಿ ಪರಾಯಣರಾದವರು, ಪರಮಾತ್ಮನನ್ನು ಬಿಟ್ಟು ಯಾವುದರಲ್ಲಿಯೂ ಉದಾಸೀನರಾಗಿರುವವರು. ಸದಾ ಆತ್ಮನಲ್ಲೇ ರಮಿಸುವವರು. ಇಂತಹವರೂ ಕೂಡ ಇಷ್ಟೊಂದು ವಿಶಾಲವಾದ ಗ್ರಂಥವನ್ನು ಅಭ್ಯಾಸಮಾಡಲು ಕಾರಣವೇನು? ॥ ೯ ॥

ಸೂತಪುರಾಣಿಕರು ಹೇಳಿದರು – ಶೌನಕಾದಿಗಳೇ! ಇಂತಹ ಬ್ರಹ್ಮಸ್ವರೂಪರಾದ ಅವಧೂತ ಪರಮಹಂಸರೇ ವಾಸ್ತವವಾಗಿ ಪೂರ್ಣಾತ್ಮಜ್ಞಾನಿಗಳಾಗಿದ್ದಾರೆ. ಅವರಿಗೆ [illegible] ಅಪೇಕ್ಷೆಯೂ ಇರುವುದಿಲ್ಲ, ಅವರಲ್ಲಿ ಅಹಂಕಾರದ ಲವಲೇಶವೂ ಇರುವುದಿಲ್ಲ. ಅವರು ಸದಾಕಾಲ ಆತ್ಮನಲ್ಲೇ ರಮಿಸುತ್ತಾ ಇರುತ್ತಾರೆ. ಭಗವಂತ-

ಹರೇರ್ಗುಣಾಕ್ಷಿಪ್ತಮತಿರ್ಭಗವಾನ್ ಬಾದರಾಯಣಿಃ ।
ಅಧ್ಯಗಾನ್ಮಹದಾಖ್ಯಾನಂ ನಿತ್ಯಂ ವಿಷ್ಣುಜನಪ್ರಿಯಃ ॥ ೧೧ ॥

ಪರೀಕ್ಷಿತೋಽಥ ರಾಜರ್ಷೇರ್ಜನ್ಮಕರ್ಮವಿಲಾಪನಮ್ ।
ಸಂಸ್ಥಾಂ ಚ ಪಾಂಡುಪುತ್ರಾಣಾಂ ವಕ್ಷ್ಯೇ ಕೃಷ್ಣಕಥೋದಯಮ್ ॥ ೧೨ ॥

ಯದಾ ಮೃಧೇ ಕೌರವಸೃಂಜಯಾನಾಂ
ವೀರೇಷ್ವಥೋ ವೀರಗತಿಂ ಗತೇಷು ।
ವೃಕೋದರಾವಿದ್ಧಗದಾಭಿಮರ್ಶ-
ಭಗ್ನೋರುದಂಡೇ ಧೃತರಾಷ್ಟ್ರಪುತ್ರೇ ॥ ೧೩ ॥

ಭರ್ತುಃ ಪ್ರಿಯಂ ದ್ರೌಣಿರಿತಿ ಸ್ಮ ಪಶ್ಯನ್
ಕೃಷ್ಣಾಸುತಾನಾಂ ಸ್ವಪತಾಂ ಶಿರಾಂಸಿ ।
ಉಪಾಹರದ್ವಿಪ್ರಿಯಮೇವ ತಸ್ಯ ತದ್
ಜುಗುಪ್ಸಿತಂ ಕರ್ಮ ವಿಗರ್ಹಯಂತಿ ॥ ೧೪ ॥

ಮಾತಾ ಶಿಶೂನಾಂ ನಿಧನಂ ಸುತಾನಾಂ
ನಿಶಮ್ಯ ಘೋರಂ ಪರಿತಪ್ಯಮಾನಾ ।
ತದಾರುದದ್ವಾಷ್ಪಕಲಾಕುಲಾಕ್ಷೀ
ತಾಂ ಸಾಂತ್ವಯನ್ನಾಹ ಕಿರೀಟಮಾಲೀ ॥ ೧೫ ॥

ತದಾ ಶುಚಸ್ತೇ ಪ್ರಮೃಜಾಮಿ ಭದ್ರೇ
ಯದ್ಬ್ರಹ್ಮಬಂಧೋಃ ಶಿರ ಆತತಾಯಿನಃ ।
ಗಾಂಡೀವಮುಕ್ತೈರ್ವಿಶಿಖೈರುಪಾಹರೇ
ತ್ವಾಽಽಕ್ರಮ್ಯ ಯತ್ಸ್ನಾಸ್ಯಸಿ ದಗ್ಧಪುತ್ರಾ ॥ ೧೬ ॥

ಇತಿ ಪ್ರಿಯಾಂ ವಲ್ಗುವಿಚಿತ್ರಜಲ್ಪೈಃ
ಸ ಸಾಂತ್ವಯಿತ್ವಾಚ್ಯುತಮಿತ್ರಸೂತಃ ।
ಅನ್ವಾದ್ರವದ್ದಂಶಿತ ಉಗ್ರಧನ್ವಾ
ಕಪಿಧ್ವಜೋ ಗುರುಪುತ್ರಂ ರಥೇನ ॥ ೧೭ ॥

ಹೇತುರಹಿತ ಭಕ್ತಿಯನ್ನು ಮಾಡುತ್ತಾ ಪರಮಾನಂದದ ಸಾಗರದಲ್ಲಿ ಮುಳುಗಿ ಇರುತ್ತಾರೆ. ಹೀಗಿದ್ದರೂ ಭಗವಂತನ ಗುಣಗಳು ಎಲ್ಲರನ್ನು ತನ್ನಕಡೆಗೆ ಆಕರ್ಷಿಸಿಕೊಳ್ಳುವಷ್ಟು ಮಧುರವಾಗಿವೆ. ಭಗವಂತನ ಗುಣಗಳ ವರ್ಣನೆ, ಸ್ಮರಣೆ, ಚಿಂತನೆ ಮಾಡುತ್ತಾ ಭಕ್ತರು ಆನಂದಿತರಾಗಿರುತ್ತಾರೆ. ॥ ೧೦ ॥ ಭಗವತ್ಸ್ವರೂಪ ವ್ಯಾಸನಂದನ ಶ್ರೀಶುಕಮಹಾಮುನಿಗಳ ಬುದ್ಧಿಯು ಭಗವಂತನ ಗುಣಗಳಿಂದ ಆಕರ್ಷಿತವಾಗಿತ್ತು. ಅದಕ್ಕಾಗಿ ಅವರು ಭಕ್ತಿ ಭಾವದಿಂದ ಕೂಡಿಕೊಂಡು ತನ್ನ ಪೂಜ್ಯ ತಂದೆಯಿಂದ ಈ ವಿಶಾಲವಾದ ಗ್ರಂಥವನ್ನು ಅಧ್ಯಯನ ಮಾಡಿದರು. ಇಂತಹ ಶುಕಮುನಿಗಳಿಗೆ ಭಗವಂತನ ಭಕ್ತರು ಅತ್ಯಂತ ಪ್ರಿಯರಾಗಿರುತ್ತಾರೆ. ಅದಕ್ಕೆಂದೇ ಪರೀಕ್ಷಿತನಿಗೆ ಈ ಭಾಗವತವನ್ನು ಉಪದೇಶಮಾಡಲು ತಾವಾಗಿಯೇ ಬಂದರು. ॥ ೧೧ ॥

ಶೌನಕರೇ! ಈಗ ನಾನು ರಾಜರ್ಷಿ ಪರೀಕ್ಷಿತನ ಜನ್ಮ-ಕರ್ಮ ಮತ್ತು ಮೋಕ್ಷಗಳ ವೃತ್ತಾಂತವನ್ನೂ, ಪಾಂಡವರ ಸ್ವರ್ಗಾರೋಹಣದ ಕಥೆಯನ್ನೂ, ಹಾಗೆಯೇ ಶ್ರೀಕೃಷ್ಣನ ಅವತಾರಕಥೆಗಳ ಉದಯವನ್ನು ಹೇಳುತ್ತೇನೆ; ಕೇಳಿರಿ. ॥ ೧೨ ॥ ಮಹಾಭಾರತ ಯುದ್ಧದಲ್ಲಿ ಕೌರವ-ಪಾಂಡವ ಎರಡೂ ಪಕ್ಷದ ವೀರರು ಸ್ವರ್ಗಸ್ಥರಾಗಿದ್ದರು. ಭೀಮಸೇನನ ಗದೆಯಿಂದ ದುರ್ಯೋಧನನ ತೊಡೆಮುರಿದುಹೋಗಿ ರಣರಂಗದಲ್ಲಿ ಬಿದ್ದಿರುವಾಗ, ಅಶ್ವತ್ಥಾಮನು ನಿದ್ರೆಮಾಡುತ್ತಿದ್ದ ದ್ರೌಪದಿಯ ಪುತ್ರರ ತಲೆಗಳನ್ನು ಕತ್ತರಿಸಿ, ಅವುಗಳನ್ನು ದುರ್ಯೋಧನನಿಗೆ ಕಾಣಿಕೆಯನ್ನಾಗಿ ಸಮರ್ಪಿಸಿದನು. ಪ್ರಭುವಾದ ದುರ್ಯೋಧನನಿಗೆ ಈ ಕಾರ್ಯವು ಪ್ರಿಯವಾದೀತೆಂದು ಅವನು ಎಣಿಸಿದ್ದನು. ಆದರೆ ಅದು ಅವನಿಗೂ ಅಪ್ರಿಯವೇ ಆಯಿತು. ಏಕೆಂದರೆ, ಇಂತಹ ನೀಚ-ಕರ್ಮವನ್ನು ಎಲ್ಲರೂ ನಿಂದಿಸುತ್ತಾರೆ. ॥ ೧೩-೧೪ ॥ ಆ ಮಕ್ಕಳ ತಾಯಿಯಾದ ದ್ರೌಪದಿಯು ತಮ್ಮ ಪುತ್ರರ ಹತ್ಯೆಯನ್ನು ನೋಡಿ ಅತ್ಯಂತ ದುಃಖಿತಳಾದಳು. ಅವಳು ಬಹಳವಾಗಿ ಸಂಕಟಪಡುತ್ತಾ ಕಣ್ಣೀರು ಸುರಿಸುತ್ತಾ ಗೋಳಾಡತೊಡಗಿದಳು. ಆಗ ಅರ್ಜುನನು ಅವಳನ್ನು ಸಂತೈಸುತ್ತಾ – ॥ ೧೫ ॥ ಭದ್ರೆ! ಆ ಕೊಲೆಗಡುಕನಾದ, ಆತತಾಯಿಯಾದ* ನೀಚ ಬ್ರಾಹ್ಮಣನ ತಲೆಯನ್ನು ಗಾಂಡೀವ ಧನುಸ್ಸಿನ ಬಾಣಗಳಿಂದ ಕತ್ತರಿಸಿ ನಿನಗೆ ಬಹುಮಾನವನ್ನಾಗಿ ತಂದುಕೊಡುವೆನು. ಪುತ್ರರ ಉತ್ತರಕ್ರಿಯೆಗಳನ್ನು ಮುಗಿಸಿದ ಬಳಿಕ ಆ ತಲೆಯನ್ನು ಕಾಲಿಂದ ಮೆಟ್ಟಿ ಅನಂತರ ಸ್ನಾನಮಾಡುವೆಯಂತೆ. ಆಗ ನಿನ್ನ ಕಣ್ಣೀರನ್ನು ಒರೆಸುವೆನು' ಎಂದು ಆಕೆಗೆ ಸಮಾಧಾನ ಹೇಳಿದನು. ॥ ೧೬ ॥ ಹೀಗೆ ಬಗೆ-ಬಗೆಯ ಮಧುರವಾದ ಮಾತುಗಳಿಂದ ಆಕೆಯನ್ನು ಸಾಂತ್ವನಮಾಡಿ ಅರ್ಜುನನು ಕವಚವನ್ನು ಧರಿಸಿ ತನ್ನ ಭಯಂಕರವಾದ ಗಾಂಡೀವಧನುಸ್ಸನ್ನು ತೆಗೆದುಕೊಂಡು, ಮಿತ್ರಶ್ರೇಷ್ಠನಾದ ಶ್ರೀಕೃಷ್ಣನನ್ನೇ ಸಾರಥಿಯನ್ನಾಗಿಸಿಕೊಂಡು, ರಥವನ್ನೇರಿ ಗುರುಪುತ್ರನಾದ ಅಶ್ವತ್ಥಾಮನನ್ನು ಬೆನ್ನಟ್ಟಿಹೋದನು. ॥ ೧೭ ॥ ಶಿಶುಹತ್ಯೆಮಾಡಿದ್ದ ಆ ಪಾತಕಿಯು

* ಬೆಂಕಿಹಚ್ಚುವವನು, ವಿಷ ಉಣಿಸುವವನು, ಕೆಟ್ಟ ಉದ್ದೇಶದಿಂದ ಶಸ್ತ್ರಧರಿಸುವವನು, ಹಣವನ್ನು ಕಿತ್ತುಕೊಳ್ಳುವವನು, ಭೂಮಿಯನ್ನು ಅಪಹರಿಸುವವನು, ಹೆಂಡತಿಯನ್ನು ಅಪಹರಿಸುವವನು, ಈ ಆರು ಮಂದಿಗಳನ್ನು ಆತತಾಯಿಗಳೆಂದು ಹೇಳುತ್ತಾರೆ.

ತಮಾಪತಂತಂ ಸ ವಿಲಕ್ಷ್ಯ ದೂರಾತ್
ಕುಮಾರಹೋದ್ವಿಗ್ನಮನಾ ರಥೇನ ।
ಪರಾದ್ರವತ್ಪ್ರಾಣಪರೀಪ್ಸುರುರ್ವ್ಯಾಂ
ಯಾವದ್ಗಮಂ ರುದ್ರಭಯಾದ್ಯಥಾರ್ಕಃ ॥ ೧೮ ॥

ಯದಾಶರಣಮಾತ್ಮಾನಮೈಕ್ಷತ ಶ್ರಾಂತವಾಜಿನಮ್ ।
ಅಸ್ತ್ರಂ ಬ್ರಹ್ಮಶಿರೋ ಮೇನೇ ಆತ್ಮತ್ರಾಣಂ ದ್ವಿಜಾತ್ಮಜಃ ॥ ೧೯ ॥

ಅಥೋಪಸ್ಪೃಶ್ಯ ಸಲಿಲಂ ಸಂದಧೇ ತತ್ಸಮಾಹಿತಃ ।
ಅಜಾನನ್ನುಪಸಂಹಾರಂ ಪ್ರಾಣಕೃಚ್ಛ್ರ ಉಪಸ್ಥಿತೇ ॥ ೨೦ ॥

ತತಃ ಪ್ರಾದುಷ್ಕೃತಂ ತೇಜಃ ಪ್ರಚಂಡಂ ಸರ್ವತೋದಿಶಮ್ ।
ಪ್ರಾಣಾಪದಮಭಿಪ್ರೇಕ್ಷ್ಯ ವಿಷ್ಣುಂ ಜಿಷ್ಣುರುವಾಚ ಹ ॥ ೨೧ ॥

ಅರ್ಜುನ ಉವಾಚ

ಕೃಷ್ಣ ಕೃಷ್ಣ ಮಹಾಬಾಹೋ ಭಕ್ತಾನಾಮಭಯಂಕರ ।
ತ್ವಮೇಕೋ ದಹ್ಯಮಾನಾನಾಮಪವರ್ಗೋಽಸಿ ಸಂಸೃತೇಃ ॥ ೨೨ ॥

ತ್ವಮಾದ್ಯಃ ಪುರುಷಃ ಸಾಕ್ಷಾದೀಶ್ವರಃ ಪ್ರಕೃತೇಃ ಪರಃ ।
ಮಾಯಾಂ ವ್ಯುದಸ್ಯ ಚಿಚ್ಛಕ್ತ್ಯಾ ಕೈವಲ್ಯೇ ಸ್ಥಿತ ಆತ್ಮನಿ ॥ ೨೩ ॥

ಸ ಏವ ಜೀವಲೋಕಸ್ಯ ಮಾಯಾಮೋಹಿತಚೇತಸಃ ।
ವಿಧತ್ಸೇ ಸ್ವೇನ ವೀರ್ಯೇಣ ಶ್ರೇಯೋ ಧರ್ಮಾದಿಲಕ್ಷಣಮ್ ॥ ೨೪ ॥

ತಥಾಯಂ ಚಾವತಾರಸ್ತೇ ಭುವೋ ಭಾರಜಿಹೀರ್ಷಯಾ ।
ಸ್ವಾನಾಂ ಚಾನನ್ಯಭಾವಾನಾಮನುಧ್ಯಾನಾಯ ಚಾಸಕೃತ್ ॥ ೨೫ ॥

ಕಿಮಿದಂ ಸ್ವಿತ್ಕುತೋ ವೇತಿ ದೇವದೇವ ನ ವೇದ್ಮ್ಯಹಮ್ ।
ಸರ್ವತೋಮುಖಮಾಯಾತಿ ತೇಜಃ ಪರಮದಾರುಣಮ್ ॥ ೨೬ ॥

ಶ್ರೀಭಗವಾನುವಾಚ

ವೇತ್ಥೇದಂ ದ್ರೋಣಪುತ್ರಸ್ಯ ಬ್ರಾಹ್ಮಮಸ್ತ್ರಂ ಪ್ರದರ್ಶಿತಮ್ ।
ನೈವಾಸೌ ವೇದ ಸಂಹಾರಂ ಪ್ರಾಣಬಾಧ ಉಪಸ್ಥಿತೇ ॥ ೨೭ ॥

ನ ಹ್ಯಸ್ಯಾನ್ಯತಮಂ ಕಿಂಚಿದಸ್ತ್ರಂ ಪ್ರತ್ಯವಕರ್ಶನಮ್ ।
ಜಹ್ಯಸ್ತ್ರತೇಜ ಉನ್ನದ್ಧಮಸ್ತ್ರಜ್ಞೋ ಹ್ಯಸ್ತ್ರತೇಜಸಾ ॥ ೨೮ ॥

ಅರ್ಜುನನು ರಥದಲ್ಲಿ ಕುಳಿತು ತನ್ನನ್ನು ಅಟ್ಟಿಕೊಂಡು ಬರುತ್ತಿರುವುದನ್ನು ದೂರದಿಂದಲೇ ನೋಡಿ, ತುಂಬ ಭಯಗೊಂಡು ತನ್ನ ಪ್ರಾಣಗಳನ್ನು ಉಳಿಸಿಕೊಳ್ಳುವುದಕ್ಕಾಗಿ ರುದ್ರನಿಗೆ ಹೆದರಿ ಓಡುವ ಸೂರ್ಯನಂತೆ* ಸಾಧ್ಯವಾದಷ್ಟು ದೂರ ಓಡತೊಡಗಿದನು. ॥ ೧೮ ॥ ಅಶ್ವತ್ಥಾಮನ ಕುದುರೆಗಳು ದಣಿದು ಬಳಲಿ ಹೋಗಿದ್ದವು. ತನಗೆ ಬೇರಾವ ಗತಿಯೂ ಉಳಿದಿಲ್ಲ ಎಂದು ಬ್ರಹ್ಮಾಸ್ತ್ರವೊಂದೇ ತನ್ನನ್ನು ರಕ್ಷಿಸುವ ಏಕಮಾತ್ರ ಸಾಧನವೆಂದು ಯೋಚಿಸಿದನು. ॥ ೧೯ ॥ ಅಶ್ವತ್ಥಾಮನಿಗೆ ಬ್ರಹ್ಮಾಸ್ತ್ರವನ್ನು ಉಪಸಂಹಾರ ಮಾಡುವ ವಿಧಿಯು ತಿಳಿದಿಲ್ಲವಾದರೂ ಪ್ರಾಣಸಂಕಟವು ಒದಗಿಬರುವುದನ್ನು ಕಂಡು ಅವನು ಆಚಮನಮಾಡಿ, ಧ್ಯಾನಸ್ಥನಾಗಿ ಆ ಬ್ರಹ್ಮಾಸ್ತ್ರವನ್ನು ಪ್ರಯೋಗ ಮಾಡಿದನು. ॥ ೨೦ ॥ ಆ ಅಸ್ತ್ರದಿಂದ ಎಲ್ಲೆಡೆಗಳಲ್ಲಿ ಭಯಂಕರವಾದ ಪ್ರಚಂಡವಾದ ತೇಜಸ್ಸು ವ್ಯಾಪಿಸಿತು. ಅದರಿಂದ ತನಗೆ ಅಪಾಯ ಒದಗುತ್ತಿರುವುದನ್ನು ಕಂಡು ಅರ್ಜುನನು ರಕ್ಷಿಸುವಂತೆ ಶ್ರೀಕೃಷ್ಣಪರಮಾತ್ಮನನ್ನು ಪ್ರಾರ್ಥಿಸಿದನು. ॥ ೨೧ ॥

ಅರ್ಜುನನು ಹೇಳಿದನು – "ಕೃಷ್ಣಾ! ಕೃಷ್ಣಾ! ನೀನು ಸಚ್ಚಿದಾನಂದಸ್ವರೂಪೀ ಪರಮಾತ್ಮನಾಗಿರುವೆ. ಸಂಸಾರದ ಸಂತಾಪಗಳಿಂದ ಸುಟ್ಟುಹೋಗುತ್ತಿರುವ ಜೀವರನ್ನು ಉದ್ಧರಿಸುವ ಮುಕ್ತಿದಾಯಕನು ನೀನೊಬ್ಬನೇ ಆಗಿರುವೆ. ॥ ೨೨ ॥ ನೀನು ಪ್ರಕೃತಿಯನ್ನು ಮೀರಿರುವ ಆದಿಪುರುಷ ಸಾಕ್ಷಾತ್ ಪರಮೇಶ್ವರನಾಗಿರುವೆ. ಜ್ಞಾನಶಕ್ತಿಯಿಂದ ಮಾಯೆಯನ್ನು ಹೊರಹಾಕಿ ಶುದ್ಧವೂ, ಅದ್ವಿತೀಯವೂ ಆದ ಆತ್ಮಸ್ವರೂಪದಲ್ಲಿ ನೆಲೆಗೊಂಡಿರುವವನೂ ನೀನೇ ಆಗಿರುವೆ. ॥ ೨೩ ॥ ಮಾಯೆಯಿಂದ ಮೋಹಗೊಂಡಿರುವ ಜೀವರಿಗಾಗಿ ಧರ್ಮಾದಿರೂಪವಾದ ಶ್ರೇಯಸ್ಸನ್ನು ಪ್ರಭಾವಾತಿಶಯದಿಂದ ನೀನೇ ಉಂಟುಮಾಡುವವನು. ॥ ೨೪ ॥ ನಿನ್ನ ಈ ಅವತಾರವು ಭೂಮಿಯ ಭಾರವನ್ನು ಕಳೆಯಲೋಸುಗ ಮತ್ತು ಅನನ್ಯಭಾವವುಳ್ಳ ಭಕ್ತರು ನಿರಂತರವಾಗಿ ಧ್ಯಾನಮಾಡಲು ಶುಭಾಲಂಬನವನ್ನು ಕೊಡುವುದಕ್ಕಾಗಿಯೇ ಇದೆ. ॥ ೨೫ ॥ ದೇವದೇವಾ! ಅತಿಭಯಂಕರವಾಗಿ ಎಲ್ಲ ಕಡೆಗಳಲ್ಲಿ ಹರಡಿಕೊಂಡಿರುವ ತೇಜಸ್ಸೊಂದು ನನ್ನ ಕಡೆಗೆ ಬರುತ್ತಿದೆಯಲ್ಲ! ಇದು ಯಾವುದು? ಎಲ್ಲಿಂದ ಬರುತ್ತಿದೆ? ನನಗೇನೂ ತಿಳಿಯುತ್ತಿಲ್ಲವಲ್ಲ!" ॥ ೨೬ ॥

ಶ್ರೀಭಗವಂತನು ಹೇಳಿದನು – "ಅರ್ಜುನಾ! ಇದು ಅಶ್ವತ್ಥಾಮನು ಪ್ರಯೋಗಿಸಿದ ಬ್ರಹ್ಮಾಸ್ತ್ರವಾಗಿದೆ. ತನಗೆ ಪ್ರಾಣಸಂಕಟ ಒದಗಿರುವುದರಿಂದ ಅವನು ಇದನ್ನು ಪ್ರಯೋಗಿಸಿದ್ದಾನೆ. ಆದರೆ ಇದನ್ನು ಉಪಸಂಹರಿಸುವುದನ್ನು ತಿಳಿಯನು. ॥ ೨೭ ॥ ಇದನ್ನು ಅಡಗಿಸುವ ಶಕ್ತಿಯು ಬೇರೆ ಯಾವುದೇ ಅಸ್ತ್ರಕ್ಕಿಲ್ಲ. ಅಸ್ತ್ರಜ್ಞನಾದ ನೀನು ಪ್ರಚಂಡವಾದ ಈ ಅಸ್ತ್ರದ ತೇಜಸ್ಸನ್ನು ಪ್ರತಿಬ್ರಹ್ಮಾಸ್ತ್ರದಿಂದಲೇ ಶಮನಗೊಳಿಸು." ॥ ೨೮ ॥

* ವಿದ್ಯುನ್ಮಾಲಿ ದೈತ್ಯನನ್ನು ಸೂರ್ಯನು ಸೋಲಿಸಿದಾಗ ಸೂರ್ಯನ ಮೇಲೆ ಭಗವಾನ್ ರುದ್ರನು ತ್ರಿಶೂಲವನ್ನೆತ್ತಿಕೊಂಡು ಆಕ್ರಮಿಸಿ ಓಡಿದನು. ಆಗ ಸೂರ್ಯನು ಎಲ್ಲ ದೇಶಗಳಿಗೆ ಹೆದರಿ ಓಡುತ್ತಾ-ಓಡುತ್ತಾ ಪೃಥ್ವಿಯಲ್ಲಿ ಕಾಶಿಗೆ ಬಂದುಬಿದ್ದನು. ಇದರಿಂದ ಅಲ್ಲಿ ಅವನಿಗೆ 'ಲೋಲಾರ್ಕ' ಎಂಬ ಹೆಸರಾಯಿತು.

ಸೂತ ಉವಾಚ

ಶ್ರುತ್ವಾ ಭಗವತಾ ಪ್ರೋಕ್ತಂ ಫಾಲ್ಗುನಃ ಪರವೀರಹಾ ।
ಸ್ಪೃಷ್ಟ್ವಾಪಸ್ತಂ ಪರಿಕ್ರಮ್ಯ ಬ್ರಾಹ್ಮಂ ಬ್ರಾಹ್ಮಾಯ ಸಂದಧೇ ॥ ೨೯ ॥

ಸಂಹತ್ಯಾನ್ಯೋನ್ಯಮುಭಯೋಸ್ತೇಜಸೀ ಶರಸಂವೃತೇ ।
ಆವೃತ್ಯ ರೋದಸೀ ಖಂ ಚ ವವೃಧಾತೇಽರ್ಕವಹ್ನಿವತ್ ॥ ೩೦ ॥

ದೃಷ್ಟ್ವಾಸ್ತ್ರತೇಜಸ್ತು ತಯೋಸ್ತ್ರೀಂಲ್ಲೋಕಾನ್ಪ್ರದಹನ್ಮಹತ್ ।
ದಹ್ಯಮಾನಾಃ ಪ್ರಜಾಃ ಸರ್ವಾಃ ಸಾಂವರ್ತಕಮಮಂಸತ ॥ ೩೧ ॥

ಪ್ರಜೋಪದ್ರವಮಾಲಕ್ಷ್ಯ ಲೋಕವ್ಯತಿಕರಂ ಚ ತಮ್ ।
ಮತಂ ಚ ವಾಸುದೇವಸ್ಯ ಸಂಜಹಾರಾರ್ಜುನೋ ದ್ವಯಮ್ ॥ ೩೨ ॥

ತತ ಆಸಾದ್ಯ ತರಸಾ ದಾರುಣಂ ಗೌತಮೀಸುತಮ್ ।
ಬಬಂಧಾಮರ್ಷತಾಮ್ರಾಕ್ಷಃ ಪಶುಂ ರಶನಯಾ ಯಥಾ ॥ ೩೩ ॥

ಶಿಬಿರಾಯ ನಿನೀಷಂತಂ ದಾಮ್ನಾ ಬದ್ಧ್ವಾ ರಿಪುಂ ಬಲಾತ್ ।
ಪ್ರಾಹಾರ್ಜುನಂ ಪ್ರಕುಪಿತೋ ಭಗವಾನಮ್ಬುಜೇಕ್ಷಣಃ ॥ ೩೪ ॥

ಮೈನಂ ಪಾರ್ಥಾರ್ಹಸಿ ತ್ರಾತುಂ ಬ್ರಹ್ಮಬಂಧುಮಿಮಂ ಜಹಿ ।
ಯೋಽಸಾವನಾಗಸಃ ಸುಪ್ತಾನವಧೀನ್ನಿಶಿ ಬಾಲಕಾನ್ ॥ ೩೫ ॥

ಮತ್ತಂ ಪ್ರಮತ್ತಮುನ್ಮತ್ತಂ ಸುಪ್ತಂ ಬಾಲಂ ಸ್ತ್ರಿಯಂ ಜಡಮ್ ।
ಪ್ರಪನ್ನಂ ವಿರಥಂ ಭೀತಂ ನ ರಿಪುಂ ಹಂತಿ ಧರ್ಮವಿತ್ ॥ ೩೬ ॥

ಸ್ವಪ್ರಾಣಾನ್ ಯಃ ಪರಪ್ರಾಣೈಃ ಪ್ರಪುಷ್ಣಾತ್ಯಘೃಣಃ ಖಲಃ ।
ತದ್ವಧಸ್ತಸ್ಯ ಹಿ ಶ್ರೇಯೋ ಯದ್ದೋಷಾದ್ಯಾತ್ಯಧಃ ಪುಮಾನ್ ॥ ೩೭ ॥

ಪ್ರತಿಶ್ರುತಂ ಚ ಭವತಾ ಪಾಂಚಾಲ್ಯೈ ಶೃಣ್ವತೋ ಮಮ ।
ಆಹರಿಷ್ಯೇ ಶಿರಸ್ತಸ್ಯ ಯಸ್ತೇ ಮಾನಿನಿ ಪುತ್ರಹಾ ॥ ೩೮ ॥

ತದಸೌ ವಧ್ಯತಾಂ ಪಾಪ ಆತತಾಯ್ಯಾತ್ಮಬಂಧುಹಾ ।
ಭರ್ತುಶ್ಚ ವಿಪ್ರಿಯಂ ವೀರ ಕೃತವಾನ್ ಕುಲಪಾಂಸನಃ ॥ ೩೯ ॥

ಏವಂ ಪರೀಕ್ಷತಾ ಧರ್ಮಂ ಪಾರ್ಥಃ ಕೃಷ್ಣೇನ ಚೋದಿತಃ ।
ನೈಚ್ಛದ್ಧಂತುಂ ಗುರುಸುತಂ ಯದ್ಯಪ್ಯಾತ್ಮಹನಂ ಮಹಾನ್ ॥ ೪೦ ॥

ಸೂತಪುರಾಣಿಕರು ಹೇಳುತ್ತಾರೆ – ಎಲೈ ಮಹರ್ಷಿಗಳೇ! ಶತ್ರುವೀರರನ್ನು ಸೋಲಿಸುವುದರಲ್ಲಿ ಪ್ರವೀಣನಾದ ಅರ್ಜುನನು ಶ್ರೀಭಗವಂತನ ಆ ಮಾತುಗಳನ್ನು ಕೇಳಿದೊಡನೆಯೇ ಆಚಮನ ಮಾಡಿ ಭಗವಂತನಿಗೆ ಪ್ರದಕ್ಷಿಣೆ ಬಂದು ಆ ಬ್ರಹ್ಮಾಸ್ತ್ರದ ನಿವಾರಣೆಗಾಗಿ ಪ್ರತಿಯಾದ ಬ್ರಹ್ಮಾಸ್ತ್ರವನ್ನು ಪ್ರಯೋಗ ಮಾಡಿದನು. ॥ ೨೯ ॥ ಬಾಣಗಳಿಂದ ಹೊರಹೊಮ್ಮಿದ ಆ ಎರಡು ಬ್ರಹ್ಮಾಸ್ತ್ರಗಳ ತೇಜಸ್ಸು ಒಂದಕ್ಕೊಂದು ಘರ್ಷಣೆಹೊಂದಿ ಪ್ರಳಯಕಾಲದ ಸೂರ್ಯ ಮತ್ತು ಅಗ್ನಿಗಳಂತೆ ಭೂಮ್ಯಾಕಾಶಗಳೆಲ್ಲೆಲ್ಲಾ ಹರಡಿ ಬೆಳೆಯತೊಡಗಿತು. ॥ ೩೦ ॥ ಆ ಇಬ್ಬರ ಬ್ರಹ್ಮಾಸ್ತ್ರಗಳ ಪ್ರಚಂಡ ತೇಜಸ್ಸಿನಿಂದ ಮೂರು ಲೋಕಗಳು ಸುಟ್ಟುಹೋಗುತ್ತಿರುವುದನ್ನು ಕಂಡು ಬೆಂದು ಹೋಗುತ್ತಿದ್ದ ಪ್ರಜೆಗಳೆಲ್ಲರೂ ಇದು ಪ್ರಳಯಕಾಲದ ಸಾಂವರ್ತಕ ಅಗ್ನಿಯೇ ಇರಬೇಕೆಂದು ಭಾವಿಸಿದರು. ॥ ೩೧ ॥ ಅದರಿಂದ ಸಂಭವಿಸುತ್ತಿದ್ದ ಪ್ರಜಾಪೀಡೆಯನ್ನು, ಲೋಕದ ವಿನಾಶವನ್ನು ಕಂಡು ಶ್ರೀಕೃಷ್ಣನ ಆಶಯವನ್ನು ಗಮನಿಸಿದ ಅರ್ಜುನನು ಆ ಎರಡೂ ಅಸ್ತ್ರಗಳನ್ನು ಉಪಸಂಹಾರ ಮಾಡಿದನು. ॥ ೩೨ ॥ ಕ್ರೋಧದಿಂದ ಕೆಂಪೇರಿದ್ದ ಕಣ್ಣುಗಳುಳ್ಳ ಅರ್ಜುನನು ದಿಢೀರನೆ ಆ ಕ್ರೂರಿಯಾದ ಅಶ್ವತ್ಥಾಮನನ್ನು ಹಿಡಿದುಕೊಂಡು ಹಗ್ಗದಿಂದ ಪಶುವನ್ನು ಕಟ್ಟಿಹಾಕುವಂತೆ ಅವನನ್ನು ಕಟ್ಟಿಹಾಕಿದನು. ॥ ೩೩ ॥ ಅರ್ಜುನನು ಅಶ್ವತ್ಥಾಮನನ್ನು ಬಲವಂತವಾಗಿ ಬಂಧಿಸಿ ತನ್ನ ಬಿಡಾರಕ್ಕೆ ಒಯ್ಯಲು ಪ್ರಯತ್ನಿಸುತ್ತಿರುವುದನ್ನು ಕಂಡು ಪುಂಡರೀಕಾಕ್ಷನಾದ ಭಗವಾನ್ ಶ್ರೀಕೃಷ್ಣನು ಕೊಂಚ ಕುಪಿತನಂತಾಗಿ ಹೀಗೆಂದನು. ॥ ೩೪ ॥

ಅರ್ಜುನಾ! ಈ ಬ್ರಾಹ್ಮಣಾಧಮನನ್ನು ಜೀವಂತವಾಗಿ ಬಿಡುವುದು ಸರಿಯಲ್ಲ. ಇವನನ್ನು ಕೊಂದೇ ಹಾಕಿಬಿಡು. ಈತನು ರಾತ್ರಿಯಲ್ಲಿ ನಿದ್ದೆಮಾಡುತ್ತಿದ್ದ ನಿರಪರಾಧಿಗಳಾದ ಬಾಲಕರನ್ನು ಕೊಂದಿರುವನು. ॥ ೩೫ ॥ ಮೈಮರೆತವನನ್ನೂ, ಅಮಲೇರಿದವನನ್ನೂ, ಹುಚ್ಚನನ್ನೂ, ಮಲಗಿದವನನ್ನೂ, ಬಾಲಕರನ್ನೂ, ಸ್ತ್ರೀಯನ್ನೂ, ವಿವೇಕ ಜ್ಞಾನಶೂನ್ಯನನ್ನೂ, ಶರಣಾಗತನನ್ನೂ, ರಥಹೀನನನ್ನೂ ಮತ್ತು ಭಯಗೊಂಡವನನ್ನೂ, ಶತ್ರುಗಳಾದರೂ ಧರ್ಮಜ್ಞನಾದ ಪುರುಷನು ಕೊಲ್ಲುವುದಿಲ್ಲ. ॥ ೩೬ ॥ ಆದರೆ ಬೇರೆಯವರನ್ನು ಕೊಂದು ತನ್ನ ಪ್ರಾಣಗಳನ್ನು ಪೋಷಿಸುವ ದುಷ್ಟ ಕ್ರೂರಿಯ ವಧೆಯು ಅವನಿಗೆ ಶ್ರೇಯಸ್ಕರವೇ. ಏಕೆಂದರೆ, ಇಂತಹ ಕೆಟ್ಟ ಕೆಲಸ ಮಾಡುತ್ತಾ ಬದುಕುತ್ತಾನಾದರೆ ಇನ್ನೂ ಹೆಚ್ಚು ಪಾಪ ವನ್ನು ಮಾಡಿ ನರಕಕ್ಕೆ ಹೋಗುತ್ತಾನೆ. ॥ ೩೭ ॥ ಇದಲ್ಲದೆ ನೀನು ನನ್ನ ಮುಂದೆ ಪಾಂಚಾಲಿಯಲ್ಲಿ – 'ಎಲೈ ಮಾನವತಿಯೇ! ನಿನ್ನ ಪುತ್ರರನ್ನು ವಧಿಸಿದವನ ತಲೆಯನ್ನು ತರಿಯುವೆ'ನೆಂಬ ಪ್ರತಿಜ್ಞೆಯನ್ನೂ ಮಾಡಿರುವೆ. ॥ ೩೮ ॥ ಆದುದರಿಂದ ಅರ್ಜುನಾ! ಈ ಪಾಪಿಯನ್ನು ಅವಶ್ಯವಾಗಿ ಸಂಹರಿಸಿಬಿಡು. ಈತನು ಕೊಲೆಪಾತಕಿ, ನಿಮ್ಮ ಪುತ್ರರನ್ನೇ ಕೊಂದುಹಾಕಿದವನು. 'ತನ್ನ ಸ್ವಾಮಿಗೂ ಅಪ್ರಿಯ ವನ್ನೇ ಮಾಡಿದ ಕುಲಾಂಗಾರನಿವನು. ॥ ೩೯ ॥ ಅರ್ಜುನನ ಧರ್ಮಬುದ್ಧಿಯನ್ನು ಪರೀಕ್ಷಿಸುವುದಕ್ಕಾಗಿ ಭಗವಾನ್ ಶ್ರೀಕೃಷ್ಣನು ಅವನಿಗೆ ಹೀಗೆ ಪ್ರೇರಣೆ ಮಾಡಿದನು. ಆದರೂ ಅರ್ಜುನನ ಹೃದಯ ಮಹಾನ್ ಆಗಿತ್ತು. ಅಶ್ವತ್ಥಾಮನು ನಮ್ಮ ಪುತ್ರರನ್ನೇ ಕೊಂದಿದ್ದರೂ, ತನ್ನನ್ನೇ ಕೊಲ್ಲಲು ಪ್ರಯತ್ನಿಸಿದರೂ ಗುರುಪುತ್ರನನ್ನು ಕೊಲ್ಲಲು ಅರ್ಜುನನು ಇಷ್ಟಪಡಲಿಲ್ಲ. ॥ ೪೦ ॥

ಅಥೋಪೇತ್ಯ ಸ್ವಶಿಬಿರಂ ಗೋವಿಂದಪ್ರಿಯಸಾರಥಿಃ ।
ನ್ಯವೇದಯತ್ತಂ ಪ್ರಿಯಾಯೈ ಶೋಚಂತ್ಯಾ ಆತ್ಮಜಾನ್ ಹತಾನ್ ॥ ೪೧ ॥

ತಥಾಽಽಹೃತಂ ಪಶುವತ್ ಪಾಶಬದ್ಧ-
ಮವಾಙ್ಮುಖಂ ಕರ್ಮಜುಗುಪ್ಸಿತೇನ ।
ನಿರೀಕ್ಷ್ಯ ಕೃಷ್ಣಾಪಕೃತಂ ಗುರೋಃ ಸುತಂ
ವಾಮಸ್ವಭಾವಾ ಕೃಪಯಾ ನನಾಮ ಚ ॥ ೪೨ ॥

ಉವಾಚ ಚಾಸಹಂತ್ಯಸ್ಯ ಬಂಧನಾನಯನಂ ಸತೀ ।
ಮುಚ್ಯತಾಂ ಮುಚ್ಯತಾಮೇಷ ಬ್ರಾಹ್ಮಣೋ ನಿತರಾಂ ಗುರುಃ ॥ ೪೩ ॥

ಸರಹಸ್ಯೋ ಧನುರ್ವೇದಃ ಸವಿಸರ್ಗೋಪಸಂಯಮಃ ।
ಅಸ್ತ್ರಗ್ರಾಮಶ್ಚ ಭವತಾ ಶಿಕ್ಷಿತೋ ಯದನುಗ್ರಹಾತ್ ॥ ೪೪ ॥

ಸ ಏಷ ಭಗವಾನ್ ದ್ರೋಣಃ ಪ್ರಜಾರೂಪೇಣ ವರ್ತತೇ ।
ತಸ್ಯಾತ್ಮನೋಽರ್ಧಂ ಪತ್ನ್ಯಾಸ್ತೇ ನಾನ್ವಗಾದ್ವೀರಸೂಃ ಕೃಪೀ ॥ ೪೫ ॥

ತದ್ಧರ್ಮಜ್ಞ ಮಹಾಭಾಗ ಭವದ್ಭಿರ್ಗೌರವಂ ಕುಲಮ್ ।
ವೃಜಿನಂ ನಾರ್ಹತಿ ಪ್ರಾಪ್ತುಂ ಪೂಜ್ಯಂ ವಂದ್ಯಮಭೀಕ್ಷ್ಣಶಃ ॥ ೪೬ ॥

ಮಾ ರೋದೀದಸ್ಯ ಜನನೀ ಗೌತಮೀ ಪತಿದೇವತಾ ।
ಯಥಾಹಂ ಮೃತವತ್ಸಾಽಽರ್ತಾ ರೋದಿಮ್ಯಶ್ರುಮುಖೀ ಮುಹುಃ ॥ ೪೭ ॥

ಯೈಃ ಕೋಪಿತಂ ಬ್ರಹ್ಮಕುಲಂ ರಾಜನ್ಯೈರಜಿತಾತ್ಮಭಿಃ ।
ತತ್ಕುಲಂ ಪ್ರದಹತ್ಯಾಶು ಸಾನುಬಂಧಂ ಶುಚಾರ್ಪಿತಮ್ ॥ ೪೮ ॥

ಸೂತ ಉವಾಚ

ಧರ್ಮ್ಯಂ ನ್ಯಾಯ್ಯಂ ಸಕರುಣಂ ನಿರ್ವ್ಯಲೀಕಂ ಸಮಂ ಮಹತ್ ।
ರಾಜಾ ಧರ್ಮಸುತೋ ರಾಜ್ಞ್ಯಾಃ ಪ್ರತ್ಯನಂದದ್ವಚೋ ದ್ವಿಜಾಃ ॥ ೪೯ ॥

ನಕುಲಃ ಸಹದೇವಶ್ಚ ಯುಯುಧಾನೋ ಧನಂಜಯಃ ।
ಭಗವಾನ್ ದೇವಕೀಪುತ್ರೋ ಯೇ ಚಾನ್ಯೇ ಯಾಶ್ಚ ಯೋಷಿತಃ ॥ ೫೦ ॥

ತತ್ರಾಹಾಮರ್ಷಿತೋ ಭೀಮಸ್ತಸ್ಯ ಶ್ರೇಯಾನ್ವಧಃ ಸ್ಮೃತಃ ।
ನ ಭರ್ತುರ್ನಾತ್ಮನಶ್ಚಾರ್ಥೇ ಯೋಽಹನ್ ಸುಪ್ತಾನ್ ಶಿಶೂನ್ ವೃಥಾ ॥ ೫೧ ॥

ನಿಶಮ್ಯ ಭೀಮಗದಿತಂ ದ್ರೌಪದ್ಯಾಶ್ಚ ಚತುರ್ಭುಜಃ ।
ಆಲೋಕ್ಯ ವದನಂ ಸಖ್ಯುರಿದಮಾಹ ಹಸನ್ನಿವ ॥ ೫೨ ॥

ಅನಂತರ ಅರ್ಜುನನು ಶ್ರೀಕೃಷ್ಣನ ಸಾರಥ್ಯದೊಂದಿಗೆ ತನ್ನ ಯುದ್ಧ ಶಿಬಿರವನ್ನು ತಲುಪಿದನು. ಅಲ್ಲಿ ತನ್ನ ಪುತ್ರರಿಗಾಗಿ ದುಃಖಿಸುತ್ತಿರುವ ಪ್ರಿಯಳಾದ ಪಾಂಚಾಲಿಗೆ ಅಶ್ವತ್ಥಾಮನನ್ನು ಒಪ್ಪಿಸಿದನು. ॥ ೪೧ ॥ ದ್ರೌಪದಿಯು ನೋಡಿದಳು – ಅಶ್ವತ್ಥಾಮನು ಪಶುವಿನಂತೆ ಬಂಧಿಸಲ್ಪಟ್ಟಿದ್ದನು. ನಿಂದಿತ ಕಾರ್ಯವೆಸಗಿದ್ದರಿಂದ ನಾಚಿ ತಲೆತಗ್ಗಿಸಿಕೊಂಡಿದ್ದನು. ತನಗೆ ಅನಿಷ್ಟವನ್ನು ಮಾಡಿದಂತಹ ಗುರುಪುತ್ರ ಅಶ್ವತ್ಥಾಮನು ಈ ಪ್ರಕಾರ ಅಪಮಾನಿತನಾಗಿರುವುದನ್ನು ನೋಡಿ ದ್ರೌಪದಿಯ ಕೋಮಲ ಹೃದಯವು ಕೃಪೆಯಿಂದ ತುಂಬಿ ಬಂದು, ಅವಳು ಅಶ್ವತ್ಥಾಮನನ್ನು ನಮಸ್ಕರಿಸಿದಳು. ॥ ೪೨ ॥ ಗುರುಪುತ್ರನನ್ನು ಹೀಗೆ ಕಟ್ಟಿಹಾಕಿ ತಂದಿರುವುದು ಆಕೆಗೆ ಸಹನೆ ಯಾಗದೆ ಹೇಳಿದಳು – ಇವರನ್ನು ಬಿಡುಗಡೆಮಾಡಿ. ಬಿಟ್ಟುಬಿಡಿ-ಬಿಟ್ಟುಬಿಡಿ. ಇವರು ಬ್ರಾಹ್ಮಣರು, ನಮ್ಮ ಗುರುಸ್ಥಾನದಲ್ಲಿರುವವರು, ಅತ್ಯಂತ ಪೂಜನೀಯರೂ ಆಗಿದ್ದಾರೆ. ॥ ೪೩ ॥ ಯಾರ ಅನುಗ್ರಹದಿಂದ ನೀವು ರಹಸ್ಯಸಹಿತ ಧನುರ್ವೇದವನ್ನೂ, ಪ್ರಯೋಗ-ಉಪಸಂಹಾರಸಹಿತ ಸಮಸ್ತ ಅಸ್ತ್ರಗಳನ್ನು ಪಡೆದಿರುವಿರೋ, ಆ ಭಗವಾನ್ ದ್ರೋಣಾಚಾರ್ಯರೇ ಪುತ್ರರೂಪದಿಂದ ನಿಮ್ಮ ಮುಂದೆ ನಿಂತಿದ್ದಾರೆ. ಆಚಾರ್ಯರ ಅರ್ಧಾಂಗಿನಿಯಾದ ಕೃಪಿಯು ಈ ವೀರಪುತ್ರನ ಮೇಲಿನ ಮಮತೆಯಿಂದಲೇ ಪತಿಯೊಡನೆ ಸಹಗಮನ ಮಾಡಲಾರದೆ, ಜೀವಿತವಾಗಿರುವಳು. ॥ ೪೪-೪೫ ॥ ಧರ್ಮಜ್ಞರೇ! ಮಹಾಭಾಗರೇ! ಪ್ರತಿದಿನವೂ ಪೂಜಾ ನಮಸ್ಕಾರಗಳಿಗೆ ಯೋಗ್ಯವಾದ ಗುರುವಂಶಕ್ಕೆ ವ್ಯಥೆಯುಂಟು ಮಾಡುವುದು ನಿಮಗೆ ಸರಿಯಲ್ಲ. ॥ ೪೬ ॥ ನಾನು ಪುತ್ರರ ಮರಣದಿಂದ ಪೀಡಿತಳಾಗಿ ಕಣ್ಣೀರು ಸುರಿಸುತ್ತಾ ಅಳುವಂತೆ ಪತಿವ್ರತೆಯಾದ ಈತನ ತಾಯಿ ಗೌತಮಿಯು ಅಳದಿರಲಿ. ॥ ೪೭ ॥ ಉಚ್ಛೃಂಖಲನಾಗಿ ತನ್ನ ದುಷ್ಕೃತ್ಯದಿಂದ ಬ್ರಾಹ್ಮಣಕುಲಕ್ಕೆ ಕೋಪವನ್ನುಂಟುಮಾಡುವ ರಾಜನನ್ನು ಕುಪಿತವಾದ ಬ್ರಾಹ್ಮಣ ಕುಲವು ಶೋಕಾಗ್ನಿಗೆ ತಳ್ಳಿ, ಶೀಘ್ರವಾಗಿ ಸುಟ್ಟುಬಿಡುತ್ತದೆ. ॥ ೪೮ ॥

ಸೂತಪುರಾಣಿಕರು ಹೇಳುತ್ತಾರೆ – ಶೌನಕಾದಿ ಋಷಿಗಳಿರಾ! ಧರ್ಮ ಮತ್ತು ನ್ಯಾಯಗಳಿಗೆ ಅನುಕೂಲವಾಗಿ, ನಿಷ್ಕಪಟವಾಗಿ, ಕಾರುಣ್ಯ-ಸಮತೆಗಳಿಂದ ಕೂಡಿದ್ದ ಆ ಮಹಾರಾಣಿಯ ವಚನವನ್ನು ಧರ್ಮಪುತ್ರ ಯುಧಿಷ್ಠಿರನು ಅಭಿನಂದಿಸಿದನು. ॥ ೪೯ ॥ ಜೊತೆಗೆ ನಕುಲನೂ, ಸಹದೇವನೂ, ಸಾತ್ಯಕಿಯೂ, ಅರ್ಜುನನೂ ಹಾಗೂ ಸ್ವಯಂ ಭಗವಾನ್ ಶ್ರೀಕೃಷ್ಣನೂ ಹಾಗೆಯೇ ಅಲ್ಲಿ ಉಪಸ್ಥಿತರಾಗಿದ್ದ ಎಲ್ಲ ನರ-ನಾರಿಯರು ಅದನ್ನು ಸಮರ್ಥಿಸಿದರು. ॥ ೫೦ ॥ ಆಗ ಭೀಮಸೇನನು ಮಾತ್ರ ಕೋಪಭರಿತನಾಗಿ – ಇವನು ಮಲಗಿದ್ದ ಮಕ್ಕಳನ್ನು ತನಗಾಗಲೀ, ತನ್ನ ಒಡೆಯನಿಗಾಗಲೀ ಯಾವುದೇ ಪ್ರಯೋಜನವಿಲ್ಲದೆ ವ್ಯರ್ಥವಾಗಿ ಕೊಂದಿರುವನು. ಆತನನ್ನು ವಧಿಸುವುದೇ ಶ್ರೇಯಸ್ಕರವೆಂದು ಗುಡುಗಿದನು ॥ ೫೧ ॥ ಆಗ ಭಗವಾನ್ ಶ್ರೀಕೃಷ್ಣನು ದ್ರೌಪದಿ ಮತ್ತು ಭೀಮಸೇನನ ಮಾತನ್ನು ಕೇಳಿ, ಅರ್ಜುನನ ಕಡೆಗೆ ನೋಡುತ್ತಾ ನಸುನಕ್ಕು ಹೀಗೆಂದನು – ॥ ೫೨ ॥

ಶ್ರೀಕೃಷ್ಣ ಉವಾಚ

ಬ್ರಹ್ಮಬಂಧುರ್ನ ಹಂತವ್ಯ ಆತತಾಯೀ ವಧಾರ್ಹಣಃ ।
ಮಯೈವೋಭಯಮಾಮ್ನಾತಂ ಪರಿಪಾಹ್ಯನುಶಾಸನಮ್ ॥ ೫೩ ॥

ಕುರು ಪ್ರತಿಶ್ರುತಂ ಸತ್ಯಂ ಯತ್ತತ್ಸಾಂತ್ವಯತಾ ಪ್ರಿಯಾಮ್ ।
ಪ್ರಿಯಂ ಚ ಭೀಮಸೇನಸ್ಯ ಪಾಂಚಾಲ್ಯಾ ಮಹ್ಯಮೇವ ಚ ॥ ೫೪ ॥

ಸೂತ ಉವಾಚ

ಅರ್ಜುನಃ ಸಹಸಾಽಽಜ್ಞಾಯ ಹರೇರ್ಹಾರ್ದಮಥಾಸಿನಾ ।
ಮಣಿಂ ಜಹಾರ ಮೂರ್ಧನ್ಯಂ ದ್ವಿಜಸ್ಯ ಸಹಮೂರ್ಧಜಮ್ ॥ ೫೫ ॥

ವಿಮುಚ್ಯ ರಶನಾಬದ್ಧಂ ಬಾಲಹತ್ಯಾಹತಪ್ರಭಮ್ ।
ತೇಜಸಾ ಮಣಿನಾ ಹೀನಂ ಶಿಬಿರಾನ್ನಿರಯಾಪಯತ್ ॥ ೫೬ ॥

ವಪನಂ ದ್ರವಿಣಾದಾನಂ ಸ್ಥಾನಾನ್ನಿರ್ಯಾಪಣಂ ತಥಾ ।
ಏಷ ಹಿ ಬ್ರಹ್ಮಬಂಧೂನಾಂ ವಧೋ ನಾನ್ಯೋಽಸ್ತಿ ದೈಹಿಕಃ ॥ ೫೭ ॥

ಪುತ್ರಶೋಕಾತುರಾಃ ಸರ್ವೇ ಪಾಂಡವಾಃ ಸಹ ಕೃಷ್ಣಯಾ ।
ಸ್ವಾನಾಂ ಮೃತಾನಾಂ ಯತ್ಕೃತ್ಯಂ ಚಕ್ರುರ್ನಿರ್ಹರಣಾದಿಕಮ್ ॥ ೫೮ ॥

ಭಗವಾನ್ ಶ್ರೀಕೃಷ್ಣನೆಂದನು – "ಪಾರ್ಥ! ಬ್ರಾಹ್ಮಣನು ಪತಿತನಾಗಿದ್ದರೂ ಅತನನ್ನು ವಧಿಸಬಾರದು. ಹಾಗೆಯೇ ಆತತಾಯಿಯನ್ನು ಸಂಹರಿಸುವುದೇ ಸರಿ. ಈ ಎರಡು ಆಜ್ಞೆಗಳನ್ನೂ ಶಾಸ್ತ್ರದಲ್ಲಿ ನಾನೇ ಹೇಳಿರುತ್ತೇನೆ. ಅದಕ್ಕಾಗಿ ನನ್ನ ಎರಡೂ ಆಜ್ಞೆಗಳನ್ನು ಪಾಲಿಸು. ॥ ೫೩ ॥ ಪ್ರಿಯೆಯಾದ ದ್ರೌಪದಿಯನ್ನು ಸಮಾಧಾನಗೊಳಿಸುವಾಗ ನೀನು ಮಾಡಿದ ಪ್ರತಿಜ್ಞೆಯನ್ನು ನೆರವೇರಿಸು. ಜೊತೆಗೆ ಭೀಮಸೇನನಿಗೂ, ಪಾಂಚಾಲಿಗೂ, ನನಗೂ ಪ್ರಿಯವಾಗಿರುವುದನ್ನೂ ಮಾಡು." ॥ ೫೪ ॥

ಸೂತಪುರಾಣಿಕರು ಹೇಳುತ್ತಾರೆ – ಶೌನಕಾದಿಗಳೇ! ಅರ್ಜುನನು ಭಗವಂತನ ಹೃದಯದ ಆಶಯವನ್ನು ಒಡನೆಯೇ ಗ್ರಹಿಸಿ, ತನ್ನ ಖಡ್ಗದಿಂದ ಅಶ್ವತ್ಥಾಮನ ತಲೆಯಲ್ಲಿದ್ದ ನೈಸರ್ಗಿಕ ಮಣಿಯನ್ನು ಕೂದಲುಸಹಿತ ಕಿತ್ತು ತೆಗೆದುಕೊಂಡನು. ॥ ೫೫ ॥ ಬಾಲಕರ ಹತ್ಯೆಯಿಂದ ಅಶ್ವತ್ಥಾಮನು ಮೊದಲೇ ಕಾಂತಿಹೀನನಾಗಿದ್ದನು. ಈಗ ಮಣಿ ಮತ್ತು ಬ್ರಹ್ಮತೇಜಸ್ಸನ್ನೂ ಕಳೆದುಕೊಂಡುಬಿಟ್ಟನು. ಇಂತಹ ಸ್ಥಿತಿಯಲ್ಲಿ ಅವನನ್ನು ಬಂಧನ ಮುಕ್ತನಾಗಿಸಿ ಶಿಬಿರದಿಂದ ಹೊರಕ್ಕೆ ಹಾಕಿದರು. ॥ ೫೬ ॥ ಕೂದಲುಸಹಿತ ತಲೆ ಬೋಳಿಸುವುದು, ಹಣ ಕಿತ್ತುಕೊಳ್ಳುವುದು, ಸ್ಥಾನಭ್ರಷ್ಟನಾಗಿಸುವುದು – ಇವು ಬ್ರಾಹ್ಮಣರಿಗೆ ವಧೆಗೆ ಸಮಾನವಾದ ಶಿಕ್ಷೆ. ಅವರಿಗೆ ಇದಕ್ಕಿಂತ ಬೇರೆ ದೈಹಿಕವಾದ ವಧೆಯನ್ನು ಮಾಡಬಾರದು. ॥ ೫೭ ॥ ಅನಂತರ ಪುತ್ರರ ಮೃತ್ಯುವಿನಿಂದ ದುಃಖದಲ್ಲಿ ಮುಳುಗಿದ್ದ ಪಾಂಡವರು ದ್ರೌಪದಿಯೊಡನೆ ಮೃತರಾಗಿದ್ದ ತಮ್ಮ ಪುತ್ರಾದಿ ಬಂಧುಗಳ ಉತ್ತರಕ್ರಿಯೆಗಳನ್ನು ಮಾಡಿದರು. ॥ ೫೮ ॥

ಏಳನೆಯ ಅಧ್ಯಾಯವು ಮುಗಿಯಿತು. ॥ ೭ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಪ್ರಥಮಸ್ಕಂಧೇ
ದ್ರೌಣಿನಿಗ್ರಹೋ ನಾಮ ಸಪ್ತಮೋಽಧ್ಯಾಯಃ ॥ ೭ ॥

ಎಂಟನೆಯ ಅಧ್ಯಾಯ

ಗರ್ಭದಲ್ಲಿ ಪರೀಕ್ಷಿತನ ರಕ್ಷಣೆ, ಕುಂತಿಯು ಮಾಡಿದ ಶ್ರೀಕೃಷ್ಣನ ಸ್ತುತಿ, ಧರ್ಮರಾಜನ ಪಶ್ಚಾತ್ತಾಪ

ಸೂತ ಉವಾಚ

ಅಥ ತೇ ಸಂಪರೇತಾನಾಂ ಸ್ವಾನಾಮುದಕಮಿಚ್ಛತಾಮ್ ।
ದಾತುಂ ಸಕೃಷ್ಣಾ ಗಂಗಾಯಾಂ ಪುರಸ್ಕೃತ್ಯ ಯಯುಃ ಸ್ತ್ರಿಯಃ ॥ ೧ ॥

ತೇ ನಿನೀಯೋದಕಂ ಸರ್ವೇ ವಿಲಪ್ಯ ಚ ಭೃಶಂ ಪುನಃ ।
ಆಪ್ಲುತಾ ಹರಿಪಾದಾಬ್ಜರಜಃಪೂತಸರಿಜ್ಜಲೇ ॥ ೨ ॥

ತತ್ರಾಸೀನಂ ಕುರುಪತಿಂ ಧೃತರಾಷ್ಟ್ರಂ ಸಹಾನುಜಮ್ ।
ಗಾಂಧಾರೀಂ ಪುತ್ರಶೋಕಾರ್ತಾಂ ಪೃಥಾಂ ಕೃಷ್ಣಾಂ ಚ ಮಾಧವಃ ॥ ೩ ॥

ಸೂತಪುರಾಣಿಕರು ಹೇಳುತ್ತಾರೆ – ಋಷಿಗಳೇ! ಅನಂತರ ಪಾಂಡವರು ತಿಲೋದಕವನ್ನು ಬಯಸುತ್ತಿದ್ದ ಸ್ವಜನರಿಗೆ ತರ್ಪಣವನ್ನು ಕೊಡುವುದಕ್ಕಾಗಿ ಶ್ರೀಕೃಷ್ಣನೊಡನೆ ಸ್ತ್ರೀಯರನ್ನು ಮುಂದಿಟ್ಟುಕೊಂಡು ಗಂಗಾನದಿಯ ತೀರಕ್ಕೆ ಬಂದರು. ॥ ೧ ॥ ಅಲ್ಲಿ ಅವರೆಲ್ಲರೂ ಮೃತಬಂಧುಗಳಿಗೆ ಜಲತರ್ಪಣಗಳನ್ನು ಇತ್ತು, ಅವರನ್ನು ನೆನೆದುಕೊಂಡು ವಿಲಾಪಿಸತೊಡಗಿದರು. ಬಳಿಕ ಶ್ರೀಭಗವಂತನ ಪಾದಾಬ್ಜಧೂಳಿಯಿಂದ ಪರಿಶುದ್ಧವಾದ ಗಂಗಾತೀರ್ಥದಲ್ಲಿ ಮತ್ತೊಮ್ಮೆ ಸ್ನಾನಮಾಡಿದರು. ॥ ೨ ॥ ಅಲ್ಲಿ ಕುಳಿತಿದ್ದ ಭೀಮಾರ್ಜುನಾದಿ ತಮ್ಮಂದಿರಿಂದೊಡಗೂಡಿ ಧರ್ಮರಾಜನನ್ನು, ಧೃತರಾಷ್ಟ್ರನನ್ನೂ, ಪುತ್ರಶೋಕದಿಂದ ಪೀಡಿತರಾಗಿದ್ದ ಗಾಂಧಾರೀ- ಕುಂತೀ- ದ್ರೌಪದಾದೇವಿಯನ್ನು ಶ್ರೀಕೃಷ್ಣಪರಮಾತ್ಮನು ಧೌಮ್ಯಾದಿ ಮಹರ್ಷಿ

ಸಾಂತ್ವಯಾಮಾಸ ಮುನಿಭಿರ್ಹತಬಂಧೂನ್ ಶುಚಾರ್ಪಿತಾನ್ ।
ಭೂತೇಷು ಕಾಲಸ್ಯ ಗತಿಂ ದರ್ಶಯನ್ನ ಪ್ರತಿಕ್ರಿಯಾಮ್ ॥ ೪ ॥

ಸಾಧಯಿತ್ವಾಜಾತಶತ್ರೋಃ ಸ್ವಂ ರಾಜ್ಯಂ ಕಿತವೈರ್ಹೃತಮ್ ।
ಘಾತಯಿತ್ವಾಸತೋ ರಾಜ್ಞಃ ಕಚಸ್ಪರ್ಶಕ್ಷತಾಯುಷಃ ॥ ೫ ॥

ಯಾಜಯಿತ್ವಾಶ್ವಮೇಧೈಸ್ತಂ ತ್ರಿಭಿರುತ್ತಮಕಲ್ಪಕೈಃ ।
ತದ್ಯಶಃ ಪಾವನಂ ದಿಕ್ಷು ಶತಮನ್ಯೋರಿವಾತನೋತ್ ॥ ೬ ॥

ಆಮಂತ್ರ್ಯ ಪಾಂಡುಪುತ್ರಾಂಶ್ಚ ಶೈನೇಯೋದ್ಧವಸಂಯುತಃ ।
ದ್ವೈಪಾಯನಾದಿಭಿರ್ವಿಪ್ರೈಃ ಪೂಜಿತೈಃ ಪ್ರತಿಪೂಜಿತಃ ॥ ೭ ॥

ಗಂತುಂ ಕೃತಮತಿರ್ಬ್ರಹ್ಮನ್ ದ್ವಾರಕಾಂ ರಥಮಾಸ್ಥಿತಃ ।
ಉಪಲೇಭೇಽಭಿಧಾವಂತೀಮುತ್ತರಾಂ ಭಯವಿಹ್ವಲಾಮ್ ॥ ೮ ॥

ಉತ್ತರೋವಾಚ

ಪಾಹಿ ಪಾಹಿ ಮಹಾಯೋಗಿನ್ ದೇವದೇವ ಜಗತ್ಪತೇ ।
ನಾನ್ಯಂ ತ್ವದಭಯಂ ಪಶ್ಯೇ ಯತ್ರ ಮೃತ್ಯುಃ ಪರಸ್ಪರಮ್ ॥ ೯ ॥

ಅಭಿದ್ರವತಿ ಮಾಮೀಶ ಶರಸ್ತಪ್ತಾಯಸೋ ವಿಭೋ ।
ಕಾಮಂ ದಹತು ಮಾಂ ನಾಥ ಮಾ ಮೇ ಗರ್ಭೋ ನಿಪಾತ್ಯತಾಮ್ ॥ ೧೦ ॥

ಸೂತ ಉವಾಚ

ಉಪಧಾರ್ಯ ವಚಸ್ತಸ್ಯಾ ಭಗವಾನ್ಭಕ್ತವತ್ಸಲಃ ।
ಅಪಾಂಡವಮಿದಂ ಕರ್ತುಂ ದ್ರೌಣೇರಸ್ತ್ರಮಬುಧ್ಯತ ॥ ೧೧ ॥

ತರ್ಹ್ಯೇವಾಥ ಮುನಿಶ್ರೇಷ್ಠ ಪಾಂಡವಾಃ ಪಂಚ ಸಾಯಕಾನ್ ।
ಆತ್ಮನೋಽಭಿಮುಖಾನ್ದೀಪ್ತಾನಾಲಕ್ಷ್ಯಾಸ್ತ್ರಾಣ್ಯುಪಾದದುಃ ॥ ೧೨ ॥

ವ್ಯಸನಂ ವೀಕ್ಷ್ಯ ತತ್ತೇಷಾಮನನ್ಯವಿಷಯಾತ್ಮನಾಮ್ ।
ಸುದರ್ಶನೇನ ಸ್ವಾಸ್ತ್ರೇಣ ಸ್ವಾನಾಂ ರಕ್ಷಾಂ ವ್ಯಧಾದ್ವಿಭುಃ ॥ ೧೩ ॥

ಗಳೊಡನೆ ಸಮಾಧಾನ ಪಡಿಸಿದನು. 'ಪ್ರಪಂಚದಲ್ಲಿ ಎಲ್ಲ ಪ್ರಾಣಿಗಳು ಕಾಲಕ್ಕೆ ಅಧೀನರಾಗಿದ್ದಾರೆ. ಮೃತ್ಯುವಿನಿಂದ ಯಾರನ್ನೂ ಯಾರೂ ರಕ್ಷಿಸಲಾರರು.' ಎಂದು ತಿಳಿಸಿ ಬಂಧು ಮರಣದಿಂದ ಶೋಕಿಸುತ್ತಿರುವ ಅವರನ್ನು ಸಾಂತ್ವನಗೊಳಿಸಿದನು. ॥ ೩-೪ ॥

ಈ ರೀತಿ ಭಗವಾನ್ ಶ್ರೀಕೃಷ್ಣನು ಅಜಾತಶತ್ರುವಾದ ಮಹಾರಾಜ ಯುಧಿಷ್ಠಿರನಿಗೆ, ಧೂರ್ತರು ಅನ್ಯಾಯದ ಮೋಸದಿಂದ ಕಸಿದುಕೊಂಡಿದ್ದ ರಾಜ್ಯವನ್ನು ಹಿಂದಕ್ಕೆ ಕೊಡಿಸಿದನು ಮತ್ತು ದ್ರೌಪದಿಯ ಕೇಶ ಪಾಶಗಳಿಗೆ ಕೈಹಾಕಿದ, ಆಯುಸ್ಸು ಕ್ಷೀಣ ಹೊಂದಿದ್ದ ದುಷ್ಟರಾಜರನ್ನು ಸಂಹಾರ ಮಾಡಿಸಿದನು. ॥ ೫ ॥ ಜೊತೆಗೆ ಯುಧಿಷ್ಠಿರ ಮಹಾರಾಜನಿಂದ ಉತ್ತಮ ಸಾಮಗ್ರಿ ಸಂಪತ್ತು ಮತ್ತು ಉತ್ತಮ ಋತ್ವಿಜರಿಂದ ಮೂರು ಅಶ್ವಮೇಧ ಯಜ್ಞಗಳನ್ನು ಮಾಡಿಸಿದನು. ಅವನ ಕೀರ್ತಿಯು ನೂರು ಯಜ್ಞ ಮಾಡಿದ ಇಂದ್ರನ ಕೀರ್ತಿಯಂತೆ ಎಲ್ಲೆಡೆ ಹರಡುವಂತೆ ಮಾಡಿದನು. ॥ ೬ ॥ ಇದಾದ ಬಳಿಕ ಭಗವಾನ್ ಶ್ರೀಕೃಷ್ಣನು ದ್ವಾರಕೆಗೆ ಹೋಗಲು ವಿಚಾರಮಾಡಿದನು. ಅದಕ್ಕಾಗಿ ಪಾಂಡವರಿಂದ ಬೀಳ್ಕೊಂಡನು, ದ್ವೈಪಾಯನ ವ್ಯಾಸರೇ ಮುಂತಾದ ಬ್ರಾಹ್ಮಣರನ್ನು ಸತ್ಕರಿಸಿ ತಾನೂ ಸತ್ಕೃತನಾದನು. ಅವನು ದ್ವಾರಕೆಗೆ ಹೊರಡಲು ಉದ್ಧವ, ಸಾತ್ಯಕಿಯರೊಡನೆ ರಥವನ್ನೇರಿದನು. ಆಗಲೇ ಅಭಿಮನ್ಯುವಿನ ಪತ್ನಿ ಉತ್ತರೆಯು ಭಯದಿಂದ ಕಳವಳಗೊಂಡು ಎದುರಿಗೆ ಓಡಿ ಬರುತ್ತಿರುವುದನ್ನು ನೋಡಿದನು. ॥ ೭-೮ ॥

ಉತ್ತರೆಯು ಪ್ರಭುವನ್ನು ಹೀಗೆ ಪ್ರಾರ್ಥಿಸತೊಡಗಿದಳು - 'ದೇವಾಧಿದೇವಾ! ಜಗತ್ಪತಿಯೇ! ಮಹಾಯೋಗಿಯೇ! ಕಾಪಾಡು! ಕಾಪಾಡು! ನಿನ್ನನ್ನು ಬಿಟ್ಟು ನನಗೆ ಬೇರೆಯಾರೂ ಅಭಯ ನೀಡಲಾರರು. ಏಕೆಂದರೆ, ಇಲ್ಲಿ ಎಲ್ಲರೂ ಪರಸ್ಪರ ಮೃತ್ಯುವಿಗೆ ಕಾರಣರಾಗುತ್ತಿದ್ದಾರೆ. ॥ ೯ ॥ ಪ್ರಭೋ! ನೀನು ಸರ್ವಶಕ್ತಿಯುಳ್ಳವನಾಗಿರುವೆ. ಕಾದ ಕಬ್ಬಿಣದ ಬಾಣವೊಂದು ನನ್ನನ್ನು ಅಟ್ಟಿಕೊಂಡು ಬರುತ್ತಿದೆ. ಇದು ಬೇಕಾದರೆ ನನ್ನನ್ನು ಸುಟ್ಟು ಹಾಕಲಿ. ಆದರೆ ನನ್ನ ಗರ್ಭವನ್ನು ನಾಶಪಡಿಸದಂತೆ ಅನುಗ್ರಹಿಸು ಸ್ವಾಮಿ! ॥ ೧೦ ॥

ಸೂತಪುರಾಣಿಕರು ಹೇಳುತ್ತಿದ್ದಾರೆ - ಭಕ್ತವತ್ಸಲ ಭಗವಾನ್ ಶ್ರೀಕೃಷ್ಣನು ಆಕೆಯ ಗೋಳಾಟವನ್ನು ಕೇಳಿದೊಡನೆಯೇ - 'ಅಶ್ವತ್ಥಾಮನು ಪಾಂಡವರ ವಂಶವನ್ನೇ ನಿರ್ಬೀಜವನ್ನಾಗಿ ಮಾಡಲು ಬ್ರಹ್ಮಾಸ್ತ್ರವನ್ನು ಪ್ರಯೋಗಿಸಿರುವನು' ಎಂದು ಅರಿತುಕೊಂಡನು. ॥ ೧೧ ॥ ಶೌನಕರೇ! ಅದೇ ಸಮಯದಲ್ಲಿ ಉರಿಯುತ್ತಿರುವ ಐದು ಬಾಣಗಳು ತಮ್ಮ ಕಡೆಗೆ ಬರುತ್ತಿರುವುದನ್ನು ಕಂಡು ಪಾಂಡವರು ಅವನ್ನು ಎದುರಿಸಲು ತಮ್ಮ-ತಮ್ಮ ಅಸ್ತ್ರಗಳನ್ನು ಎತ್ತಿಕೊಂಡರು. ॥ ೧೨ ॥ ತನಗೆ ಶರಣು ಬಂದಿದ್ದ ಅನನ್ಯ ಭಕ್ತರಿಗೆ ದೊಡ್ಡ ವಿಪತ್ತು ಬಂದಿರುವುದನ್ನು ಕಂಡು, ಸರ್ವಶಕ್ತನಾದ ಭಗವಾನ್ ಶ್ರೀಕೃಷ್ಣನು ತನ್ನ ದಿವ್ಯವಾದ ಸುದರ್ಶನದಿಂದ ಅವರನ್ನು ಕಾಪಾಡಿದನು. ॥ ೧೩ ॥

ಅಂತಃಸ್ಥಃ ಸರ್ವಭೂತಾನಾಮಾತ್ಮಾ ಯೋಗೇಶ್ವರೋ ಹರಿಃ ।
ಸ್ವಮಾಯಯಾವೃಣೋದ್ಗರ್ಭಂ ವೈರಾಟ್ಯಾಃ ಕುರುತಂತವೇ ॥ ೧೪ ॥

ಯದ್ಯಪ್ಯಸ್ತ್ರಂ ಬ್ರಹ್ಮಶಿರಸ್ತ್ವಮೋಘಂ ಚಾಪ್ರತಿಕ್ರಿಯಮ್ ।
ವೈಷ್ಣವಂ ತೇಜ ಆಸಾದ್ಯ ಸಮಶಾಮ್ಯದ್ಭೃಗೂದ್ವಹ ॥ ೧೫ ॥

ಮಾ ಮಂಸ್ಥಾ ಹ್ಯೇತದಾಶ್ಚರ್ಯಂ ಸರ್ವಾಶ್ಚರ್ಯಮಯೇಽಚ್ಯುತೇ ।
ಯ ಇದಂ ಮಾಯಯಾ ದೇವ್ಯಾ ಸೃಜತ್ಯವತಿ ಹಂತ್ಯಜಃ ॥ ೧೬ ॥

ಬ್ರಹ್ಮತೇಜೋವಿನಿರ್ಮುಕ್ತೈರಾತ್ಮಜೈಃ ಸಹ ಕೃಷ್ಣಯಾ ।
ಪ್ರಯಾಣಾಭಿಮುಖಂ ಕೃಷ್ಣಮಿದಮಾಹ ಪೃಥಾ ಸತೀ ॥ ೧೭ ॥

ಕುಂತ್ಯುವಾಚ

ನಮಸ್ಯೇ ಪುರುಷಂ ತ್ವಾಽಽದ್ಯಮೀಶ್ವರಂ ಪ್ರಕೃತೇಃ ಪರಮ್ ।
ಅಲಕ್ಷ್ಯಂ ಸರ್ವಭೂತಾನಾಮಂತರ್ಬಹಿರವಸ್ಥಿತಮ್ ॥ ೧೮ ॥

ಮಾಯಾಜವನಿಕಾಚ್ಛನ್ನಮಜ್ಞಾಧೋಕ್ಷಜಮವ್ಯಯಮ್ ।
ನ ಲಕ್ಷ್ಯಸೇ ಮೂಢದೃಶಾ ನಟೋ ನಾಟ್ಯಧರೋ ಯಥಾ ॥ ೧೯ ॥

ತಥಾ ಪರಮಹಂಸಾನಾಂ ಮುನೀನಾಮಮಲಾತ್ಮನಾಮ್ ।
ಭಕ್ತಿಯೋಗವಿಧಾನಾರ್ಥಂ ಕಥಂ ಪಶ್ಯೇಮ ಹಿ ಸ್ತ್ರಿಯಃ ॥ ೨೦ ॥

ಕೃಷ್ಣಾಯ ವಾಸುದೇವಾಯ ದೇವಕೀನಂದನಾಯ ಚ ।
ನಂದಗೋಪಕುಮಾರಾಯ ಗೋವಿಂದಾಯ ನಮೋ ನಮಃ ॥ ೨೧ ॥

ನಮಃ ಪಂಕಜನಾಭಾಯ ನಮಃ ಪಂಕಜಮಾಲಿನೇ ।
ನಮಃ ಪಂಕಜನೇತ್ರಾಯ ನಮಸ್ತೇ ಪಂಕಜಾಂಘ್ರಯೇ ॥ ೨೨ ॥

ಯಥಾ ಹೃಷೀಕೇಶ ಖಲೇನ ದೇವಕೀ
ಕಂಸೇನ ರುದ್ಧಾತಿಚಿರಂ ಶುಚಾರ್ಪಿತಾ ।
ವಿಮೋಚಿತಾಹಂ ಚ ಸಹಾತ್ಮಜಾ ವಿಭೋ
ತ್ವಯೈವ ನಾಥೇನ ಮುಹುರ್ವಿಪದ್ಗಣಾತ್ ॥ ೨೩ ॥

ಸರ್ವಪ್ರಾಣಿಗಳ ಅಂತರ್ಯಾಮಿಯಾಗಿರುವ ಯೋಗೇಶ್ವರನಾದ ಶ್ರೀಕೃಷ್ಣನು ಕುರುವಂಶದ ಕುಡಿಯನ್ನು ಉಳಿಸುವುದಕ್ಕಾಗಿ ಉತ್ತರೆಯ ಗರ್ಭವನ್ನು ತನ್ನ ಮಾಯಾಕವಚದಿಂದ ಆವರಿಸಿಬಿಟ್ಟನು. ॥ ೧೪ ॥ ಶೌನಕಾದಿ ಋಷಿಗಳಿರಾ! ಬ್ರಹ್ಮಶಿರೋಸ್ತ್ರವೆಂಬುದು ಅಮೋಘವಾದುದೇ. ಅದನ್ನು ನಿವಾರಿಸುವ ಪ್ರತ್ಯಸ್ತ್ರವಿಲ್ಲವೆಂಬುದೂ ನಿಜವೇ. ಆದರೂ ಭಗವಾನ್ ಶ್ರೀಕೃಷ್ಣನ ತೇಜದ ಇದಿರು ಅದು ಶಾಂತವಾಯಿತು. ॥ ೧೫ ॥ ಭೃಗುಕುಲತಿಲಕರೇ! ಇದೇನೋ ದೊಡ್ಡ ಆಶ್ಚರ್ಯವೆಂದು ತಿಳಿಯಬಾರದು. ಏಕೆಂದರೆ, ಭಗವಾನ್ ಶ್ರೀಕೃಷ್ಣನು ಸರ್ವಾಶ್ಚರ್ಯಮಯನಾದವನು. ತಾನು ಜನ್ಮರಹಿತನಾಗಿಯೇ ಇದ್ದು, ತನ್ನ ಮಾಯಾ ಶಕ್ತಿಯಿಂದ ಈ ಜಗತ್ತಿನ ಸೃಷ್ಟಿ ಸ್ಥಿತಿ ಸಂಹಾರಗಳನ್ನು ಮಾಡುವ ಸರ್ವಶಕ್ತಿ ಮಯನು ಪರಮಾತ್ಮನು. ॥ ೧೬ ॥ ಭಗವಾನ್ ಶ್ರೀಕೃಷ್ಣನು ದ್ವಾರಕೆಗೆ ಹೊರಟಾಗ ಬ್ರಹ್ಮಾಸ್ತ್ರದ ಜ್ವಾಲೆಯಿಂದ ಮುಕ್ತರಾದ ತನ್ನ ಪುತ್ರರೊಡನೆಯೂ, ದ್ರೌಪದಿಯೊಡನೆಯೂ ಕೂಡಿ ಸಾಧ್ವಿಯಾದ ಕುಂತೀದೇವಿಯು ಹೀಗೆ ಪ್ರಾರ್ಥಿಸಿದಳು. ॥ ೧೭ ॥

ಕುಂತೀದೇವಿಯು ಹೇಳಿದಳು – ನೀನು ಸಮಸ್ತ ಜೀವಿಗಳ ಒಳಗೂ-ಹೊರಗೂ ಪೂರ್ಣವಾಗಿ ವ್ಯಾಪಿಸಿಕೊಂಡಿರುವೆ. ಆದರೂ ಇಂದ್ರಿಯಗಳಿಂದ ಹಾಗೂ ವೃತ್ತಿಗಳಿಂದ ನೋಡಲಾಗುವುದಿಲ್ಲ. ಏಕೆಂದರೆ ನೀನು ಪ್ರಕೃತಿಯನ್ನು ಮೀರಿನಿಂತ ಆದಿಪುರುಷ ಪರಮೇಶ್ವರನಾಗಿರುವೆ. ನಾನು ನಿನಗೆ ನಮಸ್ಕರಿಸುತ್ತೇನೆ. ॥ ೧೮ ॥ ಇಂದ್ರಿಯಗಳಿಗೆ ಗೋಚರಿಸದ ಮಾಯೆಯೆಂಬ ಪರದೆಯೊಳಗೆ ತನ್ನನ್ನು ಮರೆಸಿಕೊಂಡಿರುವವನೂ, ಸರ್ವಜ್ಞನೂ ಆದ ನಿನ್ನನ್ನು ಅಜ್ಞಳಾದ ನಾನು ಹೇಗೆ ತಿಳಿಯಬಲ್ಲೆನು? ವೇಷವನ್ನು ಧರಿಸಿರುವ ಚತುರನಟನಂತೆ ಅಭಿನಯಿಸುತ್ತಿರುವ ನಿನ್ನನ್ನು ಮೂಢದೃಷ್ಟಿಯುಳ್ಳವರು ಹೇಗೆ ತಾನೇ ಗುರುತಿಸಬಲ್ಲರು? ॥ ೧೯ ॥ ನೀನು ಶುದ್ಧಹೃದಯವುಳ್ಳ ವಿಚಾರಶೀಲ ಜೀವನ್ಮುಕ್ತರಾದ ಪರಮಹಂಸರ ಹೃದಯದಲ್ಲಿ ನಿನ್ನ ಪ್ರೇಮಭಕ್ತಿಯನ್ನು ಮೂಡಿಸಲು ಅವತರಿಸಿರುವೆ. ಇಂತಹ ನಿನ್ನನ್ನು ನಮ್ಮಂತಹ ಪಾಮರ ಸ್ತ್ರೀಯರು ಹೇಗೆ ತಾನೇ ಗುರುತಿಸ ಬಲ್ಲರು? ॥ ೨೦ ॥ ಶ್ರೀಕೃಷ್ಣನಿಗೆ, ವಾಸುದೇವನಿಗೆ, ದೇವಕೀ ನಂದನನಿಗೆ, ನಂದಗೋಪಕುಮಾರನಿಗೆ, ಗೋವಿಂದನಿಗೆ, ನಮೋ ನಮಃ ನಮ್ಮ ಅನಂತ ವಂದನೆಗಳು. ॥ ೨೧ ॥ ಪದ್ಮನಾಭನಿಗೆ, ಪದ್ಮಮಾಲಾಧರನಿಗೆ, ಪದ್ಮಾಕ್ಷನಿಗೆ, ಪದ್ಮಪಾದನಾಗಿರುವ ಶ್ರೀಕೃಷ್ಣಾ! ನಿನಗೆ ಮತ್ತೆ-ಮತ್ತೆ ನಮಸ್ಕಾರಗಳು. ॥ ೨೨ ॥ ಹೃಷೀಕೇಶಾ! ಪ್ರಭೋ! ಹಿಂದೆ ದುಷ್ಟಕಂಸನಿಂದ ಸೆರೆಯಲ್ಲಿಟ್ಟಿದ್ದ, ಚಿರಕಾಲ ಶೋಕಗ್ರಸ್ತಳಾಗಿದ್ದ ದೇವಕಿಯನ್ನು ನೀನು ಕಾಪಾಡಿದಂತೆಯೇ ಪುತ್ರರೊಂದಿಗೆ ನನ್ನನ್ನೂ ಕೂಡ ನೀನು ಪದೇ-ಪದೇ ವಿಪತ್ತುಗಳಿಂದ ರಕ್ಷಿಸಿರುವೆ. ನೀನೇ ನಮ್ಮ ಸ್ವಾಮಿಯಾಗಿರುವೆ. ನೀನೇ ಸರ್ವಶಕ್ತಿಯುಳ್ಳವನು. ಶ್ರೀಕೃಷ್ಣಾ! ವಿಷದಿಂದ, ಲಾಕ್ಷಾಗೃಹದ ಭಯಾನಕ ಬೆಂಕಿಯಿಂದ, ಹಿಡಿಂಬಾದಿ ರಾಕ್ಷಸರ ದೃಷ್ಟಿಯಿಂದ, ದುಷ್ಟರ ದ್ಯೂತಸಭೆಯಿಂದ, ವನವಾಸದ ವಿಪತ್ತುಗಳಿಂದ, ಯುದ್ಧದ ಪ್ರತಿಯೊಂದು ಘಟ್ಟದಲ್ಲಿಯೂ ಮಹಾ

ವಿಷಾನ್ಮಹಾಗ್ನೇಃ ಪುರುಷಾದದರ್ಶನಾ-
ದಸತ್ಸಭಾಯಾ ವನವಾಸಕೃಚ್ಛ್ರತಃ ।
ಮೃಧೇ ಮೃಧೇಽನೇಕಮಹಾರಥಾಸ್ತ್ರತೋ
ದ್ರೌಣ್ಯಸ್ತ್ರತಶ್ಚಾಸ್ಮ ಹರೇಽಭಿರಕ್ಷಿತಾಃ ॥ ೨೪ ॥

ವಿಪದಃ ಸಂತು ನಃ ಶಶ್ವತ್ತತ್ರ ತತ್ರ ಜಗದ್ಗುರೋ ।
ಭವತೋ ದರ್ಶನಂ ಯತ್ಸ್ಯಾದಪುನರ್ಭವದರ್ಶನಮ್ ॥ ೨೫ ॥

ಜನ್ಮೈಶ್ವರ್ಯಶ್ರುತಶ್ರೀಭಿರೇಧಮಾನಮದಃ ಪುಮಾನ್ ।
ನೈವಾರ್ಹತ್ಯಭಿಧಾತುಂ ವೈ ತ್ವಾಮಕಿಂಚನಗೋಚರಮ್ ॥ ೨೬ ॥

ನಮೋಽಕಿಂಚನವಿತ್ತಾಯ ನಿವೃತ್ತಗುಣವೃತ್ತಯೇ ।
ಆತ್ಮಾರಾಮಾಯ ಶಾಂತಾಯ ಕೈವಲ್ಯಪತಯೇ ನಮಃ ॥ ೨೭ ॥

ಮನ್ಯೇ ತ್ವಾಂ ಕಾಲಮೀಶಾನಮನಾದಿನಿಧನಂ ವಿಭುಮ್ ।
ಸಮಂ ಚರಂತಂ ಸರ್ವತ್ರ ಭೂತಾನಾಂ ಯನ್ಮಿಥಃ ಕಲಿಃ ॥ ೨೮ ॥

ನ ವೇದ ಕಶ್ಚಿದ್ಭಗವಂಶ್ಚಿಕೀರ್ಷಿತಂ
ತವೇಹಮಾನಸ್ಯ ನೃಣಾಂ ವಿಡಂಬನಮ್ ।
ನ ಯಸ್ಯ ಕಶ್ಚಿದ್ದಯಿತೋಽಸ್ತಿ ಕರ್ಹಿಚಿದ್
ದ್ವೇಷ್ಯಶ್ಚ ಯಸ್ಮಿನ್ವಿಷಮಾ ಮತಿರ್ನೃಣಾಮ್ ॥ ೨೯ ॥

ಜನ್ಮ ಕರ್ಮ ಚ ವಿಶ್ವಾತ್ಮನ್ನಜಸ್ಯಾಕರ್ತುರಾತ್ಮನಃ ।
ತಿರ್ಯಙ್ನೄಷಿಷು ಯಾದಃಸು ತದತ್ಯಂತವಿಡಂಬನಮ್ ॥ ೩೦ ॥

ಗೋಪ್ಯಾದದೇ ತ್ವಯಿ ಕೃತಾಗಸಿ ದಾಮ ತಾವದ್
ಯಾ ತೇ ದಶಾಶ್ರುಕಲಿಲಾಂಜನಸಂಭ್ರಮಾಕ್ಷಮ್ ।
ವಕ್ತ್ರಂ ನಿನೀಯ ಭಯಭಾವನಯಾ ಸ್ಥಿತಸ್ಯ
ಸಾ ಮಾಂ ವಿಮೋಹಯತಿ ಭೀರಪಿ ಯದ್ಬಿಭೇತಿ ॥ ೩೧ ॥

ವಧದ ಪ್ರಯೋಗಿಸಿದ ಶಸ್ತ್ರಾಸ್ತ್ರಗಳಿಂದ ಕಾಪಾಡಿದೆ. ಹೀಗೆ ಎಷ್ಟೆಂದು ಹೇಳಲಿ? ಈಗ ಈ ಅಶ್ವತ್ಥಾಮನ ಬ್ರಹ್ಮಾಸ್ತ್ರದಿಂದಲೂ ಕೂಡ ನೀನು ನಮ್ಮನ್ನು ಕಾಪಾಡಿರುವೆ. ॥ ೨೩-೨೪ ॥ ಜಗದ್ಗುರುವೇ! ನಮ್ಮ ಜೀವನದಲ್ಲಿ ವಿಪತ್ತುಗಳು ಪದೇ-ಪದೇ ಬರುತ್ತಿರಲಿ. ಏಕೆಂದರೆ ವಿಪತ್ತುಗಳಲ್ಲಿಯೇ ನಿಶ್ಚಿತವಾಗಿ ನಿನ್ನ ದರ್ಶನ ಆಗುತ್ತಾ ಇರುತ್ತದೆ. ನಿನ್ನ ದರ್ಶನವಾದ ಮೇಲೆ ಮತ್ತೆ ಜನ್ಮ-ಮೃತ್ಯುವಿನ ಚಕ್ರದಲ್ಲಿ ಬೀಳಬೇಕಾಗುವುದಿಲ್ಲ. ॥ ೨೫ ॥ ನೀನು ಅಕಿಂಚನರಿಗೆ ಗೋಚರನಾಗುವವನು. ಕುಲಮದ, ಅಧಿಕಾರಮದ, ವಿದ್ಯಾಮದ, ಸಂಪತ್ತಿನಮದ-ಮುಂತಾದವುಗಳಿಂದ ಬೀಗುವ ಮನುಷ್ಯನಿಗೆ ನಿನ್ನ ನಾಮಸ್ಮರಣೆಯನ್ನು ಮಾಡುವ ಅರ್ಹತೆಯೂ ಹೇಗೆ ಉಂಟಾದೀತು? ॥ ೨೬ ॥ ನೀನು ನಿಷ್ಕಾಮ ಭಕ್ತರ ಪರಮಧನವಾಗಿರುವೆ. ತ್ರಿಗುಣಗಳನ್ನು ಅವುಗಳ ಕಾರ್ಯಗಳನ್ನು ಮೀರಿರುವವನಾಗಿರುವೆ. ಆತ್ಮಾರಾಮನೂ, ಪರಮಶಾಂತನೂ, ಕೈವಲ್ಯ ಮೋಕ್ಷಕ್ಕೆ ಅಧಿಪತಿಯೂ ಆದ ನಿನಗೆ ನಮಸ್ಕರಿಸುತ್ತೇನೆ. ॥ ೨೭ ॥ ಅನಾದಿಯೂ, ಅನಂತನೂ, ಸರ್ವವ್ಯಾಪಕನೂ, ಎಲ್ಲರ ನಿಯಾಮಕನೂ, ಕಾಲರೂಪೀ ಪರಮೇಶ್ವರನೂ ನೀನೇ ಆಗಿರುವೆ ಎಂದು ನಾನು ತಿಳಿಯುತ್ತೇನೆ. ಪ್ರಪಂಚದ ಸಮಸ್ತ ಪ್ರಾಣಿ, ಪದಾರ್ಥಗಳು ಪರಸ್ಪರ ವೈಷಮ್ಯದಿಂದ ಘರ್ಷಣೆ ಮಾಡುತ್ತಿದ್ದರೂ ನೀನು ಎಲ್ಲರಲ್ಲಿ ಸಮಾನರೂಪದಿಂದ ಸಂಚರಿಸುತ್ತಿರುವೆ. ॥ ೨೮ ॥ ಭಗವಂತನೇ! ನೀನು ಮನುಷ್ಯರಂತೆ ಲೀಲೆಗಳನ್ನು ಮಾಡಿದಾಗ ನೀನು ಏನು ಮಾಡಲು ಬಯಸುವೆ ಎಂಬುದು ಯಾರೂ ತಿಳಿಯಲಾರರು. ನಿನಗೆ ಎಂದಿಗೂ ಯಾರೂ ಪ್ರಿಯರು ಇಲ್ಲ, ಅಪ್ರಿಯರೂ ಇಲ್ಲ. ನಿನ್ನ ಸಂಬಂಧದಲ್ಲಿ ಜನರ ಬುದ್ಧಿಯು ವಿಷಮವಾಗಿರುತ್ತದೆ. ॥ ೨೯ ॥ ವಿಶ್ವದ ಆತ್ಮರೂಪನಾಗಿರುವವನೇ! ನೀನು ಜನ್ಮ-ಕರ್ಮರಹಿತನಾದ ಶುದ್ಧಾತ್ಮ ಸ್ವರೂಪನೇ ಆಗಿದ್ದರೂ ಲೋಕದ ವಿಡಂಬನೆಗಾಗಿ ಪಶು-ಪಕ್ಷಿ ಮುಂತಾದ ತಿರ್ಯಕ್ ಜಂತುಗಳಲ್ಲಿಯೂ, ಮನುಷ್ಯರಲ್ಲಿಯೂ, ಮುನಿಗಳಲ್ಲಿಯೂ, ಜಲಚರಾದಿ ಪ್ರಾಣಿಗಳಲ್ಲಿಯೂ ಜನ್ಮತಳೆದು ಆ ಯೋನಿಗಳಿಗೆ ಅನುರೂಪವಾದ ದಿವ್ಯ ಕರ್ಮಗಳನ್ನು ಮಾಡುತ್ತಿರುವೆ. ಇದೆಂತಹ ನಿನ್ನ ಲೀಲೆಯು? ॥ ೩೦ ॥ ನೀನು ಬಾಲ್ಯದಲ್ಲಿ ತುಂಟತನದಲ್ಲಿ ಗಡಿಗೆಯನ್ನು ಒಡೆದಾಗ ಯಶೋದೆಯು ನಿನ್ನನ್ನು ಕಟ್ಟಿಹಾಕಲು ಕೈಯಲ್ಲಿ ಹಗ್ಗವನ್ನೆತ್ತಿಕೊಂಡು ಬಂದಾಗ, ನೀನು ಹೆದರಿದವನಂತೆ ನಟಿಸುತ್ತಿರುವಾಗ ಕಣ್ಣೀರು ಸುರಿಯುತ್ತಿತ್ತು. ಕಣ್ಣಿಗೆ ಹಚ್ಚಿದ ಕಾಡಿಗೆಯೆಲ್ಲ ಗಲ್ಲಕ್ಕೆ ಮೆತ್ತಿಕೊಂಡಿತ್ತು. ಕಣ್ಣುಗಳು ಚಂಚಲವಾಗಿದ್ದವು, ಮುಖವನ್ನು ತಗ್ಗಿಸಿಕೊಂಡಿದ್ದೆ. ನಿನ್ನ ಈ ಸ್ಥಿತಿಯ-ಲೀಲೆಯ ಧ್ಯಾನ ಮಾಡುತ್ತಾ ನಾನು ಪರವಶಳಾಗಿ ಹೋಗುತ್ತೇನೆ. ಯಾರ ಕುರಿತು ಭಯವೂ ಭಯಪಡುತ್ತಿದೆಯೋ ಅಂತಹವನ ಇದು ಸ್ಥಿತಿ! ಎಂತಹ ಸೋಜಿಗವಿದು? ॥ ೩೧ ॥ ನೀನು ಜನ್ಮ ರಹಿತನಾಗಿದ್ದರೂ ಏಕೆ ಜನ್ಮತಾಳಿದೆ? ಎಂಬುದಕ್ಕೆ ಕೆಲವು ಮಹಾಪುರುಷರು ಹೀಗೆ ಹೇಳುತ್ತಾರೆ- "ಮಲಯ ಪರ್ವತದ ಕೀರ್ತಿಯನ್ನು ಹರಡುವುದಕ್ಕಾಗಿ ಅಲ್ಲಿ ಗಂಧದ ಮರಗಳು ಹುಟ್ಟು

ಕೇಚಿದಾಹುರಜಂ ಜಾತಂ ಪುಣ್ಯಶ್ಲೋಕಸ್ಯ ಕೀರ್ತಯೇ ।
ಯದೋಃ ಪ್ರಿಯಸ್ಯಾನ್ವವಾಯೇ ಮಲಯಸ್ಯೇವ ಚಂದನಮ್
॥ ೩೨ ॥

ಅಪರೇ ವಸುದೇವಸ್ಯ ದೇವಕ್ಯಾಂ ಯಾಚಿತೋಽಭ್ಯಗಾತ್ ।
ಅಜಸ್ತ್ವಮಸ್ಯ ಕ್ಷೇಮಾಯ ವಧಾಯ ಚ ಸುರದ್ವಿಷಾಮ್
॥ ೩೩ ॥

ಭಾರಾವತಾರಣಾಯಾನ್ಯೇ ಭುವೋ ನಾವ ಇವೋದಧೌ ।
ಸೀದಂತ್ಯಾ ಭೂರಿಭಾರೇಣ ಜಾತೋ ಹ್ಯಾತ್ಮಭುವಾರ್ಥಿತಃ
॥ ೩೪ ॥

ಭವೇಽಸ್ಮಿನ್ ಕ್ಲಿಶ್ಯಮಾನಾನಾಮವಿದ್ಯಾಕಾಮಕರ್ಮಭಿಃ ।
ಶ್ರವಣಸ್ಮರಣಾರ್ಹಾಣಿ ಕರಿಷ್ಯನ್ನಿತಿ ಕೇಚನ
॥ ೩೫ ॥

ಶೃಣ್ವಂತಿ ಗಾಯಂತಿ ಗೃಣಂತ್ಯಭೀಕ್ಷ್ಣಶಃ
ಸ್ಮರಂತಿ ನಂದಂತಿ ತವೇಹಿತಂ ಜನಾಃ ।
ತ ಏವ ಪಶ್ಯಂತ್ಯಚಿರೇಣ ತಾವಕಂ
ಭವಪ್ರವಾಹೋಪರಮಂ ಪದಾಂಬುಜಮ್ ॥ ೩೬ ॥

ಅಪ್ಯದ್ಯ ನಸ್ತ್ವಂ ಸ್ವಕೃತೇಹಿತ ಪ್ರಭೋ
ಜಿಹಾಸಸಿ ಸ್ವಿತ್ಸುಹೃದೋಽನುಜೀವಿನಃ ।
ಯೇಷಾಂ ನ ಚಾನ್ಯದ್ಭವತಃ ಪದಾಂಬುಜಾತ್
ಪರಾಯಣಂ ರಾಜಸು ಯೋಜಿತಾಂಹಸಾಮ್ ॥ ೩೭ ॥

ಕೇ ವಯಂ ನಾಮರೂಪಾಭ್ಯಾಂ ಯದುಭಿಃ ಸಹ ಪಾಂಡವಾಃ ।
ಭವತೋಽದರ್ಶನಂ ಯರ್ಹಿ ಹೃಷೀಕಾಣಾಮಿವೇಶಿತುಃ
॥ ೩೮ ॥

ನೇಯಂ ಶೋಭಿಷ್ಯತೇ ತತ್ರ ಯಥೇದಾನೀಂ ಗದಾಧರ ।
ತ್ವತ್ಪದೈರಂಕಿತಾ ಭಾತಿ ಸ್ವಲಕ್ಷಣವಿಲಕ್ಷಿತೈಃ
॥ ೩೯ ॥

ಇಮೇ ಜನಪದಾಃ ಸ್ವೃದ್ಧಾಃ ಸುಪಕ್ವೌಷಧಿವೀರುಧಃ ।
ವನಾದ್ರಿನದ್ಯುದನ್ವಂತೋ ಹ್ಯೇಧಂತೇ ತವ ವೀಕ್ಷಿತೈಃ
॥ ೪೦ ॥

ವಂತೆಯೇ ಪುಣ್ಯಶ್ಲೋಕನೂ, ಪ್ರಿಯಭಕ್ತೋತ್ತಮನೂ ಆದ ಯದು ಮಹಾರಾಜನ ಕೀರ್ತಿಯನ್ನು ವಿಸ್ತಾರಪಡಿಸಲಿಕ್ಕಾಗಿ ನೀನು ಅವನ ವಂಶದಲ್ಲಿ ಅವತರಿಸಿರುವೆ" ॥ ೩೨ ॥ ಮತ್ತೆ ಕೆಲವರು ಹೇಳುತ್ತಾರೆ- 'ಹಿಂದಿನ ಜನ್ಮದಲ್ಲಿ ಸುತಪಾ ಮತ್ತು ಪೃಶ್ನಿ ಎಂಬ ರೂಪದಲ್ಲಿದ್ದ ವಸುದೇವ-ದೇವಕಿಯರು ಪಡೆದ ವರದಂತೆ ನೀನು ಜನ್ಮರಹಿತನಾದರೂ ಅವರಲ್ಲಿ ಪುತ್ರನಾಗಿ ಅವತರಿಸಿದೆ. ದೇವತೆಗಳ ಯಾಚನೆಯಂತೆ ಈ ಲೋಕಗಳ ಕ್ಷೇಮಕ್ಕಾಗಿಯೂ, ದೈತ್ಯರ ನಾಶಕ್ಕಾಗಿಯೂ ನೀನು ಜನ್ಮತಾಳಿದೆ.' ॥ ೩೩ ॥ ಇನ್ನು ಕೆಲವರು ಹೀಗೂ ಹೇಳುತ್ತಾರೆ – 'ಈ ಭೂಮಿಯು ಅಧರ್ಮದ ಭಾರದಿಂದ ಕಡುಪೀಡಿತಳಾಗಿ ಸಮುದ್ರದ ಮಧ್ಯದಲ್ಲಿ ಮುಳುಗುತ್ತಿರುವಾಗ ಬ್ರಹ್ಮದೇವರ ಪ್ರಾರ್ಥನೆಯಂತೆ ಭೂ ಭಾರವನ್ನು ಇಳುಹಲು ನೀನು ಅವತರಿಸಿದೆ" ॥ ೩೪ ॥ 'ಈ ಸಂಸಾರದಲ್ಲಿ ಅಜ್ಞಾನ, ಕಾಮನೆ, ಅನಾದಿಕರ್ಮಗಳ ಕಟ್ಟಿಗೆ ಸಿಲುಕಿ ಕಷ್ಟಪಡುತ್ತಿರುವ ಜನರ ಉದ್ಧಾರಕ್ಕಾಗಿ ಅವರಿಗೆ ಶ್ರವಣ-ಸ್ಮರಣೆಗಳಿಗೆ ಶುಭಾಲಂಬನವಾಗುವ ದಿವ್ಯವಾದ ಲೀಲೆಗಳನ್ನು ನಡೆಸುವ ಉದ್ದೇಶದಿಂದ ನೀನು ಅವತರಿಸಿರುವೆ' ಎಂದು ಕೆಲವು ಮಹಾತ್ಮರು ಹೇಳುತ್ತಾರೆ. ॥ ೩೫ ॥ ನಿನ್ನ ಭಾಗ್ಯಶಾಲಿಗಳಾದ ಭಕ್ತರು ಪದೇ-ಪದೇ ನಿನ್ನ ಚರಿತ್ರವನ್ನು ಶ್ರವಣಿಸುತ್ತಾ, ಕೀರ್ತಿಸುತ್ತಾ, ಸ್ಮರಿಸುತ್ತಾ ಆನಂದಿತರಾಗಿರುತ್ತಾರೆ. ಅಂತಹವರೇ ಜನ್ಮ-ಮರಣದ ಪ್ರವಾಹವನ್ನು ಎಂದೆಂದಿಗೂ ತಡೆಗಟ್ಟುವ ನಿನ್ನ ದಿವ್ಯವಾದ ಅಡಿದಾವರೆಗಳನ್ನು ಶೀಘ್ರವಾಗಿ ಸಾಕ್ಷಾತ್ಕರಿಸಿಕೊಳ್ಳುವರು. ॥ ೩೬ ॥

ಭಕ್ತರ ಎಲ್ಲ ಇಷ್ಟಾರ್ಥಗಳನ್ನು ಈಡೇರಿಸುವ ಕಲ್ಪವೃಕ್ಷವೇ! ಪ್ರಭುವೇ! ನಿನ್ನವರಾಗಿ ನಿನ್ನ ಸಂಬಂಧಿಗಳಾಗಿ, ನಿನ್ನನ್ನೇ ಅವಲಂಬಿಸಿ ಬಾಳುತ್ತಿರುವ ನಮ್ಮನ್ನು ಈಗಲೇ ಬಿಟ್ಟು ಹೊರಟು ಹೋಗಲು ಬಯಸುವೆಯಾ ? ನಮಗೆ ನಿನ್ನ ಚರಣಾರವಿಂದಗಳಲ್ಲದೆ ಬೇರೆ ಯಾವ ಆಸರೆಯೂ ಇಲ್ಲ. ಭೂಮಿಯಲ್ಲಿರುವ ರಾಜರೆಲ್ಲರೂ ನಮಗೆ ವಿರೋಧಿಗಳಾಗಿದ್ದಾರೆ ಎಂಬುದು ನಿನಗೆ ತಿಳಿದೇ ಇದೆ. ॥ ೩೭ ॥ ಆತ್ಮನು ಎಲ್ಲ ಇಂದ್ರಿಯಗಳಿಗೆ ಧಾರಕನೂ ಪ್ರೇರಕನು. ಅವನಲ್ಲದೆ ಇಂದ್ರಿಯಗಳಿಗೆ ಶಕ್ತಿ, ಅಸ್ತಿತ್ವ ಎಲ್ಲಿಯದು ? ಹಾಗೆಯೇ ನಿನ್ನ ದಿವ್ಯದರ್ಶನವಾಗದಿದ್ದರೆ ಯದುವಂಶಿಯರ ಹಾಗೂ ಪಾಂಡವರ ನಾಮ-ರೂಪ-ಅಸ್ತಿತ್ವ, ಶಕ್ತಿ, ಇವುಗಳು ಹೇಗೆ ಇರಬಲ್ಲವು ? ॥ ೩೮ ॥ ಪ್ರಭೋ ! ಗದಾಧರ ! ನಿನ್ನ ದಿವ್ಯ ಚರಣಾರವಿಂದಗಳ ವಿಲಕ್ಷಣವಾದ ಚಿಹ್ನೆಗಳಿಂದ ಈ ಕುರುಜಾಂಗಲ ಪ್ರದೇಶವು ಎಷ್ಟು ಶೋಭಾಯಮಾನವಾಗಿದೆಯೋ, ನೀನು ಇಲ್ಲಿಂದ ಹೊರಟು ಹೋದ ಬಳಿಕ ಆ ಕಾಂತಿಯು ಇಲ್ಲವಾಗುವುದು. ॥ ೩೯ ॥ ನಿನ್ನ ಕೃಪಾಕಟಾಕ್ಷದ ಪ್ರಭಾವದಿಂದಲೇ ಈ ದೇಶವು ಪಕ್ವವಾದ ಸಮೃದ್ಧಿಗಳಿಂದ, ಧಾನ್ಯ ಮತ್ತು ಫಲಪುಷ್ಪಭರಿತವಾದ ಗಿಡ-ಮರ-ಬಳ್ಳಿಗಳ ಸಂಪತ್ತುಗಳಿಂದ ಸಮೃದ್ಧವಾಗಿದೆ. ಅರಣ್ಯ-ಗಿರಿ-ನದೀ-ಸಮುದ್ರಗಳೂ ನಿನ್ನ ದೃಷ್ಟಿಯಿಂದ ವೃದ್ಧಿಯನ್ನು ಪಡೆದಿರುವವು. ॥ ೪೦ ॥ ವಿಶ್ವೇಶ್ವರನೂ, ವಿಶ್ವಾತ್ಮನೂ, ವಿಶ್ವಮೂರ್ತಿಯೂ ಆಗಿರುವ ಪ್ರಭುವೇ ! ಸ್ವಜನರಾದ ಈ ಪಾಂಡವರಲ್ಲಿ ಹಾಗೂ

ಅಥ ವಿಶ್ವೇಶ ವಿಶ್ವಾತ್ಮನ್ವಿಶ್ವಮೂರ್ತೇ ಸ್ವಕೇಷು ಮೇ ।
ಸ್ನೇಹಪಾಶಮಿಮಂ ಛಿಂಧಿ ದೃಢಂ ಪಾಂಡುಷು ವೃಷ್ಣಿಷು ॥ ೪೧ ॥

ತ್ವಯಿ ಮೇಽನನ್ಯವಿಷಯಾ ಮತಿರ್ಮಧುಪತೇಽಸಕೃತ್ ।
ರತಿಮುದ್ವಹತಾಂ ತದದ್ಧಾಗಂಗೇವೌಘಮುದನ್ವತಿ ॥ ೪೨ ॥

ಶ್ರೀಕೃಷ್ಣ ಕೃಷ್ಣಸಖ ವೃಷ್ಣ್ಯೃಷಭಾವನಿಧ್ರುಗ್
ರಾಜನ್ಯವಂಶದಹನಾನಪವರ್ಗವೀರ್ಯ ।
ಗೋವಿಂದ ಗೋದ್ವಿಜಸುರಾರ್ತಿಹರಾವತಾರ
ಯೋಗೇಶ್ವರಾಖಿಲಗುರೋ ಭಗವನ್ನಮಸ್ತೇ ॥ ೪೩ ॥

ಸೂತ ಉವಾಚ

ಪೃಥಯೇತ್ಥಂ ಕಲಪದೈಃ ಪರಿಣೂತಾಖಿಲೋದಯಃ ।
ಮಂದಂ ಜಹಾಸ ವೈಕುಂಠೋ ಮೋಹಯನ್ನಿವ ಮಾಯಯಾ ॥ ೪೪ ॥

ತಾಂ ಬಾಢಮಿತ್ಯುಪಾಮಂತ್ರ್ಯ ಪ್ರವಿಶ್ಯ ಗಜಸಾಹ್ವಯಮ್ ।
ಸ್ತ್ರಿಯಶ್ಚ ಸ್ವಪುರಂ ಯಾಸ್ಯನ್ ಪ್ರೇಮ್ಣಾ ರಾಜ್ಞಾ ನಿವಾರಿತಃ ॥ ೪೫ ॥

ವ್ಯಾಸಾದ್ಯೈರೀಶ್ವರೇಹಾಜ್ಞೈಃ ಕೃಷ್ಣೇನಾದ್ಭುತಕರ್ಮಣಾ ।
ಪ್ರಬೋಧಿತೋಽಪೀತಿಹಾಸೈರ್ನಾಬುಧ್ಯತ ಶುಚಾರ್ಪಿತಃ ॥ ೪೬ ॥

ಆಹ ರಾಜಾ ಧರ್ಮಸುತಶ್ಚಿಂತಯನ್ಸುಹೃದಾಂ ವಧಮ್ ।
ಪ್ರಾಕೃತೇನಾತ್ಮನಾ ವಿಪ್ರಾಃ ಸ್ನೇಹಮೋಹವಶಂ ಗತಃ ॥ ೪೭ ॥

ಅಹೋ ಮೇ ಪಶ್ಯತಾಜ್ಞಾನಂ ಹೃದಿ ರೂಢಂ ದುರಾತ್ಮನಃ ।
ಪಾರಕ್ಯಸ್ಯೈವ ದೇಹಸ್ಯ ಬಹ್ವ್ಯೋ ಮೇಽಕ್ಷೌಹಿಣೀರ್ಹತಾಃ ॥ ೪೮ ॥

ಬಾಲದ್ವಿಜಸುಹೃನ್ಮಿತ್ರಪಿತೃಭ್ರಾತೃಗುರುದ್ರುಹಃ ।
ನ ಮೇ ಸ್ಯಾನ್ನಿರಯಾನ್ಮೋಕ್ಷೋ ಹ್ಯಪಿ ವರ್ಷಾಯುತಾಯುತೈಃ ॥ ೪೯ ॥

ಯಾದವರಲ್ಲಿ ನನಗೆ ದೃಢವಾದ ಮಮತೆ ಬೆಳೆದು ಬಿಟ್ಟಿದೆ. ಈ ಗಾಢವಾದ ಸ್ನೇಹಪಾಶವನ್ನು ಕತ್ತರಿಸಿ ಹಾಕಿಬಿಡು. ॥ ೪೧ ॥ ಪರಮಾನಂದ ಸ್ವರೂಪನಾದ ಮಧುಪತಿಯೇ! ಗಂಗೆಯ ಅಖಂಡ ಪ್ರವಾಹವು ಸಮುದ್ರದಲ್ಲೇ ಸದಾ ಹೋಗಿ ಸೇರುವಂತೆಯೇ ನನ್ನ ಬುದ್ಧಿಯೂ ಅತ್ತ-ಇತ್ತ ಎಲ್ಲಿಯೂ ಹರಿಯದೆ ನಿನ್ನಲ್ಲಿಯೇ ಪ್ರೇಮರಸ ಪೂರ್ಣಪ್ರವಾಹವಾಗಿ ಸದಾ ಹರಿಯುತ್ತಿರಲಿ ಹಾಗೂ ಅಲ್ಲಿಯೇ ಶಾಶ್ವತವಾಗಿ ನೆಲೆಸಲಿ. ॥ ೪೨ ॥ ಶ್ರೀಕೃಷ್ಣಾ! ಅರ್ಜುನನ ಪ್ರಿಯಮಿತ್ರನೇ! ಯದುವಂಶ ಶಿರೋಮಣಿಯೇ! ಭೂಮಿಗೆ ಭಾರವಾಗಿರುವ ರಾಜವೇಷಧಾರಿಗಳಾದ ದೈತ್ಯರ ಸಂಹಾರಕ್ಕಾಗಿ ಬೆಂಕಿಯಂತಿರುವವನೇ! ಅನಂತವೀರ್ಯನೇ! ಗೋವಿಂದಾ! ಗೋ, ದ್ವಿಜ, ದೇವತೆಗಳ ದುಃಖವನ್ನು ಹರಿಸಲು ಅವತರಿಸಿದ ಸ್ವಾಮಿಯೇ! ಯೋಗೇಶ್ವರನೇ! ಚರಾಚರದ ಗುರುವೇ! ಭಗವಂತನೇ! ನಿನಗೆ ಪದೇ-ಪದೇ ನಮಸ್ಕರಿಸುತ್ತಿದ್ದೇನೆ. ॥ ೪೩ ॥

ಸೂತಪುರಾಣಿಕರು ಹೇಳುತ್ತಾರೆ - ಕುಂತೀದೇವಿಯು ಹೀಗೆ ಮಧುರವಾದ ಶಬ್ದಗಳಿಂದ ಭಗವಂತನ ಹೆಚ್ಚಿನ ಲೀಲೆಗಳನ್ನು ವರ್ಣಿಸಿದಳು. ಇದನ್ನು ಕೇಳಿ ಭಗವಾನ್ ಶ್ರೀಕೃಷ್ಣನು ತನ್ನ ಮಾಯೆಯಿಂದ ಆಕೆಯನ್ನು ಮೋಹಗೊಳಿಸುವಂತೆ ಮಧುರ ಮಂದಹಾಸವನ್ನು ಬೀರಿದನು. ॥ ೪೪ ॥ 'ಅಸ್ತು! ಹಾಗೆಯೇ ಆಗಲಿ' ಎಂದು ಕುಂತಿಗೆ ಹೇಳಿ ಹಸ್ತಿನಾಪುರದ ಅರಮನೆಗೆ ಹಿಂದಿರುಗಿದನು. ಅಲ್ಲಿ ಸುಭದ್ರೆಯೇ ಮುಂತಾದ ಸ್ತ್ರೀಯರಿಂದ ಬೀಳ್ಕೊಂಡು ಹೊರಡಲನುವಾದಾಗ ರಾಜಾ ಯುಧಿಷ್ಠಿರನು ಪರಮಪ್ರೇಮದಿಂದ ತಡೆಗಟ್ಟಿದನು. ॥ ೪೫ ॥ ಧರ್ಮರಾಜನು ಬಂಧು-ಮಿತ್ರರ ಮರಣದಿಂದ ಅತ್ಯಂತ ಶೋಕಾಕುಲನಾಗಿದ್ದನು. ಭಗವಂತನ ಲೀಲೆಯ ಮರ್ಮವನ್ನರಿತ ವ್ಯಾಸಾದಿಮಹರ್ಷಿಗಳೂ ಹಾಗೂ ಸ್ವಯಂ ಅದ್ಭುತ ಚರಿತನಾದ ಭಗವಾನ್ ಶ್ರೀಕೃಷ್ಣನೂ ಕೂಡ ಅನೇಕ ಇತಿಹಾಸಗಳನ್ನು ಹೇಳಿ ಆತನನ್ನು ಸಾಂತ್ವನಗೊಳಿಸಲು ಪ್ರಯತ್ನಿಸಿದರೂ ಆತನಿಗೆ ಸಮಾಧಾನವಾಗಲಿಲ್ಲ. ಆತನ ಶೋಕವು ದೂರವಾಗಲಿಲ್ಲ. ॥ ೪೬ ॥ ಶೌನಕಾದಿ ಮಹರ್ಷಿಗಳೇ! ಧರ್ಮಪುತ್ರನಾದ ಮಹಾರಾಜಾ ಯುಧಿಷ್ಠಿರನನ್ನು ಪ್ರಾಕೃತವಾದ ಮನಸ್ಸು ಸ್ನೇಹ-ಮೋಹಗಳಲ್ಲಿ ಬಲವಾಗಿ ಬಂಧಿಸಿಬಿಟ್ಟಿತ್ತು. ಅದರಿಂದ ಪರವಶನಾದ ಆತನು ಬಂಧು-ಮಿತ್ರರ ವಧೆಯನ್ನೇ ಕುರಿತು ಚಿಂತಿಸುತ್ತಾ ಹೀಗೆಂದುಕೊಂಡನು - ಅಯ್ಯೋ! ದುರಾತ್ಮನಾದ ನನ್ನ ಹೃದಯದಲ್ಲಿ ಎಂತಹ ಅಜ್ಞಾನ ಬೇರೂರಿದೆ? ನಾಯಿ-ನರಿಗಳಿಗೆ ಆಹಾರವಾದ ಈ ಅನಾತ್ಮದೇಹಕ್ಕಾಗಿ ನಾನು ಅನೇಕ ಅಕ್ಷೌಹಿಣೀ* ಸೈನ್ಯವನ್ನು ಬಲಿಗೊಟ್ಟೆನು! ॥ ೪೭-೪೮ ॥ ನಾನು ಬಾಲಕರು, ಬ್ರಾಹ್ಮಣರು, ನೆಂಟರಿಷ್ಟರು, ತಂದೆ-ಅಣ್ಣ-ತಮ್ಮಂದಿರ ಸ್ಥಾನದಲ್ಲಿರುವವರು, ಗುರುಜನರು-ಹೀಗೆ ಇವರಿಗೆಲ್ಲ ದ್ರೋಹ ಮಾಡಿದೆನು. ಇಂತಹ ಮಹಾಪಾಪವನ್ನು ಮಾಡಿದ ನನಗೆ ಕೋಟ್ಯಂತರ ವರ್ಷಗಳು ಕಳೆದರೂ ನರಕದಿಂದ ಬಿಡುಗಡೆಯಾಗದು. ॥ ೪೯ ॥ 'ರಾಜನು

* ಒಂದು ಅಕ್ಷೌಹಿಣೀ ಎಂದರೆ - ೨೧,೮೭೦ ರಥಗಳು, ೨೧೮೭೦ ಆನೆಗಳು, ೧,೦೯,೩೫೦ ಕಾಲಾಳುಗಳು, ೬೫,೬೧೦ ಕುದುರೆಸವಾರರು. ಇಷ್ಟು ಸೇನೆ ಸೇರಿದರೆ ಒಂದು ಅಕ್ಷೌಹಿಣೀ ಆಗುತ್ತದೆ.

ನೈಕೋ ರಾಜ್ಞಃ ಪ್ರಜಾಭರ್ತುರ್-
ಧರ್ಮಯುದ್ಧೇ ವಧೋ ದ್ವಿಷಾಮ್ ।
ಇತಿ ಮೇ ನ ತು ಬೋಧಾಯ
ಕಲ್ಪತೇ ಶಾಸನಂ ವಚಃ ॥ ೫೦ ॥

ಸ್ತ್ರೀಣಾಂ ಮದ್ಧತಬಂಧೂನಾಂ
ದ್ರೋಹೋ ಯೋಽಸಾವಿಹೋತ್ಥಿತಃ ।
ಕರ್ಮಭಿರ್ಗೃಹಮೇಧೀಯೈರ್ನಾಹಂ
ಕಲ್ಪೋ ವ್ಯಪೋಹಿತುಮ್ ॥ ೫೧ ॥

ಯಥಾ ಪಂಕೇನ ಪಂಕಾಂಭಃ ಸುರಯಾ ವಾ ಸುರಾಕೃತಮ್ ।
ಭೂತಹತ್ಯಾಂ ತಥೈವೈಕಾಂ ನ ಯಜ್ಞೈರ್ಮಾರ್ಷ್ಟುಮರ್ಹತಿ ॥ ೫೨ ॥

ಪ್ರಜೆಗಳ ರಕ್ಷಣೆಗಾಗಿ ಧರ್ಮಯುದ್ಧದಲ್ಲಿ ಶತ್ರುಗಳನ್ನು ಕೊಂದರೆ ಅದರಿಂದ ಅವನಿಗೆ ಪಾಪತಟ್ಟದು' ಎಂಬ ಶಾಸ್ತ್ರವಚನವಿದ್ದರೂ ಇದರಿಂದ ನನಗೆ ಸಮಾಧಾನ ಆಗುತ್ತಿಲ್ಲ. ॥ ೫೦ ॥ ಯುದ್ಧದಲ್ಲಿ ನಾನು ಕೊಂದುಹಾಕಿರುವ ನೆಂಟರಿಷ್ಟರನ್ನು ಕಳೆದುಕೊಂಡು ಕೊರಗುತ್ತಿರುವ ಹೆಂಗಸರಿಗೆ ನನ್ನಿಂದಾದ ದ್ರೋಹವನ್ನು ತೊಡೆದುಹಾಕುವುದಕ್ಕೆ ಗೃಹಸ್ಥರು ಆಚರಿಸಲು ಯೋಗ್ಯವಾದ ಯಾವ ಯಜ್ಞಯಾಗಾದಿಗಳಿಂದಲೂ ಸಾಧ್ಯವಿಲ್ಲ. ॥ ೫೧ ॥ ಕೆಸರಿನಿಂದ ಕೊಳಕಾದ ನೀರನ್ನು ಕೆಸರಿನಿಂದಲೇ ತೊಳೆಯಲಾಗುವುದಿಲ್ಲ. ಮದ್ಯದಿಂದ ಉಂಟಾದ ಅಪವಿತ್ರತೆಯನ್ನು ಮದ್ಯದಿಂದಲೇ ಹೋಗಲಾಡಿಸಲಾಗುವುದಿಲ್ಲ. ಹಾಗೆಯೇ ಪ್ರಾಣಿಹಿಂಸೆಯಿಂದಲೇ ಕೂಡಿದ ಅನೇಕ ಯಜ್ಞಗಳಿಂದಲೂ ಒಂದು ಪ್ರಾಣಹತ್ಯೆಯ ಪಾಪದ ಪ್ರಾಯಶ್ಚಿತ್ತವೂ ಆಗಲಾರದು. ಹಾಗಿರುವಾಗ ಇಷ್ಟೊಂದು ಪಾಪವನ್ನು ಹೋಗಲಾಡಿಸಬಹುದೇ ? ಹೀಗೆ ಯುಧಿಷ್ಠಿರನು ಮನಸ್ಸಿನಲ್ಲಿ ಬಹಳ ವ್ಯಥೆ ಪಡುತ್ತಿದ್ದನು. ॥ ೫೨ ॥

ಎಂಟನೆಯ ಅಧ್ಯಾಯವು ಮುಗಿಯಿತು. ॥ ೮ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಪ್ರಥಮಸ್ಕಂಧೇ
ಕುಂತೀಸ್ತುತಿರ್ಯುಧಿಷ್ಠಿರಾನುತಾಪೋ ನಾಮಾಷ್ಟಮೋಽಧ್ಯಾಯಃ ॥ ೮ ॥

ಒಂಭತ್ತನೆಯ ಅಧ್ಯಾಯ

ಯುಧಿಷ್ಠಿರಾದಿಗಳು ಭೀಷ್ಮರ ಬಳಿಗೆ ಹೋದುದು, ಶ್ರೀಕೃಷ್ಣಸ್ತುತಿ ಪೂರ್ವಕ ಭೀಷ್ಮ ನಿರ್ಯಾಣ

ಸೂತ ಉವಾಚ

ಇತಿ ಭೀತಃ ಪ್ರಜಾದ್ರೋಹಾತ್ಸರ್ವಧರ್ಮವಿವಿತ್ಸಯಾ ।
ತತೋ ವಿನಶನಂ ಪ್ರಾಗಾದ್ ಯತ್ರ ದೇವವ್ರತೋಽಪತತ್ ॥ ೧ ॥

ತದಾ ತೇ ಭ್ರಾತರಃ ಸರ್ವೇ ಸದಶ್ವೈಃ ಸ್ವರ್ಣಭೂಷಿತೈಃ ।
ಅನ್ವಗಚ್ಛನ್ ರಥೈರ್ವಿಪ್ರಾ ವ್ಯಾಸಧೌಮ್ಯಾದಯಸ್ತಥಾ ॥ ೨ ॥

ಭಗವಾನಪಿ ವಿಪ್ರರ್ಷೇ ರಥೇನ ಸಧನಂಜಯಃ ।
ಸ ತೈರ್ವ್ಯರೋಚತ ನೃಪಃ ಕುಬೇರ ಇವ ಗುಹ್ಯಕೈಃ ॥ ೩ ॥

ದೃಷ್ಟ್ವಾ ನಿಪತಿತಂ ಭೂಮೌ ದಿವಶ್ಚ್ಯುತಮಿವಾಮರಮ್ ।
ಪ್ರಣೇಮುಃ ಪಾಂಡವಾ ಭೀಷ್ಮಂ ಸಾನುಗಾಃ ಸಹ ಚಕ್ರಿಣಾ ॥ ೪ ॥

ತತ್ರ ಬ್ರಹ್ಮರ್ಷಯಃ ಸರ್ವೇ ದೇವರ್ಷಯಶ್ಚ ಸತ್ತಮ ।
ರಾಜರ್ಷಯಶ್ಚ ತತ್ರಾಸನ್ ದ್ರಷ್ಟುಂ ಭರತಪುಂಗವಮ್ ॥ ೫ ॥

ಸೂತಪುರಾಣಿಕರು ಹೇಳುತ್ತಾರೆ – ಹೀಗೆ ತನ್ನಿಂದ ಪ್ರಜಾದ್ರೋಹವಾಯಿತೆಂದು ಹೆದರಿದ ಧರ್ಮರಾಜನು ಧರ್ಮರಹಸ್ಯವನ್ನು ತಿಳಿದುಕೊಳ್ಳುವ ಇಚ್ಛೆಯಿಂದ ಭೀಷ್ಮಪಿತಾಮಹರು ಶರಶಯ್ಯೆಯಲ್ಲಿ ಮಲಗಿದ್ದ ಕುರುಕ್ಷೇತ್ರಕ್ಕೆ ಹೋದನು. ॥ ೧ ॥ ಆಗ ಅವನ ಒಡಹುಟ್ಟಿದವರೆಲ್ಲರೂ ಒಳ್ಳೆಯ ಅಶ್ವಗಳು ಹೂಡಲ್ಪಟ್ಟ ಸುವರ್ಣಾಲಂಕೃತವಾದ ರಥಗಳಲ್ಲಿ ಕುಳಿತುಕೊಂಡು ಯುಧಿಷ್ಠಿರನನ್ನು ಹಿಂಬಾಲಿಸಿದರು. ಅವರೊಂದಿಗೆ ವೇದವ್ಯಾಸರು, ಧೌಮ್ಯರೇ ಮುಂತಾದ ಮಹರ್ಷಿಗಳೂ ಬ್ರಾಹ್ಮಣರೂ ಹೋದರು. ॥ ೨ ॥ ಶೌನಕರೇ ! ಅರ್ಜುನನೊಡನೆ ಭಗವಾನ್ ಶ್ರೀಕೃಷ್ಣನೂ ರಥವನ್ನೇರಿ ಹೊರಟನು. ಅವರೆಲ್ಲರಿಂದೊಡಗೂಡಿದ ಮಹಾರಾಜ ಯುಧಿಷ್ಠಿರನು ಯಕ್ಷಮಂಡಲಿಯಿಂದ ಸುತ್ತುವರಿಯಲ್ಪಟ್ಟ ಕುಬೇರನಂತೆ ಕಂಗೊಳಿಸುತ್ತಿದ್ದನು. ॥ ೩ ॥ ಸ್ವರ್ಗದಿಂದ ಜಾರಿಬಿದ್ದ ದೇವತೆಯಂತೆ ಭೂಮಿಯಲ್ಲಿ ಮಲಗಿದ್ದ ದೇವವ್ರತರಾದ ಭೀಷ್ಮರನ್ನು ಕಂಡು ಪರಿವಾರ ಸಹಿತ ಪಾಂಡವರು, ಶ್ರೀಕೃಷ್ಣಪರಮಾತ್ಮನೊಡಗೂಡಿ ಅವರಿಗೆ ನಮಸ್ಕಾರ ಮಾಡಿದರು. ॥ ೪ ॥ ಶೌನಕಾದಿಗಳೇ ! ಆಗಲೇ ಭರತಕುಲತಿಲಕರಾದ ಭೀಷ್ಮಪಿತಾಮಹರನ್ನು ಸಂದರ್ಶಿಸಲು ಎಲ್ಲ ಬ್ರಹ್ಮರ್ಷಿಗಳೂ, ದೇವರ್ಷಿಗಳೂ, ರಾಜರ್ಷಿಗಳೂ ಅಲ್ಲಿಗೆ ಆಗಮಿಸಿದರು. ॥ ೫ ॥

ಪರ್ವತೋ ನಾರದೋ ಧೌಮ್ಯೋ ಭಗವಾನ್ಬಾದರಾಯಣಃ ।
ಬೃಹದಶ್ವೋ ಭರದ್ವಾಜಃ ಸಶಿಷ್ಯೋ ರೇಣುಕಾಸುತಃ
॥ ೬ ॥

ವಸಿಷ್ಠ ಇಂದ್ರಪ್ರಮದಸ್ತ್ರಿತೋ ಗೃತ್ಸಮದೋಽಸಿತಃ ।
ಕಕ್ಷೀವಾನ್ಗೌತಮೋಽತ್ರಿಶ್ಚ ಕೌಶಿಕೋಽಥ ಸುದರ್ಶನಃ
॥ ೭ ॥

ಅನ್ಯೇ ಚ ಮುನಯೋ ಬ್ರಹ್ಮನ್ಬ್ರಹ್ಮರಾತಾದಯೋಽಮಲಾಃ ।
ಶಿಷ್ಯೈರುಪೇತಾ ಆಜಗ್ಮುಃ ಕಶ್ಯಪಾಂಗಿರಸಾದಯಃ
॥ ೮ ॥

ತಾನ್ಸಮೇತಾನ್ ಮಹಾಭಾಗಾನುಪಲಭ್ಯ ವಸೂತ್ತಮಃ ।
ಪೂಜಯಾಮಾಸ ಧರ್ಮಜ್ಞೋ ದೇಶಕಾಲವಿಭಾಗವಿತ್
॥ ೯ ॥

ಕೃಷ್ಣಂ ಚ ತತ್ಪ್ರಭಾವಜ್ಞ ಆಸೀನಂ ಜಗದೀಶ್ವರಮ್ ।
ಹೃದಿಸ್ಥಂ ಪೂಜಯಾಮಾಸ ಮಾಯಯೋಪಾತ್ತವಿಗ್ರಹಮ್
॥ ೧೦ ॥

ಪಾಂಡುಪುತ್ರಾನುಪಾಸೀನಾನ್ಪ್ರಶ್ರಯಪ್ರೇಮಸಂಗತಾನ್ ।
ಅಭ್ಯಾಚಷ್ಟಾನುರಾಗಾಸ್ರೈರಂಧೀಭೂತೇನ ಚಕ್ಷುಷಾ
॥ ೧೧ ॥

ಅಹೋ ಕಷ್ಟಮಹೋಽನ್ಯಾಯ್ಯಂ ಯದ್ಯೂಯಂ ಧರ್ಮನಂದನಾಃ ।
ಜೀವಿತುಂ ನಾರ್ಹಥ ಕ್ಲಿಷ್ಟಂ ವಿಪ್ರಧರ್ಮಾಚ್ಯುತಾಶ್ರಯಾಃ
॥ ೧೨ ॥

ಸಂಸ್ಥಿತೇಽತಿರಥೇ ಪಾಂಡೌ ಪೃಥಾ ಬಾಲಪ್ರಜಾವಧೂಃ ।
ಯುಷ್ಮತ್ಕೃತೇ ಬಹೂನ್ ಕ್ಲೇಶಾನ್ ಪ್ರಾಪ್ತಾ ತೋಕವತೀ ಮುಹುಃ
॥ ೧೩ ॥

ಸರ್ವಂ ಕಾಲಕೃತಂ ಮನ್ಯೇ ಭವತಾಂ ಚ ಯದಪ್ರಿಯಮ್ ।
ಸಪಾಲೋ ಯದ್ವಶೇ ಲೋಕೋ ವಾಯೋರಿವ ಘನಾವಲಿಃ
॥ ೧೪ ॥

ಯತ್ರ ಧರ್ಮಸುತೋ ರಾಜಾ ಗದಾಪಾಣಿರ್ವೃಕೋದರಃ ।
ಕೃಷ್ಣೋಽಸ್ತ್ರೀ ಗಾಂಡಿವಂ ಚಾಪಂ ಸುಹೃತ್ಕೃಷ್ಣಸ್ತತೋ ವಿಪತ್
॥ ೧೫ ॥

ನ ಹ್ಯಸ್ಯ ಕರ್ಹಿಚಿದ್ರಾಜನ್ಪುಮಾನ್ವೇದ ವಿಧಿತ್ಸಿತಮ್ ।
ಯದ್ವಿಜಿಜ್ಞಾಸಯಾ ಯುಕ್ತಾ ಮುಹ್ಯಂತಿ ಕವಯೋಽಪಿ ಹಿ
॥ ೧೬ ॥

ತಸ್ಮಾದಿದಂ ದೈವತಂತ್ರಂ ವ್ಯವಸ್ಯ ಭರತರ್ಷಭ ।
ತಸ್ಯಾನುವಿಹಿತೋಽನಾಥಾ ನಾಥ ಪಾಹಿ ಪ್ರಜಾಃ ಪ್ರಭೋ
॥ ೧೭ ॥

ಪರ್ವತರೂ, ನಾರದರೂ, ಧೌಮ್ಯರೂ, ಭಗವಾನ್ ವೇದವ್ಯಾಸರೂ, ಬೃಹದಶ್ವರೂ, ಭರದ್ವಾಜರೂ, ಶಿಷ್ಯರಿಂದೊಡಗೂಡಿ ಪರಶುರಾಮರೂ, ವಸಿಷ್ಠರೂ, ಇಂದ್ರಪ್ರಮದರೂ, ತ್ರಿತರೂ, ಗೃತ್ಸಮದರೂ, ಅಸಿತರೂ, ಕಕ್ಷೀವಂತರೂ, ಗೌತಮರೂ, ಅತ್ರಿಗಳೂ, ವಿಶ್ವಾಮಿತ್ರರೂ, ಸುದರ್ಶನರೂ, ಬ್ರಹ್ಮರಾತರಾದ ಶುಕಮಹಾಮುನಿಗಳೂ, ಕಶ್ಯಪರೂ, ಆಂಗೀರಸರೂ ಮೊದಲಾದ ಶುದ್ಧಾತ್ಮರಾದ ಮಹರ್ಷಿಗಳು ಶಿಷ್ಯರಸಮೇತರಾಗಿ ಅಲ್ಲಿಗೆ ಆಗಮಿಸಿದರು. ॥ ೬-೮ ॥ ದೇಶ-ಕಾಲದ ವಿಭಾಗವನ್ನು ತಿಳಿದವರಾದ, ಧರ್ಮಜ್ಞರಾದ, ವಸುದೇವತೆಯ ಅವತಾರರಾಗಿದ್ದ ಭೀಷ್ಮ ಪಿತಾಮಹರು ಅಲ್ಲಿ ನೆರೆದಿದ್ದ ಮಹಾಭಾಗ್ಯಶಾಲಿಗಳಾದ ಮುನಿಶ್ರೇಷ್ಠರೆಲ್ಲರನ್ನೂ ಸ್ವಾಗತಿಸಿ ಮನಸ್ಸಿನಿಂದ ಪೂಜಿಸಿದರು. ॥ ೯ ॥ ಹಾಗೆಯೇ ಶ್ರೀಕೃಷ್ಣನ ಪ್ರಭಾವವನ್ನು ಅರಿತಿದ್ದ ಆ ಮಹಾತ್ಮರು ಅಲ್ಲಿಯೇ ಕುಳಿತಿದ್ದ, ಮಾಯಾಮಾನುಷರೂಪಧಾರಿಯಾಗಿದ್ದ ಹೃದಯಾಂತರ್ಯಾಮಿಯಾದ, ಜಗದೀಶ್ವರನಾದ ಭಗವಾನ್ ಶ್ರೀಕೃಷ್ಣನನ್ನು ಒಳಗೂ-ಹೊರಗೂ ಪೂಜಿಸಿದರು. ॥ ೧೦ ॥

ಪಾಂಡವರು ತುಂಬಾ ವಿನಯ, ಪ್ರೇಮದೊಂದಿಗೆ ಭೀಷ್ಮ ಪಿತಾಮಹರ ಬಳಿಯಲ್ಲಿ ಕುಳಿತರು. ಅವರನ್ನು ನೋಡಿ ಭೀಷ್ಮರ ಕಣ್ಣುಗಳು ಪ್ರೇಮಗಂಬನಿಗಳಿಂದ ತುಂಬಿ ಬಂದವು. ಪಾಂಡವರನ್ನು ನೋಡುತ್ತಾ ಹೀಗೆಂದರು. ॥ ೧೧ ॥ ಧರ್ಮಪುತ್ರರೇ ! ನೀವುಗಳು ಬ್ರಾಹ್ಮಣರನ್ನೂ, ಧರ್ಮವನ್ನೂ, ಮತ್ತು ಭಗವಂತನನ್ನು ಆಶ್ರಯಿಸಿದ್ದರೂ ಇಷ್ಟು ಕಷ್ಟದಿಂದ ಬದುಕ ಬೇಕಾಯಿತಲ್ಲ ! ಅಯ್ಯೋ ! ಎಂತಹ ಕಷ್ಟ, ಅನ್ಯಾಯ ನಿಮಗೆ ಒದಗಿತಲ್ಲ! ಇಂತಹ ಕಷ್ಟ-ಕಾರ್ಪಣ್ಯಗಳ ಬದುಕಿಗೆ ನೀವು ತಕ್ಕವರಲ್ಲ. ॥ ೧೨ ॥ ಅತಿರಥನಾದ ಪಾಂಡುವು ಅಕಾಲದಲ್ಲಿ ಸ್ವರ್ಗಸ್ಥನಾದಾಗ ನಿಮಗಿನ್ನು ಎಳೆಯ ವಯಸ್ಸು, ಆಗ ಕುಂತಿಯು ನಿಮಗಾಗಿ ಎಷ್ಟು ಕಷ್ಟಪಡಬೇಕಾಯಿತು ! ನೀವೂ ಕೂಡ ಎಷ್ಟೊಂದು ಕಷ್ಟವನ್ನು ಅನುಭವಿಸಿದಿರಿ. ॥ ೧೩ ॥ ಮೋಡಗಳು ವಾಯುವಿನ ವಶವಿರುವಂತೆ, ಲೋಕಪಾಲರಿಂದ ಕೂಡಿದ ಇಡೀ ಜಗತ್ತೇ ಕಾಲಕ್ಕೆ ಅಧೀನವಾಗಿದೆ. ಆದ್ದರಿಂದ ನಿಮಗೆ ಜೀವನದಲ್ಲೊದಗಿದ ಆ ಅಪ್ರಿಯಘಟನೆಗಳೆಲ್ಲವೂ ಆ ಕಾಲನ ಲೀಲೆಯೇ ಆಗಿವೆ ಎಂದು ನಾನು ತಿಳಿಯುತ್ತೇನೆ. ॥ ೧೪ ॥ ಹಾಗಿಲ್ಲದಿದ್ದರೆ, ಸಾಕ್ಷಾತ್ ಧರ್ಮಪುತ್ರ ಯುಧಿಷ್ಠಿರನೇ ರಾಜನಾಗಿದ್ದಾಗ, ಗದಾಪಾಣಿಯಾದ ಭೀಮಸೇನನೂ ಮತ್ತು ಧನುರ್ಧಾರಿಯಾದ ಅರ್ಜುನನು ರಕ್ಷಕರಾಗಿರುವಾಗ, ಸಾಕ್ಷಾತ್ ಶ್ರೀಕೃಷ್ಣಪರಮಾತ್ಮನೇ ಗೆಳೆಯನಾಗಿರುವಾಗಲೂ ವಿಪತ್ತುಗಳು ಒದಗುವುದುಂಟೇ ? ॥ ೧೫ ॥ ಧರ್ಮನಂದನನೇ ! ಕಾಲರೂಪಿಯಾದ ಈ ಶ್ರೀಕೃಷ್ಣನು ಯಾವಾಗ ಏನನ್ನು ಮಾಡಬಯಸುತ್ತಾನೆ ಎಂಬುದನ್ನು ಯಾರೂ ಅರಿಯರು. ಅದನ್ನು ತಿಳಿಯ ಬಯಸಿ ದೊಡ್ಡ-ದೊಡ್ಡ ಜ್ಞಾನಿಗಳೂ ಕೂಡ ಆ ವಿಷಯದಲ್ಲಿ ಮೋಹಿತರಾಗುವರು. ॥ ೧೬ ॥ ಭರತಶ್ರೇಷ್ಠನೇ! ಪ್ರಪಂಚದ ಎಲ್ಲ ಘಟನೆಗಳು ಭಗವಂತನ ಇಚ್ಛೆಗೆ ಅಧೀನವಾಗಿವೆ. ಇದನ್ನರಿತು ಅದಕ್ಕನುಗುಣವಾಗಿ ನಡೆಯುತ್ತಾ ಅನಾಥರಾಗಿರುವ ಪ್ರಜೆಗಳನ್ನು ಪಾಲಿಸು. ಏಕೆಂದರೆ, ಈಗ ನೀನೇ ಇವರಿಗೆ ಒಡೆಯನಾಗಿರುವೆ. ಇದಕ್ಕೆ ಸಮರ್ಥನಾಗಿರುವೆ. ॥ ೧೭ ॥ ಈ ಶ್ರೀಕೃಷ್ಣಪರಮಾತ್ಮ

ಏಷ ವೈ ಭಗವಾನ್ಸಾಕ್ಷಾದಾದ್ಯೋ ನಾರಾಯಣಃ ಪುಮಾನ್ ।
ಮೋಹಯನ್ಮಾಯಯಾ ಲೋಕಂ ಗೂಢಶ್ಚರತಿ ವೃಷ್ಣಿಷು ॥ ೧೮ ॥

ಅಸ್ಯಾನುಭಾವಂ ಭಗವಾನ್ವೇದ ಗುಹ್ಯತಮಂ ಶಿವಃ ।
ದೇವರ್ಷಿರ್ನಾರದಃ ಸಾಕ್ಷಾದ್ಭಗವಾನ್ಕಪಿಲೋ ನೃಪ ॥ ೧೯ ॥

ಯಂ ಮನ್ಯಸೇ ಮಾತುಲೇಯಂ ಪ್ರಿಯಂ ಮಿತ್ರಂ ಸುಹೃತ್ತಮಮ್ ।
ಅಕರೋಃ ಸಚಿವಂ ದೂತಂ ಸೌಹೃದಾದಥ ಸಾರಥಿಮ್ ॥ ೨೦ ॥

ಸರ್ವಾತ್ಮನಃ ಸಮದೃಶೋ ಹ್ಯದ್ವಯಸ್ಯಾನಹಂಕೃತೇಃ ।
ತತ್ಕೃತಂ ಮತಿವೈಷಮ್ಯಂ ನಿರವದ್ಯಸ್ಯ ನ ಕ್ವಚಿತ್ ॥ ೨೧ ॥

ತಥಾಪ್ಯೇಕಾಂತಭಕ್ತೇಷು ಪಶ್ಯ ಭೂಪಾನುಕಂಪಿತಮ್ ।
ಯನ್ಮೇಽಸೂಂಸ್ತ್ಯಜತಃ ಸಾಕ್ಷಾತ್ಕೃಷ್ಣೋ ದರ್ಶನಮಾಗತಃ ॥ ೨೨ ॥

ಭಕ್ತ್ಯಾವೇಶ್ಯ ಮನೋ ಯಸ್ಮಿನ್ವಾಚಾ ಯನ್ನಾಮ ಕೀರ್ತಯನ್ ।
ತ್ಯಜನ್ಕಲೇವರಂ ಯೋಗೀ ಮುಚ್ಯತೇ ಕಾಮಕರ್ಮಭಿಃ ॥ ೨೩ ॥

ಸ ದೇವದೇವೋ ಭಗವಾನ್ಪ್ರತೀಕ್ಷತಾಂ
ಕಲೇವರಂ ಯಾವದಿದಂ ಹಿನೋಮ್ಯಹಮ್ ।
ಪ್ರಸನ್ನಹಾಸಾರುಣಲೋಚನೋಲ್ಲಸ-
ನ್ಮುಖಾಂಬುಜೋ ಧ್ಯಾನಪಥಶ್ಚತುರ್ಭುಜಃ ॥ ೨೪ ॥

ಸೂತ ಉವಾಚ

ಯುಧಿಷ್ಠಿರಸ್ತದಾಕರ್ಣ್ಯ ಶಯಾನಂ ಶರಪಂಜರೇ ।
ಅಪೃಚ್ಛದ್ವಿವಿಧಾನ್ ಧರ್ಮಾನೃಷೀಣಾಂ ಚಾನುಶೃಣ್ವತಾಮ್ ॥ ೨೫ ॥

ಪುರುಷಸ್ವಭಾವವಿಹಿತಾನ್ಯಥಾವರ್ಣಂ ಯಥಾಶ್ರಮಮ್ ।
ವೈರಾಗ್ಯರಾಗೋಪಾಧಿಭ್ಯಾಮಾಮ್ನಾತೋಭಯಲಕ್ಷಣಾನ್ ॥ ೨೬ ॥

ನಾದರೋ ಸಾಕ್ಷಾತ್ ಭಗವಂತನಾಗಿದ್ದಾನೆ. ಎಲ್ಲಕ್ಕೂ ಆದಿಕಾರಣ ನಾಗಿದ್ದು ಪರಮ ಪುರುಷ ನಾರಾಯಣನಾಗಿರುವನು. ತನ್ನ ಮಾಯೆಯಿಂದ ಜನರನ್ನು ಮೋಹಗೊಳಿಸುತ್ತಾ ಯಾದವರಲ್ಲಿ ಅಡಗಿಕೊಂಡು ಮಾನವ ರೂಪದಿಂದ ಲೀಲೆಮಾಡುತ್ತಿರುವನು. ॥ ೧೮ ॥ ಇವನ ಪ್ರಭಾವವು ಅತ್ಯಂತ ಗಹನ ಹಾಗೂ ರಹಸ್ಯ ಪೂರ್ಣವಾಗಿದೆ. ಯುಧಿಷ್ಠಿರಾ ! ಅದನ್ನು ಭಗವಾನ್ ಶಿವನು, ದೇವರ್ಷಿ ನಾರದರು ಮತ್ತು ಸಾಕ್ಷಾತ್ ಭಗವಂತನಾದ ಕಪಿಲ ಮಹರ್ಷಿ ಇವರುಗಳು ಮಾತ್ರವೇ ಬಲ್ಲರು. ॥ ೧೯ ॥ ನೀನು ಯಾರನ್ನು ನಿನ್ನ ಸೋದರಮಾವನ ಮಗ, ಪ್ರಿಯಮಿತ್ರ, ಶ್ರೇಷ್ಠನಾದ ಆಪ್ತನೆಂದೂ ತಿಳಿದುಕೊಂಡು, ಪ್ರೇಮವಶದಿಂದ ನಿನ್ನ ಮಂತ್ರಿಯನ್ನಾಗಿಯೂ, ದೂತನನ್ನಾಗಿಯೂ, ಸಾರಥಿಯನ್ನಾಗಿಯೂ ಮಾಡಿಕೊಳ್ಳುವುದರಲ್ಲಿ ಸಂಕೋಚಪಡಲಿಲ್ಲವೋ – ಅವನು ಸಾಕ್ಷಾತ್ ಪೂರ್ಣಬ್ರಹ್ಮ ಪರಮಾತ್ಮನಾಗಿದ್ದಾನೆ. ॥ ೨೦ ॥ ಅತನು ಸರ್ವಾತ್ಮನೂ, ಸಮದರ್ಶಿಯೂ, ಅದ್ವಿತೀಯನೂ, ಅಹಂಕಾರ ರಹಿತನೂ, ಆದ ನಿಷ್ಪಾಪ ಪರಮಾತ್ಮನು. ಉಚ್ಚ-ನೀಚ-ಕಾರ್ಯ ಗಳ ಕುರಿತು ಎಂದೂ ಯಾವುದೇ ವಿಷಮತೆ ತೋರದೆ ಅವನು ಸರ್ವಾತ್ಮನಾಗಿ ಸಮದರ್ಶಿಯಾಗಿದ್ದಾನೆ. ॥ ೨೧ ॥ ಯುಧಿಷ್ಠಿರಾ ! ಹೀಗೆ ಸರ್ವತ್ರ ಸಮದರ್ಶಿಯಾಗಿದ್ದರೂ ಅವನು ತನ್ನ ಅನನ್ಯ ಪ್ರೇಮೀ ಭಕ್ತರಮೇಲೆ ಎಷ್ಟೊಂದು ಕೃಪೆ ಮಾಡುತ್ತಿರುವನು ನೋಡಿದೆಯಲ್ಲ! ನಾನು ಪ್ರಾಣತ್ಯಾಗ ಮಾಡಲು ಹೊರಟಿರುವ ಇಂತಹ ಸಮಯದಲ್ಲಿ ಈ ಭಗವಾನ್ ಶ್ರೀಕೃಷ್ಣನು ನನಗೆ ಸಾಕ್ಷಾತ್ ದರ್ಶನ ಕೊಡಲು ಬಂದಿರುವನಲ್ಲ! ॥ ೨೨ ॥ ಭಕ್ತಿಭಾವದಿಂದ ಇವನಲ್ಲಿ ತಮ್ಮ ಮನಸ್ಸನ್ನು ತೊಡಗಿಸುತ್ತಾ, ವಾಣಿಯಿಂದ ಇವನ ನಾಮ ಸಂಕೀರ್ತನೆ ಮಾಡುತ್ತಾ, ದೇಹತ್ಯಾಗ ಮಾಡುವ ಭಗವತ್ ಪರಾಯಣ ಯೋಗೀಪುರುಷರು ಕಾಮನೆಗಳಿಂದ ಮತ್ತು ಕರ್ಮ ಬಂಧನದಿಂದ ಬಿಡುಗಡೆ ಹೊಂದುವರು. ॥ ೨೩ ॥ ಅಂತಹ ದೇವಾಧಿದೇವನಾದ ಭಗವಂತನು ತನ್ನ ಪ್ರಸನ್ನವಾದ ಮಂದಹಾಸ ದಿಂದಲೂ ಕೆಂಪಾದ ಕಣ್ಣುಗಳಿಂದಲೂ, ಉಲ್ಲಸಿತ ಮುಖ ಕಮಲದಿಂದಲೂ, ಚತುರ್ಭುಜಗಳಿಂದಲೂ ಕೂಡಿದ ಕೇವಲ ಯೋಗಿಗಳ ಧ್ಯಾನಕ್ಕೆ ಗೋಚರನಾಗುವ ಈ ಶ್ರೀಕೃಷ್ಣ ಪರಮಾತ್ಮನು ನಾನು ಶರೀರವನ್ನು ತ್ಯಜಿಸುವ ತನಕ ನನ್ನ ಕಡೆಗೆ ದೃಷ್ಟಿಯನ್ನು ಬೀರಲಿ. ॥ ೨೪ ॥

ಸೂತಪುರಾಣಿಕರು ಹೇಳುತ್ತಾರೆ – ಶರಶಯ್ಯೆಯಲ್ಲಿ ಮಲಗಿದ್ದ ಭೀಷ್ಮಪಿತಾಮಹರ ಮಾತನ್ನು ಕೇಳಿದ ಬಳಿಕ ಯುಧಿಷ್ಠಿರನು ನಾನಾಬಗೆಯಾದ ಧರ್ಮಗಳ ರಹಸ್ಯವನ್ನು ಅಲ್ಲಿ ನೆರೆದಿದ್ದ ಋಷಿಗಳ ಸಮ್ಮುಖದಲ್ಲಿ ಆ ಮಹಾತ್ಮರಿಂದ ಕೇಳಿಕೊಂಡನು. ॥ ೨೫ ॥ ಆಗ ತತ್ತ್ವಜ್ಞರಾದ ಭೀಷ್ಮಪಿತಾಮಹರು ವರ್ಣ ಮತ್ತು ಆಶ್ರಮಗಳಿಗೆ ಅನುಗುಣವಾಗಿ ಪುರುಷರ ಸ್ವಾಭಾವಿಕ ಧರ್ಮ ಗಳನ್ನೂ, ವೈರಾಗ್ಯವನ್ನು ಮತ್ತು ರಾಗದ ಕಾರಣದಿಂದ ವಿಭಿನ್ನ ರೂಪದಿಂದ ಹೇಳಿರುವ ನಿವೃತ್ತಿ ಹಾಗೂ ಪ್ರವೃತ್ತಿರೂಪೀ ದ್ವಿವಿಧ ಧರ್ಮಗಳನ್ನೂ, ದಾನಧರ್ಮಗಳನ್ನೂ, ರಾಜಧರ್ಮ, ಮೋಕ್ಷ ಧರ್ಮ, ಸ್ತ್ರೀಧರ್ಮ, ಭಗವದ್ಧರ್ಮ ಇವೆಲ್ಲವುಗಳನ್ನು ಬೇರೆ-ಬೇರೆಯಾಗಿ ಸಂಕ್ಷೇಪವಾಗಿಯೂ, ವಿಸ್ತಾರವಾಗಿಯೂ

ದಾನಧರ್ಮಾನ್ ರಾಜಧರ್ಮಾನ್ಮೋಕ್ಷಧರ್ಮಾನ್ವಿಭಾಗಶಃ ।
ಸ್ತ್ರೀಧರ್ಮಾನ್ ಭಗವದ್ಧರ್ಮಾನ್ಸಮಾಸವ್ಯಾಸಯೋಗತಃ ॥ ೨೭ ॥

ಧರ್ಮಾರ್ಥಕಾಮಮೋಕ್ಷಾಂಶ್ಚ ಸಹೋಪಾಯಾನ್ಯಥಾ ಮುನೇ ।
ನಾನಾಖ್ಯಾನೇತಿಹಾಸೇಷು ವರ್ಣಯಾಮಾಸ ತತ್ತ್ವವಿತ್ ॥ ೨೮ ॥

ಧರ್ಮಂ ಪ್ರವದತಸ್ತಸ್ಯ ಸ ಕಾಲಃ ಪ್ರತ್ಯುಪಸ್ಥಿತಃ ।
ಯೋ ಯೋಗಿನಶ್ಛಂದಮೃತ್ಯೋರ್ವಾಂಛಿತಸ್ತೂತ್ತರಾಯಣಃ ॥ ೨೯ ॥

ತದೋಪಸಂಹೃತ್ಯ ಗಿರಃ ಸಹಸ್ರಣೀ-
ರ್ವಿಮುಕ್ತಸಂಗಂ ಮನ ಆದಿಪೂರುಷೇ ।
ಕೃಷ್ಣೇ ಲಸತ್ಪೀತಪಟೇ ಚತುರ್ಭುಜೇ
ಪುರಃಸ್ಥಿತೇಽಮೀಲಿತದೃಗ್ವ್ಯಧಾರಯತ್ ॥ ೩೦ ॥

ವಿಶುದ್ಧಯಾ ಧಾರಣಯಾ ಹತಾಶುಭ-
ಸ್ತದೀಕ್ಷಯೈವಾಶುಗತಾಯುಧವ್ಯಥಃ ।
ನಿವೃತ್ತಸರ್ವೇಂದ್ರಿಯವೃತ್ತಿವಿಭ್ರಮ-
ಸ್ತುಷ್ಟಾವ ಜನ್ಯಂ ವಿಸೃಜಂಜನಾರ್ದನಮ್ ॥ ೩೧ ॥

ಶ್ರೀಭೀಷ್ಮ ಉವಾಚ

ಇತಿ ಮತಿರುಪಕಲ್ಪಿತಾ ವಿತೃಷ್ಣಾ
ಭಗವತಿ ಸಾತ್ವತಪುಂಗವೇ ವಿಭೂಮ್ನಿ ।
ಸ್ವಸುಖಮುಪಗತೇ ಕ್ವಚಿದ್ವಿಹರ್ತುಂ
ಪ್ರಕೃತಿಮುಪೇಯುಷಿ ಯದ್ಭವಪ್ರವಾಹಃ ॥ ೩೨ ॥

ತ್ರಿಭುವನಕಮನಂ ತಮಾಲವರ್ಣಂ
ರವಿಕರಗೌರವರಾಂಬರಂ ದಧಾನೇ ।
ವಪುರಲಕಕುಲಾವೃತಾನನಾಬ್ಜಂ
ವಿಜಯಸಖೇ ರತಿರಸ್ತು ಮೇಽನವದ್ಯಾ ॥ ೩೩ ॥

ಯುಧಿ ತುರಗರಜೋವಿಧೂಮ್ರವಿಷ್ವಕ್
ಕಚಲುಲಿತಶ್ರಮವಾರ್ಯಲಂಕೃತಾಸ್ಯೇ ।
ಮಮ ನಿಶಿತಶರೈರ್ವಿಭಿದ್ಯಮಾನ-
ತ್ವಚಿ ವಿಲಸತ್ಕವಚೇಽಸ್ತು ಕೃಷ್ಣ ಆತ್ಮಾ ॥ ೩೪ ॥

ವರ್ಣಿಸಿದರು. ಶೌನಕರೇ ! ಇದರೊಂದಿಗೆ ಧರ್ಮ, ಅರ್ಥ, ಕಾಮ, ಮೋಕ್ಷ ಎಂಬ ಈ ಪುರುಷಾರ್ಥಗಳನ್ನು ಪಡೆಯುವ ಸಾಧನೆಗಳನ್ನೂ, ಅನೇಕ ಉಪಾಖ್ಯಾನಗಳನ್ನೂ ಮತ್ತು ಇತಿಹಾಸ ವನ್ನೂ ತಿಳಿಸುತ್ತಾ ವಿಭಾಗಶಃ ವರ್ಣಿಸಿದರು. ॥ ೨೬-೨೮ ॥ ಇಚ್ಛಾಮರಣಿಗಳಾದ ಆ ಭೀಷ್ಮಪಿತಾಮಹರು ಹೀಗೆ ಧರ್ಮವನ್ನು ಕುರಿತು ಪ್ರವಚನ ಮಾಡುತ್ತಿರುವಂತೆಯೇ ಅವರು ಭಗವತ್ಪರಾಯಣರಾದ ಯೋಗಿಗಳು ದೇಹತ್ಯಾಗಕ್ಕಾಗಿ ಕಾಯುವ ಪವಿತ್ರವಾದ ಉತ್ತರಾಯಣ ಕಾಲವು ಬಂದು ಬಿಟ್ಟಿತು. ॥ ೨೯ ॥ ಆಗ ಸಾವಿರಾರು ರಥಿಕರ ಮುಂದಾಳಾಗಿದ್ದ ಭೀಷ್ಮಪಿತಾಮಹರು ವಾಣಿಯನ್ನು ಸಂಯಮಗೈದು (ಮೌನವಹಿಸಿ) ಮುಂದುಗಡೆ ಕಂಗೊಳಿಸುತ್ತಿದ್ದ ಚತುರ್ಭುಜನೂ, ಪೀತಾಂಬರವಿರಾಜಿತನೂ ಆದ ಆದಿಪುರುಷನಾದ ಭಗವಾನ್ ಶ್ರೀಕೃಷ್ಣನನ್ನು ಎವೆಯಿಕ್ಕದ ಕಣ್ಣುಗಳಿಂದ ದೃಷ್ಟಿಸುತ್ತಾ, ತಮ್ಮ ಸಂಗರಹಿತವಾದ ಮನಸ್ಸನ್ನು ಅವನಲ್ಲಿ ನೆಲೆ ಗೊಳಿಸಿದರು. ॥ ೩೦ ॥ ಹೀಗೆ ಶ್ರೀಭಗವಂತನನ್ನು ದೃಢವಾಗಿ ಧರಿಸಿದ ಧಾರಣಾ ಯೋಗದಿಂದ ಅವರ ಎಲ್ಲ ಅಶುಭಗಳು ತೊಲಗಿಹೋಗಿ, ಅವರಿಗೆ ಶಸ್ತ್ರಾಸ್ತ್ರಗಳಿಂದ ಉಂಟಾಗಿದ್ದ ಎಲ್ಲ ನೋವುಗಳು ಅವನ ಕೃಪಾಕಟಾಕ್ಷಮಾತ್ರದಿಂದ ಒಡನೆಯೇ ಕಳೆದು ಹೋದುವು. ಈಗ ಶರೀರವನ್ನು ತ್ಯಜಿಸುವ ಸಮಯ, ಅವರು ಇಂದ್ರಿಯವ್ಯಾಪಾರಗಳ ಅಲೆದಾಟವನ್ನು ನಿಲ್ಲಿಸಿ ಪ್ರೇಮದಿಂದ ಭಗವಂತನನ್ನು ಇಂತು ಸ್ತುತಿಸಿದರು. ॥ ೩೧ ॥

ಶ್ರೀಭೀಷ್ಮಪಿತಾಮಹರು ಹೇಳುತ್ತಾರೆ - ಅನೇಕ ಸಾಧನೆಗಳ ಅನುಷ್ಠಾನಗಳಿಂದ ಅತ್ಯಂತ ಶುದ್ಧವಾದ ಹಾಗೂ ಕಾಮನಾರಹಿತವಾದ ಬುದ್ಧಿಯನ್ನು ಈಗ ಮೃತ್ಯುವಿನ ಸಮಯದಲ್ಲಿ ನಾನು - ಯದುಕುಲಶಿರೋಮಣಿಯೂ, ಮಹಾಮಹಿಮನೂ, ಅನಂತನೂ ಆದ ಭಗವಾನ್ ಶ್ರೀಕೃಷ್ಣನ ಚರಣಾರವಿಂದಗಳಲ್ಲಿ ಸಮರ್ಪಿಸುತ್ತಿದ್ದೇನೆ. ಅವನು ಸದಾ ತನ್ನ ಸಹಜಾನಂದ ಸ್ವರೂಪದಲ್ಲಿ ನೆಲೆಗೊಂಡಿದ್ದುಕೊಂಡೇ, ತನ್ನ ಸಂಕಲ್ಪದಂತೆ ಲೀಲಾವಿಹಾರಕ್ಕಾಗಿ ಪ್ರಕೃತಿಯೊಡನೆ ಕೂಡಿದಾಗ ಈ ಸೃಷ್ಟಿ ಪರಂಪರೆಯು ನಡೆಯುತ್ತದೆ. ॥ ೩೨ ॥ ಹೊಂಗೆಯ ಎಲೆಗಳಂತೆ ಶ್ಯಾಮಲವರ್ಣದ ಅಂಗಕಾಂತಿಯಿಂದ ಕಂಗೊಳಿಸುವ, ಸೂರ್ಯನ ಹೊಂಗಿರಣಗಳಂತೆ ಹೊಳೆಯುವ ಪೀತಾಂಬರವನ್ನು ಧರಿಸಿರುವ, ಮುಖಕಮಲದ ಮೇಲೆ ಗುಂಗುರು-ಗುಂಗುರಾದ ಮುಂಗುರುಳುಗಳು ಜೋಲಾಡುತ್ತಿರುವ ದಿವ್ಯಮಂಗಳ ವಿಗ್ರಹವುಳ್ಳ, ತ್ರಿಭುವನೈಕ ಸುಂದರನಾದ, ಅರ್ಜುನಮಿತ್ರನಾದ ಶ್ರೀಕೃಷ್ಣನಲ್ಲಿ ನನ್ನ ನಿರುಪಾಧಿಕವಾದ ಪ್ರೇಮವು ನೆಲೆಗೊಳ್ಳಲಿ. ॥ ೩೩ ॥ ರಣರಂಗದಲ್ಲಿ ರಾರಾಜಿಸುತ್ತಿದ್ದ ಆತನ ಮೋಹನ ಮೂರ್ತಿಯು ನನಗೆ ನೆನಪಾಗುತ್ತದೆ. ಅವನ ಮುಖದ ಮೇಲೆ ಕೆದರಿ ಹೋಗಿದ್ದ ಮುಂಗುರುಳುಗಳು ಕುದುರೆಗಳ ಕಾಲಿನಿಂದೆದ್ದ ಧೂಳಿಯಿಂದ ಧೂಸರವರ್ಣವಾಗಿ ಬಿಟ್ಟಿತ್ತು. ಆಯಾಸದ ಬೆವರಿನ ಹನಿಗಳು ಅಲ್ಲಲ್ಲಿ ಅಂಟಿಕೊಂಡು ಶೋಭಿಸುತ್ತಿದ್ದುವು. ನನ್ನ ತೀಕ್ಷ್ಣವಾದ ಬಾಣಗಳು ಚರ್ಮದ ಮೇಲೆ ನಾಟಿ ಗಾಯಗಳನ್ನುಂಟುಮಾಡಿವೆ. ಇಷ್ಟೆಲ್ಲಾ ಇದ್ದರೂ ಕುಂದದ ಸೌಂದರ್ಯದಿಂದ ರಮಣೀಯವಾಗಿ ಕಂಗೊಳಿಸುತ್ತಿರುವ ■ ಕವಚಧಾರಿಯಾದ ಶ್ರೀಕೃಷ್ಣನಲ್ಲಿ ನನ್ನ ಆತ್ಮವು ಸಮರ್ಪಿತವಾಗಲಿ. ॥ ೩೪ ॥ ತನ್ನ ಮಿತ್ರನಾದ ಅರ್ಜುನನ

ಸಪದಿ ಸಖಿವಚೋ ನಿಶಮ್ಯ ಮಧ್ಯೇ
ನಿಜಪರಯೋರ್ಬಲಯೋಃ ರಥಂ ನಿವೇಶ್ಯ ।
ಸ್ಥಿತವತಿ ಪರಸೈನಿಕಾಯುರಕ್ಷ್ಣಾ
ಹೃತವತಿ ಪಾರ್ಥಸಖೇ ರತಿರ್ಮಮಾಸ್ತು ॥ ೩೫ ॥

ವ್ಯವಹಿತಪೃತನಾಮುಖಂ ನಿರೀಕ್ಷ್ಯ
ಸ್ವಜನವಧಾದ್ವಿಮುಖಸ್ಯ ದೋಷಬುದ್ಧ್ಯಾ ।
ಕುಮತಿಮಹರದಾತ್ಮವಿದ್ಯಯಾ ಯ-
ಶ್ಚರಣರತಿಃ ಪರಮಸ್ಯ ತಸ್ಯ ಮೇಽಸ್ತು ॥ ೩೬ ॥

ಸ್ವನಿಗಮಮಪಹಾಯ ಮತ್ಪ್ರತಿಜ್ಞಾ-
ಮೃತಮಧಿಕರ್ತುಮವಪ್ಲುತೋ ರಥಸ್ಥಃ ।
ಧೃತರಥಚರಣೋಽಭ್ಯಯಾಚ್ಚಲದ್ಗು-
ರ್ಹರಿರಿವ ಹಂತುಮಿಭಂ ಗತೋತ್ತರೀಯಃ ॥ ೩೭ ॥

ಶಿತವಿಶಿಖಹತೋ ವಿಶೀರ್ಣದಂಶಃ
ಕ್ಷತಜಪರಿಪ್ಲುತ ಆತತಾಯಿನೋ ಮೇ ।
ಪ್ರಸಭಮಭಿಸಸಾರ ಮದ್ವಧಾರ್ಥಂ
ಸ ಭವತು ಮೇ ಭಗವಾನ್ಗತಿರ್ಮುಕುಂದಃ ॥ ೩೮ ॥

ವಿಜಯರಥಕುಟುಂಬ ಆತ್ತತೋತ್ರೇ
ಧೃತಹಯರಶ್ಮಿನಿ ತಚ್ಛ್ರಿಯೇಕ್ಷಣೀಯೇ ।
ಭಗವತಿ ರತಿರಸ್ತು ಮೇ ಮುಮೂರ್ಷೋ-
ರ್ಯಮಿಹ ನಿರೀಕ್ಷ್ಯ ಹತಾ ಗತಾಃ ಸರೂಪಮ್ ॥ ೩೯ ॥

ಲಲಿತಗತಿವಿಲಾಸವಲ್ಗುಹಾಸ-
ಪ್ರಣಯನಿರೀಕ್ಷಣಕಲ್ಪಿತೋರುಮಾನಾಃ ।
ಕೃತಮನುಕೃತವತ್ಯ ಉನ್ಮದಾಂಧಾಃ
ಪ್ರಕೃತಿಮಗನ್ಕಿಲ ಯಸ್ಯ ಗೋಪವಧ್ವಃ ॥ ೪೦ ॥

ಮುನಿಗಣನೃಪವರ್ಯಸಂಕುಲೇಽಂತಃ-
ಸದಸಿ ಯುಧಿಷ್ಠಿರರಾಜಸೂಯ ಏಷಾಮ್ ।
ಅರ್ಹಣಮುಪಪೇದ ಈಕ್ಷಣೀಯೋ
ಮಮ ದೃಶಿಗೋಚರ ಏಷ ಆವಿರಾತ್ಮಾ ॥ ೪೧ ॥

ಮಾತನ್ನು ಕೇಳಿ, ಒಡನೆಯೇ ಸ್ವಸೈನ್ಯ ಮತ್ತು ಶತ್ರುಸೈನ್ಯಗಳ ಮಧ್ಯದಲ್ಲಿ ರಥವನ್ನು ನಿಲ್ಲಿಸಿದವನಾಗಿ, ಕೇವಲ ತನ್ನ ದೃಷ್ಟಿಯಿಂದಲೇ ಶತ್ರುಸೈನಿಕರ ಆಯುಸ್ಸನ್ನು ಕಸಿದು ಬಿಟ್ಟಿರುವ ಪಾರ್ಥಸಖನಾದ ಭಗವಾನ್ ಶ್ರೀಕೃಷ್ಣನಲ್ಲಿ ನನಗೆ ಪರಮಪ್ರೇಮವಿರಲಿ. ॥ ೩೫ ॥ ಅರ್ಜುನನು ದೂರದಿಂದ ಕೌರವ ಸೇನೆಯ ಮುಖ್ಯಸ್ಥರಾದ ನಮ್ಮನ್ನು ನೋಡಿದಾಗ ಯುದ್ಧಮಾಡುವುದು ಪಾಪವೆಂದು ತಿಳಿದು, ಅವನು ಸ್ವಜನ ವಧೆಯಿಂದ ವಿಮುಖನಾದನು. ಆಗ ಯಾವ ಜ್ಞಾನಮೂರ್ತಿಯು ಶ್ರೀಗೀತೆಯೆಂಬ ಆತ್ಮವಿದ್ಯೆಯನ್ನು ಉಪದೇಶಿಸಿ, ಅವನ ಮೋಹವನ್ನು ಹೋಗಲಾಡಿಸಿದನೋ ಅಂತಹ ಪರಮ ಪುರುಷ ಭಗವಾನ್ ಶ್ರೀಕೃಷ್ಣನ ಚರಣಗಳಲ್ಲಿ ನನ್ನ ಪ್ರೀತಿಯು ಸ್ಥಿರವಾಗಿರಲಿ. ॥ ೩೬ ॥ 'ಶ್ರೀಕೃಷ್ಣನು ಯುದ್ಧದಲ್ಲಿ ಶಸ್ತ್ರವನ್ನು ಧರಿಸುವಂತೆ ಮಾಡಿಬಿಡುತ್ತೇನೆ' ಎಂದು ನಾನು ಪ್ರತಿಜ್ಞೆ ಮಾಡಿದ್ದೆ. 'ನಾನು ಯುದ್ಧದಲ್ಲಿ ಶಸ್ತ್ರವನ್ನು ಹಿಡಿಯುವುದಿಲ್ಲ' ಎಂದು ಶ್ರೀ ಕೃಷ್ಣನು ಪ್ರತಿಜ್ಞೆ ಮಾಡಿದ್ದನು. ಆದರೆ ಭಕ್ತನಾದ ನನ್ನ ಪ್ರತಿಜ್ಞೆಯನ್ನು ನಿಜವಾಗಿಸುವುದಕ್ಕಾಗಿ ತನ್ನ ಶಪಥವನ್ನೇ ಮುರಿದು, ಸ್ವಾಮಿಯು ರಥದಿಂದ ಕೆಳಗೆ ಧುಮುಕಿ, ಸಿಂಹವು ಆನೆಯನ್ನು ಸಂಹರಿಸಲು ಅದರ ಮೇಲೆ ಎರಗುವಂತೆ, ಚಕ್ರವನ್ನೆತ್ತಿಕೊಂಡು ನನ್ನ ಮೇಲೆರಗಲು ರಭಸದಿಂದ ಧಾವಿಸಿ ಬರುತ್ತಿರುವಾಗ ಭೂಮಿಯು ನಡುಗಿತು. ಹೆಗಲಲ್ಲಿ ಹೊತ್ತ ಉತ್ತರೀಯವು ಜಾರಿ ಬಿತ್ತು. ಇಂತಹ ಶ್ರೀಕೃಷ್ಣನಲ್ಲಿ ನನ್ನ ಪ್ರೀತಿಯು ಸ್ಥಿರವಾಗಲಿ. ॥ ೩೭ ॥ ಆತತಾಯಿಯಾದ ನಾನು ತೀಕ್ಷ್ಣವಾದ ಬಾಣಗಳನ್ನು ಹೊಡೆದು ಅವನ ಕವಚವನ್ನು ತುಂಡರಿಸಿದ್ದೆ. ಅದರಿಂದ ಅವನ ಇಡೀ ಶರೀರವು ರಕ್ತದಿಂದ ತೊಯ್ದು ಹೋಗಿತ್ತು. ಅರ್ಜುನನು ತಡೆಯುತ್ತಿದ್ದರೂ ಕೇಳದೆ ನನ್ನನ್ನು ಕೊಂದೇ ಹಾಕುವೆನೆಂದು ಬಲವಂತವಾಗಿ ಯಾವಾತನು ನನ್ನನ್ನು ಅನುಗ್ರಹಿಸಲು ನನ್ನ ಕಡೆಗೆ ಓಡಿ ಬಂದನೋ, ಅಂತಹ ಭಕ್ತವತ್ಸಲನಾದ ಭಗವಾನ್ ಶ್ರೀಕೃಷ್ಣನೇ ನನಗೆ ಗತಿಯಾಗಲಿ ; ಆಶ್ರಯವಾಗಲಿ. ॥ ೩೮ ॥ ಅರ್ಜುನನ ರಥದ ಸಾರಥಿಯಾಗಿ ಒಂದು ಕೈಯಲ್ಲಿ ಚಾವಟಿಗೆಯನ್ನೂ, ಮತ್ತೊಂದು ಕೈಯಲ್ಲಿ ಕುದುರೆಗಳ ವಾಘೆಗಳನ್ನು ಹಿಡಿದುಕೊಂಡು, ಆ ವೇಷದಲ್ಲಿಯೂ ಅತ್ಯಂತ ರಮಣೀಯದರ್ಶನನಾಗಿದ್ದ ಪ್ರಭುವನ್ನು ನೋಡುತ್ತಾ ಮಹಾಭಾರತ ಯುದ್ಧದಲ್ಲಿ ಮಡಿದವರೆಲ್ಲರೂ ಆತನ ಸಾರೂಪ್ಯ ಮುಕ್ತಿಯನ್ನೇ ಪಡೆದರೋ, ಅಂತಹ ಪಾರ್ಥಸಾರಥಿ ಭಗವಾನ್ ಶ್ರೀಕೃಷ್ಣನಲ್ಲಿ ಮರಣಾಸನ್ನನಾದ ನನಗೆ ಪರಮ ಪ್ರೀತಿ ಉಂಟಾಗಲಿ. ॥ ೩೯ ॥ ಯಾರ ಹಾವ-ಭಾವಗಳಿಂದ ಕೂಡಿದ ವಿಲಾಸ, ಮಧುರವಾದ ಮಂದಹಾಸ, ಬೆಡಗು, ಬಿನ್ನಾಣ, ಪ್ರೇಮಯುಕ್ತವಾದ ಕಡೆಗಣ್ಣ ನೋಟದಿಂದ ಅತ್ಯಂತ ಸಮ್ಮಾನಿತರಾದ ಗೋಪಿಯರು ರಾಸಲೀಲೆಯಲ್ಲಿ ಅವನು ಅಂತರ್ಧಾನನಾದಾಗ ಪ್ರೇಮೋನ್ಮತ್ತರಾಗಿ ಅವನ ಆ ದಿವ್ಯಲೀಲೆಗಳನ್ನು ಅನುಕರಣೆ ಮಾಡುತ್ತಾ ತನ್ಮಯರಾಗಿ ಬಿಟ್ಟರೋ, ಅಂತಹ ಭಗವಾನ್ ಶ್ರೀಕೃಷ್ಣನಲ್ಲಿ ನನಗೆ ಪರಮ ಪ್ರೇಮವು ಉಂಟಾಗಲಿ. ॥ ೪೦ ॥ ಮಹಾಮುನಿಗಳೂ, ರಾಜಶ್ರೇಷ್ಠರೂ ನೆರೆದಿದ್ದ ಧರ್ಮರಾಜನ ರಾಜಸೂಯ ಯಜ್ಞದ ಸಭೆಯಲ್ಲಿ ಮೊಟ್ಟಮೊದಲಿಗೆ ಯಾರ ಅಗ್ರಪೂಜೆಯು ನನ್ನ ಕಣ್ಣಮುಂದೆಯೇ ನಡೆಯಿತೋ, ಅಂತಹ

ತಮಿಮಮಹಮಜಂ ಶರೀರಭಾಜಾಂ
ಹೃದಿ ಹೃದಿ ಧಿಷ್ಠಿತಮಾತ್ಮಕಲ್ಪಿತಾನಾಮ್ ।
ಪ್ರತಿದೃಶಮಿವ ನೈಕಧಾರ್ಕಮೇಕಂ
ಸಮಧಿಗತೋಽಸ್ಮಿ ವಿಧೂತಭೇದಮೋಹಃ ॥ ೪೨ ॥

ಸೂತ ಉವಾಚ

ಕೃಷ್ಣ ಏವಂ ಭಗವತಿ ಮನೋವಾಗ್ದೃಷ್ಟಿವೃತ್ತಿಭಿಃ ।
ಆತ್ಮನ್ಯಾತ್ಮಾನಮಾವೇಶ್ಯ ಸೋಽನ್ತಃಶ್ವಾಸ ಉಪಾರಮತ್ ॥ ೪೩ ॥

ಸಂಪದ್ಯಮಾನಮಾಜ್ಞಾಯ ಭೀಷ್ಮಂ ಬ್ರಹ್ಮಣಿ ನಿಷ್ಕಲೇ ।
ಸರ್ವೇ ಬಭೂವುಸ್ತೇ ತೂಷ್ಣೀಂ ವಯಾಂಸೀವ ದಿನಾತ್ಯಯೇ ॥ ೪೪ ॥

ತತ್ರ ದುಂದುಭಯೋ ನೇದುರ್ದೇವಮಾನವವಾದಿತಾಃ ।
ಶಶಂಸುಃ ಸಾಧವೋ ರಾಜ್ಞಾಂ ಖಾತ್ಪೇತುಃ ಪುಷ್ಪವೃಷ್ಟಯಃ ॥ ೪೫ ॥

ತಸ್ಯ ನಿರ್ಹರಣಾದೀನಿ ಸಂಪರೇತಸ್ಯ ಭಾರ್ಗವ ।
ಯುಧಿಷ್ಠಿರಃ ಕಾರಯಿತ್ವಾ ಮುಹೂರ್ತಂ ದುಃಖಿತೋಽಭವತ್ ॥ ೪೬ ॥

ತುಷ್ಟುವುರ್ಮುನಯೋ ಹೃಷ್ಟಾಃ ಕೃಷ್ಣಂ ತದ್ಗುಹ್ಯನಾಮಭಿಃ ।
ತತಸ್ತೇ ಕೃಷ್ಣಹೃದಯಾಃ ಸ್ವಾಶ್ರಮಾನ್ಪ್ರಯಯುಃ ಪುನಃ ॥ ೪೭ ॥

ತತೋ ಯುಧಿಷ್ಠಿರೋ ಗತ್ವಾ ಸಹಕೃಷ್ಣೋ ಗಜಾಹ್ವಯಮ್ ।
ಪಿತರಂ ಸಾಂತ್ವಯಾಮಾಸ ಗಾಂಧಾರೀಂ ಚ ತಪಸ್ವಿನೀಮ್ ॥ ೪೮ ॥

ಪಿತ್ರಾ ಚಾನುಮತೋ ರಾಜಾ ವಾಸುದೇವಾನುಮೋದಿತಃ ।
ಚಕಾರ ರಾಜ್ಯಂ ಧರ್ಮೇಣ ಪಿತೃಪೈತಾಮಹಂ ವಿಭುಃ ॥ ೪೯ ॥

ಸರ್ವರಿಗೂ ಆತ್ಮಸ್ವರೂಪನಾದ ಭಗವಾನ್ ಶ್ರೀಕೃಷ್ಣನೇ ಇಂದು ನನ್ನ ಮೃತ್ಯುಸಮಯದಲ್ಲಿ ನನ್ನೆದುರಿನಲ್ಲೇ ದರ್ಶನ ನೀಡುತ್ತಿರುವನಲ್ಲ! ಅವನಲ್ಲಿ ನನಗೆ ಅಖಂಡವಾದ ಪ್ರೇಮ ಉಂಟಾಗಲಿ. ॥ ೪೧ ॥ ಒಬ್ಬನೇ ಸೂರ್ಯನು ಬೇರೆ-ಬೇರೆ ಕಣ್ಣುಗಳಿಗೆ ಅನೇಕ ರೂಪಿಯಾಗಿ ತೋರುವಂತೆಯೇ ಅಜನ್ಮನಾದ ಭಗವಾನ್ ಶ್ರೀಕೃಷ್ಣನು ತನ್ನಿಂದಲೇ ರಚಿತವಾದ ಅನೇಕ ಶರೀರಧಾರಿಗಳ ಹೃದಯಗಳಲ್ಲಿ ಅಂತರ್ಯಾಮಿಯಾಗಿ ಅನೇಕರೂಪಗಳಂತೆ ಕಂಡು ಬರುತ್ತಿದ್ದಾನೆ. ವಾಸ್ತವವಾಗಿ ಅವನೇ ಎಲ್ಲರಲ್ಲಿ ವಿರಾಜಮಾನನಾಗಿದ್ದಾನೆ. ಅಂತಹ ಭಗವಂತನನ್ನು ನಾನು ಭೇದ-ಭ್ರಮರಹಿತನಾಗಿ ಪಡೆದುಕೊಂಡು ಏಕಾತ್ಮಭಾವವುಳ್ಳವನಾಗಿ, ಅವನ ಇದಿರಿನಲ್ಲೇ ಶರೀರತ್ಯಾಗ ಮಾಡುತ್ತಿದ್ದೇನೆ. * ॥ ೪೨ ॥

ಸೂತಪುರಾಣಿಕರು ಹೇಳುತ್ತಾರೆ – ಹೀಗೆ ಭೀಷ್ಮಪಿತಾಮಹರು ಆತ್ಮಸ್ವರೂಪನಾದ ಶ್ರೀಕೃಷ್ಣನಲ್ಲಿ ಮನಸ್ಸು, ವಾಣಿ, ದೃಷ್ಟಿ ಇವುಗಳ ಮೂಲಕ ತನ್ನನ್ನು ಸಮರ್ಪಿಸಿಕೊಂಡು, ಪ್ರಾಣವಾಯುವನ್ನು ಅವನಲ್ಲೇ ವಿಲೀನಗೊಳಿಸಿದರು ; ಶರೀರ ಶಾಂತವಾಯಿತು. ॥ ೪೩ ॥ ಅವರು ಹೀಗೆ ನಿಷ್ಕಲವಾದ ಬ್ರಹ್ಮನಲ್ಲಿ ಲಯಹೊಂದುತ್ತಿರುವುದನ್ನು ನೋಡಿ, ಸಂಜೆಯಾದಾಗ ಪಕ್ಷಿಗಳ ಕಲರವವು ಶಾಂತವಾಗುವಂತೆ ಎಲ್ಲ ಜನರು ಮೌನರಾದರು. ॥ ೪೪ ॥ ಆಗಲೇ ಮನುಷ್ಯರೂ, ದೇವತೆಗಳೂ ದುಂದುಭಿಯೇ ಮುಂತಾದ ವಾದ್ಯಗಳನ್ನು ಮೊಳಗಿಸಿದರು. ಸಾಧು-ಸಜ್ಜನರಾದ ರಾಜರು ಭೀಷ್ಮರನ್ನು ಪ್ರಶಂಸಿಸಿದರು. ಆಕಾಶದಿಂದ ಹೂಮಳೆ ಸುರಿಯಿತು. ॥ ೪೫ ॥ ಶೌನಕರೇ ! ನಿಷ್ಕಳಂಕವೂ, ನಿರುಪಾಧಿಕವೂ ಆದ ಬ್ರಹ್ಮನಲ್ಲಿ ಐಕ್ಯವನ್ನು ಪಡೆದ ಆ ಮಹಾತ್ಮರ ಮೃತಶರೀರಕ್ಕೆ ಅಂತ್ಯಕ್ರಿಯೆಯನ್ನು ನೆರವೇರಿಸಿ, ಧರ್ಮರಾಜನು ಸ್ವಲ್ಪಕಾಲ ಶೋಕಮಗ್ನನಾಗಿ ಕುಳಿತನು. ॥ ೪೬ ॥ ಅಲ್ಲಿ ನೆರೆದಿದ್ದ ಮುನಿಗಳೆಲ್ಲರೂ ಶ್ರೀಕೃಷ್ಣ ಪರಮಾತ್ಮನನ್ನು ಅವನ ರಹಸ್ಯಮಯ ದಿವ್ಯನಾಮಗಳಿಂದ ಸ್ತುತಿಸಿದ ಬಳಿಕ ಕೃಷ್ಣಮಯವಾದ ಹೃದಯಗಳಿಂದ ತಮ್ಮ-ತಮ್ಮ ಆಶ್ರಮಗಳಿಗೆ ತೆರಳಿದರು. ॥ ೪೭ ॥ ಅನಂತರ ಯುಧಿಷ್ಠಿರನೂ ಕೂಡ ಭಗವಾನ್ ಶ್ರೀಕೃಷ್ಣನೊಂದಿಗೆ ಹಸ್ತಿನಾಪುರಕ್ಕೆ ಬಂದು, ದೊಡ್ಡಪ್ಪನಾದ ಧೃತರಾಷ್ಟ್ರನನ್ನೂ, ತಪಸ್ವಿನಿಯಾದ ಗಾಂಧಾರಿಯನ್ನು ಸಮಾಧಾನಪಡಿಸಿದನು. ॥ ೪೮ ॥ ಮತ್ತೆ ಧೃತರಾಷ್ಟ್ರನ ಆಜ್ಞೆಯಂತೆ, ಭಗವಾನ್ ಶ್ರೀವಾಸುದೇವನ ಅನುಮತಿಯಿಂದ ಯುಧಿಷ್ಠಿರರಾಜನು ತನ್ನ ವಂಶಪರಂಪರೆಯಿಂದ ಬಂದ ರಾಜ್ಯವನ್ನು ಧರ್ಮದಿಂದ ಆಳತೊಡಗಿದನು. ॥ ೪೯ ॥

ಒಂಬತ್ತನೆಯ ಅಧ್ಯಾಯವು ಮುಗಿಯಿತು. ॥ ೯ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಪ್ರಥಮಸ್ಕಂಧೇ
ಯುಧಿಷ್ಠಿರರಾಜ್ಯಪ್ರಲಂಭೋ ನಾಮ ನವಮೋಽಧ್ಯಾಯಃ ॥ ೯ ॥

---

* ಶರಶಯ್ಯೆಯಲ್ಲಿ ಮಲಗಿದ ಭೀಷ್ಮಪಿತಾಮಹರು ವಿಷ್ಣುಸಹಸ್ರನಾಮದ ಮೂಲಕ ಅತ್ಯಂತ ಆದರ, ಶ್ರದ್ಧೆಯಿಂದ ಭಗವಂತನನ್ನು ಸ್ತುತಿಸಿದ್ದರು. ಭಕ್ತರಲ್ಲಿ ಇದರ ಕುರಿತು ಅತ್ಯಾದರವಿದೆ. ಭಾಗವತವನ್ನು ಓದುವವರು ಈ ಭೀಷ್ಮಸ್ತುತಿಯನ್ನು ಪದೇ-ಪದೇ ಓದುತ್ತಾರೆ. ಮಹಾಭಾರತದಲ್ಲಿ ಭೀಷ್ಮರಿಂದ ಮಾಡಲ್ಪಟ್ಟ ಸ್ತುತಿಯು 'ಭೀಷ್ಮಸ್ತವರಾಜ' ಎಂಬ ಹೆಸರಿನಿಂದ ಖ್ಯಾತವಾಗಿದೆ. ಭಕ್ತರಾದವರಲ್ಲಿ ಇದರ ಕುರಿತು ಬಹಳ ಆದರವಿದೆ. ಈ ಸ್ತುತಿಗಳಲ್ಲಿ ಭಗವಂತನ ಪ್ರಭಾವ, ಲೀಲೆಗಳನ್ನು ಭೀಷ್ಮರು ಅಲೌಕಿಕವಾಗಿ ವರ್ಣಿಸಿರುವರು. ಭಕ್ತಜನರು ವಿಷ್ಣುಸಹಸ್ರನಾಮವನ್ನು ಅತ್ಯಂತ ಶ್ರದ್ಧೆಯಿಂದ ಪಠಿಸುತ್ತಾರೆ. ಸ್ತೋತ್ರವು ಶ್ಲೋಕಗಳಲ್ಲಿರುವುದರಿಂದ ಅದು ಕಂಠಸ್ಥವೂ ಆಗುತ್ತದೆ. ಆದ್ದರಿಂದ ಈ ಸ್ತೋತ್ರಗಳನ್ನು ಭಕ್ತಿ-ಶ್ರದ್ಧೆಯಿಂದ ಪಾರಾಯಣ ಮಾಡುವ ಅಭ್ಯಾಸವಿರಿಸಿಕೊಳ್ಳಬೇಕು.

ಹತ್ತನೆಯ ಅಧ್ಯಾಯ

ಶ್ರೀಕೃಷ್ಣನು ದ್ವಾರಕೆಗೆ ಮರಳಿದುದು

ಶೌನಕ ಉವಾಚ

ಹತ್ವಾ ಸ್ವರಿಕ್ಥಸ್ಪೃಧ ಆತತಾಯಿನೋ
ಯುಧಿಷ್ಠಿರೋ ಧರ್ಮಭೃತಾಂ ವರಿಷ್ಠಃ ।
ಸಹಾನುಜೈಃ ಪ್ರತ್ಯವರುದ್ಧಭೋಜನಃ
ಕಥಂ ಪ್ರವೃತ್ತಃ ಕಿಮಕಾರಷೀತ್ತತಃ ॥ ೧ ॥

ಶೌನಕಾದಿಗಳು ಕೇಳುತ್ತಾರೆ – ಸೂತ ಪುರಾಣಿಕರೇ! ಧಾರ್ಮಿಕ ಶಿರೋಮಣಿಯಾದ ಮಹಾರಾಜ ಯುಧಿಷ್ಠಿರನು ತನ್ನ ಪೈತೃಕಸಂಪತ್ತನ್ನು ಕಸಿದುಕೊಳ್ಳುವ ಆಸೆಯಿಂದ ತನ್ನನ್ನು ವಧಿಸಲು ಪ್ರಯತ್ನಪಟ್ಟ ಶತ್ರುಗಳನ್ನು ಸಂಹರಿಸಿ, ತನ್ನ ಸಹೋದರರೊಂದಿಗೆ ಹೇಗೆ ರಾಜ್ಯಶಾಸನವನ್ನು ಮಾಡಿದನು? ಏಕೆಂದರೆ, ಭೋಗಗಳಲ್ಲಾದರೋ ಅವನಿಗೆ ಪ್ರವೃತ್ತಿಯೇ ಇರಲಿಲ್ಲ. ॥ ೧ ॥

ಸೂತ ಉವಾಚ

ವಂಶಂ ಕುರೋರ್ವಂಶದವಾಗ್ನಿನಿರ್ಹೃತಂ
ಸಂರೋಹಯಿತ್ವಾ ಭವಭಾವನೋ ಹರಿಃ ।
ನಿವೇಶಯಿತ್ವಾ ನಿಜರಾಜ್ಯ ಈಶ್ವರೋ
ಯುಧಿಷ್ಠಿರಂ ಪ್ರೀತಮನಾ ಬಭೂವ ಹ ॥ ೨ ॥

ಸೂತಪುರಾಣಿಕರು ಹೇಳುತ್ತಾರೆ - ಲೋಕದ ಉತ್ಕರ್ಷವನ್ನಾಗಿ ಅವತಾರಮಾಡಿದ ಶ್ರೀಹರಿಯು – ಬಿದಿರುಮೆಳೆಯಲ್ಲಿ ಪರಸ್ಪರ ಘರ್ಷಣೆಯಿಂದ ಉಂಟಾದ ಬೆಂಕಿಯು ಬಿದಿರುಮೆಳೆಯನ್ನೇ ಸುಟ್ಟುಬಿಡುವಂತೆ ಪರಸ್ಪರ ಕಲಹಾಗ್ನಿಯಿಂದ ಸುಟ್ಟು ಹೋಗಿದ್ದ ಕುರುವಂಶದ ಕುಡಿಯಾದ ಪರೀಕ್ಷಿತನನ್ನು ಬದುಕಿಸಿ, ಯುಧಿಷ್ಠಿರನನ್ನು ಅವನ ರಾಜ್ಯದಲ್ಲಿ ನೆಲೆಗೊಳಿಸಿ ತುಂಬಾ ಪ್ರಸನ್ನನಾದನು. ॥ ೨ ॥

ನಿಶಮ್ಯ ಭೀಷ್ಮೋಕ್ತಮಥಾಚ್ಯುತೋಕ್ತಂ
ಪ್ರವೃತ್ತವಿಜ್ಞಾನವಿಧೂತವಿಭ್ರಮಃ ।
ಶಶಾಸ ಗಾಮಿಂದ್ರ ಇವಾಜಿತಾಶ್ರಯಃ
ಪರಿಧ್ಯುಪಾಂತಾಮನುಜಾನುವರ್ತಿತಃ ॥ ೩ ॥

ಭೀಷ್ಮಪಿತಾಮಹರ ಮತ್ತು ಭಗವಾನ್ ಶ್ರೀಕೃಷ್ಣನ ಉಪದೇಶ ಶ್ರವಣದಿಂದ ಧರ್ಮರಾಜನಿಗೆ ಜ್ಞಾನೋದಯವಾಗಿ, ಎಲ್ಲ ಭ್ರಾಂತಿಗಳು ಅಳಿದು ಹೋದುವು. ಶ್ರೀಭಗವಂತನ ಬೆಂಬಲದಿಂದ ಅವನು ಸಮುದ್ರ ಪರ್ಯಂತವಾದ ಭೂಮಂಡಲವನ್ನು ಇಂದ್ರನಂತೆ ಆಳತೊಡಗಿದನು. ಭೀಮಸೇನರೇ ಮುಂತಾದ ತಮ್ಮಂದಿರು ಆತನ ಆಜ್ಞೆಯಂತೆ ನಡೆಯುತ್ತಿದ್ದರು. ॥ ೩ ॥

ಕಾಮಂ ವವರ್ಷ ಪರ್ಜನ್ಯಃ ಸರ್ವಕಾಮದುಘಾ ಮಹೀ ।
ಸಿಷಿಚುಃ ಸ್ಮ ವ್ರಜಾನ್ಗಾವಃ ಪಯಸೋಧಸ್ವತೀರ್ಮುದಾ ॥ ೪ ॥

ಯುಧಿಷ್ಠಿರನ ರಾಜ್ಯದಲ್ಲಿ ಪೂರ್ಣವಾದ ಸುಭಿಕ್ಷವಿದ್ದು, ಸುಖಶಾಂತಿಗಳು ನೆಲೆಸಿದ್ದುವು. ಅವಶ್ಯಕತೆಗೆ ತಕ್ಕಂತೆ ಯಥೇಷ್ಟವಾಗಿ ಮಳೆಯು ಸುರಿಯುತ್ತಿತ್ತು. ಜೀವನಕ್ಕೆ ಬೇಕುಬೇಕಾದ ಎಲ್ಲ ಪದಾರ್ಥಗಳು ಹೇರಳವಾಗಿ ಭೂಮಿಯಿಂದ ಸಿಗುತ್ತಿದ್ದುವು. ಆಕಳುಗಳು ಕೆಚ್ಚಲಲ್ಲಿ ಹಾಲು ಹಿಡಿಸಲಾರದೆ ಕೊಟ್ಟಿಗೆಗಳನ್ನು ಹಾಲಿನಿಂದ ನೆನೆಸುತ್ತಿದ್ದುವು. ॥ ೪ ॥

ನದ್ಯಃ ಸಮುದ್ರಾ ಗಿರಯಃ ಸವನಸ್ಪತಿವೀರುಧಃ ।
ಫಲಂತ್ಯೋಷಧಯಃ ಸರ್ವಾಃ ಕಾಮಮನ್ವೃತು ತಸ್ಯ ವೈ ॥ ೫ ॥

ನದಿಗಳೂ, ಸಮುದ್ರಗಳೂ, ಪರ್ವತಗಳೂ, ವನಸ್ಪತಿಗಳೂ, ಔಷಧಿಗಳೂ, ಲತೆಗಳೂ ಪ್ರತಿಯೊಂದು ಋತುವಿನಲ್ಲಿಯೂ ಯಥೇಷ್ಟವಾಗಿ ತಮ್ಮ-ತಮ್ಮ ಸಂಪತ್ತನ್ನು ರಾಜನಿಗೆ ನೀಡುತ್ತಿದ್ದುವು. ॥ ೫ ॥

ನಾಧಯೋ ವ್ಯಾಧಯಃ ಕ್ಲೇಶಾ ದೈವಭೂತಾತ್ಮಹೇತವಃ ।
ಅಜಾತಶತ್ರಾವಭವನ್ ಜಂತೂನಾಂ ರಾಜ್ಞಿ ಕರ್ಹಿಚಿತ್ ॥ ೬ ॥

ಅಜಾತಶತ್ರುವಾದ ಮಹಾರಾಜ ಯುಧಿಷ್ಠಿರನ ರಾಜ್ಯದಲ್ಲಿ ಯಾವ ಪ್ರಾಣಿಗೂ ಎಂದೂ ಆಧಿ-ವ್ಯಾಧಿಗಳು ಅಥವಾ ದೈವಿಕ, ಭೌತಿಕ, ಆತ್ಮಿಕವಾದ ಕ್ಲೇಶಗಳು ಆಗುತ್ತಿರಲಿಲ್ಲ. ॥ ೬ ॥

ಉಷಿತ್ವಾ ಹಾಸ್ತಿನಪುರೇ ಮಾಸಾನ್ಕತಿಪಯಾನ್ ಹರಿಃ ।
ಸುಹೃದಾಂ ಚ ವಿಶೋಕಾಯ ಸ್ವಸುಶ್ಚ ಪ್ರಿಯಕಾಮ್ಯಯಾ ॥ ೭ ॥

ತಮ್ಮ ಬಂಧು-ಮಿತ್ರರ ಶೋಕವನ್ನು ಹೋಗಲಾಡಿಸಲು ಮತ್ತು ತನ್ನ ತಂಗಿ ಸುಭದ್ರೆಯ ಸಂತೋಷಕ್ಕಾಗಿ ಭಗವಾನ್ ಶ್ರೀಕೃಷ್ಣನು ಹಸ್ತಿನಾವತಿಯಲ್ಲಿಯೇ ಕೆಲವು ತಿಂಗಳು ತಂಗಿದನು. ॥ ೭ ॥

ಆಮಂತ್ರ್ಯ ಚಾಭ್ಯನುಜ್ಞಾತಃ ಪರಿಷ್ವಜ್ಯಾಭಿವಾದ್ಯ ತಮ್ ।
ಆರುರೋಹ ರಥಂ ಕೈಶ್ಚಿತ್ಪರಿಷ್ವಕ್ತೋಽಭಿವಾದಿತಃ ॥ ೮ ॥

ಮತ್ತೆ ಅವನು ರಾಜಾಯುಧಿಷ್ಠಿರನಿಂದ ದ್ವಾರಕೆಗೆ ಹೋಗಲು ಅನುಮತಿಯನ್ನು ಕೇಳಿದನು. ಆಗ ಧರ್ಮರಾಜನು ಶ್ರೀಕೃಷ್ಣನನ್ನು ತುಂಬು ಹೃದಯದಿಂದ ಆಲಿಂಗಿಸಿಕೊಂಡು ಬೀಳ್ಕೊಟ್ಟನು. ಭಗವಂತನು ಅವನಿಗೆ ನಮಸ್ಕರಿಸಿ ರಥವನ್ನು ಏರಿದನು. ಸಮವಯಸ್ಕರಾದ ಕೆಲವರು ಆತನನ್ನು ಅಪ್ಪಿಕೊಂಡರು. ಸಣ್ಣವರು ವಂದಿಸಿಕೊಂಡರು. ॥ ೮ ॥ ಆಗ ಸುಭದ್ರೆ, ದ್ರೌಪದೀ, ಕುಂತೀ, ಉತ್ತರೆ, ಗಾಂಧಾರೀ,

ಸುಭದ್ರಾ ದ್ರೌಪದೀ ಕುಂತೀ ವಿರಾಟತನಯಾ ತಥಾ ।
ಗಾಂಧಾರೀ ಧೃತರಾಷ್ಟ್ರಶ್ಚ ಯುಯುತ್ಸುರ್ಗೌತಮೋ ಯಮೌ ॥ ೯ ॥

ವೃಕೋದರಶ್ಚ ಧೌಮ್ಯಶ್ಚ ಸ್ತ್ರಿಯೋ ಮತ್ಸ್ಯಸುತಾದಯಃ ।
ನ ಸೇಹಿರೇ ವಿಮುಹ್ಯಂತೋ ವಿರಹಂ ಶಾರ್ಙ್ಗಧನ್ವನಃ ॥ ೧೦ ॥

ಸತ್ಸಂಗಾನ್ಮುಕ್ತದುಃಸಂಗೋ ಹಾತುಂ ನೋತ್ಸಹತೇ ಬುಧಃ ।
ಕೀರ್ತ್ಯಮಾನಂ ಯಶೋ ಯಸ್ಯ ಸಕೃದಾಕರ್ಣ್ಯ ರೋಚನಮ್ ॥ ೧೧ ॥

ತಸ್ಮಿನ್ನ್ಯಸ್ತಧಿಯಃ ಪಾರ್ಥಾಃ ಸಹೇರನ್ವಿರಹಂ ಕಥಮ್ ।
ದರ್ಶನಸ್ಪರ್ಶಸಂಲಾಪಶಯನಾಸನಭೋಜನೈಃ ॥ ೧೨ ॥

ಸರ್ವೇ ತೇಽನಿಮಿಷೈರಕ್ಷೈಸ್ತಮನುದ್ರುತಚೇತಸಃ ।
ವೀಕ್ಷಂತಃ ಸ್ನೇಹಸಂಬದ್ಧಾ ವಿಚೇಲುಸ್ತತ್ರ ತತ್ರ ಹ ॥ ೧೩ ॥

ನ್ಯರುಂಧನ್ನುದ್ಗಲದ್ಬಾಷ್ಪಮೌತ್ಕಂಠ್ಯಾದ್ದೇವಕೀಸುತೇ ।
ನಿರ್ಯಾತ್ಯಗಾರಾನ್ನೋಽಭದ್ರಮಿತಿ ಸ್ಯಾದ್ಬಾಂಧವಸ್ತ್ರಿಯಃ ॥ ೧೪ ॥

ಮೃದಂಗಶಂಖಭೇರ್ಯಶ್ಚ ವೀಣಾಪಣವಗೋಮುಖಾಃ ।
ಧುಂಧುರ್ಯಾನಕಘಂಟಾದ್ಯಾ ನೇದುರ್ದುಂದುಭಯಸ್ತಥಾ ॥ ೧೫ ॥

ಪ್ರಾಸಾದಶಿಖರಾರೂಢಾಃ ಕುರುನಾರ್ಯೋ ದಿದೃಕ್ಷಯಾ ।
ವವೃಷುಃ ಕುಸುಮೈಃ ಕೃಷ್ಣಂ ಪ್ರೇಮವ್ರೀಡಾಸ್ಮಿತೇಕ್ಷಣಾಃ ॥ ೧೬ ॥

ಸಿತಾತಪತ್ರಂ ಜಗ್ರಾಹ ಮುಕ್ತಾದಾಮವಿಭೂಷಿತಮ್ ।
ರತ್ನದಂಡಂ ಗುಡಾಕೇಶಃ ಪ್ರಿಯಃ ಪ್ರಿಯತಮಸ್ಯ ಹ ॥ ೧೭ ॥

ಉದ್ಧವಃ ಸಾತ್ಯಕಿಶ್ಚೈವ ವ್ಯಜನೇ ಪರಮಾದ್ಭುತೇ ।
ವಿಕೀರ್ಯಮಾಣಃ ಕುಸುಮೈ ರೇಜೇ ಮಧುಪತಿಃ ಪಥಿ ॥ ೧೮ ॥

ಅಶ್ರೂಯಂತಾಶಿಷಃ ಸತ್ಯಾಸ್ತತ್ರ ತತ್ರ ದ್ವಿಜೇರಿತಾಃ ।
ನಾನುರೂಪಾನುರೂಪಾಶ್ಚ ನಿರ್ಗುಣಸ್ಯ ಗುಣಾತ್ಮನಃ ॥ ೧೯ ॥

ಅನ್ಯೋನ್ಯಮಾಸೀತ್ಸಂಜಲ್ಪ ಉತ್ತಮಶ್ಲೋಕಚೇತಸಾಮ್ ।
ಕೌರವೇಂದ್ರಪುರಸ್ತ್ರೀಣಾಂ ಸರ್ವಶ್ರುತಿಮನೋಹರಃ ॥ ೨೦ ॥

ಧೃತರಾಷ್ಟ್ರ, ಯುಯುತ್ಸು, ಕೃಪಾಚಾರ್ಯರು, ನಕುಲ, ಸಹದೇವ, ಭೀಮಸೇನ, ಧೌಮ್ಯರು, ಸತ್ಯವತಿ ಮುಂತಾದವರೆಲ್ಲರೂ ಶಾರ್ಙ್ಗಪಾಣಿಯಾದ ಶ್ರೀಕೃಷ್ಣನ ವಿರಹವನ್ನು ಸಹಿಸಲಾರದೆ ಮೂರ್ಛಿತರಂತಾದರು. ॥ ೯-೧೦ ॥ ಭಗವಾನ್ ಶ್ರೀಕೃಷ್ಣನ ಮಧುರವಾದ ದಿವ್ಯ ಚರಿತ್ರವನ್ನು ಒಮ್ಮೆ ಕೇಳಿದವರೂ ಕೂಡ, ಭಗವದ್ಭಕ್ತರ ಸತ್ಸಂಗದಿಂದ ದುಃಸಂಗವನ್ನು ತೊರೆದು ಆ ಹರಿಕಥಾ ಶ್ರವಣಕ್ಕಾಗಿ ಮತ್ತೆ-ಮತ್ತೆ ಹಂಬಲಿಸುತ್ತಾರೆ. ಹೀಗಿರುವಾಗ ಆ ಭಗವಂತನನ್ನು ದರ್ಶಿಸುತ್ತಾ, ಸ್ಪರ್ಶಿಸುತ್ತಾ, ಅವನೊಡನೆ ಸಂಭಾಷಿಸುತ್ತಾ, ಆಸನ-ಶಯನ-ಭೋಜನಗಳಲ್ಲಿಯೂ ಅವನೊಡನೆ ಪಾಲ್ಗೊಳ್ಳುತ್ತಾ, ಅವನಿಗೆ ಸಂಪೂರ್ಣವಾಗಿ ತಮ್ಮ ಹೃದಯವನ್ನು ಅರ್ಪಿಸಿ ಆನಂದಿಸುತ್ತಿದ್ದ ಪಾಂಡವರಿಗೆ ಅವನ ಅಗಲಿಕೆ ಸಹಿಸಲಾದೀತೇ ? ॥ ೧೧-೧೨ ॥ ಅವರ ಚಿತ್ತವು ಶ್ರೀ ಕೃಷ್ಣನಲ್ಲಿಯೇ ಲೀನವಾಗಿತ್ತು. ಎವೆಯಿಕ್ಕದ ಕಣ್ಣುಗಳಿಂದ ಅವನನ್ನೇ ನೋಡುತ್ತಾ ಅವನ ಸ್ನೇಹಕ್ಕೆ ಕಟ್ಟುಬಿದ್ದು ಅವನ ಹಿಂದೆಯೇ ಓಡಾಡುತ್ತಿದ್ದರು. ॥ ೧೩ ॥ ಭಗವಾನ್ ಶ್ರೀಕೃಷ್ಣನು ಅರಮನೆಯಿಂದ ಹೊರಡುತ್ತಲೇ ಬಂಧು-ಸ್ತ್ರೀಯರ ಕಣ್ಣುಗಳು ಪ್ರೇಮಾಶ್ರುಗಳಿಂದ ತುಂಬಿ, ಉಕ್ಕಿಬರುತ್ತಿದ್ದವು. ಆದರೆ ಅವರು ಪ್ರಯಾಣದ ಸಮಯದಲ್ಲಿ ಅಪಶಕುನವಾಗದಿರಲೆಂದು ಬಹಳ ಕಷ್ಟದಿಂದ ಅಶ್ರುಧಾರೆಯನ್ನು ತಡೆದುಕೊಂಡರು. ॥ ೧೪ ॥

ಭಗವಂತನ ಪ್ರಸ್ಥಾನದ ಸಮಯದಲ್ಲಿ ಮೃದಂಗ, ಶಂಖ, ಭೇರಿ, ವೀಣೆ, ಡೋಲು, ಕಹಳೆ, ಝಲ್ಲರಿ, ತಮಟೆ, ಘಂಟೆ ದುಂದುಭಿಗಳು ಮುಂತಾದ ಮಂಗಳ ವಾದ್ಯಗಳು ಮೊಳಗತೊಡಗಿದವು. ॥ ೧೫ ॥ ಭಗವಂತನನ್ನು ದರ್ಶಿಸುವ ಆಸೆಯಿಂದ ಕುರುವಂಶದ ಸ್ತ್ರೀಯರು ಮಹಡಿಗಳನ್ನೇರಿ ಕಣ್ಣುಗಳಿಗೆ ಹಬ್ಬವಾದ ಶ್ರೀಭಗವಂತನೆಡೆಗೆ ಪ್ರೇಮ, ಲಜ್ಜೆಗಳಿಂದ ಕೂಡಿದ ಮಂದಹಾಸದ ನೋಟವನ್ನು ಬೀರಿ, ಅವನ ಮೇಲೆ ಹೂಮಳೆಗರೆಯತೊಡಗಿದರು. ॥ ೧೬ ॥ ಗುಂಗುರುಕೂದಲುಗಳಿಂದ ಶೋಭಿಸುತ್ತಿದ್ದ ಅರ್ಜುನನು ತನ್ನ ಪ್ರಿಯಮಿತ್ರನಾದ ಶ್ರೀಕೃಷ್ಣನ ಮೇಲೆ ಮುತ್ತಿನ ಝಲ್ಲರಿಗಳಿಂದ ಅಲಂಕೃತವಾದ, ರತ್ನಖಚಿತ ಹಿಡಿಯಿಂದ ಶೋಭಿಸುವ ಬೆಳ್ಗೊಡೆಯನ್ನು ಹಿಡಿದು ಕೊಂಡನು. ॥ ೧೭ ॥ ಉದ್ಧವ, ಸಾತ್ಯಕಿಯರು ಇಕ್ಕೆಡೆಗಳಲ್ಲಿ ಪರಮಾದ್ಭುತವಾದ ಚಾಮರಗಳನ್ನು ಬೀಸುತ್ತಿದ್ದರು. ಹೆಜ್ಜೆ-ಹೆಜ್ಜೆಗೆ ಭಗವಾನ್ ಶ್ರೀಕೃಷ್ಣನ ಮೇಲೆ ಪುರಜನರು ಪುಷ್ಪವೃಷ್ಟಿಯನ್ನು ಮಾಡುತ್ತಿದ್ದರು. ಆ ದೃಶ್ಯವು ಮನೋಹರವಾಗಿತ್ತು. ॥ ೧೮ ॥ ತ್ರಿಗುಣಾತೀತನೂ, ಅಪ್ರಾಕೃತನೂ ಅನಂತ ಕಲ್ಯಾಣಗುಣ ಪರಿಪೂರ್ಣನೂ ಆದ ಆ ಪರಮಾತ್ಮನನ್ನು ಕುರಿತು ಬ್ರಾಹ್ಮಣರು ಉಚ್ಚರಿಸುತ್ತಿದ್ದ ಸತ್ಯವಾದ ಆಶೀರ್ವಚನಗಳು ಅಲ್ಲಲ್ಲಿ ಕೇಳಿ ಬರುತ್ತಿದ್ದುವು. ಈ ಆಶೀರ್ವಚನಗಳು ಆತನ ನಿರ್ಗುಣಸ್ವರೂಪಕ್ಕೆ ಅನುರೂಪವಾಗಿಲ್ಲ, ಏಕೆಂದರೆ ಆತನಲ್ಲಿ ಪ್ರಾಕೃತ ಗುಣಗಳು ಇಲ್ಲವೇ ಇಲ್ಲ. ॥ ೧೯ ॥ ಪುಣ್ಯಶ್ಲೋಕನಾದ ಆ ಪರಮಪುರುಷನಲ್ಲಿ ಚಿತ್ತವೃತ್ತಿಯುಳ್ಳ ಹಸ್ತಿನಾಪುರದ ಕುಲೀನ ಸ್ತ್ರೀಯರು ಕಿವಿ, ಮನಸ್ಸನ್ನು ಸೆಳೆಯುವಂತಹ ಭಗವಂತನನ್ನು ಕೊಂಡಾಡುತ್ತಾ ಹೀಗೆ ಪರಸ್ಪರ ಮಾತನಾಡಿಕೊಳ್ಳುತ್ತಿದ್ದರು. ॥ ೨೦ ॥

ಸ ವೈ ಕಿಲಾಯಂ ಪುರುಷಃ ಪುರಾತನೋ
ಯ ಏಕ ಆಸೀದವಿಶೇಷ ಆತ್ಮನಿ ।
ಅಗ್ರೇ ಗುಣೇಭ್ಯೋ ಜಗದಾತ್ಮನೀಶ್ವರೇ
ನಿಮೀಲಿತಾತ್ಮನ್ನಿಶಿ ಸುಪ್ತಶಕ್ತಿಷು ॥ ೨೦ ॥

ಸ ಏವ ಭೂಯೋ ನಿಜವೀರ್ಯಚೋದಿತಾಂ
ಸ್ವಜೀವಮಾಯಾಂ ಪ್ರಕೃತಿಂ ಸಿಸೃಕ್ಷತೀಮ್ ।
ಅನಾಮರೂಪಾತ್ಮನಿ ರೂಪನಾಮನೀ
ವಿಧಿತ್ಸಮಾನೋಽನುಸಸಾರ ಶಾಸ್ತ್ರಕೃತ್ ॥ ೨೧ ॥

ಸ ವಾ ಅಯಂ ಯತ್ಪದಮತ್ರ ಸೂರಯೋ
ಜಿತೇಂದ್ರಿಯಾ ನಿರ್ಜಿತಮಾತರಿಶ್ವನಃ ।
ಪಶ್ಯಂತಿ ಭಕ್ತ್ಯುತ್ಕಲಿತಾಮಲಾತ್ಮನಾ
ನನ್ವೇಷ ಸತ್ತ್ವಂ ಪರಿಮಾರ್ಷ್ಟುಮರ್ಹತಿ ॥ ೨೨ ॥

ಸ ವಾ ಅಯಂ ಸಖ್ಯನುಗೀತಸತ್ಕಥೋ
ವೇದೇಷು ಗುಹ್ಯೇಷು ಚ ಗುಹ್ಯವಾದಿಭಿಃ ।
ಯ ಏಕ ಈಶೋ ಜಗದಾತ್ಮಲೀಲಯಾ
ಸೃಜತ್ಯವತ್ಯತ್ತಿ ನ ತತ್ರ ಸಜ್ಜತೇ ॥ ೨೩ ॥

ಯದಾ ಹ್ಯಧರ್ಮೇಣ ತಮೋಧಿಯೋ ನೃಪಾ
ಜೀವಂತಿ ತತ್ರೈಷ ಹಿ ಸತ್ತ್ವತಃ ಕಿಲ ।
ಧತ್ತೇ ಭಗಂ ಸತ್ಯಮೃತಂ ದಯಾಂ ಯಶೋ
ಭವಾಯ ರೂಪಾಣಿ ದಧದ್ಯುಗೇ ಯುಗೇ ॥ ೨೪ ॥

ಅಹೋ ಅಲಂ ಶ್ಲಾಘ್ಯತಮಂ ಯದೋಃ ಕುಲಂ
ಅಹೋ ಅಲಂ ಪುಣ್ಯತಮಂ ಮಧೋರ್ವನಮ್ ।
ಯದೇಷ ಪುಂಸಾಮೃಷಭಃ ಶ್ರಿಯಃ ಪತಿಃ
ಸ್ವಜನ್ಮನಾ ಚಂಕ್ರಮಣೇನ ಚಾಂಚತಿ ॥ ೨೫ ॥

ಅಹೋ ಬತ ಸ್ವರ್ಯಶಸಸ್ತಿರಸ್ಕರೀ
ಕುಶಸ್ಥಲೀ ಪುಣ್ಯಯಶಸ್ಕರೀ ಭುವಃ ।
ಪಶ್ಯಂತಿ ನಿತ್ಯಂ ಯದನುಗ್ರಹೇಷಿತಂ
ಸ್ಮಿತಾವಲೋಕಂ ಸ್ವಪತಿಂ ಸ್ಮ ಯತ್ಪ್ರಜಾಃ ॥ ೨೬ ॥

ನೂನಂ ವ್ರತಸ್ನಾನಹುತಾದಿನೇಶ್ವರಃ
ಸಮರ್ಚಿತೋ ಹ್ಯಸ್ಯ ಗೃಹೀತಪಾಣಿಭಿಃ ।
ಪಿಬಂತಿ ಯಾಃ ಸಖ್ಯಧರಾಮೃತಂ ಮುಹು-
ರ್ವ್ರಜಸ್ತ್ರಿಯಃ ಸಮ್ಮುಮುಹುರ್ಯದಾಶಯಾಃ ॥ ೨೭ ॥

ಸಖಿಯರೇ! ಈತನೇ ಆ ಪುರಾಣಪುರುಷನಾದ ಶ್ರೀವಿಷ್ಣುವಲ್ಲವೇ? ತ್ರಿಗುಣಗಳು ಅಭಿವ್ಯಕ್ತವಾಗುವುದಕ್ಕೆ ಮೊದಲು ಮಹಾಪ್ರಳಯದ ಸಮಯದಲ್ಲಿ ಎಲ್ಲವೂ ತನ್ನಲ್ಲಿ ಉಪಸಂಹಾರ ಹೊಂದಿದಾಗ ಜಗದಾತ್ಮಾ ಈಶ್ವರನಲ್ಲಿ ಎಲ್ಲ ಜೀವರೂ, ಮಾಯಾ ಶಕ್ತಿಗಳೂ ಸುಪ್ತವಾಗಿದ್ದ ಸಮಯದಲ್ಲಿ, ತನ್ನ ನಿರ್ವಿಶೇಷವಾದ ಆತ್ಮ ಸ್ವರೂಪದಲ್ಲಿ ಏಕಾಕಿಯಾಗಿ ನೆಲೆಗೊಂಡಿದ್ದ ನಾರಾಯಣನು ಈತನೇ ಅಲ್ಲವೇ? ॥೨೦॥ ಈತನೇ ವೇದಾದಿ ಶಾಸ್ತ್ರಗಳ ಪ್ರವರ್ತಕನಾದ ಭಗವಂತನು. ನಾಮ ರೂಪರಹಿತನಾಗಿದ್ದ ಆತ್ಮನಿಗೆ ನಾಮ-ರೂಪಗಳನ್ನು ಕೊಡುವ ಇಚ್ಛೆಯಿಂದ ತನ್ನ ಪರಮಾದ್ಭುತವಾದ ವೀರ್ಯದಿಂದ ಪ್ರೇರಿತವಾಗಿ ಸೃಷ್ಟಿಯಲ್ಲಿ ಪ್ರವರ್ತಿಸಲು ತೊಡಗಿದ ಪ್ರಕೃತಿಯನ್ನು ಅನುಸರಣೆ ಮಾಡಿದನು. ತನ್ನ ಅಂಶರಾದ ಜೀವರನ್ನು ಮೋಹಗೊಳಿಸುವ ಶಕ್ತಿಯನ್ನು ಪ್ರಕೃತಿಗೆ ಕೊಟ್ಟು, ಅದಕ್ಕೆ ಅಧಿಷ್ಠಾನವಾಗಿ ತಾನೇ ನಿಂತು, ಈ ಪ್ರಪಂಚವು ಮುಂದುವರೆಯುವಂತೆ ಮಾಡಿದನು. ॥೨೧॥ ಜಿತೇಂದ್ರಿಯರಾಗಿ ಪ್ರಾಣಗಳನ್ನು ವಶಪಡಿಸಿಕೊಂಡಿರುವ ಯೋಗಿಗಳು ಭಕ್ತಿಯಿಂದ ಅರಳಿದ ನಿರ್ಮಲವಾದ ಹೃದಯದಲ್ಲಿ ಸಾಕ್ಷಾತ್ಕರಿಸಿಕೊಳ್ಳುವಂತಹ ಸಾಕ್ಷಾತ್ ಪರಬ್ರಹ್ಮ ಪರಮಾತ್ಮನೇ ಈತನು. ವಾಸ್ತವವಾಗಿ ಇವನ ಭಕ್ತಿಯಿಂದಲೇ ಅಂತಃಕರಣವು ಪೂರ್ಣ ಶುದ್ಧವಾಗುವಂತೆ, ಯೋಗಾದಿಗಳಿಂದ ಆಗುವುದಿಲ್ಲ. ॥ ೨೨ ॥ ಸಖೀ! ರಹಸ್ಯಾರ್ಥಗಳನ್ನು ಹೊರಗೆಡಹುವ ವೇದ ವ್ಯಾಸಾದಿ ಜ್ಞಾನಶ್ರೇಷ್ಠರು ವೇದಗಳ ಮೂಲಕವೂ, ಇತರ ರಹಸ್ಯ ಗ್ರಂಥಗಳ ಮೂಲಕವೂ ಗಾನ ಮಾಡಿರುವುದು ಈತನ ಮಹಿಮೆಯನ್ನೇ. ಏಕೈಕ ಪರಮೇಶ್ವರನಾಗಿ ತನ್ನ ಲೀಲಾಮಾತ್ರದಿಂದ ಈ ಜಗತ್ತಿನ ಸೃಷ್ಟಿ, ಸ್ಥಿತಿ, ಸಂಹಾರಗಳನ್ನು ನಡೆಸುತ್ತಿದ್ದರೂ ಅವುಗಳ ಲೇಪವು ಕಿಂಚಿತ್ತಾದರೂ ಇಲ್ಲದೆ ಶುದ್ಧವಾಗಿ ಬೆಳಗುತ್ತಿರುವ ಪ್ರಭುವು ಈತನೇ. ॥ ೨೩ ॥ ಪ್ರಜೆಗಳಿಗೆ ರಕ್ಷಣೆಯನ್ನೂ, ಸುಖ-ಶಾಂತಿಗಳನ್ನು ಕೊಡಬೇಕಾದ ರಾಜರೇ ತಾಮಸಬುದ್ಧಿಯುಳ್ಳವರಾಗಿ ಅಧರ್ಮದಿಂದ ಜೀವಿಸತೊಡಗಿದಾಗ, ಈತನೇ ಜಗತ್ತಿನ ಕ್ಷೇಮಕ್ಕಾಗಿ ಸತ್ತ್ವ ಗುಣವನ್ನು ಸ್ವೀಕರಿಸಿ, ಐಶ್ವರ್ಯ, ಸತ್ಯ, ಋತ, ದಯೆ, ಯಶಸ್ಸುಗಳನ್ನು ಪಾಲಿಸಲು ಯುಗ-ಯುಗಗಳಲ್ಲಿಯೂ ಅವತರಿಸುವನು. ॥ ೨೪ ॥ ಆಹಾ! ಈ ಯದುವಂಶವು ಎಷ್ಟು ಪ್ರಶಂಸನೀಯವಾಗಿದೆ! ಏಕೆಂದರೆ, ಶ್ರಿಯಃಪತಿಯಾದ ಪುರುಷೋತ್ತಮ ಶ್ರೀಕೃಷ್ಣನೇ ಈ ವಂಶದಲ್ಲಿ ಅವತರಿಸಿ ಈ ವಂಶವನ್ನು ಗೌರವಿಸಿದನು. ಹಾಗೆಯೇ ಈ ಮಧುರಾಮಂಡಲವೂ ಅತ್ಯಂತ ಪವಿತ್ರವಾದುದು. ತನ್ನ ಶೈಶವ ಬಾಲ್ಯದಲ್ಲಿ ಭಗವಂತನು ಸಂಚರಿಸುತ್ತಾ ಅದನ್ನು ಸುಶೋಭಿತಗೊಳಿಸಿದನು. ॥ ೨೫ ॥ ಎಂತಹ ಆಶ್ಚರ್ಯ! ಈ ದ್ವಾರಕಾ ನಗರವೂ ಕೂಡ ತನ್ನ ಕೀರ್ತಿಯಿಂದ ಸ್ವರ್ಗದ ಯಶಸ್ಸನ್ನು ಮೀರಿಸಿ ಭೂಲೋಕದ ಪವಿತ್ರ ಕೀರ್ತಿಯನ್ನು ಹೆಚ್ಚಿಸಿದೆಯಲ್ಲ! ಈ ನಗರದ ಪ್ರಜೆಗಳೆಲ್ಲರೂ ಈತನ ಅನುಗ್ರಹ ಪೂರ್ಣವಾದ ಮಂದಹಾಸದಿಂದ ಕೂಡಿದ ಕೃಪಾದೃಷ್ಟಿಗೆ ಪಾತ್ರರಾಗಿ ಈ ಪ್ರಭುವನ್ನು ಸದಾ ಕಣ್ಣಾರೆ ನೋಡುತ್ತಾ ಧನ್ಯರಾಗುತ್ತಿದ್ದಾರಲ್ಲ! ॥ ೨೬ ॥ ಗೆಳತಿಯೇ! ನಿಜವಾಗಿ ಈತನ ಕೈ ಹಿಡಿದ ನಾರೀಮಣಿಯರು ಎಷ್ಟು ಜನ್ಮಗಳಲ್ಲಿ ವ್ರತ, ಸ್ನಾನ, ಹೋಮಾದಿಗಳನ್ನು ಆಚರಿಸಿ ಭಗವಂತನನ್ನು ಪೂಜಿಸಿ, ಮೆಚ್ಚಿಸಿರಬೇಕು! ಅದಕ್ಕೇ ಗೋಕುಲದ ಹೆಂಗಳೆಯರು ಪದೇ-ಪದೇ ಈತನ ಅಧರಾಮೃತವನ್ನು ಪಾನಮಾಡುತ್ತಾ, ಈತನ ಸ್ಮರಣ ಮಾತ್ರದಿಂದಲೇ ಆನಂದದಿಂದ ಮೂರ್ಛಿತರಾಗುತ್ತಿರುತ್ತಾರೆ. ॥ ೨೭ ॥

ಯಾ ವೀರ್ಯಶುಲ್ಕೇನ ಹೃತಾಃ ಸ್ವಯಂವರೇ
ಪ್ರಮಥ್ಯ ಚೈದ್ಯಪ್ರಮುಖಾನ್ ಹಿ ಶುಷ್ಮಿಣಃ ।
ಪ್ರದ್ಯುಮ್ನ ಸಾಂಬಾಂಬಸುತಾದಯೋಽಪರಾ
ಯಾಶ್ಚಾಹೃತಾ ಭೌಮವಧೇ ಸಹಸ್ರಶಃ ॥ ೨೯ ॥

ಏತಾಃ ಪರಂ ಸ್ತ್ರೀತ್ವ ಮಪಾಸ್ತಪೇಶಲಂ
ನಿರಸ್ತಶೌಚಂ ಬತ ಸಾಧು ಕುರ್ವತೇ ।
ಯಾಸಾಂ ಗೃಹಾತ್ಪುಷ್ಕರಲೋಚನಃ ಪತಿ-
ರ್ನ ಜಾತ್ವಪೈತ್ಯಾಹೃತಿಭಿರ್ಹೃದಿ ಸ್ಪೃಶನ್ ॥ ೩೦ ॥

ಬಲಿಷ್ಠರಾದ ಶಿಶುಪಾಲನೇ ಮುಂತಾದವರನ್ನು ನಿಗ್ರಹಿಸಿ ಸ್ವಯಂವರದಲ್ಲಿ ವೀರ್ಯಶುಲ್ಕವಾಗಿ ಸ್ವೀಕರಿಸಿರುವ ರುಕ್ಮಿಣೀ, ಜಾಂಬವತೀ, ಮಿತ್ರವಿಂದೆಯರೇ ಮೊದಲಾದವರು-ಪ್ರದ್ಯುಮ್ನ, ಸಾಂಬ, ಆಂಬ ಇವರ ವೀರಮಾತೆಯರಾದ ಅಷ್ಟಮಹಿಷಿಯರು, ಭೌಮಾಸುರನನ್ನು ಸಂಹರಿಸಿ ಸೆರೆಯಿಂದ ಬಿಡಿಸಿ ಸ್ವೀಕರಿಸಿರುವ ಸಾವಿರಾರು ಸ್ತ್ರೀಯರೆಲ್ಲರೂ ಹೆಣ್ಣು ಜನ್ಮವೆಂಬುದು ಧರ್ಮಾನುಷ್ಠಾನಕ್ಕೆ ಅನರ್ಹವೂ, ಅಸ್ವತಂತ್ರವೂ ಅಶುದ್ಧವೂ ಎಂದೆನಿಸಿದರೂ ಈ ಜಗತ್ತಿನ ಸ್ತ್ರೀಜಾತಿಗೇ ಪಾವಿತ್ರ್ಯವನ್ನೂ ಪ್ರಕಾಶವನ್ನೂ ಇವರಿಂದ ತಂದು ಕೊಟ್ಟಿರಲ್ಲವೇ ! ಇವರ ಮಹಿಮೆಯನ್ನು ಯಾರೇ ಎಷ್ಟು ವರ್ಣಿಸಲಿ ! ಇವರ ಸ್ವಾಮಿ ಸಾಕ್ಷಾತ್ ಕಮಲನಯನ ಭಗವಾನ್ ಶ್ರೀಕೃಷ್ಣನೇ ಆಗಿದ್ದಾನಲ್ಲ! ನಾನಾ ಪ್ರಕಾರದ ಪ್ರಿಯ ಚೇಷ್ಟೆಗಳನ್ನು ಹಾಗೂ ಪಾರಿಜಾತಾದಿ ಪ್ರಿಯ ವಸ್ತುಗಳನ್ನು ಪಡೆಯುತ್ತಾ, ಇವನ ಹೃದಯದಲ್ಲಿ ಪ್ರೇಮಾನಂದವನ್ನು ಅಭಿವೃದ್ಧಿ ಪಡಿಸುತ್ತಾ ಎಂದಿಗೂ ಒಂದು ಕ್ಷಣ ವಾದರೂ ಇವನನ್ನು ಬಿಟ್ಟು ಬೇರೆಡೆಗೆ ಹೋಗಗೊಡದಿರುವ ಭಾಗ್ಯವತಿಯರು ಅವರು. ॥ ೨೯-೩೦ ॥

ಏವಂ ವಿಧಾ ಗದಂತೀನಾಂ ಸ ಗಿರಃ ಪುರಯೋಷಿತಾಮ್ ।
ನಿರೀಕ್ಷಣೇನಾಭಿನಂದನ್ಸಸ್ಮಿತೇನ ಯಯೌ ಹರಿಃ ॥ ೩೧ ॥

ಅಜಾತಶತ್ರುಃ ಪೃತನಾಂ ಗೋಪೀಥಾಯ ಮಧುದ್ವಿಷಃ ।
ಪರೇಭ್ಯಃ ಶಂಕಿತಃ ಸ್ನೇಹಾತ್ಪ್ರಾಯುಂಕ್ತ ಚತುರಂಗಿಣೀಮ್ ॥ ೩೨ ॥

ಅಥ ದೂರಾಗತಾನ್ ಶೌರಿಃ ಕೌರವಾನ್ವಿರಹಾತುರಾನ್ ।
ಸಂನಿವರ್ತ್ಯ ದೃಢಂ ಸ್ನಿಗ್ಧಾನ್ಪ್ರಾಯಾತ್ಸ್ವನಗರೀಂ ಪ್ರಿಯೈಃ ॥ ೩೩ ॥

ಕುರುಜಾಂಗಲಪಾಂಚಾಲಾನ್ ಶೂರಸೇನಾನ್ಸಯಾಮುನಾನ್ ।
ಬ್ರಹ್ಮಾವರ್ತಂ ಕುರುಕ್ಷೇತ್ರಂ ಮತ್ಸ್ಯಾನ್ಸಾರಸ್ವತಾನಥ ॥ ೩೪ ॥

ಮರುಧನ್ವಮತಿಕ್ರಮ್ಯ ಸೌವೀರಾಭೀರಯೋಃ ಪರಾನ್ ।
ಆನರ್ತಾನ್ಭಾರ್ಗವೋಪಾಗಾಚ್ಛ್ರಾಂತವಾಹೋ ಮನಾಗ್ವಿಭುಃ ॥ ೩೫ ॥

ತತ್ರ ತತ್ರ ಹ ತತ್ರತ್ಯೈರ್ಹರಿಃ ಪ್ರತ್ಯುದ್ಯತಾರ್ಹಣಃ ।
ಸಾಯಂ ಭೇಜೇ ದಿಶಂ ಪಶ್ಚಾದ್ಗವಿಷ್ಠೋ ಗಾಂ ಗತಸ್ತದಾ ॥ ೩೬ ॥

ಹಸ್ತಿನಾಪುರದ ರಮಣಿಯರು ಹೀಗೆ ಮಾತನಾಡಿಕೊಳ್ಳುತ್ತಿದ್ದಾಗ ಭಗವಾನ್ ಶ್ರೀಕೃಷ್ಣನು ಮಂದಹಾಸದಿಂದಲೂ, ಪ್ರೇಮಪೂರ್ಣವಾದ ನೋಟದಿಂದಲೂ ಅವರನ್ನು ಅಭಿನಂದಿಸುತ್ತಾ ಅಲ್ಲಿಂದ ಮುಂದಕ್ಕೆ ನಡೆದನು. ॥ ೩೧ ॥ ಅಜಾತಶತ್ರುವಾದ ಯುಧಿಷ್ಠಿರನು ಭಗವಂತನಾದ ಶ್ರೀಕೃಷ್ಣನ ರಕ್ಷಣೆಗೆಂದು ಆನೆ, ಕುದುರೆ, ರಥ, ಕಾಲಾಳು ಇವುಗಳಿಂದ ಕೂಡಿದ ಚತುರಂಗ ಸೇನೆಯನ್ನು ಕಳಿಸಿಕೊಟ್ಟನು. ಮಾರ್ಗದಲ್ಲಿ ಯಾರಾದರು ಶತ್ರುಗಳು ಆಕ್ರಮಣ ಮಾಡಬಹುದೆಂಬ ತನ್ನ ಅತಿ ಸ್ನೇಹದಿಂದ ಶಂಕಿಸುತ್ತಾ ಅವನು ಹಾಗೆ ಮಾಡಿದನು. ॥ ೩೨ ॥ ಪರಮ ಪ್ರೇಮವಶರಾಗಿ ಆತನ ಅಗಲಿಕೆಯನ್ನು ಸಹಿಸದೆ ಬಹುದೂರದವರೆಗೆ ತನ್ನನ್ನೇ ಅನುಸರಿಸಿ ಬಂದ ಕುರುವಂಶೀಯರಾದ ಪಾಂಡವರನ್ನು ಭಗವಾನ್ ಶ್ರೀಕೃಷ್ಣನು ತುಂಬಾ ಆಗ್ರಹದಿಂದ ಹಿಂದಿರುಗಿಸಿ, ಸಾತ್ಯಕಿ, ಉದ್ಧವನೇ ಮುಂತಾದ ಗೆಳೆಯರೊಂದಿಗೆ ದ್ವಾರಕೆಗೆ ಪ್ರಯಾಣ ಬೆಳೆಸಿದನು. ॥ ೩೩ ॥ ಶೌನಕರೇ ! ಕುರುಜಾಂಗಲ, ಪಾಂಚಾಲ, ಶೂರಸೇನ, ಯಮುನೆಯ ದಡದಲ್ಲಿರುವ ಸ್ಥಳಗಳನ್ನು ಬ್ರಹ್ಮಾವರ್ತ, ಕುರುಕ್ಷೇತ್ರ, ಮತ್ಸ್ಯ, ಸಾರಸ್ವತ, ಮರುಧನ್ವ ದೇಶಗಳನ್ನೂ ದಾಟಿ, ಸೌವೀರ ಮತ್ತು ಆಭೀರ ದೇಶಗಳ ಪಶ್ಚಿಮದಲ್ಲಿರುವ ಆನರ್ತ ದೇಶಕ್ಕೆ ಮಹಾಪ್ರಭುವು ದಯಮಾಡಿಸಿದನು. ಆ ವೇಳೆಗಾಗಲೇ ಬಹುದೂರ ಪ್ರಯಾಣ ಮಾಡಿದ್ದರಿಂದ ಆತನ ರಥದ ಕುದುರೆಗಳು ಬಳಲಿದ್ದವು. ॥ ೩೪-೩೫ ॥ ಮಾರ್ಗ ಮಧ್ಯದಲ್ಲಿ ಜನರು ಆತನಿಗೆ ಕಾಣಿಕೆಗಳನ್ನು ತಂದೊಪ್ಪಿಸಿ ಗೌರವ ಸೂಚಿಸುತ್ತಿದ್ದರು. ಸಾಯಂಕಾಲವಾಗುತ್ತಲೇ ಸ್ವಾಮಿಯು ರಥದಿಂದ ಕೆಳಗಿಳಿದು ಸಂಧ್ಯಾವಂದನೆ ಮಾಡಿದನು. ಇದು ಆತನ ದಿನಚರ್ಯೆ ಆಗಿತ್ತು. ಆಗಲೇ ಸೂರ್ಯಾಸ್ತವಾಗಿ ಇವರೆಲ್ಲರೂ ದ್ವಾರಕೆಯ ಗಡಿಗೆ ತಲುಪಿದರು. ॥ ೩೬ ॥

ಹತ್ತನೆಯ ಅಧ್ಯಾಯವು ಮುಗಿಯಿತು. ॥ ೧೦ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಪ್ರಥಮಸ್ಕಂಧೇ
ಶ್ರೀಕೃಷ್ಣದ್ವಾರಕಾಗಮನಂ ನಾಮ ದಶಮೋಽಧ್ಯಾಯಃ ॥ ೧೦ ॥

ಹನ್ನೊಂದನೆಯ ಅಧ್ಯಾಯ

ದ್ವಾರಕೆಯಲ್ಲಿ ಶ್ರೀಕೃಷ್ಣನಿಗೆ ರಾಜೋಚಿತ ಸ್ವಾಗತ

ಸೂತ ಉವಾಚ

ಆನರ್ತಾನ್ಸ ಉಪವ್ರಜ್ಯ ಸ್ವೃದ್ಧಾಂಜನಪದಾನ್ ಸ್ವಕಾನ್ ।
ದಧ್ಮೌ ದರವರಂ ತೇಷಾಂ ವಿಷಾದಂ ಶಮಯನ್ನಿವ ॥ ೧ ॥

ಸ ಉಚ್ಚಕಾಶೇ ಧವಲೋದರೋ ದರೋಽ-
ಪ್ಯುರುಕ್ರಮಸ್ಯಾಧರಶೋಣಶೋಣಿಮಾ ।
ದಾಧ್ಮಾಯಮಾನಃ ಕರಕಂಜಸಂಪುಟೇ
ಯಥಾಬ್ಜಷಂಡೇ ಕಲಹಂಸ ಉತ್ಸ್ವನಃ ॥ ೨ ॥

ತಮುಪಶ್ರುತ್ಯ ನಿನದಂ ಜಗದ್ಭಯಭಯಾವಹಮ್ ।
ಪ್ರತ್ಯುದ್ಯಯುಃ ಪ್ರಜಾಃ ಸರ್ವಾ ಭರ್ತೃದರ್ಶನಲಾಲಸಾಃ ॥ ೩ ॥

ತತ್ರೋಪನೀತಬಲಯೋ ರವೇರ್ದೀಪಮಿವಾದೃತಾಃ ।
ಆತ್ಮಾರಾಮಂ ಪೂರ್ಣಕಾಮಂ ನಿಜಲಾಭೇನ ನಿತ್ಯದಾ ॥ ೪ ॥

ಪ್ರೀತ್ಯುತ್ಫುಲ್ಲಮುಖಾಃ ಪ್ರೋಚುರ್ಹರ್ಷಗದ್ಗದಯಾ ಗಿರಾ ।
ಪಿತರಂ ಸರ್ವಸುಹೃದಮವಿತಾರಮಿವಾರ್ಭಕಾಃ ॥ ೫ ॥

ನತಾಃ ಸ್ಮ ತೇ ನಾಥ ಸದಾಂಘ್ರಿಪಂಕಜಂ
ವಿರಿಂಚವೈರಿಂಚ್ಯಸುರೇಂದ್ರವಂದಿತಮ್ ।
ಪರಾಯಣಂ ಕ್ಷೇಮಮಿಹೇಚ್ಛತಾಂ ಪರಂ
ನ ಯತ್ರ ಕಾಲಃ ಪ್ರಭವೇತ್ಪರಃ ಪ್ರಭುಃ ॥ ೬ ॥

ಭವಾಯ ನಸ್ತ್ವಂ ಭವ ವಿಶ್ವಭಾವನ
ತ್ವಮೇವ ಮಾತಾಥ ಸುಹೃತ್ಪತಿಃ ಪಿತಾ ।
ತ್ವಂ ಸದ್ಗುರುರ್ನಃ ಪರಮಂ ಚ ದೈವತಂ
ಯಸ್ಯಾನುವೃತ್ತ್ಯಾ ಕೃತಿನೋ ಬಭೂವಿಮ ॥ ೭ ॥

ಅಹೋ ಸನಾಥಾ ಭವತಾ ಸ್ಮ ಯದ್ವಯಂ
ತ್ರೈವಿಷ್ಟಪಾನಾಮಪಿ ದೂರದರ್ಶನಮ್ ।
ಪ್ರೇಮಸ್ಮಿತಸ್ನಿಗ್ಧನಿರೀಕ್ಷಣಾನನಂ
ಪಶ್ಯೇಮ ರೂಪಂ ತವ ಸರ್ವಸೌಭಗಮ್ ॥ ೮ ॥

ಸೂತಪುರಾಣಿಕರು ಹೇಳುತ್ತಾರೆ – ಶೌನಕಾದಿಗಳೇ! ಭಗವಾನ್ ಶ್ರೀಕೃಷ್ಣನು ತನ್ನ ಸಮೃದ್ಧವಾದ ಆನರ್ತದೇಶಕ್ಕೆ ತಲುಪಿ ಅಲ್ಲಿ ತನ್ನ ಶ್ರೇಷ್ಠವಾದ ಪಾಂಚಜನ್ಯ ಶಂಖವನ್ನೂದಿದನು. ಆ ದಿವ್ಯ ಶಂಖ ಧ್ವನಿಯನ್ನು ಕೇಳಿದೊಡನೆಯೇ ಅಲ್ಲಿಯ ಜನರ ವಿರಹ ವೇದನೆ ಉಪಶಮನವಾದಂತಾಯಿತು. ॥ ೧ ॥ ಭಗವಂತನು ತನ್ನ ಕರಕಮಲದಲ್ಲಿ ಹಿಡಿದು ಊದುತ್ತಿದ್ದ ಆ ಶುಭ್ರವಾದ ಶಂಖಕ್ಕೆ ಆತನ ಕೆಂದುಟಿಯ ಸಂಬಂಧದಿಂದ ಕೆಂಪುಬಣ್ಣವು ಬಂದು ಅದು ಕೆಂದಾವರೆಯ ಸರೋವರದಲ್ಲಿ ವಿಹರಿಸುತ್ತಾ ಮಧುರಧ್ವನಿ ಮಾಡುವ ರಾಜಹಂಸದಂತೆ ಶೋಭಿಸುತ್ತಿತ್ತು. ॥ ೨ ॥ ಜಗತ್ತಿನ ಸಕಲ ಭಯಗಳನ್ನು ಹೋಗಲಾಡಿಸುವ ಆ ಶಂಖನಾದವನ್ನು ಕೇಳಿದ ಪ್ರಜಾಜನರೆಲ್ಲರೂ ತಮ್ಮ ಪ್ರಭುವಾದ ಶ್ರೀಕೃಷ್ಣನ ದರ್ಶನದ ಲಾಲಸೆಯಿಂದ ಆತನನ್ನು ಇದಿರ್ಗೊಳ್ಳಲು ನಗರದ ಹೊರಭಾಗಕ್ಕೆ ಬಂದರು. ॥ ೩ ॥ ಸೂರ್ಯನು ಸ್ವಯಂ ಪ್ರಕಾಶನಾಗಿ ತೇಜೋನಿಧಿಯಾಗಿದ್ದರೂ ಭಕ್ತಜನರು ಪ್ರೀತ್ಯಾದರಗಳಿಂದ ಅವನಿಗೆ ದೀಪದಾನ ಮಾಡುವಂತೆ ಆ ಪ್ರಜಾಜನರು ಆತ್ಮಾರಾಮನಾಗಿ, ಆತ್ಮಲಾಭದಿಂದಲೇ ನಿತ್ಯಸಂತುಷ್ಟನಾದ ಭಗವಾನ್ ಶ್ರೀಕೃಷ್ಣನಿಗೆ ಬಗೆ-ಬಗೆಯ ಕಾಣಿಕೆಗಳನ್ನು ಅರ್ಪಿಸುತ್ತಾ ಸ್ವಾಗತಿಸಿದರು.॥ ೪ ॥ ಎಲ್ಲರ ಮುಖ-ಕಮಲಗಳು ಪ್ರೇಮದಿಂದ ಅರಳಿದವು. ಅವರೆಲ್ಲರೂ ಹರ್ಷಗದ್ಗದ ವಾಣಿಯಿಂದ ಎಲ್ಲರ ಸುಹೃದನೂ, ಸಂರಕ್ಷನೂ ಆದ ಭಗವಾನ್ ಶ್ರೀಕೃಷ್ಣನನ್ನು ಸಣ್ಣ ಬಾಲಕರು ತೊದಲು ಮಾತಿನಿಂದ ತಂದೆಯ ಬಳಿ ಮಾತಾಡುವಂತೆ ಸ್ತುತಿಸಲು ತೊಡಗಿದರು. ॥ ೫ ॥ "ಪ್ರಭೋ! ನಿನ್ನ ಚರಣಕಮಲಗಳಿಗೆ ಸದಾ ನಮ್ಮ ನಮಸ್ಕಾರಗಳು. ಬ್ರಹ್ಮದೇವರು, ಬ್ರಹ್ಮಪುತ್ರರಾದ ಸನಕಾದಿಗಳು, ಇಂದ್ರನೇ ಮೊದಲಾದವರೂ ಕೂಡ ವಂದಿಸುವ ಪಾದಾರವಿಂದಗಳವು. ಸಮಸ್ತ ಜಗತ್ತಿನ ಮೇಲೂ ಪ್ರಭುತ್ವವನ್ನು ನಡೆಸುವ ಕಾಲನ ಪ್ರಭಾವಕ್ಕು ಒಳಪಡದ, ಪರಮ ಶ್ರೇಯಸ್ಸನ್ನು ಬಯಸುವವರಿಗೆ ಪರಮಾಶ್ರಯವಾಗಿರುವ ಪವಿತ್ರ ಪಾದಗಳಿಗೆ ವಂದನೆಗಳು. ॥ ೬ ॥ ವಿಶ್ವಭಾವನನೇ! ಜಗದ್ರಕ್ಷಕನೇ! ನೀನೇ ನಮ್ಮ ತಂದೆ, ತಾಯಿ, ಸುಹೃದ, ಒಡೆಯನಾಗಿರುವೆ. ನೀನೇ ನಮಗೆ ಸದ್ಗುರು ಮತ್ತು ಪರಮ ಆರಾಧ್ಯನಾಗಿರುವೆ. ನಿನ್ನ ಚರಣಗಳ ಸೇವೆಯಿಂದ ನಾವು ಕೃತಾರ್ಥರಾಗಿದ್ದೇವೆ. ನೀನೇ ನಮ್ಮ ಶ್ರೇಯಸ್ಸನ್ನು ಮಾಡುವವನಾಗು. ॥ ೭ ॥ ಆಹಾ! ನಿನ್ನ ಸರ್ವಸೌಂದರ್ಯಸಾರವಾದ ರೂಪದ ದರ್ಶನ ಪಡೆದು, ನಿನ್ನನ್ನು ಒಡೆಯನಾಗಿ ಪಡೆದು ಅನಾಥರಾದ ನಾವು ಸನಾಥರಾದೆವು. ದೇವತೆಗಳಿಗೂ ದುರ್ಲಭವಾದ ಪ್ರೇಮಭರಿತವಾಗಿರುವ ಮಂದಹಾಸದಿಂದಲೂ, ಸ್ನೇಹಪೂರ್ಣವಾದ ನೋಟದಿಂದಲೂ ಕಂಗೊಳಿಸುವ ನಿನ್ನ ಮುಖಕಮಲವನ್ನು ನಾವು ಸದಾ ದರ್ಶಿಸುತ್ತಿದ್ದೇವಲ್ಲ! ॥ ೮ ॥

ಯರ್ಹ್ಯಂಬುಜಾಕ್ಷಾಪಸಸಾರ ಭೋ ಭವಾನ್
ಕುರೂನ್ಮಧೂನ್ವಾಥ ಸುಹೃದ್ದಿದೃಕ್ಷಯಾ ।
ತತ್ರಾಬ್ದಕೋಟಿಪ್ರತಿಮಃ ಕ್ಷಣೋ ಭವೇದ್
ರವಿಂ ವಿನಾಕ್ಷ್ಣೋರಿವ ನಸ್ತವಾಚ್ಯುತ ॥ ೯ ॥

ಇತಿ ಚೋದೀರಿತಾ ವಾಚಃ ಪ್ರಜಾನಾಂ ಭಕ್ತವತ್ಸಲಃ ।
ಶೃಣ್ವಾನೋಽನುಗ್ರಹಂ ದೃಷ್ಟ್ಯಾ ವಿತನ್ವನ್ಪ್ರಾವಿಶತ್ಪುರೀಮ್ ॥ ೧೦ ॥

ಮಧುಭೋಜದಶಾರ್ಹಾರ್ಹಕುಕುರಾಂಧಕವೃಷ್ಣಿಭಿಃ ।
ಆತ್ಮತುಲ್ಯಬಲೈರ್ಗುಪ್ತಾಂ ನಾಗೈರ್ಭೋಗವತೀಮಿವ ॥ ೧೧ ॥

ಸರ್ವರ್ತುಸರ್ವವಿಭವಪುಣ್ಯವೃಕ್ಷಲತಾಶ್ರಮೈಃ ।
ಉದ್ಯಾನೋಪವನಾರಾಮೈರ್ವೃತಪದ್ಮಾಕರಶ್ರಿಯಮ್ ॥ ೧೨ ॥

ಗೋಪುರದ್ವಾರಮಾರ್ಗೇಷು ಕೃತಕೌತುಕತೋರಣಾಮ್ ।
ಚಿತ್ರಧ್ವಜಪತಾಕಾಗ್ರೈರಂತಃ ಪ್ರತಿಹತಾತಪಾಮ್ ॥ ೧೩ ॥

ಸಮ್ಮಾರ್ಜಿತಮಹಾಮಾರ್ಗರಥ್ಯಾಪಣಕಚತ್ವರಾಮ್ ।
ಸಿಕ್ತಾಂ ಗಂಧಜಲೈರುಪ್ತಾಂ ಫಲಪುಷ್ಪಾಕ್ಷತಾಂಕುರೈಃ ॥ ೧೪ ॥

ದ್ವಾರಿ ದ್ವಾರಿ ಗೃಹಾಣಾಂ ಚ ದಧ್ಯಕ್ಷತಫಲೇಕ್ಷುಭಿಃ ।
ಅಲಂಕೃತಾಂ ಪೂರ್ಣಕುಂಭೈರ್ಬಲಿಭಿರ್ಧೂಪದೀಪಕೈಃ ॥ ೧೫ ॥

ನಿಶಮ್ಯ ಪ್ರೇಷ್ಠಮಾಯಾಂತಂ ವಸುದೇವೋ ಮಹಾಮನಾಃ ।
ಅಕ್ರೂರಶ್ಚೋಗ್ರಸೇನಶ್ಚ ರಾಮಶ್ಚಾದ್ಭುತವಿಕ್ರಮಃ ॥ ೧೬ ॥

ಪ್ರದ್ಯುಮ್ನಶ್ಚಾರುದೇಷ್ಣಶ್ಚ ಸಾಂಬೋ ಜಾಂಬವತೀಸುತಃ ।
ಪ್ರಹರ್ಷವೇಗೋಚ್ಛಶಿತಶಯನಾಸನಭೋಜನಾಃ ॥ ೧೭ ॥

ವಾರಣೇಂದ್ರಂ ಪುರಸ್ಕೃತ್ಯ ಬ್ರಾಹ್ಮಣೈಃ ಸಸುಮಂಗಲೈಃ ।
ಶಂಖತೂರ್ಯನಿನಾದೇನ ಬ್ರಹ್ಮಘೋಷೇಣ ಚಾದೃತಾಃ ।
ಪ್ರತ್ಯುಜ್ಜಗ್ಮೂ ರಥೈರ್ಹೃಷ್ಟಾಃ ಪ್ರಣಯಾಗತಸಾಧ್ವಸಾಃ ॥ ೧೮ ॥

ವಾರಮುಖ್ಯಾಶ್ಚ ಶತಶೋ ಯಾನೈಸ್ತದ್ದರ್ಶನೋತ್ಸುಕಾಃ ।
ಲಸತ್ಕುಂಡಲನಿರ್ಭಾತಕಪೋಲವದನಶ್ರಿಯಃ ॥ ೧೯ ॥

ಪುಂಡರೀಕಾಕ್ಷನೇ! ಅಚ್ಯುತನೇ! ನೀನು ಪ್ರೀತಿಯ ನೆಂಟರಿಷ್ಟರನ್ನು ನೋಡುವುದಕ್ಕೆಂದು ಹಸ್ತಿನಾವತಿಗೋ, ಮಥುರೆಗೋ (ವ್ರಜ ಮಂಡಲ) ಹೊರಟು ಹೋದರೆ ಆಗ ನೀನಿಲ್ಲದ ಸೂರ್ಯನ ಬೆಳಕನ್ನು ಕಾಣದ ಕಣ್ಣುಗಳಂತೆ ಒಂದೊಂದು ಕ್ಷಣವನ್ನು ಕೋಟಿ-ಕೋಟಿ ವರ್ಷಗಳಂತೆ ಕಳೆಯ ಬೇಕಾಗುವುದು." ॥ ೯ ॥ ಭಕ್ತವತ್ಸಲ ಭಗವಾನ್ ಶ್ರೀಕೃಷ್ಣನು ಪ್ರಜೆಗಳ ಇಂತಹ ಸವಿಮಾತುಗಳನ್ನು ಕೇಳಿ, ತನ್ನ ಕೃಪಾದೃಷ್ಟಿಯಿಂದ ಅವರ ಮೇಲೆ ಅನುಗ್ರಹದ ಮಳೆಗರೆಯುತ್ತಾ ದ್ವಾರಕೆಯನ್ನು ಪ್ರವೇಶಿಸಿದನು. ॥ ೧೦ ॥

ನಾಗಗಳು ಪಾತಾಳದ ಭೋಗವತಿ ನಗರಿಯನ್ನು ರಕ್ಷಿಸುವಂತೆ, ಎಣೆಯಿಲ್ಲದ ಪರಾಕ್ರಮವುಳ್ಳ ಮಧು, ಭೋಜ, ದಾಶಾರ್ಹ, ಅರ್ಹ, ಕುಕುರ, ಅಂಧಕ, ವೃಷ್ಣಿವಂಶೀಯರು ಭಗವಂತನ ಆ ದ್ವಾರಕೆಯನ್ನು ಸಂರಕ್ಷಿಸುತ್ತಿದ್ದರು. ಭಗವಂತನಿಂದಲೇ ಅವರಿಗೆ ಈ ಶಕ್ತಿಯು ಪ್ರಾಪ್ತವಾಗಿತ್ತು. ॥ ೧೧ ॥ ಆ ದ್ವಾರಕಾಪುರಿಯು ಎಲ್ಲ ಋತುಗಳಲ್ಲಿಯೂ ಸಮಸ್ತ ವೈಭವ ಸಂಪನ್ನವಾಗಿದ್ದು, ಪವಿತ್ರ ವೃಕ್ಷ ಲತಾ ಕುಂಜಗಳಿಂದ ಕೂಡಿತ್ತು. ಅಲ್ಲಲ್ಲಿ ಫಲಗಳಿಂದ ತುಂಬಿದ ಉದ್ಯಾನಗಳೂ, ಹೂದೋಟಗಳೂ, ಕ್ರೀಡಾವನಗಳಿದ್ದು ನಡು-ನಡುವೆ ತಾವರೆಕೊಳಗಳಿಂದ ನಗರದ ಶೋಭೆ ಹೆಚ್ಚಿಸುತ್ತಿದ್ದವು. ॥ ೧೨ ॥ ನಗರದ ಮಹಾದ್ವಾರಗಳೂ, ರಾಜಮಾರ್ಗಗಳೂ ರಮಣೀಯವಾದ ತಳಿರು-ತೋರಣಗಳಿಂದ ಸಿಂಗರಿಸಲ್ಪಟ್ಟಿತ್ತು. ಊರೊಳಗೆ ಬಿಸಿಲು ಬೀಳದಂತೆ ಚಪ್ಪರಗಳನ್ನಿಟ್ಟು ಚಿತ್ರ-ವಿಚಿತ್ರವಾದ ಧ್ವಜ-ಪತಾಕೆಗಳು ಕಂಗೊಳಿಸುತ್ತಿದ್ದವು. ॥ ೧೩ ॥ ರಾಜಮಾರ್ಗಗಳೂ, ರಥ ಬೀದಿಗಳೂ, ಅಂಗಡಿ ಬೀದಿಗಳೂ, ಅಂಗಳಗಳೂ ಗುಡಿಸಿ-ಸಾರಿಸಿ, ರಂಗವಲ್ಲಿಯನ್ನಿಟ್ಟು ಸುಗಂಧ ದ್ರವ್ಯಗಳನ್ನು ಸಿಂಪಡಿಸಿ ಅಲಂಕರಿಸಿದ್ದರು. ಭಗವಂತನ ಸ್ವಾಗತಕ್ಕಾಗಿ ಎರಚಿದ ಫಲ-ಪುಷ್ಪ, ಅಕ್ಷತೆ, ಚಿಗುರುಗಳು ಎಲ್ಲ ಕಡೆ ಚೆಲ್ಲಲ್ಪಟ್ಟಿದ್ದವು. ॥ ೧೪ ॥ ಪ್ರತಿಯೊಂದು ಮನೆಯ ಬಾಗಿಲಲ್ಲಿಯೂ ಮೊಸರು, ಅಕ್ಷತೆ, ಹಣ್ಣುಗಳು, ಕಬ್ಬು, ಜಲಪೂರಿತ ಕಲಶಗಳು, ಕಾಣಿಕೆ ಮೊದಲಾದ ವಸ್ತುಗಳೂ, ಧೂಪದೀಪ ಮುಂತಾದ ಪೂಜಾ ದ್ರವ್ಯಗಳನ್ನು ಇರಿಸಿ ಅಲಂಕರಿಸಿದ್ದರು. ॥ ೧೫ ॥

ತಮ್ಮ ಪ್ರಿಯತಮ ಭಗವಾನ್ ಶ್ರೀಕೃಷ್ಣನು ಬಂದಿರುವನೆಂದು ಕೇಳಿದೊಡನೆಯೇ ಮಹಾತ್ಮನಾದ ವಸುದೇವ, ಅಕ್ರೂರ, ಉಗ್ರಸೇನ, ಅದ್ಭುತ ಪರಾಕ್ರಮವುಳ್ಳ ಬಲರಾಮ, ಪ್ರದ್ಯುಮ್ನ, ಚಾರುದೇಷ್ಣ, ಜಾಂಬವತೀನಂದನ ಸಾಂಬ ಇವರೆಲ್ಲರೂ ಉಕ್ಕಿ ಬಂದ ತಮ್ಮ ಸಂತೋಷದ ಭರದಲ್ಲಿ ನಿದ್ರೆ, ವಿಶ್ರಾಂತಿ, ಭೋಜನಗಳೇ ಮುಂತಾದ ದಿನನಿತ್ಯ ಕರ್ಮಗಳನ್ನು ಮರೆತು, ಪಟ್ಟದಾನೆಯನ್ನು ಮುಂದಿಟ್ಟುಕೊಂಡು, ಮಂಗಳದ್ರವ್ಯಯುಕ್ತರಾದ ಬ್ರಾಹ್ಮಣರೊಡನೆ ಶಂಖವನ್ನೂ, ಕೊಂಬು, ಕಹಳೆ ಮುಂತಾದ ಮಂಗಳ ವಾದ್ಯಗಳನ್ನು ಮೊಳಗಿಸುತ್ತಾ, ವೇದಘೋಷಗಳೊಡನೆ ರಥವನ್ನೇರಿ ಹೊರಟು ಆದರ ಬುದ್ಧಿಯಿಂದ ಭಗವಂತನನ್ನು ಇದಿರುಗೊಂಡರು. ॥ ೧೬-೧೮ ॥ ಹಾಗೆಯೇ ಭಗವಾನ್ ಶ್ರೀಕೃಷ್ಣನ ದರ್ಶನಕ್ಕಾಗಿ ಮುಂಗುರುಳುಗಳಿಂದ ಅಲಂಕೃತವಾದ, ಕರ್ಣಕುಂಡಲ ಕಾಂತಿಯಿಂದ ಶೋಭಿಸುವ ಸುಂದರ ವದನಾರವಿಂದದಿಂದ ಕೂಡಿದ ಸಾವಿರಾರು ವಾರಾಂಗನೆಯರು ಪಲ್ಲಕ್ಕಿಗಳನ್ನೇರಿ ಭಗವಂತನನ್ನು ಇದಿರ್ಗೊಳ್ಳಲು ಹೊರಟರು. ॥ ೧೯ ॥

ನಟನರ್ತಕಗಂಧರ್ವಾಃ ಸೂತಮಾಗಧವಂದಿನಃ ।
ಗಾಯಂತಿ ಚೋತ್ತಮಶ್ಲೋಕಚರಿತಾನ್ಯದ್ಭುತಾನಿ ಚ ॥ ೨೦ ॥

ಭಗವಾಂಸ್ತತ್ರ ಬಂಧೂನಾಂ ಪೌರಾಣಾಮನುವರ್ತಿನಾಮ್ ।
ಯಥಾವಿಧ್ಯುಪಸಂಗಮ್ಯ ಸರ್ವೇಷಾಂ ಮಾನಮಾದಧೇ ॥ ೨೧ ॥

ಪ್ರಹ್ವಾಭಿವಾದನಾಶ್ಲೇಷಕರಸ್ಪರ್ಶಸ್ಮಿತೇಕ್ಷಣೈಃ ।
ಆಶ್ವಾಸ್ಯ ಚಾಶ್ವಪಾಕೇಭ್ಯೋ ವರೈಶ್ಚಾಭಿಮತೈರ್ವಿಭುಃ ॥ ೨೨ ॥

ಸ್ವಯಂ ಚ ಗುರುಭಿರ್ವಿಪ್ರೈಃ ಸದಾರೈಃ ಸ್ಥವಿರೈರಪಿ ।
ಆಶೀರ್ಭಿರ್ಯುಜ್ಯಮಾನೋಽನ್ಯೈರ್ವಂದಿಭಿಶ್ಚಾವಿಶತ್ಪುರಮ್ ॥ ೨೩ ॥

ರಾಜಮಾರ್ಗಂ ಗತೇ ಕೃಷ್ಣೇ ದ್ವಾರಕಾಯಾಃ ಕುಲಸ್ತ್ರಿಯಃ ।
ಹರ್ಮ್ಯಾಣ್ಯಾರುರುಹುರ್ವಿಪ್ರ ತದೀಕ್ಷಣಮಹೋತ್ಸವಾಃ ॥ ೨೪ ॥

ನಿತ್ಯಂ ನಿರೀಕ್ಷಮಾಣಾನಾಂ ಯದಪಿ ದ್ವಾರಕೌಕಸಾಮ್ ।
ನೈವ ತೃಪ್ಯಂತಿ ಹಿ ದೃಶಃ ಶ್ರಿಯೋ ಧಾಮಾಂಗಮಚ್ಯುತಮ್ ॥ ೨೫ ॥

ಶ್ರಿಯೋ ನಿವಾಸೋ ಯಸ್ಯೋರಃ
ಪಾನಪಾತ್ರಂ ಮುಖಂ ದೃಶಾಮ್ ।
ಬಾಹವೋ ಲೋಕಪಾಲಾನಾಂ
ಸಾರಂಗಾಣಾಂ ಪದಾಂಬುಜಮ್ ॥ ೨೬ ॥

ಸಿತಾತಪತ್ರವ್ಯಜನೈರುಪಸ್ಕೃತಃ
ಪ್ರಸೂನವರ್ಷೈರಭಿವರ್ಷಿತಃ ಪಥಿ ।
ಪಿಶಂಗವಾಸಾ ವನಮಾಲಯಾ ಬಭೌ
ಘನೋ ಯಥಾರ್ಕೋಡುಪಚಾಪವೈದ್ಯುತೈಃ ॥ ೨೭ ॥

ಪ್ರವಿಷ್ಟಸ್ತು ಗೃಹಂ ಪಿತ್ರೋಃ ಪರಿಷ್ವಕ್ತಃ ಸ್ವಮಾತೃಭಿಃ ।
ವವಂದೇ ಶಿರಸಾ ಸಪ್ತ ದೇವಕೀಪ್ರಮುಖಾ ಮುದಾ ॥ ೨೮ ॥

ರಸಾಭಿನಯ ಸಮರ್ಥರಾದ ನಟರೂ, ನರ್ತಕರೂ, ಗಾಯಕರೂ ಪೌರಾಣಿಕರೂ, ಸೂತ-ವಂದಿಮಾಗಧರೂ ಭಗವಾನ್ ಶ್ರೀಕೃಷ್ಣನ ದಿವ್ಯಾದ್ಭುತವಾದ ಕಥೆಗಳನ್ನು ಹಾಡುತ್ತಾ ಹೊರಟರು. ॥ ೨೦ ॥

ಭಗವಾನ್ ಶ್ರೀಕೃಷ್ಣನು ನೆಂಟರಿಷ್ಟರನ್ನೂ, ನಾಗರಿಕರನ್ನೂ, ಸೇವಕರನ್ನು ಅವರವರ ಯೋಗ್ಯತೆಗೆ ತಕ್ಕಂತೆ ಬೇರೆ-ಬೇರೆಯಾಗಿ ಸಂಧಿಸಿ, ಎಲ್ಲರನ್ನೂ ಸನ್ಮಾನಿಸಿದನು. ॥ ೨೧ ॥ ಕೆಲವರಿಗೆ ತಲೆಬಾಗಿ ವಂದಿಸಿ, ಕೆಲವರನ್ನು ಮಾತಿನಿಂದ ಅಭಿನಂದಿಸಿ, ಕೆಲವರನ್ನು ಅಪ್ಪಿಕೊಂಡು, ಕೆಲವರ ಕೈಕುಲುಕಿ, ಕೆಲವರನ್ನು ಕಂಡು ಮುಗುಳ್ನಗೆ ಬೀರಿ, ಇನ್ನು ಕೆಲವರನ್ನು ನೋಟದಿಂದಲೇ ಗೌರವಿಸಿದನು. ಪ್ರಭುವು ಪ್ರತಿಯೊಬ್ಬರಿಗೂ ಬೇಕಾದ ವರಗಳನ್ನು ಕೊಟ್ಟು ಅನುಗ್ರಹಿಸಿದನು. ಹೀಗೆ ಚಾಂಡಾಲರವರೆಗಿನ ಎಲ್ಲ ವರ್ಗದ ಜನರನ್ನು ಸಂತೋಷಗೊಳಿಸಿ, ಗುರು ಜನರಿಂದ, ವೃದ್ಧರಾದ ಸಪತ್ನೀಕ ಬ್ರಾಹ್ಮಣರಿಂದ ಹಾಗೂ ಇತರರಿಂದಲೂ ಆಶೀರ್ವಾದಗಳನ್ನು ಪಡೆದು, ಹೊಗಳುಭಟರಿಂದ ಬಿರುದಾವಳಿಗಳನ್ನು ಕೇಳುತ್ತಾ, ಎಲ್ಲರಿಂದೊಡಗೂಡಿ ಭಗವಾನ್ ಶ್ರೀಕೃಷ್ಣನು ನಗರವನ್ನು ಪ್ರವೇಶಿಸಿದನು. ॥ ೨೨-೨೩ ॥

ಶೌನಕರೇ! ಭಗವಂತನು ರಾಜಮಾರ್ಗದಲ್ಲಿ ಹೋಗುತ್ತಿದ್ದಾಗ ದ್ವಾರಕಾನಗರದ ಕುಲಸ್ತ್ರೀಯರು ಅವನ ದರ್ಶನವನ್ನೇ ಪರಮಾನಂದಮಹೋತ್ಸವವನ್ನಾಗಿ ಭಾವಿಸಿ ತಮ್ಮ-ತಮ್ಮ ಮನೆಯ ಉಪ್ಪರಿಗೆಗಳನ್ನು ಏರಿದರು. ॥ ೨೪ ॥ ಭಗವಂತನ ದಿವ್ಯ ಮಂಗಳ ವಿಗ್ರಹದ ಶೋಭೆಯನ್ನು ಏನೆಂದು ಹೇಳೋಣ? ಅವನ ವಕ್ಷಸ್ಥಳವು ಮೂರ್ತಿಮಂತ ಸೌಂದರ್ಯಲಕ್ಷ್ಮಿಯ ನಿವಾಸ ಸ್ಥಾನವೇ ಆಗಿತ್ತು. ಅವನ ಮುಖಾರವಿಂದವು ಕಣ್ಣುಗಳಿಂದ ಪಾನ ಮಾಡಲು ಸೌಂದರ್ಯಸುಧೆಯಿಂದ ತುಂಬಿದ ಪಾತ್ರೆಯೋಪಾದಿಯಲ್ಲಿತ್ತು. ಅವನ ಭುಜಗಳಾದರೋ ಲೋಕಪಾಲಕರಿಗೆ ಶಕ್ತಿಯನ್ನು ತುಂಬುವಂತಿದ್ದುವು. ಅವನ ಚರಣಕಮಲಗಳು ಭಕ್ತರೆಂಬ ಪರಮಹಂಸರ ಆಶ್ರಯಸ್ಥಾನವಾಗಿದ್ದುವು. ಅವನ ಒಂದೊಂದು ಅವಯವಗಳು ಕಾಂತಿಯ ತೌರುಮನೆಯಂತಿದ್ದು ಅಂತಹ ಭಗವಂತನ ಕಾಂತಿಯನ್ನು ಸದಾ ನೋಡುತ್ತಿದ್ದರೂ ದ್ವಾರಕಾ ವಾಸಿಗಳಿಗೆ ಕ್ಷಣಕಾಲವೂ ತೃಪ್ತಿಯುಂಟಾಗುತ್ತಿರಲಿಲ್ಲ. ॥ ೨೫-೨೬ ॥ ದ್ವಾರಕೆಯ ರಾಜಪಥದಲ್ಲಿ ಹೋಗುತ್ತಿದ್ದ ಶ್ರೀಕೃಷ್ಣನ ಮೇಲೆ ಬೆಳ್ಗೊಡೆಯನ್ನು ಹಿಡಿದಿದ್ದು ಇಕ್ಕೆಡೆಗಳಲ್ಲಿಯೂ ಚಾಮರಗಳನ್ನು ಬೀಸುತ್ತಿದ್ದರು. ಎಲ್ಲೆಡೆಗಳಿಂದ ಪುಷ್ಪವೃಷ್ಟಿಯಾಗುತ್ತಿತ್ತು. ಮಿಂಚಿನಂತೆ ಹೊಳೆಯುತ್ತಿದ್ದ ಪೀತಾಂಬರವನ್ನೂ, ಸೊಬಗು-ಸುವಾಸನೆಗಳಿಂದ ಕೂಡಿದ ವನ ಮಾಲೆಯನ್ನು ಧರಿಸಿದ್ದನು. ಹೀಗೆ ಎಲ್ಲ ಅಲಂಕಾರ-ವೈಭವಗಳಿಂದ ಕೂಡಿದ್ದ ಶ್ಯಾಮಲಮೂರ್ತಿಯಾದ ಸ್ವಾಮಿಯು ಏಕಕಾಲದಲ್ಲಿ ಸೂರ್ಯ, ಚಂದ್ರ, ಕಾಮನಬಿಲ್ಲು, ಮಿಂಚು, ಇವೆಲ್ಲವುಗಳಿಂದ ಶೋಭಿಸುವ ನೀಲಮೇಘದಂತೆ ಶೋಭಿಸುತ್ತಿದ್ದನು. ॥ ೨೭ ॥

ಭಗವಂತನು ಮೊಟ್ಟಮೊದಲು ತನ್ನ ತಂದೆ-ತಾಯಿಯರಿದ್ದ ಅರಮನೆಯನ್ನು ಪ್ರವೇಶಿಸಿ, ಅಲ್ಲಿ ಅವನು ಪರಮಾನಂದದಿಂದ ದೇವಕಿಯೇ ಮೊದಲಾದ ಏಳು ಮಂದಿ ತಾಯಂದಿರನ್ನು ಅವರ

ತಾಃ ಪುತ್ರಮಂಕಮಾರೋಪ್ಯ ಸ್ನೇಹಸ್ನುತಪಯೋಧರಾಃ ।
ಹರ್ಷವಿಹ್ವಲಿತಾತ್ಮಾನಃ ಸಿಷಿಚುರ್ನೇತ್ರಜೈರ್ಜಲೈಃ
॥ ೨೯ ॥

ಅಥಾವಿಶತ್ಸ್ವಭವನಂ ಸರ್ವಕಾಮಮನುತ್ತಮಮ್ ।
ಪ್ರಾಸಾದಾ ಯತ್ರ ಪತ್ನೀನಾಂ ಸಹಸ್ರಾಣಿ ಚ ಷೋಡಶ
॥ ೩೦ ॥

ಪತ್ನ್ಯಃ ಪತಿಂ ಪ್ರೋಷ್ಯ ಗೃಹಾನುಪಾಗತಂ
ವಿಲೋಕ್ಯ ಸಂಜಾತಮನೋಮಹೋತ್ಸವಾಃ ।
ಉತ್ತಸ್ಥು ರಾರಾತ್ಸಹಸಾಽಽಸನಾಶಯಾತ್
ಸಾಕಂ ವ್ರತೈರ್ವ್ರೀಡಿತಲೋಚನಾನನಾಃ ॥ ೩೧ ॥

ತಮಾತ್ಮಜೈರ್ದೃಷ್ಟಿಭಿರಂತರಾತ್ಮನಾ
ದುರಂತಭಾವಾಃ ಪರಿರೇಭಿರೇ ಪತಿಮ್ ।
ನಿರುದ್ಧಮಪ್ಯಾಸ್ರವದಂಬು ನೇತ್ರಯೋ-
ರ್ವಿಲಜ್ಜತೀನಾಂ ಭೃಗುವರ್ಯ ವೈಕ್ಲವಾತ್ ॥ ೩೨ ॥

ಯದ್ಯಪ್ಯಸೌ ಪಾರ್ಶ್ವಗತೋ ರಹೋಗತ-
ಸ್ತಥಾಪಿ ತಸ್ಯಾಂಘ್ರಿಯುಗಂ ನವಂ ನವಮ್ ।
ಪದೇ ಪದೇ ಕಾ ವಿರಮೇತ ತತ್ಪದಾ-
ಚ್ಚಲಾಪಿ ಯಚ್ಛ್ರೀರ್ನ ಜಹಾತಿ ಕರ್ಹಿಚಿತ್ ॥ ೩೩ ॥

ಏವಂ ನೃಪಾಣಾಂ ಕ್ಷಿತಿಭಾರಜನ್ಮನಾ-
ಮಕ್ಷೌಹಿಣೀಭಿಃ ಪರಿವೃತ್ತತೇಜಸಾಮ್ ।
ವಿಧಾಯ ವೈರಂ ಶ್ವಸನೋ ಯಥಾನಲಂ
ಮಿಥೋ ವಧೇನೋಪರತೋ ನಿರಾಯುಧಃ ॥ ೩೪ ॥

ಚರಣಗಳಲ್ಲಿ ಶಿರವನ್ನಿಟ್ಟು ನಮಸ್ಕರಿಸಿದನು. ಆಗ ಆ ಎಲ್ಲ ಮಾತೆಯರೂ ಅವನನ್ನು ಆಲಿಂಗಿಸಿಕೊಂಡು ತೊಡೆಯ ಮೇಲೆ ಕುಳ್ಳಿರಿಸಿಕೊಂಡರು. ಪ್ರೀತಿ ವಾತ್ಸಲ್ಯದ ಕಾರಣ ಅವರ ಸ್ತನಗಳಿಂದ ಹಾಲಿನ ಧಾರೆಯೇ ಹರಿಯತೊಡಗಿತು. ಅವರ ಹೃದಯ ಹರ್ಷವಿಹ್ವಲವಾಗಿ ಆನಂದ ಬಾಷ್ಪಗಳಿಂದ ಶ್ರೀಕೃಷ್ಣನಿಗೆ ಅಭಿಷೇಕಮಾಡಿದರು. ॥ ೨೮-೨೯ ॥ ಎಲ್ಲ ತಾಯಂದಿರ ಅಪ್ಪಣೆ ಪಡೆದು ಅವನು ಸಮಸ್ತ ಭೋಗಸಾಮಗ್ರಿಗಳಿಂದ ಸಂಪನ್ನವಾದ, ಸರ್ವೋತ್ತಮವಾಗಿದ್ದ ತನ್ನ ಅರಮನೆಯನ್ನು ಹೊಕ್ಕನು. ಅಲ್ಲಿ ಅವನ ಹದಿನಾರುಸಾವಿರ ಪತ್ನಿಯರಿಗೂ ಬೇರೆ-ಬೇರೆ ಭವನಗಳಿದ್ದವು. ॥ ೩೦ ॥ ಬಹಳ ದಿನಗಳ ಪ್ರವಾಸದ ಬಳಿಕ ಅರಮನೆಗೆ ಹಿಂದಿರುಗಿದ ಪ್ರಾಣನಾಥನನ್ನು ಕಂಡು ರಾಣಿಯರ ಹೃದಯಗಳು ಆನಂದೋತ್ಸಾಹಗಳಿಂದ ತುಂಬಿಬಂದುವು. ಅವನು ತಮ್ಮ ಬಳಿಗೆ ಬಂದಿರುವುದನ್ನು ನೋಡಿದ ಕೂಡಲೇ ಎಲ್ಲರೂ ಒಮ್ಮಿಂದೊಮ್ಮೆಗೆ ಧ್ಯಾನದಿಂದ ವಿಮುಖರಾಗಿ ಎದ್ದು ನಿಂತರು. ಅವರು ತಮ್ಮ-ತಮ್ಮ ಆಸನಗಳನ್ನು ಬಿಟ್ಟಿದ್ದಲ್ಲದೆ ವಿರಹಿಣೀ ಸ್ತ್ರೀಯರ ಅಲಂಕಾರ ತ್ಯಾಗವೇ ಮುಂತಾದ ವ್ರತಗಳನ್ನೂ* ತ್ಯಜಿಸಿದರು. ಆಗ ಅವರ ಮುಖ, ನೇತ್ರಗಳಲ್ಲಿ ಲಜ್ಜೆಯು ಆವರಿಸಿ ಬಿಟ್ಟಿತು. ॥ ೩೧ ॥ ಶ್ರೀಭಗವಂತನ ಕುರಿತು ಅವರ ಭಾವವು ತುಂಬಾ ಗಂಭೀರವಾಗಿತ್ತು. ಅವರು ಮೊದಲಿಗೆ ಮನಸ್ಸಿನಿಂದಲೂ, ಬಳಿಕ ಪ್ರೇಮಪೂರ್ಣ ನೋಟದಿಂದಲೂ, ಅನಂತರ ಮಕ್ಕಳನೆಪದಿಂದ ಶರೀರದಿಂದಲೂ ಪ್ರಾಣಕಾಂತನನ್ನು ಆಲಿಂಗಿಸಿಕೊಂಡರು. ಶೌನಕರೇ! ಆಗ ಅವರ ಕಣ್ಣುಗಳಲ್ಲಿ ಪ್ರೇಮಾಶ್ರುಗಳು ತುಂಬಿ ಬಂದಿದ್ದರೂ ಸಂಕೋಚದಿಂದ ಅವರು ಎಷ್ಟೇ ತಡೆದರೂ ವಿವಶತೆಯ ಕಾರಣ ಕೊನೆಗೆ ಹರಿದೇ ಬಿಟ್ಟವು. ॥ ೩೨ ॥ ಸರ್ವವ್ಯಾಪಕನೂ, ಅನಂತ ಶಕ್ತಿ ಪರಿಪೂರ್ಣನೂ ಆದ ಭಗವಾನ್ ಶ್ರೀಕೃಷ್ಣನು ಏಕಾಂತದಲ್ಲಿ ಯಾವಾಗಲೂ ಅವರ ಬಳಿಯಲ್ಲೇ ಇದ್ದರೂ, ಅವನ ಚರಣಕಮಲಗಳು ಅವರಿಗೆ ಹೆಜ್ಜೆ-ಹೆಜ್ಜೆಗೆ ಹೊಸ-ಹೊಸದಾಗಿಯೇ ಕಾಣುತ್ತಿದ್ದವು. ಸ್ವಭಾವದಿಂದಲೇ ಚಂಚಲಳಾದ ಲಕ್ಷ್ಮೀದೇವಿಯು ಯಾರನ್ನು ಒಂದು ಕ್ಷಣವಾದರೂ ಬಿಟ್ಟಿರುವುದಿಲ್ಲವೋ ಅಂತಹವನ ಸನ್ನಿಧಿಯಿಂದ ಯಾವ ಸ್ತ್ರೀಯು ತೃಪ್ತಳಾಗಬಲ್ಲಳು? ॥ ೩೩ ॥

ವಾಯುವು ಬಿದಿರುಗಳ ಘರ್ಷಣೆಯಿಂದ ದಾವಾನಲವನ್ನು ಉಂಟುಮಾಡಿ, ಅವನ್ನೇ ಸುಟ್ಟು ಬಿಡುವಂತೆಯೇ, ಭೂಮಿಗೆ ಭಾರವಾದ, ಬಲಿಷ್ಠ ರಾಜರಲ್ಲಿ ಪರಸ್ಪರ ವೈರಾಗ್ನಿಯನ್ನು ಉಂಟುಮಾಡಿ ಸ್ವತಃ ಶಸ್ತ್ರಧರಿಸದೆಯೇ ಭಗವಾನ್ ಶ್ರೀಕೃಷ್ಣನು ಅವರನ್ನು ಅನೇಕ ಅಕ್ಷೌಹಿಣೀ ಸೇನೆ ಸಹಿತ ಒಬ್ಬರಿಂದೊಬ್ಬರನ್ನು ಕೊಲ್ಲಿಸಿಬಿಟ್ಟನು. ಬಳಿಕವೇ ತಾನು ವಿರಮಿಸಿದನು. ॥ ೩೪ ॥

* ಪತಿಯು ವಿದೇಶಕ್ಕೆ ಹೋಗಿದ್ದಾಗ ಪತ್ನೀಯಾದವಳು ಈ ನಿಯಮಗಳನ್ನು ಪಾಲಿಸಬೇಕು –
ಕ್ರೀಡಾಂ ಶರೀರಸಂಸ್ಕಾರಂ ಸಮಾಜೋತ್ಸವದರ್ಶನಮ್ । ಹಾಸ್ಯಂ ಪರಗೃಹೇ ಯಾನಂ ತ್ಯಜೇತ್ ಪ್ರೋಷಿತಭರ್ತೃಕಾ ॥ *(ಯಾಜ್ಞವಲ್ಕ್ಯ ಸ್ಮೃತಿ)*
ಪತಿಯು ವಿದೇಶವಾಸಕ್ಕೆ ಹೋಗಿದ್ದಾಗ ಪತ್ನಿಯು ಆಟ-ಪಾಟಗಳಲ್ಲಿ ಭಾಗವಹಿಸಬಾರದು. ಅಲಂಕಾರಾದಿ ಶರೀರ ಸಂಸ್ಕಾರ ಮಾಡಿಕೊಳ್ಳಬಾರದು. ಸಾಮಾಜಿಕ ಉತ್ಸವಾದಿಗಳಲ್ಲಿ ಭಾಗವಹಿಸಬಾರದು. ಹಾಸ್ಯ-ವಿನೋದಗಳಲ್ಲಿ ಭಾಗವಹಿಸಬಾರದು. ಪರಗೃಹಕ್ಕೆ ಹೋಗಬಾರದು. ಈ ಐದನ್ನು ತ್ಯಜಿಸಬೇಕು.

ಸ ಏಷ ನರಲೋಕೇಽಸ್ಮಿನ್ನವತೀರ್ಣಃ ಸ್ವಮಾಯಯಾ ।
ರೇಮೇ ಸ್ತ್ರೀರತ್ನಕೂಟಸ್ಥೋ ಭಗವಾನ್ ಪ್ರಾಕೃತೋ ಯಥಾ ॥ ೩೫ ॥

ಸಾಕ್ಷಾತ್ ಪರಮೇಶ್ವರನೇ ತನ್ನ ಲೀಲೆಯಿಂದ ಈ ಮರ್ತ್ಯಲೋಕದಲ್ಲಿ ಅವತರಿಸಿದ್ದನು. ಸಾವಿರಾರು ರಮಣಿಯರ ಮಧ್ಯದಲ್ಲಿದ್ದು ಅವನು ಸಾಧಾರಣ ಮನುಷ್ಯರಂತೆ ಕ್ರೀಡಿಸಿದನು. ॥ ೩೫ ॥

ಉದ್ದಾಮಭಾವಪಿಶುನಾಮಲವಲ್ಗುಹಾಸ-
ವ್ರೀಡಾವಲೋಕನಿಹತೋ ಮದನೋಽಪಿ ಯಾಸಾಮ್ ।
ಸಮ್ಮುಹ್ಯ ಚಾಪಮಜಹಾತ್ಪ್ರಮದೋತ್ತಮಾಸ್ತಾ
ಯಸ್ಯೇಂದ್ರಿಯಂ ವಿಮಥಿತುಂ ಕುಹಕೈರ್ನ ಶೇಕುಃ ॥ ೩೬ ॥

ತಮಯಂ ಮನ್ಯತೇ ಲೋಕೋ ಹ್ಯಸಂಗಮಪಿ ಸಂಗಿನಮ್ ।
ಆತ್ಮೌಪಮ್ಯೇನ ಮನುಜಂ ವ್ಯಾಪೃಣ್ವಾನಂ ಯತೋಽಬುಧಃ ॥ ೩೭ ॥

ಯಾವ ಮೋಹನಾಂಗಿಯರ ಗಂಭೀರವಾದ ಭಾವವನ್ನು ಸೂಚಿಸುವ ಮಧುರ ಮಂದಹಾಸಗಳಿಗೂ, ಲಜ್ಜೆಯಿಂದೊಡಗೂಡಿದ ಕಡೆಗಣ್ಣ ನೋಟಗಳಿಗೂ ಸೋತು ತ್ರಿಲೋಕವಿಜಯಿಯಾದ ಮನ್ಮಥನೂ ಕೂಡ ತನ್ನ ಪಂಚ ಬಾಣಗಳನ್ನು ಧನುಸ್ಸನ್ನು ಪರಿತ್ಯಜಿಸಿದನೋ, ಅಂತಹ ಕಮನೀಯರಾದ ಕಾಮಿನಿಯರು ತಮ್ಮ ಕಾಮವಿಲಾಸಗಳಿಂದ ಯಾರ ಮನಸ್ಸಿನಲ್ಲಿ ಸ್ವಲ್ಪವೂ ಕ್ಷೋಭೆಯನ್ನು ಉಂಟು ಮಾಡಲು ಅಸಮರ್ಥರಾದರೋ, ಅಂತಹ ನಿರ್ಲಿಪ್ತನಾದ ಶ್ರೀಕೃಷ್ಣನನ್ನು ಸಾಂಸಾರಿಕ ಜನರು ತಮ್ಮಂತೆಯೇ ಕರ್ಮ ಮಾಡುತ್ತಿರುವುದನ್ನು ನೋಡಿ, ಇವನು ಆಸಕ್ತ ಪುರುಷನೆಂದು ತಿಳಿಯುವುದು ಅವರ ಮೂರ್ಖತೆಯೇ ಆಗಿದೆ. ॥ ೩೬-೩೭ ॥

ಏತದೀಶನಮೀಶಸ್ಯ ಪ್ರಕೃತಿಸ್ಥೋಽಪಿ ತದ್ಗುಣೈಃ ।
ನ ಯುಜ್ಯತೇ ಸದಾತ್ಮಸ್ಥೈರ್ಯಥಾ ಬುದ್ಧಿಸ್ತದಾಶ್ರಯಾ ॥ ೩೮ ॥

ಭಗವಂತನು ಪ್ರಕೃತಿಯಲ್ಲಿ ಸ್ಥಿತನಾಗಿದ್ದುಕೊಂಡರೂ ಅದರ ಗುಣಗಳಿಂದ ಲಿಪ್ತನಾಗದಿರುವುದೇ ಅಲ್ಲವೇ ಅವನ ಈಶ್ವರತ್ವವು. ಆತನ ಶಕ್ತಿಯ ಅಗ್ಗಳಿಕೆ. ಭಗವಂತನಲ್ಲಿ ಶರಣಾದ ಭಕ್ತರ ಬುದ್ಧಿಯೂ ಕೂಡ ತನ್ನಲ್ಲಿರುವ ಪ್ರಾಕೃತಗುಣಗಳಿಂದ ಲಿಪ್ತವಾಗುವುದಿಲ್ಲ. ॥ ೩೮ ॥

ತಂ ಮೇನಿರೇಽಬಲಾ ಮೂಢಾಃ ಸ್ತ್ರೈಣಂ ಚಾನುವ್ರತಂ ರಹಃ ।
ಅಪ್ರಮಾಣವಿದೋ ಭರ್ತುರೀಶ್ವರಂ ಮತಯೋ ಯಥಾ ॥ ೩೯ ॥

ಬುದ್ಧಿಗಳು ಬುದ್ಧ್ಯತೀತನಾದ ಪರಮಾತ್ಮನನ್ನು ಹೇಗೆ ಅರಿಯಲಾರದೋ, ಹಾಗೆಯೇ ಆ ಸ್ತ್ರೀಯರೂ ಕೂಡ ಭಗವಂತನ ದೈವತ್ವವನ್ನರಿಯದ ಮೂಢರು. ತಮ್ಮ ಪತಿಯಾದ ಶ್ರೀಕೃಷ್ಣನ ನಿಜಸ್ವರೂಪವನ್ನು ಅರಿಯಲಾರದೇ ಆತನನ್ನು ಸ್ತ್ರೀಯರಿಗೆ ಅಧೀನನಾಗಿ ಅವರೊಡನೆ ಕಲೆತು-ವಿಹರಿಸುವ ದುರ್ಬಲ ಪ್ರಕೃತಿಯವನೆಂದು ಭಾವಿಸುತ್ತಿದ್ದರು. ॥ ೩೯ ॥

ಹನ್ನೊಂದನೆಯ ಅಧ್ಯಾಯವು ಮುಗಿಯಿತು. ॥ ೧೧ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಪ್ರಥಮಸ್ಕಂಧೇ
ಶ್ರೀಕೃಷ್ಣದ್ವಾರಕಾಪ್ರವೇಶೋ ನಾಮೈಕಾದಶೋಽಧ್ಯಾಯಃ ॥ ೧೧ ॥

ಹನ್ನೆರಡನೆಯ ಅಧ್ಯಾಯ

ಪರೀಕ್ಷಿದ್ರಾಜನ ಜನನ

ಶೌನಕ ಉವಾಚ

ಅಶ್ವತ್ಥಾಮ್ನೋಪಸೃಷ್ಟೇನ ಬ್ರಹ್ಮಶೀರ್ಷ್ಣೋರುತೇಜಸಾ ।
ಉತ್ತರಾಯಾ ಹತೋ ಗರ್ಭ ಈಶೇನಾಜೀವಿತಃ ಪುನಃ ॥ ೧ ॥

ಶೌನಕರು ಕೇಳುತ್ತಿದ್ದಾರೆ – ಸೂತಪುರಾಣಿಕರೇ ! ಅಶ್ವತ್ಥಾಮನು ಪ್ರಯೋಗಿಸಿದ ಪರಮ ತೇಜಸ್ವೀ ಬ್ರಹ್ಮಶಿರೋಸ್ತ್ರದಿಂದ ಉತ್ತರೆಯ ಗರ್ಭವನ್ನು ನಾಶಪಡಿಸಿದ್ದನು. ಆದರೆ ಭಗವಂತನು ಅವನನ್ನು ಪುನಃ ಬದುಕಿಸಿದ್ದನು ಎಂದು ನಾವು ಕೇಳಿದ್ದೇವೆ. ॥ ೧ ॥

ತಸ್ಯ ಜನ್ಮ ಮಹಾಬುದ್ಧೇಃ ಕರ್ಮಾಣಿ ಚ ಮಹಾತ್ಮನಃ ।
ನಿಧನಂ ಚ ಯಥೈವಾಸೀತ್ಸ ಪ್ರೇತ್ಯ ಗತವಾನ್ ಯಥಾ ॥ ೨ ॥

ತದಿದಂ ಶ್ರೋತುಮಿಚ್ಛಾಮೋ ಗದಿತುಂ ಯದಿ ಮನ್ಯಸೇ ।
ಬ್ರೂಹಿ ನಃ ಶ್ರದ್ದಧಾನಾನಾಂ ಯಸ್ಯ ಜ್ಞಾನಮದಾಚ್ಛುಕಃ ॥ ೩ ॥

ಆ ಗರ್ಭದಿಂದ ಹುಟ್ಟಿದ ಮಹಾಜ್ಞಾನಿಯೂ, ಮಹಾತ್ಮನೂ ಆದ ಪರೀಕ್ಷಿದ್ರಾಜನಿಗೆ ಶುಕಮಹಾಮುನಿಗಳು ಜ್ಞಾನೋಪದೇಶ ಮಾಡಿದ್ದರಲ್ಲ! ಅವನ ಜನ್ಮ ಕರ್ಮ, ಮೃತ್ಯು, ಅನಂತರ ಅವನಿಗೆ ಪ್ರಾಪ್ತವಾದ ಗತಿ ಹೀಗೆಲ್ಲವನ್ನೂ ನಿಮಗೆ ಸರಿಯೆನಿಸಿದರೆ ನಮಗೆ ತಿಳಿಸಿರಿ. ನಾವುಗಳು ಶ್ರದ್ಧೆಯಿಂದ ಕೇಳ ಬಯಸುತ್ತೇವೆ. ॥ ೨-೩ ॥

ಸೂತಪುರಾಣಿಕರೆಂದರು – ಶೌನಕಾದಿಗಳೇ ! ಧರ್ಮರಾಜಾ ಯುಧಿಷ್ಠಿರನು ಪ್ರಜೆಗಳನ್ನು ಸಂತೋಷಪಡಿಸುತ್ತಾ, ತಂದೆಯಂತೆ ಅವರನ್ನು ಪಾಲಿಸುತ್ತಿದ್ದನು. ಭಗವಾನ್ ಶ್ರೀಕೃಷ್ಣನ ಪಾದಾರವಿಂದ

ಸೂತ ಉವಾಚ

ಅಪೀಪಲದ್ಧರ್ಮರಾಜಃ ಪಿತೃವದ್ರಂಜಯನ್ಪ್ರಜಾಃ ।
ನಿಃಸ್ಪೃಹಃ ಸರ್ವಕಾಮೇಭ್ಯಃ ಕೃಷ್ಣಪಾದಾಬ್ಜ ಸೇವಯಾ ॥ ೪ ॥

ಸಂಪದಃ ಕ್ರತವೋ ಲೋಕಾ ಮಹಿಷೀ ಭ್ರಾತರೋ ಮಹೀ ।
ಜಂಬೂದ್ವೀಪಾಧಿಪತ್ಯಂ ಚ ಯಶಶ್ಚ ತ್ರಿದಿವಂ ಗತಮ್ ॥ ೫ ॥

ಕಿಂ ತೇ ಕಾಮಾಃ ಸುರಸ್ಪಾರ್ಹಾ ಮುಕುಂದಮನಸೋ ದ್ವಿಜಾಃ ।
ಅಧಿಜಹ್ರುರ್ಮುದಂ ರಾಜ್ಞಃ ಕ್ಷುಧಿತಸ್ಯ ಯಥೇತರೇ ॥ ೬ ॥

ಮಾತುರ್ಗರ್ಭಗತೋ ವೀರಃ ಸ ತದಾ ಭೃಗುನಂದನ ।
ದದರ್ಶ ಪುರುಷಂ ಕಂಚಿದ್ದಹ್ಯಮಾನೋಽಸ್ತ್ರತೇಜಸಾ ॥ ೭ ॥

ಅಂಗುಷ್ಠಮಾತ್ರಮಮಲಂ ಸ್ಫುರತ್ಪುರಟಮೌಲಿನಮ್ ।
ಅಪೀಚ್ಯದರ್ಶನಂ ಶ್ಯಾಮಂ ತಡಿದ್ವಾಸಸಮಚ್ಯುತಮ್ ॥ ೮ ॥

ಶ್ರೀಮದ್ದೀರ್ಘಚತುರ್ಬಾಹುಂ ತಪ್ತಕಾಂಚನಕುಂಡಲಮ್ ।
ಕ್ಷತಜಾಕ್ಷಂ ಗದಾಪಾಣಿಮಾತ್ಮನಃ ಸರ್ವತೋದಿಶಮ್ ।
ಪರಿಭ್ರಮಂತಮುಲ್ಕಾಭಾಂ ಭ್ರಾಮಯಂತಂ ಗದಾಂ ಮುಹುಃ ॥ ೯ ॥

ಅಸ್ತ್ರತೇಜಃ ಸ್ವಗದಯಾ ನೀಹಾರಮಿವ ಗೋಪತಿಃ ।
ವಿಧಮಂತಂ ಸಂನಿಕರ್ಷೇ ಪರ್ಯೈಕ್ಷತ ಕ ಇತ್ಯಸೌ ॥ ೧೦ ॥

ವಿಧೂಯ ತದಮೇಯಾತ್ಮಾ ಭಗವಾನ್ ಧರ್ಮಗುಬ್ವಿಭುಃ ।
ಮಿಷತೋ ದಶಮಾಸಸ್ಯ ತತ್ರೈವಾಂತರ್ದಧೇ ಹರಿಃ ॥ ೧೧ ॥

ತತಃ ಸರ್ವಗುಣೋದರ್ಕೇ ಸಾನುಕೂಲಗ್ರಹೋದಯೇ ।
ಜಜ್ಞೇ ವಂಶಧರಃ ಪಾಂಡೋರ್ಭೂಯಃ ಪಾಂಡುರಿವೌಜಸಾ ॥ ೧೨ ॥

ತಸ್ಯ ಪ್ರೀತಮನಾ ರಾಜಾ ವಿಪ್ರೈರ್ಧೌಮ್ಯಕೃಪಾದಿಭಿಃ ।
ಜಾತಕಂ ಕಾರಯಾಮಾಸ ವಾಚಯಿತ್ವಾ ಚ ಮಂಗಲಮ್ ॥ ೧೩ ॥

ಗಳ ಸೇವನೆಯಿಂದ ಅವನು ಸಮಸ್ತ ಭೋಗಗಳಿಂದ ನಿಃಸ್ಪೃಹನಾಗಿದ್ದನು. ॥ ೪ ॥

ಶೌನಕಾದಿಗಳೇ ! ಧರ್ಮನಂದನನು ಅತುಳ ಸಂಪತ್ತಿನಿಂದ, ದೊಡ್ಡ-ದೊಡ್ಡ ಯಜ್ಞಗಳನ್ನು ಮಾಡಿ ಶ್ರೇಷ್ಠವಾದ ಲೋಕಗಳನ್ನು ಗಳಿಸಿದ್ದನು. ಅವನಿಗೆ ರಾಣಿಯರೂ, ಒಡಹುಟ್ಟಿದವರೂ ಅನುಕೂಲರಾಗಿದ್ದರು. ಇಡೀ ಜಂಬೂದ್ವೀಪಕ್ಕೆ ಒಡೆಯನಾಗಿದ್ದು ಅವನ ಕೀರ್ತಿಯು ಸ್ವರ್ಗವನ್ನೂ ವ್ಯಾಪಿಸಿತ್ತು. ॥ ೫ ॥ ದೇವತೆಗಳೂ ಆಸೆ ಪಡಬಹುದಾದ ಭೋಗಸಮೃದ್ಧಿಯನ್ನು ಅವನು ಹೊಂದಿದ್ದನು. ಆದರೂ ಹಸಿದಿರುವ ಮನುಷ್ಯನಿಗೆ ಭೋಜನವಲ್ಲದೆ ಬೇರೆ ಯಾವುದೂ ರುಚಿಸದಂತೆಯೇ, ಅವನಿಗೆ ಭಗವಂತನಲ್ಲದೆ ಬೇರೆ ಯಾವ ಸುಖಸಂಪತ್ತು ರುಚಿಸುತ್ತಿರಲಿಲ್ಲ॥ ೬ ॥

ಎಲೈ ಭಾರ್ಗವರೇ ! ಉತ್ತರೆಯ ಗರ್ಭದಲ್ಲಿದ್ದ ವೀರಶಿಶು ಪರೀಕ್ಷಿತ್ತು ಅಶ್ವತ್ಥಾಮನ ಬ್ರಹ್ಮಾಸ್ತ್ರದ ತೇಜದಿಂದ ಸುಡುತ್ತಿರುವಾಗ, ಅದು ತನ್ನ ಕಣ್ಣಮುಂದೆ ಒಂದು ಜ್ಯೋತಿರ್ಮಯ ಪುರುಷನನ್ನು ಕಂಡಿತು. ॥ ೭ ॥ ಪುರುಷನು ಅಂಗುಷ್ಠಮಾತ್ರದಷ್ಟಿದ್ದರೂ ಅವನ ತೇಜಸ್ಸು ಅತ್ಯದ್ಭುತವಾಗಿದ್ದು ನಿರ್ಮಲವಾಗಿತ್ತು. ಅವನು ಸುಂದರ ಶ್ಯಾಮಲ ಶರೀರಿಯಾಗಿದ್ದು, ಮಿಂಚಿನಂತೆ ಹೊಳೆಯುವ ಪೀತಾಂಬರವನ್ನು ಧರಿಸಿದ್ದನು. ತಲೆಯಲ್ಲಿ ಥಳ-ಥಳಿಸುವ ಸ್ವರ್ಣ ಕಿರೀಟವಿತ್ತು. ಆ ನಿರ್ವಿಕಾರ ಪುರುಷನಿಗೆ ಅತಿ ಸುಂದರವಾದ ನೀಳವಾಗಿದ್ದ ನಾಲ್ಕು ತೋಳುಗಳಿದ್ದವು. ಅವನ ಕಿವಿಗಳಲ್ಲಿ ಪುಟವಿಟ್ಟ ಚಿನ್ನದ ಸುಂದರ ಕುಂಡಲಗಳು ಹೊಳೆಯುತ್ತಿದ್ದವು. ಕಣ್ಣುಗಳು ರಕ್ತದಂತೆ ಕೆಂಪಾಗಿದ್ದವು. ಕೈಯಲ್ಲಿ ಧರಿಸಿದ ಉರಿಯುವ ಕೊಳ್ಳಿಯಂತಿರುವ ಗದೆಯನ್ನು ಮತ್ತೆ-ಮತ್ತೆ ತಿರುಗಿಸುತ್ತಿದ್ದನು. ॥ ೮-೯ ॥ ಸೂರ್ಯನು ತನ್ನ ಕಿರಣಗಳಿಂದ ಮಂಜನ್ನು ಹೊಡೆದೋಡಿಸುವಂತೆ, ಅವನು ಆ ಗದೆಯಿಂದ ಬ್ರಹ್ಮಾಸ್ತ್ರದ ತೇಜವನ್ನು ಒಡಿದಟ್ಟುತ್ತಿದ್ದನು. ತನ್ನ ಸಮೀಪದಲ್ಲಿದ್ದ ಆ ಪುರುಷನನ್ನು ನೋಡಿ ಗರ್ಭಸ್ಥ ಶಿಶುವು 'ಇವನಾರು ?' ಎಂದು ಯೋಚಿಸ ತೊಡಗಿತು. ॥ ೧೦ ॥ ಹೀಗೆ ಗರ್ಭಸ್ಥ ಶಿಶುವು ನೋಡುತ್ತಿರುವಂತೆಯೇ ಧರ್ಮರಕ್ಷಕ ಅಪ್ರಮೇಯ ಭಗವಾನ್ ಶ್ರೀಕೃಷ್ಣನು ಬ್ರಹ್ಮಾಸ್ತ್ರದ ತೇಜಸ್ಸನ್ನು ಶಮನಗೊಳಿಸಿ ಅಲ್ಲಿಯೇ ಅಂತರ್ಧಾನ ಹೊಂದಿದನು. ॥ ೧೧ ॥

ಅನಂತರ ಎಲ್ಲ ಗ್ರಹಗಳೂ ಅನುಕೂಲವಾಗಿ, ಎಲ್ಲ ಸದ್ಗುಣಗಳೂ ಕೂಡಿ ಸುಫಲಪ್ರದವಾದವಾಗಿದ್ದ ಶುಭ ಸಮಯದಲ್ಲಿ ಪಾಂಡುವಿನ ವಂಶದ ಕುಡಿಯಾದ ಸುಪುತ್ರನ ಜನನವಾಯಿತು. ಆ ಶಿಶುವು ತನ್ನ ತೇಜಸ್ಸಿನಿಂದ ಪಾಂಡುರಾಜನೇ ಮರಳಿ ಹುಟ್ಟಿ ಬಂದಂತೆ ಬೆಳಗುತ್ತಿತ್ತು. ॥ ೧೨ ॥ ಮೊಮ್ಮಗನು ಹುಟ್ಟಿದ ಸಮಾಚಾರವನ್ನು ಕೇಳಿ ಯುಧಿಷ್ಠಿರನ ಮನಸ್ಸಿಗೆ ಬಹಳ ಸಂತೋಷವಾಯಿತು. ಅವನು ಧೌಮ್ಯ-ಕೃಪಾಚಾರ್ಯರೇ ಮುಂತಾದ ಬ್ರಾಹ್ಮಣರಿಂದ ಮಗುವಿಗೆ ಮಂಗಳ ವಾಚನಮಾಡಿಸಿ, ಜಾತಕರ್ಮ ಸಂಸ್ಕಾರವನ್ನು ನೆರವೇರಿಸಿದನು. ॥ ೧೩ ॥ ದಾನಕ್ಕೆ ಯೋಗ್ಯ

ಹಿರಣ್ಯಂ ಗಾಂ ಮಹೀಂ ಗ್ರಾಮಾನ್ಹಸ್ತ್ಯಶ್ವಾನ್ನೃಪತಿರ್ವರಾನ್ ।
ಪ್ರಾದಾತ್ಸ್ವನ್ನಂ ಚ ವಿಪ್ರೇಭ್ಯಃ ಪ್ರಜಾತೀರ್ಥೇ ಸ ತೀರ್ಥವಿತ್
॥ ೧೪ ॥

ತಮೂಚುರ್ಬ್ರಾಹ್ಮಣಾಸ್ತುಷ್ಟಾ ರಾಜಾನಂ ಪ್ರಶ್ರಯಾನ್ವಿತಮ್ ।
ಏಷ ಹ್ಯಸ್ಮಿನ್ಪ್ರಜಾತಂತೌ ಪುರೂಣಾಂ ಪೌರವರ್ಷಭ
॥ ೧೫ ॥

ದೈವೇನಾಪ್ರತಿಘಾತೇನ ಶುಕ್ಲೇ ಸಂಸ್ಥಾಮುಪೇಯುಷಿ ।
ರಾತೋ ವೋಽನುಗ್ರಹಾರ್ಥಾಯ ವಿಷ್ಣುನಾ ಪ್ರಭವಿಷ್ಣುನಾ
॥ ೧೬ ॥

ತಸ್ಮಾನ್ನಾಮ್ನಾ ವಿಷ್ಣುರಾತ ಇತಿ ಲೋಕೇ ಬೃಹಚ್ಛ್ರವಾಃ ।
ಭವಿಷ್ಯತಿ ನ ಸಂದೇಹೋ ಮಹಾಭಾಗವತೋ ಮಹಾನ್
॥ ೧೭ ॥

ಯುಧಿಷ್ಠಿರ ಉವಾಚ

ಅಪ್ಯೇಷ ವಂಶ್ಯಾನ್ರಾಜರ್ಷೀನ್ಪುಣ್ಯಶ್ಲೋಕಾನ್ಮಹಾತ್ಮನಃ ।
ಅನುವರ್ತಿತಾ ಸ್ವಿದ್ಯಶಸಾ ಸಾಧುವಾದೇನ ಸತ್ತಮಾಃ
॥ ೧೮ ॥

ಬ್ರಾಹ್ಮಣಾ ಊಚುಃ

ಪಾರ್ಥ ಪ್ರಜಾವಿತಾ ಸಾಕ್ಷಾದಿಕ್ಷ್ವಾಕುರಿವ ಮಾನವಃ ।
ಬ್ರಹ್ಮಣ್ಯಃ ಸತ್ಯಸಂಧಶ್ಚ ರಾಮೋ ದಾಶರಥಿರ್ಯಥಾ
॥ ೧೯ ॥

ಏಷ ದಾತಾ ಶರಣ್ಯಶ್ಚ ಯಥಾ ಹ್ಯೌಶೀನರಃ ಶಿಬಿಃ ।
ಯಶೋ ವಿತನಿತಾ ಸ್ವಾನಾಂ ದೌಷ್ಯಂತಿರಿವ ಯಜ್ವನಾಮ್
॥ ೨೦ ॥

ಧನ್ವಿನಾಮಗ್ರಣೀರೇಷ ತುಲ್ಯಶ್ಚಾರ್ಜುನಯೋರ್ದ್ವಯೋಃ ।
ಹುತಾಶ ಇವ ದುರ್ಧರ್ಷಃ ಸಮುದ್ರ ಇವ ದುಸ್ತರಃ
॥ ೨೧ ॥

ಮೃಗೇಂದ್ರ ಇವ ವಿಕ್ರಾಂತೋ ನಿಷೇವ್ಯೋ ಹಿಮವಾನಿವ ।
ತಿತಿಕ್ಷುರ್ವಸುಧೇವಾಸೌ ಸಹಿಷ್ಣುಃ ಪಿತರಾವಿವ
॥ ೨೨ ॥

ಪಿತಾಮಹಸಮಃ ಸಾಮ್ಯೇ ಪ್ರಸಾದೇ ಗಿರಿಶೋಪಮಃ ।
ಆಶ್ರಯಃ ಸರ್ವಭೂತಾನಾಂ ಯಥಾ ದೇವೋ ರಮಾಶ್ರಯಃ
॥ ೨೩ ॥

ವಾದ ದೇಶ-ಕಾಲ-ಪಾತ್ರಗಳಾವುವು ಎಂಬುದನ್ನರಿತಿದ್ದ ಮಹಾರಾಜ ಯುಧಿಷ್ಠಿರನು ಪ್ರಜಾತೀರ್ಥ* ಎಂಬ ಸಮಯದಲ್ಲಿ ಅರ್ಥಾತ್-ಹೊಕ್ಕಳು ಬಳ್ಳಿ ಕತ್ತರಿಸುವ ಮೊದಲೇ ಬ್ರಾಹ್ಮಣರಿಗೆ, ಸುವರ್ಣ, ಗೋ, ಭೂಮಿ, ಗ್ರಾಮಗಳನ್ನು ಉತ್ತಮ ಜಾತಿಯ ಆನೆ-ಕುದುರೆಗಳನ್ನು ದಾನಮಾಡಿ ಮೃಷ್ಟಾನ್ನ ಭೋಜನವನ್ನು ಮಾಡಿಸಿದನು. ॥ ೧೪ ॥ ಇವುಗಳಿಂದ ಸಂತೋಷಗೊಂಡ ಬ್ರಾಹ್ಮಣರು ಅತ್ಯಂತ ವಿನಯಶಾಲಿಯಾದ ಯುಧಿಷ್ಠಿರನಲ್ಲಿ ಹೀಗೆಂದರು "ಪುರುವಂಶ ಶಿರೋಮಣಿಯೇ! ನಿವಾರಿಸಲು ಅಸಾಧ್ಯವಾದ ಕಾಲದ ಗತಿಯಿಂದ ಪವಿತ್ರವಾದ ಈ ಕುರುವಂಶವು ಇನ್ನೇನು ವಿನಾಶಹೊಂದಿ ಬಿಡುವುದೋ ಎನ್ನುವಷ್ಟರಲ್ಲಿ ಸರ್ವಸಮರ್ಥನಾದ ಭಗವಾನ್ ಶ್ರೀಮಹಾವಿಷ್ಣುವು ನಿಮ್ಮ ಮೇಲೆ ಕೃಪೆಗೈದು ನಿಮಗೆ ಈ ಬಾಲಕನನ್ನು ದಯಪಾಲಿಸಿ ಅವನನ್ನು ಸಂರಕ್ಷಿಸಿದ್ದಾನೆ. ॥ ೧೫-೧೬ ॥ ಆದ್ದರಿಂದ ಇವನಿಗೆ 'ವಿಷ್ಣುರಾತ' (ವಿಷ್ಣುವಿನಿಂದ ರಕ್ಷಿಸಲ್ಪಟ್ಟವನು) ಎಂಬ ಹೆಸರಾಗುವುದು. ನಿಸ್ಸಂದೇಹವಾಗಿ ಈ ಬಾಲಕನು ಲೋಕದಲ್ಲಿ ಮಹಾ ಯಶಸ್ವಿಯೂ, ಪರಮ ಭಗವದ್ಭಕ್ತನೂ ಆದ ಮಹಾಪುರುಷನಾಗುವನು. ॥ ೧೭ ॥

ಯುಧಿಷ್ಠಿರನೆಂದನು – ಪೂಜ್ಯರೇ ! ಈ ಬಾಲಕನು ತನ್ನ ಉಜ್ವಲವಾದ ಕೀರ್ತಿಯಿಂದ ನಮ್ಮ ವಂಶದ ಪುಣ್ಯಶ್ಲೋಕರಾದ ಮಹಾತ್ಮರಾದ ರಾಜರ್ಷಿಗಳನ್ನು ಅನುಸರಿಸುತ್ತಾನಷ್ಟೇ ? ಎಂದು ಕೇಳಿದನು. ॥ ೧೮ ॥

ಬ್ರಾಹ್ಮಣರೆಂದರು – ಎಲೈ ಕುಂತೀನಂದನನೇ! ಇವನು ಮನುಪುತ್ರನಾದ ಇಕ್ಷ್ವಾಕುಮಹಾರಾಜನಂತೆ ತನ್ನ ಪ್ರಜೆಗಳನ್ನು ಪಾಲಿಸುವನು. ಹಾಗೂ ದಶರಥನಂದನ ಭಗವಾನ್ ಶ್ರೀರಾಮನಂತೆ ಬ್ರಾಹ್ಮಣ ಭಕ್ತನೂ, ಸತ್ಯ ಪ್ರತಿಜ್ಞನೂ ಆಗುವನು. ॥ ೧೯ ॥ ಇವನು ಉಶೀನರ ಅರಸನಾದ ಶಿಬಿಯಂತೆ ದಾನಕೊಡುವವನೂ, ಶರಣಾಗತವತ್ಸಲನೂ ಆಗುವನು. ಯಜ್ಞಗಳನ್ನಾಚರಿಸುವವರಲ್ಲಿ ದುಷ್ಯಂತ ಪುತ್ರ ಭರತನಂತೆ ಆಗಿ ತನ್ನ ವಂಶದ ಕೀರ್ತಿಯನ್ನು ಹರಡುವನು. ॥ ೨೦ ॥ ಧನುರ್ಧಾರಿಗಳಲ್ಲಿ ಕಾರ್ತವೀರ್ಯಾರ್ಜುನನಿಗೂ, ತನ್ನ ತಾತನಾದ ಅರ್ಜುನನಿಗೂ ಸಮಾನನಾಗಿ ಅಗ್ರಗಣ್ಯನಾಗುವನು. ಅಗ್ನಿಯಂತೆ ಎದುರಿಸಲು ಅಶಕ್ಯವಾದ ಪ್ರತಾಪವುಳ್ಳವನೂ, ಸಮುದ್ರದಂತೆ ಅತಿಕ್ರಮಿಸಲು ಅಸಾಧ್ಯನೂ ಆಗುವನು. ॥ ೨೧ ॥ ಸಿಂಹದಂತೆ ಮಹಾಪರಾಕ್ರಮಿಯೂ, ಹಿಮಾಲಯದಂತೆ ಸರ್ವರಿಗೂ ಆಶ್ರಯನೂ, ಪೃಥ್ವಿಯಂತೆ ಕ್ಷಮಾಗುಣಶಾಲಿಯೂ, ಪ್ರಜೆಗಳ ವಿಷಯದಲ್ಲಿ ತಂದೆ-ತಾಯಿಯರಂತೆ ಸಹನಶೀಲನೂ ಆಗುವನು. ॥ ೨೨ ॥ ಇವನು ಸಮಭಾವದಲ್ಲಿ ಬ್ರಹ್ಮದೇವರಿಗೂ, ಅನುಗ್ರಹ ಮಾಡುವುದರಲ್ಲಿ ಈಶ್ವರನಿಗೂ, ಸರ್ವಪ್ರಾಣಿಗಳನ್ನು ಆಸರೆಯನ್ನಿತ್ತು ರಕ್ಷಿಸುವುದರಲ್ಲಿ ಲಕ್ಷ್ಮೀಪತಿಗೂ ಸಮಾನನಾಗುವನು. ॥ ೨೩ ॥ ಸಮಸ್ತ ಶ್ರೇಷ್ಠ

* ಹೊಕ್ಕಳುಬಳ್ಳಿ ಕತ್ತರಿಸುವುದಕ್ಕೆ ಮೊದಲು ಸೂತಕವಿರುವುದಿಲ್ಲ. '**ಯಾವನ್ನ ಛಿದ್ಯತೇ ನಾಲಂ ತಾವನ್ನಾಪ್ನೋತಿ ಸೂತಕಮ್ । ಛಿನ್ನೇ ನಾಲೇ ತತಃ ಪಶ್ಚಾತ್ ಸೂತಕಂ ತು ವಿಧೀಯತೇ ॥**'
ಈ ಸಮಯಕ್ಕೆ ಪ್ರಜಾತೀರ್ಥವೆಂದು ಹೇಳುತ್ತಾರೆ. ಈ ಸಮಯದಲ್ಲಿ ಕೊಡುವ ದಾನದ ಫಲವು ಅಕ್ಷಯವಾಗುತ್ತದೆ ಎಂದು ಸ್ಮೃತಿಗಳು ಹೇಳುತ್ತವೆ. "ಪುತ್ರೇ ಜಾತೇ ವ್ಯತೀಪಾತೇ ದತ್ತಂ ಭವತಿ ಚಾಕ್ಷಯಮ್ " – ಎಂದರೆ ಪುತ್ರೋತ್ಪತ್ತಿ ಮತ್ತು ವ್ಯತೀಪಾತದ ಸಮಯದಲ್ಲಿ ಕೊಟ್ಟ ದಾನವು ಅಕ್ಷಯವಾಗುತ್ತದೆ.

ಸರ್ವಸದ್ಗುಣಮಾಹಾತ್ಮ್ಯೇ ಏಷ ಕೃಷ್ಣಮನುವ್ರತಃ ।
ರಂತಿದೇವ ಇವೋದಾರೋ ಯಯಾತಿರಿವ ಧಾರ್ಮಿಕಃ ॥ ೨೪ ॥

ಧೃತ್ಯಾ ಬಲಿಸಮಃ ಕೃಷ್ಣೇ ಪ್ರಹ್ಲಾದ ಇವ ಸದ್ಗ್ರಹಃ ।
ಆಹರ್ತೈಷೋಽಶ್ವಮೇಧಾನಾಂ ವೃದ್ಧಾನಾಂ ಪರ್ಯುಪಾಸಕಃ ॥ ೨೫ ॥

ರಾಜರ್ಷೀಣಾಂ ಜನಯಿತಾ ಶಾಸ್ತಾ ಚೋತ್ಪಥಗಾಮಿನಾಮ್ ।
ನಿಗ್ರಹೀತಾ ಕಲೇರೇಷ ಭುವೋ ಧರ್ಮಸ್ಯ ಕಾರಣಾತ್ ॥ ೨೬ ॥

ತಕ್ಷಕಾದಾತ್ಮನೋ ಮೃತ್ಯುಂ ದ್ವಿಜಪುತ್ರೋಪಸರ್ಜಿತಾತ್ ।
ಪ್ರಪತ್ಸ್ಯತ ಉಪಶ್ರುತ್ಯ ಮುಕ್ತಸಂಗಃ ಪದಂ ಹರೇಃ ॥ ೨೭ ॥

ಜಿಜ್ಞಾಸಿತಾತ್ಮಯಾಥಾರ್ಥ್ಯೋ ಮುನೇರ್ವ್ಯಾಸಸುತಾದಸೌ ।
ಹಿತ್ವೇದಂ ನೃಪ ಗಂಗಾಯಾಂ ಯಾಸ್ಯತ್ಯದ್ಧಾಕುತೋಭಯಮ್ ॥ ೨೮ ॥

ಇತಿ ರಾಜ್ಞ ಉಪಾದಿಶ್ಯ ವಿಪ್ರಾ ಜಾತಕಕೋವಿದಾಃ ।
ಲಬ್ಧಾಪಚಿತಯಃ ಸರ್ವೇ ಪ್ರತಿಜಗ್ಮುಃ ಸ್ವಕಾನ್ ಗೃಹಾನ್ ॥ ೨೯ ॥

ಸ ಏಷ ಲೋಕೇ ವಿಖ್ಯಾತಃ ಪರೀಕ್ಷಿದಿತಿ ಯತ್ಪ್ರಭುಃ ।
ಗರ್ಭೇ ದೃಷ್ಟಮನುಧ್ಯಾಯನ್ ಪರೀಕ್ಷೇತ ನರೇಷ್ವಿಹ ॥ ೩೦ ॥

ಸ ರಾಜಪುತ್ರೋ ವವೃಧೇ ಆಶು ಶುಕ್ಲ ಇವೋಡುಪಃ ।
ಆಪೂರ್ಯಮಾಣಃ ಪಿತೃಭಿಃ ಕಾಷ್ಠಾಭಿರಿವ ಸೋಽನ್ವಹಮ್ ॥ ೩೧ ॥

ಯಕ್ಷ್ಯಮಾಣೋಽಶ್ವಮೇಧೇನ ಜ್ಞಾತಿದ್ರೋಹಜಿಹಾಸಯಾ ।
ರಾಜಾ ಲಬ್ಧಧನೋ ದಧ್ಯಾವನ್ಯತ್ರ ಕರದಂಡಯೋಃ ॥ ೩೨ ॥

ತದಭಿಪ್ರೇತಮಾಲಕ್ಷ್ಯ ಭ್ರಾತರೋಽಚ್ಯುತಚೋದಿತಾಃ ।
ಧನಂ ಪ್ರಹೀಣಮಾಜಹ್ರುರುದೀಚ್ಯಾಂ ದಿಶಿ ಭೂರಿಶಃ ॥ ೩೩ ॥

ತೇನ ಸಂಭೃತಸಂಭಾರೋ ಧರ್ಮಪುತ್ರೋ ಯುಧಿಷ್ಠಿರಃ ।
ವಾಜಿಮೇಧೈಸ್ತ್ರಿಭಿರ್ಭೀತೋ ಯಜ್ಞೈಃ ಸಮಯಜದ್ಧರಿಮ್ ॥ ೩೪ ॥

ಗುಣಗಳ ಮಹಾತ್ಮ್ಯವನ್ನು ಹೊಂದಿರುವ ವಿಷಯದಲ್ಲಿ ಶ್ರೀಕೃಷ್ಣ ಪರಮಾತ್ಮನನ್ನು ಅನುಸರಿಸುವನು. ರಂತಿದೇವನಂತೆ ಉದಾರನೂ, ಯಯಾತಿಯಂತೆ ಧಾರ್ಮಿಕನೂ ಆಗುವನು. ॥ ೨೪ ॥ ಧೈರ್ಯದಲ್ಲಿ ಬಲಿಚಕ್ರವರ್ತಿಯಂತೆಯೂ, ಭಗವಾನ್ ಶ್ರೀಕೃಷ್ಣನ ಭಕ್ತಿಯ ನಿಷ್ಠೆಯಲ್ಲಿ ಪ್ರಹ್ಲಾದನಂತೆಯೂ ಆಗುವನು. ಇವನು ಅನೇಕ ಅಶ್ವಮೇಧ ಯಜ್ಞಗಳನ್ನು ಮಾಡುವನು. ಗುರು-ಹಿರಿಯರ ಸೇವೆಯನ್ನು ನಿಷ್ಠೆಯಿಂದ ಮಾಡುವನು. ॥ ೨೫ ॥ ಇವನ ವಂಶದಲ್ಲಿ ರಾಜರ್ಷಿಗಳು ಜನಿಸುವರು. ಮರ್ಯಾದೆ ಮೀರಿ ನಡೆಯುವವರನ್ನು ಈತನು ದಂಡಿಸುವನು. ಭೂಮಿಯಲ್ಲಿ ಧರ್ಮವನ್ನು ಸ್ಥಾಪಿಸಲಿಕ್ಕಾಗಿ ಕಲಿಯುಗವನ್ನು ನಿಗ್ರಹಿಸುವನು. ॥ ೨೬ ॥ ಕೊನೆಗೆ ಬ್ರಾಹ್ಮಣಪುತ್ರನ ಶಾಪದಿಂದ ತನಗೆ ತಕ್ಷಕನಿಂದ ಸಾವು ಬರುವುದೆಂಬುದನ್ನು ತಿಳಿದು ಸರ್ವಸಂಗಪರಿತ್ಯಾಗ ಮಾಡಿ ಶ್ರೀಹರಿಗೆ ಶರಣಾಗುವನು. ॥ ೨೭ ॥ ಕೊನೆಗೆ ವ್ಯಾಸಪುತ್ರರಾದ ಶುಕಮಹಾಮುನಿಗಳಿಂದ ಆತ್ಮಸ್ವರೂಪದ ಯಥಾರ್ಥಜ್ಞಾನವನ್ನು ಪಡೆದು ಗಂಗಾತೀರದಲ್ಲಿ ದೇಹತ್ಯಾಗಮಾಡಿ ನಿಶ್ಚಯವಾಗಿಯೂ ಅಭಯಪದವನ್ನು ಅರ್ಥಾತ್ ಭಗವದ್ಧಾಮವನ್ನು ಪಡೆಯುವನು. ॥ ೨೮ ॥

ಜ್ಯೋತಿಷ್ಯಶಾಸ್ತ್ರದಲ್ಲಿ ಪ್ರವೀಣರಾದ ಬ್ರಾಹ್ಮಣರು ಧರ್ಮರಾಜನಿಗೆ ಆ ಬಾಲಕನ ಭವಿಷ್ಯವನ್ನು ತಿಳಿಸಿ, ಯಥೋಚಿತ ಸಂಭಾವನೆಯನ್ನು ಪಡೆದು ತಮ್ಮ-ತಮ್ಮ ಮನೆಗಳಿಗೆ ತೆರಳಿದರು. ॥ ೨೯ ॥ ಆ ರಾಜಕುಮಾರನೇ ಮುಂದೆ 'ಪರೀಕ್ಷಿತ್' ಎಂಬ ಹೆಸರಿನಿಂದ ವಿಖ್ಯಾತನಾದನು. ತಾನು ತಾಯಿಯ ಗರ್ಭದಲ್ಲಿದ್ದಾಗ ಸಂದರ್ಶಿಸಿದ್ದ ಪರಮಪುರುಷನನ್ನೇ ಸ್ಮರಿಸುತ್ತಾ - ಅವನು ಯಾರಾಗಿರಬಹುದು ? ಎಲ್ಲಿರಬಹುದು ? ಎಂದು ಪರೀಕ್ಷಿಸುತ್ತಿದ್ದುದರಿಂದ ಅವನಿಗೆ ಆ ಹೆಸರು ಅನ್ವರ್ಥಕವಾಯಿತು.॥ ೩೦ ॥ ಆ ರಾಜಕುಮಾರನು ತನ್ನ ಗುರು-ಹಿರಿಯರಿಂದ ಪೋಷಿಸಲ್ಪಡುತ್ತಾ ಶುಕ್ಲಪಕ್ಷದಲ್ಲಿ ತನ್ನ ಕಲೆಗಳಿಂದ ವೃದ್ಧಿಸುವ ಚಂದ್ರನಂತೆ ಶೀಘ್ರದಲ್ಲೇ ಬೆಳೆದು ದೊಡ್ಡವನಾದನು. ॥ ೩೧ ॥

ಆಗಲೇ ರಾಜಾ ಯುಧಿಷ್ಠಿರನಿಗೆ ಸ್ವಜನ ಸಂಹಾರದ ಪ್ರಾಯಶ್ಚಿತ್ತವಾಗಿ ಅಶ್ವಮೇಧವನ್ನು ಮಾಡುವ ಮನಸ್ಸಾಯಿತು. ಆದರೆ ಅದಕ್ಕಾಗಿ ಪ್ರಜೆಗಳಿಂದ ಕಂದಾಯ ಮತ್ತು ದಂಡಗಳ ರೂಪದಲ್ಲಿ ದೊರೆಯುತ್ತಿದ್ದ ಧನವನ್ನು ಬಿಟ್ಟು ಬೇರಾವ ಧನವೂ ಇಲ್ಲದಿರುವುದರಿಂದ ಅವನು ಚಿಂತಾಕ್ರಾಂತನಾದನು. ॥ ೩೨ ॥ ಆಗ ಅವನ ಅಭಿಪ್ರಾಯವನ್ನರಿತ ಭಗವಾನ್ ಶ್ರೀಕೃಷ್ಣನ ಪ್ರೇರಣೆಯಂತೆ ಅವನ ಸೋದರರು ಉತ್ತರದಿಕ್ಕಿಗೆ ಹೋಗಿ ಮರುತ್ತರಾಜನೂ,* ಬ್ರಾಹ್ಮಣರೂ ಹಿಂದೆ ಬಿಟ್ಟುಹೋದ ಹೇರಳವಾದ ಧನವನ್ನು ತಂದರು. ॥ ೩೩ ॥ ಅದರಿಂದ ಯಜ್ಞದ್ರವ್ಯಗಳನ್ನು ಸಂಪಾದಿಸಿ ಧರ್ಮಭೀರುವಾದ ಧರ್ಮರಾಜನು ಮೂರು ಅಶ್ವಮೇಧ ಯಜ್ಞಗಳ ಮೂಲಕ ಭಗವಂತನನ್ನು ಆರಾಧಿಸಿದನು. ॥ ೩೪ ॥ ಯುಧಿಷ್ಠಿರನ

* ಹಿಂದೆ ಮಹಾರಾಜಾ ಮರುತ್ತನು ಒಂದು ಅದ್ಭುತವಾದ ಯಜ್ಞವನ್ನು ಮಾಡಿದ್ದನು. ಅದರಲ್ಲಿ ಅವನು ಉಪಯೋಗಿಸಿದ್ದ ಎಲ್ಲ ಪಾತ್ರೆಗಳು ಸುವರ್ಣಮಯವೇ ಆಗಿದ್ದವು. ಯಜ್ಞವು ಮುಗಿದ ನಂತರ ಅವನು ಪಾತ್ರೆಗಳನ್ನು ಉತ್ತರದಿಕ್ಕಿನಲ್ಲಿ ಎಸೆದುಬಿಟ್ಟಿದ್ದನು. ಅವನು ಆಗ ಬ್ರಾಹ್ಮಣರಿಗೆ ದಾನಮಾಡಿದ ಧನವೂ ಎಷ್ಟು ಹೆಚ್ಚಾಗಿತ್ತೆಂದರೆ, ಅವರದನ್ನು ಕೊಂಡೊಯ್ಯಲು ಸಾಧ್ಯವಾಗದೇ ಆ ಉತ್ತರದಿಕ್ಕಿನಲ್ಲೇ ಬಿಟ್ಟುಹೋದರು. ಇತರರು ಬಹುದಿನದ ಕಾಲದ ಮೇಲೆ ರಾಜನಿಗೆ ಪೂರ್ಣ ಅಧಿಕಾರವಿರುವುದರಿಂದ ಭಗವಂತನು ಆ ಹಣವನ್ನು ತರಿಸಿ, ಧರ್ಮರಾಜನ ಯಜ್ಞ ಮಾಡಿಸಿದನು.

ಆಹೂತೋ ಭಗವಾನ್ರಾಜ್ಞಾ ಯಾಜಯಿತ್ವಾ ದ್ವಿಜೈರ್ನೃಪಮ್ ।
ಉವಾಸ ಕತಿಚಿನ್ಮಾಸಾನ್ಸುಹೃದಾಂ ಪ್ರಿಯಕಾಮ್ಯಯಾ ॥ ೩೫ ॥

ತತೋ ರಾಜ್ಞಾಭ್ಯನುಜ್ಞಾತಃ ಕೃಷ್ಣಯಾ ಸಹ ಬಂಧುಭಿಃ ।
ಯಯೌ ದ್ವಾರವತೀಂ ಬ್ರಹ್ಮನ್ಸಾರ್ಜುನೋ ಯದುಭಿರ್ವೃತಃ ॥ ೩೬ ॥

ಆಹ್ವಾನದಂತೆ ಅಲ್ಲಿಗೆ ದಯಮಾಡಿಸಿದ ಭಗವಂತನು ಬ್ರಾಹ್ಮಣರ ಮೂಲಕ ಅವನ ಯಜ್ಞವನ್ನು ಸಾಂಗವಾಗಿ ನಡೆಯಿಸಿ, ಸುಹೃದರಾದ ಪಾಂಡವರ ಸಂತೋಷಕ್ಕಾಗಿ ಕೆಲವು ತಿಂಗಳು ಅಲ್ಲೇ ಉಳಿದನು. ॥ ೩೫ ॥ ಶೌನಕರೇ! ಅನಂತರ ಬಂಧುಸಹಿತ ಧರ್ಮರಾಜನ ಮತ್ತು ದ್ರೌಪದಿಯ ಅನುಮತಿಯನ್ನು ಪಡೆದು, ಅರ್ಜುನನೊಂದಿಗೆ, ಯಾದವರಿಂದ ಸುತ್ತುವರಿಯಲ್ಪಟ್ಟು ಭಗವಾನ್ ಶ್ರೀಕೃಷ್ಣನು ದ್ವಾರಕೆಯ ಕುರಿತು ಪ್ರಯಾಣ ಬೆಳೆಸಿದನು. ॥ ೩೬ ॥

ಹನ್ನೆರಡನೆಯ ಅಧ್ಯಾಯವು ಮುಗಿಯಿತು. ॥ ೧೨ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಪ್ರಥಮಸ್ಕಂಧೇ
ಪರೀಕ್ಷಜ್ಜನ್ಮಾದ್ಯುತ್ಕರ್ಷೋ ನಾಮ ದ್ವಾದಶೋಽಧ್ಯಾಯಃ ॥ ೧೨ ॥

ಹದಿಮೂರನೆಯ ಅಧ್ಯಾಯ

ವಿದುರನ ಉಪದೇಶದಂತೆ ಧೃತರಾಷ್ಟ್ರ ಮತ್ತು ಗಾಂಧಾರಿಯ ವನಗಮನ

ಸೂತ ಉವಾಚ

ವಿದುರಸ್ತೀರ್ಥಯಾತ್ರಾಯಾಂ ಮೈತ್ರೇಯಾದಾತ್ಮನೋ ಗತಿಮ್ ।
ಜ್ಞಾತ್ವಾಗಾದ್ಧಾಸ್ತಿನಪುರಂ ತಯಾವಾಪ್ತವಿವಿತ್ಸಿತಃ ॥ ೧ ॥

ಯಾವತಃ ಕೃತವಾನ್ ಪ್ರಶ್ನಾನ್ ಕ್ಷತ್ತಾ ಕೌಷಾರವಾಗ್ರತಃ ।
ಜಾತೈಕಭಕ್ತಿರ್ಗೋವಿಂದೇ ತೇಭ್ಯಶ್ಚೋಪರರಾಮ ಹ ॥ ೨ ॥

ತಂ ಬಂಧುಮಾಗತಂ ದೃಷ್ಟ್ವಾ ಧರ್ಮಪುತ್ರಃ ಸಹಾನುಜಃ ।
ಧೃತರಾಷ್ಟ್ರೋ ಯುಯುತ್ಸುಶ್ಚ ಸೂತಃ ಶಾರದ್ವತಃ ಪೃಥಾ ॥ ೩ ॥

ಗಾಂಧಾರೀ ದ್ರೌಪದೀ ಬ್ರಹ್ಮನ್ಸುಭದ್ರಾ ಚೋತ್ತರಾ ಕೃಪೀ ।
ಅನ್ಯಾಶ್ಚ ಜಾಮಯಃ ಪಾಂಡೋರ್ಜ್ಞಾತಯಃ ಸಸುತಾಃ ಸ್ತ್ರಿಯಃ ॥ ೪ ॥

ಪ್ರತ್ಯುಜ್ಜಗ್ಮುಃ ಪ್ರಹರ್ಷೇಣ ಪ್ರಾಣಂ ತನ್ವ ಇವಾಗತಮ್ ।
ಅಭಿಸಂಗಮ್ಯ ವಿಧಿವತ್ಪರಿಷ್ವಂಗಾಭಿವಾದನೈಃ ॥ ೫ ॥

ಮುಮುಚುಃ ಪ್ರೇಮಬಾಷ್ಪೌಘಂ ವಿರಹೌತ್ಕಂಠ್ಯಕಾತರಾಃ ।
ರಾಜಾ ತಮರ್ಹಯಾಂಚಕ್ರೇ ಕೃತಾಸನಪರಿಗ್ರಹಮ್ ॥ ೬ ॥

ತಂ ಭುಕ್ತವಂತಂ ವಿಶ್ರಾಂತಮಾಸೀನಂ ಸುಖಮಾಸನೇ ।
ಪ್ರಶ್ರಯಾವನತೋ ರಾಜಾ ಪ್ರಾಹ ತೇಷಾಂ ಚ ಶೃಣ್ವತಾಮ್ ॥ ೭ ॥

ಸೂತಪುರಾಣಿಕರು ಹೇಳುತ್ತಾರೆ – ಶೌನಕಾದಿ ಮಹರ್ಷಿಗಳೇ! ಮಹಾತ್ಮರಾದ ವಿದುರನು ತೀರ್ಥಯಾತ್ರೆಯ ಸಮಯದಲ್ಲಿ ಮೈತ್ರೇಯ ಮಹರ್ಷಿಗಳಿಂದ ತತ್ತ್ವಜ್ಞಾನವನ್ನು ಪಡೆದುಕೊಂಡು ಹಸ್ತಿನಾವತಿಗೆ ಮರಳಿದನು. ಆತ್ಮಜ್ಞಾನದಿಂದ ತಿಳಿಯಬೇಕಾದ ಅವನ ಅರಿವು ಪೂರ್ಣವಾಗಿತ್ತು. ॥ ೧ ॥ ಗೋವಿಂದನಲ್ಲಿ ಅನನ್ಯ ಭಕ್ತಿಯನ್ನು ಹೊಂದಿದ್ದ ಅವನು ಮೊದಲೇ ಕೃತಕೃತ್ಯನಾಗಿದ್ದನು. ಮೈತ್ರೇಯರು ಅವನು ಕೇಳಿದ್ದ ಎಲ್ಲ ಪ್ರಶ್ನೆಗಳಿಗೆ ಉತ್ತರವನ್ನು ನೀಡಿದ್ದರು. ಅವರ ಉತ್ತರವನ್ನು ಕೇಳಿ ಮತ್ತೆ ಯಾವ ಪ್ರಶ್ನೆಯನ್ನು ಮಾಡದೆ ಅವನು ಶಾಂತನಾಗಿದ್ದನು. ॥ ೨ ॥ ಶೌನಕರೇ! ಆಪ್ತಬಂಧುವಾದ ಚಿಕ್ಕಪ್ಪ ವಿದುರನು ಬಂದಿರುವುದನ್ನು ನೋಡಿದೊಡನೆ ಸೋದರಸಹಿತನಾದ ಧರ್ಮರಾಜ, ಧೃತರಾಷ್ಟ್ರ, ಯುಯುತ್ಸು, ಸಂಜಯ, ಕೃಪಾಚಾರ್ಯರು, ಕುಂತೀ, ಗಾಂಧಾರೀ, ದ್ರೌಪದೀ, ಸುಭದ್ರೆ, ಉತ್ತರೆ, ಕೃಪಿ ಹಾಗೂ ಪಾಂಡವ ಪರಿವಾರದ ಬೇರೆ ಎಲ್ಲ ನರ-ನಾರಿಯರೂ ಜ್ಞಾತಿಗಳೂ, ತಮ್ಮ ಪುತ್ರರೊಂದಿಗೆ ಇತರ ಸ್ತ್ರೀಯರೂ ಅತ್ಯಂತ ಸಂತೋಷದಿಂದ ಮೃತ ಶರೀರಕ್ಕೆ ಚೈತನ್ಯ ಉಂಟಾಗುವಂತೆ ಅವನನ್ನು ಎದುರುಗೊಂಡರು. ಅವನನ್ನು ಸ್ವಾಗತಿಸಿ, ಯಥೋಚಿತವಾಗಿ ಆಲಿಂಗನ, ನಮಸ್ಕಾರಗಳೊಡನೆ ಬರಮಾಡಿಕೊಂಡರು. ಅವನ ಅಗಲಿಕೆಯಿಂದ ಉಂಟಾಗಿದ್ದ ದುಃಖದಿಂದ ಕಾತರಗೊಂಡಿದ್ದ ಅವರೆಲ್ಲರೂ ಆನಂದಬಾಷ್ಪಗಳನ್ನು ಹರಿಸಿದರು. ಯುಧಿಷ್ಠಿರನು ಅವನನ್ನು ಆಸನದಲ್ಲಿ ಕುಳ್ಳಿರಿಸಿ ಯಥೋಚಿತವಾಗಿ ಸತ್ಕರಿಸಿದನು. ॥ ೩-೬ ॥ ಅವನು ಭೋಜನ ಮಾಡಿ ವಿಶ್ರಾಂತಿ ಪಡೆದು ಸುಖವಾಗಿ ಕುಳಿತಿದ್ದ ಸಮಯದಲ್ಲಿ ವಿನಯದಿಂದ ತಲೆಬಾಗಿ ಅಲ್ಲಿರುವವರೆಲ್ಲ ಕೇಳುವಂತೆ ಅವರಲ್ಲಿ ಇಂತು ಪ್ರಶ್ನಿಸಿದನು. ॥ ೭ ॥

ಯುಧಿಷ್ಠಿರನೆಂದನು – "ಚಿಕ್ಕಪ್ಪಾ! ಕೌರವರು ನಮ್ಮ ಮೇಲೆ ಪ್ರಯೋಗಮಾಡಿದ ವಿಷ, ಅರಗಿನ ಮನೆಯ ಅಗ್ನಿಪ್ರಕರಣ

ಯುಧಿಷ್ಠಿರ ಉವಾಚ

ಅಪಿ ಸ್ಮರಥ ನೋ ಯುಷ್ಮತ್ಪಕ್ಷಚ್ಛಾಯಾಸಮೇಧಿತಾನ್ ।
ವಿಪದ್ಗಣಾದ್ವಿಷಾಗ್ನ್ಯಾದೇರ್ಮೋಚಿತಾ ಯತ್ಸಮಾತೃಕಾಃ ॥ ೮ ॥

ಕಯಾ ವೃತ್ತ್ಯಾ ವರ್ತಿತಂ ವಶ್ಚರದ್ಭಿಃ ಕ್ಷಿತಿಮಂಡಲಮ್ ।
ತೀರ್ಥಾನಿ ಕ್ಷೇತ್ರಮುಖ್ಯಾನಿ ಸೇವಿತಾನೀಹ ಭೂತಲೇ ॥ ೯ ॥

ಭವದ್ವಿಧಾ ಭಾಗವತಾಸ್ತೀರ್ಥಭೂತಾಃ ಸ್ವಯಂ ವಿಭೋ ।
ತೀರ್ಥೀಕುರ್ವಂತಿ ತೀರ್ಥಾನಿ ಸ್ವಾಂತಃಸ್ಥೇನ ಗದಾಭೃತಾ ॥ ೧೦ ॥

ಅಪಿ ನಃ ಸುಹೃದಸ್ತಾತ ಬಾಂಧವಾಃ ಕೃಷ್ಣದೇವತಾಃ ।
ದೃಷ್ಟಾಃ ಶ್ರುತಾ ವಾ ಯದವಃ ಸ್ವಪುರ್ಯಾಂ ಸುಖಮಾಸತೇ ॥ ೧೧ ॥

ಇತ್ಯುಕ್ತೋ ಧರ್ಮರಾಜೇನ ಸರ್ವಂ ತತ್ಸಮವರ್ಣಯತ್ ।
ಯಥಾನುಭೂತಂ ಕ್ರಮಶೋ ವಿನಾ ಯದುಕುಲಕ್ಷಯಮ್ ॥ ೧೨ ॥

ನನ್ವಪ್ರಿಯಂ ದುರ್ವಿಷಹಂ ನೃಣಾಂ ಸ್ವಯಮುಪಸ್ಥಿತಮ್ ।
ನಾವೇದಯತ್ ಸಕರುಣೋ ದುಃಖಿತಾಂದ್ರಷ್ಟುಮಕ್ಷಮಃ ॥ ೧೩ ॥

ಕಂಚಿತ್ಕಾಲಮಥಾವಾತ್ಸೀತ್ಸತ್ಕೃತೋ ದೇವವತ್ಸುಖಮ್ ।
ಭ್ರಾತುರ್ಜ್ಯೇಷ್ಠಸ್ಯ ಶ್ರೇಯಸ್ಕೃತ್ಸರ್ವೇಷಾಂ ಸುಖಮಾವಹನ್ ॥ ೧೪ ॥

ಅಬಿಭ್ರದರ್ಯಮಾ ದಂಡಂ ಯಥಾವದಘಕಾರಿಷು ।
ಯಾವದ್ದಧಾರ ಶೂದ್ರತ್ವಂ ಶಾಪಾದ್ವರ್ಷಶತಂ ಯಮಃ ॥ ೧೫ ॥

ಮುಂಚಿನ ವಿಪತ್ಪರಂಪರೆಯಿಂದ ಪಕ್ಷಿಗಳು ತಮ್ಮ ಮೊಟ್ಟೆಗಳನ್ನು ರೆಕ್ಕೆಗಳೊಳಗೆ ಇಟ್ಟುಕೊಂಡು ರಕ್ಷಿಸಿ, ಕಾವುಕೊಟ್ಟು ಬೆಳೆಸುವಂತೆ ನಮ್ಮನ್ನೂ ನಮ್ಮ ತಾಯಿಯನ್ನೂ ಕಾಪಾಡಿದಿರಿ. ಹೀಗೆ ನಿಮ್ಮ ಪ್ರೀತಿ - ಅಭಿಮಾನಗಳ ನೆರಳಿನಲ್ಲೇ ಬೆಳೆದು ದೊಡ್ಡವರಾದ ನಮ್ಮನ್ನು ನೆನಪುಮಾಡಿಕೊಳ್ಳುತ್ತಿದ್ದಿರಷ್ಟೆ! ॥ ೮ ॥ ತೀರ್ಥಯಾತ್ರೆಯ ಸಮಯದಲ್ಲಿ ನೀವು ಭೂಮಿಯಲ್ಲಿ ಸಂಚರಿಸುತ್ತಾ ಹೇಗೆ ಜೀವನ ನಿರ್ವಹಿಸಿದಿರಿ? ಯಾವ-ಯಾವ ಮುಖ್ಯವಾದ ಕ್ಷೇತ್ರಗಳನ್ನೂ, ತೀರ್ಥಗಳನ್ನೂ ಹೋಗಿ ಸೇವಿಸಿದಿರಿ? ॥ ೯ ॥ ಪೂಜ್ಯರೇ! ಭಗವಂತನ ಪ್ರಿಯಭಕ್ತರಾದ ನಿಮ್ಮಂತಹವರು ಸ್ವಯಂ ತೀರ್ಥ ಸ್ವರೂಪರೇ ಆಗಿದ್ದೀರಿ. ತಮ್ಮ ಹೃದಯದಲ್ಲಿ ವಿರಾಜಮಾನನಾದ ಭಗವಂತನ ಮೂಲಕ ತೀರ್ಥಗಳನ್ನೂ ಮಹಾತೀರ್ಥವಾಗಿಸುವವರು ನೀವು. ಏಕೆಂದರೆ, ನಿಮ್ಮಂತಹ ಸಂತರು ಗದಾಧಾರಿ ಭಗವಂತನನ್ನು ತಮ್ಮ ಹೃದಯದಲ್ಲಿ ಧರಿಸಿಕೊಂಡಿರುವಿರಿ. ॥ ೧೦ ॥ ಚಿಕ್ಕಪ್ಪನವರೇ! ನೀವು ತೀರ್ಥಯಾತ್ರೆ ಮಾಡುತ್ತಾ ದ್ವಾರಕೆಗೂ ಅವಶ್ಯವಾಗಿ ಹೋಗಿರಬಹುದು. ಅಲ್ಲಿ ನಮ್ಮ ಸುಹೃದರೂ ಹಾಗೂ ಬಂಧುಗಳಾದ ಯಾದವರು, ಅವರ ಏಕಮಾತ್ರ ಆರಾಧ್ಯದೇವನಾದ ಶ್ರೀಕೃಷ್ಣನು ತಮ್ಮ ನಗರದಲ್ಲಿ ಸುಖವಾಗಿದ್ದಾರಲ್ಲ? ತಾವು ಹೋಗಿ ನೋಡದಿದ್ದರೂ ಅವಶ್ಯವಾಗಿ ಸಮಾಚಾರ ಕೇಳಿರಬಹುದು" ಎಂದು ಕೇಳಿದನು. ॥ ೧೧ ॥

ಯುಧಿಷ್ಠಿರನು ಹೀಗೆ ಕೇಳಿದಾಗ ವಿದುರನು ತಾನು ಕಂಡು, ಕೇಳಿ, ಅನುಭವಿಸಿದಂತೆಯೇ ಎಲ್ಲ ವಿಷಯಗಳನ್ನು ಕ್ರಮವಾಗಿ ವರ್ಣಿಸಿದನು. ಕೇವಲ ಯದುವಂಶೀಯರ ವಿನಾಶದ ಮಾತನ್ನು ಮಾತ್ರ ಹೇಳಲಿಲ್ಲ. ॥ ೧೨ ॥ ಕರುಣಾಪೂರ್ಣ ಹೃದಯನಾದ ವಿದುರನು - ಯಾದವರ ಸಂಹಾರದ ಮಾತನ್ನು ಕೇಳಿ ಪಾಂಡವರಿಗೆ ಅತೀವ ಕಷ್ಟವಾದೀತು ಹಾಗೂ ಪಾಂಡವರನ್ನು ದುಃಖಿತರನ್ನಾಗಿ ನೋಡಲು ಬಯಸುತ್ತಿರಲಿಲ್ಲ. ಅದಕ್ಕಾಗಿ ಅವನು ಈ ಅಪ್ರಿಯ, ಅಸಹ್ಯ ಘಟನೆಯನ್ನು ಪಾಂಡವರಿಗೆ ಹೇಳಲಿಲ್ಲ. ಏಕೆಂದರೆ, ಅದಾದರೋ ತಾನಾಗಿ ತಿಳಿದುಬರುವ ವಿಚಾರವಷ್ಟೆ. ॥ ೧೩ ॥

ಪಾಂಡವರು ವಿದುರನನ್ನು ದೇವರಂತೆ ಸೇವೆ-ಸತ್ಕಾರ ಮಾಡುತ್ತಿದ್ದರು. ಅವರು ಕೆಲದಿನಗಳವರೆಗೆ ಹಿರಿಯಣ್ಣ ಧೃತರಾಷ್ಟ್ರನ ಶ್ರೇಯಸ್ಸನ್ನು ಬಯಸುತ್ತಾ ಸುಖವಾಗಿ ಹಸ್ತಿನಾಪುರದಲ್ಲೇ ಇದ್ದರು. ॥ ೧೪ ॥ ವಿದುರನಾದರೋ ಸಾಕ್ಷಾತ್ ಯಮಧರ್ಮನೇ ಆಗಿದ್ದರು. ಮಾಂಡವ್ಯ ಋಷಿಯ ಶಾಪದಿಂದ ಇವರು ನೂರು ವರ್ಷಗಳವರೆಗೆ ಶೂದ್ರರಂತೆ ಇದ್ದರು.* ಅಲ್ಲಿಯವರೆಗೂ ಯಮನ ತಂದೆಯಾದ ಸೂರ್ಯದೇವನೇ ಪಾಪಿಗಳಿಗೆ ದಂಡನೆಯನ್ನು ವಿಧಿಸುವ ಅಧಿಕಾರವನ್ನು ನಿರ್ವಹಿಸುತ್ತಿದ್ದನು. ॥ ೧೫ ॥

* ಒಮ್ಮೆ ಧ್ಯಾನಾಸಕ್ತರಾಗಿದ್ದ ಮಾಂಡವ್ಯ ಮಹರ್ಷಿಗಳ ಆಶ್ರಮದಲ್ಲಿ ಕೆಲವು ಕಳ್ಳರು ರಾಜಭಟರ ಕೈಗೆ ಸಿಕ್ಕಿಬಿದ್ದರು. ಕಳ್ಳರ ಜೊತೆಯಲ್ಲಿ ಮಾಂಡವ್ಯ ಮಹರ್ಷಿಗಳನ್ನೂ ಶಾಸ್ತ್ರವಿರುದ್ಧವಾಗಿ ಭ್ರಾಂತಿಯಿಂದ ರಾಜನು ಮಾಂಡವ್ಯರಿಗೆ ಶೂಲಕ್ಕೇರಿಸುವ ದಂಡವನ್ನು ವಿಧಿಸಿದನು. ತನ್ನ ತಪ್ಪನ್ನು ತಿಳಿದೊಡನೆ ರಾಜನು ಮಹರ್ಷಿಗಳನ್ನು ಶೂಲದಿಂದ ಇಳಿಸಿ, ಅವರ ಕ್ಷಮಾಯಾಚನೆಯನ್ನು ಯಾಚಿಸಿದನು. ಮಾಂಡವ್ಯರು ಯಮಧರ್ಮನ ಬಳಿಗೆ ಹೋಗಿ ನನಗೆ ಯಾವ ಪಾಪಕ್ಕಾಗಿ ಈ ದಂಡನೆಯು ಒದಗಿತೆಂದು ಪ್ರಶ್ನಿಸಲು, ಅವನು "ನೀವು ಬಾಲ್ಯದಲ್ಲಿ ಒಂದು ಚಿಟ್ಟೆಯನ್ನು ದರ್ಭಾಗ್ರದಿಂದ ಚುಚ್ಚಿದ್ದಕ್ಕಾಗಿ ನಿಮಗೀದು ಈ ಶಿಕ್ಷೆ ಒದಗಿತು" ಎಂದು ಉತ್ತರಿಸಿದನು. ಆಗ ಮಹರ್ಷಿಗಳು ಕ್ರುದ್ಧರಾಗಿ 'ನಾನು ಬಾಲ್ಯದಲ್ಲಿ ಅರಿಯದೆ ಅಪರಾಧ ಮಾಡಿರಬಹುದು. ಆದರೆ ಅಲ್ಪ ಈ ತಪ್ಪಿಗೆ ಇಷ್ಟೊಂದು ಕಠೋರವಾದ ಶಿಕ್ಷೆಯನ್ನು ವಿಧಿಸಿದ್ದರಿಂದ ನೀನು ಇಳೆಯಲು ಯೋಗ್ಯನಲ್ಲ. ನೂರು ವರ್ಷಗಳ ಕಾಲ ಶೂದ್ರಯೋನಿಯಲ್ಲಿ ಹುಟ್ಟು' ಎಂದು ಯಮನಿಗೆ ಶಪಿಸಿದರು. ಮಾಂಡವ್ಯರ ಈ ಶಾಪದಿಂದ ಯಮಧರ್ಮನು ವಿದುರನ ರೂಪದಲ್ಲಿ ಅವತರಿಸಿದನು.

ಯುಧಿಷ್ಠಿರೋ ಲಬ್ಧರಾಜ್ಯೋದೃಷ್ಟ್ವಾ ಪೌತ್ರಂ ಕುಲಂಧರಮ್ ।
ಭ್ರಾತೃಭಿರ್ಲೋಕಪಾಲಾಭೈರ್ಮುಮುದೇ ಪರಯಾ ಶ್ರಿಯಾ ॥ ೧೬ ॥

ಏವಂ ಗೃಹೇಷು ಸಕ್ತಾನಾಂ ಪ್ರಮತ್ತಾನಾಂ ತದೀಹಯಾ ।
ಅತ್ಯಕ್ರಾಮದವಿಜ್ಞಾತಃ ಕಾಲಃ ಪರಮದುಸ್ತರಃ ॥ ೧೭ ॥

ವಿದುರಸ್ತದಭಿಪ್ರೇತ್ಯ ಧೃತರಾಷ್ಟ್ರಮಭಾಷತ ।
ರಾಜನ್ನಿರ್ಗಮ್ಯತಾಂ ಶೀಘ್ರಂ ಪಶ್ಯೇದಂ ಭಯಮಾಗತಮ್ ॥ ೧೮ ॥

ಪ್ರತಿಕ್ರಿಯಾ ನ ಯಸ್ಯೇಹ ಕುತಶ್ಚಿತ್ಕರ್ಹಿಚಿತ್ಪ್ರಭೋ ।
ಸ ಏವ ಭಗವಾನ್ಕಾಲಃ ಸರ್ವೇಷಾಂ ನಃ ಸಮಾಗತಃ ॥ ೧೯ ॥

ಯೇನ ಚೈವಾಭಿಪನ್ನೋಽಯಂ ಪ್ರಾಣೈಃ ಪ್ರಿಯತಮೈರಪಿ ।
ಜನಃ ಸದ್ಯೋ ವಿಯುಜ್ಯೇತ ಕಿಮುತಾನ್ಯೈರ್ಧನಾದಿಭಿಃ ॥ ೨೦ ॥

ಪಿತೃಭ್ರಾತೃಸುಹೃತ್ಪುತ್ರಾ ಹತಾಸ್ತೇ ವಿಗತಂ ವಯಃ ।
ಆತ್ಮಾ ಚ ಜರಯಾ ಗ್ರಸ್ತಃ ಪರಗೇಹಮುಪಾಸಸೇ ॥ ೨೦ ॥

ಅಹೋ ಮಹೀಯಸೀ ಜಂತೋರ್ಜೀವಿತಾಶಾ ಯಯಾ ಭವಾನ್ ।
ಭೀಮಾಪವರ್ಜಿತಂ ಪಿಂಡ ಮಾದತ್ತೇ ಗೃಹಪಾಲವತ್ ॥ ೨೨ ॥

ಅಗ್ನಿರ್ನಿಸೃಷ್ಟೋ ದತ್ತಶ್ಚ ಗರೋ ದಾರಾಶ್ಚ ದೂಷಿತಾಃ ।
ಹೃತಂ ಕ್ಷೇತ್ರಂ ಧನಂ ಯೇಷಾಂ ತದ್ದತ್ತೈರಸುಭಿಃ ಕಿಯತ್ ॥ ೨೩ ॥

ತಸ್ಯಾಪಿ ತವ ದೇಹೋಽಯಂ ಕೃಪಣಸ್ಯ ಜಿಜೀವಿಷೋಃ ।
ಪರೈತ್ಯನಿಚ್ಛತೋ ಜೀರ್ಣೋ ಜರಯಾ ವಾಸಸೀ ಇವ ॥ ೨೪ ॥

ಗತಸ್ವಾರ್ಥಮಿಮಂ ದೇಹಂ ವಿರಕ್ತೋ ಮುಕ್ತಬಂಧನಃ ।
ಅವಿಜ್ಞಾತಗತಿರ್ಜಹ್ಯಾತ್ಸ ವೈ ಧೀರ ಉದಾಹೃತಃ ॥ ೨೫ ॥

ಯಃ ಸ್ವಕಾತ್ಪರತೋ ವೇಹ ಜಾತನಿರ್ವೇದ ಆತ್ಮವಾನ್ ।
ಹೃದಿ ಕೃತ್ವಾ ಹರಿಂ ಗೇಹಾತ್ಪ್ರವ್ರಜೇತ್ಸ ನರೋತ್ತಮಃ ॥ ೨೬ ॥

ರಾಜ್ಯವು ಮರಳಿ ಪ್ರಾಪ್ತವಾಗಿ ಲೋಕಪಾಲಕರಂತೆ ತನ್ನ ಸಹೋದರರೊಂದಿಗೆ ರಾಜಾ ಯುಧಿಷ್ಠಿರನು ವಂಶದ ಕುಡಿಯಾದ ಪರೀಕ್ಷಿತನನ್ನು ನೋಡುತ್ತಾ ತಮ್ಮ ಅತುಲ ಸಂಪತ್ತಿನಿಂದ ಆನಂದವಾಗಿ ಇರತೊಡಗಿದನು. ॥ ೧೬ ॥ ಹೀಗೆ ಗೃಹಸ್ಥ ಜೀವನದ ಕಾರ್ಯಗಳಲ್ಲಿ ಆಸಕ್ತರಾಗಿ ಮೈಮರೆತಿದ್ದ ಪಾಂಡವರಿಗೆ, ಅವರು ನೋಡುತ್ತಿದ್ದಂತೆಯೇ ಯಾವುದನ್ನು ಯಾರೂ ಅತಿಕ್ರಮಿಸಲಾರರೋ ಅಂತಹ ದುಸ್ತರ ಕಾಲವು ಹತ್ತಿರ ಬಂದೇ ಬಿಟ್ಟಿತು. ॥ ೧೭ ॥

ಆಗ ಕಾಲದ ಗತಿಯನ್ನು ಪರಿಶೀಲಿಸಿದ ವಿದುರನು ಅಣ್ಣನಾದ ಧೃತರಾಷ್ಟ್ರನ ಬಳಿಗೆ ಹೋಗಿ ಹೇಳಿದನು - "ಮಹಾರಾಜಾ! ಭಯಂಕರವಾದ ಕಾಲವು ಬಂದುಬಿಟ್ಟಿದೆ. ಆದುದರಿಂದ ನೀನು ಶೀಘ್ರವಾಗಿ ಇಲ್ಲಿಂದ ಹೊರಟುಬಿಡು. ॥ ೧೮ ॥ ಪ್ರಭೋ! ಯಾರಿಂದಲೂ ಪರಿಹರಿಸಲಾರದ, ತಡೆಯಲಾರದ, ಬದಲಾಯಿಸಲಾರದ ಆ ಸರ್ವಸಮರ್ಥವಾದ ಕಾಲವು ನಮ್ಮೆಲ್ಲರ ತಲೆಯ ಮೇಲೆ ಸುತ್ತುತ್ತಿದೆ. ॥ ೧೯ ॥ ಕಾಲಕ್ಕೆ ವಶೀಭೂತನಾದ ಜೀವನು ತನಗೆ ಪ್ರಿಯವಾಗಿರುವ ಪ್ರಾಣಗಳನ್ನು ನೋಡು- ನೋಡುತ್ತಲೇ ತೊರೆಯಬೇಕಾಗಿರುವಾಗ ಇನ್ನು ಹಣ, ಜನ ಮುಂತಾದ ವಸ್ತುಗಳ ಬಗ್ಗೆ ಹೇಳುವುದೇನಿದೆ? ॥ ೨೦ ॥ ನಿಮ್ಮ ಚಿಕ್ಕಪ್ಪ, ದೊಡ್ಡಪ್ಪ, ತಂದೆ, ಸಹೋದರ, ಸಂಬಂಧಿಗಳು, ಪುತ್ರರು ಹೀಗೆ ಎಲ್ಲರೂ ಹತರಾದರು. ನೀವೂ ಮುದುಕರಾಗಿ ವಯಸ್ಸು ಸಂದು ಹೋಯಿತು. ಬೇರೆಯವರ ಮನೆಯಲ್ಲಿ ವಾಸಿಸುತ್ತಿದ್ದೀಯೆ. ॥ ೨೦ ॥ ಅಬ್ಬಾ! ಈ ಪ್ರಾಣಗಳಿಗೆ ಹೇಗಾದರೂ ಬದುಕಿರಬೇಕೆಂಬ ಆಸೆ ಎಷ್ಟು ಪ್ರಬಲವಾಗಿದೆ! ಆದರಿಂದಲೇ ನೀನು ಭೀಮಸೇನನು ಅಸಡ್ಡೆಯಿಂದ ಹಾಕಿದ ಕೂಳನ್ನು ತಿನ್ನುತ್ತಾ ನಾಯಿಯಂತೆ ಬದುಕಿದ್ದೀಯೆ. ॥ ೨೨ ॥ ಯಾರನ್ನು ನೀನು ಬೆಂಕಿಯಿಂದ ಸುಡಬೇಕೆಂದು ಬಯಸಿದೆಯೋ, ವಿಷವನ್ನಿಕ್ಕಿ ಸಾಯಿಸಲು ಇಚ್ಛಿಸಿದೆಯೋ, ತುಂಬಿದ ಸಭೆಯಲ್ಲಿ ಯಾರ ಪತ್ನಿಗೆ ಅಪಮಾನ ಮಾಡಿದೆಯೋ, ಯಾರ ಭೂಮಿಯನ್ನು ಕಿತ್ತುಕೊಂಡೆಯೋ, ಅವರೇ ಇಂದು ಹಾಕಿದ ಕೂಳಿನಿಂದ ಬದುಕಿರುವ ಪ್ರಾಣಗಳಿಗೆ ಗೌರವವಿದೆಯೇ? ॥ ೨೩ ॥ ಇಷ್ಟಿದ್ದರೂ ನೀನು ಬದುಕಬೇಕೆಂದು ಬಯಸುವೆಯಲ್ಲ! ನಿನ್ನ ಅಜ್ಞಾನ ಮೇರೆ ಮೀರಿಹೋಗಿದೆ. ಆದರೆ ನೀನು ಬಯಸುವುದರಿಂದ ಏನಾದೀತು? ಹಳೆಯ ಬಟ್ಟೆಯಂತೆ ಮುದಿತನದಿಂದ ಈ ಶರೀರವು ಬಯಸದೆಯೇ ಕ್ಷೀಣಿಸಿದೆ. ॥ ೨೪ ॥ ಈಗ ಈ ಶರೀರದಿಂದ ನಿನ್ನ ಯಾವುದೇ ಸ್ವಾರ್ಥವು ಸಾಧಿಸಲಾರದು. ಇದರಲ್ಲಿ ಇನ್ನು ಸಿಕ್ಕಿ ಮೋಸಹೋಗಬೇಡ. ಇದರ ಮಮತೆಯನ್ನು ಕತ್ತರಿಸಿಬಿಡು. ಪ್ರಪಂಚದ ಸಂಬಂಧಿಗಳಿಂದ ವಿರಕ್ತನಾಗಿ ಯಾರಿಗೂ ತಿಳಿಯದಂತೆ ತನ್ನ ಶರೀರವನ್ನು ತ್ಯಜಿಸುವವನು ಧೀರನು. ॥ ೨೫ ॥ ತನ್ನ ಅರಿವಿನಿಂದಾಗಲೀ, ಬೇರೆಯವರ ಸಲಹೆಯಿಂದಾಗಲಿ, ಈ ಸಂಸಾರವು ದುಃಖರೂಪವೆಂದು ತಿಳಿದು ಇದರಿಂದ ವಿರಕ್ತನಾಗುವವನು, ತನ್ನ ಅಂತಃಕರಣವನ್ನು ವಶಪಡಿಸಿಕೊಂಡು ಹೃದಯದಲ್ಲಿ ಭಗವಂತನನ್ನು ಧರಿಸಿ ಸಂನ್ಯಾಸಿಯಾಗಿ ಮನೆಬಿಟ್ಟು ಹೊರಡುವವನು ಮನುಷ್ಯರಲ್ಲಿ ಉತ್ತಮನು. ॥ ೨೬ ॥

ಅಥೋದೀಚೀಂ ದಿಶಂ ಯಾತು ಸ್ವೈರಜ್ಞಾತಗತಿರ್ಭವಾನ್ ।
ಇತೋಽರ್ವಾಕ್ಪ್ರಾಯಶಃ ಕಾಲಃ ಪುಂಸಾಂ ಗುಣವಿಕರ್ಷಣಃ ॥ ೨೭ ॥

ಏವಂ ರಾಜಾ ವಿದುರೇಣಾನುಜೇನ
ಪ್ರಜ್ಞಾಚಕ್ಷುರ್ಬೋಧಿತ ಆಜಮೀಢಃ ।
ಛಿತ್ವಾ ಸ್ವೇಷು ಸ್ನೇಹಪಾಶಾಂದ್ರಢಿಮ್ನೋ
ನಿಶ್ಚಕ್ರಾಮ ಭ್ರಾತೃಸಂದರ್ಶಿತಾಧ್ವಾ ॥ ೨೮ ॥

ಪತಿಂ ಪ್ರಯಾಂತಂ ಸುಬಲಸ್ಯ ಪುತ್ರೀ
ಪತಿವ್ರತಾ ಚಾನುಜಗಾಮ ಸಾಧ್ವೀ ।
ಹಿಮಾಲಯಂ ನ್ಯಸ್ತದಂಡಪ್ರಹರ್ಷಂ
ಮನಸ್ವಿನಾಮಿವ ಸತ್ಸಂಪ್ರಹಾರಃ ॥ ೨೯ ॥

ಅಜಾತಶತ್ರುಃ ಕೃತಮೈತ್ರೋ ಹುತಾಗ್ನಿ-
ರ್ವಿಪ್ರಾನ್ನತ್ವಾ ತಿಲಗೋಭೂಮಿರುಕ್ಮೈಃ ।
ಗೃಹಂ ಪ್ರವಿಷ್ಟೋ ಗುರುವಂದನಾಯ
ನ ಚಾಪಶ್ಯತ್ಪಿತರೌ ಸೌಬಲೀಂ ಚ ॥ ೩೦ ॥

ತತ್ರ ಸಂಜಯಮಾಸೀನಂ ಪಪ್ರಚ್ಛೋದ್ವಿಗ್ನಮಾನಸಃ ।
ಗಾವಲ್ಗಣೇ ಕ್ವ ನಸ್ತಾತೋ ವೃದ್ಧೋ ಹೀನಶ್ಚ ನೇತ್ರಯೋಃ ॥ ೩೧ ॥

ಅಂಬಾ ಚ ಹತಪುತ್ರಾರ್ತಾ ಪಿತೃವ್ಯಃ ಕ್ವ ಗತಃ ಸುಹೃತ್ ।
ಅಪಿ ಮಯ್ಯಕೃತಪ್ರಜ್ಞೇ ಹತಬಂಧುಃ ಸ ಭಾರ್ಯಯಾ ।
ಆಶಂಸಮಾನಃ ಶಮಲಂ ಗಂಗಾಯಾಂ ದುಃಖಿತೋಽಪತತ್ ॥ ೩೨ ॥

ಪಿತರ್ಯುಪರತೇ ಪಾಂಡೌ ಸರ್ವಾನ್ನಃ ಸುಹೃದಃ ಶಿಶೂನ್ ।
ಅರಕ್ಷತಾಂ ವ್ಯಸನತಃ ಪಿತೃವ್ಯೌ ಕ್ವ ಗತಾವಿತಃ ॥ ೩೩ ॥

ಸೂತ ಉವಾಚ

ಕೃಪಯಾ ಸ್ನೇಹವೈಕ್ಲವ್ಯಾತ್ಸೂತೋ ವಿರಹಕರ್ಶಿತಃ ।
ಆತ್ಮೇಶ್ವರಮಚಕ್ಷಾಣೋ ನ ಪ್ರತ್ಯಾಹಾತಿಪೀಡಿತಃ ॥ ೩೪ ॥

ವಿಮೃಜ್ಯಾಶ್ರೂಣಿ ಪಾಣಿಭ್ಯಾಂ ವಿಷ್ಟಭ್ಯಾತ್ಮಾನಮಾತ್ಮನಾ ।
ಅಜಾತಶತ್ರುಂ ಪ್ರತ್ಯೂಚೇ ಪ್ರಭೋಃ ಪಾದಾವನುಸ್ಮರನ್ ॥ ೩೫ ॥

ಸಂಜಯ ಉವಾಚ

ನಾಹಂ ವೇದ ವ್ಯವಸಿತಂ ಪಿತ್ರೋರ್ವಃ ಕುಲನಂದನ ।
ಗಾಂಧಾರ್ಯಾ ವಾ ಮಹಾಬಾಹೋ ಮುಷಿತೋಽಸ್ಮಿ ಮಹಾತ್ಮಭಿಃ ॥ ೩೬ ॥

ಮುಂದೆ ಬರಲಿರುವ ಕಾಲವು ಪ್ರಾಯಶಃ ಮನುಷ್ಯರ ಗುಣಗಳ ಮಟ್ಟವನ್ನಿಳಿಸುವುದೇ ಆಗಿದೆ. ಆದ್ದರಿಂದ ನೀನು ತನ್ನ ಕುಟುಂಬದವರಿಗೆ ತಿಳಿಯದೆ ಉತ್ತರಾಖಂಡಕ್ಕೆ ಹೊರಟುಹೋಗು." ॥ ೨೭ ॥ ತಮ್ಮನಾದ ವಿದುರನು ಧೃತರಾಷ್ಟ್ರನಿಗೆ ಹೀಗೆ ತಿಳಿಸಿದಾಗ ಅವನ ಜ್ಞಾನದ ಕಣ್ಣು ತೆರೆಯಿತು. ಅವನು ಬಂಧು-ಬಾಂಧವ, ಮಿತ್ರರಲ್ಲಿದ್ದ ದೃಢವಾದ ಸ್ನೇಹಪಾಶವನ್ನು ಕತ್ತರಿಸಿ ತಮ್ಮನು ತೋರಿದ ಮಾರ್ಗವನ್ನನುಸರಿಸಿ ಹೊರಟು ಬಿಟ್ಟನು. ॥ ೨೮ ॥ ಶೂರರಿಗೆ ಧರ್ಮಯುದ್ಧದಲ್ಲಿ ಬೀಳುವ ಏಟುಗಳು ಸಂತೋಷವುಂಟು ಮಾಡುವಂತೆ, ಪತಿಯು ಸಂನ್ಯಾಸಿಗಳಿಗೆ ಪರಮಸುಖದಾಯಕ ಹಿಮಾಲಯದ ಯಾತ್ರೆಯನ್ನು ಕೈಗೊಂಡಿರುವುದನ್ನು ನೋಡಿ ಪತಿವ್ರತೆಯಾದ ಸುಬಲ ನಂದಿನೀ ಗಾಂಧಾರಿಯು ಪತಿಯನ್ನನುಸರಿಸಿ ಹೊರಟುಬಿಟ್ಟಳು. ॥ ೨೯ ॥

ಅಜಾತಶತ್ರುವಾದ ಯುಧಿಷ್ಠಿರನು ಪ್ರಾತಃಕಾಲ ಸಂಧ್ಯಾವಂದನೆ, ಅಗ್ನಿಹೋತ್ರಾದಿ ನಿತ್ಯಕರ್ಮಗಳನ್ನು ಪೂರೈಸಿ, ಬ್ರಾಹ್ಮಣರಿಗೆ ನಮಸ್ಕರಿಸಿ, ಅವರಿಗೆ ಎಳ್ಳು, ಗೋವು, ಭೂಮಿ, ಸುವರ್ಣ ಮುಂತಾದವುಗಳನ್ನು ದಾನಮಾಡಿದನು. ಅನಂತರ ಗುರು-ಹಿರಿಯರಿಗೆ ವಂದಿಸುವುದಕ್ಕಾಗಿ ಅರಮನೆಗೆ ಹೋಗಲು, ಅಲ್ಲಿ ಅವನಿಗೆ ಧೃತರಾಷ್ಟ್ರ, ವಿದುರ, ಗಾಂಧಾರಿಯರ ದರ್ಶನವಾಗಲಿಲ್ಲ. ॥ ೩೦ ॥ ಯುಧಿಷ್ಠಿರನು ಕಳವಳಗೊಂಡು ಅಲ್ಲೇ ಕುಳಿತಿದ್ದ ಸಂಜಯನನ್ನು – "ಸಂಜಯಾ! ವೃದ್ಧರೂ, ಅಂಧರೂ ಆದ ದೊಡ್ಡಪ್ಪ ಧೃತರಾಷ್ಟ್ರರೆಲ್ಲಿ? ॥ ೩೧ ॥ ಪುತ್ರಶೋಕದಿಂದ ಪೀಡಿತಳಾಗಿ ಕೊರಗುತ್ತಿದ್ದ ದೊಡ್ಡಮ್ಮ ಗಾಂಧಾರಿಯವರು, ಪರಮ ಹಿತೈಷಿಗಳಾದ ಚಿಕ್ಕಪ್ಪ ವಿದುರರು ಎಲ್ಲಿಗೆ ಹೋದರು? ದೊಡ್ಡಪ್ಪನವರು ತಮ್ಮ ಪುತ್ರರ-ಬಂಧುಗಳ ಮರಣದಿಂದ ದುಃಖಿಗಳಾಗಿದ್ದರು. ಮಂದಬುದ್ಧಿಯಾದ ನನ್ನಲ್ಲಿ ಏನಾದರೂ ತಪ್ಪನ್ನು ಶಂಕಿಸಿ ಅವರು ತಾಯಿ ಗಾಂಧಾರಿಯೊಂದಿಗೆ ಗಂಗಾನದಿಯಲ್ಲೇನಾದರೂ ಧುಮುಕಿಬಿಟ್ಟರೇ ? ॥ ೩೨ ॥ ನಮ್ಮ ತಂದೆ ಪಾಂಡುವು ಸ್ವರ್ಗಸ್ಥರಾದಾಗ ನಾವುಗಳು ಇನ್ನೂ ಸಣ್ಣ ಮಕ್ಕಳಾಗಿದ್ದೆವು. ಆಗ ಈ ದೊಡ್ಡಪ್ಪ-ಚಿಕ್ಕಪ್ಪ ಇವರುಗಳೇ ನಮ್ಮನ್ನು ನಾನಾ ದುಃಖಗಳಿಂದ ಪಾರುಗೊಳಿಸಿ, ಪ್ರೀತಿಯಿಂದ ಕಾಪಾಡಿದ್ದರು. ಅಯ್ಯೋ! ಅವರು ಈಗ ಎಲ್ಲಿಗೆ ಹೋದರೋ ತಿಳಿಯದಲ್ಲಾ !" ಎಂದು ಕೇಳಿದನು. ॥ ೩೩ ॥

ಸೂತಪುರಾಣಿಕರು ಹೇಳುತ್ತಾರೆ – ಶೌನಕರೇ! ಸಂಜಯನು ತನ್ನ ಪ್ರಭುವಾದ ಧೃತರಾಷ್ಟ್ರನನ್ನು ಕಾಣದೆ ಕರುಣೆ-ಸ್ನೇಹಗಳಿಂದ ಕುಗ್ಗಿ ಅಗಲಿಕೆಯ ದುಃಖದಿಂದ ಕೊರಗುತ್ತಾ ಯುಧಿಷ್ಠಿರನಿಗೆ ಯಾವ ಉತ್ತರವನ್ನೂ ಕೊಡದಾದನು. ॥ ೩೪ ॥ ಅನಂತರ ಕೈಗಳಿಂದ ಕಣ್ಣೀರಧಾರೆಯನ್ನು ಒರೆಸಿಕೊಂಡು, ಸ್ವಲ್ಪ-ಸ್ವಲ್ಪವಾಗಿ ತನಗೆ ತಾನೇ ಸಮಾಧಾನ ತಂದುಕೊಂಡು ತನ್ನ ಪ್ರಭುವಿನ ಪಾದಗಳನ್ನು ಸ್ಮರಿಸುತ್ತಾ ಯುಧಿಷ್ಠಿರನ ಬಳಿ ಇಂತೆಂದನು – ॥ ೩೫ ॥

ಸಂಜಯ ಹೇಳಿದನು – ಕುರುಕುಲನಂದನನೇ! ನಿಮ್ಮ ದೊಡ್ಡಪ್ಪ-ದೊಡ್ಡಮ್ಮನವರ ಸಂಕಲ್ಪವೇನಿತ್ತೋ! ಅವರೇನು ನಿಶ್ಚಯಿಸಿದ್ದರೋ? ನನಗೇನೂ ತಿಳಿಯದು. ಮಹಾಬಾಹುವೇ! ಮಹಾತ್ಮರು ನನಗೆ ಮೋಸಮಾಡಿ ಹೊರಟುಹೋದರು. ॥ ೩೬ ॥

ಅಥಾಜಗಾಮ ಭಗವಾನ್ನಾರದಃ ಸಹತುಂಬುರುಃ ।
ಪ್ರತ್ಯುತ್ಥಾಯಾಭಿವಾದ್ಯಾಹ ಸಾನುಜೋಽಭ್ಯರ್ಚಯನ್ನಿವ ॥ ೩೮ ॥

ಯುಧಿಷ್ಠಿರ ಉವಾಚ

ನಾಹಂ ವೇದ ಗತಿಂ ಪಿತ್ರೋರ್ಭಗವನ್ ಕ್ವ ಗತಾವಿತಃ ।
ಅಂಬಾ ವಾ ಹತಪುತ್ರಾರ್ತಾ ಕ್ವ ಗತಾ ಚ ತಪಸ್ವಿನೀ ॥ ೩೯ ॥

ಕರ್ಣಧಾರ ಇವಾಪಾರೇ ಭಗವಾನ್ಪಾರದರ್ಶಕಃ ।
ಅಥಾಬಭಾಷೇ ಭಗವಾನ್ನಾರದೋ ಮುನಿಸತ್ತಮಃ ॥ ೪೦ ॥

ಮಾ ಕಂಚನ ಶುಚೋ ರಾಜನ್ಯದೀಶ್ವರವಶಂ ಜಗತ್ ।
ಲೋಕಾಃ ಸಪಾಲಾ ಯಸ್ಯೇಮೇ ವಹಂತಿ ಬಲಿಮೀಶಿತುಃ ।
ಸ ಸಂಯುನಕ್ತಿ ಭೂತಾನಿ ಸ ಏವ ವಿಯುನಕ್ತಿ ಚ ॥ ೪೧ ॥

ಯಥಾ ಗಾವೋ ನಸಿ ಪ್ರೋತಾಸ್ತಂತ್ಯಾಂ ಬದ್ಧಾಃ ಸ್ವದಾಮಭಿಃ ।
ವಾಕ್ತಂತ್ಯಾಂ ನಾಮಭಿರ್ಬದ್ಧಾ ವಹಂತಿ ಬಲಿಮೀಶಿತುಃ ॥ ೪೨ ॥

ಯಥಾ ಕ್ರೀಡೋಪಸ್ಕರಾಣಾಂ ಸಂಯೋಗವಿಗಮಾವಿಹ ।
ಇಚ್ಛಯಾ ಕ್ರೀಡಿತುಃ ಸ್ಯಾತಾಂ ತಥೈವೇಶೇಚ್ಛಯಾ ನೃಣಾಮ್ ॥ ೪೩ ॥

ಯನ್ಮನ್ಯಸೇ ಧ್ರುವಂ ಲೋಕಮಧ್ರುವಂ ವಾ ನ ಚೋಭಯಮ್ ।
ಸರ್ವಥಾ ನ ಹಿ ಶೋಚ್ಯಾಸ್ತೇ ಸ್ನೇಹಾದನ್ಯತ್ರ ಮೋಹಜಾತ್ ॥ ೪೪ ॥

ತಸ್ಮಾಜ್ಜಹ್ಯಂಗ ವೈಕ್ಲವ್ಯಮಜ್ಞಾನಕೃತಮಾತ್ಮನಃ ।
ಕಥಂ ತ್ವನಾಥಾಃ ಕೃಪಣಾ ವರ್ತೇರಂಸ್ತೇ ಚ ಮಾಂ ವಿನಾ ॥ ೪೫ ॥

ಕಾಲಕರ್ಮಗುಣಾಧೀನೋ ದೇಹೋಽಯಂ ಪಾಂಚಭೌತಿಕಃ ।
ಕಥಮನ್ಯಾಂಸ್ತು ಗೋಪಾಯೇತ್ಸರ್ಪಗ್ರಸ್ತೋ ಯಥಾ ಪರಮ್ ॥ ೪೬ ॥

ಅಹಸ್ತಾನಿ ಸಹಸ್ತಾನಾಮಪದಾನಿ ಚತುಷ್ಪದಾಮ್ ।
ಫಲ್ಗೂನಿ ತತ್ರ ಮಹತಾಂ ಜೀವೋ ಜೀವಸ್ಯ ಜೀವನಮ್ ॥ ೪೭ ॥

ಸಂಜಯನು ಹೀಗೆ ಹೇಳುತ್ತಿರುವಂತೆಯೇ ತುಂಬುರು ಸಮೇತ ಪೂಜ್ಯರಾದ ದೇವರ್ಷಿನಾರದರು ಅಲ್ಲಿಗೆ ಆಗಮಿಸಿದರು. ಮಹಾರಾಜಾ ಧರ್ಮನಂದನನು ತಮ್ಮಂದಿರೊಂದಿಗೆ ಎದ್ದು ಅವರನ್ನು ವಂದಿಸಿ, ಯಥೋಚಿತವಾಗಿ ಪೂಜಿಸಿ, ಕೈಜೋಡಿಸಿಕೊಂಡು ಇಂತೆಂದನು – ॥ ೩೮ ॥

ಯುಧಿಷ್ಠಿರನೆಂದ – 'ಪೂಜ್ಯರೇ! ನಮ್ಮ ದೊಡ್ಡಪ್ಪ-ಚಿಕ್ಕಪ್ಪ ಇವರುಗಳ ಸಮಾಚಾರವಾಗಲೀ, ಅವರಿಬ್ಬರ ಹಾಗೂ ಪುತ್ರಶೋಕದಿಂದ ವ್ಯಾಕುಲಳಾದ ತಪಸ್ವಿನೀ ತಾಯಿ ಗಾಂಧಾರಿಯೂ ಇಲ್ಲಿಂದ ಎಲ್ಲಿಗೆ ಹೋದರೋ ಎಂಬ ಸಮಾಚಾರ ನನಗೆ ತಿಳಿಯದಾಗಿದೆ. ॥ ೩೯ ॥ ಮಹಾತ್ಮರೇ! ಅಪಾರವಾದ ಸಮುದ್ರದಲ್ಲಿ ದಡಮುಟ್ಟಿಸುವ ನಾವಿಕನಂತೆ ನೀವು ನಮ್ಮ ಭಾಗ್ಯೋದಯದಿಂದಲೇ ಇಲ್ಲಿಗೆ ಆಗಮಿಸಿದ್ದೀರಿ.' ಆಗ ಭಗವಂತನ ಪರಮಭಕ್ತರಾದ ನಾರದ ಮಹರ್ಷಿಗಳು ಇಂತೆಂದರು ॥ ೪೦ ॥

ಧರ್ಮರಾಜಾ! ನೀನು ಯಾರ ವಿಷಯದಲ್ಲಿಯೂ ಶೋಕಿಸಬಾರದು. ಏಕೆಂದರೆ, ಜಗತ್ತೆಲ್ಲವೂ ಈಶ್ವರಾಧೀನವಾಗಿದೆ. ಸಮಸ್ತ ಲೋಕಗಳೂ, ಲೋಕಪಾಲರೂ ಈ ಮಹಾಪ್ರಭುವಿನ ಆಣತಿಯಂತೆ ನಡೆಯುತ್ತವೆ. ಅವನೇ ಎಲ್ಲ ಪ್ರಾಣಿಗಳನ್ನು ಅವುಗಳ ಕರ್ಮಗಳಿಗೆ ಅನುಗುಣವಾಗಿ ಕೆಲವೊಮ್ಮೆ ಕೂಡಿಸುವನು. ಕೆಲವೊಮ್ಮೆ ಅಗಲಿಸುವನು. ॥ ೪೧ ॥ ಎತ್ತುಗಳು ಮೂಗಿನಲ್ಲಿ ಪೋಣಿಸಿದ ಮೂಗುದಾರಗಳಿಂದಲೂ, ಇತರ ದಪ್ಪಹಗ್ಗಗಳಿಂದ ಕಟ್ಟುಬಿದ್ದು ಅಲುಗಾಡಲೂ ಸ್ವಾತಂತ್ರ್ಯವಿಲ್ಲದೆ ತಮ್ಮ ಯಜಮಾನನ ಅಪ್ಪಣೆಯಂತೆ ನಡೆಯುವಂತೆಯೇ, ಮನುಷ್ಯನು ನಾಮ-ರೂಪಗಳೆಂಬ ಪಾಶಗಳಿಂದ, ಮಾತುಗಳೆಂಬ ತಂತುವಿನಲ್ಲಿ ಬಿಗಿಯಲ್ಪಟ್ಟು ಭಗವಂತನ ಆಜ್ಞೆಯಂತೆ ಅನುಸರಿಸುವರು. ॥ ೪೨ ॥ ■ ಲೋಕದಲ್ಲಿ ಆಟಗಾರನ ಇಷ್ಟದಂತೆ ಆಟಿಕೆಗಳು ಒಂದಾಗುತ್ತವೆ, ಬೇರ್ಪಡುತ್ತವೆ. ಹಾಗೆಯೇ ಭಗವಂತನ ಇಚ್ಛೆಯಿಂದಲೇ ಮನುಷ್ಯರ ಸೇರುವಿಕೆ, ಅಗಲುವಿಕೆ ಇವೆಲ್ಲಾ ಉಂಟಾಗುತ್ತಾ ಇರುತ್ತದೆ. ॥ ೪೩ ॥ ನೀವುಗಳು ಜೀವರೂಪದಿಂದ ನಿತ್ಯ ಅಥವಾ ದೇಹರೂಪದಿಂದ ಅನಿತ್ಯ, ಇಲ್ಲವೇ ಜಡರೂಪದಿಂದ ಅನಿತ್ಯ, ಚೇತನರೂಪದಿಂದ ನಿತ್ಯ, ಅಥವಾ ಶುದ್ಧಬ್ರಹ್ಮರೂಪದಲ್ಲಿ ನಿತ್ಯ-ಅನಿತ್ಯ ಏನನ್ನೂ ಭಾವಿಸದಿದ್ದರೂ, ಯಾವುದೇ ಅವಸ್ಥೆಯಲ್ಲಿಯೂ ಮೋಹಜನ್ಯ ಆಸಕ್ತಿಯಲ್ಲದೆ ಶೋಕಿಸಲು ಯಾವ ಕಾರಣವೂ ಇಲ್ಲ. ॥ ೪೪ ॥ ಆದುದರಿಂದ ಧರ್ಮನಂದನಾ! 'ಅನಾಥರೂ, ದೀನರೂ ಆಗಿರುವ ಅವರು ನನ್ನನ್ನು ಬಿಟ್ಟು ಹೇಗೆ ತಾನೇ ಬದುಕಿಯಾರು?' ಎಂಬ ಮನಸ್ಸಿನ ಕೊರಗನ್ನು ಬಿಡು. ಅದು ಅಜ್ಞಾನಮೂಲವಾಗಿದೆ. ॥ ೪೫ ॥ ಈ ಪಾಂಚಭೌತಿಕ ಶರೀರವು ಕಾಲ, ಕರ್ಮ, ಗುಣಗಳ ವಶದಲ್ಲಿದೆ. ಹೆಬ್ಬಾವಿನ ಬಾಯಲ್ಲಿ ಸಿಕ್ಕಿಬಿದ್ದಿರುವ ಮನುಷ್ಯನಂತೆ ಈ ಪರಾಧೀನ ಶರೀರವು ಬೇರೆಯವರನ್ನು ಹೇಗೆ ಕಾಪಾಡಬಲ್ಲದು ? ॥ ೪೬ ॥ ಲೋಕದಲ್ಲಿ ಕೈಗಳಿಲ್ಲದ ಪ್ರಾಣಿಗಳು ಕೈಗಳುಳ್ಳ ಪ್ರಾಣಿಗಳ ಆಹಾರವು. ನಾಲ್ಕು ಕಾಲುಗಳುಳ್ಳ ಪ್ರಾಣಿಗಳಿಗೆ ಕಾಲುಗಳಿಲ್ಲದವು (ತೃಣಾದಿ) ಮತ್ತು ಅವುಗಳಲ್ಲಿಯೂ ಸಣ್ಣಜೀವಿಗಳು ದೊಡ್ಡ ಜೀವಿಗಳ ಆಹಾರವಾಗಿದೆ. ॥ ೪೭ ॥

ತದಿದಂ ಭಗವಾನ್ರಾಜನ್ನೇಕ ಆತ್ಮಾಽಽತ್ಮನಾಂ ಸ್ವದೃಕ್ ।
ಅಂತರೋಽನಂತರೋ ಭಾತಿ ಪಶ್ಯ ತಂ ಮಾಯಯೋರುಧಾ ॥ ೪೭ ॥

ಸೋಽಯಮದ್ಯ ಮಹಾರಾಜ ಭಗವಾನ್ ಭೂತಭಾವನಃ ।
ಕಾಲರೂಪೋಽವತೀರ್ಣೋಽಸ್ಯಾಮಭಾವಾಯ ಸುರದ್ವಿಷಾಮ್ ॥ ೪೮ ॥

ನಿಷ್ಪಾದಿತಂ ದೇವಕೃತ್ಯಮವಶೇಷಂ ಪ್ರತೀಕ್ಷತೇ ।
ತಾವದ್ಯೂಯಮವೇಕ್ಷಧ್ವಂ ಭವೇದ್ಯಾವದಿಹೇಶ್ವರಃ ॥ ೪೯ ॥

ಧೃತರಾಷ್ಟ್ರಃ ಸಹ ಭ್ರಾತ್ರಾ ಗಾಂಧಾರ್ಯಾ ಚ ಸ್ವಭಾರ್ಯಯಾ ।
ದಕ್ಷಿಣೇನ ಹಿಮವತ ಋಷೀಣಾಮಾಶ್ರಮಂ ಗತಃ ॥ ೫೦ ॥

ಸ್ರೋತೋಭಿಃ ಸಪ್ತಭಿರ್ಯಾ ವೈ ಸ್ವರ್ಧುನೀ ಸಪ್ತಧಾ ವ್ಯಧಾತ್ ।
ಸಪ್ತಾನಾಂ ಪ್ರೀತಯೇ ನಾನಾ ಸಪ್ತಸ್ರೋತಃ ಪ್ರಚಕ್ಷತೇ ॥ ೫೧ ॥

ಸ್ನಾತ್ವಾನುಸವನಂ ತಸ್ಮಿನ್ಹುತ್ವಾ ಚಾಗ್ನೀನ್ಯಥಾವಿಧಿ ।
ಅಬ್ಭಕ್ಷ ಉಪಶಾಂತಾತ್ಮಾ ಸ ಆಸ್ತೇ ವಿಗತೈಷಣಃ ॥ ೫೨ ॥

ಜಿತಾಸನೋ ಜಿತಶ್ವಾಸಃ ಪ್ರತ್ಯಾಹೃತಷಡಿಂದ್ರಿಯಃ ।
ಹರಿಭಾವನಯಾ ಧ್ವಸ್ತರಜಃಸತ್ತ್ವತಮೋಮಲಃ ॥ ೫೩ ॥

ವಿಜ್ಞಾನಾತ್ಮನಿ ಸಂಯೋಜ್ಯ ಕ್ಷೇತ್ರಜ್ಞೇ ಪ್ರವಿಲಾಪ್ಯ ತಮ್ ।
ಬ್ರಹ್ಮಣ್ಯಾತ್ಮಾನಮಾಧಾರೇ ಘಟಾಂಬರಮಿವಾಂಬರೇ ॥ ೫೪ ॥

ಧ್ವಸ್ತಮಾಯಾಗುಣೋದರ್ಕೋ ನಿರುದ್ಧಕರಣಾಶಯಃ ।
ನಿವರ್ತಿತಾಖಿಲಾಹಾರ ಆಸ್ತೇ ಸ್ಥಾಣುರಿವಾಚಲಃ ।
ತಸ್ಯಾಂತರಾಯೋ ಮೈವಾಭೂಃ ಸಂನ್ಯಸ್ತಾಖಿಲಕರ್ಮಣಃ ॥ ೫೫ ॥

ಸ ವಾ ಅದ್ಯತನಾದ್ರಾಜನ್ಪರತಃ ಪಂಚಮೇಽಹನಿ ।
ಕಲೇವರಂ ಹಾಸ್ಯತಿ ಸ್ವಂ ತಚ್ಚ ಭಸ್ಮೀಭವಿಷ್ಯತಿ ॥ ೫೬ ॥

ಮಹಾರಾಜಾ! ಈ ಸಮಸ್ತ ರೂಪಗಳಲ್ಲಿ ಜೀವಿಗಳ ಒಳ-ಹೊರಗೆ ಇರುವವನೊಬ್ಬನೇ ಸ್ವಯಂಪ್ರಕಾಶ ಭಗವಂತನು ಸಮಸ್ತ ಆತ್ಮಗಳ ಆತ್ಮನಾಗಿರುವನು. ಮಾಯೆಯಿಂದಾಗಿ ಅನೇಕ ಪ್ರಕಾರದಿಂದ ಪ್ರಕಟನಾಗುತ್ತಿದ್ದಾನೆ. ನೀನು ಕೇವಲ ಅವನನ್ನೇ ನೋಡು. ॥ ೪೭ ॥ ಮಹಾರಾಜನೇ! ಸರ್ವಭೂತಗಳನ್ನು ಸೃಷ್ಟಿಸಿ, ರಕ್ಷಿಸುವ ಭೂತಭಾವನನಾದ ಕಾಲರೂಪಿಯಾದ ಆ ಭಗವಂತನೇ ಈಗ ದೇವದ್ರೋಹಿಗಳನ್ನು ಸಂಹರಿಸುವುದಕ್ಕಾಗಿ ಶ್ರೀಕೃಷ್ಣನ ರೂಪದಲ್ಲಿ ಅವತರಿಸಿರುವನು. ॥ ೪೮ ॥ ಈಗ ಅವನು ದೇವತೆಗಳ ಕಾರ್ಯವನ್ನು ಪೂರ್ಣಗೊಳಿಸಿರುವನು. ಇನ್ನು ಸ್ವಲ್ಪವೇ ಕೆಲಸ ಬಾಕಿ ಇರುವುದರಿಂದ ಅವನು ನಿಂತಿರುವನು. ಆ ಪ್ರಭುವು ಇಲ್ಲಿ ಇರುವ ತನಕ ನೀವುಗಳೂ ಅವನ ಪ್ರತೀಕ್ಷೆಮಾಡುತ್ತಾ ಕಾಲಕಳೆಯುತ್ತಾ ಇರಿ. ॥ ೪೯ ॥

ಧರ್ಮನಂದನಾ! ನಿಮ್ಮ ದೊಡ್ಡಪ್ಪನು ತಮ್ಮನೊಡನೆ ಹಾಗೂ ಪತ್ನಿಯೊಡನೆ ಈಗಾಗಲೇ ಹಿಮಾಲಯದ ದಕ್ಷಿಣಭಾಗದಲ್ಲಿ ದೇವಗಂಗೆಯು ಸಪ್ತರ್ಷಿಗಳಿಗೆ ಸಂತೋಷವನ್ನುಂಟುಮಾಡಲು ಏಳು ಧಾರೆಯಾಗಿ ವಿಭಾಗಗೊಂಡವಳಾಗಿ ಹರಿಯುವ 'ಸಪ್ತಸ್ರೋತ' (ಸಪ್ತರ್ಷಿಧಾಮ) ಎಂದು ಪ್ರಸಿದ್ಧವಾದ ಜಾಗದಲ್ಲಿ ಋಷಿಗಳ ಆಶ್ರಮಕ್ಕೆ ಹೊರಟುಹೋಗಿದ್ದಾನೆ. ॥ ೫೦-೫೧ ॥ ಅವನು ಅಲ್ಲಿ ತ್ರಿಕಾಲಸ್ನಾನ ಮಾಡಿ, ವಿಧಿಪೂರ್ವಕ ಅಗ್ನಿಹೋತ್ರವನ್ನು ಆಚರಿಸುತ್ತಾ, ಕೇವಲ ಜಲಾಹಾರಿಯಾಗಿ, ಪ್ರಶಾಂತನಾಗಿ ಸರ್ವಕಾಮನೆಗಳನ್ನು ತೊರೆದು ವಾಸಿಸುತ್ತಿದ್ದಾನೆ. ॥ ೫೨ ॥ ಅವನೀಗ ಆಸನ ಜಯವನ್ನು ಸಾಧಿಸಿ, ಪ್ರಾಣವಾಯುವನ್ನು ಹತೋಟಿಗೆ ತಂದುಕೊಂಡು, ತನ್ನ ಆರೂ ಇಂದ್ರಿಯಗಳನ್ನು ತಮ್ಮ ವಿಷಯಗಳಿಂದ ಹಿಂದಕ್ಕೆಳೆದುಕೊಂಡು ಭಗವಂತನ ಧಾರಣೆಯಿಂದ ತಮೋಗುಣ, ರಜೋಗುಣ ಮತ್ತು ಸತ್ತ್ವಗುಣ ಇವುಗಳ ಮಲಗಳನ್ನು ಕಳೆದುಕೊಂಡಿರುವನು. ॥ ೫೩ ॥ ಅವನು ಅಹಂಕಾರವನ್ನು ಬುದ್ಧ್ಯಾತ್ಮನಲ್ಲಿಯೂ, ಬುದ್ಧ್ಯಾತ್ಮನನ್ನು ಕ್ಷೇತ್ರಜ್ಞನಾದ ಜೀವಾತ್ಮನಲ್ಲಿಯೂ ಆ ಜೀವಾತ್ಮನನ್ನು ಘಟಾಕಾಶವು ಮಹಾಕಾಶದಲ್ಲಿ ಲೀನವಾಗುವಂತೆ ಸರ್ವಾಧಿಷ್ಠಾನವಾದ ಬ್ರಹ್ಮನಲ್ಲಿ ಒಂದಾಗಿ ಬಿಟ್ಟಿರುವನು. ಅವನು ತನ್ನ ಸಮಸ್ತ ಇಂದ್ರಿಯಗಳನ್ನೂ, ಮನಸ್ಸನ್ನೂ ತಡೆದು ವಿಷಯಗಳನ್ನು ಹೊರಗಿನಿಂದಲೇ ತಡೆಗಟ್ಟಿರುವನು. ಮಾಯೆಯ ಗುಣಗಳಿಂದ ಉಂಟಾಗುವ ಪರಿಣಾಮಗಳನ್ನು ಸರ್ವಥಾ ಇಲ್ಲವಾಗಿಸಿದ್ದಾನೆ. ಸಮಸ್ತ ಕರ್ಮಗಳನ್ನು ಸಂನ್ಯಾಸಮಾಡಿ ಈಗ ನೆಟ್ಟ ಕಂಬದಂತೆ ನಿಶ್ಚಲವಾಗಿ ಕುಳಿತಿರುವನು. ಆದ್ದರಿಂದ ನೀನು ಅವನ ಶ್ರೇಯಸ್ಸಿನಲ್ಲಿ ಅಡ್ಡಿಯಾಗಬೇಡ. * ॥ ೫೪-೫೫ ॥ ಧರ್ಮರಾಜಾ! ಇಂದಿನಿಂದ ಐದನೆಯ ದಿನ ಧೃತರಾಷ್ಟ್ರನು ತನ್ನ ಶರೀರವನ್ನು ತ್ಯಜಿಸಿಬಿಡುವನು. ಆ ದೇಹವು ಒಡನೆಯೇ ಸುಟ್ಟು ಬೂದಿಯಾಗುವುದು. ॥ ೫೬ ॥ ಗಾರ್ಹಪತ್ಯಾದಿ ಅಗ್ನಿಗಳ ಮೂಲಕ ಪರ್ಣಕುಟೀಯೊಂದಿಗೆ ಸುಡುತ್ತಿರುವ ತನ್ನ ಪತಿಯ

* ದೇವರ್ಷಿ ನಾರದರು ತ್ರಿಕಾಲದರ್ಶಿಗಳು. ಅವರು ಧೃತರಾಷ್ಟ್ರನ ಭವಿಷ್ಯ ಜೀವನವನ್ನು ವರ್ತಮಾನದಂತೆ, ಪ್ರತ್ಯಕ್ಷ ನೋಡುವವನಂತೆ ವರ್ಣಿಸುತ್ತಿದ್ದಾರೆ. ಧೃತರಾಷ್ಟ್ರನು ಹಿಂದಿನ ರಾತ್ರಿಯಲ್ಲೇ ಹಸ್ತಿನಾವತಿಯಿಂದ ಹೊರಟುಹೋಗಿದ್ದನು. ಆದ್ದರಿಂದ ಈ ವರ್ಣನೆಯು ಭವಿಷ್ಯವೆಂದು ತಿಳಿಯಬೇಕು.

ದಹ್ಯಮಾನೇಽಗ್ನಿಭಿರ್ದೇಹೇ ಪತ್ಯುಃ ಪತ್ನೀ ಸಹೋಟಜೇ ।
ಬಹಿಃ ಸ್ಥಿತಾ ಪತಿಂ ಸಾಧ್ವೀ ತಮಗ್ನಿಮನುವೇಕ್ಷ್ಯತಿ ॥ ೫೭ ॥

ವಿದುರಸ್ತು ತದಾಶ್ಚರ್ಯಂ ನಿಶಾಮ್ಯ ಕುರುನಂದನ ।
ಹರ್ಷಶೋಕಯುತಸ್ತಸ್ಮಾದ್ಗಂತಾ ತೀರ್ಥನಿಷೇವಕಃ ॥ ೫೮ ॥

ಇತ್ಯುಕ್ತ್ವಾಥಾರುಹತ್ಸ್ವರ್ಗಂ ನಾರದಃ ಸಹತುಂಬುರುಃ ।
ಯುಧಿಷ್ಠಿರೋ ವಚಸ್ತಸ್ಯ ಹೃದಿ ಕೃತ್ವಾಜಹಾಚ್ಛುಚಃ ॥ ೫೯ ॥

ಮೃತದೇಹವನ್ನು ಕಂಡು ಹೊರಗೆ ನಿಂತಿರುವ ಪತಿವ್ರತೆಯಾದ ಗಾಂಧಾರಿಯು ಪತಿಯನ್ನು ಅನುಸರಿಸಿ ಆ ಅಗ್ನಿಯನ್ನು ಪ್ರವೇಶಿಸುವಳು. ॥ ೫೭ ॥ ಧರ್ಮರಾಜಾ! ತನ್ನ ಅಣ್ಣನ ಆಶ್ಚರ್ಯಮಯ ಮೋಕ್ಷವನ್ನು ನೋಡಿದ ವಿದುರನು ಹರ್ಷಿತನಾಗಿ, ವಿಯೋಗವನ್ನು ಸಹಿಸದೆ ದುಃಖಿತನಾಗುತ್ತಾ, ಅಲ್ಲಿಂದ ತೀರ್ಥ ಯಾತ್ರೆಗಾಗಿ ಹೊರಟುಹೋಗುವನು. ॥ ೫೮ ॥ ದೇವ ಋಷಿ ನಾರದರು ಹೀಗೆ ಹೇಳಿ ತುಂಬುರುವಿನೊಡನೆ ಸ್ವರ್ಗಲೋಕಕ್ಕೆ ಹೊರಟುಹೋದರು. ಯುಧಿಷ್ಠಿರನು ಅವರ ಉಪದೇಶಗಳನ್ನು ಹೃದಯಂಗಮವಾಗಿಸಿಕೊಂಡು ಶೋಕ-ಮೋಹಗಳನ್ನು ತೊರೆದು ಬಿಟ್ಟನು. ॥ ೫೯ ॥

ಹದಿಮೂರನೆಯ ಅಧ್ಯಾಯವು ಮುಗಿಯಿತು. ॥ ೧೩ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಪ್ರಥಮಸ್ಕಂಧೇ
ತ್ರಯೋದಶೋಽಧ್ಯಾಯಃ ॥ ೧೩ ॥

ಹದಿನಾಲ್ಕನೆಯ ಅಧ್ಯಾಯ

ಅಪಶಕುನಗಳನ್ನು ಕಂಡು ಯುಧಿಷ್ಠಿರನ ಆಶಂಕೆ, ಅರ್ಜುನನು ದ್ವಾರಕೆಯಿಂದ ಮರಳಿದುದು –

ಸೂತ ಉವಾಚ

ಸಂಪ್ರಸ್ಥಿತೇ ದ್ವಾರಕಾಯಾಂ ಜಿಷ್ಣೌ ಬಂಧುದಿದೃಕ್ಷಯಾ ।
ಜ್ಞಾತುಂ ಚ ಪುಣ್ಯಶ್ಲೋಕಸ್ಯ ಕೃಷ್ಣಸ್ಯ [redacted] ವಿಚೇಷ್ಟಿತಮ್ ॥ ೧ ॥

ವ್ಯತೀತಾಃ ಕತಿಚಿನ್ಮಾಸಾಸ್ತದಾ ನಾಯಾತ್ತತೋಽರ್ಜುನಃ ।
ದದರ್ಶ ಘೋರರೂಪಾಣಿ ನಿಮಿತ್ತಾನಿ ಕುರೂದ್ವಹಃ ॥ ೨ ॥

ಕಾಲಸ್ಯ ಚ ಗತಿಂ ರೌದ್ರಾಂ ವಿಪರ್ಯಸ್ತರ್ತುಧರ್ಮಿಣಃ ।
ಪಾಪೀಯಸೀಂ ನೃಣಾಂ ವಾರ್ತಾಂ ಕ್ರೋಧಲೋಭಾನೃತಾತ್ಮನಾಮ್ ॥ ೩ ॥

ಜಿಹ್ಮಪ್ರಾಯಂ ವ್ಯವಹೃತಂ ಶಾಠ್ಯಮಿಶ್ರಂ ಚ ಸೌಹೃದಮ್ ।
ಪಿತೃಮಾತೃಸುಹೃದ್ಭ್ರಾತೃದಂಪತೀನಾಂ ಚ ಕಲ್ಕನಮ್ ॥ ೪ ॥

ನಿಮಿತ್ತಾನ್ಯತ್ಯರಿಷ್ಟಾನಿ ಕಾಲೇ ತ್ವನುಗತೇ ನೃಣಾಮ್ ।
ಲೋಭಾದ್ಯಧರ್ಮಪ್ರಕೃತಿಂ ದೃಷ್ಟ್ವೋವಾಚಾನುಜಂ ನೃಪಃ ॥ ೫ ॥

ಯುಧಿಷ್ಠಿರ ಉವಾಚ

ಸಂಪ್ರೇಷಿತೋ ದ್ವಾರಕಾಯಾಂ ಜಿಷ್ಣುರ್ಬಂಧುದಿದೃಕ್ಷಯಾ ।
ಜ್ಞಾತುಂ ಚ ಪುಣ್ಯಶ್ಲೋಕಸ್ಯ ಕೃಷ್ಣಸ್ಯ ಚ ವಿಚೇಷ್ಟಿತಮ್ ॥ ೬ ॥

ಸೂತಪುರಾಣಿಕರು ಹೇಳುತ್ತಾರೆ – ಎಲೈ ಶೌನಕಾದಿಗಳೇ! ದ್ವಾರಕೆಯಲ್ಲಿದ್ದ ನೆಂಟರಿಷ್ಟರನ್ನು ನೋಡಬರುವ ಬಯಕೆಯಿಂದಲೂ, ಪುಣ್ಯಕೀರ್ತಿಯಾದ ಭಗವಾನ್ ಶ್ರೀಕೃಷ್ಣನ ದಿವ್ಯಚೇಷ್ಟೆಗಳನ್ನು ವಿಶೇಷವಾಗಿ ತಿಳಿಯುವ ಅಪೇಕ್ಷೆಯಿಂದಲೂ ಅರ್ಜುನನು ದ್ವಾರಕೆಗೆ ಹೋಗಿದ್ದನು. ॥ ೧ ॥ ಅನೇಕ ತಿಂಗಳುಗಳು ಕಳೆದು ಹೋದರೂ ಅರ್ಜುನನು ಹಿಂದಿರುಗದಿದ್ದಾಗ, ಧರ್ಮರಾಜ ಯುಧಿಷ್ಠಿರನಿಗೆ ಭೀಕರವಾದ ಅಪಶಕುನಗಳು ಕಾಣಿಸತೊಡಗಿದವು. ॥ ೨ ॥ ಋತುಗಳ ಧರ್ಮಗಳು ಅದಲು-ಬದಲಾಗುವ ಭೀಕರವಾದ ಕಾಲದ ನಡೆಯನ್ನು ಅವನು ಕಂಡನು. ಜನರು ಜೀವನದಲ್ಲಿ ಕ್ರೋಧ, ದುರಾಸೆ, ಅಸತ್ಯಗಳಿಂದ ತುಂಬಿದವರಾಗಿ ತಮ್ಮ ಜೀವನ ನಿರ್ವಹಣೆಗಾಗಿ ಪಾಪದಿಂದ ತುಂಬಿದ ವ್ಯಾಪಾರ ಮಾಡತೊಡಗಿರುವರು. ॥ ೩ ॥ ಕಪಟ ವ್ಯವಹಾರ ಮಾಡುವುದೂ, ಕೃತ್ರಿಮವಾದ ಸ್ನೇಹವನ್ನು ತೋರುವುದೂ, ತಂದೆ-ತಾಯಿ, ಹತ್ತಿರದ ನೆಂಟರು, ಅಣ್ಣ-ತಮ್ಮಂದಿರು, ಪತಿ-ಪತ್ನಿಯರು ಪರಸ್ಪರ ಜಗಳಗಂಟರಾಗುವುದನ್ನು ಕಂಡನು. ॥ ೪ ॥ ಕಲಿಕಾಲವು ಬಂದಿದ್ದರಿಂದ ಜನರ ಸ್ವಭಾವವೇ ಲೋಭ, ದಂಭವೇ ಮುಂತಾದ ಅಧರ್ಮಗಳಿಂದ ಕೂಡಿರುವುದನ್ನು ನೋಡಿದನು. ಪ್ರಕೃತಿಯಲ್ಲಿಯೂ ಅತ್ಯಂತ ಅರಿಷ್ಟಸೂಚಕ ಅಪಶಕುನಗಳು ಆಗತೊಡಗಿದವು. ಇದೆಲ್ಲವನ್ನು ನೋಡಿದ ಧರ್ಮರಾಯನು ತಮ್ಮನಾದ ಭೀಮಸೇನನಲ್ಲಿ ಹೀಗೆ ಹೇಳಿದನು – ॥ ೫ ॥

ಯುಧಿಷ್ಠಿರನೆಂದ – "ಭೀಮಸೇನ! 'ಬಂಧುಗಳ ಯೋಗ-ಕ್ಷೇಮಗಳನ್ನು ವಿಚಾರಿಸಿಕೊಂಡು, ಪುಣ್ಯಕೀರ್ತಿಯಾದ ಶ್ರೀಕೃಷ್ಣನು ಯಾವ ಲೀಲೆಗಳನ್ನು ಮಾಡುತ್ತಿದ್ದಾನೆಂಬುದನ್ನು ತಿಳಿದು ಬಾ' – ಎಂದು ನಾವು ಅರ್ಜುನನನ್ನು ದ್ವಾರಕೆಗೆ ಕಳುಹಿಸಿದ್ದೆವು. ॥ ೬ ॥

ಗತಾಃ ಸಪ್ತಾಧುನಾ ಮಾಸಾ ಭೀಮಸೇನ ತವಾನುಜಃ ।
ನಾಯಾತಿ ಕಸ್ಯ ವಾ ಹೇತೋರ್ನಾಹಂ ವೇದೇದಮಂಜಸಾ ॥ ೭ ॥

ಅಪಿ ದೇವರ್ಷಿಣಾಽಽದಿಷ್ಟಃ ಸ ಕಾಲೋಽಯಮುಪಸ್ಥಿತಃ ।
ಯದಾತ್ಮನೋಽಽಂಗಮಾಕ್ರೀಡಂ ಭಗವಾನುತ್ಸಿಸೃಕ್ಷತಿ ॥ ೮ ॥

ಯಸ್ಮಾನ್ನಃ ಸಂಪದೋ ರಾಜ್ಯಂ ದಾರಾಃ ಪ್ರಾಣಾಃ ಕುಲಂ ಪ್ರಜಾಃ ।
ಆಸನ್ಸಪತ್ನವಿಜಯೋ ಲೋಕಾಶ್ಚ ಯದನುಗ್ರಹಾತ್ ॥ ೯ ॥

ಪಶ್ಯೋತ್ಪಾತಾನ್ನರವ್ಯಾಘ್ರ ದಿವ್ಯಾನ್ಭೌಮಾನ್ಸದೈಹಿಕಾನ್ ।
ದಾರುಣಾನ್ಶಂಸತೋಽದೂರಾದ್ಭಯಂ ನೋ ಬುದ್ಧಿಮೋಹನಮ್ ॥ ೧೦ ॥

ಊರ್ವಕ್ಷಿಬಾಹವೋ ಮಹ್ಯಂ ಸ್ಫುರಂತ್ಯಂಗ ಪುನಃ ಪುನಃ ।
ವೇಪಥುಶ್ಚಾಪಿ ಹೃದಯೇ ಆರಾದ್ದಾಸ್ಯಂತಿ ವಿಪ್ರಿಯಮ್ ॥ ೧೧ ॥

ಶಿವೈಷೋದ್ಯಂತಮಾದಿತ್ಯಮಭಿರೌತ್ಯನಲಾನನಾ ।
ಮಾಮಂಗ ಸಾರಮೇಯೋಽಯಮಭಿರೇಭತ್ಯಭೀರುವತ್ ॥ ೧೨ ॥

ಶಸ್ತಾಃ ಕುರ್ವಂತಿ ಮಾಂ ಸವ್ಯಂ ದಕ್ಷಿಣಂ ಪಶವೋಽಪರೇ ।
ವಾಹಾಂಶ್ಚ ಪುರುಷವ್ಯಾಘ್ರ ಲಕ್ಷಯೇ ರುದತೋ ಮಮ ॥ ೧೩ ॥

ಮೃತ್ಯುದೂತಃ ಕಪೋತೋಽಯಮುಲೂಕಃ ಕಂಪಯನ್ಮನಃ ।
ಪ್ರತ್ಯುಲೂಕಶ್ಚ ಕುಹ್ವಾನೈರನಿದ್ರೌ ಶೂನ್ಯಮಿಚ್ಛತಃ ॥ ೧೪ ॥

ಧೂಮ್ರಾ ದಿಶಃ ಪರಿಧಯಃ ಕಂಪತೇ ಭೂಃ ಸಹಾದ್ರಿಭಿಃ ।
ನಿರ್ಘಾತಶ್ಚ ಮಹಾಂಸ್ತಾತ ಸಾಕಂ ಚ ಸ್ತನಯಿತ್ನುಭಿಃ ॥ ೧೫ ॥

ವಾಯುರ್ವಾತಿ ಖರಸ್ಪರ್ಶೋ ರಜಸಾ ವಿಸೃಜಂಸ್ತಮಃ ।
ಅಸೃಗ್ ವರ್ಷಂತಿ ಜಲದಾ ಬೀಭತ್ಸಮಿವ ಸರ್ವತಃ ॥ ೧೬ ॥

ಅವನು ಅಲ್ಲಿಗೆ ಹೋಗಿ ಇಂದಿಗೆ ಏಳು ತಿಂಗಳುಗಳು ಕಳೆದುವು. ಇನ್ನೂ ಸಮಾಚಾರವಾವುದೂ ಅವನೇಕೆ ಹಿಂದಿರುಗಿಲ್ಲವೆಂಬುದು ಸರಿಯಾಗಿ ತಿಳಿಯುತ್ತಿಲ್ಲವಲ್ಲಾ! ॥ ೭ ॥ ಭಗವಂತನಾದ ಶ್ರೀಕೃಷ್ಣ ಪರಮಾತ್ಮನು ತನ್ನ ಮನುಷ್ಯಲೀಲೆಗಳಿಗೆ ಆಧಾರವಾಗಿರುವ ಮಾನುಷದೇಹವನ್ನು ಉಪಸಂಹಾರ ಮಾಡಿಕೊಳ್ಳಲು ಬಯಸುವ ಕಾಲ ಬರುತ್ತಿದೆಯೆಂದು ದೇವರ್ಷಿ ನಾರದರು ಸೂಚಿಸಿದ್ದರು. ಆ ಕಾಲವು ಬಂದುಬಿಟ್ಟಿಲ್ಲ ತಾನೇ! ॥ ೮ ॥ ಯಾವನ ಅನುಗ್ರಹದಿಂದಲೇ ನಮಗೆ ಸಂಪತ್ತು, ರಾಜ್ಯ, ಪತ್ನಿ, ಪ್ರಾಣ, ಕುಲ, ಪ್ರಜೆಗಳು, ಶತ್ರುವಿಜಯ ಇವೆಲ್ಲವೂ ದೊರೆತವೋ, ಆ ಸ್ವಾಮಿಯು ತನ್ನ ದೇಹವನ್ನು ಉಪಸಂಹಾರಮಾಡಿಕೊಳ್ಳುವ ಸಮಯವು ಬಂದಿಲ್ಲ ತಾನೇ? ॥ ೯ ॥ ನರೋತ್ತಮನೇ! ಆಕಾಶದಲ್ಲಿ ಉಲ್ಕಾಪಾತವೇ ಮೊದಲಾದವುಗಳು, ಭೂಮಿಯಲ್ಲಿ ಭೂಕಂಪವೇ ಮುಂತಾದವುಗಳು, ಶರೀರದಲ್ಲಿ ರೋಗಗಳೇ ಮುಂತಾದ ಅಪಶಕುನಗಳು ಕಾಣಸುತ್ತಿರುವುದನ್ನು ನೋಡು. ಇವು ಶೀಘ್ರವಾಗಿಯೇ ನಮ್ಮ ಬುದ್ಧಿಗೆ ಮೋಹವನ್ನುಂಟುಮಾಡುವ ಯಾವುದೋ ಉತ್ಪಾತವುಂಟಾಗುವುದೆಂಬುದನ್ನು ಸೂಚಿಸುತ್ತವೆ. ॥ ೧೦ ॥ ಪ್ರಿಯ ಭೀಮಸೇನಾ! ನನ್ನ ಎಡತೊಡೆ, ಎಡಗಣ್ಣು ಮತ್ತು ಎಡತೋಳುಗಳು ಮತ್ತೆ-ಮತ್ತೆ ಅದುರುತ್ತಿದ್ದು ಹೃದಯವೂ ನಡುಗುತ್ತಿದೆ. ಅತ್ಯಲ್ಪ ಕಾಲದಲ್ಲಿಯೇ ಯಾವುದೋ ಅಪ್ರಿಯವಾದ ಸಮಾಚಾರ ಬರಲಿದೆಯೆಂಬುದನ್ನು ಇವು ಹೇಳುತ್ತಿವೆ ॥ ೧೧ ॥ ನೋಡು! ಆ ಹೆಣ್ಣು ನರಿಯು ಉದಯವಾಗುತ್ತಲೇ ಸೂರ್ಯನ ಕಡೆಗೆ ನೋಡುತ್ತಾ ಊಳಿಡುತ್ತಿದೆ. ಅದರ ಬಾಯಿಂದ ಬೆಂಕಿಯ ಜ್ವಾಲೆಯೂ ಬರುತ್ತಿದೆಯಲ್ಲಾ! ಆ ನಾಯಿಯು ತನಗಾವ ಭಯವೂ ಇಲ್ಲವೇನೋ ಎಂಬಂತೆ ನನ್ನ ಕಡೆ ನೋಡಿ ಬೊಗಳುತ್ತಿದೆ. ॥ ೧೨ ॥ ಓ ಪುರುಷಶ್ರೇಷ್ಠನೇ! ಹಸುವೇ ಮುಂತಾದ ಉತ್ತಮ ಪಶುಗಳು ನನ್ನನ್ನು ತಮ್ಮ ಎಡಗಡೆಗೆ ಬಿಟ್ಟುಕೊಂಡು ಅಪ್ರದಕ್ಷಿಣಾಕಾರವಾಗಿಯೂ, ಕತ್ತೆಯೇ ಮುಂತಾದ ಅಶುಭವಾದ ಪ್ರಾಣಿಗಳು ನನ್ನನ್ನು ತಮ್ಮ ಬಲಗಡೆಗೆ ಬಿಟ್ಟುಕೊಂಡು ಪ್ರದಕ್ಷಿಣಾಕಾರವಾಗಿಯೂ ಸುತ್ತುತ್ತಿವೆ. ನನ್ನ ಕುದುರೆಯೇ ಮುಂತಾದ ವಾಹನಗಳು ಅಳುತ್ತಿರುವಂತೆ ನನಗೆ ಕಾಣಿಸುತ್ತಿದೆ. ॥ ೧೩ ॥ ಮೃತ್ಯುವಿನ ದೂತನಂತಿರುವ ಪಾರಿವಾಳ, ಗೂಬೆ ಮತ್ತು ಗೂಬೆಯ ಶತ್ರುಗಳಾದ ಕಾಗೆಗಳು ರಾತ್ರಿಯ ವೇಳೆಯಲ್ಲಿ ಕರ್ಣಕಠೋರವಾದ ಶಬ್ದಗಳಿಂದ ನನ್ನ ಮನಸ್ಸನ್ನು ನಡುಗಿಸುತ್ತಾ ಶೂನ್ಯವಾಗಿಸಲು ಬಯಸುತ್ತಿವೆ. ಸ್ವತಃ ತಾವೂ ಸುಖವಾಗಿ ನಿದ್ರಿಸುವುದಿಲ್ಲ, ಹಾಗೂ ಬೇರೆಯವರ ನಿದ್ರೆಯನ್ನೂ ಹಾಳುಮಾಡುತ್ತಿವೆ. ॥ ೧೪ ॥ ದಿಕ್ಕುಗಳು ಹೊಗೆಯು ತುಂಬಿದಂತೆ ಕಪ್ಪುಬಣ್ಣವನ್ನು ತಾಳಿವೆ. ಸೂರ್ಯ ಮತ್ತು ಚಂದ್ರರ ಸುತ್ತಲೂ ಮಂಡಲಗಳು ಬಾರಿ-ಬಾರಿಗೂ ಕಾಣಿಸಿಕೊಳ್ಳುತ್ತಿವೆ. ಭೂಮಿಯು ಪರ್ವತಸಹಿತವಾಗಿ ನಡುಗುತ್ತಿದೆ. ಮೋಡಗಳು ಜೋರಾಗಿ ಗುಡುಗುತ್ತಿದ್ದು ಮಿಂಚು-ಸಿಡಿಲುಗಳು ಮತ್ತೆ ಮತ್ತೆ ಕಾಣಿಸಿಕೊಳ್ಳುತ್ತಿವೆ. ॥ ೧೫ ॥ ಶರೀರವನ್ನು ಕೊರೆಯುವ ಬಿರುಗಾಳಿಯು ಧೂಳಿನಿಂದ ಕತ್ತಲೆಯನ್ನು ಹರಡುತ್ತಾ ಬೀಸುತ್ತಿದೆ. ಮೇಘಗಳು ಎಲ್ಲೆಡೆಗಳಲ್ಲಿ ಬೀಭತ್ಸವನ್ನುಂಟುಮಾಡುತ್ತಾ ರಕ್ತವನ್ನು ಸುರಿಸುತ್ತಿವೆ. ॥ ೧೬ ॥ ಸೂರ್ಯ-ಚಂದ್ರ

ಸೂರ್ಯಂ ಹತಪ್ರಭಂ ಪಶ್ಯ ಗ್ರಹಮರ್ದಂ ಮಿಥೋ ದಿವಿ ।
ಸಸಂಕುಲೈರ್ಭೂತಗಣೈರ್ಜ್ವಲಿತೇ ಇವ ರೋದಸೀ ॥ ೧೭ ॥

ನದ್ಯೋ ನದಾಶ್ಚ ಕ್ಷುಭಿತಾಃ ಸರಾಂಸಿ ಚ ಮನಾಂಸಿ ಚ ।
ನ ಜ್ವಲತ್ಯಗ್ನಿರಾಜ್ಯೇನ ಕಾಲೋಽಯಂ ಕಿಂ ವಿಧಾಸ್ಯತಿ ॥ ೧೮ ॥

ನ ಪಿಬಂತಿ ಸ್ತನಂ ವತ್ಸಾ ನ ದುಹ್ಯಂತಿ ಚ ಮಾತರಃ ।
ರುದಂತ್ಯಶ್ರುಮುಖಾ ಗಾವೋ ನ ಹೃಷ್ಯಂತ್ಯೃಷಭಾ ವ್ರಜೇ ॥ ೧೯ ॥

ದೈವತಾನಿ ರುದಂತೀವ ಸ್ವಿದ್ಯಂತಿ ಹ್ಯುಚ್ಚಲಂತಿ ಚ ।
ಇಮೇ ಜನಪದಾ ಗ್ರಾಮಾಃ ಪುರೋದ್ಯಾನಾಕರಾಶ್ರಮಾಃ ।
ಭ್ರಷ್ಟಶ್ರಿಯೋ ನಿರಾನಂದಾಃ ಕಿಮಘಂ ದರ್ಶಯಂತಿ ನಃ ॥ ೨೦ ॥

ಮನ್ಯ ಏತೈರ್ಮಹೋತ್ಪಾತೈರ್ನೂನಂ ಭಗವತಃ ಪದೈಃ ।
ಅನನ್ಯಪುರುಷಶ್ರೀಭಿರ್ಹೀನಾ ಭೂರ್ಹತಸೌಭಗಾ ॥ ೨೧ ॥

ಇತಿ ಚಿಂತಯತಸ್ತಸ್ಯ ದೃಷ್ಟಾರಿಷ್ಟೇನ ಚೇತಸಾ ।
ರಾಜ್ಞಃ ಪ್ರತ್ಯಾಗಮದ್ಬ್ರಹ್ಮನ್ ಯದುಪುರ್ಯಾಃ ಕಪಿಧ್ವಜಃ ॥ ೨೨ ॥

ತಂ ಪಾದಯೋರ್ನಿಪತಿತಮಯಥಾಪೂರ್ವಮಾತುರಮ್ ।
ಅಧೋವದನಮಬ್ಬಿಂದೂನ್ ಸೃಜಂತಂ ನಯನಾಬ್ಜಯೋಃ ॥ ೨೩ ॥

ವಿಲೋಕ್ಯೋದ್ವಿಗ್ನಹೃದಯೋ ವಿಚ್ಛಾಯಮನುಜಂ ನೃಪಃ ।
ಪೃಚ್ಛತಿ ಸ್ಮ ಸುಹೃನ್ಮಧ್ಯೇ ಸಂಸ್ಮರನ್ನಾರದೇರಿತಮ್ ॥ ೨೪ ॥

ಯುಧಿಷ್ಠಿರ ಉವಾಚ

ಕಚ್ಚಿದಾನರ್ತಪುರ್ಯಾಂ ನಃ ಸ್ವಜನಾಃ ಸುಖಮಾಸತೇ ।
ಮಧುಭೋಜದಶಾರ್ಹಾರ್ಹಸಾತ್ವತಾಂಧಕವೃಷ್ಣಯಃ ॥ ೨೫ ॥

ಶೂರೋ ಮಾತಾಮಹಃ ಕಚ್ಚಿತ್ ಸ್ವಸ್ತ್ಯಾಸ್ತೇ ವಾಥ ಮಾರಿಷಃ ।
ಮಾತುಲಃ ಸಾನುಜಃ ಕಚ್ಚಿತ್ಕುಶಲ್ಯಾನಕದುಂದುಭಿಃ ॥ ೨೬ ॥

ಸಪ್ತ ಸ್ವಸಾರಸ್ತತ್ಪತ್ನ್ಯೋ ಮಾತುಲಾನ್ಯಃ ಸಹಾತ್ಮಜಾಃ ।
ಆಸತೇ ಸಸ್ನುಷಾಃ ಕ್ಷೇಮಂ ದೇವಕೀಪ್ರಮುಖಾಃ ಸ್ವಯಮ್ ॥ ೨೭ ॥

ಪ್ರಭೆಗಳು ಮಂಕಾಗಿಬಿಟ್ಟಿವೆ. ಆಕಾಶದಲ್ಲಿ ಗ್ರಹಗಳು ಒಂದಕ್ಕೊಂದು ಘರ್ಷಣೆ ಹೊಂದುತ್ತಿವೆ. ಭೂತಗಣಗಳು ಒಟ್ಟಾಗಿ ಗುಂಪುಗೂಡಿ ಭೂಮಿ-ಆಕಾಶಗಳಲ್ಲಿ ಬೆಂಕಿಹಚ್ಚಿರುವಂತೆ ಕಾಣುತ್ತಿದೆಯಲ್ಲಾ! ॥ ೧೭ ॥ ನದಿಗಳೂ, ನದಗಳೂ, ಸರೋವರಗಳೂ, ಮತ್ತು ಅಂತೆಯೇ ಜನರ ಮನಸ್ಸುಗಳೂ ಕಲಕಿಹೋಗುತ್ತಿವೆ. ತುಪ್ಪದ ಧಾರೆಯನ್ನು ಸುರಿದರೂ ಅಗ್ನಿಯು ಉರಿಯುತ್ತಿಲ್ಲ. ಈ ಎಲ್ಲ ಅಶುಭಲಕ್ಷಣಗಳಿಂದ ಕೂಡಿದ ಕಾಲವು ಏನು ಫಲವನ್ನು ತರುತ್ತದೆಯೋ ಕಾಣೆ. ॥ ೧೮ ॥ ಎಳೆಯ ಕರುಗಳು ತಾಯಿಯ ಹಾಲನ್ನೂ ಕುಡಿಯುತ್ತಿಲ್ಲ; ಹಸುಗಳೂ ಅವುಗಳಿಗೆ ಹಾಲನ್ನು ಕೊಡುತ್ತಿಲ್ಲ. ಗೋಶಾಲೆಯಲ್ಲಿ ಗೋವುಗಳು ಕಣ್ಣೀರುಗರೆಯುತ್ತಿವೆ. ಹಾಗೆಯೇ ಕೊಟ್ಟಿಗೆಯಲ್ಲಿ ಎತ್ತುಗಳೂ ಸಂತೋಷಪಡುತ್ತಿಲ್ಲ. ॥ ೧೯ ॥ ದೇವತಾಮೂರ್ತಿಗಳು ಅಳುತ್ತಿವೆಯೋ ಎಂಬಂತಿವೆ. ಬೆವರು ಸುರಿಸುತ್ತಿದ್ದು ಅಲುಗಾಡುತ್ತಿರುವಂತೆಯೂ ಕಾಣುತ್ತಿವೆ. ಈ ದೇಶಗಳೂ, ಹಳ್ಳಿಗಳೂ, ಪಟ್ಟಣಗಳೂ, ಉದ್ಯಾನವನಗಳೂ, ಗಣಿಗಳೂ ಮತ್ತು ಆಶ್ರಮಗಳೂ ಕಾಂತಿಹೀನವಾಗಿ ಆನಂದರಹಿತವಾಗಿವೆ. ಇವೆಲ್ಲ ಯಾವ ಕಷ್ಟವನ್ನು ಸೂಚಿಸುತ್ತವೆಯೋ ತಿಳಿಯದಾಗಿದೆ. ॥ ೨೦ ॥ ಈ ದೊಡ್ಡ-ದೊಡ್ಡ ಉತ್ಪಾತಗಳನ್ನು ನೋಡಿದರೆ ಭೂದೇವಿಯು ಅಸಾಧಾರಣವಾದ ದಿವ್ಯಲಕ್ಷಣಗಳಿಂದ ಅಲಂಕೃತವಾದ ಶ್ರೀಭಗವಂತನ ಅಡಿದಾವರೆಗಳನ್ನಗಲಿ ತನ್ನ ಎಲ್ಲ ಸೌಭಾಗ್ಯಗಳನ್ನೂ ಕಳೆದುಕೊಂಡು ಬಿಟ್ಟಿರುವಳೋ ಏನೋ!" ॥ ೨೧ ॥

ಶೌನಕರೇ! ಮಹಾರಾಜ ಯುಧಿಷ್ಠಿರನು ಆ ಭಯಂಕರವಾದ ಉತ್ಪಾತಗಳನ್ನು ನೋಡಿ ಮನಸ್ಸಿನಲ್ಲಿ ಚಿಂತಿಸುತ್ತಿರುವಾಗಲೇ ಅರ್ಜುನನು ದ್ವಾರಕೆಯಿಂದ ಹಿಂದಿರುಗಿ ಬಂದನು. ಬಂದೊಡನೆಯೇ ಕಾಲಿಗೆ ಬಿದ್ದು ನಮಸ್ಕಾರ ಮಾಡಿದ ಅರ್ಜುನನು ಹಿಂದೆಂದೂ ಕಾಣದ ರೀತಿಯಲ್ಲಿ ಮಹಾದುಃಖದಿಂದ ಮುಖವನ್ನು ತಗ್ಗಿಸಿಕೊಂಡು ಕಣ್ಣೀರುಸುರಿಸುತ್ತಾ ಕಳೆಗುಂದಿರುವುದನ್ನು ಕಂಡು ಧರ್ಮರಾಜನಿಗೆ ಮಿತಿಮೀರಿದ ಗಾಬರಿಯುಂಟಾಯಿತು. ಆತನು ನಾರದರು ಹೇಳಿದ್ದ ಮಾತನ್ನೇ ಸ್ಮರಿಸುತ್ತಾ ಅಲ್ಲಿ ನೆರೆದಿದ್ದ ಬಂಧು-ಮಿತ್ರರ ಮಧ್ಯದಲ್ಲಿಯೇ ಅರ್ಜುನನನ್ನು ಹೀಗೆ ಪ್ರಶ್ನಿಸಿದನು. ॥ ೨೨-೨೪ ॥

ಯುಧಿಷ್ಠಿರನು ಹೇಳಿದನು – "ಅರ್ಜುನಾ! ದ್ವಾರಕಾನಗರಿಯಲ್ಲಿ ನಮ್ಮ ನೆಂಟರಿಷ್ಟರಾದ ಮಧು, ಭೋಜ, ದಶಾರ್ಹ, ಆರ್ಹ, ಸಾತ್ವತ, ಅಂಧಕ ಮತ್ತು ವೃಷ್ಣಿಗಳೇ ಮುಂತಾದ ಯಾದವರೆಲ್ಲಾ ಸುಖವಾಗಿದ್ದಾರಷ್ಟೇ! ॥ ೨೫ ॥ ನಮ್ಮ ಮಾನ್ಯ ಮಾತಾಮಹನಾದ ಶೂರಸೇನಮಹಾರಾಜನು ಕುಶಲವಾಗಿದ್ದಾನೆಯೇ? ಸೋದರಮಾವನಾದ ವಸುದೇವನೂ ಮತ್ತು ಅವನ ತಮ್ಮನೂ ಕ್ಷೇಮವೇ? ॥ ೨೬ ॥ ಅವನ ಪತ್ನಿಯರೂ, ನಮ್ಮ ಸೋದರತ್ತೆಯರೂ ಆದ ದೇವಕಿಯೇ ಮುಂತಾದ ಏಳುಮಂದಿ ಸೋದರಿಯರೂ ತಮ್ಮ ಪುತ್ರರೊಡನೆಯೂ, ಸೊಸೆಯಂದಿರೊಡನೆಯೂ ಸೌಖ್ಯವಾಗಿದ್ದಾರೆಯೇ? ॥ ೨೭ ॥ ದುಷ್ಟನಾಗಿದ್ದ ಕಂಸನ ತಂದೆ ಉಗ್ರಸೇನ ಮಹಾರಾಜನು ತನ್ನ ತಮ್ಮ ದೇವಕನೊಡನೆ ಕುಶಲವಾಗಿದ್ದಾನೆಯೇ? ಹಾಗೆಯೇ

ಕಚ್ಚಿದ್ರಾಜಾಽಽಹುಕೋ ಜೀವತ್ಯಸತ್ಪುತ್ರೋಽಸ್ಯ ಚಾನುಜಃ ।
ಹೃದೀಕಃ ಸಸುತೋಽಕ್ರೂರೋ ಜಯಂತಗದಸಾರಣಾಃ ॥ ೨೮ ॥

ಆಸತೇ ಕುಶಲಂ ಕಚ್ಚಿದ್ಯೇ ಚ ಶತ್ರುಜಿದಾದಯಃ ।
ಕಚ್ಚಿದಾಸ್ತೇ ಸುಖಂ ರಾಮೋ ಭಗವಾನ್ಸಾತ್ವತಾಂ ಪ್ರಭುಃ ॥ ೨೯ ॥

ಪ್ರದ್ಯುಮ್ನಃ ಸರ್ವವೃಷ್ಣೀನಾಂ ಸುಖಮಾಸ್ತೇ ಮಹಾರಥಃ ।
ಗಂಭೀರರಯೋಽನಿರುದ್ಧೋ ವರ್ಧತೇ ಭಗವಾನುತ ॥ ೩೦ ॥

ಸುಷೇಣಶ್ಚಾರುದೇಷ್ಣಶ್ಚ ಸಾಂಬೋ ಜಾಂಬವತೀಸುತಃ ।
ಅನ್ಯೇ ಚ ಕಾರ್ಷ್ಣಿಪ್ರವರಾಃ ಸಪುತ್ರಾ ಋಷಭಾದಯಃ ॥ ೩೧ ॥

ತಥೈವಾನುಚರಾಃ ಶೌರೇಃ ಶ್ರುತದೇವೋದ್ಧವಾದಯಃ ।
ಸುನಂದನಂದಶೀರ್ಷಣ್ಯಾ ಯೇ ಚಾನ್ಯೇ ಸಾತ್ವತರ್ಷಭಾಃ ॥ ೩೨ ॥

ಅಪಿ ಸ್ವಸ್ತ್ಯಾಸತೇ ಸರ್ವೇ ರಾಮಕೃಷ್ಣಭುಜಾಶ್ರಯಾಃ ।
ಅಪಿ ಸ್ಮರಂತಿ ಕುಶಲಮಸ್ಮಾಕಂ ಬದ್ಧಸೌಹೃದಾಃ ॥ ೩೩ ॥

ಭಗವಾನಪಿ ಗೋವಿಂದೋ ಬ್ರಹ್ಮಣ್ಯೋ ಭಕ್ತವತ್ಸಲಃ ।
ಕಚ್ಚಿತ್ಪುರೇ ಸುಧರ್ಮಾಯಾಂ ಸುಖಮಾಸ್ತೇ ಸುಹೃದ್ವೃತಃ ॥ ೩೪ ॥

ಮಂಗಲಾಯ ಚ ಲೋಕಾನಾಂ
ಕ್ಷೇಮಾಯ ಚ ಭವಾಯ ಚ ।
ಆಸ್ತೇ ಯದುಕುಲಾಂಭೋಧಾ-
ವಾದ್ಯೋಽನಂತಸಖಃ ಪುಮಾನ್ ॥ ೩೫ ॥

ಯದ್ಬಾಹುದಂಡಗುಪ್ತಾಯಾಂ ಸ್ವಪುರ್ಯಾಂ ಯದವೋಽರ್ಚಿತಾಃ ।
ಕ್ರೀಡಂತಿ ಪರಮಾನಂದಂ ಮಹಾಪೌರುಷಿಕಾ ಇವ ॥ ೩೬ ॥

ಯತ್ಪಾದಶುಶ್ರೂಷಣಮುಖ್ಯಕರ್ಮಣಾ
ಸತ್ಯಾದಯೋ ದ್ವ್ಯಷ್ಟಸಹಸ್ರಯೋಷಿತಃ ।
ನಿರ್ಜಿತ್ಯ ಸಂಖ್ಯೇ ತ್ರಿದಶಾಸ್ತದಾಶಿಷೋ
ಹರಂತಿ ವಜ್ರಾಯುಧವಲ್ಲಭೋಚಿತಾಃ ॥ ೩೭ ॥

ಯದ್ಬಾಹುದಂಡಾಭ್ಯುದಯಾನುಜೀವಿನೋ
ಯದುಪ್ರವೀರಾ ಹ್ಯಕುತೋಭಯಾ ಮುಹುಃ ।
ಅಧಿಕ್ರಮಂತ್ಯಂಘ್ರಿಭಿರಾಹೃತಾಂ ಬಲಾತ್
ಸಭಾಂ ಸುಧರ್ಮಾಂ ಸುರಸತ್ತಮೋಚಿತಾಮ್ ॥ ೩೮ ॥

ಕಚ್ಚಿತ್ತೇಽನಾಮಯಂ ತಾತ ಭ್ರಷ್ಟತೇಜಾ ವಿಭಾಸಿ ಮೇ ।
ಅಲಬ್ಧಮಾನೋಽವಜ್ಞಾತಃ ಕಿಂ ವಾ ತಾತ ಚಿರೋಷಿತಃ ॥ ೩೯ ॥

ಹೃದೀಕ, ಅವನ ಪುತ್ರನಾದ ಕೃತವರ್ಮ, ಅಕ್ರೂರ, ಜಯಂತ, ಗದ, ಸಾರಣ ಮತ್ತು ಶತ್ರುಜಿತ್ ಮುಂತಾದ ಯಾದವವೀರರು ಕ್ಷೇಮವಾಗಿದ್ದಾರಷ್ಟೇ? ಯಾದವರ ಪ್ರಭುವಾದ, ಪೂಜ್ಯನಾದ ಬಲರಾಮದೇವನೂ ಸುಖವಾಗಿದ್ದಾನೆಯೇ? ॥ ೨೮-೨೯ ॥ ಯದುವಂಶದ ಸರ್ವಶ್ರೇಷ್ಠಮಹಾರಥಿಯಾದ ಪ್ರದ್ಯುಮ್ನನು ಸುಖವಾಗಿದ್ದಾನೆಯೇ? ಯುದ್ಧದಲ್ಲಿ ಗಂಭೀರವಾದ ವೇಗ-ಚತುರತೆಗಳುಳ್ಳ ಪೂಜ್ಯನಾದ ಅನಿರುದ್ಧನು ಆನಂದವಾಗಿದ್ದಾನೆಯೇ? ॥ ೩೦ ॥ ಸುಷೇಣ, ಚಾರುದೇಷ್ಣ, ಜಾಂಬವತೀ ಪುತ್ರನಾದ ಸಾಂಬ ಮತ್ತು ಋಷಭನೇ ಮುಂತಾದ ಶ್ರೀಕೃಷ್ಣನ ಇತರ ಪುತ್ರರೂ, ಅವರ ಪುತ್ರರೂ ಎಲ್ಲರೂ ಕುಶಲರಾಗಿರುವರಷ್ಟೇ? ॥ ೩೧ ॥ ಭಗವಾನ್ ಶ್ರೀಕೃಷ್ಣನ ಸೇವಕರಾಗಿರುವ ಶ್ರುತದೇವ, ಉದ್ಧವರೇ ಮುಂತಾದ ಯಾದವ ಶ್ರೇಷ್ಠರೂ, ನಂದ-ಸುನಂದರೇ ಮುಂತಾದವರೂ, ಪೂಜ್ಯರಾದ ಶ್ರೀಬಲರಾಮ ಮತ್ತು ಶ್ರೀಕೃಷ್ಣದೇವರ ಬಾಹುಬಲದಿಂದ ಸಂರಕ್ಷಿತರಾಗಿರುವ ಇತರರೂ ಎಲ್ಲರೂ ಸೌಖ್ಯವಾಗಿದ್ದಾರೆಯೇ? ನಮ್ಮಲ್ಲಿ ಪ್ರೀತಿ-ವಿಶ್ವಾಸಗಳುಳ್ಳ ಇವರೆಲ್ಲರೂ ಆಗಾಗ್ಗೆ ನಮ್ಮ ಯೋಗ-ಕ್ಷೇಮಗಳನ್ನು ನೆನಪುಮಾಡಿಕೊಳ್ಳುತ್ತಿದ್ದಾರೆಯೇ? ॥ ೩೨-೩೩ ॥

ಭಕ್ತವತ್ಸಲನೂ, ಬ್ರಾಹ್ಮಣರಿಗೆ ಪ್ರಿಯನೂ, ಆದ ಭಗವಾನ್ ಶ್ರೀಕೃಷ್ಣನು ತಮ್ಮ ಸ್ವಜನರೊಂದಿಗೆ ದ್ವಾರಕೆಯ ಸುಧರ್ಮಾಸಭೆಯಲ್ಲಿ ಸುಖವಾಗಿ ಇರುವನಷ್ಟೇ? ॥ ೩೪ ॥ ■ ಆದಿಪುರುಷನು ಬಲರಾಮನೊಂದಿಗೆ ಲೋಕದ ಮಂಗಳಕ್ಕೋಸ್ಕರವಾಗಿಯೂ ಕ್ಷೇಮಕ್ಕೋಸ್ಕರವಾಗಿಯೂ ಯದುವಂಶವೆಂಬ ಕ್ಷೀರಸಾಗರದಲ್ಲಿ ಅವತರಿಸಿರುವನು. ಅವನ ಬಾಹುಬಲದಿಂದಲೇ ಸುರಕ್ಷಿತವಾದ ತಮ್ಮ ದ್ವಾರಕಾಪುರಿಯಲ್ಲಿ ಯದುವಂಶೀಯರು ಲೋಕದಲ್ಲಿ ಸಂಭಾವಿತರಾಗಿ ಮಹಾಪುರುಷ ನಾರಾಯಣನ ಪಾರ್ಷದರಂತೆ ಸುಖ-ಶಾಂತಿಗಳಿಂದ ವಿಹರಿಸುತ್ತಿರುವರಲ್ಲ? ॥ ೩೫-೩೬ ॥ ಸತ್ಯಭಾಮೆಯೇ ಮುಂತಾದ ಹದಿನಾರುಸಾವಿರಮಂದಿ ರಾಣಿಯರೂ ಮುಖ್ಯವಾಗಿ ಭಗವಂತನ ಚರಣಸೇವೆಯಲ್ಲೇ ನಿರತರಾಗಿದ್ದು ಇಂದ್ರಾದಿದೇವತೆಗಳನ್ನು ಯುದ್ಧದಲ್ಲಿ ಸೋಲಿಸಿ, ಶಚೀದೇವಿಯ ಭೋಗಕ್ಕೆ ಯೋಗ್ಯವಾದ ಪಾರಿಜಾತವೇ ಮುಂತಾದ ತಮ್ಮ ಇಷ್ಟವಾದ ವಸ್ತುಗಳನ್ನು ಅವನಿಂದ ಪಡೆದು ಅನುಭವಿಸುತ್ತಿದ್ದಾರಲ್ಲ? ॥ ೩೭ ॥ ಯದುವಂಶೀಯ ವೀರರು ಶ್ರೀಕೃಷ್ಣನ ಬಾಹುದಂಡಗಳ ಪ್ರಭಾವದಿಂದ ಸುರಕ್ಷಿತವಾಗಿ, ನಿರ್ಭಯರಾಗಿ, ಬಲಪೂರ್ವಕವಾಗಿ ತಂದಿರುವ ದೇವಶ್ರೇಷ್ಠರಿಗೆ ಮಾತ್ರವೇ ಭೋಗ್ಯವಾದ ಸುಧರ್ಮಾಸಭೆಯನ್ನು ತಮ್ಮ ಚರಣಗಳಿಂದ ಆಕ್ರಮಿಸುವರಲ್ಲ! ॥ ೩೮ ॥

ಅಯ್ಯಾ ಅರ್ಜುನಾ! ನೀನು ದೇಹಾರೋಗ್ಯದಿಂದ ಚೆನ್ನಾಗಿದ್ದೀಯಲ್ಲ? ನೀನು ತುಂಬಾ ಕಳೆಗುಂದಿರುವವನಂತೆ ಕಾಣುತ್ತಿದ್ದೀಯಲ್ಲ? ಅಲ್ಲಿ ಬಹಳ ದಿನಗಳವರೆಗೆ ನಿಂತರೆ ನಿನಗೆ ತಕ್ಕ ಮಾನ-ಮರ್ಯಾದೆಗಳಲ್ಲಿ ಏನಾದರೂ ಕೊರತೆ ಉಂಟಾಗಲಿಲ್ಲವಲ್ಲ? ಯಾರಾದರೂ ನಿನಗೆ ಅಪಮಾನ ಮಾಡಲಿಲ್ಲವಲ್ಲ? ॥ ೩೯ ॥

ಕಚ್ಚಿನ್ನಾಭಿಹತೋಽಭಾವೈಃ ಶಬ್ದಾದಿಭಿರಮಂಗಲೈಃ ।
ನ ದತ್ತಮುಕ್ತಮರ್ಥಿಭ್ಯ ಆಶಯಾ ಯತ್ಪ್ರತಿಶ್ರುತಮ್ ॥ ೪೦ ॥

ಕಚ್ಚಿತ್ತ್ವಂ ಬ್ರಾಹ್ಮಣಂ ಬಾಲಂ ಗಾಂ ವೃದ್ಧಂ ರೋಗಿಣಂ ಸ್ತ್ರಿಯಮ್ ।
ಶರಣೋಪಸೃತಂ ಸತ್ತ್ವಂ ನಾತ್ಯಾಕ್ಷೀಃ ಶರಣಪ್ರದಃ ॥ ೪೧ ॥

ಕಚ್ಚಿತ್ತ್ವಂ ನಾಗಮೋಽಗಮ್ಯಾಂ ಗಮ್ಯಾಂ ವಾಸತ್ಕೃತಾಂ ಸ್ತ್ರಿಯಮ್ ।
ಪರಾಜಿತೋ ವಾಥ ಭವಾನ್ನೋತ್ತಮೈರ್ನಾಸಮೈಃ ಪಥಿ ॥ ೪೨ ॥

ಅಪಿ ಸ್ವಿತ್ಪರ್ಯಭುಂಕ್ಥಾಸ್ತ್ವಂ ಸಂಭೋಜ್ಯಾನ್ವೃದ್ಧಬಾಲಕಾನ್ ।
ಜುಗುಪ್ಸಿತಂ ಕರ್ಮ ಕಿಂಚಿತ್ಕೃತವಾನ್ನ ಯದಕ್ಷಮಮ್ ॥ ೪೩ ॥

ಕಚ್ಚಿತ್ಪ್ರೇಷ್ಠತಮೇನಾಥ ಹೃದಯೇನಾತ್ಮಬಂಧುನಾ ।
ಶೂನ್ಯೋಽಸ್ಮಿ ರಹಿತೋ ನಿತ್ಯಂ ಮನ್ಯಸೇ ತೇಽನ್ಯಥಾ ನ ರುಕ್ ॥ ೪೪ ॥

ದುರ್ಭಾವಪೂರ್ಣವಾದ ಅಮಂಗಳವಾದ ಮಾತುಗಳನ್ನಾಡಿ ಯಾರಾದರೂ ನಿನ್ನ ಮನಸ್ಸನ್ನು ನೋಯಿಸಿದರೇ? ಅಥವಾ ಆಸೆಯಿಂದ ಬಯಸಿ ಬಂದವರಿಗೆ ಮಾಡಿದ ವಾಗ್ದಾನವನ್ನಾಗಲೀ, ನೀನಾಗಿಯೇ ಕೊಡುವುದಾಗಿ ಹೇಳಿದ್ದ ಪ್ರತಿಜ್ಞಾವಚನವನ್ನಾಗಲೀ ನಡೆಸಿಕೊಡದೆ ಹೋದೆಯಾ? ॥ ೪೦ ॥ ಶರಣು ಬಂದವರನ್ನು ಕೈಬಿಡದೇ ಕಾಪಾಡುವ ಸ್ವಭಾವ ನಿನ್ನದು. ನಿನ್ನಲ್ಲಿ ಶರಣಾಗತರಾದ ಬ್ರಾಹ್ಮಣನನ್ನಾಗಲೀ, ಮಗುವನ್ನಾಗಲೀ, ಗೋವನ್ನಾಗಲೀ, ವೃದ್ಧನನ್ನಾಗಲೀ, ರೋಗಿಯನ್ನಾಗಲೀ, ಅಬಲೆಯಾದ ಸ್ತ್ರೀಯನ್ನಾಗಲಿ, ಅಥವಾ ಬೇರೆ ಯಾವುದೇ ಪ್ರಾಣಿಯನ್ನಾಗಲೀ ಕಾಪಾಡದೆ ಕೈಬಿಡಲಿಲ್ಲ ತಾನೇ? ॥ ೪೧ ॥ ನೀನು ಸೇರಬಾರದ ಹೆಂಗಸಿನೊಂದಿಗೆ ಸೇರಿ ರಮಿಸಲಿಲ್ಲ ತಾನೇ? ಅಥವಾ ಸೇರಲು ಯೋಗ್ಯಳಾಗಿದ್ದರೂ ಆಕೆಯನ್ನು ಸತ್ಕರಿಸದೆ ಆಕೆಯೊಡನೆ ಸೇರಿ ರಮಿಸಲಿಲ್ಲ ತಾನೇ? ದಾರಿಯಲ್ಲಿ ನಿನ್ನಿಂದ ಕೀಳುಮಟ್ಟದವರಿಂದಾಗಲೀ, ಸಮಾನರಾದವರಿಂದಾಗಲೀ ಯುದ್ಧದಲ್ಲಿ ಸೋಲಲಿಲ್ಲ ತಾನೇ? ॥ ೪೨ ॥ ಅಥವಾ ಮೊದಲು ಊಟಮಾಡಲು ಅರ್ಹರಾದ ಬಾಲಕರನ್ನಾಗಲೀ, ಮುದುಕರನ್ನಾಗಲೀ ಬಿಟ್ಟು ನೀನು ಒಬ್ಬನೇ ಅವರಿಗಿಂತ ಮೊದಲು ಊಟಮಾಡಿಲ್ಲ ತಾನೇ? ನಿನಗೆ ಯೋಗ್ಯವಲ್ಲದ ನಿಂದಿತವಾದ ಯಾವ ಕೆಲಸವನ್ನೂ ನೀನು ಮಾಡಿಲ್ಲ ಎಂಬುದರ ಕುರಿತು ನನಗೆ ವಿಶ್ವಾಸವಿದೆ. ॥ ೪೩ ॥ ಅಥವಾ ಅತ್ಯಂತ ಪ್ರಿಯತಮನೂ, ಅಭಿನ್ನಹೃದಯನೂ, ಪರಮ ಸುಹೃತ್ತನೂ ಆದ ಭಗವಾನ್ ಶ್ರೀಕೃಷ್ಣನಿಂದ ನೀನು ಅಗಲಿದ ಕಾರಣದಿಂದ 'ಇನ್ನು ನಾನು ಎಂದೆಂದಿಗೂ ಶೂನ್ಯನೇ' ಎಂದು ಭಾವಿಸುತ್ತಾ ಈ ರೀತಿಯಾಗಿರುವೆಯಾ? ಇದಾವುದೂ ಇಲ್ಲದಿದ್ದರೆ ನಿನಗೆ ಇಂತಹ ಮನೋವ್ಯಥೆ ಉಂಟಾಗುವುದಕ್ಕೆ ಬೇರಾವ ಕಾರಣವೂ ಇರಲಾರದು. ॥ ೪೪ ॥

ಹದಿನಾಲ್ಕನೆಯ ಅಧ್ಯಾಯವು ಮುಗಿಯಿತು. ॥ ೧೪ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಪ್ರಥಮಸ್ಕಂಧೇ
ಯುಧಿಷ್ಠಿರವಿತರ್ಕೋ ನಾಮ ಚತುರ್ದಶೋಽಧ್ಯಾಯಃ ॥ ೧೪ ॥

ಹದಿನೈದನೆಯ ಅಧ್ಯಾಯ

ಶ್ರೀಕೃಷ್ಣನ ವಿರಹದಿಂದ ವ್ಯಥೆಗೊಂಡ ಪಾಂಡವರು ಪರೀಕ್ಷಿತನಿಗೆ ಪಟ್ಟಗಟ್ಟಿ ಸ್ವರ್ಗಕ್ಕೆ ತೆರಳಿದುದು –

ಸೂತ ಉವಾಚ

ಏವಂ ಕೃಷ್ಣಸಖಃ ಕೃಷ್ಣೋ ಭ್ರಾತ್ರಾ ರಾಜ್ಞಾ ವಿಕಲ್ಪಿತಃ ।
ನಾನಾಶಂಕಾಸ್ಪದಂ ರೂಪಂ ಕೃಷ್ಣವಿಶ್ಲೇಷಕರ್ಶಿತಃ ॥ ೧ ॥

ಶೋಕೇನ ಶುಷ್ಯದ್ವದನಹೃತ್ಸರೋಜೋ ಹತಪ್ರಭಃ ।
ವಿಭುಂ ತಮೇವಾನುಧ್ಯಾಯನ್ನಾಶಕ್ನೋತ್ಪ್ರತಿಭಾಷಿತುಮ್ ॥ ೨ ॥

ಸೂತಪುರಾಣಿಕರು ಹೇಳುತ್ತಾರೆ – ಎಲೈ ಶೌನಕಾದಿ ಮಹರ್ಷಿಗಳೇ! ಭಗವಾನ್ ಶ್ರೀಕೃಷ್ಣನ ನೆಚ್ಚಿನ ಗೆಳೆಯನಾದ ಅರ್ಜುನನು ಮೊದಲೇ ಶ್ರೀಕೃಷ್ಣವಿರಹದಿಂದ ಕೃಶನಾಗಿದ್ದನು. ಆತನ ವಿಷಾದಗ್ರಸ್ತವಾದ ಮುಖಮುದ್ರೆಯನ್ನು ನೋಡಿ ಯುಧಿಷ್ಠಿರನು ಅನೇಕ ಪ್ರಕಾರದ ಆಶಂಕೆಗಳನ್ನು ಪಡುತ್ತಾ ಪ್ರಶ್ನೆಗಳ ಮಳೆಯನ್ನೇ ಸುರಿಸಿದ್ದನು. ॥ ೧ ॥ ಅರ್ಜುನನ ಮುಖಕಮಲ ಮತ್ತು ಹೃದಯಕಮಲಗಳು ದುಃಖದಿಂದ ಬಾಡಿಹೋಗಿದ್ದವು. ಅವನು ಭಗವಾನ್ ಶ್ರೀಕೃಷ್ಣನ ಧ್ಯಾನದಲ್ಲಿ ಮುಳುಗಿ ಹೋಗಿದ್ದರಿಂದ ಅಣ್ಣನ ಪ್ರಶ್ನೆಗಳಿಗೆ ಉತ್ತರಗಳನ್ನು ಕೊಡದಾದನು. ॥ ೨ ॥

ಕೃಚ್ಛ್ರೇಣ ಸಂಸ್ತಭ್ಯ ಶುಚಃ ಪಾಣಿನಾಽಽಮೃಜ್ಯ ನೇತ್ರಯೋಃ ।
ಪರೋಕ್ಷೇಣ ಸಮುನ್ನದ್ಧಪ್ರಣಯೌತ್ಕಂಠ್ಯಕಾತರಃ ॥ ೩ ॥

ಸಖ್ಯಂ ಮೈತ್ರೀಂ ಸೌಹೃದಂ ಚ ಸಾರಥ್ಯಾದಿಷು ಸಂಸ್ಮರನ್ ।
ನೃಪಮಗ್ರಜಮಿತ್ಯಾಹ ಬಾಷ್ಪಗದ್ಗದಯಾ ಗಿರಾ ॥ ೪ ॥

ಅರ್ಜುನ ಉವಾಚ

ವಂಚಿತೋಽಹಂ ಮಹಾರಾಜ ಹರಿಣಾ ಬಂಧುರೂಪಿಣಾ ।
ಯೇನ ಮೇಽಪಹೃತಂ ತೇಜೋ ದೇವವಿಸ್ಮಾಪನಂ ಮಹತ್ ॥ ೫ ॥

ಯಸ್ಯ ಕ್ಷಣವಿಯೋಗೇನ ಲೋಕೋ ಹ್ಯಪ್ರಿಯದರ್ಶನಃ ।
ಉಕ್ಥೇನ ರಹಿತೋ ಹ್ಯೇಷ ಮೃತಕಃ ಪ್ರೋಚ್ಯತೇ ಯಥಾ ॥ ೬ ॥

ಯತ್ಸಂಶ್ರಯಾದ್ದ್ರುಪದಗೇಹಮುಪಾಗತಾನಾಂ
ರಾಜ್ಞಾಂ ಸ್ವಯಂವರಮುಖೇ ಸ್ಮರದುರ್ಮದಾನಾಮ್ ।
ತೇಜೋ ಹೃತಂ ಖಲು ಮಯಾಭಿಹತಶ್ಚ ಮತ್ಸ್ಯಃ
ಸಜ್ಜೀಕೃತೇನ ಧನುಷಾಧಿಗತಾ ಚ ಕೃಷ್ಣಾ ॥ ೭ ॥

ಯತ್ಸನ್ನಿಧಾವಹಮು ಖಾಂಡವಮಗ್ನಯೇಽದಾ-
ಮಿಂದ್ರಂ ಚ ಸಾಮರಗಣಂ ತರಸಾ ವಿಜಿತ್ಯ ।
ಲಬ್ಧಾ ಸಭಾ ಮಯಕೃತಾದ್ಭುತಶಿಲ್ಪಮಾಯಾ
ದಿಗ್ಭ್ಯೋಽಹರನ್ನೃಪತಯೋ ಬಲಿಮಧ್ವರೇ ತೇ ॥ ೮ ॥

ಯತ್ತೇಜಸಾ ನೃಪಶಿರೋಂಘ್ರಿಮಹನ್ಮಖಾರ್ಥೇ
ಆರ್ಯೋಽನುಜಸ್ತವ ಗಜಾಯುತಸತ್ತ್ವವೀರ್ಯಃ ।
ತೇನಾಹೃತಾಃ ಪ್ರಮಥನಾಥಮಖಾಯ ಭೂಪಾ
ಯನ್ಮೋಚಿತಾಸ್ತದನಯನ್ಬಲಿಮಧ್ವರೇ ತೇ ॥ ೯ ॥

ಪತ್ನ್ಯಾಸ್ತವಾಧಿಮಖಕ್ಲೃಪ್ತಮಹಾಭಿಷೇಕ-
ಶ್ಲಾಘಿಷ್ಠಚಾರುಕಬರಂ ಕಿತವೈಃ ಸಭಾಯಾಮ್ ।
ಸ್ಪೃಷ್ಟಂ ವಿಕೀರ್ಯ ಪದಯೋಃ ಪತಿತಾಶ್ರುಮುಖ್ಯಾ
ಯಸ್ತತ್ಸ್ತ್ರಿಯೋಽಕೃತ ಹತೇಶವಿಮುಕ್ತಕೇಶಾಃ ॥ ೧೦ ॥

ಶ್ರೀಕೃಷ್ಣನಲ್ಲಿದ್ದ ಪರಮಪ್ರೇಮಕ್ಕೆ ಪರವಶನಾಗಿ ಆತನ ಅಗಲಿಕೆಯನ್ನು ತಾಳಲಾರದೆ ಕಂಗೆಟ್ಟು ತತ್ತರಿಸಿ ಹೋಗಿದ್ದನು. ಹೇಗೋ ಉಮ್ಮಳಿಸಿ ಬರುತ್ತಿದ್ದ ದುಃಖವನ್ನು ಕಷ್ಟದಿಂದ ತಡೆದುಕೊಂಡು ಕಣ್ಣುಗಳಿಂದ ಸುರಿಯುತ್ತಿದ್ದ ಜಲಧಾರೆಯನ್ನು ಕೈಯಿಂದ ಒರೆಸಿಕೊಂಡನು. ಸಾರಥ್ಯವೇ ಮುಂತಾದ ಕಾರ್ಯಗಳ ಸಮಯದಲ್ಲಿ ಶ್ರೀಭಗವಂತನು ತನ್ನಲ್ಲಿ ತೋರುತ್ತಿದ್ದ ಸ್ನೇಹ, ಸಲಿಗೆ, ಹೃದಯೈಕ್ಯ ಘಟನೆಗಳನ್ನು ಪದೇ-ಪದೇ ನೆನೆಯುತ್ತಾ ಬಾಷ್ಪದಿಂದ ಗದ್ಗದವಾಗಿದ್ದ ಧ್ವನಿಯಿಂದ ಅಣ್ಣನಾದ ಧರ್ಮರಾಜನಿಗೆ ಹೀಗೆ ಉತ್ತರಿಸಿದನು - ॥ ೩-೪ ॥

ಅರ್ಜುನನು ಹೇಳಿದನು - ಮಹಾರಾಜಾ! ಬಂಧುವಿನ ರೂಪವನ್ನು ಧರಿಸಿ ಬಂದ ಶ್ರೀಹರಿಯು ನನಗೆ ಮೋಸಮಾಡಿದನು. ದೊಡ್ಡ-ದೊಡ್ಡ ದೇವತೆಗಳನ್ನು ಆಶ್ಚರ್ಯಚಕಿತರನ್ನಾಗಿ ಮಾಡುತ್ತಿದ್ದ ನನ್ನ ತೇಜಸ್ಸು-ಪರಾಕ್ರಮಗಳನ್ನು ಕಿತ್ತುಕೊಂಡನು. ॥ ೫ ॥ ಪ್ರಾಣವು ಹೋದೊಡನೆಯೇ ಈ ದೇಹವು ಶವದ ರೂಪವನ್ನು ತಾಳಿ ಅಸಹ್ಯವಾಗಿಬಿಡುವಂತೆ, ಆವನ ಕ್ಷಣಮಾತ್ರದ ವಿಯೋಗದಿಂದ ಈ ಜಗತ್ತು ಅಪ್ರಿಯವಾಗಿ ಕಾಣತೊಡಗುತ್ತದೆ. ॥ ೬ ॥ ಯಾವ ಆಸರೆಯಿಂದ ದ್ರೌಪದಿಯ ಸ್ವಯಂವರಕ್ಕೆ ದ್ರುಪದನಲ್ಲಿಗೆ ಬಂದ ಕಾಮೋನ್ಮತ್ತ ರಾಜರುಗಳ ತೇಜಸ್ಸನ್ನು ನಾನು ಕಸಿದುಕೊಳ್ಳುತ್ತಾ ಧನುಸ್ಸಿಗೆ ಬಾಣಹೂಡಿ ಮತ್ಸ್ಯಯಂತ್ರವನ್ನು ಭೇದಿಸಿ ದ್ರೌಪದಿಯನ್ನು ಪಡೆದೆನೋ, ಆ ಮಹಾಪುರುಷನು ನನಗೆ ಮೋಸ ಮಾಡಿದನು. ॥ ೭ ॥ ಯಾರ ಸಾನ್ನಿಧ್ಯ ಬಲದಿಂದಲೇ ನಾನು ಸಮಸ್ತ ದೇವತೆಗಳೊಂದಿಗೆ ದೇವೇಂದ್ರನನ್ನು ಸೋಲಿಸಿ, ಅಗ್ನಿ ದೇವನ ತೃಪ್ತಿಗಾಗಿ ಖಾಂಡವವನವನ್ನು ಸಮರ್ಪಿಸಿದೆನೋ, ದಾನವ ಶಿಲ್ಪಿಯಾದ ಮಯನ ಅದ್ಭುತ ಕಲಾಕೌಶಲ್ಯದಿಂದ ಕೂಡಿದ ಸಭೆಯನ್ನು ಸಂಪಾದಿಸಿದೆನೋ, ನಾನಾ ದಿಕ್ಕುಗಳಿಂದ ಆಗಮಿಸಿದ ಅರಸರು ನಿನಗೆ ಯಜ್ಞದಲ್ಲಿ ಹೇರಳವಾಗಿ ಕಾಣಿಕೆಗಳನ್ನು ಅರ್ಪಿಸಿದರೋ, ಆ ತೇಜೋಮೂರ್ತಿಯಿಂದ ನಾನು ವಂಚಿತನಾದೆನು. ॥ ೮ ॥ ಹತ್ತು ಸಾವಿರ ಆನೆಗಳ ಬಲ-ಪರಾಕ್ರಮಗಳಿಂದ ಸಂಪನ್ನನಾದ, ನಿನ್ನ ತಮ್ಮನಾದ ಆರ್ಯಭೀಮಸೇನನು ರಾಜರ ತಲೆಗಳನ್ನು ತಿರಸ್ಕಾರದಿಂದ ಮೆಟ್ಟಿದ್ದ ಜರಾಸಂಧನನ್ನು ಯಾರ ಶಕ್ತಿಯಿಂದ ಸಂಹರಿಸಿ ಆತನು ಭೈರವಯಜ್ಞದಲ್ಲಿ ಬಲಿಯನ್ನಾಗಿ ಅರ್ಪಿಸಲು ಸಂಕಲ್ಪಿಸಿದ್ದ ರಾಜರೆಲ್ಲರನ್ನು ಬಂಧನಮುಕ್ತಗೊಳಿಸಿ, ಅವರೆಲ್ಲರೂ ನಿನ್ನ ಯಜ್ಞದಲ್ಲಿ ಅಪಾರವಾದ ಕಪ್ಪ-ಕಾಣಿಕೆಗಳನ್ನು ಕೊಡುವಂತೆ ಮಾಡಿದನೋ, ಆ ಶಕ್ತಿಧರನು ನನ್ನನ್ನು ತೊರೆದುಹೋದನು. ॥ ೯ ॥ ರಾಜಸೂಯ ಯಜ್ಞದ ಅಭಿಷೇಕಜಲದಿಂದ ಪವಿತ್ರವಾಗಿದ್ದ ದ್ರೌಪದಿಯ ಸಿರಿಮುಡಿಯನ್ನು ದುರಾತ್ಮರು ತುಂಬಿದ ಸಭೆಯಲ್ಲಿ ಮುಟ್ಟುವ ಸಾಹಸವನ್ನು ಮಾಡಿದಾಗ ಆಕೆಯು ಕೆದರಿದ ತಲೆಗೂದಲುಗಳಿಂದ ತುಂಬಿದ ಕಣ್ಣೀರಿನಿಂದ ಶ್ರೀಕೃಷ್ಣನ ಚರಣಗಳಲ್ಲಿ ಬಿದ್ದು ಬೇಡಿಕೊಂಡಾಗ, ಆತನು ಅವರಿಂದಾದ ಘೋರ ಅಪಮಾನದ ಪ್ರತೀಕಾರ ಮಾಡುವ ಪ್ರತಿಜ್ಞೆಯನ್ನು ಮಾಡಿ ಆ ಧೂರ್ತರ ಸ್ತ್ರೀಯರನ್ನು ವಿಧವೆಯರನ್ನಾಗಿ ಮಾಡಿ ತಮ್ಮ ಮುಡಿಯನ್ನು ತಾವೇ ಬಿಚ್ಚಿಕೊಳ್ಳುವಂತೆ ಮಾಡಿದ ಆ ಸತ್ಯಸಂಕಲ್ಪನೂ, ಸಮರ್ಥನೂ ಆದ ಸ್ವಾಮಿಯು ನನ್ನನ್ನು ತೊರೆದು ಹೋದನು. ॥ ೧೦ ॥ ಮತ್ತೆ

ಯೋ ನೋ ಜುಗೋಪ ವನ ಏತ್ಯ ದುರಂತಕೃಚ್ಛ್ರಾದ್
ದುರ್ವಾಸಸೋಽರಿವಿಹಿತಾದಯುತಾಗ್ರಭುಗ್ಯಃ ।
ಶಾಕಾನ್ನಶಿಷ್ಟಮುಪಯುಜ್ಯ ಯತಸ್ತ್ರಿಲೋಕೀಂ
ತೃಪ್ತಾಮಮಂಸ್ತ ಸಲಿಲೇ ವಿನಿಮಗ್ನಸಂಘಃ ॥ ೧೧ ॥

ಯತ್ತೇಜಸಾಥ ಭಗವಾನ್ಯುಧಿ ಶೂಲಪಾಣಿ-
ರ್ವಿಸ್ಮಾಪಿತಃ ಸಗಿರಿಜೋಽಸ್ತ್ರಮದಾನ್ನಿಜಂ ಮೇ ।
ಅನ್ಯೇಽಪಿ ಚಾಹಮಮುನೈವ ಕಲೇವರೇಣ
ಪ್ರಾಪ್ತೋ ಮಹೇಂದ್ರಭವನೇ ಮಹದಾಸನಾರ್ಧಮ್ ॥ ೧೨ ॥

ತತ್ರೈವ ಮೇ ವಿಹರತೋ ಭುಜದಂಡಯುಗ್ಮಂ
ಗಾಂಡೀವಲಕ್ಷಣಮರಾತಿವಧಾಯ ದೇವಾಃ ।
ಸೇಂದ್ರಾಃ ಶ್ರಿತಾ ಯದನುಭಾವಿತಮಾಜಮೀಢ
ತೇನಾಹಮದ್ಯ ಮುಷಿತಃ ಪುರುಷೇಣ ಭೂಮ್ನಾ ॥ ೧೩ ॥

ಯದ್ಬಾಂಧವಃ ಕುರುಬಲಾಬ್ಧಿಮನಂತಪಾರ-
ಮೇಕೋ ರಥೇನ ತತರೇಽಹಮತಾರ್ಯಸತ್ತ್ವಮ್ ।
ಪ್ರತ್ಯಾಹೃತಂ ಬಹು ಧನಂ ಚ ಮಯಾ ಪರೇಷಾಂ
ತೇಜಾಸ್ಪದಂ ಮಣಿಮಯಂ ಚ ಹೃತಂ ಶಿರೋಭ್ಯಃ ॥ ೧೪ ॥

ಯೋ ಭೀಷ್ಮಕರ್ಣಗುರುಶಲ್ಯಚಮೂಷ್ವದಭ್ರ-
ರಾಜನ್ಯವರ್ಯರಥಮಂಡಲಮಂಡಿತಾಸು ।
ಅಗ್ರೇಚರೋ ಮಮ ವಿಭೋ ರಥಯೂಥಪಾನಾ-
ಮಾಯುರ್ಮನಾಂಸಿ ಚ ದೃಶಾ ಸಹ ಓಜ ಆರ್ಚ್ಛತ್ ॥ ೧೫ ॥

ಯದ್ದೋಃಷು ಮಾ ಪ್ರಣಿಹಿತಂ ಗುರುಭೀಷ್ಮಕರ್ಣ-
ನಪ್ತೃತ್ರಿಗರ್ತಶಲ್ಯಸೈಂಧವಬಾಹ್ಲಿಕಾದ್ಯೈಃ ।
ಅಸ್ತ್ರಾಣ್ಯಮೋಘಮಹಿಮಾನಿ ನಿರೂಪಿತಾನಿ
ನೋಪಸ್ಪೃಶುರ್ನೃಹರಿದಾಸಮಿವಾಸುರಾಣಿ ॥ ೧೬ ॥

ದುರ್ಯೋಧನನಿಂದ ಪ್ರೇರಿತರಾದ ದುರ್ವಾಸ ಮಹರ್ಷಿಗಳು ತಮ್ಮ ಹತ್ತು ಸಾವಿರ ಶಿಷ್ಯರೊಡನೆ ಭೋಜನಮಾಡಲು ಅಕಾಲದಲ್ಲಿ ಅತಿಥಿಯಾಗಿ ಬಂದಾಗ ಯಾವ ಆಪದ್ಬಾಂಧವನು ಅರಣ್ಯಕ್ಕೆ ಬಂದು ದ್ರೌಪದಿಯು ತಿಂದು ಉಳಿದಿದ್ದ ಸೊಪ್ಪಿನ ಚೂರನ್ನು ತಿಂದು ತೃಪ್ತಿಯಾಯಿತೆಂದು ಹೇಳಿದನೋ, ಸ್ನಾನಕ್ಕೆಂದು ನೀರಿನಲ್ಲಿ ಮುಳುಗಿದ್ದ ಮಹರ್ಷಿಗಳ ಗುಂಪು ಶ್ರೀಕೃಷ್ಣನ ತೃಪ್ತಿಯಿಂದ ಮೂರುಲೋಕಕ್ಕೂ ತೃಪ್ತಿಯಾಗಿದೆ ಎಂದು ನುಡಿಯುವಂತೆ ಮಾಡಿ ಅವರ ಶಾಪದಿಂದ ನಮ್ಮನ್ನು ಸಂರಕ್ಷಿಸಿದನೋ, ಆ ಸ್ವಾಮಿಯು ನಮ್ಮನ್ನು ವಂಚಿಸಿ ಹೋದನು. ॥ ೧೧ ॥ ಯಾವಾತನ ಪ್ರತಾಪದಿಂದ ಯುದ್ಧದಲ್ಲಿ ಪಾರ್ವತೀಸಹಿತ ಪರಮೇಶ್ವರನು ಆಶ್ಚರ್ಯಗೊಂಡು ಪಾಶುಪತಾಸ್ತ್ರವನ್ನು ನನಗೆ ಕರುಣಿಸಿದ್ದನೋ, ಇತರ ದೇವತೆಗಳೂ ತಮ್ಮ-ತಮ್ಮ ಅಸ್ತ್ರಗಳನ್ನು ದಯಪಾಲಿಸಿದರೋ, ನಾನು ಸಶರೀರನಾಗಿಯೇ ಮಹೇಂದ್ರನ ಸಭೆಗೆ ಹೋಗಿ ಆತನ ಅರ್ಧಾಸನದಲ್ಲಿ ಕುಳಿತುಕೊಳ್ಳುವ ಗೌರವ ಪಡೆದೆನೋ ಆತನಿಂದ ನಾನು ವಂಚಿತನಾದೆ. ॥ ೧೨ ॥ ಅಣ್ಣಾ! ನಾನು ಆಗ ಸ್ವರ್ಗದಲ್ಲಿ ವಿಹರಿಸುತ್ತಿದ್ದಾಗ ಯಾರ ಅನುಗ್ರಹದಿಂದ ಪ್ರಭಾವಿತವಾದ ಗಾಂಡೀವ ಧನುಸ್ಸನ್ನು ಹಿಡಿದುಕೊಂಡಿದ್ದ ನನ್ನ ಎರಡೂ ತೋಳುಗಳನ್ನು ಇಂದ್ರಸಹಿತರಾದ ದೇವತೆಗಳೆಲ್ಲರೂ ನಿವಾತಕವಚರೇ ಮುಂತಾದ ದೈತ್ಯರನ್ನು ಕೊಲ್ಲಲು ಆಶ್ರಯಿಸಿದ್ದರೋ ಆ ಪುರುಷೋತ್ತಮ ಶ್ರೀಕೃಷ್ಣನು ಇಂದು ನನಗೆ ಮೋಸಮಾಡಿದನು. ॥ ೧೩ ॥

ಜಯಿಸಲಸಾಧ್ಯವಾದ ಸತ್ತ್ವದಿಂದ ಕೂಡಿದ್ದ ಅಪಾರವಾದ ಕೌರವಸೇನಾ ಸಾಗರವನ್ನು ನಾನು ಯಾರ ಬಂಧುತ್ವದ ಬಲದಿಂದ ಏಕಾಕಿಯಾಗಿಯೇ ರಥದಿಂದ ದಾಟಿದೆನೋ, ಯಾವಾತನ ಸಹಾಯದಿಂದಲೇ ನಾನು ಶತ್ರುಗಳಿಂದ ರಾಜಾ ವಿರಾಟನ ಎಲ್ಲ ಗೋಸಂಪತ್ತನ್ನು ಹಿಂದಕ್ಕೆ ಮರಳಿಸಿಕೊಟ್ಟು, ಜೊತೆಗೆ ಅವರ ಹೊಳೆಯುವ ಮಣಿಮಯ ಕಿರೀಟ ಹಾಗೂ ಅಲಂಕಾರಗಳನ್ನು ಕಿತ್ತುಕೊಂಡೆನೋ, ಅಂತಹ ಶಕ್ತಿನಿಧಿಯಾದ ಪ್ರಭುವು ಕಣ್ಮರೆಯಾದನು. ॥ ೧೪ ॥ ರಾಜೇಂದ್ರನೇ! ಅಗಣಿತ ಸಂಖ್ಯೆಯಲ್ಲಿದ್ದ ರಾಜರ ರಥಗಳಿಂದ ಕೂಡಿದ್ದ ಭೀಷ್ಮ, ಕರ್ಣ, ದ್ರೋಣ, ಶಲ್ಯ ಹಾಗೂ ಇತರ ರಾಜರುಗಳ ಮುಂದೆ ಸಂಚರಿಸುತ್ತಾ ಯಾರು ಆ ಅತಿರಥ, ಮಹಾರಥರ ಮನಸ್ಸು, ಆಯುಸ್ಸು, ಶಕ್ತಿ ಇವುಗಳನ್ನು ದೃಷ್ಟಿಮಾತ್ರದಿಂದಲೇ ಅಪಹರಿಸಿದ್ದನೋ ಆ ಯಾದವಪತಿಯು ಮರೆಯಾದನು. ॥ ೧೫ ॥ ಯಾರ ಬಾಹುಗಳ ನೆರಳಿನಲ್ಲಿ ಸುರಕ್ಷಿತನಾಗಿದ್ದ ನನ್ನ ಮೇಲೆ ಆಚಾರ್ಯ ದ್ರೋಣರು, ಪಿತಾಮಹ ಭೀಷ್ಮರು, ಕರ್ಣ, ಭೂರಿಶ್ರವ, ಸುಶರ್ಮ, ಶಲ್ಯ, ಜಯದ್ರಥ, ಬಾಹ್ಲಿಕ ಮುಂತಾದವರು ಪ್ರಯೋಗಿಸಿದ್ದ ಅಮೋಘವಾದ ಅಸ್ತ್ರಗಳು ನನ್ನನ್ನು ಮುಟ್ಟಲಾರದೆ, ಹಿರಣ್ಯಕಶಿಪು ಮುಂತಾದ ದೈತ್ಯರ ಅಸ್ತ್ರ-ಶಸ್ತ್ರಗಳು ಭಗವದ್ಭಕ್ತ ಪ್ರಹ್ಲಾದನಿಗೆ ಮುಟ್ಟಲಾರದೆ ವಿಫಲವಾದಂತೆ ವಿಫಲವಾಗಿಸಿದನೋ ಅಂತಹ ಅನಂತ ಶಕ್ತಿನಿಧಿಯೂ ಆಶ್ರಿತರಕ್ಷಕನೂ ಆದ ಪ್ರಭುವು ತನ್ನನ್ನು ಉಪಸಂಹಾರ ಮಾಡಿಕೊಂಡನು. ॥ ೧೬ ॥ ಶ್ರೇಷ್ಠರಾದ ಸಾಧು-ಸಜ್ಜನರು ಸಂಸಾರದಿಂದ ಮುಕ್ತರಾಗಲು ಯಾರ ಚರಣಕಮಲಗಳನ್ನು ಭಜಿಸುತ್ತಾರೋ ಅಂತಹ ಭಕ್ತಜನರಿಗೆ ತನ್ನನ್ನೇ ಪೂರ್ಣವಾಗಿ ಕೊಟ್ಟುಕೊಂಡು

ಸೌತ್ಯೇ ವೃತಃ ಕುಮತಿನಾಽತ್ಮದ ಈಶ್ವರೋ ಮೇ
ಯತ್ಪಾದಪದ್ಮಮಭವಾಯ ಭಜಂತಿ ಭವ್ಯಾಃ ।
ಮಾಂ ಶ್ರಾಂತವಾಹಮರಯೋ ರಥಿನೋ ಭುವಿಷ್ಠಂ
ನ ಪ್ರಾಹರನ್ಯದನುಭಾವನಿರಸ್ತಚಿತ್ತಾಃ ॥ ೧೭ ॥

ನರ್ಮಾಣ್ಯುದಾರರುಚಿರಸ್ಮಿತಶೋಭಿತಾನಿ
ಹೇ ಪಾರ್ಥ ಹೇಽರ್ಜುನ ಸಖೇ ಕುರುನಂದನೇತಿ ।
ಸಂಜಲ್ಪಿತಾನಿ ನರದೇವ ಹೃದಿಸ್ಪೃಶಾನಿ
ಸ್ಮರ್ತುರ್ಲುಠಂತಿ ಹೃದಯಂ ಮಮ ಮಾಧವಸ್ಯ ॥ ೧೮ ॥

ಶಯ್ಯಾಸನಾಟನವಿಕತ್ಥನಭೋಜನಾದಿ-
ಷ್ವೈಕ್ಯಾದ್ವಯಸ್ಯ ಋತವಾನಿತಿ ವಿಪ್ರಲಬ್ಧಃ ।
ಸಖ್ಯುಃ ಸಖೇವ ಪಿತೃವತ್ತನಯಸ್ಯ ಸರ್ವಂ
ಸೇಹೇ ಮಹಾನ್ಮಹಿತಯಾ ಕುಮತೇರಘಂ ಮೇ ॥ ೧೯ ॥

ಸೋಽಹಂ ನೃಪೇಂದ್ರ ರಹಿತಃ ಪುರುಷೋತ್ತಮೇನ
ಸಖ್ಯಾ ಪ್ರಿಯೇಣ ಸುಹೃದಾ ಹೃದಯೇನ ಶೂನ್ಯಃ ।
ಅಧ್ವನ್ಯುರುಕ್ರಮಪರಿಗ್ರಹಮಂಗ ರಕ್ಷನ್
ಗೋಪೈರಸದ್ಭಿರಬಲೇವ ವಿನಿರ್ಜಿತೋಽಸ್ಮಿ ॥ ೨೦ ॥

ತದ್ವೈ ಧನುಸ್ತ ಇಷವಃ ಸ ರಥೋ ಹಯಾಸ್ತೇ
ಸೋಽಹಂ ರಥೀ ನೃಪತಯೋ ಯತ ಆನಮಂತಿ ।
ಸರ್ವಂ ಕ್ಷಣೇನ ತದಭೂದಸದೀಶರಿಕ್ತಂ
ಭಸ್ಮನ್ಹುತಂ ಕುಹಕರಾದ್ಧಮಿವೋಪ್ತಮೂಷ್ಯಾಮ್ ॥ ೨೧ ॥

ರಾಜಂಸ್ತ್ವಯಾಭಿಪೃಷ್ಟಾನಾಂ ಸುಹೃದಾಂ ನಃ ಸುಹೃತ್ಪುರೇ ।
ವಿಪ್ರಶಾಪವಿಮೂಢಾನಾಂ ನಿಘ್ನತಾಂ ಮುಷ್ಟಿಭಿರ್ಮಿಥಃ ॥ ೨೨ ॥

ವಾರುಣೀಂ ಮದಿರಾಂ ಪೀತ್ವಾ ಮದೋನ್ಮಥಿತಚೇತಸಾಮ್ ।
ಅಜಾನತಾಮಿವಾನ್ಯೋನ್ಯಂ ಚತುಃಪಂಚಾವಶೇಷಿತಾಃ ॥ ೨೩ ॥

ಬಿಡುವನೋ. ಆ ಭಗವಂತನನ್ನು ಕುಬುದ್ಧಿಯಿಂದ ನಾನು 'ಯುದ್ಧದಲ್ಲಿ ಸಾರಥಿಯಾಗು' ಎಂದು ಅತ್ಯಲ್ಪ ಕೆಲಸಕ್ಕಾಗಿ ಕೇಳಿ ಬಳಸಿಕೊಂಡುಬಿಟ್ಟೆನಲ್ಲ? ಅಯ್ಯೋ! ನನ್ನ ಕುದುರೆಗಳು ಬಳಲಿದ ಸಮಯದಲ್ಲಿ ನಾನು ರಥದಿಂದ ಕೆಳಗಿಳಿದು ನಿಂತಿರುವಾಗಲೂ ಕೂಡ ಮಹಾರಥಿಗಳಾದ ಶತ್ರುಗಳು ಕೂಡ ನನ್ನ ಮೇಲೆ ಬಾಣ ಪ್ರಯೋಗಿಸಲು ಸಮರ್ಥರಾಗಲಿಲ್ಲ. ಏಕೆಂದರೆ, ಶ್ರೀಕೃಷ್ಣನ ಪ್ರಭಾವದಿಂದ ಅವರ ಬುದ್ಧಿಯು ಕುಂಠಿತವಾಗಿತ್ತು. ॥ ೧೭ ॥ ಅಣ್ಣಾ! ಆಟದ ಸಮಯದಲ್ಲಿ ಆತನು ಹೇಳುತ್ತಿದ್ದ – 'ಪಾರ್ಥ! ಅರ್ಜುನಾ! ಸಖನೇ! ಕುರುನಂದನಾ!' ಇವೇ ಮುಂತಾದ ಉದಾರವಾದ, ರಮಣೀಯವಾದ, ನಸುನಗೆಯಿಂದ ಕೂಡಿದ, ಹೃದಯ ಸ್ಪರ್ಶಿಯಾದ ಮಾತುಗಳು ಸ್ಮರಣೆಗೆ ಬಂದು ನನ್ನ ಹೃದಯವು ಸೂರೆಗೊಳ್ಳುತ್ತಿದೆ. ಓರ್ವ ಸಾಮಾನ್ಯ ವ್ಯಕ್ತಿಯು ಸತ್ತುಹೋದಾಗ ಮನುಷ್ಯನು ಎಷ್ಟು ದುಃಖಿತನಾಗುತ್ತಾನೆಂಬುದು ನಿನಗೆ ತಿಳಿದೇ ಇದೆ. ಹೀಗಿರುವಾಗ ನಮ್ಮ ಸರ್ವಸ್ವನಾದ ಪ್ರಭುವು ಈಗಿಲ್ಲದಿರುವಾಗ ಎಷ್ಟು ದುಃಖವಾಗಬೇಡ? ॥ ೧೮ ॥ ಮಲಗುವಾಗ, ಕುಳಿತುಕೊಳ್ಳುವಾಗ, ತಿರುಗಾಡುವಾಗ, ಆತ್ಮಶ್ಲಾಘನೆಮಾಡಿಕೊಳ್ಳುವಾಗ, ಭೋಜನ ಮಾಡುವಾಗ, ನಾವಿಬ್ಬರೂ ಜೊತೆಯಲ್ಲಿದ್ದಾಗ ಹೃದಯೈಕ್ಯವಿದ್ದುದರಿಂದ 'ಮಿತ್ರಾ! ನೀನೇ ತುಂಬಾ ದೊಡ್ಡವನೋ?' ಎಂದು ನಾನು ತಿರಸ್ಕಾರದ ಮಾತುಗಳನ್ನಾಡಿದರೂ, ಆತನು ಮಹಾತ್ಮನಾಗಿದ್ದುದರಿಂದ – ಮಿತ್ರನ ತಪ್ಪನ್ನು ಮಿತ್ರನೂ, ಮಗನ ಅಪರಾಧವನ್ನು ತಂದೆಯೂ ಸಹಿಸಿಕೊಳ್ಳುವಂತೆ ದುರ್ಬುದ್ಧಿಯಾದ ನನ್ನ ಎಲ್ಲ ಅಪರಾಧಗಳನ್ನೂ ಸಹಿಸಿಕೊಂಡಿದ್ದನೋ ಅಂತಹ ಕರುಣಾಮೂರ್ತಿಯು ಕಣ್ಮರೆಯಾದನು. ॥ ೧೯ ॥ ರಾಜೇಂದ್ರ! ಮಿತ್ರಶ್ರೇಷ್ಠನೂ, ಪ್ರಿಯಮಿತ್ರನೂ, ಸುಹೃದನೂ ಆದ ಆ ಪುರುಷೋತ್ತಮನನ್ನು ಕಳೆದುಕೊಂಡು ಶೂನ್ಯ ಹೃದಯನಾಗಿ ನಾನು ಆ ಭಗವಂತನ ಪತ್ನಿಯರನ್ನು ದ್ವಾರಕೆಯಿಂದ ಜೋಪಾನವಾಗಿ ತರುತ್ತಿದ್ದಾಗ ಮಾರ್ಗಮಧ್ಯದಲ್ಲಿ ಕೆಲವು ಕೀಳುಮಟ್ಟದ ಗೊಲ್ಲರು ನನ್ನನ್ನು ಒಂದು ಅಬಲೆಯಂತೆ ಸೋಲಿಸಿಬಿಟ್ಟರು. ಆ ಸ್ತ್ರೀಯರನ್ನು ಸಂರಕ್ಷಿಸಲಾರದೆ ಹೋದೆನು. ॥ ೨೦ ॥ ಯಾವುದರ ಮುಂದೆ ದೊಡ್ಡ-ದೊಡ್ಡ ರಾಜರೂ ತಲೆ ತಗ್ಗಿಸುತ್ತಿದ್ದರೋ ಅದೇ ಗಾಂಡೀವ ಧನುಸ್ಸು, ಅದೇ ಬಾಣಗಳು, ಅದೇ ರಥ, ಅದೇ ಕುದುರೆಗಳು, ಅತಿರಥಿಯಾದ ನಾನೂ ಆ ಹಿಂದಿನವನೇ. ಆದರೆ ಶ್ರೀಕೃಷ್ಣನನ್ನು ಕಳಕೊಂಡಿದ್ದರಿಂದ ಅವೆಲ್ಲವೂ ಕ್ಷಣಮಾತ್ರದಲ್ಲಿ-ಬೂದಿಯಲ್ಲಿ ಮಾಡಿದ ಹೋಮದಂತೆ, ನೀಚನಿಗೆ ಮಾಡಿದ ಸೇವೆಯಂತೆ, ಮರುಭೂಮಿಯಲ್ಲಿ ಬಿತ್ತಿದ ಬೀಜದಂತೆ ವ್ಯರ್ಥವಾಗಿ ಹೋದುವು. ॥ ೨೧ ॥

ಮಹಾರಾಜನೇ! ದ್ವಾರಕಾವಾಸಿಗಳಾದ ನಮ್ಮ ಸುಹೃದ್-ಸಂಬಂಧಿಗಳ ಕುರಿತು ನೀನು ಕುಶಲಪ್ರಶ್ನೆಮಾಡಿದ್ದೆ. ಆ ಯಾದವರೆಲ್ಲರೂ ಬ್ರಾಹ್ಮಣರ ಶಾಪದಿಂದ ಬುದ್ಧಿಯನ್ನೂ ಕಳಕೊಂಡು 'ವಾರುಣೀ' ಎಂಬ ಮದ್ಯವನ್ನು ಕುಡಿದು ಮದೋನ್ಮತ್ತರಾಗಿ ಅಪರಿಚಿತರಂತೆ ಒಬ್ಬರು ಮತ್ತೊಬ್ಬರನ್ನು ಮುಷ್ಟಿಗಳಿಂದಲೂ, ಶಸ್ತ್ರಗಳಿಂದಲೂ ಪರಸ್ಪರ ಹೊಡೆದಾಡಿಕೊಂಡು ಸತ್ತುಹೋದರು. ಅವರಲ್ಲಿ ಕೇವಲ ನಾಲ್ಕೈದು ಮಂದಿ ಮಾತ್ರ ಉಳಿದಿರುವರು. ॥ ೨೨-೨೩ ॥ ಪ್ರಪಂಚದ ಪ್ರಾಣಿಗಳು ಪರಸ್ಪರ ಪಾಲನೆ-

ಪ್ರಾಯೇಣೈತದ್ ಭಗವತ ಈಶ್ವರಸ್ಯ ವಿಚೇಷ್ಟಿತಮ್ ।
ಮಿಥೋ ನಿಘ್ನಂತಿ ಭೂತಾನಿ ಭಾವಯಂತಿ ಚ ಯನ್ಮಿಥಃ ॥ ೨೪ ॥

ಜಲೌಕಸಾಂ ಜಲೇ ಯದ್ವನ್ಮಹಾಂತೋಽದಂತ್ಯಣೀಯಸಃ ।
ದುರ್ಬಲಾನ್ ಬಲಿನೋ ರಾಜನ್ಮಹಾಂತೋ ಬಲಿನೋ ಮಿಥಃ ॥ ೨೫ ॥

ಏವಂ ಬಲಿಷ್ಠೈರ್ಯದುಭಿರ್ಮಹದ್ಭಿರಿತರಾನ್ವಿಭುಃ ।
ಯದೂನ್ಯದುಭಿರನ್ಯೋನ್ಯಂ ಭೂಭಾರಾನ್ಸಂಜಹಾರ ಹ ॥ ೨೬ ॥

ದೇಶಕಾಲಾರ್ಥಯುಕ್ತಾನಿ ಹೃತ್ತಾಪೋಪಶಮಾನಿ ಚ ।
ಹರಂತಿ ಸ್ಮರತಶ್ಚಿತ್ತಂ ಗೋವಿಂದಾಭಿಹಿತಾನಿ ಮೇ ॥ ೨೭ ॥

ಸೂತ ಉವಾಚ

ಏವಂ ಚಿಂತಯತೋ ಜಿಷ್ಣೋಃ ಕೃಷ್ಣಪಾದಸರೋರುಹಮ್ ।
ಸೌಹಾರ್ದೇನಾತಿಗಾಢೇನ ಶಾಂತಾಽಽಸೀದ್ವಿಮಲಾ ಮತಿಃ ॥ ೨೮ ॥

ವಾಸುದೇವಾಂಘ್ರ್ಯನುಧ್ಯಾನಪರಿಬೃಂಹಿತರಂಹಸಾ ।
ಭಕ್ತ್ಯಾ ನಿರ್ಮಥಿತಾಶೇಷಕಷಾಯಧಿಷಣೋಽರ್ಜುನಃ ॥ ೨೯ ॥

ಗೀತಂ ಭಗವತಾ ಜ್ಞಾನಂ ಯತ್ತತ್ಸಂಗ್ರಾಮಮೂರ್ಧನಿ ।
ಕಾಲಕರ್ಮತಮೋರುದ್ಧಂ ಪುನರಧ್ಯಗಮದ್ವಿಭುಃ ॥ ೩೦ ॥

ವಿಶೋಕೋ ಬ್ರಹ್ಮಸಂಪತ್ತ್ಯಾ ಸಂಛಿನ್ನದ್ವೈತಸಂಶಯಃ ।
ಲೀನಪ್ರಕೃತಿನೈರ್ಗುಣ್ಯಾದಲಿಂಗತ್ವಾದಸಂಭವಃ ॥ ೩೧ ॥

ನಿಶಮ್ಯ ಭಗವನ್ಮಾರ್ಗಂ ಸಂಸ್ಥಾಂ ಯದುಕುಲಸ್ಯ ಚ ।
ಸ್ವಃಪಥಾಯ ಮತಿಂ ಚಕ್ರೇ ನಿಭೃತಾತ್ಮಾ ಯುಧಿಷ್ಠಿರಃ ॥ ೩೨ ॥

ಪೃಥಾಪ್ಯನುಶ್ರುತ್ಯ ಧನಂಜಯೋದಿತಂ
ನಾಶಂ ಯದೂನಾಂ ಭಗವದ್ಗತಿಂ ಚ ತಾಮ್ ।
ಏಕಾಂತಭಕ್ತ್ಯಾ ಭಗವತ್ಯಧೋಕ್ಷಜೇ
ನಿವೇಶಿತಾತ್ಮೋಪರರಾಮ ಸಂಸೃತೇಃ ॥ ೩೩ ॥

ಯಯಾಹರದ್ಭುವೋ ಭಾರಂ ತಾಂ ತನುಂ ವಿಜಹಾವಜಃ ।
ಕಂಟಕಂ ಕಂಟಕೇನೇವ ದ್ವಯಂ ಚಾಪೀಶಿತುಃ ಸಮಮ್ ॥ ೩೪ ॥

ಘೋಷಣೆಯನ್ನೂ ಮಾಡುತ್ತವೆ, ಪರಸ್ಪರ ಹೊಡೆದಾಡಿ ಸತ್ತು ಹೋಗುತ್ತಾರೆ. ನಿಜವಾಗಿ ಇದು ಸರ್ವಶಕ್ತಿಶಾಲಿಯಾದ ಭಗವಂತನ ಲೀಲೆಯೇ ಆಗಿದೆ. ॥ ೨೪ ॥ ನೀರಿನಲ್ಲಿ ಬದುಕುವ ಮೀನು ಮುಂತಾದ ಜಲಚರ ಪ್ರಾಣಿಗಳಲ್ಲಿ ದೊಡ್ಡದು-ಚಿಕ್ಕದನ್ನು ನುಂಗಿಹಾಕುವಂತೆ, ಜನರಲ್ಲಿಯೂ ಬಲಶಾಲಿಗಳು ದುರ್ಬಲರನ್ನು ಕೊಂದುಹಾಕುತ್ತಾರೆ. ಇಬ್ಬರೂ ಬಲಶಾಲಿಗಳಾಗಿದ್ದರೆ ಪರಸ್ಪರವಾಗಿ ಹೊಡೆದಾಡಿಕೊಂಡು ಸಾಯುತ್ತಾರೆ. ಹೀಗೆಯೇ ಭಗವಂತನು ಮಹಾಬಲಿಷ್ಠರಾಗಿದ್ದ ಯಾದವರ ಮೂಲಕ ಇತರ ರಾಜರನ್ನು ಸಂಹಾರಮಾಡಿಸಿ, ಕೊನೆಗೆ ಆ ಯದುವಂಶೀಯರಲ್ಲೇ ಒಬ್ಬರು ಮತ್ತೊಬ್ಬರನ್ನು ಕೊಂದುಹಾಕುವಂತೆ ಮಾಡಿ ಪೂರ್ಣವಾಗಿ ಭೂಭಾರವನ್ನು ಇಳಿಸಿದನು. ॥ ೨೫-೨೬ ॥ ಭಗವಾನ್ ಶ್ರೀಕೃಷ್ಣನು ನನಗೆ ಮಾಡಿದ ಉಪದೇಶವು ಸಮಯ, ಸನ್ನಿವೇಶ, ಸಂದರ್ಭ, ಉದ್ದೇಶಗಳಿಗೆ ಅನುಗುಣವಾಗಿ ಹೃದಯದ ಸಂತಾಪವನ್ನು ಶಾಂತಗೊಳಿಸುವಂತಿತ್ತು. ಅದು ಸ್ಮರಣೆಗೆ ಬಂದು ನನ್ನ ಚಿತ್ತವು ಸೂರೆಗೊಳ್ಳುತ್ತದೆ.” ॥ ೨೭ ॥

ಸೂತಪುರಾಣಿಕರು ಹೇಳುತ್ತಾರೆ - ಹೀಗೆ ಭಗವಾನ್ ಶ್ರೀಕೃಷ್ಣನ ಅಡಿದಾವರೆಗಳನ್ನು ಪ್ರಗಾಢವಾದ ಭಕ್ತಿಯಿಂದ ಸ್ಮರಿಸುತ್ತಿರುವಂತೆಯೇ ಅರ್ಜುನನ ಬುದ್ಧಿಯು ತಿಳಿಯಾಗಿ, ಪ್ರಶಾಂತವಾಗಿ ಬಿಟ್ಟಿತು. ॥ ೨೮ ॥ ಭಗವಾನ್ ಶ್ರೀಕೃಷ್ಣನ ಚರಣಕಮಲಗಳನ್ನು ಹಗಲಿರುಳು ಚಿಂತಿಸುವುದರಿಂದ ಅವನಲ್ಲಿ ಪ್ರೇಮಾಭಕ್ತಿಯು ಹೆಚ್ಚಾಗಿ ಬೆಳೆಯಿತು. ಭಕ್ತಿಯ ಆವೇಶವು ಅವನ ಹೃದಯವನ್ನು ಮಥಿಸಿ, ಅದರಿಂದ ಎಲ್ಲ ವಿಕಾರಗಳನ್ನೂ ತೊಳೆದುಹಾಕಿತು. ॥ ೨೯ ॥ ಯುದ್ಧದ ಪ್ರಾರಂಭದಲ್ಲಿ ಭಗವಂತನು ಅವನಿಗೆ ಮಾಡಿದ ಗೀತೋಪದೇಶದ ಜ್ಞಾನವು-ಕಾಲ, ಕರ್ಮ, ತಮೋಗುಣಗಳ ಪ್ರಭಾವದಿಂದ ಅಲ್ಲಿಯವರೆಗೆ ಮರೆಯಾಗಿದ್ದು ಈಗ ಮತ್ತೆ ಪುನಃ ಅವನ ಸ್ಮೃತಿಪಥವನ್ನು ಬೆಳಗಿತು. ॥ ೩೦ ॥ ಬ್ರಹ್ಮಜ್ಞಾನದ ಪ್ರಾಪ್ತಿಯಿಂದ ಮಾಯೆಯ ಆವರಣವು ಕಳಚಿಬಿತ್ತು. ತ್ರಿಗುಣಾತೀತ ಅವಸ್ಥೆಯು ಅವನಿಗೆ ಉಂಟಾಯಿತು. ದ್ವೈತದ ಸಂಶಯವು ನಿವೃತ್ತವಾಯಿತು. ಸೂಕ್ಷ್ಮಶರೀರ (ಲಿಂಗಶರೀರ) ಭಂಗವಾಯಿತು. ಅವನು ಶೋಕ ಹಾಗೂ ಹುಟ್ಟು-ಸಾವುಗಳ ಚಕ್ರದಿಂದ ಪೂರ್ಣವಾಗಿ ಬಿಡುಗಡೆಹೊಂದಿದನು. ॥ ೩೧ ॥

ಶ್ರೀಭಗವಂತನು ಸ್ವಧಾಮಕ್ಕೆ ತೆರಳಿದ ವೃತ್ತಾಂತವನ್ನು ಹಾಗೂ ಯದುಕುಲ ಸಂಹಾರದ ಸಮಾಚಾರವನ್ನು ಕೇಳಿ ಯುಧಿಷ್ಠಿರನು ನಿಶ್ಚಲಬುದ್ಧಿಯಿಂದ ಸ್ವರ್ಗಾರೋಹಣವನ್ನು ನಿಶ್ಚಯಿಸಿದನು. ॥ ೩೨ ॥ ಕುಂತೀದೇವಿಯೂ ಕೂಡ ಯದುವಂಶದ ಕ್ಷಯವನ್ನು ಮತ್ತು ಭಗವಂತನ ಸ್ವಧಾಮಗಮನವನ್ನು ಕೇಳಿ ಅನನ್ಯ ಭಕ್ತಿಯಿಂದ ತನ್ನ ಹೃದಯವನ್ನು ಭಗವಾನ್ ಶ್ರೀಕೃಷ್ಣನಲ್ಲಿ ತೊಡಗಿಸಿ ಸಂಸಾರ ಬಂಧನದಿಂದ ಎಂದೆಂದಿಗೂ ಬಿಡುಗಡೆಹೊಂದಿದಳು. ॥ ೩೩ ॥ ಜನ್ಮರಹಿತನಾದ ಭಗವಂತನು - 'ಮುಳ್ಳಿನಿಂದಲೇ ಮುಳ್ಳನ್ನು ತೆಗೆದು, ಕೊನೆಗೆ ಎರಡನ್ನೂ ಎಸೆದುಬಿಡುವಂತೆ 'ಲೋಕದೃಷ್ಟಿಯಲ್ಲಿ ಯಾವ ಯಾದವ ಶರೀರವನ್ನು ಪ್ರಕಟಪಡಿಸಿ ಅದರಿಂದ ಭೂಭಾರವನ್ನು ಇಳಿಸಿದನೋ, ಆ ಶರೀರವನ್ನೂ ತ್ಯಜಿಸಿಬಿಟ್ಟನು. ಭಗವಂತನ ದೃಷ್ಟಿಯಲ್ಲಿ ಅವೆರಡೂ ಸಮಾನವೇ ಆಗಿವೆಯಷ್ಟೆ! ॥ ೩೪ ॥ ಓರ್ವ ನಟನಂತೆ ಮತ್ಸ್ಯಾದಿ ಅವತಾರ ಶರೀರಗಳನ್ನು

ಯಥಾ ಮತ್ಸ್ಯಾದಿರೂಪಾಣಿ ಧತ್ತೇ ಜಹ್ಯಾದ್ಯಥಾ ನಟಃ ।
ಭೂಭಾರಃ ಕ್ಷಪಿತೋ ಯೇನ ಜಹೌ ತಚ್ಚ ಕಲೇವರಮ್ ॥ ೩೫ ॥

ಯದಾ ಮುಕುಂದೋ ಭಗವಾನಿಮಾಂ ಮಹೀಂ
ಜಹೌ ಸ್ವತನ್ವಾ ಶ್ರವಣೀಯಸತ್ಕಥಃ ।
ತದಾಹರೇವಾಪ್ರತಿಬುದ್ಧಚೇತಸಾ-
ಮಧರ್ಮಹೇತುಃ ಕಲಿರನ್ವವರ್ತತ ॥ ೩೬ ॥

ಯುಧಿಷ್ಠಿರಸ್ತತ್ಪರಿಸರ್ಪಣಂ ಬುಧಃ
ಪುರೇ ಚ ರಾಷ್ಟ್ರೇ ಚ ಗೃಹೇ ತಥಾತ್ಮನಿ ।
ವಿಭಾವ್ಯ ಲೋಭಾನೃತಜಿಹ್ಮಹಿಂಸನಾ-
ದ್ಯಧರ್ಮಚಕ್ರಂ ಗಮನಾಯ ಪರ್ಯಧಾತ್ ॥ ೩೭ ॥

ಸ್ವರಾಟ್ ಪೌತ್ರಂ ವಿನಯಿನಮಾತ್ಮನಃ ಸುಸಮಂ ಗುಣೈಃ ।
ತೋಯನೀವ್ಯಾಃ ಪತಿಂ ಭೂಮೇರಭ್ಯಷಿಂಚದ್ಗಜಾಹ್ವಯೇ ॥ ೩೮ ॥

ಮಥುರಾಯಾಂ ತಥಾ ವಜ್ರಂ ಶೂರಸೇನಪತಿಂ ತತಃ ।
ಪ್ರಾಜಾಪತ್ಯಾಂ ನಿರೂಪ್ಯೇಷ್ಟಿಮಗ್ನೀನಪಿಬದೀಶ್ವರಃ ॥ ೩೯ ॥

ವಿಸೃಜ್ಯ ತತ್ರ ತತ್ಸರ್ವಂ ದುಕೂಲವಲಯಾದಿಕಮ್ ।
ನಿರ್ಮಮೋ ನಿರಹಂಕಾರಃ ಸಂಛಿನ್ನಾಶೇಷಬಂಧನಃ ॥ ೪೦ ॥

ವಾಚಂ ಜುಹಾವ ಮನಸಿ ತತ್ಪ್ರಾಣ ಇತರೇ ಚ ತಮ್ ।
ಮೃತ್ಯಾವಪಾನಂ ಸೋತ್ಸರ್ಗಂ ತಂ ಪಂಚತ್ವೇ ಹ್ಯಜೋಹವೀತ್ ॥ ೪೧ ॥

ತ್ರಿತ್ವೇ ಹುತ್ವಾಥ ಪಂಚತ್ವಂ ತಚ್ಚೈಕತ್ವೇಽಜುಹೋನ್ಮುನಿಃ ।
ಸರ್ವಮಾತ್ಮನ್ಯಜುಹವೀದ್ ಬ್ರಹ್ಮಣ್ಯಾತ್ಮಾನಮವ್ಯಯೇ ॥ ೪೨ ॥

ಚೀರವಾಸಾ ನಿರಾಹಾರೋ ಬದ್ಧವಾಙ್ಮುಕ್ತಮೂರ್ಧಜಃ ।
ದರ್ಶಯನ್ನಾತ್ಮನೋ ರೂಪಂ ಜಡೋನ್ಮತ್ತಪಿಶಾಚವತ್ ॥ ೪೩ ॥

ಅನವೇಕ್ಷಮಾಣೋ ನಿರಗಾದಶೃಣ್ವನ್ ಬಧಿರೋ ಯಥಾ ।
ಉದೀಚೀಂ ಪ್ರವಿವೇಶಾಶಾಂ ಗತಪೂರ್ವಾಂ ಮಹಾತ್ಮಭಿಃ ।
ಹೃದಿ ಬ್ರಹ್ಮ ಪರಂ ಧ್ಯಾಯನ್ನಾವರ್ತೇತ ಯತೋ ಗತಃ ॥ ೪೪ ॥

ಸ್ವೀಕರಿಸುವ ಭಗವಂತನು ಭೂಭಾರವನ್ನಿಳುಹಲು ಯಾದವ ದೇಹದಿಂದ ಭೂಮಿಗೆ ಇಳಿದಿದ್ದನೋ, ಆ ಶರೀರವನ್ನೂ ಮರೆಮಾಡಿದನು. ॥ ೩೫ ॥ ಶ್ರವಣಮಂಗಳವಾದ ದಿವ್ಯಲೀಲೆಗಳನ್ನು ಯಾವ ದೇಹದಿಂದ ನಡೆಸಿದ್ದನೋ, ಆ ದೇಹವನ್ನು ಭಗವಂತನು ಭೂಮಿಯಲ್ಲಿ ತ್ಯಜಿಸಿದ ದಿನದಿಂದಲೇ ಅವಿವೇಕಿಗಳನ್ನು ಅಧರ್ಮದಲ್ಲಿ ಸಿಲುಕಿಸುವಂತಹ ಕಲಿಯುಗವು ಪ್ರಾರಂಭವಾಯಿತು. ॥ ೩೬ ॥ ವಿವೇಕಿಯಾದ ಧರ್ಮರಾಜನು – ತನ್ನ ರಾಜಧಾನಿಯಲ್ಲಿಯೂ, ರಾಷ್ಟ್ರದಲ್ಲಿಯೂ, ಮನೆ-ಮನೆಗಳಲ್ಲಿಯೂ, ಮನಸ್ಸಿನಲ್ಲಿಯೂ ದುರಾಸೆ, ಅಸತ್ಯ, ಕಾಪಟ್ಯ, ಹಿಂಸೆ ಮುಂತಾದ ಅಧರ್ಮ ಚಕ್ರವನ್ನು ನಡೆಸುವ ಕಲಿಪುರುಷನ ಆಕ್ರಮಣವನ್ನೂ ವಿಸ್ತಾರವನ್ನೂ ಗಮನಿಸಿದಾಗ ಮಹಾಪ್ರಸ್ಥಾನವನ್ನು ನಿಶ್ಚಯಿಸಿದನು. ॥ ೩೭ ॥ ಆ ಸಾರ್ವಭೌಮನು ವಿನಯಸಂಪನ್ನನಾಗಿದ್ದ, ಗುಣಸಂಪತ್ತಿನಿಂದ ತನ್ನನ್ನೇ ಸರಿಹೋಲುತ್ತಿದ್ದ ಮೊಮ್ಮಗನಾದ ಪರೀಕ್ಷಿತನನ್ನು ಸಮುದ್ರಪರ್ಯಂತವಾದ ಭೂಮಿಯ ಸಾಮ್ರಾಜ್ಯಪದವಿಯಲ್ಲಿ ಕುಳ್ಳಿರಿಸಿ ಹಸ್ತಿನಾಪುರಿಯಲ್ಲಿ ಪಟ್ಟಾಭಿಷೇಕ ಮಾಡಿದನು. ॥ ೩೮ ॥ ಹಾಗೆಯೇ ಆ ಪ್ರಭುವು ಮಥುರೆಯಲ್ಲಿ ಶೂರಸೇನ ದೇಶದ ಅಧಿಪತಿಯಾಗಿ ಅನಿರುದ್ಧನ ಪುತ್ರನಾದ ವಜ್ರನಾಭನಿಗೆ ಪಟ್ಟಕಟ್ಟಿದನು. ಅನಂತರ ತಾನು ಪ್ರಾಜಾಪತ್ಯವೆಂಬ ಇಷ್ಟಿಯನ್ನು ಮಾಡಿ ಆಹವನೀಯವೇ ಮುಂತಾದ ಅಗ್ನಿಗಳನ್ನು ತನ್ನಲ್ಲಿಯೇ ಲಯಗೊಳಿಸಿಕೊಂಡು ಗೃಹಸ್ಥಾಶ್ರಮದಿಂದ ಮುಕ್ತನಾಗಿ ಸಂನ್ಯಾಸವನ್ನು ಸ್ವೀಕರಿಸಿದನು. ॥ ೩೯ ॥ ಯುಧಿಷ್ಠಿರನು ತನ್ನ ಅಮೂಲ್ಯವಾದ ವಸ್ತ್ರ-ಆಭೂಷಣಗಳನೆಲ್ಲ ಅಲ್ಲಿಯೇ ತ್ಯಜಿಸಿ, ಅಹಂಕಾರ- ಮಮಕಾರಗಳನ್ನು ತೊರೆದು ಎಲ್ಲ ಸಾಂಸಾರಿಕ ಬಂಧನಗಳನ್ನು ಕತ್ತರಿಸಿ ಹಾಕಿದನು. ॥ ೪೦ ॥ ಅವನು ದೃಢಭಾವನೆಯಿಂದ ವಾಣಿಯನ್ನು ಮನಸ್ಸಿನಲ್ಲಿಯೂ, ಮನಸ್ಸನ್ನು ಪ್ರಾಣದಲ್ಲಿಯೂ, ಪ್ರಾಣವನ್ನು ಅಪಾನದಲ್ಲಿಯೂ, ಅಪಾನವನ್ನು ಅದರ ಕ್ರಿಯೆಗಳೊಂದಿಗೆ ಮೃತ್ಯುವಿನಲ್ಲಿ ಹಾಗೂ ಮೃತ್ಯುವನ್ನು ಪಂಚಭೂತ ಶರೀರದಲ್ಲಿ ಲೀನಗೊಳಿಸಿಕೊಂಡನು. ॥ ೪೧ ॥ ಹೀಗೆ ಶರೀರವನ್ನು ಮೃತ್ಯುರೂಪೀ ಎಂದು ಅನುಭವಿಸುತ್ತಾ ಅವನು ಅದನ್ನು ತ್ರಿಗುಣಗಳ ಸಮುದಾಯದಲ್ಲಿ ವಿಲಯಗೊಳಿಸಿ, ತ್ರಿಗುಣಗಳನ್ನು ಮೂಲಪ್ರಕೃತಿಯಲ್ಲಿಯೂ, ಸರ್ವಕಾರಣರೂಪೀ ಪ್ರಕೃತಿಯನ್ನು ಆತ್ಮನಲ್ಲಿಯೂ, ಆತ್ಮನನ್ನು ಅವಿನಾಶೀ ಬ್ರಹ್ಮನಲ್ಲಿ ವಿಲೀನಗೊಳಿಸಿದನು. ಆಗ ಅವನಿಗೆ ಈ ದೃಶ್ಯಪ್ರಪಂಚವೆಲ್ಲವೂ ಬ್ರಹ್ಮಸ್ವರೂಪವಾಗಿದೆ ಎಂಬ ಅನುಭವ ಆಗತೊಡಗಿತು. ॥ ೪೨ ॥ ಅನಂತರ ಅವನು ನಾರುಮಡಿಯನ್ನುಟ್ಟು, ಅನ್ನ-ಪಾನಾದಿಗಳನ್ನು ತ್ಯಜಿಸಿ, ಮೌನವಹಿಸಿದನು. ಕೂದಲುಗಳನ್ನು ಬಿಚ್ಚಿ ಕೆದರಿಕೊಂಡು ಜಡನಂತೆಯೂ, ಪಿಶಾಚಿಯಂತೆಯೂ ರೂಪ, ವೇಷ, ಕೃತಿಗಳಿಂದ ಕಾಣಿಸಿಕೊಳ್ಳತೊಡಗಿದನು. ॥ ೪೩ ॥ ಮತ್ತೆ ಅವನು ಕುರುಡನಂತೆ ಯಾವುದನ್ನೂ ನೋಡದೆ, ಕಿವುಡನಂತೆ ಯಾವುದನ್ನೂ ಕೇಳದೆ ಮನೆಯಿಂದ ಹೊರಟುಬಿಟ್ಟನು. ಯಾವುದನ್ನು ಪಡೆದ ಬಳಿಕ ಮತ್ತೆ ಸಂಸಾರಕ್ಕೆ ಮರಳುವಿಕೆ ಇರುವುದಿಲ್ಲವೋ ಅಂತಹ ಪರಬ್ರಹ್ಮನನ್ನು ಧ್ಯಾನಿಸುತ್ತಾ, ಮಹಾತ್ಮರೆಲ್ಲರೂ ಮಹಾಪ್ರಸ್ಥಾನ ಮಾಡಿದ ಉತ್ತರದಿಕ್ಕಿನ ಕಡೆಗೆ ಹೊರಟನು. ॥ ೪೪ ॥ ಈಗ ಪೃಥ್ವಿಯಲ್ಲಿ ಎಲ್ಲ ಜನರನ್ನು ಅಧರ್ಮದ ಸಹಾ

ಸರ್ವೇ ತಮನು ನಿರ್ಜಗ್ಮುರ್ಭ್ರಾತರಃ ಕೃತನಿಶ್ಚಯಾಃ ।
ಕಲಿನಾಧರ್ಮಮಿತ್ರೇಣ ದೃಷ್ಟ್ವಾ ಸ್ಪೃಷ್ಟಾಃ ಪ್ರಜಾ ಭುವಿ ॥ ೪೫ ॥

ಯಿತ ಕಲಿಯುಗವು ಪ್ರಭಾವಿತಗೊಳಿಸಿದೆ ಎಂದು ಭೀಮಸೇನ, ಅರ್ಜುನನೇ ಮೊದಲಾದ ಧರ್ಮರಾಜನ ತಮ್ಮಂದಿರು ನೋಡಿ, ಆ ಶ್ರೀಕೃಷ್ಣಪರಮಾತ್ಮನ ಚರಣಗಳ ಪ್ರಾಪ್ತಿಯ ದೃಢನಿಶ್ಚಯಗೈದು ತಮ್ಮ ಅಣ್ಣನೊಡನೆ ಹಿಂದೆ-ಹಿಂದೆ ನಡೆದುಬಿಟ್ಟರು. ॥ ೪೫ ॥

ತೇ ಸಾಧುಕೃತಸರ್ವಾರ್ಥಾ ಜ್ಞಾತ್ವಾತ್ಯಂತಿಕಮಾತ್ಮನಃ ।
ಮನಸಾ ಧಾರಯಾಮಾಸುರ್ವೈಕುಂಠಚರಣಾಂಬುಜಮ್ ॥ ೪೬ ॥

ಅವರೆಲ್ಲರೂ ಜೀವನದ ಎಲ್ಲ ಲಾಭಗಳನ್ನು ಚೆನ್ನಾಗಿ ಪಡೆದುಕೊಂಡಿದ್ದರು. ಈಗ ನಮಗೆ ಭಗವಾನ್ ಶ್ರೀಕೃಷ್ಣನ ಚರಣಕಮಲಗಳೇ ಪರಮಪುರುಷಾರ್ಥವೆಂದು ನಿಶ್ಚಯಿಸಿಕೊಂಡು ಅವರು ಅವನ್ನು ಹೃದಯದಲ್ಲಿ ಧರಿಸಿಕೊಂಡರು. ॥ ೪೬ ॥

ತದ್ಧ್ಯಾನೋದ್ರಿಕ್ತಯಾ ಭಕ್ತ್ಯಾ ವಿಶುದ್ಧಧಿಷಣಾಃ ಪರೇ ।
ತಸ್ಮಿನ್ನಾರಾಯಣಪದೇ ಏಕಾಂತಮತಯೋ ಗತಿಮ್ ॥ ೪೭ ॥

ಅವಾಪುರ್ದುರವಾಪಾಂ ತೇ ಅಸದ್ಭಿರ್ವಿಷಯಾತ್ಮಭಿಃ ।
ವಿಧೂತಕಲ್ಮಷಾಸ್ಥಾನೇ ವಿರಜೇನಾತ್ಮನೈವ ಹಿ ॥ ೪೮ ॥

ಪಾಂಡವರ ಹೃದಯದಲ್ಲಿ ಭಗವಾನ್ ಶ್ರೀಕೃಷ್ಣನ ಚರಣಕಮಲಗಳ ಧ್ಯಾನದಿಂದ ಭಕ್ತಿಭಾವವು ಉಕ್ಕಿಬಂತು. ಅವರ ಬುದ್ಧಿಗಳು ಪೂರ್ಣರೂಪದಿಂದ ಶುದ್ಧವಾಗಿ ಪುಣ್ಯಾತ್ಮರು ಸ್ಥಿರವಾಗಿ ನೆಲೆಸುವ ಆ ಭಗವಾನ್ ಶ್ರೀಕೃಷ್ಣನ ಸರ್ವೋತ್ತಮವಾದ ಸ್ವರೂಪದಲ್ಲಿ ಅನನ್ಯಭಾವದಿಂದ ಸ್ಥಿರವಾದುವು. ಫಲಸ್ವರೂಪವಾಗಿ ವಿಷಯಾಸಕ್ತ ದುಷ್ಟಜನರು ಎಂದೂ ಪಡೆಯಲಾರದ ಗತಿಯನ್ನು ವಿಶುದ್ಧ ಅಂತಃಕರಣದಿಂದ ಅವರು ಪಡೆದುಕೊಂಡರು. ॥ ೪೭-೪೮ ॥

ವಿದುರೋಽಪಿ ಪರಿತ್ಯಜ್ಯ ಪ್ರಭಾಸೇ ದೇಹಮಾತ್ಮವಾನ್ ।
ಕೃಷ್ಣಾವೇಶೇನ ತಚ್ಚಿತ್ತಃ ಪಿತೃಭಿಃ ಸ್ವಕ್ಷಯಂ ಯಯೌ ॥ ೪೯ ॥

ಸಂಯಮಿ ಹಾಗೂ ಶ್ರೀಕೃಷ್ಣನ ಪ್ರೇಮದಿಂದ ಮುಗ್ಧನಾದ ಭಗವನ್ಮಯ ವಿದುರನೂ ಕೂಡ ತನ್ನ ಶರೀರವನ್ನು ಪ್ರಭಾಸಕ್ಷೇತ್ರದಲ್ಲಿ ತ್ಯಜಿಸಿಬಿಟ್ಟನು. ಆಗ ಅವನನ್ನು ಕರೆದುಕೊಂಡು ಹೋಗಲು ಬಂದ ಪಿತೃಗಳೊಂದಿಗೆ ಅವನು ತನ್ನ ಲೋಕ (ಯಮಲೋಕ)ಕ್ಕೆ ಹೊರಟುಹೋದನು. ॥ ೪೯ ॥

ದ್ರೌಪದೀ ಚ ತದಾಽಽಜ್ಞಾಯ ಪತೀನಾಮನಪೇಕ್ಷತಾಮ್ ।
ವಾಸುದೇವೇ ಭಗವತಿ ಹ್ಯೇಕಾಂತಮತಿರಾಪ ತಮ್ ॥ ೫೦ ॥

ಈಗ ಪಾಂಡವರು ನಿರಪೇಕ್ಷರಾಗಿದ್ದಾರೆಂದು ದ್ರೌಪದಿಯು ಗಮನಿಸಿ, ಅವಳು ಅನನ್ಯ ಭಕ್ತಿಯಿಂದ ಭಗವಾನ್ ಶ್ರೀಕೃಷ್ಣನನ್ನೇ ಚಿಂತಿಸುತ್ತಾ, ಅವನನ್ನು ಪಡೆದುಕೊಂಡಳು. ॥ ೫೦ ॥

ಯಃ ಶ್ರದ್ಧಯೈತದ್ಭಗವತ್ಪ್ರಿಯಾಣಾಂ
ಪಾಂಡೋಃ ಸುತಾನಾಮಿತಿ ಸಂಪ್ರಯಾಣಮ್ ।
ಶೃಣೋತ್ಯಲಂ ಸ್ವಸ್ತ್ಯಯನಂ ಪವಿತ್ರಂ
ಲಬ್ಧ್ವಾ ಹರೌ ಭಕ್ತಿಮುಪೈತಿ ಸಿದ್ಧಿಮ್ ॥ ೫೧ ॥

ಪರಮಪವಿತ್ರವೂ, ಮಂಗಳಕರವೂ ಆದ ಭಗವಂತನ ಪ್ರಿಯಭಕ್ತರಾದ ಪಾಂಡವರ ಮಹಾಪ್ರಯಾಣದ ಈ ಕಥೆಯನ್ನು ಶ್ರದ್ಧೆಯಿಂದ ಕೇಳುವವನು ನಿಶ್ಚಯವಾಗಿ ಭಗವಂತನ ಭಕ್ತಿ ಮತ್ತು ಮುಕ್ತಿಗಳನ್ನು ಪಡೆದುಕೊಳ್ಳುವನು. ॥ ೫೧ ॥

ಹದಿನೈದನೆಯ ಅಧ್ಯಾಯವು ಮುಗಿಯಿತು. ॥ ೧೫ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಪ್ರಥಮಸ್ಕಂಧೇ ಪಾಂಡವಸ್ವರ್ಗಾರೋಹಣಂ ನಾಮ ಪಂಚದಶೋಽಧ್ಯಾಯಃ ॥ ೧೫ ॥

ಹದಿನಾರನೆಯ ಅಧ್ಯಾಯ

ಪರೀಕ್ಷಿದ್ರಾಜನ ದಿಗ್ವಿಜಯ ಮತ್ತು ಧರ್ಮ-ಪೃಥ್ವೀ ಸಂವಾದ

ಸೂತ ಉವಾಚ

ತತಃ ಪರೀಕ್ಷಿದ್ದ್ವಿಜವರ್ಯಶಿಕ್ಷಯಾ
ಮಹೀಂ ಮಹಾಭಾಗವತಃ ಶಶಾಸ ಹ ।
ಯಥಾ ಹಿ ಸೂತ್ಯಾಮಭಿಜಾತಕೋವಿದಾಃ
ಸಮಾದಿಶನ್ವಿಪ್ರ ಮಹದ್ಗುಣಸ್ತಥಾ ॥ ೧ ॥

ಸೂತಪುರಾಣಿಕರು ಹೇಳುತ್ತಾರೆ – ಬ್ರಾಹ್ಮಣೋತ್ತಮರಾದ ಶೌನಕರೇ! ಪಾಂಡವರ ಮಹಾಪ್ರಸ್ಥಾನದ ಬಳಿಕ ಪರಮ ಭಾಗವತೋತ್ತಮನಾದ ಪರೀಕ್ಷಿದ್ರಾಜನು ಬ್ರಾಹ್ಮಣಶ್ರೇಷ್ಠರ ಉಪದೇಶದಂತೆ ಭೂಮಿಯನ್ನು ಆಳತೊಡಗಿದನು. ಆತನ ಜನ್ಮಸಮಯದಲ್ಲಿ ಜ್ಯೋತಿರ್ವಿದ್ವಾಂಸರು ಅವನ ಸಂಬಂಧವಾಗಿ ಹೇಳಿದ್ದ ಶ್ರೇಷ್ಠ ಗುಣಗಳೆಲ್ಲವೂ ಅವನಲ್ಲಿ ಪೂರ್ಣವಾಗಿ ಕಂಡುಬಂದವು. ॥ ೧ ॥

ಸ ಉತ್ತರಸ್ಯ ತನಯಾಮುಪಯೇಮ ಇರಾವತೀಮ್ ।
ಜನಮೇಜಯಾದೀಂಶ್ಚತುರಸ್ತಸ್ಯಾಮುತ್ಪಾದಯತ್ಸುತಾನ್ ॥ ೨ ॥

ಆಜಹಾರಾಶ್ವಮೇಧಾಂಸ್ತ್ರೀನ್ ಗಂಗಾಯಾಂ ಭೂರಿದಕ್ಷಿಣಾನ್ ।
ಶಾರದ್ವತಂ ಗುರುಂ ಕೃತ್ವಾ ದೇವಾ ಯತ್ರಾಕ್ಷಿಗೋಚರಾಃ ॥ ೩ ॥

ನಿಜಗ್ರಾಹೌಜಸಾ ವೀರಃ ಕಲಿಂ ದಿಗ್ವಿಜಯೇ ಕ್ವಚಿತ್ ।
ನೃಪಲಿಂಗಧರಂ ಶೂದ್ರಂ ಘ್ನಂತಂ ಗೋಮಿಥುನಂ ಪದಾ ॥ ೪ ॥

ಶೌನಕ ಉವಾಚ

ಕಸ್ಯ ಹೇತೋರ್ನಿಜಗ್ರಾಹ ಕಲಿಂ ದಿಗ್ವಿಜಯೇ ನೃಪಃ ।
ನೃದೇವಚಿಹ್ನಧೃಕ್ ಶೂದ್ರಕೋಽಸೌ ಗಾಂ ಯಃ ಪದಾಹನತ್ ॥ ೫ ॥

ತತ್ಕಥ್ಯತಾಂ ಮಹಾಭಾಗ ಯದಿ ಕೃಷ್ಣಕಥಾಶ್ರಯಮ್ ।
ಅಥವಾಸ್ಯ ಪದಾಂಭೋಜಮಕರಂದಲಿಹಾಂ ಸತಾಮ್ ।
ಕಿಮನ್ಯೈರಸದಾಲಾಪೈರಾಯುಷೋ ಯದಸದ್ವ್ಯಯಃ ॥ ೬ ॥

ಕ್ಷುದ್ರಾಯುಷಾಂ ನೃಣಾಮಂಗ ಮರ್ತ್ಯಾನಾಮೃತಮಿಚ್ಛತಾಮ್ ।
ಇಹೋಪಹೂತೋ ಭಗವಾನ್ಮೃತ್ಯುಃ ಶಾಮಿತ್ರಕರ್ಮಣಿ ॥ ೭ ॥

ನ ಕಶ್ಚಿನ್ಮ್ರಿಯತೇ ತಾವದ್ಯಾವದಾಸ್ತ ಇಹಾಂತಕಃ ।
ಏತದರ್ಥಂ ಹಿ ಭಗವಾನಾಹೂತಃ ಪರಮರ್ಷಿಭಿಃ ।
ಅಹೋ ನೃಲೋಕೇ ಪೀಯೇತ ಹರಿಲೀಲಾಮೃತಂ ವಚಃ ॥ ೮ ॥

ಮಂದಸ್ಯ ಮಂದಪ್ರಜ್ಞಸ್ಯ ವಯೋ ಮಂದಾಯುಷಶ್ಚ ವೈ ।
ನಿದ್ರಯಾ ಹ್ರಿಯತೇ ನಕ್ತಂ ದಿವಾ ಚ ವ್ಯರ್ಥಕರ್ಮಭಿಃ ॥ ೯ ॥

ಸೂತ ಉವಾಚ

ಯದಾ ಪರೀಕ್ಷಿತ್ಕುರುಜಾಂಗಲೇಽವಸತ್
ಕಲಿಂ ಪ್ರವಿಷ್ಟಂ ನಿಜಚಕ್ರವರ್ತಿತೇ ।
ನಿಶಮ್ಯ ವಾರ್ತಾಮನತಿಪ್ರಿಯಾಂ ತತಃ
ಶರಾಸನಂ ಸಂಯುಗಶೌಂಡಿರಾದದೇ ॥ ೧೦ ॥

ಅವನು ತನ್ನ ಸೋದರಮಾವನಾದ ಉತ್ತರನ ಪುತ್ರೀ 'ಇರಾವತಿ' ಎಂಬುವಳೊಡನೆ ವಿವಾಹವಾದನು. ಆಕೆಯಲ್ಲಿ ಜನಮೇಜಯನೇ ಮೊದಲಾದ ನಾಲ್ಕು ಪುತ್ರರನ್ನು ಪಡೆದನು. ॥ ೨ ॥ ಕೃಪಾಚಾರ್ಯರನ್ನು ಆಚಾರ್ಯರನ್ನಾಗಿಸಿ ಕೊಂಡು ಗಂಗಾತೀರದಲ್ಲಿ ಮೂರು ಅಶ್ವಮೇಧಯಜ್ಞಗಳನ್ನು ಮಾಡಿದನು. ಆ ಎಲ್ಲ ಯಜ್ಞಗಳಲ್ಲಿಯೂ ಬ್ರಾಹ್ಮಣರಿಗೆ ಹೇರಳವಾಗಿ ದಕ್ಷಿಣೆ ಕೊಡಲಾಯಿತು. ಆ ಯಾಗಗಳಲ್ಲಿ ದೇವತೆಗಳು ಪ್ರತ್ಯಕ್ಷವಾಗಿ ಬಂದು ತಮ್ಮ-ತಮ್ಮ ಹವಿರ್ಭಾಗಗಳನ್ನು ಸ್ವೀಕರಿಸುತ್ತಿದ್ದರು. ॥ ೩ ॥ ಒಮ್ಮೆ ಅವನು ದಿಗ್ವಿಜಯ ಮಾಡುತ್ತಿದ್ದಾಗ ಒಂದೆಡೆಯಲ್ಲಿ ಶೂದ್ರನ ರೂಪದಲ್ಲಿ ಕಲಿಯುಗವು ರಾಜವೇಷವನ್ನು ತೊಟ್ಟು ಒಂದು ಗೋವು ಮತ್ತು ಒಂದು ಎತ್ತು ಈ ಜೋಡಿಯನ್ನು ಕಾಲಿನಿಂದ ಒದೆಯುತ್ತಿರುವುದನ್ನು ನೋಡಿದನು. ಆಗ ಪರೀಕ್ಷಿತನು ಅವನನ್ನು ಪರಾಕ್ರಮದಿಂದ ನಿಗ್ರಹಿಸಿದನು. ॥ ೪ ॥

ಶೌನಕರು ಕೇಳಿದರು – ಸೂತಪುರಾಣಿಕರೇ! 'ಪರೀಕ್ಷಿದ್ರಾಜನು ದಿಗ್ವಿಜಯದ ಸಮಯದಲ್ಲಿ ಕಲಿಪುರುಷನನ್ನು ಶಿಕ್ಷಿಸಿ, ಏಕೆ ಬಿಟ್ಟುಬಿಟ್ಟನು? ಕೊಲ್ಲಲಿಲ್ಲವೇಕೆ? ಏಕೆಂದರೆ, ಗೋವನ್ನು ಕಾಲಿನಿಂದ ಒದ್ದವನು ರಾಜನವೇಷ ತೊಟ್ಟುಕೊಂಡಿದ್ದರೂ ಅವನು ಅಧಮನಾದ ಶೂದ್ರನೇ ಆಗಿದ್ದನು. ಈ ಪ್ರಸಂಗವು ಭಗವಾನ್ ಶ್ರೀಕೃಷ್ಣನ ಲೀಲೆಗಳಿಗೆ ಸಂಬಂಧಪಟ್ಟಿದ್ದರೆ, ಅಥವಾ ಭಗವಂತನ ಚರಣಕಮಲಗಳ ಮಕರಂದವನ್ನು ಪಾನಮಾಡುವ ರಸಿಕ ಮಹಾನುಭಾವರೊಂದಿಗೆ ಸಂಬಂಧ ಇರುವುದಾದರೆ ಅವಶ್ಯವಾಗಿ ಹೇಳಿರಿ. ಬೇರೆ ವ್ಯರ್ಥವಾದ ಮಾತುಗಳಿಂದೇನಾಗಬೇಕು? ಅದರಲ್ಲಿ ಆಯುಸ್ಸು ವ್ಯರ್ಥವಾಗಿ ನಷ್ಟವಾಗುತ್ತದೆ. ॥ ೫-೬ ॥ ಪೂಜ್ಯ ಸೂತರೇ! ಕೆಲವರಿಗೆ ಮೋಕ್ಷವನ್ನು ಪಡೆಯುವ ಇಚ್ಛೆ ಇದ್ದರೂ, ಅವರು ಅಲ್ಪಾಯುಷ್ಯವುಳ್ಳವರಾಗಿ ಕಾಲನಿಗೆ ಕವಳವಾಗುತ್ತಾರೆ. ಅಂತಹವರ ಶ್ರೇಯಸ್ಸಿಗಾಗಿಯೇ ಋತ್ವಿಜರು ಭಗವಾನ್ ಯಮದೇವರನ್ನು ಇಲ್ಲಿಗೆ ಆಹ್ವಾನಿಸಿ, ಶಾಮಿತ್ರಕರ್ಮದಲ್ಲಿ ನೇಮಿಸಿಬಿಟ್ಟಿದ್ದಾರೆ. ॥ ೭ ॥ ಯಮರಾಜನು ಇಲ್ಲಿ ಈ ಕರ್ಮದಲ್ಲಿ ನಿಯುಕ್ತನಾಗಿರುವವರೆಗೆ ಯಾರ ಮೃತ್ಯುವೂ ಆಗಬಾರದು. ಮೃತ್ಯುವಿನಿಂದ ಗ್ರಸ್ತರಾದ ಮರ್ತ್ಯಲೋಕದ ಜೀವಿಗಳೂ ಕೂಡ ಭಗವಂತನ ಅಮೃತತುಲ್ಯ ಲೀಲಾ-ಕಥೆಗಳನ್ನು ಪಾನಮಾಡಬಹುದು ಎಂದು ಮಹರ್ಷಿಗಳು ಭಗವಾನ್ ಯಮನನ್ನು ಇಲ್ಲಿ ಕರೆಸಿದ್ದಾರೆ. ॥ ೮ ॥ ಈ ಯುಗದಲ್ಲಿ ಮನುಷ್ಯರಿಗೆ ಆಯುಸ್ಸು ಕಡಿಮೆ, ಜೊತೆಗೆ ತಿಳಿವಳಿಕೆಯೂ ಅಲ್ಪವೇ. ಇಂತಹ ಸ್ಥಿತಿಯಲ್ಲಿ ಜಗತ್ತಿನ ಮಂದಭಾಗ್ಯರಾದ ವಿಷಯೀ ಜನರ ಆಯುಸ್ಸು - ನಿದ್ದೆಯಲ್ಲಿ ರಾತ್ರಿಯು, ವ್ಯರ್ಥಕರ್ಮಗಳಲ್ಲಿ ಹಗಲು ಹೀಗೆ ವ್ಯರ್ಥವಾಗಿಯೇ ಕಳೆದುಹೋಗುತ್ತಿದೆ. ॥ ೯ ॥

ಸೂತಪುರಾಣಿಕರು ಹೇಳಿದರು – ಶೌನಕರೇ! ರಾಜಾ ಪರೀಕ್ಷಿತನು ಕುರುಜಾಂಗಲ ದೇಶದಲ್ಲಿ ಚಕ್ರವರ್ತಿಯಾಗಿದ್ದಾಗ ತನ್ನ ಚಕ್ರಾಧಿಪತ್ಯಕ್ಕೆ ಒಳಪಟ್ಟ ದೇಶದಲ್ಲಿ ಕಲಿಪುರುಷನು ಪ್ರವೇಶಿಸಿರುವನೆಂದು ಕೇಳಿದನು. ಈ ಅಪ್ರಿಯ ಸಮಾಚಾರವನ್ನು ಕೇಳಿ ಆತನಿಗೆ ದುಃಖವಾಯಿತಾದರೂ, ಆ ದುಷ್ಟನಾದ ಕಲಿಯೊಡನೆ ಯುದ್ಧ ಮಾಡಿ ಅವನನ್ನು ನಿಗ್ರಹಿಸುವ ಅವಕಾಶ ಸಿಕ್ಕಿತಲ್ಲ ಎಂದು ಸಮಾಧಾನಪಟ್ಟು, ಆ ಯುದ್ಧವೀರನು ಕೈಯಲ್ಲಿ ಧನುಸ್ಸನ್ನೆತ್ತಿಕೊಂಡನು. ॥ ೧೦ ॥ ಚೆನ್ನಾಗಿ ಸಿಂಗರಿಸಲ್ಪಟ್ಟಿದ್ದ ಸಿಂಹಧ್ವಜದಿಂದ ಕೂಡಿದ

ಸ್ವಲಂಕೃತಂ ಶ್ಯಾಮತುರಂಗಯೋಜಿತಂ
ರಥಂ ಮೃಗೇಂದ್ರಧ್ವಜಮಾಶ್ರಿತಃ ಪುರಾತ್ ।
ವೃತೋ ರಥಾಶ್ವದ್ವಿಪಪತ್ತಿಯುಕ್ತಯಾ
ಸ್ವಸೇನಯಾ ದಿಗ್ವಿಜಯಾಯ ನಿರ್ಗತಃ ॥ ೧೧ ॥

ಭದ್ರಾಶ್ವಂ ಕೇತುಮಾಲಂ ಚ ಭಾರತಂ ಚೋತ್ತರಾನ್ ಕುರೂನ್ ।
ಕಿಂಪುರುಷಾದೀನಿ ವರ್ಷಾಣಿ ವಿಜಿತ್ಯ ಜಗೃಹೇ ಬಲಿಮ್
॥ ೧೨ ॥

ತತ್ರ ತತ್ರೋಪಶೃಣ್ವಾನಃ ಸ್ವಪೂರ್ವೇಷಾಂ ಮಹಾತ್ಮನಾಮ್ ।
ಪ್ರಗೀಯಮಾಣಂ ಚ ಯಶಃ ಕೃಷ್ಣಮಾಹಾತ್ಮ್ಯಸೂಚಕಮ್
॥ ೧೩ ॥

ಆತ್ಮಾನಂ ಚ ಪರಿತ್ರಾತಮಶ್ವತ್ಥಾಮ್ನೋಽಸ್ತ್ರತೇಜಸಃ ।
ಸ್ನೇಹಂ ಚ ವೃಷ್ಣಿಪಾರ್ಥಾನಾಂ ತೇಷಾಂ ಭಕ್ತಿಂ ಚ ಕೇಶವೇ
॥ ೧೪ ॥

ತೇಭ್ಯಃ ಪರಮಸಂತುಷ್ಟಃ ಪ್ರೀತ್ಯುಜ್ಜೃಂಭಿತಲೋಚನಃ ।
ಮಹಾಧನಾನಿ ವಾಸಾಂಸಿ ದದೌ ಹಾರಾನ್ಮಹಾಮನಾಃ
॥ ೧೫ ॥

ಸಾರಥ್ಯ ಪಾರಷದಸೇವನಸಖ್ಯ ದೌತ್ಯ-
ವೀರಾಸನಾನುಗಮನಸ್ತವನಪ್ರಣಾಮಾನ್ ।
ಸ್ನಿಗ್ಧೇಷು ಪಾಂಡುಷು ಜಗತ್ಪ್ರಣತಿಂ ಚ ವಿಷ್ಣೋ-
ರ್ಭಕ್ತಿಂ ಕರೋತಿ ನೃಪತಿಶ್ಚರಣಾರವಿಂದೇ ॥ ೧೬ ॥

ತಸ್ಯೈವಂ ವರ್ತಮಾನಸ್ಯ ಪೂರ್ವೇಷಾಂ ವೃತ್ತಿಮನ್ವಹಮ್ ।
ನಾತಿದೂರೇ ಕಿಲಾಶ್ಚರ್ಯಂ ಯದಾಸೀತ್ತನ್ನಿಬೋಧ ಮೇ
॥ ೧೭ ॥

ಧರ್ಮಃ ಪದೈಕೇನ ಚರನ್ವಿಚ್ಛಾಯಾಮುಪಲಭ್ಯ ಗಾಮ್ ।
ಪೃಚ್ಛತಿ ಸ್ಮಾಶ್ರುವದನಾಂ ವಿವತ್ಸಾಮಿವ ಮಾತರಮ್
॥ ೧೮ ॥

ಧರ್ಮ ಉವಾಚ

ಕಚ್ಚಿದ್ಭದ್ರೇಽನಾಮಯಮಾತ್ಮನಸ್ತೇ
ವಿಚ್ಛಾಯಾಸಿ ಮ್ಲಾಯತೇಷನ್ಮುಖೇನ ।
ಆಲಕ್ಷಯೇ ಭವತೀಮಂತರಾಧಿಂ
ದೂರೇ ಬಂಧುಂ ಶೋಚಸಿ ಕಂಚನಾಂಬ ॥ ೧೯ ॥

ಶ್ಯಾಮಲವರ್ಣದ ಕುದುರೆಗಳನ್ನು ಹೂಡಿದ್ದ ರಥವನ್ನೇರಿ, ರಥಾಶ್ವಗಜಪದಾತಿಗಳೆಂಬ ಚತುರಂಗಬಲವನ್ನು ಕೂಡಿಕೊಂಡು ದಿಗ್ವಿಜಯಕ್ಕಾಗಿ ನಗರದಿಂದ ಹೊರಟನು. ॥ ೧೧ ॥ ಅವನು ಭದ್ರಾಶ್ವ, ಕೇತುಮಾಲ, ಭಾರತ, ಉತ್ತರ ಕುರು, ಕಿಂಪುರುಷವರ್ಷ ಮುಂತಾದ ಪ್ರದೇಶಗಳನ್ನೆಲ್ಲ ಜಯಿಸಿ, ಅಲ್ಲಿಯ ರಾಜರಿಂದ ಕಪ್ಪ-ಕಾಣಿಕೆಗಳನ್ನು ಪಡೆದುಕೊಂಡನು. ॥ ೧೨ ॥ ಆ ದೇಶಗಳಲ್ಲಿ ಸಂಚರಿಸುತ್ತಿದ್ದಾಗ ಎಲ್ಲೆಡೆಗಳಲ್ಲಿಯೂ ಅವನಿಗೆ ತನ್ನ ವಂಶದ ಪೂರ್ವಜರಾದ ಮಹಾಪುರುಷರ ಕೀರ್ತಿಯು ಕಿವಿಗೆ ಬೀಳುತ್ತಿತ್ತು. ಅಲ್ಲದೆ ಆ ಕೀರ್ತಿಗಾನದಿಂದ ಪದೇ-ಪದೇ ಭಗವಾನ್ ಶ್ರೀಕೃಷ್ಣನ ಮಹಿಮೆಯೂ ಪ್ರಕಟವಾಗುತಿತ್ತು. ॥ ೧೩ ॥ ಇದರೊಂದಿಗೆ ಅಶ್ವತ್ಥಾಮನು ಪ್ರಯೋಗಿಸಿದ ಬ್ರಹ್ಮಾಸ್ತ್ರ ತೇಜಸ್ಸಿನಿಂದ ಭಗವಾನ್ ಶ್ರೀಕೃಷ್ಣನು ತನ್ನನ್ನು ಕಾಪಾಡಿದ ವೃತ್ತಾಂತ, ಪಾಂಡವರಿಗೆ ಭಗವಾನ್ ಶ್ರೀಕೃಷ್ಣನಲ್ಲಿದ್ದ ಭಕ್ತಿ ಮತ್ತು ಯಾದವರಿಗೂ ಪಾಂಡವರಿಗೂ ಇದ್ದ ಸ್ನೇಹಸಂಬಂಧ – ಇವುಗಳ ಸಮಾಚಾರವು ಕಿವಿಗೆ ಬೀಳುತ್ತಿತ್ತು. ॥ ೧೪ ॥ ಅಂತಹ ಚರಿತ್ರವನ್ನು ತನಗೆ ಹೇಳುತ್ತಿದ್ದ ಜನರ ವಿಷಯದಲ್ಲಿ ಅವನಿಗೆ ತುಂಬಾ ಪ್ರಸನ್ನತೆ ಉಂಟಾಗಿ, ಕಣ್ಣುಗಳು ಪ್ರೇಮದಿಂದ ಅರಳುತ್ತಿದ್ದವು. ಪರಮೋದಾರಿಯಾದ ಅವನು ಅವರಿಗೆ ಬಹುಮೂಲ್ಯವಾದ ವಸ್ತ್ರ-ರತ್ನಹಾರಗಳನ್ನು ಬಹುಮಾನವಾಗಿ ನೀಡುತ್ತಿದ್ದನು. ॥ ೧೫ ॥ ಭಗವಾನ್ ಶ್ರೀಕೃಷ್ಣನು ಪ್ರೇಮಪರವಶನಾಗಿ ಪಾಂಡವರಿಗೆ ಸಾರಥ್ಯವನ್ನು ಮಾಡಿದ, ಅವರ ಸಭಾಸದನಾದ, ಇಚ್ಛಾನುಸಾರವಾಗಿ ಅವರ ಇತರ ಸೇವೆಗಳನ್ನೂ ಮಾಡಿದ, ಸ್ನೇಹಿತನಾಗಿದ್ದುದಲ್ಲದೆ ದೂತನ ಕೆಲಸವನ್ನು ಮಾಡಿದನು. ವೀರಾಸನದಲ್ಲಿ ಕುಳಿತಿದ್ದು ಖಡ್ಗಧಾರಿಯಾಗಿ ಕಾವಲು ಕಾಯುತ್ತಿದ್ದ, ಅನುಸರಣೆಮಾಡಿ ಹೊಗಳುತ್ತಿದ್ದ, ನಮಸ್ಕರಿಸುತ್ತಿದ್ದ, ಆ ಪ್ರಿಯತಮರಾದ ಪಾಂಡವರಿಗೆ ಇಡೀ ಜಗತ್ತೇ ತಲೆಬಾಗುವಂತೆ ಮಾಡಿದ – ಇವೇ ಮುಂತಾದ ವಿಷಯಗಳನ್ನು ಕೇಳಿ, ಆತನಿಗೆ ಭಗವಾನ್ ಶ್ರೀಕೃಷ್ಣನ ಚರಣಕಮಲಗಳಲ್ಲಿ ಭಕ್ತಿಯು ಇನ್ನೂ ಹೆಚ್ಚುತ್ತಿತ್ತು. ॥ ೧೬ ॥ ಹೀಗೆ ಅವನು ಪ್ರತಿದಿನವೂ ಪಾಂಡವರ ಆಚರಣೆಗಳನ್ನು ಅನುಸರಿಸುತ್ತಾ ದಿಗ್ವಿಜಯ ಮಾಡುತ್ತಿದ್ದನು. ಆಗಲೇ ಒಂದು ದಿನ ಅವನ ಶಿಬಿರದಿಂದ ಸ್ವಲ್ಪ ದೂರದಲ್ಲಿಯೇ ಒಂದು ಆಶ್ಚರ್ಯಕರವಾದ ಘಟನೆಯು ನಡೆಯಿತು. ಅದನ್ನು ನಾನು ನಿಮಗೆ ಹೇಳುತ್ತೇನೆ. ॥ ೧೭ ॥ ಧರ್ಮವು ಒಂದು ವೃಷಭದ ರೂಪವನ್ನು ಧರಿಸಿ ಒಂಟಿಕಾಲಿನಿಂದ ಸಂಚರಿಸುತ್ತಿತ್ತು. ದಾರಿಯಲ್ಲಿ ಅದಕ್ಕೆ ಧೇನುವಿನ ರೂಪವನ್ನು ತಾಳಿದ್ದ ಭೂದೇವಿಯ ಭೇಟಿಯಾಯಿತು. ಆ ಧೇನುವು ಮಗುವನ್ನು ಕಳೆಕೊಂಡ ತಾಯಿಯಂತೆ ಕಣ್ಣೀರಿಡುತ್ತಾ ಕಳೆಗುಂದಿ ಕಾತರಗೊಳ್ಳುತ್ತಿರುವುದನ್ನು ಕಂಡು ಧರ್ಮ ವೃಷಭವು ಆಕೆಯನ್ನು ಕೇಳತೊಡಗಿತು. ॥ ೧೮ ॥

ಧರ್ಮವು ಹೇಳಿತು – ಮಂಗಳಾಂಗಿಯೇ! ನಿನ್ನ ಮುಖವು ಸ್ವಲ್ಪ ಮಲಿನವಾಗಿರುವಂತೆ ಕಾಣುತ್ತಿದ್ದು, ನೀನು ಕಳೆಗುಂದಿರುವೆ. ನಿನಗೆ ಯಾವುದೋ ದುಃಖವಿರಬೇಕೆಂದು ತೋರುತ್ತದೆ. ನಿನ್ನ ನೆಂಟರಿಷ್ಟರು ಯಾರಾದರೂ ದೂರ ದೇಶಕ್ಕೆ ಹೋಗಿದ್ದು ಅವರ ಬಗೆಗೆ ಚಿಂತಿಸುತ್ತಿದ್ದೀಯೇನಮ್ಮಾ? ॥ ೧೯ ॥ 'ಈತನಿಗೆ ಮೂರು ಕಾಲುಗಳು ಮುರಿದುಹೋಗಿ ಒಂಟಿಕಾಲಿನಿಂದ ನಡೆಯುವ ಸ್ಥಿತಿ ಬಂದಿದೆಯಲ್ಲ' ಎಂದು ನನ್ನ ಬಗೆಗೇನಾದರೂ ಚಿಂತಿಸುತ್ತಿಲ್ಲವಲ್ಲ!

ಪಾದೈರ್ನ್ಯೂನಂ ಶೋಚಸಿ ಮೈಕಪಾದ-
ಮಾತ್ಮಾನಂ ವಾ ವೃಷಲೈರ್ಭೋಕ್ಷ್ಯಮಾಣಮ್ ।
ಆಹೋ ಸುರಾದೀನ್ ಹೃತಯಜ್ಞಭಾಗಾನ್
ಪ್ರಜಾ ಉತಸ್ವಿನ್ಮಘವತ್ಯವರ್ಷತಿ ॥ ೨೦ ॥

ಅರಕ್ಷ್ಯಮಾಣಾಃ ಸ್ತ್ರಿಯ ಉರ್ವಿ ಬಾಲಾನ್
ಶೋಚಸ್ಯಥೋ ಪುರುಷಾದೈರಿವಾರ್ತಾನ್ ।
ವಾಚಂ ದೇವೀಂ ಬ್ರಹ್ಮಕುಲೇ ಕುಕರ್ಮ-
ಣ್ಯಬ್ರಹ್ಮಣ್ಯೇ ರಾಜಕುಲೇ ಕುಲಾಗ್ರ್ಯಾನ್ ॥ ೨೧ ॥

ಕಿಂ ಕ್ಷತ್ರಬಂಧೂನ್ಕಲಿನೋಪಸೃಷ್ಟಾನ್
ರಾಷ್ಟ್ರಾಣಿ ವಾ ತೈರವರೋಪಿತಾನಿ ।
ಇತಸ್ತತೋ ವಾಶನಪಾನವಾಸಃ
ಸ್ನಾನವ್ಯವಾಯೋನ್ಮುಖಜೀವಲೋಕಮ್ ॥ ೨೨ ॥

ಯದ್ವಾಂಬ ತೇ ಭೂರಿಭರಾವತಾರ-
ಕೃತಾವತಾರಸ್ಯ ಹರೇರ್ಧರಿತ್ರಿ ।
ಅಂತರ್ಹಿತಸ್ಯ ಸ್ಮರತೀ ವಿಸೃಷ್ಟಾ
ಕರ್ಮಾಣಿ ನಿರ್ವಾಣವಿಲಂಬಿತಾನಿ ॥ ೨೩ ॥

ಇದಂ ಮಮಾಚಕ್ಷ್ವ ತವಾಧಿಮೂಲಂ
ವಸುಂಧರೇ ಯೇನ ವಿಕರ್ಶಿತಾಸಿ ।
ಕಾಲೇನ ವಾ ತೇ ಬಲಿನಾಂ ಬಲೀಯಸಾ
ಸುರಾರ್ಚಿತಂ ಕಿಂ ಹೃತಮಂಬ ಸೌಭಗಮ್ ॥ ೨೪ ॥

ಧರಣ್ಯುವಾಚ

ಭವಾನ್ಹಿ ವೇದ ತತ್ಸರ್ವಂ ಯನ್ಮಾಂ ಧರ್ಮಾನುಪೃಚ್ಛಸಿ ।
ಚತುರ್ಭಿರ್ವರ್ತಸೇ ಯೇನ ಪಾದೈರ್ಲೋಕಸುಖಾವಹೈಃ ॥ ೨೫ ॥

ಸತ್ಯಂ ಶೌಚಂ ದಯಾ ಕ್ಷಾಂತಿಸ್ತ್ಯಾಗಃ ಸಂತೋಷ ಆರ್ಜವಮ್ ।
ಶಮೋ ದಮಸ್ತಪಃ ಸಾಮ್ಯಂ ತಿತಿಕ್ಷೋಪರತಿಃ ಶ್ರುತಮ್ ॥ ೨೬ ॥

ಜ್ಞಾನಂ ವಿರಕ್ತಿರೈಶ್ವರ್ಯಂ ಶೌರ್ಯಂ ತೇಜೋ ಬಲಂ ಸ್ಮೃತಿಃ ।
ಸ್ವಾತಂತ್ರ್ಯಂ ಕೌಶಲಂ ಕಾಂತಿರ್ಧೈರ್ಯಂ ಮಾರ್ದವಮೇವ ಚ ॥ ೨೭ ॥

ಅಥವಾ 'ಧರ್ಮನಾಶಕರು ನನ್ನನ್ನು ಆಳುತ್ತಿದ್ದಾರಲ್ಲ!' ಎಂದು ನಿನ್ನ ಕುರಿತು ದುಃಖಪಡುತ್ತಿದ್ದೀಯಾ? 'ದೇವತೆಗಳಿಗೆ ಯಜ್ಞದ ಹವಿರ್ಭಾಗಗಳು ದೊರಕುತ್ತಿಲ್ಲ' ಎಂದು ಅವರ ಬಗ್ಗೆ ಶೋಕವೇ? ಅಥವಾ ಸಕಾಲದಲ್ಲಿ ಮಳೆ-ಬೆಳೆಗಳಿಲ್ಲದೆ ಕಷ್ಟಪಡುತ್ತಿರುವ ಪ್ರಜೆಗಳ ಕುರಿತು ದುಃಖಪಡುತ್ತಿರುವೆಯಾ? ॥ ೨೦॥ ರಾಕ್ಷಸರಂತಿರುವ ದುಷ್ಟರಿಂದ ಪೀಡಿತರಾಗಿ ರಕ್ಷಣೆಯಿಲ್ಲದ ಹೆಂಗಸರ ಕುರಿತಾಗಲೀ, ಪೀಡೆಗೊಳಗಾಗಿರುವ ಬಾಲಕರ ವಿಷಯದಲ್ಲಾಗಲೀ ನಿನಗೆ ದುಃಖವಾಗುತ್ತಿದೆಯಾ? ವಿದ್ಯಾದೇವಿಯು ಕುಕರ್ಮಿಗಳಾದ ಬ್ರಾಹ್ಮಣರ ಕೈಗೆ ಸಿಕ್ಕಿ, ದುರವಸ್ಥೆಗೆ ಒಳಗಾಗಿರುವುದನ್ನೋ, ಅಥವಾ ಬ್ರಾಹ್ಮಣರು ಬ್ರಹ್ಮದ್ರೋಹಿಗಳಾದ ರಾಜರನ್ನು ಸೇವಿಸುತ್ತಿರುವುದನ್ನೋ ನೋಡಿ ನೀನು ಕಳವಳಪಡುತ್ತಿರುವೆಯಾ? ॥ ೨೧ ॥ 'ಈಗಿನ ಕಾಲದಲ್ಲಿ ರಾಜರು ಹೆಸರಿಗೆ ಮಾತ್ರ ರಾಜರಾಗಿದ್ದು ಕಲಿಯಿಂದ ಪ್ರಭಾವಿತರಾಗಿ ರಾಷ್ಟ್ರಗಳನ್ನು ನಾಶಪಡಿಸುತ್ತಿದ್ದಾರಲ್ಲ!' ಎಂದು ಆ ಕ್ಷತ್ರಿಯಾಧಮರ ವಿಷಯದಲ್ಲಿ ನೀನು ಶೋಕಿಸುತ್ತಿರುವೆಯಾ? ಅಥವಾ ಕಂಡ-ಕಂಡಲ್ಲಿ ತಿನ್ನುವುದು, ಕುಡಿಯುವುದು, ಉಡುವುದು, ಸ್ನಾನಮಾಡುವುದು, ಭೋಗಿಸುವುದು ಮುಂತಾದವುಗಳಲ್ಲಿ ಶಾಸ್ತ್ರೀಯ ನಿಯಮಗಳನ್ನು ಪಾಲಿಸದೆ ಸ್ವೇಚ್ಛಾಚಾರಿಗಳಾದ ಜನರ ಕುರಿತು ಚಿಂತೆಪಡುತ್ತಿರುವೆಯಾ? ॥ ೨೨ ॥ ಭೂದೇವಿಯೇ! ನಿನ್ನ ಮೇಲೆ ಬಿದ್ದಿರುವ ಅತ್ಯಧಿಕ ಅಧರ್ಮದ ಭಾರವನ್ನು ಇಳಿಸುವುದಕ್ಕಾಗಿ ಅವತರಿಸಿ ಈಗ ತನ್ನನ್ನು ಉಪಸಂಹಾರಮಾಡಿಕೊಂಡಿರುವ ಭಗವಾನ್ ಶ್ರೀಕೃಷ್ಣನ ಮೋಕ್ಷಾವಲಂಬನವಾದ ದಿವ್ಯ ಲೀಲೆಗಳನ್ನು ನೆನೆಸಿಕೊಂಡು 'ಅಂತಹ ಸ್ವಾಮಿಯು ಕಣ್ಮರೆಯಾದನಲ್ಲ!' ಎಂದು ಶೋಕಿಸುತ್ತಿರುವೆಯಾ? ॥ ೨೩ ॥ ದೇವಿ! ನೀನಾದರೋ ಧನ-ರತ್ನಗಳ ಗಣಿಯಾಗಿರುವೆ. ಏಕೆ ಇಷ್ಟು ಕೃಶಳಾಗಿ ಕೊರಗುತ್ತಿದ್ದೀಯೇ? ಬಲಶಾಲಿಗಳಲ್ಲಿ ಅತ್ಯಂತ ಬಲಿಷ್ಠನಾದ ಕಾಲನು ದೇವತೆಗಳಿಗೂ ಪೂಜ್ಯವಾಗಿರುವ ನಿನ್ನ ಸೌಭಾಗ್ಯವನ್ನು ಅಪಹರಿಸಿದ್ದಾನೆಯೇ? ನನಗೆ ತಿಳಿಸು. ॥ ೨೪ ॥

ಪೃಥ್ವಿಯು ಹೇಳತೊಡಗಿದಳು – ಧರ್ಮದೇವನೇ! ನೀನು ನನ್ನಲ್ಲಿ ಕೇಳಿರುವ ಎಲ್ಲ ಪ್ರಶ್ನೆಗಳ ಉತ್ತರಗಳು ನಿನಗೆ ತಿಳಿದೇ ಇದೆ. ಯಾರ ಅವಲಂಬನೆಯಿಂದ ನೀನು ಲೋಕಗಳಿಗೆ ಸುಖವನ್ನುಂಟುಮಾಡುವ ನಿನ್ನ ನಾಲ್ಕು ಚರಣಗಳಿಂದಲೂ ನಡೆಯುತ್ತಿದ್ದೆಯೋ, ಅಂತಹ ಭಗವಂತನ ಅವತಾರವು ಸಮಾಪ್ತಿಯಾಯಿತಲ್ಲಾ! ಎಂದು ಶೋಕಪಡುತ್ತಿದ್ದೇನೆ. ಸತ್ಯ, ಶುಚಿತ್ವ, ದಯೆ, ಕ್ಷಮೆ, ತ್ಯಾಗ, ಸಂತೋಷ, ಸರಳತೆ, ಒಳ-ಹೊರ ಇಂದ್ರಿಯಗಳ ನಿಗ್ರಹ, ತಪಸ್ಸು, ಸಮತೆ, ಸೈರಣೆ, ಉಪರತಿ, ಶಾಸ್ತ್ರವಿಚಾರ, ಜ್ಞಾನ, ವೈರಾಗ್ಯ, ಐಶ್ವರ್ಯ, ಪರಾಕ್ರಮ, ತೇಜಸ್ಸು, ಬಲ, ಸ್ಮೃತಿ, ಸ್ವಾತಂತ್ರ್ಯ, ಕೌಶಲ, ಕಾಂತಿ, ಧೈರ್ಯ, ಕೋಮಲತೆ, ನಿರ್ಭಯತ್ವ, ವಿನಯ, ಶೀಲ, ಸಾಹಸ, ಉತ್ಸಾಹ, ಬಲ, ಸೌಭಾಗ್ಯ, ಗಾಂಭೀರ್ಯ, ಸ್ಥಿರತ್ವ, ಆಸ್ತಿಕತೆ, ಕೀರ್ತಿ, ಗೌರವ, ನಿರಹಂಕಾರತೆ ಮುಂತಾದ ಈ ಮೂವತ್ತೊಂಭತ್ತು ಅಪ್ರಾಕೃತ ಗುಣಗಳು ಹಾಗೂ ಮಹತ್ವಾಕಾಂಕ್ಷೀ ಮಹಾಪುರುಷರು ಅಪೇಕ್ಷಿಸುವ (ಶರಣಾಗತ ವತ್ಸಲತೆ) ದಿವ್ಯಗುಣಗಳು ಮತ್ತು ಇನ್ನೂ ಅನಂತಕಲ್ಯಾಣಗುಣಗಳು ಕೊಂಚವೂ ಕ್ಷೀಣಿಸದೇ ಯಾವನಲ್ಲಿ ಸದಾ ನೆಲೆಗೊಂಡಿರುವವೋ, ಅಂತಹ ಶ್ರೀನಿವಾಸನಾದ ಶ್ರೀಕೃಷ್ಣನು

ಪ್ರಾಗಲ್ಭ್ಯಂ ಪ್ರಶ್ರಯಃ ಶೀಲಂ ಸಹ ಓಜೋ ಬಲಂ ಭಗಃ ।
ಗಾಂಭೀರ್ಯಂ ಸ್ಥೈರ್ಯಮಾಸ್ತಿಕ್ಯಂ ಕೀರ್ತಿರ್ಮಾನೋಽನಹಂಕೃತಿಃ
॥ ೨೮ ॥

ಏತೇ ಚಾನ್ಯೇ ಚ ಭಗವನ್ನಿತ್ಯಾ ಯತ್ರ ಮಹಾಗುಣಾಃ ।
ಪ್ರಾರ್ಥ್ಯಾ ಮಹತ್ತ್ವಮಿಚ್ಛದ್ಭಿರ್ನ ವಿಯಂತಿ ಸ್ಮ ಕರ್ಹಿಚಿತ್
॥ ೨೯ ॥

ತೇನಾಹಂ ಗುಣಪಾತ್ರೇಣ ಶ್ರೀನಿವಾಸೇನ ಸಾಂಪ್ರತಮ್ ।
ಶೋಚಾಮಿ ರಹಿತಂ ಲೋಕಂ ಪಾಪ್ಮನಾ ಕಲಿನೇಕ್ಷಿತಮ್
॥ ೩೦ ॥

ಆತ್ಮಾನಂ ಚಾನುಶೋಚಾಮಿ ಭವಂತಂ ಚಾಮರೋತ್ತಮಮ್ ।
ದೇವಾನ್ ಪಿತೄನೃಷೀನ್ ಸಾಧೂನ್ ಸರ್ವಾನ್
ವರ್ಣಾಂಸ್ತಥಾಽಽಶ್ರಮಾನ್
॥ ೩೦ ॥

ಬ್ರಹ್ಮಾದಯೋ ಬಹುತಿಥಂ ಯದಪಾಂಗಮೋಕ್ಷ-
ಕಾಮಾಸ್ತಪಃ ಸಮಚರನ್ ಭಗವತ್ಪ್ರಪನ್ನಾಃ ।
ಸಾ ಶ್ರೀಃ ಸ್ವವಾಸಮರವಿಂದವನಂ ವಿಹಾಯ
ಯತ್ಪಾದಸೌಭಗಮಲಂ ಭಜತೇಽನುರಕ್ತಾ ॥ ೩೨ ॥

ತಸ್ಯಾಹಮಬ್ಜಕುಲಿಶಾಂಕುಶಕೇತುಕೇತೈಃ
ಶ್ರೀಮತ್ಪದೈರ್ಭಗವತಃ ಸಮಲಂಕೃತಾಂಗೀ ।
ತ್ರೀನತ್ಯರೋಚ ಉಪಲಭ್ಯ ತತೋ ವಿಭೂತಿಂ
ಲೋಕಾನ್ಸ ಮಾಂ ವ್ಯಸೃಜದುತ್ಸ್ಮಯತೀಂ ತದಂತೇ ॥ ೩೩ ॥

ಯೋ ವೈ ಮಮಾತಿಭರಮಾಸುರವಂಶರಾಜ್ಞಾ-
ಮಕ್ಷೌಹಿಣೀಶತಮಪಾನುದದಾತ್ಮತಂತ್ರಃ ।
ತ್ವಾಂ ದುಃಸ್ಥಮೂನಪದಮಾತ್ಮನಿ ಪೌರುಷೇಣ
ಸಂಪಾದಯನ್ಯದುಷು ರಮ್ಯಮಬಿಭ್ರದಂಗಮ್ ॥ ೩೪ ॥

ಕಾ ವಾ ಸಹೇತ ವಿರಹಂ ಪುರುಷೋತ್ತಮಸ್ಯ
ಪ್ರೇಮಾವಲೋಕರುಚಿರಸ್ಮಿತವಲ್ಗುಜಲ್ಪೈಃ ।
ಸ್ಥೈರ್ಯಂ ಸಮಾನಮಹರನ್ಮಧುಮಾನಿನೀನಾಂ
ರೋಮೋತ್ಸವೋ ಮಮ ಯದಂಘ್ರಿವಿಟಂಕಿತಾಯಾಃ ॥ ೩೫ ॥

ತನ್ನ ಲೀಲೆಯನ್ನು ಈಗ ಸಂಹಾರ ಮಾಡಿಕೊಂಡುಬಿಟ್ಟನಲ್ಲ! ಹಾಗೂ ಈ ಜಗತ್ತು ಪಾಪಮಯನಾದ ಕಲಿಯ ಕೆಟ್ಟದೃಷ್ಟಿಗೆ ಲಕ್ಷ್ಯವಾಗಿ ಬಿಟ್ಟಿತಲ್ಲ! ಎಂದು ನಾನು ಶೋಕಗ್ರಸ್ತಳಾಗಿದ್ದೇನೆ. ॥ ೨೫-೩೦ ॥ ಹಾಗೆಯೇ ಶೋಚನೀಯ ಸ್ಥಿತಿಯಲ್ಲಿರುವ ನನ್ನ ಕುರಿತು, ದೇವಶ್ರೇಷ್ಠನಾದ ನಿನ್ನ ಕುರಿತು, ಆಶ್ರಯಹೀನರಾದ ದೇವತೆಗಳ ಕುರಿತೂ, ಪಿತೃಗಳೂ, ಋಷಿಗಳೂ, ಸಾಧು-ಸಜ್ಜನರೂ, ಎಲ್ಲ ವರ್ಣಗಳೂ, ಆಶ್ರಮಗಳೂ ಇವುಗಳ ಕುರಿತಾಗಿಯೂ ದುಃಖಪಡುತ್ತಿದ್ದೇನೆ. ॥ ೩೧ ॥ ಯಾವಾಕೆಯ ಕೃಪಾಕಟಾಕ್ಷವನ್ನು ಪಡೆಯುವುದಕ್ಕಾಗಿ ಬ್ರಹ್ಮನೇ ಮುಂತಾದ ದೇವತೆಗಳು ಭಗವಂತನಲ್ಲಿ ಶರಣಾಗಿ ಬಹುಕಾಲದವರೆಗೆ ತಪಸ್ಸನ್ನಾಚರಿಸುತ್ತಿದ್ದರೋ, ಅಂತಹ ಲಕ್ಷ್ಮೀದೇವಿಯೂ ತನ್ನ ನಿವಾಸಸ್ಥಾನವಾಗಿರುವ ಕಮಲವನ್ನು ಬಿಟ್ಟು ಪರಮಪ್ರೇಮದಿಂದ ಯಾವಾತನ ಚರಣಕಮಲಗಳ ಸೊಬಗನ್ನು ಸೇವಿಸುತ್ತಿರುವಳೋ, ಅಂತಹ ಭಗವಂತನ ಕಮಲ, ವಜ್ರಾಯುಧ, ಅಂಕುಶ, ಧ್ವಜಗಳೇ ಮುಂತಾದ ದಿವ್ಯ ಚಿಹ್ನೆಗಳಿಂದ ಕೂಡಿದ ಶ್ರೀಪಾದಪದ್ಮಗಳ ವಿನ್ಯಾಸದಿಂದ ಅಲಂಕೃತಳಾಗಿ ಮಹಾವೈಭವವನ್ನು ಪಡೆದು, ಮೂರು ಲೋಕಗಳನ್ನೂ ಮೀರಿಸಿದ ಕಾಂತಿಯಿಂದ ಗರ್ವಪಡುತ್ತಾ ಮೆರೆಯುತ್ತಿದ್ದ ನನ್ನನ್ನು ಆ ಭಗವಂತನು ಕೈಬಿಟ್ಟುಹೋದನಲ್ಲ! ॥ ೩೨-೩೩ ॥

ನೀನು ನಿನ್ನ ಮೂರು ಚರಣಗಳು ಊನವಾಗಿ ಹೋದದ್ದರಿಂದ ಮನಸ್ಸಿನಲ್ಲೇ ನೋಯುತ್ತಿದ್ದೆ; ಆದ್ದರಿಂದ ತನ್ನ ಪುರುಷಾರ್ಥದಿಂದ ನಿನ್ನನ್ನು ತನ್ನೊಳಗೆಯೇ ಪುನಃ ಎಲ್ಲ ಅಂಗಗಳಿಂದ ಪೂರ್ಣ ಹಾಗೂ ಸ್ವಸ್ಥಮಾಡುವುದಕ್ಕಾಗಿ ಆ ಅತ್ಯಂತ ರಮಣೀಯ ಶ್ಯಾಮಸುಂದರ ವಿಗ್ರಹನು ಯದುವಂಶದಲ್ಲಿ ಅವತರಿಸಿ, ಸಾವಿರಾರು ಅಕ್ಷೌಹಿಣೀ ಸೇನೆಯ ರೂಪದಿಂದಿದ್ದ ಅಸುರವಂಶೀ ರಾಜರನ್ನು ನಾಶಮಾಡಿ ನನ್ನ ಭಾರೀ ದೊಡ್ಡ ಭಾರವನ್ನು ಇಳಿಸಿದನು. ಏಕೆಂದರೆ ಅವನು ಪರಮ ಸ್ವತಂತ್ರನಾಗಿದ್ದನು. ॥ ೩೪ ॥ ಅಂತಹ ಆ ಕೃಪಾಳು ದಯಾನಿಧಾನ ಭಗವಾನ್ ಪುರುಷೋತ್ತಮ ಶ್ಯಾಮಸುಂದರನ ವಿರಹವನ್ನು ಯಾರು ತಾನೇ ಸಹಿಸಬಲ್ಲರು ? ಅವನು ನನ್ನ ಮೇಲೆ ನಡೆದಾಡುತ್ತಿದ್ದಾಗ ನನಗೆ ರೋಮಾಂಚವಾಗುತ್ತಿತ್ತು. ಅವನ ಚರಣಗಳ ದಿವ್ಯ ಚಿಹ್ನೆಗಳು ನನ್ನ ಮೇಲೆ ಅಂಕಿತವಾಗುವಾಗ ನಾನು ಅತ್ಯಂತ ಶೋಭಿತಳಾಗುತ್ತಿದ್ದೆ. ಈಗ ಅವನು ಇಲ್ಲದುದರಿಂದ ನನಗೆ ಬಹಳ ದುಃಖವಾಗುತ್ತಾ ಇದೆ. ಹೀಗೆಯೇ ದ್ವಾರಕೆಯಲ್ಲಿ ಹದಿನಾರು ಸಾವಿರಕ್ಕಿಂತಲೂ ಹೆಚ್ಚಾಗಿಯೇ ಇದ್ದ ಸ್ತ್ರೀಯರೆಲ್ಲರೂ ಶ್ರೀಕೃಷ್ಣನನ್ನು ತಮ್ಮ ಪ್ರೇಮಕಟಾಕ್ಷದಿಂದ, ರುಚಿರ ಹಾಸ್ಯಪೂರ್ಣ ದೃಷ್ಟಿಯಿಂದ ಮತ್ತು ಮಧುರ ಭಾಷಣದಿಂದ ಪ್ರಸನ್ನಗೊಳಿಸುತ್ತಿದ್ದರು. ಭಗವಂತನೂ ಕೂಡ ಅವರನ್ನು ಹಾಗೆಯೇ ಆನಂದಗೊಳಿಸುತ್ತಿದ್ದನು. ಎಲ್ಲರ ಮನೆಗಳಲ್ಲಿ ಬೇರೆ-ಬೇರೆ ರೂಪಗಳನ್ನು ಧರಿಸಿ ಇರುತ್ತಿದ್ದನು. ಇದರಿಂದ ಅವನ ರಾಣಿಯರಿಗೆ – ನಾವು ಶ್ರೀಕೃಷ್ಣನನ್ನು ಪ್ರೇಮಿಸುವಷ್ಟೇ ಅವನೂ ನಮ್ಮನ್ನು ಪ್ರೇಮಿಸುತ್ತಿರುವನು ಮತ್ತು ನಮ್ಮಲ್ಲಿ ಮತ್ತು ಶ್ರೀಕೃಷ್ಣನಲ್ಲಿ ಪರಸ್ಪರ ಪ್ರೇಮದ ಸಮಾನತೆ ಇದೆ ಎಂದು ತಿಳಿದು ಗರ್ವಪಡುತ್ತಿದ್ದರು. ಭಗವಂತನು ಅವರ ಗರ್ವವನ್ನೂ ಕೂಡ ನಾಶಪಡಿಸಲಿಕ್ಕಾಗಿ ಅವನು ತನ್ನ ಶ್ರೀವಿಗ್ರಹವನ್ನು ಈಗ ಅಂತರ್ಧಾನಗೊಳಿಸಿರುವನು. ॥ ೩೫ ॥

ತಯೋರೇವಂ ಕಥಯತೋಃ ಪೃಥಿವೀಧರ್ಮಯೋಸ್ತದಾ ।
ಪರೀಕ್ಷಿನ್ನಾಮ ರಾಜರ್ಷಿಃ ಪ್ರಾಪ್ತಃ ಪ್ರಾಚೀಂ ಸರಸ್ವತೀಮ್ ॥ ೩೬ ॥

ಹೀಗೆ ಧರ್ಮನೂ, ಪೃಥ್ವಿಯೂ ಪರಸ್ಪರವಾಗಿ ಮಾತನಾಡುತ್ತಿದ್ದಾಗ ಆ ಕಾಲಕ್ಕೆ ಸರಿಯಾಗಿ ರಾಜರ್ಷಿಶ್ರೇಷ್ಠನಾದ ಪರೀಕ್ಷಿದ್ರಾಜನು ಸರಸ್ವತೀ ನದಿಯ ಪೂರ್ವತೀರಕ್ಕೆ ಬಂದು ತಲುಪಿದನು. ॥ ೩೬ ॥

ಹದಿನಾರನೆಯ ಅಧ್ಯಾಯವು ಮುಗಿಯಿತು. ॥ ೧೬ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಪ್ರಥಮಸ್ಕಂಧೇ
ಪೃಥ್ವೀಧರ್ಮಸಂವಾದೋ ನಾಮ ಷೋಡಶೋಽಧ್ಯಾಯಃ ॥ ೧೬ ॥

ಹದಿನೇಳನೆಯ ಅಧ್ಯಾಯ

ಪರೀಕ್ಷಿದ್ರಾಜನು ಕಲಿಪುರುಷನನ್ನು ನಿಗ್ರಹಿಸಿದುದು

ಸೂತ ಉವಾಚ

ತತ್ರ ಗೋಮಿಥುನಂ ರಾಜಾ ಹನ್ಯಮಾನಮನಾಥವತ್ ।
ದಂಡಹಸ್ತಂ ಚ ವೃಷಲಂ ದದೃಶೇ ನೃಪಲಾಂಛನಮ್ ॥ ೧ ॥

ವೃಷಂ ಮೃಣಾಲಧವಲಂ ಮೇಹಂತಮಿವ ಬಿಭ್ಯತಮ್ ।
ವೇಪಮಾನಂ ಪದೈಕೇನ ಸೀದಂತಂ ಶೂದ್ರತಾಡಿತಮ್ ॥ ೨ ॥

ಗಾಂ ಚ ಧರ್ಮದುಘಾಂ ದೀನಾಂ ಭೃಶಂ ಶೂದ್ರಪದಾಹತಾಮ್ ।
ವಿವತ್ಸಾಂ ಸಾಶ್ರುವದನಾಂ ಕ್ಷಾಮಾಂ ಯವಸಮಿಚ್ಛತೀಮ್ ॥ ೩ ॥

ಪಪ್ರಚ್ಛ ರಥಮಾರೂಢಃ ಕಾರ್ತಸ್ವರಪರಿಚ್ಛದಮ್ ।
ಮೇಘಗಂಭೀರಯಾ ವಾಚಾ ಸಮಾರೋಪಿತಕಾರ್ಮುಕಃ ॥ ೪ ॥

ಕಸ್ತ್ವಂ ಮಚ್ಛರಣೇ ಲೋಕೇ ಬಲಾದ್ಧಂಸ್ಯಬಲಾನ್ಬಲೀ ।
ನರದೇವೋಽಸಿ ವೇಷೇಣ ನಟವತ್ಕರ್ಮಣಾಽದ್ವಿಜಃ ॥ ೫ ॥

ಯಸ್ತ್ವಂ ಕೃಷ್ಣೇ ಗತೇ ದೂರಂ ಸಹ ಗಾಂಡೀವಧನ್ವನಾ ।
ಶೋಚ್ಯೋಽಸ್ಯಶೋಚ್ಯಾನ್ರಹಸಿ ಪ್ರಹರನ್ವಧಮರ್ಹಸಿ ॥ ೬ ॥

ತ್ವಂ ವಾ ಮೃಣಾಲಧವಲಃ ಪಾದೈರ್ನ್ಯೂನಃ ಪದಾ ಚರನ್ ।
ವೃಷರೂಪೇಣ ಕಿಂ ಕಶ್ಚಿದ್ದೇವೋ ನಃ ಪರಿಖೇದಯನ್ ॥ ೭ ॥

ನ ಜಾತು ಕೌರವೇಂದ್ರಾಣಾಂ ದೋರ್ದಂಡಪರಿರಂಭಿತೇ ।
ಭೂತಲೇಽನುಪತಂತ್ಯಸ್ಮಿನ್ ವಿನಾ ತೇ ಪ್ರಾಣಿನಾಂ ಶುಚಃ ॥ ೮ ॥

ಸೂತಪುರಾಣಿಕರು ಹೇಳುತ್ತಾರೆ – ಶೌನಕರೇ! ಪರೀಕ್ಷಿದ್ರಾಜನು ಅಲ್ಲಿಗೆ ಬಂದು ನೋಡುತ್ತಾನೆ – ಒಬ್ಬ ಶೂದ್ರನು ರಾಜವೇಷಧಾರಿಯಾಗಿ ಕೈಯಲ್ಲಿ ದೊಣ್ಣೆಯನ್ನು ಹಿಡಿದುಕೊಂಡು ಅನಾಥರಂತೆ ಇರುವ ಒಂದು ಹಸು, ಎತ್ತು ಜೋಡಿಯನ್ನು ಹೊಡೆಯುತ್ತಿದ್ದನು. ॥ ೧ ॥ ತಾವರೆಯ ದಂಟಿನಂತಿದ್ದ ಆ ಎತ್ತು ಒಂಟಿಕಾಲಿನ ಮೇಲೆ ನಿಂತು ಗಡ-ಗಡ ನಡುಗುತ್ತಾ ಘಾತುಕನ ಏಟಿನಿಂದ ಪೀಡಿತವಾಗಿ ಮೂತ್ರವಿಸರ್ಜನೆ ಮಾಡುತ್ತಿತ್ತು. ॥ ೨ ॥ ಹಸುವು ಧರ್ಮೋಪಯೋಗಿ ಹಾಲು, ತುಪ್ಪ ಮುಂತಾದ ಹವಿಸ್ಸು ಪದಾರ್ಥಗಳನ್ನು ಕೊಡುತ್ತದೆ. ಅದರ ಗೋಮಯವೂ ಧಾರ್ಮಿಕ ಕಾರ್ಯಗಳಲ್ಲಿ ಉಪಯೋಗಕ್ಕೆ ಬರುತ್ತದೆ. ಇಂತಹ ಹಸುವು ಪದೇ-ಪದೇ ಶೂದ್ರನ ಒದೆಯನ್ನು ತಿನ್ನುತ್ತಾ ಅತ್ಯಂತ ದೀನಳಾಗಿದ್ದಳು. ಮೊದಲೇ ಬಡಕಲಾಗಿದ್ದು, ಕರುವೂ ಅದರ ಬಳಿಯಲ್ಲಿ ಇರಲಿಲ್ಲ. ಅದಕ್ಕೆ ಹಸಿವು ಬಾಧಿಸುತ್ತಿತ್ತು. ಕಣ್ಣುಗಳಿಂದ ನೀರು ಹರಿಯುತ್ತಿತ್ತು. ॥ ೩ ॥ ಸ್ವರ್ಣಾಲಂಕೃತ ರಥದಲ್ಲಿ ಕುಳಿತಿದ್ದ ರಾಜಾ ಪರೀಕ್ಷಿತನು ತನ್ನ ಧನುಸ್ಸಿಗೆ ಬಾಣಹೂಡಿ ಮೇಘಗಂಭೀರವಾದ ವಾಣಿಯಿಂದ ಹೀಗೆ ಪ್ರಶ್ನಿಸಿದನು. ॥ ೪ ॥ ಎಲವೋ! ನೀನಾರು? ಬಲಶಾಲಿಯಾಗಿದ್ದುಕೊಂಡು ನನ್ನ ರಾಜ್ಯದಲ್ಲಿ ನನ್ನ ರಕ್ಷಣೆಯಲ್ಲಿರುವ ಈ ದುರ್ಬಲ ಪ್ರಾಣಿಗಳನ್ನು ಬಲಾತ್ಕಾರವಾಗಿ ಏಕೆ ಹೊಡೆಯುತ್ತಿರುವೆ? ನಟನಂತೆ ರಾಜನ ವೇಷವನ್ನು ಧರಿಸಿದ್ದೀಯಾ. ಆದರೆ ಕರ್ಮದಿಂದ ಶೂದ್ರನಂತೆ ಕಂಡು ಬರುವೆಯಲ್ಲ! ॥ ೫ ॥ ಗಾಂಡೀವ ಧನುರ್ಧರನಾದ ಅರ್ಜುನನೊಡನೆ ಭಗವಾನ್ ಶ್ರೀಕೃಷ್ಣನೂ ಪರಂಧಾಮಕ್ಕೆ ತೆರಳಿದ ಬಳಿಕ ನಿರಪರಾಧಿಗಳನ್ನು ಇಂತಹ ಏಕಾಂತಸ್ಥಳದಲ್ಲಿ ಹಿಂಸೆಪಡಿಸುವ ನೀನು ಅಪರಾಧಿಯೇ ಆಗಿದ್ದು ಮರಣದಂಡನೆಗೆ ಅರ್ಹನಾಗಿರುವೆ. ॥ ೬ ॥ ರಾಜನು ಆ ವೃಷಭರೂಪೀ ಧರ್ಮನಲ್ಲಿ ಪ್ರಶ್ನಿಸಿದನು – ಕಮಲದ ದಂಟಿನಂತೆ ಶುಭ್ರವಾದ ಬಣ್ಣದಿಂದ ಕಂಗೊಳಿಸುತ್ತಿರುವ ನೀನಾರು? ಮೂರು ಕಾಲುಗಳನ್ನು ಕಳೆದುಕೊಂಡು ಒಂಟಿಕಾಲಿನಿಂದಲೇ ನಡೆಯುತ್ತಿದ್ದು ನಮ್ಮನ್ನು ಖೇದಗೊಳಿಸುತ್ತಿರುವ ಯಾವನಾದರೂ ದೇವತೆಯಾಗಿರುವೆಯಾ? ॥ ೭ ॥ ಪುರುವಂಶದ ಅರಸರ ಬಾಹುದಂಡದಿಂದ ಸಂರಕ್ಷಿತವಾದ ಈ ಭೂಮಂಡಲದಲ್ಲಿ ನಿನ್ನನ್ನು ಹೊರತುಪಡಿಸಿ ಬೇರೆ ಯಾವ ಪ್ರಾಣಿಯೂ ದುಃಖದಿಂದ ಕಣ್ಣೀರು ಹರಿಸುವುದಿಲ್ಲ. ॥ ೮ ॥ ಎಲ್ಲೆ

ಮಾ ಸೌರಭೇಯಾತ್ರ ಶುಚೋ ವ್ಯೇತು ತೇ ವೃಷಲಾದ್ಭಯಮ್ ।
ಮಾ ರೋದೀರಂಬ ಭದ್ರಂ ತೇ ಖಲಾನಾಂ ಮಯಿ ಶಾಸ್ತರಿ ॥ ೯ ॥

ಯಸ್ಯ ರಾಷ್ಟ್ರೇ ಪ್ರಜಾಃ ಸರ್ವಾಸ್ತ್ರಸ್ಯಂತೇ ಸಾಧ್ವ್ಯಸಾಧುಭಿಃ ।
ತಸ್ಯ ಮತ್ತಸ್ಯ ನಶ್ಯಂತಿ ಕೀರ್ತಿರಾಯುರ್ಭಗೋ ಗತಿಃ ॥ ೧೦ ॥

ಏಷ ರಾಜ್ಞಾಂ ಪರೋ ಧರ್ಮೋ ಹ್ಯಾರ್ತಾನಾಮಾರ್ತಿನಿಗ್ರಹಃ ।
ಅತ ಏನಂ ವಧಿಷ್ಯಾಮಿ ಭೂತದ್ರುಹಮಸತ್ತಮಮ್ ॥ ೧೧ ॥

ಕೋಽವೃಶ್ಚತ್ತವ ಪಾದಾಂಸ್ತ್ರೀನ್ಸೌರಭೇಯ ಚತುಷ್ಪದ ।
ಮಾ ಭೂವಂಸ್ತ್ವಾದೃಶಾ ರಾಷ್ಟ್ರೇ ರಾಜ್ಞಾಂ ಕೃಷ್ಣಾನುವರ್ತಿನಾಮ್ ॥ ೧೨ ॥

ಆಖ್ಯಾಹಿ ವೃಷ ಭದ್ರಂ ವಃ ಸಾಧೂನಾಮಕೃತಾಗಸಾಮ್ ।
ಆತ್ಮವೈರೂಪ್ಯಕರ್ತಾರಂ ಪಾರ್ಥಾನಾಂ ಕೀರ್ತಿದೂಷಣಮ್ ॥ ೧೩ ॥

ಜನೇಽನಾಗಸ್ಯಘಂ ಯುಂಜನ್ಸರ್ವತೋಽಸ್ಯ ಚ ಮದ್ಭಯಮ್ ।
ಸಾಧೂನಾಂ ಭದ್ರಮೇವ ಸ್ಯಾದಸಾಧುದಮನೇ ಕೃತೇ ॥ ೧೪ ॥

ಅನಾಗಸ್ಸ್ವಿಹ ಭೂತೇಷು ಯ ಆಗಸ್ಕೃನ್ನಿರಂಕುಶಃ ।
ಆಹರ್ತಾಸ್ಮಿ ಭುಜಂ ಸಾಕ್ಷಾದಮರ್ತ್ಯಸ್ಯಾಪಿ ಸಾಂಗದಮ್ ॥ ೧೫ ॥

ರಾಜ್ಞೋ ಹಿ ಪರಮೋ ಧರ್ಮಃ ಸ್ವಧರ್ಮಸ್ಥಾನುಪಾಲನಮ್ ।
ಶಾಸತೋಽನ್ಯಾನ್ ಯಥಾಶಾಸ್ತ್ರಮನಾಪದ್ಯುತ್ಪಥಾನಿಹ ॥ ೧೬ ॥

ಧರ್ಮ ಉವಾಚ

ಏತದ್ವಃ ಪಾಂಡವೇಯಾನಾಂ ಯುಕ್ತಮಾರ್ತಾಭಯಂ ವಚಃ ।
ಯೇಷಾಂ ಗುಣಗಣೈಃ ಕೃಷ್ಣೋ ದೌತ್ಯಾದೌ ಭಗವಾನ್ಕೃತಃ ॥ ೧೭ ॥

ನ ವಯಂ ಕ್ಲೇಶಬೀಜಾನಿ ಯತಃ ಸ್ಯುಃ ಪುರುಷರ್ಷಭ ।
ಪುರುಷಂ ತಂ ವಿಜಾನೀಮೋ ವಾಕ್ಯಭೇದವಿಮೋಹಿತಾಃ ॥ ೧೮ ॥

ಕೇಚಿದ್ವಿಕಲ್ಪವಸನಾ ಆಹುರಾತ್ಮಾನಮಾತ್ಮನಃ ।
ದೈವಮನ್ಯೇಽಪರೇ ಕರ್ಮ ಸ್ವಭಾವಮಪರೇ ಪ್ರಭುಮ್ ॥ ೧೯ ॥

ವೃಷಭವೇ! ಈಗ ನೀನು ದುಃಖಪಡದೆ ಈ ಧರ್ಮಘಾತುಕನಿಂದ ನಿರ್ಭಯನಾಗಿರು. ಅಮ್ಮಾ ಗೋಮಾತೇ! ದುಷ್ಟರಿಗೆ ಶಾಸನ ಮಾಡುವಂತಹ ನಾನೇ ಇಲ್ಲಿರುವಾಗ ನೀನು ಅಳಬೇಡ. ನಿನಗೆ ಮಂಗಳವಾಗಲಿ. ॥ ೯ ॥ ದೇವೀ! ಯಾವ ರಾಜನ ರಾಜ್ಯದಲ್ಲಿ ಪ್ರಜೆಗಳು ದುಷ್ಟರ ಉಪದ್ರವದಿಂದ ಹೆದರುತ್ತಾರೋ, ಅಂತಹ ಮೈಮರೆತ ರಾಜನ ಕೀರ್ತಿ, ಐಶ್ವರ್ಯ, ಆಯುಸ್ಸು ಮತ್ತು ಪರಲೋಕಗಳು ನಾಶವಾಗುತ್ತವೆ. ॥ ೧೦ ॥ ಪೀಡಿತರ ದುಃಖವನ್ನು ದೂರ ಮಾಡುವುದೇ ರಾಜರ ಪರಮಧರ್ಮವಾಗಿದೆ. ಈ ಮಹಾ ದುಷ್ಟನೂ, ಪ್ರಾಣಿಗಳನ್ನು ಪೀಡಿಸುವವನೂ ಆದ ಇವನನ್ನು ನಾನು ಈಗಲೇ ಕೊಂದುಬಿಡುವೆನು. ॥ ೧೧ ॥ ಎಲೈ ವೃಷಭವೇ! ನೀನು ನಾಲ್ಕು ಕಾಲುಗಳುಳ್ಳ ಪ್ರಾಣಿಯು. ನಿನ್ನ ಮೂರು ಕಾಲುಗಳನ್ನು ಯಾರು ಮುರಿದು ಹಾಕಿದರು ? ಶ್ರೀಕೃಷ್ಣನ ಅನುಯಾಯಿಗಳಾಗಿರುವ ರಾಜರ ಆಜ್ಞೆಗೆ ಒಳಪಟ್ಟ ರಾಜ್ಯಗಳಲ್ಲಿ ಎಂದೂ ಯಾರೂ ನಿನ್ನಂತೆ ದುಃಖಿಗಳಾಗಕೂಡದು. ॥ ೧೨ ॥ ವೃಷಭೋತ್ತಮಾ! ನಿನಗೆ ಮಂಗಳವಾಗಲೀ. ನಿನ್ನಂತಹ ನಿರಪರಾಧೀ ಸಾಧುವಿನ ಅಂಗಭಂಗವನ್ನಾಗಿ ಮಾಡಿ, ಪಾಂಡವರ ಕೀರ್ತಿಗೆ ಕಳಂಕ ತಂದಿರುವ ಆ ದುಷ್ಟನು ಯಾರು? ॥ ೧೩ ॥ ನಿರಪರಾಧಿಗಳಾದ ಪ್ರಾಣಿಗಳನ್ನು ಹಿಂಸಿಸುವವನು ಎಲ್ಲೇ ಇದ್ದರೂ ಅವನು ನನಗೆ ಭಯಪಡುತ್ತಲೇ ಇರಬೇಕಾಗುವುದು. ದುಷ್ಟರನ್ನು ದಮನ ಮಾಡಿದಾಗಲೇ ಸಾಧುಗಳಿಗೆ ಶ್ರೇಯಸ್ಸಾಗುವುದಲ್ಲವೇ ? ॥ ೧೪ ॥ ನಿರಂಕುಶನಾಗಿ ನಡೆಯುತ್ತಾ ನಿರಪರಾಧಿಗಳಾದ ಪ್ರಾಣಿಗಳಿಗೆ ಹಿಂಸೆಕೊಡುವವನು ದೇವಪುರುಷನೇ ಆಗಿದ್ದರೂ ನಾನು ಅವನ ತೋಳ್ಬಳೆಗಳಿಂದಲಂಕೃತವಾದ ಭುಜವನ್ನು ಕತ್ತರಿಸಿ ಹಾಕುವೆನು. ॥ ೧೫ ॥ ಆಪತ್ಕಾಲವೊಂದನ್ನು ಬಿಟ್ಟು ಬೇರೆ ಸಮಯಗಳಲ್ಲಿ ಮರ್ಯಾದೆ ಮೀರಿ ವರ್ತಿಸುವವರನ್ನು ಶಾಸ್ತ್ರಾನುಸಾರವಾಗಿ ದಂಡಿಸುತ್ತಾ, ತಮ್ಮ ಧರ್ಮದಲ್ಲಿರುವವರನ್ನು ಕಾಪಾಡುತ್ತಾ ಇರುವುದೇ ರಾಜರ ಪರಮಧರ್ಮವಾಗಿದೆ. ॥ ೧೬ ॥

ಧರ್ಮವೃಷಭವು ಹೇಳಿತು – ಮಹಾರಾಜನೇ! ಕಲ್ಯಾಣ ಗುಣಗಳನ್ನು ಮೆಚ್ಚಿ ಭಗವಂತನಾದ ಶ್ರೀಕೃಷ್ಣನು ದೌತ್ಯವೇ ಮುಂತಾದ ಸೇವೆಯನ್ನು ಮಾಡಿದಂತಹ ಮಹಾತ್ಮರಾದ ಪಾಂಡವರ ವಂಶಜನಾದ ನೀನು ದುಃಖಿತರಿಗೆ ಈ ರೀತಿ ಆಶ್ವಾಸನೆಯನ್ನೀಯುವುದು ಯುಕ್ತವೇ ಆಗಿದೆ. ॥ ೧೭ ॥ ಪುರುಷಶ್ರೇಷ್ಠನೇ! ಶಾಸ್ತ್ರಗಳಲ್ಲಿ ಹೇಳಿರುವ ಬಗೆ-ಬಗೆಯ ಮಾತುಗಳು ನಮ್ಮನ್ನು ಮೋಹಗೊಳಿಸುವುದರಿಂದ ನಮ್ಮ ಈ ಕ್ಲೇಶಕ್ಕೆ ಯಾರು ಕಾರಣನೆಂಬುದು ನಮಗೆ ತಿಳಿಯುತ್ತಿಲ್ಲ. ॥ ೧೮ ॥ ಯಾವುದೇ ದ್ವೈತವನ್ನು ಸ್ವೀಕರಿಸದವರು ತಾವೇ-ತಮ್ಮನ್ನು ತಮ್ಮ ದುಃಖದ ಕಾರಣವೆಂದು ಹೇಳುತ್ತಾರೆ. ಕೆಲವರು ಪ್ರಾರಬ್ಧವನ್ನು ಕಾರಣವೆಂದು ಹೇಳಿದರೆ, ಕೆಲವರು ಕರ್ಮವನ್ನು ಕಾರಣವೆಂದು ಹೇಳುತ್ತಾರೆ. ಕೆಲವರು ಸ್ವಭಾವವನ್ನು, ಕೆಲವರು ಈಶ್ವರನನ್ನು ದುಃಖಗಳ ಕಾರಣವೆಂದು ಹೇಳುತ್ತಾರೆ. ॥ ೧೯ ॥ ಯಾವ ತರ್ಕ-ವಿತರ್ಕಗಳಿಗೂ ನಿಲುಕದೆ, ಯಾವ ಮಾತಿಗೂ ಗೋಚರವಾಗದೆ ಇರುವ ಯಾವುದೋ ಒಂದು ವಸ್ತುವಿನಿಂದಲೇ ಎಲ್ಲವೂ ನಡೆಯುವುದು – ಎಂದು ಕೆಲವರು ನಿರ್ಧರಿಸುತ್ತಾರೆ. ರಾಜರ್ಷಿಯೇ! ಇವುಗಳಲ್ಲಿ

ಅಪ್ರತರ್ಕ್ಯಾದನಿರ್ದೇಶ್ಯಾದಿತಿ ಕೇಷ್ವಪಿ ನಿಶ್ಚಯಃ ।
ಅತ್ರಾನುರೂಪಂ ರಾಜರ್ಷೇ ವಿಮೃಶಸ್ವಮನೀಷಯಾ ॥ ೨೦ ॥

ಸೂತ ಉವಾಚ

ಏವಂ ಧರ್ಮೇ ಪ್ರವದತಿ ಸ ಸಮ್ರಾಡ್ ದ್ವಿಜಸತ್ತಮ ।
ಸಮಾಹಿತೇನ ಮನಸಾ ವಿಖೇದಃ ಪರ್ಯಚಷ್ಟ ತಮ್ ॥ ೨೧ ॥

ರಾಜೋವಾಚ

ಧರ್ಮಂ ಬ್ರವೀಷಿ ಧರ್ಮಜ್ಞ ಧರ್ಮೋಽಸಿ ವೃಷರೂಪಧೃಕ್ ।
ಯದಧರ್ಮಕೃತಃ ಸ್ಥಾನಂ ಸೂಚಕಸ್ಯಾಪಿ ತದ್ಭವೇತ್ ॥ ೨೨ ॥

ಅಥವಾ ದೇವಮಾಯಾಯಾ ನೂನಂ ಗತಿರಗೋಚರಾ ।
ಚೇತಸೋ ವಚಸಶ್ಚಾಪಿ ಭೂತಾನಾಮಿತಿ ನಿಶ್ಚಯಃ ॥ ೨೩ ॥

ತಪಃ ಶೌಚಂ ದಯಾ ಸತ್ಯಮಿತಿ ಪಾದಾಃ ಕೃತೇ ಕೃತಾಃ ।
ಅಧರ್ಮಾಂಶೈಸ್ತ್ರಯೋ ಭಗ್ನಾಃ ಸ್ಮಯಸಂಗಮದೈಸ್ತವ ॥ ೨೪ ॥

ಇದಾನೀಂ ಧರ್ಮ ಪಾದಸ್ತೇ ಸತ್ಯಂ ನಿರ್ವರ್ತಯೇದ್ಯತಃ ।
ತಂ ಜಿಘೃಕ್ಷತ್ಯಧರ್ಮೋಽಯಮನೃತೇನೈಧಿತಃ ಕಲಿಃ ॥ ೨೫ ॥

ಇಯಂ ಚ ಭೂರ್ಭಗವತಾ ನ್ಯಾಸಿತೋರುಭರಾ ಸತೀ ।
ಶ್ರೀಮದ್ಭಿಸ್ತತ್ಪದನ್ಯಾಸೈಃ ಸರ್ವತಃ ಕೃತಕೌತುಕಾ ॥ ೨೬ ॥

ಶೋಚತ್ಯಶ್ರುಕಲಾ ಸಾಧ್ವೀ ದುರ್ಭಗೇವೋಜ್ಝಿತಾಧುನಾ ।
ಅಬ್ರಹ್ಮಣ್ಯಾ ನೃಪವ್ಯಾಜಾಃ ಶೂದ್ರಾ ಭೋಕ್ಷ್ಯಂತಿ ಮಾಮಿತಿ ॥ ೨೭ ॥

ಇತಿ ಧರ್ಮಂ ಮಹೀಂ ಚೈವ ಸಾಂತ್ವಯಿತ್ವಾ ಮಹಾರಥಃ ।
ನಿಶಾತಮಾದದೇ ಖಡ್ಗಂ ಕಲಯೇಽಧರ್ಮಹೇತವೇ ॥ ೨೮ ॥

ತಂ ಜಿಘಾಂಸುಮಭಿಪ್ರೇತ್ಯ ವಿಹಾಯ ನೃಪಲಾಂಛನಮ್ ।
ತತ್ಪಾದಮೂಲಂ ಶಿರಸಾ ಸಮಗಾದ್ಭಯವಿಹ್ವಲಃ ॥ ೨೯ ॥

ಪತಿತಂ ಪಾದಯೋರ್ವೀರಃ ಕೃಪಯಾ ದೀನವತ್ಸಲಃ ।
ಶರಣ್ಯೋ ನಾವಧೀಚ್ಛ್ಲೋಕ್ಯ ಆಹ ಚೇದಂ ಹಸನ್ನಿವ ॥ ೩೦ ॥

ಮಾನ್ಯವು ಸರಿ – ಎಂಬುದನ್ನು ನಿನ್ನ ಬುದ್ಧಿಯಿಂದ ವಿಮರ್ಶೆ ಮಾಡಿಕೋ. ನಾನಂತೂ ಈ ವಿಷಯದಲ್ಲಿ ಏನೂ ತಿಳಿದಿಲ್ಲ ॥ ೨೦ ॥

ಸೂತಪುರಾಣಿಕರು ಹೇಳುತ್ತಾರೆ – ಋಷಿಶ್ರೇಷ್ಠ ಶೌನಕರೇ! ಧರ್ಮಸ್ವರೂಪನ ಈ ಧರ್ಮಪ್ರವಚನವನ್ನು ಕೇಳಿ ಚಕ್ರವರ್ತಿಯು ಪ್ರಸನ್ನನಾಗಿ ಖೇದರಹಿತನಾದನು. ॥ ೨೧ ॥

ಪರೀಕ್ಷಿದ್ರಾಜನು ಹೇಳಿದನು – ಧರ್ಮಜ್ಞನಾದ ವೃಷಭವೇ! ನೀನು ಧರ್ಮದ ಉಪದೇಶವನ್ನು ಕೊಡುತ್ತಿರುವುದನ್ನು ನೋಡಿ ಖಂಡಿತವಾಗಿಯೂ ನೀನು ವೃಷಭರೂಪದಲ್ಲಿರುವ ಧರ್ಮವೇ ಆಗಿರುವೆ. (ನೀನು ನಿನಗೆ ದುಃಖ ಕೊಡುವವನ ಹೆಸರನ್ನು ಏಕೆ ಹೇಳಲಿಲ್ಲ ಎಂದರೆ–) ಅಧರ್ಮವನ್ನು ಆಚರಿಸುವವನಿಗೆ ದೊರೆಯುವ ನರಕಾದಿ ಸ್ಥಾನಗಳು ಅತನ ಹೆಸರನ್ನು ಸೂಚಿಸುವವನಿಗೂ ದೊರೆಯುತ್ತವೆ. ॥ ೨೨ ॥ ಅಥವಾ 'ಪರಮಾತ್ಮನ ಮಾಯೆಯ ಸ್ವರೂಪವನ್ನೂ, ಗತಿಯನ್ನೂ ಪ್ರಾಣಿಗಳ ಮನಸ್ಸಿನಿಂದಾಗಲೀ, ಮಾತಿನಿಂದಾಗಲೀ ನಿರೂಪಿಸುವುದು ಶಕ್ಯವೇ ಇಲ್ಲ' ಎಂಬುದೇ ನಿಶ್ಚಿತ ಸಿದ್ಧಾಂತವಾಗಿದೆ. ॥ ೨೩ ॥ "ಧರ್ಮದೇವನೇ! ಕೃತಯುಗದಲ್ಲಿ ನಿನಗೆ ತಪಸ್ಸು, ಪವಿತ್ರತೆ, ದಯೆ, ಸತ್ಯ ಎಂಬ ನಾಲ್ಕು ಪಾದಗಳು ಇದ್ದವು. ಅವುಗಳಲ್ಲಿ ಈಗ ಮೂರುಪಾದಗಳು ಅಧರ್ಮದ ಅಂಶಗಳಾದ ಅಹಂಕಾರ, ಆಸಕ್ತಿ, ಮದ ಇವುಗಳಿಂದ ಮುರಿದುಹೋದುವು. ॥ ೨೪ ॥ ಈ ನಾಲ್ಕನೆಯ ಪಾದವಾದ 'ಸತ್ಯ'ವೆಂಬುದು ಮಾತ್ರ ಉಳಿದಿದೆ. ಅದರ ಬಲದಿಂದಲೇ ನೀನು ಬದುಕಿರುವೆ. ಅಸತ್ಯದಿಂದ ಪೋಷಿತವಾದ ಅಧರ್ಮರೂಪವಾದ ಕಲಿಯುಗವು ಆ ಪಾದವನ್ನು ನುಂಗಿಹಾಕಲು ಪ್ರಯತ್ನಿಸುತ್ತಿದೆ. ॥ ೨೫ ॥ ಈ ಗೋಮಾತೆಯು ಸಾಕ್ಷಾತ್ ಭೂಮಿತಾಯಿಯಾಗಿದ್ದು ಶ್ರೀಕೃಷ್ಣಪರಮಾತ್ಮನು ಈಕೆಯ ಮೇಲಿದ್ದ ಮಹಾಭಾರವನ್ನು ಇಳಿಸಿ ಈಕೆಗೆ ಆನಂದವನ್ನುಂಟುಮಾಡಿದ್ದನು. ಆತನ ಸೌಂದರ್ಯನಿಧಿಯಾದ ಚರಣಚಿಹ್ನೆಗಳಿಂದ ಈಕೆಗೆ ಎಲ್ಲೆಡೆಗಳಲ್ಲಿಯೂ ಅಲಂಕಾರ, ಆನಂದೋತ್ಸವಗಳು ಸಂಪನ್ನವಾಗಿದ್ದವು. ॥ ೨೬ ॥ ಈಗ ಆತನ ಅಗಲಿಕೆಯಿಂದ ಈ ಸಾಧ್ವಿಯು ದುರ್ಭಾಗ್ಯವತಿಯಂತೆ ಕಣ್ಣೀರುಸುರಿಸುತ್ತಾ – ಅಯ್ಯೋ! ಇನ್ನು ಮುಂದೆ ಬ್ರಾಹ್ಮಣದ್ರೋಹಿಗಳಾದ ಶೂದ್ರರು ರಾಜವೇಷಧಾರಿಗಳಾಗಿ ನನ್ನನ್ನು ಆಳುವರಲ್ಲ!' ಎಂದು ಚಿಂತೆ ಪಡುತ್ತಿದ್ದಾಳೆ." ॥ ೨೭ ॥

ಮಹಾರಥಿಯಾದ ಪರೀಕ್ಷಿದ್ರಾಜನು ಹೀಗೆ ಧರ್ಮದೇವನನ್ನೂ, ಭೂದೇವಿಯನ್ನೂ ಸಮಾಧಾನಪಡಿಸಿದನು. ಅನಂತರ ಅಧರ್ಮಕ್ಕೆ ಕಾರಣನಾಗಿರುವ ಕಲಿಪುರುಷನನ್ನು ಕೊಲ್ಲುವುದಕ್ಕಾಗಿ ತೀಕ್ಷ್ಣವಾದ ಖಡ್ಗವನ್ನೆತ್ತಿದನು. ॥ ೨೮ ॥ ಪರೀಕ್ಷಿದ್ರಾಜನು ತನ್ನನ್ನು ಈಗ ಸಂಹರಿಸಲು ಬಯಸುತ್ತಿರುವನೆಂದು ತಿಳಿದ ಕಲಿಪುರುಷನು ಒಡನೆಯೇ ತನ್ನ ರಾಜವೇಷವನ್ನು ಕಳಚಿಹಾಕಿ ಭಯದಿಂದ ಕಳವಳಗೊಂಡು, ತಲೆಯನ್ನು ಆತನ ಪಾದಗಳಲ್ಲಿ ಇರಿಸಿ ಆತನಲ್ಲಿ ಶರಣಾದನು. ॥ ೨೯ ॥ ಪರೀಕ್ಷಿತನಾದರೋ ಮಹಾಯಶಸ್ವಿಯೂ, ದೀನವತ್ಸಲನೂ, ಶರಣಾಗತರಕ್ಷಕನೂ ಆಗಿದ್ದುದರಿಂದ ಕಲಿ ಪುರುಷನು ತನ್ನ ಕಾಲಿಗೆ ಬಿದ್ದಿರುವುದನ್ನು ನೋಡಿ, ಅವನನ್ನು ಸಾಯಿಸದೆ ಕರುಣೆ ತೋರಿದನು. ಅವನು ಕಿರುನಗೆಯನ್ನು ಬೀರುತ್ತಾ ಕಲಿಪುರುಷನಲ್ಲಿ ಇಂತೆಂದನು. ॥ ೩೦ ॥

ರಾಜೋವಾಚ

ನ ತೇ ಗುಡಾಕೇಶಯಶೋಧರಾಣಾಂ
ಬದ್ಧಾಂಜಲೇರ್ವೈ ಭಯಮಸ್ತಿ ಕಿಂಚಿತ್ ।
ನ ವರ್ತಿತವ್ಯಂ ಭವತಾ ಕಥಂಚನ
ಕ್ಷೇತ್ರೇ ಮದೀಯೇ ತ್ವಮಧರ್ಮಬಂಧುಃ ॥ ೩೧ ॥

ತ್ವಾಂ ವರ್ತಮಾನಂ ನರದೇವದೇಹೇ-
ಷ್ವನುಪ್ರವೃತ್ತೋಽಯಮಧರ್ಮಪೂಗಃ ।
ಲೋಭೋಽನೃತಂ ಚೌರ್ಯಮನಾರ್ಯಮಂಹೋ
ಜ್ಯೇಷ್ಠಾ ಚ ಮಾಯಾ ಕಲಹಶ್ಚ ದಂಭಃ ॥ ೩೨ ॥

ನ ವರ್ತಿತವ್ಯಂ ತದಧರ್ಮಬಂಧೋ
ಧರ್ಮೇಣ ಸತ್ಯೇನ ಚ ವರ್ತಿತವ್ಯೇ ।
ಬ್ರಹ್ಮಾವರ್ತೇ ಯತ್ರ ಯಜಂತಿ ಯಜ್ಞೈ-
ರ್ಯಜ್ಞೇಶ್ವರಂ ಯಜ್ಞವಿತಾನವಿಜ್ಞಾಃ ॥ ೩೩ ॥

ಯಸ್ಮಿನ್ಹರಿರ್ಭಗವಾನಿಜ್ಯಮಾನ
ಇಜ್ಯಾಮೂರ್ತಿರ್ಯಜತಾಂ ಶಂ ತನೋತಿ ।
ಕಾಮಾನಮೋಘಾನ್ ಸ್ಥಿರಜಂಗಮಾನಾ-
ಮಂತರ್ಬಹಿರ್ವಾಯುರಿವೈಷ ಆತ್ಮಾ ॥ ೩೪ ॥

ಸೂತ ಉವಾಚ

ಪರೀಕ್ಷಿತೈವಮಾದಿಷ್ಟಃ ಸ ಕಲಿರ್ಜಾತವೇಪಥುಃ ।
ತಮುದ್ಯತಾಸಿಮಾಹೇದಂ ದಂಡಪಾಣಿಮಿವೋದ್ಯತಮ್ ॥ ೩೫ ॥

ಕಲಿರುವಾಚ

ಯತ್ರ ಕ್ವಚನ ವತ್ಸ್ಯಾಮಿ ಸಾರ್ವಭೌಮ ತವಾಜ್ಞಯಾ ।
ಲಕ್ಷಯೇ ತತ್ರ ತತ್ರಾಪಿ ತ್ವಾಮಾತ್ತೇಷುಶರಾಸನಮ್ ॥ ೩೬ ॥

ತನ್ಮೇ ಧರ್ಮಭೃತಾಂ ಶ್ರೇಷ್ಠ ಸ್ಥಾನಂ ನಿರ್ದೇಷ್ಟುಮರ್ಹಸಿ ।
ಯತ್ರೈವ ನಿಯತೋ ವತ್ಸ್ಯ ಆತಿಷ್ಠಂಸ್ತೇಽನುಶಾಸನಮ್ ॥ ೩೭ ॥

ಸೂತ ಉವಾಚ

ಅಭ್ಯರ್ಥಿತಸ್ತದಾ ತಸ್ಮೈ ಸ್ಥಾನಾನಿ ಕಲಯೇ ದದೌ ।
ದ್ಯೂತಂ ಪಾನಂ ಸ್ತ್ರಿಯಃ ಸೂನಾ ಯತ್ರಾಧರ್ಮಶ್ಚತುರ್ವಿಧಃ ॥ ೩೮ ॥

ಪುನಶ್ಚ ಯಾಚಮಾನಾಯ ಜಾತರೂಪಮದಾತ್ಪ್ರಭುಃ ।
ತತೋಽನೃತಂ ಮದಂ ಕಾಮಂ ರಜೋ ವೈರಂ ಚ ಪಂಚಮಮ್ ॥ ೩೯ ॥

ಅಮೂನಿ ಪಂಚ ಸ್ಥಾನಾನಿ ಹ್ಯಧರ್ಮಪ್ರಭವಃ ಕಲಿಃ ।
ಔತ್ತರೇಯೇಣ ದತ್ತಾನಿ ನ್ಯವಸತ್ತನ್ನಿದೇಶಕೃತ್ ॥ ೪೦ ॥

ಪರೀಕ್ಷಿದ್ರಾಜನು ಹೇಳಿದನು – 'ನೀನು ಕೈಜೋಡಿಸಿಕೊಂಡು ಶರಣಾಗತನಾಗಿದ್ದೀಯೆ. ಆದ್ದರಿಂದ ಅರ್ಜುನನ ಯಶಸ್ವೀ ವಂಶದಲ್ಲಿ ಜನಿಸಿದ ವೀರರಿಂದ ನಿನಗೆ ಯಾವ ಭಯವೂ ಇಲ್ಲ. ಆದರೆ ನೀನು ಅಧರ್ಮಕ್ಕೆ ಸಹಾಯಕನಾಗಿರುವುದರಿಂದ ನನ್ನ ರಾಜ್ಯದಲ್ಲಿ ಖಂಡಿತವಾಗಿ ಇರಕೂಡದು. ॥ ೩೧ ॥ ನೀನು ರಾಜರ ಶರೀರಗಳಲ್ಲಿ ಇರುವುದರಿಂದಲೇ ಲೋಭ, ಅಸತ್ಯ, ಕಳ್ಳತನ, ದುಷ್ಟತನ, ಸ್ವಧರ್ಮತ್ಯಾಗ, ದಾರಿದ್ರ್ಯ, ಕಪಟ, ಕಲಹ, ದಂಭ ಮತ್ತು ಇತರ ಪಾಪಗಳು ಬೆಳೆಯುತ್ತವೆ. ॥ ೩೨ ॥ ಆದುದರಿಂದ ಎಲೈ ಅಧರ್ಮದ ಮಿತ್ರನೇ! ನೀನು ಈ ಬ್ರಹ್ಮಾವರ್ತದೇಶದಲ್ಲಿ ಒಂದು ಕ್ಷಣವೂ ಇರಬಾರದು. ಏಕೆಂದರೆ, ಇದು ಸತ್ಯ, ಧರ್ಮಗಳ ನಿವಾಸಸ್ಥಾನವಾಗಿದೆ. ಈ ಕ್ಷೇತ್ರದಲ್ಲಿ ಯಜ್ಞವಿಧಿಯನ್ನರಿತ ಮಹಾತ್ಮರು ಯಜ್ಞದ ಮೂಲಕ ಯಜ್ಞಪುರುಷನಾದ ಭಗವಂತನನ್ನು ಆರಾಧಿಸುತ್ತಾರೆ. ॥ ೩೩ ॥ ಈ ದೇಶದಲ್ಲಿ ಭಗವಂತನಾದ ಶ್ರೀಹರಿಯು ಯಜ್ಞರೂಪದಲ್ಲಿ ವಾಸಿಸುತ್ತಿರುವನು. ಯಜ್ಞಗಳ ಮೂಲಕ ಪೂಜೆಯನ್ನು ಸ್ವೀಕರಿಸಿ, ಯಜ್ಞ ಮಾಡುವವರಿಗೆ ಸ್ವರ್ಗಗಳನ್ನು ಉಂಟುಮಾಡುತ್ತಾನೆ. ಸರ್ವಾತ್ಮನಾಗಿರುವ ಆ ಸ್ವಾಮಿಯು ವಾಯುವಿನಂತೆ ಸಮಸ್ತ ಚರಾಚರ ಪ್ರಾಣಿಗಳ ಒಳ-ಹೊರಗೂ ಏಕರಸವಾಗಿ ತುಂಬಿದ್ದು ಅವರ ಕಾಮನೆಗಳನ್ನು ಪೂರ್ಣಗೊಳಿಸುತ್ತಾನೆ. ॥ ೩೪ ॥

ಸೂತಪುರಾಣಿಕರು ಹೇಳುತ್ತಾರೆ – ಪರೀಕ್ಷಿದ್ರಾಜನ ಆಜ್ಞೆಯನ್ನು ಕೇಳಿ ಕಲಿಪುರುಷನು ನಡುಗತೊಡಗಿದನು. ಯಮರಾಜನಂತೆ ಕೊಲ್ಲಲು ಖಡ್ಗವನ್ನೆತ್ತಿಕೊಂಡು ನಿಂತಿದ್ದ ಪರೀಕ್ಷಿತನಲ್ಲಿ ಕಲಿಯು ಹೀಗೆ ವಿನಂತಿಸಿಕೊಂಡನು – ॥ ೩೫ ॥

ಕಲಿಪುರುಷನು ಹೇಳಿದನು – ಸಾರ್ವಭೌಮನೇ! ನಿನ್ನ ಆಜ್ಞೆಯಂತೆ ನಾನು ಎಲ್ಲೇ ಇರಲು ಬಯಸಿದರೂ ಅಲ್ಲೆಲ್ಲಾ ಧನುಸ್ಸಿನಲ್ಲಿ ಬಾಣವನ್ನು ಹೂಡಿ ನಿಂತಿರುವ ನಿನ್ನ ಮೂರ್ತಿಯೇ ಕಾಣುತ್ತಿರುತ್ತದೆ. ॥ ೩೬ ॥ ಧಾರ್ಮಿಕ ಶಿರೋಮಣಿಯೇ! ನಾನು ನಿನ್ನ ಆಜ್ಞೆಯನ್ನು ಪಾಲಿಸುತ್ತಾ ನಿಯತವಾಗಿ ವಾಸಿಸಬಹುದಾದ ಸ್ಥಾನವು ಯಾವುದೆಂಬುದನ್ನು ದಯಮಾಡಿ ನಿರ್ದೇಶಿಸು. ॥ ೩೭ ॥

ಸೂತಪುರಾಣಿಕರು ಹೇಳುತ್ತಾರೆ – ಕಲಿಪುರುಷನ ಈ ಪ್ರಾರ್ಥನೆಯನ್ನು ಸ್ವೀಕರಿಸಿ ರಾಜಾ ಪರೀಕ್ಷಿತನು ಅವನಿಗೆ ಸ್ಥಿರವಾಗಿ ವಾಸಮಾಡಲು – ಜೂಜು, ಮದ್ಯಪಾನ, ಅಧಾರ್ಮಿಕವಾದ ಸ್ತ್ರೀಸಂಗ, ಮತ್ತು ಹಿಂಸೆ ಎಂಬ ನಾಲ್ಕು ಜಾಗಗಳನ್ನು ನಿರ್ದೇಶಿಸಿದನು. ಈ ನಾಲ್ಕು ಸ್ಥಾನಗಳಲ್ಲಿ ಕ್ರಮವಾಗಿ ಅಸತ್ಯ, ಮದ, ಆಸಕ್ತಿ, ನಿರ್ದಯತೆ ಎಂಬ ನಾಲ್ಕು ಬಗೆಯ ಅಧರ್ಮಗಳು ವಾಸಿಸುತ್ತವೆ. ॥ ೩೮ ॥ ಇವುಗಳಲ್ಲದೆ ಇನ್ನು ಕೆಲವು ಸ್ಥಾನಗಳನ್ನು ತನ್ನ ವಾಸಕ್ಕಾಗಿ ದಯಪಾಲಿಸಬೇಕೆಂದು ಕಲಿಪುರುಷನು ಕೇಳಿದಾಗ, ಸಮರ್ಥನಾದ ಪರೀಕ್ಷಿದ್ರಾಜನು ಅವನಿಗೆ ವಾಸಕ್ಕಾಗಿ ಇನ್ನೊಂದು ಸ್ಥಾನ 'ಸುವರ್ಣ' (ಚಿನ್ನ) ವನ್ನು ನಿರ್ದೇಶಿಸಿದನು. ಹೀಗೆ ಕಲಿಪುರುಷನಿಗೆ ಅಸತ್ಯ, ಮದ, ಕಾಮ, ವೈರ ಮತ್ತು ರಜೋಗುಣ ಎಂಬ ಐದು ಸ್ಥಾನಗಳಾದವು. ॥ ೩೯ ॥ ಪರೀಕ್ಷಿದ್ರಾಜನು ತನಗೆ ಕೊಟ್ಟ ಆ ಐದು ಸ್ಥಾನಗಳಲ್ಲೇ ಕಲಿಯು, ಅವನ ಅಪ್ಪಣೆಯನ್ನು ಪಾಲಿಸುತ್ತಾ ವಾಸಿಸತೊಡಗಿದನು. ॥ ೪೦ ॥ ಆದ್ದರಿಂದ ಆತ್ಮಕಲ್ಯಾಣ

ಅಥೈತಾನಿ ನ ಸೇವೇತ ಬುಭೂಷುಃ ಪುರುಷಃ ಕ್ವಚಿತ್ ।
ವಿಶೇಷತೋ ಧರ್ಮಶೀಲೋ ರಾಜಾ ಲೋಕಪತಿರ್ಗುರುಃ ॥ ೪೧ ॥

ವೃಷಸ್ಯ ನಷ್ಟಾಂಸ್ತ್ರೀನ್ಪಾದಾಂಸ್ತಪಃ ಶೌಚಂ ದಯಾಮಿತಿ ।
ಪ್ರತಿಸಂದಧ ಆಶ್ವಾಸ್ಯ ಮಹೀಂ ಚ ಸಮವರ್ಧಯತ್ ॥ ೪೨ ॥

ಸ ಏಷ ಏತರ್ಹ್ಯಧ್ಯಾಸ್ತ ಆಸನಂ ಪಾರ್ಥಿವೋಚಿತಮ್ ।
ಪಿತಾಮಹೇನೋಪನ್ಯಸ್ತಂ ರಾಜ್ಞಾರಣ್ಯಂ ವಿವಿಕ್ಷತಾ ॥ ೪೩ ॥

ಆಸ್ತೇಽಧುನಾ ಸ ರಾಜರ್ಷಿಃ ಕೌರವೇಂದ್ರಃ ಶ್ರಿಯೋಲ್ಲಸನ್ ।
ಗಜಾಹ್ವಯೇ ಮಹಾಭಾಗಶ್ಚಕ್ರವರ್ತೀ ಬೃಹಚ್ಛ್ರವಾಃ ॥ ೪೪ ॥

ಇತ್ಥಂಭೂತಾನುಭಾವೋಽಯಮಭಿಮನ್ಯುಸುತೋ ನೃಪಃ ।
ಯಸ್ಯ ಪಾಲಯತಃ ಕ್ಷೌಣೀಂ ಯೂಯಂ ಸತ್ರಾಯ ದೀಕ್ಷಿತಾಃ ॥ ೪೫ ॥

ತನ್ನ ಏಳಿಗೆಯನ್ನು ಬಯಸುವ ಪುರುಷನು ಈ ಐದು ಸ್ಥಾನಗಳನ್ನು ಎಂದಿಗೂ ಸೇವಿಸಬಾರದು. ವಿಶೇಷವಾಗಿ ಧರ್ಮಶೀಲರಾದ ರಾಜರು, ಪ್ರಜಾನಾಯಕರು, ಧರ್ಮೋಪದೇಶಮಾಡುವ ಗುರುಜನರು ತುಂಬಾ ಎಚ್ಚರಿಕೆಯಿಂದ ಇವುಗಳನ್ನು ತ್ಯಜಿಸಬೇಕು. ॥ ೪೧ ॥ ಅನಂತರ ಪರೀಕ್ಷಿದ್ರಾಜನು ವೃಷಭರೂಪದಲ್ಲಿದ್ದ ಧರ್ಮಕ್ಕೆ ತಪಸ್ಸು, ಶೌಚ, ದಯೆ ಎಂಬ ಮೂರು ಪಾದಗಳನ್ನು ಜೋಡಿಸಿ ಕೊಟ್ಟು ಸಮಾಧಾನಪಡಿಸಿದನು. ಭೂದೇವಿಯನ್ನು ಸಮಾಧಾನಗೊಳಿಸಿ ಆಕೆಯನ್ನು ಸಲಹಿದನು. ॥ ೪೨ ॥ ಆ ಪರೀಕ್ಷಿದ್ರಾಜನೇ ತನ್ನ ಪಿತಾಮಹನು ಅರಣ್ಯಕ್ಕೆ ತೆರಳುವಾಗ ತನಗೆ ಕೊಟ್ಟ ರಾಜಸಿಂಹಾಸನದ ಮೇಲೆ ಈಗಲೂ ಬೆಳಗುತ್ತಿದ್ದಾನೆ. ॥ ೪೩ ॥ ಪರಮ ಯಶಸ್ವಿಯೂ, ಸೌಭಾಗ್ಯಸಂಪನ್ನನೂ ಆದ ಆ ಚಕ್ರವರ್ತಿ ರಾಜರ್ಷಿಯು ಹಸ್ತಿನಾವತಿಯಲ್ಲಿ ಕೌರವಕುಲದ ರಾಜ್ಯಲಕ್ಷ್ಮಿಯಿಂದ ರಾರಾಜಿಸುತ್ತಿದ್ದಾನೆ. ॥ ೪೪ ॥ ಅಭಿಮನ್ಯುನಂದನ ರಾಜಾ ಪರೀಕ್ಷಿತನ ಪ್ರಭಾವ ಹೀಗಿದೆ. ಆ ಮಹಾನುಭಾವನು ರಾಜ್ಯವನ್ನಾಳುವ ಸಮಯದಲ್ಲಿಯೇ ನೀವು ದೀರ್ಘಕಾಲ ನಡೆಯುವ ಈ ಸತ್ರಯಾಗದಲ್ಲಿ ದೀಕ್ಷಿತರಾಗಿರುವಿರಿ. * ॥ ೪೫ ॥

ಹದಿನೇಳನೆಯ ಅಧ್ಯಾಯವು ಮುಗಿಯಿತು. ॥ ೧೭ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಪ್ರಥಮಸ್ಕಂಧೇ
ಕಲಿನಿಗ್ರಹೋ ನಾಮ ಸಪ್ತದಶೋಽಧ್ಯಾಯಃ ॥ ೧೭ ॥

ಹದಿನೆಂಟನೆಯ ಅಧ್ಯಾಯ

ಪರೀಕ್ಷಿದ್ರಾಜನಿಗೆ ಶೃಂಗೀ ಋಷಿಯ ಶಾಪ ಒದಗಿದುದು

ಸೂತ ಉವಾಚ

ಯೋ ವೈ ದ್ರೌಣ್ಯಸ್ತ್ರವಿಪ್ಲುಷ್ಟೋ ನ ಮಾತುರುದರೇ ಮೃತಃ ।
ಅನುಗ್ರಹಾದ್ ಭಗವತಃ ಕೃಷ್ಣಸ್ಯಾದ್ಭುತಕರ್ಮಣಃ ॥ ೧ ॥

ಬ್ರಹ್ಮಕೋಪೋತ್ಥಿತಾದ್ಯಸ್ತು ತಕ್ಷಕಾತ್ಪ್ರಾಣವಿಪ್ಲವಾತ್ ।
ನ ಸಮ್ಮುಮೋಹೋರುಭಯಾದ್ಭಗವತ್ಯರ್ಪಿತಾಶಯಃ ॥ ೨ ॥

ಸೂತಪುರಾಣಿಕರು ಹೇಳುತ್ತಾರೆ – ಶೌನಕಾದಿಗಳೇ! ಅದ್ಭುತ ಕರ್ಮಗಳುಳ್ಳ ಶ್ರೀಕೃಷ್ಣಪರಮಾತ್ಮನ ಕೃಪೆಯಿಂದ ರಾಜಾ ಪರೀಕ್ಷಿತನು ತನ್ನ ತಾಯಿಯ ಗರ್ಭದಲ್ಲಿ ಅಶ್ವತ್ಥಾಮನ ಬ್ರಹ್ಮಾಸ್ತ್ರದಿಂದ ದಹಿಸುತ್ತಿದ್ದರೂ ಸಾಯದೆ ಉಳಿದುಕೊಂಡನು. ॥ ೧ ॥ ಬ್ರಾಹ್ಮಣ ಶಾಪದಿಂದ ಪ್ರೇರಿತನಾಗಿ ತಕ್ಷಕನು ಕಚ್ಚಲು ಬಂದಾಗಲೂ ಆತನು ಪ್ರಾಣನಾಶವಾಗುವುದೆಂಬ ಭಯದಿಂದ ಮೋಹಕ್ಕೆ ಒಳಗಾಗಲಿಲ್ಲ. ಏಕೆಂದರೆ, ಅವನು ತನ್ನ ಚಿತ್ತವನ್ನು ಭಗವಾನ್ ಶ್ರೀಕೃಷ್ಣನ ಪಾದಾರವಿಂದಗಳಲ್ಲಿ ಸಮರ್ಪಣೆಮಾಡಿಬಿಟ್ಟಿದ್ದನು. ॥ ೨ ॥ ಅವನು ಸರ್ವಸಂಗ ಪರಿತ್ಯಾಗಮಾಡಿ ಗಂಗಾತೀರಕ್ಕೆ ಹೋಗಿ ಶ್ರೀಶುಕಮಹಾಮುನಿಗಳಿಂದ ಉಪದೇಶ ಪಡೆದು ಭಗವಂತನ ಸ್ವರೂಪ

* ೪೧ರಿಂದ ೪೫ರವರೆಗಿನ ಶ್ಲೋಕಗಳಲ್ಲಿ ಪರೀಕ್ಷಿದ್ರಾಜನನ್ನು ವರ್ತಮಾನದಂತೆ ವರ್ಣಿಸಲಾಗಿದೆ. "**ವರ್ತಮಾನಸಾಮೀಪ್ಯೇ ವರ್ತಮಾನವದ್ವಾ**" (ಪಾ-ಸೂ-೩/೩/೧೩೧) ಎಂಬ ಪಾಣಿನಿಯ ಸೂತ್ರದಂತೆ ವರ್ತಮಾನದ ಸಮೀಪವರ್ತಿ ಭೂತ ಮತ್ತು ನಿಕಟವರ್ತಿ ಭವಿಷ್ಯತ್ತಿಗಾಗಿ ವರ್ತಮಾನದ ಪ್ರಯೋಗ ಮಾಡಬಹುದು. ಶ್ರೀವಲ್ಲಭಾಚಾರ್ಯರು ತಮ್ಮ ಟೀಕೆಯಲ್ಲಿ ಬರೆದಿರುವರು – ಆಗ ಪರೀಕ್ಷಿದ್ರಾಜನು ಭೌತಿಕವಾಗಿ ಮೃತನಾಗಿದ್ದರೂ, ಆತನ ಕೀರ್ತಿ ಹಾಗೂ ಪ್ರಭಾವಗಳು ವರ್ತಮಾನದಂತೆ ವಿದ್ಯಮಾನವಾಗಿದ್ದವು. ಅವನ ಹರಿಕಥಾ ಅತ್ಯಂತ ಶ್ರದ್ಧೆಯನ್ನು ಉಂಟುಮಾಡಲು ಅವನ ಅಂತರವನ್ನು ಬಿಚ್ಚಿಡಲಾಗಿದೆ. ಅವನಿಗೆ ಭಗವಂತನ ಸಾಯುಜ್ಯ ಪ್ರಾಪ್ತವಾಗಿತ್ತು. ಅದಕ್ಕಾಗಿಯೇ ಸೂತಪುರಾಣಿಕರು ಅವನನ್ನು ತಮ್ಮ ಎದುರಿಗೆ ನೋಡುತ್ತಿದ್ದರು. ಕೇವಲ ಅವರಿಗೆ ಮಾತ್ರವಲ್ಲ ಅಲ್ಲಿದ್ದ ಎಲ್ಲರಿಗೂ ಹಾಗೆಯೇ ಅನುಭವವಾಗುತ್ತಿತ್ತು. "**ಆತ್ಮಾ ವೈ ಪುತ್ರನಾಮಾಸಿ**" ಎಂಬ ಶ್ರುತಿಗನುಸಾರ ಜನಮೇಜಯನ ರೂಪದಲ್ಲಿಯೂ ಅವನೇ ರಾಜಸಿಂಹಾಸನದಲ್ಲಿ ಕುಳಿತಿದ್ದನು. ಇವೆಲ್ಲ ಕಾರಣಗಳಿಂದ ವರ್ತಮಾನದಂತೆ ಅವನ ವರ್ಣನೆಯು ಕಥಾರಸವನ್ನು ಪುಷ್ಟಗೊಳಿಸುತ್ತದೆ.

ಉತ್ಸೃಜ್ಯ ಸರ್ವತಃ ಸಂಗಂ ವಿಜ್ಞಾತಾಜಿತಸಂಸ್ಥಿತಿಃ ।
ವೈಯಾಸಕೇರ್ಜಹೌ ಶಿಷ್ಯೋ ಗಂಗಾಯಾಂ ಸ್ವಂ ಕಲೇವರಮ್ ॥ ೩ ॥

ನೋತ್ತಮಶ್ಲೋಕವಾರ್ತಾನಾಂ ಜುಷತಾಂ ತತ್ಕಥಾಮೃತಮ್ ।
ಸ್ಯಾತ್ಸಂಭ್ರಮೋಽಂತಕಾಲೇಽಪಿ ಸ್ಮರತಾಂ ತತ್ಪದಾಂಬುಜಮ್ ॥ ೪ ॥

ತಾವತ್ಕಲಿರ್ನ ಪ್ರಭವೇತ್ ಪ್ರವಿಷ್ಟೋಽಪೀಹ ಸರ್ವತಃ ।
ಯಾವದೀಶೋ ಮಹಾನುರ್ವ್ಯಾಮಾಭಿಮನ್ಯವ ಏಕರಾಟ್ ॥ ೫ ॥

ಯಸ್ಮಿನ್ನಹನಿ ಯರ್ಹ್ಯೇವ ಭಗವಾನುತ್ಸಸರ್ಜ ಗಾಮ್ ।
ತದೈವೇಹಾನುವೃತ್ತೋಽಸಾವಧರ್ಮಪ್ರಭವಃ ಕಲಿಃ ॥ ೬ ॥

ನಾನುದ್ವೇಷ್ಟಿ ಕಲಿಂ ಸಮ್ರಾಟ್ಸಾರಂಗ ಇವ ಸಾರಭುಕ್ ।
ಕುಶಲಾನ್ಯಾಶು ಸಿದ್ಧ್ಯಂತಿ ನೇತರಾಣಿ ಕೃತಾನಿ ಯತ್ ॥ ೭ ॥

ಕಿಂ ನು ಬಾಲೇಷು ಶೂರೇಣ ಕಲಿನಾ ಧೀರಭೀರುಣಾ ।
ಅಪ್ರಮತ್ತಃ ಪ್ರಮತ್ತೇಷು ಯೋ ವೃಕೋ ನೃಷು ವರ್ತತೇ ॥ ೮ ॥

ಉಪವರ್ಣಿತಮೇತದ್ವಃ ಪುಣ್ಯಂ ಪಾರೀಕ್ಷಿತಂ ಮಯಾ ।
ವಾಸುದೇವಕಥೋಪೇತಮಾಖ್ಯಾನಂ ಯದಪೃಚ್ಛತ ॥ ೯ ॥

ಯಾ ಯಾಃ ಕಥಾ ಭಗವತಃ ಕಥನೀಯೋರುಕರ್ಮಣಃ ।
ಗುಣಕರ್ಮಾಶ್ರಯಾಃ ಪುಂಭಿಃ ಸಂಸೇವ್ಯಾಸ್ತಾ ಬುಭೂಷುಭಿಃ ॥ ೧೦ ॥

ಋಷಯ ಊಚುಃ

ಸೂತ ಜೀವ ಸಮಾಃ ಸೌಮ್ಯ ಶಾಶ್ವತೀರ್ವಿಶದಂ ಯಶಃ ।
ಯಸ್ತ್ವಂ ಶಂಸಸಿ ಕೃಷ್ಣಸ್ಯ ಮರ್ತ್ಯಾನಾಮಮೃತಂ ಹಿ ನಃ ॥ ೧೧ ॥

ಕರ್ಮಣ್ಯಸ್ಮಿನ್ನನಾಶ್ವಾಸೇ ಧೂಮಧೂಮ್ರಾತ್ಮನಾಂ ಭವಾನ್ ।
ಆಪಾಯಯತಿ ಗೋವಿಂದಪಾದಪದ್ಮಾಸವಂ ಮಧು ॥ ೧೨ ॥

ತುಲಯಾಮ ಲವೇನಾಪಿ ನ ಸ್ವರ್ಗಂ ನಾಪುನರ್ಭವಮ್ ।
ಭಗವತ್ಸಂಗಿ ಸಂಗಸ್ಯ ಮರ್ತ್ಯಾನಾಂ ಕಿಮುತಾಶಿಷಃ ॥ ೧೩ ॥

ವನ್ನರಿತುಕೊಂಡು ತನ್ನ ಶರೀರವನ್ನು ತ್ಯಜಿಸಿಬಿಟ್ಟನು. ॥ ೩ ॥ ಭಗವಾನ್ ಶ್ರೀಕೃಷ್ಣನ ಲೀಲಾಕಥೆಗಳನ್ನು ಹೇಳುತ್ತ ಕೇಳುತ್ತ ಆ ಕಥಾಮೃತವನ್ನು ಸೇವಿಸುತ್ತಾ, ಅವನ ಪಾದಾರವಿಂದಗಳನ್ನು ಸ್ಮರಿಸುತ್ತಾ ಇರುವ ಸುಕೃತಿಗಳಿಗೆ ಪ್ರಾಣಾಂತ್ಯಕಾಲದಲ್ಲಿಯೂ ಗಾಬರಿ, ಗಲಿಬಿಲಿಗಳು ಉಂಟಾಗುವುದಿಲ್ಲ. ॥ ೪ ॥ ಪೃಥ್ವಿಯಲ್ಲಿ ಅಭಿಮನ್ಯುನಂದನ ಪರೀಕ್ಷಿದ್ರಾಜನು ಚಕ್ರವರ್ತಿಯಾಗಿದ್ದವರೆಗೆ ಎಲ್ಲೆಡೆ ಕಲಿಯು ವ್ಯಾಪ್ತನಾಗಿದ್ದರೂ ಅವನ ಆಟವೇನೂ ನಡೆಯಲಿಲ್ಲ. ॥ ೫ ॥ ಶ್ರೀಕೃಷ್ಣನು ಯಾವದಿನ, ಯಾವ ಕ್ಷಣದಲ್ಲಿ ಭೂಲೋಕವನ್ನು ತ್ಯಜಿಸಿದನೋ, ಅಂದಿನಿಂದಲೇ ಅಧರ್ಮದ ಮೂಲಕಾರಣವಾದ ಕಲಿಯು ಪ್ರವೇಶಮಾಡಿಬಿಟ್ಟಿದ್ದರೂ ಪರೀಕ್ಷಿತನು ಅದನ್ನು ಹತೋಟಿಯಲ್ಲಿ ಇಟ್ಟುಕೊಂಡಿದ್ದನು. ॥ ೬ ॥ ಪರೀಕ್ಷಿದ್ರಾಜನು ದುಂಬಿಯಂತೆ ಸಾರವನ್ನು ಗ್ರಹಿಸುವ ಸ್ವಭಾವವುಳ್ಳವನಾಗಿದ್ದುದರಿಂದಲೇ, ಅವನಿಗೆ ಕಲಿಯುಗದ ಮೇಲೆ ಯಾವ ದ್ವೇಷವೂ ಇರಲಿಲ್ಲ. ಏಕೆಂದರೆ, ಇದರಲ್ಲಿ ಮಹಾನ್ ಗುಣವೊಂದಿದೆ. ಪುಣ್ಯಕರ್ಮಗಳಾದರೋ ಸಂಕಲ್ಪಮಾತ್ರದಿಂದಲೇ ಫಲಕಾರಿಯಾಗುತ್ತವೆ ; ಆದರೆ ಪಾಪಕರ್ಮದ ಫಲವು ಶರೀರದಿಂದ ಮಾಡಿದಾಗಲೇ ಸಿಗುವುದು. ಸಂಕಲ್ಪಮಾತ್ರದಿಂದಲ್ಲ. ॥ ೭ ॥ ಈ ಕಲಿಯು ತೋಳದಂತೆ. ತೋಳವು ಬಾಲಕರ ಮೇಲೆ ಪರಾಕ್ರಮ ತೋರಿದರೂ ಧೈರ್ಯವುಳ್ಳ ಶೂರ–ವೀರರಿಗೆ ಭಯಪಡುತ್ತದೆ. ಹಾಗೆಯೇ ಕಲಿಪುರುಷನು ಪ್ರಮಾದಿ ಜನರನ್ನು ತನ್ನ ವಶಪಡಿಸಿಕೊಳ್ಳುವುದರಲ್ಲಿ ಸದಾ ಎಚ್ಚರವಾಗಿರುತ್ತಾನೆ. ॥ ೮ ॥ ಶೌನಕಾದಿ ಋಷಿಗಳೇ ! ನೀವು ಕೇಳಿದಂತೆ ಶ್ರೀಭಗವಂತನ ಕಥೆಯಿಂದ ಕೂಡಿದ ಪವಿತ್ರವಾದ ಪರೀಕ್ಷಿದ್ರಾಜನ ಕಥೆಯನ್ನು ನಿಮಗೆ ವರ್ಣಿಸಿದೆ. ॥ ೯ ॥ ಕೀರ್ತಿಸಲು ಯೋಗ್ಯವಾದ, ಆಶ್ಚರ್ಯಕರವಾದ, ನಾನಾ ದಿವ್ಯಲೀಲೆಗಳನ್ನು ನಡೆಸಿದ ಭಗವಾನ್ ಶ್ರೀಕೃಷ್ಣನ ದಿವ್ಯಗುಣಗಳನ್ನೂ, ದಿವ್ಯಕರ್ಮಗಳನ್ನೂ ಹೇಳುವ ಯಾವ–ಯಾವ ದಿವ್ಯಕಥೆಗಳುಂಟೋ ಅವೆಲ್ಲವನ್ನೂ ಶ್ರೇಯಸ್ಸನ್ನು ಬಯಸುವ ಪುರುಷರು ಸೇವಿಸಬೇಕು. ॥ ೧೦ ॥

ಋಷಿಗಳು ಕೇಳಿದರು – ಸೌಮ್ಯ ಸ್ವಭಾವವುಳ್ಳ ಸೂತಪುರಾಣಿಕರೇ ! ನೀವು ಶಾಶ್ವತಕಾಲದವರೆಗೆ ಜೀವಿಸಿರಿ. ಏಕೆಂದರೆ, ಮೃತ್ಯುವಿನ ಪ್ರವಾಹದಲ್ಲಿ ಬಿದ್ದಿರುವ ನಮಗೆ ನೀವು ಭಗವಾನ್ ಶ್ರೀಕೃಷ್ಣನ ಅಮೃತಮಯವಾದ ಧವಳಕೀರ್ತಿಯನ್ನು ಶ್ರವಣಮಾಡಿಸುತ್ತಿರುವಿರಿ. ॥ ೧೧ ॥ ಬಹಳಕಾಲ ಯಜ್ಞವನ್ನು ಮಾಡುತ್ತಾ-ಮಾಡುತ್ತಾ ಅದರ ಹೊಗೆಯಿಂದ ನಮ್ಮ ಶರೀರಗಳು ಬೂದುಬಣ್ಣಕ್ಕೆ ತಿರುಗಿತು. ಆದರೂ ಈ ಕರ್ಮಗಳ ಫಲವು ದೊರೆಯುವುದೆಂಬ ವಿಶ್ವಾಸವಿಲ್ಲ. ನೀವಾದರೋ ಈಗಲೇ ನಮಗೆ ಭಗವಾನ್ ಶ್ರೀಕೃಷ್ಣಚಂದ್ರನ ಚರಣಕಮಲಗಳ ದಿವ್ಯೋನ್ಮಾದಕರವಾದ ಮಕರಂದವನ್ನು ಪಾನಮಾಡಿಸಿ ತೃಪ್ತಿಯನ್ನುಂಟುಮಾಡುತ್ತಿದ್ದೀರಿ. ಇದರಿಂದ ನಮಗೆ ಆಧ್ಯಾತ್ಮಿಕ ಶಾಂತಿಯು ಪ್ರತ್ಯಕ್ಷವಾಗಿ ಅನುಭವಕ್ಕೆ ಬಂದಿದೆ. ॥ ೧೨ ॥ ಭಗವದ್ಭಕ್ತರ ಲವಕಾಲ ಮಾತ್ರ ಸತ್ಸಂಗದಿಂದ ಉಂಟಾದ ಸೌಖ್ಯವನ್ನು ಸ್ವರ್ಗವಾಗಲೀ, ಮೋಕ್ಷವಾಗಲೀ ಹೋಲಿಸಲಾಗುವುದಿಲ್ಲ. ಹಾಗಿರುವಾಗ ತುಚ್ಛವಾದ ಮಾನುಷಭೋಗಗಳ ವಿಷಯದಲ್ಲಿ ಹೇಳುವುದೇನಿದೆ ? ॥ ೧೩ ॥ ಮಹನೀಯರಾದ

ಕೋ ನಾಮ ತೃಪ್ಯೇದ್ ರಸವಿತ್ಕಥಾಯಾಂ
ಮಹತ್ತಮೈಕಾಂತಪರಾಯಣಸ್ಯ ।
ನಾಂತಂ ಗುಣಾನಾಮಗುಣಸ್ಯ ಜಗ್ಮು-
ರ್ಯೋಗೇಶ್ವರಾ ಯೇ ಭವಪಾದ್ಮಮುಖ್ಯಾಃ ॥ ೧೪ ॥

ತನ್ನೋ ಭವಾನ್ವೈ ಭಗವತ್ಪ್ರಧಾನೋ
ಮಹತ್ತಮೈಕಾಂತ ಪರಾಯಣಸ್ಯ ।
ಹರೇರುದಾರಂ ಚರಿತಂ ವಿಶುದ್ಧಂ
ಶುಶ್ರೂಷತಾಂ ನೋ ವಿತನೋತು ವಿದ್ವನ್ ॥ ೧೫ ॥

ಸ ವೈ ಮಹಾಭಾಗವತಃ ಪರೀಕ್ಷಿದ್
ಯೇನಾಪವರ್ಗಾಖ್ಯಮದಭ್ರಬುದ್ಧಿಃ ।
ಜ್ಞಾನೇನ ವೈಯಾಸಕಿಶಬ್ದಿತೇನ
ಭೇಜೇ ಖಗೇಂದ್ರಧ್ವಜಪಾದಮೂಲಮ್ ॥ ೧೬ ॥

ತನ್ನಃ ಪರಂ ಪುಣ್ಯ ಮಸಂವೃತಾರ್ಥ-
ಮಾಖ್ಯಾನಮತ್ಯದ್ಭುತಯೋಗನಿಷ್ಠಮ್ ।
ಆಖ್ಯಾಹ್ಯನಂತಾಚರಿತೋಪಪನ್ನಂ
ಪಾರೀಕ್ಷಿತಂ ಭಾಗವತಾಭಿರಾಮಮ್ ॥ ೧೭ ॥

ಸೂತ ಉವಾಚ

ಅಹೋ ವಯಂ ಜನ್ಮಭೃತೋಽದ್ಯ ಹಾಸ್ಮ
ವೃದ್ಧಾನುವೃತ್ತ್ಯಾಪಿ ವಿಲೋಮಜಾತಾಃ ।
ದೌಷ್ಕುಲ್ಯಮಾಧಿಂ ವಿಧುನೋತಿ ಶೀಘ್ರಂ
ಮಹತ್ತಮಾನಾಮಭಿಧಾನಯೋಗಃ ॥ ೧೮ ॥

ಕುತಃ ಪುನರ್ಗೃಣತೋ ನಾಮ ತಸ್ಯ
ಮಹತ್ತಮೈಕಾಂತಪರಾಯಣಸ್ಯ ।
ಯೋಽನಂತ ಶಕ್ತಿರ್ಭಗವಾನನಂತೋ
ಮಹದ್ಗುಣತ್ವಾದ್ಯಮನಂತ ಮಾಹುಃ ॥ ೧೯ ॥

ಏತಾವತಾಲಂ ನನು ಸೂಚಿತೇನ
ಗುಣೈರಸಾಮ್ಯಾನತಿಶಾಯನಸ್ಯ ।
ಹಿತ್ವೇತರಾನ್ಪ್ರಾರ್ಥಯತೋ ವಿಭೂತಿ-
ರ್ಯಸ್ಯಾಂಘ್ರಿರೇಣುಂ ಜುಷತೇಽನಭೀಪ್ಸೋಃ ॥ ೨೦ ॥

ಏಕಮಾತ್ರ ಜೀವನ ಸರ್ವಸ್ವನಾದ ಶ್ರೀಕೃಷ್ಣನ ಲೀಲಾಕಥೆಗಳಿಂದ ತೃಪ್ತನಾಗಬಲ್ಲ ರಸಮರ್ಮಜ್ಞನು ಯಾರಿರಬಹುದು! ಸಮಸ್ತ ಪ್ರಾಕೃತ ಗುಣಗಳಿಂದ ಅತೀತನಾದ ಭಗವಂತನ ಅಚಿಂತ್ಯ, ಅನಂತ ಕಲ್ಯಾಣಗುಣಗಳ ಪಾರವನ್ನು ಬ್ರಹ್ಮರುದ್ರಾದಿ ದೊಡ್ಡ-ದೊಡ್ಡ ಯೋಗೇಶ್ವರರೂ ಕಾಣಲಾರರು. ॥ ೧೪ ॥ ಎಲೈ ಜ್ಞಾನಿ ಶಿರೋಮಣಿಯೇ! ಭಗವಂತನನ್ನೇ ಜೀವನದ ಧ್ರುವತಾರೆಯನ್ನಾಗಿ ಭಾವಿಸುವ ನಿಮ್ಮ ಸತ್ಪುರುಷರ ಏಕಮಾತ್ರ ಆಶ್ರಯನಾದ ಶ್ರೀಭಗವಂತನ ಉದಾರವೂ, ಪರಿಶುದ್ಧವೂ ಆದ ಚರಿತ್ರವನ್ನು ನಮಗೆ ವಿಸ್ತಾರವಾಗಿ ವರ್ಣಿಸಿ ಹೇಳಿರಿ. ॥ ೧೫ ॥ ಭಗವಂತನ ಪರಮಪ್ರೇಮಿ ಮಹಾಬುದ್ಧಿವಂತನಾದ ಪರೀಕ್ಷಿತನು ಶ್ರೀಶುಕ ಮಹಾಮುನಿಗಳಿಂದ ಕೇಳಲ್ಪಟ್ಟ ಜ್ಞಾನದಿಂದ ಮೋಕ್ಷಸ್ವರೂಪೀ ಭಗವಂತನ ಚರಣಕಮಲಗಳನ್ನು ಪಡೆದುಕೊಂಡನು. ಆ ಜ್ಞಾನವನ್ನು ಹಾಗೂ ಪರೀಕ್ಷಿತನ ಪರಮ ಪವಿತ್ರ ಆಖ್ಯಾನವನ್ನು ದಯವಿಟ್ಟು ವರ್ಣಿಸಿರಿ. ಏಕೆಂದರೆ, ಅದರಲ್ಲಿ ಯಾವ ಮಾತು ಮರೆಯಾಗಿರಲಿಕ್ಕಿಲ್ಲ ಮತ್ತು ಭಗವತ್ ಪ್ರೇಮದ ಅದ್ಭುತ ಯೋಗ ನಿಷ್ಠೆಯ ನಿರೂಪಣೆಯೂ ಇರಬಹುದು. ಅದರಲ್ಲಿ ಹೆಜ್ಜೆ-ಹೆಜ್ಜೆಗೆ ಭಗವಾನ್ ಶ್ರೀಕೃಷ್ಣನ ದಿವ್ಯಲೀಲೆಗಳ ವರ್ಣನೆ ಇರಬಹುದು. ಭಗವಂತನ ಪ್ರಿಯ ಭಕ್ತರಿಗೆ ಅಂತಹ ಪ್ರಸಂಗವನ್ನು ಕೇಳುವುದರಲ್ಲಿ ಬಹಳ ರಸ ದೊರೆಯುತ್ತದೆ. ॥ ೧೬-೧೭ ॥

ಸೂತಪುರಾಣಿಕರು ಹೇಳುತ್ತಾರೆ – ಅಹಾ! ವಿಲೋಮಜಾತಿಯಾದ* ಸೂತಕುಲದಲ್ಲಿ ಹುಟ್ಟಿದ್ದರೂ ಮಹಾತ್ಮರ ಸೇವೆ ಮಾಡಿದ ಕಾರಣ ಇಂದು ನಮ್ಮ ಜನ್ಮ ಸಫಲವಾಯಿತು. ಏಕೆಂದರೆ, ಮಹಾತ್ಮರೊಡನೆ ಸಂಭಾಷಿಸುವುದರಿಂದಲೇ ದುಷ್ಕುಲದಲ್ಲಿ ಹುಟ್ಟಿದ ಮನೋವ್ಯಥೆಯು ಬೇಗನೆ ತೊಲಗಿಹೋಗುತ್ತದೆ. ॥ ೧೮ ॥ ಮತ್ತೆ ಸತ್ಪುರುಷರ ಏಕಮಾತ್ರ ಆಶ್ರಯನಾದ ಭಗವಂತನ ನಾಮವನ್ನು ಕೊಂಡಾಡುವವರ ಬಗ್ಗೆ ಹೇಳುವುದೇನಿದೆ? ಭಗವಂತನ ಶಕ್ತಿಯು ಅನಂತವಾಗಿದೆ, ಅವನು ಸ್ವಯಂ ಅನಂತನಾಗಿದ್ದಾನೆ. ವಾಸ್ತವವಾಗಿ ಅವನ ಗುಣಗಳ ಅನಂತತೆಯಿಂದಲೇ ಅವನನ್ನು ಅನಂತನೆಂದು ಹೇಳುತ್ತಾರೆ. ॥ ೧೯ ॥ ಭಗವಂತನ ಗುಣಗಳ ಸಮತೆಯನ್ನು ಕೂಡ ಯಾರೂ ಮಾಡಲಾರರೆಂದಾಗ, ಅವನಿಗಿಂತ ಹೆಚ್ಚಿನವರಾದರೋ ಹೇಗೆ ಆಗಬಲ್ಲರು? "ಲಕ್ಷ್ಮೀದೇವಿಯು ತನ್ನನ್ನು ಪಡೆದುಕೊಳ್ಳುವ ಇಚ್ಛೆಯಿಂದ ಪ್ರಾರ್ಥಿಸುವ ಬ್ರಹ್ಮಾದಿ ದೇವತೆಗಳನ್ನು ಕಣ್ಣೆತ್ತಿಯೂ ನೋಡದೆ, ಭಗವಂತನು ಬಯಸದಿದ್ದರೂ ಅವನ ಚರಣರಜವನ್ನು ಸೇವಿಸುತ್ತಿರುವವಳಲ್ಲ! ಅವನ ಗುಣಗಳ ವಿಶೇಷತೆಯನ್ನು ತಿಳಿಸುವುದಕ್ಕಾಗಿ ಇಷ್ಟು ಹೇಳುವುದು ಸಾಕಾಗಿದೆ. ॥ ೨೦ ॥ ಬ್ರಹ್ಮದೇವರು ಯಾರ ಶ್ರೀಪಾದಪದ್ಮಗಳನ್ನು ತೊಳೆದಾಗ ಅವನ ಪಾವನಜಲದಿಂದ ಉದ್ಭವಿಸಿದ ತೀರ್ಥವೇ ಗಂಗೆಯಾಗಿ ಪ್ರವಹಿಸಿತೋ, ಅದು ಶಿವನನ್ನು ಮತ್ತು ಇಡೀ ಜಗತ್ತನ್ನು ಪವಿತ್ರಗೊಳಿಸುತ್ತದೆ. ಇಂತಹ ಸ್ಥಿತಿಯಿರುವಾಗ ತ್ರಿಭುವನದಲ್ಲಿ ಶ್ರೀಕೃಷ್ಣನಲ್ಲದೆ ಬೇರೆ ಯಾರು 'ಭಗವಾನ್' ಎಂಬ ಶಬ್ದಕ್ಕೆ

* ಉಚ್ಚ-ವರ್ಣದ ಸ್ತ್ರೀಯಲ್ಲಿ ನಿಮ್ನ ವರ್ಣದ ಪುರುಷನಿಂದ ಹುಟ್ಟಿದ ಸಂತಾನವು 'ವಿಲೋಮಜಾತ' ಎನಿಸುತ್ತದೆ. ಸೂತಜಾತಿಯ ಉತ್ಪತ್ತಿಯೂ ಹೀಗೆಯೇ ಬ್ರಾಹ್ಮಣ ತಾಯಿ, ಕ್ಷತ್ರಿಯ ತಂದೆ ಇವರಿಂದ ಉಂಟಾದ್ದರಿಂದ ಅವರನ್ನು ಶಾಸ್ತ್ರಗಳಲ್ಲಿ 'ವಿಲೋಮಜಾತಿ' ಎಂದು ತಿಳಿಯಲಾಗಿದೆ.

ಅಥಾಪಿ ಯತ್ಪಾದನಖಾವಸೃಷ್ಟಂ
ಜಗದ್ವಿರಿಂಚೋಪಹೃತಾರ್ಹಣಾಂಭಃ ।
ಸೇಶಂ ಪುನಾತ್ಯನ್ಯತಮೋ ಮುಕುಂದಾತ್
ಕೋ ನಾಮ ಲೋಕೇ ಭಗವತ್ಪದಾರ್ಥಃ ॥ ೨೦ ॥

ಯತ್ರಾನುರಕ್ತಾಃ ಸಹಸೈವ ಧೀರಾ
ವ್ಯಪೋಹ್ಯ ದೇಹಾದಿಷು ಸಂಗಮೂಢಮ್ ।
ವ್ರಜಂತಿ ತತ್ಪಾರಮಹಂಸ್ಯಮಂತ್ಯಂ
ಯಸ್ಮಿನ್ನಹಿಂಸೋಪಶಮಃ ಸ್ವಧರ್ಮಃ ॥ ೨೨ ॥

ಅಹಂ ಹಿ ಪೃಷ್ಟೋಽರ್ಯಮಣೋ ಭವದ್ಭಿ-
ರಾಚಕ್ಷ ಆತ್ಮಾವಗಮೋಽತ್ರ ಯಾವಾನ್ ।
ನಭಃ ಪತಂತ್ಯಾತ್ಮಸಮಂ ಪತತ್ರಿಣ-
ಸ್ತಥಾ ಸಮಂ ವಿಷ್ಣುಗತಿಂ ವಿಪಶ್ಚಿತಃ ॥ ೨೩ ॥

ಏಕದಾ ಧನುರುದ್ಯಮ್ಯ ವಿಚರನ್ಮೃಗಯಾಂ ವನೇ ।
ಮೃಗಾನನುಗತಃ ಶ್ರಾಂತಃ ಕ್ಷುಧಿತಸ್ತೃಷಿತೋ ಭೃಶಮ್ ॥ ೨೪ ॥

ಜಲಾಶಯಮಚಕ್ಷಾಣಃ ಪ್ರವಿವೇಶ ತಮಾಶ್ರಮಮ್ ।
ದದರ್ಶ ಮುನಿಮಾಸೀನಂ ಶಾಂತಂ ಮೀಲಿತಲೋಚನಮ್ ॥ ೨೫ ॥

ಪ್ರತಿರುದ್ಧೇಂದ್ರಿಯಪ್ರಾಣಮನೋಬುದ್ಧಿ ಮುಪಾರತಮ್ ।
ಸ್ಥಾನತ್ರಯಾತ್ಪರಂ ಪ್ರಾಪ್ತಂ ಬ್ರಹ್ಮಭೂತಮವಿಕ್ರಿಯಮ್ ॥ ೨೬ ॥

ವಿಪ್ರಕೀರ್ಣಜಟಾಚ್ಛನ್ನಂ ರೌರವೇಣಾಜಿನೇನ ಚ ।
ವಿಶುಷ್ಯತ್ತಾಲುರುದಕಂ ತಥಾಭೂತಮಯಾಚತ ॥ ೨೭ ॥

ಅಲಬ್ಧ ತೃಣಭೂಮ್ಯಾದಿರಸಂಪ್ರಾಪ್ತಾರ್ಘ್ಯಸೂನೃತಃ ।
ಅವಜ್ಞಾತಮಿವಾತ್ಮಾನಂ ಮನ್ಯಮಾನಶ್ಚುಕೋಪ ಹ ॥ ೨೮ ॥

ಅಭೂತಪೂರ್ವಃ ಸಹಸಾ ಕ್ಷುತ್ತೃಡ್ಭ್ಯಾಮರ್ದಿತಾತ್ಮನಃ ।
ಬ್ರಾಹ್ಮಣಂ ಪ್ರತ್ಯಭೂದ್ಬ್ರಹ್ಮನ್ಮತ್ಸರೋ ಮನ್ಯುರೇವ ಚ ॥ ೨೯ ॥

ಸ ತು ಬ್ರಹ್ಮಋಷೇರಂಸೇ ಗತಾಸುಮುರಗಂ ರುಷಾ ।
ವಿನಿರ್ಗಚ್ಛನ್ಧನುಷ್ಕೋಟ್ಯಾ ನಿಧಾಯ ಪುರಮಾಗಮತ್ ॥ ೩೦ ॥

ಏಷ ಕಿಂ ನಿಭೃತಾಶೇಷಕರಣೋ ಮೀಲಿತೇಕ್ಷಣಃ ।
ಮೃಷಾ ಸಮಾಧಿರಾಹೋಸ್ವಿತ್ಕಿಂ ನು ಸ್ಯಾತ್ಕ್ಷತ್ರಬಂಧುಭಿಃ ॥ ೩೧ ॥

ಸಂಪೂರ್ಣವಾಗಿ ಅನ್ವರ್ಥ ವಿಷಯವಾಗಬಲ್ಲನು ? ॥ ೨೦ ॥ ಭಗವಂತನಲ್ಲಿ ಪರಮಪ್ರೇಮ ವನ್ನು ಪಡೆದ ಧೀರರು ಶರೀರ ಮುಂತಾದವುಗಳಲ್ಲಿ ನೆಟ್ಟಿದ್ದ ಆಸಕ್ತಿಯನ್ನು ಕೂಡಲೇ ತೊರೆದು ಅಹಿಂಸೆ ಮತ್ತು ಉಪಶಾಂತಿ ಗಳನ್ನೇ ತನ್ನ ಧರ್ಮವನ್ನಾಗಿ ಹೊಂದಿರುವ, ಜೀವನದ ಕಟ್ಟಕಡೆಯ ಆಶ್ರಯವಾದ ಪರಮಹಂಸ ಧರ್ಮವನ್ನು ಯಾವನ ನಿರಂತರ ಧ್ಯಾನಕ್ಕೋಸ್ಕರ ಹೊಂದುತ್ತಾರೋ ಅಂತಹ ಮುಕುಂದನು ತಾನೇ 'ಭಗವಾನ್' ಶಬ್ದಕ್ಕೆ ಪೂರ್ಣವಾದ ಅರ್ಥವಾಗುತ್ತಾನೆ. ॥ ೨೨ ॥ ಎಲೈ ಸೂರ್ಯಸದೃಶರಾದ ಮಹಾತ್ಮರೇ! ನೀವು ನನ್ನಲ್ಲಿ ಕೇಳಬೇಕೆಂದಿರುವ ವಿಷಯದ ಬಗೆಗೆ ನನಗೆ ತಿಳಿದಷ್ಟನ್ನು ಪ್ರಾಮಾಣಿಕವಾಗಿ ಹೇಳುತ್ತೇನೆ. ಪಕ್ಷಿಗಳಿಗೆ ತಮ್ಮ-ತಮ್ಮ ಶಕ್ತಿಗೆ ತಕ್ಕಂತೆ ಆಕಾಶದಲ್ಲಿ ಹಾರಲು ಸಾಧ್ಯವಿರುವಂತೆಯೇ ವಿದ್ವಾಂಸರಿಗೂ ಕೂಡ ಶ್ರೀಭಗವಂತನ ಮಹಿಮೆಯನ್ನು ತಮ್ಮ ಶಕ್ತಿಗನುಗುಣವಾಗಿಯೇ ತಿಳಿದು ವರ್ಣಿಸಲು ಸಾಧ್ಯವಾಗುತ್ತದೆ. ॥ ೨೩ ॥

ಒಂದು ದಿನ ಆ ಪರೀಕ್ಷಿದ್ರಾಜನು ಬಿಲ್ಲನ್ನೆತ್ತಿಕೊಂಡು ಬೇಟೆಯಾಡಲು ಕಾಡಿಗೆ ಹೋದನು. ಮೃಗಗಳ ಹಿಂದೆ ಓಡುತ್ತಾ-ಓಡುತ್ತಾ ಬಳಲಿ, ಅವನಿಗೆ ಹಸಿವು-ಬಾಯಾರಿಕೆಗಳು ಉಂಟಾದವು. ॥ ೨೪ ॥ ನೀರು ಕುಡಿಯಲು ಯಾವುದೇ ಜಲಾಶಯವೂ ಕಾಣದಿರಲು ಅವನು ಹತ್ತಿರದ ಒಂದು ಋಷ್ಯಾಶ್ರಮವನ್ನು ಹೊಕ್ಕನು. ಅಲ್ಲಿ ಕಣ್ಣುಮುಚ್ಚಿಕೊಂಡು ಧ್ಯಾನಸ್ಥರಾಗಿ ಶಾಂತಭಾವದಿಂದ ಕುಳಿತಿದ್ದ ಓರ್ವ ಮುನಿಯನ್ನು ಕಂಡನು. ॥ ೨೫ ॥ ಅವರು ಇಂದ್ರಿಯ, ಪ್ರಾಣ, ಮನಸ್ಸು, ಬುದ್ಧಿಗಳೆಲ್ಲವನ್ನು ತಡೆಗಟ್ಟಿ ಸಂಸಾರಾತೀತ ಸ್ಥಿತಿಯಲ್ಲಿದ್ದರು. ಜಾಗ್ರತ್, ಸ್ವಪ್ನ, ಸುಷುಪ್ತಿ ಮೂರೂ ಸ್ಥಿತಿಯನ್ನು ದಾಟಿ ನಿರ್ವಿಕಾರ ಬ್ರಹ್ಮರೂಪೀ ತುರೀಯಾವಸ್ಥೆಯಲ್ಲಿ ಸ್ಥಿತರಾಗಿದ್ದರು. ॥ ೨೬ ॥ ಕೆದರಿದ ಜಟೆಗಳಿಂದ ಅವರ ದೇಹ ಮುಚ್ಚಿಹೋಗಿತ್ತು. ಅವರು ಕೃಷ್ಣಾಜಿನವನ್ನು ಹೊದ್ದಿದ್ದರು. ಅಂತಹ ಸಮಾಧಿಸ್ಥ ಮುನಿಗಳಲ್ಲಿ ನಾಲಿಗೆ-ಗಂಟಲು ಒಣಗಿಹೋಗಿದ್ದ ರಾಜನು ನೀರನ್ನು ಕೇಳಿದನು. ॥ ೨೭ ॥ ಆದರೆ ಅವನಿಗೆ ಅಲ್ಲಿ ಕುಳಿತುಕೊಳ್ಳಲು ಹುಲ್ಲಿನ ಆಸನವೂ ದೊರೆಯಲಿಲ್ಲ, ಭೂಮಿಯಲ್ಲಿ ಕುಳಿತುಕೊಳ್ಳಲೂ ಕೂಡ ಯಾರೂ ಹೇಳಲಿಲ್ಲ. ಅರ್ಘ್ಯವೇ ಮುಂತಾದ ಉಪಚಾರವಾಗಲೀ, ಕಡೆಗೆ ಒಂದು ಸವಿಮಾತಾದರೂ ದೊರೆಯದಿದ್ದಾಗ, ತನಗೆ ಅವಮಾನವಾಯಿತೆಂದು ಭಾವಿಸಿ ಅವನು ಬಹಳ ಕೋಪಗೊಂಡನು. ॥ ೨೮ ॥ ಶೌನಕರೇ! ಹಸಿವು-ಬಾಯಾರಿಕೆಯಿಂದ ಪೀಡಿತನಾಗಿದ್ದ ಅವನಿಗೆ ಇದ್ದಕ್ಕಿದ್ದಂತೆ ಆ ಬ್ರಾಹ್ಮಣನ ಮೇಲೆ ಅಸೂಯೆಯೂ, ಕ್ರೋಧವೂ ಉಂಟಾದವು. ಅವನ ಜೀವನದಲ್ಲಿ ಮೊಟ್ಟಮೊದಲನೆಯದಾಗಿ ಇಂತಹ ಘಟನೆಯಾಗಿತ್ತು. ॥ ೨೯ ॥ ಅಲ್ಲಿಂದ ಮರಳುವಾಗ ಅವನು ಸಿಟ್ಟಿನಿಂದ ಒಂದು ಸತ್ತುಹೋಗಿದ್ದ ಹಾವನ್ನು ಧನುಸ್ಸಿನ ತುದಿಯಿಂದ ಎತ್ತಿ ಆ ಬ್ರಹ್ಮರ್ಷಿಯ ಕೊರಳಿಗೆ ಹಾಕಿ, ತನ್ನ ರಾಜಧಾನಿಗೆ ಹಿಂತಿರುಗಿದನು. ॥ ೩೦ ॥ ಈ ಮುನಿಯು ನಿಜವಾಗಿ ಕಣ್ಣುಮುಚ್ಚಿ ತನ್ನೆಲ್ಲ ಇಂದ್ರಿಯಗಳನ್ನು ತಡೆಗಟ್ಟಿ ಸಮಾಧಿಯಲ್ಲಿದ್ದನೋ, ಅಥವಾ 'ಈ ರಾಜನಿಂದ ಏನಾಗಬೇಕು' ಎಂದು ತಾತ್ಸಾರದಿಂದ ಸಮಾಧಿ

ತಸ್ಯ ಪುತ್ರೋಽತಿತೇಜಸ್ವೀ ವಿಹರನ್ ಬಾಲಕೋಽರ್ಭಕೈಃ ।
ರಾಜ್ಞಾಘಂ ಪ್ರಾಪಿತಂ ತಾತಂ ಶ್ರುತ್ವಾ ತತ್ರೇದಮಬ್ರವೀತ್ ॥ ೩೨ ॥

ಅಹೋ ಅಧರ್ಮಃ ಪಾಲಾನಾಂ ಪೀವ್ನಾಂ ಬಲಿಭುಜಾಮಿವ ।
ಸ್ವಾಮಿನ್ಯಘಂ ಯದ್ದಾಸಾನಾಂ ದ್ವಾರಪಾನಾಂ ಶುನಾಮಿವ ॥ ೩೩ ॥

ಬ್ರಾಹ್ಮಣೈಃ ಕ್ಷತ್ರಬಂಧುರ್ಹಿ ದ್ವಾರಪಾಲೋ ನಿರೂಪಿತಃ ।
ಸ ಕಥಂ ತದ್ಗೃಹೇ ದ್ವಾಃಸ್ಥಃ ಸಭಾಂಡಂ ಭೋಕ್ತುಮರ್ಹತಿ ॥ ೩೪ ॥

ಕೃಷ್ಣೇ ಗತೇ ಭಗವತಿ ಶಾಸ್ತರ್ಯುತ್ಪಥಗಾಮಿನಾಮ್ ।
ತದ್ಭಿನ್ನಸೇತೂನದ್ಯಾಹಂ ಶಾಸ್ಮಿ ಪಶ್ಯತ ಮೇ ಬಲಮ್ ॥ ೩೫ ॥

ಇತ್ಯುಕ್ತ್ವಾ ರೋಷತಾಮ್ರಾಕ್ಷೋ ವಯಸ್ಯಾನೃಷಿಬಾಲಕಃ ।
ಕೌಶಿಕ್ಯಾಪ ಉಪಸ್ಪೃಶ್ಯ ವಾಗ್ವಜ್ರಂ ವಿಸಸರ್ಜ ಹ ॥ ೩೬ ॥

ಇತಿ ಲಂಘಿತಮರ್ಯಾದಂ ತಕ್ಷಕಃ ಸಪ್ತಮೇಽಹನಿ ।
ದಂಕ್ಷ್ಯತಿ ಸ್ಮ ಕುಲಾಂಗಾರಂ ಚೋದಿತೋ ಮೇ ತತದ್ರುಹಮ್ ॥ ೩೭ ॥

ತತೋಽಭ್ಯೇತ್ಯಾಶ್ರಮಂ ಬಾಲೋ ಗಲೇ ಸರ್ಪಕಲೇವರಮ್ ।
ಪಿತರಂ ವೀಕ್ಷ್ಯ ದುಃಖಾರ್ತೋ ಮುಕ್ತಕಂಠೋ ರುರೋದ ಹ ॥ ೩೮ ॥

ಸ ವಾ ಆಂಗಿರಸೋ ಬ್ರಹ್ಮನ್ ಶ್ರುತ್ವಾ ಸುತವಿಲಾಪನಮ್ ।
ಉನ್ಮೀಲ್ಯ ಶನಕೈರ್ನೇತ್ರೇ ದೃಷ್ಟ್ವಾ ಸ್ವಾಂಸೇ ಮೃತೋರಗಮ್ ॥ ೩೯ ॥

ವಿಸೃಜ್ಯ ಪುತ್ರಂ ಪಪ್ರಚ್ಛ ವತ್ಸ ಕಸ್ಮಾದ್ಧಿ ರೋದಿಷಿ ।
ಕೇನ ವಾ ತೇಽಪಕೃತಮಿತ್ಯುಕ್ತಃ ಸ ನ್ಯವೇದಯತ್ ॥ ೪೦ ॥

ನಿಶಮ್ಯ ಶಪ್ತಮತದರ್ಹಂ ನರೇಂದ್ರಂ
ಸ ಬ್ರಾಹ್ಮಣೋ ನಾತ್ಮಜಮಭ್ಯನಂದತ್ ।
ಅಹೋ ಬತಾಂಹೋ ಮಹದದ್ಯ ತೇ ಕೃತ-
ಮಲ್ಪೀಯಸಿ ದ್ರೋಹ ಉರುರ್ದಮೋ ಧೃತಃ ॥ ೪೧ ॥

ನ ವೈ ನೃಭಿರ್ನರದೇವಂ ಪರಾಖ್ಯಂ
ಸಮ್ಮಾತುಮರ್ಹಸ್ಯವಿಪಕ್ವಬುದ್ಧೇ ।
ಯತ್ತೇಜಸಾ ದುರ್ವಿಷಹೇಣ ಗುಪ್ತಾ
ವಿಂದಂತಿ ಭದ್ರಾಣ್ಯಕುತೋಭಯಾಃ ಪ್ರಜಾಃ ॥ ೪೨ ॥

ಮನಸ್ಸು ನಿಶ್ಚಲವಾಗಿತ್ತೋ? ಎಂದಾಗಿ ಆಲೋಚಿಸುತ್ತಾ ಅವನು ಹೊರಟು ಹೋದನು. ॥ ೩೧ ॥

ಆ ಮಹಾಮುನಿಯ ಹೆಸರು ಶಮೀಕ. ಅವರ ಪುತ್ರ 'ಶೃಂಗೀ' ಎಂಬುವನು ಮಹಾತೇಜಸ್ವಿಯಾಗಿದ್ದನು. ಇತರ ಋಷಿಕುಮಾರರೊಡನೆ ಆಟವಾಡುತ್ತಿದ್ದಾಗ ಅವನಿಗೆ—ರಾಜನು ತನ್ನ ತಂದೆಯ ವಿಷಯದಲ್ಲಿ ಕೆಟ್ಟವ್ಯವಹಾರ ಮಾಡಿದ್ದು ತಿಳಿಯಿತು. ಆಗ ಅವನು ಕಿಡಿ-ಕಿಡಿಯಾಗಿ ಹೀಗೆಂದನು – ॥ ೩೨ ॥ 'ಛೇ! ಎಂತಹ ಅಧರ್ಮವಾಯಿತು! ಬಲಿಯಲ್ಲಿ ಹಾಕಿದ ಬಲಿಯನ್ನವನ್ನು ತಿಂದು ಬದುಕುವ ಕಾಗೆಯಂತೆಯೂ, ಬಾಗಿಲನ್ನು ಕಾಯುವ ನಾಯಿಯಂತೆಯೂ, ದಾಸರಂತೆಯೂ ಇರಬೇಕಾಗಿದ್ದ ಈ ಕ್ಷತ್ರಿಯಾಧಮರು ಕೊಬ್ಬಿ ಹೀಗೆ ಸ್ವಾಮಿದ್ರೋಹ ಮಾಡುವುದೇ? ॥ ೩೩ ॥ ಇಂತಹ ಕ್ಷತ್ರಿಯರನ್ನು ಬ್ರಾಹ್ಮಣರು ಬಾಗಿಲು ಕಾಯುವ ಕೆಲಸಕ್ಕೆ ನೇಮಿಸಿರುವರು. ಅವರು ಬಾಗಿಲಲ್ಲೇ ಇರಬೇಕೇ ಹೊರತು ಒಳಗೆ ನುಗ್ಗಿ ಪಾತ್ರೆಯಲ್ಲಿರುವ ಅನ್ನವನ್ನು ತಿನ್ನಲು ಹೇಗೆ ಅರ್ಹರಾದಾರು? ॥ ೩೪ ॥ ದುರ್ಮಾರ್ಗದಲ್ಲಿ ನಡೆಯುವವರನ್ನು ಶಿಕ್ಷಿಸುತ್ತಿದ್ದ ಭಗವಾನ್ ಶ್ರೀಕೃಷ್ಣನು ಪರಂಧಾಮವನ್ನು ಹೊಂದಿದ ಬಳಿಕ ಎಲ್ಲೆಮೀರಿ ನಡೆಯುತ್ತಿರುವ ಇವರಿಗೆ ನಾನೇ ಶಿಕ್ಷೆಯನ್ನು ವಿಧಿಸುತ್ತೇನೆ. ನನ್ನ ತಪೋಬಲವನ್ನಾದರೂ ನೋಡಲಿ." ॥ ೩೫ ॥ ತನ್ನ ಸಂಗಡಿಗರೊಂದಿಗೆ ಹೀಗೆ ನುಡಿದು ಆ ಮುನಿಕುಮಾರನು ಕೋಪದಿಂದ ಕೆಂಪೇರಿದ ಕಣ್ಣುಗಳುಳ್ಳವನಾಗಿ ಕೌಶಿಕೀ ನದಿಯ ನೀರಿನಲ್ಲಿ ಆಚಮನಮಾಡಿ ತನ್ನ ಮಾತೆಂಬ ವಜ್ರವನ್ನು ಹೀಗೆ ಪ್ರಯೋಗಿಸಿದನು. ॥ ೩೬ ॥ 'ಕುಲಗೇಡಿಕನಾದ ಆ ಪರೀಕ್ಷಿದ್ರಾಜನು ನನ್ನ ಪೂಜ್ಯನಾದ ತಂದೆಗೆ ಅಪಮಾನಮಾಡಿ, ಮೇರೆಮೀರಿ ನಡೆದಿದ್ದಾನೆ. ಆದ್ದರಿಂದ ನನ್ನ ಪ್ರೇರಣೆಯಂತೆ ಇಂದಿನಿಂದ ಏಳನೆಯ ದಿನ ತಕ್ಷಕ ಸರ್ಪವು ಅವನನ್ನು ಕಚ್ಚಿಬಿಡಲಿ.' ॥ ೩೭ ॥

ಹೀಗೆ ಶಾಪಕೊಟ್ಟ ಬಳಿಕ ಆ ಬಾಲಕನು ತನ್ನ ಆಶ್ರಮಕ್ಕೆ ಬಂದು, ತನ್ನ ತಂದೆಯ ಕೊರಳಿನಲ್ಲಿ ಸತ್ತ ಹಾವನ್ನು ಕಂಡು ಗಟ್ಟಿಯಾಗಿ ಅಳತೊಡಗಿದನು. ॥ ೩೮ ॥ ಎಲೈ ಶೌನಕರೇ! ಆ ಅಂಗೀರಸ ಗೋತ್ರದ ಮುನಿವರ್ಯ ಶಮೀಕರು ಪುತ್ರನ ಅಳುವಿನ ಧ್ವನಿಯನ್ನು ಕೇಳಿ, ಎಚ್ಚರಗೊಂಡು ಮೆಲ್ಲನೆ ಕಣ್ಣುತೆರೆದು ನೋಡಿದಾಗ ತನ್ನ ಕೊರಳಿನಲ್ಲಿ ನೇತಾಡುತ್ತಿದ್ದ ಸತ್ತ ಹಾವನ್ನು ನೋಡಿದನು. ॥ ೩೯ ॥ ಅದನ್ನು ಕಿತ್ತೆಸೆದು ತನ್ನ ಪುತ್ರನಲ್ಲಿ ಕೇಳಿದರು – ಮಗೂ! ನೀನು ಏಕೆ ಅಳುತ್ತಿರುವೆ? ಯಾರು ನಿನಗೆ ಅಪಕಾರ ಮಾಡಿದರು? ಎಂದು ಕೇಳಲಾಗಿ – ಶೃಂಗಿಯು ಎಲ್ಲ ವೃತ್ತಾಂತವನ್ನು ತಿಳಿಸಿದನು. ॥ ೪೦ ॥ ರಾಜನಿಗೆ ಶಾಪಕೊಟ್ಟ ಸಮಾಚಾರ ಕೇಳಿ ಆ ಬ್ರಹ್ಮರ್ಷಿಯು ತನ್ನ ಪುತ್ರನನ್ನು ಅಭಿನಂದಿಸಲಿಲ್ಲ. ಅವರ ದೃಷ್ಟಿಯಲ್ಲಿ ಪರೀಕ್ಷಿತನು ಶಾಪಕ್ಕೆ ಯೋಗ್ಯನಾಗಿರಲಿಲ್ಲ. ಅಯ್ಯೋ! ಎಂತಹ ಪಾಪಕಾರ್ಯವನ್ನು ಮಾಡಿದೆ? ಮೂರ್ಖಬಾಲಕನೇ! ಒಂದು ಸಣ್ಣ ಅಪರಾಧಕ್ಕಾಗಿ ನೀನು ಎಷ್ಟು ದೊಡ್ಡ ದಂಡವನ್ನು ವಿಧಿಸಿದೆ? ॥ ೪೧ ॥ ಎಲೈ ದುಡುಕುಬುದ್ಧಿಯವನೇ! ನಿನ್ನ ಬುದ್ಧಿಯು ಪರಿಪಕ್ವವಾಗಿಲ್ಲ. ಆ ರಾಜನಾದರೋ ಮಹಾವಿಷ್ಣುಸ್ವರೂಪನು. ಅವನನ್ನು ಸಾಮಾನ್ಯ ಮನುಷ್ಯನೆಂದು ತಿಳಿಯಬಾರದು. ತಡೆಯಲಸಾಧ್ಯವಾದ ಅವನ ತೇಜಸ್ಸಿನಿಂದಲೇ ಈ

ಅಲಕ್ಷ್ಯಮಾಣೇ ನರದೇವನಾಮ್ನಿ
ರಥಾಂಗಪಾಣಾವಯಮಂಗ ಲೋಕಃ ।
ತದಾ ಹಿ ಚೌರಪ್ರಚುರೋ ವಿನಂಕ್ಷ್ಯ-
ತ್ಯರಕ್ಷ್ಯಮಾಣೋಽವಿವರೂಥವತ್ಕ್ಷಣಾತ್ ॥ ೪೩ ॥

ತದದ್ಯ ನಃ ಪಾಪಮುಪೈತ್ಯನನ್ವಯಂ
ಯನ್ನಷ್ಟನಾಥಸ್ಯ ವಸೋರ್ವಿಲುಂಪಕಾತ್ ।
ಪರಸ್ಪರಂ ಘ್ನಂತಿ ಶಪಂತಿ ವೃಂಜತೇ
ಪಶೂನ ಸ್ತ್ರಿಯೋಽರ್ಥಾನ್ಪುರುದಸ್ಯವೋ ಜನಾಃ ॥ ೪೪ ॥

ತದಾಽಽರ್ಯಧರ್ಮಶ್ಚ ವಿಲೀಯತೇ ನೃಣಾಂ
ವರ್ಣಾಶ್ರಮಾಚಾರಯುತಸ್ತ್ರಯೀಮಯಃ ।
ತತೋಽರ್ಥಕಾಮಾಭಿನಿವೇಶಿತಾತ್ಮನಾಂ
ಶುನಾಂ ಕಪೀನಾಮಿವ ವರ್ಣಸಂಕರಃ ॥ ೪೫ ॥

ಧರ್ಮಪಾಲೋ ನರಪತಿಃ ಸ ತು ಸಮ್ರಾಡ್ ಬೃಹಚ್ಛ್ರವಾಃ ।
ಸಾಕ್ಷಾನ್ಮಹಾಭಾಗವತೋ ರಾಜರ್ಷಿರ್ಹಯಮೇಧಯಾಟ್ ।
ಕ್ಷುತ್ತೃಟ್‌ಶ್ರಮಯುತೋ ದೀನೋ ನೈವಾಸ್ಮಚ್ಛಾಪಮರ್ಹತಿ
॥ ೪೬ ॥

ಅಪಾಪೇಷು ಸ್ವಭೃತ್ಯೇಷು ಬಾಲೇನಾಪಕ್ವಬುದ್ಧಿನಾ ।
ಪಾಪಂ ಕೃತಂ ತದ್ಭಗವಾನ್ಸರ್ವಾತ್ಮಾ ಕ್ಷಂತುಮರ್ಹತಿ
॥ ೪೭ ॥

ತಿರಸ್ಕೃತಾ ವಿಪ್ರಲಬ್ಧಾಃ ಶಪ್ತಾಃ ಕ್ಷಿಪ್ತಾ ಹತಾ ಅಪಿ ।
ನಾಸ್ಯ ತತ್ಪ್ರತಿಕುರ್ವಂತಿ ತದ್ಭಕ್ತಾಃ ಪ್ರಭವೋಽಪಿ ಹಿ
॥ ೪೮ ॥

ಇತಿ ಪುತ್ರಕೃತಾಘೇನ ಸೋಽನುತಪ್ತೋ ಮಹಾಮುನಿಃ ।
ಸ್ವಯಂ ವಿಪ್ರಕೃತೋ ರಾಜ್ಞಾ ನೈವಾಘಂ ತದಚಿಂತಯತ್
॥ ೪೯ ॥

ಪ್ರಾಯಶಃ ಸಾಧವೋ ಲೋಕೇ
ಪರೈರ್ದ್ವಂದ್ವೇಷು ಯೋಜಿತಾಃ ।
ನ ವ್ಯಥಂತಿ ನ ಹೃಷ್ಯಂತಿ
ಯತ ಆತ್ಮಾಽಗುಣಾಶ್ರಯಃ ॥ ೫೦ ॥

ಪ್ರಜೆಗಳೆಲ್ಲರೂ ಸುರಕ್ಷಿತರಾಗಿ, ನಿರ್ಭಯದಿಂದ, ನೆಮ್ಮದಿಯಾಗಿ ಬದುಕುತ್ತಿದ್ದಾರೆ. ॥ ೪೨ ॥ ಯಾವಾಗ ರಾಜನ ರೂಪವನ್ನು ಧರಿಸಿ ಭಗವಂತನು ಭೂಮಿಯಲ್ಲಿ ಕಾಣಿಸಿಕೊಳ್ಳುವುದಿಲ್ಲವೋ, ಆಗ ಕಳ್ಳ-ಕಾಕರು ಹೆಚ್ಚಿ ಕಾವಲಿಲ್ಲದ ಕುರಿಮಂದೆಯಂತೆ ಈ ಲೋಕವು ಕ್ಷಣಮಾತ್ರದಲ್ಲಿ ನಶಿಸಿಹೋದೀತು. ॥ ೪೩ ॥ ದೈವಸ್ವರೂಪೀ ರಾಜನನ್ನು ಕಳಕೊಂಡರೆ ಲೋಕಕ್ಕೆ ಮಹಾ ಅನರ್ಥ ಒದಗುವುದು. ಲೂಟಿ, ದರೋಡೆಗಳೂ, ಪರಸ್ಪರ ಹೊಡೆದಾಟ-ಬಡಿದಾಟಗಳೂ, ಬೈಗುಳಗಳು ಹೆಚ್ಚುತ್ತವೆ. ದನ-ಕರುಗಳೇ ಮುಂತಾದ ಪಶುಗಳೂ, ಹೆಂಗಸರೂ, ಧನ-ಕನಕಾದಿ ಸಂಪತ್ತುಗಳೂ ಕೊಳ್ಳೆ ಹೋಗುತ್ತವೆ. ॥ ೪೪ ॥ ಆಗ ವರ್ಣಾಶ್ರಮಗಳಿಂದ ಕೂಡಿದ ಆರ್ಯಧರ್ಮವು ಲೋಪವಾಗುವುದು. ಹಣದಲೋಭ ಮತ್ತು ಕಾಮವಾಸನೆಗಳಿಗೆ ಒಳಗಾಗಿ ಜನರು ನಾಯಿ, ಕಪಿಗಳು ಸೇರುವಂತೆ ಉಚ್ಛೃಂಖಲರಾಗಿ ವರ್ಣಸಂಕರ ಉಂಟಾಗುವುದು. ॥ ೪೫ ॥ ಚಕ್ರವರ್ತಿ ಪರೀಕ್ಷಿದ್ರಾಜನಾದರೋ ಮಹಾಯಶಸ್ವೀ, ಧರ್ಮಧುರಂಧರನಾಗಿದ್ದಾನೆ. ಅವನು ಅನೇಕ ಅಶ್ವಮೇಧ ಯಜ್ಞಗಳನ್ನು ಆಚರಿಸಿರುವನು. ಭಗವಂತನ ಪ್ರಿಯಭಕ್ತನಾದ ರಾಜರ್ಷಿಯಾದ ಅವನು ಹಸಿವು-ಬಾಯಾರಿಕೆಯಿಂದ ಬಳಲಿದವನಾಗಿ ನಮ್ಮ ಆಶ್ರಮಕ್ಕೆ ಬಂದಿದ್ದನು. ಅವನು ಖಂಡಿತವಾಗಿಯೂ ನಮ್ಮ ಶಾಪಕ್ಕೆ ಯೋಗ್ಯನಾಗಿರಲಿಲ್ಲ. ॥ ೪೬ ॥ ತಿಳುವಳಿಕೆಯಿಲ್ಲದ ಈ ಬಾಲಕನು ನಮ್ಮ ಸೇವೆಮಾಡುತ್ತಿದ್ದ ನಿಷ್ಪಾಪಿಯಾದ ರಾಜನಿಗೆ ಅಪರಾಧವನ್ನೆಸಗಿದ್ದಾನೆ. ಸರ್ವಾತ್ಮನಾದ ಭಗವಂತನು ಕೃಪೆಯಿಟ್ಟು ಇವನನ್ನು ಕ್ಷಮಿಸಲಿ. ॥ ೪೭ ॥ ಭಗವಂತನ ಭಕ್ತರಲ್ಲಿ ಶಕ್ತಿಯಿದ್ದರೂ ಅವರು ಸೇಡುತೀರಿಸಿಕೊಳ್ಳಲು ಹೋಗುವುದಿಲ್ಲ. ಇತರರಿಂದ ತಮಗೆ ಅವಮಾನ, ಮೋಸ, ಬೈಗುಳ, ಆಕ್ಷೇಪಣೆ, ಹೊಡೆದಾಟ, ಬಡಿದಾಟ ಮುಂತಾದವುಗಳಾದರೂ ಅವುಗಳನ್ನು ಸಹಿಸಿಕೊಳ್ಳುತ್ತಾರೆ. ॥ ೪೮ ॥ ಶಮೀಕ ಮಹರ್ಷಿಗಳಿಗೆ ತನ್ನ ಪುತ್ರನು ಮಾಡಿದ ಅಪರಾಧಕ್ಕಾಗಿ ತುಂಬಾ ಪಶ್ಚಾತ್ತಾಪವಾಯಿತು. ಪರೀಕ್ಷಿದ್ರಾಜನು ತಮಗೆ ಮಾಡಿದ್ದ ಅಪಮಾನವನ್ನಾದರೋ ಅವರು ಮನಸ್ಸಿಗೆ ಹಚ್ಚಿಕೊಳ್ಳಲೇ ಇಲ್ಲ. ॥ ೪೯ ॥ ಸಾಧು-ಸಂತರ ಸ್ವಭಾವವೇ ಹೀಗೆ. ಜಗತ್ತಿನಲ್ಲಿ ಇತರರು ಅವರನ್ನು ನಿಂದಾ-ಸ್ತುತಿ ಮುಂತಾದ ದ್ವಂದ್ವಗಳಿಗೆ ಈಡುಮಾಡಿದರೂ ಅವರು ಸಾಮಾನ್ಯವಾಗಿ ಹರ್ಷಿತರಾಗುವುದಿಲ್ಲ, ವ್ಯಥೆಪಡುವುದಿಲ್ಲ. ಏಕೆಂದರೆ, ಅವರು ಆತ್ಮಸ್ವರೂಪವನ್ನರಿತು ಅದರಲ್ಲಿ ನೆಲೆಸಿರುತ್ತಾರೆ. ಆತ್ಮನು ತ್ರಿಗುಣಾತೀತನಲ್ಲವೇ? ॥ ೫೦ ॥

ಹದಿನೆಂಟನೆಯ ಅಧ್ಯಾಯವು ಮುಗಿಯಿತು. ॥ ೧೮ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಪ್ರಥಮಸ್ಕಂಧೇ
ವಿಪ್ರಶಾಪೋಪಲಂಭನಂ ನಾಮಾಷ್ಟಾದಶೋಽಧ್ಯಾಯಃ ॥ ೧೮ ॥

ಹತ್ತೊಂಭತ್ತನೆಯ ಅಧ್ಯಾಯ

ಪರೀಕ್ಷಿದ್ರಾಜನ ಪ್ರಾಯೋಪವೇಶ, ಶುಕಮಹಾಮುನಿಯ ಆಗಮನ–

ಸೂತ ಉವಾಚ

ಮಹೀಪತಿಸ್ತ್ವಥ ತತ್ಕರ್ಮ ಗರ್ಹ್ಯಂ
ವಿಚಿಂತಯನ್ನಾತ್ಮಕೃತಂ ಸುದುರ್ಮನಾಃ ।
ಅಹೋ ಮಯಾ ನೀಚಮನಾರ್ಯವತ್ಕೃತಂ
ನಿರಾಗಸಿ ಬ್ರಹ್ಮಣಿ ಗೂಢತೇಜಸಿ ॥ ೧ ॥

ಧ್ರುವಂ ತತೋ ಮೇ ಕೃತದೇವಹೇಲನಾ-
ದ್ದುರತ್ಯಯಂ ವ್ಯಸನಂ ನಾತಿದೀರ್ಘಾತ್ ।
ತದಸ್ತು ಕಾಮಂ ಹ್ಯಘನಿಷ್ಕೃತಾಯ ಮೇ
ಯಥಾ ನ ಕುರ್ಯಾಂ ಪುನರೇವಮದ್ಧಾ ॥ ೨ ॥

ಅದ್ಯೈವ ರಾಜ್ಯಂ ಬಲಮೃದ್ಧಕೋಶಂ
ಪ್ರಕೋಪಿತಬ್ರಹ್ಮಕುಲಾನಲೋ ಮೇ ।
ದಹತ್ವಭದ್ರಸ್ಯ ಪುನರ್ನ ಮೇಽಭೂತ್
ಪಾಪೀಯಸೀ ಧೀರ್ದ್ವಿಜದೇವಗೋಭ್ಯಃ ॥ ೩ ॥

ಸ ಚಿಂತಯನ್ನಿತ್ಥಮಥಾಶೃಣೋದ್ಯಥಾ
ಮುನೇಃ ಸುತೋಕ್ತೋ ನಿರ್ಋತಿಸ್ತಕ್ಷಕಾಖ್ಯಃ ।
ಸ ಸಾಧು ಮೇನೇ ನ ಚಿರೇಣ ತಕ್ಷಕಾ-
ನಲಂ ಪ್ರಸಕ್ತಸ್ಯ ವಿರಕ್ತಿಕಾರಣಮ್ ॥ ೪ ॥

ಅಥೋ ವಿಹಾಯೇಮಮಮುಂ ಚ ಲೋಕಂ
ವಿಮರ್ಶಿತೌ ಹೇಯತಯಾ ಪುರಸ್ತಾತ್ ।
ಕೃಷ್ಣಾಂಘ್ರಿಸೇವಾಮಧಿಮನ್ಯಮಾನ
ಉಪಾವಿಶತ್ಪ್ರಾಯಮಮರ್ತ್ಯನದ್ಯಾಮ್ ॥ ೫ ॥

ಯಾ ವೈ ಲಸಚ್ಛ್ರೀತುಲಸೀವಿಮಿಶ್ರ-
ಕೃಷ್ಣಾಂಘ್ರಿರೇಣ್ವಭ್ಯಧಿಕಾಂಬುನೇತ್ರೀ ।
ಪುನಾತಿ ಲೋಕಾನುಭಯತ್ರ ಸೇಶಾನ್
ಕಸ್ತಾಂ ನ ಸೇವೇತ ಮರಿಷ್ಯಮಾಣಃ ॥ ೬ ॥

ಇತಿ ವ್ಯವಚ್ಛಿದ್ಯ ಸ ಪಾಂಡವೇಯಃ
ಪ್ರಾಯೋಪವೇಶಂ ಪ್ರತಿ ವಿಷ್ಣುಪದ್ಯಾಮ್ ।
ದಧ್ಯೌ ಮುಕುಂದಾಂಘ್ರಿಮನನ್ಯಭಾವೋ
ಮುನಿವ್ರತೋ ಮುಕ್ತಸಮಸ್ತಸಂಗಃ ॥ ೭ ॥

ಸೂತಪುರಾಣಿಕರು ಹೇಳುತ್ತಾರೆ – ಶೌನಕಾದಿಗಳೇ! ರಾಜಧಾನಿಗೆ ಬಂದ ರಾಜಾಪರೀಕ್ಷಿತನಿಗೆ ತನ್ನ ಆ ನಿಂದನೀಯ ಕರ್ಮಕ್ಕಾಗಿ ಭಾರೀ ಪಶ್ಚಾತ್ತಾಪವಾಯಿತು. ಅವನಿಗೆ ತುಂಬಾ ಬೇಸರವಾಗಿ ಅಂದುಕೊಂಡನು – ಅಯ್ಯೋ! ನಾನು ನಿರಪರಾಧಿಯೂ, ಗೂಢವಾದ ಬ್ರಹ್ಮತೇಜಸ್ಸಿನಿಂದ ಕೂಡಿದ್ದ ಮಹಾತ್ಮನೂ ಆದ ಬ್ರಾಹ್ಮಣನೊಂದಿಗೆ ಅನಾರ್ಯನಂತೆ ನೀಚ ಕಾರ್ಯವನ್ನು ಎಸಗಿಬಿಟ್ಟೆನಲ್ಲ! ॥ ೧ ॥ ಹೀಗೆ ದೈವಾಪಚಾರವನ್ನು ಮಾಡಿದ್ದರಿಂದ ಅತಿಶೀಘ್ರವಾಗಿ ದಾಟಲಶಕ್ಯವಾದ ಆಪತ್ತು ನಿಶ್ಚಯವಾಗಿಯೂ ಒದಗುವುದು. ನಾನೂ ಅದನ್ನೇ ಬಯಸುತ್ತೇನೆ. ಏಕೆಂದರೆ, ಅದರಿಂದ ನನ್ನ ಪಾಪದ ಪ್ರಾಯಶ್ಚಿತ್ತವಾದೀತು. ಮತ್ತೆ ಎಂದಿಗೂ ಇಂತಹ ಕಾರ್ಯವನ್ನು ಮಾಡುವ ದುಸ್ಸಾಹಸವಾಗಲಾರದು. ॥ ೨ ॥ ಬ್ರಾಹ್ಮಣರ ಕ್ರೋಧಾಗ್ನಿಯು ಇಂದೇ ನನ್ನ ರಾಜ್ಯ, ಸೇನೆ, ತುಂಬಿದ ಭಂಡಾರ ಇವೆಲ್ಲವನ್ನು ಸುಟ್ಟುಹಾಕಲಿ. ಮುಂದೆಂದಿಗೂ ದುಷ್ಟನಾದ ನನ್ನಲ್ಲಿ ಬ್ರಾಹ್ಮಣರು, ದೇವತೆಗಳು, ಗೋವುಗಳು ಇವರ ಕುರಿತು ಇಂತಹ ಪಾಪಬುದ್ಧಿಯು ಉಂಟಾಗದಿರಲಿ. ॥ ೩ ॥ ಅವನು ಹೀಗೆ ಚಿಂತಿಸುತ್ತಿರುವಾಗಲೇ ಶಮೀಕ ಮಹರ್ಷಿಗಳು 'ಗೌರಮುಖ'ನೆಂಬ ಶಿಷ್ಯನ ಮೂಲಕ ಹೇಳಿಕಳಿಸಿದರು – "ಋಷಿಪುತ್ರನಾದ ಶೃಂಗಿಯ ಶಾಪದಿಂದ ಪ್ರೇರಿತನಾದ ತಕ್ಷಕನು ಇಂದಿನಿಂದ ಏಳನೆಯ ದಿನ ಮೃತ್ಯುವಿಗೆ ಕಾರಣನಾಗುವನು" ಎಂಬ ಸಮಾಚಾರವು ಅವನ ಕಿವಿಗೆ ಬಿತ್ತು. ಅದನ್ನು ಕೇಳಿ ರಾಜನು – 'ಆ ತಕ್ಷಕನೆಂಬ ಬೆಂಕಿಯು ರಾಜಕಾರ್ಯಗಳಲ್ಲಿ ಮತ್ತು ಭೋಗಗಳಲ್ಲಿ ಆಸಕ್ತನಾಗಿರುವ ನನಗೆ ವೈರಾಗ್ಯಕ್ಕೆ ಕಾರಣವಾಯಿತು' ಎಂದು ಭಾವಿಸಿಕೊಂಡನು. ॥ ೪ ॥ ಅನಂತರ ಅವನು ರಾಜ್ಯವಾಳುತ್ತಿರುವಾಗಲೇ ಈ ಲೋಕ ಮತ್ತು ಪರಲೋಕಗಳ ಭೋಗಗಳನ್ನು ತುಚ್ಛವೂ, ತ್ಯಾಜ್ಯವೂ ಎಂದು ತಿಳಿದಿದ್ದನು. ಈಗ ಅವನ್ನು ಸ್ವರೂಪತಃ ತ್ಯಾಗಗೈದು ಭಗವಾನ್ ಶ್ರೀಕೃಷ್ಣನ ಚರಣಕಮಲಗಳ ಸೇವೆಯನ್ನೇ ಪರಮೋತ್ತಮವಾದುದು ಎಂದು ನಿಶ್ಚಯಿಸಿ, ದೇವನದಿ ಗಂಗೆಯ ದಡದಲ್ಲಿ ಕುಳಿತು ಪ್ರಾಯೋಪವೇಶ ವ್ರತವನ್ನು ಕೈಗೊಂಡನು. ॥ ೫ ॥ ಯಾವ ದೇವನದಿಯು ಘಮ-ಘಮಿಸುತ್ತಿರುವ ತುಲಸೀದಳಗಳು ಬೆರೆತ ಶ್ರೀಕೃಷ್ಣನ ಪಾದಧೂಳಿಯಿಂದ ಪರಮ ಪವಿತ್ರವಾಗಿರುವ ಜಲದಿಂದ ಪ್ರವಹಿಸುತ್ತಾ ಲೋಕಪಾಲರ ಸಹಿತವಾದ ಸಮಸ್ತ ಲೋಕಗಳನ್ನು ಒಳಗೂ-ಹೊರಗೂ ಪಾವನಗೊಳಿಸುತ್ತಿದೆಯೋ, ಅಂತಹ ಲೋಕಪಾವನೆಯಾದ ಗಂಗೆಯನ್ನು ಮರಣಕಾಲದಲ್ಲಿ ಯಾರು ತಾನೇ ಸೇವಿಸಲಾರನು? ॥ ೬ ॥

ಹೀಗೆ ಪಾಂಡವಕುಲತಿಲಕನು ಗಂಗಾನದಿಯ ತೀರದಲ್ಲಿ ಆಮರಣಾಂತ ಉಪವಾಸದ ನಿಶ್ಚಯಗೈದು ಸರ್ವಸಂಗ ಪರಿತ್ಯಾಗ ಮಾಡಿ ಮುನಿಧರ್ಮವನ್ನು ಹಿಡಿದು, ಅನನ್ಯಭಾವದಿಂದ ಶ್ರೀಕೃಷ್ಣನ ಚರಣಾರವಿಂದಗಳನ್ನು ಧ್ಯಾನಿಸತೊಡಗಿದನು. ॥ ೭ ॥ ಆಗಲೇ

ತತ್ರೋಪಜಗ್ಮುರ್ಭುವನಂ ಪುನಾನಾ
ಮಹಾನುಭಾವಾ ಮುನಯಃ ಸಶಿಷ್ಯಾಃ ।
ಪ್ರಾಯೇಣ ತೀರ್ಥಾಭಿಗಮಾಪದೇಶೈಃ
ಸ್ವಯಂ ಹಿ ತೀರ್ಥಾನಿ ಪುನಂತಿ ಸಂತಃ ॥ ೮ ॥

ಅತ್ರಿರ್ವಸಿಷ್ಠಶ್ಚ್ಯವನಃ ಶರದ್ವಾ-
ನರಿಷ್ಟನೇಮಿರ್ಭೃಗುರಂಗಿರಾಶ್ಚ ।
ಪರಾಶರೋ ಗಾಧಿಸುತೋಽಥ ರಾಮ
ಉತಥ್ಯ ಇಂದ್ರಪ್ರಮದೇಧ್ಮವಾಹೌ ॥ ೯ ॥

ಮೇಧಾತಿಥಿರ್ದೇವಲ ಆರ್ಷ್ಟಿಷೇಣೋ
ಭಾರದ್ವಾಜೋ ಗೌತಮಃ ಪಿಪ್ಪಲಾದಃ ।
ಮೈತ್ರೇಯ ಔರ್ವಃ ಕವಷಃ ಕುಂಭಯೋನಿ-
ರ್ದ್ವೈಪಾಯನೋ ಭಗವಾನ್ನಾರದಶ್ಚ ॥ ೧೦ ॥

ಅನ್ಯೇ ಚ ದೇವರ್ಷಿಬ್ರಹ್ಮರ್ಷಿವರ್ಯಾ
ರಾಜರ್ಷಿವರ್ಯಾ ಅರುಣಾದಯಶ್ಚ ।
ನಾನಾರ್ಷೇಯಪ್ರವರಾನ್ಸಮೇತಾ-
ನಭ್ಯರ್ಚ್ಯ ರಾಜಾ ಶಿರಸಾ ವವಂದೇ ॥ ೧೧ ॥

ಸುಖೋಪವಿಷ್ಟೇಷ್ವಥ ತೇಷು ಭೂಯಃ
ಕೃತಪ್ರಣಾಮಃ ಸ್ವಚಿಕೀರ್ಷಿತಂ ಯತ್ ।
ವಿಜ್ಞಾಪಯಾಮಾಸ ವಿವಿಕ್ತಚೇತಾ
ಉಪಸ್ಥಿತೋಽಗ್ರೇಽಭಿಗೃಹೀತಪಾಣಿಃ ॥ ೧೨ ॥

ರಾಜೋವಾಚ

ಅಹೋ ವಯಂ ಧನ್ಯತಮಾ ನೃಪಾಣಾಂ
ಮಹತ್ತಮಾನುಗ್ರಹಣೀಯಶೀಲಾಃ ।
ರಾಜ್ಞಾಂ ಕುಲಂ ಬ್ರಾಹ್ಮಣಪಾದಶೌಚಾದ್
ದೂರಾದ್ವಿಸೃಷ್ಟಂ ಬತ ಗರ್ಹ್ಯಕರ್ಮ ॥ ೧೩ ॥

ತಸ್ಯೈವ ಮೇಽಘಸ್ಯ ಪರಾವರೇಶೋ
ವ್ಯಾಸಕ್ತಚಿತ್ತಸ್ಯ ಗೃಹೇಷ್ವಭೀಕ್ಷ್ಣಮ್ ।
ನಿರ್ವೇದಮೂಲೋ ದ್ವಿಜಶಾಪರೂಪೋ
ಯತ್ರ ಪ್ರಸಕ್ತೋ ಭಯಮಾಶು ಧತ್ತೇ ॥ ೧೪ ॥

ತಂ ಮೋಪಯಾತಂ ಪ್ರತಿಯಂತು ವಿಪ್ರಾ
ಗಂಗಾ ಚ ದೇವೀ ಧೃತಚಿತ್ತಮೀಶೇ ।
ದ್ವಿಜೋಪಸೃಷ್ಟಃ ಕುಹಕಸ್ತಕ್ಷಕೋ ವಾ
ದಶತ್ವಲಂ ಗಾಯತ ವಿಷ್ಣುಗಾಥಾಃ ॥ ೧೫ ॥

ಪುನಶ್ಚ ಭೂಯಾದ್ಭಗವತ್ಯನಂತೇ
ರತಿಃ ಪ್ರಸಂಗಶ್ಚ ತದಾಶ್ರಯೇಷು ।
ಮಹತ್ಸು ಯಾಂ ಯಾಮುಪಯಾಮಿ ಸೃಷ್ಟಿಂ
ಮೈತ್ರ್ಯಸ್ತು ಸರ್ವತ್ರ ನಮೋ ದ್ವಿಜೇಭ್ಯಃ ॥ ೧೬ ॥

ತ್ರಿಲೋಕಗಳನ್ನು ಪವಿತ್ರಗೊಳಿಸುವ ಮಹಾನುಭಾವರಾದ ಅನೇಕ ಮಹರ್ಷಿಗಳು ಶಿಷ್ಯಸಮೇತರಾಗಿ ಅಲ್ಲಿಗೆ ಆಗಮಿಸಿದರು. ಸಾಧು-ಸಂತರು ಪ್ರಾಯಶಃ ತೀರ್ಥಯಾತ್ರೆಯ ನೆಪದಲ್ಲಿ ಆ ತೀರ್ಥಸ್ಥಾನಗಳನ್ನು ಪವಿತ್ರಮಾಡುತ್ತಾರೆ. ॥ ೮ ॥ ಆಗ ಅಲ್ಲಿಗೆ – ಅತ್ರಿ, ವಸಿಷ್ಠ ಚ್ಯವನ, ಶರದ್ವಾನ್, ಅರಿಷ್ಟನೇಮಿ, ಭೃಗು, ಅಂಗಿರಾ, ಪರಾಶರ, ವಿಶ್ವಾಮಿತ್ರ, ಪರಶುರಾಮ, ಉತಥ್ಯ, ಇಂದ್ರಪ್ರಮದ, ಇಧ್ಮವಾಹ, ಮೇಧಾತಿಥಿ, ದೇವಲ, ಆರ್ಷ್ಟಿಷೇಣ, ಭಾರದ್ವಾಜ, ಗೌತಮ, ಪಿಪ್ಪಲಾದ, ಮೈತ್ರೇಯ, ಔರ್ವ, ಕವಷ, ಅಗಸ್ತ್ಯ, ಭಗವಾನ್ ವ್ಯಾಸರು, ದೇವರ್ಷಿ ನಾರದರು ಹಾಗೂ ಇವರಲ್ಲದೆ ಇನ್ನೂ ಅನೇಕ ಶ್ರೇಷ್ಠ ದೇವರ್ಷಿಗಳು, ಮಹರ್ಷಿಗಳು, ಅರುಣಾದಿ ರಾಜರ್ಷಿಯರು ಆಗಮಿಸಿದರು. ಹೀಗೆ ನಾನಾ ಗೋತ್ರರ ಮುಖ್ಯ-ಮುಖ್ಯ ಋಷಿಗಳನ್ನು ಒಂದೆಡೆ ನೋಡಿದ ಪರೀಕ್ಷಿದ್ರಾಜನು ಎಲ್ಲರಿಗೂ – ಯಥಾಯೋಗ್ಯ ಸತ್ಕಾರಗೈದು, ಅವರ ಚರಣಗಳಲ್ಲಿ ಶಿರವನ್ನಿಟ್ಟು ಸಾಷ್ಟಾಂಗ ನಮಸ್ಕಾರಮಾಡಿದನು. ॥ ೯-೧೧ ॥ ಅನಂತರ ಅವರೆಲ್ಲರೂ ಸುಖಾಸೀನರಾಗಿ ಕುಳಿತುಕೊಳ್ಳಲು ಮಹಾರಾಜಾ ಪರೀಕ್ಷಿತನು ಪುನಃ ಅವರನ್ನು ವಂದಿಸಿ, ಅವರ ಮುಂದೆ ಕೈಜೋಡಿಸಿಕೊಂಡು ನಿಂತು, ಶುದ್ಧವಾದ ಮನಸ್ಸಿನಿಂದ ತಾನು ಮುಂದೆ ಕೈಗೊಳ್ಳಬೇಕೆಂದಿದ್ದ ಕಾರ್ಯನಿಶ್ಚಯವನ್ನು ಹೀಗೆ ವಿಜ್ಞಾಪನೆ ಮಾಡಿಕೊಂಡನು. ॥ ೧೨ ॥

ಪರೀಕ್ಷಿದ್ರಾಜನು ಹೇಳಿದನು – ಆಹಾ! ಎಂತಹ ಧನ್ಯತೆ! ತಮ್ಮಂತಹ ಶ್ರೇಷ್ಠರಾದ ಮಹಾತ್ಮರ ಅನುಗ್ರಹಕ್ಕೆ ಪಾತ್ರನಾದ ನಾನೇ ರಾಜರಲ್ಲಿ ಅತಿ ಧನ್ಯನು. ಬ್ರಹ್ಮಜ್ಞಾನಿಗಳಾದ ಬ್ರಾಹ್ಮಣರ ಪಾದತೀರ್ಥದಿಂದ ಪರಿಶುದ್ಧರಾಗದೆ ದೂರರಾದ ರಾಜರ ಕುಲವು ನೀಚಕರ್ಮಕ್ಕೆ ತುತ್ತಾಗುವುದು. ಇದು ಎಷ್ಟು ದುಃಖದ ಸಂಗತಿಯಾಗಿದೆ. ॥ ೧೩ ॥ ನಾನೂ ಅಪರಾಧೀ ರಾಜನೇ ಆಗಿದ್ದೇನೆ. ನಿರಂತರ ದೇಹ-ಗೇಹಗಳಲ್ಲೇ ಆಸಕ್ತನಾದ ಕಾರಣ ನಾನೂ ಪಾಪರೂಪನೇ ಆಗಿದ್ದೇನೆ. ಇದರಿಂದ ಸಾಕ್ಷಾತ್ ಭಗವಂತನೇ ಬ್ರಾಹ್ಮಣರ ಶಾಪರೂಪದಿಂದ ನನ್ನ ಮೇಲೆ ಕೃಪೆಮಾಡಲು ಆಗಮಿಸಿದ್ದಾನೆ. ಈ ಶಾಪವು ವೈರಾಗ್ಯವನ್ನುಂಟು ಮಾಡುವುದಾಗಿದೆ. ಏಕೆಂದರೆ, ಇಂತಹ ಶಾಪದಿಂದ ಸಂಸಾರಾಸಕ್ತ ಪುರುಷರು ಭಯಗೊಂಡು ವಿರಕ್ತರಾಗುತ್ತಿರುತ್ತಾರೆ. ॥ ೧೪ ॥ ಎಲೈ ಬ್ರಾಹ್ಮಣಶ್ರೇಷ್ಠರೇ! ಹೀಗೆ ಭಗವಂತನಲ್ಲಿ ನೆಟ್ಟ ಮನಸ್ಸುಳ್ಳ ನಾನು ನಿಮ್ಮಲ್ಲಿ ಶರಣಾಗಿದ್ದೇನೆಂದು ತಿಳಿಯಿರಿ. ಗಂಗಾಮಾತೆಯೂ ಹಾಗೆ ತಿಳಿಯಲಿ, ಬ್ರಾಹ್ಮಣನಿಂದ ಪ್ರೇರಿತನಾಗಿ ಬರುವ ವಂಚಕನಾದ ತಕ್ಷಕನೇ ಬಂದು ನನ್ನನ್ನು ಕಚ್ಚಿದರೂ ಸರಿಯೇ. ನೀವು ಮಾತ್ರ ಬಿಡದೇ ನನ್ನ ಮುಂದೆ ಶ್ರೀವಿಷ್ಣುವಿನ ಕೀರ್ತನೆಗಳನ್ನು ಹಾಡುತ್ತಿರಿ ॥ ೧೫ ॥ ಕರ್ಮವಶದಿಂದ ಮುಂದೆ ನಾನು ಎಷ್ಟುಬಾರಿ ಹು...
ದರೂ ಆ ಎಲ್ಲ ಜನ್ಮಗಳಲ್ಲಿಯೂ ನನಗೆ ಶ್ರೀಭಗವಂತನಲ್ಲಿ ಭಕ್ತಿಯು ನೆಲಸಲಿ. ಆತನನ್ನು ಆಶ್ರಯಿಸಿದ ಮಹಾತ್ಮರ ಸಂಗ... ದೊರೆಯುತ್ತಿರಲಿ. ಎಲ್ಲರಲ್ಲಿಯೂ ಸ್ನೇಹಭಾವವಿರುವಂತೆ ನೀ... ಆಶೀರ್ವದಿಸಿರಿ. ಬ್ರಾಹ್ಮಣಶ್ರೇಷ್ಠರಾದ ನಿಮ್ಮೆಲ್ಲರಿಗೂ ನಮೋ ನಮಃ ॥ ೧೬ ॥

ಇತಿ ಸ್ಮ ರಾಜಾಧ್ಯವಸಾಯಯುಕ್ತಃ
ಪ್ರಾಚೀನಮೂಲೇಷು ಕುಶೇಷು ಧೀರಃ ।
ಉದಙ್ಮುಖೋ ದಕ್ಷಿಣಕೂಲ ಆಸ್ತೇ
ಸಮುದ್ರಪತ್ನ್ಯಾಃ ಸ್ವಸುತನ್ಯಸ್ತಭಾರಃ ॥ ೧೭ ॥

ಏವಂ ಚ ತಸ್ಮಿನ್ನರದೇವದೇವೇ
ಪ್ರಾಯೋಪವಿಷ್ಟೇ ದಿವಿ ದೇವಸಂಘಾಃ ।
ಪ್ರಶಸ್ಯ ಭೂಮೌ ವ್ಯಕಿರನ್ಪ್ರಸೂನೈ-
ರ್ಮುದಾ ಮುಹುರ್ದುಂದುಭಯಶ್ಚ ನೇದುಃ ॥ ೧೮ ॥

ಮಹರ್ಷಯೋ ವೈ ಸಮುಪಾಗತಾ ಯೇ
ಪ್ರಶಸ್ಯ ಸಾಧ್ವಿತ್ಯನುಮೋದಮಾನಾಃ ।
ಊಚುಃ ಪ್ರಜಾನುಗ್ರಹಶೀಲಸಾರಾ
ಯದುತ್ತಮಶ್ಲೋಕಗುಣಾಭಿರೂಪಮ್ ॥ ೧೯ ॥

ನ ವಾ ಇದಂ ರಾಜರ್ಷಿವರ್ಯ ಚಿತ್ರಂ
ಭವತ್ಸು ಕೃಷ್ಣಂ ಸಮನುವ್ರತೇಷು ।
ಯೇಽಧ್ಯಾಸನಂ ರಾಜಕಿರೀಟಜುಷ್ಟಂ
ಸದ್ಯೋ ಜಹುರ್ಭಗವತ್ಪಾರ್ಶ್ವಕಾಮಾಃ ॥ ೨೦ ॥

ಸರ್ವೇ ವಯಂ ತಾವದಿಹಾಸ್ಮಹೇಽಥ
ಕಲೇವರಂ ಯಾವದಸೌ ವಿಹಾಯ ।
ಲೋಕಂ ಪರಂ ವಿರಜಸ್ಕಂ ವಿಶೋಕಂ
ಯಾಸ್ಯತ್ಯಯಂ ಭಾಗವತಪ್ರಧಾನಃ ॥ ೨೧ ॥

ಆಶ್ರುತ್ಯ ತದೃಷಿಗಣವಚಃ ಪರೀಕ್ಷಿತ್
ಸಮಂ ಮಧುಚ್ಯುದ್ಗುರು ಚಾವ್ಯಲೀಕಮ್ ।
ಆಭಾಷ್ಯತೈನಾನಭಿನಂದ್ಯ ಯುಕ್ತಾನ್
ಶುಶ್ರೂಷಮಾಣಶ್ಚರಿತಾನಿ ವಿಷ್ಣೋಃ ॥ ೨೨ ॥

ಸಮಾಗತಾಃ ಸರ್ವತ ಏವ ಸರ್ವೇ
ವೇದಾ ಯಥಾ ಮೂರ್ತಿಧರಾಸ್ತ್ರಿಪೃಷ್ಠೇ ।
ನೇಹಾಥವಾಮುತ್ರ ಚ ಕಶ್ಚನಾರ್ಥ
ಋತೇ ಪರಾನುಗ್ರಹಮಾತ್ಮಶೀಲಮ್ ॥ ೨೩ ॥

ತತಶ್ಚ ವಃ ಪೃಚ್ಛ್ಯಮಿಮಂ ವಿಪೃಚ್ಛೇ
ವಿಶ್ರಭ್ಯ ವಿಪ್ರಾ ಇತಿಕೃತ್ಯತಾಯಾಮ್ ।
ಸರ್ವಾತ್ಮನಾ ಮ್ರಿಯಮಾಣೈಶ್ಚ ಕೃತ್ಯಂ
ಶುದ್ಧಂ ಚ ತತ್ರಾಮೃಶತಾಭಿಯುಕ್ತಾಃ ॥ ೨೪ ॥

ಹೀಗೆ ದೃಢನಿಶ್ಚಯಮಾಡಿದ ಧೀರನಾದ ಆ ರಾಜೇಂದ್ರನು ರಾಜ್ಯಭಾರವನ್ನು ಪುತ್ರನಾದ ಜನಮೇಜಯನಿಗೆ ಒಪ್ಪಿಸಿ, ಗಂಗಾ ನದಿಯ ದಕ್ಷಿಣತೀರದಲ್ಲಿ ಪೂರ್ವಾಗ್ರವಾಗಿ ಹಾಸಿದ ದರ್ಭೆಗಳ ಮೇಲೆ ಉತ್ತರಾಭಿಮುಖವಾಗಿ ಕುಳಿತುಕೊಂಡನು. ॥ ೧೭ ॥ ಏಕಛತ್ರ ಚಕ್ರವರ್ತಿ ಪರೀಕ್ಷಿತನು ಹೀಗೆ ಪ್ರಾಯೋಪವೇಶವ್ರತವನ್ನು ಕೈಗೊಂಡು ಕುಳಿತುಕೊಂಡಾಗ, ದೇವಲೋಕದಲ್ಲಿದ್ದ ದೇವತೆಗಳು ಅವನನ್ನು ಆನಂದದಿಂದ ಪ್ರಶಂಸಿಸುತ್ತಾ ಭೂಮಿಯ ಮೇಲೆ ಹೂಮಳೆಯನ್ನು ಸುರಿಸಿದರು. ದೇವದುಂದುಭಿಗಳು ಮತ್ತೆ-ಮತ್ತೆ ಮೊಳಗತೊಡಗಿದುವು. ॥ ೧೮ ॥ ಹಾಗೆಯೇ ಅಲ್ಲಿ ನೆರೆದಿದ್ದ ಮಹರ್ಷಿಗಳೆಲ್ಲರೂ ಭಲೇ! ಭಲೇ! ಎಂದು ಹೇಳಿ ಪರೀಕ್ಷಿತನ ನಿಶ್ಚಯವನ್ನು ಪ್ರಶಂಸಿಸಿದರು ಹಾಗೂ ಅನುಮೋದಿಸಿದರು. ಋಷಿಗಳಾದರೋ ಸ್ವಭಾವದಿಂದಲೇ ಜನರಮೇಲೆ ಅನುಗ್ರಹದ ಮಳೆಗರೆಯುತ್ತಾರೆ. ಇಷ್ಟೇ ಅಲ್ಲ ಅವರ ಎಲ್ಲ ಶಕ್ತಿಯೂ ಲೋಕಕ್ಕೆ ಕೃಪೆದೋರಲೆಂದೇ ಇರುತ್ತದೆ. ಆ ಮಹಾತ್ಮರು ಭಗವಾನ್ ಶ್ರೀಕೃಷ್ಣನ ಗುಣಗಳಿಂದ ಪ್ರಭಾವಿತನಾದ ಪರೀಕ್ಷಿತನಿಗೆ ಅನುಗುಣವಾಗಿ ಮಾತನಾಡಿದರು. ॥ ೧೯ ॥ 'ರಾಜರ್ಷಿಶ್ರೇಷ್ಠನೇ! ಭಗವಾನ್ ಶ್ರೀಕೃಷ್ಣನ ಸೇವಕನೂ, ಅನುಯಾಯಿಯೂ, ಪಾಂಡುವಂಶೀಯನೂ ಆದ ನಿನಗೆ ಇದು ಆಶ್ಚರ್ಯದ ಮಾತಲ್ಲ. ಏಕೆಂದರೆ, ನೀವೆಲ್ಲ ಭಗವಂತನ ಸನ್ನಿಧಿಯನ್ನು ಪಡೆಯಲಿಕ್ಕಾಗಿ ಸಮಸ್ತ ಸಾಮಂತರಾಜರ ಕಿರೀಟಗಳಿಂದ ಸೇವಿಸಲ್ಪಡುತ್ತಿದ್ದ ರಾಜಸಿಂಹಾಸನವನ್ನು ಕ್ಷಣಾರ್ಧದಲ್ಲಿ ತ್ಯಜಿಸಿಬಿಟ್ಟಿರಿ. ॥ ೨೦ ॥ "ಈ ಪರಮ ಭಾಗವತೋತ್ತಮನಾದ ಪರೀಕ್ಷಿದ್ರಾಜನು ತನ್ನ ನಶ್ವರವಾದ ದೇಹವನ್ನು ತ್ಯಜಿಸಿ, ಮಾಯಾದೋಷದಿಂದಲೂ, ಶೋಕದಿಂದಲೂ ರಹಿತನಾಗಿ ಭಗವದ್ಧಾಮವನ್ನು ಹೊಂದುವವರೆಗೂ ಇಲ್ಲಿಯೇ ಇರೋಣ' ಎಂದು ಅವರು ನಿಶ್ಚಯಿಸಿದರು. ॥ ೨೧ ॥

ಮಹಾಯೋಗಿಗಳಾದ ಆ ಮಹರ್ಷಿಗಳ ಮಧುರವೂ, ಗಂಭೀರವೂ, ಸತ್ಯವೂ, ಸಮವೂ ಆದ ಆ ಮಾತುಗಳನ್ನು ಕೇಳಿ, ಪರೀಕ್ಷಿದ್ರಾಜನು ಅವರನ್ನು ಅಭಿನಂದಿಸಿ ಶ್ರೀಭಗವಂತನ ಮನೋಹರವಾದ ಚರಿತ್ರವನ್ನು ಕೇಳುವ ಇಚ್ಛೆಯಿಂದ ಋಷಿಗಳನ್ನು ಇಂತು ಪ್ರಶ್ನಿಸಿದನು. ॥ ೨೨ ॥ ಎಲೈ ಮಹಾತ್ಮರೇ! ಎಲ್ಲ ಕಡೆಗಳಿಂದಲೂ ಇಲ್ಲಿಗೆ ದಯಮಾಡಿಸಿರುವ ತಾವು ಸತ್ಯಲೋಕದಲ್ಲಿರುವ ಸಾಕಾರವಾದ ವೇದಗಳಿಗೆ ಸಮಾನರಾಗಿದ್ದೀರಿ. ಇತರರ ಮೇಲೆ ಅನುಗ್ರಹ ತೋರುವುದು ನಿಮ್ಮ ಸಹಜ ಸ್ವಭಾವವೇ ಆಗಿದ್ದು, ನಿಮಗೆ ಇದನ್ನು ಬಿಟ್ಟು ಇಹಲೋಕದಲ್ಲಿ ಅಥವಾ ಪರಲೋಕದಲ್ಲಿ ಬೇರೆ ಯಾವ ಸ್ವಾರ್ಥವೂ ಇಲ್ಲ. ॥ ೨೩ ॥ ಬ್ರಾಹ್ಮಣಶ್ರೇಷ್ಠರೇ! ನಿಮ್ಮ ಮೇಲೆ ಪೂರ್ಣವಾದ ನಂಬಿಕೆಯನ್ನಿಟ್ಟು ನಾನು ನನ್ನ ಕರ್ತವ್ಯದ ಬಗ್ಗೆ ಎರಡು ಪ್ರಶ್ನೆಗಳನ್ನು ಕೇಳುತ್ತೇನೆ. ವಿದ್ವಾಂಸರಾದ ನೀವೆಲ್ಲರೂ ಪರಸ್ಪರವಾಗಿ ವಿಚಾರಮಾಡಿ ತಿಳಿಸಿರಿ. ಎಲ್ಲರೂ ಎಲ್ಲ ಅವಸ್ಥೆಗಳಲ್ಲಿಯೂ ಮತ್ತು ವಿಶೇಷವಾಗಿ ಮರಣ ಸಮಯವು ಹತ್ತಿರವಾಗಿರುವಾಗಲು ಅಂತಃಕರಣ ಹಾಗೂ ಶರೀರದಿಂದ ಮಾಡಬೇಕಾದ ಶುದ್ಧಕರ್ಮವು ಯಾವುದು? * ॥ ೨೪ ॥

* ಇಲ್ಲಿ ರಾಜನು ಮಹರ್ಷಿಗಳಲ್ಲಿ ಎರಡು ಪ್ರಶ್ನೆಗಳನ್ನು ಕೇಳಿರುವನು – (೧) ಜೀವನು ಸದಾಕಾಲ ಮಾಡಬೇಕಾದ ಕರ್ತವ್ಯವೇನು? (೨) ಸ್ವಲ್ಪಕಾಲದಲ್ಲೇ ಮರಣಹೊಂದಲಿರುವವನು ಮಾಡಬೇಕಾದ ಕರ್ತವ್ಯಗಳೇನು? ಇದೇ ಎರಡು ಪ್ರಶ್ನೆಗಳನ್ನು ಅವನು ಶುಕಮಹಾಮುನಿಗಳಲ್ಲಿಯೂ ಕೇಳುವನು. ಆ ಎರಡು ಪ್ರಶ್ನೆಗಳ ಉತ್ತರವನ್ನೇ ಎರಡನೇ ಸ್ಕಂಧದಿಂದ ಹನ್ನೆರಡನೇ ಸ್ಕಂಧದವರೆಗೆ ವಿಸ್ತಾರವಾಗಿ ನೀಡಲಾಗಿದೆ.

ತತ್ರಾಭವದ್ಭಗವಾನ್ವ್ಯಾಸಪುತ್ರೋ
  ಯದೃಚ್ಛಯಾ ಗಾಮಟಮಾನೋಽನಪೇಕ್ಷಃ ।
ಅಲಕ್ಷ್ಯಲಿಂಗೋ ನಿಜಲಾಭತುಷ್ಟೋ
  ವೃತಶ್ಚ ಬಾಲೈರವಧೂತವೇಷಃ ॥ ೨೫ ॥

ತಂ ದ್ವ್ಯಷ್ಟವರ್ಷಂ ಸುಕುಮಾರಪಾದ-
  ಕರೋರುಬಾಹ್ವಂಸಕಪೋಲಗಾತ್ರಮ್ ।
ಚಾರ್ವಾಯತಾಕ್ಷೋನ್ನಸತುಲ್ಯಕರ್ಣ-
  ಸುಭ್ರ್ವಾನನಂ ಕಂಬುಸುಜಾತಕಂಠಮ್ ॥ ೨೬ ॥

ನಿಗೂಢಜತ್ರುಂ ಪೃಥುತುಂಗವಕ್ಷಸ-
  ಮಾವರ್ತನಾಭಿಂ ವಲಿವಲ್ಗೂದರಂ ಚ ।
ದಿಗಂಬರಂ ವಕ್ತ್ರವಿಕೀರ್ಣಕೇಶಂ
  ಪ್ರಲಂಬಬಾಹುಂ ಸ್ವಮರೋತ್ತಮಾಭಮ್ ॥ ೨೭ ॥

ಶ್ಯಾಮಂ ಸದಾಪೀವ್ಯವಯೋಽಂಗಲಕ್ಷ್ಮ್ಯಾ
  ಸ್ತ್ರೀಣಾಂ ಮನೋಜ್ಞಂ ರುಚಿರಸ್ಮಿತೇನ ।
ಪ್ರತ್ಯುತ್ಥಿತಾಸ್ತೇ ಮುನಯಃ ಸ್ವಾಸನೇಭ್ಯ-
  ಸ್ತಲ್ಲಕ್ಷಣಜ್ಞಾ ಅಪಿ ಗೂಢವರ್ಚಸಮ್ ॥ ೨೮ ॥

ಸ ವಿಷ್ಣುರಾತೋಽತಿಥಯ ಆಗತಾಯ
  ತಸ್ಮೈ ಸಪರ್ಯಾಂ ಶಿರಸಾಜಹಾರ ।
ತತೋ ನಿವೃತ್ತಾ ಹ್ಯಬುಧಾಃ ಸ್ತ್ರಿಯೋಽರ್ಭಕಾ
  ಮಹಾಸನೇ ಸೋಪವಿವೇಶ ಪೂಜಿತಃ ॥ ೨೯ ॥

ಸ ಸಂವೃತಸ್ತತ್ರ ಮಹಾನ್ಮಹೀಯಸಾಂ
  ಬ್ರಹ್ಮರ್ಷಿರಾಜರ್ಷಿದೇವರ್ಷಿಸಂಘೈಃ ।
ವ್ಯರೋಚತಾಲಂ ಭಗವಾನ್ಯಥೇಂದು-
  ರ್ಗ್ರಹರ್ಕ್ಷತಾರಾನಿಕರೈಃ ಪರೀತಃ ॥ ೩೦ ॥

ಪ್ರಶಾಂತಮಾಸೀನಮಕುಂಠಮೇಧಸಂ
  ಮುನಿಂ ನೃಪೋ ಭಾಗವತೋಽಭ್ಯುಪೇತ್ಯ ।
ಪ್ರಣಮ್ಯ ಮೂರ್ಧ್ನಾವಹಿತಃ ಕೃತಾಂಜಲಿ-
  ರ್ನತ್ವಾ ಗಿರಾ ಸೂನೃತಯಾನ್ವಪೃಚ್ಛತ್ ॥ ೩೦ ॥

ಪರೀಕ್ಷಿದುವಾಚ

ಅಹೋ ಅದ್ಯ ವಯಂ ಬ್ರಹ್ಮನ್ಸತ್ಸೇವ್ಯಾಃ ಕ್ಷತ್ರಬಂಧವಃ ।
ಕೃಪಯಾತಿಥಿರೂಪೇಣ ಭವದ್ಭಿಸ್ತೀರ್ಥಕಾಃ ಕೃತಾಃ ॥ ೩೨ ॥

ಅದೇ ಸಮಯಕ್ಕೆ ಸರಿಯಾಗಿ ಭೂಮಿಯಲ್ಲಿ ಸ್ವಚ್ಛಂದವಾಗಿ ಸಂಚಾರಮಾಡುತ್ತಿದ್ದ ನಿರಪೇಕ್ಷಿಮಾರ್ಗಿಗಳಾದ ವ್ಯಾಸಪುತ್ರ ಭಗವಾನ್ ಶ್ರೀಶುಕಮಹಾಮುನಿಗಳು ಅಲ್ಲಿ ಕಾಣಿಸಿಕೊಂಡರು. ■ ಮಹಾತ್ಮರಾದರೂ ಪರಮಾತ್ಮನ ಲಾಭದಿಂದ ಸದಾ ಸಂತುಷ್ಟರಾಗಿದ್ದರು. ವರ್ಣ ಅಥವಾ ಆಶ್ರಮಗಳಿಗೆ ಸಂಬಂಧಪಟ್ಟ ಯಾವ ಹೊರ ಚಿಹ್ನೆಗಳೂ ಇಲ್ಲದ ಅವಧೂತವೇಷದಲ್ಲಿದ್ದರು. ಹುಡುಗರೂ, ಹೆಂಗಸರೂ ಅವರ ಸುತ್ತಲೂ ನೆರೆದಿದ್ದರು. ॥ ೨೫ ॥ ಹದಿನಾರು ವರ್ಷ ತಾರುಣ್ಯದ ಅವರು ಚೆಲುವಿನ ಗಣಿಯಾಗಿದ್ದರು. ಅವರ ಕೈ-ಕಾಲುಗಳು, ಮೊಣಕಾಲುಗಳು, ಭುಜಗಳು, ಕೆನ್ನೆಗಳು ಹಾಗೂ ಉಳಿದ ಎಲ್ಲ ಅಂಗಗಳು ಸುಕುಮಾರವಾಗಿದ್ದವು. ಅಂದ-ಚೆಂದಗಳಿಂದ ಕೂಡಿದ ವಿಶಾಲವಾದ ನೇತ್ರಗಳು, ಎತ್ತರವಾದ ಮೂಗು, ಸಮವಾದ ಕಿವಿಗಳು, ರಮಣೀಯವಾದ ಹುಬ್ಬುಗಳಿಂದ ಕಂಗೊಳಿಸುವ ಮುಖ, ಶಂಖದಂತೆ ಸುಂದರವಾದ ಕಂಠ, ಮುಚ್ಚಿದ ಹೆಗಲುಸಂದುಗಳು, ವಿಶಾಲವೂ-ಉನ್ನತವೂ ಆದ ಎದೆ, ಸುಳಿಯನ್ನು ಹೋಲುವ ಹೊಕ್ಕಳು, ತ್ರಿವಳಿಗಳಿಂದ ಕೂಡಿದ ಉದರ ಪ್ರದೇಶ, ಉದ್ದವಾದ ತೋಳುಗಳು ಮತ್ತು ಮುಖದ ಮೇಲೆ ಕೆದರಿ ಹರಡಿದ್ದ ಕೂದಲುಗಳಿಂದ ಮನಮೋಹಕವಾದ ಮೂರ್ತಿಯಾಗಿ, ದಿಗಂಬರರಾಗಿ, ಅವರು ದೇವೋತ್ತಮರಂತೆ ರಾರಾಜಿಸುತ್ತಿದ್ದರು. ॥ ೨೬-೨೭ ॥ ಶ್ಯಾಮಲವಾದ ಶರೀರಕಾಂತಿ, ರೂಪ-ಲಾವಣ್ಯ ಮತ್ತು ಮಧುರ ಮಂದಹಾಸಗಳಿಂದ ಸ್ತ್ರೀಯರ ಕಣ್ಮನಗಳನ್ನು ಸದಾ ಸೆಳೆಯುತ್ತಿದ್ದರು. ತಮ್ಮ ಬ್ರಹ್ಮತೇಜಸ್ಸನ್ನು ಅಡಗಿಸಿಟ್ಟುಕೊಂಡಿದ್ದರೂ, ಅದರ ಲಕ್ಷಣಗಳನ್ನರಿತ ಮುನಿಗಳು ಅವರನ್ನು ಗುರುತಿಸಿದರು. ಒಡನೆಯೇ ಎಲ್ಲರೂ ತಮ್ಮ-ತಮ್ಮ ಆಸನಗಳನ್ನು ಬಿಟ್ಟು ಅವರನ್ನು ಗೌರವಿಸಲು ಎದ್ದುನಿಂತರು. ॥ ೨೮ ॥

ವಿಷ್ಣುರಾತ ಪರೀಕ್ಷಿದ್ರಾಜನು ಅತಿಥಿಯಾಗಿ ದಯಮಾಡಿಸಿದ್ದ ಅವರಿಗೆ ತಲೆಬಾಗಿ ನಮಸ್ಕರಿಸಿ ಪೂಜಿಸಿದನು. ಅವರ ಸ್ವರೂಪವನ್ನು ಅರಿಯದ ಬಾಲಕರು, ಸ್ತ್ರೀಯರೂ ಅವರ ಈ ಮಹಿಮೆಯನ್ನು ನೋಡಿ ಹಿಂದಿರುಗಿ ಹೊರಟುಹೋದರು. ಆಗ ಎಲ್ಲರಿಂದ ಸಮ್ಮಾನಿತರಾದ ಶ್ರೀಶುಕಮಹಾಮುನಿಗಳು ಶ್ರೇಷ್ಠವಾದ ಆಸನದಲ್ಲಿ ಮಂಡಿಸಿದರು. ॥ ೨೯ ॥ ಬ್ರಹ್ಮರ್ಷಿಗಳೂ, ರಾಜರ್ಷಿಗಳೂ ಇವರ ಸಮೂಹದಿಂದ ಆವೃತರಾದ ಮಹಾತೇಜಸ್ವಿಗಳೂ, ಅತಿಪೂಜ್ಯರೂ, ಆದ ಶುಕಮಹಾಮುನಿಗಳು ಗ್ರಹ-ನಕ್ಷತ್ರ ತಾರಾಮಂಡಲಗಳಿಂದ ಸುತ್ತುವರಿಯಲ್ಪಟ್ಟ ಭಗವಾನ್ ಚಂದ್ರನಂತೆ ಶೋಭಾಯಮಾನರಾಗಿದ್ದರು. ॥ ೩೦ ॥ ಪ್ರಶಾಂತರಾಗಿ ಕುಳಿತಿದ್ದ ಅದ್ಭುತ ಮೇಧಾಸಂಪನ್ನರಾದ ಆ ಶುಕಮಹಾಮುನಿಗಳ ಬಳಿಗೆ ಪರಮಭಾಗವತೋತ್ತಮನಾದ ಆ ರಾಜರ್ಷಿಯು ಬಂದು ಸಾವಧಾನವಾಗಿ ಅವರಿಗೆ ತಲೆಬಾಗಿ ನಮಸ್ಕಾರ ಮಾಡಿ ಸತ್ಯವೂ ಪ್ರಿಯವೂ ಆದ ವಾಣಿಯಿಂದ ಅವರಲ್ಲಿ ಹೀಗೆ ಅರಿಕೆಮಾಡಿಕೊಂಡನು. ॥ ೩೧ ॥

ಪರೀಕ್ಷಿದ್ರಾಜನು ಹೇಳಿದನು – ಬ್ರಹ್ಮನಿಷ್ಠರಾದ ಮುನಿವರ್ಯರೇ! ಆಹಾ! ಈಗ ನಾವು ಧನ್ಯರಾದೆವು. ಕ್ಷತ್ರಿಯಾಧಮರಾದ ನಾವೂ ಕೂಡ ಈಗ ಸತ್ಸಂಗಕ್ಕೆ ಅಧಿಕಾರಿಗಳಾದೆವು.

ಯೇಷಾಂ ಸಂಸ್ಮರಣಾತ್ಪುಂಸಾಂ ಸದ್ಯಃ ಶುದ್ಧ್ಯಂತಿ ವೈ ಗೃಹಾಃ ।
ಕಿಂ ಪುನರ್ದರ್ಶನಸ್ಪರ್ಶಪಾದ ಶೌಚಾಸನಾದಿಭಿಃ ॥ ೩೩ ॥

ಸಾಂನ್ನಿಧ್ಯಾತ್ತೇ ಮಹಾಯೋಗಿನ್ಪಾತಕಾನಿ ಮಹಾಂತ್ಯಪಿ ।
ಸದ್ಯೋ ನಶ್ಯಂತಿ ವೈ ಪುಂಸಾಂ ವಿಷ್ಣೋರಿವ ಸುರೇತರಾಃ ॥ ೩೪ ॥

ಅಪಿ ಮೇ ಭಗವಾನ್ ಪ್ರೀತಃ ಕೃಷ್ಣಃ ಪಾಂಡುಸುತಪ್ರಿಯಃ ।
ಪೈತೃಷ್ವಸೇಯಪ್ರೀತ್ಯರ್ಥಂ ತದ್ಗೋತ್ರಸ್ಯಾತ್ತಬಾಂಧವಃ ॥ ೩೫ ॥

ಅನ್ಯಥಾ ತೇಽವ್ಯಕ್ತಗತೇರ್ದರ್ಶನಂ ನಃ ಕಥಂ ನೃಣಾಮ್ ।
ನಿತರಾಂ ಮ್ರಿಯಮಾಣಾನಾಂ ಸಂಸಿದ್ಧಸ್ಯ ವನೀಯಸಃ ॥ ೩೬ ॥

ಅತಃ ಪೃಚ್ಛಾಮಿ ಸಂಸಿದ್ಧಿಂ ಯೋಗಿನಾಂ ಪರಮಂ ಗುರುಮ್ ।
ಪುರುಷಸ್ಯೇಹ ಯತ್ಕಾರ್ಯಂ ಮ್ರಿಯಮಾಣಸ್ಯ ಸರ್ವಥಾ ॥ ೩೭ ॥

ಯಚ್ಛ್ರೋತವ್ಯಮಥೋ ಜಪ್ಯಂ ಯತ್ಕರ್ತವ್ಯಂ ನೃಭಿಃ ಪ್ರಭೋ ।
ಸ್ಮರ್ತವ್ಯಂ ಭಜನೀಯಂ ವಾ ಬ್ರೂಹಿ ಯದ್ವಾ ವಿಪರ್ಯಯಮ್ ॥ ೩೮ ॥

ನೂನಂ ಭಗವತೋ ಬ್ರಹ್ಮನ್ ಗೃಹೇಷು ಗೃಹಮೇಧಿನಾಮ್ ।
ನ ಲಕ್ಷ್ಯತೇ ಹ್ಯವಸ್ಥಾನಮಪಿ ಗೋದೋಹನಂ ಕ್ವಚಿತ್ ॥ ೩೯ ॥

ಸೂತ ಉವಾಚ

ಏವಮಾಭಾಷಿತಃ ಪೃಷ್ಟಃ ಸ ರಾಜ್ಞಾ ಶ್ಲಕ್ಷ್ಣಯಾ ಗಿರಾ ।
ಪ್ರತ್ಯಭಾಷತ ಧರ್ಮಜ್ಞೋ ಭಗವಾನ್ಬಾದರಾಯಣಿಃ ॥ ೪೦ ॥

ಸಾಧು-ಸಜ್ಜನರ ಸಮಾಜದಲ್ಲಿ ಸೇರಿಕೊಂಡೆವು. ತಾವು ಕೃಪೆಮಾಡಿ ಅತಿಥಿಗಳಾಗಿ ಇಲ್ಲಿಗೆ ಬಂದು ನಮ್ಮನ್ನೆಲ್ಲರನ್ನೂ ತೀರ್ಥದಂತೆ ಪವಿತ್ರರನ್ನಾಗಿ ಮಾಡಿರುವಿರಿ. ॥ ೩೨ ॥ ನಿಮ್ಮಂತಹವರ ಸ್ಮರಣೆ ಮಾತ್ರದಿಂದಲೇ ಗೃಹಸ್ಥರ ಮನೆಗಳು ಪವಿತ್ರವಾಗುವುವು. ಹೀಗಿರುವಾಗ ನಿಮ್ಮ ನೇರವಾದ ದರ್ಶನ, ಸ್ಪರ್ಶನ, ಪಾದಪ್ರಕ್ಷಾಳನ, ಆಸನ ಸಮರ್ಪಣೆ ಮುಂತಾದವುಗಳ ಅವಕಾಶ ಸಿಕ್ಕಿದಾಗ ಹೇಳುವುದೇನಿದೆ? ॥ ೩೩ ॥ ಮಹಾಯೋಗಿಗಳೇ! ಮಹಾವಿಷ್ಣುವಿನ ಮುಂದೆ ದೈತ್ಯರು ನಾಶಹೊಂದುವಂತೆ – ತಮ್ಮ ಸಾನ್ನಿಧ್ಯಮಾತ್ರದಿಂದಲೇ ಮಹಾಪಾತಕಗಳೂ ಕೂಡ ಬಹಳಬೇಗನೇ ಧ್ವಂಸವಾಗಿ ಬಿಡುತ್ತವೆ. ॥ ೩೪ ॥ ಪಾಂಡವರಿಗೆ ಮಿತ್ರನಾದ ಭಗವಾನ್ ಶ್ರೀಕೃಷ್ಣನು ನಿಜವಾಗಿಯೂ ನನ್ನ ಮೇಲೆ ಅತ್ಯಂತ ಪ್ರಸನ್ನನಾಗಿರುವನು. ತನ್ನ ಸೋದರತ್ತೆಯ ಮಕ್ಕಳಿಗೆ ಪ್ರಿಯವನ್ನುಂಟುಮಾಡಿದ ಭಗವಂತನು ಪಾಂಡವರ ವಂಶದಲ್ಲಿ ಹುಟ್ಟಿದ ನನ್ನ ಮೇಲೂ ಅತ್ಯಂತವಾದ ಉಪಕಾರವನ್ನು ಮಾಡಿರುವನು. ॥ ೩೫ ॥ ಭಗವಾನ್ ಶ್ರೀಕೃಷ್ಣನ ಕರುಣೆಯಿಲ್ಲದಿದ್ದರೆ ತಮ್ಮಂತಹ ಏಕಾಂತ ಜೀವಿಗಳೂ, ಗೂಢಸಂಚಾರಿಗಳೂ ಆದ ಮಹಾತ್ಮರೂ ತಾವಾಗಿಯೇ ದಯಮಾಡಿಸಿ ಮರಣವನ್ನು ಸಮೀಪಿಸುವ ನಮ್ಮಂತಹ ಪ್ರಾಕೃತ ಮನುಷ್ಯರಿಗೆ ದರ್ಶನಕೊಡುತ್ತಿದ್ದರೇ? ॥ ೩೬ ॥ ತಾವಾದರೋ ಯೋಗಿಗಳಿಗೂ ಪರಮಗುರುಗಳಾಗಿದ್ದೀರಿ. ಆದ್ದರಿಂದ 'ಸರ್ವಥಾ ಮರಣಾಸನ್ನನಾದ ಪುರುಷನು ಏನು ಮಾಡಬೇಕು?' ಈ ಕುರಿತು ಸಿದ್ಧಿಯ ಸ್ವರೂಪ ಮತ್ತು ಸಾಧನೆಯ ಸಂಬಂಧವಾಗಿ ನಿಮ್ಮಲ್ಲಿ ಪ್ರಶ್ನಿಸುತ್ತಿದ್ದೇನೆ. ॥ ೩೭ ॥ ಮಹಾತ್ಮರೇ! ಮನುಷ್ಯನಾದವನು ಏನು ಮಾಡಬೇಕು? ಯಾವುದನ್ನು ಶ್ರವಣಿಸಬೇಕು, ಯಾರ ಜಪ, ಯಾರ ಸ್ಮರಣೆ, ಯಾರ ಭಜನೆ ಮಾಡಬೇಕು? ಹಾಗೂ ಯಾವುದನ್ನು ತ್ಯಜಿಸಬೇಕು? ॥ ೩೮ ॥ ಬ್ರಹ್ಮತೇಜೋಮಯರಾದ ಪೂಜ್ಯರೇ! ತಮ್ಮ ದರ್ಶನವು ಅತ್ಯಂತ ದುರ್ಲಭವಾದುದು. ಏಕೆಂದರೆ ತಾವು ಗೃಹಸ್ಥರ ಮನೆಗಳಲ್ಲಾಗಲೀ, ಅಥವಾ ಬೇರೆಡೆಗಳಲ್ಲಾಗಲೀ, ಹಸುವು ಹಾಲು ಕರೆಯುವಷ್ಟು ಹೊತ್ತು ಸಹ ನಿಲ್ಲುವುದನ್ನು ಪ್ರಾಯಶಃ ನೋಡಲು ಶಕ್ಯವಿಲ್ಲ. ॥ ೩೯ ॥

ಸೂತಪುರಾಣಿಕರು ಹೇಳುತ್ತಾರೆ – ಶೌನಕರೇ! ಆ ಸಾರ್ವಭೌಮನು ಹೀಗೆ ಅತಿಮಧುರವಾದ ವಾಣಿಯಿಂದ ಸಂಭಾಷಿಸಿ, ಪ್ರಶ್ನೆಮಾಡಲು, ಸಕಲಧರ್ಮಗಳ ಮರ್ಮವನ್ನು ಅರಿತಿದ್ದ ವ್ಯಾಸನಂದನರಾದ ಭಗವಾನ್ ಶುಕಮಹಾಮುನಿಗಳು ಅರಸನಿಗೆ ಹೀಗೆ ಉತ್ತರಿಸತೊಡಗಿದರು. ॥ ೪೦ ॥

ಹತ್ತೊಂಭತ್ತನೆಯ ಅಧ್ಯಾಯವು ಮುಗಿಯಿತು. ॥ ೧೯ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಪ್ರಥಮಸ್ಕಂಧೇ
ಶುಕಾಗಮನಂ ನಾಮೈಕೋನವಿಂಶೋಽಧ್ಯಾಯಃ ॥ ೧೯ ॥

ಮೊದಲನೆಯ ಸ್ಕಂಧವು ಸಂಪೂರ್ಣವಾಯಿತು.

॥ ಶ್ರೀರಾಧಾಕೃಷ್ಣಾಭ್ಯಾಂ ನಮಃ ॥

ಶ್ರೀಮದ್ಭಾಗವತಮಹಾಪುರಾಣ

ದ್ವಿತೀಯ ಸ್ಕಂಧ



ಯಸ್ಯಾವತಾರಕರ್ಮಾಣಿ ಗಾಯಂತಿ ಹ್ಯಸ್ಮದಾದಯಃ ।
ನ ಯಂ ವಿದಂತಿ ತತ್ತ್ವೇನ ತಸ್ಮೈ ಭಗವತೇ ನಮಃ ॥

॥ ಓಂ ನಮೋ ಭಗವತೇ ವಾಸುದೇವಾಯ ॥

ಶ್ರೀಮದ್ಭಾಗವತಮಹಾಪುರಾಣಮ್

ದ್ವಿತೀಯಃ ಸ್ಕಂಧಃ

ಮೊದಲನೆಯ ಅಧ್ಯಾಯ

ಧ್ಯಾನವಿಧಿ ಮತ್ತು ಶ್ರೀಭಗವಂತನ ವಿರಾಟ್‌ಸ್ವರೂಪದ ವರ್ಣನೆ

ಶ್ರೀಶುಕ ಉವಾಚ

ವರೀಯಾನೇಷ ತೇ ಪ್ರಶ್ನಃ ಕೃತೋ ಲೋಕಹಿತೋ ನೃಪ ।
ಆತ್ಮವಿತ್ಸಮ್ಮತಃ ಪುಂಸಾಂ ಶ್ರೋತವ್ಯಾದಿಷು ಯಃ ಪರಃ ॥ ೧ ॥

ಶ್ರೋತವ್ಯಾದೀನಿ ರಾಜೇಂದ್ರ ನೃಣಾಂ ಸಂತಿ ಸಹಸ್ರಶಃ ।
ಅಪಶ್ಯತಾಮಾತ್ಮತತ್ತ್ವಂ ಗೃಹೇಷು ಗೃಹಮೇಧಿನಾಮ್ ॥ ೨ ॥

ನಿದ್ರಯಾ ಹ್ರಿಯತೇ ನಕ್ತಂ ವ್ಯವಾಯೇನ ಚ ವಾ ವಯಃ ।
ದಿವಾ ಚಾರ್ಥೇಹಯಾ ರಾಜನ್ಕುಟುಂಬ ಭರಣೇನ ವಾ ॥ ೩ ॥

ದೇಹಾಪತ್ಯಕಲತ್ರಾದಿಷ್ವಾತ್ಮಸೈನ್ಯೇಷ್ವಸತ್ಸ್ವಪಿ ।
ತೇಷಾಂ ಪ್ರಮತ್ತೋ ನಿಧನಂ ಪಶ್ಯನ್ನಪಿ ನ ಪಶ್ಯತಿ ॥ ೪ ॥

ತಸ್ಮಾದ್ಭಾರತ ಸರ್ವಾತ್ಮಾ ಭಗವಾನೀಶ್ವರೋ ಹರಿಃ ।
ಶ್ರೋತವ್ಯಃ ಕೀರ್ತಿತವ್ಯಶ್ಚ ಸ್ಮರ್ತವ್ಯಶ್ಚೇಚ್ಛತಾಭಯಮ್ ॥ ೫ ॥

ಏತಾವಾನ್ ಸಾಂಖ್ಯ ಯೋಗಾಭ್ಯಾಂ ಸ್ವಧರ್ಮಪರಿನಿಷ್ಠಯಾ ।
ಜನ್ಮಲಾಭಃ ಪರಃ ಪುಂಸಾಮಂತೇ ನಾರಾಯಣಸ್ಮೃತಿಃ ॥ ೬ ॥

ಪ್ರಾಯೇಣ ಮುನಯೋ ರಾಜನ್ನಿವೃತ್ತಾ ವಿಧಿಷೇಧತಃ ।
ನೈರ್ಗುಣ್ಯಸ್ಥಾ ರಮಂತೇ ಸ್ಮ ಗುಣಾನುಕಥನೇ ಹರೇಃ ॥ ೭ ॥

ಶ್ರೀಶುಕಮಹಾಮುನಿಗಳು ಹೇಳಿದರು – "ಪರೀಕ್ಷಿದ್ರಾಜನೇ! ನೀನು ಲೋಕಹಿತಕ್ಕಾಗಿ ಕೇಳಿರುವ ಪ್ರಶ್ನೆಯು ತುಂಬಾ ಶ್ರೇಷ್ಠವಾದುದು. ಮನುಷ್ಯರ ಶ್ರವಣ, ಕೀರ್ತನ, ಸ್ಮರಣೆ ಮುಂತಾದವುಗಳು ಏನೇನುಂಟೋ, ಅವುಗಳಲ್ಲಿ ಅತ್ಯಂತ ಉತ್ತಮವಾದುದು ಇದು. ಆತ್ಮಜ್ಞಾನಿಗಳಿಗೆ ಸಮ್ಮತವಾದುದು ಈ ಪ್ರಶ್ನೆ ॥ ೧ ॥ ರಾಜೇಂದ್ರನೇ! ಆತ್ಮತತ್ತ್ವವನ್ನರಿಯದೆ ಮನೆಯ ಕೆಲಸ-ಕಾರ್ಯಗಳಲ್ಲಿಯೇ ಮಗ್ನರಾದ ಗೃಹಸ್ಥರಿಗೆ ಕೇಳಲು, ಯೋಚಿಸಲು, ಮಾಡಲು ಸಾವಿರಾರು ವಿಷಯಗಳಿರುತ್ತವೆ. ॥ ೨ ॥ ಅವರ ಆಯುಸ್ಸೆಲ್ಲಾ ಇವುಗಳಲ್ಲೇ ಕಳೆದುಹೋಗುತ್ತದೆ. ಅವರ ರಾತ್ರಿಯು ನಿದ್ದೆ ಮಾಡಲ್ಲೋ, ಸ್ತ್ರೀಪ್ರಸಂಗದಲ್ಲೋ ಕಳೆದುಹೋದರೆ ಹಗಲು ಹಣ ಸಂಪಾದನೆಯ ಹಗರಣಗಳಲ್ಲಿ, ಕುಟುಂಬ ಪೋಷಣೆಯಲ್ಲಿ ಕಳೆದುಹೋಗುತ್ತದೆ. ॥ ೩ ॥ ಸಂಸಾರದಲ್ಲಿ ಮನುಷ್ಯನಿಗೆ ಅತ್ಯಂತ ಘನಿಷ್ಠ ಸಂಬಂಧವೆಂದು ಹೇಳಲಾಗುವ ಶರೀರ, ಪತ್ನೀ, ಪುತ್ರ ಮುಂತಾದವುಗಳು ಏನೆಲ್ಲ ಇವೆಯೋ, ಅವೆಲ್ಲ ಅಸತ್ಪದಾರ್ಥಗಳು. ಆದರೆ ಜೀವಿಯು ಹಗಲು-ಇರುಳು ಅವೆಲ್ಲಾ ಸಾವಿಗೆ ಈಡಾಗುವುದನ್ನು ನೋಡುತ್ತಾ ಇದ್ದರೂ ಎಚ್ಚರವಾಗದಷ್ಟು ಮೋಹದಲ್ಲಿ ಹುಚ್ಚನಾಗಿರುತ್ತಾನೆ. ॥ ೪ ॥ ಅದಕ್ಕಾಗಿ ಪರೀಕ್ಷಿತನೇ! ಅಭಯಪದವನ್ನು ಪಡೆಯಬಯಸುವವನಾದರೋ ಸರ್ವಾತ್ಮಾ ಸರ್ವಶಕ್ತಿಯುಳ್ಳ ಭಗವಾನ್ ಶ್ರೀಕೃಷ್ಣನ ಲೀಲೆಗಳನ್ನೇ ಶ್ರವಣ, ಕೀರ್ತನ, ಸ್ಮರಣೆ ಮಾಡಬೇಕು. ಹೀಗೆ ಮಾಡುವುದರಿಂದ ಅವನಿಗೆ ಭಗವಂತನಲ್ಲಿ ತದಾಕಾರ ವೃತ್ತಿಯುಂಟಾಗಿ ಸುಲಭವಾಗಿ ಪರಮಾತ್ಮನ ಪ್ರಾಪ್ತಿಯುಂಟಾಗುತ್ತದೆ ॥ ೫ ॥ ಜ್ಞಾನಯೋಗದಿಂದಾಗಲೀ, ಭಕ್ತಿಯೋಗದಿಂದಾಗಲೀ, ಸ್ವಧರ್ಮ ನಿಷ್ಠೆಯಿಂದಾಗಲೀ ಹೇಗಾದರೂ ಅಂತ್ಯಕಾಲದಲ್ಲಿ ನಾರಾಯಣ ಸ್ಮರಣೆ ಉಂಟಾಗುವಂತೆ ಮಾಡಿಕೊಳ್ಳುವುದೇ ಮನುಷ್ಯ ಜೀವನದ ಪರಮಲಾಭವಾಗಿದೆ. ಆದ್ದರಿಂದ ಮೇಲೆ ಹೇಳಿದ ಈ ಮೂರರಲ್ಲಿ ಯಾವುದೇ ಯೋಗದ ಮೂಲಕ ತನ್ನನ್ನು ಭಗವಂತನಲ್ಲಿ ತೊಡಗಿಸಿಕೊಳ್ಳಬೇಕು. ॥ ೬ ॥ ಪರೀಕ್ಷಿದ್ರಾಜನೇ! ನಿರ್ಗುಣ ಬ್ರಹ್ಮನಲ್ಲಿ ನೆಲೆಗೊಂಡಿರುವ, ವಿಧಿ-ನಿಷೇಧಗಳನ್ನು ಮೀರಿರುವ ದೊಡ್ಡ-ದೊಡ್ಡ ಋಷಿ-ಮುನಿಗಳೂ ಕೂಡ ಪ್ರಾಯಶಃ ಭಗವಂತನ ಅನಂತಕಲ್ಯಾಣಗುಣಗಳನ್ನು ವರ್ಣಿಸುವುದರಲ್ಲೇ ರಮಿಸುತ್ತಿರುತ್ತಾರೆ. (**ಮಚ್ಚಿತ್ತಾ ಮದ್ಗತಪ್ರಾಣಾ ಬೋಧಯಂತಃ ಪರಸ್ಪರಮ್ । ಕಥಯಂತಶ್ಚ ಮಾಂ ನಿತ್ಯಂ ತುಷ್ಯಂತಿ ಚ ರಮಂತಿ ಚ ॥**) (ಭಗವದ್ಗೀತೆ ೧೦/೯) ॥ ೭ ॥

ಇದಂ ಭಾಗವತಂ ನಾಮ ಪುರಾಣಂ ಬ್ರಹ್ಮಸಮ್ಮಿತಮ್ ।
ಅಧೀತವಾನ್ ದ್ವಾಪರಾದೌ ಪಿತುರ್ದ್ವೈಪಾಯನಾದಹಮ್ ॥ ೮ ॥

ಪರಿನಿಷ್ಠಿತೋಽಪಿ ನೈರ್ಗುಣ್ಯ ಉತ್ತಮಶ್ಲೋಕಲೀಲಯಾ ।
ಗೃಹೀತಚೇತಾ ರಾಜರ್ಷೇ ಆಖ್ಯಾನಂ ಯದಧೀತವಾನ್ ॥ ೯ ॥

ತದಹಂ ತೇಽಭಿಧಾಸ್ಯಾಮಿ ಮಹಾಪೌರುಷಿಕೋ ಭವಾನ್ ।
ಯಸ್ಯ ಶ್ರದ್ದಧತಾಮಾಶು ಸ್ಯಾನ್ಮುಕುಂದೇ ಮತಿಃ ಸತೀ ॥ ೧೦ ॥

ಏತನ್ನಿರ್ವಿದ್ಯಮಾನಾನಾಮಿಚ್ಛತಾಮಕುತೋಭಯಮ್ ।
ಯೋಗಿನಾಂ ನೃಪ ನಿರ್ಣೀತಂ ಹರೇರ್ನಾಮಾನುಕೀರ್ತನಮ್ ॥ ೧೧ ॥

ಕಿಂ ಪ್ರಮತ್ತಸ್ಯ ಬಹುಭಿಃ ಪರೋಕ್ಷೈರ್ಹಾಯನೈರಿಹ ।
ವರಂ ಮುಹೂರ್ತಂ ವಿದಿತಂ ಘಟತೇ ಶ್ರೇಯಸೇ ಯತಃ ॥ ೧೨ ॥

ಖಟ್ವಾಂಗೋ ನಾಮ ರಾಜರ್ಷಿರ್ಜ್ಞಾತ್ವೇಯತ್ತಾಮಿಹಾಯುಷಃ ।
ಮುಹೂರ್ತಾತ್ಸರ್ವಮುತ್ಸೃಜ್ಯ ಗತವಾನಭಯಂ ಹರಿಮ್ ॥ ೧೩ ॥

ಅಂತಹ ಮಹಾಮಹಿಮೆಯ ದಿವ್ಯ ಪ್ರಬಂಧವಾಗಿ ವೇದ ಸದೃಶವೂ, ಬ್ರಹ್ಮರೂಪವೂ ಆಗಿರುವ ಈ ಭಾಗವತವೆಂಬ ಮಹಾ ಪುರಾಣವನ್ನು ನಾನು ದ್ವಾಪರಯುಗದ ಪ್ರಾರಂಭದಲ್ಲಿ ನನ್ನ ತೀರ್ಥರೂಪರಾದ ಶ್ರೀಕೃಷ್ಣದ್ವೈಪಾಯನರಿಂದ ಅಧ್ಯಯನ ಮಾಡಿದೆ. ॥ ೮ ॥ ರಾಜರ್ಷಿಯೇ ! ನಾನು ನಿರ್ಗುಣಸ್ವರೂಪನಾದ ಪರಮಾತ್ಮನಲ್ಲಿ ನಿಷ್ಠೆಯುಳ್ಳವನು. ಆದರೂ ಪುಣ್ಯಕೀರ್ತಿಯಾದ ಭಗವಾನ್ ಶ್ರೀಕೃಷ್ಣನ ಮಧುರಲೀಲೆಗಳು ಬಲವಂತವಾಗಿ ನನ್ನ ಮನಸ್ಸನ್ನು ಸೂರೆಗೊಂಡವು. ಆದ್ದರಿಂದ ನಾನು ಈ ಪುರಾಣವನ್ನು ಅಧ್ಯಯನ ಮಾಡಿದೆ.* ॥ ೯ ॥ ನೀನು ಭಗವಂತನ ಪರಮಭಕ್ತನಾದ್ದರಿಂದ ನಿನಗೆ ಇದನ್ನು ನಾನು ಹೇಳುತ್ತೇನೆ. ಇದರಲ್ಲಿ ಶ್ರದ್ಧೆಯನ್ನಿಡುವವರ ಚಿತ್ತವೃತ್ತಿಗಳು ಶುದ್ಧವಾಗಿ ಭಗವಾನ್ ಶ್ರೀಕೃಷ್ಣನ ಚರಣಗಳಲ್ಲಿ ಅನನ್ಯ ಭಕ್ತಿಯಿಂದ ಬೇಗನೇ ತೊಡಗಿಕೊಳ್ಳುವವು. ॥ ೧೦ ॥ ಎಲೈ ರಾಜನೇ ! ಲೋಕ-ಪರಲೋಕದ ಯಾವುದೇ ವಸ್ತುವನ್ನು ಬಯಸುವವರಿಗೆ, ಸಂಸಾರದಲ್ಲಿ ದುಃಖಗಳನ್ನನುಭವಿಸಿ ವೈರಾಗ್ಯ ಹೊಂದಿದವರಿಗೆ, ನಿರ್ಭಯವಾದ ಮೋಕ್ಷಪದವನ್ನು ಪಡೆಯಲು ಬಯಸುವ ಸಾಧಕರಿಗೆ ಹಾಗೂ ಯೋಗಸಂಪನ್ನ ಸಿದ್ಧ ಜ್ಞಾನಿಗಳಿಗೂ ಕೂಡ ಭಗವನ್ನಾಮಕೀರ್ತನರೂಪವಾದ ಈ ಪುರಾಣವು ಶ್ರೇಯಸ್ಕರವೆಂದು ಸಮಸ್ತ ಶಾಸ್ತ್ರಗಳಲ್ಲಿ ನಿಶ್ಚಯಿಸಲ್ಪಟ್ಟಿದೆ. ॥ ೧೧ ॥ ತಮ್ಮ ಶ್ರೇಯಸ್ಸಾಧನೆಯಲ್ಲಿ ಎಚ್ಚರವಿಲ್ಲದವರು ಎಷ್ಟೇ ವರ್ಷಗಳು ಬದುಕಿದ್ದರೂ ಏನು ಲಾಭ ? ಅವರಿಗರಿವಿಲ್ಲದಂತೆಯೇ ಅವರ ಆಯುಸ್ಸು ವ್ಯರ್ಥವಾಗಿ ಕಳೆದುಹೋಗುವುದು. ಶ್ರೇಯಸ್ಸಾಧನೆಯ ವಿಷಯದಲ್ಲಿ ಸಾವಧಾನನಾಗಿದ್ದು ಜ್ಞಾನಪೂರ್ವಕವಾಗಿ ಒಂದು ಮುಹೂರ್ತ ಕಾಲ ಬದುಕಿದ್ದರೂ ಅದು ಸಫಲವೇ ಆಗುವುದು. ಏಕೆಂದರೆ, ಜೀವನು ಬಯಸಿದರೆ ತನ್ನ ಶ್ರೇಯಸ್ಸನ್ನು ಒಂದೇ ಗಳಿಗೆಯಲ್ಲಿ ಮಾಡಿಕೊಳ್ಳಬಲ್ಲನು. ॥ ೧೨ ॥ ರಾಜರ್ಷಿ ಖಟ್ವಾಂಗನು ತನ್ನ ಆಯುಸ್ಸಿನ ಸಮಾಪ್ತಿಯ ಸಮಯವನ್ನರಿತು ಎರಡೇ ಗಳಿಗೆಯಲ್ಲಿ ಸರ್ವಸಂಗಪರಿತ್ಯಾಗಿಯಾಗಿ ಭಗವಂತನ ಅಭಯಪದವನ್ನು ಪಡೆದುಕೊಂಡನು. ॥ ೧೩ ॥ ಪರೀಕ್ಷಿದ್ರಾಜನೇ !

* ಈ ಭಾಗವತ ಪುರಾಣವನ್ನು ತನ್ನ ಪುತ್ರನಾದ ಶುಕಮುನಿಗೆ ಓದಿಸಬೇಕೆಂಬ ಇಚ್ಛೆಯು ವ್ಯಾಸರಲ್ಲಿ ಪ್ರಬಲವಾಗಿತ್ತು. ಆದರೆ ಅವನಾದರೋ ಪೂರ್ಣ ವೈರಾಗ್ಯವುಳ್ಳವನಾಗಿದ್ದನು. ಯಾವುದೇ ಮಮತೆ ಅವನಿಗೆ ಎಲ್ಲಿಯೂ ಇರಲಿಲ್ಲ. ಒಮ್ಮೆ ವೇದವ್ಯಾಸರ ಶಿಷ್ಯರು ಭಾಗವತದ ಶ್ಲೋಕಗಳನ್ನು ಹಾಡುತ್ತಿದ್ದರು. ಅದನ್ನು ಶುಕಮುನಿಯು ಕೇಳಿದರು –

ಅಹೋ ಬಕೀ ಯಂ ಸ್ತನಕಾಲಕೂಟಂ ಜಿಘಾಂಸಯಾಪಾಯಯದಪ್ಯಸಾಧ್ವೀ । ಲೇಭೇ ಗತಿಂ ಧಾತ್ರ್ಯುಚಿತಾಂ ತತೋಽನ್ಯಂ ಕಂ ವಾ ದಯಾಲುಂ ಶರಣಂ ವ್ರಜೇಮ ॥ *(ಭಾಗವತ ೩/೨/೨೩)*

ಬರ್ಹಾಪೀಡಂ ನಟವರವಪುಃ ಕರ್ಣಯೋಃ ಕರ್ಣಿಕಾರಂ ಬಿಭ್ರದ್ ವಾಸಃ ಕನಕಕಪಿಶಂ ವೈಜಯಂತೀಂ ಚ ಮಾಲಾಮ್ ।
ರಂಧ್ರಾನ್ ವೇಣೋರಧರಸುಧಯಾ ಪೂರಯನ್ ಗೋಪವೃಂದೈಃ ವೃಂದಾರಣ್ಯಂ ಸ್ವಪದರಮಣಂ ಪ್ರಾವಿಶದ್ ಗೀತಕೀರ್ತಿಃ ॥

(ಭಾಗವತ ೧೦/೨೧/೫)

ಈ ಎರಡು ಶ್ಲೋಕಗಳು ಕೇಳುತ್ತಲೇ ಶುಕರು ಭಗವಂತನ ಲೀಲಾಮೃತದಲ್ಲಿ ಮುಳುಗಿಹೋದರು ಹಾಗೂ ಈ ಗ್ರಂಥದ ಕಡೆಗೆ ಸೆಳೆಯಲ್ಪಟ್ಟರು. ಮತ್ತೆ ಪೂಜ್ಯರಾದ ತಂದೆಯಿಂದ ಈ ಗ್ರಂಥವನ್ನು ಪೂರ್ಣವಾಗಿ ಅಧ್ಯಯನಮಾಡಿದರು.

ಈ ಭಾಗವತ ಗ್ರಂಥರತ್ನದ ಭಾವಗಳನ್ನು ತಿಳಿದು-ಅರಿತುಕೊಂಡು ಮನನ-ಚಿಂತನ ಮಾಡುವುದರಿಂದ ಭಗವಂತನ ಕುರಿತು ಭಕ್ತಿಯು ಬೆಳೆಯುತ್ತಾ ಹೋಗುತ್ತದೆ. ಭಕ್ತನ ಉದ್ಧಾರದಲ್ಲಿ ಯಾವುದೇ ಶಂಕೆ ಇರುವುದಿಲ್ಲ. ಏಕೆಂದರೆ, ಭಕ್ತನ ಉದ್ಧಾರವನ್ನು ಸಾಕ್ಷಾತ್ ಭಗವಂತನೇ ಮಾಡುತ್ತಾನೆ. ಗೀತೆಯಲ್ಲಿ ಭಗವಂತನೇ ಹೇಳಿರುವನು –

ತೇಷಾಮಹಂ ಸಮುದ್ಧರ್ತಾ ಮೃತ್ಯುಸಂಸಾರಸಾಗರಾತ್ । ಭವಾಮಿ ನಚಿರಾತ್ಪಾರ್ಥ ಮಯ್ಯಾವೇಶಿತಚೇತಸಾಮ್ ॥ *(ಭಗವದ್ಗೀತ ೧೨/೭)*

ಆದ್ದರಿಂದ ಭಾಗವತದ ಮುಖ್ಯ-ಮುಖ್ಯ ಶ್ಲೋಕಗಳನ್ನು ಪದೇ-ಪದೇ ಓದುತ್ತಾ ಇರುವ ಅಭ್ಯಾಸವಿರಿಸಿಕೊಳ್ಳಬೇಕು. ಇದರಿಂದ ಭಗವದ್ಭಕ್ತಿಯಲ್ಲಿ ಬಹಳ ಸಹಾಯವಾಗುತ್ತದೆ. ಹೊಸ-ಹೊಸ ಭಾವಗಳು ಉಂಟಾಗುತ್ತವೆ. ಭಗವಂತನ ವಿಲಕ್ಷಣತೆಯು ಅನುಭವವಾಗತೊಡಗುತ್ತದೆ.

ತವಾಪ್ಯೇತರ್ಹಿ ಕೌರವ್ಯ ಸಪ್ತಾಹಂ ಜೀವಿತಾವಧಿಃ ।
ಉಪಕಲ್ಪಯ ತತ್ಸರ್ವಂ ತಾವದ್ಯತ್ಸಾಂಪರಾಯಿಕಮ್ ॥ ೧೪ ॥

ಅಂತಕಾಲೇ ತು ಪುರುಷ ಆಗತೇ ಗತಸಾಧ್ವಸಃ ।
ಛಿಂದ್ಯಾದಸಂಗಶಸ್ತ್ರೇಣ ಸ್ಪೃಹಾಂ ದೇಹೇಽನು ಯೇ ಚ ತಮ್ ॥ ೧೫ ॥

ಗೃಹಾತ್ಪ್ರವ್ರಜಿತೋ ಧೀರಃ ಪುಣ್ಯತೀರ್ಥಜಲಾಪ್ಲುತಃ ।
ಶುಚೌ ವಿವಿಕ್ತ ಆಸೀನೋ ವಿಧಿವತ್ಕಲ್ಪಿತಾಸನೇ ॥ ೧೬ ॥

ಅಭ್ಯಸೇನ್ಮನಸಾ ಶುದ್ಧಂ ತ್ರಿವೃದ್ಬ್ರಹ್ಮಾಕ್ಷರಂ ಪರಮ್ ।
ಮನೋ ಯಚ್ಛೇಜ್ಜಿತಶ್ವಾಸೋ ಬ್ರಹ್ಮಬೀಜಮವಿಸ್ಮರನ್ ॥ ೧೭ ॥

ನಿಯಚ್ಛೇದ್ವಿಷಯೇಭ್ಯೋಽಕ್ಷಾನ್ಮನಸಾ ಬುದ್ಧಿಸಾರಥಿಃ ।
ಮನಃ ಕರ್ಮಭಿರಾಕ್ಷಿಪ್ತಂ ಶುಭಾರ್ಥೇ ಧಾರಯೇದ್ಧಿಯಾ ॥ ೧೮ ॥

ತತ್ರೈಕಾವಯವಂ ಧ್ಯಾಯೇದವ್ಯುಚ್ಛಿನ್ನೇನ ಚೇತಸಾ ।
ಮನೋ ನಿರ್ವಿಷಯಂ ಯುಕ್ತ್ವಾ ತತಃ ಕಿಂಚನ ನ ಸ್ಮರೇತ್ ।
ಪದಂ ತತ್ಪರಮಂ ವಿಷ್ಣೋರ್ಮನೋ ಯತ್ರ ಪ್ರಸೀದತಿ ॥ ೧೯ ॥

ರಜಸ್ತಮೋಭ್ಯಾಮಾಕ್ಷಿಪ್ತಂ ವಿಮೂಢಂ ಮನ ಆತ್ಮನಃ ।
ಯಚ್ಛೇದ್ಧಾರಣಯಾ ಧೀರೋ ಹಂತಿ ಯಾ ತತ್ಕೃತಂ ಮಲಮ್ ॥ ೨೦ ॥

ಈಗಲಾದರೋ ನಿನ್ನ ಜೀವನದ ಅವಧಿ ಏಳುದಿನಗಳಿವೆ. ಅಷ್ಟರೊಳಗೆ ನೀನು ನಿನ್ನ ಪರಲೋಕವನ್ನು ಸುಧಾರಿಸಿ ಪರಮಪದವನ್ನು ಪಡೆಯುವಂತಹ ಉಪಾಯವನ್ನು ಮಾಡು. ॥ ೧೪ ॥

ಅಂತ್ಯಕಾಲ ಬಂದಾಗ ಮನುಷ್ಯನು ಏನು ಮಾಡಬೇಕು ? ಎಂದು ಕೇಳುವೆಯಲ್ಲ? ಆಗ ಅವನು ಗಾಬರಿಗೊಳ್ಳಬಾರದು. ನಿರ್ಭಯನಾಗಿದ್ದು, ವೈರಾಗ್ಯರೂಪ ಶಸ್ತ್ರದಿಂದ ಶರೀರದಲ್ಲಿ ಹಾಗೂ ಅದಕ್ಕೆ ಸಂಬಂಧಪಟ್ಟವರ ಕುರಿತೂ ಇರುವ ಮಮತೆಯನ್ನು ಕಡಿದುಹಾಕಬೇಕು. ಎಲ್ಲ ರೀತಿಯ ಸ್ಪೃಹೆಯನ್ನು ತ್ಯಾಗ ಮಾಡಿ ಏಕಮಾತ್ರ ಪರಮಾತ್ಮನಲ್ಲೇ ಮನಸ್ಸನ್ನು ತೊಡಗಿಸಬೇಕು. ॥ ೧೫ ॥ ಧೈರ್ಯವಾಗಿ ಮನೆಯನ್ನು ಬಿಟ್ಟು ಪುಣ್ಯತೀರ್ಥದಲ್ಲಿ ಸ್ನಾನಮಾಡಿ, ಪವಿತ್ರವೂ, ಏಕಾಂತವೂ ಆದ ಸ್ಥಾನದಲ್ಲಿ ವಿಧಿಪೂರ್ವಕ ಆಸನವನ್ನು ಹಾಕಿ ಕುಳಿತುಕೊಳ್ಳಬೇಕು. ಹಾಗೂ ಧ್ಯಾನದಲ್ಲಿ ಮಗ್ನನಾಗಬೇಕು. ॥ ೧೬ ॥ ಅನಂತರ ಅಕಾರ, ಉಕಾರ, ಮಕಾರಗಳೆಂಬ ಮೂರು ಮಾತ್ರೆಗಳಿಂದ ಕೂಡಿದ ಪರಮಪವಿತ್ರವಾದ ಓಂಕಾರವನ್ನು ಮನಸ್ಸಿನಲ್ಲೇ ಜಪಿಸಬೇಕು. ಪ್ರಾಣವಾಯುವನ್ನು ವಶಪಡಿಸಿಕೊಂಡು ಬ್ರಹ್ಮಬೀಜ ಪ್ರಣವವನ್ನು ಕಿಂಚಿತ್ತಾದರೂ ಮರೆಯದೆ ಮನಸ್ಸನ್ನು ನಿಗ್ರಹ ಮಾಡಿ ನಿರಂತರವಾಗಿ ಪರಮಾತ್ಮನ ನಾಮಜಪವನ್ನು ಮಾಡಬೇಕು. ॥ ೧೭ ॥ ಶುದ್ಧಬುದ್ಧಿಯ ಸಹಾಯದಿಂದ ಮನಸ್ಸಿನ ಮೂಲಕ ಇಂದ್ರಿಯಗಳನ್ನು ವಿಷಯಗಳಿಂದ ಹಿಮ್ಮೆಟ್ಟಿಸಬೇಕು. ಕರ್ಮದ ವಾಸನೆಯಿಂದ ಉಂಟಾದ ಚಂಚಲ ಮನಸ್ಸನ್ನು ವಿಚಾರದ ಮೂಲಕ ಸಮಜಾಯಿಸಿ ಮನಸ್ಸಿನ ಅಮನೀ* ಭಾವವನ್ನು ಹೊಂದಬೇಕು. ಮನಸ್ಸು ಶಾಂತವಾಗುತ್ತಲೇ ಬುದ್ಧಿಯ ಸಹಾಯದಿಂದ ಪರಮಾತ್ಮನ ಸ್ವರೂಪವನ್ನು ಚಿಂತಿಸುವ ಅಭ್ಯಾಸಮಾಡಬೇಕು. ಹೀಗೆ ಪುನಃ ಪುನಃ ಅಭ್ಯಾಸ ಮಾಡುತ್ತಿರುವುದರಿಂದ ಮನಸ್ಸು ಪರಮಾತ್ಮನ ಚಿಂತನದಲ್ಲಿ ತೊಡಗುತ್ತದೆ ಹಾಗೂ ಭಗವದ್ಭಕ್ತಿಯ ಪ್ರಭಾವದಿಂದ ಶುದ್ಧ ಬುದ್ಧಿಯಲ್ಲಿ ಪರಬ್ರಹ್ಮ ಪರಮಾತ್ಮನ ಸಾಕ್ಷಾತ್ಕಾರವಾಗುತ್ತದೆ. ॥ ೧೮ ॥ ಆ ದಿವ್ಯ ಮಂಗಳವಿಗ್ರಹದಲ್ಲಿ ಯಾವುದಾದರೂ ಒಂದು ಅವಯವವನ್ನು ಸ್ಥಿರವಾದ ಚಿತ್ತದಿಂದ ಚೆನ್ನಾಗಿ ಧ್ಯಾನಿಸಬೇಕು. ಹೀಗೆ ಒಂದೊಂದೇ ಅವಯವವನ್ನು ಧ್ಯಾನಮಾಡುತ್ತಾ-ಮಾಡುತ್ತಾ ವಿಷಯವಾಸನಾ ರಹಿತವಾದ ಮನಸ್ಸನ್ನು ಮತ್ತೆ ಯಾವ ವಿಷಯದ ಕುರಿತು ಚಿಂತಿಸದಂತೆ ಪೂರ್ಣವಾಗಿ ಭಗವಂತನಲ್ಲಿ ತಲ್ಲೀನಗೊಳಿಸಬೇಕು. ಅದೇ ವಿಷ್ಣುವಿನ ಪರಮಪದವು. ಅದನ್ನು ಪಡೆದರೇನೇ ಮನಸ್ಸು ಪರಮಾನಂದಪೂರಿತವಾಗಿ ಪ್ರಸನ್ನವಾಗುವುದು. ॥ ೧೯ ॥ ಹಾಗೆ ಭಗವಂತನ ಧ್ಯಾನಮಾಡುವಾಗ ಮನಸ್ಸು ರಜೋಗುಣದಿಂದ ಚಂಚಲವಾದರೆ, ಅಥವಾ ತಮೋಗುಣದಿಂದ ಮೂಢವಾದರೆ ಆಗ ಗಾಬರಿಪಡಬಾರದು. ಧೈರ್ಯದೊಂದಿಗೆ ಯೋಗಧಾರಣೆಯಿಂದ ಅವನ್ನು ವಶಪಡಿಸಿಕೊಳ್ಳಬೇಕು. ಆದರಿಂದ ಅವನ ಮಲ,

* ಅಮನೀಭಾವದ ತಾತ್ಪರ್ಯ – ಮನಸ್ಸಿಗೆ ಪದೇ-ಪದೇ ಕೇಳಲಿ. ಎಲೈ ಮನಸ್ಸೆ ನಿನಗೇನು ಬೇಕು ? ನನಗೇನೂ ಬೇಡ ಎಂಬ ಉತ್ತರ ಹೇಳಬೇಕು. ಹೀಗೆ ಮೇಲಿಂದ ಮೇಲೆ ಕೇಳುತ್ತಾ ಇರುವುದರಿಂದ ಮನಸ್ಸಿನ ಸಂಕಲ್ಪ-ವಿಕಲ್ಪಗಳ ವೃತ್ತಿಗಳು ನಿಧಾನವಾಗಿ ನಿಂತುಹೋಗುತ್ತದೆ. ಇದಕ್ಕೆ ಅಮನೀಭಾವವೆಂದು ಹೇಳುತ್ತಾರೆ. ಮನಸ್ಸೇ ಇಂದ್ರಿಯಗಳನ್ನು ಪ್ರೇರೇಪಿಸುತ್ತದೆ. ಅದೇ ಅಮನೀಭಾವವ ಪಡೆದಿದ್ದರಿಂದ ಇತರ ಇಂದ್ರಿಯಗಳ ಮೇಲೆ ಸಹಜವಾಗಿ ಹತೋಟಿ ಬಂದುಬಿಡುತ್ತದೆ.

ಯಸ್ಯಾಂ ಸಂಧಾರ್ಯಮಾಣಾಯಾಂ ಯೋಗಿನೋ ಭಕ್ತಿಲಕ್ಷಣಃ ।
ಆಶು ಸಂಪದ್ಯತೇ ಯೋಗ ಆಶ್ರಯಂ ಭದ್ರಮೀಕ್ಷತಃ ॥ ೨೧ ॥

ರಾಜೋವಾಚ

ಯಥಾ ಸಂಧಾರ್ಯತೇ ಬ್ರಹ್ಮನ್ ಧಾರಣಾ ಯತ್ರ ಸಮ್ಮತಾ ।
ಯಾದೃಶೀ ವಾ ಹರೇದಾಶು ಪುರುಷಸ್ಯ ಮನೋಮಲಮ್ ॥ ೨೨ ॥

ಶ್ರೀಶುಕ ಉವಾಚ

ಜಿತಾಸನೋ ಜಿತಶ್ವಾಸೋ ಜಿತಸಂಗೋ ಜಿತೇಂದ್ರಿಯಃ ।
ಸ್ಥೂಲೇ ಭಗವತೋ ರೂಪೇ ಮನಃ ಸಂಧಾರಯೇದ್ಧಿಯಾ ॥ ೨೩ ॥

ವಿಶೇಷಸ್ತಸ್ಯ ದೇಹೋಽಯಂ ಸ್ಥವಿಷ್ಠಶ್ಚ ಸ್ಥವೀಯಸಾಮ್ ।
ಯತ್ರೇದಂ ದೃಶ್ಯತೇ ವಿಶ್ವಂ ಭೂತಂ ಭವ್ಯಂ ಭವಚ್ಚ ಸತ್ ॥ ೨೪ ॥

ಅಂಡಕೋಶೇ ಶರೀರೇಽಸ್ಮಿನ್ ಸಪ್ತಾವರಣಸಂಯುತೇ ।
ವೈರಾಜಃ ಪುರುಷೋ ಯೋಽಸೌ ಭಗವಾನ್ ಧಾರಣಾಶ್ರಯಃ ॥ ೨೫ ॥

ಪಾತಾಲಮೇತಸ್ಯ ಹಿ ಪಾದಮೂಲಂ
  ಪಠಂತಿ ಪಾರ್ಷ್ಣಿಪ್ರಪದೇ ರಸಾತಲಮ್ ।
ಮಹಾತಲಂ ವಿಶ್ವಸೃಜೋಽಥ ಗುಲ್ಫೌ
  ತಲಾತಲಂ ವೈ ಪುರುಷಸ್ಯ ಜಂಘೇ ॥ ೨೬ ॥

ದ್ವೇ ಜಾನುನೀ ಸುತಲಂ ವಿಶ್ವಮೂರ್ತೇ-
  ರೂರುದ್ವಯಂ ವಿತಲಂ ಚಾತಲಂ ಚ ।
ಮಹೀತಲಂ ತಜ್ಜಘನಂ ಮಹೀಪತೇ
  ನಭಸ್ತಲಂ ನಾಭಿಸರೋ ಗೃಣಂತಿ ॥ ೨೭ ॥

ವಿಕ್ಷೇಪ, ಆವರಣರೂಪವಾದ ಮೂರೂ ಮಲಗಳು ತೊರೆದು ಮನಸ್ಸು ನಿರ್ಮಲವಾಗುವುದು. ಆಗ ಪರಮಾತ್ಮನ ಚಿಂತನೆಯು ಸಹಜವಾಗಿ ಆಗತೊಡಗುತ್ತದೆ ॥ ೨೦ ॥ ಧಾರಣೆಯಿಂದ ಸ್ಥಿರನಾದ ಯೋಗಿಯು ಧ್ಯಾನದಿಂದ ತನ್ನ ಪರಮ ಮಂಗಲಮಯ ಆಶ್ರಯನಾದ ಭಗವಂತನನ್ನು ನೋಡುತ್ತಿದ್ದರೆ ಶೀಘ್ರವಾಗಿ ಅವನಿಗೆ ಭಕ್ತಿಯೋಗವು ಸಿದ್ಧಿಸುವುದು." ॥ ೨೧ ॥

ಪರೀಕ್ಷಿತನು ಕೇಳಿದನು – ಬ್ರಹ್ಮರ್ಷಿಯೇ! ಈ ಧಾರಣೆಯನ್ನು ಯಾವ ಸಾಧನೆಯಿಂದ, ಯಾವ ವಸ್ತುವಿನಲ್ಲಿ ಹೇಗೆ ಮಾಡಲಾಗುತ್ತದೆ. ಮನುಷ್ಯನ ಮನೋಮಲವನ್ನು ಶೀಘ್ರವಾಗಿ ನಾಶಪಡಿಸುವ ಈ ಧಾರಣೆಯ ಸ್ವರೂಪವೇನು? ದಯಮಾಡಿ ಅಪ್ಪಣೆ ಕೊಡಿಸಬೇಕು. ॥ ೨೨ ॥

ಶ್ರೀಶುಕಯೋಗಿಗಳು ಹೇಳುತ್ತಾರೆ – ಮಹಾರಾಜಾ! ಮೊಟ್ಟ ಮೊದಲಿಗೆ ಆಸನವನ್ನು ಸ್ಥಿರಗೊಳಿಸಬೇಕು. ಮತ್ತೆ ಪ್ರಾಣಾಯಾಮದ ಮೂಲಕ ಇಂದ್ರಿಯಗಳನ್ನು ಜಯಿಸಿ, ಎಲ್ಲಿಯೂ ಆಸಕ್ತಿಯನ್ನು ಇಡಬಾರದು. ಹೀಗಾದ ಬಳಿಕ ಇರುವ ದೃಶ್ಯವರ್ಗವನ್ನು ಭಗವಂತನದೇ ಸ್ಥೂಲ ವಿರಾಟ್ ಶರೀರವೆಂದು ಭಾವಿಸಿ, ಇದನ್ನೇ ಬ್ರಹ್ಮವೆಂದು ತಿಳಿಯಬೇಕು. ಸಮಗ್ರ ವಿಶ್ವವು ಇದೇ ನಿರ್ಗುಣ-ನಿರಾಕಾರ ಪರಮಾತ್ಮನ ಸಗುಣ-ಸಾಕಾರ ವಿಗ್ರಹವಾಗಿದೆ ಎಂದು ಧಾರಣೆ ಮಾಡಬೇಕು. ಹೀಗೆ ಭಾವಿಸಿ ಸರ್ವತ್ರ ಬ್ರಹ್ಮವನ್ನೇ ನೋಡಬೇಕು. ॥ ೨೩ ॥ ವಿಶೇಷ ರೂಪದಿಂದ ಕಂಡುಬರುವ ಹಿಂದೆ ಇದ್ದ, ಈಗ ಇರುವ, ಮುಂದೆ ಇರಬಹುದಾದ ಈ ವಿಶ್ವವು ಅತ್ಯಂತ ದೊಡ್ಡದಾದ ಪರಮಾತ್ಮನ ಸ್ಥೂಲದೇಹವಾಗಿದೆ ಎಂದು ಭಾವಿಸಬೇಕು. ಎಲ್ಲ ಕಾಲಗಳಲ್ಲಿ ಇರುವ ಇದೊಂದು ಪರಮಾತ್ಮನ ಸ್ಥೂಲ ರೂಪವಾಗಿದೆ. ಆ ನಿರ್ಗುಣ-ನಿರಾಕಾರ ಪರಬ್ರಹ್ಮ ಪರಮಾತ್ಮನು ತನ್ನ ಸಂಕಲ್ಪದಿಂದಲೇ ತನ್ನಲ್ಲೇ ಸೃಷ್ಟಿಯನ್ನು ನಿರ್ಮಿಸಿದನು ಮತ್ತು ಅವನೇ ಈ ರೂಪವಾಗಿ ಅನೇಕ ರೂಪಗಳಲ್ಲಿ ಪ್ರಕಾಶಿತನಾಗುತ್ತಿದ್ದಾನೆ ಎಂದು ಭಾವಿಸಬೇಕು. ಹೀಗೆ ಭಾವಿಸಿ ಸರ್ವತ್ರ ಬ್ರಹ್ಮವೊಂದನ್ನೇ ನೋಡಬೇಕು. ॥ ೨೪ ॥ ಜಲ, ಅಗ್ನಿ, ವಾಯು, ಆಕಾಶ, ಅಹಂಕಾರ, ಮಹತ್ತತ್ತ್ವ ಮತ್ತು ಪ್ರಕೃತಿ ಹೀಗೆ ಏಳು ಆವರಣಗಳಿಂದ ಸುತ್ತುವರಿಯಲ್ಪಟ್ಟ ಈ ಬ್ರಹ್ಮಾಂಡವೆಂಬ ಶರೀರದಲ್ಲಿ ಇರುವ ವಿರಾಟ್‌ಪುರುಷನನ್ನು ವೈರಾಜನೆಂಬ ಹೆಸರಿನಿಂದ ಹೇಳಲಾಗಿದೆ. ('**ವಿವಿಧಂ ರಾಜತೇ ಶೋಭತೇ ಇತಿ ವಿರಾಟ್**' ಅರ್ಥಾತ್ ಆ ಪರಮಾತ್ಮನೇ ಅನೇಕ ರೂಪಗಳಲ್ಲಿ ವಿಲಸಿತನಾಗಿದ್ದಾನೆ.) ಈ ಭಾವನೆಯಿಂದ ಈ ವಿಶ್ವವನ್ನು ಭಗವಂತನದೇ ಸ್ಥೂಲ ವಿರಾಟ್‌ರೂಪವೆಂದು ತಿಳಿದು ಸರ್ವತ್ರ ಭಗವಂತನನ್ನೇ ಈ ಪ್ರಕಾರದಿಂದ ಧಾರಣೆ ಮಾಡಬೇಕು. ॥ ೨೫ ॥ ತತ್ತ್ವಜ್ಞರಾದವರು ಅವನನ್ನು ಹೀಗೆ ವರ್ಣಿಸುತ್ತಾರೆ – ಪಾತಾಳವು ಆ ವಿರಾಟ್‌ಪುರುಷನ ಪಾದಮೂಲವು. ಆತನ ಹಿಮ್ಮಡಿ ಮತ್ತು ತುದಿಗಾಲುಗಳು ರಸಾತಲವು. ಆತನ ಎರಡೂ ಹರಡುಗಳು ಮಹಾತಲಲೋಕವು. ತಲಾತಲವು ಆ ವಿರಾಟ್‌ಪುರುಷನ ಮೊಣಕಾಲುಗಳು ॥ ೨೬ ॥ ಆ ವಿಶ್ವಮೂರ್ತಿಯ ಎರಡು ಮಂಡಿಗಳೇ ಸುತಲಲೋಕವು. ವಿತಲ ಮತ್ತು ಅತಲಲೋಕಗಳು ಆತನ ಎರಡು ತೊಡೆಗಳು. ಭೂತಲವು ಸೊಂಟದ ಮುಂಭಾಗವಾಗಿದೆ. ಮಹಾರಾಜಾ! ಆತನ ಹೊಕ್ಕುಳೇ ಭುವರ್ಲೋಕ (ಅಂತರಿಕ್ಷ). ॥ ೨೭ ॥ ಆ

ಉರಃಸ್ಥಲಂ ಜ್ಯೋತಿರನೀಕಮಸ್ಯ
ಗ್ರೀವಾ ಮಹರ್ವದನಂ ವೈ ಜನೋಽಸ್ಯ ।
ತಪೋ ವರಾಟೀಂ ವಿದುರಾದಿಪುಂಸಃ
ಸತ್ಯಂ ತು ಶೀರ್ಷಾಣಿ ಸಹಸ್ರಶೀರ್ಷ್ಣಃ ॥ ೨೮ ॥

ಇಂದ್ರಾದಯೋ ಬಾಹವ ಆಹುರುಸ್ರಾಃ
ಕರ್ಣೌ ದಿಶಃ ಶ್ರೋತ್ರಮಮುಷ್ಯ ಶಬ್ದಃ ।
ನಾಸತ್ಯದಸ್ರೌ ಪರಮಸ್ಯ ನಾಸೇ
ಘ್ರಾಣೋಽಸ್ಯ ಗಂಧೋ ಮುಖಮಗ್ನಿರಿದ್ಧಃ ॥ ೨೯ ॥

ದ್ಯೌರಕ್ಷಿಣೀ ಚಕ್ಷುರಭೂತ್ಪತಂಗಃ
ಪಕ್ಷ್ಮಾಣಿ ವಿಷ್ಣೋರಹನೀ ಉಭೇ ಚ ।
ತದ್ಭ್ರೂವಿಜೃಂಭಃ ಪರಮೇಷ್ಠಿಧಿಷ್ಣ್ಯ-
ಮಾಪೋಽಸ್ಯ ತಾಲೂ ರಸ ಏವ ಜಿಹ್ವಾ ॥ ೩೦ ॥

ಛಂದಾಂಸ್ಯನಂತಸ್ಯ ಶಿರೋ ಗೃಣಂತಿ
ದಂಷ್ಟ್ರಾ ಯಮಃ ಸ್ನೇಹಕಲಾ ದ್ವಿಜಾನಿ ।
ಹಾಸೋ ಜನೋನ್ಮಾದಕರೀ ಚ ಮಾಯಾ
ದುರಂತಸರ್ಗೋ ಯದಪಾಂಗಮೋಕ್ಷಃ ॥ ೩೧ ॥

ವ್ರೀಡೋತ್ತರೋಷ್ಠೋಽಧರ ಏವ ಲೋಭೋ
ಧರ್ಮಃ ಸ್ತನೋಽಧರ್ಮಪಥೋಽಸ್ಯ ಪೃಷ್ಠಮ್ ।
ಕಸ್ತಸ್ಯ ಮೇಢ್ರಂ ವೃಷಣೌ ಚ ಮಿತ್ರೌ
ಕುಕ್ಷಿಃ ಸಮುದ್ರಾ ಗಿರಯೋಽಸ್ಥಿಸಂಘಾಃ ॥ ೩೨ ॥

ನದ್ಯೋಽಸ್ಯ ನಾಡ್ಯೋಽಥ ತನೂರುಹಾಣಿ
ಮಹೀರುಹಾ ವಿಶ್ವತನೋರ್ನೃಪೇಂದ್ರ ।
ಅನಂತ ವೀರ್ಯಃ ಶ್ವಸಿತಂ ಮಾತರಿಶ್ವಾ
ಗತಿರ್ವಯಃ ಕರ್ಮ ಗುಣಪ್ರವಾಹಃ ॥ ೩೩ ॥

ಈಶಸ್ಯ ಕೇಶಾನ್ವಿದುರಂಬುವಾಹಾನ್
ವಾಸಸ್ತು ಸಂಧ್ಯಾಂ ಕುರುವರ್ಯ ಭೂಮ್ನಃ ।
ಅವ್ಯಕ್ತ ಮಾಹುರ್ಹೃದಯಂ ಮನಶ್ಚ
ಸ ಚಂದ್ರಮಾಃ ಸರ್ವವಿಕಾರಕೋಶಃ ॥ ೩೪ ॥

ವಿಜ್ಞಾನಶಕ್ತಿಂ ಮಹಿಮಾಮನಂತಿ
ಸರ್ವಾತ್ಮನೋಽಂತಃಕರಣಂ ಗಿರಿತ್ರಮ್ ।
ಅಶ್ವಾಶ್ವತರ್ಯುಷ್ಟ್ರ ಗಜಾ ನಖಾನಿ
ಸರ್ವೇ ಮೃಗಾಃ ಪಶವಃ ಶ್ರೋಣಿದೇಶೇ ॥ ೩೫ ॥

ವಯಾಂಸಿ ತದ್ವ್ಯಾಕರಣಂ ವಿಚಿತ್ರಂ
ಮನುರ್ಮನೀಷಾ ಮನುಜೋ ನಿವಾಸಃ ।
ಗಂಧರ್ವವಿದ್ಯಾಧರಚಾರಣಾಪ್ಸರಃ-
ಸ್ವರಸ್ಮೃತೀರಸುರಾನೀಕವೀರ್ಯಃ ॥ ೩೬ ॥

ಪುರಾತನನಾದ ಆ ಪರಮಾತ್ಮನ ಎದೆಯನ್ನು ಸ್ವರ್ಗಲೋಕವೆಂದೂ, ಕತ್ತನ್ನು ಮಹರ್ಲೋಕವೆಂದೂ, ಮುಖವನ್ನು ಜನೋಲೋಕವೆಂದೂ, ಹಣೆಯನ್ನು ತಪೋಲೋಕವೆಂದೂ ಹೇಳುತ್ತಾರೆ. ಆ ಸಾವಿರ ತಲೆಗಳುಳ್ಳ ಪ್ರಭುವಿನ ಶಿರಸ್ಸುಗಳ ಸಮೂಹವೇ ಸತ್ಯಲೋಕವು. ॥ ೨೮ ॥ ಇಂದ್ರಾದಿ ದೇವತೆಗಳು ಆತನ ಭುಜಗಳು, ಆತನಿಗೆ ದಿಕ್ಕುಗಳೇ ಕಿವಿಗಳು. ಶಬ್ದವೇ ಶ್ರವಣೇಂದ್ರಿಯವಾಗಿದೆ. ಅಶ್ವಿನೀದೇವತೆಗಳೇ ಪರಮಪುರುಷನ ಮೂಗಿನಹೊಳ್ಳೆಗಳು. ಗಂಧವು ಆತನ ಘ್ರಾಣೇಂದ್ರಿಯವು. ಉರಿಯುತ್ತಿರುವ ಅಗ್ನಿಯೇ ಆತನ ಮುಖ. ॥ ೨೯ ॥ ದ್ಯುಲೋಕವು ಆ ಮಹಾವಿಷ್ಣುವಿನ ನೇತ್ರಗಳು. ಅವುಗಳಲ್ಲಿ ನೋಡುವ ಶಕ್ತಿಯೇ ಸೂರ್ಯನು. ಎರಡು ರೆಪ್ಪೆಗಳೇ ಹಗಲು-ರಾತ್ರಿಗಳು. ಆತನ ಹುಬ್ಬುಗಳ ವಿಲಾಸವೇ ಬ್ರಹ್ಮಲೋಕವು. ನೀರು ಆತನ ದವಡೆಗಳು, ರಸವೇ ಆತನ ನಾಲಿಗೆ ಎಂದು ತಿಳಿಯಬೇಕು. ॥ ೩೦ ॥ ವೇದಗಳನ್ನು ಆ ಅನಂತನ ಬ್ರಹ್ಮರಂಧ್ರಸ್ಥಾನವೆಂದು ಹೇಳುತ್ತಾರೆ. ಆತನ ಕೋರೆದಾಡೆಯು ಯಮರಾಜನು. ಎಲ್ಲ ಬಗೆಯ ಸ್ನೇಹರೂಪವಾದ ಕಲೆಗಳು ಅರ್ಥಾತ್ ಪ್ರೇಮ ಮತ್ತು ಮುಕ್ತಿಯ ವಿತರಣಕೇಂದ್ರವೇ ಆತನ ದಂತಗಳು ಮತ್ತು ಜಗತ್ತನ್ನು ಮೋಹಗೊಳಿಸುವ ಮಾಯೆಯು ಆತನ ಮುಗುಳ್ನಗೆಯು. ಈ ಅನಂತವಾದ ಸೃಷ್ಟಿಯು ಆತನ ಕಡೆಗಣ್ಣನೋಟವು. ॥ ೩೧ ॥ ಲಜ್ಜೆಯು ಆತನ ಮೇಲ್ತುಟಿ, ಆತನ ಕೆಳತುಟಿಯೇ ಲೋಭವು. ಧರ್ಮವು ಸ್ತನಗಳು, ಅಧರ್ಮವು ಬೆನ್ನು, ಪ್ರಜಾಪತಿಯೇ ಆತನ ಜನನೇಂದ್ರಿಯವು. ಮಿತ್ರಾವರುಣರೇ ವೃಷಣಗಳು. ಸಮುದ್ರಗಳು ಆತನ ಹೊಟ್ಟೆ, ಪರ್ವತಗಳು ಮೂಳೆಗಳು. ॥ ೩೨ ॥ ರಾಜೇಂದ್ರನೇ! ವಿಶ್ವಮೂರ್ತಿಯಾದ ಆ ವಿರಾಟ್ಪುರುಷನ ನಾಡಿಗಳೇ ನದಿಗಳು. ಮೈಗೂದಲುಗಳೇ ವೃಕ್ಷಗಳು. ಅನಂತಬಲಸಂಪನ್ನನಾದ ವಾಯುವೇ ಆತನ ಉಸಿರು. ಕಾಲವು ಆತನ ನಡಿಗೆ. ಗುಣಗಳ ಪರಿಪಾಕವೇ ಆತನ ಕರ್ಮವು. ॥ ೩೩ ॥ ಪರೀಕ್ಷಿತನೇ! ಮೋಡಗಳನ್ನು ಆತನ ಕೇಶಗಳೆಂದು ಹೇಳುತ್ತಾರೆ. ಸಂಧ್ಯೆಯು ಆ ಅನಂತನ ವಸ್ತ್ರವು. ಅವ್ಯಕ್ತ(ಮೂಲಪ್ರಕೃತಿ)ವನ್ನು ಆತನ ಹೃದಯವೆಂದು ಹೇಳುತ್ತಾರೆ. ಎಲ್ಲ ವಿಕಾರಗಳ ಕೋಶವಾದ ಮನಸ್ಸೇ ಚಂದ್ರನು. ॥ ೩೪ ॥ ಮಹತ್ತತ್ತ್ವವನ್ನು ಆ ಸರ್ವಾತ್ಮಕನಾದ ಸ್ವಾಮಿಯ ಚಿತ್ತವೆನ್ನುತ್ತಾರೆ. ರುದ್ರದೇವರನ್ನು ಅಹಂಕಾರವೆನ್ನುತ್ತಾರೆ. ಕುದುರೆ, ಹೇಸರಗತ್ತೆ, ಒಂಟೆ, ಆನೆಗಳು ಆತನ ಉಗುರುಗಳು, ಅರಣ್ಯವಾಸಿಗಳಾದ ಎಲ್ಲ ಮೃಗಗಳೂ ಆತನ ನಡುವಿನಲ್ಲಿವೆ. ॥ ೩೫ ॥ ಬಗೆ-ಬಗೆಯ ಪಕ್ಷಿಗಳು ಆತನ ಅದ್ಭುತವಾದ ರಚನಾಕೌಶಲ್ಯ, ಸ್ವಾಯಂಭುವ ಮನುವೇ ಆತನ ಬುದ್ಧಿಯು. ಮನುವಿನ ಸಂತಾನವಾದ ಮನುಷ್ಯರೇ ಆತನ ವಾಸಸ್ಥಾನ. ಗಂಧರ್ವರು, ವಿದ್ಯಾಧರರು, ಚಾರಣರು, ಅಪ್ಸರೆಯರು ಇವರು ಆತನ ಷಡ್ಜ ಮುಂತಾದ ಸಪ್ತಸ್ವರಗಳ ಸ್ಮೃತಿಗಳು. ದೈತ್ಯರ ಸೇನೆಯೇ ಆತನ ವೀರ್ಯವು. ॥ ೩೬ ॥ ಆತನಿಗೆ ಬ್ರಾಹ್ಮಣರು ಮುಖ, ಕ್ಷತ್ರಿಯರು ಭುಜಗಳು, ವೈಶ್ಯರು ತೊಡೆಗಳು, ಶೂದ್ರರು ಕಾಲುಗಳು. ಇಂದ್ರ, ವರುಣ, ಕುಬೇರ ಮುಂತಾದ ದೇವತೆಗಳನ್ನು ಉದ್ದೇಶಿಸಿ ಯಜ್ಞಮಾಡುತ್ತಾರೆ. ಆ ದೇವತಾ ರೂಪನೂ ಆತನೇ. ದೇವತೆಗಳಿಂದ ಸಂಪನ್ನವಾಗುವ ಯಜ್ಞ

ಬ್ರಹ್ಮಾನನಂ ಕ್ಷತ್ರಭುಜೋ ಮಹಾತ್ಮಾ
ವಿಡೂರುರಂಘ್ರಿಶ್ರಿತಕೃಷ್ಣವರ್ಣಃ ।
ನಾನಾಭಿಧಾಭೀಜ್ಯಗಣೋಪಪನ್ನೋ
ದ್ರವ್ಯಾತ್ಮಕಃ ಕರ್ಮ ವಿತಾನಯೋಗಃ ॥ ೩೭ ॥

ಕ್ರಿಯೆಯೂ ಅವನೇ. ಯಜ್ಞಗಳಿಂದ ದೊರೆಯುವ ವಸ್ತುವೂ ಪರಮಾತ್ಮನೇ. (ಬ್ರಹ್ಮಾರ್ಪಣಂ ಬ್ರಹ್ಮಹವಿರ್ಬ್ರಹ್ಮಾಗ್ನೌ ಬ್ರಹ್ಮಣಾ ಹುತಮ್ । ಬ್ರಹ್ಮೈವ ತೇನ ಗಂತವ್ಯಂ ಬ್ರಹ್ಮಕರ್ಮಸಮಾಧಿನಾ ॥) (ಭಗವದ್ಗೀತೆ ೪/೨೪). ॥ ೩೭॥ ಪ್ರಿಯ ಪರೀಕ್ಷಿತನೇ! ಭಗವಂತನ ಈ ವಿರಾಟ್ಸ್ವರೂಪವನ್ನು ನಾನು ನಿನಗೆ ವರ್ಣಿಸಿದೆ. ಈ ವಿರಾಟ್ ಬ್ರಹ್ಮಾಂಡವು ಆ ಪರಮಾತ್ಮನದೇ ಸ್ಥೂಲರೂಪವಾಗಿದೆ. ಇದರಲ್ಲಿ ಬೇರೆ-ಬೇರೆಯಾಗಿ ಭಗವಂತನ ಅವಯವಗಳನ್ನು ಕಲ್ಪಿಸಿ, ಭಗವಂತನ ಸಗುಣರೂಪವನ್ನು ನೋಡಬೇಕು. ಅವನ ವಿಶ್ವ ನಿರ್ಮಾಣದ ಕಲಾಕೌಶಲ್ಯವನ್ನು ತಿಳಿಯುತ್ತಾ ಭಗವಂತನ ಆಶ್ಚರ್ಯಮಯ ಲೀಲೆಗಳನ್ನು ದರ್ಶಿಸುತ್ತಾ ಚಿಂತಿಸಬೇಕು. ಹೀಗೆ ಚಿಂತಿಸುತ್ತಾ-ಚಿಂತಿಸುತ್ತಾ ಬುದ್ಧಿಯ ಮೂಲಕ ಮನಸ್ಸಿನಲ್ಲಿ – ಪರಮಾತ್ಮನಲ್ಲದೆ ಬೇರೆ ಏನೂ ಇಲ್ಲ ಎಂಬ ನಿಶ್ಚಯವನ್ನು ಧರಿಸಿಕೊಳ್ಳಬೇಕು. ಅವನೇ ಲೀಲೆಯಿಂದ ಇಷ್ಟು ರೂಪಗಳನ್ನು ತನ್ನಲ್ಲಿ ಕಲ್ಪಿಸಿರುವನು. ॥ ೩೮ ॥

ಇಯಾನಸಾವೀಶ್ವರವಿಗ್ರಹಸ್ಯ
ಯಃ ಸನ್ನಿವೇಶಃ ಕಥಿತೋ ಮಯಾ ತೇ ।
ಸಂಧಾರ್ಯತೇಽಸ್ಮಿನ್ವಪುಷಿ ಸ್ಥವಿಷ್ಠೇ
ಮನಃ ಸ್ವಬುದ್ಧ್ಯಾ, ನ ಯತೋಽಸ್ತಿ ಕಿಂಚಿತ್ ॥ ೩೮ ॥

■ ಪರಮಾತ್ಮನೇ ಸಮಸ್ತ ಪ್ರಾಣಿಗಳ ಬುದ್ಧಿಯೇ ಮುಂತಾದ ವೃತ್ತಿಗಳಿಂದ ಎಲ್ಲ ಪದಾರ್ಥಗಳನ್ನು ಹಾಗೂ ವಿಷಯಗಳನ್ನು ಅನುಭವಿಸುತ್ತಾನೆ. ಅವನೇ ಎಲ್ಲರ ಆತ್ಮನಾಗಿದ್ದಾನೆ. ಅವನು ಏಕನೂ, ಅದ್ವಿತೀಯನೂ ಆಗಿರುವನು. ಸ್ವಪ್ನವನ್ನು ಕಾಣುವವನು ತನ್ನೊಳಗೆಯೇ ಸ್ವಪ್ನಜಗತ್ತಿನಲ್ಲಿ ತಾನೂ ಸೇರಿ ಎಲ್ಲರೀತಿಯ ಪದಾರ್ಥಗಳನ್ನು ಕಲ್ಪಿಸುತ್ತಾನೆ. ಹಾಗೆಯೇ ಪರಮಾತ್ಮನೂ ಈ ಜಗತ್ತನ್ನು ತನ್ನಲ್ಲಿ ಕಲ್ಪಿಸಿಕೊಳ್ಳುವನು. ಪರಮಾತ್ಮನು ವಾಸ್ತವವಾಗಿ ಸತ್ಯಸ್ವರೂಪನಾಗಿದ್ದಾನೆ. ಆನಂದದ ಅಪಾರ ಸಮುದ್ರನಾಗಿದ್ದಾನೆ. ಅವನನ್ನೇ ಭಜಿಸಬೇಕು. ಸಾಂಸಾರಿಕ ವಿಷಯಗಳಲ್ಲಿ ರಮಿಸ ಬಾರದು. ಏಕೆಂದರೆ, ಅದರಲ್ಲಿನ ಆಸಕ್ತಿಯೇ ಪತನದ ಕಾರಣವಾಗಿದೆ. ಭಗವಂತನ ಭಕ್ತಿ ಮಾಡುವುದರಲ್ಲೇ ಜೀವಿಯ ಕಲ್ಯಾಣವಿದೆ. ॥ ೩೯ ॥

ಸ ಸರ್ವಧೀವೃತ್ತ್ಯನುಭೂತಸರ್ವ
ಆತ್ಮಾ ಯಥಾ ಸ್ವಪ್ನಜನೇಕ್ಷಿತೈಕಃ ।
ತಂ ಸತ್ಯಮಾನಂದನಿಧಿಂ ಭಜೇತ
ನಾನ್ಯತ್ರ ಸಜ್ಜೇದ್ಯತ ಆತ್ಮಪಾತಃ ॥ ೩೯ ॥

ಮೊದಲನೆಯ ಅಧ್ಯಾಯವು ಮುಗಿಯಿತು. ॥ ೧ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದ್ವಿತೀಯಸ್ಕಂಧೇ ಮಹಾಪುರುಷಸಂಸ್ಥಾನುವರ್ಣನಂ ನಾಮ ಪ್ರಥಮೋಽಧ್ಯಾಯಃ ॥ ೧ ॥

ಎರಡನೆಯ ಅಧ್ಯಾಯ

ಶ್ರೀಭಗವಂತನ ಸ್ಥೂಲ ಮತ್ತು ಸೂಕ್ಷ್ಮರೂಪಗಳ ಧಾರಣಾಯೋಗ ಹಾಗೂ ಕ್ರಮಮುಕ್ತಿ ಮತ್ತು ಸದ್ಯೋಮುಕ್ತಿಯ ವರ್ಣನೆ

ಶ್ರೀಶುಕ ಉವಾಚ

ಏವಂ ಪುರಾ ಧಾರಣಯಾತ್ಮಯೋನಿ-
ರ್ನಷ್ಟಾಂ ಸ್ಮೃತಿಂ ಪ್ರತ್ಯವರುಧ್ಯ ತುಷ್ಟಾತ್ ।
ತಥಾ ಸಸರ್ಜೇದಮಮೋಘದೃಷ್ಟಿ-
ರ್ಯಥಾಪ್ಯಯಾತ್ಪ್ರಾಗ್ವ್ಯವಸಾಯಬುದ್ಧಿಃ ॥ ೧ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – "ಬ್ರಹ್ಮದೇವರು ಸೃಷ್ಟಿಯ ಪ್ರಾರಂಭದಲ್ಲಿ ಇದೇ ಧಾರಣಾಯೋಗದ ಮೂಲಕವೇ ಶ್ರೀಭಗವಂತನನ್ನು ಪ್ರಸನ್ನಗೊಳಿಸಿ ಅವನ ಅನುಗ್ರಹದಿಂದ – ಹಿಂದೆ ಪ್ರಳಯಕಾಲದಲ್ಲಿ ಲುಪ್ತವಾಗಿದ್ದ ಸೃಷ್ಟಿವಿಷಯಕ ಜ್ಞಾನವನ್ನು ಪಡೆದುಕೊಂಡರು. ಅದರಿಂದಲೇ ಅಮೋಘವೂ, ನಿಶ್ಚಯಾತ್ಮಕವೂ ಆದ ಬುದ್ಧಿಯನ್ನು ಪಡೆದು ಈ ಜಗತ್ತನ್ನು ಮೊದಲಿದ್ದಂತೆ ಸೃಷ್ಟಿ ಮಾಡಿದರು. ॥ ೧ ॥ ಬಗೆ-ಬಗೆಯ ಫಲಗಳ ಪ್ರಲೋಭನೆಗಳ

ಶಾಬ್ದಸ್ಯ ಹಿ ಬ್ರಹ್ಮಣ ಏಷ ಪಂಥಾ
ಯನ್ನಾಮಭಿರ್ಧ್ಯಾಯತಿ ಧೀರಪಾರ್ಥೈಃ ।
ಪರಿಭ್ರಮಂಸ್ತತ್ರ ನ ವಿಂದತೇಽರ್ಥಾನ್
ಮಾಯಾಮಯೇ ವಾಸನಯಾ ಶಯಾನಃ ॥ ೨ ॥

ಅತಃ ಕವಿರ್ನಾಮಸು ಯಾವದರ್ಥಃ
ಸ್ಯಾದಪ್ರಮತ್ತೋ ವ್ಯವಸಾಯಬುದ್ಧಿಃ ।
ಸಿದ್ಧೇಽನ್ಯಥಾರ್ಥೇ ನ ಯತೇತ ತತ್ರ
ಪರಿಶ್ರಮಂ ತತ್ರ ಸಮೀಕ್ಷಮಾಣಃ ॥ ೩ ॥

ಸತ್ಯಾಂ ಕ್ಷಿತೌ ಕಿಂ ಕಶಿಪೋಃ ಪ್ರಯಾಸೈ-
ರ್ಬಾಹೌ ಸ್ವಸಿದ್ಧೇ ಹ್ಯುಪಬರ್ಹಣೈಃ ಕಿಮ್ ।
ಸತ್ಯಂಜಲೌ ಕಿಂ ಪುರುಧಾನ್ನಪಾತ್ರ್ಯಾ
ದಿಗ್ವಲ್ಕಲಾದೌ ಸತಿ ಕಿಂ ದುಕೂಲೈಃ ॥ ೪ ॥

ಚೀರಾಣಿ ಕಿಂ ಪಥಿ ನ ಸಂತಿ ದಿಶಂತಿ ಭಿಕ್ಷಾಂ
ನೈವಾಂಘ್ರಿಪಾಃ ಪರಭೃತಃ ಸರಿತೋಽಪ್ಯಶುಷ್ಯನ್ ।
ರುದ್ಧಾ ಗುಹಾಃ ಕಿಮಜಿತೋಽವತಿ ನೋಪಸನ್ನಾನ್
ಕಸ್ಮಾದ್ಭಜಂತಿ ಕವಯೋ ಧನದುರ್ಮದಾಂಧಾನ್ ॥ ೫ ॥

ಏವಂ ಸ್ವಚಿತ್ತೇ ಸ್ವತ ಏವ ಸಿದ್ಧ
ಆತ್ಮಾ ಪ್ರಿಯೋಽರ್ಥೋ ಭಗವಾನನಂತಃ ।
ತಂ ನಿರ್ವೃತೋ ನಿಯತಾರ್ಥೋ ಭಜೇತ
ಸಂಸಾರಹೇತೂಪರಮಶ್ಚ ಯತ್ರ ॥ ೬ ॥

ಕಸ್ತಾಂ ತ್ವನಾದೃತ್ಯ ಪರಾನುಚಿಂತಾಮ್
ಋತೇ ಪಶೂನಸತೀಂ ನಾಮ ಯುಂಜ್ಯಾತ್ ।
ಪಶ್ಯಂಜನಂ ಪತಿತಂ ವೈತರಣ್ಯಾಂ
ಸ್ವಕರ್ಮಜಾನ್ಪರಿತಾಪಾಂಜುಷಾಣಮ್ ॥ ೭ ॥

ಒಳಗಾಗದೆ ವಿರಕ್ತನಾಗಿ ಶ್ರೀಭಗವಂತನಲ್ಲಿ ಧಾರಣಾಯೋಗವನ್ನು ಅವಲಂಬಿಸಬೇಕು. ವೇದಗಳು ಅತ್ಯಂತ ಆಕರ್ಷಕ ಶೈಲಿಯಲ್ಲಿ ಕರ್ಮಫಲಗಳನ್ನು ನಿರ್ದೇಶಿಸುತ್ತವೆ. ಸಾಮಾನ್ಯ ಜನರು ಅವುಗಳಿಂದ ಮರುಳಾಗುತ್ತಾರೆ. ಅವರ ಬುದ್ಧಿಯು ಸ್ವರ್ಗವೇ ಮುಂತಾದ ನಿರರ್ಥಕ ನಾಮಗಳಲ್ಲಿ ಸಿಲುಕಿ ಸುಖವಾಸನೆಯ ಕನಸು ಕಾಣುತ್ತಾ ಅಲೆದಾಡುತ್ತಿರುತ್ತಾರೆ. ಆದರೆ ಮಾಯಾಮಯ ಲೋಕಗಳಲ್ಲಿ ನಿಜವಾದ ಸುಖ ದೊರೆಯುವುದಿಲ್ಲ. ॥ ೨ ॥ ಆದ್ದರಿಂದ ವಿವೇಕಿಯು ಈ ಬಗೆ-ಬಗೆಯ ನಾಮಗಳುಳ್ಳ ಪದಾರ್ಥಗಳೊಡನೆ ಪ್ರಯೋಜನಕ್ಕೆ ಬೇಕಾದಷ್ಟೇ ವ್ಯವಹಾರ ಇಟ್ಟುಕೊಳ್ಳಬೇಕು. ಅವುಗಳು ನಿಸ್ಸಾರವೇ ಆಗಿವೆ ಎಂಬ ನಿಶ್ಚಯವನ್ನು ಬುದ್ಧಿಯಲ್ಲಿರಿಸಿಕೊಳ್ಳಬೇಕು. ಒಂದು ಕ್ಷಣವಾದರೂ ಎಚ್ಚರ ತಪ್ಪಬಾರದು. ಸಾಂಸಾರಿಕ ಪದಾರ್ಥಗಳು ಪ್ರಾರಬ್ಧವಶದಿಂದ ಪ್ರಯತ್ನವಿಲ್ಲದೆಯೇ ದೊರಕುವುದಾದರೆ, ಅವುಗಳನ್ನು ಗಳಿಸುವ ಪರಿಶ್ರಮವು ವ್ಯರ್ಥವೆಂದೇ ತಿಳಿದು ಅವುಗಳಿಗಾಗಿ ಪ್ರಯತ್ನಿಸಬಾರದು. ॥ ೩ ॥ ಭೂಮಿಯ ಮೇಲೆ ಮಲಗುವುದರಿಂದಲೇ ಸುಖನಿದ್ರೆ, ಆಯಾಸ ಪರಿಹಾರವಾಗುವುದಿದ್ದರೆ ಮಂಚಕ್ಕಾಗಿ ಏಕೆ ಪ್ರಯತ್ನಮಾಡಬೇಕು ? ದೇವರ ಅನುಗ್ರಹದಿಂದ ತಾನಾಗಿ ದೊರೆತ ತೋಳುಗಳು ಇರುವಾಗ ತಲೆದಿಂಬುಗಳು ಏಕೆ ಬೇಕು ? ಬೊಗಸೆಯಿಂದಲೇ ಆಹಾರವನ್ನು ಸ್ವೀಕರಿಸುವ ಕೆಲಸ ಸಾಗುವುದಾದರೆ ಅನೇಕ ಪಾತ್ರೆಗಳನ್ನು ಒಟ್ಟುಗೂಡಿಸುವುದೇಕೆ ? ನಾರುಮಡಿಯನ್ನೇ ಉಟ್ಟುಕೊಂಡು ಅಥವಾ ದಿಗಂಬರನಾಗಿಯೇ ಇದ್ದುಕೊಂಡು ಜೀವನ ನಿರ್ವಹಿಸುವುದು ಸಾಧ್ಯವಾಗುವಾಗ ಪಟ್ಟೆವಸ್ತ್ರಗಳು ಏಕೆ ಬೇಕು ? ॥ ೪ ॥ ಉಟ್ಟುಕೊಳ್ಳಲು ಮಾರ್ಗದಲ್ಲಿ ಚಿಂದಿಬಟ್ಟೆಗಳು ದೊರೆಯುವುದಿಲ್ಲವೇ ? ಹಸಿವಾದಾಗ ಪರೋಪಕಾರಕ್ಕಾಗಿಯೇ ಇರುವ ವೃಕ್ಷಗಳು ಹಣ್ಣು-ಹಂಪಲುಗಳ ಭಿಕ್ಷೆ ನೀಡುವುದಿಲ್ಲವೇ ? ಬಾಯಾರಿದವನಿಗೆ ನದಿಗಳು ಬತ್ತಿಹೋಗಿವೆಯೇ ? ವಾಸಕ್ಕೆ ಜಾಗ ಬೇಕಾದಾಗ ಗುಹೆಗಳ ಬಾಗಿಲುಗಳು ಮುಚ್ಚಿಹೋಗಿವೆಯೇ ? ಎಲ್ಲಕ್ಕೂ ಮಿಗಿಲಾಗಿ ಶ್ರೀಭಗವಂತನು ಶರಣುಬಂದವರನ್ನು ರಕ್ಷಿಸುವುದಿಲ್ಲವೇ ? ಹೀಗಿದ್ದರೂ ವಿವೇಕಿಗಳು ಅಹಂಕಾರದ ಅಮಲಿನಲ್ಲಿರುವ ಶ್ರೀಮಂತರನ್ನು ಏಕೆ ಸೇವಿಸಬೇಕು ? ॥ ೫ ॥ ಹೀಗೆ ವಿರಕ್ತನಾದ ಮೇಲೆ ನಮ್ಮ ಹೃದಯದಲ್ಲೇ ಸರ್ವದಾ ಸ್ವತಃ ಸಿದ್ಧನಾಗಿ ನಮ್ಮ ಆತ್ಮಸ್ವರೂಪನೇ ಆಗಿ, ಪರಮಪ್ರಿಯತಮನಾಗಿರುವ ಪರಮಸತ್ಯಸ್ವರೂಪನಾದ ಪರಮಾತ್ಮ ಅನಂತನು ಬೆಳಗುತ್ತಿದ್ದಾನೆ ಎಂದು ನಿಶ್ಚಯಿಸಿ ಪರಮಪ್ರೇಮದಿಂದಲೂ, ಆನಂದದಿಂದಲೂ ಆತನನ್ನೇ ಭಜಿಸಬೇಕು. ಏಕೆಂದರೆ, ಆತನ ಭಜನೆಯಿಂದಲೇ ಸಂಸಾರಕ್ಕೆ ಕಾರಣವಾದ ಅಜ್ಞಾನವು ತೊಲಗುವುದು. ॥ ೬ ॥ ಪಶುಗಳ ಮಾತೇನೋ ಬೇರೆ ಹಾಗಿದೆ. ಆದರೆ ಈ ಸಂಸಾರವೆಂಬ ವೈತರಣೀ ನದಿಯಲ್ಲಿ ಜನರು ಬಿದ್ದು ತಮ್ಮ ಕರ್ಮಗಳ ಫಲವಾದ ದುಃಖಗಳನ್ನು ಅನುಭವಿಸುತ್ತಿರುವುದನ್ನು ನೋಡಿಯೂ ಕೂಡ ಶ್ರೀಭಗವಂತನ ಮಂಗಳಮಯವಾದ ಧ್ಯಾನವನ್ನು ಮಾಡದೆ, ಅಸತ್ ವಿಷಯ ಭೋಗಗಳಲ್ಲೇ ತನ್ನ ಚಿತ್ತವನ್ನು ಅಲೆಯಲು ಬಿಡುವವನು ಮನುಷ್ಯನೇ ಅಲ್ಲ. ॥ ೭ ॥

ಕೇಚಿತ್ಸ್ವದೇಹಾಂತರ್ಹೃದಯಾವಕಾಶೇ
ಪ್ರಾದೇಶಮಾತ್ರಂ ಪುರುಷಂ ವಸಂತಮ್ ।
ಚತುರ್ಭುಜಂ ಕಂಜರಥಾಂಗ ಶಂಖ-
ಗದಾಧರಂ ಧಾರಣಯಾ ಸ್ಮರಂತಿ ॥ ೮ ॥

ಪ್ರಸನ್ನವಕ್ತ್ರಂ ನಲಿನಾಯತೇಕ್ಷಣಂ
ಕದಂಬಕಿಂಜಲ್ಕಪಿಶಂಗವಾಸಸಮ್ ।
ಲಸನ್ಮಹಾರತ್ನ ಹಿರಣ್ಮಯಾಂಗದಂ
ಸ್ಫುರನ್ಮಹಾರತ್ನ ಕಿರೀಟಕುಂಡಲಮ್ ॥ ೯ ॥

ಉನ್ನಿದ್ರಹೃತ್ಪಂಕಜಕರ್ಣಿಕಾಲಯೇ
ಯೋಗೇಶ್ವರಾಸ್ಥಾಪಿತಪಾದಪಲ್ಲವಮ್ ।
ಶ್ರೀಲಕ್ಷ್ಮಣಂ ಕೌಸ್ತುಭರತ್ನ ಕಂಧರ-
ಮಮ್ಲಾನಲಕ್ಷ್ಮ್ಯಾ ವನಮಾಲಯಾಽಽಚಿತಮ್ ॥ ೧೦ ॥

ವಿಭೂಷಿತಂ ಮೇಖಲಯಾಂಗುಲೀಯಕೈ-
ರ್ಮಹಾಧನೈರ್ನೂಪುರಕಂಕಣಾದಿಭಿಃ ।
ಸ್ನಿಗ್ಧಾಮಲಾಕುಂಚಿತನೀಲಕುಂತಲೈ-
ರ್ವಿರೋಚಮಾನಾನನಹಾಸಪೇಶಲಮ್ ॥ ೧೧ ॥

ಅದೀನಲೀಲಾಹಸಿತೇಕ್ಷಣೋಲ್ಲಸತ್
ಭ್ರೂಭಂಗಸಂಸೂಚಿತಭೂರ್ಯನುಗ್ರಹಮ್ ।
ಈಕ್ಷೇತ ಚಿಂತಾಮಯಮೇನಮೀಶ್ವರಂ
ಯಾವನ್ಮನೋ ಧಾರಣಯಾವತಿಷ್ಠತೇ ॥ ೧೨ ॥

ಏಕೈಕಶೋಽಂಗಾನಿ ಧಿಯಾನುಭಾವಯೇತ್
ಪಾದಾದಿ ಯಾವದ್ಧಸಿತಂ ಗದಾಭೃತಃ ।
ಜಿತಂ ಜಿತಂ ಸ್ಥಾನಮಪೋಹ್ಯ ಧಾರಯೇತ್
ಪರಂ ಪರಂ ಶುದ್ಧ್ಯತಿ ಧೀರ್ಯಥಾ ಯಥಾ ॥ ೧೩ ॥

ರಾಜೇಂದ್ರಾ! ಸ್ಥೂಲವಾದ ಭಗವದ್ರೂಪದಲ್ಲಿ ಮಾಡುವ ಯೋಗಧಾರಣೆಯನ್ನು ಹಿಂದೆ ಹೇಳಿದೆನು. ಕೆಲವು ಸಾಧಕರು ತಮ್ಮ ಶರೀರದೊಳಗೆ ಹೃದಯಾಕಾಶದಲ್ಲಿ ಬೆಳಗುತ್ತಿರುವ ಭಗವಂತನ ಗೇಣುದ್ದದ ರೂಪದಲ್ಲಿ ಯೋಗಧಾರಣೆಯನ್ನು ಮಾಡುತ್ತಾರೆ. ಅವರು ಹೀಗೆ ಧ್ಯಾನಿಸುತ್ತಾರೆ – ನಮ್ಮ ಹೃದಯ ಪ್ರದೇಶದಲ್ಲಿ ಇರುವ ಆ ಭಗವಂತನು ನಾಲ್ಕುಭುಜಗಳುಳ್ಳವನಾಗಿದ್ದು ಅವುಗಳಲ್ಲಿ ಪಾಂಚಜನ್ಯ ಶಂಖ, ಸುದರ್ಶನ ಚಕ್ರ, ಕೌಮೋದಕೀ ಗದೆ, ಲೀಲಾಪದ್ಮಗಳನ್ನು ಧರಿಸಿದ್ದಾನೆ. ॥ ೮ ॥ ಆತನ ಪ್ರಸನ್ನವಾದ ಮುಖಕಮಲ, ಕಮಲದಂತೆ ವಿಶಾಲವೂ, ಕೋಮಲವೂ ಆದ ಕಣ್ಣುಗಳು, ಕದಂಬ ಪುಷ್ಪದ ಕೇಸರದಂತೆ ಕಂಗೊಳಿಸುವ ಪೀತಾಂಬರದ ಉಡಿಗೆ, ತೋಳುಗಳಲ್ಲಿ ಶ್ರೇಷ್ಠವಾದ ರತ್ನಗಳಿಂದ ಖಚಿತ ಭುಜಕೀರ್ತಿಗಳು ಕಂಗೊಳಿಸುತ್ತಿವೆ. ತಲೆ ಮತ್ತು ಕಿವಿಗಳಲ್ಲಿ ಅಮೂಲ್ಯರತ್ನಗಳಿಂದ ಥಳ-ಥಳಿಸುತ್ತಿರುವ ಕಿರೀಟ-ಕುಂಡಲಗಳು ಬೆಳಗುತ್ತಿವೆ. ॥ ೯ ॥ ಯೋಗೇಶ್ವರರು ತಮ್ಮ ಅರಳಿದ ಹೃದಯ ಕಮಲದ ಕರ್ಣಿಕೆಯಲ್ಲಿ ಆತನ ಚರಣಗಳನ್ನು ಸ್ಥಾಪಿಸಿಕೊಂಡಿರುತ್ತಾರೆ. ಅವನ ಹೃದಯದ ಮೇಲೆ ಶ್ರೀವತ್ಸಚಿಹ್ನೆ ಕಂಗೊಳಿಸುತ್ತಿದೆ. ಕುತ್ತಿಗೆಯಲ್ಲಿ ಕೌಸ್ತುಭಮಣಿಯ ಶೋಭೆ, ವಕ್ಷಸ್ಥಳದಲ್ಲಿ ಎಂದಿಗೂ ಬಾಡದಿರುವ ವನಮಾಲೆಯೂ ಅಲಂಕೃತವಾಗಿದೆ. ॥ ೧೦ ॥ ನಡುವಿನಲ್ಲಿ ಕಟಿಸೂತ್ರ, ಕೈ ಬೆರಳುಗಳಲ್ಲಿ ಉಜ್ವಲವಾದ ಉಂಗುರಗಳು, ಕಾಲುಗಳಲ್ಲಿ ಕಾಲಂದುಗೆ, ಕೈಯಲ್ಲಿ ಕಂಕಣ ಮುಂತಾದ ಆಭರಣಗಳನ್ನು ಧರಿಸಿರುವನು. ನಯವಾದ, ನಿರ್ಮಲವಾದ, ನೀಲವರ್ಣದ ಗುಂಗುರು ಕೂದಲುಗಳ ಕಮನೀಯವಾದ ಕೇಶರಾಶಿ. ಅವನ ಮುಖಕಮಲವು ಮಂದ-ಮಂದ ಮುಗುಳ್ನಗೆಯಿಂದ ಅರಳಿನಿಂತಿದೆ. ॥ ೧೧ ॥ ಸುಂದರವಾದ ಲೀಲೆಯ ನಗೆನೋಟದಿಂದ ಬೆಳಗುತ್ತಾ ಭಕ್ತರಮೇಲೆ ಅನುಗ್ರಹದ ಮಳೆಯನ್ನು ಕರೆಯುತ್ತಿರುವ ಹುಬ್ಬುಗಳು. ಇಂತಹ ಸೌಂದರ್ಯ-ಲಾವಣ್ಯಪೂರ್ಣವಾದ ದಿವ್ಯ ಮಂಗಳವಿಗ್ರಹದಲ್ಲಿ ಮನಸ್ಸು ಧಾರಣಾಯೋಗದಿಂದ ಸ್ಥಿರವಾಗುವವರೆಗೂ ಪದೇ-ಪದೇ ಈ ಚಿಂತನಸ್ವರೂಪ ಭಗವಂತನನ್ನು ನೋಡುತ್ತಾ ಇರಲು ಪ್ರಯತ್ನಿಸಬೇಕು. ಮತ್ತೆ-ಮತ್ತೆ ಚಿಂತಿಸುತ್ತಾ ಇರುವಾಗ ಮನಸ್ಸಿನಲ್ಲಿ ಧಾರಣೆಯು ಸ್ಥಿರವಾಗುವುದು. ಬಳಿಕ ಭಗವಂತನ ಧ್ಯಾನವು ಭಗವತ್ಕೃಪೆಯಿಂದ ತಾನೇ-ತಾನಾಗಿ ನಡೆಯುತ್ತಾ ಇರುತ್ತದೆ. ॥ ೧೨ ॥ ಹೀಗೆ ನಿಶ್ಚಯಾತ್ಮಿಕಾ ಬುದ್ಧಿಯಿಂದ ಭಗವಂತನ ಚರಣಕಮಲಗಳಿಂದ ಹಿಡಿದು ಮುಗುಳ್ನಗೆಯಿಂದ ಕೂಡಿದ ಮುಖಕಮಲದವರೆವಿಗೂ ಒಂದೊಂದು ಅವಯವವನ್ನು ಬುದ್ಧಿಯಿಂದ ಧರಿಸಬೇಕು. ಬುದ್ಧಿಯು ಶುದ್ಧವಾದಂತೆಲ್ಲ ಚಿತ್ತವು ಅವನಲ್ಲಿ ಸ್ಥಿರವಾಗುತ್ತಾ ಹೋಗುತ್ತದೆ. ಒಂದೊಂದು ಅಂಗದಲ್ಲಿ ಧ್ಯಾನವು ಸ್ಥಿರವಾದ ನಂತರ ಅದನ್ನು ಬಿಟ್ಟು ಮತ್ತೊಂದು ಅಂಗವನ್ನು ಧ್ಯಾನಿಸತೊಡಗಬೇಕು. ಹೀಗೆ ಧ್ಯಾನ ಮಾಡುವುದರಿಂದ ಬುದ್ಧಿಯು ಶುದ್ಧವಾಗಿ, ಚಿತ್ತವು ಭಗವಂತನಲ್ಲಿ ಸ್ಥಿರವಾಗಿ ಹೋಗುತ್ತದೆ. ॥ ೧೩ ॥ ಈ ಪರಮಾತ್ಮನೇ ನಿರ್ಗುಣಬ್ರಹ್ಮನಾಗಿದ್ದಾನೆ ಹಾಗೂ ಅವನೇ ಲೀಲೆಯಿಂದ ಈ ಸಗುಣರೂಪವನ್ನು ಧರಿಸಿರುವನು. ಹೀಗೆ ಪರಾತ್ಪರನೂ, ಸಾಕ್ಷಿರೂಪನೂ ಆದ ಶ್ರೀಹರಿಯಲ್ಲಿ ಭಕ್ತಿಯೋಗಸಮಾಧಿ ಉಂಟಾಗುವ

ಯಾವನ್ನ ಜಾಯೇತ ಪರಾವರೇಽಸ್ಮಿನ್
ವಿಶ್ವೇಶ್ವರೇ ದ್ರಷ್ಟರಿ ಭಕ್ತಿಯೋಗಃ ।
ತಾವತ್ ಸ್ಥವೀಯಃ ಪುರುಷಸ್ಯ ರೂಪಂ
ಕ್ರಿಯಾವಸಾನೇ ಪ್ರಯತಃ ಸ್ಮರೇತ ॥ ೧೪ ॥

ಸ್ಥಿರಂ ಸುಖಂ ಚಾಸನಮಾಶ್ರಿತೋ ಯತಿ-
ರ್ಯದಾ ಜಿಹಾಸುರಿಮಮಂಗ ಲೋಕಮ್ ।
ಕಾಲೇ ಚ ದೇಶೇ ಚ ಮನೋ ನ ಸಜ್ಜಯೇತ್
ಪ್ರಾಣಾನ್ನಿಯಚ್ಛೇನ್ಮನಸಾ ಜಿತಾಸುಃ ॥ ೧೫ ॥

ಮನಃ ಸ್ವಬುದ್ಧ್ಯಾಮಲಯಾ ನಿಯಮ್ಯ
ಕ್ಷೇತ್ರಜ್ಞ ಏತಾಂ ನಿನಯೇತ್ತಮಾತ್ಮನಿ ।
ಆತ್ಮಾನಮಾತ್ಮನ್ಯವರುಧ್ಯ ಧೀರೋ
ಲಬ್ಧೋಪಶಾಂತಿರ್ವಿರಮೇತ ಕೃತ್ಯಾತ್ ॥ ೧೬ ॥

ನ ಯತ್ರ ಕಾಲೋಽನಿಮಿಷಾಂ ಪರಃ ಪ್ರಭುಃ
ಕುತೋ ನು ದೇವಾ ಜಗತಾಂ ಯ ಈಶಿರೇ ।
ನ ಯತ್ರ ಸತ್ತ್ವಂ ನ ರಜಸ್ತಮಶ್ಚ
ನ ವೈ ವಿಕಾರೋ ನ ಮಹಾನ್ಪ್ರಧಾನಮ್ ॥ ೧೭ ॥

ಪರಂ ಪದಂ ವೈಷ್ಣವಮಾಮನಂತಿ ತದ್
ಯನ್ನೇತಿ ನೇತೀತ್ಯತದುತ್ಸಿಸೃಕ್ಷವಃ ।
ವಿಸೃಜ್ಯ ದೌರಾತ್ಮ್ಯಮನನ್ಯಸೌಹೃದಾ
ಹೃದೋಪಗುಹ್ಯಾರ್ಹಪದಂ ಪದೇ ಪದೇ ॥ ೧೮ ॥

ಇತ್ಥಂ ಮುನಿಸ್ತೂಪರಮೇದ್ವ್ಯವಸ್ಥಿತೋ
ವಿಜ್ಞಾನದೃಗ್ವೀರ್ಯಸುರಂಧಿತಾಶಯಃ ।
ಸ್ವಪಾರ್ಷ್ಣಿನಾಽಽಪೀಡ್ಯ ಗುದಂ ತತೋಽನಿಲಂ
ಸ್ಥಾನೇಷು ಷಟ್ಸೂನ್ನಮಯೇಜ್ಜಿತಕ್ಲಮಃ ॥ ೧೯ ॥

ವರೆಗೂ ನಿತ್ಯ-ನೈಮಿತ್ತಿಕ ಕರ್ಮಾಚರಣೆಯ ನಂತರ ಏಕಾಗ್ರತೆಯಿಂದ ಮೇಲೆ ಹೇಳಿದ ಶ್ರೀಭಗವಂತನ ಸ್ಥೂಲರೂಪವನ್ನು ಧ್ಯಾನಿಸುತ್ತಾ ಇರಬೇಕು. ॥ ೧೪ ॥

ಆಸನವು ಸ್ಥಿರವಾಗಿ ಮತ್ತು ಸುಖವಾಗಿ ಕುಳಿತುಕೊಳ್ಳುವಂತಾಗಿರಬೇಕು. ಇಂದ್ರಿಯಗಳನ್ನು ನಿಗ್ರಹಿಸಿ, ಯೋಗಿಯು ಈ ಲೋಕವನ್ನು ತ್ಯಜಿಸಿ ಭಗವಂತನ ವೈಕುಂಠಲೋಕಕ್ಕೆ ಹೋಗಬೇಕೆಂದು ಬಯಸಿದಾಗ, ಯಾವುದೇ ಕಾಲದಲ್ಲಿ ಅಥವಾ ದೇಶದಲ್ಲಿ ಮನಸ್ಸನ್ನು ತೊಡಗಿಸದೆ ಕೇವಲ ಪ್ರಾಣಾಯಾಮದ ಮೂಲಕ ಇಂದ್ರಿಯಗಳನ್ನು ವಶಪಡಿಸಿಕೊಳ್ಳಬೇಕು. ಮತ್ತೆ ಕೇವಲ ಭಗವಂತನನ್ನೇ ಚಿಂತಿಸಬೇಕು. ॥ ೧೫ ॥ ಅನಂತರ ಶುದ್ಧವಾದ ಬುದ್ಧಿಯಿಂದ ಮನಸ್ಸನ್ನು ಸಂಯಮಗೊಳಿಸಿ, ಮನಸ್ಸಿನೊಡನೆ ಬುದ್ಧಿಯನ್ನು ಕ್ಷೇತ್ರಜ್ಞನಲ್ಲಿಯೂ, ಕ್ಷೇತ್ರಜ್ಞನನ್ನು ಅಂತರಾತ್ಮನಲ್ಲಿಯೂ, ಆ ಅಂತರಾತ್ಮನನ್ನು ಪರಮಾತ್ಮನಲ್ಲಿಯೂ ಲಯಗೊಳಿಸಿ, ಆ ಧೀರಪುರುಷನು ಪರಮಶಾಂತಿಪೂರ್ಣವಾದ ಸ್ಥಿತಿಯಲ್ಲಿ ನೆಲೆಗೊಳ್ಳಬೇಕು. ಆಮೇಲೆ ಅವನಿಗೆ ಯಾವ ಕರ್ತವ್ಯವೂ ಇರುವುದಿಲ್ಲ. (**ಆತ್ಮಸಂಸ್ಥಂ ಮನಃ ಕೃತ್ವಾ ನ ಕಿಂಚಿದಪಿ ಚಿಂತಯೇತ್ – ಗೀತಾ ೬**) ॥ ೧೬ ॥ ಈ ಸ್ಥಿತಿಯಲ್ಲಿ ಸತ್ತ್ವಗುಣವೂ ಇರುವುದಿಲ್ಲ. ಅಂದಮೇಲೆ ರಜೋಗುಣ – ತಮೋಗುಣಗಳ ಪ್ರಸಂಗವಾದರೂ ಎಲ್ಲಿ ಬಂದೀತು? ಅಹಂಕಾರ, ಮಹತ್ತತ್ತ್ವ, ಪ್ರಕೃತಿಯ ಕೂಡ ಅಸ್ತಿತ್ವ ಅಲ್ಲಿರುವುದಿಲ್ಲ. ಆ ಸ್ಥಿತಿಯಲ್ಲಿ ದೇವತೆಗಳ ನಿಯಾಮಕ ಕಾಲನ ಬೇಳೆಯೂ ಬೇಯದಿರುವಾಗ ದೇವತೆಗಳಾಗಲೀ, ಅವರಿಗೆ ಅಧೀನರಾಗಿರುವ ಇತರ ಪ್ರಾಣಿಗಳಾದರೋ ಹೇಗೆ ಇರಬಲ್ಲರು? ॥ ೧೭ ॥ ಪರಮಾತ್ಮನಿಂದ ಭಿನ್ನವಾದ ಸಮಸ್ತವನ್ನು ತ್ಯಾಗಮಾಡಲು ಬಯಸುವ ಯೋಗಿಗಳು '**ನೇತಿ-ನೇತಿ**' 'ಇದೂ ಅಲ್ಲ! ಇದೂ ಅಲ್ಲ!' ಎಂಬ ಭಾವನೆಯಿಂದ ಉಳಿದ ಎಲ್ಲದರಲ್ಲೂ ಆತ್ಮಬುದ್ಧಿಯನ್ನು ತ್ಯಾಗಗೈದು ಪರಮಾತ್ಮಸ್ವರೂಪವನ್ನು ಹೃದಯದಿಂದ ಪದೇ-ಪದೇ ಆಲಿಂಗಿಸಿಕೊಳ್ಳುತ್ತಾ ಅನನ್ಯ ಪ್ರೇಮದಿಂದ ಪರಿಪೂರ್ಣರಾಗುವರೋ – ಅದೇ ಭಗವಾನ್ ವಿಷ್ಣುವಿನ ಪರಮಪದವಾಗಿದೆ. ಈ ವಿಷಯದಲ್ಲಿ ಎಲ್ಲ ಶಾಸ್ತ್ರಗಳ ಸಮ್ಮತಿ ಇದೆ. ॥ ೧೮ ॥*

ಜ್ಞಾನದೃಷ್ಟಿಯ ಬಲದಿಂದ ಚಿತ್ತದ ವಾಸನೆಯನ್ನು ಕಳೆದುಕೊಂಡ ಬ್ರಹ್ಮನಿಷ್ಠನಾದ ಯೋಗಿಯು ಈ ರೀತಿಯಲ್ಲಿ ತನ್ನ ಶರೀರವನ್ನು ತ್ಯಜಿಸಬೇಕು. ಮೊದಲು ಹಿಮ್ಮಡಿಯಿಂದ ತನ್ನ ಗುದವನ್ನು ಒತ್ತಿಕೊಂಡು ಸ್ಥಿರನಾಗಬೇಕು. ಮತ್ತೆ ಗಾಬರಿಯಿಲ್ಲದೆ ಪ್ರಾಣವಾಯುವನ್ನು ಷಟ್-ಚಕ್ರಭೇದನ ಕ್ರಮದಿಂದ ಅನಾಯಾಸವಾಗಿ ಮೇಲಕ್ಕೆ ತೆಗೆದುಕೊಂಡು ಹೋಗಬೇಕು. ॥ ೧೯ ॥ ಪ್ರಶಸ್ತವಾದ ಮನಸ್ಸುಳ್ಳ ಯೋಗಿಯು ನಾಭಿಚಕ್ರವಾದ ಮಣಿಪೂರದಲ್ಲಿರುವ

* ಶ್ಲೋಕ ೭ರಿಂದ ೧೮ರ ವರೆಗಿನ ಪ್ರಸಂಗವು ಸದ್ಯೋಮುಕ್ತಿಯದ್ದಾಗಿದೆ. ಇದರಲ್ಲಿ ಭಗವಂತನ ಸ್ವರೂಪವನ್ನು ಎಲ್ಲ ಸಮಯದಲ್ಲಿ ಧ್ಯಾನಿಸಬೇಕು. ಧ್ಯಾನದ ಮೂಲಕ ಧಾರಣೆಯನ್ನು ಮಾಡಬೇಕು. ಅದರಿಂದಾಗಿ ಅದರಲ್ಲಿ ಭಗವಂತನ ಸ್ಥಿತಿ ಉಂಟಾಗುತ್ತದೆ. ಇದರಿಂದ ಭಕ್ತಿಯೋಗವು ದೃಢವಾಗುತ್ತದೆ. ಭಕ್ತನ ಉದ್ಧಾರವನ್ನು ಸಾಕ್ಷಾತ್ ಭಗವಂತನೇ ಮಾಡುತ್ತಾನೆ. ಭಕ್ತನ ಹೊಣೆಗಾರಿಕೆಯು ಭಗವಂತನ ಮೇಲೆ ಬರುತ್ತದೆ. ಇದ್ದರಿಂದ ಭಕ್ತಿಯಲ್ಲಿ ಸದ್ಯೋಮುಕ್ತಿಯನ್ನು ಹೇಳಲಾಗಿದೆ. ಇನ್ನು ಶ್ಲೋಕ ೧೯ರಿಂದ ೩೦ರವರೆಗೆ ಜ್ಞಾನಮಾರ್ಗದ ಪ್ರಸಂಗ ನಡೆಯುತ್ತದೆ. ಈಗ ಯೋಗಾಭ್ಯಾಸದಿಂದ ಸಿಗುವ ಕ್ರಮಮುಕ್ತಿಯ ಪ್ರಸಂಗವನ್ನು ಪ್ರಾರಂಭಿಸುತ್ತಾರೆ.

ನಾಭ್ಯಾಂ ಸ್ಥಿತಂ ಹೃದ್ಯಧಿರೋಪ್ಯ ತಸ್ಮಾ-
ದುದಾನಗತ್ಯೋರಸಿ ತಂ ನಯೇನ್ಮುನಿಃ ।
ತತೋಽನುಸಂಧಾಯ ಧಿಯಾ ಮನಸ್ವೀ
ಸ್ವತಾಲುಮೂಲಂ ಶನಕೈರ್ನಯೇತ ॥ ೨೦ ॥

ತಸ್ಮಾದ್ಭ್ರುವೋರಂತರಮುನ್ನಯೇತ
ನಿರುದ್ಧಸಪ್ತಾಯತನೋಽನಪೇಕ್ಷಃ ।
ಸ್ಥಿತ್ವಾ ಮುಹೂರ್ತಾರ್ಧಮಕುಂಠದೃಷ್ಟಿ-
ರ್ನಿರ್ಭಿದ್ಯ ಮೂರ್ಧನ್ವಿಸೃಜೇತ್ಪರಂ ಗತಃ ॥ ೨೧ ॥

ಯದಿ ಪ್ರಯಾಸ್ಯನ್ನೃಪ ಪಾರಮೇಷ್ಠ್ಯಂ
ವೈಹಾಯಸಾನಾಮುತ ಯದ್ವಿಹಾರಮ್ ।
ಅಷ್ಟಾಧಿಪತ್ಯಂ ಗುಣಸನ್ನಿವಾಯೇ
ಸಹೈವ ಗಚ್ಛೇನ್ಮನಸೇಂದ್ರಿಯೈಶ್ಚ ॥ ೨೨ ॥

ಯೋಗೇಶ್ವರಾಣಾಂ ಗತಿಮಾಹುರಂತ-
ರ್ಬಹಿಸ್ತ್ರಿಲೋಕ್ಯಾಃ ಪವನಾಂತರಾತ್ಮನಾಮ್ ।
ನ ಕರ್ಮಭಿಸ್ತಾಂ ಗತಿಮಾಪ್ನುವಂತಿ
ವಿದ್ಯಾ ತಪೋಯೋಗಸಮಾಧಿಭಾಜಾಮ್ ॥ ೨೩ ॥

ವೈಶ್ವಾನರಂ ಯಾತಿ ವಿಹಾಯಸಾ ಗತಃ
ಸುಷುಮ್ಣಯಾ ಬ್ರಹ್ಮಪಥೇನ ಶೋಚಿಷಾ ।
ವಿಧೂತಕಲ್ಕೋಽಥ ಹರೇರುದಸ್ತಾತ್
ಪ್ರಯಾತಿ ಚಕ್ರಂ ನೃಪ ಶೈಶುಮಾರಮ್ ॥ ೨೪ ॥

ತದ್ವಿಶ್ವನಾಭಿಂ ತ್ವತಿವರ್ತ್ಯ ವಿಷ್ಣೋ-
ರಣೀಯಸಾ ವಿರಜೇನಾತ್ಮನೈಕಃ ।
ನಮಸ್ಕೃತಂ ಬ್ರಹ್ಮವಿದಾಮುಪೈತಿ
ಕಲ್ಪಾಯುಷೋ ಯದ್ವಿಬುಧಾ ರಮಂತೇ ॥ ೨೫ ॥

ವಾಯುವನ್ನು ಹೃದಯಚಕ್ರವಾದ ಅನಾಹತಚಕ್ರಕ್ಕೂ, ಅಲ್ಲಿಂದ ಉದಾನವಾಯುವಿನ ಮೂಲಕ ವಕ್ಷಃಸ್ಥಳದ ಮೇಲಿರುವ ವಿಶುದ್ಧ ಚಕ್ರಕ್ಕೂ, ಮತ್ತೆ ಆ ವಾಯುವನ್ನು ಮೆಲ್ಲ-ಮೆಲ್ಲನೆ ತಾಲು ಮೂಲಕ್ಕೂ (ಅಂದರೆ ವಿಶುದ್ಧ ಚಕ್ರದ ತುದಿಗೆ) ಆಜ್ಞಾಚಕ್ರಕ್ಕೆ ಹತ್ತಿಸಬೇಕು. ॥ ೨೦ ॥ ಅನಂತರ ಎರಡು ಕಣ್ಣುಗಳು, ಎರಡು ಕಿವಿಗಳು, ಮೂಗುಹೊಳ್ಳೆಗಳು ಮತ್ತು ಬಾಯಿ ಎಂಬ ಈ ಏಳು ರಂಧ್ರಗಳನ್ನು ಮುಚ್ಚಿಕೊಂಡು ತಾಲುಮೂಲದಲ್ಲಿರುವ ವಾಯುವನ್ನು ಹುಬ್ಬುಗಳ ಮಧ್ಯದಲ್ಲಿರುವ ಆಜ್ಞಾಚಕ್ರಕ್ಕೆ ಕೊಂಡೊಯ್ಯಬೇಕು. ಯಾವುದೇ ಲೋಕಕ್ಕೆ ಹೋಗುವ ಇಚ್ಛೆ ಇಲ್ಲದಿದ್ದರೆ ಅರ್ಧಗಳಿಗೆ ಕಾಲ ಆ ವಾಯುವನ್ನು ಅಲ್ಲಿಯೇ ತಡೆದು ಸ್ಥಿರವಾದ ಲಕ್ಷ್ಯದೊಡನೆ ಅದನ್ನು ಸಹಸ್ರಾರಕ್ಕೆ ಕೊಂಡೊಯ್ದು ಪರಮಾತ್ಮನಲ್ಲಿ ನೆಲೆಗೊಳಿಸಬೇಕು. ಅನಂತರ ಬ್ರಹ್ಮರಂಧ್ರವನ್ನು ಭೇದಿಸಿಕೊಂಡು ಶರೀರ-ಇಂದ್ರಿಯಾದಿಗಳನ್ನು ತ್ಯಜಿಸಿ ಬ್ರಹ್ಮನಲ್ಲಿ ಲೀನವಾಗಬೇಕು. ಇಂತಹ ಯೋಗಿಯು 'ಸರ್ವಂ ಖಲು ಇದಂ ಬ್ರಹ್ಮ' ಹೀಗೆ ಭಾವಿಸಿಕೊಂಡು ಸರ್ವತ್ರ ಒಂದೇ ಬ್ರಹ್ಮನನ್ನು ಸಾಕ್ಷಾತ್ಕರಿಸಿ ಕೊಳ್ಳುತ್ತಾರೆ. ಹೀಗೆ ಬ್ರಹ್ಮನಲ್ಲಿ ಸ್ಥಿರವಾದ ಬಳಿಕ ಪರಮಪದವನ್ನು ಪಡೆದುಕೊಳ್ಳುವರು. ॥ ೨೧ ॥

ಪರೀಕ್ಷಿತನೇ! ಯೋಗಿಗೆ ಬ್ರಹ್ಮಲೋಕಕ್ಕೆ ಹೋಗುವ ಇಚ್ಛೆಯಾಗಲೀ, ಅಣಿಮಾದಿಸಿದ್ಧಿಗಳನ್ನು ಪಡೆದು ಆಕಾಶದಲ್ಲಿ ಸಂಚರಿಸುವ ಸಿದ್ಧರೊಡನೆ ವಿಹರಿಸುವ ಅಥವಾ ತ್ರಿಗುಣಮಯವಾದ ಬ್ರಹ್ಮಾಂಡದ ಯಾವುದೇ ಭಾಗದಲ್ಲಿ ಸಂಚರಿಸುವ ಇಚ್ಛೆಯಾಗಲೀ, ಇದ್ದ ಪಕ್ಷದಲ್ಲಿ ಅವನು ಮನಸ್ಸನ್ನು ಮತ್ತು ಇಂದ್ರಿಯಗಳನ್ನು ಜೊತೆಯಲ್ಲೇ ತೆಗೆದುಕೊಂಡು ಶರೀರದಿಂದ ಹೊರಹೊರಡಬೇಕು. ॥ ೨೨ ॥ ಯೋಗಿಗಳ ಶರೀರವು ವಾಯುವಿನಂತೆ ಸೂಕ್ಷ್ಮವಾಗಿರುತ್ತದೆ. ಉಪಾಸನೆ, ತಪಸ್ಸು, ಯೋಗ, ಸಮಾಧಿಗಳನ್ನು ಸೇವನೆ ಮಾಡಿದ ಯೋಗಿಗಳಿಗೆ, ಮೂರೂ ಲೋಕಗಳ ಒಳಗೆ-ಹೊರಗೆ, ಎಲ್ಲೆಡೆಗಳಲ್ಲಿ ಸ್ವಚ್ಛಂದವಾಗಿ ಸಂಚರಿಸುವ ಅಧಿಕಾರ ಇರುತ್ತದೆ. ಕೇವಲ ವರ್ಣಾಶ್ರಮ ಧರ್ಮವನ್ನು ಪಾಲಿಸುವವರಿಗೆ ಈ ರೀತಿ ಅಡೆ-ತಡೆಯಿಲ್ಲದೆ ಸಂಚರಿಸಲಾಗುವುದಿಲ್ಲ. ॥ ೨೩ ॥ ಪರೀಕ್ಷಿತನೇ! ಯೋಗಿಯು ಜ್ಯೋತಿರ್ಮಯ ಮಾರ್ಗ ಸುಷುಮ್ನೆಯ ಮೂಲಕ ಬ್ರಹ್ಮಲೋಕಕ್ಕೆ ಹೋಗುವಾಗ ಅವನು ಮೊದಲು ಆಕಾಶಮಾರ್ಗದಿಂದ ಅಗ್ನಿಲೋಕಕ್ಕೆ ಹೋಗುತ್ತಾನೆ. ಆಗ ಅವನಲ್ಲಿ ಉಳಿದಿರುವ ದೋಷಗಳೂ ಸುಟ್ಟುಹೋಗುತ್ತವೆ. ಅನಂತರ ಅವನು ಅಲ್ಲಿಂದ ಮೇಲಕ್ಕೆ ಮಹಾವಿಷ್ಣುವಿನ ಶಿಂಶುಮಾರವೆಂಬ ಜ್ಯೋತಿರ್ಮಯ ಚಕ್ರವನ್ನು ತಲುಪುತ್ತಾನೆ. ॥ ೨೪ ॥ ಭಗವಾನ್ ಶ್ರೀವಿಷ್ಣುವಿನ ಈ ಶಿಂಶುಮಾರಚಕ್ರವು ವಿಶ್ವಬ್ರಹ್ಮಾಂಡಕ್ಕೆ ಸುತ್ತುವ ಕೇಂದ್ರವಾದ ನಾಭಿಯಾಗಿದೆ. ಮಹಾಯೋಗಿಯು ಅದನ್ನು ದಾಟಿ ಅತ್ಯಂತ ಸೂಕ್ಷ್ಮವೂ, ನಿರ್ಮಲವೂ ಆದ ಶರೀರದಿಂದ ಒಂಟಿಯಾಗಿಯೇ ಮಹರ್ಲೋಕಕ್ಕೆ ಹೋಗುತ್ತಾನೆ. ಆ ಮಹರ್ಲೋಕವು ಬ್ರಹ್ಮಜ್ಞಾನಿಗಳಿಂದಲೂ ನಮಸ್ಕರಿಸಲ್ಪಡುವ ಸ್ಥಾನ ಮತ್ತು ಒಂದು ಕಲ್ಪದವರೆಗೆ ಬದುಕುವ ದೇವತೆಗಳು ಅಲ್ಲಿ ವಿಹರಿಸುತ್ತಾ ಇರುತ್ತಾರೆ. ॥ ೨೫ ॥

ಅಥೋ ಅನಂತಸ್ಯ ಮುಖಾನಲೇನ
ದಂದಹ್ಯಮಾನಂ ಸ ನಿರೀಕ್ಷ್ಯ ವಿಶ್ವಮ್ ।
ನಿರ್ಯಾತಿ ಸಿದ್ಧೇಶ್ವರಯುಷ್ಟಧಿಷ್ಣ್ಯಂ
ಯದ್ದ್ವೈಪರಾರ್ಧ್ಯಂ ತದು ಪಾರಮೇಷ್ಠ್ಯಮ್ ॥ ೨೬ ॥

ನ ಯತ್ರ ಶೋಕೋ ನ ಜರಾ ನ ಮೃತ್ಯು-
ರ್ನಾರ್ತಿರ್ನ ಚೋದ್ವೇಗ ಋತೇ ಕುತಶ್ಚಿತ್ ।
ಯಚ್ಚಿತ್ತತೋದಃ ಕೃಪಯಾನಿದಂವಿದಾಂ
ದುರಂತದುಃಖಪ್ರಭವಾನುದರ್ಶನಾತ್ ॥ ೨೭ ॥

ತತೋ ವಿಶೇಷಂ ಪ್ರತಿಪದ್ಯ ನಿರ್ಭಯ-
ಸ್ತೇನಾತ್ಮನಾಪೋಽನಲಮೂರ್ತಿರತ್ವರನ್ ।
ಜ್ಯೋತಿರ್ಮಯೋ ವಾಯುಮುಪೇತ್ಯ ಕಾಲೇ
ವಾಯ್ವಾತ್ಮನಾ ಖಂ ಬೃಹದಾತ್ಮಲಿಂಗಮ್ ॥ ೨೮ ॥

ಘ್ರಾಣೇನ ಗಂಧಂ ರಸನೇನ ವೈ ರಸಂ
ರೂಪಂ ತು ದೃಷ್ಟ್ಯಾ ಶ್ವಸನಂ ತ್ವಚೈವ ।
ಶ್ರೋತ್ರೇಣ ಚೋಪೇತ್ಯ ನಭೋಗುಣತ್ವಂ
ಪ್ರಾಣೇನ ಚಾಕೂತಿಮುಪೈತಿ ಯೋಗೀ ॥ ೨೯ ॥

ಸ ಭೂತಸೂಕ್ಷ್ಮೇಂದ್ರಿಯಸಂನಿಕರ್ಷಂ
ಮನೋಮಯಂ ದೇವಮಯಂ ವಿಕಾರ್ಯಮ್ ।
ಸಂಸಾದ್ಯ ಗತ್ಯಾ ಸಹ ತೇನ ಯಾತಿ
ವಿಜ್ಞಾನತತ್ತ್ವಂ ಗುಣಸಂನಿರೋಧಮ್ ॥ ೩೦ ॥

ತೇನಾತ್ಮನಾಽಽತ್ಮಾನಮುಪೈತಿ ಶಾಂತ-
ಮಾನಂದಮಾನಂದಮಯೋಽವಸಾನೇ ।
ಏತಾಂ ಗತಿಂ ಭಾಗವತೀಂ ಗತೋ ಯಃ
ಸ ವೈ ಪುನರ್ನೇಹ ವಿಷಜ್ಜತೇಽಂಗ ॥ ೩೧ ॥

ಏತೇ ಸೃತೀ ತೇ ನೃಪ ವೇದಗೀತೇ
ತ್ವಯಾಭಿಪೃಷ್ಟೇ ಚ ಸನಾತನೇ ಚ ।
ಯೇ ವೈ ಪುರಾ ಬ್ರಹ್ಮಣ ಆಹ ಪೃಷ್ಟ
ಆರಾಧಿತೋ ಭಗವಾನ್ ವಾಸುದೇವಃ ॥ ೩೨ ॥

ಅನಂತರ ಆ ಯೋಗಿಯು ಪ್ರಳಯ ಸಮಯದಲ್ಲಿ ಕೆಳಗಿನ ಲೋಕಗಳು ಆದಿಶೇಷನ ಮುಖದಿಂದ ಹೊರಡುವ ಬೆಂಕಿಯಿಂದ ಸುಟ್ಟುಹೋಗುವುದನ್ನು ನೋಡಿ ಬ್ರಹ್ಮಲೋಕಕ್ಕೆ ಹೊರಟುಹೋಗುತ್ತಾನೆ. ಆ ಬ್ರಹ್ಮಲೋಕವು ದೊಡ್ಡ-ದೊಡ್ಡ ಸಿದ್ಧೇಶ್ವರರು ವಿಮಾನದಲ್ಲಿ ವಿಹರಿಸುವ ದಿವ್ಯ ಸ್ಥಾನ. ಈ ಲೋಕದ ಆಯುಸ್ಸು ಬ್ರಹ್ಮನ ಆಯುಸ್ಸಿನಷ್ಟು ಎರಡು ಪರಾರ್ಧವಿರುತ್ತದೆ. ॥ ೨೬ ॥ ಅಲ್ಲಿ ಶೋಕ-ಮೋಹಗಳಿಲ್ಲ, ಮುಪ್ಪಾಗಲೀ, ಮರಣವಾಗಲೀ ಇಲ್ಲ. ಯಾರಿಂದಲೂ ಯಾವುದೇ ಬಗೆಯ ಉದ್ವೇಗವಾಗಲೀ, ಭಯವಾಗಲೀ, ಇರಲು ಸಾಧ್ಯವೇ ಇಲ್ಲ. ಅಲ್ಲಿ ದುಃಖ ಇರುವುದಾದರೆ – ಪರಮಪದಕ್ಕೆ ಹೋಗದೆ ಇರುವ ಜನರು ಅನುಭವಿಸುವ ಹುಟ್ಟು-ಸಾವುಗಳ ಅತಿಘೋರವಾದ ಸಂಕಟವನ್ನು ಕಂಡು ದಯೆಯಿಂದ ಅಲ್ಲಿಯ ಜನರ ಮನಸ್ಸಿಗೆ ನೋವಾಗುತ್ತಾ ಇರುತ್ತದೆ. ॥ ೨೭ ॥ ಸತ್ಯಲೋಕವನ್ನು ತಲುಪಿದ ಬಳಿಕ ಆ ಯೋಗಿಯು ನಿರ್ಭಯನಾಗಿ ತನ್ನ ಸೂಕ್ಷ್ಮಶರೀರವನ್ನು ಪೃಥ್ವಿತತ್ತ್ವದಲ್ಲಿ ಸೇರಿಸಿಬಿಟ್ಟು ಆತುರವಿಲ್ಲದೆ ಏಳು ಆವರಣಗಳನ್ನು ಭೇದಿಸುತ್ತಾನೆ. ಪೃಥ್ವಿರೂಪದಿಂದ ಜಲವನ್ನೂ ಮತ್ತು ಜಲರೂಪದಿಂದ ತೇಜೋರೂಪವಾದ ಆವರಣಗಳನ್ನು ತಲುಪಿ ಅವನು ಜ್ಯೋತಿರೂಪದಿಂದ ವಾಯುರೂಪವಾದ ಆವರಣಕ್ಕೆ ಬರುವನು. ಅಲ್ಲಿಂದ ಸಕಾಲದಲ್ಲಿ ಬ್ರಹ್ಮನ ಅನಂತತೆಯ ಅರಿವನ್ನುಂಟುಮಾಡುವ ಆಕಾಶ ರೂಪದ ಆವರಣವನ್ನು ಹೊಂದುತ್ತಾನೆ. ಈ ಆಕಾಶವು ಬೃಹತ್ ಆತ್ಮನ ಚಿಹ್ನೆಯಾಗಿದೆ. ॥ ೨೮ ॥ ಈ ಪ್ರಕಾರವಾಗಿ ಸ್ಥೂಲವಾದ ಆವರಣಗಳನ್ನು ದಾಟಿಹೋಗುವ ಸಮಯದಲ್ಲಿ ಆತನ ಇಂದ್ರಿಯಗಳೂ ಕೂಡ ತಮ್ಮ-ತಮ್ಮ ಸೂಕ್ಷ್ಮವಾದ ಅಧಿಷ್ಠಾನದಲ್ಲಿ ಲೀನವಾಗುತ್ತಾ ಹೋಗುತ್ತವೆ. ಘ್ರಾಣೇಂದ್ರಿಯವು ಗಂಧತನ್ಮಾತ್ರೆಯಲ್ಲಿಯೂ, ರಸನೇಂದ್ರಿಯವು ರಸತನ್ಮಾತ್ರೆಯಲ್ಲಿಯೂ, ನೇತ್ರವು ರೂಪತನ್ಮಾತ್ರೆಯಲ್ಲಿಯೂ, ತ್ವಚೆಯು ಸ್ಪರ್ಶತನ್ಮಾತ್ರೆಯಲ್ಲಿಯೂ, ಶ್ರೋತ್ರವು ಶಬ್ದತನ್ಮಾತ್ರೆಯಲ್ಲಿಯೂ, ಮತ್ತು ಕರ್ಮೇಂದ್ರಿಯಗಳು ತಮ್ಮ-ತಮ್ಮ ಕ್ರಿಯಾಶಕ್ತಿಯಲ್ಲಿಯೂ ಸೇರಿಕೊಂಡು ತಮ್ಮ-ತಮ್ಮ ಸೂಕ್ಷ್ಮಸ್ವರೂಪವನ್ನು ಹೊಂದುತ್ತವೆ. ॥ ೨೯ ॥ ಈ ರೀತಿ ಯೋಗಿಯು ಪಂಚಭೂತಗಳ ಸ್ಥೂಲ-ಸೂಕ್ಷ್ಮ ಆವರಣಗಳನ್ನು ದಾಟಿ ಅಹಂಕಾರ ತತ್ತ್ವದಲ್ಲಿ ಪ್ರವೇಶಿಸುತ್ತಾನೆ. ಅಲ್ಲಿ ಸೂಕ್ಷ್ಮ ಭೂತಗಳನ್ನು ತಾಮಸ ಅಹಂಕಾರದಲ್ಲಿಯೂ, ಇಂದ್ರಿಯಗಳನ್ನು ರಾಜಸ ಅಹಂಕಾರದಲ್ಲಿಯೂ, ಮನಸ್ಸು, ಇಂದ್ರಿಯಗಳ ಅಧಿಷ್ಠಾತೃ ದೇವತೆಗಳನ್ನು ಸಾತ್ತ್ವಿಕ ಅಹಂಕಾರದಲ್ಲಿಯೂ ಲಯಗೊಳಿಸುತ್ತಾನೆ. ಅನಂತರ ಅಹಂಕಾರ ಸಹಿತ ಲಯರೂಪವಾದ ಗತಿಯ ಮೂಲಕ ಮಹತ್ತತ್ತ್ವದಲ್ಲಿ ಪ್ರವೇಶಿಸಿ, ಕೊನೆಗೆ ಸಮಸ್ತ ಗುಣಗಳ ಲಯಸ್ಥಾನವಾದ ಪ್ರಕೃತಿರೂಪವಾದ ಆವರಣದಲ್ಲಿ ಹೋಗಿ ಸೇರಿಕೊಳ್ಳುತ್ತಾನೆ. ॥ ೩೦ ॥ ಮಹಾರಾಜಾ ! ಮಹಾಪ್ರಳಯದ ಸಮಯದಲ್ಲಿ ಪ್ರಕೃತಿರೂಪವಾದ ಆವರಣವು ಲಯಹೊಂದಿದಾಗ ಆ ಯೋಗಿಯು ತಾನೂ ಆನಂದಸ್ವರೂಪನಾಗಿ, ಆವರಣರಹಿತನಾಗಿ, ಪರಮಾನಂದ ಸ್ವರೂಪನೂ, ಪ್ರಶಾಂತನೂ ಆಗಿರುವ ಪರಮಾತ್ಮನನ್ನು ಹೊಂದಿಬಿಡುತ್ತಾನೆ. ಈ ಭಾಗವತೀಯ ಗತಿಯನ್ನು ಪಡೆದವನು ಮತ್ತೆ ಈ ಸಂಸಾರಕ್ಕೆ ಹಿಂದಿರುಗಬೇಕಾಗುವುದಿಲ್ಲ. ॥ ೩೧ ॥ ಪರೀಕ್ಷಿದ್ರಾಜನೇ ! ನಿನ್ನ ಪ್ರಶ್ನೆಗೆ ಉತ್ತರ

ನ ಹ್ಯತೋಽನ್ಯಃ ಶಿವಃ ಪಂಥಾ ವಿಶತಃ ಸಂಸೃತಾವಿಹ ।
ವಾಸುದೇವೇ ಭಗವತಿ ಭಕ್ತಿಯೋಗೋ ಯತೋ ಭವೇತ್
॥ ೩೩ ॥

ಭಗವಾನ್ ಬ್ರಹ್ಮ ಕಾರ್ತ್ಸ್ನ್ಯೇನ ತ್ರಿರನ್ವೀಕ್ಷ್ಯ ಮನೀಷಯಾ ।
ತದಧ್ಯವಸ್ಯತ್ ಕೂಟಸ್ಥೋ ರತಿರಾತ್ಮನ್ಯತೋ ಭವೇತ್
॥ ೩೪ ॥

ಭಗವಾನ್ಸರ್ವಭೂತೇಷು ಲಕ್ಷಿತಃ ಸ್ವಾತ್ಮನಾ ಹರಿಃ ।
ದೃಶ್ಯೈರ್ಬುದ್ಧ್ಯಾದಿಭಿರ್ದ್ರಷ್ಟಾ ಲಕ್ಷಣೈರನುಮಾಪಕೈಃ
॥ ೩೫ ॥

ತಸ್ಮಾತ್ಸರ್ವಾತ್ಮನಾ ರಾಜನ್ ಹರಿಃ ಸರ್ವತ್ರ ಸರ್ವದಾ ।
ಶ್ರೋತವ್ಯಃ ಕೀರ್ತಿತವ್ಯಶ್ಚ ಸ್ಮರ್ತವ್ಯೋ ಭಗವಾನ್ನೃಣಾಮ್
॥ ೩೬ ॥

ಪಿಬಂತಿ ಯೇ ಭಗವತ ಆತ್ಮನಃ ಸತಾಂ
ಕಥಾಮೃತಂ ಶ್ರವಣಪುಟೇಷು ಸಂಭೃತಮ್ ।
ಪುನಂತಿ ತೇ ವಿಷಯವಿದೂಷಿತಾಶಯಂ
ವ್ರಜಂತಿ ತಚ್ಚರಣಸರೋರುಹಾಂತಿಕಮ್ ॥ ೩೭ ॥

ವಾಗಿ ನಾನು ವೇದಗಳು ಹೇಳುವ ಸನಾತನವಾದ ಎರಡು ಮಾರ್ಗಗಳನ್ನು ವರ್ಣಿಸಿದ್ದೇನೆ. ಮೊದಲನೆಯದು ಸದ್ಯೋಮುಕ್ತಿ, ಎರಡನೆಯದು ಕ್ರಮಮುಕ್ತಿ. ಹಿಂದೆ ಬ್ರಹ್ಮದೇವರು ಆರಾಧಿಸಿ ಪ್ರಶ್ನೆಮಾಡಿದಾಗ ಭಗವಾನ್ ವಾಸುದೇವನು ಅವನಿಗೆ ಉತ್ತರವನ್ನಾಗಿ ಇದನ್ನೇ ಹೇಳಿದ್ದನು. ॥ ೩೨ ॥

ಸಂಸಾರಚಕ್ರದಲ್ಲಿ ಬಿದ್ದಿರುವ ಮನುಷ್ಯನಿಗೆ ಯಾವ ಸಾಧನೆಯಿಂದ ಭಗವಾನ್ ಶ್ರೀಕೃಷ್ಣನಲ್ಲಿ ಅನನ್ಯ ಪ್ರೇಮಮಯ ಭಕ್ತಿಯು ಪ್ರಾಪ್ತವಾಗುತ್ತದೋ, ಅದಲ್ಲದೆ ಬೇರೆ ಯಾವುದೂ ಶ್ರೇಯಸ್ಕರವಾದ ಮಾರ್ಗವಿಲ್ಲ. ॥ ೩೩ ॥ ಪೂಜ್ಯರಾದ ಬ್ರಹ್ಮದೇವರು ಏಕಾಗ್ರಚಿತ್ತದಿಂದ ಎಲ್ಲ ವೇದಗಳನ್ನು ಮೂರುಬಾರಿ ಪರಿಶೀಲನೆ ಮಾಡಿ ಯಾವುದರಿಂದ ಸರ್ವಾತ್ಮಕನಾದ ಭಗವಾನ್ ಶ್ರೀಕೃಷ್ಣನಲ್ಲಿ ಅನನ್ಯ ಪ್ರೇಮ ಉಂಟಾಗುತ್ತದೋ, ಅದೇ ಸರ್ವಶ್ರೇಷ್ಠವಾದ ಧರ್ಮವಾಗಿದೆ ಎಂದು ಬುದ್ಧಿಯಿಂದ ನಿಶ್ಚಯ ಮಾಡಿದರು. ॥ ೩೪ ॥ ಸಮಸ್ತ ಚರಾಚರ ಪ್ರಾಣಿಗಳಲ್ಲಿ ಅವುಗಳ ಆತ್ಮರೂಪದಲ್ಲಿ ಭಗವಾನ್ ಶ್ರೀಕೃಷ್ಣನೇ ಲಕ್ಷಿತನಾಗಿದ್ದಾನೆ. ಏಕೆಂದರೆ, ಇವೆಲ್ಲಕ್ಕೂ ಸಾಕ್ಷಿಯಾಗಿರುವ ಏಕಮಾತ್ರ ದ್ರಷ್ಟಾ ಅವನೇ. ದೃಶ್ಯಪದಾರ್ಥಗಳಾದ ಬುದ್ಧಿ ಮುಂತಾದವುಗಳು ತರ್ಕದಿಂದ ಆತನಲ್ಲಿಗೆ ಒಯ್ಯುವ ಲಕ್ಷಣಗಳೇ ಆಗಿವೆ. ॥ ೩೫ ॥ ಪರೀಕ್ಷಿತನೇ! ಅದಕ್ಕಾಗಿ ಮನುಷ್ಯನು ಎಲ್ಲ ಹೊತ್ತಿನಲ್ಲಿ, ಎಲ್ಲ ಅವಸ್ಥೆಗಳಲ್ಲಿ ತನ್ನ ಸಮಸ್ತ ಶಕ್ತಿಯಿಂದ ತನ್ನೊಳಗೆ ಇರುವ ಭಗವಾನ್ ಶ್ರೀಹರಿಯ ಕುರಿತಾದ ಶ್ರವಣ, ಕೀರ್ತನೆ, ಸ್ಮರಣೆಗಳನ್ನು ಮಾಡಬೇಕು. ಮನುಷ್ಯರ ಶ್ರೇಯಸ್ಸಿಗಾಗಿ ಇದೇ ಸರ್ವಶ್ರೇಷ್ಠ ಉಪಾಯವಾಗಿದೆ. ॥ ೩೬ ॥ ರಾಜನೇ! ಸಂತ-ಸತ್ಪುರುಷರು ಆತ್ಮಸ್ವರೂಪೀ ಭಗವಂತನ ಕಥಾಮೃತವನ್ನು ಹಂಚುತ್ತಲೇ ಇರುತ್ತಾರೆ. ಯಾರು ತಮ್ಮ ಕಿವಿಗಳೆಂಬ ದೊನ್ನೆಯಲ್ಲಿ ತುಂಬಿ ಕೊಂಡು ಅದನ್ನು ಪಾನಮಾಡುತ್ತಾರೋ, ಅವರ ಹೃದಯದಿಂದ ವಿಷಯಗಳ ಕಾಲುಷ್ಯವು ಹೊರಟುಹೋಗುತ್ತದೆ. ಅವರು ಶುದ್ಧರಾಗಿ ಭಗವಾನ್ ಶ್ರೀಕೃಷ್ಣನ ಚರಣಕಮಲಗಳ ಸಾನ್ನಿಧ್ಯವನ್ನು ಹೊಂದುತ್ತಾರೆ. ಆದ್ದರಿಂದ ಭಗವಂತನ ಭಕ್ತಿಯನ್ನೇ ಮಾಡಬೇಕು. ॥ ೩೭ ॥

ಎರಡನೆಯ ಅಧ್ಯಾಯವು ಮುಗಿಯಿತು. ॥ ೨ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದ್ವಿತೀಯಸ್ಕಂಧೇ
ಪುರುಷಸಂಸ್ಥಾವರ್ಣನಂ ನಾಮ ದ್ವಿತೀಯೋಽಧ್ಯಾಯಃ ॥ ೨ ॥

ಮೂರನೆಯ ಅಧ್ಯಾಯ

ಕಾಮನೆಗಳಿಗೆ ತಕ್ಕಂತೆ ಬೇರೆ-ಬೇರೆ ದೇವತೆಗಳ ಉಪಾಸನೆ ಮತ್ತು ಭಗವದ್ಭಕ್ತಿಯ ಪ್ರಧಾನತೆಯ ನಿರೂಪಣೆ

ಶ್ರೀಶುಕ ಉವಾಚ

ಏವಮೇತನ್ನಿಗದಿತಂ ಪೃಷ್ಟವಾನ್ಯದ್ಭವಾನ್ ಮಮ ।
ನೃಣಾಂ ಯನ್ಮ್ರಿಯಮಾಣಾನಾಂ ಮನುಷ್ಯೇಷು ಮನೀಷಿಣಾಮ್
॥ ೧ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಮರಣಕಾಲವು ಸಮೀಪಿಸಿದಾಗ ಬುದ್ಧಿವಂತನಾದ ಮನುಷ್ಯನು ಏನು ಮಾಡಬೇಕು ? ಎಂದು ನೀನು ಪ್ರಶ್ನಿಸಿದುದಕ್ಕೆ ನಾನು ಉತ್ತರ ಹೇಳಿಯಾಯಿತು. ॥ ೧ ॥ ಲೌಕಿಕವನ್ನು ಬಯಸುವವರು ಯಾವ-ಯಾವ ದೇವತೆಯಲ್ಲಿ ಏನೇನನ್ನು ಬೇಡಬೇಕೆಂಬುದನ್ನು ಈಗ ಹೇಳುತ್ತೇನೆ

ಬ್ರಹ್ಮವರ್ಚಸಕಾಮಸ್ತು ಯಜೇತ ಬ್ರಹ್ಮಣಸ್ಪತಿಮ್ ।
ಇಂದ್ರಮಿಂದ್ರಿಯಕಾಮಸ್ತು ಪ್ರಜಾಕಾಮಃ ಪ್ರಜಾಪತೀನ್ ॥ ೨ ॥

ದೇವೀಂ ಮಾಯಾಂ ತು ಶ್ರೀಕಾಮ
ಸ್ತೇಜಸ್ಕಾಮೋ ವಿಭಾವಸುಮ್ ।
ವಸುಕಾಮೋ ವಸೂನ್ ರುದ್ರಾನ್
ವೀರ್ಯಕಾಮೋಽಥ ವೀರ್ಯವಾನ್ ॥ ೩ ॥

ಅನ್ನಾದ್ಯಕಾಮಸ್ತ್ವದಿತಿಂ ಸ್ವರ್ಗಕಾಮೋಽದಿತೇಃ ಸುತಾನ್ ।
ವಿಶ್ವಾನ್ ದೇವಾನ್ರಾಜ್ಯಕಾಮಃ ಸಾಧ್ಯಾನ್ಸಂಸಾಧಕೋ ವಿಶಾಮ್ ॥ ೪ ॥

ಆಯುಷ್ಕಾಮೋಽಶ್ವಿನೌ ದೇವೌ ಪುಷ್ಟಿಕಾಮ ಇಲಾಂ ಯಜೇತ್ ।
ಪ್ರತಿಷ್ಠಾಕಾಮಃ ಪುರುಷೋ ರೋದಸೀ ಲೋಕಮಾತರೌ ॥ ೫ ॥

ರೂಪಾಭಿಕಾಮೋ ಗಂಧರ್ವಾನ್ ಸ್ತ್ರೀಕಾಮೋಽಪ್ಸರ ಉರ್ವಶೀಮ್ ।
ಆಧಿಪತ್ಯಕಾಮಃ ಸರ್ವೇಷಾಂ ಯಜೇತ ಪರಮೇಷ್ಠಿನಮ್ ॥ ೬ ॥

ಯಜ್ಞಂ ಯಜೇದ್ಯಶಸ್ಕಾಮಃ ಕೋಶಕಾಮಃ ಪ್ರಚೇತಸಮ್ ।
ವಿದ್ಯಾಕಾಮಸ್ತು ಗಿರಿಶಂ ದಾಂಪತ್ಯಾರ್ಥ ಉಮಾಂ ಸತೀಮ್ ॥ ೭ ॥

ಧರ್ಮಾರ್ಥ ಉತ್ತಮಶ್ಲೋಕಂ ತಂತುಂ ತನ್ವನ್ ಪಿತೄನ್ಯಜೇತ್ ।
ರಕ್ಷಾಕಾಮಃ ಪುಣ್ಯಜನಾನೋಜಸ್ಕಾಮೋ ಮರುದ್ಗಣಾನ್ ॥ ೮ ॥

ರಾಜ್ಯಕಾಮೋ ಮನೂನ್ದೇವಾನ್ನಿರ್ಋತಿಂ ತ್ವಭಿಚರನ್ಯಜೇತ್ ।
ಕಾಮಕಾಮೋ ಯಜೇತ್ಸೋಮಂ ಅಕಾಮಃ ಪುರುಷಂ ಪರಮ್ ॥ ೯ ॥

ಅಕಾಮಃ ಸರ್ವಕಾಮೋ ವಾ ಮೋಕ್ಷಕಾಮ ಉದಾರಧೀಃ ।
ತೀವ್ರೇಣ ಭಕ್ತಿಯೋಗೇನ ಯಜೇತ ಪುರುಷಂ ಪರಮ್ ॥ ೧೦ ॥

ಏತಾವಾನೇವ ಯಜತಾಮಿಹ ನಿಃಶ್ರೇಯಸೋದಯಃ ।
ಭಗವತ್ಯಚಲೋ ಭಾವೋ ಯದ್ ಭಾಗವತಸಂಗತಃ ॥ ೧೧ ॥

ಜ್ಞಾನಂ ಯದಾಪ್ರತಿನಿವೃತ್ತ ಗುಣೋರ್ಮಿಚಕ್ರ-
ಮಾತ್ಮಪ್ರಸಾದ ಉತ ಯತ್ರ ಗುಣೇಷ್ವಸಂಗಃ ।
ಕೈವಲ್ಯ ಸಮ್ಮತಪಥಸ್ತ್ವಥ ಭಕ್ತಿಯೋಗಃ
ಕೋ ನಿರ್ವೃತೋ ಹರಿಕಥಾಸು ರತಿಂ ನ ಕುರ್ಯಾತ್ ॥ ೧೨ ॥

ಬ್ರಹ್ಮತೇಜಸ್ಸನ್ನು ಬಯಸುವವನು ಬ್ರಹ್ಮಣಸ್ಪತಿಯನ್ನೂ, ಇಂದ್ರಿಯಗಳ ವಿಶೇಷಶಕ್ತಿಯನ್ನು ಇಚ್ಛಿಸುವವನು ಇಂದ್ರನನ್ನೂ, ಸಂತಾನದ ಅಪೇಕ್ಷೆ ಉಳ್ಳವರು ಪ್ರಜಾಪತಿಗಳನ್ನು ಉಪಾಸಿಸಬೇಕು. ॥ ೨ ॥ ಸಂಪತ್ತಿಗಾಗಿ ಶ್ರೀದೇವಿಯನ್ನೂ, ತೇಜಸ್ಸಿಗಾಗಿ ಅಗ್ನಿಯನ್ನೂ, ಧನಕ್ಕಾಗಿ ವಸುಗಳನ್ನೂ, ವೀರ್ಯವನ್ನು ಬಯಸುವವರು ರುದ್ರರನ್ನೂ ಉಪಾಸನೆಮಾಡಬೇಕು. ॥ ೩ ॥ ಹೇರಳವಾದ ಅನ್ನವನ್ನು ಪಡೆಯಲು ಅದಿತಿದೇವಿಯನ್ನೂ, ಸ್ವರ್ಗಕಾಮನೆಗಾಗಿ ಅದಿತಿಯ ಪುತ್ರರಾದ ದೇವತೆಗಳನ್ನೂ, ರಾಜ್ಯದ ಅಭಿಲಾಷೆಯುಳ್ಳವನು ವಿಶ್ವೇದೇವತೆಗಳನ್ನೂ, ಪ್ರಜೆಗಳನ್ನು ತನಗೆ ಅನುಕೂಲರನ್ನಾಗಿ ಮಾಡಿಕೊಳ್ಳಲು ಸಾಧ್ಯದೇವತೆಗಳನ್ನು ಆರಾಧಿಸಬೇಕು. ॥ ೪ ॥ ಆಯುಸ್ಸನ್ನು ಇಚ್ಛಿಸುವವನು ಅಶ್ವಿನೀಕುಮಾರರನ್ನೂ, ಪುಷ್ಟಿಗಾಗಿ ಪೃಥ್ವಿಯನ್ನೂ, ಪ್ರತಿಷ್ಠೆಯನ್ನು ಬಯಸುವವರು ಲೋಕದ ತಂದೆ-ತಾಯಿಗಳಾದ ದ್ಯಾವಾ-ಪೃಥ್ವಿಗಳನ್ನು ಆರಾಧಿಸಬೇಕು. ॥ ೫ ॥ ಸೌಂದರ್ಯಕ್ಕಾಗಿ ಗಂಧರ್ವರನ್ನೂ, ಪತ್ನಿಯ ಆಸೆಯಿದ್ದರೆ ಊರ್ವಶೀ ಎಂಬ ಅಪ್ಸರೆಯನ್ನೂ, ಎಲ್ಲರಿಗೂ ಅಧಿಪತಿ ಯಾಗಬೇಕೆಂಬ ಆಸೆಯಿದ್ದರೆ ಪರಮೇಷ್ಠಿ ಬ್ರಹ್ಮದೇವರನ್ನೂ ಉಪಾಸಿಸಬೇಕು. ॥ ೬ ॥ ಯಶಸ್ಸಿಗಾಗಿ ಯಜ್ಞಪುರುಷನನ್ನೂ, ಕೋಶದ ಆಸೆಯುಳ್ಳವನು ವರುಣನನ್ನೂ, ವಿದ್ಯಾಕಾಮನೆಗಾಗಿ ಶಂಕರನನ್ನೂ, ದಾಂಪತ್ಯಪ್ರೇಮ ಬಯಸುವವರು ಉಮಾದೇವಿಯನ್ನು ಪೂಜಿಸಬೇಕು. ॥ ೭ ॥ ಧರ್ಮವನ್ನು ಸಂಪಾದಿಸಲು ಉತ್ತಮಶ್ಲೋಕನಾದ ವಿಷ್ಣುವನ್ನೂ, ವಂಶಪರಂಪರೆಯನ್ನು ಬಯಸುವವನು ಪಿತೃಗಳನ್ನೂ, ಬಾಧೆಗಳ ರಕ್ಷಣೆಗಾಗಿ ಯಕ್ಷರನ್ನೂ, ಬಲಶಾಲಿಯಾಗಲು ಮರುದ್ದೇವತೆಗಳನ್ನೂ ಪೂಜಿಸಬೇಕು. ॥ ೮ ॥ ರಾಜ್ಯಕಾಮನೆಯುಳ್ಳವನು ಮನ್ವಂತರಗಳಿಗೆ ಒಡೆಯರಾದ ಮನುಗಳನ್ನೂ, ಅಭಿಚಾರಿಕ ಕರ್ಮಗಳಿಗಾಗಿ ನಿರ್ಋತಿಯನ್ನೂ, ಕಾಮಭೋಗಗಳಿಗೆ ಚಂದ್ರನನ್ನೂ, ನಿಷ್ಕಾಮಭಾವವನ್ನು ಪಡೆಯುವ ಆಸೆಯುಳ್ಳವರು ಪರಮಪುರುಷ ಶ್ರೀಮನ್ನಾರಾಯಣನನ್ನೂ ಆರಾಧಿಸಬೇಕು. ॥ ೯ ॥ ಉದಾರವಾದ ಮನಸ್ಸುಳ್ಳ ಬುದ್ಧಿವಂತನಾದ ಮನುಷ್ಯನು ನಿಷ್ಕಾಮನಾಗಿರಲೀ, ಸಕಾಮನಾಗಿರಲೀ, ಅಥವಾ ಮೋಕ್ಷಕಾಮನಾಗಿರಲೀ, ಅವನು ತೀವ್ರವಾದ ಭಕ್ತಿಯೋಗದಿಂದ ಆ ಭಗವಂತನಾದ ಶ್ರೀಪುರುಷೋತ್ತಮನನ್ನೇ ಆರಾಧಿಸಬೇಕು. ॥ ೧೦ ॥ ಭಗವಂತನ ಪ್ರೇಮಿಭಕ್ತರ ಸಂಗಮಾಡಿ, ಭಗವಂತನಲ್ಲಿ ಅವಿಚಲವಾದ ಭಕ್ತಿಯನ್ನು ಪಡೆದು ಕೊಳ್ಳುವುದರಲ್ಲೇ ಎಲ್ಲ ಸಾಧಕರಿಗೆ ಎಲ್ಲಕ್ಕಿಂತ ದೊಡ್ಡದಾದ ಹಿತವಿದೆ. ॥ ೧೧ ॥ ಇಂತಹ ಸತ್ಪುರುಷರ ಸತ್ಸಂಗದಲ್ಲಿ ನಡೆಯುವ ಭಗವಂತನ ಲೀಲಾ-ಕಥೆಗಳಿಂದ ಸಂಸಾರಸಾಗರದ ತ್ರಿಗುಣಮಯ ಅಲೆಗಳ ಹೊಡೆತಗಳು ಶಾಂತವಾಗಿ, ಹೃದಯವು ಶುದ್ಧವಾಗಿ ಆನಂದದ ಅನುಭವವಾಗುವಂತಹ ದುರ್ಲಭಜ್ಞಾನದ ಪ್ರಾಪ್ತಿಯಾಗುತ್ತದೆ. ಇದರಿಂದ ಇಂದ್ರಿಯಗಳಲ್ಲಿ ಆಸಕ್ತಿಯು ಉಳಿಯದೆ ಕೈವಲ್ಯ ಮೋಕ್ಷಕ್ಕೆ ಸರ್ವಸಮ್ಮತವಾದ ಭಕ್ತಿಯೋಗವು ಪ್ರಾಪ್ತವಾಗುತ್ತದೆ. ಶ್ರೀಭಗವಂತನ ರಸಮಯವಾದ ಹರಿಕಥೆಗಳ ರುಚಿಹತ್ತಿದ ಬಳಿಕ ಯಾರಿಗೆ ತಾನೇ ಅದರಲ್ಲಿ ಭಕ್ತಿಯುಂಟಾಗುವುದಿಲ್ಲ? ॥ ೧೨ ॥

ಶೌನಕ ಉವಾಚ

ಇತ್ಯಭಿವ್ಯಾಹೃತಂ ರಾಜಾ ನಿಶಮ್ಯ ಭರತರ್ಷಭಃ ।
ಕಿಮನ್ಯತ್ಪೃಷ್ಟವಾನ್ಭೂಯೋ ವೈಯಾಸಕಿಮೃಷಿಂ ಕವಿಮ್ ॥ ೧೩ ॥

ಏತಚ್ಛುಶ್ರೂಷತಾಂ ವಿದ್ವನ್ಸೂತ ನೋಽರ್ಹಸಿ ಭಾಷಿತುಮ್ ।
ಕಥಾ ಹರಿಕಥೋದರ್ಕಾಃ ಸತಾಂ ಸ್ಯುಃ ಸದಸಿ ಧ್ರುವಮ್ ॥ ೧೪ ॥

ಸ ವೈ ಭಾಗವತೋ ರಾಜಾ ಪಾಂಡವೇಯೋ ಮಹಾರಥಃ ।
ಬಾಲಕ್ರೀಡನಕೈಃ ಕ್ರೀಡನ್ ಕೃಷ್ಣಕ್ರೀಡಾಂ ಯ ಆದದೇ ॥ ೧೫ ॥

ವೈಯಾಸಕಿಶ್ಚ ಭಗವಾನ್ ವಾಸುದೇವಪರಾಯಣಃ ।
ಉರುಗಾಯಗುಣೋದಾರಾಃ ಸತಾಂ ಸ್ಯುರ್ಹಿ ಸಮಾಗಮೇ ॥ ೧೬ ॥

ಆಯುರ್ಹರತಿ ವೈ ಪುಂಸಾಂ ಉದ್ಯನ್ನಸ್ತಂ ಚ ಯನ್ನಸೌ ।
ತಸ್ಯರ್ತೇ ಯತ್ಕ್ಷಣೋ ನೀತ ಉತ್ತಮಶ್ಲೋಕವಾರ್ತಯಾ ॥ ೧೭ ॥

ತರವಃ ಕಿಂ ನ ಜೀವಂತಿ ಭಸ್ತ್ರಾಃ ಕಿಂ ನ ಶ್ವಸಂತ್ಯುತ ।
ನ ಖಾದಂತಿ ನ ಮೇಹಂತಿ ಕಿಂ ಗ್ರಾಮಪಶವೋಽಪರೇ ॥ ೧೮ ॥

ಶ್ವವಿಡ್ವರಾಹೋಷ್ಟ್ರಖರೈಃ ಸಂಸ್ತುತಃ ಪುರುಷಃ ಪಶುಃ ।
ನ ಯತ್ಕರ್ಣಪಥೋಪೇತೋ ಜಾತು ನಾಮ ಗದಾಗ್ರಜಃ ॥ ೧೯ ॥

ಬಿಲೇ ಬತೋರುಕ್ರಮವಿಕ್ರಮಾನ್ ಯೇ
ನ ಶೃಣ್ವತಃ ಕರ್ಣಪುಟೇ ನರಸ್ಯ ।
ಜಿಹ್ವಾಸತೀ ದಾರ್ದುರಿಕೇವ ಸೂತ
ನ ಚೋಪಗಾಯತ್ಯುರುಗಾಯಗಾಥಾಃ ॥ ೨೦ ॥

ಭಾರಃ ಪರಂ ಪಟ್ಟಕಿರೀಟಜುಷ್ಟ-
ಮಪ್ಯುತ್ತಮಾಂಗಂ ನ ನಮೇನ್ಮುಕುಂದಮ್ ।
ಶಾವೌ ಕರೌ ನೋ ಕುರುತಃ ಸಪರ್ಯಾಂ
ಹರೇರ್ಲಸತ್ಕಾಂಚನಕಂಕಣೌ ವಾ ॥ ೨೧ ॥

ಬರ್ಹಾಯಿತೇ ತೇ ನಯನೇ ನರಾಣಾಂ
ಲಿಂಗಾನಿ ವಿಷ್ಣೋರ್ನ ನಿರೀಕ್ಷತೋ ಯೇ ।
ಪಾದೌ ನೃಣಾಂ ತೌ ದ್ರುಮಜನ್ಮಭಾಜೌ
ಕ್ಷೇತ್ರಾಣಿ ನಾನುವ್ರಜತೋ ಹರೇರ್ಯೌ ॥ ೨೨ ॥

ಶೌನಕರು ಕೇಳುತ್ತಾರೆ – ಸೂತಪುರಾಣಿಕರೇ! ಶುಕಮಹಾಮುನಿಗಳು ಹೇಳಿದ ಮಾತನ್ನು ಕೇಳಿದ ಭರತಕುಲತಿಲಕನಾದ ಪರೀಕ್ಷಿದ್ರಾಜನು ಜ್ಞಾನಿಶ್ರೇಷ್ಠರೂ, ವರ್ಣನಕಲಾನಿಪುಣರೂ ಆದ ವ್ಯಾಸಪುತ್ರರನ್ನು ಮತ್ತೇನು ಪ್ರಶ್ನಿಸಿದರು? ॥ ೧೩ ॥ ಮಹಾತ್ಮರಾದ ಸೂತರೇ! ನೀವಾದರೋ ಎಲ್ಲವನ್ನೂ ಬಲ್ಲವರಾಗಿದ್ದೀರಿ. ಸತ್ಪುರುಷರು ಸೇರಿದ ಸಭೆಯಲ್ಲಿ ಭಗವಂತನ ಕಥಾಮೃತದ ಆಸ್ವಾದನೆಯಲ್ಲೇ ಪರ್ಯವಸಾನ ಹೊಂದುವ ಮಾತುಗಳೇ ನಡೆಯುವುವು ತಾನೇ? ನಾವುಗಳು ಅದನ್ನು ಪ್ರೇಮದಿಂದ ಕೇಳಬಯಸುವೆವು. ನೀವು ದಯವಿಟ್ಟು ಹೇಳುವವರಾಗಿರಿ. ॥ ೧೪ ॥ ಪಾಂಡವಕುಲನಂದನನಾದ ಮಹಾರಥೀ ಪರೀಕ್ಷಿದ್ರಾಜನು ಪರಮ ಭಾಗವತೋತ್ತಮನಾಗಿದ್ದನು. ಬಾಲ್ಯದಲ್ಲಿ ಆಟವಾಡುವಾಗಲೂ ಶ್ರೀಕೃಷ್ಣನ ಸಂಬಂಧವಾದ ಆಟಗಳಿಂದಲೇ ಹೆಚ್ಚಿನ ರಸವನ್ನು ಅನುಭವಿಸುತ್ತಿದ್ದನು. ॥ ೧೫ ॥ ಭಗವತ್ಸ್ವರೂಪ ಶ್ರೀಶುಕಮಹಾಮುನಿಗಳೂ ಕೂಡ ಹುಟ್ಟಿದಂದಿನಿಂದಲೇ ಭಗವತ್ಪರಾಯಣರಾಗಿದ್ದರು. ಇಂತಹ ಸತ್ಪುರುಷರ ಸಮಾಗಮವಾದಾಗ ಭಗವಂತನ ಮಂಗಳಮಯ ಗುಣಗಳ ದಿವ್ಯ ಚರ್ಚೆಯೇ ಅವಶ್ಯವಾಗಿ ನಡೆದಿರಬೇಕು. ॥ ೧೬ ॥ ಮನುಷ್ಯರ ಜೀವನದಲ್ಲಿ ಭಗವಾನ್ ಶ್ರೀಕೃಷ್ಣನ ಅನಂತಕಲ್ಯಾಣಗುಣಗಳ ಗಾನ-ಶ್ರವಣದಲ್ಲಿ ಕಳೆಯುವ ಕಾಲವೇ ಸಾರ್ಥಕವಾದ ಕಾಲವು. ಬೇರೆ ರೀತಿಯಲ್ಲಿ ಕಳೆದ ಆಯುಸ್ಸು ವ್ಯರ್ಥವೇ ಸರಿ. ಭಗವಾನ್ ಭಾಸ್ಕರನು ಪ್ರತಿದಿನವೂ ಉದಯಾಸ್ತದಿಂದ ಅವರ ಆಯುಸ್ಸನ್ನು ಕಸಿದುಕೊಳ್ಳುವನು. ॥ ೧೭ ॥ ವೃಕ್ಷಗಳು ಜೀವಿಸುತ್ತಿಲ್ಲವೇ? ಕಮ್ಮಾರನ ಚರ್ಮದ ತಿದಿಯು ಉಸಿರಾಡುವುದಿಲ್ಲವೇ? ಗ್ರಾಮದ ಸಾಕುಪ್ರಾಣಿಗಳು ಮನುಷ್ಯರಂತೆ ತಿಂದುಂಡು ಬದುಕುವುದಿಲ್ಲವೇ? ಶ್ರೀಕೃಷ್ಣನ ಕಥಾಮೃತವು ಯಾವಾಗಲೂ ಕಿವಿಗೆ ಬೀಳದಿರುವ ನರಪಶುವು – ನಾಯಿ, ಹಂದಿ, ಒಂಟೆ, ಕತ್ತೆಗಳಿಗಿಂತಲೂ ನೀಚನೆಂದು ತಿಳಿಯಬೇಕು. ॥ ೧೮-೧೯ ॥

ಸೂತಪುರಾಣಿಕರೇ! ಭಗವಾನ್ ಶ್ರೀಕೃಷ್ಣನ ದಿವ್ಯಕಥೆಯನ್ನು ಕೇಳದೆ ಇರುವ ಮನುಷ್ಯನ ಕಿವಿಗಳು ಇಲಿಗಳ ಬಿಲದಂತೆಯಲ್ಲವೇ? ಹಾಗೆಯೇ ಆ ಭಗವಂತನ ಲೀಲಾ-ಕಥೆಗಳನ್ನು ಹಾಡದವನ ನಾಲಿಗೆಯು ಕಪ್ಪೆಗಳ ನಾಲಿಗೆಗೆ ಸಮಾನವಲ್ಲವೇ? ॥ ೨೦ ॥ ಭಗವಾನ್ ಮುಕುಂದನ ಚರಣಗಳಿಗೆ ಎರಗದಿರುವ ತಲೆಯು ರೇಷ್ಮೆಯ ರುಮಾಲು, ರತ್ನಕಿರೀಟಗಳಿಂದ ಕೂಡಿದ್ದರೂ ಕೇವಲ ಹೊರೆಯೆಂದೇ ಭಾವಿಸಬೇಕು. ಶ್ರೀಭಗವಂತನ ಸೇವೆ-ಪೂಜೆಗಳನ್ನು ಮಾಡದ ಕೈಗಳು ಥಳ-ಥಳಿಸುವ ಚಿನ್ನದ ಕಂಕಣಗಳಿಂದ ಕೂಡಿದ್ದರೂ ಹೆಣದ ಕೈಗಳಂತೆ ಆಗಿವೆ. ॥ ೨೧ ॥ ಭಗವಂತನ ಸ್ಮರಣೆ ಹೊಂದಿಸುವಂತಹ ಮೂರ್ತಿ, ತೀರ್ಥ, ನದಿಗಳನ್ನು ದರ್ಶಿಸದೇ ಇರುವ ಕಣ್ಣುಗಳು ನವಿಲುಗರಿಯ ಕಣ್ಣುಗಳಂತೆ ಇವೆ. ಭಗವಂತನ ದಿವ್ಯ ಕ್ಷೇತ್ರಗಳಿಗೆ ಹೋಗದಿರುವ ಕಾಲುಗಳು ಮರಗಾಲುಗಳೇ ಸರಿ. ಅಥವಾ ವೃಕ್ಷಜಾತಿಯ ಜೀವಿಗಳಿಗೆ ಸಮಾನವಾದ ಕಾಲುಗಳು. ವೃಕ್ಷಗಳಲ್ಲಿ ಚೈತನ್ಯವಿದ್ದರೂ ಅವು ನಡೆಯಲಾರವು. ॥ ೨೨ ॥

ಜೀವಚ್ಛವೋ ಭಾಗವತಾಂಘ್ರಿರೇಣುಂ
ನ ಜಾತು ಮರ್ತ್ಯೋಽಭಿಲಭೇತ ಯಸ್ತು ।
ಶ್ರೀವಿಷ್ಣುಪದ್ಯಾ ಮನುಜಸ್ತುಲಸ್ಯಾಃ
ಶ್ವಸಂಚ್ಛವೋ ಯಸ್ತು ನ ವೇದ ಗಂಧಮ್ ॥ ೨೩ ॥

ತದಶ್ಮಸಾರಂ ಹೃದಯಂ ಬತೇದಂ
ಯದ್ಗೃಹ್ಯಮಾಣೈರ್ಹರಿನಾಮಧೇಯೈಃ ।
ನ ವಿಕ್ರಿಯೇತಾಥ ಯದಾ ವಿಕಾರೋ
ನೇತ್ರೇ ಜಲಂ ಗಾತ್ರರುಹೇಷು ಹರ್ಷಃ ॥ ೨೪ ॥

ಅಥಾಭಿಧೇಹ್ಯಂಗ ಮನೋಽನುಕೂಲಂ
ಪ್ರಭಾಷಸೇ ಭಾಗವತಪ್ರಧಾನಃ ।
ಯದಾಹ ವೈಯಾಸಕಿರಾತ್ಮವಿದ್ಯಾ-
ವಿಶಾರದೋ ನೃಪತಿಂ ಸಾಧು ಪೃಷ್ಟಃ ॥ ೨೫ ॥

ಭಗವದ್ಭಕ್ತರಾದ ಸಂತರ ಚರಣಧೂಳಿಯನ್ನು ಎಂದೂ ತಲೆಯಮೇಲೆ ಮುಡಿದುಕೊಳ್ಳದ ಮನುಷ್ಯನು ಬದುಕಿದ್ದರೂ ಶವಕ್ಕೆ ಸಮಾನನು. ಶ್ರೀಕೃಷ್ಣನ ಚರಣಗಳಿಗೆ ಅರ್ಪಿಸಿದ ತುಳಸಿಯನ್ನು ಆಘ್ರಾಣಿಸದ ಮನುಷ್ಯನು ಉಸಿರಾಡುತ್ತಿದ್ದರೂ ಹೆಣದಂತೆಯೇ ಆಗಿದ್ದಾನೆ. ॥ ೨೩ ॥ ಸೂತಪುರಾಣಿಕರೇ! ಭಗವಾನ್ ಶ್ರೀಹರಿಯ ದಿವ್ಯನಾಮಗಳ ಶ್ರವಣ-ಸಂಕೀರ್ತನೆಗಳು ನಡೆಯುತ್ತಿದ್ದರೂ ಯಾರ ಹೃದಯವು ಕರಗುವುದಿಲ್ಲವೋ ಅದರ ಪರಿಣಾಮವಾಗಿ ಕಣ್ಣುಗಳಲ್ಲಿ ಆನಂದಾಶ್ರುಗಳು ಒಸರುವುದಿಲ್ಲವೋ, ಹರ್ಷದ ರೋಮಾಂಚನ ಉಂಟಾಗುವುದಿಲ್ಲವೋ, ಅದು ವಾಸ್ತವ ಹೃದಯವಾಗಿರದೆ ಕಬ್ಬಿಣದ ತುಂಡೇ ಆಗಿದೆ. ॥ ೨೪ ॥ ಮಹಾತ್ಮರೇ! ನಿಮ್ಮ ಮಧುರವಾದ ವಾಣಿಯು ಮನಸ್ಸಿಗೆ ರಮಣೀಯವಾಗಿ, ಅತ್ಯಂತ ಹಿತಕರವಾಗಿದೆ. ಪರೀಕ್ಷಿದ್ರಾಜನು ಶ್ರದ್ಧಾ-ಭಕ್ತಿಗಳಿಂದ ಕೇಳಿದ ಪ್ರಶ್ನೆಗಳಿಗೆ ಭಾಗವತ ಪ್ರಮುಖರಾದ ಆತ್ಮವಿದ್ಯಾ ವಿಶಾರದರಾದ ಶ್ರೀಶುಕಮಹಾಮುನಿಗಳು ಏನು ಅಪ್ಪಣೆ ಕೊಡಿಸಿದರೋ ಅದನ್ನು ನಮಗೆ ದಯಮಾಡಿ ತಿಳಿಸುವವರಾಗಿರಿ. ॥ ೨೫ ॥

ಮೂರನೆಯ ಅಧ್ಯಾಯವು ಮುಗಿಯಿತು. ॥ ೩ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದ್ವಿತೀಯಸ್ಕಂಧೇ ತೃತೀಯೋಽಧ್ಯಾಯಃ ॥ ೩ ॥

ನಾಲ್ಕನೆಯ ಅಧ್ಯಾಯ

ಸೃಷ್ಟಿವಿಷಯಕ ರಾಜನ ಪ್ರಶ್ನೆ – ಶ್ರೀಶುಕಮಹಾಮುನಿಗಳ ಕಥಾರಂಭ

ಸೂತ ಉವಾಚ

ವೈಯಾಸಕೇರಿತಿ ವಚಸ್ತತ್ತ್ವನಿಶ್ಚಯಮಾತ್ಮನಃ ।
ಉಪಧಾರ್ಯ ಮತಿಂ ಕೃಷ್ಣೇ ಔತ್ತರೇಯಃ ಸತೀಂ ವ್ಯಧಾತ್ ॥ ೧ ॥

ಆತ್ಮಜಾಯಾಸುತಾಗಾರಪಶುದ್ರವಿಣಬಂಧುಷು ।
ರಾಜ್ಯೇ ಚಾವಿಕಲೇ ನಿತ್ಯಂ ವಿರೂಢಾಂ ಮಮತಾಂ ಜಹೌ ॥ ೨ ॥

ಪಪ್ರಚ್ಛ ಚೇಮಮೇವಾರ್ಥಂ ಯನ್ಮಾಂ ಪೃಚ್ಛಥ ಸತ್ತಮಾಃ ।
ಕೃಷ್ಣಾನುಭಾವಶ್ರವಣೇ ಶ್ರದ್ದಧಾನೋ ಮಹಾಮನಾಃ ॥ ೩ ॥

ಸಂಸ್ಥಾಂ ವಿಜ್ಞಾಯ ಸಂನ್ಯಸ್ಯ ಕರ್ಮ ತ್ರೈವರ್ಗಿಕಂ ಚ ಯತ್ ।
ವಾಸುದೇವೇ ಭಗವತಿ ಆತ್ಮಭಾವಂ ದೃಢಂ ಗತಃ ॥ ೪ ॥

ಸೂತಪುರಾಣಿಕರು ಹೇಳುತ್ತಾರೆ – ಶೌನಕಾದಿ ಮಹರ್ಷಿಗಳೇ! ಪರಮಾತ್ಮತತ್ತ್ವದ ಬಗೆಗೆ ನಿಶ್ಚಯವನ್ನುಂಟು ಮಾಡುವ ಶ್ರೀಶುಕಮಹಾಮುನಿಗಳ ಉಪದೇಶವನ್ನು ಕೇಳಿದೊಡನೆಯೇ, ಪರೀಕ್ಷಿದ್ರಾಜನು ತನ್ನ ಪರಿಶುದ್ಧವಾದ ಬುದ್ಧಿಯನ್ನು ಅನನ್ಯ ಭಾವದಿಂದ ಭಗವಾನ್ ಶ್ರೀಕೃಷ್ಣನ ಚರಣಾರವಿಂದಗಳಲ್ಲಿ ಸಮರ್ಪಿಸಿಬಿಟ್ಟನು. ॥ ೧ ॥ ಶರೀರ, ಪತ್ನೀ, ಪುತ್ರರು, ಅರಮನೆ, ಪಶು, ಧನ, ಬಂಧು-ಮಿತ್ರರು ಮತ್ತು ನಿಷ್ಕಂಟಕರಾಜ್ಯ ಇವುಗಳಲ್ಲಿ ಉಂಟಾಗಿದ್ದ ದೃಢವಾದ ಮಮತೆಯನ್ನು ಅವನು ಒಂದೇ ಕ್ಷಣದಲ್ಲಿ ತ್ಯಜಿಸಿಬಿಟ್ಟನು. ॥ ೨ ॥ ಎಲೈ ಮುನಿಶ್ರೇಷ್ಠರೇ! ಮಹಾತ್ಮನಾದ ಪರೀಕ್ಷಿದ್ರಾಜನು ತನ್ನ ಮೃತ್ಯುವಿನ ನಿಶ್ಚಿತ ಸಮಯವನ್ನು ಅರಿತಿದ್ದನು. ಅದಕ್ಕಾಗಿ ಅವನು ಧರ್ಮ, ಅರ್ಥ, ಕಾಮ ಇವುಗಳಿಗೆ ಸಂಬಂಧಿಸಿದ ಎಲ್ಲ ಕರ್ಮಗಳನ್ನು ಸಂನ್ಯಾಸ ಮಾಡಿದನು. ಬಳಿಕ ಭಗವಾನ್ ಶ್ರೀಕೃಷ್ಣನಲ್ಲಿ ಆತ್ಮಭಾವವನ್ನು ಹೊಂದಿ, ಪೂರ್ಣಶ್ರದ್ಧೆಯಿಂದ ಭಗವಾನ್ ಶ್ರೀಕೃಷ್ಣನ ಮಹಿಮೆಯನ್ನು ಕೇಳಲು ಅವನು ಶ್ರೀಶುಕಮುನಿಗಳಲ್ಲಿ ಪ್ರಶ್ನೆಯನ್ನು ಮಾಡಿದನು. ಅದನ್ನೇ ನೀವುಗಳೂ ನನ್ನಲ್ಲಿ ಕೇಳುತ್ತಿದ್ದೀರಲ್ಲ! ॥ ೩-೪ ॥

ರಾಜೋವಾಚ

ಸಮೀಚೀನಂ ವಚೋ ಬ್ರಹ್ಮನ್ಸರ್ವಜ್ಞಸ್ಯ ತವಾನಘ ।
ತಮೋ ವಿಶೀರ್ಯತೇ ಮಹ್ಯಂ ಹರೇಃ ಕಥಯತಃ ಕಥಾಮ್ ॥ ೫ ॥

ಭೂಯ ಏವ ವಿವಿತ್ಸಾಮಿ ಭಗವಾನಾತ್ಮಮಾಯಯಾ ।
ಯಥೇದಂ ಸೃಜತೇ ವಿಶ್ವಂ ದುರ್ವಿಭಾವ್ಯಮಧೀಶ್ವರೈಃ ॥ ೬ ॥

ಯಥಾ ಗೋಪಾಯತಿ ವಿಭುರ್ಯಥಾ ಸಂಯಚ್ಛತೇ ಪುನಃ ।
ಯಾಂ ಯಾಂ ಶಕ್ತಿಮುಪಾಶ್ರಿತ್ಯ ಪುರುಶಕ್ತಿಃ ಪರಃ ಪುಮಾನ್ ।
ಆತ್ಮಾನಂ ಕ್ರೀಡಯನ್ಕ್ರೀಡನ್ಕರೋತಿ ವಿಕರೋತಿ ಚ ॥ ೭ ॥

ನೂನಂ ಭಗವತೋ ಬ್ರಹ್ಮನ್ ಹರೇರದ್ಭುತಕರ್ಮಣಃ ।
ದುರ್ವಿಭಾವ್ಯಮಿವಾಭಾತಿ ಕವಿಭಿಶ್ಚಾಪಿ ಚೇಷ್ಟಿತಮ್ ॥ ೮ ॥

ಯಥಾ ಗುಣಾಂಸ್ತು ಪ್ರಕೃತೇರ್ಯುಗಪತ್ಕ್ರಮಶೋಽಪಿ ವಾ ।
ಬಿಭರ್ತಿ ಭೂರಿಶಸ್ತ್ವೇಕಃ ಕುರ್ವನ್ ಕರ್ಮಾಣಿ ಜನ್ಮಭಿಃ ॥ ೯ ॥

ವಿಚಿಕಿತ್ಸಿತಮೇತನ್ಮೇ ಬ್ರವೀತು ಭಗವಾನ್ಯಥಾ ।
ಶಾಬ್ದೇ ಬ್ರಹ್ಮಣಿ ನಿಷ್ಣಾತಃ ಪರಸ್ಮಿಂಶ್ಚ ಭವಾನ್ಖಲು ॥ ೧೦ ॥

ಸೂತ ಉವಾಚ

ಇತ್ಯುಪಾಮಂತ್ರಿತೋ ರಾಜ್ಞಾ ಗುಣಾನುಕಥನೇ ಹರೇಃ ।
ಹೃಷೀಕೇಶಮನುಸ್ಮೃತ್ಯ ಪ್ರತಿವಕ್ತುಂ ಪ್ರಚಕ್ರಮೇ ॥ ೧೧ ॥

ಶ್ರೀಶುಕ ಉವಾಚ

ನಮಃ ಪರಸ್ಮೈ ಪುರುಷಾಯ ಭೂಯಸೇ
ಸದುದ್ಭವಸ್ಥಾನನಿರೋಧಲೀಲಯಾ ।
ಗೃಹೀತಶಕ್ತಿತ್ರಿತಯಾಯ ದೇಹಿನಾ-
ಮಂತರ್ಭವಾಯಾನುಪಲಕ್ಷ್ಯವರ್ತ್ಮನೇ ॥ ೧೨ ॥

ಪರೀಕ್ಷಿದ್ರಾಜನು ಕೇಳಿದನು – ಬ್ರಹ್ಮರ್ಷಿಗಳೇ ! ಸರ್ವಜ್ಞರೂ, ಪರಮಪವಿತ್ರರೂ ಆದ ಮಹಾತ್ಮರೇ ! ತಮ್ಮ ಮಾತು ಅತ್ಯಂತ ಶ್ರೇಷ್ಠ ಹಾಗೂ ಸಮುಚಿತವಾಗಿದೆ. ತಾವು ಶ್ರೀಭಗವಂತನ ಕಥೆಯನ್ನು ಹೇಳುತ್ತಿರುವಂತೆ ನನ್ನ ಅಜ್ಞಾನದ ಪರೆಯೂ ಕಳಚಿಕೊಳ್ಳುತ್ತಿದೆ. ಜ್ಞಾನದ ಬೆಳಕನ್ನು ಕಾಣುತ್ತಿದ್ದೇನೆ. ॥ ೫ ॥ ಶ್ರೀಭಗವಂತನು ತನ್ನ ಮಾಯೆಯಿಂದ ಈ ಜಗತ್ತನ್ನು ಹೇಗೆ ಸೃಷ್ಟಿಮಾಡುತ್ತಾನೆ ಎಂಬುದನ್ನು ಇನ್ನೂ ವಿಸ್ತಾರವಾಗಿ ತಿಳಿಯಬಯಸುತ್ತೇನೆ. ಈ ಸೃಷ್ಟಿಯು ಅತ್ಯಂತ ರಹಸ್ಯಮಯವಾಗಿದೆ. ಬ್ರಹ್ಮಾದಿ ದೇವತೆಗಳಿಗೂ ಇದನ್ನು ತಿಳಿಯಲು ಕಷ್ಟವಾಗಿದೆ. ॥ ೬ ॥ ಭಗವಂತನು ಈ ವಿಶ್ವವನ್ನು ಹೇಗೆ ರಕ್ಷಿಸುತ್ತಾನೆ ? ಮತ್ತೆ ಹೇಗೆ ಸಂಹರಿಸುತ್ತಾನೆ ? ಅನಂತ ಶಕ್ತಿಯುಳ್ಳ ಆ ಪರಮಾತ್ಮನು ಯಾವ-ಯಾವ ಶಕ್ತಿಗಳನ್ನು ಆಶ್ರಯಿಸಿ ಈ ಸೃಷ್ಟಿ ಸ್ಥಿತಿ, ಲಯರೂಪಗಳಲ್ಲಿ ತಾನೇ ಆಟಿಗೆಗಳಾಗಿ ಆಟವಾಡುತ್ತಾನೆ ? ಮಕ್ಕಳು ಆಟಕ್ಕಾಗಿ ಮಣ್ಣಿನಿಂದ ಮನೆಗಳನ್ನು ಕಟ್ಟುವಂತೆ ಈ ಬ್ರಹ್ಮಾಂಡಗಳನ್ನು ರಚಿಸಿ, ಅವುಗಳನ್ನು ನಾಶಪಡಿಸುವ ಆಟವನ್ನು ಹೇಗೆ ಆಡುತ್ತಾನೆ ? ಹೀಗೆ ಮಾಡುವಾಗಲೂ ಅವನಲ್ಲಿ ಯಾವುದೇ ಆಸಕ್ತಿ ಇರುವುದಿಲ್ಲವಲ್ಲ! ಅವನು ಇದರಿಂದ ಅಸಂಗನಾಗಿಯೇ ಇರುವನಲ್ಲ! ॥ ೭ ॥ ಭಗವಾನ್ ಶ್ರೀಹರಿಯ ಲೀಲೆಗಳು ನಿಜವಾಗಿಯೂ ಅದ್ಭುತ-ಅಚಿಂತ್ಯವಾಗಿವೆ. ಅವನ ಲೀಲೆಗಳ ರಹಸ್ಯವನ್ನು ತಿಳಿಯುವುದು ಮಹಾಜ್ಞಾನಿಗಳಿಗೂ ಅತ್ಯಂತ ಕಷ್ಟವೇ ಸರಿ. ॥ ೮ ॥ ಒಬ್ಬಂಟಿಗನೇ ಆದ ಭಗವಂತನು ಅನೇಕ ಕರ್ಮಗಳನ್ನು ಮಾಡಲು ಪುರುಷರೂಪದಿಂದ ಪ್ರಕೃತಿಯ ಭಿನ್ನ-ಭಿನ್ನವಾದ ಗುಣಗಳನ್ನು ಒಟ್ಟಿಗೆ ಧರಿಸುತ್ತಾನೋ ? ಅಥವಾ ಅನೇಕ ಅವತಾರಗಳನ್ನು ತಾಳಿ ಅವುಗಳನ್ನು ಕ್ರಮಶಃ ಧರಿಸಿಕೊಳ್ಳುತ್ತಾನೋ ? ॥ ೯ ॥ ಪೂಜ್ಯರಾದ ನೀವು ಶಬ್ದಬ್ರಹ್ಮ ವೇದ ಮತ್ತು ಪರಬ್ರಹ್ಮ ಪರಮಾತ್ಮತತ್ತ್ವ ಇವೆರಡೂ ವಿಷಯಗಳಲ್ಲಿ ನಿಷ್ಣಾತರಾದವರು. ಆದ್ದರಿಂದ ನನ್ನ ಸಂದೇಹವನ್ನು ದಯಮಾಡಿ ನಿವಾರಣೆ ಮಾಡಬೇಕು. ॥ ೧೦ ॥

ಸೂತಪುರಾಣಿಕರು ಹೇಳುತ್ತಾರೆ – ರಾಜಾಪರೀಕ್ಷಿತನು ಭಗವಂತನ ಗುಣಗಳನ್ನು ವರ್ಣಿಸಲಿಕ್ಕಾಗಿ ಈ ರೀತಿ ಪ್ರಾರ್ಥಿಸಿದಾಗ ಶುಕಮುನಿಗಳು ಭಗವಾನ್ ಶ್ರೀಕೃಷ್ಣನನ್ನು ಮತ್ತೆ-ಮತ್ತೆ ಸ್ಮರಿಸುತ್ತಾ ತನ್ನ ಪ್ರವಚನವನ್ನು ಪ್ರಾರಂಭಿಸಿದರು. ॥ ೧೧ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಭಗವಾನ್ ಪುರುಷೋತ್ತಮನ ಚರಣಕಮಲಗಳಲ್ಲಿ ನನ್ನ ಕೋಟಿ, ಕೋಟಿ ಪ್ರಣಾಮಗಳು. ಅವನು ವಿಶ್ವದ ಸೃಷ್ಟಿ ಸ್ಥಿತಿ, ಪ್ರಳಯ ಇವುಗಳ ಲೀಲೆಯನ್ನು ನಡೆಸಲು ಸತ್ತ್ವ, ರಜ, ತಮೋಗುಣರೂಪವಾದ ಮೂರು ಶಕ್ತಿಗಳನ್ನು ಸ್ವೀಕರಿಸಿ, ಬ್ರಹ್ಮ ವಿಷ್ಣು ಮಹೇಶ್ವರರ ರೂಪಗಳನ್ನು ಧರಿಸಿಕೊಳ್ಳುವನು. ಅವನು ಸಮಸ್ತ ಚರಾಚರಪ್ರಾಣಿಗಳ ಹೃದಯದಲ್ಲಿ ಅಂತರ್ಯಾಮಿಯಾಗಿ ವಿರಾಜಿಸುತ್ತಿದ್ದಾನೆ. ಅವನನ್ನು ಪಡೆಯುವ ಮಾರ್ಗವು ಬುದ್ಧಿಯ ವಿಷಯವಲ್ಲ. ಅವನು ಸ್ವತಃ ಅನಂತನಾಗಿದ್ದು ಅವನ ಮಹಿಮೆಯೂ ಅನಂತವಾಗಿದೆ. ॥ ೧೨ ॥ ಸಾಧು-ಸಂತರ ದುಃಖಗಳನ್ನು ಹೋಗಲಾಡಿಸಿ ಅವರಿಗೆ ತನ್ನ ಪ್ರೇಮವನ್ನು ಕರುಣಿಸುವವನೂ, ದುಷ್ಟರನ್ನು ದಮನಗೈದು

ಭೂಯೋ ನಮಃ ಸದ್ವೃಜಿನಚ್ಛಿದೇಽಸತಾ-
ಮಸಂಭವಾಯಾಖಿಲಸತ್ತ್ವಮೂರ್ತಯೇ ।
ಪುಂಸಾಂ ಪುನಃ ಪಾರಮಹಂಸ್ಯ ಆಶ್ರಮೇ
ವ್ಯವಸ್ಥಿತಾನಾಮನುಮೃಗ್ಯದಾಶುಷೇ ॥ ೧೩ ॥

ನಮೋ ನಮಸ್ತೇಽಸ್ತ್ವೃಷಭಾಯ ಸಾತ್ವತಾಂ
ವಿದೂರಕಾಷ್ಠಾಯ ಮುಹುಃ ಕುಯೋಗಿನಾಮ್ ।
ನಿರಸ್ತಸಾಮ್ಯಾತಿಶಯೇನ ರಾಧಸಾ
ಸ್ವಧಾಮನಿ ಬ್ರಹ್ಮಣಿ ರಂಸ್ಯತೇ ನಮಃ ॥ ೧೪ ॥

ಯತ್ಕೀರ್ತನಂ ಯತ್ಸ್ಮರಣಂ ಯದೀಕ್ಷಣಂ
ಯದ್ವಂದನಂ ಯಚ್ಛ್ರವಣಂ ಯದರ್ಹಣಮ್ ।
ಲೋಕಸ್ಯ ಸದ್ಯೋ ವಿಧುನೋತಿ ಕಲ್ಮಷಂ
ತಸ್ಮೈ ಸುಭದ್ರಶ್ರವಸೇ ನಮೋ ನಮಃ ॥ ೧೫ ॥

ವಿಚಕ್ಷಣಾ ಯಚ್ಚರಣೋಪಸಾದನಾತ್
ಸಂಗಂ ವ್ಯುದಸ್ಯೋಭಯತೋಽಂತರಾತ್ಮನಃ ।
ವಿಂದಂತಿ ಹಿ ಬ್ರಹ್ಮಗತಿಂ ಗತಕ್ಲಮಾ-
ಸ್ತಸ್ಮೈ ಸುಭದ್ರಶ್ರವಸೇ ನಮೋ ನಮಃ ॥ ೧೬ ॥

ತಪಸ್ವಿನೋ ದಾನಪರಾ ಯಶಸ್ವಿನೋ
ಮನಸ್ವಿನೋ ಮಂತ್ರವಿದಃ ಸುಮಂಗಲಾಃ ।
ಕ್ಷೇಮಂ ನ ವಿಂದಂತಿ ವಿನಾ ಯದರ್ಪಣಂ
ತಸ್ಮೈ ಸುಭದ್ರಶ್ರವಸೇ ನಮೋ ನಮಃ ॥ ೧೭ ॥

ಕಿರಾತಹೂಣಾಂಧ್ರಪುಲಿಂದಪುಲ್ಕಸಾ
ಆಭೀರಕಂಕಾಯವನಾಃ ಖಸಾದಯಃ ।
ಯೇಽನ್ಯೇ ಚ ಪಾಪಾ ಯದುಪಾಶ್ರಯಾಶ್ರಯಾಃ
ಶುದ್ಧ್ಯಂತಿ ತಸ್ಮೈ ಪ್ರಭವಿಷ್ಣವೇ ನಮಃ ॥ ೧೮ ॥

ಸ ಏಷ ಆತ್ಮಾಽಽತ್ಮವತಾಮಧೀಶ್ವರ-
ಸ್ತ್ರಯೀಮಯೋ ಧರ್ಮಮಯಸ್ತಪೋಮಯಃ ।
ಗತವ್ಯಲೀಕೈರಜಶಂಕರಾದಿಭಿ-
ರ್ವಿತರ್ಕ್ಯಲಿಂಗೋ ಭಗವಾನ್ಪ್ರಸೀದತಾಮ್ ॥ ೧೯ ॥

ಅವರಿಗೆ ಮುಕ್ತಿಯನ್ನು ಕೊಡುವವನೂ, ಪರಮಹಂಸಾಶ್ರಮದಲ್ಲಿ ಇರುವವರ ಅಭೀಷ್ಟವಾದ ವಸ್ತುವನ್ನು ಅನುಗ್ರಹಿಸುವವನೂ, ಸರ್ವಸಮನಾಗಿದ್ದು ಸರ್ವರಿಗೂ ಕಲ್ಯಾಣವನ್ನುಂಟುಮಾಡುವವನೂ ಆದ ಆ ಪರಮಾತ್ಮನಿಗೆ ಪುನಃ ಪುನಃ ನಮಸ್ಕರಿಸುತ್ತೇನೆ. ॥ ೧೩ ॥ ಅವನು ಬಹಳ ಭಕ್ತವತ್ಸಲನಾಗಿರುವನು. ಹಟದಿಂದ ಭಕ್ತಿಹೀನ ಸಾಧನೆ ಮಾಡುವವರು ಅವನ ನೆರಳನ್ನೂ ಮುಟ್ಟಲಾರರು. ಅವನಂತೆ ಯಾರಿಗೂ ಐಶ್ವರ್ಯ ಇಲ್ಲದಿರುವಾಗ ಅವನಿಗಿಂತ ಹೆಚ್ಚಿಗೆ ಹೇಗಿದ್ದೀತು ? ಇಂತಹ ಐಶ್ವರ್ಯದಿಂದ ಕೂಡಿದವನಾಗಿ ನಿರಂತರವಾಗಿ ಬ್ರಹ್ಮಸ್ವರೂಪವಾದ ತನ್ನ ಧಾಮದಲ್ಲಿ ವಿಹರಿಸುತ್ತಿರುವ ಆ ಭಗವಾನ್ ಶ್ರೀಕೃಷ್ಣನಿಗೆ ಪದೇ-ಪದೇ ನಮಸ್ಕಾರಗಳು. ॥ ೧೪ ॥ ಯಾರ ಕೀರ್ತನೆ, ಸ್ಮರಣೆ, ದರ್ಶನ, ವಂದನೆ, ಶ್ರವಣ, ಪೂಜೆಗಳು ಜೀವರ ಪಾಪಗಳನ್ನು ತತ್‌ಕ್ಷಣದಲ್ಲೇ ನಾಶಮಾಡುತ್ತವೆಯೋ, ಅಂತಹ ಪುಣ್ಯಕೀರ್ತಿಯಾದ ಭಗವಾನ್ ಶ್ರೀಕೃಷ್ಣನಿಗೆ ನಮೋ ನಮಃ ॥ ೧೫ ॥ ವಿವೇಕಿಗಳು ಯಾರ ಚರಣಕಮಲಗಳಲ್ಲಿ ಶರಣಾಗತರಾಗಿ ತಮ್ಮ ಹೃದಯದಿಂದ ಇಹಲೋಕ-ಪರಲೋಕಗಳ ಆಸಕ್ತಿಯನ್ನು ಕಿತ್ತೊಗೆಯುವರೋ, ಯಾವುದೇ ಪರಿಶ್ರಮವಿಲ್ಲದೆ ಬ್ರಹ್ಮಪದವನ್ನು ಪಡೆದುಕೊಳ್ಳುವರೋ, ಆ ಮಂಗಳಕೀರ್ತಿಯಾದ ಭಗವಾನ್ ಶ್ರೀಕೃಷ್ಣನಿಗೆ ಅನೇಕ ಬಾರಿ ನಮಸ್ಕಾರಗಳು. ॥ ೧೬ ॥ ಎಷ್ಟೇ ದೊಡ್ಡ ತಪಸ್ವಿಗಳಾಗಲೀ, ದಾನಿಗಳಾಗಲೀ, ಯಶಸ್ವಿಗಳಾಗಲೀ, ಪ್ರಶಸ್ತಮನಸ್ಸುಳ್ಳವರಾಗಲೀ, ಮಂತ್ರಜ್ಞರಾಗಲೀ, ಸದಾಚಾರಿಗಳಾಗಲೀ – ತಮ್ಮ ಸಾಧನೆಯನ್ನು ಹಾಗೂ ತಮ್ಮನ್ನೂ ಆತನ ಚರಣಾರವಿಂದಗಳಲ್ಲಿ ಸಮರ್ಪಣೆಮಾಡದೆ ಹೋದರೆ ಅವರಿಗೆ ಶ್ರೇಯಸ್ಸು ದೊರೆಯಲಾರದು. ಅಂತಹ ಕಲ್ಯಾಣಕೀರ್ತಿಯುಳ್ಳ ಭಗವಂತನಿಗೆ ಕೋಟಿ-ಕೋಟಿ ನಮಸ್ಕಾರಗಳು. ॥ ೧೭ ॥ ಕಿರಾತರಾಗಲೀ, ಹೂಣರಾಗಲೀ, ಆಂಧ್ರರಾಗಲೀ, ಪುಲಿಂದರಾಗಲೀ, ಪುಲ್ಕಸರಾಗಲೀ, ಆಭೀರರಾಗಲೀ, ಕಂಕರಾಗಲೀ, ಯವನರಾಗಲೀ, ಖಸರಾಗಲೀ, ಇತರ ಯಾವುದೇ ಜಾತಿಯವರೇ ಆಗಲೀ, ಎಂತಹ ಪಾಪಿಷ್ಠನೇ ಆಗಲೀ, ಯಾರ ಶರಣಾಗತ ಭಕ್ತರಲ್ಲಿ ಶರಣಾದರೆ ಪವಿತ್ರರಾಗುವರೋ, ಅಂತಹ ಸರ್ವಶಕ್ತಿಯುಳ್ಳ ಭಗವಂತನಿಗೆ ನಮಸ್ಕಾರವು. ॥ ೧೮ ॥ ಆತ್ಮಜ್ಞಾನಿಗಳ ಆತ್ಮಸ್ವರೂಪನಾಗಿಯೂ, ಭಕ್ತರಿಗೆ ಸ್ವಾಮಿಯಾಗಿಯೂ, ಕರ್ಮಕಾಂಡಿಗಳಿಗೆ ವೇದಮೂರ್ತಿಯಾಗಿಯೂ, ಧಾರ್ಮಿಕರಿಗೆ ಧರ್ಮಸ್ವರೂಪನೂ ಆಗಿ, ತಪಸ್ವಿಗಳಿಗೆ ತಪಸ್ಸ್ವರೂಪಿಯಾಗಿ, ಅವನೇ ಆಗಿದ್ದಾನೆ. ಬ್ರಹ್ಮರುದ್ರಾದಿ ದೇವತೆಗಳೂ ಕೂಡ ತಮ್ಮ ಶುದ್ಧ ಹೃದಯದಿಂದ ಅವನ ಸ್ವರೂಪವನ್ನೇ ಚಿಂತಿಸುತ್ತಾ ಆಶ್ಚರ್ಯಚಕಿತರಾಗಿ ನೋಡುತ್ತಾ ಇರುತ್ತಾರೆ. ಅಂತಹ ಆ ಭಗವಂತನು ನನ್ನ ಮೇಲೆ ಅನುಗ್ರಹದ ಮಳೆಗರೆಯಲಿ. ॥ ೧೯ ॥ ಶ್ರೀದೇವಿಯ ಪತಿಯೂ, ಯಜ್ಞಗಳ ಅಧಿಪತಿಯೂ, ಪ್ರಜಾಪತಿಯೂ, ಬುದ್ಧಿಗಳ ಒಡೆಯನೂ, ಸರ್ವಲೋಕ ಪತಿಯೂ, ಧರಾಧಿಪತಿಯೂ, ಯದುಕುಲದಲ್ಲಿ ಅವತರಿಸಿ ಅಂಧಕ, ವೃಷ್ಣಿ ಸಾತ್ವತರೇ ಮುಂತಾದ ಯಾದವರ ರಕ್ಷಕನೂ, ಪರಮಗತಿಯೂ ಆಗಿ ಬೆಳಗಿದ ಭಕ್ತವತ್ಸಲನೂ,

ಶ್ರಿಯಃ ಪತಿರ್ಯಜ್ಞಪತಿಃ ಪ್ರಜಾಪತಿ-
ರ್ಧಿಯಾಂ ಪತಿರ್ಲೋಕಪತಿರ್ಧರಾಪತಿಃ ।
ಪತಿರ್ಗತಿಶ್ಚಾಂಧಕವೃಷ್ಣಿ ಸಾತ್ವತಾಂ
ಪ್ರಸೀದತಾಂ ಮೇ ಭಗವಾನ್ಸತಾಂ ಪತಿಃ ॥ ೨೦ ॥

ಯದಂಘ್ರ್ಯಭಿಧ್ಯಾನಸಮಾಧಿಧೌತಯಾ
ಧಿಯಾನುಪಶ್ಯಂತಿ ಹಿ ತತ್ತ್ವಮಾತ್ಮನಃ ।
ವದಂತಿ ಚೈತತ್ಕವಯೋ ಯಥಾರುಚಂ
ಸ ಮೇ ಮುಕುಂದೋ ಭಗವಾನ್ಪ್ರಸೀದತಾಮ್ ॥ ೨೧ ॥

ಪ್ರಚೋದಿತಾ ಯೇನ ಪುರಾ ಸರಸ್ವತೀ
ವಿತನ್ವತಾಜಸ್ಯ ಸತೀಂ ಸ್ಮೃತಿಂ ಹೃದಿ ।
ಸ್ವಲಕ್ಷಣಾ ಪ್ರಾದುರಭೂತ್ಕಿಲಾಸ್ಯತಃ
ಸ ಮೇ ಋಷೀಣಾಮೃಷಭಃ ಪ್ರಸೀದತಾಮ್ ॥ ೨೨ ॥

ಭೂತೈರ್ಮಹದ್ಭಿರ್ಯ ಇಮಾಃ ಪುರೋ ವಿಭು-
ರ್ನಿರ್ಮಾಯ ಶೇತೇ ಯದಮೂಷು ಪೂರುಷಃ ।
ಭುಂಕ್ತೇ ಗುಣಾನ್ ಷೋಡಶ ಷೋಡಶಾತ್ಮಕಃ
ಸೋಽಲಂಕೃಷೀಷ್ಟ ಭಗವಾನ್ವಚಾಂಸಿ ಮೇ ॥ ೨೩ ॥

ನಮಸ್ತಸ್ಮೈ ಭಗವತೇ ವಾಸುದೇವಾಯ ವೇಧಸೇ ।
ಪಪುರ್ಜ್ಞಾನಮಯಂ ಸೌಮ್ಯಾ ಯನ್ಮುಖಾಂಬುರುಹಾಸವಮ್ ॥ ೨೪ ॥

ಏತದೇವಾತ್ಮಭೂ ರಾಜನ್ ನಾರದಾಯ ವಿಪೃಚ್ಛತೇ ।
ವೇದಗರ್ಭೋಽಭ್ಯಧಾತ್ಸಾಕ್ಷಾದ್ ಯದಾಹ ಹರಿರಾತ್ಮನಃ ॥ ೨೫ ॥

ಸಾಧು-ಸಂತರ ಸರ್ವಸ್ವನೂ ಆದ ಶ್ರೀಕೃಷ್ಣನು ನನ್ನ ಮೇಲೆ ಪ್ರಸನ್ನನಾಗಲೀ. ॥ ೨೦ ॥ ಜ್ಞಾನಿಗಳು ಯಾವನ ಪಾದಾರವಿಂದಗಳ ಧ್ಯಾನಸಮಾಧಿಯಿಂದಲೇ ಶುದ್ಧವಾದ ಬುದ್ಧಿಯಿಂದ ಆತ್ಮತತ್ತ್ವವನ್ನು ಸಾಕ್ಷಾತ್ಕರಿಸಿಕೊಳ್ಳುವರೋ, ತಮ್ಮ ಬುದ್ಧಿ ಮತ್ತು ಅಭಿರುಚಿಗನುಗುಣವಾಗಿ ಯಾರ ಸ್ವರೂಪವನ್ನು ವರ್ಣಿಸುತ್ತಾರೋ, ಅಂತಹ ಭಕ್ತಿ, ಮುಕ್ತಿ, ಸ್ತೋತ್ರಶಕ್ತಿ ಪ್ರದಾತನಾದ ಭಗವಾನ್ ಶ್ರೀಕೃಷ್ಣನು ನನಗೆ ಅನುಗ್ರಹಿಸಲಿ. ॥ ೨೧ ॥ ಸೃಷ್ಟಿ ಸಮಯದಲ್ಲಿ ಯಾರು ಬ್ರಹ್ಮದೇವರ ಹೃದಯದಲ್ಲಿ ಸ್ಮೃತಿಯನ್ನು ಜಾಗ್ರತಗೊಳಿಸಲು ಜ್ಞಾನದ ಅಧಿಷ್ಠಾತ್ರಿಯಾದ ಸರಸ್ವತಿಯನ್ನು ಪ್ರೇರಣೆ ಮಾಡಿದನೋ, ಆ ಬ್ರಹ್ಮನ ಮುಖದಿಂದ ಶಿಕ್ಷಾ, ವ್ಯಾಕರಣಾದಿ ಆರು ಅಂಗಗಳಿಂದ ಕೂಡಿದ ವೇದಸರಸ್ವತಿಯನ್ನು ಪ್ರಕಟಗೊಳಿಸಿದನೋ, ಅಂತಹ ಜ್ಞಾನಿಗಳಲ್ಲಿ ಶ್ರೇಷ್ಠನಾದ ಭಗವಂತನು ನನಗೆ ಪ್ರಸನ್ನನಾಗಲಿ. ॥ ೨೨ ॥ ಭಗವಂತನೇ ಪಂಚಭೂತಗಳಿಂದ ಈ ಶರೀರಗಳನ್ನು ನಿರ್ಮಾಣಿಸಿದ್ದು ಇವುಗಳಲ್ಲಿ ಜೀವರೂಪದಿಂದ ಮಲಗಿರುತ್ತಾನೆ. ಐದು ಜ್ಞಾನೇಂದ್ರಿಯಗಳು, ಐದು ಕರ್ಮೇಂದ್ರಿಯಗಳು, ಐದು ಪ್ರಾಣಗಳು, ಒಂದು ಮನಸ್ಸು ಹೀಗೆ ಹದಿನಾರು ಕಲೆಗಳಿಂದ ಕೂಡಿಕೊಂಡು ಇವುಗಳ ಮೂಲಕ ಹದಿನಾರು ವಿಷಯಗಳನ್ನು ಭೋಗಿಸುತ್ತಾನೆ. ಆ ಸರ್ವಭೂತಮಯನಾದ ಭಗವಂತನು ತನ್ನ ಗುಣಗಳಿಂದ ನನ್ನ ವಾಣಿಯನ್ನು ಅಲಂಕರಿಸಲಿ. ॥ ೨೩ ॥ ಆ ವಾಸುದೇವನ ಅವತಾರವಾದ, ಸರ್ವಜ್ಞರಾದ, ಭಗವಾನ್ ವೇದವ್ಯಾಸರಿಗೆ ನಮಸ್ಕಾರಗಳು. ಆ ಮಹಾನುಭಾವರ ಮುಖಕಮಲದಿಂದ ಮಕರಂದದಂತೆ ಹರಿಯುತ್ತಿರುವ ಜ್ಞಾನ ಸುಧೆಯನ್ನೇ ಅಲ್ಲವೇ ಸಾಧು-ಸತ್ಪುರುಷರು ಸದಾ ಪಾನಮಾಡುತ್ತಿರುವುದು! ॥ ೨೪ ॥

ಓ ರಾಜೇಂದ್ರನೇ! ಇದನ್ನು ಸಾಕ್ಷಾತ್ ಶ್ರೀಮನ್ನಾರಾಯಣನು ಬ್ರಹ್ಮದೇವರಿಗೆ ಉಪದೇಶಮಾಡಿದ್ದನು. ತಮ್ಮನ್ನು ಪ್ರಶ್ನೆಮಾಡಿದ ನಾರದರಿಗೆ ಬ್ರಹ್ಮದೇವರು ಅದನ್ನು ಉಪದೇಶಿಸಿದರು. ಅದನ್ನೇ ನಾನು ನಿನಗೆ ಈಗ ಉಪದೇಶಿಸುತ್ತಿದ್ದೇನೆ. ॥ ೨೫ ॥

ನಾಲ್ಕನೆಯ ಅಧ್ಯಾಯವು ಮುಗಿಯಿತು. ॥ ೪ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದ್ವಿತೀಯಸ್ಕಂಧೇ ಚತುರ್ಥೋಽಧ್ಯಾಯಃ ॥ ೪ ॥

ಐದನೆಯ ಅಧ್ಯಾಯ

ಸೃಷ್ಟಿಯ ವರ್ಣನೆ

ನಾರದ ಉವಾಚ

ದೇವದೇವ ನಮಸ್ತೇಽಸ್ತು ಭೂತಭಾವನ ಪೂರ್ವಜ ।
ತದ್ವಿಜಾನೀಹಿ ಯಜ್ಜ್ಞಾನಮಾತ್ಮತತ್ತ್ವನಿದರ್ಶನಮ್ ॥ ೧ ॥

ಯದ್ರೂಪಂ ಯದಧಿಷ್ಠಾನಂ ಯತಃ ಸೃಷ್ಟಮಿದಂ ಪ್ರಭೋ ।
ಯತ್ಸಂಸ್ಥಂ ಯತ್ಪರಂ ಯಚ್ಚ ತತ್ತತ್ತ್ವಂ ವದ ತತ್ತ್ವತಃ ॥ ೨ ॥

ನಾರದರು ಕೇಳುತ್ತಾರೆ – ದೇವ ದೇವನೇ! ಚತುರ್ಮುಖನೇ! ನಿನಗೆ ನಮಸ್ಕಾರವು. ನೀನು ಎಲ್ಲ ಭೂತಗಳನ್ನೂ ಸೃಷ್ಟಿಸಿದವನು. ಎಲ್ಲರಿಗೂ ಮೊದಲಿಗನು. ಆತ್ಮತತ್ತ್ವದ ಸಾಕ್ಷಾತ್ಕಾರವು ಆಗುವಂತಹ ಆ ಜ್ಞಾನವನ್ನು ನನಗೆ ಅನುಗ್ರಹಿಸು. ॥ ೧ ॥ ಪ್ರಭೋ! ಈ ಜಗತ್ತಿನ ಸ್ವರೂಪವೇನು? ಲಕ್ಷಣವೇನು? ಇದರ ಆಧಾರ ಯಾವುದು? ಇದನ್ನು ಯಾರು ಸೃಷ್ಟಿಸಿದರು? ಯಾವುದರಲ್ಲಿ ಇದು ಲಯ ಹೊಂದುತ್ತದೆ? ಇದು ಯಾರಿಗೆ ಅಧೀನವಾಗಿದೆ? ವಾಸ್ತವವಾಗಿ ಈ ಜಗತ್ತು ಎಂದರೇನು? ಇದರ ತತ್ತ್ವವನ್ನು ನನಗೆ ತಿಳಿಸು. ॥ ೨ ॥ ನಿನಗೆ ಇದೆಲ್ಲವೂ ತಿಳಿದಿದೆ, ಏಕೆಂದರೆ,

ಸರ್ವಂ ಹ್ಯೇತದ್ಭವಾನ್ವೇದ ಭೂತಭವ್ಯಭವತ್ಪ್ರಭುಃ ।
ಕರಾಮಲಕವದ್ ವಿಶ್ವಂ ವಿಜ್ಞಾನಾವಸಿತಂ ತವ ॥ ೩ ॥

ಯದ್ವಿಜ್ಞಾನೋ ಯದಾಧಾರೋ ಯತ್ಪರಸ್ತ್ವಂ ಯದಾತ್ಮಕಃ ।
ಏಕಃ ಸೃಜಸಿ ಭೂತಾನಿ ಭೂತೈರೇವಾತ್ಮಮಾಯಯಾ ॥ ೪ ॥

ಆತ್ಮನ್ ಭಾವಯಸೇ ತಾನಿ ನ ಪರಾಭಾವಯನ್ಸ್ವಯಮ್ ।
ಆತ್ಮಶಕ್ತಿಮವಷ್ಟಭ್ಯ ಊರ್ಣನಾಭಿರಿವಾಕ್ಲಮಃ ॥ ೫ ॥

ನಾಹಂ ವೇದ ಪರಂ ಹ್ಯಸ್ಮಿನ್ನಾಪರಂ ನ ಸಮಂ ವಿಭೋ ।
ನಾಮರೂಪಗುಣೈರ್ಭಾವ್ಯಂ ಸದಸತ್ಕಿಂಚಿದನ್ಯತಃ ॥ ೬ ॥

ಸ ಭವಾನಚರದ್ಘೋರಂ ಯತ್ತಪಃ ಸುಸಮಾಹಿತಃ ।
ತೇನ ಖೇದಯಸೇ ನಸ್ತ್ವಂ ಪರಾಶಂಕಾಂ ಪ್ರಯಚ್ಛಸಿ ॥ ೭ ॥

ಏತನ್ಮೇ ಪೃಚ್ಛತಃ ಸರ್ವಂ ಸರ್ವಜ್ಞ ಸಕಲೇಶ್ವರ ।
ವಿಜಾನೀಹಿ ಯಥೈವೇದಮಹಂ ಬುಧ್ಯೇಽನುಶಾಸಿತಃ ॥ ೮ ॥

ಬ್ರಹ್ಮೋವಾಚ

ಸಮ್ಯಕ್ಕಾರುಣಿಕಸ್ಯೇದಂ ವತ್ಸ ತೇ ವಿಚಿಕಿತ್ಸಿತಮ್ ।
ಯದಹಂ ಚೋದಿತಃ ಸೌಮ್ಯ ಭಗವದ್ವೀರ್ಯದರ್ಶನೇ ॥ ೯ ॥

ನಾನೃತಂ ತವ ತಚ್ಚಾಪಿ ಯಥಾ ಮಾಂ ಪ್ರಬ್ರವೀಷಿ ಭೋಃ ।
ಅವಿಜ್ಞಾಯ ಪರಂ ಮತ್ತ ಏತಾವತ್ತ್ವಂ ಯತೋ ಹಿ ಮೇ ॥ ೧೦ ॥

ಯೇನ ಸ್ವರೋಚಿಷಾ ವಿಶ್ವಂ ರೋಚಿತಂ ರೋಚಯಾಮ್ಯಹಮ್ ।
ಯಥಾರ್ಕೋಽಗ್ನಿರ್ಯಥಾ ಸೋಮೋ ಯಥರ್ಕ್ಷಗ್ರಹತಾರಕಾಃ ॥ ೧೧ ॥

ತಸ್ಮೈ ನಮೋ ಭಗವತೇ ವಾಸುದೇವಾಯ ಧೀಮಹಿ ।
ಯನ್ಮಾಯಯಾ ದುರ್ಜಯಯಾ ಮಾಂ ಬ್ರುವಂತಿ ಜಗದ್ಗುರುಮ್ ॥ ೧೨ ॥

ವಿಲಜ್ಜಮಾನಯಾ ಯಸ್ಯ ಸ್ಥಾತುಮೀಕ್ಷಾಪಥೇಽಮುಯಾ ।
ವಿಮೋಹಿತಾ ವಿಕತ್ಥಂತೇ ಮಮಾಹಮಿತಿ ದುರ್ಧಿಯಃ ॥ ೧೩ ॥

ನೀನು ಭೂತ, ಭವಿಷ್ಯ, ವರ್ತಮಾನ ಇವುಗಳಿಗೆ ಅಧಿಪತಿಯಾಗಿರುವೆ. ನೀನು ಸರ್ವಜ್ಞನು. ವಿಶ್ವವೆಲ್ಲವೂ ಅಂಗೈನೆಲ್ಲಿಯಂತೆ ಸ್ಪಷ್ಟವಾಗಿ ನಿನ್ನ ಅರಿವಿಗೆ ಗೋಚರವಾಗಿದೆ. ॥ ೩ ॥ ನಿನಗೆ ಈ ಜ್ಞಾನವು ಎಲ್ಲಿಂದ ಬಂದಿತು? ನೀನು ಯಾರ ಆಧಾರದಲ್ಲಿ ಇರುವೆ? ನಿನ್ನ ಸ್ವಾಮಿ ಯಾರು? ಸ್ವರೂಪವೇನು? ಮಾಯಾಶಕ್ತಿಯಿಂದ ನೀನೊಬ್ಬನೇ ಪಂಚಭೂತಗಳಿಂದ ಪ್ರಾಣಿಗಳನ್ನು ಸೃಷ್ಟಿಸುತ್ತಿರುವೆಯಲ್ಲ! ಇದೆಂತಹ ಆಶ್ಚರ್ಯದ ಸಂಗತಿಯಾಗಿದೆ! ॥ ೪ ॥ ಜೇಡರಹುಳುವು ಅನಾಯಾಸವಾಗಿ ತನ್ನ ಮುಖದಿಂದಲೇ ಬಲೆಯನ್ನು ಹೊರಪಡಿಸಿ ಅದರಲ್ಲಿ ಆಡುತ್ತಿರುವಂತೆ, ನೀನು ನಿನ್ನ ಶಕ್ತಿಯನ್ನೇ ಆಶ್ರಯಿಸಿ ನಿರಾಯಾಸವಾಗಿ ಪ್ರಾಣಿಗಳನ್ನೂ ನಿನ್ನಲ್ಲಿಯೇ ಸೃಷ್ಟಿಸಿಕೊಂಡರೂ ನಿನ್ನಲ್ಲಿ ಯಾವುದೇ ವಿಕಾರಗಳಾಗುವುದಿಲ್ಲ. ॥ ೫ ॥ ಜಗತ್ತಿನಲ್ಲಿ ನಾಮ, ರೂಪ, ಗುಣಗಳಿಂದ ತಿಳಿಯಲಾಗುವ ಎಲ್ಲವುಗಳಲ್ಲಿಯೂ ನೀನಲ್ಲದೆ ಬೇರೆಯವರಿಂದ ಉತ್ಪನ್ನವಾದಂತಹ ಸತ್, ಅಸತ್, ಉತ್ತಮ, ಮಧ್ಯಮ, ಅಧಮ ಮುಂತಾದ ಯಾವ ವಸ್ತುವೂ ಕಂಡುಬರುವುದಿಲ್ಲ. ಅಂದರೆ ಎಲ್ಲವೂ ನಿನ್ನಿಂದಲೇ ಸೃಷ್ಟಿಸಲ್ಪಟ್ಟಿದೆ. ॥ ೬ ॥ ಹೀಗೆ ಎಲ್ಲರ ಒಡೆಯನಾಗಿಯೂ ನೀನು ಏಕಾಗ್ರಚಿತ್ತದಿಂದ ಮಾಡಿದ ಘೋರ ತಪಸ್ಸಿನಿಂದ ನನಗೆ ಮೋಹದೊಂದಿಗೆ 'ನಿನ್ನಿಂದಲೂ ದೊಡ್ಡವನು ಯಾರಾದರೂ ಇರಬಹುದೇ?' ಎಂಬ ಶಂಕೆಯೂ ಆಗುತ್ತಿದೆ. ॥ ೭ ॥ ತಂದೆಯೇ! ನೀನು ಸರ್ವಜ್ಞನೂ ಸರ್ವೇಶ್ವರನೂ ಆಗಿರುವೆ. ನಾನು ಕೇಳುತ್ತಿರುವುದನ್ನು ನನಗೆ ಚೆನ್ನಾಗಿ ಮನವರಿಕೆಯಾಗುವಂತೆ ದಯಮಾಡಿ ತಿಳಿಸುವವರಾಗಿರಿ. ॥ ೮ ॥

ಬ್ರಹ್ಮದೇವರು ಹೇಳಿದರು – ಮಗು ನಾರದಾ! ನೀನು ಜೀವಿಗಳ ಮೇಲೆ ಕರುಣೆಯಿಟ್ಟು ಈ ಒಳ್ಳೆಯ ಪ್ರಶ್ನೆಯನ್ನು ಕೇಳಿರುವೆ. ಏಕೆಂದರೆ, ಇದರಿಂದ ಭಗವಂತನ ಗುಣಗಳನ್ನು ವರ್ಣಿಸುವ ಪ್ರೇರಣೆಯು ನನಗುಂಟಾಗಿದೆ. ॥ ೯ ॥ ನೀನು ನನ್ನ ಕುರಿತು ಹೇಳಿದುದೆಲ್ಲವೂ ಸತ್ಯವೇ. ಏಕೆಂದರೆ, ನನಗಿಂತಲೂ ಶ್ರೇಷ್ಠನಾಗಿರುವ ಪರತತ್ತ್ವದ ಅರಿವು ಉಂಟಾಗುವವರೆಗೂ ನೀನು ಹೇಳಿದ ಎಲ್ಲ ಪ್ರಭಾವಗಳೂ ನನ್ನಲ್ಲಿ ಇರುವಂತೆ ಕಂಡುಬರುತ್ತದೆ. ವಾಸ್ತವವಾಗಿ ಸಮಗ್ರಶಕ್ತಿಯು ಪರಮಪಿತಾ ಪರಮಾತ್ಮನದ್ದೇ ಆಗಿದೆ. ಅವನ ಪ್ರಭಾವದಿಂದಲೇ ಈ ಸೃಷ್ಟಿಕ್ರಮವು ನಡೆಯುತ್ತಾ ಇದೆ. ॥ ೧೦ ॥ ಸೂರ್ಯ, ಚಂದ್ರ, ಅಗ್ನಿ, ಗ್ರಹ, ನಕ್ಷತ್ರ, ತಾರೆಗಳು ಪರಮಾತ್ಮನ ಪ್ರಕಾಶದಿಂದಲೇ ಜಗತ್ತಿನಲ್ಲಿ ಪ್ರಕಾಶಿತವಾಗುವಂತೆಯೇ, ನಾನೂ ಕೂಡ ಅದೇ ಸ್ವಯಂಪ್ರಕಾಶ ಭಗವಂತನ ಚಿನ್ಮಯ ಪ್ರಕಾಶದಿಂದ ಪ್ರಕಾಶಿತನಾಗಿ ಪ್ರಪಂಚವನ್ನು ಬೆಳಗುತ್ತಿರುವೆನು. ಅರ್ಥಾತ್ – ಜಗತ್ತನ್ನು ರಚಿಸುತ್ತಿರುವೆನು. ॥ ೧೧ ॥ ಯಾರ ದುರ್ಜಯ ಮಾಯೆಯಿಂದ ಮೋಹಿತರಾಗಿ ಜನರು ನನ್ನನ್ನೇ ಜಗದ್ಗುರು ಎಂದು ಹೇಳುತ್ತಾರೋ, ಆ ಮಾಯಾಧೀಶನಾದ ಭಗವಾನ್ ವಾಸುದೇವನನ್ನು ನಾನು ಧ್ಯಾನಿಸುತ್ತಾ, ವಂದಿಸುತ್ತೇನೆ. ವಾಸ್ತವವಾಗಿ ಜಗದ್ಗುರು ಭಗವಾನ್ ಶ್ರೀಕೃಷ್ಣನೇ ಆಗಿರುವನು (**ಕೃಷ್ಣಂ ವಂದೇ ಜಗದ್ಗುರುಮ್**). ॥ ೧೨ ॥ ಆ ಮಾಯೆಯಾದರೋ ಅವನ ಕಣ್ಣುಮುಂದೆ ನಿಲ್ಲಲಾರದೆ ನಾಚಿ ದೂರದಿಂದಲೇ ಓಡಿಹೋಗುತ್ತದೆ. ಆದರೆ ಜಗತ್ತಿನಲ್ಲಿರುವ ಅಜ್ಞಾನಿಗಳು ಆ ಮಾಯೆಯಿಂದ ಮೋಹಿತರಾಗಿ 'ನಾನು, ನನ್ನದು' ಹೀಗೆ ಹರಟುತ್ತಾ ಇರುತ್ತಾರೆ. ॥ ೧೩ ॥

ದ್ರವ್ಯಂ ಕರ್ಮ ಚ ಕಾಲಶ್ಚ ಸ್ವಭಾವೋ ಜೀವ ಏವ ಚ ।
ವಾಸುದೇವಾತ್ಪರೋ ಬ್ರಹ್ಮನ್ನ ಚಾನ್ಯೋಽರ್ಥೋಽಸ್ತಿ ತತ್ತ್ವತಃ ॥ ೧೪ ॥

ನಾರಾಯಣಪರಾ ವೇದಾ ದೇವಾ ನಾರಾಯಣಾಂಗಜಾಃ ।
ನಾರಾಯಣಪರಾ ಲೋಕಾ ನಾರಾಯಣಪರಾ ಮಖಾಃ ॥ ೧೫ ॥

ನಾರಾಯಣಪರೋ ಯೋಗೋ ನಾರಾಯಣಪರಂ ತಪಃ ।
ನಾರಾಯಣಪರಂ ಜ್ಞಾನಂ ನಾರಾಯಣಪರಾ ಗತಿಃ ॥ ೧೬ ॥

ತಸ್ಯಾಪಿ ದ್ರಷ್ಟುರೀಶಸ್ಯ ಕೂಟಸ್ಥಸ್ಯಾಖಿಲಾತ್ಮನಃ ।
ಸೃಜ್ಯಂ ಸೃಜಾಮಿ ಸೃಷ್ಟೋಽಹಮೀಕ್ಷಯೈವಾಭಿಚೋದಿತಃ ॥ ೧೭ ॥

ಸತ್ತ್ವಂ ರಜಸ್ತಮ ಇತಿ ನಿರ್ಗುಣಸ್ಯ ಗುಣಾಸ್ತ್ರಯಃ ।
ಸ್ಥಿತಿಸರ್ಗನಿರೋಧೇಷು ಗೃಹೀತಾ ಮಾಯಯಾ ವಿಭೋಃ ॥ ೧೮ ॥

ಕಾರ್ಯಕಾರಣಕರ್ತೃತ್ವೇ ದ್ರವ್ಯಜ್ಞಾನಕ್ರಿಯಾಶ್ರಯಾಃ ।
ಬಧ್ನಂತಿ ನಿತ್ಯದಾ ಮುಕ್ತಂ ಮಾಯಿನಂ ಪುರುಷಂ ಗುಣಾಃ ॥ ೧೯ ॥

ಸ ಏಷ ಭಗವಾಂಲ್ಲಿಂಗೈಸ್ತ್ರಿಭಿರೇಭಿರಧೋಕ್ಷಜಃ ।
ಸ್ವಲಕ್ಷಿತಗತಿರ್ಬ್ರಹ್ಮನ್ ಸರ್ವೇಷಾಂ ಮಮ ಚೇಶ್ವರಃ ॥ ೨೦ ॥

ಕಾಲಂ ಕರ್ಮ ಸ್ವಭಾವಂ ಚ ಮಾಯೇಶೋ ಮಾಯಯಾ ಸ್ವಯಾ ।
ಆತ್ಮನ್ಯದೃಚ್ಛಯಾ ಪ್ರಾಪ್ತಂ ವಿಬುಭೂಷುರುಪಾದದೇ ॥ ೨೧ ॥

ಕಾಲಾದ್ಗುಣವ್ಯತಿಕರಃ ಪರಿಣಾಮಃ ಸ್ವಭಾವತಃ ।
ಕರ್ಮಣೋ ಜನ್ಮ ಮಹತಃ ಪುರುಷಾಧಿಷ್ಠಿತಾದಭೂತ್ ॥ ೨೨ ॥

ಮಹತಸ್ತು ವಿಕುರ್ವಾಣಾದ್ರಜಃಸತ್ತ್ವೋಪಬೃಂಹಿತಾತ್ ।
ತಮಃಪ್ರಧಾನಸ್ತ್ವಭವದ್ ದ್ರವ್ಯಜ್ಞಾನಕ್ರಿಯಾತ್ಮಕಃ ॥ ೨೩ ॥

ಸೋಽಹಂಕಾರ ಇತಿ ಪ್ರೋಕ್ತೋ ವಿಕುರ್ವನ್ಸಮಭೂತ್ತ್ರಿಧಾ ।
ವೈಕಾರಿಕಸ್ತೈಜಸಶ್ಚ ತಾಮಸಶ್ಚೇತಿ ಯದ್ಭಿದಾ ।
ದ್ರವ್ಯಶಕ್ತಿಃ ಕ್ರಿಯಾಶಕ್ತಿರ್ಜ್ಞಾನಶಕ್ತಿರಿತಿ ಪ್ರಭೋ ॥ ೨೪ ॥

ನಾರದಾ! ದ್ರವ್ಯವಾಗಲೀ, ಕರ್ಮವಾಗಲೀ, ಕಾಲವಾಗಲೀ, ಸ್ವಭಾವವಾಗಲೀ, ಜೀವವೇ ಆಗಲಿ ಯಾವುದೂ ವಾಸ್ತವವಾಗಿ ಆ ವಾಸುದೇವನಿಂದ ಬೇರೆಯಾದ ಯಾವ ಪದಾರ್ಥವೂ ಇಲ್ಲ. ॥ ೧೪ ॥ ನಾರಾಯಣನೇ ವೇದಗಳಿಗೆ ತಾತ್ಪರ್ಯವು. ಆ ವೇದಗಳಲ್ಲಿ ಸ್ತುತಿಸಲ್ಪಡುವ ದೇವತೆಗಳೂ ನಾರಾಯಣನ ಅಂಗದಿಂದ ಹುಟ್ಟಿದವರೇ. ಎಲ್ಲ ಯಜ್ಞಗಳಿಂದ ಆರಾಧಿಸಲ್ಪಡುವವನೂ ನಾರಾಯಣನೇ. ಆ ಯಜ್ಞಗಳಿಂದ ಹೊಂದುವ ಲೋಕಗಳೂ ನಾರಾಯಣನನ್ನೇ ಆಶ್ರಯಿಸಿವೆ. ॥ ೧೫ ॥ ಎಲ್ಲ ಯೋಗಗಳಿಗೆ ಲಕ್ಷ್ಯನಾಗಿರುವವನು ನಾರಾಯಣನೇ. ಎಲ್ಲ ತಪಸ್ಸುಗಳು ನಾರಾಯಣನಿಗಾಗಿಯೇ ಮಾಡಲಾಗುತ್ತವೆ. ಜ್ಞಾನಗಮ್ಯನೂ ನಾರಾಯಣನೇ. ಎಲ್ಲಕ್ಕೂ ಪರಮಗತಿಯು ಆ ನಾರಾಯಣನೇ. ॥ ೧೬ ॥ ಅವನು ದ್ರಷ್ಟಾ ಆಗಿದ್ದರೂ ಈಶ್ವರನಾಗಿದ್ದಾನೆ, ಒಡೆಯನಾಗಿದ್ದಾನೆ. ಕೂಟಸ್ಥ ನಿರ್ವಿಕಾರನಾಗಿದ್ದರೂ ಸರ್ವಸ್ವರೂಪನಾಗಿದ್ದಾನೆ. ಅವನೇ ನನ್ನನ್ನು ಸೃಷ್ಟಿಸಿದವನು. ಅವನ ದೃಷ್ಟಿಯಿಂದಲೇ ಪ್ರೇರಿತನಾಗಿ, ನಾನು ಅವನ ಇಚ್ಛೆಗನುಗುಣವಾಗಿ ಸೃಷ್ಟಿಯನ್ನು ರಚಿಸುತ್ತೇನೆ. ॥ ೧೭ ॥ ಆ ಪರಮಾತ್ಮನು ಗುಣಾತೀತನು. ಜಗತ್ತಿನ ಸೃಷ್ಟಿ, ಸ್ಥಿತಿ, ಲಯಗಳನ್ನು ಮಾಡಲಿಕ್ಕಾಗಿ ಸತ್ತ್ವ, ರಜ, ತಮೋಗುಣಗಳೆಂಬ ಮೂರು ಗುಣಗಳನ್ನು ತನ್ನ ಮಾಯಾಶಕ್ತಿಯಿಂದ ಸ್ವೀಕರಿಸುತ್ತಾನೆ. ॥ ೧೮ ॥ ಆ ಮೂರು ಗುಣಗಳೇ ದ್ರವ್ಯ, ಜ್ಞಾನ, ಕ್ರಿಯೆ ಇವುಗಳ ಆಶ್ರಯಪಡೆದು, ಸ್ವರೂಪತಃ ನಿತ್ಯಮುಕ್ತನೂ, ಮಾಯಾತೀತನೂ ಆದ ಪುರುಷನು ಮಾಯೆಯಲ್ಲಿ ಸ್ಥಿತನಾದಾಗ ಕಾರ್ಯ, ಕಾರಣ, ಕರ್ತೃತ್ವ ಇವುಗಳ ಅಭಿಮಾನದಿಂದ ಬಂಧಿತನಾಗುತ್ತಾನೆ. ॥ ೧೯ ॥ ನಾರದಾ ! ಇಂದ್ರಿಯಾತೀತ ಆ ಭಗವಂತನೇ ತ್ರಿಗುಣಗಳ ಆವರಣಗಳಿಂದ ತನ್ನ ಸ್ವರೂಪವನ್ನು ಚೆನ್ನಾಗಿ ಮರೆಮಾಡಿ ಕೊಳ್ಳುವನು. ಇದರಿಂದ ಜನರು ಅವನನ್ನು ತಿಳಿಯಲಾರರು. ಇಡೀ ಜಗತ್ತಿಗೂ ಮತ್ತು ನನಗೂ ಅವನೇ ಏಕಮಾತ್ರ ಸ್ವಾಮಿಯಾಗಿದ್ದಾನೆ. ॥ ೨೦ ॥

ಮಾಯಾಧಿಪನಾದ ಆ ಭಗವಂತನಿಗೆ '**ಬಹು ಸ್ಯಾಂ ಪ್ರಜಾಯೇಯ**' (ನಾನೇ ಅನೇಕನಾಗುವೆನು) ಎಂಬ ಇಚ್ಛೆಯು ಉಂಟಾದಾಗ ತನ್ನ ಮಾಯೆಯಿಂದ ತನ್ನ ಸ್ವರೂಪದಲ್ಲಿ ಬಂದು ಸೇರಿದ ಕಾಲ, ಕರ್ಮ, ಸ್ವಭಾವ ಇವುಗಳನ್ನು ಸ್ವೀಕರಿಸಿದನು. ॥ ೨೧ ॥ ಭಗವಂತನ ಶಕ್ತಿಯಿಂದಲೇ ಕಾಲವು ತ್ರಿಗುಣಗಳಲ್ಲಿ ಕ್ಷೋಭೆಯನ್ನುಂಟುಮಾಡಿತು. ಸ್ವಭಾವವು ಅವುಗಳನ್ನು ರೂಪಾಂತರ ಮಾಡಿತು. ಕರ್ಮವು ಮಹತ್ತತ್ತ್ವಕ್ಕೆ ಜನ್ಮನೀಡಿತು. ॥ ೨೨ ॥ ರಜೋಗುಣ ಮತ್ತು ಸತ್ತ್ವಗುಣಗಳು ವೃದ್ಧಿಗೊಂಡಾಗ ಮಹತ್ತತ್ತ್ವದಲ್ಲಿ ಯಾವ ಯಾವ ವಿಕಾರ ಉಂಟಾಯಿತೋ, ಅದರಿಂದ ಜ್ಞಾನ, ಕ್ರಿಯೆ, ದ್ರವ್ಯರೂಪವಾಗಿ ತಮಃಪ್ರಧಾನವಾದ ವಿಕಾರ ಉಂಟಾಯಿತು. ॥ ೨೩ ॥ ■ ವಿಕಾರವೇ ಅಹಂಕಾರವು. ಅದು ವಿಕಾರಗೊಂಡು ವೈಕಾರಿಕಾಹಂಕಾರ, ತೈಜಸಾಹಂಕಾರ, ತಾಮಸಾಹಂಕಾರ ಎಂಬ ಮೂರು ಬಗೆಯಾಯಿತು. ನಾರದಾ! ಅವು ಕ್ರಮವಾಗಿ ಜ್ಞಾನಶಕ್ತಿ, ಕ್ರಿಯಾಶಕ್ತಿ, ದ್ರವ್ಯಶಕ್ತಿ ಪ್ರಧಾನವಾಗಿವೆ. ॥ ೨೪ ॥ ಪಂಚಭೂತಗಳಿಗೆ ಕಾರಣರೂಪವಾದ ತಾಮಸಾಹಂಕಾರದಲ್ಲಿ ವಿಕಾರ ಉಂಟಾದಾಗ ಅದರಿಂದ ಆಕಾಶವು ಉತ್ಪನ್ನವಾಯಿತು. ಆಕಾಶದ ತನ್ಮಾತ್ರ ಮತ್ತು ಗುಣ ಶಬ್ದವಾಗಿದೆ. ಈ

ತಾಮಸಾದಪಿ ಭೂತಾದೇರ್ವಿಕುರ್ವಾಣಾದಭೂನ್ನಭಃ ।
ತಸ್ಯ ಮಾತ್ರಾಗುಣಃ ಶಬ್ದೋ ಲಿಂಗಂ ಯದ್ದ್ರಷ್ಟೃದೃಶ್ಯಯೋಃ ॥ ೨೫ ॥

ನಭಸೋಽಥ ವಿಕುರ್ವಾಣಾದಭೂತ್ ಸ್ಪರ್ಶಗುಣೋಽನಿಲಃ ।
ಪರಾನ್ವಯಾಚ್ಛಬ್ದವಾಂಶ್ಚ ಪ್ರಾಣ ಓಜಃ ಸಹೋ ಬಲಮ್ ॥ ೨೬ ॥

ವಾಯೋರಪಿ ವಿಕುರ್ವಾಣಾತ್ಕಾಲಕರ್ಮಸ್ವಭಾವತಃ ।
ಉದಪದ್ಯತ ತೇಜೋ ವೈ ರೂಪವತ್ ಸ್ಪರ್ಶಶಬ್ದವತ್ ॥ ೨೭ ॥

ತೇಜಸಸ್ತು ವಿಕುರ್ವಾಣಾದಾಸೀದಂಭೋ ರಸಾತ್ಮಕಮ್ ।
ರೂಪವತ್ ಸ್ಪರ್ಶವಚ್ಚಾಂಭೋ ಘೋಷವಚ್ಚ ಪರಾನ್ವಯಾತ್ ॥ ೨೮ ॥

ವಿಶೇಷಸ್ತು ವಿಕುರ್ವಾಣಾದಂಭಸೋ ಗಂಧವಾನಭೂತ್ ।
ಪರಾನ್ವಯಾದ್ ರಸಸ್ಪರ್ಶಶಬ್ದರೂಪಗುಣಾನ್ವಿತಃ ॥ ೨೯ ॥

ವೈಕಾರಿಕಾನ್ಮನೋ ಜಜ್ಞೇ ದೇವಾ ವೈಕಾರಿಕಾ ದಶ ।
ದಿಗ್ವಾತಾರ್ಕಪ್ರಚೇತೋಽಶ್ವಿವಹ್ನೀಂದ್ರೋಪೇಂದ್ರಮಿತ್ರಕಾಃ ॥ ೩೦ ॥

ತೈಜಸಾತ್ತು ವಿಕುರ್ವಾಣಾದಿಂದ್ರಿಯಾಣಿ ದಶಾಭವನ್ ।
ಜ್ಞಾನಶಕ್ತಿಃ ಕ್ರಿಯಾಶಕ್ತಿರ್ಬುದ್ಧಿಃ ಪ್ರಾಣಶ್ಚ ತೈಜಸೌ ।
ಶ್ರೋತ್ರಂ ತ್ವಗ್ಘ್ರಾಣದೃಗ್ಜಿಹ್ವಾವಾಗ್ದೋರ್ಮೇಢ್ರಾಂಘ್ರಿಪಾಯವಃ ॥ ೩೧ ॥

ಯದೈತೇಽಸಂಗತಾ ಭಾವಾ ಭೂತೇಂದ್ರಿಯಮನೋಗುಣಾಃ ।
ಯದಾಯತನನಿರ್ಮಾಣೇ ನ ಶೇಕುರ್ಬ್ರಹ್ಮವಿತ್ತಮ ॥ ೩೨ ॥

ತದಾ ಸಂಹತ್ಯ ಚಾನ್ಯೋನ್ಯಂ ಭಗವಚ್ಛಕ್ತಿಚೋದಿತಾಃ ।
ಸದಸತ್ತ್ವಮುಪಾದಾಯ ಚೋಭಯಂ ಸಸೃಜುರ್ಹ್ಯದಃ ॥ ೩೩ ॥

ವರ್ಷಪೂಗಸಹಸ್ರಾಂತೇ ತದಂಡಮುದಕೇಶಯಮ್ ।
ಕಾಲಕರ್ಮಸ್ವಭಾವಸ್ಥೋ ಜೀವೋಽಜೀವಮಜೀವಯತ್ ॥ ೩೪ ॥

ಸ ಏವ ಪುರುಷಸ್ತಸ್ಮಾದಂಡಂ ನಿರ್ಭಿದ್ಯ ನಿರ್ಗತಃ ।
ಸಹಸ್ರೋರ್ವಂಘ್ರಿಬಾಹ್ವಕ್ಷಃ ಸಹಸ್ರಾನನಶೀರ್ಷವಾನ್ ॥ ೩೫ ॥

ಶಬ್ದದ ಮೂಲಕವೇ ದ್ರಷ್ಟಾ, ದೃಶ್ಯದ ಬೋಧ ಉಂಟಾಗುವುದು. ॥ ೨೫ ॥ ಆಕಾಶದಲ್ಲಿ ವಿಕಾರ ಉಂಟಾದಾಗ ಅದರಿಂದ ವಾಯುವಿನ ಉತ್ಪತ್ತಿಯಾಯಿತು. ಅದರ ಗುಣ ಸ್ಪರ್ಶ. ಇದಲ್ಲದೆ ತನ್ನ ಕಾರಣದ ಗುಣವಾದ ಶಬ್ದವೂ ವಾಯುವಿನಲ್ಲಿರುತ್ತದೆ. ಇಂದ್ರಿಯಗಳಲ್ಲಿರುವ ಸ್ಫೂರ್ತಿ, ಶರೀರದಲ್ಲಿರುವ ಜೀವನಶಕ್ತಿ, ಓಜಸ್ಸು, ಬಲಗಳೂ ಇದರ ರೂಪವೇ ಆಗಿದೆ. ॥ ೨೬ ॥ ಕಾಲ, ಕರ್ಮ, ಸ್ವಭಾವಗಳಿಂದ ವಾಯುವಿನಲ್ಲೂ ವಿಕಾರ ಉಂಟಾಯಿತು. ಅದರಿಂದ ತೇಜಸ್ಸಿನ ಉತ್ಪತ್ತಿಯಾಯಿತು. ಇದರ ಪ್ರಧಾನಗುಣ ರೂಪವು. ಇದರ ಜೊತೆಯಲ್ಲಿ ತನ್ನ ಕಾರಣಗಳಾದ ಆಕಾಶ, ವಾಯುಗಳ ಗುಣಗಳಾದ ಶಬ್ದ ಸ್ಪರ್ಶಗಳೂ ತೇಜಸ್ಸಿನಲ್ಲಿರುತ್ತವೆ. ॥ ೨೭ ॥ ತೇಜಸ್ಸಿನ ವಿಕಾರದಿಂದ ಜಲದ ಉತ್ಪತ್ತಿಯಾಯಿತು. ಇದರ ಗುಣ ರಸ. ತನ್ನ ಕಾರಣ ತತ್ತ್ವಗಳ ಗುಣ ಶಬ್ದ, ಸ್ಪರ್ಶ, ರೂಪ ಇವುಗಳೂ ಜಲದಲ್ಲಿರುತ್ತವೆ. ॥ ೨೮ ॥ ಜಲದ ವಿಕಾರದಿಂದ ಪೃಥ್ವಿಯ ಉತ್ಪತ್ತಿಯಾಯಿತು. ಇದರ ಗುಣ ಗಂಧ. 'ಕಾರಣದ ಗುಣಗಳು ಕಾರ್ಯದಲ್ಲಿ ಬರುತ್ತವೆ' ಈ ನ್ಯಾಯದಿಂದ ಶಬ್ದ, ಸ್ಪರ್ಶ, ರೂಪ, ರಸ – ಈ ನಾಲ್ಕು ಗುಣಗಳನ್ನು ಪೃಥ್ವಿಯು ಹೊಂದಿರುತ್ತದೆ. ॥ ೨೯ ॥ ವೈಕಾರಿಕ ಅಹಂಕಾರದಿಂದ ಮನಸ್ಸು ಮತ್ತು ಇಂದ್ರಿಯಗಳ ಅಧಿಷ್ಠಾತೃಗಳಾದ ಹತ್ತು ದೇವತೆಗಳ ಉತ್ಪತ್ತಿಯಾಯಿತು. ದಿಕ್ಕುಗಳು, ವಾಯು, ಸೂರ್ಯ, ವರುಣ, ಅಶ್ವಿನೀದೇವತೆಗಳು, ಅಗ್ನಿ, ಇಂದ್ರ, ಉಪೇಂದ್ರ, ಮಿತ್ರ, ಪ್ರಜಾಪತಿ ಇವರೆ ಆ ಹತ್ತು ದೇವತೆಗಳು. ॥ ೩೦ ॥ ತೈಜಸ ಅರ್ಥಾತ್ – ರಾಜಸ ಅಹಂಕಾರದಿಂದ ಶ್ರೋತ್ರ, ತ್ವಕ್, ನೇತ್ರ, ಜಿಹ್ವೆ ಮತ್ತು ಘ್ರಾಣ – ಈ ಐದು ಜ್ಞಾನೇಂದ್ರಿಯಗಳೂ ಹಾಗೂ ವಾಣಿ, ಹಸ್ತ, ಪಾದ, ಗುದ, ಜನನೇಂದ್ರಿಯ – ಐದು ಕರ್ಮೇಂದ್ರಿಯಗಳೂ ಉತ್ಪನ್ನವಾದುವು. ಜೊತೆಗೆ ಜ್ಞಾನಶಕ್ತಿರೂಪವಾದ ಬುದ್ಧಿಯೂ, ಕ್ರಿಯಾಶಕ್ತಿ ರೂಪವಾದ ಪ್ರಾಣವೂ ತೈಜಸಾಹಂಕಾರದಿಂದಲೇ ಉಂಟಾದುವು. ॥ ೩೧ ॥

ಬ್ರಾಹ್ಮಣಶ್ರೇಷ್ಠ ನಾರದಾ! ಈ ಪಂಚಭೂತಗಳೂ, ಇಂದ್ರಿಯಗಳೂ, ಮನಸ್ಸು, ತ್ರಿಗುಣಗಳೂ ಪರಸ್ಪರ ಸೇರದೆ ಪ್ರತ್ಯೇಕವಾಗಿದ್ದಾಗ ಅವುಗಳಿಗೆ ತಮ್ಮ ವಾಸಕ್ಕಾಗಿ ಭೋಗಗಳ ಸಾಧನರೂಪ ಶರೀರದ ರಚನೆಯನ್ನು ಮಾಡಲಾಗದಾದವು. ॥ ೩೨ ॥ ಭಗವಂತನು ತನ್ನ ಶಕ್ತಿಯಿಂದ ಇವನ್ನು ಪ್ರೇರೇಪಿಸಿದಾಗ ಇವು ಪರಸ್ಪರ ಒಂದರೊಡನೆ ಒಂದು ಬೆರೆತು ಕಾರ್ಯಕಾರಣ ಭಾವವನ್ನು ಪಡೆದು ಕ್ರಮವಾಗಿ ವ್ಯಷ್ಟಿ ಮತ್ತು ಸಮಷ್ಟಿರೂಪವಾದ ಪಿಂಡಾಂಡ ಹಾಗೂ ಬ್ರಹ್ಮಾಂಡ ಎರಡನ್ನೂ ರಚಿಸಿದವು. ॥ ೩೩ ॥ ಆ ಬ್ರಹ್ಮಾಂಡ ರೂಪವಾದ ಅಂಡವು ಒಂದು ಸಾವಿರ ವರ್ಷಕಾಲ ನಿರ್ಜೀವವಾಗಿ ನೀರಿನಲ್ಲಿ ಬಿದ್ದಿತ್ತು. ಮತ್ತೆ ಕಾಲ, ಕರ್ಮ, ಸ್ವಭಾವಗಳನ್ನು ಸ್ವೀಕರಿಸಿದ ಭಗವಂತನು ಅದನ್ನು ಜೀವಂತಗೊಳಿಸಿದನು, ಅರ್ಥಾತ್ – ಜೀವರೂಪದಿಂದ ಅದರಲ್ಲಿ ಪ್ರವೇಶಿಸಿದನು. ॥ ೩೪ ॥ ಆ ಅಂಡವನ್ನು ಒಡೆದುಕೊಂಡು ಅದರಿಂದ ಹೊರಟು ಬಂದವನೇ ಸಾವಿರತೊಡೆ, ಸಾವಿರಪಾದ, ಸಾವಿರಭುಜ, ಸಾವಿರ ನೇತ್ರ, ಸಾವಿರಮುಖ, ಸಾವಿರ ತಲೆಗಳುಳ್ಳ ವಿರಾಟ್‌ಪುರುಷನು. ॥ ೩೫ ॥ ವಿದ್ವಾಂಸರು ಉಪಾಸನೆಗೋಸ್ಕರ ಆ ವಿರಾಟ್ ಪುರುಷನ

ಯಸ್ಯೇಹಾವಯವೈರ್ಲೋಕಾನ್ಕಲ್ಪಯಂತಿ ಮನೀಷಿಣಃ ।
ಕಟ್ಯಾದಿಭಿರಧಃ ಸಪ್ತ ಸಪ್ತೋರ್ಧ್ವಂ ಜಘನಾದಿಭಿಃ ॥ ೩೬ ॥

ಪುರುಷಸ್ಯ ಮುಖಂ ಬ್ರಹ್ಮ ಕ್ಷತ್ರಮೇತಸ್ಯ ಬಾಹವಃ ।
ಊರ್ವೋರ್ವೈಶ್ಯೋ ಭಗವತಃ ಪದ್ಭ್ಯಾಂ ಶೂದ್ರೋಽಭ್ಯಜಾಯತ ॥ ೩೭ ॥

ಭೂರ್ಲೋಕಃ ಕಲ್ಪಿತಃ ಪದ್ಭ್ಯಾಂ ಭುವರ್ಲೋಕೋಽಸ್ಯ ನಾಭಿತಃ ।
ಹೃದಾ ಸ್ವರ್ಲೋಕ ಉರಸಾ ಮಹರ್ಲೋಕೋ ಮಹಾತ್ಮನಃ ॥ ೩೮ ॥

ಗ್ರೀವಾಯಾಂ ಜನಲೋಕೋಽಸ್ಯ ತಪೋಲೋಕಃ ಸ್ತನದ್ವಯಾತ್ ।
ಮೂರ್ಧಭಿಃ ಸತ್ಯಲೋಕಸ್ತು ಬ್ರಹ್ಮಲೋಕಃ ಸನಾತನಃ ॥ ೩೯ ॥

ತತ್ಕಟ್ಯಾಂ ಚಾತಲಂ ಕ್ಲೃಪ್ತಮೂರುಭ್ಯಾಂ ವಿತಲಂ ವಿಭೋಃ ।
ಜಾನುಭ್ಯಾಂ ಸುತಲಂ ಶುದ್ಧಂ ಜಂಘಾಭ್ಯಾಂ ತು ತಲಾತಲಮ್ ॥ ೪೦ ॥

ಮಹಾತಲಂ ತು ಗುಲ್ಫಾಭ್ಯಾಂ ಪ್ರಪದಾಭ್ಯಾಂ ರಸಾತಲಮ್ ।
ಪಾತಾಲಂ ಪಾದತಲತ ಇತಿ ಲೋಕಮಯಃ ಪುಮಾನ್ ॥ ೪೧ ॥

ಭೂರ್ಲೋಕಃ ಕಲ್ಪಿತಃ ಪದ್ಭ್ಯಾಂ ಭುವರ್ಲೋಕೋಽಸ್ಯ ನಾಭಿತಃ ।
ಸ್ವರ್ಲೋಕಃ ಕಲ್ಪಿತೋ ಮೂರ್ಧ್ನಾ ಇತಿ ವಾ ಲೋಕಕಲ್ಪನಾ ॥ ೪೨ ॥

ಅಂಗಗಳಲ್ಲೇ ಸಮಸ್ತ ಲೋಕಗಳನ್ನೂ, ಅವುಗಳಲ್ಲಿರುವ ವಸ್ತುಗಳನ್ನೂ ಕಲ್ಪಿಸಿಕೊಳ್ಳುತ್ತಾರೆ. ಆತನ ನಡುವಿನಿಂದ ಕೆಳಗಿನ ಅಂಗಗಳಲ್ಲಿ ಏಳು ಪಾತಾಳಗಳನ್ನೂ, ಸೊಂಟದ ಮೇಲಿರುವ ಅಂಗಗಳಲ್ಲಿ ಏಳು ಸ್ವರ್ಗಗಳನ್ನೂ ಕಲ್ಪಿಸಿಕೊಳ್ಳುತ್ತಾರೆ. ॥ ೩೬ ॥ ಬ್ರಾಹ್ಮಣರು ಈ ವಿರಾಟ್‌ಪುರುಷನ ಬಾಯಿಯಿಂದಲೂ, ಭುಜಗಳಿಂದ ಕ್ಷತ್ರಿಯರೂ, ವೈಶ್ಯರು ಆ ಭಗವಂತನ ತೊಡೆಗಳಿಂದಲೂ, ಶೂದ್ರರು ಪಾದಗಳಿಂದಲೂ ಜನಿಸಿದರು. ॥ ೩೭ ॥ ಕಾಲಿನಿಂದ ಹಿಡಿದು ಸೊಂಟದವರೆಗೆ ಏಳೂ ಪಾತಾಳಗಳೂ ಮತ್ತು ಭೂಲೋಕವು ಕಲ್ಪಿತವಾಗುತ್ತದೆ. ಆತನ ನಾಭಿಯಲ್ಲಿ ಭುವರ್ಲೋಕವನ್ನೂ, ಹೃದಯದಲ್ಲಿ ಸ್ವರ್ಲೋಕವನ್ನೂ, ವಕ್ಷಸ್ಥಳದಲ್ಲಿ ಮಹರ್ಲೋಕವನ್ನೂ ಕಲ್ಪಿಸಲಾಗಿದೆ. ॥ ೩೮ ॥ ಕತ್ತಿನಲ್ಲಿ ಜನೋಲೋಕವೂ, ಎರಡು ಸ್ತನಗಳಲ್ಲಿ ತಪೋಲೋಕವೂ, ಮಸ್ತಕದಲ್ಲಿ ನನ್ನ ನಿತ್ಯನಿವಾಸಸ್ಥಾನವಾದ ಸತ್ಯಲೋಕವೂ ಭಾವಿತವಾಗಿದೆ. ॥ ೩೯ ॥ ಆ ವಿರಾಟ್‌ಪುರುಷನ ನಡುವಿನಲ್ಲಿ ಅತಲ ಲೋಕವೂ, ತೊಡೆಯಲ್ಲಿ ವಿತಲವೂ, ಮಂಡಿಗಳಲ್ಲಿ ಪವಿತ್ರವಾದ ಸುತಲಲೋಕವೂ, ಮೊಣಕಾಲುಗಳಲ್ಲಿ ತಲಾತಲಲೋಕವೂ ಕಲ್ಪಿತವಾಗಿದೆ. ॥ ೪೦ ॥ ಕಾಲಿನ ಹರಡುಗಳಲ್ಲಿ ಮಹಾತಲವೂ, ಪಾದಾಗ್ರದಲ್ಲಿ ರಸಾತಲವೂ, ಅಂಗಾಲಿನಲ್ಲಿ ಪಾತಾಳವನ್ನೂ ಭಾವಿಸುತ್ತಾರೆ. ಹೀಗೆ ವಿರಾಟ್‌ಪುರುಷನು ಸರ್ವಲೋಕಮಯನಾಗಿದ್ದಾನೆ. ॥ ೪೧ ॥ ಅಥವಾ ಆ ವಿರಾಟ್‌ಪುರುಷನ ಅಂಗಗಳಲ್ಲಿ, ಪಾದಗಳಲ್ಲಿ ಭೂಲೋಕ, ನಾಭಿಯಲ್ಲಿ ಭುವರ್ಲೋಕ, ಶಿರಸ್ಸಿನಲ್ಲಿ ಸ್ವರ್ಲೋಕಗಳನ್ನೂ ಕಲ್ಪಿಸಬಹುದು. ॥ ೪೨ ॥

ಐದನೆಯ ಅಧ್ಯಾಯವು ಮುಗಿಯಿತು. ॥ ೫ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದ್ವಿತೀಯಸ್ಕಂಧೇ ಪಂಚಮೋಽಧ್ಯಾಯಃ ॥ ೫ ॥

ಆರನೆಯ ಅಧ್ಯಾಯ

ವಿರಾಟ್‌ಸ್ವರೂಪದ ವಿಭೂತಿಗಳ ವರ್ಣನೆ

ಬ್ರಹ್ಮೋವಾಚ

ವಾಚಾಂ ವಹ್ನೇರ್ಮುಖಂ ಕ್ಷೇತ್ರಂ ಛಂದಸಾಂ ಸಪ್ತ ಧಾತವಃ ।
ಹವ್ಯಕವ್ಯಾಮೃತಾನ್ನಾನಾಂ ಜಿಹ್ವಾ ಸರ್ವರಸಸ್ಯ ಚ ॥ ೧ ॥

ಸರ್ವಾಸೂನಾಂ ಚ ವಾಯೋಶ್ಚ ತನ್ನಾಸೇ ಪರಮಾಯಣೇ ।
ಅಶ್ವಿನೋರೋಷಧೀನಾಂ ಚ ಘ್ರಾಣೋ ಮೋದಪ್ರಮೋದಯೋಃ ॥ ೨ ॥

ಬ್ರಹ್ಮದೇವರು ಹೇಳುತ್ತಾರೆ – ದೇವರ್ಷಿನಾರದನೇ! ಆ ವಿರಾಟ್‌ಪುರುಷನ ಮುಖದಿಂದ ವಾಣಿಯೂ, ವಾಣಿಯ ಅಧಿಷ್ಠಾತೃದೇವತೆ ಅಗ್ನಿಯೂ ಉತ್ಪತ್ತಿಯಾದುವು. ಗಾಯತ್ರೀ, ಉಷ್ಣಿಕ್, ಅನುಷ್ಟುಪ್, ಬೃಹತೀ, ಪಂಕ್ತಿ, ತ್ರಿಷ್ಟುಪ್, ಜಗತೀ – ಎಂಬ ಏಳು ಛಂದಸ್ಸುಗಳು ಆತನ ಏಳು ಧಾತುಗಳಿಂದ ಉದ್ಭವಿಸಿದವು. ಮನುಷ್ಯರು, ಪಿತೃದೇವತೆಗಳು ಮತ್ತು ದೇವತೆಗಳು ಇವರುಗಳಿಗೆ ಭೋಜ್ಯವಾಗಿರುವ ಅಮೃತಮಯ ಅನ್ನವೂ ಎಲ್ಲ ಪ್ರಕಾರದ ರಸಗಳೂ, ರಸನೇಂದ್ರಿಯ ಹಾಗೂ ಅದರ ಅಧಿಷ್ಠಾತೃ ದೇವತೆ ವರುಣನು ಆತನ ನಾಲಿಗೆಯಿಂದ ಉತ್ಪನ್ನನಾದನು. ॥ ೧ ॥ ಆತನ ಮೂಗಿನ ಹೊಳ್ಳೆಗಳಿಂದ ಪ್ರಾಣ, ಅಪಾನ, ವ್ಯಾನ, ಉದಾನ, ಸಮಾನ– ಈ ಐದು ಪ್ರಾಣಗಳೂ, ಅವುಗಳ ದೇವತೆಯಾದ ಪ್ರಾಣ ದೇವರೂ (ವಾಯು) ಮತ್ತು ಘ್ರಾಣೇಂದ್ರಿಯದಿಂದ ಅಶ್ವಿನೀ ಕುಮಾರರೂ, ಸಮಸ್ತ ಓಷಧಿಗಳೂ ಹಾಗೂ ಸಾಮಾನ್ಯ ಹಾಗೂ ವಿಶೇಷ ಗಂಧಗಳೂ ಉತ್ಪನ್ನವಾದುವು. ॥ ೨ ॥ ಆತನ ನೇತ್ರೇಂದ್ರಿಯವು ರೂಪ

ರೂಪಾಣಾಂ ತೇಜಸಾಂ ಚಕ್ಷುರ್ದಿವಃ ಸೂರ್ಯಸ್ಯ ಚಾಕ್ಷಿಣೀ ।
ಕರ್ಣೌ ದಿಶಾಂ ಚ ತೀರ್ಥಾನಾಂ ಶ್ರೋತ್ರಮಾಕಾಶಶಬ್ದಯೋಃ ।
ತದ್ಗಾತ್ರಂ ವಸ್ತು ಸಾರಾಣಾಂ ಸೌಭಗಸ್ಯ ಚ ಭಾಜನಮ್ ॥ ೩ ॥

ತ್ವಗಸ್ಯ ಸ್ಪರ್ಶವಾಯೋಶ್ಚ ಸರ್ವಮೇಧಸ್ಯ ಚೈವ ಹಿ ।
ರೋಮಾಣ್ಯುದ್ಭಿಜ್ಜಜಾತೀನಾಂ ಯೈರ್ವಾ ಯಜ್ಞಸ್ತು ಸಂಭೃತಃ ॥ ೪ ॥

ಕೇಶಶ್ಮಶ್ರುನಖಾನ್ಯಸ್ಯ ಶಿಲಾಲೋಹಾಭ್ರವಿದ್ಯುತಾಮ್ ।
ಬಾಹವೋ ಲೋಕಪಾಲಾನಾಂ ಪ್ರಾಯಶಃ ಕ್ಷೇಮಕರ್ಮಣಾಮ್ ॥ ೫ ॥

ವಿಕ್ರಮೋ ಭೂರ್ಭುವಃ ಸ್ವಶ್ಚ ಕ್ಷೇಮಸ್ಯ ಶರಣಸ್ಯ ಚ ।
ಸರ್ವಕಾಮವರಸ್ಯಾಪಿ ಹರೇಶ್ಚರಣ ಆಸ್ಪದಮ್ ॥ ೬ ॥

ಅಪಾಂ ವೀರ್ಯಸ್ಯ ಸರ್ಗಸ್ಯ ಪರ್ಜನ್ಯಸ್ಯ ಪ್ರಜಾಪತೇಃ ।
ಪುಂಸಃ ಶಿಶ್ನ ಉಪಸ್ಥಸ್ತು ಪ್ರಜಾತ್ಯಾನಂದನಿರ್ವೃತೇಃ ॥ ೭ ॥

ಪಾಯುರ್ಯಮಸ್ಯ ಮಿತ್ರಸ್ಯ ಪರಿಮೋಕ್ಷಸ್ಯ ನಾರದ ।
ಹಿಂಸಾಯಾ ನಿರ್ಋತೇರ್ಮೃತ್ಯೋರ್ನಿರಯಸ್ಯ ಗುದಃ ಸ್ಮೃತಃ ॥ ೮ ॥

ಪರಾಭೂತೇರಧರ್ಮಸ್ಯ ತಮಸಶ್ಚಾಪಿ ಪಶ್ಚಿಮಃ ।
ನಾಡ್ಯೋ ನದನದೀನಾಂ ತು ಗೋತ್ರಾಣಾಮಸ್ಥಿಸಂಹತಿಃ ॥ ೯ ॥

ಅವ್ಯಕ್ತರಸಸಿಂಧೂನಾಂ ಭೂತಾನಾಂ ನಿಧನಸ್ಯ ಚ ।
ಉದರಂ ವಿದಿತಂ ಪುಂಸೋ ಹೃದಯಂ ಮನಸಃ ಪದಮ್ ॥ ೧೦ ॥

ಧರ್ಮಸ್ಯ ಮಮ ತುಭ್ಯಂ ಚ ಕುಮಾರಾಣಾಂ ಭವಸ್ಯ ಚ ।
ವಿಜ್ಞಾನಸ್ಯ ಚ ಸತ್ತ್ವಸ್ಯ ಪರಸ್ಯಾತ್ಮಾ ಪರಾಯಣಮ್ ॥ ೧೧ ॥

ಅಹಂ ಭವಾನ್ಭವಶ್ಚೈವ ತ ಇಮೇ ಮುನಯೋಽಗ್ರಜಾಃ ।
ಸುರಾಸುರನರಾ ನಾಗಾಃ ಖಗಾ ಮೃಗಸರೀಸೃಪಾಃ ॥ ೧೨ ॥

ಮತ್ತು ತೇಜಸ್ಸುಗಳಿಗೂ ಹಾಗೂ ನೇತ್ರಗೋಳವು ಸ್ವರ್ಗಕ್ಕೂ, ಸೂರ್ಯನಿಗೂ ಜನ್ಮಸ್ಥಾನವಾಗಿದೆ. ಸಮಸ್ತ ದಿಕ್ಕುಗಳು ಮತ್ತು ಪವಿತ್ರಗೊಳಿಸುವ ತೀರ್ಥಗಳೂ ಕಿವಿಗಳಿಂದಲೂ ಹಾಗೂ ಆಕಾಶ-ಶಬ್ದಗಳು ಆತನ ಶ್ರೋತ್ರೇಂದ್ರಿಯದಿಂದಲೂ ಹೊರಹೊಮ್ಮಿದವು. ಆತನ ಶರೀರವು ಪ್ರಪಂಚದ ಎಲ್ಲ ವಸ್ತುಗಳ ಸಾರ, ಸೌಂದರ್ಯದ ಕೋಶವಾಗಿದೆ. ॥ ೩ ॥ ಸಮಸ್ತ ಯಜ್ಞಗಳೂ ಸ್ಪರ್ಶ ಮತ್ತು ವಾಯುವೂ ಆತನ ತ್ವಗಿಂದ್ರಿಯದಿಂದ ಉದ್ಭವಿಸಿದವು. ಅವನ ರೋಮಗಳು ಎಲ್ಲ ಉದ್ಭಿಜ್ಜ-ವೃಕ್ಷಗಳಿಗೆ ಅಥವಾ ಯಜ್ಞೋಪಯೋಗೀ ಅರಳಿ, ಅತ್ತಿ, ಕಗ್ಗಲಿ, ಮುತ್ತುಗ ಮುಂತಾದ ವನಸ್ಪತಿಗಳಿಗೆ ಉತ್ಪತ್ತಿಸ್ಥಾನವು. ॥ ೪ ॥ ಅವನ ರೋಮ – ಗಡ್ಡ – ಮೀಸೆ ಮತ್ತು ಉಗುರುಗಳಿಂದ ಮೋಡ, ಮಿಂಚು, ಶಿಲೆ, ಕಬ್ಬಿಣ ಮುಂತಾದ ಧಾತುಗಳೂ ಹಾಗೂ ಅವನ ಭುಜಗಳಿಂದ ಜಗತ್ತನ್ನು ರಕ್ಷಿಸುವ ಲೋಕಪಾಲರು ಪ್ರಕಟರಾದರು. ॥ ೫ ॥ ಅವನು ನಡೆದಾಡುವುದು ಭೂಃ, ಭುವಃ ಸುವಃ ಮೂರೂ ಲೋಕಗಳಿಗೆ ಆಶ್ರಯವು. ಶರಣಾಗತರ ರಕ್ಷಣೆ, ಭಯನಿವಾರಣೆ ಮತ್ತು ಸಮಸ್ತ ಇಷ್ಟಾರ್ಥಗಳ ಈಡೇರಿಕೆಗಳೂ ಆ ಶ್ರೀಹರಿಯ ಚರಣಕಮಲಗಳೇ ಆಶ್ರಯವು. ॥ ೬ ॥ ಆ ವಿರಾಟ್ ಪುರುಷನ ಲಿಂಗವು ಜಲ, ವೀರ್ಯ, ಸೃಷ್ಟಿ ಮೋಡ ಮತ್ತು ಪ್ರಜಾಪತಿದೇವತೆಗೆ ಆಧಾರವು. ಅವನ ಜನನೇಂದ್ರಿಯವು ಸಂತಾನೋತ್ಪತ್ತಿಗೆ ಸುಖದ ಸ್ಥಾನವು ॥ ೭ ॥ ನಾರದಾ! ಆ ವಿರಾಟ್ಪುರುಷನ ಪಾಯು-ಇಂದ್ರಿಯವು ಯಮನಿಗೂ, ಮಿತ್ರನಿಗೂ ಮಲವಿಸರ್ಜನೆಗೂ ಆಶ್ರಯವಾಗಿದೆ ಮತ್ತು ಗುದದ್ವಾರವು ಹಿಂಸೆಗೂ, ಮೃತ್ಯುದೇವತೆಗೂ, ನರಕಕ್ಕೂ ಉತ್ಪತ್ತಿಸ್ಥಾನವು. ॥ ೮ ॥ ಅವನ ಬೆನ್ನಿನಿಂದ ಪರಾಜಯ, ಅಧರ್ಮ, ಅಜ್ಞಾನಗಳೂ, ನಾಡಿಗಳಿಂದ ನದೀ-ನದಗಳೂ, ಮೂಳೆಗಳಿಂದ ಪರ್ವತಗಳೂ ನಿರ್ಮಾಣವಾದುವು. ॥ ೯ ॥ ಅವ್ಯಕ್ತ ಅರ್ಥಾತ್ – ಮೂಲಪ್ರಕೃತಿ, ರಸವೆಂಬ ಧಾತು, ಸಮುದ್ರಗಳೂ, ಸಮಸ್ತ ಪ್ರಾಣಿಗಳೂ ಮತ್ತು ಅವುಗಳ ಮೃತ್ಯುವೂ ಅವನ ಉದರದಲ್ಲಿ ಅಡಗಿದೆ. ಅವನ ಹೃದಯವೇ ಮನಸ್ಸಿನ ಜನ್ಮಭೂಮಿಯು. ॥ ೧೦ ॥ ನಾರದಾ! ಧರ್ಮಕ್ಕೂ, ನನಗೂ, ನಿನಗೂ, ಸನಕಾದಿಗಳಿಗೂ, ಶಂಕರನಿಗೂ, ವಿಜ್ಞಾನಕ್ಕೂ, ಅಂತಃಕರಣಕ್ಕೂ, ಹೀಗೆ ಎಲ್ಲಕ್ಕೂ ಉದ್ಗಮಸ್ಥಾನ ಪರಮಾತ್ಮನೇ ಆಗಿದ್ದಾನೆ. ಅವನೇ ಎಲ್ಲರ ಆಶ್ರಯನಾಗಿರುವನು. ॥ ೧೧ ॥ ಹೆಚ್ಚೇನು ಹೇಳಲಿ! ನಾನೂ, ನೀನೂ, ನಿನ್ನ ಅಣ್ಣಂದಿರಾದ ಸನಕಾದಿಗಳೂ, ದೇವಾಸುರ-ಮನುಷ್ಯರೂ ನಾಗ-ಪಕ್ಷಿ-ಮೃಗಗಳೂ, ತೆವಳುವ ಪ್ರಾಣಿಗಳೂ, ಗಂಧರ್ವರೂ, ಅಪ್ಸರೆಯರೂ, ಯಕ್ಷರೂ, ರಾಕ್ಷಸರೂ, ಭೂತ-ಪ್ರೇತಗಳೂ, ಸರ್ಪಗಳೂ, ಪಶುಗಳೂ, ಪಿತೃದೇವತೆಗಳೂ, ಸಿದ್ಧರೂ, ವಿದ್ಯಾಧರರೂ, ಚಾರಣರೂ, ವೃಕ್ಷಗಳೂ, ಆಕಾಶ-ನೀರು-ನೆಲಗಳಲ್ಲಿ ವಾಸಿಸುವ ಇತರ ನಾನಾಜೀವಿಗಳೂ, ಗ್ರಹ-ನಕ್ಷತ್ರಗಳೂ, ಬಾಲವುಳ್ಳ ತಾರೆಗಳೂ, ಚುಕ್ಕೆಗಳೂ, ತಾರೆಗಳೂ, ಮಿಂಚು-ಮೋಡಗಳೂ ಇವೆಲ್ಲವೂ ಆ ವಿರಾಟ್ಪುರುಷನ ಅವಯವಗಳು. ಭೂತ-ಭವಿಷ್ಯ-ವರ್ತಮಾನಗಳಿಗೆ ಸೇರಿದ ಎಲ್ಲವೂ ಆತನೇ. ಇವೆಲ್ಲವನ್ನು ಎಲ್ಲೆಡೆ

ಗಂಧರ್ವಾಪ್ಸರಸೋ ಯಕ್ಷಾ ರಕ್ಷೋಭೂತಗಣೋರಗಾಃ ।
ಪಶವಃ ಪಿತರಃ ಸಿದ್ಧಾ ವಿದ್ಯಾಧ್ರಾಶ್ಚಾರಣಾ ದ್ರುಮಾಃ ॥ ೧೩ ॥

ಅನ್ಯೇ ಚ ವಿವಿಧಾ ಜೀವಾ ಜಲಸ್ಥಲನಭೌಕಸಃ ।
ಗ್ರಹರ್ಕ್ಷಕೇತವಸ್ತಾರಾಸ್ತಡಿತಃ ಸ್ತನಯಿತ್ನವಃ ॥ ೧೪ ॥

ಸರ್ವಂ ಪುರುಷ ಏವೇದಂ ಭೂತಂ ಭವ್ಯಂ ಭವಚ್ಚ ಯತ್ ।
ತೇನೇದಮಾವೃತಂ ವಿಶ್ವಂ ವಿತಸ್ತಿಮಧಿತಿಷ್ಠತಿ ॥ ೧೫ ॥

ಸ್ವಧಿಷ್ಣ್ಯಂ ಪ್ರತಪನ್ಪ್ರಾಣೋ ಬಹಿಶ್ಚ ಪ್ರತಪತ್ಯಸೌ ।
ಏವಂ ವಿರಾಜಂ ಪ್ರತಪಂಸ್ತಪತ್ಯಂತರ್ಬಹಿಃ ಪುಮಾನ್ ॥ ೧೬ ॥

ಸೋಽಮೃತಸ್ಯಾಭಯಸ್ಯೇಶೋ ಮರ್ತ್ಯಮನ್ನಂ ಯದತ್ಯಗಾತ್ ।
ಮಹಿಮೈಷ ತತೋ ಬ್ರಹ್ಮನ್ಪುರುಷಸ್ಯ ದುರತ್ಯಯಃ ॥ ೧೭ ॥

ಪಾದೇಷು ಸರ್ವಭೂತಾನಿ ಪುಂಸಃ ಸ್ಥಿತಿಪದೋ ವಿದುಃ ।
ಅಮೃತಂ ಕ್ಷೇಮಮಭಯಂ ತ್ರಿಮೂರ್ಧ್ನೋಽಧಾಯಿ ಮೂರ್ಧಸು ॥ ೧೮ ॥

ಪಾದಾಸ್ತ್ರಯೋ ಬಹಿಶ್ಚಾಸನ್ನಪ್ರಜಾನಾಂ ಯ ಆಶ್ರಮಾಃ ।
ಅಂತಸ್ತ್ರಿಲೋಕ್ಯಾಸ್ತ್ವಪರೋ ಗೃಹಮೇಧೋಽಬೃಹದ್ವ್ರತಃ ॥ ೧೯ ॥

ಸೃತೀ ವಿಚಕ್ರಮೇ ವಿಶ್ವಙ್ ಸಾಶನಾನಶನೇ ಉಭೇ ।
ಯದವಿದ್ಯಾ ಚ ವಿದ್ಯಾ ಚ ಪುರುಷಸ್ತೂಭಯಾಶ್ರಯಃ ॥ ೨೦ ॥

ಗಳಿಂದಲೂ ಅವನು ತುಂಬಿರುವನಲ್ಲದೆ ಹತ್ತು ಅಂಗುಲಗಳಷ್ಟು* ಮೇಲೆ ಇದನ್ನು ಮೀರಿಯೂ ಇದ್ದಾನೆ. ॥ ೧೨-೧೪ ॥ ಪ್ರಾಣ ವೆಂಬ ಸೂರ್ಯನು ತನ್ನ ಮಂಡಲವನ್ನು ಪ್ರಕಾಶಿಸುತ್ತಾ, ಒಳಗೂ, ಹೊರಗೂ ವಿಶ್ವದ ಎಲ್ಲೆಡೆ ಪ್ರಕಾಶವನ್ನು ಹರಡುತ್ತಾನೆ. ಹಾಗೆಯೇ ಪುರಾಣಪುರುಷ ಪರಮಾತ್ಮನೂ ಕೂಡ ಸಮಗ್ರ ವಿರಾಟ್ ಪುರುಷನನ್ನು (ಬ್ರಹ್ಮಾಂಡವನ್ನು) ಪ್ರಕಾಶಿಸುತ್ತಾ, ಅದರ ಒಳಗೆ-ಹೊರಗೆ ಎಲ್ಲೆಡೆಗಳಲ್ಲಿಯೂ ಪ್ರಕಾಶಿತನಾಗಿದ್ದಾನೆ. ॥ ೧೬ ॥ ಮುನಿವರ್ಯಾ! ಮನುಷ್ಯನ ಕ್ರಿಯೆ ಮತ್ತು ಸಂಕಲ್ಪದಿಂದ ಏನೆಲ್ಲ ಉಂಟಾಗುತ್ತದೋ, ಅದಕ್ಕಿಂತಲೂ ಆ ಪರಮಾತ್ಮನು ಮೀರಿಇದ್ದು ಅಮೃತ ಹಾಗೂ ಅಭಯಪದ (ಮೋಕ್ಷಪದ)ದ ಸ್ವಾಮಿಯಾಗಿರುವನು. ಅವನ ಮಹಿಮೆಯ ಪಾರವನ್ನು ಯಾರೂ ಹೊಂದಲಾರರು. ॥ ೧೭ ॥ ಸಮಸ್ತ ಲೋಕಗಳು ಭಗವಂತನ ಒಂದು ಪಾದ (ಅಂಶ) ಮಾತ್ರವಾಗಿದೆ ಹಾಗೂ ಅವನ ಅಂಶಮಾತ್ರ ಸ್ಥಿತಿಪದದಲ್ಲಿ ಸಮಸ್ತ ಪ್ರಾಣಿಗಳು ವಾಸಿಸುತ್ತವೆ. ವಿರಾಟಪುರುಷನ ಮೂರ್ಧ್ನಿಯಲ್ಲಿ ಮೂರು ಲೋಕಗಳಿವೆ. ಅವುಗಳಲ್ಲಿನ ಜನೋಲೋಕದಲ್ಲಿ ಅಮೃತ ತಪೋಲೋಕದಲ್ಲಿ ಕ್ಷೇಮ ಮತ್ತು ಸತ್ಯಲೋಕದಲ್ಲಿ ಅಭಯಪದವಿದೆ. ಈ ಮೂರೂ ಲೋಕಗಳು ವಿರಾಟ್ ಪುರುಷನ ಮೂರ್ಧ್ನಿಯಲ್ಲಿ ಇರುವುದರಿಂದ ಅವನನ್ನು ತ್ರಿಮೂರ್ಧಾ ಎಂದು ಹೇಳಲಾಗಿದೆ. ॥ ೧೮ ॥

ಜನೋಲೋಕ, ತಪೋಲೋಕ, ಸತ್ಯಲೋಕ ಇವುಗಳಲ್ಲಿ ಅವಿವಾಹಿತರೂ, ಬ್ರಹ್ಮಚಾರಿಗಳೂ, ವಾನಪ್ರಸ್ಥರೂ, ಸಂನ್ಯಾಸಿಗಳೂ ವಾಸಿಸುತ್ತಾರೆ. ಇದು ಅವನ ಹೊರಗಿನ ಪಾದವಾಗಿದೆ. ದೀರ್ಘಕಾಲೀನ ಬ್ರಹ್ಮಚರ್ಯರಹಿತರಾದ ಗೃಹಸ್ಥರು ಭೂಲೋಕ, ಭುವರ್ಲೋಕ, ಸ್ವರ್ಲೋಕಗಳೊಳಗೇ ವಾಸಿಸುತ್ತಾರೆ. ಇದು ಅವನ ಒಳಗಿನ ಪಾದವಾಗಿದೆ. ಭಗವಂತನ ಹತ್ತು ಅಂಗುಲದಲ್ಲೇ ಇದೆಲ್ಲ ಪ್ರಪಂಚವಿದೆ. ಆದರೆ ಭಗವಂತನು ಅವೆಲ್ಲಕ್ಕಿಂತ ಅತೀತನಾಗಿದ್ದಾನೆ. ॥ ೧೯ ॥ ಭಗವಂತನು ಮನುಷ್ಯರಿಗಾಗಿ ಎರಡು ಮಾರ್ಗವನ್ನು ಹೇಳಿರುವನು. ಅವುಗಳಲ್ಲಿ ಅವನು ಯಾವುದರಲ್ಲಿಯೂ ನಡೆಯಬಲ್ಲನು. ಒಂದು ಸ-ಅಶನ, ಅರ್ಥಾತ್ ಸಕಾಮ ಅನುಷ್ಠಾನ. ಇನ್ನೊಂದು ಅನ-ಅಶನ, ಅರ್ಥಾತ್ ನಿಷ್ಕಾಮ ಅನುಷ್ಠಾನ. ಇದರಲ್ಲಿ ಸಕಾಮ ಮಾರ್ಗವನ್ನು ಅವಿದ್ಯೆ ಮತ್ತು ನಿಷ್ಕಾಮ ಮಾರ್ಗವನ್ನು ವಿದ್ಯೆ ಎಂದು ಹೇಳಲಾಗಿದೆ. ನಿಷ್ಕಾಮಕರ್ಮದಲ್ಲಿ ಪರಮಾತ್ಮನ ಉಪಾಸನಾ ಪದ್ಧತಿಯಿಂದ ಕ್ರಿಯೆ ನಡೆಯುತ್ತದೆ. ಸಕಾಮದಲ್ಲಿ ಕರ್ಮಗಳು ವಿಸ್ತಾರವಾಗಿವೆ. ಅವು ಅವಿದ್ಯಾ ಮೂಲಕವಾಗಿವೆ. ಕ್ಷೇತ್ರಜ್ಞ ಜೀವಾತ್ಮನು ಎರಡರಲ್ಲಿನ ಯಾವುದೇ ಮಾರ್ಗವನ್ನು

* ದಶಾಂಗುಲ ಇದೊಂದು ಉಪಲಕ್ಷಣವಾಗಿದೆ. ಹೆಬ್ಬೆರಳು ಮತ್ತು ತೋರುಬೆರಳು ಚಾಚಿದಾಗ ಅವರ ಮಧ್ಯಭಾಗವನ್ನು ಪ್ರಾದೇಶಮಾತ್ರವೆಂಬ ಸಂಜ್ಞೆ ಇದೆ. ಇದೇ ಸಾಮಾನ್ಯ ೧೦ ಅಂಗುಲವೆಂದು ತಿಳಿಯಲಾಗಿದೆ. ಇದಲ್ಲದೇ ದಶಾಂಗುಲ ನ್ಯಾಯವೆಂದೂ ಹೇಳಲಾಗಿದೆ – ಬ್ರಹ್ಮಾಂಡದ ಏಳು ಆವರಣಗಳನ್ನು ವರ್ಣಿಸುವಾಗ ವೇದಾಂತ ಪ್ರಕ್ರಿಯೆಯಲ್ಲಿ ಹೀಗೆ ತಿಳಿಯಲಾಗಿದೆ – ಪೃಥ್ವಿಗಿಂತ ಹತ್ತುಪಟ್ಟು ಜಲವಿದೆ. ಜಲದ ಹತ್ತುಪಟ್ಟು ಅಗ್ನಿಯೂ, ಅಗ್ನಿಗಿಂತ ಹತ್ತುಪಟ್ಟು ವಾಯುವೂ, ವಾಯುವಿನಿಂದ ಹತ್ತುಪಟ್ಟು ಆಕಾಶವೂ, ಆಕಾಶಕ್ಕಿಂತ ಹತ್ತುಪಟ್ಟು ಅಹಂಕಾರವೂ, ಅಹಂಕಾರಕ್ಕಿಂತ ಹತ್ತುಪಟ್ಟು ಮಹತ್ತತ್ತ್ವವೂ, ಮಹತ್ತತ್ತ್ವಕ್ಕಿಂತ ಹತ್ತು ಪಟ್ಟು ಮೂಲಪ್ರಕೃತಿ ದೊಡ್ಡದಾಗಿದೆ. ಆ ಪ್ರಕೃತಿಯು ಭಗವಂತನ ಕೇವಲ ಒಂದು ಪಾದದಲ್ಲಿದೆ. ಈ ಪ್ರಕಾರ ಭಗವಂತನ ಮಹತ್ವ ಪ್ರಕಟಿಸಲಾಗಿದೆ. ಇದು ದಶಾಂಗುಲ-ನ್ಯಾಯವೆಂದು ಹೇಳಲಾಗಿದೆ.
ಹತ್ತು ಅಂಗುಲಗಳಿಗೂ ಮೀರಿದ್ದಾನೆ – ಎಂದರೆ ಈ ವಿಶ್ವಕ್ಕಿಂತಲೂ ಹೊರಗೂ ಮೇಲಿರುವವನು. ಎಲ್ಲವನ್ನೂ ತುಂಬಿ ಮೀರಿರುವನು – ಎಂದು ಅಧಿಕ್ಯದಲ್ಲಿ ಮಾತ್ರವೇ ತಾತ್ಪರ್ಯ. ಅಪರಿಚ್ಛಿನ್ನನಾದ ಅವನು ಕೇವಲ ಹತ್ತು ಅಂಗುಲಗಳಷ್ಟು ದೊಡ್ಡವನು ಎಂದರೆ ಪ್ರಮಾಣದ ನಿರ್ದೇಶವಲ್ಲ (ಶ್ರೀಧರೀಯ).

ಯಸ್ಮಾದಂಡಂ ವಿರಾಡ್ ಜಜ್ಞೇ ಭೂತೇಂದ್ರಿಯಗುಣಾತ್ಮಕಃ ।
ತದ್ದ್ರವ್ಯಮತ್ಯಗಾದ್ವಿಶ್ವಂ ಗೋಭಿಃ ಸೂರ್ಯ ಇವಾತಪನ್ ॥ ೨೧ ॥

ಯದಾಸ್ಯ ನಾಭ್ಯಾನ್ನಲಿನಾದಹಮಾಸಂ ಮಹಾತ್ಮನಃ ।
ನಾವಿದಂ ಯಜ್ಞಸಂಭಾರಾನ್ಪುರುಷಾವಯವಾದೃತೇ ॥ ೨೨ ॥

ತೇಷು ಯಜ್ಞಸ್ಯ ಪಶವಃ ಸವನಸ್ಪತಯಃ ಕುಶಾಃ ।
ಇದಂ ಚ ದೇವಯಜನಂ ಕಾಲಶ್ಚೋರುಗುಣಾನ್ವಿತಃ ॥ ೨೩ ॥

ವಸ್ತೂನ್ಯೋಷಧಯಃ ಸ್ನೇಹಾ ರಸಲೋಹಮೃದೋ ಜಲಮ್ ।
ಋಚೋ ಯಜೂಂಷಿ ಸಾಮಾನಿ ಚಾತುರ್ಹೋತ್ರಂ ಚ ಸತ್ತಮ ॥ ೨೪ ॥

ನಾಮಧೇಯಾನಿ ಮಂತ್ರಾಶ್ಚ ದಕ್ಷಿಣಾಶ್ಚ ವ್ರತಾನಿ ಚ ।
ದೇವತಾನುಕ್ರಮಃ ಕಲ್ಪಃ ಸಂಕಲ್ಪಸ್ತಂತ್ರಮೇವ ಚ ॥ ೨೫ ॥

ಗತಯೋ ಮತಯಃ ಶ್ರದ್ಧಾ ಪ್ರಾಯಶ್ಚಿತ್ತಂ ಸಮರ್ಪಣಮ್ ।
ಪುರುಷಾವಯವೈರೇತೇ ಸಂಭಾರಾಃ ಸಂಭೃತಾ ಮಯಾ ॥ ೨೬ ॥

ಇತಿ ಸಂಭೃತಸಂಭಾರಃ ಪುರುಷಾವಯವೈರಹಮ್ ।
ತಮೇವ ಪುರುಷಂ ಯಜ್ಞಂ ತೇನೈವಾಯಜಮೀಶ್ವರಮ್ ॥ ೨೭ ॥

ತತಸ್ತೇ ಭ್ರಾತರ ಇಮೇ ಪ್ರಜಾನಾಂ ಪತಯೋ ನವ ।
ಅಯಜನ್ ವ್ಯಕ್ತಮವ್ಯಕ್ತಂ ಪುರುಷಂ ಸುಸಮಾಹಿತಾಃ ॥ ೨೮ ॥

ತತಶ್ಚ ಮನವಃ ಕಾಲೇ ಈಜಿರೇ ಋಷಯೋಽಪರೇ ।
ಪಿತರೋ ವಿಬುಧಾ ದೈತ್ಯಾ ಮನುಷ್ಯಾಃ ಕ್ರತುಭಿರ್ವಿಭುಮ್ ॥ ೨೯ ॥

ನಾರಾಯಣೇ ಭಗವತಿ ತದಿದಂ ವಿಶ್ವಮಾಹಿತಮ್ ।
ಗೃಹೀತಮಾಯೋರುಗುಣಃ ಸರ್ಗಾದಾವಗುಣಃ ಸ್ವತಃ ॥ ೩೦ ॥

ಸೃಜಾಮಿ ತನ್ನಿಯುಕ್ತೋಽಹಂ ಹರೋ ಹರತಿ ತದ್ವಶಃ ।
ವಿಶ್ವಂ ಪುರುಷರೂಪೇಣ ಪರಿಪಾತಿ ತ್ರಿಶಕ್ತಿಧೃಕ್ ॥ ೩೧ ॥

ಹಿಡಿಯಬಲ್ಲನು. ಎರಡೂ ಮಾರ್ಗಗಳ ಆಧಾರ ಈ ವಿರಾಟ್ ಪುರುಷ ಪರಮಾತ್ಮನೇ ಆಗಿದ್ದಾನೆ ॥ ೨೦ ॥ ಏಕೆಂದರೆ, ಆ ವಿರಾಟ್ ಪುರುಷನಿಂದಲೇ ಭೂತಗಳು, ಇಂದ್ರಿಯಗಳು, ಗುಣಗಳುಳ್ಳ ಈ ಬ್ರಹ್ಮಾಂಡವು ಉತ್ಪನ್ನವಾಗಿದೆ. ಆ ಪುರಾಣಪುರುಷ ಪರಮಾತ್ಮನು ಸಮಸ್ತ ವಸ್ತುಗಳಿಂದ ಅತೀತನಾಗಿದ್ದಾನೆ. ಸೂರ್ಯನು ಬೆಳಗುತ್ತಾ ತನ್ನ ಕಿರಣಗಳಿಂದ ವಿಶ್ವವೆಲ್ಲವನ್ನು ಪ್ರಕಾಶಿಸುತ್ತಿದ್ದು ವಿಶ್ವದಿಂದ ಬೇರೆಯೇ ಆಗಿದ್ದಾನೆ. ಹಾಗೆಯೇ ಪರಮಾತ್ಮನು ಸಮಗ್ರ ವಿಶ್ವವನ್ನು ನಿರ್ಮಿಸಿ, ಅದನ್ನು ಪ್ರಕಾಶಿಸುತ್ತಿರುವನು. ಆದರೆ ಅವನು ಇದರಿಂದ ಅತೀತನೇ ಆಗಿದ್ದಾನೆ ॥ ೨೧ ॥

ಮಹಾತ್ಮನಾದ ಆ ವಿರಾಟ್ ಪುರುಷನ ನಾಭಿಕಮಲದಿಂದ ನಾನು ಜನಿಸಿದಾಗ ನನಗೆ ಯಜ್ಞಮಾಡುವುದಕ್ಕೆ ಆ ಪುರುಷನ ಅಂಗಗಳನ್ನು ಬಿಟ್ಟು ಬೇರೆ ಯಾವ ಸಾಮಗ್ರಿಯೂ ದೊರೆಯಲಿಲ್ಲ ॥ ೨೨ ॥ ಆಗ ನಾನು ಅವನ ಅಂಗಗಳಲ್ಲೇ ಯಜ್ಞದ ಪಶು, ಯೂಪಸ್ತಂಭ, ಕುಶ, ಯಜ್ಞಭೂಮಿ, ಯಜ್ಞಕ್ಕೆ ಯೋಗ್ಯವಾದ ಉತ್ತಮ ಕಾಲವನ್ನು ಕಲ್ಪಿಸಿಕೊಂಡೆನು ॥ ೨೩ ॥ ಋಷಿಶ್ರೇಷ್ಠನೇ! ಯಜ್ಞಕ್ಕೆ ಆವಶ್ಯಕವಾದ ಪಾತ್ರೆ ಮುಂತಾದ ವಸ್ತುಗಳು, ಗೋದಿ, ಅಕ್ಕಿ ಮುಂತಾದ ಓಷಧಿಗಳು, ತುಪ್ಪವೇ ಮುಂತಾದ ಸ್ನೇಹ ಪದಾರ್ಥಗಳು, ಆರು ರಸಗಳು, ಚಿನ್ನ, ಮಣ್ಣು, ನೀರು, ಋಕ್ಕು, ಯಜುಸ್ಸು, ಸಾಮಗಳು, ಚಾತುರ್ಹೋತ್ರ, ಯಜ್ಞಗಳ ನಾಮಧೇಯಗಳು, ಮಂತ್ರಗಳು, ದಕ್ಷಿಣೆ, ವ್ರತ, ದೇವತೆಗಳ ಕ್ರಮಗಳು, ಕಲ್ಪಗ್ರಂಥಗಳು, ಸಂಕಲ್ಪ, ತಂತ್ರ, ಗತಿ, ಮತಿ, ಶ್ರದ್ಧೆ, ಪ್ರಾಯಶ್ಚಿತ್ತ ಮತ್ತು ಸಮರ್ಪಣೆಗಳು – ಈ ಎಲ್ಲ ಯಜ್ಞಸಾಮಗ್ರಿಗಳನ್ನು ಆ ಪುರುಷನ ಅಂಗಗಳಿಂದಲೇ ಸಂಗ್ರಹಿಸಿದೆನು ॥ ೨೪-೨೬ ॥ ಹೀಗೆ ಆ ವಿರಾಟ್‌ಪುರುಷನ ಅಂಗಗಳಿಂದಲೇ ಸಂಗ್ರಹಿಸಿದ ಎಲ್ಲ ಸಾಮಗ್ರಿಗಳಿಂದ ನಾನು ಆ ಯಜ್ಞಸ್ವರೂಪನಾದ ಪರಮಾತ್ಮನನ್ನು ಯಜ್ಞದ ಮೂಲಕ ಪೂಜಿಸಿದೆನು ॥ ೨೭ ॥ ಅನಂತರ ನಿನ್ನ ಸೋದರರಾದ ಒಂಭತ್ತು ಮಂದಿ ಪ್ರಜಾಪತಿಗಳೂ ಏಕಾಗ್ರಚಿತ್ತದಿಂದ ವ್ಯಕ್ತ ಮತ್ತು ಅವ್ಯಕ್ತ ಸ್ವರೂಪನಾದ, ವಿರಾಟ್ ಮತ್ತು ಅಂತರ್ಯಾಮಿರೂಪನಾದ ಆ ಪುರುಷನನ್ನು ಆರಾಧಿಸಿದರು ॥ ೨೮ ॥ ಇದಾದ ಬಳಿಕ ಆಗಾಗ ಮನುಗಳು, ಋಷಿಗಳು, ಪಿತೃಗಳು, ದೇವತೆಗಳು, ದೈತ್ಯರು, ಮನುಷ್ಯರು ಯಜ್ಞಗಳ ಮೂಲಕ ಆ ಭಗವಂತನ ಆರಾಧನೆಯನ್ನು ಮಾಡಿದರು ॥ ೨೯ ॥ ನಾರದಾ! ಈ ಇಡೀ ವಿಶ್ವವು ಆ ಭಗವಂತನಾದ ನಾರಾಯಣನಲ್ಲಿಯೇ ನೆಲೆಗೊಂಡಿದೆ. ಸ್ವಯಂ ಗುಣಾತೀತನಾಗಿದ್ದರೂ ಸೃಷ್ಟಿಯ ಪ್ರಾರಂಭದಲ್ಲಿ ತನ್ನ ಮಾಯಾಶಕ್ತಿಯಿಂದ ತ್ರಿಗುಣಗಳನ್ನು ಸ್ವೇಚ್ಛೆಯಿಂದ ಸ್ವೀಕರಿಸುವನು ॥ ೩೦ ॥ ಅವನ ಪ್ರೇರಣೆಯಿಂದಲೇ ನಾನು ಈ ವಿಶ್ವವನ್ನು ರಚಿಸುತ್ತೇನೆ. ಅವನಿಗೆ ಅಧೀನನಾಗಿಯೇ ರುದ್ರನು ಇದನ್ನು ಸಂಹರಿಸುತ್ತಾನೆ. ಅವನು ಸ್ವತಃ ವಿಷ್ಣುರೂಪದಿಂದ ಇದನ್ನು ಪಾಲಿಸುತ್ತಾನೆ. ಏಕೆಂದರೆ, ಅವನೇ ಸತ್ತ್ವ, ರಜ, ತಮಸ್ಸು ಎಂಬ ಮೂರು ಶಕ್ತಿಗಳನ್ನು ಸ್ವೀಕರಿಸಿರುವನು ॥ ೩೧ ॥ ಮಗು! ನೀನು ಕೇಳಿದ ಪ್ರಶ್ನೆಗಳಿಗೆ ಉತ್ತರವನ್ನು ಕೊಟ್ಟಿರುವೆನು. ಒಟ್ಟಿನಲ್ಲಿ ಹೇಳುವುದಾದರೆ ಆ ಭಗವಂತನನ್ನು

ಇತಿ ತೇಽಭಿಹಿತಂ ತಾತ ಯಥೇದಮನುಪೃಚ್ಛಸಿ ।
ನಾನ್ಯದ್ಭಗವತಃ ಕಿಂಚಿದ್ಭಾವ್ಯಂ ಸದಸದಾತ್ಮಕಮ್
॥ ೩೨ ॥

ನ ಭಾರತೀ ಮೇಽಙ್ಗ ಮೃಷೋಪಲಕ್ಷ್ಯತೇ
ನ ವೈ ಕ್ವಚಿನ್ಮೇ ಮನಸೋ ಮೃಷಾ ಗತಿಃ ।
ನ ಮೇ ಹೃಷೀಕಾಣಿ ಪತಂತ್ಯಸತ್ಪಥೇ
ಯನ್ಮೇ ಹೃದೌತ್ಕಂಠ್ಯವತಾ ಧೃತೋ ಹರಿಃ ॥ ೩೩ ॥

ಸೋಽಹಂ ಸಮಾಮ್ನಾಯಮಯಸ್ತಪೋಮಯಃ
ಪ್ರಜಾಪತೀನಾಮಭಿವಂದಿತಃ ಪತಿಃ ।
ಆಸ್ಥಾಯ ಯೋಗಂ ನಿಪುಣಂ ಸಮಾಹಿತ-
ಸ್ತಂ ನಾಧ್ಯಗಚ್ಛಂ ಯತ ಆತ್ಮಸಂಭವಃ ॥ ೩೪ ॥

ನತೋಽಸ್ಮ್ಯಹಂ ತಚ್ಚರಣಂ ಸಮೀಯುಷಾಂ
ಭವಚ್ಛಿದಂ ಸ್ವಸ್ತ್ಯಯನಂ ಸುಮಂಗಲಮ್ ।
ಯೋ ಹ್ಯಾತ್ಮಮಾಯಾವಿಭವಂ ಸ್ಮ ಪರ್ಯಗಾದ್
ಯಥಾ ನಭಃ ಸ್ವಾಂತಮಥಾಪರೇ ಕುತಃ ॥ ೩೫ ॥

ನಾಹಂ ನ ಯೂಯಂ ಯದೃತಾಂ ಗತಿಂ ವಿದು-
ರ್ನ ವಾಮದೇವಃ ಕಿಮುತಾಪರೇ ಸುರಾಃ ।
ತನ್ಮಾಯಯಾ ಮೋಹಿತಬುದ್ಧಯಸ್ತ್ವಿದಂ
ವಿನಿರ್ಮಿತಂ ಚಾತ್ಮಸಮಂ ವಿಚಕ್ಷ್ಮಹೇ ॥ ೩೬ ॥

ಯಸ್ಯಾವತಾರಕರ್ಮಾಣಿ ಗಾಯಂತಿ ಹ್ಯಸ್ಮದಾದಯಃ ।
ನ ಯಂ ವಿದಂತಿ ತತ್ತ್ವೇನ ತಸ್ಮೈ ಭಗವತೇ ನಮಃ
॥ ೩೭ ॥

ಬಿಟ್ಟು ಸದ್ರೂಪವಾಗಲೀ, ಅಸದ್ರೂಪವಾಗಲೀ, ಕಾರ್ಯ-ಕಾರಣ ವಾಗಲೀ ಯಾವ ವಸ್ತುವೂ ಇಲ್ಲ, ಎಂದು ತಿಳಿ.* ॥ ೩೨ ॥

ಪ್ರಿಯ ನಾರದನೇ! ನಾನು ಪ್ರೇಮಪೂರ್ಣ ಹೃದಯದಿಂದ ಭಗವಂತನ ಸ್ಮರಣೆಯಲ್ಲಿ ಮಗ್ನನಾಗಿರುತ್ತೇನೆ. ಇದರಿಂದಲೇ ನನ್ನ ಮಾತು ಎಂದಿಗೂ ಸುಳ್ಳಾಗುವುದು ಕಂಡುಬರುವುದಿಲ್ಲ, ನನ್ನ ಮನಸ್ಸಿನ ಸಂಕಲ್ಪವು ಎಂದೂ ಅಸತ್ಯವಾಗುವುದಿಲ್ಲ, ನನ್ನ ಇಂದ್ರಿಯಗಳು ಎಂದಿಗೂ ಮರ್ಯಾದೆ ಮೀರಿ ದುರ್ಮಾರ್ಗದಲ್ಲಿ ಪ್ರವರ್ತಿಸುವುದಿಲ್ಲ. ॥ ೩೩ ॥ ನಾನು ವೇದಮಯನಾಗಿದ್ದೇನೆ. ತಪೋಮಯನಾಗಿದ್ದೇನೆ; ದೊಡ್ಡ-ದೊಡ್ಡ ಪ್ರಜಾಪತಿಗಳಿಂದಲೂ ನಮಸ್ಕರಿಸಲ್ಪಡುತ್ತಿರುವ ಪ್ರಜಾಪತಿ ಸಾರ್ವಭೌಮನಾಗಿದ್ದೇನೆ. ಆದರೆ ಇಂತಹ ನನಗೂ ಸಂಪೂರ್ಣ ಯೋಗನಿಷ್ಠೆಯನ್ನು ಆಚರಿಸಿದಾಗಲೂ ನನ್ನ ಮೂಲಕಾರಣನಾದ ಆ ಪರಮಾತ್ಮನ ಸ್ವರೂಪವನ್ನು ತಿಳಿಯಲು ತೊಡಲು ಸಾಧ್ಯವಾಗಲಿಲ್ಲ. ॥ ೩೪ ॥ (ಏಕೆಂದರೆ, ಅವನಾದರೋ ಏಕಮಾತ್ರ ಭಕ್ತಿಯಿಂದಲೇ ದೊರೆಯುವವನು.) ನಾನಾದರೋ ಪರಮ ಮಂಗಲಮಯನಾದ ಹಾಗೂ ಶರಣುಬಂದ ಭಕ್ತರ ಭವಬಂಧನವನ್ನು ಧ್ವಂಸಮಾಡುವ ಕ್ಷೇಮಪ್ರದನಾದ ಭಗವಂತನ ಚರಣಗಳಿಗೆ ನಮಸ್ಕರಿಸುತ್ತೇನೆ. ಅವನಲ್ಲಿ ಶರಣಾಗಿದ್ದೇನೆ. ಅನಂತ ಅಪಾರ ಆಕಾಶಕ್ಕೆ ಮೇರೆಯೇ ಇಲ್ಲದಿರುವಂತೆ ಭಗವಂತನ ಅನಂತ ಮಹಿಮೆಗೆ ಪಾರವಿಲ್ಲ. ಆತನ ಮಾಯೆಯ ವೈಭವವು ಅಪಾರವಾದುದು, ಅನಂತವಾದುದು. ಆಕಾಶವು ತನ್ನ ಅನಂತತೆಯನ್ನು ತಾನು ತಿಳಿಯದಂತೆಯೇ ಅವನೂ ಕೂಡ ತನ್ನ ಮಹಿಮೆಯ ವಿಸ್ತಾರವನ್ನು ಅರಿಯನು. ಹೀಗಿರುವಾಗ ಇತರರು ಹೇಗೆ ಅರಿಯಬಲ್ಲರು? ॥ ೩೫ ॥ ನಾನು, ನನ್ನ ಮಕ್ಕಳಾದ ನೀವೂ, ದೇವದೇವನಾದ ವಾಮದೇವನೂ ಅವನ ಸತ್ಯಸ್ವರೂಪವನ್ನು ತಿಳಿಯೆವು. ಹೀಗಿರುವಾಗ ಇತರ ದೇವತೆಗಳು ಹೇಗೆ ಅರಿಯಬಲ್ಲರು? ಆತನ ಮಾಯೆಯಿಂದ ಮೋಹಿತರಾದ ನಾವು ಆತನನ್ನು ತಿಳಿಯುವುದಿರಲಿ, – ಆತನು ನಿರ್ಮಿಸಿದ ಜಗತ್ತಿನ ಸ್ವರೂಪವನ್ನು ಸರಿಯಾಗಿ ತಿಳಿಯಲಾರೆವು. ನಮ್ಮ-ನಮ್ಮ ಬುದ್ಧಿಯ ಮಟ್ಟಕ್ಕೆ ತಕ್ಕಂತೆ ಅದನ್ನು ವರ್ಣಿಸುತ್ತಿದ್ದೇವೆ. ವಾಸ್ತವವಾಗಿ ಆ ತತ್ತ್ವವನ್ನು ವಾಣಿ ಮತ್ತು ಬುದ್ಧಿಯ ಮೂಲಕ ವರ್ಣಿಸಲಾಗುವುದಿಲ್ಲ. ॥ ೩೬ ॥** ನಾವು ಕೇವಲ ಆತನ ಅವತಾರಗಳನ್ನು ಮಾತ್ರ ಗಾನಮಾಡಬಲ್ಲೆವೇ ಹೊರತು, ಅವನ ತತ್ತ್ವವನ್ನು ತಿಳಿಯಲಾರೆವು. ಅಂತಹ ಭಗವಂತನ ಶ್ರೀಚರಣಗಳಲ್ಲಿ ನಾನು ನಮಸ್ಕರಿಸುತ್ತೇನೆ. ॥ ೩೭ ॥

* ಗೀತೆಯಲ್ಲಿ ಭಗವಂತನು ಹೇಳಿರುವನು –
ಮತ್ತಃ ಪರತರಂ ನಾನ್ಯತ್ಕಿಂಚಿದಸ್ತಿ ಧನಂಜಯ । ಮಯಿ ಸರ್ವಮಿದಂ ಪ್ರೋತಂ ಸೂತ್ರೇ ಮಣಿಗಣಾ ಇವ ॥ *(ಭಗವದ್ಗೀತೆ ೭/೭)*
ಹೇ ಧನಂಜಯನೇ! ನನಗಿಂತ ಭಿನ್ನವಾದ ಯಾವುದೇ ಪರಮ ಕಾರಣವು ಇಲ್ಲವಾಗಿದೆ. ಈ ಸಂಪೂರ್ಣ ಜಗತ್ತು ಸೂತ್ರದಲ್ಲಿ ನೂಲಿನ ಮಣಿಗಳಂತೆ ನನ್ನಲ್ಲಿ ಪೋಣಿಸಲ್ಪಟ್ಟಿದೆ.

** ಕುರುಡರು ಆನೆಯನ್ನು ಕಂಡ ಇದೊಂದು ದೃಷ್ಟಾಂತ – ಒಮ್ಮೆ ಮೂರುಜನ ಕುರುಡರು ಒಟ್ಟಿಗೆ ಹೋಗುತ್ತಿದ್ದರು. ಅವರಿಗೆ ದಾರಿಯಲ್ಲಿ ಒಂದು ಆನೆ ಸಿಕ್ಕಿತು. ಒಬ್ಬನು ಆನೆಯ ಕಾಲನ್ನು ಮುಟ್ಟಿ ಹೇಳಿದನು – ಆನೆಯೆಂದರೆ ಕಂಬವಾಗಿದೆ. ಇನ್ನೊಬ್ಬನು ಕಿವಿಯನ್ನು ಮುಟ್ಟಿ – ಆನೆಯೆಂದರೆ ಮೊರವಾಗಿದೆ ಎಂದು ಹೇಳಿದನು. ಮೂರನೆಯವನು ಆನೆಯ ಸೊಂಡಿಲನ್ನು ಮುಟ್ಟಿ – ಆನೆಯೆಂದರೆ ದೊಡ್ಡ ಹೆಬ್ಬಾವಿನಂತಿದೆ ಎಂದು ಹೇಳಿದನು. ಆನೆಯ ವಿಷಯದಲ್ಲಿ ಮೂವರೂ ಕುರುಡರು ತಮ್ಮ-ತಮ್ಮ ಬುದ್ಧಿಗನುಸಾರವಾದ ಅಭಿಪ್ರಾಯವಿರುವಂತೆಯೇ, ಆ ಪರಬ್ರಹ್ಮ ಪರಮಾತ್ಮನ ವಿಷಯದಲ್ಲಿ ಬೇರೆ-ಬೇರೆ ಮಾನ್ಯತೆಯ ಭೇದವಿರುತ್ತದೆ. ನಿಜವಾಗಿ ಆ ತತ್ತ್ವವನ್ನು ಮಾತಿನಿಂದ ವರ್ಣಿಸಲು ಆಗುವುದೇ ಇಲ್ಲ.

ಸ ಏಷ ಆದ್ಯಃ ಪುರುಷಃ ಕಲ್ಪೇ ಕಲ್ಪೇ ಸೃಜತ್ಯಜಃ ।
ಆತ್ಮಾಽಽತ್ಮನ್ಯಾತ್ಮನಾಽಽತ್ಮಾನಂ ಸಂಯಚ್ಛತಿ ಚ ಪಾತಿ ಚ ॥ ೩೮ ॥

ವಿಶುದ್ಧಂ ಕೇವಲಂ ಜ್ಞಾನಂ ಪ್ರತ್ಯಕ್ ಸಮ್ಯಗವಸ್ಥಿತಮ್ ।
ಸತ್ಯಂ ಪೂರ್ಣಮನಾದ್ಯಂತಂ ನಿರ್ಗುಣಂ ನಿತ್ಯಮದ್ವಯಮ್ ॥ ೩೯ ॥

ಋಷೇ ವಿದಂತಿ ಮುನಯಃ ಪ್ರಶಾಂತಾತ್ಮೇಂದ್ರಿಯಾಶಯಾಃ ।
ಯದಾ ತದೇವಾಸತ್ತರ್ಕೈಸ್ತಿರೋಧೀಯೇತ ವಿಪ್ಲುತಮ್ ॥ ೪೦ ॥

ಆದ್ಯೋಽವತಾರಃ ಪುರುಷಃ ಪರಸ್ಯ
ಕಾಲಃ ಸ್ವಭಾವಃ ಸದಸನ್ಮನಶ್ಚ ।
ದ್ರವ್ಯಂ ವಿಕಾರೋ ಗುಣ ಇಂದ್ರಿಯಾಣಿ
ವಿರಾಟ್ ಸ್ವರಾಟ್ ಸ್ಥಾಸ್ನು ಚರಿಷ್ಣು ಭೂಮ್ನಃ ॥ ೪೧ ॥

ಅಹಂ ಭವೋ ಯಜ್ಞ ಇಮೇ ಪ್ರಜೇಶಾ
ದಕ್ಷಾದಯೋ ಯೇ ಭವದಾದಯಶ್ಚ ।
ಸ್ವರ್ಲೋಕಪಾಲಾಃ ಖಗಲೋಕಪಾಲಾ
ನೃಲೋಕಪಾಲಾಸ್ತಲಲೋಕಪಾಲಾಃ ॥ ೪೨ ॥

ಗಂಧರ್ವವಿದ್ಯಾಧರಚಾರಣೇಶಾ
ಯೇ ಯಕ್ಷರಕ್ಷೋರಗನಾಗನಾಥಾಃ ।
ಯೇ ವಾ ಋಷೀಣಾಮೃಷಭಾಃ ಪಿತೄಣಾಂ
ದೈತ್ಯೇಂದ್ರ ಸಿದ್ಧೇಶ್ವರದಾನವೇಂದ್ರಾಃ ।
ಅನ್ಯೇ ಚ ಯೇ ಪ್ರೇತಪಿಶಾಚಭೂತ-
ಕೂಷ್ಮಾಂಡಯಾದೋಮೃಗಪಕ್ಷ್ಯಧೀಶಾಃ ॥ ೪೩ ॥

ಯತ್ಕಿಂ ಚ ಲೋಕೇ ಭಗವನ್ಮಹಸ್ವ-
ದೋಜಃಸಹಸ್ವದ್ಬಲವತ್ ಕ್ಷಮಾವತ್ ।
ಶ್ರೀಹ್ರೀವಿಭೂತ್ಯಾತ್ಮವದದ್ಭುತಾರ್ಣಂ
ತತ್ತ್ವಂ ಪರಂ ರೂಪವದಸ್ವರೂಪಮ್ ॥ ೪೪ ॥

ಪ್ರಾಧಾನ್ಯತೋ ಯಾನೃಷ ಆಮನಂತಿ
ಲೀಲಾವತಾರಾನ್ಪುರುಷಸ್ಯ ಭೂಮ್ನಃ ।
ಆಪೀಯತಾಂ ಕರ್ಣಕಷಾಯಶೋಷಾ-
ನನುಕ್ರಮಿಷ್ಯೇ ತ ಇಮಾನ್ಸುಪೇಶಾನ್ ॥ ೪೫ ॥

ಅವನು ಜನ್ಮರಹಿತನಾದ ಆದಿಪುರುಷನು. ಪ್ರತಿಯೊಂದು ಕಲ್ಪದಲ್ಲಿಯೂ ತನ್ನನ್ನು-ತಾನೇ ಸೃಷ್ಟಿಸಿಕೊಂಡು, ರಕ್ಷಿಸಿಕೊಳ್ಳುತ್ತಾ, ಅದರ ಸಂಹಾರವನ್ನು ಮಾಡಿಕೊಳ್ಳುತ್ತಾನೆ. ॥ ೩೮ ॥ ಅವನು ಮಾಯಾಲೇಶವಿಲ್ಲದ ಶುದ್ಧಜ್ಞಾನ ಸ್ವರೂಪನು. ಅಂತರಾತ್ಮನಾದ ಆತ್ಮನಾಗಿ ಬೆಳಗುತ್ತಿರುವವನೂ, ಸತ್ಯನೂ, ಪರಿಪೂರ್ಣನೂ, ಆದ್ಯಂತರಹಿತನೂ, ಗುಣಾತೀತನೂ, ನಿತ್ಯನೂ, ಅದ್ವಿತೀಯನೂ ಆದ ಪರಮಾತ್ಮನೇ ಅವನು. ॥ ೩೯ ॥ ಮಹರ್ಷಿಯೇ! ಮಹಾತ್ಮರು ತಮ್ಮ ಅಂತಃಕರಣ, ಇಂದ್ರಿಯಗಳು ಮತ್ತು ಶರೀರವನ್ನು ಪ್ರಶಾಂತಗೊಳಿಸಿಕೊಂಡಾಗ ಅವನ ಸಾಕ್ಷಾತ್ಕಾರವಾಗುತ್ತದೆ. ಆದರೆ ಕೆಟ್ಟ ತರ್ಕಗಳ ಮುಸುಕು ಹಾಕಿಕೊಂಡಾಗ ಅವನು ಮರೆಯಾಗುತ್ತಾನೆ. ॥ ೪೦ ॥

ಪರಮಾತ್ಮನ ಮೊದಲನೆಯ ಅವತಾರವೇ ಈ ವಿರಾಟ್ ಪುರುಷನದು. ಕಾಲ, ಸ್ವಭಾವ, ಕಾರ್ಯ, ಕಾರಣ, ಮನಸ್ಸು, ಪಂಚ-ಭೂತಗಳು, ಅಹಂಕಾರ, ತ್ರಿಗುಣಗಳು, ಇಂದ್ರಿಯಗಳು, ಬ್ರಹ್ಮಾಂಡಶರೀರ, ಅದರ ಅಭಿಮಾನಿ ದೇವತೆ, ಸ್ಥಾವರ-ಜಂಗಮ ಜೀವರು - ಇವೆಲ್ಲವೂ ಆ ಭಗವಾನ್ ಅನಂತನದೇ ರೂಪಗಳಾಗಿವೆ. ಇವೆಲ್ಲ ರೂಪಗಳಲ್ಲಿದ್ದರೂ ವಾಸ್ತವವಾಗಿ ಅವನು ಒಬ್ಬನೇ ಆಗಿದ್ದಾನೆ. ಅವನ ಮಹಿಮೆಗೆ ಪಾರವಿಲ್ಲ, ಆದ್ದರಿಂದ ಅನಂತನಾಗಿದ್ದಾನೆ, ಸರ್ವವ್ಯಾಪಿಯೂ, ಭೂಮನೂ ಅರ್ಥಾತ್ ಮಹತ್ತಾಗಿದ್ದಾನೆ. ॥ ೪೧ ॥ ನಾನು, ಶಂಕರನು, ಯಜ್ಞಪುರುಷನಾದ ವಿಷ್ಣು, ದಕ್ಷನೇ ಮುಂತಾದ ಪ್ರಜಾಪತಿಗಳು, ನೀನು ಮತ್ತು ನಿನ್ನಂತಹ ದಿವ್ಯ ಮಹರ್ಷಿಗಳು, ಸ್ವರ್ಗಾಧಿಪತಿಗಳು, ದಿವ್ಯಪಕ್ಷಿಗಳ ಅಧಿಪತಿಗಳು, ನರಪತಿಗಳು, ಪಾತಾಳವೇ ಮುಂತಾದ ಕೆಳಗಿನ ಲೋಕಗಳ ಪಾಲಕರು, ಗಂಧರ್ವ-ವಿದ್ಯಾಧರ-ಚಾರಣರ ಅಧಿನಾಯಕರು, ಯಕ್ಷ-ರಾಕ್ಷಸ-ಸರ್ಪ-ನಾಗಜಾತಿಗಳ ನಾಯಕರು, ಮಹರ್ಷಿಗಳು, ಪಿತೃಪತಿಗಳು, ದೈತ್ಯೇಂದ್ರರು, ಸಿದ್ಧೇಶ್ವರರು, ದಾನವ ಅರಸುಗಳು ಮತ್ತು ಭೂತ-ಪ್ರೇತ-ಪಿಶಾಚ-ಕೂಷ್ಮಾಂಡ, ಜಲಜಂತುಗಳು, ಮೃಗಗಳು, ಪಕ್ಷಿಗಳ ಒಡೆಯರು, ಐಶ್ವರ್ಯ, ತೇಜಸ್ಸು, ಇಂದ್ರಿಯಬಲ, ಮನೋಬಲ, ಶರೀರಬಲ ಅಥವಾ ಕ್ಷಮೆಯಿಂದ ಸಂಪನ್ನನಾಗಿರುವ ಎಲ್ಲ ವಸ್ತುಗಳು ಅಥವಾ ವಿಶೇಷವಾದ ಸೌಂದರ್ಯ, ಲಜ್ಜೆ, ವೈಭವ ಮತ್ತು ವಿಭೂತಿಗಳಿಂದ ಬೆಳಗುತ್ತಿರುವ, ಅದ್ಭುತವಾದ ರೂಪ-ಸಂಪತ್ತುಗಳಿಂದ ಖ್ಯಾತವಾದುವುಗಳೂ, ರೂಪರಹಿತನಾಗಿ ಅತಿಶಯವನ್ನು ಪಡೆದಿರುವವರೂ, ಮುಂತಾದ ಎಲ್ಲರೂ, ಎಲ್ಲವೂ ಆ ಪರಮತತ್ತ್ವಮಯ ಭಗವತ್ಸ್ವರೂಪಗಳೇ ಆಗಿವೆ. ॥ ೪೨-೪೪ ॥ ನಾರದನೇ! ಇವುಗಳಲ್ಲದೆ ಆ ಪರಮಪುರುಷನ ಪರಮ ಪವಿತ್ರವಾದ ಮತ್ತು ಪ್ರಧಾನವಾದ ಅನೇಕ ಲೀಲಾವತಾರಗಳು ಶಾಸ್ತ್ರಗಳಲ್ಲಿ ವರ್ಣಿತವಾಗಿವೆ. ಅವು ಕಿವಿಗಳಿಗೆ ಇಂಪಾಗಿ ಕಿವಿಗಳ ಕೊಳೆಯನ್ನು ತೊಳೆದು ಹಾಕುವ ದಿವ್ಯಚರಿತ್ರಗಳು. ಅವುಗಳನ್ನು ಕ್ರಮವಾಗಿ ನಾನು ವರ್ಣಿಸುತ್ತೇನೆ; ಸಾವಧಾನವಾಗಿ ಶ್ರವಣಿಸು." ॥ ೪೫ ॥

ಆರನೆಯ ಅಧ್ಯಾಯವು ಮುಗಿಯಿತು. ॥ ೬ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದ್ವಿತೀಯಸ್ಕಂಧೇ ಷಷ್ಠೋಽಧ್ಯಾಯಃ ॥ ೬ ॥

ಏಳನೆಯ ಅಧ್ಯಾಯ

ಭಗವಂತನ ಲೀಲಾವತಾರಗಳ ಕಥೆ

ಬ್ರಹ್ಮೋವಾಚ

ಯತ್ರೋದ್ಯತಃ ಕ್ಷಿತಿತಲೋದ್ಧರಣಾಯ ಬಿಭ್ರತ್
ಕ್ರೌಡೀಂ ತನುಂ ಸಕಲಯಜ್ಞಮಯೀಮನಂತಃ ।
ಅಂತರ್ಮಹಾರ್ಣವ ಉಪಾಗತ ಮಾದಿದೈತ್ಯಂ
ತಂ ದಂಷ್ಟ್ರಯಾದ್ರಿಮಿವ ವಜ್ರಧರೋ ದದಾರ ॥ ೧ ॥

ಬ್ರಹ್ಮದೇವರು ಹೇಳುತ್ತಾರೆ – ಎಲೈ ನಾರದನೇ! "ಪ್ರಳಯ ಜಲದಲ್ಲಿ ಮುಳುಗಿಹೋಗಿದ್ದ ಭೂಮಿಯನ್ನು ಉದ್ಧರಿಸಲು ಅನಂತನಾದ ಶ್ರೀಭಗವಂತನು ಸಮಸ್ತ ಯಜ್ಞಮಯವಾದ ವರಾಹ ದೇಹವನ್ನು ಕೈಗೊಂಡನು. ಆ ಅವತಾರದಲ್ಲಿ ಅವನು ಸಮುದ್ರದೊಳಗೆಯೇ ತನ್ನನ್ನು ಎದುರಿಸಲು ಬಂದ ಆದಿದೈತ್ಯ ಹಿರಣ್ಯಾಕ್ಷನನ್ನು – ಇಂದ್ರನು ವಜ್ರಾಯುಧದಿಂದ ಪರ್ವತವನ್ನು ಭೇದಿಸಿದಂತೆ, ತನ್ನ ಕೋರೆದಾಡೆಗಳಿಂದ ಸೀಳಿಹಾಕಿದನು. ॥ ೧ ॥

ಜಾತೋ ರುಚೇರಜನಯತ್ ಸುಯಮಾನ್ ಸುಯಜ್ಞ
ಆಕೂತಿಸೂನುರಮರಾನಥ ದಕ್ಷಿಣಾಯಾಮ್ ।
ಲೋಕತ್ರಯಸ್ಯ ಮಹತೀಮಹರದ್ಯದಾಽಽರ್ತಿಂ
ಸ್ವಾಯಂಭುವೇನ ಮನುನಾ ಹರಿರಿತ್ಯನೂಕ್ತಃ ॥ ೨ ॥

ಅನಂತರ ಅದೇ ಪ್ರಭುವು ರುಚಿಯೆಂಬ ಪ್ರಜಾಪತಿಯ ಪತ್ನಿಯಾದ ಆಕೂತಿಯ ಗರ್ಭದಲ್ಲಿ 'ಸುಯಜ್ಞ' ರೂಪದಲ್ಲಿ ಅವತರಿಸಿದನು. ಆ ಅವತಾರದಲ್ಲಿ ಅವನು 'ದಕ್ಷಿಣಾ' ಎಂಬ ತನ್ನ ಧರ್ಮಪತ್ನಿಯಲ್ಲಿ 'ಸುಯಮ'ರೆಂಬ ದೇವತೆಗಳನ್ನು ಪುತ್ರರನ್ನಾಗಿ ಪಡೆದು, ಮೂರು ಲೋಕಗಳಿಗೂ ಒದಗಿದ್ದ ಮಹಾಪೀಡೆಯನ್ನು ಪರಿಹರಿಸಿದ್ದರಿಂದ ಸ್ವಾಯಂಭುವ ಮನುವು ಈತನನ್ನು 'ಹರಿ' ಎಂಬ ನಾಮದಿಂದ ಕರೆದನು. ॥ ೨ ॥

ಜಜ್ಞೇ ಚ ಕರ್ದಮಗೃಹೇ ದ್ವಿಜ ದೇವಹೂತ್ಯಾಂ
ಸ್ತ್ರೀಭಿಃ ಸಮಂ ನವಭಿರಾತ್ಮ ಗತಿಂ ಸ್ವಮಾತ್ರೇ ।
ಊಚೇ ಯಯಾಽಽತ್ಮಶಮಲಂ ಗುಣಸಂಗಪಂಕ-
ಮಸ್ಮಿನ್ ವಿಧೂಯ ಕಪಿಲಸ್ಯ ಗತಿಂ ಪ್ರಪೇದೇ ॥ ೩ ॥

ನಾರದಾ! ಕರ್ದಮ ಪ್ರಜಾಪತಿಯ ಮನೆಯಲ್ಲಿ ದೇವಹೂತಿ ದೇವಿಯ ಗರ್ಭದಲ್ಲಿ ಒಂಭತ್ತು ಮಂದಿ ಸೋದರಿಯರೊಡನೆ ಭಗವಂತನು 'ಕಪಿಲ'ನೆಂಬ ಹೆಸರಿನಿಂದ ಅವತರಿಸಿದನು. ಅವನು ತನ್ನ ತಾಯಿ ದೇವಹೂತಿಗೆ ಆತ್ಮಜ್ಞಾನವನ್ನು ಉಪದೇಶಮಾಡಿದನು. ಅದರಿಂದ ಆಕೆಯು ತನ್ನಲ್ಲಿ ತ್ರಿಗುಣಗಳ ಆಸಕ್ತಿಯಿಂದ ಉಂಟಾಗಿದ್ದ ಹೃದಯದ ಎಲ್ಲ ಕಲ್ಮಷವನ್ನು ಅದೇ ಜನ್ಮದಲ್ಲಿ ತೊಳೆದುಕೊಂಡು ಕಪಿಲನ ನಿಜಸ್ವರೂಪವಾದ ಮುಕ್ತಿಯನ್ನು ಪಡೆದುಕೊಂಡಳು. ॥ ೩ ॥

ಅತ್ರೇರಪತ್ಯಮಭಿಕಾಂಕ್ಷತ ಆಹ ತುಷ್ಟೋ
ದತ್ತೋ ಮಯಾಹಮಿತಿ ಯದ್ಭಗವಾನ್ಸ ದತ್ತಃ ।
ಯತ್ಪಾದಪಂಕಜಪರಾಗಪವಿತ್ರದೇಹಾ
ಯೋಗರ್ದ್ಧಿಮಾಪುರುಭಯೀಂ ಯದುಹೈಹಯಾದ್ಯಾಃ ॥ ೪ ॥

ಅತ್ರಿಮಹರ್ಷಿಯು ಪುತ್ರಾರ್ಥಿಯಾಗಿ ತಪಸ್ಸುಮಾಡಿದಾಗ ಅತನಲ್ಲಿ ಪ್ರಸನ್ನನಾದ ಭಗವಂತನು – 'ನಾನು ನನ್ನನ್ನೇ ನಿನಗೆ ಪುತ್ರನಾಗಿ ಕೊಟ್ಟುಕೊಂಡಿದ್ದೇನೆ; ನಿನಗೆ ಪುತ್ರರೂಪದಲ್ಲಿ ದತ್ತನಾಗಿದ್ದೇನೆ' ಎಂದು ವರಕೊಟ್ಟದ್ದರಿಂದ ಅವರಲ್ಲಿ ಅವತರಿಸಿದ ಭಗವಂತನು 'ದತ್ತ' (ದತ್ತಾತ್ರೇಯ) ಎಂಬ ನಾಮದಿಂದಲೇ ಖ್ಯಾತನಾದನು. ಅವನ ಚರಣಕಮಲಗಳ ಪರಾಗದಿಂದ ತಮ್ಮ ಶರೀರವನ್ನು ಪವಿತ್ರಗೊಳಿಸಿಕೊಂಡು ಯದುರಾಜನು ಮತ್ತು ಸಹಸ್ರಾರ್ಜುನರೇ ಮುಂತಾದವರು ಭೋಗ ಮತ್ತು ಯೋಗಗಳೆಂಬ ಎರಡೂ ಯೋಗಸಿದ್ಧಿಗಳನ್ನು ಪಡೆದು ಕೃತಾರ್ಥರಾದರು. ॥ ೪ ॥

ತಪ್ತಂ ತಪೋ ವಿವಿಧಲೋಕಸಿಸೃಕ್ಷಯಾ ಮೇ
ಆದೌ ಸನಾತ್ ಸ್ವತಪಸಃ ಸ ಚತುಃಸನೋಽಭೂತ್ ।
ಪ್ರಾಕ್ಕಲ್ಪಸಂಪ್ಲವವಿನಷ್ಟಮಿಹಾತ್ಮತತ್ತ್ವಂ
ಸಮ್ಯಗ್ಜಗಾದ ಮುನಯೋ ಯದಚಕ್ಷತಾತ್ಮನ್ ॥ ೫ ॥

ನಾರದನೇ! ಸೃಷ್ಟಿಯ ಪ್ರಾರಂಭದಲ್ಲಿ ನಾನು ಬಗೆ-ಬಗೆಯ ಲೋಕಗಳನ್ನು ಸೃಷ್ಟಿಸಬೇಕೆಂಬ ಬಯಕೆಯಿಂದ ತಪಸ್ಸುಮಾಡಿದೆನು. ನನ್ನ ಆ ಅಖಂಡ ತಪಸ್ಸಿನಿಂದ ಪ್ರಸನ್ನನಾದ ಸ್ವಾಮಿಯು 'ತಪಸ್ಸು' ಎಂಬ ಅರ್ಥವನ್ನು ಹೇಳುವ 'ಸನ' ಎಂಬ ಹೆಸರಿನಿಂದ ಕೂಡಿ ಸನಕ, ಸನಂದನ, ಸನಾತನ, ಸನತ್ಕುಮಾರ ಎಂಬ ನಾಲ್ಕು ರೂಪಗಳಲ್ಲಿ ಅವತರಿಸಿದನು. ಈ ಅವತಾರದಲ್ಲಿ ಅವನು ಪ್ರಳಯದಿಂದಾಗಿ ಹಿಂದಿನ ಕಲ್ಪದಲ್ಲಿ ಮರೆತುಹೋಗಿದ್ದ ಆತ್ಮತತ್ತ್ವವನ್ನು

ಮುನಿಗಳಿಗೆ ಚೆನ್ನಾಗಿ ಉಪದೇಶಮಾಡಿದನು. ಅದರಿಂದ ಅವರು ಆಗಲೇ ಪರಮತತ್ತ್ವವನ್ನು ತಮ್ಮ ಹೃದಯದಲ್ಲಿ ಸಾಕ್ಷಾತ್ಕರಿಸಿಕೊಂಡರು. ॥ ೫ ॥

ಧರ್ಮಸ್ಯ ದಕ್ಷದುಹಿತರ್ಯಜನಿಷ್ಟ ಮೂರ್ತ್ಯಾಂ
ನಾರಾಯಣೋ ನರ ಇತಿ ಸ್ವತಪಃಪ್ರಭಾವಃ ।
ದೃಷ್ಟ್ವಾಽಽತ್ಮನೋ ಭಗವತೋ ನಿಯಮಾವಲೋಪಂ
ದೇವ್ಯಸ್ತ್ವನಂಗಪೃತನಾ ಘಟಿತುಂ ನ ಶೇಕುಃ ॥ ೬ ॥

ಧರ್ಮನ ಪತ್ನೀ ದಕ್ಷಕನ್ಯೆಯಾದ 'ಮೂರ್ತಿ' ಎಂಬಾಕೆಯ ಗರ್ಭದಲ್ಲಿ ಅವನು ನರ-ನಾರಾಯಣರೂಪದಲ್ಲಿ ಅವತರಿಸಿದನು. ಪರಮಾದ್ಭುತವಾದ ತಪಃಪ್ರಭಾವವನ್ನು ಪ್ರಕಟಿಸುವ ಅವತಾರವಿದು. ಇಂದ್ರನ ಪ್ರೇರಣೆಯಿಂದ ಆತನ ತಪೋಭಂಗ ಮಾಡಬೇಕೆಂದು ಬಂದ ಮನ್ಮಥನ ಸೇನೆಯಾದ ಅಪ್ಸರಸ್ತ್ರೀಯರು ತಾವೇ ಆಶಾಭಂಗಹೊಂದಿ, ಅವರ ಉದ್ದೇಶವು ಈಡೇರಲಿಲ್ಲ. ಕೊನೆಗೆ ಅವರು ಭಗವಂತನಲ್ಲಿ ಕ್ಷಮೆಯನ್ನು ಯಾಚಿಸಿದರು. ॥ ೬ ॥

ಕಾಮಂ ದಹಂತಿ ಕೃತಿನೋ ನನು ರೋಷದೃಷ್ಟ್ಯಾ
ರೋಷಂ ದಹಂತಮುತ ತೇ ನ ದಹಂತ್ಯಸಹ್ಯಮ್ ।
ಸೋಽಯಂ ಯದಂತರಮಲಂ ಪ್ರವಿಶನ್ಬಿಭೇತಿ
ಕಾಮಃ ಕಥಂ ನು ಪುನರಸ್ಯ ಮನಃ ಶ್ರಯೇತ ॥ ೭ ॥

ನಾರದಾ ! ಶಂಕರನೇ ಮೊದಲಾದ ಮಹಾನುಭಾವರು ಮನ್ಮಥನು ತಮ್ಮ ತಪಸ್ಸನ್ನು ಕೆಡಿಸಲು ಬಂದಾಗ ರೋಷದೃಷ್ಟಿಯಿಂದ ಆತನನ್ನು ಸುಟ್ಟುಬಿಡುತ್ತಾರೆ. ಆದರೆ ಅವರು ತಮ್ಮನ್ನೇ ಸುಡುತ್ತಿರುವ, ಸಹಿಸಲು ಅಸಾಧ್ಯವಾದ ಕ್ರೋಧವನ್ನು ಸುಟ್ಟುಹಾಕಲು ಅಶಕ್ತರಾಗುತ್ತಾರೆ. ಆದರೆ ಅದೇ ಕ್ರೋಧವು ನರ-ನಾರಾಯಣರ ನಿರ್ಮಲವಾದ ಮನಸ್ಸನ್ನು ಪ್ರವೇಶಿಸಲು ಅಂಜುತ್ತದೆ. ಹೀಗಿರುವಾಗ ಕಾಮವು ಅಲ್ಲಿಗೆ ಹೇಗೆ ತಾನೇ ಪ್ರವೇಶಮಾಡೀತು ? ■ ನರ-ನಾರಾಯಣರೂಪೀ ಭಗವಂತನು ಕಲ್ಪದ ಪ್ರಾರಂಭದಿಂದಲೇ ಲೋಕಕಲ್ಯಾಣಕ್ಕಾಗಿ ಕಠಿಣ ತಪಸ್ಸನ್ನು ಮಾಡುತ್ತಿದ್ದಾನೆ. ॥ ೭ ॥

ವಿದ್ಧಃ ಸಪತ್ನ್ಯುದಿತಪತ್ರಿಭಿರಂತಿ ರಾಜ್ಞೋ
ಬಾಲೋಽಪಿ ಸನ್ನುಪಗತಸ್ತಪಸೇ ವನಾನಿ ।
ತಸ್ಮಾ ಅದಾದ್ಧ್ರುವಗತಿಂ ಗೃಣತೇ ಪ್ರಸನ್ನೋ
ದಿವ್ಯಾಃ ಸ್ತುವಂತಿ ಮುನಯೋ ಯದುಪರ್ಯಧಸ್ತಾತ್ ॥ ೮ ॥

ತಂದೆಯಾದ ಉತ್ತಾನಪಾದ ರಾಜನ ಬಳಿಯಲ್ಲಿ ಕುಳಿತಿದ್ದ ಐದುವರ್ಷದ ಬಾಲಕ ಧ್ರುವನನ್ನು ಆತನ ಮಲತಾಯಿ ಸುರುಚಿಯು ವಾಗ್ಬಾಣಗಳಿಂದ ಘಾಸಿಪಡಿಸಿದಳು. ಇಷ್ಟು ಸಣ್ಣ ವಯಸ್ಸಿನವನಾದರೂ, ಅವನು ಸಹಿಸದೆ ಅರಮನೆಯನ್ನು ಬಿಟ್ಟು ತಪಸ್ಸನ್ನಾಚರಿಸಲು ಕಾಡಿಗೆ ಹೋದನು. ಪ್ರಭುಭಕ್ತಿಯಿಂದ ತನ್ನನ್ನು ಪ್ರಾರ್ಥಿಸಿದ ಆತನಿಗೆ ಒಲಿದು, ಭಗವಂತನು ಪ್ರಕಟನಾಗಿ ಧ್ರುವನಿಗೆ – ದಿವ್ಯ ಸಪ್ತರ್ಷಿಗಳು ಮೇಲೂ ಕೆಳಗೂ ಪ್ರದಕ್ಷಿಣೆಮಾಡುತ್ತಾ ಸ್ತುತಿಸುತ್ತಿರುವ ಅತ್ಯುನ್ನತವಾದ ಧ್ರುವಪದವನ್ನೇ ಕರುಣಿಸಿದನು. ॥ ೮ ॥

ಯದ್ವೇನಮುತ್ಪಥಗತಂ ದ್ವಿಜವಾಕ್ಯವಜ್ರ-
ವಿಪ್ಲುಷ್ಟಪೌರುಷಭಗಂ ನಿರಯೇ ಪತಂತಮ್ ।
ತ್ರಾತ್ವಾರ್ಥಿತೋ ಜಗತಿ ಪುತ್ರಪದಂ ಚ ಲೇಭೇ
ದುಗ್ಧಾ ವಸೂನಿ ವಸುಧಾ ಸಕಲಾನಿ ಯೇನ ॥ ೯ ॥

ವೇನರಾಜನು ಅತ್ಯಂತ ದುರ್ಮಾರ್ಗವನ್ನು ಹಿಡಿದಾಗ ಬ್ರಾಹ್ಮಣರ ಹುಂಕಾರರೂಪೀ ವಜ್ರದಿಂದ ಆತನ ಐಶ್ವರ್ಯ, ಪೌರುಷ ಸುಟ್ಟುಹೋಯಿತು. ಅವನು ನರಕಕ್ಕೆ ಬೀಳತೊಡಗಿದನು. ಮಹಾತ್ಮರು ಶ್ರೀಭಗವಂತನನ್ನು ಪ್ರಾರ್ಥಿಸಿ ಆತನ ಶರೀರವನ್ನು ಕಡೆದರು. ಆಗ ಅಲ್ಲಿ ಪೃಥುಮಹಾರಾಜನ ರೂಪದಲ್ಲಿ ಆತನಿಗೆ ಪುತ್ರನಾಗಿ ಭಗವಂತನು ಅವತರಿಸಿ ವೇನನನ್ನು ನರಕದಿಂದ ಉದ್ಧರಿಸಿದನು. ಹೀಗೆ 'ಪುತ್ರ' ಶಬ್ದವನ್ನು ಸಾರ್ಥಕಪಡಿಸಿದನು. ಅದೇ ಅವತಾರದಲ್ಲಿ ಪೃಥ್ವಿಯನ್ನು ಹಸುವಾಗಿಸಿ ಅದರಿಂದ ಜಗತ್ತಿಗಾಗಿ ಸಮಸ್ತ ಔಷಧ-ಅನ್ನವನ್ನು ಕರೆದುಕೊಳ್ಳುವಂತೆ ಮಾಡಿ ಕರುಣಿಸಿದನು. ಎಲ್ಲ ವಸುಸಂಪತ್ತನ್ನೂ ಧರಿಸಿದ್ದರಿಂದ 'ವಸುಂಧರಾ' ಎಂಬ ಹೆಸರೂ ಭೂಮಿಗೆ ಆಗ ಅನ್ವರ್ಥವಾಯಿತು. ॥ ೯ ॥

ನಾಭೇರಸಾವೃಷಭ ಆಸ ಸುದೇವಿಸೂನುಃ
ಯೋ ವೈ ಚಚಾರ ಸಮದೃಗ್ಜಡಯೋಗಚರ್ಯಾಮ್ ।
ಯತ್ಪಾರಮಹಂಸ್ಯಮೃಷಯಃ ಪದಮಾಮನಂತಿ
ಸ್ವಸ್ಥಃ ಪ್ರಶಾಂತ ಕರಣಃ ಪರಿಮುಕ್ತಸಂಗಃ ॥೧೦॥

ನಾಭಿರಾಜನ ಪತ್ನಿಯಾದ ಸುದೇವಿಯ ಗರ್ಭದಲ್ಲಿ ಭಗವಂತನು ಋಷಭದೇವನ ರೂಪದಲ್ಲಿ ಅವತರಿಸಿದನು. ಈ ಋಷಭಾವತಾರದಲ್ಲಿ ಸ್ವಾಮಿಯು ಸರ್ವಸಂಗಪರಿತ್ಯಾಗಮಾಡಿ, ಇಂದ್ರಿಯ-ಮನಸ್ಸುಗಳನ್ನು ಪ್ರಶಾಂತಗೊಳಿಸಿಕೊಂಡು, ಸ್ವಸ್ವರೂಪದಲ್ಲಿ ನೆಲೆಗೊಂಡು, ಸಮದರ್ಶಿಯಾಗಿ ಯೋಗದ ಪರಾಕಾಷ್ಠೆಯಲ್ಲಿದ್ದು

ಸತ್ರೇ ಮಮಾಸ ಭಗವಾನ್ ಹಯಶೀರಷಾಥೋ
ಸಾಕ್ಷಾತ್ ಸ ಯಜ್ಞಪುರುಷಸ್ತಪನೀಯವರ್ಣಃ ।
ಛಂದೋಮಯೋ ಮಖಮಯೋಽಖಿಲದೇವತಾತ್ಮಾ
ವಾಚೋ ಬಭೂವುರುಶತೀಃ ಶ್ವಸತೋಽಸ್ಯ ನಸ್ತಃ ॥೧೧॥

ಜಡನಂತೆ ಲೋಕಕ್ಕೆ ಕಾಣಿಸಿಕೊಂಡನು. ಈ ಸ್ಥಿತಿ ಮತ್ತು ಆಚರಣೆಗಳನ್ನೇ ಮಹರ್ಷಿಗಳು ಪರಮಹಂಸಪದ, ಅವಧೂತಚರ್ಯೆ ಎಂದು ಕರೆಯುತ್ತಾರೆ. ॥ ೧೦ ॥

ಆ ಯಜ್ಞಪುರುಷನಾದ ವಿಷ್ಣುವೇ ನಾನು ಮಾಡಿದ ಯಜ್ಞದಲ್ಲಿ ಚಿನ್ನದಂತೆ ಹೊಳೆಯುವ ದೇಹಕಾಂತಿಯಿಂದ ಬೆಳಗುತ್ತಿದ್ದ ಕುದುರೆಯ ಮುಖವುಳ್ಳ 'ಹಯಗ್ರೀವ' ರೂಪದಲ್ಲಿ ಅವತರಿಸಿದನು. ಭಗವಂತನ ಆ ದಿವ್ಯಮಂಗಳ ವಿಗ್ರಹವು ವೇದಮಯ, ಯಜ್ಞಮಯ ಮತ್ತು ಸರ್ವ ದೇವಮಯವಾದುದು. ಆತನ ನಿಶ್ವಾಸ ರೂಪದಲ್ಲಿ ವೇದವಾಣಿಯು ಪ್ರಕಟಗೊಂಡಿತು. ॥ ೧೧ ॥

ಮತ್ಸ್ಯೋ ಯುಗಾಂತಸಮಯೇ ಮನುನೋಪಲಬ್ಧಃ
ಕ್ಷೋಣೀಮಯೋ ನಿಖಿಲಜೀವನಿಕಾಯಕೇತಃ ।
ವಿಸ್ರಂಸಿತಾನುರುಭಯೇ ಸಲಿಲೇ ಮುಖಾನ್ಮೇ
ಆದಾಯ ತತ್ರ ವಿಜಹಾರ ಹ ವೇದಮಾರ್ಗಾನ್ ॥೧೨॥

ಚಾಕ್ಷುಷ ಮನ್ವಂತರದ ಕೊನೆಯ ಪ್ರಳಯಕಾಲದಲ್ಲಿ ಭಗವಂತನು ಮತ್ಸ್ಯರೂಪದಿಂದ ಸತ್ಯವ್ರತ ಮನುವಿಗೆ ಪ್ರತ್ಯಕ್ಷನಾದನು. ಆ ಸಮಯದಲ್ಲಿ ಪೃಥ್ವಿರೂಪೀ ನೌಕೆಗೆ ಆತನ ದೇಹವು ಆಶ್ರಯವಾಗಲು ಹಸ್ಯೋಚಿತ ಅವನು ಸಮಸ್ತ ಜೀವಿಗಳಿಗೂ ಆಶ್ರಯನಾದನು. ಭಯಂಕರವಾದ ಆ ಪ್ರಳಯಜಲದಲ್ಲಿ ನನ್ನ ಮುಖದಿಂದ ಜಾರಿದ್ದ ವೇದಗಳನ್ನು ಎತ್ತಿಕೊಂಡು, ಅದರಲ್ಲೇ ವಿಹರಿಸುತ್ತಿದ್ದನು. ॥ ೧೨ ॥

ಕ್ಷೀರೋದಧಾವಮರದಾನವಯೂಥಪಾನಾ-
ಮುನ್ಮಥ್ನತಾಮಮೃತಲಬ್ಧಯ ಆದಿದೇವಃ ।
ಪೃಷ್ಠೇನ ಕಚ್ಛಪವಪುರ್ವಿದಧಾರ ಗೋತ್ರಂ
ನಿದ್ರಾಕ್ಷಣೋಽದ್ರಿಪರಿವರ್ತಕಷಾಣಕಂಡೂಃ ॥೧೩॥

ದೇವಮುಖ್ಯರೂ ಮತ್ತು ದಾನವಮುಖ್ಯರೂ ಸೇರಿಕೊಂಡು ಅಮೃತವನ್ನು ಪಡೆಯುವುದಕ್ಕಾಗಿ ಕ್ಷೀರಸಮುದ್ರವನ್ನು ಕಡೆಯುತ್ತಿದ್ದಾಗ ಆ ಆದಿದೇವನು ಲಕ್ಷಯೋಜನ ವಿಸ್ತಾರವುಳ್ಳ ಕಚ್ಛಪ (ಆಮೆ) ರೂಪವನ್ನು ತಾಳಿ ತನ್ನ ಬೆನ್ನಮೇಲೆ ಮಂದರಾಚಲವನ್ನು ಹೊತ್ತುಕೊಂಡನು. ಆಗ ಸುತ್ತುತ್ತಿದ್ದ ಪರ್ವತದ ಉಜ್ಜುವಿಕೆಯಿಂದ ಬೆನ್ನತುರಿಯು ಸ್ವಲ್ಪ ಕಡಿಮೆಯಾಗಿ ಸ್ವಾಮಿಗೆ ಕ್ಷಣಕಾಲ ಸುಖನಿದ್ರೆಗೆ ಅವಕಾಶವಾಯಿತು. ॥ ೧೩ ॥

ತ್ರೈವಿಷ್ಟಪೋರುಭಯಹಾ ಸ ನೃಸಿಂಹರೂಪಂ
ಕೃತ್ವಾ ಭ್ರಮದ್ಭ್ರುಕುಟಿದಂಷ್ಟ್ರಕರಾಲವಕ್ತ್ರಮ್ ।
ದೈತ್ಯೇಂದ್ರಮಾಶು ಗದಯಾಭಿಪತಂತಮಾರಾತ್
ಊರೌ ನಿಪಾತ್ಯ ವಿದದಾರ ನಖೈಃ ಸ್ಫುರಂತಮ್ ॥೧೪॥

ದೇವತೆಗಳ ಹಾಗೂ ಮೂರುಲೋಕಗಳ ಮಹಾಭಯವನ್ನು ಹೋಗಲಾಡಿಸಲು ಆ ದೇವದೇವನು ಆದುರುತ್ತಿರುವ ಹುಬ್ಬುಗಳಿಂದಲೂ, ತೀಕ್ಷ್ಣವಾದ ಕೋರೆದಾಡೆಗಳಿಂದಲೂ, ಗಂಟುಹಾಕಿಕೊಂಡ ಮುಖದಿಂದ ಕೂಡಿ ಕಡುಭಯಂಕರವಾದ ನರಸಿಂಹರೂಪವನ್ನು ಧರಿಸಿದನು. ಆಗ ಗದೆಯನ್ನು ಎತ್ತಿಕೊಂಡು ತನ್ನ ಮೇಲೆ ಎರಗಿ ಬಂದ ದೈತ್ಯೇಂದ್ರನಾದ ಹಿರಣ್ಯಕಶಿಪುವನ್ನು ಬರಸೆಳೆದುಕೊಂಡು ತನ್ನ ತೊಡೆಯಮೇಲೆ ಮಲಗಿಸಿಕೊಂಡು ಆತನನ್ನು ತನ್ನ ಹರಿತವಾದ ಉಗುರುಗಳಿಂದ ಸೀಳಿಹಾಕಿದನು. ॥ ೧೪ ॥

ಅಂತಃ ಸರಸ್ಯುರುಬಲೇನ ಪದೇ ಗೃಹೀತೋ
ಗ್ರಾಹೇಣ ಯೂಥಪತಿರಂಬುಜಹಸ್ತ ಆರ್ತಃ ।
ಆಹೇದಮಾದಿಪುರುಷಾಖಿಲಲೋಕನಾಥ
ತೀರ್ಥಶ್ರವಃ ಶ್ರವಣಮಂಗಲನಾಮಧೇಯ ॥೧೫॥

ಒಂದು ಭಾರೀ ದೊಡ್ಡ ಸರೋವರದಲ್ಲಿ ಮಹಾಬಲಶಾಲಿಯಾದ ಗಜರಾಜನ ಕಾಲನ್ನು ಒಂದು ಮೊಸಳೆಯು ಬಲವಾಗಿ ಹಿಡಿದುಕೊಂಡಿತು. ಗಜರಾಜನು ಅದರೊಡನೆ ಸೆಣಸಾಡುತ್ತಾ ಸೋತು ಆಯಾಸಗೊಂಡು, ಗಾಬರಿಯಾದಾಗ, ಆ ಗಜರಾಜನು ಸೊಂಡಿಲಿನಲ್ಲಿ ಕಮಲವೊಂದನ್ನು ಮೇಲೆತ್ತಿ ಹಿಡಿದುಕೊಂಡು – 'ಓ ಆದಿಪುರುಷನೇ! ಸಕಲ ಲೋಕಗಳ ಸ್ವಾಮಿಯೇ! ಪುಣ್ಯಕೀರ್ತಿಯೇ! ಶ್ರವಣಮಂಗಳವಾದ ನಾಮಧೇಯವುಳ್ಳ ನಾರಾಯಣನೇ! ಎಂದು ಕೂಗಿಡಲು – ಒಡನೆಯೇ ಆ ಕೂಗನ್ನು ಕೇಳಿದ ಅನಂತಶಕ್ತಿಯಾದ ಶ್ರೀಹರಿಯು ಅಲ್ಲಿಗೆ ಚಕ್ರಪಾಣಿಯಾಗಿ, ಪಕ್ಷಿರಾಜ ಗರುಡನ ಬೆನ್ನೇರಿ ಬಂದು ತನ್ನ ಚಕ್ರದಿಂದ ನಕ್ರದ

ಶ್ರುತ್ವಾ ಹರಿಸ್ತಮರಣಾರ್ಥಿನಮಪ್ರಮೇಯ-
ಶ್ಚಕ್ರಾಯುಧಃ ಪತಗರಾಜಭುಜಾಧಿರೂಢಃ ।
ಚಕ್ರೇಣ ನಕ್ರವದನಂ ವಿನಿಪಾಟ್ಯ ತಸ್ಮಾ-
ದ್ಧಸ್ತೇ ಪ್ರಗೃಹ್ಯ ಭಗವಾನ್ಕೃಪಯೋಜ್ಜಹಾರ ॥ ೧೬ ॥

ಬಾಯಿಯನ್ನು ಸೀಳಿಹಾಕಿ ಆ ಗಜೇಂದ್ರನನ್ನು ಕರುಣೆಯಿಂದ ಕೈ ಹಿಡಿದು ಕಾಪಾಡಿದನು ಮತ್ತು ಅದಕ್ಕೆ ಮುಕ್ತಿಯನ್ನು ಕರುಣಿಸಿದನು. ॥ ೧೫-೧೬ ॥

ಜ್ಯಾಯಾನ್ಗುಣೈರವರಜೋಽಪ್ಯದಿತೇಃ ಸುತಾನಾಂ
ಲೋಕಾನ್ವಿಚಕ್ರಮ ಇಮಾನ್ಯದಥಾಧಿಯಜ್ಞಃ ।
ಕ್ಷ್ಮಾಂ ವಾಮನೇನ ಜಗೃಹೇ ತ್ರಿಪದಚ್ಛಲೇನ
ಯಾಂಚಾಮೃತೇ ಪಥಿ ಚರನ್ಪ್ರಭುಭಿರ್ನ ಚಾಲ್ಯಃ ॥ ೧೭ ॥

ನಾರ್ಥೋ ಬಲೇರಯಮುರುಕ್ರಮಪಾದಶೌಚ-
ಮಾಪಃ ಶಿಖಾಧೃತವತೋ ವಿಬುಧಾಧಿಪತ್ಯಮ್ ।
ಯೋ ವೈ ಪ್ರತಿಶ್ರುತಮೃತೇ ನ ಚಿಕೀರ್ಷದನ್ಯ-
ದಾತ್ಮಾನಮಂಗ ಶಿರಸಾ ಹರಯೇಽಭಿಮೇನೇ ॥ ೧೮ ॥

ಅದಿತಿಯ ಪುತ್ರರಲ್ಲಿ ಅತ್ಯಂತ ಕಿರಿಯವನಾದರೂ ಗುಣಗಳಲ್ಲಿ ಎಲ್ಲರಿಗಿಂತಲೂ ಹಿರಿಯನಾದ ದೇವದೇವನವನು. ವಾಮನ ಮೂರ್ತಿಯಾಗಿ ಬಲಿಚಕ್ರವರ್ತಿಯಿಂದ ತನ್ನ ಮೂರು ಹೆಜ್ಜೆಗಳ ಅಳತೆಯಷ್ಟು ಭೂಮಿಯನ್ನು ಬೇಡಿ ತೆಗೆದುಕೊಳ್ಳುವ ನೆಪಹೂಡಿ ತ್ರಿವಿಕ್ರಮನಾಗಿ ಬೆಳೆದು, ಮೂರು ಹೆಜ್ಜೆಗಳಿಂದ ತ್ರಿಲೋಕಗಳನ್ನು ಅಳೆದು ಆಕ್ರಮಿಸಿಬಿಟ್ಟನು. ಭಗವಂತನು ಆತನಿಂದ ಭೂಮಿಯನ್ನು ಬೇಡಿಯೇ ಪಡೆದನೇಕೆಂದರೆ – ಬಲಿಯು ಎಂದಿಗೂ ಸನ್ಮಾರ್ಗವನ್ನು ಬಿಟ್ಟವನಲ್ಲ. ಅಂತಹ ಸಜ್ಜನ ಶಿರೋಮಣಿಗಳನ್ನು ಅವರ ಸ್ಥಾನದಿಂದ, ಐಶ್ವರ್ಯದಿಂದ ಕದಲಿಸಬೇಕಾದರೆ ಎಂತಹ ಸಮರ್ಥರಿಗಾದರೂ ಯಾಚಿಸುವುದೊಂದೇ ಉಪಾಯ. ಬೇರಾವ ಉಪಾಯವೂ ಇಲ್ಲ – ಎಂಬ ತತ್ತ್ವವನ್ನು ಆ ಮೂಲಕ ಸ್ವಾಮಿಯು ತೋರಿಸಿದನು. ವಾಸ್ತವವಾಗಿ ಬಲೀಂದ್ರನಿಗೆ ಇಂದ್ರಪದವಿಯಿಂದ ಯಾವ ಪುರುಷಾರ್ಥವೂ ಆಗಬೇಕಾಗಿರಲಿಲ್ಲ. ಏಕೆಂದರೆ, ಅವನು ಸಾಕ್ಷಾತ್ ತ್ರಿವಿಕ್ರಮಸ್ವಾಮಿಯ ಶ್ರೀಪಾದಪದ್ಮತೀರ್ಥವನ್ನೇ ಶಿರಸ್ಸಿನಲ್ಲಿ ಧರಿಸಿ ಧನ್ಯನಾಗಿದ್ದನು.* ಅವನ ನಿಷ್ಠೆ ಎಂತಹುದು! ವಟು ವಾಮನನಿಗೆ ಮೂರು ಹೆಜ್ಜೆಗಳಷ್ಟು ಭೂಮಿಯನ್ನು ಕೊಡುವುದಾಗಿ ತಾನು ಮಾಡಿದ್ದ ವಾಗ್ದಾನವನ್ನು ಗುರುಗಳಾದ ಶುಕ್ರಾಚಾರ್ಯರು ತಡೆದರೂ ತನ್ನ ಮಾತಿಗೆ ವಿರುದ್ಧವಾಗಿ ನಡೆಯಲಿಲ್ಲ. ಭಗವಂತನಿಗೆ ಮೂರನೆಯ ಹೆಜ್ಜೆಯ ಜಾಗವನ್ನು ಕೊಡುವುದಕ್ಕಾಗಿ ಆತನ ಪಾದವನ್ನು ತನ್ನ ಶಿರಸ್ಸಿನಲ್ಲಿರಿಸಿಕೊಂಡು ತನ್ನನ್ನೇ ಪೂರ್ಣವಾಗಿ ಆತ್ಮಸಮರ್ಪಣೆ ಮಾಡಿದ ಮಹಾತ್ಮನವನು.** ॥ ೧೭-೧೮ ॥

ನಾರದನೇ! ನಿನ್ನ ಭಕ್ತಿ-ಭಾವಕ್ಕೆ ಒಲಿದ ಆ ಭಗವಂತನು ಹಂಸ ರೂಪಿಯಾಗಿ ನಿನಗೆ ಯೋಗಜ್ಞಾನ ಮತ್ತು ಆತ್ಮತತ್ತ್ವವನ್ನು ಪ್ರಕಾಶ

* ಬಲಿಚಕ್ರವರ್ತಿಯ ಮಹಾರಾಣಿ ವಿಂಧ್ಯಾವಳಿಯು ಸ್ವರ್ಣಕಲಶದಲ್ಲಿ ಕುಂಕುಮ-ಚಂದನಮಿಶ್ರಿತ ಜಲವನ್ನು ತೆಗೆದುಕೊಂಡು ಬಂದಳು. ಚಕ್ರವರ್ತಿ ಬಲಿಯು ಬಹಳ ಭಕ್ತಿ-ಶ್ರದ್ಧೆಯಿಂದ ಭಗವಂತನ ಪೂಜ್ಯವಾದ ಸುಕೋಮಲ ಚರಣಕಮಲಗಳನ್ನು ಪ್ರೇಮಾತಿರೇಕದಿಂದ ಅಶ್ರುಪೂರಿತ ನಯನಗಳಿಂದ ಭಾವವಿಹ್ವಲನಾಗಿ ತೊಳೆದನು. ಆ ಚರಣೋದಕವನ್ನು ಪತ್ನಿಯೊಂದಿಗೆ ತಾನು ಪಾನಮಾಡಿ, ಅರಮನೆಯಲ್ಲೆಲ್ಲ ಸಿಂಪಡಿಸಿದನು.

** ಬಲಿ ಚಕ್ರವರ್ತಿಯು ಆತ್ಮನಿವೇದನ ಮಾಡಿದನು. ಭಕ್ತರ-ಭಕ್ತನಾದ ಭಗವಂತನೂ ಕೂಡ ತನ್ನನ್ನೇ ಆತನಿಗೆ ಕೊಟ್ಟುಕೊಂಡು, ಅವನ ಬಾಗಿಲನ್ನು ಕಾದನು. ಭಗವದ್ಗೀತೆಯಲ್ಲಿ ಭಗವಂತನು ಹೇಳುವನು –

ಯೇ ಯಥಾ ಮಾಂ ಪ್ರಪದ್ಯಂತೇ ತಾಂಸ್ತಥೈವ ಭಜಾಮ್ಯಹಮ್ । ಮಮ ವರ್ತ್ಮಾನುವರ್ತಂತೇ ಮನುಷ್ಯಾಃ ಪಾರ್ಥ ಸರ್ವಶಃ ॥

(ಭಗವದ್ಗೀತೆ ೪/೧೧)

ಹೇ ಅರ್ಜುನನೇ! ಯಾವ ಭಕ್ತರು ನನ್ನನ್ನು ಯಾವ ಭಾವದಿಂದ ಭಜಿಸುತ್ತಾರೋ ಅವರನ್ನು ನಾನು ಕೂಡ ಅದೇ ಭಾವದಿಂದ ಭಜಿಸುತ್ತೇನೆ; ಏಕೆಂದರೆ ಮನುಷ್ಯರೆಲ್ಲರೂ ಎಲ್ಲ ಪ್ರಕಾರದಿಂದ ನನ್ನ ಮಾರ್ಗವನ್ನೇ ಅನುಸರಿಸುತ್ತಾರೆ.

ಇದೊಂದು ಉಪಾಖ್ಯಾನವನ್ನು ಮಹಾತ್ಮರು ಹೇಳುತ್ತಾರೆ – ಭಗವಂತನು ಬಲಿಯ ಮನೆಯಲ್ಲಿ ದ್ವಾರಪಾಲಕನಾದನು. ಅತ್ತ ಲಕ್ಷ್ಮಿಯು ನೋಡುತ್ತಾಳೆ – ನನ್ನ ಸ್ವಾಮಿಯು ಬಲಿಯ ಬಳಿಗೆ ವಾಮನನಾಗಿ ಹೋಗಿ ಭೂಮಿಯನ್ನು ಬೇಡಿದನು. ಅದರಿಂದ ಈಗ ಅವನಿಗೆ ಸೇವಕನಾಗಬೇಕಾಯಿತು. ಹೀಗಿರುವಾಗ ಲಕ್ಷ್ಮೀದೇವಿಯೂ ಬಲಿಯಬಳಿಗೆ ಬಂದಳು. ಆಕೆಯ ಪತಿಯು ಮೂರು ಅಡಿ ಭೂಮಿಯನ್ನು ಬೇಡಿದ್ದನು. ಆದರೆ ಈಕೆಯು ಇನ್ನೊಂದು ರೀತಿಯಿಂದ ಅದ್ಭುತವಾಗಿರುವಂತಹುದನ್ನು ಮಾಡಿದಳು. ಲಕ್ಷ್ಮಿಯು ಬಲಿಯ ಬಳಿ ಹೇಳಿದಳು – 'ನನಗೆ ಯಾರೂ ಅಣ್ಣ-ತಮ್ಮಂದಿರು ಇಲ್ಲ. ನೀನು ನನಗೆ ಅಣ್ಣನಾಗು. ಬಲಿಯು ಒಪ್ಪಿ, ಲಕ್ಷ್ಮಿಗೆ ಅಣ್ಣನಾದನು; ಲಕ್ಷ್ಮಿಯು ತಂಗಿಯಾದಳು. ಆಕೆಯು ಬಲಿಯ ಅರಮನೆಯಲ್ಲೇ ವಾಸಿಸಿದಳು. ರಕ್ಷಾಬಂಧನದ ದಿನ ಬಂತು. ತಂಗಿ ಹೇಳಿದಳು ಅಣ್ಣಾ! ಇಂದು ನಾನು ನಿನಗೆ ರಾಖಿ ಕಟ್ಟುವೆನು. ಇದರಿಂದ ತಂಗಿಯು ಅಣ್ಣನ ಕ್ಷೇಮವನ್ನು ಬಯಸುತ್ತಾಳೆ. ಬಲಿ ಹೇಳಿದ – ಸರಿ, ಹಾಗಾದರೆ ರಾಖಿಕಟ್ಟು. ಲಕ್ಷ್ಮಿಯು ಪ್ರೇಮದಿಂದ ಅಣ್ಣನಿಗೆ ರಾಖಿಯನ್ನು ಕಟ್ಟಿದಳು ಹಾಗೂ ಉಡುಗೊರೆಯನ್ನು ಕೇಳಿದಳು. ಏನು ಕೊಡಲಿ ? ಲಕ್ಷ್ಮಿ ! ಹೇಳಿದಳು – ನನ್ನ ಸ್ವಾಮಿಯು ನಿನ್ನಲ್ಲಿ ದ್ವಾರಪಾಲಕನಾಗಿದ್ದಾರೆ. ನಾನು ಅವರನ್ನು ಕರೆದುಕೊಂಡು ಹೋಗಲೆಂದೇ ಬಂದಿರುವೆನು. ಭಗವಂತನು ಸರ್ವವ್ಯಾಪಕನು. ಅವನು ಬಲಿಚಕ್ರವರ್ತಿಯ ಬಳಿಯೂ ಇದ್ದಾನೆ.

(ಮುಂದಿನ ಪುಟಕ್ಕೆ)

ತುಭ್ಯಂ ಚ ನಾರದ ಭೃಶಂ ಭಗವಾನ್ವಿವೃದ್ಧ-
ಭಾವೇನ ಸಾಧುಪರಿತುಷ್ಟ ಉವಾಚ ಯೋಗಮ್ ।
ಜ್ಞಾನಂ ಚ ಭಾಗವತಮಾತ್ಮಸತತ್ತ್ವದೀಪಂ
ಯದ್ವಾಸುದೇವಶರಣಾ ವಿದುರಂಜಸೈವ ॥೧೯॥

ತಿಳಿಸುವ ಭಾಗವತ ಧರ್ಮವನ್ನು ಉಪದೇಶಮಾಡಿದ್ದನಷ್ಟೆ! ಆ ಧರ್ಮವು ಶ್ರೀವಾಸುದೇವನಲ್ಲಿ ಶರಣಾಗತರಾದ ಭಕ್ತರಿಗೆ ಮಾತ್ರ ಸುಲಭವಾಗಿ ದೊರೆಯುವಂತಹುದು. ॥ ೧೯ ॥

ಚಕ್ರಂ ಚ ದಿಕ್ಷ್ವವಿಹತಂ ದಶಸು ಸ್ವತೇಜೋ
ಮನ್ವಂತರೇಷು ಮನುವಂಶಧರೋ ಬಿಭರ್ತಿ ।
ದುಷ್ಟೇಷು ರಾಜಸು ದಮಂ ವ್ಯದಧಾತ್ಸ್ವಕೀರ್ತಿಂ
ಸತ್ಯೇ ತ್ರಿಪೃಷ್ಠ ಉಶತೀಂ ಪ್ರಥಯಂಶ್ಚರಿತ್ರೈಃ ॥೨೦॥

ಅದೇ ಭಗವಂತನು ಸ್ವಾಯಂಭುವ ಮುಂತಾದ ಮನ್ವಂತರಗಳಲ್ಲಿ ಮನುವಿನ ರೂಪದಲ್ಲಿ ಅವತರಿಸಿ ಹತ್ತು ದಿಕ್ಕುಗಳಲ್ಲಿಯೂ ಸುದರ್ಶನಚಕ್ರಕ್ಕೆ ಸಮಾನವಾದ ತನ್ನ ತೇಜಸ್ಸಿನಿಂದ ಯಾವ ಅಡ-ತಡೆ ಇಲ್ಲದೆ ನಿಷ್ಕಂಟಕ ರಾಜ್ಯಭಾರ ಮಾಡುತ್ತಾನೆ. ಆತನ ಪುಣ್ಯಚರಿತ್ರೆಯ ಕೀರ್ತಿಯು ಮೂರು ಲೋಕಗಳ ಮೇಲಿರುವ ಸತ್ಯಲೋಕದವರೆಗೂ ಹರಡುತ್ತದೆ. ತನ್ನ ಆ ರೂಪದಲ್ಲಿ ಅವನು ಕಾಲ-ಕಾಲಗಳಲ್ಲಿ ಭೂಮಿಗೆ ಭಾರವಾಗುವ ದುಷ್ಟರಾಜರ ನಿಗ್ರಹವನ್ನೂ ಮಾಡುವನು. ॥ ೨೦ ॥

ಧನ್ವಂತರಿಶ್ಚ ಭಗವಾನ್ ಸ್ವಯಮೇವ ಕೀರ್ತಿ-
ರ್ನಾಮ್ನಾ ನೃಣಾಂ ಪುರುರುಜಾಂ ರುಜ ಆಶು ಹಂತಿ ।
ಯಜ್ಞೇ ಚ ಭಾಗಮಮೃತಾಯುರವಾವರುಂಧ
ಆಯುಷ್ಯವೇದಮನುಶಾಸ್ತ್ಯವತೀರ್ಯ ಲೋಕೇ ॥೨೧॥

ಧನ್ಯಕೀರ್ತಿಯಾದ ಭಗವಾನ್ ಧನ್ವಂತರಿಯೂ ಅವನ ಅವತಾರವೇ. ಆತನು ತನ್ನ ನಾಮದಿಂದಲೇ ದೊಡ್ಡ-ದೊಡ್ಡ ರೋಗಿಗಳ ರೋಗಗಳನ್ನು ಶೀಘ್ರದಲ್ಲೇ ನಾಶಮಾಡುವನು. ದೇವತೆಗಳಿಗೆ ಅಮೃತವನ್ನು ಪಾನಮಾಡಿಸಿ ಅವರನ್ನು ಅಮರರನ್ನಾಗಿಸಿದನು. ದೈತ್ಯರು ಅಪಹರಿಸಿದ ಅವರ ಯಜ್ಞಭಾಗವನ್ನು ಮರಳಿಕೊಡಿಸಿದನು. ಈ ಲೋಕದಲ್ಲಿ ಅವತಾರಮಾಡಿ ಆಯುರ್ವೇದವನ್ನು ಪ್ರವರ್ತನೆ ಮಾಡಿದನು. ॥ ೨೧ ॥

ಕ್ಷತ್ರಂ ಕ್ಷಯಾಯ ವಿಧಿನೋಪಭೃತಂ ಮಹಾತ್ಮಾ
ಬ್ರಹ್ಮಧ್ರುಗುಜ್ಝಿತಪಥಂ ನರಕಾರ್ತಿಲಿಪ್ಸು ।
ಉದ್ಧಂತ್ಯಸಾವವನಿಕಂಟಕಮುಗ್ರವೀರ್ಯ-
ಸ್ತ್ರಿಃಸಪ್ತಕೃತ್ವ ಉರುಧಾರಪರಶ್ವಧೇನ ॥೨೨॥

ಬ್ರಹ್ಮದ್ರೋಹಿಗಳಾಗಿ, ಆರ್ಯ ಮರ್ಯಾದೆಯನ್ನು ಉಲ್ಲಂಘಿಸುವ, ನರಕಕ್ಕೆ ಯೋಗ್ಯರಾದ ದುಷ್ಟಕ್ಷತ್ರಿಯರು ಪ್ರಪಂಚದಲ್ಲಿ ಹೆಚ್ಚಿದಾಗ, ಭಗವಂತನು ಮಹಾಪರಾಕ್ರಮಿ ಪರಶುರಾಮನ ರೂಪದಲ್ಲಿ ಅವತಾರಮಾಡಿ ಹರಿತವಾದ ತನ್ನ ಗಂಡುಗೊಡಲಿಯಿಂದ ಇಪ್ಪತ್ತೊಂದು ಬಾರಿ ಅವರನ್ನು ಸಂಹರಿಸುತ್ತಾನೆ. ॥ ೨೨ ॥

ಅಸ್ಮತ್ಪ್ರಸಾದಸುಮುಖಃ ಕಲಯಾ ಕಲೇಶ
ಇಕ್ಷ್ವಾಕುವಂಶ ಅವತೀರ್ಯ ಗುರೋರ್ನಿದೇಶೇ ।
ತಿಷ್ಠನ್ವನಂ ಸದಯಿತಾನುಜ ಆವಿವೇಶ
ಯಸ್ಮಿನ್ವಿರುಧ್ಯ ದಶಕಂಧರ ಆರ್ತಿಮಾರ್ಚ್ಛತ್ ॥೨೩॥

ಪರಿಪೂರ್ಣನಾದ ಭಗವಂತನು ನಮ್ಮನ್ನು ಅನುಗ್ರಹಿಸುವುದಕ್ಕಾಗಿ ತನ್ನ ಅಂಶಕಲೆಗಳಾದ ಭರತ-ಲಕ್ಷ್ಮಣ- ಶತ್ರುಘ್ನರೊಡನೆ ಶ್ರೀರಾಮಚಂದ್ರನ ರೂಪದಲ್ಲಿ ಇಕ್ಷ್ವಾಕುವಂಶದಲ್ಲಿ ಅವತರಿಸಿದನು. ಈ ಅವತಾರದಲ್ಲಿ ಅವನು ತನ್ನ ತಂದೆಯ ಆಜ್ಞೆಯನ್ನು ಪಾಲಿಸಲಿಕ್ಕಾಗಿ ತನ್ನ ಪತ್ನೀ ಮತ್ತು ತಮ್ಮನೊಡನೆ ಅರಣ್ಯದಲ್ಲಿ ವಾಸಿಸಿದನು. ಆಗಲೇ ಅವನಲ್ಲಿ ವಿರೋಧ ಬೆಳೆಸಿಕೊಂಡ ದುಷ್ಟ ದಶಾನನನು ಅವನ ಕೈಯಿಂದ ಹತನಾದನು. ॥ ೨೩ ॥ ತ್ರಿಪುರಾಸುರರ ವಿಮಾನವನ್ನು ಸುಟ್ಟುಹಾಕಲು ಬಯಸಿದ ರುದ್ರನಂತೆ ಕ್ರುದ್ಧನಾಗಿ ಶ್ರೀರಾಮನು ಶತ್ರುನಗರಿಯನ್ನು ಧ್ವಂಸಮಾಡುವುದಕ್ಕಾಗಿ ಸಮುದ್ರತೀರಕ್ಕೆ ಬಂದಾಗ ಸೀತಾವಿಯೋಗದಿಂದ ವೃದ್ಧಿಗೊಂಡ ಕ್ರೋಧಾಗ್ನಿಯಿಂದ ಕೆಂಪೇರಿದ ಆತನ ದೃಷ್ಟಿಮಾತ್ರದಿಂದಲೇ ಸಮುದ್ರದಲ್ಲಿರುವ ಮೀನು, ಮೊಸಳೆ, ಸರ್ಪಗಳೇ ಮುಂತಾದ ಜಲಚರಗಳು ಉರಿದುಹೋಗಲು ತೊಡಗುತ್ತವೆ. ಆಗ

ಬಲಿರಾಜನ ಹೆಸರು ಮತ್ತು ಕೀರ್ತಿ ಮೂರು ಲೋಕಗಳಲ್ಲಿಯೂ ವ್ಯಾಪಿಸಿದೆ. ಅವನ ಹೆಸರು ಪುಣ್ಯಶ್ಲೋಕರಲ್ಲಿ ಹಾಗೂ ಚಿರಂಜೀವಿಗಳಲ್ಲಿ ಹೇಳುತ್ತಾರೆ. ಇವನು ಅತ್ಯಂತ ಉದಾರನೂ, ಭಕ್ತಿಯಲ್ಲಿ ಅಗ್ರೇಸರನಾಗಿದ್ದಾನೆ. ಪ್ರಹ್ಲಾದನ ಮೊಮ್ಮಗನಾಗಿದ್ದು ಭಗವಂತನ ಕೃಪೆಗೆ ಪಾತ್ರನಾಗಿದ್ದಾನೆ. ಅವನ ಕುರಿತು ಹೇಳಿದಷ್ಟು ಕಡಿಮೆಯೇ. ಇಲ್ಲಿ ಭಕ್ತಿ ಮತ್ತು ಭಗವಂತನ ಪ್ರೇಮವನ್ನು ಬಹಳ ಸಂಕ್ಷೇಪವಾಗಿ – ಆನಂದಸಾಗರದಲ್ಲಿ ಒಂದು ಮುಳುಗುಹಾಕಿದಂತೆ ಬರೆಯಲಾಗಿದೆ. ಬಲಿಚಕ್ರವರ್ತಿಯ ಪ್ರಸಂಗಬಂದಾಗ ಶ್ರೀಶುಕಮಹಾಮುನಿಗಳ ಹೃದಯ ತುಂಬಿಬರುತ್ತದೆ. ಇದೇ ಕಾರಣದಿಂದ – ಬಲಿಯು ಆತ್ಮನಿವೇದನ ಮಾಡಿರುವನು ಎಂದು ಅವರು ಹೇಳಿರುವರು. ಇದೇ ಅವನಿಗಾಗಿ ದೊಡ್ಡ ಗೌರವ ಮತ್ತು ಪುರುಷಾರ್ಥದ ಮಾತಾಗಿದೆ ಎಂದು ವಿಶೇಷವಾಗಿ ಗಮನಿಸಬೇಕು.

ಯಸ್ಮಾ ಅದಾದುದಧಿರೂಢಭಯಾಂಗವೇಪೋ
ಮಾರ್ಗಂ ಸಪದ್ಯರಿಪುರಂ ಹರವದ್ ದಿಧಕ್ಷೋಃ ।
ದೂರೇಸುಹೃನ್ಮಥಿತರೋಷಸುಶೋಣದೃಷ್ಟ್ಯಾ
ತಾತಪ್ಯಮಾನಮಕರೋರಗನಕ್ರಚಕ್ರಃ ॥ ೨೪ ॥

ವಕ್ಷಃಸ್ಥಲಸ್ಪರ್ಶರುಗ್ಣಮಹೇಂದ್ರವಾಹ-
ದಂತೈರ್ವಿಡಂಬಿತಕಕುಬ್ಜುಷ ಊಢಹಾಸಮ್ ।
ಸದ್ಯೋಽಸುಭಿಃ ಸಹ ವಿನೇಷ್ಯತಿ ದಾರಹರ್ತುರ್-
ವಿಸ್ಫೂರ್ಜಿತೈರ್ಧನುಷ ಉಚ್ಚರತೋಽಧಿಸೈನ್ಯೇ ॥ ೨೫ ॥

ಭೂಮೇಃ ಸುರೇತರವರೂಥವಿಮರ್ದಿತಾಯಾಃ
ಕ್ಲೇಶವ್ಯಯಾಯ ಕಲಯಾ ಸಿತಕೃಷ್ಣಕೇಶಃ ।
ಜಾತಃ ಕರಿಷ್ಯತಿ ಜನಾನುಪಲಕ್ಷ್ಯಮಾರ್ಗಃ
ಕರ್ಮಾಣಿ ಚಾತ್ಮಮಹಿಮೋಪನಿಬಂಧನಾನಿ ॥ ೨೬ ॥

ತೋಕೇನ ಜೀವಹರಣಂ ಯದುಲೂಕಿಕಾಯಾ-
ಸ್ತ್ರೈಮಾಸಿಕಸ್ಯ ಚ ಪದಾ ಶಕಟೋಽಪವೃತ್ತಃ ।
ಯದ್ ರಿಂಗತಾಂತರಗತೇನ ದಿವಿಸ್ಪೃಶೋರ್ವಾ
ಉನ್ಮೂಲನಂ ತ್ವಿತರಥಾರ್ಜುನಯೋರ್ನ ಭಾವ್ಯಮ್ ॥ ೨೭ ॥

ಸಮುದ್ರರಾಜನು ಗಡ-ಗಡನೆ ನಡುಗುತ್ತಾ, ಒಡನೆಯೇ ಒಡೆಯನಿಗೆ ದಾರಿಮಾಡಿಕೊಡುತ್ತಾನೆ. ॥ ೨೪ ॥ ರಾವಣನು ಅತಿಪರಾಕ್ರಮಿಯಾಗಿ ದುರಹಂಕಾರದಿಂದ ಬೀಗಿ ಮೆರೆಯುತ್ತಿದ್ದನು. ಆತನು ಇಂದ್ರನೊಡನೆ ಯುದ್ಧಮಾಡುತ್ತಿದ್ದಾಗ ಇಂದ್ರನ ವಾಹನ ಐರಾವತದ ದಂತಗಳು ಅವನ ಕಠೋರವಾದ ಎದೆಗೆ ತಗುಲಿ ಚೂರು-ಚೂರಾಗಿ ನಾಲ್ಕೂ ದಿಕ್ಕುಗಳಲ್ಲಿ ಹರಡಿಕೊಂಡು ದಿಕ್ಕುಗಳೆಲ್ಲ ಬೆಳ್ಳಗಾಗಿದ್ದವು. ದಿಗ್ವಿಜಯೀ ರಾವಣನು ದುರಹಂಕಾರದಿಂದ ಉಬ್ಬಿ ನಗುತ್ತಿದ್ದನು. ಆದರೆ ಆ ರಾವಣನೇ ಶ್ರೀರಾಮ ದೇವರ ಪತ್ನಿಯಾದ ಸೀತಾದೇವಿಯನ್ನು ಅಪಹರಿಸಿ ರಣರಂಗದಲ್ಲಿ ಗರ್ವದಿಂದ ಅವನನ್ನು ಎದುರಿಸಲು ಬಂದಾಗ ಶ್ರೀರಾಮನ ಧನುಷ್ಟಂಕಾರದಿಂದಲೇ ಅವನ ಅಹಂಕಾರವು ಪ್ರಾಣಗಳೊಡನೆ ವಿಲೀನವಾಗಿತ್ತು. ॥ ೨೫ ॥

ದೈತ್ಯರ ದಂಡುಗಳು ಭೂದೇವಿಯನ್ನು ಮೆಟ್ಟಿ ತುಳಿದುಹಾಕ ತೊಡಗಿದಾಗ ಆಕೆಯ ಭಾರವನ್ನು ಇಳಿಸುವುದಕ್ಕಾಗಿ ಭಗವಂತನು ತನ್ನ ಬಿಳಿಯ ಮತ್ತು ಕಪ್ಪು ಕೇಶಗಳಿಂದ ಬಲರಾಮ ಹಾಗೂ ಶ್ರೀಕೃಷ್ಣರ ರೂಪಗಳಲ್ಲಿ ಕಲಾವತಾರವನ್ನು ಸ್ವೀಕರಿಸುವನು.* ಇವರಿಬ್ಬರೂ ಆನಂದದ ನಿಧಿಗಳಾಗಿದ್ದಾರೆ. ಆ ಅವತಾರದಲ್ಲಿ ತನ್ನ ಮಹಿಮೆಯನ್ನು ಪ್ರಕಟಪಡಿಸುವಂತಹ ಅನೇಕ ಅದ್ಭುತವಾದ ಕರ್ಮಗಳನ್ನು ಮಾಡುವನು. ಲೋಕದ ಜನರು ಆ ಲೀಲೆಗಳ ರಹಸ್ಯವನ್ನು ಸ್ವಲ್ಪವೂ ತಿಳಿದುಕೊಳ್ಳಲಾರರು. ಅವನ ಅದ್ಭುತ ಚರಿತ್ರವೇ ಅವನ ಮಹಿಮೆಯನ್ನು ಮತ್ತು ಅವನ ಭಗವತ್ತತೆಯನ್ನು ಪ್ರಕಟಪಡಿಸೀತು. ॥ ೨೬ ॥ ಪುಟ್ಟ ಮಗುವಿರುವಾಗಲೇ ಪೂತನಾ ರಾಕ್ಷಸಿಯ ಪ್ರಾಣಗಳನ್ನಪಹರಿಸಿದ್ದು, ಹುಟ್ಟಿ ಮೂರನೇ ತಿಂಗಳಲ್ಲೇ ತನ್ನ ಕಾಲಿನಿಂದ ದೊಡ್ಡ ಗಾಡಿಯನ್ನು ತಲೆಕೆಳಗು ಮಾಡಿದ್ದು, ಅಂಬೆಗಾಲು ಹಾಕುತ್ತಿದ್ದಾಗ ಆಕಾಶಕ್ಕೆ ಬೆಳೆದ ಯಮಳಾರ್ಜುನ ವೃಕ್ಷಗಳ ನಡುವೆ ಪ್ರವೇಶಿಸಿ, ಅವನ್ನು ಬೇರುಸಹಿತ ಕಿತ್ತುಹಾಕಿದ್ದು – ಇಂತಹ ಪರಮಾದ್ಭುತಕಾರ್ಯಗಳನ್ನು ಭಗವಂತನಲ್ಲದೆ ಬೇರೆ ಯಾರೂ ಮಾಡಲಾರರು. ॥ ೨೭ ॥ ಗೋಕುಲದಲ್ಲಿ ಕಾಳಿಯ ನಾಗನ ವಿಷದಿಂದ ದೂಷಿತವಾಗಿದ್ದ ಯಮುನಾನದಿಯ ನೀರನ್ನು ಕುಡಿದು ಹಸು-ಕರುಗಳೂ ಗೋಪಾಲಕರೂ ಸತ್ತುಹೋಗುವರು. ಆಗ

* 'ಸಿತಕೃಷ್ಣಕೇಶಃ' 'ಸಿತ' ಅಂದರೆ ಗೌರವರ್ಣ, 'ಕೃಷ್ಣ' ಅರ್ಥಾತ್ ಶ್ಯಾಮವರ್ಣ ಮತ್ತು ಕೇಶ. ಅರ್ಥಾತ್ – ಕಂ-ಸುಖವು, ಈಶ = ನಿಧಿ ಅರ್ಥಾತ್ – ಈ ಬಲರಾಮಕೃಷ್ಣರು ಇಬ್ಬರೂ ಆನಂದದ ನಿಧಿಗಳಾಗಿದ್ದಾರೆ. ಇವರನ್ನು ನೋಡಿದವನು ಆನಂದದಲ್ಲಿ ಮುಳುಗಿ ಇವರನ್ನೇ ನೋಡುತ್ತಾ ಇರುತ್ತಾನೆ. ಮಹಾಭಾರತ ಯುದ್ಧದಲ್ಲಿ ಶ್ರೀಕೃಷ್ಣನು ಶತ್ರುಗಳನ್ನು ನೋಡಿಯೇ ಅವರ ಆಯುಸ್ಸನ್ನು ಅಪಹರಿಸಿದನು. ಭಗವಾನ್ ಶ್ರೀರಾಮ ಮತ್ತು ಶ್ರೀಕೃಷ್ಣ ಎರಡೂ ಅವತಾರಗಳೂ ಸೌಂದರ್ಯ-ಮಾಧುರ್ಯಗಳ ನಿಧಿಯಾಗಿವೆ. ಪಶು-ಪಕ್ಷಿ, ಮನುಷ್ಯ, ದೇವತೆ, ಅಸುರರು ಮುಂತಾದವರು ಯಾರೇ ಇವರ ರೂಪವನ್ನು ನೋಡಿದಾಗ, ಅವರ ಚಿತ್ತವನ್ನು ಇವರು ಕದ್ದುಕೊಳ್ಳುವರು. ಮತ್ತೆ ಅವರ ಚಿತ್ತ ಅವರಲ್ಲಿ ಇರುವುದಿಲ್ಲ.

ಭಗವಾನ್ ಶ್ರೀಕೃಷ್ಣನು ಮುರಳಿಯನ್ನು ನುಡಿಸಿದಾಗ ಹಸುಗಳು ತಮ್ಮ ಕಿವಿಗಳನ್ನು ನಿಮಿರಿಕೊಂಡು ಅದನ್ನು ಆಸ್ವಾದಿಸುತ್ತವೆ. ನವಿಲುಗಳು ಕುಣಿಯತೊಡಗುತ್ತವೆ. ಸಾರಸ-ಹಂಸಗಳೇ ಮುಂತಾದ ಪಕ್ಷಿಗಳು ಸರೋವರದಲ್ಲಿ ದೃಷ್ಟಿ ಮಿಟುಕಿಸದೆ ಅವನನ್ನೇ ನೋಡುತ್ತವೆ. ಗೋಪಿಯರ ಕೆಲಸ-ಕಾರ್ಯಗಳು ನಿಂತುಹೋಗುವುವು. ಅವರೆಲ್ಲರೂ ಅವನ ಚಿಂತನದಲ್ಲೇ ಮುಳುಗಿರುತ್ತಿದ್ದರು. ಭಗವಾನ್ ಶ್ರೀರಾಮನಿಗಾಗಿಯೂ – ಮಹಾರಾಜ ಜನಕನ ಮಾತನು ದುರಳಭವನ್ನಿ ಹೇಳುತ್ತಾನೆ – "ದೇವ ದೇಖಿ ತವ ಬಾಲಕ ದೋಊ, ಅಬ ನ ಆಂಖಿ ತರ ಆವತ ಕೋಊ ॥" (ರಾ.ಚ.ಮಾ.) ಅರ್ಥಾತ್ ಈಗ ಬೇರೆ ಏನೂ ಕಾಣಿಸದಷ್ಟು ಅವನು ಕಣ್ಣುಗಳಲ್ಲಿ ತುಂಬಿಕೊಂಡನು. ಚಿಂತನೆಯಲ್ಲಿ ಅವನೇ ನೆಲೆಸಿದನು. ಭಗವಂತನ ಸೌಂದರ್ಯದ ಒಂದು ಬಿಂದುವಿನಿಂದ ಇಡೀ ವಿಶ್ವವೇ ತೃಪ್ತವಾಗುತ್ತಾ ಇದೆ. ಅವನಾದರೋ ಸೌಂದರ್ಯ-ಮಾಧುರ್ಯದ ಆಳವಾದ ಸಾಗರವಾಗಿದ್ದಾನೆ. ಭಗವಂತನಿಗೆ ಚಿತ್ತಗಳ್ಳ ಎಂಬುದೊಂದು ಹೆಸರಿದೆ. ಇದಾದರೋ ಚಿತ್ತಗಳ್ಳನ ಕುರಿತು ಲೋಕಪ್ರಸಿದ್ಧಿಯಲ್ಲಿ ಅನೇಕ ಅರ್ಥಗಳಿವೆ. ಆದರೆ ಸಂತರು ಇದೂ ಒಂದು ಅರ್ಥವನ್ನು ಹೇಳುತ್ತಾರೆ – ಚಿತ್ತ ಅಂದರೆ ಹೃದಯ ಅಂದರೆ ಚಿತ್ತ-ಚಿತ್ತವನ್ನು ಅಪಹರಿಸುವುದರಲ್ಲಿ ಅಗ್ರಗಣ್ಯನಾಗಿದ್ದಾನೆ. ಚಿತ್ತವನ್ನು ಕದ್ದು ಅವರ ಜನ್ಮ-ಮೃತ್ಯುಗಳನ್ನೇ ನಾಶಮಾಡಿಬಿಡುತ್ತಾನೆ.

ಯದ್ವೈ ವ್ರಜೇ ವ್ರಜಪಶೂನ್ವಿಷತೋಯಪೀತಾನ್
ಪಾಲಾಂಸ್ತ್ವಜೀವಯದನುಗ್ರಹದೃಷ್ಟಿವೃಷ್ಟ್ಯಾ ।
ತಚ್ಛುದ್ಧಯೇಽತಿವಿಷವೀರ್ಯವಿಲೋಲಜಿಹ್ವ-
ಮುಚ್ಚಾಟಯಿಷ್ಯದುರಗಂ ವಿಹರನ್ ಹ್ರದಿನ್ಯಾಮ್ ॥೨೮॥

ತತ್ಕರ್ಮ ದಿವ್ಯಮಿವ ಯನ್ನಿಶಿ ನಿಃಶಯಾನಂ
ದಾವಾಗ್ನಿನಾ ಶುಚಿವನೇ ಪರಿದಹ್ಯಮಾನೇ ।
ಉನ್ನೇಷ್ಯತಿ ವ್ರಜಮತೋಽವಸಿತಾಂತಕಾಲಂ
ನೇತ್ರೇ ಪಿಧಾಪ್ಯ ಸಬಲೋಽನಧಿಗಮ್ಯವೀರ್ಯಃ ॥೨೯॥

ಗೃಹ್ಣೀತ ಯದ್ಯದುಪಬಂಧಮಮುಷ್ಯ ಮಾತಾ
ಶುಲ್ಬಂ ಸುತಸ್ಯ ನ ತು ತತ್ತದಮುಷ್ಯ ಮಾತಿ ।
ಯಜ್ಜೃಂಭತೋಽಸ್ಯ ವದನೇ ಭುವನಾನಿ ಗೋಪೀ
ಸಂವೀಕ್ಷ್ಯ ಶಂಕಿತಮನಾಃ ಪ್ರತಿಬೋಧಿತಾಽಽಸೀತ್ ॥೩೦॥

ನಂದಂ ಚ ಮೋಕ್ಷ್ಯತಿ ಭಯಾದ್ವರುಣಸ್ಯ ಪಾಶಾ-
ದ್ಗೋಪಾನ್ಬಿಲೇಷು ಪಿಹಿತಾನ್ಮಯಸೂನುನಾ ಚ ।
ಅಹ್ನ್ಯಾಪೃತಂ ನಿಶಿ ಶಯಾನಮತಿಶ್ರಮೇಣ
ಲೋಕಂ ವಿಕುಂಠಮುಪನೇಷ್ಯತಿ ಗೋಕುಲಂ ಸ್ಮ ॥೩೧॥

ಗೋಪೈರ್ಮಖೇ ಪ್ರತಿಹತೇ ವ್ರಜವಿಪ್ಲವಾಯ
ದೇವೇಽಭಿವರ್ಷತಿ ಪಶೂನ್ ಕೃಪಯಾ ರಿರಕ್ಷುಃ ।
ಧರ್ತೋಚ್ಛಿಲೀಂಧ್ರಮಿವ ಸಪ್ತ ದಿನಾನಿ ಸಪ್ತ-
ವರ್ಷೋ ಮಹೀಧ್ರಮನಘೈಕಕರೇ ಸಲೀಲಮ್ ॥೩೨॥

ಕ್ರೀಡನ್ವನೇ ನಿಶಿ ನಿಶಾಕರರಶ್ಮಿಗೌರ್ಯಾಂ
ರಾಸೋನ್ಮುಖಃ ಕಲಪದಾಯತಮೂರ್ಚ್ಛಿತೇನ ।
ಉದ್ದೀಪಿತಸ್ಮರರುಜಾಂ ವ್ರಜಭೃದ್ವಧೂನಾಂ
ಹರ್ತುರ್ಹರಿಷ್ಯತಿ ಶಿರೋ ಧನದಾನುಗಸ್ಯ ॥೩೩॥

ಅವನು ತನ್ನ ಅಮೃತಮಯ ಅನುಗ್ರಹದೃಷ್ಟಿಯಿಂದಲೇ ಅವರೆಲ್ಲರನ್ನು ಬದುಕಿಸುವನು ಮತ್ತು ಯಮುನಾಜಲವನ್ನು ಶುದ್ಧಪಡಿಸುವುದಕ್ಕಾಗಿ ಆ ಮಡುವಿನಲ್ಲಿ ಧುಮುಕಿ ಅಲ್ಲಿ ವಿಹರಿಸಿ, ವಿಷದ ಶಕ್ತಿಯಿಂದ ನಾಲಿಗೆಗಳನ್ನು ಅಲ್ಲಾಡಿಸುತ್ತಿದ್ದ ಕಾಳಿಯ ನಾಗನನ್ನು ಅಲ್ಲಿಂದ ಓಡಿಸಿದ್ದು ಇದು ಮನುಷ್ಯಕೃತ್ಯವೇ? ॥ ೨೮ ॥ ಅಂದೇ ರಾತ್ರಿ ಎಲ್ಲರೂ ಯಮುನಾನದಿಯ ತೀರದಲ್ಲಿ ಮಲಗಿ ನಿದ್ರಿಸುತ್ತಿರುವಾಗ ಬೇಸಗೆಯ ಕಾಲವಾದ್ದರಿಂದ ಹತ್ತಿರದ ಕಾಡಿನ ಕಾಡ್ಗಿಚ್ಚಿನಿಂದ ಉರಿದುಹೋಗತೊಡಗಿದಾಗ ಬಲರಾಮದೇವರೊಡನೆ ಶ್ರೀಕೃಷ್ಣನು ಅಲ್ಲಿಗೆ ಹೋಗಿ ಪ್ರಾಣಾಪಾಯಕ್ಕೆ ಸಿಕ್ಕಿದ ಗೋವಳರನ್ನು – 'ಎಲ್ಲರೂ ಕಣ್ಣುಮುಚ್ಚಿಕೊಳ್ಳಿ' ಎಂದು ಹೇಳಿ ಅವರನ್ನು ಕಿಚ್ಚಿನಿಂದ ಪಾರಾಗಿಸಿದನು. ಎಂತಹ ಅಲೌಕಿಕ ಲೀಲೆ ಇದು! ಅವನ ಶಕ್ತಿಯನ್ನು ವಾಸ್ತವವಾಗಿ ಚಿಂತಿಸುವುದಕ್ಕಾದರೂ ಸಾಧ್ಯವೇ? ॥ ೨೯ ॥ ತಾಯಿ ಯಶೋದೆಯು ಶ್ರೀಕೃಷ್ಣನನ್ನು ಕಟ್ಟಿಹಾಕಲು ಯಾವ-ಯಾವುದೋ ಹಗ್ಗವನ್ನು ತಂದರೂ ಅದು ಆತನ ಹೊಟ್ಟೆಗೆ ಸುತ್ತಲು ಸಾಕಾಗದೆ ಎರಡು ಅಂಗುಲಗಳು ಕಡಿಮೆಯೇ ಆಗುವುದು. ಅವಳು ಕಟ್ಟಲಾಗದೆ ಇದ್ದಾಗ, ಅವನು ಆಕೆಯ ಮೇಲೆ ಕೃಪೆದೋರಿ ಸ್ವತಃ ಬಂಧನಕ್ಕೆ ಒಳಗಾದನು. ಇದರಿಂದ ಅವನಿಗೆ 'ದಾಮೋದರ' ಎಂಬ ಹೆಸರಾಯಿತು. ಅವನು ಆಕಳಿಸುವಾಗ ಆತನ ಬಾಯೊಳಗೆ ಹದಿನಾಲ್ಕು ಲೋಕಗಳನ್ನೂ ಕಂಡು ಆಕೆಯು ಅತ್ಯಂತ ಭಯಗ್ರಸ್ತಳಾದಾಗ ಭಗವಂತನೇ ತನ್ನ ಸಂಕಲ್ಪದಿಂದ ತನ್ನ ಜ್ಞಾನವನ್ನು ಕರುಣಿಸಿದಾಗ, ತಾಯಿಯು ಅವನ ಪ್ರಭಾವವನ್ನು ಅರಿತು ಸಮಾಧಾನಗೊಳ್ಳುವಳು. ॥ ೩೦ ॥ ಅವನು ತಂದೆ – ನಂದಗೋಪನನ್ನು ಹೆಬ್ಬಾವಿನ ಭಯದಿಂದಲೂ, ವರುಣದೇವರ ಪಾಶದಿಂದಲೂ ಬಿಡಿಸುವನು. ಮಯಾಸುರನ ಪುತ್ರ ವ್ಯೋಮಾಸುರನು ಗೋಪಬಾಲಕರನ್ನು ಪರ್ವತದ ಗುಹೆಯಲ್ಲಿ ಬಚ್ಚಿಟ್ಟು ಸೆರೆಯಲ್ಲಿಟ್ಟಾಗ, ಅವರನ್ನು ಬಿಡುಗಡೆ ಮಾಡಿ ಕಾಪಾಡುವನು. ಗೋಕುಲದ ಜನರು ಹಗಲು ದುಡಿಯುತ್ತಾ, ರಾತ್ರಿ ನಿದ್ರಿಸುತ್ತಾ ಯಾವ ಸಾಧನೆಯನ್ನೂ ಮಾಡದಿದ್ದರೂ ಅವರನ್ನು ತನ್ನ ಪರಮಧಾಮವಾದ ವೈಕುಂಠಕ್ಕೆ ಕೊಂಡುಹೋಗುವನು. ॥ ೩೧ ॥ ಪುಣ್ಯಾತ್ಮನಾದ ನಾರದನೇ! ಶ್ರೀಕೃಷ್ಣನ ಸಲಹೆಯಂತೆ ಗೋಪಾಲಕರು ಇಂದ್ರಯಜ್ಞವನ್ನು ನಿಲ್ಲಿಸಿದಾಗ, ಕ್ರುದ್ಧನಾದ ಇಂದ್ರನು ಇಡೀ ಗೋಕುಲವನ್ನು ಧ್ವಂಸಮಾಡಲಿಕ್ಕಾಗಿ ಭಯಂಕರ ಮಳೆಗರೆಯಲು, ಆ ಗೋವುಗಳನ್ನೂ, ಗೋವಳರನ್ನೂ ಕರುಣೆಯಿಂದ ರಕ್ಷಿಸಲು – ಇನ್ನೂ ಏಳು ವರ್ಷವಯಸ್ಸಿನಲ್ಲಿ ಅವನು ಏಳು ದಿವಸಗಳ ಕಾಲ ಗೋವರ್ಧನ ಪರ್ವತವನ್ನು ನಾಯಿಕೊಡೆಯಂತೆ ಲೀಲಾಜಾಲವಾಗಿ ಒಂದೇ ಬೆರಳಿಂದ ಎತ್ತಿ ಹಿಡಿದುಕೊಂಡಿದ್ದು ಅದರ ಆಸರೆಯಲ್ಲಿ ಅವರನ್ನೆಲ್ಲಾ ಕಾಪಾಡುವನು. ॥ ೩೨ ॥

ವೃಂದಾವನದ ಸುತ್ತಲೂ ಶುಭ್ರವಾದ ಬೆಳದಿಂಗಳು ಹರಡಿರುವ ರಮಣೀಯವಾದ ರಾತ್ರಿಯಲ್ಲಿ ರಾಸಕ್ರೀಡೆಯನ್ನಾಡುವ ಇಚ್ಛೆಯಿಂದ ಸ್ವಾಮಿಯು ಕೊಳಲಿನಿಂದ ಸಂಗೀತಸುಧೆಯನ್ನು ಹರಿಸತೊಡಗುವಾಗ ಪ್ರೇಮಪರವಶರಾಗಿ ಅಲ್ಲಿಗೆ ಬರುವ ಗೋಪಿಕೆಯರನ್ನು ಕುಬೇರನ ಸೇವಕನಾದ ಶಂಖಚೂಡನು

ಯೇ ಚ ಪ್ರಲಂಬಖರದರ್ದುರಕೇಶ್ಯರಿಷ್ಟ-
ಮಲ್ಲೇಭಕಂಸಯವನಾಃ ಕಪಿಪೌಂಡ್ರಕಾದ್ಯಾಃ ।
ಅನ್ಯೇ ಚ ಶಾಲ್ವಕುಜಬಲ್ವಲದಂತವಕ್ತ್ರ-
ಸಪ್ತೋಕ್ಷಶಂಬರವಿದೂರಥರುಕ್ಮಿಮುಖ್ಯಾಃ ॥ ೩೪ ॥

ಯೇ ವಾ ಮೃಧೇ ಸಮಿತಿಶಾಲಿನ ಆತ್ತಚಾಪಾಃ
ಕಾಂಬೋಜಮತ್ಸ್ಯಕುರುಕೈಕಯಸೃಂಜಯಾದ್ಯಾಃ ।
ಯಾಸ್ಯಂತ್ಯದರ್ಶನಮಲಂ ಬಲಪಾರ್ಥಭೀಮ-
ವ್ಯಾಜಾಹ್ವಯೇನ ಹರಿಣಾ ನಿಲಯಂ ತದೀಯಮ್ ॥ ೩೫ ॥

ಕಾಲೇನ ಮೀಲಿತಧಿಯಾಮವಮೃಶ್ಯ ನೃಣಾಂ
ಸ್ತೋಕಾಯುಷಾಂ ಸ್ವನಿಗಮೋ ಬತ ದೂರಪಾರಃ ।
ಆವಿರ್ಹಿತಸ್ತ್ವನುಯುಗಂ ಸ ಹಿ ಸತ್ಯವತ್ಯಾಂ
ವೇದದ್ರುಮಂ ವಿಟಪಶೋ ವಿಭಜಿಷ್ಯತಿ ಸ್ಮ ॥ ೩೬ ॥

ದೇವದ್ವಿಷಾಂ ನಿಗಮವರ್ತ್ಮನಿ ನಿಷ್ಠಿತಾನಾಂ
ಪೂರ್ಭಿರ್ಮಯೇನ ವಿಹಿತಾಭಿರದೃಶ್ಯತೂರ್ಭಿಃ ।
ಲೋಕಾನ್ ಘ್ನತಾಂ ಮತಿವಿಮೋಹಮತಿಪ್ರಲೋಭಂ
ವೇಷಂ ವಿಧಾಯ ಬಹು ಭಾಷ್ಯತ ಔಪಧರ್ಮ್ಯಮ್ ॥ ೩೭ ॥

ಯರ್ಹ್ಯಾಲಯೇಷ್ವಪಿ ಸತಾಂ ನ ಹರೇಃ ಕಥಾಃ ಸ್ಯುಃ
ಪಾಷಂಡಿನೋ ದ್ವಿಜಜನಾ ವೃಷಲಾ ನೃದೇವಾಃ ।
ಸ್ವಾಹಾ ಸ್ವಧಾ ವಷಡಿತಿ ಸ್ಮ ಗಿರೋ ನ ಯತ್ರ
ಶಾಸ್ತಾ ಭವಿಷ್ಯತಿ ಕಲೇರ್ಭಗವಾನ್ಯುಗಾಂತೇ ॥ ೩೮ ॥

ಸರ್ಗೇ ತಪೋಽಹಮೃಷಯೋ ನವ ಯೇ ಪ್ರಜೇಶಾಃ
ಸ್ಥಾನೇ ಚ ಧರ್ಮಮಖಮನ್ವಮರಾವನೀಶಾಃ ।
ಅಂತೇ ತ್ವಧರ್ಮಹರಮನ್ಯುವಶಾಸುರಾದ್ಯಾ
ಮಾಯಾವಿಭೂತಯ ಇಮಾಃ ಪುರುಶಕ್ತಿಭಾಜಃ ॥ ೩೯ ॥

ಆಕ್ರಮಿಸುವಾಗ ಶ್ರೀಕೃಷ್ಣನು ಅವನ ಶಿರಚ್ಛೇದನಮಾಡಿ ಅವರನ್ನು ರಕ್ಷಿಸುವನು. ॥ ೩೩ ॥ ಇನ್ನೂ – ಪ್ರಲಂಬಾಸುರ, ಧೇನುಕಾಸುರ, ಬಕಾಸುರ, ಕೇಶೀ, ಅರಿಷ್ಟಾಸುರ ಮುಂತಾದ ಅನೇಕ ದೈತ್ಯರನ್ನೂ, ಚಾಣೂರ ಮುಂತಾದ ಮಲ್ಲರನ್ನೂ, ಕುವಲಯಾ ಪೀಡವೆಂಬ ಆನೆಯನ್ನೂ, ಕಂಸ, ಕಾಲಯವನ, ನರಕಾಸುರ, ಪೌಂಡ್ರಕದೇಶದ ಮಿಥ್ಯಾವಾಸುದೇವ, ಶಾಲ್ವ, ದ್ವಿವಿದನೆಂಬ ವಾನರ, ಬಲ್ವಲ, ದಂತವಕ್ತ್ರ, ನಗ್ನಜಿತರಾಜನ ಏಳು ಕೊಬ್ಬಿದ ಗೂಳಿಗಳನ್ನೂ, ಶಂಬರಾಸುರ, ವಿದೂರಥ, ರುಕ್ಮಿ ಮುಂತಾದವರನ್ನೂ, ಬಿಲ್ಲು-ಬಾಣಗಳನ್ನು ಧರಿಸಿ ಯುದ್ಧರಂಗಕ್ಕೆ ಬರುವ ಕಾಂಭೋಜ, ಮತ್ಸ್ಯ, ಕುರು, ಕೈಕಯ, ಸೃಂಜಯ ಮೊದಲಾದ ದೇಶಗಳ ರಾಜರನ್ನೂ ಆತನು ಸಂಹರಿಸುವನು. ಕೆಲವರನ್ನು ತಾನೇ ಕೊಂದು, ಕೆಲವರನ್ನು ಬಲರಾಮ, ಭೀಮಸೇನ, ಅರ್ಜುನನೇ ಮುಂತಾದವರಿಂದ ಸಂಹಾರಮಾಡಿಸುವನು. ಇವರೆಲ್ಲರೂ ಭಗವಂತನ ಧಾಮವನ್ನೇ ಸೇರಿಕೊಳ್ಳುವರು. ॥ ೩೪-೩೫ ॥

ಕಾಲದ ಪ್ರಭಾವದಿಂದ ಮನುಷ್ಯರ ಬುದ್ಧಿಶಕ್ತಿಯು, ಆಯುಸ್ಸೂ ಕಡಿಮೆಯಾದಾಗ, ಇವರಿಗೆ ತತ್ತ್ವವನ್ನು ಹೇಳುವ ಇದೀ ನನ್ನ ವೇದವಾಣಿಯನ್ನು ತಿಳಿಯುವ ಸಾಮರ್ಥ್ಯ ಇರದಿದ್ದಾಗ, ಕರುಣಾಳುವಾದ ಪ್ರಭುವು ಪ್ರತಿಯೊಂದು ಕಲ್ಪದಲ್ಲಿಯೂ ಸತ್ಯವತಿಯ ಗರ್ಭದಿಂದ ಭಗವಾನ್ ವೇದವ್ಯಾಸರ ರೂಪದಲ್ಲಿ ಪ್ರಗಟಗೊಂಡು, ವೇದ ವೃಕ್ಷವನ್ನು ನಾನಾ ಶಾಖೆಗಳ ರೂಪದಲ್ಲಿ ವಿಭಾಗ ಮಾಡುವನು. ॥ ೩೬ ॥

ದೇವಶತ್ರುಗಳಾದ ದೈತ್ಯರು ವೇದಮಾರ್ಗದ ಆಸರೆಯನ್ನು ಪಡೆದು ಮಯಾಸುರನು ರಚಿಸಿದ ಅದೃಶ್ಯವಾದ ವೇಗವುಳ್ಳ ಪುರಗಳಲ್ಲಿ ವಾಸಿಸುತ್ತಾ ಮನುಷ್ಯರನ್ನು ಹಿಂಸಿಸತೊಡಗಿದಾಗ, ಆ ಭಗವಂತನು ಜನರ ಮನಸ್ಸಿನಲ್ಲಿ ಮೋಹವನ್ನೂ ಪ್ರಲೋಭನೆಯನ್ನೂ ಉಂಟು ಮಾಡುವ ವೇಷವನ್ನು ಧರಿಸಿ ಬುದ್ಧದೇವರ ರೂಪದಲ್ಲಿ ಬಹಳಷ್ಟು ಉಪಧರ್ಮಗಳನ್ನು ಉಪದೇಶ ಮಾಡುವನು. ಏಕೆಂದರೆ, ಜನರ ಕಲ್ಯಾಣಮಾಡುವುದೇ ಭಗವಂತನ ಕಾರ್ಯವಲ್ಲವೇ! ॥ ೩೭ ॥

ಕಲಿಯುಗದ ಕೊನೆಯಲ್ಲಿ ಸತ್ಪುರುಷರ ಮನೆಗಳಲ್ಲಿಯೂ ಶ್ರೀಹರಿಕಥೆಯ ಶ್ರವಣ-ಕೀರ್ತನ-ಉತ್ಸವಾದಿಗಳು ನಡೆಯಲು ಅವಕಾಶವಿಲ್ಲದಂತಾಗುವುದು. ಪಾಷಂಡಿಗಳೂ, ಧರ್ಮಘಾತುಕರು, ಶೂದ್ರರು ರಾಜರಾಗಿ ಬಿಡುವರು. ದೇವತೆಗಳನ್ನೂ, ಪಿತೃಗಳನ್ನೂ ಕುರಿತು ಮಾಡುವ ಯಜ್ಞ ಮತ್ತು ಶ್ರಾದ್ಧಗಳ ಸದ್ದೂ ಇರುವುದಿಲ್ಲ. ಸ್ವಾಹಾ, ಸ್ವಧಾ, ವಷಟ್‌ಕಾರಗಳು ಕಿವಿಗೆ ಬೀಳುವುದಿಲ್ಲ. ಇಂತಹ ಸಮಯದಲ್ಲಿ ಕಲಿಯುಗವನ್ನು ಶಿಕ್ಷಿಸಲಿಕ್ಕಾಗಿ ಭಗವಂತನು ಕಲ್ಕಿರೂಪದಲ್ಲಿ ಅವತರಿಸುವನು. ॥ ೩೮ ॥

ಪ್ರಪಂಚದ ಸೃಷ್ಟಿಯ ಸಮಯಬಂದಾಗ ತಪಸ್ಸಿನ ರೂಪದಲ್ಲೂ, ನನ್ನ ರೂಪದಲ್ಲೂ, ಮರೀಚಿಯೇ ಮುಂತಾದ ಮಹರ್ಷಿಗಳ ಮತ್ತು ಒಂಭತ್ತು ಪ್ರಜಾಪತಿಗಳ ರೂಪದಲ್ಲಿಯೂ, ಹಾಗೆಯೇ ರಕ್ಷಣೆಯ ಸಮಯ ಬಂದಾಗ ಧರ್ಮ, ವಿಷ್ಣು, ಮನು, ದೇವತೆಗಳೂ ಮತ್ತು ರಾಜರುಗಳೂ ಇವರ ರೂಪದಲ್ಲೂ, ವಿನಾಶಕಾಲ ಬಂದಾಗ ಅಧರ್ಮ, ರುದ್ರದೇವರು, ಕ್ರೋಧವಶವೆಂಬ ಸರ್ಪಗಳೂ, ದೈತ್ಯರೂ – ಮುಂತಾದ ರೂಪದಲ್ಲೂ ಸರ್ವಶಕ್ತಿ ಸಂಪನ್ನ

ವಿಷ್ಣೋರ್ನು ವೀರ್ಯಗಣನಾಂ ಕತಮೋಽರ್ಹತೀಹ
ಯಃ ಪಾರ್ಥಿವಾನ್ಯಪಿ ಕವಿರ್ವಿಮಮೇ ರಜಾಂಸಿ ।
ಚಸ್ಕಂಭ ಯಃ ಸ್ವರಂಹಸಾಸ್ಖಲತಾ ತ್ರಿಪೃಷ್ಠಂ
ಯಸ್ಮಾತ್ತ್ರಿಸಾಮ್ಯಸದನಾದುರುಕಂಪಯಾನಮ್ ॥ ೪೦ ॥

ನಾಂತಂ ವಿದಾಮ್ಯಹಮಮೀ ಮುನಯೋಽಗ್ರಜಾಸ್ತೇ
ಮಾಯಾಬಲಸ್ಯ ಪುರುಷಸ್ಯ ಕುತೋಽಪರೇ ಯೇ ।
ಗಾಯನ್ ಗುಣಾನ್ ದಶಶತಾನನ ಆದಿದೇವಃ
ಶೇಷೋಽಧುನಾಪಿ ಸಮವಸ್ಯತಿ ನಾಸ್ಯ ಪಾರಮ್ ॥ ೪೧ ॥

ಯೇಷಾಂ ಸ ಏಷ ಭಗವಾಂದಯಯೇದನಂತಃ
ಸರ್ವಾತ್ಮನಾಽಽಶ್ರಿತಪದೋ ಯದಿ ನಿರ್ವ್ಯಲೀಕಮ್ ।
ತೇ ದುಸ್ತರಾಮತಿತರಂತಿ ಚ ದೇವಮಾಯಾಂ
ನೈಷಾಂ ಮಮಾಹಮಿತಿ ಧೀಃ ಶ್ವಶೃಗಾಲಭಕ್ಷ್ಯೇ ॥ ೪೨ ॥

ವೇದಾಹಮಂಗ ಪರಮಸ್ಯ ಹಿ ಯೋಗಮಾಯಾಂ
ಯೂಯಂ ಭವಶ್ಚ ಭಗವಾನಥ ದೈತ್ಯವರ್ಯಃ ।
ಪತ್ನೀ ಮನೋಃ ಸ ಚ ಮನುಶ್ಚ ತದಾತ್ಮಜಾಶ್ಚ
ಪ್ರಾಚೀನಬರ್ಹಿರೃಭುರಂಗ ಉತ ಧ್ರುವಶ್ಚ ॥ ೪೩ ॥

ಇಕ್ಷ್ವಾಕುರೈಲಮುಚುಕುಂದವಿದೇಹಗಾಧಿ-
ರಘ್ವಂಬರೀಷಸಗರಾ ಗಯನಾಹುಷಾದ್ಯಾಃ ।
ಮಾಂಧಾತ್ರಲರ್ಕಶತಧನ್ವನುರಂತಿದೇವಾ
ದೇವವ್ರತೋ ಬಲಿರಮೂರ್ತರಯೋ ದಿಲೀಪಃ ॥ ೪೪ ॥

ಸೌಭರ್ಯುತಂಕ ಶಿಬಿದೇವಲಪಿಪ್ಪಲಾದ-
ಸಾರಸ್ವತೋದ್ಧವಪರಾಶರಭೂರಿಷೇಣಾಃ ।
ಯೇಽನ್ಯೇ ವಿಭೀಷಣಹನೂಮದುಪೇಂದ್ರದತ್ತ-
ಪಾರ್ಥಾರ್ಷ್ಟಿಷೇಣವಿದುರಶ್ರುತದೇವವರ್ಯಾಃ ॥ ೪೫ ॥

ನಾದ ಶ್ರೀಭಗವಂತನ ವಿಚಿತ್ರವಾದ ಮಾಯಾವಿಭೂತಿಗಳು ಪ್ರಕಟಗೊಳ್ಳುವವು. ॥ ೩೯ ॥ ಭಗವಂತನ ಶಕ್ತಿಗಳು ಅನಂತವಾದುವು. ತನ್ನ ಪ್ರತಿಭೆಯಿಂದ ಭೂಮಿಯಲ್ಲಿರುವ ಒಂದೊಂದು ಧೂಳಿನ ಕಣಗಳನ್ನು ಎಣಿಸಿಬಿಟ್ಟರೂ, ಮಹಾವಿಷ್ಣುವಿನ ಶಕ್ತಿಗಳನ್ನು ಯಾವಾತನು ಎಣಿಸಿ ಮುಗಿಸಿಯಾನು? ಯಾರಿಗೆ ತಾನೇ ಅಂತಹ ಶಕ್ತಿ ಇದ್ದೀತು? ಈ ಅನಂತ ಶಕ್ತಿಸಂಪನ್ನನಾದ ಪ್ರಭುವು ತ್ರಿವಿಕ್ರಮಾವತಾರದಲ್ಲಿ ತ್ರಿಲೋಕಗಳನ್ನೂ ಅಳೆಯುತ್ತಿದ್ದಾಗ ಈತನ ಚರಣಗಳ ಅದ್ಭುತವಾದ ವೇಗದಿಂದ ಪ್ರಕೃತಿಯಿಂದ ಪ್ರಾರಂಭವಾಗಿ ಸತ್ಯಲೋಕದವರೆಗೆ ಇಡೀ ಬ್ರಹ್ಮಾಂಡವೇ ನಡುಗತೊಡಗಿದಾಗ ಈತನೇ ತನ್ನ ಶಕ್ತಿಯಿಂದ ಅದನ್ನು ಸ್ಥಿರಗೊಳಿಸಿದನು. ॥ ೪೦ ॥ ಸಮಸ್ತ ಸೃಷ್ಟಿಯ ರಚನೆಯನ್ನೂ, ಸಂಹಾರವನ್ನೂ ಮಾಡುವ ಮಾಯೆಯು ಈತನ ಒಂದು ಶಕ್ತಿಯು. ಇಂತಹ ಅನಂತ ಶಕ್ತಿಗಳಿಗೆ ಆಶ್ರಯನಾಗಿರುವ ಈತನ ಸ್ವರೂಪವನ್ನು ನಾನು ಅರಿಯೆನು. ನಿನ್ನ ಅಣ್ಣಂದಿರಾದ ಸನಕಾದಿಗಳೂ ಅರಿಯರು. ಇನ್ನು ಇತರರ ವಿಷಯದಲ್ಲಿ ಹೇಳುವುದೇನಿದೆ? ಆದಿದೇವನಾದ ಆದಿಶೇಷಸ್ವಾಮಿಯು ತನ್ನ ಸಾವಿರ ಬಾಯಿಗಳಿಂದ ಇವನ ಗುಣಗಳನ್ನು ಹಿಂದಿನಿಂದಲೂ ಹಾಡುತ್ತಾ ಬಂದರೂ, ಇಂದಿಗೂ ಅವುಗಳ ದಡಕಾಣಲಾಗಲಿಲ್ಲ. ॥ ೪೧ ॥ ನಿಷ್ಕಪಟಭಾವದಿಂದ ತಮ್ಮ ಸರ್ವಸ್ವವನ್ನೂ ಮತ್ತು ತಮ್ಮನ್ನೂ ಅವನ ಚರಣಕಮಲಗಳಲ್ಲಿ ಸಮರ್ಪಿಸಿಕೊಳ್ಳುವವರ ಮೇಲೆಯೇ ಆ ಅನಂತ ಭಗವಂತನು ದಯೆಯನ್ನು ಹರಿಸುತ್ತಾನೆ. ಅವನ ದಯೆಗೆ ಪಾತ್ರರಾದರೇ ಅವನ ದುಸ್ತರವಾದ ಮಾಯೆಯ ಸ್ವರೂಪವನ್ನು ಅರಿತು ಅದನ್ನು ದಾಟಿ ಹೋಗುತ್ತಾರೆ. ಇಂತಹ ಸುಕೃತಿಗಳಿಗೆ ನರಿ-ನಾಯಿಗಳಿಗೆ ಆಹಾರವಾಗುವ ತಮ್ಮ ಹಾಗೂ ತಮ್ಮ ಪುತ್ರಾದಿಗಳ ಶರೀರದಲ್ಲಿ 'ನಾನು-ನನ್ನದು' ಎಂಬ ಅಹಂಭಾವವಿರುವುದಿಲ್ಲ. ॥ ೪೨ ॥ ಪ್ರಿಯ ನಾರದನೇ! ಆ ಪರಮಪುರುಷನ ಯೋಗಮಾಯೆಯನ್ನು ನಾನು ಬಲ್ಲೆನು. ಹಾಗೆಯೇ ನೀನೂ, ನಿನ್ನ ಅಣ್ಣಂದಿರಾದ ಸನಕಾದಿಗಳೂ, ಭಗವಾನ್ ಶಂಕರನೂ, ದೈತ್ಯಕುಲಭೂಷಣನಾದ ಪ್ರಹ್ಲಾದನೂ, ಶತರೂಪಾ, ಮನು, ಮನುಪುತ್ರ ಪ್ರಿಯವ್ರತ ಮುಂತಾದವರೂ, ಪ್ರಾಚೀನ ಬರ್ಹಿ, ಋಭು, ಅಂಗ ಮತ್ತು ಧ್ರುವ ಇವರೆಲ್ಲ ಬಲ್ಲರು. ॥ ೪೩ ॥ ಇವರಲ್ಲದೆ ಇಕ್ಷ್ವಾಕು, ಪುರೂರವ, ಮುಚುಕುಂದ, ಜನಕ, ಗಾಧಿ, ರಘು, ಅಂಬರೀಷ, ಸಗರ, ಗಯ, ಯಯಾತಿ ಮುಂತಾದವರೂ, ಮಾಂಧಾತಾ, ಅಲರ್ಕ, ಶತಧನ್ವಾ, ಅನು, ರಂತಿದೇವ, ಭೀಷ್ಮ, ಬಲಿ, ಅಮೂರ್ತ್ತರಯ, ದಿಲೀಪ, ಸೌಭರಿ, ಉತ್ತಂಕ, ಶಿಬಿ, ದೇವಲ, ಪಿಪ್ಪಲಾದ, ಸಾರಸ್ವತ, ಉದ್ಧವ, ಪರಾಶರ, ಭೂರಿಷೇಣ, ಹಾಗೂ ವಿಭೀಷಣ, ಹನುಮಂತ, ಶುಕಮುನಿ, ಅರ್ಜುನ, ಆರ್ಷ್ಟಿಷೇಣ, ವಿದುರ, ಶ್ರುತದೇವ ಮುಂತಾದ ಮಹಾತ್ಮರೂ ತಿಳಿದಿದ್ದಾರೆ. ॥ ೪೪-೪೫ ॥ ಭಗವಂತನ ಪರಾಕ್ರಮವು ಅತ್ಯಂತ ಅದ್ಭುತವಾದುದು. ಆ ಪ್ರಭುವಿಗೆ ಶರಣಾದವರು ಅವನ ಭಕ್ತರೇ ಆಗಿಹೋಗುವರು. ಅವರ ಶೀಲ-ಸ್ವಭಾವಗಳು, ಆಚರಣೆಗಳೂ ಸತ್ಪುರುಷರಂತೆ ಆಗಿ ಹೋಗುವವು. ಅವರು ಬೇಕಾದರೆ, ಸ್ತ್ರೀ, ಶೂದ್ರ, ಹೂಣ ಭಿಲ್ಲರು ಜಾತಿಯ ಮನುಷ್ಯರೇ ಆಗಿರಲಿ, ಬೇಕಾದರೆ ಪಶು-ಪಕ್ಷಿ ಮುಂತಾದ ಯಾವುದೇ ಯೋನಿಯವ

ತೇ ವೈ ವಿದಂತ್ಯತಿತರಂತಿ ಚ ದೇವಮಾಯಾಂ
ಸ್ತ್ರೀಶೂದ್ರಹೂಣಶಬರಾ ಅಪಿ ಪಾಪಜೀವಾಃ ।
ಯದ್ಯದ್ಭುತಕ್ರಮಪರಾಯಣಶೀಲಶಿಕ್ಷಾ-
ಸ್ತಿರ್ಯಗ್ಜನಾ ಅಪಿ ಕಿಮು ಶ್ರುತಧಾರಣಾ ಯೇ ॥೪೬॥

ಆಗಲೀ, ಅವರೆಲ್ಲರೂ ಭಗವಂತನ ಶರಣಾಗತಿಯ ಬಲದಲ್ಲಿ ದಾಟಲಶಕ್ಯವಾದ ಆ ದೇವಮಾಯೆಯನ್ನು ದಾಟಿಹೋಗುತ್ತಾರೆ. ಎಂದಾಗ ವೈದಿಕ ಸದಾಚಾರಿಗಳು ದಾಟಿಹೋಗುವರು ಎಂದು ಹೇಳಬೇಕಾದುದೇ ಇಲ್ಲ. ॥ ೪೬ ॥

ಶಶ್ವತ್ಪ್ರಶಾಂತಮಭಯಂ ಪ್ರತಿಬೋಧಮಾತ್ರಂ
ಶುದ್ಧಂ ಸಮಂ ಸದಸತಃ ಪರಮಾತ್ಮತತ್ತ್ವಮ್ ।
ಶಬ್ದೋ ನ ಯತ್ರ ಪುರುಕಾರಕವಾನ್ಕ್ರಿಯಾರ್ಥೋ
ಮಾಯಾ ಪರೈತ್ಯಭಿಮುಖೇ ಚ ವಿಲಜ್ಜಮಾನಾ ॥೪೭॥

ನಾರದನೇ ! ಪರಮಾತ್ಮತತ್ತ್ವವು ಶಾಶ್ವತವೂ, ಪ್ರಶಾಂತವೂ, ಅಭಯವೂ, ಜ್ಞಾನೈಕಸ್ವರೂಪವೂ ಆಗಿರುವುದು. ಅವನಲ್ಲಿ ಮಾಯೆಯ ಮಲವಾಗಲೀ, ಅದರಿಂದ ರಚಿತವಾದ ವಿಷಮತೆಗಳಾಗಲೀ ಇಲ್ಲ. ಅವನು ಸತ್-ಅಸತ್ ಎರಡನ್ನೂ ಮೀರಿದವನು. ಯಾವುದೇ ವೈದಿಕ ಅಥವಾ ಲೌಕಿಕ ಶಬ್ದಗಳು ಅವನವರೆಗೆ ತಲುಪಲಾರವು. ನಾನಾ ಸಾಧನಗಳಿಂದ ಸಂಪನ್ನವಾಗುವ ಕರ್ಮಗಳ ಫಲಗಳೂ ಅವನವರೆಗೆ ತಲುಪಲಾರವು. ಹೆಚ್ಚೇನು, ಸ್ವಯಂ ಮಾಯೆಯೂ ಕೂಡ ಅವನ ಎದುರು ನಿಲ್ಲಲಾರಳು. ನಾಚಿ ಓಡಿಹೋಗುತ್ತಾಳೆ. ॥ ೪೭ ॥ ಮಹಾತ್ಮರು-ಶೋಕರಹಿತ ಆನಂದ ಸ್ವರೂಪ ಬ್ರಹ್ಮನ ರೂಪದಲ್ಲಿ ಸಾಕ್ಷಾತ್ಕಾರ ಮಾಡಿಕೊಳ್ಳುವರೋ ಅದೇ ಪರಮಪುರುಷ ಭಗವಂತನ ಪರಮಪದವಾಗಿದೆ. ಸಂಯಮಿಗಳು ಅದರಲ್ಲೇ ತಮ್ಮ ಮನಸ್ಸನ್ನು ಸೇರಿಸಿ ಸ್ಥಿರರಾಗುತ್ತಾರೆ. ಜ್ಞಾನ-ಆನಂದಗಳ ಅಕ್ಷಯನಿಧಿಯಾಗಿರುವ ಆತನಲ್ಲೇ ನೆಲೆಸಿರುವಂತಹವರಿಗೆ ಮುಕ್ತಿಪ್ರಾಪ್ತಿಗಾಗಿ ಬೇರೆ ಜ್ಞಾನಸಾಧನಗಳೇಕೇ? ಜಲಕ್ಕೆ ಅಧಿಪತಿಯಾಗಿರುವ ಮೇಘರೂಪಿಯಾದ ಇಂದ್ರನಿಗೆ ನೀರಿಗೋಸ್ಕರ ಬಾವಿಯನ್ನು ತೋಡುವ ಗುದ್ದಲಿಯ ಅವಶ್ಯಕತೆ ಇಲ್ಲವಷ್ಟೆ! ನೀರು ಬೇಕಾದಾಗ ಸ್ವತಃ ಅವನು ಇತರರಿಗೂ ಮಳೆ ಸುರಿಸಿ ನೀರು ಕೊಡಬಲ್ಲನು. ಹಾಗೆಯೇ ಭಗವಂತನನ್ನು ಪ್ರಾಪ್ತ ಮಾಡಿಕೊಂಡ ಮಹಾಪುರುಷರೂ ಕೂಡ ತಮ್ಮ ಪ್ರಭಾವದಿಂದ ಬೇರೆಯವರಿಗೂ ಭಗವತ್ಪ್ರಾಪ್ತಿಯ ಮಾರ್ಗವನ್ನು ಸುಗಮಗೊಳಿಸುತ್ತಾರೆ. ॥ ೪೮ ॥ ಜಗತ್ತಿನಲ್ಲಿರುವ ಶ್ರೇಯಸ್ಕರ ಸಾಧನೆಗಳೆಲ್ಲಕ್ಕೂ ಪ್ರಭುವೇ ಒಡೆಯನಾಗಿದ್ದಾನೆ. ಅವನೇ ಈ ಜೀವಿಯ ಭಾವ ಮತ್ತು ಸ್ವಭಾವಕ್ಕನುಸಾರವಾಗಿ ಶಾಸ್ತ್ರದ ಮೂಲಕ ಅವನ ಕರ್ಮಗಳನ್ನು ವಿಧಿಸುತ್ತಾನೆ. ಸತ್ಕರ್ಮಗಳ ಪ್ರಸಿದ್ಧಿಯೂ ಭಗವಂತನಿಂದಲೇ ಆಗುತ್ತದೆ. ವಾಸ್ತವವಾಗಿ ಜೀವನೂ ಅಜನ್ಮಾ, ಶಾಶ್ವತನಾಗಿದ್ದಾನೆ. ಶರೀರ ನಾಶವಾದರೂ ಜೀವಿಯು ನಾಶವಾಗುವುದಿಲ್ಲ.* ಈ ಸ್ಥೂಲ ದೇಹವಾದರೋ ಪಂಚಭೂತಗಳಿಂದ ಉಂಟಾಗಿದೆ. ಈ ಶರೀರವು ತಮ್ಮ-ತಮ್ಮ ಐದು ಭೂತಗಳಲ್ಲಿ ಸೇರಿಹೋದಾಗ ದೇಹರೂಪದಿಂದ ಇರುವ ಉಪಾಧಿಯು ತಮ್ಮ-ತಮ್ಮ ತತ್ತ್ವಗಳಲ್ಲಿ ಸೇರಿಹೋಗುತ್ತದೆ. ಆದರೆ ಘಟಾಕಾಶವು ಮಹಾಕಾಶದಲ್ಲಿ ಒಂದೇ ರೂಪವಾಗಿ ಇರುತ್ತದೆ. ಘಟಕ್ಕೆ ಇದ್ದ ಉಪಾಧಿಯು ಕೇವಲ ನಾಶವಾಯಿತು. ಇದರಿಂದ ಮಹಾಕಾಶದಲ್ಲಿ ಯಾವುದೇ ಅಂತರ ಬೀಳುವುದಿಲ್ಲ. ಹಾಗೆಯೇ ದೇಹದ ಉಪಾಧಿಯು ಇಲ್ಲವಾದಾಗಲೂ ಆತ್ಮನು ಪರಮಾತ್ಮನಲ್ಲಿ ಒಂದಾಗಿ ಹೋಗುತ್ತಾನೆ. ॥ ೪೯ ॥

ತದ್ವೈ ಪದಂ ಭಗವತಃ ಪರಮಸ್ಯ ಪುಂಸೋ
ಬ್ರಹ್ಮೇತಿ ಯದ್ವಿದುರಜಸ್ರಸುಖಂ ವಿಶೋಕಮ್ ।
ಸಧ್ರ್ಯಙ್ನಿಯಮ್ಯ ಯತಯೋ ಯಮಕರ್ತಹೇತಿಂ
ಜಹ್ಯುಃ ಸ್ವರಾಡಿವ ನಿಪಾನಖನಿತ್ರಮಿಂದ್ರಃ ॥೪೮॥

ಸ ಶ್ರೇಯಸಾಮಪಿ ವಿಭುರ್ಭಗವಾನ್ಯತೋಽಸ್ಯ
ಭಾವಸ್ವಭಾವವಿಹಿತಸ್ಯ ಸತಃ ಪ್ರಸಿದ್ಧಿಃ ।
ದೇಹೇ ಸ್ವಧಾತುವಿಗಮೇಽನುವಿಶೀರ್ಯಮಾಣೇ
ವ್ಯೋಮೇವ ತತ್ರ ಪುರುಷೋ ನ ವಿಶೀರ್ಯತೇಽಜಃ ॥೪೯॥

* ಅಂತವಂತ ಇಮೇ ದೇಹಾ ನಿತ್ಯಸ್ಯೋಕ್ತಾಃ ಶರೀರಿಣಃ । ಅನಾಶಿನೋಽಪ್ರಮೇಯಸ್ಯ ತಸ್ಮಾದ್ಯುಧ್ಯಸ್ವ ಭಾರತ ॥ *(ಶ್ರೀಮದ್ಭಗವದ್ಗೀತೆ ೨/೧೮)*

ಸೋಽಯಂ ತೇಽಭಿಹಿತಸ್ತಾತ ಭಗವಾನ್ವಿಶ್ವಭಾವನಃ ।
ಸಮಾಸೇನ ಹರೇರ್ನಾನ್ಯದನ್ಯಸ್ಮಾತ್ ಸದಸಚ್ಚ ಯತ್ ॥ ೫೦ ॥

ಇದಂ ಭಾಗವತಂ ನಾಮ ಯನ್ಮೇ ಭಗವತೋದಿತಮ್ ।
ಸಂಗ್ರಹೋಽಯಂ ವಿಭೂತೀನಾಂ ತ್ವಮೇತದ್ವಿಪುಲೀಕುರು ॥ ೫೧ ॥

ಯಥಾ ಹರೌ ಭಗವತಿ ನೃಣಾಂ ಭಕ್ತಿರ್ಭವಿಷ್ಯತಿ ।
ಸರ್ವಾತ್ಮನ್ಯಖಿಲಾಧಾರೇ ಇತಿ ಸಂಕಲ್ಪ್ಯ ವರ್ಣಯ ॥ ೫೨ ॥

ಮಾಯಾಂ ವರ್ಣಯತೋಽಮುಷ್ಯ ಈಶ್ವರಸ್ಯಾನುಮೋದತಃ ।
ಶೃಣ್ವತಃ ಶ್ರದ್ಧಯಾ ನಿತ್ಯಂ ಮಾಯಯಾಽಽತ್ಮಾ ನ ಮುಹ್ಯತಿ ॥ ೫೩ ॥

ಮಗೂ ನಾರದನೇ! ಸಂಕಲ್ಪ ಮಾತ್ರದಿಂದಲೇ ವಿಶ್ವವನ್ನು ರಚಿಸುವ ಭಗವಂತನಾದ ಶ್ರೀಹರಿಯನ್ನು ಕುರಿತು ಹೀಗೆ ಸಂಕ್ಷೇಪವಾಗಿ ನಾನು ವರ್ಣಿಸಿರುವೆನು. ಒಟ್ಟಿನಲ್ಲಿ ಹೇಳುವುದಾದರೆ ಸತ್ ಆಗಲೀ, ಅಸತ್ ಆಗಲೀ, ಕಾರ್ಯ-ಕಾರಣವಾಗಿರಲೀ ಯಾವುದೂ ಆತನಿಂದ ಭಿನ್ನವಾಗಿಲ್ಲ. ಆದರೂ ಅವನು ಅವುಗಳಿಂದ ಪ್ರತ್ಯೇಕವಾಗಿಯೇ ಇದ್ದಾನೆ. ॥ ೫೦ ॥ ಭಗವಂತನು ನನಗೆ ಉಪದೇಶಿಸಿದ ಆ ಭಾಗವತವು ಇದೇ ಆಗಿದೆ. ಇದರಲ್ಲಿ ಭಗವಂತನ ವಿಭೂತಿಗಳ ಸಂಕ್ಷಿಪ್ತ ವರ್ಣನೆಯಿದೆ. ನೀನು ಇದನ್ನು ವಿಸ್ತಾರಗೊಳಿಸು. ॥ ೫೧ ॥ ಸರ್ವಾತ್ಮಕನೂ, ಸರ್ವಕ್ಕೂ ಆಧಾರನೂ ಆಗಿರುವ ಭಗವಂತನಾದ ಶ್ರೀಹರಿಯಲ್ಲಿ ಮನುಷ್ಯರಿಗೆ ಭಕ್ತಿಯುಂಟಾಗುವಂತೆ ಸಂಕಲ್ಪಮಾಡಿ ಅದನ್ನು ವರ್ಣಿಸು. ॥ ೫೨ ॥ ಭಗವಂತನ ಅಚಿಂತ್ಯವಾದ ಈ ಮಾಯಾಶಕ್ತಿಯನ್ನು ವರ್ಣಿಸುವವನೂ, ಇತರರು ವರ್ಣಿಸುವಾಗ ಅದನ್ನು ಶ್ರವಣಿಸಿ, ಅನುಮೋದನ ಮಾಡುವವನೂ ಆದ ಪುರುಷನ ಚಿತ್ತವು ಎಂದಿಗೂ ಮಾಯೆಯಿಂದ ಮೋಹಗೊಳ್ಳುವುದಿಲ್ಲ. ॥ ೫೩ ॥

ಏಳನೆಯ ಅಧ್ಯಾಯವು ಮುಗಿಯಿತು. ॥ ೭ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದ್ವಿತೀಯಸ್ಕಂಧೇ
ಬ್ರಹ್ಮನಾರದಸಂವಾದೇ ಸಪ್ತಮೋಽಧ್ಯಾಯಃ ॥ ೭ ॥

ಎಂಟನೆಯ ಅಧ್ಯಾಯ

ಪರೀಕ್ಷಿದ್ರಾಜನು ಮಾಡಿದ ವಿವಿಧ ಪ್ರಶ್ನೆಗಳು

ರಾಜೋವಾಚ

ಬ್ರಹ್ಮಣಾ ಚೋದಿತೋ ಬ್ರಹ್ಮನ್ ಗುಣಾಖ್ಯಾನೇಽಗುಣಸ್ಯ ಚ ।
ಯಸ್ಮೈ ಯಸ್ಮೈ ಯಥಾ ಪ್ರಾಹ ನಾರದೋ ದೇವದರ್ಶನಃ ॥ ೧ ॥

ಏತದ್ವೇದಿತುಮಿಚ್ಛಾಮಿ ತತ್ತ್ವಂ ವೇದವಿದಾಂ ವರ ।
ಹರೇರದ್ಭುತವೀರ್ಯಸ್ಯ ಕಥಾ ಲೋಕಸುಮಂಗಲಾಃ ॥ ೨ ॥

ಕಥಯಸ್ವ ಮಹಾಭಾಗ ಯಥಾಹಮಖಿಲಾತ್ಮನಿ ।
ಕೃಷ್ಣೇ ನಿವೇಶ್ಯ ನಿಃಸಂಗಂ ಮನಸ್ತ್ಯಕ್ಷ್ಯೇ ಕಲೇವರಮ್ ॥ ೩ ॥

ಶೃಣ್ವತಃ ಶ್ರದ್ಧಯಾ ನಿತ್ಯಂ ಗೃಣತಶ್ಚ ಸ್ವಚೇಷ್ಟಿತಮ್ ।
ಕಾಲೇನ ನಾತಿದೀರ್ಘೇಣ ಭಗವಾನ್ವಿಶತೇ ಹೃದಿ ॥ ೪ ॥

ಪರೀಕ್ಷಿದ್ರಾಜನು ಹೇಳಿದನು - ಬ್ರಾಹ್ಮಣೋತ್ತಮರೇ! ದೇವಋಷಿ ನಾರದರು ದೇವಸಾಕ್ಷಾತ್ಕಾರ ಸಂಪನ್ನರು. ಅವರ ದರ್ಶನ ದೇವರ ದರ್ಶನಕ್ಕೆ ಸಮವಾದುದು. ಆ ಮಹಾತ್ಮರಿಗೆ ಬ್ರಹ್ಮದೇವರು - "ಮಗು! ನಾರದಾ! ಗುಣಾತೀತನಾದ ಪರಮಾತ್ಮನ ಕಲ್ಯಾಣಗುಣಗಳನ್ನು ಲೋಕಕ್ಕೆ ವರ್ಣನೆಮಾಡು" ಎಂದು ಪ್ರೇರಣೆ ಮಾಡಿದುದಾಗಿ ಹೇಳಿದಿರಿ. ॥ ೧ ॥ ಅವರು - ಯಾರಿಗೆ ಹಾಗೂ ಯಾವ ರೂಪದಲ್ಲಿ ಉಪದೇಶ ಮಾಡಿದರು? ಎಂಬುದನ್ನು ತಿಳಿಸಿರಿ. ಅದ್ಭುತವಾದ ಶಕ್ತಿಗಳಿಗೆ ಆಶ್ರಯನಾಗಿರುವ ಭಗವಂತನ ಕಥೆಗಳು ಲೋಕಕ್ಕೆ ಪರಮಮಂಗಳವನ್ನು ಉಂಟುಮಾಡುವವು. ಆತನ ವಿಷಯವಾಗಿಯೂ ತಿಳಿಸಿರಿ. ॥ ೨ ॥ ಶುಕಮಹಾತ್ಮರೇ! ತಾವು ವೇದಜ್ಞರಲ್ಲಿಯೂ ಶ್ರೇಷ್ಠರಾದವರು. ಸಂಗರಹಿತವಾದ ನನ್ನ ಮನಸ್ಸು ಸರ್ವಾತ್ಮಕವಾದ ಶ್ರೀಕೃಷ್ಣನಲ್ಲಿ ತನ್ಮಯವಾಗಿ, ಶರೀರವನ್ನು ಬಿಡಬೇಕೆಂದಿರುವ ನನಗೆ ಭಗವದ್ವಿಷಯವನ್ನು ವರ್ಣಿಸಿರಿ. ॥ ೩ ॥ ಭಗವಂತನ ದಿವ್ಯಲೀಲೆಗಳನ್ನು ದಿನ-ದಿನವೂ ಶ್ರದ್ಧೆಯಿಂದ ಶ್ರವಣಿಸುವವರ, ಸಂಕೀರ್ತನೆ ಮಾಡುವವರ ಹೃದಯದಲ್ಲಿ ಅವನು ಶೀಘ್ರವಾಗಿ ಪ್ರವೇಶಿಸಿ ಅಲ್ಲೇ ಪ್ರಕಟನಾಗುತ್ತಾನೆ. ॥ ೪ ॥ ಭಗವಾನ್ ಶ್ರೀಕೃಷ್ಣನು ಕಿವಿಗಳ ರಂಧ್ರಗಳ ಮೂಲಕ ಭಕ್ತರ ಭಾವಮಯ ಹೃದಯಕಮಲವನ್ನು

ಪ್ರವಿಷ್ಟಃ ಕರ್ಣರಂಧ್ರೇಣ ಸ್ವಾನಾಂ ಭಾವಸರೋರುಹಮ್ ।
ಧುನೋತಿ ಶಮಲಂ ಕೃಷ್ಣಃ ಸಲಿಲಸ್ಯ ಯಥಾ ಶರತ್ ॥ ೫ ॥

ಧೌತಾತ್ಮಾ ಪುರುಷಃ ಕೃಷ್ಣಪಾದಮೂಲಂ ನ ಮುಂಚತಿ ।
ಮುಕ್ತಸರ್ವಪರಿಕ್ಲೇಶಃ ಪಾಂಥಃ ಸ್ವಶರಣಂ ಯಥಾ ॥ ೬ ॥

ಯದಧಾತುಮತೋ ಬ್ರಹ್ಮನ್ ದೇಹಾರಂಭೋಽಸ್ಯ ಧಾತುಭಿಃ ।
ಯದೃಚ್ಛಯಾ ಹೇತುನಾ ವಾ ಭವಂತೋ ಜಾನತೇ ಯಥಾ ॥ ೭ ॥

ಆಸೀದ್ ಯದುದರಾತ್ಪದ್ಮಂ ಲೋಕಸಂಸ್ಥಾನಲಕ್ಷಣಮ್ ।
ಯಾವಾನಯಂ ವೈ ಪುರುಷ ಇಯತ್ತಾವಯವೈಃ ಪೃಥಕ್ ।
ತಾವಾನಸಾವಿತಿ ಪ್ರೋಕ್ತಃ ಸಂಸ್ಥಾವಯವವಾನಿವ ॥ ೮ ॥

ಅಜಃ ಸೃಜತಿ ಭೂತಾನಿ ಭೂತಾತ್ಮಾ ಯದನುಗ್ರಹಾತ್ ।
ದದೃಶೇ ಯೇನ ತದ್ರೂಪಂ ನಾಭಿಪದ್ಮ ಸಮುದ್ಭವಃ ॥ ೯ ॥

ಸ ಚಾಪಿ ಯತ್ರ ಪುರುಷೋ ವಿಶ್ವಸ್ಥಿತ್ಯುದ್ಭವಾಪ್ಯಯಃ ।
ಮುಕ್ತ್ವಾಽಽತ್ಮಮಾಯಾಂ ಮಾಯೇಶಃ ಶೇತೇ ಸರ್ವಗುಹಾಶಯಃ ॥ ೧೦ ॥

ಪುರುಷಾವಯವೈರ್ಲೋಕಾಃ ಸಪಾಲಾಃ ಪೂರ್ವಕಲ್ಪಿತಾಃ ।
ಲೋಕೈರಮುಷ್ಯಾವಯವಾಃ ಸಪಾಲೈರಿತಿ ಶುಶ್ರುಮ ॥ ೧೧ ॥

ಯಾವಾನ್ಕಲ್ಪೋ ವಿಕಲ್ಪೋ ವಾ
ಯಥಾ ಕಾಲೋಽನುಮೀಯತೇ ।
ಭೂತಭವ್ಯಭವಚ್ಛಬ್ದ
ಆಯುರ್ಮಾನಂ ಚ ಯತ್ ಸತಃ ॥ ೧೨ ॥

ಕಾಲಸ್ಯಾನುಗತಿರ್ಯಾ ತು ಲಕ್ಷ್ಯತೇಽಣ್ವೀ ಬೃಹತ್ಯಪಿ ।
ಯಾವತ್ಯಃ ಕರ್ಮಗತಯೋ ಯಾದೃಶೀರ್ದ್ವಿಜಸತ್ತಮ ॥ ೧೩ ॥

ಪ್ರವೇಶಿಸಿ ಅಲ್ಲಿ ಬೆಳಗುತ್ತಾನೆ. ಶರದೃತುವು ಬಗ್ಗಡವಾದ ನೀರಿನ ಕೆಸರು-ಕೊಳೆಯನ್ನು ಹೋಗಲಾಡಿಸುವಂತೆ ಭಕ್ತರ ಮನಸ್ಸಿನ ಕಶ್ಮಲವನ್ನು ಹೋಗಲಾಡಿಸುತ್ತಾನೆ. ॥ ೫ ॥ ದಾರಿಯಲ್ಲಿ ಒದಗಿದ ಎಲ್ಲ ಕಷ್ಟ-ಕಾರ್ಪಣ್ಯಗಳನ್ನೂ ದಾಟಿ ಮನೆಗೆ ಹಿಂದಿರುಗಿದವನು ಹೇಗೆ ತನ್ನ ಮನೆಯನ್ನು ಬಿಟ್ಟುಹೋಗುವುದಿಲ್ಲವೋ – ಹಾಗೆಯೇ ಭಗವಂತನ ಪ್ರವೇಶದಿಂದ ಹೃದಯಶುದ್ಧಿಯನ್ನು ಪಡೆದ ಮುಕ್ತ ಜೀವಿಯು ಶ್ರೀಕೃಷ್ಣಪರಮಾತ್ಮನ ಚರಣಕಮಲಗಳನ್ನು ಕ್ಷಣಕಾಲವೂ ತೊರೆಯುವುದಿಲ್ಲ. ॥ ೬ ॥

ಪೂಜ್ಯರೇ! ಜೀವಕ್ಕೆ ಪಂಚಭೂತಗಳ ಸಂಬಂಧವು ಕಿಂಚಿತ್ತೂ ಇಲ್ಲ. ಆದರೂ ಆತನ ಶರೀರವು ಪಂಚ-ಭೂತಗಳಿಂದಲೇ ನಿರ್ಮಿತವಾಗುವುದು. ಇದು ಸ್ವಾಭಾವಿಕವಾಗಿಯೇ ಹೀಗೆ ಆಗುವುದೋ ಅಥವಾ ಯಾವುದಾದರೂ ಕಾರಣಕ್ಕೆ ವಶವಾಗಿ ಹೀಗೆ ಆಗುವುದೋ? ಈ ರಹಸ್ಯವು ತಮಗೆ ತಿಳಿದೇ ಇದೆ. ॥ ೭ ॥ ಭಗವಂತನ ನಾಭಿಯಿಂದ ಒಂದು ಕಮಲವು ಉಂಟಾಯಿತು ಮತ್ತು ಅದರಿಂದ ಲೋಕಗಳ ಸೃಷ್ಟಿಯಾಯಿತು ಎಂದು ತಾವು ಹೇಳಿದಿರಿ. ಈ ಜೀವಿಯು ತನ್ನ ಸೀಮಿತ ಅವಯವಗಳಿಂದ ಪರಿಚ್ಛಿನ್ನನಿರುವಂತೆಯೇ ಪರಮಾತ್ಮನನ್ನೂ ಕೂಡ ಸೀಮಿತ ಅವಯವಗಳಿಂದ ಪರಿಚ್ಛಿನ್ನನಂತೆ ನೀವು ವರ್ಣಿಸಿದಿರಿ. ಇದು ಹೇಗೆ ಹೊಂದುತ್ತದೆ? ॥ ೮ ॥ ಯಾರ ಕೃಪೆಯಿಂದ ಸರ್ವಭೂತಮಯರು ಬ್ರಹ್ಮದೇವರು ಪ್ರಾಣಿಗಳನ್ನು ಸೃಷ್ಟಿಸುತ್ತಾರೋ, ಯಾರ ನಾಭಿಕಮಲದಿಂದಲೇ ಹುಟ್ಟಿದರೋ ಆತನ ಕೃಪೆಯಿಂದಲೇ ಬ್ರಹ್ಮದೇವರಿಗೆ ಆತನ ರೂಪವನ್ನು ಸಂದರ್ಶಿಸಲು ಸಾಧ್ಯವಾಯಿತೇ? ಅಂತಹ ವಿಶ್ವದ ಸೃಷ್ಟಿ, ಸ್ಥಿತಿ, ಲಯಗಳಿಗೆ ಕಾರಣನೂ, ಸರ್ವಾಂತರ್ಯಾಮಿಯೂ, ಮಾಯೆಗೆ ಅಧಿಪತಿಯೂ ಆದ ಪರಮಪುರುಷ ಪರಮಾತ್ಮನೂ ಕೂಡ ತನ್ನ ಮಾಯೆಯನ್ನು ತ್ಯಜಿಸಿ ಯಾವುದರಲ್ಲಿ, ಯಾವ ರೂಪದಿಂದ ಮಲಗುತ್ತಾನೆ? ॥ ೯-೧೦ ॥ ವಿರಾಟ್‌ಪುರುಷನ ಅಂಗಗಳಿಂದ ಲೋಕಗಳೂ ಮತ್ತು ಲೋಕಪಾಲರೂ ಉಂಟಾದರೆಂದು ಮೊದಲು ಹೇಳಿದಿರಿ, ಅನಂತರ ಆತನ ಅಂಗಗಳನ್ನು ಲೋಕಗಳ ಮತ್ತು ಲೋಕಪಾಲಕರ ರೂಪದಲ್ಲಿ ಕಲ್ಪಿಸಿಕೊಳ್ಳಬೇಕೆಂದೂ ಉಪದೇಶಿಸಿದಿರಿ. ಇವೆರಡೂ ಮಾತುಗಳ ತಾತ್ಪರ್ಯವೇನು? ॥ ೧೧ ॥

ಮಹಾಕಲ್ಪಗಳು ಮತ್ತು ಅವುಗಳೊಳಗಿನ ಅವಾಂತರ ಕಲ್ಪಗಳು ಎಷ್ಟು? ಭೂತ, ಭವಿಷ್ಯ, ವರ್ತಮಾನ ಕಾಲಗಳ ಅನುಮಾನ ಹೇಗೆ ಮಾಡಲಾಗುತ್ತದೆ? ಸ್ಥೂಲ ದೇಹಾಭಿಮಾನಿಗಳಾದ ಜೀವರ ಆಯುಸ್ಸಿನ ಅಳತೆ ಎಷ್ಟು? ॥ ೧೨ ॥ ಬ್ರಾಹ್ಮಣಶ್ರೇಷ್ಠರೇ! ಕಾಲದ ಸೂಕ್ಷ್ಮಗತಿಗಳಾದ ತ್ರುಟಿ ಮುಂತಾದುವನ್ನೂ, ಸ್ಥೂಲಗತಿಗಳಾದ ವರ್ಷಾದಿ ಮುಂತಾದವುಗಳನ್ನೂ ತಿಳಿಯುವುದು ಹೇಗೆ? ಬಗೆ-ಬಗೆಯಾದ ಕರ್ಮಗಳಿಗೆ ತಕ್ಕಂತೆ ಜೀವಿಗಳಿಗೆ ಎಷ್ಟು ಗತಿಗಳು ಮತ್ತು ಎಂತಹ ಗತಿಗಳೂ ಆಗುತ್ತವೆ? ॥ ೧೩ ॥ ದೇವತೆಗಳು, ಮನುಷ್ಯರು ಮುಂತಾದ ಯೋನಿಗಳು, ಸತ್ತ್ವ, ರಜ, ತಮೋ

ಯಸ್ಮಿನ್ಕರ್ಮಸಮಾವಾಯೋ ಯಥಾ ಯೇನೋಪಗೃಹ್ಯತೇ ।
ಗುಣಾನಾಂ ಗುಣಿನಾಂ ಚೈವ ಪರಿಣಾಮಮಭೀಪ್ಸತಾಮ್ ॥ ೧೪ ॥

ಭೂಪಾತಾಲಕಕುಬ್ವ್ಯೋಮಗ್ರಹನಕ್ಷತ್ರಭೂಭೃತಾಮ್ ।
ಸರಿತ್ಸಮುದ್ರದ್ವೀಪಾನಾಂ ಸಂಭವಶ್ಚೈತದೋಕಸಾಮ್ ॥ ೧೫ ॥

ಪ್ರಮಾಣಮಂಡಕೋಶಸ್ಯ ಬಾಹ್ಯಾಭ್ಯಂತರಭೇದತಃ ।
ಮಹತಾಂ ಚಾನುಚರಿತಂ ವರ್ಣಾಶ್ರಮವಿನಿಶ್ಚಯಃ ॥ ೧೬ ॥

ಯುಗಾನಿ ಯುಗಮಾನಂ ಚ ಧರ್ಮೋ ಯಶ್ಚ ಯುಗೇ ಯುಗೇ ।
ಅವತಾರಾನುಚರಿತಂ ಯದಾಶ್ಚರ್ಯತಮಂ ಹರೇಃ ॥ ೧೭ ॥

ನೃಣಾಂ ಸಾಧಾರಣೋ ಧರ್ಮಃ ಸವಿಶೇಷಶ್ಚ ಯಾದೃಶಃ ।
ಶ್ರೇಣೀನಾಂ ರಾಜರ್ಷೀಣಾಂ ಚ ಧರ್ಮಃ ಕೃಚ್ಛ್ರೇಷು ಜೀವತಾಮ್ ॥ ೧೮ ॥

ತತ್ತ್ವಾನಾಂ ಪರಿಸಂಖ್ಯಾನಂ ಲಕ್ಷಣಂ ಹೇತುಲಕ್ಷಣಮ್ ।
ಪುರುಷಾರಾಧನವಿಧಿರ್ಯೋಗಸ್ಯಾಧ್ಯಾತ್ಮಿಕಸ್ಯ ಚ ॥ ೧೯ ॥

ಯೋಗೇಶ್ವರೈಶ್ವರ್ಯಗತಿರ್ಲಿಂಗಭಂಗಸ್ತು ಯೋಗಿನಾಮ್ ।
ವೇದೋಪವೇದಧರ್ಮಾಣಾಮಿತಿಹಾಸಪುರಾಣಯೋಃ ॥ ೨೦ ॥

ಸಂಪ್ಲವಃ ಸರ್ವಭೂತಾನಾಂ ವಿಕ್ರಮಃ ಪ್ರತಿಸಂಕ್ರಮಃ ।
ಇಷ್ಟಾಪೂರ್ತಸ್ಯ ಕಾಮ್ಯಾನಾಂ ತ್ರಿವರ್ಗಸ್ಯ ಚ ಯೋ ವಿಧಿಃ ॥ ೨೧ ॥

ಯಶ್ಚಾನುಶಾಯಿನಾಂ ಸರ್ಗಃ ಪಾಷಂಡಸ್ಯ ಚ ಸಂಭವಃ ।
ಆತ್ಮನೋ ಬಂಧಮೋಕ್ಷೌ ಚ ವ್ಯವಸ್ಥಾನಂ ಸ್ವರೂಪತಃ ॥ ೨೨ ॥

ಯಥಾಽಽತ್ಮತಂತ್ರೋ ಭಗವಾನ್ವಿಕ್ರೀಡತ್ಯಾತ್ಮಮಾಯಯಾ ।
ವಿಸೃಜ್ಯ ವಾ ಯಥಾ ಮಾಯಾಮುದಾಸ್ತೇ ಸಾಕ್ಷಿವದ್ವಿಭುಃ ॥ ೨೩ ॥

ಸರ್ವಮೇತಚ್ಚ ಭಗವನ್ ಪೃಚ್ಛತೋ ಮೇಽನುಪೂರ್ವಶಃ ।
ತತ್ತ್ವತೋಽರ್ಹಸ್ಯುದಾಹರ್ತುಂ ಪ್ರಪನ್ನಾಯ ಮಹಾಮುನೇ ॥ ೨೪ ॥

ಗುಣಗಳ ಫಲವಾಗಿಯೇ ದೊರೆಯುತ್ತವೆ. ಅವುಗಳನ್ನು ಬಯಸುವ ಜೀವಿಗಳು ಯಾವ-ಯಾವ ಯೋನಿಯನ್ನು ಪಡೆಯಲಿಕ್ಕಾಗಿ ಯಾವ-ಯಾವ ಪ್ರಕಾರದಿಂದ ಯಾವ-ಯಾವ ಕರ್ಮಗಳನ್ನು ಸ್ವೀಕರಿಸುತ್ತಾರೆ ? ॥ ೧೪ ॥ ಪೃಥ್ವಿ, ಪಾತಾಳ, ದಿಕ್ಕುಗಳು, ಆಕಾಶ, ಗ್ರಹ, ನಕ್ಷತ್ರ, ಪರ್ವತ, ನದೀ, ಸಮುದ್ರ, ದ್ವೀಪಗಳು ಮತ್ತು ಅವುಗಳಲ್ಲಿ ವಾಸಿಸುವ ಜೀವರ ಉತ್ಪತ್ತಿಯು ಹೇಗಾಗುತ್ತದೆ ? ॥ ೧೫ ॥ ಬ್ರಹ್ಮಾಂಡದ ಪರಿಮಾಣವೇನು ? ಅದರ ಒಳಗಿನ-ಹೊರಗಿನ ಪರಿಮಾಣವೆಷ್ಟು ? ಜೊತೆಗೆ ಮಹಾಪುರುಷರ ಚರಿತ್ರೆ, ವರ್ಣಾಶ್ರಮಗಳ ಭೇದಗಳೂ ಮತ್ತು ಅವುಗಳ ಧರ್ಮವನ್ನು ನಿರೂಪಣೆ ಮಾಡಿರಿ. ॥ ೧೬ ॥ ಯುಗಗಳ ಭೇದ, ಅವುಗಳ ಪರಿಮಾಣ, ಅವುಗಳ ಬೇರೆ-ಬೇರೆ ಧರ್ಮಗಳು, ಹಾಗೂ ಭಗವಂತನ ನಾನಾ ಅವತಾರಗಳ ಪರಮಾಶ್ಚರ್ಯಮಯ ಚರಿತ್ರೆಗಳನ್ನು ಹೇಳಿರಿ. ॥ ೧೭ ॥ ಮನುಷ್ಯರ ಸಾಧಾರಣ ಮತ್ತು ವಿಶೇಷ ಧರ್ಮಗಳು ಯಾವು-ಯಾವುವು ? ಬೇರೆ-ಬೇರೆ ವ್ಯವಸಾಯವುಳ್ಳ ಜನರ, ರಾಜರ್ಷಿಗಳ ಮತ್ತು ವಿಪತ್ತುಗಳಿಗೆ ಸಿಲುಕಿದ ಜನರ ಧರ್ಮಗಳನ್ನೂ ಉಪದೇಶಿಸಿರಿ. ॥ ೧೮ ॥ ತತ್ತ್ವಗಳ ಸಂಖ್ಯೆ ಎಷ್ಟು? ಅವುಗಳ ಸ್ವರೂಪ ಹಾಗೂ ಲಕ್ಷಣಗಳಾವುವು? ಭಗವಂತನ ಆರಾಧನೆಯ ಮತ್ತು ಆಧ್ಯಾತ್ಮಯೋಗದ ವಿಧಾನವೇನು ? ॥ ೧೯ ॥ ಯೋಗೇಶ್ವರರಿಗೆ ಯಾವ-ಯಾವ ಸಿದ್ಧಿಗಳು ದೊರಕುತ್ತವೆ ? ಅವರಿಗೆ ಕಡೆಯಲ್ಲಿ ಯಾವ ಗತಿ ಸಿಗುತ್ತದೆ? ಯೋಗಿಗಳ ಲಿಂಗ ಶರೀರಗಳ ಭಂಗ ಹೇಗೆ ಆಗುತ್ತದೆ? ವೇದ, ಉಪವೇದ, ಧರ್ಮಶಾಸ್ತ್ರ, ಇತಿಹಾಸ ಮತ್ತು ಪುರಾಣಗಳ ಸ್ವರೂಪ ಹಾಗೂ ತಾತ್ಪರ್ಯವೇನು ? ॥ ೨೦ ॥ ಸಮಸ್ತ ಪ್ರಾಣಿಗಳ ಉತ್ಪತ್ತಿ, ಸ್ಥಿತಿ, ಪ್ರಳಯ ಹೇಗಾಗುತ್ತದೆ ? ಯಜ್ಞಯಾಗಾದಿ ವೈದಿಕ ಇಷ್ಟಕರ್ಮಗಳೂ, ಬಾವಿ ತೋಡಿಸುವುದೇ ಮುಂತಾದ ಪೂರ್ತಕರ್ಮಗಳೂ, ಕಾಮ್ಯಕರ್ಮಗಳೂ ಹಾಗೂ ಧರ್ಮ, ಅರ್ಥ, ಕಾಮ ಇವುಗಳನ್ನು ಸಾಧಿಸುವ ವಿಧಿಯೇನು ? ॥ ೨೧ ॥ ಪ್ರಳಯ ಕಾಲದ ಪ್ರಕೃತಿಯಲ್ಲಿ ಲೀನವಾಗಿದ್ದ ಜೀವರ ಉತ್ಪತ್ತಿ ಹೇಗಾಗುತ್ತದೆ ? ಪಾಷಂಡದ ಉತ್ಪತ್ತಿ ಹೇಗಾಗುತ್ತದೆ ? ಆತ್ಮನ ಬಂಧ-ಮೋಕ್ಷಗಳ ಸ್ವರೂಪವೇನು ? ಅವನು ತನ್ನ ಸ್ವರೂಪದಲ್ಲಿ ಹೇಗೆ ನೆಲೆಗೊಳ್ಳುವನು ? ॥ ೨೨ ॥ ಭಗವಂತನಾದರೋ ಪರಮ ಸ್ವತಂತ್ರನಾಗಿದ್ದಾನೆ. ಅವನು ತನ್ನ ಮಾಯೆಯೊಡನೆ ಹೇಗೆ ಕ್ರೀಡಿಸುತ್ತಾನೆ ಮತ್ತು ಅದನ್ನು ಬಿಟ್ಟು ಸಾಕ್ಷಿಯಂತೆ ಉದಾಸೀನ ಹೇಗಾಗುತ್ತಾನೆ ? ॥ ೨೩ ॥ ಪೂಜ್ಯರಾದ ಮಹಾಮುನಿಗಳೇ ! ಶರಣಾಗತನಾಗಿರುವ ನಾನು ತಮ್ಮಲ್ಲಿ ಅರಿಕೆಮಾಡಿಕೊಂಡಿರುವ ಈ ಎಲ್ಲ ಪ್ರಶ್ನೆಗಳಿಗೂ ಕ್ರಮವಾಗಿ ಉತ್ತರಿಸುವ ಕೃಪೆಮಾಡಬೇಕು. ತಾತ್ತ್ವಿಕವಾಗಿ ಅವುಗಳನ್ನು ನಿರೂಪಣೆ ಮಾಡಿರಿ. ॥ ೨೪ ॥ ಈ ವಿಷಯದಲ್ಲಿ ತಾವಾದರೋ ಸ್ವಯಂಭುವಾದ ಬ್ರಹ್ಮದೇವರಂತೆ ಪರಮಪ್ರಮಾಣರಾಗಿರುವಿರಿ. ಇತರರು ತಮ್ಮ ಪೂರ್ವಪರಂಪರೆಯಿಂದ ಕೇಳಿ ಬಂದಂತೆ

ಅತ್ರ ಪ್ರಮಾಣಂ ಹಿ ಭವಾನ್ಪರಮೇಷ್ಠೀ ಯಥಾಽಽತ್ಮಭೂಃ ।
ಅಪರೇ ಚಾನುತಿಷ್ಠಂತಿ ಪೂರ್ವೇಷಾಂ ಪೂರ್ವಜೈಃ ಕೃತಮ್ ॥ ೨೫ ॥

ನ ಮೇಽಸವಃ ಪರಾಯಂತಿ ಬ್ರಹ್ಮನ್ನನಶನಾದಮೀ ।
ಪಿಬತೋಽಚ್ಯುತಪೀಯೂಷಮನ್ಯತ್ರ ಕುಪಿತಾದ್ದ್ವಿಜಾತ್ ॥ ೨೬ ॥

ಸೂತ ಉವಾಚ

ಸ ಉಪಾಮಂತ್ರಿತೋ ರಾಜ್ಞಾ ಕಥಾಯಾಮಿತಿ ಸತ್ಪತೇಃ ।
ಬ್ರಹ್ಮರಾತೋ ಭೃಶಂ ಪ್ರೀತೋ ವಿಷ್ಣುರಾತೇನ ಸಂಸದಿ ॥ ೨೭ ॥

ಪ್ರಾಹ ಭಾಗವತಂ ನಾಮ ಪುರಾಣಂ ಬ್ರಹ್ಮಸಮ್ಮಿತಮ್ ।
ಬ್ರಹ್ಮಣೇ ಭಗವತ್ಪ್ರೋಕ್ತಂ ಬ್ರಹ್ಮಕಲ್ಪ ಉಪಾಗತೇ ॥ ೨೮ ॥

ಯದ್ಯತ್ಪರೀಕ್ಷಿದೃಷಭಃ ಪಾಂಡೂನಾಮನುಪೃಚ್ಛತಿ ।
ಆನುಪೂರ್ವ್ಯೇಣ ತತ್ಸರ್ವಮಾಖ್ಯಾತುಮುಪಚಕ್ರಮೇ ॥ ೨೯ ॥

ಅನುಷ್ಠಾನ ಮಾಡುವರು. ॥ ೨೫ ॥ ಪರಮ ಪೂಜ್ಯರೇ! ನನ್ನ ಹಸಿವು-ಬಾಯಾರಿಕೆಗಳ ಬಗ್ಗೆ ಚಿಂತಿಸದಿರಿ. ಕ್ರುದ್ಧನಾದ ಬ್ರಾಹ್ಮಣನ ಶಾಪವಲ್ಲದೆ ನನ್ನ ಪ್ರಾಣಗಳು ಹೋಗಲಾರವು. ಏಕೆಂದರೆ, ನಾನು ತಮ್ಮ ಮುಖಾರವಿಂದದಿಂದ ಸೂಸುತ್ತಿರುವ ಭಗವಂತನ ಅಮೃತಮಯ ಲೀಲಾಕಥೆಗಳನ್ನು ಪಾನ ಮಾಡುತ್ತಿದ್ದೇನೆ. ॥ ೨೬ ॥

ಸೂತಪುರಾಣಿಕರು ಹೇಳುತ್ತಾರೆ – ಶೌನಕಾದಿ ಋಷಿಗಳೇ! ವಿಷ್ಣುರಾತ ಪರೀಕ್ಷಿದ್ರಾಜನು ಸಂತ-ಸತ್ಪುರುಷರ ಸಭೆಯಲ್ಲಿ ಭಗವಂತನ ಲೀಲಾಕಥೆಯನ್ನು ಕೇಳಲು ಹೀಗೆ ಪ್ರಾರ್ಥಿಸಿದಾಗ, ಬ್ರಹ್ಮರಾತ ಶ್ರೀಶುಕಮಹಾಮುನಿಗಳಿಗೆ ಬಹಳ ಸಂತೋಷವಾಯಿತು. ॥ ೨೭ ॥ ಅವರು ಅವನಿಗೆ ಬ್ರಹ್ಮಕಲ್ಪದ ಪ್ರಾರಂಭದಲ್ಲಿ ಸ್ವಯಂ ಭಗವಂತನೇ ಬ್ರಹ್ಮದೇವರಿಗೆ ಕರುಣಿಸಿದ್ದ ವೇದತುಲ್ಯವಾದ ಶ್ರೀಮದ್ಭಾಗವತಮಹಾಪುರಾಣವನ್ನು ಹೇಳಿದರು. ॥ ೨೮ ॥

ಪಾಂಡವಕುಲತಿಲಕನಾದ ಪರೀಕ್ಷಿತನು ಯಾವ-ಯಾವ ಪ್ರಶ್ನೆಗಳನ್ನು ತಮ್ಮ ಮುಂದೆ ಇಟ್ಟಿದ್ದನೋ ಅವೆಲ್ಲವುಗಳಿಗೆ ಶ್ರೀಶುಕಮುನಿಗಳು ಕ್ರಮವಾಗಿ ಉತ್ತರಿಸತೊಡಗಿದರು. ॥ ೨೯ ॥

ಎಂಟನೆಯ ಅಧ್ಯಾಯವು ಮುಗಿಯಿತು. ॥ ೮ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದ್ವಿತೀಯಸ್ಕಂಧೇ
ಪ್ರಶ್ನವಿಧಿರ್ನಾಮಾಷ್ಟಮೋಽಧ್ಯಾಯಃ ॥ ೮ ॥

ಒಂಬತ್ತನೆಯ ಅಧ್ಯಾಯ

ಬ್ರಹ್ಮದೇವರು ಭಗವದ್ಧಾಮವನ್ನು ದರ್ಶಿಸಿದುದು, ಅವರಿಗೆ ಭಗವಂತನಿಂದ ಚತುಃಶ್ಲೋಕೀ ಭಾಗವತದ ಉಪದೇಶ

ಶ್ರೀಶುಕ ಉವಾಚ

ಆತ್ಮಮಾಯಾಮೃತೇ ರಾಜನ್ ಪರಸ್ಯಾನುಭವಾತ್ಮನಃ ।
ನ ಘಟೇತಾರ್ಥಸಂಬಂಧಃ ಸ್ವಪ್ನದ್ರಷ್ಟುರಿವಾಂಜಸಾ ॥ ೧ ॥

ಬಹುರೂಪ ಇವಾಭಾತಿ ಮಾಯಯಾ ಬಹುರೂಪಯಾ ।
ರಮಮಾಣೋ ಗುಣೇಷ್ವಸ್ಯಾ ಮಮಾಹಮಿತಿ ಮನ್ಯತೇ ॥ ೨ ॥

ಯರ್ಹಿ ವಾವ ಮಹಿಮ್ನಿ ಸ್ವೇ ಪರಸ್ಮಿನ್ಕಾಲಮಾಯಯೋಃ ।
ರಮೇತ ಗತಸಮ್ಮೋಹಸ್ತ್ಯಕ್ತ್ವೋದಾಸ್ತೇ ತದೋಭಯಮ್ ॥ ೩ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ರಾಜೇಂದ್ರ! ಸ್ವಪ್ನದಲ್ಲಿ ನೋಡಲಾಗುವ ಪದಾರ್ಥಗಳೊಂದಿಗೆ ಅದನ್ನು ನೋಡುವವನಿಗೆ ಯಾವ ಸಂಬಂಧವೂ ಇರುವುದಿಲ್ಲ, ಹಾಗೆಯೇ ದೇಹಾತೀತನಾಗಿ ಅನುಭವಸ್ವರೂಪನಾದ ಆತ್ಮನಿಗೆ ದೃಶ್ಯ ಪದಾರ್ಥಗಳೊಡನೆ ಯಾವ ಸಂಬಂಧವೂ ಇರುವುದಿಲ್ಲ. ಮಾಯೆಯ ಕಾರಣದಿಂದಲೇ ಸಂಬಂಧವಿರುವಂತೆ ಅನಿಸುತ್ತದೆ. ॥ ೧ ॥ ಮಾಯೆಯು ಬಹುರೂಪವುಳ್ಳದ್ದು, ಅದರಿಂದ ಆತ್ಮನು ವಿವಿಧ ರೂಪಗಳುಳ್ಳವನಂತೆ ಕಂಡುಬರುತ್ತಾನೆ. ಮಾಯಾ ಗುಣಗಳಲ್ಲಿ ರಮಿಸತೊಡಗಿದಾಗ 'ಇದು ನಾನು, ಇದು ನನ್ನದು' ಹೀಗೆ ತಿಳಿಯತೊಡಗುತ್ತಾನೆ. ॥ ೨ ॥ ವಾಸ್ತವವಾಗಿ ಜೀವಿಯ ಸ್ವರೂಪವು ನಿರ್ಗುಣ-ನಿರಾಕಾರವಾಗಿದೆ. (ಸ್ಫಟಿಕ ಮಣಿಯು ಪೂರ್ಣ ಶುಭ್ರವಾಗಿದ್ದು, ಅದರ ಬಳಿಯಲ್ಲಿ ಇಟ್ಟ ವಸ್ತುವಿನ ಬಣ್ಣ ಅದರಲ್ಲಿ ಕಂಡುಬರುತ್ತದೆ. ಹಾಗೆಯೇ ಜೀವನು ತನ್ನ ಮಹಿಮೆಯಲ್ಲಿ

ಆತ್ಮತತ್ತ್ವವಿಶುದ್ಧ್ಯರ್ಥಂ ಯದಾಹ ಭಗವಾನೃತಮ್ ।
ಬ್ರಹ್ಮಣೇ ದರ್ಶಯನ್ ರೂಪಮವ್ಯಲೀಕವ್ರತಾದೃತಃ ॥ ೪ ॥

ಸ ಆದಿದೇವೋ ಜಗತಾಂ ಪರೋ ಗುರುಃ
ಸ್ವಧಿಷ್ಣ್ಯಮಾಸ್ಥಾಯ ಸಿಸೃಕ್ಷಯೈಕ್ಷತ ।
ತಾಂ ನಾಧ್ಯಗಚ್ಛದ್ದೃಶಮತ್ರಸಮ್ಮತಾಂ
ಪ್ರಪಂಚನಿರ್ಮಾಣವಿಧಿರ್ಯಯಾ ಭವೇತ್ ॥ ೫ ॥

ಸ ಚಿಂತಯನ್ ದ್ವ್ಯಕ್ಷರಮೇಕದಾಂಭ-
ಸ್ಯುಪಾಶೃಣೋದ್ದ್ವಿರ್ಗದಿತಂ ವಚೋ ವಿಭುಃ ।
ಸ್ಪರ್ಶೇಷು ಯತ್ ಷೋಡಶಮೇಕವಿಂಶಂ
ನಿಷ್ಕಿಂಚನಾನಾಂ ನೃಪ ಯದ್ಧನಂ ವಿದುಃ ॥ ೬ ॥

ನಿಶಮ್ಯ ತದ್ವಕ್ತೃದಿದೃಕ್ಷಯಾ ದಿಶೋ
ವಿಲೋಕ್ಯ ತತ್ರಾನ್ಯದಪಶ್ಯಮಾನಃ ।
ಸ್ವಧಿಷ್ಣ್ಯಮಾಸ್ಥಾಯ ವಿಮೃಶ್ಯ ತದ್ಧಿತಂ
ತಪಸ್ಯುಪಾದಿಷ್ಟ ಇವಾದಧೇ ಮನಃ ॥ ೭ ॥

ದಿವ್ಯಂ ಸಹಸ್ರಾಬ್ದಮಮೋಘದರ್ಶನೋ
ಜಿತಾನಿಲಾತ್ಮಾ ವಿಜಿತೋಭಯೇಂದ್ರಿಯಃ ।
ಅತಪ್ಯತ ಸ್ಮಾಖಿಲಲೋಕತಾಪನಂ
ತಪಸ್ತಪೀಯಾಂಸ್ತಪತಾಂ ಸಮಾಹಿತಃ ॥ ೮ ॥

ತಸ್ಮೈ ಸ್ವಲೋಕಂ ಭಗವಾನ್ ಸಭಾಜಿತಃ
ಸಂದರ್ಶಯಾಮಾಸ ಪರಂ ನ ಯತ್ಪರಮ್ ।
ವ್ಯಪೇತಸಂಕ್ಲೇಶವಿಮೋಹಸಾಧ್ವಸಂ
ಸ್ವದೃಷ್ಟವದ್ಭಿರ್ಪುರುಷೈರಭಿಷ್ಟುತಮ್ ॥ ೯ ॥

ಸ್ಥಿತನಾಗಿದ್ದಾಗ ಅವನ ಮೇಲೆ ಕಾಲ ಮತ್ತು ಮಾಯೆಯ ಪ್ರಭಾವ ಬೀಳುವುದಿಲ್ಲ) ಮೋಹವನ್ನು ತ್ಯಜಿಸಿ 'ನಾನು-ನನ್ನದು' ಇವೆರಡನ್ನೂ ಬಿಟ್ಟುಬಿಡುತ್ತಾನೆ. ಪೂರ್ಣವಾಗಿ ಉದಾಸೀನನಾಗುತ್ತಾನೆ. ಆಗ ಅವನು ತನ್ನ ಆತ್ಮನಲ್ಲೇ ರಮಮಾಣನಾಗುತ್ತಾನೆ. ॥ ೩ ॥ ಆತ್ಮತತ್ತ್ವದ ಜ್ಞಾನಕ್ಕಾಗಿ ಬ್ರಹ್ಮದೇವರು ನಿಷ್ಕಪಟವಾದ ತಪಸ್ಸನ್ನಾಚರಿಸಿದಾಗ ಪ್ರಸನ್ನನಾದ ಭಗವಂತನು ಆತನಿಗೆ ತನ್ನ ಸ್ವರೂಪದ ದರ್ಶನಮಾಡಿಸಿ, ಆತ್ಮತತ್ತ್ವದ ಜ್ಞಾನಕ್ಕಾಗಿ ಅವರಿಗೆ ಪರಮ ಸತ್ಯವನ್ನು ಉಪದೇಶಮಾಡಿದನು. ಅಯ್ಯಾ! ಅದನ್ನು ನಾನು ನಿನಗೆ ಹೇಳುತ್ತೇನೆ. ॥ ೪ ॥

ಮೂರೂ ಲೋಕಗಳ ಪರಮಗುರುಗಳಾದ ಆದಿದೇವ ಬ್ರಹ್ಮದೇವರು ತಮ್ಮ ಜನ್ಮಸ್ಥಾನವಾದ ಕಮಲದ ಮೇಲೆ ಕುಳಿತುಕೊಂಡು ಸೃಷ್ಟಿಮಾಡಬೇಕೆಂಬ ಇಚ್ಛೆಯಿಂದ ವಿಚಾರ ಮಾಡತೊಡಗಿದರು. ಆದರೆ ಸೃಷ್ಟಿಯನ್ನು ಮಾಡುವುದಕ್ಕೆ ಬೇಕಾದ ದೃಷ್ಟಿಯಾಗಲೀ, ವಿಧಾನವಾಗಲೀ ಅವರಿಗೆ ದೊರಕಲಿಲ್ಲ. ॥ ೫ ॥ ಪರೀಕ್ಷಿತನೇ! ಒಂದು ದಿನ ಅವರು ಹೀಗೆ ಚಿಂತಿಸುತ್ತಿರುವಾಗ ಪ್ರಳಯಸಮುದ್ರದಿಂದ ಎರಡು ಅಕ್ಷರಗಳು ಎರಡು ಬಾರಿ ಕೇಳಿಬಂತು. ಅದು ವ್ಯಂಜನಗಳಲ್ಲಿರುವ ಹದಿನಾರನೆಯ ಮತ್ತು ಇಪ್ಪತ್ತೊಂದನೆಯ ವರ್ಣಗಳ ಸೇರುವಿಕೆಯಿಂದಾದ 'ತಪ' ಎಂಬುದು. ಈ ತಪಸ್ಸೇ ತ್ಯಾಗಿಗಳ ಧನವೆಂದು ಮಹಾತ್ಮರು ಹೇಳುತ್ತಾರೆ. ॥ ೬ ॥ ಆ ಪದವನ್ನು ಕೇಳಿದ ಬ್ರಹ್ಮದೇವರು ಇದನ್ನು ಯಾರು ಹೇಳಿದರು? ಎಂದು ಸುತ್ತಲೂ ನೋಡಿದರು. ಆದರೆ ಯಾರೂ ಬೇರೂ ಕಾಣಲಿಲ್ಲ. ಆಗ ಅವರು ತಮ್ಮ ಕಮಲಾಸನದಲ್ಲಿ ಕುಳಿತು – 'ಹೇಗೂ ನನಗೆ ತಪಸ್ಸು ಮಾಡಬೇಕೆಂಬ ಆಜ್ಞೆಯು ನೇರವಾಗಿ ಬಂದಿದೆ. ಅದನ್ನು ಮಾಡುವುದೇ ಹಿತವೆಂದು ನಿಶ್ಚಯಿಸಿ ಮನಸ್ಸನ್ನು ತಪಸ್ಸಿನಲ್ಲಿ ತೊಡಗಿಸಿದರು. ॥ ೭ ॥ ಬ್ರಹ್ಮದೇವರು ಎಲ್ಲ ತಪಸ್ವಿಗಳಲ್ಲಿಯೂ ದೊಡ್ಡ ತಪಸ್ವಿಗಳಾಗಿದ್ದಾರೆ. ಅವರ ಜ್ಞಾನವು ಅಮೋಘವಾಗಿದೆ. ಅವರು ಆಗ ಒಂದು ಸಾವಿರ ದಿವ್ಯವರ್ಷಗಳವರೆಗೆ ಏಕಾಗ್ರವಾದ ಚಿತ್ತದಿಂದ ತಮ್ಮ ಪ್ರಾಣ, ಮನಸ್ಸು, ಕರ್ಮೇಂದ್ರಿಯ, ಜ್ಞಾನೇಂದ್ರಿಯಗಳನ್ನು ವಶಪಡಿಸಿಕೊಂಡು – ಸಮಸ್ತ ಲೋಕಗಳನ್ನು ಪ್ರಕಾಶಗೊಳಿಸುವ ಸಾಮರ್ಥ್ಯವನ್ನು ಪಡೆಯುವ ಅದ್ಭುತವಾದ ತಪಸ್ಸನ್ನು ಆಚರಿಸಿದರು. ॥ ೮ ॥

ಅವರ ತಪಸ್ಸಿನಿಂದ ಪ್ರಸನ್ನನಾದ ಶ್ರೀಭಗವಂತನು ಅವರಿಗೆ ಎಲ್ಲಕ್ಕಿಂತ ಶ್ರೇಷ್ಠವೂ, ಅದಕ್ಕಿಂತ ಮಿಗಿಲಾಗಿ ಇನ್ನೊಂದು ಇಲ್ಲದಿರುವ ತನ್ನ ಸರ್ವಶ್ರೇಷ್ಠವಾದ ಲೋಕವನ್ನು ತೋರಿದನು. ಆ ಲೋಕದಲ್ಲಿ ಯಾವುದೇ ರೀತಿಯ ಕ್ಲೇಶ, ಮೋಹ, ಭಯ ಇವುಗಳಿಲ್ಲ. ಅದರ ಸಂದರ್ಶನದ ಸೌಭಾಗ್ಯ ಎಂದಾದರೂ ಒಂದು ಬಾರಿ ದೊರೆತರೂ ದೇವತೆಗಳು ಅದನ್ನು ಪದೇ-ಪದೇ ಸ್ತುತಿಸುತ್ತಾರೆ. ॥ ೯ ॥ ಅಲ್ಲಿ ರಜೋಗುಣ, ತಮೋಗುಣ ಮತ್ತು ಇವುಗಳಿಂದ ಮಿಶ್ರವಾದ ಸತ್ತ್ವಗುಣವೂ ಇಲ್ಲ. ಅಲ್ಲಿ ಕಾಲದ ಬೇಳೆ ಬೇಯುವುದಿಲ್ಲ. ಮಾಯೆಯು ಹೆಜ್ಜೆಯಿಡುವುದಿಲ್ಲ. ಹಾಗಿರುವಾಗ ಮಾಯೆಯ

ಪ್ರವರ್ತತೇ ಯತ್ರ ರಜಸ್ತಮಸ್ತಯೋಃ
ಸತ್ತ್ವಂ ಚ ಮಿಶ್ರಂ ನ ಚ ಕಾಲವಿಕ್ರಮಃ ।
ನ ಯತ್ರ ಮಾಯಾ ಕಿಮುತಾಪರೇ ಹರೇ-
ರನುವ್ರತಾ ಯತ್ರ ಸುರಾಸುರಾರ್ಚಿತಾಃ ॥ ೧೦ ॥

ಶ್ಯಾಮಾವದಾತಾಃ ಶತಪತ್ರಲೋಚನಾಃ
ಪಿಶಂಗವಸ್ತ್ರಾಃ ಸುರುಚಃ ಸುಪೇಶಸಃ ।
ಸರ್ವೇ ಚತುರ್ಬಾಹವ ಉನ್ಮಿಷನ್ಮಣಿ-
ಪ್ರವೇಕನಿಷ್ಕಾಭರಣಾಃ ಸುವರ್ಚಸಃ ।
ಪ್ರವಾಲವೈದೂರ್ಯಮೃಣಾಲವರ್ಚಸಃ
ಪರಿಸ್ಫುರತ್ಕುಂಡಲಮೌಲಿಮಾಲಿನಃ ॥ ೧೧ ॥

ಭ್ರಾಜಿಷ್ಣುಭಿರ್ಯಃ ಪರಿತೋ ವಿರಾಜತೇ
ಲಸದ್ವಿಮಾನಾವಲಿಭಿರ್ಮಹಾತ್ಮನಾಮ್ ।
ವಿದ್ಯೋತಮಾನಃ ಪ್ರಮದೋತ್ತಮಾದ್ಯುಭಿಃ
ಸವಿದ್ಯುದಭ್ರಾವಲಿಭಿರ್ಯಥಾ ನಭಃ ॥ ೧೨ ॥

ಶ್ರೀರ್ಯತ್ರ ರೂಪಿಣ್ಯುರುಗಾಯಪಾದಯೋಃ
ಕರೋತಿ ಮಾನಂ ಬಹುಧಾ ವಿಭೂತಿಭಿಃ ।
ಪ್ರೇಂಖಂ ಶ್ರಿತಾ ಯಾ ಕುಸುಮಾಕರಾನುಗೈ-
ರ್ವಿಗೀಯಮಾನಾ ಪ್ರಿಯಕರ್ಮ ಗಾಯತೀ ॥ ೧೩ ॥

ದದರ್ಶ ತತ್ರಾಖಿಲಸಾತ್ವತಾಂ ಪತಿಂ
ಶ್ರಿಯಃ ಪತಿಂ ಯಜ್ಞಪತಿಂ ಜಗತ್ಪತಿಮ್ ।
ಸುನಂದನಂದಪ್ರಬಲಾರ್ಹಣಾದಿಭಿಃ
ಸ್ವಪಾರ್ಷದಮುಖ್ಯೈಃ ಪರಿಸೇವಿತಂ ವಿಭುಮ್ ॥ ೧೪ ॥

ಭೃತ್ಯಪ್ರಸಾದಾಭಿಮುಖಂ ದೃಗಾಸವಂ
ಪ್ರಸನ್ನಹಾಸಾರುಣಲೋಚನಾನನಮ್ ।
ಕಿರೀಟಿನಂ ಕುಂಡಲಿನಂ ಚತುರ್ಭುಜಂ
ಪೀತಾಂಬರಂ ವಕ್ಷಸಿ ಲಕ್ಷಿತಂ ಶ್ರಿಯಾ ॥ ೧೫ ॥

ಸಂತಾನಗಳು ಹೇಗೆ ಪ್ರವೇಶಿಸಿಯಾವು? ಅಲ್ಲಿ ದೇವತೆಗಳಿಂದಲೂ, ದೈತ್ಯರಿಂದಲೂ ಆರಾಧಿಸಲ್ಪಡುತ್ತಿರುವ ಭಗವಂತನ ಪಾರ್ಷದರು ವಾಸಿಸುತ್ತಾರೆ. ॥ ೧೦ ॥ ಅವರ ಶರೀರಗಳು ಉಜ್ಜ್ವಲವಾದ ಕಾಂತಿಯಿಂದೊಡಗೂಡಿ ಶ್ಯಾಮಲವರ್ಣದಿಂದಲೂ, ಕಮಲದಂತೆ ಕೋಮಲವಾದ ಕಣ್ಣುಗಳಿಂದಲೂ, ಪೀತಾಂಬರದಿಂದಲೂ ಶೋಭಿಸುತ್ತಿವೆ. ಅವರ ಒಂದೊಂದು ಅಂಗದಿಂದಲೂ ಸೌಂದರ್ಯಾಮೃತವು ಹೊರಸೂಸುತ್ತಿದೆ. ಅವರು ಕೋಮಲ ಮೂರ್ತಿಗಳಾಗಿದ್ದು ಎಲ್ಲರಿಗೂ ಚತುರ್ಭುಜಗಳಿವೆ. ಅವರು ಮಹಾ ತೇಜಸ್ವಿಗಳಾಗಿದ್ದು ರತ್ನಖಚಿತವಾದ ಚಿನ್ನದ ಪ್ರಭೆಯಿಂದ ಹೊಳೆಯುವ ಭೂಷಣಗಳನ್ನು ಧರಿಸಿದ್ದಾರೆ. ಹವಳ, ವೈಡೂರ್ಯಮಣಿ ಮತ್ತು ಕಮಲದ ಉಜ್ಜ್ವಲವಾದ ತಂತುವಿಗೆ ಸಮಾನವಾದ ಕಾಂತಿಯಿಂದ ಥಳ-ಥಳಿಸುತ್ತಿದ್ದಾರೆ. ಅವರ ಕಿವಿಗಳಲ್ಲಿ ಕುಂಡಲಗಳೂ, ಶಿರಸ್ಸಿನಲ್ಲಿ ಕಿರೀಟವೂ, ಕಂಠದಲ್ಲಿ ದಿವ್ಯಮಾಲೆಗಳೂ ರಾರಾಜಿಸುತ್ತಿವೆ. ॥ ೧೧ ॥ ಮಿಂಚಿನಿಂದ ಕೂಡಿದ ಮೋಡಗಳಿಂದ ಶೋಭಿಸುವ ಆಕಾಶದಂತೆಯೇ ಆ ಲೋಕವು ಕಮನೀಯ ಕಾಮಿನಿಯರ ಕಾಂತಿಯಿಂದ ಕೂಡಿದ, ಮಹಾತ್ಮರ ದಿವ್ಯ ತೇಜೋಮಯ ವಿಮಾನಗಳಿಂದ ಎಲ್ಲ ಕಡೆಗಳಲ್ಲಿಯೂ ಶೋಭಾಯಮಾನವಾಗಿದೆ. ॥ ೧೨ ॥ ಆ ವೈಕುಂಠಲೋಕದಲ್ಲಿ ದಿವ್ಯ, ರೂಪ-ಲಾವಣ್ಯ ಸಂಪನ್ನೆಯಾದ ಮಹಾಲಕ್ಷ್ಮಿಯು ತನ್ನ ಬಗೆ-ಬಗೆಯ ವಿಭೂತಿಗಳ ಮೂಲಕ ಭಗವಂತನ ಶ್ರೀಚರಣಕಮಲಗಳನ್ನು ನಾನಾ ಪ್ರಕಾರದಿಂದ ಸೇವೆ ಮಾಡುತ್ತಾ ಇದ್ದಾಳೆ. ಕೆಲವೊಮ್ಮೆ ಅವಳು ಉಯ್ಯಾಲೆಯ ಮೇಲೆ ಕುಳಿತು ತನ್ನ ಪ್ರಿಯತಮನಾದ ಭಗವಂತನ ಲೀಲೆಗಳನ್ನು ಗಾಯನ ಮಾಡತೊಡಗುವಳು. ಆಗ ಆಕೆಯ ಸೌಂದರ್ಯ-ಸುವಾಸನೆಗಳಿಂದ ಉನ್ಮತ್ತರಾದ ಭ್ರಮರಗಳಾದ ದುಂಬಿಗಳೂ ಕೂಡ ಶ್ರೀಲಕ್ಷ್ಮೀದೇವಿಯ ಗುಣಗಳನ್ನು ಗಾನ ಮಾಡತೊಡಗುತ್ತವೆ. ॥ ೧೩ ॥

ಆ ದಿವ್ಯಲೋಕದಲ್ಲಿ ಸಮಸ್ತಭಕ್ತರ ಸಂರಕ್ಷಕನೂ, ಲಕ್ಷ್ಮೀಪತಿಯೂ, ಯಜ್ಞಪತಿಯೂ, ವಿಶ್ವಪತಿಯೂ ಆದ ಭಗವಂತನು ವಿರಾಜಿಸುತ್ತಿರುವುದನ್ನು ಬ್ರಹ್ಮದೇವರು ನೋಡಿದರು. ನಂದ, ಸುನಂದ, ಪ್ರಬಲ, ಅರ್ಹಣ ಮುಂತಾದ ಪಾರ್ಷದ ಮುಖ್ಯರು ಆ ಪ್ರಭುವನ್ನು ಸೇವಿಸುತ್ತಿದ್ದರು. ॥ ೧೪ ॥ ಮಹಾಪ್ರಭುವಿನ ಮುಖಕಮಲವು ಭಕ್ತರಿಗೆ ಅನುಗ್ರಹತೋರುವ ಮಧುರವಾದ ಮುಗುಳ್ನಗೆಯಿಂದ ರಮಣೀಯವಾಗಿದೆ. ಕಣ್ಣುಗಳಲ್ಲಿ ಸುಂದರವಾದ ಕೆಂಪು ಬಣ್ಣದ ಕಾಂತಿ, ಕಡುಮೋಹಕವಾದ, ಮಧುರವಾದ ಕಡೆಗಣ್ಣ ನೋಟ – ಇವು ಕೂಡಲೇ ಪ್ರೇಮೀ ಭಕ್ತರಿಗೆ ತನ್ನ ಸರ್ವಸ್ವವನ್ನೂ ಕೊಟ್ಟುಬಿಡುತ್ತವೋ ಎಂಬಂತೆ ಕಾಣುತ್ತಿದೆ. ತಲೆಯಲ್ಲಿ ಕಿರೀಟವೂ, ಕಿವಿಗಳಲ್ಲಿ ಕುಂಡಲಗಳೂ, ಮೈಮೇಲೆ ಪೀತಾಂಬರವೂ ಹೊಳೆಯುತ್ತಿದೆ. ವಕ್ಷಸ್ಥಳದಲ್ಲಿ ಒಂದು ಸ್ವರ್ಣರೇಖೆಯಂತೆ ಶ್ರೀಲಕ್ಷ್ಮೀದೇವಿಯು ವಿರಾಜಿಸುತ್ತಿದ್ದಾಳೆ. ಭಗವಂತನಿಗೆ ಅಂದವಾದ ನಾಲ್ಕು ಭುಜಗಳಿವೆ. ॥ ೧೫ ॥ ಪ್ರಭುವು ಅಮೂಲ್ಯವೂ, ಸರ್ವೋ

ಅಧ್ಯರ್ಹಣೀಯಾಸನಮಾಸ್ಥಿತಂ ಪರಂ
ವೃತಂ ಚತುಃಷೋಡಶಪಂಚ ಶಕ್ತಿಭಿಃ ।
ಯುಕ್ತಂ ಭಗೈಃ ಸ್ವೈರಿತರತ್ರ ಚಾಧ್ರುವೈಃ
ಸ್ವ ಏವ ಧಾಮನ್ ರಮಮಾಣಮೀಶ್ವರಮ್ ॥ ೧೬ ॥

ತದ್ದರ್ಶನಾಹ್ಲಾದಪರಿಪ್ಲುತಾಂತರೋ
ಹೃಷ್ಯತ್ತನುಃ ಪ್ರೇಮಭರಾಶ್ರುಲೋಚನಃ ।
ನನಾಮ ಪಾದಾಂಬುಜಮಸ್ಯ ವಿಶ್ವಸೃಗ್
ಯತ್‌ಪಾರಮಹಂಸ್ಯೇನ ಪಥಾಧಿಗಮ್ಯತೇ ॥ ೧೭ ॥

ತಂ ಪ್ರೀಯಮಾಣಂ ಸಮುಪಸ್ಥಿತಂ ತದಾ
ಪ್ರಜಾವಿಸರ್ಗೇ ನಿಜಶಾಸನಾರ್ಹಣಮ್ ।
ಬಭಾಷ ಈಷತ್ ಸ್ಮಿತಶೋಚಿಷಾ ಗಿರಾ
ಪ್ರಿಯಃ ಪ್ರಿಯಂ ಪ್ರೀತಮನಾಃ ಕರೇ ಸ್ಪೃಶನ್ ॥ ೧೮ ॥

ಶ್ರೀಭಗವಾನುವಾಚ

ತ್ವಯಾಹಂ ತೋಷಿತಃ ಸಮ್ಯಗ್ವೇದಗರ್ಭ ಸಿಸೃಕ್ಷಯಾ ।
ಚಿರಂ ಭೃತೇನ ತಪಸಾ ದುಸ್ತೋಷಃ ಕೂಟಯೋಗಿನಾಮ್ ॥ ೧೯ ॥

ವರಂ ವರಯ ಭದ್ರಂ ತೇ ವರೇಶಂ ಮಾಭಿವಾಂಛಿತಮ್ ।
ಬ್ರಹ್ಮನ್ ಶ್ರೇಯಃ ಪರಿಶ್ರಾಮಃ ಪುಂಸಾಂ ಮದ್ದರ್ಶನಾವಧಿಃ ॥ ೨೦ ॥

ಮನೀಷಿತಾನುಭಾವೋಽಯಂ ಮಮ ಲೋಕಾವಲೋಕನಮ್ ।
ಯದುಪಶ್ರುತ್ಯ ರಹಸಿ ಚಕರ್ಥ ಪರಮಂ ತಪಃ ॥ ೨೧ ॥

ಪ್ರತ್ಯಾದಿಷ್ಟಂ ಮಯಾ ತತ್ರ ತ್ವಯಿ ಕರ್ಮವಿಮೋಹಿತೇ ।
ತಪೋ ಮೇ ಹೃದಯಂ ಸಾಕ್ಷಾದಾತ್ಮಾಹಂ ತಪಸೋಽನಘ ॥ ೨೨ ॥

ಸೃಜಾಮಿ ತಪಸೈವೇದಂ ಗ್ರಸಾಮಿ ತಪಸಾ ಪುನಃ ।
ಬಿಭರ್ಮಿ ತಪಸಾ ವಿಶ್ವಂ ವೀರ್ಯಂ ಮೇ ದುಶ್ಚರಂ ತಪಃ ॥ ೨೩ ॥

ತ್ತಮವೂ ಆದ ಆಸನದಲ್ಲಿ ವಿರಾಜಿಸುತ್ತಿದ್ದಾನೆ. ಪುರುಷ, ಪ್ರಕೃತಿ, ಮಹತ್ತತ್ತ್ವ, ಅಹಂಕಾರ, ಮನಸ್ಸು, ಹತ್ತು ಇಂದ್ರಿಯಗಳು, ಪಂಚ ತನ್ಮಾತ್ರೆಗಳು, ಪಂಚಭೂತಗಳು – ಹೀಗೆ ಇಪ್ಪತ್ತೈದು ಶಕ್ತಿಗಳು ಮೂರ್ತಿಗೊಂಡು ಆತನ ನಾಲ್ಕೂ ಕಡೆಗಳಲ್ಲಿ ನಿಂತುಕೊಂಡಿವೆ. ಸಮಗ್ರವಾದ ಐಶ್ವರ್ಯ, ಧರ್ಮ, ಕೀರ್ತಿ, ಶ್ರೀ, ಜ್ಞಾನ ಮತ್ತು ವೈರಾಗ್ಯ ಎಂಬ ನಿತ್ಯಸಿದ್ಧವಾದ ಸ್ವರೂಪ ಶಕ್ತಿಗಳಿಂದ ಸ್ವಾಮಿಯು ಕೂಡಿಕೊಂಡಿರುತ್ತಾನೆ. ಅವನನ್ನು ಬಿಟ್ಟು ಬೇರೆ ಯಾವುದರಲ್ಲಿಯೂ ಕೂಡ ಅವು ನಿತ್ಯವಾಗಿ ಇರುವುದಿಲ್ಲ. ಸರ್ವೇಶ್ವರನಾದ ಆ ಪ್ರಭುವು ಸದಾಕಾಲ ತನ್ನ ಆನಂದಮಯ ಸ್ವರೂಪದಲ್ಲೇ ನಿರಂತರವಾಗಿ ಮುಳುಗಿರುತ್ತಾನೆ. ॥ ೧೬ ॥ ಆತನನ್ನು ನೋಡಿದೊಡನೆಯೇ ಬ್ರಹ್ಮದೇವರ ಹೃದಯವು ಉಕ್ಕೇರುವ ಆನಂದದಿಂದ ತುಂಬಿಹೋಯಿತು. ದೇಹವು ರೋಮಾಂಚಿತವಾಗಿ, ಕಣ್ಣುಗಳಲ್ಲಿ ಆನಂದಾಶ್ರುಗಳು ಚಿಮ್ಮಿಬಂದವು. ಪರಮಹಂಸರಿಗೆ ನಿವೃತ್ತಿ ಮಾರ್ಗದಿಂದಲೇ ದೊರೆಯುವ ಭಗವಂತನ ಶ್ರೀಪಾದಪದ್ಮಗಳಿಗೆ ಬ್ರಹ್ಮದೇವರು ಮತ್ತೊಮ್ಮೆ ತಲೆಬಾಗಿ ನಮಸ್ಕರಿಸಿದರು. ॥ ೧೭ ॥ ಬ್ರಹ್ಮದೇವರಿಗೆ ಪ್ರಿಯನಾದ ಆ ಭಗವಂತನು ತನ್ನ ಪ್ರಿಯಪುತ್ರನು ಪ್ರಜಾಸೃಷ್ಟಿಮಾಡಲು ತನ್ನ ಶಾಸನವನ್ನು ಸ್ವೀಕರಿಸುವುದಕ್ಕೆ ಯೋಗ್ಯನೆಂದು ತಿಳಿದು, ಅತ್ಯಂತ ಪ್ರಸನ್ನನಾಗಿ ಪ್ರೀತಿತುಂಬಿದ ಮನಸ್ಸಿನಿಂದ ಆತನನ್ನು ಕೈಯಿಂದ ನೇವರಿಸುತ್ತಾ ಮೃದುವಾದ ಮಂದಹಾಸದಿಂದ ಶೋಭಿಸುತ್ತಿರುವ ಮಾತಿನಿಂದ ಹೀಗೆಂದನು – ॥ ೧೮ ॥

ಶ್ರೀಭಗವಂತನು ನುಡಿದನು – ಬ್ರಹ್ಮನೇ! ನಿನ್ನ ಹೃದಯದಲ್ಲಾದರೋ ಸಮಸ್ತ ವೇದಗಳ ಜ್ಞಾನವು ತುಂಬಿದೆ. ನೀನು ಸೃಷ್ಟಿರಚನೆಯ ಇಚ್ಛೆಯಿಂದ ಚಿರಕಾಲ ತಪಸ್ಸುಮಾಡಿ ನನ್ನನ್ನು ಚೆನ್ನಾಗಿ ಸಂತೋಷಪಡಿಸಿರುವೆ. ಮನಸ್ಸಿನಲ್ಲಿ ಕಪಟವನ್ನಿಟ್ಟುಕೊಂಡು ಯೋಗಸಾಧನೆ ಮಾಡುವವರು ಎಂದಿಗೂ ನನ್ನನ್ನು ಪ್ರಸನ್ನಗೊಳಿಸಲಾರರು. ॥ ೧೯ ॥ ಬ್ರಹ್ಮನೇ! ನಿನಗೆ ಮಂಗಳವಾಗಲಿ. ನಿನಗೆ ಇಷ್ಟವಾದ ವರವನ್ನು ಬೇಡಿಕೋ. ಬೇಡಿದ ವಸ್ತುಗಳನ್ನು ಕೊಡುವ ಸಾಮರ್ಥ್ಯ ನನಗಿದೆ. ನನ್ನ ದರ್ಶನವಾಗುವವರೆಗೆ ಮನುಷ್ಯರಿಗೆ ತಪಸ್ಸೇ ಮುಂತಾದ ಸಾಧನೆಗಳ ಪರಿಶ್ರಮವಿರುತ್ತದೆ. ನನ್ನ ದರ್ಶನವಾದಾಗ ಅದೇ ಪರಿಶ್ರಮಗಳ ಫಲವೆಂದು ತಿಳಿ. ಬೇರೆ ಯಾವುದೇ ಪರಿಶ್ರಮಗಳು ಇರುವುದಿಲ್ಲ. ಏಕೆಂದರೆ, ಜೀವರ ಸಮಸ್ತ ಶ್ರೇಯಸ್ಸಿನ ಸಾಧನೆಗಳ ವಿಶ್ರಾಮ-ಪರ್ಯವಸಾನ ನನ್ನ ದರ್ಶನದಲ್ಲೇ ಇದೆ. ॥ ೨೦ ॥ ನೀನು ನನ್ನನ್ನು ನೋಡದೆಯೇ ನನ್ನ ವಾಣಿಯನ್ನು ಕೇಳಿ, ಇಷ್ಟು ತೀವ್ರವಾದ ತಪಸ್ಸನ್ನು ಆಚರಿಸಿದೆ. ಅದರಿಂದಲೇ ನಿನಗೆ ನನ್ನ ಇಚ್ಛೆಯಿಂದ ನನ್ನ ಲೋಕದ ದರ್ಶನವಾಯಿತು. ॥ ೨೧ ॥ ಆಗ ನೀನು ಸೃಷ್ಟಿರಚನೆಯ ಕಾರ್ಯದಲ್ಲಿ ಕಿಂಕರ್ತವ್ಯ ಮೂಢನಾಗಿದ್ದೆ. ಇದರಿಂದಲೇ ನಿನಗೆ ನಾನೇ ತಪಸ್ಸನ್ನಾಚರಿಸಲು ಅಪ್ಪಣೆ ಕೊಟ್ಟಿದ್ದೆ. ಪಾಪರಹಿತನೇ! ತಪಸ್ಸು ನನ್ನ ಹೃದಯವಾಗಿದೆ. ನಾನೇ ತಪಸ್ಸಿನ ಆತ್ಮಾ ಆಗಿದ್ದೇನೆ. ॥ ೨೨ ॥ ನಾನು ತಪಸ್ಸಿನಿಂದಲೇ ಈ ಜಗತ್ತನ್ನು ಸೃಷ್ಟಿಸುತ್ತೇನೆ. ತಪಸ್ಸಿನಿಂದಲೇ ಇದನ್ನು ಧರಿಸಿ–

ಬ್ರಹ್ಮೋವಾಚ

**ಭಗವನ್ ಸರ್ವಭೂತಾನಾಮಧ್ಯಕ್ಷೋಽವಸ್ಥಿತೋ ಗುಹಾಮ್ ।
ವೇದ ಹ್ಯಪ್ರತಿರುದ್ಧೇನ ಪ್ರಜ್ಞಾನೇನ ಚಿಕೀರ್ಷಿತಮ್ ॥ ೨೪ ॥**

**ತಥಾಪಿ ನಾಥಮಾನಸ್ಯ ನಾಥ ನಾಥಯ ನಾಥಿತಮ್ ।
ಪರಾವರೇ ಯಥಾ ರೂಪೇ ಜಾನೀಯಾಂ ತೇ ತ್ವರೂಪಿಣಃ ॥ ೨೫ ॥**

**ಯಥಾಽಽತ್ಮಮಾಯಾಯೋಗೇನ ನಾನಾಶಕ್ತ್ಯುಪಬೃಂಹಿತಮ್ ।
ವಿಲುಂಪನ್ ವಿಸೃಜನ್ ಗೃಹ್ಣನ್ ಬಿಭ್ರದಾತ್ಮಾನಮಾತ್ಮನಾ ॥ ೨೬ ॥**

**ಕ್ರೀಡಸ್ಯಮೋಘಸಂಕಲ್ಪ ಊರ್ಣನಾಭಿರ್ಯಥೋರ್ಣುತೇ ।
ತಥಾ ತದ್ವಿಷಯಾಂ ಧೇಹಿ ಮನೀಷಾಂ ಮಯಿ ಮಾಧವ ॥ ೨೭ ॥**

**ಭಗವಚ್ಛಿಕ್ಷಿತಮಹಂ ಕರವಾಣಿ ಹ್ಯತಂದ್ರಿತಃ ।
ನೇಹಮಾನಃ ಪ್ರಜಾಸರ್ಗಂ ಬಧ್ಯೇಯಂ ಯದನುಗ್ರಹಾತ್ ॥ ೨೮ ॥**

**ಯಾವತ್ಸಖಾ ಸಖ್ಯುರಿವೇಶ ತೇ ಕೃತಃ
ಪ್ರಜಾವಿಸರ್ಗೇ ವಿಭಜಾಮಿ ಭೋ ಜನಮ್ ।
ಅವಿಕ್ಲವಸ್ತೇ ಪರಿಕರ್ಮಣಿ ಸ್ಥಿತೋ
ಮಾ ಮೇ ಸಮುನ್ನದ್ಧ ಮದೋಽಜಮಾನಿನಃ ॥ ೨೯ ॥**

ಶ್ರೀಭಗವಾನುವಾಚ

**ಜ್ಞಾನಂ ಪರಮಗುಹ್ಯಂ ಮೇ ಯದ್ವಿಜ್ಞಾನಸಮನ್ವಿತಮ್ ।
ಸರಹಸ್ಯಂ ತದಂಗಂ ಚ ಗೃಹಾಣ ಗದಿತಂ ಮಯಾ ॥ ೩೦ ॥**

**ಯಾವಾನಹಂ ಯಥಾಭಾವೋ ಯದ್ರೂಪಗುಣಕರ್ಮಕಃ ।
ತಥೈವ ತತ್ತ್ವವಿಜ್ಞಾನಮಸ್ತು ತೇ ಮದನುಗ್ರಹಾತ್ ॥ ೩೧ ॥**

ಪಾಲಿಸುತ್ತೇನೆ. ಮತ್ತೆ ತಪಸ್ಸಿನಿಂದಲೇ ನನ್ನಲ್ಲಿ ಲೀನಗೊಳಿಸಿಕೊಳ್ಳುತ್ತೇನೆ. ತಪಸ್ಸೇ ನನ್ನ ಒಂದು ದಾಟಲಶಕ್ಯವಾದ ಶಕ್ತಿಯಾಗಿದೆ. ॥ ೨೩ ॥

ಬ್ರಹ್ಮದೇವನು ಹೇಳಿದನು – ಭಗವಂತನೇ! ನೀನೇ ಸಮಸ್ತ ಪ್ರಾಣಿಗಳ ಅಂತಃಕರಣದಲ್ಲಿ ಸಾಕ್ಷಿರೂಪದಿಂದ ವಿರಾಜಿಸುತ್ತಿರುವೆ. ನಾನು ಏನು ಮಾಡಲು ಬಯಸುತ್ತಿರುವೆ ಎಂಬುದನ್ನು ನೀನು ನಿನ್ನ ಅಪ್ರತಿಹತವಾದ ಜ್ಞಾನದಿಂದ ತಿಳಿದೇ ಇದ್ದೀಯೆ. ॥ ೨೪ ॥ ಮಹಾಪ್ರಭೋ! ರೂಪರಹಿತನಾಗಿರುವ ನಿನ್ನ ಪರರೂಪ ಮತ್ತು ಅಪರರೂಪ (ಸಗುಣ–ನಿರ್ಗುಣ) ಗಳೆರಡನ್ನೂ ತಿಳಿಯಬೇಕೆಂಬ ನನ್ನ ಬೇಡಿಕೆಯನ್ನು ಈಡೇರಿಸಲು ಪ್ರಾರ್ಥಿಸುತ್ತೇನೆ. ॥ ೨೫ ॥ ನೀನು ಮಾಯೆಗೆ ಸ್ವಾಮಿಯಾಗಿರುವೆ. ಸತ್ಯಸಂಕಲ್ಪನು. ಜೇಡರ ಹುಳವು ತನ್ನ ಬಾಯಿಂದ ಬಲೆಯನ್ನು ಹೆಣೆದು ಅದರಲ್ಲಿ ಆಟವಾಡುತ್ತಾ ಕೊನೆಗೆ ಅದನ್ನು ತನ್ನಲ್ಲಿಯೇ ಲಯಗೊಳಿಸಿಕೊಳ್ಳುವಂತೆ, ನೀನೂ ನಿನ್ನ ಮಾಯಾಶಕ್ತಿಯಿಂದ ನಾನಾಶಕ್ತಿಸಂಪನ್ನವಾದ ಈ ಜಗತ್ತಿನ ಸೃಷ್ಟಿ, ಸ್ಥಿತಿ, ಲಯಗಳನ್ನು ಮಾಡಲಿಕ್ಕಾಗಿ ನಿನ್ನನ್ನೇ ಅನೇಕ ರೂಪಗಳನ್ನಾಗಿಸಿಕೊಂಡು ಕ್ರೀಡಿಸುತ್ತಿರುವೆ. ಇದನ್ನು ನೀನು ಹೇಗೆ ಮಾಡುವೆ? ಎಂಬ ಮರ್ಮವನ್ನು ತಿಳಿಯಬಲ್ಲ ಜ್ಞಾನವನ್ನು ನನಗೆ ದಯಪಾಲಿಸು. ॥ ೨೬-೨೭ ॥ ನಾನು ಎಚ್ಚರವಾಗಿದ್ದು ನಿನ್ನ ಆಜ್ಞೆಯನ್ನು ಪಾಲನೆಮಾಡುವಂತೆಯೂ, ಸೃಷ್ಟಿಯನ್ನು ಮಾಡುವಾಗಲೂ ಕರ್ತೃತ್ವದ ಅಭಿಮಾನದಿಂದ ಬಂಧಿತನಾಗದಂತೆ ನನ್ನ ಮೇಲೆ ಕೃಪೆಮಾಡು. ॥ ೨೮ ॥ ಪ್ರಭೋ! ನೀನು ಪರಮಪ್ರೀತಿಯಿಂದ ನನ್ನ ಕೈಯನ್ನು ಹಿಡಿದುಕೊಂಡು ನನ್ನನ್ನು ಮಿತ್ರನಂತೆ ಸ್ವೀಕರಿಸಿರುವೆ. ಆದ್ದರಿಂದ ನಾನು ಈ ಸೃಷ್ಟಿರಚನೆಯೆಂಬ ನಿನ್ನ ಸೇವೆಯನ್ನು ಮಾಡುವಾಗಲೂ, ಎಚ್ಚರಿಕೆಯಿಂದ ಹಿಂದಿನ ಕಲ್ಪದ ಗುಣ-ಕರ್ಮಗಳಿಗೆ ತಕ್ಕಂತೆ ಜೀವಿಗಳನ್ನು ವಿಭಾಜಿಸುವಾಗಲೂ ಎಲ್ಲಾದರೂ ನನ್ನ ಜನ್ಮ-ಕರ್ಮಗಳಿಂದ ಸ್ವತಂತ್ರನೆಂದು ತಿಳಿದುಕೊಂಡು ಅಭಿಮಾನಕ್ಕೆ ಒಳಗಾಗದಂತೆ ಅನುಗ್ರಹಿಸು. ॥ ೨೯ ॥

ಭಗವಂತನು ಹೇಳಿದನು – ವಿರಂಚಿಯೇ! ನನ್ನ ಪರಮ ಗೋಪನೀಯ, ವಿಜ್ಞಾನಸಹಿತ ಜ್ಞಾನದ ಕುರಿತು ನಿನಗೆ ನಾನು ಹೇಳುತ್ತಿದ್ದೇನೆ. ಅದರ ರಹಸ್ಯ ಮತ್ತು ಅಂಗಗಳ ಸಹಿತ ವರ್ಣಿಸುವೆನು. ಸಾವಧಾನವಾಗಿ ಕೇಳು. ॥ ೩೦ ॥ ನನ್ನ ವಿಸ್ತಾರವೆಷ್ಟು? ನನ್ನ ಲಕ್ಷಣವೇನು? ನನಗೆ ಯಾವ-ಯಾವ ರೂಪಗಳೂ, ಗುಣಗಳೂ, ಕರ್ಮಗಳೂ ಇವೆಯೋ ಅವೆಲ್ಲದರ ತಾತ್ತ್ವಿಕವಾದ ಜ್ಞಾನವು ನಿನಗೆ ನನ್ನ ಅನುಗ್ರಹದಿಂದ ಉಂಟಾಗಲೀ. ॥ ೩೧ ॥

ಸೃಷ್ಟಿಗೆ ಮೊದಲು ಕೇವಲ ನಾನೇ ಇದ್ದೆ. ನಾನಲ್ಲದೆ ಸ್ಥೂಲವಾಗಲೀ, ಸೂಕ್ಷ್ಮವಾಗಲೀ, ಎರಡರ ಕಾರಣವಾದ ಅಜ್ಞಾನವಾಗಲೀ ಇರಲಿಲ್ಲ. ಸೃಷ್ಟಿಯು ಉಂಟಾದ ಮೇಲೆ ಏನೆಲ್ಲ ಈ ದೃಶ್ಯ ವರ್ಗವಿದೆಯೋ ಅದೆಲ್ಲವೂ ನಾನೇ ಆಗಿದ್ದೇನೆ. 'ಸತ್ (ಅಕ್ಷರ)' 'ಅಸತ್ (ಕ್ಷರ)' ಆದರಿಂದ ಆಚೆ (ಪುರುಷೋತ್ತಮ) ಇರುವುದೆಲ್ಲವೂ ನಾನೇ ಆಗಿದ್ದೇನೆ. ಇವೆಲ್ಲದರ ನಾಶವಾದ ಬಳಿಕವೂ ಉಳಿಯುವುದೆಲ್ಲವೂ ನಾನೇ ಆಗಿದ್ದೇನೆ. ॥ ೩೨ ॥ ಪರಮಾತ್ಮನ

ಅಹಮೇವಾಸಮೇವಾಗ್ರೇ ನಾನ್ಯದ್ ಯತ್ಸದಸತ್ಪರಮ್ ।
ಪಶ್ಚಾದಹಂ ಯದೇತಚ್ಚ ಯೋಽವಶಿಷ್ಯೇತ ಸೋಽಸ್ಮ್ಯಹಮ್
॥ ೩೨ ॥

ಋತೇಽರ್ಥಂ ಯತ್ಪ್ರತೀಯೇತ ನ ಪ್ರತೀಯೇತ ಚಾತ್ಮನಿ ।
ತದ್ವಿದ್ಯಾದಾತ್ಮನೋ ಮಾಯಾಂ ಯಥಾಭಾಸೋ ಯಥಾ ತಮಃ
॥ ೩೩ ॥

ಯಥಾ ಮಹಾಂತಿ ಭೂತಾನಿ ಭೂತೇಷೂಚ್ಚಾವಚೇಷ್ವನು ।
ಪ್ರವಿಷ್ಟಾನ್ಯಪ್ರವಿಷ್ಟಾನಿ ತಥಾ ತೇಷು ನ ತೇಷ್ವಹಮ್
॥ ೩೪ ॥

ಏತಾವದೇವ ಜಿಜ್ಞಾಸ್ಯಂ ತತ್ತ್ವಜಿಜ್ಞಾಸುನಾಽಽತ್ಮನಃ ।
ಅನ್ವಯವ್ಯತಿರೇಕಾಭ್ಯಾಂ ಯತ್ ಸ್ಯಾತ್ಸರ್ವತ್ರ ಸರ್ವದಾ
॥ ೩೫ ॥

ಏತನ್ಮತಂ ಸಮಾತಿಷ್ಠ ಪರಮೇಣ ಸಮಾಧಿನಾ ।
ಭವಾನ್ಕಲ್ಪವಿಕಲ್ಪೇಷು ನ ವಿಮುಹ್ಯತಿ ಕರ್ಹಿಚಿತ್
॥ ೩೬ ॥

ಶ್ರೀಶುಕ ಉವಾಚ

ಸಂಪ್ರದಿಶ್ಯೈವಮಜನೋ ಜನಾನಾಂ ಪರಮೇಷ್ಠಿನಮ್ ।
ಪಶ್ಯತಸ್ತಸ್ಯ ತದ್ರೂಪಮಾತ್ಮನೋ ನ್ಯರುಣದ್ಧರಿಃ
॥ ೩೭ ॥

ಅಂತರ್ಹಿತೇಂದ್ರಿಯಾರ್ಥಾಯ ಹರಯೇ ವಿಹಿತಾಂಜಲಿಃ ।
ಸರ್ವಭೂತಮಯೋ ವಿಶ್ವಂ ಸಸರ್ಜೇದಂ ಸ ಪೂರ್ವವತ್
॥ ೩೮ ॥

ಪ್ರಜಾಪತಿರ್ಧರ್ಮಪತಿರೇಕದಾ ನಿಯಮಾನ್ ಯಮಾನ್ ।
ಭದ್ರಂ ಪ್ರಜಾನಾಮನ್ವಿಚ್ಛನ್ನಾತಿಷ್ಠತ್ಸ್ವಾರ್ಥಕಾಮ್ಯಯಾ
॥ ೩೯ ॥

ಸತ್ತೆಯಿಲ್ಲದೆ ಕಂಡುಬರುವುದೆಲ್ಲವೂ ಮಾಯೆಯ ಆಟವಾಗಿದೆ. ಹಾಗೆಯೇ ಆತ್ಮತತ್ತ್ವದ ದರ್ಶನವಾದಾಗ ಮಾಯೆಯು ಕಂಡುಬರುವುದಿಲ್ಲ. ಆದರೆ ಮಾಯೆಯಾದರೋ ಇಲ್ಲವೇ ಇಲ್ಲ. ಏಕೆಂದರೆ, ವಿದ್ಯೆ ಮತ್ತು ಅವಿದ್ಯೆಗಳೆಂಬ ಎರಡೂ ಭಗವಂತನ ಶಕ್ತಿಗಳಾಗಿವೆ. ತಮ ಅರ್ಥಾತ್ ರಾಹುಗ್ರಹದ ಗಣನೆ ನವಗ್ರಹರಲ್ಲಿ ಆಗುತ್ತದೆ, ಆದರೆ ಅದು ಆಕಾಶದಲ್ಲಿ ಕಾಣುವುದಿಲ್ಲ. ಹಾಗೆಯೇ ಈ ವಿಶ್ವವು ವಾಸ್ತವವಾಗಿ ಇಲ್ಲದಿದ್ದರೂ ಕಂಡುಬರುತ್ತದೆ. ಆದ್ದರಿಂದ ಇದೇ ನನ್ನ ಮಾಯೆ ಎಂದು ತಿಳಿ. ಆದಕ್ಕಾಗಿ ಪರಮಾತ್ಮತತ್ತ್ವದ ಅನುಭೂತಿಯನ್ನು ಪಡೆಯಲು ವಿದ್ಯೆಯ ಮೂಲಕ ಅವಿದ್ಯೆಯನ್ನು ನಿರಾಕರಿಸಬೇಕು. ॥ ೩೩ ॥ ಹೇಗೆ ಪ್ರಾಣಿಗಳ ಸಣ್ಣ-ದೊಡ್ಡ ಶರೀರಗಳಲ್ಲಿ (ಆಕಾಶಾದಿ) ಪಂಚಭೂತಗಳು ಸೇರಿಕೊಂಡಿವೆ ಮತ್ತು ಸೇರಿಕೊಂಡೂ ಇಲ್ಲ, ಹಾಗೆಯೇ ಅವುಗಳಲ್ಲಿ (ಪ್ರಾಣಿಗಳಲ್ಲಿ) ನಾನು ಸೇರಿಕೊಂಡಿದ್ದರೂ ನಿಜವಾಗಿ ಅವುಗಳಲ್ಲಿ ನಾನು ಸೇರಿಕೊಂಡಿಲ್ಲ. ॥ ೩೪ ॥ ಪರಮಾತ್ಮನ ತತ್ತ್ವವನ್ನು ತಿಳಿಯುವ ಇಚ್ಛೆಯುಳ್ಳವನಿಗೆ ವಿಧಿರೂಪದಿಂದ – ಅರ್ಥಾತ್ 'ಪರಮಾತ್ಮನು ಹೀಗಿದ್ದಾನೆ, ಹಾಗಿದ್ದಾನೆ' ಈ ಭಾವದಿಂದ ಹಾಗೂ ನಿಷೇಧರೂಪದಿಂದ ಅರ್ಥಾತ್ 'ಪರಮಾತ್ಮನು ಹೀಗೂ ಇಲ್ಲ, ಹಾಗೂ ಇಲ್ಲ' ಈ ಭಾವದಿಂದ ಪರಮಾತ್ಮನು ಎಲ್ಲ ದೇಶಗಳಲ್ಲಿ, ಎಲ್ಲ ಕಾಲಗಳಲ್ಲಿ ಇದ್ದಾನೆ ಇಷ್ಟೇ ತಿಳಿಯುವ ಅವಶ್ಯಕತೆ ಇದೆ. ॥ ೩೫ ॥ ಬ್ರಹ್ಮನೇ! ನೀನು ಅವಿಚಲ ಸಮಾಧಿಯ ಮೂಲಕ ನನ್ನ ಈ ಸಿದ್ಧಾಂತದಲ್ಲಿ ಪೂರ್ಣನಿಷ್ಠೆಯನ್ನಿಡು. ಇದರಿಂದ ನಿನಗೆ ಕಲ್ಪ-ಕಲ್ಪಾಂತರಗಳಲ್ಲಿ ವಿವಿಧ ಪ್ರಕಾರದ ಸೃಷ್ಟಿಯನ್ನು ಮಾಡುತ್ತಿದ್ದರೂ ನೀನು ಎಂದೂ ಮೋಹಿತನಾಗಲಾರೆ (ಆದ್ದರಿಂದ ಸಾಧಕನು ಸಚ್ಚಿದಾನಂದಘನ ಪರಮಾತ್ಮನೊಬ್ಬನೇ ಎಲ್ಲ ದೇಶಗಳಲ್ಲಿ, ಎಲ್ಲ ಕಾಲಗಳಲ್ಲಿ ಇದ್ದಾನೆ. ಅವನಿಂದ ಬೇರೆಯಾದುದು ಯಾವುದೂ ಇಲ್ಲ ಎಂಬುದನ್ನು ನಿಶ್ಚಯಿಸಿಕೊಳ್ಳಬೇಕು. ಹೀಗೆ ಮಾಡುವುದರಿಂದ ಅವನು ಶೋಕ, ಮೋಹ ಮುಂತಾದ ವಿಕಾರಗಳಿಂದ ಮತ್ತು ಅವಿದ್ಯೆಯೇ ಮೊದಲಾದ ಕ್ಲೇಶಗಳಿಂದ ಮುಕ್ತನಾಗಿ ಪರಮ ಶಾಂತಿಸ್ವರೂಪನಾದ ಪರಮಾತ್ಮನನ್ನು ಪಡೆದುಕೊಳ್ಳಬಲ್ಲನು.) ॥ ೩೬ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ! ಜನ್ಮರಹಿತನಾದ ಶ್ರೀಮನ್ನಾರಾಯಣನು ಜನರಲ್ಲಿ, ಉತ್ತಮಾಧಿಪತ್ಯವನ್ನು ಪಡೆದ ಬ್ರಹ್ಮದೇವರಿಗೆ ಹೀಗೆ ಉಪದೇಶಮಾಡಿ ಅವರು ನೋಡುತ್ತಿರುವಂತೆಯೇ ಅಂತರ್ಧಾನಹೊಂದಿದನು. ॥ ೩೭ ॥ ಬ್ರಹ್ಮದೇವರು ತನ್ನ ಕಣ್ಣಿಂದಲೇ ಅದೃಶ್ಯನಾದ ಭಗವಂತನಿಗೆ ಕೈಜೋಡಿಸಿ ನಮಸ್ಕಾರಮಾಡಿ, ಅವನ ಅನುಗ್ರಹದಿಂದ ಹಿಂದಿನ ಕಲ್ಪದಲ್ಲಿ ಇದ್ದ ಹಾಗೆ ಪುನಃ ಈ ವಿಶ್ವವನ್ನು ಸೃಷ್ಟಿಮಾಡಿದರು. ॥ ೩೮ ॥ ಒಮ್ಮೆ ಧರ್ಮಪತಿಗಳಾದ ಆ ಪ್ರಜಾಪತಿ ಬ್ರಹ್ಮದೇವರು ಎಲ್ಲ ಪ್ರಜೆಗಳಿಗೆ ಕಲ್ಯಾಣವು ಉಂಟಾಗಲೆಂಬ ಸ್ವಾರ್ಥವನ್ನು ಸಾಧಿಸಲು ವಿಧಿಪೂರ್ವಕವಾಗಿ ಯಮ-ನಿಯಮಗಳನ್ನು ಆಚರಿಸಿದರು. ॥ ೩೯ ॥ ಆಗಲೇ ಅವರ ಪ್ರಿಯಪುತ್ರನಾದ ದೇವರ್ಷಿ ನಾರದರು ಮಾಯಾಪತಿ

ತಂ ನಾರದಃ ಪ್ರಿಯತಮೋ ರಿಕ್ಥಾದಾನಾಮನುವ್ರತಃ ।
ಶುಶ್ರೂಷಮಾಣಃ ಶೀಲೇನ ಪ್ರಶ್ರಯೇಣ ದಮೇನ ಚ ॥ ೪೦ ॥

ಮಾಯಾಂ ವಿವಿದಿಷನ್ವಿಷ್ಣೋರ್ಮಾಯೇಶಸ್ಯ ಮಹಾಮುನಿಃ ।
ಮಹಾಭಾಗವತೋ ರಾಜನ್ಪಿತರಂ ಪರ್ಯತೋಷಯತ್ ॥ ೪೧ ॥

ತುಷ್ಟಂ ನಿಶಾಮ್ಯ ಪಿತರಂ ಲೋಕಾನಾಂ ಪ್ರಪಿತಾಮಹಮ್ ।
ದೇವರ್ಷಿಃ ಪರಿಪಪ್ರಚ್ಛ ಭವಾನ್ಯನ್ಮಾನುಪೃಚ್ಛತಿ ॥ ೪೨ ॥

ತಸ್ಮಾ ಇದಂ ಭಾಗವತಂ ಪುರಾಣಂ ದಶಲಕ್ಷಣಮ್ ।
ಪ್ರೋಕ್ತಂ ಭಗವತಾ ಪ್ರಾಹ ಪ್ರೀತಃ ಪುತ್ರಾಯ ಭೂತಕೃತ್ ॥ ೪೩ ॥

ನಾರದಃ ಪ್ರಾಹ ಮುನಯೇ ಸರಸ್ವತ್ಯಾಸ್ತಟೇ ನೃಪ ।
ಧ್ಯಾಯತೇ ಬ್ರಹ್ಮ ಪರಮಂ ವ್ಯಾಸಾಯಾಮಿತತೇಜಸೇ ॥ ೪೪ ॥

ಯದುತಾಹಂ ತ್ವಯಾ ಪೃಷ್ಟೋ ವೈರಾಜಾತ್ಪುರುಷಾದಿದಮ್ ।
ಯಥಾಸೀತ್ತದುಪಾಖ್ಯಾಸ್ಯೇ ಪ್ರಶ್ನಾನನ್ಯಾಂಶ್ಚ ಕೃತ್ಸ್ನಶಃ ॥ ೪೫ ॥

ಭಗವಂತನ ಮಾಯೆಯ ತತ್ತ್ವವನ್ನು ಅರಿಯುವ ಇಚ್ಛೆಯಿಂದ ಜಿತೇಂದ್ರಿಯನಾಗಿ, ಸದಾಚಾರ ಸಂಪನ್ನನಾಗಿ ಅವರ ಸೇವೆ ಮಾಡುತ್ತಿದ್ದನು. ಪರಮ ಭಾಗವತೋತ್ತಮನಾದ ನಾರದ ಮಹರ್ಷಿಯು ಹೀಗೆ ಬಹುಕಾಲ ಸೇವಿಸುತ್ತಾ ಬ್ರಹ್ಮದೇವರನ್ನು ಸಂತೋಷಪಡಿಸಿದನು. ॥ ೪೦-೪೧ ॥ ಪರೀಕ್ಷಿದ್ರಾಜನೇ! ಲೋಕಪಿತಾಮಹರಾದ ಬ್ರಹ್ಮದೇವರು ಪ್ರಸನ್ನರಾಗಿರುವುದನ್ನು ನೋಡಿ ನಾರದಮುನಿಯು - ನೀನು ಈಗ ನನ್ನಲ್ಲಿ ಪ್ರಶ್ನಿಸಿದಂತೆ, ಅದೇ ವಿಷಯವನ್ನು ಕುರಿತು ಪ್ರಶ್ನಿಸಿದನು. ॥ ೪೨ ॥ ಅವನ ಪ್ರಶ್ನೆಯಿಂದ ಇನ್ನೂ ಸಂತುಷ್ಟರಾಗಿ ಬ್ರಹ್ಮದೇವರು ತನಗೆ ಭಗವಂತನು ಉಪದೇಶಿಸಿದ್ದ ಹತ್ತು ಲಕ್ಷಣಗಳಿಂದ ಕೂಡಿದ ಶ್ರೀಮದ್ಭಾಗವತ ಪುರಾಣವನ್ನು ತನ್ನ ಪ್ರಿಯಪುತ್ರನಿಗೆ ಉಪದೇಶಿಸಿದರು. ॥ ೪೩ ॥ ಪರೀಕ್ಷಿತನೇ! ಅನಂತರ ನಾರದಮಹರ್ಷಿಯು - ಸರಸ್ವತೀನದಿಯ ತೀರದಲ್ಲಿ ಕುಳಿತು ಪರಬ್ರಹ್ಮವನ್ನು ಧ್ಯಾನಿಸುತ್ತಿದ್ದ ಮಹಾತೇಜಸ್ವಿಗಳಾದ ವ್ಯಾಸಮುನಿಗಳಿಗೆ ಅದನ್ನು ಹಾಗೆಯೇ ಉಪದೇಶಮಾಡಿದರು. ವ್ಯಾಸಮಹಾಮುನಿಗಳು ಅದನ್ನು ನನಗೆ ಉಪದೇಶಿಸಿದರು. ॥ ೪೪ ॥ ನೀನು ನನ್ನಲ್ಲಿ - ವಿರಾಟ್‌ಪುರುಷನಿಂದ ಈ ಜಗತ್ತಿನ ಉತ್ಪತ್ತಿ ಹೇಗಾಯಿತು? ಎಂದು ಪ್ರಶ್ನಿಸಿದೆಯಲ್ಲ! ಆ ಪ್ರಶ್ನೆಗೂ ಹಾಗೂ ನೀನು ಕೇಳಿದ ಇತರ ಪ್ರಶ್ನೆಗಳಿಗೂ ಈ ಭಾಗವತ ಪುರಾಣದ ರೂಪದಲ್ಲಿ ನಾನು ಉತ್ತರಿಸುವೆನು. ॥ ೪೫ ॥

ಒಂಭತ್ತನೆಯ ಅಧ್ಯಾಯವು ಮುಗಿಯಿತು. ॥ ೯ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ
ದ್ವಿತೀಯಸ್ಕಂಧೇ ನವಮೋಽಧ್ಯಾಯಃ ॥ ೯ ॥

ಹತ್ತನೆಯ ಅಧ್ಯಾಯ

ಶ್ರೀಮದ್ಭಾಗವತದ ಹತ್ತು ಲಕ್ಷಣಗಳು

ಶ್ರೀಶುಕ ಉವಾಚ

ಅತ್ರ ಸರ್ಗೋ ವಿಸರ್ಗಶ್ಚ ಸ್ಥಾನಂ ಪೋಷಣಮೂತಯಃ ।
ಮನ್ವಂತರೇಶಾನುಕಥಾ ನಿರೋಧೋ ಮುಕ್ತಿರಾಶ್ರಯಃ ॥ ೧ ॥

ದಶಮಸ್ಯ ವಿಶುದ್ಧ್ಯರ್ಥಂ ನವಾನಾಮಿಹ ಲಕ್ಷಣಮ್ ।
ವರ್ಣಯಂತಿ ಮಹಾತ್ಮಾನಃ ಶ್ರುತೇನಾರ್ಥೇನ ಚಾಂಜಸಾ ॥ ೨ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ - ಪರೀಕ್ಷಿತನೇ! ಈ ಶ್ರೀಮದ್ಭಾಗವತದಲ್ಲಿ ಸರ್ಗ, ವಿಸರ್ಗ, ಸ್ಥಾನ, ಪೋಷಣ, ಊತಿ, ಮನ್ವಂತರ, ಈಶಾನುಕಥಾ, ನಿರೋಧ, ಮುಕ್ತಿ ಮತ್ತು ಆಶ್ರಯ ಎಂಬ ಹತ್ತು ವಿಷಯಗಳ ವರ್ಣನೆ ಇದೆ. ॥ ೧ ॥ ಇವರಲ್ಲಿ ಹತ್ತನೆಯದಾದ 'ಆಶ್ರಯತತ್ತ್ವ'ವನ್ನು ಸರಿಯಾಗಿ ನಿಶ್ಚಯಿಸಲಿಕ್ಕಾಗಿ ಕೆಲವೆಡೆ ಶ್ರುತಿಗಳಿಂದ, ಕೆಲವೆಡೆ ತಾತ್ಪರ್ಯದಿಂದ, ಕೆಲವೆಡೆ ಎರಡರ ಅನುಕೂಲವಾದ ಅನುಭವದಿಂದ ಮಹಾತ್ಮರು ಉಳಿದ ಒಂಭತ್ತು ವಿಷಯಗಳನ್ನು ಸುಗಮವಾಗಿ ವರ್ಣಿಸಿರುವರು. ॥ ೨ ॥ ಈಶ್ವರನ ಪ್ರೇರಣೆಯಿಂದ ಗುಣಗಳಲ್ಲಿ ಕ್ಷೋಭೆ ಉಂಟಾಗಿ ರೂಪಾಂತರವಾದಾಗ ಉತ್ಪತ್ತಿಯಾದ ಆಕಾಶಾದಿ ಪಂಚಭೂತ

ಭೂತಮಾತ್ರೇಂದ್ರಿಯಧಿಯಾಂ ಜನ್ಮ ಸರ್ಗ ಉದಾಹೃತಃ ।
ಬ್ರಹ್ಮಣೋ ಗುಣವೈಷಮ್ಯಾದ್ವಿಸರ್ಗಃ ಪೌರುಷಃ ಸ್ಮೃತಃ ॥ ೩ ॥

ಸ್ಥಿತಿರ್ವೈಕುಂಠವಿಜಯಃ ಪೋಷಣಂ ತದನುಗ್ರಹಃ ।
ಮನ್ವಂತರಾಣಿ ಸದ್ಧರ್ಮ ಊತಯಃ ಕರ್ಮವಾಸನಾಃ ॥ ೪ ॥

ಅವತಾರಾನುಚರಿತಂ ಹರೇಶ್ಚಾಸ್ಯಾನುವರ್ತಿನಾಮ್ ।
ಸತಾಮೀಶಕಥಾಃ ಪ್ರೋಕ್ತಾ ನಾನಾಖ್ಯಾನೋಪಬೃಂಹಿತಾಃ ॥ ೫ ॥

ನಿರೋಧೋಽಸ್ಯಾನುಶಯನಮಾತ್ಮನಃ ಸಹ ಶಕ್ತಿಭಿಃ ।
ಮುಕ್ತಿರ್ಹಿತ್ವಾನ್ಯಥಾ ರೂಪಂ ಸ್ವರೂಪೇಣ ವ್ಯವಸ್ಥಿತಿಃ ॥ ೬ ॥

ಆಭಾಸಶ್ಚ ನಿರೋಧಶ್ಚ ಯತಶ್ಚಾಧ್ಯವಸೀಯತೇ ।
ಸ ಆಶ್ರಯಃ ಪರಂ ಬ್ರಹ್ಮ ಪರಮಾತ್ಮೇತಿ ಶಬ್ದ್ಯತೇ ॥ ೭ ॥

ಯೋಽಧ್ಯಾತ್ಮಿಕೋಽಯಂ ಪುರುಷಃ ಸೋಽಸಾವೇವಾಧಿದೈವಿಕಃ ।
ಯಸ್ತತ್ರೋಭಯವಿಚ್ಛೇದಃ ಪುರುಷೋ ಹ್ಯಾಧಿಭೌತಿಕಃ ॥ ೮ ॥

ಗಳೂ, ಶಬ್ದಾದಿ ತನ್ಮಾತ್ರೆಗಳೂ, ಇಂದ್ರಿಯಗಳೂ, ಅಹಂಕಾರ ಮತ್ತು ಮಹತ್ತತ್ತ್ವ ಇವುಗಳ ಉತ್ಪತ್ತಿಯನ್ನು 'ಸರ್ಗ' ಎಂದು ಕರೆಯುತ್ತಾರೆ. (ಗುಣಗಳ ಸಾಮ್ಯಾವಸ್ಥೆ ಇರುವತನಕ ಏನೂ ಆಗುವುದಿಲ್ಲ) ಪ್ರಕೃತಿಯಲ್ಲಿ ಗೊಂದಲ ಉಂಟಾದಾಗಲೇ ಸೃಷ್ಟಿಯಾಗುತ್ತದೆ. ಇದನ್ನೇ ಸರ್ಗವೆಂದು ಹೇಳುತ್ತಾರೆ. ■ ವಿರಾಟ್ ಪುರುಷನಿಂದ ಉತ್ಪನ್ನರಾದ ಬ್ರಹ್ಮದೇವರಿಂದ ನಿರ್ಮಾಣಗೊಂಡ ವಿಭಿನ್ನ ಚರಾಚರ ಸೃಷ್ಟಿಯನ್ನು 'ವಿಸರ್ಗ' ಎಂದು ಹೇಳುವರು. ॥ ೩ ॥ ಈ ವಿಶ್ವದ ಉತ್ಪತ್ತಿ, ಸ್ಥಿತಿ, ಸಂಹಾರ ಇವು ಮೂರೂ ಲೀಲಾರೂಪವಾಗಿ ಭಗವಂತನಿಂದ ಕ್ರಮವಾಗಿ ನಡೆಯುತ್ತಾ ಇರುತ್ತದೆ. ಈ ಮೂರರಲ್ಲಿ (ಸ್ಥಿತಿ) ಪಾಲಿಸುವುದು, ಜಗತ್ತಿನ ಸ್ಥಿತಿಯು ಇರುವುದಕ್ಕಾಗಿಯೇ ಭಗವಾನ್ ವಿಷ್ಣುವಿನ ಮೂಲಕವೇ ಇದರ ಪೋಷಣೆ ನಡೆಯುತ್ತದೆ. ಇದರಿಂದ ಭಗವಂತನ ಕೃಪೆ ಮತ್ತು ಅವನ ಶ್ರೇಷ್ಠತೆ ಸಿದ್ಧವಾಗುತ್ತದೆ. ಆದ್ದರಿಂದ ಈ ವಿಶ್ವವನ್ನು ಪಾಲನೆ-ಸಂರಕ್ಷಿಸುವುದು 'ಸ್ಥಿತಿ' ಎಂದು ಹೇಳಲಾಗಿದೆ. ಜೊತೆಗೆ ಭಗವಂತನಿಂದ ಸುರಕ್ಷಿತವಾದ ಸೃಷ್ಟಿಯಲ್ಲಿ ಭಕ್ತರನ್ನು ಪೋಷಿಸುವುದನ್ನು 'ಪೋಷಣ' ಎಂದು ಹೇಳುತ್ತಾರೆ. ಪ್ರಜಾಪಾಲನೆರೂಪವಾದ ಶುದ್ಧ ಕರ್ಮವನ್ನು ಅನುಷ್ಠಾನಮಾಡುವ ಮನ್ವಂತರಗಳ ಅಧಿಪತಿಗಳ ಸದ್ಧರ್ಮವನ್ನು 'ಮನ್ವಂತರ' ಎಂದು ಹೇಳಲಾಗಿದೆ. ಕರ್ಮಬಂಧನದಲ್ಲಿ ತೊಡಗುವ ಜೀವಿಗಳ ಕರ್ಮವಾಸನೆಯನ್ನು 'ಊತಿ' ಎಂಬುದಾಗಿ ಹೇಳಿದೆ. ॥ ೪ ॥ ಬಗೆ-ಬಗೆಯ ಉಪಾಖ್ಯಾನಗಳಿಂದ ಶ್ರೀಭಗವಂತನ ಅವತಾರ ಕಥೆಗಳನ್ನು ಮತ್ತು ಅವನ ಭಕ್ತರ ಚರಿತ್ರೆಗಳನ್ನು 'ಈಶಾನುಕಥಾ' ಎಂದು ಕರೆಯುತ್ತಾರೆ. ಇದನ್ನು ಹಾಡಿ-ಶ್ರವಣಿಸಿ ಜೀವನು ಬ್ರಹ್ಮಸ್ವರೂಪವನ್ನು ಪಡೆದುಕೊಳ್ಳುವನು. ॥ ■ ॥ ಭಗವಂತನು ಯೋಗನಿದ್ರೆಯಲ್ಲಿ ಮಲಗಿದಾಗ ಜೀವನು ತನ್ನ ಉಪಾಧಿಗಳೊಡನೆ ಆತನಲ್ಲಿ ಲಯಹೊಂದುವುದೇ 'ನಿರೋಧ'ವಾಗಿದೆ. ಅಜ್ಞಾನ ಕಲ್ಪಿತ ಕರ್ತೃತ್ವ, ಭೋಕ್ತೃತ್ವ ಮುಂತಾದ ಅನಾತ್ಮಭಾವವನ್ನು ಪರಿತ್ಯಜಿಸಿ ತನ್ನ ವಾಸ್ತವಿಕ ಸ್ವರೂಪವಾದ ಪರಮಾತ್ಮನಲ್ಲಿ ನೆಲೆಗೊಳ್ಳುವುದೇ 'ಮುಕ್ತಿ'ಯಾಗಿದೆ. ॥ ೬ ॥ ಪರೀಕ್ಷಿದ್ರಾಜನೇ ! ಈ ಚರಾಚರ ಜಗತ್ತಿನ ಉತ್ಪತ್ತಿ, ಸ್ಥಿತಿ, ಲಯಗಳು ಯಾವ ತತ್ತ್ವದಿಂದ ಪ್ರಕಾಶಿತವಾಗುತ್ತವೆಯೋ ■ ಪರಬ್ರಹ್ಮವೇ 'ಆಶ್ರಯ' ಎನಿಸುತ್ತದೆ. ಅದನ್ನೇ ಪರಮಾತ್ಮನೆಂದು ಶಾಸ್ತ್ರಗಳು ಕರೆಯುತ್ತವೆ. ಆ ಪರಬ್ರಹ್ಮನೇ ಎಲ್ಲರ ಆಶ್ರಯವಾಗಿದ್ದಾನೆ. ಈ ಆಶ್ರಯತತ್ತ್ವವನ್ನು ತಿಳಿಯಲಿಕ್ಕಾಗಿಯೇ ಇತರ ಒಂಭತ್ತು ತತ್ತ್ವಗಳನ್ನು ನಿರೂಪಿಸಲಾಗಿದೆ. ॥ ೭ ॥ ಯಾವ ಪುರುಷನು ಆಧ್ಯಾತ್ಮಿಕ (ಜೀವ)ನೆಂದು ಹೇಳಲಾಗಿದೆಯೋ ಅವನನ್ನೇ ಅಧಿದೈವ (ಇಂದ್ರಿಯಗಳ ದೇವತೆಗಳು) ಎಂದೂ ಹೇಳುತ್ತಾರೆ. ಹೀಗೆಯೇ ವಾಸ್ತವವಾಗಿ ನೋಡಿದರೆ ಅಧಿಭೌತಿಕವೂ ಅವನೇ ಆಗಿದ್ದಾನೆ. ಆದರೆ ಪಾಂಚಭೌತಿಕ ಸ್ಥೂಲದೇಹದ ಕುರಿತು ಆತ್ಮಬುದ್ಧಿ ಉಂಟಾದ ಕಾರಣ ಜೀವನು ಈ ದೇಹವನ್ನು ಬೇರೆ ಎಂದು ತಿಳಿಯುತ್ತಾನೆ. ಆಧ್ಯಾತ್ಮಿಕ ಹಾಗೂ

ಏಕಮೇಕತರಾಭಾವೇ ಯದಾ ನೋಪಲಭಾಮಹೇ ।
ತ್ರಿತಯಂ ತತ್ರ ಯೋ ವೇದ ಸ ಆತ್ಮಾ ಸ್ವಾಶ್ರಯಾಶ್ರಯಃ ॥ ೯ ॥

ಪುರುಷೋಽಂಡಂ ವಿನಿರ್ಭಿದ್ಯ ಯದಾಸೌ ಸ ವಿನಿರ್ಗತಃ ।
ಆತ್ಮನೋಽಯನಮನ್ವಿಚ್ಛನ್ನ ಪೋಽಸ್ರಾಕ್ಷೀಚ್ಛುಚಿಃ ಶುಚೀಃ ॥ ೧೦ ॥

ತಾಸ್ವವಾತ್ಸೀತ್ ಸ್ವಸೃಷ್ಟಾಸು ಸಹಸ್ರಪರಿವತ್ಸರಾನ್ ।
ತೇನ ನಾರಾಯಣೋ ನಾಮ ಯದಾಪಃ ಪುರುಷೋದ್ಭವಾಃ ॥ ೧೧ ॥

ದ್ರವ್ಯಂ ಕರ್ಮ ಚ ಕಾಲಶ್ಚ ಸ್ವಭಾವೋ ಜೀವ ಏವ ಚ ।
ಯದನುಗ್ರಹತಃ ಸಂತಿ ನ ಸಂತಿ ಯದುಪೇಕ್ಷಯಾ ॥ ೧೨ ॥

ಏಕೋ ನಾನಾತ್ವಮನ್ವಿಚ್ಛನ್ ಯೋಗತಲ್ಪಾತ್ಸಮುತ್ಥಿತಃ ।
ವೀರ್ಯಂ ಹಿರಣ್ಮಯಂ ದೇವೋ ಮಾಯಯಾ ವ್ಯಸೃಜತ್ತ್ರಿಧಾ ॥ ೧೩ ॥

ಅಧಿದೈವಮಥಾಧ್ಯಾತ್ಮಮಧಿಭೂತಮಿತಿ ಪ್ರಭುಃ ।
ಯಥೈಕಂ ಪೌರುಷಂ ವೀರ್ಯಂ ತ್ರಿಧಾಭಿದ್ಯತ ತಚ್ಛೃಣು ॥ ೧೪ ॥

ಆಧಿದೈವಿಕಗಳನ್ನು ಬೇರೆ ಎಂದು ತಿಳಿಯುತ್ತಾನೆ. ಏಕೆಂದರೆ, ಈ ಮೂರರಲ್ಲಿ ಯಾವುದೇ ಒಂದು ಇಲ್ಲದಿದ್ದರೆ ಒಂದು ಮತ್ತೊಂದರ ಜ್ಞಾನ ಉಂಟಾಗುವುದಿಲ್ಲ. (ಉದಾಹರಣೆಗಾಗಿ – ಜೀವಾತ್ಮನೇ ಇಲ್ಲದಿದ್ದರೆ ಆಧಿದೈವಿಕ ಮತ್ತು ಆಧಿಭೌತಿಕ ಎರಡನ್ನೂ ತಿಳಿಯಲಾಗುವುದಿಲ್ಲ. ಇದೇ ಪ್ರಕಾರ ಇಂದ್ರಿಯಗಳ ದೇವತೆಗಳು ಇಲ್ಲದಿದ್ದರೂ ನಾವು ಉಳಿದ ಎರಡನ್ನು ತಿಳಿಯಲಾರೆವು. ಹಾಗೆಯೇ ಶರೀರ ಇಲ್ಲದಿದ್ದರೂ ನಾವು ಅವೆರಡನ್ನು ತಿಳಿಯಲಾರೆವು. ಮೂರೂ ಸೇರಿಯೇ ಒಂದು– ಮತ್ತೊಂದನ್ನು ತಿಳಿಯಲಾಗುತ್ತದೆ) ಈ ಮೂರನ್ನೂ ತಿಳಿಯುವವನೇ ಪರಮಾತ್ಮನು. ಇವು ಮೂರೂ ಪರಮಾತ್ಮನದೇ ಸ್ವರೂಪವಾಗಿವೆ. ಓರ್ವ ಪರಮಾತ್ಮನಲ್ಲದೆ ಏನೂ ಇಲ್ಲ. ಅವನ ಆಶ್ರಯದಲ್ಲೇ ಎಲ್ಲವೂ ಇದೆ. ಆದ್ದರಿಂದ ಪರಮಾತ್ಮನನ್ನೇ ಆಶ್ರಯತತ್ತ್ವವೆಂದು ಹೇಳಲಾಗಿದೆ. ॥ ೮-೯ ॥

ಹಿಂದೆ ಹೇಳಿದ ವಿರಾಟ್‌ಪುರುಷನು ಬ್ರಹ್ಮಾಂಡವನ್ನು ಭೇದಿಸಿ ಹೊರಬಂದಾಗ ಅವನು ತನಗೆ ನೆಲೆಸುವುದಕ್ಕೆ ಸ್ಥಾನವನ್ನು ಹುಡುಕ ತೊಡಗಿದನು. ಅದಕ್ಕಾಗಿ ಶುದ್ಧಸಂಕಲ್ಪನಾದ ಆ ಪುರುಷರೂಪನು ಪರಿಶುದ್ಧವಾದ 'ಜಲ'ವನ್ನು ಸೃಷ್ಟಿಸಿದನು. ॥ ೧೦ ॥ ವಿರಾಟ್‌ಪುರುಷರೂಪನಾದ 'ನರ'ನಿಂದ ಉತ್ಪನ್ನವಾದ್ದರಿಂದ ಜಲಕ್ಕೆ 'ನಾರ' ಎಂದು ಹೆಸರಾಯಿತು. ತಾನೇ ನಿರ್ಮಿಸಿದ ಆ ನಾರವನ್ನು ನೆಲೆಯನ್ನಾಗಿ ಮಾಡಿಕೊಂಡು ಅದರಲ್ಲಿ ಅವನು ಸಾವಿರಾರು ವರ್ಷಗಳವರೆಗೂ ಪವಡಿಸಿದ್ದರಿಂದ ಅವನು 'ನಾರಾಯಣ' ಎನಿಸಿದನು. ॥ ೧೧ ॥ ಭಗವಂತನಾದ ಆ ನಾರಾಯಣನ ಅನುಗ್ರಹದಿಂದಲೇ ದ್ರವ್ಯ, ಕರ್ಮ, ಕಾಲ, ಸ್ವಭಾವ ಮತ್ತು ಜೀವ ಮುಂತಾದವುಗಳು ತಮ್ಮ-ತಮ್ಮ ಕಾರ್ಯಗಳನ್ನು ನಡೆಸುತ್ತವೆ. ಅವನು ಉಪೇಕ್ಷೆ ಮಾಡಿದರೆ ಅವುಗಳಿಗೆ ಅಸ್ತಿತ್ವವೇ ಇಲ್ಲ. (ಮಹತ್ತಿನಿಂದ ಪೃಥ್ವಿವರೆಗಿನ ದ್ರವ್ಯಗಳು, ಪ್ರಾಣಿಗಳಿಗೆ ಜನ್ಮಾದಿಗಳಿಗೆ ಕಾರಣವಾದ ಕರ್ಮ, ಸತ್ತ್ವಾದಿಗುಣಗಳ ಬದಲಾವಣೆಗೆ ಕಾರಣವಾದ ಕಾಲ, ಪ್ರಕೃತಿಯ ಪರಿಣಾಮಹೊಂದುವಿಕೆಯೇ ಮುಂತಾದ ಸ್ವಭಾವ, ಸುಖ-ದುಃಖಾದಿಗಳನ್ನು ಅನುಭವಿಸುವ ಜೀವ-ಇವೆಲ್ಲದರ ಅಸ್ತಿತ್ವವು ಆ ನಾರಾಯಣನಿಂದಲೇ.) ॥ ೧೨ ॥ ಆ ಅದ್ವಿತೀಯ ಭಗವಾನ್ ನಾರಾಯಣನು ಯೋಗನಿದ್ರೆಯಿಂದ ಎಚ್ಚೆತ್ತು ತಾನು ಅನೇಕವಾಗಬೇಕೆಂದು ಸಂಕಲ್ಪಿಸಿದಾಗ, ತನ್ನ ಮಾಯೆಯಿಂದ ಅಖಿಲಬ್ರಹ್ಮಾಂಡದ ಬೀಜಸ್ವರೂಪ ತನ್ನ ಸುವರ್ಣಮಯ ವೀರ್ಯವನ್ನು ಅಧಿದೈವ, ಅಧ್ಯಾತ್ಮ ಅಧಿಭೂತ ಎಂಬ ಮೂರು ಭಾಗವಾಗಿ ವಿಂಗಡಿಸಿದನು. (ಅವುಗಳಲ್ಲಿ ದಿಕ್ಕು ಮುಂತಾದ ಅಭಿಮಾನಿ ದೇವತೆಗಳಿಂದ ಕೂಡಿದ ಹನ್ನೊಂದು ಇಂದ್ರಿಯಗಳ ಅಧಿಷ್ಠಾತೃ ದೇವತೆಗಳು ಅಧಿದೈವವೆಂದೂ, ಜೀವನು ಅಧ್ಯಾತ್ಮನೆಂದೂ, ಪೃಥ್ವಿಯೇ ಮುಂತಾದವುಗಳಲ್ಲಿರುವ ಗಂಧವೇ ಮುಂತಾದ ಗುಣಗಳು ಅಧಿಭೂತವೆಂದೂ ಕರೆಯಲ್ಪಡುವುವು.) ವಿರಾಟ್‌ಪುರುಷನ ಒಂದೇ ವೀರ್ಯವು ಹೀಗೆ ಮೂರು ವಿಭಾಗವಾಗಿ ವಿಭಜಿಸಲ್ಪಟ್ಟಿತು. ಮುಂದೇನಾಯಿತೆಂಬುದನ್ನು ಹೇಳುತ್ತೇನೆ, ಕೇಳು. ॥ ೧೩-೧೪ ॥

ಅಂತಃಶರೀರ ಆಕಾಶಾತ್ ಪುರುಷಸ್ಯ ವಿಚೇಷ್ಟತಃ ।
ಓಜಃ ಸಹೋ ಬಲಂ ಜಜ್ಞೇ ತತಃ ಪ್ರಾಣೋ ಮಹಾನಸುಃ ॥ ೧೫ ॥

ಅನು ಪ್ರಾಣಂತಿ ಯಂ ಪ್ರಾಣಾಃ ಪ್ರಾಣಂತಂ ಸರ್ವಜಂತುಷು ।
ಅಪಾನಂತಮಪಾನಂತಿ ನರದೇವಮಿವಾನುಗಾಃ ॥ ೧೬ ॥

ಪ್ರಾಣೇನ ಕ್ಷಿಪತಾ ಕ್ಷುತ್ತೃಡಂತರಾ ಜಾಯತೇ ಪ್ರಭೋಃ ।
ಪಿಪಾಸತೋ ಜಕ್ಷತಶ್ಚ ಪ್ರಾಙ್ಮುಖಂ ನಿರಭಿದ್ಯತ ॥ ೧೭ ॥

ಮುಖತಸ್ತಾಲು ನಿರ್ಭಿನ್ನಂ ಜಿಹ್ವಾ ತತ್ರೋಪಜಾಯತೇ ।
ತತೋ ನಾನಾರಸೋ ಜಜ್ಞೇ ಜಿಹ್ವಯಾ ಯೋಽಧಿಗಮ್ಯತೇ ॥ ೧೮ ॥

ವಿವಕ್ಷೋರ್ಮುಖತೋ ಭೂಮ್ನೋ
ವಹ್ನಿರ್ವಾಗ್ ವ್ಯಾಹೃತಂ ತಯೋಃ ।
ಜಲೇ ವೈ ತಸ್ಯ ಸುಚಿರಂ
ನಿರೋಧಃ ಸಮಜಾಯತ ॥ ೧೯ ॥

ನಾಸಿಕೇ ನಿರಭಿದ್ಯೇತಾಂ ದೋಧೂಯತಿ ನಭಸ್ವತಿ ।
ತತ್ರ ವಾಯುರ್ಗಂಧವಹೋ ಘ್ರಾಣೋ ನಸಿ ಜಿಘೃಕ್ಷತಃ ॥ ೨೦ ॥

ಯದಾಽಽತ್ಮನಿ ನಿರಾಲೋಕಮಾತ್ಮಾನಂ ಚ ದಿದೃಕ್ಷತಃ ।
ನಿರ್ಭಿನ್ನೇ ಹ್ಯಕ್ಷಿಣೀ ತಸ್ಯ ಜ್ಯೋತಿಶ್ಚಕ್ಷುರ್ಗುಣಗ್ರಹಃ ॥ ೨೧ ॥

ಬೋಧ್ಯಮಾನಸ್ಯ ಋಷಿಭಿರಾತ್ಮನಸ್ತಜ್ಜಿಘೃಕ್ಷತಃ ।
ಕರ್ಣೌ ಚ ನಿರಭಿದ್ಯೇತಾಂ ದಿಶಃ ಶ್ರೋತ್ರಂ ಗುಣಗ್ರಹಃ ॥ ೨೨ ॥

ವಸ್ತುನೋ ಮೃದುಕಾಠಿನ್ಯಲಘುಗುರ್ವೋಷ್ಣಶೀತತಾಮ್ ।
ಜಿಘೃಕ್ಷತಸ್ತ್ವಙ್ನಿರ್ಭಿನ್ನಾ ತಸ್ಯಾಂ ರೋಮಮಹೀರುಹಾಃ ।
ತತ್ರ ಚಾಂತರ್ಬಹಿರ್ವಾತಸ್ತ್ವಚಾ ಲಬ್ಧಗುಣೋ ವೃತಃ ॥ ೨೩ ॥

ಆ ವಿರಾಟ್‌ಪುರುಷನು ಕ್ರಿಯಾಶಕ್ತಿಯಿಂದ ದೇಹವನ್ನು ಅಲ್ಲಾಡಿಸಿದಾಗ, ಆ ದೇಹದಲ್ಲಿದ್ದ ಆಕಾಶದಿಂದ ಇಂದ್ರಿಯಶಕ್ತಿ, ಮನಶ್ಶಕ್ತಿ, ಶರೀರಶಕ್ತಿಗಳು ಉಂಟಾದುವು. ಅವುಗಳಿಂದ ಅವೆಲ್ಲದರ ಪ್ರಭುವಾದ ಸೂತ್ರಾತ್ಮಕವಾದ ಮಹಾಪ್ರಾಣನು ಹುಟ್ಟಿದನು. ॥ ೧೫ ॥ ಸೇವಕರು ತಮ್ಮ ಪ್ರಭುವಿನ ಹಿಂದೆ-ಹಿಂದೆಯೇ ನಡೆಯುವಂತೆ ಶರೀರದಲ್ಲಿ ಎಲ್ಲ ಇಂದ್ರಿಯಗಳು ಪ್ರಾಣದ ಹಿಂದೆ-ಹಿಂದೆ ನಡೆಯುತ್ತವೆ. ಎಲ್ಲರ ಶರೀರಗಳಲ್ಲಿ ಪ್ರಾಣವು ಬಲಯುಕ್ತವಾಗಿದ್ದರೆ, ಇಂದ್ರಿಯಗಳಿಗೆ ಬಲ. ಅದು ಬಲಹೀನವಾದರೆ ಇಂದ್ರಿಯಗಳೂ ಬಲಹೀನರಾಗುತ್ತವೆ. ॥ ೧೬ ॥ ಪ್ರಾಣವಾಯುವು ವೇಗವಾಗಿ ಬಂದು-ಹೋಗತೊಡಗಿದಾಗ ವಿರಾಟ್ ಪುರುಷನಿಗೆ ಹಸಿವು-ಬಾಯಾರಿಕೆಯ ಅನುಭವವಾಯಿತು. ಆಹಾರ-ಪಾನೀಯಗಳ ಇಚ್ಛೆ ಉಂಟಾಗುತ್ತಲೇ ಮೊಟ್ಟಮೊದಲಿಗೆ ಅವನ ಶರೀರದಲ್ಲಿ ಬಾಯಿ ಪ್ರಕಟವಾಯಿತು. ॥ ೧೭ ॥ ಅದರಿಂದ ಅಣ್ಣಾಲಿಗೆಯೂ, ಅನಂತರ ರಸನೇಂದ್ರಿಯ (ನಾಲಿಗೆ) ಪ್ರಕಟವಾದುವು. ಇದಾದ ಬಳಿಕ ನಾಲಿಗೆಯು ಗ್ರಹಿಸುವ ಅನೇಕ ಪ್ರಕಾರದ ರಸಗಳು ಉತ್ಪನ್ನವಾದುವು. ॥ ೧೮ ॥ ಅವನಿಗೆ ಮಾತಾಡಲು ಇಚ್ಛೆ ಉಂಟಾದಾಗ ವಾಕ್ ಇಂದ್ರಿಯ, ಅದರ ಅಧಿಷ್ಠಾನ ದೇವತೆ ಅಗ್ನಿ ಮತ್ತು ಅದರ ವಿಷಯ ಮಾತಾಡುವುದು – ಇವು ಮೂರೂ ಪ್ರಕಟವಾದುವು. ಬಳಿಕ ಬಹಳ ದಿವಸಗಳವರೆಗೆ ಆ ಜಲದಲ್ಲೇ ಇದ್ದುಬಿಟ್ಟನು. ॥ ೧೯ ॥ ಶ್ವಾಸದ ವೇಗದಿಂದ 'ಮೂಗಿನ ಹೊಳ್ಳೆಗಳು' ಪ್ರಕಟವಾದುವು. ಅವನಿಗೆ ಮೂಸುವ ಇಚ್ಛೆಯಾದಾಗ ಮೂಗು ಘ್ರಾಣೇಂದ್ರಿಯವೂ, ಗಂಧವನ್ನು ಹರಡುವಂತಹ ಅದರ ದೇವತೆ ವಾಯುದೇವರೂ ಪ್ರಕಟಗೊಂಡರು. ॥ ೨೦ ॥ ಮೊದಲು ಅವನ ದೇಹದಲ್ಲಿ ಪ್ರಕಾಶವಿರಲಿಲ್ಲ, ಮತ್ತೆ ಅವನಿಗೆ ತನ್ನನ್ನು ಇತರರನ್ನೂ ನೋಡಬೇಕೆಂಬ ಇಚ್ಛೆ ಉಂಟಾದಾಗ ಕಣ್ಣುಗುಡ್ಡೆಗಳೂ, ಅದರ ಅಭಿಮಾನಿ ಸೂರ್ಯನು ಮತ್ತು ನೇತ್ರೇಂದ್ರಿಯವು ಪ್ರಕಟವಾಯಿತು. ಇದರಿಂದಲೇ ರೂಪದ ಗ್ರಹಣ ಸಾಧ್ಯವಾಯಿತು. ॥ ೨೧ ॥ ಅನಂತರ ವೇದರೂಪೀ ಋಷಿಗಳು ವಿರಾಟ್‌ಪುರುಷನನ್ನು ಸ್ತೋತ್ರಗಳಿಂದ ಎಚ್ಚರಿಸತೊಡಗಿದಾಗ ಅವನಿಗೆ ಕೇಳಬೇಕೆಂಬ ಇಚ್ಛೆಯಾಯಿತು. ಆಗಲೇ ಕಿವಿಗಳು, ಅದರ ಅಭಿಮಾನಿದೇವತೆಗಳು ದಿಕ್ಕುಗಳು ಮತ್ತು ಶ್ರೋತ್ರೇಂದ್ರಿಯವು ಪ್ರಕಟವಾಯಿತು. ॥ ೨೨ ॥ ಬಳಿಕ ಅವನು ವಸ್ತುಗಳ ಮೃದುತ್ವ, ಕಾಠಿನ್ಯ, ಲಘುತ್ವ, ಗುರುತ್ವ, ಉಷ್ಣತೆ, ಶೈತ್ಯ ಮುಂತಾದವುಗಳನ್ನು ಅರಿಯಲು ಬಯಸಿದಾಗ ಅವನ ಶರೀರದಲ್ಲಿ ಚರ್ಮ ಪ್ರಕಟವಾಯಿತು. ಪೃಥ್ವಿಯಿಂದ ಮರಗಳು ಹುಟ್ಟುವಂತೆ ಆ ಚರ್ಮದಿಂದ ರೋಮಗಳೂ ಮತ್ತು ಅದರ ಒಳಗೂ-ಹೊರಗೂ ವ್ಯಾಪಿಸಿರುವ ವಾಯುವು ಪ್ರಕಟವಾಯಿತು. ಸ್ಪರ್ಶವನ್ನು ಗ್ರಹಿಸುವ ತ್ವಗ್‌ಇಂದ್ರಿಯವೂ ಜೊತೆ-ಜೊತೆಯಲ್ಲೇ ಶರೀರದಲ್ಲಿ ಎಲ್ಲ ಕಡೆಗಳಲ್ಲಿ ಬಂದು ಸುತ್ತಿಕೊಂಡಿತು. ಅದರಿಂದ ಅವನಿಗೆ ಸ್ಪರ್ಶದ ಅನುಭವವಾಗತೊಡಗಿತು. ॥ ೨೩ ॥ ಅವನಿಗೆ

ಹಸ್ತೌ ರುರುಹತುಸ್ತಸ್ಯ ನಾನಾಕರ್ಮಚಿಕೀರ್ಷಯಾ ।
ತಯೋಸ್ತು ಬಲಮಿಂದ್ರಶ್ಚ ಆದಾನಮುಭಯಾಶ್ರಯಮ್ ॥ ೨೪ ॥

ಗತಿಂ ಜಿಗೀಷತಃ ಪಾದೌ ರುರುಹಾತೇಽಭಿಕಾಮಿಕಾಮ್ ।
ಪದ್ಭ್ಯಾಂ ಯಜ್ಞಃ ಸ್ವಯಂ ಹವ್ಯಂ ಕರ್ಮಭಿಃ ಕ್ರಿಯತೇ ನೃಭಿಃ ॥ ೨೫ ॥

ನಿರಭಿದ್ಯತ ಶಿಶ್ನೋ ವೈ ಪ್ರಜಾನಂದಾ ಮೃತಾರ್ಥಿನಃ ।
ಉಪಸ್ಥ ಆಸೀತ್ಕಾಮಾನಾಂ ಪ್ರಿಯಂ ತದುಭಯಾಶ್ರಯಮ್ ॥ ೨೬ ॥

ಉತ್ಸಿಸೃಕ್ಷೋರ್ಧಾತುಮಲಂ ನಿರಭಿದ್ಯತ ವೈ ಗುದಮ್ ।
ತತಃ ಪಾಯುಸ್ತತೋ ಮಿತ್ರ ಉತ್ಸರ್ಗ ಉಭಯಾಶ್ರಯಃ ॥ ೨೭ ॥

ಆಸಿಸೃಪ್ಸೋಃ ಪುರಃ ಪುರ್ಯಾ ನಾಭಿದ್ವಾರಮಪಾನತಃ ।
ತತ್ರಾಪಾನಸ್ತತೋ ಮೃತ್ಯುಃ ಪೃಥಕ್ತ್ವಮುಭಯಾಶ್ರಯಮ್ ॥ ೨೮ ॥

ಆದಿತ್ಸೋರನ್ನಪಾನಾನಾಮಾಸನ್ ಕುಕ್ಷ್ಯಂತ್ರನಾಡಯಃ ।
ನದ್ಯಃ ಸಮುದ್ರಾಶ್ಚ ತಯೋಸ್ತುಷ್ಟಿಃ ಪುಷ್ಟಿಸ್ತದಾಶ್ರಯೇ ॥ ೨೯ ॥

ನಿದಿಧ್ಯಾಸೋರಾತ್ಮಮಾಯಾಂ ಹೃದಯಂ ನಿರಭಿದ್ಯತ ।
ತತೋ ಮನಸ್ತತಶ್ಚಂದ್ರಃ ಸಂಕಲ್ಪಃ ಕಾಮ ಏವ ಚ ॥ ೩೦ ॥

ನಾನಾಕರ್ಮಗಳನ್ನು ಮಾಡಬೇಕೆಂಬ ಇಚ್ಛೆ ಉಂಟಾದಾಗ ಅವನ ಕೈಗಳು ಮೂಡಿದವು. ಆ ಕೈಗಳಲ್ಲಿ ಪದಾರ್ಥಗಳನ್ನು ಗ್ರಹಣ ಮಾಡುವ ಶಕ್ತಿಯಾದ ಹಸ್ತೇಂದ್ರಿಯವೂ ಅದರ ಅಭಿಮಾನಿ ದೇವತೆಯಾದ ಇಂದ್ರನೂ ಪ್ರಕಟನಾದನು. ಆ ಇಬ್ಬರ ಆಶ್ರಯದಿಂದ ತೆಗೆದುಕೊಳ್ಳುವ – ಹಿಡಿದುಕೊಳ್ಳುವ ಕರ್ಮವೂ ಪ್ರಕಟವಾಯಿತು. ॥ ೨೪ ॥ ಅವನಿಗೆ ಬಯಸಿದಲ್ಲಿಗೆ ಹೋಗಬೇಕೆಂಬ ಇಚ್ಛೆಯುಂಟಾದಾಗ ಅವನ ಶರೀರದಲ್ಲಿ ಕಾಲುಗಳು ಮೂಡಿದವು. ಚರಣಗಳ ಜೊತೆಗೆ ಚರಣೇಂದ್ರಿಯದ ಅಧಿಷ್ಠಾನ ದೇವತೆಯಾದ ಯಜ್ಞಪುರುಷ ಭಗವಾನ್ ವಿಷ್ಣುವು ಕಾಣಿಸಿಕೊಂಡನು. ಆ ಚರಣಗಳಲ್ಲಿ ನಡಿಗೆಯೆಂಬ ಕರ್ಮವು ಪ್ರಕಟವಾಯಿತು. ಮನುಷ್ಯನು ಇದೇ ಚರಣೇಂದ್ರಿಯದಿಂದ ನಡೆಯುತ್ತಾ ಯಜ್ಞಸಾಮಗ್ರಿಯನ್ನು ಸಂಗ್ರಹಿಸುತ್ತಾನೆ. ॥ ೨೫ ॥ ಅನಂತರ ಅವನಿಗೆ ಸಂತಾನ, ರತಿಸುಖ, ಸಂತತಿಯಿಂದುಂಟಾಗುವ ಸ್ವರ್ಗಾದಿಭೋಗಗಳನ್ನು ಅನುಭವಿಸಬೇಕೆಂಬ ಬಯಕೆ ಉಂಟಾದಾಗ ವಿರಾಟ್ ಪುರುಷನ ಶರೀರದಲ್ಲಿ ಲಿಂಗದ ಉತ್ಪತ್ತಿಯಾಯಿತು. ಅದರಲ್ಲಿ ಉಪಸ್ಥೇಂದ್ರಿಯವೂ ಅದರ ಅಭಿಮಾನಿದೇವತೆ ಪ್ರಜಾಪತಿಯು ಹಾಗೂ ಇವೆರಡನ್ನು ಆಶ್ರಯಿಸಿರುವ ಕಾಮಸುಖವು ಉಂಟಾಯಿತು. ॥ ೨೬ ॥ ಅವನಿಗೆ ಮಲತ್ಯಾಗದ ಇಚ್ಛೆಯಾದಾಗ ಗುದದ್ವಾರ ಪ್ರಕಟವಾಯಿತು. ಅನಂತರ ಅದರಲ್ಲಿ ಪಾಯು-ಇಂದ್ರಿಯ ಮತ್ತು ಮಿತ್ರದೇವತೆಯೂ ಉತ್ಪನ್ನರಾದರು. ಇವೆರಡರಿಂದಲೇ ಮಲತ್ಯಾಗದ ಕ್ರಿಯೆಯು ನಡೆಯುವುದು. ॥ ೨೭ ॥ ಬಳಿಕ ವಿರಾಟ್‌ಪುರುಷನಿಗೆ ಒಂದು ದೇಹದಿಂದ ಮತ್ತೊಂದು ದೇಹಕ್ಕೆ ಹೋಗಬೇಕೆಂಬ ಅಭಿಲಾಷೆ ಉಂಟಾಗಲು, ಆಗ ಹೊಕ್ಕಳಿನ ದ್ವಾರವು ಪ್ರಕಟವಾಯಿತು. ಅದರಿಂದ ಅಪಾನವೂ, ಮೃತ್ಯುದೇವತೆಯೂ ಪ್ರಕಟಗೊಂಡರು. ಅವರಿಬ್ಬರ ಆಶ್ರಯದಿಂದಲೇ ಪ್ರಾಣಾಪಾನಗಳ ಅಗಲಿಕೆ ಅಂದರೆ ಮೃತ್ಯುವು ಆಗುವುದು. ॥ ೨೮ ॥ ವಿರಾಟ್‌ಪುರುಷನಿಗೆ ಅನ್ನ-ಪಾನೀಯಗಳನ್ನು ಸ್ವೀಕರಿಸಬೇಕೆಂಬ ಇಚ್ಛೆಯುಂಟಾದಾಗ ಹೊಟ್ಟೆಯೆಂಬ ಇಂದ್ರಿಯಸ್ಥಾನವೂ, ಕರುಳು-ನರಗಳೆಂಬ ಇಂದ್ರಿಯಗಳು ಉಂಟಾದುವು. ಜೊತೆಗೇ ಹೊಟ್ಟೆಯ ದೇವತೆ ಸಮುದ್ರವೂ, ನಾಡಿಗಳ ದೇವತೆ ನದಿಗಳೂ ಹಾಗೂ ತುಷ್ಟಿ ಮತ್ತು ಪುಷ್ಟಿ ಇವೆರಡೂ, ಅವುಗಳ ಆಶ್ರಿತ ವಿಷಯಗಳೂ ಉತ್ಪನ್ನವಾದುವು. ॥ ೨೯ ॥ ಬಳಿಕ ಆ ವಿರಾಟ್ ಪುರುಷನು ತನ್ನ ಮಾಯಾಶಕ್ತಿಯನ್ನು ಕುರಿತು ವಿಚಾರಮಾಡಲು ಬಯಸಿದಾಗ ಹೃದಯವೆಂಬ ಇಂದ್ರಿಯವುಂಟಾಯಿತು. ಅದರಿಂದ ಮನಸ್ಸೆಂಬ ಇಂದ್ರಿಯವೂ, ಅದರ ದೇವತೆಯಾದ ಚಂದ್ರನೂ ಮತ್ತು ವಿಷಯ ಕಾಮನೆ-ಸಂಕಲ್ಪಗಳೆಂಬ ವಿಷಯಗಳೂ ಉತ್ಪನ್ನವಾದುವು. (ಹೀಗೆ ಸಮಷ್ಟಿರೂಪವಾದ ವಿರಾಟ್‌ಪುರುಷನಿಂದ ಆಧ್ಯಾತ್ಮಿಕ, ಆಧಿದೈವಿಕ, ಆಧಿಭೌತಿಕಗಳೆಂಬ ಭೇದಾನುಸಾರ ವ್ಯಷ್ಟಿ ರೂಪವಾಗಿ ಅವಯವಗಳು ಉಂಟಾದುವು. ಇನ್ನು ಅವುಗಳ ಅಂಶಗಳ ಉತ್ಪತ್ತಿಯನ್ನು ಹೇಳುವೆನು ಕೇಳು.) ॥ ೩೦ ॥ ಆ

ತ್ವಕ್ಚರ್ಮಮಾಂಸರುಧಿರಮೇದೋಮಜ್ಜಾಸ್ಥಿಧಾತವಃ ।
ಭೂಮ್ಯಪ್ತೇಜೋಮಯಾಃ ಸಪ್ತ
ಪ್ರಾಣೋ ವ್ಯೋಮಾಂಬುವಾಯುಭಿಃ ॥ ೩೧ ॥

ಗುಣಾತ್ಮಕಾನೀಂದ್ರಿಯಾಣಿ ಭೂತಾದಿಪ್ರಭವಾ ಗುಣಾಃ ।
ಮನಃ ಸರ್ವವಿಕಾರಾತ್ಮಾ ಬುದ್ಧಿರ್ವಿಜ್ಞಾನರೂಪಿಣೀ ॥ ೩೨ ॥

ಏತದ್ಭಗವತೋ ರೂಪಂ ಸ್ಥೂಲಂ ತೇ ವ್ಯಾಹೃತಂ ಮಯಾ ।
ಮಹ್ಯಾದಿಭಿಶ್ಚಾವರಣೈರಷ್ಟಭಿರ್ಬಹಿರಾವೃತಮ್ ॥ ೩೩ ॥

ಅತಃ ಪರಂ ಸೂಕ್ಷ್ಮತಮಮವ್ಯಕ್ತಂ ನಿರ್ವಿಶೇಷಣಮ್ ।
ಅನಾದಿಮಧ್ಯನಿಧನಂ ನಿತ್ಯಂ ವಾಙ್ಮನಸಃ ಪರಮ್ ॥ ೩೪ ॥

ಅಮುನೀ ಭಗವದ್ರೂಪೇ ಮಯಾ ತೇ ಅನುವರ್ಣಿತೇ ।
ಉಭೇ ಅಪಿ ನ ಗೃಹ್ಣಂತಿ ಮಾಯಾಸೃಷ್ಟೇ ವಿಪಶ್ಚಿತಃ ॥ ೩೫ ॥

ಸ ವಾಚ್ಯವಾಚಕತಯಾ ಭಗವಾನ್ ಬ್ರಹ್ಮರೂಪಧೃಕ್ ।
ನಾಮರೂಪಕ್ರಿಯಾ ಧತ್ತೇ ಸಕರ್ಮಾಕರ್ಮಕಃ ಪರಃ ॥ ೩೬ ॥

ಪ್ರಜಾಪತೀನ್ಮನೂನ್ ದೇವಾನೃಷೀನ್ ಪಿತೃಗಣಾನ್ಪೃಥಕ್ ।
ಸಿದ್ಧಚಾರಣಗಂಧರ್ವಾನ್ ವಿದ್ಯಾಧ್ರಾಸುರಗುಹ್ಯಕಾನ್ ॥ ೩೭ ॥

ಕಿನ್ನರಾಪ್ಸರಸೋ ನಾಗಾನ್ ಸರ್ಪಾನ್ ಕಿಂಪುರುಷೋರಗಾನ್ ।
ಮಾತೄ ರಕ್ಷಃಪಿಶಾಚಾಂಶ್ಚ ಪ್ರೇತಭೂತವಿನಾಯಕಾನ್ ॥ ೩೮ ॥

ಕೂಷ್ಮಾಂಡೋನ್ಮಾದವೇತಾಲಾನ್ಯಾತುಧಾನಾನ್ಗ್ರಹಾನಪಿ ।
ಖಗಾನ್ಮೃಗಾನ್ಪಶೂನ್ವೃಕ್ಷಾನ್ಗಿರೀನ್ನೃಪ ಸರೀಸೃಪಾನ್ ॥ ೩೯ ॥

ದ್ವಿವಿಧಾಶ್ಚತುರ್ವಿಧಾ ಯೇಽನ್ಯೇ ಜಲಸ್ಥಲನಭೌಕಸಃ ।
ಕುಶಲಾಕುಶಲಾ ಮಿಶ್ರಾಃ ಕರ್ಮಣಾಂ ಗತಯಸ್ತ್ವಿಮಾಃ ॥ ೪೦ ॥

ವಿರಾಟ್‌ಪುರುಷನ ಶರೀರದಲ್ಲಿ ಪೃಥ್ವಿ, ಜಲ, ತೇಜಸ್ಸುಗಳಿಂದ ತ್ವಕ್, ಚರ್ಮ, ಮಾಂಸ, ರಕ್ತ, ಮೇದಸ್ಸು, ಮಜ್ಜೆ, ಅಸ್ಥಿಗಳೆಂಬ ಏಳು ಧಾತುಗಳು ಪ್ರಕಟಗೊಂಡವು. ಹಾಗೆಯೇ ಆಕಾಶ, ಜಲ, ವಾಯುಗಳಿಂದ ಪ್ರಾಣಗಳ ಉತ್ಪತ್ತಿಯೂ ಆಯಿತು. ॥ ೩೧ ॥ ಶ್ರೋತ್ರಾದಿ ಎಲ್ಲ ಇಂದ್ರಿಯಗಳು ಶಬ್ದಾದಿ ವಿಷಯಗಳನ್ನು ಗ್ರಹಣ ಮಾಡುವಂತಹ ಆ ವಿಷಯಗಳು ಅಹಂಕಾರದಿಂದ ಉತ್ಪನ್ನವಾಗಿವೆ. ಮನಸ್ಸು-ಕಾಮ, ಸಂಕಲ್ಪ, ವಿಕಲ್ಪ ಮುಂತಾದ ಎಲ್ಲ ವಿಕಾರಗಳ ಉತ್ಪತ್ತಿ ಸ್ಥಾನವಾಗಿದೆ. ಬುದ್ಧಿಯು ಸಮಸ್ತ ಪದಾರ್ಥಗಳ ಅರಿವನ್ನು ಉಂಟುಮಾಡುತ್ತದೆ. ॥ ೩೨ ॥ ಹೀಗೆ ಭಗವಂತನ ಈ ಸ್ಥೂಲರೂಪವನ್ನು ನಿನಗೆ ವರ್ಣಿಸಿರುವೆನು. ಇದು ಹೊರಗಡೆಯಿಂದ ಪೃಥಿವೀ, ಜಲ, ತೇಜಸ್ಸು, ವಾಯು, ಆಕಾಶ, ಅಹಂಕಾರ, ಮಹತ್ತತ್ತ್ವ ಮತ್ತು ಪ್ರಕೃತಿ ಈ ಎಂಟು ಆವರಣಗಳಿಂದ ಸುತ್ತುವರಿದಿದೆ. ॥ ೩೩ ॥ ಈ ಸ್ಥೂಲರೂಪಕ್ಕಿಂತ ಪರವಾದ, ಉತ್ತಮವಾದ ಭಗವಂತನ ಸೂಕ್ಷ್ಮರೂಪವಿದೆ. ಇದು ಅವ್ಯಕ್ತವೂ, ನಿರ್ವಿಶೇಷವೂ, ಆದಿ-ಮಧ್ಯಾಂತರರಹಿತವೂ, ನಿತ್ಯವೂ ಆದುದು. ಮಾತು-ಮನಸ್ಸುಗಳಿಗೆ ಅಗೋಚರವಾದುದು. ॥ ೩೪ ॥

ನಾನು ನಿನಗೆ ಈವರೆಗೆ ವರ್ಣಿಸಿದ ಭಗವಂತನ ಸ್ಥೂಲ-ಸೂಕ್ಷ್ಮ ವ್ಯಕ್ತ-ಅವ್ಯಕ್ತಗಳೆರಡೂ ಮಾಯೆಯಿಂದ ರಚಿತವಾಗಿವೆ. ಆದರಿಂದ ವಿದ್ವಾಂಸರಾದವರು ಇವೆರಡನ್ನೂ ಸ್ವೀಕರಿಸುವುದಿಲ್ಲ. ॥ ೩೫ ॥ (ಇನ್ನು ಭಗವಂತನ ಗುಣ ಕರ್ಮಗಳನ್ನು ಹೇಳುತ್ತೇನೆ –) ನಿಜವಾಗಿ ಭಗವಂತನು ನಿಷ್ಕ್ರಿಯನಾಗಿದ್ದಾನೆ. ತನ್ನ ಶಕ್ತಿ (ಸಂಕಲ್ಪ) ಯಿಂದಲೇ ಸಕ್ರಿಯನಾಗುತ್ತಾನೆ. ಮತ್ತೆ ಅವನೇ ಬ್ರಹ್ಮನ ಅಥವಾ ವಿರಾಟ್ ರೂಪವನ್ನು ಧರಿಸಿ, ವಾಚ್ಯ-ವಾಚಕ, ಶಬ್ದ ಮತ್ತು ಅದರ ಅರ್ಥ ಇವುಗಳ ರೂಪದಲ್ಲಿ ಪ್ರಕಟನಾಗುತ್ತಾನೆ. ಬಳಿಕ ಅನೇಕ ನಾಮ, ರೂಪ, ಕ್ರಿಯೆಗಳನ್ನು ಸ್ವೀಕರಿಸುತ್ತಾನೆ. ವಾಸ್ತವವಾಗಿ ಅವನು ಪರಬ್ರಹ್ಮನಾಗಿದ್ದಾನೆ. ನಿರ್ಗುಣ, ನಿರಾಕಾರ, ಭಗವಂತನಾಗಿದ್ದಾನೆ. ॥ ೩೬ ॥ ಪರೀಕ್ಷಿದ್ರಾಜನೇ! ಮರೀಚಿಯೇ ಮುಂತಾದ ನವಪ್ರಜಾಪತಿಗಳೂ, ಸ್ವಾಯಂಭುವನೇ ಆದಿ ಹದಿನಾಲ್ಕು ಮನುಗಳೂ, ಇಂದ್ರಾದಿದೇವತೆಗಳೂ, ಋಷಿಗಳೂ, ಪಿತೃಗಳೂ, ಸಿದ್ಧರೂ, ಚಾರಣರೂ, ಗಂಧರ್ವರೂ, ವಿದ್ಯಾಧರರೂ, ಅಸುರರೂ, ಯಕ್ಷರೂ, ಕಿನ್ನರರೂ, ಅಪ್ಸರೆಯರೂ, ನಾಗರೂ, ಸರ್ಪಗಳೂ, ಕಿಂಪುರುಷರೂ, ಉರಗರೂ, ಮಾತೃಕೆಯರೂ, ರಾಕ್ಷಸರೂ, ಪಿಶಾಚಿಗಳೂ, ಪ್ರೇತಗಳೂ, ಭೂತಗಳೂ, ವಿನಾಯಕರೂ, ಕೂಷ್ಮಾಂಡರೂ, ಉನ್ಮಾದರೂ, ವೇತಾಳರೂ, ಯಾತುಧಾನರೂ, ಗ್ರಹರೂ, ಪಕ್ಷಿಗಳೂ, ಮೃಗಗಳೂ, ಪಶುಗಳೂ, ವೃಕ್ಷಗಳೂ, ಪರ್ವತಗಳೂ, ಸರೀಸೃಪಗಳೂ ಮುಂತಾದ ಪ್ರಪಂಚದಲ್ಲಿರುವ ನಾಮ-ರೂಪಗಳೆಲ್ಲವೂ ಭಗವಂತನವೇ ಆಗಿವೆ. ॥ ೩೭-೩೯ ॥ ಜಗತ್ತಿನಲ್ಲಿ ಸ್ಥಾವರ-ಜಂಗಮವೆಂಬ ಇಬ್ಬಗೆಯ ಹಾಗೂ ಜರಾಯುಜ, ಅಂಡಜ, ಸ್ವೇದಜ, ಉದ್ಭಿಜ್ಜವೆಂಬ ಭೇದದಿಂದ ನಾಲ್ಕು ಪ್ರಕಾರದ ಜಲಚರ,

ಸತ್ತ್ವಂ ರಜಸ್ತಮ ಇತಿ ತಿಸ್ರಃ ಸುರನೃನಾರಕಾಃ ।
ತತ್ರಾಪ್ಯೇಕೈಕಶೋ ರಾಜನ್ ಭಿದ್ಯಂತೇ ಗತಯಸ್ತ್ರಿಧಾ ।
ಯದೈಕೈಕತರೋಽನ್ಯಾಭ್ಯಾಂ ಸ್ವಭಾವ ಉಪಹನ್ಯತೇ ॥ ೪೧ ॥

ಸ ಏವೇದಂ ಜಗದ್ಧಾತಾ ಭಗವಾಂಧರ್ಮರೂಪಧೃಕ್ ।
ಪುಷ್ಣಾತಿ ಸ್ಥಾಪಯನ್ ವಿಶ್ವಂ ತಿರ್ಯಙ್ನರಸುರಾತ್ಮಭಿಃ ॥ ೪೨ ॥

ತತಃ ಕಾಲಾಗ್ನಿ ರುದ್ರಾತ್ಮಾ ಯತ್ಸೃಷ್ಟಮಿದಮಾತ್ಮನಃ ।
ಸಂನಿಯಚ್ಛತಿ ಕಾಲೇನ ಘನಾನೀಕಮಿವಾನಿಲಃ ॥ ೪೩ ॥

ಇತ್ಥಂಭಾವೇನ ಕಥಿತೋ ಭಗವಾನ್ ಭಗವತ್ತಮಃ ।
ನೇತ್ಥಂಭಾವೇನ ಹಿ ಪರಂ ದ್ರಷ್ಟುಮರ್ಹಂತಿ ಸೂರಯಃ ॥ ೪೪ ॥

ನಾಸ್ಯ ಕರ್ಮಣಿ ಜನ್ಮಾದೌ ಪರಸ್ಯಾನುವಿಧೀಯತೇ ।
ಕರ್ತೃತ್ವಪ್ರತಿಷೇಧಾರ್ಥಂ ಮಾಯಯಾರೋಪಿತಂ ಹಿ ತತ್ ॥ ೪೫ ॥

ಅಯಂ ತು ಬ್ರಹ್ಮಣಃ ಕಲ್ಪಃ ಸವಿಕಲ್ಪ ಉದಾಹೃತಃ ।
ವಿಧಿಃ ಸಾಧಾರಣೋ ಯತ್ರ ಸರ್ಗಾಃ ಪ್ರಾಕೃತವೈಕೃತಾಃ ॥ ೪೬ ॥

ಪರಿಮಾಣಂ ಚ ಕಾಲಸ್ಯ ಕಲ್ಪಲಕ್ಷಣವಿಗ್ರಹಮ್ ।
ಯಥಾ ಪುರಸ್ತಾದ್ವ್ಯಾಖ್ಯಾಸ್ಯೇ ಪಾದ್ಮಂ ಕಲ್ಪಮಥೋ ಶೃಣು ॥ ೪೭ ॥

ಶೌನಕ ಉವಾಚ

ಯದಾಹ ನೋ ಭವಾನ್ಸೂತ ಕ್ಷತ್ತಾ ಭಾಗವತೋತ್ತಮಃ ।
ಚಚಾರ ತೀರ್ಥಾನಿ ಭುವಸ್ತ್ಯಕ್ತ್ವಾ ಬಂಧೂನ್ಸುದುಸ್ತ್ಯಜಾನ್ ॥ ೪೮ ॥

ಸ್ಥಳಚರ, ನಭಚರ ಎಷ್ಟು ಪ್ರಾಣಿಗಳಿವೆಯೋ ಅವೆಲ್ಲವುಗಳ ಶುಭ-ಅಶುಭ ಮತ್ತು ಮಿಶ್ರಿತ ಕರ್ಮಗಳನುಸಾರ ಗತಿಯುಂಟಾಗುತ್ತದೆ. ॥ ೪೦ ॥ ಸತ್ತ್ವಗುಣದ ಪ್ರಧಾನತೆಯಿಂದ ದೇವತಾ ಯೋನಿಯೂ, ರಜೋಗುಣದ ಪ್ರಧಾನತೆಯಿಂದ ಮನುಷ್ಯ ಯೋನಿಯೂ, ತಮೋಗುಣದ ಪ್ರಧಾನತೆಯಿಂದ ನಾರಕೀಯ ಯೋನಿಗಳೂ ದೊರೆಯುತ್ತವೆ. ಈ ಗುಣಗಳಲ್ಲಿಯೂ ಒಂದು ಗುಣವು ಇನ್ನೆರಡು ಗುಣಗಳಿಂದ ಆಕ್ರಮಿಸಲ್ಪಟ್ಟಾಗ ಪ್ರತಿಯೊಂದರ ಮೂರು-ಮೂರು ಭೇದಗಳಾಗುವವು. ॥ ೪೧ ॥ ಆ ಭಗವಂತನೇ ಧರ್ಮಮಯ ವಿಷ್ಣುರೂಪವನ್ನು ಸ್ವೀಕರಿಸಿ, ದೇವತೆ, ಮನುಷ್ಯ, ಪಶು-ಪಕ್ಷಿ ಮುಂತಾದ ರೂಪಗಳಲ್ಲಿ ಅವತರಿಸಿ ವಿಶ್ವದ ಪಾಲನೆ- ಪೋಷಣೆಗಳನ್ನು ಮಾಡುತ್ತಾನೆ. ॥ ೪೨ ॥ ಪ್ರಳಯ ಸಮಯ ಬಂದಾಗ ಆ ಭಗವಂತನೇ ಕಾಲಾಗ್ನಿಸ್ವರೂಪೀ ರುದ್ರನ ರೂಪವನ್ನು ಸ್ವೀಕರಿಸಿ – ವಾಯುವು ಮೇಘಮಾಲೆಯನ್ನು ತನ್ನಲ್ಲಿ ಲಯಗೊಳಿಸಿಕೊಳ್ಳುವಂತೆ ತಾನೇ ಸೃಷ್ಟಿಸಿದ ವಿಶ್ವವನ್ನು ಉಪಸಂಹಾರಮಾಡಿಕೊಂಡುಬಿಡುತ್ತಾನೆ. ॥ ೪೩ ॥

ಪರೀಕ್ಷಿದ್ರಾಜನೇ! ಅಚಿಂತ್ಯ ಐಶ್ವರ್ಯವುಳ್ಳ ಭಗವಂತನನ್ನು ಭಾಗವತೋತ್ತಮರು ಇದೇ ರೀತಿಯಲ್ಲಿ ವರ್ಣಿಸಿರುವರು. ಆದರೆ ತತ್ತ್ವಜ್ಞಾನಿಗಳು ಮಾತ್ರ ಕೇವಲ ಸೃಷ್ಟಿ, ಸ್ಥಿತಿ, ಲಯಗಳನ್ನು ಮಾಡುವಷ್ಟೇ ರೂಪದಲ್ಲಿ ಅವನನ್ನು ಸಂದರ್ಶಿಸಲು ಬಯಸುವುದಿಲ್ಲ. ಏಕೆಂದರೆ ಅವನಾದರೋ ಇದರಿಂದ ಅತೀತನೂ ಆಗಿದ್ದಾನೆ. ಗುಣಾತೀತನಾಗಿದ್ದಾನೆ. ಎಲ್ಲಕ್ಕಿಂತ ಮಹತ್ತಾಗಿದ್ದಾನೆ ಎಂದು ತಿಳಿಯುತ್ತಾರೆ. ॥ ೪೪ ॥ ಸೃಷ್ಟಿರಚನಾದಿ ಕರ್ಮಗಳನ್ನು ಹೇಳಿ ಪೂರ್ಣ ಪರಮಾತ್ಮನಲ್ಲಿ ಕರ್ಮ ಅಥವಾ ಕರ್ತೃತ್ವದ ಸಂಬಂಧವನ್ನು ಆರೋಪಿಸಿ ನಿರೂಪಿಸಲಿಲ್ಲ. ಆದಾದರೋ ಮಾಯೆಯಿಂದ ಆರೋಪಿತನಾದ ಕಾರಣ ಕರ್ತೃತ್ವದ ನಿಷೇಧಮಾಡಲೆಂದೇ ನಿರೂಪಿಸಲಾಗಿದೆ. ॥ ೪೫ ॥ ಇದನ್ನು ನಾನು ಬ್ರಹ್ಮದೇವರ ಮಹಾಕಲ್ಪದ ಅವಾಂತರ ಕಲ್ಪಗಳೊಡನೆ ವರ್ಣಿಸುವೆನು. ಎಲ್ಲ ಕಲ್ಪಗಳಲ್ಲಿ ಸೃಷ್ಟಿಯೂ ಒಂದೇ ರೀತಿ ಇರುತ್ತದೆ. ಆದರೆ ಇಷ್ಟು ಭಾಗದಲ್ಲಿ ಮಾತ್ರ ವ್ಯತ್ಯಾಸ ವಿರುತ್ತದೆ – ಮಹಾಕಲ್ಪದ ಪ್ರಾರಂಭದಲ್ಲಿ ಪ್ರಕೃತಿಯಿಂದ ಕ್ರಮವಾಗಿ ಮಹತ್ತತ್ತ್ವಾದಿಗಳ ಉತ್ಪತ್ತಿಯಾಗುತ್ತದೆ ಮತ್ತು ಕಲ್ಪಗಳ ಪ್ರಾರಂಭದಲ್ಲಿ ಪ್ರಾಕೃತ ಸೃಷ್ಟಿಯಾದರೋ ಹಾಗೆಯೇ ಇರುತ್ತದೆ. ಚರಾಚರ ಪ್ರಾಣಿಗಳ ವೈಕೃತಿಕ ಸೃಷ್ಟಿಯು ಹೊಸದಾಗಿ ಆಗುತ್ತದೆ. ॥ ೪೬ ॥ ರಾಜೇಂದ್ರಾ! ಕಾಲದ ಪರಿಮಾಣ, ಕಲ್ಪ ಮತ್ತು ಅದರ ಅಂತರ್ಗತ ಮನ್ವಂತರಗಳ ವರ್ಣನೆ ಮುಂದೆ ಮಾಡಲಾಗುವುದು. ಈಗ ನೀನು ಪಾದ್ಮಕಲ್ಪದ ವರ್ಣನೆಯನ್ನು ಸಾವಧಾನವಾಗಿ ಕೇಳು. ॥ ೪೭ ॥

ಶೌನಕರು ಕೇಳಿದರು – ಸೂತಪುರಾಣಿಕರೇ! ಭಗವಂತನ ಪರಮಭಕ್ತ ವಿದುರನು ತೊರೆಯಲು ಕಷ್ಟಸಾಧ್ಯರಾದ ಬಂಧುಗಳನ್ನು ತೊರೆದು ತೀರ್ಥಯಾತ್ರೆ ಮಾಡುತ್ತಿದ್ದನು ಎಂದು ನೀವು

ಕ್ಷತ್ತುಃ ಕೌಷಾರವೇಸ್ತಸ್ಯ ಸಂವಾದೋಽಧ್ಯಾತ್ಮಸಂಶ್ರಿತಃ ।
ಯದ್ವಾ ಸ ಭಗವಾಂಸ್ತಸ್ಮೈ ಪೃಷ್ಟಸ್ತತ್ತ್ವಮುವಾಚ ಹ ॥ ೪೯ ॥

ಬ್ರೂಹಿ ನಸ್ತದಿದಂ ಸೌಮ್ಯ ವಿದುರಸ್ಯ ವಿಚೇಷ್ಟಿತಮ್ ।
ಬಂಧುತ್ಯಾಗನಿಮಿತ್ತಂ ಚ ತಥೈವಾಗತವಾನ್ಪುನಃ ॥ ೫೦ ॥

ಸೂತ ಉವಾಚ

ರಾಜ್ಞಾ ಪರೀಕ್ಷಿತಾ ಪೃಷ್ಟೋ ಯದವೋಚನ್ಮಹಾಮುನಿಃ ।
ತದ್ವೋಽಭಿಧಾಸ್ಯೇ ಶೃಣುತ ರಾಜ್ಞಃ ಪ್ರಶ್ನಾನುಸಾರತಃ ॥ ೫೧ ॥

ನಮಗೆ ಹೇಳಿರುವಿರಿ. ॥ ೪೮ ॥ ಆ ಯಾತ್ರೆಯಲ್ಲಿ ಮೈತ್ರೇಯ ಮುನಿಗಳೊಂದಿಗೆ ಆಧ್ಯಾತ್ಮಿಕ ವಿಷಯವಾಗಿ ಸಂಭಾಷಣೆ ನಡೆಯಿತು. ಅವನು ಪ್ರಶ್ನಿಸಿದಾಗ ಮೈತ್ರೇಯರು ಯಾವ ತತ್ತ್ವವನ್ನು ಉಪದೇಶಿಸಿದರು ? ॥ ೪೯ ॥ ಸೂತಪುರಾಣಿಕರೇ ! ನಿಮ್ಮ ಸ್ವಭಾವವು ತುಂಬಾ ಸೌಮ್ಯವಾಗಿದೆ. ನೀವು ವಿದುರನ ಆ ಚರಿತ್ರೆಯನ್ನು ನಮಗೆ ಹೇಳಿರಿ. ಅವರು ಬಂಧು-ಮಿತ್ರರನ್ನು ಏಕೆ ಬಿಟ್ಟು ಹೋದರು ? ಮತ್ತೆ ಪುನಃ ಅವರ ಬಳಿಗೆ ಏಕೆ ಮರಳಿದರು ? ॥ ೫೦ ॥

ಸೂತಪುರಾಣಿಕರು ಹೇಳಿದರು – ಶೌನಕಾದಿ ಮಹರ್ಷಿಗಳೇ! ರಾಜಾ ಪರೀಕ್ಷಿತನೂ ಇದೇ ಮಾತನ್ನು ಕೇಳಿದ್ದನು. ಅವನ ಪ್ರಶ್ನೆಗಳ ಉತ್ತರದಲ್ಲಿ ಶ್ರೀಶುಕಮಹಾಮುನಿಗಳು ಹೇಳಿದುದನ್ನೇ ನಾನು ನಿಮಗೆ ಹೇಳುವೆನು. ಸಾವಧಾನವಾಗಿ ಕೇಳಿರಿ. ॥ ೫೧ ॥

ಹತ್ತನೆಯ ಅಧ್ಯಾಯವು ಮುಗಿಯಿತು. ॥ ೧೦ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದ್ವಿತೀಯಸ್ಕಂಧೇ
ಪುರುಷಸಂಸ್ಥಾನುವರ್ಣನಂ ನಾಮ ದಶಮೋಽಧ್ಯಾಯಃ ॥ ೧೦ ॥

ಎರಡನೆಯ ಸ್ಕಂಧವು ಸಂಪೂರ್ಣವಾಯಿತು.

॥ ಓಂ ನಮೋ ಭಗವತೇ ವಾಸುದೇವಾಯ ॥

ಶ್ರೀಮದ್ಭಾಗವತಮಹಾಪುರಾಣಮ್

ತೃತೀಯಃ ಸ್ಕಂಧಃ

ಮೊದಲನೆಯ ಅಧ್ಯಾಯ

ಉದ್ಧವ ವಿದುರರ ಸಮಾಗಮ – ಸಂಭಾಷಣೆ

ಶ್ರೀಶುಕ ಉವಾಚ

ಏವಮೇತತ್ಪುರಾ ಪೃಷ್ಟೋ ಮೈತ್ರೇಯೋ ಭಗವಾನ್ಕಿಲ ।
ಕ್ಷತ್ತ್ರಾ ವನಂ ಪ್ರವಿಷ್ಟೇನ ತ್ಯಕ್ತ್ವಾ ಸ್ವಗೃಹಮೃದ್ಧಿಮತ್ ॥ ೧ ॥

ಯದ್ವಾ ಅಯಂ ಮನ್ತ್ರಕೃದ್ವೋ ಭಗವಾನಖಿಲೇಶ್ವರಃ ।
ಪೌರವೇಂದ್ರಗೃಹಂ ಹಿತ್ವಾ ಪ್ರವಿವೇಶಾತ್ಮಸಾತ್ಕೃತಮ್ ॥ ೨ ॥

ರಾಜೋವಾಚ

ಕುತ್ರ ಕ್ಷತ್ತುರ್ಭಗವತಾ ಮೈತ್ರೇಯೇಣಾಸ ಸಂಗಮಃ ।
ಕದಾ ವಾ ಸಹ ಸಂವಾದ ಏತದ್ವರ್ಣಯ ನಃ ಪ್ರಭೋ ॥ ೩ ॥

ನ ಹ್ಯಲ್ಪಾರ್ಥೋದಯಸ್ತಸ್ಯ ವಿದುರಸ್ಯಾಮಲಾತ್ಮನಃ ।
ತಸ್ಮಿನ್ವರೀಯಸಿ ಪ್ರಶ್ನಃ ಸಾಧುವಾದೋಪಬೃಂಹಿತಃ ॥ ೪ ॥

ಸೂತ ಉವಾಚ

ಸ ಏವಮೃಷಿವರ್ಯೋಽಯಂ ಪೃಷ್ಟೋ ರಾಜ್ಞಾ ಪರೀಕ್ಷಿತಾ ।
ಪ್ರತ್ಯಾಹ ತಂ ಸುಬಹುವಿತ್ ಪ್ರೀತಾತ್ಮಾ ಶ್ರೂಯತಾಮಿತಿ ॥ ೫ ॥

ಶ್ರೀಶುಕ ಉವಾಚ

ಯದಾ ತು ರಾಜಾ ಸ್ವಸುತಾನಸಾಧೂನ್
ಪುಷ್ಣನ್ನಧರ್ಮೇಣ ವಿನಷ್ಟದೃಷ್ಟಿಃ ।
ಭ್ರಾತುರ್ಯವಿಷ್ಠಸ್ಯ ಸುತಾನ್ವಿಬಂಧೂನ್
ಪ್ರವೇಶ್ಯ ಲಾಕ್ಷಾಭವನೇ ದದಾಹ ॥ ೬ ॥

ಯದಾ ಸಭಾಯಾಂ ಕುರುದೇವದೇವ್ಯಾಃ
ಕೇಶಾಭಿಮರ್ಶಂ ಸುತಕರ್ಮ ಗರ್ಹ್ಯಮ್ ।
ನ ವಾರಯಾಮಾಸ ನೃಪಃ ಸ್ನುಷಾಯಾಃ
ಸ್ವಾಸ್ರೈರ್ಹರಂತ್ಯಾಃ ಕುಚಕುಂಕುಮಾನಿ ॥ ೭ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ! ನೀನು ಕೇಳಿರುವ ಮಾತನ್ನೇ ಹಿಂದೆ ತನ್ನ ಸುಖ-ಸಮೃದ್ಧಿಯಿಂದ ಕೂಡಿದ ಮನೆಯನ್ನು ತ್ಯಜಿಸಿ ಕಾಡಿಗೆ ಹೋಗಿರುವ ವಿದುರನು ಮೈತ್ರೇಯರಲ್ಲಿ ಕೇಳಿದ್ದನು. ॥ ೧ ॥ ಸರ್ವೇಶ್ವರನಾದ ಭಗವಾನ್ ಶ್ರೀಕೃಷ್ಣನು ಪಾಂಡವರ ದೂತನಾಗಿ ಹಸ್ತಿನಾವತಿಗೆ ಹೋಗಿದ್ದಾಗ, ದುರ್ಯೋಧನನ ಅರಮನೆಯನ್ನು ಬಿಟ್ಟು ಭಕ್ತಶ್ರೇಷ್ಠನಾದ ವಿದುರನನ್ನು ತನ್ನವನೆಂದೇ ತಿಳಿದು, ಅವನು ಕರೆಯದೆಯೇ ಆತನ ಮನೆಗೆ ಹೋಗಿದ್ದನು. ॥ ೨ ॥

ಪರೀಕ್ಷಿದ್ರಾಜನು ಕೇಳಿದನು – "ಮಹಾತ್ಮರೇ! ಭಗವಾನ್ ಮೈತ್ರೇಯರೊಂದಿಗೆ ವಿದುರನ ಸಮಾಗಮ ಎಲ್ಲಿ ಆಯಿತು? ಯಾವಾಗ ಆಗಿತ್ತು? ಎಂಬುದನ್ನು ತಿಳಿಸುವ ಕೃಪೆಮಾಡಿರಿ. ॥ ೩ ॥ ಪ್ರಶ್ನೆ ಮಾಡಿದವನು ಮಹಾತ್ಮನಾದ ವಿದುರನು. ಉತ್ತರ ಹೇಳಿದವರು ಮಹಾನುಭಾವರಾದ ಮೈತ್ರೇಯರು. ಅಂದ ಮೇಲೆ ಅದು ಅಲ್ಪ ಪ್ರಯೋಜನವುಳ್ಳ ಪ್ರಶ್ನೆಯಾಗಿರಲಾರದು. ಅತ್ಯಂತ ಮಹತ್ವಪೂರ್ಣವಾದ, ಪುರುಷಾರ್ಥಗಳನ್ನು ಕೈಗೂಡಿಸುವ ಪ್ರಶ್ನೆಯೇ ಆಗಿರಬೇಕು. ಭಗವಂತನ ಸಚ್ಚರಿತ್ರೆಗಳಿಂದ ಕೂಡಿರಬೇಕು. ಮಹಾತ್ಮರ ಶ್ಲಾಘನೆಗೆ ಪಾತ್ರವಾಗಿರಬೇಕು. ॥ ೪ ॥

ಸೂತಪುರಾಣಿಕರು ಹೇಳುತ್ತಾರೆ – ಶೌನಕರೇ! ಸರ್ವಜ್ಞರಾದ ಶುಕಮಹಾಮುನಿಗಳು ರಾಜನ ಪ್ರಶ್ನೆಯನ್ನು ಕೇಳಿ ಸಂತೋಷಗೊಂಡು ಅವನಿಗೆ ಹೇಳತೊಡಗಿದರು. ॥ ೫ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿದ್ರಾಜನೇ! ದೃಷ್ಟಿಹೀನನಾದ ಕುರುರಾಜ ಧೃತರಾಷ್ಟ್ರನು ಅನ್ಯಾಯದಿಂದ ದುಷ್ಟರಾಗಿದ್ದ ತನ್ನ ಮಕ್ಕಳನ್ನು ಪಾಲನೆ-ಪೋಷಣೆ ಮಾಡುತ್ತಾ, ತಮ್ಮನ ಮಕ್ಕಳಾಗಿದ್ದ, ಅನಾಥರಾಗಿದ್ದ ಪಾಂಡವರನ್ನು ಅರಗಿನಾಲಯಕ್ಕೆ ಕಳಿಸಿ ಬೆಂಕಿ ಹಚ್ಚಿಸಿದ್ದನು. ॥ ೬ ॥ ತನ್ನ ಸೊಸೆಯಾಗಿದ್ದ, ಮಹಾರಾಜಾ ಯುಧಿಷ್ಠಿರನ ಧರ್ಮಪತ್ನಿಯಾದ ದ್ರೌಪದಿಯ ತುರುಬನ್ನು ದುಷ್ಟ ದುಃಶಾಸನನು ತುಂಬಿದ ಸಭೆಯಲ್ಲಿ ಎಳೆದಾಗ ಆಕೆಯ ಕಣ್ಣುಗಳಿಂದ ಹರಿದ ಕಂಬನಿಧಾರೆಯು ಆಕೆಯ ಎದೆಗೆ ಹಚ್ಚಿಕೊಂಡಿದ್ದ ಕುಂಕುಮಕೇಸರಿಯು ತೊಳೆದುಹೋಗುತ್ತಿತ್ತು. ಆದರೂ ಧೃತರಾಷ್ಟ್ರನು ನೀಚನಾಗಿದ್ದ ತನ್ನ ಪುತ್ರನನ್ನು ಕುಮಾರ್ಗದಿಂದ ತಡೆಯಲಿಲ್ಲ. ॥ ೭ ॥ ಸತ್ಯಸಂಧನೂ, ಸಾಧುವೂ ಆಗಿದ್ದ ಧರ್ಮನಂದನನನ್ನು ಮರುಳ ದುರ್ಯೋಧನನು ಕಪಟ ದ್ಯೂತದಲ್ಲಿ ಗೆದ್ದು ಕಾಡಿಗೆ ಅಟ್ಟಿದನು. ಅವನು ಅಲ್ಲಿ ಹನ್ನೆರಡು ವರ್ಷದ

ದ್ಯೂತೇ ತ್ವಧರ್ಮೇಣ ಜಿತಸ್ಯ ಸಾಧೋಃ
ಸತ್ಯಾವಲಂಬಸ್ಯ ವನಾಗತಸ್ಯ ।
ನ ಯಾಚತೋಽದಾತ್ಸಮಯೇನ ದಾಯಂ
ತಮೋ ಜುಷಾಣೋ ಯದಜಾತಶತ್ರೋಃ ॥ ೮ ॥

ಯದಾ ಚ ಪಾರ್ಥಪ್ರಹಿತಃ ಸಭಾಯಾಂ
ಜಗದ್ಗುರುರ್ಯಾನಿ ಜಗಾದ ಕೃಷ್ಣಃ ।
ನ ತಾನಿ ಪುಂಸಾಮಮೃತಾಯನಾನಿ
ರಾಜೋರು ಮೇನೇ ಕ್ಷತಪುಣ್ಯಲೇಶಃ ॥ ೯ ॥

ಯದೋಪಹೂತೋ ಭವನಂ ಪ್ರವಿಷ್ಟೋ
ಮಂತ್ರಾಯ ಪೃಷ್ಟಃ ಕಿಲ ಪೂರ್ವಜೇನ ।
ಅಥಾಹ ತನ್ಮಂತ್ರದೃಶಾಂ ವರೀಯಾನ್
ಯನ್ಮಂತ್ರಿಣೋ ವೈದುರಿಕಂ ವದಂತಿ ॥ ೧೦ ॥

ಅಜಾತಶತ್ರೋಃ ಪ್ರತಿಯಚ್ಛ ದಾಯಂ
ತಿತಿಕ್ಷತೋ ದುರ್ವಿಷಹಂ ತವಾಗಃ ।
ಸಹಾನುಜೋ ಯತ್ರ ವೃಕೋದರಾಹಿಃ
ಶ್ವಸನ್ರುಷಾ ಯತ್ತ್ವಮಲಂ ಬಿಭೇಷಿ ॥ ೧೧ ॥

ಪಾರ್ಥಾಂಸ್ತು ದೇವೋ ಭಗವಾನ್ ಮುಕುಂದೋ
ಗೃಹೀತವಾನ್ ಸಕ್ಷಿತಿದೇವದೇವಃ ।
ಆಸ್ತೇ ಸ್ವಪುರ್ಯಾಂ ಯದುದೇವದೇವೋ
ವಿನಿರ್ಜಿತಾಶೇಷನೃದೇವದೇವಃ ॥ ೧೨ ॥

ಸ ಏಷ ದೋಷಃ ಪುರುಷದ್ವಿಡಾಸ್ತೇ
ಗೃಹಾನ್ ಪ್ರವಿಷ್ಟೋ ಯಮಪತ್ಯಮತ್ಯಾ ।
ಪುಷ್ಣಾಸಿ ಕೃಷ್ಣಾದ್ವಿಮುಖೋ ಗತಶ್ರೀಃ
ತ್ಯಜಾಶ್ವಶೈವಂ ಕುಲಕೌಶಲಾಯ ॥ ೧೩ ॥

ಇತ್ಯೂಚಿವಾಂಸ್ತತ್ರ ಸುಯೋಧನೇನ
ಪ್ರವೃದ್ಧಕೋಪಸ್ಫುರಿತಾಧರೇಣ ।
ಅಸತ್ಕೃತಃ ಸತ್ ಸ್ಪೃಹಣೀಯಶೀಲಃ
ಕ್ಷತ್ತಾ ಸಕರ್ಣಾನುಜ ಸೌಬಲೇನ ॥ ೧೪ ॥

ಕ ಏನಮತ್ರೋಪಜುಹಾವ ಜಿಹ್ಮಂ
ದಾಸ್ಯಾಃ ಸುತಂ ಯದ್ಬಲಿನೈವ ಪುಷ್ಟಃ ।
ತಸ್ಮಿನ್ಪ್ರತೀಪಃ ಪರಕೃತ್ಯ ಆಸ್ತೇ
ನಿರ್ವಾಸ್ಯತಾಮಾಶು ಪುರಾಚ್ಛ್ವಸಾನಃ ॥ ೧೫ ॥

ವನವಾಸವನ್ನೂ ಒಂದು ವರ್ಷದ ಅಜ್ಞಾತವಾಸವನ್ನೂ ಮುಗಿಸಿ ಬಂದು ನ್ಯಾಯೋಚಿತವಾದ ತನ್ನ ಭಾಗದ ರಾಜ್ಯವನ್ನು ಕೇಳಿಕೊಂಡರೂ ಮೋಹಾಂಧನಾಗಿ ಅಜಾತಶತ್ರುವಾದ ಧರ್ಮರಾಜನಿಗೆ ಕೊಡದೆ ತಿರಸ್ಕರಿಸಿದನು. ॥ ೮ ॥ ಧರ್ಮರಾಜನಿಂದ ಕಳುಹಿಸಲ್ಪಟ್ಟ ಜಗದ್ಗುರು ಭಗವಾನ್ ಶ್ರೀಕೃಷ್ಣನು ಕೌರವರ ಸಭೆಯಲ್ಲಿ – ಭೀಷ್ಮಾದಿ ಸತ್ಪುರುಷರಿಗೆ ಅಮೃತದಂತಿರುವ ಮಧುರ ಹಿತವಚನವನ್ನು ಹೇಳಿದನು. ಆದರೆ ಎಲ್ಲ ಪುಣ್ಯವನ್ನು ಕಳಕೊಂಡಿದ್ದ ಕುರುರಾಜನು ಅವನ್ನು ಆದರಿಸಲಿಲ್ಲ. ॥ ೯ ॥ ಮಂತ್ರಾಲೋಚನೆ-ಸಲುವಾಗಿ ವಿದುರನನ್ನು ಧೃತರಾಷ್ಟ್ರನು ಬರಮಾಡಿಕೊಂಡಾಗ, ಅವನು ಅರಮನೆಗೆ ಹೋದನು. ಅಣ್ಣ ಧೃತರಾಷ್ಟ್ರನು ಕೇಳಿದಾಗ ಮಂತ್ರಿಗಳಲ್ಲಿ ಶ್ರೇಷ್ಠನಾದ ಮಹಾತ್ಮಾ ವಿದುರನು ನೀಡಿದ ಮಂತ್ರಾಲೋಚನೆಯ ನೀತಿಗಳನ್ನು ನೀತಿಶಾಸ್ತ್ರಜ್ಞರು 'ವಿದುರನೀತಿ' ಎಂದು ಕರೆಯುತ್ತಾರೆ. ॥ ೧೦ ॥

ವಿದುರನೆಂದನು – ಅಣ್ಣಯ್ಯ ! ಅಜಾತ ಶತ್ರುವಾದ, ಮಹಾತ್ಮನಾದ ಯುಧಿಷ್ಠಿರನಿಗೆ ನೀನು ಆತನ ಹಕ್ಕಿನ ರಾಜ್ಯವನ್ನು ಕೊಟ್ಟುಬಿಡು. ಅವನು ಸಹಿಸಲು ಯೋಗ್ಯವಲ್ಲದ ಅಪರಾಧಗಳನ್ನೂ ಸಹಿಸಿಕೊಂಡಿರುವನು. ಭೀಮಸೇನನೆಂಬ ಕಾಲಸರ್ಪಕ್ಕೆ ನೀನೂ ಗಡ-ಗಡ ನಡುಗುತ್ತಿರುವೆ. ಅವನು ತನ್ನ ತಮ್ಮಂದಿರೊಡನೆ ಸೇಡು ತೀರಿಸಿಕೊಳ್ಳಲು ಕ್ರೋಧಾವೇಶದಿಂದ ಬುಸುಗುಟ್ಟುತ್ತಿರುವನು. ॥ ೧೧ ॥ ಬ್ರಾಹ್ಮಣರಿಗೂ, ದೇವತೆಗಳಿಗೂ ಆರಾಧ್ಯದೈವನಾದ ಭಗವಾನ್ ಶ್ರೀಕೃಷ್ಣನು ಪಾಂಡವರನ್ನು ತನ್ನವರನ್ನಾಗಿಸಿ ಕೊಂಡು ಕಾಪಾಡುತ್ತಿದ್ದಾನೆ. ಯಾದವವೀರರೆಲ್ಲರ ಆರಾಧ್ಯದೇವನಾದ ಅವನು ಈಗ ತನ್ನ ರಾಜಧಾನಿ ದ್ವಾರಕೆಯಲ್ಲೇ ಇದ್ದಾನೆ. ಅದ್ದರಿಂದ ನೀನು ಪಾಂಡವರೊಂದಿಗೆ ವಿರೋಧವನ್ನು ಕಟ್ಟಿಕೊಳ್ಳಬೇಡ. ಅವನು ಭೂಮಿಯಲ್ಲಿರುವ ರಾಜಾಧಿರಾಜರೆಲ್ಲರನ್ನೂ ಸೋಲಿಸಿರುವ ಅಜೇಯನಾದ ಸ್ವಾಮಿಯು. ॥ ೧೨ ॥ ಯಾವನನ್ನು ತನ್ನ ಪುತ್ರನೆಂದು ತಿಳಿದು, ಆತನ ಮಾತುಗಳಿಗೆಲ್ಲ ಹೂಂಗುಟ್ಟುತ್ತಾ ಪೋಷಿಸುತ್ತಿರುವೆಯೋ ಆ ದುರ್ಯೋಧನನಾದರೋ ದೋಷಗಳ ಮೂರ್ತಿಭವಿಸಿ ನಿನ್ನ ಅರಮನೆಯನ್ನು ಹೊಕ್ಕು ಕುಳಿತಿರುವನು. ಸರ್ವಭೂತ ಸುಹೃದನಾದ ಭಗವಾನ್ ಶ್ರೀಕೃಷ್ಣನಲ್ಲಿ ದ್ವೇಷಬುದ್ಧಿಯಿಂದ ಕೂಡಿರುವ ಆತನನ್ನು ಪೋಷಿಸುತ್ತಿರುವ ನೀನು ನಿನ್ನ ಭಾಗ್ಯವನ್ನು ಕಳೆದುಕೊಂಡು ಬಿಟ್ಟಿರುವೆ ಅದ್ದರಿಂದ ನೀನು ನಿನ್ನ ಕುಲದ ಕುಶಲವನ್ನು ಬಯಸುವೆಯಾದರೆ ಈ ದುಷ್ಟನನ್ನು ಕೂಡಲೇ ತೊರೆದುಬಿಡು. ॥ ೧೩ ॥

ಸತ್ಪುರುಷರಿಗೆ ಪ್ರಿಯವಾದ ಶೀಲಸ್ವಭಾವವುಳ್ಳ ವಿದುರನ ಆ ಮಾತನ್ನು ಕೇಳಿ – ಕರ್ಣ, ದುಃಶಾಸನ, ಶಕುನಿ ಇವರುಗಳಿಂದ ಕೂಡಿದ ದುರ್ಯೋಧನನು ಕ್ರೋಧದಿಂದ ಕಿಡಿ-ಕಿಡಿಯಾದನು. ಸಿಟ್ಟಿನಿಂದ ಅವನ ತುಟಿಗಳು ಅದುರುತ್ತಿದ್ದವು. ಅವನು ವಿದುರನನ್ನು ತಿರಸ್ಕರಿಸುತ್ತಾ – "ಈ ವಕ್ರಬುದ್ಧಿಯ ದಾಸೀಪುತ್ರನನ್ನು ಇಲ್ಲಿಗೆ ಕರೆದವರಾರು ? ನಮ್ಮ ಮನೆಯ ಕೂಳನ್ನೇ ತಿಂದು-ಬೆಳೆದು, ನಮಗೆ ವಿರೋಧಿಯಾಗಿ, ಶತ್ರುಗಳಿಗೆ ಹಿತವನ್ನು ಬಯಸುತ್ತಿರುವ ಕೃತಘ್ನನೀತನು. ಇವನನ್ನು ಕೊಲ್ಲದೆ ನಮ್ಮ ನಗರದಿಂದ ಹೊರಗೆ ಹಾಕಿರಿ. ॥ ೧೪-೧೫ ॥ ಕಿವಿಗಳಿಗೆ ಶೂಲದಂತಿರುವ

ಸ ಇತ್ಥಮತ್ಯುಲ್ಬಣಕರ್ಣಬಾಣೈ-
ರ್ಭ್ರಾತುಃ ಪುರೋ ಮರ್ಮಸು ತಾಡಿತೋಽಪಿ ।
ಸ್ವಯಂ ಧನುರ್ದ್ವಾರಿ ನಿಧಾಯ ಮಾಯಾಂ
ಗತವ್ಯಥೋಽಯಾದುರು ಮಾನಯಾನಃ ॥ ೧೬ ॥

ಸ ನಿರ್ಗತಃ ಕೌರವಪುಣ್ಯಲಬ್ಧೋ
ಗಜಾಹ್ವಯಾತ್ತೀರ್ಥಪದಃ ಪದಾನಿ ।
ಅನ್ವಾಕ್ರಮತ್ಪುಣ್ಯಚಿಕೀರ್ಷಯೋರ್ವ್ಯಾಂ
ಸ್ವಧಿಷ್ಠಿತೋ ಯಾನಿ ಸಹಸ್ರಮೂರ್ತಿಃ ॥ ೧೭ ॥

ಪುರೇಷು ಪುಣ್ಯೋಪವನಾದ್ರಿಕುಂಜೇ-
ಷ್ವಪಂಕತೋಯೇಷು ಸರಿತ್ಸರಸ್ಸು ।
ಅನಂತಲಿಂಗೈಃ ಸಮಲಂಕೃತೇಷು
ಚಚಾರ ತೀರ್ಥಾಯತನೇಷ್ವನನ್ಯಃ ॥ ೧೮ ॥

ಗಾಂ ಪರ್ಯಟನ್ಮೇಧ್ಯವಿವಿಕ್ತವೃತ್ತಿಃ
ಸದಾಪ್ಲುತೋಽಧಃಶಯನೋಽವಧೂತಃ ।
ಅಲಕ್ಷಿತಃ ಸ್ವೈರವಧೂತವೇಷೋ
ವ್ರತಾನಿ ಚೇರೇ ಹರಿತೋಷಣಾನಿ ॥ ೧೯ ॥

ಇತ್ಥಂ ವ್ರಜನ್ಭಾರತಮೇವ ವರ್ಷಂ
ಕಾಲೇನ ಯಾವದ್ಗತವಾನ್ ಪ್ರಭಾಸಮ್ ।
ತಾವಚ್ಛಶಾಸ ಕ್ಷಿತಿಮೇಕಚಕ್ರಾ-
ಮೇಕಾತಪತ್ರಾಮಜಿತೇನ ಪಾರ್ಥಃ ॥ ೨೦ ॥

ತತ್ರಾಥ ಶುಶ್ರಾವ ಸುಹೃದ್ವಿನಷ್ಟಿಂ
ವನಂ ಯಥಾ ವೇಣುಜವಹ್ನಿಸಂಶ್ರಯಮ್ ।
ಸಂಸ್ಪರ್ಧಯಾ ದಗ್ಧಮಥಾನುಶೋಚನ್
ಸರಸ್ವತೀಂ ಪ್ರತ್ಯಗಿಯಾಯ ತೂಷ್ಣೀಮ್ ॥ ೨೧ ॥

ತಸ್ಯಾಂ ತ್ರಿತಸ್ಯೋಶನಸೋ ಮನೋಶ್ಚ
ಪೃಥೋರಥಾಗ್ನೇರಸಿತಸ್ಯ ವಾಯೋಃ ।
ತೀರ್ಥಂ ಸುದಾಸಸ್ಯ ಗವಾಂ ಗುಹಸ್ಯ
ಯಚ್ಛ್ರಾದ್ಧದೇವಸ್ಯ ಸ ಆಸಿಷೇವೇ ॥ ೨೨ ॥

ಅನ್ಯಾನಿ ಚೇಹ ದ್ವಿಜದೇವದೇವೈಃ
ಕೃತಾನಿ ನಾನಾಯತನಾನಿ ವಿಷ್ಣೋಃ ।
ಪ್ರತ್ಯಂಗ ಮುಖ್ಯಾಂಕಿತಮಂದಿರಾಣಿ
ಯದ್ದರ್ಶನಾತ್ಕೃಷ್ಣಮನುಸ್ಮರಂತಿ ॥ ೨೩ ॥

ಮರ್ಮಭೇದಕವಾದ ಮಾತುಗಳನ್ನು ವಿದುರನು ಅಣ್ಣನ ಎದುರಿನಲ್ಲೇ ಕೇಳಬೇಕಾಯಿತು. ಆದರೆ ಮಂತ್ರಿ ಶ್ರೇಷ್ಠನಾದ ವಿದುರನು ಆ ಯೋಗಿರಾಜನು ಅವುಗಳಿಂದ ಬೇಸರಗೊಳ್ಳದೆ 'ಭಗವಂತನ ಮಾಯೆಯು ಪ್ರಬಲವಾದುದು' ಎಂದು ಭಾವಿಸಿ, ತನ್ನ ಬಲಿಷ್ಠವಾದ ಧನುಸ್ಸನ್ನು ರಾಜದ್ವಾರದಲ್ಲಿ ಬಿಟ್ಟು ಹಸ್ತಿನಾವತಿಯಿಂದ ಹೊರಟುಹೋದನು. ॥ ೧೬ ॥ ಕೌರವರಿಗೆ ವಿದುರನಂತಹ ಮಹಾತ್ಮನು ಅವರ ಪುಣ್ಯಪುಂಜದ ಫಲವಾಗಿಯೇ ದೊರಕಿದ್ದನು. ಅವನು ಹೊರಡಲು ಕೌರವರ ಭಾಗ್ಯವೇ ಅವನೊಡನೆ ಹೋದಂತಾಯಿತು. ಆ ಮಹಾತ್ಮನು ಪುಣ್ಯಸಂಪಾದನೆಗಾಗಿ ಭೂಮಂಡಲದಲ್ಲಿ ಶ್ರೀಹರಿ, ಬ್ರಹ್ಮ, ರುದ್ರ, ಅನಂತ ಮುಂತಾದ ಅನೇಕ ರೂಪಗಳಲ್ಲಿ ವಿರಾಜಮಾನನಾದ ತೀರ್ಥಪಾದನಾದ ಭಗವಂತನ ಪುಣ್ಯಕ್ಷೇತ್ರಗಳಲ್ಲಿ ಸಂಚರಿಸ ತೊಡಗಿದನು. ॥ ೧೭ ॥ ಭಗವಂತನ ದಿವ್ಯಮಂಗಳವಿಗ್ರಹಗಳು ಕಂಗೊಳಿಸುವ ಪುಣ್ಯತೀರ್ಥಕ್ಷೇತ್ರಗಳಲ್ಲಿಯೂ, ನಗರಗಳಲ್ಲೂ, ಪವಿತ್ರ ವನಗಳಲ್ಲೂ, ಪರ್ವತಗಳಲ್ಲೂ, ನಿಕುಂಜಗಳಲ್ಲೂ, ನಿರ್ಮಲಜಲದಿಂದ ತುಂಬಿದ ನದೀ, ಸರೋವರಗಳಲ್ಲೂ ಏಕಾಕಿಯಾಗಿಯೇ ಸಂಚರಿಸುತ್ತಿದ್ದನು. ॥ ೧೮ ॥ ಬಂಧು-ಮಿತ್ರಾದಿಗಳು ತನ್ನನ್ನು ಗುರುತಿಸದಿರಲೆಂದು ಅವಧೂತವೇಷದಲ್ಲೇ ಸಂಚರಿಸುತ್ತಿದ್ದನು. ಶರೀರಕ್ಕೆ ಅಲಂಕಾರ ಮಾಡಿಕೊಳ್ಳದೆ, ಶುದ್ಧವಾದ ಸಾತ್ತ್ವಿಕ ಆಹಾರವನ್ನೇ ಭಗವತ್ಪ್ರಸಾದವೆಂದು ಸ್ವೀಕರಿಸುತ್ತಿದ್ದನು. ನೆಲದಲ್ಲಿ ಮಲಗುತ್ತಾ, ತೀರ್ಥಗಳಲ್ಲಿ ಸ್ನಾನಮಾಡುತ್ತಾ, ಶ್ರೀಭಗವಂತನನ್ನು ಸಂತೋಷಪಡಿಸುವಂತಹ ವ್ರತಗಳನ್ನು ಆಚರಿಸುತ್ತಾ ಶುದ್ಧವಾದ ವೃತ್ತಿಯಿಂದ ಜೀವನ ನಿರ್ವಹಿಸುತ್ತಿದ್ದನು. ॥ ೧೯ ॥

ಹೀಗೆ ವಿದುರನು ಭರತವರ್ಷದಲ್ಲೆಲ್ಲ ಸಂಚರಿಸುತ್ತಾ ಪ್ರಭಾಸ ಕ್ಷೇತ್ರಕ್ಕೆ ಬಂದನು. ಆ ವೇಳೆಗೆ ಭಗವಾನ್ ಶ್ರೀಕೃಷ್ಣನ ಸಹಾಯದಿಂದ ಯುಧಿಷ್ಠಿರನು ಅಖಂಡ ಭೂಮಂಡಲದ ಏಕಛತ್ರಾಧಿಪತಿಯಾಗಿ ರಾಜ್ಯವಾಳುತ್ತಿದ್ದನು. ॥ ೨೦ ॥ ಬಿದಿರುಮೆಳೆಗಳು ಪರಸ್ಪರ ಘರ್ಷಣೆಯಿಂದ ಇಡೀ ಬಿದಿರಿನಕಾಡು ಸುಟ್ಟು ಬೂದಿಯಾಗುವಂತೆ – ತನ್ನ ಬಂಧು-ಮಿತ್ರರು ತಮ್ಮ ಅಂತಃಕಲಹದಿಂದ ಪರಸ್ಪರ ಹೊಡೆದಾಡಿ ನಾಶವಾದ ಸಮಾಚಾರವು ಆತನಿಗೆ ಅಲ್ಲೇ ತಿಳಿಯಿತು. ಇದನ್ನು ಕೇಳಿ ದುಃಖಿಸುತ್ತಾ ಮೌನವಾಗಿ ಸರಸ್ವತೀ ನದೀ ತೀರಕ್ಕೆ ತಲುಪಿದರು. ॥ ೨೧ ॥ ಅಲ್ಲಿ ಅವನು – ತ್ರಿತ, ಉಶನಾ, ಮನು, ಪೃಥು, ಅಗ್ನಿ ಅಸಿತ, ವಾಯು, ಸುದಾಸ, ಗೌ, ಗುಹ, ಶ್ರಾದ್ಧದೇವ ಎಂಬ ಹೆಸರುಗಳಿಂದ ಪ್ರಸಿದ್ಧವಾದ ಹನ್ನೊಂದು ತೀರ್ಥಗಳನ್ನು ಸೇವಿಸಿದನು. ॥ ೨೨ ॥ ಅವುಗಳನ್ನಲ್ಲದೆ ಭೂಮಿಯಲ್ಲಿ ಬ್ರಾಹ್ಮಣರಿಂದಲೂ, ದೇವತೆಗಳಿಂದಲೂ ಸ್ಥಾಪಿತವಾದ ಇನ್ನೂ ಅನೇಕ ಭಗವಾನ್ ವಿಷ್ಣುವಿನ ಮಂದಿರಗಳನ್ನು ದರ್ಶಿಸಿದನು. ಅವುಗಳ ಶಿಖರದಲ್ಲಿ ಭಗವಂತನ ಪ್ರಧಾನ ಆಯುಧಶ್ರೇಷ್ಠ ಸುದರ್ಶನ ಚಕ್ರದಿಂದ ಅಲಂಕೃತವಾಗಿದ್ದು ದರ್ಶನಮಾತ್ರದಿಂದಲೇ ಶ್ರೀಕೃಷ್ಣನ ಸ್ಮರಣೆಯಾಗುವಂತಹ ದಿವ್ಯಮಂದಿರಗಳನ್ನೂ ಸೇವಿಸಿದನು. ॥ ೨೩ ॥ ಅಲ್ಲಿಂದ ಹೊರಟು ಅವನು ಧನ-ಧಾನ್ಯಗಳಿಂದ ಸಮೃದ್ಧವಾಗಿದ್ದ ಸೌರಾಷ್ಟ್ರ, ಸೌವೀರ, ಮತ್ಸ್ಯ, ಕುರುಜಾಂಗಲವೇ ಮುಂತಾದ ದೇಶಗಳಲ್ಲಿ ಸಂಚರಿ

ತತಸ್ತ್ವತಿವ್ರಜ್ಯ ಸುರಾಷ್ಟ್ರಮೃದ್ಧಂ
ಸೌವೀರಮತ್ಸ್ಯಾನ್ಕುರುಜಾಂಗಲಾಂಶ್ಚ ।
ಕಾಲೇನ ತಾವದ್ಯಮುನಾಮುಪೇತ್ಯ
ತತ್ರೋದ್ಧವಂ ಭಾಗವತಂ ದದರ್ಶ ॥ ೨೪ ॥

ಸ ವಾಸುದೇವಾನುಚರಂ ಪ್ರಶಾಂತಂ
ಬೃಹಸ್ಪತೇಃ ಪ್ರಾಕ್ ತನಯಂ ಪ್ರತೀತಮ್ ।
ಆಲಿಂಗ್ಯ ಗಾಢಂ ಪ್ರಣಯೇನ ಭದ್ರಂ
ಸ್ವಾನಾಮಪೃಚ್ಛದ್ಭಗವತ್ಪ್ರಜಾನಾಮ್ ॥ ೨೫ ॥

ಕಚ್ಚಿತ್ಪುರಾಣೌ ಪುರುಷೌ ಸ್ವನಾಭ್ಯ-
ಪಾದ್ಮಾನುವೃತ್ತ್ಯೇಹ ಕಿಲಾವತೀರ್ಣೌ ।
ಆಸಾತ ಉರ್ವ್ಯಾಃ ಕುಶಲಂ ವಿಧಾಯ
ಕೃತಕ್ಷಣೌ ಕುಶಲಂ ಶೂರಗೇಹೇ ॥ ೨೬ ॥

ಕಚ್ಚಿತ್ಕುರೂಣಾಂ ಪರಮಃ ಸುಹೃನ್ನೋ
ಭಾಮಃ ಸ ಆಸ್ತೇ ಸುಖಮಂಗ ಶೌರಿಃ ।
ಯೋ ವೈ ಸ್ವಸ್ೃಣಾಂ ಪಿತೃವದ್ದದಾತಿ
ವರಾನ್ವದಾನ್ಯೋ ವರತರ್ಪಣೇನ ॥ ೨೭ ॥

ಕಚ್ಚಿದ್ವರೂಥಾಧಿಪತಿರ್ಯದೂನಾಂ
ಪ್ರದ್ಯುಮ್ನ ಆಸ್ತೇ ಸುಖಮಂಗ ವೀರಃ ।
ಯಂ ರುಕ್ಮಿಣೀ ಭಗವತೋಽಭಿಲೇಭೇ
ಆರಾಧ್ಯ ವಿಪ್ರಾನ್ ಸ್ಮರಮಾದಿಸರ್ಗೇ ॥ ೨೮ ॥

ಕಚ್ಚಿತ್ಸುಖಂ ಸಾತ್ವತವೃಷ್ಣಿ ಭೋಜ-
ದಾಶಾರ್ಹಕಾಣಾಮಧಿಪಃ ಸ ಆಸ್ತೇ ।
ಯಮಭ್ಯಷಿಂಚಚ್ಛತಪತ್ರನೇತ್ರೋ
ನೃಪಾಸನಾಶಾಂ ಪರಿಹೃತ್ಯ ದೂರಾತ್ ॥ ೨೯ ॥

ಕಚ್ಚಿದ್ಧರೇಃ ಸೌಮ್ಯ ಸುತಃ ಸದೃಕ್ಷ
ಆಸ್ತೇಽಗ್ರಣೀ ರಥಿನಾಂ ಸಾಧು ಸಾಂಬಃ ।
ಅಸೂತ ಯಂ ಜಾಂಬವತೀ ವ್ರತಾಢ್ಯಾ
ದೇವಂ ಗುಹಂ ಯೋಽಂಬಿಕಯಾ ಧೃತೋಽಗ್ರೇ ॥ ೩೦ ॥

ಕ್ಷೇಮಂ ಸ ಕಚ್ಚಿದ್ಯುಯುಧಾನ ಆಸ್ತೇ
ಯಃ ಫಾಲ್ಗುನಾಲ್ಲಬ್ಧ ಧನೂರಹಸ್ಯಃ ।
ಲೇಭೇಽಂಜಸಾಧೋಕ್ಷಜಸೇವಯೈವ
ಗತಿಂ ತದೀಯಾಂ ಯತಿಭಿರ್ದುರಾಪಾಮ್ ॥ ೩೧ ॥

ಸುತ್ತಾ ಕೆಲದಿನಗಳಲ್ಲಿ ಯಮುನಾನದೀ ತೀರಕ್ಕೆ ಹೋದಾಗ ಅಲ್ಲಿ ಆತನಿಗೆ ಪರಮಭಾಗವತೋತ್ತಮ ಉದ್ಧವನ ಸಂದರ್ಶನ ವಾಯಿತು. ॥ ೨೪ ॥ ಆ ಉದ್ಧವನಾದರೋ ಭಗವಂತನಾದ ವಾಸುದೇವನ ಪ್ರಖ್ಯಾತ ಸೇವಕನು. ಪ್ರಶಾಂತವಾದ ಸ್ವಭಾವವುಳ್ಳವನು. ಹಿಂದೆ ಬೃಹಸ್ಪತಿಯವರ ಶಿಷ್ಯನೆಂಬ ಪ್ರಸಿದ್ಧಿಯುಳ್ಳ ನೀತಿಶಾಸ್ತ್ರವಿಶಾರದನು. ವಿದುರನು ಅವರನ್ನು ನೋಡುತ್ತಲೇ ಪ್ರೀತಿಯಿಂದ ಗಾಢವಾಗಿ ಆಲಿಂಗಿಸಿಕೊಂಡನು. ಮತ್ತೆ ಭಗವಂತನಾದ ಶ್ರೀಕೃಷ್ಣನ ಮತ್ತು ಅವನ ಆಶ್ರಿತರಾದ ತನ್ನ ಸ್ವಜನರ ಕುರಿತು ಕ್ಷೇಮ-ಸಮಾಚಾರ ಕೇಳಿದನು. ॥ ೨೫ ॥

ಉದ್ಧವನೇ! ವಸುದೇವನ ಮನೆಯಲ್ಲಿ ಪುರಾಣಪುರುಷರಾದ ಶ್ರೀಕೃಷ್ಣ-ಬಲರಾಮರು ಕುಶಲರಾಗಿದ್ದಾರಲ್ಲ? ತನ್ನ ನಾಭಿಕಮಲದಿಂದ ಹುಟ್ಟಿದ ಬ್ರಹ್ಮದೇವರ ಪ್ರಾರ್ಥನೆಯಂತೆ ಈ ಭುವಿಯಲ್ಲಿ ಅವತರಿಸಿ, ಭೂಭಾರವನ್ನು ಇಳುಹಿ, ಅದರ ಕ್ಷೇಮವನ್ನು ಸಾಧಿಸಿ ತಾವೂ ಆನಂದವಾಗಿ ಕ್ಷೇಮವಾಗಿದ್ದಾರಲ್ಲ? ॥ ೨೬ ॥ ಕುರುವಂಶಿಗಳಾದ ನಮಗೆ ಪರಮ ಸ್ನೇಹಿತನಾಗಿರುವ ಶೂರಸೇನನ ಪುತ್ರನಾದ ಪೂಜ್ಯ ವಸುದೇವನು ಕುಶಲನಾಗಿದ್ದಾನೆಯೇ? ತಂದೆಯಂತೆ ಕೊಡುಗೈಯುಳ್ಳವನಾಗಿ ತನ್ನ ಸೋದರಿಯರಿಗೂ, ಅವರ ಪತಿಗಳಿಗೂ ತೃಪ್ತಿಯುಂಟಾಗುವಂತೆ ಅವರು ಬಯಸಿದ ಬಳುವಳಿಗಳನ್ನು ಧಾರಾಳವಾಗಿ ಕೊಡುತ್ತಿದ್ದ ವಸುದೇವನು ಸೌಖ್ಯವೇ? ॥ ೨೭ ॥ ಪ್ರಿಯ ಉದ್ಧವನೇ! ಯಾದವರ ಸೇನಾಪತಿಯಾದ ಮಹಾವೀರನಾದ ಪ್ರದ್ಯುಮ್ನನು ಸುಖವಾಗಿದ್ದಾನಷ್ಟೇ? ರುಕ್ಮಿಣೀ ದೇವಿಯು ಬ್ರಾಹ್ಮಣರನ್ನು ಆರಾಧಿಸಿ, ಪೂರ್ವಜನ್ಮದಲ್ಲಿ ಮನ್ಮಥನಾಗಿದ್ದವನನ್ನು ಭಗವಂತನಿಂದ ಸತ್ಪುತ್ರನಾಗಿ ಪಡೆದ ಆ ಪ್ರದ್ಯುಮ್ನನ ಕುಶಲವನ್ನು ವಿಚಾರಿಸುತ್ತಿದ್ದೇನೆ. ॥ ೨೮ ॥ ಸಾತ್ವತ, ವೃಷ್ಣಿ ಭೋಜ, ದಾಶಾರ್ಹ ಮೊದಲಾದ ಯದುವಂಶೀಯರ ಅಧಿಪತಿಯಾದ ಉಗ್ರಸೇನ ಮಹಾರಾಜರು ಕ್ಷೇಮವಾಗಿರುವರೇ? ಸಿಂಹಾಸನದ ಆಸೆಯನ್ನು ಸರ್ವಥಾ ತ್ಯಾಗಮಾಡಿದ್ದ ಅವರನ್ನು ಕಮಲನಯನ ಭಗವಾನ್ ಶ್ರೀಕೃಷ್ಣನು ಪುನಃ ರಾಜಸಿಂಹಾಸನದಲ್ಲಿ ಕುಳ್ಳಿರಿಸಿ ಪಟ್ಟಾಭಿಷೇಕಮಾಡಿದ್ದನಲ್ಲ? ॥ ೨೯ ॥ ತನ್ನ ತಂದೆಯಾದ ಶ್ರೀಕೃಷ್ಣನಿಗೆ ಸಮಾನನಾದ, ಸಮಸ್ತ ರಥಿಗಳಿಗೂ ಅಗ್ರಗಣ್ಯನಾಗಿರುವ ಸಾಂಬನು ಕುಶಲವಷ್ಟೇ? ಇವನು ಮೊದಲು ಪಾರ್ವತೀ ದೇವಿಗೆ ಪುತ್ರನಾಗಿದ್ದ ಕುಮಾರಸ್ವಾಮಿಯಾಗಿದ್ದನು. ಜಾಂಬವತಿಯು ಅನೇಕ ವ್ರತಗಳನ್ನಾಚರಿಸಿ ಆತನನ್ನು ಪುತ್ರನನ್ನಾಗಿ ಪಡೆದುಕೊಂಡಿದ್ದಳು. ॥ ೩೦ ॥ ಅರ್ಜುನನಿಂದ ಸರಹಸ್ಯವಾದ ಧನುರ್ವಿದ್ಯೆಯ ಶಿಕ್ಷಣವನ್ನು ಪಡೆದ ವೀರಾಧಿವೀರನಾದ ಯುಯುಧಾನನು (ಸಾತ್ಯಕಿ) ಸೌಖ್ಯವಷ್ಟೇ? ಮಹಾಯೋಗಿಗಳಿಗೂ ದುರ್ಲಭವಾದ ಭಾಗವತಯೋಗದ ಸಿದ್ಧಿಯನ್ನು ಶ್ರೀಕೃಷ್ಣನ ಸೇವೆಯಿಂದಲೇ ಅನಾಯಾಸವಾಗಿ ಪಡೆದುಕೊಂಡಿದ್ದ ಸುಕೃತಿಯವನು. ॥ ೩೧ ॥ ಭಗವಂತನ ಶರಣಾಗತನೂ, ನಿರ್ಮಲ ಭಕ್ತಿನಿಧಿಯೂ ವಿದ್ವನ್ಮಣಿಯೂ ಆದ ಅಕ್ರೂರನು ಕ್ಷೇಮವಿದ್ದಾನೆಯೇ? ನಂದಗೋಕುಲಕ್ಕೆ ಹೋಗುತ್ತಿದ್ದಾಗ ಅಲ್ಲಿನ ಭೂಮಿಯ ರಜದಲ್ಲಿ ಶ್ರೀಕೃಷ್ಣ ಪರಮಾತ್ಮನ ಅಂಕಿತವಾದ ಪದಚಿಹ್ನೆಗಳನ್ನು ಕಂಡು ಪ್ರೇಮಪರವಶನಾಗಿ ಉರುಳುಸೇವೆ ಮಾಡಿದ ಭಾಗವತೋತ್ತಮ

ಕಚ್ಚಿದ್ಬುಧಃ ಸ್ವಸ್ತ್ಯನಮೀವ ಆಸ್ತೇ
ಶ್ವಫಲ್ಕಪುತ್ರೋ ಭಗವತ್ಪ್ರಪನ್ನಃ ।
ಯಃ ಕೃಷ್ಣ ಪಾದಾಂಕಿತಮಾರ್ಗಪಾಂಸು-
ಷ್ವಚೇಷ್ಟತ ಪ್ರೇಮವಿಭಿನ್ನಧೈರ್ಯಃ ॥ ೩೨ ॥

ಕಚ್ಚಿಚ್ಛಿವಂ ದೇವಕಭೋಜಪುತ್ರ್ಯಾ
ವಿಷ್ಣುಪ್ರಜಾಯಾ ಇವ ದೇವಮಾತುಃ ।
ಯಾ ವೈ ಸ್ವಗರ್ಭೇಣ ದಧಾರ ದೇವಂ
ತ್ರಯೀ ಯಥಾ ಯಜ್ಞವಿತಾನಮರ್ಥಮ್ ॥ ೩೩ ॥

ಅಪಿಸ್ವಿದಾಸ್ತೇ ಭಗವಾನ್ಸುಖಂ ವೋ
ಯಃ ಸಾತ್ವತಾಂ ಕಾಮದುಘೋಽನಿರುದ್ಧಃ ।
ಯಮಾಮನಂತಿ ಸ್ಮ ಹ ಶಬ್ದಯೋನಿಂ
ಮನೋಮಯಂ ಸತ್ತ್ವತುರೀಯತತ್ತ್ವಮ್ ॥ ೩೪ ॥

ಅಪಿಸ್ವಿದನ್ಯೇ ಚ ನಿಜಾತ್ಮದೈವ-
ಮನನ್ಯವೃತ್ತ್ಯಾ ಸಮನುವ್ರತಾ ಯೇ ।
ಹೃದೀಕಸತ್ಯಾತ್ಮಜಚಾರುದೇಷ್ಣ-
ಗದಾದಯಃ ಸ್ವಸ್ತಿ ಚರಂತಿ ಸೌಮ್ಯ ॥ ೩೫ ॥

ಅಪಿ ಸ್ವದೋರ್ಭ್ಯಾಂ ವಿಜಯಾಚ್ಯುತಾಭ್ಯಾಂ
ಧರ್ಮೇಣ ಧರ್ಮಃ ಪರಿಪಾತಿ ಸೇತುಮ್ ।
ದುರ್ಯೋಧನೋಽತಪ್ಯತ ಯತ್ಸಭಾಯಾಂ
ಸಾಮ್ರಾಜ್ಯಲಕ್ಷ್ಮ್ಯಾ ವಿಜಯಾನುವೃತ್ತ್ಯಾ ॥ ೩೬ ॥

ಕಿಂ ವಾ ಕೃತಾಘೇಷ್ವಘಮತ್ಯಮರ್ಷೀ
ಭೀಮೋಽಹಿವದ್ದೀರ್ಘತಮಂ ವ್ಯಮುಂಚತ್ ।
ಯಸ್ಯಾಂಘ್ರಿಪಾತಂ ರಣಭೂರ್ನ ಸೇಹೇ
ಮಾರ್ಗಂ ಗದಾಯಾಶ್ಚರತೋ ವಿಚಿತ್ರಮ್ ॥ ೩೭ ॥

ಕಚ್ಚಿದ್ಯಶೋಧಾ ರಥಯೂಥಪಾನಾಂ
ಗಾಂಡೀವಧನ್ವೋಪರತಾರಿರಾಸ್ತೇ ।
ಅಲಕ್ಷಿತೋ ಯಚ್ಛರಕೂಟಗೂಢೋ
ಮಾಯಾಕಿರಾತೋ ಗಿರಿಶಸ್ತುತೋಷ ॥ ೩೮ ॥

ಯಮಾವುತಸ್ವಿತ್ತನಯೌ ಪೃಥಾಯಾಃ
ಪಾರ್ಥೈರ್ವೃತೌ ಪಕ್ಷ್ಮಭಿರಕ್ಷಿಣೀವ ।
ರೇಮಾತ ಉದ್ದಾಯ ಮೃಧೇ ಸ್ವರಿಕ್ಥಂ
ಪರಾತ್ಸುಪರ್ಣಾವಿವ ವಜ್ರಿವಕ್ತ್ರಾತ್ ॥ ೩೯ ॥

ಅಹೋ ಪೃಥಾಪಿ ಧ್ರಿಯತೇಽರ್ಭಕಾರ್ಥೇ
ರಾಜರ್ಷಿವರ್ಯೇಣ ವಿನಾಪಿ ತೇನ ।
ಯಸ್ತ್ವೇಕವೀರೋಽಧಿರಥೋ ವಿಜಿಗ್ಯೇ
ಧನುರ್ದ್ವಿತೀಯಃ ಕಕುಭಶ್ಚತಸ್ರಃ ॥ ೪೦ ॥

ನವನು. ॥ ೩೨ ॥ ಭೋಜ ವಂಶಜಳಾದ ದೇವಕನ ಸುಪುತ್ರೀ ದೇವಕೀದೇವಿಯು ಕುಶಲವಷ್ಟೇ ? ಆಕೆಯು ದೇವಮಾತೆಯಾದ ಅದಿತಿಯಂತೆ ಸಾಕ್ಷಾತ್ ಮಹಾವಿಷ್ಣುವಿನ ಮಾತೆಯಾದ ಮಹಾಭಾಗ್ಯ ಶಾಲಿನಿಯು. 'ತ್ರಯೀ' ಎನಿಸಿದ ವೇದವಿದ್ಯೆಯು ತನ್ನ ಮಂತ್ರಗಳಲ್ಲಿ ಯಜ್ಞವಿಸ್ತಾರರೂಪವಾದ ಅರ್ಥವನ್ನು ಧರಿಸುವಂತೆ, ತನ್ನ ಗರ್ಭದಲ್ಲಿ ಭಗವಾನ್ ಶ್ರೀಕೃಷ್ಣನನ್ನು ಧರಿಸಿದ್ದ ಸುಕೃತಶಾಲಿನಿ. ॥ ೩೩ ॥ ಭಕ್ತಜನರ ಎಲ್ಲ ಕಾಮನೆಗಳನ್ನು ಈಡೇರಿಸುವ ಭಗವಾನ್ ಅನಿರುದ್ಧನು ಕ್ಷೇಮವಿದ್ದಾನೆಯೇ ? ಆತನನ್ನು ವೇದಗಳ ಆದಿ ಕಾರಣನೆಂದೂ, ವೇದವೇದ್ಯನೆಂದೂ, ಅಂತಃಕರಣದ ನಾಲ್ಕನೆಯ ಅಂಶವಾದ ಮನದ ಅಧಿಷ್ಠಾತೃವೆಂದೂ ಶಾಸ್ತ್ರಗಳು ಸಾರುತ್ತಿವೆ. ॥ ೩೪ ॥ ಎಲೈ ಸೌಮ್ಯನೇ ! ತಮ್ಮ ಆತ್ಮದೈವತನಾದ ಭಗವಾನ್ ಶ್ರೀಕೃಷ್ಣನನ್ನು ಅನನ್ಯ ಭಾವದಿಂದ ಅನುಸರಿಸುತ್ತಿರುವ ಹೃದೀಕ, ಸತ್ಯಭಾಮಾಪುತ್ರ ಚಾರುದೇಷ್ಣ, ಗದನೇ ಮುಂತಾದವರೆಲ್ಲರೂ ಕುಶಲವಾಗಿದ್ದಾರಷ್ಟೇ ? ॥ ೩೫ ॥

ಮಹಾರಾಜ ಯುಧಿಷ್ಠಿರನು ಅರ್ಜುನ ಮತ್ತು ಶ್ರೀಕೃಷ್ಣರೆಂಬ ತನ್ನೆರಡು ಭುಜಗಳ ಬಲದಿಂದ ಧರ್ಮಪೂರ್ವಕ ಧರ್ಮಸೇತುವನ್ನು ಕಾಪಾಡುತ್ತಿದ್ದಾನಲ್ಲ ? ಮಯನಿರ್ಮಿತವಾದ ಮಹಾಸಭೆಯಲ್ಲಿ ಆತನ ರಾಜ್ಯವೈಭವವನ್ನೂ, ಐಶ್ವರ್ಯವನ್ನೂ ನೋಡಿದ ದುರ್ಯೋಧನನು ಅಸೂಯಾಸಂತಾಪಕ್ಕೆ ಒಳಗಾಗಿದ್ದನು. ॥ ೩೬ ॥ ಅಪರಾಧಿಗಳ ವಿಷಯದಲ್ಲಿ ಕಡುಕೋಪವುಳ್ಳ ಭೀಮಸೇನನು ಸರ್ಪದಂತೆ ಅತಿದೀರ್ಘ ಕಾಲದಿಂದ ಇಟ್ಟುಕೊಂಡಿದ್ದ ರೋಷವನ್ನು ಬಿಟ್ಟು ಬಿಟ್ಟಿದ್ದಾನೆಯೇ ? ಅವನು ಗದಾಯುದ್ಧದಲ್ಲಿ ಅದ್ಭುತವಾಗಿ ಗದೆಯನ್ನು ತಿರುಗುತ್ತಾ ಓಡಾಡುತ್ತಿರುವಾಗ ಆತನ ಪಾದಗಳ ಭಾರವನ್ನು ಯುದ್ಧಭೂಮಿಗೆ ಸಹಿಸಲಾಗುತ್ತಿರಲಿಲ್ಲ. ॥ ೩೭ ॥ ಯಾವನ ಬಾಣಗಳ ರಾಶಿಯಲ್ಲಿ ಮರೆಯಾಗಿ ಕಣ್ಣಿಗೇ ಕಾಣಿಸದೇ ಹೋಗಿದ್ದ ಮಾಯಾಕಿರಾತವೇಷಧಾರೀ ಶಿವನು ಸುಪ್ರಸನ್ನನಾಗಿದ್ದನೋ, ಅಂತಹ ಅತಿರಥಿಯೂ, ರಥಿಗಳ ಮತ್ತು ಸೇನಾಪತಿಗಳ ಕೀರ್ತಿಯನ್ನು ವೃದ್ಧಿಪಡಿಸುವವನೂ ಆದ ಗಾಂಡೀವ ಧಾರಿಯಾದ ಅರ್ಜುನನು ಕ್ಷೇಮವಾಗಿದ್ದಾನೆಯೇ ? ಈಗಲಂತೂ ಆತನ ಸಕಲಶತ್ರುಗಳೂ ಶಾಂತರಾಗಿ ಬಿಟ್ಟಿರಬೇಕಲ್ಲ ? ॥ ೩೮ ॥ ಕಣ್ಣುಗಳು ರೆಪ್ಪೆಗಳಿಂದ ರಕ್ಷಿತವಾಗಿರುವಂತೆ, ಕುಂತೀಪುತ್ರರಿಂದ ಸದಾ ರಕ್ಷಿತರಾದ ಮತ್ತು ಕುಂತೀದೇವಿಯೂ ಮುದ್ದಿನಿಂದ ಸಾಕಿದ ಮಾದ್ರಿಯ ಅವಳಿ ಮಕ್ಕಳಾದ ನಕುಲ–ಸಹದೇವರು ಕ್ಷೇಮವಾಗಿದ್ದಾರೆಯೇ ? ಮಹಾಪರಾಕ್ರಮಿಗಳಾದ ಅವರಿಬ್ಬರು ಗರುಡನು ಇಂದ್ರನ ಮುಖದಿಂದ ಅಮೃತವನ್ನು ಕಿತ್ತುಕೊಂಡಂತೆ, ಯುದ್ಧದಲ್ಲಿ ಶತ್ರುವಿನಿಂದ ರಾಜ್ಯವನ್ನು ಕಿತ್ತುಕೊಂಡಿರುವರು. ॥ ೩೯ ॥ ಅಯ್ಯೋ ! ಕುಂತಿಯಾದರೋ ರಾಜರ್ಷಿಶ್ರೇಷ್ಠನಾದ ಪಾಂಡುವಿನ ಅಗಲಿಕೆಯಿಂದ ಮೃತಪ್ರಾಯಳಾಗಿದ್ದರೂ, ಈ ಪುತ್ರರಿಗಾಗಿ ತನ್ನ ಪ್ರಾಣಗಳನ್ನು ಉಳಿಸಿಕೊಂಡಳು. ರಥಿಗಳಲ್ಲಿ ಶ್ರೇಷ್ಠನಾಗಿದ್ದ ಪಾಂಡುವೂ ಅನುಪಮ ವೀರನು. ಒಂದೇ ಧನುಸ್ಸಿನಿಂದ ಒಬ್ಬಂಟಿಗನಾಗಿಯೇ ನಾಲ್ಕೂ ದಿಕ್ಕುಗಳನ್ನು ಗೆದ್ದು ಬಂದಿದ್ದನು. ಅಂತಹ ವೀರನ ಪತ್ನಿ ಕುಂತಿಯು ಕ್ಷೇಮದಿಂದಿರುವಳೇ ? ॥ ೪೦ ॥ ಎಲೈ ಸೌಮ್ಯನೇ ! ಅಧಃಪತನ ಹೊಂದಿದ ಧೃತರಾಷ್ಟ್ರ

ಸೌಮ್ಯಾನುಶೋಚೇ ತಮಧಃಪತಂತಂ
ಭ್ರಾತ್ರೇ ಪರೇತಾಯ ವಿದುದ್ರುಹೇ ಯಃ ।
ನಿರ್ಯಾಪಿತೋ ಯೇನ ಸುಹೃತ್ಸ್ವಪುರ್ಯಾ
ಅಹಂ ಸ್ವಪುತ್ರಾನ್ಸಮನುವ್ರತೇನ ॥ ೪೧ ॥

ಸೋಽಹಂ ಹರೇರ್ಮರ್ತ್ಯವಿಡಂಬನೇನ
ದೃಶೋ ನೃಣಾಂ ಚಾಲಯತೋ ವಿಧಾತುಃ ।
ನಾನ್ಯೋಪಲಕ್ಷ್ಯಃ ಪದವೀಂ ಪ್ರಸಾದಾ-
ಚ್ಚರಾಮಿ ಪಶ್ಯನ್ ಗತವಿಸ್ಮಯೋಽತ್ರ ॥ ೪೨ ॥

ನೂನಂ ನೃಪಾಣಾಂ ತ್ರಿಮದೋತ್ಪಥಾನಾಂ
ಮಹೀಂ ಮುಹುಶ್ಚಾಲಯತಾಂ ಚಮೂಭಿಃ ।
ವಧಾತ್ಪ್ರಪನ್ನಾರ್ತಿಜಿಹೀರ್ಷಯೇಶೋಽ-
ಪ್ಯುಪೈಕ್ಷತಾಘಂ ಭಗವಾನ್ಕುರೂಣಾಮ್ ॥ ೪೩ ॥

ಅಜಸ್ಯ ಜನ್ಮೋತ್ಪಥನಾಶನಾಯ
ಕರ್ಮಾಣ್ಯಕರ್ತುರ್ಗ್ರಹಣಾಯ ಪುಂಸಾಮ್ ।
ನನ್ವನ್ಯಥಾ ಕೋಽರ್ಹತಿ ದೇಹಯೋಗಂ
ಪರೋ ಗುಣಾನಾಮುತ ಕರ್ಮತಂತ್ರಮ್ ॥ ೪೪ ॥

ತಸ್ಯ ಪ್ರಪನ್ನಾಖಿಲಲೋಕಪಾನಾ-
ಮವಸ್ಥಿತಾನಾಮನುಶಾಸನೇ ಸ್ವೇ ।
ಅರ್ಥಾಯ ಜಾತಸ್ಯ ಯದುಷ್ವಜಸ್ಯ
ವಾರ್ತಾಂ ಸಖೇ ಕೀರ್ತಯ ತೀರ್ಥಕೀರ್ತೇಃ ॥ ೪೫ ॥

ನಿಗಾಗಿ ನನಗೆ ಮತ್ತೆ-ಮತ್ತೆ ದುಃಖವುಂಟಾಗುತ್ತದೆ. ಅವನು ಪಾಂಡವರ ರೂಪದಲ್ಲಿ ಸ್ವರ್ಗಸ್ಥನಾದ ತನ್ನ ತಮ್ಮ ಪಾಂಡುವಿನೊಂದಿಗೂ ದ್ರೋಹವೆಸಗಿರುವನು. ದುಷ್ಟರಾದ ತನ್ನ ಪುತ್ರರ ಎಲ್ಲ ಕೆಲಸದಲ್ಲಿಯೂ ಹೂಂಗುಟ್ಟುತ್ತಾ, ಹಿತಚಿಂತಕನಾದ ನನ್ನನ್ನು ನಗರದಿಂದ ಹೊರಹಾಕಿದ್ದನು. ॥ ೪೧ ॥ ಅಯ್ಯಾ! ಆದರೆ ಈ ಕುರಿತು ನನಗೆ ದುಃಖವಾಗಲೀ, ಆಶ್ಚರ್ಯವಾಗಲೀ ಇಲ್ಲ. ಜಗತ್ತನ್ನು ಸೃಷ್ಟಿಸಿ, ಧರಿಸಿಕೊಂಡಿರುವ ಭಗವಾನ್ ಶ್ರೀಕೃಷ್ಣನೇ ಮನುಷ್ಯರಂತೆ ಲೀಲೆಗಳನ್ನು ನಡೆಸಿ ಜನರ ಮನೋವೃತ್ತಿಗಳನ್ನು ಭ್ರಮಿಸಿಬಿಟ್ಟಿರುವನು ಎಂಬುದು ನನಗೆ ತಿಳಿದಿದೆ. ಆದ್ದರಿಂದ ನಾನು ಆತನ ಕೃಪೆಯಿಂದ ಅವನ ಮಹಿಮೆಗಳನ್ನು ನೋಡುತ್ತಾ, ಬೇರೆಯವರ ದೃಷ್ಟಿಯಿಂದ ದೂರವುಳಿದು ಆನಂದವಾಗಿ ಸಂಚರಿಸುತ್ತಿರುವೆನು. ॥ ೪೨ ॥ ಕೌರವರು ತನ್ನಲ್ಲಿ ತುಂಬಾ ಅಪರಾಧಗಳನ್ನು ಮಾಡಿದ್ದರೂ ಭಗವಂತನು ಅವರನ್ನು ಒಡನೆಯೇ ಶಿಕ್ಷಿಸದೆ - ಧನಮದ, ವಿದ್ಯಾಮದ, ಜಾತಿಮದಗಳೆಂಬ ಮೂರು ಮದಗಳಿಂದ ಕೊಬ್ಬಿ ಕುರುಡರಾಗಿ ದುರ್ಮಾರ್ಗವನ್ನು ಹಿಡಿದು, ತಮ್ಮ ಸೈನ್ಯಗಳಿಂದ ಮತ್ತೆ-ಮತ್ತೆ ಭೂಮಿಯನ್ನು ನಡುಗಿಸುತ್ತಿದ್ದ ದುಷ್ಟರಾಜರನ್ನೂ ಅವರೊಡನೆ ನಾಶಮಾಡಿ, ಶರಣಾಗತರ ದುಃಖವನ್ನು ದೂರಮಾಡಿದನು. ॥ ೪೩ ॥ ಉದ್ಧವನೇ! ಭಗವಾನ್ ಶ್ರೀಕೃಷ್ಣನು ಜನ್ಮ-ಕರ್ಮಗಳಿಂದ ರಹಿತನಾಗಿದ್ದರೂ ದುಷ್ಟರ ನಾಶವನ್ನು ಮಾಡುವುದಕ್ಕಾಗಿ ಮತ್ತು ಭಕ್ತ ಜನರನ್ನು ತನ್ನ ಕಡೆಗೆ ಆಕರ್ಷಿತಗೊಳಿಸಲು ಅವನ ದಿವ್ಯ ಜನ್ಮ-ಕರ್ಮಗಳಾಗುತ್ತವೆ. ಇಲ್ಲದಿದ್ದರೆ, ಭಗವಂತನ ಮಾತೇನು! ಗುಣಾತೀತರಾದ ಬೇರೆ ಜನರೂ ಕೂಡ ಈ ಕರ್ಮಾಧೀನ ದೇಹದ ಬಂಧನದಲ್ಲಿ ಬೀಳಲು ಬಯಸುವಂತಹವರು ಯಾರಿದ್ದಾರೆ? ॥ ೪೪ ॥ ಆದ್ದರಿಂದ ಎಲೈ ಮಿತ್ರನೇ! ಜನ್ಮರಹಿತನಾಗಿದ್ದರೂ ತನ್ನಲ್ಲಿ ಶರಣುಬಂದ ಸಮಸ್ತ ಲೋಕ ಪಾಲಕರಿಗೂ ಮತ್ತು ತನ್ನ ಅನುಶಾಸನಕ್ಕೆ ವಿಧೇಯರಾಗಿ ನಡೆಯುವ ಭಕ್ತರಿಗೂ ಪ್ರಿಯವನ್ನುಂಟು ಮಾಡುವುದಕ್ಕಾಗಿ ಯದುಕುಲದಲ್ಲಿ ಸ್ವೇಚ್ಛೆಯಿಂದ ಅವತರಿಸಿದ ಪವಿತ್ರ ಕೀರ್ತಿಯುಳ್ಳ ಶ್ರೀಕೃಷ್ಣನ ಸಮಾಚಾರವನ್ನು ನನಗೆ ತಿಳಿಸು. ॥ ೪೫ ॥

ಮೊದಲನೆಯ ಅಧ್ಯಾಯವು ಮುಗಿಯಿತು. ॥ ೧ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ತೃತೀಯಸ್ಕಂಧೇ
ವಿದುರೋದ್ಧವಸಂವಾದೇ ಪ್ರಥಮೋಽಧ್ಯಾಯಃ ॥ ೧ ॥

ಎರಡನೆಯ ಅಧ್ಯಾಯ

ಉದ್ಧವನು ವಿದುರನಿಗೆ ಭಗವಂತನ ಬಾಲಲೀಲೆಗಳನ್ನು ವರ್ಣಿಸಿದುದು

ಶ್ರೀಶುಕ ಉವಾಚ

ಇತಿ ಭಾಗವತಃ ಪೃಷ್ಟಃ ಕ್ಷತ್ತ್ರಾ ವಾರ್ತಾಂ ಪ್ರಿಯಾಶ್ರಯಾಮ್ ।
ಪ್ರತಿವಕ್ತುಂ ನ ಚೋತ್ಸೇಹ ಔತ್ಕಂಠ್ಯಾತ್ಸ್ಮಾರಿತೇಶ್ವರಃ ॥ ೧ ॥

ಶ್ರೀಶುಕಮಹಾಮುನಿಗಳು ಹೇಳಿದರು - ಮಹಾರಾಜನೇ! ಹೀಗೆ ವಿದುರನು ಪ್ರಿಯತಮನಾದ ಶ್ರೀಕೃಷ್ಣನಿಗೆ ಸಂಬಂಧಿಸಿದ ಮಾತುಗಳನ್ನು ಕೇಳಿದಾಗ ಭಾಗವತಶ್ರೇಷ್ಠನಾದ ಉದ್ಧವನಿಗೆ ಭಗವಂತನ ಸ್ಮರಣೆಯಿಂದ ಹೃದಯವು ತುಂಬಿಬಂತು. ಭಗವಂತನ ವಿರಹ ವ್ಯಥೆಯಿಂದ ಕೊಂಚಕಾಲ ಯಾವ ಉತ್ತರವನ್ನೂ ಕೊಡದಾದನು. ॥ ೧ ॥

ಯಃ ಪಂಚಹಾಯನೋ ಮಾತ್ರಾ ಪ್ರಾತರಾಶಾಯ ಯಾಚಿತಃ ।
ತನ್ನೈಚ್ಛದ್ರಚಯನ್ ಯಸ್ಯ ಸಪರ್ಯಾಂ ಬಾಲಲೀಲಯಾ ॥ ೨ ॥

ಸ ಕಥಂ ಸೇವಯಾ ತಸ್ಯ ಕಾಲೇನ ಜರಸಂ ಗತಃ ।
ಪೃಷ್ಟೋ ವಾರ್ತಾಂ ಪ್ರತಿಬ್ರೂಯಾದ್ಭರ್ತುಃ ಪಾದಾವನುಸ್ಮರನ್ ॥ ೩ ॥

ಸ ಮುಹೂರ್ತಮಭೂತ್ತೂಷ್ಣೀಂ ಕೃಷ್ಣಾಂಘ್ರಿಸುಧಯಾ ಭೃಶಮ್ ।
ತೀವ್ರೇಣ ಭಕ್ತಿಯೋಗೇನ ನಿಮಗ್ನಃ ಸಾಧು ನಿರ್ವೃತಃ ॥ ೪ ॥

ಪುಲಕೋದ್ಭಿನ್ನಸರ್ವಾಂಗೋ ಮುಂಚನ್ಮೀಲದ್ದೃಶಾ ಶುಚಃ ।
ಪೂರ್ಣಾರ್ಥೋ ಲಕ್ಷಿತಸ್ತೇನ ಸ್ನೇಹಪ್ರಸರಸಂಪ್ಲುತಃ ॥ ೫ ॥

ಶನಕೈರ್ಭಗವಲ್ಲೋಕಾನ್ನೃಲೋಕಂ ಪುನರಾಗತಃ ।
ವಿಮೃಜ್ಯ ನೇತ್ರೇ ವಿದುರಂ ಪ್ರೀತ್ಯಾಹೋದ್ಧವ ಉತ್ಸ್ಮಯನ್ ॥ ೬ ॥

ಉದ್ಧವ ಉವಾಚ

ಕೃಷ್ಣದ್ಯುಮಣಿನಿಮ್ಲೋಚೇ ಗೀರ್ಣೇಷ್ವಜಗರೇಣ ಹ ।
ಕಿಂ ನು ನಃ ಕುಶಲಂ ಬ್ರೂಯಾಂ ಗತಶ್ರೀಷು ಗೃಹೇಷ್ವಹಮ್ ॥ ೭ ॥

ದುರ್ಭಗೋ ಬತ ಲೋಕೋಽಯಂ ಯದವೋ ನಿತರಾಮಪಿ ।
ಯೇ ಸಂವಸಂತೋ ನ ವಿದುರ್ಹರಿಂ ಮೀನಾ ಇವೋಡುಪಮ್ ॥ ೮ ॥

ಇಂಗಿತಜ್ಞಾಃ ಪುರುಪ್ರೌಢಾ ಏಕಾರಾಮಾಶ್ಚ ಸಾತ್ವತಾಃ ।
ಸಾತ್ವತಾಮೃಷಭಂ ಸರ್ವೇ ಭೂತಾವಾಸಮಮಂಸತ ॥ ೯ ॥

ದೇವಸ್ಯ ಮಾಯಯಾ ಸ್ಪೃಷ್ಟಾ ಯೇ ಚಾನ್ಯದಸದಾಶ್ರಿತಾಃ ।
ಭ್ರಾಮ್ಯತೇ ಧೀರ್ನ ತದ್ವಾಕ್ಯೈರಾತ್ಮನ್ಯುಪ್ತಾತ್ಮನೋ ಹರೌ ॥ ೧೦ ॥

ಅವನು ಐದು ವರ್ಷದ ಬಾಲಕನಾಗಿದ್ದಾಗ ಆಟ-ಪಾಠಗಳಲ್ಲಿ ಇರುವಾಗಲೂ ಶ್ರೀಕೃಷ್ಣನಲ್ಲೇ ತನ್ಮಯನಾಗುತ್ತಿದ್ದನು. ಆಟವಾಡುತ್ತಾ ಅವನು ಶ್ರೀಕೃಷ್ಣನ ಪೂಜೆಯಲ್ಲಿ ನಿರತನಾಗಿದ್ದಾಗ ತಾಯಿಯು ಉಪಾಹಾರಕ್ಕಾಗಿ ಕರೆದಾಗಲೂ ಅದನ್ನು ಬಿಟ್ಟು ಹೋಗಲು ಬಯಸುತ್ತಿರಲಿಲ್ಲ. ॥ ೨ ॥ ಈಗಲಾದರೋ ಶ್ರೀಕೃಷ್ಣನ ಸೇವೆಯಲ್ಲೇ ದೀರ್ಘಕಾಲ ತೊಡಗಿ ಮುದುಕನಾಗಿದ್ದನು. ಆದ್ದರಿಂದ ವಿದುರನು ಕೇಳಿದ್ದರಿಂದ ಅವನಿಗೆ ತನ್ನ ಪ್ರಿಯಪ್ರಭುವಿನ ಚರಣಕಮಲಗಳ ಸ್ಮರಣೆ ಉಂಟಾಗಿ ಹೃದಯವು ಭಾರವಾಗುವುದು ಸಹಜವೇ ? ಆ ಸ್ಥಿತಿಯಲ್ಲಿ ಅವನಿಗೆ ಪ್ರತ್ಯುತ್ತರ ಕೊಡಲು ಹೇಗೆ ಸಾಧ್ಯವಾದೀತು ? ॥ ೩ ॥ ಅವನು ಶ್ರೀಕೃಷ್ಣಪಾದಾರವಿಂದಗಳ ಧ್ಯಾನಾಮೃತಪಾನದಿಂದ ಆನಂದಭರಿತನಾಗಿ ಎರಡು ಘಳಿಗೆ ಕಾಲ ಏನೂ ಮಾತನಾಡಲಾರದೆ ಸುಮ್ಮನಿದ್ದುಬಿಟ್ಟನು. ಅವನು ತೀವ್ರವಾದ ಭಕ್ತಿಯೋಗದಲ್ಲಿ ಮುಳುಗಿಹೋಗಿದ್ದನು. ॥ ೪ ॥ ಅವನ ಶರೀರವೆಲ್ಲ ರೋಮಾಂಚವಾಯಿತು. ಮುಚ್ಚಿದ್ದ ಕಣ್ಣುಗಳಿಂದ ಆನಂದಾಶ್ರುಗಳು ಹರಿಯತೊಡಗಿದವು. ಹೀಗೆ ಭಕ್ತಿಪ್ರವಾಹದಲ್ಲಿ ಮುಳುಗಿದ್ದ ಉದ್ಧವನನ್ನು ನೋಡಿ ಅವನು ಕೃತಕೃತ್ಯನಾದ ಪುಣ್ಯಶಾಲಿಯೆಂದು ವಿದುರನು ತಿಳಿದನು. ॥ ೫ ॥ ಕೊಂಚ ಕಾಲಾನಂತರ ಉದ್ಧವನು ಭಗವಂತನ ಪ್ರೇಮಧಾಮದಿಂದ ಕೆಳಗಿಳಿದು ಮನುಷ್ಯಲೋಕಕ್ಕೆ ಬಂದವನಾಗಿ ಕಣ್ಣುಗಳನ್ನು ಒರೆಸಿಕೊಂಡು ಭಗವಲ್ಲೀಲೆಗಳ ಸ್ಮರಣೆ ಉಂಟಾಗಿ ಮುಗುಳ್ನಗುತ್ತಾ ವಿದುರನಲ್ಲಿ ಹೀಗೆ ಹೇಳತೊಡಗಿದನು. ॥ ೬ ॥

ಉದ್ಧವನು ಹೇಳಿದನು – ಎಲೈ ವಿದುರನೇ ! ಶ್ರೀಕೃಷ್ಣನೆಂಬ ಸೂರ್ಯನು ಅಸ್ತಮಾನವಾದ್ದರಿಂದ ನಮ್ಮ ಮನೆಗಳನ್ನೂ ಕಾಲರೂಪೀ ಹೆಬ್ಬಾವು ನುಂಗಿಬಿಟ್ಟಿದೆ. ಅವು ಶ್ರೀಹೀನವಾಗಿವೆ. ಈಗ ನಾನು ಅವುಗಳ ಕುಶಲ ಸಮಾಚಾರ ಏನೆಂದು ಹೇಳಲಿ ? ॥ ೭ ॥ ಎಂತಹ ದುರದೃಷ್ಟ! ಈ ಲೋಕವೇ ಭಾಗ್ಯಹೀನವಾಗಿ ಬಿಟ್ಟಿತು. ಅದರಲ್ಲೂ ಯಾದವರು ವಿಶೇಷವಾಗಿ ನಿರ್ಭಾಗ್ಯರಾದರು. ಅವರು ನಿರಂತರ ಭಗವಂತನ ಜೊತೆಯಲ್ಲೇ ಇರುತ್ತಿದ್ದರೂ – ಅಮೃತಮಯ ಚಂದ್ರಬಿಂಬವು ಸಮುದ್ರದಲ್ಲೇ ಇದ್ದರೂ ಅದನ್ನು ಮೀನುಗಳು ಗುರುತಿಸದಂತೆ ಯಾದವರು ಭಗವಂತನನ್ನು ಗುರುತಿಸದೆ ಹೋದರು. ॥ ೮ ॥ ಯಾದವರು ಇಂಗಿತಜ್ಞರೂ, ಮಹಾಬುದ್ಧಿಶಾಲಿಗಳೂ ಆಗಿದ್ದರು. ಶ್ರೀಕೃಷ್ಣ ಪರಮಾತ್ಮನೊಂದಿಗೆ ಒಂದೇ ಜಾಗದಲ್ಲಿದ್ದು ಅವನೊಡನೆ ವಾಸಿಸುತ್ತಿದ್ದರೂ ಅವರೆಲ್ಲರೂ ಸಮಸ್ತ ವಿಶ್ವದ ಆಶ್ರಯನೂ, ಸರ್ವಾಂತರ್ಯಾಮಿಯೂ ಆದ ಶ್ರೀಕೃಷ್ಣನನ್ನು ಓರ್ವ ಯಾದವ ಶ್ರೇಷ್ಠನೆಂದೇ ತಿಳಿದಿದ್ದರು. ॥ ೯ ॥ ಆದರೆ ಭಗವಂತನ ಮಾಯೆಯಿಂದ ಮೋಹಿತರಾದ ಈ ಯಾದವರು ಮತ್ತು ಇವನಲ್ಲಿ ವ್ಯರ್ಥವಾಗಿ ವೈರವನ್ನು ಕಟ್ಟಿಕೊಂಡ ಶಿಶುಪಾಲಾದಿಗಳ ಅಪಮಾನಕರ, ನಿಂದಾಸೂಚಕವಾಕ್ಯಗಳಿಂದ ಭಗವಂತನಲ್ಲಿ ಮನಸ್ಸಮಾಧಿಯನ್ನು ಹೊಂದಿದ ಮಹಾತ್ಮರ ಬುದ್ಧಿಯು ಭ್ರಮಿತವಾಗುತ್ತಿರಲಿಲ್ಲ. ॥ ೧೦ ॥ ಎಂದೂ ತಪಸ್ಸನ್ನೇ ಮಾಡದ ಜನರಿಗೂ ಕೂಡ ಇಷ್ಟು ದಿನ ದರ್ಶನಕೊಟ್ಟು ಈಗ ಅವರ ದರ್ಶನದ ಲಾಲಸೆಯನ್ನು ತೃಪ್ತಿಪಡಿಸದೆಯೇ ಆ ಭಗವಾನ್ ಶ್ರೀಕೃಷ್ಣನು ತನ್ನ ತ್ರಿಭುವನಮೋಹನ ದಿವ್ಯವಿಗ್ರಹವನ್ನು ಅಡಗಿಸಿ ಅಂತರ್ಧಾನ

ಪ್ರದರ್ಶ್ಯಾತಪ್ತತಪಸಾಮವಿತೃಪ್ತದೃಶಾಂ ನೃಣಾಮ್ ।
ಆದಾಯಾಂತರಧಾದ್ಯಸ್ತು ಸ್ವಬಿಂಬಂ ಲೋಕಲೋಚನಮ್ ॥ ೧೧ ॥

ಯನ್ಮರ್ತ್ಯಲೀಲೌಪಯಿಕಂ ಸ್ವಯೋಗ-
ಮಾಯಾಬಲಂ ದರ್ಶಯತಾ ಗೃಹೀತಮ್ ।
ವಿಸ್ಮಾಪನಂ ಸ್ವಸ್ಯ ಚ ಸೌಭಗರ್ದ್ಧೇಃ
ಪರಂ ಪದಂ ಭೂಷಣಭೂಷಣಾಂಗಮ್ ॥ ೧೨ ॥

ಯದ್ಧರ್ಮಸೂನೋರ್ಬತ ರಾಜಸೂಯೇ
ನಿರೀಕ್ಷ್ಯ ದೃಕ್ಸ್ವಸ್ತ್ಯಯನಂ ತ್ರಿಲೋಕಃ ।
ಕಾರ್ತ್ಸ್ನ್ಯೇನ ಚಾದ್ಯೇಹ ಗತಂ ವಿಧಾತು-
ರರ್ವಾಕ್ಸೃತೌ ಕೌಶಲಮಿತ್ಯಮನ್ಯತ ॥ ೧೩ ॥

ಯಸ್ಯಾನುರಾಗಪ್ಲುತಹಾಸರಾಸ-
ಲೀಲಾವಲೋಕಪ್ರತಿಲಬ್ಧಮಾನಾಃ ।
ವ್ರಜಸ್ತ್ರಿಯೋ ದೃಗ್ಭಿರನುಪ್ರವೃತ್ತ-
ಧಿಯೋಽವತಸ್ಥುಃ ಕಿಲ ಕೃತ್ಯಶೇಷಾಃ ॥ ೧೪ ॥

ಸ್ವಶಾಂತರೂಪೇಷ್ವಿತರೈಃ ಸ್ವರೂಪೈ-
ರಭ್ಯರ್ದ್ಯಮಾನೇಷ್ವನುಕಂಪಿತಾತ್ಮಾ ।
ಪರಾವರೇಶೋ ಮಹದಂಶಯುಕ್ತೋ
ಹ್ಯಜೋಽಪಿ ಜಾತೋ ಭಗವಾನ್ಯಥಾಗ್ನಿಃ ॥ ೧೫ ॥

ಮಾಂ ಖೇದಯತ್ಯೇತದಜಸ್ಯ ಜನ್ಮ-
ವಿಡಂಬನಂ ಯದ್ವಸುದೇವಗೇಹೇ ।
ವ್ರಜೇ ಚ ವಾಸೋಽರಿಭಯಾದಿವ ಸ್ವಯಂ
ಪುರಾದ್ವ್ಯವಾತ್ಸೀದ್ಯದನಂತವೀರ್ಯಃ ॥ ೧೬ ॥

ದುನೋತಿ ಚೇತಃ ಸ್ಮರತೋ ಮಮೈತದ್
ಯದಾಹ ಪಾದಾವಭಿವಂದ್ಯ ಪಿತ್ರೋಃ ।
ತಾತಾಂಬ ಕಂಸಾದುರುಶಂಕಿತಾನಾಂ
ಪ್ರಸೀದತಂ ನೋಽಕೃತನಿಷ್ಕೃತೀನಾಮ್ ॥ ೧೭ ॥

ಕೋ ವಾ ಅಮುಷ್ಯಾಂಘ್ರಿಸರೋಜರೇಣುಂ
ವಿಸ್ಮರ್ತುಮೀಶೀತ ಪುಮಾನ್ವಿಜಿಘ್ರನ್ ।
ಯೋ ವಿಸ್ಫುರದ್ಭ್ರೂವಿಟಪೇನ ಭೂಮೇ-
ರ್ಭಾರಂ ಕೃತಾಂತೇನ ತಿರಶ್ಚಕಾರ ॥ ೧೮ ॥

ನಾದನು. ಹೀಗೆ ಅವನು ಅವರ ಕಣ್ಣನ್ನೇ ಕಿತ್ತುಕೊಂಡು ಬಿಟ್ಟಿರುವನು. ॥ ೧೧ ॥ ತನ್ನ ಯೋಗಮಾಯೆಯ ಪ್ರಭಾವವನ್ನು ತೋರ್ಪಡಿಸುತ್ತಾ ಮನುಷ್ಯಲೀಲೆಗೆ ತಕ್ಕಂತೆ ಅವನು ಸ್ವೀಕರಿಸಿದ್ದ ಆ ಶ್ರೀಮೂರ್ತಿಯ ಸೊಬಗನ್ನು ಹೇಗೆ ವರ್ಣಿಸೋಣ! ಅದು ಸೌಂದರ್ಯ-ಸೌಭಾಗ್ಯಗಳ ಪರಮ ನೆಲೆಯೇ ಆಗಿತ್ತು. ಅವನಿಂದ ಆಭೂಷಣಗಳೂ ವಿಭೂಷಿತವಾಗುತ್ತಿದ್ದವು. ಜಗತ್ತಿಗೆ ಮಾತ್ರವಲ್ಲದೆ ಸ್ವಯಂ ಭಗವಂತನಿಗೇ ಆಶ್ಚರ್ಯವನ್ನುಂಟು ಮಾಡುವುದಾಗಿತ್ತು. ॥ ೧೨ ॥

ಧರ್ಮರಾಜನ ರಾಜಸೂಯಯಜ್ಞದ ಸಮಯದಲ್ಲಿ ಕಣ್ಣುಗಳಿಗೆ ಹಬ್ಬವಾಗಿದ್ದ ಆ ಭಗವಂತನ ಶ್ರೀಮೂರ್ತಿಯನ್ನು ಕಂಡು ಮೂರು ಲೋಕದ ಜನರೂ – 'ಬ್ರಹ್ಮದೇವರು ಮನುಷ್ಯಸೃಷ್ಟಿಯ ರಚನೆಯಲ್ಲಿರುವ ಎಲ್ಲ ಜಾಣ್ಮೆಯನ್ನು ಈ ರೂಪದಲ್ಲೇ ಸೇರಿಸಿ ಬಿಟ್ಟಿರುವನು' ಎಂದು ಭಾವಿಸಿದ್ದರು. ॥ ೧೩ ॥ ಆ ಶ್ರೀಕೃಷ್ಣನ ಅನುರಾಗಪೂರ್ಣವಾದ ಹಾಸ್ಯ ಮತ್ತು ವಿನೋದಮಯವಾದ ಕಟಾಕ್ಷಗಳಿಂದ ಸಮ್ಮಾನಿತರಾದ ಗೋಕುಲದ ಸ್ತ್ರೀಯರ ಕಣ್ಣುಗಳು ಅವನಲ್ಲೇ ನೆಟ್ಟಿರುತ್ತಿದ್ದವು ಮತ್ತು ಮನೋಲಯವನ್ನು ಹೊಂದಿ ಮನೆಯ ಕೆಲಸಗಳನ್ನು ನಿಲ್ಲಿಸಿ ಬೊಂಬೆಗಳಂತೆ ಸ್ತಬ್ಧರಾಗಿ ನಿಂತುಬಿಡುತ್ತಿದ್ದರು. ॥ ೧೪ ॥ ಚರಾಚರ ಜಗತ್ತಿನ ಮತ್ತು ಪ್ರಕೃತಿಯ ಒಡೆಯನಾದ ಭಗವಂತನು ಸೌಮ್ಯಸ್ವರೂಪಿಗಳಾದ ಮಹಾತ್ಮರೂ, ದೇವತೆಗಳೂ ಮುಂತಾದವರು ಘೋರರೂಪಿಗಳಾದ ಅಸುರರಿಂದ ಪೀಡಿಸಲ್ಪಡುತ್ತಿರುವುದನ್ನು ಕಂಡು ಕರುಣಾಪೂರಿತನಾಗಿ, ಜನ್ಮರಹಿತನಾಗಿದ್ದರೂ ತನ್ನ ಅಂಶವಾದ ಬಲರಾಮನೊಂದಿಗೆ ಕಟ್ಟಿಗೆಯಲ್ಲಿ ಬೆಂಕಿಯು ಆವಿರ್ಭವಿಸುವಂತೆ ಪ್ರಕಟನಾದನು. ॥ ೧೫ ॥ ಜನ್ಮರಹಿತನಾಗಿದ್ದರೂ ಆ ಮಹಾಪ್ರಭುವು ವಸುದೇವನ ಮನೆಯಲ್ಲಿ ಜನ್ಮತಳೆದು ಲೀಲೆಗಳನ್ನು ತೋರುವುದೂ, ಸಮಸ್ತ ಭೂತಗಳಿಗೂ ಅಭಯಪ್ರದನಾಗಿದ್ದರೂ ಕಂಸನಿಗೆ ಭಯಗೊಂಡವನಂತೆ ವೃಂದಾವನಕ್ಕೆ ಹೋಗಿ ಅಡಗಿರುವುದು, ಅನಂತ ಪರಾಕ್ರಮಿಯಾಗಿದ್ದರೂ ಕಾಲಯವನನಿಗೆ ಭಯಗೊಂಡವನಂತೆ ಮಥುರಾನಗರಿಯನ್ನು ಬಿಟ್ಟು ಓಡಿಹೋಗುವುದೂ – ಇವೆಲ್ಲ ಭಗವಂತನ ಲೀಲೆಗಳು ನೆನಪಿಗೆ ಬಂದು ಮನಸ್ಸು ಕಳವಳಗೊಳ್ಳುತ್ತದೆ. ॥ ೧೬ ॥ ಮೂರು ಲೋಕಗಳಿಗೂ ತಂದೆಯಾಗಿದ್ದರೂ ವಸುದೇವ-ದೇವಕಿಯರ ಚರಣಗಳಿಗೆ ಎರಗಿ 'ಅಪ್ಪಾ! ಅಮ್ಮಾ! ಕಂಸನ ಭಯಕ್ಕೆ ಒಳಗಾಗಿ ನಾವು ನಿಮಗೆ ಯಾವ ಸೇವೆಯನ್ನೂ ಮಾಡಲಾಗಲಿಲ್ಲ, ನಮ್ಮ ಅಪರಾಧವನ್ನು ಮನ್ನಿಸಿ ಪ್ರಸನ್ನರಾಗಬೇಕು' ಎಂದು ಬೇಡಿಕೊಂಡನು. ಶ್ರೀಕೃಷ್ಣನ ಆ ಮಾತುಗಳು ನೆನಪಾದಾಗ ಇಂದೂ ಕೂಡ ನನ್ನ ಚಿತ್ತವು ಅತ್ಯಂತ ವ್ಯಥಿತವಾಗುತ್ತದೆ. ॥ ೧೭ ॥ ಕಾಲಸ್ವರೂಪವಾದ ತನ್ನ ಭ್ರುಕುಟಿವಿಲಾಸದಿಂದಲೇ ಭೂಮಿಯ ಸಮಸ್ತ ಭಾರವನ್ನು ಇಳಿಸಿದ ಆ ಪರಮಪುರುಷ ಶ್ರೀಕೃಷ್ಣನ ಪಾದಪದ್ಮಗಳ ಪರಾಗವನ್ನು ಸೇವಿಸುವ ಯಾವನು ತಾನೇ ಅದನ್ನು ಮರೆಯುವನು? ॥ ೧೮ ॥ ಶಿಶುಪಾಲನಾದರೋ ಶ್ರೀಕೃಷ್ಣನಲ್ಲಿ ಬದ್ಧದ್ವೇಷ ಹೊಂದಿದ್ದರೂ, ಅವನು ಯೋಗಿಗಳು ಯೋಗಸಾಧನೆಯಿಂದ ಪಡೆಯಲು ಬಯಸುತ್ತಿರುವ ಪರಮ ಸಿದ್ಧಿಯನ್ನು ಪಡೆದುದನ್ನು ನೀವು ರಾಜಸೂಯ

ದೃಷ್ಟ್ವಾ ಭವದ್ಭಿರ್ನನು ರಾಜಸೂಯೇ
ಚೈದ್ಯಸ್ಯ ಕೃಷ್ಣಂ ದ್ವಿಷತೋಽಪಿ ಸಿದ್ಧಿಃ ।
ಯಾಂ ಯೋಗಿನಃ ಸಂಸ್ಪೃಹಯಂತಿ ಸಮ್ಯಗ್
ಯೋಗೇನ ಕಸ್ತದ್ವಿರಹಂ ಸಹೇತ ॥ ೧೯ ॥

ತಥೈವ ಚಾನ್ಯೇ ನರಲೋಕವೀರಾ
ಯ ಆಹವೇ ಕೃಷ್ಣಮುಖಾರವಿಂದಮ್ ।
ನೇತ್ರೈಃ ಪಿಬಂತೋ ನಯನಾಭಿರಾಮಂ
ಪಾರ್ಥಾಸ್ತ್ರಪೂತಾಃ ಪದಮಾಪುರಸ್ಯ ॥ ೨೦ ॥

ಸ್ವಯಂ ತ್ವಸಾಮ್ಯಾತಿಶಯಸ್ತ್ರ್ಯಧೀಶಃ
ಸ್ವಾರಾಜ್ಯಲಕ್ಷ್ಮ್ಯಾಪ್ತಸಮಸ್ತಕಾಮಃ ।
ಬಲಿಂ ಹರದ್ಭಿಶ್ಚಿರಲೋಕಪಾಲೈಃ
ಕಿರೀಟಕೋಟ್ಯೇಡಿತಪಾದಪೀಠಃ ॥ ೨೧ ॥

ತತ್ತಸ್ಯ ಕೈಂಕರ್ಯಮಲಂ ಭೃತಾನ್ನೋ
ವಿಗ್ಲಾಪಯತ್ಯಂಗ ಯದುಗ್ರಸೇನಮ್ ।
ತಿಷ್ಠನ್ನಿಷಣ್ಣಂ ಪರಮೇಷ್ಠಿಧಿಷ್ಣ್ಯೇ
ನ್ಯಬೋಧಯದ್ದೇವ ನಿಧಾರಯೇತಿ ॥ ೨೨ ॥

ಅಹೋ ಬಕೀ ಯಂ ಸ್ತನಕಾಲಕೂಟಂ
ಜಿಘಾಂಸಯಾಪಾಯಯದಪ್ಯಸಾಧ್ವೀ ।
ಲೇಭೇ ಗತಿಂ ಧಾತ್ರ್ಯುಚಿತಾಂ ತತೋಽನ್ಯಂ
ಕಂ ವಾ ದಯಾಲುಂ ಶರಣಂ ವ್ರಜೇಮ ॥ ೨೩ ॥

ಮನ್ಯೇಽಸುರಾನ್ಭಾಗವತಾಂಸ್ತ್ರ್ಯಧೀಶೇ
ಸಂರಂಭಮಾರ್ಗಾಭಿನಿವಿಷ್ಟಚಿತ್ತಾನ್ ।
ಯೇ ಸಂಯುಗೇಽಚಕ್ಷತ ತಾರ್ಕ್ಷ್ಯಪುತ್ರ-
ಮಂಸೇ ಸುನಾಭಾಯುಧಮಾಪತಂತಮ್ ॥ ೨೪ ॥

ವಸುದೇವಸ್ಯ ದೇವಕ್ಯಾಂ ಜಾತೋ ಭೋಜೇಂದ್ರಬಂಧನೇ ।
ಚಿಕೀರ್ಷುರ್ಭಗವಾನಸ್ಯಾಃ ಶಮಜೇನಾಭಿಯಾಚಿತಃ ॥ ೨೫ ॥

ತತೋ ನಂದವ್ರಜಮಿತಃ ಪಿತ್ರಾ ಕಂಸಾದ್ವಿಬಿಭ್ಯತಾ ।
ಏಕಾದಶ ಸಮಾಸ್ತತ್ರ ಗೂಢಾರ್ಚಿಃ ಸಬಲೋಽವಸತ್ ॥ ೨೬ ॥

ಪರೀತೋ ವತ್ಸಪೈರ್ವತ್ಸಾಂಶ್ಚಾರಯನ್ ವ್ಯಹರದ್ವಿಭುಃ ।
ಯಮುನೋಪವನೇ ಕೂಜದ್ದ್ವಿಜಸಂಕುಲಿತಾಂಘ್ರಿಪೇ ॥ ೨೭ ॥

ಯಜ್ಞದಲ್ಲಿ ಪ್ರತ್ಯಕ್ಷವಾಗಿ ನೋಡಿರುವಿರಿ. ಅಂತಹವನ ವಿರಹವನ್ನು ಯಾರು ತಾನೇ ಸಹಿಸಬಲ್ಲರು? ॥ ೧೯ ॥ ಶಿಶುಪಾಲನಂತೆ ಮಹಾಭಾರತ ಯುದ್ಧದಲ್ಲಿ ಅರ್ಜುನನ ಬಾಣಗಳಿಗೆ ತುತ್ತಾಗಿ ಕಣ್ಣುಗಳಿಗೆ ಹಬ್ಬವಾಗಿದ್ದ ಶ್ರೀಕೃಷ್ಣನ ಮುಖಾರವಿಂದವನ್ನು ನೋಡುತ್ತಾ ಪ್ರಾಣತ್ಯಾಗಮಾಡಿದ ಎಲ್ಲರೂ ಪವಿತ್ರರಾಗಿ ಪರಂಧಾಮವನ್ನು ಪಡೆದುಕೊಂಡರು. ॥ ೨೦ ॥ ಸಾಕ್ಷಾತ್ ಭಗವಾನ್ ಶ್ರೀಕೃಷ್ಣನು ಮೂರು ಲೋಕಗಳಿಗೆ ಒಡೆಯನು. ಅವನಿಗೆ ಸಮಾನರಾದವರು ಯಾರೂ ಇಲ್ಲ, ಹಾಗಿರುವಾಗ ಅವನಿಗಿಂತ ಮಿಗಿಲಾದವರು ಯಾರಿದ್ದಾರೆ? ಇಂದ್ರಾದಿ ಅಸಂಖ್ಯ ಲೋಕಪಾಲರು ನಾನಾ ರೀತಿಯ ಕಾಣಿಕೆಗಳನ್ನು ತಂದು-ತಂದು ಒಪ್ಪಿಸಿ, ತಮ್ಮ ಕಿರೀಟಗಳ ತುದಿಯಿಂದ ಅವನು ಕಾಲನ್ನಿಡುವ ಪಾದಪೀಠಕ್ಕೆ ಮಣಿಯುತ್ತಿದ್ದರು. ॥ ೨೧ ॥ ವಿದುರನೇ! ಅದೇ ಭಗವಾನ್ ಶ್ರೀಕೃಷ್ಣನು ರಾಜಸಿಂಹಾಸನದ ಮೇಲೆ ಕುಳಿತಿರುವ ಉಗ್ರಸೇನನ ಮುಂದೆ ನಿಂತು 'ದೇವಾ! ನಮ್ಮ ಅರಿಕೆಯನ್ನು ಆಲಿಸಬೇಕು' ಎಂದು ಬಿನ್ನವಮಾಡುತ್ತಿದ್ದನು. ಅವನ ಸೇವಾ ಭಾವವು ನೆನಪಾಗುತ್ತಲೇ ನಮ್ಮಂತಹ ಸೇವಕರ ಚಿತ್ತವು ಅತ್ಯಂತ ಕಳವಳಗೊಳ್ಳುತ್ತದೆ. ॥ ೨೨ ॥ ಪಾಪಿಷ್ಠೆಯಾದ ಪೂತನಿಯು ತನ್ನ ಸ್ತನಗಳಲ್ಲಿ ವಿಷವನ್ನು ತುಂಬಿಕೊಂಡು ಶ್ರೀಕೃಷ್ಣನನ್ನು ಕೊಲ್ಲಬೇಕೆಂಬ ಅಭಿಪ್ರಾಯದಿಂದ ಅವನಿಗೆ ಸ್ತನ್ಯವನ್ನು ಕುಡಿಸಿದ್ದಳು. ಅವಳಿಗೂ ಕೂಡ ಭಗವಂತನು ನಿಜವಾದ ದಾದಿಗೆ ಸಿಕ್ಕಬೇಕಾದ ಸದ್ಗತಿಯನ್ನು ಕರುಣಿಸಿದನು. ಶರಣುಹೋಗುವುದಕ್ಕೆ ಯೋಗ್ಯವಾದ ಕರುಣಾಳುವು ಅವನಲ್ಲದೆ ಮತ್ತೆ ಯಾರಿದ್ದಾರೆ? ॥ ೨೩ ॥ ಈ ಅಸುರರನ್ನು ನಾನು ಭಗವದ್ಭಕ್ತರೆಂದೇ ಪರಿಗಣಿಸುತ್ತೇನೆ. ಏಕೆಂದರೆ, ವೈರಜನಿತ ಕ್ರೋಧದ ಕಾರಣ ಅವರ ಚಿತ್ತವು ಸದಾಕಾಲ ಶ್ರೀಕೃಷ್ಣನಲ್ಲೇ ತೊಡಗಿರುತ್ತಿತ್ತು ಮತ್ತು ರಣರಂಗದಲ್ಲಿ ಗರುಡನು ಹೆಗಲಲ್ಲಿ ಹೊತ್ತುಕೊಂಡಿದ್ದ ಸುದರ್ಶನ ಚಕ್ರಧಾರಿಯಾದ ಶತ್ರುಗಳ ಮೇಲೆ ಎರಗುತ್ತಿರುವ ಶ್ರೀ ಭಗವಂತನ ದರ್ಶನವೂ ಆಗುತ್ತಿತ್ತು. ॥ ೨೪ ॥

ಬ್ರಹ್ಮದೇವರ ಪ್ರಾರ್ಥನೆಯಂತೆ ಭೂಭಾರವನ್ನು ಇಳುಹಿ, ಅದನ್ನು ಸುಖಿಯಾಗಿಸಲಿಕ್ಕಾಗಿ ಭಗವಂತನು ಕಂಸನ ಕಾರಾಗೃಹದಲ್ಲಿ ವಸುದೇವ-ದೇವಕಿಯರಲ್ಲಿ ಅವತರಿಸಿದ್ದನು. ॥ ೨೫ ॥ ಆಗ ಕಂಸನಿಗೆ ಭಯಪಟ್ಟು ತಂದೆ ವಸುದೇವನು ಆತನನ್ನು ನಂದ ಗೋಕುಲಕ್ಕೆ ಕೊಂಡೊಯ್ದು ಇರಿಸಿದನು. ಅಲ್ಲಿ ಆತನು ಬಲರಾಮನೊಂದಿಗೆ ತನ್ನ ಪ್ರಭಾವವು ಹೊರಗೆ ಯಾರಿಗೂ ತಿಳಿಯದಂತೆ ಅಡಗಿಕೊಂಡು ಹನ್ನೊಂದು ವರ್ಷ ವಾಸವಾಗಿದ್ದನು. ॥ ೨೬ ॥ ಹಕ್ಕಿಗಳ ಹಿಂಡು ಕಲ-ಕಲ ನಿನಾದ ಮಾಡುತ್ತಾ ಸುಖವಾಗಿ ವಾಸಿಸುತ್ತಿದ್ದ ಯಮುನಾತೀರದ ಉದ್ಯಾನವನದಲ್ಲಿ ಕರುಗಳನ್ನು ಮೇಯಿಸುತ್ತಾ ಭಗವಾನ್ ಶ್ರೀಕೃಷ್ಣನು ಗೊಲ್ಲಬಾಲಕರೊಡನೆ ಕ್ರೀಡಿಸುತ್ತಿದ್ದನು. ॥ ೨೭ ॥ ಗೋಕುಲನಿವಾಸಿಗಳ ದೃಷ್ಟಿಯನ್ನು ಸೆಳೆಯುವಂತಹ ನಾನಾ ಬಾಲಲೀಲೆಗಳನ್ನು ಅಲ್ಲಿ ಪ್ರಭುವು ಪ್ರಕಟಿಸಿದನು. ಕೆಲವೊಮ್ಮೆ ಅಳುವಂತೆಯೂ, ಕೆಲವು ವೇಳೆ ನಗುವಂತೆಯೂ ಕಾಣಿಸಿಕೊಂಡರೆ, ಕೆಲವೊಮ್ಮೆ ಸಿಂಹದ ಮರಿಯಂತೆ ಮುಗ್ಧದೃಷ್ಟಿ

ಕೌಮಾರೀಂ ದರ್ಶಯಂಶ್ಚೇಷ್ಟಾಂ
ಪ್ರೇಕ್ಷಣೀಯಾಂ ವ್ರಜೌಕಸಾಮ್ ।
ರುದನ್ನಿವ ಹಸನ್ಮುಗ್ಧ-
ಬಾಲಸಿಂಹಾವಲೋಕನಃ ॥ ೨೮ ॥

ಸ ಏವ ಗೋಧನಂ ಲಕ್ಷ್ಮ್ಯಾ ನಿಕೇತಂ ಸಿತಗೋವೃಷಮ್ ।
ಚಾರಯನ್ನನುಗಾನ್ ಗೋಪಾನ್ರಣದ್ವೇಣುರರೀರಮತ್ ॥ ೨೯ ॥

ಪ್ರಯುಕ್ತಾನ್ಭೋಜರಾಜೇನ ಮಾಯಿನಃ ಕಾಮರೂಪಿಣಃ ।
ಲೀಲಯಾ ವ್ಯನುದತ್ತಾಂಸ್ತಾನ್ ಬಾಲಃ ಕ್ರೀಡನಕಾನಿವ ॥ ೩೦ ॥

ವಿಪನ್ನಾನ್ವಿಷಪಾನೇನ ನಿಗೃಹ್ಯ ಭುಜಗಾಧಿಪಮ್ ।
ಉತ್ಥಾಪ್ಯಾಪಾಯಯದ್ಗಾವಸ್ತತ್ತೋಯಂ ಪ್ರಕೃತಿಸ್ಥಿತಮ್ ॥ ೩೧ ॥

ಅಯಾಜಯದ್ಗೋಸವೇನ ಗೋಪರಾಜಂ ದ್ವಿಜೋತ್ತಮೈಃ ।
ವಿತ್ತಸ್ಯ ಚೋರುಭಾರಸ್ಯ ಚಿಕೀರ್ಷನ್ಸದ್ವ್ಯಯಂ ವಿಭುಃ ॥ ೩೨ ॥

ವರ್ಷತೀಂದ್ರೇ ವ್ರಜಃ ಕೋಪಾದ್ಭಗ್ನಮಾನೇಽತಿವಿಹ್ವಲಃ ।
ಗೋತ್ರಲೀಲಾತಪತ್ರೇಣ ತ್ರಾತೋ ಭದ್ರಾನುಗೃಹ್ಣತಾ ॥ ೩೩ ॥

ಶರಚ್ಛಶಿಕರೈರ್ಮೃಷ್ಟಂ ಮಾನಯನ್ರಜನೀಮುಖಮ್ ।
ಗಾಯನ್ಕಲಪದಂ ರೇಮೇ ಸ್ತ್ರೀಣಾಂ ಮಂಡಲಮಂಡನಃ ॥ ೩೪ ॥

ಯಿಂದ ನೋಡುತ್ತಿದ್ದನು. ॥ ೨೮ ॥ ಸ್ವಲ್ಪ ದೊಡ್ಡವನಾದಾಗ ಬಿಳಿಯ ಎತ್ತುಗಳನ್ನೂ, ನಾನಾಬಣ್ಣದ ಹಸುಗಳನ್ನೂ ಮೇಯಿಸುತ್ತಾ ಕೊಳಲನ್ನೂದಿ ಅದರ ಇಂಚರದಿಂದ ಗೋವಳರನ್ನೂ ಸಂತೋಷಪಡಿಸುತ್ತಿದ್ದನು. ॥ ೨೯ ॥ ಆ ಸಮಯದಲ್ಲಿ ಕಂಸನು ಆತನನ್ನು ಕೊಂದು ಬಿಡಬೇಕೆಂದು ಮಾಯಾವಿಗಳೂ, ಕಾಮರೂಪಿಗಳೂ ಆದ ಅನೇಕ ರಾಕ್ಷಸರನ್ನು ಕಳಿಸಿದಾಗ ಹುಡುಗರು ಆಟದ ಸಾಮಾನು ಮುರಿದು ಹಾಕುವಂತೆ ಭಗವಂತನು ಅವರನ್ನು ಕೊಂದುಬಿಟ್ಟನು. ॥ ೩೦ ॥ ಕಾಳಿಂಗನಾಗನನ್ನು ಮರ್ದನಮಾಡಿ, ವಿಷಮಿಶ್ರಿತವಾದ ನೀರನ್ನು ಕುಡಿದು ವಿಪತ್ತಿಗೆ ಒಳಗಾಗಿದ್ದ ಗೋವುಗಳನ್ನೂ, ಗೋವಳರನ್ನೂ ಬದುಕಿಸಿ, ಆ ಮಡುವಿನ ನೀರನ್ನು ಶುದ್ಧಗೊಳಿಸಿ ಕುಡಿಯಲು ಯೋಗ್ಯವನ್ನಾಗಿ ಮಾಡಿದನು. ॥ ೩೧ ॥ ಗೋಪರಾಜನಾದ ನಂದಗೋಪನಲ್ಲಿದ್ದ ಹೇರಳವಾದ ಹಣದ ಸದ್ವಿನಿಯೋಗವಾಗಲೆಂದು ಭಗವಾನ್ ಶ್ರೀಕೃಷ್ಣನು ಅವನಿಂದ ಶ್ರೇಷ್ಠ ಬ್ರಾಹ್ಮಣರ ಮೂಲಕ ಗೋವರ್ಧನ ಪೂಜಾರೂಪೀ ಗೋಯಜ್ಞವನ್ನು ಮಾಡಿಸಿದನು. ॥ ೩೨ ॥ ಅದರಿಂದ ತನಗೆ ಮಾನಭಂಗವಾಯಿತೆಂದು ಭಾವಿಸಿ ಕಡು ಕೋಪಗೊಂಡ ಇಂದ್ರನು ಗೋಕುಲವನ್ನು ಧ್ವಂಸಮಾಡಿಬಿಡಲು ಭಯಂಕರವಾದ ಜಡಿಮಳೆಯನ್ನು ಸುರಿಸತೊಡಗಲು – ಭಗವಂತನು ಕರುಣಾಪೂರ್ಣನಾಗಿ ಗೋವರ್ಧನ ಪರ್ವತವನ್ನು ಲೀಲಾಜಾಲವಾಗಿ ಕೊಡೆಯಂತೆ ಎತ್ತಿಹಿಡಿದು ಅತ್ಯಂತ ಭಯಗೊಂಡ ಗೋವುಗಳನ್ನೂ, ಗೋಪಾಲಕರನ್ನೂ ಸಂರಕ್ಷಿಸಿದನು. ॥ ೩೩ ॥ ಸಾಯಂಕಾಲದಲ್ಲಿ ಇಡೀ ನಂದಗೋಕುಲದಲ್ಲಿ ಶರತ್ಕಾಲದ ಬೆಳದಿಂಗಳು ಚೆಲ್ಲುತ್ತಿರಲು ಆಗ ಶ್ರೀಕೃಷ್ಣನು ಅದನ್ನು ಸಂಭಾವಿಸುತ್ತಾ, ಮುರಳೀಗಾನಮಾಡುತ್ತಾ ಗೋಪಸ್ತ್ರೀ ಸಮೂಹದೊಡನೆ ರಾಸಕ್ರೀಡೆಯಾಡಿದನು. ॥ ೩೪ ॥

ಎರಡನೆಯ ಅಧ್ಯಾಯವು ಮುಗಿಯಿತು. ॥ ೨ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ತೃತೀಯಸ್ಕಂಧೇ
ವಿದುರೋದ್ಧವಸಂವಾದೇ ದ್ವಿತೀಯೋಽಧ್ಯಾಯಃ ॥ ೨ ॥

ಮೂರನೆಯ ಅಧ್ಯಾಯ

ಭಗವಂತನ ಇನ್ನೂ ಲೀಲಾಚರಿತ್ರೆಗಳ ವರ್ಣನೆ

ಉದ್ಧವ ಉವಾಚ

ತತಃ ಸ ಆಗತ್ಯ ಪುರಂ ಸ್ವಪಿತ್ರೋಃ
ಚಿಕೀರ್ಷಯಾ ಶಂ ಬಲದೇವಸಂಯುತಃ ।
ನಿಪಾತ್ಯ ತುಂಗಾದ್ರಿಪುಯೂಥನಾಥಂ
ಹತಂ ವ್ಯಕರ್ಷದ್ವ್ಯಸುಮೋಜಸೋರ್ವ್ಯಾಮ್ ॥ ೧ ॥

ಉದ್ಧವನು ಹೇಳುತ್ತಿರುವನು – ವಿದುರಾ! ಅನಂತರ ಶ್ರೀಕೃಷ್ಣಪರಮಾತ್ಮನು ತನ್ನ ತಂದೆ-ತಾಯಿಯರಿಗೆ ಸುಖವನ್ನು ನೀಡಲೋಸ್ಕರ ಬಲರಾಮದೇವನೊಡನೆ ಮಥುರೆಗೆ ಆಗಮಿಸಿ, ಶತ್ರುಸಮುದಾಯದ ಒಡೆಯನಾದ ಕಂಸನನ್ನು ಅವನ ಉನ್ನತ ಸಿಂಹಾಸನದಿಂದ ಕೆಡವಿ ಕೊಂದು ಅವನ ಶವವನ್ನು ನೆಲದ ಮೇಲೆ ಎಳೆದುಹಾಕಿದನು. ॥ ೧ ॥ ಸಾಂದೀಪನಿಮುನಿಯ ಬಳಿಗೆ ವಿದ್ಯಾಭ್ಯಾಸಕ್ಕಾಗಿ ತೆರಳಿ, ಅವರು ಒಂದು ಬಾರಿ ಹೇಳಿಕೊಟ್ಟ

ಸಾಂದೀಪನೇಃ ಸಕೃತ್ಪ್ರೋಕ್ತಂ ಬ್ರಹ್ಮಾಧೀತ್ಯ ಸವಿಸ್ತರಮ್ ।
ತಸ್ಮೈ ಪ್ರಾದಾದ್ವರಂ ಪುತ್ರಂ ಮೃತಂ ಪಂಚಜನೋದರಾತ್ ॥ ೨ ॥

ಸಮಾಹುತಾ ಭೀಷ್ಮಕಕನ್ಯಯಾ ಯೇ
　ಶ್ರಿಯಃ ಸವರ್ಣೇನ ಬುಭೂಷಯೈಷಾಮ್ ।
ಗಾಂಧರ್ವವೃತ್ತ್ಯಾ ಮಿಷತಾಂ ಸ್ವಭಾಗಂ
　ಜಹ್ರೇ ಪದಂ ಮೂರ್ಧ್ನಿ ದಧತ್ಸುಪರ್ಣಃ ॥ ೩ ॥

ಕಕುದ್ಮಿನೋಽವಿದ್ಧನಸೋ ದಮಿತ್ವಾ
　ಸ್ವಯಂವರೇ ನಾಗ್ನಜಿತೀಮುವಾಹ ।
ತದ್ಭಗ್ನಮಾನಾನಪಿ ಗೃಧ್ಯತೋಽಜ್ಞಾನ್
　ಜಘ್ನೇಽಕ್ಷತಃ ಶಸ್ತ್ರಭೃತಃ ಸ್ವಶಸ್ತ್ರೈಃ ॥ ೪ ॥

ಪ್ರಿಯಂ ಪ್ರಭುರ್ಗ್ರಾಮ್ಯ ಇವ ಪ್ರಿಯಾಯಾ
　ವಿಧಿತ್ಸುರಾರ್ಚ್ಛದ್ ದ್ಯುತರುಂ ಯದರ್ಥೇ ।
ವಜ್ರ್ಯಾದ್ರವತ್ತಂ ಸಗಣೋ ರುಷಾಂಧಃ
　ಕ್ರೀಡಾಮೃಗೋ ನೂನಮಯಂ ವಧೂನಾಮ್ ॥ [redacted] ॥

ಸುತಂ ಮೃಧೇ ಖಂ ವಪುಷಾ ಗ್ರಸಂತಂ
　ದೃಷ್ಟ್ವಾ ಸುನಾಭೋನ್ಮಥಿತಂ ಧರಿತ್ರ್ಯಾ ।
ಆಮಂತ್ರಿತಸ್ತತ್ತನಯಾಯ ಶೇಷಂ
　ದತ್ತ್ವಾ ತದಂತಃಪುರಮಾವಿವೇಶ ॥ ೬ ॥

ತತ್ರಾಹೃತಾಸ್ತಾ ನರದೇವಕನ್ಯಾಃ
　ಕುಜೇನ ದೃಷ್ಟ್ವಾ ಹರಿಮಾರ್ತಬಂಧುಮ್ ।
ಉತ್ಥಾಯ ಸದ್ಯೋ ಜಗೃಹುಃ ಪ್ರಹರ್ಷ-
　ವ್ರೀಡಾನುರಾಗಪ್ರಹಿತಾವಲೋಕೈಃ ॥ ೭ ॥

ಆಸಾಂ ಮುಹೂರ್ತ ಏಕಸ್ಮಿನ್ನಾನಾಗಾರೇಷು ಯೋಷಿತಾಮ್ ।
ಸವಿಧಂ ಜಗೃಹೇ ಪಾಣೀನನುರೂಪಃ ಸ್ವಮಾಯಯಾ ॥ ೮ ॥

ತಾಸ್ವಪತ್ಯಾನ್ಯಜನಯದಾತ್ಮತುಲ್ಯಾನಿ ಸರ್ವತಃ ।
ಏಕೈಕಸ್ಯಾಂ ದಶ ದಶ ಪ್ರಕೃತೇರ್ವಿಬುಭೂಷಯಾ ॥ ೯ ॥

ಮಾತ್ರದಿಂದಲೇ ವೇದ-ವೇದಾಂಗಾದಿಗಳೆಲ್ಲವನ್ನೂ ಪೂರ್ಣವಾಗಿ ಕಲಿತು, ಗುರುದಕ್ಷಿಣೆಯ ರೂಪದಲ್ಲಿ ಅವರ ಮೃತನಾಗಿದ್ದ ಪುತ್ರನನ್ನು ಪಂಚಜನನೆಂಬ ರಾಕ್ಷಸನ ಹೊಟ್ಟೆಯನ್ನು ಸೀಳಿ (ಯಮಪುರಿಯಿಂದ) ತಂದುಕೊಟ್ಟನು. ॥ ೨ ॥ ಲಕ್ಷ್ಮೀದೇವಿಗೆ ಸಮಾನಳಾಗಿದ್ದ ಭೀಷ್ಮಕನ ಪುತ್ರಿ ರುಕ್ಮಿಣಿಯ ಸೌಂದರ್ಯದಿಂದ ಆಕೃಷ್ಟರಾಗಿ ಆಕೆಯನ್ನು ವಿವಾಹವಾಗಲೆಂದು ಶಿಶುಪಾಲನು ಮತ್ತು ಆತನ ಸಹಾಯಕರು ಸ್ವಯಂವರದ ಕರೆಗೆ ಓಗೊಟ್ಟು ಸಭೆಗೆ ಬಂದಿದ್ದರು. ಶ್ರೀಕೃಷ್ಣನು ಅವರೆಲ್ಲರ ತಲೆಯನ್ನು ಮೆಟ್ಟಿ, ಅವರ ಕಣ್ಣೆದುರಿಗೇ ತನ್ನ ನಿತ್ಯಸಂಗಾತಿಯನ್ನು ಗಾಂಧರ್ವವಿಧಿಯಿಂದ ವಿವಾಹಮಾಡಿಕೊಳ್ಳಲೋಸುಗ ಗರುಡನು ಅಮೃತಕಲಶವನ್ನು ಜಯಿಸಿ ತಂದಂತೆ ಆಕೆಯನ್ನು ಜಯಿಸಿತಂದನು. ॥ ೩ ॥ ಮೂಗುದಾರ ಹೋಣಿಸಲ್ಪಡದೇ ಇದ್ದ ಏಳು ಕೊಬ್ಬಿದ ಗೂಳಿಗಳನ್ನು ಹಿಡಿದು ಅವುಗಳಿಗೆ ಮೂಗುದಾರ ಹಾಕಿ ಅವುಗಳ ಕೊಬ್ಬನ್ನು ಅಡಗಿಸಿ ವೀರ್ಯಶುಲ್ಕೆಯಾಗಿದ್ದ ನಾಗ್ನಜಿತಿ (ಸತ್ಯೆ)ಯನ್ನು ಆತನು ವಿವಾಹವಾದನು. ತಮಗೆ ಮಾನಭಂಗವಾಯಿತೆಂದು ತಿಳಿದ ಮೂರ್ಖರಾದವರು ಶಸ್ತ್ರಗಳನ್ನೆತ್ತಿಕೊಂಡು ರಾಜಕುಮಾರಿಯನ್ನು ಕಸಿದುಕೊಳ್ಳಲು ಬಯಸಿದಾಗ ಭಗವಾನ್ ಶ್ರೀಕೃಷ್ಣನು ಸ್ವತಃ ಗಾಯಗೊಳ್ಳದೆ ಅವರನ್ನೆಲ್ಲ ಶಸ್ತ್ರಗಳಿಂದ ಕೊಂದುಹಾಕಿದನು. ॥ ೪ ॥ ಭಗವಂತನು ವಿಷಯೀ ಪುರುಷನಂತೆ ಲೀಲೆಮಾಡುತ್ತಾ ತನ್ನ ಪ್ರಾಣಪ್ರಿಯಳಾದ ಸತ್ಯಭಾಮಾದೇವಿಯನ್ನು ಸಂತೋಷಪಡಿಸಲಿಕ್ಕಾಗಿ ಸ್ವರ್ಗದಿಂದ ಪಾರಿಜಾತವೃಕ್ಷವನ್ನು ಕಿತ್ತುತಂದನು. ನಿಶ್ಚಯವಾಗಿಯೂ ತನ್ನ ಪತ್ನಿಯರ ಕ್ರೀಡಾಮೃಗದಂತೆ ಇರುವ ದೇವೇಂದ್ರನು ಕ್ರೋಧದಿಂದ ಕುರುಡನಾಗಿ ಆ ಸಮಯದಲ್ಲಿ ತನ್ನ ಸೈನ್ಯದೊಂದಿಗೆ ಕೃಷ್ಣನನ್ನು ಎದುರಿಸುವ ಸಾಹಸಮಾಡಿದ್ದನು. ॥ ೫ ॥ ತನ್ನ ಶರೀರಾಕಾರದಿಂದ ಆಕಾಶವನ್ನೇ ನುಂಗುವಂತಿದ್ದ ಆ ಭೂದೇವಿಯ ಪುತ್ರನಾದ ಭೌಮಾಸುರನನ್ನು ಭಗವಂತನು ಯುದ್ಧದಲ್ಲಿ ಸಂಹಾರ ಮಾಡಿದನು. ಆಗ ಭೂದೇವಿಯ ಪ್ರಾರ್ಥನೆಯನ್ನು ಮನ್ನಿಸಿ ಆತನು ಭೌಮಾಸುರನ ಪುತ್ರನಾದ ಭಗದತ್ತನಿಗೆ ಆತನ ರಾಜ್ಯವನ್ನು ಕೊಟ್ಟು ಅವನ ಅಂತಃಪುರವನ್ನು ಪ್ರವೇಶಿಸಿದನು. ॥ ೬ ॥ ಅಲ್ಲಿ ಭೌಮಾಸುರನಿಂದ ಅಪಹರಿಸಿ ತರಲ್ಪಟ್ಟಿದ್ದ ಅನೇಕ ರಾಜಕುಮಾರಿಯರಿದ್ದರು. ಅವರು ದೀನಬಂಧು ಶ್ರೀಕೃಷ್ಣನನ್ನು ನೋಡಿದೊಡನೆಯೇ ಎದ್ದುನಿಂತು ಹರ್ಷ, ಲಜ್ಜೆ ಮತ್ತು ಪ್ರೇಮಪೂರ್ಣ ನೋಟಗಳಿಂದ ಒಡನೆಯೇ ಆತನನ್ನು ತಮ್ಮ ಪತಿಯನ್ನಾಗಿ ವರಿಸಿಬಿಟ್ಟರು. ॥ ೭ ॥

ಆಗ ಭಗವಂತನು ತನ್ನ ನಿಜಶಕ್ತಿ ಯೋಗಮಾಯೆಯಿಂದ ಆ ಎಲ್ಲ ಲಲನಾಮಣಿಗಳಿಗೂ ಅನುರೂಪವಾಗಿ ಅಷ್ಟೇ ರೂಪಗಳನ್ನು ತಾಳಿ ಬೇರೆ-ಬೇರೆ ಅರಮನೆಗಳಲ್ಲಿ ಒಂದೇ ಮುಹೂರ್ತದಲ್ಲಿ ವಿಧಿಪೂರ್ವಕವಾಗಿ ಪಾಣಿಗ್ರಹಣ ಮಾಡಿಕೊಂಡನು. ॥ ೮ ॥ ತನ್ನ ಲೀಲೆಯನ್ನು ವಿಸ್ತರಿಸಲಿಕ್ಕಾಗಿ ಅವನು ಅವರಲ್ಲಿ ಪ್ರತಿಯೊಬ್ಬಳ ಗರ್ಭದಿಂದ ಸರ್ವಗುಣಗಳಿಂದ ತನ್ನನ್ನೇ ಹೋಲುವಂತಹ ಹತ್ತು-ಹತ್ತು ಪುತ್ರರನ್ನು ಪಡೆದನು. ॥ ೯ ॥ ಕಾಲಯವನ, ಜರಾಸಂಧ, ಶಾಲ್ವರೇ ಮುಂತಾದವರು ತಮ್ಮ-ತಮ್ಮ ಸೇನೆಗಳೊಂದಿಗೆ ಮಥುರೆಯನ್ನೂ-ದ್ವಾರಕೆಯನ್ನೂ ಮುತ್ತಿದಾಗ ಭಗವಂತನು ಮುಚುಕುಂದ

ಕಾಲಮಾಗಧಶಾಲ್ವಾದೀನನೀಕೈ ರುಂಧತಃ ಪುರಮ್ ।
ಅಜೀಘನತ್ಸ್ವಯಂ ದಿವ್ಯಂ ಸ್ವಪುಂಸಾಂ ತೇಜ ಆದಿಶತ್ ॥ ೧೦ ॥

ಶಂಬರಂ ದ್ವಿವಿದಂ ಬಾಣಂ ಮುರಂ ಬಲ್ವಲಮೇವ ಚ ।
ಅನ್ಯಾಂಶ್ಚ ದಂತವಕ್ತ್ರಾದೀನವಧೀತ್ಕಾಂಶ್ಚ ಘಾತಯತ್ ॥ ೧೧ ॥

ಅಥ ತೇ ಭ್ರಾತೃಪುತ್ರಾಣಾಂ ಪಕ್ಷಯೋಃ ಪತಿತಾನ್ನೃಪಾನ್ ।
ಚಚಾಲ ಭೂಃ ಕುರುಕ್ಷೇತ್ರಂ ಯೇಷಾಮಾಪತತಾಂ ಬಲೈಃ ॥ ೧೨ ॥

ಸ ಕರ್ಣದುಃಶಾಸನಸೌಬಲಾನಾಂ
ಕುಮಂತ್ರಪಾಕೇನ ಹತಶ್ರಿಯಾಯುಷಮ್ ।
ಸುಯೋಧನಂ ಸಾನುಚರಂ ಶಯಾನಂ
ಭಗ್ನೋರುಮುರ್ವ್ಯಾಂ ನ ನನಂದ ಪಶ್ಯನ್ ॥ ೧೩ ॥

ಕಿಯಾನ್ಭುವೋಽಯಂ ಕ್ಷಪಿತೋರುಭಾರೋ
ಯದ್ದ್ರೋಣಭೀಷ್ಮಾರ್ಜುನಭೀಮಮೂಲೈಃ ।
ಅಷ್ಟಾದಶಾಕ್ಷೌಹಿಣಿಕೋ ಮದಂಶೈ-
ರಾಸ್ತೇ ಬಲಂ ದುರ್ವಿಷಹಂ ಯದೂನಾಮ್ ॥ ೧೪ ॥

ಮಿಥೋ ಯದೈಷಾಂ ಭವಿತಾ ವಿವಾದೋ
ಮಧ್ವಾಮದಾತಾಮ್ರವಿಲೋಚನಾನಾಮ್ ।
ನೈಷಾಂ ವಧೋಪಾಯ ಇಯಾನತೋಽನ್ಯೋ
ಮಯ್ಯುದ್ಯತೇಽಂತರ್ದಧತೇ ಸ್ವಯಂ ಸ್ಮ ॥ ೧೫ ॥

ಏವಂ ಸಂಚಿಂತ್ಯ ಭಗವಾನ್ಸ್ವರಾಜ್ಯೇ ಸ್ಥಾಪ್ಯ ಧರ್ಮಜಮ್ ।
ನಂದಯಾಮಾಸ ಸುಹೃದಃ ಸಾಧೂನಾಂ ವರ್ತ್ಮ ದರ್ಶಯನ್ ॥ ೧೬ ॥

ಉತ್ತರಾಯಾಂ ಧೃತಃ ಪೂರೋರ್ವಂಶಃ ಸಾಧ್ವಭಿಮನ್ಯುನಾ ।
ಸ ವೈ ದ್ರೌಣ್ಯಸ್ತ್ರಸಂಪ್ಲುಷ್ಟಃ ಪುನರ್ಭಗವತಾ ಧೃತಃ ॥ ೧೭ ॥

ಅಯಾಜಯದ್ಧರ್ಮಸುತಮಶ್ವಮೇಧೈಸ್ತ್ರಿಭಿರ್ವಿಭುಃ ।
ಸೋಽಪಿ ಕ್ಷ್ಮಾಮನುಜೈ ರಕ್ಷನ್ ರೇಮೇ ಕೃಷ್ಣಮನುವ್ರತಃ ॥ ೧೮ ॥

ಭಗವಾನಪಿ ವಿಶ್ವಾತ್ಮಾ ಲೋಕವೇದಪಥಾನುಗಃ ।
ಕಾಮಾನ್ಸಿಷೇವೇ ದ್ವಾರ್ವತ್ಯಾಮಸಕ್ತಃ ಸಾಂಖ್ಯಮಾಸ್ಥಿತಃ ॥ ೧೯ ॥

ಭೀಮಸೇನರೇ ಮುಂತಾದ ಸ್ವಜನರಿಗೆ ತನ್ನ ಅಲೌಕಿಕ ಶಕ್ತಿಯನ್ನು ಅನುಗ್ರಹಿಸಿ ಅವರ ಮೂಲಕ ತಾನೇ ಅವರನ್ನು ಕೊಲ್ಲಿಸಿದನು. ॥ ೧೦ ॥ ಶಂಬರ, ದ್ವಿವಿದ, ಬಾಣಾಸುರ, ಮುರ, ಬಲ್ವಲ, ದಂತವಕ್ತ್ರಾದಿಗಳಲ್ಲಿಯೂ ಕೆಲವರನ್ನು ತಾನೇ ನಿಗ್ರಹಿಸಿ, ಮತ್ತೆ ಕೆಲವರನ್ನು ಬೇರೆಯವರಿಂದ ಕೊಲ್ಲಿಸಿದನು. ॥ ೧೧ ॥ ಅನಂತರ ಭಗವಂತನು ನಿನ್ನ ಅಣ್ಣ ಧೃತರಾಷ್ಟ್ರ ಮತ್ತು ಪಾಂಡುಪುತ್ರರ ಪಕ್ಷ ವಹಿಸಿ ಯುದ್ಧಕ್ಕೆ ಬಂದ ರಾಜರನ್ನು ಸಂಹಾರಮಾಡಿಸಿದನು. ಆ ರಾಜರ ಸೇನೆಗಳಾದರೋ ಕುರುಕ್ಷೇತ್ರಕ್ಕೆ ಯುದ್ಧಕ್ಕಾಗಿ ಬಂದು ನೆರೆದಾಗ ಇಡೀ ಭೂಮಿಯೇ ನಡುಗಿಹೋಗುವಷ್ಟು ವಿಶಾಲವಾಗಿದ್ದುವು. ॥ ೧೨ ॥ ದುರ್ಯೋಧನನು ಕರ್ಣ, ದುಃಶಾಸನ, ಶಕುನಿ ಇವರ ದುರಾಲೋಚನೆಗೆ ಒಳಗಾಗಿ ತನ್ನ ಆಯುಸ್ಸು, ಸಂಪತ್ತು, ಕಾಂತಿಯನ್ನು ಕಳೆದುಕೊಂಡು, ಭೀಮಸೇನನ ಗದಾಘಾತದಿಂದ ತೊಡೆಗಳು ಮುರಿದು ಪರಿವಾರಸಮೇತನಾಗಿ ನೆಲದ ಮೇಲೆ ಬಿದ್ದಿರುವುದನ್ನು ನೋಡಿದರೂ ಆತನಿಗೆ ಪೂರ್ಣವಾಗಿ ಸಂತೋಷ ಉಂಟಾಗಲಿಲ್ಲ. ಏಕೆಂದರೆ, ದ್ರೋಣ, ಭೀಷ್ಮ, ಅರ್ಜುನ, ಭೀಮಸೇನ ಇವರುಗಳ ಮೂಲಕ ಹದಿನೆಂಟು ಅಕ್ಷೌಹಿಣೀ ಸೈನ್ಯವು ಸಂಹರಿಸಲ್ಪಟ್ಟರೂ ಭೂಮಿಯ ಭಾರವೆನೋ ಇಳಿದಂತಾಯಿತು. ಆದರೂ ಕೂಡ ನನ್ನ ಅಂಶಭೂತರಾದ ಪ್ರದ್ಯುಮ್ನನೇ ಮುಂತಾದವರ ಬಲದಿಂದ ಕೊಬ್ಬಿಹೋಗಿರುವ ಯಾದವರ ಸಹಿಸಲಸದಳವಾದ ಬಲವು ಇನ್ನೂ ಉಳಿದಿದೆಯಲ್ಲ! ಎಂದು ಚಿಂತಿಸಿದನು. ॥ ೧೩-೧೪ ॥ 'ಮುಂದೆ ಈ ಯಾದವರು ಮದ್ಯಪಾನದಿಂದ ಮತ್ತೇರಿ ಕಣ್ಣುಗಳು ಕೆಂಪಾಗಿ ಪರಸ್ಪರ ಹೊಡೆದಾಡಿ ನಾಶಹೊಂದಬೇಕು. ಇವರನ್ನು ಸಂಹರಿಸಲು ಬೇರೆ ಉಪಾಯವೇ ಇಲ್ಲ. ಆದ್ದರಿಂದ ಹೀಗೆ ಆಗುವಂತೆ ನಾನು ಸಂಕಲ್ಪಿಸಿದರೆ ಅವರು ತಾವಾಗಿಯೇ ಹೊಡೆದಾಡಿ ಮಡಿಯುವರು' ಎಂದು ಯೋಚನೆ ಮಾಡಿದರು. ॥ ೧೫ ॥

ಭಗವಂತನು ಹೀಗೆ ಯೋಚಿಸಿ ಯುಧಿಷ್ಠಿರನಿಗೆ ಅವನ ರಾಜ್ಯದಲ್ಲಿ ಪಟ್ಟಾಭಿಷೇಕಮಾಡಿಸಿ ಅವರನ್ನು ನೆಲೆಗೊಳಿಸಿದನು. ಬಂಧುಗಳಿಗೂ-ಮಿತ್ರರಿಗೂ ಸತ್ಪುರುಷರ ಮಾರ್ಗವನ್ನು ತೋರಿ ಆನಂದಿತರನ್ನಾಗಿಸಿದನು. ॥ ೧೬ ॥ ಉತ್ತರೆಯ ಗರ್ಭದಲ್ಲಿ ಅಭಿಮನ್ಯುವು ಪೂರುವಂಶದ ಕುಡಿಯನ್ನು ಸ್ಥಾಪಿಸಿದ್ದನು. ಅದೂ ಕೂಡ ಅಶ್ವತ್ಥಾಮನ ಬ್ರಹ್ಮಾಸ್ತ್ರದಿಂದ ನಾಶವಾಗುವುದರಲ್ಲಿತ್ತು. ಆದರೆ ಭಗವಂತನು ಅದನ್ನು ಬದುಕಿಸಿದನು. ॥ ೧೭ ॥ ಯುಧಿಷ್ಠಿರನಿಂದ ಭಗವಂತನು ಮೂರು ಅಶ್ವಮೇಧ ಯಜ್ಞಗಳನ್ನು ಮಾಡಿಸಿದನು. ಧರ್ಮನಂದನನೂ ಶ್ರೀಕೃಷ್ಣನನ್ನು ಅನುವರ್ತಿಸುತ್ತಾ ತನ್ನ ತಮ್ಮಂದಿರೊಡನೆ ಪೃಥ್ವಿಯನ್ನು ರಕ್ಷಿಸುತ್ತಾ, ರಾಜ್ಯಭಾರಗಳನ್ನು ನಿರ್ವಹಿಸುತ್ತಾ ಆನಂದದಿಂದ ಇರತೊಡಗಿದನು. ॥ ೧೮ ॥

ಆಮೇಲೆ ವಿಶ್ವಾತ್ಮನಾದ ಭಗವಂತನು ದ್ವಾರಕೆಯಲ್ಲಿದ್ದುಕೊಂಡು ಲೋಕ ಮತ್ತು ವೇದಗಳ ಮರ್ಯಾದೆಗಳನ್ನು ಪಾಲಿಸುತ್ತಾ ಸಾಂಖ್ಯಯೋಗಗಳಿಗೆ ಅನುಗುಣವಾಗಿ ನಿರ್ಲಿಪ್ತಭಾವದಿಂದ ಎಲ್ಲ ಭೋಗಗಳನ್ನು ಅನುಭವಿಸಿದನು. ॥ ೧೯ ॥ ತನ್ನ ಮಧುರ ಮುಗುಳ್ನಗೆ, ಸ್ನೇಹಪೂರ್ಣವಾದ ನೋಟ, ಅಮೃತಸದೃಶ

ಸ್ನಿಗ್ಧಸ್ಮಿತಾವಲೋಕೇನ ವಾಚಾ ಪೀಯೂಷಕಲ್ಪಯಾ ।
ಚರಿತ್ರೇಣಾನವದ್ಯೇನ ಶ್ರೀನಿಕೇತೇನ ಚಾತ್ಮನಾ ॥ ೨೦ ॥

ಇಮಂ ಲೋಕಮಮುಂ ಚೈವ ರಮಯನ್ಸುತರಾಂ ಯದೂನ್ ।
ರೇಮೇ ಕ್ಷಣದಯಾ ದತ್ತಕ್ಷಣಸ್ತ್ರೀಕ್ಷಣಸೌಹೃದಃ ॥ ೨೧ ॥

ತಸ್ಯೈವಂ ರಮಮಾಣಸ್ಯ ಸಂವತ್ಸರಗಣಾನ್ಬಹೂನ್ ।
ಗೃಹಮೇಧೇಷು ಯೋಗೇಷು ವಿರಾಗಃ ಸಮಜಾಯತ ॥ ೨೨ ॥

ದೈವಾಧೀನೇಷು ಕಾಮೇಷು ದೈವಾಧೀನಃ ಸ್ವಯಂ ಪುಮಾನ್ ।
ಕೋ ವಿಸ್ರಂಭೇತ ಯೋಗೇನ ಯೋಗೇಶ್ವರಮನುವ್ರತಃ ॥ ೨೩ ॥

ಪುರ್ಯಾಂ ಕದಾಚಿತ್ಕ್ರೀಡದ್ಭಿರ್ಯದುಭೋಜಕುಮಾರಕೈಃ ।
ಕೋಪಿತಾ ಮುನಯಃ ಶೇಪುರ್ಭಗವನ್ಮತಕೋವಿದಾಃ ॥ ೨೪ ॥

ತತಃ ಕತಿಪಯೈರ್ಮಾಸೈರ್ವೃಷ್ಣಿಭೋಜಾಂಧಕಾದಯಃ ।
ಯಯುಃ ಪ್ರಭಾಸಂ ಸಂಹೃಷ್ಟಾ ರಥೈರ್ದೇವವಿಮೋಹಿತಾಃ ॥ ೨೫ ॥

ತತ್ರ ಸ್ನಾತ್ವಾ ಪಿತೄಂದೇವಾನೃಷೀಂಶ್ಚೈವ ತದಂಭಸಾ ।
ತರ್ಪಯಿತ್ವಾಥ ವಿಪ್ರೇಭ್ಯೋ ಗಾವೋ ಬಹುಗುಣಾ ದದುಃ ॥ ೨೬ ॥

ಹಿರಣ್ಯಂ ರಜತಂ ಶಯ್ಯಾಂ ವಾಸಾಂಸ್ಯಜಿನಕಂಬಲಾನ್ ।
ಯಾನಂ ರಥಾನಿಭಾನ್ ಕನ್ಯಾ ಧರಾಂ ವೃತ್ತಿಕರೀಮಪಿ ॥ ೨೭ ॥

ಅನ್ನಂ ಚೋರುರಸಂ ತೇಭ್ಯೋ ದತ್ತ್ವಾ ಭಗವದರ್ಪಣಮ್ ।
ಗೋವಿಪ್ರಾರ್ಥಾಸವಃ ಶೂರಾಃ ಪ್ರಣೇಮುರ್ಭುವಿ ಮೂರ್ಧಭಿಃ ॥ ೨೮ ॥

ವಾದ ವಾಣಿ, ನಿರ್ಮಲ ನಡತೆ ಮತ್ತು ಸೌಂದರ್ಯ-ಕಾಂತಿಗಳಿಗೆ ನೆಲೆಮನೆಯಾದ ತನ್ನ ದಿವ್ಯ ಮಂಗಳ ವಿಗ್ರಹದಿಂದ ಇಹಲೋಕ-ಪರಲೋಕಗಳನ್ನು ಹಾಗೂ ವಿಶೇಷವಾಗಿ ಯಾದವರನ್ನು ಸಂತೋಷಪಡಿಸುತ್ತಿದ್ದನು. ರಾತ್ರಿಯಲ್ಲಿ ತನ್ನ ಸ್ತ್ರೀಜನರಿಗೆ ಕೊಂಚಕಾಲ ಸುಖವನ್ನು ತೋರುತ್ತಾ ಸಮಯೋಚಿತ ವಿಹಾರದಿಂದ ಅವರನ್ನೂ ಸಂತೋಷಪಡಿಸುತ್ತಿದ್ದನು. ॥ ೨೦-೨೧ ॥ ಹೀಗೆ ಅನೇಕ ವರ್ಷಗಳವರೆಗೆ ವಿಹರಿಸುತ್ತಾ ಅವನಿಗೆ ಗೃಹಸ್ಥಾಶ್ರಮಕ್ಕೆ ಸಂಬಂಧಪಟ್ಟ ಭೋಗ-ಸಾಮಗ್ರಿಗಳಲ್ಲಿ ವೈರಾಗ್ಯ ಉಂಟಾಯಿತು. ॥ ೨೨ ॥ ಈ ಭೋಗ-ಸಾಮಗ್ರಿಗಳು ದೈವಾಧೀನವಾಗಿವೆ ಮತ್ತು ಜೀವಿಯೂ ಕೂಡ ಭಗವಂತನ ಅಧೀನನೇ. ಯೋಗೇಶ್ವರ ಭಗವಾನ್ ಶ್ರೀಕೃಷ್ಣನೇ ಅವುಗಳಲ್ಲಿ ವೈರಾಗ್ಯವುಂಟಾದಾಗ ಭಕ್ತಿಯೋಗದಿಂದ ಅವನನ್ನು ಅನುಸರಿಸುವ ಭಕ್ತನಿಗಾದರೋ ಈ ಭೋಗಗಳಲ್ಲಿ ವಿಶ್ವಾಸವು ಹೇಗೆ ಉಂಟಾದೀತು? ॥ ೨೩ ॥

ಒಮ್ಮೆ ದ್ವಾರಕೆಯಲ್ಲಿ ಆಟವಾಡುತ್ತಿದ್ದ ಯಾದವ ಮತ್ತು ಭೋಜವಂಶದ ಬಾಲಕರು ಕೆಲವು ಮುನೀಶ್ವರರನ್ನು ಚುಡಾಯಿಸಿದರು. ಯಾದವ ಕುಲವನ್ನು ಸಂಹಾರಮಾಡುವುದೇ ಭಗವಂತನಿಗೆ ಇಷ್ಟವೆಂಬುದನ್ನು ತಿಳಿದಿದ್ದ ಆ ಮಹರ್ಷಿಗಳು ಆ ಕುಮಾರರಿಗೆ ಶಾಪವನ್ನು ಕೊಟ್ಟರು. ॥ ೨೪ ॥ ಅದಾದ ಕೆಲವು ತಿಂಗಳುಗಳ ಬಳಿಕ ಮುಂದೆ ಒದಗುವ ದುರದೃಷ್ಟಕ್ಕೆ ಅಧೀನರಾದ ವೃಷ್ಣಿ, ಭೋಜ, ಅಂಧಕರೇ ಮುಂತಾದ ಯಾದವರು ಸಂತೋಷದಿಂದ ರಥಗಳನ್ನೇರಿ ಪ್ರಭಾಸಕ್ಷೇತ್ರಕ್ಕೆ ಹೋದರು. ॥ ೨೫ ॥ ಅಲ್ಲಿ ಅವರು ಸ್ನಾನಾದಿಗಳನ್ನು ಮಾಡಿ ತೀರ್ಥೋದಕದಿಂದ ಪಿತೃಗಳಿಗೂ, ದೇವತೆಗಳಿಗೂ, ಋಷಿಗಳಿಗೂ ತರ್ಪಣವನ್ನು ಕೊಟ್ಟು ಬ್ರಾಹ್ಮಣರಿಗೆ ಉತ್ತಮವಾದ ಗೋವುಗಳನ್ನು ದಾನಮಾಡಿದರು. ॥ ೨೬ ॥ ಅವರು ಚಿನ್ನ, ಬೆಳ್ಳಿ, ಹಾಸಿಗೆ, ಬಟ್ಟೆ, ಮೃಗಚರ್ಮ, ಕಂಬಳಿ, ರಥ, ಆನೆ, ಕನ್ಯೆಯರು ಮತ್ತು ಜೀವನೋಪಾಯವಾಗುವ ಭೂಮಿ ಹಾಗೂ ಬಗೆ-ಬಗೆಯ ರಸಭರಿತವಾದ ಅನ್ನವನ್ನೂ, ಭಗವದರ್ಪಣ ಬುದ್ಧಿಯಿಂದ ಬ್ರಾಹ್ಮಣರಿಗೆ ದಾನಮಾಡಿದರು. ಗೋ-ಬ್ರಾಹ್ಮಣರ ಸಂರಕ್ಷಣೆಗಾಗಿಯೇ ಜೀವಿಸುತ್ತಿದ್ದ ಆ ವೀರರು ಭೂಮಿಯಲ್ಲಿ ತಲೆಯನ್ನು ಬಾಗಿ ಅವರಿಗೆ ಸಾಷ್ಟಾಂಗ ನಮಸ್ಕಾರ ಮಾಡಿದರು. ॥ ೨೭-೨೮ ॥

ಮೂರನೆಯ ಅಧ್ಯಾಯವು ಮುಗಿಯಿತು. ॥ ೩ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ತೃತೀಯಸ್ಕಂಧೇ
ವಿದುರೋದ್ಧವಸಂವಾದೇ ತೃತೀಯೋಽಧ್ಯಾಯಃ ॥ ೩ ॥

ನಾಲ್ಕನೆಯ ಅಧ್ಯಾಯ

ಉದ್ಧವನೊಡನೆ ಸಂಭಾಷಣೆ ವಿದುರನು ಮೈತ್ರೇಯರ ಬಳಿಗೆ ತೆರಳಿದುದು

ಉದ್ಧವ ಉವಾಚ

ಅಥ ತೇ ತದನುಜ್ಞಾತಾ ಭುಕ್ತ್ವಾ ಪೀತ್ವಾ ಚ ವಾರುಣೀಮ್ ।
ತಯಾ ವಿಭ್ರಂಶಿತಜ್ಞಾನಾ ದುರುಕ್ತೈರ್ಮರ್ಮ ಪಸ್ಪೃಶುಃ ॥ ೧ ॥

ಉದ್ಧವನು ಹೇಳುತ್ತಿದ್ದಾನೆ – ಓ ಮಹಾತ್ಮನೇ! ಮತ್ತೆ ಬ್ರಾಹ್ಮಣರ ಅಪ್ಪಣೆಪಡೆದು ಯಾದವರು ಭೋಜನ ಮಾಡಿದರು. ಮತ್ತೆ ವಾರುಣೀ ಎಂಬ ಮದ್ಯವನ್ನು ಕುಡಿದರು, ಅದರಿಂದ ಜ್ಞಾನ ಗೆಟ್ಟು ದುರ್ವಚನಗಳನ್ನಾಡುತ್ತಾ ಪರಸ್ಪರ ಹೃದಯಕ್ಕೆ ನೋವನ್ನುಂಟುಮಾಡುವ ಮಾತುಗಳನ್ನಾಡತೊಡಗಿದರು. ॥ ೧ ॥

ತೇಷಾಂ ಮೈರೇಯದೋಷೇಣ ವಿಷಮೀಕೃತಚೇತಸಾಮ್ ।
ನಿಮ್ಲೋಚತಿ ರವಾವಾಸೀದ್ವೇಣೂನಾಮಿವ ಮರ್ದನಮ್
॥ ೨ ॥

ಭಗವಾನ್ ಸ್ವಾತ್ಮಮಾಯಾಯಾ ಗತಿಂ ತಾಮವಲೋಕ್ಯ ಸಃ ।
ಸರಸ್ವತೀಮುಪಸ್ಪೃಶ್ಯ ವೃಕ್ಷಮೂಲಮುಪಾವಿಶತ್
॥ ೩ ॥

ಅಹಂ ಚೋಕ್ತೋ ಭಗವತಾ ಪ್ರಪನ್ನಾರ್ತಿಹರೇಣ ಹ ।
ಬದರೀಂ ತ್ವಂ ಪ್ರಯಾಹೀತಿ ಸ್ವಕುಲಂ ಸಂಜಿಹೀರ್ಷುಣಾ
॥ ೪ ॥

ಅಥಾಪಿ ತದಭಿಪ್ರೇತಂ ಜಾನನ್ನಹಮರಿಂದಮ ।
ಪೃಷ್ಠತೋಽನ್ವಗಮಂ ಭರ್ತುಃ ಪಾದವಿಶ್ಲೇಷಣಾಕ್ಷಮಃ
॥ ೫ ॥

ಅದ್ರಾಕ್ಷಮೇಕಮಾಸೀನಂ ವಿಚಿನ್ವನ್ದಯಿತಂ ಪತಿಮ್ ।
ಶ್ರೀನಿಕೇತಂ ಸರಸ್ವತ್ಯಾಂ ಕೃತಕೇತಮಕೇತನಮ್
॥ ೬ ॥

ಶ್ಯಾಮಾವದಾತಂ ವಿರಜಂ ಪ್ರಶಾಂತಾರುಣಲೋಚನಮ್ ।
ದೋರ್ಭಿಶ್ಚತುರ್ಭಿರ್ವಿದಿತಂ ಪೀತಕೌಶಾಂಬರೇಣ ಚ
॥ ೭ ॥

ವಾಮ ಊರಾವಧಿಶ್ರಿತ್ಯ ದಕ್ಷಿಣಾಂಘ್ರಿಸರೋರುಹಮ್ ।
ಅಪಾಶ್ರಿತಾರ್ಭಕಾಶ್ವತ್ಥಮಕೃಶಂ ತ್ಯಕ್ತಪಿಪ್ಪಲಮ್
॥ ೮ ॥

ತಸ್ಮಿನ್ಮಹಾಭಾಗವತೋ ದ್ವೈಪಾಯನಸುಹೃತ್ಸಖಾ ।
ಲೋಕಾನನುಚರನ್ ಸಿದ್ಧ ಆಸಸಾದ ಯದೃಚ್ಛಯಾ
॥ ೯ ॥

ತಸ್ಯಾನುರಕ್ತಸ್ಯ ಮುನೇರ್ಮುಕುಂದಃ
ಪ್ರಮೋದಭಾವಾನತಕಂಧರಸ್ಯ ।
ಆಶೃಣ್ವತೋ ಮಾಮನುರಾಗಹಾಸ-
ಸಮೀಕ್ಷಯಾ ವಿಶ್ರಮಯನ್ನುವಾಚ ॥ ೧೦ ॥

ಶ್ರೀಭಗವಾನುವಾಚ

ವೇದಾಹಮಂತರ್ಮನಸೀಪ್ಸಿತಂ ತೇ
ದದಾಮಿ ಯತ್ತದ್ ದುರವಾಪಮನ್ಯೈಃ ।
ಸತ್ರೇ ಪುರಾ ವಿಶ್ವಸೃಜಾಂ ವಸೂನಾಂ
ಮತ್ಸಿದ್ಧಿಕಾಮೇನ ವಸೋ ತ್ವಯೇಷ್ಟಃ ॥ ೧೧ ॥

ಮದಿರೆಯ ಮತ್ತಿನಿಂದ ಅವರ ಬುದ್ಧಿಯು ಕೆಟ್ಟುಹೋಗಿ ಬಿದಿರುಗಳ ಪರಸ್ಪರ ಘರ್ಷಣೆಯಿಂದ ಬೆಂಕಿಹತ್ತಿಕೊಳ್ಳುವಂತೆ ಸೂರ್ಯಾಸ್ತವಾಗುತ್ತಿದ್ದಂತೆ ಅವರಲ್ಲಿ ಹೊಡೆದಾಟ-ಬಡಿದಾಟ ಪ್ರಾರಂಭವಾಯಿತು. ॥ ೨ ॥ ಭಗವಂತನು ತನ್ನ ಮಾಯೆಯ ವಿಚಿತ್ರವಾದ ಆ ಗತಿಯನ್ನು ನೋಡಿ ಸರಸ್ವತಿನದಿಯ ಜಲದಿಂದ ಆಚಮನಗೈದು ಒಂದು ಅಶ್ವತ್ಥವೃಕ್ಷದ ಬುಡದಲ್ಲಿ ಕುಳಿತುಬಿಟ್ಟನು. ॥ ೩ ॥ ಆಶ್ರಿತರ ದುಃಖವನ್ನು ದೂರಮಾಡುವಂತಹ ಭಗವಾನ್ ಶ್ರೀಕೃಷ್ಣನು ತನ್ನ ಕುಲವನ್ನು ಉಪಸಂಹಾರ ಮಾಡಬೇಕೆಂದು ಸಂಕಲ್ಪಿಸಿ, ನನಗೆ ಬದರಿಕಾಶ್ರಮಕ್ಕೆ ಹೋಗಬೇಕೆಂದು ಮೊದಲೇ ಆಜ್ಞೆ ಮಾಡಿದ್ದನು. ॥ ೪ ॥ ವಿದುರನೇ! ಆತನ ಆಶಯವು ನನಗೆ ತಿಳಿದಿದ್ದರೂ ನಾನು ಸ್ವಾಮಿಯ ಚರಣಾರವಿಂದಗಳ ಅಗಲಿಕೆಯನ್ನು ಸಹಿಸಲಾರದೆ ಆತನನ್ನೇ ಹುಡುಕುತ್ತಾ ಪ್ರಭಾಸಕ್ಷೇತ್ರಕ್ಕೆ ಹಿಂಬಾಲಿಸಿದೆನು. ॥ ೫ ॥ ಅಲ್ಲಿ ಎಲ್ಲರಿಗೂ ಆಶ್ರಯನಾಗಿ ಯಾರ ಆಶ್ರಯಕ್ಕೂ ಒಳಗಾಗದೆ ಇರುವ ಪ್ರಿಯತಮ ಶ್ರೀಲಕ್ಷ್ಮೀನಿವಾಸನಾದ ಮಹಾಪ್ರಭುವು ಸರಸ್ವತೀನದಿಯ ತೀರದಲ್ಲಿ ಒಬ್ಬಂಟಿಗನಾಗಿ ಕುಳಿತಿರುವುದನ್ನು ನಾನು ನೋಡಿದೆನು. ॥ ೬ ॥ ಶ್ಯಾಮಲವರ್ಣದಿಂದ ಕಂಗೊಳಿಸುತ್ತಿರುವ ಶುದ್ಧವಾದ ಸತ್ತ್ವಮಯನಾದ ಸುಂದರ ಶ್ರೀಮೂರ್ತಿ, ಪ್ರಸನ್ನವಾಗಿ ಕೆಂಪಿನಿಂದ ಹೊಳೆಯುತ್ತಿರುವ ನೇತ್ರಕಮಲಗಳು, ಶೋಭಾಯಮಾನವಾದ ಚತುರ್ಭುಜಗಳು, ಥಳ-ಥಳಿಸುತ್ತಿರುವ ರೇಷ್ಮೆಯ ಪೀತಾಂಬರ ಇವುಗಳಿಂದ ಕೂಡಿದ ಆತನನ್ನು ದೂರದಿಂದಲೇ ನಾನು ಗುರುತಿಸಿದೆನು. ॥ ೭ ॥ ಸ್ವಾಮಿಯು ಒಂದು ಸಣ್ಣ ಅರಳೀಮರವನ್ನು ಒರಗಿಕೊಂಡು ಎಡತೊಡೆಯಮೇಲೆ ಬಲಗಾಲನ್ನು ಇರಿಸಿ ಸುಖಾಸೀನನಾಗಿದ್ದನು. ಆಹಾರತ್ಯಾಗ ಮಾಡಿದ್ದರೂ ಅವನು ಆನಂದದಿಂದ ಪುಷ್ಟನಾಗಿಯೇ ಪ್ರಕಾಶಿಸುತ್ತಿದ್ದನು. ॥ ೮ ॥ ಇಂತಹ ಭಗವದ್ರೂಪವನ್ನು ನಾನು ಕಣ್ಣಾರೆ ನೋಡುತ್ತಿರುವಂತೆ ವೇದವ್ಯಾಸರ ಪ್ರಿಯಮಿತ್ರರೂ, ಪರಮಭಾಗವತರೂ, ಸಿದ್ಧರೂ ಆಗಿದ್ದ ಮೈತ್ರೇಯ ಮಹರ್ಷಿಗಳು ಅಲ್ಲಿಗೆ ಆಕಸ್ಮಿಕವಾಗಿ ಬಂದು ಸೇರಿದರು. ॥ ೯ ॥ ಮೈತ್ರೇಯರಾದರೋ ಭಗವಂತನ ಅನುರಾಗೀ ಭಕ್ತರಾಗಿದ್ದರು. ಆನಂದ ಮತ್ತು ಭಕ್ತಿಭಾವದಿಂದ ಅವರ ಕತ್ತು ಬಾಗಿತ್ತು. ಶ್ರೀಹರಿಯು ಅವರ ಎದುರಿಗೇ ತನ್ನ ಮಂದಹಾಸ ಶೋಭಿತವಾದ ಕಟಾಕ್ಷದಿಂದ ನನ್ನನ್ನು ಆನಂದಗೊಳಿಸುತ್ತಾ ಇಂತೆಂದನು - ॥ ೧೦ ॥

ಶ್ರೀಭಗವಂತನು ಹೇಳಿದನು – ನಿನ್ನ ಆಂತರಿಕ ಅಭಿಲಾಷೆ ಏನೆಂಬುದನ್ನು ನಾನು ಬಲ್ಲೆನು. ಆದ್ದರಿಂದ ಇತರರಿಗೆ ಅತ್ಯಂತ ದುರ್ಲಭವಾದ ಸಾಧನೆಯೊಂದನ್ನು ನಿನಗೆ ಕೊಡುವೆನು. ಉದ್ಧವಾ! ನೀನು ಹಿಂದಿನ ಜನ್ಮದಲ್ಲಿ ವಸುದೇವತೆಯಾಗಿದ್ದೆ. ಪ್ರಜಾಪತಿಗಳೂ ಮತ್ತು ವಸುದೇವತೆಗಳೂ ಕೂಡಿ ಯಜ್ಞದಿಂದ ನನ್ನನ್ನು ಪಡೆಯುವ ಇಚ್ಛೆಯಿಂದ ನೀವು ನನ್ನನ್ನು ಆರಾಧಿಸಿದ್ದೀರಿ. ॥ ೧೧ ॥ ಎಲೈ ಸಾಧುಶ್ರೇಷ್ಠನೇ! ಪ್ರಪಂಚದಲ್ಲಿ ನಿನಗೆ ಇದೇ ಅಂತಿಮ ಜನ್ಮವಾಗಿದೆ. ಏಕೆಂದರೆ, ಇದರಲ್ಲಿ ನೀನು ನನ್ನ ಅನುಗ್ರಹವನ್ನು ಪಡೆದುಕೊಂಡಿರುವೆ. ಈಗ ನಾನು ಮರ್ತ್ಯಲೋಕವನ್ನು ಬಿಟ್ಟು ನನ್ನ ಸ್ವಧಾಮಕ್ಕೆ ತೆರಳಲು ನಿಶ್ಚಯಿಸಿರುವೆನು. ಇಂತಹ ಸಮಯದಲ್ಲಿ ನೀನು ಏಕಾಂತದಲ್ಲಿ ಅನನ್ಯಭಕ್ತಿಯಿಂದ ನನ್ನ ದರ್ಶನ ಪಡೆದೆ.

ಸ ಏಷ ಸಾಧೋ ಚರಮೋ ಭವಾನಾ-
ಮಾಸಾದಿತಸ್ತೇ ಮದನುಗ್ರಹೋ ಯತ್ ।
ಯನ್ಮಾಂ ನೃಲೋಕಾನ್ ರಹ ಉತ್ಸೃಜಂತಂ
ದಿಷ್ಟ್ಯಾ ದದೃಶ್ವಾನ್ ವಿಶದಾನುವೃತ್ತ್ಯಾ ॥ ೧೨ ॥

ಪುರಾ ಮಯಾ ಪ್ರೋಕ್ತಮಜಾಯ ನಾಭ್ಯೇ
ಪದ್ಮೇ ನಿಷಣ್ಣಾಯ ಮಮಾದಿಸರ್ಗೇ ।
ಜ್ಞಾನಂ ಪರಂ ಮನ್ಮಹಿಮಾವಭಾಸಂ
ಯತ್ಸೂರಯೋ ಭಾಗವತಂ ವದಂತಿ ॥ ೧೩ ॥

ಇತ್ಯಾದೃತೋಕ್ತಃ ಪರಮಸ್ಯ ಪುಂಸಃ
ಪ್ರತಿಕ್ಷಣಾನುಗ್ರಹಭಾಜನೋಽಹಮ್ ।
ಸ್ನೇಹೋತ್ಥರೋಮಾ ಸ್ಖಲಿತಾಕ್ಷರಸ್ತಂ
ಮುಂಚನ್ ಶುಚಃ ಪ್ರಾಂಜಲಿರಾಬಭಾಷೇ ॥ ೧೪ ॥

ಕೋ ನ್ವೀಶ ತೇ ಪಾದಸರೋಜಭಾಜಾಂ
ಸುದುರ್ಲಭೋಽರ್ಥೇಷು ಚತುರ್ಷ್ವಪೀಹ ।
ತಥಾಪಿ ನಾಹಂ ಪ್ರವೃಣೋಮಿ ಭೂಮನ್
ಭವತ್ಪದಾಂಭೋಜನಿಷೇವಣೋತ್ಸುಕಃ ॥ ೧೫ ॥

ಕರ್ಮಾಣ್ಯನೀಹಸ್ಯ ಭವೋಽಭವಸ್ಯ ತೇ
ದುರ್ಗಾಶ್ರಯೋಽಥಾರಿಭಯಾತ್ಪಲಾಯನಮ್ ।
ಕಾಲಾತ್ಮನೋ ಯತ್ಪ್ರಮದಾಯುತಾಶ್ರಯಃ
ಸ್ವಾತ್ಮನ್ರತೇಃ ಖಿದ್ಯತಿ ಧೀರ್ವಿದಾಮಿಹ ॥ ೧೬ ॥

ಮಂತ್ರೇಷು ಮಾಂ ವಾ ಉಪಹೂಯ ಯತ್ತ್ವ-
ಮಕುಂಠಿತಾಖಂಡಸದಾತ್ಮಬೋಧಃ ।
ಪೃಚ್ಛೇಃ ಪ್ರಭೋ ಮುಗ್ಧ ಇವಾಪ್ರಮತ್ತಃ
ತನ್ನೋ ಮನೋ ಮೋಹಯತೀವ ದೇವ ॥ ೧೭ ॥

ಜ್ಞಾನಂ ಪರಂ ಸ್ವಾತ್ಮರಹಃಪ್ರಕಾಶಂ
ಪ್ರೋವಾಚ ಕಸ್ಮೈ ಭಗವಾನ್ ಸಮಗ್ರಮ್ ।
ಅಪಿ ಕ್ಷಮಂ ನೋ ಗ್ರಹಣಾಯ ಭರ್ತ-
ರ್ವದಾಂಜಸಾ ಯದ್ ವೃಜಿನಂ ತರೇಮ ॥ ೧೮ ॥

ಇತ್ಯಾವೇದಿತಹಾರ್ದಾಯ ಮಹ್ಯಂ ಸ ಭಗವಾನ್ಪರಃ ।
ಆದಿದೇಶಾರವಿಂದಾಕ್ಷ ಆತ್ಮನಃ ಪರಮಾಂ ಸ್ಥಿತಿಮ್ ॥ ೧೯ ॥

ಸ ಏವಮಾರಾಧಿತಪಾದತೀರ್ಥಾ-
ದಧೀತತತ್ತ್ವಾತ್ಮವಿಬೋಧಮಾರ್ಗಃ ।
ಪ್ರಣಮ್ಯ ಪಾದೌ ಪರಿವೃತ್ಯ ದೇವ-
ಮಿಹಾಗತೋಽಹಂ ವಿರಹಾತುರಾತ್ಮಾ ॥ ೨೦ ॥

ಇದು ನಿನ್ನ ಮಹದ್ಭಾಗ್ಯವೇ ಸರಿ. ॥ ೧೨ ॥ ಹಿಂದೆ ಪದ್ಮಕಲ್ಪದ ಪ್ರಾರಂಭದಲ್ಲಿ ನಾನು ಕಮಲಭವನಾದ ಬ್ರಹ್ಮನಿಗೆ ನನ್ನ ಮಹಿಮೆಯನ್ನು ಪ್ರಕಟಪಡಿಸುವಂತಹ ಶ್ರೇಷ್ಠತಮವಾದ ಜ್ಞಾನವನ್ನು ಉಪದೇಶ ಮಾಡಿದ್ದೆನು. ಅದನ್ನು ಜ್ಞಾನಿಗಳು 'ಭಾಗವತ' ಎಂದು ಕರೆಯುತ್ತಾರೆ. ನಿನಗೂ ಅದನ್ನೇ ಅನುಗ್ರಹಿಸುತ್ತೇನೆ. ॥ ೧೩ ॥

ವಿದುರನೇ! ಪರಮಪುರುಷನು ನನಗೆ ಹೀಗೆ ಅಪ್ಪಣೆ ಕೊಡಿಸಿದನು. ಆತನ ಕೃಪಾರಸವು ಪ್ರತಿಕ್ಷಣದಲ್ಲೂ ನನ್ನ ಮೇಲೆ ಹರಿಯುತ್ತಿತ್ತು. ಆತನ ಪ್ರೀತ್ಯಾದರಪೂರ್ಣವಾದ ಮಾತುಗಳನ್ನು ಕೇಳಿ ನಾನು ಸ್ನೇಹವಶನಾಗಿ ರೋಮಾಂಚಿತನಾದೆ. ನನ್ನ ವಾಣಿ ಗದ್ಗದವಾಯಿತು. ಕಣ್ಣುಗಳಿಂದ ಆನಂದಾಶ್ರುಗಳು ಹರಿಯತೊಡಗಿದ್ದವು. ಕೈ ಜೋಡಿಸಿಕೊಂಡು ನಾನು ಆತನಲ್ಲಿ ಹೀಗೆ ಬಿನ್ನವಿಸಿಕೊಂಡೆನು. ॥ ೧೪ ॥ ಸ್ವಾಮಿ! ನಿನ್ನ ಚರಣಕಮಲಗಳನ್ನು ಸೇವಿಸುವ ಮನುಷ್ಯನಿಗೆ ಈ ಜಗತ್ತಿನಲ್ಲಿ ಧರ್ಮ, ಅರ್ಥ, ಕಾಮ, ಮೋಕ್ಷಗಳೆಂಬ ನಾಲ್ಕು ಪುರುಷಾರ್ಥಗಳಲ್ಲಿ ಯಾವುದೂ ದುರ್ಲಭವಲ್ಲ. ಆದರೆ ನನಗೆ ಅವುಗಳ ಯಾವುದೇ ಇಚ್ಛೆಯಿಲ್ಲ. ನಾನಾದರೋ ಕೇವಲ ನಿನ್ನ ಚರಣಕಮಲಗಳ ಸೇವೆಗಾಗಿಯೇ ಕಾತರನಾಗಿರುತ್ತೇನೆ. ॥ ೧೫ ॥ ಪ್ರಭೋ! ನೀನು ನಿಃಸ್ಪೃಹನಾಗಿದ್ದರೂ ಕರ್ಮಗಳನ್ನು ಆಚರಿಸುತ್ತಿರುವೆ. ಜನ್ಮರಹಿತನಾದರೂ ಜನ್ಮತಾಳುತ್ತಿರುವೆ. ಕಾಲಾತ್ಮನಾಗಿದ್ದರೂ ಶತ್ರುವಿಗೆ ಹೆದರಿದವನಂತೆ ಪಲಾಯನಮಾಡಿ ಕೋಟೆಯಲ್ಲಿ ಅಡಗಿಕೊಳ್ಳುವೆ. ಸ್ವಾತ್ಮಾರಾಮನಾಗಿದ್ದರೂ ಹದಿನಾರುಸಾವಿರ ಸ್ತ್ರೀಯರೊಡನೆ ಕ್ರೀಡಿಸುವೆ. ನಿನ್ನ ಈ ವಿಚಿತ್ರ ಚರಿತ್ರವನ್ನು ನೋಡಿ ವಿದ್ವಾಂಸರ ಬುದ್ಧಿಯೂ ಭ್ರಮಿತವಾಗುತ್ತದೆ. ॥ ೧೬ ॥ ಸರ್ವಜ್ಞನಾಗಿ ಸದಾ ಅಕುಂಠಿತವಾದ ಅಖಂಡಜ್ಞಾನವನ್ನು ಹೊಂದಿದ್ದರೂ ನೀನು ಸಾಮಾನ್ಯ ಮನುಷ್ಯನಂತೆ ಕಾರ್ಯಾಲೋಚನೆಯಲ್ಲಿ ನನ್ನನ್ನು ಕರೆದು ಸಲಹೆ ಕೇಳುತ್ತಿದ್ದೆ. ಈ ಲೀಲೆಯು ನನ್ನ ಮನಸ್ಸಿಗೆ ಭ್ರಾಂತಿಯನ್ನುಂಟು ಮಾಡುತ್ತಿದೆ. ॥ ೧೭ ॥ ಸ್ವಾಮಿ! ನಿನ್ನ ಸ್ವರೂಪದ ಗೂಢರಹಸ್ಯವನ್ನು ಪ್ರಕಾಶಪಡಿಸುವ ಶ್ರೇಷ್ಠತಮವಾದ ಯಾವ ಜ್ಞಾನವನ್ನು ಬ್ರಹ್ಮದೇವರಿಗೆ ಉಪದೇಶಿಸಿರುವೆಯೋ, ಅದನ್ನು ಗ್ರಹಿಸುವ ಯೋಗ್ಯತೆ ನನಗಿದ್ದರೆ ಉಪದೇಶಿಸು. ಅದರಿಂದ ಸಂಸಾರ ಬಂಧನಗಳನ್ನು ಕಳೆದುಕೊಂಡು ಕೃತಾರ್ಥನಾಗುವೆನು. ॥ ೧೮ ॥

ಹೀಗೆ ನಾನು ನನ್ನ ಹೃದಯದ ಭಾವವನ್ನು ಅರಿಕೆ ಮಾಡಿಕೊಳ್ಳಲು ಆ ಪರಮಪುರುಷನಾದ ಪುಂಡರೀಕಾಕ್ಷನು ನನಗೆ ತನ್ನ ಸ್ವರೂಪದ ಪರಮಸ್ಥಿತಿಯನ್ನು ಉಪದೇಶಿಸಿದನು. ॥ ೧೯ ॥ ಆ ತೀರ್ಥಪಾದನಾದ ಪರಮಗುರು ಶ್ರೀಕೃಷ್ಣನಿಂದ ಹೀಗೆ ಆತ್ಮತತ್ತ್ವಜ್ಞಾನ ಪಡೆಯುವ ಸಾಧನೆಯನ್ನು ತಿಳಿದುಕೊಂಡು, ಆತನ ಅಡಿದಾವರೆಗಳಿಗೆ ಮಣಿದು, ಪ್ರದಕ್ಷಿಣೆಮಾಡಿ ನಾನು ಇಲ್ಲಿಗೆ ಬಂದಿರುವೆನು. ಆತನ ಅಗಲುವಿಕೆಯಿಂದ ನನ್ನ ಚಿತ್ತವು ತುಂಬಾ ಕಳವಳದಿಂದ ತುಂಬಿದೆ. ॥ ೨೦ ॥ ಆ ಭಗವಂತನ ದರ್ಶನವೆಂಬ ಆನಂದವನ್ನು ಅನುಭವಿಸಿದ್ದ ನಾನು ಈಗ ಆತನ ಅಗಲಿಕೆಯ ದುಃಖವನ್ನು ಅನುಭವಿಸುತ್ತಿದ್ದೇನೆ. ಇನ್ನು ನಾನು ಅವನ ಅಪ್ಪಣೆಯಂತೆ ಆತನಿಗೆ ಪ್ರಿಯವಾದ ಬದರಿಕಾಶ್ರಮಕ್ಕೆ ಹೋಗುತ್ತೇನೆ. ಭಗವಾನ್ ನಾರಾಯಣ ಮತ್ತು ನರ ಇವರಿಬ್ಬರು ಋಷಿಗಳು

ಸೋಽಹಂ ತದ್ದರ್ಶನಾಹ್ಲಾದವಿಯೋಗಾರ್ತಿಯುತಃ ಪ್ರಭೋ ।
ಗಮಿಷ್ಯೇ ದಯಿತಂ ತಸ್ಯ ಬದರ್ಯಾಶ್ರಮಮಂಡಲಮ್ ॥ ೨೧ ॥

ಯತ್ರ ನಾರಾಯಣೋ ದೇವೋ ನರಶ್ಚ ಭಗವಾನೃಷಿಃ ।
ಮೃದು ತೀವ್ರಂ ತಪೋ ದೀರ್ಘಂ ತೇಪಾತೇ ಲೋಕಭಾವನೌ ॥ ೨೨ ॥

ಶ್ರೀಶುಕ ಉವಾಚ

ಇತ್ಯುದ್ಧವಾದುಪಾಕರ್ಣ್ಯ ಸುಹೃದಾಂ ದುಃಸಹಂ ವಧಮ್ ।
ಜ್ಞಾನೇನಾಶಮಯತ್ ಕ್ಷತ್ತಾ ಶೋಕಮುತ್ಪತಿತಂ ಬುಧಃ ॥ ೨೩ ॥

ಸ ತಂ ಮಹಾಭಾಗವತಂ ವ್ರಜಂತಂ ಕೌರವರ್ಷಭಃ ।
ವಿಶ್ರಂಭಾದಭ್ಯಧತ್ತೇದಂ ಮುಖ್ಯಂ ಕೃಷ್ಣಪರಿಗ್ರಹೇ ॥ ೨೪ ॥

ವಿದುರ ಉವಾಚ

ಜ್ಞಾನಂ ಪರಂ ಸ್ವಾತ್ಮರಹಃಪ್ರಕಾಶಂ
ಯದಾಹ ಯೋಗೇಶ್ವರ ಈಶ್ವರಸ್ತೇ ।
ವಕ್ತುಂ ಭವಾನ್ನೋಽರ್ಹತಿ ಯದ್ಧಿ ವಿಷ್ಣೋ-
ರ್ಭೃತ್ಯಾಃ ಸ್ವಭೃತ್ಯಾರ್ಥಕೃತಶ್ಚರಂತಿ ॥ ೨೫ ॥

ಉದ್ಧವ ಉವಾಚ

ನನು ತೇ ತತ್ತ್ವಸಂರಾಧ್ಯ ಋಷಿಃ ಕೌಷಾರವೋಽಂತಿ ಮೇ ।
ಸಾಕ್ಷಾದ್ಭಗವತಾಽಽದಿಷ್ಟೋ ಮರ್ತ್ಯಲೋಕಂ ಜಿಹಾಸತಾ ॥ ೨೬ ॥

ಶ್ರೀಶುಕ ಉವಾಚ

ಇತಿ ಸಹ ವಿದುರೇಣ ವಿಶ್ವಮೂರ್ತೇ-
ರ್ಗುಣಕಥಯಾ ಸುಧಯಾ ಪ್ಲಾವಿತೋರುತಾಪಃ ।
ಕ್ಷಣಮಿವ ಪುಲಿನೇ ಯಮಸ್ವಸುಸ್ತಾಂ
ಸಮುಷಿತ ಔಪಗವಿರ್ನಿಶಾಂ ತತೋಽಗಾತ್ ॥ ೨೭ ॥

ರಾಜೋವಾಚ

ನಿಧನಮುಪಗತೇಷು ವೃಷ್ಣಿಭೋಜೇ-
ಷ್ವಧಿರಥಯೂಥಪಯೂಥಪೇಷು ಮುಖ್ಯಃ ।
ಸ ತು ಕಥಮವಶಿಷ್ಟ ಉದ್ಧವೋ ಯದ್
ಹರಿರಪಿ ತತ್ಯಜ ಆಕೃತಿಂ ತ್ರ್ಯಧೀಶಃ ॥ ೨೮ ॥

ಶ್ರೀಶುಕ ಉವಾಚ

ಬ್ರಹ್ಮಶಾಪಾಪದೇಶೇನ ಕಾಲೇನಾಮೋಘವಾಂಛಿತಃ ।
ಸಂಹೃತ್ಯ ಸ್ವಕುಲಂ ನೂನಂ ತ್ಯಕ್ಷ್ಯನ್ ದೇಹಮಚಿಂತಯತ್ ॥ ೨೯ ॥

ಲೋಕಾನುಗ್ರಹ ಮಾಡುವುದಕ್ಕಾಗಿ ಕಠಿಣ ತಪಸ್ಸನ್ನಾಚರಿಸುತ್ತಿದ್ದಾರೆ. ॥ ೨೦-೨೨ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಮಹಾರಾಜಾ! ಹೀಗೆ ಉದ್ಧವನ ಬಾಯಿಂದ ಪ್ರಿಯಬಂಧುಗಳ ವಿನಾಶದ ಸಹಿಸಲಾರದ ಸಮಾಚಾರವನ್ನು ಕೇಳಿ ಪರಮಜ್ಞಾನೀ ವಿದುರನಿಗೆ ಉಂಟಾದ ಶೋಕವನ್ನು ಅವನು ಜ್ಞಾನದ ಮೂಲಕ ಶಾಂತವಾಗಿಸಿಕೊಂಡನು. ॥ ೨೩ ॥ ಭಗವಾನ್ ಶ್ರೀಕೃಷ್ಣನ ಭಕ್ತ ಪರಿವಾರದಲ್ಲಿ ಮುಖ್ಯನಾಗಿದ್ದ ಆ ಭಾಗವತೋತ್ತಮನು ಬದರಿಕಾಶ್ರಮದ ಕಡೆಗೆ ಹೊರಟಾಗ ಕುರುಶ್ರೇಷ್ಠ ವಿದುರನು ಶ್ರದ್ಧಾಪೂರ್ವಕವಾಗಿ ಅವನಲ್ಲಿ ಕೇಳಿದನು. ॥ ೨೪ ॥

ವಿದುರನೆಂದನು – ಎಲೈ ಉದ್ಧವನೇ! ಯೋಗೇಶ್ವರ ಭಗವಾನ್ ಶ್ರೀಕೃಷ್ಣನು ತನ್ನ ಸ್ವರೂಪದ ಗೂಢವಾದ ರಹಸ್ಯವನ್ನು ಪ್ರಕಟಗೊಳಿಸುವಂತಹ ಯಾವ ಪರಮ ಜ್ಞಾನವನ್ನು ನಿನಗೆ ಹೇಳಿದನೋ, ಅದನ್ನು ನಮಗೂ ಹೇಳಿರಿ. ಏಕೆಂದರೆ ಭಗವಂತನ ಸೇವಕರಾದರೋ ತಮ್ಮ ಸೇವಕರ ಕಾರ್ಯವನ್ನು ಸಿದ್ಧಗೊಳಿಸುವುದಕ್ಕಾಗಿಯೇ ಸಂಚರಿಸುತ್ತಿರುತ್ತಾರೆ. ॥ ೨೫ ॥

ಉದ್ಧವನು ಹೇಳಿದನು – ಮಹಾತ್ಮನೇ! ಮೈತ್ರೇಯ ಮಹರ್ಷಿಗಳ ಸೇವೆ ಮಾಡಿಯೇ ನೀನು ಆ ತತ್ತ್ವಜ್ಞಾನವನ್ನು ಪಡೆಯಬೇಕು. ಈ ಮರ್ತ್ಯಲೋಕವನ್ನು ಬಿಡುವ ಮುನ್ನ ಭಗವಂತನೇ ಆ ತತ್ತ್ವಜ್ಞಾನವನ್ನು ನಿನಗೆ ಉಪದೇಶಮಾಡಬೇಕೆಂದು ಅವರಿಗೆ ನನ್ನೆದುರಿಗೇ ಅಪ್ಪಣೆ ಮಾಡಿರುವನು ॥ ೨೬ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿದ್ರಾಜನೇ! ಹೀಗೆ ವಿದುರನೊಡನೆ ವಿಶ್ವಮೂರ್ತಿಯಾದ ಶ್ರೀಕೃಷ್ಣನ ಮಾತ್ಮನ ಗುಣಗಳ ಸಂಕೀರ್ತನೆ ಮಾಡಿದ್ದರಿಂದ ಉದ್ಧವನ ಆ ಮಹಾವಿಯೋಗ ಸಂತಾಪವು ಆ ಕಥಾಮೃತದಿಂದ ಶಮನಗೊಂಡಿತು. ಯಮುನಾನದೀ ತೀರದಲ್ಲಿ ಆ ರಾತ್ರಿಯು ಅವನಿಗೆ ಒಂದು ಕ್ಷಣದಂತೆ ಕಳೆದುಹೋಯಿತು. ಮತ್ತೆ ಬೆಳಗಾಗುತ್ತಲೇ ಅವನು ಅಲ್ಲಿಂದ ಹೊರಟುಬಿಟ್ಟನು. ॥ ೨೭ ॥

ರಾಜಾಪರೀಕ್ಷಿತನು ಕೇಳಿದನು – ಪೂಜ್ಯರೇ! ವೃಷ್ಣಿವಂಶ ಮತ್ತು ಭೋಜವಂಶಗಳ ಮಹಾರಥಿಗಳೂ, ನಾಯಕ-ಮಹಾನಾಯಕರೆಲ್ಲರೂ ನಾಶಹೊಂದಿಬಿಟ್ಟರು. ಮೂರುಲೋಕಗಳ ಒಡೆಯನಾದ ಶ್ರೀಹರಿಯೂ ಕೂಡ ತನ್ನ ರೂಪವನ್ನು ಮರೆಮಾಡಬೇಕಾಯಿತು. ಹೀಗಿರುವಾಗ ■ ಯಾದವವಂಶದ ನಾಯಕರಲ್ಲೊಬ್ಬನಾದ ಉದ್ಧವನು ಮಾತ್ರ ಹೇಗೆ ಉಳಿದುಕೊಂಡನು? ॥ ೨೮ ॥

ಶ್ರೀಶುಕಮಹರ್ಷಿಗಳು ಹೇಳುತ್ತಾರೆ – ರಾಜನೇ! ತನ್ನ ಇಚ್ಛೆಯು ಎಂದೂ ವ್ಯರ್ಥವಾಗದಿರುವ ಆ ಶ್ರೀಹರಿಯು ಬ್ರಾಹ್ಮಣರ ಶಾಪರೂಪೀಕಾಲದ ನೆಪದಿಂದ ತನ್ನ ಕುಲವನ್ನು ಸಂಹಾರಮಾಡಿ, ತನ್ನ ಲೀಲಾ ಸಂವರಣ ಮಾಡುವ ಸಮಯದಲ್ಲಿ ಹೀಗೆ ಯೋಚಿಸಿದನು. ॥ ೨೯ ॥ 'ಈಗ ನಾನು ಈ ಲೋಕವನ್ನು ಬಿಟ್ಟು ಹೊರಟುಹೋದ ಬಳಿಕ ನನ್ನ ಜ್ಞಾನವನ್ನು ಗ್ರಹಿಸಲು ಯೋಗ್ಯನಾದ ಅಧಿಕಾರಿಯೆಂದರೆ ನಂಯಾಯಿಗಳಲ್ಲಿ ಶ್ರೇಷ್ಠನಾದ ಉದ್ಧವ

ಅಸ್ಮಾಲ್ಲೋಕಾದುಪರತೇ ಮಯಿ ಜ್ಞಾನಂ ಮದಾಶ್ರಯಮ್ ।
ಅರ್ಹತ್ಯುದ್ಧವ ಏವಾದ್ಧಾ ಸಂಪ್ರತ್ಯಾತ್ಮವತಾಂ ವರಃ ॥ ೩೦ ॥

ನೋದ್ಧವೋಽಣ್ವಪಿ ಮನ್ನ್ಯೂನೋ ಯದ್ಗುಣೈರ್ನಾರ್ದಿತಃ ಪ್ರಭುಃ ।
ಅತೋ ಮದ್ವಯುನಂ ಲೋಕಂ ಗ್ರಾಹಯನ್ನಿಹ ತಿಷ್ಠತು ॥ ೩೧ ॥

ಏವಂ ತ್ರಿಲೋಕಗುರುಣಾ ಸಂದಿಷ್ಟಃ ಶಬ್ದಯೋನಿನಾ ।
ಬದರ್ಯಾಶ್ರಮಮಾಸಾದ್ಯ ಹರಿಮೀಜೇ ಸಮಾಧಿನಾ ॥ ೩೨ ॥

ವಿದುರೋಽಪ್ಯುದ್ಧವಾಚ್ಛ್ರುತ್ವಾ ಕೃಷ್ಣಸ್ಯ ಪರಮಾತ್ಮನಃ ।
ಕ್ರೀಡಯೋಪಾತ್ತದೇಹಸ್ಯ ಕರ್ಮಾಣಿ ಶ್ಲಾಘಿತಾನಿ ಚ ॥ ೩೩ ॥

ದೇಹನ್ಯಾಸಂ ಚ ತಸ್ಯೈವಂ ಧೀರಾಣಾಂ ಧೈರ್ಯವರ್ಧನಮ್ ।
ಅನ್ಯೇಷಾಂ ದುಷ್ಕರತರಂ ಪಶೂನಾಂ ವಿಕ್ಲವಾತ್ಮನಾಮ್ ॥ ೩೪ ॥

ಆತ್ಮಾನಂ ಚ ಕುರುಶ್ರೇಷ್ಠ ಕೃಷ್ಣೇನ ಮನಸೇಕ್ಷಿತಮ್ ।
ಧ್ಯಾಯನ್ ಗತೇ ಭಾಗವತೇ ರುರೋದ ಪ್ರೇಮವಿಹ್ವಲಃ ॥ ೩೫ ॥

ಕಾಲಿಂದ್ಯಾಃ ಕತಿಭಿಃ ಸಿದ್ಧ ಅಹೋಭಿರ್ಭರತರ್ಷಭ ।
ಪ್ರಾಪದ್ಯತ ಸ್ವಃಸರಿತಂ ಯತ್ರ ಮಿತ್ರಾಸುತೋ ಮುನಿಃ ॥ ೩೬ ॥

ನೊಬ್ಬನೇ! ॥ ೩೦ ॥ ಈತನು ನನಗಿಂತ ಅಣುಮಾತ್ರವೂ ಕಡಿಮೆಯವನಲ್ಲ. ಏಕೆಂದರೆ, ಇವನು ವಿಷಯಗಳ ಬಾಧೆಗೆ ಎಂದಿಗೂ ತುತ್ತಾದವನಲ್ಲ. ಆದ್ದರಿಂದ ಈತನು ಜನರಿಗೆ ನನ್ನ ಜ್ಞಾನದ ಬಗೆಗೆ ತಿಳುವಳಿಕೆ ನೀಡುತ್ತಾ ಇಲ್ಲಿಯೇ ಇರಲಿ.' ॥ ೩೧ ॥ ವೇದಗಳಿಗೆ ಮೂಲಕಾರಣನಾದ ಮತ್ತು ವೇದೈಕವೇದ್ಯನಾದ ಜಗದ್ಗುರು ಶ್ರೀಕೃಷ್ಣನಿಂದ ಹೀಗೆ ಆಜ್ಞೆಪಡೆದ ಮಹಾತ್ಮನಾದ ಉದ್ಧವನು ಬದರಿಕಾಶ್ರಮಕ್ಕೆ ಹೋಗಿ ಸಮಾಧಿಯೋಗದಿಂದ ಶ್ರೀಹರಿಯನ್ನು ಆರಾಧಿಸತೊಡಗಿದನು. ॥ ೩೨ ॥ ಕುರುಶ್ರೇಷ್ಠ ಪರೀಕ್ಷಿತನೇ! ಭಗವಾನ್ ಶ್ರೀಕೃಷ್ಣನು ಲೀಲೆಯಿಂದಲೇ ತನ್ನ ದಿವ್ಯ ಮಂಗಳ ವಿಗ್ರಹವನ್ನು ಈ ಲೋಕದಲ್ಲಿ ಪ್ರಕಟಿಸಿದ್ದನು. ಅದನ್ನು ಮರೆಸಿಕೊಂಡದ್ದೂ ಲೀಲಾಮಾತ್ರವೇ. ಆತನು ಅಂತರ್ಧಾನಹೊಂದಿದ ಈ ಘಟನೆಯು ಧೀರ ಪುರುಷರಿಗೆ ಧೈರ್ಯವನ್ನೂ, ಉತ್ಸಾಹವನ್ನೂ ತುಂಬುತ್ತದೆ. ಆದರೆ ಪಶುಸಮಾನರಾದ ಹೇಡಿಗಳಿಗೆ ಅತ್ಯಂತ ದುಷ್ಕರವಾಗಿದೆ. ಪರಮ ಭಾಗವತೋತ್ತಮನಾದ ಉದ್ಧವನ ಬಾಯಿಂದ ಭಗವಂತನ ಶ್ರೇಷ್ಠವಾದ ಕರ್ಮಗಳನ್ನೂ, ಅಂತರ್ಧಾನಹೊಂದಿದ ವೃತ್ತಾಂತವನ್ನೂ ವಿದುರನು ಹೀಗೆ ಕೇಳಿದನು. ಹಾಗೆಯೇ ಪರಂಧಾಮ ಹೊಂದುವ ಸಮಯದಲ್ಲಿ ಸ್ವಾಮಿಯು ತನ್ನನ್ನು ನೆನೆಸಿಕೊಂಡನು ಎಂದು ಕೇಳಿ ವಿದುರನು – ಉದ್ಧವನು ಹೊರಟುಹೋದ ಬಳಿಕ ಪ್ರೇಮಪರವಶನಾಗಿ ರೋದಿಸತೊಡಗಿದನು. ॥ ೩೩-೩೫ ॥ ಅನಂತರ ಆ ಸಾಧುಶಿರೋಮಣಿಯು ಯಮುನಾನದಿಯ ತೀರದಿಂದ ಹೊರಟು. ಕೆಲವು ದಿನಗಳಲ್ಲೇ ಶ್ರೀಮೈತ್ರೇಯ ಮಹರ್ಷಿಗಳು ತಂಗಿದ್ದ ಗಂಗಾನದೀತೀರವನ್ನು ತಲುಪಿದನು. ॥ ೩೬ ॥

ನಾಲ್ಕನೆಯ ಅಧ್ಯಾಯವು ಮುಗಿಯಿತು. ॥ ೪ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ತೃತೀಯಸ್ಕಂಧೇ
ವಿದುರೋದ್ಧವಸಂವಾದೇ ಚತುರ್ಥೋಽಧ್ಯಾಯಃ ॥ ೪ ॥

ಐದನೆಯ ಅಧ್ಯಾಯ

ವಿದುರನ ಪ್ರಶ್ನೆ – ಮೈತ್ರೇಯರಿಂದ ಸೃಷ್ಟಿಕ್ರಮದ ವರ್ಣನೆ

ಶ್ರೀಶುಕ ಉವಾಚ

ದ್ವಾರಿ ದ್ಯುನದ್ಯಾ ಋಷಭಃ ಕುರೂಣಾಂ
ಮೈತ್ರೇಯಮಾಸೀನಮಗಾಧಬೋಧಮ್ ।
ಕ್ಷತ್ತೋಪಸೃತ್ಯಾಚ್ಯುತಭಾವಶುದ್ಧಃ
ಪಪ್ರಚ್ಛ ಸೌಶೀಲ್ಯಗುಣಾಭಿತೃಪ್ತಃ ॥ ೧ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಮಹಾರಾಜನೇ! ಶ್ರೀಕೃಷ್ಣನ ಧ್ಯಾನದಿಂದ ನಿರ್ಮಲಚಿತ್ತನಾದ ಕುರುಶ್ರೇಷ್ಠ ವಿದುರನು ಶ್ರೀಹರಿದ್ವಾರ ಕ್ಷೇತ್ರದಲ್ಲಿ ಇರುವ ಅಗಾಧ ಜ್ಞಾನಿಗಳಾದ ಮೈತ್ರೇಯ ಮಹರ್ಷಿಗಳ ಬಳಿಗೆ ಹೋದನು. ಆ ಮಹಾತ್ಮರ ಸೌಶೀಲ್ಯಾದಿ ಗುಣಗಳಿಂದ ಸಂತೃಪ್ತನಾಗಿ ಅವರಲ್ಲಿ ಹೀಗೆ ಅರಿಕೆಮಾಡಿಕೊಂಡನು. ॥ ೧ ॥

ವಿದುರ ಉವಾಚ

ಸುಖಾಯ ಕರ್ಮಾಣಿ ಕರೋತಿ ಲೋಕೋ
ನ ತೈಃ ಸುಖಂ ವಾನ್ಯದುಪಾರಮಂ ವಾ ।
ವಿಂದೇತ ಭೂಯಸ್ತತ ಏವ ದುಃಖಂ
ಯದತ್ರ ಯುಕ್ತಂ ಭಗವಾನ್ ವದೇನ್ನಃ ॥ ೨ ॥

ಜನಸ್ಯ ಕೃಷ್ಣಾದ್ವಿಮುಖಸ್ಯ ದೈವಾ-
ದಧರ್ಮಶೀಲಸ್ಯ ಸುದುಃಖಿತಸ್ಯ ।
ಅನುಗ್ರಹಾಯೇಹ ಚರಂತಿ ನೂನಂ
ಭೂತಾನಿ ಭವ್ಯಾನಿ ಜನಾರ್ದನಸ್ಯ ॥ ೩ ॥

ತತ್ಸಾಧುವರ್ಯಾದಿಶ ವರ್ತ್ಮ ಶಂ ನಃ
ಸಂರಾಧಿತೋ ಭಗವಾನ್ಯೇನ ಪುಂಸಾಮ್ ।
ಹೃದಿ ಸ್ಥಿತೋ ಯಚ್ಛತಿ ಭಕ್ತಪೂತೇ
ಜ್ಞಾನಂ ಸತತ್ತ್ವಾಧಿಗಮಂ ಪುರಾಣಮ್ ॥ ೪ ॥

ಕರೋತಿ ಕರ್ಮಾಣಿ ಕೃತಾವತಾರೋ
ಯಾನ್ಯಾತ್ಮತಂತ್ರೋ ಭಗವಾಂಸ್ತ್ರ್ಯಧೀಶಃ ।
ಯಥಾ ಸಸರ್ಜಾಗ್ರ ಇದಂ ನಿರೀಹಃ
ಸಂಸ್ಥಾಪ್ಯ ವೃತ್ತಿಂ ಜಗತೋ ವಿಧತ್ತೇ ॥ ೫ ॥

ಯಥಾ ಪುನಃ ಸ್ವೇ ಖ ಇದಂ ನಿವೇಶ್ಯ
ಶೇತೇ ಗುಹಾಯಾಂ ಸ ನಿವೃತ್ತವೃತ್ತಿಃ ।
ಯೋಗೇಶ್ವರಾಧೀಶ್ವರ ಏಕ ಏತ-
ದನುಪ್ರವಿಷ್ಟೋ ಬಹುಧಾ ಯಥಾಸೀತ್ ॥ ೬ ॥

ಕ್ರೀಡನ್ವಿಧತ್ತೇ ದ್ವಿಜಗೋಸುರಾಣಾಂ
ಕ್ಷೇಮಾಯ ಕರ್ಮಾಣ್ಯವತಾರಭೇದೈಃ ।
ಮನೋ ನ ತೃಪ್ಯತ್ಯಪಿ ಶೃಣ್ವತಾಂ ನಃ
ಸುಶ್ಲೋಕಮೌಲೇಶ್ಚರಿತಾಮೃತಾನಿ ॥ ೭ ॥

ಯೈಸ್ತತ್ತ್ವಭೇದೈರಧಿಲೋಕನಾಥೋ
ಲೋಕಾನಲೋಕಾನ್ಸಹಲೋಕಪಾಲಾನ್ ।
ಅಚೀಕ್ಲೃಪದ್ಯತ್ರ ಹಿ ಸರ್ವಸತ್ತ್ವ-
ನಿಕಾಯಭೇದೋಽಧಿಕೃತಃ ಪ್ರತೀತಃ ॥ ೮ ॥

ಯೇನ ಪ್ರಜಾನಾಮುತ ಆತ್ಮಕರ್ಮ-
ರೂಪಾಭಿಧಾನಾಂ ಚ ಭಿದಾಂ ವ್ಯಧತ್ತ ।
ನಾರಾಯಣೋ ವಿಶ್ವಸೃಡಾತ್ಮಯೋನಿ-
ರೇತಚ್ಚ ನೋ ವರ್ಣಯ ವಿಪ್ರವರ್ಯ ॥ ೯ ॥

ವಿದುರನು ಹೇಳಿದನು – ಓ ಮಹಾತ್ಮರೇ! ಪ್ರಪಂಚದಲ್ಲಿ ಎಲ್ಲ ಜನರೂ ಸುಖವನ್ನು ಪಡೆಯಬೇಕೆಂಬ ಆಸೆಯಿಂದ ಕರ್ಮ ಮಾಡುತ್ತಾರೆ. ಆದರೆ ಅದರಿಂದ ಅವರಿಗೆ ಸುಖಸಿಗುವುದಿಲ್ಲ, ದುಃಖ ದೂರವಾಗುವುದಿಲ್ಲ. ಅಷ್ಟೇ ಅಲ್ಲ, ಅದರಿಂದ ಅವರಿಗೆ ದುಃಖವೇ ಹೆಚ್ಚುತ್ತದೆ. ಆದ್ದರಿಂದ ಇದರ ಬಗೆಗೆ ಜನರು ಏನು ಮಾಡಬೇಕು? ಸುಖವನ್ನೇ ಪಡೆಯುವ ದಾರಿ ಯಾವುದು? ಎಂಬುದನ್ನು ದಯವಿಟ್ಟು ತಿಳಿಸಿರಿ. ॥ ೨ ॥ ದುರದೃಷ್ಟವಶದಿಂದ ಭಗವಾನ್ ಶ್ರೀಕೃಷ್ಣನಿಂದ ವಿಮುಖರಾಗಿ, ಅಧರ್ಮದಲ್ಲಿ ಆಸಕ್ತರಾಗಿ, ಅತಿ ದುಃಖಪಡುತ್ತಿರುವವರ ಮೇಲೆ ಕೃಪೆಯನ್ನು ತೋರಲೆಂದೇ ನಿಮ್ಮಂತಹ ಭಾಗ್ಯಶಾಲಿ ಭಗವದ್ಭಕ್ತರು ಪ್ರಪಂಚದಲ್ಲಿ ಸಂಚಾರಮಾಡುತ್ತಿರುವುದು. ॥ ೩ ॥ ಸಾಧುಶ್ರೇಷ್ಠರೇ! ಭಗವಂತನನ್ನು ಹೇಗೆ ಆರಾಧಿಸಿದರೆ ಅವನು ಭಕ್ತರ ಭಕ್ತಿಶುದ್ಧವಾದ ಹೃದಯದಲ್ಲಿ ಬಂದು ನೆಲಸಿ, ತನ್ನ ಸ್ವರೂಪದ ಅಪರೋಕ್ಷಾನುಭವವನ್ನು ಮಾಡುವ ಸನಾತನ ಜ್ಞಾನವನ್ನು ಅನುಗ್ರಹಿಸುತ್ತಾನೋ ಅಂತಹ ಶಾಂತಿಪ್ರದವಾದ ಸನಾತನವಾದ ಜ್ಞಾನವನ್ನು ತಾವು ನನಗೆ ಉಪದೇಶಿಸಿರಿ. ॥ ೪ ॥ ತ್ರಿಲೋಕಗಳಿಗೆ ಒಡೆಯನಾಗಿ ಪರಮಸ್ವತಂತ್ರನಾಗಿರುವ ಶ್ರೀಹರಿಯು ಅವತಾರಮಾಡಿ ಯಾವ-ಯಾವ ಲೀಲೆಗಳನ್ನು ಮಾಡುವನು? ಪೂರ್ಣಕಾಮನಾಗಿ ಕರ್ತೃತ್ವಲೇಪವಿಲ್ಲದ ಆ ಸ್ವಾಮಿಯು ಕಲ್ಪದ ಪ್ರಾರಂಭದಲ್ಲಿ ಈ ಜಗತ್ತನ್ನು ಹೇಗೆ ನಿರ್ಮಿಸಿದನು? ತಾನು ಸೃಷ್ಟಿಸಿದ ಜೀವಿಗಳನ್ನು ನೆಲೆಗೊಳಿಸಿ ಅವುಗಳಿಗೆ ಜೀವನೋಪಾಯವನ್ನು ಹೇಗೆ ಕಲ್ಪಿಸಿದನು? ಮತ್ತೆ ಅವನು ತನ್ನ ಈ ಕಾರ್ಯವನ್ನು ತೊರೆದು ಜಗತ್ತೆಲ್ಲವನ್ನು ತನ್ನ ಹೃದಯಾಕಾಶದಲ್ಲಿ ವಿಲೀನಗೊಳಿಸಿಕೊಂಡು ಯೋಗಮಾಯೆಯನ್ನು ಆಶ್ರಯಿಸಿ ಹೇಗೆ ಶಯನಿಸುತ್ತಾನೆ. ಆ ಯೋಗೇಶ್ವರ ಪ್ರಭುವು ಒಬ್ಬನೇ ಆಗಿದ್ದರೂ ಈ ಬ್ರಹ್ಮಾಂಡದಲ್ಲಿ ಅಂತರ್ಯಾಮಿಯಾಗಿ ಒಳಹೊಕ್ಕು ಅನೇಕ ರೂಪಗಳಲ್ಲಿ, ಹೇಗೆ ಪ್ರಕಟಗೊಳ್ಳುತ್ತಾನೆ? ಈ ಎಲ್ಲ ರಹಸ್ಯವನ್ನು ನನಗೆ ತಿಳಿಸಿರಿ. ॥ ೫-೬ ॥ ಬ್ರಾಹ್ಮಣರು, ಗೋವುಗಳು, ದೇವತೆಗಳು ಇವರೆಲ್ಲರಿಗೆ ಕ್ಷೇಮವನ್ನುಂಟು ಮಾಡುವುದಕ್ಕಾಗಿ ಅನೇಕ ಅವತಾರಗಳನ್ನು ಧರಿಸಿಕೊಂಡು ಲೀಲೆಯಿಂದಲೇ ಮಾಡುವ ನಾನಾ ಪ್ರಕಾರದ ದಿವ್ಯ ಕರ್ಮಗಳನ್ನು ನಮಗೆ ತಿಳಿಸೋಣವಾಗಲಿ. ಪುಣ್ಯಕೀರ್ತಿಶಾಲಿಗಳ ಚೂಡಾಮಣಿಯಾಗಿರುವ ಶ್ರೀಹರಿಯ ಲೀಲಾಕಥಾಮೃತವನ್ನು ಎಷ್ಟು ಪಾನಮಾಡಿದರೂ ನಮ್ಮ ಮನಸ್ಸಿಗೆ ತೃಪ್ತಿ ಯಾಗುವುದಿಲ್ಲ. ॥ ೭ ॥ ಸಮಸ್ತ ಲೋಕಾಧಿಪತಿಗಳ ಒಡೆಯನಾದ ಶ್ರೀಹರಿಯು ಈ ಲೋಕಗಳನ್ನು, ಲೋಕಪಾಲರನ್ನು ಮತ್ತು ಲೋಕಗಳ ಹೊರಗಿನ ಭಾಗಗಳನ್ನೂ, ಅದರಲ್ಲಿ ಈ ಎಲ್ಲ ರೀತಿಯ ಪ್ರಾಣಿಗಳ ಅಧಿಕಾರಾನುಸಾರ ಬೇರೆ-ಬೇರೆಯಾಗಿ ಕಂಡುಬರುವ ಭೇದಗಳು ಯಾವ ತತ್ತ್ವದಿಂದ ರಚಿಸಿರುವನು? ಇದನ್ನೂ ನನಗೆ ಹೇಳಿರಿ. ॥ ೮ ॥ ಮುನಿಶ್ರೇಷ್ಠರೇ! ಸ್ವಯಂಭುವೂ, ಸರ್ವಕಾರಣನೂ ಆದ ಶ್ರೀಮನ್ನಾರಾಯಣನು ತನ್ನ ಪ್ರಜೆಗಳ ಸ್ವಭಾವ, ಕರ್ಮ, ರೂಪ ಮತ್ತು ನಾಮಭೇದಗಳನ್ನು ಹೇಗೆ ರಚನೆ ಮಾಡುವನು? ಪೂಜ್ಯರೇ! ವ್ಯಾಸಮಹರ್ಷಿಗಳಿಂದ ನಾನು ಎಲ್ಲ ವರ್ಣಾಶ್ರಮಧರ್ಮಗಳನ್ನು ಹಲವು ಬಾರಿ ಕೇಳಿರುವೆನು. ಆದರೆ

ಪರಾವರೇಷಾಂ ಭಗವನ್ ವ್ರತಾನಿ
ಶ್ರುತಾನಿ ಮೇ ವ್ಯಾಸಮುಖಾದಭೀಕ್ಷ್ಣಮ್ ।
ಅತೃಪ್ನುಮ ಕ್ಷುಲ್ಲಸುಖಾವಹಾನಾಂ
ತೇಷಾಮೃತೇ ಕೃಷ್ಣ ಕಥಾಮೃತೌಘಾತ್ ॥ ೧೦ ॥

ಕಸ್ತೃಪ್ನುಯಾತ್ತೀರ್ಥಪದೋಽಭಿಧಾನಾತ್
ಸತ್ರೇಷು ವಃ ಸೂರಿಭಿರೀಡ್ಯಮಾನಾತ್ ।
ಯಃ ಕರ್ಣನಾಡೀಂ ಪುರುಷಸ್ಯ ಯಾತೋ
ಭವಪ್ರದಾಂ ಗೇಹರತಿಂ ಛಿನತ್ತಿ ॥ ೧೧ ॥

ಮುನಿರ್ವಿವಕ್ಷುರ್ಭಗವದ್ಗುಣಾನಾಂ
ಸಖಾಪಿ ತೇ ಭಾರತಮಾಹ ಕೃಷ್ಣಃ ।
ಯಸ್ಮಿನ್ನೃಣಾಂ ಗ್ರಾಮ್ಯ ಸುಖಾನುವಾದೈ-
ರ್ಮತಿರ್ಗೃಹೀತಾ ನು ಹರೇಃ ಕಥಾಯಾಮ್ ॥ ೧೨ ॥

ಸಾ ಶ್ರದ್ದಧಾನಸ್ಯ ವಿವರ್ಧಮಾನಾ
ವಿರಕ್ತಿಮನ್ಯತ್ರ ಕರೋತಿ ಪುಂಸಃ ।
ಹರೇಃ ಪದಾನುಸ್ಮೃತಿನಿರ್ವೃತಸ್ಯ
ಸಮಸ್ತದುಃಖಾಪ್ಯಯಮಾಶು ಧತ್ತೇ ॥ ೧೩ ॥

ತಾಂಛೋಚ್ಯಶೋಚ್ಯಾನವಿದೋಽನುಶೋಚೇ
ಹರೇಃ ಕಥಾಯಾಂ ವಿಮುಖಾನಘೇನ ।
ಕ್ಷಿಣೋತಿ ದೇವೋಽನಿಮಿಷಸ್ತು ಯೇಷಾ-
ಮಾಯುರ್ವೃಥಾವಾದಗತಿಸ್ಮೃತೀನಾಮ್ ॥ ೧೪ ॥

ತದಸ್ಯ ಕೌಷಾರವ ಶರ್ಮದಾತು-
ರ್ಹರೇಃ ಕಥಾಮೇವ ಕಥಾಸು ಸಾರಮ್ ।
ಉದ್ಧೃತ್ಯ ಪುಷ್ಪೇಭ್ಯ ಇವಾರ್ತಬಂಧೋ
ಶಿವಾಯ ನಃ ಕೀರ್ತಯ ತೀರ್ಥಕೀರ್ತೇಃ ॥ ೧೫ ॥

ಸ ವಿಶ್ವಜನ್ಮಸ್ಥಿತಿಸಂಯಮಾರ್ಥೇ
ಕೃತಾವತಾರಃ ಪ್ರಗೃಹೀತಶಕ್ತಿಃ ।
ಚಕಾರ ಕರ್ಮಾಣ್ಯತಿಪೂರುಷಾಣಿ
ಯಾನೀಶ್ವರಃ ಕೀರ್ತಯ ತಾನಿ ಮಹ್ಯಮ್ ॥ ೧೬ ॥

ಶ್ರೀಶುಕ ಉವಾಚ

ಸ ಏವಂ ಭಗವಾನ್ಪೃಷ್ಟಃ ಕ್ಷತ್ತ್ರಾ ಕೌಷಾರವಿರ್ಮುನಿಃ ।
ಪುಂಸಾಂ ನಿಃಶ್ರೇಯಸಾರ್ಥೇನ ತಮಾಹ ಬಹು ಮಾನಯನ್ ॥ ೧೭ ॥

ಮೈತ್ರೇಯ ಉವಾಚ

ಸಾಧು ಪೃಷ್ಟಂ ತ್ವಯಾ ಸಾಧೋ ಲೋಕಾನ್ಸಾಧ್ವನುಗೃಹ್ಣತಾ ।
ಕೀರ್ತಿಂ ವಿತನ್ವತಾ ಲೋಕೇ ಆತ್ಮನೋಽಧೋಕ್ಷಜಾತ್ಮನಃ ॥ ೧೮ ॥

ಈಗ ಶ್ರೀಕೃಷ್ಣಕಥಾಮೃತ ಪ್ರವಾಹವನ್ನು ಬಿಟ್ಟು ಕ್ಷಣಿಕ ಸುಖವನ್ನು ಉಂಟುಮಾಡುವ ಬೇರಾವ ಧರ್ಮಗಳನ್ನು ಕೇಳಿದರೂ ಮನಸ್ಸಿಗೆ ತೃಪ್ತಿಯಾಗುವುದಿಲ್ಲ. ॥ ೯-೧೦ ॥ ಆದರೆ ಆ ಭಗವತ್ಕಥಾಮೃತವು ಮನುಷ್ಯರ ಕಿವಿಗಳ ರಂಧ್ರಗಳ ಮೂಲಕ ಪ್ರವೇಶಿಸುತ್ತಲೇ ಸಂಸಾರದ ಬಂಧನಕ್ಕೆ ಕಾರಣವಾದ ವಿಷಯಾಸಕ್ತಿಯನ್ನು ತೊಡೆದು ಹಾಕುವುದು. ನಾರದಾದಿ ಮಹಾತ್ಮರೂ ಕೂಡ ನಿಮ್ಮಂತಹ ಸಾಧುಗಳ ಸಮಾಜದಲ್ಲಿ ಕೀರ್ತಿಸುತ್ತಿರುತ್ತಾರೆ. ತೀರ್ಥ ಪಾದನಾದ ಶ್ರೀಹರಿಯ ಅಂತಹ ಕಥಾಮೃತವನ್ನಾದರೋ, ಎಷ್ಟು ಕೇಳಿದರೂ ಸಾಕೆನಿಸುವುದಿಲ್ಲ. ॥ ೧೧ ॥ ಪೂಜ್ಯರೇ! ನಿಮ್ಮ ಗೆಳೆಯರಾದ ಮುನಿಶ್ರೇಷ್ಠ ಕೃಷ್ಣದ್ವೈಪಾಯನರು ಶ್ರೀಭಗವಂತನ ಗುಣಗಳನ್ನು ವರ್ಣಿಸುವುದಕ್ಕಾಗಿಯೇ ಮಹಾಭಾರತವನ್ನು ರಚಿಸಿರುವರು. ಅದರಲ್ಲಿ ಅವರು ವಿಷಯಸುಖಗಳ ಉಲ್ಲೇಖ ಮಾಡುತ್ತಾ, ಅವುಗಳ ಮೂಲಕ ಮನುಷ್ಯರ ಬುದ್ಧಿಯು ಶ್ರೀಕೃಷ್ಣನಲ್ಲಿ ತೊಡಗಿಸಲು ಪ್ರಯತ್ನಿಸಿರುವರು. ॥ ೧೨ ॥ ಈ ಭಗವತ್ಕಥೆಯ ರುಚಿಯು ಶ್ರದ್ಧೆಯುಳ್ಳ ಮನುಷ್ಯನ ಹೃದಯದಲ್ಲಿ ಬೆಳೆಯ ತೊಡಗಿದಾಗ ಬೇರೆ ವಿಷಯಗಳಿಂದ ಅವನನ್ನು ವಿರಕ್ತನನ್ನಾಗಿ ಮಾಡುತ್ತದೆ. ಅವನು ಭಗವಚ್ಚರಣಗಳ ನಿರಂತರ ಚಿಂತನೆಯಿಂದ ಆನಂದಮಗ್ನನಾಗಿ, ಅವನ ಎಲ್ಲ ದುಃಖಗಳು ಬೇಗನೇ ಕೊನೆಗೊಳ್ಳುತ್ತವೆ. ॥ ೧೩ ॥ ಆದರೆ ಅಜ್ಞಾನಿಗಳು ತಮ್ಮ ಪೂರ್ವ ಪಾಪಗಳಿಂದ ಶ್ರೀಹರಿಯ ಕಥೆಗೆ ವಿಮುಖರಾದ ಆ ಬಡಪಾಯಿ ಜೀವಿಗಳ ಕುರಿತು ಕರುಣೆಯೇ ಉಂಟಾಗುತ್ತದೆ. ಅಯ್ಯೋ! ಭಗವತ್ಸ್ವರೂಪೀ ಕಾಲಪುರುಷನು ಅವರ ಅಮೂಲ್ಯ ಜೀವನವನ್ನು ಕತ್ತರಿಸುತ್ತಿದ್ದರೂ ಅವರು ತಮ್ಮ ಮಾತು, ಮನಸ್ಸು ದೇಹಗಳನ್ನು ವ್ಯರ್ಥವಾದ ವಾದವಿವಾದದಲ್ಲಿ, ವ್ಯರ್ಥಚೇಷ್ಟೆಗಳಲ್ಲಿ, ವ್ಯರ್ಥ ಚಿಂತನೆಯಲ್ಲಿ ತೊಡಗಿಸಿರುತ್ತಾರೆ. ॥ ೧೪ ॥ ಮುನಿವರೇಣ್ಯರೇ! ತಾವು ದೀನಬಂಧುಗಳೂ, ದಯಾಳುಗಳೂ ಆಗಿರುವಿರಿ. ದುಂಬಿಯು ನಾನಾಪುಷ್ಪಗಳಿಂದ ರಸವನ್ನು ಶೋಧಿಸಿ ತೆಗೆಯುವಂತೆ ತಾವು ಈ ಲೌಕಿಕ ಕಥೆಗಳಿಂದ ಅವುಗಳ ಸಾರಭೂತವಾಗಿರುವ ಪರಮ ಪವಿತ್ರವೂ, ಮಂಗಳಕರವೂ ಆದ ಕಥೆಗಳನ್ನು ನಮ್ಮ ಶ್ರೇಯಸ್ಸಿಗಾಗಿ ಸಂಗ್ರಹಿಸಿ ಹೇಳಿರಿ. ॥ ೧೫ ॥ ಸರ್ವೇಶ್ವರನಾದ ಭಗವಂತನು ಜಗತ್ತಿನ ಸೃಷ್ಟಿ, ಸ್ಥಿತಿ, ಲಯಗಳಿಗಾಗಿ ತನ್ನ ಮಾಯಾಶಕ್ತಿಯನ್ನು ಸ್ವೀಕರಿಸಿ ರಾಮ-ಕೃಷ್ಣಾದಿ ಅನೇಕ ಅವತಾರಗಳ ಮೂಲಕ ಮಾಡಿದ ಅಲೌಕಿಕ ಲೀಲೆಗಳೆಲ್ಲವನ್ನು ನನಗೆ ಹೇಳಿರಿ. ॥ ೧೬ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಮಹಾತ್ಮನಾದ ವಿದುರನು ಸಮಸ್ತ ಜೀವಿಗಳ ಶ್ರೇಯಸ್ಸಿಗಾಗಿ ಮೈತ್ರೇಯರಲ್ಲಿ ಹೀಗೆ ಪ್ರಶ್ನಿಸಿದಾಗ, ಅವನ ಸದಾಶಯವನ್ನೂ, ಸೌಜನ್ಯವನ್ನೂ, ಭಕ್ತಿ-ಜ್ಞಾನ-ವೈರಾಗ್ಯ ಮಹಿಮೆಯನ್ನೂ ಅಭಿನಂದಿಸುತ್ತಾ ಮಹರ್ಷಿ ಮೈತ್ರೇಯರು ಹೀಗೆ ಉತ್ತರಿಸಿದರು. ॥ ೧೭ ॥

ಶ್ರೀಮೈತ್ರೇಯರು ಹೇಳತೊಡಗಿದರು – ಓ ಸಾಧು ಶ್ರೇಷ್ಠನೇ! ಲೋಕಾನುಗ್ರಹಕ್ಕಾಗಿ ನೀನು ತುಂಬಾ ಒಳ್ಳೆಯ ಪ್ರಶ್ನೆಯನ್ನೇ ಕೇಳಿರುವೆ. ನಿನ್ನ ಮನಸ್ಸು ಸದಾ ಶ್ರೀಭಗವಂತನಲ್ಲೇ

ನೈತಚ್ಚಿತ್ರಂ ತ್ವಯಿ ಕ್ಷತ್ತರ್ಬಾದರಾಯಣವೀರ್ಯಜೇ ।
ಗೃಹೀತೋಽನನ್ಯಭಾವೇನ ಯತ್ತ್ವಯಾ ಹರಿರೀಶ್ವರಃ ॥ ೧೯ ॥

ಮಾಂಡವ್ಯಶಾಪಾದ್ಭಗವಾನ್ಪ್ರಜಾಸಂಯಮನೋ ಯಮಃ ।
ಭ್ರಾತುಃ ಕ್ಷೇತ್ರೇ ಭುಜಿಷ್ಯಾಯಾಂ ಜಾತಃ ಸತ್ಯವತೀಸುತಾತ್ ॥ ೨೦ ॥

ಭವಾನ್ಭಗವತೋ ನಿತ್ಯಂ ಸಮ್ಮತಃ ಸಾನುಗಸ್ಯ ಚ ।
ಯಸ್ಯ ಜ್ಞಾನೋಪದೇಶಾಯ ಮಾಽಽದಿಶದ್ಭಗವಾನ್ ವ್ರಜನ್ ॥ ೨೧ ॥

ಅಥ ತೇ ಭಗವಲ್ಲೀಲಾ ಯೋಗಮಾಯೋಪಬೃಂಹಿತಾಃ ।
ವಿಶ್ವಸ್ಥಿತ್ಯುದ್ಭವಾಂತಾರ್ಥಾ ವರ್ಣಯಾಮ್ಯನುಪೂರ್ವಶಃ ॥ ೨೨ ॥

ಭಗವಾನೇಕ ಆಸೇದಮಗ್ರ ಆತ್ಮಾಽಽತ್ಮನಾಂ ವಿಭುಃ ।
ಆತ್ಮೇಚ್ಛಾನುಗತಾವಾತ್ಮಾ ನಾನಾಮತ್ಯುಪಲಕ್ಷಣಃ ॥ ೨೩ ॥

ಸ ವಾ ಏಷ ತದಾ ದ್ರಷ್ಟಾ ನಾಪಶ್ಯದ್ದೃಶ್ಯಮೇಕರಾಟ್ ।
ಮೇನೇಽಸಂತಮಿವಾತ್ಮಾನಂ ಸುಪ್ತಶಕ್ತಿರಸುಪ್ತದೃಕ್ ॥ ೨೪ ॥

ಸಾ ವಾ ಏತಸ್ಯ ಸಂದ್ರಷ್ಟುಃ ಶಕ್ತಿಃ ಸದಸದಾತ್ಮಿಕಾ ।
ಮಾಯಾ ನಾಮ ಮಹಾಭಾಗ ಯಯೇದಂ ನಿರ್ಮಮೇ ವಿಭುಃ ॥ ೨೫ ॥

ಕಾಲವೃತ್ತ್ಯಾ ತು ಮಾಯಾಯಾಂ ಗುಣಮಯ್ಯಾಮಧೋಕ್ಷಜಃ ।
ಪುರುಷೇಣಾತ್ಮಭೂತೇನ ವೀರ್ಯಮಾಧತ್ತ ವೀರ್ಯವಾನ್ ॥ ೨೬ ॥

ತತೋಽಭವನ್ಮಹತ್ತತ್ತ್ವಮವ್ಯಕ್ತಾತ್ಕಾಲಚೋದಿತಾತ್ ।
ವಿಜ್ಞಾನಾತ್ಮಾಽಽತ್ಮದೇಹಸ್ಥಂ ವಿಶ್ವಂ ವ್ಯಂಜಂಸ್ತಮೋನುದಃ ॥ ೨೭ ॥

ಸೋಽಪ್ಯಂಶಗುಣಕಾಲಾತ್ಮಾ ಭಗವದ್ದೃಷ್ಟಿಗೋಚರಃ ।
ಆತ್ಮಾನಂ ವ್ಯಕರೋದಾತ್ಮಾ ವಿಶ್ವಸ್ಯಾಸ್ಯ ಸಿಸೃಕ್ಷಯಾ ॥ ೨೮ ॥

ಕೊಡಗಿದೆ. ಆದರೂ ನೀನು ಹೀಗೆ ಪ್ರಶ್ನಿಸಿದ್ದರಿಂದ ನಿನ್ನ ಕೀರ್ತಿಯು ಜಗತ್ತಿನಲ್ಲಿ ಹರಡುವುದು. ॥ ೧೮ ॥ ಅನನ್ಯ ಭಾವದಿಂದ ಸರ್ವೇಶ್ವರನಾದ ಶ್ರೀಹರಿಯನ್ನು ಹಿಡಿದಿಟ್ಟುಕೊಂಡಿರುವ ಭಕ್ತಶ್ರೇಷ್ಠನು ನೀನು. ಬಾದರಾಯಣರ ಔರಸಪುತ್ರರಾಗಿರುವ ನಿನ್ನಲ್ಲಿ ಇಂತಹ ಮಹಿಮೆ ಇರುವುದು ಆಶ್ಚರ್ಯವೇನೂ ಅಲ್ಲ. ॥ ೧೯ ॥ ನೀನು ದುಷ್ಟ ಜೀವಿಗಳಿಗೆ ದಂಡನೆಯನ್ನು ಕೊಡುವ ಪೂಜ್ಯನಾದ ಯಮಧರ್ಮನೇ ಆಗಿರುವೆ. ಮಾಂಡವ್ಯ ಋಷಿಗಳ ಶಾಪದಿಂದ ಶ್ರೀವೇದವ್ಯಾಸರಿಂದ ಅವರ ತಮ್ಮನಾದ ವಿಚಿತ್ರವೀರ್ಯನ ದಾಸಿಯ ಗರ್ಭದಲ್ಲಿ ಜನ್ಮತಳೆದಿರುವೆ. ॥ ೨೦ ॥ ನೀನು ಸದಾ ಭಗವಂತನಿಗೂ ಆತನ ಭಕ್ತರಿಗೂ ಅತ್ಯಂತ ಪ್ರಿಯನಾದವನು. ಅದಕ್ಕಾಗಿ ಭಗವಂತನು ಪರಂಧಾಮಕ್ಕೆ ತೆರಳುವಾಗ ನಿನಗೆ ಜ್ಞಾನೋಪದೇಶ ಮಾಡಬೇಕೆಂದು ನನಗೆ ಅಪ್ಪಣೆ ಮಾಡಿದನು. ॥ ೨೧ ॥ ಅದರಂತೆ ಈಗ ನಾನು ನಿನಗೆ ಭಗವಂತನು ಜಗತ್ತಿನ ಸೃಷ್ಟಿ, ಸ್ಥಿತಿ, ಲಯಗಳ ಕಾರ್ಯಕ್ಕಾಗಿ ತನ್ನ ಯೋಗಮಾಯೆಯ ಮೂಲಕ ವಿಸ್ತಾರಗೊಂಡ ಅವನ ವಿವಿಧವಾದ ಲೀಲೆಗಳನ್ನು ಕ್ರಮವಾಗಿ ವರ್ಣಿಸುತ್ತೇನೆ. ॥ ೨೨ ॥ ಈ ಜಗತ್ತಿನ ಸೃಷ್ಟಿಗೆ ಮೊದಲು ಎಲ್ಲ ಆತ್ಮಗಳಿಗೂ ಆತ್ಮನಾಗಿರುವ ಪೂರ್ಣಪರಮಾತ್ಮನೊಬ್ಬನೇ ಇದ್ದನು. ದ್ರಷ್ಟಾನೂ ಇರಲಿಲ್ಲ, ದೃಶ್ಯವೂ ಇರಲಿಲ್ಲ. ಸೃಷ್ಟಿಕಾಲದಲ್ಲಿ ಕಂಡುಬರುವ ವೃತ್ತಿಗಳ ಅನೇಕ ಭೇದಗಳೂ, ಅನೇಕತೆಗಳೂ ಅಲ್ಲಿರಲಿಲ್ಲ. ಆತನು ತನ್ನ ಇಚ್ಛೆಯಿಂದ ತಾನೊಬ್ಬನೇ ತಾನೇ-ತಾನಾಗಿದ್ದನು. ॥ ೨೩ ॥ ಅವನೇ ದ್ರಷ್ಟಾ ಆಗಿ ನೋಡತೊಡಗಿದರೆ ಅವನಿಗೆ ದೃಶ್ಯವಾವುದೂ ಕಂಡುಬರಲಿಲ್ಲ. ಏಕೆಂದರೆ ಆಗ ಅವನೇ ಅದ್ವಿತೀಯ ರೂಪದಲ್ಲಿದ್ದನು. ಇಂತಹ ಸ್ಥಿತಿಯಲ್ಲಿ ಅಪೂರ್ಣನಂತೆ ಎಂದು ಅವನಿಗನಿಸಿತು. ಆದರೆ ವಾಸ್ತವವಾಗಿ ಅವನು ಅಸತ್ತಾಗಿರಲಿಲ್ಲ. ಏಕೆಂದರೆ ಆತನ ಶಕ್ತಿಗಳು ಸುಪ್ತವಾಗಿದ್ದವು. ಆತನ ಜ್ಞಾನವೇನೂ ಲುಪ್ತವಾಗಿ ಇರಲಿಲ್ಲ. ॥ ೨೪ ॥ ಈ ದ್ರಷ್ಟಾ ಮತ್ತು ದೃಶ್ಯದ ಅನುಸಂಧಾನ ಮಾಡುವಂತಹ ಶಕ್ತಿಯೇ ಕಾರ್ಯಕಾರಣರೂಪೀ ಮಾಯೆಯು. ಓ ಮಹಾತ್ಮಾ! ಈ ಭಾವಾಭಾವರೂಪೀ ಅನಿರ್ವಚನೀಯ ಮಾಯೆಯ ಮೂಲಕವೇ ಭಗವಂತನು ಈ ವಿಶ್ವವನ್ನು ಸೃಷ್ಟಿಸಿದನು. ॥ ೨೫ ॥ ಕಾಲಶಕ್ತಿಯಿಂದ ಈ ತ್ರಿಗುಣಮಯ ಮಾಯೆಯಲ್ಲಿ ಕ್ಷೋಭೆಯುಂಟಾದಾಗ ಆ ಇಂದ್ರಿಯಾತೀತನಾದ ಚಿನ್ಮಯ ಪರಮಾತ್ಮನು ತನ್ನ ಅಂಶ ಪುರುಷರೂಪದಿಂದ ಅದರಲ್ಲಿ ಚಿದಾಭಾಸರೂಪೀ ಬೀಜವನ್ನು ಸ್ಥಾಪಿಸಿದನು. ॥ ೨೬ ॥ ಆಗ ಕಾಲದ ಪ್ರೇರಣೆಯಿಂದ ಆ ಅವ್ಯಕ್ತಮಾಯೆಯಿಂದ ಮಹತ್ತತ್ತ್ವ ಪ್ರಕಟವಾಯಿತು. ಅದು ತನ್ನಲ್ಲಿ ಸೂಕ್ಷ್ಮವಾಗಿ ಅಡಗಿದ್ದ ಪ್ರಪಂಚವನ್ನು ಪ್ರಕಾಶಗೊಳಿಸುವ ತತ್ತ್ವವು. ಅಜ್ಞಾನವನ್ನು ನಾಶಪಡಿಸುವುದರಿಂದ ಅದು 'ವಿಜ್ಞಾನಾತ್ಮಾ' ಎಂದೂ ಕರೆಯಲ್ಪಡುತ್ತದೆ. ॥ ೨೭ ॥ ಅನಂತರ ಭಗವಂತನ ಅಂಶ, ಗುಣ ಮತ್ತು ಕಾಲದ ಅಧೀನ ಆ ಮಹತ್ತತ್ತ್ವ ಭಗವಂತನ ದೃಷ್ಟಿಗೆ ಬಿದ್ದು ಈ ವಿಶ್ವವನ್ನು ರಚಿಸುವುದಕ್ಕಾಗಿ ರೂಪಾಂತರಗೊಳಿಸಿಕೊಂಡಿತು. ॥ ೨೮ ॥ ಮಹತ್ತತ್ತ್ವವು ವಿಕಾರಗೊಂಡಾಗ ಅಹಂಕಾರ ತತ್ತ್ವವು ಉತ್ಪನ್ನಗೊಂಡಿತು. ಅದು ಕಾರ್ಯ (ಅಧಿಭೂತ), ಕಾರಣ (ಅಧ್ಯಾತ್ಮ),

ಮಹತ್ತತ್ತ್ವಾದ್ವಿಕುರ್ವಾಣಾದಹಂತತ್ತ್ವಂ ವ್ಯಜಾಯತ ।
ಕಾರ್ಯಕಾರಣಕರ್ತ್ರಾತ್ಮಾ ಭೂತೇಂದ್ರಿಯಮನೋಮಯಃ ॥ ೨೯ ॥

ವೈಕಾರಿಕಸ್ತೈಜಸಶ್ಚ ತಾಮಸಶ್ಚೇತ್ಯಹಂ ತ್ರಿಧಾ ।
ಅಹಂತತ್ತ್ವಾದ್ವಿಕುರ್ವಾಣಾನ್ಮನೋ ವೈಕಾರಿಕಾದಭೂತ್ ।
ವೈಕಾರಿಕಾಶ್ಚ ಯೇ ದೇವಾ ಅರ್ಥಾಭಿವ್ಯಂಜನಂ ಯತಃ ॥ ೩೦ ॥

ತೈಜಸಾನೀಂದ್ರಿಯಾಣ್ಯೇವ ಜ್ಞಾನಕರ್ಮಮಯಾನಿ ಚ ।
ತಾಮಸೋ ಭೂತಸೂಕ್ಷ್ಮಾದಿರ್ಯತಃ ಖಂ ಲಿಂಗಮಾತ್ಮನಃ ॥ ೩೧ ॥

ಕಾಲಮಾಯಾಂಶಯೋಗೇನ ಭಗವದ್ವೀಕ್ಷಿತಂ ನಭಃ ।
ನಭಸೋಽನುಸೃತಂ ಸ್ಪರ್ಶಂ ವಿಕುರ್ವನ್ನಿರ್ಮಮೇಽನಿಲಮ್ ॥ ೩೨ ॥

ಅನಿಲೋಽಪಿ ವಿಕುರ್ವಾಣೋ ನಭಸೋರುಬಲಾನ್ವಿತಃ ।
ಸಸರ್ಜ ರೂಪತನ್ಮಾತ್ರಂ ಜ್ಯೋತಿರ್ಲೋಕಸ್ಯ ಲೋಚನಮ್ ॥ ೩೩ ॥

ಅನಿಲೇನಾನ್ವಿತಂ ಜ್ಯೋತಿರ್ವಿಕುರ್ವತ್ಪರವೀಕ್ಷಿತಮ್ ।
ಆಧತ್ತಾಂಭೋ ರಸಮಯಂ ಕಾಲಮಾಯಾಂಶಯೋಗತಃ ॥ ೩೪ ॥

ಜ್ಯೋತಿಷಾಂಭೋಽನುಸಂಸೃಷ್ಟಂ ವಿಕುರ್ವದ್ಬ್ರಹ್ಮವೀಕ್ಷಿತಮ್ ।
ಮಹೀಂ ಗಂಧಗುಣಾಮಾಧಾತ್ಕಾಲಮಾಯಾಂಶಯೋಗತಃ ॥ ೩೫ ॥

ಭೂತಾನಾಂ ನಭಆದೀನಾಂ ಯದ್ಯದ್ಭವ್ಯಾವರಾವರಮ್ ।
ತೇಷಾಂ ಪರಾನುಸಂಸರ್ಗಾದ್ಯಥಾಸಂಖ್ಯಂ ಗುಣಾನ್ವಿದುಃ ॥ ೩೬ ॥

ಏತೇ ದೇವಾಃ ಕಲಾ ವಿಷ್ಣೋಃ
ಕಾಲಮಾಯಾಂಶಲಿಂಗಿನಃ ।
ನಾನಾತ್ವಾತ್ಸ್ವಕ್ರಿಯಾನೀಶಾಃ
ಪ್ರೋಚುಃ ಪ್ರಾಂಜಲಯೋ ವಿಭುಮ್ ॥ ೩೭ ॥

ದೇವಾ ಊಚುಃ

ನಮಾಮ ತೇ ದೇವ ಪದಾರವಿಂದಂ
ಪ್ರಪನ್ನತಾಪೋಪಶಮಾತಪತ್ರಮ್ ।
ಯನ್ಮೂಲಕೇತಾ ಯತಯೋಽಂಜಸೋರು
ಸಂಸಾರದುಃಖಂ ಬಹಿರುತ್ಕ್ಷಿಪಂತಿ ॥ ೩೮ ॥

ಧಾತರ್ಯದಸ್ಮಿನ್ಭವ ಈಶ ಜೀವಾ-
ಸ್ತಾಪತ್ರಯೇಣೋಪಹತಾ ನ ಶರ್ಮ ।
ಆತ್ಮನ್ ಲಭಂತೇ ಭಗವಂಸ್ತವಾಂಘ್ರಿ-
ಚ್ಛಾಯಾಂ ಸವಿದ್ಯಾಮತ ಆಶ್ರಯೇಮ ॥ ೩೯ ॥

ರ್ತೃ (ಅಧಿದೈವ) ಎಂಬ ಮೂರು ರೂಪಗಳಿಂದ ಕ್ರಮವಾಗಿ ಭೂತ, ಇಂದ್ರಿಯ ಮತ್ತು ಮನಸ್ಸಿನ ಕಾರಣವಾಗಿದೆ. ॥ ೨೯ ॥ ಆ ಅಹಂಕಾರವು ವೈಕಾರಿಕ (ಸಾತ್ತ್ವಿಕ) ತೈಜಸ (ರಾಜಸ) ಮತ್ತು ತಾಮಸ ಎಂಬ ಭೇದದಿಂದ ಮೂರು ಪ್ರಕಾರದ್ದಾಗಿದೆ. ಅವುಗಳಲ್ಲಿ ಸಾತ್ತ್ವಿಕ ಅಹಂಕಾರದಿಂದ ಮನಸ್ಸು ಮತ್ತು ಯಾವುದರಿಂದ ವಿಷಯಗಳ ಜ್ಞಾನ ಉಂಟಾಗುತ್ತದೋ ಆ ಇಂದ್ರಿಯಗಳ ಅಧಿಷ್ಠಾತೃ ದೇವತೆಗಳು ಉಂಟಾದವು. ॥ ೩೦ ॥ ತೈಜಸ ಅಹಂಕಾರದಿಂದ ಜ್ಞಾನೇಂದ್ರಿಯ ಮತ್ತು ಕರ್ಮೇಂದ್ರಿಯಗಳಾದುವು. ತಾಮಸಾಹಂಕಾರದಿಂದ ಸೂಕ್ಷ್ಮ ಭೂತಗಳ ಕಾರಣ ಶಬ್ದತನ್ಮಾತ್ರೆಯು ಉಂಟಾಯಿತು. ಅದರಿಂದ (ಪರಮಾತ್ಮನಿಗೆ ದೃಷ್ಟಾಂತವಾಗಿ ಹೇಳಲ್ಪಡುವ) ಆಕಾಶದ ತತ್ತ್ವವು ಹುಟ್ಟಿತು. ॥ ೩೧ ॥ ಭಗವಂತನ ದೃಷ್ಟಿಯು ಆಕಾಶದ ಮೇಲೆ ಬೀಳಲು ಅದರಿಂದ ಮತ್ತೆ ಕಾಲ, ಮಾಯೆ, ಚಿದಂಶಗಳ ಯೋಗದಿಂದ ಸ್ಪರ್ಶತನ್ಮಾತ್ರೆಯು ಉಂಟಾಯಿತು. ಅದು ವಿಕಾರಗೊಂಡಾಗ ವಾಯುವು ಉತ್ಪನ್ನವಾಯಿತು. ॥ ೩೨ ॥ ಮಹಾಬಲಶಾಲಿಯಾದ ವಾಯುವು ಆಕಾಶದೊಡನೆ ವಿಕಾರಗೊಂಡಾಗ ರೂಪತನ್ಮಾತ್ರೆಯು ಉಂಟಾಯಿತು. ಅದರಿಂದ ಜಗತ್ತಿಗೆ ಪ್ರಕಾಶವನ್ನು ನೀಡುವ ತೇಜಸ್ಸು ಉತ್ಪನ್ನವಾಯಿತು. ॥ ೩೩ ॥ ಮತ್ತೆ ಪರಮಾತ್ಮನ ದೃಷ್ಟಿಗೆ ಪಾತ್ರವಾಗಿ ವಾಯುಸಹಿತ ತೇಜಸ್ಸು, ಕಾಲ, ಮಾಯೆ, ಮತ್ತು ಚಿದಂಶಗಳ ಯೋಗದಿಂದ ವಿಕಾರಗೊಂಡು ರಸತನ್ಮಾತ್ರೆಯ ಕಾರ್ಯವಾದ ಜಲತತ್ತ್ವವನ್ನು ನಿರ್ಮಾಣಮಾಡಿತು. ॥ ೩೪ ॥ ಅನಂತರ ಜಲವು ತೇಜಸ್ಸಿನೊಡನೆ ಸೇರಿ ಬ್ರಹ್ಮನ ದೃಷ್ಟಿಪಾತದಿಂದ ಕಾಲ, ಮಾಯೆ ಮತ್ತು ಚಿದಂಶಗಳ ಯೋಗದಿಂದ ಗಂಧಗುಣವುಳ್ಳ ಪೃಥ್ವಿಯನ್ನು ಉಂಟುಮಾಡಿತು. ॥ ೩೫ ॥ ವಿದುರನೇ! ಆಕಾಶವೇ ಮುಂತಾದ ಪಂಚಭೂತಗಳಲ್ಲಿ ಉತ್ತರೋತ್ತರ ಭೂತಗಳಲ್ಲಿ ಕ್ರಮವಾಗಿ ಅವುಗಳ ಹಿಂದು-ಹಿಂದಿನ ಭೂತಗಳ ಗುಣಗಳೂ ಅನುವರ್ತಿಸುತ್ತವೆಯೆಂದು ತಿಳಿಯಬೇಕು. ॥ ೩೬ ॥ ಆ ಮಹತ್ತತ್ತ್ವಾದಿಗಳಿಗೆ ಅಭಿಮಾನಿಗಳಾಗಿ ವಿಕಾರ, ವಿಕ್ಷೇಪ ಮತ್ತು ಚೇತನಾಂಶ ವಿಶಿಷ್ಟರಾದ ದೇವತೆಗಳೆಲ್ಲ ಶ್ರೀಭಗವಂತನ ಅಂಶಗಳೇ ಆಗಿದ್ದಾರೆ. ಅವರೆ ಬೇರೆ-ಬೇರೆಯಾಗಿ ಇರುವ ಕಾರಣ ವಿಶ್ವರಚನೆಯೆಂಬ ತಮ್ಮ ಕಾರ್ಯಗಳನ್ನು ಮಾಡಲು ವಿಫಲರಾದಾಗ ಅವರು ಕೈ ಮುಗಿದು ಭಗವಂತನನ್ನು ಹೀಗೆ ಪ್ರಾರ್ಥಿಸಿದರು. ॥ ೩೭ ॥

ದೇವತೆಗಳು ಹೇಳುತ್ತಾರೆ – ಓ ದೇವದೇವಾ! ನಿನ್ನ ಪಾದಾರವಿಂದಗಳಿಗೆ ವಂದಿಸುತ್ತೇವೆ. ಅವು ಶರಣುಬಂದ ಜೀವಿಗಳ ತಾಪವನ್ನು ಹೋಗಲಾಡಿಸುವುದಕ್ಕೆ ಕೊಡೆಗಳಂತಿವೆ. ಅವುಗಳ ಆಸರೆ ಪಡೆದ ಯತಿಗಳು ಅನಂತ ಸಂಸಾರದುಃಖವನ್ನು ಸುಲಭವಾಗಿ ದೂರಕ್ಕೆ ಎಸೆದು ಬಿಡುತ್ತಾರೆ. ॥ ೩೮ ॥ ಓ ಸೃಷ್ಟಿಕರ್ತಾ ಜಗದೀಶ್ವರನೇ! ಈ ಸಂಸಾರದಲ್ಲಿ ತಾಪತ್ರಯದಿಂದ ದುಃಖಿತರಾಗಿರುವ ಕಾರಣ ಜೀವಿಗಳಿಗೆ ಸ್ವಲ್ಪವೂ ಶಾಂತಿ ಸಿಗುತ್ತಿಲ್ಲ. ಅದರಿಂದ ನಾವು ನಿನ್ನ ಚರಣಗಳ ಜ್ಞಾನಮಯ ಛಾಯೆಯ ಆಶ್ರಯವನ್ನು ಪಡೆಯುತ್ತೇವೆ. ॥ ೩೯ ॥ ಮುನಿಗಳು ಏಕಾಂತದಲ್ಲಿ

ಮಾರ್ಗಂತಿ ಯತ್ತೇ ಮುಖಪದ್ಮನೀಡೈಃ
ಛಂದಃಸುಪರ್ಣೈರ್ಋಷಯೋ ವಿವಿಕ್ತೇ ।
ಯಸ್ಯಾಘಮರ್ಷೋದಸರಿದ್ವರಾಯಾಃ
ಪದಂ ಪದಂ ತೀರ್ಥಪದಃ ಪ್ರಪನ್ನಾಃ ॥ ೪೦ ॥

ಯಚ್ಛ್ರದ್ಧಯಾ ಶ್ರುತವತ್ಯಾ ಚ ಭಕ್ತ್ಯಾ
ಸಂಮೃಜ್ಯಮಾನೇ ಹೃದಯೇಽವಧಾಯ ।
ಜ್ಞಾನೇನ ವೈರಾಗ್ಯಬಲೇನ ಧೀರಾ
ವ್ರಜೇಮ ತತ್ತೇಽಂಘ್ರಿಸರೋಜಪೀಠಮ್ ॥ ೪೧ ॥

ವಿಶ್ವಸ್ಯ ಜನ್ಮಸ್ಥಿತಿಸಂಯಮಾರ್ಥೇ
ಕೃತಾವತಾರಸ್ಯ ಪದಾಂಬುಜಂ ತೇ ।
ವ್ರಜೇಮ ಸರ್ವೇ ಶರಣಂ ಯದೀಶ
ಸ್ಮೃತಂ ಪ್ರಯಚ್ಛತ್ಯಭಯಂ ಸ್ವಪುಂಸಾಮ್ ॥ ೪೨ ॥

ಯತ್ಸಾನುಬಂಧೇಽಸತಿ ದೇಹಗೇಹೇ
ಮಮಾಹಮಿತ್ಯೂಢದುರಾಗ್ರಹಾಣಾಮ್ ।
ಪುಂಸಾಂ ಸುದೂರಂ ವಸತೋಽಪಿ ಪುರ್ಯಾಂ
ಭಜೇಮ ತತ್ತೇ ಭಗವನ್ಪದಾಬ್ಜಮ್ ॥ ೪೩ ॥

ತಾನ್ ವೈ ಹ್ಯಸದ್ವೃತ್ತಿಭಿರಕ್ಷಿಭಿರ್ಯೇ
ಪರಾಹೃತಾಂತರ್ಮನಸಃ ಪರೇಶ ।
ಅಥೋ ನ ಪಶ್ಯಂತ್ಯುರುಗಾಯ ನೂನಂ
ಯೇ ತೇ ಪದನ್ಯಾಸವಿಲಾಸಲಕ್ಷ್ಮ್ಯಾಃ ॥ ೪೪ ॥

ಪಾನೇನ ತೇ ದೇವ ಕಥಾಸುಧಾಯಾಃ
ಪ್ರವೃದ್ಧಭಕ್ತ್ಯಾ ವಿಶದಾಶಯಾ ಯೇ ।
ವೈರಾಗ್ಯಸಾರಂ ಪ್ರತಿಲಭ್ಯ ಬೋಧಂ
ಯಥಾಂಜಸಾನ್ವೀಯುರಕುಂಠಧಿಷ್ಣ್ಯಮ್ ॥ ೪೫ ॥

ತಥಾಪರೇ ಚಾತ್ಮಸಮಾಧಿಯೋಗ-
ಬಲೇನ ಜಿತ್ವಾ ಪ್ರಕೃತಿಂ ಬಲಿಷ್ಠಾಮ್ ।
ತ್ವಾಮೇವ ಧೀರಾಃ ಪುರುಷಂ ವಿಶಂತಿ
ತೇಷಾಂ ಶ್ರಮಃ ಸ್ಯಾನ್ನ ತು ಸೇವಯಾ ತೇ ॥ ೪೬ ॥

ತತ್ತೇ ವಯಂ ಲೋಕಸಿಸೃಕ್ಷಯಾಽಽದ್ಯ
ತ್ವಯಾನುಸೃಷ್ಟಾಸ್ತ್ರಿಭಿರಾತ್ಮಭಿಃ ಸ್ಮ ।
ಸರ್ವೇ ವಿಯುಕ್ತಾಃ ಸ್ವವಿಹಾರತಂತ್ರಂ
ನ ಶಕ್ನುಮಸ್ತತ್ಪ್ರತಿಹರ್ತವೇ ತೇ ॥ ೪೭ ॥

ಕುಳಿತು ನಿನ್ನ ಮುಖಕಮಲದ ಆಶ್ರಯದಲ್ಲಿರುವ ವೇದಮಂತ್ರಗಳೆಂಬ ಪಕ್ಷಿಗಳ ಸಹಾಯದಿಂದ ಯಾವುದನ್ನು ಅರಸುತ್ತಿರುವರೋ ಮತ್ತು ಯಾವುದು ಸಮಸ್ತ ಪಾಪಗಳನ್ನೂ ನಾಶಗೊಳಿಸುವ ದೇವನದಿಯಾದ ಗಂಗೆಯ ಉತ್ಪತ್ತಿಸ್ಥಾನವಾಗಿದೆಯೋ ಅಂತಹ ನಿನ್ನ ಪರಮಪಾವನವಾದ ಪಾದಪದ್ಮಗಳನ್ನು ನಾವು ಆಶ್ರಯಿಸುತ್ತೇವೆ. ॥ ೪೦ ॥ ಧೀರರಾದ ಯೋಗೀಶ್ವರರು ಯಾವುದನ್ನು ಶ್ರದ್ಧೆ ಮತ್ತು ಶ್ರವಣ-ಕೀರ್ತನರೂಪವಾದ ಭಕ್ತಿಯಿಂದ ಶುದ್ಧವಾದ ತಮ್ಮ ಅಂತಃಕರಣದಲ್ಲಿ ಧರಿಸಿಕೊಂಡು ಜ್ಞಾನವೈರಾಗ್ಯಗಳ ಬಲದಿಂದ ಮುಕ್ತಿಯನ್ನು ಪಡೆಯುತ್ತಾರೋ ಅಂತಹ ನಿನ್ನ ಪಾದಗಳ ಪೀಠವನ್ನು ನಾವು ಆಶ್ರಯಿಸುತ್ತೇವೆ. ॥ ೪೧ ॥ ಪ್ರಭೋ! ನೀನು ಪ್ರಪಂಚದ ಸೃಷ್ಟಿ, ಸ್ಥಿತಿ, ಲಯಗಳಿಗಾಗಿಯೇ ಅವತರಿಸುತ್ತೀಯೆ. ಆದುದರಿಂದ ನಾವೆಲ್ಲರೂ ಸ್ಮರಿಸುವ ಭಕ್ತರಿಗೆ ಅಭಯವನ್ನೀಯುವ ನಿನ್ನ ಅಡಿದಾವರೆಗಳನ್ನು ಶರಣುಹೊಂದುತ್ತೇವೆ. ॥ ೪೨ ॥ ನೀನು ಸಮಸ್ತ ಮನುಷ್ಯರ ಹೃದಯಗಳಲ್ಲಿ ಅಂತರ್ಯಾಮಿಯಾಗಿ ವಾಸ ಮಾಡುತ್ತಿದ್ದರೂ ಯಾರು ಮನೆ-ಮಡದಿ-ಮಕ್ಕಳು-ದೇಹ ಮುಂತಾದವುಗಳಲ್ಲಿ ಹಾಗೂ ಅವುಗಳೊಂದಿಗೆ ಸಂಬಂಧವಿರುವ ಬೇರೆ ತುಚ್ಛ ಪದಾರ್ಥಗಳಲ್ಲಿ 'ನಾನು, ನನ್ನದು' ಎಂಬ ದುರಾಗ್ರಹವಿರಿಸಿಕೊಂಡವರಿಗೆ ಅತ್ಯಂತದೂರವಾದ ನಿನ್ನ ಚರಣಾರವಿಂದಗಳನ್ನು ನಾವು ಭಜಿಸುತ್ತೇವೆ. ॥ ೪೩ ॥ ಪರಮ ಯಶಸ್ವೀ ಪರಮೇಶ್ವರನೇ! ಇಂದ್ರಿಯಗಳ ವಿಷಯಗಳಿಗೆ ಅಭಿಮುಖವಾಗಿರುವುದರಿಂದ ಯಾರ ಮನಸ್ಸು ಸದಾ ಹೊರಗಡೆಯೇ ಅಲೆಯುತ್ತಿರುವುದೋ, ಅಂತಹ ಪಾಮರ ಜನರು ನಿನ್ನ ಶ್ರೀಪಾದ ವಿನ್ಯಾಸದ ಕಾಂತಿಯನ್ನು ವಿಶೇಷವಾಗಿ ಅರಿತಿರುವ ಭಕ್ತಜನರ ದರ್ಶನವನ್ನು ಪಡೆಯುವುದಿಲ್ಲ. ಆದರಿಂದ ಅವರು ನಿನ್ನ ಚರಣಾರವಿಂದಗಳಿಂದ ದೂರವಾಗಿದ್ದಾರೆ. ॥ ೪೪ ॥ ಪ್ರಭೋ! ನಿನ್ನ ಕಥಾಮೃತಪಾನದಿಂದ ಉಕ್ಕಿಬರುವ ಭಕ್ತಿಯಿಂದ ಯಾರ ಅಂತಃಕರಣವು ನಿರ್ಮಲವಾಗಿ ಬಿಟ್ಟಿದೆಯೋ, ಅಂತಹವರು ವೈರಾಗ್ಯಸಾರವಾದ ಆತ್ಮಜ್ಞಾನವನ್ನು ಪಡೆದು ಆಯಾಸವಿಲ್ಲದೆಯೇ ವೈಕುಂಠಧಾಮವನ್ನು ಹೊಂದಿಬಿಡುವರು. ॥ ೪೫ ॥ ಅಂತೆಯೇ ಕೆಲವು ಧೀರರು ಚಿತ್ತವೃತ್ತಿ ನಿರೋಧರೂಪವಾದ ಸಮಾಧಿಯ ಬಲದಿಂದ ನಿನ್ನ ಪ್ರಬಲ ಮಾಯೆಯನ್ನು ದಾಟಿ ನಿನ್ನಲ್ಲಿ ಲೀನರಾಗುತ್ತಾರೆ. ಆದರೆ ಅವರಿಗೆ ತುಂಬಾ ಶ್ರಮವಿರುತ್ತದೆ. ನಿನ್ನ ಭಕ್ತಿಮಾರ್ಗದಲ್ಲಾದರೋ ಯಾವ ಕಷ್ಟವೂ ಇಲ್ಲ. ॥ ೪೬ ॥

ಓ ಆದಿದೇವನೇ! ಪ್ರಪಂಚದ ಸೃಷ್ಟಿಗಾಗಿ ನೀನು ನಮ್ಮನ್ನು ತ್ರಿಗುಣಮಯರನ್ನಾಗಿ ಸೃಷ್ಟಿಸಿರುವೆ. ಆದರೆ ನಮ್ಮೆಲ್ಲರ ಸ್ವಭಾವವು ಬೇರೆ-ಬೇರೆಯಾದ್ದರಿಂದ ಪರಸ್ಪರ ಸಾಮ್ಯವಿಲ್ಲ. ಆದ್ದರಿಂದ ನಾವು ಒಟ್ಟಿಗೆ ಸೇರಿ ನಿನ್ನ ಕ್ರೀಡೆಗಾಗಿ ಲೋಕಸೃಷ್ಟಿಯನ್ನು ಮಾಡಿ ನಿನಗೆ ಸಮರ್ಪಿಸಲು ಅಸಮರ್ಥರಾಗಿದ್ದೇವೆ. ॥ ೪೭ ॥ ಆದ್ದರಿಂದ ಜನ್ಮರಹಿತನಾದ ಭಗವಂತನೇ! ಯಾವುದರಿಂದ ನಾವು ಬ್ರಹ್ಮಾಂಡವನ್ನು ರಚಿಸಿ ನಿನಗೆ ಸಮಸ್ತ ಭೋಗಗಳನ್ನು ಸಮರ್ಪಿಸಲು ಸಮರ್ಥರಾಗುವೆವು ? ಅನ್ನವನ್ನೂ ಪಡೆದು ಜೀವಿಸುವೆವು ? ಮತ್ತು ಈ ಸಮಸ್ತ ಜೀವಿಗಳೂ ಕೂಡ ಎಲ್ಲ ವಿಘ್ನಗಳಿಂದಲೂ ದೂರವಾಗಿದ್ದು

ಯಾವದ್ಬಲಿಂ ತೇಽಜ ಹರಾಮ ಕಾಲೇ
ಯಥಾ ವಯಂ ಚಾನ್ನಮದಾಮ ಯತ್ರ ।
ಯಥೋಭಯೇಷಾಂ ತ ಇಮೇ ಹಿ ಲೋಕಾ
ಬಲಿಂ ಹರಂತೋಽನ್ನಮದಂತ್ಯನೂಹಾಃ ॥ ೪೮ ॥

ತ್ವಂ ನಃ ಸುರಾಣಾಮಸಿ ಸಾನ್ವಯಾನಾಂ
ಕೂಟಸ್ಥ ಆದ್ಯಃ ಪುರುಷಃ ಪುರಾಣಃ ।
ತ್ವಂ ದೇವ ಶಕ್ತ್ಯಾಂ ಗುಣಕರ್ಮಯೋನೌ
ರೇತಸ್ತ್ವಜಾಯಾಂ ಕವಿಮಾದಧೇಽಜಃ ॥ ೪೯ ॥

ತತೋ ವಯಂ ಸತ್ಪ್ರಮುಖಾ ಯದರ್ಥೇ
ಬಭೂವಿಮಾತ್ಮನ್ಕರವಾಮ ಕಿಂ ತೇ ।
ತ್ವಂ ನಃ ಸ್ವಚಕ್ಷುಃ ಪರಿದೇಹಿ ಶಕ್ತ್ಯಾ
ದೇವ ಕ್ರಿಯಾರ್ಥೇ ಯದನುಗ್ರಹಾಣಾಮ್ ॥ ೫೦ ॥

ನಮಗೂ ಹಾಗೂ ನಿನಗೂ ಸೇವೆಗಳನ್ನು ಸಮರ್ಪಿಸುತ್ತಾ ತಮ್ಮ-ತಮ್ಮ ಆಹಾರಗಳನ್ನು ಸೇವಿಸಲು ಸಮರ್ಥವಾದಾವು? ಅಂತಹ ಯಾವುದಾದರೂ ಉಪಾಯವನ್ನು ಮಾಡು. ॥ ೪೮ ॥ ಓ ಭಗವಂತಾ! ವಿಕಾರರಹಿತನಾದ ಪುರಾಣಪುರುಷನಾದ ನೀನೇ ಇತರ ಕಾರ್ಯವರ್ಗಗಳಿಂದೊಡಗೂಡಿದ ದೇವತೆಗಳಾದ ನಮಗೆಲ್ಲರಿಗೂ ಆದಿಕಾರಣನಾಗಿರುವೆ. ಜನ್ಮರಹಿತನಾದ ನೀನು ಹೀಗೆ ಸತ್ತ್ವಾದಿಗುಣ ಮತ್ತು ಜನ್ಮಾದಿಕರ್ಮಗಳ ಕಾರಣರೂಪೀ ಮಾಯಾ ಶಕ್ತಿಯಲ್ಲಿ ಚಿದಂಶರೂಪವಾದ ವೀರ್ಯವನ್ನು ಸ್ಥಾಪಿಸಿದ್ದೆ. ॥ ೪೯ ॥ ಓ ಪರಮಾತ್ಮಾ! ಮಹತ್ತತ್ತ್ವಾದಿರೂಪೀ ದೇವಗಣ ಗಳಿಂದ ನಾವು ಯಾವ ಕಾರ್ಯಕ್ಕಾಗಿ ಸೃಷ್ಟಿಸಲ್ಪಟ್ಟಿರುವೆವೋ, ಇದರ ಸಂಬಂಧವಾಗಿ ನಾವು ಏನು ಮಾಡಬೇಕು? ದೇವಾ! ನಮ್ಮ ಮೇಲೆ ನೀನೇ ಅನುಗ್ರಹ ಮಾಡುವಂತಹವನು. ಅದಕ್ಕಾಗಿ ಬ್ರಹ್ಮಾಂಡ ರಚನೆಗಾಗಿ ನೀನು ನಮಗೆ ನಿನ್ನ ಅದ್ಭುತವಾದ ಕ್ರಿಯಾ ಶಕ್ತಿಗಳೊಡನೆ ನಿನ್ನ ದಿವ್ಯವಾದ ಜ್ಞಾನಶಕ್ತಿಯನ್ನು ಕರುಣಿಸು. ॥ ೫೦ ॥

ಐದನೆಯ ಅಧ್ಯಾಯವು ಮುಗಿಯಿತು. ॥ ೫ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ತೃತೀಯಸ್ಕಂಧೇ ಪಂಚಮೋಽಧ್ಯಾಯಃ ॥ ೫ ॥

ಆರನೆಯ ಅಧ್ಯಾಯ

ವಿರಾಟ್‌ಶರೀರದ ಉತ್ಪತ್ತಿ

ಋಷಿರುವಾಚ

ಇತಿ ತಾಸಾಂ ಸ್ವಶಕ್ತೀನಾಂ ಸತೀನಾಮಸಮೇತ್ಯ ಸಃ ।
ಪ್ರಸುಪ್ತಲೋಕತಂತ್ರಾಣಾಂ ನಿಶಾಮ್ಯ ಗತಿಮೀಶ್ವರಃ ॥ ೧ ॥

ಕಾಲಸಂಜ್ಞಾಂ ತದಾ ದೇವೀಂ ಬಿಭ್ರಚ್ಛಕ್ತಿಮುರುಕ್ರಮಃ ।
ತ್ರಯೋವಿಂಶತಿತತ್ತ್ವಾನಾಂ ಗಣಂ ಯುಗಪದಾವಿಶತ್ ॥ ೨ ॥

ಸೋಽನುಪ್ರವಿಷ್ಟೋ ಭಗವಾಂಶ್ಚೇಷ್ಟಾರೂಪೇಣ ತಂ ಗಣಮ್ ।
ಭಿನ್ನಂ ಸಂಯೋಜಯಾಮಾಸ ಸುಪ್ತಂ ಕರ್ಮ ಪ್ರಬೋಧಯನ್ ॥ ೩ ॥

ಪ್ರಬುದ್ಧಕರ್ಮಾ ದೈವೇನ ತ್ರಯೋವಿಂಶತಿಕೋ ಗಣಃ ।
ಪ್ರೇರಿತೋಽಜನಯತ್ಸ್ವಾಭಿರ್ಮಾತ್ರಾಭಿರಧಿಪೂರುಷಮ್ ॥ ೪ ॥

ಪರೇಣ ವಿಶತಾ ಸ್ವಸ್ಮಿನ್ಮಾತ್ರಯಾ ವಿಶ್ವಸೃಗ್ಗಣಃ ।
ಚುಕ್ಷೋಭಾನ್ಯೋನ್ಯಮಾಸಾದ್ಯ ಯಸ್ಮಿಲ್ಲೋಕಾಶ್ಚರಾಚರಾಃ ॥ ೫ ॥

ಮೈತ್ರೇಯ ಮಹರ್ಷಿಗಳು ಹೇಳಿದರು - ಮಹಾತ್ಮನಾದ ವಿದುರನೇ! ತನ್ನ ಮಹತ್ತತ್ತ್ವವೇ ಮುಂತಾದ ಶಕ್ತಿಗಳು ಹೀಗೆ ಒಂದರೊಡನೊಂದು ಸೇರದೆ ಬೇರೆಯಾಗಿದ್ದ ಕಾರಣ ಸೃಷ್ಟಿಕಾರ್ಯವನ್ನು ಮುಂದರಿಸಲು ಅಸಮರ್ಥವಾಗಿದ್ದುದನ್ನು ಕಂಡು ಆ ಸರ್ವಶಕ್ತನಾದ ಭಗವಂತನು ಕಾಲಶಕ್ತಿಯನ್ನು ಸ್ವೀಕರಿಸಿ ಮಹತ್ತತ್ತ್ವ, ಅಹಂಕಾರ, ಪಂಚಭೂತ, ಪಂಚತನ್ಮಾತ್ರೆಗಳು, ಮನಸ್ಸು ಸಹಿತ ಹನ್ನೊಂದು ಇಂದ್ರಿಯಗಳು ಈ ಇಪ್ಪತ್ತಮೂರು ತತ್ತ್ವಗಳ ಸಮುದಾಯವನ್ನು ಒಟ್ಟಿಗೆ ಒಳಹೊಕ್ಕನು. ॥ ೧-೨ ॥ ಹೀಗೆ ಒಳಹೊಕ್ಕು ಮಹಾಪ್ರಭುವು ಪ್ರಸುಪ್ತವಾಗಿದ್ದ ಜೀವಿಗಳ ಅದೃಷ್ಟ ಕರ್ಮಗಳನ್ನು ಎಚ್ಚರಗೊಳಿಸಿ ಮತ್ತೆ ಪರಸ್ಪರ ದೂರವಾಗಿದ್ದ ಆ ತತ್ತ್ವಸಮೂಹವನ್ನು ತನ್ನ ಕ್ರಿಯಾಶಕ್ತಿಯ ಮೂಲಕ ಒಂದುಗೂಡಿಸಿದನು. ॥ ೩ ॥ ಹೀಗೆ ಭಗವಂತನು ಅದೃಷ್ಟವನ್ನು ಕಾರ್ಯೋನ್ಮುಖಗೊಳಿಸಿದಾಗ ಆ ಇಪ್ಪತ್ತಮೂರು ತತ್ತ್ವಗಳ ಸಮೂಹವು ಭಗವಂತನ ಪ್ರೇರಣೆಯಿಂದ ತಮ್ಮ ಅಂಶಗಳಿಂದ ಆದಿಪುರುಷ-ವಿರಾಟ್‌ಪುರುಷನನ್ನು ಸೃಷ್ಟಿಸಿದವು. ॥ ೪ ॥ ಅರ್ಥಾತ್-ಭಗವಂತನು ಅಂಶರೂಪದಿಂದ ತನ್ನ ಆ ಶರೀರದಲ್ಲಿ ಪ್ರವೇಶಿಸಿದಾಗ ಆ ವಿಶ್ವರಚನೆ ಮಾಡುವ ಮಹತ್ತತ್ತ್ವಾದಿ ಸಮುದಾಯವು ಒಂದರೊಳಗೆ ಒಂದು ಬೆರೆತು ಪರಿಣಾಮಹೊಂದಿತು. ಈ ತತ್ತ್ವಗಳ ಪರಿಣಾಮವೇ ವಿರಾಟ್ ಪುರುಷನಾಗಿದ್ದಾನೆ. ಅದರಲ್ಲೇ ಚರಾಚರ ಜಗತ್ತು ಇರುವುದು. ॥ ೫ ॥ ಆ ಹಿರಣ್ಮಯನಾದ ವಿರಾಟ್‌ಪುರುಷನು ಸಮಸ್ತ ಜೀವ

ಹಿರಣ್ಮಯಃ ಸ ಪುರುಷಃ ಸಹಸ್ರಪರಿವತ್ಸರಾನ್ ।
ಆಂಡಕೋಶ ಉವಾಸಾಪ್ಸು ಸರ್ವಸತ್ತ್ವೋಪಬೃಂಹಿತಃ ॥ ೬ ॥

ಸ ವೈ ವಿಶ್ವಸೃಜಾಂ ಗರ್ಭೋ ದೇವಕರ್ಮಾತ್ಮಶಕ್ತಿಮಾನ್ ।
ವಿಬಭಾಜಾತ್ಮನಾಽಽತ್ಮಾನಮೇಕಧಾ ದಶಧಾ ತ್ರಿಧಾ ॥ ೭ ॥

ಏಷ ಹ್ಯಶೇಷಸತ್ತ್ವಾನಾಮಾತ್ಮಾಂಶಃ ಪರಮಾತ್ಮನಃ ।
ಆದ್ಯೋಽವತಾರೋ ಯತ್ರಾಸೌ ಭೂತಗ್ರಾಮೋ ವಿಭಾವ್ಯತೇ ॥ ೮ ॥

ಸಾಧ್ಯಾತ್ಮಃ ಸಾಧಿದೈವಶ್ಚ ಸಾಧಿಭೂತ ಇತಿ ತ್ರಿಧಾ ।
ವಿರಾಟ್ ಪ್ರಾಣೋ ದಶವಿಧ ಏಕಧಾ ಹೃದಯೇನ ಚ ॥ ೯ ॥

ಸ್ಮರನ್ ವಿಶ್ವಸೃಜಾಮೀಶೋ ವಿಜ್ಞಾಪಿತಮಧೋಕ್ಷಜಃ ।
ವಿರಾಜಮತಪತ್ ಸ್ವೇನ ತೇಜಸೈಷಾಂ ವಿವೃತ್ತಯೇ ॥ ೧೦ ॥

ಅಥ ತಸ್ಯಾಭಿತಪ್ತಸ್ಯ ಕತಿ ಚಾಯತನಾನಿ ಹ ।
ನಿರಭಿದ್ಯಂತ ದೇವಾನಾಂ ತಾನಿ ಮೇ ಗದತಃ ಶೃಣು ॥ ೧೧ ॥

ತಸ್ಯಾಗ್ನಿರಾಸ್ಯಂ ನಿರ್ಭಿನ್ನಂ ಲೋಕಪಾಲೋಽವಿಶತ್ಪದಮ್ ।
ವಾಚಾ ಸ್ವಾಂಶೇನ ವಕ್ತವ್ಯಂ ಯಯಾಸೌ ಪ್ರತಿಪದ್ಯತೇ ॥ ೧೨ ॥

ನಿರ್ಭಿನ್ನಂ ತಾಲು ವರುಣೋ ಲೋಕಪಾಲೋಽವಿಶದ್ಧರೇಃ ।
ಜಿಹ್ವಯಾಂಶೇನ ಚ ರಸಂ ಯಯಾಸೌ ಪ್ರತಿಪದ್ಯತೇ ॥ ೧೩ ॥

ನಿರ್ಭಿನ್ನೇ ಅಶ್ವಿನೌ ನಾಸೇ ವಿಷ್ಣೋರಾವಿಶತಾಂ ಪದಮ್ ।
ಘ್ರಾಣೇನಾಂಶೇನ ಗಂಧಸ್ಯ ಪ್ರತಿಪತ್ತಿರ್ಯತೋ ಭವೇತ್ ॥ ೧೪ ॥

ನಿರ್ಭಿನ್ನೇ ಅಕ್ಷಿಣೀ ತ್ವಷ್ಟಾ ಲೋಕಪಾಲೋಽವಿಶದ್ವಿಭೋಃ ।
ಚಕ್ಷುಷಾಂಶೇನ ರೂಪಾಣಾಂ ಪ್ರತಿಪತ್ತಿರ್ಯತೋ ಭವೇತ್ ॥ ೧೫ ॥

ನಿರ್ಭಿನ್ನಾನ್ಯಸ್ಯ ಚರ್ಮಾಣಿ ಲೋಕಪಾಲೋಽನಿಲೋಽವಿಶತ್ ।
ಪ್ರಾಣೇನಾಂಶೇನ ಸಂಸ್ಪರ್ಶಂ ಯೇನಾಸೌ ಪ್ರತಿಪದ್ಯತೇ ॥ ೧೬ ॥

ರಾಶಿಗಳನ್ನು ತನ್ನಲ್ಲಿರಿಸಿಕೊಂಡು ಜಲರಾಶಿಯ ಮಧ್ಯದಲ್ಲಿರುವ ಬ್ರಹ್ಮಾಂಡವೆಂಬ ಕೋಶದಲ್ಲಿ ಒಂದು ಸಾವಿರ ದಿವ್ಯವರ್ಷಗಳವರೆಗೆ ವಾಸಿಸುತ್ತಿದ್ದನು. ॥ ೬ ॥ ಅನಂತರ ಭಗವಂತನ ಜ್ಞಾನ, ಕ್ರಿಯೆ ಮತ್ತು ಆತ್ಮಶಕ್ತಿಗಳಿಂದ ಸಂಪನ್ನನಾದ ಆ ತತ್ತ್ವಗರ್ಭನಾದ ವಿರಾಟ್‌ಪುರುಷನು ತನ್ನನ್ನು ತಾನೇ ವಿಭಾಗ ಮಾಡಿಕೊಂಡನು. ಒಂದು ಹೃದಯರೂಪವಾಗಿಯೂ, ಹತ್ತುಪ್ರಾಣಗಳ ರೂಪವಾಗಿಯೂ, ಆಧ್ಯಾತ್ಮಿಕ, ಆಧಿದೈವಿಕ, ಆಧಿಭೌತಿಕಗಳೆಂಬ ಮೂರು ರೀತಿಯಾಗಿ ವಿಭಾಗಿಸಿಕೊಂಡನು. ॥ ೭ ॥ ಈ ವಿರಾಟ್‌ಪುರುಷನೇ ಪ್ರಥಮ ಜೀವನಾದ ಕಾರಣ ಸಮಸ್ತ ಜೀವರ ಆತ್ಮಾ ಜೀವರೂಪನಾದ್ದರಿಂದ ಪರಮಾತ್ಮನ ಅಂಶ ಮತ್ತು ಶ್ರೀಭಗವಂತನ ಮೊದಲನೆಯ ಅಭಿವ್ಯಕ್ತಿ ಆಗಿರುವುದರಿಂದ ಅವನ ಮೊದಲನೆಯ ಅವತಾರವಾಗಿದೆ. ಈ ಸಮಸ್ತ ಭೂತ ಸಮುದಾಯವು ಇವನಲ್ಲೇ ಪ್ರಕಾಶಗೊಳ್ಳುವುದು. ॥ ೮ ॥ ಇವನು ಅಧ್ಯಾತ್ಮ, ಅಧಿಭೂತ, ಅಧಿದೈವರೂಪದಿಂದ ಮೂರು ಬಗೆಯಾಗಿಯೂ, ಪ್ರಾಣರೂಪದಿಂದ ಹತ್ತು ಬಗೆಯಾಗಿಯೂ, ಹೃದಯ ರೂಪದಿಂದ ಒಂದು* ಬಗೆಯಾಗಿಯೂ ಇರುವನೆಂದು ತಿಳಿಯಬೇಕು. ॥ ೯ ॥

ಮತ್ತೆ ವಿಶ್ವರಚನೆಯನ್ನು ಮಾಡುವ ಮಹತ್ತತ್ತ್ವಾದಿಗಳ ಅಧಿಪತಿಯಾದ ಶ್ರೀಭಗವಂತನು ಆ ತತ್ತ್ವಗಳ ಪ್ರಾರ್ಥನೆಯನ್ನು ನೆನೆದು ಅವುಗಳ ವೃತ್ತಿಗಳನ್ನು ಎಚ್ಚರಿಸಲಿಕ್ಕಾಗಿ ತನ್ನ ಚೈತನ್ಯ ರೂಪವಾದ ತೇಜಸ್ಸಿನಿಂದ ಆ ವಿರಾಟ್‌ಪುರುಷನನ್ನು ಪ್ರಕಾಶಿತಗೊಳಿಸಿ, ಎಚ್ಚರಿಸಿದನು. ॥ ೧೦ ॥ ಅವನು ಎಚ್ಚರಗೊಂಡೊಡನೆಯೇ ದೇವತೆಗಳಿಗೋಸ್ಕರ ಎಷ್ಟು ಸ್ಥಾನಗಳು ಪ್ರಕಟಗೊಂಡವು ಎಂಬುದನ್ನು ಹೇಳುತ್ತೇನೆ, ಕೇಳು. ॥ ೧೧ ॥ ಮೊಟ್ಟಮೊದಲಿಗೆ ಆ ವಿರಾಟ್ ಪುರುಷನ ಮುಖವು ಪ್ರಕಟವಾಯಿತು. ಅದರಲ್ಲಿ ಲೋಕಪಾಲನಾದ ಅಗ್ನಿಯು ತನ್ನ ಅಂಶವಾದ ವಾಗಿಂದ್ರಿಯದೊಡನೆ ಪ್ರವೇಶ ಮಾಡಿದನು. ಅದರಿಂದಲೇ ಈ ಜೀವವು ಮಾತನಾಡುತ್ತಾನೆ. ॥ ೧೨ ॥ ಮತ್ತೆ ವಿರಾಟ್‌ಪುರುಷನ ದವಡೆ ಉತ್ಪನ್ನವಾಯಿತು. ಅದರಲ್ಲಿ ಲೋಕಪಾಲನಾದ ವರುಣನು ತನ್ನ ಅಂಶ ರಸನೇಂದ್ರಿಯ ಸಹಿತ ಸ್ಥಿತನಾದನು. ಅದರಿಂದ ಜೀವವು ರಸಗಳನ್ನು ಗ್ರಹಿಸುತ್ತದೆ. ॥ ೧೩ ॥ ಇದಾದ ಬಳಿಕ ಆ ವಿರಾಟ್‌ಪುರುಷನ ಮೂಗಿನ ಹೊಳ್ಳೆಗಳು ಪ್ರಕಟವಾದುವು. ಇಬ್ಬರು ಅಶ್ವಿನೀಕುಮಾರರು ತಮ್ಮ ಅಂಶವಾದ ಘ್ರಾಣೇಂದ್ರಿಯದೊಡನೆ ಅವುಗಳನ್ನು ಹೊಕ್ಕರು. ಅದರಿಂದ ಜೀವಿಯು ವಾಸನೆಯನ್ನು ಗ್ರಹಿಸುತ್ತದೆ. ॥ ೧೪ ॥ ಹೀಗೆಯೇ ಆ ವಿರಾಟ್‌ಪುರುಷನ ದೇಹದಲ್ಲಿ ಕಣ್ಣುಗಳು ಪ್ರಕಟಗೊಂಡಾಗ, ಅವುಗಳಲ್ಲಿ ತನ್ನ ಅಂಶನೇತ್ರೇಂದ್ರಿಯಸಹಿತ ಲೋಕಪತಿ ಸೂರ್ಯನು ಪ್ರವೇಶಿಸಿದನು. ಆ ನೇತ್ರೇಂದ್ರಿಯದಿಂದ ಜೀವನಿಗೆ ವಿವಿಧ ರೂಪಗಳ ಅರಿವು ಉಂಟಾಗುತ್ತದೆ. ॥ ೧೫ ॥ ಮತ್ತೆ ಆ ವಿರಾಟ್‌ಪುರುಷನಲ್ಲಿ ತ್ವಚೆ ತೊಗಲು ಉತ್ಪನ್ನವಾಯಿತು. ಅದರಲ್ಲಿ ತನ್ನ ಅಂಶ ತ್ವಗಿಂದ್ರಿಯಸಹಿತ ಲೋಕಪಾಲನಾದ

* ಹತ್ತು ಇಂದ್ರಿಯಗಳೊಡನೆ ಮನಸ್ಸು ಆಧ್ಯಾತ್ಮವಾಗಿದೆ, ಇಂದ್ರಿಯಾದಿಗಳ ವಿಷಯಗಳು ಅಧಿಭೂತ, ಇಂದ್ರಿಯಗಳ ಅಧಿಷ್ಠಾತೃ ದೇವತೆಗಳು ಅಧಿದೈವವಾಗಿದೆ. ಪ್ರಾಣ, ಅಪಾನ, ವ್ಯಾನ, ಉದಾನ, ಸಮಾನ ಎಂಬ ಐದು ಪ್ರಾಣಗಳು, ನಾಗ, ಕೂರ್ಮ, ಕೃಕಲ, ದೇವದತ್ತ, ಧನಂಜಯಗಳೆಂಬ ಐದು ಉಪಪ್ರಾಣಗಳು, ಹೀಗೆ ಒಟ್ಟಿಗೆ ಹತ್ತು ಪ್ರಾಣಗಳು.

ಕರ್ಣಾವಸ್ಯ ವಿನಿರ್ಭಿನ್ನೌ ಧಿಷ್ಣ್ಯಂ ಸ್ವಂ ವಿವಿಶುರ್ದಿಶಃ ।
ಶ್ರೋತ್ರೇಣಾಂಶೇನ ಶಬ್ದಸ್ಯ ಸಿದ್ಧಿಂ ಯೇನ ಪ್ರಪದ್ಯತೇ ॥ ೧೭ ॥

ತ್ವಚಮಸ್ಯ ವಿನಿರ್ಭಿನ್ನಾಂ ವಿವಿಶುರ್ಧಿಷ್ಣ್ಯಮೋಷಧೀಃ ।
ಅಂಶೇನ ರೋಮಭಿಃ ಕಂಡೂಂ ಯೈರಸೌ ಪ್ರತಿಪದ್ಯತೇ ॥ ೧೮ ॥

ಮೇಢ್ರಂ ತಸ್ಯ ವಿನಿರ್ಭಿನ್ನಂ ಸ್ವಧಿಷ್ಣ್ಯಂ ಕ ಉಪಾವಿಶತ್ ।
ರೇತಸಾಂಶೇನ ಯೇನಾಸಾವಾನಂದಂ ಪ್ರತಿಪದ್ಯತೇ ॥ ೧೯ ॥

ಗುದಂ ಪುಂಸೋ ವಿನಿರ್ಭಿನ್ನಂ ಮಿತ್ರೋ ಲೋಕೇಶ ಆವಿಶತ್ ।
ಪಾಯುನಾಂಶೇನ ಯೇನಾಸೌ ವಿಸರ್ಗಂ ಪ್ರತಿಪದ್ಯತೇ ॥ ೨೦ ॥

ಹಸ್ತಾವಸ್ಯ ವಿನಿರ್ಭಿನ್ನಾವಿಂದ್ರಃ ಸ್ವರ್ಪತಿರಾವಿಶತ್ ।
ವಾರ್ತಯಾಂಶೇನ ಪುರುಷೋ ಯಯಾ ವೃತ್ತಿಂ ಪ್ರಪದ್ಯತೇ ॥ ೨೧ ॥

ಪಾದಾವಸ್ಯ ವಿನಿರ್ಭಿನ್ನೌ ಲೋಕೇಶೋ ವಿಷ್ಣುರಾವಿಶತ್ ।
ಗತ್ಯಾ ಸ್ವಾಂಶೇನ ಪುರುಷೋ ಯಯಾ ಪ್ರಾಪ್ಯಂ ಪ್ರಪದ್ಯತೇ ॥ ೨೨ ॥

ಬುದ್ಧಿಂ ಚಾಸ್ಯ ವಿನಿರ್ಭಿನ್ನಾಂ ವಾಗೀಶೋ ಧಿಷ್ಣ್ಯಮಾವಿಶತ್ ।
ಬೋಧೇನಾಂಶೇನ ಬೋದ್ಧವ್ಯಂ ಪ್ರತಿಪತ್ತಿರ್ಯತೋ ಭವೇತ್ ॥ ೨೩ ॥

ಹೃದಯಂ ಚಾಸ್ಯ ನಿರ್ಭಿನ್ನಂ ಚಂದ್ರಮಾ ಧಿಷ್ಣ್ಯಮಾವಿಶತ್ ।
ಮನಸಾಂಶೇನ ಯೇನಾಸೌ ವಿಕ್ರಿಯಾಂ ಪ್ರತಿಪದ್ಯತೇ ॥ ೨೪ ॥

ಆತ್ಮಾನಂ ಚಾಸ್ಯ ನಿರ್ಭಿನ್ನಮಭಿಮಾನೋಽವಿಶತ್ಪದಮ್ ।
ಕರ್ಮಣಾಂಶೇನ ಯೇನಾಸೌ ಕರ್ತವ್ಯಂ ಪ್ರತಿಪದ್ಯತೇ ॥ ೨೫ ॥

ಸತ್ತ್ವಂ ಚಾಸ್ಯ ವಿನಿರ್ಭಿನ್ನಂ ಮಹಾನ್ಧಿಷ್ಣ್ಯಮುಪಾವಿಶತ್ ।
ಚಿತ್ತೇನಾಂಶೇನ ಯೇನಾಸೌ ವಿಜ್ಞಾನಂ ಪ್ರತಿಪದ್ಯತೇ ॥ ೨೬ ॥

ಶೀರ್ಷ್ಣೋಽಸ್ಯ ದ್ಯೌರ್ಧರಾ ಪದ್ಭ್ಯಾಂ ಖಂ ನಾಭೇರುದಪದ್ಯತ ।
ಗುಣಾನಾಂ ವೃತ್ತಯೋ ಯೇಷು ಪ್ರತೀಯಂತೇ ಸುರಾದಯಃ ॥ ೨೭ ॥

ವಾಯುವು ಒಳಹೊಕ್ಕನು. ಆ ತ್ವಗಿಂದ್ರಿಯದಿಂದ ಜೀವಿಯು ಸ್ಪರ್ಶವನ್ನು ಅನುಭವಿಸುವನು. ॥ ೧೬ ॥ ಆ ವಿರಾಟ್‌ಪುರುಷನಲ್ಲಿ ಕಿವಿಯ ಬಿಲಗಳು ಪ್ರಕಟವಾದಾಗ ಅದರಲ್ಲಿ ತನ್ನ ಅಂಶ ಶ್ರವಣೇಂದ್ರಿಯಸಹಿತ ದಿಕ್ಕುಗಳು ಪ್ರವೇಶಿಸಿದವು. ಆ ಶ್ರವಣೇಂದ್ರಿಯದಿಂದ ಜೀವಿಗೆ ಶಬ್ದದ ಜ್ಞಾನ ಉಂಟಾಗುತ್ತದೆ. ॥ ೧೭ ॥ ಮತ್ತೆ ವಿರಾಟ್‌ಪುರುಷನಲ್ಲಿ ಚರ್ಮವು ಉತ್ಪನ್ನವಾಯಿತು. ಅದರಲ್ಲಿ ತನ್ನ ಅಂಶ ರೋಮಗಳೊಡನೆ ಔಷಧಿಗಳು ಸ್ಥಿತವಾದುವು. ಆ ರೋಮಗಳಿಂದಲೇ ಜೀವಿಗಳಿಗೆ ತುರಿಕೆ ಮುಂತಾದವುಗಳ ಅನುಭವವಾಗುವುದು. ॥ ೧೮ ॥ ಈಗ ಆ ವಿರಾಟ್‌ಪುರುಷನ ಶ್ರೀವಿಗ್ರಹದಲ್ಲಿ ಲಿಂಗವು ಉತ್ಪನ್ನವಾಯಿತು. ತನ್ನ ಆಶ್ರಯವಾದ ಅದನ್ನು ಪ್ರಜಾಪತಿಯು ತನ್ನ ಅಂಶವಾದ ವೀರ್ಯದೊಡನೆ ಪ್ರವೇಶಿಸಿದನು. ಇದರಿಂದ ಜೀವವು ಆನಂದವನ್ನು ಅನುಭವಿಸುವನು. ॥ ೧೯ ॥ ಮತ್ತೆ ವಿರಾಟ್‌ಪುರುಷನಲ್ಲಿ ಗುದವು ಪ್ರಕಟಗೊಳ್ಳಲು ಲೋಕಪಾಲ ಮಿತ್ರನು ತನ್ನ ಅಂಶ ಪಾಯು-ಇಂದ್ರಿಯದೊಡನೆ ಅದರಲ್ಲಿ ಹೊಕ್ಕನು. ಈ ಇಂದ್ರಿಯದಿಂದಲೇ ಜೀವನು ಮಲತ್ಯಾಗ ಮಾಡುವನು. ॥ ೨೦ ॥ ಇದಾದನಂತರ ಅವನಲ್ಲಿ ಕೈಗಳು ಮೂಡಿದುವು. ಆಗ ದೇವರಾಜ ಇಂದ್ರನು ತನ್ನ ಅಂಶ ಗ್ರಹಣತ್ಯಾಗರೂಪವಾದ ಶಕ್ತಿಯೊಡನೆ ಅವುಗಳಲ್ಲಿ ಪ್ರವೇಶ ಮಾಡಿದನು. ಈ ಶಕ್ತಿಯಿಂದಲೇ ಜೀವವು ತನ್ನ ಕೊಡುವಿಕೆ, ಪಡೆಯುವಿಕೆ, ಹಿಡಿದುಕೊಳ್ಳುವಿಕೆ ಎಂಬ ತನ್ನ ಜೀವನೋಪಾಯವನ್ನು ಸಾಧಿಸುವುದು. ॥ ೨೧ ॥ ಇವನಲ್ಲಿ ಚರಣಗಳು ಉತ್ಪನ್ನವಾದಾಗ ಲೋಕೇಶ್ವರನಾದ ವಿಷ್ಣುವು ತನ್ನ ಶಕ್ತಿಯಾದ ಗತಿಯೊಡನೆ ಅವನ್ನು ಪ್ರವೇಶಿಸಿದನು. ಆ ಗಮನ ಶಕ್ತಿಯಿಂದಲೇ ಜೀವವು ತನ್ನ ಗಮ್ಯಸ್ಥಾನಕ್ಕೆ ತಲುಪುವುದು. ॥ ೨೨ ॥ ಆಮೇಲೆ ಆ ದೇಹದಲ್ಲಿ ಬುದ್ಧಿಯು ಉತ್ಪನ್ನವಾಗಲು ವಾಗೀಶನಾದ ಬೃಹಸ್ಪತಿಯು ತನ್ನ ಅಂಶವಾದ ಬುದ್ಧಿಶಕ್ತಿಯೊಡನೆ ಅದರಲ್ಲಿ ಪ್ರವೇಶಿಸಿದನು. ಈ ಬುದ್ಧಿಶಕ್ತಿಯಿಂದಲೇ ಜೀವವು ತಿಳಿಯಬೇಕಾದ ವಿಷಯಗಳನ್ನು ತಿಳಿದುಕೊಳ್ಳುವುದು. ॥ ೨೩ ॥ ಮತ್ತೆ ಇದರಲ್ಲಿ ಹೃದಯವು ಪ್ರಕಟಗೊಂಡಿತು. ಅದರಲ್ಲಿ ತನ್ನ ಅಂಶವಾದ ಮನಸ್ಸಿನೊಡನೆ ಚಂದ್ರನು ನೆಲೆಗೊಂಡನು. ಈ ಮನಶ್ಶಕ್ತಿಯಿಂದಲೇ ಜೀವವು ಸಂಕಲ್ಪ-ವಿಕಲ್ಪಾದಿ ವಿಕಾರಗಳನ್ನು ಹೊಂದುವನು. ॥ ೨೪ ॥ ಇದಾದ ಬಳಿಕ ವಿರಾಟ್‌ಪುರುಷನಲ್ಲಿ ಅಹಂಕಾರ ಉತ್ಪನ್ನವಾಯಿತು. ತನಗೆ ಆಶ್ರಯವಾದ ಇದರೊಳಗೆ ತನ್ನ ಕ್ರಿಯಾಶಕ್ತಿ ಸಹಿತ ಅದರ ಅಭಿಮಾನಿಯಾದ ರುದ್ರದೇವರು ಪ್ರವೇಶ ಮಾಡಿದರು. ಇದರಿಂದ ಜೀವನು ತನ್ನ ಕರ್ತವ್ಯವನ್ನು ಸ್ವೀಕರಿಸುತ್ತಾನೆ. ॥ ೨೫ ॥ ಈಗ ಇದರಲ್ಲಿ ಚಿತ್ತವು ಪ್ರಕಟಗೊಂಡಿತು. ಅದರಲ್ಲಿ ಚಿತ್‌ಶಕ್ತಿಯೊಡನೆ ಮಹತ್ತತ್ತ್ವವು (ಬ್ರಹ್ಮಾ) ಸ್ಥಿತವಾಯಿತು. ಈ ಚಿತ್ತಶಕ್ತಿಯಿಂದಲೇ ಜೀವವು ವಿಜ್ಞಾನ (ಚೈತನ್ಯ)ವನ್ನು ಪಡೆಯುವುದು. ॥ ೨೬ ॥ ಈ ವಿರಾಟ್ ಪುರುಷನ ತಲೆಯಿಂದ ಸ್ವರ್ಗಲೋಕ, ಕಾಲುಗಳಿಂದ ಪೃಥ್ವಿ ಮತ್ತು ನಾಭಿಯಿಂದ ಅಂತರಿಕ್ಷ (ಆಕಾಶ) ಉತ್ಪನ್ನವಾಯಿತು. ಇವುಗಳಲ್ಲಿ ಕ್ರಮವಾಗಿ ಸತ್ತ್ವ, ರಜ, ತಮ ಈ ಮೂರು ಗುಣಗಳ ಪರಿಣಾಮಸ್ವರೂಪೀ ದೇವತೆಗಳು, ಮನುಷ್ಯರು, ಪ್ರೇತಾದಿಗಳು ಕಂಡುಬರುತ್ತವೆ. ॥ ೨೭ ॥ ಇವು

ಆಧ್ಯಾತ್ಮಿಕೇನ ಸತ್ತ್ವೇನ ದಿವಂ ದೇವಾಃ ಪ್ರಪೇದಿರೇ ।
ಧರಾಂ ರಜಃಸ್ವಭಾವೇನ ಪಣಯೋ ಯೇ ಚ ತಾನನು ॥ ೨೮ ॥

ತಾರ್ತೀಯೇನ ಸ್ವಭಾವೇನ ಭಗವನ್ನಾಭಿಮಾಶ್ರಿತಾಃ ।
ಉಭಯೋರಂತರಾ ವ್ಯೋಮ್ನಿ ಯೇ ರುದ್ರಪಾರ್ಷದಾಂ ಗತಾಃ ॥ ೨೯ ॥

ಮುಖತೋಽವರ್ತತ ಬ್ರಹ್ಮ ಪುರುಷಸ್ಯ ಕುರೂದ್ವಹ ।
ಯಸ್ತೂನ್ಮುಖತ್ವಾದ್ವರ್ಣಾನಾಂ ಮುಖ್ಯೋಽಭೂದ್ಬ್ರಾಹ್ಮಣೋ ಗುರುಃ ॥ ೩೦ ॥

ಬಾಹುಭ್ಯೋಽವರ್ತತ ಕ್ಷತ್ರಂ ಕ್ಷತ್ರಿಯಸ್ತದನುವ್ರತಃ ।
ಯೋ ಜಾತಸ್ತ್ರಾಯತೇ ವರ್ಣಾನ್ಪೌರುಷಃ ಕಂಟಕಕ್ಷತಾತ್ ॥ ೩೧ ॥

ವಿಶೋಽವರ್ತಂತ ತಸ್ಯೋರ್ವೋರ್ಲೋಕವೃತ್ತಿಕರೀರ್ವಿಭೋಃ ।
ವೈಶ್ಯಸ್ತದುದ್ಭವೋ ವಾರ್ತಾಂ ನೃಣಾಂ ಯಃ ಸಮವರ್ತಯತ್ ॥ ೩೨ ॥

ಪದ್ಭ್ಯಾಂ ಭಗವತೋ ಜಜ್ಞೇ ಶುಶ್ರೂಷಾ ಧರ್ಮಸಿದ್ಧಯೇ ।
ತಸ್ಯಾಂ ಜಾತಃ ಪುರಾ ಶೂದ್ರೋ ಯದ್ವೃತ್ತ್ಯಾ ತುಷ್ಯತೇ ಹರಿಃ ॥ ೩೩ ॥

ಏತೇ ವರ್ಣಾಃ ಸ್ವಧರ್ಮೇಣ ಯಜಂತಿ ಸ್ವಗುರುಂ ಹರಿಮ್ ।
ಶ್ರದ್ಧಯಾಽಽತ್ಮವಿಶುದ್ಧ್ಯರ್ಥಂ ಯಜ್ಜಾತಾಃ ಸಹ ವೃತ್ತಿಭಿಃ ॥ ೩೪ ॥

ಏತತ್ಕ್ಷತ್ತರ್ಭಗವತೋ ದೈವಕರ್ಮಾತ್ಮರೂಪಿಣಃ ।
ಕಃ ಶ್ರದ್ದಧ್ಯಾದುಪಾಕರ್ತುಂ ಯೋಗಮಾಯಾಬಲೋದಯಮ್ ॥ ೩೫ ॥

ಅಥಾಪಿ ಕೀರ್ತಯಾಮ್ಯಂಗ ಯಥಾಮತಿ ಯಥಾಶ್ರುತಮ್ ।
ಕೀರ್ತಿಂ ಹರೇಃ ಸ್ವಾಂ ಸತ್ಕರ್ತುಂ ಗಿರಮನ್ಯಾಭಿಧಾಸತೀಮ್ ॥ ೩೬ ॥

ಏಕಾಂತಲಾಭಂ ವಚಸೋ ನು ಪುಂಸಾಂ
ಸುಶ್ಲೋಕಮೌಲೇರ್ಗುಣವಾದಮಾಹುಃ ।
ಶ್ರುತೇಶ್ಚ ವಿದ್ವದ್ಭಿರುಪಾಕೃತಾಯಾಂ
ಕಥಾಸುಧಾಯಾಮುಪಸಂಪ್ರಯೋಗಮ್ ॥ ೩೭ ॥

ಗಳಲ್ಲಿ ದೇವತೆಗಳು ಸತ್ತ್ವಗುಣದ ಹೆಚ್ಚಳದಿಂದ ಸ್ವರ್ಗಲೋಕದಲ್ಲಿಯೂ, ಮನುಷ್ಯ ಮತ್ತು ಅವನ ಉಪಯೋಗೀ ಪಶುವೇ ಮುಂತಾದ ಜೀವಿಗಳು ರಜೋಗುಣದ ಪ್ರಧಾನತೆಯಿಂದಾಗಿ ಪೃಥ್ವಿಯಲ್ಲಿಯೂ, ತಾಮಸ ಸ್ವಭಾವವುಳ್ಳ ರುದ್ರನ ಪಾರ್ಷದರು (ಭೂತ-ಪ್ರೇತಾದಿಗಳು) ಎರಡರ ನಡುವಿನಲ್ಲಿ ಇರುವ ಭಗವಂತನ ನಾಭಿಯ ಸ್ಥಾನದಲ್ಲಿ ಅಂತರಿಕ್ಷ ಲೋಕದಲ್ಲಿಯೂ ವಾಸಮಾಡುತ್ತವೆ. ॥ ೨೮-೨೯ ॥

ಮಹಾತ್ಮನಾದ ವಿದುರನೇ! ವೇದಗಳೂ ಮತ್ತು ಬ್ರಾಹ್ಮಣರೂ ಭಗವಂತನ ಮುಖದಿಂದ ಪ್ರಕಟಗೊಂಡಿದ್ದರಿಂದಲೇ ಬ್ರಾಹ್ಮಣರು ಸಕಲವರ್ಣಗಳಲ್ಲಿ ಶ್ರೇಷ್ಠರು ಹಾಗೂ ಸರ್ವವರ್ಣಗಳಿಗೂ ಗುರುವೆನಿಸಿದರು. ॥ ೩೦ ॥ ಆತನ ಭುಜಗಳಿಂದ ಕ್ಷತ್ರಿಯ ವೃತ್ತಿಯೂ ಮತ್ತು ಅದನ್ನು ಅವಲಂಬಿಸಿರುವ ಕ್ಷತ್ರಿಯವರ್ಣವೂ ಉತ್ಪನ್ನವಾಯಿತು. ವಿರಾಟ್‌ಪುರುಷನ ಅಂಶವಾಗಿ ಜನಿಸಿದ ಕಾರಣ ಇವರು ಎಲ್ಲ ವರ್ಣಗಳನ್ನು ಕಳ್ಳ-ಕಾಕರೇ ಮುಂತಾದ ಉಪದ್ರವಗಳಿಂದ ರಕ್ಷಣೆ ಮಾಡುತ್ತಾರೆ. ॥ ೩೧ ॥ ಶ್ರೀಭಗವಂತನ ಎರಡು ತೊಡೆಗಳಿಂದ ಎಲ್ಲ ಜನರ ನಿರ್ವಾಹ ಮಾಡುವಂತಹ ವೈಶ್ಯವೃತ್ತಿ ಉತ್ಪನ್ನವಾಯಿತು ಮತ್ತು ಅವುಗಳಿಂದಲೇ ವೈಶ್ಯವರ್ಣದ ಪ್ರಾದುರ್ಭಾವವಾಯಿತು. ಈ ವರ್ಣವು ತನ್ನ ವೃತ್ತಿಯಿಂದ ಎಲ್ಲ ಜೀವಿಗಳ ಜೀವನ ನಿರ್ವಾಹ ನಡೆಸುತ್ತದೆ. ॥ ೩೨ ॥ ಮತ್ತೆ ಎಲ್ಲ ಧರ್ಮಗಳ ಸಿದ್ಧಿಗಾಗಿ ಭಗವಂತನ ಚರಣಗಳಿಂದ ಸೇವಾವೃತ್ತಿ ಪ್ರಕಟವಾಯಿತು ಮತ್ತು ಅವುಗಳಿಂದಲೇ ಮೊಟ್ಟಮೊದಲು ಆ ವೃತ್ತಿಯ ಅಧಿಕಾರಿ ಶೂದ್ರವರ್ಣವೂ ಪ್ರಕಟಗೊಂಡಿತು. ಅವರ ವೃತ್ತಿಯಿಂದಲೇ ಶ್ರೀಹರಿಯು ಪ್ರಸನ್ನನಾಗುತ್ತಾನೆ.* ॥ ೩೩ ॥ ಈ ನಾಲ್ಕೂ ವರ್ಣಗಳೂ ಕೂಡ ತಮ್ಮ-ತಮ್ಮ ವೃತ್ತಿಗಳೊಡನೆ ಯಾರಿಂದ ಹುಟ್ಟಿದವೋ ಆ ಪರಮಗುರುವಾದ ಶ್ರೀಹರಿಯನ್ನು ಚಿತ್ತಶುದ್ಧಿಗಾಗಿ ತಮ್ಮ-ತಮ್ಮ ಧರ್ಮಗಳಿಂದ ಶ್ರದ್ಧಾಪೂರ್ವಕ ಆರಾಧಿಸುತ್ತವೆ. ॥ ೩೪ ॥ ವಿದುರನೇ! ಈ ವಿರಾಟ್‌ಪುರುಷನು ಕಾಲ, ಕರ್ಮ, ಸ್ವಭಾವ ಶಕ್ತಿಗಳಿಂದ ಕೂಡಿ ಭಗವಂತನ ಯೋಗಮಾಯೆಯ ಪ್ರಭಾವವನ್ನು ಪ್ರಕಟಪಡಿಸುವವನು. ಈತನ ಸ್ವರೂಪವನ್ನು ಪೂರ್ಣವಾಗಿ ವರ್ಣಿಸಲು ಯಾರಿಗೆ ತಾನೇ ಸಾಧ್ಯ? ॥ ೩೫ ॥ ಪ್ರಿಯ ವಿದುರನೇ! ಆದರೂ ಇತರ ವ್ಯಾವಹಾರಿಕ ಚರ್ಚೆಗಳಿಂದ ಕಲುಷಗೊಂಡಿರುವ ನನ್ನ ವಾಣಿಯನ್ನು ಪವಿತ್ರಗೊಳಿಸಲು, ನನ್ನ ಬುದ್ಧಿಗೂ, ಶ್ರೀಗುರುಗಳ ಬಾಯಿಂದ ಕೇಳಿರುವುದಕ್ಕೂ ಅನುಗುಣವಾಗಿ ಶ್ರೀಹರಿಯ ಸುಕೀರ್ತಿಯನ್ನು ವರ್ಣಿಸುತ್ತೇನೆ. ॥ ೩೬ ॥ ಪುಣ್ಯಕೀರ್ತಿ ಶಿರೋಮಣಿಯಾದ ಶ್ರೀಹರಿಯ ಗುಣಗಾನಮಾಡುವುದೇ ಮನುಷ್ಯರ ವಾಣಿಗೆ ಹಾಗೂ ವಿದ್ವಾಂಸರ ಬಾಯಿಂದ ಭಗವಂತನ ಕಥಾಮೃತವನ್ನು ಪಾನಮಾಡುವುದೇ ಅವರ ಕಿವಿಗಳಿಗೆ ಪರಮಲಾಭವಾಗಿದೆ ಎಂದು

* "ತಸ್ಯಾಂ ಜಾತಃ ಪುರಾ ಶೂದ್ರೋ ಯದ್ವೃತ್ತ್ಯಾ ತುಷ್ಯತೇ ಹರಿಃ ॥" ಎಲ್ಲ ಧರ್ಮಗಳ ಸಿದ್ಧಿಗೂ ಮೂಲಭೂತವಾದುದು ಸೇವೆ. ಸೇವೆಯಿಲ್ಲದೆ ಯಾವ ಧರ್ಮವೂ ಉಳಿಯುವುದಿಲ್ಲ. ಆದ್ದರಿಂದ ಎಲ್ಲ ಧರ್ಮಗಳಿಗೂ ಮೂಲವಾದ ಸೇವೆಯೇ ವೃತ್ತಿಯಾಗಿರುವ ಶೂದ್ರನು ಎಲ್ಲ ವರ್ಣಗಳಲ್ಲೂ ಶ್ರೇಷ್ಠನು. ಬ್ರಾಹ್ಮಣನ ಧರ್ಮವಿರುವುದು ಮೋಕ್ಷಕ್ಕಾಗಿ, ಕ್ಷತ್ರಿಯರ ಧರ್ಮವಿರುವುದು ಭೋಗಕ್ಕೋಸ್ಕರವಾಗಿ, ವೈಶ್ಯಧರ್ಮವಿರುವುದು ಹಣಸಂಪಾದನೆಗಾಗಿ. ಹೀಗೆ ಮೊದಲನೆ ಮೂರು ವರ್ಣಗಳ ಧರ್ಮಗಳು ಇತರ ಪುರುಷಾರ್ಥಗಳಿಗಿದ್ದರೆ, ಶೂದ್ರಧರ್ಮ ತನ್ನ ಪುರುಷಾರ್ಥಕ್ಕಾಗಿ ಇದೆ. ಆದ್ದರಿಂದ ಅವನ ವೃತ್ತಿಯಿಂದಲೇ ಶ್ರೀಭಗವಂತನು ಪ್ರಸನ್ನನಾಗುವನು.

ಆತ್ಮನೋಽವಸಿತೋ ವತ್ಸ ಮಹಿಮಾ ಕವಿನಾಽಽದಿನಾ ।
ಸಂವತ್ಸರಸಹಸ್ರಾಂತೇ ಧಿಯಾ ಯೋಗವಿಪಕ್ವಯಾ ॥ ೩೮ ॥

ಅತೋ ಭಗವತೋ ಮಾಯಾ ಮಾಯಿನಾಮಪಿ ಮೋಹಿನೀ ।
ಯತ್ಸ್ವಯಂ ಚಾತ್ಮವರ್ತ್ಮಾತ್ಮಾ ನ ವೇದ ಕಿಮುತಾಪರೇ ॥ ೩೯ ॥

ಯತೋಽಪ್ರಾಪ್ಯ ನ್ಯವರ್ತಂತ ವಾಚಶ್ಚ ಮನಸಾ ಸಹ ।
ಅಹಂ ಚಾನ್ಯ ಇಮೇ ದೇವಾಸ್ತಸ್ಮೈ ಭಗವತೇ ನಮಃ ॥ ೪೦ ॥

ಮಹಾಪುರುಷರ ಸಿದ್ಧಾಂತವಾಗಿದೆ ॥ ೩೭ ॥ ವತ್ಸ ವಿದುರಾ! ನಾವು ಮಾತ್ರವಲ್ಲ; ಆದಿಕವಿಯಾದ ಶ್ರೀಬ್ರಹ್ಮದೇವರೂ ಕೂಡ ಒಂದು ಸಾವಿರ ದಿವ್ಯವರ್ಷಗಳವರೆಗೆ ತಮ್ಮ ಯೋಗದಿಂದ ಪರಿಪಕ್ವವಾದ ಬುದ್ಧಿಯಿಂದ ವಿಚಾರಮಾಡಿದರೂ ಅಪ್ರಮೇಯನಾದ ಆತನ ಮಹಿಮೆಯ ಪಾರವನ್ನು ಕಾಣಲಾರದೇ ಹೋದನು. ॥ ೩೮ ॥ ಭಗವಂತನ ಮಾಯೆಯು ದೊಡ್ಡ-ದೊಡ್ಡ ಮಾಯಾವಿಗಳನ್ನೂ ಮರುಳುಗೊಳಿಸುವ ಸಾಮರ್ಥ್ಯವುಳ್ಳದ್ದು. ಅಘಟಿತ ಘಟನಾಸಾಮರ್ಥ್ಯವುಳ್ಳ ಅದರ ಭ್ರಾಮಕಗತಿಯು ಅನಂತವಾಗಿದೆ. ಅದ್ದರಿಂದ ಸ್ವತಃ ಭಗವಂತನೇ ಅದರ ಆಳ ತಿಳಿಯದೆ ಹೋದನು. ಮತ್ತೆ ಇತರರ ಮಾತಾದರೋ ಏನು? ॥ ೩೯ ॥ ಯಾವುದನ್ನು ಮುಟ್ಟಲಾರದೆ ಮನಸ್ಸು ಮಾತಿನೊಡನೆ ಹಿಂದಿರುಗಿ ಬರುವುದೋ, ಯಾವುದರ ಪಾರವನ್ನು (ಕೊನೆಯನ್ನು) ಕಾಣುವ ವಿಷಯದಲ್ಲಿ ಬ್ರಹ್ಮ-ರುದ್ರಾದಿ ಇತರ ದೇವತೆಗಳೂ ಸಮರ್ಥರಾಗದೇ ಹೋದರೋ ಆ ಭಗವಂತನಿಗೆ ನಮ್ಮ ನಮಸ್ಕಾರಗಳು. ॥ ೪೦ ॥

ಆರನೆಯ ಅಧ್ಯಾಯವು ಮುಗಿಯಿತು. ॥ ೬ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ತೃತೀಯಸ್ಕಂಧೇ ಷಷ್ಠೋಽಧ್ಯಾಯಃ ॥ ೬ ॥

ಏಳನೆಯ ಅಧ್ಯಾಯ

ಮೈತ್ರೇಯ - ವಿದುರರ ಸಂವಾದ

ಶ್ರೀಶುಕ ಉವಾಚ

ಏವಂ ಬ್ರುವಾಣಂ ಮೈತ್ರೇಯಂ ದ್ವೈಪಾಯನಸುತೋ ಬುಧಃ ।
ಪ್ರೀಣಯನ್ನಿವ ಭಾರತ್ಯಾ ವಿದುರಃ ಪ್ರತ್ಯಭಾಷತ ॥ ೧ ॥

ವಿದುರ ಉವಾಚ

ಬ್ರಹ್ಮನ್ಕಥಂ ಭಗವತಶ್ಚಿನ್ಮಾತ್ರಸ್ಯಾವಿಕಾರಿಣಃ ।
ಲೀಲಯಾ ಚಾಪಿ ಯುಜ್ಯೇರನ್ನಿರ್ಗುಣಸ್ಯ ಗುಣಾಃ ಕ್ರಿಯಾಃ ॥ ೨ ॥

ಕ್ರೀಡಾಯಾಮುದ್ಯಮೋಽರ್ಭಸ್ಯ ಕಾಮಶ್ಚಿಕ್ರೀಡಿಷಾನ್ಯತಃ ।
ಸ್ವತಸ್ತೃಪ್ತಸ್ಯ ಚ ಕಥಂ ನಿವೃತ್ತಸ್ಯ ಸದಾನ್ಯತಃ ॥ ೩ ॥

ಅಸ್ರಾಕ್ಷೀದ್ಭಗವಾನ್ವಿಶ್ವಂ ಗುಣಮಯ್ಯಾತ್ಮಮಾಯಯಾ ।
ತಯಾ ಸಂಸ್ಥಾಪಯತ್ಯೇತದ್ಭೂಯಃ ಪ್ರತ್ಯಪಿಧಾಸ್ಯತಿ ॥ ೪ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿದ್ರಾಜನೇ! ಮೈತ್ರೇಯರ ಇಂತಹ ನಿರೂಪಣೆಯನ್ನು ಕೇಳಿ ವ್ಯಾಸಪುತ್ರನಾದ ವಿದುರನು ತನ್ನ ಮಧುರವಾಣಿಯಿಂದ ಅವರನ್ನು ಸಂತೋಷಪಡಿಸುತ್ತಾ ಹೀಗೆ ಪ್ರಶ್ನಿಸಿಕೊಂಡನು – ॥ ೧ ॥

ವಿದುರನು ಕೇಳಿದನು – ಬ್ರಾಹ್ಮಣಶ್ರೇಷ್ಠರೇ! ಶ್ರೀಭಗವಂತನಾದರೋ ಕೇವಲ ಜ್ಞಾನಸ್ವರೂಪನು, ನಿರ್ವಿಕಾರನು ಮತ್ತು ಸತ್ತ್ವಾದಿ ತ್ರಿಗುಣರಹಿತನು. ಆತನಿಗೆ ಲೀಲಾರ್ಥವಾಗಿಯಾದರೂ ಗುಣಗಳೊಡನೆ, ಕ್ರಿಯೆಗಳೊಡನೆ ಸಂಬಂಧ ಹೇಗೆ ಉಂಟಾಗುವುದು? ॥ ೨ ॥ ಬಾಲಕರಲ್ಲಾದರೋ ಕಾಮನೆ ಹಾಗೂ ಬೇರೆ ಮಕ್ಕಳೊಡನೆ ಆಡಬೇಕೆಂಬ ಇಚ್ಛೆ ಇರುತ್ತದೆ. ಅದರಿಂದ ಅವರು ಆಟಕ್ಕಾಗಿ ಪ್ರಯತ್ನಿಸುತ್ತಾರೆ. ಆದರೆ ಭಗವಂತನಾದರೋ ಸ್ವತಃ ನಿತ್ಯತೃಪ್ತನು, ಪೂರ್ಣಕಾಮನು, ಸದಾ ನಿರ್ಲಿಪ್ತನು. ಹೀಗಿರುವಾಗ ಆತನು ಕ್ರೀಡಿಸಲಿಕ್ಕಾಗಿಯೇ ಏಕೆ ಸಂಕಲ್ಪಮಾಡುವನು? ॥ ೩ ॥ ಭಗವಂತನು ತನ್ನ ತ್ರಿಗುಣಮಯಿ ಮಾಯೆಯಿಂದ ಜಗತ್ತನ್ನು ರಚಿಸುವನು. ಅದರಿಂದಲೇ ಇದನ್ನು ಪಾಲಿಸುತ್ತಿರುವನು. ಕೊನೆಗೆ ಅದರಿಂದಲೇ ಸಂಹಾರ ಮಾಡುವನು. ॥ ೪ ॥ ಭಗವಂತನ ಜ್ಞಾನಕ್ಕೆ ದೇಶ-ಕಾಲ-ಅವಸ್ಥೆಗಳಿಂದಾಗಲೀ, ತನ್ನಿಂದಾಗಲೀ, ಬೇರೆ ನಿಮಿತ್ತದಿಂದಾಗಲೀ ಎಂದಿಗೂ ಲೋಪವಿಲ್ಲ. ಹಾಗಿರುವಾಗ ಆತನಿಗೆ ಮಾಯೆಯೊಡನೆ ಸಂಯೋಗವಾದರೂ ಹೇಗೆ

ದೇಶತಃ ಕಾಲತೋ ಯೋಽಸಾವವಸ್ಥಾತಃ ಸ್ವತೋಽನ್ಯತಃ ।
ಅವಿಲುಪ್ತಾವಬೋಧಾತ್ಮಾ ಸ ಯುಜ್ಯೇತಾಜಯಾ ಕಥಮ್ ॥ ೫ ॥

ಭಗವಾನೇಕ ಏವೈಷ ಸರ್ವಕ್ಷೇತ್ರೇಷ್ವವಸ್ಥಿತಃ ।
ಅಮುಷ್ಯ ದುರ್ಭಗತ್ವಂ ವಾ ಕ್ಲೇಶೋ ವಾ ಕರ್ಮಭಿಃ ಕುತಃ ॥ ೬ ॥

ಏತಸ್ಮಿನ್ಮೇ ಮನೋ ವಿದ್ವನ್ ಖಿದ್ಯತೇಽಜ್ಞಾನಸಂಕಟೇ ।
ತನ್ನಃ ಪರಾಣುದ ವಿಭೋ ಕಶ್ಮಲಂ ಮಾನಸಂ ಮಹತ್ ॥ ೭ ॥

ಶ್ರೀಶುಕ ಉವಾಚ

ಸ ಇತ್ಥಂ ಚೋದಿತಃ ಕ್ಷತ್ತ್ರಾ ತತ್ತ್ವಜಿಜ್ಞಾಸುನಾ ಮುನಿಃ ।
ಪ್ರತ್ಯಾಹ ಭಗವಚ್ಚಿತ್ತಃ ಸ್ಮಯನ್ನಿವ ಗತಸ್ಮಯಃ ॥ ೮ ॥

ಮೈತ್ರೇಯ ಉವಾಚ

ಸೇಯಂ ಭಗವತೋ ಮಾಯಾ ಯನ್ನಯೇನ ವಿರುಧ್ಯತೇ ।
ಈಶ್ವರಸ್ಯ ವಿಮುಕ್ತಸ್ಯ ಕಾರ್ಪಣ್ಯಮುತ ಬಂಧನಮ್ ॥ ೯ ॥

ಯದರ್ಥೇನ ವಿನಾಮುಷ್ಯ ಪುಂಸ ಆತ್ಮವಿಪರ್ಯಯಃ ।
ಪ್ರತೀಯತ ಉಪದ್ರಷ್ಟುಃ ಸ್ವಶಿರಶ್ಛೇದನಾದಿಕಃ ॥ ೧೦ ॥

ಯಥಾ ಜಲೇ ಚಂದ್ರಮಸಃ ಕಂಪಾದಿಸ್ತತ್ಕೃತೋ ಗುಣಃ ।
ದೃಶ್ಯತೇಽಸನ್ನಪಿ ದ್ರಷ್ಟುರಾತ್ಮನೋಽನಾತ್ಮನೋ ಗುಣಃ ॥ ೧೧ ॥

ಸ ವೈ ನಿವೃತ್ತಿಧರ್ಮೇಣ ವಾಸುದೇವಾನುಕಂಪಯಾ ।
ಭಗವದ್ಭಕ್ತಿಯೋಗೇನ ತಿರೋಧತ್ತೇ ಶನೈರಿಹ ॥ ೧೨ ॥

ಯದೇಂದ್ರಿಯೋಪರಾಮೋಽಥ ದ್ರಷ್ಟ್ರಾತ್ಮನಿ ಪರೇ ಹರೌ ।
ವಿಲೀಯಂತೇ ತದಾ ಕ್ಲೇಶಾಃ ಸಂಸುಪ್ತಸ್ಯೇವ ಕೃತ್ಸ್ನಶಃ ॥ ೧೩ ॥

ಅಶೇಷಸಂಕ್ಲೇಶಶಮಂ ವಿಧತ್ತೇ
ಗುಣಾನುವಾದಶ್ರವಣಂ ಮುರಾರೇಃ ।
ಕುತಃ ಪುನಸ್ತಚ್ಚರಣಾರವಿಂದ-
ಪರಾಗಸೇವಾರತಿರಾತ್ಮಲಬ್ಧಾ ॥ ೧೪ ॥

ವಿದುರ ಉವಾಚ

ಸಂಛಿನ್ನಃ ಸಂಶಯೋ ಮಹ್ಯಂ ತವ ಸೂಕ್ತಾಸಿನಾ ವಿಭೋ ।
ಉಭಯತ್ರಾಪಿ ಭಗವನ್ಮನೋ ಮೇ ಸಂಪ್ರಧಾವತಿ ॥ ೧೫ ॥

ಉಂಟಾಯಿತು ? ॥ ೫ ॥ ಭಗವಂತನೊಬ್ಬನೇ ಸಮಸ್ತ ಕ್ಷೇತ್ರಗಳಲ್ಲಿಯೂ ಸಾಕ್ಷಿರೂಪದಿಂದ ಇರುತ್ತಾನೆ. ಮತ್ತೆ ಅವನಿಗೆ ದುರ್ಭಾಗ್ಯವಾಗಲೀ, ಯಾವುದಾದರೂ ಕರ್ಮದಿಂದುಂಟಾದ ಕ್ಲೇಶವಾಗಲೀ ಹೇಗಾಗಬಲ್ಲದು ? ॥ ೬ ॥ ಮಹಾತ್ಮರೇ ! ಈ ಅಜ್ಞಾನ ಸಂಕಟದಲ್ಲಿ ಬಿದ್ದು ನನ್ನ ಮನಸ್ಸು ಖಿನ್ನವಾಗುತ್ತಿದೆ. ತಾವು ಕೃಪೆಮಾಡಿ ನನ್ನ ಮನಸ್ಸಿನ ಈ ಅಜ್ಞಾನಮೋಹವನ್ನು ನಿವಾರಣೆ ಮಾಡಬೇಕೆಂದು ಕೇಳಿ ಕೊಳ್ಳುತ್ತೇನೆ. ॥ ೭ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ರಾಜನೇ ! ತತ್ತ್ವಜಿಜ್ಞಾಸುವಾದ ವಿದುರನ ಈ ಪ್ರಶ್ನೆಯನ್ನು ಕೇಳಿ ಅಹಂಕಾರರಹಿತರಾದ ಶ್ರೀಮೈತ್ರೇಯರು ಭಗವಂತನನ್ನು ಸ್ಮರಿಸುತ್ತಾ ಮುಗುಳ್ನಕ್ಕು ಹೀಗೆ ಉತ್ತರಿಸಿದರು. ॥ ೮ ॥

ಶ್ರೀಮೈತ್ರೇಯರು ಹೇಳುತ್ತಾರೆ – ವಿದುರನೇ ! ಎಲ್ಲರ ಸ್ವಾಮಿಯೂ, ನಿತ್ಯಮುಕ್ತನೂ ಆದ ಪರಮಾತ್ಮನಿಗೆ ದೀನತೆ, ಬಂಧನ ಉಂಟಾಗುವುದೆಂದರೆ ಅವಶ್ಯವಾಗಿ ಯುಕ್ತಿಗೆ ವಿರುದ್ಧವಾಗಿದೆ. ಆದರೆ ವಸ್ತುತಃ ಇದೇ ಭಗವಂತನ ಮಾಯೆಯಾಗಿದೆ. ॥ ೯ ॥ ಸ್ವಪ್ನವನ್ನು ಕಾಣುವವನಿಗೆ ತನ್ನ ತಲೆಯೇ ಕತ್ತರಿಸಿದಂತೆ ಅನುಭವ ಉಂಟಾಗಬಹುದು. ಆದರೆ ನಿಜವಾಗಿ ಏನೂ ಆಗಿರುವುದಿಲ್ಲ. ಆದರೂ ಅಜ್ಞಾನದಿಂದ ಅವನು ಸತ್ಯವೆಂದೇ ತಿಳಿದು ಗಾಬರಿಪಡುವಂತೆ ಈ ಜೀವನಿಗೆ ಬಂಧನಾದಿಗಳು ಯಾವುದೂ ಇಲ್ಲದಿದ್ದರೂ ಅಜ್ಞಾನವಶದಿಂದ ಹಾಗೇ ಇರುವಂತೆ ಕಂಡುಬರುತ್ತದೆ. ॥ ೧೦ ॥ ಈ ಬಂಧನವೇ ಮುಂತಾದ ತೋರಿಕೆಗಳು ಈಶ್ವರನಲ್ಲಿ ಏಕೆ ಆಗುವುದಿಲ್ಲ? ಎಂದರೆ – ನೀರಿನಲ್ಲಿ ಬಿದ್ದ ಚಂದ್ರನ ಬಿಂಬವು ಅಲ್ಲಾಡಿದಂತೆ ಕಂಡುಬಂದರೂ ಆಕಾಶದಲ್ಲಿರುವ ಚಂದ್ರನಲ್ಲಿ ಕಂಪನವಿರುವುದಿಲ್ಲ, ಹಾಗೆಯೇ ದೇಹಾಭಿಮಾನೀ ಜೀವನಲ್ಲೇ ದೇಹಾದಿ ಮಿಥ್ಯಾಧರ್ಮಗಳ ತೋರಿಕೆ ಕಂಡುಬರುತ್ತದೆ. ಪರಮಾತ್ಮನಲ್ಲಿ ಇಲ್ಲ. ॥ ೧೧ ॥ ನಿಷ್ಕಾಮ ಭಾವದಿಂದ ಧರ್ಮಗಳನ್ನು ಆಚರಿಸಿದಾಗ ಭಗವತ್ಕೃಪೆಯಿಂದ ಪ್ರಾಪ್ತವಾದ ಭಕ್ತಿಯೋಗದ ಮೂಲಕ ಈ ಮಿಥ್ಯಾಪ್ರತೀತಿಗಳು ನಿಧಾನವಾಗಿ ತೊಲಗಿಹೋಗುತ್ತವೆ. ॥ ೧೨ ॥ ಸಮಸ್ತ ಇಂದ್ರಿಯಗಳು ವಿಷಯಗಳಿಂದ ಹಿಮ್ಮೆಟ್ಟಿ ಸಾಕ್ಷಿಸ್ವರೂಪವಾದ ಶ್ರೀಹರಿಯಲ್ಲಿ ನಿಶ್ಚಲವಾಗಿ ನೆಲೆಗೊಂಡಾಗ ಗಾಢನಿದ್ದೆಯಲ್ಲಿ ಮಲಗಿದ ಮನುಷ್ಯನಂತೆ ಜೀವಿಯ ರಾಗ-ದ್ವೇಷಾದಿ ಎಲ್ಲ ಕ್ಲೇಶಗಳು ಪೂರ್ಣವಾಗಿ ನಾಶಹೊಂದುವವು. ॥ ೧೩ ॥ ಶ್ರೀಕೃಷ್ಣಪರಮಾತ್ಮನ ಗುಣಗಳ ವರ್ಣನೆಯನ್ನೂ, ಶ್ರವಣವನ್ನೂ ಮಾಡುತ್ತಿದ್ದರೆ ಸಮಸ್ತ ದುಃಖರಾಶಿಯೂ ಶಾಂತವಾಗಿ ಬಿಡುವುದು. ಹೀಗಿರುವಾಗ ನಮ್ಮ ಹೃದಯದಲ್ಲಿ ಅವನ ಪಾದಾರವಿಂದಗಳ ಧೂಳನ್ನು ಸೇವಿಸಬೇಕೆಂಬ ಪರಮಪ್ರೇಮವು ಜಾಗ್ರತಗೊಂಡರೆ ಮತ್ತೆ ಹೇಳುವುದೇನಿದೆ ? ॥ ೧೪ ॥

ವಿದುರನೆಂದನು – ಮಹಾತ್ಮರೇ ! ನನ್ನ ಪ್ರಶ್ನೆಗೆ ಉತ್ತರವಾಗಿ ತಾವು ಹೇಳಿದ ಸೂಕ್ತಿಯೆಂಬ ಖಡ್ಗದಿಂದ ನನ್ನ ಸಂದೇಹವು ಸಮೂಲವಾಗಿ ಕತ್ತರಿಸಿಹೋಯಿತು. ಈಗ ನನ್ನ ಮನಸ್ಸು ಪರಮಾತ್ಮನ ಸ್ವತಂತ್ರತೆ ಮತ್ತು ಜೀವಿಯ ಪರತಂತ್ರತೆ ಎಂಬ ಎರಡು

ಸಾಧ್ವೇತದ್ವ್ಯಾಹೃತಂ ವಿದ್ವನ್ನಾತ್ಮಮಾಯಾಯನಂ ಹರೇಃ ।
ಆಭಾತ್ಯಪಾರ್ಥಂ ನಿರ್ಮೂಲಂ ವಿಶ್ವಮೂಲಂ ನ ಯದ್ಬಹಿಃ ॥ ೧೬ ॥

ಯಶ್ಚ ಮೂಢತಮೋ ಲೋಕೇ ಯಶ್ಚ ಬುದ್ಧೇಃ ಪರಂ ಗತಃ ।
ತಾವುಭೌ ಸುಖಮೇಧೇತೇ ಕ್ಲಿಶ್ಯತ್ಯಂತರಿತೋ ಜನಃ ॥ ೧೭ ॥

ಅರ್ಥಾಭಾವಂ ವಿನಿಶ್ಚಿತ್ಯ ಪ್ರತೀತಸ್ಯಾಪಿ ನಾತ್ಮನಃ ।
ತಾಂ ಚಾಪಿ ಯುಷ್ಮಚ್ಚರಣಸೇವಯಾಹಂ ಪರಾಣುದೇ ॥ ೧೮ ॥

ಯತ್ಸೇವಯಾ ಭಗವತಃ ಕೂಟಸ್ಥಸ್ಯ ಮಧುದ್ವಿಷಃ ।
ರತಿರಾಸೋ ಭವೇತ್ತೀವ್ರಃ ಪಾದಯೋರ್ವ್ಯಸನಾರ್ದನಃ ॥ ೧೯ ॥

ದುರಾಪಾ ಹ್ಯಲ್ಪತಪಸಃ ಸೇವಾ ವೈಕುಂಠವರ್ತ್ಮಸು ।
ಯತ್ರೋಪಗೀಯತೇ ನಿತ್ಯಂ ದೇವದೇವೋ ಜನಾರ್ದನಃ ॥ ೨೦ ॥

ಸೃಷ್ಟ್ವಾಗ್ರೇ ಮಹದಾದೀನಿ ಸವಿಕಾರಾಣ್ಯನುಕ್ರಮಾತ್ ।
ತೇಭ್ಯೋ ವಿರಾಜಮುದ್ಧೃತ್ಯ ತಮನು ಪ್ರಾವಿಶದ್ವಿಭುಃ ॥ ೨೧ ॥

ಯಮಾಹುರಾದ್ಯಂ ಪುರುಷಂ ಸಹಸ್ರಾಂಘ್ರ್ಯೂರುಬಾಹುಕಮ್ ।
ಯತ್ರ ವಿಶ್ವ ಇಮೇ ಲೋಕಾಃ ಸವಿಕಾಶಂ ಸಮಾಸತೇ ॥ ೨೨ ॥

ಯಸ್ಮಿಂದಶವಿಧಃ ಪ್ರಾಣಃ ಸೇಂದ್ರಿಯಾರ್ಥೇಂದ್ರಿಯಸ್ತ್ರಿವೃತ್ ।
ತ್ವಯೇರಿತೋ ಯತೋ ವರ್ಣಾಸ್ತದ್ವಿಭೂತೀರ್ವದಸ್ವ ನಃ ॥ ೨೩ ॥

ಯತ್ರ ಪುತ್ರೈಶ್ಚ ಪೌತ್ರೈಶ್ಚ ನಪ್ತೃಭಿಃ ಸಹ ಗೋತ್ರಜೈಃ ।
ಪ್ರಜಾ ವಿಚಿತ್ರಾಕೃತಯ ಆಸನ್ಯಾಭಿರಿದಂ ತತಮ್ ॥ ೨೪ ॥

ವಿಷಯಗಳನ್ನು ಚೆನ್ನಾಗಿ ತಿಳಿದುಕೊಂಡಿದೆ. ॥ ೧೫ ॥ ಜ್ಞಾನಿಶ್ರೇಷ್ಠರೇ! 'ಜೀವಿಯಲ್ಲಿ ಕಂಡುಬರುವ ಕ್ಲೇಶಾದಿಗಳ ಆಧಾರ ಕೇವಲ ಭಗವಂತನ ಮಾಯೆಯೇ ಆಗಿದೆ' ಎಂದು ತಾವು ತಿಳಿಸಿದುದು ಸರಿಯಾಗಿಯೇ ಇದೆ. ಆ ಕ್ಲೇಶವು ಮಿಥ್ಯಾ ಹಾಗೂ ಆಧಾರರಹಿತವಾಗಿದೆ. ಏಕೆಂದರೆ, ಈ ವಿಶ್ವದ ಮೂಲಕಾರಣವು ಮಾಯೆಯಲ್ಲದೆ ಬೇರೆ ಏನೂ ಇಲ್ಲ. ॥ ೧೬ ॥ ಈ ಪ್ರಪಂಚದಲ್ಲಿ ಎರಡು ವರ್ಗದ ಜನರೇ ಸುಖಿಗಳಾಗಿರುತ್ತಾರೆ – (೧) ಏನೂ ಅರಿಯದ (ಅಜ್ಞಾನದಿಂದ ಕೂಡಿದ) ಕಡುಮೂರ್ಖರು. (೨) ಬುದ್ಧಿ ಮುಂತಾದವುಗಳಿಂದ ಮೀರಿರುವ ಶ್ರೀಭಗವಂತನನ್ನು ಹೊಂದಿದವರು. ನಡುವಿನ ಶ್ರೇಣಿಯ ಜನರು ಸಂಶಯಗಳಿಗೆ ವಶರಾಗಿ ದುಃಖಪಡುತ್ತಿರುತ್ತಾರೆ. ॥ ೧೭ ॥ ಪೂಜ್ಯರೇ! ಈ ಅನಾತ್ಮ ವಸ್ತುಗಳು ವಾಸ್ತವವಾಗಿ ಇಲ್ಲವೇ ಇಲ್ಲ. ಕೇವಲ ಕಂಡುಬರುತ್ತವಷ್ಟೆ ಎಂಬ ನಿಶ್ಚಯವು ನಿಮ್ಮ ಕೃಪೆಯಿಂದ ನನಗೆ ಉಂಟಾಯಿತು. ಈಗ ನಿಮ್ಮ ಚರಣಗಳ ಸೇವೆಯ ಪ್ರಭಾವದಿಂದ ಆ ಪ್ರತೀತಿಗಳನ್ನು ಹೋಗಲಾಡಿಸಿಕೊಳ್ಳುವೆನು. ॥ ೧೮ ॥ ಈ ತಮ್ಮ ಚರಣಗಳ ಸೇವೆಯಿಂದ ನಿತ್ಯಸಿದ್ಧ ಭಗವಾನ್ ಮಧುಸೂದನನ ಚರಣಕಮಲದಲ್ಲಿ ಉತ್ಕಟಪ್ರೇಮ ಮತ್ತು ಆನಂದದ ವೃದ್ಧಿಯಾಗುತ್ತದೆ. ಅದು ಹುಟ್ಟು ಸಾವುಗಳನ್ನು ನಾಶಮಾಡಿಬಿಡುತ್ತದೆ. ॥ ೧೯ ॥ ಭಗವದ್ಭಕ್ತರಾದ ಮಹಾತ್ಮರೇ ಭಗವತ್ಪ್ರಾಪ್ತಿಯ ಸಾಕ್ಷಾತ್ ಮಾರ್ಗವಾಗಿದ್ದಾರೆ. ಅವರಲ್ಲಿ ಸದಾಕಾಲ ದೇವದೇವನಾದ ಶ್ರೀಹರಿಯ ಗುಣಗಾನವಾಗುತ್ತಾ ಇರುತ್ತದೆ. ಅಂತಹ ಮಹಾತ್ಮರ ಸೇವಾಭಾಗ್ಯವು ಅಲ್ಪಪುಣ್ಯವುಳ್ಳವರಿಗೆ ದೊರಕಲಾರದು. ॥ ೨೦ ॥

ಪೂಜ್ಯರೇ! ಸೃಷ್ಟಿಯ ಪ್ರಾರಂಭದಲ್ಲಿ ಭಗವಂತನು ಕ್ರಮವಾಗಿ ಮಹತ್ತು ಮುಂತಾದ ತತ್ತ್ವಗಳನ್ನು ಹಾಗೂ ಅದರ ವಿಕಾರಗಳನ್ನು ರಚಿಸಿ, ಮತ್ತೆ ಅವುಗಳ ಅಂಶಗಳಿಂದ ವಿರಾಟ್‌ಪುರುಷನನ್ನು ನಿರ್ಮಿಸಿದನು. ಅನಂತರ ತಾನೇ ಅದರಲ್ಲಿ ಪ್ರವೇಶಿಸಿದನು ಎಂದು ತಾವು ತಿಳಿಸಿದಿರಿ. ॥ ೨೧ ॥ ಆ ವಿರಾಟ್‌ಪುರುಷನಿಗೆ ಸಾವಿರಾರು ಕಾಲುಗಳು, ತೊಡೆಗಳೂ, ಬಾಹುಗಳು ಇವೆ. ಆತನನ್ನೇ ವೇದಗಳು ಆದಿಪುರುಷನೆಂದು ಕರೆಯುತ್ತವೆ. ವಿಸ್ತಾರಗೊಂಡ ಈ ಸಮಸ್ತಲೋಕಗಳು ಆತನಲ್ಲಿಯೇ ಅಡಕವಾಗಿವೆ. ॥ ೨೨ ॥ ಇಂದ್ರಿಯ ವಿಷಯಗಳಿಂದಲೂ, ತ್ರಿಗುಣಗಳಿಂದಲೂ ಕೂಡಿದ ಇಂದ್ರಿಯಬಲ, ಮನೋಬಲ, ಶಾರೀರಿಕಬಲಗಳೊಂದಿಗೆ ಹತ್ತು ವಿಧವಾದ ಪ್ರಾಣಗಳೂ ಆತನಲ್ಲಿಯೇ ಸೇರಿಕೊಂಡಿವೆ. ಬ್ರಾಹ್ಮಣಾದಿ ವರ್ಣಗಳೂ ಆತನಿಂದಲೇ ಹುಟ್ಟಿದವು ಎಂಬುದನ್ನೂ ವರ್ಣಿಸಿದಿರಿ. ಈಗ ನನಗೆ ಆ ಪರಮಾತ್ಮನ ಬ್ರಹ್ಮಾದಿ ವಿಭೂತಿಗಳನ್ನು ತಿಳಿಸಿರಿ. ಈ ಇಡೀ ಬ್ರಹ್ಮಾಂಡವನ್ನು ತುಂಬಿಕೊಂಡಿರುವ ಮಕ್ಕಳು, ಮೊಮ್ಮಕ್ಕಳು, ಮರಿಮಕ್ಕಳೇ ಮುಂತಾದ ಬಂಧುಗಳೊಡನೆ ಕೂಡಿದ ಎಲ್ಲ ಪ್ರಜೆಗಳೂ ಆ ವಿಭೂತಿಯಿಂದಲೇ ಉಂಟಾದವರಲ್ಲವೇ! ॥ ೨೩-೨೪ ॥ ಆ ವಿರಾಟ್ ಪುರುಷನು ಬ್ರಹ್ಮಾದಿ ಪ್ರಜಾಪತಿಗಳಿಗೂ ಪ್ರಭುವು. ಅವನು ಯಾವ-ಯಾವ ಪ್ರಜಾಪತಿಗಳನ್ನು ಸೃಷ್ಟಿಸಿದನು? ಸೃಷ್ಟಿ ಉಪಸೃಷ್ಟಿ ಮತ್ತು ಮನ್ವಂತರಾಧಿಪತಿಗಳನ್ನು ಯಾವ ಕ್ರಮದಿಂದ

ಪ್ರಜಾಪತೀನಾಂ ಸ ಪತಿಶ್ಚಕ್ಲೃಪೇ ಕಾನ್ ಪ್ರಜಾಪತೀನ್ ।
ಸರ್ಗಾಂಶ್ಚೈವಾನುಸರ್ಗಾಂಶ್ಚ ಮನೂನ್ಮನ್ವಂತರಾಧಿಪಾನ್ ॥ ೨೫ ॥

ಏತೇಷಾಮಪಿ ವಂಶಾಂಶ್ಚ ವಂಶಾನುಚರಿತಾನಿ ಚ ।
ಉಪರ್ಯಧಶ್ಚ ಯೇ ಲೋಕಾ ಭೂಮೇರ್ಮಿತ್ರಾತ್ಮಜಾಸತೇ ॥ ೨೬ ॥

ತೇಷಾಂ ಸಂಸ್ಥಾಂ ಪ್ರಮಾಣಂ ಚ ಭೂರ್ಲೋಕಸ್ಯ ಚ ವರ್ಣಯ ।
ತಿರ್ಯಙ್ಮಾನುಷದೇವಾನಾಂ ಸರೀಸೃಪಪತತ್ತ್ರಿಣಾಮ್ ।
ವದ ನಃ ಸರ್ಗಸಂವ್ಯೂಹಂ ಗಾರ್ಭಸ್ವೇದದ್ವಿಜೋದ್ಭಿದಾಮ್ ॥ ೨೭ ॥

ಗುಣಾವತಾರೈರ್ವಿಶ್ವಸ್ಯ ಸರ್ಗಸ್ಥಿತ್ಯಪ್ಯಯಾಶ್ರಯಮ್ ।
ಸೃಜತಃ ಶ್ರೀನಿವಾಸಸ್ಯ ವ್ಯಾಚಕ್ಷ್ವೋದಾರವಿಕ್ರಮಮ್ ॥ ೨೮ ॥

ವರ್ಣಾಶ್ರಮವಿಭಾಗಾಂಶ್ಚ ರೂಪಶೀಲಸ್ವಭಾವತಃ ।
ಋಷೀಣಾಂ ಜನ್ಮಕರ್ಮಾದಿ ವೇದಸ್ಯ ಚ ವಿಕರ್ಷಣಮ್ ॥ ೨೯ ॥

ಯಜ್ಞಸ್ಯ ಚ ವಿತಾನಾನಿ ಯೋಗಸ್ಯ ಚ ಪಥಃ ಪ್ರಭೋ ।
ನೈಷ್ಕರ್ಮ್ಯಸ್ಯ ಚ ಸಾಂಖ್ಯಸ್ಯ ತಂತ್ರಂ ವಾ ಭಗವತ್ಸ್ಮೃತಮ್ ॥ ೩೦ ॥

ಪಾಖಂಡಪಥವೈಷಮ್ಯಂ ಪ್ರತಿಲೋಮನಿವೇಶನಮ್ ।
ಜೀವಸ್ಯ ಗತಯೋ ಯಾಶ್ಚ ಯಾವತೀರ್ಗುಣಕರ್ಮಜಾಃ ॥ ೩೧ ॥

ಧರ್ಮಾರ್ಥಕಾಮಮೋಕ್ಷಾಣಾಂ ನಿಮಿತ್ತಾನ್ಯವಿರೋಧತಃ ।
ವಾರ್ತಾಯಾ ದಂಡನೀತೇಶ್ಚ ಶ್ರುತಸ್ಯ ಚ ವಿಧಿಂ ಪೃಥಕ್ ॥ ೩೨ ॥

ಶ್ರಾದ್ಧಸ್ಯ ಚ ವಿಧಿಂ ಬ್ರಹ್ಮನ್ ಪಿತೄಣಾಂ ಸರ್ಗಮೇವ ಚ ।
ಗ್ರಹನಕ್ಷತ್ರತಾರಾಣಾಂ ಕಾಲಾವಯವಸಂಸ್ಥಿತಿಮ್ ॥ ೩೩ ॥

ದಾನಸ್ಯ ತಪಸೋ ವಾಪಿ ಯಚ್ಚೇಷ್ಟಾಪೂರ್ತಯೋಃ ಫಲಮ್ ।
ಪ್ರವಾಸಸ್ಥಸ್ಯ ಯೋ ಧರ್ಮೋ ಯಶ್ಚ ಪುಂಸ ಉತಾಪದಿ ॥ ೩೪ ॥

ಯೇನ ವಾ ಭಗವಾಂಸ್ತುಷ್ಯೇದ್ಧರ್ಮಯೋನಿರ್ಜನಾರ್ದನಃ ।
ಸಂಪ್ರಸೀದತಿ ವಾ ಯೇಷಾಮೇತದಾಖ್ಯಾಹಿ ಚಾನಘ ॥ ೩೫ ॥

ಅನುವ್ರತಾನಾಂ ಶಿಷ್ಯಾಣಾಂ ಪುತ್ರಾಣಾಂ ಚ ದ್ವಿಜೋತ್ತಮ ।
ಅನಾಪೃಷ್ಟಮಪಿ ಬ್ರೂಯುರ್ಗುರವೋ ದೀನವತ್ಸಲಾಃ ॥ ೩೬ ॥

ಸೃಷ್ಟಿಸಿದನು ? ॥ ೨೫ ॥ ಮೈತ್ರೇಯರೇ! ಆ ಮನುಗಳ ವಂಶಗಳನ್ನೂ, ಆ ವಂಶಗಳಿಗೆ ಸೇರಿದ ರಾಜರ ಚರಿತ್ರೆಗಳನ್ನೂ ವರ್ಣಿಸಿರಿ. ಭೂಮಿಗೆ ಮೇಲೆ ಯಾವ ಲೋಕಗಳಿವೆ? ಕೆಳಗೆ ಯಾವ ಲೋಕಗಳಿವೆ? ಭೂಲೋಕದ ವಿಸ್ತಾರವೇನು? ಸ್ಥಿತಿಯೇನು? ಎಂಬುದನ್ನೂ ವಿವರಿಸಿರಿ. ತಿರ್ಯಕ್, ಮನುಷ್ಯರು, ದೇವತೆಗಳು, ಹರಿದಾಡುವ ಪ್ರಾಣಿಗಳು, ಪಕ್ಷಿಗಳು, ಜರಾಯುಜ, ಸ್ವೇದಜ, ಅಂಡಜ, ಉದ್ಭಿಜ್ಜ ಈ ನಾಲ್ಕು ಪ್ರಕಾರದ ಪ್ರಾಣಿಗಳ ಉತ್ಪತ್ತಿ ಕ್ರಮವನ್ನೂ ತಿಳಿಸಿರಿ. ॥ ೨೬-೨೭ ॥ ಶ್ರೀಹರಿಯು ಸೃಷ್ಟಿಮಾಡುವಾಗ ಜಗತ್ತಿನ ಉತ್ಪತ್ತಿ, ಸ್ಥಿತಿ, ಸಂಹಾರಕ್ಕಾಗಿ ತನ್ನ ಗುಣಾವತಾರವಾದ ಬ್ರಹ್ಮಾ, ವಿಷ್ಣು, ಮಹೇಶ್ವರ ರೂಪಗಳಲ್ಲಿಯೂ, ಇತರ ಅವತಾರ ರೂಪಗಳಲ್ಲಿಯೂ ಯಾವ ಮಂಗಳಕರವಾದ ಲೀಲೆಗಳನ್ನು ಮಾಡಿದನು? ಎಂಬುದನ್ನು ವರ್ಣಿಸಿರಿ. ॥ ೨೮ ॥ ವೇಷ, ಆಚಾರ, ಸ್ವಭಾವಗಳಿಗೆ ಅನುಸಾರವಾಗಿ ವರ್ಣಾಶ್ರಮಗಳ ವಿಭಾಗ, ಋಷಿಗಳ ಜನ್ಮ-ಕರ್ಮಾದಿಗಳೂ, ವೇದಗಳ ವಿಭಾಗ, ಯಜ್ಞಗಳ ವಿಸ್ತಾರ, ಯೋಗದ ಮಾರ್ಗ, ಜ್ಞಾನಮಾರ್ಗ ಮತ್ತು ಅದಕ್ಕೆ ಸಾಧನವಾದ ಸಾಂಖ್ಯಮಾರ್ಗ ಹಾಗೂ ಶ್ರೀಭಗವಂತನು ಉಪದೇಶಿಸಿದ ನಾರದ ಪಾಂಚರಾತ್ರಾದಿ ತಂತ್ರಶಾಸ್ತ್ರಗಳನ್ನು, ವಿಭಿನ್ನ ಪಾಷಂಡ ಮತಗಳ ಮಾರ್ಗಭೇದಗಳನ್ನೂ, ಅದರ ಪ್ರಚಾರದಿಂದ ಉಂಟಾಗುವ ವೈಷಮ್ಯವನ್ನೂ, ಪ್ರತಿಲೋಮ ವರ್ಣಗಳ ಸೃಷ್ಟಿ ಸ್ಥಿತಿಗಳನ್ನೂ, ಬೇರೆ-ಬೇರೆ ಗುಣಗಳಿಂದಲೂ – ಕರ್ಮಗಳಿಂದಲೂ ಜೀವರಿಗೆ ಉಂಟಾಗುವ ಬಗೆ-ಬಗೆಯ ಗತಿಯನ್ನೂ ನಿರೂಪಿಸಿರಿ. ॥ ೨೯-೩೧ ॥

ಮಹಾತ್ಮರೇ! ಧರ್ಮ-ಅರ್ಥ-ಕಾಮ-ಮೋಕ್ಷಗಳೆಂಬ ನಾಲ್ಕು ಪುರುಷಾರ್ಥಗಳನ್ನೂ, ಪರಸ್ಪರ ವಿರೋಧ ಬರದಂತೆ ಸಾಧಿಸುವ ಮಾರ್ಗಗಳನ್ನೂ, ವಾಣಿಜ್ಯ, ದಂಡನೀತಿ ಮತ್ತು ಶಾಸ್ತ್ರಶ್ರವಣದ ವಿಧಿಗಳನ್ನೂ, ಶ್ರಾದ್ಧದ ವಿಧಿಯನ್ನೂ, ಪಿತೃದೇವತೆಗಳ ಸೃಷ್ಟಿಯನ್ನೂ, ಹಾಗೆಯೇ ಕಾಲಚಕ್ರದಲ್ಲಿ ಗ್ರಹ, ನಕ್ಷತ್ರ, ತಾರಾಗಣಗಳ ಸ್ಥಿತಿಗಳನ್ನೂ ಬೇರೆ-ಬೇರೆಯಾಗಿ ವರ್ಣಿಸಿರಿ. ॥ ೩೨-೩೩ ॥ ದಾನ, ತಪಸ್ಸು, ಇಷ್ಟಾ- ಪೂರ್ತಕರ್ಮಗಳ ಫಲವೇನು? ಪ್ರವಾಸ ಹಾಗೂ ಆಪತ್ಕಾಲದಲ್ಲಿ ಮನುಷ್ಯನು ಯಾವ ಧರ್ಮವನ್ನು ಆಚರಿಸಬೇಕು ? ॥ ೩೪ ॥ ಪುಣ್ಯಾತ್ಮರಾದ ಮೈತ್ರೇಯರೇ! ಧರ್ಮಕ್ಕೆ ಮೂಲ ಕಾರಣನಾದ ಭಗವಾನ್ ಜನಾರ್ದನನು ಯಾವ ಆಚರಣೆಗಳಿಂದ ಸಂತುಷ್ಟನಾಗುತ್ತಾನೆ ? ಯಾರ ಮೇಲೆ ಅನುಗ್ರಹ ತೋರುವನು ? ಎಂಬುದನ್ನೂ ವರ್ಣಿಸಿರಿ. ॥ ೩೫ ॥ ದ್ವಿಜಶ್ರೇಷ್ಠರೇ! ದೀನವತ್ಸಲರಾದ ಗುರುಗಳು ತಮಗೆ ವಿಧೇಯರಾಗಿರುವ ಶಿಷ್ಯರಿಗೂ ಮತ್ತು ಪುತ್ರರಿಗೂ ಕೇಳದೆಯೇ ಹಿತೋಪದೇಶ ಮಾಡುತ್ತಾರೆ. ॥ ೩೬ ॥ ಪೂಜ್ಯರೇ! ಮಹದಾದಿ ತತ್ತ್ವಗಳ ಪ್ರಳಯಗಳು ಎಷ್ಟು ಪ್ರಕಾರಗಳಾಗಿವೆ ? ಶ್ರೀಭಗವಂತನು ಯೋಗನಿದ್ರೆಯಲ್ಲಿರುವಾಗ ಅವುಗಳಲ್ಲಿ ಯಾವ-ಯಾವ ತತ್ತ್ವಗಳು ಅವನ ಸೇವೆ ಮಾಡುತ್ತವೆ ? ಯಾವ-ಯಾವ ತತ್ತ್ವಗಳು ಅವನಲ್ಲಿ ಲಯ

ತತ್ತ್ವಾನಾಂ ಭಗವಂಸ್ತೇಷಾಂ ಕತಿಧಾ ಪ್ರತಿಸಂಕ್ರಮಃ ।
ತತ್ರೇಮಂ ಕ ಉಪಾಸೀರನ್ ಕ ಉ ಸ್ವಿದನುಶೇರತೇ ॥ ೩೭ ॥

ಪುರುಷಸ್ಯ ಚ ಸಂಸ್ಥಾನಂ ಸ್ವರೂಪಂ ವಾ ಪರಸ್ಯ ಚ ।
ಜ್ಞಾನಂ ಚ ನೈಗಮಂ ಯತ್ತದ್ಗುರುಶಿಷ್ಯಪ್ರಯೋಜನಮ್ ॥ ೩೮ ॥

ನಿಮಿತ್ತಾನಿ ಚ ತಸ್ಯೇಹ ಪ್ರೋಕ್ತಾನ್ಯನಘ ಸೂರಿಭಿಃ ।
ಸ್ವತೋ ಜ್ಞಾನಂ ಕುತಃ ಪುಂಸಾಂ ಭಕ್ತಿರ್ವೈರಾಗ್ಯಮೇವ ವಾ ॥ ೩೯ ॥

ಏತಾನ್ಮೇ ಪೃಚ್ಛತಃ ಪ್ರಶ್ನಾನ್ ಹರೇಃ ಕರ್ಮವಿವಿತ್ಸಯಾ ।
ಬ್ರೂಹಿ ಮೇಽಜ್ಞಸ್ಯ ಮಿತ್ರತ್ವಾದಜಯಾ ನಷ್ಟಚಕ್ಷುಷಃ ॥ ೪೦ ॥

ಸರ್ವೇ ವೇದಾಶ್ಚ ಯಜ್ಞಾಶ್ಚ ತಪೋ ದಾನಾನಿ ಚಾನಘ ।
ಜೀವಾಭಯಪ್ರದಾನಸ್ಯ ನ ಕುರ್ವೀರನ್ ಕಲಾಮಪಿ ॥ ೪೧ ॥

ಶ್ರೀಶುಕ ಉವಾಚ

ಸ ಇತ್ಥಮಾಪೃಷ್ಟಪುರಾಣಕಲ್ಪಃ
ಕುರುಪ್ರಧಾನೇನ ಮುನಿಪ್ರಧಾನಃ ।
ಪ್ರವೃದ್ಧಹರ್ಷೋ ಭಗವತ್ಕಥಾಯಾಂ
ಸಂಚೋದಿತಸ್ತಂ ಪ್ರಹಸನ್ನಿವಾಹ ॥ ೪೨ ॥

ಹೊಂದುತ್ತವೆ? ॥ ೩೭ ॥ ಜೀವದ ತತ್ತ್ವವೇನು? ಪರಮ ಪುರುಷನ ಸ್ವರೂಪವೇನು? ಉಪನಿಷತ್ ಪ್ರತಿಪಾದಿತ ಜ್ಞಾನದ ಸ್ವರೂಪ ಮತ್ತು ಗುರು-ಶಿಷ್ಯರ ಪಾರಸ್ಪರಿಕ ಪ್ರಯೋಜನವೇನು? ॥ ೩೮ ॥ ಪುಣ್ಯಾತ್ಮರೇ! ಆ ಜ್ಞಾನದ ಪ್ರಾಪ್ತಿಗಾಗಿ ವಿದ್ವಾಂಸರು ಯಾವ-ಯಾವ ಉಪಾಯಗಳನ್ನು ಹೇಳಿರುವರು? ಏಕೆಂದರೆ, ಮನುಷ್ಯರಿಗೆ ಜ್ಞಾನ, ಭಕ್ತಿ, ವೈರಾಗ್ಯಗಳು ತಾವೇ-ತಾವಾಗಿ ಉಂಟಾಗಲಾರದಷ್ಟೆ? ॥ ೩೯ ॥ ಬ್ರಾಹ್ಮಣ ಶ್ರೇಷ್ಠರೇ! ಮಾಯಾ-ಮೋಹದಿಂದಾಗಿ ನನ್ನ ವಿಚಾರದೃಷ್ಟಿಯು ನಷ್ಟವಾಗಿ ಹೋಗಿದೆ. ನಾನು ಅಜ್ಞಾನಿಯಾಗಿದ್ದೇನೆ. ತಾವೋ ನನ್ನ ಪರಮ ಹಿತೈಷಿಗಳು. ಆದ್ದರಿಂದ ಶ್ರೀಹರಿಲೀಲೆಯ ಜ್ಞಾನವನ್ನು ಪಡೆಯುವ ಇಚ್ಛೆಯಿಂದ ನಾನು ಕೇಳಿರುವ ಪ್ರಶ್ನೆಗಳಿಗೆ ಉತ್ತರವನ್ನು ದಯಪಾಲಿಸಿರಿ. ॥ ೪೦ ॥ ಪುಣ್ಯಾತ್ಮರಾದ ಮೈತ್ರೇಯರೇ! ಸಮಸ್ತ ವೇದಗಳ ಅಧ್ಯಯನ, ಯಜ್ಞ, ತಪಸ್ಸು, ದಾನಾದಿಗಳಿಂದ ಉಂಟಾಗುವ ಪುಣ್ಯವು – ಭಗವತ್ತತ್ತ್ವದ ಉಪದೇಶದಿಂದ ಜೀವಿಯನ್ನು ಜನ್ಮ-ಮೃತ್ಯು ಭಯದಿಂದ ಬಿಡಿಸಿ, ಅವನನ್ನು ನಿರ್ಭಯನನ್ನಾಗಿಸುವುದರಲ್ಲಿ ಉಂಟಾಗುವ ಪುಣ್ಯದ ಹದಿನಾರನೆಯ ಒಂದು ಭಾಗಕ್ಕೂ ಸಾಟಿಯಾಗಲಾರದು. ॥ ೪೧ ॥

ಶ್ರೀಶುಕಮಹರ್ಷಿಗಳು ಹೇಳುತ್ತಾರೆ – ಎಲೈ ರಾಜೇಂದ್ರಾ! ಕುರುಶ್ರೇಷ್ಠನಾದ ವಿದುರನು ಹೀಗೆ ಪುರಾಣದ ವಿಷಯದಲ್ಲಿ ಪ್ರಶ್ನೆ ಮಾಡಿದಾಗ, ಮುನಿಶ್ರೇಷ್ಠರಾದ ಮೈತ್ರೇಯರಿಗೆ ತುಂಬಾ ಸಂತೋಷವಾಯಿತು. ಶ್ರೀಭಗವಂತನ ಕಥೆಯನ್ನು ಹೇಳಲು ಪ್ರೇರಣೆ ಬಂದದ್ದರಿಂದ ಹರ್ಷಗೊಂಡು ನಸುನಗುತ್ತಾ ಅವನಿಗೆ ಹೀಗೆ ಹೇಳತೊಡಗಿದರು. ॥ ೪೨ ॥

ಏಳನೆಯ ಅಧ್ಯಾಯವು ಮುಗಿಯಿತು. ॥ ೭ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ತೃತೀಯಸ್ಕಂಧೇ ಸಪ್ತಮೋಽಧ್ಯಾಯಃ ॥ ೭ ॥

ಎಂಟನೆಯ ಅಧ್ಯಾಯ

ಬ್ರಹ್ಮದೇವರ ಉತ್ಪತ್ತಿ

ಮೈತ್ರೇಯ ಉವಾಚ

ಸತ್ಸೇವನೀಯೋ ಬತ ಪೂರುವಂಶೋ
ಯಲ್ಲೋಕಪಾಲೋ ಭಗವತ್ಪ್ರಧಾನಃ ।
ಬಭೂವಿಥೇಹಾಜಿತಕೀರ್ತಿಮಾಲಾಂ
ಪದೇ ಪದೇ ನೂತನಯಸ್ಯಭೀಕ್ಷ್ಣಮ್ ॥ ೧ ॥

ಸೋಽಹಂ ನೃಣಾಂ ಕ್ಷುಲ್ಲಸುಖಾಯ ದುಃಖಂ
ಮಹದ್ಗತಾನಾಂ ವಿರಮಾಯ ತಸ್ಯ ।
ಪ್ರವರ್ತಯೇ ಭಾಗವತಂ ಪುರಾಣಂ
ಯದಾಹ ಸಾಕ್ಷಾದ್ಭಗವಾನೃಷಿಭ್ಯಃ ॥ ೨ ॥

ಶ್ರೀಮೈತ್ರೇಯರು ಹೇಳುತ್ತಾರೆ – ಎಲೈ ವಿದುರನೇ! ನೀನು ಭಗವದ್ಭಕ್ತರಲ್ಲಿ ಪ್ರಧಾನನೂ, ಲೋಕಪಾಲಕನೂ ಆ ಯಮಧರ್ಮನೇ ಆಗಿರುವೆ. ನೀನು ಪುರುವಂಶದಲ್ಲಿ ಹುಟ್ಟಿದ್ದರಿಂದ ಆ ವಂಶವು ಸಾಧು-ಸತ್ಪುರುಷರಿಗೆ ಸೇವ್ಯವಾಗಿ ಹೋಗಿದೆ. ಎಂತಹ ಧನ್ಯನು ನೀನು! ಶ್ರೀಹರಿಯ ಕೀರ್ತಿಮಯ ಮಾಲೆಯನ್ನು ಪ್ರತಿಯೊಂದು ಪದದಲ್ಲಿಯೂ ನಿರಂತರವಾಗಿ ಹೊಸದಾಗಿಸುತ್ತಿದ್ದೀಯೆ. ॥ ೧ ॥ ಈಗ ನಾನು ಕ್ಷುದ್ರವಾದ ವಿಷಯಸುಖದ ಕಾಮನೆಯಿಂದ ಮಹಾದುಃಖವನ್ನು ಅನುಭವಿಸುತ್ತಿರುವ ಜನರ ದುಃಖವನ್ನು ತೊಲಗಿಸುವುದಕ್ಕಾಗಿ ಶ್ರೀಮದ್ಭಾಗವತ ಮಹಾಪುರಾಣವನ್ನು ಪ್ರಾರಂಭಿಸುತ್ತೇನೆ. ಇದನ್ನು ಸ್ವಯಂ ಸಂಕರ್ಷಣ ಭಗವಂತನು ಸನಕಾದಿ ಮಹರ್ಷಿಗಳಿಗೆ ಉಪದೇಶಿಸಿದ್ದನು. ॥ ೨ ॥

ಆಸೀನಮುರ್ವ್ಯಾಂ ಭಗವಂತಮಾದ್ಯಂ
ಸಂಕರ್ಷಣಂ ದೇವಮಕುಂಠಸತ್ತ್ವಮ್ ।
ವಿವಿತ್ಸವಸ್ತತ್ತ್ವಮತಃ ಪರಸ್ಯ
ಕುಮಾರಮುಖ್ಯಾ ಮುನಯೋಽನ್ವಪೃಚ್ಛನ್ ॥ ೩ ॥

ಸ್ವಮೇವ ಧಿಷ್ಣ್ಯಂ ಬಹು ಮಾನಯಂತಂ
ಯಂ ವಾಸುದೇವಾಭಿಧಮಾಮನಂತಿ ।
ಪ್ರತ್ಯಗ್ಧೃತಾಕ್ಷಾಂಬುಜಕೋಶಮೀಷ-
ದುನ್ಮೀಲಯಂತಂ ವಿಬುಧೋದಯಾಯ ॥ ೪ ॥

ಸ್ವರ್ಧುನ್ಯುದಾರ್ದ್ರೈಃ ಸ್ವಜಟಾಕಲಾಪೈ-
ರುಪಸ್ಪೃಶಂತಶ್ಚರಣೋಪಧಾನಮ್ ।
ಪದ್ಮಂ ಯದರ್ಚಂತ್ಯಹಿರಾಜಕನ್ಯಾಃ
ಸಪ್ರೇಮನಾನಾಬಲಿಭಿರ್ವರಾರ್ಥಾಃ ॥ ೫ ॥

ಮುಹುರ್ಗೃಣಂತೋ ವಚಸಾನುರಾಗ-
ಸ್ಖಲತ್ಪದೇನಾಸ್ಯ ಕೃತಾನಿ ತಜ್ಜ್ಞಾಃ ।
ಕಿರೀಟಸಾಹಸ್ರಮಣಿಪ್ರವೇಕ-
ಪ್ರದ್ಯೋತಿತೋದ್ದಾಮಫಣಾಸಹಸ್ರಮ್ ॥ ೬ ॥

ಪ್ರೋಕ್ತಂ ಕಿಲೈತದ್ಭಗವತ್ತಮೇನ
ನಿವೃತ್ತಿಧರ್ಮಾಭಿರತಾಯ ತೇನ ।
ಸನತ್ಕುಮಾರಾಯ ಸ ಚಾಹ ಪೃಷ್ಟ
ಸಾಂಖ್ಯಾಯನಾಯಾಂಗ ಧೃತವ್ರತಾಯ ॥ ೭ ॥

ಸಾಂಖ್ಯಾಯನಃ ಪಾರಮಹಂಸ್ಯಮುಖ್ಯೋ
ವಿವಕ್ಷಮಾಣೋ ಭಗವದ್ವಿಭೂತೀಃ ।
ಜಗಾದ ಸೋಽಸ್ಮದ್ಗುರವೇಽನ್ವಿತಾಯ
ಪರಾಶರಾಯಾಥ ಬೃಹಸ್ಪತೇಶ್ಚ ॥ ೮ ॥

ಪ್ರೋವಾಚ ಮಹ್ಯಂ ಸ ದಯಾಲುರುಕ್ತೋ
ಮುನಿಃ ಪುಲಸ್ತ್ಯೇನ ಪುರಾಣಮಾದ್ಯಮ್ ।
ಸೋಽಹಂ ತವೈತತ್ಕಥಯಾಮಿ ವತ್ಸ
ಶ್ರದ್ಧಾಲವೇ ನಿತ್ಯಮನುವ್ರತಾಯ ॥ ೯ ॥

ಉದಾಪ್ಲುತಂ ವಿಶ್ವಮಿದಂ ತದಾಽಽಸೀದ್
ಯನ್ನಿದ್ರಯಾಮೀಲಿತದೃಙ್ ನ್ಯಮೀಲಯತ್ ।
ಅಹೀಂದ್ರತಲ್ಪೇಽಧಿಶಯಾನ ಏಕಃ
ಕೃತಕ್ಷಣಃ ಸ್ವಾತ್ಮರತೌ ನಿರೀಹಃ ॥ ೧೦ ॥

ಅಖಂಡ ಜ್ಞಾನಸಂಪನ್ನ ಆದಿದೇವ ಭಗವಾನ್ ಸಂಕರ್ಷಣನು ಪಾತಾಳದಲ್ಲಿ ವಿರಾಜಮಾನನಾಗಿದ್ದನು. ಸನತ್ಕುಮಾರಾದಿ ಋಷಿಗಳು ಅವನಿಂದ ಪರಮಪುರುಷೋತ್ತಮ ಪರಬ್ರಹ್ಮತತ್ತ್ವವನ್ನು ತಿಳಿಯಲಿಕ್ಕಾಗಿ ಪ್ರಶ್ನಿಸಿದರು. ॥ ೩ ॥ ಸ್ವಾಮಿ ಸಂಕರ್ಷಣನು ಆಗ ತನಗೆ ಆಶ್ರಯನಾಗಿರುವ ಹಾಗೂ ವೇದಗಳು ಯಾರನ್ನು ವಾಸುದೇವನೆಂದು ನಿರೂಪಿಸುವವೋ ಆ ಪರಮಾತ್ಮನನ್ನೇ ಮನಸ್ಸಿನಲ್ಲಿ ಆರಾಧಿಸುತ್ತಿದ್ದನು. ಧ್ಯಾನದಲ್ಲಿ ಮುಳುಗಿದ್ದ ಆತನ ಕಮಲಸದೃಶವಾದ ಕಣ್ಣುಗಳು ಮುಚ್ಚಿದ್ದವು. ಋಷಿಗಳ ಪ್ರಶ್ನೆಯನ್ನು ಕೇಳಿ ಸನತ್ಕುಮಾರಾದಿ ಜ್ಞಾನಿಗಳ ಆನಂದಕ್ಕಾಗಿ ಅರೆತೆರೆದ ಕಣ್ಣುಗಳಿಂದ ಅವರನ್ನು ನೋಡಿದನು. ॥ ೪ ॥

ಸನಕಾದಿ ಮಹರ್ಷಿಗಳು ಮಂದಾಕಿನಿಯ ಜಲದಿಂದ ಒದ್ದೆಯಾದ ತಮ್ಮ ಜಟೆಗಳಿಂದ ಆ ಆದಿಶೇಷ ಸ್ವಾಮಿಯ ಪಾದಪೀಠರೂಪವಾದ ಪದ್ಮವನ್ನು ಮುಟ್ಟಿ ನಮಸ್ಕರಿಸಿದರು. ನಾಗರಾಜಕುಮಾರಿಯರು ತಮ್ಮ ಅಭೀಷ್ಟ ವರವನ್ನು ಪಡೆಯಲಿಕ್ಕಾಗಿ ಪ್ರೇಮದಿಂದ ಬಗೆ-ಬಗೆಯಾದ ಕಾಣಿಕೆಗಳನ್ನು ಸಮರ್ಪಿಸುತ್ತಾ ಪೂಜಿಸುತ್ತಿದ್ದ ಪವಿತ್ರವಾದ ಪದ್ಮಪೀಠವದು. ॥ ೫ ॥ ಅವನ ಲೀಲೆಗಳ ಮರ್ಮವನ್ನು ತಿಳಿದಿದ್ದ ಶ್ರೇಷ್ಠಮಹರ್ಷಿಗಳು ಪ್ರೇಮದಿಂದ ಗದ್ಗದವಾಣಿಯಿಂದ ಅವನ ದಿವ್ಯ ಲೀಲೆಗಳನ್ನು ಮತ್ತೆ-ಮತ್ತೆ ಹಾಡಿ ಹೊಗಳುತ್ತಿದ್ದರು. ಹರಡಿಕೊಂಡು ಮೇಲಕ್ಕೆ ಎತ್ತಿದ ಸ್ವಾಮಿಯ ಸಾವಿರ ಹೆಡೆಗಳು, ಕಿರೀಟಗಳ ಸಾವಿರಾರು ರತ್ನಶ್ರೇಷ್ಠಗಳಿಂದ ಹೊರ ಹೊಮ್ಮುತ್ತಿದ್ದ ಕಿರಣಗಳಿಂದ ಥಳ-ಥಳಿಸುತ್ತಿದ್ದುವು. ॥ ೬ ॥ ಸಂಕರ್ಷಣ ಭಗವಂತನು ನಿವೃತ್ತಿಪರಾಯಣರಾದ ಸನತ್ಕುಮಾರರಿಗೆ ಈ ಶ್ರೀಮದ್ಭಾಗವತವನ್ನು ಉಪದೇಶಿಸಿದ್ದನೆಂಬುದು ಪ್ರಸಿದ್ಧವಾಗಿದೆ. ಅನಂತರ ಆ ಮಹರ್ಷಿವರ್ಯರು ತಮ್ಮನ್ನು ಪ್ರಶ್ನೆಮಾಡಿದ ವ್ರತನಿಷ್ಠರಾದ ಸಾಂಖ್ಯಾಯನ ಮುನಿಗಳಿಗೆ ಅದನ್ನು ಉಪದೇಶ ಮಾಡಿದರು. ॥ ೭ ॥ ಪರಮಹಂಸರಲ್ಲಿ ಶ್ರೇಷ್ಠರಾದ ಶ್ರೀಸಾಂಖ್ಯಾಯನರಿಗೆ ಶ್ರೀಭಗವಂತನ ವಿಭೂತಿಗಳನ್ನು ವರ್ಣಿಸಬೇಕೆಂಬ ಇಚ್ಛೆಯುಂಟಾದಾಗ ಅವರು ಇದನ್ನು ತಮ್ಮ ಆಪ್ತರೂ, ವಿಧೇಯರೂ, ಶಿಷ್ಯರೂ ಆದ ನಮ್ಮ ಪರಮಗುರುಗಳಾದ ಪರಾಶರರಿಗೂ ಮತ್ತು ಬೃಹಸ್ಪತಿಗೂ ಉಪದೇಶಿಸಿದರು. ॥ ೮ ॥ ಇದಾದ ಬಳಿಕ ಪರಮ ದಯಾಳುಗಳಾದ ಪರಾಶರರು ಪುಲಸ್ತ್ಯಮುನಿಗಳಿಂದ ಆಶೀರ್ವಾದ ಪಡೆದು ಆ ಆದಿಪುರಾಣವನ್ನು ನನಗೆ ಉಪದೇಶಮಾಡಿದರು. ವತ್ಸಾ! ನೀನು ಶ್ರದ್ಧಾಳುವೂ, ನಿಷ್ಠೆಯಿಂದ ಅನುಸರಿಸುತ್ತಿರುವ ಭಕ್ತನೂ ಆಗಿರುವುದರಿಂದ ಈಗ ಅದೇ ಪುರಾಣವನ್ನು ನಾನು ನಿನಗೆ ಉಪದೇಶಿಸುತ್ತೇನೆ. ॥ ೯ ॥

ಸೃಷ್ಟಿಯ ಮೊದಲು ಈ ಜಗತ್ತೆಲ್ಲವೂ ನೀರಿನಲ್ಲಿ ಮುಳುಗಿ ಹೋಗಿತ್ತು. ಆಗ ಶ್ರೀಮನ್ನಾರಾಯಣನೊಬ್ಬನೇ ಶೇಷತಲ್ಪದಲ್ಲಿ ಪವಡಿಸಿದ್ದನು. ಯೋಗನಿದ್ರೆಯಲ್ಲಿ ಕಣ್ಣುಮುಚ್ಚಿಕೊಂಡಿದ್ದರೂ ಆತನ ಜ್ಞಾನಶಕ್ತಿಯು ಮಾತ್ರ ಸಂಪೂರ್ಣವಾಗಿ ಎಚ್ಚರವಾಗಿಯೇ ಇತ್ತು. ಆತನು ಆತ್ಮಾನಂದದಲ್ಲೇ ಮಗ್ನನಾಗಿದ್ದನು. ಯಾವ ಸಂಕಲ್ಪವೂ, ಕ್ರಿಯೆಯೂ ಇಲ್ಲದೆ ಸ್ವಾಮಿಯು ತಾನೇ-ತಾನಾಗಿ ಜಲದಲ್ಲಿ ಮಲಗಿದ್ದನು. ॥ ೧೦ ॥

ಆಗ ಕಟ್ಟಿಗೆಯಲ್ಲಿ ಅಡಗಿರುವ ಬೆಂಕಿಯಂತೆ-ಸಕಲ ಭೂತಗಳೂ ಆತನ ದೇಹದಲ್ಲಿ ಸೂಕ್ಷ್ಮರೂಪದಲ್ಲಿ ಅಡಗಿ ಕೊಂಡಿದ್ದವು.

ಸೋಽನ್ತಃಶರೀರೇಽರ್ಪಿತಭೂತಸೂಕ್ಷ್ಮಃ
ಕಾಲಾತ್ಮಿಕಾಂ ಶಕ್ತಿಮುದೀರಯಾಣಃ ।
ಉವಾಸ ತಸ್ಮಿನ್ಸಲಿಲೇ ಪದೇ ಸ್ವೇ
ಯಥಾನಲೋ ದಾರುಣಿ ರುದ್ಧವೀರ್ಯಃ ॥ ೧೧ ॥

ಚತುರ್ಯುಗಾನಾಂ ಚ ಸಹಸ್ರಮಪ್ಸು
ಸ್ವಪನ್ಸ್ವಯೋದೀರಿತಯಾ ಸ್ವಶಕ್ತ್ಯಾ ।
ಕಾಲಾಖ್ಯಯಾಽಽಸಾದಿತಕರ್ಮತಂತ್ರೋ
ಲೋಕಾನಪೀತಾನ್ ದದೃಶೇ ಸ್ವದೇಹೇ ॥ ೧೨ ॥

ತಸ್ಯಾರ್ಥಸೂಕ್ಷ್ಮಾಭಿನಿವಿಷ್ಟದೃಷ್ಟೇ-
ರಂತರ್ಗತೋಽರ್ಥೋ ರಜಸಾ ತನೀಯಾನ್ ।
ಗುಣೇನ ಕಾಲಾನುಗತೇನ ವಿದ್ಧಃ
ಸೂಷ್ಯಂಸ್ತದಾಭಿದ್ಯತ ನಾಭಿದೇಶಾತ್ ॥ ೧೩ ॥

ಸ ಪದ್ಮಕೋಶಃ ಸಹಸೋದತಿಷ್ಠತ್
ಕಾಲೇನ ಕರ್ಮಪ್ರತಿಬೋಧನೇನ ।
ಸ್ವರೋಚಿಷಾ ತತ್ಸಲಿಲಂ ವಿಶಾಲಂ
ವಿದ್ಯೋತಯನ್ನರ್ಕ ಇವಾತ್ಮಯೋನಿಃ ॥ ೧೪ ॥

ತಲ್ಲೋಕಪದ್ಮಂ ಸ ಉ ಏವ ವಿಷ್ಣುಃ
ಪ್ರಾವೀವಿಶತ್ಸರ್ವಗುಣಾವಭಾಸಮ್ ।
ತಸ್ಮಿನ್ಸ್ವಯಂ ವೇದಮಯೋ ವಿಧಾತಾ
ಸ್ವಯಂಭುವಂ ಯಂ ಸ್ಮ ವದಂತಿ ಸೋಽಭೂತ್ ॥ ೧೫ ॥

ತಸ್ಯಾಂ ಸ ಚಾಮ್ಭೋರುಹಕರ್ಣಿಕಾಯಾ-
ಮವಸ್ಥಿತೋ ಲೋಕಮಪಶ್ಯಮಾನಃ ।
ಪರಿಕ್ರಮನ್ ವ್ಯೋಮ್ನಿ ವಿವೃತ್ತನೇತ್ರ-
ಶ್ಚತ್ವಾರಿ ಲೇಭೇಽನುದಿಶಂ ಮುಖಾನಿ ॥ ೧೬ ॥

ತಸ್ಮಾದ್ಯುಗಾಂತಶ್ವಸನಾವಘೂರ್ಣ-
ಜಲೋರ್ಮಿಚಕ್ರಾತ್ಸಲಿಲಾದ್ವಿರೂಢಮ್ ।
ಉಪಾಶ್ರಿತಃ ಕಂಜಮು ಲೋಕತತ್ತ್ವಂ
ನಾತ್ಮಾನಮದ್ಧಾವಿದದಾದಿದೇವಃ ॥ ೧೭ ॥

ಕ ಏಷ ಯೋಽಸಾವಹಮಬ್ಜಪೃಷ್ಠ
ಏತತ್ಕುತೋ ವಾಬ್ಜಮನನ್ಯದಪ್ಸು ।
ಅಸ್ತಿ ಹ್ಯಧಸ್ತಾದಿಹ ಕಿಂಚನೈತ-
ದಧಿಷ್ಠಿತಂ ಯತ್ರ ಸತಾ ನು ಭಾವ್ಯಮ್ ॥ ೧೮ ॥

ಸ ಇತ್ಥಮುದ್ವೀಕ್ಷ್ಯ ತದಬ್ಜನಾಲ-
ನಾಡೀಭಿರಂತರ್ಜಲಮಾವಿವೇಶ ।
ನಾರ್ವಾಗ್ಗತಸ್ತತ್ಖರನಾಲನಾಲ-
ನಾಭಿಂ ವಿಚಿನ್ವಂಸ್ತದವಿಂದತಾಜಃ ॥ ೧೯ ॥

ಎಲ್ಲ ಶಕ್ತಿಗಳನ್ನೂ ಲಯಗೊಳಿಸಿ ಕೊಂಡಿದ್ದರೂ ಸೃಷ್ಟಿಕಾಲ ಬಂದಾಗ ತನ್ನನ್ನು ಎಚ್ಚರಿಸಲು ಕಾಲಶಕ್ತಿಯೊಂದನ್ನು ಮಾತ್ರ ಅವನು ಎಚ್ಚರವಾಗಿ ಇರಿಸಿಕೊಂಡಿದ್ದನು. ॥ ೧೧ ॥ ಹೀಗೆ ಸ್ವಾಮಿಯು ತನ್ನ ಸ್ವರೂಪವಾದ ಚಿತ್‌ಶಕ್ತಿಯೊಂದಿಗೆ ಒಂದು ಸಾವಿರ ಚತುರ್ಯುಗಗಳವರೆಗೆ ನೀರಿನಲ್ಲಿ ಪವಡಿಸಿದಾಗ ಆತನಿಂದಲೇ ನೇಮಿಸಲ್ಪಟ್ಟ ಕಾಲಶಕ್ತಿಯು ಅವನನ್ನು ಜೀವಿಗಳ ಕರ್ಮಗಳನ್ನು ಪ್ರವೃತ್ತಿಗಾಗಿ ಪ್ರೇರೇಪಿಸಿದಾಗ ಅವನು ತನ್ನ ಶರೀರದಲ್ಲಿ ಲೀನವಾದ ಅನಂತ ಲೋಕಗಳನ್ನು ನೋಡಿದನು. ॥ ೧೨ ॥ ಸೂಕ್ಷ್ಮರೂಪದಲ್ಲಿರುವ ಲಿಂಗಶರೀರಾದಿಗಳಲ್ಲಿ ಭಗವಂತನ ದೃಷ್ಟಿಯು ಬೀಳಲು ಆಗ ಆತನ ಅಂತರ್ಗತವಾದ ಅರ್ಥವು ಕಾಲಶಕ್ತಿಯನ್ನು ಆಶ್ರಯಿಸಿದ ರಜೋಗುಣದಿಂದ ಪ್ರೇರಣೆಗೊಂಡು ಸೃಷ್ಟಿರಚನೆಗಾಗಿ ಆವನ ನಾಭಿಸ್ಥಾನದಿಂದ ಹೊರಗೆ ಉದ್ಭವಿಸಿತು. ॥ ೧೩ ॥ ಕರ್ಮಶಕ್ತಿಯನ್ನು ಎಚ್ಚರಗೊಳಿಸುವ ಕಾಲದ ಮೂಲಕ ಮಹಾವಿಷ್ಣುವಿನ ನಾಭಿಯಿಂದ ಪ್ರಕಟಗೊಂಡ ಆ ಸೂಕ್ಷ್ಮತತ್ತ್ವವು ಕಮಲದ ಮೊಗ್ಗಿನ ರೂಪದಲ್ಲಿ ಒಮ್ಮೆಲೇ ಮೇಲಕ್ಕೆದ್ದು ಸೂರ್ಯಸದೃಶವಾದ ತನ್ನ ತೇಜಸ್ಸಿನಿಂದ ಆ ಅಪಾರವಾದ ಜಲರಾಶಿಯನ್ನು ಪ್ರಕಾಶಗೊಳಿಸಿತು. ॥ ೧೪ ॥ ಸಮಸ್ತ ಗುಣಗಳಿಗೂ ಪ್ರಕಾಶಕವಾದ ಆ ಸರ್ವಲೋಕಸ್ವರೂಪವಾದ ಕಮಲವನ್ನು ಭಗವಂತನು ಅಂತರ್ಯಾಮಿರೂಪದಲ್ಲಿ ಪ್ರವೇಶಿಸಿದನು. ಆಗ ಸರ್ವವೇದಮಯರಾಗಿ ಸೃಷ್ಟಿಕರ್ತರಾಗಿ 'ಸ್ವಯಂಭೂ' ಎಂದು ಜ್ಞಾನಿಗಳಿಂದ ಕರೆಯಲ್ಪಡುವ ಬ್ರಹ್ಮದೇವರು ಅದರಿಂದ ಹುಟ್ಟಿಕೊಂಡರು. ॥ ೧೫ ॥ ಆ ಕಮಲದ ಕರ್ಣಿಕೆಯ ಮಧ್ಯದಲ್ಲಿ ಕುಳಿತಿದ್ದ ಬ್ರಹ್ಮದೇವರಿಗೆ ಯಾವ ಲೋಕವೂ ಕಾಣದಿರಲು ಅವರು ಆಕಾಶದಲ್ಲಿ ಕಣ್ಣನ್ನರಳಿಸಿಕೊಂಡು ನಾಲ್ಕೂ ಕಡೆಗೆ ಹೊರಳಿಸಿದಾಗ ಅವರಿಗೆ ನಾಲ್ಕು ದಿಕ್ಕುಗಳಲ್ಲಿಯೂ ನಾಲ್ಕು ಮುಖಗಳು ಪ್ರಕಟಗೊಂಡವು. ॥ ೧೬ ॥ ಆಗ ಪ್ರಳಯಕಾಲದ ಪ್ರಚಂಡವಾಯುವಿನ ಹೊಡೆತಗಳಿಂದ ಚಿಮ್ಮುತ್ತಿದ್ದ ಜಲರಾಶಿಯಿಂದ ಉದ್ಭವಿಸಿದ ಕಮಲದ ಮೇಲೆ ವಿರಾಜಮಾನರಾದ ಆ ಆದಿಬ್ರಹ್ಮದೇವರಿಗೆ ತಾನು ಯಾರು? ಮತ್ತು ಆ ಲೋಕತತ್ತ್ವರೂಪೀ ಕಮಲದ ರಹಸ್ಯವು ಏನೂ ತಿಳಿಯಲಿಲ್ಲ. ॥ ೧೭ ॥

ಈ ಕಮಲದ ಕರ್ಣಿಕೆಯಲ್ಲಿ ಕುಳಿತಿರುವ ನಾನು ಯಾರು? ಈ ಪದ್ಮವು ನೀರಿನಲ್ಲಿ ಹುಟ್ಟಲು ಕಾರಣವೇನು? ಹಾಗಾದರೆ ಇದರ ಕೆಳಗಡೆ ಇದಕ್ಕೆ ಆಧಾರವಾಗಿರುವ ಯಾವುದೋ ಒಂದು ವಸ್ತು ಇರಬೇಡವೇ? ಎಂದು ಅವರು ಆಲೋಚನೆ ಮಾಡಿದರು. ॥ ೧೮ ॥

ಹೀಗೆ ಆಲೋಚಿಸಿದ ಅವರು ಆ ಕಮಲನಾಳದ ಸೂಕ್ಷ್ಮ ರಂಧ್ರಗಳ ಮೂಲಕವಾಗಿ ಆ ನೀರಿನಲ್ಲಿ ಒಳಹೊಕ್ಕು ಅದರ ಕೆಳಭಾಗವನ್ನು ಹುಡುಕಿದರು. ಹಾಗೆ ಹುಡುಕುತ್ತಾ ಆ ನಾಳದ ನಾಭಿಪ್ರದೇಶದ ಬಳಿಗೆ ಬಂದರೂ ಅವರಿಗೆ ಅದರ ಆಧಾರವು ದೊರೆಯದೆ ಹೋಯಿತು. ॥ ೧೯ ॥

ವಿದುರನೇ! ಹೀಗೆ ಅಪಾರವಾದ ಕತ್ತಲೆಯಲ್ಲಿ ತನ್ನ ಉತ್ಪತ್ತಿಸ್ಥಾನವನ್ನು ಹುಡುಕುತ್ತಿರಲು ಬ್ರಹ್ಮದೇವರಿಗೆ ಬಹಳ ಕಾಲವು ಕಳೆದುಹೋಯಿತು. ಆ ಸಮಯವೇ ಪ್ರಾಣಿಗಳಿಗೆ ಭಯವನ್ನುಂಟು

ತಮಸ್ಯಪಾರೇ ವಿದುರಾತ್ಮಸರ್ಗಂ
ವಿಚಿನ್ವತೋಽಭೂತ್ಸುಮಹಾಂಸ್ತ್ರಿಣೇಮಿಃ ।
ಯೋ ದೇಹಭಾಜಾಂ ಭಯಮೀರಯಾಣಃ
ಪರಿಕ್ಷಿಣೋತ್ಯಾಯುರಜಸ್ಯ ಹೇತಿಃ ॥ ೧೯ ॥

ತತೋ ನಿವೃತ್ತೋಽಪ್ರತಿಲಬ್ಧಕಾಮಃ
ಸ್ವಧಿಷ್ಣ್ಯಮಾಸಾದ್ಯ ಪುನಃ ಸ ದೇವಃ ।
ಶನೈರ್ಜಿತಶ್ವಾಸನಿವೃತ್ತಚಿತ್ತೋ
ನ್ಯಷೀದದಾರೂಢಸಮಾಧಿಯೋಗಃ ॥ ೨೦ ॥

ಕಾಲೇನ ಸೋಽಜಃ ಪುರುಷಾಯುಷಾಭಿ-
ಪ್ರವೃತ್ತಯೋಗೇನ ವಿರೂಢಬೋಧಃ ।
ಸ್ವಯಂ ತದಂತರ್ಹೃದಯೇಽವಭಾತ-
ಮಪಶ್ಯತಾಪಶ್ಯತ ಯನ್ನ ಪೂರ್ವಮ್ ॥ ೨೧ ॥

ಮೃಣಾಲಗೌರಾಯತಶೇಷಭೋಗ-
ಪರ್ಯಂಕ ಏಕಂ ಪುರುಷಂ ಶಯಾನಮ್ ।
ಫಣಾತಪತ್ರಾಯುತಮೂರ್ಧರತ್ನ-
ದ್ಯುಭಿರ್ಹತಧ್ವಾಂತಯುಗಾಂತತೋಯೇ ॥ ೨೨ ॥

ಪ್ರೇಕ್ಷಾಂ ಕ್ಷಿಪಂತಂ ಹರಿತೋಪಲಾದ್ರೇಃ
ಸಂಧ್ಯಾಭ್ರನೀವೇರುರುರುಕ್ಮಮೂರ್ಧ್ನಃ ।
ರತ್ನೋದಧಾರೌಷಧಿಸೌಮನಸ್ಯ
ವನಸ್ರಜೋ ವೇಣುಭುಜಾಂಘ್ರಿಪಾಂಘ್ರೇಃ ॥ ೨೩ ॥

ಆಯಾಮತೋ ವಿಸ್ತರತಃ ಸ್ವಮಾನ-
ದೇಹೇನ ಲೋಕತ್ರಯಸಂಗ್ರಹೇಣ ।
ವಿಚಿತ್ರದಿವ್ಯಾಭರಣಾಂಶುಕಾನಾಂ
ಕೃತಶ್ರಿಯಾಪಾಶ್ರಿತವೇಷದೇಹಮ್ ॥ ೨೪ ॥

ಪುಂಸಾಂ ಸ್ವಕಾಮಾಯ ವಿವಿಕ್ತಮಾರ್ಗೈ-
ರಭ್ಯರ್ಚತಾಂ ಕಾಮದುಘಾಂಘ್ರಿಪದ್ಮಮ್ ।
ಪ್ರದರ್ಶಯಂತಂ ಕೃಪಯಾ ನಖೇಂದು-
ಮಯೂಖಭಿನ್ನಾಂಗುಲಿಚಾರುಪತ್ರಮ್ ॥ ೨೫ ॥

ಮಾಡುತ್ತಾ ತಾವರ ಆಯುಸ್ಸನ್ನು ಕ್ಷೀಣಗೊಳಿಸುತ್ತಿರುವ ಶ್ರೀಭಗವಂತನ ಕಾಲಚಕ್ರವೆಂದು ತಿಳಿ. ॥ ೧೯ ॥ ಹೀಗೆ ಎಷ್ಟು ಹುಡುಕಿದರೂ ತನ್ನ ನೆಲೆಯು ಸಿಕ್ಕದಿರಲು ಬ್ರಹ್ಮದೇವರು ವಿಫಲ ಮನೋರಥರಾಗಿ ಅಲ್ಲಿಂದ ಹಿಂದಿರುಗಿ ತಮಗೆ ಆಧಾರವಾಗಿದ್ದ ಕಮಲದ ಮೇಲೆ ಕುಳಿತು ನಿಧಾನವಾಗಿ ಪ್ರಾಣವಾಯುವನ್ನು ಜಯಿಸಿ ಚಿತ್ತದ ಸಂಕಲ್ಪ-ವಿಕಲ್ಪಗಳನ್ನು ತೊರೆದು ಸಮಾಧಿಸ್ಥರಾದರು. ॥ ೨೦ ॥ ಹೀಗೆ ಬ್ರಹ್ಮದೇವರಿಗೆ ಪುರುಷನ ಪೂರ್ಣಾಯುಷ್ಯವಾದ ದಿವ್ಯವಾದ ನೂರು ವರ್ಷಗಳ ಕಾಲದವರೆಗೆ ಯೋಗಾಭ್ಯಾಸ ಮಾಡಿದ್ದರಿಂದ ಜ್ಞಾನೋದಯವಾಗಲು ಆ ಹಿಂದೆ ಎಷ್ಟು ಹುಡುಕಿದರೂ ಕಾಣದಿರುವ ಆ ಸ್ಥಾನವು ತಮ್ಮ ಅಂತಃಕರಣದಲ್ಲೇ ಬೆಳಗುತ್ತಿರುವುದನ್ನು ಅವರು ನೋಡಿದರು. ॥ ೨೧ ॥ ಎಂತಹ ದಿವ್ಯದರ್ಶನವದು! ಆ ಪ್ರಳಯಜಲದಲ್ಲಿ ಕಮಲನಾಳದಂತೆ ಬೆಳ್ಳಗೆ ಹೊಳೆಯುತ್ತಿದ್ದ ವಿಶಾಲವಾದ ಆದಿ ಶೇಷನ ದಿವ್ಯದೇಹವೆಂಬ ಹಾಸಿಗೆಯಮೇಲೆ ಭಗವಾನ್ ಪುರುಷೋತ್ತಮನು ಒಬ್ಬಂಟಿಗನಾಗಿ ಪವಡಿಸಿದ್ದಾನೆ. ಆದಿಶೇಷನ ಹತ್ತು ಸಾವಿರ ಹೆಡೆಗಳು ಕೊಡೆಯಂತೆ ಮೇಲಕ್ಕೆ ಬಿಚ್ಚಿಕೊಂಡು ಹರಡಿ ಕೊಂಡಿವೆ. ಆತನ ಹೆಡೆಗಳ ಮೇಲೆ ಕಿರೀಟಗಳು ಕಂಗೊಳಿಸುತ್ತಿದ್ದು ಅದರಲ್ಲಿ ಕೆತ್ತಿದ್ದ ನವರತ್ನಗಳ ಕಾಂತಿಯಿಂದ ನಾಲ್ಕೂ ದಿಕ್ಕುಗಳ ಕತ್ತಲೆಯೂ ತೊಲಗಿಹೋಗಿದೆ. ॥ ೨೨ ॥ ಶ್ರೀಭಗವಂತನು ತನ್ನ ಶರೀರದ ಶ್ಯಾಮಲಕಾಂತಿಯಿಂದ ನೀಲಮರಕತಮಣಿಪರ್ವತದ ಕಾಂತಿಯನ್ನು ನಾಚಿಸುತ್ತಿದ್ದಾನೆ. ಆತನ ನಡುವಿನ ಪೀತಾಂಬರವು ಪರ್ವತದ ತಪ್ಪಲಿನಲ್ಲಿ ಹರಡಿರುವ ಸಂಧ್ಯಾಕಾಲದ ಹೊಂಬಣ್ಣದ ಮೋಡದ ಕಾಂತಿಯನ್ನು ಮಲಿನಗೊಳಿಸುತ್ತಿದೆ. ಆತನ ತಲೆಯ ಮೇಲೆ ಜಗ-ಜಗಿಸುತ್ತಿರುವ ಸ್ವರ್ಣಕಿರೀಟವು ಸ್ವರ್ಣಪರ್ವತದ ಶಿಖರಗಳ ಗರ್ವವನ್ನು ಭಂಜಿಸುತ್ತಿದೆ. ಆತನು ಧರಿಸಿದ ವನಮಾಲೆಯು ಪರ್ವತದ ರತ್ನಗಳ, ಜಲಪಾತದ, ಓಷಧಿಗಳ, ಪುಷ್ಪಗಳ ಶೋಭೆಯನ್ನು ಪರಾಜಯಗೊಳಿಸುತ್ತಿದೆ. ಆತನ ಭುಜ ದಂಡವು ಪರ್ವತದಲ್ಲಿ ಬೆಳೆದ ವೇಣುದಂಡವನ್ನೂ, ಚರಣಗಳು ಅಲ್ಲಿ ಕಂಗೊಳಿಸುತ್ತಿರುವ ಇತರ ವೃಕ್ಷಗಳನ್ನೂ ತಿರಸ್ಕರಿಸುತ್ತವೆ. ॥ ೨೩ ॥ ಆತನ ದಿವ್ಯ ಮಂಗಳ ವಿಗ್ರಹವು ಮೂರು ಲೋಕಗಳನ್ನೂ ಒಳಗೊಳ್ಳುವ ಉದ್ದಗಲಗಳಿಂದ ಕೂಡಿ ತನ್ನ ಕಾಂತಿಯಿಂದ ಬಗೆ-ಬಗೆಯ ದಿವ್ಯ ವಸ್ತ್ರಾಭರಣಗಳಿಗೆ ಕಾಂತಿಯನ್ನು ತುಂಬುತ್ತಿದ್ದರೂ ಪೀತಾಂಬರಾದಿ ತನ್ನ ವೇಷ-ಭೂಷಣಗಳಿಂದ ಸುಸಜ್ಜಿತವಾಗಿದೆ. ॥ ೨೪ ॥ ಶ್ರೀಭಗವಂತನು ತನ್ನ ಇಷ್ಟಾರ್ಥಗಳ ಸಿದ್ಧಿಗಾಗಿ ನಾನಾಮಾರ್ಗಗಳಿಂದ ಆರಾಧಿಸುತ್ತಿರುವ ಭಕ್ತಜನರಿಗೆ ಪರಮ ಕರುಣೆಯಿಂದ ಅವರ ಎಲ್ಲ ಇಷ್ಟಗಳಿಗೂ ಕಲ್ಪತರುವಿನಂತಿರುವ ತನ್ನ ಪಾದಾರವಿಂದಗಳ ದರ್ಶನವನ್ನು ದಯಪಾಲಿಸುತ್ತಿರುವನು. ಆ ದಿವ್ಯ ಪಾದಪದ್ಮಗಳ ಎಸಳುಗಳು ಕಾಲುಗುರುಗಳೆಂಬ ತಿಂಗಳು ಬೆಳಕಿನ ಕಾಂತಿಯಿಂದ ಬಿಡಿ-ಬಿಡಿಯಾಗಿ ಕಂಗೊಳಿಸುತ್ತಿವೆ. ॥ ೨೫ ॥

ಸ್ವಾಮಿಯು – ಸುಂದರವಾದ ಮೂಗು, ಚೆಲುವಾದ ಹುಬ್ಬುಗಳು, ಕಿವಿಗಳಲ್ಲಿ ಹೊಳೆಯುತ್ತಿರುವ ಕುಂಡಲಗಳ ಕಾಂತಿ, ತೊಂಡೆಯ ಹಣ್ಣಿನಂತೆ ಕೆಂಪಾದ ತುಟಿಗಳ ಸೊಬಗು ಹಾಗೂ

ಮುಖೇನ ಲೋಕಾರ್ತಿಹರಸ್ಮಿತೇನ
ಪರಿಸ್ಫುರತ್ಕುಂಡಲಮಂಡಿತೇನ ।
ಶೋಣಾಯಿತೇನಾಧರಬಿಂಬಭಾಸಾ
ಪ್ರತ್ಯರ್ಹಯಂತಂ ಸುನಸೇನ ಸುಭ್ರ್ವಾ ॥ ೨೭ ॥

ಕದಂಬಕಿಂಜಲ್ಕಪಿಶಂಗವಾಸಸಾ
ಸ್ವಲಂಕೃತಂ ಮೇಖಲಯಾ ನಿತಂಬೇ ।
ಹಾರೇಣ ಚಾನಂತಧನೇನ ವತ್ಸ
ಶ್ರೀವತ್ಸವಕ್ಷಸ್ಥಲವಲ್ಲಭೇನ ॥ ೨೮ ॥

ಪರಾರ್ಧ್ಯಕೇಯೂರಮಣಿಪ್ರವೇಕ-
ಪರ್ಯಸ್ತದೋರ್ದಂಡಸಹಸ್ರಶಾಖಮ್ ।
ಅವ್ಯಕ್ತಮೂಲಂ ಭುವನಾಂಘ್ರಿಪೇಂದ್ರ-
ಮಹೀಂದ್ರಭೋಗೈರಧಿವೀತವಲ್ಶಮ್ ॥ ೨೯ ॥

ಚರಾಚರೌಕೋ ಭಗವನ್ಮಹೀಧ್ರ-
ಮಹೀಂದ್ರಬಂಧುಂ ಸಲಿಲೋಪಗೂಢಮ್ ।
ಕಿರೀಟಸಾಹಸ್ರಹಿರಣ್ಯಶೃಂಗ-
ಮಾವಿರ್ಭವತ್ಕೌಸ್ತುಭರತ್ನಗರ್ಭಮ್ ॥ ೩೦ ॥

ನಿವೀತಮಾಮ್ನಾಯಮಧುವ್ರತಶ್ರಿಯಾ
ಸ್ವಕೀರ್ತಿಮಯ್ಯಾ ವನಮಾಲಯಾ ಹರಿಮ್ ।
ಸೂರ್ಯೇಂದುವಾಯ್ವಗ್ನ್ಯಗಮಂ ತ್ರಿಧಾಮಭಿಃ
ಪರಿಕ್ರಮತ್ಪ್ರಾಧನಿಕೈರ್ದುರಾಸದಮ್ ॥ ೩೧ ॥

ತರ್ಹ್ಯೇವ ತನ್ನಾಭಿಸರಃಸರೋಜ-
ಮಾತ್ಮಾನಮಂಭಃ ಶ್ವಸನಂ ವಿಯಚ್ಚ ।
ದದರ್ಶ ದೇವೋ ಜಗತೋ ವಿಧಾತಾ
ನಾತಃ ಪರಂ ಲೋಕವಿಸರ್ಗದೃಷ್ಟಿಃ ॥ ೩೨ ॥

ಸ ಕರ್ಮಬೀಜಂ ರಜಸೋಪರಕ್ತಃ
ಪ್ರಜಾಃ ಸಿಸೃಕ್ಷನ್ನಿಯದೇವ ದೃಷ್ಟ್ವಾ ।
ಅಸ್ತೌದ್ವಿಸರ್ಗಾಭಿಮುಖಸ್ತಮೀಡ್ಯ-
ಮವ್ಯಕ್ತವರ್ತ್ಮನ್ಯಭಿವೇಶಿತಾತ್ಮಾ ॥ ೩೩ ॥

ಸಕಲ ಲೋಕಗಳ ಪೀಡೆಗಳನ್ನು ಪರಿಹರಿಸುವ ಮಂದಹಾಸದಿಂದ ಶೋಭಿಸುತ್ತಿರುವ ಮುಖಾರವಿಂದದಿಂದ ಉಪಾಸಕರನ್ನು ಸಂಭಾವಿಸಿ ಅಭಿನಂದನೆ ಮಾಡುತ್ತಿದ್ದಾನೆ. ॥ ೨೭ ॥ ವತ್ಸಾ! ಆತನ ಸೊಂಟದಲ್ಲಿ ಕದಂಬ ಕುಸುಮದ ಕೇಸರದಂತೆ ಹೊಂಬಣ್ಣದಿಂದ ಹೊಳೆಯುತ್ತಿರುವ ಉಡಿಗೆ ಮತ್ತು ಚಿನ್ನದ ಉಡಿದಾರಗಳೂ, ವಕ್ಷಸ್ಥಳದಲ್ಲಿ ಅಮೂಲ್ಯವಾದ ಹಾರಗಳೂ, ಹೊಂಬಣ್ಣದ ರೇಖೆಗಳುಳ್ಳ ಶ್ರೀವತ್ಸಲಾಂಛನವೂ ಅಪೂರ್ವವಾದ ಕಾಂತಿಯಿಂದ ಶೋಭಿಸುತ್ತಿವೆ. ॥ ೨೮ ॥ ಶ್ರೀಭಗವಂತನು ಆಳವಾಗಿ ಅವ್ಯಕ್ತವಾದ ಬೇರುಗಳುಳ್ಳ ಮಹಾಚಂದನವೃಕ್ಷದ ಬೆಡಗನ್ನು ಬೀರುತ್ತಿದ್ದಾನೆ. ಅಮೂಲ್ಯವಾದ ಕಂಕಣ ಕೇಯೂರಗಳಿಂದಲೂ, ಪರಮೋತ್ಕೃಷ್ಟವಾದ ಮಣಿಗಳಿಂದಲೂ ಮೆರೆಯುತ್ತಿರುವ ಆತನ ವಿಶಾಲವಾದ ಭುಜದಂಡಗಳೇ ಆ ವೃಕ್ಷದ ಸಾವಿರಾರು ಶಾಖೆಗಳು. ಶ್ರೀದೇಹವನ್ನು ಬಳಸಿರುವ ಆದಿಶೇಷನ ದೇಹವೇ ವೃಕ್ಷವನ್ನು ಸುತ್ತಿಕೊಂಡಿರುವ ಮಹಾಸರ್ಪಗಳು. ॥ ೨೯ ॥ ಮಹಾ ಜಲರಾಶಿಯಲ್ಲಿ ಶೇಷದೇವರಿಗೆ ಆಶ್ರಯನಾಗಿರುವ ಆದಿದೇವ ಶ್ರೀಮನ್ನಾರಾಯಣನು ನೀರಿನಿಂದ ಆವೃತವಾಗಿರುವ ಪರ್ವತರಾಜನಂತೆ ರಾರಾಜಿಸುತ್ತಿದ್ದಾನೆ. ಗಿರಿಯು ನಾನಾ ಜೀವರುಗಳಿಗೆ ಆಸರೆಯಾಗಿರುವಂತೆ ಆತನು ಚರಾಚರ ಜೀವಿಗಳಿಗೆಲ್ಲ ಆಶ್ರಯನಾಗಿದ್ದಾನೆ. ಶೇಷದೇವರ ಹೆಡೆಗಳಲ್ಲಿ ಬೆಳಗುತ್ತಿರುವ ಸಹಸ್ರಾರು ಕಿರೀಟಗಳೇ ಪರ್ವತದ ಹೊನ್ನಿನಂತೆ ಹೊಳೆಯುವ ಶಿಖರಗಳು. ಆತನ ವಕ್ಷಸ್ಥಳದಲ್ಲಿ ಬೆಳಗುತ್ತಿರುವ ಕೌಸ್ತುಭಮಣಿಯೇ ಪರ್ವತಗರ್ಭದಲ್ಲಿ ಪ್ರಕಟಗೊಂಡ ಮಹಾರತ್ನ. ॥ ೩೦ ॥ ಪ್ರಭುವಿನ ಕಂಠದಲ್ಲಿ ವೇದಗಳೆಂಬ ದುಂಬಿಗಳು ಝೇಂಕರಿಸುತ್ತಿರುವ ಕೀರ್ತಿರೂಪವಾದ ವನಮಾಲೆಯು ಮೆರೆಯುತ್ತಿದೆ. ಸೂರ್ಯ, ಚಂದ್ರ, ವಾಯು, ಅಗ್ನಿಯೇ ಮುಂತಾದ ದೇವತೆಗಳೂ ಆವನ ಬಳಿಗೆ ತಲುಪಲಾರರು. ಮೂರು ಲೋಕಗಳಲ್ಲಿಯೂ ಅಡೆ-ತಡೆಗಳಿಲ್ಲದೇ ಸಂಚರಿಸುವ ಸುದರ್ಶನ ಚಕ್ರವೇ ಮುಂತಾದ ಆಯುಧಗಳೂ ಆತನ ಸುತ್ತಲೂ ಓಡಾಡುತ್ತಿವೆ. ಇದರಿಂದಾಗಿ ಆವನ ಬಳಿಗೆ ತಲುಪುವುದು ಕಠಿಣವಾಗಿದೆ. ॥ ೩೧ ॥

ಆಗ ವಿಶ್ವರಚನೆಯ ಇಚ್ಛೆಯುಳ್ಳ ಲೋಕವಿಧಾತಾ ಬ್ರಹ್ಮದೇವರಿಗೆ ಶ್ರೀಭಗವಂತನ ನಾಭಿಸರೋವರದಿಂದ ಪ್ರಕಟಗೊಂಡ ಕಮಲ, ಜಲ, ಆಕಾಶ, ವಾಯು ಮತ್ತು ತನ್ನ ಶರೀರ – ಎಂಬ ಐದು ಪದಾರ್ಥಗಳು ಕಾಣಿಸಿದವು. ಸೃಷ್ಟಿಯನ್ನು ರಚಿಸಲು ಈ ಐದಲ್ಲದೆ ಬೇರಾವ ಪದಾರ್ಥಗಳೂ ಆವರಿಗೆ ಕಾಣಿಸಲಿಲ್ಲ. ॥ ೩೨ ॥ ರಜೋಗುಣದಿಂದ ವ್ಯಾಪ್ತರಾದ ಬ್ರಹ್ಮದೇವರು ಪ್ರಜೆಯನ್ನು ರಚಿಸಲು ಬಯಸುತ್ತಿದ್ದರು. ಸೃಷ್ಟಿಯ ಕಾರಣರೂಪೀ ಈ ಐದು ಪದಾರ್ಥಗಳನ್ನು ನೋಡಿದಾಗ ಲೋಕರಚನೆಗಾಗಿ ಉತ್ಸುಕರಾದ ಕಾರಣ ಬ್ರಹ್ಮದೇವರು ಅಚಿಂತ್ಯಗತಿಯಾದ ಶ್ರೀಹರಿಯಲ್ಲಿ ಚಿತ್ತವನ್ನು ತೊಡಗಿಸಿ ಆ ಪರಮಪೂಜನೀಯ ಪ್ರಭುವನ್ನು ಸ್ತುತಿಸತೊಡಗಿದರು. ॥ ೩೩ ॥

ಎಂಟನೆಯ ಅಧ್ಯಾಯವು ಮುಗಿಯಿತು. ॥ ೮ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ತೃತೀಯಸ್ಕಂಧೇ ಅಷ್ಟಮೋಽಧ್ಯಾಯಃ ॥ ೮ ॥

ಒಂಭತ್ತನೆಯ ಅಧ್ಯಾಯ

ಬ್ರಹ್ಮದೇವರು ಮಾಡಿದ ಭಗವತ್ಸ್ತೋತ್ರ

ಬ್ರಹ್ಮೋವಾಚ

ಜ್ಞಾತೋಽಸಿ ಮೇಽದ್ಯ ಸುಚಿರಾನ್ನನು ದೇಹಭಾಜಾಂ
ನ ಜ್ಞಾಯತೇ ಭಗವತೋ ಗತಿರಿತ್ಯವದ್ಯಮ್ ।
ನಾನ್ಯತ್ತ್ವದಸ್ತಿ ಭಗವನ್ನಪಿ ತನ್ನ ಶುದ್ಧಂ
ಮಾಯಾಗುಣವ್ಯತಿಕರಾದ್ಯದುರುರ್ವಿಭಾಸಿ ॥ ೧ ॥

ರೂಪಂ ಯದೇತದವಬೋಧರಸೋದಯೇನ
ಶಶ್ವನ್ನಿವೃತ್ತತಮಸಃ ಸದನುಗ್ರಹಾಯ ।
ಆದೌ ಗೃಹೀತಮವತಾರಶತೈಕಬೀಜಂ
ಯನ್ನಾಭಿಪದ್ಮಭವನಾದಹಮಾವಿರಾಸಮ್ ॥ ೨ ॥

ನಾತಃ ಪರಂ ಪರಮ ಯದ್ಭವತಃ ಸ್ವರೂಪ-
ಮಾನಂದಮಾತ್ರಮವಿಕಲ್ಪಮವಿದ್ಧವರ್ಚಃ ।
ಪಶ್ಯಾಮಿ ವಿಶ್ವಸೃಜಮೇಕಮವಿಶ್ವಮಾತ್ಮನ್
ಭೂತೇಂದ್ರಿಯಾತ್ಮಕಮದಸ್ತ ಉಪಾಶ್ರಿತೋಽಸ್ಮಿ ॥ ೩ ॥

ತದ್ವಾ ಇದಂ ಭುವನಮಂಗಲ ಮಂಗಲಾಯ
ಧ್ಯಾನೇ ಸ್ಮ ನೋ ದರ್ಶಿತಂ ತ ಉಪಾಸಕಾನಾಮ್ ।
ತಸ್ಮೈ ನಮೋ ಭಗವತೇಽನುವಿಧೇಮ ತುಭ್ಯಂ
ಯೋಽನಾದೃತೋ ನರಕಭಾಗ್ಭಿರಸತ್ಪ್ರಸಂಗೈಃ ॥ ೪ ॥

ಯೇ ತು ತ್ವದೀಯಚರಣಾಂಬುಜಕೋಶಗಂಧಂ
ಜಿಘ್ರಂತಿ ಕರ್ಣವಿವರೈಃ ಶ್ರುತಿವಾತನೀತಮ್ ।
ಭಕ್ತ್ಯಾ ಗೃಹೀತಚರಣಃ ಪರಯಾ ಚ ತೇಷಾಂ
ನಾಪೈಷಿ ನಾಥ ಹೃದಯಾಂಬುರುಹಾತ್ಸ್ವಪುಂಸಾಮ್ ॥ ೫ ॥

ತಾವದ್ಭಯಂ ದ್ರವಿಣಗೇಹಸುಹೃನ್ನಿಮಿತ್ತಂ
ಶೋಕಃ ಸ್ಪೃಹಾ ಪರಿಭವೋ ವಿಪುಲಶ್ಚ ಲೋಭಃ ।
ತಾವನ್ಮಮೇತ್ಯಸದವಗ್ರಹ ಆರ್ತಿಮೂಲಂ
ಯಾವನ್ನ ತೇಽಙ್ಘ್ರಿಮಭಯಂ ಪ್ರವೃಣೀತ ಲೋಕಃ ॥ ೬ ॥

ಶ್ರೀಬ್ರಹ್ಮದೇವರು ಹೇಳಿದರು – ಲೋಕೇಶ್ವರನೇ! ಬಹು ಕಾಲದ ನಂತರ ನಿನ್ನ ದರ್ಶನವನ್ನು ಪಡೆದು ನಾನು ಧನ್ಯನಾದೆನು. ನಿನ್ನ ಈ ದಿವ್ಯಸ್ವರೂಪವನ್ನು ದೇಹಧಾರಿಗಳಾದ ಜೀವರು ತಿಳಿಯದೇ ಹೋದರಲ್ಲ! ಎಂತಹ ದೌರ್ಭಾಗ್ಯ! ಓ ಭಗವಂತಾ! ನೀನಲ್ಲದೆ ಬೇರೆ ಯಾವ ವಸ್ತುವೂ ಇಲ್ಲವೇ ಇಲ್ಲ. ಕಂಡುಬರುವ ವಸ್ತುವು ಸ್ವರೂಪತಃ ಸತ್ಯವಾದುದಲ್ಲ. ಏಕೆಂದರೆ, ಮಾಯೆಯ ಗುಣಗಳು ಕ್ಷೋಭಿತವಾದ ಕಾರಣ ಕೇವಲ ನೀನೇ ಅನೇಕ ರೂಪಗಳಲ್ಲಿ ಕಂಡುಬರುವೆ. ॥ ೧ ॥

ಓ ಭಗವಂತನೇ! ನೀನು ಸದಾ ಜ್ಞಾನಪ್ರಕಾಶದಿಂದ ಬೆಳಗುತ್ತಿರುವವನು. ಆದ್ದರಿಂದ ಅಜ್ಞಾನವು ನಿನ್ನಿಂದ ಸದಾ ದೂರವಾಗಿರುತ್ತದೆ. ಯಾವ ನಾಭಿಕಮಲದಿಂದ ನಾನು ಜನಿಸಿದ್ದೇನೋ ಅಂತಹ ನಿನ್ನ ಈ ದಿವ್ಯ ದೇಹವು ನೂರಾರು ಅವತಾರಗಳಿಗೆ ಮೂಲ ಕಾರಣವಾದುದು. ಸತ್ಪುರುಷರ ಮೇಲೆ ಕೃಪೆದೋರಿ ಅವರನ್ನು ಅನುಗ್ರಹಿಸುವುದಕ್ಕಾಗಿ ಈ ಮೊಟ್ಟಮೊದಲನೆಯ ಅವತಾರವನ್ನು ತಾಳಿರುವೆ. ॥ ೨ ॥ ಪರಮಾತ್ಮಾ! ನಿನ್ನ ಆನಂದೈಕಮಯವೂ, ಭೇದರಹಿತವೂ, ಅಖಂಡತೇಜೋಮಯವೂ ಆದ ಸ್ವರೂಪವನ್ನು ನಾನು ಈ ದಿವ್ಯರೂಪದಿಂದ ಭಿನ್ನವೆಂದು ತಿಳಿಯುವುದಿಲ್ಲ. ಆದುದರಿಂದ ನೀನು ವಿಶ್ವದ ರಚನೆ ಮಾಡುವವನಾದರೂ ವಿಶ್ವಾತೀತನಾಗಿರುವೆ. ಅದ್ವಿತೀಯನಾಗಿರುವ ಸಮಸ್ತ ಭೂತಗಳಿಗೂ, ಇಂದ್ರಿಯಗಳಿಗೂ ಅಧಿಷ್ಠಾನವಾಗಿರುವ ಈ ದಿವ್ಯರೂಪವನ್ನು ಶರಣು ಹೊಂದುತ್ತೇನೆ. ॥ ೩ ॥ ಜಗತ್ಕಲ್ಯಾಣಮೂರ್ತಿಯೇ! ನಿನ್ನ ಉಪಾಸಕನಾಗಿರುವ ನನ್ನ ಹಿತಕ್ಕೋಸ್ಕರವೇ ಧ್ಯಾನದಲ್ಲಿ ನನಗೆ ಈ ನಿನ್ನ ದಿವ್ಯರೂಪವನ್ನು ತೋರಿಸಿರುವೆ. ಪಾಪಾತ್ಮರೂ ವಿಷಯಾಸಕ್ತರೂ ಆದ ಜೀವಿಗಳು ಮಾತ್ರವೇ ಇದನ್ನು ತಿರಸ್ಕರಿಸುತ್ತಾರೆ. ನಾನಾದರೋ ನಿನ್ನನ್ನು ಈ ದಿವ್ಯ ರೂಪದಲ್ಲಿಯೇ ನೋಡುತ್ತಾ ಮತ್ತೆ-ಮತ್ತೆ ನಮಸ್ಕರಿಸುತ್ತೇನೆ. ॥ ೪ ॥ ನನ್ನ ಸ್ವಾಮಿಯೇ! ವೇದಗಳೆಂಬ ವಾಯುವಿನಿಂದ ತಂದಿರುವ ನಿನ್ನ ಪಾದಗಳೆಂಬ ಕಮಲಕೋಶದ ಕಂಪನ್ನು ತಮ್ಮ ಕಿವಿಗಳಿಂದ ಸುಕೃತಿಗಳು ಸ್ವೀಕರಿಸುತ್ತಾರೆ. ಅಂತಹ ಭಕ್ತೋತ್ತಮರ ಹೃದಯಕಮಲದಿಂದ ಎಂದಿಗೂ ನೀನು ದೂರವಾಗುವುದಿಲ್ಲ. ಏಕೆಂದರೆ ಅವರು ತಮ್ಮ ಪರಾಭಕ್ತಿಯೆಂಬ ಹಗ್ಗದಿಂದ ನಿನ್ನ ಪಾದಪದ್ಮಗಳನ್ನು ಕಟ್ಟಿಹಾಕಿಕೊಂಡಿರುವರು. ॥ ೫ ॥ ಪರಮಾತ್ಮನೇ! ಮನುಷ್ಯನು ಅಭಯಪ್ರದವಾದ ನಿನ್ನ ಚರಣಾರವಿಂದಗಳ ಆಸರೆಯನ್ನು ಪಡೆಯುವವರೆಗೆ ಅವನಿಗೆ ಧನ, ಮನೆ, ಬಂಧುಗಳ ಕಾರಣದಿಂದ ಉಂಟಾಗುವ ಭಯ, ಶೋಕ, ದುರಾಸೆ, ದೈನ್ಯ, ಕಡುಲೋಭ ಮುಂತಾದವುಗಳು ತೊಂದರೆ ಕೊಡುತ್ತಾ ಇರುತ್ತವೆ ಮತ್ತು ದುಃಖಕ್ಕೆ ಏಕಮಾತ್ರ ಕಾರಣವಾದ ಅಹಂಕಾರ-ಮಮಕಾರಗಳ ದುರಾಗ್ರಹವು ಇರುತ್ತದೆ. ॥ ೬ ॥

ದೈವೇನ ತೇ ಹತಧಿಯೋ ಭವತಃ ಪ್ರಸಂಗಾ-
ತ್ಸರ್ವಾಶುಭೋಪಶಮನಾದ್ವಿಮುಖೇಂದ್ರಿಯಾ ಯೇ ।
ಕುರ್ವಂತಿ ಕಾಮಸುಖಲೇಶಲವಾಯ ದೀನಾ
ಲೋಭಾಭಿಭೂತಮನಸೋಽಕುಶಲಾನಿ ಶಶ್ವತ್ ॥ ೭ ॥

ಕ್ಷುತ್ತೃಟ್ತ್ರಿಧಾತುಭಿರಿಮಾ ಮುಹುರರ್ದ್ಯಮಾನಾಃ
ಶೀತೋಷ್ಣವಾತವರ್ಷೈರಿತರೇತರಾಚ್ಚ ।
ಕಾಮಾಗ್ನಿನಾಚ್ಯುತ ರುಷಾ ಚ ಸುದುರ್ಭರೇಣ
ಸಂಪಶ್ಯತೋ ಮನ ಉರುಕ್ರಮ ಸೀದತೇ ಮೇ ॥ ೮ ॥

ಯಾವತ್ಪೃಥಕ್ತ್ವಮಿದಮಾತ್ಮನ ಇಂದ್ರಿಯಾರ್ಥ-
ಮಾಯಾಬಲಂ ಭಗವತೋ ಜನ ಈಶ ಪಶ್ಯೇತ್ ।
ತಾವನ್ನ ಸಂಸೃತಿರಸೌ ಪ್ರತಿಸಂಕ್ರಮೇತ
ವ್ಯರ್ಥಾಪಿ ದುಃಖನಿವಹಂ ವಹತೀ ಕ್ರಿಯಾರ್ಥಾ ॥ ೯ ॥

ಅಹ್ನ್ಯಾಪೃತಾರ್ತಕರಣಾ ನಿಶಿ ನಿಃಶಯಾನಾ
ನಾನಾಮನೋರಥಧಿಯಾ ಕ್ಷಣಭಗ್ನನಿದ್ರಾಃ ।
ದೈವಾಹತಾರ್ಥರಚನಾ ಋಷಯೋಽಪಿ ದೇವ
ಯುಷ್ಮತ್ಪ್ರಸಂಗವಿಮುಖಾ ಇಹ ಸಂಸರಂತಿ ॥ ೧೦ ॥

ತ್ವಂ ಭಾವಯೋಗಪರಿಭಾವಿತಹೃತ್ಸರೋಜ
ಆಸ್ಸೇ ಶ್ರುತೇಕ್ಷಿತಪಥೋ ನನು ನಾಥ ಪುಂಸಾಮ್ ।
ಯದ್ಯದ್ಧಿಯಾ ತ ಉರುಗಾಯ ವಿಭಾವಯಂತಿ
ತತ್ತದ್ವಪುಃ ಪ್ರಣಯಸೇ ಸದನುಗ್ರಹಾಯ ॥ ೧೧ ॥

ನಾತಿಪ್ರಸೀದತಿ ತಥೋಪಚಿತೋಪಚಾರೈ-
ರಾರಾಧಿತಃ ಸುರಗಣೈರ್ಹೃದಿ ಬದ್ಧಕಾಮೈಃ ।
ಯತ್ಸರ್ವಭೂತದಯಯಾಸದಲಭ್ಯಯೈಕೋ
ನಾನಾಜನೇಷ್ವವಹಿತಃ ಸುಹೃದಂತರಾತ್ಮಾ ॥ ೧೨ ॥

ದೇವದೇವನೇ! ಮೂರ್ಖರು ಎಲ್ಲ ಅಮಂಗಳಗಳನ್ನು ನಾಶಪಡಿಸುವ ನಿನ್ನ ಶ್ರವಣ-ಕೀರ್ತನೆ ಮುಂತಾದ ಸತ್ಪ್ರಸಂಗಗಳಿಂದ ಇಂದ್ರಿಯಗಳನ್ನು ಬೇರೆಡೆ ಸೆಳೆದು ಅಣುಮಾತ್ರವಾದ ವಿಷಯಸುಖಗಳನ್ನೇ ಬಯಸುತ್ತಾ, ದೀನರಾಗಿ, ಮನಸ್ಸಿನಲ್ಲಿ ಆಸೆಪಡುತ್ತಾ ದುಷ್ಕರ್ಮಗಳಲ್ಲಿ ತೊಡಗುತ್ತಾರೆ. ಅದೃಷ್ಟದಿಂದ ವಿವೇಕವನ್ನು ಕಳೆದುಕೊಂಡ ಅಂತಹವರು ನಿಜವಾಗಿ ಬಡಪಾಯಿಗಳು. ॥ ೭ ॥ ಓ ಅಚ್ಯುತಾ! ತ್ರಿವಿಕ್ರಮ! ಈ ಜನರು ಹಸಿವು, ಬಾಯಾರಿಕೆ, ವಾತ, ಪಿತ್ತ, ಕಫ, ಚಳಿ, ಸೆಕೆ, ಗಾಳಿ-ಮಳೆಗಳಿಂದಲೂ, ಪರಸ್ಪರ ಒಬ್ಬರಿಂದೊಬ್ಬರು ಹಾಗೂ ಕಾಮಾಗ್ನಿಯಿಂದಲೂ, ಸಹಿಸಲಸದಳವಾದ ಕ್ರೋಧದಿಂದ ಅಗ್ನಿಯಿಂದಲೂ ಮತ್ತೆ-ಮತ್ತೆ ಕಷ್ಟಪಡುತ್ತಿರುವುದನ್ನು ನೋಡಿ ನನ್ನ ಮನಸ್ಸಿಗೆ ತುಂಬಾ ವಿಷಾದವಾಗುತ್ತದೆ. ॥ ೮ ॥

ಎಲೈ ಪ್ರಭುವೇ! ಮನುಷ್ಯನು ಎಲ್ಲಿಯವರೆಗೆ ಇಂದ್ರಿಯ ಮತ್ತು ಅವುಗಳ ವಿಷಯರೂಪವಾದ ಮಾಯೆಯ ಪ್ರಭಾವದಿಂದ ನಿನ್ನಿಂದ ತನ್ನನ್ನು ಬೇರೆಯಾಗಿ ನೋಡುತ್ತಾನೋ, ಅಲ್ಲಿಯವರೆಗೂ ಅವನಿಗೆ ಈ ಸಂಸಾರಚಕ್ರದಿಂದ ಬಿಡುಗಡೆಯಾಗುವುದಿಲ್ಲ. ಈ ಜಗತ್ತು ಮಿಥ್ಯೆಯಾಗಿದ್ದರೂ ಕರ್ಮಫಲವನ್ನು ಭೋಗಿಸುವ ಕ್ಷೇತ್ರವಾದ್ದರಿಂದ ಅವನನ್ನು ನಾನಾಪ್ರಕಾರದ ದುಃಖಗಳಲ್ಲಿ ಸಿಕ್ಕಿಸುತ್ತಾ ಇರುತ್ತದೆ. ॥ ೯ ॥

ದೇವಾ! ಅನ್ಯರಾದ ಇತರರ ಮಾತಿರಲಿ – ಋಷಿ-ಮುನಿಗಳೂ ಕೂಡ ನಿನ್ನ ಕಥಾಪ್ರಸಂಗಕ್ಕೆ ವಿಮುಖರಾದರೆ ಸಂಸಾರಬಂಧನಕ್ಕೆ ಒಳಗಾಗಬೇಕಾಗುತ್ತದೆ. ಅವರು ಹಗಲಿನಲ್ಲಿ ಬಗೆ-ಬಗೆಯ ವಿಷಯವ್ಯಾಪಾರಗಳಲ್ಲಿ ಆಸಕ್ತರಾಗಿರುವುದರಿಂದ ಅವರ ಚಿತ್ತವು ವಿಕ್ಷಿಪ್ತವಾಗಿರುತ್ತದೆ. ರಾತ್ರಿಯಲ್ಲಿ ಅವರು ಪ್ರಜ್ಞೆಯಿಲ್ಲದ ನಿದ್ರೆಯಲ್ಲಿ ಬಿದ್ದುಕೊಂಡಿರುತ್ತಾರೆ. ಅಂತಹ ಸಮಯದಲ್ಲೂ ಅವರು ನಾನಾರೀತಿಯ ಮನೋರಥಗಳಿಂದ ಪೀಡಿತರಾಗಿ ಕ್ಷಣ-ಕ್ಷಣಕ್ಕೂ ನಿದ್ರಾಭಂಗವನ್ನು ಹೊಂದುತ್ತಾರೆ. ದೈವವಶದಿಂದ ಅವರ ಅರ್ಥಸಿದ್ಧಿಯ ಉದ್ಯೋಗಗಳೆಲ್ಲವೂ ವಿಫಲವಾಗುತ್ತಾ ಇರುತ್ತವೆ. ॥ ೧೦ ॥ ಸ್ವಾಮಿ! ಶ್ರವಣ ಮನನಾದಿಗಳಿಂದ ನಿನ್ನ ಮಾರ್ಗವನ್ನು ತಿಳಿದು, ಅನನ್ಯವಾದ ಭಕ್ತಿಯೋಗದಿಂದ ಮನಸ್ಸನ್ನು ಪರಿಶುದ್ಧಗೊಳಿಸಿಕೊಂಡಿರುವವರ ಹೃದಯಕಮಲದಲ್ಲಿ ನೀನು ವಾಸಮಾಡುತ್ತಿರುವೆ. ಪುಣ್ಯಕೀರ್ತಿಯಾದ ಪ್ರಭುವೇ! ನಿನ್ನ ಭಕ್ತಜನರು ಯಾವ-ಯಾವ ಭಾವನೆಯಿಂದ ನಿನ್ನನ್ನು ಚಿಂತನೆಮಾಡುತ್ತಾರೋ, ಅವರನ್ನು ಅನುಗ್ರಹಿಸಲಿಕ್ಕಾಗಿ ನೀನು ಆಯಾ ರೂಪವನ್ನೇ ಧರಿಸುತ್ತೀಯೆ. ॥ ೧೧ ॥ ಭಗವಂತಾ! ನೀನು ಅದ್ವಿತೀಯನಾಗಿದ್ದು ಸಮಸ್ತ ಪ್ರಾಣಿಗಳ ಅಂತಃಕರಣದಲ್ಲಿ ಸ್ಥಿತನಾಗಿ ಅವರ ಪರಮಹಿತಕಾರಿ ಅಂತರಾತ್ಮನಾಗಿರುವೆ. ದುರ್ಜನರಿಗೆ ಅಲಭ್ಯವಾಗಿರುವ 'ಭೂತದಯೆ'ಯಿಂದ ನೀನು ಎಷ್ಟು ಪ್ರಸನ್ನನಾಗುವೆಯೋ, ಅಷ್ಟು ನಾನಾ ಕಾಮನೆಗಳಿಂದ ಬಗೆ-ಬಗೆಯ ಉಪಚಾರಗಳ ಮೂಲಕ ನಿನ್ನನ್ನು ಆರಾಧಿಸುವ ದೇವತೆಗಳ ಪೂಜೆಯಿಂದಲೂ ಪ್ರಸನ್ನನಾಗುವುದಿಲ್ಲ. ॥ ೧೨ ॥ ನಿನಗೆ ಸಮರ್ಪಿಸಲ್ಪಟ್ಟ ಕರ್ಮಗಳಿಗೆ ಎಂದೂ ನಾಶವಿಲ್ಲ. ಅವು ಅಕ್ಷಯವಾಗುತ್ತವೆ. ಆದುದರಿಂದ ಯಜ್ಞ, ದಾನ, ಕಠಿಣ ತಪಸ್ಸು, ವ್ರತಾದಿಗಳು ಮುಂತಾದ ನಾನಾ ಪ್ರಕಾರದ

ಪುಂಸಾಮತೋ ವಿವಿಧಕರ್ಮಭಿರಧ್ವರಾದ್ಯೈ-
ರ್ದಾನೇನ ಚೋಗ್ರತಪಸಾ ವ್ರತಚರ್ಯಯಾ ಚ ।
ಆರಾಧನಂ ಭಗವತಸ್ತವ ಸತ್ಕ್ರಿಯಾರ್ಥೋ
ಧರ್ಮೋಽರ್ಪಿತಃ ಕರ್ಹಿಚಿದ್ಧ್ರಿಯತೇ ನ ಯತ್ರ ॥ ೧೩ ॥

ಶಶ್ವತ್ಸ್ವರೂಪಮಹಸೈವ ನಿಪೀತಭೇದ-
ಮೋಹಾಯ ಬೋಧಧಿಷಣಾಯ ನಮಃ ಪರಸ್ಮೈ ।
ವಿಶ್ವೋದ್ಭವಸ್ಥಿತಿಲಯೇಷು ನಿಮಿತ್ತಲೀಲಾ-
ರಾಸಾಯ ತೇ ನಮ ಇದಂ ಚಕೃಮೇಶ್ವರಾಯ ॥ ೧೪ ॥

ಯಸ್ಯಾವತಾರಗುಣಕರ್ಮವಿಡಂಬನಾನಿ
ನಾಮಾನಿ ಯೇಽಸುವಿಗಮೇ ವಿವಶಾ ಗೃಣಂತಿ ।
ತೇ ನೈಕಜನ್ಮಶಮಲಂ ಸಹಸೈವ ಹಿತ್ವಾ
ಸಂಯಾಂತ್ಯಪಾವೃತಮೃತಂ ತಮಜಂ ಪ್ರಪದ್ಯೇ ॥ ೧೫ ॥

ಯೋ ವಾ ಅಹಂ ಚ ಗಿರಿಶಶ್ಚ ವಿಭುಃ ಸ್ವಯಂ ಚ
ಸ್ಥಿತ್ಯುದ್ಭವಪ್ರಲಯಹೇತವ ಆತ್ಮಮೂಲಮ್ ।
ಭಿತ್ತ್ವಾ ತ್ರಿಪಾದ್ವವೃಧ ಏಕ ಉರುಪ್ರರೋಹ-
ಸ್ತಸ್ಮೈ ನಮೋ ಭಗವತೇ ಭುವನದ್ರುಮಾಯ ॥ ೧೬ ॥

ಲೋಕೋ ವಿಕರ್ಮನಿರತಃ ಕುಶಲೇ ಪ್ರಮತ್ತಃ
ಕರ್ಮಣ್ಯಯಂ ತ್ವದುದಿತೇ ಭವದರ್ಚನೇ ಸ್ವೇ ।
ಯಸ್ತಾವದಸ್ಯ ಬಲವಾನಿಹ ಜೀವಿತಾಶಾಂ
ಸದ್ಯಶ್ಛಿನತ್ತ್ಯನಿಮಿಷಾಯ ನಮೋಽಸ್ತು ತಸ್ಮೈ ॥ ೧೭ ॥

ಯಸ್ಮಾದ್ಬಿಭೇಮ್ಯಹಮಪಿ ದ್ವಿಪರಾರ್ಧಧಿಷ್ಣ್ಯ-
ಮಧ್ಯಾಸಿತಃ ಸಕಲಲೋಕನಮಸ್ಕೃತಂ ಯತ್ ।
ತೇಪೇ ತಪೋ ಬಹುಸವೋಽವರುರುತ್ಸಮಾನ-
ಸ್ತಸ್ಮೈ ನಮೋ ಭಗವತೇಽಧಿಮಖಾಯ ತುಭ್ಯಮ್ ॥ ೧೮ ॥

ಕರ್ಮಗಳ ಮೂಲಕ ನಿನ್ನ ಪ್ರಸನ್ನತೆಯನ್ನು ಪಡೆಯುವುದೇ ಸರ್ವೋತ್ತಮವಾದ ಕರ್ಮಫಲವು. ಏಕೆಂದರೆ, ನಿನ್ನ ಪ್ರಸನ್ನತೆಯುಂಟಾದ ಬಳಿಕ ಯಾವ ಫಲವು ತಾನೇ ದುರ್ಲಭವಾದುದು ? ॥ ೧೩ ॥ ನೀನು ಸದಾ ನಿನ್ನ ಸ್ವರೂಪದ ಪ್ರಕಾಶದಿಂದಲೇ ಪ್ರಾಣಿಗಳ ಭೇದಭ್ರಮವಾದ ಅಂಧಕಾರವನ್ನು ನಾಶಮಾಡುತ್ತಾ ಇರುತ್ತೀಯೆ. ವಿದ್ಯೆಯೆಂಬ ಜ್ಞಾನಸ್ವರೂಪನೂ, ಜ್ಞಾನಕ್ಕೆ ಅಧಿಷ್ಠಾನವಾಗಿರುವ ಸಾಕ್ಷಾತ್ ಪರಮಪುರುಷನೂ ಆದ ನಿನಗೆ ನಾನು ವಂದಿಸುತ್ತೇನೆ. ಜಗತ್ತಿನ ಸೃಷ್ಟಿ, ಸ್ಥಿತಿ, ಲಯಗಳ ನಿಮಿತ್ತವಾಗಿ ನಡೆಯುವ ಮಾಯಾಲೀಲೆಯು ನಿನ್ನ ಆಟವೇ ಆಗಿದೆ. ಇಂತಹ ಪ್ರಭುವಾದ ನಿನಗೆ ಮತ್ತೆ-ಮತ್ತೆ ನಮಸ್ಕಾರಗಳು. ॥ ೧೪ ॥ ಮರಣಕಾಲದಲ್ಲಿ ನಿನ್ನ ಅವತಾರ, ಗುಣ ಮತ್ತು ಕರ್ಮಗಳನ್ನು ಸೂಚಿಸುವ – ವಾಸುದೇವಾ, ದೇವಕೀನಂದನಾ, ಜನಾರ್ದನಾ, ಮುರಾರಿ ಹೀಗೆ ಇನ್ನೂ ದಿವ್ಯನಾಮಗಳನ್ನು ಆಕಸ್ಮಿಕವಾಗಿಯೋ, ವಿವಶತೆಯಿಂದಲೋ ಉಚ್ಚರಿಸುವ ಜನರು ಅನೇಕ ಜನ್ಮಗಳ ಪಾಪಗಳನ್ನು ಒಡನೆಯೇ ಕಳಕೊಂಡು ಮಾಯೆಯೇ ಮುಂತಾದ ಆವರಣರಹಿತವಾದ ಬ್ರಹ್ಮಪದವನ್ನು ಪಡೆಯುವರು. ಅಂತಹ ಅಜನೂ, ನಿತ್ಯನೂ, ಶಾಶ್ವತನೂ ಆದ ನಿನ್ನನ್ನು ಶರಣುಹೊಂದುತ್ತೇನೆ. ॥ ೧೫ ॥ ಭಗವಂತನೇ ! ವಿಶ್ವವೃಕ್ಷನಾಗಿ ವಿರಾಜಿಸುತ್ತಿರುವ ನಿನಗೆ ನಮಸ್ಕಾರವು. ಜಗತ್ತಿನ ಸೃಷ್ಟಿ, ಸ್ಥಿತಿ, ಲಯಗಳಿಗೆ ಕಾರಣರಾದ ನಾನೂ, ಸ್ವಯಂ ನೀನು ಮತ್ತು ರುದ್ರನು ಎಂಬ ತ್ರಿಮೂರ್ತಿಗಳು ಆ ವೃಕ್ಷದ ಮೂರು ಪ್ರಧಾನ ಶಾಖೆಗಳು. ಪ್ರಜಾಪತಿಗಳು, ಮನುಗಳು ಮುಂತಾದವರು ಕಿರುಕೊಂಬೆಗಳು. ಇದರ ಮೂಲವಾದರೋ ನೀನೇ ಆಗಿದ್ದೀಯೆ. ಹೀಗೆ ಮೂಲಪ್ರಕೃತಿಯನ್ನು ಸ್ವೀಕರಿಸಿ, ತ್ರಿಗುಣಾತ್ಮಕವಾಗಿ ವಿಭಾಗಿಸಿಕೊಂಡು ವಿಸ್ತಾರವಾಗಿ ಹಬ್ಬಿರುವ ವಿಶ್ವವೃಕ್ಷರೂಪನಾದ ನಿನಗೆ ನಮೋ ನಮಃ ॥ ೧೬॥ ಪ್ರಭೋ ! ಭಗವಂತನ ಆರಾಧನೆಯೇ ಜನರಿಗೆ ಶ್ರೇಯಸ್ಕರವಾದ ಸ್ವಧರ್ಮವೆಂದು ನೀನು ತಿಳಿಸಿರುವೆ. ಆದರೂ ಅವರು ಈ ವಿಷಯದಲ್ಲಿ ಉದಾಸೀನರಾಗಿ ಸದಾ ನಿಷಿದ್ಧವಾದ ಕರ್ಮಗಳಲ್ಲಿಯೇ ತೊಡಗಿರುತ್ತಾರೆ. ಹೀಗೆ ಪ್ರಮಾದೀ ಜೀವರ ಬದುಕುವ ಆಸೆಯನ್ನು ಸದಾ ಸಾವಧಾನವಾಗಿದ್ದುಕೊಂಡು ಶೀಘ್ರವಾಗಿ ಕತ್ತರಿಸಿ ಹಾಕುತ್ತಿರುವ ಮಹಾಬಲಶಾಲಿಯಾದ ಕಾಲವೂ ನಿನ್ನ ರೂಪವೇ ಆಗಿದೆ. ಆ ಮಹಾಕಾಲನಾದ ನಿನಗೆ ನಮಸ್ಕಾರಗಳು. ॥ ೧೭ ॥ ಎರಡು ಪರಾರ್ಧಗಳ ಆಯುಸ್ಸು ಇದ್ದು ಸಮಸ್ತ ಲೋಕಗಳಿಂದಲೂ ನಮಸ್ಕೃತನಾಗಿ, ಸತ್ಯಲೋಕಕ್ಕೆ ಒಡೆಯನಾಗಿದ್ದರೂ ನಾನು ನಿನ್ನ ಆ ಕಾಲರೂಪಕ್ಕೆ ಹೆದರುತ್ತೇನೆ. ಅದರಿಂದ ಬದುಕುಳಿಯಲು ಮತ್ತು ನಿನ್ನನ್ನು ಹೊಂದುವುದಕ್ಕಾಗಿ ನಾನು ಇಷ್ಟುಕಾಲ ತಪಸ್ಸನ್ನಾಚರಿಸಿದ್ದೇನೆ. ಅಧಿಯಜ್ಞರೂಪದಲ್ಲಿ ಈ ತಪಸ್ಸಿಗೆ ಸಾಕ್ಷಿಯಾಗಿರುವ ನಿನಗೆ ನಾನು ನಮಸ್ಕರಿಸುತ್ತೇನೆ ॥ ೧೮ ॥ ಸ್ವಾಮೀ ! ನೀನು ಪೂರ್ಣಕಾಮನು. ಯಾವ ವಿಷಯ ಸುಖದ ಇಚ್ಛೆ ಇಲ್ಲದಿದ್ದರೂ ನೀನೇ ನಿರ್ಮಿಸಿದ ಧರ್ಮಸೇತುವನ್ನು ಸಂರಕ್ಷಿಸುವುದಕ್ಕಾಗಿ, ಪಶು, ಪಕ್ಷಿ, ಮನುಷ್ಯ, ದೇವತೆ ಮುಂತಾದ ಜೀವಯೋನಿಗಳಲ್ಲಿ ಸ್ವೇಚ್ಛೆಯಿಂದ ಶರೀರ

ತಿರ್ಯಙ್ಮನುಷ್ಯವಿಬುಧಾದಿಷು ಜೀವಯೋನಿ-
ಷ್ವಾತ್ಮೇಚ್ಛಯಾಽಽತ್ಮಕೃತಸೇತುಪರೀಪ್ಸಯಾ ಯಃ ।
ರೇಮೇ ನಿರಸ್ತರತಿರಪ್ಯವರುದ್ಧದೇಹ-
ಸ್ತಸ್ಮೈ ನಮೋ ಭಗವತೇ ಪುರುಷೋತ್ತಮಾಯ ॥ ೧೯ ॥

ಯೋಽವಿದ್ಯಯಾನುಪಹತೋಽಪಿ ದಶಾರ್ಧವೃತ್ತ್ಯಾ
ನಿದ್ರಾಮುವಾಹ ಜಠರೀಕೃತಲೋಕಯಾತ್ರಃ ।
ಅಂತರ್ಜಲೇಽಹಿಕಶಿಪುಸ್ಪರ್ಶಾನುಕೂಲಾಂ
ಭೀಮೋರ್ಮಿಮಾಲಿನಿ ಜನಸ್ಯ ಸುಖಂ ವಿವೃಣ್ವನ್ ॥ ೨೦ ॥

ಯನ್ನಾಭಿಪದ್ಮಭವನಾದಹಮಾಸಮೀಡ್ಯ
ಲೋಕತ್ರಯೋಪಕರಣೋ ಯದನುಗ್ರಹೇಣ ।
ತಸ್ಮೈ ನಮಸ್ತ ಉದರಸ್ಥಭವಾಯ ಯೋಗ-
ನಿದ್ರಾವಸಾನವಿಕಸನ್ನಲಿನೇಕ್ಷಣಾಯ ॥ ೨೧ ॥

ಸೋಽಯಂ ಸಮಸ್ತಜಗತಾಂ ಸುಹೃದೇಕ ಆತ್ಮಾ
ಸತ್ತ್ವೇನ ಯನ್ಮೃಡಯತೇ ಭಗವಾನ್ಭಗೇನ ।
ತೇನೈವ ಮೇ ದೃಶಮನುಸ್ಪೃಶತಾದ್ಯಥಾಹಂ
ಸ್ರಕ್ಷ್ಯಾಮಿ ಪೂರ್ವವದಿದಂ ಪ್ರಣತಪ್ರಿಯೋಽಸೌ ॥ ೨೨ ॥

ಏಷ ಪ್ರಪನ್ನವರದೋ ರಮಯಾಽಽತ್ಮಶಕ್ತ್ಯಾ
ಯದ್ಯತ್ಕರಿಷ್ಯತಿ ಗೃಹೀತಗುಣಾವತಾರಃ ।
ತಸ್ಮಿನ್ ಸ್ವವಿಕ್ರಮಮಿದಂ ಸೃಜತೋಽಪಿ ಚೇತೋ
ಯುಂಜೀತ ಕರ್ಮಶಮಲಂ ಚ ಯಥಾ ವಿಜಹ್ಯಾಮ್ ॥ ೨೩ ॥

ನಾಭಿಹ್ರದಾದಿಹ ಸತೋಽಮ್ಭಸಿ ಯಸ್ಯ ಪುಂಸೋ
ವಿಜ್ಞಾನಶಕ್ತಿರಹಮಾಸಮನಂತಶಕ್ತೇಃ ।
ರೂಪಂ ವಿಚಿತ್ರಮಿದಮಸ್ಯ ವಿವೃಣ್ವತೋ ಮೇ
ಮಾ ರೀರಿಷೀಷ್ಟ ನಿಗಮಸ್ಯ ಗಿರಾಂ ವಿಸರ್ಗಃ ॥ ೨೪ ॥

ಸೋಽಸಾವದಭ್ರಕರುಣೋ ಭಗವಾನ್ವಿವೃದ್ಧ-
ಪ್ರೇಮಸ್ಮಿತೇನ ನಯನಾಂಬುರುಹಂ ವಿಜೃಂಭನ್ ।
ಉತ್ಥಾಯ ವಿಶ್ವವಿಜಯಾಯ ಚ ನೋ ವಿಷಾದಂ
ಮಾಧ್ವ್ಯಾ ಗಿರಾಪನಯತಾತ್ಪುರುಷಃ ಪುರಾಣಃ ॥ ೨೫ ॥

ಮೈತ್ರೇಯ ಉವಾಚ

ಸ್ವಸಂಭವಂ ನಿಶಾಮ್ಯೈವಂ ತಪೋವಿದ್ಯಾಸಮಾಧಿಭಿಃ ।
ಯಾವನ್ಮನೋವಚಃ ಸ್ತುತ್ವಾ ವಿರರಾಮ ಸ ಖಿನ್ನವತ್ ॥ ೨೬ ॥

ಗಳನ್ನು ಧರಿಸಿ ಅನೇಕ ಲೀಲೆಗಳನ್ನು ನಡೆಸುತ್ತೀಯೆ. ಅಂತಹ ಪುರುಷೋತ್ತಮ ಭಗವಂತನಾದ ನಿನಗೆ ನಮಸ್ಕಾರವು. ॥ ೧೯ ॥

ಪ್ರಭೋ! ನೀನು ಅವಿದ್ಯಾ, ಅಸ್ಮಿತಾ, ರಾಗ, ದ್ವೇಷ ಮತ್ತು ಅಭಿನಿವೇಶ – ಈ ಅಜ್ಞಾನಕ್ಕೆ ಕಾರಣವಾದ ಐದು ಕ್ಲೇಶಗಳಿಗೆ ಸ್ವಲ್ಪವೂ ವಶಪಡದವನು. ಆದರೂ ಇಡೀ ವಿಶ್ವವನ್ನು ಉದರದಲ್ಲಿ ಅಡಗಿಸಿಕೊಂಡು ಭಯಂಕರವಾದ ಅಲೆಗಳ ಮಾಲೆಗಳಿಂದ ಕ್ಷೋಭೆಗೊಂಡ ಪ್ರಳಯ ಜಲರಾಶಿಯಲ್ಲಿ ಆದಿಶೇಷನೆಂಬ ಕೋಮಲವಾದ ಹಾಸಿಗೆಯಲ್ಲಿ ಪವಡಿಸಿದ್ದೀಯೆ. ಹಿಂದಿನ ಕಲ್ಪದ ಕರ್ಮಪರಂಪರೆಯಿಂದ ಬಳಲಿದ ಅನಂತ ಜೀವರುಗಳಿಗೆ ವಿಶ್ರಾಂತಿ ಕೊಡುವುದಕ್ಕಾಗಿಯೇ ಈ ನಿನ್ನ ಶಯನಲೀಲೆಯಾಗಿದೆ. ॥ ೨೦ ॥

ಸ್ವಾಮಿಯೇ! ನಿನ್ನ ನಾಭಿಕಮಲರೂಪೀ ಭವನದಲ್ಲಿ ನಾನು ಜನಿಸಿದ್ದೇನೆ. ಈ ಸಮಸ್ತ ವಿಶ್ವವು ನಿನ್ನ ಉದರದಲ್ಲಿ ಅಡಗಿದೆ. ನಿನ್ನ ಅನುಗ್ರಹದಿಂದಲೇ ನಾನು ಮೂರು ಲೋಕಗಳನ್ನು ಸೃಷ್ಟಿಮಾಡಿ ಉಪಕರಿಸುವ ಸಾಮರ್ಥ್ಯವನ್ನು ಪಡೆದಿರುವೆನು. ಈಗ ಯೋಗನಿದ್ರೆಯು ಮುಗಿದುಹೋದ ವೇಳೆಯಲ್ಲಿ ಅರಳುತ್ತಿರುವ ತಾವರೆಯಂತಹ ಕಣ್ಣುಗಳಿಂದ ಕಂಗೊಳಿಸುತ್ತಿರುವ ನಿನಗೆ ನಮಸ್ಕಾರಗಳು. ॥ ೨೧ ॥ ನೀನು ಸಮಸ್ತ ಜಗತ್ತಿನ ಏಕಮಾತ್ರ ಸುಹೃದನೂ, ಆತ್ಮನೂ, ಶರಣ್ಯನೂ ಭಕ್ತಪ್ರಿಯನೂ ಆಗಿರುವ ನಿನಗೆ ನಮಸ್ಕಾರವು. ಹಿಂದಿನ ಕಲ್ಪದಲ್ಲಿ ಇದ್ದಹಾಗೆ ಈ ಜಗತ್ತನ್ನು ಸೃಷ್ಟಿಸಲು ಬಯಸಿದ್ದೇನೆ. ಅದಕ್ಕೆ ಬೇಕಾದ ಬುದ್ಧಿಯನ್ನು ಅನುಗ್ರಹಿಸು. ಯಾವ ಜ್ಞಾನ ಮತ್ತು ಐಶ್ವರ್ಯಗಳಿಂದ ವಿಶ್ವಕ್ಕೆ ಆನಂದವನ್ನು ತುಂಬುತ್ತಿರುವೆಯೋ, ಅದು ನನ್ನ ಬುದ್ಧಿಯಲ್ಲಿ ಸೇರಿಕೊಳ್ಳುವಂತೆ ಮಾಡು. ॥ ೨೨ ॥

ಶ್ರೀಪತಿಯೇ! ಭಕ್ತವಾಂಛಾ ಕಲ್ಪತರುವೇ? ನಿನ್ನ ಶಕ್ತಿಸ್ವರೂಪಳೇ ಆದ ಶ್ರೀಲಕ್ಷ್ಮೀದೇವಿಯೊಂದೊಡಗೂಡಿ ಅನೇಕ ಗುಣಾವತಾರಗಳನ್ನು ಮಾಡಿ, ಹಲವಾರು ಅದ್ಭುತ ಕರ್ಮಗಳಲ್ಲೇ ನಾನು ಮಾಡುತ್ತಿರುವ ಈ ಜಗತ್ಸೃಷ್ಟಿಯ ಉದ್ಯಮವೂ ಒಂದಾಗಿದೆ. ಆದ್ದರಿಂದ ಈ ಸೃಷ್ಟಿಸಮಯದಲ್ಲಿ ನನ್ನ ಚಿತ್ತಕ್ಕೆ ಪ್ರೇರಣೆಯನ್ನು ನೀಡು; ಅದಕ್ಕೆ ಶಕ್ತಿಯನ್ನು ತುಂಬು. ಅದರಿಂದ ನಾನು ಸೃಷ್ಟಿರಚನಾ ವಿಷಯದಲ್ಲಿ ಅಭಿಮಾನರೂಪೀ ಕಶ್ಮಲದಿಂದ ದೂರ ಉಳಿಯುವಂತಾಗಲಿ. ॥ ೨೩ ॥ ಈ ಪ್ರಳಯ ಜಲರಾಶಿಯಲ್ಲಿ ಮಲಗಿದ ಅನಂತಶಕ್ತಿಯುಳ್ಳ ನಿನ್ನ ನಾಭಿಕಮಲದಿಂದ ಜನಿಸಿರುವ ನಾನು ನಿನ್ನ ವಿಜ್ಞಾನಶಕ್ತಿಯೇ ಆಗಿದ್ದೇನೆ. ಮಹತ್ತತ್ತ್ವದ ಅಭಿಮಾನಿ ದೇವತೆಯೂ ಆಗಿದ್ದೇನೆ. ಆದುದರಿಂದ ಜಗತ್ತಿನ ವಿಚಿತ್ರರೂಪವನ್ನು ವಿಸ್ತರಿಸುವಾಗ ನನ್ನ ವೇದವಾಣಿಯ ಉಚ್ಚಾರಣೆಯು ಲುಪ್ತವಾಗದಂತೆ ಅನುಗ್ರಹಿಸು. ॥ ೨೪ ॥ ನೀನು ಪರಮ ಕರುಣಾಪೂರ್ಣನಾದ ಪುರಾಣಪುರುಷನು. ಪ್ರೇಮಪ್ರವಾಹವನ್ನು ಸೂಸುವ ಕಿರುನಗೆಯಿಂದ ಶೋಭಿಸುತ್ತಿರುವ ಕಮಲಸದೃಶವಾದ ಕಣ್ಣುಗಳನ್ನು ತೆರೆದು ವಿಶ್ವಸೃಷ್ಟಿಯ ವಿಜಯಕ್ಕಾಗಿ ಎದ್ದು ಸವಿನುಡಿಗಳಿಂದ ನನ್ನ ವಿಷಾದವನ್ನು ತೊಡೆದುಹಾಕಿಬಿಡು. ॥ ೨೫ ॥

ಶ್ರೀಮೈತ್ರೇಯರು ಹೇಳುತ್ತಾರೆ – ವಿದುರನೇ! ಬ್ರಹ್ಮದೇವರು ಹೀಗೆ ತಮ್ಮ ಜ್ಞಾನ, ವಿದ್ಯೆ ಮತ್ತು ಸಮಾಧಿಯ ಮೂಲಕ ತನ್ನ

ಅಥಾಭಿಪ್ರೇತಮನ್ವೀಕ್ಷ್ಯ ಬ್ರಹ್ಮಣೋ ಮಧುಸೂದನಃ ।
ವಿಷಣ್ಣಚೇತಸಂ ತೇನ ಕಲ್ಪವ್ಯತಿಕರಾಂಭಸಾ ॥ ೨೭ ॥

ಲೋಕಸಂಸ್ಥಾನವಿಜ್ಞಾನ ಆತ್ಮನಃ ಪರಿಖಿದ್ಯತಃ ।
ತಮಾಹಾಗಾಧಯಾ ವಾಚಾ ಕಶ್ಮಲಂ ಶಮಯನ್ನಿವ ॥ ೨೮ ॥

ಶ್ರೀಭಗವಾನುವಾಚ

ಮಾ ವೇದಗರ್ಭ ಗಾಸ್ತಂದ್ರೀಂ ಸರ್ಗ ಉದ್ಯಮಮಾವಹ ।
ತನ್ಮಯಾಽಽಪಾದಿತಂ ಹ್ಯಗ್ರೇ ಯನ್ಮಾಂ ಪ್ರಾರ್ಥಯತೇ ಭವಾನ್ ॥ ೨೯ ॥

ಭೂಯಸ್ತ್ವಂ ತಪ ಆತಿಷ್ಠ ವಿದ್ಯಾಂ ಚೈವ ಮದಾಶ್ರಯಾಮ್ ।
ತಾಭ್ಯಾಮಂತರ್ಹೃದಿ ಬ್ರಹ್ಮನ್ ಲೋಕಾಂದ್ರಕ್ಷ್ಯಸ್ಯಪಾವೃತಾನ್ ॥ ೩೦ ॥

ತತ ಆತ್ಮನಿ ಲೋಕೇ ಚ ಭಕ್ತಿಯುಕ್ತಃ ಸಮಾಹಿತಃ ।
ದ್ರಷ್ಟಾಸಿ ಮಾಂ ತತಂ ಬ್ರಹ್ಮನ್ಮಯಿ ಲೋಕಾಂಸ್ತ್ವಮಾತ್ಮನಃ ॥ ೩೦ ॥

ಯದಾ ತು ಸರ್ವಭೂತೇಷು ದಾರುಷ್ವಗ್ನಿಮಿವ ಸ್ಥಿತಮ್ ।
ಪ್ರತಿಚಕ್ಷೀತ ಮಾಂ ಲೋಕೋ ಜಹ್ಯಾತ್ತರ್ಹ್ಯೇವ ಕಶ್ಮಲಮ್ ॥ ೩೨ ॥

ಯದಾ ರಹಿತಮಾತ್ಮಾನಂ ಭೂತೇಂದ್ರಿಯಗುಣಾಶಯೈಃ ।
ಸ್ವರೂಪೇಣ ಮಯೋಪೇತಂ ಪಶ್ಯನ್ ಸ್ವಾರಾಜ್ಯಮೃಚ್ಛತಿ ॥ ೩೩ ॥

ನಾನಾಕರ್ಮವಿತಾನೇನ ಪ್ರಜಾ ಬಹ್ವೀಃ ಸಿಸೃಕ್ಷತಃ ।
ನಾತ್ಮಾವಸೀದತ್ಯಸ್ಮಿಂಸ್ತೇ ವರ್ಷೀಯಾನ್ಮದನುಗ್ರಹಃ ॥ ೩೪ ॥

ಋಷಿಮಾದ್ಯಂ ನ ಬಧ್ನಾತಿ ಪಾಪೀಯಾಂಸ್ತ್ವಾಂ ರಜೋಗುಣಃ ।
ಯನ್ಮನೋ ಮಯಿ ನಿರ್ಬದ್ಧಂ ಪ್ರಜಾಃ ಸಂಸೃಜತೋಽಪಿ ತೇ ॥ ೩೫ ॥

ಜ್ಞಾತೋಽಹಂ ಭವತಾ ತ್ವದ್ಯ ದುರ್ವಿಜ್ಞೇಯೋಽಪಿ ದೇಹಿನಾಮ್ ।
ಯನ್ಮಾಂ ತ್ವಂ ಮನ್ಯಸೇಽಯುಕ್ತಂ ಭೂತೇಂದ್ರಿಯಗುಣಾತ್ಮಭಿಃ ॥ ೩೬ ॥

ತುಭ್ಯಂ ಮದ್ವಿಚಿಕಿತ್ಸಾಯಾಮಾತ್ಮಾ ಮೇ ದರ್ಶಿತೋಽಬಹಿಃ ।
ನಾಲೇನ ಸಲಿಲೇ ಮೂಲಂ ಪುಷ್ಕರಸ್ಯ ವಿಚಿನ್ವತಃ ॥ ೩೭ ॥

ಉತ್ಪತ್ತಿಸ್ಥಾನವಾದ ಶ್ರೀನಾರಾಯಣನನ್ನು ಕಂಡು, ತಮ್ಮ ಮನಸ್ಸು ಮತ್ತು ಮಾತುಗಳ ಶಕ್ತ್ಯನುಸಾರ ಆತನನ್ನು ಸ್ತುತಿಸಿ, ಆಯಾಸಗೊಂಡವರಂತೆ ಮೌನವನ್ನು ತಳೆದರು. ॥ ೨೬ ॥ ಬ್ರಹ್ಮನು ಈ ಪ್ರಳಯ ಜಲರಾಶಿಯಿಂದ ತುಂಬಾ ಗಾಬರಿಗೊಂಡಿರುವನು. ಸೃಷ್ಟಿಯ ವಿಷಯದಲ್ಲಿ ನಿಶ್ಚಯವಾದ ವಿಚಾರವು ಹೊಳೆಯದೇ ಅವನ ಚಿತ್ತಕ್ಕೆ ತುಂಬಾ ಕಳವಳ ಉಂಟಾಗಿದೆ ಎಂಬುದಾಗಿ ಭಗವಾನ್ ಮಧುಸೂದನನು ನೋಡಿದನು. ಅವನ ಆಶಯವನ್ನು ಅರಿತು ಭಗವಂತನು ತನ್ನ ಗಂಭೀರವಾದ ವಾಣಿಯಿಂದ ಆತನ ಖೇದವನ್ನು ಶಮನಗೊಳಿಸುತ್ತಾ ಹೇಳತೊಡಗಿದನು. ॥ ೨೭-೨೮ ॥

ಶ್ರೀಭಗವಂತನು ಹೇಳಿದನು – ವತ್ಸ ವೇದಗರ್ಭನೇ! ನೀನು ವಿಷಾದಕ್ಕೆ ವಶನಾಗಿ ಆಲಸ್ಯವನ್ನು ಹೊಂದಬೇಡ. ಸೃಷ್ಟಿ ವಿಷಯದಲ್ಲಿ ತತ್ಪರನಾಗು. ನೀನು ನನ್ನಿಂದ ಬಯಸುವ ಜ್ಞಾನವನ್ನಾದರೋ ನಿನಗೆ ಈ ಮೊದಲೇ ಕೊಟ್ಟಿದ್ದಾಗಿದೆ. ॥ ೨೯ ॥ ನೀನು ಮತ್ತೊಮ್ಮೆ ತಪಸ್ಸನ್ನಾಚರಿಸು ಮತ್ತು ಭಾಗವತ ಜ್ಞಾನದ ಅನುಷ್ಠಾನ ಮಾಡು. ಅದರ ಮೂಲಕ ನೀನು ಎಲ್ಲ ಲೋಕಗಳನ್ನು ಸ್ಪಷ್ಟವಾಗಿ ನಿನ್ನ ಅಂತಃಕರಣದಲ್ಲಿ ನೋಡುವೆಯಂತೆ. ॥ ೩೦ ॥ ಮತ್ತೆ ಭಕ್ತಿಯುಕ್ತನಾಗಿ, ಏಕಾಗ್ರಚಿತ್ತನಾಗಿ ನೀನು ನನ್ನಲ್ಲೇ ಸಮಸ್ತಲೋಕಗಳನ್ನು ಮತ್ತು ವ್ಯಾಪ್ತವಾಗಿರುವುದನ್ನು ನೋಡುವೆ ಹಾಗೂ ನಿನ್ನಲ್ಲೇ ಸಮಸ್ತ ಲೋಕಗಳೂ ಮತ್ತು ನಾನೂ ವ್ಯಾಪಿಸಿರುವುದನ್ನೂ ನೋಡುವೆ. ॥ ೩೧ ॥ ಕಟ್ಟಿಗೆಯಲ್ಲಿ ಬೆಂಕಿಯು ಅಡಗಿ ವ್ಯಾಪಿಸಿಕೊಂಡಿರುವಂತೆ ನಾನು ಸಮಸ್ತ ಭೂತಗಳಲ್ಲಿಯೂ ಅಡಗಿ ವ್ಯಾಪಿಸಿಕೊಂಡಿರುವುದನ್ನು ಸಾಕ್ಷಾತ್ಕರಿಸಿಕೊಂಡಾಗಲೇ ಜೀವಿಯು ಅಜ್ಞಾನರೂಪವಾದ ಕಶ್ಮಲದಿಂದ ಮುಕ್ತನಾಗುವನು. ॥ ೩೨ ॥ ಅವನು ತನ್ನನ್ನು-ಭೂತಗಳು, ಇಂದ್ರಿಯಗಳು, ಗುಣಗಳು, ಅಂತಃಕರಣ ಇವುಗಳಿಂದ ರಹಿತನಾಗಿ ಸ್ವಸ್ವರೂಪದಿಂದ ನನ್ನಿಂದ ಅಭಿನ್ನನೆಂದು ನೋಡಿದಾಗ ಮೋಕ್ಷವನ್ನು ಪಡೆಯುವನು. ॥ ೩೩ ॥ ಬ್ರಹ್ಮನೇ! ನಿನ್ನ ಮೇಲೆ ನನ್ನ ಪೂರ್ಣವಾದ ಅನುಗ್ರಹವಿದೆ. ಆದುದರಿಂದ ನಾನಾ ಪ್ರಕಾರದ ಕರ್ಮಸಂಸ್ಕಾರಗಳಿಗೆ ಅನುಗುಣವಾಗಿ ಅನೇಕ ಪ್ರಕಾರಗಳಾದ ಜೀವರನ್ನು ಸೃಷ್ಟಿಸಲು ಬಯಸಿದರೂ ನಿನ್ನ ಮನಸ್ಸು ಕೊಂಚವೂ ಮೋಹಿತವಾಗಲಾರದು. ॥ ೩೪ ॥ ನೀನು ಮಂತ್ರದ್ರಷ್ಟಾರರಲ್ಲಿ ಮೊದಲಿಗನಾಗಿ ಆದಿಋಷಿಯಾಗಿರುವೆ. ಪ್ರಜೆಗಳನ್ನು ಸೃಷ್ಟಿಮಾಡುತ್ತಿರುವಾಗಲೂ ನಿನ್ನ ಮನಸ್ಸು ನನ್ನಲ್ಲೇ ನೆಟ್ಟಿರುವುದರಿಂದ ಪಾಪಿಷ್ಠವಾದ ರಜೋಗುಣವು ನಿನ್ನನ್ನು ಬಂಧಿಸಲಾರದು. ॥ ೩೫ ॥ ವತ್ಸ! ಭೂತಗಳು, ಇಂದ್ರಿಯಗಳು, ಗುಣಗಳು, ಅಂತಃಕರಣ – ಇವುಗಳಿಂದ ನಾನು ರಹಿತನಾಗಿರುವೆನೆಂದು ನೀನು ತಿಳಿದುಕೊಂಡಿರುವೆ. ಆದ್ದರಿಂದ ಸಾಮಾನ್ಯ ದೇಹಿಗಳಿಗೆ ತಿಳಿಯಲು ಅತಿ ಕಷ್ಟವಾಗಿರುವ ನನ್ನ ನಿಜಸ್ವರೂಪವನ್ನು ನೀನು ತಿಳಿದುಕೊಂಡುಬಿಟ್ಟಿರುವೆ. ॥ ೩೬ ॥ 'ನನಗೆ ಯಾವುದಾದರೂ ಆಶ್ರಯವಿದೆಯೋ, ಇಲ್ಲವೋ' ಎಂಬ ಸಂದೇಹದಿಂದ ನೀನು ಕಮಲನಾಳದ ಮೂಲಕ ಜಲದಲ್ಲಿ ಪ್ರವೇಶಿಸಿ ಅದರ ಮೂಲವನ್ನು ಹುಡುಕುತ್ತಿದ್ದೆ. ಅದಕ್ಕಾಗಿ ನಾನು ನಿನಗೆ ನನ್ನ ಸ್ವರೂಪವನ್ನು ನಿನ್ನ ಅಂತಃಕರಣದಲ್ಲೇ ತೋರಿಸಿರುವೆನು. ॥ ೩೭ ॥

ಯಚ್ಚಕರ್ಥಾಂಗ ಮತ್ಸ್ತೋತ್ರಂ ಮತ್ಕಥಾಭ್ಯುದಯಾಂಕಿತಮ್ ।
ಯದ್ವಾ ತಪಸಿ ತೇ ನಿಷ್ಠಾ ಸ ಏಷ ಮದನುಗ್ರಹಃ ॥ ೩೮ ॥

ಪ್ರೀತೋಽಹಮಸ್ತು ಭದ್ರಂ ತೇ ಲೋಕಾನಾಂ ವಿಜಯೇಚ್ಛಯಾ ।
ಯದಸ್ತೌಷೀರ್ಗುಣಮಯಂ ನಿರ್ಗುಣಂ ಮಾನುವರ್ಣಯನ್ ॥ ೩೯ ॥

ಯ ಏತೇನ ಪುಮಾನ್ನಿತ್ಯಂ ಸ್ತುತ್ವಾ ಸ್ತೋತ್ರೇಣ ಮಾಂ ಭಜೇತ್ ।
ತಸ್ಯಾಶು ಸಂಪ್ರಸೀದೇಯಂ ಸರ್ವಕಾಮವರೇಶ್ವರಃ ॥ ೪೦ ॥

ಪೂರ್ತೇನ ತಪಸಾ ಯಜ್ಞೈರ್ದಾನೈರ್ಯೋಗಸಮಾಧಿನಾ ।
ರಾದ್ಧಂ ನಿಃಶ್ರೇಯಸಂ ಪುಂಸಾಂ ಮತ್ಪ್ರೀತಿಸ್ತತ್ತ್ವವಿನ್ಮತಮ್ ॥ ೪೧ ॥

ಅಹಮಾತ್ಮಾಽಽತ್ಮನಾಂ ಧಾತಃ ಪ್ರೇಷ್ಠಃ ಸನ್ಪ್ರೇಯಸಾಮಪಿ ।
ಅತೋ ಮಯಿ ರತಿಂ ಕುರ್ಯಾದ್ದೇಹಾದಿರ್ಯತ್ಕೃತೇ ಪ್ರಿಯಃ ॥ ೪೨ ॥

ಸರ್ವವೇದಮಯೇನೇದಮಾತ್ಮನಾತ್ಮಾತ್ಮಯೋನಿನಾ ।
ಪ್ರಜಾಃ ಸೃಜ ಯಥಾಪೂರ್ವಂ ಯಾಶ್ಚ ಮಯ್ಯನುಶೇರತೇ ॥ ೪೩ ॥

ಮೈತ್ರೇಯ ಉವಾಚ

ತಸ್ಮಾ ಏವಂ ಜಗತ್ಸ್ರಷ್ಟ್ರೇ ಪ್ರಧಾನಪುರುಷೇಶ್ವರಃ ।
ವ್ಯಜ್ಯೇದಂ ಸ್ವೇನ ರೂಪೇಣ ಕಂಜನಾಭಸ್ತಿರೋದಧೇ ॥ ೪೪ ॥

ಪ್ರಿಯಪುತ್ರನೇ! ನೀನು ಮಾಡಿರುವ ನನ್ನ ಕಥಾವೈಭವದಿಂದ ಕೂಡಿದ ಸ್ತುತಿ ಮತ್ತು ನಿನಗಿರುವ ತಪೋನಿಷ್ಠೆ – ಇವೂ ನನ್ನ ಅನುಗ್ರಹದಿಂದಲೇ ಉಂಟಾಗಿದೆ. ॥ ೩೮ ॥ ಲೋಕಗಳನ್ನು ಸೃಷ್ಟಿಸುವ ಇಚ್ಛೆಯಿಂದ ನೀನು ನನ್ನನ್ನು ಸಗುಣನಾಗಿಯೂ, ನಿರ್ಗುಣನಾಗಿಯೂ ವರ್ಣಿಸಿ ಸ್ತೋತ್ರ ಮಾಡಿರುವುದರಿಂದ ನಾನು ಅತ್ಯಂತ ಸಂತುಷ್ಟನಾಗಿರುವೆನು. ನಿನಗೆ ಮಂಗಳವಾಗಲಿ. ॥ ೩೯ ॥ ಸ್ವಯಂಭುವೇ! ಸಮಸ್ತ ಮನೋರಥಗಳನ್ನು ಈಡೇರಿಸುವ ಸಾಮರ್ಥ್ಯವುಳ್ಳ ಈಶ್ವರನು ನಾನು. ನೀನು ಮಾಡಿದ ಈ ಸ್ತೋತ್ರದ ಮೂಲಕ ಪ್ರತಿದಿನವೂ ನನ್ನನ್ನು ಭಜಿಸುವವನಿಗೆ ನಾನು ಬೇಗನೇ ಪ್ರಸನ್ನನಾಗುತ್ತೇನೆ. ॥ ೪೦ ॥ ಕೆರೆ-ಬಾವಿ ಮುಂತಾದವುಗಳನ್ನು ತೋಡಿಸುವ ಪೂರ್ತ, ತಪಸ್ಸು, ಯಜ್ಞ, ಯೋಗ, ಸಮಾಧಿ ಮುಂತಾದ ಸಾಧನೆಗಳಿಂದ ದೊರೆಯುವ ಪರಮ ಮಂಗಳ ಮಯ ಫಲವು ನನ್ನ (ಭಗವಂತನ) ಪ್ರಸನ್ನತೆಯೇ ಆಗಿದೆ ಎಂದು ತತ್ತ್ವಜ್ಞಾನಿಗಳ ಅಭಿಪ್ರಾಯವಾಗಿದೆ. ॥ ೪೧ ॥ ವಿಧಾತನೇ! ನಾನು ಎಲ್ಲ ಆತ್ಮಗಳಿಗೂ ಆತ್ಮನಾಗಿರುವೆನು. ಪತ್ನೀ, ಪುತ್ರಾದಿ ಪ್ರಿಯವಸ್ತುಗಳಿಂದಲೂ ಪ್ರಿಯನಾದವನು. ದೇಹಿಗಳಿಗೆ ದೇಹಾದಿಗಳು ನನಗೋಸ್ಕರವೇ ಪ್ರಿಯವಾಗಿವೆ. ಆದುದರಿಂದ ಪ್ರಿಯಕ್ಕೂ ಪ್ರಿಯತಮನಾಗಿರುವ ನನ್ನನ್ನೇ ಪ್ರೇಮಿಸಬೇಕು. ॥ ೪೨ ॥ ಬ್ರಹ್ಮನೇ! ಮೂರು ಲೋಕಗಳನ್ನು ಮತ್ತು ಈಗ ನನ್ನಲ್ಲಿ ಲೀನವಾದ ಪ್ರಜೆಗಳನ್ನು ಹಿಂದಿನ ಕಲ್ಪದಲ್ಲಿ ಅವು ಹೇಗಿದ್ದವೋ ಹಾಗೆಯೇ– ನನ್ನಿಂದ ಉತ್ಪನ್ನವಾದ ನಿನ್ನ ಸರ್ವವೇದಮಯ ಸ್ವರೂಪದಿಂದ ಸ್ವತಃ ರಚಿಸು. ॥ ೪೩ ॥

ಮೈತ್ರೇಯರು ಹೇಳುತ್ತಾರೆ – ಪ್ರಕೃತಿ ಮತ್ತು ಪುರುಷರಿಗೂ ಪ್ರಭುವಾದ ಭಗವಾನ್ ಪದ್ಮನಾಭನು ಸೃಷ್ಟಿಕರ್ತರಾದ ಬ್ರಹ್ಮದೇವರಿಗೆ ಹೀಗೆ ಜಗತ್ತಿನ ಸೃಷ್ಟಿಕ್ರಮವನ್ನು ಪ್ರಕಟಿಸಿ, ಜಯವಾಗಲೀ ಎಂದು ಆಶೀರ್ವದಿಸಿ, ತನ್ನ ನಿಜರೂಪವನ್ನು ಕಣ್ಮರೆಯಾಗಿಸಿದನು. ॥ ೪೪ ॥

ಒಂಭತ್ತನೆಯ ಅಧ್ಯಾಯವು ಮುಗಿಯಿತು. ॥ ೯ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ತೃತೀಯಸ್ಕಂಧೇ ನವಮೋಽಧ್ಯಾಯಃ ॥ ೯ ॥

ಹತ್ತನೆಯ ಅಧ್ಯಾಯ

ಹತ್ತುಬಗೆಯ ಸೃಷ್ಟಿಯ ವರ್ಣನೆ

ವಿದುರ ಉವಾಚ

ಅಂತರ್ಹಿತೇ ಭಗವತಿ ಬ್ರಹ್ಮಾ ಲೋಕಪಿತಾಮಹಃ ।
ಪ್ರಜಾಃ ಸಸರ್ಜ ಕತಿಧಾ ದೈಹಿಕೀರ್ಮಾನಸೀರ್ವಿಭುಃ ॥ ೧ ॥

ಯೇ ಚ ಮೇ ಭಗವನ್ಪೃಷ್ಟಾಸ್ತ್ವಯ್ಯರ್ಥಾ ಬಹುವಿತ್ತಮ ।
ತಾನ್ವದಸ್ವಾನುಪೂರ್ವ್ಯೇಣ ಛಿಂಧಿ ನಃ ಸರ್ವಸಂಶಯಾನ್ ॥ ೨ ॥

ವಿದುರನು ಕೇಳಿದನು – ಮುನಿವರ್ಯರಾದ ಮೈತ್ರೇಯರೇ! ಭಗವಾನ್ ನಾರಾಯಣನು ಅಂತರ್ಧಾನನಾದ ಮೇಲೆ ಸರ್ವಲೋಕಪಿತಾಮಹರಾದ ಬ್ರಹ್ಮದೇವರು ತಮ್ಮ ದೇಹದಿಂದ ಮತ್ತು ಮನಸ್ಸಿನಿಂದ ಎಷ್ಟು ಬಗೆಯ ಸೃಷ್ಟಿಗಳನ್ನು ಉತ್ಪನ್ನಮಾಡಿದರು? ॥ ೧ ॥ ಪೂಜ್ಯರೇ! ಇದಲ್ಲದೆ ನಾನು ತಮ್ಮಲ್ಲಿ ಕೇಳಿಕೊಂಡ ಎಲ್ಲ ಪ್ರಶ್ನೆಗಳಿಗೆ ಕ್ರಮವಾಗಿ ಉತ್ತರ ದಯಪಾಲಿಸಿ ನನ್ನ ಎಲ್ಲ ಸಂಶಯಗಳನ್ನು ಪರಿಹರಿಸಿರಿ. ತಾವು ಜ್ಞಾನಿಗಳಲ್ಲೇ ಅತ್ಯಂತ ಶ್ರೇಷ್ಠರಾಗಿರುವಿರಿ. ॥ ೨ ॥

ಸೂತ ಉವಾಚ

ಏವಂ ಸಂಚೋದಿತಸ್ತೇನ ಕ್ಷತ್ತ್ರಾ ಕೌಷಾರವಿರ್ಮುನಿಃ ।
ಪ್ರೀತಃ ಪ್ರತ್ಯಾಹ ತಾನ್ಪ್ರಶ್ನಾನ್ ಹೃದಿಸ್ಥಾನಥ ಭಾರ್ಗವ ॥ ೩ ॥

ಮೈತ್ರೇಯ ಉವಾಚ

ವಿರಿಂಚೋಽಪಿ ತಥಾ ಚಕ್ರೇ ದಿವ್ಯಂ ವರ್ಷಶತಂ ತಪಃ ।
ಆತ್ಮನ್ಯಾತ್ಮಾನಮಾವೇಶ್ಯ ಯದಾಹ ಭಗವಾನಜಃ ॥ ೪ ॥

ತದ್ವಿಲೋಕ್ಯಾಬ್ಜಸಂಭೂತೋ ವಾಯುನಾ ಯದಧಿಷ್ಠಿತಃ ।
ಪದ್ಮಮಂಭಶ್ಚ ತತ್ಕಾಲಕೃತವೀರ್ಯೇಣ ಕಂಪಿತಮ್ ॥ ೫ ॥

ತಪಸಾ ಹ್ಯೇಧಮಾನೇನ ವಿದ್ಯಯಾ ಚಾತ್ಮಸಂಸ್ಥಯಾ ।
ವಿವೃದ್ಧವಿಜ್ಞಾನಬಲೋ ನ್ಯಪಾದ್ವಾಯುಂ ಸಹಾಂಭಸಾ ॥ ೬ ॥

ತದ್ವಿಲೋಕ್ಯ ವಿಯದ್ವ್ಯಾಪಿ ಪುಷ್ಕರಂ ಯದಧಿಷ್ಠಿತಮ್ ।
ಅನೇನ ಲೋಕಾನ್ಪ್ರಾಗ್ಲೀನಾನ್ಕಲ್ಪಿತಾಸ್ಮೀತ್ಯಚಿಂತಯತ್ ॥ ೭ ॥

ಪದ್ಮಕೋಶಂ ತದಾಽಽವಿಶ್ಯ ಭಗವತ್ಕರ್ಮಚೋದಿತಃ ।
ಏಕಂ ವ್ಯಭಾಂಕ್ಷೀದುರುಧಾ ತ್ರಿಧಾ ಭಾವ್ಯಂ ದ್ವಿಸಪ್ತಧಾ ॥ ೮ ॥

ಏತಾವಾನ್ಜೀವಲೋಕಸ್ಯ ಸಂಸ್ಥಾಭೇದಃ ಸಮಾಹೃತಃ ।
ಧರ್ಮಸ್ಯ ಹ್ಯನಿಮಿತ್ತಸ್ಯ ವಿಪಾಕಃ ಪರಮೇಷ್ಠ್ಯಸೌ ॥ ೯ ॥

ವಿದುರ ಉವಾಚ

ಯದಾತ್ಥ ಬಹುರೂಪಸ್ಯ ಹರೇರದ್ಭುತಕರ್ಮಣಃ ।
ಕಾಲಾಖ್ಯಂ ಲಕ್ಷಣಂ ಬ್ರಹ್ಮನ್ಯಥಾ ವರ್ಣಯ ನಃ ಪ್ರಭೋ ॥ ೧೦ ॥

ಮೈತ್ರೇಯ ಉವಾಚ

ಗುಣವ್ಯತಿಕರಾಕಾರೋ ನಿರ್ವಿಶೇಷೋಽಪ್ರತಿಷ್ಠಿತಃ ।
ಪುರುಷಸ್ತದುಪಾದಾನಮಾತ್ಮಾನಂ ಲೀಲಯಾಸೃಜತ್ ॥ ೧೧ ॥

ವಿಶ್ವಂ ವೈ ಬ್ರಹ್ಮತನ್ಮಾತ್ರಂ ಸಂಸ್ಥಿತಂ ವಿಷ್ಣುಮಾಯಯಾ ।
ಈಶ್ವರೇಣ ಪರಿಚ್ಛಿನ್ನಂ ಕಾಲೇನಾವ್ಯಕ್ತಮೂರ್ತಿನಾ ॥ ೧೨ ॥

ಯಥೇದಾನೀಂ ತಥಾಗ್ರೇ ಚ ಪಶ್ಚಾದಪ್ಯೇತದೀದೃಶಮ್ ।
ಸರ್ಗೋ ನವವಿಧಸ್ತಸ್ಯ ಪ್ರಾಕೃತೋ ವೈಕೃತಸ್ತು ಯಃ ॥ ೧೩ ॥

ಸೂತಪುರಾಣಿಕರು ಹೇಳಿದರು – ಶೌನಕಾದಿ ಋಷಿಗಳೇ! ವಿದುರನು ಹೀಗೆ ಕೇಳಿದಾಗ ಮುನಿವರ್ಯ ಮೈತ್ರೇಯರು ಬಹಳ ಪ್ರಸನ್ನರಾಗಿ ತಮ್ಮ ಹೃದಯದಲ್ಲಿದ್ದ ಆ ಪ್ರಶ್ನೆಗಳಿಗೆ ಹೀಗೆ ಉತ್ತರಿಸ ತೊಡಗಿದರು. ॥ ೩ ॥

ಶ್ರೀಮೈತ್ರೇಯರು ಹೇಳುತ್ತಾರೆ – ಅಯ್ಯಾ ವಿದುರನೇ! ಜನ್ಮರಹಿತನಾದ ಭಗವಾನ್ ಶ್ರೀಹರಿಯು ಹೇಳಿದಂತೆಯೇ ಬ್ರಹ್ಮದೇವರು ತಮ್ಮ ಚಿತ್ತವನ್ನು ಆತ್ಮಭೂತನಾದ ಶ್ರೀನಾರಾಯಣನಲ್ಲಿ ತೊಡಗಿಸಿ ನೂರು ದಿವ್ಯವರ್ಷಗಳವರೆಗೆ ತಪಸ್ಸನ್ನಾಚರಿಸಿದರು. ॥ ೪ ॥ ಆಗ ಪ್ರಳಯಕಾಲದ ಮಹಾವಾಯುವಿನ ಬಡಿತಗಳಿಂದ ಅವರು ಕುಳಿತಿದ್ದ ಕಮಲವು ಹಾಗೂ ಸುತ್ತಲೂ ಇದ್ದ ಜಲರಾಶಿಯೂ ಅಲ್ಲಾಡುತ್ತಿರುವುದು ಅವರಿಗೆ ಗೋಚರಿಸಿತು. ॥ ೫ ॥ ಪ್ರಬಲವಾದ ತಪಸ್ಸಿನಿಂದ ಮತ್ತು ಹೃದಯದಲ್ಲಿ ಸ್ಥಿತವಾದ ಆತ್ಮಜ್ಞಾನದಿಂದ ಅವರ ವಿಜ್ಞಾನ-ಬಲವು ವೃದ್ಧಿಸಿತು. ಅವುಗಳ ಬಲದಿಂದ ಅವರು ಆ ಜಲರಾಶಿಯನ್ನೂ, ವಾಯುವನ್ನೂ ಕುಡಿದು ಬಿಟ್ಟರು. ॥ ೬ ॥ ಮತ್ತೆ ತಾನು ಕುಳಿತಿದ್ದ ಆಕಾಶವ್ಯಾಪಿ ಮಹಾಕಮಲವನ್ನು ನೋಡಿ ಅವರು – 'ಹಿಂದಿನ ಕಲ್ಪದಲ್ಲಿ ಲೀನವಾದ ಲೋಕಗಳನ್ನು ನಾನು ಈ ಕಮಲದಿಂದಲೇ ಸೃಷ್ಟಿಸುವೆನು' ಎಂದು ಯೋಚಿಸಿದರು. ॥ ೭ ॥ ಶ್ರೀಭಗವಂತನಿಂದ ಸೃಷ್ಟಿಕಾರ್ಯವನ್ನು ಮಾಡಲು ನೇಮಕಗೊಂಡಿದ್ದ ಆ ಬ್ರಹ್ಮದೇವರು ಕಮಲಕೋಶದಲ್ಲಿ ಪ್ರವೇಶಿಸಿ ಒಂದೊಂದನ್ನೇ ಭೂಃ, ಭುವಃ, ಸುವಃ ಎಂಬ ಮೂರು ಭಾಗಗಳನ್ನಾಗಿ ವಿಂಗಡಿಸಿದರು. ಆ ಕಮಲವು ಅತ್ಯಂತ ದೊಡ್ಡದಾಗಿದ್ದು ಅದನ್ನು ಹದಿನಾಲ್ಕು ಲೋಕಗಳನ್ನಾಗಿ ಅಥವಾ ಅದಕ್ಕಿಂತಲೂ ಹೆಚ್ಚು ಲೋಕಗಳನ್ನಾಗಿ ವಿಭಾಗಮಾಡಬಹುದಾಗಿತ್ತು. ॥ ೮ ॥ ಜೀವಿಗಳ ಭೋಗಸ್ಥಾನವಾಗಿ ಇವೇ ಮೂರು ಲೋಕಗಳು ಶಾಸ್ತ್ರಗಳಲ್ಲಿ ವರ್ಣಿತವಾಗಿವೆ. ನಿಷ್ಕಾಮ ಕರ್ಮ ಮಾಡುವವರಿಗಾದರೋ ಮಹಃ, ತಪಃ, ಜನಃ ಮತ್ತು ಸತ್ಯಲೋಕ ರೂಪವಾದ ಬ್ರಹ್ಮಲೋಕ ಇವುಗಳು ದೊರೆಯುತ್ತವೆ. ॥ ೯ ॥

ವಿದುರನು ಕೇಳಿದನು – ಬ್ರಾಹ್ಮಣೋತ್ತಮರೇ! ತಾವು ಅದ್ಭುತಕರ್ಮನಾದ ಶ್ರೀಹರಿಯ ಕಾಲವೆಂಬ ಶಕ್ತಿಯ ಮಾತನ್ನು ಹೇಳಿದಿರಿ. ಸ್ವಾಮಿ! ದಯವಿಟ್ಟು ಅದನ್ನು ನನಗೆ ವಿಸ್ತಾರವಾಗಿ ವರ್ಣಿಸಬೇಕು. ॥ ೧೦ ॥

ಶ್ರೀಮೈತ್ರೇಯರು ಹೇಳುತ್ತಾರೆ – ಎಲೈ ವಿದುರಾ! ವಿಷಯಗಳು ರೂಪಾಂತರ ಹೊಂದುವುದೇ ಕಾಲದ ಆಕಾರವು. ಅದು ಸ್ವತಃ ನಿರ್ವಿಶೇಷವೂ, ಅನಾದಿಯೂ, ಅನಂತವೂ ಆಗಿದೆ. ಅದನ್ನೇ ನಿಮಿತ್ತವಾಗಿಟ್ಟುಕೊಂಡು ಶ್ರೀಭಗವಂತನು ಲೀಲಾಜಾಲವಾಗಿ ತನ್ನನ್ನೇ ಸೃಷ್ಟಿಯರೂಪದಲ್ಲಿ ಪ್ರಕಟಪಡಿಸಿಕೊಳ್ಳುವನು. ॥ ೧೧ ॥ ಮೊದಲು ಈ ವಿಶ್ವವೆಲ್ಲವೂ ಭಗವಂತನ ಮಾಯೆಯಲ್ಲಿ ಲೀನವಾಗಿ ಬ್ರಹ್ಮರೂಪದಲ್ಲೇ ಇತ್ತು. ಅದನ್ನೇ ಅವ್ಯಕ್ತಮೂರ್ತಿಯಾದ ಕಾಲದ ಮೂಲಕ ಭಗವಂತನು ಪುನಃ ಪ್ರತ್ಯೇಕವಾಗಿ ಪ್ರಕಟಪಡಿಸಿದನು. ॥ ೧೨ ॥ ಈ ಜಗತ್ತು ಈಗಿರುವಂತೆ ಹಿಂದೆಯೂ ಇತ್ತು ಮತ್ತು ಮುಂದೆಯೂ ಹೀಗೆಯೇ ಇರುವುದು. ಇದರ ಸೃಷ್ಟಿಯು ಒಂಭತ್ತು ಪ್ರಕಾರದಿಂದಿರುವುದು ಮತ್ತು ಪ್ರಾಕೃತ-ವೈಕೃತ ಭೇದದಿಂದ ಹತ್ತನೆಯದಾದ ಒಂದು ಸೃಷ್ಟಿಯೂ ಇದೆ. ॥ ೧೩ ॥

ಕಾಲದ್ರವ್ಯಗುಣೈರಸ್ಯ ತ್ರಿವಿಧಃ ಪ್ರತಿಸಂಕ್ರಮಃ।
ಆದ್ಯಸ್ತು ಮಹತಃ ಸರ್ಗೋ ಗುಣವೈಷಮ್ಯಮಾತ್ಮನಃ ॥ ೧೪ ॥

ಇದರ ಪ್ರಳಯವು, ಕಾಲ, ದ್ರವ್ಯ, ಗುಣ ಇವುಗಳ ಮೂಲಕ ಮೂರು ಪ್ರಕಾರದಿಂದ ಆಗುತ್ತದೆ. ಈಗ ಇವುಗಳಲ್ಲಿ ಮೊದಲಿಗೆ ಹತ್ತು ಪ್ರಕಾರದ ಸೃಷ್ಟಿಯನ್ನು ವರ್ಣಿಸುತ್ತೇನೆ; ಕೇಳು - ಮೊದಲನೆಯದು ಮಹತ್ತತ್ತ್ವದ ಸೃಷ್ಟಿ. ಭಗವಂತನ ಪ್ರೇರಣೆಯಿಂದ ಸತ್ತ್ವಾದಿ ಗುಣಗಳಲ್ಲಿ ವಿಷಮತೆ ಉಂಟಾಗುವುದೇ ಇದರ ಸ್ವರೂಪವಾಗಿದೆ. ॥ ೧೪ ॥

ದ್ವಿತೀಯಸ್ತ್ವಹಮೋ ಯತ್ರ ದ್ರವ್ಯಜ್ಞಾನಕ್ರಿಯೋದಯಃ।
ಭೂತಸರ್ಗಸ್ತೃತೀಯಸ್ತು ತನ್ಮಾತ್ರೋ ದ್ರವ್ಯಶಕ್ತಿಮಾನ್ ॥ ೧೫ ॥

ಎರಡನೆಯ ಸೃಷ್ಟಿ ಅಹಂಕಾರದ್ದು. ಇದರಿಂದ ಪೃಥ್ವಿಯೇ ಮುಂತಾದ ಪಂಚಭೂತಗಳು, ಜ್ಞಾನೇಂದ್ರಿಯ ಮತ್ತು ಕರ್ಮೇಂದ್ರಿಯಗಳ ಉತ್ಪತ್ತಿ ಆಗುತ್ತದೆ. ಭೂತ ಸೃಷ್ಟಿಯೇ ಮೂರನೆಯದು. ಇದರಲ್ಲಿ ಪಂಚಮಹಾಭೂತಗಳನ್ನು ಉಂಟುಮಾಡುವ ತನ್ಮಾತ್ರವರ್ಗ ಇರುವುದು. ॥ ೧೫ ॥

ಚತುರ್ಥ ಐಂದ್ರಿಯಃ ಸರ್ಗೋ ಯಸ್ತು ಜ್ಞಾನಕ್ರಿಯಾತ್ಮಕಃ।
ವೈಕಾರಿಕೋ ದೇವಸರ್ಗಃ ಪಂಚಮೋ ಯನ್ಮಯಂ ಮನಃ ॥ ೧೬ ॥

ನಾಲ್ಕನೆಯದು ಇಂದ್ರಿಯಗಳ ಸೃಷ್ಟಿಯು. ಇದು ಜ್ಞಾನ ಮತ್ತು ಕ್ರಿಯಾಶಕ್ತಿಯಿಂದ ಸಂಪನ್ನವಾಗುವುದು. ಐದನೆಯದಾದ ಸೃಷ್ಟಿಯು ಸಾತ್ತ್ವಿಕ ಅಹಂಕಾರದಿಂದ ಉತ್ಪನ್ನವಾಗಿ ಇಂದ್ರಿಯಗಳಿಗೆ ಅಧಿಷ್ಠಾತೃ ದೇವತೆಗಳದ್ದಾಗಿದೆ. ಮನಸ್ಸು ಇದೇ ಸೃಷ್ಟಿಯಲ್ಲಿ ಅಂತರ್ಗತವಾಗಿದೆ. ॥ ೧೬ ॥

ಷಷ್ಠಸ್ತು ತಮಸಃ ಸರ್ಗೋ ಯಸ್ತ್ವಬುದ್ಧಿಕೃತಃ ಪ್ರಭೋಃ।
ಷಡಿಮೇ ಪ್ರಾಕೃತಾಃ ಸರ್ಗಾ ವೈಕೃತಾನಪಿ ಮೇ ಶೃಣು ॥ ೧೭ ॥

ಅವಿದ್ಯೆಯ ಸೃಷ್ಟಿಯು ಆರನೆಯದು. ಇದರಲ್ಲಿ ತಾಮಿಸ್ರ, ಅಂಧತಾಮಿಸ್ರ, ತಮ, ಮೋಹ ಮತ್ತು ಮಹಾಮೋಹ - ಎಂಬ ಐದು ಗಂಟುಗಳು ಇರುವುವು. ಇದು ಜೀವಿಗಳ ಬುದ್ಧಿಯನ್ನು ಆವರಣ ಮತ್ತು ವಿಕ್ಷೇಪಗೊಳಿಸುವಂತಹುದು. ಇವು ಆರು ಪ್ರಾಕೃತ ಸೃಷ್ಟಿಗಳು. ಇನ್ನು ವೈಕೃತ ಸೃಷ್ಟಿಗಳನ್ನು ವರ್ಣಿಸುವೆನು. ಕೇಳು. ॥ ೧೭ ॥

ರಜೋಭಾಜೋ ಭಗವತೋ ಲೀಲೇಯಂ ಹರಿಮೇಧಸಃ।
ಸಪ್ತಮೋ ಮುಖ್ಯಸರ್ಗಸ್ತು ಷಡ್ವಿಧಸ್ತಸ್ಥುಷಾಂ ಚ ಯಃ ॥ ೧೮ ॥

ಚಿಂತನೆ ಮಾಡುವವರ ಸಮಸ್ತ ದುಃಖಗಳನ್ನು ಪರಿಹರಿಸುವ ಭಗವಾನ್ ಶ್ರೀಹರಿಯದೇ ಇವೆಲ್ಲ ಲೀಲೆಗಳು. ಅವನೇ ಬ್ರಹ್ಮದೇವರ ರೂಪದಲ್ಲಿ ರಜೋಗುಣವನ್ನು ಸ್ವೀಕರಿಸಿ ಜಗತ್ತನ್ನು ರಚಿಸುವನು. ಆರು ಪ್ರಕಾರದ ಪ್ರಾಕೃತ ಸೃಷ್ಟಿಯ ಬಳಿಕ, ವೈಕೃತಿಕ ಸೃಷ್ಟಿಯಲ್ಲಿ ಪ್ರಧಾನವಾದ ಸ್ಥಾವರ ಸೃಷ್ಟಿಯೇ ಏಳನೆಯದು. ಅದು ಆರು ವಿಭಾಗವಾಗಿರುವುದು. ॥ ೧೮ ॥

ವನಸ್ಪತ್ಯೋಷಧಿಲತಾತ್ವಕ್ಸಾರಾ ವೀರುಧೋ ದ್ರುಮಾಃ।
ಉತ್ಸ್ರೋತಸಸ್ತಮಃಪ್ರಾಯಾ ಅಂತಃಸ್ಪರ್ಶಾ ವಿಶೇಷಿಣಃ ॥ ೧೯ ॥

ವನಸ್ಪತಿಗಳು, ಓಷಧಿಗಳು, ಲತೆಗಳು, ಬಿದಿರು ಮುಂತಾದ ತ್ವಕ್ಸಾರಗಳು, ವೀರುಧಗಳು ಮತ್ತು ದ್ರುಮಗಳೇ ಆ ಆರು ಬಗೆಗಳು.* ಇವು ಕೆಳಭಾಗದಿಂದ (ಬೇರಿನಿಂದ) ಮೇಲ್ಗಡೆಗೆ ಆಹಾರಸಂಚಾರ ಹೊಂದಿರುತ್ತವೆ. ಸಾಮಾನ್ಯವಾಗಿ ಇವುಗಳಲ್ಲಿ ಜ್ಞಾನಶಕ್ತಿಯು ಪ್ರಕಟವಾಗಿರುವುದಿಲ್ಲ. ಇವು ಒಳಗಿಂದೊಳಗೆ ಕೇವಲ ಸ್ಪರ್ಶದ ಅನುಭವ ಮಾಡುತ್ತವೆ. ಇವುಗಳ ಪ್ರತಿಯೊಂದರಲ್ಲಿಯೂ ಯಾವುದೋ ವಿಶೇಷಗುಣವಿರುತ್ತದೆ. ॥ ೧೯ ॥

ತಿರಶ್ಚಾಮಷ್ಟಮಃ ಸರ್ಗಃ ಸೋಽಷ್ಟಾವಿಂಶದ್ವಿಧೋ ಮತಃ।
ಅವಿದೋ ಭೂರಿತಮಸೋ ಘ್ರಾಣಜ್ಞಾ ಹೃದ್ಯವೇದಿನಃ ॥ ೨೦ ॥

ಎಂಟನೆಯ ಸೃಷ್ಟಿಯು ತಿರ್ಯಕ್ (ಪಶು-ಪಕ್ಷಿ) ಯೋನಿಗಳದ್ದಾಗಿದೆ. ಆ ಸೃಷ್ಟಿಯಲ್ಲಿ ಇಪ್ಪತ್ತೆಂಟು ಜಾತಿಯ ಪ್ರಾಣಿಗಳು ಜನಿಸಿದವು. ಇವುಗಳಿಗೆ ಇಂದು-ನಾಳೆ ಎಂಬ ಕಾಲಜ್ಞಾನವಿರುವುದಿಲ್ಲ. ತಮೋಗುಣದ ಹೆಚ್ಚಳದಿಂದ ಇವು ಕೇವಲ ತಿಂದು-ಕುಡಿಯುವುದು, ಮೈಥುನ ಮಲಗುವುದು ಇಷ್ಟೇ ತಿಳಿಯುವುವು. ಇವುಗಳಿಗೆ ಮೂಸಿ

* ಹೂವಿಲ್ಲದೆ ಫಲಿಸುವ ಅರಳಿ, ಅತ್ತಿ, ಹಲಸು, ಆಲ ಮುಂತಾದವುಗಳು ವನಸ್ಪತಿಗಳು. ಹೂಬಿಟ್ಟು ಫಲಕೊಡುವ ಜವೆ, ಭತ್ತ, ಹೆಸರು ಮುಂತಾದವುಗಳು ಓಷಧಿಗಳು. ಇವುಗಳು ಫಲಪಕ್ವವಾದ ಮೇಲೆ ನಾಶಹೊಂದುತ್ತವೆ. ಆಶ್ರಯ ವೃಕ್ಷಾದಿಗಳಿಗೆ ಹಬ್ಬಿ ಮೇಲಕ್ಕೆ ಬೆಳೆಯುವ ಮಲ್ಲಿಗೆ ಮುಂತಾದ ಬಳ್ಳಿಗಳೇ ಲತೆಗಳು. ಕಠೋರವಾದ ತೊಗಟೆಯನ್ನು ಹೊಂದಿರುವ ಬಿದಿರು ಮುಂತಾದವುಗಳು ತ್ವಕ್ಸಾರಗಳು. ಗಟ್ಟಿಯಾಗಿ ಕುರುಚಲಾಗಿರುವುದರಿಂದ ಮೇಲಕ್ಕೆ ಹತ್ತದೆ ನೆಲದ ಮೇಲೆಯೇ ಹರಡಿಕೊಳ್ಳುವ ಬಳ್ಳಿಗಳು ವೀರುಧಗಳೆನಿಸುತ್ತವೆ. ಉದಾ:- ಕರ್ಬೂಜ, ಕಲ್ಲಂಗಡಿ ಮುಂತಾದವುಗಳು. ಮೊದಲು ಹೂವುಬಿಟ್ಟು ನಂತರ ಹೂವಿನ ಜಾಗದಲ್ಲೇ ಹಣ್ಣುಗಳು ಬಿಡುವ ಮಾವು, ನೇರಳೆ, ತೆಂಗು ಮುಂತಾದವುಗಳೇ ದ್ರುಮಗಳು.

ಗೌರಜೋ ಮಹಿಷಃ ಕೃಷ್ಣಃ ಸೂಕರೋ ಗವಯೋ ರುರುಃ ।
ದ್ವಿಶಫಾಃ ಪಶವಶ್ಚೇಮೇ ಅವಿರುಷ್ಟ್ರಶ್ಚ ಸತ್ತಮ ॥ ೨೧ ॥

ಖರೋಽಶ್ವೋಽಶ್ವತರೋ ಗೌರಃ ಶರಭಶ್ಚಮರೀ ತಥಾ ।
ಏತೇ ಚೈಕಶಫಾಃ ಕ್ಷತ್ತಃ ಶೃಣು ಪಂಚನಖಾನ್ಪಶೂನ್ ॥ ೨೨ ॥

ಶ್ವಾ ಸೃಗಾಲೋ ವೃಕೋ ವ್ಯಾಘ್ರೋ ಮಾರ್ಜಾರಃ ಶಶಶಲ್ಲಕೌ ।
ಸಿಂಹಃ ಕಪಿರ್ಗಜಃ ಕೂರ್ಮೋ ಗೋಧಾ ಚ ಮಕರಾದಯಃ ॥ ೨೩ ॥

ಕಂಕಗೃಧ್ರಬಕಶ್ಯೇನಭಾಸಭಲ್ಲೂಕಬರ್ಹಿಣಃ ।
ಹಂಸಸಾರಸಚಕ್ರಾಹ್ವಕಾಕೋಲೂಕಾದಯಃ ಖಗಾಃ ॥ ೨೪ ॥

ಅರ್ವಾಕ್ಸ್ರೋತಸ್ತು ನವಮಃ ಕ್ಷತ್ತರೇಕವಿಧೋ ನೃಣಾಮ್ ।
ರಜೋಽಧಿಕಾಃ ಕರ್ಮಪರಾ ದುಃಖೇ ಚ ಸುಖಮಾನಿನಃ ॥ ೨೫ ॥

ವೈಕೃತಾಸ್ತ್ರಯ ಏವೈತೇ ದೇವಸರ್ಗಶ್ಚ ಸತ್ತಮ ।
ವೈಕಾರಿಕಸ್ತು ಯಃ ಪ್ರೋಕ್ತಃ ಕೌಮಾರಸ್ತೂಭಯಾತ್ಮಕಃ ॥ ೨೬ ॥

ದೇವಸರ್ಗಶ್ಚಾಷ್ಟವಿಧೋ ವಿಬುಧಾಃ ಪಿತರೋಽಸುರಾಃ ।
ಗಂಧರ್ವಾಪ್ಸರಸಃ ಸಿದ್ಧಾ ಯಕ್ಷರಕ್ಷಾಂಸಿ ಚಾರಣಾಃ ॥ ೨೭ ॥

ಭೂತಪ್ರೇತಪಿಶಾಚಾಶ್ಚ ವಿದ್ಯಾಧ್ರಾಃ ಕಿನ್ನರಾದಯಃ ।
ದಶೈತೇ ವಿದುರಾಖ್ಯಾತಾಃ ಸರ್ಗಾಸ್ತೇ ವಿಶ್ವಸೃಕ್ಕೃತಾಃ ॥ ೨೮ ॥

ಅತಃ ಪರಂ ಪ್ರವಕ್ಷ್ಯಾಮಿ ವಂಶಾನ್ಮನ್ವಂತರಾಣಿ ಚ ।
ಏವಂ ರಜಃಪ್ಲುತಃ ಸ್ರಷ್ಟಾ ಕಲ್ಪಾದಿಷ್ವಾತ್ಮಭೂರ್ಹರಿಃ ।
ಸೃಜತ್ಯಮೋಘಸಂಕಲ್ಪ ಆತ್ಮೈವಾತ್ಮಾನಮಾತ್ಮನಾ ॥ ೨೯ ॥

ನೋಡಿಯೇ ವಸ್ತುವಿನ ಜ್ಞಾನವಾಗುತ್ತದೆ. ಇವುಗಳ ಹೃದಯದಲ್ಲಿ ವಿಚಾರಶಕ್ತಿ ಅಥವಾ ದೂರದರ್ಶಿತ್ವ ಇರುವುದಿಲ್ಲ. ॥ ೨೦ ॥ ಸಾಧುಶ್ರೇಷ್ಠನೇ! ಈ ತಿರ್ಯಕ್ ಪ್ರಾಣಿಗಳಲ್ಲಿ – ಹಸು, ಆಡು, ಕೋಣ, ಜಿಂಕೆ, ಹಂದಿ ಗವಯ (ನೀಲಗೋವು) ರುರು ಎಂಬ ಮೃಗ, ಟಗರು, ಒಂಟೆ – ಇವುಗಳನ್ನು 'ದ್ವಿಶಫ' (ಎರಡು ಗೊರಸುಗಳುಳ್ಳವುಗಳು) ಎಂದು ಕರೆಯುತ್ತಾರೆ ॥ ೨೧ ॥ ಕತ್ತೆ, ಕುದುರೆ, ಹೇಸರಗತ್ತೆ, ಗೌರಮೃಗ, ಶರಭ ಮತ್ತು ಚಮರೀಮೃಗ – ಈ ಆರು ಜಾತಿಯ ಪ್ರಾಣಿಗಳು 'ಏಕ ಶಫ' (ಒಂದು ಗೊರಸು ಉಳ್ಳವುಗಳು) ಎನಿಸುತ್ತವೆ. ಇನ್ನು ಐದು ಉಗುರುಗಳುಳ್ಳ ಪಶು-ಪಕ್ಷಿಗಳ ಹೆಸರನ್ನು ಹೇಳುವೆನು; ಕೇಳು. ॥ ೨೨ ॥ ನಾಯಿ, ನರಿ, ತೋಳ, ಹುಲಿ, ಬೆಕ್ಕು, ಮೊಲ, ಮುಳ್ಳು ಹಂದಿ, ಸಿಂಹ, ಕಪಿ, ಆನೆ, ಆಮೆ, ಉಡ, ಮೊಸಳೆ ಮುಂತಾದ ಪ್ರಾಣಿಗಳು 'ಪಂಚನಖ'ಗಳಾಗಿವೆ. ॥ ೨೩ ॥ ಕಂಕ, ಗೃಧ್ರ, ಬಕ, ಗಿಡುಗ, ಭಾಸ, ನವಿಲು, ಹಂಸ, ಸಾರಸ, ಚಕ್ರವಾಕ, ಕಾಗೆ, ಗೂಬೆ ಮುಂತಾದವುಗಳು ಹಾರುವ ಪಕ್ಷಿಗಳೆಂದು ಕರೆಸಿಕೊಳ್ಳುವುವು. ॥ ೨೪ ॥ ವಿದುರನೇ! ಒಂಭತ್ತನೆಯ ಸೃಷ್ಟಿಯು ಮನುಷ್ಯರದ್ದು. ಇದು ಒಂದೇ ಪ್ರಕಾರದ್ದಾಗಿದೆ. ಇವರಲ್ಲಿ ಆಹಾರದ ಸ್ರೋತವು ಮೇಲಿನಿಂದ (ಬಾಯಿಯಿಂದ) ಕೆಳಕ್ಕೆ ಹರಿಯುತ್ತದೆ. ಮನುಷ್ಯರು ರಜೋಗುಣ ಪ್ರಧಾನವಾಗಿದ್ದು ಕರ್ಮಪರಾಯಣ ಮತ್ತು ದುಃಖರೂಪೀ ವಿಷಯಗಳಲ್ಲೇ ಸುಖವನ್ನು ಭಾವಿಸುವರು. ॥ ೨೫ ॥ ಸ್ಥಾವರ, ಪಶು-ಪಕ್ಷಿ, ಮನುಷ್ಯ – ಈ ಮೂರು ಬಗೆಯ ಸೃಷ್ಟಿಗಳೂ ಮತ್ತು ಮುಂದೆ ಹೇಳಲಾಗುವ ದೇವಸೃಷ್ಟಿಯೂ ವೈಕೃತ ಸೃಷ್ಟಿಯೇ ಆಗಿದೆ. ಮಹತ್ತತ್ತ್ವಾದಿರೂಪವಾದ ವೈಕಾರಿಕ ದೇವ ಸರ್ಗದ ಗಣನೆಯನ್ನು ಮೊದಲು ಪ್ರಾಕೃತ ಸೃಷ್ಟಿಯಲ್ಲಿ ಮಾಡಲಾಗಿದೆ. ಇವಲ್ಲದೆ ಸನತ್ಕುಮಾರಾದಿ ಋಷಿಗಳ ಕೌಮಾರ ಸರ್ಗವು ಪ್ರಾಕೃತ-ವೈಕಾರಿಕ ಎರಡೂ ಪ್ರಕಾರಗಳಿಂದ ಇದೆ. ॥ ೨೬ ॥ ದೇವತೆಗಳು, ಪಿತೃಗಳು, ಅಸುರರು, ಗಂಧರ್ವರು, ಅಪ್ಸರೆಯರು, ಯಕ್ಷ-ರಾಕ್ಷಸರು, ಸಿದ್ಧರು, ಚಾರಣ – ವಿದ್ಯಾಧರರು, ಭೂತ- ಪ್ರೇತ-ಪಿಶಾಚಗಳು, ಕಿನ್ನರ – ಕಿಂಪುರುಷ – ಅಶ್ವಮುಖ ಮುಂತಾದ ಭೇದಗಳಿಂದ ದೇವಸೃಷ್ಟಿಯು ಎಂಟು ಪ್ರಕಾರದ್ದಾಗಿದೆ. ವಿದುರನೇ! ಹೀಗೆ ಜಗತ್ಕರ್ತಾ ಶ್ರೀಬ್ರಹ್ಮದೇವರಿಂದ ರಚಿತವಾದ ಹತ್ತು ಬಗೆಯ ಸೃಷ್ಟಿಯನ್ನು ನಾನು ನಿನಗೆ ಹೇಳಿದೆನು. ॥ ೨೭-೨೮ ॥ ಇನ್ನು ಮುಂದೆ ನಾನು ವಂಶ ಮತ್ತು ಮನ್ವಂತರಾದಿಗಳನ್ನು ವರ್ಣಿಸುವೆನು. ಹೀಗೆ ಸೃಷ್ಟಿಕರ್ತನಾದ ಸತ್ಯಸಂಕಲ್ಪನಾದ ಶ್ರೀಹರಿಯೇ ಬ್ರಹ್ಮದೇವರ ರೂಪದಲ್ಲಿ ಪ್ರತಿಕಲ್ಪದ ಪ್ರಾರಂಭದಲ್ಲಿಯೂ ರಜೋಗುಣದಿಂದ ವ್ಯಾಪಿಸಲ್ಪಟ್ಟು ತಾನೇ ಜಗದ್ರೂಪದಲ್ಲಿ ತನ್ನನ್ನೇ ಸೃಷ್ಟಿಸಿಕೊಳ್ಳುವನು. ॥ ೨೯ ॥

ಹತ್ತನೆಯ ಅಧ್ಯಾಯವು ಮುಗಿಯಿತು. ॥ ೧೦ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ತೃತೀಯಸ್ಕಂಧೇ ದಶಮೋಽಧ್ಯಾಯಃ ॥ ೧೦ ॥

ಹನ್ನೊಂದನೆಯ ಅಧ್ಯಾಯ

ಮನ್ವಂತರವೇ ಮುಂತಾದ ಕಾಲವಿಭಾಗದ ವರ್ಣನೆ

ಮೈತ್ರೇಯ ಉವಾಚ

ಚರಮಃ ಸದ್ವಿಶೇಷಾಣಾಮನೇಕೋಽಸಂಯುತಃ ಸದಾ ।
ಪರಮಾಣುಃ ಸ ವಿಜ್ಞೇಯೋ ನೃಣಾಮೈಕ್ಯಭ್ರಮೋ ಯತಃ ॥ ೧ ॥

ಸತ ಏವ ಪದಾರ್ಥಸ್ಯ ಸ್ವರೂಪಾವಸ್ಥಿತಸ್ಯ ಯತ್ ।
ಕೈವಲ್ಯಂ ಪರಮಮಹಾನವಿಶೇಷೋ ನಿರಂತರಃ ॥ ೨ ॥

ಏವಂ ಕಾಲೋಽಪ್ಯನುಮಿತಃ ಸೌಕ್ಷ್ಮ್ಯೇ ಸ್ಥೌಲ್ಯೇ ಚ ಸತ್ತಮ ।
ಸಂಸ್ಥಾನಭುಕ್ತ್ಯಾ ಭಗವಾನವ್ಯಕ್ತೋ ವ್ಯಕ್ತಭುಗ್ವಿಭುಃ ॥ ೩ ॥

ಸ ಕಾಲಃ ಪರಮಾಣುರ್ವೈ ಯೋ ಭುಂಕ್ತೇ ಪರಮಾಣುತಾಮ್ ।
ಸತೋಽವಿಶೇಷಭುಗ್ಯಸ್ತು ಸ ಕಾಲಃ ಪರಮೋ ಮಹಾನ್ ॥ ೪ ॥

ಅಣುರ್ದ್ವೌ ಪರಮಾಣೂ ಸ್ಯಾತ್ತ್ರಸರೇಣುಸ್ತ್ರಯಃ ಸ್ಮೃತಃ ।
ಜಾಲಾರ್ಕರಶ್ಮ್ಯವಗತಃ ಖಮೇವಾನುಪತನ್ನಗಾತ್ ॥ ೫ ॥

ತ್ರಸರೇಣುತ್ರಿಕಂ ಭುಂಕ್ತೇ ಯಃ ಕಾಲಃ ಸ ತ್ರುಟಿಃ ಸ್ಮೃತಃ ।
ಶತಭಾಗಸ್ತು ವೇಧಃ ಸ್ಯಾತ್ತೈಸ್ತ್ರಿಭಿಸ್ತು ಲವಃ ಸ್ಮೃತಃ ॥ ೬ ॥

ನಿಮೇಷಸ್ತ್ರಿಲವೋ ಜ್ಞೇಯ ಆಮ್ನಾತಸ್ತೇ ತ್ರಯಃ ಕ್ಷಣಃ ।
ಕ್ಷಣಾನ್ಪಂಚ ವಿದುಃ ಕಾಷ್ಠಾಂ ಲಘು ತಾ ದಶ ಪಂಚ ಚ ॥ ೭ ॥

ಶ್ರೀಮೈತ್ರೇಯರು ಹೇಳುತ್ತಾರೆ – ವಿದುರನೇ! ಈಗ ನಿನಗೆ ಕಾಲದ ವಿಶೇಷ ಸ್ವರೂಪಗಳನ್ನು ವರ್ಣಿಸುವೆನು; ಕೇಳು. ಅವುಗಳಲ್ಲಿ ಮೊದಲನೆಯದು ಪರಮಾಣುವು. ಈ ಪರಮಾಣು ಪೃಥ್ವಿಯೇ ಮುಂತಾದ ಕಾರ್ಯವರ್ಗದ ಸೂಕ್ಷ್ಮತಮವಾದ ಅಂಶ. ಇನ್ನು ಮುಂದೆ ವಿಭಾಗಮಾಡಲಾಗದಿರುವ ಅಂಶ. ಬದಲಾವಣೆ ಹೊಂದದೆ ಇರುವ ಮತ್ತು ಇತರ ಪರಮಾಣುಗಳೊಡನೆ ಸಂಯೋಗವನ್ನು ಹೊಂದಲಾರದ ಅಂಶ. ಇಂತಹ ಅನೇಕ ಪರಮಾಣುಗಳು ಪರಸ್ಪರವಾಗಿ ಕೂಡಿರುವಾಗಲೇ ಮನುಷ್ಯರಿಗೆ ಭ್ರಮೆಯಿಂದ ಪರಮಾಣುಸಮುದಾಯ ರೂಪವಾದ ಒಂದು ಅವಯವ ಇದೆ ಎಂದು ತೋರಿಬರುತ್ತದೆ. ॥ ೧ ॥ ಈ ಪರಮಾಣುವು ಯಾವುದರ ಸೂಕ್ಷ್ಮತಮವಾದ ಅಂಶವಾಗಿದೆಯೋ – ಅಂತಹ ಪೃಥ್ವಿವ್ಯಾದಿ ಕಾರ್ಯಗಳ ಏಕತೆಯೇ, ಸಮುದಾಯವೇ, ಸಮಗ್ರರೂಪವೇ ಪರಮ ಮಹತ್ತು ಎನಿಸುವುದು. ಆಗ ಅದರಲ್ಲಿ ಪ್ರಳಯವೇ ಮುಂತಾದ ಅವಸ್ಥಾಭೇದಗಳ ಸ್ಫೂರ್ತಿ ಇರುವುದಿಲ್ಲ, ಹೊಸಕಾಲ, ಹಳೆಯಕಾಲ ಇತ್ಯಾದಿ ಕಾಲಭೇದಗಳು ತಿಳಿದುಬರುವುದಿಲ್ಲ, ಘಟ-ಪಟಾದಿ ವಸ್ತುಭೇದಗಳ ಕಲ್ಪನೆಯೂ ತೋರುವುದಿಲ್ಲ ॥ ೨ ॥ ಸಾಧುಶ್ರೇಷ್ಠನೇ! ಹೀಗೆ ವಸ್ತುವಿನ ಸೂಕ್ಷ್ಮತಮ ಮತ್ತು ಮಹತ್ತಮ ಸ್ವರೂಪವನ್ನು ತಿಳಿಸಿದೆನಷ್ಟೆ! ಇದರಂತೆಯೇ ಪರಮಾಣು ಮುಂತಾದ ಅವಸ್ಥೆಗಳಲ್ಲಿ ವ್ಯಾಪ್ತವಾಗಿ ಪದಾರ್ಥಗಳನ್ನು ಭೋಗಿಸುವಂತಹವನೂ, ಸೃಷ್ಟ್ಯಾದಿಗಳಲ್ಲಿ ಸಮರ್ಥನೂ, ಅವ್ಯಕ್ತಸ್ವರೂಪನೂ ಆದ ಭಗವಾನ್ ಕಾಲನ ಸೂಕ್ಷ್ಮತೆ ಮತ್ತು ಸ್ಥೂಲತೆಯ ಅನುಮಾನ ಮಾಡಬಹುದಾಗಿದೆ. ॥ ೩ ॥ ಪ್ರಪಂಚದಲ್ಲಿ ಪರಮಾಣುವಿನಂತಹ ಸೂಕ್ಷ್ಮವಾದ ಅವಸ್ಥೆಯಲ್ಲಿ ವ್ಯಾಪಕವಾಗಿರುವ ಕಾಲವನ್ನು ಸೂಕ್ಷ್ಮತಮ ಕಾಲವೆಂದು ಅರಿಯಬೇಕು. ಸೃಷ್ಟಿಯಿಂದಾರಂಭಿಸಿ ಪ್ರಳಯದವರೆಗೆ ಅದರ ಎಲ್ಲ ಅವಸ್ಥೆಗಳನ್ನು ಅನುಭವಿಸುವ ಕಾಲವೇ ಪರಮ ಮಹತ್ಕಾಲವು. ॥ ೪ ॥

ಎರಡು ಪರಮಾಣುಗಳು ಸೇರಿ ಒಂದು 'ಅಣು'ವಾಗುತ್ತದೆ. ಮೂರು ಅಣುಗಳು ಸೇರಿ ಒಂದು 'ತ್ರಸರೇಣು' ಆಗುವುದು. ಇದು ಕಿಟಕಿಯ ಮೂಲಕ ಬರುವ ಸೂರ್ಯಕಿರಣದಲ್ಲಿ ಆಕಾಶದಲ್ಲಿ ಹಾರಿಹೋಗುತ್ತಾ ಭೂಮಿಗಿಳಿಯುವ ಕಣಗಳಂತೆ ಕಾಣುತ್ತದೆ. ॥ ೫ ॥ ಇಂತಹ ಮೂರು ತ್ರಸರೇಣುಗಳನ್ನು ದಾಟಲು ಸೂರ್ಯನಿಗೆ ತಗಲುವ ಸಮಯವನ್ನು 'ತ್ರುಟಿ' ಎಂದು ಹೇಳುತ್ತಾರೆ. ತ್ರುಟಿಯ ನೂರುಪಟ್ಟು ಕಾಲವು 'ವೇಧ' ಎಂತಲೂ, ಮೂರು ವೇಧಗಳು ಒಂದು 'ಲವ' ಎಂದೂ ಹೇಳುತ್ತಾರೆ. ॥ ೬ ॥ ಮೂರು 'ಲವ'ಗಳಿಗೆ ಒಂದು 'ನಿಮೇಷ' ಮತ್ತು ಮೂರು ನಿಮೇಷಗಳಿಗೆ ಒಂದು 'ಕ್ಷಣ'ವೆಂತಲೂ, ಐದು ಕ್ಷಣಗಳಿಗೆ ಒಂದು 'ಕಾಷ್ಠಾ' ವೆಂತಲೂ, ಹದಿನೈದು ಕಾಷ್ಠಗಳಿಗೆ ಒಂದು 'ಲಘು' ಎಂತಲೂ ಹೇಳುತ್ತಾರೆ. ॥ ೭ ॥ ಹದಿನೈದು ಲಘುಗಳಿಗೆ ಒಂದು 'ನಾಡಿಕಾ' (ದಂಡ). ಎನ್ನುತ್ತಾರೆ. ಎರಡು ನಾಡಿಕೆಗಳ ಕಾಲವನ್ನು ಒಂದು 'ಮುಹೂರ್ತ'

ಲಘೂನಿ ವೈ ಸಮಾಮ್ನಾತಾ ದಶ ಪಂಚ ಚ ನಾಡಿಕಾ ।
ತೇ ದ್ವೇ ಮುಹೂರ್ತಃ ಪ್ರಹರಃ ಷಡ್ಯಾಮಃ ಸಪ್ತ ವಾ ನೃಣಾಮ್ ॥ ೮ ॥

ದ್ವಾದಶಾರ್ಧಪಲೋನ್ಮಾನಂ ಚತುರ್ಭಿಶ್ಚತುರಂಗುಲೈಃ ।
ಸ್ವರ್ಣಮಾಷೈಃ ಕೃತಚ್ಛಿದ್ರಂ ಯಾವತ್ಪ್ರಸ್ಥಜಲಪ್ಲುತಮ್ ॥ ೯ ॥

ಯಾಮಾಶ್ಚತ್ವಾರಶ್ಚತ್ವಾರೋ ಮರ್ತ್ಯಾನಾಮಹನೀ ಉಭೇ ।
ಪಕ್ಷಃ ಪಂಚದಶಾಹಾನಿ ಶುಕ್ಲಃ ಕೃಷ್ಣಶ್ಚ ಮಾನದ ॥ ೧೦ ॥

ತಯೋಃ ಸಮುಚ್ಚಯೋ ಮಾಸಃ ಪಿತೄಣಾಂ ತದಹರ್ನಿಶಮ್ ।
ದ್ವೌ ತಾವೃತುಃ ಷಡಯನಂ ದಕ್ಷಿಣಂ ಚೋತ್ತರಂ ದಿವಿ ॥ ೧೧ ॥

ಅಯನೇ ಚಾಹನೀ ಪ್ರಾಹುರ್ವತ್ಸರೋ ದ್ವಾದಶ ಸ್ಮೃತಃ ।
ಸಂವತ್ಸರಶತಂ ನೃಣಾಂ ಪರಮಾಯುರ್ನಿರೂಪಿತಮ್ ॥ ೧೨ ॥

ಗ್ರಹರ್ಕ್ಷತಾರಾಚಕ್ರಸ್ಥಃ ಪರಮಾಣ್ವಾದಿನಾ ಜಗತ್ ।
ಸಂವತ್ಸರಾವಸಾನೇನ ಪರ್ಯೇತ್ಯನಿಮಿಷೋ ವಿಭುಃ ॥ ೧೩ ॥

ಸಂವತ್ಸರಃ ಪರಿವತ್ಸರ ಇಡಾವತ್ಸರ ಏವ ಚ ।
ಅನುವತ್ಸರೋ ವತ್ಸರಶ್ಚ ವಿದುರೈವಂ ಪ್ರಭಾಷ್ಯತೇ ॥ ೧೪ ॥

ಎನ್ನುತ್ತಾರೆ. ದಿವಸವು ಕುಗ್ಗುವುದು ಮತ್ತು ಹಿಗ್ಗುವುದು ಇದಕ್ಕನುಸಾರ ಆರು ಅಥವಾ ಏಳು ನಾಡಿಕೆಗಳ ಕಾಲವು ಒಂದು 'ಪ್ರಹರ' ಎನಿಸುತ್ತದೆ. (ಇದರಲ್ಲಿ ಹಗಲು ಮತ್ತು ರಾತ್ರಿಗಳ ಸಂಧಿಕಾಲದಲ್ಲಿ ಬರುವ ಎರಡು ಮುಹೂರ್ತಗಳು ಲೆಕ್ಕಕ್ಕೆ ಬರುವುದಿಲ್ಲ.) ಮನುಷ್ಯರ ಹಗಲು ಅಥವಾ ರಾತ್ರಿಯ ನಾಲ್ಕನೆಯ ಒಂದು ಭಾಗವಾಗಿರುವ ಇದನ್ನು 'ಯಾಮ' ಎಂದೂ ಹೇಳುತ್ತಾರೆ. ॥ ೮ ॥ ಇಪ್ಪತ್ತು ಗುಲಗುಂಜಿ ತೂಕವುಳ್ಳ ಚಿನ್ನದಿಂದ ನಾಲ್ಕು ಅಂಗುಲ ಪ್ರಮಾಣದ ಸೂಜಿಯನ್ನು ಮಾಡಿ, ಅದರಿಂದ ಆರು ಪಲಗಳ ತೂಕವುಳ್ಳ ತಾಮ್ರದ ಪಾತ್ರೆಯ ಕೆಳಗಡೆಯಲ್ಲಿ ರಂಧ್ರವನ್ನು ಕೊರೆದು, ಅದನ್ನು ಒಂದು ಸೇರು ನೀರುಳ್ಳ ಮತ್ತೊಂದು ಪಾತ್ರೆಯಲ್ಲಿ ಇಡಬೇಕು. ಆಗ ಕೆಳಗಿನ ರಂಧ್ರದಿಂದ ನೀರು ಮೇಲಕ್ಕೆ ಉಕ್ಕಿ ಆ ಪಾತ್ರೆಯು ಮುಳುಗಿಹೋಗುವ ಅಷ್ಟು ಕಾಲವನ್ನು 'ನಾಡಿಕಾ' ಎಂದು ಹೇಳುತ್ತಾರೆ. ॥ ೯ ॥ ವಿದುರನೇ! ಮೇಲೆ ಹೇಳಿದ ನಾಲ್ಕು ಯಾಮಗಳು ಹಗಲಿಂತಲೂ, ನಾಲ್ಕು ಯಾಮಗಳು ರಾತ್ರಿಯಿಂತಲೂ ಮನುಷ್ಯಮಾನದ ಪ್ರಕಾರ ತಿಳಿಯಬೇಕು. ಇಂತಹ ಹದಿನೈದು ಹಗಲು-ರಾತ್ರಿಗಳು ಸೇರಿದರೆ ಒಂದು 'ಪಕ್ಷ'ವಾಗುತ್ತದೆ. ಈ ಪಕ್ಷಗಳಲ್ಲಿ 'ಶುಕ್ಲ', 'ಕೃಷ್ಣ' ಎಂಬ ಎರಡು ವಿಭಾಗಗಳಿವೆ. ॥ ೧೦ ॥ ಇವೆರಡೂ ಪಕ್ಷಗಳು ಸೇರಿದರೆ ಮನುಷ್ಯರ ಒಂದು 'ಮಾಸ'ವಾಗುತ್ತದೆ. ಪಿತೃಗಳಿಗೆ ಒಂದು ದಿನ (ಹಗಲಿರುಳು)ವಾಗುತ್ತದೆ. ಎರಡು ತಿಂಗಳುಗಳ ಒಂದು 'ಋತು' ಮತ್ತು ಆರು ತಿಂಗಳ ಒಂದು ಅಯನವಾಗುತ್ತದೆ. ಅಯನಗಳಲ್ಲಿ ಉತ್ತರಾಯಣ ಮತ್ತು ದಕ್ಷಿಣಾಯನ ಎಂಬ ಎರಡು ಭೇದಗಳುಂಟು. ॥ ೧೧ ॥ ಇವೆರಡು ಅಯನಗಳು ಸೇರಿದರೆ ದೇವತೆಗಳ ಒಂದು ದಿವಸ (ಅಹೋರಾತ್ರಿ)ವಾಗುತ್ತದೆ. ಮನುಷ್ಯಮಾನದಲ್ಲಿ ಹನ್ನೆರಡು ತಿಂಗಳುಗಳಿಗೆ ಒಂದು ವರ್ಷವು. ಇಂತಹ ನೂರು ವರ್ಷಗಳೇ ಮನುಷ್ಯನ ಪರಮಾಯುಸ್ಸು ಎಂದು ಹೇಳಲಾಗಿದೆ. ॥ ೧೨ ॥ ಚಂದ್ರನೇ ಮೊದಲಾದ ಗ್ರಹರು, ಅಶ್ವಿನ್ಯಾದಿ ನಕ್ಷತ್ರಗಳು, ಸಮಸ್ತ ತಾರಾಮಂಡಲದ ಅಧಿಷ್ಠಾತೃವಾದ ಕಾಲಸ್ವರೂಪೀ ಭಗವಾನ್ ಸೂರ್ಯನು ಪರಮಾಣುವಿನಿಂದ ಹಿಡಿದು ಸಂವತ್ಸರಪರ್ಯಂತವಾದ ಕಾಲದಲ್ಲಿ ದ್ವಾದಶ ರಾಶಿರೂಪೀ ಸಮಸ್ತ ಭುವನಕೋಶವನ್ನು ನಿರಂತರ ಪ್ರದಕ್ಷಿಣೆ ಮಾಡುತ್ತಾ ಇರುತ್ತಾನೆ. ॥ ೧೩ ॥ ಸೂರ್ಯ, ಬೃಹಸ್ಪತಿ, ಸವನ, ಚಂದ್ರ, ನಕ್ಷತ್ರ ಸಂಬಂಧೀ ತಿಂಗಳುಗಳ ಭೇದದಿಂದ ಈ ವರ್ಷವನ್ನು ಸಂವತ್ಸರ, ಪರಿವತ್ಸರ, ಇಡಾವತ್ಸರ, ಅನುವತ್ಸರ ಮತ್ತು ವತ್ಸರ ಹೀಗೆ ಹೇಳಲಾಗುತ್ತದೆ. ॥ ೧೪ ॥ ವಿದುರನೇ! ಈ ಐದು ವಿಧವಾದ ವರ್ಷಗಳನ್ನೂ ಪ್ರವರ್ತಿಸುತ್ತಿರುವ ಭಗವಾನ್ ಸೂರ್ಯನನ್ನು ನೀವು ಉಪಹಾರಾದಿಗಳನ್ನು ಸಮರ್ಪಿಸಿ ಪೂಜೆಮಾಡಿರಿ. ಈ ಸೂರ್ಯದೇವನು ಪಂಚಭೂತಗಳಲ್ಲಿ ತೇಜಸ್ಸ್ವರೂಪನಾಗಿದ್ದಾನೆ. ತನ್ನ ಕಾಲಶಕ್ತಿಯಿಂದ ಬೀಜವೇ ಮುಂತಾದ ಪದಾರ್ಥಗಳನ್ನು ಮೊಳಕೆಯಾಗುವ ಶಕ್ತಿಯನ್ನು ಅನೇಕ ಪ್ರಕಾರದಿಂದ ಕಾರ್ಯೋನ್ಮುಖಗೊಳಿಸುತ್ತಾನೆ. ಇವನು ಪುರುಷರ ಮೋಹನಿವೃತ್ತಿಗಾಗಿ ಅವರ ಆಯುಸ್ಸನ್ನು ಕ್ಷಯಗೊಳಿಸುತ್ತಾ ಆಕಾಶದಲ್ಲಿ ವಿಚರಿಸುತ್ತಾ ಇರು

ಯಃ ಸೃಜ್ಯಶಕ್ತಿಮುರುಧೋಚ್ಛ್ವಸಯನ್ ಸ್ವಶಕ್ತ್ಯಾ
ಪುಂಸೋಽಭ್ರಮಾಯ ದಿವಿ ಧಾವತಿ ಭೂತಭೇದಃ ।
ಕಾಲಾಖ್ಯಯಾ ಗುಣಮಯಂ ಕ್ರತುಭಿರ್ವಿತನ್ವಂ-
ಸ್ತಸ್ಮೈ ಬಲಿಂ ಹರತ ವತ್ಸರಪಂಚಕಾಯ ॥ ೧೫ ॥

ವಿದುರ ಉವಾಚ

ಪಿತೃದೇವಮನುಷ್ಯಾಣಾಮಾಯುಃ ಪರಮಿದಂ ಸ್ಮೃತಮ್ ।
ಪರೇಷಾಂ ಗತಿಮಾಚಕ್ಷ್ವ ಯೇ ಸ್ಯುಃ ಕಲ್ಪಾದ್ಬಹಿರ್ವಿದಃ ॥ ೧೬ ॥

ಭಗವಾನ್ ವೇದ ಕಾಲಸ್ಯ ಗತಿಂ ಭಗವತೋ ನನು ।
ವಿಶ್ವಂ ವಿಚಕ್ಷತೇ ಧೀರಾ ಯೋಗರಾದ್ಧೇನ ಚಕ್ಷುಷಾ ॥ ೧೭ ॥

ಮೈತ್ರೇಯ ಉವಾಚ

ಕೃತಂ ತ್ರೇತಾ ದ್ವಾಪರಂ ಚ ಕಲಿಶ್ಚೇತಿ ಚತುರ್ಯುಗಮ್ ।
ದಿವ್ಯೈರ್ದ್ವಾದಶಭಿರ್ವರ್ಷೈಃ ಸಾವಧಾನಂ ನಿರೂಪಿತಮ್ ॥ ೧೮ ॥

ಚತ್ವಾರಿ ತ್ರೀಣಿ ದ್ವೇ ಚೈಕಂ ಕೃತಾದಿಷು ಯಥಾಕ್ರಮಮ್ ।
ಸಂಖ್ಯಾತಾನಿ ಸಹಸ್ರಾಣಿ ದ್ವಿಗುಣಾನಿ ಶತಾನಿ ಚ ॥ ೧೯ ॥

ಸಂಧ್ಯಾಂ ಶಯೋರಂತರೇಣ ಯಃ ಕಾಲಃ ಶತಸಂಖ್ಯಯೋಃ ।
ತಮೇವಾಹುರ್ಯುಗಂ ತಜ್ಜ್ಞಾ ಯತ್ರ ಧರ್ಮೋ ವಿಧೀಯತೇ ॥ ೨೦ ॥

ಧರ್ಮಶ್ಚತುಷ್ಪಾನ್ಮನುಜಾನ್ ಕೃತೇ ಸಮನುವರ್ತತೇ ।
ಸ ಏವಾನ್ಯೇಷ್ವಧರ್ಮೇಣ ವ್ಯೇತಿ ಪಾದೇನ ವರ್ಧತಾ ॥ ೨೧ ॥

ತ್ರಿಲೋಕ್ಯಾ ಯುಗಸಾಹಸ್ರಂ ಬಹಿರಾಬ್ರಹ್ಮಣೋ ದಿನಮ್ ।
ತಾವತ್ಯೇವ ನಿಶಾ ತಾತ ಯನ್ನಿಮೀಲತಿ ವಿಶ್ವಸೃಕ್ ॥ ೨೨ ॥

ತ್ತಾನೆ. ಇವನೇ ಸಕಾಮ ಪುರುಷರಿಗೆ ಯಜ್ಞಾದಿ ಕರ್ಮಗಳಿಂದ ಪ್ರಾಪ್ತವಾಗುವ ಸ್ವರ್ಗಾದಿ ಮಂಗಲಮಯ ಫಲಗಳನ್ನು ವಿಸ್ತರಿಸುತ್ತಾನೆ. ॥ ೧೫ ॥

ವಿದುರನೆಂದನು – ಮುನಿವರ್ಯರೇ! ತಾವು ದೇವತೆಗಳ, ಪಿತೃಗಳ, ಮನುಷ್ಯರ ಪರಮಾಯುಷ್ಯವನ್ನು ವರ್ಣಿಸಿದಿರಿ. ಇನ್ನು ಮೂರು ಲೋಕಗಳ ಹೊರಗಿದ್ದು, ಕಲ್ಪಕಾಲಕ್ಕಿಂತಲೂ ಹೆಚ್ಚುಕಾಲದ ವರೆಗೆ ಇರುವ ಜ್ಞಾನಿಶ್ರೇಷ್ಠರಾದ ಸನಕಾದಿಮುನಿಗಳ ಆಯುಸ್ಸು ಎಷ್ಟೆಂಬುದನ್ನು ತಿಳಿಸಿರಿ. ॥ ೧೬ ॥ ನೀವು ಭಗವಂತನ ಕಾಲಗತಿಯನ್ನು ಚೆನ್ನಾಗಿ ತಿಳಿದಿರುವಿರಿ. ಏಕೆಂದರೆ, ಧೀರರಾದ ಜ್ಞಾನಿಗಳು ತಮ್ಮ ಯೋಗಸಿದ್ಧವಾದ ದೃಷ್ಟಿಯಿಂದ ಇಡೀ ವಿಶ್ವವನ್ನೇ ನೋಡಬಲ್ಲರು. ॥ ೧೭ ॥

ಶ್ರೀಮೈತ್ರೇಯರು ಹೇಳುತ್ತಾರೆ – ಎಲೈ ವಿದುರನೇ! ಕೃತಯುಗ, ತ್ರೇತಾಯುಗ, ದ್ವಾಪರಯುಗ, ಕಲಿಯುಗ ಎಂಬ ಈ ನಾಲ್ಕು ಯುಗಗಳು ತಮ್ಮ ಸಂಧ್ಯಾಕಾಲ ಮತ್ತು ಸಂಧ್ಯಾಂಶಗಳೊಡನೆ ಕೂಡಿ ದೇವತೆಗಳ ಹನ್ನೆರಡುಸಾವಿರ ವರ್ಷಗಳವರೆಗೆ ಇರುತ್ತವೆ ಎಂದು ಹೇಳಲಾಗಿದೆ. ॥ ೧೮ ॥ ಈ ಕೃತಯುಗವೇ ಮುಂತಾದ ನಾಲ್ಕು ಯುಗಗಳಲ್ಲಿ ಕ್ರಮವಾಗಿ ನಾಲ್ಕು, ಮೂರು, ಎರಡು ಮತ್ತು ಒಂದು ಸಾವಿರ ದಿವ್ಯವರ್ಷಗಳಿರುತ್ತವೆ. ಪ್ರತಿಯೊಂದರಲ್ಲಿಯೂ ಎಷ್ಟೆಷ್ಟು ಸಾವಿರ ವರ್ಷಗಳಿರುತ್ತವೋ ಅವಕ್ಕೆ ಎರಡರಷ್ಟು ನೂರು ವರ್ಷಗಳು ಅವುಗಳ ಸಂಧ್ಯಾಕಾಲ ಮತ್ತು ಸಂಧ್ಯಾಂಶಗಳಲ್ಲಿ ಇರುತ್ತವೆ.* ॥ ೧೯ ॥ ಯುಗದ ಪ್ರಾರಂಭದಲ್ಲಿ ಸಂಧ್ಯೆ ಮತ್ತು ಅಂತ್ಯದಲ್ಲಿ ಸಂಧ್ಯಾಂಶವಿರುತ್ತದೆ. ಇದರ ವರ್ಷಗಣನೆಯು ನೂರಾರು ಸಂಖ್ಯೆಯಲ್ಲಿರುತ್ತವೆ. ಇವರ ನಡುವಿನ ಕಾಲವನ್ನು ಕಾಲದ ಜ್ಞಾನವುಳ್ಳವರು ಯುಗವೆಂದು ಹೇಳುವರು. ಪ್ರತಿಯೊಂದು ಯುಗದಲ್ಲಿಯೂ ಒಂದೊಂದು ವಿಶೇಷಧರ್ಮದ ವಿಧಾನ ಮಾಡಲಾಗಿದೆ. ॥ ೨೦ ॥ ಕೃತಯುಗದ ಮನುಷ್ಯರಲ್ಲಿ ಧರ್ಮವು ತನ್ನ ನಾಲ್ಕು ಪಾದಗಳಿಂದಲೂ ಕೂಡಿರುತ್ತದೆ. ಇತರ ಯುಗಗಳಲ್ಲಿ ಕ್ರಮವಾಗಿ ಅಧರ್ಮವು ವೃದ್ಧಿಹೊಂದುವುದರಿಂದ ಧರ್ಮದ ಒಂದೊಂದು ಚರಣವು ಕ್ಷೀಣವಾಗುತ್ತದೆ. ॥ ೨೧ ॥ ಪ್ರಿಯ ವಿದುರನೇ! ಈ ತ್ರೈಲೋಕ್ಯದ ಹೊರಗೆ ಮಹರ್ಲೋಕದಿಂದ ಬ್ರಹ್ಮಲೋಕದವರೆಗೂ ಇರುವ ಲೋಕಗಳಲ್ಲಿ ಒಂದು ಸಾವಿರ ಚತುರ್ಯುಗದ ಒಂದು ಹಗಲು ಮತ್ತು ಇಷ್ಟೇ ದೊಡ್ಡ ರಾತ್ರಿಯು ಇರುತ್ತದೆ. ಆ ರಾತ್ರಿಭಾಗದಲ್ಲಿ ಜಗತ್ಕರ್ತೃವಾದ ಬ್ರಹ್ಮದೇವರು ಶಯನಿಸುತ್ತಾರೆ. ॥ ೨೨ ॥ ಆ ರಾತ್ರಿಯು ಮುಗಿಯುತ್ತಲೇ ಈ ಲೋಕದ ಕಲ್ಪವು ಪ್ರಾರಂಭವಾಗುತ್ತದೆ. ಆಂದರೆ ಬ್ರಹ್ಮದೇವರು ಮತ್ತೆ ಸೃಷ್ಟಿಯನ್ನು ಪ್ರಾರಂಭಿಸುತ್ತಾರೆ. ಬ್ರಹ್ಮದೇವರ

* ಕೃತಯುಗದಲ್ಲಿ ೪,೦೦೦ ದಿವ್ಯವರ್ಷಗಳು ಯುಗದ್ದು ಮತ್ತು ೮೦೦ ಸಂಧ್ಯಾ ಹಾಗೂ ಸಂಧ್ಯಾಂಶದ ಒಟ್ಟು ೪,೮೦೦ ದಿವ್ಯವರ್ಷಗಳು. ಹಾಗೆಯೇ ತ್ರೇತಾಯುಗದಲ್ಲಿ ೩,೬೦೦ ದಿವ್ಯವರ್ಷಗಳು (೩,೦೦೦ + ೬೦೦). ದ್ವಾಪರಯುಗದಲ್ಲಿ ೨,೪೦೦ ದಿವ್ಯವರ್ಷಗಳು (೨೦೦೦ + ೪೦೦). ಕಲಿಯುಗದಲ್ಲಿ ೧,೨೦೦ ದಿವ್ಯವರ್ಷಗಳು (೧,೦೦೦ + ೨೦೦) ಇರುತ್ತವೆ. ಮನುಷ್ಯರ ಒಂದು ವರ್ಷವು ದೇವತೆಗಳ ಒಂದು ದಿನ. ಆದ್ದರಿಂದ ದೇವತೆಗಳ ಒಂದು ವರ್ಷ ಮನುಷ್ಯರ ೩೬೦ ವರ್ಷಗಳಿಗೆ ಸಮನಾದುದು. ಇದೇ ರೀತಿ ಮನುಷ್ಯಮಾನದಂತೆ ಕಲಿಯುಗದಲ್ಲಿ ೪,೩೨,೦೦೦ ವರ್ಷಗಳು. ಇದಕ್ಕೆ ಎರಡರಷ್ಟು ದ್ವಾಪರಯುಗದಲ್ಲೂ, ಮೂರರಷ್ಟು ತ್ರೇತಾಯುಗದಲ್ಲೂ, ನಾಲ್ಕರಷ್ಟು ಕೃತಯುಗದಲ್ಲೂ ವರ್ಷಗಳು ಆಗುತ್ತವೆಯೆಂದು ತಿಳಿಯಬೇಕು.

ನಿಶಾವಸಾನ ಆರಬ್ಧೋ ಲೋಕಕಲ್ಪೋಽನುವರ್ತತೇ ।
ಯಾವದ್ದಿನಂ ಭಗವತೋ ಮನೂನ್ಭುಂಜಂಶ್ಚತುರ್ದಶ ॥ ೨೩ ॥

ಸ್ವಂ ಸ್ವಂ ಕಾಲಂ ಮನುರ್ಭುಂಕ್ತೇ ಸಾಧಿಕಾಂ ಹ್ಯೇಕಸಪ್ತತಿಮ್ ।
ಮನ್ವಂತರೇಷು ಮನವಸ್ತದ್ವಂಶ್ಯಾ ಋಷಯಃ ಸುರಾಃ ।
ಭವಂತಿ ಚೈವ ಯುಗಪತ್ಸುರೇಶಾಶ್ಚಾನು ಯೇ ಚ ತಾನ್ ॥ ೨೪ ॥

ಏಷ ದೈನಂದಿನಃ ಸರ್ಗೋ ಬ್ರಾಹ್ಮಸ್ತ್ರೈಲೋಕ್ಯವರ್ತನಃ ।
ತಿರ್ಯಙ್ನೃಪಿತೃದೇವಾನಾಂ ಸಂಭವೋ ಯತ್ರ ಕರ್ಮಭಿಃ ॥ ೨೫ ॥

ಮನ್ವಂತರೇಷು ಭಗವಾನ್ ಬಿಭ್ರತ್ಸತ್ತ್ವಂ ಸ್ವಮೂರ್ತಿಭಿಃ ।
ಮನ್ವಾದಿಭಿರಿದಂ ವಿಶ್ವಮವತ್ಯುದಿತಪೌರುಷಃ ॥ ೨೬ ॥

ತಮೋಮಾತ್ರಾಮುಪಾದಾಯ ಪ್ರತಿಸಂರುದ್ಧವಿಕ್ರಮಃ ।
ಕಾಲೇನಾನುಗತಾಶೇಷ ಆಸ್ತೇ ತೂಷ್ಣೀಂ ದಿನಾತ್ಯಯೇ ॥ ೨೭ ॥

ತಮೇವಾನ್ವಪಿಧೀಯಂತೇ ಲೋಕಾ ಭೂರಾದಯಸ್ತ್ರಯಃ ।
ನಿಶಾಯಾಮನುವೃತ್ತಾಯಾಂ ನಿರ್ಮುಕ್ತಶಶಿಭಾಸ್ಕರಮ್ ॥ ೨೮ ॥

ತ್ರಿಲೋಕ್ಯಾಂ ದಹ್ಯಮಾನಾಯಾಂ ಶಕ್ತ್ಯಾ ಸಂಕರ್ಷಣಾಗ್ನಿನಾ ।
ಯಾಂತ್ಯೂಷ್ಮಣಾ ಮಹರ್ಲೋಕಾ-ಜ್ಜನಂ ಭೃಗ್ವಾದಯೋಽರ್ದಿತಾಃ ॥ ೨೯ ॥

ತಾವತ್ತ್ರಿಭುವನಂ ಸದ್ಯಃ ಕಲ್ಪಾಂತೈಧಿತಸಿಂಧವಃ ।
ಪ್ಲಾವಯಂತ್ಯುತ್ಕಟಾಟೋಪಚಂಡವಾತೇರಿತೋರ್ಮಯಃ ॥ ೩೦ ॥

ಅಂತಃ ಸ ತಸ್ಮಿನ್ ಸಲಿಲ ಆಸ್ತೇಽನಂತಾಸನೋ ಹರಿಃ ।
ಯೋಗನಿದ್ರಾನಿಮೀಲಾಕ್ಷಃ ಸ್ತೂಯಮಾನೋ ಜನಾಲಯೈಃ ॥ ೩೧ ॥

ಏವಂ ವಿಧೈರಹೋರಾತ್ರೈಃ ಕಾಲಗತ್ಯೋಪಲಕ್ಷಿತೈಃ ।
ಅಪಕ್ಷಿತಮಿವಾಸ್ಯಾಪಿ ಪರಮಾಯುರ್ವಯಃಶತಮ್ ॥ ೩೨ ॥

ಯದರ್ಧಮಾಯುಷಸ್ತಸ್ಯ ಪರಾರ್ಧಮಭಿಧೀಯತೇ ।
ಪೂರ್ವಃ ಪರಾರ್ಧೋಽಪಕ್ರಾಂತೋ ಹ್ಯಪರೋಽದ್ಯ ಪ್ರವರ್ತತೇ ॥ ೩೩ ॥

ಪೂರ್ವಸ್ಯಾದೌ ಪರಾರ್ಧಸ್ಯ ಬ್ರಾಹ್ಮೋ ನಾಮ ಮಹಾನಭೂತ್ ।
ಕಲ್ಪೋ ಯತ್ರಾಭವದ್ಬ್ರಹ್ಮಾ ಶಬ್ದಬ್ರಹ್ಮೇತಿ ಯಂ ವಿದುಃ ॥ ೩೪ ॥

ದಿನವಿರುವವರೆಗೆ ಇದೇ ಕ್ರಮ ನಡೆಯುತ್ತಾ ಇರುತ್ತದೆ. ಈ ಒಂದು ಕಲ್ಪದಲ್ಲಿ ಹದಿನಾಲ್ಕು ಮನುಗಳು ಆಗಿಹೋಗುತ್ತಾರೆ. ॥ ೨೩ ॥ ಪ್ರತಿಯೊಬ್ಬ ಮನುವೂ ದೇವಮಾನದ (ಚತುರ್ಯುಗ) ಎಪ್ಪತ್ತೊಂದು ಯುಗಗಳವರೆಗೆ ಮತ್ತು ಸ್ವಲ್ಪ ಹೆಚ್ಚುಕಾಲ ತನ್ನ ಅಧಿಕಾರವನ್ನು ನಡೆಸುತ್ತಾನೆ. ಪ್ರತಿಯೊಂದು ಮನ್ವಂತರದಲ್ಲಿಯೂ ಬೇರೆ-ಬೇರೆ ಮನುವಂಶಗಳ ರಾಜರೂ, ಸಪ್ತರ್ಷಿಗಳೂ, ದೇವತಾಗಣಗಳೂ, ಇಂದ್ರರೂ ಮತ್ತು ಅವರ ಅನುಯಾಯಿಗಳಾದ ಗಂಧರ್ವಾದಿಗಳೂ ಒಟ್ಟಿಗೆ ಇದ್ದು ತಮ್ಮ ಅಧಿಕಾರಗಳನ್ನು ಅನುಭವಿಸುತ್ತಾರೆ. ॥ ೨೪ ॥ ಇದು ಬ್ರಹ್ಮದೇವರ ದಿನಂಪ್ರತಿಯ ಸೃಷ್ಟಿಯ ವಿಚಾರ. ಇದರಲ್ಲಿಯೇ ಮೂರು ಲೋಕಗಳ ರಚನೆಯೂ ಆಗುವುದು. ಅದರಲ್ಲಿ ತಮ್ಮ-ತಮ್ಮ ಕರ್ಮಾನುಸಾರ ಪಶು-ಪಕ್ಷಿ ಮನುಷ್ಯ, ಪಿತೃಗಳು, ದೇವತೆಗಳು ಇವರುಗಳ ಉತ್ಪತ್ತಿಯಾಗುತ್ತದೆ. ॥ ೨೫ ॥ ಈ ಮನ್ವಂತರಗಳಲ್ಲಿ ಭಗವಂತನು ಸತ್ತ್ವಗುಣವನ್ನಾಶ್ರಯಿಸಿ ತನ್ನ ಮನುವೇ ಮುಂತಾದ ಮೂರ್ತಿಗಳ ಮೂಲಕ ಪೌರುಷವನ್ನು ಪ್ರಕಟಿಸುತ್ತಾ ಈ ವಿಶ್ವವನ್ನು ಪಾಲಿಸುತ್ತಾನೆ. ॥ ೨೬ ॥ ಕಾಲಕ್ರಮದಲ್ಲಿ ತಮ್ಮ ಹಗಲು ಮುಗಿದೊಡನೆಯೇ ಬ್ರಹ್ಮದೇವರು ತಮೋಗುಣದ ಸಂಪರ್ಕಹೊಂದಿ, ತಮ್ಮ ಸೃಷ್ಟಿರಚನಾರೂಪೀ ಪೌರುಷವನ್ನು ಸ್ಥಗಿತಗೊಳಿಸಿ ನಿಶ್ಚೇಷ್ಟಿತರಾಗುತ್ತಾರೆ. ॥ ೨೭ ॥ ಆಗ ಇಡೀ ವಿಶ್ವವು ಅವರಲ್ಲೇ ಲೀನವಾಗುತ್ತದೆ. ಸೂರ್ಯ-ಚಂದ್ರರೇ ಇಲ್ಲದ ಪ್ರಳಯರಾತ್ರಿಯು ಬರುವುದು. ಭೂಃ, ಭುವಃ, ಸುವಃ ಎಂಬ ಮೂರು ಲೋಕಗಳೂ ಆ ಬ್ರಹ್ಮದೇವರ ಶರೀರದಲ್ಲಿ ಅಡಗಿಕೊಳ್ಳುವುವು. ॥ ೨೮ ॥ ಆಗಲೇ ಮೂರು ಲೋಕಗಳೂ ಆದಿಶೇಷದೇವರ ಬಾಯಿಯಿಂದ ಹೊರಟಿರುವ ಅಗ್ನಿರೂಪೀ ಭಗವಂತನ ಶಕ್ತಿಯಿಂದ ಸುಡಲು ತೊಡಗುವುದು. ಅದರ ಬೇಗೆಯನ್ನು ತಾಳಲಾರದೆ ಭೃಗುವೇ ಮುಂತಾದ ಮುನೀಶ್ವರರು ಮಹರ್ಲೋಕದಿಂದ ಜನೋಲೋಕಕ್ಕೆ ಹೋಗಿಬಿಡುವರು. ॥ ೨೯ ॥ ಅಷ್ಟರಲ್ಲಿ ಸಪ್ತ ಸಮುದ್ರಗಳೂ ಪ್ರಳಯಕಾಲದ ಪ್ರಚಂಡಮಾರುತದಿಂದ ಉಕ್ಕೇರಿ ಮಹಾತರಂಗಗಳಿಂದ ತ್ರೈಲೋಕ್ಯವನ್ನೂ ಮುಳುಗಿಸಿಬಿಡುವುವು. ॥ ೩೦ ॥ ಆಗ ಆ ಪ್ರಳಯಜಲದಲ್ಲಿ ಶ್ರೀಭಗವಂತನು ಶೇಷಶಾಯಿಯಾಗಿ ಯೋಗನಿದ್ರೆಯಲ್ಲಿ ಕಣ್ಣುಗಳನ್ನು ಮುಚ್ಚಿಕೊಂಡು ಪವಡಿಸುವನು. ಆ ಸಮಯದಲ್ಲಿ ಜನೋಲೋಕದಲ್ಲಿರುವ ಮುನಿಗಳು ಆತನನ್ನು ಸ್ತುತಿಸುತ್ತಿರುವರು. ॥ ೩೧ ॥ ಹೀಗೆ ಕಾಲಗತಿಗೆ ಒಳಪಟ್ಟಿರುವ ಇಂತಹ ಹಗಲು-ರಾತ್ರಿಗಳಿಂದಲೇ ಬ್ರಹ್ಮದೇವರ ಪೂರ್ಣಾಯುಸ್ಸಾಗಿರುವ ನೂರು ವರ್ಷಗಳು ಕಳೆದಂತಾಗುವುದು. ॥ ೩೨ ॥

ಬ್ರಹ್ಮದೇವರ ಆಯುಸ್ಸಿನ ಅರ್ಧಭಾಗಕ್ಕೆ (ಅಂದರೆ ಅವರ ೫೦ ವರ್ಷಗಳ ಕಾಲಕ್ಕೆ) ಒಂದು 'ಪರಾರ್ಧ'ವೆಂದು ಹೇಳುತ್ತಾರೆ. ಇಷ್ಟರವರೆಗೆ ಮೊದಲನೆಯ ಪರಾರ್ಧವು ಮುಗಿದು, ಎರಡನೆಯ ಪರಾರ್ಧವು ನಡೆಯುತ್ತಿದೆ. ॥ ೩೩ ॥ ಹಿಂದಿನ ಪರಾರ್ಧದ ಪ್ರಾರಂಭದಲ್ಲಿ ಮೊಟ್ಟಮೊದಲು 'ಬ್ರಾಹ್ಮ'ವೆಂಬ ಮಹಾಕಲ್ಪವಿತ್ತು. ಅದರಲ್ಲೇ ಬ್ರಹ್ಮದೇವರ ಉತ್ಪತ್ತಿಯಾಗಿತ್ತು. ಜ್ಞಾನಿಗಳು ಅವರನ್ನು ಶಬ್ದಬ್ರಹ್ಮವೆಂದು ಹೇಳುತ್ತಾರೆ. ॥ ೩೪ ॥ ಅದೇ ಪರಾರ್ಧದ ಕಡೆಯ ಭಾಗದ ಕಲ್ಪವನ್ನು 'ಪಾದ್ಮಕಲ್ಪ'ವೆನ್ನುತ್ತಾರೆ. ಇದರಲ್ಲಿ ಭಗವಂತನ

ತಸ್ಯೈವ ಚಾಂತೇ ಕಲ್ಪೋಽಭೂದ್ಯಂ ಪಾದ್ಮಮಭಿಚಕ್ಷತೇ ।
ಯದ್ಧರೇರ್ನಾಭಿಸರಸ ಆಸೀಲ್ಲೋಕಸರೋರುಹಮ್ ॥ ೩೫ ॥

ಅಯಂ ತು ಕಥಿತಃ ಕಲ್ಪೋ ದ್ವಿತೀಯಸ್ಯಾಪಿ ಭಾರತ ।
ವಾರಾಹ ಇತಿ ವಿಖ್ಯಾತೋ ಯತ್ರಾಸೀಚ್ಛೂಕರೋ ಹರಿಃ ॥ ೩೬ ॥

ಕಾಲೋಽಯಂ ದ್ವಿಪರಾರ್ಧಾಖ್ಯೋ ನಿಮೇಷ ಉಪಚರ್ಯತೇ ।
ಅವ್ಯಾಕೃತಸ್ಯಾನಂತಸ್ಯ ಅನಾದೇರ್ಜಗದಾತ್ಮನಃ ॥ ೩೭ ॥

ಕಾಲೋಽಯಂ ಪರಮಾಣ್ವಾದಿರ್ದ್ವಿಪರಾರ್ಧಾಂತ ಈಶ್ವರಃ ।
ನೈವೇಶಿತುಂ ಪ್ರಭುರ್ಭೂಮ್ನ ಈಶ್ವರೋ ಧಾಮಮಾನಿನಾಮ್ ॥ ೩೮ ॥

ವಿಕಾರೈಃ ಸಹಿತೋ ಯುಕ್ತೈರ್ವಿಶೇಷಾದಿಭಿರಾವೃತಃ ।
ಆಂಡಕೋಶೋ ಬಹಿರಯಂ ಪಂಚಾಶತ್ಕೋಟಿವಿಸ್ತೃತಃ ॥ ೩೯ ॥

ದಶೋತ್ತರಾಧಿಕೈರ್ಯತ್ರ ಪ್ರವಿಷ್ಟಃ ಪರಮಾಣುವತ್ ।
ಲಕ್ಷ್ಯತೇಽಂತರ್ಗತಾಶ್ಚಾನ್ಯೇ ಕೋಟಿಶೋ ಹ್ಯಂಡರಾಶಯಃ ॥ ೪೦ ॥

ತದಾಹುರಕ್ಷರಂ ಬ್ರಹ್ಮ ಸರ್ವಕಾರಣಕಾರಣಮ್ ।
ವಿಷ್ಣೋರ್ಧಾಮ ಪರಂ ಸಾಕ್ಷಾತ್ಪುರುಷಸ್ಯ ಮಹಾತ್ಮನಃ ॥ ೪೧ ॥

ನಾಭಿಸರೋವರದಿಂದ ಸರ್ವಲೋಕಮಯ ಕಮಲವು ಪ್ರಕಟವಾಗಿತ್ತು. ॥ ೩೫ ॥ ಭರತರ್ಷಭನೇ! ಈಗ ನಡೆಯುತ್ತಿರುವ ಕಲ್ಪವನ್ನು ಎರಡನೇ ಪರಾರ್ಧದ ಪ್ರಾರಂಭದ್ದೆಂದು ಹೇಳಲಾಗುತ್ತದೆ. ಇದರಲ್ಲಿ ಶ್ರೀಭಗವಂತನು ವರಾಹರೂಪವನ್ನು ಸ್ವೀಕರಿಸಿದ್ದರಿಂದ ಇದನ್ನು 'ವಾರಾಹಕಲ್ಪ'ವೆಂದು ಕರೆಯುತ್ತಾರೆ. ॥ ೩೬ ॥ ಈ ಎರಡು ಪರಾರ್ಧಗಳು ಅವ್ಯಕ್ತನೂ, ಅನಂತನೂ, ಅನಾದಿಯೂ, ವಿಶ್ವಾತ್ಮನೂ ಆಗಿರುವ ಶ್ರೀಹರಿಗೆ ಒಂದು 'ನಿಮೇಷ' ಕಾಲಮಾತ್ರ ಆಗುವುದು. ॥ ೩೭ ॥ ಪರಮಾಣುವಿನಿಂದ ಹಿಡಿದು ಎರಡು ಪರಾರ್ಧಕಾಲ ಪರ್ಯಂತ ಹಬ್ಬಿರುವ ಈ ಮಹಾಕಾಲವು ಸರ್ವಸಮರ್ಥವಾಗಿದ್ದರೂ, ಸರ್ವಾತ್ಮನಾಗಿರುವ ಶ್ರೀಹರಿಯ ಮೇಲೆ ಯಾವ ಅಧಿಕಾರವನ್ನೂ ನಡೆಸಲಾರದು. ದೇಹಾದಿಗಳಲ್ಲಿ ಅಭಿಮಾನವನ್ನಿಟ್ಟಿರುವ ಜೀವಿಗಳ ಮೇಲೆ ಮಾತ್ರವೇ ಅದರ ಶಾಸನವು ನಡೆಯುವುದು. ॥ ೩೮ ॥

ಪ್ರಕೃತಿ, ಮಹತ್ತತ್ತ್ವ, ಅಹಂಕಾರ ಮತ್ತು ಪಂಚ ತನ್ಮಾತ್ರೆಗಳು – ಈ ಎಂಟು ಪ್ರಕೃತಿಗಳಿಂದೊಡಗೂಡಿದ ಹತ್ತು ಇಂದ್ರಿಯಗಳೂ, ಮನಸ್ಸು ಹಾಗೂ ಪಂಚಭೂತಗಳು ಎಂಬ ಈ ಹದಿನಾರು ವಿಕಾರಗಳು ಸೇರಿ ನಿರ್ಮಿತವಾಗಿರುವ ಈ ಬ್ರಹ್ಮಾಂಡಕೋಶವು ಒಳಗಡೆ ಐವತ್ತು ಕೋಟಿ ಯೋಜನಗಳಷ್ಟು ವಿಸ್ತಾರವಾಗಿದೆ ಮತ್ತು ಇದರ ಹೊರಗಡೆ ನಾಲ್ಕೂ ಕಡೆಗಳಲ್ಲಿಯೂ ಏಳು ಆವರಣಗಳುಂಟು. ಆ ಆವರಣಗಳು ಇದಕ್ಕಿಂತಲೂ ಒಂದು ತುಂಬಾ ದೊಡ್ಡವು. ಅವುಗಳಲ್ಲಿ ಮುಂದು-ಮುಂದಿನದು ಹಿಂದು-ಹಿಂದಿನದಕ್ಕಿಂತಲೂ ಹತ್ತರಷ್ಟು ವಿಸ್ತಾರವಾಗಿದೆ. ಆದರೆ ಇಷ್ಟು ಮಹಾವಿಸ್ತಾರವಾಗಿರುವ ಇವೆಲ್ಲವೂ ಯಾರಲ್ಲಿ ಪರಮಾಣುಗಳಂತೆ ಕಾಣುತ್ತಿವೆಯೋ ಮತ್ತು ಇಂತಹ ಕೋಟಿ-ಕೋಟಿ ಬ್ರಹ್ಮಾಂಡರಾಶಿಗಳು ಯಾರಲ್ಲಿ ಅಡಗಿ ಹೋಗಿವೆಯೋ, ಅಂತಹ ಪ್ರಧಾನವೇ (ಪ್ರಕೃತಿಯೇ) ಮುಂತಾದ ಸಮಸ್ತ ಕಾರಣಗಳಿಗೂ ಮಹಾಕಾರಣನಾಗಿರುವವನೇ ಅಕ್ಷರಬ್ರಹ್ಮನೆನಿಸಿದ ಪುರಾಣಪುರುಷನಾದ ಸಾಕ್ಷಾತ್ ಪರಮಾತ್ಮನಾದ ಭಗವಾನ್ ಶ್ರೀಮಹಾವಿಷ್ಣುವಿನ ಶ್ರೇಷ್ಠಸ್ವರೂಪವಾಗಿದೆ. ॥ ೩೯-೪೧ ॥

ಹನ್ನೊಂದನೆಯ ಅಧ್ಯಾಯವು ಮುಗಿಯಿತು. ॥ ೧೧ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ತೃತೀಯಸ್ಕಂಧೇ ಏಕಾದಶೋಽಧ್ಯಾಯಃ ॥ ೧೧ ॥

ಹನ್ನೆರಡನೆಯ ಅಧ್ಯಾಯ

ಸೃಷ್ಟಿಯ ವಿಸ್ತಾರ

ಮೈತ್ರೇಯ ಉವಾಚ

ಇತಿ ತೇ ವರ್ಣಿತಃ ಕ್ಷತ್ತಃ ಕಾಲಾಖ್ಯಃ ಪರಮಾತ್ಮನಃ ।
ಮಹಿಮಾ ವೇದಗರ್ಭೋಽಥ ಯಥಾಸ್ರಾಕ್ಷೀನ್ನಿಬೋಧ ಮೇ ॥ ೧ ॥

ಶ್ರೀಮೈತ್ರೇಯರು ಹೇಳುತ್ತಾರೆ – ಮಹಾತ್ಮನಾದ ವಿದುರನೇ! ಇಲ್ಲಿಯವರೆಗೆ ನಾನು ನಿನಗೆ ಭಗವಂತನ ಕಾಲರೂಪವಾದ ಮಹಿಮೆಯನ್ನು ಹೇಳಿದೆನು. ಈಗ ಬ್ರಹ್ಮದೇವರು ಜಗತ್ತನ್ನು ಹೇಗೆ ಸೃಷ್ಟಿಸಿದರೆಂಬುದನ್ನು ಹೇಳುತ್ತೇನೆ; ಕೇಳು. ॥ ೧ ॥ ಮೊಟ್ಟಮೊದಲಿಗೆ ಅವರು ಅಜ್ಞಾನದ ಐದು ವೃತ್ತಿಗಳಾದ ತಮಸ್ಸು

ಸಸರ್ಜಾಗ್ರೇಽಂಧತಾಮಿಸ್ರಮಥ ತಾಮಿಸ್ರಮಾದಿಕೃತ್ ।
ಮಹಾಮೋಹಂ ಚ ಮೋಹಂ ಚ ತಮಶ್ಚಾಜ್ಞಾನವೃತ್ತಯಃ ॥ ೨ ॥

ದೃಷ್ಟ್ವಾ ಪಾಪೀಯಸೀಂ ಸೃಷ್ಟಿಂ ನಾತ್ಮಾನಂ ಬಹ್ವಮನ್ಯತ ।
ಭಗವದ್ಧ್ಯಾನಪೂತೇನ ಮನಸಾನ್ಯಾಂ ತತೋಽಸೃಜತ್ ॥ ೩ ॥

ಸನಕಂ ಚ ಸನಂದಂ ಚ ಸನಾತನಮಥಾತ್ಮಭೂಃ ।
ಸನತ್ಕುಮಾರಂ ಚ ಮುನೀನ್ನಿಷ್ಕ್ರಿಯಾನೂರ್ಧ್ವರೇತಸಃ ॥ ೪ ॥

ತಾನ್ಬಭಾಷೇ ಸ್ವಭೂಃ ಪುತ್ರಾನ್ಪ್ರಜಾಃ ಸೃಜತ ಪುತ್ರಕಾಃ ।
ತನ್ನೈಚ್ಛನ್ಮೋಕ್ಷಧರ್ಮಾಣೋ ವಾಸುದೇವಪರಾಯಣಾಃ ॥ ೫ ॥

ಸೋಽವಧ್ಯಾತಃ ಸುತೈರೇವಂ ಪ್ರತ್ಯಾಖ್ಯಾತಾನುಶಾಸನೈಃ ।
ಕ್ರೋಧಂ ದುರ್ವಿಷಹಂ ಜಾತಂ ನಿಯಂತುಮುಪಚಕ್ರಮೇ ॥ ೬ ॥

ಧಿಯಾ ನಿಗೃಹ್ಯಮಾಣೋಽಪಿ ಭ್ರುವೋರ್ಮಧ್ಯಾತ್ಪ್ರಜಾಪತೇಃ ।
ಸದ್ಯೋಽಜಾಯತ ತನ್ಮನ್ಯುಃ ಕುಮಾರೋ ನೀಲಲೋಹಿತಃ ॥ ೭ ॥

ಸ ವೈ ರುರೋದ ದೇವಾನಾಂ ಪೂರ್ವಜೋ ಭಗವಾನ್ಭವಃ ।
ನಾಮಾನಿ ಕುರು ಮೇ ಧಾತಃ ಸ್ಥಾನಾನಿ ಚ ಜಗದ್ಗುರೋ ॥ ೮ ॥

ಇತಿ ತಸ್ಯ ವಚಃ ಪಾದ್ಮೋ ಭಗವಾನ್ಪರಿಪಾಲಯನ್ ।
ಅಭ್ಯಧಾದ್ಭದ್ರಯಾ ವಾಚಾ ಮಾ ರೋದೀಸ್ತತ್ಕರೋಮಿ ತೇ ॥ ೯ ॥

ಯದರೋದೀಃ ಸುರಶ್ರೇಷ್ಠ ಸೋದ್ವೇಗ ಇವ ಬಾಲಕಃ ।
ತತಸ್ತ್ವಾಮಭಿಧಾಸ್ಯಂತಿ ನಾಮ್ನಾ ರುದ್ರ ಇತಿ ಪ್ರಜಾಃ ॥ ೧೦ ॥

ಹೃದಿಂದ್ರಿಯಾಣ್ಯಸುರ್ವ್ಯೋಮ ವಾಯುರಗ್ನಿರ್ಜಲಂ ಮಹೀ ।
ಸೂರ್ಯಶ್ಚಂದ್ರಸ್ತಪಶ್ಚೈವ ಸ್ಥಾನಾನ್ಯಗ್ರೇ ಕೃತಾನಿ ಮೇ ॥ ೧೧ ॥

ಮನ್ಯುರ್ಮನುರ್ಮಹಿನಸೋ ಮಹಾನ್ಶಿವ ಋತಧ್ವಜಃ ।
ಉಗ್ರರೇತಾ ಭವಃ ಕಾಲೋ ವಾಮದೇವೋ ಧೃತವ್ರತಃ ॥ ೧೨ ॥

ಧೀರ್ವೃತ್ತಿರುಶನೋಮಾ ಚ ನಿಯುತ್ಸರ್ಪಿರಿಲಾಂಬಿಕಾ ।
ಇರಾವತೀ ಸುಧಾ ದೀಕ್ಷಾ ರುದ್ರಾಣ್ಯೋ ರುದ್ರ ತೇ ಸ್ತ್ರಿಯಃ ॥ ೧೩ ॥

ಗೃಹಾಣೈತಾನಿ ನಾಮಾನಿ ಸ್ಥಾನಾನಿ ಚ ಸಯೋಷಣಃ ।
ಏಭಿಃ ಸೃಜ ಪ್ರಜಾ ಬಹ್ವೀಃ ಪ್ರಜಾನಾಮಸಿ ಯತ್ಪತಿಃ ॥ ೧೪ ॥

(ಅವಿದ್ಯೆ), ಮೋಹ (ಅಸ್ಮಿತೆ), ಮಹಾಮೋಹ (ರಾಗ), ತಾಮಿಸ್ರ (ದ್ವೇಷ) ಮತ್ತು ಅಂಧತಾಮಿಸ್ರ (ಅಭಿನಿವೇಶ) ಇವುಗಳನ್ನು ಸೃಷ್ಟಿಸಿದರು. ॥ ೨ ॥ ಆದರೆ ಈ ಅತ್ಯಂತ ಪಾಪಮಯ ಸೃಷ್ಟಿಯನ್ನು ನೋಡಿ ಅವರಿಗೆ ಸಂತೋಷವಾಗಲಿಲ್ಲ. ಆಗ ಅವರು ತಮ್ಮ ಮನಸ್ಸನ್ನು ಪರಮಾತ್ಮನ ಧ್ಯಾನದಿಂದ ಪವಿತ್ರವಾಗಿಸಿಕೊಂಡು ಬೇರೊಂದು ಸೃಷ್ಟಿಯನ್ನು ಮಾಡಿದರು. ॥ ೩ ॥ ಈ ಬಾರಿ ಅವರು ಸನಕ, ಸನಂದನ, ಸನಾತನ ಮತ್ತು ಸನತ್ಕುಮಾರ – ಎಂಬ ನಾಲ್ಕುಮಂದಿ ನಿವೃತ್ತಿಧರ್ಮಪರಾಯಣರಾದ ಊರ್ಧ್ವರೇತಸ್ಕರಾದ ಮುನಿಶ್ರೇಷ್ಠರನ್ನು ಸೃಷ್ಟಿಸಿದರು. ॥ ೪ ॥ ತಮ್ಮ ಆ ಪುತ್ರರಿಗೆ ಸ್ವಯಂಭೂ ಬ್ರಹ್ಮದೇವರು – 'ಪುತ್ರರೇ! ನೀವು ಸೃಷ್ಟಿಯನ್ನು ಮಾಡಿರಿ' ಎಂದು ಹೇಳಿದರು. ಆದರೆ ಅವರು ಹುಟ್ಟಿನಿಂದಲೇ ಮೋಕ್ಷಧರ್ಮವುಳ್ಳವರೂ, ನಿವೃತ್ತಿಮಾರ್ಗನಿಷ್ಠರೂ, ವಾಸುದೇವ ಪರಾಯಣರೂ ಆಗಿದ್ದರಿಂದ ಪ್ರವೃತ್ತಿಧರ್ಮರೂಪವಾದ ಸೃಷ್ಟಿಯನ್ನು ಮಾಡಲು ಇಷ್ಟಪಡಲಿಲ್ಲ. ॥ ೫ ॥ ತನ್ನ ಪುತ್ರರು ಹೀಗೆ ತನ್ನ ಅಪ್ಪಣೆಯನ್ನು ಮೀರಿ ತಿರಸ್ಕಾರ ಮಾಡಿದುದನ್ನು ನೋಡಿ ಬ್ರಹ್ಮದೇವರಿಗೆ ಸಹಿಸಲಾರದಷ್ಟು ಕ್ರೋಧವುಂಟಾಯಿತು. ಅವರು ಅದನ್ನು ತಡೆದುಕೊಳ್ಳಲು ಪ್ರಯತ್ನಮಾಡಿದರು. ॥ ೬ ॥ ಆದರೆ ಬುದ್ಧಿಯಿಂದ ಅದನ್ನು ತಡೆದರೂ ಕೂಡ ಆ ಕ್ರೋಧವು ಪ್ರಜಾಪತಿಯ ಹುಬ್ಬುಗಳ ಮಧ್ಯದಿಂದ ನೀಲಿ ಮತ್ತು ಕೆಂಪುಬಣ್ಣದ ಓರ್ವ ಬಾಲಕನ ರೂಪದಲ್ಲಿ ಪ್ರಕಟಗೊಂಡಿತು. ॥ ೭ ॥ ಆ ಬಾಲಕನೇ ದೇವತೆಗಳೆಲ್ಲ ಮೊದಲು ಹುಟ್ಟಿದ ಭಗವಾನ್ ರುದ್ರದೇವರು. ಆತನು ಅಳುತ್ತಾ-ಅಳುತ್ತಾ – 'ಓ ಜಗದ್ಗುರೋ, ಸೃಷ್ಟಿಕರ್ತನೇ! ನನಗೆ ಹೆಸರನ್ನೂ, ವಾಸಸ್ಥಾನವನ್ನೂ ತಿಳಿಸುವವನಾಗು ಎಂದು ಕೇಳತೊಡಗಿದನು. ॥ ೮ ॥

ಆಗ ಪದ್ಮಸಂಭವ ಭಗವಾನ್ ಬ್ರಹ್ಮದೇವರು ಆ ಬಾಲಕನ ಪ್ರಾರ್ಥನೆಯನ್ನು ಈಡೇರಿಸಲು ಮಧುರವಾದ ವಾಣಿಯಿಂದ – ಮಗೂ! ಅಳಬೇಡ, ನಿನ್ನ ಇಚ್ಛೆಯನ್ನು ಪೂರೈಸುತ್ತೇನೆ ಎಂದು ಹೇಳಿದರು. ॥ ೯ ॥ ದೇವಶ್ರೇಷ್ಠನೇ! ನೀನು ಹುಟ್ಟಿದೊಡನೆಯೇ ಬಾಲಕನಂತೆ ಅಳತೊಡಗಿದೆ. ಆದ್ದರಿಂದ ಜನರು ನಿನ್ನನ್ನು 'ರುದ್ರ'ನೆಂಬ ಹೆಸರಿನಿಂದ ಕರೆಯುವರು. ॥ ೧೦ ॥ ನಿನಗೆ ವಾಸಿಸಲು ಹೃದಯ, ಇಂದ್ರಿಯ, ಪ್ರಾಣ, ಆಕಾಶ, ವಾಯು, ಅಗ್ನಿ, ಜಲ, ಪೃಥಿವಿ, ಸೂರ್ಯ, ಚಂದ್ರ ಮತ್ತು ತಪಸ್ಸು ಈ ಸ್ಥಾನಗಳನ್ನು ಮೊದಲೇ ರಚಿಸಿರುವೆನು. ॥ ೧೧ ॥ ನೀನು – ಮನ್ಯು, ಮನು, ಮಹಿನಸ, ಮಹಾನ್, ಶಿವ, ಋತಧ್ವಜ, ಉಗ್ರರೇತಸ, ಭವ, ಕಾಲ, ವಾಮದೇವ, ಧೃತವ್ರತ – ಈ ಹೆಸರುಗಳಿಂದ ಖ್ಯಾತನಾಗುವೆ. ॥ ೧೨ ॥ ರುದ್ರದೇವನೇ! ಧೀ, ವೃತ್ತಿ, ಉಶನಾ, ಉಮಾ, ನಿಯುತ್, ಸರ್ಪಿ, ಇಳಾ, ಅಂಬಿಕಾ, ಇರಾವತೀ, ಸುಧಾ ಮತ್ತು ದೀಕ್ಷಾ – ಎಂಬ ಹನ್ನೊಂದು ಮಂದಿ ರುದ್ರಾಣಿಯರು ನಿನ್ನ ಪತ್ನಿಯರಾಗುವರು. ॥ ೧೩ ॥ ಈ ಹೆಸರುಗಳನ್ನೂ, ಸ್ಥಾನಗಳನ್ನೂ ಪತ್ನಿಯರನ್ನೂ ಸ್ವೀಕರಿಸಿ ಇವರ ಮೂಲಕ ಬಹುಮಂದಿ ಪ್ರಜೆಗಳನ್ನು ಸೃಷ್ಟಿಸು. ಏಕೆಂದರೆ, ನೀನು ಪ್ರಜಾಪತಿಯಾಗಿರುವೆ, ಎಂದು ಆತನಿಗೆ ಹೇಳಿದರು. ॥ ೧೪ ॥

ಇತ್ಯಾದಿಷ್ಟಃ ಸ ಗುರುಣಾ ಭಗವಾನ್ನೀಲಲೋಹಿತಃ ।
ಸತ್ತ್ವಾಕೃತಿಸ್ವಭಾವೇನ ಸಸರ್ಜಾತ್ಮಸಮಾಃ ಪ್ರಜಾಃ
॥ ೧೫ ॥

ರುದ್ರಾಣಾಂ ರುದ್ರಸೃಷ್ಟಾನಾಂ ಸಮಂತಾದ್ಗ್ರಸತಾಂ ಜಗತ್ ।
ನಿಶಾಮ್ಯಾಸಂಖ್ಯಶೋ ಯೂಥಾನ್ ಪ್ರಜಾಪತಿರಶಂಕತ
॥ ೧೬ ॥

ಅಲಂ ಪ್ರಜಾಭಿಃ ಸೃಷ್ಟಾಭಿರೀದೃಶೀಭಿಃ ಸುರೋತ್ತಮ ।
ಮಯಾ ಸಹ ದಹಂತೀಭಿರ್ದಿಶಶ್ಚಕ್ಷುರ್ಭಿರುಲ್ಬಣೈಃ
॥ ೧೭ ॥

ತಪ ಆತಿಷ್ಠ ಭದ್ರಂ ತೇ ಸರ್ವಭೂತಸುಖಾವಹಮ್ ।
ತಪಸೈವ ಯಥಾಪೂರ್ವಂ ಸ್ರಷ್ಟಾ ವಿಶ್ವಮಿದಂ ಭವಾನ್
॥ ೧೮ ॥

ತಪಸೈವ ಪರಂ ಜ್ಯೋತಿರ್ಭಗವಂತಮಧೋಕ್ಷಜಮ್ ।
ಸರ್ವಭೂತಗುಹಾವಾಸಮಂಜಸಾ ವಿಂದತೇ ಪುಮಾನ್
॥ ೧೯ ॥

ಮೈತ್ರೇಯ ಉವಾಚ

ಏವಮಾತ್ಮಭುವಾಽಽದಿಷ್ಟಃ ಪರಿಕ್ರಮ್ಯ ಗಿರಾಂ ಪತಿಮ್ ।
ಬಾಢಮಿತ್ಯಮುಮಾಮಂತ್ರ್ಯ ವಿವೇಶ ತಪಸೇ ವನಮ್
॥ ೨೦ ॥

ಅಥಾಭಿಧ್ಯಾಯತಃ ಸರ್ಗಂ ದಶ ಪುತ್ರಾಃ ಪ್ರಜಜ್ಞಿರೇ ।
ಭಗವಚ್ಛಕ್ತಿಯುಕ್ತಸ್ಯ ಲೋಕಸಂತಾನಹೇತವಃ
॥ ೨೧ ॥

ಮರೀಚಿರತ್ರ್ಯಂಗಿರಸೌ ಪುಲಸ್ತ್ಯಃ ಪುಲಹಃ ಕ್ರತುಃ ।
ಭೃಗುರ್ವಸಿಷ್ಠೋ ದಕ್ಷಶ್ಚ ದಶಮಸ್ತತ್ರ ನಾರದಃ
॥ ೨೨ ॥

ಉತ್ಸಂಗಾನ್ನಾರದೋ ಜಜ್ಞೇ ದಕ್ಷೋಽಂಗುಷ್ಠಾತ್ಸ್ವಯಂಭುವಃ ।
ಪ್ರಾಣಾದ್ವಸಿಷ್ಠಃ ಸಂಜಾತೋ ಭೃಗುಸ್ತ್ವಚಿ ಕರಾತ್ಕ್ರತುಃ
॥ ೨೩ ॥

ಪುಲಹೋ ನಾಭಿತೋ ಜಜ್ಞೇ ಪುಲಸ್ತ್ಯಃ ಕರ್ಣಯೋರ್ಋಷಿಃ ।
ಅಂಗಿರಾ ಮುಖತೋಽಕ್ಷ್ಣೋಽತ್ರಿರ್ಮರೀಚಿರ್ಮನಸೋಽಭವತ್
॥ ೨೪ ॥

ಧರ್ಮಃ ಸ್ತನಾದ್ದಕ್ಷಿಣತೋ ಯತ್ರ ನಾರಾಯಣಃ ಸ್ವಯಮ್ ।
ಅಧರ್ಮಃ ಪೃಷ್ಠತೋ ಯಸ್ಮಾನ್ಮೃತ್ಯುರ್ಲೋಕಭಯಂಕರಃ
॥ ೨೫ ॥

ಹೃದಿ ಕಾಮೋ ಭ್ರುವಃ ಕ್ರೋಧೋ ಲೋಭಶ್ಚಾಧರದಚ್ಛದಾತ್ ।
ಆಸ್ಯಾದ್ವಾಕ್ಸಿಂಧವೋ ಮೇಢ್ರಾನ್ನಿರ್ಋತಿಃ ಪಾಯೋರಘಾಶ್ರಯಃ
॥ ೨೬ ॥

ಲೋಕಪಿತಾ ಬ್ರಹ್ಮದೇವರಿಂದ ಹೀಗೆ ಆಜ್ಞಾಪಿಸಲ್ಪಟ್ಟ ಭಗವಾನ್ ನೀಲಲೋಹಿತ ರುದ್ರದೇವರು ಬಲ, ಆಕಾರ ಮತ್ತು ಸ್ವಭಾವಗಳೆಲ್ಲದರಲ್ಲಿಯೂ ತನ್ನಂತೆಯೇ ಇರುವ ಪ್ರಜೆಗಳನ್ನು ಸೃಷ್ಟಿಸತೊಡಗಿದರು. ॥ ೧೫ ॥ ಭಗವಾನ್ ರುದ್ರನಿಂದ ಉತ್ಪನ್ನರಾದ ಈ ಅಸಂಖ್ಯ ರುದ್ರರು ಗುಂಪುಗಳನ್ನು ಮಾಡಿಕೊಂಡು ಜಗತ್ತನ್ನು ಭಕ್ಷಿಸತೊಡಗಿದರು. ಅದನ್ನು ನೋಡಿ ಬ್ರಹ್ಮದೇವರಿಗೆ ತುಂಬಾ ಭಯ-ಶಂಕೆಗಳು ಉಂಟಾದುವು. ॥ ೧೬ ॥ ಆಗ ಅವರು ರುದ್ರನನ್ನು ಕುರಿತು– "ದೇವಶ್ರೇಷ್ಠನೇ! ನಿನ್ನ ಪ್ರಜೆಗಳಾದರೋ ತಮ್ಮ ಭಯಂಕರ ದೃಷ್ಟಿಗಳಿಂದ ನನ್ನನ್ನೂ ಹಾಗೂ ಎಲ್ಲ ದಿಕ್ಕುಗಳನ್ನೂ ಸುಟ್ಟುಹಾಕಲು ತೊಡಗಿದ್ದಾರೆ. ಆದ್ದರಿಂದ ಇಂತಹ ಸೃಷ್ಟಿಯನ್ನು ಮುಂದೆ ಮಾಡಬೇಡ" ಎಂದು ಹೇಳಿದರು. ॥ ೧೭ ॥ ನಿನಗೆ ಮಂಗಳವಾಗಲೀ, ಈಗ ನೀನು ಸಮಸ್ತ ಪ್ರಾಣಿಗಳಿಗೆ ಸುಖವನ್ನುಂಟುಮಾಡುವುದಕ್ಕಾಗಿ ತಪಸ್ಸನ್ನಾಚರಿಸು. ಮತ್ತೆ ಆ ತಪಸ್ಸಿನ ಪ್ರಭಾವದಿಂದಲೇ ನೀನು ಹಿಂದಿನಂತೆ ಈ ವಿಶ್ವವನ್ನು ಸೃಷ್ಟಿಸುವೆಯಂತೆ. ॥ ೧೮ ॥ ತಪಸ್ಸಿನ ಮೂಲಕವೇ ಇಂದ್ರಿಯಾತೀತನೂ, ಸರ್ವಾಂತರ್ಯಾಮಿಯೂ, ಜ್ಯೋತಿಸ್ವರೂಪನೂ ಆದ ಶ್ರೀಹರಿಯನ್ನು ಮನುಷ್ಯನು ಸುಲಭವಾಗಿ ಹೊಂದಬಲ್ಲನು. ॥ ೧೯ ॥

ಶ್ರೀಮೈತ್ರೇಯರು ಹೇಳುತ್ತಾರೆ – ವಿದುರನೇ! ಬ್ರಹ್ಮದೇವರ ಆಜ್ಞೆಯಂತೆ ರುದ್ರದೇವರು – 'ಹಾಗೆಯೇ ಆಗಲಿ' ಎಂದು ಹೇಳಿ, ಅವರಿಗೆ ಪ್ರದಕ್ಷಿಣೆ ಮಾಡಿ, ಅವರಿಂದ ಅನುಮತಿಯನ್ನು ಪಡೆದು ತಪಸ್ಸನ್ನಾಚರಿಸಲು ವನಕ್ಕೆ ತೆರಳಿದರು. ॥ ೨೦ ॥

ಅನಂತರ ಭಗವಂತನ ಶಕ್ತಿಯಿಂದ ಸಂಪನ್ನರಾದ ಬ್ರಹ್ಮದೇವರು ಸೃಷ್ಟಿಯನ್ನು ಮಾಡಲು ಸಂಕಲ್ಪಿಸಿದಾಗ ಅವರಿಗೆ ಹತ್ತು ಮಂದಿ ಪುತ್ರರು ಜನಿಸಿದರು. ಅವರಿಂದಲೇ ಲೋಕದಲ್ಲಿ ಬಹುಮಟ್ಟಿಗೆ ಪ್ರಜಾವೃದ್ಧಿಯಾದದ್ದು. ॥ ೨೧ ॥ ಮರೀಚಿ, ಅತ್ರಿ, ಅಂಗಿರಾ, ಪುಲಸ್ತ್ಯ, ಪುಲಹ, ಕ್ರತು, ಭೃಗು, ವಸಿಷ್ಠ, ದಕ್ಷ ಮತ್ತು ನಾರದರು – ಇವರೇ ಆ ಹತ್ತು ಮಂದಿ ಪುತ್ರಶ್ರೇಷ್ಠರು. ॥ ೨೨ ॥ ಇವರಲ್ಲಿ ನಾರದರು ಬ್ರಹ್ಮದೇವರ ತೊಡೆಯಿಂದಲೂ, ದಕ್ಷನು ಅಂಗುಷ್ಠದಿಂದಲೂ, ವಸಿಷ್ಠರು ಪ್ರಾಣದಿಂದಲೂ, ಭೃಗು ತ್ವಚೆಯಿಂದಲೂ, ಕ್ರತು ಕೈಯಿಂದಲೂ, ಪುಲಹ ನಾಭಿಯಿಂದಲೂ, ಪುಲಸ್ತ್ಯರು ಕಿವಿಯಿಂದಲೂ, ಅಂಗಿರಾ ಬಾಯಿಯಿಂದಲೂ, ಅತ್ರಿಯು ನೇತ್ರಗಳಿಂದಲೂ, ಮರೀಚಿಯು ಮನದಿಂದಲೂ ಉತ್ಪನ್ನರಾದರು. ॥ ೨೩-೨೪ ॥ ಮತ್ತೆ ಬ್ರಹ್ಮದೇವರ ಬಲಗಡೆಯ ಸ್ತನದಿಂದ 'ಧರ್ಮ'ವು ಉತ್ಪನ್ನವಾಯಿತು. ಅವನ ಪತ್ನೀ ಮೂರ್ತಿಯಿಂದ ಸ್ವಯಂ ನಾರಾಯಣನು ಅವತರಿಸಿದನು. ಬ್ರಹ್ಮದೇವರ ಬೆನ್ನಿನಿಂದ ಅಧರ್ಮದ ಜನ್ಮವಾಯಿತು ಮತ್ತು ಅವನಿಂದ ಜಗತ್ತಿಗೆ ಭಯವನ್ನುಂಟುಮಾಡುವ ಮೃತ್ಯುವು ಜನಿಸಿದನು. ॥ ೨೫ ॥ ಹೀಗೆಯೇ ಬ್ರಹ್ಮದೇವರ ಹೃದಯದಿಂದ ಕಾಮವು, ಹುಬ್ಬುಗಳಿಂದ ಕ್ರೋಧವೂ, ಕೆಳಗಿನ ತುಟಿಯಿಂದ ಲೋಭವೂ, ಬಾಯಿಯಿಂದ ಮಾತಿಗೆ ಅಧಿಷ್ಠಾತ್ರಿ ದೇವತೆಯಾದ ಸರಸ್ವತಿಯೂ, ಲಿಂಗದಿಂದ ಸಮುದ್ರವೂ, ಗುದದಿಂದ ರಾಕ್ಷಸಾಧಿಪತಿಯೂ, ಪಾಪಗಳಿಗೆ ನಿವಾಸಸ್ಥಾನವಾದ ನಿರ್ಋತಿಯೂ ಉದ್ಭವಿಸಿದರು. ॥ ೨೬ ॥

ಛಾಯಾಯಾಃ ಕರ್ದಮೋ ಜಜ್ಞೇ ದೇವಹೂತ್ಯಾಃ ಪತಿಃ ಪ್ರಭುಃ ।
ಮನಸೋ ದೇಹತಶ್ಚೇದಂ ಜಜ್ಞೇ ವಿಶ್ವಕೃತೋ ಜಗತ್ ॥ ೨೭ ॥

ವಾಚಂ ದುಹಿತರಂ ತನ್ವೀಂ ಸ್ವಯಂಭೂರ್ಹರತೀಂ ಮನಃ ।
ಅಕಾಮಾಂ ಚಕಮೇ ಕ್ಷತ್ತಃ ಸಕಾಮ ಇತಿ ನಃ ಶ್ರುತಮ್ ॥ ೨೮ ॥

ತಮಧರ್ಮೇ ಕೃತಮತಿಂ ವಿಲೋಕ್ಯ ಪಿತರಂ ಸುತಾಃ ।
ಮರೀಚಿಮುಖ್ಯಾ ಮುನಯೋ ವಿಶ್ರಮ್ಭಾತ್ಪ್ರತ್ಯಬೋಧಯನ್ ॥ ೨೯ ॥

ನೈತತ್ಪೂರ್ವೈಃ ಕೃತಂ ತ್ವದ್ಯೇ ನ ಕರಿಷ್ಯಂತಿ ಚಾಪರೇ ।
ಯತ್ತ್ವಂ ದುಹಿತರಂ ಗಚ್ಛೇರನಿಗೃಹ್ಯಾಂಗಜಂ ಪ್ರಭುಃ ॥ ೩೦ ॥

ತೇಜೀಯಸಾಮಪಿ ಹ್ಯೇತನ್ನ ಸುಶ್ಲೋಕ್ಯಂ ಜಗದ್ಗುರೋ ।
ಯದ್ವೃತ್ತಮನುತಿಷ್ಠನ್ವೈ ಲೋಕಃ ಕ್ಷೇಮಾಯ ಕಲ್ಪತೇ ॥ ೩೧ ॥

ತಸ್ಮೈ ನಮೋ ಭಗವತೇ ಯ ಇದಂ ಸ್ವೇನ ರೋಚಿಷಾ ।
ಆತ್ಮಸ್ಥಂ ವ್ಯಂಜಯಾಮಾಸ ಸ ಧರ್ಮಂ ಪಾತುಮರ್ಹತಿ ॥ ೩೨ ॥

ಸ ಇತ್ಥಂ ಗೃಣತಃ ಪುತ್ರಾನ್ಪುರೋ ದೃಷ್ಟ್ವಾ ಪ್ರಜಾಪತೀನ್ ।
ಪ್ರಜಾಪತಿಪತಿಸ್ತನ್ವಂ ತತ್ಯಾಜ ವ್ರೀಡಿತಸ್ತದಾ ।
ತಾಂ ದಿಶೋ ಜಗೃಹುರ್ಘೋರಾಂ ನೀಹಾರಂ ಯದ್ವಿದುಸ್ತಮಃ ॥ ೩೩ ॥

ಕದಾಚಿದ್ಧ್ಯಾಯತಃ ಸ್ರಷ್ಟುರ್ವೇದಾ ಆಸಂಶ್ಚತುರ್ಮುಖಾತ್ ।
ಕಥಂ ಸ್ರಕ್ಷ್ಯಾಮ್ಯಹಂ ಲೋಕಾನ್ಸಮವೇತಾನ್ಯಥಾ ಪುರಾ ॥ ೩೪ ॥

ಚಾತುರ್ಹೋತ್ರಂ ಕರ್ಮತಂತ್ರಮುಪವೇದನಯೈಃ ಸಹ ।
ಧರ್ಮಸ್ಯ ಪಾದಾಶ್ಚತ್ವಾರಸ್ತಥೈವಾಶ್ರಮವೃತ್ತಯಃ ॥ ೩೫ ॥

ವಿದುರ ಉವಾಚ

ಸ ವೈ ವಿಶ್ವಸೃಜಾಮೀಶೋ ವೇದಾದೀನ್ಮುಖತೋಽಸೃಜತ್ ।
ಯದ್ಯದ್ಯೇನಾಸೃಜದ್ದೇವಸ್ತನ್ಮೇ ಬ್ರೂಹಿ ತಪೋಧನ ॥ ೩೬ ॥

ನೆರಳಿನಿಂದ ದೇವಹೂತಿಯ ಪತಿಪೂಜ್ಯರಾದ ಕರ್ದಮರೂ ಜನಿಸಿದರು. ಹೀಗೆ ಈ ಇಡೀ ಜಗತ್ತು ಸೃಷ್ಟಿಕರ್ತರಾದ ಬ್ರಹ್ಮದೇವರ ಶರೀರ ಮತ್ತು ಮನಸ್ಸುಗಳಿಂದ ಉಂಟಾಗಿದೆ. ॥ ೨೭ ॥

ಮಹಾತ್ಮನಾದ ವಿದುರನೇ! ಬ್ರಹ್ಮದೇವರ ಕನ್ಯೆಯಾದ ಸರಸ್ವತಿಯು ಅತ್ಯಂತ ಸುಕುಮಾರಿಯೂ, ಸುಂದರಿಯೂ ಆಗಿದ್ದಳು. ಆಕೆಗೆ ಕಾಮವಿಲ್ಲದಿದ್ದರೂ ಬ್ರಹ್ಮದೇವರು ಆಕೆಯನ್ನು ಕಾಮಿಸಿದರು – ಎಂದು ನಾವು ಕೇಳಿದ್ದೇವೆ. ॥ ೨೮॥ ಬ್ರಹ್ಮದೇವರು ಇಂತಹ ಅಧರ್ಮಮಯವಾದ ಸಂಕಲ್ಪ ಮಾಡಿದ್ದನ್ನು ಕಂಡು ಅವರ ಪುತ್ರರಾದ ಮರೀಚಿಗಳೇ ಮುಂತಾದ ಮಹರ್ಷಿಗಳು ಅವರಿಗೆ ವಿಶ್ವಾಸಪೂರ್ವಕ ತಿಳಿಹೇಳಿದರು– ॥ ೨೯ ॥ ತೀರ್ಥರೂಪರೇ! ತಾವು ಸಮರ್ಥರು. ಮನಸ್ಸಿನಲ್ಲಿ ಉಂಟಾಗಿರುವ ಈ ಕಾಮದ ವೇಗವನ್ನು ತಡೆಯುವ ಶಕ್ತಿ ಇದ್ದರೂ ತಾವು ಅದನ್ನು ತಡೆಗಟ್ಟದೆ ಪುತ್ರೀಗಮನವನ್ನು ಮಾಡಲು ಸಂಕಲ್ಪಿಸಿದ್ದೀರಲ್ಲ! ಇಂತಹ ಪಾಪವನ್ನು ಹಿಂದಿನ ಯಾವ ಬ್ರಹ್ಮದೇವರೂ ಮಾಡಿಲ್ಲ; ಮುಂದಿನವರೂ ಮಾಡಲಾರರು. ॥ ೩೦ ॥ ಜಗದ್ಗುರುವೇ! ನಿಮ್ಮಂತಹ ತೇಜಸ್ವೀ ಪುರುಷರಿಗೆ ಇಂತಹ ಕೆಲಸ ಶೋಭಿಸುವುದಿಲ್ಲ. ಏಕೆಂದರೆ, ನಿಮ್ಮಂತಹವರ ಆಚರಣೆಗಳನ್ನು ಅನುಸರಿಸುವುದರಿಂದಲೇ ಜಗತ್ತಿನ ಕಲ್ಯಾಣವಾಗುತ್ತದೆ. ॥ ೩೧ ॥ ಯಾರು ತನ್ನಲ್ಲಿ ವಿಲೀನಗೊಂಡಿರುವ ಈ ಜಗತ್ತನ್ನು ಸ್ವಪ್ರಕಾಶದಿಂದಲೇ ಪ್ರಕಟಪಡಿಸುವನೋ ಆ ಪರಮಾತ್ಮನಿಗೆ ನಮೋ ನಮಃ. ಈ ಸಮಯದಲ್ಲಿ ಅವನೇ ಧರ್ಮವನ್ನು ರಕ್ಷಿಸಬಲ್ಲನು. ॥ ೩೨ ॥ ತನ್ನ ಪುತ್ರರಾದ ಮರೀಚಿಗಳೇ ಮುಂತಾದ ಪ್ರಜಾಪತಿಗಳು ತಮ್ಮ ಮುಂದೆ ಹೀಗೆ ಹೇಳುತ್ತಿರುವುದನ್ನು ನೋಡಿ ಪ್ರಜಾಪತಿಗಳಿಗೂ ಪತಿಯಾದ ಬ್ರಹ್ಮದೇವರಿಗೆ ತುಂಬಾ ನಾಚಿಕೆಯುಂಟಾಗಿ, ಅವರು ಒಡನೆಯೇ ಆ ದೇಹವನ್ನು ತೊರೆದುಬಿಟ್ಟರು. ಹೀಗೆ ಅವರು ತೊರೆದ ಘೋರವಾದ ಶರೀರವನ್ನು ದಿಕ್ಕುಗಳು ಸ್ವೀಕರಿಸಿದವು. ಅದೇ ಮಂಜು ಆಯಿತು. ಅದನ್ನು ಅಂಧಕಾರವೆಂದೂ ಹೇಳುತ್ತಾರೆ. ॥ ೩೩ ॥

ಒಮ್ಮೆ ಬ್ರಹ್ಮದೇವರು – 'ನಾನು ಎಲ್ಲ ಲೋಕಗಳನ್ನು ಹಿಂದೆ ಇದ್ದಂತೆಯೇ ವ್ಯವಸ್ಥಿತವಾದ ರೂಪದಲ್ಲಿ ಸೃಷ್ಟಿಮಾಡಬೇಕು' ಎಂದು ಯೋಚಿಸುತ್ತಿದ್ದರು. ಆಗ ಅವರ ನಾಲ್ಕು ಮುಖಗಳಿಂದ ನಾಲ್ಕು ವೇದಗಳು ಪ್ರಕಟಗೊಂಡವು. ॥ ೩೪ ॥ ಇವುಗಳಲ್ಲದೆ ಉಪವೇದಗಳು, ನ್ಯಾಯಶಾಸ್ತ್ರ, ಅಧ್ವರ್ಯು, ಉದ್ಗಾತೃ, ಹೋತೃ ಮತ್ತು ಬ್ರಹ್ಮ ಎಂಬ ನಾಲ್ಕು ಮಂದಿ ಋತ್ವಿಕ್ಕುಗಳ ಕರ್ಮಗಳು, ಯಜ್ಞಗಳ ವಿಸ್ತಾರ, ಧರ್ಮದ ನಾಲ್ಕು ಪಾದಗಳು, ನಾಲ್ಕು ಆಶ್ರಮಗಳು ಹಾಗೂ ಅವುಗಳ ವೃತ್ತಿಗಳು ಹೀಗೆ ಎಲ್ಲವೂ ಬ್ರಹ್ಮದೇವರ ಮುಖಗಳಿಂದ ಉದ್ಭವಿಸಿದವು. ॥ ೩೫ ॥

ವಿದುರನು ಕೇಳಿದನು – 'ತಪೋಧನರೇ! ಸೃಷ್ಟಿಕರ್ತರಾದ ಪ್ರಜಾಪತಿಗಳಿಗೂ ಪ್ರಭುವಾದ ಬ್ರಹ್ಮದೇವರು ತಮ್ಮ ಮುಖಗಳಿಂದ ಈ ವೇದಾದಿಗಳನ್ನು ಹೊರಹೊಮ್ಮಿಸಿದಾಗ ಅವರು ಯಾವ-ಯಾವ ಮುಖದಿಂದ ಯಾವ-ಯಾವ ವಸ್ತುಗಳನ್ನು ನಿರ್ಮಾಣಮಾಡಿದರು? ಎಂಬುದನ್ನು ದಯವಿಟ್ಟು ನನಗೆ ತಿಳಿಸುವರಾಗಿ' ಎಂದು ವಿಜ್ಞಾಪಿಸಿಕೊಂಡನು. ॥ ೩೬ ॥

ಮೈತ್ರೇಯ ಉವಾಚ

ಋಗ್ಯಜುಃಸಾಮಾಥರ್ವಾಖ್ಯಾನ್ವೇದಾನ್ಪೂರ್ವಾದಿಭಿರ್ಮುಖೈಃ ।
ಶಸ್ತ್ರಮಿಜ್ಯಾಂ ಸ್ತುತಿಸ್ತೋಮಂ ಪ್ರಾಯಶ್ಚಿತ್ತಂ ವ್ಯಧಾತ್ಕ್ರಮಾತ್ ॥ ೩೭ ॥

ಆಯುರ್ವೇದಂ ಧನುರ್ವೇದಂ ಗಾಂಧರ್ವಂ ವೇದಮಾತ್ಮನಃ ।
ಸ್ಥಾಪತ್ಯಂ ಚಾಸೃಜದ್ವೇದಂ ಕ್ರಮಾತ್ಪೂರ್ವಾದಿಭಿರ್ಮುಖೈಃ ॥ ೩೮ ॥

ಇತಿಹಾಸಪುರಾಣಾನಿ ಪಂಚಮಂ ವೇದಮೀಶ್ವರಃ ।
ಸರ್ವೇಭ್ಯ ಏವ ವಕ್ತ್ರೇಭ್ಯಃ ಸಸೃಜೇ ಸರ್ವದರ್ಶನಃ ॥ ೩೯ ॥

ಷೋಡಶ್ಯುಕ್ಥೌ ಪೂರ್ವವಕ್ತ್ರಾತ್ಪುರೀಷ್ಯಗ್ನಿಷ್ಟುತಾವಥ ।
ಆಪ್ತೋರ್ಯಾಮಾತಿರಾತ್ರೌ ಚ ವಾಜಪೇಯಂ ಸಗೋಸವಮ್ ॥ ೪೦ ॥

ವಿದ್ಯಾ ದಾನಂ ತಪಃ ಸತ್ಯಂ ಧರ್ಮಸ್ಯೇತಿ ಪದಾನಿ ಚ ।
ಆಶ್ರಮಾಂಶ್ಚ ಯಥಾಸಂಖ್ಯಮಸೃಜತ್ಸಹ ವೃತ್ತಿಭಿಃ ॥ ೪೧ ॥

ಸಾವಿತ್ರಂ ಪ್ರಾಜಾಪತ್ಯಂ ಚ ಬ್ರಾಹ್ಮಂ ಚಾಥ ಬೃಹತ್ತಥಾ ।
ವಾರ್ತಾಸಂಚಯಶಾಲೀನಶಿಲೋಂಛ ಇತಿ ವೈ ಗೃಹೇ ॥ ೪೨ ॥

ವೈಖಾನಸಾ ವಾಲಖಿಲ್ಯೌದುಂಬರಾಃ ಫೇನಪಾ ವನೇ ।
ನ್ಯಾಸೇ ಕುಟೀಚಕಃ ಪೂರ್ವಂ ಬಹ್ವೋದೋ ಹಂಸನಿಷ್ಕ್ರಿಯೌ ॥ ೪೩ ॥

ಶ್ರೀಮೈತ್ರೇಯರು ಹೇಳುತ್ತಾರೆ – 'ಎಲೈ ವಿದುರನೇ! ಬ್ರಹ್ಮದೇವರು ತಮ್ಮ ಪೂರ್ವ, ದಕ್ಷಿಣ, ಪಶ್ಚಿಮ, ಉತ್ತರ – ಈ ದಿಕ್ಕುಗಳ ಮುಖಗಳಿಂದ ಕ್ರಮವಾಗಿ ಋಗ್ವೇದ, ಯಜುರ್ವೇದ, ಸಾಮವೇದ, ಅಥರ್ವವೇದಗಳನ್ನು ಪ್ರಕಟಪಡಿಸಿದರು. ಇದೇ ಕ್ರಮದಲ್ಲೇ ಹೋತೃವಿನ ಕರ್ಮವಾದ ಶಸ್ತ್ರವನ್ನೂ, ಅಧ್ವರ್ಯುವಿನ ಕರ್ಮವಾದ ಇಜ್ಯೆಯನ್ನೂ, ಉದ್ಗಾತೃವಿನ ಕರ್ಮವಾದ ಸ್ತುತಿ-ಸ್ತೋಮವನ್ನು ಮತ್ತು ಬ್ರಹ್ಮನ ಕರ್ಮವಾದ ಪ್ರಾಯಶ್ಚಿತ್ತವನ್ನೂ ಹೊರಹೊಮ್ಮಿಸಿದರು. ॥ ೩೭ ॥ ಹೀಗೆಯೇ ಆಯುರ್ವೇದ (ಚಿಕಿತ್ಸಾಶಾಸ್ತ್ರ), ಧನುರ್ವೇದ (ಶಸ್ತ್ರವಿದ್ಯೆ), ಗಾಂಧರ್ವವೇದ (ಸಂಗೀತಶಾಸ್ತ್ರ) ಮತ್ತು ಸ್ಥಾಪತ್ಯವೇದ (ಶಿಲ್ಪವಿದ್ಯೆ) ಈ ನಾಲ್ಕು ಉಪವೇದಗಳನ್ನು ಕ್ರಮವಾಗಿ ಪೂರ್ವಾದಿ ದಿಕ್ಕುಗಳ ಮುಖಗಳಿಂದಲೇ ನಿರ್ಮಾಣಮಾಡಿದರು. ॥ ೩೮ ॥ ಮತ್ತೆ ಸರ್ವಜ್ಞರಾದ ಆ ಬ್ರಹ್ಮದೇವರು ಇತಿಹಾಸ ಪುರಾಣರೂಪವಾದ ಐದನೆಯ ವೇದವನ್ನೂ ಎಲ್ಲ ಮುಖಗಳಿಂದ ನಿರ್ಮಿಸಿದರು. ॥ ೩೯ ॥ ಅದೇ ಕ್ರಮದಲ್ಲಿ ಷೋಡಶೀ ಮತ್ತು ಉಕ್ಥ, ಚಯನ ಮತ್ತು ಅಗ್ನಿಷ್ಟೋಮ, ಆಪ್ತೋರ್ಯಾಮ ಮತ್ತು ಅತಿರಾತ್ರ, ವಾಜಪೇಯ ಮತ್ತು ಗೋಸವ ಎಂಬ ಎರಡೆರಡು ಯಾಗಗಳೂ ಪೂರ್ವಾದಿ ಮುಖಗಳಿಂದ ಉತ್ಪನ್ನವಾದುವು. ॥ ೪೦ ॥ ವಿದ್ಯಾ, ದಾನ, ತಪಸ್ಸು, ಸತ್ಯ ಎಂಬ ಧರ್ಮದ ನಾಲ್ಕು ಪಾದಗಳನ್ನೂ, ವೃತ್ತಿಗಳ ಸಹಿತ ನಾಲ್ಕು ಆಶ್ರಮಗಳನ್ನೂ, ಇದೇ ಕ್ರಮದಲ್ಲಿ ಪ್ರಕಟಪಡಿಸಿದನು. ॥ ೪೧ ॥ ಸಾವಿತ್ರ,* ಪ್ರಾಜಾಪತ್ಯ,[೧] ಬ್ರಾಹ್ಮ[೨] ಮತ್ತು ಬೃಹತ್[೩] – ಈ ನಾಲ್ಕು ವೃತ್ತಿಗಳು ಬ್ರಹ್ಮಚಾರಿಯದಾಗಿವೆ. ವಾರ್ತಾ,[೪] ಸಂಚಯ,[೫] ಶಾಲೀನ[೬] ಮತ್ತು ಶಿಲೋಂಛ[೭] – ಇವು ನಾಲ್ಕು ವೃತ್ತಿಗಳು ಗೃಹಸ್ಥನಿಗೆ ಸಂಬಂಧಪಟ್ಟವುಗಳು. ॥ ೪೨ ॥ ಇದೇ ರೀತಿಯಲ್ಲಿ ವಾನಪ್ರಸ್ಥರಲ್ಲಿ ವೃತ್ತಿಭೇದಕ್ಕನುಸಾರವಾಗಿ ವೈಖಾನಸ,[೮] ವಾಲಖಿಲ್ಯ,[೯] ಔದುಂಬರ[೧೦] ಮತ್ತು ಫೇನಪ[೧೧] – ಇವು ನಾಲ್ಕು ವಾನಪ್ರಸ್ಥರು ಹಾಗೂ ಕುಟೀಚಕ,[೧೨] ಬಹೂದಕ,[೧೩] ಹಂಸ[೧೪] ಮತ್ತು ನಿಷ್ಕ್ರಿಯ (ಪರಮಹಂಸ)[೧೫] – ಇವು ನಾಲ್ಕು ಸನ್ಯಾಸಿಗಳ ಭೇದವಾಗಿದೆ. ॥ ೪೩ ॥ ಇದೇ ಕ್ರಮದಲ್ಲಿ ಆನ್ವೀಕ್ಷಿಕೀ,[೧೬] ತ್ರಯೀ,[೧೭] ವಾರ್ತಾ[೧೮] ಮತ್ತು ದಂಡನೀತಿ[೧೯] – ಈ ನಾಲ್ಕು ವಿದ್ಯೆಗಳೂ ಹಾಗೂ ನಾಲ್ಕು ವ್ಯಾಹೃತಿಗಳೂ[೨೦] ಕೂಡ ಬ್ರಹ್ಮದೇವನ

* ಉಪನಯನ ಸಂಸ್ಕಾರವಾದ ನಂತರ ಗಾಯತ್ರಿಯ ಅಧ್ಯಯನಕ್ಕಾಗಿ ಆಚರಿಸುವ ನಾಲ್ಕು ದಿನಗಳ ವ್ರತ. ೧. ಒಂದು ವರ್ಷದ ಬ್ರಹ್ಮಚರ್ಯವ್ರತ. ೨. ವೇದಾಧ್ಯಯನ ಮುಗಿಯುವವರೆಗೆ ಪಾಲಿಸುವ ಬ್ರಹ್ಮಚರ್ಯವ್ರತ. ೩. ಜೀವನಪರ್ಯಂತ ಬ್ರಹ್ಮಚರ್ಯಪಾಲನೆ. ೪. ಕೃಷಿಯೇ ಮುಂತಾದ ಶಾಸ್ತ್ರವಿಹಿತ ವೃತ್ತಿಗಳು. ೫. ಯಾಗಾದಿಗಳನ್ನು ಮಾಡುವುದು. ೬. ಅಯಾಚಿತ ವೃತ್ತಿ. ೭. ಧಾನ್ಯದ ಕಣದಲ್ಲಿ ಅಥವಾ ಧಾನ್ಯದ ಅಂಗಡಿಯ ಬಳಿ ಬಿದ್ದ ಕಾಳುಗಳನ್ನು ಆರಿಸಿತಂದು ಅದರಿಂದ ಜೀವನ ನಿರ್ವಾಹ ಮಾಡುವುದು. ೮. ಉಳುಮೆಯಿಲ್ಲದ ಭೂಮಿಯಲ್ಲಿ ಬೆಳೆದ ಧಾನ್ಯದಿಂದ ಜೀವನ ನಿರ್ವಹಣೆ. ೯. ಹೊಸಧಾನ್ಯವು ದೊರೆತಾಕ್ಷಣ ಹಿಂದೆ ಸಂಗ್ರಹಿಸಲ್ಪಟ್ಟ ಧಾನ್ಯವನ್ನು ದಾನಮಾಡಿಬಿಡುವುದು. ೧೦. ಪ್ರಾತಃಕಾಲದಲ್ಲಿ ಎದ್ದಾಗ ಮುಖವು ಯಾವ ದಿಕ್ಕಿಗೆ ಇರುತ್ತದೋ, ಅದೇ ದಿಕ್ಕಿನಿಂದ ಹಣ್ಣು ಮುಂತಾದವುಗಳನ್ನು ತಂದು ಜೀವನ ನಿರ್ವಹಿಸುವುದು. ೧೧. ತಾನಾಗಿಯೇ ಉದುರಿಬಿದ್ದ ಹಣ್ಣುಗಳಿಂದ ಜೀವನ ನಿರ್ವಹಣೆ. ೧೨. ಕುಟೀರವನ್ನು ನಿರ್ಮಿಸಿಕೊಂಡು ಒಂದೇ ಕಡೆಯಲ್ಲಿದ್ದು ಆಶ್ರಮಧರ್ಮಗಳನ್ನು ನಡೆಸುತ್ತಾ ಇರುವುದು. ೧೩. ಕರ್ಮದ ಕಡೆಗೆ ಗೌಣದೃಷ್ಟಿಯನ್ನಿರಿಸಿ ಜ್ಞಾನಕ್ಕೇ ಪ್ರಧಾನವೆಂದು ತಿಳಿಯುವವರು. ೧೪. ಜ್ಞಾನಾಭ್ಯಾಸಿ. ೧೫. ಜೀವನ್ಮುಕ್ತ ಜ್ಞಾನೀ. ೧೬. ಮೋಕ್ಷವನ್ನು ಕೊಡುವ ಆತ್ಮವಿದ್ಯೆ. ೧೭. ಸ್ವರ್ಗಾದಿ ಫಲಗಳನ್ನು ಕೊಡುವ ಕರ್ಮವಿದ್ಯೆ. ೧೮. ಕೃಷಿ-ವ್ಯಾಪಾರಾದಿ ಸಂಬಂಧೀ ವಿದ್ಯೆ. ೧೯. ರಾಜನೀತಿ. ೨೦. ಭೂಃ, ಭುವಃ, ಸುವಃ – ಇವು ಮೂರು ಮತ್ತು ನಾಲ್ಕನೆಯದು ಮಹಃ ಸೇರಿ ನಾಲ್ಕು ವ್ಯಾಹೃತಿಗಳು. ಆಶ್ವಲಾಯನರು ತಮ್ಮ ಗೃಹ್ಯಸೂತ್ರದಲ್ಲಿ ತಿಳಿಸಿದಂತೆ – '**ಏವಂ ವ್ಯಾಹೃತಯಃ ಪ್ರೋಕ್ತಾ ವ್ಯಸ್ತಾಃ ಸಮಸ್ತಾಃ ।**' ಅಥವಾ ಭೂಃ, ಭುವಃ, ಸುವಃ, ಮಹಃ ಇವು ನಾಲ್ಕು ವ್ಯಾಹೃತಿಗಳು – ಶ್ರುತಿ ಹೇಳುತ್ತದೆ – '**ಭೂರ್ಭುವಃ ಸುವರಿತಿ ವಾ ಏತಾಸ್ತಿಸ್ರೋ ವ್ಯಾಹೃತಯಃ । ತಾಸಾ ಮುಹಸ್ಮೈತಾಂ ಚತುರ್ಥೀಂ ಮಾಹಾಚಮಸ್ಯಃ ಪ್ರವೇದಯತೇ ಮಹ ಇತಿ ।**' (ತೈತ್ತಿರೀಯ ಉಪನಿಷತ್ತು).

ಆನ್ವೀಕ್ಷಿಕೀ ತ್ರಯೀ ವಾರ್ತಾ ದಂಡನೀತಿಸ್ತಥೈವ ಚ ।
ಏವಂ ವ್ಯಾಹೃತಯಶ್ಚಾಸನ್ಪ್ರಣವೋ ಹ್ಯಸ್ಯ ದಹ್ರತಃ ॥ ೪೪ ॥

ತಸ್ಯೋಷ್ಣಿಗಾಸೀಲ್ಲೋಮಭ್ಯೋ ಗಾಯತ್ರೀ ಚ ತ್ವಚೋ ವಿಭೋಃ ।
ತ್ರಿಷ್ಟುಮ್ಮಾಂಸಾತ್ಸ್ನುತೋಽನುಷ್ಟುಬ್ಜಗತ್ಯಸ್ಥ್ನಃ ಪ್ರಜಾಪತೇಃ ॥ ೪೫ ॥

ಮಜ್ಜಾಯಾಃ ಪಂಕ್ತಿರುತ್ಪನ್ನಾ ಬೃಹತೀ ಪ್ರಾಣತೋಽಭವತ್ ।
ಸ್ಪರ್ಶಸ್ತಸ್ಯಾಭವಜ್ಜೀವಃ ಸ್ವರೋ ದೇಹ ಉದಾಹೃತಃ ॥ ೪೬ ॥

ಊಷ್ಮಾಣಮಿಂದ್ರಿಯಾಣ್ಯಾಹುರಂತಃಸ್ಥಾ ಬಲಮಾತ್ಮನಃ ।
ಸ್ವರಾಃ ಸಪ್ತ ವಿಹಾರೇಣ ಭವಂತಿ ಸ್ಮ ಪ್ರಜಾಪತೇಃ ॥ ೪೭ ॥

ಶಬ್ದಬ್ರಹ್ಮಾತ್ಮನಸ್ತಸ್ಯ ವ್ಯಕ್ತಾವ್ಯಕ್ತಾತ್ಮನಃ ಪರಃ ।
ಬ್ರಹ್ಮಾವಭಾತಿ ವಿತತೋ ನಾನಾಶಕ್ತ್ಯುಪಬೃಂಹಿತಃ ॥ ೪೮ ॥

ತತೋಽಪರಾಮುಪಾದಾಯ ಸ ಸರ್ಗಾಯ ಮನೋ ದಧೇ ।
ಋಷೀಣಾಂ ಭೂರಿವೀರ್ಯಾಣಾಮಪಿ ಸರ್ಗಮವಿಸ್ತೃತಮ್ ॥ ೪೯ ॥

ಜ್ಞಾತ್ವಾ ತದ್ಧೃದಯೇ ಭೂಯಶ್ಚಿಂತಯಾಮಾಸ ಕೌರವ ।
ಅಹೋ ಅದ್ಭುತಮೇತನ್ಮೇ ವ್ಯಾಪೃತಸ್ಯಾಪಿ ನಿತ್ಯದಾ ॥ ೫೦ ॥

ನ ಹ್ಯೇಧಂತೇ ಪ್ರಜಾ ನೂನಂ ದೈವಮತ್ರ ವಿಘಾತಕಮ್ ।
ಏವಂ ಯುಕ್ತಕೃತಸ್ತಸ್ಯ ದೈವಂ ಚಾವೇಕ್ಷತಸ್ತದಾ ॥ ೫೧ ॥

ಕಸ್ಯ ರೂಪಮಭೂದ್ದ್ವೇಧಾ ಯತ್ಕಾಯಮಭಿಚಕ್ಷತೇ ।
ತಾಭ್ಯಾಂ ರೂಪವಿಭಾಗಾಭ್ಯಾಂ ಮಿಥುನಂ ಸಮಪದ್ಯತ ॥ ೫೨ ॥

ಯಸ್ತು ತತ್ರ ಪುಮಾನ್ಸೋಽಭೂನ್ಮನುಃ ಸ್ವಾಯಂಭುವಃ ಸ್ವರಾಟ್ ।
ಸ್ತ್ರೀ ಯಾಽಽಸೀಚ್ಛತರೂಪಾಖ್ಯಾ ಮಹಿಷ್ಯಸ್ಯ ಮಹಾತ್ಮನಃ ॥ ೫೩ ॥

ತದಾ ಮಿಥುನಧರ್ಮೇಣ ಪ್ರಜಾ ಹ್ಯೇಧಾಂಬಭೂವಿರೇ ।
ಸ ಚಾಪಿ ಶತರೂಪಾಯಾಂ ಪಂಚಾಪತ್ಯಾನ್ಯಜೀಜನತ್ ॥ ೫೪ ॥

ನಾಲ್ಕು ಮುಖಗಳಿಂದ ಉತ್ಪನ್ನವಾದುವು. ಅವರ ಹೃದಯಾಕಾಶದಿಂದ ಓಂಕಾರವು ಪ್ರಕಟಗೊಂಡಿತು. ॥ ೪೪ ॥ ಬ್ರಹ್ಮದೇವರ ರೋಮಗಳಿಂದ ಉಷ್ಣಿಕ್, ತ್ವಚೆಯಿಂದ ಗಾಯತ್ರಿ, ಮಾಂಸದಿಂದ ತ್ರಿಷ್ಟುಪ್, ಸ್ನಾಯುಗಳಿಂದ ಅನುಷ್ಟುಪ್, ಅಸ್ಥಿಗಳಿಂದ ಜಗತಿ, ಮಜ್ಜೆಯಿಂದ ಪಂಕ್ತಿ ಮತ್ತು ಪ್ರಾಣಗಳಿಂದ ಬೃಹತಿ – ಎಂಬ ಛಂದಗಳು ಉತ್ಪನ್ನವಾದುವು. ಹೀಗೆಯೇ ಅವರ ಜೀವ ಸ್ಪರ್ಶವರ್ಣ (ಕವರ್ಗಾದಿ ಪಂಚವರ್ಗ) ಮತ್ತು ದೇಹ ಸ್ವರವರ್ಣ (ಅಕಾರಾದಿ) ಗಳೆಂದು ಕರೆಯಲ್ಪಟ್ಟವು. ॥ ೪೫-೪೬ ॥ ಅವರ ಇಂದ್ರಿಯಗಳನ್ನು ಊಷ್ಮವರ್ಣ (ಶ, ಷ, ಸ, ಹ) ಮತ್ತು ಬಲವನ್ನು ಅಂತಸ್ಥವರ್ಣ (ಯ, ರ, ಲ, ವ) ಎಂದು ಹೇಳುತ್ತಾರೆ. ಅವರ ಕ್ರೀಡೆಯಿಂದ ನಿಷಾದ, ಋಷಭ, ಗಾಂಧಾರ, ಷಡ್ಜ, ಮಧ್ಯಮ, ಧೈವತ, ಪಂಚಮ – ಇವು ಏಳು ಸ್ವರಗಳು ಉಂಟಾದುವು. ॥ ೪೭ ॥ ಅಯ್ಯಾ ವಿದುರಾ! ಬ್ರಹ್ಮದೇವರು ಶಬ್ದಬ್ರಹ್ಮಸ್ವರೂಪರಾಗಿ, ವೈಖರೀ ರೂಪದಿಂದ ವ್ಯಕ್ತರಾಗಿಯೂ, ಪರಾರೂಪ (ಓಂಕಾರ)ದಿಂದ ಅವ್ಯಕ್ತರಾಗಿಯೂ ಇದ್ದಾರೆ ಮತ್ತು ಆ ಶಬ್ದಬ್ರಹ್ಮನ ಮೇಲಿರುವ ಹಾಗೂ ಎಲ್ಲೆಡೆಗಳಲ್ಲಿಯೂ ಪರಿಪೂರ್ಣವಾಗಿರುವ ಪರಬ್ರಹ್ಮವು ಅನೇಕ ಪ್ರಕಾರದ ಶಕ್ತಿಗಳಿಂದ ಕೂಡಿ ಇಂದ್ರಾದಿ ದೇವತಾರೂಪಗಳಿಂದ ಬೆಳಗುತ್ತಿದೆ. ॥ ೪೮ ॥

ಎಲೈ ವಿದುರನೇ! ಬ್ರಹ್ಮದೇವರು ಕಾಮಾಸಕ್ತವಾದ ತಮ್ಮ ಮೊದಲನೆಯ ದೇಹವನ್ನು ತ್ಯಜಿಸಿದ ನಂತರ ಬೇರೊಂದು ಶರೀರವನ್ನು ಧರಿಸಿ ವಿಶ್ವವನ್ನು ವಿಸ್ತರಿಸಬೇಕೆಂದು ಯೋಚಿಸಿದರು. ಮರೀಚಿಗಳೇ ಮುಂತಾದ ಮಹಾಶಕ್ತಿಸಂಪನ್ನರಾದ ಋಷಿಗಳಿಂದಲೂ ಕೂಡ ಸೃಷ್ಟಿಯ ವಿಸ್ತಾರವು ಹೆಚ್ಚಾಗಿ ಆಗದೇ ಇದ್ದುದನ್ನು ಕಂಡು ಅವರು ತಮ್ಮ ಮನಸ್ಸಿನಲ್ಲಿ – 'ಏನಿದು ಎಂತಹ ಆಶ್ಚರ್ಯ! ನಾನು ನಿರಂತರವಾಗಿ ಪ್ರಯತ್ನಮಾಡಿದರೂ ಪ್ರಜಾವೃದ್ಧಿಯು ಆಗುತ್ತಿಲ್ಲವಲ್ಲ! ದೈವವೇ ಇದಕ್ಕೆ ಏನೋ ವಿಘ್ನವನ್ನು ತಂದೊಡ್ಡುತ್ತಿದೆ ಎಂದು ಕಾಣುತ್ತದೆ' ಎಂದು ಚಿಂತೆಗೊಳಗಾದರು. ಮಾಡಬೇಕಾದ ಯುಕ್ತವಾದ ಕಾರ್ಯಗಳನ್ನು ಮಾಡುತ್ತಿದ್ದ ಬ್ರಹ್ಮದೇವರು ಹೀಗೆ ದೈವದ ಕುರಿತು ವಿಚಾರಮಾಡುತ್ತಿದ್ದಾಗ ಅಕಸ್ಮಾತ್ತಾಗಿ ಅವರ ಶರೀರದಲ್ಲಿ ಎರಡು ಭಾಗಗಳು ಉಂಟಾದುವು. 'ಕ' ಎಂಬುದು ಬ್ರಹ್ಮದೇವರ ಹೆಸರು. ಅದರಿಂದ ವಿಭಾಗಗೊಂಡಿದ್ದರಿಂದ 'ಕಾಯ' ಎಂದು ಶರೀರಕ್ಕೆ ಹೆಸರಾಯಿತು. ಹೀಗೆ ಒಡೆದ ಅವರ ಶರೀರದ ಎರಡು ಭಾಗಗಳಿಂದ ಒಂದು ಸ್ತ್ರೀ-ಪುರುಷರ ಜೋಡಿ ಪ್ರಕಟವಾಯಿತು. ॥ ೪೯-೫೨ ॥ ಅವುಗಳಲ್ಲಿ ಪುರುಷಭಾಗವು ಸಾಮ್ರಾಟ್ ಸ್ವಾಯಂಭುವ ಮನುವಾಯಿತು. ಸ್ತ್ರೀಭಾಗವು ಅವನ ಸಾಮ್ರಾಜ್ಞೀ ಶತರೂಪಾದೇವಿಯಾಯಿತು. ॥ ೫೩ ॥ ಅಂದಿನಿಂದ ಮಿಥುನಧರ್ಮ (ಸ್ತ್ರೀ-ಪುರುಷ ಸಂಭೋಗ)ದಿಂದ ಪ್ರಜೆಯ ವೃದ್ಧಿಯಾಗತೊಡಗಿತು. ಮಹಾರಾಜ ಸ್ವಾಯಂಭುವ ಮನುವು ಶತರೂಪಾದೇವಿಯಲ್ಲಿ ಐದು ಸಂತಾನಗಳನ್ನು ಪಡೆದನು. ॥ ೫೪ ॥ ಸಾಧು ಶಿರೋಮಣಿಯಾದ ವಿದುರನೇ! ಅವರಲ್ಲಿ ಪ್ರಿಯವ್ರತ

ಪ್ರಿಯವ್ರತೋತ್ತಾನಪಾದೌ ತಿಸ್ರಃ ಕನ್ಯಾಶ್ಚ ಭಾರತ ।
ಆಕೂತಿರ್ದೇವಹೂತಿಶ್ಚ ಪ್ರಸೂತಿರಿತಿ ಸತ್ತಮ ॥ ೫೬ ॥

ಆಕೂತಿಂ ರುಚಯೇ ಪ್ರಾದಾತ್ಕರ್ದಮಾಯ ತು ಮಧ್ಯಮಾಮ್ ।
ದಕ್ಷಾಯಾದಾತ್ಪ್ರಸೂತಿಂ ಚ ಯತ ಆಪೂರಿತಂ ಜಗತ್ ॥ ೫೭ ॥

ಮತ್ತು ಉತ್ತಾನಪಾದರೆಂಬ ಇಬ್ಬರು ಪುತ್ರರು ಹಾಗೂ ಆಕೂತಿ, ದೇವಹೂತಿ, ಪ್ರಸೂತಿ ಎಂಬ ಮೂವರು ಪುತ್ರಿಯರು. ॥ ೫೬ ॥ ಮನುವು ಅವರಲ್ಲಿ ಆಕೂತಿಯನ್ನು ರುಚಿ ಎಂಬ ಪ್ರಜಾಪತಿಗೂ, ಮಧ್ಯದ ಮಗಳಾದ ದೇವಹೂತಿಯನ್ನು ಕರ್ದಮ ಪ್ರಜಾಪತಿಗೂ, ಪ್ರಸೂತಿಯನ್ನು ದಕ್ಷಪ್ರಜಾಪತಿಗೂ ಕೊಟ್ಟು ವಿವಾಹಮಾಡಿದರು. ಆ ಮೂರು ಪುತ್ರಿಯರ ಸಂತಾನದಿಂದ ಇಡೀ ಜಗತ್ತೇ ತುಂಬಿ ಹೋಯಿತು. ॥ ೫೭ ॥

ಹನ್ನೆರಡನೆಯ ಅಧ್ಯಾಯವು ಮುಗಿಯಿತು. ॥ ೧೨ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ತೃತೀಯಸ್ಕಂಧೇ ದ್ವಾದಶೋಽಧ್ಯಾಯಃ ॥ ೧೨ ॥

ಹದಿಮೂರನೆಯ ಅಧ್ಯಾಯ

ವರಾಹಾವತಾರದ ಕಥೆ

ಶ್ರೀಶುಕ ಉವಾಚ

ನಿಶಾಮ್ಯ ವಾಚಂ ವದತೋ ಮುನೇಃ ಪುಣ್ಯತಮಾಂ ನೃಪ ।
ಭೂಯಃ ಪಪ್ರಚ್ಛ ಕೌರವ್ಯೋ ವಾಸುದೇವಕಥಾದೃತಃ ॥ ೧ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ! ಮುನಿಸಾರ್ವ ಶ್ರೀಮೈತ್ರೇಯರ ಮುಖದಿಂದ ಈ ಪರಮ ಪುಣ್ಯಪ್ರದ ಕಥೆಯನ್ನು ಕೇಳಿ ವಿದುರನು ಪುನಃ ಕೇಳಿದನು; ಏಕೆಂದರೆ ಭಗವಂತನ ಲೀಲಾಕಥೆಗಳಲ್ಲಿ ಅವನಿಗೆ ಅತ್ಯಂತ ಅನುರಾಗ ಉಂಟಾಗಿತ್ತು. ॥ ೧ ॥

ವಿದುರ ಉವಾಚ

ಸ ವೈ ಸ್ವಾಯಂಭುವಃ ಸಮ್ರಾಟ್ ಪ್ರಿಯಃ ಪುತ್ರಃ ಸ್ವಯಂಭುವಃ ।
ಪ್ರತಿಲಭ್ಯ ಪ್ರಿಯಾಂ ಪತ್ನೀಂ ಕಿಂ ಚಕಾರ ತತೋ ಮುನೇ ॥ ೨ ॥

ಚರಿತಂ ತಸ್ಯ ರಾಜರ್ಷೇರಾದಿರಾಜಸ್ಯ ಸತ್ತಮ ।
ಬ್ರೂಹಿ ಮೇ ಶ್ರದ್ದಧಾನಾಯ ವಿಷ್ವಕ್ಸೇನಾಶ್ರಯೋ ಹ್ಯಸೌ ॥ ೩ ॥

ಶ್ರುತಸ್ಯ ಪುಂಸಾಂ ಸುಚಿರಶ್ರಮಸ್ಯ
ನನ್ವಂಜಸಾ ಸೂರಿಭಿರೀಡಿತೋಽರ್ಥಃ ।
ಯತ್ತದ್ಗುಣಾನುಶ್ರವಣಂ ಮುಕುಂದ-
ಪಾದಾರವಿಂದಂ ಹೃದಯೇಷು ಯೇಷಾಮ್ ॥ ೪ ॥

ವಿದುರನು ಕೇಳಿದನು – ಮುನೀಂದ್ರರೇ! ಬ್ರಹ್ಮದೇವರ ಪ್ರಿಯಪುತ್ರನಾದ ಆ ಸಾಮ್ರಾಟ ಸ್ವಾಯಂಭುವ ಮನುವು ಪ್ರಿಯ ಪತ್ನಿಯಾದ ಶತರೂಪಾದೇವಿಯನ್ನು ಪಡೆದ ಬಳಿಕ ಏನು ಮಾಡಿದನು? ॥ ೨ ॥ ತಾವು ಸಾಧುವರೇಣ್ಯರಾಗಿರುವಿರಿ. ಆದಿರಾಜನಾದ ರಾಜರ್ಷಿ ಸ್ವಾಯಂಭುವ ಮನುವಿನ ಪವಿತ್ರ ಚರಿತ್ರೆಯನ್ನು ಹೇಳಿರಿ. ಅವನು ಭಗವಾನ್ ಶ್ರೀವಿಷ್ಣುವಿನ ಶರಣು ಹೊಂದಿದ ಭಕ್ತಾಗ್ರೇಸರನು. ಆದುದರಿಂದ ಅವರ ಚರಿತ್ರೆ ಕೇಳಲು ನನಗೆ ಬಹಳ ಶ್ರದ್ಧೆ ಉಂಟಾಗಿದೆ. ॥ ೩ ॥ ಯಾರ ಹೃದಯದಲ್ಲಿ ಮುಕುಂದನ ಚರಣಾರವಿಂದಗಳು ವಿರಾಜಿಸುತ್ತವೋ, ಅಂತಹ ಭಕ್ತಶ್ರೇಷ್ಠರ ಗುಣಗಳನ್ನು ಶ್ರವಣಮಾಡುವುದೇ ಬಹುಕಾಲ ಶ್ರಮದಿಂದ ಮಾಡಿದ ಶಾಸ್ತ್ರಾಭ್ಯಾಸದ ಪರಮ ಪ್ರಯೋಜನವೆಂದು ಜ್ಞಾನಿಗಳು ಹೇಳುತ್ತಾರೆ. ॥ ೪ ॥

ಶ್ರೀಶುಕ ಉವಾಚ

ಇತಿ ಬ್ರುವಾಣಂ ವಿದುರಂ ವಿನೀತಂ
ಸಹಸ್ರಶೀರ್ಷ್ಣಶ್ಚರಣೋಪಧಾನಮ್ ।
ಪ್ರಹೃಷ್ಟರೋಮಾ ಭಗವತ್ಕಥಾಯಾಂ
ಪ್ರಣೀಯಮಾನೋ ಮುನಿರಭ್ಯಚಷ್ಟ ॥ ೫ ॥

ಶ್ರೀಶುಕಮಹರ್ಷಿಗಳು ಹೇಳುತ್ತಾರೆ – ಎಲೈ ರಾಜೇಂದ್ರಾ! ಸಹಸ್ರಶೀರ್ಷನಾದ ಶ್ರೀಹರಿಯ ಚರಣಾಶ್ರಿತ ಭಕ್ತನಾದ ವಿದುರನು ಹೀಗೆ ಅತ್ಯಂತ ವಿಧೇಯನಾಗಿ ಪ್ರಾರ್ಥಿಸಿದಾಗ, ಭಗವತ್ಕಥಾ ನಿರೂಪಣೆ ಮಾಡಲು ಪ್ರೇರಿತರಾದ ಶ್ರೀಮೈತ್ರೇಯರು ರೋಮಾಂಚಿತರಾಗಿ ಹೇಳತೊಡಗಿದರು. ॥ ೫ ॥

ಮೈತ್ರೇಯ ಉವಾಚ

ಯದಾ ಸ್ವಭಾರ್ಯಯಾ ಸಾಕಂ ಜಾತಃ ಸ್ವಾಯಂಭುವೋ ಮನುಃ ।
ಪ್ರಾಂಜಲಿಃ ಪ್ರಣತಶ್ಚೇದಂ ವೇದಗರ್ಭಮಭಾಷತ ॥ ೬ ॥

ಶ್ರೀಮೈತ್ರೇಯರು ನುಡಿದರು – ವಿದುರನೇ! ಪತ್ನಿಯೊಡನೆ ಜನಿಸಿದ ಸ್ವಾಯಂಭುವ ಮನುವು ಬ್ರಹ್ಮದೇವರಲ್ಲಿ ವಿನಯದಿಂದ ಕೈಜೋಡಿಸಿಕೊಂಡು ಹೇಳಿದನು – ॥ ೬ ॥

ತ್ವಮೇಕಃ ಸರ್ವಭೂತಾನಾಂ ಜನ್ಮಕೃದ್ವೃತ್ತಿದಃ ಪಿತಾ ।
ಅಥಾಪಿ ನಃ ಪ್ರಜಾನಾಂ ತೇ ಶುಶ್ರೂಷಾ ಕೇನ ವಾ ಭವೇತ್ ॥ ೭ ॥

ತದ್ವಿಧೇಹಿ ನಮಸ್ತುಭ್ಯಂ ಕರ್ಮಸ್ವಿಡ್ಯಾತ್ಮಶಕ್ತಿಷು ।
ಯತ್ಕೃತ್ವೇಹ ಯಶೋ ವಿಷ್ವಗಮುತ್ರ ಚ ಭವೇದ್ಗತಿಃ ॥ ೮ ॥

ಬ್ರಹ್ಮೋವಾಚ

ಪ್ರೀತಸ್ತುಭ್ಯಮಹಂ ತಾತ ಸ್ವಸ್ತಿ ಸ್ತಾದ್ವಾಂ ಕ್ಷಿತೀಶ್ವರ ।
ಯನ್ನಿರ್ವ್ಯಲೀಕೇನ ಹೃದಾ ಶಾಧಿ ಮೇತ್ಯಾತ್ಮನಾರ್ಪಿತಮ್ ॥ ೯ ॥

ಏತಾವತ್ಯಾತ್ಮಜೈರ್ವೀರ ಕಾರ್ಯಾ ಹ್ಯಪಚಿತಿರ್ಗುರೌ ।
ಶಕ್ತ್ಯಾಪ್ರಮತ್ತೈರ್ಗೃಹ್ಯೇತ ಸಾದರಂ ಗತಮತ್ಸರೈಃ ॥ ೧೦ ॥

ಸ ತ್ವಮಸ್ಯಾಮಪತ್ಯಾನಿ ಸದೃಶಾನ್ಯಾತ್ಮನೋ ಗುಣೈಃ ।
ಉತ್ಪಾದ್ಯ ಶಾಸ ಧರ್ಮೇಣ ಗಾಂ ಯಜ್ಞೈಃ ಪುರುಷಂ ಯಜ ॥ ೧೧ ॥

ಪರಂ ಶುಶ್ರೂಷಣಂ ಮಹ್ಯಂ ಸ್ಯಾತ್ಪ್ರಜಾರಕ್ಷಯಾ ನೃಪ ।
ಭಗವಾಂಸ್ತೇ ಪ್ರಜಾಭರ್ತುರ್ಹೃಷೀಕೇಶೋಽನುತುಷ್ಯತಿ ॥ ೧೨ ॥

ಯೇಷಾಂ ನ ತುಷ್ಟೋ ಭಗವಾನ್ಯಜ್ಞಲಿಂಗೋ ಜನಾರ್ದನಃ ।
ತೇಷಾಂ ಶ್ರಮೋ ಹ್ಯಪಾರ್ಥಾಯ ಯದಾತ್ಮಾ ನಾದೃತಃ ಸ್ವಯಮ್ ॥ ೧೩ ॥

ಮನುರುವಾಚ

ಆದೇಶೇಽಹಂ ಭಗವತೋ ವರ್ತೇಯಾಮೀವಸೂದನ ।
ಸ್ಥಾನಂ ತ್ವಿಹಾನುಜಾನೀಹಿ ಪ್ರಜಾನಾಂ ಮಮ ಚ ಪ್ರಭೋ ॥ ೧೪ ॥

ಯದೋಕಃ ಸರ್ವಸತ್ತ್ವಾನಾಂ ಮಹೀ ಮಗ್ನಾ ಮಹಾಂಭಸಿ ।
ಅಸ್ಯಾ ಉದ್ಧರಣೇ ಯತ್ನೋ ದೇವ ದೇವ್ಯಾ ವಿಧೀಯತಾಮ್ ॥ ೧೫ ॥

ಮೈತ್ರೇಯ ಉವಾಚ

ಪರಮೇಷ್ಠೀ ತ್ವಪಾಂ ಮಧ್ಯೇ ತಥಾ ಸನ್ನಾಮವೇಕ್ಷ್ಯ ಗಾಮ್ ।
ಕಥಮೇನಾಂ ಸಮುನ್ನೇಷ್ಯ ಇತಿ ದಧ್ಯೌ ಧಿಯಾ ಚಿರಮ್ ॥ ೧೬ ॥

ತೀರ್ಥರೂಪರೇ! ಸಮಸ್ತ ಪ್ರಾಣಿಗಳಿಗೆ ಜನ್ಮನೀಡುವ ಮತ್ತು ಅವುಗಳಿಗೆ ಜೀವಿಕೆಯನ್ನು ಕಲ್ಪಿಸಿಕೊಡುವ ತಂದೆ ತಾವೇ ಆಗಿದ್ದೀರಿ. ಆದರೂ ತಮ್ಮ ಸಂತಾನವಾದ ನಾವು ಏನು ಮಾಡಿದರೆ ತಮ್ಮ ಸೇವೆಯಾಗುವುದು? ಎಂಬುದನ್ನು ಅಪ್ಪಣೆ ಕೊಡಿಸಿರಿ. ॥ ೭ ॥ ಪೂಜ್ಯಪಾದರೇ! ತಮಗೆ ನಮೋ ನಮಃ "ಯಾವುದನ್ನು ಮಾಡಿದರೆ ನಮಗೆ ಈ ಲೋಕದಲ್ಲಿ ಒಳ್ಳೆಯ ಯಶಸ್ಸು ಹಾಗೂ ಪರಲೋಕದಲ್ಲಿ ಸದ್ಗತಿ ಉಂಟಾಗುವಂತಹ, ನಾವು ಮಾಡಲು ಶಕ್ಯವಾಗಿರುವ ಕಾರ್ಯವನ್ನು ನಮಗೆ ಅಪ್ಪಣೆ ನೀಡಿರಿ" ಎಂದು ಬೇಡಿಕೊಂಡರು. ॥ ೮ ॥

ಶ್ರೀಬ್ರಹ್ಮದೇವರು ಹೇಳಿದರು – ಅಯ್ಯಾ! ಭೂಮೀಶ್ವರನೇ! ನಿಮ್ಮಿಬ್ಬರ ವಿಷಯದಲ್ಲಿ ನಾನು ಬಹಳ ಪ್ರಸನ್ನನಾಗಿದ್ದೇನೆ. ನಿಮಗೆ ಮಂಗಳವಾಗಲಿ. ಏಕೆಂದರೆ, ನಿಷ್ಕಪಟ ಭಾವದಿಂದ ನೀನು 'ನನಗೆ ಆಜ್ಞೆ ಮಾಡಿರಿ' ಎಂದು ಹೇಳಿ ಆತ್ಮಸಮರ್ಪಣ ಮಾಡಿರುವಿ. ॥ ೯ ॥ ವೀರವರನೇ! ಪುತ್ರರಾದವರು ತಮ್ಮ ತಂದೆಯನ್ನು ಹೀಗೆಯೇ ಪೂಜಿಸಬೇಕು. ಬೇರೆಯವರ ಕುರಿತು ಮಾತ್ಸರ್ಯ ಭಾವವನ್ನಿರಿಸದೆ ತಂದೆಯ ಆಜ್ಞೆಯನ್ನು ಆದರಪೂರ್ವಕವಾಗಿ ಸ್ವೀಕರಿಸಿ, ಎಚ್ಚರಿಕೆಯಿಂದ ಅದನ್ನು ಯಥಾಶಕ್ತಿ ನಡೆಸಿಕೊಡುವುದೇ ಅವರಿಗೆ ಉಚಿತವಾದ ಕರ್ತವ್ಯವಾಗಿದೆ. ॥ ೧೦ ॥ ನೀನು ನಿನ್ನ ಪತ್ನಿಯಾದ ಈ ಶತರೂಪೆಯಿಂದ ತನಗೆ ಸಮಾನರಾಗಿರುವ ಸದ್ಗುಣೀ ಸಂತಾನವನ್ನು ಪಡೆದು, ಧರ್ಮದಿಂದ ಪೃಥ್ವಿಯನ್ನು ಪಾಲಿಸುತ್ತಾ, ಯಜ್ಞಗಳ ಮೂಲಕ ಶ್ರೀಹರಿಯನ್ನು ಆರಾಧಿಸುತ್ತಾ ಇರು. ॥ ೧೧ ॥ ರಾಜನೇ! ನಿನ್ನ ಪ್ರಜಾಪಾಲನೆಯಿಂದ ನನ್ನ ದೊಡ್ಡದಾದ ಸೇವೆಯಾದಂತಾದೀತು ಮತ್ತು ನೀನು ಪ್ರಜೆಗಳನ್ನು ಪಾಲಿಸುವುದನ್ನು ನೋಡಿ ಭಗವಾನ್ ಶ್ರೀಹರಿಯು ಪ್ರಸನ್ನನಾಗುವನು. ಯಜ್ಞಮೂರ್ತಿಯಾದ ಭಗವಾನ್ ಜನಾರ್ದನನು ಪ್ರಸನ್ನನಾಗದಿರುವವರ ಶ್ರಮವೆಲ್ಲ ವ್ಯರ್ಥವೇ ಸರಿ. ಏಕೆಂದರೆ, ಅವರು ತಮ್ಮ ಆತ್ಮನನ್ನೇ ಅನಾದರ ಮಾಡಿಕೊಂಡಂತೆ ಆಗುತ್ತದೆ. ॥ ೧೨-೧೩ ॥

ಮನುಮಹಾರಾಜನೆಂದ – ಪಾಪವಿನಾಶಕ ಪಿತನೇ! ಪೂಜ್ಯರಾದ ತಮ್ಮ ಆಜ್ಞೆಯನ್ನು ನಾನು ಶಿರಸಾವಹಿಸಿ ಪಾಲಿಸುತ್ತೇನೆ. ಆದರೆ ತಾವು ಈ ಜಗತ್ತಿನಲ್ಲಿ ನಮಗೂ, ನನ್ನ ಭಾವೀ ಪ್ರಜೆಗಳಿಗೆ ಇರಲು ಸ್ಥಾನವನ್ನು ಅನುಗ್ರಹಿಸಿಕೊಡಬೇಕು. ॥ ೧೪ ॥ ದೇವಾ! ಸಮಸ್ತ ಜೀವಿಗಳಿಗೂ ನಿವಾಸಸ್ಥಾನವಾದ ಪೃಥಿವಿಯು ಈಗ ಪ್ರಳಯಜಲದಲ್ಲಿ ಮುಳುಗಿಹೋಗಿದೆ. ಭೂಮಿಯನ್ನು ಮೇಲಕ್ಕೆತ್ತಲು ತಾವು ಪ್ರಯತ್ನಿಸಬೇಕು, ಎಂದು ಪ್ರಾರ್ಥಿಸಿಕೊಂಡನು. ॥ ೧೫ ॥

ಶ್ರೀಮೈತ್ರೇಯರು ಹೇಳುತ್ತಿದ್ದಾರೆ – ವಿದುರಾ! ಭೂಮಿಯು ಹೀಗೆ ಆಳವಾದ ನೀರಿನಲ್ಲಿ ಮುಳುಗಿ ಹೋಗಿರುವುದನ್ನು ಕಂಡು – 'ಇದನ್ನು ಹೇಗೆ ಮೇಲಕ್ಕೆ ಎತ್ತುವುದು?' ಎಂದು ಬ್ರಹ್ಮದೇವರು ಬಹಳ ಹೊತ್ತು ಚಿಂತಿಸತೊಡಗಿದರು. ॥ ೧೬ ॥ ನಾನು ಲೋಕಸೃಷ್ಟಿಯಲ್ಲಿ ತೊಡಗಿದ್ದಾಗ ಭೂಮಿಯು ನೀರಿನಲ್ಲಿ ಮುಳುಗಿ ರಸಾತಳಕ್ಕೆ ಹೋಯಿತು. ಸೃಷ್ಟಿಯನ್ನು ಮಾಡಲು ನೇಮಕಗೊಂಡಿರುವ

ಸೃಜತೋ ಮೇ ಕ್ಷಿತಿರ್ವಾರ್ಭಿಃ ಪ್ಲಾವ್ಯಮಾನಾ ರಸಾಂ ಗತಾ ।
ಅಥಾತ್ರ ಕಿಮನುಷ್ಠೇಯಮಸ್ಮಾಭಿಃ ಸರ್ಗಯೋಜಿತೈಃ ।
ಯಸ್ಯಾಹಂ ಹೃದಯಾದಾಸಂ ಸ ಈಶೋ ವಿದಧಾತು ಮೇ ॥ ೧೭ ॥

ಇತ್ಯಭಿಧ್ಯಾಯತೋ ನಾಸಾವಿವರಾತ್ಸಹಸಾನಘ ।
ವರಾಹತೋಕೋ ನಿರಗಾದಂಗುಷ್ಠಪರಿಮಾಣಕಃ ॥ ೧೮ ॥

ತಸ್ಯಾಭಿಪಶ್ಯತಃ ಖಸ್ಥಃ ಕ್ಷಣೇನ ಕಿಲ ಭಾರತ ।
ಗಜಮಾತ್ರಃ ಪ್ರವವೃಧೇ ತದದ್ಭುತಮಭೂನ್ಮಹತ್ ॥ ೧೯ ॥

ಮರೀಚಿಪ್ರಮುಖೈರ್ವಿಪ್ರೈಃ ಕುಮಾರೈರ್ಮನುನಾ ಸಹ ।
ದೃಷ್ಟ್ವಾ ತತ್ಸೌಕರಂ ರೂಪಂ ತರ್ಕಯಾಮಾಸ ಚಿತ್ರಧಾ ॥ ೨೦ ॥

ಕಿಮೇತತ್ಸೌಕರವ್ಯಾಜಂ ಸತ್ತ್ವಂ ದಿವ್ಯಮವಸ್ಥಿತಮ್ ।
ಅಹೋ ಬತಾಶ್ಚರ್ಯಮಿದಂ ನಾಸಾಯಾ ಮೇ ವಿನಿಃಸೃತಮ್ ॥ ೨೧ ॥

ದೃಷ್ಟೋಽಂಗುಷ್ಠ ಶಿರೋಮಾತ್ರಃ ಕ್ಷಣಾದ್ಗಂಡ ಶಿಲಾಸಮಃ ।
ಅಪಿ ಸ್ವಿದ್ಭಗವಾನೇಷ ಯಜ್ಞೋ ಮೇ ಖೇದಯನ್ಮನಃ ॥ ೨೨ ॥

ಇತಿ ಮೀಮಾಂಸತಸ್ತಸ್ಯ ಬ್ರಹ್ಮಣಃ ಸಹ ಸೂನುಭಿಃ ।
ಭಗವಾನ್ಯಜ್ಞಪುರುಷೋ ಜಗರ್ಜಾಗೇಂದ್ರಸನ್ನಿಭಃ ॥ ೨೩ ॥

ಬ್ರಹ್ಮಾಣಂ ಹರ್ಷಯಾಮಾಸ ಹರಿಸ್ತಾಂಶ್ಚ ದ್ವಿಜೋತ್ತಮಾನ್ ।
ಸ್ವಗರ್ಜಿತೇನ ಕಕುಭಃ ಪ್ರತಿಸ್ವನಯತಾ ವಿಭುಃ ॥ ೨೪ ॥

ನಿಶಮ್ಯ ತೇ ಘರ್ಘರಿತಂ ಸ್ವಖೇದ-
ಕ್ಷಯಿಷ್ಣು ಮಾಯಾಮಯಸೂಕರಸ್ಯ ।
ಜನಸ್ತಪಃಸತ್ಯನಿವಾಸಿನಸ್ತೇ
ತ್ರಿಭಿಃ ಪವಿತ್ರೈರ್ಮುನಯೋಽಗೃಣನ್ ಸ್ಮ ॥ ೨೫ ॥

ತೇಷಾಂ ಸತಾಂ ವೇದವಿತಾನಮೂರ್ತಿ-
ರ್ಬ್ರಹ್ಮಾವಧಾರ್ಯಾತ್ಮಗುಣಾನುವಾದಮ್ ।
ವಿನದ್ಯ ಭೂಯೋ ವಿಬುಧೋದಯಾಯ
ಗಜೇಂದ್ರಲೀಲೋ ಜಲಮಾವಿವೇಶ ॥ ೨೬ ॥

ಉತ್ಕ್ಷಿಪ್ತವಾಲಃ ಖಚರಃ ಕಠೋರಃ
ಸಟಾ ವಿಧುನ್ವನ್ ಖರರೋಮಶತ್ವಕ್ ।
ಖುರಾಹತಾಭ್ರಃ ಸಿತದಂಷ್ಟ್ರ ಈಕ್ಷಾ-
ಜ್ಯೋತಿರ್ಬಭಾಸೇ ಭಗವಾನ್ಮಹೀಧ್ರಃ ॥ ೨೭ ॥

ನಾನು ಈಗ ಏನು ಮಾಡುವುದು ? 'ಯಾರ ಸಂಕಲ್ಪದಿಂದ ನಾನು ಜನಿಸಿದೆನೋ, ಆ ಸರ್ವೇಶ್ವರನೇ ನನ್ನ ಈ ಕೆಲಸವನ್ನು ನಡೆಸಿಕೊಡಬೇಕು' ಎಂದು ಅವರು ಯೋಚಿಸಿದರು. ॥ ೧೭ ॥

ಪುಣ್ಯಾತ್ಮನಾದ ವಿದುರನೇ! ಬ್ರಹ್ಮದೇವರು ಹೀಗೆ ಚಿಂತಿಸುತ್ತಿರುವಾಗಲೇ ಅವರ ಮೂಗಿನ ಹೊಳ್ಳೆಯಿಂದ ಇದ್ದಕ್ಕಿದ್ದಂತೆ ಹೆಬ್ಬೆರಳಿನ ಗಾತ್ರದ ಒಂದು ಹಂದಿಯ ಮರಿಯು ಹೊರಬಂತು. ॥ ೧೮ ॥ ಆಶ್ಚರ್ಯವೋ ಆಶ್ಚರ್ಯ! ಆಕಾಶದಲ್ಲಿ ನಿಂತುಕೊಂಡ ಆ ಹಂದಿಯ ಮರಿಯು ಬ್ರಹ್ಮದೇವರು ನೋಡು-ನೋಡುತ್ತಿರುವಂತೆಯೇ ಒಂದು ಕ್ಷಣದಲ್ಲಿ ದೊಡ್ಡ ಆನೆಯ ಗಾತ್ರಕ್ಕೆ ಸಮವಾಗಿ ಬೆಳೆದುಬಿಟ್ಟಿತು. ॥ ೧೯ ॥ ಬೃಹದಾಕಾರದ ವರಾಹಮೂರ್ತಿಯನ್ನು ಕಂಡು, ಮರೀಚಿಗಳೇ ಮುಂತಾದ ಮುನಿಗಳು, ಸನಕಾದಿಗಳು, ಸ್ವಾಯಂಭುವ ಮನುವು ಮುಂತಾದವರ ಜತೆಗೂಡಿ ಬ್ರಹ್ಮದೇವರು ಬಗೆ-ಬಗೆಯಾಗಿ ತರ್ಕಿಸತೊಡಗಿದರು. ॥ ೨೦ ॥ 'ಅಪ್ಪಾ! ಹಂದಿಯ ರೂಪದಲ್ಲಿ ಇಲ್ಲಿ ಪ್ರಕಟವಾಗಿರುವ ಈ ದಿವ್ಯ ಪ್ರಾಣಿಯು ಯಾವುದು ? ಎಂತಹ ಆಶ್ಚರ್ಯ ! ಇದು ಈಗತಾನೇ ನನ್ನ ಮೂಗಿನಿಂದ ಹೊರಬಂದಿತಲ್ಲ! ॥ ೨೧ ॥ ಮೊದಲು ಒಂದು ಹೆಬ್ಬೆರಳಿನ ತುದಿಯಷ್ಟು ಗಾತ್ರವಿದ್ದು ಈಗ ಒಂದು ಕ್ಷಣದಲ್ಲಿ ಭಾರೀದೊಡ್ಡ ಬಂಡೆಯಷ್ಟು ಬೆಳೆದುಬಿಟ್ಟಿದೆಯಲ್ಲ! ನಿಜವಾಗಿ ಯಜ್ಞಮೂರ್ತಿಯಾದ ಶ್ರೀಭಗವಂತನೇ ನಮ್ಮ ಮನಸ್ಸನ್ನು ಹೀಗೆ ಮರುಳುಗೊಳಿಸುತ್ತಿರುವನು!' ಎಂದು ಚಿಂತಿಸಿದರು. ॥ ೨೨ ॥ ಬ್ರಹ್ಮದೇವರು ಮತ್ತು ಅವರ ಪುತ್ರರು ಹೀಗೆ ಯೋಚಿಸುತ್ತಿರುವಂತೆಯೇ ಭಗವಾನ್ ಯಜ್ಞಪುರುಷನು ಮಹಾಪರ್ವತಾಕಾರವನ್ನು ತಳೆದು ಗರ್ಜಿಸತೊಡಗಿದನು. ॥ ೨೩ ॥ ಸರ್ವಶಕ್ತನಾದ ಶ್ರೀಹರಿಯು ತನ್ನ ಗರ್ಜನೆಯಿಂದ ಎಲ್ಲ ದಿಕ್ಕುಗಳನ್ನು ಪ್ರತಿಧ್ವನಿಸುವಂತೆ ಮಾಡಿ ಬ್ರಹ್ಮದೇವರನ್ನು ಮತ್ತು ಬ್ರಾಹ್ಮಣಶ್ರೇಷ್ಠರನ್ನು ಸಂತೋಷಗೊಳಿಸಿದನು. ॥ ೨೪ ॥ ತಮ್ಮ ಖೇದವನ್ನು ನಿವಾರಿಸುತ್ತಿದ್ದ ಆ ಮಾಯಾವರಾಹನ ಘುರ್ಘುರ ಧ್ವನಿಯನ್ನು ಕೇಳಿ ಜನೋಲೋಕ, ತಪೋಲೋಕ ಮತ್ತು ಸತ್ಯಲೋಕ ನಿವಾಸಿಗಳಾದ ಮುನಿಗಳು ಮೂರು ವೇದಗಳ ಪವಿತ್ರವಾದ ಮಂತ್ರಗಳಿಂದ ಅವನನ್ನು ಸ್ತುತಿಸತೊಡಗಿದರು. ॥ ೨೫ ॥ ಭಗವಂತನು ವೇದಮಯಸ್ವರೂಪನಲ್ಲವೇ! ವೇದಮಂತ್ರಸಮೂಹ ಪ್ರತಿಪಾದ್ಯನಲ್ಲವೇ! ಆ ಮುನೀಶ್ವರರು ಮಾಡಿದ ಸ್ತುತಿಯನ್ನು ವೇದರೂಪವೆಂದು ತಿಳಿದು ಭಗವಂತನಿಗೆ ತುಂಬಾ ಸಂತೋಷವಾಯಿತು. ಮತ್ತೆ ಪುನಃ ಒಮ್ಮೆ ಗರ್ಜಿಸಿ ದೇವತೆಗಳ ಹಿತಕ್ಕಾಗಿ ಗಜರಾಜನಂತೆ ಕ್ರೀಡಿಸುತ್ತಾ ಜಲರಾಶಿಯನ್ನು ಪ್ರವೇಶಿಸಿಬಿಟ್ಟನು. ॥ ೨೬ ॥ ಆ ವರಾಹರೂಪನಾದ ಭಗವಂತನು ಮೊದಲು ಬಾಲವನ್ನು ಮೇಲಕ್ಕೆತ್ತಿ ಅತಿವೇಗದಿಂದ ಆಕಾಶಕ್ಕೆ ಜಿಗಿದು, ಕುತ್ತಿಗೆಯ ಕೂದಲುಗಳನ್ನು ಕೆದರಿಕೊಂಡು, ಗೊರಸುಗಳ ಏಟಿನಿಂದ ಮೋಡಗಳನ್ನು ಚದುರಿಸತೊಡಗಿದನು. ಕಠೋರವಾದ ದೇಹ, ತೊಗಲಿನ ಮೇಲೆ ಕೆದರಿದ್ದ ಒರಟಾದ ಮೈಗೂದಲುಗಳು, ಬಿಳುಪಾದ ಕೋರೆದಾಡೆ, ಕಣ್ಣುಗಳು ಕಾರುತ್ತಿದ್ದ ತೇಜಸ್ಸು – ಇವುಗಳಿಂದ ಮೆರೆಯುತ್ತಿದ್ದ ಮಹಾವರಾಹದ ಶೋಭೆ ಅವರ್ಣನೀಯವಾಗಿತ್ತು. ॥ ೨೭ ॥

ಘ್ರಾಣೇನ ಪೃಥ್ವ್ಯಾಃ ಪದವೀಂ ವಿಜಿಘ್ರನ್
ಕ್ರೋಡಾಪದೇಶಃ ಸ್ವಯಮಧ್ವರಾಂಗಃ ।
ಕರಾಲದಂಷ್ಟ್ರೋಽಪ್ಯಕರಾಲದೃಗ್ಭ್ಯಾ-
ಮುದ್ವೀಕ್ಷ್ಯ ವಿಪ್ರಾನ್ ಗೃಣತೋಽವಿಶತ್ಕಮ್ ॥ ೨೮ ॥

ಸ ವಜ್ರಕೂಟಾಂಗ ನಿಪಾತವೇಗ-
ವಿಶೀರ್ಣಕುಕ್ಷಿಃ ಸ್ತನಯನ್ನುದನ್ವಾನ್ ।
ಉತ್ಸೃಷ್ಟದೀರ್ಘೋರ್ಮಿಭುಜೈರಿವಾರ್ತ-
ಶ್ಚುಕ್ರೋಶ ಯಜ್ಞೇಶ್ವರ ಪಾಹಿ ಮೇತಿ ॥ ೨೯ ॥

ಖುರೈಃ ಕ್ಷುರಪ್ರೈರ್ದರಯಂಸ್ತದಾಽಽಪ
ಉತ್ಪಾರಪಾರಂ ತ್ರಿಪರೂ ರಸಾಯಾಮ್ ।
ದದರ್ಶ ಗಾಂ ತತ್ರ ಸುಷುಪ್ಸುರಗ್ರೇ
ಯಾಂ ಜೀವಧಾನೀಂ ಸ್ವಯಮಭ್ಯಧತ್ತ ॥ ೩೦ ॥

ಸ್ವದಂಷ್ಟ್ರಯೋದ್ಧೃತ್ಯ ಮಹೀಂ ನಿಮಗ್ನಾಂ
ಸ ಉತ್ಥಿತಃ ಸಂರುರುಚೇ ರಸಾಯಾಃ ।
ತತ್ರಾಪಿ ದೈತ್ಯಂ ಗದಯಾಽಽಪತಂತ
ಸುನಾಭಸಂದೀಪಿತತೀವ್ರಮನ್ಯುಃ ॥ ೩೧ ॥

ಜಘಾನ ರುಂಧಾನಮಸಹ್ಯವಿಕ್ರಮಂ
ಸ ಲೀಲಯೇಭಂ ಮೃಗರಾಡಿವಾಂಭಸಿ ।
ತದ್ರಕ್ತಪಂಕಾಂಕಿತಗಂಡತುಂಡೋ
ಯಥಾ ಗಜೇಂದ್ರೋ ಜಗತೀಂ ವಿಭಿಂದನ್ ॥ ೩೨ ॥

ತಮಾಲನೀಲಂ ಸಿತದಂತಕೋಟ್ಯಾ
ಕ್ಷ್ಮಾಮುತ್ಕ್ಷಿಪಂತಂ ಗಜಲೀಲಯಾಂಗ ।
ಪ್ರಜ್ಞಾಯ ಬದ್ಧಾಂಜಲಯೋಽನುವಾಕೈ-
ರ್ವಿರಿಂಚಿಮುಖ್ಯಾ ಉಪತಸ್ಥುರೀಶಮ್ ॥ ೩೩ ॥

ಋಷಯ ಊಚುಃ

ಜಿತಂ ಜಿತಂ ತೇಽಜಿತ ಯಜ್ಞಭಾವನ
ತ್ರಯೀಂ ತನುಂ ಸ್ವಾಂ ಪರಿಧುನ್ವತೇ ನಮಃ ।
ಯದ್ರೋಮಗರ್ತೇಷು ನಿಲಿಲ್ಯುರಧ್ವರಾ-
ಸ್ತಸ್ಮೈ ನಮಃ ಕಾರಣಸೂಕರಾಯ ತೇ ॥ ೩೪ ॥

ಭಗವಂತನು ಸ್ವಯಂ ಯಜ್ಞಪುರುಷನಾಗಿದ್ದರೂ ಸೂಕರರೂಪವನ್ನು ಧರಿಸಿದ್ದರಿಂದ ತನ್ನ ಮೂಗಿನಿಂದ ಭೂಮಿಯ ಮಾರ್ಗವನ್ನು ಮೂಸಿ-ಮೂಸಿ ನೋಡುತ್ತಿದ್ದನು. ಅವನ ಕೋರೆದಾಡೆಗಳು ತುಂಬಾ ಭೀಕರವಾಗಿದ್ದುವು, ಕಠೋರವಾಗಿದ್ದುವು. ಆದರೂ ತನ್ನನ್ನು ಸ್ತುತಿಸುತ್ತಿದ್ದ ಋಷಿಗಳ ವಿಷಯದಲ್ಲಿ ಅವನ ದೃಷ್ಟಿಯು ಪ್ರಸನ್ನವಾಗಿದ್ದು, ತನ್ನ ಸೌಮ್ಯವಾದ ದೃಷ್ಟಿಪಾತದಿಂದ ಅವರನ್ನು ದಿಟ್ಟಿಸುತ್ತಾ, ಅನುಗ್ರಹಿಸುತ್ತಾ ಜಲದಲ್ಲಿ ಪ್ರವೇಶಮಾಡಿಬಿಟ್ಟನು. ॥ ೨೮ ॥ ವಜ್ರಮಯವಾದ ಪರ್ವತದ ಶಿಖರದಂತೆ ಕಠೋರವಾಗಿದ್ದ ಆವನ ಶ್ರೀದೇಹವು ನೀರಿನಲ್ಲಿ ಬಿದ್ದೊಡನೆಯೇ ಅದರ ರಭಸದಿಂದ ಸಮುದ್ರದ ಹೊಟ್ಟೆಯು ಒಡೆದುಹೋದಂತಾಗಿ ಗುಡುಗು-ಸಿಡಿಲುಗಳಂತೆ ಭಯಂಕರ ಶಬ್ದವುಂಟಾಯಿತು. ಸಮುದ್ರವು ತನ್ನ ಉಕ್ಕೇರಿದ ತರಂಗಗಳೆಂಬ ಭುಜಗಳನ್ನು ಮೇಲಕ್ಕೆತ್ತಿಕೊಂಡು ಆರ್ತಸ್ವರದಿಂದ ಓ ಯಜ್ಞೇಶ್ವರನೇ! ನನ್ನನ್ನು ಕಾಪಾಡು! ಕಾಪಾಡು! ಎಂದು ಮೊರೆಯಿಡುತ್ತದೋ ಎಂಬಂತೆ ಕಾಣುತ್ತಿತ್ತು. ॥ ೨೯ ॥ ಆಗ ಭಗವಾನ್ ಯಜ್ಞವರಾಹನು ಬಾಣ ಸದೃಶವಾಗಿದ್ದ ಚೂಪಾದ ತನ್ನ ಗೊರಸುಗಳಿಂದ ಜಲವನ್ನು ಸೀಳುತ್ತಾ ಆ ಜಲರಾಶಿಯ ಆಚೆಯ ದಡವನ್ನು (ತಳಭಾಗವನ್ನು) ತಲುಪಿದನು. ಅಲ್ಲಿ ರಸಾತಳದಲ್ಲಿ ಅವನು ಪ್ರಳಯಸಮಯದಲ್ಲಿ ತಾನು ಪವಡಿಸಲು ತೊಡಗಿದಾಗ ತನ್ನ ಹೊಟ್ಟೆಯಲ್ಲಿ ಹಿಂದೆ ಲಯಗೊಳಿಸಿಕೊಂಡಿದ್ದ ಮತ್ತು ಸಮಸ್ತ ಜೀವರಾಶಿಗಳಿಗೂ ಆಶ್ರಯವಾಗಿರುವ ಭೂಮಿಯು ಇರುವುದನ್ನು ನೋಡಿದನು. ॥ ೩೦ ॥

ಮತ್ತೆ ಭಗವಂತನು ನೀರಿನಲ್ಲಿ ಮುಳುಗಿಹೋಗಿದ್ದ ■ ಭೂಮಿಯನ್ನು ತನ್ನ ಕೋರೆದಾಡೆಗಳಿಂದ ಎತ್ತಿಕೊಂಡು ಪಾತಾಳದಿಂದ ಮೇಲಕ್ಕೆ ಎದ್ದುಬಂದನು. ಆಗ ಆತನ ಕಾಂತಿಯು ಅತ್ಯಂತ ದರ್ಶನೀಯವಾಗಿತ್ತು. ನೀರಿನಿಂದ ಮೇಲಕ್ಕೆ ಎದ್ದು ಬರುತ್ತಿರುವಾಗ ತನ್ನನ್ನು ಎದುರಿಸಿ ಗದೆಯಿಂದ ಆಕ್ರಮಣಮಾಡಿದ ಹಿರಣ್ಯಾಕ್ಷನ ಮೇಲೆ ಸ್ವಾಮಿಗೆ ಸುದರ್ಶನಚಕ್ರದಿಂದ ಉದ್ದೀಪನಗೊಂಡಂತೆ ತೀಕ್ಷ್ಣವಾದ ಕ್ರೋಧವು ಕೆರಳಿತು. ■ ಅಸುರನು ಮಹಾಪರಾಕ್ರಮಿಯಾಗಿದ್ದರೂ ಸಿಂಹವು ಆನೆಯನ್ನು ಕೊಂದುಬಿಡುವಂತೆ ಸ್ವಾಮಿಯು ಆತನನ್ನು ಲೀಲಾಜಾಲವಾಗಿ ಜಲದಲ್ಲೇ ಸಂಹರಿಸಿಬಿಟ್ಟನು. ಆಗ ಭಗವಂತನ ಗಂಡಸ್ಥಳ ಮತ್ತು ಮುಖವೂ ದೈತ್ಯನ ರಕ್ತದಿಂದ ನೆನೆದು ಕೆಂಪಾಗಿದ್ದರಿಂದ ಆತನು ಕೆಂಪುಮಣ್ಣಿನಲ್ಲಿ ಮಣ್ಣುಸೀಳುವ ಆಟವನ್ನಾಡಿ ಬಂದ ಗಜರಾಜನಂತೆ ರಾರಾಜಿಸುತ್ತಿದ್ದನು. ॥ ೩೧-೩೨ ॥ ಅಯ್ಯಾ! ಗಜರಾಜನು ತನ್ನ ದಂತಗಳ ಮೇಲೆ ಕಮಲಪುಷ್ಪವನ್ನು ಎತ್ತಿ ಧರಿಸಿದಂತೆ ಸ್ವಾಮಿಯು ತನ್ನ ಬಿಳಿಯ ದಂತಗಳ ತುದಿಯಲ್ಲಿ ಭೂಮಿಯನ್ನು ಎತ್ತಿ ಹಿಡಿದಿದ್ದನು. ಆತನ ದಿವ್ಯದೇಹವು ಹೊಂಗೆಯ ಮರದಂತೆ ಶ್ಯಾಮಲವರ್ಣದಿಂದ ಕಂಗೊಳಿಸುತ್ತಿತ್ತು. ಆಗ ಬ್ರಹ್ಮದೇವರೂ, ಮರೀಚಿಗಳೇ ಮುಂತಾದ ಮಹರ್ಷಿಗಳು ಈತನು ಭಗವಂತನೇ ಆಗಿದ್ದಾನೆಂದು ಗುರುತಿಸಿ, ಕೈಜೋಡಿಸಿಕೊಂಡು ವೇದಾರ್ಥಗರ್ಭಿತವಾದ ವಾಕ್ಯಗಳಿಂದ ಆತನನ್ನು ಹೀಗೆ ಸ್ತೋತ್ರಮಾಡತೊಡಗಿದರು. ॥ ೩೩ ॥

ಋಷಿಗಳು ಹೇಳುತ್ತಾರೆ – ಅಜಿತಮೂರ್ತಿಯಾದ ಭಗವಂತಾ! ನಿನಗೆ ಜಯವಾಗಲಿ! ಜಯವಾಗಲಿ! ಎಲ್ಲರನ್ನೂ ಜಯಿಸಿದವನೂ, ಯಾರಿಗೂ ಸೋಲದವನೂ ನೀನು.

ರೂಪಂ ತವೈತನ್ನನು ದುಷ್ಕೃತಾತ್ಮನಾಂ
ದುರ್ದರ್ಶನಂ ದೇವ ಯದಧ್ವರಾತ್ಮಕಮ್ ।
ಛಂದಾಂಸಿ ಯಸ್ಯ ತ್ವಚಿ ಬರ್ಹಿರೋಮ-
ಸ್ವಾಜ್ಯಂ ದೃಶಿ ತ್ವಂಘ್ರಿಷು ಚಾತುರ್ಹೋತ್ರಮ್ ॥ ೩೫ ॥

ಸ್ರುಕ್ತುಂಡ ಆಸೀತ್ಸ್ರುವ ಈಶ ನಾಸಯೋ-
ರಿಡೋದರೇ ಚಮಸಾಃ ಕರ್ಣರಂಧ್ರೇ ।
ಪ್ರಾಶಿತ್ರಮಾಸ್ಯೇ ಗ್ರಸನೇ ಗ್ರಹಾಸ್ತು ತೇ
ಯಚ್ಚರ್ವಣಂ ತೇ ಭಗವನ್ನಗ್ನಿಹೋತ್ರಮ್ ॥ ೩೬ ॥

ದೀಕ್ಷಾನುಜನ್ಮೋಪಸದಃ ಶಿರೋಧರಂ
ತ್ವಂ ಪ್ರಾಯಣೀಯೋದಯನೀಯದಂಷ್ಟ್ರಃ ।
ಜಿಹ್ವಾ ಪ್ರವರ್ಗ್ಯಸ್ತವ ಶೀರ್ಷಕಂ ಕ್ರತೋಃ
ಸಭ್ಯಾವಸಥ್ಯಂ ಚಿತಯೋಽಸವೋ ಹಿ ತೇ ॥ ೩೭ ॥

ಸೋಮಸ್ತು ರೇತಃ ಸವನಾನ್ಯವಸ್ಥಿತಿಃ
ಸಂಸ್ಥಾವಿಭೇದಾಸ್ತವ ದೇವ ಧಾತವಃ ।
ಸತ್ರಾಣಿ ಸರ್ವಾಣಿ ಶರೀರಸಂಧಿ-
ಸ್ತ್ವಂ ಸರ್ವಯಜ್ಞಕ್ರತುರಿಷ್ಟಿಬಂಧನಃ ॥ ೩೮ ॥

ನಮೋ ನಮಸ್ತೇಽಖಿಲಮಂತ್ರ ದೇವತಾ-
ದ್ರವ್ಯಾಯ ಸರ್ವಕ್ರತವೇ ಕ್ರಿಯಾತ್ಮನೇ ।
ವೈರಾಗ್ಯಭಕ್ತ್ಯಾತ್ಮಜಯಾನುಭಾವಿತ-
ಜ್ಞಾನಾಯ ವಿದ್ಯಾಗುರವೇ ನಮೋ ನಮಃ ॥ ೩೯ ॥

ಓ ಯಜ್ಞಪತಿಯೇ! ಮೂರುವೇದಗಳ ರೂಪವಾದ ದಿವ್ಯ ಮಂಗಳ ವಿಗ್ರಹವನ್ನು ಓಲಾಡಿಸುತ್ತಾ ಕಂಗೊಳಿಸುವ ನಿನಗೆ ನಮಸ್ಕಾರವು. ಸಮಸ್ತ ಯಜ್ಞಗಳು ನಿನ್ನ ರೋಮಕೂಪದಲ್ಲಿ ಅಡಗಿವೆ. ನೀನು ಪೃಥ್ವಿಯನ್ನು ಉದ್ಧಾರಮಾಡಲಿಕ್ಕಾಗಿಯೇ ಈ ಸೂಕರ ರೂಪವನ್ನು ಧರಿಸಿರುವೆ. ನಿನಗೆ ನಮಸ್ಕಾರವು. ॥ ೩೪ ॥ ದೇವಾ! ದುರಾಚಾರಿಗಳಿಗೆ ನಿನ್ನ ಈ ದಿವ್ಯಮೂರ್ತಿಯ ದರ್ಶನ ವಾಗುವುದು ಬಹಳ ಕಷ್ಟವು. ಏಕೆಂದರೆ, ಇದು ಯಜ್ಞರೂಪವೇ ಆಗಿದೆ. ಇದರ ತೊಗಲಿನಲ್ಲಿ ಗಾಯತ್ರಿಯೇ ಮುಂತಾದ ಛಂದಸ್ಸುಗಳೂ, ರೋಮಾ ವಳಿಯಲ್ಲಿ ದರ್ಭೆಗಳೂ, ನೇತ್ರಗಳಲ್ಲಿ (ಯಜ್ಞದ ಹವಿಸ್ಸಾದ) ತುಪ್ಪವೂ, ನಾಲ್ಕು ಚರಣಗಳಲ್ಲಿ ಅಧ್ವರ್ಯು, ಉದ್ಗಾತೃ, ಹೋತೃ ಮತ್ತು ಬ್ರಹ್ಮಾ – ಎಂಬ ನಾಲ್ಕು ಋತ್ವಿಜರೂ ಅಡಗಿದ್ದಾರೆ. ॥ ೩೫ ॥ ಈಶ್ವರನೇ! ನಿನ್ನ ಮುಖದ ಅಗ್ರಭಾಗದಲ್ಲಿ 'ಸ್ರುಕ್' ಇದೆ. ಮೂಗಿನ ಹೊಳ್ಳೆಗಳಲ್ಲಿ 'ಸ್ರುವಾ' ಇದೆ. ಉದರದಲ್ಲಿ 'ಇಡಾ' ಎಂಬ ಯಜ್ಞದ ಭಕ್ಷಣಪಾತ್ರೆಯಿದೆ. ಕಿವಿಗಳಲ್ಲಿ 'ಚಮಸ'ವಿದೆ. ಮುಖದಲ್ಲಿ 'ಪ್ರಾಶಿತ್ರ' (ಬ್ರಹ್ಮಭಾಗಪಾತ್ರ) ಇದೆ. ಕಂಠದ ರಂಧ್ರದಲ್ಲಿ 'ಗ್ರಹ' (ಸೋಮಪಾತ್ರೆ) ಎಂಬ ಯಜ್ಞಪಾತ್ರೆಯಿದೆ. ಭಗವಂತನೇ! ನಿನ್ನ ಅಗಿಯುವಿಕೆಯು ಅಗ್ನಿಹೋತ್ರವಾಗಿದೆ. ॥ ೩೬ ॥ ಆಗಾಗ ಅವತರಿಸುವುದು ಯಜ್ಞಸ್ವರೂಪನಾದ ನಿನ್ನ 'ದೀಕ್ಷಣೀಯ' ಎಂಬ ಇಷ್ಟಿಯಾಗಿದೆ. ನಿನ್ನ ಕುತ್ತಿಗೆಯೇ 'ಉಪಸದ' ಎಂಬ ಮೂರು ಇಷ್ಟಿಗಳ ರೂಪವಾಗಿದೆ. ಎರಡು ದಾಡೆಗಳು 'ಪ್ರಾಯಣೀಯ' (ದೀಕ್ಷಾನಂತರದ ಇಷ್ಟಿ) ಮತ್ತು 'ಉದಯನೀಯ' (ಯಜ್ಞಸಮಾಪ್ತಿ ಇಷ್ಟಿ) ಇಷ್ಟಿಗಳಾಗಿವೆ. ನಿನ್ನ ನಾಲಿಗೆಯು 'ಪ್ರವರ್ಗ್ಯ'ವು. (ಪ್ರತಿಯೊಂದು ಉಪಸದವನ್ನೂ ಹಿಂದೆ ಮಾಡಲ್ಪಡುವ ಮಹಾವೀರ ಎಂಬ ಕರ್ಮವು.) ನಿನ್ನ ಶಿರಸ್ಸು 'ಸಭ್ಯ' (ಹೋಮ ರಹಿತವಾದ) ಎಂಬ ಅಗ್ನಿಯು. 'ಆವಸಥ್ಯ' ಎಂಬ ಔಪಾಸನಾಗ್ನಿಯೂ ಮತ್ತು ಪ್ರಾಣಶಕ್ತಿಯೂ (ಇಷ್ಟಕಾಚಯನ) ನಿನ್ನ ಪ್ರಾಣಗಳು. ॥ ೩೭ ॥ ದೇವಾ! ನಿನ್ನ ವೀರ್ಯವೇ ಸೋಮವು. ಕುಳಿತಿರುವಿಕೆಯು ಪ್ರಾತಃ ಸವನವೇ ಮುಂತಾದ ಮೂರು ಸವನಗಳು. ನಿನ್ನ ಏಳು ಧಾತುಗಳೇ – ಅಗ್ನಿಷ್ಟೋಮ, ಅತ್ಯಗ್ನಿಷ್ಟೋಮ, ಉಕ್ಥ, ಷೋಡಶೀ, ವಾಜಪೇಯ, ಅತಿರಾತ್ರ ಮತ್ತು ಅಪ್ತೋರ್ಯಾಮಗಳೆಂಬ ಏಳು ಸಂಸ್ಥೆಗಳು ಮತ್ತು ನಿನ್ನ ಶರೀರದ ಸಂಧಿಭಾಗಗಳೇ ಸಂಪೂರ್ಣವಾದ ದ್ವಾದಶಾಹವೇ ಮುಂತಾದ ಸತ್ರಗಳು. ಹೀಗೆ ನೀನು ಸಂಪೂರ್ಣ ಯಜ್ಞವೂ (ಅಂದರೆ ಸೋಮರಹಿತಯಜ್ಞ) ಮತ್ತು ಕ್ರತುವೂ (ಸೋಮ ಸಹಿತ ಯಜ್ಞ) ಎರಡೂ ಆಗಿರುವೆ. ಯಜ್ಞಾನುಷ್ಠಾನ ರೂಪವಾದ ಇಷ್ಟಿಗಳು ನಿನ್ನ ಅಂಗಗಳನ್ನು ಒಟ್ಟಿಗೆ ಸೇರಿಸಿರುವ ಮಾಂಸಪೇಶಿಗಳಾಗಿವೆ. ॥ ೩೮ ॥ ಸಮಸ್ತ ಮಂತ್ರ ಸ್ವರೂಪನೂ, ದೇವತಾ ಸ್ವರೂಪನೂ, ದ್ರವ್ಯ ಸ್ವರೂಪನೂ, ಯಜ್ಞ ಸ್ವರೂಪನೂ, ಕರ್ಮ ಸ್ವರೂಪನೂ ಆಗಿರುವ ನಿನಗೆ ನಮೋ ನಮಃ. ವೈರಾಗ್ಯ, ಭಕ್ತಿ ಮತ್ತು ಚಿತ್ತದ ಏಕಾಗ್ರತೆಯಿಂದ ಯಾವ ಜ್ಞಾನವು ಅನುಭವಕ್ಕೆ ಬರುವುದೋ, ಅದು ನಿನ್ನ ಸ್ವರೂಪವೇ ಆಗಿದೆ. ನೀನೇ ಎಲ್ಲರ ವಿದ್ಯಾಗುರುವೂ ಆಗಿರುವೆ. ಅಂತಹ ನಿನಗೆ ಮತ್ತೆ-ಮತ್ತೆ ಪ್ರಣಾಮಗಳು. ॥ ೩೯ ॥ ಭೂದೇವಿಯನ್ನು ಧರಿಸಿಕೊಂಡಿರುವ ಭಗವಂತನೇ! ನೀನು ಕೋರೆದಾಡೆಗಳ ತುದಿಯಲ್ಲಿ ಇರಿಸಿ ಕೊಂಡಿರುವ

ದಂಷ್ಟ್ರಾಗ್ರಕೋಟ್ಯಾ ಭಗವಂಸ್ತ್ವಯಾ ಧೃತಾ
ವಿರಾಜತೇ ಭೂಧರ ಭೂಃ ಸಭೂಧರಾ ।
ಯಥಾ ವನಾನ್ನಿಃಸರತೋ ದತಾ ಧೃತಾ
ಮತಂಗಜೇಂದ್ರಸ್ಯ ಸಪತ್ರಪದ್ಮಿನೀ ॥ ೪೦ ॥

ತ್ರಯೀಮಯಂ ರೂಪಮಿದಂ ಚ ಸೌಕರಂ
ಭೂಮಂಡಲೇನಾಥ ದತಾ ಧೃತೇನ ತೇ ।
ಚಕಾಸ್ತಿ ಶೃಂಗೋಢಘನೇನ ಭೂಯಸಾ
ಕುಲಾಚಲೇಂದ್ರಸ್ಯ ಯಥೈವ ವಿಭ್ರಮಃ ॥ ೪೧ ॥

ಸಂಸ್ಥಾಪಯೈನಾಂ ಜಗತಾಂ ಸತಸ್ಥುಷಾಂ
ಲೋಕಾಯ ಪತ್ನೀಮಸಿ ಮಾತರಂ ಪಿತಾ ।
ವಿಧೇಮ ಚಾಸ್ಯೈ ನಮಸಾ ಸಹ ತ್ವಯಾ
ಯಸ್ಯಾಂ ಸ್ವತೇಜೋಽಗ್ನಿಮಿವಾರಣಾವಧಾಃ ॥ ೪೨ ॥

ಕಃ ಶ್ರದ್ದಧೀತಾನ್ಯತಮಸ್ತವ ಪ್ರಭೋ
ರಸಾಂ ಗತಾಯಾ ಭುವ ಉದ್ವಿಬರ್ಹಣಮ್ ।
ನ ವಿಸ್ಮಯೋಽಸೌ ತ್ವಯಿ ವಿಶ್ವವಿಸ್ಮಯೇ
ಯೋ ಮಾಯಯೇದಂ ಸಸೃಜೇಽತಿವಿಸ್ಮಯಮ್ ॥ ೪೩ ॥

ವಿಧುನ್ವತಾ ವೇದಮಯಂ ನಿಜಂ ವಪು-
ರ್ಜನಸ್ತಪಃ ಸತ್ಯನಿವಾಸಿನೋ ವಯಮ್ ।
ಸಟಾಶಿಖೋದ್ಧೂತಶಿವಾಂಬುಬಿಂದುಭಿ-
ರ್ವಿಮೃಜ್ಯಮಾನಾ ಭೃಶಮೀಶ ಪಾವಿತಾಃ ॥ ೪೪ ॥

ಸ ವೈ ಬತ ಭ್ರಷ್ಟಮತಿಸ್ತವೈಷ ತೇ
ಯಃ ಕರ್ಮಣಾಂ ಪಾರಮಪಾರಕರ್ಮಣಃ ।
ಯದ್ಯೋಗಮಾಯಾಗುಣಯೋಗಮೋಹಿತಂ
ವಿಶ್ವಂ ಸಮಸ್ತಂ ಭಗವನ್ವಿಧೇಹಿ ಶಮ್ ॥ ೪೫ ॥

ಮೈತ್ರೇಯ ಉವಾಚ

ಇತ್ಯುಪಸ್ಥೀಯಮಾನಸ್ತೈರ್ಮುನಿಭಿರ್ಬ್ರಹ್ಮವಾದಿಭಿಃ ।
ಸಲಿಲೇ ಸ್ವಖುರಾಕ್ರಾಂತ ಉಪಾಧತ್ತಾವಿತಾವನಿಮ್
॥ ೪೬ ॥

ಸ ಇತ್ಥಂ ಭಗವಾನುರ್ವೀಂ ವಿಷ್ವಕ್ಸೇನಃ ಪ್ರಜಾಪತಿಃ ।
ರಸಾಯಾ ಲೀಲಯೋನ್ನೀತಾಮಪ್ಸು ನ್ಯಸ್ಯ ಯಯೌ ಹರಿಃ
॥ ೪೭ ॥

ಯ ಏವಮೇತಾಂ ಹರಿಮೇಧಸೋ ಹರೇಃ
ಕಥಾಂ ಸುಭದ್ರಾಂ ಕಥನೀಯಮಾಯಿನಃ ।
ಶೃಣ್ವೀತ ಭಕ್ತ್ಯಾ ಶ್ರವಯೇತ ವೋಶತೀಂ
ಜನಾರ್ದನೋಽಸ್ಯಾಶು ಹೃದಿ ಪ್ರಸೀದತಿ ॥ ೪೮ ॥

ಪರ್ವತಗಳಿಂದ ಅಲಂಕೃತವಾದ ಈ ಭೂಗೋಳವು ಜಲಾಶಯ ದಿಂದ ಹೊರಬರುತ್ತಿರುವ ಮದಗಜದ ದಂತಾಗ್ರದಲ್ಲಿ ದಳಗಳ ಸಹಿತ ಕಮಲದಂತೆ ಬೆಳಗುತ್ತಿದೆ. ॥ ೩೯ ॥ ಕೋರೆಹಲ್ಲು ಗಳ ಮೇಲೆ ಭೂಮಂಡಲವನ್ನು ಧರಿಸಿಕೊಂಡಿರುವ ನಿನ್ನ ಈ ವೇದಮಯವಾದ ವರಾಹ ಶ್ರೀವಿಗ್ರಹವು ತನ್ನ ಶಿಖರದ ಮೇಲೆ ಮೇಘಮಾಲೆಯನ್ನು ಧರಿಸಿಕೊಂಡಿರುವ ಮಹಾಕುಲಪರ್ವತ ದಂತೆ ಕಂಗೊಳಿಸುತ್ತಿದೆ. ॥ ೪೦ ॥ ಸ್ವಾಮಿ ! ಚರಾಚರ ಜೀವಿಗಳು ಸುಖವಾಗಿ ವಾಸಿಸಲು ನಿನ್ನ ಪತ್ನಿಯಾದ ಈ ಭೂಮಾತೆಯನ್ನು ಜಲದ ಮೇಲೆ ನೆಲೆಗೊಳಿಸುವವನಾಗು. ಜಗತ್ತಿನ ತಂದೆ ನೀನಾಗಿ ರುವೆ. ಅರಣಿಯಲ್ಲಿ ಅಗ್ನಿಯನ್ನು ಸ್ಥಾಪಿಸುವಂತೆ ನೀನು ಇದರಲ್ಲಿ ಧಾರಣಾಶಕ್ತಿರೂಪವಾದ ನಿನ್ನ ತೇಜಸ್ಸನ್ನು ಸ್ಥಾಪಿಸಿದ್ದೀಯೇ. ಇಂತಹ ನಿನಗೂ ಮತ್ತು ಈ ಭೂಮಾತೆಗೂ ಭೂರಿ-ಭೂರಿ ನಮ ಸ್ಕಾರಗಳು. ॥ ೪೧ ॥ ಪ್ರಭೋ ! ರಸಾತಳದಲ್ಲಿ ಮುಳುಗಿ ಹೋಗಿದ್ದ ಪೃಥಿವಿಯನ್ನು ಮೇಲಕ್ಕೆ ಎತ್ತುವ ಸಾಹಸವನ್ನು ಮಾಡಲು ನೀನಲ್ಲದೆ ಬೇರೆ ಯಾರಿಗೆ ಶಕ್ಯವಿದೆ. ಆದರೆ ನೀನು ಆಶ್ಚರ್ಯಗಳ ನಿಧಿಯು. ಇದು ನಿನಗೆ ದೊಡ್ಡ ಆಶ್ಚರ್ಯದ ಕೆಲಸವೇನೂ ಅಲ್ಲ. ಮಾಯಾಬಲದಿಂದ ಈ ಅತ್ಯಾಶ್ಚರ್ಯಮಯವಾದ ವಿಶ್ವವನ್ನು ರಚಿಸಿದವನು ನೀನೇ ಅಲ್ಲವೇ ! ॥ ೪೨ ॥ ನೀನು ನಿನ್ನ ವೇದಮಯ ವಾದ ದಿವ್ಯಮಂಗಳ ವಿಗ್ರಹವನ್ನು ಅಲುಗಾಡಿಸಿದಾಗ ನಿನ್ನ ಕುತ್ತಿಗೆಯ ಕೂದಲುಗಳಿಂದ ಸಿಡಿದ ಶೀತಲ ಜಲಬಿಂದುಗಳು ನಮ್ಮ ಮೇಲೆ ಬೀಳುತ್ತಿವೆ. ಅದರಲ್ಲಿ ನೆನೆದ ಜನೋಲೋಕ, ತಪೋಲೋಕ, ಸತ್ಯ ಲೋಕಗಳ ನಿವಾಸಿಗಳಾದ ನಾವೆಲ್ಲರೂ ಪವಿತ್ರ ರಾಗಿ ಬಿಟ್ಟಿದ್ದೇವೆ. ॥ ೪೩ ॥ ಅಪಾರವಾದ ಕರ್ಮಗಳುಳ್ಳವನು ನೀನು. ನಿನ್ನ ಕರ್ಮಗಳ ಪಾರ(ಕೊನೆ)ವನ್ನು ಹೊಂದಲು ಬಯಸುವವನು ಬುದ್ಧಿಗೆಟ್ಟವನೆಂದೇ ಹೇಳಬೇಕಷ್ಟೆ. ನಿನ್ನ ಯೋಗ ಮಾಯೆಯ ಗುಣಗಳ ಯೋಗದಿಂದಲೇ ಈ ಇಡೀ ಜಗತ್ತು ಮೋಹಿತವಾಗಿದೆ. ಭಗವಂತನೇ ! ಈ ಜಗತ್ತಿಗೆ ಮಂಗಳವನ್ನುಂಟು ಮಾಡು. ॥ ೪೪ ॥

ಶ್ರೀಮೈತ್ರೇಯರು ಹೇಳುತ್ತಾರೆ – ವಿದುರನೇ ! ಆ ಬ್ರಹ್ಮ ವಾದಿಗಳಾದ ಮುನಿಗಳು ಹೀಗೆ ಸ್ತುತಿಸುತ್ತಿರಲಾಗಿ ಸರ್ವರಕ್ಷಕ ನಾದ ವರಾಹಮೂರ್ತಿ ಭಗವಂತನು ತನ್ನ ಗೊರಸುಗಳಿಂದ ನೀರನ್ನು ಸ್ತಂಭನಮಾಡಿ ಅದರ ಮೇಲೆ ಭೂದೇವಿಯನ್ನು ನೆಲೆಗೊಳಿಸಿದನು. ॥ ೪೫ ॥ ಹೀಗೆ ರಸಾತಳದಿಂದ ಲೀಲಾಜಾಲ ವಾಗಿ ಎತ್ತಿತಂದಿರುವ ಭೂಮಿಯನ್ನು ಜಲದ ಮೇಲೆ ಇರಿಸಿ ವಿಷ್ವಕ್ಸೇನನೂ, ಪ್ರಜಾಪತಿಯೂ ಆದ ಭಗವಾನ್ ಶ್ರೀಹರಿಯು ಅಂತರ್ಧಾನಹೊಂದಿದನು. ॥ ೪೬ ॥

ಎಲೈ ವಿದುರನೇ ! ಶ್ರೀಭಗವಂತನ ಲೀಲಾಮಯವಾದ ಚರಿತ್ರೆ ಗಳು ಕೀರ್ತಿಸಲು ಯೋಗ್ಯವಾಗಿವೆ. ಅವುಗಳಲ್ಲೇ ತೊಡಗಿದ ಬುದ್ಧಿಯು ಎಲ್ಲ ರೀತಿಯ ಪಾಪ-ತಾಪಗಳನ್ನು ದೂರಮಾಡುತ್ತದೆ. ಮಂಗಳಮನೋಹರವಾದ ಈ ಕಥೆಯನ್ನು ಭಕ್ತಿಭಾವದಿಂದ ಕೇಳುವ ಅಥವಾ ಹೇಳುವ ಮನುಷ್ಯನ ವಿಷಯದಲ್ಲಿ ಭಕ್ತವತ್ಸಲ ನಾದ ಭಗವಂತನು ಅಂತರಂಗದಲ್ಲಿ ಬಹುಬೇಗನೇ ಪ್ರಸನ್ನನಾಗು ವನು. ॥ ೪೭ ॥ ಶ್ರೀಭಗವಂತನಾದರೋ ಎಲ್ಲ ಕಾಮನೆಗಳನ್ನೂ

ತಸ್ಮಿನ್ಪ್ರಸನ್ನೇ ಸಕಲಾಶಿಷಾಂ ಪ್ರಭೌ
ಕಿಂ ದುರ್ಲಭಂ ತಾಭಿರಲಂ ಲವಾತ್ಮಭಿಃ ।
ಅನನ್ಯದೃಷ್ಟ್ಯಾ ಭಜತಾಂ ಗುಹಾಶಯಃ
ಸ್ವಯಂ ವಿಧತ್ತೇ ಸ್ವಗತಿಂ ಪರಃ ಪರಾಮ್ ॥ ೪೯ ॥

ಕೋ ನಾಮ ಲೋಕೇ ಪುರುಷಾರ್ಥಸಾರವಿತ್
ಪುರಾಕಥಾನಾಂ ಭಗವತ್ಕಥಾಸುಧಾಮ್ ।
ಆಪೀಯ ಕರ್ಣಾಂಜಲಿಭಿರ್ಭವಾಪಹಾ-
ಮಹೋ ವಿರಜ್ಯೇತ ವಿನಾ ನರೇತರಮ್ ॥ ೫೦ ॥

ಕರುಣಿಸುವ ಸಾಮರ್ಥ್ಯವುಳ್ಳವನು. ಅವನು ಪ್ರಸನ್ನನಾದರೆ ಪ್ರಪಂಚದಲ್ಲಿ ಯಾವುದು ತಾನೇ ದುರ್ಲಭವಿದೆ? ಅದರ ಆ ಕ್ಷುದ್ರವಾದ ಬಯಕೆಗಳ ಆವಶ್ಯಕತೆಯಾದರೂ ಏನಿದೆ? ಅನನ್ಯ ಭಾವದಿಂದ ಅವನನ್ನು ಭಜಿಸುವವರಿಗೆ ಅಂತರ್ಯಾಮಿ ಪರಮಾತ್ಮನು ಸ್ವತಃ ತನ್ನ ಪರಮಪದವನ್ನು ಕೊಟ್ಟುಬಿಡುತ್ತಾನೆ. ॥ ೪೯ ॥ ಸಂಸಾರ ಬಂಧನವನ್ನು ಬಿಡಿಸುವ ಶ್ರೀಭಗವಂತನ ಪ್ರಾಚೀನ ಕಥೆಗಳಲ್ಲಿನ ಕಥಾಮೃತವನ್ನು ಒಮ್ಮೆ ಕರ್ಣಪುಟದಿಂದ ಪಾನಮಾಡಿದರೂ ಪುರುಷಾರ್ಥಗಳ ಸಾರವನ್ನು ಬಲ್ಲ ಮನುಷ್ಯರಿಗೆ ಅದರಲ್ಲಿ ಬೇಸರ ಉಂಟಾಗುವುದಿಲ್ಲ. ಹಾಗೇ ಬೇಸರ ಉಂಟಾದರೆ ಆತನು ಮನುಷ್ಯನೇ ಅಲ್ಲ. ॥ ೫೦ ॥

ಹದಿಮೂರನೆಯ ಅಧ್ಯಾಯವು ಮುಗಿಯಿತು. ॥ ೧೩ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ತೃತೀಯಸ್ಕಂಧೇ
ವರಾಹಪ್ರಾದುರ್ಭಾವಾನುವರ್ಣನೇ ತ್ರಯೋದಶೋಽಧ್ಯಾಯಃ ॥ ೧೩ ॥

ಹದಿನಾಲ್ಕನೆಯ ಅಧ್ಯಾಯ

ದಿತಿ-ಕಶ್ಯಪರ ಸಂವಾದ

ಶ್ರೀಶುಕ ಉವಾಚ

ನಿಶಮ್ಯ ಕೌಷಾರವಿಣೋಪವರ್ಣಿತಾಂ
ಹರೇಃ ಕಥಾಂ ಕಾರಣಸೂಕರಾತ್ಮನಃ ।
ಪುನಃ ಸ ಪಪ್ರಚ್ಛ ತಮುದ್ಯತಾಂಜಲಿ-
ರ್ನ ಚಾತಿತೃಪ್ತೋ ವಿದುರೋ ಧೃತವ್ರತಃ ॥ ೧ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿದ್ರಾಜನೇ! ಭಕ್ತವ್ರತಧಾರಿಯಾದ ವಿದುರನು ಮೈತ್ರೇಯ ಮಹರ್ಷಿಗಳಿಂದ ಸೃಷ್ಟಿಕಾರಣಕ್ಕಾಗಿ ಯಜ್ಞವರಾಹನಾದ ಶ್ರೀಹರಿಯ ಅಮೃತಮಯ ಕಥೆಯನ್ನು ಕೇಳಿ ಸಂತೋಷಗೊಂಡರೂ ಪೂರ್ಣ ತೃಪ್ತಿಯುಂಟಾಗಲಿಲ್ಲ. ಅದರಿಂದ ಅವನು ಕೈಮುಗಿದುಕೊಂಡು ಪುನಃ ವಿನಂತಿಸಿಕೊಂಡನು. ॥ ೧ ॥

ವಿದುರ ಉವಾಚ

ತೇನೈವ ತು ಮುನಿಶ್ರೇಷ್ಠ ಹರಿಣಾ ಯಜ್ಞಮೂರ್ತಿನಾ ।
ಆದಿದೈತ್ಯೋ ಹಿರಣ್ಯಾಕ್ಷೋ ಹತ ಇತ್ಯನುಶುಶ್ರುಮ ॥ ೨ ॥

ತಸ್ಯ ಚೋದ್ಧರತಃ ಕ್ಷೌಣೀಂ ಸ್ವದಂಷ್ಟ್ರಾಗ್ರೇಣ ಲೀಲಯಾ ।
ದೈತ್ಯರಾಜಸ್ಯ ಚ ಬ್ರಹ್ಮನ್ಕಸ್ಮಾದ್ಧೇತೋರಭೂನ್ಮೃಧಃ ॥ ೩ ॥

ವಿದುರನು ಕೇಳಿದನು – 'ಮುನಿಶ್ರೇಷ್ಠರೇ! ಯಜ್ಞವರಾಹ ರೂಪಿಯಾದ ಆ ಭಗವಂತನಿಂದಲೇ ಆದಿದೈತ್ಯನಾದ ಹಿರಣ್ಯಾಕ್ಷನು ಸಂಹರಿಸಲ್ಪಟ್ಟನು' ಎಂದು ಈಗತಾನೇ ನಿಮ್ಮಿಂದ ಕೇಳಿದೆನು. ॥ ೨ ॥ ಆ ಭಗವಂತನು ಲೀಲಾಜಾಲವಾಗಿ ತನ್ನ ಕೋರೆ ದಾಡೆಗಳ ಮೇಲೆ ಭೂಮಿಯನ್ನು ಇರಿಸಿಕೊಂಡು ನೀರಿನಿಂದ ಮೇಲಕ್ಕೆ ಬರುವಾಗ ಅವನಿಗೂ ದೈತ್ಯನಾದ ಹಿರಣ್ಯಾಕ್ಷನಿಗೂ ಏತಕ್ಕಾಗಿ ಯುದ್ಧವಾಯಿತು? ದಯಮಾಡಿ ಇದನ್ನು ತಿಳಿಸುವವರಾಗಿರಿ. ॥ ೩ ॥

ಮೈತ್ರೇಯ ಉವಾಚ

ಸಾಧು ವೀರ ತ್ವಯಾ ಪೃಷ್ಟಮವತಾರಕಥಾಂ ಹರೇಃ ।
ಯತ್ತ್ವಂ ಪೃಚ್ಛಸಿ ಮರ್ತ್ಯಾನಾಂ ಮೃತ್ಯುಪಾಶವಿಶಾತನೀಮ್ ॥ ೪ ॥

ಯಯೋತ್ತಾನಪದಃ ಪುತ್ರೋ
ಮುನಿನಾ ಗೀತಯಾರ್ಭಕಃ ।
ಮೃತ್ಯೋಃ ಕೃತ್ವೈವ ಮೂರ್ಧ್ನ್ಯಂಘ್ರಿ-
ಮಾರುರೋಹ ಹರೇಃ ಪದಮ್ ॥ ೫ ॥

ಶ್ರೀಮೈತ್ರೇಯರು ಹೇಳತೊಡಗಿದರು – ಎಲೈ ವಿದುರನೇ! ನೀನು ತುಂಬಾ ಒಳ್ಳೆಯ ಪ್ರಶ್ನೆಯನ್ನೇ ಕೇಳಿದೆ. ಮನುಷ್ಯರನ್ನು ಮೃತ್ಯುಪಾಶದಿಂದ ಪಾರಾಗಿಸುವ ಶ್ರೀಹರಿಯ ಅವತಾರಕಥೆಯ ಬಗ್ಗೆಯೇ ಕೇಳುತ್ತಿರುವೆ. ॥ ೪ ॥ ನೋಡು! ಉತ್ತಾನಪಾದನ ಪುತ್ರನಾದ ಧ್ರುವನು ಪುಟ್ಟಬಾಲಕನಾಗಿರುವಾಗಲೇ ಶ್ರೀನಾರದ ಮಹರ್ಷಿಗಳು ಹೇಳಿದ ಹರಿಕಥೆಯ ಪ್ರಭಾವದಿಂದಲೇ ಅವನು ಮೃತ್ಯುವಿನ ತಲೆಯನ್ನು ಮೆಟ್ಟಿ ಭಗವಂತನ ಪರಮಪದಕ್ಕೆ ಆರೂಢನಾದುದು. ॥ ೫ ॥ ಹಿಂದೆ ಒಮ್ಮೆ ಶ್ರೀವರಾಹರೂಪನಾದ ಭಗವಂತನಿಗೂ-ಹಿರಣ್ಯಾಕ್ಷನಿಗೂ ನಡೆದ ಯುದ್ಧದ ವಿಷಯದಲ್ಲಿ ದೇವತೆಗಳು ದೇವಾಧಿದೇವ ಬ್ರಹ್ಮದೇವರ ಬಳಿ ಪ್ರಶ್ನಿಸಿದಾಗ, ಅವರು ಈ

ಅಥಾತ್ರಾಪೀತಿಹಾಸೋಽಯಂ ಶ್ರುತೋ ಮೇ ವರ್ಣಿತಃ ಪುರಾ ।
ಬ್ರಹ್ಮಣಾ ದೇವದೇವೇನ ದೇವಾನಾಮನುಪೃಚ್ಛತಾಮ್ ॥ ೬ ॥

ದಿತಿರ್ದಾಕ್ಷಾಯಣೀ ಕ್ಷತ್ತರ್ಮಾರೀಚಂ ಕಶ್ಯಪಂ ಪತಿಮ್ ।
ಅಪತ್ಯಕಾಮಾ ಚಕಮೇ ಸಂಧ್ಯಾಯಾಂ ಹೃಚ್ಛಯಾರ್ದಿತಾ ॥ ೭ ॥

ಇಷ್ಟ್ವಾಗ್ನಿಜಿಹ್ವಂ ಪಯಸಾ ಪುರುಷಂ ಯಜುಷಾಂ ಪತಿಮ್ ।
ನಿಮ್ಲೋಚತ್ಯರ್ಕ ಆಸೀನಮಗ್ನ್ಯಗಾರೇ ಸಮಾಹಿತಮ್ ॥ ೮ ॥

ದಿತಿರುವಾಚ

ಏಷ ಮಾಂ ತ್ವತ್ಕೃತೇ ವಿದ್ವನ್ಕಾಮ ಆತ್ತಶರಾಸನಃ ।
ದುನೋತಿ ದೀನಾಂ ವಿಕ್ರಮ್ಯ ರಂಭಾಮಿವ ಮತಂಗಜಃ ॥ ೯ ॥

ತದ್ಭವಾನ್ ದಹ್ಯಮಾನಾಯಾಂ ಸಪತ್ನೀನಾಂ ಸಮೃದ್ಧಿಭಿಃ ।
ಪ್ರಜಾವತೀನಾಂ ಭದ್ರಂ ತೇ ಮಯ್ಯಾಯುಂಕ್ತಾಮನುಗ್ರಹಮ್ ॥ ೧೦ ॥

ಭರ್ತರ್ಯಾಪ್ತೋರುಮಾನಾನಾಂ ಲೋಕಾನಾವಿಶತೇ ಯಶಃ ।
ಪತಿರ್ಭವದ್ವಿಧೋ ಯಾಸಾಂ ಪ್ರಜಯಾ ನನು ಜಾಯತೇ ॥ ೧೧ ॥

ಪುರಾ ಪಿತಾ ನೋ ಭಗವಾನ್ ದಕ್ಷೋ ದುಹಿತೃವತ್ಸಲಃ ।
ಕಂ ವೃಣೀತ ವರಂ ವತ್ಸಾ ಇತ್ಯಪೃಚ್ಛತ ನಃ ಪೃಥಕ್ ॥ ೧೨ ॥

ಸ ವಿದಿತ್ವಾಽಽತ್ಮಜಾನಾಂ ನೋ ಭಾವಂ ಸಂತಾನಭಾವನಃ ।
ತ್ರಯೋದಶಾದದಾತ್ತಾಸಾಂ ಯಾಸ್ತೇ ಶೀಲಮನುವ್ರತಾಃ ॥ ೧೩ ॥

ಅಥ ಮೇ ಕುರು ಕಲ್ಯಾಣ ಕಾಮಂ ಕಂಜವಿಲೋಚನ ।
ಆರ್ತೋಪಸರ್ಪಣಂ ಭೂಮನ್ನಮೋಘಂ ಹಿ ಮಹೀಯಸಿ ॥ ೧೪ ॥

ಇತಿ ತಾಂ ವೀರ ಮಾರೀಚಃ ಕೃಪಣಾಂ ಬಹುಭಾಷಿಣೀಮ್ ।
ಪ್ರತ್ಯಾಹಾನುನಯನ್ವಾಚಾ ಪ್ರವೃದ್ಧಾನಂಗಕಶ್ಮಲಾಮ್ ॥ ೧೫ ॥

ಏಷ ತೇಽಹಂ ವಿಧಾಸ್ಯಾಮಿ ಪ್ರಿಯಂ ಭೀರು ಯದಿಚ್ಛಸಿ ।
ತಸ್ಯಾಃ ಕಾಮಂ ನ ಕಃ ಕುರ್ಯಾತ್ಸಿದ್ಧಿಸ್ತ್ರೈವರ್ಗಿಕೀ ಯತಃ ॥ ೧೬ ॥

ಸರ್ವಾಶ್ರಮಾನುಪಾದಾಯ ಸ್ವಾಶ್ರಮೇಣ ಕಲತ್ರವಾನ್ ।
ವ್ಯಸನಾರ್ಣವಮತ್ಯೇತಿ ಜಲಯಾನೈರ್ಯಥಾರ್ಣವಮ್ ॥ ೧೭ ॥

ಇತಿಹಾಸವನ್ನು ವರ್ಣಿಸಿದ್ದರು. ನಾನೂ ಪರಂಪರೆಯಿಂದ ಕೇಳಿದ್ದೇನೆ. ॥ ೬ ॥

ವಿದುರನೇ! ಹಿಂದೊಮ್ಮೆ ದಕ್ಷಪ್ರಜಾಪತಿಯ ಪುತ್ರಿಯಾದ ದಿತಿಯು ಪುತ್ರಪ್ರಾಪ್ತಿಯ ಬಯಕೆಯಿಂದ ಕಾಮಾತುರಳಾಗಿ ಪತಿಯಾದ, ಮರೀಚಿ ಪುತ್ರರಾದ ಕಶ್ಯಪಮಹರ್ಷಿಯ ಬಳಿಗೆ ಸಾಯಂಸಂಧ್ಯಾಸಮಯದಲ್ಲಿ ಹೋಗಿ ಪ್ರಾರ್ಥಿಸಿದಳು. ॥ ೭ ॥ ಕಶ್ಯಪರು ಆಗ ಕ್ಷೀರದ ಆಹುತಿಗಳಿಂದ ಅಗ್ನಿಜಿಹ್ವ ಭಗವಾನ್ ಯಜ್ಞಪತಿಯನ್ನು ಆರಾಧನೆಮಾಡಿ ಸೂರ್ಯಾಸ್ತದ ಸಮಯವನ್ನು ಗಮನಿಸಿ ಅಗ್ನಿಶಾಲೆಯಲ್ಲಿ ಧ್ಯಾನಸ್ಥರಾಗಿ ಕುಳಿತಿದ್ದರು. ॥ ೮ ॥

ದಿತಿಯು ಹೇಳಿದಳು – ಜ್ಞಾನಿಶ್ರೇಷ್ಠರೇ! ಮದಭರಿತ ಆನೆಯು ಬಾಳೆಯ ಗಿಡವನ್ನು ಹೊಸಕಿ ಹಾಕುವಂತೆಯೇ ಈ ಪ್ರಸಿದ್ಧ ಬಿಲ್ಲುಗಾರನಾದ ಮನ್ಮಥನು ಅಬಲೆಯಾಗಿರುವ ನನ್ನನ್ನು ನಿಮ್ಮ ವಿಷಯದಲ್ಲಿ ಹುರಿದುಂಬಿಸಿ ಸತಾಯಿಸುತ್ತಿದ್ದಾನೆ. ॥ ೯ ॥ ನನ್ನ ಸವತಿಯರು ಪುತ್ರವತಿಯರಾಗಿ ಸಮೃದ್ಧರಾಗಿರುವುದನ್ನು ನೋಡಿ ನನ್ನ ಮನಸ್ಸು ಅಸೂಯೆಯಿಂದ ಉರಿಯುತ್ತಿದೆ. ಆದ್ದರಿಂದ ನೀವು ನನ್ನ ಮೇಲೆ ಕೃಪೆದೋರಿರಿ. ನಿಮಗೆ ಮಂಗಳವಾಗಲಿ. ॥ ೧೦ ॥ ನಿಮ್ಮಂತಹ ಪತಿಯು ನನ್ನಲ್ಲಿ ಗರ್ಭವನ್ನಿರಿಸಿ ಪುತ್ರರೂಪದಿಂದ ಜನಿಸುವರಲ್ಲವೇ, ಸ್ತ್ರೀಯರಿಗೆ ಪತಿಯು ಸನ್ಮಾನ ಮಾಡಿದಂತಾಗುತ್ತದೆ. ಅವಳ ಕೀರ್ತಿಯೇ ಪ್ರಪಂಚದಲ್ಲಿ ಹರಡುತ್ತದಲ್ಲ! ॥ ೧೧ ॥ ನಮ್ಮ ತಂದೆಯಾದ ದಕ್ಷಪ್ರಜಾಪತಿಗೆ ಪುತ್ರಿಯರ ಮೇಲೆ ಬಹಳ ಸ್ನೇಹವಿತ್ತು. ಅವನು ನಮ್ಮನ್ನು ಒಬ್ಬೊಬ್ಬರನ್ನಾಗಿ ಕರೆದು – 'ನೀನು ಯಾರನ್ನು ಪತಿಯನ್ನಾಗಿ ವರಿಸುತ್ತೀಯೇ ?' ಎಂದು ಕೇಳಿದನು. ॥ ೧೨ ॥ ಅವರು ತಮ್ಮ ಸಂತಾನದ ಬಗೆಗೆ ಎಲ್ಲ ರೀತಿಯಿಂದ ಗಮನ ವಿಡುತ್ತಿದ್ದರು. ಆದ್ದರಿಂದ ನಮ್ಮ ಅಭಿಪ್ರಾಯವನ್ನು ತಿಳಿದು ಅವನು – ನಿಮಗೆ ಗುಣಸ್ವಭಾವದಿಂದ ಅನುರೂಪರಾದ ಹದಿಮೂರು ಮಂದಿ ಪುತ್ರಿಯರಾದ ನಮ್ಮನ್ನು ನಿಮ್ಮೊಂದಿಗೆ ವಿವಾಹಮಾಡಿ ಕೊಟ್ಟನು. ॥ ೧೩ ॥ ಆದ್ದರಿಂದ ಮಂಗಳಮೂರ್ತಿಯೇ! ಕಮಲನಯನನೇ! ನನ್ನ ಇಷ್ಟಾರ್ಥವನ್ನು ಈಡೇರಿಸಿ ಕೊಡಿರಿ. ಏಕೆಂದರೆ, ಮಹಾತ್ಮರೇ! ನಿಮ್ಮಂತಹ ಮಹಾಪುರುಷರ ಬಳಿಗೆ ಬಂದ ದೀನಜನರ ಇಷ್ಟಾರ್ಥವು ಕೈಗೂಡದಿರುವುದಿಲ್ಲ. ॥ ೧೪ ॥

ವಿದುರನೇ! ಹೀಗೆ ಕಾಮನವೇಗದಿಂದ ಅತ್ಯಂತ ಪೀಡಿತಳಾದ ದಿತಿಯು ದೈನ್ಯದಿಂದ ಅಂಗಲಾಚಿ ಬಹಳವಾಗಿ ಬೇಡಿಕೊಳ್ಳುತ್ತಿರುವ ಪತ್ನಿಯನ್ನು ಸುಮಾತುಗಳಿಂದ ಸಂತೈಸುತ್ತಾ ಕಶ್ಯಪರು ಹೇಳಿದರು – ॥ ೧೫ ॥ ಎಲೈ ಭೀರುವೇ! ನಿನ್ನ ಬಯಕೆಯಂತೆ ನಿನಗೆ ಪ್ರಿಯವಾದುದನ್ನು ಅವಶ್ಯವಾಗಿ ಮಾಡುವೆನು. ಧರ್ಮ, ಅರ್ಥ, ಕಾಮ ಎಂಬ ಮೂರು ಪುರುಷಾರ್ಥಗಳ ಸಿದ್ಧಿಗೆ ಸಾಧನವಾಗಿರುವ ಪತ್ನಿಯ ಕಾಮನೆಯನ್ನು ಯಾವ ಪತಿಯು ತಾನೇ ಪೂರೈಸುವುದಿಲ್ಲ? ॥ ೧೬ ॥ ಮನುಷ್ಯನು ಹಡಗನ್ನು ಹತ್ತಿ ಸಮುದ್ರವನ್ನು ದಾಟುವಂತೆ – ಗೃಹಸ್ಥಾಶ್ರಮಿಯು ಇತರ ಆಶ್ರಮಗಳಿಗೂ ಆಶ್ರಯ ನೀಡುತ್ತಾ ತನ್ನ ಪತ್ನಿಯೊಡಗೂಡಿ ಆಶ್ರಮಧರ್ಮಗಳ ಮೂಲಕ ಸ್ವಯಂ ದುಃಖಸಾಗರವನ್ನು ದಾಟಿಬಿಡುವನು. ॥ ೧೭ ॥ ಎಲೈ ಮಾನಿನಿಯೇ! ತ್ರಿವಿಧ ಪುರುಷಾರ್ಥದ

ಯಾಮಾಹುರಾತ್ಮನೋ ಹ್ಯರ್ಧಂ ಶ್ರೇಯಸ್ಕಾಮಸ್ಯ ಮಾನಿನಿ ।
ಯಸ್ಯಾಂ ಸ್ವಧುರಮಧ್ಯಸ್ಯ ಪುಮಾಂಶ್ಚರತಿ ವಿಜ್ವರಃ ॥ ೧೮ ॥

ಯಾಮಾಶ್ರಿತ್ಯೇಂದ್ರಿಯಾರಾತೀನ್ ದುರ್ಜಯಾನಿತರಾಶ್ರಮೈಃ ।
ವಯಂ ಜಯೇಮ ಹೇಲಾಭಿರ್ದಸ್ಯೂನ್ ದುರ್ಗಪತಿರ್ಯಥಾ ॥ ೧೯ ॥

ನ ವಯಂ ಪ್ರಭವಸ್ತಾಂ ತ್ವಾಮನುಕರ್ತುಂ ಗೃಹೇಶ್ವರಿ ।
ಅಪ್ಯಾಯುಷಾ ವಾ ಕಾರ್ತ್ಸ್ನ್ಯೇನ ಯೇ ಚಾನ್ಯೇ ಗುಣಗೃಧ್ನವಃ ॥ ೨೦ ॥

ಅಥಾಪಿ ಕಾಮಮೇತಂ ತೇ ಪ್ರಜಾತ್ಯೈ ಕರವಾಣ್ಯಲಮ್ ।
ಯಥಾ ಮಾಂ ನಾತಿವೋಚಂತಿ ಮುಹೂರ್ತಂ ಪ್ರತಿಪಾಲಯ ॥ ೨೦ ॥

ಏಷಾ ಘೋರತಮಾ ವೇಲಾ ಘೋರಾಣಾಂ ಘೋರದರ್ಶನಾ ।
ಚರಂತಿ ಯಸ್ಯಾಂ ಭೂತಾನಿ ಭೂತೇಶಾನುಚರಾಣಿ ಹ ॥ ೨೨ ॥

ಏತಸ್ಯಾಂ ಸಾಧ್ವಿ ಸಂಧ್ಯಾಯಾಂ ಭಗವಾನ್ ಭೂತಭಾವನಃ ।
ಪರೀತೋ ಭೂತಪರ್ಷದ್ಭಿರ್ವೃಷೇಣಾಟತಿ ಭೂತರಾಟ್ ॥ ೨೩ ॥

ಶ್ಮಶಾನಚಕ್ರಾನಿಲಧೂಲಿಧೂಮ್ರ-
ವಿಕೀರ್ಣವಿದ್ಯೋತಜಟಾಕಲಾಪಃ ।
ಭಸ್ಮಾವಗುಂಠಾಮಲರುಕ್ಮದೇಹೋ
ದೇವಸ್ತ್ರಿಭಿಃ ಪಶ್ಯತಿ ದೇವರಸ್ತೇ ॥ ೨೪ ॥

ನ ಯಸ್ಯ ಲೋಕೇ ಸ್ವಜನಃ ಪರೋ ವಾ
ನಾತ್ಯಾದೃತೋ ನೋತ ಕಶ್ಚಿದ್ವಿಗರ್ಹ್ಯಃ ।
ವಯಂ ವ್ರತೈರ್ಯಚ್ಚರಣಾಪವಿದ್ಧಾ-
ಮಾಶಾಸ್ಮಹೇಽಜಾಂ ಬತ ಭುಕ್ತಭೋಗಾಮ್ ॥ ೨೫ ॥

ಯಸ್ಯಾನವದ್ಯಾಚರಿತಂ ಮನೀಷಿಣೋ
ಗೃಣಂತ್ಯವಿದ್ಯಾಪಟಲಂ ಬಿಭಿತ್ಸವಃ ।
ನಿರಸ್ತಸಾಮ್ಯಾತಿಶಯೋಽಪಿ ಯತ್ಸ್ವಯಂ
ಪಿಶಾಚಚರ್ಯಾಮಚರದ್ಗತಿಃ ಸತಾಮ್ ॥ ೨೬ ॥

ಬಯಕೆಯುಳ್ಳ ಪುರುಷನಿಗೆ ಪತ್ನಿಯು ಶರೀರದ ಅರ್ಧಭಾಗವೇ ಆಗಿದ್ದಾಳೆ ಎಂದು ಹೇಳಲಾಗಿದೆ. ಅವಳ ಮೇಲೆ ತನ್ನ ಆಶ್ರಮದ ಭಾರವನ್ನು ಇರಿಸಿ ಗೃಹಸ್ಥನು ನಿಶ್ಚಿಂತವಾಗಿ ಸಂಚರಿಸುತ್ತಾನೆ. ॥ ೧೮ ॥ ಇತರ ಆಶ್ರಮಗಳಲ್ಲಿರುವವರಿಗೆ ಇಂದ್ರಿಯಗಳೆಂಬ ಶತ್ರುವನ್ನು ಗೆಲ್ಲುವುದು ಕಷ್ಟ. ಆದರೆ ಕೋಟೆ-ಕೊತ್ತಲಗಳ ಆಶ್ರಯದಲ್ಲಿರುವ ದುರ್ಗಪತಿಯು ಲೂಟಿಮಾಡುವ ಕಳ್ಳ-ಕಾಕರನ್ನು ಸುಲಭವಾಗಿ ನಿಗ್ರಹಿಸುತ್ತಾನೆ. ಹಾಗೆಯೇ ನಾವು ಪತ್ನಿಯ ಆಶ್ರಯದಿಂದ ಈ ಇಂದ್ರಿಯಗಳೆಂಬ ಶತ್ರುಗಳನ್ನು ಸುಲಭವಾಗಿ ಗೆದ್ದುಕೊಳ್ಳುವೆವು. ॥ ೧೯ ॥ ಎಲೈ ಗೃಹೇಶ್ವರಿಯೇ! ನಿನ್ನಂತಹ ಪತ್ನಿಯರು ಮಾಡುವ ಉಪಕಾರವನ್ನು ನಾನಾಗಲೀ ಅಥವಾ ಇತರ ಯಾರೇ ಗುಣಗ್ರಾಹೀ ಪುರುಷನಾಗಲೀ ತನ್ನ ಇಡೀ ಆಯುಷ್ಯದಲ್ಲಿ ಅಥವಾ ಜನ್ಮಾಂತರದಲ್ಲಿಯೂ ಪೂರ್ಣವಾಗಿ ತೀರಿಸಲಾರನು. ॥ ೨೦ ॥ ಆದರೂ ಸಂತಾನವನ್ನು ಪಡೆಯಬೇಕೆಂಬ ನಿನ್ನ ಇಚ್ಛೆಯನ್ನು ನಾನು ಅವಶ್ಯವಾಗಿ ಈಡೇರಿಸುವೆನು. ಆದರೆ ನೀನು ಮುಹೂರ್ತಕಾಲ ಕಾಯಬೇಕು. ಹೀಗಾದರೆ ನಾನು ಲೋಕನಿಂದೆಗೆ ಗುರಿಯಾಗುವುದಿಲ್ಲ. ॥ ೨೧ ॥ ಈ ಸಂಧ್ಯಾಸಮಯವು ಅತ್ಯಂತ ಘೋರವಾದ ಕಾಲ. ರಾಕ್ಷಸಾದಿ ಘೋರಜೀವಿಗಳು ವಿಹರಿಸುವ ಕಾಲವು. ಇದು ಭಗವಾನ್ ಭೂತನಾಥನ ಗಣಗಳಾದ ಭೂತಪ್ರೇತಾದಿಗಳು ಓಡಾಡುತ್ತಿರುವ ಭೀಕರವಾದ ಸಮಯ. ॥ ೨೨ ॥ ಎಲೈ ಸಾಧ್ವಿಯೇ! ಈ ಸಂಧ್ಯಾಕಾಲದಲ್ಲಿ ಭಗವಾನ್ ಭೂತಪತಿಯಾದ ಮಹಾದೇವನು ವೃಷಭವನ್ನೇರಿ ತನ್ನ ಗಣಗಳೊಡನೆ ಸಂಚರಿಸುತ್ತಿರುತ್ತಾನೆ. ॥ ೨೩ ॥ ಆತನ ಜಡೆಗಳು ಸ್ಮಶಾನದಲ್ಲಿ ಬೀಸುವ ಬಿರುಗಾಳಿಯಿಂದ ಕೆದರಿ ಧೂಳಿನಿಂದ ಧೂಸರಿತವಾಗಿವೆ. ಅವನು ಬಂಗಾರದಂತೆ ಹೊಳೆಯುತ್ತಿರುವ ತನ್ನ ದೇಹಕ್ಕೆಲ್ಲಾ ವಿಭೂತಿಯನ್ನು ಹಚ್ಚಿಕೊಂಡಿರುವನು. ಇಂತಹ ಪೂಜ್ಯನಾದ ಸಹೋದರನಾದ ನಿನ್ನ ಭಾವನು ತನ್ನ ಸೂರ್ಯ, ಚಂದ್ರ, ಅಗ್ನಿ ಎಂಬ ಮೂರು ಕಣ್ಣುಗಳಿಂದ ಎಲ್ಲರನ್ನೂ ನೋಡುತ್ತಿರುತ್ತಾನೆ. ॥ ೨೪ ॥ ಅವನಿಗೆ ಪ್ರಪಂಚದಲ್ಲಿ ಯಾರೂ ತನ್ನವರು-ಬೇರೆಯವರು, ಬೇಕಾದವರು-ಬೇಡವಾದವರು, ಆದರಣೀಯರು- ನಿಂದನೀಯರು ಎಂಬ ಭೇದವಿಲ್ಲ. ನಾವಾದರೋ ಅನೇಕ ವ್ರತಗಳನ್ನು ಆಚರಿಸುತ್ತಾ, ಆತನು ಭೋಗಿಸಿ ಕಾಲಿನಿಂದ ಒದ್ದು ತಳ್ಳಿರುವ ಮಾಯೆಯನ್ನೇ ಸ್ವೀಕರಿಸಲು ಬಯಸುತ್ತಿರುವವರು. ॥ ೨೫ ॥ ವಿವೇಕಿಗಳಾದ ಜನರು ಅವಿದ್ಯೆಯ ಆವರಣವನ್ನು ಭೇದಿಸುವ ಇಚ್ಛೆಯಿಂದ ಅವನ ನಿರ್ಮಲವಾದ ಚರಿತ್ರವನ್ನು ಹಾಡುತ್ತಿರುತ್ತಾರೆ. ಅವನಿಗಿಂತ ಮಿಗಿಲಾದವರಿರಲಿ, ಅವನಿಗೆ ಸಮಾನರಾದವರೂ ಯಾರೂ ಇಲ್ಲ. ಸತ್ಪುರುಷರು ಮಾತ್ರವೇ ಆತನನ್ನು ತಲುಪಬಲ್ಲರು. ಇಷ್ಟೆಲ್ಲ ಇದ್ದರೂ ಅವನು ಪಿಶಾಚದಂತೆ ಆಚರಣೆಯನ್ನು ತೋರುತ್ತಾನೆ. ಇದು ಲೋಕವಿಡಂಬನೆಗಾಗಿಯೇ ಇದೆ. ॥ ೨೬ ॥ ಈ ಶರೀರವು ನರಿ-ನಾಯಿಗಳ ಆಹಾರವಾಗುವುದು. ಅವಿವೇಕಿಗಳು ಇದನ್ನೇ ಆತ್ಮವೆಂದು ಭಾವಿಸಿ ಇದನ್ನು ವಸ್ತ್ರ

ಹಸಂತಿ ಯಸ್ಯಾಚರಿತಂ ಹಿ ದುರ್ಭಗಾಃ
ಸ್ವಾತ್ಮನ್‌ರತಸ್ಯಾವಿದುಷಃ ಸಮೀಹಿತಮ್ ।
ಯೈರ್ವಸ್ತ್ರಮಾಲ್ಯಾಭರಣಾನುಲೇಪನೈಃ
ಶ್ವಭೋಜನಂ ಸ್ವಾತ್ಮತಯೋಪಲಾಲಿತಮ್ ॥ ೨೭ ॥

ಬ್ರಹ್ಮಾದಯೋ ಯತ್ಕೃತಸೇತುಪಾಲಾ
ಯತ್ಕಾರಣಂ ವಿಶ್ವಮಿದಂ ಚ ಮಾಯಾ ।
ಆಜ್ಞಾಕರೀ ಯಸ್ಯ ಪಿಶಾಚಚರ್ಯಾ
ಅಹೋ ವಿಭೂಮ್ನಶ್ಚರಿತಂ ವಿಡಂಬನಮ್ ॥ ೨೮ ॥

ಮೈತ್ರೇಯ ಉವಾಚ

ಸೈವಂ ಸಂವಿದಿತೇ ಭರ್ತ್ರಾ ಮನ್ಮಥೋನ್ಮಥಿತೇಂದ್ರಿಯಾ ।
ಜಗ್ರಾಹ ವಾಸೋ ಬ್ರಹ್ಮರ್ಷೇರ್ವೃಷಲೀವ ಗತತ್ರಪಾ ॥ ೨೯ ॥

ಸ ವಿದಿತ್ವಾಥ ಭಾರ್ಯಾಯಾಸ್ತಂ ನಿರ್ಬಂಧಂ ವಿಕರ್ಮಣಿ ।
ನತ್ವಾ ದಿಷ್ಟಾಯ ರಹಸಿ ತಯಾಥೋಪವಿವೇಶ ಹ ॥ ೩೦ ॥

ಅಥೋಪಸ್ಪೃಶ್ಯ ಸಲಿಲಂ ಪ್ರಾಣಾನಾಯಮ್ಯ ವಾಗ್ಯತಃ ।
ಧ್ಯಾಯಞ್ಜಜಾಪ ವಿರಜಂ ಬ್ರಹ್ಮ ಜ್ಯೋತಿಃ ಸನಾತನಮ್ ॥ ೩೧ ॥

ದಿತಿಸ್ತು ವ್ರೀಡಿತಾ ತೇನ ಕರ್ಮಾವದ್ಯೇನ ಭಾರತ ।
ಉಪಸಂಗಮ್ಯ ವಿಪ್ರರ್ಷಿಮಧೋಮುಖ್ಯಭ್ಯಭಾಷತ ॥ ೩೨ ॥

ದಿತಿರುವಾಚ

ಮಾ ಮೇ ಗರ್ಭಮಿಮಂ ಬ್ರಹ್ಮನ್ಭೂತಾನಾಮೃಷಭೋಽವಧೀತ್ ।
ರುದ್ರಃ ಪತಿರ್ಹಿ ಭೂತಾನಾಂ ಯಸ್ಯಾಕರವಮಂಹಸಮ್ ॥ ೩೩ ॥

ನಮೋ ರುದ್ರಾಯ ಮಹತೇ ದೇವಾಯೋಗ್ರಾಯ ಮೀಢುಷೇ ।
ಶಿವಾಯ ನ್ಯಸ್ತದಂಡಾಯ ಧೃತದಂಡಾಯ ಮನ್ಯವೇ ॥ ೩೪ ॥

ಸ ನಃ ಪ್ರಸೀದತಾಂ ಭಾಮೋ ಭಗವಾನುರ್ವನುಗ್ರಹಃ ।
ವ್ಯಾಧಸ್ಯಾಪ್ಯನುಕಂಪ್ಯಾನಾಂ ಸ್ತ್ರೀಣಾಂ ದೇವಃ ಸತೀಪತಿಃ ॥ ೩೫ ॥

ಮೈತ್ರೇಯ ಉವಾಚ

ಸ್ವಸರ್ಗಸ್ಯಾಶಿಷಂ ಲೋಕ್ಯಾಮಾಶಾಸಾನಾಂ ಪ್ರವೇಪತೀಮ್ ।
ನಿವೃತ್ತಸಂಧ್ಯಾನಿಯಮೋ ಭಾರ್ಯಾಮಾಹ ಪ್ರಜಾಪತಿಃ ॥ ೩೬ ॥

ಒಡವೆ, ಗಂಧ, ಮಾಲೆ ಇವುಗಳಿಂದ ಅಲಂಕರಿಸುತ್ತಿರುತ್ತಾರೆ. ಇಂತಹ ದುರದೃಷ್ಟಶಾಲಿಗಳು ಆತ್ಮಾರಾಮನಾಗಿರುವ ಭಗವಾನ್ ಶಂಕರನ ಆಚರಣೆಗಳಿಗೆ ನಗುತ್ತಿರುತ್ತಾರೆ. ॥ ೨೭ ॥ ನಮ್ಮ ವಿಷಯ ಹಾಗಿರಲಿ. ಬ್ರಹ್ಮಾದಿ ಲೋಕಪಾಲರೂ ಕೂಡ ಆತನು ಕಟ್ಟಿರುವ, ನಿರ್ದೇಶಿಸಿರುವ ಧರ್ಮಮರ್ಯಾದೆಯನ್ನೇ ಅನುಸರಿಸುತ್ತಾರೆ. ಅವನೇ ಈ ವಿಶ್ವದ ಅಧಿಷ್ಠಾನನಾಗಿದ್ದಾನೆ. ಈ ಮಾಯೆಯೂ ಅವನ ಆಜ್ಞೆಯನ್ನು ಪಾಲಿಸುವಳು. ಹೀಗಿದ್ದರೂ ಆತನು ಪ್ರೇತಗಳಂತೆ ನಡೆದುಕೊಳ್ಳುತ್ತಾನೆ. ಅಬ್ಬಾ! ಎಂತಹ ಅದ್ಭುತ ಲೀಲೆಯಿದು! ಜಗದ್ವ್ಯಾಪಕನಾದ ಪ್ರಭುವು ಮಾಡುತ್ತಿರುವ ಈ ಲೀಲೆಗಳು ಸ್ವಲ್ಪವೂ ಅರ್ಥವಾಗುವುದಿಲ್ಲ. ॥ ೨೮ ॥

ಶ್ರೀಮೈತ್ರೇಯರು ಹೇಳುತ್ತಾರೆ – ವಿದುರನೇ! ಪತಿಯು ಈ ಪ್ರಕಾರ ತಿಳುವಳಿಕೆ ನೀಡಿದರೂ ಕಾಮಾತುರಳಾದ ದಿತಿಯು ವೇಶ್ಯೆಯಂತೆ ನಾಚಿಕೆಬಿಟ್ಟು ಬ್ರಹ್ಮರ್ಷಿ ಕಶ್ಯಪರ ವಸ್ತ್ರವನ್ನು ಹಿಡಿದುಕೊಂಡಳು. ॥ ೨೯ ॥ ಆಗ ಕಶ್ಯಪರು ಭಾರ್ಯೆಯ ನಿಂದಿತವಾದ ಕರ್ಮದಲ್ಲಿರುವ ಆಗ್ರಹವನ್ನು ಕಂಡು 'ದೈವೇಚ್ಛೆ ಇದ್ದಂತಾಗಲಿ' ಎಂದು ದೈವಕ್ಕೆ ಕೈಮುಗಿದು ಏಕಾಂತದಲ್ಲಿ ಆಕೆಯೊಡನೆ ಸಮಾಗಮ ಮಾಡಿದರು. ॥ ೩೦ ॥ ಅನಂತರ ಸ್ನಾನ ಮಾಡಿ ಮೌನಿಯಾಗಿ, ಪ್ರಾಣಾಯಾಮಮಾಡಿ ಪರಿಶುದ್ಧವೂ, ಜ್ಯೋತಿರ್ಮಯವೂ, ಸನಾತನವೂ ಆದ ಪರಬ್ರಹ್ಮವನ್ನು ಧ್ಯಾನಿಸುತ್ತಾ, ಅವನನ್ನೇ ಕುರಿತು ಜಪ ಮಾಡತೊಡಗಿದರು. ॥ ೩೧ ॥ ವಿದುರನೇ! ದಿತಿಗೂ ತಾನು ಮಾಡಿದ ನಿಂದ್ಯವಾದ ಕರ್ಮದ ಬಗ್ಗೆ ತುಂಬಾ ನಾಚಿಕೆಯಾಗಿ, ಆಕೆಯು ಬ್ರಹ್ಮರ್ಷಿಯ ಬಳಿಗೆ ಬಂದು ತಲೆತಗ್ಗಿಸಿಕೊಂಡು ಹೀಗೆ ಹೇಳತೊಡಗಿದಳು. ॥ ೩೨ ॥

ದಿತಿಯು ಹೇಳುತ್ತಾಳೆ – ಓ ಬ್ರಹ್ಮರ್ಷಿಯೇ! ಭಗವಾನ್ ರುದ್ರನು ಭೂತಗಳ ಸ್ವಾಮಿಯು. ಆತನ ಕುರಿತು ನಾನು ಅಪರಾಧವನ್ನೆಸಗಿದ್ದೇನೆ. ಆದರೂ ಆ ಭೂತಶ್ರೇಷ್ಠನಾದ ದೇವನು ನನ್ನ ಗರ್ಭವನ್ನು ನಾಶಮಾಡದಿರಲಿ. ॥ ೩೩ ॥ ಮಹಾದೇವನಾದ ರುದ್ರನಿಗೆ ನಮಸ್ಕಾರವು. ಉಗ್ರನಾಗಿದ್ದರೂ ಭಕ್ತರ ಇಷ್ಟಾರ್ಥಗಳನ್ನು ಈಡೇರಿಸುವ ಶಿವನಿಗೆ ನಮಸ್ಕಾರವು. ಸತ್ಪುರುಷರ ವಿಷಯದಲ್ಲಿ ದಂಡವನ್ನು ಬಳಸದೆ, ದುಷ್ಟರ ವಿಷಯದಲ್ಲಿಯೇ ದಂಡಪಾಣಿಯಾದ ಕ್ರೋಧಮೂರ್ತಿಗೆ ನಮೋ ನಮಃ ॥ ೩೪ ॥ ಹೆಂಗಸರಾದ ನಮ್ಮ ಮೇಲಾದರೋ ಪ್ರಾಣಿಹಿಂಸೆಮಾಡುವ ಬೇಡರೂ ಕೂಡ ದಯೆ ತೋರಿಸುವರು. ಹೀಗಿರುವಾಗ ಪರಮ ಕರುಣಾಳುವೂ, ಸತೀಪತಿಯೂ ನನಗೆ ಭಾವನೂ ಆಗಿರುವ ಶಂಕರನು ನನ್ನ ಮೇಲೆ ಪ್ರಸನ್ನನಾಗಲೀ. ॥ [illegible] ॥

ಶ್ರೀಮೈತ್ರೇಯರು ಹೇಳಿದರು – ಎಲೈ ವಿದುರನೇ! ಪ್ರಜಾಪತಿ ಕಶ್ಯಪರು ಸಾಯಂ ಸಂಧ್ಯಾವಂದನಾದಿಗಳನ್ನು ಮುಗಿಸಿಕೊಂಡು ದಿತಿಯನ್ನು ಗಮನಿಸಿದರು. ಆಕೆಯು ಗಡ-ಗಡನೆ ನಡುಗುತ್ತಾ ತನ್ನ ಸಂತಾನದ ಲೌಕಿಕ ಮತ್ತು ಪಾರಲೌಕಿಕ ಉನ್ನತಿಗಾಗಿ ಪ್ರಾರ್ಥಿಸುತ್ತಿದ್ದಳು. ಆಗ ಕಶ್ಯಪರು ಆಕೆಗೆ ಹೇಳಿದರು – ॥ ೩೬ ॥

ಕಶ್ಯಪ ಉವಾಚ

ಅಪ್ರಾಯತ್ಯಾದಾತ್ಮನಸ್ತೇ ದೋಷಾನ್ಮೌಹೂರ್ತಿಕಾದುತ ।
ಮನ್ನಿದೇಶಾತಿಚಾರೇಣ ದೇವಾನಾಂ ಚಾತಿಹೇಲನಾತ್ ॥ ೩೭ ॥

ಭವಿಷ್ಯತಸ್ತವಾಭದ್ರಾವಭದ್ರೇ ಜಾಠರಾಧಮೌ ।
ಲೋಕಾನ್ಸಪಾಲಾಂಸ್ತ್ರೀಂಶ್ಚಂಡಿ ಮುಹುರಾಕ್ರಂದಯಿಷ್ಯತಃ ॥ ೩೮ ॥

ಪ್ರಾಣಿನಾಂ ಹನ್ಯಮಾನಾನಾಂ ದೀನಾನಾಮಕೃತಾಗಸಾಮ್ ।
ಸ್ತ್ರೀಣಾಂ ನಿಗೃಹ್ಯಮಾಣಾನಾಂ ಕೋಪಿತೇಷು ಮಹಾತ್ಮಸು ॥ ೩೯ ॥

ತದಾ ವಿಶ್ವೇಶ್ವರಃ ಕ್ರುದ್ಧೋ ಭಗವಾಲ್ಲೋಕಭಾವನಃ ।
ಹನಿಷ್ಯತ್ಯವತೀರ್ಯಾಸೌ ಯಥಾದ್ರೀನ್ ಶತಪರ್ವಧೃಕ್ ॥ ೪೦ ॥

ದಿತಿರುವಾಚ

ವಧಂ ಭಗವತಾ ಸಾಕ್ಷಾತ್ಸುನಾಭೋದಾರಬಾಹುನಾ ।
ಆಶಾಸೇ ಪುತ್ರಯೋರ್ಮಹ್ಯಂ ಮಾ ಕ್ರುದ್ಧಾದ್ಬ್ರಾಹ್ಮಣಾದ್ವಿಭೋ ॥ ೪೧ ॥

ನ ಬ್ರಹ್ಮದಂಡದಗ್ಧಸ್ಯ ನ ಭೂತಭಯದಸ್ಯ ಚ ।
ನಾರಕಾಶ್ಚಾನುಗೃಹ್ಣಂತಿ ಯಾಂ ಯಾಂ ಯೋನಿಮಸೌ ಗತಃ ॥ ೪೨ ॥

ಕಶ್ಯಪ ಉವಾಚ

ಕೃತಶೋಕಾನುತಾಪೇನ ಸದ್ಯಃ ಪ್ರತ್ಯವಮರ್ಶನಾತ್ ।
ಭಗವತ್ಯುರುಮಾನಾಚ್ಚ ಭವೇ ಮಯ್ಯಪಿ ಚಾದರಾತ್ ॥ ೪೩ ॥

ಪುತ್ರಸ್ಯೈವ ತು ಪುತ್ರಾಣಾಂ ಭವಿತೈಕಃ ಸತಾಂ ಮತಃ ।
ಗಾಸ್ಯಂತಿ ಯದ್ಯಶಃ ಶುದ್ಧಂ ಭಗವದ್ಯಶಸಾ ಸಮಮ್ ॥ ೪೪ ॥

ಯೋಗೈರ್ಹೇಮೇವ ದುರ್ವರ್ಣಂ ಭಾವಯಿಷ್ಯಂತಿ ಸಾಧವಃ ।
ನಿರ್ವೈರಾದಿಭಿರಾತ್ಮಾನಂ ಯಚ್ಛೀಲಮನುವರ್ತಿತುಮ್ ॥ ೪೫ ॥

ಯತ್ಪ್ರಸಾದಾದಿದಂ ವಿಶ್ವಂ ಪ್ರಸೀದತಿ ಯದಾತ್ಮಕಮ್ ।
ಸ ಸ್ವದೃಗ್ಭಗವಾನ್ಯಸ್ಯ ತೋಷ್ಯತೇಽನನ್ಯಯಾ ದೃಶಾ ॥ ೪೬ ॥

ಕಶ್ಯಪರು ಇಂತೆಂದರು – 'ನಿನ್ನ ಚಿತ್ತವು ದುಷ್ಕಾಮದಿಂದ ಕಲುಷಿತವಾಗಿತ್ತು. ನೀನು ಸಮಾಗಮ ಮಾಡಿದ ಸಮಯವೂ ಅಶುಭವಾಗಿತ್ತು. ನೀನು ನನ್ನ ಮಾತನ್ನೂ ಗೌರವಿಸಲಿಲ್ಲ. ದೇವತೆಗಳಿಗೂ ಅಪಚಾರವಸಗಿದೆ. ॥ ೩೭ ॥ ಎಲೈ ಅಮಂಗಳವಾದ ಚಂಡಿಯೇ! ನಿನ್ನ ಗರ್ಭದಿಂದ ಅಮಂಗಳರೂ, ಅಧಮರೂ ಆದ ಇಬ್ಬರು ಪುತ್ರರು ಹುಟ್ಟುವರು. ಅವರು ತಮ್ಮ ಅತ್ಯಾಚಾರದಿಂದ ಸಮಸ್ತ ಲೋಕವನ್ನೂ, ಲೋಕಪಾಲಕರನ್ನೂ ಪದೇ-ಪದೇ ಅಳುವಂತೆ ಮಾಡುವರು. ॥ ೩೮ ॥ ಅವರ ಕೈಯಿಂದ ನೂರಾರು ನಿರಪರಾಧಿಗಳೂ, ದೀನರೂ ಆದ ಪ್ರಾಣಿಗಳು ಕೊಲ್ಲಲ್ಪಡುವುವು. ಸ್ತ್ರೀಯರ ಮೇಲೆ ಅತ್ಯಾಚಾರ ನಡೆಯುವುದು. ಮಹಾತ್ಮರನ್ನು ಕುಪಿತಗೊಳಿಸಲಾಗುವುದು. ಆಗ ಸರ್ವಲೋಕರಕ್ಷಕನಾದ ಜಗದೀಶ್ವರನು ಕ್ರುದ್ಧನಾಗಿ ಭುವಿಯಲ್ಲಿ ಅವತರಿಸಿ – ಇಂದ್ರನು ಪರ್ವತಗಳನ್ನು ನಿಗ್ರಹಿಸಿದಂತೆ ಅವರನ್ನು ವಧಿಸುವನು. ॥ ೩೯-೪೦ ॥

ದಿತಿಯು ಪ್ರಾರ್ಥಿಸಿಕೊಂಡಳು – ಸ್ವಾಮಿ! ನನ್ನ ಪುತ್ರರು ಕುಪಿತರಾದ ಬ್ರಾಹ್ಮಣರ ಶಾಪದಿಂದ ಸಾಯದೇ, ಭಗವಾನ್ ಸಾಕ್ಷಾತ್ ಶ್ರೀಮನ್ ನಾರಾಯಣನ ಕೈಯಿಂದಲೇ ಮರಣ ಹೊಂದುವಂತಾದರೆ ನನಗೂ ಸಮ್ಮತವೇ. ॥ ೪೧ ॥ ಯಾವ ಜೀವಿಯು ಬ್ರಾಹ್ಮಣರ ಶಾಪದಿಂದ ಸುಟ್ಟುಹೋದವನು ಅಥವಾ ಪ್ರಾಣಿಗಳನ್ನು ಭಯಪಡಿಸುವವನು ಯಾವುದೇ ಯೋನಿಯಲ್ಲಿ ಹುಟ್ಟಿದರೂ ಅವನ ಮೇಲೆ ನಾರಕೀಯ ಜೀವಿಗಳೂ ಕೂಡ ದಯೆಮಾಡುವುದಿಲ್ಲ. ॥ ೪೨ ॥

ಕಶ್ಯಪರು ಹೇಳಿದರು – ದೇವಿ! ನೀನು ಗೈದ ಪಾಪದ ಬಗೆಗೆ ಶೋಕವನ್ನೂ, ಪಶ್ಚಾತ್ತಾಪವನ್ನೂ ತೋರಿದ್ದೀಯೆ. ನಿನಗೆ ಉಚಿತ-ಅನುಚಿತ ಇದರ ವಿವೇಕವು ಒಡನೆಯೇ ಉಂಟಾಗಿದೆ. ಇದಲ್ಲದೆ ಭಗವಂತನಾದ ವಿಷ್ಣುವಿನಲ್ಲಿಯೂ, ಶಂಭುವಿನಲ್ಲಿಯೂ ಗೌರವವನ್ನೂ, ನನ್ನಲ್ಲಿ ಆದರವನ್ನೂ ತೋರಿಸಿರುವೆ. ಆದ್ದರಿಂದ ನಿನ್ನಲ್ಲಿ ಹುಟ್ಟುವ ಇಬ್ಬರು ಪುತ್ರರಲ್ಲಿ ಒಬ್ಬನಿಗೆ ನಾಲ್ವರು ಪುತ್ರರಾಗುವರು. ಅವರಲ್ಲಿ ಒಬ್ಬನು ಮಾತ್ರ ಸಾಧು-ಸಜ್ಜನ ಶಿರೋಮಣಿಯಾಗುವನು. ಸತ್ಪುರುಷರ ಗೌರವಕ್ಕೆ ಪಾತ್ರನಾಗಿ, ಆತನ ಪವಿತ್ರವಾದ ಕೀರ್ತಿಯನ್ನು ಭಕ್ತರು ಭಗವಂತನ ಗುಣಕೀರ್ತನೆಯೊಡನೆ ಸೇರಿಸಿ ಹಾಡುವರು. ॥ ೪೩-೪೪ ॥ ಬಣ್ಣಗೆಟ್ಟ ಚಿನ್ನವನ್ನು ಪದೇ-ಪದೇ ಪುಟಕ್ಕಿಟ್ಟು ಶುದ್ಧಗೊಳಿಸಿದಂತೆಯೇ, ಸಜ್ಜನರು ಆತನ ಆಚರಣೆಗಳನ್ನು ಅನುಸರಿಸುವುದಕ್ಕಾಗಿ ನಿರ್ವೈರತೆ ಮುಂತಾದ ಉಪಾಯಗಳಿಂದ ತಮ್ಮ ಅಂತಃಕರಣವನ್ನು ಶೋಧಿಸಿಕೊಳ್ಳುವರು. ॥ ೪೫ ॥ ಯಾರ ಕೃಪೆಯಿಂದ ಅವನ ಸ್ವರೂಪಭೂತವಾದ ಈ ಜಗತ್ತು ಆನಂದಿತವಾಗುತ್ತದೋ ಆ ಸ್ವಯಂ ಪ್ರಕಾಶ ಭಗವಂತನೂ ಕೂಡ ಆತನ ಅನನ್ಯ ಭಕ್ತಿಯಿಂದ ಸಂತುಷ್ಟನಾಗುವನು. ॥ ೪೬ ॥ ದಿತಿಯೇ! ಆ ಬಾಲಕನು ದೊಡ್ಡ ಭಗವದ್ಭಕ್ತನೂ, ಉದಾರ ಹೃದಯನೂ, ಪ್ರಭಾವಶಾಲಿಯೂ, ಮಹಾಪುರುಷರಿಗೂ ಪೂಜ್ಯನೂ ಆಗುವನು. ಪ್ರೌಢವಾದ ಭಕ್ತಿ

ಸ ವೈ ಮಹಾಭಾಗವತೋ ಮಹಾತ್ಮಾ
ಮಹಾನುಭಾವೋ ಮಹತಾಂ ಮಹಿಷ್ಠಃ ।
ಪ್ರವೃದ್ಧಭಕ್ತ್ಯಾ ಹ್ಯನುಭಾವಿತಾಶಯೇ
ನಿವೇಶ್ಯ ವೈಕುಂಠಮಿಮಂ ವಿಹಾಸ್ಯತಿ ॥ ೪೭ ॥

ಭಾವದಿಂದ ವಿಶುದ್ಧ ಮತ್ತು ಭಗವದ್ಭಾವದಿಂದ ತುಂಬಿದ ಅಂತಃಕರಣದಲ್ಲಿ ಶ್ರೀಭಗವಂತನನ್ನು ನೆಲೆಗೊಳಿಸಿಕೊಂಡು ದೇಹಾಭಿಮಾನವನ್ನು ತ್ಯಜಿಸುವನು. ॥ ೪೭ ॥

ಅಲಂಪಟಃ ಶೀಲಧರೋ ಗುಣಾಕರೋ
ಹೃಷ್ಟಃ ಪರರ್ಧ್ಯಾ ವ್ಯಥಿತೋ ದುಃಖಿತೇಷು ।
ಅಭೂತಶತ್ರುರ್ಜಗತಃ ಶೋಕಹರ್ತಾ
ನೈದಾಘಿಕಂ ತಾಪಮಿವೋಡುರಾಜಃ ॥ ೪೮ ॥

ಅವನು ವಿಷಯಗಳಲ್ಲಿ ಅಲಂಪಟನೂ, ಗುಣಶೀಲ ಸಂಪನ್ನನೂ, ಗುಣಗಳ ಗಣಿಯೂ, ಮತ್ತೊಬ್ಬರ ಸಮೃದ್ಧಿಯಲ್ಲಿ ಸುಖಿಯೂ, ದುಃಖದಲ್ಲಿ ದುಃಖಿಯೂ ಆಗುವನು. ಅವನಿಗೆ ಯಾರೂ ಶತ್ರುಗಳೇ ಇರುವುದಿಲ್ಲ. ಚಂದ್ರನು ಬೇಸಿಗೆಯ ತಾಪವನ್ನು ಕಳೆಯುವಂತೆ ಅವನು ಜಗತ್ತಿನ ಶೋಕವನ್ನು ಹೋಗಲಾಡಿಸುವನು. ॥ ೪೮ ॥

ಅಂತರ್ಬಹಿಶ್ಚಾಮಲಮಬ್ಜನೇತ್ರಂ
ಸ್ವಪೂರುಷೇಚ್ಛಾನುಗೃಹೀತರೂಪಮ್ ।
ಪೌತ್ರಸ್ತವ ಶ್ರೀಲಲನಾಲಲಾಮಂ
ದ್ರಷ್ಟಾ ಸ್ಫುರತ್ಕುಂಡಲಮಂಡಿತಾನನಮ್ ॥ ೪೯ ॥

ಯಾರು ಈ ಪ್ರಪಂಚದ ಒಳ-ಹೊರಗೆ ಎಲ್ಲೆಡೆ ವಿರಾಜಮಾನನಾಗಿದ್ದಾನೋ, ತನ್ನ ಭಕ್ತರ ಬಯಕೆಗೆ ತಕ್ಕಂತೆ ಆಗಾಗ ತನ್ನ ಮಂಗಳವಿಗ್ರಹವನ್ನು ಪ್ರಕಟಪಡಿಸುವನೋ, ಥಳ-ಥಳಿಸುತ್ತಿರುವ ಕುಂಡಲಗಳಿಂದ ಶೋಭಿಸುವ ಮುಖಮಂಡಲದಿಂದ ಕಂಗೊಳಿಸುತ್ತಿದ್ದಾನೆಯೋ, ಅಂತಹ ಶ್ರೀಲಕ್ಷ್ಮೀದೇವಿಗೂ ಸಮೃದ್ಧಿಯನ್ನು ತುಂಬುತ್ತಿರುವ ಕಮಲಾಕ್ಷನಾದ ಶ್ರೀಹರಿಯನ್ನು ನಿನ್ನ ಮೊಮ್ಮಗನು ಪ್ರತ್ಯಕ್ಷವಾಗಿ ದರ್ಶಿಸುವನು. ॥ ೪೯ ॥

ಮೈತ್ರೇಯ ಉವಾಚ

ಶ್ರುತ್ವಾ ಭಾಗವತಂ ಪೌತ್ರಮಮೋದತ ದಿತಿರ್ಭೃಶಮ್ ।
ಪುತ್ರಯೋಶ್ಚ ವಧಂ ಕೃಷ್ಣಾದ್ವಿದಿತ್ವಾಽಽಸೀನ್ಮಹಾಮನಾಃ ॥ ೫೦ ॥

ಶ್ರೀಮೈತ್ರೇಯರು ಹೇಳುತ್ತಾರೆ – ವಿದುರನೇ! ತನ್ನ ಪೌತ್ರನು ಪರಮ ಭಾಗವತನಾಗುವನೆಂದು ಕೇಳಿ ದಿತಿಗೆ ತುಂಬಾ ಸಂತೋಷವಾಯಿತು. ತನ್ನ ಪುತ್ರರು ಸಾಕ್ಷಾತ್ ಶ್ರೀಹರಿಯಿಂದ ಸಂಹರಿಸಲ್ಪಡುವರು ಎಂಬುದನ್ನು ಕೇಳಿ ಇನ್ನೂ ಉತ್ಸಾಹವುಂಟಾಯಿತು. ॥ ೫೦ ॥

ಹದಿನಾಲ್ಕನೆಯ ಅಧ್ಯಾಯವು ಮುಗಿಯಿತು. ॥ ೧೪ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ತೃತೀಯಸ್ಕಂಧೇ
ದಿತಿ-ಕಶ್ಯಪಸಂವಾದೇ ಚತುರ್ದಶೋಽಧ್ಯಾಯಃ ॥ ೧೪ ॥

ಹದಿನೈದನೆಯ ಅಧ್ಯಾಯ

ಜಯ – ವಿಜಯರಿಗೆ ಸನಕಾದಿಗಳ ಶಾಪ

ಮೈತ್ರೇಯ ಉವಾಚ

ಪ್ರಾಜಾಪತ್ಯಂ ತು ತತ್ತೇಜಃ ಪರತೇಜೋಹನಂ ದಿತಿಃ ।
ದಧಾರ ವರ್ಷಾಣಿ ಶತಂ ಶಂಕಮಾನಾ ಸುರಾರ್ದನಾತ್ ॥ ೧ ॥

ಲೋಕೇ ತೇನ ಹತಾಲೋಕೇ ಲೋಕಪಾಲಾ ಹತೌಜಸಃ ।
ನ್ಯವೇದಯನ್ವಿಶ್ವಸೃಜೇ ಧ್ವಾಂತವ್ಯತಿಕರಂ ದಿಶಾಮ್ ॥ ೨ ॥

ಶ್ರೀಮೈತ್ರೇಯರು ಹೇಳುತ್ತಾರೆ – ವಿದುರನೇ! ದಿತಿದೇವಿಯು ತನ್ನ ಪುತ್ರರಿಂದ ದೇವತೆಗಳಿಗೆ ಸಂಕಷ್ಟವುಂಟಾಗುವುದು ಎಂದು ಶಂಕಿಸಿ, ಇತರರ ತೇಜಸ್ಸನ್ನು ಧ್ವಂಸಮಾಡುವ ಕಶ್ಯಪರ ಮಹಾತೇಜಸ್ಸನ್ನು (ಗರ್ಭವನ್ನು) ನೂರುವರ್ಷಕಾಲ ತನ್ನ ಹೊಟ್ಟೆಯಲ್ಲೇ ಇರಿಸಿಕೊಂಡಳು. ॥ ೧ ॥ ■ ಗರ್ಭಸ್ಥ ತೇಜದಿಂದಲೇ ಲೋಕದಲ್ಲಿ ಸೂರ್ಯಾದಿಗಳ ಪ್ರಕಾಶವು ಕ್ಷೀಣವಾಗತೊಡಗಿತು ಮತ್ತು ಇಂದ್ರಾದಿ ಲೋಕಪಾಲರೂ ತೇಜೋಹೀನರಾದರು. ಆಗ ಅವರೆಲ್ಲರೂ ಬ್ರಹ್ಮದೇವರ ಬಳಿಗೆ ಹೋಗಿ ಎಲ್ಲ ದಿಕ್ಕುಗಳಲ್ಲಿಯೂ ಕತ್ತಲೆ ಕವಿದು ಅವ್ಯವಸ್ಥೆ ಉಂಟಾಗಿದೆ ಎಂಬುದನ್ನು ಹೇಳಿಕೊಂಡರು. ॥ ೨ ॥

ದೇವಾ ಊಚುಃ

ತಮ ಏತದ್ವಿಭೋ ವೇತ್ಥ ಸಂವಿಗ್ನಾ ಯದ್ವಯಂ ಭೃಶಮ್ ।
ನ ಹ್ಯವ್ಯಕ್ತಂ ಭಗವತಃ ಕಾಲೇನಾಸ್ಪೃಷ್ಟವರ್ತ್ಮನಃ ॥ ೩ ॥

ಇಂದ್ರಾದಿ ದೇವತೆಗಳು ಪ್ರಾರ್ಥಿಸಿಕೊಂಡರು – ಪೂಜ್ಯರೇ! ತಾವು ಸರ್ವಜ್ಞರು. ಕಾಲವು ತಮ್ಮ ಜ್ಞಾನಶಕ್ತಿಯನ್ನು ಕುಂಠಿತಗೊಳಿಸಲಾರದು. ಆದ್ದರಿಂದ ತಮಗೆ ಅರಿವಿರದ ವಿಷಯ ಯಾವುದೂ ಇಲ್ಲ. ಈ ಅಂಧಕಾರದ ವಿಷಯವೂ ತಮಗೆ ತಿಳಿದೇ

ದೇವದೇವ ಜಗದ್ಧಾತರ್ಲೋಕನಾಥಶಿಖಾಮಣೇ ।
ಪರೇಷಾಮಪರೇಷಾಂ ತ್ವಂ ಭೂತಾನಾಮಸಿ ಭಾವವಿತ್ ॥ ೪ ॥

ನಮೋ ವಿಜ್ಞಾನವೀರ್ಯಾಯ ಮಾಯಯೇದಮುಪೇಯುಷೇ ।
ಗೃಹೀತಗುಣಭೇದಾಯ ನಮಸ್ತೇಽವ್ಯಕ್ತಯೋನಯೇ ॥ ೫ ॥

ಯೇ ತ್ವಾನನ್ಯೇನ ಭಾವೇನ ಭಾವಯಂತ್ಯಾತ್ಮಭಾವನಮ್ ।
ಆತ್ಮನಿ ಪ್ರೋತಭುವನಂ ಪರಂ ಸದಸದಾತ್ಮಕಮ್ ॥ ೬ ॥

ತೇಷಾಂ ಸುಪಕ್ವಯೋಗಾನಾಂ ಜಿತಶ್ವಾಸೇಂದ್ರಿಯಾತ್ಮನಾಮ್ ।
ಲಬ್ಧಯುಷ್ಮತ್ಪ್ರಸಾದಾನಾಂ ನ ಕುತಶ್ಚಿತ್ಪರಾಭವಃ ॥ ೭ ॥

ಯಸ್ಯ ವಾಚಾ ಪ್ರಜಾಃ ಸರ್ವಾ ಗಾವಸ್ತಂತ್ಯೇವ ಯಂತ್ರಿತಾಃ ।
ಹರಂತಿ ಬಲಿಮಾಯತ್ತಾಸ್ತಸ್ಮೈ ಮುಖ್ಯಾಯ ತೇ ನಮಃ ॥ ೮ ॥

ಸ ತ್ವಂ ವಿಧತ್ಸ್ವ ಶಂ ಭೂಮಂಸ್ತಮಸಾ ಲುಪ್ತಕರ್ಮಣಾಮ್ ।
ಅದಭ್ರದಯಯಾ ದೃಷ್ಟ್ಯಾ ಆಪನ್ನಾನರ್ಹಸೀಕ್ಷಿತುಮ್ ॥ ೯ ॥

ಏಷ ದೇವ ದಿತೇರ್ಗರ್ಭ ಓಜಃ ಕಾಶ್ಯಪಮರ್ಪಿತಮ್ ।
ದಿಶಸ್ತಿಮಿರಯನ್ಸರ್ವಾ ವರ್ಧತೇಽಗ್ನಿರಿವೈಧಸಿ ॥ ೧೦ ॥

ಮೈತ್ರೇಯ ಉವಾಚ

ಸ ಪ್ರಹಸ್ಯ ಮಹಾಬಾಹೋ ಭಗವಾನ್ ಶಬ್ದಗೋಚರಃ ।
ಪ್ರತ್ಯಾಚಷ್ಟಾತ್ಮಭೂರ್ದೇವಾನ್ ಪ್ರೀಣನ್ರುಚಿರಯಾ ಗಿರಾ ॥ ೧೧ ॥

ಬ್ರಹ್ಮೋವಾಚ

ಮಾನಸಾ ಮೇ ಸುತಾ ಯುಷ್ಮತ್ಪೂರ್ವಜಾಃ ಸನಕಾದಯಃ ।
ಚೇರುರ್ವಿಹಾಯಸಾ ಲೋಕಾನ್‌ಲ್ಲೋಕೇಷು ವಿಗತಸ್ಪೃಹಾಃ ॥ ೧೨ ॥

ತ ಏಕದಾ ಭಗವತೋ ವೈಕುಂಠಸ್ಯಾಮಲಾತ್ಮನಃ ।
ಯಯುರ್ವೈಕುಂಠನಿಲಯಂ ಸರ್ವಲೋಕನಮಸ್ಕೃತಮ್ ॥ ೧೩ ॥

ಇದೆ. ನಾವಂತೂ ಇದರಿಂದ ತುಂಬಾ ಭಯಗೊಂಡಿರುವೆವು. ॥ ೩ ॥ ದೇವಾಧಿದೇವಾ! ನೀವು ಜಗತ್ತನ್ನು ಸೃಷ್ಟಿಸಿದವರು, ಸಮಸ್ತ ಲೋಕಪಾಲಕರ ಮುಕುಟಮಣಿಗಳಾಗಿದ್ದೀರಿ. ನೀವು ಚಿಕ್ಕ-ದೊಡ್ಡ ಎಲ್ಲ ಜೀವಿಗಳ ಭಾವವನ್ನು ತಿಳಿದಿರುವಿರಿ. ॥ ೪ ॥ ದೇವಾ! ತಾವು ವಿಜ್ಞಾನ ಬಲ ಸಂಪನ್ನರು. ಮಾಯೆಯಿಂದಲೇ ಈ ಚತುರ್ಮುಖ ರೂಪವನ್ನು ಮತ್ತು ರಜೋಗುಣವನ್ನು ಸ್ವೀಕರಿಸಿರುವಿರಿ. ತಮ್ಮ ಉತ್ಪತ್ತಿಗೆ ನಿಜವಾದ ಕಾರಣವನ್ನು ಯಾರೂ ತಿಳಿಯಲಾರರು. ಇಂತಹ ಅಪ್ರಮೇಯಮಹಿಮರಾದ ತಮಗೆ ನಮೋ ನಮಃ ॥ ೫ ॥ ಸಮಸ್ತ ಭುವನಗಳು ತಮ್ಮಲ್ಲಿ ಅಡಗಿವೆ. ಕಾರ್ಯ-ಕಾರಣ ರೂಪವಾದ ಸರ್ವಜಗತ್ತು ತಮ್ಮ ಶರೀರವೇ ಆಗಿದೆ. ಆದರೂ ತಾವು ವಾಸ್ತವವಾಗಿ ಈ ಜಗತ್ತನ್ನು ಮೀರಿದವರು. ಸಮಸ್ತ ಜೀವಿಗಳಿಗೂ ಉತ್ಪತ್ತಿಸ್ಥಾನವಾಗಿರುವ ತಮ್ಮನ್ನು ಅನನ್ಯ ಭಾವದಿಂದ ಧ್ಯಾನಮಾಡುವ ಸಿದ್ಧಯೋಗಿಗಳಿಗೆ ಯಾರಿಂದಲೂ ಪರಾಭವ ಉಂಟಾಗುವುದಿಲ್ಲ. ಏಕೆಂದರೆ ಅವರು ನಿಮ್ಮ ಕರುಣಾಕಟಾಕ್ಷದಿಂದ ಕೃತಕೃತ್ಯರಾಗಿ ಇರುವರು. ಅವರು ಪ್ರಾಣ, ಇಂದ್ರಿಯ, ಮನಸ್ಸುಗಳನ್ನು ಜಯಿಸಿಬಿಟ್ಟಿರುವುದರಿಂದ ಅವರ ಯೋಗವು ಪರಿಪಕ್ವವಾಗಿ ಬಿಟ್ಟಿರುವುದು. ॥ ೬-೭ ॥ ಎತ್ತುಗಳು ಮೂಗುದಾರಕ್ಕೆ ಕಟ್ಟಲ್ಪಟ್ಟು ಕೆಲಸಮಾಡುವಂತೆ – ಎಲ್ಲ ಪ್ರಜೆಗಳೂ ತಮ್ಮ ವೇದವಾಣಿಯಿಂದ ಬದ್ಧರಾಗಿ, ತಮಗೆ ಅಧೀನರಾಗಿ ನಿಯಮಪೂರ್ವಕವಾಗಿ ಕರ್ಮಾನುಷ್ಠಾನಮಾಡಿ ತಮಗೆ ಪೂಜೆಯನ್ನು ಸಮರ್ಪಿಸುತ್ತಾರೆ. ಎಲ್ಲರನ್ನೂ ನಿಯಮಿಸುವ ಮುಖ್ಯಪ್ರಾಣರೇ ತಾವು. ಇಂತಹ ಸರ್ವನಿಯಾಮಕರಾದ ತಮಗೆ ನಮಸ್ಕಾರವು. ॥ ೮ ॥ ಬೃಹತ್ಸ್ವರೂಪರಾದ ದೇವರೇ! ಈ ಕತ್ತಲೆಯಿಂದ ಹಗಲು ರಾತ್ರಿಗಳ ವಿಭಾಗವೇ ಅಸ್ಪಷ್ಟವಾಗಿ ಲೋಕದ ಎಲ್ಲ ಕರ್ಮಗಳು ಲುಪ್ತವಾಗುತ್ತಿವೆ. ಇದರಿಂದ ಎಲ್ಲ ಜನರೂ ದುಃಖಕ್ಕೆ ಗುರಿಯಾಗಿದ್ದಾರೆ. ಅವರ ಕಲ್ಯಾಣವನ್ನುಂಟುಮಾಡು. ಶರಣಾಗತರಾಗಿರುವ ನಮ್ಮನ್ನು ದಯಾದೃಷ್ಟಿಯಿಂದ ದಿಟ್ಟಿಸಿರಿ. ॥ ೯ ॥ ದೇವಾ! ಬೆಂಕಿಯು ಕಟ್ಟಿಗೆಯಲ್ಲಿ ಸೇರಿ ಹೆಚ್ಚುವಂತೆ ಕಶ್ಯಪರ ವೀರ್ಯದಿಂದ ಸ್ಥಾಪಿತವಾದ ಈ ದಿತಿಯ ಗರ್ಭವು ಎಲ್ಲ ದಿಕ್ಕುಗಳನ್ನೂ ಅಂಧಕಾರಮಯವನ್ನಾಗಿ ಮಾಡುತ್ತಾ ಕ್ರಮೇಣ ಬೆಳೆಯುತ್ತಿದೆ. ॥ ೧೦ ॥

ಶ್ರೀಮೈತ್ರೇಯರು ಹೇಳುತ್ತಾರೆ – ಮಹಾಬಾಹುವೇ! ದೇವತೆಗಳ ಪ್ರಾರ್ಥನೆಯನ್ನು ಕೇಳಿ ಬ್ರಹ್ಮದೇವರು ನಸುನಕ್ಕು ತಮ್ಮ ಮಧುರವಾದ ವಾಣಿಯಿಂದ ಅವರನ್ನು ಸಂತೋಷಪಡಿಸಿ ಹೀಗೆ ಹೇಳತೊಡಗಿದರು – ॥ ೧೧ ॥

ಶ್ರೀಬ್ರಹ್ಮದೇವರೆಂದರು – ಎಲೈ ದೇವತೆಗಳಿರಾ! ನಿಮ್ಮ ಪೂರ್ವಜರೂ, ನನ್ನ ಮಾನಸಪುತ್ರರೂ ಆದ ಸನಕಾದಿಗಳು ಪರಮ ವೈರಾಗ್ಯ ಸಂಪನ್ನರಾಗಿ, ಲೋಕಗಳ ಆಸಕ್ತಿಯನ್ನು ತೊರೆದು ಸಮಸ್ತ ಲೋಕಗಳಲ್ಲಿಯೂ ಆಕಾಶಮಾರ್ಗದಿಂದ ಸಂಚರಿಸುತ್ತಿದ್ದರು. ॥ ೧೨ ॥ ಒಮ್ಮೆ ಅವರು ಶುದ್ಧಸತ್ತ್ವಮಯವಾಗಿ ಸಮಸ್ತಲೋಕಗಳಿಗೂ ಮೇಲೆ ವಿರಾಜಿಸುತ್ತಿರುವ ವೈಕುಂಠಧಾಮಕ್ಕೆ ಹೋದರು. ॥ ೧೩ ॥

ವಸಂತಿ ಯತ್ರ ಪುರುಷಾಃ ಸರ್ವೇ ವೈಕುಂಠ ಮೂರ್ತಯಃ ।
ಯೇಽನಿಮಿತ್ತನಿಮಿತ್ತೇನ ಧರ್ಮೇಣಾರಾಧಯನ್ ಹರಿಮ್
॥ ೧೪ ॥

ಯತ್ರ ಚಾದ್ಯಃ ಪುಮಾನಾಸ್ತೇ ಭಗವಾನ್ ಶಬ್ದಗೋಚರಃ ।
ಸತ್ತ್ವಂ ವಿಷ್ಟಭ್ಯ ವಿರಜಂ ಸ್ವಾನಾಂ ನೋ ಮೃಡಯನ್ವೃಷಃ
॥ ೧೫ ॥

ಯತ್ರ ನೈಃಶ್ರೇಯಸಂ ನಾಮ ವನಂ ಕಾಮದುಘೈರ್ದ್ರುಮೈಃ ।
ಸರ್ವರ್ತುಶ್ರೀಭಿರ್ವಿಭ್ರಾಜತ್ಕೈವಲ್ಯಮಿವ ಮೂರ್ತಿಮತ್
॥ ೧೬ ॥

ವೈಮಾನಿಕಾಃ ಸಲಲನಾಶ್ಚರಿತಾನಿ ಯತ್ರ
ಗಾಯಂತಿ ಲೋಕಶಮಲಕ್ಷಪಣಾನಿ ಭರ್ತುಃ ।
ಅಂತರ್ಜಲೇಽನುವಿಕಸನ್ಮಧುಮಾಧವೀನಾಂ
ಗಂಧೇನ ಖಂಡಿತಧಿಯೋಽಪ್ಯನಿಲಂ ಕ್ಷಿಪಂತಃ ॥ ೧೭ ॥

ಪಾರಾವತಾನ್ಯಭೃತಸಾರಸಚಕ್ರವಾಕ-
ದಾತ್ಯೂಹಹಂಸಶುಕತಿತ್ತಿರಿಬರ್ಹಿಣಾಂ ಯಃ ।
ಕೋಲಾಹಲೋ ವಿರಮತೇಽಚಿರಮಾತ್ರಮುಚ್ಚೈ-
ರ್ಭೃಂಗಾಧಿಪೇ ಹರಿಕಥಾಮಿವ ಗಾಯಮಾನೇ ॥ ೧೮ ॥

ಮಂದಾರಕುಂದಕುರವೋತ್ಪಲಚಂಪಕಾರ್ಣ-
ಪುನ್ನಾಗನಾಗಬಕುಲಾಂಬುಜಪಾರಿಜಾತಾಃ ।
ಗಂಧೇಽರ್ಚಿತೇ ತುಲಸಿಕಾಭರಣೇನ ತಸ್ಯಾ
ಯಸ್ಮಿಂಸ್ತಪಃ ಸುಮನಸೋ ಬಹು ಮಾನಯಂತಿ ॥ ೧೯ ॥

ಯತ್ಸಂಕುಲಂ ಹರಿಪದಾನತಿಮಾತ್ರ ದೃಷ್ಟೈ-
ರ್ವೈದೂರ್ಯಮಾರಕತಹೇಮಮಯೈರ್ವಿಮಾನೈಃ ।
ಯೇಷಾಂ ಬೃಹತ್ಕಟಿತಟಾಃ ಸ್ಮಿತಶೋಭಿಮುಖ್ಯಃ
ಕೃಷ್ಣಾತ್ಮನಾಂ ನ ರಜ ಆದಧುರುತ್ಸ್ಮಯಾದ್ಯೈಃ ॥ ೨೦ ॥

ಅಲ್ಲಿ ಇರುವವರೆಲ್ಲರೂ ವಿಷ್ಣುರೂಪಿಗಳೇ ಆಗಿದ್ದಾರೆ. ಬೇರೆ ಎಲ್ಲ ರೀತಿಯ ಕಾಮನೆಗಳನ್ನು ತ್ಯಜಿಸಿ ಕೇವಲ ಭಗವಚ್ಚರಣಗಳ ಶರಣಾಗತಿಯನ್ನು ಪಡೆಯಲಿಕ್ಕಾಗಿಯೇ ತಮ್ಮ ಧರ್ಮದ ಮೂಲಕ ಶ್ರೀಮಹಾವಿಷ್ಣುವನ್ನು ಆರಾಧನೆ ಮಾಡುವವರಿಗೆ ಮಾತ್ರ ಆ ಲೋಕವು ಪ್ರಾಪ್ತವಾಗುತ್ತದೆ. ॥ ೧೪ ॥ ಅಲ್ಲಿ ವೇದ-ವೇದಾಂತ ಪ್ರತಿಪಾದ್ಯನಾಗಿರುವ ಧರ್ಮಮೂರ್ತಿಯಾದ ಶ್ರೀಆದಿನಾರಾಯಣನು ನಮ್ಮಂತಹ ಭಕ್ತರಿಗೆ ಸುಖವನ್ನು ಕೊಡುವುದಕ್ಕಾಗಿಯೇ ಶುದ್ಧಸತ್ತ್ವಮಯ ಸ್ವರೂಪವನ್ನು ಧರಿಸಿಕೊಂಡು ಯಾವಾಗಲೂ ವಿರಾಜಮಾನನಾಗಿದ್ದಾನೆ. ॥ ೧೫ ॥ ಆ ವೈಕುಂಠದಲ್ಲಿ ಮೂರ್ತಿವತ್ತಾದ ಕೈವಲ್ಯದಂತೆಯೇ ಕಂಗೊಳಿಸುವ 'ನೈಃಶ್ರೇಯಸ' ಎಂಬ ದಿವ್ಯೋದ್ಯಾನವು ಕಂಡುಬರುವುದು. ಅದು ಎಲ್ಲ ರೀತಿಯ ಕಾಮನೆಗಳನ್ನು ಪೂರ್ಣಗೊಳಿಸುವ ವೃಕ್ಷಗಳಿಂದ ಸುಶೋಭಿತವಾಗಿದ್ದು, ಎಲ್ಲ ಸಮಯದಲ್ಲಿ ಆರು ಋತುಗಳ ಶೋಭೆಯಿಂದ ಸಂಪನ್ನವಾಗಿದೆ. ॥ ೧೬ ॥

ಅಲ್ಲಿ ವಿಮಾನಗಳಲ್ಲಿ ಸಂಚರಿಸುವ ಗಂಧರ್ವರು – ಜನರ ಸರ್ವಪಾಪಗಳನ್ನು ಸುಟ್ಟುಹಾಕುವಂತಹ ತಮ್ಮ ಒಡೆಯನ ಪವಿತ್ರ ಲೀಲೆಗಳನ್ನು ತಮ್ಮ ಮನದನ್ನೆಯರೊಡನೆ ಹಾಡುತ್ತಾ ಇರುತ್ತಾರೆ. ಆ ಸಮಯದಲ್ಲಿ ಸರೋವರಗಳಲ್ಲಿ ಅರಳಿರುವ ಮಕರಂದದಿಂದ ಕೂಡಿದ ವಸಂತಸಮಯದ ಮಾಧವೀಲತೆಗಳ ಸುಮಧುರವಾದ ಗಂಧವು ಅವರ ಚಿತ್ತವನ್ನು ತನ್ನೆಡೆಗೆ ಸೆಳೆದು ಕೊಳ್ಳಲು ಬಯಸುತ್ತದೆ. ಆದರೆ ಅವರು ಅದರ ಕಡೆಗೆ ಗಮನವೇ ಕೊಡದೆ, ಬದಲಿಗೆ ಆ ಕಂಪನ್ನು ಹೊತ್ತುತರುವ ಮಂದಾನಿಲವನ್ನೇ ಆಕ್ಷೇಪಿಸುತ್ತಾರೆ. ॥ ೧೭ ॥ ದುಂಬಿಗಳ ರಾಜನು ತಾರಸ್ವರದಿಂದ ಝೇಂಕರಿಸುತ್ತಾ ಶ್ರೀಹರಿಕಥೆಯನ್ನು ಗಾನಮಾಡುತ್ತಿರುವುದೋ, ಎಂಬಂತೆ ಕಂಡುಬಂದಾಗ ಪಾರಿವಾಳ, ಕೋಗಿಲೆ, ಸಾರಸ, ಚಕ್ರವಾಕ, ಚಾತಕ, ಹಂಸ, ಗಿಳಿ, ತಿತ್ತಿರಿ ಮತ್ತು ನವಿಲುಗಳ ಕೋಲಾಹಲ ಶಬ್ದವು – ತಾವೂ ಆ ಕೀರ್ತನೆಯ ಆನಂದದಲ್ಲಿ ಮೈಮರೆತಿರುವರೋ ಎಂಬಂತೆ ಕೊಂಚ ಕಾಲ ನಿಂತುಹೋಗುವುದು. ॥ ೧೮ ॥ ಆ ದಿವ್ಯವನದಲ್ಲಿರುವ ಮಂದಾರ, ಮಲ್ಲಿಗೆ, ಕುರವಕ, ನೈದಿಲೆ, ಸಂಪಿಗೆ, ಪುನ್ನಾಗ, ನಾಗಕೇಸರ, ಬಕುಳ, ಅಂಬುಜ, ಪಾರಿಜಾತ ಮುಂತಾದ ಪುಷ್ಪಗಳು ತುಳಸಿಗಿಂತಲೂ ಹೆಚ್ಚು ಸುವಾಸನೆ ಇದ್ದರೂ – ಶ್ರೀಹರಿಯು ತುಳಸಿಯಿಂದ ವಿಶೇಷವಾಗಿ ತನ್ನ ಶರೀರವನ್ನು ಅಲಂಕರಿಸಿಕೊಂಡು, ತುಳಸಿಯ ಕಂಪನ್ನೇ ಹೆಚ್ಚಾಗಿ ಆಘ್ರಾಣಿಸಿ ಗೌರವಿಸುತ್ತಾನೆ – ಎಂಬುದನ್ನು ಕಂಡು ಅವು ಆ ತುಳಸಿಯ ತಪಸ್ಸನ್ನು ಅತಿಶಯವಾಗಿ ಕೊಂಡಾಡುತ್ತವೆ. ॥ ೧೯ ॥ ಆ ದಿವ್ಯಲೋಕವು ವೈಡೂರ್ಯ, ಮರಕತಮಣಿ ಮತ್ತು ಸುವರ್ಣದಿಂದ ನಿರ್ಮಿತವಾದ ವಿಮಾನಗಳಿಂದ ತುಂಬಿಹೋಗಿದೆ. ಇವು ಕರ್ಮಫಲವಾಗಿ ದೊರೆಯುವುದಿಲ್ಲ, ಶ್ರೀಹರಿಯ ಪಾದಪದ್ಮಗಳನ್ನು ಆರಾಧಿಸುವುದರಿಂದ ಮಾತ್ರವೇ ದೊರೆಯುವ ದಿವ್ಯ ವಿಮಾನಗಳು. ಇವುಗಳಲ್ಲಿ ಕುಳಿತಿರುವ ಭಗವದ್ಭಕ್ತ ಶಿರೋಮಣಿಗಳು ಶ್ರೀಕೃಷ್ಣನಲ್ಲಿ ನೆಟ್ಟ ಚಿತ್ತವುಳ್ಳವರಾಗಿ ತದ್ಗತಪ್ರಾಣರಾಗಿರುತ್ತಾರೆ. ದೊಡ್ಡ ನಿತಂಬವುಳ್ಳವರಾಗಿ ಕಿರುನಗೆಯನ್ನು ಸೂಸುತ್ತಿರುವ ಸುಂದರಿಯರೂ ಇವರ ಮನಸ್ಸಿನಲ್ಲಿ ಕಾಮವಿಕಾರವನ್ನು ಉಂಟುಮಾಡಲಾರರು. ॥ ೨೦ ॥

ಶ್ರೀ ರೂಪಿಣೀ ಕ್ವಣಯತೀ ಚರಣಾರವಿಂದಂ
ಲೀಲಾಂಬುಜೇನ ಹರಿಸದ್ಮನಿ ಮುಕ್ತದೋಷಾ ।
ಸಂಲಕ್ಷ್ಯತೇ ಸ್ಫಟಿಕಕುಡ್ಯ ಉಪೇತಹೇಮ್ನಿ
ಸಮ್ಮಾರ್ಜತೀವ ಯದನುಗ್ರಹಣೇಽನ್ಯಯತ್ನಃ ॥ ೨೦ ॥

ವಾಪೀಷು ವಿದ್ರುಮತಟಾಸ್ವಮಲಾಮೃತಾಪ್ಸು
ಪ್ರೇಷ್ಯಾನ್ವಿತಾ ನಿಜವನೇ ತುಲಸೀಭಿರೀಶಮ್ ।
ಅಭ್ಯರ್ಚತೀ ಸ್ವಲಕಮುನ್ನಸಮೀಕ್ಷ್ಯ ವಕ್ತ್ರ-
ಮುಚ್ಛೇಷಿತಂ ಭಗವತೇತ್ಯಮತಾಂಗ ಯಚ್ಛ್ರೀಃ ॥ ೨೧ ॥

ಯನ್ನ ವ್ರಜಂತ್ಯಘಭಿದೋ ರಚನಾನುವಾದಾ-
ಚ್ಛೃಣ್ವಂತಿ ಯೇಽನ್ಯವಿಷಯಾಃ ಕುಕಥಾ ಮತಿಘ್ನೀಃ ।
ಯಾಸ್ತು ಶ್ರುತಾ ಹತಭಗೈರ್ನೃಭಿರಾತ್ತಸಾರಾ-
ಸ್ತಾಂಸ್ತಾನ್ ಕ್ಷಿಪಂತ್ಯಶರಣೇಷು ತಮಃಸು ಹಂತ ॥ ೨೨ ॥

ಯೇಽಭ್ಯರ್ಥಿತಾಮಪಿ ಚ ನೋ ನೃಗತಿಂ ಪ್ರಪನ್ನಾ
ಜ್ಞಾನಂ ಚ ತತ್ತ್ವವಿಷಯಂ ಸಹಧರ್ಮ ಯತ್ರ ।
ನಾರಾಧನಂ ಭಗವತೋ ವಿತರಂತ್ಯಮುಷ್ಯ
ಸಮ್ಮೋಹಿತಾ ವಿತತಯಾ ಬತ ಮಾಯಯಾ ತೇ ॥ ೨೩ ॥

ಯಚ್ಚ ವ್ರಜಂತ್ಯನಿಮಿಷಾಮೃಷಭಾನುವೃತ್ತ್ಯಾ
ದೂರೇಯಮಾ ಹ್ಯುಪರಿ ನಃ ಸ್ಪೃಹಣೀಯಶೀಲಾಃ ।
ಭರ್ತುರ್ಮಿಥಃ ಸುಯಶಸಃ ಕಥನಾನುರಾಗ-
ವೈಕ್ಲವ್ಯಬಾಷ್ಪಕಲಯಾ ಪುಲಕೀಕೃತಾಂಗಾಃ ॥ ೨೪ ॥

ತದ್ವಿಶ್ವಗುರ್ವಧಿಕೃತಂ ಭುವನೈಕವಂದ್ಯಂ
ದಿವ್ಯಂ ವಿಚಿತ್ರವಿಬುಧಾಗ್ರ್ಯವಿಮಾನಶೋಚಿಃ ।
ಆಪುಃ ಪರಾಂ ಮುದಮಪೂರ್ವಮುಪೇತ್ಯ ಯೋಗ-
ಮಾಯಾಬಲೇನ ಮುನಯಸ್ತದಥೋ ವಿಕುಂಠಮ್ ॥ ೨೫ ॥

ಯಾವ ಮಹಾದೇವಿಯ ಕೃಪೆಯನ್ನು ಪಡೆಯಲು ದೇವತೆಗಳೂ ಕೂಡ ಪ್ರಯತ್ನಿಸುತ್ತಿರುವರೋ, ಆ ಚೆಲುವಿನ ಗಣಿಯಾದ ಶ್ರೀಲಕ್ಷ್ಮೀದೇವಿಯು ಶ್ರೀಹರಿಯ ಭವನದಲ್ಲಿ ತನ್ನ ಚಾಂಚಲ್ಯವೆಂಬ ದೋಷವನ್ನು ತೊರೆದು ನಿತ್ಯವಾಸಮಾಡುತ್ತಿರುವಳು. ಆ ದೇವದೇವಿಯು ಕಾಲಂದುಗೆಗಳ ಕಿರುಗೆಜ್ಜೆಗಳಿಂದ ಶಬ್ದಮಾಡುವ ಹೆಜ್ಜೆಗಳನ್ನಿಡುತ್ತಾ, ಲೀಲಾಕಮಲವನ್ನು ತಿರುಗಿಸುವಾಗ ಆ ಕನಕ ಭವನದ ಸ್ಫಟಿಕಮಯವಾದ ಗೋಡೆಗಳಲ್ಲಿ ಆಕೆಯ ಪ್ರತಿಬಿಂಬವು ಬಿದ್ದು, ಆಕೆಯು ಅವುಗಳನ್ನು ಗುಡಿಸುತ್ತಿರುವಳೋ ಎಂಬಂತೆ ಕಾಣುತ್ತದೆ. ॥ ೨೦ ॥ ಪ್ರಿಯ ದೇವತೆಗಳಿರಾ! ಆ ದಿವ್ಯಲೋಕದಲ್ಲಿ ಅವಳು ದಾಸಿಯರಿಂದೊಡಗೂಡಿ ತನ್ನ ಕ್ರೀಡಾವನದಲ್ಲಿ ತುಳಸೀದಳಗಳಿಂದ ತನ್ನ ಹೃದಯವಲ್ಲಭನಾದ ಶ್ರೀಹರಿಯನ್ನು ಪೂಜಿಸುತ್ತಿರುವಾಗ, ಅಲ್ಲಿಯ ಹವಳದ ಮೆಟ್ಟಿಲುಗಳಿಂದಲೂ, ನಿರ್ಮಲ ಜಲದಿಂದ ತುಂಬಿದ ಸರೋವರದಲ್ಲಿ ಸುಂದರವಾದ ಮುಂಗುರುಳುಗಳಿಂದಲೂ, ಉನ್ನತವಾದ ಮೂಗಿನಿಂದಲೂ ಮೆರೆಯುವ ತನ್ನ ಮುಖಕಮಲದ ಪ್ರತಿಬಿಂಬವನ್ನು ಆ ಜಲದಲ್ಲಿ ನೋಡಿಕೊಂಡು – 'ಇದು ಶ್ರೀಭಗವಂತನಿಂದ ಆದರಿಸಲ್ಪಟ್ಟಿದ್ದು' ಎಂಬ ಸೌಭಾಗ್ಯದಿಂದ ಆನಂದಮಗ್ನಳಾಗುತ್ತಾಳೆ. ॥ ೨೧ ॥ ಪಾಪಗಳನ್ನು ಲೋಪಗೊಳಿಸುವ ಭಗವಂತನ ಲೀಲಾ ಕಥೆಗಳನ್ನು ಬಿಟ್ಟು, ಬುದ್ಧಿಯನ್ನು ನಾಶಗೊಳಿಸುವಂತಹ ಅರ್ಥ-ಕಾಮಸಂಬಂಧೀ ಇತರ ನಿಂದಿತ ಕಥೆಗಳನ್ನು ಕೇಳುವ ದುಷ್ಕರ್ಮಿಗಳು ಈ ಲೋಕವನ್ನು ಕನಸಿನಲ್ಲಿಯೂ ಪಡೆಯಲಾರರು. ಅಯ್ಯೋ! ಆ ನಿಸ್ಸಾರವಾದ ಕಥೆಗಳನ್ನು ಕೇಳುವ ದುರ್ಭಾಗ್ಯಶಾಲಿಗಳನ್ನು, ತಮ್ಮ ಪುಣ್ಯಗಳನ್ನು ಕಳೆಕೊಂಡವರನ್ನು, ಆಶ್ರಯರಹಿತವಾದ ಘೋರನರಕದಲ್ಲಿ ಅವಳು ಕೆಡಹುವಳು. ॥ ೨೨ ॥ ಆಹಾ! ಈ ನರಜನ್ಮವು ಎಷ್ಟು ಶ್ರೇಷ್ಠವಾದುದು! ದೇವತೆಗಳೂ ಬಯಸುವಂತಹ ಮಹಿಮೆಯುಳ್ಳದ್ದು. ತತ್ತ್ವಜ್ಞಾನ ಮತ್ತು ಧರ್ಮವನ್ನು ಇದರಲ್ಲೇ ಪಡೆಯಲಾಗುತ್ತದೆ. ಇಂತಹ ಜನ್ಮ ಪಡೆದಿದ್ದರೂ ಭಗವಂತನನ್ನು ಆರಾಧಿಸದಿರುವವರು ನಿಜವಾಗಿ ಎಲ್ಲೆಡೆ ಹರಡಿಕೊಂಡಿರುವ ಆತನ ಮಾಯೆಯಿಂದ ಮೋಹಿತರಾಗುತ್ತಾರೆ. ॥ ೨೩ ॥ ದೇವಾಧಿದೇವ ಶ್ರೀಹರಿಯನ್ನೇ ನಿರಂತರವಾಗಿ ಚಿಂತಿಸುವುದರಿಂದ ಯಮರಾಜನೂ ಅವರಿಂದ ದೂರವುಳಿಯುತ್ತಾನೆ. ಅವರು ಭಗವಂತನ ದಿವ್ಯಕೀರ್ತಿಯನ್ನು ಪರಸ್ಪರವಾಗಿ ಚರ್ಚಿಸುವುದರಿಂದ ಪ್ರೇಮವಿಹ್ವಲರಾಗಿ ಅವರ ಕಣ್ಣುಗಳಿಂದ ನಿರಂತರ ಆನಂದದ ಅಶ್ರುಧಾರೆಗಳು ಹರಿಯುತ್ತಾ ಇರುತ್ತವೆ. ಶರೀರ ರೋಮಾಂಚನಗೊಳ್ಳುವುದು. ಇಂತಹವರ ಶೀಲ-ಸ್ವಭಾವಗಳನ್ನು ನಾವೂ ಕೂಡ ಬಯಸುತ್ತೇವೆ. ಈ ಪರಮ ಭಾಗವತೋತ್ತಮರು ಮಾತ್ರವೇ ನಮ್ಮ ಲೋಕಗಳಿಗೂ ಮೇಲೆ ಬೆಳಗುತ್ತಿರುವ ವೈಕುಂಠಧಾಮಕ್ಕೆ ಹೋಗುವರು. ॥ ೨೪ ॥ ವಿಶ್ವಗುರುವಾದ ಶ್ರೀಹರಿಗೆ ನಿವಾಸಸ್ಥಾನವಾಗಿ, ಸಮಸ್ತ ಲೋಕಗಳಿಗೂ ವಂದನೀಯವಾಗಿ, ಶ್ರೇಷ್ಠತಮವಾದ ದೇವತೆಗಳ ವಿವಿಧ ವಿಮಾನಗಳಿಂದ ವಿಭೂಷಿತವಾದ, ಪರಮ ದಿವ್ಯವೂ, ಪರಮಾದ್ಭುತವೂ ಆದ ಆ ವೈಕುಂಠಧಾಮವನ್ನು – ತಮ್ಮ ಯೋಗಬಲದಿಂದ ಸನಕಾದಿ ಮುನಿಗಳು ಸೇರಿ ಪರಮಾನಂದವನ್ನು ಅನುಭವಿಸಿದರು. ॥ ೨೫ ॥

ತಸ್ಮಿನ್ನತೀತ್ಯ ಮುನಯಃ ಷಡಸಜ್ಜಮಾನಾಃ
ಕಕ್ಷಾಃ ಸಮಾನವಯಸಾವಥ ಸಪ್ತಮಾಯಾಮ್ ।
ದೇವಾವಚಕ್ಷತ ಗೃಹೀತಗದೌ ಪರಾರ್ಧ್ಯ-
ಕೇಯೂರಕುಂಡಲಕಿರೀಟವಿಟಂಕವೇಷೌ ॥ ೨೭ ॥

ಮತ್ತದ್ವಿರೇಫವನಮಾಲಿಕಯಾ ನಿವೀತೌ
ವಿನ್ಯಸ್ತಯಾಸಿತಚತುಷ್ಟಯಬಾಹುಮಧ್ಯೇ ।
ವಕ್ತ್ರಂ ಭ್ರುವಾ ಕುಟಿಲಯಾ ಸ್ಫುಟನಿರ್ಗಮಾಭ್ಯಾಂ
ರಕ್ತೇಕ್ಷಣೇನ ಚ ಮನಾಗ್ರಭಸಂ ದಧಾನೌ ॥ ೨೮ ॥

ದ್ವಾರ್ಯೇತಯೋರ್ನಿವಿವಿಶುರ್ಮಿಷತೋರಪೃಷ್ಟ್ವಾ
ಪೂರ್ವಾ ಯಥಾ ಪುರಟವಜ್ರಕಪಾಟಿಕಾ ಯಾಃ ।
ಸರ್ವತ್ರ ತೇಽವಿಷಮಯಾ ಮುನಯಃ ಸ್ವದೃಷ್ಟ್ಯಾ
ಯೇ ಸಂಚರಂತ್ಯವಿಹತಾ ವಿಗತಾಭಿಶಂಕಾಃ ॥ ೨೯ ॥

ತಾನ್ವೀಕ್ಷ್ಯ ವಾತರಶನಾಂಶ್ಚತುರಃ ಕುಮಾರಾನ್
ವೃದ್ಧಾನ್ದಶಾರ್ಧವಯಸೋ ವಿದಿತಾತ್ಮತತ್ತ್ವಾನ್ ।
ವೇತ್ರೇಣ ಚಾಸ್ಖಲಯತಾಮತದರ್ಹಣಾಂಸ್ತೌ
ತೇಜೋ ವಿಹಸ್ಯ ಭಗವತ್ಪ್ರತಿಕೂಲಶೀಲೌ ॥ ೩೦ ॥

ತಾಭ್ಯಾಂ ಮಿಷತ್ಸ್ವನಿಮಿಷೇಷು ನಿಷಿಧ್ಯಮಾನಾಃ
ಸ್ವರ್ಹತ್ತಮಾ ಹ್ಯಪಿ ಹರೇಃ ಪ್ರತಿಹಾರಪಾಭ್ಯಾಮ್ ।
ಊಚುಃ ಸುಹೃತ್ತಮದಿದೃಕ್ಷಿತಭಂಗ ಈಷತ್
ಕಾಮಾನುಜೇನ ಸಹಸಾ ತ ಉಪಪ್ಲುತಾಕ್ಷಾಃ ॥ ೩೧ ॥

ಮುನಯ ಊಚುಃ

ಕೋ ವಾಮಿಹೈತ್ಯ ಭಗವತ್ಪರಿಚರ್ಯಯೋಚ್ಚೈ-
ಸ್ತದ್ಧರ್ಮಿಣಾಂ ನಿವಸತಾಂ ವಿಷಮಃ ಸ್ವಭಾವಃ ।
ತಸ್ಮಿನ್ಪ್ರಶಾಂತಪುರುಷೇ ಗತವಿಗ್ರಹೇ ವಾಂ
ಕೋ ವಾಽಽತ್ಮವತ್ಕುಹಕಯೋಃ ಪರಿಶಂಕನೀಯಃ ॥ ೩೨ ॥

ಶ್ರೀಭಗವಂತನನ್ನು ಕಾಣಬೇಕೆಂಬ ತವಕದಿಂದ ಅವರು ಬೇರೆ ದರ್ಶನೀಯ ವಸ್ತುಗಳನ್ನು ಉಪೇಕ್ಷಿಸುತ್ತಾ ಆ ವೈಕುಂಠ ಧಾಮದ ಆರು ಮಂಡಪಗಳನ್ನು ದಾಟಿ ಏಳನೆಯ ಮಂಡಪಕ್ಕೆ ತಲುಪಿದರು. ಆಗ ಅವರು ಅಲ್ಲಿ ಸಮವಯಸ್ಕರಾಗಿದ್ದು ದಿವ್ಯಾಭರಣಗಳಿಂದ ಸಂಪನ್ನರಾಗಿದ್ದ ಇಬ್ಬರು ದಿವ್ಯ ಪುರುಷರನ್ನು ಕಂಡರು. ■ ದೇವಶ್ರೇಷ್ಠರು ಗದಾಪಾಣಿಗಳಾಗಿದ್ದು ಅಮೂಲ್ಯವಾದ ಕೇಯೂರ, ಕಟಕ, ಕುಂಡಲ, ಕಿರೀಟಗಳಿಂದ ಅಲಂಕೃತರಾಗಿದ್ದರು. ॥ ೨೭ ॥ ಶ್ಯಾಮಲವರ್ಣದಿಂದೊಪ್ಪುತ್ತಿದ್ದ ನಾಲ್ಕು ನೀಳವಾದ ಭುಜಗಳ ನಡುವೆ ಮದವೇರಿದ ದುಂಬಿಗಳು ಗುಂಜಾರವ ಮಾಡುತ್ತಿದ್ದ ವನಮಾಲೆ ಶೋಭಿಸುತ್ತಿತ್ತು. ಅವರು ಹುಬ್ಬುಗಂಟು ಹಾಕಿಕೊಂಡಿದ್ದರು. ಮೂಗಿನಹೊಳ್ಳೆಗಳು ಅರಳಿ, ಕಣ್ಣುಗಳು ಕೆಂಪೇರಿ, ಮುಖದ ಮೇಲೆ ದುಗುಡದ ಛಾಯೆ ಕಾಣಿಸುತ್ತಿತ್ತು. ॥ ೨೮ ॥ ಅವರು ಹೀಗೆ ನೋಡುತ್ತಿದ್ದರೂ ಆ ಮಹರ್ಷಿಗಳು ಅವರಲ್ಲಿ ಯಾವ ವಿಚಾರವನ್ನೂ ಮಾಡದೆ ಈ ಹಿಂದೆ ಸುವರ್ಣ ಮತ್ತು ವಜ್ರಮಯವಾದ ಬಾಗಿಲುಗಳಿಂದ ಕೂಡಿದ ಆರು ಮಂಡಪಗಳನ್ನು ದಾಟಿ ಬಂದ ಹಾಗೆಯೇ ಏಳನೆಯ ಬಾಗಿಲಿನೊಳಗೂ ನುಗ್ಗಿದರು. ಏಕೆಂದರೆ, ಅವರ ದೃಷ್ಟಿ ಸರ್ವತ್ರ ಸಮಾನವಾಗಿತ್ತು. ಅವರು ನಿಃಶಂಕರಾಗಿ ಎಲ್ಲ ಕಡೆಗಳಲ್ಲಿ ಯಾವ ಅಡೆ-ತಡೆ ಇಲ್ಲದೆ ಸಂಚಾರಮಾಡುವ ಪ್ರಭಾವ ಹೊಂದಿದ್ದರು. ॥ ೨೯ ॥ ಆ ನಾಲ್ವರು ಕುಮಾರರೂ ಪೂರ್ಣತತ್ತ್ವಜ್ಞಾನಿಗಳಾಗಿದ್ದು ಬ್ರಹ್ಮದೇವರ ಸೃಷ್ಟಿಯಲ್ಲಿ ವಯಸ್ಸಿನಲ್ಲಿ ಎಲ್ಲರಿಗಿಂತಲೂ ದೊಡ್ಡವರಾಗಿದ್ದರೂ ನೋಡಲು ಐದು ವರ್ಷದ ಬಾಲಕರಂತೆ ಕಂಡು ಬರುತ್ತಿದ್ದರು. ದಿವ್ಯ ದಿಗಂಬರವೃತ್ತಿಯಿಂದ ಬೆತ್ತಲೆಯಾಗಿದ್ದರು. ಅವರು ಹೀಗೆ ಯಾವ ಸಂಕೋಚವೂ ಇಲ್ಲದೆ ಒಳಗೆ ಹೋಗುತ್ತಿರುವುದನ್ನು ಕಂಡು ■ ದ್ವಾರಪಾಲಕರು ಭಗವಂತನ ಶೀಲ-ಸ್ವಭಾವಗಳಿಗೆ ವಿರುದ್ಧವಾದ ಭಾವನೆಯಿಂದ ಆ ಮಹಾತ್ಮರ ತೇಜಸ್ಸನ್ನು ಕಡೆಗಣಿಸಿ, ಹಾಸ್ಯಮಾಡುತ್ತಾ ತಮ್ಮ ಕೈಯಲ್ಲಿದ್ದ ಬೆತ್ತವನ್ನು ಮುಂದೆ ಚಾಚಿ ತಡೆದರು. ಆ ಮಹಾತ್ಮರು ಅಂತಹ ಅಪಮಾನಕ್ಕೆ ಖಂಡಿತವಾಗಿಯೂ ಯೋಗ್ಯರಾದವರಲ್ಲ. ॥ ೩೦ ॥ ದ್ವಾರಪಾಲಕರು ವೈಕುಂಠವಾಸಿಯರಾದ ದೇವತೆಗಳ ಎದುರಿನಲ್ಲೇ ಸರ್ವಶ್ರೇಷ್ಠ ಪೂಜಾರ್ಹರಾದ ಆ ಕುಮಾರರನ್ನು ತಡೆದಾಗ ತಮ್ಮ ಪ್ರಿಯತಮ ಪ್ರಭುವಿನ ದರ್ಶನದಲ್ಲಿ ವಿಘ್ನವು ಉಂಟಾದ್ದರಿಂದ ಅವರ ಕಣ್ಣುಗಳು ಕೊಂಚ ಕೆಂಪಾಗಿ ಅವರು ಇಂತೆಂದರು. ॥ ೩೧ ॥

ಮುನಿಗಳು ಹೇಳಿದರು - ಎಲೈ ದ್ವಾರಪಾಲಕರೇ! ಭಗವಂತನ ಕೈಂಕರ್ಯಮಾಡಿದ ಪುಣ್ಯಪ್ರಭಾವದಿಂದ ಈ ಲೋಕಕ್ಕೆ ಬಂದು ಇಲ್ಲಿ ವಾಸಮಾಡುವವರಾದರೋ ಆ ಭಗವಂತನಂತೆಯೇ ಸಮದರ್ಶಿಗಳಾಗಿರುತ್ತಾರೆ. ನೀವಿಬ್ಬರೂ ಅವರಲ್ಲಿಯೇ ಸೇರಿದವರು. ಆದರೆ ನಿಮ್ಮ ಸ್ವಭಾವದಲ್ಲಿ ಈ ವಿಷಮತೆ ಏಕೆ ಕಂಡು ಬರುತ್ತಿದೆ? ಭಗವಂತನಾದರೋ ಪರಮ ಶಾಂತಮೂರ್ತಿಯು. ಆತನಿಗೆ ಯಾರಲ್ಲಿಯೂ ವಿರೋಧವಿಲ್ಲ. ಆದ್ದರಿಂದ ಇಲ್ಲಿಗೆ ಬರುವ ಅಥವಾ ಇಲ್ಲಿರುವ ಯಾರ ಮೇಲೆಯೂ ಶಂಕೆಪಡಲು ಅವಕಾಶವಿಲ್ಲ. ಇಲ್ಲಿರುವವರು ಯಾರೂ ಕಪಟಿಗಳಲ್ಲ. ನೀವು ಕಪಟಿಗಳಾಗಿರುವುದರಿಂದ ಇತರರನ್ನೂ ನಿಮ್ಮಂತೆಯೇ ಭಾವಿಸಿ ಶಂಕೆಪಡುತ್ತೀರಿ. ॥ ೩೨ ॥

ನ ಹ್ಯಂತರಂ ಭಗವತೀಹ ಸಮಸ್ತಕುಕ್ಷಾ-
ವಾತ್ಮಾನಮಾತ್ಮನಿ ನಭೋ ನಭಸೀವ ಧೀರಾಃ ।
ಪಶ್ಯಂತಿ ಯತ್ರ ಯುವಯೋಃ ಸುರಲಿಂಗಿನೋಃ ಕಿಂ
ವ್ಯುತ್ಪಾದಿತಂ ಹ್ಯುದರಭೇದಿ ಭಯಂ ಯತೋಽಸ್ಯ ॥ ೩೩ ॥

ಭಗವಂತನ ಉದರದಲ್ಲಿ ಸಕಲ ಬ್ರಹ್ಮಾಂಡವೂ ಅಡಗಿದೆ. ಇಲ್ಲಿ ವಾಸಮಾಡುವ ಧೀಮಂತರು ಆ ಸರ್ವಾತ್ಮನಾದ ಶ್ರೀಹರಿಗೂ – ತಮಗೂ ಯಾವ ಅಂತರವನ್ನೂ ನೋಡುವುದಿಲ್ಲ. ಮಹಾಕಾಶದಲ್ಲಿ ಘಟಾಕಾಶದಂತೆ ಅವನಲ್ಲಿ ತಮ್ಮ ಅಂತರ್ಭಾವವನ್ನು ನೋಡುತ್ತಾರೆ. ನೀವಾದರೋ ದೇವ ರೂಪಧಾರಿಗಳು. ಹಾಗಿರುವಾಗಲೂ ಭಗವಂತನೊಂದಿಗೆ ಭೇದ ಭಾವದ ಕಾರಣದಿಂದ ಉಂಟಾಗುವ ಭಯದ ಕಲ್ಪನೆ ನೀವು ಮಾಡಿಕೊಂಡಂತೆ ಕಂಡುಬರುತ್ತದೆ. ॥ ೩೩ ॥

ತದ್ವಾಮಮುಷ್ಯ ಪರಮಸ್ಯ ವಿಕುಂಠಭರ್ತುಃ
ಕರ್ತುಂ ಪ್ರಕೃಷ್ಟಮಿಹ ಧೀಮಹಿ ಮಂದಧೀಭ್ಯಾಮ್ ।
ಲೋಕಾನಿತೋ ವ್ರಜತಮಂತರಭಾವದೃಷ್ಟ್ಯಾ
ಪಾಪೀಯಸಸ್ತ್ರಯ ಇಮೇ ರಿಪವೋಽಸ್ಯ ಯತ್ರ ॥ ೩೪ ॥

ನೀವಾದರೋ ವೈಕುಂಠಪತಿಯಾದ ಶ್ರೀಭಗವಂತನಿಗೆ ಪಾರ್ಷದರಾಗಿದ್ದರೂ ನಿಮ್ಮ ಬುದ್ಧಿಯು ಮಂದವಾಗಿದೆ. ಆದ್ದರಿಂದಲೇ ನಿಮಗೆ ಒಳ್ಳೆಯದಾಗಲೆಂದು ನಾವು ನಿಮ್ಮ ಅಪರಾಧಕ್ಕೆ ತಕ್ಕ ದಂಡವನ್ನು ವಿಧಿಸಲು ಯೋಚಿಸಿದ್ದೇವೆ. ನೀವು ನಿಮ್ಮ ಭೇದದೃಷ್ಟಿಯ ದೋಷದಿಂದಾಗಿ ಈ ವೈಕುಂಠಧಾಮವನ್ನು ಬಿಟ್ಟು ಕಾಮ, ಕ್ರೋಧ, ಲೋಭಗಳೆಂಬ ಶತ್ರುಗಳು ವಾಸಮಾಡುತ್ತಿರುವ ಪಾಪಿಷ್ಠವಾದ ಯೋನಿಯಲ್ಲಿ ಹುಟ್ಟಿರಿ. ॥ ೩೪ ॥

ತೇಷಾಮಿತೀರಿತಮುಭಾವವಧಾರ್ಯ ಘೋರಂ
ತಂ ಬ್ರಹ್ಮದಂಡಮನಿವಾರಣಮಸ್ತ್ರಪೂಗೈಃ ।
ಸದ್ಯೋ ಹರೇರನುಚರಾವುರು ಬಿಭ್ಯತಸ್ತತ್
ಪಾದಗ್ರಹಾವಪತತಾಮತಿಕಾತರೇಣ ॥ ೩೫ ॥

ಸನಕಾದಿ ಮಹರ್ಷಿಗಳ ಈ ಕಠೋರವಾದ ಮಾತನ್ನು ಕೇಳಿ ಜಯ–ವಿಜಯರು ಭಯಗೊಂಡರು. ಏಕೆಂದರೆ ಬ್ರಾಹ್ಮಣರ ಶಾಪವನ್ನು ಯಾವುದೇ ಅಸ್ತ್ರ–ಶಸ್ತ್ರಸಮೂಹಗಳಿಂದ ನಿವಾರಿಸಲು ಅಸಾಧ್ಯವಾದುದು. ಅವರು ಒಡನೆಯೇ ಅತಿದೈನ್ಯದಿಂದ ಆ ಮಹರ್ಷಿಗಳ ಪಾದಗಳನ್ನು ಹಿಡಿದುಕೊಂಡು ನೆಲದಲ್ಲಿ ಉರುಳಿದರು. ನಮ್ಮ ಸ್ವಾಮಿ ಶ್ರೀಹರಿಯೂ ಬ್ರಾಹ್ಮಣರಿಗೆ ತುಂಬಾ ಭಯ ಪಡುತ್ತಾನೆ ಎಂಬುದು ಅವರಿಗೆ ತಿಳಿದಿತ್ತು. ॥ ೩೫ ॥

ಭೂಯಾದಘೋನಿ ಭಗವದ್ಭಿರಕಾರಿ ದಂಡೋ
ಯೋ ನೌ ಹರೇತ ಸುರಹೇಲನಮಪ್ಯಶೇಷಮ್ ।
ಮಾ ವೋಽನುತಾಪಕಲಯಾ ಭಗವತ್ಸ್ಮೃತಿಘ್ನೋ
ಮೋಹೋ ಭವೇದಿಹ ತು ನೌ ವ್ರಜತೋರಧೋಽಧಃ ॥ ೩೬ ॥

ಮತ್ತೆ ಅವರು ಅತಿದೈನ್ಯದಿಂದ – "ಎಲೈ ಮಹಾತ್ಮರೇ! ನಾವು ಖಂಡಿತವಾಗಿ ಅಪರಾಧಿಗಳಾಗಿದ್ದೇವೆ. ಆದ್ದರಿಂದ ತಾವು ವಿಧಿಸಿದ ದಂಡವು ಉಚಿತವೇ ಆಗಿದೆ; ಅದು ನಮಗೆ ಸಿಗಲೇಬೇಕು. ನಾವು ಭಗವಂತನ ಅಭಿಪ್ರಾಯವನ್ನು ತಿಳಿಯದೆ ಆತನ ಆಜ್ಞೆಯನ್ನು ಉಲ್ಲಂಘಿಸಿದ್ದೇವೆ. ಇದರಿಂದ ಉಂಟಾದ ಪಾಪವು ನೀವು ವಿಧಿಸಿದ ದಂಡದಿಂದಾಗಿ ಪೂರ್ಣವಾಗಿ ತೊಳೆದುಹೋಗುವುದು. ಆದರೆ ನಮ್ಮ ದುರ್ದಶೆ ಕಂಡು ತಮಗೆ ಕನಿಕರ ಉಂಟಾಗಿ ಸ್ವಲ್ಪವಾದರೂ ಅನುತಾಪ ಉಂಟಾದರೆ – ನಾವು ಆ ಅಧಮ ಯೋನಿಯಲ್ಲಿ ಹುಟ್ಟಿದರೂ ನಮಗೆ ಭಗವಂತನ ಸ್ಮೃತಿಯನ್ನು ನಾಶಮಾಡುವಂತಹ ಮೋಹವು ಆವರಿಸದಿರುವಂತೆ ಅನುಗ್ರಹಿಸಿರಿ" ಎಂದು ಪ್ರಾರ್ಥಿಸಿದರು. ॥ ೩೬ ॥

ಏವಂ ತದೈವ ಭಗವಾನರವಿಂದನಾಭಃ
ಸ್ವಾನಾಂ ವಿಬುಧ್ಯ ಸದತಿಕ್ರಮಮಾರ್ಯಹೃದ್ಯಃ ।
ತಸ್ಮಿನ್ ಯಯೌ ಪರಮಹಂಸಮಹಾಮುನೀನಾ-
ಮನ್ವೇಷಣೀಯಚರಣೌ ಚಲಯನ್ ಸಹಶ್ರೀಃ ॥ ೩೭ ॥

ತನ್ನ ಪಾರ್ಷದರು ಸನಕಾದಿಗಳಿಗೆ ಅಪಚಾರ ಮಾಡಿದ್ದಾರೆ ಎಂಬುದನ್ನು ತಿಳಿದು ಸಾಧುಜನಹೃದಯನಿವಾಸಿಯಾದ ಭಗವಾನ್ ಪದ್ಮನಾಭನು ಶ್ರೀದೇವಿಸಮೇತನಾಗಿ ಅಲ್ಲಿಗೆ ದಯಮಾಡಿಸಿದನು. ಪರಮಹಂಸಮಹಾಮುನಿಗಳು ಸಮಾಧಿಯೋಗದಲ್ಲಿ ಅರಸಿದರೂ ಸುಲಭನಾಗಿ ಸಿಗದಿರುವ ಪಾದಾರವಿಂದಗಳುಳ್ಳ ಪ್ರಭುವು ಕಾಲ್ನಡಿಗೆಯಿಂದಲೇ ಅಲ್ಲಿಗೆ ಬಂದನು. ॥ ೩೭ ॥ ತಮ್ಮ ಸಮಾಧಿಗೆ ವಿಷಯನಾಗಿರುವ ಭಗವಾನ್ ಶ್ರೀವೈಕುಂಠನಾಥನು ಪ್ರತ್ಯಕ್ಷವಾಗಿ ಮುಂದೆಯೇ ಇರುವುದನ್ನು ಸನಕಾದಿಗಳು ನೋಡಿದರು. ಅವನೊಂದಿಗೆ ಪಾರ್ಷದರು ಛತ್ರ–ಚಾಮರಾದಿಗಳನ್ನು ಹಿಡಿದುಕೊಂಡು ಪ್ರಭುವನ್ನು ಹಿಂಬಾಲಿಸುತ್ತಿದ್ದರು. ಇಕ್ಕೆಲಗಳಲ್ಲಿಯೂ

ತಂ ತ್ವಾಗತಂ ಪ್ರತಿಹೃತೌಪಯಿಕಂ ಸ್ವಪುಂಭಿ-
ಸ್ತೇಽಚಕ್ಷತಾಕ್ಷವಿಷಯಂ ಸ್ವಸಮಾಧಿಭಾಗ್ಯಮ್ ।
ಹಂಸಶ್ರಿಯೋರ್ವ್ಯಜನಯೋಃ ಶಿವವಾಯುಲೋಲ-
ಚ್ಛುಭ್ರಾತಪತ್ರಶಶಿಕೇಸರಶೀಕರಾಂಬುಮ್ ॥ ೩೮ ॥

ಕೃತ್ಸ್ನಪ್ರಸಾದಸುಮುಖಂ ಸ್ಪೃಹಣೀಯಧಾಮ
ಸ್ನೇಹಾವಲೋಕಕಲಯಾ ಹೃದಿ ಸಂಸ್ಪೃಶಂತಮ್ ।
ಶ್ಯಾಮೇ ಪೃಥಾವುರಸಿ ಶೋಭಿತಯಾ ಶ್ರಿಯಾ ಸ್ವ-
ಶ್ಚೂಡಾಮಣಿಂ ಸುಭಗಯಂತಮಿವಾತ್ಮಧಿಷ್ಣ್ಯಮ್ ॥ ೩೯ ॥

ಪೀತಾಂಶುಕೇ ಪೃಥುನಿತಂಬಿನಿ ವಿಸ್ಫುರಂತ್ಯಾ
ಕಾಂಚ್ಯಾಲಿಭಿರ್ವಿರುತಯಾ ವನಮಾಲಯಾ ಚ ।
ವಲ್ಗುಪ್ರಕೋಷ್ಠವಲಯಂ ವಿನತಾಸುತಾಂಸೇ
ವಿನ್ಯಸ್ತಹಸ್ತಮಿತರೇಣ ಧುನಾನಮಬ್ಜಮ್ ॥ ೪೦ ॥

ವಿದ್ಯುತ್ಕ್ಷಿಪನ್ಮಕರಕುಂಡಲಮಂಡನಾರ್ಹ-
ಗಂಡಸ್ಥಲೋನ್ನಸಮುಖಂ ಮಣಿಮತ್ಕಿರೀಟಮ್ ।
ದೋರ್ದಂಡಷಂಡವಿವರೇ ಹರತಾ ಪರಾರ್ಧ್ಯ-
ಹಾರೇಣ ಕಂಧರಗತೇನ ಚ ಕೌಸ್ತುಭೇನ ॥ ೪೧ ॥

ಅತ್ರೋಪಸೃಷ್ಟಮಿತಿ ಚೋತ್ಸ್ಮಿತಮಿಂದಿರಾಯಾಃ
ಸ್ವಾನಾಂ ಧಿಯಾ ವಿರಚಿತಂ ಬಹುಸೌಷ್ಠವಾಢ್ಯಮ್ ।
ಮಹ್ಯಂ ಭವಸ್ಯ ಭವತಾಂ ಚ ಭಜಂತಮಂಗಂ
ನೇಮುರ್ನಿರೀಕ್ಷ್ಯ ನವಿತೃಪ್ತದೃಶೋ ಮುದಾ ಕೈಃ ॥ ೪೨ ॥

ತಸ್ಯಾರವಿಂದನಯನಸ್ಯ ಪದಾರವಿಂದ-
ಕಿಂಜಲ್ಕಮಿಶ್ರತುಲಸೀಮಕರಂದವಾಯುಃ ।
ಅಂತರ್ಗತಃ ಸ್ವವಿವರೇಣ ಚಕಾರ ತೇಷಾಂ
ಸಂಕ್ಷೋಭಮಕ್ಷರಜುಷಾಮಪಿ ಚಿತ್ತತನ್ವೋಃ ॥ ೪೩ ॥

ರಾಜಹಂಸಗಳ ರೆಕ್ಕೆಗಳಂತಿರುವ ಚಾಮರಗಳಿಂದ ಗಾಳಿ ಬೀಸುತ್ತಿದ್ದರು. ಆ ಶೀತಲ ಮಂದಗಾಳಿಯಿಂದ ಅವನ ಶ್ವೇತಛತ್ರದಲ್ಲಿ ಅಲಂಕರಿಸಿರುವ ಮುತ್ತಿನ ಜಾಲರಿಗಳು ಅಲ್ಲಾಡುತ್ತಾ ಚಂದ್ರನ ಕಿರಣಗಳಿಂದ ಅಮೃತದ ಬಿಂದುಗಳೇ ಉದುರುತ್ತಿವೆಯೋ ಎಂಬಂತೆ ಶೋಭಿಸುತ್ತಿದ್ದವು. ॥ ೩೮ ॥

ಪೂರ್ಣವಾದ ಅನುಗ್ರಹವನ್ನು ಸೂಸುತ್ತಿರುವ ಪ್ರಸನ್ನವಾದ ಮುಖಮುದ್ರೆಯಿಂದಲೂ, ಕಮನೀಯವಾದ ಕಾಂತಿಯಿಂದಲೂ ಸ್ನೇಹದ ಮಳೆಗರೆಯುವ ಸವಿನೋಟದಿಂದಲೂ, ಕಣ್ಮನಗಳನ್ನೂ ಸೂರೆಗೊಳ್ಳುತ್ತಾ - ತನ್ನ ವಿಶಾಲವಾದ ಶ್ಯಾಮಲವಕ್ಷಸ್ಥಳದಲ್ಲಿ ವಿರಾಜಿಸುತ್ತಿರುವ ಶ್ರೀಲಕ್ಷ್ಮೀದೇವಿಯೊಂದಿಗೆ ಶೋಭಿಸುತ್ತಾ, ದಿವ್ಯಲೋಕಗಳಿಗೂ ಶಿರೋಭೂಷಣವಾಗಿರುವ ವೈಕುಂಠಧಾಮವನ್ನು ಬೆಳಗುತ್ತಿರುವನು. ॥ ೩೯ ॥ ವಿಶಾಲವಾದ ನಿತಂಬದಲ್ಲಿ ಪ್ರಕಾಶಿಸುತ್ತಿರುವ ಪೀತಾಂಬರ, ಅದರ ಮೇಲೆ ಥಳ-ಥಳಿಸುತ್ತಿರುವ ರತ್ನಖಚಿತವಾದ ಕಟಿಸೂತ್ರ, ಕಂಠದಲ್ಲಿ ಉಲಿಯುತ್ತಿರುವ ದುಂಬಿಯ ಹಿಂಡುಗಳಿಂದ ದರ್ಶನೀಯವಾದ ವನಮಾಲೆಯ ಸಿರಿ ಮತ್ತು ಮಣಿಕಟ್ಟುಗಳಲ್ಲಿ ಮನೋಹರವಾದ ಕೈಬಳೆಗಳ ಬೆಡಗು. ಒಂದು ಕರಕಮಲವನ್ನು ಗರುಡನ ಹೆಗಲಮೇಲಿರಿಸಿ, ಮತ್ತೊಂದರಿಂದ ಲೀಲಾಕಮಲವನ್ನು ತಿರುಗಿಸುತ್ತಿರುವನು. ॥ ೪೦ ॥ ಮಿಂಚಿನ ಪ್ರಭೆಯನ್ನು ನಾಚಿಸುವ ಅವನ ಸುಂದರ ಕಪೋಲಗಳು ಆತನು ಧರಿಸಿದ್ದ ಮಕರಕುಂಡಲಗಳ ಕಾಂತಿಯನ್ನು ಹೆಚ್ಚಿಸುತ್ತಿವೆ. ನೀಳವಾದ ಮನೋಹರ ಮೂಗು, ಪರಮ ಸುಂದರವಾದ ಮುಖಾರವಿಂದ, ತಲೆಯಲ್ಲಿ ಮಣಿಮಯವಾದ ಕಿರೀಟವು ಮೆರೆಯುತ್ತಿದೆ. ನಾಲ್ಕು ಭುಜಗಳ ನಡುವೆ ಕಂಠದಲ್ಲಿ ಅಮೂಲ್ಯವಾದ ಹಾರಗಳೂ, ವಕ್ಷಸ್ಥಳದಲ್ಲಿ ಕೌಸ್ತುಭಮಣಿಯೂ ಜಗ-ಜಗಿಸುತ್ತಿವೆ. ॥ ೪೧ ॥ ಭಗವಂತನ ಶ್ರೀವಿಗ್ರಹವು ಸೌಂದರ್ಯದ ನೆಲೆಯಾಗಿದೆ. ಶ್ರೀದೇವಿಯ ಸೌಂದರ್ಯದ ಅಭಿಮಾನವನ್ನೂ ಕರಗಿಸಿಬಿಡುತ್ತದೋ ಎಂದು ಭಕ್ತರಿಗೆ ಅನ್ನಿಸುವಂತಿದೆ. ಬ್ರಹ್ಮದೇವರು ಹೇಳುತ್ತಾರೆ - ದೇವತೆಗಳಿರಾ! ಹೀಗೆ ನನಗಾಗಿಯೂ, ಶಿವನಿಗಾಗಿಯೂ ಮತ್ತು ನಿಮಗೋಸ್ಕರವೂ ಸುಂದರ ವಿಗ್ರಹವನ್ನು ಧರಿಸುವಂತಹ ಶ್ರೀಹರಿಯನ್ನು ನೋಡಿ ಸನಕಾದಿ ಮುನೀಶ್ವರರು ಅವನಿಗೆ ತಲೆಬಾಗಿ ನಮಸ್ಕರಿಸಿದರು. ಆಗ ಅವನ ಅದ್ಭುತ ಸೌಂದರ್ಯವನ್ನು ಎಷ್ಟು ನೋಡುತ್ತಿದ್ದರೂ ಅವರಿಗೆ ತೃಪ್ತಿಯುಂಟಾಗುತ್ತಿರಲಿಲ್ಲ. ॥ ೪೨ ॥

ಸನಕಾದಿ ಮುನೀಶ್ವರರು ನಿರಂತರ ಬ್ರಹ್ಮಾನಂದದಲ್ಲಿ ಮುಳುಗಿರುತ್ತಿದ್ದರು. ಆದರೆ ಆ ಭಗವಾನ್ ಪುಂಡರೀಕಾಕ್ಷನ ಚರಣಾರವಿಂದಗಳ ಮಕರಂದದೊಡನೆ ಬೆರೆತ ತುಳಸೀ ಮಂಜರಿಯ ಗಂಧದಿಂದ ಸುವಾಸಿತವಾದ ವಾಯುವು ಮೂಗಿನ ಹೊಳ್ಳೆಗಳ ಮೂಲಕ ಅಂತಃಕರಣವನ್ನು ಪ್ರವೇಶಿಸಿದೊಡನೆಯೇ ಅವರ ದೇಹ-ಮನಸ್ಸುಗಳು ಆನಂದದಿಂದ ಕಲಕಿಹೋದುವು. ॥ ೪೩ ॥ ಶ್ರೀಭಗವಂತನ ಮುಖವು ನೀಲಕಮಲದಂತೆ ಕಂಗೊಳಿಸುತ್ತಿತ್ತು.

ತೇ ವಾ ಅಮುಷ್ಯ ವದನಾಸಿತಪದ್ಮಕೋಶ-
ಮುದ್ವೀಕ್ಷ್ಯ ಸುಂದರತರಾಧರಕುಂದಹಾಸಮ್ ।
ಲಬ್ಧಾಶಿಷಃ ಪುನರವೇಕ್ಷ್ಯ ತದೀಯಮಂಘ್ರಿ-
ದ್ವಂದ್ವಂ ನಖಾರುಣಮಣಿಶ್ರಯಣಂ ನಿದಧ್ಯುಃ ॥ ೪೪ ॥

ಪುಂಸಾಂ ಗತಿಂ ಮೃಗಯತಾಮಿಹ ಯೋಗಮಾರ್ಗೈ-
ರ್ಧ್ಯಾನಾಸ್ಪದಂ ಬಹು ಮತಂ ನಯನಾಭಿರಾಮಮ್ ।
ಪೌಂಸ್ನಂ ವಪುರ್ದರ್ಶಯಾನಮನನ್ಯಸಿದ್ಧೈ-
ರೌತ್ಪತ್ತಿಕೈಃ ಸಮಗೃಣನ್ಯುತಮಷ್ಟಭೋಗೈಃ ॥ ೪೫ ॥

ಕುಮಾರಾ ಊಚುಃ

ಯೋಽನ್ತರ್ಹಿತೋ ಹೃದಿ ಗತೋಽಪಿ ದುರಾತ್ಮನಾಂ ತ್ವಂ
ಸೋಽದ್ಯೈವ ನೋ ನಯನಮೂಲಮನಂತ ರಾದ್ಧಃ ।
ಯರ್ಹ್ಯೇವ ಕರ್ಣವಿವರೇಣ ಗುಹಾಂ ಗತೋ ನಃ
ಪಿತ್ರಾನುವರ್ಣಿತರಹಾ ಭವದುದ್ಭವೇನ ॥ ೪೬ ॥

ತಂ ತ್ವಾಂ ವಿದಾಮ ಭಗವನ್ಪರಮಾತ್ಮತತ್ತ್ವಂ
ಸತ್ತ್ವೇನ ಸಂಪ್ರತಿ ರತಿಂ ರಚಯಂತಮೇಷಾಮ್ ।
ಯತ್ತೇಽನುತಾಪವಿದಿತೈರ್ದೃಢಭಕ್ತಿಯೋಗೈ-
ರುದ್ಗ್ರಂಥಯೋ ಹೃದಿ ವಿದುರ್ಮುನಯೋ ವಿರಾಗಾಃ ॥ ೪೭ ॥

ನಾತ್ಯಂತಿಕಂ ವಿಗಣಯಂತ್ಯಪಿ ತೇ ಪ್ರಸಾದಂ
ಕಿಂತ್ವನ್ಯದರ್ಪಿತಭಯಂ ಭ್ರುವ ಉನ್ನಯೈಸ್ತೇ ।
ಯೇಽಙ್ಗತ್ವದಂಘ್ರಿಶರಣಾ ಭವತಃ ಕಥಾಯಾಃ
ಕೀರ್ತನ್ಯತೀರ್ಥಯಶಸಃ ಕುಶಲಾ ರಸಜ್ಞಾಃ ॥ ೪೮ ॥

ಅತಿ ಸುಂದರವಾದ ತುಟಿಗಳಿಂದಲೂ, ಮಲ್ಲಿಗೆಯ ಮೊಗ್ಗಿನಂತೆ ಮನೋಹರವಾದ ಮಂದಹಾಸದಿಂದಲೂ ಅದರ ಕಾಂತಿಯು ಹೆಚ್ಚಾಗಿತ್ತು. ಮುನೀಂದ್ರರು ಅದರ ದರ್ಶನಪಡೆದು ಕೃತಕೃತ್ಯರಾಗಿಬಿಟ್ಟರು. ಅನಂತರ ಪದ್ಮರಾಗಮಣಿಯಂತೆ ಕೆಂಪಗೆ ಹೊಳೆಯುತ್ತಿದ್ದ ಉಗುರುಗಳಿಂದ ಕಂಗೊಳಿಸುವ ಆತನ ಚರಣಕಮಲಗಳನ್ನು ಅವರು ಧ್ಯಾನಿಸತೊಡಗಿದರು. ॥ ೪೪ ॥ ಯೋಗಮಾರ್ಗದ ಮೂಲಕ ಮೋಕ್ಷಪದವನ್ನು ಅರಸುವ ಪುರುಷರಿಗೆ ಧ್ಯಾನಕ್ಕೆ ವಿಷಯನಾದ, ಅತ್ಯಂತ ಆದರಣೀಯನಾಗಿ ಕಣ್ಣುಗಳಿಗೆ ಆನಂದವನ್ನು ಉಕ್ಕೇರಿಸುವ ತನ್ನ ಪುರುಷರೂಪವನ್ನು ಪ್ರಕಟಿಸುವ ಪರಮಪುರುಷನನ್ನು ಕಂಡು – ಆ ಮುನೀಂದ್ರರು ಇತರ ಸಾಧನೆಗಳಿಂದ ಸಿದ್ಧವಾಗದೇ ಇರುವ ಸ್ವಾಭಾವಿಕವಾದ ಅಷ್ಟಸಿದ್ಧಿಗಳಿಂದ ಸಂಪನ್ನನಾಗಿರುವ ಅಂತಹ ಶ್ರೀಹರಿಯನ್ನು ಸ್ತೋತ್ರಮಾಡತೊಡಗಿದರು. ॥ ೪೫ ॥

ಸನಕಾದಿ ಮುನಿಗಳು ಹೇಳುತ್ತಾರೆ – ಓ ಅನಂತನೇ! ನೀನು ಅಂತರ್ಯಾಮಿರೂಪದಿಂದ ದುಷ್ಟಚಿತ್ತವುಳ್ಳವರ ಹೃದಯದಲ್ಲಿ ಸ್ಥಿತನಾಗಿದ್ದರೂ ಅವರ ದೃಷ್ಟಿಗೆ ಮರೆಯಾಗಿಯೇ ಇರುತ್ತಿರುವೆ. ಅಂತಹ ನೀನು ಇಂದು ನಮ್ಮ ಕಣ್ಣುಗಳ ಮುಂದೆ ಪ್ರತ್ಯಕ್ಷವಾಗಿ ಗೋಚರಿಸುತ್ತಿರುವೆ. ಸ್ವಾಮಿ! ನಿನ್ನಿಂದ ಉತ್ಪನ್ನರಾದ ನಮ್ಮ ತಂದೆ ಬ್ರಹ್ಮದೇವರು ನಿನ್ನ ರಹಸ್ಯವನ್ನು ಹೇಳಿದ ಸಮಯದಲ್ಲೇ ಕಿವಿದೆರೆಗಳ ಮೂಲಕ ನೀನು ಬುದ್ಧಿಯೊಳಗೆ ಪ್ರವೇಶಿಸಿ ಅಲ್ಲಿ ಬೆಳಗತೊಡಗಿದ್ದೆ. ಆದರೆ ನಿನ್ನನ್ನು ಕಣ್ಣಾರೆ ನೋಡುವ ಸೌಭಾಗ್ಯವು ಈಗ ತಾನೇ ನಮಗೆ ಒದಗಿಬಂದಿದೆ. ॥ ೪೬ ॥ ಭಗವಂತನೇ! ನಿನ್ನನ್ನು ಸಾಕ್ಷಾತ್ ಪರತತ್ತ್ವವೆಂದೇ ನಾವು ಬಲ್ಲೆವು. ಅಂತಹ ನೀನು ಈಗ ನಿನ್ನ ವಿಶುದ್ಧಸತ್ತ್ವಮಯವಾದ ಶ್ರೀವಿಗ್ರಹದಿಂದ ನಿನ್ನ ಈ ಭಕ್ತರನ್ನು ಆನಂದಗೊಳಿಸುತ್ತಿದ್ದೀಯೆ. ನಿನ್ನ ಈ ಸಗುಣವೂ-ಸಾಕಾರವೂ ಆದ ಮೂರ್ತಿಯನ್ನು ರಾಗ-ದ್ವೇಷರಹಿತರಾದ ಮುನಿಗಳು ನಿನ್ನ ಕೃಪಾದೃಷ್ಟಿಯಿಂದ ದೊರಕಿದ ದೃಢವಾದ ಭಕ್ತಿಯೋಗದ ಮೂಲಕ ತಮ್ಮ ಹೃದಯಗಳಲ್ಲಿ ಪಡೆದುಕೊಳ್ಳುವರು. ॥ ೪೭ ॥ ಸ್ವಾಮಿ! ನಿನ್ನ ಯಶಃಕೀರ್ತಿಯು ಅತ್ಯಂತ ಕೀರ್ತನೀಯವೂ, ಸಾಂಸಾರಿಕ ದುಃಖಗಳನ್ನು ನಿವೃತ್ತಿಮಾಡುವಂತಹುದು. ನಿನ್ನ ಚರಣಾರವಿಂದಗಳಲ್ಲಿ ಶರಣಾಗತರಾಗಿ ನಿನ್ನ ಕಥೆಗಳಲ್ಲಿಯೇ ರಸಾನುಭಾವವನ್ನು ಪಡೆಯುವ ಕುಶಲರಾದ ಮಹಾತ್ಮರು ನಿನ್ನ ಪರಮಪ್ರಸಾದವಾದ ಮೋಕ್ಷಪದವನ್ನೂ ಕೂಡ ಪರಮವೆಂದು ಎಣಿಸುವುದಿಲ್ಲ. ಹೀಗಿರುವಾಗ ನೀನು ಸ್ವಲ್ಪ ಹುಬ್ಬುಗಂಟಿಕ್ಕಿ ಹಾಕಿಕೊಂಡರೆ ಸಾಕು, ಅದರಿಂದ ಇಂದ್ರಪದವಿಯೇ ಭಯಕ್ಕೆ ಒಳಗಾಗುವಾಗ ಇತರ ಭೋಗಗಳ ವಿಷಯದಲ್ಲಿ ಹೇಳುವುದೇನಿದೆ? ॥ ೪೮ ॥ ಭಗವಂತಾ! ನಮ್ಮ ಚಿತ್ತವು ದುಂಬಿಗಳಂತೆ ನಿನ್ನ ಅಡಿದಾವರೆಗಳಲ್ಲೇ ರಮಿಸುತ್ತಿದ್ದರೆ, ಹಾಗೆಯೇ ನಮ್ಮ ವಾಣಿಯು ತುಳಸಿಯಂತೆ ನಿನ್ನ ಚರಣಸಂಬಂಧದಿಂದಲೇ ಶೋಭಿಸುತ್ತಿದ್ದರೆ, ನಮ್ಮ ಕಿವಿಗಳು ನಿನ್ನ ಪುಣ್ಯಮಯ ಕೀರ್ತಿಯ ಸುಧೆಯಿಂದಲೇ ಪರಿಪೂರ್ಣವಾಗುತ್ತಿದ್ದರೆ, ನಮಗೆ ಎಲ್ಲಿದ್ದರೂ ಭಯವಿಲ್ಲ. ನಮ್ಮ ಪಾಪಗಳ ಕಾರಣ

ಕಾಮಂ ಭವಃ ಸ್ವವೃಜಿನೈರ್ನಿರಯೇಷು ನಃ ಸ್ತಾ-
ಚ್ಚೇತೋಽಲಿವದ್ಯದಿ ನು ತೇ ಪದಯೋ ರಮೇತ ।
ವಾಚಶ್ಚ ನಸ್ತುಲಸಿವದ್ಯದಿ ತೇಽಙ್ಘ್ರಿಶೋಭಾಃ
ಪೂರ್ಯೇತ ತೇ ಗುಣಗಣೈರ್ಯದಿ ಕರ್ಣರಂಧ್ರಃ ॥ ೪೯ ॥

ಪ್ರಾದುಶ್ಚಕರ್ಥ ಯದಿದಂ ಪುರುಹೂತ ರೂಪಂ
ತೇನೇಶ ನಿರ್ವೃತಿಮವಾಪುರಲಂ ದೃಶೋ ನಃ ।
ತಸ್ಮಾ ಇದಂ ಭಗವತೇ ನಮ ಇದ್ವಿಧೇಮ
ಯೋಽನಾತ್ಮನಾಂ ದುರುದಯೋ ಭಗವಾನ್ಪ್ರತೀತಃ ॥ ೫೦ ॥

ದಿಂದ ನರಕವೇ ಮುಂತಾದ ದುರ್ಗತಿಗಳಲ್ಲಿದ್ದರೂ ನಮಗೆ ಚಿಂತೆಯಿಲ್ಲ. ॥ ೪೯ ॥

ವಿಶಾಲವಾದ ಕಣ್ಣುಳ್ಳ ಪರಮಪುರುಷನೇ! ನಮ್ಮ ಮುಂದೆ ನೀನು ಪ್ರಕಟಪಡಿಸಿದ ಈ ಸುಂದರ ರೂಪವು ಕಣ್ಣುಗಳಿಗೆ ಪರಮಾನಂದವನ್ನು ನೀಡಿದೆ. ನಾರಾಯಣಾ! ವಿಷಯಾಸಕ್ತ ಜಿತೇಂದ್ರಿಯರಲ್ಲದ ಜೀವಿಗಳಿಗೆ ಇದನ್ನು ಕಾಣುವುದು ಅತ್ಯಂತ ಕಠಿಣವಾಗಿದೆ. ನೀನು ಸಾಕ್ಷಾತ್ ಭಗವಂತನಾಗಿರುವೆ. ಈ ಪ್ರಕಾರ ಸ್ಪಷ್ಟವಾಗಿ ನಮ್ಮ ಕಣ್ಣುಮುಂದೆ ಪ್ರಕಟನಾಗಿರುವ ನಿನಗೆ ನಾವು ನಮಸ್ಕರಿಸುತ್ತೇವೆ. ॥ ೫೦ ॥

ಹದಿನೈದನೆಯ ಅಧ್ಯಾಯವು ಮುಗಿಯಿತು. ॥ ೧೫ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ತೃತೀಯಸ್ಕಂಧೇ
ಜಯವಿಜಯಯೋಃ ಸನಕಾದಿಶಾಪೋ ನಾಮ ಪಂಚದಶೋಽಧ್ಯಾಯಃ ॥ ೧೫ ॥

ಹದಿನಾರನೆಯ ಅಧ್ಯಾಯ

ಜಯ-ವಿಜಯರು ವೈಕುಂಠದಿಂದ ಚ್ಯುತರಾದುದು

ಬ್ರಹ್ಮೋವಾಚ

ಇತಿ ತದ್ಗೃಣತಾಂ ತೇಷಾಂ ಮುನೀನಾಂ ಯೋಗಧರ್ಮಿಣಾಮ್ ।
ಪ್ರತಿನಂದ್ಯ ಜಗಾದೇದಂ ವಿಕುಂಠನಿಲಯೋ ವಿಭುಃ ॥ ೧ ॥

ಶ್ರೀಭಗವಾನುವಾಚ

ಏತೌ ತೌ ಪಾರ್ಷದೌ ಮಹ್ಯಂ ಜಯೋ ವಿಜಯ ಏವ ಚ ।
ಕದರ್ಥೀಕೃತ್ಯ ಮಾಂ ಯದ್ವೋ ಬಹ್ವಕ್ರಾತಾಮತಿಕ್ರಮಮ್ ॥ ೨ ॥

ಯಸ್ತ್ವೇತಯೋರ್ಧೃತೋ ದಂಡೋ ಭವದ್ಭಿರ್ಮಾಮನುವ್ರತೈಃ ।
ಸ ಏವಾನುಮತೋಽಸ್ಮಾಭಿರ್ಮುನಯೋ ದೇವಹೇಲನಾತ್ ॥ ೩ ॥

ತದ್ವಃ ಪ್ರಸಾದಯಾಮ್ಯದ್ಯ ಬ್ರಹ್ಮ ದೈವಂ ಪರಂ ಹಿ ಮೇ ।
ತದ್ಧೀತ್ಯಾತ್ಮಕೃತಂ ಮನ್ಯೇ ಯತ್ಸ್ವಪುಂಭಿರಸತ್ಕೃತಾಃ ॥ ೪ ॥

ಯನ್ನಾಮಾನಿ ಚ ಗೃಹ್ಣಾತಿ ಲೋಕೋ ಭೃತ್ಯೇ ಕೃತಾಗಸಿ ।
ಸೋಽಸಾಧುವಾದಸ್ತತ್ಕೀರ್ತಿಂ ಹಂತಿ ತ್ವಚಮಿವಾಮಯಃ ॥ ೫ ॥

ಯಸ್ಯಾಮೃತಾಮಲಯಶಃಶ್ರವಣಾವಗಾಹಃ
ಸದ್ಯಃ ಪುನಾತಿ ಜಗದಾಶ್ವಪಚಾದ್ವಿಕುಂಠಃ ।
ಸೋಽಹಂ ಭವದ್ಭ್ಯ ಉಪಲಬ್ಧಸುತೀರ್ಥಕೀರ್ತಿ-
ಶ್ಛಿಂದ್ಯಾಂ ಸ್ವಬಾಹುಮಪಿ ವಃ ಪ್ರತಿಕೂಲವೃತ್ತಿಮ್ ॥ ೬ ॥

ಬ್ರಹ್ಮದೇವರು ಹೇಳುತ್ತಾರೆ – ಎಲೈ ದೇವತೆಗಳಿರಾ! ಯೋಗನಿಷ್ಠರಾದ ಸನಕಾದಿ ಮುನಿಗಳು ಹೀಗೆ ಸ್ತುತಿಸಿದಾಗ ವೈಕುಂಠಪತಿಯಾದ ಶ್ರೀಹರಿಯು ಅವರನ್ನು ಪ್ರಶಂಸಿಸುತ್ತಾ ಇಂತೆಂದನು. ॥ ೧ ॥

ಶ್ರೀಭಗವಂತನು ಹೇಳಿದನು – ಮುನಿವರ್ಯರೇ! ಈ ಜಯ-ವಿಜಯರು ನನ್ನ ಪಾರ್ಷದರಾಗಿದ್ದಾರೆ. ಇವರು ನನ್ನನ್ನೂ ಲೆಕ್ಕಿಸದೆ ನಿಮಗೆ ಬಹಳ ದೊಡ್ಡ ಅಪರಾಧ ಮಾಡಿದ್ದಾರೆ. ॥ ೨ ॥ ನೀವೂ ನನಗೆ ಏಕಾಂತ ಭಕ್ತರು. ಆದ್ದರಿಂದ ಹೀಗೆ ನನಗೆ ಅಪಚಾರ ಮಾಡಿದ್ದಕ್ಕೆ ನೀವು ಇವರಿಗೆ ವಿಧಿಸಿದ ದಂಡನೆಯು ನನಗೆ ಸಮ್ಮತವೇ ಆಗಿದೆ. ॥ ೩ ॥ ಬ್ರಾಹ್ಮಣರು ನನಗೆ ಪರಮಾರಾಧ್ಯರು. ನನ್ನ ಅನುಚರರಾದ ಇವರಿಂದ ನಿಮಗಾದ ತಿರಸ್ಕಾರವನ್ನು ನನಗೆ ಆಗಿರುವ ತಿರಸ್ಕಾರವೆಂದೇ ತಿಳಿಯುತ್ತೇನೆ. ಆದ್ದರಿಂದ ನಾನು ನಿಮ್ಮಲ್ಲಿ ಪ್ರಸನ್ನತೆಯನ್ನು ಬಯಸುತ್ತೇನೆ. ॥ ೪ ॥ ಸೇವಕರು ಅಪರಾಧವನ್ನು ಮಾಡಿದರೆ ಜನರು ಅದಕ್ಕೆ ಯಜಮಾನರ ಹೆಸರನ್ನೇ ಹೇಳುತ್ತಾರೆ. ಚರ್ಮರೋಗವು ತ್ವಚೆಯನ್ನು ಕೆಡಿಸುವಂತೆ, ಸೇವಕರು ಮಾಡುವ ಅಪರಾಧವು ಒಡೆಯನ ಕೀರ್ತಿಯನ್ನು ಕಳಂಕಿತವಾಗಿಸುತ್ತದೆ. ॥ ೫ ॥ ನನ್ನ ನಿರ್ಮಲವಾದ ಕೀರ್ತಿಸುಧೆಯಲ್ಲಿ ಸ್ನಾನಮಾಡಿದರೆ ಚಾಂಡಾಲವರೆಗಿನ ಇಡೀ ಜಗತ್ತು ಪವಿತ್ರವಾಗುತ್ತದೆ. ಅದಕ್ಕಾಗಿ ನಾನು 'ವಿಕುಂಠ'ನೆಂದು ಕರೆಯಲ್ಪಡುತ್ತೇನೆ. ಆದರೆ ಈ ಪವಿತ್ರಕೀರ್ತಿಯು ನಿಮ್ಮಿಂದಲೇ ಬಂದಿರುವುದು. ಆದ್ದರಿಂದ ನಿಮಗೆ ಪ್ರತಿಕೂಲವಾಗಿ ನಡೆದುಕೊಂಡರೆ, ಅದು ನನ್ನ ಭುಜವೇ ಆಗಿದ್ದರೂ ಅದನ್ನು ನಾನು ಕೂಡಲೇ ಕತ್ತರಿಸಿಬಿಡುವೆನು. ॥ ೬ ॥

ಯತ್ಸೇವಯಾ ಚರಣಪದ್ಮಪವಿತ್ರರೇಣುಂ
ಸದ್ಯಃಕ್ಷತಾಖಿಲಮಲಂ ಪ್ರತಿಲಬ್ಧಶೀಲಮ್ ।
ನ ಶ್ರೀರ್ವಿರಕ್ತಮಪಿ ಮಾಂ ವಿಜಹಾತಿ ಯಸ್ಯಾಃ
ಪ್ರೇಕ್ಷಾಲವಾರ್ಥ ಇತರೇ ನಿಯಮಾನ್ವಹಂತಿ ॥ ೭ ॥

ನಾಹಂ ತಥಾದ್ಮಿ ಯಜಮಾನಹವಿರ್ವಿತಾನೇ
ಶ್ಚ್ಯೋತದ್ಘೃತಪ್ಲುತಮದನ್ ಹುತಭುಙ್ಮುಖೇನ ।
ಯದ್ಬ್ರಾಹ್ಮಣಸ್ಯ ಮುಖತಶ್ಚರತೋಽನುಘಾಸಂ
ತುಷ್ಟಸ್ಯ ಮಯ್ಯವಹಿತೈರ್ನಿಜಕರ್ಮಪಾಕೈಃ ॥ ೮ ॥

ಯೇಷಾಂ ಬಿಭರ್ಮ್ಯಹಮಖಂಡವಿಕುಂಠಯೋಗ-
ಮಾಯಾವಿಭೂತಿರಮಲಾಂಘ್ರಿರಜಃ ಕಿರೀಟೈಃ ।
ವಿಪ್ರಾಂಸ್ತು ಕೋ ನ ವಿಷಹೇತ ಯದರ್ಹಣಾಂಭಃ
ಸದ್ಯಃ ಪುನಾತಿ ಸಹಚಂದ್ರಲಲಾಮಲೋಕಾನ್ ॥ ೯ ॥

ಯೇ ಮೇ ತನೂರ್ದ್ವಿಜವರಾನ್ ದುಹತೀರ್ಮದೀಯಾ
ಭೂತಾನ್ಯಲಬ್ಧಶರಣಾನಿ ಚ ಭೇದಬುದ್ಧ್ಯಾ ।
ದ್ರಕ್ಷ್ಯಂತ್ಯಘಕ್ಷತದೃಶೋ ಹ್ಯಹಿಮನ್ಯವಸ್ತಾನ್
ಗೃಧ್ರಾ ರುಷಾ ಮಮ ಕುಷಂತ್ಯಧಿದಂಡನೇತುಃ ॥ ೧೦ ॥

ಯೇ ಬ್ರಾಹ್ಮಣಾನ್ಮಯಿ ಧಿಯಾ ಕ್ಷಿಪತೋಽರ್ಚಯಂತ-
ಸ್ತುಷ್ಯದ್ಧೃದಃ ಸ್ಮಿತಸುಧೋಕ್ಷಿತಪದ್ಮವಕ್ತ್ರಾಃ ।
ವಾಣ್ಯಾನುರಾಗಕಲಯಾಽಽತ್ಮಜವದ್ಗೃಣಂತಃ
ಸಂಬೋಧಯಂತ್ಯಹಮಿವಾಹಮುಪಾಹೃತಸ್ತೈಃ ॥ ೧೧ ॥

ತನ್ಮೇ ಸ್ವಭರ್ತುರವಸಾಯಮಲಕ್ಷಮಾಣೌ
ಯುಷ್ಮದ್ವ್ಯತಿಕ್ರಮಗತಿಂ ಪ್ರತಿಪದ್ಯ ಸದ್ಯಃ ।
ಭೂಯೋ ಮಮಾಂತಿಕಮಿತಾಂ ತದನುಗ್ರಹೋ ಮೇ
ಯತ್ಕಲ್ಪತಾಮಚಿರತೋ ಭೃತಯೋರ್ವಿವಾಸಃ ॥ ೧೨ ॥

ನಿಮ್ಮಂತಹವರ ಸೇವೆ ಮಾಡಿದ್ದರಿಂದಲೇ ನನ್ನ ಪಾದಧೂಳಿಗೆ ಎಲ್ಲ ಪಾಪಗಳನ್ನು ಒಡನೆಯೇ ನಾಶಪಡಿಸುವ ಪಾವಿತ್ರ್ಯ ವುಂಟಾಗಿದೆ. ಯಾರ ಲೇಶಮಾತ್ರವಾದ ಕೃಪಾಕಟಾಕ್ಷಕ್ಕಾಗಿ ಬ್ರಹ್ಮಾದಿ ದೇವತೆಗಳೂ ಬಗೆ-ಬಗೆಯ ನಿಯಮಗಳನ್ನೂ, ವ್ರತ ಗಳನ್ನೂ ಆಚರಿಸುತ್ತಾರೋ, ಅಂತಹ ಲಕ್ಷ್ಮೀದೇವಿಯು ನಾನು ಉದಾಸೀನ ಮಾಡಿದರೂ ನನ್ನನ್ನು ಒಂದು ಕ್ಷಣಕಾಲವು ಬಿಡದೆ ಇರುವ ಲೋಕೋತ್ತರವಾದ ಶೀಲಸ್ವಭಾವವು ನನಗೆ ದೊರೆತುದು ನಿಮ್ಮ ಸೇವೆಯಿಂದಲೇ. ॥ ೭ ॥ ತಮ್ಮ ಸಮಸ್ತ ಕರ್ಮಫಲವನ್ನು ನನಗೆ ಸಮರ್ಪಿಸಿ ಸದಾ ಸಂತುಷ್ಟರಾಗಿರುವ ನಿಷ್ಕಾಮರಾದ ಬ್ರಾಹ್ಮಣರು ಪ್ರತಿಯೊಂದು ತುತ್ತಿನಲ್ಲಿಯೂ ತೃಪ್ತಿಯನ್ನು ಅನು ಭವಿಸುತ್ತಾ, ತುಪ್ಪದಲ್ಲಿ ನೆನೆದಿರುವ ಬಗೆ-ಬಗೆಯ ಪಕ್ವಾನ್ನಗಳನ್ನು ಭುಂಜಿಸುವಾಗ ಅವರ ಬಾಯಿಯ ಮೂಲಕ ನಾನು ತೃಪ್ತ ನಾಗುವಂತೆ, ಯಜ್ಞದಲ್ಲಿ ಅಗ್ನಿಮುಖದಲ್ಲಿ ಯಜಮಾನನು ಅರ್ಪಿಸಿದ ಆಹುತಿಯನ್ನು ಸ್ವೀಕರಿಸುವುದರಿಂದಲೂ ನಾನು ತೃಪ್ತ ನಾಗುವುದಿಲ್ಲ. ॥ ೮ ॥ ಅಖಂಡವಾದ ಯೋಗಮಾಯೆಯೂ, ಅಸೀಮ ಐಶ್ವರ್ಯವೂ ನನಗೆ ಅಧೀನವಾಗಿದೆ. ನನ್ನ ಪಾದೋದಕ ವಾದ ಗಂಗೆಯು ಚಂದ್ರಶೇಖರ ಭಗವಾನ್ ಶಿವನ ಸಹಿತ ಸಮಸ್ತ ಲೋಕಗಳನ್ನು ಪವಿತ್ರಗೊಳಿಸುತ್ತದೆ. ಇಂತಹ ಪರಮ ಪವಿತ್ರನೂ, ಪರಮೇಶ್ವರನೂ ಆಗಿದ್ದರೂ ನಾನು ಯಾರ ಪವಿತ್ರವಾದ ಪಾದ ರಜವನ್ನು ನನ್ನ ಕಿರೀಟದಲ್ಲಿ ಧರಿಸಿಕೊಂಡಿರುವೆನೋ, ಅಂತಹ ಬ್ರಾಹ್ಮಣರ ಕರ್ಮವನ್ನು ಯಾರು ತಾನೇ ಸಹಿಸುವುದಿಲ್ಲ? ॥ ೯ ॥ ಬ್ರಾಹ್ಮಣರು, ಹಾಲುಕರೆಯುವ ಹಸುಗಳು, ಅನಾಥ ಪ್ರಾಣಿಗಳು ನನ್ನ ಶರೀರಗಳೇ ಆಗಿವೆ. ಪಾಪಗಳಿಂದ ವಿವೇಕ ದೃಷ್ಟಿಯನ್ನು ಕಳೆದುಕೊಂಡು ಈ ಮೂವರನ್ನು ನನ್ನಿಂದ ಬೇರೆ ಎಂದು ತಿಳಿಯುವವರು ಯಮನಿಗೆ ಅತಿಥಿಗಳಾಗುವರು. ಕಾಳಸರ್ಪ ದಂತೆ ಕ್ರೂರಿಗಳಾದ ಅವರನ್ನು ಯಮನ ದೂತರೆಂಬ ಹದ್ದುಗಳು ಅತ್ಯಂತ ಕ್ರೋಧಗೊಂಡು ತಮ್ಮ ಕೊಕ್ಕುಗಳಿಂದ ಕುಕ್ಕಿಹಾಕುತ್ತವೆ. ॥ ೧೦ ॥ ಬ್ರಾಹ್ಮಣರು ತಿರಸ್ಕಾರಪೂರ್ವಕವಾಗಿ ಕಟುವಾಗಿ ನುಡಿ ದರೂ ಅವರಲ್ಲಿ 'ಪರಮಾತ್ಮನಾದ ನಾನೇ ಆ ಬ್ರಾಹ್ಮಣರು' ಎಂದು ಭಾವಿಸಿ, ಪ್ರಸನ್ನವಾದ ಚಿತ್ತದಿಂದ ಮತ್ತು ಅಮೃತಮಯವಾದ ಕಿರುನಗೆಯಿಂದ ಕೂಡಿದ ಪ್ರಸನ್ನವಾದ ಮುಖಕಮಲದಿಂದ ಯಾರು ಅವರನ್ನು ಆದರಿಸುತ್ತಾರೋ ಹಾಗೂ ಮುನಿಸಿಕೊಂಡ ತಂದೆಯನ್ನು ಮಗನೂ ಮತ್ತು ನಿಮ್ಮನ್ನು ನಾನು ಭಾವಿಸುವಂತೆ ಪ್ರೇಮಪೂರ್ಣ ಮಾತುಗಳಿಂದ ಪ್ರಾರ್ಥನೆ ಮಾಡುತ್ತಾ ಅವರನ್ನು ಶಾಂತಗೊಳಿಸುತ್ತಾರೋ – ಅಂತಹವರು ನನ್ನನ್ನು ವಶಪಡಿಸಿ ಕೊಳ್ಳುವರು. ॥ ೧೧ ॥ ನನ್ನ ಈ ಸೇವಕರು ನನ್ನ ಅಭಿಪ್ರಾಯವನ್ನು ಅರಿಯದೆಯೇ ನಿಮಗೆ ಅವಮಾನಮಾಡಿದ್ದಾರೆ. ಅದಕ್ಕಾಗಿ ಒಪ್ಪಾಯದಿಂದ ನೀವು ಈ ಜಯ-ವಿಜಯರ ಲೋಕಭ್ರಂಶದ ಅವಧಿಯು ಬೇಗನೇ ಮುಗಿದು, ಅವರು ತಮ್ಮ ಅಪರಾಧಕ್ಕನು ರೂಪವಾದ ಅಧಮಗತಿಯನ್ನು ಹೊಂದಿ ಶೀಘ್ರವೇ ನನ್ನ ಬಳಿಗೆ ಹಿಂದಿರುಗುವಂತೆ ಕೃಪೆ ತೋರಬೇಕು. ॥ ೧೨ ॥

ಬ್ರಹ್ಮೋವಾಚ

ಅಥ ತಸ್ಯೋಶತೀಂ ದೇವೀಮೃಷಿಕುಲ್ಯಾಂ ಸರಸ್ವತೀಮ್ ।
ನಾಸ್ವಾದ್ಯ ಮನ್ಯುದಷ್ಟಾನಾಂ ತೇಷಾಮಾತ್ಮಾಪ್ಯತೃಪ್ಯತ ॥ ೧೩ ॥

ಸತೀಂ ವ್ಯಾದಾಯ ಶೃಣ್ವತೋ ಲಘ್ವೀಂ ಗುರ್ವರ್ಥಗಹ್ವರಾಮ್ ।
ವಿಗಾಹ್ಯಾಗಾಧಗಂಭೀರಾಂ ನ ವಿದುಸ್ತಚ್ಚಿಕೀರ್ಷಿತಮ್ ॥ ೧೪ ॥

ತೇ ಯೋಗಮಾಯಯಾಽಽರಬ್ಧಪಾರಮೇಷ್ಠ್ಯಮಹೋದಯಮ್ ।
ಪ್ರೋಚುಃ ಪ್ರಾಂಜಲಯೋ ವಿಪ್ರಾಃ ಪ್ರಹೃಷ್ಟಾಃ ಕ್ಷುಭಿತತ್ವಚಃ ॥ ೧೫ ॥

ಮುನಯ ಊಚುಃ

ನ ವಯಂ ಭಗವನ್ ವಿದ್ಮಸ್ತವ ದೇವ ಚಿಕೀರ್ಷಿತಮ್ ।
ಕೃತೋ ಮೇಽನುಗ್ರಹಶ್ಚೇತಿ ಯದಧ್ಯಕ್ಷಃ ಪ್ರಭಾಷಸೇ ॥ ೧೬ ॥

ಬ್ರಹ್ಮಣ್ಯಸ್ಯ ಪರಂ ದೈವಂ ಬ್ರಾಹ್ಮಣಾಃ ಕಿಲ ತೇ ಪ್ರಭೋ ।
ವಿಪ್ರಾಣಾಂ ದೇವದೇವಾನಾಂ ಭಗವಾನಾತ್ಮದೈವತಮ್ ॥ ೧೭ ॥

ತ್ವತ್ತಃ ಸನಾತನೋ ಧರ್ಮೋ ರಕ್ಷ್ಯತೇ ತನುಭಿಸ್ತವ ।
ಧರ್ಮಸ್ಯ ಪರಮೋ ಗುಹ್ಯೋ ನಿರ್ವಿಕಾರೋ ಭವಾನ್ಮತಃ ॥ ೧೮ ॥

ತರಂತಿ ಹ್ಯಂಜಸಾ ಮೃತ್ಯುಂ ನಿವೃತ್ತಾ ಯದನುಗ್ರಹಾತ್ ।
ಯೋಗಿನಃ ಸ ಭವಾನ್ಕಿಂಸ್ವಿದನುಗೃಹ್ಯೇತ ಯತ್ಪರೈಃ ॥ ೧೯ ॥

ಯಂ ವೈ ವಿಭೂತಿರುಪಯಾತ್ಯನುವೇಲಮನ್ಯೈ-
ರರ್ಥಾರ್ಥಿಭಿಃ ಸ್ವಶಿರಸಾ ಧೃತಪಾದರೇಣುಃ ।
ಧನ್ಯಾರ್ಪಿತಾಂಘ್ರಿತುಲಸೀನವದಾಮಧಾಮ್ನೋ
ಲೋಕಂ ಮಧುವ್ರತಪತೇರಿವ ಕಾಮಯಾನಾ ॥ ೨೦ ॥

ಶ್ರೀಬ್ರಹ್ಮದೇವರು ಹೇಳುತ್ತಾರೆ – ದೇವತೆಗಳಿರಾ! ಸನಕಾದಿ ಮುನಿಗಳು ಕ್ರೋಧವೆಂಬ ಸರ್ಪದಿಂದ ಕಚ್ಚಲ್ಪಟ್ಟಿದ್ದರೂ ಅವರ ಕ್ರೋಧವು ಆಗಲೇ ಶಾಂತವಾಗಿತ್ತು. ಈಗ ಅಂತಃಕರಣವನ್ನು ಪ್ರಕಾಶಪಡಿಸುವ ಭಗವಂತನ ಅಮೃತಮಯವಾದ ಮಧುರವಾಣಿಯನ್ನು ಎಷ್ಟು ಕೇಳಿದರೂ ಅವರ ಚಿತ್ತಕ್ಕೆ ತೃಪ್ತಿಯಾಗಲಿಲ್ಲ. ॥ ೧೩ ॥ ಭಗವಂತನ ವಾಣಿಯು ಅತ್ಯಂತ ಸತ್ಯವೂ, ಸುಮನೋಹರವೂ ಆಗಿತ್ತು. ಕಡಿಮೆ ಅಕ್ಷರಗಳಿಂದ ಕೂಡಿದ್ದು, ಅರ್ಥಗರ್ಭಿತವೂ, ಸಾರಭೂತವೂ, ಅರ್ಥೈಸಲು ಬಹು ಕಷ್ಟವೂ, ಗಂಭೀರವೂ ಆಗಿತ್ತು. ಬಹಳ ಸಾವಧಾನವಾಗಿ ಕೇಳಿ, ವಿಚಾರಮಾಡಿದರೂ ಭಗವಂತನು ಏನು ಹೇಳಲು ಬಯಸುತ್ತಿರುವನು ಎಂಬುದು ತಿಳಿದು ಬರುತ್ತಿರಲಿಲ್ಲ. ॥ ೧೪ ॥ ಭಗವಂತನ ಅದ್ಭುತವಾದ ಔದಾರ್ಯವನ್ನು ಕಂಡು ಅವರು ಆನಂದಿತರಾಗಿ, ಅವರ ಅಂಗಾಂಗಗಳೆಲ್ಲವೂ ರೋಮಾಂಚಿತವಾದುವು. ಯೋಗಮಾಯೆಯ ಪ್ರಭಾವದಿಂದ ತನ್ನ ಪರಮೈಶ್ವರ್ಯದ ಪ್ರಭಾವವನ್ನು ಪ್ರಕಟಪಡಿಸುವಂತಹ ಪ್ರಭುವಿನ ಮುಂದೆ ಕೈಜೋಡಿಸಿಕೊಂಡು ಅವರು ವಿಜ್ಞಾಪಿಸಿಕೊಂಡರು. ॥ ೧೫ ॥

ಸನಕಾದಿ ಮುನಿಗಳು ಹೇಳಿದರು – ಸ್ವಯಂಪ್ರಕಾಶವಾದ ಪರಮಾತ್ಮನೇ! ನೀನು ಸರ್ವೇಶ್ವರನೂ, ಲೋಕಾಧ್ಯಕ್ಷನೂ ಆಗಿದ್ದರೂ ನಮ್ಮನ್ನು ಕುರಿತು – 'ನೀವು ನನ್ನಲ್ಲಿ ತುಂಬಾ ಅನುಗ್ರಹ ಮಾಡಿದಿರಿ' ಎಂದು ಹೇಳಿದೆಯಲ್ಲ! ಇದರ ಅಭಿಪ್ರಾಯ ಏನೆಂದು ನಮಗೆ ತಿಳಿಯಲಿಲ್ಲ. ॥ ೧೬ ॥ ಪ್ರಭುವೇ! ನೀನು ಬ್ರಾಹ್ಮಣರಿಗೂ, ದೇವತೆಗಳಿಗೂ ದೇವತೆಯಾಗಿದ್ದು, ಬ್ರಹ್ಮಾದಿಗಳಿಗೂ ಆತ್ಮನೂ, ಆರಾಧ್ಯದೈವವೂ ಆಗಿರುವೆ. ಬ್ರಾಹ್ಮಣರ ಪರಮಹಿತಕಾರಿಯಾಗಿರುವೆ. ಇಂತಹ ನೀನು 'ಬ್ರಾಹ್ಮಣರೇ ನನಗೆ ಪರಮದೈವ'ವೆಂದು ಹೇಳಿರುವುದು ಕೇವಲ ಲೋಕಶಿಕ್ಷಣಕ್ಕಾಗಿಯೇ ಇದೆ. (ಜನರು ಬ್ರಾಹ್ಮಣರನ್ನು ಗೌರವಿಸಬೇಕೆಂಬ ಆದರ್ಶವನ್ನು ತೋರಲು ಹೀಗೆ ಹೇಳಿರುವೆ ಎಂದು ನಾವು ಭಾವಿಸುತ್ತೇವೆ.) ॥ ೧೭ ॥ ಸನಾತನ ಧರ್ಮವು ನಿನ್ನಿಂದಲೇ ಉಂಟಾಗಿದೆ. ನಿನ್ನ ಹಲವು ಅವತಾರಗಳ ಮೂಲಕ ಆಗಾಗ ಆ ಧರ್ಮಸೇತುವನ್ನು ರಕ್ಷಿಸುವವನೂ ನೀನೇ. ನಿರ್ವಿಕಾರ ಸ್ವರೂಪನೂ, ಧರ್ಮದ ಪರಮರಹಸ್ಯವೂ ನೀನೇ ಆಗಿರುವೆ ಎಂದು ಶಾಸ್ತ್ರಗಳು ಸಾರುತ್ತಿವೆ. ॥ ೧೮ ॥ ನಿವೃತ್ತಿಧರ್ಮವನ್ನು ಸಾಧಿಸುವ ಯೋಗಿಗಳು ನಿನ್ನ ಅನುಗ್ರಹದಿಂದಲೇ ಮೃತ್ಯುರೂಪವಾದ ಸಂಸಾರಸಾಗರವನ್ನು ಸಹಜವಾಗಿ ದಾಟಿ ದಡವನ್ನು ಕಾಣುವರು. ಹೀಗಿರುವಾಗ ನಿನಗೆ ಇತರರು ಕೃಪೆಮಾಡುವುದು ಎಂದರೇನು? ॥ ೧೯ ॥ ಐಶ್ವರ್ಯವೇ ಮುಂತಾದ ಪ್ರಯೋಜನಕ್ಕಾಗಿ ಉಪಾಸಿಸುವ ಅರ್ಥಾರ್ಥಿ ಭಕ್ತರು ಶ್ರೀಲಕ್ಷ್ಮೀದೇವಿಯ ಪಾದಧೂಳಿಯನ್ನು ತಮ್ಮ ತಲೆಯಲ್ಲಿ ಮುಡಿದುಕೊಳ್ಳುತ್ತಾರೆ. ಆದರೆ ಆ ದೇವಿಯೋ ನಿರಂತರವಾಗಿ ನಿನ್ನ ಸೇವೆಯಲ್ಲಿ ಆಸಕ್ತಳಾಗಿರುತ್ತಾಳೆ. ಭಾಗ್ಯಶಾಲಿಗಳಾದ ಭಕ್ತರು ನಿನ್ನ ಪಾದಾರವಿಂದಗಳಲ್ಲಿ ಸಮರ್ಪಿಸುವ ನವ-ನವೀನ ತುಳಸೀ ಮಾಲೆಯ ಮೇಲೆ ಝೇಂಕರಿಸುತ್ತಿರುವ ದುಂಬಿಗಳಂತೆ ಆಕೆಯೂ ಕೂಡ ನಿನ್ನ ಪಾದಪದ್ಮಗಳನ್ನೇ ತನ್ನ ನಿವಾಸಸ್ಥಾನವನ್ನಾಗಿ ಮಾಡಿ

ಯಸ್ತಾಂ ವಿವಿಕ್ತಚರಿತೈರನುವರ್ತಮಾನಾಂ
ನಾತ್ಯಾದ್ರಿಯತ್ಪರಮಭಾಗವತಪ್ರಸಂಗಃ ।
ಸ ತ್ವಂ ದ್ವಿಜಾನುಪಥಪುಣ್ಯರಜಃಪುನೀತಃ
ಶ್ರೀವತ್ಸಲಕ್ಷ್ಮ ಕಿಮಗಾ ಭಗಭಾಜನಸ್ತ್ವಮ್ ॥ ೨೧ ॥

ಧರ್ಮಸ್ಯ ತೇ ಭಗವತಸ್ತ್ರಿಯುಗ ತ್ರಿಭಿಃ ಸ್ವೈಃ
ಪದ್ಭಿಶ್ಚರಾಚರಮಿದಂ ದ್ವಿಜದೇವತಾರ್ಥಮ್ ।
ನೂನಂ ಭೃತಂ ತದಭಿಘಾತಿ ರಜಸ್ತಮಶ್ಚ
ಸತ್ತ್ವೇನ ನೋ ವರದಯಾ ತನುವಾ ನಿರಸ್ಯ ॥ ೨೨ ॥

ನ ತ್ವಂ ದ್ವಿಜೋತ್ತಮಕುಲಂ ಯದಿಹಾತ್ಮಗೋಪಂ
ಗೋಪ್ತಾ ವೃಷಃ ಸ್ವರ್ಹಣೇನ ಸಸೂನೃತೇನ ।
ತರ್ಹ್ಯೇವ ನಂಕ್ಷ್ಯತಿ ಶಿವಸ್ತವ ದೇವ ಪಂಥಾ
ಲೋಕೋಽಗ್ರಹೀಷ್ಯದೃಷಭಸ್ಯ ಹಿ ತತ್ಪ್ರಮಾಣಮ್ ॥ ೨೩ ॥

ತತ್ತೇಽನಭೀಷ್ಟಮಿವ ಸತ್ತ್ವನಿಧೇರ್ವಿಧಿತ್ಸೋಃ
ಕ್ಷೇಮಂ ಜನಾಯ ನಿಜಶಕ್ತಿಭಿರುದ್ಧೃತಾರೇಃ ।
ನೈತಾವತಾ ತ್ರ್ಯಧಿಪತೇರ್ಬತ ವಿಶ್ವಭರ್ತು-
ಸ್ತೇಜಃ ಕ್ಷತಂ ತ್ವವನತಸ್ಯ ಸ ತೇ ವಿನೋದಃ ॥ ೨೪ ॥

ಯಂ ವಾನಯೋರ್ದಮಮಧೀಶ ಭವಾನ್ವಿಧತ್ತೇ
ವೃತ್ತಿಂ ನು ವಾ ತದನುಮನ್ಮಹಿ ನಿರ್ವ್ಯಲೀಕಮ್ ।
ಅಸ್ಮಾಸು ವಾ ಯ ಉಚಿತೋ ಧ್ರಿಯತಾಂ ಸ ದಂಡೋ
ಯೇಽನಾಗಸೌ ವಯಮಯುಂಕ್ಷ್ಮಹಿ ಕಿಲ್ಬಿಷೇಣ ॥ ೨೫ ॥

ಶ್ರೀಭಗವಾನುವಾಚ

ಏತೌ ಸುರೇತರಗತಿಂ ಪ್ರತಿಪದ್ಯ ಸದ್ಯಃ
ಸಂರಂಭಸಂಭೃತಸಮಾಧ್ಯನುಬದ್ಧಯೋಗೌ ।
ಭೂಯಃ ಸಕಾಶಮುಪಯಾಸ್ಯತ ಆಶು ಯೋ ವಃ
ಶಾಪೋ ಮಯೈವ ನಿಮಿತಸ್ತದವೇತ ವಿಪ್ರಾಃ ॥ ೨೬ ॥

ಕೊಳ್ಳಲು ಬಯಸುತ್ತಾಳೆ. (ಸವತಿ ಯಾಗಿರುವ ತುಳಸೀದೇವಿಗೆ ಒದಗಿದ ಸೌಭಾಗ್ಯವು ತನಗೂ ಬರಲಿ ಎಂದು ತಾನೂ ನಿನ್ನ ಚರಣಗಳಲ್ಲೇ ಇದ್ದು ಅವುಗಳನ್ನು ಸೇವಿಸಲು ಇಷ್ಟಪಡುತ್ತಿರುವಳು.) ॥ ೨೦ ॥ ಆದರೆ ತನ್ನ ಪವಿತ್ರ ಚರಿತ್ರಗಳಿಂದ ನಿರಂತರ ತತ್ಪರಳಾಗಿರುವ ಆ ಲಕ್ಷ್ಮೀದೇವಿಯನ್ನೂ ಕೂಡ ಹೆಚ್ಚಾಗಿ ಆದರಿಸದೆ ನೀನು ನಿನ್ನ ಭಕ್ತರಮೇಲೆಯೇ ವಿಶೇಷವಾದ ಪ್ರೀತಿಯನ್ನು ತೋರಿಸುತ್ತೀಯೆ. ಹೀಗಿರುವಾಗ ಎಲ್ಲೆಲ್ಲಿಯೋ ಸಂಚರಿಸುವ ಬ್ರಾಹ್ಮಣರ ಪಾದಗಳಿಗೆ ತಗುಲಿದ ಪುಣ್ಯವಾದ ಮಾರ್ಗದ ಧೂಳಿಯಾಗಲೀ, ಶ್ರೀವತ್ಸಲಾಂಛನವಾಗಲೀ ನಿನ್ನನ್ನು ಪವಿತ್ರಗೊಳಿಸಿಯಾವೇ ? ಅವುಗಳಿಂದ ನಿನ್ನ ಕಾಂತಿಯು ಹೆಚ್ಚೀತೇ ? ॥ ೨೧ ॥

ಭಗವಂತನೇ ! ನೀನು ಸಾಕ್ಷಾತ್ ಧರ್ಮಸ್ವರೂಪಿಯಾಗಿರುವೆ. ನೀನೇ ಕೃತ, ತ್ರೇತ, ದ್ವಾಪರವೆಂದು ಮೂರು ಯುಗಗಳಲ್ಲಿಯೂ ಪ್ರತ್ಯಕ್ಷವಾಗಿ ಇರುವವನು. ತಪಸ್ಸು, ಶೌಚ, ದಾನಗಳೆಂಬ ಮೂರು ಚರಣಗಳಿಂದ ದೇವತೆಗಳ ಮತ್ತು ಬ್ರಾಹ್ಮಣರ ಹಿತಕ್ಕಾಗಿ ಚರಾಚರ ಜಗತ್ತನ್ನು ರಕ್ಷಿಸುತ್ತಿರುವವನು. ಶುದ್ಧಸತ್ತ್ವಮಯಿಯೂ, ವರಪ್ರದವೂ ಆದ ನಿನ್ನ ಶ್ರೀಮೂರ್ತಿಯಿಂದ ನಮ್ಮಲ್ಲಿರುವ ಧರ್ಮವಿರೋಧಿಗಳಾದ ರಜೋಗುಣ-ತಮೋಗುಣಗಳನ್ನು ದೂರಮಾಡು ಸ್ವಾಮಿ. ॥ ೨೨ ॥ ದೇವಾ ! ಈ ಬ್ರಾಹ್ಮಣಕುಲವನ್ನು ನೀನು ಅವಶ್ಯವಾಗಿ ರಕ್ಷಿಸಬೇಕು. ನೀನು ಸಾಕ್ಷಾತ್ ಧರ್ಮ ರೂಪಿಯೇ ಆಗಿದ್ದರೂ ನಿನ್ನ ಶುಭವಚನಗಳಿಂದಲೂ, ಪೂಜಾವಿಧಿಗಳಿಂದಲೂ ಈ ಉತ್ತಮ ಕುಲವನ್ನು ರಕ್ಷಿಸದೇ ಇದ್ದರೆ ನೀನು ನಿಯತಮಾಡಿರುವ ಮಂಗಳಕರವಾದ ಮಾರ್ಗವು ನಷ್ಟವಾಗಿ ಬಿಡುವುದು. ಏಕೆಂದರೆ, ಶ್ರೇಷ್ಠರಾದ ಪುರುಷರು ಆಚರಿಸುವುದನ್ನೇ ಜನರು ಪ್ರಮಾಣವೆಂದು ಭಾವಿಸಿ ಅನುಸರಿಸುತ್ತಾರೆ. ॥ ೨೩ ॥ ಪ್ರಭೋ ! ನೀನು ಸತ್ತ್ವಗುಣದ ಗಣಿಯಾಗಿದ್ದು ಸಮಸ್ತ ಜೀವಿಗಳಿಗೆ ಕಲ್ಯಾಣವನ್ನುಂಟುಮಾಡುವುದರಲ್ಲಿ ತತ್ಪರನಾಗಿದ್ದೀಯೆ. ಧರ್ಮಕ್ಕೆ ದ್ರೋಹಿಗಳಾದವರನ್ನು ನಿನ್ನ ಶಕ್ತಿ ಹಾಗೂ ವಿಭೂತಿಗಳಾದ ರಾಜರೇ ಮುಂತಾದವರ ಮೂಲಕ ಸಂಹಾರ ಮಾಡಿಸುತ್ತೀಯೆ. ವೇದಮಾರ್ಗವು ನಾಶ ಹೊಂದುವುದು ನಿನಗೆ ಎಳ್ಳಷ್ಟೂ ಇಷ್ಟವಿಲ್ಲ. ನೀನು ಮೂರು ಲೋಕಗಳಿಗೆ ಒಡೆಯನೂ, ಜಗದ್ರಕ್ಷಕನೂ ಆಗಿದ್ದರೂ ಬ್ರಾಹ್ಮಣರ ವಿಷಯದಲ್ಲಿ ಇಷ್ಟೊಂದು ವಿನಯದಿಂದ ನಡೆದುಕೊಳ್ಳುತ್ತೀಯೆ ! ಆದರೆ ಇದರಿಂದ ನಿನ್ನ ತೇಜಸ್ಸಿಗೆ ಯಾವ ಕೊರತೆಯೂ ಇಲ್ಲ. ಏಕೆಂದರೆ, ಇದು ನಿನ್ನ ಲೀಲಾವಿಲಾಸವಲ್ಲವೇ ! ॥ ೨೪ ॥ ಸರ್ವೇಶ್ವರನೇ ! ನೀನು ಈ ಜಯ-ವಿಜಯರಿಗೆ ಉಚಿತವೆನಿಸಿದ ಶಿಕ್ಷೆಯನ್ನು ಕೊಡಬಹುದು ಅಥವಾ ಪುರಸ್ಕಾರರೂಪವಾಗಿ ಅವರ ವೃತ್ತಿಯನ್ನು ವೃದ್ಧಿಪಡಿಸಬಹುದು. ನೀನು ಏನು ಮಾಡಿದರೂ ನಮಗೆ ಸಮ್ಮತವೇ. ಅಥವಾ ನಿನ್ನ ನಿರಪರಾಧಿಗಳಾದ ಅನುಚರರಿಗೆ ಶಾಪಕೊಟ್ಟದ್ದಕ್ಕಾಗಿ ನೀನು ನಮಗೆ ತಕ್ಕ ಶಿಕ್ಷೆಯನ್ನು ವಿಧಿಸಬಹುದು. ಅದನ್ನೂ ಕೂಡ ನಾವು ಹರ್ಷದಿಂದ ಸ್ವೀಕರಿಸುತ್ತೇವೆ. ॥ ೨೫ ॥

ಶ್ರೀಭಗವಂತನೆಂದನು – ಬ್ರಾಹ್ಮಣೋತ್ತಮರೇ ! ನೀವು ಇವರಿಗೆ ಕೊಟ್ಟಿರುವ ಶಾಪವು ನನ್ನ ಪ್ರೇರಣೆಯಿಂದಲೇ ಎಂದು ತಿಳಿಯಿರಿ.

ಬ್ರಹ್ಮೋವಾಚ

ಅಥ ತೇ ಮುನಯೋ ದೃಷ್ಟ್ವಾ ನಯನಾನಂದಭಾಜನಮ್ ।
ವೈಕುಂಠಂ ತದಧಿಷ್ಠಾನಂ ವಿಕುಂಠಂ ಚ ಸ್ವಯಂಪ್ರಭಮ್ ॥ ೨೭ ॥

ಭಗವಂತಂ ಪರಿಕ್ರಮ್ಯ ಪ್ರಣಿಪತ್ಯಾನುಮಾನ್ಯ ಚ ।
ಪ್ರತಿಜಗ್ಮುಃ ಪ್ರಮುದಿತಾಃ ಶಂಸಂತೋ ವೈಷ್ಣವೀಂ ಶ್ರಿಯಮ್ ॥ ೨೮ ॥

ಭಗವಾನನುಗಾವಾಹ ಯಾತಂ ಮಾ ಭೈಷ್ಟಮಸ್ತು ಶಮ್ ।
ಬ್ರಹ್ಮತೇಜಃ ಸಮರ್ಥೋಽಪಿ ಹಂತುಂ ನೇಚ್ಛೇ ಮತಂ ತು ಮೇ ॥ ೨೯ ॥

ಏತತ್ಪುರೈವ ನಿರ್ದಿಷ್ಟಂ ರಮಯಾ ಕ್ರುದ್ಧಯಾ ಯದಾ ।
ಪುರಾಪವಾರಿತಾ ದ್ವಾರಿ ವಿಶಂತೀ ಮಯ್ಯುಪಾರತೇ ॥ ೩೦ ॥

ಮಯಿ ಸಂರಂಭಯೋಗೇನ ನಿಸ್ತೀರ್ಯ ಬ್ರಹ್ಮಹೇಲನಮ್ ।
ಪ್ರತ್ಯೇಷ್ಯತಂ ನಿಕಾಶಂ ಮೇ ಕಾಲೇನಾಲ್ಪೀಯಸಾ ಪುನಃ ॥ ೩೧ ॥

ದ್ವಾಃಸ್ಥಾವಾದಿಶ್ಯ ಭಗವಾನ್ ವಿಮಾನಶ್ರೇಣಿಭೂಷಣಮ್ ।
ಸರ್ವಾತಿಶಯಯಾ ಲಕ್ಷ್ಮ್ಯಾ ಜುಷ್ಟಂ ಸ್ವಂ ಧಿಷ್ಣ್ಯಮಾವಿಶತ್ ॥ ೩೨ ॥

ತೌ ತು ಗೀರ್ವಾಣಋಷಭೌ ದುಸ್ತರಾದ್ಧರಿಲೋಕತಃ ।
ಹತಶ್ರಿಯೌ ಬ್ರಹ್ಮಶಾಪಾದಭೂತಾಂ ವಿಗತಸ್ಮಯೌ ॥ ೩೩ ॥

ತದಾ ವಿಕುಂಠಧಿಷಣಾತ್ತಯೋರ್ನಿಪತಮಾನಯೋಃ ।
ಹಾಹಾಕಾರೋ ಮಹಾನಾಸೀದ್ವಿಮಾನಾಗ್ರ್ಯೇಷು ಪುತ್ರಕಾಃ ॥ ೩೪ ॥

ತಾವೇವ ಹ್ಯಧುನಾ ಪ್ರಾಪ್ತೌ ಪಾರ್ಷದಪ್ರವರೌ ಹರೇಃ ।
ದಿತೇರ್ಜಠರನಿರ್ವಿಷ್ಟಂ ಕಾಶ್ಯಪಂ ತೇಜ ಉಲ್ಬಣಮ್ ॥ ೩೫ ॥

ತಯೋರಸುರಯೋರದ್ಯ ತೇಜಸಾ ಯಮಯೋರ್ಹಿ ವಃ ।
ಆಕ್ಷಿಪ್ತಂ ತೇಜ ಏತರ್ಹಿ ಭಗವಾಂಸ್ತದ್ವಿಧಿತ್ಸತಿ ॥ ೩೬ ॥

ವಿಶ್ವಸ್ಯ ಯಃ ಸ್ಥಿತಿಲಯೋದ್ಭವಹೇತುರಾದ್ಯೋ
ಯೋಗೇಶ್ವರೈರಪಿ ದುರತ್ಯಯಯೋಗಮಾಯಃ ।
ಕ್ಷೇಮಂ ವಿಧಾಸ್ಯತಿ ಸ ನೋ ಭಗವಾಂಸ್ತ್ರ್ಯಧೀಶ-
ಸ್ತತ್ರಾಸ್ಮದೀಯವಿಮೃಶೇನ ಕಿಯಾನಿಹಾರ್ಥಃ ॥ ೩೭ ॥

ಈಗ ಇವರು ಒಡನೆಯೇ ನಿಮ್ಮ ಶಾಪಕ್ಕನುಸಾರವಾಗಿ ದೈತ್ಯ ಯೋನಿಯನ್ನು ಪಡೆದು, ಕ್ರೋಧಾವೇಶದಿಂದ ಹೆಚ್ಚಿನ ಏಕಾಗ್ರತೆಯನ್ನು ಸುದೃಢ ಯೋಗಸಂಪನ್ನರಾಗಿ ಮತ್ತೆ ಬೇಗನೇ ನನ್ನ ಬಳಿಗೆ ಹಿಂತಿರುಗುವರು, ಎಂದು ಅಪ್ಪಣೆಕೊಟ್ಟನು. ॥ ೨೬ ॥

ಶ್ರೀಬ್ರಹ್ಮದೇವರು ಹೇಳುತ್ತಾರೆ – ಎಲೈ ದೇವತೆಗಳಿರಾ! ಅನಂತರ ಆ ಮುನೀಂದ್ರರು ಕಣ್ಣುಗಳಿಗೆ ಹಬ್ಬವಾಗಿರುವ ಭಗವಾನ್ ವಿಷ್ಣುವನ್ನು ಹಾಗೂ ಸ್ವಯಂಪ್ರಕಾಶವಾದ ವೈಕುಂಠ ಧಾಮವನ್ನು ದರ್ಶಿಸಿ, ಸ್ವಾಮಿಗೆ ಪ್ರದಕ್ಷಿಣೆಮಾಡಿ ನಮಸ್ಕರಿಸಿ ಆತನ ಅಪ್ಪಣೆ ಪಡೆದು, ಭಗವಂತನ ಮಹಿಮೆಯನ್ನು ಕೊಂಡಾಡುತ್ತಾ ಪರಮಾನಂದಭರಿತರಾಗಿ ಅಲ್ಲಿಂದ ಹಿಂದಿರುಗಿದರು. ॥ ೨೭-೨೮ ॥ ಅನಂತರ ಭಗವಂತನು ತನ್ನ ಅನುಚರರಿಗೆ – 'ಹೋಗಿ, ಭಯ ಪಡಬೇಡಿರಿ. ನಿಮಗೆ ಮಂಗಳವಾಗಲಿ. ನಾನು ಸರ್ವಸಮರ್ಥನಾಗಿದ್ದರೂ, ಬ್ರಹ್ಮತೇಜಸ್ಸನ್ನು ಅಳಿಸಲು ಬಯಸುವುದಿಲ್ಲ. ಇದೇ ನನ್ನ ಅಭಿಪ್ರಾಯವೂ ಆಗಿದೆ. ॥ ೨೯ ॥ ಹಿಂದೊಮ್ಮೆ ನಾನು ಯೋಗನಿದ್ರೆಯಲ್ಲಿ ವಿಶ್ರಮಿಸಿದ್ದಾಗ ಒಳಗೆ ಪ್ರವೇಶಿಸುತ್ತಿದ್ದ ಲಕ್ಷ್ಮೀದೇವಿಯನ್ನು ನೀವು ತಡೆದಿದ್ದೀರಿ. ಆಗ ಅವಳೂ ನಿಮಗೆ ಹೀಗೆಯೇ ಶಾಪ ಕೊಟ್ಟಿದ್ದಳು. ॥ ೩೦ ॥ ಈಗ ನೀವು ದೈತ್ಯಯೋನಿಯಲ್ಲಿದ್ದು, ನನ್ನ ಬಗೆಗೆ ಕ್ರೋಧಾಕಾರವಾದ ವೃತ್ತಿಯಿಂದ ಏಕಾಗ್ರತೆಯನ್ನು ಪಡೆದು, ಅದರಿಂದ ಈ ವಿಪ್ರಶಾಪದ ಪಾಪದಿಂದ ಬಿಡುಗಡೆಹೊಂದಿ, ಸ್ವಲ್ಪ ಸಮಯದಲ್ಲೇ ನನ್ನ ಬಳಿಗೆ ಮರಳಿ ಬರುವಿರಿ ಎಂದು ಹೇಳಿದನು. ॥ ೩೧ ॥ ಶ್ರೀಭಗವಂತನು ದ್ವಾರಪಾಲಕರಿಗೆ ಹೀಗೆ ಅಪ್ಪಣೆಯನ್ನಿತ್ತು, ವಿಮಾನಗಳ ಸಾಲುಗಳಿಂದ ಅಲಂಕೃತವಾಗಿ ಸರ್ವಾತಿಶಯ ಶ್ರೀಸಮೃದ್ಧಿಯಿಂದ ಕೂಡಿದ ತನ್ನ ಧಾಮವನ್ನು ಒಳಹೊಕ್ಕನು. ॥ ೩೨ ॥ ದೇವಶ್ರೇಷ್ಠರಾದ ಆ ಜಯ-ವಿಜಯರಾದರೋ ಉಲ್ಲಂಘಿಸಲಸದಳವಾದ ಬ್ರಾಹ್ಮಣರ ಶಾಪದ ಫಲವಾಗಿ ಭಗವದ್ಧಾಮದಲ್ಲೇ ದೈವೀಸಂಪತ್ತನ್ನು ಕಳಕೊಂಡರು. ಅವರ ಗರ್ವವೆಲ್ಲ ಕರಗಿಹೋಯಿತು. ॥ ೩೩ ॥ ಅವರು ವೈಕುಂಠ ಲೋಕದಿಂದ ಬೀಳತೊಡಗಿದಾಗ ಶ್ರೇಷ್ಠವಾದ ವಿಮಾನಗಳಲ್ಲಿ ಕುಳಿತಿದ್ದ ವೈಕುಂಠವಾಸಿಗಳು ಹಾಹಾಕಾರ ಮಾಡತೊಡಗಿದರು. ॥ ೩೪ ॥ ಎಲೈ ದೇವತೆಗಳಿರಾ! ಈಗ ದಿತಿಯ ಗರ್ಭದಲ್ಲಿ ಬೆಳಗುತ್ತಿರುವ ಕಶ್ಯಪರ ಉಗ್ರವಾದ ತೇಜಸ್ಸಿನಲ್ಲಿ ಭಗವಂತನ ಆ ಪಾರ್ಷದರಾದ ಜಯ-ವಿಜಯರು ಪ್ರವೇಶಿಸಿರುವರು. ॥ ೩೫ ॥ ಆ ಇಬ್ಬರ ತೇಜಸ್ಸಿನಿಂದಲೇ ನಿಮ್ಮೆಲ್ಲರ ತೇಜಸ್ಸು ಕಳೆಗುಂದಿದೆ. ಭಗವಂತನ ವಿಧಾನದಂತೆಯೇ ಹೀಗೆಲ್ಲ ಆಗಿದೆ. ॥ ೩೬ ॥ ಜಗತ್ತಿನ ಸೃಷ್ಟಿ, ಸ್ಥಿತಿ, ಲಯಗಳಿಗೆ ಯಾರು ಕಾರಣನಾಗಿದ್ದಾನೋ, ಯಾರ ಯೋಗಮಾಯೆಯನ್ನು ದೊಡ್ಡ-ದೊಡ್ಡ ಯೋಗಿಗಳೂ ಕಷ್ಟಪಟ್ಟು ದಾಟುವರೋ, ತ್ರಿಗುಣಗಳಿಗೆ ನಿಯಾಮಕನಾದ ಆ ಶ್ರೀಹರಿಯೇ ನಮಗೆ ಕ್ಷೇಮವನ್ನುಂಟು ಮಾಡುವನು. ಈ ವಿಷಯದಲ್ಲಿ ನಾವು ಹೆಚ್ಚು ವಿಚಾರ ಮಾಡುವುದರಿಂದ ಏನು ಪ್ರಯೋಜನ? 'ಪರಮಾತ್ಮನೇ! ನಿನಗೆ ಶರಣು' ಎಂದು ಬ್ರಹ್ಮದೇವರು ದೇವತೆಗಳನ್ನು ಸಂತೈಸಿದರು. ॥ ೩೭ ॥

ಹದಿನಾರನೆಯ ಅಧ್ಯಾಯವು ಮುಗಿಯಿತು. ॥ ೧೬ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ತೃತೀಯಸ್ಕಂಧೇ ಷೋಡಶೋಽಧ್ಯಾಯಃ ॥ ೧೬ ॥

ಹದಿನೇಳನೆಯ ಅಧ್ಯಾಯ

ಹಿರಣ್ಯಾಕ್ಷ-ಹಿರಣ್ಯಕಶಿಪುಗಳ ಜನನ – ಹಿರಣ್ಯಾಕ್ಷನ ದಿಗ್ವಿಜಯ

ಮೈತ್ರೇಯ ಉವಾಚ

ನಿಶಮ್ಯಾತ್ಮಭುವಾ ಗೀತಂ ಕಾರಣಂ ಶಂಕಯೋಜ್ಝಿತಾಃ ।
ತತಃ ಸರ್ವೇ ನ್ಯವರ್ತಂತ ತ್ರಿದಿವಾಯ ದಿವೌಕಸಃ ॥ ೧ ॥

ದಿತಿಸ್ತು ಭರ್ತುರಾದೇಶಾದಪತ್ಯಪರಿಶಂಕಿನೀ ।
ಪೂರ್ಣೇ ವರ್ಷಶತೇ ಸಾಧ್ವೀ ಪುತ್ರೌ ಪ್ರಸುಷುವೇ ಯಮೌ ॥ ೨ ॥

ಉತ್ಪಾತಾ ಬಹವಸ್ತತ್ರ ನಿಪೇತುರ್ಜಾಯಮಾನಯೋಃ ।
ದಿವಿ ಭುವ್ಯಂತರಿಕ್ಷೇ ಚ ಲೋಕಸ್ಯೋರುಭಯಾವಹಾಃ ॥ ೩ ॥

ಸಹಾಚಲಾ ಭುವಶ್ಚೇಲುರ್ದಿಶಃ ಸರ್ವಾಃ ಪ್ರಜಜ್ವಲುಃ ।
ಸೋಲ್ಕಾಶ್ಚಾಶನಯಃ ಪೇತುಃ ಕೇತವಶ್ಚಾರ್ತಿಹೇತವಃ ॥ ೪ ॥

ವವೌ ವಾಯುಃ ಸುದುಃಸ್ಪರ್ಶಃ ಫೂತ್ಕಾರಾನೀರಯನ್ಮುಹುಃ ।
ಉನ್ಮೂಲಯನ್ನಗಪತೀನ್ವಾತ್ಯಾನೀಕೋ ರಜೋಧ್ವಜಃ ॥ ೫ ॥

ಉದ್ಧಸತ್ತಡಿದಂಭೋದಘಟಯಾ ನಷ್ಟಭಾಗಣೇ ।
ವ್ಯೋಮ್ನಿ ಪ್ರವಿಷ್ಟತಮಸಾ ನ ಸ್ಮ ವ್ಯಾದೃಶ್ಯತೇ ಪದಮ್ ॥ ೬ ॥

ಚುಕ್ರೋಶ ವಿಮನಾ ವಾರ್ಧಿರುದೂರ್ಮಿಃ ಕ್ಷುಭಿತೋದರಃ ।
ಸೋದಪಾನಾಶ್ಚ ಸರಿತಶ್ಚುಕ್ಷುಭುಃ ಶುಷ್ಕಪಂಕಜಾಃ ॥ ೭ ॥

ಮುಹುಃ ಪರಿಧಯೋಽಭೂವನ್ಸರಾಹ್ವೋಃ ಶಶಿಸೂರ್ಯಯೋಃ ।
ನಿರ್ಘಾತಾ ರಥನಿರ್ಹ್ರಾದಾ ವಿವರೇಭ್ಯಃ ಪ್ರಜಜ್ಞಿರೇ ॥ ೮ ॥

ಅಂತರ್ಗ್ರಾಮೇಷು ಮುಖತೋ ವಮಂತ್ಯೋ ವಹ್ನಿಮುಲ್ಬಣಮ್ ।
ಸೃಗಾಲೋಲೂಕಟಂಕಾರೈಃ ಪ್ರಣೇದುರಶಿವಂ ಶಿವಾಃ ॥ ೯ ॥

ಸಂಗೀತವದ್ರೋದನವದುನ್ನಮಯ್ಯ ಶಿರೋಧರಾಮ್ ।
ವ್ಯಮುಂಚನ್ವಿವಿಧಾ ವಾಚೋ ಗ್ರಾಮಸಿಂಹಾಸ್ತತಸ್ತತಃ ॥ ೧೦ ॥

ಶ್ರೀಮೈತ್ರೇಯರು ಹೇಳುತ್ತಾರೆ – ಅಯ್ಯಾ ವಿದುರನೇ! ಬ್ರಹ್ಮದೇವರ ಮಾತಿನಿಂದ ಅಂಧಕಾರದ ಕಾರಣವನ್ನು ತಿಳಿದುಕೊಂಡ ದೇವತೆಗಳ ಶಂಕೆ ದೂರವಾಯಿತು. ಅವರೆಲ್ಲರೂ ಸ್ವರ್ಗಕ್ಕೆ ಹಿಂದಿರುಗಿದರು. ॥ ೧ ॥

ಇತ್ತ ದಿತಿಗೆ ಪತಿಯ ಮಾತಿನಂತೆ ಪುತ್ರರಿಂದ ಲೋಕಕ್ಕೆ ಉಪದ್ರವವು ಉಂಟಾಗುವುದೆಂಬ ಶಂಕೆ ಇದ್ದೇ ಇತ್ತು. ಆದ್ದರಿಂದ ಆ ಸಾಧ್ವಿಯು ಪೂರಾ ನೂರು ವರ್ಷಗಳು ಕಳೆದಾಗ ಇಬ್ಬರು ಅವಳಿ ಮಕ್ಕಳನ್ನು ಹಡೆದಳು. ॥ ೨ ॥

ಆ ಮಕ್ಕಳು ಹುಟ್ಟುವಾಗ ಸ್ವರ್ಗದಲ್ಲಿ, ಭೂಮಿಯಲ್ಲಿ ಮತ್ತು ಅಂತರಿಕ್ಷಗಳಲ್ಲಿ ಅನೇಕ ಉತ್ಪಾತಗಳಾಗತೊಡಗಿದವು. ಅದರಿಂದ ಜನರು ಅತ್ಯಂತ ಭಯಗೊಂಡರು. ॥ ೩ ॥ ಅಲ್ಲಲ್ಲಿ ಭೂಮಿಯೂ, ಪರ್ವತಗಳೂ ನಡುಗ ತೊಡಗಿದವು. ಎಲ್ಲ ದಿಕ್ಕುಗಳಲ್ಲಿಯೂ ಅಗ್ನಿಜ್ವಾಲೆಗಳು ಉರಿಯುತ್ತಿದ್ದವು. ಎಲ್ಲೆಡೆ ಉಲ್ಕೆಗಳು ಉದುರಿದವು. ಸಿಡಿಲು ಬಡಿಯ ತೊಡಗಿತು. ಆಕಾಶದಲ್ಲಿ ಅನಿಷ್ಟಸೂಚಕ ಧೂಮಕೇತುಗಳು ಕಾಣಿಸಿಕೊಂಡವು. ॥ ೪ ॥ ಸೊಯ್ಯನೇ ಶಬ್ದ ಮಾಡುತ್ತಾ ಸೋಕಿದವರಿಗೆ ಸಹಿಸಲಾಗದಂತೆ ಬೀಸುತ್ತಾ, ದೊಡ್ಡ-ದೊಡ್ಡ ಮರಗಳನ್ನು ಬುಡಮೇಲಾಗಿಸುತ್ತಾ ಅಸಹ್ಯವಾದ ಬಿರುಗಾಳಿ ಬೀಸತೊಡಗಿತು. ಆಗ ಸುಳಿಗಾಳಿಯು ಸೇನೆಯಂತೆಯೂ, ಧೂಳೀಪಟಲವು ಧ್ವಜದಂತೆಯೂ ಕಂಡುಬರುತ್ತಿತ್ತು. ॥ ೫ ॥ ಕೋಲ್ಮಿಂಚು ಮತ್ತೆ-ಮತ್ತೆ ಸುಳಿಯುತ್ತಾ ವಿಕಟವಾಗಿ ನಗುತ್ತಿದೆಯೋ ಎಂಬಂತಿತ್ತು. ಆಕಾಶದಲ್ಲಿ ಸೂರ್ಯ, ಚಂದ್ರ, ನಕ್ಷತ್ರಗಳು ಯಾವುದೂ ಕಾಣಿಸದಷ್ಟು ದಟ್ಟವಾಗಿ ಮೋಡಗಳು ಮುಸುಕಿದವು. ಇದರಿಂದ ಎಲ್ಲೆಡೆ ಏನೂ ಕಾಣಿಸದಷ್ಟು ಗಾಢಾಂಧಕಾರವು ಮುಸುಕಿತು. ॥ ೬ ॥ ಸಮುದ್ರವು ಗಟ್ಟಿಯಾಗಿ ಗೋಳಿಡುತ್ತದೋ ಎಂಬಂತೆ ಭೋರ್ಗರೆಯುತ್ತಿತ್ತು. ಆಕಾಶದೆತ್ತರಕ್ಕೆ ಏಳುವ ರುದ್ರತೆರೆಗಳಿಂದ ಅದರಲ್ಲಿನ ಜಲಚರಗಳೆಲ್ಲವೂ ತಳಮಳಗೊಂಡವು. ನದಿಗಳು, ಕೆರೆ, ಕುಂಟೆ-ಕೊಳಗಳಲ್ಲಿ ನೀರು ಬತ್ತಿಹೋಗಿ ಅದರಲ್ಲಿದ್ದ ಕಮಲಗಳು ಒಣಗಿ ಹೋದುವು. ॥ ೭ ॥ ಸೂರ್ಯ-ಚಂದ್ರರಿಗೆ ಮತ್ತೆ-ಮತ್ತೆ ಗ್ರಹಣ ಹಿಡಿಯುತ್ತಿತ್ತು. ಅವರ ಸುತ್ತಲೂ ಅಮಂಗಳಸೂಚಕವಾದ ಪರಿವೇಷವೆಂಬ ಮಂಡಲಗಳು ಆವಿರ್ಭವಿಸಿದವು. ಆಕಾಶದಲ್ಲಿ ಮೋಡಗಳೇ ಇಲ್ಲದ ಗರ್ಜನೆಗಳೂ, ಪರ್ವತ ಗುಹೆಗಳಲ್ಲಿ ಘರ್ಘರ ಧ್ವನಿಗಳೂ ಅಕಾರಣವಾಗಿ ಕೇಳತೊಡಗಿದವು. ॥ ೮ ॥ ಹಳ್ಳಿಗಳಲ್ಲಿ – ಊರೊಳಗೆ ನರಿಗಳೂ, ಗೂಬೆಗಳೂ ಭಯಾನಕವಾಗಿ ಕೂಗಿಕೊಳ್ಳುತ್ತಿರಲು ಹೆಣ್ಣುನರಿಗಳು ಬಾಯಿಂದ ಭೀಕರವಾಗಿ ಬೆಂಕಿಯನ್ನುಗುಳುತ್ತಾ ಅಮಂಗಳವಾಗಿ ಊಳಿಡತೊಡಗಿದವು. ॥ ೯ ॥ ಅಲ್ಲಲ್ಲಿ ನಾಯಿಗಳು ಕತ್ತನೆತ್ತಿಕೊಂಡು ಕೆಲವೊಮ್ಮೆ ಹಾಡುವಂತೆಯೂ, ಕೆಲವೊಮ್ಮೆ ಅಳುವಂತೆಯೂ ಕರ್ಕಶವಾಗಿ ಕೂಗಿಡುತ್ತಿದ್ದವು. ॥ ೧೦ ॥ ಕತ್ತೆಗಳ ಹಿಂಡುಗಳು ತಮ್ಮ ಗೊರಸುಗಳಿಂದ ನೆಲವನ್ನು ಗೆಬರುತ್ತಾ ವಿಕಟವಾಗಿ ಅರಚುತ್ತಾ, ಮತ್ತೇರಿ ರಭಸದಿಂದ ಅತ್ತ-ಇತ್ತಲ್ಲಿಗೆ

ಖರಾಶ್ಚ ಕರ್ಕಶೈಃ ಕ್ಷತ್ತಃ ಖುರೈರ್ಘ್ನಂತೋ ಧರಾತಲಮ್ ।
ಖಾರ್ಕಾರರಭಸಾ ಮತ್ತಾಃ ಪರ್ಯಧಾವನ್ವರೂಥಶಃ ॥ ೧೧ ॥

ರುದಂತೋ ರಾಸಭತ್ರಸ್ತಾ ನೀಡಾದುದಪತನ್ಖಗಾಃ ।
ಘೋಷೇಽರಣ್ಯೇ ಚ ಪಶವಃ ಶಕೃನ್ಮೂತ್ರಮಕುರ್ವತ ॥ ೧೨ ॥

ಗಾವೋಽತ್ರಸನ್ನಸೃಗ್ದೋಹಾಸ್ತೋಯದಾಃ ಪೂಯವರ್ಷಿಣಃ ।
ವ್ಯರುದನ್ದೇವಲಿಂಗಾನಿ ದ್ರುಮಾಃ ಪೇತುರ್ವಿನಾನಿಲಮ್ ॥ ೧೩ ॥

ಗ್ರಹಾನ್ಪುಣ್ಯತಮಾನನ್ಯೇ ಭಗಣಾಂಶ್ಚಾಪಿ ದೀಪಿತಾಃ ।
ಅತಿಚೇರುರ್ವಕ್ರಗತ್ಯಾ ಯುಯುಧುಶ್ಚ ಪರಸ್ಪರಮ್ ॥ ೧೪ ॥

ದೃಷ್ಟ್ವಾನ್ಯಾಂಶ್ಚ ಮಹೋತ್ಪಾತಾನತತ್ತತ್ತ್ವವಿದಃ ಪ್ರಜಾಃ ।
ಬ್ರಹ್ಮಪುತ್ರಾನೃತೇ ಭೀತಾ ಮೇನಿರೇ ವಿಶ್ವಸಂಪ್ಲವಮ್ ॥ ೧೫ ॥

ತಾವಾದಿದೈತ್ಯೌ ಸಹಸಾ ವ್ಯಜ್ಯಮಾನಾತ್ಮಪೌರುಷೌ ।
ವವೃಧಾತೇಽಶ್ಮಸಾರೇಣ ಕಾಯೇನಾದ್ರಿಪತೀ ಇವ ॥ ೧೬ ॥

ದಿವಿಸ್ಪೃಶೌ ಹೇಮಕಿರೀಟಕೋಟಿಭಿ-
ರ್ನಿರುದ್ಧಕಾಷ್ಠೌ ಸ್ಫುರದಂಗದಾಭುಜೌ ।
ಗಾಂ ಕಂಪಯಂತೌ ಚರಣೈಃ ಪದೇ ಪದೇ
ಕಟ್ಯಾ ಸುಕಾಂಚ್ಯಾರ್ಕಮತೀತ್ಯ ತಸ್ಥತುಃ ॥ ೧೭ ॥

ಪ್ರಜಾಪತಿರ್ನಾಮ ತಯೋರಕಾರ್ಷೀದ್
ಯಃ ಪ್ರಾಕ್ಸ್ವದೇಹಾದ್ಯಮಯೋರಜಾಯತ ।
ತಂ ವೈ ಹಿರಣ್ಯಕಶಿಪುಂ ವಿದುಃ ಪ್ರಜಾ
ಯಂ ತಂ ಹಿರಣ್ಯಾಕ್ಷಮಸೂತ ಸಾಗ್ರತಃ ॥ ೧೮ ॥

ಚಕ್ರೇ ಹಿರಣ್ಯಕಶಿಪುರ್ದೋರ್ಭ್ಯಾಂ ಬ್ರಹ್ಮವರೇಣ ಚ ।
ವಶೇ ಸಪಾಲಾಲ್ಲೋಕಾಂಸ್ತ್ರೀನಕುತೋಮೃತ್ಯುರುದ್ಧತಃ ॥ ೧೯ ॥

ಹಿರಣ್ಯಾಕ್ಷೋಽನುಜಸ್ತಸ್ಯ ಪ್ರಿಯಃ ಪ್ರೀತಿಕೃದನ್ವಹಮ್ ।
ಗದಾಪಾಣಿರ್ದಿವಂ ಯಾತೋ ಯುಯುತ್ಸುರ್ಮೃಗಯನ್ರಣಮ್ ॥ ೨೦ ॥

ತಂ ವೀಕ್ಷ್ಯ ದುಃಸಹಜವಂ ರಣತ್ಕಾಂಚನನೂಪುರಮ್ ।
ವೈಜಯಂತ್ಯಾ ಸ್ರಜಾ ಜುಷ್ಟಮಂಸನ್ಯಸ್ತಮಹಾಗದಮ್ ॥ ೨೧ ॥

ಓಡತೊಡಗಿದವು. ॥ ೧೧ ॥ ಆ ಕತ್ತೆಗಳ ಕೆಟ್ಟ ಶಬ್ದಕ್ಕೆ ಹೆದರಿದ ಹಕ್ಕಿಗಳು ಅಳುವಿನ ಧ್ವನಿಮಾಡುತ್ತಾ ಗೂಡುಗಳಿಂದ ಹೊರಕ್ಕೆ ಹಾರಿದವು. ದೊಡ್ಡಿಗಳಲ್ಲಿ ಕಟ್ಟಿಹಾಕಿದ ಮತ್ತು ಕಾಡಿನಲ್ಲಿ ಮೇಯುತ್ತಿದ್ದ ಹಸುಗಳು, ಹೋರಿಗಳು ಮುಂತಾದ ಪಶುಗಳು ಅಂಜಿಕೆಯಿಂದ ಮಲ-ಮೂತ್ರ ವಿಸರ್ಜಿಸ ತೊಡಗಿದವು. ॥ ೧೨ ॥ ಆಕಳುಗಳು ಭಯಗೊಂಡು ಹಾಲಿನ ಬದಲಿಗೆ ತಮ್ಮ ಕೆಚ್ಚಲುಗಳಿಂದ ರಕ್ತವನ್ನೇ ಸುರಿಸಿದವು. ಮೋಡಗಳು ಕೀವಿನ ಮಳೆ ಗರೆದವು. ದೇವತಾ ಮೂರ್ತಿಗಳ ಕಣ್ಣುಗಳಿಂದ ಕಣ್ಣೀರು ಸುರಿಯ ತೊಡಗಿತು. ಬಿರುಗಾಳಿ ಬೀಸದೆಯೇ ಮರಗಳು ನೆಲಕ್ಕುರುಳುತ್ತಿದ್ದವು. ॥ ೧೩ ॥

ಶನಿ, ರಾಹು ಮುಂತಾದ ಕ್ರೂರ ಗ್ರಹರು ಪ್ರಬಲರಾಗಿ ಚಂದ್ರ, ಬೃಹಸ್ಪತಿ ಮುಂತಾದ ಶುಭಗ್ರಹರನ್ನು ಮತ್ತು ನಕ್ಷತ್ರಗಳನ್ನೂ ಅತಿಕ್ರಮಿಸಿ ವಕ್ರಗತಿಯಲ್ಲಿ ಚಲಿಸಿ ಪರಸ್ಪರವಾಗಿ ಯುದ್ಧ ಮಾಡತೊಡಗಿದವು. ॥ ೧೪ ॥ ಇಂತಹ ಇನ್ನೂ ಅನೇಕ ಉತ್ಪಾತಗಳನ್ನು ಕಂಡು ಸನಕಾದಿಗಳನ್ನು ಬಿಟ್ಟು ಉಳಿದೆಲ್ಲ ಜೀವಿಗಳು ಗಾಬರಿಗೊಂಡವು. ಈ ಉತ್ಪಾತಗಳ ಮರ್ಮವನ್ನರಿಯದೆ – 'ಇನ್ನೇನು ಜಗತ್ತಿನ ಪ್ರಳಯವೇ ಆಗಿಬಿಡುವುದು' ಎಂದು ಭಾವಿಸಿದರು. ॥ ೧೫ ॥

ಆದಿ ದೈತ್ಯರಾದ ಅವರಿಬ್ಬರೂ ಹುಟ್ಟುತ್ತಲೇ ತಮ್ಮ ಭಯಂಕರವಾದ ಪೌರುಷವನ್ನು ಪ್ರಕಟಪಡಿಸುತ್ತಾ ಬಹುಬೇಗನೇ ಉಕ್ಕಿನಂತಹ ತಮ್ಮ ಕಠೋರ ಶರೀರಗಳೊಂದಿಗೆ ಮಹಾ ಪರ್ವತದಂತೆ ಬೆಳೆದರು. ॥ ೧೬ ॥ ಅವರ ಸುವರ್ಣಮಯ ಕಿರೀಟಗಳ ತುದಿಯು ಸ್ವರ್ಗವನ್ನು ಮುಟ್ಟುವಷ್ಟು ಅವರು ಎತ್ತರವಾಗಿದ್ದು ಅವರ ವಿಶಾಲ ದೇಹಗಳಿಂದ ಎಲ್ಲ ದಿಕ್ಕುಗಳು ಮುಚ್ಚಿಹೋಗಿದ್ದವು. ರತ್ನಖಚಿತವಾದ ಕೋಳ್ಬಳೆಗಳು ಭುಜಗಳಲ್ಲಿ ಹೊಳೆಯುತ್ತಿದ್ದವು. ಅವರು ನೆಲದ ಮೇಲೆ ಒಂದೊಂದು ಹೆಜ್ಜೆಯನ್ನಿರಿಸಿದರೂ ಭೂಮಿಯು ನಡುಗುತ್ತಿತ್ತು. ಅವರು ನಿಂತರೆಂದರೆ ಥಳ-ಥಳಿಸುವ ನಡುದಾರದ ಪ್ರಕಾಶದಿಂದ ಸೂರ್ಯನನ್ನೂ ತಿರಸ್ಕರಿಸುವಂತಿತ್ತು. ॥ ೧೭ ॥ ಹಾಗೆ ಹುಟ್ಟಿದ ಅವಳಿಮಕ್ಕಳಿಗೆ ಪ್ರಜಾಪತಿ ಕಶ್ಯಪರು ನಾಮಕರಣ ಮಾಡಿದರು. ಅವರಲ್ಲಿ ತಮ್ಮ ವೀರ್ಯದಿಂದ ದಿತಿಯಗರ್ಭದಲ್ಲಿ ಮೊದಲು ಸ್ಥಾಪಿಸಲ್ಪಟ್ಟ ಪುತ್ರನಿಗೆ 'ಹಿರಣ್ಯಕಶಿಪು' ಎಂದು ಹೆಸರಿಸಿದರು. ದಿತಿಯ ಹೊಟ್ಟೆಯಿಂದ ಮೊದಲಿಗೆ ಹೊರಬಂದ ಪುತ್ರನು 'ಹಿರಣ್ಯಾಕ್ಷ' ಎಂಬ ಹೆಸರಿನಿಂದ ಖ್ಯಾತನಾದನು. ॥ ೧೮ ॥

ಹಿರಿಯವನಾದ ಹಿರಣ್ಯಕಶಿಪುವು ಬ್ರಹ್ಮದೇವರ ವರದಿಂದ ತನಗೆ ಯಾರಿಂದಲೂ ಮೃತ್ಯುವಿಲ್ಲವೆಂದು ಭಾವಿಸಿ ಅಹಂಕಾರದಿಂದ ಕೊಬ್ಬಿಹೋದನು. ತನ್ನ ಭುಜಬಲದಿಂದ ಲೋಕಪಾಲರ ಸಹಿತ ಮೂರೂ ಲೋಕಗಳನ್ನು ವಶಪಡಿಸಿಕೊಂಡನು. ॥ ೧೯ ॥ ಆತನಿಗೆ ತಮ್ಮನಾದ ಹಿರಣ್ಯಾಕ್ಷನ ಮೇಲೆ ತುಂಬುಪ್ರೀತಿ. ಹಿರಣ್ಯಾಕ್ಷನೂ ತನ್ನಣ್ಣನನ್ನು ಬಹುವಾಗಿ ಪ್ರೀತಿಸುತ್ತಾ ಅವನಿಗೆ ಪ್ರಿಯವಾಗುವಂತೆ ನಡೆದುಕೊಳ್ಳುತ್ತಿದ್ದನು. ಒಂದು ದಿನ ಆ ಹಿರಣ್ಯಾಕ್ಷನು ಕೈಯಲ್ಲಿ ಗದೆಯನ್ನೆತ್ತಿಕೊಂಡು ಯುದ್ಧಕ್ಕಾಗಿ ಹಂಬಲಿಸುತ್ತಾ ಸ್ವರ್ಗಲೋಕಕ್ಕೆ ಹೋದನು. ॥ ೨೦ ॥ ಆತನ ರೂಪ, ಪರಾಕ್ರಮ ಮತ್ತು ವೇಗಗಳು ಎಲ್ಲರನ್ನು ಭಯಪಡಿಸುವಂತಿತ್ತು. ಕಾಲುಗಳಲ್ಲಿ ಚಿನ್ನದ ಕಾಲಂದುಗೆಗಳು ಝಣ-ಝಣಿಸುತ್ತಿದ್ದವು. ಕತ್ತಿನಲ್ಲಿ ವಿಜಯಸೂಚಕವಾದ ಮಾಲೆ ಧರಿಸಿದ್ದನು. ಹೆಗಲಮೇಲೆ ವಿಶಾಲವಾದ ಗದೆಯು ಮೆರೆಯುತ್ತಿತ್ತು. ॥ ೨೧ ॥

ಮನೋವೀರ್ಯವರೋತ್ಸಿಕ್ತಮಸೃಣ್ಯಮಕುತೋಭಯಮ್ ।
ಭೀತಾ ನಿಲಿಲ್ಯಿರೇ ದೇವಾಸ್ತಾರ್ಕ್ಷ್ಯತ್ರಸ್ತಾ ಇವಾಹಯಃ ॥ ೨೨ ॥

ಸ ವೈ ತಿರೋಹಿತಾನ್ ದೃಷ್ಟ್ವಾ ಮಹಸಾ ಸ್ವೇನ ದೈತ್ಯರಾಟ್ ।
ಸೇಂದ್ರಾನ್ ದೇವಗಣಾನ್ ಕ್ಷೀಬಾನಪಶ್ಯನ್ ವ್ಯನದದ್ಭೃಶಮ್ ॥ ೨೩ ॥

ತತೋ ನಿವೃತ್ತಃ ಕ್ರೀಡಿಷ್ಯನ್ ಗಂಭೀರಂ ಭೀಮನಿಸ್ವನಮ್ ।
ವಿಜಗಾಹೇ ಮಹಾಸತ್ತ್ವೋ ವಾರ್ಧಿಂ ಮತ್ತ ಇವ ದ್ವಿಪಃ ॥ ೨೪ ॥

ತಸ್ಮಿನ್ ಪ್ರವಿಷ್ಟೇ ವರುಣಸ್ಯ ಸೈನಿಕಾ
ಯಾದೋಗಣಾಃ ಸನ್ನಧಿಯಃ ಸಸಾಧ್ವಸಾಃ ।
ಅಹನ್ಯಮಾನಾ ಅಪಿ ತಸ್ಯ ವರ್ಚಸಾ
ಪ್ರಧರ್ಷಿತಾ ದೂರತರಂ ಪ್ರದುದ್ರುವುಃ ॥ ೨೫ ॥

ಸ ವರ್ಷಪೂಗಾನುದಧೌ ಮಹಾಬಲ-
ಶ್ಚರನ್ಮಹೋರ್ಮೀಂಛ್ವಸನೇರಿತಾನ್ಮುಹುಃ ।
ಮೌರ್ವ್ಯಾಭಿಜಘ್ನೇ ಗದಯಾ ವಿಭಾವರೀ-
ಮಾಸೇದಿವಾಂಸ್ತಾತ ಪುರೀಂ ಪ್ರಚೇತಸಃ ॥ ೨೬ ॥

ತತ್ರೋಪಲಭ್ಯಾಸುರಲೋಕಪಾಲಕಂ
ಯಾದೋಗಣಾನಾಮೃಷಭಂ ಪ್ರಚೇತಸಮ್ ।
ಸ್ಮಯನ್ಪ್ರಲಬ್ಧುಂ ಪ್ರಣಿಪತ್ಯ ನೀಚವ-
ಜ್ಜಗಾದ ಮೇ ದೇಹ್ಯಧಿರಾಜ ಸಂಯುಗಮ್ ॥ ೨೭ ॥

ತ್ವಂ ಲೋಕಪಾಲೋಽಧಿಪತಿರ್ಬೃಹಚ್ಛ್ರವಾ
ವೀರ್ಯಾಪಹೋ ದುರ್ಮದವೀರಮಾನಿನಾಮ್ ।
ವಿಜಿತ್ಯ ಲೋಕೇಽಖಿಲದೈತ್ಯದಾನವಾನ್
ಯದ್ರಾಜಸೂಯೇನ ಪುರಾಯಜತ್ಪ್ರಭೋ ॥ ೨೮ ॥

ಸ ಏವಮುತ್ಸಿಕ್ತಮದೇನ ವಿದ್ವಿಷಾ
ದೃಢಂ ಪ್ರಲಬ್ಧೋ ಭಗವಾನಪಾಂ ಪತಿಃ ।
ರೋಷಂ ಸಮುತ್ಥಂ ಶಮಯನ್ಸ್ವಯಾ ಧಿಯಾ
ವ್ಯವೋಚದಂಗೋಪಶಮಂ ಗತಾ ವಯಮ್ ॥ ೨೯ ॥

ಪಶ್ಯಾಮಿ ನಾನ್ಯಂ ಪುರುಷಾತ್ಪುರಾತನಾದ್
ಯಃ ಸಂಯುಗೇ ತ್ವಾಂ ರಣಮಾರ್ಗಕೋವಿದಮ್ ।
ಆರಾಧಯಿಷ್ಯತ್ಯಸುರರ್ಷಭೇಹಿ ತಂ
ಮನಸ್ವಿನೋ ಯಂ ಗೃಣತೇ ಭವಾದೃಶಾಃ ॥ ೩೦ ॥

ಮನೋಬಲ, ದೇಹಬಲ ಮತ್ತು ಬ್ರಹ್ಮದೇವನಿಂದ ಪಡೆದ ವರಬಲಗಳಿಂದ ಅವನು ಉನ್ಮತ್ತನಾಗಿದ್ದನು. ಆದ್ದರಿಂದ ಅವನು ನಿರಂಕುಶನಾಗಿ, ಯಾರಿಗೂ ಹೆದರದೆ ವರ್ತಿಸುತ್ತಿದ್ದನು. ಅವನನ್ನು ಕಂಡೊಡನೆ ದೇವತೆಗಳು – ಗರುಡನನ್ನು ಕಂಡ ಸರ್ಪಗಳಂತೆ ಭಯಗ್ರಸ್ತರಾಗಿ ಎಲ್ಲೆಲ್ಲೋ ಅವಿತುಕೊಂಡರು. ॥ ೨೨ ॥ ತನ್ನೆದುರಿಗೆ ಮಹಾ ಸತ್ತ್ವಶಾಲಿಗಳಾದ ಇಂದ್ರಾದಿ ದೇವತೆಗಳೂ ತನ್ನ ತೇಜಸ್ಸಿಗೆ ಅಂಜಿ ಹೇಡಿಗಳಾಗಿ ಅವಿತುಕೊಂಡಿರುವುದನ್ನು ಕಂಡ ಆ ದೈತ್ಯರಾಜ ಹಿರಣ್ಯಾಕ್ಷನು ಮತ್ತೆ-ಮತ್ತೆ ಭಯಂಕರವಾಗಿ ಗರ್ಜಿಸತೊಡಗಿದನು. ॥ ೨೩ ॥ ಮತ್ತೆ ಆ ಮಹಾಬಲಶಾಲಿಯಾದ ದೈತ್ಯನು ಅಲ್ಲಿಂದ ಹಿಂದಿರುಗಿ ಜಲಕ್ರೀಡೆಯನ್ನಾಡಬೇಕೆಂದು ಬಯಸಿ ಮದ್ದಾನೆಯಂತೆ ತರಂಗಮಾಲೆಗಳಿಂದ ಭೀಕರವಾಗಿ ಗರ್ಜಿಸುತ್ತಿದ್ದ ಗಂಭೀರವಾದ ಸಮುದ್ರದೊಳಗೆ ನುಗ್ಗಿದನು. ॥ ೨೪ ॥

ಅವನು ಸಮುದ್ರದೊಳಗೆ ಹೆಜ್ಜೆಯಿಡುತ್ತಲೇ ಅಲ್ಲಿದ್ದ ವರುಣನ ಸೈನಿಕರಾದ ಜಲಚರ ಜೀವಿಗಳೆಲ್ಲವೂ ತಬ್ಬಿಬ್ಬಾಗಿ, ಆತನು ತಮ್ಮನ್ನು ಏನೂ ಮಾಡದಿದ್ದರೂ ಆತನ ತೇಜಸ್ಸಿನಿಂದಲೇ ಹೆದರಿ ದೂರಕ್ಕೆ ಓಡಿಹೋದವು. ॥ ೨೫ ॥ ಆ ಮಹಾಬಲಶಾಲಿಯಾದ ದೈತ್ಯನು ಅನೇಕ ವರ್ಷಗಳ ಕಾಲ ಆ ಕಡಲಿನಲ್ಲೇ ವಿಹರಿಸುತ್ತಿದ್ದನು. ಅಲ್ಲಿಯೂ ತನಗೆ ಯಾರೂ ಎದುರಾಳಿಯು ಸಿಗದಿರುವಾಗ ಆತನು ವಾಯುವೇಗದಿಂದ ಮೇಲಕ್ಕೆ ಏಳುತ್ತಿದ್ದ ಪ್ರಚಂಡವಾದ ತರಂಗಗಳನ್ನೇ ತನ್ನ ಕಬ್ಬಿಣದ ಗದೆಯಿಂದ ಅಪ್ಪಳಿಸುತ್ತಿದ್ದನು. ಹೀಗೆಯೇ ಸುತ್ತಾಡುತ್ತಾ ಆತನು ವರುಣದೇವರ ರಾಜಧಾನಿಯಾದ ವಿಭಾವರೀಪುರಿಯನ್ನು ತಲುಪಿದನು. ॥ ೨೬ ॥ ಅಲ್ಲಿ ಆತನು ಪಾತಾಳಲೋಕದ ಅಧಿಪತಿಯೂ, ಜಲಚರಗಳ ಒಡೆಯನೂ ಆದ ವರುಣನನ್ನು ನೋಡಿ, ಆತನನ್ನು ಗೇಲಿ-ಕುಚೋದ್ಯಗಳನ್ನು ಮಾಡುತ್ತಾ, ನೀಚ- ಮನುಷ್ಯನಂತೆ ಆತನಿಗೆ ನಮಸ್ಕರಿಸಿದನು. ಮತ್ತೆ ಹುಸಿನಗೆಯಿಂದ ವ್ಯಂಗ್ಯವಾಗಿ – ಮಹಾರಾಜ ! ನನಗೆ ಯುದ್ಧಭಿಕ್ಷೆಯನ್ನು ಕೊಡಿರಿ ಎಂದು ನುಡಿದನು. ॥ ೨೭ ॥ ಪ್ರಭುಗಳೇ ! ನೀವಾದರೋ ಲೋಕಪಾಲರು, ರಾಜಾಧಿರಾಜರು. ಮಹಾ ಕೀರ್ತಿಶಾಲಿಗಳು. ತಮ್ಮನ್ನು ಮಹಾವೀರರೆಂದು ತಿಳಿದುಕೊಂಡಿದ್ದವರ ಮದವನ್ನು ಮರ್ದನ ಮಾಡಿದವರು ನೀವು. ಹಿಂದೊಮ್ಮೆ ಲೋಕದ ಎಲ್ಲ ದೈತ್ಯ-ದಾನವರನ್ನು ಸೋಲಿಸಿ ರಾಜಸೂಯ ಯಜ್ಞವನ್ನೂ ಮಾಡಿದ್ದಿರಿ. ॥ ೨೮ ॥

ಆ ಮದೋನ್ಮತ್ತ ಶತ್ರುವಿನ ಇಂತಹ ಹೀಯಾಳಿಕೆಯ ಮಾತನ್ನು ಕೇಳಿ ವರುಣನಿಗೆ ಮಿತಿಮೀರಿದ ಕೋಪವುಂಟಾದರೂ, ಅವನು ತನ್ನ ಬುದ್ಧಿಬಲದಿಂದ ಉಮ್ಮಳಿಸಿದ ಕ್ರೋಧವನ್ನು ನುಂಗಿಕೊಂಡು ಆತನಿಗೆ ಹೇಳಿದನು – ಅಯ್ಯಾ, ವೀರಾಗ್ರಣಿಯೇ ! ಈಗ ನನಗೆ ಯುದ್ಧದ ಯಾವುದೇ ಅಭಿಲಾಷೆಯು ಉಳಿಯಲಿಲ್ಲ. ॥ ೨೯ ॥ ನಿನ್ನಂತಹ ರಣಕುಶಲಿಯನ್ನು ಯುದ್ಧದಲ್ಲಿ ಸಂತೋಷಪಡಿಸಲು ಪುರಾಣಪುರುಷೋತ್ತಮನಾದ ಭಗವಂತನಲ್ಲದೆ ಬೇರೆ ಯಾರೂ ಕಂಡುಬರುವುದಿಲ್ಲ. ದೈತ್ಯರಾಜನೇ ! ನೀನು ಆತನ ಬಳಿಗೆ ಹೋಗು. ಆತನೇ ನಿನ್ನ ಇಷ್ಟಾರ್ಥವನ್ನು ಈಡೇರಿಸುವನು. ನಿನ್ನಂತಹ ವೀರಾಗ್ರಣಿಗಳು ಆತನ ಪರಾಕ್ರಮವನ್ನೇ ಹಾಡಿ ಹೊಗಳುತ್ತಾರೆ. ॥ ೩೦ ॥

ತಂ ವೀರಮಾರಾದಭಿಪದ್ಯ ವಿಸ್ಮಯಃ
ಶಯಿಷ್ಯಸೇ ವೀರಶಯೇ ಶ್ವಭಿರ್ವೃತಃ ।
ಯಸ್ತ್ವದ್ವಿಧಾನಾಮಸತಾಂ ಪ್ರಶಾಂತಯೇ
ರೂಪಾಣಿ ಧತ್ತೇ ಸದನುಗ್ರಹೇಚ್ಛಯಾ ॥ ೩೦ ॥

ಆತನು ಮಹಾವೀರಾಧಿವೀರನು. ಅವನ ಬಳಿಗೆ ಹೋದೊಡನೆಯೇ ನಿನ್ನ ಗರ್ವವು ಇಳಿದುಹೋಗಿ, ನೀನು ನಾಯಿಗಳಿಂದ ಸುತ್ತುವರಿಯಲ್ಪಟ್ಟು ವೀರಶಯ್ಯೆಯಲ್ಲಿ ಮಲಗುವೆ. ಅವನು ನಿನ್ನಂತಹ ದುಷ್ಟರನ್ನು ನಿಗ್ರಹಿಸಿ, ಸತ್ಪುರುಷರನ್ನು ಸಲಹುವುದಕ್ಕಾಗಿ ನಾನಾ ರೂಪಗಳನ್ನು ಧರಿಸುತ್ತಾ ಇರುತ್ತಾನೆ. ॥ ೩೦ ॥

ಹದಿನೇಳನೆಯ ಅಧ್ಯಾಯವು ಮುಗಿಯಿತು. ॥ ೧೭ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ತೃತೀಯಸ್ಕಂಧೇ
ಹಿರಣ್ಯಾಕ್ಷದಿಗ್ವಿಜಯೇ ಸಪ್ತದಶೋಽಧ್ಯಾಯಃ ॥ ೧೭ ॥

ಹದಿನೆಂಟನೆಯ ಅಧ್ಯಾಯ

ಹಿರಣ್ಯಾಕ್ಷನೊಡನೆ ಭಗವಾನ್ ಶ್ರೀವರಾಹದೇವರ ಯುದ್ಧ

ಮೈತ್ರೇಯ ಉವಾಚ

ತದೇವಮಾಕರ್ಣ್ಯ ಜಲೇಶಭಾಷಿತಂ
ಮಹಾಮನಾಸ್ತದ್ವಿಗಣಯ್ಯ ದುರ್ಮದಃ ।
ಹರೇರ್ವಿದಿತ್ವಾ ಗತಿಮಂಗ ನಾರದಾದ್
ರಸಾತಲಂ ನಿರ್ವಿವಿಶೇ ತ್ವರಾನ್ವಿತಃ ॥ ೧ ॥

ದದರ್ಶ ತತ್ರಾಭಿಜಿತಂ ಧರಾಧರಂ
ಪ್ರೋನ್ನೀಯಮಾನಾವನಿಮಗ್ರದಂಷ್ಟ್ರಯಾ ।
ಮುಷ್ಣಂತಮಕ್ಷ್ಣಾ ಸ್ವರುಚೋಽರುಣಶ್ರಿಯಾ
ಜಹಾಸ ಚಾಹೋ ವನಗೋಚರೋ ಮೃಗಃ ॥ ೨ ॥

ಆಹೈನಮೇಹ್ಯಜ್ಞ ಮಹೀಂ ವಿಮುಂಚ ನೋ
ರಸೌಕಸಾಂ ವಿಶ್ವಸೃಜೇಯಮರ್ಪಿತಾ ।
ನ ಸ್ವಸ್ತಿ ಯಾಸ್ಯಸ್ಯನಯಾ ಮಮೇಕ್ಷತಃ
ಸುರಾಧಮಾಸಾದಿತಸೂಕರಾಕೃತೇ ॥ ೩ ॥

ತ್ವಂ ನಃ ಸಪತ್ನೈರಭವಾಯ ಕಿಂ ಭೃತೋ
ಯೋ ಮಾಯಯಾ ಹಂತ್ಯಸುರಾನ್ಪರೋಕ್ಷಜಿತ್ ।
ತ್ವಾಂ ಯೋಗಮಾಯಾಬಲಮಲ್ಪಪೌರುಷಂ
ಸಂಸ್ಥಾಪ್ಯ ಮೂಢ ಪ್ರಮೃಜೇ ಸುಹೃಚ್ಛುಚಃ ॥ ೪ ॥

ಶ್ರೀಮೈತ್ರೇಯರು ಹೇಳುತ್ತಾರೆ – ಮಹಾತ್ಮನಾದ ವಿದುರನೇ! 'ಶ್ರೀಹರಿಯು ನಿನ್ನನ್ನು ಯುದ್ಧದಲ್ಲಿ ಕೊಲ್ಲುವನು' ಎಂಬ ವರುಣದೇವರ ಮಾತನ್ನು ಕೇಳಿ ಆ ಉನ್ಮತ್ತನಾದ ಹಿರಣ್ಯಾಕ್ಷನಿಗೆ ಸ್ವಲ್ಪವೂ ಅಂಜಿಕೆಯಾಗಲಿಲ್ಲ. ಅದನ್ನು ಲಕ್ಷ್ಯಕ್ಕೆ ತೆಗೆದುಕೊಳ್ಳದ ತನಗೆ ಶತ್ರುವಾದ ಆ ಹರಿಯು ಎಲ್ಲಿದ್ದಾನೆ ಎಂದು ಒಡನೆಯೇ ನಾರದರಿಂದ ತಿಳಿದುಕೊಂಡು ರಭಸದಿಂದ ರಸಾತಳವನ್ನು ಹೊಕ್ಕನು. ॥ ೧ ॥ ಅಲ್ಲಿ ಅವನು ವಿಶ್ವವಿಜಯಿಯಾದ ಆ ವರಾಹಭಗವಂತನು ಭೂಮಿಯನ್ನು ತನ್ನ ಕೋರೆದಾಡೆಗಳ ಮೇಲಿರಿಸಿಕೊಂಡು ಮೇಲಕ್ಕೆ ಬರುತ್ತಿರುವುದನ್ನು ಕಂಡನು. ಅವನು ತನ್ನ ಕೆಂಗಣ್ಣಿನ ಕಾಂತಿಯಿಂದ ಪರರ ತೇಜಸ್ಸನ್ನು ಕಸಿದುಕೊಳ್ಳುತ್ತಾ ಮುನ್ನಡೆಯುತ್ತಿದ್ದಾನೆ. ಆತನನ್ನು ನೋಡಿದೊಡನೆಯೇ ದೈತ್ಯನು ಘೊಳ್ಳನೆ ನಕ್ಕು – 'ಅರೇ! ಈ ಕಾಡಿನ ಪಶುವು ಇಲ್ಲಿಗೆ ಎಲ್ಲಿಂದ ಬಂತು?' ಎಂದು ಅಪಹಾಸ್ಯ ಮಾಡಿದನು. ॥ ೨ ॥ ಎಲವೋ ಮೂಢನೇ! ಇತ್ತ ಬಾ. ಈ ಭೂಮಿಯನ್ನು ಬಿಟ್ಟುಬಿಡು. ಇದನ್ನು ವಿಶ್ವಕರ್ತನಾದ ಬ್ರಹ್ಮನು ರಸಾತಳದಲ್ಲಿ ವಾಸಿಸುವ ನಮ್ಮ ವಶಕ್ಕೆ ಒಪ್ಪಿಸಿರುವನು. ಎಲೈ ಹಂದಿಯ ರೂಪವನ್ನಾಂತ ಸುರಾಧಮನೇ! ನನ್ನ ಕಣ್ಣು ಎದುರಿಗೆ ಇದನ್ನು ಎತ್ತಿಕೊಂಡು ನೆಮ್ಮದಿಯಾಗಿ ಹೋಗಲಾರೆ. ॥ ೩ ॥ ನೀನು ಮಾಯೆಯಿಂದ ಅಡಗಿಕೊಂಡೇ ದೈತ್ಯರನ್ನು ಜಯಿಸಿಕೊಂಡು ಬಿಡುವೆ. ಹೀಗೆ ಮೋಸದಿಂದ ನಮ್ಮನ್ನು ಕೊಲ್ಲುವುದಕ್ಕಾಗಿಯೇ ನಿನ್ನನ್ನು ನಮ್ಮ ಶತ್ರುಗಳು ಸಾಕಿದ್ದಾರೋ? ನಿನ್ನ ಬಲವಾದರೋ ಯೋಗಮಾಯೆ ಒಂದೇ ಆಗಿದೆ. ಅದನ್ನು ಬಿಟ್ಟು ನಿನ್ನಲ್ಲಿ ಬೇರೆ ಪೌರುಷವೇನಿದೆ? ಇಂದು ನಿನ್ನನ್ನು ಮುಗಿಸಿ ನನ್ನ ಬಂಧುಗಳ ದುಃಖವನ್ನು ದೂರಮಾಡುವೆನು. ॥ ೪ ॥ ಇಂದು ನಾನು ಬೀಸುವ ಗದೆಯ ಏಟಿನಿಂದ ನಿನ್ನ ತಲೆಯು ಒಡೆದುಹೋಗಿ ನೀನು

ತ್ವಯಿ ಸಂಸ್ಥಿತೇ ಗದಯಾ ಶೀರ್ಣಶೀರ್ಷ-
ಣ್ಯಸ್ಮದ್ಭುಜಚ್ಯುತಯಾ ಯೇ ಚ ತುಭ್ಯಮ್ ।
ಬಲಿಂ ಹರಂತ್ಯೃಷಯೋ ಯೇ ಚ ದೇವಾಃ
ಸ್ವಯಂ ಸರ್ವೇ ನ ಭವಿಷ್ಯಂತ್ಯಮೂಲಾಃ ॥ ೫ ॥

ಸ ತುದ್ಯಮಾನೋಽರಿದುರುಕ್ತ ತೋಮರೈ-
ರ್ದಂಷ್ಟ್ರಾಗ್ರಗಾಂ ಗಾಮುಪಲಕ್ಷ್ಯ ಭೀತಾಮ್ ।
ತೋದಂ ಮೃಷನ್ನಿರಗಾದಂಬುಮಧ್ಯಾದ್
ಗ್ರಾಹಾಹತಃ ಸಕರೇಣುರ್ಯಥೇಭಃ ॥ ೬ ॥

ತಂ ನಿಃಸರಂತಂ ಸಲಿಲಾದನುದ್ರುತೋ
ಹಿರಣ್ಯಕೇಶೋ ದ್ವಿರದಂ ಯಥಾ ಝಷಃ ।
ಕರಾಲದಂಷ್ಟ್ರೋಽಶನಿನಿಸ್ವನೋಽಬ್ರವೀತ್
ಗತಹ್ರಿಯಾಂ ಕಿಂ ತ್ವಸತಾಂ ವಿಗರ್ಹಿತಮ್ ॥ ೭ ॥

ಸ ಗಾಮುದಸ್ತಾತ್ಸಲಿಲಸ್ಯ ಗೋಚರೇ
ವಿನ್ಯಸ್ಯ ತಸ್ಯಾಮದಧಾತ್ಸ್ವಸತ್ತ್ವಮ್ ।
ಅಭಿಷ್ಟುತೋ ವಿಶ್ವಸೃಜಾ ಪ್ರಸೂನೈ-
ರಾಪೂರ್ಯಮಾಣೋ ವಿಬುಧೈಃ ಪಶ್ಯತೋಽರೇಃ ॥ ೮ ॥

ಪರಾನುಷಕ್ತಂ ತಪನೀಯೋಪಕಲ್ಪಂ
ಮಹಾಗದಂ ಕಾಂಚನಚಿತ್ರದಂಶಮ್ ।
ಮರ್ಮಾಣ್ಯಭೀಕ್ಷ್ಣಂ ಪ್ರತುದಂತಂ ದುರುಕ್ತೈಃ
ಪ್ರಚಂಡ ಮನ್ಯುಃ ಪ್ರಹಸಂಸ್ತಂ ಬಭಾಷೇ ॥ ೯ ॥

ಶ್ರೀಭಗವಾನುವಾಚ

ಸತ್ಯಂ ವಯಂ ಭೋ ವನಗೋಚರಾ ಮೃಗಾ
ಯುಷ್ಮದ್ವಿಧಾನ್ಮೃಗಯೇ ಗ್ರಾಮಸಿಂಹಾನ್ ।
ನ ಮೃತ್ಯುಪಾಶೈಃ ಪ್ರತಿಮುಕ್ತಸ್ಯ ವೀರಾ
ವಿಕತ್ಥನಂ ತವ ಗೃಹ್ಣಂತ್ಯಭದ್ರ ॥ ೧೦ ॥

ಏತೇ ವಯಂ ನ್ಯಾಸಹರಾ ರಸೌಕಸಾಂ
ಗತಹ್ರಿಯೋ ಗದಯಾ ದ್ರಾವಿತಾಸ್ತೇ ।
ತಿಷ್ಠಾಮಹೇಽಥಾಪಿ ಕಥಂಚಿದಾಜೌ
ಸ್ಥೇಯಂ ಕ್ವ ಯಾಮೋ ಬಲಿನೋತ್ಪಾದ್ಯ ವೈರಮ್ ॥ ೧೧ ॥

ಸತ್ತು ಹೋದಾಗ ನಿನ್ನನ್ನು ಆರಾಧಿಸುತ್ತಿರುವ ದೇವತೆಗಳೂ, ಋಷಿಗಳೂ ಬೇರುಕಿತ್ತ ಮರದಂತೆ ತಾವಾಗಿಯೇ ನಾಶವಾಗಿ ಹೋಗುವರು. ॥ ೫ ॥

ಹಿರಣ್ಯಾಕ್ಷನು ಭಗವಂತನನ್ನು ದುರ್ವಚನಗಳೆಂಬ ಬಾಣಗಳಿಂದ ನೋಯಿಸುತ್ತಿದ್ದರೂ, ಕೋರೆಹಲ್ಲುಗಳ ತುದಿಯಲ್ಲಿದ್ದ ಭೂದೇವಿಯು ಅಸುರನ ಬೆದರಿಕೆಯಿಂದ ಭಯಗೊಂಡಿರುವುದನ್ನು ಮನಗಂಡು, ಶತ್ರುವಿನ ವಾಗ್ಬಾಣಗಳನ್ನು ಸ್ವಾಮಿಯು ಸಹಿಸಿಕೊಂಡು – ಮೊಸಳೆಯ ಏಟುತಿಂದ ಗಜರಾಜನು ತನ್ನ ಹೆಣ್ಣಾನೆಯೊಡನೆ ಹೊರಬರುವಂತೆ ನೀರಿನಿಂದ ಹೊರಬರುತ್ತಿದ್ದನು. ॥ ೬ ॥ ಹೀಗೆ ತನ್ನ ಹೀಯಾಳಿಕೆಗೆ ಯಾವ ಉತ್ತರವನ್ನೂ ಕೊಡದೇ ಶ್ರೀವರಾಹಮೂರ್ತಿಯು ನೀರಿನಿಂದ ಹೊರಗೆ ಹೋಗುತ್ತಿರುವುದನ್ನು ಕಂಡಾಗ ಹಳದಿಯ ತಲೆಗೂದಲು ಮತ್ತು ತೀಕ್ಷ್ಣವಾದ ಕೋರೆಹಲ್ಲುಗಳಿಂದ ಕೂಡಿದ್ದ ಆ ದೈತ್ಯನು ಮೊಸಳೆಯು ಆನೆಯನ್ನು ಅಟ್ಟಿಕೊಂಡು ಹೋಗುವಂತೆ ಆತನನ್ನು ಹಿಂಬಾಲಿಸಿ ಸಿಡಿಲಿನಂತೆ ಅಬ್ಬರಿಸುತ್ತಾ – ಎಲವೋ! ಹೇಡಿಯಂತೆ ಹೀಗೆ ಓಡಿಹೋಗುವುದರಲ್ಲಿ ನಿನಗೆ ನಾಚಿಕೆಯಾಗುವುದಿಲ್ಲವೇ ? ನಾಚಿಕೆಗೆಟ್ಟ ನೀಚರಿಗೆ ನಿಂದ್ಯವಾದುದು ಏನಿದೆ? ಎಂದು ನುಡಿದನು. ॥ ೭ ॥ ಶ್ರೀಭಗವಂತನು ಭೂಮಿಯನ್ನು ನೀರಿನಿಂದ ಮೇಲೆತ್ತಿ ತಂದು ಯೋಗ್ಯಜಾಗದಲ್ಲಿ ಇರಿಸಿ, ಅದರಲ್ಲಿ ತನ್ನ ಆಧಾರಶಕ್ತಿಯನ್ನು ತುಂಬಿದನು. ಆಗ ಹಿರಣ್ಯಾಕ್ಷನು ನೋಡುತ್ತಿರುವಂತೆಯೇ ಸೃಷ್ಟಿಕರ್ತನಾದ ಬ್ರಹ್ಮದೇವರು ಆತನನ್ನು ಸ್ತುತಿಸಿದರು; ದೇವತೆಗಳು ಪುಷ್ಪವೃಷ್ಟಿಗೈದರು. ॥ ೮ ॥ ಆಗ ಚಿನ್ನದ ಆಭರಣಗಳನ್ನೂ, ಅದ್ಭುತವಾದ ಕವಚವನ್ನೂ ಧರಿಸಿ, ಕೈಯಲ್ಲಿ ಭಾರೀಗದೆಯನ್ನು ಹಿಡಿದುಕೊಂಡು ತನ್ನನ್ನು ಕಟುವಾಕ್ಯಗಳಿಂದ ನಿರಂತರವಾಗಿ ನೋಯಿಸುತ್ತಿದ್ದ ಆ ದೈತ್ಯನನ್ನು ಕುರಿತು – ಶ್ರೀಹರಿಯು ಉಕ್ಕೇರಿದ ಕೋಪದಿಂದ ನಗುತ್ತಾ ಹೇಳಿದನು – ॥ ೯ ॥

ಶ್ರೀಭಗವಂತನು ಹೇಳುತ್ತಾನೆ – ಎಲವೋ ದೈತ್ಯನೇ! ನೀನು ಹೇಳಿದಂತೆ ನಾವು ಕಾಡಿನ ಮೃಗವು ಆಗಿರುವುದು ನಿಜವೇ ಆಗಿದೆ. ನಿನ್ನಂತಹ ಗ್ರಾಮಸಿಂಹ (ನಾಯಿ)ಗಳನ್ನು ಹುಡುಕುತ್ತಾ ತಿರುಗುತ್ತಿರುತ್ತೇವೆ. ದುಷ್ಟನೇ! ಮೃತ್ಯುಪಾಶದಲ್ಲಿ ಸಿಲುಕಿಕೊಂಡಿರುವ ನಿನ್ನಂತಹ ನಿರ್ಭಾಗ್ಯ ಜೀವಿಗಳ ಆತ್ಮಪ್ರಶಂಸೆಯ ಕಡೆಗೆ ವೀರಪುರುಷರು ಗಮನವೀಯುವುದಿಲ್ಲ. ॥ ೧೦ ॥ 'ರಸಾತಲ ನಿವಾಸಿಗಳ ನಿಕ್ಷೇಪದ ಸಂಪತ್ತನ್ನು ಕದ್ದುಕೊಂಡು ನಾಚಿಕೆಗೆಟ್ಟು ನಿನ್ನ ಗದೆಯ ಭಯದಿಂದ ಇಲ್ಲಿಗೆ ಓಡಿಬಂದಿದ್ದೇವೆ ಎಂದು ನೀನು ಹೇಳಿರುವುದು ನಿಜವೇ! ನಿನ್ನಂತಹ ಅದ್ವಿತೀಯನಾದ ವೀರನ ಮುಂದೆ ಯುದ್ಧದಲ್ಲಿ ನಿಲ್ಲುವ ಸಾಮರ್ಥ್ಯವು ನಮಗೆಲ್ಲಿದೆ! ಆದರೂ ಹೇಗೋ ನಿನ್ನ ಮುಂದೆ ನಿಂತಿರುವೆನು. ನಿನ್ನಂತಹ ಬಲಶಾಲಿಗಳೊಡನೆ ವೈರವನ್ನು ಕಟ್ಟಿಕೊಂಡು ಹೋಗುವುದಾದರೂ ಎಲ್ಲಿಗೆ? ॥ ೧೧ ॥

ತ್ವಂ ಪದ್ರಥಾನಾಂ ಕಿಲ ಯೂಥಪಾಧಿಪೋ
ಘಟಸ್ವ ನೋಽಸ್ವಸ್ತಯ ಆಶ್ವನೂಹಃ ।
ಸಂಸ್ಥಾಪ್ಯ ಚಾಸ್ಮಾನ್ಪ್ರಮೃಜಾಶ್ರು ಸ್ವಕಾನಾಂ
ಯಃ ಸ್ವಾಂ ಪ್ರತಿಜ್ಞಾಂ ನಾತಿಪಿಪರ್ತ್ಯಸಭ್ಯಃ ॥ ೧೨ ॥

ಮೈತ್ರೇಯ ಉವಾಚ

ಸೋಽಧಿಕ್ಷಿಪ್ತೋ ಭಗವತಾ ಪ್ರಲಬ್ಧಶ್ಚ ರುಷಾ ಭೃಶಮ್ ।
ಆಜಹಾರೋಲ್ಬಣಂ ಕ್ರೋಧಂ ಕ್ರೀಡ್ಯಮಾನೋಽಹಿರಾಡಿವ ॥ ೧೩ ॥

ಸೃಜನ್ನಮರ್ಷಿತಃ ಶ್ವಾಸಾನ್ಮನ್ಯುಪ್ರಚಲಿತೇಂದ್ರಿಯಃ ।
ಆಸಾದ್ಯ ತರಸಾ ದೈತ್ಯೋ ಗದಯಾಭ್ಯಹನದ್ಧರಿಮ್ ॥ ೧೪ ॥

ಭಗವಾಂಸ್ತು ಗದಾವೇಗಂ ವಿಸೃಷ್ಟಂ ರಿಪುಣೋರಸಿ ।
ಅವಂಚಯತ್ತಿರಶ್ಚೀನೋ ಯೋಗಾರೂಢ ಇವಾಂತಕಮ್ ॥ ೧೫ ॥

ಪುನರ್ಗದಾಂ ಸ್ವಾಮಾದಾಯ ಭ್ರಾಮಯಂತಮಭೀಕ್ಷ್ಣಶಃ ।
ಅಭ್ಯಧಾವದ್ಧರಿಃ ಕ್ರುದ್ಧಃ ಸಂರಂಭಾದ್ದಷ್ಟದಚ್ಛದಮ್ ॥ ೧೬ ॥

ತತಶ್ಚ ಗದಯಾರಾತಿಂ ದಕ್ಷಿಣಸ್ಯಾಂ ಭ್ರುವಿ ಪ್ರಭುಃ ।
ಆಜಘ್ನೇ ಸ ತು ತಾಂ ಸೌಮ್ಯ ಗದಯಾ ಕೋವಿದೋಽಹನತ್ ॥ ೧೭ ॥

ಏವಂ ಗದಾಭ್ಯಾಂ ಗುರ್ವೀಭ್ಯಾಂ ಹರ್ಯಕ್ಷೋ ಹರಿರೇವ ಚ ।
ಜಿಗೀಷಯಾ ಸುಸಂರಬ್ಧಾವನ್ಯೋನ್ಯಮಭಿಜಘ್ನತುಃ ॥ ೧೮ ॥

ತಯೋಃ ಸ್ಪೃಧೋಸ್ತಿಗ್ಮಗದಾಹತಾಂಗಯೋಃ
ಕ್ಷತಾಸ್ರವಘ್ರಾಣವಿವೃದ್ಧಮನ್ವ್ಯೋಃ ।
ವಿಚಿತ್ರಮಾರ್ಗಾಂಶ್ಚರತೋರ್ಜಿಗೀಷಯಾ
ವ್ಯಭಾದಿಲಾಯಾಮಿವ ಶುಷ್ಮಿಣೋರ್ಮೃಧಃ ॥ ೧೯ ॥

ದೈತ್ಯಸ್ಯ ಯಜ್ಞಾವಯವಸ್ಯ ಮಾಯಾ-
ಗೃಹೀತವಾರಾಹತನೋರ್ಮಹಾತ್ಮನಃ ।
ಕೌರವ್ಯ ಮಹ್ಯಾಂ ದ್ವಿಷತೋರ್ವಿಮರ್ದನಂ
ದಿದೃಕ್ಷುರಾಗಾದೃಷಿಭಿರ್ವೃತಃ ಸ್ವರಾಟ್ ॥ ೨೦ ॥

ಪದಾತಿಗಳಾದ ಯೋಧವೀರರಲ್ಲಿ ನೀನು ಮಹಾ ನಾಯಕನಾಗಿರುವೆ. ಆದ್ದರಿಂದ ಈಗ ಯಾವ ಶಂಕೆಯೂ ಇಲ್ಲದೆ ನಮಗೆ ಅನಿಷ್ಟವನ್ನು ಮಾಡಲು ಪ್ರಯತ್ನಿಸು. ನನ್ನನ್ನು ಕೊಂದು ನಿನ್ನ ನೆಂಟರಿಷ್ಟರ ಕಣ್ಣೀರನ್ನು ಒರೆಸುವವನಾಗು. ಇನ್ನು ತಡಮಾಡಬೇಡ. ಮಾಡಿದ ಪ್ರತಿಜ್ಞೆಯನ್ನು ನೆರವೇರಿಸದವನು ಅಸಭ್ಯನು. ಸತ್ಪುರುಷರಲ್ಲಿ ಸೇರಿ ಕುಳಿತುಕೊಳ್ಳಲು ಯೋಗ್ಯನಲ್ಲ. ॥ ೧೨ ॥

ಶ್ರೀಮೈತ್ರೇಯರು ಹೇಳುತ್ತಾರೆ – ವಿದುರನೇ! ಶ್ರೀಭಗವಂತನು ಕ್ರೋಧದಿಂದ ಹೀಗೆ ಆ ದೈತ್ಯನನ್ನು ತಿರಸ್ಕರಿಸಿ, ಉಪಹಾಸ್ಯಮಾಡಿದಾಗ, ಅವನು – ಕಾಲಿನಿಂದ ಮೆಟ್ಟಿ ಆಟವಾಡಿಸಲ್ಪಟ್ಟ ಕಾಳಿಂಗಸರ್ಪದಂತೆ ಕೆರಳಿ ಕ್ರೋಧದಿಂದ ಭುಗಿಲೆದ್ದನು. ॥ ೧೩ ॥ ಅವನು ಸಿಟ್ಟಿನಿಂದ ಸಿಡಿ-ಮಿಡಿಗೊಂಡು ನಿಟ್ಟುಸಿರು ಬಿಡತೊಡಗಿದನು. ಆತನ ಇಂದ್ರಿಯಗಳು ಪ್ರಕ್ಷುಬ್ಧವಾದುವು. ಒಡನೆಯೇ ಆತನು ಹಾರಿ ಹರಿಯ ಮೇಲೆ ಗದೆಯನ್ನು ಪ್ರಯೋಗಿಸಿದನು. ॥ ೧೪ ॥ ಆದರೆ ಭಗವಂತನು ತನ್ನ ಎದೆಯ ಮೇಲೆ ಪ್ರಯೋಗಿಸಿದ ಶತ್ರುವಿನ ಗದಾಘಾತವನ್ನು – ಯೋಗಸಿದ್ಧ ಪುರುಷನು ಮೃತ್ಯುವಿನ ಆಕ್ರಮಣದಿಂದ ತನ್ನನ್ನು ರಕ್ಷಿಸಿಕೊಂಡಂತೆ ವ್ಯರ್ಥವಾಗಿಸಿದನು. ॥ ೧೫ ॥

ಮತ್ತೆ ದೈತ್ಯನು ಕ್ರೋಧದಿಂದ ತುಟಿಯನ್ನು ಕಚ್ಚಿಕೊಳ್ಳುತ್ತಾ ತನ್ನ ಗದೆಯನ್ನು ಮತ್ತೆ-ಮತ್ತೆ ತಿರುಗಿಸತೊಡಗಿದಾಗ ಶ್ರೀಹರಿಯು ಕೋಪಗೊಂಡು ಆತನ ಮೇಲೆ ಥಟ್ಟನೆ ಹಾರಿದನು. ॥ ೧೬ ॥ ಸಾಧುಶ್ರೇಷ್ಠನಾದ ವಿದುರಾ! ಆಗ ಪ್ರಭುವು ಶತ್ರುವಿನ ಬಲಹುಬ್ಬಿನ ಮೇಲೆ ಗದೆಯಿಂದ ಬೀಸಿ ಹೊಡೆಯಲು ಗದಾಯುದ್ಧದಲ್ಲಿ ಕುಶಲನಾದ ಹಿರಣ್ಯಾಕ್ಷನು ಅದನ್ನು ಮಧ್ಯದಲ್ಲಿಯೇ ತನ್ನ ಗದೆಯಿಂದ ತಡೆದನು. ॥ ೧೭ ॥ ಹೀಗೆ ಶ್ರೀಹರಿಯು ಮತ್ತು ಹಿರಣ್ಯಾಕ್ಷನು ಒಬ್ಬರನ್ನೊಬ್ಬರು ಜಯಿಸುವ ಇಚ್ಛೆಯಿಂದ ಅತ್ಯಂತ ಕ್ರುದ್ಧರಾಗಿ ಪರಸ್ಪರ ಭಾರವಾದ ಗದೆಗಳಿಂದ ಪ್ರಹರಿಸತೊಡಗಿದರು. ॥ ೧೮ ॥ ಇಬ್ಬರಲ್ಲಿಯೂ ಒಬ್ಬರನ್ನೊಬ್ಬರು ಗೆಲ್ಲಬೇಕೆಂಬ ಸ್ಪರ್ಧೆಯುಂಟಾಯಿತು. ಇಬ್ಬರ ಅಂಗಗಳೂ ಗದೆಗಳ ಏಟುಗಳಿಂದ ಗಾಯಗೊಂಡು ಅವುಗಳಿಂದ ಸುರಿಯುತ್ತಿದ್ದ ರಕ್ತದ ವಾಸನೆಯಿಂದ ಇಬ್ಬರಿಗೂ ಕ್ರೋಧವು ಉಕ್ಕೇರುತ್ತಿತ್ತು. ಇಬ್ಬರೂ ಬಗೆ-ಬಗೆಯ ವರಸೆಗಳನ್ನು ತೋರಿಸತೊಡಗಿದರು. ಹಸುವಿಗೋಸ್ಕರ ಸೆಣಸುವ ಎರಡು ಹೋರಿಗಳಂತೆ ಭೂಮಿಗೋಸ್ಕರವಾಗಿ ಇಬ್ಬರೂ ಭಯಂಕರವಾಗಿ ಯುದ್ಧಮಾಡತೊಡಗಿದರು. ॥ ೧೯ ॥ ವಿದುರನೇ! ಹೀಗೆ ಹಿರಣ್ಯಾಕ್ಷನಿಗೂ – ಮಾಯೆಯಿಂದ ವರಾಹರೂಪವನ್ನಾಂತ ಯಜ್ಞಮೂರ್ತಿಯಾದ ಭಗವಂತನಿಗೂ ಭೂದೇವಿಯನ್ನು ಗೆಲ್ಲಬೇಕೆಂಬ ಹಗೆತನದಿಂದ ಯುದ್ಧವಾಗುತ್ತಿರಲು, ಅದನ್ನು ನೋಡಲು ಋಷಿಗಳೊಡನೆ ಬ್ರಹ್ಮದೇವರು ಅಲ್ಲಿಗೆ ಬಂದರು. ॥ ೨೦ ॥

ಆಸನ್ನಶೌಂಡೀರಮಪೇತಸಾಧ್ವಸಂ
ಕೃತಪ್ರತೀಕಾರಮಹಾರ್ಯವಿಕ್ರಮಮ್ ।
ವಿಲಕ್ಷ್ಯ ದೈತ್ಯಂ ಭಗವಾನ್ಸಹಸ್ರಣೀ-
ರ್ಜಗಾದ ನಾರಾಯಣಮಾದಿಸೂಕರಮ್ ॥ ೨೦ ॥

ಬ್ರಹ್ಮೋವಾಚ

ಏಷ ತೇ ದೇವ ದೇವಾನಾ-
ಮಂಘ್ರಿಮೂಲಮುಪೇಯುಷಾಮ್ ।
ವಿಪ್ರಾಣಾಂ ಸೌರಭೇಯೀಣಾಂ-
ಭೂತಾನಾಮಪ್ಯನಾಗಸಾಮ್ ॥ ೨೧ ॥

ಆಗಸ್ಕೃದ್ಭಯಕೃದ್ದುಷ್ಕೃದಸ್ಮದ್ರಾದ್ಧವರೋಽಸುರಃ ।
ಅನ್ವೇಷನ್ನಪ್ರತಿರಥೋ ಲೋಕಾನಟತಿ ಕಂಟಕಃ ॥ ೨೨ ॥

ಮೈನಂ ಮಾಯಾವಿನಂ ದೃಪ್ತಂ ನಿರಂಕುಶಮಸತ್ತಮಮ್ ।
ಆಕ್ರೀಡ ಬಾಲವದ್ದೇವ ಯಥಾಽಽಶೀವಿಷಮುತ್ಥಿತಮ್ ॥ ೨೩ ॥

ನ ಯಾವದೇಷ ವರ್ಧೇತ ಸ್ವಾಂ ವೇಲಾಂ ಪ್ರಾಪ್ಯ ದಾರುಣಃ ।
ಸ್ವಾಂ ದೇವ ಮಾಯಾಮಾಸ್ಥಾಯ ತಾವಜ್ಜಹ್ಯಘಮಚ್ಯುತ ॥ ೨೪ ॥

ಏಷಾ ಘೋರತಮಾ ಸಂಧ್ಯಾ ಲೋಕಚ್ಛಂಬಟ್ಕರೀ ಪ್ರಭೋ ।
ಉಪಸರ್ಪತಿ ಸರ್ವಾತ್ಮನ್ಸುರಾಣಾಂ ಜಯಮಾವಹ ॥ ೨೫ ॥

ಅಧುನೈಷೋಽಭಿಜಿನ್ನಾಮ ಯೋಗೋ
ಮೌಹೂರ್ತಿಕೋ ಹ್ಯಗಾತ್ ।
ಶಿವಾಯ ನಸ್ತ್ವಂ ಸುಹೃದಾ-
ಮಾಶು ನಿಸ್ತರ ದುಸ್ತರಮ್ ॥ ೨೬ ॥

ದಿಷ್ಟ್ಯಾ ತ್ವಾಂ ವಿಹಿತಂ ಮೃತ್ಯುಮಯಮಾಸಾದಿತಃ ಸ್ವಯಮ್ ।
ವಿಕ್ರಮ್ಯೈನಂ ಮೃಧೇ ಹತ್ವಾ ಲೋಕಾನಾಧೇಹಿ ಶರ್ಮಣಿ ॥ ೨೭ ॥

ಅವರ ಸುತ್ತಲೂ ಸಾವಿರಾರು ಋಷಿಗಳು ನೆರೆದಿದ್ದರು. 'ಈ ದೈತ್ಯನು ಭಾರೀ ಶೂರನಾಗಿದ್ದಾನೆ, ಇವನಲ್ಲಿ ಭಯವೆಂಬುದೇ ಇಲ್ಲ. ಆಕ್ರಮಣಮಾಡುವುದರಲ್ಲಿ ಸಮರ್ಥನಾಗಿದ್ದಾನೆ. ಈತನ ಪರಾಕ್ರಮವನ್ನು ನುಚ್ಚುನೂರುಮಾಡುವುದು ಅತಿ ಕಠಿಣವಾದ ಕಾರ್ಯವಾಗಿದೆ' ಎಂಬುದನ್ನು ಗಮನಿಸಿ ಬ್ರಹ್ಮದೇವರು ಆದಿವರಾಹರೂಪಿಯಾದ ನಾರಾಯಣನಲ್ಲಿ ಹೀಗೆ ಬಿನ್ನವಿಸಿಕೊಂಡರು. ॥ ೨೦ ॥

ಶ್ರೀಬ್ರಹ್ಮದೇವರೆಂದರು – ಸ್ವಾಮಿಯೇ! ಈ ದುಷ್ಟ ದೈತ್ಯನು ನನ್ನಿಂದ ವರವನ್ನು ಪಡೆದು ತುಂಬಾ ಪ್ರಬಲನಾಗಿಬಿಟ್ಟಿರುವನು. ಈಗ ಈತನು ನಿನ್ನಲ್ಲಿ ಶರಣಾಗತರಾಗಿರುವ ಗೋವುಗಳಿಗೂ, ಬ್ರಾಹ್ಮಣರಿಗೂ, ದೇವತೆಗಳಿಗೂ ಹಾಗೂ ನಿರಪರಾಧಿ ಜೀವಿಗಳಿಗೂ ತೊಂದರೆಯನ್ನುಂಟುಮಾಡುತ್ತಾ ದುಃಖವನ್ನು – ಭಯವನ್ನು ಹುಟ್ಟಿಸುತ್ತಿದ್ದಾನೆ. ತನಗೆ ಸಾಟಿಯಾದ ಬೇರೊಬ್ಬ ಯೋಧನು ಇಲ್ಲದಿರುವುದರಿಂದ ಈ ಲೋಕಕಂಟಕನು ತನ್ನನ್ನು ಎದುರಿಸಿ ಯುದ್ಧ ಮಾಡುವ ವೀರನನ್ನು ಹುಡುಕುತ್ತಾ ಎಲ್ಲ ಲೋಕಗಳಲ್ಲಿಯೂ ಸಂಚರಿಸುತ್ತಿದ್ದಾನೆ. ॥ ೨೧-೨೨ ॥ ಈ ದುಷ್ಟನು ಅತಿಮಾಯಾವಿಯೂ, ದುರಹಂಕಾರಿಯೂ, ನಿರಂಕುಶನೂ ಆಗಿದ್ದಾನೆ. ಮಗುವು ಕೋಪಗೊಂಡ ಹಾವಿನೊಡನೆ ಆಟವಾಡುವಂತೆ ನೀನು ಈತನೊಡನೆ ಹುಡುಗಾಟಮಾಡಬೇಡ. ॥ ೨೩ ॥ ಓ ದೇವದೇವನೇ! ಅಚ್ಯುತಾ! ಈ ದಾರುಣ ದೈತ್ಯನಿಗೆ ಬಲವನ್ನು ವೃದ್ಧಿಪಡಿಸುವ ಸಮಯವು ಬಂದು ಈತನು ಹೆಚ್ಚು ಬಲಶಾಲಿಯಾಗುವುದರೊಳಗೆ ನೀನು ನಿನ್ನ ಯೋಗಮಾಯೆಯನ್ನು ಸ್ವೀಕರಿಸಿ ಈ ಪಾಪಿಯನ್ನು ಸಂಹರಿಸಿಬಿಡು. ॥ ೨೪ ॥

ಪ್ರಭುವೇ! ಇದೋ ಲೋಕವನ್ನು ಸಂಹಾರಮಾಡುವ ಭಯಂಕರವಾದ ಸಂಧ್ಯಾಕಾಲವು ಬರುವುದರಲ್ಲಿದೆ. ಅಷ್ಟರೊಳಗೆ ಈತನನ್ನು ಸಂಹಾರಮಾಡಿ ದೇವತೆಗಳಿಗೆ ವಿಜಯವನ್ನು ದಯಪಾಲಿಸು. ॥ ೨೫ ॥ ಈಗ ಅಭಿಜಿತ್ ಎಂಬ ಮಂಗಳಮಯವಾದ ಮುಹೂರ್ತದ ಯೋಗವೂ ಬಂದಿದೆ. ಆದ್ದರಿಂದ ನಿನ್ನ ಸುಹೃದರಾದ ನಮ್ಮ ಕಲ್ಯಾಣಕ್ಕಾಗಿ ಈ ದುರ್ಜಯ ದೈತ್ಯನನ್ನು ಬೇಗನೇ ಸಂಹರಿಸಿಬಿಡು. ॥ ೨೬ ॥ ಪ್ರಭೋ! ತನ್ನ ಮೃತ್ಯುವಾಗಿ ವಿಧಾಯಕನಾಗಿರುವ ನಿನ್ನ ಬಳಿಗೆ ನಮ್ಮೆಲ್ಲರ ಸೌಭಾಗ್ಯದಿಂದ ಈತನೇ ಬಂದು ಸೇರಿದ್ದಾನೆ. ಈಗ ನೀನು ಯುದ್ಧದಲ್ಲಿ ಪರಾಕ್ರಮದಿಂದ ಈತನನ್ನು ಕೊಂದು ಲೋಕಗಳಿಗೆ ಶಾಂತಿಯನ್ನು ಉಂಟುಮಾಡು. ॥ ೨೭ ॥

ಹದಿನೆಂಟನೆಯ ಅಧ್ಯಾಯವು ಮುಗಿಯಿತು. ॥ ೧೮ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ತೃತೀಯಸ್ಕಂಧೇ
ಹಿರಣ್ಯಾಕ್ಷವಧೇಽಷ್ಟಾದಶೋಽಧ್ಯಾಯಃ ॥ ೧೮ ॥

ಹತ್ತೊಂಭತ್ತನೆಯ ಅಧ್ಯಾಯ

ಹಿರಣ್ಯಾಕ್ಷನ ವಧೆ

ಮೈತ್ರೇಯ ಉವಾಚ

**ಅವಧಾರ್ಯ ವಿರಿಂಚಸ್ಯ ನಿರ್ವ್ಯಲೀಕಾಮೃತಂ ವಚಃ ।
ಪ್ರಹಸ್ಯ ಪ್ರೇಮಗರ್ಭೇಣ ತದಪಾಂಗೇನ ಸೋಽಗ್ರಹೀತ್ ॥ ೧ ॥**

**ತತಃ ಸಪತ್ನಂ ಮುಖತಶ್ಚರಂತಮಕುತೋಭಯಮ್ ।
ಜಘಾನೋತ್ಪತ್ಯ ಗದಯಾ ಹನಾವಸುರಮಕ್ಷಜಃ ॥ ೨ ॥**

**ಸಾ ಹತಾ ತೇನ ಗದಯಾ ವಿಹತಾ ಭಗವತ್ಕರಾತ್ ।
ವಿಘೂರ್ಣಿತಾಪತದ್ರೇಜೇ ತದದ್ಭುತಮಿವಾಭವತ್ ॥ ೩ ॥**

**ಸ ತದಾ ಲಬ್ಧತೀರ್ಥೋಽಪಿ ನ ಬಬಾಧೇ ನಿರಾಯುಧಮ್ ।
ಮಾನಯನ್‌ಸ ಮೃಧೇ ಧರ್ಮಂ ವಿಷ್ವಕ್ಸೇನಂ ಪ್ರಕೋಪಯನ್ ॥ ೪ ॥**

**ಗದಾಯಾಮಪವಿದ್ಧಾಯಾಂ ಹಾಹಾಕಾರೇ ವಿನಿರ್ಗತೇ ।
ಮಾನಯಾಮಾಸ ತದ್ಧರ್ಮಂ ಸುನಾಭಂ ಚಾಸ್ಮರದ್ವಿಭುಃ ॥ ೫ ॥**

**ತಂ ವ್ಯಗ್ರಚಕ್ರಂ ದಿತಿಪುತ್ರಾಧಮೇನ
ಸ್ವಪಾರ್ಷದಮುಖ್ಯೇನ ವಿಷಜ್ಜಮಾನಮ್ ।
ಚಿತ್ರಾ ವಾಚೋಽತದ್ವಿದಾಂ ಖೇಚರಾಣಾಂ
ತತ್ರ ಸ್ಮಾಸನ್ ಸ್ವಸ್ತಿ ತೇಽಮುಂ ಜಹೀತಿ ॥ ೬ ॥**

**ಸ ತಂ ನಿಶಾಮ್ಯಾತ್ತರಥಾಂಗಮಗ್ರತೋ
ವ್ಯವಸ್ಥಿತಂ ಪದ್ಮಪಲಾಶಲೋಚನಮ್ ।
ವಿಲೋಕ್ಯ ಚಾಮರ್ಷಪರಿಪ್ಲುತೇಂದ್ರಿಯೋ
ರುಷಾ ಸ್ವದಂತಚ್ಛದಮಾದಶಚ್ಛ್ವಸನ್ ॥ ೭ ॥**

**ಕರಾಲದಂಷ್ಟ್ರಶ್ಚಕ್ಷುರ್ಭ್ಯಾಂ ಸಂಚಕ್ಷಾಣೋ ದಹನ್ನಿವ ।
ಅಭಿಪ್ಲುತ್ಯ ಸ್ವಗದಯಾ ಹತೋಽಸೀತ್ಯಾಹನದ್ಧರಿಮ್ ॥ ೮ ॥**

ಶ್ರೀಮೈತ್ರೇಯರು ಹೇಳುತ್ತಾರೆ - ಎಲೈ ವಿದುರನೇ! ಬ್ರಹ್ಮದೇವರು ನುಡಿದ ನಿಷ್ಕಪಟವೂ, ಅಮೃತಮಯವೂ ಆದ ವಿಜ್ಞಾಪನೆಯನ್ನು ಕೇಳಿ ಭಗವಂತನು ಅವನ ಮುಗ್ಧತನಕ್ಕಾಗಿ ನಸುನಕ್ಕು ತನ್ನ ಪ್ರೇಮಪೂರಿತವಾದ ಕಡೆಗಣ್ಣ ನೋಟದಿಂದ ಅವನ ಪ್ರಾರ್ಥನೆಯನ್ನು ಸ್ವೀಕರಿಸಿದನು. ॥ ೧ ॥ ಮತ್ತೆ ಅವನು ತನ್ನ ಮುಂದೆ ನಿರ್ಭಯನಾಗಿ ಸಂಚರಿಸುತ್ತಿದ್ದ ಶತ್ರುವಿನ ಮೇಲೆ ದಿಢೀರನೆ ಎರಗಿ ಆತನ ದವಡೆಯ ಮೇಲೆ ಗದೆಯನ್ನು ಬೀಸಿದನು. ಆದರೆ ಹಿರಣ್ಯಾಕ್ಷನ ಗದೆಗೆ ಢಿಕ್ಕಿಹೊಡೆದು ಆ ಗದೆಯು ಭಗವಂತನ ಕೈಯಿಂದ ಜಾರಿ ಸುತ್ತುಹೊಡೆಯುತ್ತಾ ನೆಲದಲ್ಲಿ ಉರುಳಿ ಕಂಗೊಳಿಸಿತು. ಆದರೆ ಅದು ತುಂಬಾ ಅದ್ಭುತವಾದ ಘಟನೆಯಂತೆ ಎಂದು ಎಲ್ಲರಿಗೆ ಅನಿಸಿತು. ॥ ೨-೩ ॥ ಆಗ ಶತ್ರುವಿನ ಮೇಲೆ ಆಕ್ರಮಣ ಮಾಡಲು ಒಳ್ಳೆಯ ಅವಕಾಶವಿದ್ದರೂ – ಶತ್ರುವು ಆಯುಧರಹಿತನಾಗಿರುವುದನ್ನು ಕಂಡು ಹಿರಣ್ಯಾಕ್ಷನು ಯುದ್ಧಧರ್ಮವನ್ನು ಪಾಲಿಸುತ್ತಾ ಅವನ ಮೇಲೆ ಆಕ್ರಮಣ ಮಾಡಲಿಲ್ಲ. ಭಗವಂತನ ಕ್ರೋಧವನ್ನು ಹೆಚ್ಚಿಸಲೆಂದೇ ಅವನು ಹೀಗೆ ಮಾಡಿದನು. ॥ ೪ ॥ ಗದೆಯು ಕೆಳಗೆ ಉರುಳಿ ಜನರು ಅದಕ್ಕಾಗಿ ಹಾಹಾಕಾರ ಮಾಡಿ ಸುಮ್ಮನಾಗಲು, ಪ್ರಭುವು ಆತನ ಧರ್ಮಬುದ್ಧಿಯನ್ನು ಪ್ರಶಂಸೆಮಾಡಿ ತನ್ನ ಸುದರ್ಶನಚಕ್ರವನ್ನು ಸ್ಮರಿಸಿದನು. ॥ ೫ ॥

ಸುದರ್ಶನ ಚಕ್ರವು ಒಡನೆಯೇ ಅಲ್ಲಿ ಕಾಣಿಸಿಕೊಂಡು ಭಗವಂತನ ಕರದಲ್ಲಿ ತಿರುಗತೊಡಗಿತು. ಆದರೆ ಭಗವಂತನು ತನ್ನ ಮುಖ್ಯಪಾರ್ಷದನಾಗಿದ್ದ ದೈತ್ಯಾಧಮ ಹಿರಣ್ಯಾಕ್ಷನೊಡನೆ ವಿಶೇಷವಾಗಿ ಕ್ರೀಡಿಸತೊಡಗಿದನು. ಆಗ ಆತನ ಪ್ರಭಾವವನ್ನರಿಯದ ದೇವತೆಗಳು – 'ಪ್ರಭೋ! ನಿನಗೆ ಜಯವಾಗಲೀ. ಈತನನ್ನು ಇನ್ನು ಆಟವಾಡಿಸಬೇಡ. ಶೀಘ್ರವಾಗಿ ಸಂಹರಿಸಿಬಿಡು' ಎಂದು ವಿಚಿತ್ರವಾಗಿ ಪ್ರಾರ್ಥಿಸುತ್ತಿರುವುದು ಸ್ವಾಮಿಗೆ ಕೇಳಿಸಿತು. ॥ ೬ ॥ ಕಮಲಾಕ್ಷನಾದ ಶ್ರೀಹರಿಯು ತನ್ನೆದುರಿಗೆ ಸುದರ್ಶನಚಕ್ರಧಾರಿಯಾಗಿ ನಿಂತಿರುವುದನ್ನು ನೋಡಿ ಆ ದೈತ್ಯರಾಜನ ಸಕಲೇಂದ್ರಿಯಗಳು ತಳಮಳಗೊಂಡವು. ಅವನು ನಿಟ್ಟುಸಿರುಬಿಡುತ್ತಾ ಹಲ್ಲುಗಳಿಂದ ತುಟಿಯನ್ನು ಕಚ್ಚಿಕೊಳ್ಳತೊಡಗಿದನು. ॥ ೭ ॥ ಆಗ ತೀಕ್ಷ್ಣವಾದ ಕೋರೆಹಲ್ಲುಗಳುಳ್ಳ ದೈತ್ಯನು ಭಗವಂತನನ್ನು ಭಸ್ಮ ಮಾಡಿಬಿಡುವನೋ ಎಂಬಂತೆ ದುರುಗುಟ್ಟಿ ನೋಡತೊಡಗಿದನು. ಅವನು ಛಂಗನೆ ಜಿಗಿದು 'ಎಲವೋ! ಈಗ ನೀನು ಉಳಿಯಲಾರೆ' ಎಂದು ಗರ್ಜಿಸುತ್ತಾ ಶ್ರೀಹರಿಯ ಮೇಲೆ ಬಲವಾಗಿ ಗದೆಯನ್ನು ಪ್ರಯೋಗಿಸಿದನು. ॥ ೮ ॥

ಪದಾ ಸವ್ಯೇನ ತಾಂ ಸಾಧೋ ಭಗವಾನ್ಯಜ್ಞಸೂಕರಃ ।
ಲೀಲಯಾ ಮಿಷತಃ ಶತ್ರೋಃ ಪ್ರಾಹರದ್ವಾತರಂಹಸಮ್ ॥ ೯ ॥

ಆಹ ಚಾಯುಧಮಾಧತ್ಸ್ವ ಘಟಸ್ವ ತ್ವಂ ಜಿಗೀಷಸಿ ।
ಇತ್ಯುಕ್ತಃ ಸ ತದಾ ಭೂಯಸ್ತಾಡಯನ್ವ್ಯನದದ್ಭೃಶಮ್ ॥ ೧೦ ॥

ಸಾಧುಶ್ರೇಷ್ಠ ವಿದುರನೇ! ಯಜ್ಞಮೂರ್ತಿಯಾದ ಭಗವಾನ್ ವರಾಹಸ್ವಾಮಿಯು ಶತ್ರುವು ನೋಡುತ್ತಿರುವಂತೆ ತನ್ನ ಎಡಗಾಲಿನಿಂದ ಆ ಗದೆಯನ್ನು ಲೀಲಾಜಾಲವಾಗಿ ಕೆಳಕ್ಕೆ ಉರುಳಿಸಿ 'ಎಲೈ ದೈತ್ಯನೇ! ನೀನು ನನ್ನನ್ನು ಗೆಲ್ಲಲು ಬಯಸುತ್ತೀಯೆ. ಆದ್ದರಿಂದ ನಿನ್ನ ಶಸ್ತ್ರವನ್ನು ಎತ್ತಿಕೊಂಡು ಮತ್ತೊಂದುಬಾರಿ ಆಕ್ರಮಣಮಾಡುವವನಾಗು' ಎಂದು ಆತನಿಗೆ ಹೇಳಿದನು. ಭಗವಂತನು ಹೇಳಿದುದನ್ನು ಕೇಳಿ ಆತನು ಮತ್ತೆ ಗದೆಯನ್ನು ಪ್ರಯೋಗಿಸಿ ಭಯಂಕರವಾಗಿ ಗರ್ಜಿಸಿದನು. ॥ ೯-೧೦ ॥

ತಾಂ ಸ ಆಪತತೀಂ ವೀಕ್ಷ್ಯ ಭಗವಾನ್ ಸಮವಸ್ಥಿತಃ ।
ಜಗ್ರಾಹ ಲೀಲಯಾ ಪ್ರಾಪ್ತಾಂ ಗರುತ್ಮಾನಿವ ಪನ್ನಗೀಮ್ ॥ ೧೧ ॥

ಗದೆಯು ತನ್ನತ್ತ ಬರುತ್ತಿರುವುದನ್ನು ಕಂಡು ಭಗವಂತನು – ಗರುಡನು ಹೆಣ್ಣು ಸರ್ಪವನ್ನು ಹಿಡಿಯುವಂತೆ ನಿಂತಲ್ಲೇ ಅದನ್ನು ಅನಾಯಾಸವಾಗಿ ಹಿಡಿದುಕೊಂಡನು. ॥ ೧೧ ॥

ಸ್ವಪೌರುಷೇ ಪ್ರತಿಹತೇ ಹತಮಾನೋ ಮಹಾಸುರಃ ।
ನೈಚ್ಛದ್ಗದಾಂ ದೀಯಮಾನಾಂ ಹರಿಣಾ ವಿಗತಪ್ರಭಃ ॥ ೧೨ ॥

ತನ್ನ ಪ್ರಯತ್ನವು ವ್ಯರ್ಥವಾದುದನ್ನು ಕಂಡು ■ ಮಹಾದೈತ್ಯನ ಗರ್ವವು ಇಳಿದು, ತೇಜಸ್ಸು ನಷ್ಟವಾಗಿ ಹೋಯಿತು. ಈ ಸಲ ಭಗವಂತನು ಗದೆಯನ್ನು ಕೊಡಲು ಬಂದಾಗ ಆತನು ಅದನ್ನು ಪಡೆಯಲು ಬಯಸಲಿಲ್ಲ. ॥ ೧೨ ॥

ಜಗ್ರಾಹ ತ್ರಿಶಿಖಂ ಶೂಲಂ ಜ್ವಲಜ್ಜ್ವಲನಲೋಲುಪಮ್ ।
ಯಜ್ಞಾಯ ಧೃತರೂಪಾಯ ವಿಪ್ರಾಯಾಭಿಚರನ್ಯಥಾ ॥ ೧೩ ॥

ಆದರೆ ಯಾರಾದರೂ ಬ್ರಾಹ್ಮಣನ ಮೇಲೆ ನಿಷ್ಫಲವಾದ ಅಭಿಚಾರವನ್ನು ಪ್ರಯೋಗಿಸುವಂತೆ ಅವನು ಯಜ್ಞಪುರುಷನ ಮೇಲೆ ಪ್ರಯೋಗಿಸಲಿಕ್ಕಾಗಿ ಉರಿಯುವ ಬೆಂಕಿಯಂತಿದ್ದ ತ್ರಿಶೂಲವನ್ನು ಕೈಗೆತ್ತಿಕೊಂಡನು. ॥ ೧೩ ॥

ತದೋಜಸಾ ದೈತ್ಯಮಹಾಭಟಾರ್ಪಿತಂ
　ಚಕಾಸದಂತಃ ಖ ಉದೀರ್ಣದೀಧಿತಿ ।
ಚಕ್ರೇಣ ಚಿಚ್ಛೇದ ನಿಶಾತನೇಮಿನಾ
　ಹರಿರ್ಯಥಾ ತಾರ್ಕ್ಷ್ಯಪತತ್ರಮುಜ್ಝಿತಮ್ ॥ ೧೪ ॥

ಮಹಾಬಲಶಾಲಿಯಾದ ಹಿರಣ್ಯಾಕ್ಷನು ಬಲಪೂರ್ವಕವಾಗಿ ಅತ್ಯಂತ ವೇಗದಿಂದ ಪ್ರಯೋಗಿಸಿದ ತೇಜಸ್ವಿಯಾದ ಆ ತ್ರಿಶೂಲವು ಆಕಾಶದಲ್ಲಿ ಥಳ-ಥಳಿಸತೊಡಗಿತು. ಭಗವಂತನು ಅದನ್ನು ತನ್ನ ತೀಕ್ಷ್ಣವಾದ ಅಲಗುಳ್ಳ ಸುದರ್ಶನಚಕ್ರದಿಂದ – ಇಂದ್ರನು ಗರುಡನ ಗರಿಯನ್ನು ಕತ್ತರಿಸಿದಂತೆ * ಕತ್ತರಿಸಿಹಾಕಿದನು. ॥ ೧೪ ॥

ವೃಕ್ಣೇ ಸ್ವಶೂಲೇ ಬಹುಧಾರಿಣಾ ಹರೇಃ
　ಪ್ರತ್ಯೇತ್ಯ ವಿಸ್ತೀರ್ಣಮುರೋ ವಿಭೂತಿಮತ್ ।
ಪ್ರವೃದ್ಧರೋಷಃ ಸ ಕಠೋರಮುಷ್ಟಿನಾ
　ನದನ್ಪ್ರಹೃತ್ಯಾಂತರಧೀಯತಾಸುರಃ ॥ ೧೫ ॥

ಭಗವಂತನ ಚಕ್ರದಿಂದ ನುಚ್ಚುನೂರಾದ ತನ್ನ ತ್ರಿಶೂಲವನ್ನು ಕಂಡು ದೈತ್ಯನಿಗೆ ಮಿತಿಮೀರಿದ ಕ್ರೋಧವುಂಟಾಯಿತು. ಆಗ ಆವನು ಭಗವಂತನ ಬಳಿಗೆ ಬಂದು ತನ್ನ ಕಠೋರವಾದ ಮುಷ್ಟಿಯಿಂದ ಶ್ರೀವತ್ಸಚಿಹ್ನೆಯಿಂದ ಬೆಳಗುತ್ತಿದ್ದ ಆತನ ಎದೆಗೆ ಬಲವಾಗಿ ಗುದ್ದಿ ಜೋರಾಗಿ ಗರ್ಜಿಸಿ ಕಣ್ಮರೆಯಾಗಿಬಿಟ್ಟನು. ॥ ೧೫ ॥

ತೇನೇತ್ಥಮಾಹತಃ ಕ್ಷತ್ತರ್ಭಗವಾನಾದಿಸೂಕರಃ ।
ನಾಕಂಪತ ಮನಾಕ್ಕ್ವಾಪಿ ಸ್ರಜಾ ಹತ ಇವ ದ್ವಿಪಃ ॥ ೧೬ ॥

ವಿದುರನೇ! ಗಜರಾಜನ ಮೇಲೆ ಹೂವಿನ ಹಾರದ ಏಟು ಏನೂ ಪರಿಣಾಮ ಬೀರದಂತೆ, ದೈತ್ಯನು ಈ ಏಟು ಹೊಡೆದರೂ ಭಗವಾನ್ ಆದಿವರಾಹನು ಸ್ವಲ್ಪವೂ ವಿಚಲಿತನಾಗಲಿಲ್ಲ. ॥ ೧೬ ॥

ಅಥೋರುಧಾಸೃಜನ್ಮಾಯಾಂ
　　ಯೋಗಮಾಯೇಶ್ವರೇ ಹರೌ ।
ಯಾಂ ವಿಲೋಕ್ಯ ಪ್ರಜಾಸ್ತ್ರಸ್ತಾ
　　ಮೇನಿರೇಽಸ್ಯೋಪಸಂಯಮಮ್ ॥ ೧೭ ॥

ಆಗ ಆ ಮಹಾ ಮಾಯಾವಿಯಾದ ದೈತ್ಯನು ಮಾಯೆಗೆ ಅಧಿಪತಿಯಾದ ಶ್ರೀಹರಿಯ ಮೇಲೆ ಅನೇಕ ರೀತಿಯ ಮಾಯೆಗಳನ್ನು ಪ್ರಯೋಗಿಸತೊಡಗಿದನು. ಅದನ್ನು ಕಂಡು ಎಲ್ಲ ಪ್ರಜೆಗಳು ಭಯಗೊಂಡು ಈಗಲೇ ಜಗತ್ತಿನ ಪ್ರಳಯವಾಗುವುದೋ ಎಂದು ತಿಳಿದರು. ॥ ೧೭ ॥

* ಒಮ್ಮೆ ಗರುಡದೇವನು ತನ್ನ ತಾಯಿಯಾದ ವಿನತಾದೇವಿಯನ್ನು ಸರ್ಪಗಳ ದಾಸ್ಯ ಕದ್ರುವಿನ ದಾಸ್ಯದಿಂದ ಬಿಡಿಸಲೋಸುಗ ಸ್ವರ್ಗದಿಂದ ಅಮೃತವನ್ನು ತರಲು ಹೋದಾಗ ಇಂದ್ರನು ಗರುಡನ ಮೇಲೆ ತನ್ನ ವಜ್ರಾಯುಧವನ್ನು ಪ್ರಯೋಗಿಸಿದನು. ದಧೀಚಿಯ ಮೂಳೆ ಎಂದೂ ವ್ಯರ್ಥವಾಗುವುದಿಲ್ಲ. ಆ ದಿವ್ಯಾಯುಧಕ್ಕೆ ಗೌರವ ತೋರಲು ಗರುಡದೇವನು ತನ್ನ ರೆಕ್ಕೆಯ ಒಂದು ಗರಿಯನ್ನು ಅದಕ್ಕೆ ಲಕ್ಷ್ಯವಾಗಿ ಕೊಟ್ಟನು. ಅದನ್ನು ಮಾತ್ರ ಕತ್ತರಿಸಿತು ವಜ್ರಾಯುಧವು.

ಪ್ರವವುರ್ವಾಯವಶ್ಚಂಡಾಸ್ತಮಃ ಪಾಂಸವಮೈರಯನ್ ।
ದಿಗ್ಭ್ಯೋ ನಿಪೇತುರ್ಗ್ರಾವಾಣಃ ಕ್ಷೇಪಣೈಃ ಪ್ರಹಿತಾ ಇವ ॥ ೧೮ ॥

ದ್ಯೌರ್ನಷ್ಟಭಗಣಾಭ್ರೌಘೈಃ ಸವಿದ್ಯುತ್ಸ್ತನಯಿತ್ನುಭಿಃ ।
ವರ್ಷದ್ಭಿಃ ಪೂಯಕೇಶಾಸೃಗ್ವಿಣ್ಮೂತ್ರಾಸ್ಥೀನಿ ಚಾಸಕೃತ್ ॥ ೧೯ ॥

ಗಿರಯಃ ಪ್ರತ್ಯದೃಶ್ಯಂತ ನಾನಾಯುಧಮುಚೋಽನಘ ।
ದಿಗ್ವಾಸಸೋ ಯಾತುಧಾನ್ಯಃ ಶೂಲಿನ್ಯೋ ಮುಕ್ತಮೂರ್ಧಜಾಃ ॥ ೨೦ ॥

ಬಹುಭಿರ್ಯಕ್ಷರಕ್ಷೋಭಿಃ ಪತ್ತ್ಯಶ್ವರಥಕುಂಜರೈಃ ।
ಆತತಾಯಿಭಿರುತ್ಸೃಷ್ಟಾ ಹಿಂಸ್ರಾ ವಾಚೋಽತಿವೈಶಸಾಃ ॥ ೨೧ ॥

ಪ್ರಾದುಷ್ಕೃತಾನಾಂ ಮಾಯಾನಾಮಾಸುರೀಣಾಂ ವಿನಾಶಯತ್ ।
ಸುದರ್ಶನಾಸ್ತ್ರಂ ಭಗವಾನ್ ಪ್ರಾಯುಂಕ್ತ ದಯಿತಂ ತ್ರಿಪಾತ್ ॥ ೨೨ ॥

ತದಾ ದಿತೇಃ ಸಮಭವತ್ಸಹಸಾ ಹೃದಿ ವೇಪಥುಃ ।
ಸ್ಮರಂತ್ಯಾ ಭರ್ತುರಾದೇಶಂ ಸ್ತನಾಚ್ಚಾಸೃಕ್ ಪ್ರಸುಸ್ರುವೇ ॥ ೨೩ ॥

ವಿನಷ್ಟಾಸು ಸ್ವಮಾಯಾಸು ಭೂಯಶ್ಚಾವ್ರಜ್ಯ ಕೇಶವಮ್ ।
ರುಷೋಪಗೂಹಮಾನೋಽಮುಂ ದದೃಶೇಽವಸ್ಥಿತಂ ಬಹಿಃ ॥ ೨೪ ॥

ತಂ ಮುಷ್ಟಿಭಿರ್ವಿನಿಘ್ನಂತಂ ವಜ್ರಸಾರೈರಧೋಕ್ಷಜಃ ।
ಕರೇಣ ಕರ್ಣಮೂಲೇಽಹನ್ ಯಥಾ ತ್ವಾಷ್ಟ್ರಂ ಮರುತ್ಪತಿಃ ॥ ೨೫ ॥

ಸ ಆಹತೋ ವಿಶ್ವಜಿತಾ ಹ್ಯವಜ್ಞಯಾ
ಪರಿಭ್ರಮದ್ಗಾತ್ರ ಉದಸ್ತಲೋಚನಃ ।
ವಿಶೀರ್ಣಬಾಹ್ವಂಘ್ರಿಶಿರೋರುಹೋಽಪತದ್
ಯಥಾ ನಗೇಂದ್ರೋ ಲುಲಿತೋ ನಭಸ್ವತಾ ॥ ೨೬ ॥

ಕ್ಷಿತೌ ಶಯಾನಂ ತಮಕುಂಠವರ್ಚಸಂ
ಕರಾಲದಂಷ್ಟ್ರಂ ಪರಿದಷ್ಟದಚ್ಛದಮ್ ।
ಅಜಾದಯೋ ವೀಕ್ಷ್ಯ ಶಶಂಸುರಾಗತಾ
ಅಹೋ ಇಮಾಂ ಕೋ ನು ಲಭೇತ ಸಂಸ್ಥಿತಿಮ್ ॥ ೨೭ ॥

ಆಗ ಭಯಂಕರವಾದ ಬಿರುಗಾಳಿಯು ಬೀಸುತ್ತಾ ಧೂಳಿನಿಂದ ಎಲ್ಲೆಡೆ ಕತ್ತಲೆಯೇ ತುಂಬಿಹೋಯಿತು. ಎಲ್ಲ ಕಡೆಯಿಂದ ಕವಣೆಯ ಯಂತ್ರದಿಂದ ಎಸೆಯುತ್ತಿವೆಯೋ ಎಂಬಂತೆ ಕಲ್ಲುಗಳ ಸುರಿಮಳೆ ಬೀಳತೊಡಗಿತು. ॥ ೧೮ ॥ ಸಿಡಿಮಿಂಚುಗಳೊಡನೆ ಸಿಡಿಲುಗಳಿಂದ ಮೋಡಗಳು ಎಲ್ಲೆಡೆ ಕವಿದು ಆಕಾಶದಲ್ಲಿ ಸೂರ್ಯ, ಚಂದ್ರ, ನಕ್ಷತ್ರಗಳೆಲ್ಲ ಅಡಗಿಹೋದುವು ಹಾಗೂ ಕೂದಲೂ, ಕೀವು, ಮಲ-ಮೂತ್ರಗಳು, ಎಲುಬುಗಳು ನಿರಂತರ ಸುರಿಯತೊಡಗಿದುವು. ॥ ೧೯ ॥ ವಿದುರನೇ! ಬಗೆ- ಬಗೆಯ ಅಸ್ತ್ರ-ಶಸ್ತ್ರಗಳ ಮಳೆಗರೆಯುವ ಪರ್ವತಗಳೇ ಕಾಣಿಸತೊಡಗಿದುವು. ಕೈಯಲ್ಲಿ ತ್ರಿಶೂಲವನ್ನು ಹಿಡಿದು, ತಲೆಗೆದರಿಕೊಂಡಿದ್ದ ಬೆತ್ತಲೆಯರಾದ ರಾಕ್ಷಸಿಯರು ಕಾಣಿಸತೊಡಗಿದರು. ॥ ೨೦ ॥ ಬಹುಸಂಖ್ಯೆಯಲ್ಲಿ ಕಾಲಾಳುಗಳು, ಕುದುರೆ ಸವಾರರು, ರಥಿಕರು, ಮದ್ದಾನೆಗಳ ಮೇಲೇರಿದ್ದ ಮಾವುತರು, ಕೊಲ್ಲುವುದಕ್ಕೆ ಸಿದ್ಧರಾಗಿದ್ದ ಯಕ್ಷ-ರಾಕ್ಷಸರು ಕೊಲ್ಲು-ಕಡಿ ಎಂದು ಕೂಗುತ್ತಿರುವ ಅತ್ಯಂತ ಕ್ರೂರವೂ, ಹಿಂಸಾಮಯವೂ ಆದ ಕೋಲಾಹಲ ಶಬ್ದವು ಎಲ್ಲೆಡೆ ಕೇಳಿಸತೊಡಗಿತು. ॥ ೨೧ ॥

ಹೀಗೆ ಪ್ರಕಟಗೊಂಡ ಆ ಆಸುರೀಮಾಯೆಯನ್ನು ನಾಶಗೊಳಿಸಲೋಸುಗ ಯಜ್ಞಮೂರ್ತಿಯಾದ ಶ್ರೀವರಾಹ ಭಗವಂತನು ತನ್ನ ಪ್ರಿಯವಾದ ಸುದರ್ಶನಚಕ್ರವನ್ನು ಪ್ರಯೋಗಿಸಿದನು. ॥ ೨೨ ॥ ಆಗ ದಿತಿದೇವಿಗೆ ತನ್ನ ಪತಿಯು ಹಿಂದೆ ಹೇಳಿದ ಮಾತು ನೆನಪಿಗೆ ಬಂದು ಆಕೆಯ ಹೃದಯವು ನಡುಗಿದಂತಾಗಿ ಇದ್ದಕ್ಕಿದ್ದಂತೆ ಸ್ತನಗಳಿಂದ ರಕ್ತವು ಸುರಿಯತೊಡಗಿತು. ॥ ೨೩ ॥ ತನ್ನ ಮಾಯೆಯು ನಾಶವಾದಾಗ ಆ ದೈತ್ಯನು ಪುನಃ ಭಗವಂತನ ಬಳಿಗೆ ಬಂದನು. ಅವನು ಕೆರಳಿದ ಕೋಪದಿಂದ ಭಗವಂತನನ್ನು ಚೂರು-ಚೂರು ಮಾಡಬೇಕೆಂದು ಬಯಸಿ ಆತನನ್ನು ತನ್ನ ತೋಳ್ತೆಕ್ಕೆಯಲ್ಲಿ ಅವುಚಿ ಹಿಡಿದುಕೊಂಡನು. ಆದರೆ ಭಗವಂತನಾದರೋ ಹೊರಗೆ ನಿಂತಿರುವುದನ್ನು ನೋಡಿದನು. ॥ ೨೪ ॥ ಆಗ ಅವನು ಮತ್ತೂ ಕ್ರುದ್ಧನಾಗಿ ತನ್ನ ವಜ್ರದಂತಹ ಮುಷ್ಟಿಗಳಿಂದ ಭಗವಂತನನ್ನು ಥಳಿಸತೊಡಗಿದನು. ಒಡನೆಯೇ ಭಗವಂತನು – ದೇವೇಂದ್ರನು ವೃತ್ರಾಸುರನನ್ನು ಬಡಿದಂತೆ ಆತನ ಕೆನ್ನೆಗೆ ಒಂದು ಪೆಟ್ಟುಕೊಟ್ಟನು. ॥ ೨೫ ॥ ವಿಶ್ವವಿಜಯಿಯಾದ ಭಗವಂತನೇನೋ ಆತನಿಗೆ ಉಪೇಕ್ಷೆಯಿಂದಲೇ ಹೊಡೆದಿದ್ದನು. ಆದರೂ ಕೂಡ ಆ ಏಟಿನಿಂದ ಹಿರಣ್ಯಾಕ್ಷನ ದೇಹವು ಗಿರ್ರನೇ ತಿರುಗಿತು. ಕಣ್ಣಾಲಿಗಳು ಹೊರಬಂದುವು. ಕೈ-ಕಾಲು-ಕೂದಲು ಛಿನ್ನ-ಭಿನ್ನವಾಗಿ ಆತನು ಗತಪ್ರಾಣನಾಗಿ ಬಿರುಗಾಳಿಯಿಂದ ಬುಡಸಹಿತ ಉರುಳಿದ ಮಹಾವೃಕ್ಷದಂತೆ ನೆಲಕ್ಕೆ ಉರುಳಿದನು. ॥ ೨೬ ॥

ಹಿರಣ್ಯಾಕ್ಷನ ತೇಜವು ಆಗಲೂ ಕುಂದಲಿಲ್ಲ. ಕರಾಳವಾದ ಕೋರೆಹಲ್ಲುಗಳಿಂದ ತುಟಿಗಳನ್ನು ಕಚ್ಚಿಕೊಂಡು ನೆಲದಮೇಲೆ ಶವವಾಗಿ ಬಿದ್ದಿರುವ ದೈತ್ಯನನ್ನು ನೋಡಿ – ಯುದ್ಧವನ್ನು ನೋಡಲು ಬಂದಿದ್ದ ಬ್ರಹ್ಮಾದಿದೇವತೆಗಳು ಅವನನ್ನು ಪ್ರಶಂಸಿಸುತ್ತಾ –

ಯಂ ಯೋಗಿನೋ ಯೋಗಸಮಾಧಿನಾ ರಹೋ
ಧ್ಯಾಯಂತಿ ಲಿಂಗಾದಸತೋ ಮುಮುಕ್ಷಯಾ ।
ತಸ್ಯೈಷ ದೈತ್ಯಋಷಭಃ ಪದಾಹತೋ
ಮುಖಂ ಪ್ರಪಶ್ಯಂಸ್ತನುಮುತ್ಸಸರ್ಜ ಹ ॥ ೨೮ ॥

ಏತೌ ತೌ ಪಾರ್ಷದಾವಸ್ಯ ಶಾಪಾದ್ಯಾತಾವಸದ್ಗತಿಮ್ ।
ಪುನಃ ಕತಿಪಯೈಃ ಸ್ಥಾನಂ ಪ್ರಪತ್ಸ್ಯೇತೇ ಹ ಜನ್ಮಭಿಃ ॥ ೨೯ ॥

ದೇವಾ ಊಚುಃ

ನಮೋ ನಮಸ್ತೇಽಖಿಲಯಜ್ಞತಂತವೇ
ಸ್ಥಿತೌ ಗೃಹೀತಾಮಲಸತ್ತ್ವಮೂರ್ತಯೇ ।
ದಿಷ್ಟ್ಯಾ ಹತೋಽಯಂ ಜಗತಾಮರುಂತುದ-
ಸ್ತ್ವತ್ಪಾದಭಕ್ತ್ಯಾ ವಯಮೀಶ ನಿರ್ವೃತಾಃ ॥ ೩೦ ॥

ಮೈತ್ರೇಯ ಉವಾಚ

ಏವಂ ಹಿರಣ್ಯಾಕ್ಷಮಸಹ್ಯವಿಕ್ರಮಂ
ಸ ಸಾದಯಿತ್ವಾ ಹರಿರಾದಿಸೂಕರಃ ।
ಜಗಾಮ ಲೋಕಂ ಸ್ವಮಖಂಡಿತೋತ್ಸವಂ
ಸಮೀಡಿತಃ ಪುಷ್ಕರವಿಷ್ಟರಾದಿಭಿಃ ॥ ೩೧ ॥

ಮಯಾ ಯಥಾನೂಕ್ತಮವಾದಿ ತೇ ಹರೇಃ
ಕೃತಾವತಾರಸ್ಯ ಸುಮಿತ್ರ ಚೇಷ್ಟಿತಮ್ ।
ಯಥಾ ಹಿರಣ್ಯಾಕ್ಷ ಉದಾರವಿಕ್ರಮೋ
ಮಹಾಮೃಧೇ ಕ್ರೀಡನವನ್ನಿರಾಕೃತಃ ॥ ೩೨ ॥

ಸೂತ ಉವಾಚ

ಇತಿ ಕೌಷಾರವಾಖ್ಯಾತಾಮಾಶ್ರುತ್ಯ ಭಗವತ್ಕಥಾಮ್ ।
ಕ್ಷತ್ತಾಽಽನಂದಂ ಪರಂ ಲೇಭೇ ಮಹಾಭಾಗವತೋ ದ್ವಿಜ ॥ ೩೩ ॥

ಅನ್ಯೇಷಾಂ ಪುಣ್ಯಶ್ಲೋಕಾನಾಮುದ್ದಾಮಯಶಸಾಂ ಸತಾಮ್ ।
ಉಪಶ್ರುತ್ಯ ಭವೇನ್ಮೋದಃ ಶ್ರೀವತ್ಸಾಂಕಸ್ಯ ಕಿಂ ಪುನಃ ॥ ೩೪ ॥

ಯೋ ಗಜೇಂದ್ರಂ ಝಷಗ್ರಸ್ತಂ
ಧ್ಯಾಯಂತಂ ಚರಣಾಂಬುಜಮ್ ।
ಕ್ರೋಶಂತೀನಾಂ ಕರೇಣೂನಾಂ
ಕೃಚ್ಛ್ರತೋಽಮೋಚಯದ್ದ್ರುತಮ್ ॥ ೩೫ ॥

"ಆಹಾ! ಇಂತಹ ಅಲಭ್ಯವಾದ ಮೃತ್ಯುವು ಬೇರಾರಿಗೆ ತಾನೇ ದೊರಕೀತು – ಎಂದು ಉದ್ಗರಿಸಿದರು. ॥ ೨೭ ॥ ತಮ್ಮ ಮಿಥ್ಯಾ ಉಪಾಧಿಗಳಿಂದ ಬಿಡುಗಡೆ ಹೊಂದಲು ಯೋಗಿಗಳು ಏಕಾಂತದಲ್ಲಿ ಸಮಾಧಿಯೋಗದಿಂದ ಯಾವಾತನ ಧ್ಯಾನಮಾಡುತ್ತಾರೋ, ಅಂತಹ ಭಗವಂತನ ಚರಣ ಹತಿಯಿಂದ, ಆತನ ಮುಖಾರವಿಂದವನ್ನೇ ನೋಡುತ್ತಾ ದೇಹತ್ಯಾಗ ಮಾಡಿದನಲ್ಲವೇ ಈ ದೈತ್ಯರಾಜನು! ॥ ೨೮ ॥ ಈ ಹಿರಣ್ಯಾಕ್ಷ ಮತ್ತು ಹಿರಣ್ಯಕಶಿಪು ಭಗವಂತನ ಪಾರ್ಷದರೇ ಆಗಿದ್ದಾರೆ. ಶಾಪವಶದಿಂದ ಅಧೋಗತಿ ಪ್ರಾಪ್ತವಾಗಿತ್ತು. ಇನ್ನು ಒಂದೆರಡು ಜನ್ಮಗಳಲ್ಲೇ ಇವರು ಮತ್ತೆ ತಮ್ಮ ಸ್ವಸ್ಥಾನಕ್ಕೆ ಹಿಂದಿರುಗುವರು" ಎಂದು ಆತನ ಧನ್ಯತೆಯನ್ನು ಕೊಂಡಾಡಿದರು. ॥ ೨೯ ॥

ದೇವತೆಗಳು ಸ್ತುತಿಸತೊಡಗಿದರು – ಪ್ರಭುವೇ! ನಿನಗೆ ಮತ್ತೆ-ಮತ್ತೆ ನಮಸ್ಕಾರಗಳು. ಸಮಸ್ತ ಯಜ್ಞಗಳನ್ನು ವಿಸ್ತರಿಸುವ ವಿಭುವು ನೀನು. ಜಗತ್ತಿನ ಸ್ಥಿತಿಗಾಗಿ ಶುದ್ಧಸತ್ತ್ವಮಯವಾದ ದಿವ್ಯ ಮಂಗಳವಿಗ್ರಹವನ್ನು ಪ್ರಕಟಪಡಿಸುತ್ತೀಯೆ. ಜಗತ್ತಿಗೆ ಕಷ್ಟ ಕೊಡುತ್ತಿದ್ದ ಈ ದುಷ್ಟದೈತ್ಯನು ನಾಶಹೊಂದಿರುವುದು ಬಹಳ ಸಂತಸದ ಸುದ್ದಿ. ನಿನ್ನ ಚರಣಗಳಲ್ಲಿನ ಭಕ್ತಿಯ ಪ್ರಭಾವದಿಂದ ನಮಗೂ ಸುಖ-ಶಾಂತಿಗಳು ಲಭಿಸಿದುವು. ॥ ೩೦ ॥

ಶ್ರೀಮೈತ್ರೇಯರು ಹೇಳುತ್ತಾರೆ – ಎಲೈ ವಿದುರನೇ! ಹೀಗೆ ಮಹಾಪರಾಕ್ರಮಿಯಾದ ಹಿರಣ್ಯಾಕ್ಷನನ್ನು ವಧಿಸಿ, ಬ್ರಹ್ಮಾದಿ ದೇವತೆಗಳು ಸ್ತುತಿಮಾಡುತ್ತಿರುವಂತೆ ಭಗವಾನ್ ಆದಿವರಾಹಸ್ವಾಮಿಯು ತನ್ನ ಅಖಂಡ ಆನಂದಮಯ ಧಾಮಕ್ಕೆ ವಿಜಯ ಮಾಡಿದನು. ॥ ೩೧ ॥ ಮಿತ್ರ ವಿದುರನೇ! ಭಗವಂತನು ಅವತರಿಸಿ ಹೇಗೆ ಲೀಲೆಗಳನ್ನು ಮಾಡುತ್ತಾನೆ ಮತ್ತು ಮಹಾ ಪರಾಕ್ರಮಿಯಾದ ಹಿರಣ್ಯಾಕ್ಷನನ್ನು ಯುದ್ಧದಲ್ಲಿ ಹೇಗೆ ಆಟದ ಬೊಂಬೆಯಂತೆ ಮುರಿದುಹಾಕಿದನು ಎಂಬುದನ್ನು ನಾನು ಗುರುಮುಖದಿಂದ ಕೇಳಿದಂತೆಯೇ ನಿನಗೆ ನಿರೂಪಿಸಿರುವೆನು. ॥ ೩೨ ॥

ಸೂತಪುರಾಣಿಕರು ಹೇಳುತ್ತಾರೆ – ಶೌನಕಾದಿ ಋಷಿಗಳೇ! ಮೈತ್ರೇಯ ಮಹರ್ಷಿಗಳಿಂದ ಭಗವಂತನ ಈ ಕಥೆಯನ್ನು ಕೇಳಿ ಪರಮಭಾಗವತೋತ್ತಮನಾದ ವಿದುರನಿಗೆ ಪರಮಾನಂದ ಉಂಟಾಯಿತು. ॥ ೩೩ ॥ ಪವಿತ್ರವಾದ ಕೀರ್ತಿಯುಳ್ಳ ಮಹಾ ಯಶಸ್ವಿಗಳಾದ ಮಹಾಪುರುಷರ ಚರಿತ್ರೆಗಳನ್ನು ಕೇಳಿದರೂ ಪರಮಾನಂದವುಂಟಾಗುವುದು. ಹೀಗಿರುವಾಗ ಶ್ರೀವತ್ಸಲಾಂಛನಭೂಷಿತ ಶ್ರೀ ಭಗವಂತನ ಲೀಲೆಗಳನ್ನು ಕೇಳಿದಾಗ ಆಗುವ ಆನಂದದ ಬಗೆಗೆ ಹೇಳುವುದೇನಿದೆ? ॥ ೩೪ ॥ ಘೋರವಾದ ಮೊಸಳೆಯು ಗಜರಾಜನ ಕಾಲನ್ನು ಹಿಡಿದುಕೊಂಡಾಗ ಗಜರಾಜನು ಪ್ರಭುವಿನ ಪಾದಗಳನ್ನು ಧ್ಯಾನಿಸತೊಡಗಿದನು. ಅವನ ಪರಿವಾರದ ಹೆಣ್ಣಾನೆಗಳೂ ದುಃಖದಿಂದ ಕೂಗಿಕೊಳ್ಳತೊಡಗಿದುವು. ಅಂತಹ ಕಷ್ಟ ಸಮಯದಲ್ಲಿ ಒಡನೆಯೇ ಮೈದೋರಿ ಭಕ್ತಗಜೇಂದ್ರನನ್ನು ದುಃಖದ ದೆಸೆಯಿಂದ ಬಿಡಿಸಿದ ಪರಮ ಕರುಣಾಳುವೇ ಈತನು. ಶರಣು

ತಂ ಸುಖಾರಾಧ್ಯಮೃಜುಭಿರನನ್ಯಶರಣೈರ್ನೃಭಿಃ ।
ಕೃತಜ್ಞಃ ಕೋ ನ ಸೇವೇತ ದುರಾರಾಧ್ಯಮಸಾಧುಭಿಃ
॥ ೩೬ ॥

ಯೋ ವೈ ಹಿರಣ್ಯಾಕ್ಷವಧಂ ಮಹಾದ್ಭುತಂ
ವಿಕ್ರೀಡಿತಂ ಕಾರಣಸೂಕರಾತ್ಮನಃ ।
ಶೃಣೋತಿ ಗಾಯತ್ಯನುಮೋದತೇಽಞ್ಜಸಾ
ವಿಮುಚ್ಯತೇ ಬ್ರಹ್ಮವಧಾದಪಿ ದ್ವಿಜಾಃ ॥ ೩೭ ॥

ಏತನ್ಮಹಾಪುಣ್ಯಮಲಂ ಪವಿತ್ರಂ
ಧನ್ಯಂ ಯಶಸ್ಯಂ ಪದಮಾಯುರಾಶಿಷಾಮ್ ।
ಪ್ರಾಣೇಂದ್ರಿಯಾಣಾಂ ಯುಧಿ ಶೌರ್ಯವರ್ಧನಂ
ನಾರಾಯಣೋಽನ್ತೇ ಗತಿರಂಗ ಶೃಣ್ವತಾಮ್ ॥ ೩೮ ॥

ಬಂದ ಸರಳಹೃದಯರಾದ ಭಕ್ತರಲ್ಲಿ ಸಹಜವಾಗಿಯೇ ಪ್ರಸನ್ನನಾಗುವನು. ಆದರೆ ದುಷ್ಟಪುರುಷರಿಗೆ ದೂರವಾಗಿರುವನು. ಅವರಿಗೆ ಅವನ ಒಲುಮೆ ದೊರೆಯದು. ಉಪಕಾರಗಳನ್ನು ಗುರುತಿಸುವ ಕೃತಜ್ಞನಾದ ಯಾರು ತಾನೇ ಆ ಭಕ್ತಪ್ರಿಯನನ್ನು ಸೇವಿಸುವುದಿಲ್ಲ? ॥ ೩೫-೩೬॥ ಶೌನಕಾದಿ ಮಹರ್ಷಿಗಳೇ! ಭೂಮಿಯನ್ನು ಉದ್ಧರಿಸುವುದಕ್ಕಾಗಿ ವರಾಹರೂಪವನ್ನು ಧರಿಸಿದ ಶ್ರೀಹರಿಯು ಮಾಡಿದ ಹಿರಣ್ಯಾಕ್ಷವಧವೆಂಬ ಅದ್ಭುತವಾದ ಈ ಲೀಲೆಯನ್ನು ಕೇಳುವವನೂ, ಹಾಡುವವನೂ, ಅನುಮೋದಿಸುವವನೂ, ಬ್ರಹ್ಮಹತ್ಯೆಯೇ ಮುಂತಾದ ಘೋರ ಪಾತಕಗಳಿಂದ ಸಹಜವಾಗಿ ಬಿಡುಗಡೆಹೊಂದುತ್ತಾನೆ. ॥ ೩೭॥ ಈ ಚರಿತ್ರೆಯು ಅತ್ಯಂತ ಪುಣ್ಯಪ್ರದವಾದುದು. ಪರಮ ಪವಿತ್ರವಾದುದು, ಧನ್ಯವಾದುದು. ಕೇಳುವ ಸುಕೃತಿಗಳಿಗೆ ಧನವನ್ನೂ, ಯಶಸ್ಸನ್ನೂ ದಯಪಾಲಿಸುವುದು. ಆಯುಸ್ಸನ್ನು ವೃದ್ಧಿಗೊಳಿಸುವುದು. ಕಾಮನೆಗಳನ್ನೂ ಈಡೇರಿಸುವುದು. ಯುದ್ಧದಲ್ಲಿ ಪ್ರಾಣ ಮತ್ತು ಇಂದ್ರಿಯಗಳ ಶಕ್ತಿಯನ್ನು ಹೆಚ್ಚಿಸುವುದು. ಇದನ್ನು ಕೇಳಿದವರಿಗೆ ಕೊನೆಗೆ ಶ್ರೀಮನ್ನಾರಾಯಣನ ಆಶ್ರಯವೇ ದೊರೆಯುವುದು. ॥ ೩೮ ॥

ಹತ್ತೊಂಭತ್ತನೆಯ ಅಧ್ಯಾಯವು ಮುಗಿಯಿತು. ॥ ೧೯ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ತೃತೀಯಸ್ಕಂಧೇ
ಹಿರಣ್ಯಾಕ್ಷವಧೋನಾಮೈಕೋನವಿಂಶೋಽಧ್ಯಾಯಃ ॥ ೧೯ ॥

ಇಪ್ಪತ್ತನೆಯ ಅಧ್ಯಾಯ

ಬ್ರಹ್ಮದೇವರು ಮಾಡಿದ ನಾನಾ ಪ್ರಕಾರದ ಸೃಷ್ಟಿಯ ವರ್ಣನೆ

ಶೌನಕ ಉವಾಚ

ಮಹೀಂ ಪ್ರತಿಷ್ಠಾಮಧ್ಯಸ್ಯ ಸೌತೇ ಸ್ವಾಯಂಭುವೋ ಮನುಃ ।
ಕಾನ್ಯನ್ವತಿಷ್ಠದ್ ದ್ವಾರಾಣಿ ಮಾರ್ಗಾಯಾವರಜನ್ಮನಾಮ್
॥ ೧ ॥

ಕ್ಷತ್ತಾ ಮಹಾಭಾಗವತಃ ಕೃಷ್ಣಸ್ಯೈಕಾಂತಿಕಃ ಸುಹೃತ್ ।
ಯಸ್ತತ್ಯಾಜಾಗ್ರಜಂ ಕೃಷ್ಣೇ ಸಾಪತ್ಯಮಘವಾನಿತಿ
॥ ೨ ॥

ದ್ವೈಪಾಯನಾದನವರೋ ಮಹಿತ್ವೇ ತಸ್ಯ ದೇಹಜಃ ।
ಸರ್ವಾತ್ಮನಾಶ್ರಿತಃ ಕೃಷ್ಣಂ ತತ್ಪರಾಂಶ್ಚಾಪ್ಯನುವ್ರತಃ
॥ ೩ ॥

ಕಿಮನ್ವಪೃಚ್ಛನ್ ಮೈತ್ರೇಯಂ ವಿರಜಾಸ್ತೀರ್ಥಸೇವಯಾ ।
ಉಪಗಮ್ಯ ಕುಶಾವರ್ತ ಆಸೀನಂ ತತ್ತ್ವವಿತ್ತಮಮ್
॥ ೪ ॥

ಶೌನಕರು ಕೇಳುತ್ತಾರೆ – ಸೂತಪುರಾಣಿಕರೇ! ಜೀವಿಗಳಿಗೆ ಆಧಾರಸ್ಥಾನವಾಗಿರುವ ಭೂಮಿಯನ್ನು ಪಡೆದುಕೊಂಡ ಬಳಿಕ ಸ್ವಾಯಂಭುವ ಮನುವು ಮುಂದೆ ಹುಟ್ಟಲಿರುವ ಸಂತತಿಯನ್ನು ಉಂಟುಮಾಡಲು ಯಾವ-ಯಾವ ಉಪಾಯಗಳನ್ನು ಮಾಡಿದನು? ॥ ೧ ॥ ವಿದುರನಾದರೋ ಪರಮ ಭಾಗವತೋತ್ತಮನು. ಅವನು ಭಗವಾನ್ ಶ್ರೀಕೃಷ್ಣನ ಏಕಾಂತಭಕ್ತನೂ, ಸ್ನೇಹಿತನೂ ಆಗಿದ್ದನು. ಆದ್ದರಿಂದಲೇ ತನ್ನ ಅಣ್ಣನಾದ ಧೃತರಾಷ್ಟ್ರನೂ, ಅವನ ಪುತ್ರರೂ ಶ್ರೀಕೃಷ್ಣನನ್ನು ತಿರಸ್ಕಾರಮಾಡಿದ ಅಪರಾಧಿಗಳೆಂದು ತಿಳಿದು ಅವರನ್ನು ಪರಿತ್ಯಾಗಮಾಡಿಬಿಟ್ಟನು. ॥ ೨ ॥ ಅವನು ದ್ವೈಪಾಯನ ಮಹರ್ಷಿಗಳ ಸುಪುತ್ರನು. ಮಹಿಮೆಯಲ್ಲಿ ಅವನು ತನ್ನ ತೀರ್ಥರೂಪರಿಂದ ಯಾವ ವಿಷಯದಲ್ಲಿಯೂ ಕಡಿಮೆಯಾಗಿರಲಿಲ್ಲ. ಎಲ್ಲ ಪ್ರಕಾರಗಳಿಂದಲೂ ಭಗವಾನ್ ಶ್ರೀಕೃಷ್ಣನ ಆಶ್ರಿತನೂ, ಕೃಷ್ಣಭಕ್ತರ ಅನುಗಾಮಿಯೂ ಆಗಿದ್ದನು. ॥ ೩ ॥ ತೀರ್ಥಯಾತ್ರೆಗಳನ್ನು ಮಾಡಿದ್ದರಿಂದ ಆತನ ಅಂತಃಕರಣವು ಇನ್ನೂ ಪರಿಶುದ್ಧವಾಗಿತ್ತು. ಆ ಮಹಾತ್ಮನು ಕುಶಾವರ್ತ (ಹರಿದ್ವಾರ) ಕ್ಷೇತ್ರದಲ್ಲಿ ಕುಳಿತಿದ್ದ ತತ್ತ್ವಜ್ಞಾನಿಶ್ರೇಷ್ಠರಾದ ಮೈತ್ರೇಯಮಹರ್ಷಿಗಳ ಬಳಿಗೆ ಹೋಗಿ ಏನೇನು ಕೇಳಿದನು? ॥ ೪ ॥ ಸೂತಪುರಾಣಿಕರೇ! ಶ್ರೀಹರಿಯು

ತಯೋಃ ಸಂವದತೋಃ ಸೂತ ಪ್ರವೃತ್ತಾ ಹ್ಯಮಲಾಃ ಕಥಾಃ ।
ಆಪೋ ಗಾಂಗಾ ಇವಾಘಘ್ನೀರ್ಹರೇಃ ಪಾದಾಂಬುಜಾಶ್ರಯಾಃ ॥ ೫ ॥

ತಾ ನಃ ಕೀರ್ತಯ ಭದ್ರಂ ತೇ ಕೀರ್ತನ್ಯೋದಾರಕರ್ಮಣಃ ।
ರಸಜ್ಞಃ ಕೋ ನು ತೃಪ್ಯೇತ ಹರಿಲೀಲಾಮೃತಂ ಪಿಬನ್ ॥ ೬ ॥

ಏವಮುಗ್ರಶ್ರವಾಃ ಪೃಷ್ಟ ಋಷಿಭಿರ್ನೈಮಿಷಾಯನೈಃ ।
ಭಗವತ್ಯರ್ಪಿತಾಧ್ಯಾತ್ಮಸ್ತಾನಾಹ ಶ್ರೂಯತಾಮಿತಿ ॥ ೭ ॥

ಸೂತ ಉವಾಚ

ಹರೇರ್ಧೃತಕ್ರೋಡತನೋಃ ಸ್ವಮಾಯಯಾ
ನಿಶಮ್ಯ ಗೋರುದ್ಧರಣಂ ರಸಾತಲಾತ್ ।
ಲೀಲಾಂ ಹಿರಣ್ಯಾಕ್ಷಮವಜ್ಞಯಾ ಹತಂ
ಸಂಜಾತಹರ್ಷೋ ಮುನಿಮಾಹ ಭಾರತಃ ॥ ೮ ॥

ವಿದುರ ಉವಾಚ

ಪ್ರಜಾಪತಿಪತಿಃ ಸೃಷ್ಟ್ವಾ ಪ್ರಜಾಸರ್ಗೇ ಪ್ರಜಾಪತೀನ್ ।
ಕಿಮಾರಭತ ಮೇ ಬ್ರಹ್ಮನ್ ಪ್ರಬ್ರೂಹ್ಯವ್ಯಕ್ತಮಾರ್ಗವಿತ್ ॥ ೯ ॥

ಯೇ ಮರೀಚ್ಯಾದಯೋ ವಿಪ್ರಾ ಯಸ್ತು ಸ್ವಾಯಂಭುವೋ ಮನುಃ ।
ತೇ ವೈ ಬ್ರಹ್ಮಣ ಆದೇಶಾತ್ಕಥಮೇತದಭಾವಯನ್ ॥ ೧೦ ॥

ಸದ್ವಿತೀಯಾಃ ಕಿಮಸೃಜನ್ಸ್ವತಂತ್ರಾ ಉತ ಕರ್ಮಸು ।
ಆಹೋಸ್ವಿತ್ಸಂಹತಾಃ ಸರ್ವ ಇದಂ ಸ್ಮ ಸಮಕಲ್ಪಯನ್ ॥ ೧೧ ॥

ಮೈತ್ರೇಯ ಉವಾಚ

ದೈವೇನ ದುರ್ವಿತರ್ಕ್ಯೇಣ ಪರೇಣಾನಿಮಿಷೇಣ ಚ ।
ಜಾತಕ್ಷೋಭಾದ್ಭಗವತೋ ಮಹಾನಾಸೀದ್ಗುಣತ್ರಯಾತ್ ॥ ೧೨ ॥

ರಜಃಪ್ರಧಾನಾನ್ಮಹತಸ್ತ್ರಿಲಿಂಗೋ ದೈವಚೋದಿತಾತ್ ।
ಜಾತಃ ಸಸರ್ಜ ಭೂತಾದಿರ್ವಿಯದಾದೀನಿ ಪಂಚಶಃ ॥ ೧೩ ॥

ಕಥೆಗಳು ಅವನ ಶ್ರೀಪಾದತೀರ್ಥವಾದ ಗಂಗಾಜಲದಂತೆಯೇ ಸಮಸ್ತ ಪಾಪಗಳನ್ನು ನಾಶಮಾಡುವವು. ಶ್ರೀಮೈತ್ರೇಯರಿಗೂ, ವಿದುರನಿಗೂ ನಡೆದ ಸಂಭಾಷಣೆಯಲ್ಲಿ ಶ್ರೀಹರಿಯ ಚರಣಗಳಿಗೆ ಸಂಬಂಧಪಟ್ಟ ಪರಮಪವಿತ್ರವಾದ ಯಾವ ಕಥೆಗಳು ನಡೆದುವೋ ಅವುಗಳನ್ನು ನಮಗೂ ಹೇಳಿರಿ. ॥ ೫ ॥ ನಿಮಗೆ ಮಂಗಳವಾಗಲಿ. ಸಂಕೀರ್ತನೆ ಮಾಡಲು ಯೋಗ್ಯವಾದ ಉದಾರ ಚಾರಿತ್ರ್ಯವುಳ್ಳ ಸ್ವಾಮಿಯ ಅವತಾರಲೀಲೆಗಳು ಅಮೃತರೂಪವೇ ಆಗಿವೆ. ಅವನ್ನು ನಮಗೂ ಕೀರ್ತಿಸುವವರಾಗಿರಿ. ಅವುಗಳನ್ನು ಎಷ್ಟೇ ಪಾನ ಮಾಡಿದರೂ ರಸಿಕರಾದವರಿಗೆ ತೃಪ್ತಿಯು ಹೇಗೆ ಉಂಟಾದೀತು? ॥ ೬ ॥

ನೈಮಿಷಾರಣ್ಯನಿವಾಸಿಗಳಾದ ಮುನಿಗಳು ಹೀಗೆ ಪ್ರಶ್ನೆ ಮಾಡಲು ಉಗ್ರಶ್ರವರೆಂಬ ಸೂತಪುರಾಣಿಕರು ಭಗವಂತನಲ್ಲಿ ಚಿತ್ತವನ್ನು ನೆಲೆಗೊಳಿಸಿ, ಅವರಿಗೆ ಕೇಳಿರಿ – ಎಂದು ಹೇಳತೊಡಗಿದರು. ॥ ೭ ॥

ಸೂತಪುರಾಣಿಕರು ಹೇಳುತ್ತಾರೆ – ಮುನಿಗಳೇ! ಮಾಯಾವರಾಹರೂಪಿಯಾದ ಶ್ರೀಹರಿಯು ಪೃಥ್ವಿಯನ್ನು ರಸಾತಳದಿಂದ ಮೇಲಕ್ಕೆತ್ತಿದ ಮತ್ತು ಹಿರಣ್ಯಾಕ್ಷನನ್ನು ಕಡೆಗಣಿಸಿ ಆಟವಾಡುವಂತೆ ಅನಾಯಾಸವಾಗಿ ಸಂಹರಿಸಿದ ಅವತಾರಲೀಲೆಯನ್ನು ಕೇಳಿ ಪರಮಾನಂದಭರಿತನಾದ ವಿದುರನು ಮೈತ್ರೇಯಮಹರ್ಷಿಗಳಲ್ಲಿ ಹೀಗೆ ವಿನಂತಿಸಿಕೊಂಡನು. ॥ ೮ ॥

ವಿದುರನು ಕೇಳಿದನು – ಬ್ರಾಹ್ಮಣಶ್ರೇಷ್ಠರೇ! ತಾವು ಅಪರೋಕ್ಷ ಜ್ಞಾನಿಗಳು. ಆದುದರಿಂದ ಪ್ರಜಾಪತಿಗಳಿಗೂ ಪತಿಯಾದ ಬ್ರಹ್ಮದೇವರು ಮರೀಚಿಯೇ ಮುಂತಾದ ಪ್ರಜಾಪತಿಗಳನ್ನು ಹುಟ್ಟಿಸಿದ ಬಳಿಕ ಸೃಷ್ಟಿಯನ್ನು ಮುಂದುವರಿಸಲು ಏನು ಮಾಡಿದರು? ॥ ೯ ॥ ಮರೀಚಿಯೇ ಮುಂತಾದ ಮುನೀಶ್ವರರೂ, ಸ್ವಾಯಂಭುವ ಮನುವೂ ಬ್ರಹ್ಮದೇವರ ಆಜ್ಞೆಯಂತೆ ಹೇಗೆ ಪ್ರಜೆಗಳನ್ನು ವೃದ್ಧಿಗೊಳಿಸಿದರು? ॥ ೧೦ ॥ ಅವರು ತಮ್ಮ ಪತ್ನಿಯರ ಸಹಯೋಗದಿಂದ ಈ ಜಗತ್ತನ್ನು ಸೃಷ್ಟಿಮಾಡಿದರೋ? ಅಥವಾ ತಮ್ಮ-ತಮ್ಮ ಕಾರ್ಯಗಳಲ್ಲಿ ಸ್ವತಂತ್ರರಾಗಿದ್ದುಕೊಂಡು ರಚಿಸಿದರೇ? ಅಥವಾ ಎಲ್ಲರೂ ಒಟ್ಟಿಗೆ ಇದನ್ನು ರಚಿಸಿದರೇ? ತಿಳಿಸುವವರಾಗಿರಿ. ॥ ೧೧ ॥

ಶ್ರೀಮೈತ್ರೇಯರು ಹೇಳಿದರು – ಎಲೈ ವಿದುರನೇ! ಕೇಳು. ಪ್ರಕೃತಿಯು ಹಿಂದೆ ತ್ರಿಗುಣಗಳ ಸಾಮ್ಯಾವಸ್ಥೆಯಿಂದ ನಿರ್ವಿಕಾರವಾಗಿತ್ತು. ಅನಂತರ ಚಿಂತಿಸಲು ಅಸಾಧ್ಯವಾಗಿರುವ ಜೀವರ ಪ್ರಾರಬ್ಧದಿಂದಲೂ, ಪ್ರಕೃತಿಯ ನಿಯಾಮಕ, ಪುರುಷ ಮತ್ತು ಕಾಲ ಈ ಮೂರು ಕಾರಣಗಳಿಂದ ಹಾಗೂ ಭಗವಂತನ ಸನ್ನಿಧಾನದಿಂದ ತ್ರಿಗುಣಮಯ ಪ್ರಕೃತಿಯಲ್ಲಿ ಕ್ಷೋಭೆ ಉಂಟಾಗಿ ಅದರಿಂದ ಮಹತ್ತತ್ತ್ವ ಉತ್ಪನ್ನವಾಯಿತು. ॥ ೧೨ ॥ ಭಗವತ್ಸಂಕಲ್ಪದಿಂದ ರಜಸ್ಸು ಪ್ರಧಾನವುಳ್ಳ ಮಹತ್ತತ್ತ್ವದಿಂದ ವೈಕಾರಿಕ (ಸಾತ್ತ್ವಿಕ), ರಾಜಸ ಮತ್ತು ತಾಮಸ ಮೂರು ರೀತಿಯ ಅಹಂಕಾರವು ಉಂಟಾಯಿತು. ಅದು ಆಕಾಶಾದಿ ಐದು-ಐದು ತತ್ತ್ವಗಳ ಅನೇಕ ವರ್ಗಗಳನ್ನು* ಪ್ರಕಟಿಸಿತು. ॥ ೧೩ ॥

* ಪಂಚತನ್ಮಾತ್ರೆಗಳು, ಪಂಚಮಹಾಭೂತಗಳು, ಐದು ಜ್ಞಾನೇಂದ್ರಿಯಗಳು, ಐದು ಕರ್ಮೇಂದ್ರಿಯಗಳು ಮತ್ತು ಅವುಗಳ ಐದೈದು ದೇವತೆಗಳು ಹೀಗೆ ಇವೇ ಆರು ವರ್ಗಗಳ ಸಂಕೇತ ಇಲ್ಲಿ ಮಾಡಲಾಗಿದೆ ಎಂದು ತಿಳಿಯಬೇಕು.

ತಾನಿ ಚೈಕೈಕಶಃ ಸ್ರಷ್ಟುಮಸಮರ್ಥಾನಿ ಭೌತಿಕಮ್ ।
ಸಂಹತ್ಯ ದೈವಯೋಗೇನ ಹೈಮಮಂಡಮವಾಸೃಜನ್ ॥ ೧೪ ॥

ಸೋಽಶಯಿಷ್ಟಾಬ್ಧಿಸಲಿಲೇ ಆಂಡಕೋಶೋ ನಿರಾತ್ಮಕಃ ।
ಸಾಗ್ರಂ ವೈ ವರ್ಷಸಾಹಸ್ರಮನ್ವವಾತ್ಸೀತ್ತಮೀಶ್ವರಃ ॥ ೧೫ ॥

ತಸ್ಯ ನಾಭೇರಭೂತ್ಪದ್ಮಂ ಸಹಸ್ರಾರ್ಕೋರುದೀಧಿತಿ ।
ಸರ್ವಜೀವನಿಕಾಯೌಕೋ ಯತ್ರ ಸ್ವಯಮಭೂತ್ಸ್ವರಾಟ್ ॥ ೧೬ ॥

ಸೋಽನುವಿಷ್ಟೋ ಭಗವತಾ ಯಃ ಶೇತೇ ಸಲಿಲಾಶಯೇ ।
ಲೋಕಸಂಸ್ಥಾಂ ಯಥಾಪೂರ್ವಂ ನಿರ್ಮಮೇ ಸಂಸ್ಥಯಾ ಸ್ವಯಾ ॥ ೧೭ ॥

ಸಸರ್ಜಚ್ಛಾಯಯಾ ವಿದ್ಯಾಂ ಪಂಚಪರ್ವಾಣಮಗ್ರತಃ ।
ತಾಮಿಸ್ರಮಂಧತಾಮಿಸ್ರಂ ತಮೋ ಮೋಹೋ ಮಹಾತಮಃ ॥ ೧೮ ॥

ವಿಸಸರ್ಜಾತ್ಮನಃ ಕಾಯಂ ನಾಭಿನಂದಂಸ್ತಮೋಮಯಮ್ ।
ಜಗೃಹುರ್ಯಕ್ಷರಕ್ಷಾಂಸಿ ರಾತ್ರಿಂ ಕ್ಷುತ್ತೃಟ್ಸಮುದ್ಭವಾಮ್ ॥ ೧೯ ॥

ಕ್ಷುತ್ತೃಡ್ಭ್ಯಾಮುಪಸೃಷ್ಟಾಸ್ತೇ ತಂ ಜಗ್ಧುಮಭಿದುದ್ರುವುಃ ।
ಮಾ ರಕ್ಷತೈನಂ ಜಕ್ಷಧ್ವಮಿತ್ಯೂಚುಃ ಕ್ಷುತ್ತೃಡರ್ದಿತಾಃ ॥ ೨೦ ॥

ದೇವಸ್ತಾನಾಹ ಸಂವಿಗ್ನೋ ಮಾ ಮಾಂ ಜಕ್ಷತ ರಕ್ಷತ ।
ಅಹೋ ಮೇ ಯಕ್ಷರಕ್ಷಾಂಸಿ ಪ್ರಜಾ ಯೂಯಂ ಬಭೂವಿಥ ॥ ೨೧ ॥

ದೇವತಾಃ ಪ್ರಭಯಾ ಯಾ ಯಾ ದೀವ್ಯನ್ ಪ್ರಮುಖತೋಽಸೃಜತ್ ।
ತೇ ಅಹಾರ್ಷುರ್ದೇವಯಂತೋ ವಿಸೃಷ್ಟಾಂ ತಾಂ ಪ್ರಭಾಮಹಃ ॥ ೨೨ ॥

ದೇವೋಽದೇವಾಂಜಘನತಃ ಸೃಜತಿ ಸ್ಮಾತಿಲೋಲುಪಾನ್ ।
ತ ಏನಂ ಲೋಲುಪತಯಾ ಮೈಥುನಾಯಾಭಿಪೇದಿರೇ ॥ ೨೩ ॥

ತತೋ ಹಸನ್ ಸ ಭಗವಾನಸುರೈರ್ನಿರಪತ್ರಪೈಃ ।
ಅನ್ವೀಯಮಾನಸ್ತರಸಾ ಕ್ರುದ್ಧೋ ಭೀತಃ ಪರಾಪತತ್ ॥ ೨೪ ॥

ಅವೆಲ್ಲವೂ ಬೇರೆ-ಬೇರೆಯಾಗಿದ್ದಾಗ ಭೂತಗಳ ಕಾರ್ಯರೂಪೀ ಬ್ರಹ್ಮಾಂಡವನ್ನು ರಚಿಸಲು ಅಸಮರ್ಥವಾಗಿದ್ದವು. ಅದಕ್ಕಾಗಿ ಅವು ಭಗವಂತನ ಶಕ್ತಿಯಿಂದ ಪರಸ್ಪರ ಕಲೆತು ಒಂದು ಸುವರ್ಣಮಯ ಅಂಡವು ನಿರ್ಮಿತವಾಯಿತು. ॥ ೧೪ ॥ ಆ ಅಂಡವು ಚೈತನ್ಯಶೂನ್ಯವಾದ ಸ್ಥಿತಿಯಲ್ಲಿ ಒಂದು ಸಾವಿರ ವರ್ಷಗಳಿಗಿಂತಲೂ ಹೆಚ್ಚುಕಾಲ ಕಾರಣಜಲದ ಮಧ್ಯದಲ್ಲಿ ಬಿದ್ದುಕೊಂಡಿತ್ತು. ಮತ್ತೆ ಭಗವಂತನು ಆ ಅಂಡಕೋಶದಲ್ಲಿ ಪ್ರವೇಶಿಸಿದನು. ॥ ೧೫ ॥ ಅದರಲ್ಲಿ ಅಧಿಷ್ಠಿತನಾದ ಬಳಿಕ ಅವನ ನಾಭಿಯಿಂದ ಸಾವಿರಾರು ಸೂರ್ಯರಿಗೆ ಸಮಾನವಾಗಿ ಬೆಳಗುತ್ತಿರುವ ಒಂದು ಕಮಲವು ಪ್ರಕಟಗೊಂಡಿತು. ಅದು ಎಲ್ಲ ಜೀವಸಮುದಾಯಗಳಿಗೆ ಆಶ್ರಯವಾಗಿತ್ತು. ಅದರಿಂದಲೇ ಸ್ವಯಂ ಬ್ರಹ್ಮದೇವರೂ ಆವಿರ್ಭವಿಸಿದರು. ॥ ೧೬ ॥

ಅನಂತರ ಸಾಗರಜಲಶಾಯಿಯಾದ ಶ್ರೀಮನ್ನಾರಾಯಣನು ತನ್ನ ಸಂಕಲ್ಪದಿಂದ ಆ ಬ್ರಹ್ಮದೇವರಲ್ಲಿ ಪ್ರವೇಶಿಸಿದನು. ಆಗ ಬ್ರಹ್ಮದೇವರು ಹಿಂದಿನ ಕಲ್ಪಗಳಲ್ಲಿ ತಾನೇ ನಿಶ್ಚಯಿಸಿದ್ದ ನಾಮ-ರೂಪಮಯ ವ್ಯವಸ್ಥೆಗೆ ಅನುಸಾರವಾಗಿ ಲೋಕಗಳನ್ನು ನಿರ್ಮಿಸತೊಡಗಿದರು. ॥ ೧೭ ॥ ಮೊಟ್ಟಮೊದಲಿಗೆ ಅವರು ತನ್ನ ಛಾಯೆಯಿಂದ ತಾಮಿಸ್ರ, ಅಂಧತಾಮಿಸ್ರ, ತಮ, ಮೋಹ ಮತ್ತು ಮಹಾಮೋಹಗಳೆಂಬ ಐದು ಬಗೆಯ ಅವಿದ್ಯೆಗಳನ್ನು ಸೃಷ್ಟಿಮಾಡಿದರು. ॥ ೧೮ ॥ ಬ್ರಹ್ಮದೇವರಿಗೆ ಆ ತಮೋಮಯವಾದ ಶರೀರವು ಮನಸ್ಸಿಗೆ ಒಪ್ಪದಿರಲು ಅವರು ಅದನ್ನು ತೊರೆದುಬಿಟ್ಟರು. ಆ ಶರೀರದಿಂದ ಉಂಟಾದ ಯಕ್ಷ-ರಾಕ್ಷಸರು ಹಸಿವು – ಬಾಯಾರಿಕೆಗಳಿಗೆ ಕಾರಣವಾದ ಆ ರಾತ್ರಿರೂಪವಾದ ದೇಹವನ್ನು ಪರಿಗ್ರಹಿಸಿದರು. ॥ ೧೯ ॥ ಆಗ ಹಸಿವು-ಬಾಯಾರಿಕೆಗಳಿಂದ ಪೀಡಿತರಾದ ಅವರು ಬ್ರಹ್ಮದೇವರನ್ನೇ ತಿಂದುಹಾಕಲು ಓಡಿಬಂದರು. 'ಈತನನ್ನು ತಿಂದುಹಾಕಿ, ಇವನನ್ನು ರಕ್ಷಿಸಬೇಡಿ' ಎಂದು ಕೂಗಿಕೊಂಡರು. ಏಕೆಂದರೆ, ಅವರಲ್ಲಿ ಹಸಿವು-ಬಾಯಾರಿಕೆಗಳು ಅಷ್ಟು ಉತ್ಕಟವಾಗಿದ್ದವು. ॥ ೨೦ ॥ ಆಗ ಬ್ರಹ್ಮದೇವರು ಗಾಬರಿಗೊಂಡು ಎಲೈ! ನೀವು ನನ್ನ ಸಂತಾನಗಳು. ಆದ್ದರಿಂದ ನನ್ನನ್ನು ತಿನ್ನಬೇಡಿರಿ. ನನ್ನನ್ನು ಕಾಪಾಡಿರಿ. (ಅವರಲ್ಲಿ 'ತಿಂದುಬಿಡಿ' ಎಂದು ಹೇಳಿದವರು ಯಕ್ಷರಾದರು. 'ಇವನನ್ನು ರಕ್ಷಿಸಬೇಡಿ' ಎಂದು ಹೇಳಿದವರು ರಾಕ್ಷಸರಾದರು). ॥ ೨೧ ॥

ಮತ್ತೆ ಬ್ರಹ್ಮದೇವರು ಸಾತ್ತ್ವಿಕ ಪ್ರಭೆಯಿಂದ ಬೆಳಗುತ್ತಾ ಮುಖ್ಯ-ಮುಖ್ಯರಾದ ದೇವತೆಗಳನ್ನು ಸೃಷ್ಟಿಸಿದರು. ಅವರು ಆಟವಾಡುತ್ತಾ ಇದ್ದು ಬ್ರಹ್ಮದೇವರು ತ್ಯಾಗಮಾಡಿದ ಹಗಲುರೂಪವಾದ ಪ್ರಕಾಶಮಯ ಶರೀರವನ್ನು ಪರಿಗ್ರಹಿಸಿದರು. ॥ ೨೨ ॥ ಅನಂತರ ಬ್ರಹ್ಮದೇವರು ತಮ್ಮ ಜಘನ ಪ್ರದೇಶದಿಂದ ಕಾಮಾಸಕ್ತರಾದ ಅಸುರರನ್ನು ಸೃಷ್ಟಿಸಿದನು. ಅವರು ಅತ್ಯಂತ ಕಾಮಲೋಲುಪರಾಗಿದ್ದರಿಂದ ಹುಟ್ಟಿದೊಡನೆಯೇ ಮೈಥುನಕ್ಕಾಗಿ ಬ್ರಹ್ಮದೇವರ ಕಡೆಗೆ ಓಡಿ ಬಂದರು. ॥ ೨೩ ॥ ಅದನ್ನು ಕಂಡು ಬ್ರಹ್ಮದೇವರಿಗೆ ಮೊದಲಿಗೆ ನಗುಬಂತು. ಆದರೆ ಅವರು ನಾಚಿಕೆಗೆಟ್ಟು ತನ್ನನ್ನು ಹಿಂಬಾಲಿಸುತ್ತಿರುವುದನ್ನು ಕಂಡು, ಕೋಪಗೊಂಡು ಭಯದಿಂದ ಪಲಾಯನಮಾಡಿದರು. ॥ ೨೪ ॥

ಸ ಉಪವ್ರಜ್ಯ ವರದಂ ಪ್ರಪನ್ನಾರ್ತಿಹರಂ ಹರಿಮ್ ।
ಅನುಗ್ರಹಾಯ ಭಕ್ತಾನಾಮನುರೂಪಾತ್ಮದರ್ಶನಮ್ ॥ ೨೫ ॥

ಪಾಹಿ ಮಾಂ ಪರಮಾತ್ಮಂಸ್ತೇ ಪ್ರೇಷಣೇನಾಸೃಜಂ ಪ್ರಜಾಃ ।
ತಾ ಇಮಾ ಯಭಿತುಂ ಪಾಪಾ ಉಪಾಕ್ರಾಮಂತಿ ಮಾಂ ಪ್ರಭೋ ॥ ೨೬ ॥

ತ್ವಮೇಕಃ ಕಿಲ ಲೋಕಾನಾಂ ಕ್ಲಿಷ್ಟಾನಾಂ ಕ್ಲೇಶನಾಶನಃ ।
ತ್ವಮೇಕಃ ಕ್ಲೇಶದಸ್ತೇಷಾಮನಾಸನ್ನಪದಾಂ ತವ ॥ ೨೭ ॥

ಸೋಽವಧಾರ್ಯಾಸ್ಯ ಕಾರ್ಪಣ್ಯಂ ವಿವಿಕ್ತಾಧ್ಯಾತ್ಮದರ್ಶನಃ ।
ವಿಮುಂಚಾತ್ಮತನುಂ ಘೋರಾಮಿತ್ಯುಕ್ತೋ ವಿಮುಮೋಚ ಹ ॥ ೨೮ ॥

ತಾಂ ಕ್ವಣಚ್ಚರಣಾಂಭೋಜಾಂ ಮದವಿಹ್ವಲಲೋಚನಾಮ್ ।
ಕಾಂಚೀಕಲಾಪವಿಲಸದ್ದುಕೂಲಚ್ಛನ್ನರೋಧಸಮ್ ॥ ೨೯ ॥

ಅನ್ಯೋನ್ಯಶ್ಲೇಷಯೋತ್ತುಂಗನಿರಂತರಪಯೋಧರಾಮ್ ।
ಸುನಾಸಾಂ ಸುದ್ವಿಜಾಂ ಸ್ನಿಗ್ಧಹಾಸಲೀಲಾವಲೋಕನಾಮ್ ॥ ೩೦ ॥

ಗೂಹಂತೀಂ ವ್ರೀಡಯಾಽಽತ್ಮಾನಂ ನೀಲಾಲಕವರೂಥಿನೀಮ್ ।
ಉಪಲಭ್ಯಾಸುರಾ ಧರ್ಮ ಸರ್ವೇ ಸಮ್ಮುಮುಹುಃ ಸ್ತ್ರಿಯಮ್ ॥ ೩೧ ॥

ಅಹೋ ರೂಪಮಹೋ ಧೈರ್ಯಮಹೋ ಅಸ್ಯಾ ನವಂ ವಯಃ ।
ಮಧ್ಯೇ ಕಾಮಯಮಾನಾನಾಮಕಾಮೇವ ವಿಸರ್ಪತಿ ॥ ೩೨ ॥

ವಿತರ್ಕಯಂತೋ ಬಹುಧಾ ತಾಂ ಸಂಧ್ಯಾಂ ಪ್ರಮದಾಕೃತಿಮ್ ।
ಅಭಿಸಂಭಾವ್ಯ ವಿಶ್ರಂಭಾತ್ಪರ್ಯಪೃಚ್ಛನ್ ಕುಮೇಧಸಃ ॥ ೩೩ ॥

ಕಾಸಿ ಕಸ್ಯಾಸಿ ರಂಭೋರು ಕೋ ವಾರ್ಥಸ್ತೇಽತ್ರ ಭಾಮಿನಿ ।
ರೂಪದ್ರವಿಣಪಣ್ಯೇನ ದುರ್ಭಗಾನ್ನೋ ವಿಬಾಧಸೇ ॥ ೩೪ ॥

ಬಳಿಕ ಅವರು ಭಕ್ತರನ್ನು ಅನುಗ್ರಹಿಸಲು ಅವರ ಭಾವನೆಗನುಸಾರವಾಗಿ ರೂಪಗಳನ್ನು ಧರಿಸಿ ದರ್ಶನ ನೀಡುವವನೂ, ಶರಣಾಗತವತ್ಸಲನೂ, ವರದಾಯಕನೂ ಆದ ಶ್ರೀಹರಿಯ ಬಳಿಗೆ ಹೋಗಿ ಇಂತೆಂದರು – ॥ ೨೫ ॥ ಪ್ರಭೋ! ಪರಮಾತ್ಮಾ! ನನ್ನನ್ನು ರಕ್ಷಿಸು. ನಾನು ನಿನ್ನ ಅಪ್ಪಣೆಯಂತೆ ಪ್ರಜೆಗಳನ್ನು ಸೃಷ್ಟಿಸಿದೆ. ಆದರೆ ಈ ದುಷ್ಟ ಸಂತಾನವು ಪಾಪದಲ್ಲಿ ತೊಡಗಿ ನನ್ನನ್ನೇ ಸತಾಯಿಸುತ್ತಿದ್ದಾರಲ್ಲ! ॥ ೨೬ ॥ ಸ್ವಾಮಿ! ದುಃಖದಿಂದ ತಲ್ಲಣಿಸುವ ಜೀವರ ದುಃಖವನ್ನು ಹೋಗಲಾಡಿಸುವವನು ನೀನೊಬ್ಬನೇ. ನಿನ್ನ ಪಾದಗಳನ್ನು ಆಶ್ರಯಿಸದೆ ಇರುವ ಜೀವಿಗಳಿಗೆ ದುಃಖವನ್ನು ಕೊಡುವವನೂ ನೀನೇ ಆಗಿರುವೆ. ॥ ೨೭ ॥

ಭಗವಂತನು ಎಲ್ಲರ ಹೃದಯದ ಭಾವನೆಗಳನ್ನು ಪ್ರತ್ಯಕ್ಷದಂತೆ ನೋಡುತ್ತಿರುವನು. ಅವನು ಬ್ರಹ್ಮದೇವರ ಆ ದೈನ್ಯಪರಿಸ್ಥಿತಿಯನ್ನು ಕಂಡು ಕನಿಕರದಿಂದ – 'ವತ್ಸ! ನೀನು ಈ ನಿನ್ನ ಕಾಮಕಲುಷಿತವಾದ ಘೋರವಾದ ದೇಹವನ್ನು ತೊರೆದುಬಿಡು' ಎಂದು ಆದೇಶ ನೀಡಲು ಅವರು ಆ ದೇಹವನ್ನು ತೊರೆದುಬಿಟ್ಟರು. ॥ ೨೮ ॥ (ಬ್ರಹ್ಮದೇವರು ತೊರೆದ ಆ ಶರೀರವು ಒಂದು ಸುಂದರವಾದ ಸ್ತ್ರೀರೂಪ ತಾಳಿತು – ಅದೇ ಸಾಯಂಸಂಧ್ಯೆಯು.) ಅವಳ ಕಾಲುಗಳಲ್ಲಿ ಕಾಲ್ಗಡಗಳು ಝಣ-ಝಣ ಶಬ್ದಮಾಡುತ್ತಿದ್ದವು. ಕಣ್ಣುಗಳು ಮದದಿಂದ ಮತ್ತೇರಿದ್ದವು. ನಡುವು ಒಡ್ಯಾಣದಿಂದ ಶೋಭಿಸುತ್ತಿರುವ ಸುಂದರವಾದ ಸೀರೆಯಿಂದ ಅಲಂಕೃತವಾಗಿತ್ತು. ॥ ೨೯ ॥ ಉನ್ನತವಾದ ಸ್ತನಗಳು ನಡುವಿನಲ್ಲಿ ಅಂತರವೇ ಇಲ್ಲದಷ್ಟು ಒಂದಕ್ಕೊಂದು ಸೇರಿಕೊಂಡಿದ್ದವು. ಆಕೆಯ ಮೂಗು ಮತ್ತು ದಂತಪಂಕ್ತಿಗಳು ಅತ್ಯಂತ ಆಕರ್ಷಣೀಯವಾಗಿದ್ದವು. ಆ ಸುಂದರಿಯು ಮಧುರವಾದ ಮಂದಹಾಸದಿಂದ, ಹಾವ-ಭಾವ ಪೂರ್ಣವಾದ ದೃಷ್ಟಿಯಿಂದ ಅಸುರರನ್ನು ವೀಕ್ಷಿಸುತ್ತಿದ್ದಳು. ॥ ೩೦ ॥ ತನ್ನ ಕಪ್ಪಾದ ಮುಂಗುರುಳುಗಳಿಂದ ಶೋಭಿಸುತ್ತಿರುವ ಆ ಸುಕುಮಾರಿಯು ಲಜ್ಜೆಯಿಂದ ತನ್ನ ಸೀರೆಯಲ್ಲೇ ಮುಚ್ಚಿಹೋಗಿರುವಳೋ ಎಂದು ಕಾಣುತ್ತಿದ್ದಳು. ವಿದುರನೇ! ಆಕೆಯನ್ನು ಕಂಡು ಅಸುರ ರೆಲ್ಲರೂ ಆಕೆಯಲ್ಲಿ ಮೋಹಪರವಶರಾದರು. ॥ ೩೧ ॥ ಆಹಾ! ಈಕೆಯದು ಎಂತಹ ಅದ್ಭುತವಾದ ರೂಪ! ಎಂತಹ ಅಲೌಕಿಕ ಧೈರ್ಯ! ಎಂತಹ ಹೊಸ ಯೌವನ! ಕಾಮಪೀಡಿತರಾದ ನಮ್ಮ ನಡುವೆ ಈ ವೈಯ್ಯಾರಿಯು ನಿಷ್ಕಾಮದಿಂದ ಓಡಾಡುತ್ತಿರುವಳಲ್ಲ! ॥ ೩೨ ॥

ಹೀಗೆ ಆ ದುಷ್ಟಬುದ್ಧಿಯ ದೈತ್ಯರು ಸ್ತ್ರೀರೂಪಿಣಿಯಾದ ಸಂಧ್ಯೆಯ ವಿಷಯದಲ್ಲಿ ಬಗೆ-ಬಗೆಯ ತರ್ಕ-ವಿತರ್ಕಗಳನ್ನು ಮಾಡುತ್ತಾ, ಆಕೆಯನ್ನು ಬಹಳವಾಗಿ ಆದರಿಸುತ್ತಾ ಪ್ರೇಮಪೂರ್ವಕವಾಗಿ ಕೇಳಿದರು – ॥ ೩೩ ॥ "ಎಲೆಗೆ ಸುಂದರೀ! ನೀನು ಯಾರು? ಯಾರ ಮಗಳಾಗಿರುವೆ? ಭಾಮಿನಿ! ನೀನು ಇಲ್ಲಿಗೆ ಬಂದಿರುವ ಪ್ರಯೋಜನವೇನು? ನಿನ್ನ ಅನುಪಮವಾದ ಸೌಂದರ್ಯವೆಂಬ ಅಮೂಲ್ಯವಾದ ಮಾರಾಟದ ವಸ್ತುವನ್ನು ತೋರಿಸಿ, ದುರದೃಷ್ಟಶಾಲಿಗಳಾದ ನಮ್ಮನ್ನು ಏಕೆ ಪೀಡಿಸುತ್ತಿರುವೆ. ॥ ೩೪ ॥

ಯಾ ವಾ ಕಾಚಿತ್ತ್ವಮಬಲೇ ದಿಷ್ಟ್ಯಾ ಸಂದರ್ಶನಂ ತವ ।
ಉತ್ಸುನೋಷೀಕ್ಷಮಾಣಾನಾಂ ಕಂದುಕಕ್ರೀಡಯಾ ಮನಃ || ೩೫ ||

ನೈಕತ್ರ ತೇ ಜಯತಿ ಶಾಲಿನಿ ಪಾದಪದ್ಮಂ
ಘ್ನಂತ್ಯಾ ಮುಹುಃ ಕರತಲೇನ ಪತತ್ಪತಂಗಮ್ ।
ಮಧ್ಯಂ ವಿಷೀದತಿ ಬೃಹತ್ಸ್ತನಭಾರಭೀತಂ
ಶಾಂತೇವ ದೃಷ್ಟಿರಮಲಾ ಸುಶಿಖಾಸಮೂಹಃ || ೩೬ ||

ಇತಿ ಸಾಯಂತನೀಂ ಸಂಧ್ಯಾ-
ಮಸುರಾಃ ಪ್ರಮದಾಯತೀಮ್ ।
ಪ್ರಲೋಭಯಂತೀಂ ಜಗೃಹುರ್ಮತ್ವಾ
ಮೂಢಧಿಯಃ ಸ್ತ್ರಿಯಮ್ || ೩೭ ||

ಪ್ರಹಸ್ಯ ಭಾವಗಂಭೀರಂ ಜಿಘ್ರಂತ್ಯಾತ್ಮಾನಮಾತ್ಮನಾ ।
ಕಾಂತ್ಯಾ ಸಸರ್ಜ ಭಗವಾನ್ಗಂಧರ್ವಾಪ್ಸರಸಾಂ ಗಣಾನ್ || ೩೮ ||

ವಿಸಸರ್ಜ ತನುಂ ತಾಂ ವೈ
ಜ್ಯೋತ್ಸ್ನಾಂ ಕಾಂತಿಮತೀಂ ಪ್ರಿಯಾಮ್ ।
ತ ಏವ ಚಾದದುಃ ಪ್ರೀತ್ಯಾ
ವಿಶ್ವಾವಸುಪುರೋಗಮಾಃ || ೩೯ ||

ಸೃಷ್ಟ್ವಾ ಭೂತಪಿಶಾಚಾಂಶ್ಚ ಭಗವಾನಾತ್ಮತಂದ್ರಿಣಾ ।
ದಿಗ್ವಾಸಸೋ ಮುಕ್ತಕೇಶಾನ್ವೀಕ್ಷ್ಯ ಚಾಮೀಲಯದ್ದೃಶೌ || ೪೦ ||

ಜಗೃಹುಸ್ತದ್ವಿಸೃಷ್ಟಾಂ ತಾಂ ಜೃಂಭಣಾಖ್ಯಾಂ ತನುಂ ಪ್ರಭೋಃ ।
ನಿದ್ರಾಮಿಂದ್ರಿಯವಿಕ್ಲೇದೋ ಯಯಾ ಭೂತೇಷು ದೃಶ್ಯತೇ ।
ಯೇನೋಚ್ಛಿಷ್ಟಾಂಧರ್ಷಯಂತಿ ತಮುನ್ಮಾದಂ ಪ್ರಚಕ್ಷತೇ || ೪೧ ||

ಊರ್ಜಸ್ವಂತಂ ಮನ್ಯಮಾನ ಆತ್ಮಾನಂ ಭಗವಾನಜಃ ।
ಸಾಧ್ಯಾನ್ ಗಣಾನ್ ಪಿತೃಗಣಾನ್ ಪರೋಕ್ಷೇಣಾಸೃಜತ್ಪ್ರಭುಃ || ೪೨ ||

ತ ಆತ್ಮಸರ್ಗಂ ತಂ ಕಾಯಂ ಪಿತರಃ ಪ್ರತಿಪೇದಿರೇ ।
ಸಾಧ್ಯೇಭ್ಯಶ್ಚ ಪಿತೃಭ್ಯಶ್ಚ ಕವಯೋ ಯದ್ವಿತನ್ವತೇ || ೪೩ ||

ಸಿದ್ಧಾನ್ವಿದ್ಯಾಧರಾಂಶ್ಚೈವ ತಿರೋಧಾನೇನ ಸೋಽಸೃಜತ್ ।
ತೇಭ್ಯೋಽದದಾತ್ತಮಾತ್ಮಾನಮಂತರ್ಧಾನಾಖ್ಯಮದ್ಭುತಮ್ || ೪೪ ||

ಸ ಕಿನ್ನರಾನ್ ಕಿಂಪುರುಷಾನ್ಪ್ರತ್ಯಾತ್ಮ್ಯೇನಾಸೃಜತ್ಪ್ರಭುಃ ।
ಮಾನಯನ್ನಾತ್ಮನಾಽಽತ್ಮಾನಮಾತ್ಮಾಭಾಸಂ ವಿಲೋಕಯನ್ || ೪೫ ||

ಅಬಲೆಯೇ! ನೀನು ಯಾರೇ ಆಗಿರು. ನಿನ್ನ ದರ್ಶನವಾಗಿರುವುದೇ ನಮ್ಮ ದೊಡ್ಡ ಸೌಭಾಗ್ಯವು. ನೀನು ಚೆಂಡನ್ನು ಆಡಿಸುತ್ತಾ ದರ್ಶಕರಾಗಿರುವ ನಮ್ಮ ಮನಸ್ಸನ್ನು ಕಲಕುತ್ತಿದ್ದೀಯೇ. || ೩೫ || ಸುಂದರಿಯೇ! ಪುಟಿಯುತ್ತಿರುವ ಚೆಂಡನ್ನು ಅಂಗೈಯಿಂದ ನೀನು ಹೊಡೆಯುತ್ತಿರುವಾಗ ನಿನ್ನ ಪಾದಕಮಲಗಳು ಒಂದೆಡೆ ನಿಲ್ಲದೆ ಚಲಿಸುತ್ತಾ ಇರುತ್ತವೆ. ನಿನ್ನ ಕಟಿಪ್ರದೇಶವು ಸ್ಥೂಲವಾದ ಸ್ತನಗಳ ಭಾರದಿಂದ ಆಯಾಸಗೊಂಡಂತಿದೆ. ನಿನ್ನ ನಿರ್ಮಲವಾದ ದೃಷ್ಟಿಯೂ ಬಳಲಿದಂತಿದೆ. ಆಹಾ! ನಿನ್ನ ಕೇಶಪಾಶವು ಎಷ್ಟು ಸುಂದರವಾಗಿದೆ!" || ೩೬ || ಈ ರೀತಿಯಲ್ಲಿ ಸ್ತ್ರೀರೂಪದಿಂದ ಪ್ರಕಟಗೊಂಡ ಸಾಯಂಸಂಧ್ಯೆಯು ಅವರನ್ನು ಅತ್ಯಂತ ಕಾಮಾಸಕ್ತಗೊಳಿಸಿತು. ಆ ಮೂರ್ಖರು ಆಕೆಯನ್ನು ರಮಣೀರತ್ನವೆಂದು ಭಾವಿಸಿ ಪರಿಗ್ರಹಿಸಿದರು. || ೩೭ ||

ಅನಂತರ ಬ್ರಹ್ಮದೇವರು ಗಂಭೀರಭಾವದಿಂದ ನಗುತ್ತಾ ತನ್ನ ಸೌಂದರ್ಯವನ್ನು ತಾನೇ ಸವಿಯುತ್ತಿರುವಂತೆ ಕಂಗೊಳಿಸುತ್ತಿದ್ದ ತನ್ನ ಕಾಂತಿಮಯವಾದ ಮೂರ್ತಿಯಿಂದ ಗಂಧರ್ವರನ್ನೂ ಮತ್ತು ಅಪ್ಸರೆಯರನ್ನು ಸೃಷ್ಟಿಸಿದರು. || ೩೮ || ಆಗ ಅವರು ಚಂದ್ರಿಕಾರೂಪವಾದ ತಮ್ಮ ಕಾಂತಿಮಯ ಪ್ರಿಯಶರೀರವನ್ನು ತ್ಯಜಿಸಿದರು. ಆ ದೇಹವನ್ನು ವಿಶ್ವಾವಸುವೇ ಮುಂತಾದ ಗಂಧರ್ವರು ಪ್ರೀತಿಯಿಂದ ಪರಿಗ್ರಹಿಸಿದರು. (ಆ ದೇಹವನ್ನು ಪ್ರಾತಸಂಧ್ಯೆಯೆಂದು ಕರೆಯುತ್ತಾರೆ) || ೩೯ ||

ಇದಾದ ಬಳಿಕ ಬ್ರಹ್ಮದೇವರು ತನ್ನ ಆಲಸ್ಯ(ತಂದ್ರಾ)ದಿಂದ ಭೂತ-ಪಿಶಾಚಗಳನ್ನು ಸೃಷ್ಟಿಸಿದರು. ಅವು ದಿಗಂಬರವಾಗಿ ತಲೆಗೆದರಿಕೊಂಡಿರುವುದನ್ನು ಕಂಡು ಅವರು ಕಣ್ಣುಗಳನ್ನು ಮುಚ್ಚಿಕೊಂಡರು. || ೪೦ || ಬ್ರಹ್ಮದೇವರು ತ್ಯಜಿಸಿದ ಆ ಆಕಳಿಕೆಯ ರೂಪವಾದ ದೇಹವನ್ನು ಭೂತ-ಪಿಶಾಚಗಳು ಪರಿಗ್ರಹಿಸಿದರು. ಅದನ್ನೇ ನಿದ್ದೆಯೆಂದೂ ಕರೆಯುತ್ತಾರೆ. ಅದು ಜೀವಿಗಳ ಇಂದ್ರಿಯಗಳಲ್ಲಿ ಶೈಥಿಲ್ಯವನ್ನುಂಟುಮಾಡುತ್ತದೆ. ಮನುಷ್ಯನು ಎಂಜಲು ಬಾಯಿಯಿಂದ ಮಲಗಿದರೆ ಆತನನ್ನೂ ಭೂತ-ಪಿಶಾಚಾದಿಗಳು ಆಕ್ರಮಿಸುತ್ತವೆ. ಇದನ್ನೇ ಉನ್ಮಾದವೆಂದೂ ಹೇಳುತ್ತಾರೆ. || ೪೧ ||

ಮತ್ತೆ ಬ್ರಹ್ಮದೇವರು – 'ನಾನು ತೇಜೋಮಯನಾಗಿದ್ದೇನೆ' ಎಂದು ಭಾವಿಸಿಕೊಂಡು ತಮ್ಮ ಅದೃಶ್ಯರೂಪದಿಂದ ಸಾಧ್ಯಗಣಗಳನ್ನು ಮತ್ತು ಪಿತೃಗಣಗಳನ್ನೂ ಸೃಷ್ಟಿಸಿದರು. || ೪೨|| ತಮ್ಮ ಸ್ಥಾನವಾದ ಆ ಅದೃಶ್ಯಶರೀರವನ್ನು ಪಿತೃದೇವತೆಗಳು ಪರಿಗ್ರಹಿಸಿದರು. ಅದನ್ನೇ ಗುರಿಯಾಗಿಟ್ಟುಕೊಂಡು ಪಂಡಿತರು ಶ್ರಾದ್ಧಾದಿಗಳ ಮೂಲಕ ಪಿತೃದೇವತೆಗಳಿಗೂ ಮತ್ತು ಸಾಧ್ಯಗಣಗಳಿಗೂ ಕ್ರಮವಾಗಿ ಕವ್ಯ(ಪಿಂಡ)ಗಳನ್ನು, ಹವ್ಯಗಳನ್ನೂ ಅರ್ಪಿಸುತ್ತಾರೆ. || ೪೩ ||

ಬ್ರಹ್ಮದೇವರು ತಮ್ಮ ತಿರೋಧಾನಶಕ್ತಿಯಿಂದ ಸಿದ್ಧರನ್ನೂ, ವಿದ್ಯಾಧರರನ್ನೂ ಸೃಷ್ಟಿಮಾಡಿ ಅವರಿಗೆ ತಮ್ಮ ಅಂತರ್ಧಾನವೆಂಬ ಅದ್ಭುತವಾದ ಶರೀರವನ್ನು ಅನುಗ್ರಹಿಸಿದರು. || ೪೪ || ಒಮ್ಮೆ ಬ್ರಹ್ಮದೇವರು ತಮ್ಮ ಪ್ರತಿಬಿಂಬವನ್ನು ಕಂಡು ಸಂತೋಷಗೊಂಡರು. ತಮ್ಮನ್ನು ಅತಿಸುಂದರರೆಂದು ಭಾವಿಸಿಕೊಂಡು ಆ ಪ್ರತಿಬಿಂಬದಿಂದ ಕಿನ್ನರರನ್ನೂ ಮತ್ತು ಕಿಂಪುರುಷರನ್ನೂ ಸೃಷ್ಟಿಮಾಡಿದರು. || ೪೫ ||

ತೇ ತು ತಜ್ಜಗೃಹೂ ರೂಪಂ ತ್ಯಕ್ತಂ ಯತ್ಪರಮೇಷ್ಠಿನಾ ।
ಮಿಥುನೀಭೂಯ ಗಾಯಂತಸ್ತಮೇವೋಷಸಿ ಕರ್ಮಭಿಃ ॥ ೪೬ ॥

ದೇಹೇನ ವೈ ಭೋಗವತಾ ಶಯಾನೋ ಬಹುಚಿಂತಯಾ ।
ಸರ್ಗೇಽನುಪಚಿತೇ ಕ್ರೋಧಾದುತ್ಸಸರ್ಜ ಹ ತದ್ವಪುಃ ॥ ೪೭ ॥

ಯೇಽಹೀಯಂತಾಮುತಃ ಕೇಶಾ ಅಹಯಸ್ತೇಽಂಗ ಜಜ್ಞಿರೇ ।
ಸರ್ಪಾಃ ಪ್ರಸರ್ಪತಃ ಕ್ರೂರಾ ನಾಗಾ ಭೋಗೋರುಕಂಧರಾಃ ॥ ೪೮ ॥

ಸ ಆತ್ಮಾನಂ ಮನ್ಯಮಾನಃ ಕೃತಕೃತ್ಯಮಿವಾತ್ಮಭೂಃ ।
ತದಾ ಮನೂನ್ಸಸರ್ಜಾಂತೇ ಮನಸಾ ಲೋಕಭಾವನಾನ್ ॥ ೪೯ ॥

ತೇಭ್ಯಃ ಸೋಽತ್ಯಸೃಜತ್ಸ್ವೀಯಂ ಪುರಂ ಪುರುಷಮಾತ್ಮವಾನ್ ।
ತಾನ್‌ದೃಷ್ಟ್ವಾ ಯೇ ಪುರಾ ಸೃಷ್ಟಾಃ ಪ್ರಶಶಂಸುಃ ಪ್ರಜಾಪತಿಮ್ ॥ ೫೦ ॥

ಅಹೋ ಏತಜ್ಜಗತ್ಸ್ರಷ್ಟಃ ಸುಕೃತಂ ಬತ ತೇ ಕೃತಮ್ ।
ಪ್ರತಿಷ್ಠಿತಾಃ ಕ್ರಿಯಾ ಯಸ್ಮಿನ್ ಸಾಕಮನ್ನಮದಾಮಹೇ ॥ ೫೧ ॥

ತಪಸಾ ವಿದ್ಯಯಾ ಯುಕ್ತೋ ಯೋಗೇನ ಸುಸಮಾಧಿನಾ ।
ಋಷೀನೃಷಿರ್ಹೃಷೀಕೇಶಃ ಸಸರ್ಜಾಭಿಮತಾಃ ಪ್ರಜಾಃ ॥ ೫೨ ॥

ತೇಭ್ಯಶ್ಚೈಕೈಕಶಃ ಸ್ವಸ್ಯ ದೇಹಸ್ಯಾಂಶಮದಾದಜಃ ।
ಯತ್ತತ್ಸಮಾಧಿಯೋಗರ್ದ್ಧಿತಪೋವಿದ್ಯಾವಿರಕ್ತಿಮತ್ ॥ ೫೩ ॥

ಬ್ರಹ್ಮದೇವರು ತಮ್ಮ ಆ ಪ್ರತಿಬಿಂಬಶರೀರವನ್ನು ತ್ಯಜಿಸಲು ಕಿನ್ನರರೂ ಮತ್ತು ಕಿಂಪುರುಷರೂ ಅದನ್ನು ಸ್ವೀಕರಿಸಿದರು. ಆದರಿಂದಲೇ ಇವರೆಲ್ಲರೂ ಉಷಃಕಾಲದಲ್ಲಿ ತಮ್ಮ ಪತ್ನಿಯರಿಂದೊಡಗೂಡಿ ಬ್ರಹ್ಮದೇವರ ಗುಣ-ಕರ್ಮಗಳನ್ನು ಹಾಡಿ ಹೊಗಳುತ್ತಾರೆ. ॥ ೪೬ ॥

ಒಮ್ಮೆ ಬ್ರಹ್ಮದೇವರು ಸೃಷ್ಟಿಯ ವೃದ್ಧಿಯು ಆಗದಿರುವುರಿಂದ ತುಂಬಾ ಚಿಂತಾಪರವಶರಾಗಿ ಕೈ-ಕಾಲು ಮುಂತಾದ ಅವಯವಗಳನ್ನು ಚಾಚಿಕೊಂಡು ಮಲಗಿಬಿಟ್ಟರು. ಮತ್ತೆ ಕ್ರೋಧವಶರಾಗಿ ತಮ್ಮ ಭೋಗಮಯ ಶರೀರವನ್ನು ತ್ಯಜಿಸಿಬಿಟ್ಟರು. ॥ ೪೭ ॥ ಆ ದೇಹದಿಂದ ಕೆಳಗೆ ಉದುರಿದ ಕೂದಲುಗಳಿಂದ ಅಹಿಗಳೆಂಬ ಹಾವುಗಳು ಉಂಟಾದವು. ಅವರು ಆ ದೇಹದಿಂದ ಚಲಿಸಿದಾಗ ಕ್ರೂರಸ್ವಭಾವವುಳ್ಳ ಸರ್ಪಗಳೂ ಮತ್ತು ನಾಗಗಳೆಂಬ ಹಾವುಗಳು ಜನಿಸಿದವು. ಅವುಗಳ ದೇಹಗಳು ಹೆಡೆಗಳ ರೂಪದಲ್ಲಿ ಹೆಗಲಿನ ಹತ್ತಿರ ವಿಸ್ತಾರವಾಗಿ ಹರಡಿಕೊಂಡಿದೆ. ॥ ೪೮ ॥

ಒಮ್ಮೆ ಬ್ರಹ್ಮದೇವರಿಗೆ ತಾವು ಕೃತಕೃತ್ಯರಾದಂತೆ ಅನುಭವ ಉಂಟಾಯಿತು. ಆಗ ಅವರು ಸೃಷ್ಟಿಯ ಕೊನೆಯಲ್ಲಿ ತಮ್ಮ ಮನಸ್ಸಿನಿಂದ ಮನುಗಳನ್ನು ಸೃಷ್ಟಿಸಿದರು. ಇವರೆಲ್ಲರೂ ಪ್ರಜೆಗಳನ್ನು ಬೆಳೆಸುವವರಾಗಿರುತ್ತಾರೆ. ॥ ೪೯ ॥ ಪ್ರಶಸ್ತವಾದ ಮನಸ್ಸುಳ್ಳ ಬ್ರಹ್ಮದೇವರು ಅವರಿಗಾಗಿ ತನ್ನ ಪುರುಷಾಕಾರ ಶರೀರವನ್ನು ತ್ಯಜಿಸಿದರು. ಮನುಗಳನ್ನು ಕಂಡು ಅವರಿಗಿಂತಲೂ ಮೊದಲು ಸೃಷ್ಟಿಸಲ್ಪಟ್ಟ ದೇವತೆಗಳೂ, ಗಂಧರ್ವರೂ ಮುಂತಾದವರು ಬ್ರಹ್ಮದೇವರನ್ನು ಸ್ತುತಿಸತೊಡಗಿದರು. ॥ ೫೦ ॥ 'ವಿಶ್ವಸೃಷ್ಟಿಯನ್ನು ಮಾಡಿದ ದೇವರೇ! ನಿಮ್ಮ ಈ ಮನುಗಳ ಸೃಷ್ಟಿಯು ಬಹಳ ಸುಂದರವಾಗಿದೆ. ಇದರಲ್ಲಿ ಅಗ್ನಿಹೋತ್ರಾದಿ ಎಲ್ಲ ಕರ್ಮಗಳು ನೆಲೆಗೊಂಡಿವೆ. ಇದರ ಸಹಾಯದಿಂದ ನಾವೂ ಕೂಡ ನಮ್ಮ ಹವಿರ್ಭಾಗವೆಂಬ ಅನ್ನವನ್ನು ಸ್ವೀಕರಿಸಬಲ್ಲೆವು.' ॥ ೫೧ ॥

ಅನಂತರ ಆದಿಋಷಿಯಾದ ಬ್ರಹ್ಮದೇವರು ಇಂದ್ರಿಯ ಸಂಯಮಪೂರ್ವಕವಾದ ತಪಸ್ಸು, ವಿದ್ಯೆ, ಯೋಗ, ಸಮಾಧಿ ಇವುಗಳಿಂದ ಸಂಪನ್ನರಾಗಿ ತಮ್ಮ ಪ್ರಿಯಸಂತಾನವಾದ ಋಷಿಗಣವನ್ನು ರಚಿಸಿದರು. ಅವರಲ್ಲಿ ಪ್ರತಿಯೊಬ್ಬರಿಗೂ ತಮ್ಮ ಸಮಾಧಿ, ಯೋಗ, ಐಶ್ವರ್ಯ, ತಪಸ್ಸು, ವಿದ್ಯೆ, ವೈರಾಗ್ಯಮಯವಾದ ಶರೀರದ ಅಂಶಗಳನ್ನು ದಯಪಾಲಿಸಿದರು. ॥ ೫೨-೫೩ ॥

ಇಪ್ಪತ್ತನೆಯ ಅಧ್ಯಾಯವು ಮುಗಿಯಿತು. ॥ ೨೦ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ತೃತೀಯಸ್ಕಂಧೇ
ವಿಂಶೋಽಧ್ಯಾಯಃ ॥ ೨೦ ॥

ಇಪ್ಪತ್ತೊಂದನೆಯ ಅಧ್ಯಾಯ

ಕರ್ದಮರ ತಪಸ್ಸು ಮತ್ತು ಭಗವಂತನ ವರಪ್ರದಾನ

ವಿದುರ ಉವಾಚ

ಸ್ವಾಯಂಭುವಸ್ಯ ಚ ಮನೋರ್ವಂಶಃ ಪರಮಸಮ್ಮತಃ ।
ಕಥ್ಯತಾಂ ಭಗವನ್ಯತ್ರ ಮೈಥುನೇನೈಧಿರೇ ಪ್ರಜಾಃ ॥ ೧ ॥

ಪ್ರಿಯವ್ರತೋತ್ತಾನಪಾದೌ ಸುತೌ ಸ್ವಾಯಂಭುವಸ್ಯ ವೈ ।
ಯಥಾಧರ್ಮಂ ಜುಗುಪತುಃ ಸಪ್ತದ್ವೀಪವತೀಂ ಮಹೀಮ್ ॥ ೨ ॥

ತಸ್ಯ ವೈ ದುಹಿತಾ ಬ್ರಹ್ಮನ್ ದೇವಹೂತೀತಿ ವಿಶ್ರುತಾ ।
ಪತ್ನೀ ಪ್ರಜಾಪತೇರುಕ್ತಾ ಕರ್ದಮಸ್ಯ ತ್ವಯಾನಘ ॥ ೩ ॥

ತಸ್ಯಾಂ ಸ ವೈ ಮಹಾಯೋಗೀ ಯುಕ್ತಾಯಾಂ ಯೋಗಲಕ್ಷಣೈಃ ।
ಸಸರ್ಜ ಕತಿಧಾ ವೀರ್ಯಂ ತನ್ಮೇ ಶುಶ್ರೂಷವೇ ವದ ॥ ೪ ॥

ರುಚಿರ್ಯೋ ಭಗವಾನ್ ಬ್ರಹ್ಮನ್-
ದಕ್ಷೋ ವಾ ಬ್ರಹ್ಮಣಃ ಸುತಃ ।
ಯಥಾ ಸಸರ್ಜ ಭೂತಾನಿ
ಲಬ್ಧ್ವಾ ಭಾರ್ಯಾಂ ಚ ಮಾನವೀಮ್ ॥ ೫ ॥

ಮೈತ್ರೇಯ ಉವಾಚ

ಪ್ರಜಾಃ ಸೃಜೇತಿ ಭಗವಾನ್ ಕರ್ದಮೋ ಬ್ರಹ್ಮಣೋದಿತಃ ।
ಸರಸ್ವತ್ಯಾಂ ತಪಸ್ತೇಪೇ ಸಹಸ್ರಾಣಾಂ ಸಮಾ ದಶ ॥ ೬ ॥

ತತಃ ಸಮಾಧಿಯುಕ್ತೇನ ಕ್ರಿಯಾಯೋಗೇನ ಕರ್ದಮಃ ।
ಸಂಪ್ರಪೇದೇ ಹರಿಂ ಭಕ್ತ್ಯಾ ಪ್ರಪನ್ನವರದಾಶುಷಮ್ ॥ ೭ ॥

ತಾವತ್ಪ್ರಸನ್ನೋ ಭಗವಾನ್ ಪುಷ್ಕರಾಕ್ಷಃ ಕೃತೇ ಯುಗೇ ।
ದರ್ಶಯಾಮಾಸ ತಂ ಕ್ಷತ್ತಃ ಶಾಬ್ದಂ ಬ್ರಹ್ಮ ದಧದ್ವಪುಃ ॥ ೮ ॥

ಸ ತಂ ವಿರಜಮರ್ಕಾಭಂ ಸಿತಪದ್ಮೋತ್ಪಲಸ್ರಜಮ್ ।
ಸ್ನಿಗ್ಧನೀಲಾಲಕವ್ರಾತವಕ್ತ್ರಾಬ್ಜಂ ವಿರಜೋಽಂಬರಮ್ ॥ ೯ ॥

ಕಿರೀಟಿನಂ ಕುಂಡಲಿನಂ ಶಂಖಚಕ್ರಗದಾಧರಮ್ ।
ಶ್ವೇತೋತ್ಪಲಕ್ರೀಡನಕಂ ಮನಃಸ್ಪರ್ಶಸ್ಮಿತೇಕ್ಷಣಮ್ ॥ ೧೦ ॥

ವಿದುರನು ಕೇಳಿದನು – ಪೂಜ್ಯ ಮೈತ್ರೇಯರೇ! ಸ್ವಾಯಂಭುವ ಮನುವಿನ ವಂಶವು ಅತ್ಯಂತ ಆದರಣೀಯವೆಂದು ಕೇಳಿದ್ದೇನೆ. ಅದರಲ್ಲಿ ಮೈಥುನಧರ್ಮದ ಮೂಲಕ ಪ್ರಜೆಯ ವೃದ್ಧಿಯಾಗಿತ್ತು. ಈಗ ನೀವು ನನಗೆ ಅವನ ಕಥೆಯನ್ನು ಹೇಳಿರಿ. ॥ ೧ ॥ ಪೂಜ್ಯರೇ! ಸ್ವಾಯಂಭುವ ಮನುವಿನ ಪುತ್ರರಾದ ಪ್ರಿಯವ್ರತ ಮತ್ತು ಉತ್ತಾನಪಾದ-ಇವರು ಸಪ್ತದ್ವೀಪಗಳಿಂದ ಒಡಗೂಡಿದ ಪೃಥ್ವಿಯನ್ನು ಧರ್ಮದಿಂದ ಆಳಿದರು ಹಾಗೂ ಖ್ಯಾತಳಾದ ಪುತ್ರಿ ದೇವಹೂತಿ ಎಂಬುವಳು ಕರ್ದಮ ಪ್ರಜಾಪತಿಯನ್ನು ವಿವಾಹವಾಗಿದ್ದಳು ಎಂದು ತಾವು ತಿಳಿಸಿರುವಿರಿ. ॥ ೨-೩ ॥ ದೇವಹೂತಿಯು ಯಮ-ನಿಯಮಗಳೇ ಮುಂತಾದ ಯೋಗಲಕ್ಷಣಗಳಿಂದ ಸಂಪನ್ನಳಾಗಿದ್ದಳು. ಅವಳು ಕರ್ದಮ ಪ್ರಜಾಪತಿಯಿಂದ ಎಷ್ಟು ಸಂತಾನಗಳನ್ನು ಪಡೆದಳು? ಎಂಬುದನ್ನು ತಿಳಿಯಲು ಇಚ್ಛಿಸುತ್ತಿದ್ದೇನೆ. ಈ ಎಲ್ಲ ಪ್ರಸಂಗವನ್ನು ನನಗೆ ತಿಳಿಸುವವರಾಗಿರಿ. ॥ ೪ ॥ ಹಾಗೆಯೇ ಭಗವಾನ್ ರುಚಿಯೂ ಮತ್ತು ಬ್ರಹ್ಮಪುತ್ರನಾದ ದಕ್ಷಪ್ರಜಾಪತಿಯೂ ಸ್ವಾಯಂಭುವ ಮನುವಿನ ಪುತ್ರಿಯರನ್ನು ವಿವಾಹವಾಗಿ ಅವರಿಂದ ಎಷ್ಟೆಷ್ಟು ಸಂತಾನಗಳನ್ನು ಪಡೆದರು? ಇದೆಲ್ಲ ಚರಿತ್ರೆಯನ್ನೂ ನನಗೆ ಹೇಳುವವರಾಗಿರಿ. ॥ ೫ ॥

ಶ್ರೀಮೈತ್ರೇಯ ಮಹರ್ಷಿಗಳು ಹೇಳುತ್ತಾರೆ – ವಿದುರನೇ! ಬ್ರಹ್ಮದೇವರು ಪೂಜ್ಯರಾದ ಕರ್ದಮರಿಗೆ – 'ನೀನು ಸಂತಾನವನ್ನು ಪಡೆ' ಎಂದು ಆಜ್ಞಾಪಿಸಿದಾಗ ಅವರು ಸರಸ್ವತೀನದೀತೀರದಲ್ಲಿ ಹತ್ತುಸಾವಿರ ವರ್ಷ ತಪಸ್ಸು ಮಾಡಿದರು. ॥ ೬ ॥ ಕರ್ದಮ ಪ್ರಜಾಪತಿಗಳು ಏಕಾಗ್ರಚಿತ್ತದಿಂದ ಭಕ್ತಿಪೂರ್ವಕ ಪೂಜೋಪಚಾರಾದಿಗಳಿಂದ (ಕ್ರಿಯಾಯೋಗ) ಶರಣಾಗತರಿಗೆ ವರದಾಯಕನಾದ ಶ್ರೀಹರಿಯನ್ನು ಆರಾಧಿಸತೊಡಗಿದರು. ॥ ೭ ॥ ಆಗ ಕೃತ ಯುಗದ ಪ್ರಾರಂಭದಲ್ಲಿ ಪುಂಡರೀಕಾಕ್ಷನಾದ ಭಗವಾನ್ ಶ್ರೀಹರಿಯು ಅವರ ತಪಸ್ಸಿನಿಂದ ಸಂತುಷ್ಟನಾಗಿ ತನ್ನ ಶಬ್ದಬ್ರಹ್ಮಮಯ ರೂಪದಿಂದ ಸಾಕಾರನಾಗಿ ಅವರಿಗೆ ದರ್ಶನವನ್ನು ಕರುಣಿಸಿದನು. ॥ ೮ ॥

ಕರ್ದಮರಿಗೆ ದರ್ಶನವಿತ್ತ ಭಗವಂತನ ಶ್ರೀವಿಗ್ರಹವು ಸೂರ್ಯನಂತೆ ತೇಜಸ್ವಿಯಾಗಿತ್ತು. ಅವನು ಕಂಠದಲ್ಲಿ ಕಮಲ ಮತ್ತು ಕುಂದ ಪುಷ್ಪಗಳ ಮಾಲೆಗಳನ್ನು ಧರಿಸಿದ್ದನು. ಮುಖಕಮಲವು ನುಣುಪಾದ ನೀಲಿಬಣ್ಣದ ಮುಂಗುರುಳುಗಳಿಂದ ಕಂಗೊಳಿಸುತ್ತಿತ್ತು. ಸ್ವಾಮಿಯು ನಿರ್ಮಲವಾದ ವಸ್ತ್ರಗಳನ್ನು ಧರಿಸಿದ್ದನು. ॥ ೯ ॥ ಅವನ ತಲೆಯ ಮೇಲೆ ಥಳ-ಥಳಿಸುವ ಸ್ವರ್ಣಕಿರೀಟವೂ, ಕಿವಿಗಳಲ್ಲಿ ಹೊಳೆಯುತ್ತಿರುವ ಕರ್ಣಕುಂಡಲಗಳು, ಕರಕಮಲಗಳಲ್ಲಿ ಶಂಖ, ಚಕ್ರ, ಗದೆ ಮುಂತಾದ ದಿವ್ಯಾಯುಧಗಳು ವಿರಾಜಿಸುತ್ತಿದ್ದವು. ಒಂದು ಕೈಯಲ್ಲಿ ಬಿಳಿಯ ಲೀಲಾಕಮಲವು ಆಡುತ್ತಿತ್ತು. ಪ್ರಭುವಿನ ಮಧುರ ಮಂದಹಾಸದಿಂದ ಶೋಭಿಸುತ್ತಿದ್ದ ದೃಷ್ಟಿಯು ಚಿತ್ತವನ್ನು ಅಪಹರಿಸುವಂತಿತ್ತು. ॥ ೧೦ ॥

ವಿನ್ಯಸ್ತಚರಣಾಂಭೋಜಮಂಸದೇಶೇ ಗರುತ್ಮತಃ ।
ದೃಷ್ಟ್ವಾ ಖೇಽವಸ್ಥಿತಂ ವಕ್ಷಃಶ್ರಿಯಂ ಕೌಸ್ತುಭಕಂಧರಮ್ ॥ ೧೧ ॥

ಜಾತಹರ್ಷೋಽಪತನ್ಮೂರ್ಧ್ನಾ ಕ್ಷಿತೌ ಲಬ್ಧಮನೋರಥಃ ।
ಗೀರ್ಭಿಸ್ತ್ವಭ್ಯಗೃಣಾತ್ಪ್ರೀತಿಸ್ವಭಾವಾತ್ಮಾ ಕೃತಾಂಜಲಿಃ ॥ ೧೨ ॥

ಋಷಿರುವಾಚ

ಜುಷ್ಟಂ ಬತಾದ್ಯಾಖಿಲಸತ್ತ್ವರಾಶೇಃ
ಸಾಂಸಿಧ್ಯಮಕ್ಷ್ಣೋಸ್ತವ ದರ್ಶನಾನ್ನಃ ।
ಯದ್ದರ್ಶನಂ ಜನ್ಮಭಿರೀಡ್ಯ ಸದ್ಭಿ-
ರಾಶಾಸತೇ ಯೋಗಿನೋ ರೂಢಯೋಗಾಃ ॥ ೧೩ ॥

ಯೇ ಮಾಯಯಾ ತೇ ಹತಮೇಧಸಸ್ತ್ವತ್
ಪಾದಾರವಿಂದಂ ಭವಸಿಂಧುಪೋತಮ್ ।
ಉಪಾಸತೇ ಕಾಮಲವಾಯ ತೇಷಾಂ
ದಾಸೀಶ ಕಾಮಾನ್ನಿರಯೇಽಪಿ ಯೇ ಸ್ಯುಃ ॥ ೧೪ ॥

ತಥಾ ಸ ಚಾಹಂ ಪರಿವೋಢುಕಾಮಃ
ಸಮಾನಶೀಲಾಂ ಗೃಹಮೇಧಧೇನುಮ್ ।
ಉಪೇಯಿವಾನ್ಮೂಲಮಶೇಷಮೂಲಂ
ದುರಾಶಯಃ ಕಾಮದುಘಾಂಘ್ರಿಪಸ್ಯ ॥ ೧೫ ॥

ಪ್ರಜಾಪತೇಸ್ತೇ ವಚಸಾಧೀಶ ತಂತ್ಯಾ
ಲೋಕಃ ಕಿಲಾಯಂ ಕಾಮಹತೋಽನುಬದ್ಧಃ ।
ಅಹಂ ಚ ಲೋಕಾನುಗತೋ ವಹಾಮಿ
ಬಲಿಂ ಚ ಶುಕ್ಲಾನಿಮಿಷಾಯ ತುಭ್ಯಮ್ ॥ ೧೬ ॥

ಲೋಕಾಂಶ್ಚ ಲೋಕಾನುಗತಾನ್ಪಶೂಂಶ್ಚ
ಹಿತ್ವಾ ಶ್ರಿತಾಸ್ತೇ ಚರಣಾತಪತ್ರಮ್ ।
ಪರಸ್ಪರಂ ತ್ವದ್ಗುಣವಾದಸೀಧು-
ಪೀಯೂಷನಿರ್ಯಾಪಿತದೇಹಧರ್ಮಾಃ ॥ ೧೭ ॥

ನ ತೇಽಜರಾಕ್ಷಭ್ರಮಿರಾಯುರೇಷಾಂ
ತ್ರಯೋದಶಾರಂ ತ್ರಿಶತಂ ಷಷ್ಟಿಪರ್ವ ।
ಷಣ್ನೇಮ್ಯನಂತಚ್ಛದಿ ಯತ್ತ್ರಿಣಾಭಿ
ಕರಾಲಸ್ರೋತೋ ಜಗದಾಚ್ಛಿದ್ಯ ಧಾವತ್ ॥ ೧೮ ॥

ಅವನ ಪಾದಾರವಿಂದಗಳು ಗರುಡದೇವನ ಹೆಗಲ ಮೇಲೆ ವಿರಾಜಿಸುತ್ತಿದ್ದವು. ವಕ್ಷಸ್ಥಳದಲ್ಲಿ ಶ್ರೀಲಕ್ಷ್ಮೀ ದೇವಿಯೂ, ಕಂಠದಲ್ಲಿ ಕೌಸ್ತುಭ ಮಣಿಯೂ ಶೋಭಿಸುತ್ತಿತ್ತು. ಆಕಾಶದಲ್ಲಿ ಬೆಳಗುತ್ತಿದ್ದ ಭಗವಂತನ ಮನೋಹರ ಮೂರ್ತಿಯನ್ನು ದರ್ಶನ ಮಾಡುತ್ತಾ ಕರ್ದಮರು ಪರಮಾನಂದದಲ್ಲಿ ಮುಳುಗಿ, ಸಕಲ ಕಾಮನೆಗಳೂ ಈಡೇರಿದಂತೆ ಭಾವಿಸಿದರು. ಅವರು ಆನಂದತುಂಬಿದ ಹೃದಯದಿಂದ ಭಗವಂತನಿಗೆ ಸಾಷ್ಟಾಂಗ ನಮಸ್ಕಾರ ಮಾಡುತ್ತಾ ಪ್ರೇಮಪೂರ್ಣವಾದ ಚಿತ್ತದಿಂದ ಕೈಜೋಡಿಸಿಕೊಂಡು ಸವಿಮಾತುಗಳಿಂದ ಸ್ವಾಮಿಯನ್ನು ಸ್ತುತಿಸತೊಡಗಿದರು. ॥ ೧೧-೧೨ ॥

ಕರ್ದಮರು ನುಡಿದರು – ಸ್ತುತಿಸಲು ಯೋಗ್ಯವಾದ ಪರಮೇಶ್ವರಾ! ನೀನು ಸಂಪೂರ್ಣ ಸತ್ತ್ವಗುಣದ ಆಧಾರನಾಗಿರುವೆ! ಯೋಗಿಗಳು ಉತ್ತರೋತ್ತರ ಶುಭಯೋನಿಗಳಲ್ಲಿ ಜನಿಸಿ, ಕೊನೆಗೆ ಯೋಗಾರೂಢರಾಗಿ ಯಾರನ್ನು ದರ್ಶಿಸಲು ಬಯಸುತ್ತಾರೋ, ಅಂತಹ ನಿನ್ನ ಅದೇ ದರ್ಶನವನ್ನು ಪಡೆದು ಇಂದು ನನ್ನ ಕಣ್ಣುಗಳು ಸಫಲವಾದುವು. ॥ ೧೩ ॥ ನಿನ್ನ ಚರಣಕಮಲಗಳು ಭವಸಾಗರವನ್ನು ದಾಟಲು ನಾವೆಯಾಗಿವೆ. ಅಂತಹ ಪಾದಾರವಿಂದಗಳನ್ನು ನಿನ್ನ ಮಾಯೆಯಿಂದ ವಿವೇಕವನ್ನು ಕಳೆದುಕೊಂಡವರು ಮಾತ್ರ ತುಚ್ಛವೂ, ಕ್ಷಣಿಕವೂ ಆದ ವಿಷಯಸುಖಗಳಿಗಾಗಿ ಆಶ್ರಯಿಸುತ್ತಾರೆ. ಆ ಸುಖಗಳು ನರಕದಲ್ಲೂ ದೊರೆಯಬಲ್ಲವು. ಆದರೆ ಸ್ವಾಮಿ! ನೀನಾದರೋ ಅವರಿಗೆ ಆ ವಿಷಯ ಭೋಗಗಳನ್ನೂ ಕೊಡುತ್ತೀಯೆ. ॥ ೧೪ ॥ ಪ್ರಭುವೇ! ನೀನು ಕಲ್ಪವೃಕ್ಷನಾಗಿರುವೆ. ನಿನ್ನ ಚರಣಗಳು ಸಮಸ್ತ ಮನೋರಥಗಳನ್ನು ಪೂರ್ಣಗೊಳಿಸುವಂತಹವುಗಳು. ನನ್ನ ಹೃದಯವು ಕಾಮದಿಂದ ಕಲುಷಿತವಾಗಿದೆ. ನಾನು – ನನಗೆ ಅನುರೂಪಳಾಗಿ ಗೃಹಸ್ಥಧರ್ಮವನ್ನು ಪಾಲನೆ ಮಾಡಲು ಸಹಾಯಕಳಾದ ಶೀಲವತಿಯಾದ ಕನ್ಯೆಯನ್ನು ಪತ್ನಿಯನ್ನಾಗಿ ಪಡೆಯಲಿಕ್ಕಾಗಿಯೇ ನಿನ್ನ ಅಡಿದಾವರೆಗಳಲ್ಲಿ ಶರಣು ಹೊಂದಿರುವೆನು. ॥ ೧೫ ॥ ಸರ್ವೇಶ್ವರಾ! ನೀನು ಸಮಸ್ತ ಲೋಕಗಳ ಅಧಿಪತಿಯಾಗಿರುವೆ. ನಾನಾ ಪ್ರಕಾರದ ಕಾಮನೆಗಳಿಗೆ ಸಿಲುಕಿಕೊಂಡ ಈ ಲೋಕವು ನಿನ್ನ ವೇದವಾಣೀರೂಪವಾದ ಹಗ್ಗದಿಂದ ಬಂಧಿತವಾಗಿದೆ. ಧರ್ಮಮೂರ್ತಿಯೇ! ಅದನ್ನೇ ಅನುಸರಿಸುತ್ತಾ ನಾನೂ ಕೂಡ ಕಾಲಸ್ವರೂಪನಾದ ನಿನಗೆ ಆಜ್ಞಾಪಾಲನರೂಪೀ ಪೂಜೆ-ಉಪಹಾರಾದಿಗಳನ್ನು ಸಮರ್ಪಿಸುತ್ತಿದ್ದೇನೆ. ॥ ೧೬ ॥

ಮಹಾಪ್ರಭೋ! ವಿಷಯಸುಖಗಳಲ್ಲಿ ಆಸಕ್ತರಾದ ಜನರನ್ನೂ, ಅವರ ಮಾರ್ಗಾವಲಂಬಿಯಾದ ನನ್ನಂತಹ ಕರ್ಮಜಡರಾದ ಪಶುಗಳನ್ನೂ ನಿನ್ನ ಏಕಾಂತಭಕ್ತರು ಸ್ವಲ್ಪವೂ ಲೆಕ್ಕಿಸದೆ ನಿನ್ನ ಪಾದಾರವಿಂದಗಳ ನೆರಳನ್ನೆ ಆಶ್ರಯಿಸುತ್ತಾರೆ. ನಿನ್ನ ಗುಣ-ಕೀರ್ತನರೂಪವಾದ ದಿವ್ಯೋನ್ಮಾದವನ್ನುಂಟುಮಾಡುವ ಸುಧೆಯನ್ನು ಪಾನಮಾಡುತ್ತಾ ಹಸಿವು ಬಾಯಾರಿಕೆಗಳೇ ಮುಂತಾದ ದೇಹಧರ್ಮಗಳನ್ನು ಶಮನಗೊಳಿಸಿಕೊಳ್ಳುತ್ತಾರೆ. ॥ ೧೭ ॥ ಸ್ವಾಮಿ! ಈ ಕಾಲಚಕ್ರವು ತುಂಬಾ ಬಲಿಷ್ಠವಾದುದು. ಸಾಕ್ಷಾತ್ ಪರಬ್ರಹ್ಮವೇ ಇದರ ಅಚ್ಚು. ಅಧಿಕಮಾಸದಿಂದ ಕೂಡಿದ ಹದಿಮೂರು ತಿಂಗಳುಗಳು ಇದರ ಅರೆ(ಕಾಲು)ಗಳು. ಮುನ್ನೂರಅರವತ್ತು ದಿವಸಗಳು ಇದರ ಗಿಣ್ಣು

ಏಕಃ ಸ್ವಯಂ ಸಂಜಗತಃ ಸಿಸೃಕ್ಷಯಾ-
ದ್ವಿತೀಯಯಾಽಽತ್ಮನ್ನಧಿಯೋಗಮಾಯಯಾ ।
ಸೃಜಸ್ಯದಃ ಪಾಸಿ ಪುನರ್ಗ್ರಸಿಷ್ಯಸೇ
ಯಥೋರ್ಣನಾಭಿರ್ಭಗವನ್ ಸ್ವಶಕ್ತಿಭಿಃ ॥ ೧೯ ॥

ನೈತದ್ಬತಾಧೀಶ ಪದಂ ತವೇಪ್ಸಿತಂ
ಯನ್ಮಾಯಯಾ ನಸ್ತನುಷೇ ಭೂತಸೂಕ್ಷ್ಮಮ್ ।
ಅನುಗ್ರಹಾಯಾಸ್ತ್ವಪಿ ಯರ್ಹಿ ಮಾಯಯಾ
ಲಸತ್ತುಲಸ್ಯಾ ತನುವಾ ವಿಲಕ್ಷಿತಃ ॥ ೨೦ ॥

ತಂ ತ್ವಾನುಭೂತ್ಯೋಪರತಕ್ರಿಯಾರ್ಥಂ
ಸ್ವಮಾಯಯಾ ವರ್ತಿತಲೋಕತಂತ್ರಮ್ ।
ನಮಾಮ್ಯಭೀಕ್ಷ್ಣಂ ನಮನೀಯಪಾದ-
ಸರೋಜಮಲ್ಪೀಯಸಿ ಕಾಮವರ್ಷಮ್ ॥ ೨೧ ॥

ಋಷಿರುವಾಚ

ಇತ್ಯವ್ಯಲೀಕಂ ಪ್ರಣುತೋಽಬ್ಜನಾಭ-
ಸ್ತಮಾಬಭಾಷೇ ವಚಸಾಮೃತೇನ ।
ಸುಪರ್ಣಪಕ್ಷೋಪರಿ ರೋಚಮಾನಃ
ಪ್ರೇಮಸ್ಮಿತೋದ್ವೀಕ್ಷಣವಿಭ್ರಮದ್ಭ್ರೂಃ ॥ ೨೨ ॥

ಶ್ರೀಭಗವಾನುವಾಚ

ವಿದಿತ್ವಾ ತವ ಚೈತ್ಯಂ ಮೇ ಪುರೈವ ಸಮಯೋಜಿ ತತ್ ।
ಯದರ್ಥಮಾತ್ಮನಿಯಮೈಸ್ತ್ವಯೈವಾಹಂ ಸಮರ್ಚಿತಃ ॥ ೨೩ ॥

ನ ವೈ ಜಾತು ಮೃಷೈವ ಸ್ಯಾತ್ಪ್ರಜಾಧ್ಯಕ್ಷ ಮದರ್ಹಣಮ್ ।
ಭವದ್ವಿಧೇಷ್ವತಿತರಾಂ ಮಯಿ ಸಂಗೃಭಿತಾತ್ಮನಾಮ್ ॥ ೨೪ ॥

ಪ್ರಜಾಪತಿಸುತಃ ಸಮ್ರಾಣ್ಮನುರ್ವಿಖ್ಯಾತಮಂಗಲಃ ।
ಬ್ರಹ್ಮಾವರ್ತಂ ಯೋಽಧಿವಸನ್ ಶಾಸ್ತಿ ಸಪ್ತಾರ್ಣವಾಂ ಮಹೀಮ್ ॥ ೨೫ ॥

ಸ ಚೇಹ ವಿಪ್ರ ರಾಜರ್ಷಿರ್ಮಹಿಷ್ಯಾ ಶತರೂಪಯಾ ।
ಆಯಾಸ್ಯತಿ ದಿದೃಕ್ಷುಸ್ತ್ವಾಂ ಪರಶ್ವೋ ಧರ್ಮಕೋವಿದಃ ॥ ೨೬ ॥

ಗಳು. ಇದು ಆರು ಋತುಗಳೆಂಬ ಅಂಚುಪಟ್ಟಿಗಳಿಂದಲೂ, ಅನಂತವಾದ ಕಲಾ-ಕಾಷ್ಠಾದಿ ಪತ್ರಾಕಾರವಾದ ಧಾರೆಗಳಿಂದಲೂ, ಮೂರು ಚಾತುರ್ಮಾಸ್ಯ ಇದರ ಆಧಾರಭೂತ ನಾಭಿಯಿಂದಲೂ ಕೂಡಿದೆ. ಇದು ಅತ್ಯಂತ ವೇಗವುಳ್ಳ ಸಂವತ್ಸರರೂಪೀ ಕಾಲಚಕ್ರವು ಜಗತ್ತಿನ ಆಯುಷ್ಯವನ್ನು ಕತ್ತರಿಸುತ್ತಾ ಸುತ್ತುತ್ತಿದೆ. ಆದರೆ ಇದು ನಿನ್ನ ಏಕಾಂತಭಕ್ತರ ಆಯುಸ್ಸನ್ನು ಕಳೆಯಲಾರದು. ॥ ೧೮ ॥ ಭಗವಂತನೇ! ಜೇಡರ ಹುಳುವು ತನ್ನ ಬಲೆಯನ್ನು ತಾನೇ ಹೊರಹೊಮ್ಮಿಸಿ, ಅದನ್ನು ರಕ್ಷಿಸುತ್ತಾ ಕೊನೆಗೆ ನುಂಗಿಹಾಕುತ್ತದೆ. ಹಾಗೆಯೇ ನೀನೊಬ್ಬನೇ ನಿನ್ನಿಂದ ಅಭಿನ್ನವಾದ ಯೋಗಮಾಯೆಯನ್ನು ಅವಲಂಬಿಸಿ ಅದರಿಂದ ವ್ಯಕ್ತವಾದ ನಿನ್ನ ಸತ್ತ್ವಾದಿಶಕ್ತಿಗಳಿಂದ ಈ ಜಗತ್ತನ್ನು ಸೃಷ್ಟಿಸಿ, ರಕ್ಷಿಸಿ, ಲಯಗೊಳಿಸುತ್ತೀಯೆ. ॥ ೧೯ ॥ ಪ್ರಭೋ! ಈಗ ನೀನು ತನ್ನ ತುಲಸೀಮಾಲೆಯಿಂದ ಅಲಂಕೃತವಾದ, ಮಾಯೆಯಿಂದ ಪರಿಚ್ಛಿನ್ನನಂತೆ ಕಂಡುಬರುವ ಸಗುಣಮೂರ್ತಿಯಾಗಿ ದರ್ಶನವನ್ನು ನನಗೆ ದಯಪಾಲಿಸಿರುವೆ. ನೀನು ನಮ್ಮಂತಹ ಭಕ್ತರಿಗೆ ಕರುಣಿಸುವ ಶಬ್ದಾದಿ ವಿಷಯ-ಸುಖಗಳು ಮಾಯಿಕವಾಗಿದ್ದರೂ, ನಿನಗೆ ಇಷ್ಟವಿಲ್ಲದಿದ್ದರೂ, ಪರಿಣಾಮದಲ್ಲಿ ನಮಗೆ ಶುಭವೇ ಉಂಟಾಗುವಂತೆ ಇಂತಹ ಭೋಗಸುಖಗಳನ್ನು ಕೊಡುವವನಾಗು. ॥ ೨೦ ॥

ಸ್ವಾಮಿ! ನೀನು ಸ್ವರೂಪತಃ ನಿಷ್ಕ್ರಿಯನಾಗಿದ್ದರೂ ಮಾಯಾಶಕ್ತಿಯಿಂದ ಇಡೀ ಪ್ರಪಂಚದ ವ್ಯವಹಾರಗಳನ್ನು ನಡೆಸುತ್ತಿದ್ದೀಯೆ. ಸ್ವಲ್ಪವೇ ಉಪಾಸನೆ ಮಾಡುವವರ ಮೇಲೆಯೂ ಕೂಡ ನೀನು ಬಯಸಿದ ಎಲ್ಲ ವಸ್ತುಗಳನ್ನು ಮಳೆಗರೆಯುತ್ತಾ ಇರುತ್ತೀಯೆ. ನಿನ್ನ ವಂದನೀಯವಾದ ಚರಣಕಮಲಗಳಿಗೆ ನಾನು ಮತ್ತೆ-ಮತ್ತೆ ನಮಸ್ಕರಿಸುತ್ತಿದ್ದೇನೆ. ॥ ೨೧ ॥

ಶ್ರೀಮೈತ್ರೇಯರು ಹೇಳುತ್ತಾರೆ – ವಿದುರನೇ! ಕರ್ದಮರು ಹೀಗೆ ನಿಷ್ಕಪಟಭಾವದಿಂದ ಭಗವಂತನನ್ನು ಸ್ತೋತ್ರಮಾಡಲು ಸ್ವಾಮಿಯು ಅತ್ಯಂತ ಪ್ರಸನ್ನನಾದನು. ಗರುಡದೇವನ ಹೆಗಲಮೇಲೆ ವಿರಾಜಿಸುತ್ತಿರುವ ಭಗವಂತನು ಪ್ರೇಮಪೂರ್ಣವಾದ ಕಿರುನಗೆಯನ್ನು ಸೂಸುತ್ತಾ, ಪ್ರೇಮತುಂಬಿದ ದೃಷ್ಟಿಯನ್ನು ಬೀರುತ್ತಾ ಅಮೃತಮಯ ವಚನಗಳಿಂದ ಕರ್ದಮರಿಗೆ ಇಂತೆಂದನು. ॥ ೨೨ ॥

ಶ್ರೀಭಗವಂತನು ಹೇಳಿದನು – ಮಹರ್ಷಿಯೇ! ಯಾವ ಪ್ರಯೋಜನಕ್ಕಾಗಿ ನೀನು ಆತ್ಮಸಂಯಮಾದಿಗಳ ಮೂಲಕ ನನ್ನನ್ನು ಆರಾಧಿಸಿರುವೆಯೋ, ಆ ನಿನ್ನ ಹೃದಯದ ಭಾವವನ್ನು ಅರಿತವನಾದ ನಾನು ಮೊದಲಿನಿಂದಲೇ ಅದರ ವ್ಯವಸ್ಥೆ ಮಾಡಿರುವೆನು. ॥ ೨೩ ॥ ಪ್ರಜಾಪತಿಯೇ! ನನ್ನನ್ನು ಕುರಿತು ಮಾಡಿದ ಪೂಜೆಯು ಎಂದಿಗೂ ವಿಫಲವಾಗುವುದಿಲ್ಲ. ಏಕಾಂತಭಕ್ತಿಯಿಂದ ನನ್ನಲ್ಲೇ ಚಿತ್ತವನ್ನು ತೊಡಗಿಸಿರುವ ನಿನ್ನಂತಹ ಮಹಾತ್ಮರು ಮಾಡಿದ ಉಪಾಸನೆಗಾದರೋ ಅತ್ಯಧಿಕವಾದ ಫಲವು ಸಿಕ್ಕಿಯೇ ಸಿಕ್ಕುವುದು. ॥ ೨೪ ॥ ಬ್ರಹ್ಮದೇವರ ಸುಪುತ್ರನಾದ ಸ್ವಾಯಂಭುವಮನು ಚಕ್ರವರ್ತಿಯು ಸದಾಚಾರ ಸಂಪನ್ನನಾಗಿ ಬ್ರಹ್ಮಾವರ್ತದಲ್ಲಿದ್ದು ಸಪ್ತ ಸಮುದ್ರಗಳಿಂದ ಕೂಡಿದ ಇಡೀ ಭೂಮಂಡಲವನ್ನು ಈಗ ಆಳುತ್ತಿದ್ದಾನೆ. ॥ ೨೫ ॥ ವಿಪ್ರಶ್ರೇಷ್ಠನೇ! ಆ ಪರಮಧರ್ಮಜ್ಞನಾದ ಮಹಾರಾಜನು ತನ್ನ ಪತ್ನಿಯಾದ ಶತರೂಪಾದೇವಿಯೊಂದಿಗೆ ನಿನ್ನನ್ನು ಭೆಟ್ಟಿಯಾಗಲು ನಾಳಿದ್ದು ಇಲ್ಲಿಗೆ ಬರುವನು. ॥ ೨೬ ॥

ಆತ್ಮಜಾಮಸಿತಾಪಾಂಗೀಂ ವಯಃಶೀಲಗುಣಾನ್ವಿತಾಮ್ ।
ಮೃಗಯಂತೀಂ ಪತಿಂ ದಾಸ್ಯತ್ಯನುರೂಪಾಯ ತೇ ಪ್ರಭೋ ॥ ೨೭ ॥

ಸಮಾಹಿತಂ ತೇ ಹೃದಯಂ ಯತ್ರೇಮಾನ್ಪರಿವತ್ಸರಾನ್ ।
ಸಾ ತ್ವಾಂ ಬ್ರಹ್ಮನ್ನೃಪವಧೂಃ ಕಾಮಮಾಶು ಭಜಿಷ್ಯತಿ ॥ ೨೮ ॥

ಯಾ ತ ಆತ್ಮಭೃತಂ ವೀರ್ಯಂ ನವಧಾ ಪ್ರಸವಿಷ್ಯತಿ ।
ವೀರ್ಯೇ ತ್ವದೀಯೇ ಋಷಯ ಆಧಾಸ್ಯಂತ್ಯಂಜಸಾಽಽತ್ಮನಃ ॥ ೨೯ ॥

ತ್ವಂ ಚ ಸಮ್ಯಗನುಷ್ಠಾಯ ನಿದೇಶಂ ಮ ಉಶತ್ತಮಃ ।
ಮಯಿ ತೀರ್ಥೀಕೃತಾಶೇಷಕ್ರಿಯಾರ್ಥೋ ಮಾಂ ಪ್ರಪತ್ಸ್ಯಸೇ ॥ ೩೦ ॥

ಕೃತ್ವಾ ದಯಾಂ ಚ ಜೀವೇಷು ದತ್ತ್ವಾ ಚಾಭಯಮಾತ್ಮವಾನ್ ।
ಮಯ್ಯಾತ್ಮಾನಂ ಸಹ ಜಗದ್ದ್ರಕ್ಷ್ಯಸ್ಯಾತ್ಮನಿ ಚಾಪಿ ಮಾಮ್ ॥ ೩೧ ॥

ಸಹಾಹಂ ಸ್ವಾಂಶಕಲಯಾ ತ್ವದ್ವೀರ್ಯೇಣ ಮಹಾಮುನೇ ।
ತವ ಕ್ಷೇತ್ರೇ ದೇವಹೂತ್ಯಾಂ ಪ್ರಣೇಷ್ಯೇ ತತ್ತ್ವಸಂಹಿತಾಮ್ ॥ ೩೨ ॥

ಮೈತ್ರೇಯ ಉವಾಚ

ಏವಂ ತಮನುಭಾಷ್ಯಾಥ ಭಗವಾನ್ಪ್ರತ್ಯಗಕ್ಷಜಃ ।
ಜಗಾಮ ಬಿಂದುಸರಸಃ ಸರಸ್ವತ್ಯಾ ಪರಿಶ್ರಿತಾತ್ ॥ ೩೩ ॥

ನಿರೀಕ್ಷತಸ್ತಸ್ಯ ಯಯಾವಶೇಷ-
ಸಿದ್ಧೇಶ್ವರಾಭಿಷ್ಟುತಸಿದ್ಧಮಾರ್ಗಃ ।
ಆಕರ್ಣಯನ್ ಪತ್ರರಥೇಂದ್ರಪಕ್ಷೈ-
ರುಚ್ಚಾರಿತಂ ಸ್ತೋಮಮುದೀರ್ಣಸಾಮ ॥ ೩೪ ॥

ಅಥ ಸಂಪ್ರಸ್ಥಿತೇ ಶುಕ್ಲೇ ಕರ್ದಮೋ ಭಗವಾನೃಷಿಃ ।
ಆಸ್ತೇ ಸ್ಮ ಬಿಂದುಸರಸಿ ತಂ ಕಾಲಂ ಪ್ರತಿಪಾಲಯನ್ ॥ ೩೫ ॥

ಮನುಃ ಸ್ಯಂದನಮಾಸ್ಥಾಯ ಶಾತಕೌಂಭಪರಿಚ್ಛದಮ್ ।
ಆರೋಪ್ಯ ಸ್ವಾಂ ದುಹಿತರಂ ಸಭಾರ್ಯಃ ಪರ್ಯಟನ್ಮಹೀಮ್ ॥ ೩೬ ॥

ತಸ್ಮಿನ್ ಸುಧನ್ವನ್ನಹನಿ ಭಗವಾನ್ಯತ್ಸಮಾದಿಶತ್ ।
ಉಪಾಯಾದಾಶ್ರಮಪದಂ ಮುನೇಃ ಶಾಂತವ್ರತಸ್ಯ ತತ್ ॥ ೩೭ ॥

ಅವನಿಗೆ ರೂಪ, ಯೌವನ, ಗುಣ-ಶೀಲಗಳಿಂದ ಸಂಪನ್ನಳಾಗಿರುವ ಶ್ಯಾಮಲಲೋಚನೆಯಾದ ವಿವಾಹಯೋಗ್ಯಳಾದ ಕನ್ಯೆಯೊಬ್ಬಳಿದ್ದಾಳೆ. ಆಕೆಗೆ ನೀನೇ ಯೋಗ್ಯನಾದ ವರನಾಗಿರುವೆ. ಆಕೆಯನ್ನು ನಿನಗೆ ಆ ರಾಜನು ವಿವಾಹ ಮಾಡಿಕೊಡುವನು. ॥ ೨೭ ॥ ಬ್ರಾಹ್ಮಣೋತ್ತಮನೇ ! ಕಳೆದ ಅನೇಕ ವರ್ಷಗಳಿಂದ ನಿನ್ನ ಮನಸ್ಸು ಎಂತಹ ಭಾರ್ಯೆಯನ್ನು ಪಡೆಯಬೇಕೆಂದು ನೆಲೆಗೊಂಡಿದೆಯೋ, ಅಂತಹ ಪತ್ನಿಯಾಗಿ ಆ ರಾಜಕುಮಾರಿಯು ಬೇಗನೇ ನಿನಗೆ ದೊರೆತು ಯಥೇಷ್ಟವಾಗಿ ಸೇವೆಮಾಡುವಳು. ॥ ೨೮ ॥ ಆಕೆಯು ನಿನ್ನ ವೀರ್ಯವನ್ನು ತನ್ನ ಗರ್ಭದಲ್ಲಿ ಧರಿಸಿಕೊಂಡು ಅದರಿಂದ ಒಂಭತ್ತು ಕನ್ಯೆಯರನ್ನು ಹಡೆಯುವಳು. ಅನಂತರ ಮರೀಚಿಗಳೇ ಮುಂತಾದ ಮಹಾತ್ಮರು ಅವರನ್ನು ವಿವಾಹವಾಗಿ ಅವರಿಂದ ಸಂತಾನಗಳನ್ನು ಪಡೆಯುವರು. ॥ ೨೯ ॥ ನೀನೂ ಕೂಡ ನನ್ನ ಆಜ್ಞೆಯನ್ನು ಚೆನ್ನಾಗಿ ಪಾಲಿಸುವುದರಿಂದ ಚಿತ್ತಶುದ್ಧಿಯಾಗಿ, ಮತ್ತೆ ತನ್ನ ಎಲ್ಲ ಕರ್ಮಫಲಗಳನ್ನು ನನಗೆ ಅರ್ಪಿಸಿ ನನ್ನನ್ನೇ ಪಡೆಯುವೆ. ॥ ೩೦ ॥ ಸಮಸ್ತ ಜೀವಿಗಳಲ್ಲಿಯೂ ದಯೆಯನ್ನು ತೋರಿ, ಅವುಗಳಿಗೆ ಅಭಯದಾನವನ್ನಿತ್ತು ಆತ್ಮಜ್ಞಾನವನ್ನು ಹೊಂದುವೆ. ಮತ್ತೆ ತನ್ನ ಸಹಿತ ಇಡೀ ಜಗತ್ತನ್ನು ನನ್ನಲ್ಲಿಯೂ ಮತ್ತು ನನ್ನನ್ನು ತನ್ನಲ್ಲಿಯೂ ಸ್ಥಿತನೆಂದು ನೋಡುವೆ. ॥ ೩೧ ॥ ಮಹಾಮುನಿಯೇ ! ನಾನೂ ಕೂಡ ನನ್ನ ಅಂಶ-ಕಲೆಯಿಂದ ನಿನ್ನ ವೀರ್ಯದ ಮೂಲಕ ನಿನ್ನ ಪತ್ನಿಯಾದ ದೇವಹೂತಿಯ ಗರ್ಭದಲ್ಲಿ ಅವತರಿಸಿ ಸಾಂಖ್ಯಶಾಸ್ತ್ರದ ಪ್ರವರ್ತಕನಾಗುವೆನು. ॥ ೩೨ ॥

ಶ್ರೀಮೈತ್ರೇಯರು ಹೇಳುತ್ತಾರೆ – ವಿದುರನೇ! ಅಂತರ್ಮುಖವಾದ ಇಂದ್ರಿಯಗಳಿಗೆ ಗೋಚರನಾಗುವ ಶ್ರೀಹರಿಯು ಕರ್ದಮ ಋಷಿಗಳೊಡನೆ ಹೀಗೆ ಸಂಭಾಷಿಸಿ ಸರಸ್ವತೀನದಿಯಿಂದ ಸುತ್ತುವರಿಯಲ್ಪಟ್ಟ ಬಿಂದುಸರೋವರ ತೀರ್ಥದಿಂದ ತನ್ನ ಲೋಕಕ್ಕೆ ಹೊರಟನು. ॥ ೩೩ ॥ ಮಹಾಮಹಿಮರಾದ ಕರ್ದಮರು ನೋಡುತ್ತಿರುವಂತೆಯೇ ಗರುಡನನ್ನೇರಿ ಅವನ ರೆಕ್ಕೆಗಳಿಂದ ಕೇಳಿಬರುತ್ತಿದ್ದ ಸಾಮಗಾನವನ್ನೂ, ಸ್ತೋಮವೆಂಬ ಋಕ್ಕುಗಳ ಸ್ತುತಿಯನ್ನು ಕೇಳುತ್ತಾ ಪ್ರಸಿದ್ಧರಾದ ಮಹಾಯೋಗಿಗಳು ಸ್ತುತಿಸುತ್ತಿರುವ ಸಿದ್ಧಮಾರ್ಗದಿಂದ ಶ್ರೀಹರಿಯು ವೈಕುಂಠಕ್ಕೆ ತೆರಳಿದನು. ॥ ೩೪ ॥

ವಿದುರನೇ ! ಭಗವಂತನು ಹಾಗೆ ತೆರಳಿದ ಬಳಿಕ ಪೂಜ್ಯರಾದ ಕರ್ದಮರು ಆತನು ಹೇಳಿದ್ದ ಕಾಲವನ್ನು ಎದುರುನೋಡುತ್ತಾ ಬಿಂದುಸರೋವರದ ಬಳಿಯಲ್ಲೇ ಇದ್ದರು. ॥ ೩೫ ॥ ಇತ್ತಕಡೆಯಿಂದ ಸ್ವಾಯಂಭುವಮನುವು ಮಹಾರಾಣಿ ಶತರೂಪಾಳೊಂದಿಗೆ ಸುವರ್ಣಮಯ ರಥದಲ್ಲಿ ತನ್ನ ಮಗಳೊಂದಿಗೆ ಭೂಮಿಯಲ್ಲಿ ಸಂಚರಿಸುತ್ತಾ ಶ್ರೀಭಗವಂತನು ಹೇಳಿದ್ದ ದಿವಸದಲ್ಲಿ ಶಾಂತಿ ಪರಾಯಣ, ವ್ರತನಿಷ್ಠರಾದ ಮಹರ್ಷಿಕರ್ದಮರ ಆಶ್ರಮವನ್ನು ತಲುಪಿದರು. ॥ ೩೬-೩೭ ॥ ಸರಸ್ವತೀನದಿಯ ಜಲದಿಂದ ತುಂಬಿ ತುಳುಕುತ್ತಿದ್ದ ಆ 'ಬಿಂದುಸರೋವರ'ವು ತನ್ನ ಶರಣಾಗತ ಭಕ್ತನಾದ ಕರ್ದಮರ ವಿಷಯದಲ್ಲಿ ಪರಮ ಕರುಣೆತುಂಬಿದ ಕಣ್ಣುಗಳಿಂದ ಭಗವಂತನ ಕಣ್ಣೀರಿನ ಬಿಂದುಗಳು ಉದುರಿದ್ದರಿಂದ ಇದಕ್ಕೆ ಈ ಹೆಸರು ಬಂದಿತ್ತು. ಆ ತೀರ್ಥವು ಅತ್ಯಂತ ಪವಿತ್ರವಾದುದು. ಅದರ

ಯಸ್ಮಿನ್ಭಗವತೋ ನೇತ್ರಾನ್ನ್ಯಪತನ್ನಶ್ರುಬಿಂದವಃ ।
ಕೃಪಯಾ ಸಂಪರೀತಸ್ಯ ಪ್ರಪನ್ನೇಽರ್ಪಿತಯಾ ಭೃಶಮ್
॥ ೩೮ ॥

ತದ್ವೈ ಬಿಂದುಸರೋ ನಾಮ ಸರಸ್ವತ್ಯಾ ಪರಿಪ್ಲುತಮ್ ।
ಪುಣ್ಯಂ ಶಿವಾಮೃತಜಲಂ ಮಹರ್ಷಿಗಣಸೇವಿತಮ್
॥ ೩೯ ॥

ಪುಣ್ಯದ್ರುಮಲತಾಜಾಲೈಃ ಕೂಜತ್ಪುಣ್ಯಮೃಗದ್ವಿಜೈಃ ।
ಸರ್ವರ್ತುಫಲಪುಷ್ಪಾಢ್ಯಂ ವನರಾಜಿಶ್ರಿಯಾನ್ವಿತಮ್
॥ ೪೦ ॥

ಮತ್ತದ್ವಿಜಗಣೈರ್ಘುಷ್ಟಂ ಮತ್ತಭ್ರಮರವಿಭ್ರಮಮ್ ।
ಮತ್ತಬರ್ಹಿನಟಾಟೋಪಮಾಹ್ವಯನ್ಮತ್ತಕೋಕಿಲಮ್
॥ ೪೧ ॥

ಕದಂಬಚಂಪಕಾಶೋಕಕರಂಜಬಕುಲಾಸನೈಃ ।
ಕುಂದಮಂದಾರಕುಟಜೈಶ್ಚೂತಪೋತೈರಲಂಕೃತಮ್
॥ ೪೨ ॥

ಕಾರಂಡವೈಃ ಪ್ಲವೈರ್ಹಂಸೈಃ ಕುರರೈರ್ಜಲಕುಕ್ಕುಟೈಃ ।
ಸಾರಸೈಶ್ಚಕ್ರವಾಕೈಶ್ಚ ಚಕೋರೈರ್ವಲ್ಗು ಕೂಜಿತಮ್
॥ ೪೩ ॥

ತಥೈವ ಹರಿಣೈಃ ಕ್ರೋಡೈಃ ಶ್ವಾವಿದ್ಗವಯಕುಂಜರೈಃ ।
ಗೋಪುಚ್ಛೈರ್ಹರಿಭಿರ್ಮರ್ಕೈರ್ನಕುಲೈರ್ನಾಭಿಭಿರ್ವೃತಮ್
॥ ೪೪ ॥

ಪ್ರವಿಶ್ಯ ತತ್ತೀರ್ಥವರಮಾದಿರಾಜಃ ಸಹಾತ್ಮಜಃ ।
ದದರ್ಶ ಮುನಿಮಾಸೀನಂ ತಸ್ಮಿನ್ ಹುತಹುತಾಶನಮ್
॥ ೪೫ ॥

ವಿದ್ಯೋತಮಾನಂ ವಪುಷಾ ತಪಸ್ಯುಗ್ರಯುಜಾ ಚಿರಮ್ ।
ನಾತಿಕ್ಷಾಮಂ ಭಗವತಃ ಸ್ನಿಗ್ಧಾಪಾಂಗಾವಲೋಕನಾತ್ ।
ತದ್ವ್ಯಾಹೃತಾಮೃತಕಲಾಪೀಯೂಷಶ್ರವಣೇನ ಚ
॥ ೪೬ ॥

ಪ್ರಾಂಶುಂ ಪದ್ಮಪಲಾಶಾಕ್ಷಂ ಜಟಿಲಂ ಚೀರವಾಸಸಮ್ ।
ಉಪಸಂಸೃತ್ಯ ಮಲಿನಂ ಯಥಾರ್ಹಣಮಸಂಸ್ಕೃತಮ್
॥ ೪೭ ॥

ಅಥೋಟಜಮುಪಾಯಾತಂ ನೃದೇವಂ ಪ್ರಣತಂ ಪುರಃ ।
ಸಪರ್ಯಯಾ ಪರ್ಯಗೃಹ್ಣಾತ್ಪ್ರತಿನಂದ್ಯಾನುರೂಪಯಾ
॥ ೪೮ ॥

ಗೃಹೀತಾರ್ಹಣಮಾಸೀನಂ ಸಂಯತಂ ಪ್ರೀಣಯನ್ಮುನಿಃ ।
ಸ್ಮರನ್ ಭಗವದಾದೇಶಮಿತ್ಯಾಹ ಶ್ಲಕ್ಷ್ಣಯಾ ಗಿರಾ
॥ ೪೯ ॥

ನೂನಂ ಚಂಕ್ರಮಣಂ ದೇವ ಸತಾಂ ಸಂರಕ್ಷಣಾಯ ತೇ ।
ವಧಾಯ ಚಾಸತಾಂ ಯಸ್ತ್ವಂ ಹರೇಃ ಶಕ್ತಿರ್ಹಿ ಪಾಲಿನೀ
॥ ೫೦ ॥

ಜಲವು ಮಂಗಳಮಯವೂ, ಅಮೃತದಂತೆ ಮಧುರವಾದುದು. ಮಹರ್ಷಿಗಡಣವು ಸದಾಕಾಲ ಅದನ್ನು ಸೇವಿಸುತ್ತಿದ್ದರು. ॥ ೩೮-೩೯ ॥ ಆ ಸರೋವರವು ಬಗೆ-ಬಗೆಯಾಗಿ ಶಬ್ದಮಾಡುತ್ತಿದ್ದ ಪವಿತ್ರವಾದ ಮೃಗಗಳಿಂದಲೂ, ಪಕ್ಷಿಗಳಿಂದಲೂ ಕೂಡಿದ್ದು, ಪುಣ್ಯ ವೃಕ್ಷಗಳಿಂದಲೂ, ಬಳ್ಳಿಗಳಿಂದಲೂ ಸುತ್ತುವರಿಯಲ್ಪಟ್ಟಿತ್ತು. ಎಲ್ಲ ಋತುಗಳಲ್ಲಿಯೂ ಬಿಡುವ ಹೂವು-ಹಣ್ಣುಗಳಿಂದ ಸಂಪನ್ನವಾಗಿ ಸುಂದರವಾದ ವನಶ್ರೇಣಿಯಿಂದ ಅದರ ಶೋಭೆ ಹೆಚ್ಚಿತ್ತು. ॥ ೪೦ ॥ ಅಲ್ಲಿ ಮದಿಸಿದ ಹಕ್ಕಿಗಳ ಹಿಂಡುಗಳು ಚಿಲಿ-ಪಿಲಿಗುಟ್ಟುತ್ತಿದ್ದವು. ಮದಭರಿತ ದುಂಬಿಗಳು ಝೇಂಕರಿಸುತ್ತಿದ್ದವು. ಉನ್ಮತ್ತ ನವಿಲುಗಳು ಗರಿಗಳನ್ನು ಕೆದರಿಕೊಂಡು ನಟರಂತೆ ಕುಣಿದಾಡುತ್ತಿದ್ದವು. ಮದಿಸಿದ ಕೋಗಿಲೆಗಳು 'ಕುಹೂ-ಕುಹೂ' ಎಂದು ಶಬ್ದಮಾಡುತ್ತಾ ಒಂದನ್ನೊಂದು ಕರೆಯುವಂತೆ ಕಾಣುತ್ತಿದ್ದವು. ॥ ೪೧ ॥ ಆ ಆಶ್ರಮವು ಕದಂಬ, ಚಂಪಕ, ಅಶೋಕ, ಕರಂಜ (ಹೊಂಗೆ), ಬಕುಳ, ಅಸನ, ಕುಂದ, ಮಂದಾರ, ಕುಟಜ, ಚೂತ ಮುಂತಾದ ವೃಕ್ಷಗಳಿಂದ ಕೂಡಿಕೊಂಡು ರಮಣೀಯವಾಗಿತ್ತು. ॥ ೪೨ ॥ ಹಾಗೆಯೇ ಅಲ್ಲಿ ಕಾರಂಡವ, ಪ್ಲವ, ಹಂಸ, ಕುರರ, ನೀರುಕೋಳಿ, ಸಾರಸ, ಚಕ್ರವಾಕ, ಚಕೋರ ಮುಂತಾದ ಪಕ್ಷಿಗಳು ಇಂಪಾಗಿ ಕಲರವಮಾಡುತ್ತಿದ್ದವು. ॥ ೪೩ ॥ ಜಿಂಕೆ, ಹಂದಿ, ಶಲ್ಯಕ, ಗವಯ, ಗಜ, ಗೋಪುಚ್ಛ ಸಿಂಹ, ವಾನರ, ಮುಂಗುಸಿ, ಕಸ್ತೂರಿಮೃಗ ಮುಂತಾದ ವನ್ಯಜೀವಿಗಳೂ ಅಲ್ಲಿ ಓಡಾಡುತ್ತಿದ್ದವು. ॥ ೪೪ ॥

ಅಂತಹ ಆಶ್ರಮವನ್ನೂ, ತೀರ್ಥವನ್ನೂ ಆದಿರಾಜನಾದ ಸ್ವಾಯಂಭುವ ಮನುವು ತನ್ನ ಕನ್ಯೆಯೊಡನೆ ತಲುಪಿದಾಗ ಕರ್ದಮ ಮುನಿಗಳು ಅಗ್ನಿಹೋತ್ರಾದಿಗಳಿಂದ ನಿವೃತ್ತರಾಗಿ ಸುಖಾಸೀನರಾಗಿರುವುದನ್ನು ಕಂಡನು. ॥ ೪೫ ॥ ಬಹಳ ದಿವಸಗಳ ಕಾಲ ಉಗ್ರವಾದ ತಪಸ್ಸಿನಿಂದಾಗಿ ಅವರ ಶರೀರವು ಮಹಾತೇಜಸ್ಸಿನಿಂದ ಬೆಳಗುತ್ತಿತ್ತು. ದೀರ್ಘಕಾಲ ತಪಸ್ಸು ಆಚರಿಸಿದ್ದರೂ ಅವರು ಬಳಲಿದಂತೆ ಕಾಣುತ್ತಿರಲಿಲ್ಲ, ಏಕೆಂದರೆ, ಭಗವಂತನ ಸ್ನೇಹಪೂರ್ಣವಾದ ದೃಷ್ಟಿಯಿಂದಲೂ, ಕರ್ಣಾಮೃತವಾದ ವಚನಗಳಿಂದಲೂ ಅವರಿಗೆ ಅನುಗ್ರಹವಾಗಿತ್ತು. ॥ ೪೬ ॥ ಅವರ ದೇಹವು ನೀಳವಾಗಿದ್ದು ಕಣ್ಣುಗಳು ಕಮಲದ ಎಸಳಿನಂತೆ ಕಮನೀಯವಾಗಿದ್ದವು. ತಲೆಯಲ್ಲಿ ಜಟಾಜೂಟವೂ, ನಡುವಿನಲ್ಲಿ ನಾರುಮಡಿಯು ಶೋಭಿಸುತ್ತಿತ್ತು. ಹತ್ತಿರದಿಂದ ನೋಡಿದರೆ ಅವರು ಸಾಣೆ ಹಿಡಿಯದಿರುವ ಮಹಾಮೂಲ್ಯ ರತ್ನದಂತೆ ಮಲಿನರಾಗಿ ಕಾಣುತ್ತಿದ್ದರು. ॥ ೪೭ ॥ ಮಹಾರಾಜ ಸ್ವಾಯಂಭುವಮನುವು ತನ್ನ ಕುಟೀರಕ್ಕೆ ಬಂದು ತನಗೆ ನಮಸ್ಕರಿಸುವುದನ್ನು ಕಂಡು ಅವರು ಆತನನ್ನು ಆಶೀರ್ವಾದದಿಂದ ಸಂತೋಷಗೊಳಿಸಿ ಯಥೋಚಿತವಾದ ಆತಿಥ್ಯದಿಂದ ಸತ್ಕರಿಸಿದರು. ॥ ೪೮ ॥

ಮನುವು ಅವರ ಸತ್ಕಾರವನ್ನು ಸ್ವೀಕರಿಸಿ, ಶಾಂತವಾದ ಮನಸ್ಸಿನಿಂದ ಆಸನದಲ್ಲಿ ಸುಖವಾಗಿ ಕುಳಿತುಕೊಳ್ಳಲು – ಮುನಿವರ್ಯರು ಭಗವಂತನ ಆಜ್ಞೆಯನ್ನು ಸ್ಮರಿಸಿಕೊಂಡು ಅವನನ್ನು ಮಧುರವಾಣಿಯಿಂದ ಸಂತೋಷಪಡಿಸುತ್ತಾ ಹೀಗೆಂದರು –॥ ೪೯ ॥ ದೇವಾ ! ಪೂಜ್ಯನಾದ ನೀನು ಭಗವಂತನಾದ ಮಹಾ

ಯೋಽರ್ಕೇಂದ್ವಗ್ನೀಂದ್ರವಾಯೂನಾಂ
ಯಮಧರ್ಮಪ್ರಚೇತಸಾಮ್ ।
ರೂಪಾಣಿ ಸ್ಥಾನ ಆಧತ್ಸೇ
ತಸ್ಮೈ ಶುಕ್ಲಾಯ ತೇ ನಮಃ ॥ ೩೧ ॥

ನ ಯದಾ ರಥಮಾಸ್ಥಾಯ ಜೈತ್ರಂ ಮಣಿಗಣಾರ್ಪಿತಮ್ ।
ವಿಸ್ಫೂರ್ಜಚ್ಚಂಡಕೋದಂಡೋ ರಥೇನ ತ್ರಾಸಯನ್ನಘಾನ್ ॥ ೩೨ ॥

ಸ್ವಸೈನ್ಯಚರಣಕ್ಷುಣ್ಣಂ ವೇಪಯನ್ಮಂಡಲಂ ಭುವಃ ।
ವಿಕರ್ಷನ್ ಬೃಹತೀಂ ಸೇನಾಂ ಪರ್ಯಟಸ್ಯಂಶುಮಾನಿವ ॥ ೩೩ ॥

ತದೈವ ಸೇತವಃ ಸರ್ವೇ ವರ್ಣಾಶ್ರಮನಿಬಂಧನಾಃ ।
ಭಗವದ್ರಚಿತಾ ರಾಜನ್ ಭಿದ್ಯೇರನ್ಬತ ದಸ್ಯುಭಿಃ ॥ ೩೪ ॥

ಅಧರ್ಮಶ್ಚ ಸಮೇಧೇತ ಲೋಲುಪೈರ್ವ್ಯಂಕುಶೈರ್ನೃಭಿಃ ।
ಶಯಾನೇ ತ್ವಯಿ ಲೋಕೋಽಯಂ ದಸ್ಯುಗ್ರಸ್ತೋ ವಿನಂಕ್ಷ್ಯತಿ ॥ ೩೫ ॥

ಅಥಾಪಿ ಪೃಚ್ಛೇ ತ್ವಾಂ ವೀರ ಯದರ್ಥಂ ತ್ವಮಿಹಾಗತಃ ।
ತದ್ವಯಂ ನಿರ್ವ್ಯಲೀಕೇನ ಪ್ರತಿಪದ್ಯಾಮಹೇ ಹೃದಾ ॥ ೩೬ ॥

ವಿಷ್ಣುವಿನ ಪಾಲನಶಕ್ತಿರೂಪನು. ಆದ್ದರಿಂದ ನಿನ್ನ ಸಂಚಾರದ ಉದ್ದೇಶವು ನಿಸ್ಸಂಶಯವಾಗಿ ಸಜ್ಜನರ ರಕ್ಷಣೆ ಮತ್ತು ದುರ್ಜನರ ಸಂಹಾರಕ್ಕಾಗಿಯೇ ಇರುವುದು. ॥ ೩೦ ॥ ನೀನು ಸಾಕ್ಷಾತ್ತಾಗಿ ಪರಿಶುದ್ಧವಾದ ವಿಷ್ಣುರೂಪಿಯೇ ಆಗಿದ್ದು, ಬೇರೆ-ಬೇರೆ ಕರ್ಮಗಳಿಗೋಸ್ಕರ ಸೂರ್ಯ, ಚಂದ್ರ, ಇಂದ್ರ, ಅಗ್ನಿ, ವಾಯು, ಯಮ, ವರುಣ ಮುಂತಾದ ರೂಪಗಳನ್ನು ಧರಿಸುವವನಾಗಿದ್ದೀಯೇ. ನಿನಗೆ ನಮಸ್ಕಾರಗಳು. ॥ ೩೧ ॥ ನೀನು ರತ್ನಖಚಿತವಾದ ವಿಜಯರಥದಲ್ಲಿ ಕುಳಿತು ಪ್ರಚಂಡವಾದ ಧನುಸ್ಸನ್ನು ಟಂಕಾರಮಾಡುತ್ತಾ ರಥದ ಘುರ್ಘುರ ಧ್ವನಿಯಿಂದಲೇ ಪಾಪಿಗಳು ಭಯಗ್ರಸ್ತರಾಗುವಂತೆ ಮಾಡುವೆ. ಸೈನ್ಯದ ಪದಹತಿಯಿಂದ ಭೂಮಿಯನ್ನು ನಡುಗಿಸುತ್ತಾ ವಿಶಾಲವಾದ ಸೇನೆಯೊಡನೆ ಭೂಮಿಯ ಮೇಲೆ ಸೂರ್ಯನಂತೆ ಸಂಚರಿಸುತ್ತಿರುವೆ. ನೀನೇನಾದರೂ ಹೀಗೆ ಮಾಡದಿದ್ದರೆ ದಸ್ಯುಗಳು – ಭಗವಂತನು ರಚಿಸಿದ ವರ್ಣಾಶ್ರಮಧರ್ಮಗಳ ಮರ್ಯಾದೆಯನ್ನು ಒಡನೆಯೇ ನಾಶ ಮಾಡಿಬಿಡುವರು. ವಿಷಯಾಸಕ್ತರಾದ ಜನರು ಅಡೆ-ತಡೆಗಳಿಲ್ಲದೆ ಎಲ್ಲೆಡೆ ಅಧರ್ಮವನ್ನೇ ಹರಡುವರು. ನೀನೇನಾದರೂ ಲೋಕದ ಕಡೆಗೆ ಗಮನ ಕೊಡದೆ ನಿಶ್ಚಿಂತನಾಗಿಬಿಟ್ಟರೆ ಈ ಲೋಕವು ದುರಾಚಾರಿಗಳ ಕೈಯಲ್ಲಿ ಸಿಕ್ಕಿಬಿದ್ದು ನಾಶವಾಗಿ ಬಿಡುವುದು. ॥ ೩೨-೩೫ ॥ ಎಲೈ ಮಹಾವೀರನೇ! ಇಷ್ಟೆಲ್ಲಾ ಇದ್ದರೂ 'ನೀನು ಇಲ್ಲಿಗೆ ಯಾವ ಪ್ರಯೋಜನಕ್ಕಾಗಿ ಬಂದಿರುವೆ?' ಎಂದು ನಾನು ಕೇಳುತ್ತೇನೆ. ನೀವು ಯಾವುದೇ ಅಪ್ಪಣೆ ಮಾಡಿದರೂ ಅದನ್ನು ನಾನು ನಿಷ್ಕಪಟಭಾವದಿಂದ ಸಂತೋಷವಾಗಿ ಸ್ವೀಕರಿಸುವೆನು. ॥ ೩೬ ॥

ಇಪ್ಪತ್ತೊಂದನೆಯ ಅಧ್ಯಾಯವು ಮುಗಿಯಿತು. ॥ ೨೧ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ತೃತೀಯಸ್ಕಂಧೇ ಏಕವಿಂಶೋಽಧ್ಯಾಯಃ ॥ ೨೧ ॥

ಇಪ್ಪತ್ತೆರಡನೆಯ ಅಧ್ಯಾಯ

ದೇವಹೂತಿ-ಕರ್ದಮರ ವಿವಾಹ

ಮೈತ್ರೇಯ ಉವಾಚ

ಏವಮಾವಿಷ್ಕೃತಾಶೇಷಗುಣಕರ್ಮೋದಯೋ ಮುನಿಮ್ ।
ಸವ್ರೀಡ ಇವ ತಂ ಸಮ್ರಾಡುಪಾರತಮುವಾಚ ಹ ॥ ೧ ॥

ಮನುರುವಾಚ

ಬ್ರಹ್ಮಾಸೃಜತ್ಸ್ವಮುಖತೋ ಯುಷ್ಮಾನಾತ್ಮಪರೀಪ್ಸಯಾ ।
ಛಂದೋಮಯಸ್ತಪೋವಿದ್ಯಾಯೋಗಯುಕ್ತಾನಲಂಪಟಾನ್ ॥ ೨ ॥

ಶ್ರೀಮೈತ್ರೇಯರು ಹೇಳುತ್ತಾರೆ – ಎಲೈ ವಿದುರನೇ! ಹೀಗೆ ಕರ್ದಮರು ಮನುವಿನ ಸಮಸ್ತ ಗುಣ-ಕರ್ಮಗಳನ್ನು ವರ್ಣಿಸಿದಾಗ ಸಾಮ್ರಾಟನಾದ ಸ್ವಾಯಂಭುವಮನುವು ಆ ನಿವೃತ್ತಿ ಪರಾಯಣ ಮುನಿಯ ಬಳಿ ಸಂಕೋಚದಿಂದಲೇ ಹೀಗೆಂದನು. ॥ ೧ ॥

ಮನುವು ಹೇಳುತ್ತಾನೆ – ಮುನಿವರ್ಯರೇ! ವೇದಮೂರ್ತಿಗಳಾದ ಬ್ರಹ್ಮದೇವರು ತಮ್ಮ ವೇದಮಯವಾದ ದಿವ್ಯ ವಿಗ್ರಹದ ರಕ್ಷಣೆಗಾಗಿ ತಪಸ್ಸು, ವಿದ್ಯೆ, ಯೋಗಗಳಿಂದ ಸಂಪನ್ನರಾದ, ವಿಷಯಲಂಪಟತೆಯಿಲ್ಲದ ಬ್ರಾಹ್ಮಣರಾದ ನಿಮ್ಮನ್ನು ತಮ್ಮ ಮುಖದಿಂದ ಪ್ರಕಟಿಸಿದರು. ಮತ್ತೆ ಸಹಸ್ರಪಾದನಾದ ವಿರಾಟ್ ಪುರುಷನು ನಿಮ್ಮ ರಕ್ಷಣೆಗಾಗಿಯೇ ತನ್ನ ಸಹಸ್ರಭುಜಗಳಿಂದ ಕ್ಷತ್ರಿಯರಾದ ನಮ್ಮನ್ನು ಸೃಷ್ಟಿಮಾಡಿದನು. ಹೀಗೆ ಅವನಿಗೆ

ತತ್ತ್ರಾಣಾಯಾಸೃಜಚ್ಚಾಸ್ಮಾನ್ ದೋಃಸಹಸ್ರಾತ್ಸಹಸ್ರಪಾತ್ ।
ಹೃದಯಂ ತಸ್ಯ ಹಿ ಬ್ರಹ್ಮ ಕ್ಷತ್ರಮಂಗಂ ಪ್ರಚಕ್ಷತೇ ॥ ೩ ॥

ಅತೋ ಹ್ಯನ್ಯೋನ್ಯಮಾತ್ಮಾನಂ ಬ್ರಹ್ಮ ಕ್ಷತ್ರಂ ಚ ರಕ್ಷತಃ ।
ರಕ್ಷತಿ ಸ್ಮಾವ್ಯಯೋ ದೇವಃ ಸ ಯಃ ಸದಸದಾತ್ಮಕಃ ॥ ೪ ॥

ತವ ಸಂದರ್ಶನಾದೇವಚ್ಛಿನ್ನಾ ಮೇ ಸರ್ವಸಂಶಯಾಃ ।
ಯತ್ಸ್ವಯಂ ಭಗವಾನ್ಪ್ರೀತ್ಯಾ ಧರ್ಮಮಾಹ ರಿರಕ್ಷಿಷೋಃ ॥ ೫ ॥

ದಿಷ್ಟ್ಯಾ ಮೇ ಭಗವಾನ್ ದೃಷ್ಟೋ ದುರ್ದರ್ಶೋ ಯೋಽಕೃತಾತ್ಮನಾಮ್ ।
ದಿಷ್ಟ್ಯಾ ಪಾದರಜಃ ಸ್ಪೃಷ್ಟಂ ಶೀರ್ಷ್ಣಾ ಮೇ ಭವತಃ ಶಿವಮ್ ॥ ೬ ॥

ದಿಷ್ಟ್ಯಾ ತ್ವಯಾನುಶಿಷ್ಟೋಽಹಂ ಕೃತಶ್ಚಾನುಗ್ರಹೋ ಮಹಾನ್ ।
ಅಪಾವೃತೈಃ ಕರ್ಣರಂಧ್ರೈರ್ಜುಷ್ಟಾ ದಿಷ್ಟ್ಯೋಶತೀರ್ಗಿರಃ ॥ ೭ ॥

ಸ ಭವಾಂದುಹಿತೃಸ್ನೇಹಪರಿಕ್ಲಿಷ್ಟಾತ್ಮನೋ ಮಮ ।
ಶ್ರೋತುಮರ್ಹಸಿ ದೀನಸ್ಯ ಶ್ರಾವಿತಂ ಕೃಪಯಾ ಮುನೇ ॥ ೮ ॥

ಪ್ರಿಯವ್ರತೋತ್ತಾನಪದೋಃ ಸ್ವಸೇಯಂ ದುಹಿತಾ ಮಮ ।
ಅನ್ವಿಚ್ಛತಿ ಪತಿಂ ಯುಕ್ತಂ ವಯಃಶೀಲಗುಣಾದಿಭಿಃ ॥ ೯ ॥

ಯದಾ ತು ಭವತಃ ಶೀಲಶ್ರುತರೂಪವಯೋಗುಣಾನ್ ।
ಅಶೃಣೋನ್ನಾರದಾದೇಷಾ ತ್ವಯ್ಯಾಸೀತ್ಕೃತನಿಶ್ಚಯಾ ॥ ೧೦ ॥

ತತ್ಪ್ರತೀಚ್ಛ ದ್ವಿಜಾಗ್ರ್ಯೇಮಾಂ ಶ್ರದ್ಧಯೋಪಹೃತಾಂ ಮಯಾ ।
ಸರ್ವಾತ್ಮನಾನುರೂಪಾಂ ತೇ ಗೃಹಮೇಧಿಷು ಕರ್ಮಸು ॥ ೧೧ ॥

ಉದ್ಯತಸ್ಯ ಹಿ ಕಾಮಸ್ಯ ಪ್ರತಿವಾದೋ ನ ಶಸ್ಯತೇ ।
ಅಪಿ ನಿರ್ಮುಕ್ತಸಂಗಸ್ಯ ಕಾಮರಕ್ತಸ್ಯ ಕಿಂ ಪುನಃ ॥ ೧೨ ॥

ಯ ಉದ್ಯತಮನಾದೃತ್ಯ ಕೀನಾಶಮಭಿಯಾಚತೇ ।
ಕ್ಷೀಯತೇ ತದ್ಯಶಃ ಸ್ಫೀತಂ ಮಾನಶ್ಚಾವಜ್ಞಯಾ ಹತಃ ॥ ೧೩ ॥

ಅಹಂ ತ್ವಾಶೃಣವಂ ವಿದ್ವನ್ವಿವಾಹಾರ್ಥಂ ಸಮುದ್ಯತಮ್ ।
ಅತಸ್ತ್ವಮುಪಕುರ್ವಾಣಃ ಪ್ರತ್ತಾಂ ಪ್ರತಿಗೃಹಾಣ ಮೇ ॥ ೧೪ ॥

ಬ್ರಾಹ್ಮಣರು ಹೃದಯವೆಂದೂ, ಕ್ಷತ್ರಿಯರು ಶರೀರವೆಂದೂ ಕರೆಯಲ್ಪಡುತ್ತಾರೆ. ॥ ೨-೩ ॥ ಆದ್ದರಿಂದ ಒಂದೇ ಶರೀರಕ್ಕೆ ಸಂಬಂಧಪಟ್ಟಿರುವುದರಿಂದ ತಮ್ಮ-ತಮ್ಮನ್ನು ಮತ್ತು ಒಬ್ಬರು ಮತ್ತೊಬ್ಬರನ್ನು ರಕ್ಷಿಸುತ್ತಿರುವ ಆ ಬ್ರಾಹ್ಮಣ ಮತ್ತು ಕ್ಷತ್ರಿಯರನ್ನು – ಸಮಸ್ತ ಕಾರಣರೂಪನಾಗಿದ್ದರೂ ವಾಸ್ತವದಲ್ಲಿ ನಿರ್ವಿಕಾರನಾಗಿರುವ ಶ್ರೀಹರಿಯೇ ರಕ್ಷಿಸುತ್ತಾನೆ. ॥ ೪ ॥ ತಮ್ಮ ದರ್ಶನದಿಂದಲೇ ನನ್ನ ಎಲ್ಲ ಸಂದೇಹಗಳೂ ದೂರವಾದುವು. ಏಕೆಂದರೆ, ತಾವು ನನ್ನ ಪ್ರಶಂಸೆಯ ನೆಪದಲ್ಲಿ ಪ್ರಜಾಪಾಲನೆಯ ಇಚ್ಛೆಯುಳ್ಳ ರಾಜನ ಧರ್ಮಗಳನ್ನು ತುಂಬು ಪ್ರೇಮದಿಂದ ನಿರೂಪಿಸಿದಿರಿ. ॥ ೫ ॥ ಜಿತೇಂದ್ರಿಯನಲ್ಲದವರಿಗೆ ತಮ್ಮ ದರ್ಶನವು ಬಹು ದುರ್ಲಭವಾಗಿದೆ. ತಮ್ಮ ದರ್ಶನವನ್ನು ಪಡೆದು, ನಿಮ್ಮ ಚರಣಗಳ ಮಂಗಳಮಯ ಧೂಳಿಯನ್ನು ತಲೆಯಲ್ಲಿ ಮುಡಿದುಕೊಂಡಿರುವ ನಾನು ದೊಡ್ಡ ಭಾಗ್ಯವಂತನೇ ಸರಿ! ॥ ೬ ॥ ನನ್ನ ಸೌಭಾಗ್ಯದಿಂದಲೇ ನೀವು ನನಗೆ ರಾಜ ಧರ್ಮಗಳನ್ನು ಉಪದೇಶಿಸಿ ಮಹದನುಗ್ರಹವನ್ನು ಮಾಡಿರುವಿರಿ. ತಮ್ಮ ಪವಿತ್ರವಾದ ವಾಣಿಯನ್ನು ನಾನು ಕಿವಿಯಾರೆ ಕೇಳಿರುವುದಕ್ಕೂ ನನ್ನ ಶುಭ ಪ್ರಾರಬ್ಧದ ಉದಯವೆಂದೇ ತಿಳಿಯುತ್ತೇನೆ. ॥ ೭ ॥

ಮುನಿಗಳೇ! ಈ ಕನ್ಯೆಯ ಮೇಲಿರುವ ಪ್ರೇಮದಿಂದ ನನ್ನ ಮನಸ್ಸು ತುಂಬಾ ಚಿಂತಾಗ್ರಸ್ತವಾಗಿದೆ. ಆದುದರಿಂದ ದೀನನಾದ ನನ್ನ ಈ ಪ್ರಾರ್ಥನೆಯನ್ನು ತಾವು ಕೃಪಾಪೂರ್ವಕವಾಗಿ ಕೇಳಬೇಕು. ॥ ೮ ॥ ಪ್ರಿಯವ್ರತ ಮತ್ತು ಉತ್ತಾನಪಾದ – ಇವರ ತಂಗಿಯಾಗಿರುವ ಈ ನನ್ನ ಮಗಳು ವಯಸ್ಸು, ಶೀಲ-ಗುಣಗಳಿಂದ ತನಗೆ ಅನುರೂಪನಾದ ಪತಿಯನ್ನು ಪಡೆಯಲು ಬಯಸುತ್ತಾಳೆ. ॥ ೯ ॥ ಈಕೆಯು ಶ್ರೀನಾರದಮಹರ್ಷಿಗಳ ಬಾಯಿಯಿಂದ – ತಮ್ಮ ಶೀಲ, ವಿದ್ಯೆ, ರೂಪ, ಆಯುಸ್ಸು, ಗುಣಗಳ ವರ್ಣನೆಯನ್ನು ಕೇಳಿದಂದಿನಿಂದಲೇ ತಮ್ಮನ್ನು ತನ್ನ ಪತಿಯನ್ನಾಗಿ ಮಾಡಿಕೊಳ್ಳಲು ನಿಶ್ಚಯಿಸಿಬಿಟ್ಟಿದ್ದಾಳೆ. ॥ ೧೦ ॥ ಬ್ರಾಹ್ಮಣಶ್ರೇಷ್ಠರೇ! ನಾನು ಅತ್ಯಂತ ಶ್ರದ್ಧೆಯಿಂದ ಈ ಕನ್ಯೆಯನ್ನು ತಮಗೆ ಸಮರ್ಪಣೆ ಮಾಡುತ್ತಿದ್ದೇನೆ. ತಾವು ಈಕೆಯನ್ನು ಸ್ವೀಕರಿಸಬೇಕು. ಇವಳು ಗೃಹಸ್ಥೋಚಿತ ಎಲ್ಲ ರೀತಿಯ ಕಾರ್ಯಗಳಲ್ಲಿ ತಮಗೆ ಯೋಗ್ಯಳಾಗಿದ್ದಾಳೆ. ॥ ೧೧ ॥ ತಾನಾಗಿಯೇ ಬಂದೊದಗಿದ ಭೋಗವನ್ನು ತಿರಸ್ಕರಿಸುವುದು ವಿರಕ್ತನಿಗೂ ಉಚಿತವಲ್ಲ, ಹಾಗಿರುವಾಗ ವಿಷಯಾಸಕ್ತನಾದವನ ವಿಷಯದಲ್ಲಿ ಹೇಳುವ ಮಾತೇನಿದೆ? ॥ ೧೨ ॥ ತಾನಾಗಿಯೇ ಒದಗಿಬಂದ ಭೋಗವನ್ನು ಕಡೆಗಣಿಸಿ ಮತ್ತೆ ಬೇರೆ ಯಾರೋ ಕೃಪಣನ ಮುಂದೆ ಕೈಚಾಚುವವನು ವಿಸ್ತಾರವಾಗಿ ಹರಡಿಕೊಂಡಿರುವ ತನ್ನ ಕೀರ್ತಿಯನ್ನು ಕಳೆದುಕೊಳ್ಳುವನು ಹಾಗೂ ಮತ್ತೊಬ್ಬರ ತಿರಸ್ಕಾರದಿಂದ ಅವನಿಗೆ ಮಾನಭಂಗವೂ ಆಗುವುದು. ॥ ೧೩ ॥ ಜ್ಞಾನಿಶ್ರೇಷ್ಠರೇ! ತಾವು ವಿವಾಹಮಾಡಿಕೊಳ್ಳಲು ಸಿದ್ಧರಾಗಿದ್ದೀರೆಂದು ನಾನು ಕೇಳಿದ್ದೇನೆ. ತಮ್ಮ ಬ್ರಹ್ಮಚರ್ಯಕ್ಕೆ ಒಂದು ಎಲ್ಲೆ ಇದೆ. ತಾವು ನೈಷ್ಠಿಕ ಬ್ರಹ್ಮಚಾರಿಗಳಲ್ಲವಲ್ಲ! ಆದ್ದರಿಂದ ತಾವು ಈ ಕನ್ಯೆಯನ್ನು ಸ್ವೀಕರಿಸಿರಿ. ನಾನು ಈಕೆಯನ್ನು ತಮಗೆ ಸಮರ್ಪಿಸುತ್ತಿದ್ದೇನೆ. ॥ ೧೪ ॥

ಋಷಿರುವಾಚ

ಬಾಢಮುದ್ವೋಢುಕಾಮೋಽಹಮಪ್ರತ್ತಾ ಚ ತವಾತ್ಮಜಾ ।
ಆವಯೋರನುರೂಪೋಽಸಾವಾದ್ಯೋ ವೈವಾಹಿಕೋ ವಿಧಿಃ ॥ ೧೫ ॥

ಕಾಮಃ ಸ ಭೂಯಾನ್ನರದೇವ ತೇಽಸ್ಯಾಃ
ಪುತ್ರ್ಯಾಃ ಸಮಾಮ್ನಾಯವಿಧೌ ಪ್ರತೀತಃ ।
ಕ ಏವ ತೇ ತನಯಾಂ ನಾದ್ರಿಯೇತ
ಸ್ವಯೈವ ಕಾಂತ್ಯಾ ಕ್ಷಿಪತೀಮಿವ ಶ್ರಿಯಮ್ ॥ ೧೬ ॥

ಯಾಂ ಹರ್ಮ್ಯಪೃಷ್ಠೇ ಕ್ವಣದಂಘ್ರಿಶೋಭಾಂ
ವಿಕ್ರೀಡತೀಂ ಕಂದುಕವಿಹ್ವಲಾಕ್ಷೀಮ್ ।
ವಿಶ್ವಾವಸುರ್ನ್ಯಪತತ್ಸ್ವಾದ್ವಿಮಾನಾದ್
ವಿಲೋಕ್ಯ ಸಮ್ಮೋಹವಿಮೂಢಚೇತಾಃ ॥ ೧೭ ॥

ತಾಂ ಪ್ರಾರ್ಥಯಂತೀಂ ಲಲನಾಲಲಾಮ-
ಮಸೇವಿತಶ್ರೀಚರಣೈರದೃಷ್ಟಾಮ್ ।
ವತ್ಸಾಂ ಮನೋರುಚ್ಚಪದಃ ಸ್ವಸಾರಂ
ಕೋ ನಾನುಮನ್ಯೇತ ಬುಧೋಽಭಿಯಾತಾಮ್ ॥ ೧೮ ॥

ಅತೋ ಭಜಿಷ್ಯೇ ಸಮಯೇನ ಸಾಧ್ವೀಂ
ಯಾವತ್ತೇಜೋ ಬಿಭೃಯಾದಾತ್ಮನೋ ಮೇ ।
ಅತೋ ಧರ್ಮಾನ್ಪಾರಮಹಂಸ್ಯಮುಖ್ಯಾನ್
ಶುಕ್ಲಪ್ರೋಕ್ತಾನ್ ಬಹು ಮನ್ಯೇಽವಿಹಿಂಸ್ರಾನ್ ॥ ೧೯ ॥

ಯತೋಽಭವದ್ವಿಶ್ವಮಿದಂ ವಿಚಿತ್ರಂ
ಸಂಸ್ಥಾಸ್ಯತೇ ಯತ್ರ ಚ ವಾವತಿಷ್ಠತೇ ।
ಪ್ರಜಾಪತೀನಾಂ ಪತಿರೇಷ ಮಹ್ಯಂ
ಪರಂ ಪ್ರಮಾಣಂ ಭಗವಾನನಂತಃ ॥ ೨೦ ॥

ಮೈತ್ರೇಯ ಉವಾಚ

ಸ ಉಗ್ರಧನ್ವನ್ನಿಯದೇವಾಬಭಾಷೇ
ಆಸೀಚ್ಚ ತೂಷ್ಣೀಮರವಿಂದನಾಭಮ್ ।
ಧಿಯೋಪಗೃಹ್ಣನ್ ಸ್ಮಿತಶೋಭಿತೇನ
ಮುಖೇನ ಚೇತೋ ಲುಲುಭೇ ದೇವಹೂತ್ಯಾಃ ॥ ೨೧ ॥

ಶ್ರೀಕರ್ದಮ ಮುನಿಗಳು ಹೇಳಿದರು – ಮಹಾರಾಜನೇ! ಸರಿ. ನಾನು ವಿವಾಹವಾಗಲು ಬಯಸುತ್ತಿದ್ದೇನೆ. ನಿಮ್ಮ ಕನ್ಯೆಯ ವಾಗ್ದಾನವು ಯಾರೊಂದಿಗೂ ಆಗಲಿಲ್ಲವಲ್ಲ! ಆದ್ದರಿಂದ ನಮ್ಮಿಬ್ಬರ ವಿವಾಹವು ಸರ್ವಶ್ರೇಷ್ಠ ಬ್ರಾಹ್ಮವಿಧಿಯಿಂದ * ಆಗುವುದು ಉಚಿತವೇ ಆಗಿದೆ. ॥ ೧೫ ॥ ಎಲೈ ರಾಜನೇ! ವೇದೋಕ್ತ ವಿವಾಹ-ವಿಧಿಯಲ್ಲಿ 'ಗೃಭ್ಣಾಮಿ ತೇ' ಮುಂತಾದ ಮಂತ್ರಗಳಲ್ಲಿ ಹೇಳಿರುವ ಸಂತಾನಕಾಮನೆಯು ನಿಮ್ಮ ಈ ಕನ್ಯೆಯೊಂದಿಗೆ ನಮ್ಮ ಸಂಬಂಧ ಬೆಳೆಯುವುದರಿಂದ ಸಫಲವಾಗುವುದು. ತನ್ನ ಅಂಗಕಾಂತಿಯಿಂದ ಆಭೂಷಣಗಳ ಶೋಭೆಯನ್ನೂ ತಿರಸ್ಕರಿಸುತ್ತಿರುವ ನಿಮ್ಮ ಕನ್ಯೆಯನ್ನು ಯಾರು ತಾನೇ ಅನಾದರಿಸುವನು? ॥ ೧೬ ॥ ಒಮ್ಮೆ ಈಕೆಯು ತನ್ನ ಅರಮನೆಯ ಮೇಲ್ಛಾವಣಿಯಲ್ಲಿ ಚೆಂಡಾಟವನ್ನು ಆಡುತ್ತಿದ್ದಳು. ಚೆಂಡಿನ ಹಿಂದೆ-ಹಿಂದೆ ಅತ್ತ-ಇತ್ತ ಓಡುತ್ತಿರುವುದರಿಂದ ಆಕೆಯ ಕಣ್ಣುಗಳು ಚಂಚಲವಾಗಿದ್ದುವು. ಕಾಲಿನ ಕಾಲಂದುಗೆಗಳು ಝಣ-ಝಣ ಶಬ್ದಮಾಡುತ್ತಿದ್ದವು. ಆಗ ಈಕೆಯನ್ನು ಕಂಡು ಮೋಹಗೊಂಡ ವಿಶ್ವಾವಸು ಗಂಧರ್ವನು ಪ್ರಜ್ಞೆಯಿಲ್ಲದೆ ವಿಮಾನದಿಂದ ಕೆಳಗೆ ಉರುಳಿದ್ದನು. ॥ ೧೭ ॥ ಅಂತಹ ಸೌಂದರ್ಯರಾಶಿಯಾದ ಈಕೆಯು ತಾನಾಗಿ ಬಂದು ಪ್ರಾರ್ಥಿಸಿದಾಗ ಯಾವ ವಿವೇಕಿಯು ತಾನೇ ಇವಳನ್ನು ಸ್ವೀಕರಿಸದೆ ಹೋದಾನು? ಇವಳಾದರೋ ಸಾರ್ವಭೌಮ ಸ್ವಾಯಂಭುವ ಮನುವಿನ ಕಣ್ಮಣಿಯಾದ ಸುಪುತ್ರಿಯು. ಉತ್ತಾನಪಾದನ ಪ್ರೀತಿಯ ತಂಗಿ ಹಾಗೂ ರಮಣೀಯ ರತ್ನವಾಗಿದ್ದಾಳೆ. ಶ್ರೀಲಕ್ಷ್ಮೀದೇವಿಯ ಚರಣಗಳನ್ನು ಎಂದಿಗೂ ಉಪಾಸನೆ ಮಾಡದವರಿಗೆ ಈಕೆಯ ದರ್ಶನವೂ ಆಗಲಾರದು. ॥ ೧೮ ॥ ಆದ್ದರಿಂದ ನಾನು ನಿನ್ನ ಈ ಸಾಧ್ವಿಯಾದ ಕನ್ಯೆಯನ್ನು ಅವಶ್ಯವಾಗಿ ಸ್ವೀಕರಿಸುವೆನು. ಆದರೆ ಒಂದು ನಿಬಂಧನೆ ಇದೆ. ಈಕೆಯಲ್ಲಿ ಸಂತಾನ ಉಂಟಾಗುವವರೆಗೆ ನಾನು ಗೃಹಸ್ಥ ಧರ್ಮಾನುಸಾರವಾಗಿ ಇವಳೊಂದಿಗೆ ಇರುವೆನು. ಅನಂತರ ಭಗವಂತನು ಹೇಳಿರುವ ಸಂನ್ಯಾಸಪ್ರಧಾನವಾದ ಹಿಂಸಾರಹಿತವಾದ ಶಮ-ದಮಾದಿ ಧರ್ಮಗಳಿಗೆ ಹೆಚ್ಚು ಪ್ರಾಶಸ್ತ್ಯನೀಡುವೆನು. ॥ ೧೯ ॥ ಈ ವಿಚಿತ್ರವಾದ ಜಗತ್ತು ಯಾರಿಂದ ಉಂಟಾಗಿದೆಯೋ, ಯಾರಲ್ಲಿ ಲೀನವಾಗಿ ಹೋಗುತ್ತದೋ, ಯಾರ ಆಶ್ರಯದಿಂದ ಇದು ಸ್ಥಿರವಾಗಿ ಇದೆಯೋ – ಆ ಪ್ರಜಾಪತಿಗಳಿಗೂ ಪತಿಯಾದ ಭಗವಾನ್ ಶ್ರೀಅನಂತನೇ ನನಗೆ ಅತ್ಯಂತ ಅಧಿಕವಾಗಿ ಮಾನ್ಯನಾಗಿದ್ದಾನೆ. ॥ ೨೦ ॥

ಶ್ರೀಮೈತ್ರೇಯರು ಹೇಳುತ್ತಾರೆ – ಪ್ರಚಂಡ ಧನುರ್ಧಾರಿಯಾದ ವಿದುರನೇ! ಕರ್ದಮರು ಇಷ್ಟನ್ನು ಮಾತ್ರಹೇಳಿ ಹೃದಯದಲ್ಲಿ ಭಗವಾನ್ ಪದ್ಮನಾಭನನ್ನು ಧ್ಯಾನಿಸುತ್ತಾ ಮೌನವಾದರು. ಆಗ ಅವರ ಮಂದಹಾಸಯುಕ್ತ ಮುಖಕಮಲವನ್ನು ನೋಡಿ ದೇವಹೂತಿಯ ಚಿತ್ತವು ಸೂರೆಗೊಂಡಿತು. ॥ ೨೧ ॥

* ಮನುಸ್ಮೃತಿಯಲ್ಲಿ ಎಂಟು ಬಗೆಯ ವಿವಾಹಗಳನ್ನು ಉಲ್ಲೇಖಿಸಿದೆ – (೧) ಬ್ರಾಹ್ಮ (೨) ದೈವ (೩) ಆರ್ಷ, (೪) ಪ್ರಾಜಾಪತ್ಯ, (೫) ಆಸುರ, (೬) ಗಾಂಧರ್ವ, (೭) ರಾಕ್ಷಸ (೮) ಪೈಶಾಚ. ಇವುಗಳಲ್ಲಿ ಮೊದಲನೆಯದಾದ 'ಬ್ರಾಹ್ಮ' ವಿವಾಹವು ಶ್ರೇಷ್ಠವೆನಿಸುತ್ತದೆ. ಇದರಲ್ಲಿ ತಂದೆಯೇ ಯೋಗ್ಯನಾದ ವರನನ್ನು ಆರಿಸಿ, ಆತನಿಗೆ ತನ್ನ ಕನ್ಯೆಯನ್ನು ದಾನಮಾಡುತ್ತಾನೆ.

ಸೋಽನುಜ್ಞಾತ್ವಾ ವ್ಯವಸಿತಂ ಮಹಿಷ್ಯಾ ದುಹಿತುಃ ಸ್ಫುಟಮ್ ।
ತಸ್ಮೈ ಗುಣಗಣಾಢ್ಯಾಯ ದದೌ ತುಲ್ಯಾಂ ಪ್ರಹರ್ಷಿತಃ ॥ ೨೨ ॥

ಶತರೂಪಾ ಮಹಾರಾಜ್ಞೀ ಪಾರಿಬರ್ಹಾನ್ಮಹಾಧನಾನ್ ।
ದಂಪತ್ಯೋಃ ಪರ್ಯದಾತ್ಪ್ರೀತ್ಯಾ ಭೂಷಾವಾಸಃ ಪರಿಚ್ಛದಾನ್ ॥ ೨೩ ॥

ಪ್ರತ್ತಾಂ ದುಹಿತರಂ ಸಮ್ರಾಟ್ಸದೃಕ್ಷಾಯ ಗತವ್ಯಥಃ ।
ಉಪಗುಹ್ಯ ಚ ಬಾಹುಭ್ಯಾಮೌತ್ಕಂಠ್ಯೋನ್ಮಥಿತಾಶಯಃ ॥ ೨೪ ॥

ಅಶಕ್ನುವಂಸ್ತದ್ವಿರಹಂ ಮುಂಚನ್ ಬಾಷ್ಪಕಲಾಂ ಮುಹುಃ ।
ಆಸಿಂಚದಂಬ ವತ್ಸೇತಿ ನೇತ್ರೋದೈರ್ದುಹಿತುಃ ಶಿಖಾಃ ॥ ೨೫ ॥

ಆಮಂತ್ರ್ಯ ತಂ ಮುನಿವರಮನುಜ್ಞಾತಃ ಸಹಾನುಗಃ ।
ಪ್ರತಸ್ಥೇ ರಥಮಾರುಹ್ಯ ಸಭಾರ್ಯಃ ಸ್ವಪುರಂ ನೃಪಃ ॥ ೨೬ ॥

ಉಭಯೋರ್ಋಷಿಕುಲ್ಯಾಯಾಃ ಸರಸ್ವತ್ಯಾಃ ಸುರೋಧಸೋಃ ।
ಋಷೀಣಾಮುಪಶಾಂತಾನಾಂ ಪಶ್ಯನ್ನಾಶ್ರಮಸಂಪದಃ ॥ ೨೭ ॥

ತಮಾಯಾಂತಮಭಿಪ್ರೇತ್ಯ ಬ್ರಹ್ಮಾವರ್ತಾತ್ಪ್ರಜಾಃ ಪತಿಮ್ ।
ಗೀತಸಂಸ್ತುತಿವಾದಿತ್ರೈಃ ಪ್ರತ್ಯುದೀಯುಃ ಪ್ರಹರ್ಷಿತಾಃ ॥ ೨೮ ॥

ಬರ್ಹಿಷ್ಮತೀ ನಾಮ ಪುರೀ ಸರ್ವಸಂಪತ್ಸಮನ್ವಿತಾ ।
ನ್ಯಪತನ್ ಯತ್ರ ರೋಮಾಣಿ ಯಜ್ಞಸ್ಯಾಂಗಂ ವಿಧುನ್ವತಃ ॥ ೨೯ ॥

ಕುಶಾಃ ಕಾಶಾಸ್ತ ಏವಾಸನ್ ಶಶ್ವದ್ಧರಿತವರ್ಚಸಃ ।
ಋಷಯೋ ಯೈಃ ಪರಾಭಾವ್ಯ ಯಜ್ಞಘ್ನಾನ್ಯಜ್ಞಮೀಜಿರೇ ॥ ೩೦ ॥

ಕುಶಕಾಶಮಯಂ ಬರ್ಹಿರಾಸ್ತೀರ್ಯ ಭಗವಾನ್ಮನುಃ ।
ಅಯಜದ್ಯಜ್ಞಪುರುಷಂ ಲಬ್ಧ್ವಾ ಸ್ಥಾನಂ ಯತೋ ಭುವಮ್ ॥ ೩೧ ॥

ಬರ್ಹಿಷ್ಮತೀಂ ನಾಮ ವಿಭುರ್ಯಾಂ ನಿರ್ವಿಶ್ಯ ಸಮಾವಸತ್ ।
ತಸ್ಯಾಂ ಪ್ರವಿಷ್ಟೋ ಭವನಂ ತಾಪತ್ರಯವಿನಾಶನಮ್ ॥ ೩೨ ॥

ಈ ಸಂಬಂಧದಲ್ಲಿ ಮಹಾರಾಣಿ ಶತರೂಪಾ ಮತ್ತು ರಾಜಕುಮಾರಿಯ ಸ್ಪಷ್ಟ ಅನುಮತಿಯಿದೆ ಎಂದು ಗಮನಿಸಿ ಮನುವು ಅನೇಕಗುಣಸಂಪನ್ನರಾದ ಕರ್ದಮರಿಗೆ ಅವರಷ್ಟೇ ಗುಣಸಂಪನ್ನಳಾದ ತನ್ನ ಕನ್ಯೆಯನ್ನು ಸಂತೋಷವಾಗಿ ದಾನಮಾಡಿದನು. ॥ ೨೨ ॥ ಮಹಾರಾಣಿ ಶತರೂಪೆಯೂ ಕೂಡ ಮಗಳಿಗೂ – ಅಳಿಯನಿಗೂ ಅತ್ಯಂತ ಪ್ರೇಮ ದಿಂದ ಬಹುಮೂಲ್ಯವಾದ ಅನೇಕ ವಸ್ತ್ರಭೂಷಣಗಳನ್ನೂ, ಗೃಹಸ್ಥ ಜೀವನಕ್ಕೆ ಬೇಕಾದ ಪಾತ್ರೆ ಮುಂತಾದುವುಗಳನ್ನು ಬಳುವಳಿಯನ್ನಾಗಿ ಕೊಟ್ಟಳು. ॥ ೨೩ ॥ ಹೀಗೆ ಸುಯೋಗ್ಯನಾದ ವರನಿಗೆ ಕನ್ಯೆಯನ್ನು ಕೊಟ್ಟು ಮನು ಮಹಾರಾಜನು ನಿಶ್ಚಿಂತನಾದನು. ಹೊರಡುವಾಗ ಮಗಳ ಅಗಲಿಕೆಯನ್ನು ಸಹಿಸಲಾರದೆ ದುಃಖದಿಂದ ಆಕೆಯನ್ನು ಎದೆಗೊತ್ತಿಕೊಂಡು ಮಗಳೇ! ಮಗೂ! ಎಂದು ಹೇಳಿ ಅಳತೊಡಗಿದರು. ಕಣ್ಣುಗಳಿಂದ ಹರಿಯುತ್ತಿದ್ದ ಕಣ್ಣೀರಿನ ಪ್ರವಾಹದಿಂದ ಆತನು ದೇವಹೂತಿಯ ತಲೆಗೂದಲನ್ನು ನೆನೆಯಿಸಿಬಿಟ್ಟನು. ॥ ೨೪-೨೫ ॥ ಅನಂತರ ಮನುವು ಮುನಿವರ್ಯ ಕರ್ದಮರಲ್ಲಿ ಹೋಗಿ ಬರುವೆನೆಂದು ಹೇಳಿ, ಅವರಿಂದ ಅನುಮತಿಯನ್ನು ಪಡೆದು ಮಹಾರಾಣಿಯೊಂದಿಗೆ ರಥದಲ್ಲಿ ಕುಳಿತು, ತನ್ನ ಸೇವಕರೊಡನೆ ಋಷಿಗಣಗಳಿಂದ ಸೇವಿತನಾದ ಸರಸ್ವತೀನದಿಯ ಎರಡೂ ದಡಗಳಲ್ಲಿದ್ದ ಋಷ್ಯಾಶ್ರಮಗಳ ಸೊಬಗನ್ನು ನೋಡುತ್ತಾ ತನ್ನ ರಾಜಧಾನಿಗೆ ಹೊರಟುಹೋದನು. ॥ ೨೬-೨೭॥

ತಮ್ಮ ಪ್ರಭುಗಳು ಬರುತ್ತಿರುವ ಸಮಾಚಾರವನ್ನು ತಿಳಿದೊಡನೆ ಬ್ರಹ್ಮಾವರ್ತದ ಪ್ರಜೆಗಳು ಪರಮಾನಂದ ಪುಳಕಿತರಾಗಿ ಸ್ತೋತ್ರ-ಗೀತ ಹಾಗೂ ವಾದ್ಯಧ್ವನಿಗಳೊಡನೆ ಆತನನ್ನು ಸ್ವಾಗತಿಸಲು ರಾಜಧಾನಿಯಿಂದ ಹೊರಗೆ ಬಂದರು. ॥ ೨೮ ॥ ಸಮಸ್ತ ಸಂಪತ್ತುಗಳಿಂದ ಸಂಪನ್ನವಾಗಿದ್ದ 'ಬರ್ಹಿಷ್ಮತಿನಗರ'ವು ಸ್ವಾಯಂಭುವ ಮನುವಿನ ರಾಜಧಾನಿಯಾಗಿತ್ತು. ಭಗವಂತನಾದ ಶ್ರೀವರಾಹಸ್ವಾಮಿಯು ರಸಾತಳದಿಂದ ಭೂಮಿಯನ್ನು ಮೇಲಕ್ಕೆತ್ತಿ ತಂದಾಗ ತನ್ನ ದೇಹವನ್ನು ಕೊಡಹಲು ಅದರಿಂದ ರೋಮಗಳು ಉದುರಿದ ಜಾಗೆವದು. ॥ ೨೯ ॥ ಆ ರೋಮಗಳೇ ಸದಾ ಹಸಿರು-ಪಚ್ಚೆಯಿಂದ ಶೋಭಿಸುವ 'ಕುಶ' ಮತ್ತು 'ಕಾಶ'ಗಳೆಂಬ ಹುಲ್ಲುಗಳಾದವು. ಅವುಗಳ ಮೂಲಕ ಮುನಿಗಳು ಯಜ್ಞದಲ್ಲಿ ವಿಘ್ನವನ್ನುಂಟು ಮಾಡುತ್ತಿದ್ದ ದೈತ್ಯರನ್ನು ತಿರಸ್ಕರಿಸಿ ಭಗವಾನ್ ಯಜ್ಞಪುರುಷನನ್ನು ಯಜ್ಞಗಳ ಮೂಲಕ ಆರಾಧಿಸಿದ್ದರು. ॥ ೩೦ ॥ ಮನುಸಾರ್ವಭೌಮನೂ ಕೂಡ ಶ್ರೀವರಾಹದೇವರ ಅನುಗ್ರಹದಿಂದ ಭೂಮಿಯೆಂಬ ನಿವಾಸಸ್ಥಾನವು ದೊರೆತ ಬಳಿಕ, ಅದೇ ಜಾಗದಲ್ಲಿ ಕುಶ ಮತ್ತು ಕಾಶಗಳ ಆಸನವನ್ನು ಹರಡಿ ಯಜ್ಞಪುರುಷನನ್ನು ಪೂಜಿಸಿದ್ದನು. ॥ ೩೧ ॥

ಮನುವು ತನ್ನ ನಿವಾಸಸ್ಥಾನವಾದ ಬರ್ಹಿಷ್ಮತಿನಗರಿಯನ್ನು ತಲುಪಿ, ತಾಪತ್ರಯಗಳನ್ನು ಹೋಗಲಾಡಿಸುವ ತನ್ನ ಅರಮನೆಯನ್ನು ಪ್ರವೇಶಮಾಡಿದನು. ॥ ೩೨ ॥ ಅಲ್ಲಿ ಆತನು ತನ್ನ ಭಾರ್ಯೆ ಹಾಗೂ ಸಂತಾನಗಳೊಡನೆ ಧರ್ಮ, ಅರ್ಥ ಮತ್ತು ಮೋಕ್ಷಗಳಿಗೆ ಅನುಕೂಲವಾಗಿರುವ ಭೋಗಗಳನ್ನು ಅನುಭವಿಸತೊಡಗಿದನು.

ಸಭಾರ್ಯಃ ಸಪ್ರಜಃ ಕಾಮಾನ್ಬುಭುಜೇಽನ್ಯಾವಿರೋಧತಃ ।
ಸಂಗೀಯಮಾನಸತ್ಕೀರ್ತಿಃ ಸಸ್ತ್ರೀಭಿಃ ಸುರಗಾಯಕೈಃ ।
ಪ್ರತ್ಯೂಷೇಷ್ವನುಬದ್ಧೇನ ಹೃದಾ ಶೃಣ್ವನ್ ಹರೇಃ ಕಥಾಃ
॥ ೩೩ ॥

ನಿಷ್ಣಾತಂ ಯೋಗಮಾಯಾಸು
ಮುನಿಂ ಸ್ವಾಯಂಭುವಂ ಮನುಮ್ ।
ಯದಾ ಭ್ರಂಶಯಿತುಂ ಭೋಗಾ
ನ ಶೇಕುರ್ಭಗವತ್ಪರಮ್ ॥ ೩೪ ॥

ಅಯಾತಯಾಮಾಸ್ತಸ್ಯಾಸನ್ ಯಾಮಾಃ ಸ್ವಾಂತರಯಾಪನಾಃ ।
ಶೃಣ್ವತೋ ಧ್ಯಾಯತೋ ವಿಷ್ಣೋಃ ಕುರ್ವತೋ ಬ್ರುವತಃ ಕಥಾಃ
॥ ೩೫ ॥

ಸ ಏವಂ ಸ್ವಾಂತರಂ ನಿನ್ಯೇ ಯುಗಾನಾಮೇಕಸಪ್ತತಿಮ್ ।
ವಾಸುದೇವಪ್ರಸಂಗೇನ ಪರಿಭೂತಗತಿತ್ರಯಃ
॥ ೩೬ ॥

ಶಾರೀರಾ ಮಾನಸಾ ದಿವ್ಯಾ ವೈಯಾಸೇ ಯೇ ಚ ಮಾನುಷಾಃ ।
ಭೌತಿಕಾಶ್ಚ ಕಥಂ ಕ್ಲೇಶಾ ಬಾಧಂತೇ ಹರಿಸಂಶ್ರಯಮ್
॥ ೩೭ ॥

ಯಃ ಪೃಷ್ಟೋ ಮುನಿಭಿಃ ಪ್ರಾಹ
ಧರ್ಮಾನ್ನಾನಾವಿಧಾನ್ ಶುಭಾನ್ ।
ನೃಣಾಂ ವರ್ಣಾಶ್ರಮಾಣಾಂ ಚ
ಸರ್ವಭೂತಹಿತಃ ಸದಾ ॥ ೩೮ ॥

ಏತತ್ತ ಆದಿರಾಜಸ್ಯ ಮನೋಶ್ಚರಿತಮದ್ಭುತಮ್ ।
ವರ್ಣಿತಂ ವರ್ಣನೀಯಸ್ಯ ತದಪತ್ಯೋದಯಂ ಶೃಣು
॥ ೩೯ ॥

ಪ್ರಾತಃಕಾಲವಾದೊಡನೆ ಗಂಧರ್ವರು ತಮ್ಮ ಹೆಂಡಿರೊಡನೆ ಆತನ ಕೀರ್ತಿಯನ್ನು ಕೊಂಡಾಡುತ್ತಿದ್ದರು. ಆದರೆ ಆತನು ಅದರಲ್ಲಿ ಆಸಕ್ತಿ ತೋರದೆ ಪ್ರೇಮಪೂರ್ಣವಾದ ಹೃದಯದಿಂದ ಶ್ರೀಹರಿಯ ಕಥೆಗಳನ್ನೇ ಕೇಳುತ್ತಿದ್ದನು. ॥ ೩೩ ॥ ಆ ಮನುವು ಇಷ್ಟಬಂದ ಭೋಗಗಳನ್ನು ನಿರ್ಮಿಸುವ ಸಾಮರ್ಥ್ಯವನ್ನು ಹೊಂದಿದ್ದನು. ಆದರೆ ಮನನಶೀಲನೂ, ಭಗವತ್ಪರಾಯಣನೂ ಆದ ಆ ಯೋಗಿಯನ್ನು ಭೋಗಗಳು ಕಿಂಚಿತ್ತಾದರೂ ಕದಲಿಸದೆ ಹೋದುವು. ॥ ೩೪ ॥ ತನ್ನ ಮನ್ವಂತರವೆಂಬ ಕಾಲದಲ್ಲಿ ಒಂದು ಕ್ಷಣಕಾಲವನ್ನು ಆವನು ವ್ಯರ್ಥಮಾಡುತ್ತಿರಲಿಲ್ಲ. ಶ್ರೀಮಹಾವಿಷ್ಣುವಿನ ಕಥೆಗಳನ್ನು ಕೇಳುವುದರಲ್ಲಿಯೂ, ಧ್ಯಾನಿಸುವುದರಲ್ಲಿಯೂ, ರಚಿಸುವುದರಲ್ಲಿಯೂ, ನಿರೂಪಿಸುವುದರಲ್ಲಿಯೂ, ಎಲ್ಲ ಕಾಲವನ್ನು ಸದುಪಯೋಗ ಪಡಿಸುತ್ತಿದ್ದನು. ॥ ೩೫ ॥ ಹೀಗೆ ಆವನು ತನ್ನ ಜಾಗ್ರತ್, ಸ್ವಪ್ನ ಸುಷುಪ್ತಿಗಳೆಂಬ ಮೂರು ಅವಸ್ಥೆಗಳನ್ನೂ, ಸತ್ತ್ವ, ರಜ, ತಮಗಳೆಂಬ ತ್ರಿಗುಣಗಳನ್ನು ತಿರಸ್ಕರಿಸಿ ತ್ರಿಗುಣಾತೀತನಾಗಿ ಶ್ರೀವಾಸುದೇವನ ಕಥಾಪ್ರಸಂಗದಲ್ಲೇ ಇರುತ್ತಾ ತನ್ನ ಮನ್ವಂತರದ ಎಪ್ಪತ್ತೊಂದು ಚತುರ್ಯುಗಗಳನ್ನು ಸಫಲವಾಗಿ ಕಳೆದನು. ॥ ೩೬ ॥ ವ್ಯಾಸಪುತ್ರನಾದ ವಿದುರನೇ! ಶ್ರೀಹರಿಯನ್ನು ಆಶ್ರಯಿಸಿರುವ ಸುಕೃತಿಯನ್ನು ಶಾರೀರಿಕ, ಮಾನಸಿಕ, ದೈವಿಕ, ಮಾನುಷಿಕ ಅಥವಾ ಭೌತಿಕ ದುಃಖಗಳು ಹೇಗೆ ತಾನೇ ಕಾಡಿಸಿಯಾವು. ॥ ೩೭ ॥ ಮಹಾಪುರುಷನಾದ ಮನುವು ಸಮಸ್ತ ಪ್ರಾಣಿಗಳ ಹಿತದಲ್ಲೇ ತೊಡಗಿರುತ್ತಿದ್ದನು. ಮುನಿಗಳು ಆತನನ್ನು ಪ್ರಶ್ನಿಸಿದಾಗ ಆ ಧರ್ಮಾತ್ಮ ಪ್ರಭುವು - ಮನುಷ್ಯರಿಗೂ ಹಾಗೂ ಎಲ್ಲ ವರ್ಣಗಳಿಗೂ, ಆಶ್ರಮಗಳಿಗೂ ಸಂಬಂಧಪಟ್ಟ ಅನೇಕ ಮಂಗಲಮಯ ಧರ್ಮಗಳನ್ನೂ ವರ್ಣಿಸಿದನು. (ಅದು 'ಮನುಸಂಹಿತಾ' ಎಂಬ ಗ್ರಂಥದ ರೂಪದಲ್ಲಿ ಈಗಲೂ ಉಪಲಬ್ಧವಾಗಿದೆ.) ॥ ೩೮ ॥

ಜಗತ್ತಿನ ಮೊಟ್ಟಮೊದಲನೆಯ ಚಕ್ರವರ್ತಿಯೂ, ಪುರುಷಶ್ರೇಷ್ಠನೂ ಪುಣ್ಯಶ್ಲೋಕನೂ ಆದ ಸ್ವಾಯಂಭುವ ಮನುವಿನ ಅದ್ಭುತ ಚರಿತ್ರೆಯನ್ನು ನಾನು ನಿನಗೆ ವರ್ಣಿಸಿರುವೆನು. ಈಗ ಆತನ ಕನ್ಯಾರತ್ನವಾದ ದೇವಹೂತಿಯ ಮಹಿಮೆಯನ್ನು ಕೇಳುವವನಾಗು. ॥ ೩೯ ॥

ಇಪ್ಪತ್ತೆರಡನೆಯ ಅಧ್ಯಾಯವು ಮುಗಿಯಿತು. ॥ ೨೨ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ತೃತೀಯಸ್ಕಂಧೇ ದ್ವಾವಿಂಶೋಽಧ್ಯಾಯಃ ॥ ೨೨ ॥

ಇಪ್ಪತ್ತಮೂರನೆಯ ಅಧ್ಯಾಯ

ಕರ್ದಮ-ದೇವಹೂತಿಯರ ವಿಹಾರ

ಮೈತ್ರೇಯ ಉವಾಚ

ಪಿತೃಭ್ಯಾಂ ಪ್ರಸ್ಥಿತೇ ಸಾಧ್ವೀ ಪತಿಮಿಂಗಿತಕೋವಿದಾ ।
ನಿತ್ಯಂ ಪರ್ಯಚರತ್ಪ್ರೀತ್ಯಾ ಭವಾನೀವ ಭವಂ ಪ್ರಭುಮ್
॥ ೧ ॥

ಶ್ರೀಮೈತ್ರೇಯರು ಹೇಳುತ್ತಾರೆ - ಎಲೈ ವಿದುರನೇ! ತಂದೆ-ತಾಯಿಗಳು ಹೊರಟುಹೋದ ಬಳಿಕ ಪತಿಯ ಇಂಗಿತವನ್ನು ತಿಳಿಯುವುದರಲ್ಲಿ ಕುಶಲೆಯಾದ, ಸಾಧ್ವೀಮಣಿ ದೇವಹೂತಿಯು ಶ್ರೀಪಾರ್ವತೀದೇವಿಯು ಪರಶಿವನನ್ನು ಪೂಜಿಸುವಂತೆ ಪ್ರತಿದಿನವೂ ಪ್ರೇಮಪೂರ್ವಕವಾಗಿ ಪತಿಯಸೇವೆ, ಶುಶ್ರೂಷೆಗಳನ್ನು ಮಾಡತೊಡಗಿದಳು. ॥ ೧ ॥

ವಿಶ್ರಮ್ಭೇಣಾತ್ಮಶೌಚೇನ ಗೌರವೇಣ ದಮೇನ ಚ ।
ಶುಶ್ರೂಷಯಾ ಸೌಹೃದೇನ ವಾಚಾ ಮಧುರಯಾ ಚ ಭೋಃ ॥ ೨ ॥

ವಿಸೃಜ್ಯ ಕಾಮಂ ದಂಭಂ ಚ ದ್ವೇಷಂ ಲೋಭಮಘಂ ಮದಮ್ ।
ಅಪ್ರಮತ್ತೋದ್ಯತಾ ನಿತ್ಯಂ ತೇಜೀಯಾಂಸಮತೋಷಯತ್ ॥ ೩ ॥

ಸ ವೈ ದೇವರ್ಷಿವರ್ಯಸ್ತಾಂ ಮಾನವೀಂ ಸಮನುವ್ರತಾಮ್ ।
ದೈವಾದ್ಗರೀಯಸಃ ಪತ್ಯುರಾಶಾಸಾನಾಂ ಮಹಾಶಿಷಃ ॥ ೪ ॥

ಕಾಲೇನ ಭೂಯಸಾ ಕ್ಷಾಮಾಂ ಕರ್ಶಿತಾಂ ವ್ರತಚರ್ಯಯಾ ।
ಪ್ರೇಮಗದ್ಗದಯಾ ವಾಚಾ ಪೀಡಿತಃ ಕೃಪಯಾಬ್ರವೀತ್ ॥ ೫ ॥

ಕರ್ದಮ ಉವಾಚ

ತುಷ್ಟೋಽಹಮದ್ಯ ತವ ಮಾನವಿ ಮಾನದಾಯಾಃ
ಶುಶ್ರೂಷಯಾ ಪರಮಯಾ ಪರಯಾ ಚ ಭಕ್ತ್ಯಾ ।
ಯೋ ದೇಹಿನಾಮಯಮತೀವ ಸುಹೃತ್ಸ್ವದೇಹೋ
ನಾವೇಕ್ಷಿತಃ ಸಮುಚಿತಃ ಕ್ಷಪಿತುಂ ಮದರ್ಥೇ ॥ ೬ ॥

ಯೇ ಮೇ ಸ್ವಧರ್ಮನಿರತಸ್ಯ ತಪಃಸಮಾಧಿ-
ವಿದ್ಯಾತ್ಮಯೋಗವಿಜಿತಾ ಭಗವತ್ಪ್ರಸಾದಾಃ ।
ತಾನೇವ ತೇ ಮದನುಸೇವನಯಾವರುದ್ಧಾನ್
ದೃಷ್ಟಿಂ ಪ್ರಪಶ್ಯ ವಿತರಾಮ್ಯಭಯಾನಶೋಕಾನ್ ॥ ೭ ॥

ಅನ್ಯೇ ಪುನರ್ಭಗವತೋ ಭ್ರುವ ಉದ್ವಿಜೃಂಭ-
ವಿಭ್ರಂಶಿತಾರ್ಥರಚನಾಃ ಕಿಮುರುಕ್ರಮಸ್ಯ ।
ಸಿದ್ಧಾಸಿ ಭುಂಕ್ಷ್ವ ವಿಭವಾನ್ನಿಜಧರ್ಮದೋಹಾನ್
ದಿವ್ಯಾನ್ನರೈರ್ದುರಧಿಗಾನ್ನೃಪವಿಕ್ರಿಯಾಭಿಃ ॥ ೮ ॥

ಏವಂ ಬ್ರುವಾಣಮಬಲಾಖಿಲಯೋಗಮಾಯಾ-
ವಿದ್ಯಾವಿಚಕ್ಷಣಮವೇಕ್ಷ್ಯ ಗತಾಧಿರಾಸೀತ್ ।
ಸಂಪ್ರಶ್ರಯಪ್ರಣಯವಿಹ್ವಲಯಾ ಗಿರೇಷದ್
ವ್ರೀಡಾವಲೋಕವಿಲಸದ್ಧಸಿತಾನನಾಽಽಹ ॥ ೯ ॥

ಅವಳು ಕಾಮವಾಸನೆಯನ್ನೂ, ದಂಭವನ್ನೂ, ದ್ವೇಷವನ್ನೂ, ಲೋಭವನ್ನೂ, ಪಾಪವನ್ನೂ, ಮದವನ್ನೂ ಪರಿತ್ಯಜಿಸಿ ಬಹಳ ಎಚ್ಚರಿಕೆಯಿಂದಲೂ, ಆಸಕ್ತಿಯಿಂದಲೂ ಪತಿಸೇವೆಯಲ್ಲಿ ತತ್ಪರಳಾಗಿದ್ದು ವಿಶ್ವಾಸ, ಪರಿಶುದ್ಧಿ, ಪಾವಿತ್ರ್ಯ, ಗೌರವ, ಸಂಯಮ, ಶುಶ್ರೂಷೆ, ಒಲವು, ಸವಿಮಾತು ಮುಂತಾದ ಸದ್ಗುಣ-ಸದಾಚಾರಗಳಿಂದ ಪರಮ ತೇಜಸ್ವಿಯಾದ ಪತಿದೇವರನ್ನು ಸಂತೋಷಪಡಿಸಿದಳು. ॥ ೨-೩ ॥ ದೇವಹೂತಿಯು ಪತಿಯನ್ನು ದೇವರಿಗಿಂತಲೂ ಹೆಚ್ಚೆಂದು ಭಾವಿಸಿ ಆತನ ಮಹಾಶೀರ್ವಾದಗಳನ್ನು ಬಯಸುತ್ತಾ, ಅವನ ಸೇವೆಯಲ್ಲೇ ತತ್ಪರಳಾಗಿದ್ದಳು. ಈ ಪ್ರಕಾರ ಬಹಳ ದಿನಗಳವರೆಗೂ ತನ್ನನ್ನು ಅನುವರ್ತಿಸುತ್ತಾ, ವ್ರತಾದಿಗಳನ್ನು ಆಚರಿಸಿದ್ದರಿಂದ ಆ ರಾಜಪುತ್ರಿಯು ದುರ್ಬಲಳಾಗಿದ್ದುದನ್ನು ಕಂಡ ಕರ್ದಮರು ಕನಿಕರದಿಂದ ಕೂಡಿ ನೊಂದುಕೊಂಡು ಪ್ರೇಮದಿಂದ ಗದ್ಗದವಾದ ವಾಣಿಯಿಂದ ಆಕೆಗೆ ಇಂತೆಂದರು. ॥ ೪-೫ ॥

ಕರ್ದಮರು ಹೇಳಿದರು – ಮನುನಂದಿನಿ! ನೀನು ನನ್ನಲ್ಲಿ ತೋರಿದ ಪ್ರೀತ್ಯಾದರಗಳಿಂದ, ಮಾಡಿದ ಪರಮ ಶುಶ್ರೂಷೆಯಿಂದ, ಇಟ್ಟ ಪರಮಭಕ್ತಿಯಿಂದ ನಾನು ಬಹಳ ಸಂತೋಷವಾಗಿದ್ದೇನೆ. ಎಲ್ಲ ದೇಹಧಾರಿಗಳಿಗೂ ತಮ್ಮ ಶರೀರದಲ್ಲಿ ಅತೀವ ಪ್ರೀತಿ ಹಾಗೂ ಆದರವಿರುತ್ತದೆ. ಆದರೆ ನೀನು ನನ್ನ ಸೇವೆಯ ಮುಂದೆ ಶರೀರವು ಕ್ಷೀಣಿಸುವುದನ್ನು ಲಕ್ಷಿಸಲಿಲ್ಲ. ॥ ೬ ॥ ಆದರಿಂದ ಸ್ವಧರ್ಮಪಾಲನೆಯಾದ ತಪಸ್ಸು, ಸಮಾಧಿ, ಉಪಾಸನೆ, ಯೋಗ ಮುಂತಾದವುಗಳ ಮೂಲಕ ನಾನು ಭಯ-ಶೋಕರಹಿತವಾದ ವಿಭೂತಿ (ಸಿದ್ಧಿ)ಗಳನ್ನು ಭಗವದನುಗ್ರಹದಿಂದ ಸಂಪಾದಿಸಿರುವೆನು. ಅವುಗಳ ಮೇಲೆ ನೀನು ನಿನ್ನ ಸೇವಾಯೋಗದಿಂದ ಅಧಿಕಾರವನ್ನು ಗಳಿಸಿದ್ದೀಯೆ. ನಾನು ನಿನಗೆ ದಿವ್ಯ ದೃಷ್ಟಿಯನ್ನು ಕೊಡುತ್ತೇನೆ. ಅದರಿಂದ ನೀನು ಅವುಗಳನ್ನು ನೋಡುವವಳಾಗು. ॥ ೭ ॥ ಇತರ ಭೋಗಗಳಾದರೋ ಭಗವಾನ್ ಶ್ರೀಹರಿಯ ಭ್ರುಕುಟಿವಿಲಾಸ ಮಾತ್ರದಿಂದ ನಾಶವಾಗಿ ಹೋಗುತ್ತವೆ. ಆದ್ದರಿಂದ ಅವುಗಳು ನಾನು ತೋರುವ ಈ ವಿಭೂತಿಗಳ ಮುಂದೆ ಏನೂ ಅಲ್ಲ. ನೀನು ನನ್ನ ಸೇವೆಯಿಂದ ಕೃತಕೃತ್ಯಳಾಗಿರುವೆ. ಪಾತಿವ್ರತ್ಯ ಧರ್ಮವನ್ನು ಪಾಲಿಸಿದ್ದರಿಂದ ನಿನಗೆ ಈ ದಿವ್ಯಭೋಗಗಳು ದೊರಕಿವೆ. ನೀನು ಇವುಗಳನ್ನು ಭೋಗಿಸಬಹುದು. 'ನಾವು ರಾಜರು, ನಮಗೆ ಎಲ್ಲವೂ ಸುಲಭವಾಗಿದೆ' ಎಂಬ ದುರಭಿಮಾನವೇ ಮುಂತಾದ ವಿಕಾರಗಳು ಇರುವ ಮನುಷ್ಯರಿಗೆ ಈ ದಿವ್ಯಭೋಗಗಳು ದೊರೆಯಲಾರವು. ॥ ೮ ॥

ಕರ್ದಮರು ಹೀಗೆ ಹೇಳಲು, ತನ್ನ ಪತಿಯು ಸಂಪೂರ್ಣವಾದ ಯೋಗಮಾಯೆಗಳಲ್ಲೂ, ವಿದ್ಯೆಗಳಲ್ಲಿಯೂ ನಿಷ್ಣಾತರೆಂದು ಅರಿತು ಆ ಅಬಲೆಯ ಸರ್ವಚಿಂತೆಗಳು ದೂರವಾದುವು. ಆಕೆಯ ಮುಖವು ಸ್ವಲ್ಪ ಸಂಕೋಚದಿಂದ ತುಂಬಿದ ದೃಷ್ಟಿಯಿಂದಲೂ, ಮಧುರವಾದ ಮುಗುಳ್ನಗೆಯಿಂದಲೂ ಅರಳಿತು. ವಿನಯ ಮತ್ತು ಪ್ರೀತಿಯಿಂದ ಗದ್ಗದವಾದ ವಾಣಿಯಿಂದ ತನ್ನ ಪತಿಯಲ್ಲಿ ಹೀಗೆಂದಳು. ॥ ೯ ॥

ದೇವಹೂತಿರುವಾಚ

ರಾದ್ಧಂ ಬತ ದ್ವಿಜವೃಷೈತದಮೋಘಯೋಗ-
ಮಾಯಾಧಿಪೇ ತ್ವಯಿ ವಿಭೋ ತದವೈಮಿ ಭರ್ತಃ ।
ಯಸ್ತೇಽಭ್ಯಧಾಯಿ ಸಮಯಃ ಸಕೃದಂಗಸಂಗೋ
ಭೂಯಾದ್ಗರೀಯಸಿ ಗುಣಃ ಪ್ರಸವಃ ಸತೀನಾಮ್ ॥ ೧೦ ॥

ತತ್ರೇತಿಕೃತ್ಯಮುಪಶಿಕ್ಷ ಯಥೋಪದೇಶಂ
ಯೇನೈಷ ಮೇ ಕರ್ಶಿತೋಽತಿರಿರಂಸಯಾಽಽತ್ಮಾ ।
ಸಿದ್ಧ್ಯೇತ ತೇ ಕೃತಮನೋಭವಧರ್ಷಿತಾಯಾ
ದೀನಸ್ತದೀಶ ಭವನಂ ಸದೃಶಂ ವಿಚಕ್ಷ್ವ ॥ ೧೧ ॥

ಮೈತ್ರೇಯ ಉವಾಚ

ಪ್ರಿಯಾಯಾಃ ಪ್ರಿಯಮನ್ವಿಚ್ಛನ್ಕರ್ದಮೋ ಯೋಗಮಾಸ್ಥಿತಃ ।
ವಿಮಾನಂ ಕಾಮಗಂ ಕ್ಷತ್ತಸ್ತರ್ಹ್ಯೇವಾವಿರಚೀಕರತ್ ॥ ೧೨ ॥

ಸರ್ವಕಾಮದುಘಂ ದಿವ್ಯಂ ಸರ್ವರತ್ನಸಮನ್ವಿತಮ್ ।
ಸರ್ವರ್ದ್ಧ್ಯುಪಚಯೋದರ್ಕಂ ಮಣಿಸ್ತಂಭೈರುಪಸ್ಕೃತಮ್ ॥ ೧೩ ॥

ದಿವ್ಯೋಪಕರಣೋಪೇತಂ ಸರ್ವಕಾಲಸುಖಾವಹಮ್ ।
ಪಟ್ಟಿಕಾಭಿಃ ಪತಾಕಾಭಿರ್ವಿಚಿತ್ರಾಭಿರಲಂಕೃತಮ್ ॥ ೧೪ ॥

ಸ್ರಗ್ಭಿರ್ವಿಚಿತ್ರಮಾಲ್ಯಾಭಿರ್ಮಂಜುಶಿಂಜತ್ಷಡಂಘ್ರಿಭಿಃ ।
ದುಕೂಲಕ್ಷೌಮಕೌಶೇಯೈರ್ನಾನಾವಸ್ತ್ರೈರ್ವಿರಾಜಿತಮ್ ॥ ೧೫ ॥

ಉಪರ್ಯುಪರಿ ವಿನ್ಯಸ್ತನಿಲಯೇಷು ಪೃಥಕ್ಪೃಥಕ್ ।
ಕ್ಷಿಪ್ತೈಃ ಕಶಿಪುಭಿಃ ಕಾಂತಂ ಪರ್ಯಂಕವ್ಯಜನಾಸನೈಃ ॥ ೧೬ ॥

ತತ್ರ ತತ್ರ ವಿನಿಕ್ಷಿಪ್ತನಾನಾಶಿಲ್ಪೋಪಶೋಭಿತಮ್ ।
ಮಹಾಮರಕತಸ್ಥಲ್ಯಾ ಜುಷ್ಟಂ ವಿದ್ರುಮವೇದಿಭಿಃ ॥ ೧೭ ॥

ದ್ವಾಃಸು ವಿದ್ರುಮದೇಹಲ್ಯಾ ಭಾತಂ ವಜ್ರಕಪಾಟವತ್ ।
ಶಿಖರೇಷ್ವಿಂದ್ರನೀಲೇಷು ಹೇಮಕುಂಭೈರಧಿಶ್ರಿತಮ್ ॥ ೧೮ ॥

ದೇವಹೂತಿಯು ಹೇಳಿದಳು – "ಬ್ರಾಹ್ಮಣಶ್ರೇಷ್ಠರೇ! ಪತಿದೇವಾ! ಎಂದಿಗೂ ವಿಫಲವಾಗದಿರುವ ಯೋಗಶಕ್ತಿ ಮತ್ತು ತ್ರಿಗುಣಾತ್ಮಕವಾದ ಮಾಯೆಯ ಮೇಲೆ ಅಧಿಕಾರ ಹೊಂದಿರುವ ನಿಮಗೆ ಈ ಐಶ್ವರ್ಯಗಳೆಲ್ಲವೂ ಇವೆಯೆಂದು ನಾನು ಬಲ್ಲೆನು. ಆದರೆ ವಿವಾಹ ಸಮಯದಲ್ಲಿ ನೀವು – 'ಗರ್ಭಾಧಾನವಾಗುವವರೆಗೆ ನಾನು ನಿನ್ನೊಡನೆ ಗೃಹಸ್ಥಸುಖಗಳನ್ನು ಅನುಭವಿಸುವೆನು' ಎಂದು ಪ್ರತಿಜ್ಞೆ ಮಾಡಿದುದನ್ನು ಈಗ ನೆರವೇರಿಸಿಕೊಡಬೇಕು. ಏಕೆಂದರೆ, ಶ್ರೇಷ್ಠನಾದ ಪತಿಯಿಂದ ಸಂತಾನವನ್ನು ಪಡೆಯುವುದೇ ಪತಿವ್ರತಾ ಸ್ತ್ರೀಯರಿಗೆ ಪರಮಲಾಭವು. ॥ ೧೦ ॥ ನಮ್ಮಿಬ್ಬರ ಸಮಾಗಮಕ್ಕೆ ಶಾಸ್ತ್ರಾನುಸಾರವಾಗಿ ಮಾಡಬೇಕಾದ ಕರ್ತವ್ಯಗಳನ್ನು ತಾವು ಉಪದೇಶ ಮಾಡಿರಿ. ಗಂಧ, ಮಾಲ್ಯ, ಲೇಪನ, ಭೋಜನ – ಮುಂತಾದ ಉಪಯುಕ್ತ ಸಾಮಗ್ರಿಗಳನ್ನು ಸೇರಿಸಿರಿ. ನಿಮ್ಮ ಸಂಗವನ್ನು ಬಯಸುವ ನನ್ನ ಈ ದುರ್ಬಲವಾದ ಶರೀರವು ನಿಮ್ಮ ಅಂಗಸಂಗಕ್ಕೆ ಯೋಗ್ಯವಾಗಬೇಕಲ್ಲ! ನೀವೇ ಹೆಚ್ಚಿಸಿರುವ ಕಾಮದಿಂದ ನಾನು ಪೀಡಿತಳಾಗಿರುವೆನು. ಸ್ವಾಮಿ! ಇದಕ್ಕೆ ಯೋಗ್ಯವಾದ ಒಂದು ಭವ್ಯಭವನವೂ ನಿರ್ಮಾಣವಾಗುವಂತೆ ತಾವು ವಿಚಾರ ಮಾಡಿರಿ." ॥ ೧೧ ॥

ಶ್ರೀಮೈತ್ರೇಯರು ಹೇಳುತ್ತಾರೆ – ಎಲೈ ವಿದುರನೇ! ಕೇಳು. ಕರ್ದಮ ಮಹರ್ಷಿಗಳು ತನ್ನ ಪ್ರಿಯಳ ಇಚ್ಛೆಯನ್ನು ಈಡೇರಿಸಲು ಒಡನೆಯೇ ಯೋಗದಲ್ಲಿ ಸ್ಥಿತನಾಗಿ, ಇಚ್ಛಾನುಸಾರವಾಗಿ ಎಲ್ಲೆಡೆ ಸಂಚರಿಸುವಂತಹ ಒಂದು ದಿವ್ಯ ವಿಮಾನವನ್ನು ರಚಿಸಿದನು. ॥ ೧೨ ॥ ಆ ವಿಮಾನವು ಎಲ್ಲ ಇಷ್ಟಾರ್ಥಭೋಗಗಳನ್ನು ಈಡೇರಿಸುತ್ತಿತ್ತು. ಅದು ಅತ್ಯಂತ ಸುಂದರವಾಗಿದ್ದು, ಎಲ್ಲ ಬಗೆಯ ರತ್ನಗಳಿಂದ ಕೂಡಿದ್ದು, ಎಲ್ಲ ಸಂಪತ್ತುಗಳ ಉತ್ತರೋತ್ತರ ವೃದ್ಧಿಯಿಂದ ಸಂಪನ್ನವಾಗಿತ್ತು. ರತ್ನಮಯ ಕಂಬಗಳಿಂದ ಅತ್ಯಂತ ಶೋಭಾಯಮಾನವಾಗಿತ್ತು. ॥ ೧೩ ॥ ಅದು ಎಲ್ಲ ಋತುಗಳಲ್ಲಿಯೂ ಸುಖವನ್ನುಂಟುಮಾಡುವ ಅದ್ಭುತವಾದ ವಿಮಾನ. ಎಲ್ಲೆಡೆಗಳಲ್ಲೂ ಬಗೆ-ಬಗೆಯ ದಿವ್ಯಸಾಮಗ್ರಿಗಳಿಂದ ಕೂಡಿದ್ದು, ಚಿತ್ರ-ವಿಚಿತ್ರವಾದ ರೇಶ್ಮೆಯ ಧ್ವಜ-ಪತಾಕೆಗಳಿಂದ ಸಿಂಗರಿಸಲ್ಪಟ್ಟಿತ್ತು. ॥ ೧೪ ॥ ಮಧುರವಾಗಿ ಝೇಂಕರಿಸುವ ದುಂಬಿಗಳ ಹಿಂಡಿನಿಂದ ಕೂಡಿದ ಬಣ್ಣ-ಬಣ್ಣದ ಪುಷ್ಪಮಾಲೆಗಳಿಂದಲೂ, ನಾನಾ-ಪ್ರಕಾರದ ರೇಷ್ಮೆ, ನಾರು, ಹತ್ತಿಗಳ ಬಟ್ಟೆ ಮಡಿವಸ್ತ್ರಗಳಿಂದಲೂ ಅದು ಅತ್ಯಂತ ಶೋಭಾಯಮಾನವಾಗಿತ್ತು. ॥ ೧೫ ॥ ಒಂದರ ಮೇಲೊಂದು ನಿರ್ಮಿತವಾಗಿದ್ದ ಕೊಠಡಿಗಳಲ್ಲಿ ಬೇರೆ-ಬೇರೆಯಾಗಿ ಹಾಸಲ್ಪಟ್ಟಿದ್ದ ಹಾಸಿಗೆಗಳು, ಮಂಚಗಳು, ಬೀಸಣಿಗೆಗಳು ಮತ್ತು ಆಸನಗಳಿಂದ ಕೂಡಿ ಅತ್ಯಂತ ರಮಣೀಯವಾಗಿತ್ತು. ॥ ೧೬ ॥ ಅಲ್ಲಲ್ಲಿ ಗೋಡೆಗಳಲ್ಲಿ ಕೆತ್ತಲ್ಪಟ್ಟ ಸುಂದರ ಕೆತ್ತನೆ ಶಿಲ್ಪಗಳಿಂದ ಅದು ಅಪೂರ್ವವಾಗಿ ಶೋಭಿಸುತ್ತಿತ್ತು. ಅದರಲ್ಲಿ ಮರಕತಮಣಿಯ ನೆಲವನ್ನೂ, ಕುಳಿತುಕೊಳ್ಳಲು ಯೋಗ್ಯವಾದ ಹವಳದ ವೇದಿಕೆಗಳನ್ನು ನಿರ್ಮಿಸಿದ್ದರು. ॥ ೧೭ ॥ ಬಾಗಿಲುಗಳು ಹವಳದ ಹೊಸ್ತಿಲುಗಳಿಂದಲೂ, ವಜ್ರದ ಕವಾಟಗಳಿಂದಲೂ ವಿರಾಜಿಸುತ್ತಿದ್ದವು. ಇಂದ್ರನೀಲಮಣಿಗಳ ಶಿಖರಗಳ ಮೇಲೆ ಚಿನ್ನದ ಕಲಶಗಳು ಹೊಳೆಯುತ್ತಿದ್ದವು. ॥ ೧೮ ॥

ಚಕ್ಷುಷ್ಮತ್ಪದ್ಮರಾಗಾಗ್ರ್ಯೈರ್ವಜ್ರಭಿತ್ತಿಷು ನಿರ್ಮಿತೈಃ ।
ಜುಷ್ಟಂ ವಿಚಿತ್ರವೈತಾನೈರ್ಮಹಾರ್ಹೈರ್ಹೇಮತೋರಣೈಃ ॥ ೧೯ ॥

ಹಂಸಪಾರಾವತವ್ರಾತೈಸ್ತತ್ರ ತತ್ರ ನಿಕೂಜಿತಮ್ ।
ಕೃತ್ರಿಮಾನ್ ಮನ್ಯಮಾನೈಃ ಸ್ವಾನಧಿರುಹ್ಯಾಧಿರುಹ್ಯ ಚ ॥ ೨೦ ॥

ವಿಹಾರಸ್ಥಾನವಿಶ್ರಾಮಸಂವೇಶಪ್ರಾಂಗಣಾಜಿರೈಃ ।
ಯಥೋಪಜೋಷಂ ರಚಿತೈರ್ವಿಸ್ಮಾಪನಮಿವಾತ್ಮನಃ ॥ ೨೦ ॥

ಈದೃಗ್ಗೃಹಂ ತತ್ಪಶ್ಯಂತೀಂ ನಾತಿಪ್ರೀತೇನ ಚೇತಸಾ ।
ಸರ್ವಭೂತಾಶಯಾಭಿಜ್ಞಃ ಪ್ರಾವೋಚತ್ಕರ್ದಮಃ ಸ್ವಯಮ್ ॥ ೨೨ ॥

ನಿಮಜ್ಜ್ಯಾಸ್ಮಿನ್ ಹ್ರದೇ ಭೀರು ವಿಮಾನಮಿದಮಾರುಹ ।
ಇದಂ ಶುಕ್ಲಕೃತಂ ತೀರ್ಥಮಾಶಿಷಾಂ ಯಾಪಕಂ ನೃಣಾಮ್ ॥ ೨೩ ॥

ಸಾ ತದ್ಭರ್ತುಃ ಸಮಾದಾಯ ವಚಃ ಕುವಲಯೇಕ್ಷಣಾ ।
ಸರಜಂ ಬಿಭ್ರತೀ ವಾಸೋ ವೇಣೀಭೂತಾಂಶ್ಚ ಮೂರ್ಧಜಾನ್ ॥ ೨೪ ॥

ಅಂಗಂ ಚ ಮಲಪಂಕೇನ ಸಂಛನ್ನಂ ಶಬಲಸ್ತನಮ್ ।
ಆವಿವೇಶ ಸರಸ್ವತ್ಯಾಃ ಸರಃ ಶಿವಜಲಾಶಯಮ್ ॥ ೨೫ ॥

ಸಾಂತಃಸರಸಿ ವೇಶ್ಮಸ್ಥಾಃ ಶತಾನಿ ದಶ ಕನ್ಯಕಾಃ ।
ಸರ್ವಾಃ ಕಿಶೋರವಯಸೋ ದದರ್ಶೋತ್ಪಲಗಂಧಯಃ ॥ ೨೬ ॥

ತಾಂ ದೃಷ್ಟ್ವಾ ಸಹಸೋತ್ಥಾಯ
ಪ್ರೋಚುಃ ಪ್ರಾಂಜಲಯಃ ಸ್ತ್ರಿಯಃ ।
ವಯಂ ಕರ್ಮಕರೀಸ್ತುಭ್ಯಂ
ಶಾಧಿ ನಃ ಕರವಾಮ ಕಿಮ್ ॥ ೨೭ ॥

ಸ್ನಾನೇನ ತಾಂ ಮಹಾರ್ಹೇಣ ಸ್ನಾಪಯಿತ್ವಾ ಮನಸ್ವಿನೀಮ್ ।
ದುಕೂಲೇ ನಿರ್ಮಲೇ ನೂತ್ನೇ ದದುರಸ್ಯೈ ಚ ಮಾನದಾಃ ॥ ೨೮ ॥

ಭೂಷಣಾನಿ ಪರಾರ್ಧ್ಯಾನಿ ವರೀಯಾಂಸಿ ದ್ಯುಮಂತಿ ಚ ।
ಅನ್ನಂ ಸರ್ವಗುಣೋಪೇತಂ ಪಾನಂ ಚೈವಾಮೃತಾಸವಮ್ ॥ ೨೯ ॥

ಅದರ ವಜ್ರಮಣಿಯ ಗೋಡೆಗಳಲ್ಲಿ ಕೂಡಿದ ಥಳ-ಥಳಿಸುವ ಪದ್ಮರಾಗಮಣಿಗಳು ವಿಮಾನದ ಕಣ್ಣುಗಳಂತೆ ಕಂಗೊಳಿಸುತ್ತಿದ್ದವು. ಬಹುಮೂಲ್ಯವಾದ ಚಿತ್ರ-ವಿಚಿತ್ರವಾದ ತೋರಣಗಳಿಂದಲೂ, ಚಿನ್ನದ ಮೇಲ್ಕಟ್ಟುಗಳಿಂದಲೂ ಆ ವಿಮಾನವು ಮನೋಹರವಾಗಿತ್ತು. ॥ ೧೯ ॥ ಆ ವಿಮಾನದಲ್ಲಿ ಅಲ್ಲಲ್ಲಿ ಅತಿಸುಂದರವಾದ ಕೃತ್ರಿಮ ಹಂಸಗಳೂ, ಪಾರಿವಾಳಗಳೂ ನಿರ್ಮಿಸಿದ್ದರು. ಅವುಗಳನ್ನು ಸಜೀವಪಕ್ಷಿಗಳೆಂದೇ ಭ್ರಮಿಸಿ ಬಹುಸಂಖ್ಯೆಯಲ್ಲಿ ಜೀವಂತ ಹಂಸಗಳೂ – ಪಾರಿವಾಳಗಳೂ ಅವುಗಳ ಬಳಿಯಲ್ಲಿ ಕುಳಿತು ತಮ್ಮ ಧ್ವನಿಗಳಿಂದ ಕೂಗಿಡುತ್ತಿದ್ದವು. ॥ ೨೦ ॥ ಅದರಲ್ಲಿ ಅವಶ್ಯಕತೆಗನುಸಾರ ಆಟದ ಉದ್ಯಾನಗಳೂ, ಶಯನಗೃಹಗಳೂ, ಕುಳಿತುಕೊಳ್ಳುವ ಸ್ಥಾನಗಳಿಂದಲೂ, ಅಂಗಳಗಳಿಂದಲೂ, ಹಜಾರಗಳಿಂದಲೂ ರಾರಾಜಿಸುತ್ತಿತ್ತು. ಅದನ್ನು ತನ್ನ ಸಿದ್ಧಿಯಿಂದ ನಿರ್ಮಿಸಿದ ಕರ್ದಮರನ್ನು ಬೆರಗುಗೊಳಿಸುವಂತಿತ್ತು ಆ ವಿಮಾನವು. ॥ ೨೦ ॥

ಇಂತಹ ಸುಂದರವಾದ ಭವನವನ್ನು (ವಿಮಾನವನ್ನು) ನೋಡಿದರೂ ದೇವಹೂತಿಗೆ ಮನಸ್ಸಿನಲ್ಲಿ ಪ್ರಸನ್ನತೆ ಉಂಟಾಗಿಲ್ಲವೆಂಬುದನ್ನು ಅರಿತು–ಎಲ್ಲ ಭೂತಗಳ ಭಾವನೆಗಳನ್ನು ತಿಳಿಯುವ ಜ್ಞಾನಿಗಳಾದ ಕರ್ದಮರು ತನ್ನ ಇನಿಯಳನ್ನು ಕುರಿತು ಹೇಳಿದರು –॥ ೨೨ ॥ 'ಪ್ರಿಯೇ! ನೀನು ಈ ಬಿಂದು ಸರೋವರದಲ್ಲಿ ಸ್ನಾನಮಾಡಿ ವಿಮಾನವನ್ನು ಹತ್ತು. ಭಗವಾನ್ ಶ್ರೀಮಹಾವಿಷ್ಣುವಿನಿಂದ ನಿರ್ಮಿತವಾದ ಈ ತೀರ್ಥಕ್ಕೆ ಮನುಷ್ಯರ ಸರ್ವಕಾಮನೆಗಳನ್ನು ಈಡೇರಿಸುವ ಶಕ್ತಿಯಿದೆ.' ॥ ೨೩ ॥

ಕಮಲಲೋಚನೆಯಾದ ದೇವಹೂತಿಯು ಪತಿಯ ಮಾತಿನಂತೆ ಸರಸ್ವತಿಯ ಪವಿತ್ರಜಲದಿಂದ ತುಂಬಿದ್ದ ಬಿಂದು ಸರೋವರವನ್ನು ಪ್ರವೇಶಿಸಿದಳು. ಆ ಸಮಯದಲ್ಲಿ ಆಕೆಯ ಬಟ್ಟೆಗಳು ಮಲಿನವಾಗಿದ್ದವು. ತಲೆಕೂದಲುಗಳು ಅಂಟಿಕೊಂಡು ಜಡೆಕಟ್ಟಿದ್ದವು. ದೇಹದಲ್ಲಿ ಕೊಳೆ ತುಂಬಿಕೊಂಡಿತ್ತು. ಸ್ತನಗಳು ಕಾಂತಿಹೀನವಾಗಿದ್ದವು. ॥ ೨೪–೨೫ ॥ ಸರೋವರದಲ್ಲಿ ಮುಳುಗಿದೊಡನೆಯೇ ಅದರೊಳಗೆ ಆಕೆಯು – ಒಂದು ಭವ್ಯ ಅರಮನೆಯನ್ನೂ, ಅದರೊಳಗೆ ಕಮಲಗಂಧಿಯರಾದ, ಕಿಶೋರಾವಸ್ಥೆಯಲ್ಲಿದ್ದ ಒಂದು ಸಾವಿರ ಕನ್ಯೆಯರನ್ನು ನೋಡಿದಳು. ॥ ೨೬ ॥ ದೇವಹೂತಿಯನ್ನು ಕಂಡೊಡನೆ ಅವರು ಎದ್ದು ನಿಂತು ಕೈಜೋಡಿಸಿಕೊಂಡು – 'ನಾವು ನಿಮ್ಮ ದಾಸಿಯರು. ಏನು ಸೇವೆಮಾಡಬೇಕು? ಅಪ್ಪಣೆಯಾಗಲಿ' ಎಂದು ಅರಿಕೆಮಾಡಿಕೊಂಡರು. ॥ ೨೭ ॥

ಎಲೈ ವಿದುರನೇ! ಸ್ವಾಮಿನಿಗೆ ಸಮ್ಮಾನಕೊಡುವಂತಹ ಆ ಕುಶಲ ರಮಣಿಯರು ಅಮೂಲ್ಯವಾದ ಕಂಪು-ತಂಪುಗಳಿಂದ ಕೂಡಿದ ಚೂರ್ಣ ಮುಂತಾದವುಗಳಿಂದ ಮಿಶ್ರಿತವಾದ ತೀರ್ಥಜಲದಿಂದ ಆಕೆಗೆ ಸ್ನಾನಮಾಡಿಸಿ ನಿರ್ಮಲವಾದ ನೂತನ ಪಟ್ಟೆ ಮಡಿಗಳನ್ನು ಉಡಲು ಕೊಟ್ಟರು. ॥ ೨೮ ॥ ಮತ್ತೆ ಕಾಂತಿಯುಕ್ತವೂ, ಕಮನೀಯವೂ ಆದ ಬಹುಮೂಲ್ಯ ಒಡವೆಗಳನ್ನು ತೊಡಲು ಅರ್ಪಿಸಿದರು. ಸರ್ವಗುಣಗಳಿಂದಲೂ ಕೂಡಿದ ಅನ್ನಾಹಾರಗಳನ್ನೂ, ಅಮೃತಕ್ಕೆಣೆಯಾದ ಪಾನೀಯಗಳನ್ನೂ ನೀಡಿದರು. ॥ ೨೯ ॥

ಅಥಾದರ್ಶೇ ಸ್ವಮಾತ್ಮಾನಂ ಸ್ರಗ್ವಿಣಂ ವಿರಜಾಂಬರಮ್ ।
ವಿರಜಂ ಕೃತಸ್ವಸ್ತ್ಯಯನಂ ಕನ್ಯಾಭಿರ್ಬಹುಮಾನಿತಮ್ ॥ ೩೦ ॥

ಸ್ನಾತಂ ಕೃತಶಿರಃಸ್ನಾನಂ ಸರ್ವಾಭರಣಭೂಷಿತಮ್ ।
ನಿಷ್ಕಗ್ರೀವಂ ವಲಯಿನಂ ಕೂಜತ್ಕಾಂಚನನೂಪುರಮ್ ॥ ೩೧ ॥

ಶ್ರೋಣ್ಯೋರಧ್ಯಸ್ತಯಾ ಕಾಂಚ್ಯಾ ಕಾಂಚನ್ಯಾ ಬಹುರತ್ನಯಾ ।
ಹಾರೇಣ ಚ ಮಹಾರ್ಹೇಣ ರುಚಕೇನ ಚ ಭೂಷಿತಮ್ ॥ ೩೨ ॥

ಸುದತಾ ಸುಭ್ರುವಾ ಶ್ಲಕ್ಷ್ಣಸ್ನಿಗ್ಧಾಪಾಂಗೇನ ಚಕ್ಷುಷಾ ।
ಪದ್ಮಕೋಶಸ್ಪೃಧಾ ನೀಲೈರಲಕೈಶ್ಚ ಲಸನ್ಮುಖಮ್ ॥ ೩೩ ॥

ಯದಾ ಸಸ್ಮಾರ ಋಷಭಮೃಷೀಣಾಂ ದಯಿತಂ ಪತಿಮ್ ।
ತತ್ರ ಚಾಸ್ತೇ ಸಹ ಸ್ತ್ರೀಭಿರ್ಯತ್ರಾಸ್ತೇ ಸ ಪ್ರಜಾಪತಿಃ ॥ ೩೪ ॥

ಭರ್ತುಃ ಪುರಸ್ತಾದಾತ್ಮಾನಂ ಸ್ತ್ರೀಸಹಸ್ರವೃತಂ ತದಾ ।
ನಿಶಾಮ್ಯ ತದ್ಯೋಗಗತಿಂ ಸಂಶಯಂ ಪ್ರತ್ಯಪದ್ಯತ ॥ ೩೫ ॥

ಸ ತಾಂ ಕೃತಮಲಸ್ನಾನಾಂ ವಿಭ್ರಾಜಂತೀಮಪೂರ್ವವತ್ ।
ಆತ್ಮನೋ ಬಿಭ್ರತೀಂ ರೂಪಂ ಸಂವೀತರುಚಿರಸ್ತನೀಮ್ ॥ ೩೬ ॥

ವಿದ್ಯಾಧರೀಸಹಸ್ರೇಣ ಸೇವ್ಯಮಾನಾಂ ಸುವಾಸಸಮ್ ।
ಜಾತಭಾವೋ ವಿಮಾನಂ ತದಾರೋಹಯದಮಿತ್ರಹನ್ ॥ ೩೭ ॥

ತಸ್ಮಿನ್ನಲುಪ್ತಮಹಿಮಾ ಪ್ರಿಯಯಾನುರಕ್ತೋ
ವಿದ್ಯಾಧರೀಭಿರುಪಚೀರ್ಣವಪುರ್ವಿಮಾನೇ ।
ಬಭ್ರಾಜ ಉತ್ಕಚಕುಮುದ್ಗಣವಾನಪೀಚ್ಯ-
ಸ್ತಾರಾಭಿರಾವೃತ ಇವೋಡುಪತಿರ್ನಭಸ್ಥಃ ॥ ೩೮ ॥

ತೇನಾಷ್ಟಲೋಕಪವಿಹಾರಕುಲಾಚಲೇಂದ್ರ-
ದ್ರೋಣೀಷ್ವನಂಗಸಖಮಾರುತಸೌಭಗಾಸು ।
ಸಿದ್ಧೈರ್ನುತೋ ದ್ಯುಧುನಿಪಾತಶಿವಸ್ವನಾಸು
ರೇಮೇ ಚಿರಂ ಧನದವಲ್ಲಲನಾವರೂಥೀ ॥ ೩೯ ॥

ದೇವಹೂತಿಯು ತಾನು ಬಗೆ-ಬಗೆಯಾದ ಸುಗಂಧಪುಷ್ಪಗಳ ಹಾರಗಳಿಂದಲೂ, ಸ್ವಚ್ಛವಾದ ವಸ್ತ್ರಗಳಿಂದಲೂ ಅಲಂಕೃತಳಾಗಿರುವುದನ್ನೂ, ಹಾಗೆಯೇ ತನ್ನ ದೇಹವು ನಿರ್ಮಲಕಾಂತಿಯಿಂದ ಶೋಭಿಸುತ್ತಿರುವುದನ್ನೂ, ಆ ಕನ್ಯೆಯರು ಅತೀವ ಆದರದಿಂದ ತನಗೆ ಮಾಂಗಲಿಕ ಶೃಂಗಾರಮಾಡಿರುವುದನ್ನು ಕನ್ನಡಿಯಲ್ಲಿ ನೋಡಿಕೊಂಡಳು. ॥ ೩೦ ॥ ಅವಳನ್ನು ತಲೆಗೆ ಸ್ನಾನಮಾಡಿಸಿ, ಅಂಗಾಂಗಗಳನ್ನು ಅನೇಕ ಆಭರಣಗಳಿಂದ ಅಲಂಕರಿಸಲಾಗಿತ್ತು. ಅವಳ ಕಂಠಕ್ಕೆ ಒಪ್ಪುವ ಸ್ವರ್ಣಹಾರಗಳನ್ನೂ, ರತ್ನಹಾರಗಳನ್ನೂ ಕೈಗಳಿಗೆ ಬಳೆ-ಉಂಗುರಗಳನ್ನು ಕಾಲುಗಳಿಗೆ ಝಣ-ಝಣಿಸುವ ಚಿನ್ನದ ಕಾಲಂದುಗೆಗಳನ್ನು ತೊಡಿಸಿದ್ದರು. ॥ ೩೧ ॥ ನಡುವಿನಲ್ಲಿ ನವರತ್ನಗಳು ಕೂಡಿದ ಸ್ವರ್ಣದ ಒಡ್ಯಾಣದಿಂದಲೂ, ಅಂಗಾಂಗಗಳಲ್ಲಿ ಕುಂಕುಮ-ಕೇಸರಿ ಮುಂತಾದ ಮಂಗಳದ್ರವ್ಯ ಲೇಪನಗಳಿಂದಲೂ ಅವಳು ಅಪೂರ್ವ ಕಾಂತಿಯಿಂದ ಕಂಗೊಳಿಸುತ್ತಿದ್ದಳು. ॥ ೩೨ ॥ ಆಕೆಯ ಮುಖವು ಸುಂದರ ದಂತಪಂಕ್ತಿಗಳಿಂದಲೂ, ಮನೋಹರವಾದ ಹುಬ್ಬುಗಳಿಂದಲೂ, ಕಮಲದ ಮೊಗ್ಗಿನೊಡನೆ ಸ್ಪರ್ಧಿಸುತ್ತಿದೆಯೋ ಎಂಬಂತಿರುವ ಪ್ರೇಮಕಟಾಕ್ಷದಿಂದ ಕಂಗೊಳಿಸುವ ಕಣ್ಣುಗಳಿಂದಲೂ, ಮೋಹಕವಾದ ಮುಂಗುರುಳುಗಳಿಂದಲೂ, ಬಹು ಅಂದವಾಗಿ ಕಾಣುತ್ತಿತ್ತು. ॥ ೩೩ ॥ ವಿದುರನೇ! ದೇವಹೂತಿಯು ತನ್ನ ಪ್ರಿಯಪತಿಯನ್ನು ನೆನೆದೊಡನೆ ತಾನು ತನ್ನ ಗೆಳತಿಯರೊಡನೆ ಪ್ರಜಾಪತಿ ಕರ್ದಮರ ಬಳಿಯಲ್ಲೇ ವಿರಾಜಿಸುತ್ತಿರುವುದನ್ನು ನೋಡಿ ನಲಿದಳು. ॥ ೩೪ ॥ ಆಗ ತಾನು ಸಾವಿರಾರು ಸ್ತ್ರೀಯರೊಡನೆ ತನ್ನ ಪ್ರಾಣನಾಥನ ಮುಂದೆಯೇ ಇರುವುದನ್ನು ಕಂಡು, ಇದೆಲ್ಲ ಅವರ ಯೋಗದ ಪ್ರಭಾವವೆಂದೇ ತಿಳಿದು ಆಕೆಗೆ ತುಂಬಾ ಆಶ್ಚರ್ಯವಾಯಿತು. ॥ ೩೫ ॥

ಶತ್ರುದಮನ ವಿದುರನೇ! ದೇವಹೂತಿಯ ದೇಹವು ಸ್ನಾನದಿಂದಾಗಿ ಅತ್ಯಂತ ನಿರ್ಮಲವಾಗಿದೆ. ವಿವಾಹಕ್ಕೆ ಮೊದಲಿದ್ದ ರೂಪ-ಸೌಂದರ್ಯದಿಂದ ಅಪೂರ್ವವಾದ ಶೋಭೆಯಿಂದ ಕೂಡಿದ್ದಾಳೆ. ಆಕೆಯು ಸುಂದರವಾದ ವಸ್ತ್ರಗಳನ್ನೂ ಧರಿಸಿದ್ದು, ಆಕೆಯ ಸುಂದರ ವಕ್ಷಸ್ಥಳಗಳು ಕುಪ್ಪಸದಿಂದ ಮುಚ್ಚಲ್ಪಟ್ಟಿವೆ. ಸಾವಿರಾರು ಮಂದಿ ವಿದ್ಯಾಧರ ಸ್ತ್ರೀಯರು ಆಕೆಯ ಸೇವೆಯಲ್ಲಿ ತೊಡಗಿರುವರು. ಇದನ್ನು ನೋಡಿ ಸಂತಸಗೊಂಡ ಕರ್ದಮ ಪ್ರಜಾಪತಿಗಳು ಆಕೆಯನ್ನು ಅತ್ಯಂತ ಪ್ರೇಮದಿಂದ ವಿಮಾನಕ್ಕೆ ಹತ್ತಿಸಿದರು. ॥ ೩೬-೩೭ ॥ ಆಗ ಕರ್ದಮರು ತನ್ನ ಪ್ರಿಯೆಯ ವಿಷಯದಲ್ಲಿ ಅನುರಕ್ತರಾಗಿದ್ದರೂ ಅವರ ಮಹಿಮೆಯು (ಮನಸ್ಸು ಇಂದ್ರಿಯಗಳ ಮೇಲಿನ ಹಿಡಿತ) ಕಡಿಮೆಯಾಗಲಿಲ್ಲ. ವಿದ್ಯಾಧರ ಸ್ತ್ರೀಯರು ಅವರ ಸೇವೆಯನ್ನು ಮಾಡುತ್ತಿದ್ದರು. ಅರಳಿದ ಕುಮುದ ಪುಷ್ಪಗಳಿಂದ ತಮ್ಮನ್ನು ಸಿಂಗರಿಸಿಕೊಂಡು ರಾರಾಜಿಸುತ್ತಿದ್ದ ಅವರು ಆಕಾಶದಲ್ಲಿ ನಕ್ಷತ್ರಗಣದಿಂದ ಸುತ್ತುವರಿಯಲ್ಪಟ್ಟ ಚಂದ್ರನಂತೆ ಹೊಳೆಯುತ್ತಿದ್ದರು. ॥ ೩೮ ॥ ಆ ವಿಮಾನದಲ್ಲಿ ವಾಸಮಾಡುತ್ತಾ ಅವರು ಕುಬೇರನಂತೆ ಮೇರುಪರ್ವತದ ತಪ್ಪಲುಗಳಲ್ಲಿ ದೀರ್ಘ ಕಾಲದವರೆಗೆ ವಿಹರಿಸುತ್ತಿದ್ದರು. ಆ ತಪ್ಪಲುಗಳು ಎಂಟು ಲೋಕಪಾಲರ ವಿಹಾರಭೂಮಿಯಾಗಿತ್ತು. ಕಾಮವನ್ನು ಹೆಚ್ಚಿಸುವ ತಂಪು-ಕಂಪು

ವೈಶ್ರಂಭಕೇ ಸುರಸನೇ ನಂದನೇ ಪುಷ್ಪಭದ್ರಕೇ ।
ಮಾನಸೇ ಚೈತ್ರರಥ್ಯೇ ಚ ಸ ರೇಮೇ ರಾಮಯಾ ರತಃ ॥ ೪೦ ॥

ಭ್ರಾಜಿಷ್ಣುನಾ ವಿಮಾನೇನ ಕಾಮಗೇನ ಮಹೀಯಸಾ ।
ವೈಮಾನಿಕಾನತ್ಯಶೇತ ಚರಲ್ಲೋಕಾನ್ಯಥಾನಿಲಃ ॥ ೪೧ ॥

ಕಿಂ ದುರಾಪಾದನಂ ತೇಷಾಂ ಪುಂಸಾಮುದ್ದಾಮಚೇತಸಾಮ್ ।
ಯೈರಾಶ್ರಿತಸ್ತೀರ್ಥಪದಶ್ಚರಣೋ ವ್ಯಸನಾತ್ಯಯಃ ॥ ೪೨ ॥

ಪ್ರೇಕ್ಷಯಿತ್ವಾ ಭುವೋಗೋಲಂ ಪತ್ನ್ಯೈ ಯಾವಾನ್ಸ್ವಸಂಸ್ಥಯಾ ।
ಬಹ್ವಾಶ್ಚರ್ಯಂ ಮಹಾಯೋಗೀ ಸ್ವಾಶ್ರಮಾಯ ನ್ಯವರ್ತತ ॥ ೪೩ ॥

ವಿಭಜ್ಯ ನವಧಾಽಽತ್ಮಾನಂ ಮಾನವೀಂ ಸುರತೋತ್ಸುಕಾಮ್ ।
ರಾಮಾಂ ನಿರಮಯನ್ರೇಮೇ ವರ್ಷಪೂಗಾನ್ಮುಹೂರ್ತವತ್ ॥ ೪೪ ॥

ತಸ್ಮಿನ್ವಿಮಾನ ಉತ್ಕೃಷ್ಟಾಂ ಶಯ್ಯಾಂ ರತಿಕರೀಂ ಶ್ರಿತಾ ।
ನ ಚಾಬುಧ್ಯತ ತಂ ಕಾಲಂ ಪತ್ಯಾಪೀಚ್ಯೇನ ಸಂಗತಾ ॥ ೪೫ ॥

ಏವಂ ಯೋಗಾನುಭಾವೇನ ದಂಪತ್ಯೋ ರಮಮಾಣಯೋಃ ।
ಶತಂ ವ್ಯತೀಯುಃ ಶರದಃ ಕಾಮಲಾಲಸಯೋರ್ಮನಾಕ್ ॥ ೪೬ ॥

ತಸ್ಯಾಮಾಧತ್ತ ರೇತಸ್ತಾಂ ಭಾವಯನ್ನಾಽಽತ್ಮನಾಽಽತ್ಮವಿತ್ ।
ನೋಧಾ ವಿಧಾಯ ರೂಪಂ ಸ್ವಂ ಸರ್ವಸಂಕಲ್ಪವಿದ್ವಿಭುಃ ॥ ೪೭ ॥

ಗಳಿಂದ ಕೂಡಿದ ಮಂದಮಾರುತವು ಬೀಸುತ್ತಾ ಅಲ್ಲಿ ಸುಖ-ಸೌಂದರ್ಯಗಳನ್ನು ವಿಸ್ತರಿಸುತ್ತಿತ್ತು. ಶ್ರೀಗಂಗೆಯು ಸ್ವರ್ಗದಿಂದ ಧುಮುಕುತ್ತಿದ್ದ ಮಂಗಳಧ್ವನಿಯು ನಿರಂತರ ಪ್ರತಿಧ್ವನಿಸುತ್ತಿತ್ತು. ಆಗಲೂ ಕೂಡ ದಿವ್ಯವಿದ್ಯಾಧರಿಯರು ಅವರ ಸೇವೆಗಾಗಿ ಸಿದ್ಧರಾಗಿದ್ದರು. ಸಿದ್ಧರ ಸಮುದಾಯವು ಅವರಿಗೆ ವಂದನೆ ಸಲ್ಲಿಸುತ್ತಿತ್ತು. ॥ ೩೯ ॥

ಹೀಗೆ ತನ್ನ ಪ್ರಾಣವಲ್ಲಭೆಯೊಡನೆ ಕರ್ದಮರು ವೈಶ್ರಂಭಕ, ಸುರಸನ, ನಂದನ, ಪುಷ್ಪಭದ್ರ, ಚೈತ್ರರಥ ಮುಂತಾದ ಅನೇಕ ದೇವತೋದ್ಯಾನಗಳಲ್ಲಿಯೂ, ಮಾನಸಸರೋವರದಲ್ಲಿಯೂ ಪರಮಾನುರಾಗದಿಂದ ವಿಹರಿಸುತ್ತಿದ್ದರು. ॥ ೪೦ ॥ ಇಚ್ಛಾನುಸಾರ ಸಂಚರಿಸುತ್ತಿದ್ದ ಆ ಕಾಂತಿಯುಕ್ತ ಶ್ರೇಷ್ಠವಾದ ವಿಮಾನದಲ್ಲಿ ಕುಳಿತು ವಾಯುವಿನಂತೆ ಎಲ್ಲ ಲೋಕಗಳಲ್ಲಿ ಸಂಚರಿಸುತ್ತಾ ವಿಮಾನವಿಹಾರಿಗಳಾದ ದೇವತೆಗಳಿಗಿಂತಲೂ ಹೆಚ್ಚು ಸುಖ-ಸಂಪತ್ತುಗಳನ್ನು ಅವರು ಅನುಭವಿಸಿದರು. ॥ ೪೧ ॥ ವಿದುರನೇ! ಭಗವಂತನ ಭವಭಯಹಾರಿಯಾದ ಪವಿತ್ರ ಪಾದಪದ್ಮಗಳನ್ನು ಆಶ್ರಯಿಸಿರುವ ಸುಕೃತಿಗಳಿಗೆ ಯಾವ ವಸ್ತುವು ಅಥವಾ ಶಕ್ತಿಯು ತಾನೇ ದುರ್ಲಭವಾಗಿದೆ? ॥ ೪೨ ॥

ಹೀಗೆ ಮಹಾಯೋಗಿಗಳಾದ ಕರ್ದಮರು ತಮ್ಮ ಪ್ರಿಯೆಗೆ ಜಂಬೂದ್ವೀಪವೇ ಮುಂತಾದ ದ್ವೀಪಗಳೂ, ಭಾರತ-ಕಿಂಪುರುಷ ಮುಂತಾದ ವರ್ಷಗಳೂ, ವಿಚಿತ್ರವಾದ ರಚನೆಯಿಂದ ಅತ್ಯಂತ ಆಶ್ಚರ್ಯಕರವಾಗಿ ಕಾಣುತ್ತಿರುವ ಇಡೀ ಭೂಮಂಡಲವನ್ನು ತೋರಿಸಿ ತಮ್ಮ ಆಶ್ರಮಕ್ಕೆ ಹಿಂದಿರುಗಿದರು. ॥ ೪೩ ॥ ಮತ್ತೆ ಅವರು ತಮ್ಮನ್ನು ಒಂಭತ್ತು ರೂಪಗಳಲ್ಲಿ ವಿಭಕ್ತಗೊಳಿಸಿಕೊಂಡು ರತಿಸುಖಕ್ಕಾಗಿ ಅತ್ಯಂತ ಉತ್ಸುಕಳಾದ ಮನುಕುಮಾರಿ ದೇವಹೂತಿಯನ್ನು ಆನಂದಪಡಿಸುತ್ತಾ, ಅವಳೊಂದಿಗೆ ಅನೇಕ ವರ್ಷಗಳ ಕಾಲ ವಿಹರಿಸಿದರು. ಆದರೆ ಆ ಅತಿದೀರ್ಘಕಾಲವು ಒಂದು ಮುಹೂರ್ತದಂತೆ ಕಳೆದುಹೋಯಿತು. ॥ ೪೪ ॥ ಆ ವಿಮಾನದಲ್ಲಿ ರತಿಸುಖವನ್ನು ಹೆಚ್ಚಿಸುವ ಅತಿ ಸುಂದರವಾದ ಶಯ್ಯೆಯನ್ನು ಆಶ್ರಯಿಸಿ, ಪರಮ ಸೌಂದರ್ಯನಿಧಿಯಾದ ತನ್ನ ಪ್ರಿಯತಮನೊಡನೆ ಇರುತ್ತಿದ್ದ ದೇವಹೂತಿಗೆ ಆ ಕಾಲದ ಪರಿವೆ ಸ್ವಲ್ಪವೂ ಉಂಟಾಗಲಿಲ್ಲ. ॥ ೪೫ ॥ ಹೀಗೆ ರಮಿಸುತ್ತಾ ಆ ದಂಪತಿಗಳು ತಮ್ಮ ಯೋಗಬಲದಿಂದ ನೂರಾರುವರ್ಷಗಳ ಕಾಲ ವಿಹರಿಸುತ್ತಿದ್ದರೂ ಅವರಿಗೆ ಆ ಕಾಲವು ಅತಿ ಸ್ವಲ್ಪ ಸಮಯದಂತೆ ಕಳೆದುಹೋಯಿತು. ॥ ೪೬ ॥ ಆತ್ಮಜ್ಞಾನಿಗಳಾದ ಕರ್ದಮರು ಎಲ್ಲ ಸಂಕಲ್ಪಗಳನ್ನು ಬಲ್ಲವರಾಗಿದ್ದರು. ದೇವಹೂತಿಯು ಸಂತಾನವನ್ನು ಪಡೆಯಲು ಉತ್ಸುಕಳಾಗಿರುವುದನ್ನು ಗಮನಿಸಿ, ಹಾಗೆಯೇ ಭಗವಂತನ ಆದೇಶವನ್ನು ಸ್ಮರಿಸಿಕೊಂಡು, ಅವರು ತಮ್ಮ ಸ್ವರೂಪವನ್ನು ಒಂಭತ್ತು ಬಗೆಯಾಗಿ ವಿಭಾಗಿಸಿಕೊಂಡು ಕನ್ಯೆಯರನ್ನು ಪಡೆಯಲಿಕ್ಕಾಗಿ ಏಕಾಗ್ರಚಿತ್ತದಿಂದ ಅರ್ಧಾಂಗರೂಪದಲ್ಲಿ ತಮ್ಮ ಪತ್ನಿಯನ್ನು ಭಾವಿಸುತ್ತಾ ಆಕೆಯ ಗರ್ಭದಲ್ಲಿ ವೀರ್ಯವನ್ನು ಸ್ಥಾಪಿಸಿದರು. ॥ ೪೭ ॥

ಅಥ ಸಾ ಸುಷುವೇ ಸದ್ಯೋ ದೇವಹೂತಿಃ ಸ್ತ್ರಿಯಃ ಪ್ರಜಾಃ ।
ಸರ್ವಾಸ್ತಾಶ್ಚಾರುಸರ್ವಾಂಗ್ಯೋ ಲೋಹಿತೋತ್ಪಲಗಂಧಯಃ ॥ ೪೮ ॥

ಪತಿಂ ಸಾ ಪ್ರವ್ರಜಿಷ್ಯಂತಂ ತದಾಽಽಲಕ್ಷ್ಯೋಶತೀ ಸತೀ ।
ಸ್ಮಯಮಾನಾ ವಿಕ್ಲವೇನ ಹೃದಯೇನ ವಿದೂಯತಾ ॥ ೪೯ ॥

ಲಿಖಂತ್ಯಧೋಮುಖೀ ಭೂಮಿಂ ಪದಾ ನಖಮಣಿಶ್ರಿಯಾ ।
ಉವಾಚ ಲಲಿತಾಂ ವಾಚಂ ನಿರುಧ್ಯಾಶ್ರುಕಲಾಂ ಶನೈಃ ॥ ೫೦ ॥

ದೇವಹೂತಿರುವಾಚ

ಸರ್ವಂ ತದ್ಭಗವಾನ್ಮಹ್ಯಮುಪೋವಾಹ ಪ್ರತಿಶ್ರುತಮ್ ।
ಅಥಾಪಿ ಮೇ ಪ್ರಪನ್ನಾಯಾ ಅಭಯಂ ದಾತುಮರ್ಹಸಿ ॥ ೫೧ ॥

ಬ್ರಹ್ಮನ್ದುಹಿತೃಭಿಸ್ತುಭ್ಯಂ ವಿಮೃಗ್ಯಾಃ ಪತಯಃ ಸಮಾಃ ।
ಕಶ್ಚಿತ್ಸ್ಯಾನ್ಮೇ ವಿಶೋಕಾಯ ತ್ವಯಿ ಪ್ರವ್ರಜಿತೇ ವನಮ್ ॥ ೫೨ ॥

ಏತಾವತಾಲಂ ಕಾಲೇನ ವ್ಯತಿಕ್ರಾಂತೇನ ಮೇ ಪ್ರಭೋ ।
ಇಂದ್ರಿಯಾರ್ಥಪ್ರಸಂಗೇನ ಪರಿತ್ಯಕ್ತಪರಾತ್ಮನಃ ॥ ೫೩ ॥

ಇಂದ್ರಿಯಾರ್ಥೇಷು ಸಜ್ಜಂತ್ಯಾ ಪ್ರಸಂಗಸ್ತ್ವಯಿ ಮೇ ಕೃತಃ ।
ಅಜಾನಂತ್ಯಾ ಪರಂ ಭಾವಂ ತಥಾಪ್ಯಸ್ತ್ವಭಯಾಯ ಮೇ ॥ ೫೪ ॥

ಸಂಗೋ ಯಃ ಸಂಸೃತೇರ್ಹೇತುರಸತ್ಸು ವಿಹಿತೋಽಧಿಯಾ ।
ಸ ಏವ ಸಾಧುಷು ಕೃತೋ ನಿಸ್ಸಂಗತ್ವಾಯ ಕಲ್ಪತೇ ॥ ೫೫ ॥

ನೇಹ ಯತ್ಕರ್ಮ ಧರ್ಮಾಯ ನ ವಿರಾಗಾಯ ಕಲ್ಪತೇ ।
ನ ತೀರ್ಥಪದಸೇವಾಯೈ ಜೀವನ್ನಪಿ ಮೃತೋ ಹಿ ಸಃ ॥ ೫೬ ॥

ಸಾಹಂ ಭಗವತೋ ನೂನಂ ವಂಚಿತಾ ಮಾಯಯಾ ದೃಢಮ್ ।
ಯತ್ತ್ವಾಂ ವಿಮುಕ್ತಿದಂ ಪ್ರಾಪ್ಯ ನ ಮುಮುಕ್ಷೇಯ ಬಂಧನಾತ್ ॥ ೫೭ ॥

ಅದರ ಫಲವಾಗಿ ದೇವಹೂತಿಯು ಒಟ್ಟಿಗೆ ಒಂಭತ್ತುಮಂದಿ ಕನ್ಯೆಯರಿಗೆ ಜನ್ಮನೀಡಿದಳು. ಅವರೆಲ್ಲರೂ ಸರ್ವಾಂಗ ಸುಂದರಿಯರಾಗಿದ್ದು, ಅವರ ದೇಹದಿಂದ ಕೆಂದಾವರೆಯ ಕಂಪು ಸೂಸುತ್ತಿತ್ತು. ॥ ೪೮ ॥ ಅದೇ ಸಮಯದಲ್ಲಿ ಶುದ್ಧ ಸ್ವಭಾವವುಳ್ಳ ದೇವಹೂತಿಯು ತನ್ನ ಪತಿಯಾದ ಕರ್ದಮರು ತಮ್ಮ ಹಿಂದಿನ ಪ್ರತಿಜ್ಞೆಯಂತೆ ಸಂನ್ಯಾಸವನ್ನು ಸ್ವೀಕರಿಸಲು ಬಯಸುತ್ತಿದ್ದಾರೆ ಎಂಬುದನ್ನು ಗಮನಿಸಿದಳು. ಆಗ ಅವಳು ಉಕ್ಕಿಬರುತ್ತಿದ್ದ ತನ್ನ ಕಣ್ಣೀರನ್ನು ತಡೆದುಕೊಂಡು ಮೇಲ್ಮೆಯ ಮುಗುಳುನಗುತ್ತಾ ಕಡು ಕಳವಳಗೊಂಡ ಮನಸ್ಸಿನಿಂದ ಸವಿಮಾತಿನಲ್ಲಿ ತನ್ನ ಪತಿಯಲ್ಲಿ ಮೆಲ್ಲ-ಮೆಲ್ಲನೆ ಮಾತನಾಡಿದಳು. ಆಗ ಆಕೆಯು ತಲೆಯನ್ನು ತಗ್ಗಿಸಿಕೊಂಡು ನಖಮಣಿಗಳಿಂದ ಬೆಳಗುತ್ತಿದ್ದ ಕಾಲಿನಿಂದ ನೆಲವನ್ನು ಕೆರೆಯುತ್ತಿದ್ದಳು. ॥ ೪೯-೫೦ ॥

ದೇವಹೂತಿಯು ಹೇಳಿದಳು - ಪೂಜ್ಯಪಾದರೇ! ತಾವೇನೋ ಮಾಡಿದ್ದ ಪ್ರತಿಜ್ಞೆಯನ್ನು ಪೂರ್ಣವಾಗಿ ನಿಭಾಯಿಸಿಬಿಟ್ಟಿರಿ. ಆದರೂ ನಾನು ತಮ್ಮಲ್ಲಿ ಶರಣಾಗತಳಾಗಿದ್ದೇನೆ. ಆದ್ದರಿಂದ ನನಗೆ ತಾವು ಮತ್ತೊಂದು ಅಭಯಪ್ರದಾನವನ್ನು ನೀಡಬೇಕು. ॥ ೫೧ ॥ ಬ್ರಾಹ್ಮಣೋತ್ತಮರೇ! ಈ ಕನ್ಯೆಯರಿಗೆ ಯೋಗ್ಯರಾದ ಪತಿಗಳನ್ನು ಹುಡುಕಬೇಕಾಗಿದೆ. ಇದಲ್ಲದೆ ತಾವು ಅರಣ್ಯಕ್ಕೆ ಹೊರಟುಹೋದ ಬಳಿಕ ನನ್ನ ಜನನ-ಮರಣರೂಪೀ ಶೋಕವನ್ನು ದೂರ ಮಾಡುವುದಕ್ಕೆ ಒಬ್ಬರು ಜೊತೆಯಲ್ಲಿರಬೇಕಲ್ಲವೇ? ॥ ೫೨ ॥ ಪ್ರಭುವೇ! ಇಲ್ಲಿಯವರೆಗೂ ಪರಮಾತ್ಮನಿಂದ ವಿಮುಖಳಾಗಿ, ಇಂದ್ರಿಯಗಳ ಸುಖವನ್ನು ಭೋಗಿಸುವುದರಲ್ಲಿ ಕಳೆದು ಹೋದ ನನ್ನ ಸಮಯವೆಲ್ಲವೂ ನಿರರ್ಥಕವೇ ಆಗಿದೆ. ॥ ೫೩ ॥ ತಮ್ಮ ಪರಮ ಪ್ರಭಾವವನ್ನು ತಿಳಿಯದಿರುವ ಕಾರಣದಿಂದಲೇ ನಾನು ಇಂದ್ರಿಯವಿಷಯಗಳಲ್ಲೇ ಆಸಕ್ತಳಾಗಿದ್ದು, ತಮ್ಮಲ್ಲಿ ಅನುರಾಗವನ್ನು ತೋರಿಸುತ್ತಿದ್ದೆ. ಆದರೆ ಅದೂ ಕೂಡ ನನ್ನ ಸಂಸಾರ ಭಯವನ್ನು ನೀಗಿಸುವ ಸಾಮರ್ಥ್ಯವನ್ನು ಹೊಂದಿರಲೇ ಬೇಕು. ॥ ೫೪ ॥ ಅಜ್ಞಾನವಶದಿಂದ ಅಸಜ್ಜನರೊಡನೆ ಮಾಡಿದ ಸಹವಾಸವು ಸಂಸಾರ-ಬಂಧನಕ್ಕೆ ಕಾರಣವಾಗುತ್ತದೆ. ಅದೇ ಸಹವಾಸವನ್ನು ಸಜ್ಜನರೊಡನೆ ಮಾಡಿದ್ದೇ ಆದರೆ ಅದರಿಂದ ನಿಸ್ಸಂಗತೆ ಉಂಟಾಗುವುದು. ॥ ೫೫ ॥ ಈ ಪ್ರಪಂಚದಲ್ಲಿ ಕರ್ಮಗಳಿಂದ ಧರ್ಮಾರ್ಥವನ್ನು ಸಂಪಾದಿಸದಿರುವವನು, ವೈರಾಗ್ಯ ಉಂಟಾಗದವನು, ಭಗವಂತನ ಸೇವೆಯನ್ನು ಮಾಡದವನು ಬದುಕಿದ್ದರೂ ಸತ್ತಿರುವವನಂತೆಯೇ ಸರಿ. ॥ ೫೬ ॥ ಸ್ವಾಮಿ! ಖಂಡಿತವಾಗಿ ನಾನು ಭಗವಂತನ ಮಾಯೆಯಿಂದ ಮೋಸಹೋಗಿರುವೆನು. ಏಕೆಂದರೆ, ತಮ್ಮಂತಹ ಮುಕ್ತಿಪ್ರದರಾದ ಪತಿದೇವರನ್ನು ಪಡೆದರೂ ಸಂಸಾರ ಬಂಧನದಿಂದ ಬಿಡುಗಡೆಯನ್ನು ಬಯಸದೆ ಹೋದೆನಲ್ಲ! ॥ ೫೭ ॥

ಇಪ್ಪತ್ತಮೂರನೆಯ ಅಧ್ಯಾಯವು ಮುಗಿಯಿತು. ॥ ೨೩ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ತೃತೀಯಸ್ಕಂಧೇ
ಕಾಪಿಲೇಯೋಪಾಖ್ಯಾನೇ ತ್ರಯೋವಿಂಶೋಽಧ್ಯಾಯಃ ॥ ೨೩ ॥

ಇಪ್ಪತ್ತನಾಲ್ಕನೆಯ ಅಧ್ಯಾಯ

ಭಗವಾನ್ ಶ್ರೀಕಪಿಲರ ಅವತಾರ

ಮೈತ್ರೇಯ ಉವಾಚ

ನಿರ್ವೇದವಾದಿನೀಮೇವಂ ಮನೋರ್ದುಹಿತರಂ ಮುನಿಃ ।
ದಯಾಲುಃ ಶಾಲಿನೀಮಾಹ ಶುಕ್ಲಾಭಿವ್ಯಾಹೃತಂ ಸ್ಮರನ್ ॥ ೧ ॥

ಋಷಿರುವಾಚ

ಮಾ ಖಿದೋ ರಾಜಪುತ್ರೀತ್ಥಮಾತ್ಮಾನಂ ಪ್ರತ್ಯನಿಂದಿತೇ ।
ಭಗವಾಂಸ್ತೇಽಕ್ಷರೋ ಗರ್ಭಮದೂರಾತ್ಸಂಪ್ರಪತ್ಸ್ಯತೇ ॥ ೨ ॥

ಧೃತವ್ರತಾಸಿ ಭದ್ರಂ ತೇ ದಮೇನ ನಿಯಮೇನ ಚ ।
ತಪೋದ್ರವಿಣದಾನೈಶ್ಚ ಶ್ರದ್ಧಯಾ ಚೇಶ್ವರಂ ಭಜ ॥ ೩ ॥

ಸ ತ್ವಯಾಽಽರಾಧಿತಃ ಶುಕ್ಲೋ ವಿತನ್ವನ್ಮಾಮಕಂ ಯಶಃ ।
ಛೇತ್ತಾ ತೇ ಹೃದಯಗ್ರಂಥಿಮೌದರ್ಯೋ ಬ್ರಹ್ಮಭಾವನಃ ॥ ೪ ॥

ಮೈತ್ರೇಯ ಉವಾಚ

ದೇವಹೂತ್ಯಪಿ ಸಂದೇಶಂ ಗೌರವೇಣ ಪ್ರಜಾಪತೇಃ ।
ಸಮ್ಯಕ್ ಶ್ರದ್ಧಾಯ ಪುರುಷಂ ಕೂಟಸ್ಥಮಭಜದ್ಗುರುಮ್ ॥ ೫ ॥

ತಸ್ಯಾಂ ಬಹುತಿಥೇ ಕಾಲೇ ಭಗವಾನ್ಮಧುಸೂದನಃ ।
ಕಾರ್ದಮಂ ವೀರ್ಯಮಾಪನ್ನೋ ಜಜ್ಞೇಽಗ್ನಿರಿವ ದಾರುಣಿ ॥ ೬ ॥

ಅವಾದಯಂಸ್ತದಾ ವ್ಯೋಮ್ನಿ ವಾದಿತ್ರಾಣಿ ಘನಾಘನಾಃ ।
ಗಾಯಂತಿ ತಂ ಸ್ಮ ಗಂಧರ್ವಾ ನೃತ್ಯಂತ್ಯಪ್ಸರಸೋ ಮುದಾ ॥ ೭ ॥

ಪೇತುಃ ಸುಮನಸೋ ದಿವ್ಯಾಃ ಖೇಚರೈರಪವರ್ಜಿತಾಃ ।
ಪ್ರಸೇದುಶ್ಚ ದಿಶಃ ಸರ್ವಾ ಅಂಭಾಂಸಿ ಚ ಮನಾಂಸಿ ಚ ॥ ೮ ॥

ತತ್ಕರ್ದಮಾಶ್ರಮಪದಂ ಸರಸ್ವತ್ಯಾ ಪರಿಶ್ರಿತಮ್ ।
ಸ್ವಯಂಭೂಃ ಸಾಕಮೃಷಿಭಿರ್ಮರೀಚ್ಯಾದಿಭಿರಭ್ಯಯಾತ್ ॥ ೯ ॥

ಭಗವಂತಂ ಪರಂ ಬ್ರಹ್ಮ ಸತ್ತ್ವೇನಾಂಶೇನ ಶತ್ರುಹನ್ ।
ತತ್ತ್ವಸಂಖ್ಯಾನವಿಜ್ಞಪ್ತ್ಯೈ ಜಾತಂ ವಿದ್ವಾನಜಃ ಸ್ವರಾಟ್ ॥ ೧೦ ॥

ಶ್ರೀಮೈತ್ರೇಯರು ಹೇಳುತ್ತಾರೆ – ವಿದುರನೇ! ಗುಣಶಾಲಿನಿಯಾದ ಮನುಕುಮಾರಿ ದೇವಹೂತಿಯು ಹೀಗೆ ವೈರಾಗ್ಯದಿಂದ ಕೂಡಿದ ಮಾತುಗಳನ್ನು ಹೇಳಿದಾಗ ಕರುಣಾಳುಗಳಾದ ಕರ್ದಮ ಮುನಿಗಳು ಭಗವಾನ್ ಶ್ರೀವಿಷ್ಣುವಿನ ಮಾತುಗಳನ್ನು ಸ್ಮರಿಸಿಕೊಂಡು, ಆಕೆಗೆ ಹೇಳಿದರು – ॥ ೧ ॥

ಕರ್ದಮರು ಇಂತೆಂದರು – ನಿರ್ದೋಷಳಾದ ರಾಜಕುಮಾರಿಯೇ! ನಿನ್ನ ಬಗೆಗೆ ಹೀಗೆ ವಿಷಾದಪಟ್ಟುಕೊಳ್ಳಬೇಡ. ಅವಿನಾಶಿಯಾದ ಭಗವಾನ್ ಶ್ರೀಹರಿಯು ಶೀಘ್ರದಲ್ಲಿಯೇ ನಿನ್ನ ಗರ್ಭಕ್ಕೆ ದಯಮಾಡಿಸುವನು. ॥ ೨ ॥ ಪ್ರಿಯೆ! ನೀನು ಅನೇಕ ಪ್ರಕಾರದ ವ್ರತಗಳನ್ನು ಪಾಲಿಸಿದ್ದೀಯೆ. ಆದರಿಂದ ನಿನ್ನ ಮಂಗಳವೇ ಆಗುವುದು. ಈಗ ನೀನು ಸಂಯಮ, ನಿಯಮ, ತಪಸ್ಸು, ದಾನಾದಿಗಳನ್ನು ಮಾಡುತ್ತಾ ಶ್ರದ್ಧೆಯಿಂದ ಭಗವಂತನನ್ನು ಭಜಿಸುತ್ತಿರು. ॥ ೩ ॥ ನೀನು ಹೀಗೆ ಆರಾಧಿಸುತ್ತಿದ್ದರೆ ಶ್ರೀಹರಿಯು ನಿನ್ನ ಗರ್ಭದಲ್ಲಿ ಅವತರಿಸಿ, ನನ್ನ ಕೀರ್ತಿಯನ್ನು ಹೆಚ್ಚಿಸುವನು ಹಾಗೂ ಬ್ರಹ್ಮಜ್ಞಾನವನ್ನು ಉಪದೇಶಮಾಡಿ ನಿನ್ನ ಅಜ್ಞಾನದ ಗಂಟನ್ನು ಕತ್ತರಿಸಿಹಾಕುವನು. ॥ ೪ ॥

ಶ್ರೀಮೈತ್ರೇಯರು ಹೇಳುತ್ತಾರೆ – ಸಾಧುಶ್ರೇಷ್ಠನಾದ ವಿದುರನೇ! ದೇವಹೂತಿಯು ಕರ್ದಮ ಪ್ರಜಾಪತಿಗಳ ಆದೇಶದಲ್ಲಿ ಗೌರವಬುದ್ಧಿ ತೋರಿ, ಪೂರ್ಣ ನಂಬಿಕೆಯಿಂದ ನಿರ್ವಿಕಾರಿಯಾದ ಜಗದ್ಗುರು ಭಗವಾನ್ ಶ್ರೀಹರಿಯನ್ನು ಚೆನ್ನಾಗಿ ಆರಾಧಿಸತೊಡಗಿದಳು. ॥ ೫ ॥ ಹೀಗೆ ಬಹಳ ಸಮಯ ಕಳೆಯಲು ಭಗವಾನ್ ಶ್ರೀಮಧುಸೂದನನು ಕರ್ದಮರ ವೀರ್ಯವನ್ನು ಆಶ್ರಯಿಸಿ, ಕಟ್ಟಿಗೆಯಿಂದ ಅಗ್ನಿಯು ಉದ್ಭವಿಸುವಂತೆ ದೇವಹೂತಿಯ ಗರ್ಭದಿಂದ ಪ್ರಕಟನಾದನು. ॥ ೬ ॥ ಆಗ ಆಕಾಶದಲ್ಲಿ ದೇವದುಂದುಭಿಗಳು ಮೊಳಗಿದವು. ಮೋಡಗಳು ಗುಡುಗುತ್ತಾ ಅಮೃತದ ಮಳೆಯನ್ನು ಕರೆದವು. ಗಂಧರ್ವರು ಗಾನ ಮಾಡತೊಡಗಿದರು. ಅಪ್ಸರೆಯರು ಆನಂದದಿಂದ ನೃತ್ಯವಾಡತೊಡಗಿದರು. ॥ ೭ ॥ ಆಕಾಶದಿಂದ ದೇವತೆಗಳು ಹೂಮಳೆಯನ್ನು ಸುರಿಸಿದರು. ಎಲ್ಲ ದಿಕ್ಕುಗಳಲ್ಲಿಯೂ ಆನಂದವು ಹರಡಿತು. ಜಲಾಶಯಗಳ ಜಲವು ನಿರ್ಮಲವಾಯಿತು. ಎಲ್ಲ ಜೀವಿಗಳ ಮನಸ್ಸು ಪ್ರಸನ್ನಗೊಂಡವು. ॥ ೮ ॥ ಇದೇ ಸಮಯಕ್ಕೆ ಸರಸ್ವತೀನದಿಯಿಂದ ಸುತ್ತುವರಿಯಲ್ಪಟ್ಟ ಕರ್ದಮರ ಆಶ್ರಮಕ್ಕೆ ಮರೀಚಿಯೇ ಮುಂತಾದ ಮುನಿಗಳ ಸಹಿತ ಶ್ರೀಬ್ರಹ್ಮದೇವರು ದಯಮಾಡಿಸಿದರು. ॥ ೯ ॥ ಎಲೈ ಶತ್ರುದಮನ ವಿದುರನೇ! ಸಾಕ್ಷಾತ್ ಪರಬ್ರಹ್ಮ ಭಗವಾನ್ ಶ್ರೀವಿಷ್ಣುವೇ ಸಾಂಖ್ಯಶಾಸ್ತ್ರವನ್ನು ಪ್ರವರ್ತನೆ ಮಾಡಲು ತನ್ನ ಪರಿಶುದ್ಧ ಸತ್ತ್ವಮಯವಾದ ಅಂಶದಿಂದ ಅಲ್ಲಿ ಅವತರಿಸಿರುವನು ಎಂಬುದು ಸ್ವಯಂಸಿದ್ಧ ಜ್ಞಾನದಿಂದ ಸಂಪನ್ನರೂ ಜನ್ಮರಹಿತರೂ ಆದ ಬ್ರಹ್ಮದೇವರಿಗೆ ಸ್ಪಷ್ಟವಾಗಿ ತಿಳಿದುಬಂದಿತ್ತು. ॥ ೧೦ ॥

ಸಭಾಜಯನ್ ವಿಶುದ್ಧೇನ ಚೇತಸಾ ತಚ್ಚಿಕೀರ್ಷಿತಮ್ ।
ಪ್ರಹೃಷ್ಯಮಾಣೈರಸುಭಿಃ ಕರ್ದಮಂ ಚೇದಮಭ್ಯಧಾತ್ ॥ ೧೧ ॥

ಬ್ರಹ್ಮೋವಾಚ

ತ್ವಯಾ ಮೇಽಪಚಿತಿಸ್ತಾತ ಕಲ್ಪಿತಾ ನಿರ್ವ್ಯಲೀಕತಃ ।
ಯನ್ಮೇ ಸಂಜಗೃಹೇ ವಾಕ್ಯಂ ಭವಾನ್ಮಾನದ ಮಾನಯನ್ ॥ ೧೨ ॥

ಏತಾವತ್ಯೇವ ಶುಶ್ರೂಷಾ ಕಾರ್ಯಾ ಪಿತರಿ ಪುತ್ರಕೈಃ ।
ಬಾಢಮಿತ್ಯನುಮನ್ಯೇತ ಗೌರವೇಣ ಗುರೋರ್ವಚಃ ॥ ೧೩ ॥

ಇಮಾ ದುಹಿತರಃ ಸತ್ಯ ತವ ವತ್ಸ ಸುಮಧ್ಯಮಾಃ ।
ಸರ್ಗಮೇತಂ ಪ್ರಭಾವೈಃ ಸ್ವೈರ್ಬೃಂಹಯಿಷ್ಯಂತ್ಯನೇಕಧಾ ॥ ೧೪ ॥

ಅತಸ್ತ್ವಮೃಷಿಮುಖ್ಯೇಭ್ಯೋ ಯಥಾಶೀಲಂ ಯಥಾರುಚಿ ।
ಆತ್ಮಜಾಃ ಪರಿದೇಹ್ಯದ್ಯ ವಿಸ್ತೃಣೀಹಿ ಯಶೋ ಭುವಿ ॥ ೧೫ ॥

ವೇದಾಹಮಾದ್ಯಂ ಪುರುಷಮವತೀರ್ಣಂ ಸ್ವಮಾಯಯಾ ।
ಭೂತಾನಾಂ ಶೇವಧಿಂ ದೇಹಂ ಬಿಭ್ರಾಣಂ ಕಪಿಲಂ ಮುನೇ ॥ ೧೬ ॥

ಜ್ಞಾನವಿಜ್ಞಾನಯೋಗೇನ ಕರ್ಮಣಾಮುದ್ಧರಂಜಟಾಃ ।
ಹಿರಣ್ಯಕೇಶಃ ಪದ್ಮಾಕ್ಷಃ ಪದ್ಮಮುದ್ರಾಪದಾಂಬುಜಃ ॥ ೧೭ ॥

ಏಷ ಮಾನವಿ ತೇ ಗರ್ಭಂ ಪ್ರವಿಷ್ಟಃ ಕೈಟಭಾರ್ದನಃ ।
ಅವಿದ್ಯಾಸಂಶಯಗ್ರಂಥಿಂ ಛಿತ್ತ್ವಾ ಗಾಂ ವಿಚರಿಷ್ಯತಿ ॥ ೧೮ ॥

ಅಯಂ ಸಿದ್ಧಗಣಾಧೀಶಃ ಸಾಂಖ್ಯಾಚಾರ್ಯೈಃ ಸುಸಮ್ಮತಃ ।
ಲೋಕೇ ಕಪಿಲ ಇತ್ಯಾಖ್ಯಾಂ ಗಂತಾ ತೇ ಕೀರ್ತಿವರ್ಧನಃ ॥ ೧೯ ॥

ಮೈತ್ರೇಯ ಉವಾಚ

ತಾವಾಶ್ವಾಸ್ಯ ಜಗತ್ಸ್ರಷ್ಟಾ ಕುಮಾರೈಃ ಸಹನಾರದಃ ।
ಹಂಸೋ ಹಂಸೇನ ಯಾನೇನ ತ್ರಿಧಾಮಪರಮಂ ಯಯೌ ॥ ೨೦ ॥

ಗತೇ ಶತಧೃತೌ ಕ್ಷತ್ತಃ ಕರ್ದಮಸ್ತೇನ ಚೋದಿತಃ ।
ಯಥೋದಿತಂ ಸ್ವದುಹಿತೄಃ ಪ್ರಾದಾದ್ವಿಶ್ವಸೃಜಾಂ ತತಃ ॥ ೨೧ ॥

ಮರೀಚಯೇ ಕಲಾಂ ಪ್ರಾದಾದನಸೂಯಾಮಥಾತ್ರಯೇ ।
ಶ್ರದ್ಧಾಮಂಗಿರಸೇಽಯಚ್ಛತ್ಪುಲಸ್ತ್ಯಾಯ ಹವಿರ್ಭುವಮ್ ॥ ೨೨ ॥

ಆದ್ದರಿಂದ ಭಗವಂತನು ಮಾಡಬೇಕೆಂದಿದ್ದ ಕಾರ್ಯವನ್ನು ಅವರು ವಿಶುದ್ಧವಾದ ಚಿತ್ತದಿಂದ ಅಭಿನಂದನೆ ಮಾಡುತ್ತಾ, ಆದರಿಸುತ್ತಾ, ತಮ್ಮ ಎಲ್ಲ ಇಂದ್ರಿಯಗಳಿಂದಲೂ ಪ್ರಸನ್ನತೆಯನ್ನು ಪ್ರಕಟಿಸುತ್ತಾ ಕರ್ದಮರನ್ನು ಕುರಿತು ಇಂತೆಂದರು – ॥ ೧೧ ॥

ಶ್ರೀಬ್ರಹ್ಮದೇವರು ಹೇಳಿದರು – ವತ್ಸ ಕರ್ದಮ! ಬೇರೆಯವರಿಗೆ ಮಾನವನ್ನು ಕೊಡುವವನೇ! ನೀನು ನನ್ನನ್ನು ಸಮ್ಮಾನಿಸುತ್ತಾ, ನನ್ನ ಆಜ್ಞೆಯನ್ನು ಪಾಲಿಸಿರುವೆ. ಇದರಿಂದ ನಿನ್ನ ನಿಷ್ಕಪಟ ಭಾವದಿಂದ ನನ್ನ ಪೂಜೆಯನ್ನು ಸಲ್ಲಿಸಿರುವೆ. ॥ ೧೨॥ ಮಕ್ಕಳಾದವರು – 'ಏವಮಸ್ತು' ಎಂದು ಹೇಳಿ ಅತ್ಯಂತ ಆದರದಿಂದ ಅವನ ಆಣತಿಯನ್ನು ಪಾಲಿಸುವುದೇ ತಂದೆಗೆ ಸಲ್ಲಿಸಬೇಕಾದ ಅತ್ಯಂತ ಶ್ರೇಷ್ಠವಾದ ಸೇವೆಯಾಗಿದೆ. ॥ ೧೩ ॥ ಮಗು! ನೀನು ಸಭ್ಯನಾಗಿರುವೆ. ನಿನ್ನ ಸುಂದರಿಯರಾದ ಈ ಕನ್ಯೆಯರು ತಮ್ಮ ವಂಶ ಸಂತತಿಗಳ ಮೂಲಕ ಈ ಸೃಷ್ಟಿಯನ್ನು ಅನೇಕ ಪ್ರಕಾರದಿಂದ ಹೆಚ್ಚಿಸುವರು. ॥ ೧೪ ॥ ಈಗ ನೀನು ಈ ಮರೀಚಿಗಳೇ ಮುಂತಾದ ಮುನಿವರ್ಯರಿಗೆ ಇವರ ಸ್ವಭಾವ ಮತ್ತು ರುಚಿಗಳಿಗೆ ತಕ್ಕಂತೆ ನಿನ್ನ ಕನ್ಯೆಯರನ್ನು ವಿವಾಹಮಾಡಿಕೊಟ್ಟು ಪ್ರಪಂಚದಲ್ಲಿ ಸತ್ಕೀರ್ತಿಯನ್ನು ಹರಡುವವನಾಗು. ॥ ೧೫ ॥ ಮುನಿವರ್ಯನೇ! ಸಮಸ್ತ ಪ್ರಾಣಿಗಳಿಗೂ ನಿಧಿಯಾಗಿ, ಅವರ ಅಭೀಷ್ಟಗಳನ್ನು ಈಡೇರಿಸುವ ಆದಿಪುರುಷನಾದ ಶ್ರೀಮನ್ನಾರಾಯಣನೇ ಈಗ ತನ್ನ ಯೋಗಮಾಯೆಯಿಂದ ಕಪಿಲನೆಂಬ ಹೆಸರಿನಿಂದ ಅವತರಿಸಿರುವನು. ॥ ೧೬ ॥ (ಮತ್ತೆ ದೇವಹೂತಿಗೆ ಹೇಳಿದರು –) ರಾಜಕುಮಾರಿ! ಹೊನ್ನಿನಂತೆ ಹೊಳೆಯುವ ಕೇಶಗಳಿಂದಲೂ, ತಾವರೆ ಹೂವಿನಂತೆ ಕಂಗೊಳಿಸುವ ಕಣ್ಣುಗಳಿಂದಲೂ, ಪದ್ಮಾಂಕಿತವಾದ ಪದಾರವಿಂದಗಳಿಂದಲೂ ಕೂಡಿ, ಶಿಶುರೂಪದಿಂದ ಕೈಟಭಾರಿಯಾದ ಶ್ರೀಮಹಾವಿಷ್ಣುವೇ ಜ್ಞಾನ-ವಿಜ್ಞಾನಗಳ ಮೂಲಕ ಕರ್ಮಗಳ ವಾಸನೆಯನ್ನು ನಿರ್ಮೂಲಗೊಳಿಸಲು ನಿನ್ನ ಗರ್ಭದಲ್ಲಿ ಪ್ರವೇಶಿಸಿರುವನು. ಈತನು ಅವಿದ್ಯೆಯಿಂದುಂಟಾದ ಮೋಹದ ಗಂಟನ್ನು ಕತ್ತರಿಸಿ, ಭೂಮಿಯಲ್ಲಿ ಯಥೇಚ್ಛವಾಗಿ ಸಂಚರಿಸುವನು. ॥ ೧೭-೧೮ ॥ ಇವನು ಸಿದ್ಧರಿಗೂ, ಸಾಂಖ್ಯಾಚಾರ್ಯರಿಗೂ ಸಮ್ಮಾನಯೋಗ್ಯನಾಗುವನು. 'ಕಪಿಲ' ಎಂಬ ಹೆಸರಿನಿಂದ ಪ್ರಸಿದ್ಧನಾಗಿ ಲೋಕದಲ್ಲಿ ನಿನ್ನ ಕೀರ್ತಿಯನ್ನು ಹೆಚ್ಚಿಸುವನು. ॥ ೧೯ ॥

ಶ್ರೀಮೈತ್ರೇಯರು ಹೇಳುತ್ತಾರೆ – ವಿದುರನೇ! ಜಗತ್ತನ್ನು ಸೃಷ್ಟಿಸುವ ಶ್ರೀಬ್ರಹ್ಮದೇವರು ಅವರಿಬ್ಬರಿಗೂ ಹೀಗೆ ಸಂತೈಸಿ ಸನಕಾದಿಗಳನ್ನೂ, ನಾರದರನ್ನೂ ಜೊತೆಗೂಡಿ ಹಂಸಾರೂಢರಾಗಿ ತಮ್ಮ ಬ್ರಹ್ಮಲೋಕಕ್ಕೆ ಹೊರಟುಹೋದರು. ॥ ೨೦ ॥ ಶ್ರೀಬ್ರಹ್ಮದೇವರು ಹೋದಬಳಿಕ ಕರ್ದಮರು ಅವರ ಅಪ್ಪಣೆಯಂತೆ ಮರೀಚಿಗಳೇ ಮುಂತಾದ ಪ್ರಜಾಪತಿಗಳಿಗೆ ತಮ್ಮ ಕನ್ಯೆಯರನ್ನು ಕೊಟ್ಟು ವಿವಾಹ ಮಾಡಿದರು. ॥ ೨೧ ॥ ಅವರು ತಮ್ಮ ಕನ್ಯಾಮಣಿಗಳಲ್ಲಿ 'ಕಲಾ' ಎಂಬಾಕೆಯನ್ನು ಮರೀಚಿ ಮಹರ್ಷಿಗಳಿಗೂ, 'ಅನಸೂಯೆ'ಯನ್ನು ಅತ್ರಿಗಳಿಗೂ, 'ಶ್ರದ್ಧೆ'ಯನ್ನು ಅಂಗಿರಸರಿಗೂ, 'ಹವಿರ್ಭೂ' ಎಂಬಾಕೆಯನ್ನು ಪುಲಸ್ತ್ಯರಿಗೂ ಕೊಟ್ಟು ವಿವಾಹ ಮಾಡಿದರು. ॥ ೨೨ ॥

ಪುಲಹಾಯ ಗತಿಂ ಯುಕ್ತಾಂ ಕ್ರತವೇ ಚ ಕ್ರಿಯಾಂ ಸತೀಮ್ ।
ಖ್ಯಾತಿಂ ಚ ಭೃಗವೇಽಯಚ್ಛದ್ವಸಿಷ್ಠಾಯಾಪ್ಯರುಂಧತೀಮ್ ॥ ೨೩ ॥

ಅಥರ್ವಣೇಽದದಾಚ್ಛಾಂತಿಂ ಯಯಾ ಯಜ್ಞೋ ವಿತನ್ಯತೇ ।
ವಿಪ್ರರ್ಷಭಾನ್ಕೃತೋದ್ವಾಹಾನ್ಸದಾರಾನ್ಸಮಲಾಲಯತ್ ॥ ೨೪ ॥

ತತಸ್ತ ಋಷಯಃ ಕ್ಷತ್ತಃ ಕೃತದಾರಾ ನಿಮಂತ್ರ್ಯ ತಮ್ ।
ಪ್ರಾತಿಷ್ಠನ್ನಂದಿಮಾಪನ್ನಾಃ ಸ್ವಂ ಸ್ವಮಾಶ್ರಮಮಂಡಲಮ್ ॥ ೨೫ ॥

ಸ ಚಾವತೀರ್ಣಂ ತ್ರಿಯುಗಮಾಜ್ಞಾಯ ವಿಬುಧರ್ಷಭಮ್ ।
ವಿವಿಕ್ತ ಉಪಸಂಗಮ್ಯ ಪ್ರಣಮ್ಯ ಸಮಭಾಷತ ॥ ೨೬ ॥

ಅಹೋ ಪಾಪಚ್ಯಮಾನಾನಾಂ ನಿರಯೇ ಸ್ವೈರಮಂಗಲೈಃ ।
ಕಾಲೇನ ಭೂಯಸಾ ನೂನಂ ಪ್ರಸೀದಂತೀಹ ದೇವತಾಃ ॥ ೨೭ ॥

ಬಹುಜನ್ಮವಿಪಕ್ವೇನ ಸಮ್ಯಗ್ಯೋಗಸಮಾಧಿನಾ ।
ದ್ರಷ್ಟುಂ ಯತಂತೇ ಯತಯಃ ಶೂನ್ಯಾಗಾರೇಷು ಯತ್ಪದಮ್ ॥ ೨೮ ॥

ಸ ಏವ ಭಗವಾನದ್ಯ ಹೇಲನಂ ನಗಣಯ್ಯ ನಃ ।
ಗೃಹೇಷು ಜಾತೋ ಗ್ರಾಮ್ಯಾಣಾಂ ಯಃ ಸ್ವಾನಾಂ ಪಕ್ಷಪೋಷಣಃ ॥ ೨೯ ॥

ಸ್ವೀಯಂ ವಾಕ್ಯಮೃತಂ ಕರ್ತುಮವತೀರ್ಣೋಽಸಿ ಮೇ ಗೃಹೇ ।
ಚಿಕೀರ್ಷುರ್ಭಗವಾನ್ ಜ್ಞಾನಂ ಭಕ್ತಾನಾಂ ಮಾನವರ್ಧನಃ ॥ ೩೦ ॥

ತಾನ್ಯೇವ ತೇಽಭಿರೂಪಾಣಿ ರೂಪಾಣಿ ಭಗವಂಸ್ತವ ।
ಯಾನಿ ಯಾನಿ ಚ ರೋಚಂತೇ ಸ್ವಜನಾನಾಮರೂಪಿಣಃ ॥ ೩೧ ॥

ತ್ವಾಂ ಸೂರಿಭಿಸ್ತತ್ತ್ವಬುಭುತ್ಸಯಾದ್ಧಾ
ಸದಾಭಿವಾದಾರ್ಹಣಪಾದಪೀಠಮ್ ।
ಐಶ್ವರ್ಯವೈರಾಗ್ಯಯಶೋಽವಬೋಧ-
ವೀರ್ಯಶ್ರಿಯಾ ಪೂರ್ತಮಹಂ ಪ್ರಪದ್ಯೇ ॥ ೩೨ ॥

ಪರಂ ಪ್ರಧಾನಂ ಪುರುಷಂ ಮಹಾಂತಂ
ಕಾಲಂ ಕವಿಂ ತ್ರಿವೃತಂ ಲೋಕಪಾಲಮ್ ।
ಆತ್ಮಾನುಭೂತ್ಯಾನುಗತಪ್ರಪಂಚಂ
ಸ್ವಚ್ಛಂದಶಕ್ತಿಂ ಕಪಿಲಂ ಪ್ರಪದ್ಯೇ ॥ ೩೩ ॥

ಮಹರ್ಷಿ ಪುಲಹರಿಗೆ ಅನುರೂಪಳಾದ 'ಗತಿ' ಎಂಬ ಕನ್ಯೆಯನ್ನೂ, ಕ್ರತುವಿಗೆ ಸಾಧ್ವೀಮಣಿಯಾದ 'ಕ್ರಿಯೆ' ಎಂಬುವಳನ್ನೂ, ಭೃಗು ಮಹರ್ಷಿಗಳಿಗೆ 'ಖ್ಯಾತಿ' ಎಂಬಾಕೆಯನ್ನೂ, ಮಹರ್ಷಿ ವಸಿಷ್ಠರಿಗೆ 'ಅರುಂಧತಿ'ಯನ್ನೂ ವಿವಾಹ ಮಾಡಿಕೊಟ್ಟರು. ॥ ೨೩ ॥ ಅಥರ್ವಾ ಮಹರ್ಷಿಗಳಿಗೆ ಯಜ್ಞಕರ್ಮವನ್ನು ವಿಸ್ತರಿಸುವ 'ಶಾಂತಿ' ಎಂಬ ಕನ್ಯೆಯನ್ನು ಕೊಟ್ಟು ವಿವಾಹ ಮಾಡಿದರು. ಕರ್ದಮರು ವಿವಾಹಿತರಾದ ಮಹರ್ಷಿಗಳನ್ನೂ, ಅವರ ಪತ್ನಿಯರನ್ನೂ ಪ್ರೀತಿಯಿಂದ ತುಂಬಾ ಸತ್ಕಾರಮಾಡಿದರು. ॥ ೨೪ ॥ ವಿದುರನೇ! ಹೀಗೆ ವಿವಾಹಮಾಡಿಕೊಂಡ ಮಹರ್ಷಿಗಳೆಲ್ಲರೂ ಕರ್ದಮರ ಅನುಮತಿಯನ್ನು ಪಡೆದು ಪರಮಾನಂದದಿಂದ ತಮ್ಮ-ತಮ್ಮ ಆಶ್ರಮಗಳಿಗೆ ಹೊರಟುಹೋದರು. ॥ ೨೫ ॥

ದೇವಾಧಿದೇವನಾದ ಸಾಕ್ಷಾತ್ ಶ್ರೀಹರಿಯೇ ತಮ್ಮ ಮನೆಯಲ್ಲಿ ಅವತರಿಸಿರುವುದನ್ನು ಗಮನಿಸಿ ಕರ್ದಮರು ಏಕಾಂತದಲ್ಲಿ ಅವನ ಬಳಿಗೆ ಹೋಗಿ, ಅವನಿಗೆ ನಮಸ್ಕರಿಸಿ ಇಂತೆಂದರು – ॥ ೨೬ ॥ ಆಹಾ! ನನ್ನದು ಎಂತಹ ಪುಣ್ಯ! ತಮ್ಮ ಪಾಪಕರ್ಮಗಳ ಫಲವಾಗಿ ಈ ದುಃಖಮಯ ಪ್ರಪಂಚದಲ್ಲಿ ನಾನಾ ಪ್ರಕಾರದ ಪೀಡೆಗಳನ್ನು ಅನುಭವಿಸುತ್ತಿರುವ ಮನುಷ್ಯರ ಮೇಲೆ ದೇವತೆಗಳು ಪ್ರಸನ್ನರಾಗಬೇಕಾದರೆ ಬಹಳ ಸಮಯಬೇಕು. ॥ ೨೭ ॥ ಆದರೆ ಯಾರ ಸ್ವರೂಪವನ್ನು ಯೋಗಿಜನರು ಅನೇಕ ಜನ್ಮಗಳ ಸಾಧನೆಯಿಂದ ಸುದೃಢವಾದ ಸಮಾಧಿಯ ಮೂಲಕ ಏಕಾಂತದಲ್ಲಿ ನೋಡಲು ಪ್ರಯತ್ನಿಸುವರೋ ಅಂತಹ ತನ್ನ ಭಕ್ತರನ್ನು ರಕ್ಷಿಸುತ್ತಿರುವ ಶ್ರೀಹರಿಯು ನಮ್ಮಂತಹ ವಿಷಯಲೋಲುಪರ ಮೂಲಕ ಆಗುವ ತನ್ನ ಅವಜ್ಞತೆಯನ್ನು ಸ್ವಲ್ಪವೂ ಲೆಕ್ಕಿಸದೆ ಇಂದು ನಮ್ಮ ಮನೆಯಲ್ಲಿ ಅವತರಿಸಿದ್ದಾನಲ್ಲ! ॥ ೨೮-೨೯ ॥ ಸ್ವಾಮಿಯೇ! ನೀನು ನಿಜವಾಗಿಯೂ ನಿನ್ನ ಭಕ್ತರ ಮಾನವನ್ನು ಹೆಚ್ಚಿಸುವವನಾಗಿರುವೆ. ನೀನು ನಿನ್ನ ವಾಕ್ಯವನ್ನು ಸತ್ಯವಾಗಿಸಲೋಸುಗ ಮತ್ತು ಸಾಂಖ್ಯಯೋಗವನ್ನು ಉಪದೇಶಮಾಡುವುದಕ್ಕಾಗಿಯೇ ನಮ್ಮಲ್ಲಿ ಅವತರಿಸಿರುವೆ. ॥ ೩೦ ॥ ಭಗವಂತಾ! ನೀನು ಪ್ರಾಕೃತರೂಪರಹಿತನಾಗಿರುವೆ. ನಿನ್ನ ಚತುರ್ಭುಜಾದಿ ಅಲೌಕಿಕ ರೂಪಗಳೇ ನಿನಗೆ ಯೋಗ್ಯವಾಗಿವೆ. ಆದರೆ ನಿನ್ನ ಸ್ವಜನರಾದ ಭಕ್ತರಿಗೆ ರುಚಿಸುವ ಮನುಷ್ಯರೂಪಗಳೇ ನಿನಗೂ ಪ್ರಿಯವಾಗಿ ಅವನ್ನು ಧರಿಸುತ್ತೀಯೆ. ॥ ೩೧ ॥ ನಿನ್ನ ಪಾದಪೀಠವು ತತ್ತ್ವಜ್ಞಾನೇಚ್ಛುಗಳಾದ ವಿದ್ವಾಂಸರಿಂದ ಸರ್ವದಾ ವಂದನೀಯವಾಗಿದೆ. ಹಾಗೂ ನೀನು ಐಶ್ವರ್ಯ, ವೈರಾಗ್ಯ, ಯಶ, ಜ್ಞಾನ, ವೀರ್ಯ, ಶ್ರೀ – ಹೀಗೆ ಆರು ಐಶ್ವರ್ಯಗಳಿಂದ ಪೂರ್ಣನಾಗಿರುವೆ. ನಾನು ನಿನಗೆ ಶರಣಾಗಿದ್ದೇನೆ. ॥ ೩೨ ॥ ಭಗವಂತನೇ! ನೀನು ಸಾಕ್ಷಾತ್ ಪರಬ್ರಹ್ಮನಾಗಿರುವೆ. ಎಲ್ಲ ಶಕ್ತಿಗಳು ನಿನ್ನ ಅಧೀನವಾಗಿವೆ. ಪ್ರಕೃತಿ, ಪುರುಷ, ಮಹತ್ತತ್ತ್ವ, ಕಾಲ, ತ್ರಿವಿಧ ಅಹಂಕಾರ, ಸಮಸ್ತ ಲೋಕಗಳು ಮತ್ತು ಲೋಕಪಾಲರ ರೂಪದಲ್ಲಿ ನೀನೇ ಪ್ರಕಟನಾಗಿರುವೆ. ಸರ್ವಜ್ಞ ಪರಮಾತ್ಮನಾದ ನೀನೇ ಈ ಸಮಸ್ತ ಪ್ರಪಂಚವನ್ನು ತನ್ನ ಚೈತನ್ಯಶಕ್ತಿಯ ಮೂಲಕ ತನ್ನಲ್ಲಿ ಲೀನಗೊಳಿಸಿಕೊಳ್ಳುವೆ. ಆದ್ದರಿಂದ ಇವೆಲ್ಲವುಗಳಿಂದಲೂ ನೀನು ಅತೀತನಾಗಿರುವೆ. ಇಂತಹ ಭಗವಾನ್ ಕಪಿಲನಾದ ನಿನ್ನನ್ನು ನಾನು ಶರಣುಹೊಂದುತ್ತೇನೆ. ॥ ೩೩ ॥

ಆ ಸ್ಮಾಭಿಪೃಚ್ಛೇಽದ್ಯ ಪತಿಂ ಪ್ರಜಾನಾಂ
ತ್ವಯಾವತೀರ್ಣರ್ಣ ಉತಾಪ್ತಕಾಮಃ ।
ಪರಿವ್ರಜತ್ಪದವೀಮಾಸ್ಥಿತೋಽಹಂ
ಚರಿಷ್ಯೇ ತ್ವಾಂ ಹೃದಿ ಯುಂಜನ್ವಿಶೋಕಃ ॥ ೩೪ ॥

ಸ್ವಾಮಿ! ನಿನ್ನ ಕೃಪೆಯಿಂದ ನಾನು ಮೂರೂ ಋಣಗಳಿಂದ ಮುಕ್ತನಾಗಿರುವೆ. ನನ್ನ ಎಲ್ಲ ಮನೋರಥಗಳೂ ಪೂರ್ಣವಾದುವು. ಇನ್ನು ನಾನು ಸಂನ್ಯಾಸಮಾರ್ಗವನ್ನು ಹಿಡಿದು ನಿನ್ನನ್ನೇ ಚಿಂತಿಸುತ್ತಾ ಶೋಕರಹಿತನಾಗಿ ಸಂಚರಿಸುವೆನು. ನೀನು ಸಮಸ್ತ ಪ್ರಜೆಗಳ ಒಡೆಯನಾಗಿರುವೆ. ಆದ್ದರಿಂದ ಇದಕ್ಕಾಗಿ ನಿನ್ನ ಆಜ್ಞೆ-ಅನುಮತಿಯನ್ನು ಪ್ರಾರ್ಥಿಸುತ್ತೇನೆ. ॥ ೩೪ ॥

ಶ್ರೀಭಗವಾನುವಾಚ

ಮಯಾ ಪ್ರೋಕ್ತಂ ಹಿ ಲೋಕಸ್ಯ ಪ್ರಮಾಣಂ ಸತ್ಯಲೌಕಿಕೇ ।
ಅಥಾಜನಿ ಮಯಾ ತುಭ್ಯಂ ಯದವೋಚಮೃತಂ ಮುನೇ ॥ ೩೫ ॥

ಏತನ್ಮೇ ಜನ್ಮ ಲೋಕೇಽಸ್ಮಿನ್ಮುಮುಕ್ಷೂಣಾಂ ದುರಾಶಯಾತ್ ।
ಪ್ರಸಂಖ್ಯಾನಾಯ ತತ್ತ್ವಾನಾಂ ಸಮ್ಮತಾಯಾತ್ಮದರ್ಶನೇ ॥ ೩೬ ॥

ಏಷ ಆತ್ಮಪಥೋಽವ್ಯಕ್ತೋ ನಷ್ಟಃ ಕಾಲೇನ ಭೂಯಸಾ ।
ತಂ ಪ್ರವರ್ತಯಿತುಂ ದೇಹಮಿಮಂ ವಿದ್ಧಿ ಮಯಾ ಭೃತಮ್ ॥ ೩೭ ॥

ಗಚ್ಛ ಕಾಮಂ ಮಯಾಽಽಪೃಷ್ಟೋ ಮಯಿ ಸಂನ್ಯಸ್ತಕರ್ಮಣಾ ।
ಜಿತ್ವಾ ಸುದುರ್ಜಯಂ ಮೃತ್ಯುಮಮೃತತ್ವಾಯ ಮಾಂ ಭಜ ॥ ೩೮ ॥

ಮಾಮಾತ್ಮಾನಂ ಸ್ವಯಂಜ್ಯೋತಿಃ ಸರ್ವಭೂತಗುಹಾಶಯಮ್ ।
ಆತ್ಮನ್ಯೇವಾತ್ಮನಾ ವೀಕ್ಷ್ಯ ವಿಶೋಕೋಽಭಯಮೃಚ್ಛಸಿ ॥ ೩೯ ॥

ಮಾತ್ರ ಆಧ್ಯಾತ್ಮಿಕೀಂ ವಿದ್ಯಾಂ ಶಮನೀಂ ಸರ್ವಕರ್ಮಣಾಮ್ ।
ವಿತರಿಷ್ಯೇ ಯಯಾ ಚಾಸೌ ಭಯಂ ಚಾತಿತರಿಷ್ಯತಿ ॥ ೪೦ ॥

ಶ್ರೀಭಗವಂತನೆಂದನು – ಎಲೈ ಮುನೀಂದ್ರನೇ! ವೈದಿಕ ಮತ್ತು ಲೌಕಿಕ ಎಲ್ಲ ಕರ್ಮಗಳಲ್ಲಿ ಪ್ರಪಂಚಕ್ಕಾಗಿ ನಾನು ಹೇಳಿದುದೇ ಪ್ರಮಾಣವಾಗಿದೆ. ಆದ್ದರಿಂದ – 'ನಾನು ನಿಮ್ಮಲ್ಲಿ ಅವತರಿಸುವೆ' ಎಂದು ಹೇಳಿದುದನ್ನು ಸತ್ಯವಾಗಿಸಲೆಂದೇ ನಾನು ಇಲ್ಲಿ ಅವತರಿಸಿರುವೆನು. ॥ ೩೫ ॥ ಅಂತೆಯೇ ಲಿಂಗಶರೀರದಿಂದ ಬಿಡುಗಡೆಹೊಂದುವ ಬಯಕೆಯುಳ್ಳ ಮುನಿಗಳಿಗೆ ಆತ್ಮದರ್ಶನಕ್ಕೆ ಉಪಯೋಗವಾಗುವ ಪ್ರಕೃತಿಯೇ ಮುಂತಾದ ತತ್ತ್ವಗಳನ್ನು ವಿವೇಚನೆ ಮಾಡುವುದಕ್ಕಾಗಿಯೂ ನನ್ನ ಈ ಅವತಾರವಾಗಿದೆ. ॥ ೩೬ ॥ ಆತ್ಮಜ್ಞಾನದ ಸೂಕ್ಷ್ಮವಾದ ಈ ಮಾರ್ಗವು ಬಹಳ ಕಾಲದಿಂದಲೂ ಲುಪ್ತವಾಗಿಬಿಟ್ಟಿದೆ. ಅದನ್ನು ಮತ್ತೆ ಪ್ರವರ್ತನೆ ಮಾಡುವುದಕ್ಕಾಗಿಯೇ ನಾನು ಈ ಶರೀರವನ್ನು ಧರಿಸಿರುವೆನು ಎಂದು ತಿಳಿ. ॥ ೩೭ ॥ ಮುನಿವರ್ಯನೇ! ನಾನು ಅನುಮತಿಯನ್ನು ನೀಡಿರುವೆನು. ನೀನು ನಿನ್ನ ಇಚ್ಛಾನುಸಾರವಾಗಿ ಹೋಗಬಹುದು. ಸಮಸ್ತ ಕರ್ಮಗಳನ್ನು ನನ್ನಲ್ಲಿ ಸಮರ್ಪಣೆಮಾಡುತ್ತಾ, ದುರ್ಜಯವಾದ ಮೃತ್ಯುವನ್ನು ಗೆದ್ದುಕೊಂಡು ಮೋಕ್ಷವನ್ನು ಪಡೆಯುವುದಕ್ಕಾಗಿ ನನ್ನನ್ನು ಭಜಿಸುತ್ತಾ ಇರು. ॥ ೩೮ ॥ ನಾನು ಸ್ವಯಂಪ್ರಕಾಶನೂ, ಸಮಸ್ತ ಜೀವರ ಅಂತಃಕರಣದಲ್ಲಿ ವಾಸಿಸುವ ಪರಮಾತ್ಮನೂ ಆಗಿರುವೆ. ಆದ್ದರಿಂದ ನೀನು ವಿಶುದ್ಧಬುದ್ಧಿಯ ಮೂಲಕ ನಿನ್ನ ಅಂತಃಕರಣದಲ್ಲಿ ನನ್ನನ್ನು ಸಾಕ್ಷಾತ್ಕರಿಸಿಕೊಂಡಾಗ ಎಲ್ಲ ರೀತಿಯ ಶೋಕಗಳಿಂದ ಬಿಡುಗಡೆಹೊಂದಿ ನಿರ್ಭಯಪದ (ಮೋಕ್ಷ) ವನ್ನು ಪಡೆದುಕೊಳ್ಳುವೆ. ॥ ೩೯ ॥ ತಾಯಿಯಾದ ದೇವಹೂತಿಗೂ ನಾನು ಸಮಸ್ತ ಕರ್ಮಗಳಿಂದ ಬಿಡುಗಡೆಹೊಂದುವ ಆತ್ಮಜ್ಞಾನವನ್ನು ಕರುಣಿಸುವೆನು. ಆದರಿಂದ ಅವಳು ಈ ಸಂಸಾರಭಯದಿಂದ ಪಾರಾಗಿಹೋಗುವಳು. ॥ ೪೦ ॥

ಮೈತ್ರೇಯ ಉವಾಚ

ಏವಂ ಸಮುದಿತಸ್ತೇನ ಕಪಿಲೇನ ಪ್ರಜಾಪತಿಃ ।
ದಕ್ಷಿಣೀಕೃತ್ಯ ತಂ ಪ್ರೀತೋ ವನಮೇವ ಜಗಾಮ ಹ ॥ ೪೧ ॥

ವ್ರತಂ ಸ ಆಸ್ಥಿತೋ ಮೌನಮಾತ್ಮೈಕಶರಣೋ ಮುನಿಃ ।
ನಿಃಸಂಗೋ ವ್ಯಚರತ್ಕ್ಷೋಣೀಮನಗ್ನಿರನಿಕೇತನಃ ॥ ೪೨ ॥

ಮನೋ ಬ್ರಹ್ಮಣಿ ಯುಂಜಾನೋ ಯತ್ತತ್ಸದಸತಃ ಪರಮ್ ।
ಗುಣಾವಭಾಸೇ ವಿಗುಣ ಏಕಭಕ್ತ್ಯಾನುಭಾವಿತೇ ॥ ೪೩ ॥

ಶ್ರೀಮೈತ್ರೇಯರು ಹೇಳುತ್ತಾರೆ – ಭಗವಾನ್ ಕಪಿಲನು ಹೀಗೆ ಹೇಳಿದೊಡನೆ ಪ್ರಜಾಪತಿಯಾದ ಕರ್ದಮರು ಅವನನ್ನು ಪ್ರದಕ್ಷಿಣೆಗೈದು ಸಂತೋಷದಿಂದ ಕಾಡಿಗೆ ಹೊರಟುಹೋದರು. ॥ ೪೧ ॥

ಅಲ್ಲಿ ಅಹಿಂಸಾಮಯ ಸಂನ್ಯಾಸಧರ್ಮವನ್ನು ಪಾಲಿಸುತ್ತಾ ಅವರು ಏಕಮಾತ್ರ ಶ್ರೀಭಗವಂತನಲ್ಲಿ ಶರಣಾದರು. ಬಳಿಕ ಅಗ್ನಿಯನ್ನೂ, ಆಶ್ರಮವನ್ನೂ ತ್ಯಜಿಸಿ, ನಿಸ್ಸಂಗಭಾವದಿಂದ ಭೂಮಿಯಲ್ಲಿ ಸಂಚರಿಸತೊಡಗಿದರು. ॥ ೪೨ ॥ ಯಾವಾತನು ಕಾರ್ಯಕಾರಣದಿಂದ ಅತೀತನಾಗಿರುವನೋ, ಸತ್ತ್ವಾದಿ ತ್ರಿಗುಣಗಳ ಪ್ರಕಾಶಕನೂ, ಗುಣಾತೀತನೂ, ಅನನ್ಯ ಭಕ್ತಿಯಿಂದಲೇ ಪ್ರತ್ಯಕ್ಷನಾಗುವನೋ ಆ ಪರಬ್ರಹ್ಮನಲ್ಲಿ ಅವರು ತಮ್ಮ ಮನಸ್ಸನ್ನು ತೊಡಗಿಸಿದರು. ॥ ೪೩ ॥

ನಿರಹಂಕೃತಿರ್ನಿರ್ಮಮಶ್ಚ ನಿರ್ದ್ವಂದ್ವಃ ಸಮದೃಕ್ಸ್ವದೃಕ್ ।
ಪ್ರತ್ಯಕ್ಪ್ರಶಾಂತಧೀರ್ಧೀರಃ ಪ್ರಶಾಂತೋರ್ಮಿರಿವೋದಧಿಃ ॥ ೪೪ ॥

ವಾಸುದೇವೇ ಭಗವತಿ ಸರ್ವಜ್ಞೇ ಪ್ರತ್ಯಗಾತ್ಮನಿ ।
ಪರೇಣ ಭಕ್ತಿಭಾವೇನ ಲಬ್ಧಾತ್ಮಾ ಮುಕ್ತಬಂಧನಃ ॥ ೪೫ ॥

ಆತ್ಮಾನಂ ಸರ್ವಭೂತೇಷು ಭಗವಂತಮವಸ್ಥಿತಮ್ ।
ಅಪಶ್ಯತ್ಸರ್ವಭೂತಾನಿ ಭಗವತ್ಯಪಿ ಚಾತ್ಮನಿ ॥ ೪೬ ॥

ಇಚ್ಛಾದ್ವೇಷವಿಹೀನೇನ ಸರ್ವತ್ರ ಸಮಚೇತಸಾ ।
ಭಗವದ್ಭಕ್ತಿಯುಕ್ತೇನ ಪ್ರಾಪ್ತಾ ಭಾಗವತೀ ಗತಿಃ ॥ ೪೭ ॥

ಅವರು ಅಹಂಕಾರ, ಮಮತೆ ಮತ್ತು ಸುಖ-ದುಃಖಾದಿ ದ್ವಂದ್ವಗಳಿಂದ ಬಿಡುಗಡೆಹೊಂದಿ, ಸಮದರ್ಶಿಯಾಗಿ, ಎಲ್ಲದರಲ್ಲಿ ತನ್ನ ಆತ್ಮವನ್ನೇ ನೋಡತೊಡಗಿದರು. ಅವರ ಬುದ್ಧಿ ಅಂತರ್ಮುಖಿಯೂ, ಶಾಂತವೂ ಆಯಿತು. ಆಗ ಧೀರರಾದ ಕರ್ದಮರು ಪ್ರಶಾಂತವೂ, ಗಂಭೀರವೂ ಆದ ಸಮುದ್ರದಂತೆ ಕಂಡು ಬರುತ್ತಿದ್ದರು. ॥ ೪೪ ॥ ಪರಮ ಭಕ್ತಿಭಾವದ ಮೂಲಕ ಸರ್ವಾಂತರ್ಯಾಮಿಯೂ, ಸರ್ವಜ್ಞನೂ ಆದ ಶ್ರೀವಾಸುದೇವನಲ್ಲಿ ಚಿತ್ತವು ಸ್ಥಿರವಾದ್ದರಿಂದ ಅವರು ಎಲ್ಲ ಬಂಧನಗಳಿಂದಲೂ ಮುಕ್ತರಾಗಿ ಹೋದರು. ॥ ೪೫ ॥ ಸಮಸ್ತ ಪ್ರಾಣಿಗಳಲ್ಲಿ ತನ್ನ ಆತ್ಮಸ್ವರೂಪಿ ಶ್ರೀಹರಿಯನ್ನು ಮತ್ತು ಸಮಸ್ತಪ್ರಾಣಿಗಳನ್ನು ಆತ್ಮಸ್ವರೂಪ ಶ್ರೀಭಗವಂತನಲ್ಲಿ ಇರುವುದನ್ನು ನೋಡತೊಡಗಿದರು. ॥ ೪೬ ॥ ಹೀಗೆ ಇಚ್ಛಾ-ದ್ವೇಷಗಳಿಂದ ರಹಿತರಾಗಿ ಸರ್ವತ್ರ ಸಮಬುದ್ಧಿ ಮತ್ತು ಭಗವದ್ಭಕ್ತಿಯಿಂದ ಸಂಪನ್ನರಾದ ಶ್ರೀಕರ್ದಮರು ಭಗವಂತನ ಪರಮಪದವನ್ನು ಪಡೆದುಕೊಂಡರು. ॥ ೪೭ ॥

ಇಪ್ಪತ್ನಾಲ್ಕನೆಯ ಅಧ್ಯಾಯವು ಮುಗಿಯಿತು. ॥ ೨೪ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ತೃತೀಯಸ್ಕಂಧೇ
ಕಾಪಿಲೇಯೋಪಾಖ್ಯಾನೇ ಚತುರ್ವಿಂಶೋಽಧ್ಯಾಯಃ ॥ ೨೪ ॥

ಇಪ್ಪತ್ತೈದನೆಯ ಅಧ್ಯಾಯ

ದೇವಹೂತಿಯ ಪ್ರಶ್ನೆಗೆ ಕಪಿಲರಿಂದ ಭಕ್ತಿಯೋಗದ ಮಹಿಮೆಯ ವರ್ಣನೆ

ಶೌನಕ ಉವಾಚ

ಕಪಿಲಸ್ತತ್ತ್ವಸಂಖ್ಯಾತಾ ಭಗವಾನಾತ್ಮಮಾಯಯಾ ।
ಜಾತಃ ಸ್ವಯಮಜಃ ಸಾಕ್ಷಾದಾತ್ಮಪ್ರಜ್ಞಪ್ತಯೇ ನೃಣಾಮ್ ॥ ೧ ॥

ನ ಹ್ಯಸ್ಯ ವರ್ಷ್ಮಣಃ ಪುಂಸಾಂ ವರಿಮ್ಣಃ ಸರ್ವಯೋಗಿನಾಮ್ ।
ವಿಶ್ರುತೌ ಶ್ರುತದೇವಸ್ಯ ಭೂರಿ ತೃಪ್ಯಂತಿ ಮೇಽಸವಃ ॥ ೨ ॥

ಯದ್ಯದ್ವಿಧತ್ತೇ ಭಗವಾನ್ಸ್ವಚ್ಛಂದಾತ್ಮಾಽಽತ್ಮಮಾಯಯಾ ।
ತಾನಿ ಮೇ ಶ್ರದ್ದಧಾನಸ್ಯ ಕೀರ್ತನ್ಯಾನ್ಯನುಕೀರ್ತಯ ॥ ೩ ॥

ಸೂತ ಉವಾಚ

ದ್ವೈಪಾಯನಸಖಸ್ತ್ವೇವಂ ಮೈತ್ರೇಯೋ ಭಗವಾಂಸ್ತಥಾ ।
ಪ್ರಾಹೇದಂ ವಿದುರಂ ಪ್ರೀತ ಆನ್ವೀಕ್ಷಿಕ್ಯಾಂ ಪ್ರಚೋದಿತಃ ॥ ೪ ॥

ಶೌನಕರು ಹೇಳುತ್ತಾರೆ – ಸೂತಪುರಾಣಿಕರೇ! ತತ್ತ್ವಗಳನ್ನು ಲೆಕ್ಕಿಸುವ ಸಾಂಖ್ಯದರ್ಶನ ಪ್ರವರ್ತಕರಾದ ಭಗವಾನ್ ಕಪಿಲರು ಸಾಕ್ಷಾತ್ ಅಜನ್ಮನಾದ ನಾರಾಯಣನೇ ಆಗಿದ್ದರೂ ಕೂಡ ಜನರಿಗೆ ಆತ್ಮಜ್ಞಾನವನ್ನು ಉಪದೇಶಿಸಲು ತನ್ನ ಮಾಯೆಯಿಂದ ಅವತರಿಸಿರುವನು ಎಂದು ಕೇಳಿದುಬಂತು. ॥ ೧ ॥ ನಾವು ಭಗವಂತನ ಬಹಳಷ್ಟು ಚರಿತ್ರೆಗಳನ್ನು ಕೇಳಿದ್ದರೂ ಈ ಯೋಗಿವರ್ಯ, ಪುರುಷಶ್ರೇಷ್ಠ ಕಪಿಲರ ಕೀರ್ತಿಯನ್ನು ಕೇಳಿದಷ್ಟು ನನ್ನ ಇಂದ್ರಿಯಗಳಿಗೆ ತೃಪ್ತಿಯಾಗಿಲ್ಲ. ॥ ೨ ॥ ಸಂಪೂರ್ಣವಾಗಿ ಸ್ವತಂತ್ರನಾಗಿರುವ ಶ್ರೀಹರಿಯು ತನ್ನ ಯೋಗಮಾಯೆಯ ಮೂಲಕ ಭಕ್ತರ ಬಯಕೆಗನುಸಾರ ಶರೀರಗಳನ್ನು ಧರಿಸಿ ಮಾಡುವ ಲೀಲೆಗಳೆಲ್ಲವೂ ಕೀರ್ತನೆಗೆ ಯೋಗ್ಯವಾಗಿವೆ. ಅದ್ದರಿಂದ ತಾವು ಅವೆಲ್ಲವನ್ನು ನನಗೆ ಹೇಳಿರಿ. ಅದನ್ನು ಕೇಳುವುದರಲ್ಲಿ ನನಗೆ ಬಹಳ ಶ್ರದ್ಧೆ ಇದೆ. ॥ ೩ ॥

ಸೂತಪುರಾಣಿಕರು ಹೇಳುತ್ತಾರೆ – ಶೌನಕಾದಿ ಋಷಿಗಳೇ! ನಿಮ್ಮಂತೆಯೇ ವಿದುರನೂ ಈ ಆತ್ಮಜ್ಞಾನ ಸಂಬಂಧವಾದ ಪ್ರಶ್ನೆಯನ್ನು ಮಾಡಿದ್ದನು. ಆಗ ವ್ಯಾಸರ ಸ್ನೇಹಿತರಾದ ಪೂಜ್ಯರಾದ ಶ್ರೀಮೈತ್ರೇಯರು ಪ್ರಸನ್ನರಾಗಿ ವಿದುರನಿಗೆ ಹೀಗೆ ಹೇಳತೊಡಗಿದರು – ॥ ೪ ॥

ಮೈತ್ರೇಯ ಉವಾಚ

ಪಿತರಿ ಪ್ರಸ್ಥಿತೇಽರಣ್ಯಂ ಮಾತುಃ ಪ್ರಿಯಚಿಕೀರ್ಷಯಾ ।
ತಸ್ಮಿನ್ ಬಿಂದುಸರೇಽವಾತ್ಸೀದ್ಭಗವಾನ್ಕಪಿಲಃ ಕಿಲ ॥ ೫ ॥

ತಮಾಸೀನಮಕರ್ಮಾಣಂ ತತ್ತ್ವಮಾರ್ಗಾಗ್ರದರ್ಶನಮ್ ।
ಸ್ವಸುತಂ ದೇವಹೂತ್ಯಾಹ ಧಾತುಃ ಸಂಸ್ಮರತೀ ವಚಃ ॥ ೬ ॥

ದೇವಹೂತಿರುವಾಚ

ನಿರ್ವಿಣ್ಣಾ ನಿತರಾಂ ಭೂಮನ್ನಸದಿಂದ್ರಿಯತರ್ಷಣಾತ್ ।
ಯೇನ ಸಂಭಾವ್ಯಮಾನೇನ ಪ್ರಪನ್ನಾಂಧಂ ತಮಃ ಪ್ರಭೋ ॥ ೭ ॥

ತಸ್ಯ ತ್ವಂ ತಮಸೋಽಂಧಸ್ಯ ದುಷ್ಪಾರಸ್ಯಾದ್ಯ ಪಾರಗಮ್ ।
ಸಚ್ಚಕ್ಷುರ್ಜನ್ಮನಾಮಂತೇ ಲಬ್ಧಂ ಮೇ ತ್ವದನುಗ್ರಹಾತ್ ॥ ೮ ॥

ಯ ಆದ್ಯೋ ಭಗವಾನ್ಪುಂಸಾಮೀಶ್ವರೋ ವೈ ಭವಾನ್ಕಿಲ ।
ಲೋಕಸ್ಯ ತಮಸಾಂಧಸ್ಯ ಚಕ್ಷುಃ ಸೂರ್ಯ ಇವೋದಿತಃ ॥ ೯ ॥

ಅಥ ಮೇ ದೇವ ಸಮ್ಮೋಹಮಪಾಕ್ರಷ್ಟುಂ ತ್ವಮರ್ಹಸಿ ।
ಯೋಽವಗ್ರಹೋಽಹಂಮಮೇತೀತ್ಯೇತಸ್ಮಿನ್ಯೋಜಿತಸ್ತ್ವಯಾ ॥ ೧೦ ॥

ತಂ ತ್ವಾ ಗತಾಹಂ ಶರಣಂ ಶರಣ್ಯಂ
ಸ್ವಭೃತ್ಯ ಸಂಸಾರತರೋಃ ಕುಠಾರಮ್ ।
ಜಿಜ್ಞಾಸಯಾಹಂ ಪ್ರಕೃತೇಃ ಪೂರುಷಸ್ಯ
ನಮಾಮಿ ಸದ್ಧರ್ಮವಿದಾಂ ವರಿಷ್ಠಮ್ ॥ ೧೧ ॥

ಮೈತ್ರೇಯ ಉವಾಚ

ಇತಿ ಸ್ವಮಾತುರ್ನಿರವದ್ಯಮೀಪ್ಸಿತಂ
ನಿಶಮ್ಯ ಪುಂಸಾಮಪವರ್ಗವರ್ಧನಮ್ ।
ಧಿಯಾಭಿನಂದ್ಯಾತ್ಮವತಾಂ ಸತಾಂ ಗತಿ-
ರ್ಬಭಾಷ ಈಷತ್ಸ್ಮಿತಶೋಭಿತಾನನಃ ॥ ೧೨ ॥

ಶ್ರೀಭಗವಾನುವಾಚ

ಯೋಗ ಆಧ್ಯಾತ್ಮಿಕಃ ಪುಂಸಾಂ ಮತೋ ನಿಃಶ್ರೇಯಸಾಯ ಮೇ ।
ಅತ್ಯಂತೋಪರತಿರ್ಯತ್ರ ದುಃಖಸ್ಯ ಚ ಸುಖಸ್ಯ ಚ ॥ ೧೩ ॥

ತಮಿಮಂ ತೇ ಪ್ರವಕ್ಷ್ಯಾಮಿ
ಯಮವೋಚಂ ಪುರಾನಘೇ ।
ಋಷೀಣಾಂ ಶ್ರೋತುಕಾಮಾನಾಂ
ಯೋಗಂ ಸರ್ವಾಂಗ ನೈಪುಣಮ್ ॥ ೧೪ ॥

ಶ್ರೀಮೈತ್ರೇಯರು ಹೇಳುತ್ತಾರೆ – ಎಲೈ ವಿದುರನೇ! ತಂದೆಯು ಕಾಡಿಗೆ ಹೋದಬಳಿಕ ಭಗವಾನ್ ಕಪಿಲರು ತನ್ನ ತಾಯಿಯನ್ನು ಸಂತೋಷಪಡಿಸಲು ಆ ಬಿಂದುಸರೋವರ ತೀರ್ಥಕ್ಷೇತ್ರದಲ್ಲೇ ವಾಸಿಸತೊಡಗಿದರು. ॥ ೫ ॥ ಒಂದು ದಿನ ತತ್ತ್ವಜ್ಞಾನದಲ್ಲಿ ಪಾರಂಗತರೂ, ಕರ್ಮರಹಿತರೂ ಆದ ಭಗವಾನ್ ಕಪಿಲರು ಸುಖಾಸೀನರಾಗಿದ್ದಾಗ ದೇವಹೂತಿಯು ಬ್ರಹ್ಮದೇವರು ಹಿಂದೆ ಹೇಳಿದ ಮಾತನ್ನು ಸ್ಮರಿಸಿಕೊಂಡು ತನ್ನ ಪುತ್ರನಬಳಿ ಇಂತೆಂದಳು. ॥ ೬ ॥

ದೇವಹೂತಿಯು ಕೇಳಿದಳು – ಪ್ರಭುವೇ! ಈ ದುಷ್ಟ ಇಂದ್ರಿಯಗಳ ವಿಷಯ-ಲಾಲಸೆಯಿಂದ ನಾನು ಬೇಸರಗೊಂಡಿರುವೆನು. ಇವುಗಳ ಇಚ್ಛೆಯನ್ನು ಪೂರೈಸುವುದರಿಂದಲೇ ಘೋರವಾದ ಅಜ್ಞಾನಾಂಧಕಾರದಲ್ಲಿ ಬಿದ್ದು ತೊಳಲಾಡುತ್ತಿದ್ದೇನೆ. ॥ ೭ ॥ ಈಗ ನಿನ್ನ ಅನುಗ್ರಹದಿಂದ ನನ್ನ ಜನ್ಮಪರಂಪರೆಯು ಕೊನೆಗೊಂಡಿದೆ. ಇದರಿಂದ ದಾಟಲಸದಳವಾದ ಅಜ್ಞಾನದ ಈ ಕತ್ತಲೆಯನ್ನು ದಾಟಿಸಲು ಒಳ್ಳೆಯ ಕಣ್ಣುಗಳಂತಿರುವ ನೀನು ನನಗೆ ದೊರೆತಿರುವೆ. ॥ ೮ ॥ ನೀನು ಸಮಸ್ತ ಜೀವರಿಗೂ ಪ್ರಭುವಾದ ಭಗವಾನ್ ಆದಿಪುರುಷನಾಗಿರುವೆ. ಅಜ್ಞಾನದ ಕತ್ತಲೆಯಿಂದ ಕುರುಡಾಗಿರುವ ಮನುಷ್ಯರಿಗೆ ಕಣ್ಣಾಗಿರುವ ಸೂರ್ಯನಂತೆ ಉದಯ ಹೊಂದಿದ್ದೀಯೆ. ॥ ೯ ॥ ದೇವನೇ! ಈ ದೇಹ-ಗೇಹ ಮುಂತಾದವುಗಳಲ್ಲಿ 'ನಾನು-ನನ್ನದು' ಎಂದು ಇರುವ ದುರಾಗ್ರಹವನ್ನು ಕೂಡ ನೀನೇ ಉಂಟುಮಾಡಿರುವೆ. ಆದ್ದರಿಂದ ನೀನೇ ಈಗ ನನ್ನ ಈ ಮಹಾಮೋಹವನ್ನು ದೂರಗೊಳಿಸು. ॥ ೧೦ ॥

ನೀನು ಭಕ್ತರ ಸಂಸಾರವೃಕ್ಷವನ್ನು ಕಡಿದುಹಾಕುವುದರಲ್ಲಿ ಕೊಡಲಿಯಂತಿರುವೆ. ಪ್ರಕೃತಿ ಮತ್ತು ಪುರುಷರ ಜ್ಞಾನವನ್ನು ಪಡೆಯುವ ಇಚ್ಛೆಯಿಂದ ಶರಣಾಗತವತ್ಸಲನಾದ ನಿನ್ನಲ್ಲಿ ಶರಣಾಗಿದ್ದೇನೆ. ಭಾಗವತ ಧರ್ಮಜ್ಞರಲ್ಲಿ ಸರ್ವಶ್ರೇಷ್ಠನಾದ ನಿನಗೆ ನಾನು ನಮಸ್ಕರಿಸುತ್ತೇನೆ. ॥ ೧೧ ॥

ಶ್ರೀಮೈತ್ರೇಯರು ಹೇಳುತ್ತಾರೆ – ಹೀಗೆ ತಾಯಿಯಾದ ದೇವಹೂತಿಯು ಪ್ರಕಟಪಡಿಸಿದ ತನ್ನ ಅಭಿಲಾಷೆಯು ಪರಮ ಪವಿತ್ರವೂ, ಜನರಿಗೆ ಮೋಕ್ಷಮಾರ್ಗದಲ್ಲಿ ಅನುರಾಗ ಉಂಟಾಗುವಂತಹುದೂ ಆಗಿದೆ. ಅದನ್ನು ಕೇಳಿ ಆತ್ಮಜ್ಞರಾದ ಸತ್ಪುರುಷರಿಗೆಲ್ಲ ಶರಣ್ಯರಾದ ಶ್ರೀಕಪಿಲ ಮುನಿಗಳು – ಅದನ್ನು ಮನಸ್ಸಿನಲ್ಲೇ ಪ್ರಶಂಸಿಸಿ, ಮತ್ತೆ ಮೃದುವಾದ ಮಂದಹಾಸದಿಂದ ಶೋಭಿಸುವ ಮುಖಾರವಿಂದದಿಂದ ಹೀಗೆ ಹೇಳತೊಡಗಿದರು. ॥ ೧೨ ॥

ಶ್ರೀಭಗವಾನ್ ಕಪಿಲರು ಹೇಳುತ್ತಾರೆ – ಅಮ್ಮಾ! ಅಧ್ಯಾತ್ಮಯೋಗವೇ ಮನುಷ್ಯರ ಆತ್ಯಂತಿಕ ಕಲ್ಯಾಣವನ್ನುಂಟು ಮಾಡುವ ಪ್ರಧಾನ ಸಾಧನೆಯಾಗಿದೆ. ಅದರಿಂದ ದುಃಖ ಮತ್ತು ಸುಖಗಳು ಪೂರ್ಣವಾಗಿ ನಿವೃತ್ತಿಯಾಗುತ್ತದೆ ಎಂಬುದೇ ನನ್ನ ನಿಶ್ಚಯವಾಗಿದೆ. ॥ ೧೩ ॥ ಪುಣ್ಯಾತ್ಮಳೇ! ಸರ್ವಾಂಗಸಂಪನ್ನವಾಗಿರುವ ಅಂತಹ ಯೋಗವನ್ನು ಕೇಳಲು ಬಯಸಿದ ನಾರದರೇ ಮುಂತಾದ ಮುನಿಗಳ ಮುಂದೆ ನಾನು ಹಿಂದೆ ಇದನ್ನು ವರ್ಣಿಸಿದ್ದೆನು. ಅದನ್ನೇ ಈಗ ನಿನಗೂ ಹೇಳುತ್ತೇನೆ. ॥ ೧೪ ॥

ಚೇತಃ ಖಲ್ವಸ್ಯ ಬಂಧಾಯ ಮುಕ್ತಯೇ ಚಾತ್ಮನೋ ಮತಮ್ ।
ಗುಣೇಷು ಸಕ್ತಂ ಬಂಧಾಯ ರತಂ ವಾ ಪುಂಸಿ ಮುಕ್ತಯೇ ॥ ೧೫ ॥

ಅಹಂಮಮಾಭಿಮಾನೋತ್ಥೈಃ ಕಾಮಲೋಭಾದಿಭಿರ್ಮಲೈಃ ।
ವೀತಂ ಯದಾ ಮನಃ ಶುದ್ಧಮದುಃಖಮಸುಖಂ ಸಮಮ್ ॥ ೧೬ ॥

ತದಾ ಪುರುಷ ಆತ್ಮಾನಂ ಕೇವಲಂ ಪ್ರಕೃತೇಃ ಪರಮ್ ।
ನಿರಂತರಂ ಸ್ವಯಂಜ್ಯೋತಿರಣಿಮಾನಮಖಂಡಿತಮ್ ॥ ೧೭ ॥

ಜ್ಞಾನವೈರಾಗ್ಯಯುಕ್ತೇನ ಭಕ್ತಿಯುಕ್ತೇನ ಚಾತ್ಮನಾ ।
ಪರಿಪಶ್ಯತ್ಯುದಾಸೀನಂ ಪ್ರಕೃತಿಂ ಚ ಹತೌಜಸಮ್ ॥ ೧೮ ॥

ನ ಯುಜ್ಯಮಾನಯಾ ಭಕ್ತ್ಯಾ ಭಗವತ್ಯಖಿಲಾತ್ಮನಿ ।
ಸದೃಶೋಽಸ್ತಿ ಶಿವಃ ಪಂಥಾ ಯೋಗಿನಾಂ ಬ್ರಹ್ಮಸಿದ್ಧಯೇ ॥ ೧೯ ॥

ಪ್ರಸಂಗಮಜರಂ ಪಾಶಮಾತ್ಮನಃ ಕವಯೋ ವಿದುಃ ।
ಸ ಏವ ಸಾಧುಷು ಕೃತೋ ಮೋಕ್ಷದ್ವಾರಮಪಾವೃತಮ್ ॥ ೨೦ ॥

ತಿತಿಕ್ಷವಃ ಕಾರುಣಿಕಾಃ ಸುಹೃದಃ ಸರ್ವದೇಹಿನಾಮ್ ।
ಅಜಾತಶತ್ರವಃ ಶಾಂತಾಃ ಸಾಧವಃ ಸಾಧುಭೂಷಣಾಃ ॥ ೨೧ ॥

ಮಯ್ಯನನ್ಯೇನ ಭಾವೇನ ಭಕ್ತಿಂ ಕುರ್ವಂತಿ ಯೇ ದೃಢಾಮ್ ।
ಮತ್ಕೃತೇ ತ್ಯಕ್ತಕರ್ಮಾಣಸ್ತ್ಯಕ್ತಸ್ವಜನಬಾಂಧವಾಃ ॥ ೨೨ ॥

ಮದಾಶ್ರಯಾಃ ಕಥಾ ಮೃಷ್ಟಾಃ ಶೃಣ್ವಂತಿ ಕಥಯಂತಿ ಚ ।
ತಪಂತಿ ವಿವಿಧಾಸ್ತಾಪಾ ನೈತಾನ್ಮದ್ಗತಚೇತಸಃ ॥ ೨೩ ॥

ತ ಏತೇ ಸಾಧವಃ ಸಾಧ್ವಿ ಸರ್ವಸಂಗ ವಿವರ್ಜಿತಾಃ ।
ಸಂಗಸ್ತೇಷ್ವಥ ತೇ ಪ್ರಾರ್ಥ್ಯಃ ಸಂಗ ದೋಷಹರಾ ಹಿ ತೇ ॥ ೨೪ ॥

ಸತಾಂ ಪ್ರಸಂಗಾನ್ಮಮ ವೀರ್ಯಸಂವಿದೋ
ಭವಂತಿ ಹೃತ್ಕರ್ಣರಸಾಯನಾಃ ಕಥಾಃ ।
ತಜ್ಜೋಷಣಾದಾಶ್ವಪವರ್ಗವರ್ತ್ಮನಿ
ಶ್ರದ್ಧಾ ರತಿರ್ಭಕ್ತಿರನುಕ್ರಮಿಷ್ಯತಿ ॥ ೨೫ ॥

ಭಕ್ತ್ಯಾ ಪುಮಾಂಜಾತವಿರಾಗ ಐಂದ್ರಿಯಾದ್
ದೃಷ್ಟಶ್ರುತಾನ್ಮದ್ರಚನಾನುಚಿಂತಯಾ ।
ಚಿತ್ತಸ್ಯ ಯತ್ತೋ ಗ್ರಹಣೇ ಯೋಗಯುಕ್ತೋ
ಯತಿಷ್ಯತೇ ಋಜುಭಿರ್ಯೋಗಮಾರ್ಗೈಃ ॥ ೨೬ ॥

ಈ ಜೀವಿಯ ಬಂಧನ ಮತ್ತು ಮೋಕ್ಷಗಳ ಕಾರಣ ಮನಸ್ಸೇ ಆಗಿದೆ ಎಂಬುದು ಬಲ್ಲವರ ಅಭಿಪ್ರಾಯವಾಗಿದೆ. ■ ಮನಸ್ಸು ವಿಷಯಗಳಲ್ಲಿ ಆಸಕ್ತವಾದರೆ ಬಂಧನಕ್ಕೆ ಕಾರಣವಾಗುತ್ತದೆ ಹಾಗೂ ಪರಮಾತ್ಮನಲ್ಲಿ ಅನುರಕ್ತವಾದರೆ ಅದೇ ಮೋಕ್ಷಕ್ಕೆ ಕಾರಣವಾಗುತ್ತದೆ. ॥ ೧೫ ॥ ಈ ಮನಸ್ಸು ನಾನು-ನನ್ನದು ಎಂಬುದರಿಂದ ಉಂಟಾಗುವ ಕಾಮ-ಲೋಭಾದಿ ವಿಕಾರಗಳಿಂದ ಮುಕ್ತ ಹಾಗೂ ಶುದ್ಧವಾದಾಗ ಅದು ಸುಖ-ದುಃಖಗಳಿಂದ ಬಿಡುಗಡೆ ಹೊಂದಿ ಸಮತೆಯನ್ನು ಪಡೆಯುತ್ತದೆ. ॥ ೧೬ ॥ ಆಗ ಜೀವಿಯು ತನ್ನ ಜ್ಞಾನ-ವೈರಾಗ್ಯ ಮತ್ತು ಭಕ್ತಿಗಳಿಂದ ಕೂಡಿದ ಹೃದಯದಿಂದ ಆತ್ಮವು ಪ್ರಕೃತಿಯಿಂದ ಅತೀತವೂ, ಏಕಮಾತ್ರ (ಅದ್ವಿತೀಯ), ಭೇದರಹಿತವೂ, ಸ್ವಯಂಪ್ರಕಾಶವೂ, ಸೂಕ್ಷ್ಮವೂ, ಅಖಂಡವೂ ಹಾಗೂ ಉದಾಸೀನವೂ (ಸುಖ-ದುಃಖಶೂನ್ಯ) ಎಂಬುದಾಗಿ ನೋಡುತ್ತಾನೆ ಹಾಗೂ ಪ್ರಕೃತಿಯು ಶಕ್ತಿಹೀನವೆಂದು ಅನುಭವಿಸುತ್ತಾನೆ. ॥ ೧೭-೧೮ ॥ ಯೋಗಿಗಳಿಗೆ ಬ್ರಹ್ಮಸಿದ್ಧಿಗಾಗಿ ಸರ್ವಾತ್ಮಾ ಶ್ರೀಹರಿಯ ಕುರಿತು ಮಾಡಿದ ಭಕ್ತಿಗೆ ಸಾಟಿಯಾದ ಬೇರೆ ಯಾವುದೇ ಮಂಗಳಮಯವಾದ ಮಾರ್ಗವು ಇರುವುದಿಲ್ಲ. ॥ ೧೯ ॥ ಸಂಗ ಅಥವಾ ಆಸಕ್ತಿಯನ್ನೇ ತುಂಡರಿಸಲಾರದ ಆತ್ಮನ ಬಂಧನವೆಂದು ವಿವೇಕಿಗಳು ತಿಳಿಯುತ್ತಾರೆ. ಆದರೆ ಅದೇ ಸಂಗ ಅಥವಾ ಆಸಕ್ತಿಯು ಸಂತ ಮಹಾತ್ಮರ ಕುರಿತು ಉಂಟಾದಾಗ ಅದು ಮೋಕ್ಷಕ್ಕೆ ತೆರೆದ ಬಾಗಿಲಾಗುತ್ತದೆ. ॥ ೨೦ ॥

ಸಹನಶೀಲರೂ, ದಯಾಳುಗಳೂ, ಸಮಸ್ತದೇಹಧಾರಿಗಳ ಅಕಾರಣ ಮಿತ್ರರೂ, ಯಾರೊಂದಿಗೂ ಶತ್ರುಭಾವವನ್ನು ಇರಿಸದವರೂ, ಸರಳಸ್ವಭಾವರೂ, ಸತ್ಪುರುಷರನ್ನು ಗೌರವಿಸುವವರೂ, ನನ್ನಲ್ಲಿ ಅನನ್ಯ ಭಾವದಿಂದ ಸುದೃಢವಾದ ಭಕ್ತಿಯನ್ನು ಮಾಡುವವರೂ, ನನಗಾಗಿ ಸಮಸ್ತ ಕರ್ಮ ಹಾಗೂ ತನ್ನ ನಿಜ ಸಂಬಂಧಿಗಳನ್ನೂ ತ್ಯಜಿಸುವವರೂ, ನನ್ನಲ್ಲಿ ಪರಾಯಣರಾಗಿ, ನನ್ನ ಪವಿತ್ರ ಕಥೆಗಳ ಶ್ರವಣ, ಕೀರ್ತನೆಮಾಡುವವರೂ ಹಾಗೂ ನನ್ನಲ್ಲೇ ಚಿತ್ತವನ್ನು ನೆಟ್ಟಿರುವವರೂ, ಆದ ಇಂತಹ ಭಕ್ತರಿಗೆ ಸಂಸಾರದ ಬಗೆ-ಬಗೆಯ ಸಂತಾಪಗಳು ಯಾವುದೇ ಕಷ್ಟವನ್ನು ಕೊಡಲಾರವು. ॥ ೨೧-೨೩ ॥ ಇಂತಹ ಸರ್ವಸಂಗಪರಿತ್ಯಾಗಿ ಮಹಾಪುರುಷರೇ ಸಾಧುಗಳೆನಿಸುವರು. ನೀನು ಇಂತಹವರ ಸಂಗದ ಇಚ್ಛೆಯನ್ನೇ ಮಾಡಬೇಕು. ಏಕೆಂದರೆ, ಅವರು ಆಸಕ್ತಿಯಿಂದುಂಟಾದ ಎಲ್ಲ ದೋಷಗಳನ್ನು ನಿವಾರಿಸುತ್ತಾರೆ. ॥ ೨೪ ॥ ಸತ್ಪುರುಷರ ಸಮಾಗಮದಿಂದ ನನ್ನ ಪರಾಕ್ರಮದ ಯಥಾರ್ಥ ಜ್ಞಾನವನ್ನುಂಟುಮಾಡುವ ಹಾಗೂ ಹೃದಯಕ್ಕೂ, ಕಿವಿಗಳಿಗೂ ಪ್ರಿಯವಾದ ಕಥೆಗಳು ತಿಳಿದುಬರುತ್ತವೆ. ಅವುಗಳನ್ನು ಸೇವಿಸುವುದರಿಂದ ಶೀಘ್ರವಾಗಿ ಮೋಕ್ಷಮಾರ್ಗದಲ್ಲಿ ಶ್ರದ್ಧೆ, ಪ್ರೇಮ, ಭಕ್ತಿ ಇವುಗಳು ಕ್ರಮವಾಗಿ ವಿಕಾಸ ಹೊಂದುತ್ತವೆ. ॥ ೨೫ ॥ ಅನಂತರ ನನ್ನ ಸೃಷ್ಟಿಯೇ ಮುಂತಾದ ಲೀಲೆಗಳನ್ನು ಚಿಂತನೆ ಮಾಡುವುದರಿಂದ ಉಂಟಾಗುವ ಭಕ್ತಿಯ ಮೂಲಕ ಲೌಕಿಕ ಮತ್ತು ಪಾರಲೌಕಿಕ ಸುಖಗಳಲ್ಲಿ ವೈರಾಗ್ಯವುಂಟಾಗುವುದು. ಆಗ ಮನುಷ್ಯನು ಸಾವಧಾನವಾಗಿ ಯೋಗದ ಭಕ್ತಿಪ್ರಧಾನವಾದ ಸರಳ ಉಪಾಯಗಳಿಂದ ಸಮಾಹಿತನಾಗಿ ಮನಸ್ಸನ್ನು ನಿಗ್ರಹಿಸಲು ಪ್ರಯತ್ನಿಸುವನು. ॥ ೨೬ ॥

ಅಸೇವಯಾಯಂ ಪ್ರಕೃತೇರ್ಗುಣಾನಾಂ
ಜ್ಞಾನೇನ ವೈರಾಗ್ಯವಿಜೃಂಭಿತೇನ ।
ಯೋಗೇನ ಮಯ್ಯರ್ಪಿತಯಾ ಚ ಭಕ್ತ್ಯಾ
ಮಾಂ ಪ್ರತ್ಯಗಾತ್ಮಾನಮಿಹಾವರುಂಧೇ ॥ ೨೭ ॥

ಹೀಗೆ ಪ್ರಕೃತಿಯ ಗುಣಗಳಿಂದ ಉಂಟಾದ ಶಬ್ದಾದಿ ವಿಷಯಗಳನ್ನು ತ್ಯಾಗಮಾಡುವುದರಿಂದ ವೈರಾಗ್ಯಯುಕ್ತ ಜ್ಞಾನದಿಂದ, ಯೋಗದಿಂದ ಹಾಗೂ ನನ್ನ ವಿಷಯವಾದ ಸುದೃಢ ಭಕ್ತಿಯಿಂದ ಮನುಷ್ಯನು ತನ್ನ ಅಂತರಾತ್ಮನಾಗಿರುವ ನನ್ನನ್ನು ಇಲ್ಲಿಯೇ ಈ ದೇಹದಲ್ಲೇ ಪಡೆದುಕೊಳ್ಳುವನು. ॥ ೨೭ ॥

ದೇವಹೂತಿರುವಾಚ

ಕಾಚಿತ್ತ್ವಯ್ಯುಚಿತಾ ಭಕ್ತಿಃ ಕೀದೃಶೀ ಮಮ ಗೋಚರಾ ।
ಯಯಾ ಪದಂ ತೇ ನಿರ್ವಾಣಮಂಜಸಾನ್ವಾಶ್ನವಾ ಅಹಮ್ ॥ ೨೮ ॥

ಯೋ ಯೋಗೋ ಭಗವದ್ಬಾಣೋ-
ನಿರ್ವಾಣಾತ್ಮಂಸ್ತ್ವಯೋದಿತಃ ।
ಕೀದೃಶಃ ಕತಿ ಚಾಂಗಾನಿ
ಯತಸ್ತತ್ತ್ವಾವಬೋಧನಮ್ ॥ ೨೯ ॥

ತದೇತನ್ಮೇ ವಿಜಾನೀಹಿ ಯಥಾಹಂ ಮಂದಧೀರ್ಹರೇ ।
ಸುಖಂ ಬುದ್ಧ್ಯೇಯ ದುರ್ಬೋಧಂ ಯೋಷಾ ಭವದನುಗ್ರಹಾತ್ ॥ ೩೦ ॥

ದೇವಹೂತಿಯು ಕೇಳಿದಳು – ಭಗವಂತನೇ! ನಿನಗೆ ಉಚಿತವಾಗಿರುವ ಭಕ್ತಿಯ ಸ್ವರೂಪವೇನು? ನನ್ನಂತಹ ಅಬಲೆಯರಿಗೆ ಎಂತಹ ಭಕ್ತಿಯು ಸರಿಯಾದುದು? ಅದರಿಂದ ನಾನು ಸಹಜವಾಗಿಯೇ ನಿನ್ನ ನಿರ್ವಾಣಪದವನ್ನು ಹೊಂದಬಲ್ಲೆನು? ॥ ೨೮ ॥ ಮೋಕ್ಷಸ್ವರೂಪನಾದ ಪ್ರಭುವೇ! ಯಾವುದರಿಂದ ತತ್ತ್ವಜ್ಞಾನ ಉಂಟಾಗುವುದೋ ಮತ್ತು ಗುರಿಗೆ ಸರಿಯಾಗಿ ಹೊಡೆದ ಬಾಣದಂತೆ ಭಗವಂತನನ್ನು ಪ್ರಾಪ್ತಿಯಾಗಿಸುವ, ನೀನು ಹೇಳುವ ಯೋಗವು ಯಾವುದು? ಹಾಗೂ ಅದರ ಅಂಗಗಳು ಎಷ್ಟಿವೆ? ॥ ೨೯ ॥ ಹರಿಯೇ! ತಿಳಿಯಲು ಕಷ್ಟವಾಗಿರುವ ಈ ವಿಷಯಗಳನ್ನು ಮಂದಮತಿಯಾದ ನನ್ನಂತಹ ಸ್ತ್ರೀಯರೂ ಕೂಡ ನಿನ್ನ ಕೃಪೆಯಿಂದ ಸುಲಭವಾಗಿ ಅರಿಯಲು ಸಾಧ್ಯವಾಗುವಂತೆ ನಿರೂಪಿಸಬೇಕು. ॥ ೩೦ ॥

ಮೈತ್ರೇಯ ಉವಾಚ

ವಿದಿತ್ವಾರ್ಥಂ ಕಪಿಲೋ ಮಾತುರಿತ್ಥಂ
ಜಾತಸ್ನೇಹೋ ಯತ್ರ ತನ್ವಾಭಿಜಾತಃ ।
ತತ್ತ್ವಾಮ್ನಾಯಂ ಯತ್ಪ್ರವದಂತಿ ಸಾಂಖ್ಯಂ
ಪ್ರೋವಾಚ ವೈ ಭಕ್ತಿವಿತಾನಯೋಗಮ್ ॥ ೩೧ ॥

ಶ್ರೀಮೈತ್ರೇಯರು ಹೇಳುತ್ತಾರೆ – ಎಲೈ ವಿದುರನೇ! ತನ್ನ ಜನ್ಮಕ್ಕೆ ಕಾರಣಳಾದ ಆ ಮಹಾತಾಯಿಯ ಅಭಿಪ್ರಾಯವನ್ನು ತಿಳಿದು ಕಪಿಲರ ಹೃದಯದಲ್ಲಿ ಸ್ನೇಹವು ಉಕ್ಕಿಬಂತು. ಆಗ ಅವರು ಆಕೆಗೆ ಪ್ರಕೃತಿಯೇ ಮುಂತಾದ ತತ್ತ್ವಗಳನ್ನು ನಿರೂಪಣೆ ಮಾಡುವ 'ಸಾಂಖ್ಯ' ವೆಂಬ ಶಾಸ್ತ್ರವನ್ನು ಉಪದೇಶಿಸಿದರು. ಜೊತೆಯಲ್ಲೇ ಭಕ್ತಿಯ ವಿಸ್ತಾರವನ್ನೂ, ಯೋಗವನ್ನೂ, ಉಪದೇಶಿಸಿದರು. ॥ ೩೧ ॥

ಶ್ರೀಭಗವಾನುವಾಚ

ದೇವಾನಾಂ ಗುಣಲಿಂಗಾನಾಮಾನುಶ್ರವಿಕಕರ್ಮಣಾಮ್ ।
ಸತ್ತ್ವ ಏವೈಕಮನಸೋ ವೃತ್ತಿಃ ಸ್ವಾಭಾವಿಕೀ ತು ಯಾ ॥ ೩೨ ॥

ಅನಿಮಿತ್ತಾ ಭಾಗವತೀ ಭಕ್ತಿಃ ಸಿದ್ಧೇರ್ಗರೀಯಸೀ ।
ಜರಯತ್ಯಾಶು ಯಾ ಕೋಶಂ ನಿಗೀರ್ಣಮನಲೋ ಯಥಾ ॥ ೩೩ ॥

ನೈಕಾತ್ಮತಾಂ ಮೇ ಸ್ಪೃಹಯಂತಿ ಕೇಚಿನ್
ಮತ್ಪಾದಸೇವಾಭಿರತಾ ಮದೀಹಾಃ ।
ಯೇಽನ್ಯೋನ್ಯತೋ ಭಾಗವತಾಃ ಪ್ರಸಜ್ಯ
ಸಭಾಜಯಂತೇ ಮಮ ಪೌರುಷಾಣಿ ॥ ೩೪ ॥

ಶ್ರೀಭಗವಂತನೆಂದನು – ಅಮ್ಮಾ! ಸತ್ತ್ವಮಾತ್ರ ಭಗವಂತನಲ್ಲೇ ನೆಲೆಗೊಂಡ ಚಿತ್ತವುಳ್ಳ ಮನುಷ್ಯನ – ವೇದವಿಹಿತ ಕರ್ಮಗಳಲ್ಲಿ ತೊಡಗಿರುವ ಹಾಗೂ ವಿಷಯಗಳ ಜ್ಞಾನವನ್ನು ಮಾಡಿಸುವಂತಹ (ಕರ್ಮೇಂದ್ರಿಯ ಹಾಗೂ ಜ್ಞಾನೇಂದ್ರಿಯ – ಎರಡೂ ಪ್ರಕಾರದ) ಇಂದ್ರಿಯಗಳ ಸತ್ತ್ವಮೂರ್ತಿ ಶ್ರೀಹರಿಯ ಕುರಿತು ಇರುವ ಸ್ವಾಭಾವಿಕ ಪ್ರವೃತ್ತಿಯೇ ಭಗವಂತನ ಅಹೈತುಕೀ ಭಕ್ತಿಯಾಗಿದೆ. ಇದು ಮುಕ್ತಿಗಿಂತಲೂ ಮಿಗಿಲಾದುದು. ಏಕೆಂದರೆ, ತಿಂದಿರುವ ಅನ್ನವನ್ನು ಜಠರಾಗ್ನಿ ಜೀರ್ಣಗೊಳಿಸುವಂತೆ ಈ ಭಕ್ತಿಯೂ ಕೂಡ ಕರ್ಮಸಂಸ್ಕಾರಗಳ ಭಂಡಾರವಾದ ಲಿಂಗಶರೀರವನ್ನು ಒಡನೆಯೇ ಭಸ್ಮವಾಗಿಸಿಬಿಡುತ್ತದೆ. ॥ ೩೨-೩೩ ॥ ನನ್ನ ಚರಣಸೇವೆಯಲ್ಲೇ ಪ್ರೀತಿಯುಳ್ಳವರಾದ ಹಾಗೂ ನನ್ನ ಪ್ರಸನ್ನತೆಗಾಗಿಯೇ ಸಮಸ್ತ ಕಾರ್ಯಗಳನ್ನು ಮಾಡುವಂತಹ ಭಾಗ್ಯವಂತರಾದ ಭಕ್ತರು ಪರಸ್ಪರ ಸೇರಿ ಪ್ರೇಮಪೂರ್ವಕ ನನ್ನ ಪರಾಕ್ರಮವೇ ಮುಂತಾದ ಗುಣಗಳಿಂದ ಕೂಡಿದ ಚರಿತ್ರೆಗಳನ್ನೇ ಚರ್ಚಿಸುತ್ತಾರೆ. ಅವರು ನನ್ನೊಡನೆ ಏಕಾತ್ಮರೂಪವಾದ ಸಾಯುಜ್ಯಮುಕ್ತಿಯನ್ನೂ ಕೂಡ ಇಚ್ಛಿಸುವುದಿಲ್ಲ. ॥ ೩೪ ॥ ಅಮ್ಮಾ! ಆ ಮಹಾತ್ಮರು ಕೆಂದಾವರೆಯನ್ನು ಹೋಲುವ ಕಣ್ಣುಗಳುಳ್ಳ, ಪ್ರಸನ್ನವಾದ ಮುಖದಿಂದಲೂ ಕಂಗೊಳಿಸುವ ಪರಮಸುಂದರವೂ, ವರಪ್ರದವೂ ಆದ ನನ್ನ ದಿವ್ಯಮಂಗಳ ವಿಗ್ರಹವನ್ನು ಸಂದರ್ಶಿಸುತ್ತಾ, ನನ್ನೊಡನೆ ಸವಿಮಾತುಗಳಿಂದ ಸಂಭಾಷಣೆ

ಪಶ್ಯಂತಿ ತೇ ಮೇ ರುಚಿರಾಣ್ಯಂಬ ಸಂತಃ
ಪ್ರಸನ್ನವಕ್ತ್ರಾರುಣಲೋಚನಾನಿ ।
ರೂಪಾಣಿ ದಿವ್ಯಾನಿ ವರಪ್ರದಾನಿ
ಸಾಕಂ ವಾಚಂ ಸ್ಪೃಹಣೀಯಾಂ ವದಂತಿ ॥ ೩೫ ॥

ತೈರ್ದರ್ಶನೀಯಾವಯವೈರುದಾರ-
ವಿಲಾಸಹಾಸೇಕ್ಷಿತವಾಮಸೂಕ್ತೈಃ ।
ಹೃತಾತ್ಮನೋ ಹೃತಪ್ರಾಣಾಂಶ್ಚ ಭಕ್ತಿ-
ರನಿಚ್ಛತೋ ಮೇ ಗತಿಮಣ್ವೀಂ ಪ್ರಯುಂಕ್ತೇ ॥ ೩೬ ॥

ಅಥೋ ವಿಭೂತಿಂ ಮಮ ಮಾಯಾವಿನಸ್ತಾ-
ಮೈಶ್ವರ್ಯಮಷ್ಟಾಂಗಮನುಪ್ರವೃತ್ತಮ್ ।
ಶ್ರಿಯಂ ಭಾಗವತೀಂ ವಾಸ್ಪೃಹಯಂತಿ ಭದ್ರಾಂ
ಪರಸ್ಯ ಮೇ ತೇಽಶ್ನುವತೇ ತು ಲೋಕೇ ॥ ೩೭ ॥

ನ ಕರ್ಹಿಚಿನ್ಮತ್ಪರಾಃ ಶಾಂತರೂಪೇ
ನಂಕ್ಷ್ಯಂತಿ ನೋ ಮೇಽನಿಮಿಷೋ ಲೇಢಿ ಹೇತಿಃ ।
ಯೇಷಾಮಹಂ ಪ್ರಿಯ ಆತ್ಮಾ ಸುತಶ್ಚ
ಸಖಾ ಗುರುಃ ಸುಹೃದೋ ದೈವಮಿಷ್ಟಮ್ ॥ ೩೮ ॥

ಇಮಂ ಲೋಕಂ ತಥೈವಾಮು-
ಮಾತ್ಮಾನಮುಭಯಾಯಿನಮ್ ।
ಆತ್ಮಾನಮನು ಯೇ ಚೇಹ ಯೇ
ರಾಯಃ ಪಶವೋ ಗೃಹಾಃ ॥ ೩೯ ॥

ವಿಸೃಜ್ಯ ಸರ್ವಾನನ್ಯಾಂಶ್ಚ ಮಾಮೇವಂ ವಿಶ್ವತೋಮುಖಮ್ ।
ಭಜಂತ್ಯನನ್ಯಯಾ ಭಕ್ತ್ಯಾ ತಾನ್ಮೃತ್ಯೋರತಿಪಾರಯೇ
॥ ೪೦ ॥

ನಾನ್ಯತ್ರ ಮದ್ಭಗವತಃ ಪ್ರಧಾನಪುರುಷೇಶ್ವರಾತ್ ।
ಆತ್ಮನಃ ಸರ್ವಭೂತಾನಾಂ ಭಯಂ ತೀವ್ರಂ ನಿವರ್ತತೇ
॥ ೪೧ ॥

ಮದ್ಭಯಾದ್ವಾತಿ ವಾತೋಽಯಂ ಸೂರ್ಯಸ್ತಪತಿ ಮದ್ಭಯಾತ್ ।
ವರ್ಷತೀಂದ್ರೋ ದಹತ್ಯಗ್ನಿರ್ಮೃತ್ಯುಶ್ಚರತಿ ಮದ್ಭಯಾತ್
॥ ೪೨ ॥

ಜ್ಞಾನವೈರಾಗ್ಯಯುಕ್ತೇನ ಭಕ್ತಿಯೋಗೇನ ಯೋಗಿನಃ ।
ಕ್ಷೇಮಾಯ ಪಾದಮೂಲಂ ಮೇ ಪ್ರವಿಶಂತ್ಯಕುತೋಭಯಮ್
॥ ೪೩ ॥

ಏತಾವಾನೇವ ಲೋಕೇಽಸ್ಮಿನ್ಪುಂಸಾಂ ನಿಃಶ್ರೇಯಸೋದಯಃ ।
ತೀವ್ರೇಣ ಭಕ್ತಿಯೋಗೇನ ಮನೋ ಮಯ್ಯರ್ಪಿತಂ ಸ್ಥಿರಮ್
॥ ೪೪ ॥

ಮಾಡುತ್ತಿರುತ್ತಾರೆ. ಅದಕ್ಕಾಗಿ ದೊಡ್ಡ-ದೊಡ್ಡ ತಪಸ್ವಿಗಳೂ ಆಸೆ ಪಡುತ್ತಿರುವವರು. ॥ ೩೫ ॥ ಕಮನೀಯವಾದ ಅಂಗೋಪಾಂಗಗಳಿಂದಲೂ, ಉದಾರವಾದ ಮಂದಹಾಸವಿಲಾಸಗಳಿಂದಲೂ, ಮನೋಹರವಾದ ನೋಟಗಳಿಂದಲೂ, ಮಧುರವಾದ ಮಾತುಗಳಿಂದಲೂ ಕೂಡಿದ ನನ್ನ ಆ ರೂಪದ ಮಾಧುರ್ಯದಲ್ಲಿ ಅವರ ಮನಸ್ಸು ಇಂದ್ರಿಯಗಳು ಮುಳುಗಿಹೋಗುತ್ತವೆ. ಇಂತಹ ನನ್ನ ಭಕ್ತಿಯು ಬಯಸದಿದ್ದರೂ ಅವರಿಗೆ ಪರಮಪದವನ್ನು ದೊರಕಿಸಿ ಕೊಡುತ್ತದೆ. ॥ ೩೬ ॥ ಅವಿದ್ಯೆಯ ನಿವೃತ್ತಿಯಾದ ಬಳಿಕವೂ ಅವರು ಮಾಯಾಪತಿಯಾದ ನನ್ನ ಸತ್ಯಲೋಕಾದಿಗಳ ಭೋಗ ಸಂಪತ್ತು, ಭಕ್ತಿಯ ಅನಂತರ ತಾನಾಗಿ ದೊರೆಯುವ ಅಷ್ಟಸಿದ್ಧಿಗಳು ಅಥವಾ ವೈಕುಂಠಧಾಮದ ಭಗವತ್ ಐಶ್ವರ್ಯವನ್ನೂ ಕೂಡ ಇಚ್ಛಿಸದಿದ್ದರೂ, ನನ್ನ ಪರಮಧಾಮವನ್ನು ತಲುಪಿದಾಗ ಅವರಿಗೆ ಇವೆಲ್ಲ ವಿಭೂತಿಗಳು ತಾನಾಗಿಯೇ ಪ್ರಾಪ್ತವಾಗುತ್ತವೆ. ॥ ೩೭ ॥ ಅಮ್ಮಾ! ಏಕಮಾತ್ರ ನಾನೇ ಪ್ರಿಯನೂ, ಆತ್ಮನೂ, ಪುತ್ರನೂ, ಮಿತ್ರನೂ, ಗುರುವೂ, ಹಿತಕಾರಿಯೂ, ಇಷ್ಟದೇವನೂ ಆಗಿರುವ ನನ್ನ ಆಶ್ರಯದಲ್ಲೇ ಇರುವ ಭಕ್ತಜನರು ಶಾಂತಿಪೂರ್ಣವಾದ ವೈಕುಂಠಧಾಮವನ್ನು ತಲುಪುವರು. ಅಲ್ಲಿ ಅವರಿಗೆ ಯಾವ ದಿವ್ಯ ಭೋಗಗಳ ಕೊರತೆಯೂ ಇರುವುದಿಲ್ಲ ಹಾಗೂ ನನ್ನ ಕಾಲಚಕ್ರವೂ ಅವರನ್ನು ಕಬಳಿಸಲಾರದು. ॥ ೩೮ ॥

ತಾಯೇ! ಇಹಲೋಕ-ಪರಲೋಕ ಹಾಗೂ ಇವೆರಡೂ ಲೋಕಗಳಲ್ಲಿ ಜೊತೆಯಲ್ಲೇ ಹೋಗುವ ಲಿಂಗದೇಹವನ್ನೂ, ಶರೀರದೊಂದಿಗೆ ಸಂಬಂಧವಿರಿಸುವ ಧನ, ಪಶು, ಗೃಹ ಮುಂತಾದ ಪದಾರ್ಥಗಳೆಲ್ಲವನ್ನು ಮತ್ತು ಇತರ ಸಂಗ್ರಹವನ್ನು ತೊರೆದು ಅನನ್ಯ ಭಕ್ತಿಯಿಂದ ಎಲ್ಲ ರೀತಿಯಿಂದ ನನ್ನನ್ನೇ ಭಜಿಸುವವರನ್ನು ನಾನು ಮೃತ್ಯುರೂಪೀ ಸಂಸಾರಸಾಗರದಿಂದ ಪಾರಾಗಿಬಿಡುತ್ತೇನೆ. ॥ ೩೯-೪೦ ॥ ನಾನು ಸಾಕ್ಷಾತ್ ಭಗವಂತನಾಗಿರುವೆನು. ಪ್ರಕೃತಿ ಮತ್ತು ಪುರುಷರಿಗೂ ಕೂಡ ಒಡೆಯನಾಗಿದ್ದೇನೆ. ಸಮಸ್ತ ಪ್ರಾಣಿಗಳ ಆತ್ಮನಾಗಿದ್ದು ನನ್ನನ್ನಲ್ಲದೆ ಬೇರೆ ಯಾವುದರ ಆಶ್ರಯವನ್ನೂ ಪಡೆದರೂ ಮೃತ್ಯುರೂಪವಾದ ಮಹಾಭಯದಿಂದ ಬಿಡುಗಡೆ ದೊರೆಯಬಾರದು. ॥ ೪೧ ॥ ನನ್ನ ಭಯದಿಂದ ವಾಯುವು ಬೀಸುತ್ತದೆ. ನನ್ನ ಭಯದಿಂದಲೇ ಸೂರ್ಯನು ಪ್ರಕಾಶಿಸುತ್ತಿರುವನು. ನನ್ನ ಭಯದಿಂದಲೇ ಇಂದ್ರನು ಮಳೆಗರೆಯುವನು ಮತ್ತು ಅಗ್ನಿಯು ಉರಿಯುತ್ತದೆ. ನನ್ನ ಭಯದಿಂದಲೇ ಮೃತ್ಯುವು ತನ್ನ ಕಾರ್ಯದಲ್ಲಿ ತೊಡಗುತ್ತದೆ. ॥ ೪೨ ॥ ಯೋಗಿಗಳು ಜ್ಞಾನ-ವೈರಾಗ್ಯಗಳಿಂದ ಕೂಡಿದ ಭಕ್ತಿಯೋಗದ ಮೂಲಕ ಶಾಂತಿಯನ್ನು ಪಡೆಯುವುದಕ್ಕಾಗಿ ನನ್ನ ನಿರ್ಭಯ ಚರಣಕಮಲಗಳನ್ನೇ ಆಶ್ರಯಿಸುತ್ತಾರೆ. ॥ ೪೩ ॥ ಚಿತ್ತವು ತೀವ್ರವಾದ ಭಕ್ತಿಯೋಗದಿಂದ ನನ್ನಲ್ಲಿ ಸಂಲಗ್ನವಾಗಿ ಸ್ಥಿರವಾಗುವುದೇ ಪ್ರಪಂಚದಲ್ಲಿ ಮನುಷ್ಯನಿಗೆ ಎಲ್ಲಕ್ಕಿಂತ ದೊಡ್ಡ ಶ್ರೇಯಸ್ಕರವಾದುದು. ॥ ೪೪ ॥

ಇಪ್ಪತ್ತೈದನೆಯ ಅಧ್ಯಾಯವು ಮುಗಿಯಿತು. ॥ ೨೫ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ತೃತೀಯಸ್ಕಂಧೇ
ಕಾಪಿಲೇಯೋಪಾಖ್ಯಾನೇ ಪಂಚವಿಂಶೋಽಧ್ಯಾಯಃ ॥ ೨೫ ॥

ಇಪ್ಪತ್ತಾರನೆಯ ಅಧ್ಯಾಯ

ಮಹತ್ತು ಮುಂತಾದ ಬೇರೆ-ಬೇರೆ ತತ್ತ್ವಗಳ ಉತ್ಪತ್ತಿಯ ವರ್ಣನೆ

ಶ್ರೀಭಗವಾನುವಾಚ

ಅಥ ತೇ ಸಂಪ್ರವಕ್ಷ್ಯಾಮಿ ತತ್ತ್ವಾನಾಂ ಲಕ್ಷಣಂ ಪೃಥಕ್ ।
ಯದ್ವಿದಿತ್ವಾ ವಿಮುಚ್ಯೇತ ಪುರುಷಃ ಪ್ರಾಕೃತೈರ್ಗುಣೈಃ ॥ ೧ ॥

ಜ್ಞಾನಂ ನಿಃಶ್ರೇಯಸಾರ್ಥಾಯ ಪುರುಷಸ್ಯಾತ್ಮದರ್ಶನಮ್ ।
ಯದಾಹುರ್ವರ್ಣಯೇ ತತ್ತೇ ಹೃದಯಗ್ರಂಥಿಭೇದನಮ್ ॥ ೨ ॥

ಅನಾದಿರಾತ್ಮಾ ಪುರುಷೋ ನಿರ್ಗುಣಃ ಪ್ರಕೃತೇಃ ಪರಃ ।
ಪ್ರತ್ಯಗ್ಧಾಮಾ ಸ್ವಯಂಜ್ಯೋತಿರ್ವಿಶ್ವಂ ಯೇನ ಸಮನ್ವಿತಮ್ ॥ ೩ ॥

ಸ ಏಷ ಪ್ರಕೃತಿಂ ಸೂಕ್ಷ್ಮಾಂ ದೈವೀಂ ಗುಣಮಯೀಂ ವಿಭುಃ ।
ಯದೃಚ್ಛಯೈವೋಪಗತಾಮಭ್ಯಪದ್ಯತ ಲೀಲಯಾ ॥ ೪ ॥

ಗುಣೈರ್ವಿಚಿತ್ರಾಃ ಸೃಜತೀಂ ಸ್ವರೂಪಾಃ ಪ್ರಕೃತಿಂ ಪ್ರಜಾಃ ।
ವಿಲೋಕ್ಯ ಮುಮುಹೇ ಸದ್ಯಃ ಸ ಇಹ ಜ್ಞಾನಗೂಹಯಾ ॥ ೫ ॥

ಏವಂ ಪರಾಭಿಧ್ಯಾನೇನ ಕರ್ತೃತ್ವಂ ಪ್ರಕೃತೇಃ ಪುಮಾನ್ ।
ಕರ್ಮಸು ಕ್ರಿಯಮಾಣೇಷು ಗುಣೈರಾತ್ಮನಿ ಮನ್ಯತೇ ॥ ೬ ॥

ತದಸ್ಯ ಸಂಸೃತಿರ್ಬಂಧಃ ಪಾರತಂತ್ರ್ಯಂ ಚ ತತ್ಕೃತಮ್ ।
ಭವತ್ಯಕರ್ತುರೀಶಸ್ಯ ಸಾಕ್ಷಿಣೋ ನಿರ್ವೃತಾತ್ಮನಃ ॥ ೭ ॥

ಕಾರ್ಯಕಾರಣಕರ್ತೃತ್ವೇ ಕಾರಣಂ ಪ್ರಕೃತಿಂ ವಿದುಃ ।
ಭೋಕ್ತೃತ್ವೇ ಸುಖದುಃಖಾನಾಂ ಪುರುಷಂ ಪ್ರಕೃತೇಃ ಪರಮ್ ॥ ೮ ॥

ದೇವಹೂತಿರುವಾಚ

ಪ್ರಕೃತೇಃ ಪುರುಷಸ್ಯಾಪಿ ಲಕ್ಷಣಂ ಪುರುಷೋತ್ತಮ ।
ಬ್ರೂಹಿ ಕಾರಣಯೋರಸ್ಯ ಸದಸಚ್ಚ ಯದಾತ್ಮಕಮ್ ॥ ೯ ॥

ಶ್ರೀಭಗವಂತನು ಹೇಳುತ್ತಾನೆ – ಅಮ್ಮಾ! ಈಗ ನಾನು ನಿನಗೆ ಪ್ರಕೃತಿಯೇ ಮುಂತಾದ ಎಲ್ಲ ತತ್ತ್ವಗಳ ಬೇರೆ-ಬೇರೆಯಾದ ಲಕ್ಷಣವನ್ನು ಹೇಳುವೆನು. ಇದನ್ನು ತಿಳಿದುಕೊಂಡ ಮನುಷ್ಯನು ಪ್ರಕೃತಿಯ ಗುಣಗಳಿಂದ ಮುಕ್ತನಾಗುವನು. ॥ ೧ ॥ ಆತ್ಮದರ್ಶನರೂಪವಾದ ಜ್ಞಾನವೇ ಪುರುಷನಿಗೆ ಮೋಕ್ಷದ ಕಾರಣವಾಗಿದೆ. ಅದೇ ಅವನ ಅಹಂಕಾರರೂಪೀ ಹೃದಯಗ್ರಂಥಿಯನ್ನು ಕತ್ತರಿಸುವುದಾಗಿದೆ ಎಂದು ಪಂಡಿತರು ಹೇಳುತ್ತಾರೆ. ಅದೇ ಜ್ಞಾನವನ್ನು ನಾನು ಮುಂದೆ ನಿನಗೆ ವರ್ಣಿಸುವೆನು. ॥ ೨ ॥ ಈ ಇಡೀ ಜಗತ್ತು ಯಾರಿಂದ ವ್ಯಾಪ್ತವಾಗಿ, ಪ್ರಕಾಶಿಸುತ್ತದೋ ಆ ಆತ್ಮನೇ ಪುರುಷನಾಗಿದ್ದಾನೆ. ಅವನು ಅನಾದಿಯೂ, ನಿರ್ಗುಣನೂ, ಪ್ರಕೃತಿಗಿಂತ ಅತೀತನೂ, ಅಂತಃಕರಣದಲ್ಲಿ ಸ್ಫುರಿತನಾಗುವವನೂ, ಸ್ವಯಂಪ್ರಕಾಶನೂ ಆಗಿರುವನು. ॥ ೩ ॥ ■ ಸರ್ವವ್ಯಾಪಕ ಪುರುಷನು ತನ್ನ ಬಳಿಗೆ ಲೀಲಾವಿಲಾಸಪೂರ್ವಕವಾಗಿ ಬಂದಿರುವ ಅವ್ಯಕ್ತ ಮತ್ತು ತ್ರಿಗುಣಾತ್ಮಿಕೆಯಾದ ವೈಷ್ಣವೀಮಾಯೆಯನ್ನು ತನ್ನ ಇಚ್ಛೆಯಿಂದಲೇ ಸ್ವೀಕರಿಸಿದನು. ॥ ೪ ॥ ಲೀಲಾಪರಾಯಣಳಾಗಿರುವ ಪ್ರಕೃತಿಯು ತನ್ನ ಸತ್ತ್ವಾದಿ ಗುಣಗಳಿಂದ, ಅವುಗಳಿಗೆ ಅನುರೂಪವಾದ ಪ್ರಜೆಗಳನ್ನು ಸೃಷ್ಟಿಸತೊಡಗಿದಳು. ಇದನ್ನು ಕಂಡ ಪುರುಷನು ಜ್ಞಾನವನ್ನು ಮುಚ್ಚುವಂತಹ ಅವಳ ಆವರಣಶಕ್ತಿಯಿಂದ ಮೋಹಿತನಾಗಿ ತನ್ನ ಸ್ವರೂಪವನ್ನು ಮರೆತುಬಿಟ್ಟನು. ॥ ೫ ॥ ಹೀಗೆ ತನ್ನಿಂದ ಭಿನ್ನವಾದ ಪ್ರಕೃತಿಯನ್ನೇ ತನ್ನ ಸ್ವರೂಪವೆಂದು ತಿಳಿದುಕೊಂಡಿದ್ದರಿಂದ ಪುರುಷನು ಪ್ರಕೃತಿಯ ಗುಣಗಳ ಮೂಲಕ ಮಾಡಲಾಗುವ ಕರ್ಮಗಳಲ್ಲಿ ತನ್ನನ್ನೇ ಕರ್ತಾ ಎಂದು ತಿಳಿಯತೊಡಗಿದನು. ॥ ೬ ॥ ಕರ್ತೃತ್ವಾಭಿಮಾನದಿಂದಲೇ ಅಕರ್ತೃವೂ, ಸ್ವಾಧೀನನೂ, ಸಾಕ್ಷಿಯೂ, ಆನಂದಸ್ವರೂಪನೂ ಆದ ಪುರುಷನಿಗೆ ಜನ್ಮ-ಮೃತ್ಯುರೂಪವಾದ ಬಂಧನವೂ ಹಾಗೂ ಪರತಂತ್ರತೆಯೂ ಪ್ರಾಪ್ತವಾಯಿತು. ॥ ೭ ॥ ಕಾರ್ಯರೂಪವಾದ ಶರೀರದಲ್ಲಿಯೂ, ಕಾರಣರೂಪವಾದ ಇಂದ್ರಿಯಗಳಲ್ಲಿಯೂ, ಕರ್ತೃರೂಪವಾದ ಇಂದ್ರಿಯಗಳ ಅಭಿಮಾನೀ ದೇವತೆಗಳಲ್ಲಿಯೂ ಪುರುಷನು 'ಅವು ನನ್ನವು' ಎಂದು ಆರೋಪಿಸಿಕೊಳ್ಳುವುದಕ್ಕೆ ಪ್ರಕೃತಿಯೇ ಕಾರಣವೆಂದು ಪಂಡಿತರು ಹೇಳುತ್ತಾರೆ. ವಾಸ್ತವದಲ್ಲಿ ಪ್ರಕೃತಿಗೆ ಅತೀತನಾಗಿದ್ದರೂ ಪ್ರಕೃತಿಸ್ಥನಾದ ಆ ಪುರುಷನನ್ನೇ ಸುಖ-ದುಃಖಗಳನ್ನು ಭೋಗಿಸಲು ಕಾರಣನೆಂದು ತಿಳಿಯುತ್ತಾರೆ. ॥ ೮ ॥

ದೇವಹೂತಿಯು ಕೇಳಿದಳು – ಪುರುಷೋತ್ತಮನೇ! ಈ ವಿಶ್ವದ ಸ್ಥೂಲ-ಸೂಕ್ಷ್ಮಕಾರ್ಯಗಳೆಲ್ಲವೂ ಯಾರ ಸ್ವರೂಪವಾಗಿವೆಯೋ ಹಾಗೂ ಯಾರು ಇದರ ಕಾರಣವಾಗಿದ್ದಾರೋ, ಆ ಪ್ರಕೃತಿ-ಪುರುಷರ ಲಕ್ಷಣವನ್ನೂ ಕೂಡ ನೀನು ನನಗೆ ತಿಳಿಸುವವನಾಗು. ॥ ೯ ॥

ಶ್ರೀಭಗವಾನುವಾಚ

ಯತ್ತತ್ತ್ರಿಗುಣಮವ್ಯಕ್ತಂ ನಿತ್ಯಂ ಸದಸದಾತ್ಮಕಮ್ ।
ಪ್ರಧಾನಂ ಪ್ರಕೃತಿಂ ಪ್ರಾಹುರವಿಶೇಷಂ ವಿಶೇಷವತ್ ॥ ೧೦ ॥

ಪಂಚಭಿಃ ಪಂಚಭಿರ್ಬ್ರಹ್ಮ ಚತುರ್ಭಿರ್ದಶಭಿಸ್ತಥಾ ।
ಏತಚ್ಚತುರ್ವಿಂಶತಿಕಂ ಗಣಂ ಪ್ರಾಧಾನಿಕಂ ವಿದುಃ ॥ ೧೧ ॥

ಮಹಾಭೂತಾನಿ ಪಂಚೈವ ಭೂರಾಪೋಽಗ್ನಿರ್ಮರುನ್ನಭಃ ।
ತನ್ಮಾತ್ರಾಣಿ ಚ ತಾವಂತಿ ಗಂಧಾದೀನಿ ಮತಾನಿ ಮೇ ॥ ೧೨ ॥

ಇಂದ್ರಿಯಾಣಿ ದಶ ಶ್ರೋತ್ರಂ ತ್ವಗ್ದೃಗ್ರಸನನಾಸಿಕಾಃ ।
ವಾಕ್ಕರೌ ಚರಣೌ ಮೇಢ್ರಂ ಪಾಯುರ್ದಶಮ ಉಚ್ಯತೇ ॥ ೧೩ ॥

ಮನೋ ಬುದ್ಧಿರಹಂಕಾರಶ್ಚಿತ್ತಮಿತ್ಯಂತರಾತ್ಮಕಮ್ ।
ಚತುರ್ಧಾ ಲಕ್ಷ್ಯತೇ ಭೇದೋ ವೃತ್ತ್ಯಾ ಲಕ್ಷಣರೂಪಯಾ ॥ ೧೪ ॥

ಏತಾವಾನೇವ ಸಂಖ್ಯಾತೋ ಬ್ರಹ್ಮಣಃ ಸಗುಣಸ್ಯ ಹ ।
ಸನ್ನಿವೇಶೋ ಮಯಾ ಪ್ರೋಕ್ತೋ ಯಃ ಕಾಲಃ ಪಂಚವಿಂಶಕಃ ॥ ೧೫ ॥

ಪ್ರಭಾವಂ ಪೌರುಷಂ ಪ್ರಾಹುಃ ಕಾಲಮೇಕೇ ಯತೋ ಭಯಮ್ ।
ಅಹಂಕಾರವಿಮೂಢಸ್ಯ ಕರ್ತುಃ ಪ್ರಕೃತಿಮೀಯುಷಃ ॥ ೧೬ ॥

ಪ್ರಕೃತೇರ್ಗುಣಸಾಮ್ಯಸ್ಯ ನಿರ್ವಿಶೇಷಸ್ಯ ಮಾನವಿ ।
ಚೇಷ್ಟಾ ಯತಃ ಸ ಭಗವಾನ್ಕಾಲ ಇತ್ಯುಪಲಕ್ಷಿತಃ ॥ ೧೭ ॥

ಅಂತಃ ಪುರುಷರೂಪೇಣ ಕಾಲರೂಪೇಣ ಯೋ ಬಹಿಃ ।
ಸಮನ್ವೇತ್ಯೇಷ ಸತ್ತ್ವಾನಾಂ ಭಗವಾನಾತ್ಮಮಾಯಯಾ ॥ ೧೮ ॥

ದೈವಾತ್ಕ್ಷುಭಿತಧರ್ಮಿಣ್ಯಾಂ ಸ್ವಸ್ಯಾಂ ಯೋನೌ ಪರಃ ಪುಮಾನ್ ।
ಆಧತ್ತ ವೀರ್ಯಂ ಸಾಸೂತ ಮಹತ್ತತ್ತ್ವಂ ಹಿರಣ್ಮಯಮ್ ॥ ೧೯ ॥

ವಿಶ್ವಮಾತ್ಮಗತಂ ವ್ಯಂಜನ್ಕೂಟಸ್ಥೋ ಜಗದಂಕುರಃ ।
ಸ್ವತೇಜಸಾಪಿಬತ್ತೀವ್ರಮಾತ್ಮಪ್ರಸ್ವಾಪನಂ ತಮಃ ॥ ೨೦ ॥

ಶ್ರೀಭಗವಂತನು ಹೇಳಿದನು – ತಾಯೇ! ಯಾವುದು ತ್ರಿಗುಣಾತ್ಮಕವೂ, ಅವ್ಯಕ್ತವೂ, ನಿತ್ಯವೂ ಆಗಿ ಕಾರ್ಯಕಾರಣರೂಪವಾಗಿದೆಯೋ ಹಾಗೂ ಸ್ವತಃ ನಿರ್ವಿಶೇಷವಾಗಿದ್ದರೂ ಸಮಸ್ತ ವಿಶೇಷ ಧರ್ಮಗಳಿಗೆ ಆಶ್ರಯವಾಗಿದೆಯೋ – ಆ ಪ್ರಧಾನವೆಂಬ ತತ್ತ್ವವನ್ನೇ ಪ್ರಕೃತಿ ಎನ್ನುತ್ತಾರೆ. ॥ ೧೦ ॥ ಪಂಚಮಹಾಭೂತಗಳೂ, ಪಂಚತನ್ಮಾತ್ರೆಗಳೂ, ನಾಲ್ಕು ಅಂತಃಕರಣ ವಿಶೇಷಗಳೂ, ಹತ್ತು ಇಂದ್ರಿಯಗಳೂ ಹೀಗೆ ಈ ಇಪ್ಪತ್ತನಾಲ್ಕು ತತ್ತ್ವಗಳ ಸಮೂಹವನ್ನು ವಿದ್ವಾಂಸರು ಪ್ರಕೃತಿಯ ಕಾರ್ಯವೆಂದು ತಿಳಿಯುತ್ತಾರೆ. ॥ ೧೧ ॥ ಪೃಥಿವಿ, ಜಲ, ತೇಜ, ವಾಯು, ಆಕಾಶ – ಇವು ಪಂಚಮಹಾಭೂತಗಳು. ಗಂಧ, ರಸ, ರೂಪ, ಸ್ಪರ್ಶ, ಶಬ್ದ ಇವು ಪಂಚತನ್ಮಾತ್ರೆಗಳು ಎಂದು ತಿಳಿಯಲಾಗಿದೆ. ॥ ೧೨ ॥ ಕಿವಿ, ಚರ್ಮ, ಕಣ್ಣು ನಾಲಿಗೆ, ಮೂಗು, ಮಾತು, ಕೈ, ಕಾಲು, ಉಪಸ್ಥ ಪಾಯು – ಎಂಬ ಈ ಹತ್ತು ಇಂದ್ರಿಯಗಳು. ॥ ೧೩ ॥ ಮನ, ಬುದ್ಧಿ ಚಿತ್ತ, ಅಹಂಕಾರ ಎಂಬ ಇವೇ ಅಂತಃಕರಣ ರೂಪಗಳು. ಇವುಗಳಿಗೆ ಕ್ರಮವಾಗಿ ಸಂಕಲ್ಪ ನಿಶ್ಚಯ, ಚಿಂತೆ, ಅಭಿಮಾನ ಎಂಬ ನಾಲ್ಕು ಪ್ರವೃತ್ತಿಗಳು. ॥ ೧೪ ॥ ತತ್ತ್ವಜ್ಞಾನಿಗಳು ಹೀಗೆ ಸಗುಣಬ್ರಹ್ಮನ ಸನ್ನಿವೇಶಸ್ಥಾನಗಳನ್ನಾಗಿ ಇಪ್ಪತ್ತನಾಲ್ಕು ತತ್ತ್ವಗಳ ಸಂಖ್ಯೆಯನ್ನು ತಿಳಿಸಿರುವರು. ಇವುಗಳಲ್ಲದೆ ಕಾಲ ಎಂಬುದು ಇಪ್ಪತ್ತೈದನೆಯ ತತ್ತ್ವವಾಗಿದೆ. ॥ ೧೫ ॥ ಕೆಲವು ಜ್ಞಾನಿಗಳು ಕಾಲವನ್ನು ಪುರುಷನಿಂದ ಬೇರೆಯಾದ ತತ್ತ್ವವೆಂದು ತಿಳಿಯದೆ, ಪುರುಷನ ಪ್ರಭಾವ ಅಂದರೆ ಈಶ್ವರನ ಸಂಹಾರಕಾರಕ ಶಕ್ತಿಯನ್ನಾಗಿ ತಿಳಿಸುತ್ತಾರೆ. ಅದರಿಂದ ಮಾಯೆಯ ಕಾರ್ಯವಾದ ದೇಹಾದಿಗಳನ್ನು ಆತ್ಮವೆಂದು ಅಭಿಮಾನಪಟ್ಟು ಅಹಂಕಾರದಿಂದ ಮೋಹಿತನಾಗಿ ತನ್ನನ್ನು ಕರ್ತಾ ಎಂದು ತಿಳಿಯುವ ಜೀವನಿಗೆ ನಿರಂತರವಾದ ಭಯವು ಇದ್ದೇ ಇರುತ್ತದೆ. ॥ ೧೬ ॥ ಅಮ್ಮಾ! ಮನುಪುತ್ರಿಯೇ! ಯಾರ ಪ್ರೇರಣೆಯಿಂದ ಗುಣಗಳ ಸಾಮ್ಯಾವಸ್ಥೆಯ ರೂಪದಲ್ಲಿರುವ ನಿರ್ವಿಶೇಷವಾದ ಪ್ರಕೃತಿಯಲ್ಲಿ ಗತಿಯು ಉಂಟಾಗುತ್ತದೋ, ಪುರುಷರೂಪಿಯಾದ ಭಗವಂತನೇ ವಾಸ್ತವವಾಗಿ 'ಕಾಲ'ನೆಂದು ಕರೆಯಲ್ಪಡುತ್ತಾನೆ. ॥ ೧೭॥ ಹೀಗೆ ತನ್ನ ಮಾಯೆಯ ಮೂಲಕ ಎಲ್ಲ ಪ್ರಾಣಿಗಳೊಳಗೆ ಜೀವರೂಪದಿಂದಲೂ ಹೊರಗೆ ಕಾಲರೂಪದಿಂದಲೂ ವ್ಯಾಪ್ತನಾಗಿರುವ ಭಗವಂತನೇ ಇಪ್ಪತ್ತೈದನೆಯ ತತ್ತ್ವವು. ॥ ೧೮ ॥

ಪರಮಪುರುಷ ಪರಮಾತ್ಮನು ಜೀವರ ಅದೃಷ್ಟವಶದಿಂದ ಕ್ಷೋಭೆಗೊಂಡ ಸರ್ವಜೀವಿಗಳ ಉತ್ಪತ್ತಿಸ್ಥಾನರೂಪವಾದ ತನ್ನ ಮಾಯೆಯಲ್ಲಿ ಚಿಚ್ಛಕ್ತಿರೂಪವಾದ ವೀರ್ಯವನ್ನು ಸ್ಥಾಪಿಸಿದಾಗ ಅದರಿಂದ ತೇಜೋಮಯ ಮಹತ್ತತ್ತ್ವವು ಉತ್ಪನ್ನವಾಯಿತು ॥ ೧೯ ॥ ಲಯ-ವಿಕ್ಷೇಪಾದಿ ರಹಿತ ಹಾಗೂ ಜಗತ್ತಿಗೆ ಅಂಕುರದಂತಿರುವ ಈ ಮಹತ್ತತ್ತ್ವವು ತನ್ನಲ್ಲಿದ್ದ ವಿಶ್ವವನ್ನು ಪ್ರಕಟಪಡಿಸಲು ತನ್ನ ಸ್ವರೂಪವನ್ನು ಮುಚ್ಚಿಕೊಂಡಿದ್ದ ಪ್ರಳಯಕಾಲದ ಕತ್ತಲೆಯನ್ನು ತನ್ನದೇ ತೇಜದಿಂದ ಕುಡಿದುಬಿಟ್ಟಿತು. ॥ ೨೦ ॥

ಯತ್ತತ್ಸತ್ತ್ವಗುಣಂ ಸ್ವಚ್ಛಂ ಶಾಂತಂ ಭಗವತಃ ಪದಮ್ ।
ಯದಾಹುರ್ವಾಸುದೇವಾಖ್ಯಂ ಚಿತ್ತಂ ತನ್ಮಹದಾತ್ಮಕಮ್
॥ ೨೧ ॥

ಸ್ವಚ್ಛತ್ವಮವಿಕಾರಿತ್ವಂ ಶಾಂತತ್ವಮಿತಿ ಚೇತಸಃ ।
ವೃತ್ತಿಭಿರ್ಲಕ್ಷಣಂ ಪ್ರೋಕ್ತಂ ಯಥಾಪಾಂ ಪ್ರಕೃತಿಃ ಪರಾ
॥ ೨೨ ॥

ಮಹತ್ತತ್ತ್ವಾದ್ವಿಕುರ್ವಾಣಾದ್ಭಗವದ್ವೀರ್ಯಸಂಭವಾತ್ ।
ಕ್ರಿಯಾಶಕ್ತಿರಹಂಕಾರಸ್ತ್ರಿವಿಧಃ ಸಮಪದ್ಯತ
॥ ೨೩ ॥

ವೈಕಾರಿಕಸ್ತೈಜಸಶ್ಚ ತಾಮಸಶ್ಚ ಯತೋ ಭವಃ ।
ಮನಸಶ್ಚೇಂದ್ರಿಯಾಣಾಂ ಚ ಭೂತಾನಾಂ ಮಹತಾಮಪಿ
॥ ೨೪ ॥

ಸಹಸ್ರಶಿರಸಂ ಸಾಕ್ಷಾದ್ಯಮನಂತಂ ಪ್ರಚಕ್ಷತೇ ।
ಸಂಕರ್ಷಣಾಖ್ಯಂ ಪುರುಷಂ ಭೂತೇಂದ್ರಿಯಮನೋಮಯಮ್
॥ ೨೫ ॥

ಕರ್ತೃತ್ವಂ ಕರಣತ್ವಂ ಚ ಕಾರ್ಯತ್ವಂ ಚೇತಿ ಲಕ್ಷಣಮ್ ।
ಶಾಂತ ಘೋರವಿಮೂಢತ್ವಮಿತಿ ವಾ ಸ್ಯಾದಹಂಕೃತೇಃ
॥ ೨೬ ॥

ವೈಕಾರಿಕಾದ್ವಿಕುರ್ವಾಣಾನ್ಮನಸ್ತತ್ತ್ವಮಜಾಯತ ।
ಯತ್ಸಂಕಲ್ಪವಿಕಲ್ಪಾಭ್ಯಾಂ ವರ್ತತೇ ಕಾಮಸಂಭವಃ
॥ ೨೭ ॥

ಯದ್ವಿದುರ್ಹ್ಯನಿರುದ್ಧಾಖ್ಯಂ ಹೃಷೀಕಾಣಾಮಧೀಶ್ವರಮ್ ।
ಶಾರದೇಂದೀವರಶ್ಯಾಮಂ ಸಂರಾಧ್ಯಂ ಯೋಗಿಭಿಃ ಶನೈಃ
॥ ೨೮ ॥

ತೈಜಸಾತ್ತು ವಿಕುರ್ವಾಣಾದ್ಬುದ್ಧಿತತ್ತ್ವಮಭೂತ್ಸತಿ ।
ದ್ರವ್ಯಸ್ಫುರಣವಿಜ್ಞಾನಮಿಂದ್ರಿಯಾಣಾಮನುಗ್ರಹಃ
॥ ೨೯ ॥

ಸಂಶಯೋಽಥ ವಿಪರ್ಯಾಸೋ ನಿಶ್ಚಯಃ ಸ್ಮೃತಿರೇವ ಚ ।
ಸ್ವಾಪ ಇತ್ಯುಚ್ಯತೇ ಬುದ್ಧೇರ್ಲಕ್ಷಣಂ ವೃತ್ತಿತಃ ಪೃಥಕ್
॥ ೩೦ ॥

ಸತ್ತ್ವಗುಣಮಯವಾಗಿ, ಸ್ವಚ್ಛವಾಗಿ, ಶಾಂತವಾಗಿ ಭಗವಂತನ ಉಪಲಬ್ಧಿಸ್ಥಾನವಾದ ಚಿತ್ತವೇ ಮಹತ್ತತ್ತ್ವವಾಗಿದೆ. ಅದನ್ನೇ 'ವಾಸುದೇವ' * ಎಂದೂ ಹೇಳುತ್ತಾರೆ. ॥ ೨೧ ॥ ಪೃಥಿವಿಯೇ ಮುಂತಾದ ಪದಾರ್ಥಗಳೊಡನೆ ಸಂಸರ್ಗಹೊಂದುವ ಮೊದಲು ನೀರು ನೊರೆ-ಗುಳ್ಳೆಗಳೇ ಇಲ್ಲದೆ ಸಹಜಸ್ಥಿತಿಯಲ್ಲಿರುವಾಗ ಅತ್ಯಂತ ಸ್ವಚ್ಛವೂ, ವಿಕಾರಶೂನ್ಯವೂ, ಶಾಂತವೂ ಆಗಿರುತ್ತದೆ. ಹಾಗೆಯೇ ತನ್ನ ಸ್ವಾಭಾವಿಕ ಅವಸ್ಥೆಯ ದೃಷ್ಟಿಯಿಂದ ಸ್ವಚ್ಛತ್ವ, ಅವಿಕಾರಿತ್ವ ಮತ್ತು ಶಾಂತತ್ವಗಳೇ ವೃತ್ತಿಗಳೊಡನೆ ಚಿತ್ತದ ಲಕ್ಷಣವೆಂದು ಹೇಳಲಾಗಿದೆ. ॥ ೨೨ ॥ ಅನಂತರ ಭಗವಂತನ ವೀರ್ಯರೂಪವಾದ ಚಿತ್-ಶಕ್ತಿಯಿಂದ ಉತ್ಪನ್ನವಾದ ಮಹತ್ತತ್ತ್ವದಲ್ಲಿ ವಿಕಾರ ಉಂಟಾದಾಗ, ಅದರಿಂದ ಕ್ರಿಯಾಶಕ್ತಿಪ್ರಧಾನವಾದ ಅಹಂಕಾರವು ಉತ್ಪನ್ನವಾಯಿತು. ಅದು ವೈಕಾರಿಕ, ತೈಜಸ ಮತ್ತು ತಾಮಸ ಎಂಬ ಮೂರು ಪ್ರಕಾರದಿಂದ ಕೂಡಿದೆ. ಅದರಿಂದಲೇ ಕ್ರಮವಾಗಿ ಮನಸ್ಸು ಇಂದ್ರಿಯಗಳು ಮತ್ತು ಪಂಚಭೂತಗಳ ಉತ್ಪತ್ತಿಯಾಯಿತು. ॥ ೨೩-೨೪ ॥ ಈ ಭೂತ, ಇಂದ್ರಿಯ ಮತ್ತು ಮನೋರೂಪವಾದ ಅಹಂಕಾರವನ್ನೇ ಪಂಡಿತರು ಸಾಕ್ಷಾತ್ 'ಸಂಕರ್ಷಣ' ಹೆಸರಿನ ಸಾವಿರತಲೆಯುಳ್ಳ 'ಅನಂತ-ನಾಗರಾಜ' ಎಂದು ಕರೆಯುತ್ತಾರೆ. ॥ ೨೫ ॥ ಈ ಅಹಂಕಾರದ ಲಕ್ಷಣವು ದೇವತಾರೂಪದಿಂದ ಕರ್ತೃತ್ವ, ಇಂದ್ರಿಯರೂಪದಿಂದ ಕರಣತ್ವ, ಪಂಚಭೂತರೂಪದಿಂದ ಕಾರ್ಯತ್ವವಾಗಿದೆ ಹಾಗೂ ಸತ್ತ್ವಾದಿ ಗುಣಗಳ ಸಂಬಂಧದಿಂದ ಶಾಂತತ್ವ, ಘೋರತ್ವ, ಮತ್ತು ಮೂಢತ್ವವೂ ಇದರ ಲಕ್ಷಣವಾಗಿದೆ. ॥ ೨೬ ॥ ಮೇಲೆ ಹೇಳಿದ ಮೂರು ಬಗೆಯ ಅಹಂಕಾರದಲ್ಲಿನ ವೈಕಾರಿಕ ಅಹಂಕಾರವು ವಿಕೃತವಾದಾಗ ಅದರಿಂದ ಮನಸ್ಸುಂಟಾಯಿತು. ಅದರ ಸಂಕಲ್ಪ-ವಿಕಲ್ಪಗಳಿಂದ ಕಾಮನೆಗಳ ಉತ್ಪತ್ತಿಯಾಗುತ್ತದೆ. ॥ ೨೭ ॥ ಈ ಮನಸ್ತತ್ತ್ವವೇ ಇಂದ್ರಿಯಗಳಿಗೆ ಅಧಿಷ್ಠಾತೃವಾದ 'ಅನಿರುದ್ಧ' ಎಂಬ ಹೆಸರಿನಿಂದ ಪ್ರಸಿದ್ಧವಾಗಿದೆ. ಯೋಗಿಗಳು ಶರತ್ಕಾಲದ ನೀಲಕಮಲದಂತೆ ಶ್ಯಾಮಲ ವರ್ಣವುಳ್ಳ ಈ ಅನಿರುದ್ಧನನ್ನು ಮೆಲ್ಲ-ಮೆಲ್ಲನೆ ಮನಸ್ಸನ್ನು ಸ್ವಾಧೀನಪಡಿಸಿಕೊಂಡು ಆರಾಧಿಸುತ್ತಾರೆ. ॥ ೨೮ ॥ ಎಲೈ ಸಾಧ್ವಿಯೇ! ಮತ್ತೆ ತೈಜಸ ಅಹಂಕಾರವು ವಿಕಾರಗೊಳ್ಳಲು ಅದರಿಂದ ಬುದ್ಧಿತತ್ತ್ವವು ಉಂಟಾಯಿತು. ವಸ್ತುವಿನ ಸ್ಫೂರ್ತಿರೂಪವಾದ ವಿಜ್ಞಾನ ಮತ್ತು ಇಂದ್ರಿಯಗಳ ವ್ಯಾಪಾರದಲ್ಲಿ ಸಹಾಯಕವಾಗುವಿಕೆ – ಪದಾರ್ಥಗಳ ವಿಶೇಷಜ್ಞಾನ ಪಡೆಯುವಿಕೆ – ಇವು ಬುದ್ಧಿಯ ಕಾರ್ಯವಾಗಿವೆ. ॥ ೨೯ ॥ ವೃತ್ತಿಗಳ ಭೇದದಿಂದ ಸಂಶಯ, ವಿಪರ್ಯಯ (ವಿಪರೀತ ಜ್ಞಾನ), ನಿಶ್ಚಯ, ಸ್ಮೃತಿ ಮತ್ತು ನಿದ್ದೆ ಇವುಗಳೂ ಬುದ್ಧಿಯ ಲಕ್ಷಣಗಳಾಗಿವೆ. ಈ ಬುದ್ಧಿತತ್ತ್ವವೇ 'ಪ್ರದ್ಯುಮ್ನ'ನೆನಿಸುತ್ತದೆ. ॥ ೩೦ ॥

* ಅಧ್ಯಾತ್ಮದಲ್ಲಿ ಯಾವುದನ್ನು ಚಿತ್ತವೆಂದು ಕರೆಯುವರೋ, ಅದನ್ನೇ ಅಧಿಭೂತದಲ್ಲಿ ಮಹತ್ತತ್ತ್ವ ಎಂದು ಹೇಳಲಾಗುತ್ತದೆ. ಚಿತ್ತದಲ್ಲಿ ಅಧಿಷ್ಠಾತೃವಾಗಿರುವವನು 'ಕ್ಷೇತ್ರಜ್ಞನು' ಮತ್ತು ಉಪಾಸ್ಯದೇವನು 'ವಾಸುದೇವ'ನಾಗಿದ್ದಾನೆ. ಹಾಗೆಯೇ ಅಹಂಕಾರದಲ್ಲಿ ಅಧಿಷ್ಠಾತೃವಾಗಿರುವವನು ರುದ್ರನು ಮತ್ತು ಉಪಾಸ್ಯ ದೇವನು ಸಂಕರ್ಷಣನಾಗಿದ್ದಾನೆ. ಬುದ್ಧಿಯಲ್ಲಿ ಅಧಿಷ್ಠಾತೃವಾಗಿರುವವನು ಬ್ರಹ್ಮನು ಮತ್ತು ಉಪಾಸ್ಯದೇವನು ಪ್ರದ್ಯುಮ್ನನು. ಮನಸ್ಸಿನಲ್ಲಿ ಅಧಿಷ್ಠಾತೃವಾದವನು ಚಂದ್ರನು ಮತ್ತು ಉಪಾಸ್ಯದೇವನು 'ಅನಿರುದ್ಧ'ನಾಗಿದ್ದಾನೆ.

ತೈಜಸಾನೀಂದ್ರಿಯಾಣ್ಯೇವ ಕ್ರಿಯಾಜ್ಞಾನವಿಭಾಗಶಃ ।
ಪ್ರಾಣಸ್ಯ ಹಿ ಕ್ರಿಯಾ ಶಕ್ತಿರ್ಬುದ್ಧೇರ್ವಿಜ್ಞಾನಶಕ್ತಿತಾ ॥ ೩೧ ॥

ತಾಮಸಾಚ್ಚ ವಿಕುರ್ವಾಣಾದ್ಭಗವದ್ವೀರ್ಯಚೋದಿತಾತ್ ।
ಶಬ್ದಮಾತ್ರಮಭೂತ್ತಸ್ಮಾನ್ನಭಃ ಶ್ರೋತ್ರಂ ತು ಶಬ್ದಗಮ್ ॥ ೩೨ ॥

ಅರ್ಥಾಶ್ರಯತ್ವಂ ಶಬ್ದಸ್ಯ ದ್ರಷ್ಟುರ್ಲಿಂಗತ್ವಮೇವ ಚ ।
ತನ್ಮಾತ್ರತ್ವಂ ಚ ನಭಸೋ ಲಕ್ಷಣಂ ಕವಯೋ ವಿದುಃ ॥ ೩೩ ॥

ಭೂತಾನಾಂ ಛಿದ್ರದಾತೃತ್ವಂ ಬಹಿರಂತರಮೇವ ಚ ।
ಪ್ರಾಣೇಂದ್ರಿಯಾತ್ಮಧಿಷ್ಣ್ಯತ್ವಂ ನಭಸೋ ವೃತ್ತಿಲಕ್ಷಣಮ್ ॥ ೩೪ ॥

ನಭಸಃ ಶಬ್ದತನ್ಮಾತ್ರಾತ್ ಕಾಲಗತ್ಯಾ ವಿಕುರ್ವತಃ ।
ಸ್ಪರ್ಶೋಽಭವತ್ತತೋ ವಾಯುಸ್ತ್ವಕ್ ಸ್ಪರ್ಶಸ್ಯ ಚ ಸಂಗ್ರಹಃ ॥ ೩೫ ॥

ಮೃದುತ್ವಂ ಕಠಿನತ್ವಂ ಚ ಶೈತ್ಯಮುಷ್ಣತ್ವಮೇವ ಚ ।
ಏತತ್ಸ್ಪರ್ಶಸ್ಯ ಸ್ಪರ್ಶತ್ವಂ ತನ್ಮಾತ್ರತ್ವಂ ನಭಸ್ವತಃ ॥ ೩೬ ॥

ಚಾಲನಂ ವ್ಯೂಹನಂ ಪ್ರಾಪ್ತಿರ್ನೇತೃತ್ವಂ ದ್ರವ್ಯಶಬ್ದಯೋಃ ।
ಸರ್ವೇಂದ್ರಿಯಾಣಾಮಾತ್ಮತ್ವಂ ವಾಯೋಃ ಕರ್ಮಾಭಿಲಕ್ಷಣಮ್ ॥ ೩೭ ॥

ವಾಯೋಶ್ಚ ಸ್ಪರ್ಶತನ್ಮಾತ್ರಾದ್ರೂಪಂ ದೈವೇರಿತಾದಭೂತ್ ।
ಸಮುತ್ಥಿತಂ ತತಸ್ತೇಜಶ್ಚಕ್ಷೂ ರೂಪೋಪಲಂಭನಮ್ ॥ ೩೮ ॥

ದ್ರವ್ಯಾಕೃತಿತ್ವಂ ಗುಣತಾ ವ್ಯಕ್ತಿಸಂಸ್ಥಾತ್ವಮೇವ ಚ ।
ತೇಜಸ್ತ್ವಂ ತೇಜಸಃ ಸಾಧ್ವಿ ರೂಪಮಾತ್ರಸ್ಯ ವೃತ್ತಯಃ ॥ ೩೯ ॥

ದ್ಯೋತನಂ ಪಚನಂ ಪಾನಮದನಂ ಹಿಮಮರ್ದನಮ್ ।
ತೇಜಸೋ ವೃತ್ತಯಸ್ತ್ವೇತಾಃ ಶೋಷಣಂ ಕ್ಷುತ್ತೃಡೇವ ಚ ॥ ೪೦ ॥

ಇಂದ್ರಿಯಗಳೂ ಕೂಡ ತೈಜಸ ಅಹಂಕಾರದ್ದೇ ಕಾರ್ಯವಾಗಿದೆ. ಕರ್ಮ ಮತ್ತು ಜ್ಞಾನ ಇವುಗಳ ವಿಭಾಗದಿಂದ ಅವುಗಳಲ್ಲಿ ಜ್ಞಾನೇಂದ್ರಿಯ ಮತ್ತು ಕರ್ಮೇಂದ್ರಿಯಗಳೆಂಬ ಎರಡು ಭೇದಗಳಿವೆ. ಇವುಗಳಲ್ಲಿ ಕರ್ಮ ಪ್ರಾಣದ ಶಕ್ತಿ ಮತ್ತು ಜ್ಞಾನ ಬುದ್ಧಿಯ ಶಕ್ತಿಯಾಗಿದೆ. ॥ ೩೧ ॥

ಭಗವಂತನ ಚೈತನ್ಯಶಕ್ತಿಯ ಪ್ರೇರಣೆಯಿಂದ ತಾಮಸ ಅಹಂಕಾರವು ವಿಕೃತವಾದಾಗ ಅದರಿಂದ ಶಬ್ದ ತನ್ಮಾತ್ರೆಯು ಉದ್ಭವಿಸಿತು. ಶಬ್ದ ತನ್ಮಾತ್ರೆಯಿಂದ ಆಕಾಶ ಹಾಗೂ ಶಬ್ದಜ್ಞಾನವನ್ನುಂಟು ಮಾಡುವ ಶ್ರೋತ್ರೇಂದ್ರಿಯವು ಉತ್ಪನ್ನವಾಯಿತು. ॥ ೩೨ ॥ ಅರ್ಥವನ್ನು ಪ್ರಕಾಶಪಡಿಸುವುದು, ಪರೋಕ್ಷದಲ್ಲಿ ಮಾತನಾಡುವವನ ಜ್ಞಾನವನ್ನು ಉಂಟುಮಾಡುವುದು, ಆಕಾಶದಂತೆ ಸೂಕ್ಷ್ಮರೂಪವಾಗುವಿಕೆ, ಇವೇ ಶಬ್ದದ ಲಕ್ಷಣವೆಂಬುದು ವಿದ್ವಾಂಸರ ಮತವಾಗಿದೆ. ॥ ೩೩ ॥ ಭೂತಗಳಿಗೆ ಅವಕಾಶ ಕೊಡುವಿಕೆ, ಎಲ್ಲರ ಒಳ-ಹೊರಗೆ ಇರುವುದು ಮತ್ತು ಪ್ರಾಣ, ಇಂದ್ರಿಯ, ಮನಸ್ಸುಗಳಿಗೆ ಆಶ್ರಯವಾಗಿರುವಿಕೆ, ಇವಿಷ್ಟೂ ಆಕಾಶದ ವೃತ್ತಿ (ಕಾರ್ಯ) ರೂಪವಾದ ಲಕ್ಷಣವಾಗಿದೆ. ॥ ೩೪ ॥

ಅನಂತರ ಶಬ್ದತನ್ಮಾತ್ರೆಯ ಕಾರ್ಯವಾದ ಆಕಾಶದಲ್ಲಿ ಕಾಲಗತಿಯಿಂದ ವಿಕಾರವುಂಟಾದಾಗ ಸ್ಪರ್ಶತನ್ಮಾತ್ರೆಯು ಉಂಟಾಯಿತು ಮತ್ತು ಅದರಿಂದ ವಾಯು ಹಾಗೂ ಸ್ಪರ್ಶಗ್ರಹಣವನ್ನು ಮಾಡಿಸುವ ತ್ವಗಿಂದ್ರಿಯ (ತ್ವಚಾ)ವು ಉತ್ಪನ್ನವಾಯಿತು. ॥ ೩೫ ॥ ಕೋಮಲತೆ, ಕಠೋರತೆ, ಶೀತಲತೆ, ಉಷ್ಣತೆ ಮತ್ತು ವಾಯುವಿನಂತೆ ಸೂಕ್ಷ್ಮರೂಪವಾಗುವುದು – ಇವು ಸ್ಪರ್ಶದ ಲಕ್ಷಣಗಳಾಗಿವೆ. ॥ ೩೬ ॥ ಮರದ ಕೊಂಬೆಯೇ ಮುಂತಾದವುಗಳನ್ನು ಅಲ್ಲಾಡಿಸುವುದು, ಹುಲ್ಲು ಇತ್ಯಾದಿಗಳನ್ನು ಒಟ್ಟುಗೂಡಿಸುವುದು, ಎಲ್ಲೆಡೆಗೂ ತಲುಪುವುದು, ಗಂಧಾದಿಗಳಿಂದ ಕೂಡಿದ ದ್ರವ್ಯವನ್ನು ಘ್ರಾಣಾದಿ ಇಂದ್ರಿಯದ ಬಳಿಗೆ ಮತ್ತು ಶಬ್ದವನ್ನು ಶ್ರೋತ್ರೇಂದ್ರಿಯದ ಬಳಿಗೆ ಒಯ್ಯುವುದು ಹಾಗೂ ಎಲ್ಲ ಇಂದ್ರಿಯಗಳಿಗೆ ಕಾರ್ಯಶಕ್ತಿಯನ್ನು ಕೊಡುವುದು – ಇವು ವಾಯುವಿನ ವೃತ್ತಿಗಳ ಲಕ್ಷಣವಾಗಿವೆ. ॥ ೩೭ ॥

ಇದಾದ ನಂತರ ದೈವ ಪ್ರೇರಣೆಯಿಂದ ಸ್ಪರ್ಶತನ್ಮಾತ್ರೆಯಿಂದ ಕೂಡಿದ ವಾಯುವು ವಿಕಾರಗೊಂಡಾಗ ಅದರಿಂದ ರೂಪತನ್ಮಾತ್ರೆಯು ಉಂಟಾಯಿತು. ಅದರಿಂದ ತೇಜಸ್ಸೂ ಮತ್ತು ರೂಪವನ್ನು ಅರಿವಿಗೆ ತರುವ ನೇತ್ರೇಂದ್ರಿಯವೂ ಆವಿರ್ಭವಿಸಿದವು. ॥ ೩೮ ॥ ಎಲೈ ಸಾಧ್ವಿಯೇ! ವಸ್ತುವಿನ ಆಕಾರದ ಅರಿವನ್ನುಂಟು ಮಾಡುವುದು, ಗೌಣವಾಗುವುದು ಅಂದರೆ ದ್ರವ್ಯದ ಅಂಗರೂಪವಾಗಿ ಭಾಸವಾಗುವುದು, ದ್ರವ್ಯಕ್ಕೆ ಇರುವ ಆಕಾರ-ಪ್ರಕಾರ, ಪರಿಮಾಣ ಮುಂತಾದವುಗಳನ್ನು ಅದೇ ರೂಪದಲ್ಲಿ ಉಪಲಕ್ಷಿತವಾಗುವುದು ಹಾಗೂ ತೇಜಸ್ಸಿಗೆ ಸ್ವರೂಪಭೂತವಾಗುವುದು – ಇವೆಲ್ಲವೂ ರೂಪತನ್ಮಾತ್ರೆಯ ವೃತ್ತಿಗಳಾಗಿವೆ. ॥ ೩೯ ॥ ಹೊಳೆಯುವುದು, ಬೇಯಿಸುವುದು, ಚಳಿಯನ್ನು ಹೋಗಲಾಡಿಸುವುದು, ಒಣಗಿಸುವುದು, ಹಸಿವೆ-ಬಾಯಾರಿಕೆಗಳನ್ನು ಉಂಟುಮಾಡುವುದು ಮತ್ತು ಅವುಗಳನ್ನು ಕಳೆದುಕೊಳ್ಳಲು ಆಹಾರ-ಪಾನೀಯಗಳನ್ನು ಸೇವಿಸುವಂತೆ ಮಾಡುವುದು – ಇವು ತೇಜಸ್ಸಿನ ವೃತ್ತಿಗಳು. ॥ ೪೦ ॥

ರೂಪಮಾತ್ರಾದ್ವಿಕುರ್ವಾಣಾತ್ತೇಜಸೋ ದೈವಚೋದಿತಾತ್ ।
ರಸಮಾತ್ರಮಭೂತ್ತಸ್ಮಾದಂಭೋ ಜಿಹ್ವಾ ರಸಗ್ರಹಃ ॥ ೪೧ ॥

ಕಷಾಯೋ ಮಧುರಸ್ತಿಕ್ತಃ ಕಟ್ವಮ್ಲ ಇತಿ ನೈಕಧಾ ।
ಭೌತಿಕಾನಾಂ ವಿಕಾರೇಣ ರಸ ಏಕೋ ವಿಭಿದ್ಯತೇ ॥ ೪೨ ॥

ಕ್ಲೇದನಂ ಪಿಂಡನಂ ತೃಪ್ತಿಃ ಪ್ರಾಣನಾಪ್ಯಾಯನೋಂದನಮ್ ।
ತಾಪಾಪನೋದೋ ಭೂಯಸ್ತ್ವಮಂಭಸೋ ವೃತ್ತಯಸ್ತ್ವಿಮಾಃ ॥ ೪೩ ॥

ರಸಮಾತ್ರಾದ್ವಿಕುರ್ವಾಣಾದಂಭಸೋ ದೈವಚೋದಿತಾತ್ ।
ಗಂಧಮಾತ್ರಮಭೂತ್ತಸ್ಮಾತ್ಪೃಥ್ವೀ ಘ್ರಾಣಸ್ತು ಗಂಧಗಃ ॥ ೪೪ ॥

ಕರಂಭಪೂತಿಸೌರಭ್ಯಶಾಂತೋಗ್ರಾಮ್ಲಾದಿಭಿಃ ಪೃಥಕ್ ।
ದ್ರವ್ಯಾವಯವವೈಷಮ್ಯಾದ್ಗಂಧ ಏಕೋ ವಿಭಿದ್ಯತೇ ॥ ೪೫ ॥

ಭಾವನಂ ಬ್ರಹ್ಮಣಃ ಸ್ಥಾನಂ ಧಾರಣಂ ಸದ್ವಿಶೇಷಣಮ್ ।
ಸರ್ವಸತ್ತ್ವಗುಣೋದ್ಭೇದಃ ಪೃಥಿವೀವೃತ್ತಿಲಕ್ಷಣಮ್ ॥ ೪೬ ॥

ನಭೋಗುಣವಿಶೇಷೋಽರ್ಥೋ ಯಸ್ಯ ತಚ್ಛ್ರೋತ್ರಮುಚ್ಯತೇ ।
ವಾಯೋರ್ಗುಣವಿಶೇಷೋಽರ್ಥೋ ಯಸ್ಯ ತತ್ಸ್ಪರ್ಶನಂ ವಿದುಃ ॥ ೪೭ ॥

ತೇಜೋಗುಣವಿಶೇಷೋಽರ್ಥೋ ಯಸ್ಯ ತಚ್ಚಕ್ಷುರುಚ್ಯತೇ ।
ಅಂಭೋಗುಣವಿಶೇಷೋಽರ್ಥೋ ಯಸ್ಯ ತದ್ರಸನಂ ವಿದುಃ ।
ಭೂಮೇರ್ಗುಣವಿಶೇಷೋಽರ್ಥೋ ಯಸ್ಯ ಸ ಘ್ರಾಣ ಉಚ್ಯತೇ ॥ ೪೮ ॥

ಪರಸ್ಯ ದೃಶ್ಯತೇ ಧರ್ಮೋ ಹ್ಯಪರಸ್ಮಿನ್ಸಮನ್ವಯಾತ್ ।
ಅತೋ ವಿಶೇಷೋ ಭಾವಾನಾಂ ಭೂಮಾವೇವೋಪಲಕ್ಷ್ಯತೇ ॥ ೪೯ ॥

ಮತ್ತೆ ದೈವದ ಪ್ರೇರಣೆಯಿಂದ ರೂಪತನ್ಮಾತ್ರಮಯವಾದ ತೇಜಸ್ಸು ವಿಕಾರಗೊಳ್ಳಲು, ಅದರಿಂದ ರಸತನ್ಮಾತ್ರೆಯು ಉಂಟಾಯಿತು ಮತ್ತು ಅದರಿಂದ ಜಲ ಹಾಗೂ ರಸವನ್ನು ಗ್ರಹಣ ಮಾಡುವ ರಸನೇಂದ್ರಿಯ (ಜಿಹ್ವೆ)ವು ಉತ್ಪನ್ನವಾಯಿತು. ॥ ೪೧ ॥ ರಸವು ತನ್ನ ಶುದ್ಧಸ್ವರೂಪದಲ್ಲಿ ಒಂದೇ ಆಗಿದ್ದರೂ ಬೇರೆ ಭೌತಿಕ ಪದಾರ್ಥಗಳ ಸಂಯೋಗದಿಂದ ಅದು ಒಗರು, ಸಿಹಿ, ಕಾರ, ಕಹಿ, ಹುಳಿ, ಉಪ್ಪು ಮುಂತಾಗಿ ನಾನಾಪ್ರಕಾರವಾಗುವುದು. ॥ ೪೨ ॥ ಪದಾರ್ಥಗಳನ್ನು ನೆನೆಸಿ ಒದ್ದೆ ಮಾಡುವುದು, ಮಣ್ಣು ಮುಂತಾದವುಗಳನ್ನು ಮುದ್ದೆಯನ್ನಾಗಿಸುವುದು, ತೃಪ್ತಿಯನ್ನುಂಟುಮಾಡುವುದು, ಜೀವಂತವಾಗಿಡುವುದು, ಬಾಯಾರಿಕೆ ಹೋಗಲಾಡಿಸುವುದು, ಪದಾರ್ಥಗಳನ್ನು ಮೃದುವಾಗಿಸುವುದು, ತಾಪವನ್ನು ಶಮನಗೊಳಿಸುವುದು, ಬಾವಿಯೇ ಮುಂತಾದವುಗಳಿಂದ ತೆಗೆದರೂ ಅಲ್ಲಿ ಮತ್ತೆ-ಮತ್ತೆ ಪ್ರಕಟವಾಗುವುದು – ಇವು ಜಲದ ವೃತ್ತಿಗಳಾಗಿವೆ. ॥ ೪೩ ॥

ಇದಾದ ಬಳಿಕ ಭಗವತ್ಪ್ರೇರಣೆಯಿಂದ ರಸಸ್ವರೂಪವಾದ ಜಲವು ವಿಕಾರಗೊಳ್ಳಲು ಅದರಿಂದ ಗಂಧತನ್ಮಾತ್ರೆಯು ಉಂಟಾಯಿತು ಮತ್ತು ಅದರಿಂದ ಪೃಥ್ವಿಯೂ ಹಾಗೂ ಗಂಧವನ್ನು ಗ್ರಹಿಸುವ ಘ್ರಾಣೇಂದ್ರಿಯವೂ ಪ್ರಕಟಗೊಂಡಿತು. ॥ ೪೪ ॥ ಗಂಧವು ಒಂದೇ ಆಗಿದ್ದರೂ ಪರಸ್ಪರ ಬೆರೆತಿರುವ ದ್ರವ್ಯಭಾಗಗಳ ಹೆಚ್ಚು-ಕಡಿಮೆಯಿಂದ ಅದು ಮಿಶ್ರಗಂಧ, ದುರ್ಗಂಧ, ಸುಗಂಧ, ಮೃದು, ತೀವ್ರ, ಹುಳಿ ಮುಂತಾದ ನಾನಾ ಪ್ರಕಾರಗಳಾಗುವವು. ॥ ೪೫ ॥ ಪ್ರತಿಮಾದಿ ರೂಪದಿಂದ ಬ್ರಹ್ಮನ ಸಾಕಾರ ಭಾವನೆಗೆ ಆಶ್ರಯವಾಗುವಿಕೆ, ಜಲವೇ ಮುಂತಾದ ಕಾರಣ ತತ್ತ್ವಗಳಿಂದ ಭಿನ್ನವಾದ ಯಾವುದೇ ಆಶ್ರಯದ ಅಪೇಕ್ಷೆ ಇಲ್ಲದೆಯೇ ಇರುವುದು, ಜಲವೇ ಮುಂತಾದ ಬೇರೆ ಪದಾರ್ಥಗಳನ್ನು ಧರಿಸುವುದು, ಆಕಾಶಾದಿಗಳಿಗೆ ಅವಚ್ಛೇದಕವಾಗುವುದು – ಅಂದರೆ ಘಟಾಕಾಶ, ಮಠಾಕಾಶ ಮುಂತಾದ ಭೇದಗಳನ್ನು ಸಿದ್ಧಪಡಿಸುವುದು, ಹಾಗೂ ಪರಿಣಾಮ ವಿಶೇಷದಿಂದ ಸರ್ವಪ್ರಾಣಿಗಳ ಸ್ತ್ರೀತ್ವ – ಪುರುಷತ್ವ ಮುಂತಾದ ಗುಣಗಳನ್ನು ಪ್ರಕಟಪಡಿಸುವುದು – ಇವು ಪೃಥಿವಿಯ ಕಾರ್ಯರೂಪೀ ಲಕ್ಷಣಗಳು. ॥ ೪೬ ॥

ಆಕಾಶದ ವಿಶೇಷ ಗುಣವಾದ ಶಬ್ದವನ್ನು ಗ್ರಹಿಸುವುದೇ ಶ್ರೋತ್ರೇಂದ್ರಿಯವೆನಿಸುವುದು. ವಾಯುವಿನ ವಿಶೇಷಗುಣವಾದ ಸ್ಪರ್ಶವನ್ನೇ ವಿಷಯವಾಗಿರುವುದು ತ್ವಕ್ (ಚರ್ಮ) ಇಂದ್ರಿಯವು. ॥ ೪೭ ॥ ತೇಜದ ವಿಶೇಷಗುಣವಾದ ರೂಪವನ್ನೇ ವಿಷಯವಾಗಿರುವ ಇಂದ್ರಿಯವೇ ನೇತ್ರೇಂದ್ರಿಯ. ಜಲದ ವಿಶೇಷಗುಣವಾದ ರಸವನ್ನೇ ವಿಷಯವನ್ನಾಗಿ ಹೊಂದಿರುವ ಇಂದ್ರಿಯವು ರಸನೇಂದ್ರಿಯ(ನಾಲಿಗೆ)ವಾಗಿದೆ. ಪೃಥಿವಿಯ ವಿಶೇಷಗುಣವಾದ ಗಂಧವನ್ನೇ ವಿಷಯವಾಗಿರುವ ಇಂದ್ರಿಯವು ಘ್ರಾಣೇಂದ್ರಿಯ (ಮೂಗು) ಎಂದು ತಿಳಿಯುತ್ತಾರೆ. ॥ ೪೮ ॥ ವಾಯುವೇ ಮುಂತಾದ ಕಾರ್ಯತತ್ತ್ವಗಳಲ್ಲಿ ಆಕಾಶಾದಿ ಕಾರಣತತ್ತ್ವಗಳು ಇರುವುದರಿಂದ ಅವುಗಳ ಗುಣಗಳೂ ಅನುಸರಿಸಿ ಬಂದಿರುವುದು ನೋಡಲಾಗುತ್ತದೆ. ಆದ್ದರಿಂದ ಸಮಸ್ತ ಮಹಾಭೂತಗಳ ಗುಣ-ಶಬ್ದ, ಸ್ಪರ್ಶ, ರೂಪ, ರಸ, ಗಂಧ ಕೇವಲ ಪೃಥ್ವಿಯಲ್ಲೇ ದೊರೆಯುತ್ತವೆ. ॥ ೪೯ ॥

ಏತಾನ್ಯಸಂಹತ್ಯ ಯದಾ ಮಹದಾದೀನಿ ಸಪ್ತ ವೈ ।
ಕಾಲಕರ್ಮಗುಣೋಪೇತೋ ಜಗದಾದಿರುಪಾವಿಶತ್ ॥ ೫೦ ॥

ತತಸ್ತೇನಾನುವಿದ್ಧೇಭ್ಯೋ ಯುಕ್ತೇಭ್ಯೋಽಂಡಮಚೇತನಮ್ ।
ಉತ್ಥಿತಂ ಪುರುಷೋ ಯಸ್ಮಾದುದತಿಷ್ಠದಸೌ ವಿರಾಟ್ ॥ ೫೧ ॥

ಏತದಂಡಂ ವಿಶೇಷಾಖ್ಯಂ ಕ್ರಮವೃದ್ಧೈರ್ದಶೋತ್ತರೈಃ ।
ತೋಯಾದಿಭಿಃ ಪರಿವೃತಂ ಪ್ರಧಾನೇನಾವೃತೈರ್ಬಹಿಃ ।
ಯತ್ರ ಲೋಕವಿತಾನೋಽಯಂ ರೂಪಂ ಭಗವತೋ ಹರೇಃ ॥ ೫೨ ॥

ಹಿರಣ್ಮಯಾದಂಡಕೋಶಾದುತ್ಥಾಯ ಸಲಿಲೇಶಯಾತ್ ।
ತಮಾವಿಶ್ಯ ಮಹಾದೇವೋ ಬಹುಧಾ ನಿರ್ಬಿಭೇದ ಖಮ್ ॥ ೫೩ ॥

ನಿರಭಿದ್ಯತಾಸ್ಯ ಪ್ರಥಮಂ ಮುಖಂ ವಾಣೀ ತತೋಽಭವತ್ ।
ವಾಣ್ಯಾ ವಹ್ನಿರಥೋ ನಾಸೇ ಪ್ರಾಣೋಽತೋ ಘ್ರಾಣ ಏತಯೋಃ ॥ ೫೪ ॥

ಘ್ರಾಣಾದ್ವಾಯುರಭಿದ್ಯೇತಾಮಕ್ಷಿಣೀ ಚಕ್ಷುರೇತಯೋಃ ।
ತಸ್ಮಾತ್ಸೂರ್ಯೋ ವ್ಯಭಿದ್ಯೇತಾಂ ಕರ್ಣೌ ಶ್ರೋತ್ರಂ ತತೋ ದಿಶಃ ॥ ೫೫ ॥

ನಿರ್ಬಿಭೇದ ವಿರಾಜಸ್ತ್ವಗ್ ರೋಮಶ್ಮಶ್ರ್ವಾದಯಸ್ತತಃ ।
ತತ ಓಷಧಯಶ್ಚಾಸನ್ ಶಿಶ್ನಂ ನಿರ್ಬಿಭಿದೇ ತತಃ ॥ ೫೬ ॥

ರೇತಸ್ತಸ್ಮಾದಾಪ ಆಸನ್ನಿರಭಿದ್ಯತ ವೈ ಗುದಮ್ ।
ಗುದಾದಪಾನೋಽಪಾನಾಚ್ಚ ಮೃತ್ಯುರ್ಲೋಕಭಯಂಕರಃ ॥ ೫೭ ॥

ಹಸ್ತೌ ಚ ನಿರಭಿದ್ಯೇತಾಂ ಬಲಂ ತಾಭ್ಯಾಂ ತತಃ ಸ್ವರಾಟ್ ।
ಪಾದೌ ಚ ನಿರಭಿದ್ಯೇತಾಂ ಗತಿಸ್ತಾಭ್ಯಾಂ ತತೋ ಹರಿಃ ॥ ೫೮ ॥

ಮಹತ್ತತ್ತ್ವ, ಅಹಂಕಾರ ಮತ್ತು ಪಂಚಭೂತ – ಈ ಏಳು ತತ್ತ್ವಗಳು ಪರಸ್ಪರ ಸೇರಿಕೊಳ್ಳದೆ ಬೇರೆ-ಬೇರೆಯಾಗಿದ್ದಾಗ ಜಗತ್ತಿನ ಆದಿಕಾರಣನಾದ ಶ್ರೀಮನ್ನಾರಾಯಣನು ಕಾಲ, ಅದೃಷ್ಟ ಮತ್ತು ಸತ್ತ್ವಾದಿಗುಣಗಳೊಂದಿಗೆ ಅವುಗಳಲ್ಲಿ ಪ್ರವೇಶಿಸಿದನು. ॥ ೫೦ ॥

ಅನಂತರ ಪರಮಾತ್ಮನ ಪ್ರವೇಶದಿಂದ ಕ್ಷೋಭೆಗೊಂಡು ಒಂದರೊಡನೊಂದು ಬೆರೆತುಕೊಂಡ ಆ ತತ್ತ್ವಗಳಿಂದ ಒಂದು ಜಡವಾದ ಅಂಡವು ಉತ್ಪನ್ನವಾಯಿತು. ಆ ಅಂಡದಿಂದಲೇ ಈ ವಿರಾಟ್ ಪುರುಷನು ಅಭಿವ್ಯಕ್ತಗೊಂಡನು. ॥ ೫೧ ॥ ಆ ಅಂಡದ ಹೆಸರು 'ವಿಶೇಷ' ಎಂದಾಗಿದೆ. ಇದರೊಳಗೆ ಇದ್ದ ಶ್ರೀಹರಿಯ ಸ್ವರೂಪಭೂತ ಹದಿನಾಲ್ಕು ಭುವನಗಳ ವಿಸ್ತಾರವಿದೆ. ಇದು ನಾಲ್ಕು ಕಡೆಗಳಿಂದ ಕ್ರಮವಾಗಿ ಒಂದು ಮತ್ತೊಂದಕ್ಕೆ ಹತ್ತರಷ್ಟು ಇರುವ ಜಲ, ಅಗ್ನಿ, ವಾಯು, ಆಕಾಶ, ಅಹಂಕಾರ ಮತ್ತು ಮಹತ್ತತ್ತ್ವ – ಎಂಬ ಆರು ಆವರಣಗಳಿಂದ ಕೂಡಿದೆ. ಇವೆಲ್ಲದರ ಹೊರಗೆ ಏಳನೆಯ ಆವರಣ ಪ್ರಕೃತಿಯದಾಗಿದೆ. ॥ ೫೨ ॥ ಅನಂತರ ಕಾರಣಮಯವಾದ ನೀರಿನಲ್ಲಿದ್ದ ಆ ತೇಜೋಮಯ ಅಂಡದಿಂದ ಮೇಲಕ್ಕೆದ್ದು ವಿರಾಟ್ಪುರುಷನು ಪುನಃ ಅದರಲ್ಲಿ ಪ್ರವೇಶಮಾಡಿದನು ಮತ್ತು ಅದರಲ್ಲಿ ಹಲವು ಬಗೆಯ ಛಿದ್ರಗಳನ್ನು ಮಾಡಿದನು. ॥ ೫೩ ॥ ಎಲ್ಲಕ್ಕಿಂತ ಮೊದಲು ಅದರಲ್ಲಿ ಬಾಯಿಯು ಪ್ರಕಟಗೊಂಡಿತು. ಅದರಲ್ಲಿ ವಾಗಿಂದ್ರಿಯವಾದ ನಾಲಿಗೆಯೂ ಮತ್ತು ಅನಂತರ ಅದರ ಅಧಿಷ್ಠಾನದೇವತೆಯೂ ಆದ ಅಗ್ನಿಯು ಉತ್ಪನ್ನವಾಯಿತು. ಮತ್ತೆ ಮೂಗಿನಹೊಳ್ಳೆಗಳು ಪ್ರಕಟ ಗೊಂಡವು. ಅದರಿಂದ ಪ್ರಾಣಸಹಿತ ಘ್ರಾಣೇಂದ್ರಿಯವು ಉತ್ಪತ್ತಿಯಾಯಿತು. ॥ ೫೪ ॥ ಘ್ರಾಣೇಂದ್ರಿಯದ ಬಳಿಕ ಅದರ ಅಧಿಷ್ಠಾತೃ ವಾಯುವು ಉತ್ಪನ್ನವಾಯಿತು. ಆಮೇಲೆ ಕಣ್ಣಿನ ಗೋಳಗಳು ಪ್ರಕಟಗೊಂಡವು. ಅದರಿಂದ ನೇತ್ರೇಂದ್ರಿಯವು ಪ್ರಕಟವಾಗಿ, ಮತ್ತೆ ಅದರ ಅಧಿಷ್ಠಾತೃದೇವತೆಯಾದ ಸೂರ್ಯನು ಉತ್ಪನ್ನನಾದನು. ಅನಂತರ ಕಿವಿಗಳ ರಂಧ್ರಗಳು ಪ್ರಕಟಗೊಂಡವು. ಅವುಗಳಿಂದ ಅವುಗಳ ಇಂದ್ರಿಯವಾದ ಶ್ರೋತ್ರ ಮತ್ತು ಅದರ ಅಭಿಮಾನಿದೇವತೆಯಾದ ದಿಗ್ದೇವತೆಯೂ ಪ್ರಕಟಗೊಂಡಿತು. ॥ ೫೫ ॥ ಅನಂತರ ಈ ವಿರಾಟ್‌ಪುರುಷನ ತ್ವಚೆ ಉಂಟಾಯಿತು. ಅದರಿಂದ ಮೈಗೂದಲು, ಗಡ್ಡ-ಮೀಸೆಗಳು, ತಲೆಗೂದಲುಗಳು ಆವಿರ್ಭವಿಸಿದವು. ಅನಂತರ ತ್ವಚೆಯ ಅಭಿಮಾನೀ ಓಷಧಿ (ಅನ್ನ ಮುಂತಾದವು) ಗಳು ಉತ್ಪನ್ನವಾದವು. ಇದಾದ ಬಳಿಕ ಲಿಂಗವು ಪ್ರಕಟಗೊಂಡಿತು. ॥ ೫೬ ॥ ಅದರಿಂದ ವೀರ್ಯ ಮತ್ತು ವೀರ್ಯದಿಂದ ಲಿಂಗದ ಅಭಿಮಾನಿ ದೇವತೆಯಾದ ಆಪೋ (ಜಲ) ದೇವತೆಯೂ ಉತ್ಪನ್ನವಾಯಿತು. ಮತ್ತೆ ಗುದವು ಪ್ರಕಟಗೊಂಡು, ಅದರಿಂದ ಅಪಾನವಾಯುವೂ ಮತ್ತು ಅಪಾನವಾಯುವಿನ ಬಳಿಕ ಅದರ ಅಭಿಮಾನಿಯಾದ ಲೋಕಗಳಲ್ಲಿ ಭಯವನ್ನುಂಟುಮಾಡುವ ಮೃತ್ಯುದೇವತೆ ಕಾಣಿಸಿಕೊಂಡಿತು. ॥ ೫೭ ॥ ಅದಾದಮೇಲೆ ಹಸ್ತ(ಕೈ)ಗಳು ಪ್ರಕಟಗೊಂಡವು. ಅದರಿಂದ ಬಲ ಮತ್ತು ಬಲದ ಬಳಿಕ ಹಸ್ತೇಂದ್ರಿಯದ ಅಭಿಮಾನಿ ಇಂದ್ರನು ಉತ್ಪನ್ನನಾದನು. ಮತ್ತೆ ಚರಣ (ಕಾಲು) ಗಳು ಪ್ರಕಟಗೊಂಡವು. ಅವುಗಳಿಂದ ನಡೆ ಎಂಬ ಕ್ರಿಯೆಯೂ, ಪಾದೇಂದ್ರಿಯವೂ, ಅದರ ಅಭಿಮಾನಿಯಾದ ವಿಷ್ಣು ದೇವತೆಯೂ ಪ್ರಕಟಗೊಂಡನು. ॥ ೫೮ ॥

ನಾಡ್ಯೋಽಸ್ಯ ನಿರಭಿದ್ಯಂತ ತಾಭ್ಯೋ ಲೋಹಿತಮಾಭೃತಮ್ ।
ನದ್ಯಸ್ತತಃ ಸಮಭವನ್ನುದರಂ ನಿರಭಿದ್ಯತ ॥ ೫೯ ॥

ಕ್ಷುತ್ಪಿಪಾಸೇ ತತಃ ಸ್ಯಾತಾಂ ಸಮುದ್ರಸ್ತ್ವೇತಯೋರಭೂತ್ ।
ಅಥಾಸ್ಯ ಹೃದಯಂ ಭಿನ್ನಂ ಹೃದಯಾನ್ಮನ ಉತ್ಥಿತಮ್ ॥ ೬೦ ॥

ಮನಸಶ್ಚಂದ್ರಮಾ ಜಾತೋ ಬುದ್ಧಿರ್ಬುದ್ಧೇರ್ಗಿರಾಂ ಪತಿಃ ।
ಅಹಂಕಾರಸ್ತತೋ ರುದ್ರಶ್ಚಿತ್ತಂ ಚೈತ್ಯಸ್ತತೋಽಭವತ್ ॥ ೬೧ ॥

ಏತೇ ಹ್ಯಭ್ಯುತ್ಥಿತಾ ದೇವಾ ನೈವಾಸ್ಯೋತ್ಥಾಪನೇಽಶಕನ್ ।
ಪುನರಾವಿವಿಶುಃ ಖಾನಿ ತಮುತ್ಥಾಪಯಿತುಂ ಕ್ರಮಾತ್ ॥ ೬೨ ॥

ವಹ್ನಿರ್ವಾಚಾ ಮುಖಂ ಭೇಜೇ ನೋದತಿಷ್ಠತ್ತದಾ ವಿರಾಟ್ ।
ಘ್ರಾಣೇನ ನಾಸಿಕೇ ವಾಯುರ್ನೋದತಿಷ್ಠತ್ತದಾ ವಿರಾಟ್ ॥ ೬೩ ॥

ಅಕ್ಷಿಣೀ ಚಕ್ಷುಷಾಽಽದಿತ್ಯೋ ನೋದತಿಷ್ಠತ್ತದಾ ವಿರಾಟ್ ।
ಶ್ರೋತ್ರೇಣ ಕರ್ಣೌ ಚ ದಿಶೋ ನೋದತಿಷ್ಠತ್ತದಾ ವಿರಾಟ್ ॥ ೬೪ ॥

ತ್ವಚಂ ರೋಮಭಿರೋಷಧ್ಯೋ ನೋದತಿಷ್ಠತ್ತದಾ ವಿರಾಟ್ ।
ರೇತಸಾ ಶಿಶ್ನಮಾಪಸ್ತು ನೋದತಿಷ್ಠತ್ತದಾ ವಿರಾಟ್ ॥ ೬೫ ॥

ಗುದಂ ಮೃತ್ಯುರಪಾನೇನ ನೋದತಿಷ್ಠತ್ತದಾ ವಿರಾಟ್ ।
ಹಸ್ತಾವಿಂದ್ರೋ ಬಲೇನೈವ ನೋದತಿಷ್ಠತ್ತದಾ ವಿರಾಟ್ ॥ ೬೬ ॥

ವಿಷ್ಣುರ್ಗತ್ಯೈವ ಚರಣೌ ನೋದತಿಷ್ಠತ್ತದಾ ವಿರಾಟ್ ।
ನಾಡೀರ್ನದ್ಯೋ ಲೋಹಿತೇನ ನೋದತಿಷ್ಠತ್ತದಾ ವಿರಾಟ್ ॥ ೬೭ ॥

ಕ್ಷುತ್ತೃಡ್ಭ್ಯಾಮುದರಂ ಸಿಂಧುರ್ನೋದತಿಷ್ಠತ್ತದಾ ವಿರಾಟ್ ।
ಹೃದಯಂ ಮನಸಾ ಚಂದ್ರೋ ನೋದತಿಷ್ಠತ್ತದಾ ವಿರಾಟ್ ॥ ೬೮ ॥

ಬುದ್ಧ್ಯಾ ಬ್ರಹ್ಮಾಪಿ ಹೃದಯಂ ನೋದತಿಷ್ಠತ್ತದಾ ವಿರಾಟ್ ।
ರುದ್ರೋಽಭಿಮತ್ಯಾ ಹೃದಯಂ ನೋದತಿಷ್ಠತ್ತದಾ ವಿರಾಟ್ ॥ ೬೯ ॥

ಹೀಗೆಯೇ ವಿರಾಟ್ ಪುರುಷನ ನಾಡಿಗಳು ಪ್ರಕಟಗೊಂಡಾಗ ಅವುಗಳಿಂದ ರಕ್ತವೂ ಉತ್ಪನ್ನವಾಯಿತು ಮತ್ತು ಅದರಿಂದ ನದಿಗಳು ಆವಿರ್ಭವಿಸಿದವು. ಮತ್ತೆ ಅವನ ಹೊಟ್ಟೆಯು ಪ್ರಕಟವಾಯಿತು. ॥ ೫೯ ॥ ಅದರಿಂದ ಹಸಿವು-ಬಾಯಾರಿಕೆಗಳು ಕಾಣಿಸಿಕೊಂಡವು. ಬಳಿಕ ಉದರದ ಅಭಿಮಾನಿ ಸಮುದ್ರದೇವತೆ ಉತ್ಪನ್ನವಾಯಿತು. ಅನಂತರ ಬಳಿಕ ಅವನ ಹೃದಯು ಪ್ರಕಟವಾಯಿತು. ಅದರಿಂದ ಮನಸ್ಸಿನ ಪ್ರಾಕಟ್ಯವಾಯಿತು. ॥ ೬೦ ॥ ಮನಸ್ಸಿನ ಬಳಿಕ ಅದರ ಅಭಿಮಾನಿದೇವತೆ ಚಂದ್ರನು ಉಂಟಾದನು. ಮತ್ತೆ ಹೃದಯದಿಂದಲೇ ಬುದ್ಧಿಯೂ, ಅದರ ಅಭಿಮಾನೀ ದೇವತೆ ಯಾದ ಬ್ರಹ್ಮನೂ ಕಾಣಿಸಿಕೊಂಡನು. ಅನಂತರ ಅಹಂಕಾರವೂ, ಅದರ ಅಭಿಮಾನಿ ರುದ್ರದೇವತೆಯೂ ಉತ್ಪನ್ನವಾಯಿತು. ಇವಾದಬಳಿಕ ಚಿತ್ತ ಮತ್ತು ಅದರ ಅಭಿಮಾನಿ ಕ್ಷೇತ್ರಜ್ಞನು ಪ್ರಕಟನಾದನು. ॥ ೬೧ ॥

ಈ ಕ್ಷೇತ್ರಜ್ಞನನ್ನು ಬಿಟ್ಟು ಇತರ ಎಲ್ಲ ದೇವತೆಗಳು ಉತ್ಪನ್ನರಾದರೂ ಕೂಡ ವಿರಾಟ್‌ಪುರುಷನನ್ನು ಎಬ್ಬಿಸಲು ಅಸಮರ್ಥರಾದಾಗ, ಅವನನ್ನು ಎಬ್ಬಿಸಲು ಅವರು ಕ್ರಮವಾಗಿ ಮತ್ತೆ ತಮ್ಮ-ತಮ್ಮ ಉತ್ಪತ್ತಿಸ್ಥಾನಗಳಲ್ಲಿ ಪ್ರವೇಶಮಾಡಿದರು. ॥ ೬೨ ॥ ಅಗ್ನಿಯು ವಾಣಿಯೊಂದಿಗೆ ಬಾಯೊಳಗೆ ಪ್ರವೇಶಿಸಿದನು. ಆದರೆ ಇದರಿಂದ ವಿರಾಟ್‌ಪುರುಷನು ಏಳಲಿಲ್ಲ. ವಾಯುವು ಘ್ರಾಣೇಂದ್ರಿಯ ಸಹಿತ ಮೂಗಿನಹೊಳ್ಳೆಗಳಲ್ಲಿ ಪ್ರವೇಶಿಸಿದನು. ಆದರೂ ವಿರಾಟ್‌ಪುರುಷನು ಏಳಲಿಲ್ಲ. ॥ ೬೩ ॥ ಸೂರ್ಯನು ಚಕ್ಷುಗಳೊಂದಿಗೆ ನೇತ್ರಗಳಲ್ಲಿ ಪ್ರವೇಶಿಸಿದನು. ಆದರೂ ವಿರಾಟ್ ಪುರುಷನು ಏಳಲಿಲ್ಲ. ದಿಕ್ಕುಗಳು ಶ್ರವಣೇಂದ್ರಿಯ ಸಹಿತ ಕಿವಿಯಲ್ಲಿ ಪ್ರವೇಶಿಸಿದವು. ಆದರೂ ವಿರಾಟ್‌ಪುರುಷನು ಏಳಲಿಲ್ಲ. ॥ ೬೪ ॥ ಓಷಧಿಗಳು ರೋಮಗಳೊಡನೆ ತ್ವಚೆಯಲ್ಲಿ ಪ್ರವೇಶಿಸಿದವು. ಆಗಲೂ ವಿರಾಟ್‌ಪುರುಷನು ಏಳಲಿಲ್ಲ. ಜಲವು ವೀರ್ಯದೊಂದಿಗೆ ಲಿಂಗದಲ್ಲಿ ಪ್ರವೇಶಿಸಿತು. ಆಗಲೂ ವಿರಾಟ್‌ಪುರುಷನು ಏಳಲಿಲ್ಲ. ॥ ೬೫ ॥ ಮೃತ್ಯುವು ಅಪಾನದೊಂದಿಗೆ ಗುದದೊಳಗೆ ಪ್ರವೇಶಿಸಿತು. ಆದರೂ ವಿರಾಟ್‌ಪುರುಷನು ಏಳಲಿಲ್ಲ. ಇಂದ್ರನು ಬಲದೊಂದಿಗೆ ಕೈಗಳಲ್ಲಿ ಪ್ರವೇಶಿಸಿದನು. ಆದರೂ ವಿರಾಟ್‌ಪುರುಷನು ಏಳಲಿಲ್ಲ. ॥ ೬೬ ॥ ವಿಷ್ಣುದೇವರು ಗತಿಯೊಡನೆ ಚರಣಗಳಲ್ಲಿ ಹೊಕ್ಕರೂ ವಿರಾಟ್‌ಪುರುಷನು ಏಳಲಿಲ್ಲ. ನದಿಗಳು ರಕ್ತದೊಡನೆ ನಾಡಿಗಳಲ್ಲಿ ಪ್ರವೇಶಿಸಿದರೂ ವಿರಾಟ್‌ಪುರುಷನು ಏಳಲಿಲ್ಲ. ॥ ೬೭ ॥ ಸಮುದ್ರವು ಹಸಿವು-ಬಾಯಾರಿಕೆಗಳೊಂದಿಗೆ ಉದರದಲ್ಲಿ ಪ್ರವೇಶಮಾಡಿತು. ಆದರೂ ವಿರಾಟ್‌ಪುರುಷನು ಏಳಲಿಲ್ಲ. ಚಂದ್ರನು ಮನಸ್ಸಿನ ಸಹಿತ ಹೃದಯದಲ್ಲಿ ಹೊಕ್ಕರೂ ವಿರಾಟ್‌ಪುರುಷನು ಏಳಲಿಲ್ಲ. ॥ ೬೮ ॥ ಬ್ರಹ್ಮದೇವರು ಬುದ್ಧಿಯಸಹಿತ ಹೃದಯದಲ್ಲಿ ಪ್ರವೇಶಿಸಿದನು ಆಗಲೂ ವಿರಾಟ್‌ಪುರುಷನು ಏಳಲಿಲ್ಲ. ರುದ್ರದೇವರು ಅಹಂಕಾರದೊಂದಿಗೆ ಅದೇ ಹೃದಯದಲ್ಲಿ ಪ್ರವೇಶಿಸಿದರೂ ವಿರಾಟ್‌ಪುರುಷನು ಏಳಲಿಲ್ಲ. ॥ ೬೯ ॥

ಚಿತ್ತೇನ ಹೃದಯಂ ಚೈತ್ಯಃ ಕ್ಷೇತ್ರಜ್ಞಃ ಪ್ರಾವಿಶದ್ಯದಾ ।
ವಿರಾಟ್ ತದೈವ ಪುರುಷಃ ಸಲಿಲಾದುದತಿಷ್ಠತ ॥ ೭೦ ॥

ಯಥಾ ಪ್ರಸುಪ್ತಂ ಪುರುಷಂ ಪ್ರಾಣೇಂದ್ರಿಯಮನೋಧಿಯಃ ।
ಪ್ರಭವಂತಿ ವಿನಾ ಯೇನ ನೋತ್ಥಾಪಯಿತುಮೋಜಸಾ ॥ ೭೧ ॥

ತಮಸ್ಮಿನ್ಪ್ರತ್ಯಗಾತ್ಮಾನಂ ಧಿಯಾ ಯೋಗಪ್ರವೃತ್ತಯಾ ।
ಭಕ್ತ್ಯಾ ವಿರಕ್ತ್ಯಾ ಜ್ಞಾನೇನ ವಿವಿಚ್ಯಾತ್ಮನಿ ಚಿಂತಯೇತ್ ॥ ೭೨ ॥

ಆದರೆ ಚಿತ್ತದ ಅಧಿಷ್ಠಾತೃ ಕ್ಷೇತ್ರಜ್ಞನು ಚಿತ್ತದೊಂದಿಗೆ ಹೃದಯದಲ್ಲಿ ಪ್ರವೇಶಿಸಿದಾಗ ವಿರಾಟ್‌ಪುರುಷನು ಒಡನೆಯೇ ಜಲದಿಂದ ಮೇಲೆದ್ದು ನಿಂತುಕೊಂಡನು. ॥ ೭೦ ॥ ಲೋಕದಲ್ಲಿ ನಿದ್ರಿಸುತ್ತಿರುವ ಪ್ರಾಣಿಯನ್ನು - ಪ್ರಾಣ, ಇಂದ್ರಿಯಗಳು, ಮನಸ್ಸು, ಬುದ್ಧಿ ಮುಂತಾದವುಗಳೂ - ಚಿತ್ತದ ಅಧಿಷ್ಠಾತೃವಾಗಿರುವ ಕ್ಷೇತ್ರಜ್ಞನ ಸಹಾಯವಿಲ್ಲದೆ ತಮ್ಮ ಬಲದಿಂದ ಎಬ್ಬಿಸಲಾರವೋ, ಹಾಗೆಯೇ ವಿರಾಟ್‌ಪುರುಷನನ್ನೂ ಕೂಡ ಅವರು ಕ್ಷೇತ್ರಜ್ಞನಾದ ಪರಮಾತ್ಮನಲ್ಲದೆ ಎಬ್ಬಿಸಲು ಅಸಮರ್ಥರಾದುವು. ॥ ೭೧ ॥ ಆದ್ದರಿಂದ ಭಕ್ತಿ, ವೈರಾಗ್ಯ ಮತ್ತು ಚಿತ್ತದ ಏಕಾಗ್ರತೆಯಿಂದ ಪ್ರಕಟಗೊಂಡ ಜ್ಞಾನದ ಮೂಲಕ ಆ ಅಂತರಾತ್ಮಸ್ವರೂಪನಾದ ಕ್ಷೇತ್ರಜ್ಞನು ಈ ಶರೀರದಲ್ಲಿ ಇದ್ದರೂ ಇದರಿಂದ ನಿರ್ಲಿಪ್ತನೆಂದು ತಿಳಿದುಕೊಂಡು ಅವನನ್ನು ಚಿಂತಿಸಬೇಕು. ॥ ೭೨ ॥

ಇಪ್ಪತ್ತಾರನೆಯ ಅಧ್ಯಾಯವು ಮುಗಿಯಿತು. ॥ ೨೬ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ತೃತೀಯಸ್ಕಂಧೇ
ಕಾಪಿಲೇಯೇ ತತ್ತ್ವಸಮಾಮ್ನಾಯೇ ಷಡ್ವಿಂಶೋಽಧ್ಯಾಯಃ ॥ ೨೬ ॥

ಇಪ್ಪತ್ತೇಳನೆಯ ಅಧ್ಯಾಯ

ಪ್ರಕೃತಿ-ಪುರುಷರ ವಿವೇಕದಿಂದ ಮೋಕ್ಷಪ್ರಾಪ್ತಿಯ ವರ್ಣನೆ

ಶ್ರೀಭಗವಾನುವಾಚ

ಪ್ರಕೃತಿಸ್ಥೋಽಪಿ ಪುರುಷೋ ನಾಜ್ಯತೇ ಪ್ರಾಕೃತೈರ್ಗುಣೈಃ ।
ಅವಿಕಾರಾದಕರ್ತೃತ್ವಾನ್ನಿರ್ಗುಣತ್ವಾಜ್ಜಲಾರ್ಕವತ್ ॥ ೧ ॥

ಸ ಏಷ ಯರ್ಹಿ ಪ್ರಕೃತೇರ್ಗುಣೇಷ್ವಭಿವಿಷಜ್ಜತೇ ।
ಅಹಂಕ್ರಿಯಾವಿಮೂಢಾತ್ಮಾ ಕರ್ತಾಸ್ಮೀತ್ಯಭಿಮನ್ಯತೇ ॥ ೨ ॥

ತೇನ ಸಂಸಾರಪದವೀಮವಶೋಽಭ್ಯೇತ್ಯನಿರ್ವೃತಃ ।
ಪ್ರಾಸಂಗಿಕೈಃ ಕರ್ಮದೋಷೈಃ ಸದಸನ್ಮಿಶ್ರಯೋನಿಷು ॥ ೩ ॥

ಅರ್ಥೇ ಹ್ಯವಿದ್ಯಮಾನೇಽಪಿ ಸಂಸೃತಿರ್ನ ನಿವರ್ತತೇ ।
ಧ್ಯಾಯತೋ ವಿಷಯಾನಸ್ಯ ಸ್ವಪ್ನೇಽನರ್ಥಾಗಮೋ ಯಥಾ ॥ ೪ ॥

ಶ್ರೀಕಪಿಲಭಗವಂತನು ಹೇಳುತ್ತಾನೆ - ಹೇಗೆ ಸೂರ್ಯನು ನೀರಿನಲ್ಲಿ ಪ್ರತಿಬಿಂಬಿಸಿದಾಗ ಆ ಪ್ರತಿಬಿಂಬದಲ್ಲಿ ನೀರಿನಲ್ಲಿರುವ ಶೈತ್ಯ, ಚಂಚಲತೆ ಮುಂತಾದ ಗುಣಗಳು ಅಂಟಿಕೊಳ್ಳದಂತೆ, ಆತ್ಮನು ಪ್ರಕೃತಿಯ ಕಾರ್ಯವಾದ ಶರೀರದಲ್ಲಿ ಇದ್ದರೂ ಅದರ ಗುಣಗಳಾದ ಸುಖ-ದುಃಖಾದಿಗಳಿಂದ ವಾಸ್ತವವಾಗಿ ಲಿಪ್ತನಾಗುವುದಿಲ್ಲ. ಏಕೆಂದರೆ, ಅವನು ಸ್ವಭಾವದಿಂದಲೇ ನಿರ್ವಿಕಾರನೂ, ಅಕರ್ತನೂ, ನಿರ್ಗುಣನೂ ಆಗಿರುವನು. ॥ ೧ ॥ ಆದರೆ ಅವನೇ ಪ್ರಾಕೃತಗುಣಗಳೊಂದಿಗೆ ತನ್ನ ಸಂಬಂಧವನ್ನು ಸ್ಥಾಪಿಸಿಕೊಂಡಾಗ ಅಹಂಕಾರದಿಂದ ಮೋಹಿತನಾಗಿ - 'ನಾನು ಕರ್ತಾ ಆಗಿದ್ದೇನೆ' ಎಂದು ಭಾವಿಸತೊಡಗುತ್ತಾನೆ. ॥ ೨ ॥ ಆ ಅಭಿಮಾನದ ಕಾರಣದಿಂದಲೇ ಅವನು ದೇಹದ ಸಂಸರ್ಗದಿಂದ ಮಾಡಲಾದ ಪುಣ್ಯ- ಪಾಪರೂಪವಾದ ಕರ್ಮಗಳ ದೋಷದಿಂದ ತನ್ನ ಸ್ವಾಧೀನತೆಯನ್ನೂ, ಶಾಂತಿಯನ್ನೂ ಕಳೆದುಕೊಂಡು, ಉತ್ತಮ, ಮಧ್ಯಮ, ನೀಚ ಯೋನಿಗಳಲ್ಲಿ ಜನ್ಮತಳೆದು ಸಂಸಾರಚಕ್ರದಲ್ಲಿ ಸುತ್ತುತ್ತಿರುವನು. ॥ ೩ ॥ ಸ್ವಪ್ನದಲ್ಲಿ ಭಯ-ಶೋಕಾದಿಗಳಿಗೆ ಯಾವುದೇ ಕಾರಣವಿಲ್ಲದಿದ್ದರೂ ಸ್ವಪ್ನದ ಪದಾರ್ಥಗಳಲ್ಲಿ ಆಸ್ಥೆಯು ಉಂಟಾದ ಕಾರಣ ದುಃಖವನ್ನು ಅನುಭವಿಸಬೇಕಾಗುತ್ತದೆ. ಹಾಗೆಯೇ ಭಯ-ಶೋಕ, ಅಹಂಕಾರ-ಮಮಕಾರ, ಮತ್ತು ಜನ್ಮ-ಮರಣ ಮುಂತಾದ ಸಂಸಾರಕ್ಕೆ ಯಾವ ಅಸ್ತಿತ್ವವೂ ಇಲ್ಲದಿದ್ದರೂ, ಅವಿದ್ಯೆಗೆ ವಶನಾಗಿ ವಿಷಯಗಳನ್ನು ಚಿಂತಿಸುತ್ತಿರುವುದರಿಂದ ಜೀವಿಯ ಸಂಸಾರ ಚಕ್ರವು ಎಂದಿಗೂ ತೊಲಗುವುದಿಲ್ಲ. ॥ ೪ ॥

ಅತ ಏವ ಶನೈಶ್ಚಿತ್ತಂ ಪ್ರಸಕ್ತಮಸತಾಂ ಪಥಿ ।
ಭಕ್ತಿಯೋಗೇನ ತೀವ್ರೇಣ ವಿರಕ್ತ್ಯಾ ಚ ನಯೇದ್ವಶಮ್ ॥ ೫ ॥

ಯಮಾದಿಭಿರ್ಯೋಗಪಥೈರಭ್ಯಸನ್ ಶ್ರದ್ಧಯಾನ್ವಿತಃ ।
ಮಯಿ ಭಾವೇನ ಸತ್ಯೇನ ಮತ್ಕಥಾಶ್ರವಣೇನ ಚ ॥ ೬ ॥

ಸರ್ವಭೂತಸಮತ್ವೇನ ನಿರ್ವೈರೇಣಾಪ್ರಸಂಗತಃ ।
ಬ್ರಹ್ಮಚರ್ಯೇಣ ಮೌನೇನ ಸ್ವಧರ್ಮೇಣ ಬಲೀಯಸಾ ॥ ೭ ॥

ಯದೃಚ್ಛಯೋಪಲಬ್ಧೇನ ಸಂತುಷ್ಟೋ ಮಿತಭುಙ್ ಮುನಿಃ ।
ವಿವಿಕ್ತಶರಣಃ ಶಾಂತೋ ಮೈತ್ರಃ ಕರುಣ ಆತ್ಮವಾನ್ ॥ ೮ ॥

ಸಾನುಬಂಧೇ ಚ ದೇಹೇಽಸ್ಮಿನ್ನಕುರ್ವನ್ನಸದಾಗ್ರಹಮ್ ।
ಜ್ಞಾನೇನ ದೃಷ್ಟತತ್ತ್ವೇನ ಪ್ರಕೃತೇಃ ಪುರುಷಸ್ಯ ಚ ॥ ೯ ॥

ನಿವೃತ್ತಬುದ್ಧ್ಯವಸ್ಥಾನೋ ದೂರೀಭೂತಾನ್ಯದರ್ಶನಃ ।
ಉಪಲಭ್ಯಾತ್ಮನಾಽಽತ್ಮಾನಂ ಚಕ್ಷುಷೇವಾರ್ಕಮಾತ್ಮದೃಕ್ ॥ ೧೦ ॥

ಮುಕ್ತಲಿಂಗಂ ಸದಾಭಾಸಮಸತಿ ಪ್ರತಿಪದ್ಯತೇ ।
ಸತೋ ಬಂಧುಮಸಚ್ಚಕ್ಷುಃ ಸರ್ವಾನುಸ್ಯೂತಮದ್ವಯಮ್ ॥ ೧೧ ॥

ಯಥಾ ಜಲಸ್ಥ ಆಭಾಸಃ ಸ್ಥಲಸ್ಥೇನಾವದೃಶ್ಯತೇ ।
ಸ್ವಾಭಾಸೇನ ತಥಾ ಸೂರ್ಯೋ ಜಲಸ್ಥೇನ ದಿವಿ ಸ್ಥಿತಃ ॥ ೧೨ ॥

ಏವಂ ತ್ರಿವೃದಹಂಕಾರೋ ಭೂತೇಂದ್ರಿಯಮನೋಮಯೈಃ ।
ಸ್ವಾಭಾಸೈರ್ಲಕ್ಷಿತೋಽನೇನ ಸದಾಭಾಸೇನ ಸತ್ಯದೃಕ್ ॥ ೧೩ ॥

ಭೂತಸೂಕ್ಷ್ಮೇಂದ್ರಿಯಮನೋಬುದ್ಧ್ಯಾದಿಷ್ವಿಹ ನಿದ್ರಯಾ ।
ಲೀನೇಷ್ವಸತಿ ಯಸ್ತತ್ರ ವಿನಿದ್ರೋ ನಿರಹಂಕ್ರಿಯಃ ॥ ೧೪ ॥

ಅದಕ್ಕಾಗಿ ಬುದ್ಧಿವಂತರಾದವರು ವಿಷಯಚಿಂತನೆಯೆಂಬ ದುರ್ಮಾರ್ಗದಲ್ಲಿ ಸಿಕ್ಕಿಹಾಕಿಕೊಂಡಿರುವ ಚಿತ್ತವನ್ನು ತೀವ್ರವಾದ ಭಕ್ತಿಯೋಗ ಮತ್ತು ವೈರಾಗ್ಯಗಳ ಮೂಲಕ ನಿಧಾನವಾಗಿ ವಶಪಡಿಸಿಕೊಳ್ಳಬೇಕು. ॥ ೫ ॥

ಯಮ-ನಿಯಮಾದಿ ಯೋಗಸಾಧನೆಯನ್ನು ಶ್ರದ್ಧೆಯಿಂದ ಅಭ್ಯಾಸಮಾಡುತ್ತಾ, ಚಿತ್ತವನ್ನು ಪದೇ-ಪದೇ ಏಕಾಗ್ರಗೊಳಿಸುತ್ತಾ, ನನ್ನಲ್ಲಿ ನಿಜವಾದ ಭಾವವನ್ನಿಟ್ಟು, ನನ್ನ ಕಥೆಗಳನ್ನು ಕೇಳುತ್ತಾ, ಸಮಸ್ತ ಪ್ರಾಣಿಗಳಲ್ಲಿಯೂ ಸಮಭಾವವನ್ನಿರಿಸಿ, ಯಾರಲ್ಲಿಯೂ ವೈರಭಾವವನ್ನು ತಾಳದೆ, ಆಸಕ್ತಿಯನ್ನು ತೊರೆದು, ಬ್ರಹ್ಮಚರ್ಯ-ಮೌನವ್ರತಗಳನ್ನು ಹೊಂದಿ, ಪ್ರಾರಬ್ಧಾನುಗುಣವಾಗಿ ಸಿಕ್ಕಿದಷ್ಟರಲ್ಲಿ ಸಂತೋಷಪಟ್ಟುಕೊಳ್ಳುತ್ತಾ, ಮಿತವಾಗಿ ಆಹಾರವನ್ನು ಸೇವಿಸುತ್ತಾ, ಏಕಾಂತದಲ್ಲಿ ವಾಸಿಸುತ್ತಾ, ಶಾಂತಸ್ವಭಾವವುಳ್ಳವನಾಗಿ, ಎಲ್ಲರಿಗೂ ಮಿತ್ರನಾಗಿ, ದಯಾಳುವಾಗಿ, ಧೈರ್ಯಶಾಲಿಯಾಗಿ, ಪ್ರಕೃತಿ-ಪುರುಷರ ನಿಜವಾದ ಸ್ವರೂಪದ ಅನುಭವದಿಂದ ದೊರೆತಿರುವ ತತ್ತ್ವಜ್ಞಾನದ ಕಾರಣ ಪತ್ನೀ, ಪುತ್ರಾದಿಗಳಿಂದ ಕೂಡಿದ ಈ ದೇಹದಲ್ಲಿ 'ನಾನು-ನನ್ನದು' ಎಂಬ ಮಿಥ್ಯಾ ಅಭಿಮಾನವನ್ನು ತೊರೆದು, ಬುದ್ಧಿಯ ಜಾಗ್ರದಾದಿ ಅವಸ್ಥೆಗಳಿಂದ ತನ್ನನ್ನು ಬೇರ್ಪಡಿಸಿಕೊಂಡು, ಪರಮಾತ್ಮನನ್ನು ಬಿಟ್ಟು ಬೇರೆ ಯಾವ ಪದಾರ್ಥವನ್ನು ನೋಡದ ಆತ್ಮದರ್ಶಿಯಾದ ಮುನಿಗೆ ಆ ಬ್ರಹ್ಮಪದವು ದೊರೆಯುವುದು. ಅವನು ಕಣ್ಣುಗಳಿಂದ ಸೂರ್ಯನನ್ನು ನೋಡುವಂತೆ ತನ್ನ ಶುದ್ಧವಾದ ಅಂತಃಕರಣದ ಮೂಲಕ ಪರಮಾತ್ಮನನ್ನು ಸಾಕ್ಷಾತ್ಕರಿಸಿಕೊಂಡು, ದೇಹವೇ ಮುಂತಾದ ಎಲ್ಲ ಉಪಾಧಿಗಳಿಂದಲೂ ಬೇರೆಯಾಗಿ, ಅಹಂಕಾರಾದಿ ಮಿಥ್ಯಾ ವಸ್ತುಗಳಲ್ಲಿ ಸದ್ವಸ್ತುವಾಗಿ ಬೆಳಗುತ್ತಿರುವ, ಜಗತ್ಕಾರಣಭೂತವಾದ ಪ್ರಕೃತಿಗೂ ಅಧಿಷ್ಠಾನವಾಗಿರುವ, ಮಹದಾದಿ ಕಾರ್ಯವರ್ಗಗಳ ಪ್ರಕಾಶಕನಾಗಿರುವ, ಕಾರ್ಯ- ಕಾರಣ ರೂಪವಾದ ಸಮಸ್ತ ಪದಾರ್ಥಗಳಲ್ಲಿ ವ್ಯಾಪ್ತನಾಗಿರುವ ಅದ್ವಿತೀಯನಾದ ಪರಬ್ರಹ್ಮನ ಪದವನ್ನು ಪಡೆಯುವನು. ॥ ೬-೧೧ ॥

ನೀರಿನಲ್ಲಿ ಪ್ರತಿಬಿಂಬಿಸುವ ಸೂರ್ಯನ ಪ್ರಕಾಶವು ಮನೆಯೊಳಗೆ ಹೊಕ್ಕು ಗೋಡೆಯಮೇಲೆ ಬಿದ್ದಾಗ, ಅಲ್ಲಿಯ ಜನರು ಈ ಬಿಸಿಲು ಎಲ್ಲಿಂದ ಬಂತು ಎಂದು ವಿಚಾರ ಮಾಡುತ್ತಾ ಅದಕ್ಕೆ ಆಧಾರವಾಗಿ ನೀರಿನಲ್ಲಿರುವ ಸೂರ್ಯಪ್ರತಿಬಿಂಬವನ್ನು ಕಂಡು, ಅದಕ್ಕೆ ಮೂಲವಾದ ನಿಜವಾದ ಸೂರ್ಯನನ್ನು ಕಾಣುವರು. ಹಾಗೆಯೇ ವೈಕಾರಿಕಾದಿ ಭೇದದಿಂದ ಮೂರು ರೀತಿಯ ಅಹಂಕಾರವು – ದೇಹ, ಇಂದ್ರಿಯ ಮತ್ತು ಮನಸ್ಸಿನಲ್ಲಿ ಕಂಡುಬರುವ ತನ್ನ ಪ್ರತಿಬಿಂಬಗಳಿಂದ ತಿಳಿದುಬರುತ್ತದೆ. ಮತ್ತು ಪುನಃ ಸತ್‌ಪರಮಾತ್ಮನ ಪ್ರತಿಬಿಂಬದಿಂದ ಕೂಡಿದ ಅಹಂಕಾರದ ಮೂಲಕ ಸತ್ಯಜ್ಞಾನಸ್ವರೂಪ ಪರಮಾತ್ಮನ ದರ್ಶನವಾಗುತ್ತದೆ. ಅದು – ಸುಷುಪ್ತಿಯಲ್ಲಿ ನಿದ್ರೆಯಿಂದ ಶಬ್ದಾದಿ ಭೂತಸೂಕ್ಷ್ಮ, ಇಂದ್ರಿಯ ಮತ್ತು ಮನಸ್ಸು, ಬುದ್ಧಿ ಮುಂತಾದವುಗಳು ಅವ್ಯಾಕೃತದಲ್ಲಿ ಲೀನವಾದ ಬಳಿಕ, ಸ್ವಯಂ ಎಚ್ಚರವಾಗಿದ್ದು ಸರ್ವಥಾ ಅಹಂಕಾರ ಶೂನ್ಯವಾಗಿರುತ್ತದೆ. ॥ ೧೨-೧೪ ॥

ಮನ್ಯಮಾನಸ್ತದಾಽಽತ್ಮಾನಮನಷ್ಟೋ ನಷ್ಟವನ್ಮೃಷಾ ।
ನಷ್ಟೇಽಹಂಕರಣೇ ದ್ರಷ್ಟಾ ನಷ್ಟವಿತ್ತ ಇವಾತುರಃ ॥ ೧೫ ॥

ಏವಂ ಪ್ರತ್ಯವಮೃಶ್ಯಾಸಾವಾತ್ಮಾನಂ ಪ್ರತಿಪದ್ಯತೇ ।
ಸಾಹಂಕಾರಸ್ಯ ದ್ರವ್ಯಸ್ಯ ಯೋಽವಸ್ಥಾನಮನುಗ್ರಹಃ ॥ ೧೬ ॥

ದೇವಹೂತಿರುವಾಚ

ಪುರುಷಂ ಪ್ರಕೃತಿರ್ಬ್ರಹ್ಮನ್ ನ ವಿಮುಂಚತಿ ಕರ್ಹಿಚಿತ್ ।
ಅನ್ಯೋನ್ಯಾಪಾಶ್ರಯತ್ವಾಚ್ಚ ನಿತ್ಯತ್ವಾದನಯೋಃ ಪ್ರಭೋ ॥ ೧೭ ॥

ಯಥಾ ಗಂಧಸ್ಯ ಭೂಮೇಶ್ಚ ನ ಭಾವೋ ವ್ಯತಿರೇಕತಃ ।
ಅಪಾಂ ರಸಸ್ಯ ಚ ಯಥಾ ತಥಾ ಬುದ್ಧೇಃ ಪರಸ್ಯ ಚ ॥ ೧೮ ॥

ಅಕರ್ತುಃ ಕರ್ಮಬಂಧೋಽಯಂ ಪುರುಷಸ್ಯ ಯದಾಶ್ರಯಃ ।
ಗುಣೇಷು ಸತ್ಸು ಪ್ರಕೃತೇಃ ಕೈವಲ್ಯಂ ತೇಷ್ವತಃ ಕಥಮ್ ॥ ೧೯ ॥

ಕ್ವಚಿತ್ತತ್ತ್ವಾವಮರ್ಶೇನ ನಿವೃತ್ತಂ ಭಯಮುಲ್ಬಣಮ್ ।
ಅನಿವೃತ್ತನಿಮಿತ್ತತ್ವಾತ್ಪುನಃ ಪ್ರತ್ಯವತಿಷ್ಠತೇ ॥ ೨೦ ॥

ಶ್ರೀಭಗವಾನುವಾಚ

ಅನಿಮಿತ್ತನಿಮಿತ್ತೇನ ಸ್ವಧರ್ಮೇಣಾಮಲಾತ್ಮನಾ ।
ತೀವ್ರಯಾ ಮಯಿ ಭಕ್ತ್ಯಾ ಚ ಶ್ರುತಸಂಭೃತಯಾ ಚಿರಮ್ ॥ ೨೧ ॥

ಜ್ಞಾನೇನ ದೃಷ್ಟತತ್ತ್ವೇನ ವೈರಾಗ್ಯೇಣ ಬಲೀಯಸಾ ।
ತಪೋಯುಕ್ತೇನ ಯೋಗೇನ ತೀವ್ರೇಣಾತ್ಮಸಮಾಧಿನಾ ॥ ೨೨ ॥

ಪ್ರಕೃತಿಃ ಪುರುಷಸ್ಯೇಹ ದಹ್ಯಮಾನಾ ತ್ವಹರ್ನಿಶಮ್ ।
ತಿರೋಭವಿತ್ರೀ ಶನಕೈರಗ್ನೇರ್ಯೋನಿರಿವಾರಣಿಃ ॥ ೨೩ ॥

ಭುಕ್ತಭೋಗಾ ಪರಿತ್ಯಕ್ತಾ ದೃಷ್ಟದೋಷಾ ಚ ನಿತ್ಯಶಃ ।
ನೇಶ್ವರಸ್ಯಾಶುಭಂ ಧತ್ತೇ ಸ್ವೇ ಮಹಿಮ್ನಿ ಸ್ಥಿತಸ್ಯ ಚ ॥ ೨೪ ॥

ಯಥಾ ಹ್ಯಪ್ರತಿಬುದ್ಧಸ್ಯ ಪ್ರಸ್ವಾಪೋ ಬಹ್ವನರ್ಥಭೃತ್ ।
ಸ ಏವ ಪ್ರತಿಬುದ್ಧಸ್ಯ ನ ವೈ ಮೋಹಾಯ ಕಲ್ಪತೇ ॥ ೨೫ ॥

(ಜಾಗ್ರತ್-ಅವಸ್ಥೆಯಲ್ಲಿ ಈ ಆತ್ಮನು ಭೂತಸೂಕ್ಷ್ಮಾದಿ ದೃಶ್ಯವರ್ಗದ ದ್ರಷ್ಟಾರೂಪದಲ್ಲಿ ಸ್ಪಷ್ಟವಾಗಿ ಅನುಭವಕ್ಕೆ ಬರುತ್ತಾನೆ. ಆದರೆ –) ಸುಷುಪ್ತಿಯಲ್ಲಿ ತನ್ನ ಉಪಾಧಿಭೂತ ಅಹಂಕಾರದ ನಾಶವಾದ್ದರಿಂದ ಅವನು ಭ್ರಮೆಯಿಂದ ತಾನೇ ನಾಶವಾದೆನೆಂದು ತಿಳಿದುಕೊಳ್ಳುತ್ತಾನೆ. ಧನವು ನಾಶವಾದಾಗ ತಾನೇ ನಾಶವಾದೆನೆಂದು ತಿಳಿದು ಅತ್ಯಂತ ದುಃಖಿತನಾಗುವಂತೆ ಅವನೂ ಕೂಡ ಅತ್ಯಂತ ವಿವಶನಾಗಿ ನಷ್ಟವಾದಂತೆ ಆಗಿಹೋಗುತ್ತಾನೆ. ॥ ೧೫ ॥ ಅಮ್ಮಾ! ಈ ಎಲ್ಲ ಮಾತುಗಳನ್ನು ಮನನಗೈದು ವಿವೇಕಿ ಪುರುಷನು – ಅಹಂಕಾರಸಹಿತ ಸಮಸ್ತ ತತ್ತ್ವಗಳ ಅಧಿಷ್ಠಾನವೂ, ಪ್ರಕಾಶಕವೂ ಆದ ತನ್ನ ಆತ್ಮದ ಅನುಭವವನ್ನು ಪಡೆದುಕೊಳ್ಳುತ್ತಾನೆ. ॥ ೧೬ ॥

ದೇವಹೂತಿಯು ಕೇಳಿದಳು – ಪ್ರಭುವೇ! ಪ್ರಕೃತಿ ಮತ್ತು ಪುರುಷ ಇವೆರಡೂ ನಿತ್ಯವೂ, ಒಂದನ್ನೊಂದರ ಆಶ್ರಯದಿಂದಲೂ ಇರುವವು. ಅದಕ್ಕಾಗಿ ಪ್ರಕೃತಿಯಾದರೋ ಪುರುಷನನ್ನು ಎಂದೂ ಬಿಟ್ಟಿರಲಾರದು. ॥ ೧೭ ॥ ಬ್ರಹ್ಮಸ್ವರೂಪನೇ! ಗಂಧವು ಪೃಥಿವಿಯ, ರಸವು ಜಲದ ಬೇರೆಬೇರೆಯಾದ ಸ್ಥಿತಿಯು ಹೇಗೆ ಆಗಲಾರದೋ ಹಾಗೆಯೇ ಪುರುಷ ಮತ್ತು ಪ್ರಕೃತಿಯೂ ಒಂದನ್ನೊಂದು ಬಿಟ್ಟು ಇರಲಾರವು. ॥ ೧೮ ॥ ಆದ್ದರಿಂದ ಯಾವುದರ ಆಶ್ರಯದಿಂದ ಅಕರ್ತೃವಾದ ಪುರುಷನಿಗೆ ಈ ಕರ್ಮಬಂಧನ ಉಂಟಾಗಿದೆಯೋ ಆ ಪ್ರಕೃತಿಯ ಗುಣಗಳು ಇರುವಾಗಲೇ ಅವನಿಗೆ ಕೈವಲ್ಯಪದವು ಹೇಗೆ ದೊರೆಕಬಲ್ಲದು? ॥ ೧೯ ॥ ತತ್ತ್ವಗಳ ವಿಚಾರ ಮಾಡುವುದರಿಂದ ಎಂದಾದರೂ ಈ ಸಂಸಾರ ಬಂಧನದ ತೀವ್ರ ಭಯವು ನಿವೃತ್ತವಾದರೂ ಕೂಡ ಅದರ ನಿಮಿತ್ತಭೂತ ಪ್ರಾಕೃತ ಗುಣಗಣಗಳ ಅಭಾವ ಆಗದಿರುವುದರಿಂದ ಭಯವು ಪುನಃ ಉಂಟಾಗಬಹುದಲ್ಲ? ॥ ೨೦ ॥

ಶ್ರೀಭಗವಂತನು ಹೇಳಿದನು – ತಾಯೇ! ಅರಣಿಯಿಂದಲೇ ಉತ್ಪನ್ನವಾದ ಅಗ್ನಿಯಿಂದ ಅದರ ಉತ್ಪತ್ತಿಸ್ಥಾನವಾದ ಅರಣಿಯೂ ಸುಟ್ಟು ಬೂದಿಯಾಗಿ ಹೋಗುವಂತೆ, ನಿಷ್ಕಾಮಭಾವದಿಂದ ಮಾಡಲಾದ ಸ್ವಧರ್ಮಪಾಲನೆಯ ಮೂಲಕ ಶುದ್ಧವಾದ ಅಂತಃಕರಣದಿಂದ, ಬಹಳಕಾಲ ಭಗವತ್ಕಥೆಗಳನ್ನು ಕೇಳುತ್ತಿರುವುದರಿಂದ ಪುಷ್ಟಿಗೊಂಡ ನನ್ನ ತೀವ್ರವಾದ ಭಕ್ತಿಯಿಂದ, ತತ್ತ್ವಸಾಕ್ಷಾತ್ಕಾರ ಮಾಡಿಸುವ ಜ್ಞಾನದಿಂದ, ಪ್ರಬಲ ವೈರಾಗ್ಯದಿಂದ, ವ್ರತನಿಯಮಗಳೊಂದಿಗೆ ಗೈದ ಧ್ಯಾನಾಭ್ಯಾಸದಿಂದ ಮತ್ತು ಚಿತ್ತದ ಪ್ರಗಾಢವಾದ ಏಕಾಗ್ರತೆಯಿಂದ ಪುರುಷನ ಪ್ರಕೃತಿಯು (ಅವಿದ್ಯೆಯು) ಹಗಲೂ-ರಾತ್ರಿಯೂ ಕ್ಷೀಣಿಸುತ್ತಾ ನಿಧಾನವಾಗಿ ಲೀನವಾಗಿ ಹೋಗುತ್ತದೆ. ॥ ೨೧–೨೩ ॥ ಮತ್ತೆ ಪ್ರತಿದಿನವೂ ದೋಷಗಳನ್ನು ನೋಡಿ ಭೋಗಿಸಿ – ತ್ಯಜಿಸಿದ ಆ ಪ್ರಕೃತಿಯು – ತನ್ನ ಸ್ವರೂಪದಲ್ಲಿ ಸ್ಥಿತನಾದ ಸ್ವತಂತ್ರ (ಬಂಧಮುಕ್ತ)ನಾದ ಆ ಪುರುಷನ ಯಾವುದೇ ಅಹಿತವನ್ನು ಮಾಡಲಾರಳು. ॥ ೨೪ ॥ ಮಲಗಿರುವ ಮನುಷ್ಯನಿಗೆ ಸ್ವಪ್ನದಲ್ಲಿ ಎಷ್ಟೋ ಅನರ್ಥಗಳ ಅನುಭವಗಳಾದರೂ ಎಚ್ಚರವಾದಾಗ ಅವನಿಗೆ ಆ ಸ್ವಪ್ನದ ಅನುಭವದಿಂದ ಯಾವುದೇ ಮೋಹವು ಉಂಟಾಗುವುದಿಲ್ಲ. ॥ ೨೫ ॥

ಏವಂ ವಿದಿತತತ್ತ್ವಸ್ಯ ಪ್ರಕೃತಿರ್ಮಯಿ ಮಾನಸಮ್ ।
ಯುಂಜತೋ ನಾಪಕುರುತ ಆತ್ಮಾರಾಮಸ್ಯ ಕರ್ಹಿಚಿತ್ ॥ ೨೬ ॥

ಯದೈವಮಧ್ಯಾತ್ಮರತಃ ಕಾಲೇನ ಬಹುಜನ್ಮನಾ ।
ಸರ್ವತ್ರ ಜಾತವೈರಾಗ್ಯ ಆಬ್ರಹ್ಮಭುವನಾನ್ಮುನಿಃ ॥ ೨೭ ॥

ಮದ್ಭಕ್ತಃ ಪ್ರತಿಬುದ್ಧಾರ್ಥೋ ಮತ್ಪ್ರಸಾದೇನ ಭೂಯಸಾ ।
ನಿಃಶ್ರೇಯಸಂ ಸ್ವಸಂಸ್ಥಾನಂ ಕೈವಲ್ಯಾಖ್ಯಂ ಮದಾಶ್ರಯಮ್ ॥ ೨೮ ॥

ಪ್ರಾಪ್ನೋತೀಹಾಂಜಸಾ ಧೀರಃ ಸ್ವದೃಶಾಚ್ಛಿನ್ನಸಂಶಯಃ ।
ಯದ್ಗತ್ವಾ ನ ನಿವರ್ತೇತ ಯೋಗೀ ಲಿಂಗಾದ್ವಿನಿರ್ಗಮೇ ॥ ೨೯ ॥

ಯದಾ ನ ಯೋಗೋಪಚಿತಾಸು ಚೇತೋ
ಮಾಯಾಸು ಸಿದ್ಧಸ್ಯ ವಿಷಜ್ಜತೇಽಂಗ ।
ಅನನ್ಯಹೇತುಷ್ವಥ ಮೇ ಗತಿಃ ಸ್ಯಾದ್
ಆತ್ಯಂತಿಕೀ ಯತ್ರ ನ ಮೃತ್ಯುಹಾಸಃ ॥ ೩೦ ॥

ಹಾಗೆಯೇ ತತ್ತ್ವಜ್ಞಾನ ಉಂಟಾದವನು ನಿರಂತರವಾಗಿ ನನ್ನಲ್ಲೇ ಮನಸ್ಸನ್ನು ತೊಡಗಿಸಿರುತ್ತಾನೆ. ಅಂತಹ ಆತ್ಮಾರಾಮ ಮುನಿಗೆ ಪ್ರಕೃತಿಯು ಯಾವ ತೊಂದರೆಯನ್ನೂ ಮಾಡಲಾರಳು. ॥ ೨೬ ॥ ಅನೇಕ ಜನ್ಮಗಳಲ್ಲಿ ಮನುಷ್ಯನು ದೀರ್ಘಕಾಲದವರೆಗೆ ಹೀಗೆ ಆತ್ಮಚಿಂತನೆಯಲ್ಲಿಯೇ ಮುಳುಗಿದ್ದರೆ, ಆಗ ಅವನಿಗೆ ಬ್ರಹ್ಮಲೋಕದವರೆಗಿನ ಎಲ್ಲ ರೀತಿಯ ಭೋಗಗಳಿಂದ ವೈರಾಗ್ಯ ಉಂಟಾಗುತ್ತದೆ. ॥ ೨೭ ॥ ಧೀರನಾದ ನನ್ನ ಆ ಭಕ್ತನು ನನ್ನ ಮಹಾಕೃಪೆಯಿಂದ ತತ್ತ್ವಜ್ಞಾನವನ್ನು ಪಡೆದು ಕೊಂಡು ಆತ್ಮಾನುಭವದ ಮೂಲಕ ಎಲ್ಲ ಸಂಶಯಗಳಿಂದಲೂ ಮುಕ್ತನಾಗಿ ಹೋಗುತ್ತಾನೆ. ಮತ್ತೆ ಲಿಂಗದೇಹವು ಭಂಗವಾದ ಮೇಲೆ ಏಕಮಾತ್ರ ನನ್ನನ್ನೇ ಆಶ್ರಯಿಸಿರುವ ತನ್ನ ಸ್ವರೂಪಭೂತ ಕೈವಲ್ಯವೆಂಬ ಮಂಗಳಮಯವಾದ ಸ್ಥಾನವನ್ನು ಸಹಜವಾಗಿಯೇ ಪಡೆದುಕೊಳ್ಳುವನು. ಅದನ್ನು ತಲುಪಿದ ಬಳಿಕ ಯೋಗಿಯು ಪುನಃ ಸಂಸಾರಕ್ಕೆ ಮರಳುವುದಿಲ್ಲ. ॥ ೨೮-೨೯ ॥ ಅಮ್ಮಾ! ಯೋಗಿಯ ಚಿತ್ತವು ಯೋಗಸಾಧನೆಯಿಂದ ಹುಟ್ಟಿರುವ ಮಾಯಾಮಯ ಅಣಿಮಾದಿ ಅಷ್ಟಸಿದ್ಧಿಗಳಲ್ಲಿ, ಅದರ ಪ್ರಾಪ್ತಿಗಾಗಿ ಯೋಗಸಾಧನೆಗಿಂತ ಬೇರೆ ಯಾವ ಸಾಧನವೂ ಇಲ್ಲವೆಂದು ತಿಳಿದು ಅವುಗಳಲ್ಲಿ ಸಿಕ್ಕಿಹಾಕಿಕೊಳ್ಳದಿದ್ದರೆ, ಅವನಿಗೆ ಅವಿನಾಶಿಯಾದ ನನ್ನ ಪರಮಪದವು ಪ್ರಾಪ್ತವಾಗುತ್ತದೆ. ಮತ್ತೆ ಮೃತ್ಯುವಿನ ಯಾವುದೇ ಪ್ರಭಾವ ಉಳಿಯುವುದಿಲ್ಲ. ॥ ೩೦ ॥

ಇಪ್ಪತ್ತೇಳನೆಯ ಅಧ್ಯಾಯವು ಮುಗಿಯಿತು. ॥ ೨೭ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ತೃತೀಯಸ್ಕಂಧೇ
ಕಾಪಿಲೇಯೋಪಾಖ್ಯಾನೇ ಸಪ್ತವಿಂಶೋಽಧ್ಯಾಯಃ ॥ ೨೭ ॥

ಇಪ್ಪತ್ತೆಂಟನೆಯ ಅಧ್ಯಾಯ

ಅಷ್ಟಾಂಗಯೋಗದ ವಿಧಿ

ಶ್ರೀಭಗವಾನುವಾಚ

ಯೋಗಸ್ಯ ಲಕ್ಷಣಂ ವಕ್ಷ್ಯೇ ಸಬೀಜಸ್ಯ ನೃಪಾತ್ಮಜೇ ।
ಮನೋ ಯೇನೈವ ವಿಧಿನಾ ಪ್ರಸನ್ನಂ ಯಾತಿ ಸತ್ಪಥಮ್ ॥ ೧ ॥

ಸ್ವಧರ್ಮಾಚರಣಂ ಶಕ್ತ್ಯಾ ವಿಧರ್ಮಾಚ್ಚ ನಿವರ್ತನಮ್ ।
ದೈವಾಲ್ಲಬ್ಧೇನ ಸಂತೋಷ ಆತ್ಮವಿಚ್ಚರಣಾರ್ಚನಮ್ ॥ ೨ ॥

ಗ್ರಾಮ್ಯಧರ್ಮನಿವೃತ್ತಿಶ್ಚ ಮೋಕ್ಷಧರ್ಮರತಿಸ್ತಥಾ ।
ಮಿತಮೇಧ್ಯಾದನಂ ಶಶ್ವದ್ವಿವಿಕ್ತಕ್ಷೇಮಸೇವನಮ್ ॥ ೩ ॥

ಶ್ರೀಕಪಿಲಭಗವಂತನು ಹೇಳುತ್ತಾನೆ – ಅಮ್ಮಾ! ರಾಜಪುತ್ರಿಯೇ! ಈಗ ನಾನು ನಿನಗೆ ಸಬೀಜದ (ಸಗುಣಭಕ್ತಿ ಯೋಗದ) ಲಕ್ಷಣವನ್ನು ಹೇಳುವೆನು. ಇದರಿಂದ ಚಿತ್ತವು ಶುದ್ಧ ಹಾಗೂ ಪ್ರಸನ್ನವಾಗಿ ಪರಮಾತ್ಮನ ಮಾರ್ಗವನ್ನೇ ಹಿಡಿಯುತ್ತದೆ. ॥ ೧ ॥ ಈ ಯೋಗವನ್ನು ಸಾಧನೆಮಾಡುವವನು ಶಾಸ್ತ್ರವಿಹಿತವಾದ ಸ್ವಧರ್ಮವನ್ನು ಯಥಾಶಕ್ತಿ ಆಚರಿಸಬೇಕು. ಶಾಸ್ತ್ರವಿರುದ್ಧ ಆಚರಣೆಯನ್ನು ಪರಿತ್ಯಜಿಸಬೇಕು. ಪ್ರಾರಬ್ಧಾನುಸಾರ ದೊರಕುದರಲ್ಲಿ ಸಂತುಷ್ಟನಾಗಬೇಕು. ಆತ್ಮಜ್ಞಾನಿಗಳ ಚರಣಗಳನ್ನು ಪೂಜಿಸಬೇಕು. ॥ ೨ ॥ ವಿಷಯವಾಸನೆಗಳನ್ನು ಹೆಚ್ಚಿಸುವ ಕರ್ಮಗಳಿಂದ ದೂರವಿರಬೇಕು. ಸಂಸಾರಬಂಧನದಿಂದ ಬಿಡಿಸುವಂತಹ ಧರ್ಮದಲ್ಲಿ ಪ್ರೇಮವಿರಿಸಬೇಕು. ಪವಿತ್ರ ಹಾಗೂ ಪರಿಮಿತ ಭೋಜನವನ್ನು ಮಾಡಬೇಕು. ನಿರಂತರ ಏಕಾಂತವೂ, ನಿರ್ಭಯವೂ ಆದ ಸ್ಥಾನದಲ್ಲಿ ವಾಸಿಸಬೇಕು. ॥ ೩ ॥

ಅಹಿಂಸಾ ಸತ್ಯಮಸ್ತೇಯಂ ಯಾವದರ್ಥಪರಿಗ್ರಹಃ ।
ಬ್ರಹ್ಮಚರ್ಯಂ ತಪಃ ಶೌಚಂ ಸ್ವಾಧ್ಯಾಯಃ ಪುರುಷಾರ್ಚನಮ್ ॥ ೪ ॥

ಮೌನಂ ಸದಾಽಽಸನಜಯಃ ಸ್ಥೈರ್ಯಂ ಪ್ರಾಣಜಯಃ ಶನೈಃ ।
ಪ್ರತ್ಯಾಹಾರಶ್ಚೇಂದ್ರಿಯಾಣಾಂ ವಿಷಯಾನ್ಮನಸಾ ಹೃದಿ ॥ ೫ ॥

ಸ್ವಧಿಷ್ಣ್ಯಾನಾಮೇಕದೇಶೇ ಮನಸಾ ಪ್ರಾಣಧಾರಣಮ್ ।
ವೈಕುಂಠಲೀಲಾಭಿಧ್ಯಾನಂ ಸಮಾಧಾನಂ ತಥಾಽಽತ್ಮನಃ ॥ ೬ ॥

ಏತೈರನ್ಯೈಶ್ಚ ಪಥಿಭಿರ್ಮನೋ ದುಷ್ಟಮಸತ್ಪಥಮ್ ।
ಬುದ್ಧ್ಯಾ ಯುಂಜೀತ ಶನಕೈರ್ಜಿತಪ್ರಾಣೋ ಹ್ಯತಂದ್ರಿತಃ ॥ ೭ ॥

ಶುಚೌ ದೇಶೇ ಪ್ರತಿಷ್ಠಾಪ್ಯ ವಿಜಿತಾಸನ ಆಸನಮ್ ।
ತಸ್ಮಿನ್ ಸ್ವಸ್ತಿ ಸಮಾಸೀನ ಋಜುಕಾಯಃ ಸಮಭ್ಯಸೇತ್ ॥ ೮ ॥

ಪ್ರಾಣಸ್ಯ ಶೋಧಯೇನ್ಮಾರ್ಗಂ ಪೂರಕುಂಭಕರೇಚಕೈಃ ।
ಪ್ರತಿಕೂಲೇನ ವಾ ಚಿತ್ತಂ ಯಥಾ ಸ್ಥಿರಮಚಂಚಲಮ್ ॥ ೯ ॥

ಮನೋಽಚಿರಾತ್ಸ್ಯಾದ್ವಿರಜಂ ಜಿತಶ್ವಾಸಸ್ಯ ಯೋಗಿನಃ ।
ವಾಯ್ವಗ್ನಿಭ್ಯಾಂ ಯಥಾ ಲೋಹಂ ಧ್ಮಾತಂ ತ್ಯಜತಿ ವೈ ಮಲಮ್ ॥ ೧೦ ॥

ಪ್ರಾಣಾಯಾಮೈರ್ದಹೇದ್ದೋಷಾನ್ ಧಾರಣಾಭಿಶ್ಚ ಕಿಲ್ಬಿಷಾನ್ ।
ಪ್ರತ್ಯಾಹಾರೇಣ ಸಂಸರ್ಗಾನ್ ಧ್ಯಾನೇನಾನೀಶ್ವರಾನ್ಗುಣಾನ್ ॥ ೧೧ ॥

ಯದಾ ಮನಃ ಸ್ವಂ ವಿರಜಂ ಯೋಗೇನ ಸುಸಮಾಹಿತಮ್ ।
ಕಾಷ್ಠಾಂ ಭಗವತೋ ಧ್ಯಾಯೇತ್ಸ್ವನಾಸಾಗ್ರಾವಲೋಕನಃ ॥ ೧೨ ॥

ಪ್ರಸನ್ನವದನಾಂಭೋಜಂ ಪದ್ಮಗರ್ಭಾರುಣೇಕ್ಷಣಮ್ ।
ನೀಲೋತ್ಪಲದಲಶ್ಯಾಮಂ ಶಂಖಚಕ್ರಗದಾಧರಮ್ ॥ ೧೩ ॥

ಯಾವುದೇ ಪ್ರಾಣಿಯನ್ನು ತ್ರಿಕರಣಗಳಿಂದಲೂ ಹಿಂಸಿಸಬಾರದು. ಸತ್ಯವಾಗಿ ಮಾತನಾಡಬೇಕು. ಕಳ್ಳತನ ಮಾಡಬಾರದು. ಆವಶ್ಯಕತೆಗಿಂತ ಹೆಚ್ಚಿನ ವಸ್ತುಗಳನ್ನು ಸಂಗ್ರಹಿಸಬಾರದು. ಬ್ರಹ್ಮಚರ್ಯವನ್ನು ಪಾಲಿಸಬೇಕು. ತಪಸ್ಸನ್ನಾಚರಿಸಬೇಕು. ಒಳ-ಹೊರಗೆ ಪವಿತ್ರವಾಗಿರಬೇಕು. ಶಾಸ್ತ್ರಗಳನ್ನು ಅಧ್ಯಯನ ಮಾಡುತ್ತಾ, ಭಗವಂತನನ್ನು ಪೂಜಿಸಬೇಕು. ॥ ೪ ॥ ವಾಣಿಯ ಸಂಯಮವಿರಿಸಬೇಕು. ಒಳ್ಳೆಯ ಯೋಗಾಸನಗಳನ್ನು ಅಭ್ಯಾಸಮಾಡಿ ಸ್ಥಿರವಾಗಿ ಕುಳಿತುಕೊಳ್ಳಬೇಕು. ನಿಧಾನವಾಗಿ ಪ್ರಾಣಾಯಾಮದ ಮೂಲಕ ಶ್ವಾಸವನ್ನು ಜಯಿಸಿಕೊಳ್ಳಬೇಕು. ಇಂದ್ರಿಯಗಳನ್ನು ಮನಸ್ಸಿನ ಮೂಲಕ ವಿಷಯಗಳಿಂದ ಸೆಳೆದುಕೊಂಡು ಹೃದಯದಲ್ಲಿ ನೆಲೆಗೊಳಿಸಬೇಕು. ॥ ೫ ॥ ಮೂಲಾಧಾರವೇ ಮುಂತಾದ ಯಾವುದಾದರೊಂದು ಕೇಂದ್ರದಲ್ಲಿ ಮನಸ್ಸಿನಸಹಿತ ಪ್ರಾಣಗಳನ್ನು ಸ್ಥಿರವಾಗಿಸಬೇಕು. ನಿರಂತರವಾಗಿ ಭಗವಂತನ ಲೀಲೆಗಳನ್ನು ಚಿಂತಿಸುತ್ತಾ ಚಿತ್ತವನ್ನು ಸಮಾಧಾನಪಡಿಸಿಕೊಳ್ಳಬೇಕು. ॥ ೬ ॥ ಇವುಗಳಿಂದ ಹಾಗೂ ವ್ರತ-ದಾನಾದಿಗಳಿಂದ ಬೇರೆ ಸಾಧನೆಗಳಿಂದಲೂ ಸಾವಧಾನವಾಗಿ ಪ್ರಾಣಗಳನ್ನು ಜಯಿಸಿ, ಕುಮಾರ್ಗದಲ್ಲಿ ಸಂಚರಿಸುವ ದುಷ್ಟ ಚಿತ್ತವನ್ನು ಬುದ್ಧಿಯ ಮೂಲಕ ಮೆಲ್ಲ-ಮೆಲ್ಲನೆ ಏಕಾಗ್ರಗೊಳಿಸಿ ಅದನ್ನು ಪರಮಾತ್ಮನ ಧ್ಯಾನದಲ್ಲಿ ತೊಡಗಿಸಬೇಕು. ॥ ೭ ॥

ಮೊದಲು ಆಸನಜಯವನ್ನು ಸಾಧಿಸಿ, ಪ್ರಾಣಾಯಾಮದ ಅಭ್ಯಾಸಕ್ಕಾಗಿ ಶುಚಿಯಾದ ಜಾಗದಲ್ಲಿ ಕುಶ-ಮೃಗಚರ್ಮವೇ ಮುಂತಾದವುಗಳಿಂದ ಕೂಡಿದ ಆಸನವನ್ನು ಹಾಸಿಕೊಳ್ಳಬೇಕು. ಅದರ ಮೇಲೆ ದೇಹವನ್ನು ನೆಟ್ಟಗೆ ಸ್ಥಿರವಾಗಿ ಇರಿಸಿಕೊಂಡು ಸುಖವಾಗಿ ಕುಳಿತು ಅಭ್ಯಾಸ ಮಾಡಬೇಕು. ॥ ೮ ॥ ಆರಂಭದಲ್ಲಿ ಪೂರಕ, ಕುಂಭಕ, ರೇಚಕ ಕ್ರಮದಿಂದ ಅಥವಾ ಇದಕ್ಕೆ ವಿಪರೀತವಾಗಿ ರೇಚಕ, ಕುಂಭಕ, ಪೂರಕ, ಕ್ರಮದಲ್ಲಿ ಪ್ರಾಣಾಯಾಮ ಮಾಡಿ ಪ್ರಾಣದ ಮಾರ್ಗವನ್ನು ಶುದ್ಧಪಡಿಸಬೇಕು. ಅದರಿಂದ ಚಿತ್ತವು ಸ್ಥಿರವೂ, ನಿಶ್ಚಲವೂ ಆಗುವುದು. ॥ ೯ ॥ ಗಾಳಿ ಮತ್ತು ಬೆಂಕಿಯಿಂದ ಶೋಧಿಸಿದ ಚಿನ್ನವು ತನ್ನ ಕೊಳೆಯನ್ನು ಕಳೆದುಕೊಳ್ಳುವಂತೆ – ಪ್ರಾಣವಾಯುವನ್ನು ಜಯಿಸಿದ ಯೋಗಿಯ ಚಿತ್ತವು ಶೀಘ್ರವಾಗಿ ಶುದ್ಧವಾಗುವುದು. ॥ ೧೦ ॥ ಆದುದರಿಂದ ಯೋಗಿಯು-ಪ್ರಾಣಾಯಾಮದಿಂದ ವಾತಪಿತ್ತಾದಿಗಳಿಂದ ಉಂಟಾದ ದೋಷಗಳನ್ನೂ, ಧಾರಣೆಯಿಂದ ಪಾಪವನ್ನೂ, ಪ್ರತ್ಯಾಹಾರದಿಂದ ವಿಷಯಗಳ ಸಂಬಂಧವನ್ನೂ ಹಾಗೂ ಧ್ಯಾನದಿಂದ ಭಗವಂತನಿಂದ ವಿಮುಖಗೊಳಿಸುವಂತಹ ರಾಗ-ದ್ವೇಷಾದಿ ದುರ್ಗುಣಗಳನ್ನು ದೂರಮಾಡಬೇಕು. ॥ ೧೧ ॥ ಯೋಗದ ಅಭ್ಯಾಸ ಮಾಡುತ್ತಾ-ಮಾಡುತ್ತಾ ಚಿತ್ತವು ನಿರ್ಮಲವೂ, ಏಕಾಗ್ರವೂ ಆದಾಗ ನಾಸಿಕಾಗ್ರದಲ್ಲಿ ದೃಷ್ಟಿಯನ್ನು ನೆಟ್ಟು ಈ ರೀತಿಯಿಂದ ಭಗವಂತನ ಮೂರ್ತಿಯ ಧ್ಯಾನವನ್ನು ಮಾಡಬೇಕು. ॥ ೧೨ ॥

ಶ್ರೀಭಗವಂತನ ಮುಖಕಮಲವು ಪ್ರಸನ್ನವಾಗಿ ಆನಂದದಿಂದ ಅರಳಿದೆ. ಕಣ್ಣುಗಳು ಕಮಲಕೋಶದಂತೆ ನಸುಗೆಂಪಾಗಿವೆ. ಶರೀರವು ನೀಲಕಮಲದಳದಂತೆ ಶ್ಯಾಮಲ ವರ್ಣದಿಂದ ಶೋಭಿಸುತ್ತಿದೆ. ಕೈಗಳಲ್ಲಿ ಶಂಖ, ಚಕ್ರ, ಗದಾಪದ್ಮಗಳು ಅಲಂಕೃತವಾಗಿವೆ. ॥ ೧೩ ॥

ಲಸತ್ಪಂಕಜಕಿಂಜಲ್ಕಪೀತಕೌಶೇಯವಾಸಸಮ್ ।
ಶ್ರೀವತ್ಸವಕ್ಷಸಂ ಭ್ರಾಜತ್ಕೌಸ್ತುಭಾಮುಕ್ತಕಂಧರಮ್ ॥ ೧೪ ॥

ಮತ್ತದ್ವಿರೇಫಕಲಯಾ ಪರೀತಂ ವನಮಾಲಯಾ ।
ಪರಾರ್ಧ್ಯಹಾರವಲಯಕಿರೀಟಾಂಗದನೂಪುರಮ್ ॥ ೧೫ ॥

ಕಾಂಚೀಗುಣೋಲ್ಲಸಚ್ಛ್ರೋಣಿಂ ಹೃದಯಾಂಭೋಜವಿಷ್ಟರಮ್ ।
ದರ್ಶನೀಯತಮಂ ಶಾಂತಂ ಮನೋನಯನವರ್ಧನಮ್ ॥ ೧೬ ॥

ಅಪೀಚ್ಯದರ್ಶನಂ ಶಶ್ವತ್ಸರ್ವಲೋಕನಮಸ್ಕೃತಮ್ ।
ಸಂತಂ ವಯಸಿ ಕೈಶೋರೇ ಭೃತ್ಯಾನುಗ್ರಹಕಾತರಮ್ ॥ ೧೭ ॥

ಕೀರ್ತನ್ಯತೀರ್ಥಯಶಸಂ ಪುಣ್ಯಶ್ಲೋಕಯಶಸ್ಕರಮ್ ।
ಧ್ಯಾಯೇದ್ದೇವಂ ಸಮಗ್ರಾಂಗಂ ಯಾವನ್ನ ಚ್ಯವತೇ ಮನಃ ॥ ೧೮ ॥

ಸ್ಥಿತಂ ವ್ರಜಂತಮಾಸೀನಂ ಶಯಾನಂ ವಾ ಗುಹಾಶಯಮ್ ।
ಪ್ರೇಕ್ಷಣೀಯೇಹಿತಂ ಧ್ಯಾಯೇಚ್ಛುದ್ಧಭಾವೇನ ಚೇತಸಾ ॥ ೧೯ ॥

ತಸ್ಮಿನ್ ಲಬ್ಧಪದಂ ಚಿತ್ತಂ ಸರ್ವಾವಯವಸಂಸ್ಥಿತಮ್ ।
ವಿಲಕ್ಷ್ಯೈಕತ್ರ ಸಂಯುಜ್ಯಾದಂಗೇ ಭಗವತೋ ಮುನಿಃ ॥ ೨೦ ॥

ಸಂಚಿಂತಯೇದ್ಭಗವತಶ್ಚರಣಾರವಿಂದಂ
ವಜ್ರಾಂಕುಶಧ್ವಜಸರೋರುಹಲಾಂಛನಾಢ್ಯಮ್ ।
ಉತ್ತುಂಗರಕ್ತವಿಲಸನ್ನಖಚಕ್ರವಾಲ-
ಜ್ಯೋತ್ಸ್ನಾಭಿರಾಹತಮಹದ್ಧೃದಯಾಂಧಕಾರಮ್ ॥ ೨೧ ॥

ಯಚ್ಛೌಚನಿಃಸೃತಸರಿತ್ಪ್ರವರೋದಕೇನ
ತೀರ್ಥೇನ ಮೂರ್ಧ್ನ್ಯಧಿಕೃತೇನ ಶಿವಃ ಶಿವೋಽಭೂತ್ ।
ಧ್ಯಾತುರ್ಮನಃಶಮಲಶೈಲನಿಸೃಷ್ಟವಜ್ರಂ
ಧ್ಯಾಯೇಚ್ಚಿರಂ ಭಗವತಶ್ಚರಣಾರವಿಂದಮ್ ॥ ೨೨ ॥

ಕಮಲದ ಕೇಸರದಂತೆ ಪಚ್ಚಪೀತಾಂಬರವು ಸ್ವಾಮಿಯ ಉಡಿಗೆಯಲ್ಲಿ ಕಳ-ಕಳಿಸುತ್ತಿದೆ. ವಕ್ಷಸ್ಥಳದಲ್ಲಿ ಶ್ರೀವತ್ಸಚಿಹ್ನೆಯಿದೆ. ಕೊರಳಲ್ಲಿ ಕೌಸ್ತುಭಮಣಿಯು ಥಳ-ಥಳಿಸುತ್ತಿದೆ. ॥ ೧೪ ॥ ವನಮಾಲೆಯು ಚರಣಗಳವರೆಗೂ ಬಂದಿದೆ. ಅದರ ಸುತ್ತಲೂ ದುಂಬಿಗಳು ಸುಗಂಧದಿಂದ ಮದವೇರಿ ಇಂಪಾಗಿ ಝೇಂಕರಿಸುತ್ತಿವೆ. ಸ್ವಾಮಿಯ ಅಂಗಾಂಗಗಳಲ್ಲಿ ಅಮೂಲ್ಯವಾದ ಹಾರಗಳೂ, ಕಂಕಣ, ಕಿರೀಟ, ಭುಜಕೀರ್ತಿ, ಕಾಲಂದುಗೆಗಳೇ ಮುಂತಾದ ಆಭೂಷಣಗಳು ವಿರಾಜಿಸುತ್ತಿವೆ. ॥ ೧೫ ॥ ನಡುವಿನಲ್ಲಿ ಧರಿಸಿದ ಒಡ್ಯಾಣದ ಎಳೆಗಳು ಅದರ ಕಾಂತಿಯನ್ನು ಹೆಚ್ಚಿಸುತ್ತಿವೆ. ಭಕ್ತರ ಹೃದಯಕಮಲವೇ ಆ ಭಗವಂತನ ಆಸನವಾಗಿದೆ. ಶ್ಯಾಮಸುಂದರನ ಆ ಪ್ರಶಾಂತಮೂರ್ತಿಯು ಎಲ್ಲರ ಕಣ್ಮನಗಳನ್ನೂ ಸೂರೆಗೊಳ್ಳುತ್ತಿದೆ. ॥ ೧೬ ॥ ಎಳೆವಯಸ್ಸಿನಲ್ಲಿರುವ ಆ ಮನೋಹರ ಮೂರ್ತಿಯು ಭಕ್ತರ ಮೇಲೆ ಕರುಣೆಯನ್ನು ಹರಿಸಲು ತವಕಪಡುತ್ತಿದೆ. ತುಂಬಾ ಮನೋಹರವಾದ ದರ್ಶನವದು. ಆ ಭಗವಂತನು ಸಮಸ್ತಲೋಕಗಳಿಂದಲೂ ಸದಾ ವಂದಿತನಾಗಿದ್ದಾನೆ. ॥ ೧೭ ॥ ಅವನ ಪವಿತ್ರಕೀರ್ತಿಯು ಪರಮಕೀರ್ತನೀಯವಾಗಿದೆ. ಅವನು ರಾಜಾಬಲಿಯೇ ಮುಂತಾದ ಪರಮಯಶಸ್ವಿಗಳ ಯಶವನ್ನೂ ಕೂಡ ಹೆಚ್ಚಿಸುವವನಾಗಿದ್ದಾನೆ. ಹೀಗೆ ಶ್ರೀಮನ್ನಾರಾಯಣನ ಸಮಸ್ತ ಅಂಗಗಳಲ್ಲಿ ಚಿತ್ತವು ಜಾರದೆ ಸ್ಥಿರವಾಗುವವರೆಗೆ ಧ್ಯಾನಮಾಡಬೇಕು. ॥ ೧೮ ॥ ಭಗವಂತನ ಲೀಲೆಗಳು ತುಂಬಾ ದರ್ಶನೀಯವಾಗಿವೆ. ಆದ್ದರಿಂದ ತನ್ನ ಅಭಿರುಚಿಗನುಸಾರವಾಗಿ ನಿಂತಿರುವ, ನಡೆಯುತ್ತಿರುವ, ಕುಳಿತುಕೊಂಡ, ಮಲಗಿರುವ ಮುಂತಾಗಿ ನಾನಾ ಭಂಗಿಯಲ್ಲಿರುವ ಅಥವಾ ಅಂತರ್ಯಾಮಿರೂಪದಲ್ಲಿ ಸ್ಥಿತನಾದ ಅವನ ಸ್ವರೂಪವನ್ನು ವಿಶುದ್ಧಭಾವದಿಂದ ಕೂಡಿದ ಚಿತ್ತದಿಂದ ಚಿಂತನೆಮಾಡಬೇಕು. ॥ ೧೯ ॥ ಹೀಗೆ ಸರ್ವಾಂಗಗಳಲ್ಲಿಯೂ ನೆಲೆಪಡೆದು ರಮಿಸುತ್ತಿರುವ ಚಿತ್ತವನ್ನು ಒಂದೊಂದೇ ಅವಯವದಲ್ಲಿ ನಿಲ್ಲಿಸುತ್ತಾ ಅಡಿಯಿಂದ ಮುಡಿಯವರೆಗೂ ಧ್ಯಾನಮಾಡಬೇಕು. ॥ ೨೦ ॥

ಮೊದಲಿಗೆ ಭಗವಂತನ ಚರಣಕಮಲಗಳನ್ನು ಧ್ಯಾನಿಸಬೇಕು. ಅವು – ವಜ್ರ, ಅಂಕುಶ, ಧ್ವಜ, ಕಮಲಗಳ ಮಂಗಳರೇಖೆ ಚಿಹ್ನೆಗಳಿಂದ ರಾರಾಜಿಸುತ್ತಿವೆ. ಸ್ವಲ್ಪ ಉಬ್ಬಿಕೊಂಡು, ನಸುಗೆಂಪಿನಿಂದ ಶೋಭಿಸುತ್ತಿರುವ ನಖಚಂದ್ರಮಂಡಲದ ತಿಂಗಳಬೆಳಕಿನಿಂದ ಧ್ಯಾನಿಸುತ್ತಿರುವ ಭಕ್ತರ ಹೃದಯದ ಅಜ್ಞಾನರೂಪೀ ಕತ್ತಲೆಯನ್ನು ದೂರಮಾಡುತ್ತಿದೆ. ॥ ೨೧ ॥ ಬ್ರಹ್ಮದೇವರು ಇವುಗಳನ್ನು ತೊಳೆದಾಗಲೇ ನದಿಗಳಲ್ಲಿ ಶ್ರೇಷ್ಠವಾದ ಗಂಗೆಯು ಪ್ರಕಟಳಾದಳು. ಅಂತಹ ಪವಿತ್ರ ಜಲವನ್ನು ಮಸ್ತಕದಲ್ಲಿ ಧರಿಸಿದ್ದರಿಂದಲೇ ಸ್ವತಃ ಮಂಗಳಸ್ವರೂಪನಾಗಿದ್ದರೂ ಶ್ರೀಶಿವನು ಹೆಚ್ಚು ಮಂಗಳಸ್ವರೂಪನಾದನು. ಇವು ತನ್ನ ಧ್ಯಾನಮಾಡುವವರ ಪಾಪಗಳೆಂಬ ಪರ್ವತಗಳ ಮೇಲೆ ಪ್ರಯೋಗಿಸಿದ ಇಂದ್ರನ ವಜ್ರಾಯುಧದಂತಿವೆ. ಭಗವಂತನ ಈ ಚರಣಕಮಲಗಳನ್ನು ಚಿರಕಾಲದವರೆಗೂ ಚಿಂತಿಸುತ್ತಿರಬೇಕು. ॥ ೨೨ ॥

ಜಾನುದ್ವಯಂ ಜಲಜಲೋಚನಯಾ ಜನನ್ಯಾ
ಲಕ್ಷ್ಮ್ಯಾಖಿಲಸ್ಯ ಸುರವಂದಿತಯಾ ವಿಧಾತುಃ ।
ಊರ್ವೋರ್ನಿಧಾಯ ಕರಪಲ್ಲವರೋಚಿಷಾ ಯತ್
ಸಂಲಾಲಿತಂ ಹೃದಿ ವಿಭೋರಭವಸ್ಯ ಕುರ್ಯಾತ್ ॥ ೨೩ ॥

ಜನ್ಮರಹಿತನಾದ ಭವಭಯಹಾರಿ ಶ್ರೀಹರಿಯ ಮೊಣಕಾಲುಗಳನ್ನು ಧ್ಯಾನಿಸಬೇಕು. ವಿಶ್ವವಿಧಾತೃಗಳಾದ ಬ್ರಹ್ಮದೇವರಿಗೂ ಜನನಿಯಾದ, ಸರ್ವದೇವವಂದಿತೆಯಾದ ಪದ್ಮನಯನೆ ಪದ್ಮಾದೇವಿಯು ತನ್ನ ತೊಡೆಗಳ ಮೇಲೆ ಇರಿಸಿಕೊಂಡು ತನ್ನ ಕಾಂತಿಯುತವಾದ ಕರಪಲ್ಲವಗಳಿಂದ ಸೇವಿಸುತ್ತಿರುವ ಪಾದಪದ್ಮಗಳನ್ನು ಹೃದಯದಲ್ಲಿ ಧ್ಯಾನಿಸಬೇಕು. ॥ ೨೩ ॥

ಊರೂ ಸುಪರ್ಣಭುಜಯೋರಧಿ ಶೋಭಮಾನಾ-
ವೋಜೋನಿಧೀ ಅತಸಿಕಾಕುಸುಮಾವಭಾಸೌ ।
ವ್ಯಾಲಂಬಿಪೀತವರವಾಸಸಿ ವರ್ತಮಾನ-
ಕಾಂಚೀಕಲಾಪಪರಿರಂಭಿ ನಿತಂಬಬಿಂಬಮ್ ॥ ೨೪ ॥

ಅನಂತರ ಭಗವಂತನ ತೊಡೆಗಳ ಧ್ಯಾನಮಾಡಬೇಕು. ಅವು ಮಹಾಬಲಶಾಲಿಗಳಾಗಿದ್ದು ವೇದಮೂರ್ತಿಯಾದ ಗರುಡನ ಹೆಗಲನ್ನು ಅಲಂಕರಿಸಿರುವ, ಅಗಸೆಯ ಹೂವಿನಂತೆ ನೀಲಿಯ ಬಣ್ಣದ ಕಾಂತಿಯಿಂದ ಕಂಗೊಳಿಸುತ್ತಿವೆ. ತರುವಾಯ ಕಣಕಾಲಿನವರೆಗೂ ಲಂಬಿಸಿರುವ ಪೀತಾಂಬರದಿಂದ ಮುಚ್ಚಲ್ಪಟ್ಟು, ಅವುಗಳ ಮೇಲೆ ಧರಿಸಿರುವ ರತ್ನಖಚಿತವಾದ ನಡುದಾರ ಒಡ್ಯಾಣದ ಎಳೆಗಳನ್ನು ಆಲಿಂಗಿಸುತ್ತಿರುವ ಭಗವಂತನ ನಿತಂಬವನ್ನು ಧ್ಯಾನಿಸಬೇಕು. ॥ ೨೪ ॥

ನಾಭಿಹ್ರದಂ ಭುವನಕೋಶಗುಹೋದರಸ್ಥಂ
ಯತ್ರಾತ್ಮಯೋನಿಧಿಷಣಾಖಿಲಲೋಕಪದ್ಮಮ್ ।
ವ್ಯೂಢಂ ಹರಿನ್ಮಣಿವೃಷಸ್ತನಯೋರಮುಷ್ಯ
ಧ್ಯಾಯೇದ್ದ್ವಯಂ ವಿಶದಹಾರಮಯೂಖಗೌರಮ್ ॥ ೨೫ ॥

ಬಳಿಕ ದೇವದೇವನ ಉದರದಲ್ಲಿ ಬೆಳಗುತ್ತಿರುವ ಸುಳಿನಾಭಿಯ ಸರೋವರವನ್ನು ಧ್ಯಾನಿಸಬೇಕು. ಅದು ಸಮಸ್ತ ಲೋಕಗಳಿಗೂ ಆಶ್ರಯಸ್ಥಾನವು. ಸೃಷ್ಟಿಕರ್ತರಾದ ಬ್ರಹ್ಮದೇವರಿಗೆ ಆಧಾರವಾದ ಸರ್ವಲೋಕಮಯ ಕಮಲವು ಇಲ್ಲಿಯೇ ಪ್ರಕಟಗೊಂಡಿದೆಯಲ್ಲ! ಅನಂತರ ಮರಕತಮಣಿಗಳಂತೆ ಕಂಗೊಳಿಸುತ್ತಾ ವಕ್ಷಃಸ್ಥಳದಲ್ಲಿ ಅಲಂಕೃತವಾಗಿರುವ ಧವಳವಾದ ಹಾರಗಳ ಕಿರಣಗಳಿಂದ ಬೆಳ್ಳಗೆ ಪ್ರಕಾಶಿಸುತ್ತಿರುವ ಎರಡೂ ಸ್ತನಗಳನ್ನು ಧ್ಯಾನಿಸಬೇಕು. ॥ ೨೫ ॥

ವಕ್ಷೋಽಧಿವಾಸಮೃಷಭಸ್ಯ ಮಹಾವಿಭೂತೇಃ
ಪುಂಸಾಂ ಮನೋನಯನನಿರ್ವೃತಿಮಾದಧಾನಮ್ ।
ಕಂಠಂ ಚ ಕೌಸ್ತುಭಮಣೇರಧಿಭೂಷಣಾರ್ಥಂ
ಕುರ್ಯಾನ್ಮನಸ್ಯಖಿಲಲೋಕನಮಸ್ಕೃತಸ್ಯ ॥ ೨೬ ॥

ಆಮೇಲೆ ಮಹಾಲಕ್ಷ್ಮಿಗೆ ನೆಲೆಯಾಗಿರುವ, ಎಲ್ಲ ಪುರುಷರ ಕಣ್ಣುಗಳಿಗೆ ಮುದವನ್ನೂ ನೀಡುವ ಪುರುಷೋತ್ತಮನ ವಕ್ಷಃಸ್ಥಳವನ್ನು ಧ್ಯಾನಿಸಬೇಕು. ಮತ್ತೆ ಮಣಿಗಳಿಗೆ ಭೂಷಣವಾಗಿರುವ ಕೌಸ್ತುಭಮಣಿಯನ್ನು ಧರಿಸಿಕೊಂಡಿರುವ ಸರ್ವಲೋಕನಮಸ್ಕೃತನಾದ ಶ್ರೀನಾರಾಯಣನ ಕೊರಳನ್ನು ಧ್ಯಾನಿಸಬೇಕು. ॥ ೨೬ ॥

ಬಾಹೂಂಶ್ಚ ಮಂದರಗಿರೇಃ ಪರಿವರ್ತನೇನ
ನಿರ್ಣಿಕ್ತಬಾಹುವಲಯಾನಧಿಲೋಕಪಾಲಾನ್ ।
ಸಂಚಿಂತಯೇದ್ದಶಶತಾರಮಸಹ್ಯತೇಜಃ
ಶಂಖಂ ಚ ತತ್ಕರಸರೋರುಹರಾಜಹಂಸಮ್ ॥ ೨೭ ॥

ತರುವಾಯ ಲೋಕಪಾಲಕರಿಗೆ ಆಶ್ರಯವಾಗಿರುವ ಭಗವಂತನ ನಾಲ್ಕು ಭುಜಗಳನ್ನೂ ಧ್ಯಾನಮಾಡಬೇಕು. ಅವುಗಳಲ್ಲಿ ಧರಿಸಿರುವ ಕಂಕಣಾದಿ ಉಜ್ವಲ ಆಭೂಷಣಗಳು ಸಮುದ್ರಮಂಥನದ ಸಮಯದಲ್ಲಿ ಮಂದರಾಚಲದ ಘರ್ಷಣೆಯಿಂದ ಸಾಣೆ ಹಿಡಿದವೋ ಎಂಬಂತೆ ಝಗ-ಝಗಿಸುತ್ತಿವೆ. ಹಾಗೆಯೇ ಸಹಿಸಲಾಗದಂತಹ ತೇಜಸ್ಸಿನಿಂದ ಬೆಳಗುತ್ತಿರುವ, ಸಾವಿರ ಅಲಗುಗಳುಳ್ಳ ಸುದರ್ಶನ ಚಕ್ರವನ್ನೂ ಮತ್ತು ಕರಕಮಲದಲ್ಲಿ ರಾಜಹಂಸದಂತೆ ವಿರಾಜಿಸುತ್ತಿರುವ ಶ್ರೀಪಾಂಚಜನ್ಯಶಂಖವನ್ನೂ ಚಿಂತಿಸಬೇಕು. ॥ ೨೭ ॥

ಕೌಮೋದಕೀಂ ಭಗವತೋ ದಯಿತಾಂ ಸ್ಮರೇತ
ದಿಗ್ಧಾಮರಾತಿಭಟಶೋಣಿತಕರ್ದಮೇನ ।
ಮಾಲಾಂ ಮಧುವ್ರತವರೂಥಗಿರೋಪಘುಷ್ಟಾಂ
ಚೈತ್ಯಸ್ಯ ತತ್ತ್ವಮಮಲಂ ಮಣಿಮಸ್ಯ ಕಂಠೇ ॥ ೨೮ ॥

ಬಳಿಕ ಶತ್ರುವೀರರ ರಕ್ತದಿಂದ ತೊಯ್ದ ಪ್ರಭುವಿನ ಪ್ರಿಯವಾದ ಕೌಮೋದಕೀ ಗದೆಯನ್ನೂ, ದುಂಬಿಗಳ ಝೇಂಕಾರದಿಂದ ಕೂಡಿದ ವನಮಾಲೆಯನ್ನೂ ಮತ್ತು ಅವನ ಕೊರಳಿನಲ್ಲಿ ಶೋಭಾಯಮಾನವಾದ ಸಮಸ್ತ ಜೀವಗಳ ಪರಿಶುದ್ಧ ತತ್ತ್ವರೂಪವಾಗಿರುವ ಕೌಸ್ತುಭಮಣಿಯನ್ನು* ಧ್ಯಾನಿಸಬೇಕು. ॥ ೨೮ ॥

* 'ಆತ್ಮಾನಮಸ್ಯ ಜಗತೋ ನಿರ್ಲೇಪಮಗುಣಾಮಲಮ್ । ಬಿಭರ್ತಿ ಕೌಸ್ತುಭಮಣಿಂ ಸ್ವರೂಪಂ ಭಗವಾನ್ ಹರಿಃ ॥' ಎಂಬಂತೆ ಈ ಜಗತ್ತಿನ ನಿರ್ಲಿಪ್ತವೂ, ನಿರ್ಮಲವೂ, ಗುಣಾತೀತವೂ ಆದ ಆತ್ಮಸ್ವರೂಪವನ್ನೇ ಶ್ರೀಹರಿಯು ಕೌಸ್ತುಭಮಣಿಯ ರೂಪದಲ್ಲಿ ಧರಿಸಿರುವನು.
(ವಿಷ್ಣುಪುರಾಣ)

ಭೃತ್ಯಾನುಕಂಪಿತಧಿಯೇಹ ಗೃಹೀತಮೂರ್ತೇಃ
ಸಂಚಿಂತಯೇದ್ಭಗವತೋ ವದನಾರವಿಂದಮ್ ।
ಯದ್ವಿಸ್ಫುರನ್ಮಕರಕುಂಡಲವಲ್ಗಿತೇನ
ವಿದ್ಯೋತಿತಾಮಲಕಪೋಲಮುದಾರನಾಸಮ್ ॥ ೨೯ ॥

ಯಚ್ಛ್ರೀನಿಕೇತಮಲಿಭಿಃ ಪರಿಸೇವ್ಯಮಾನಂ
ಭೂತ್ಯಾ ಸ್ವಯಾ ಕುಟಿಲಕುಂತಲವೃಂದಜುಷ್ಟಮ್ ।
ಮೀನದ್ವಯಾಶ್ರಯಮಧಿಕ್ಷಿಪದಬ್ಜನೇತ್ರಂ
ಧ್ಯಾಯೇನ್ಮನೋಮಯಮತಂದ್ರಿತ ಉಲ್ಲಸದ್ಭ್ರು ॥ ೩೦ ॥

ತಸ್ಯಾವಲೋಕಮಧಿಕಂ ಕೃಪಯಾತಿಘೋರ-
ತಾಪತ್ರಯೋಪಶಮನಾಯ ನಿಸೃಷ್ಟಮಕ್ಷ್ಣೋಃ ।
ಸ್ನಿಗ್ಧಸ್ಮಿತಾನುಗುಣಿತಂ ವಿಪುಲಪ್ರಸಾದಂ
ಧ್ಯಾಯೇಚ್ಚಿರಂ ವಿತತಭಾವನಯಾ ಗುಹಾಯಾಮ್ ॥ ೩೧ ॥

ಹಾಸಂ ಹರೇರವನತಾಖಿಲಲೋಕತೀವ್ರ-
ಶೋಕಾಶ್ರುಸಾಗರವಿಶೋಷಣಮತ್ಯುದಾರಮ್ ।
ಸಮ್ಮೋಹನಾಯ ರಚಿತಂ ನಿಜಮಾಯಯಾಸ್ಯ
ಭ್ರೂಮಂಡಲಂ ಮುನಿಕೃತೇ ಮಕರಧ್ವಜಸ್ಯ ॥ ೩೨ ॥

ಧ್ಯಾನಾಯನಂ ಪ್ರಹಸಿತಂ ಬಹುಲಾಧರೋಷ್ಠ-
ಭಾಸಾರುಣಾಯಿತತನುದ್ವಿಜಕುಂದಪಂಕ್ತಿ ।
ಧ್ಯಾಯೇತ್ಸ್ವದೇಹಕುಹರೇಽವಸಿತಸ್ಯ ವಿಷ್ಣೋ-
ರ್ಭಕ್ತ್ಯಾಽಽರ್ದ್ರಯಾರ್ಪಿತಮನಾ ನ ಪೃಥಗ್ದಿದೃಕ್ಷೇತ್ ॥ ೩೩ ॥

ಏವಂ ಹರೌ ಭಗವತಿ ಪ್ರತಿಲಬ್ಧಭಾವೋ
ಭಕ್ತ್ಯಾ ದ್ರವದ್ಧೃದಯ ಉತ್ಪುಲಕಃ ಪ್ರಮೋದಾತ್ ।
ಔತ್ಕಂಠ್ಯಬಾಷ್ಪಕಲಯಾ ಮುಹುರರ್ದ್ಯಮಾನ-
ಸ್ತಚ್ಚಾಪಿ ಚಿತ್ತಬಡಿಶಂ ಶನಕೈರ್ವಿಯುಂಕ್ತೇ ॥ ೩೪ ॥

ಆನಂತರ ಭಕ್ತರಾದ ಭೃತ್ಯರ ಮೇಲೆ ದಯೆಯನ್ನು ತೋರುವುದಕ್ಕಾಗಿಯೇ ಇಲ್ಲಿ ಸಾಕಾರರೂಪವನ್ನು ತಳೆದಿರುವ ಶ್ರೀಹರಿಯ ಮುಖಕಮಲವನ್ನು ಧ್ಯಾನಿಸಬೇಕು. ■ ವದನಾರವಿಂದವು ಉದಾರವಾದ ಮೂಗಿನಿಂದಲೂ, ಹೊಳೆಯುತ್ತಿರುವ ಮಕರ ಕುಂಡಲಗಳು ಚಲಿಸುತ್ತಿರುವುದರಿಂದ ಅತಿಶಯವಾದ ಕಾಂತಿಯಿಂದ ಬೆಳಗುತ್ತಿರುವ ಸ್ವಚ್ಛವಾದ ಕಪೋಲಗಳಿಂದಲೂ ವಿಶೇಷವಾಗಿ ಕಂಗೊಳಿಸುತ್ತಿದೆ. ॥ ೨೯ ॥ ಕಪ್ಪು-ಕಪ್ಪಾದ ಗುಂಗುರು ಮುಂಗುರುಳುಗಳಿಂದ ಶೋಭಿಸುವ ಭಗವಂತನ ಮುಖ ಮಂಡಲವು ತನ್ನ ಕಾಂತಿಯಿಂದ-ದುಂಬಿಗಳಿಂದ ಸೇವಿತವಾದ ಕಮಲಕೋಶವನ್ನೂ ನಾಚಿಸುತ್ತಿದೆ ಮತ್ತು ಕಮಲದಂತೆ ವಿಶಾಲವಾಗಿ, ಚಂಚಲವಾಗಿ ಹೊಳೆಯುತ್ತಿರುವ ಆತನ ಕಣ್ಣುಗಳು ತನ್ನ ಕಾಂತಿಯಿಂದ ಕಮಲ ಕೋಶದ ಮೇಲೆ ನೆಗೆಯುತ್ತಾ ಮಿನುಗುವ ಮೀನುಗಳ ಜೋಡಿಯನ್ನು ಸೋಲಿಸುತ್ತಿವೆ. ಹಾಗೆಯೇ ಉನ್ನತವಾದ ಹುಬ್ಬುಗಳ ಬಳ್ಳಿಯಿಂದಲೂ ಶೋಭಿಸುತ್ತಿರುವ ಭಗವಂತನ ಮನೋಹರವಾದ ಮುಖಾರವಿಂದವನ್ನು ಮನಸ್ಸಿನಲ್ಲಿ ಧರಿಸಿ ಆಲಸ್ಯವನ್ನು ತೊರೆದು ಧ್ಯಾನಿಸುತ್ತಾ ಇರಬೇಕು. ॥ ೩೦ ॥

ಹೃದಯಗುಹೆಯಲ್ಲಿ ಬಹಳಕಾಲದವರೆಗೆ ಭಕ್ತಿಭಾವದಿಂದ ಭಗವಂತನ ನೇತ್ರಗಳ ನೋಟವನ್ನು ಧ್ಯಾನಮಾಡಬೇಕು. ಆ ನೋಟವು ಕೃಪೆಯಿಂದಲೂ, ಪ್ರೇಮಪೂರ್ಣವಾದ ಮಂದಹಾಸದಿಂದಲೂ ಕ್ಷಣ-ಕ್ಷಣಕ್ಕೂ ವೃದ್ಧಿಯನ್ನು ಹೊಂದುತ್ತಾ ಅನುಗ್ರಹದ ಮಳೆಯನ್ನೇ ಸುರಿಸುತ್ತಿರುತ್ತದೆ ಹಾಗೂ ಭಕ್ತಜನರ ಅತಿಘೋರವಾದ ತ್ರಿತಾಪಗಳನ್ನು ಶಾಂತಗೊಳಿಸಲೆಂದೇ ಪ್ರಕಟವಾಗಿದೆ. ॥ ೩೧ ॥ ಆನಂತರ ಶರಣಾಗತರಾದ ಭಕ್ತರ ಅತಿ ತೀವ್ರವಾದ ಶೋಕದ ಕಣ್ಣೀರಿನ ಕಡಲನ್ನೇ ಬತ್ತಿಸುವಂತಹ ಅತ್ಯಂತ ಉದಾರವಾಗಿರುವ ಶ್ರೀಹರಿಯ ಹಾಸ್ಯದ ಹೊನಲನ್ನು ಧ್ಯಾನಿಸಬೇಕು. ಮುನಿಗಳ ಹಿತಕ್ಕಾಗಿಯೇ, ಮನ್ಮಥನಿಗೆ ಮೋಹವನ್ನುಂಟುಮಾಡುವುದಕ್ಕಾಗಿಯೇ ತನ್ನ ಮಾಯೆಯಿಂದ ಶ್ರೀಹರಿಯು ತನ್ನ ಭ್ರೂಮಂಡಲವನ್ನು ರಚಿಸಿರುವನು. ಅದನ್ನು ಧ್ಯಾನಿಸಬೇಕು. ॥ ೩೨ ॥ ಆಮೇಲೆ ಎಣೆಯಿಲ್ಲದ ಪ್ರೇಮಾತಿಶಯದ ಭಾವದಿಂದ ತನ್ನ ಹೃದಯದಲ್ಲಿ ವಿರಾಜಿಸುತ್ತಿರುವ ಶ್ರೀಹರಿಯ ನಗುವನ್ನು ಧ್ಯಾನಮಾಡಿರಿ. ಇದು ಧ್ಯಾನಕ್ಕೆ ಅತ್ಯಂತ ಯೋಗ್ಯವಾಗಿದೆ. ನಗುತ್ತಿರುವಾಗ ಮೇಲ್ತುಟಿ ಮತ್ತು ಕೆಳತುಟಿಗಳ ಬಲು ಕೆಂಪಾದ ಕಾಂತಿಯು ಬಾಯಿಯೊಳಗೆ ಶುಭ್ರಬಣ್ಣದ ಕುಂದಪುಷ್ಪದ ಮೊಗ್ಗಿನಂತೆ ಮೆರೆಯುತ್ತಿರುವ ಪುಟ್ಟಹಲ್ಲುಗಳ ಮೇಲೆ ಕೆಂಪು ಬಣ್ಣವು ಬಿದ್ದು ಬೆಳಗುತ್ತಿರುವಂತೆ ಧ್ಯಾನಿಸಬೇಕು. ಹೀಗೆ ಧ್ಯಾನದಲ್ಲಿ ತನ್ಮಯನಾಗಿ ಶ್ರೀಭಗವಂತನನ್ನು ಬಿಟ್ಟು ಬೇರಾವ ಪದಾರ್ಥವನ್ನು ನೋಡಲು ಬಯಸಬಾರದು. ॥ ೩೩ ॥

ಈ ರೀತಿಯ ಧ್ಯಾನದ ಅಭ್ಯಾಸದಿಂದ ಸಾಧಕನಿಗೆ ಶ್ರೀಹರಿಯಲ್ಲಿ ಪ್ರೇಮವು ಉಂಟಾಗುತ್ತದೆ. ಅವನ ಹೃದಯವು ಭಕ್ತಿಯಿಂದ ಕರಗಿಹೋಗುವುದು. ಶರೀರದಲ್ಲಿ ಆನಂದಾತಿರೇಕದಿಂದ ನವಿರೇಳುವುದು. ಉತ್ಕಂಠತೆಯಿಂದ ಉಂಟಾದ ಪ್ರೇಮಾಶ್ರುಗಳ ಪ್ರವಾಹದಿಂದ ಪದೇ-ಪದೇ ತನ್ನ ಶರೀರಕ್ಕೆ ಸ್ನಾನಮಾಡಿಸುವನು.

ಮುಕ್ತಾಶ್ರಯಂ ಯರ್ಹಿ ನಿರ್ವಿಷಯಂ ವಿರಕ್ತಂ
ನಿರ್ವಾಣಮೃಚ್ಛತಿ ಮನಃ ಸಹಸಾ ಯಥಾರ್ಚಿಃ ।
ಆತ್ಮಾನಮತ್ರ ಪುರುಷೋಽವ್ಯವಧಾನಮೇಕ-
ಮನ್ವೀಕ್ಷತೇ ಪ್ರತಿನಿವೃತ್ತಗುಣಪ್ರವಾಹಃ ॥ ೩೫ ॥

ಸೋಽಪ್ಯೇತಯಾ ಚರಮಯಾ ಮನಸೋ ನಿವೃತ್ತ್ಯಾ
ತಸ್ಮಿನ್ಮಹಿಮ್ನ್ಯವಸಿತಃ ಸುಖದುಃಖಬಾಹ್ಯೇ ।
ಹೇತುತ್ವಮಪ್ಯಸತಿ ಕರ್ತರಿ ದುಃಖಯೋರ್ಯತ್
ಸ್ವಾತ್ಮನ್ವಿಧತ್ತ ಉಪಲಬ್ಧಪರಾತ್ಮಕಾಷ್ಠಃ ॥ ೩೬ ॥

ದೇಹಂ ಚ ತಂ ನ ಚರಮಃ ಸ್ಥಿತಮುತ್ಥಿತಂ ವಾ
ಸಿದ್ಧೋ ವಿಪಶ್ಯತಿ ಯತೋಽಧ್ಯಗಮತ್ಸ್ವರೂಪಮ್ ।
ದೈವಾದುಪೇತಮಥ ದೈವವಶಾದಪೇತಂ
ವಾಸೋ ಯಥಾ ಪರಿಕೃತಂ ಮದಿರಾಮದಾಂಧಃ ॥ ೩೭ ॥

ದೇಹೋಽಪಿ ದೈವವಶಗಃ ಖಲು ಕರ್ಮ ಯಾವತ್
ಸ್ವಾರಂಭಕಂ ಪ್ರತಿಸಮೀಕ್ಷತ ಏವ ಸಾಸುಃ ।
ತಂ ಸಪ್ರಪಂಚಮಧಿರೂಢಸಮಾಧಿಯೋಗಃ
ಸ್ವಾಪ್ನಂ ಪುನರ್ನ ಭಜತೇ ಪ್ರತಿಬುದ್ಧವಸ್ತುಃ ॥ ೩೮ ॥

ಯಥಾ ಪುತ್ರಾಚ್ಚ ವಿತ್ತಾಚ್ಚ ಪೃಥಙ್ಮರ್ತ್ಯಃ ಪ್ರತೀಯತೇ ।
ಅಪ್ಯಾತ್ಮತ್ವೇನಾಭಿಮತಾದ್ದೇಹಾದೇಃ ಪುರುಷಸ್ತಥಾ ॥ ೩೯ ॥

ಮತ್ತೆ ಮೀನನ್ನು ಹಿಡಿಯುವ ಗಾಳದಂತೆ ಶ್ರೀಹರಿಯನ್ನು ತನ್ನತ್ತ ಆಕರ್ಷಿಸಿಕೊಂಡು ಸಾಧನರೂಪವಾದ ಚಿತ್ತವನ್ನೂ ಕೂಡ ಮೆಲ್ಲ-ಮೆಲ್ಲನೆ ಧ್ಯೇಯವಸ್ತುವಿನಿಂದ ಅಗಲಿಸಿಬಿಡುತ್ತಾನೆ. ॥ ೩೪ ॥ ಎಣ್ಣೆಯು ಮುಗಿದಾಗ ದೀಪಶಿಖೆಯು ತನ್ನ ಕಾರಣರೂಪೀ ತೇಜಸ್ತತ್ತ್ವದಲ್ಲಿ ಲೀನವಾಗುವಂತೆ – ಆಶ್ರಯ, ವಿಷಯ ಮತ್ತು ರಾಗಗಳಿಂದ ರಹಿತವಾದ ಮನಸ್ಸು ಶಾಂತವಾಗಿ, ಬ್ರಹ್ಮಾಕಾರವಾಗಿ ಬಿಡುವುದು. ಈ ಸ್ಥಿತಿಯು ಉಂಟಾದ ಬಳಿಕ ಜೀವವು ಗುಣಪ್ರವಾಹರೂಪದಲ್ಲಿ ದೇಹಾದಿ ಉಪಾಧಿಗಳಿಂದ ನಿವೃತ್ತನಾದ ಕಾರಣ ಧ್ಯಾತಾ, ಧ್ಯಾನ, ಧ್ಯೇಯ ಮುಂತಾದ ವಿಭಾಗಗಳಿಂದ ರಹಿತವಾದ ಒಂದು ಅಖಂಡ ಪರಮಾತ್ಮನನ್ನು ಎಲ್ಲೆಡೆ ವ್ಯಾಪಿಸಿ ತುಂಬಿರುವುದನ್ನು ನೋಡುವನು. ॥ ೩೫ ॥ ಯೋಗಾಭ್ಯಾಸದಿಂದ ಉಂಟಾದ ಚಿತ್ತದ ಈ ಅವಿದ್ಯಾರಹಿತ ಲಯರೂಪೀ ನಿವೃತ್ತಿಯಿಂದ ತನ್ನ ಸುಖ-ದುಃಖರಹಿತವಾದ ಬ್ರಹ್ಮರೂಪವಾದ ಮಹಿಮೆಯಲ್ಲಿ ನೆಲೆಗೊಂಡು ಪರಮಾತ್ಮತತ್ತ್ವವನ್ನು ಯೋಗಿಯು ಸಾಕ್ಷಾತ್ಕರಿಸಿಕೊಳ್ಳುವನು. ಈ ಹಿಂದೆ ಅಜ್ಞಾನವಶದಿಂದ ಸುಖ-ದುಃಖಗಳ ಕರ್ತೃತ್ವವು ತನ್ನ ಸ್ವರೂಪದಲ್ಲೇ ಇದೆಯೆಂದು ತಿಳಿದುಕೊಂಡಿದ್ದ ಆತನು ಆ ಕರ್ತೃತ್ವವು ಅವಿದ್ಯೆಯಿಂದ ಉಂಟಾದ ಅಹಂಕಾರದಲ್ಲೇ ಇದೆಯೆಂದು ಅರಿತುಕೊಳ್ಳುವನು. ॥ ೩೬ ॥ ಮದ್ಯದ ಅಮಲಿನಲ್ಲಿರುವ ಮನುಷ್ಯನಿಗೆ ತನ್ನ ಸೊಂಟದಲ್ಲಿ ಸುತ್ತಿಕೊಂಡ ಬಟ್ಟೆಯು ಇರುವುದಾಗಲೀ, ಬಿದ್ದುಹೋದುದಾಗಲೀ ಯಾವುದೂ ತಿಳಿಯದಂತೆ – ಚರಮಾವಸ್ಥೆಯನ್ನು ಪಡೆದಿರುವ ಸಿದ್ಧ ಪುರುಷನಿಗೂ ತನ್ನ ದೇಹವು ಕುಳಿತಿರುವುದಾಗಲೀ, ಏಳುವುದಾಗಲೀ, ಅಥವಾ ದೈವವಶದಿಂದ ಎಲ್ಲಿಗಾದರೂ ಹೋಗುವುದಾಗಲೀ, ಅಲ್ಲಿಂದ ಹಿಂದಿರುಗುವುದಾಗಲೀ ಯಾವುದೇ ವಿಷಯದ ಅರಿವು ಇರುವುದಿಲ್ಲ. ಏಕೆಂದರೆ, ಅವನು ತನ್ನ ಪರಮಾನಂದಮಯ ಸ್ವರೂಪದಲ್ಲಿ ಸ್ಥಿತನಾಗಿರುತ್ತಾನೆ. ॥ ೩೭ ॥ ಅವನ ಶರೀರವಾದರೋ ಹಿಂದಿನ ಜನ್ಮದ ಸಂಸ್ಕಾರಗಳ ಅಧೀನವಾಗಿದೆ. ಆದ್ದರಿಂದ ಅವನ ಪ್ರಾರಬ್ಧಕರ್ಮವು ಉಳಿದಿರುವವರೆಗೂ ಅವನು ಇಂದ್ರಿಯಗಳ ಸಹಿತ ಜೀವಿಸಿರುತ್ತಾನೆ. ಆದರೆ ಯಾರಿಗೆ ಸಮಾಧಿವರೆಗಿನ ಯೋಗದ ಸ್ಥಿತಿಯು ಉಂಟಾಗಿದೆಯೋ, ಯಾರು ಪರಮಾತ್ಮತತ್ತ್ವವನ್ನು ಚೆನ್ನಾಗಿ ತಿಳಿದುಕೊಂಡಿರುವನೋ, ಆ ಸಿದ್ಧಪುರುಷನು ಪತ್ನೀ-ಪುತ್ರಾದಿಗಳ ಸಹಿತ ತನ್ನ ಶರೀರವನ್ನು ಸ್ವಪ್ನದಲ್ಲಿ ಕಂಡುಬರುವ ಶರೀರಗಳಂತೆ ಮತ್ತೆ ಸ್ವೀಕರಿಸುವುದಿಲ್ಲ – ಅವುಗಳಲ್ಲಿ ಅಹಂತೆ-ಮಮತೆ ಇಡುವುದಿಲ್ಲ. ॥ ೩೮ ॥

ಸಾಧಾರಣ ಮನುಷ್ಯರಿಗೆ ಅತ್ಯಂತ ಸ್ನೇಹದ ಕಾರಣ ಪುತ್ರ, ಧನಾದಿಗಳಲ್ಲಿಯೂ ಆತ್ಮಬುದ್ಧಿ ಇರುತ್ತದೆ. ಆದರೆ ಸ್ವಲ್ಪ ವಿಚಾರ ಮಾಡುವುದರಿಂದಲೇ ಅವು ತನ್ನಿಂದ ಬೇರೆ ಎಂದು ಸ್ಪಷ್ಟವಾಗಿ ಕಂಡುಬರುತ್ತವೆ. ಹಾಗೆಯೇ ತನ್ನ ಆತ್ಮನೆಂದು ಭಾವಿಸಿದ ದೇಹವೇ ಮುಂತಾದವುಗಳಲ್ಲಿಯೂ 'ಅವು ತಾನಲ್ಲ' ಅವುಗಳಿಂದ ಬೇರೆಯಾದ, ಅವುಗಳಿಗೆ ಸಾಕ್ಷಿಯಾದ ಪುರುಷನು ಇದ್ದಾನೆ ಎಂದು ತಿಳಿದು ಬರುತ್ತದೆ. ॥ ೩೯ ॥

ಯಥೋಲ್ಮುಕಾದ್ವಿಸ್ಫುಲಿಂಗಾದ್ಧೂಮಾದ್ವಾಪಿ ಸ್ವಸಂಭವಾತ್ ।
ಅಪ್ಯಾತ್ಮತ್ವೇನಾಭಿಮತಾದ್ಯಥಾಗ್ನಿಃ ಪೃಥಗುಲ್ಮುಕಾತ್ ॥ ೪೦ ॥

ಭೂತೇಂದ್ರಿಯಾಂತಃಕರಣಾತ್ಪ್ರಧಾನಾಜ್ಜೀವಸಂಜ್ಞಿತಾತ್ ।
ಆತ್ಮಾ ತಥಾ ಪೃಥಗ್ದ್ರಷ್ಟಾ ಭಗವಾನ್ಬ್ರಹ್ಮಸಂಜ್ಞಿತಃ ॥ ೪೧ ॥

ಸರ್ವಭೂತೇಷು ಚಾತ್ಮಾನಂ ಸರ್ವಭೂತಾನಿ ಚಾತ್ಮನಿ ।
ಈಕ್ಷೇತಾನನ್ಯಭಾವೇನ ಭೂತೇಷ್ವಿವ ತದಾತ್ಮತಾಮ್ ॥ ೪೨ ॥

ಸ್ವಯೋನಿಷು ಯಥಾ ಜ್ಯೋತಿರೇಕಂ ನಾನಾ ಪ್ರತೀಯತೇ ।
ಯೋನೀನಾಂ ಗುಣವೈಷಮ್ಯಾತ್ತಥಾಽಽತ್ಮಾ ಪ್ರಕೃತೌ ಸ್ಥಿತಃ ॥ ೪೩ ॥

ತಸ್ಮಾದಿಮಾಂ ಸ್ವಾಂ ಪ್ರಕೃತಿಂ ದೈವೀಂ ಸದಸದಾತ್ಮಿಕಾಮ್ ।
ದುರ್ವಿಭಾವ್ಯಾಂ ಪರಾಭಾವ್ಯ ಸ್ವರೂಪೇಣಾವತಿಷ್ಠತೇ ॥ ೪೪ ॥

ಉರಿಯುತ್ತಿರುವ ಸೌದೆಗಳಿಂದಲೂ, ಕಿಡಿಗಳಿಂದಲೂ ಮತ್ತು ತನ್ನಿಂದಲೇ ಉಂಟಾದ ಹೊಗೆಯಿಂದಲೂ ಹಾಗೂ ಅಗ್ನಿರೂಪವಾಗಿ ತಿಳಿಯಲ್ಪಡುವ ಉರಿಯುವ ಕಟ್ಟಿಗೆಯಿಂದಲೂ ಅಗ್ನಿಯು ವಾಸ್ತವವಾಗಿ ಬೇರೆಯೇ ಆಗಿರುವಂತೆ – ಭೂತ, ಇಂದ್ರಿಯ ಮತ್ತು ಅಂತಃಕರಣಗಳಿಂದ ಅವುಗಳ ಸಾಕ್ಷಿ ಆತ್ಮನು ಬೇರೆಯೇ ಆಗಿದ್ದಾನೆ ಹಾಗೂ ಜೀವನೆಂದು ಕರೆಯಲ್ಪಡುವ ಆ ಆತ್ಮನಿಗಿಂತಲೂ ಬ್ರಹ್ಮವು ಭಿನ್ನವಾದುದು ಮತ್ತು ಪ್ರಕೃತಿಗೆ ಸಂಚಾಲಕನಾಗಿರುವ ಪುರುಷೋತ್ತಮನು ಪ್ರಕೃತಿಗಿಂತ ಭಿನ್ನನಾಗಿರುವನು. ॥ ೪೦-೪೧ ॥ ದೇಹದೃಷ್ಟಿಯಿಂದ ಜರಾಯುಜ, ಅಂಡಜ, ಸ್ವೇದಜ, ಉದ್ಭಿಜ್ಜ ಎಂಬ ನಾಲ್ಕು ಪ್ರಕಾರದ ಪ್ರಾಣಿಗಳು ಪಂಚಭೂತಮಾತ್ರವಾಗಿವೆ. ಹಾಗೆಯೇ ಸಮಸ್ತ ಜೀವರಲ್ಲಿ ಆತ್ಮನನ್ನು ಮತ್ತು ಆತ್ಮನಲ್ಲಿ ಸಮಸ್ತ ಜೀವರನ್ನು ಅನನ್ಯ ಭಾವದಿಂದ ಅನುಗತನೆಂದು ನೋಡಬೇಕು. ॥ ೪೨ ॥ ಒಂದೇ ಅಗ್ನಿಯು ತನ್ನ ಬೇರೆ-ಬೇರೆ ಆಶ್ರಯಗಳಲ್ಲಿ ಅವುಗಳ ಭಿನ್ನತೆಯಿಂದಾಗಿ ನಾನಾ ಆಕಾರದಿಂದ ಕಂಡುಬರುವಂತೆ, ದೇವ-ಮನುಷ್ಯಾದಿ ಶರೀರಗಳಲ್ಲಿ ಇರುವ ಒಂದೇ ಆತ್ಮನು ತನ್ನ ಆಶ್ರಯಗಳ ಗುಣ-ಭೇದದಿಂದಾಗಿ ಬೇರೆ-ಬೇರೆಯಾಗಿ ಕಂಡುಬರುತ್ತಾನೆ. ॥ ೪೩ ॥ ಆದ್ದರಿಂದ ಭಗವಂತನ ಭಕ್ತನು ಜೀವದ ಸ್ವರೂಪವನ್ನು ಮರೆಸುವ ಕಾರ್ಯಕಾರಣರೂಪದಿಂದ ಪರಿಣಾಮವನ್ನು ಹೊಂದಿರುವ ಭಗವಂತನ ಈ ಅಚಿಂತ್ಯಶಕ್ತಿಯಾದ ಮಾಯೆಯನ್ನು ಭಗವಂತನ ಕೃಪೆಯಿಂದಲೇ ಗೆದ್ದು ತನ್ನ ನಿಜವಾದ ಸ್ವರೂಪದಲ್ಲಿ, ಬ್ರಹ್ಮರೂಪದಲ್ಲಿ ನೆಲೆಗೊಳ್ಳುವನು. ॥ ೪೪ ॥

ಇಪ್ಪತ್ತೆಂಟನೆಯ ಅಧ್ಯಾಯವು ಮುಗಿಯಿತು. ॥ ೨೮ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ತೃತೀಯಸ್ಕಂಧೇ
ಕಾಪಿಲೇಯೇ ಸಾಧನಾನುಷ್ಠಾನಂ ನಾಮಾಷ್ಟಾವಿಂಶೋಽಧ್ಯಾಯಃ ॥ ೨೮ ॥

ಇಪ್ಪತ್ತೊಂಭತ್ತನೆಯ ಅಧ್ಯಾಯ

ಭಕ್ತಿಯೋಗದ ಮರ್ಮ ಮತ್ತು ಕಾಲದ ಮಹಿಮೆ

ದೇವಹೂತಿರುವಾಚ

ಲಕ್ಷಣಂ ಮಹದಾದೀನಾಂ ಪ್ರಕೃತೇಃ ಪುರುಷಸ್ಯ ಚ ।
ಸ್ವರೂಪಂ ಲಕ್ಷ್ಯತೇಽಮೀಷಾಂ ಯೇನ ತತ್ಪಾರಮಾರ್ಥಿಕಮ್ ॥ ೧ ॥

ಯಥಾ ಸಾಂಖ್ಯೇಷು ಕಥಿತಂ ಯನ್ಮೂಲಂ ತತ್ಪ್ರಚಕ್ಷತೇ ।
ಭಕ್ತಿಯೋಗಸ್ಯ ಮೇ ಮಾರ್ಗಂ ಬ್ರೂಹಿ ವಿಸ್ತರಶಃ ಪ್ರಭೋ ॥ ೨ ॥

ವಿರಾಗೋ ಯೇನ ಪುರುಷೋ ಭಗವನ್ಸರ್ವತೋ ಭವೇತ್ ।
ಆಚಕ್ಷ್ವ ಜೀವಲೋಕಸ್ಯ ವಿವಿಧಾ ಮಮ ಸಂಸೃತೀಃ ॥ ೩ ॥

ದೇವಹೂತಿಯು ಕೇಳಿದಳು – ಪ್ರಭುವೇ! ಸಾಂಖ್ಯಶಾಸ್ತ್ರದಲ್ಲಿ ಪ್ರಕೃತಿ, ಪುರುಷ ಮತ್ತು ಮಹತ್ತತ್ತ್ವಾದಿ ಲಕ್ಷಣಗಳು ಇರುವಂತೆ, ಹಾಗೂ ಯಾವುದರ ಮೂಲಕ ಅವುಗಳ ವಾಸ್ತವಿಕ ಸ್ವರೂಪವನ್ನು ಬೇರೆ-ಬೇರೆ ತಿಳಿಯಲಾಗುತ್ತದೋ ಮತ್ತು ಭಕ್ತಿಯೋಗವನ್ನೂ, ಅದರ ಪ್ರಯೋಜನವನ್ನೂ ಹೇಳಲಾಗಿದೆಯೋ ಅದೆಲ್ಲವನ್ನು ನೀನು ನನಗೆ ತಿಳಿಸಿದೆ. ಈಗ ದಯಮಾಡಿ ಭಕ್ತಿಯೋಗದ ಮಾರ್ಗವನ್ನು ವಿಸ್ತಾರವಾಗಿ ನನಗೆ ಹೇಳುವವನಾಗು. ॥ ೧-೨ ॥ ಇದಲ್ಲದೆ ಜೀವರ ಜನ್ಮ-ಮರಣರೂಪವಾದ ಅನೇಕ ವಿಧವಾದ ಗತಿಗಳನ್ನೂ ವರ್ಣಿಸು. ಅವುಗಳನ್ನು ಕೇಳುವುದರಿಂದ ಜೀವನಿಗೆ ಎಲ್ಲ ವಿಧದ ವಸ್ತುಗಳಲ್ಲಿ ವೈರಾಗ್ಯ ಉಂಟಾಗುತ್ತದೆ. ॥ ೩ ॥

ಕಾಲಸ್ಯೇಶ್ವರರೂಪಸ್ಯ ಪರೇಷಾಂ ಚ ಪರಸ್ಯ ತೇ ।
ಸ್ವರೂಪಂ ಬತ ಕುರ್ವಂತಿ ಯದ್ಧೇತೋಃ ಕುಶಲಂ ಜನಾಃ ॥ ೪ ॥

ಲೋಕಸ್ಯ ಮಿಥ್ಯಾಭಿಮತೇರಚಕ್ಷುಷ-
ಶ್ಚಿರಂ ಪ್ರಸುಪ್ತಸ್ಯ ತಮಸ್ಯನಾಶ್ರಯೇ ।
ಶ್ರಾಂತಸ್ಯ ಕರ್ಮಸ್ವನುವಿದ್ಧಯಾ ಧಿಯಾ
ತ್ವಮಾವಿರಾಸೀಃ ಕಿಲ ಯೋಗಭಾಸ್ಕರಃ ॥ ೫ ॥

ಮೈತ್ರೇಯ ಉವಾಚ

ಇತಿ ಮಾತುರ್ವಚಃ ಶ್ಲಕ್ಷ್ಣಂ ಪ್ರತಿನಂದ್ಯ ಮಹಾಮುನಿಃ ।
ಆಬಭಾಷೇ ಕುರುಶ್ರೇಷ್ಠ ಪ್ರೀತಸ್ತಾಂ ಕರುಣಾರ್ದಿತಃ ॥ ೬ ॥

ಶ್ರೀಭಗವಾನುವಾಚ

ಭಕ್ತಿಯೋಗೋ ಬಹುವಿಧೋ ಮಾರ್ಗೈರ್ಭಾಮಿನಿ ಭಾವ್ಯತೇ ।
ಸ್ವಭಾವಗುಣಮಾರ್ಗೇಣ ಪುಂಸಾಂ ಭಾವೋ ವಿಭಿದ್ಯತೇ ॥ ೭ ॥

ಅಭಿಸಂಧಾಯ ಯೋ ಹಿಂಸಾಂ ದಂಭಂ ಮಾತ್ಸರ್ಯಮೇವ ವಾ ।
ಸಂರಂಭೀ ಭಿನ್ನದೃಗ್ಭಾವಂ ಮಯಿ ಕುರ್ಯಾತ್ಸ ತಾಮಸಃ ॥ ೮ ॥

ವಿಷಯಾನಭಿಸಂಧಾಯ ಯಶ ಐಶ್ವರ್ಯಮೇವ ವಾ ।
ಅರ್ಚಾದಾವರ್ಚಯೇದ್ಯೋ ಮಾಂ ಪೃಥಗ್ಭಾವಃ ಸ ರಾಜಸಃ ॥ ೯ ॥

ಕರ್ಮನಿರ್ಹಾರಮುದ್ದಿಶ್ಯ ಪರಸ್ಮಿನ್ವಾ ತದರ್ಪಣಮ್ ।
ಯಜೇದ್ಯಷ್ಟವ್ಯಮಿತಿ ವಾ ಪೃಥಗ್ಭಾವಃ ಸ ಸಾತ್ತ್ವಿಕಃ ॥ ೧೦ ॥

ಮದ್ಗುಣಶ್ರುತಿಮಾತ್ರೇಣ ಮಯಿ ಸರ್ವಗುಹಾಶಯೇ ।
ಮನೋಗತಿರವಿಚ್ಛಿನ್ನಾ ಯಥಾ ಗಂಗಾಂಭಸೋಽಂಬುಧೌ ॥ ೧೧ ॥

ಲಕ್ಷಣಂ ಭಕ್ತಿಯೋಗಸ್ಯ ನಿರ್ಗುಣಸ್ಯ ಹ್ಯುದಾಹೃತಮ್ ।
ಅಹೈತುಕ್ಯವ್ಯವಹಿತಾ ಯಾ ಭಕ್ತಿಃ ಪುರುಷೋತ್ತಮೇ ॥ ೧೨ ॥

ಸಾಲೋಕ್ಯಸಾರ್ಷ್ಟಿಸಾಮೀಪ್ಯಸಾರೂಪ್ಯೈಕತ್ವಮಪ್ಯುತ ।
ದೀಯಮಾನಂ ನ ಗೃಹ್ಣಂತಿ ವಿನಾ ಮತ್ಸೇವನಂ ಜನಾಃ ॥ ೧೩ ॥

ಯಾವುದರ ಭಯದಿಂದ ಜನರು ಶುಭ ಕರ್ಮಗಳಲ್ಲಿ ಪ್ರವೃತ್ತರಾಗುತ್ತಾರೋ ಮತ್ತು ಯಾವುದು ಬ್ರಹ್ಮಾದಿಗಳಿಗೂ ಶಾಸನ ಮಾಡುವಂತಹುದೋ ಆ ಸರ್ವಸಮರ್ಥ ಕಾಲದ ಸ್ವರೂಪವನ್ನೂ ಕೂಡ ನೀನು ನನಗೆ ಹೇಳು. ॥ ೪ ॥ ಜ್ಞಾನದೃಷ್ಟಿಯು ಲುಪ್ತವಾದ ಕಾರಣ ದೇಹಾದಿ ಮಿಥ್ಯಾ ವಸ್ತುಗಳಲ್ಲಿ ಯಾರಿಗೆ ಆತ್ಮಾಭಿಮಾನ ಉಂಟಾಗಿದೆಯೋ, ಹಾಗೂ ಬುದ್ಧಿಯು ಕರ್ಮಾಸಕ್ತವಾಗಿರುವ ಕಾರಣ ಅತ್ಯಂತ ಶ್ರಮಪಡುತ್ತಾ ಯಾರು ಬಹಳ ಕಾಲದಿಂದ ಅಪಾರ ಅಂಧಕಾರಮಯ ಸಂಸಾರದಲ್ಲಿ ಮಲಗಿರುವರೋ ಅಂತಹವರನ್ನು ಎಚ್ಚರಿಸಲು ಯೋಗಭಾಸ್ಕರನಂತೆ ನೀನು ಅವತರಿಸಿರುವೆ. ॥ ೫ ॥

ಶ್ರೀಮೈತ್ರೇಯರು ಹೇಳುತ್ತಾರೆ – ಕುರುಶ್ರೇಷ್ಠನಾದ ವಿದುರನೇ! ತಾಯಿಯ ಆ ಚೆನ್ನುಡಿಯನ್ನು ಕೇಳಿ ಕಪಿಲ ಮಹಾಮುನಿಗಳು ಆಕೆಯನ್ನು ಪ್ರಶಂಸಿಸುತ್ತಾ, ಜೀವರ ಕುರಿತು ದಯೆಯಿಂದ ದ್ರವೀಭೂತರಾಗಿ ಹೆಚ್ಚಿನ ಪ್ರಸನ್ನತೆಯಿಂದ ಅವಳಲ್ಲಿ ಹೇಳತೊಡಗಿದರು. ॥ ೬ ॥

ಶ್ರೀಭಗವಂತನು ಹೇಳಿದನು – ಅಮ್ಮಾ! ಸಾಧಕರ ಭಾವಕ್ಕನುಸಾರವಾಗಿ ಭಕ್ತಿಯೋಗವು ಅನೇಕ ಪ್ರಕಾರವಾಗಿ ಪ್ರಕಾಶಿಸುತ್ತದೆ. ಏಕೆಂದರೆ, ಸ್ವಭಾವ ಮತ್ತು ಗುಣಗಳ ಭೇದದಿಂದ ಮನುಷ್ಯರ ಭಾವದಲ್ಲಿಯೂ ವಿಭಿನ್ನತೆ ಬಂದುಬಿಡುತ್ತದೆ. ॥ ೭ ॥ ಭೇದಬುದ್ಧಿಯಿಂದ ಕೂಡಿ, ಹೃದಯದಲ್ಲಿ ಹಿಂಸೆ, ದಂಭ ಅಥವಾ ಮಾತ್ಸರ್ಯ ಭಾವವನ್ನಿರಿಸಿಕೊಂಡು ನನ್ನಲ್ಲಿ ಭಕ್ತಿಯನ್ನಿಡುವವನು ನನ್ನ ತಾಮಸ ಭಕ್ತನಾಗಿದ್ದಾನೆ. ॥ ೮ ॥ ವಿಷಯಸುಖಕ್ಕಾಗಿಯೇ, ಯಶಸ್ಸು, ಐಶ್ವರ್ಯದ ಕಾಮನೆಯಿಂದಲೇ ಪ್ರತಿಮಾದಿಗಳಲ್ಲಿ ಭೇದಭಾವದಿಂದ ನನ್ನನ್ನು ಪೂಜಿಸುವವನು ರಾಜಸ ಭಕ್ತನಾಗಿದ್ದಾನೆ. ॥ ೯ ॥ ಪಾಪಗಳನ್ನು ಕಳೆದುಕೊಳ್ಳುವುದಕ್ಕಾಗಿಯೇ, ಪರಮಾತ್ಮನಿಗೆ ಅರ್ಪಿಸಲೋಸುಗವೇ ಮತ್ತು ಪೂಜೆಯು ಕರ್ತವ್ಯವಾಗಿದೆ ಎಂಬ ಬುದ್ಧಿಯಿಂದ ಭೇದಭಾವದಿಂದ ನನ್ನನ್ನು ಪೂಜಿಸುವವನು ಸಾತ್ತ್ವಿಕ ಭಕ್ತನೆನಿಸುವನು. ॥ ೧೦ ॥ ಗಂಗಾಪ್ರವಾಹವು ಅಖಂಡವಾಗಿ ಸಮುದ್ರದೆಡೆಗೆ ಹರಿಯುವಂತೆಯೇ ನನ್ನ ಗುಣಗಳನ್ನು ಶ್ರವಣ ಮಾತ್ರದಿಂದಲೇ ಮನಸ್ಸಿನ ಗತಿಯು ತೈಲಧಾರೆಯಂತೆ ಅವಿಚ್ಛಿನ್ನ ರೂಪದಿಂದ ಸರ್ವಾಂತರ್ಯಾಮಿಯಾದ ನನ್ನ ಕಡೆಗೆ ಹರಿಯುವುದು ಹಾಗೂ ಪುರುಷೋತ್ತಮನಾದ ನನ್ನಲ್ಲಿ ನಿಷ್ಕಾಮವಾದ ಅನನ್ಯಪ್ರೇಮ ಉಂಟಾಗುವುದು – ನಿರ್ಗುಣಭಕ್ತಿಯ ಲಕ್ಷಣವೆಂದು ಹೇಳಲಾಗಿದೆ. ॥ ೧೧-೧೨ ॥ ಇಂತಹ ನಿಷ್ಕಾಮಭಕ್ತರು ನನ್ನ ಸೇವೆಯನ್ನು ಬಿಟ್ಟು ನಾನು ಕೊಟ್ಟರೂ * ಸಾಲೋಕ್ಯ,[೧] ಸಾರ್ಷ್ಟಿ,[೨] ಸಾಮೀಪ್ಯ[೩] ಸಾರೂಪ್ಯ[೪] ಮತ್ತು ಸಾಯುಜ್ಯ[೫] ಮುಕ್ತಿಗಳನ್ನೂ ಕೂಡ ಸ್ವೀಕರಿಸುವುದಿಲ್ಲ. ॥ ೧೩ ॥

ಭಗವಂತನ ಸೇವೆಗಾಗಿಯೇ ಮುಕ್ತಿಯನ್ನು ತಿರಸ್ಕರಿಸುವಂತಹ ಈ ಭಕ್ತಿಯೋಗವೇ ಪರಮ ಪುರುಷಾರ್ಥ ಅಥವಾ ಸಾಧ್ಯವೆಂದು ಹೇಳಲಾಗಿದೆ. ಇದರ ಮೂಲಕ ಮನುಷ್ಯನು ಮೂರೂ

* [೧] – ಭಗವಂತನ ನಿತ್ಯಧಾಮದಲ್ಲಿ ವಾಸಿಸುವುದು. [೨] – ಭಗವಂತನಂತೆಯೇ ಐಶ್ವರ್ಯವನ್ನು ಹೊಂದುವಿಕೆ. [೩] – ಸದಾ ಭಗವಂತನ ಸಮೀಪದಲ್ಲಿಯೇ ಇರುವುದು, [೪] – ಭಗವಂತನಂತೆಯೇ ರೂಪವನ್ನು ಹೊಂದುವಿಕೆ. [೫] – ಭಗವಂತನ ವಿಗ್ರಹದಲ್ಲಿ ಸೇರಿ ಹೋಗುವುದು. ಅವನೊಂದಿಗೆ ಒಂದಾಗುವುದು, ಅಥವಾ ಬ್ರಹ್ಮರೂಪನಾಗುವುದು.

ಸ ಏವ ಭಕ್ತಿಯೋಗಾಖ್ಯ ಆತ್ಯಂತಿಕ ಉದಾಹೃತಃ ।
ಯೇನಾತಿವ್ರಜ್ಯ ತ್ರಿಗುಣಂ ಮದ್ಭಾವಾಯೋಪಪದ್ಯತೇ ॥ ೧೪ ॥

ನಿಷೇವಿತೇನಾನಿಮಿತ್ತೇನ ಸ್ವಧರ್ಮೇಣ ಮಹೀಯಸಾ ।
ಕ್ರಿಯಾಯೋಗೇನ ಶಸ್ತೇನ ನಾತಿಹಿಂಸ್ರೇಣ ನಿತ್ಯಶಃ ॥ ೧೫ ॥

ಮದ್ಧಿಷ್ಣ್ಯದರ್ಶನಸ್ಪರ್ಶಪೂಜಾಸ್ತುತ್ಯಭಿವಂದನೈಃ ।
ಭೂತೇಷು ಮದ್ಭಾವನಯಾ ಸತ್ತ್ವೇನಾಸಂಗಮೇನ ಚ ॥ ೧೬ ॥

ಮಹತಾಂ ಬಹುಮಾನೇನ ದೀನಾನಾಮನುಕಂಪಯಾ ।
ಮೈತ್ರ್ಯಾ ಚೈವಾತ್ಮತುಲ್ಯೇಷು ಯಮೇನ ನಿಯಮೇನ ಚ ॥ ೧೭ ॥

ಆಧ್ಯಾತ್ಮಿಕಾನುಶ್ರವಣಾನ್ನಾಮಸಂಕೀರ್ತನಾಚ್ಚ ಮೇ ।
ಆರ್ಜವೇನಾರ್ಯಸಂಗೇನ ನಿರಹಂಕ್ರಿಯಯಾ ತಥಾ ॥ ೧೮ ॥

ಮದ್ಧರ್ಮಣೋ ಗುಣೈರೇತೈಃ ಪರಿಸಂಶುದ್ಧ ಆಶಯಃ ।
ಪುರುಷಸ್ಯಾಂಜಸಾಭ್ಯೇತಿ ಶ್ರುತಮಾತ್ರಗುಣಂ ಹಿ ಮಾಮ್ ॥ ೧೯ ॥

ಯಥಾ ವಾತರಥೋ ಘ್ರಾಣಮಾವೃಂಕ್ತೇ ಗಂಧ ಆಶಯಾತ್ ।
ಏವಂ ಯೋಗರತಂ ಚೇತ ಆತ್ಮಾನಮವಿಕಾರಿ ಯತ್ ॥ ೨೦ ॥

ಅಹಂ ಸರ್ವೇಷು ಭೂತೇಷು ಭೂತಾತ್ಮಾವಸ್ಥಿತಃ ಸದಾ ।
ತಮವಜ್ಞಾಯ ಮಾಂ ಮರ್ತ್ಯಃ ಕುರುತೇಽರ್ಚಾವಿಡಂಬನಮ್ ॥ ೨೧ ॥

ಯೋ ಮಾಂ ಸರ್ವೇಷು ಭೂತೇಷು ಸಂತಮಾತ್ಮಾನಮೀಶ್ವರಮ್ ।
ಹಿತ್ವಾರ್ಚಾಂ ಭಜತೇ ಮೌಢ್ಯಾದ್ಭಸ್ಮನ್ಯೇವ ಜುಹೋತಿ ಸಃ ॥ ೨೨ ॥

ದ್ವಿಷತಃ ಪರಕಾಯೇ ಮಾಂ ಮಾನಿನೋ ಭಿನ್ನದರ್ಶಿನಃ ।
ಭೂತೇಷು ಬದ್ಧವೈರಸ್ಯ ನ ಮನಃ ಶಾಂತಿಮೃಚ್ಛತಿ ॥ ೨೩ ॥

ಅಹಮುಚ್ಚಾವಚೈರ್ದ್ರವ್ಯೈಃ ಕ್ರಿಯಯೋತ್ಪನ್ನಯಾನಘೇ ।
ನೈವ ತುಷ್ಯೇಽರ್ಚಿತೋಽರ್ಚಾಯಾಂ ಭೂತಗ್ರಾಮಾವಮಾನಿನಃ ॥ ೨೪ ॥

ಅರ್ಚಾದಾವರ್ಚಯೇತ್ತಾವದೀಶ್ವರಂ ಮಾಂ ಸ್ವಕರ್ಮಕೃತ್ ।
ಯಾವನ್ನ ವೇದ ಸ್ವಹೃದಿ ಸರ್ವಭೂತೇಷ್ವವಸ್ಥಿತಮ್ ॥ ೨೫ ॥

ಆತ್ಮನಶ್ಚ ಪರಸ್ಯಾಪಿ ಯಃ ಕರೋತ್ಯಂತರೋದರಮ್ ।
ತಸ್ಯ ಭಿನ್ನದೃಶೋ ಮೃತ್ಯುರ್ವಿದಧೇ ಭಯಮುಲ್ಬಣಮ್ ॥ ೨೬ ॥

ಗುಣಗಳನ್ನು ದಾಟಿ ನನ್ನ ಭಾವವನ್ನು ಅಂದರೆ ನನ್ನ ಪ್ರೇಮರೂಪೀ ಅಪ್ರಾಕೃತ ಸ್ವರೂಪವನ್ನು ಪಡೆದುಕೊಳ್ಳುವನು. ॥ ೧೪ ॥

ನಿಷ್ಕಾಮಭಾವದಿಂದ ಶ್ರದ್ಧಾಪೂರ್ವಕ ತನ್ನ ನಿತ್ಯ-ನೈಮಿತ್ತಿಕ ಕರ್ತವ್ಯಗಳನ್ನು ಪಾಲಿಸುತ್ತಾ ಪ್ರತಿದಿನವೂ ಹಿಂಸಾರಹಿತ ಉತ್ತಮ ಕ್ರಿಯಾಯೋಗವನ್ನು ಅನುಷ್ಠಾನ ಮಾಡುವುದು; ನನ್ನ ಪ್ರತಿಮೆಯನ್ನು ದರ್ಶನ, ಸ್ಪರ್ಶ, ಪೂಜೆ, ಸ್ತುತಿ, ವಂದನೆ ಮಾಡುವುದು; ಸರ್ವಪ್ರಾಣಿಗಳಲ್ಲಿ ನನ್ನನ್ನು ಭಾವಿಸುವುದು; ಧೈರ್ಯ ಮತ್ತು ವೈರಾಗ್ಯವನ್ನು ಅವಲಂಬಿಸುವುದು; ಮಹಾಪುರುಷರನ್ನು ಗೌರವಿಸುವುದು; ದೀನರಲ್ಲಿ ದಯೆ, ಸಮಾನರಲ್ಲಿ ಮಿತ್ರತೆಯ ವ್ಯವಹಾರಮಾಡುವುದು; ಯಮ-ನಿಯಮಗಳನ್ನು ಪಾಲಿಸುವುದು; ಅಧ್ಯಾತ್ಮಶಾಸ್ತ್ರಗಳ ಶ್ರವಣ ಮತ್ತು ನನ್ನ ನಾಮಗಳನ್ನು ಗಟ್ಟಿಯಾಗಿ ಕೀರ್ತಿಸುವುದರಿಂದ; ಮನಸ್ಸಿನ ಸರಳತೆ, ಸತ್ಪುರುಷರ ಸಂಗ, ಅಹಂಕಾರದ ತ್ಯಾಗದಿಂದ ನನ್ನ ಧರ್ಮಗಳನ್ನು (ಭಾಗವತ ಧರ್ಮಗಳನ್ನು) ಅನುಷ್ಠಾನ ಮಾಡುವಂತಹ ಭಕ್ತಜನರ ಚಿತ್ತವು ಅತ್ಯಂತ ಶುದ್ಧವಾಗಿ ನನ್ನ ಗುಣಗಳ ಶ್ರವಣಮಾತ್ರದಿಂದ ಆಯಾಸವಿಲ್ಲದೆಯೇ ನನ್ನಲ್ಲಿ ತೊಡಗುತ್ತದೆ. ॥ ೧೫-೧೯ ॥

ಸುಗಂಧವು ತನಗೆ ಆಶ್ರಯವಾದ ಪುಷ್ಪದಿಂದ ಗಾಳಿಯೆಂಬ ಯಾನದ ಮೂಲಕ ಮೂಗನ್ನು ತಲುಪುವಂತೆಯೇ, ನಿರ್ವಿಕಾರಿಯಾದ ಚಿತ್ತವು ಭಕ್ತಿಯೋಗದಲ್ಲಿ ತತ್ಪರವಾಗಿ ಪರಮಾತ್ಮನನ್ನು ಸೇರಿಕೊಳ್ಳುತ್ತದೆ. ॥ ೨೦ ॥ ನಾನು ಆತ್ಮರೂಪದಿಂದ ಸದಾಕಾಲ ಎಲ್ಲ ಜೀವರಲ್ಲಿ ಇದ್ದೇನೆ. ಅದಕ್ಕಾಗಿ ಸರ್ವಭೂತಗಳಲ್ಲಿರುವ ಪರಮಾತ್ಮನಾದ ನನ್ನನ್ನು ಅನಾದರಿಸಿ, ಕೇವಲ ಪ್ರತಿಮೆಯಲ್ಲೇ ನನ್ನನ್ನು ಪೂಜಿಸುವವರ ಪೂಜೆಯು ಕೇವಲ ವಿಡಂಬನೆಯಾಗಿದೆ. ॥ ೨೧ ॥ ಎಲ್ಲರ ಆತ್ಮಾ ಪರಮೇಶ್ವರನಾದ ನಾನು ಎಲ್ಲ ಪ್ರಾಣಿಗಳಲ್ಲಿಯೂ ಇದ್ದೇನೆ. ಇಂತಹ ಸ್ಥಿತಿಯಲ್ಲಿ ಮೋಹವಶರಾಗಿ ನನ್ನನ್ನು ಉಪೇಕ್ಷಿಸಿ ಕೇವಲ ಪ್ರತಿಮೆಯ ಪೂಜೆಯಲ್ಲೇ ತೊಡಗಿರುವವರು ಬೂದಿಯಲ್ಲಿ ಹೋಮ ಮಾಡಿದಂತೆ ಆಗುವುದು. ॥ ೨೨ ॥ ಭೇದದೃಷ್ಟಿಯುಳ್ಳವನು ಅಭಿಮಾನದಿಂದ ಬೇರೆ ಜೀವರೊಂದಿಗೆ ವೈರಕಟ್ಟಿಕೊಳ್ಳುವನು. ಹೀಗೆ ಅವುಗಳ ದೇಹದಲ್ಲಿ ಇರುವ ಆತ್ಮನಾದ ನನ್ನನ್ನು ದ್ವೇಷಿಸುತ್ತಾನೆ. ಇಂತಹವರ ಮನಸ್ಸಿಗೆ ಎಂದಿಗೂ ಶಾಂತಿಯು ದೊರೆಯುವುದಿಲ್ಲ. ॥ ೨೩ ॥ ತಾಯೇ! ಇತರ ಜೀವರಿಗೆ ಅಪಮಾನ ಮಾಡುವವನು ಸಾಮಾನ್ಯವಾದ ಮತ್ತು ಶ್ರೇಷ್ಠವಾದ ಹಲವು ಬಗೆಯ ಸಾಮಗ್ರಿಗಳಿಂದ ಅನೇಕ ಪ್ರಕಾರವಾದ ವಿಧಿ-ವಿಧಾನಗಳೊಡನೆ ನನ್ನ ಮೂರ್ತಿಯನ್ನು ಪೂಜಿಸಿದರೂ ನಾನು ಅದರಿಂದ ಪ್ರಸನ್ನನಾಗುವುದಿಲ್ಲ. ॥ ೨೪ ॥ ತನ್ನ ಹೃದಯದಲ್ಲಿಯೂ ಹಾಗೂ ಸಂಪೂರ್ಣ ಪ್ರಾಣಿಗಳಲ್ಲಿಯೂ ಇರುವ ಪರಮಾತ್ಮನ ಅನುಭವವು ಆಗುವವರೆಗೆ ಮನುಷ್ಯನು ತನ್ನ ಧರ್ಮದ ಅನುಷ್ಠಾನ ಮಾಡುತ್ತಾ ಈಶ್ವರನಾದ ನನ್ನನ್ನು ಪ್ರತಿಮೆಯೇ ಮುಂತಾದವುಗಳಲ್ಲಿ ಪೂಜೆ ಮಾಡುತ್ತಾ ಇರಬೇಕು. ॥ ೨೫ ॥

ಆತ್ಮ ಮತ್ತು ಪರಮಾತ್ಮರ ನಡುವೆ ಸ್ವಲ್ಪವಾದರೂ ಅಂತರ ತೋರುವ ಭೇದದರ್ಶಿಯಾದವನಿಗೆ ನಾನು ಮೃತ್ಯುರೂಪದಿಂದ ಮಹಾ ಭಯವನ್ನು ತಂದು ಒಡ್ಡುತ್ತೇನೆ. ॥ ೨೬ ॥ ಆದ್ದರಿಂದ ಎಲ್ಲ ಪ್ರಾಣಿಗಳ ಒಳಗೂ ಮನೆಮಾಡಿಕೊಂಡು ಅವುಗಳ ಆತ್ಮನಾಗಿರುವ ಪರಮಾತ್ಮನಾದ ನನ್ನನ್ನು ಯಥೋಚಿತವಾಗಿ ದಾನ, ಸಮ್ಮಾನ

ಅಥ ಮಾಂ ಸರ್ವಭೂತೇಷು ಭೂತಾತ್ಮಾನಂ ಕೃತಾಲಯಮ್ ।
ಅರ್ಹಯೇದ್ದಾನಮಾನಾಭ್ಯಾಂ ಮೈತ್ರ್ಯಾಭಿನ್ನೇನ ಚಕ್ಷುಷಾ ॥ ೨೭ ॥

ಜೀವಾಃ ಶ್ರೇಷ್ಠಾ ಹ್ಯಜೀವಾನಾಂ ತತಃ ಪ್ರಾಣಭೃತಃ ಶುಭೇ ।
ತತಃ ಸಚಿತ್ತಾಃ ಪ್ರವರಾಸ್ತತಶ್ಚೇಂದ್ರಿಯವೃತ್ತಯಃ ॥ ೨೮ ॥

ತತ್ರಾಪಿ ಸ್ಪರ್ಶವೇದಿಭ್ಯಃ ಪ್ರವರಾ ರಸವೇದಿನಃ ।
ತೇಭ್ಯೋ ಗಂಧವಿದಃ ಶ್ರೇಷ್ಠಾಸ್ತತಃ ಶಬ್ದವಿದೋ ವರಾಃ ॥ ೨೯ ॥

ರೂಪಭೇದವಿದಸ್ತತ್ರ ತತಶ್ಚೋಭಯತೋದತಃ ।
ತೇಷಾಂ ಬಹುಪದಾಃ ಶ್ರೇಷ್ಠಾಶ್ಚತುಷ್ಪಾದಸ್ತತೋ ದ್ವಿಪಾತ್ ॥ ೩೦ ॥

ತತೋ ವರ್ಣಾಶ್ಚ ಚತ್ವಾರಸ್ತೇಷಾಂ ಬ್ರಾಹ್ಮಣ ಉತ್ತಮಃ ।
ಬ್ರಾಹ್ಮಣೇಷ್ವಪಿ ವೇದಜ್ಞೋ ಹ್ಯರ್ಥಜ್ಞೋಽಭ್ಯಧಿಕಸ್ತತಃ ॥ ೩೧ ॥

ಅರ್ಥಜ್ಞಾತ್ಸಂಶಯಚ್ಛೇತ್ತಾ ತತಃ ಶ್ರೇಯಾನ್ ಸ್ವಕರ್ಮಕೃತ್ ।
ಮುಕ್ತಸಂಗಸ್ತತೋ ಭೂಯಾನದೋಗ್ಧಾ ಧರ್ಮಮಾತ್ಮನಃ ॥ ೩೨ ॥

ತಸ್ಮಾನ್ಮಯ್ಯರ್ಪಿತಾಶೇಷಕ್ರಿಯಾರ್ಥಾತ್ಮಾ ನಿರಂತರಃ ।
ಮಯ್ಯರ್ಪಿತಾತ್ಮನಃ ಪುಂಸೋ ಮಯಿ ಸಂನ್ಯಸ್ತಕರ್ಮಣಃ ।
ನ ಪಶ್ಯಾಮಿ ಪರಂ ಭೂತಮಕರ್ತುಃ ಸಮದರ್ಶನಾತ್ ॥ ೩೩ ॥

ಮನಸೈತಾನಿ ಭೂತಾನಿ ಪ್ರಣಮೇದ್ಬಹು ಮಾನಯನ್ ।
ಈಶ್ವರೋ ಜೀವಕಲಯಾ ಪ್ರವಿಷ್ಟೋ ಭಗವಾನಿತಿ ॥ ೩೪ ॥

ಭಕ್ತಿಯೋಗಶ್ಚ ಯೋಗಶ್ಚ ಮಯಾ ಮಾನವ್ಯುದೀರಿತಃ ।
ಯಯೋರೇಕತರೇಣೈವ ಪುರುಷಃ ಪುರುಷಂ ವ್ರಜೇತ್ ॥ ೩೫ ॥

ಸ್ನೇಹದ ವ್ಯವಹಾರ ಹಾಗೂ ಸಮದೃಷ್ಟಿಯ ಮೂಲಕ ಪೂಜಿಸಬೇಕು. ॥ ೨೭ ॥

ಅಮ್ಮಾ! ಕಲ್ಲು ಮುಂತಾದ ಅಚೇತನಗಳಿಗಿಂತ ವೃಕ್ಷವೇ ಮುಂತಾದ ಜೀವಗಳು ಶ್ರೇಷ್ಠವಾಗಿವೆ. ಅವುಗಳಿಗಿಂತಲೂ ಉಸಿರಾಡುವ ಪ್ರಾಣಿಗಳು ಶ್ರೇಷ್ಠರು. ಅವುಗಳಲ್ಲಿಯೂ ಮನಸ್ಸುಳ್ಳ ಪ್ರಾಣಿಗಳು ಉತ್ತಮರು. ಅವುಗಳಿಗಿಂತಲೂ ಇಂದ್ರಿಯಗಳ ವೃತ್ತಿಗಳಿಂದ ಕೂಡಿದ ಪ್ರಾಣಿಗಳು ಶ್ರೇಷ್ಠವಾದವುಗಳು. ಇಂದ್ರಿಯಗಳುಳ್ಳ ಪ್ರಾಣಿಗಳಿಗಿಂತಲೂ ಕೇವಲ ಸ್ಪರ್ಶವನ್ನು ಮಾತ್ರ ಅನುಭವಿಸುವ ಪ್ರಾಣಿಗಳೂ, ಅವುಗಳಿಗಿಂತ ರಸವನ್ನು ಗ್ರಹಿಸುವ ಮತ್ಸ್ಯವೇ ಮುಂತಾದ ಪ್ರಾಣಿಗಳು ಶ್ರೇಷ್ಠ ಹಾಗೂ ರಸವನ್ನು ತಿಳಿಯುವವರಿಗಿಂತಲೂ ಗಂಧವನ್ನು ಗ್ರಹಿಸುವ ಭ್ರಮರಾದಿಗಳು, ಗಂಧವನ್ನು ಗ್ರಹಿಸುವವುಗಳಿಗಿಂತ ಶಬ್ದವನ್ನು ಗ್ರಹಿಸುವ ಸರ್ಪಾದಿ ಪ್ರಾಣಿಗಳೂ ಶ್ರೇಷ್ಠ ಎನಿಸುವವು. ॥ ೨೮-೨೯ ॥ ಅವುಗಳಿಗಿಂತಲೂ ರೂಪವನ್ನು ಅನುಭವಿಸುವ ಕಾಗೆಯೇ ಮುಂತಾದವುಗಳು ಉತ್ತಮ. ಅವುಗಳಿಗಿಂತಲೂ ಬಾಯಿಯೊಳಗೆ ಮೇಲೆ-ಕೆಳಗೆ ಹಲ್ಲು ಇರುವ ಜೀವರು ಶ್ರೇಷ್ಠವಾಗಿವೆ. ಅವುಗಳಲ್ಲಿಯೂ ಕಾಲುಗಳಿಲ್ಲದ ಜೀವಿಗಳಿಗಿಂತಲೂ ಅನೇಕ ಚರಣವುಳ್ಳವುಗಳು ಶ್ರೇಷ್ಠವಾಗಿವೆ. ಅನೇಕ ಚರಣಗಳುಳ್ಳವುಗಳಿಗಿಂತ ನಾಲ್ಕುಚರಣಗಳುಳ್ಳವುಗಳು ಶ್ರೇಷ್ಠವು. ನಾಲ್ಕು ಚರಣಗಳುಳ್ಳವುಗಳಿಗಿಂತಲೂ ಎರಡು ಕಾಲುಗಳುಳ್ಳ ಮನುಷ್ಯನು ಶ್ರೇಷ್ಠನಾಗಿದ್ದಾನೆ. ॥ ೩೦ ॥ ಮನುಷ್ಯರಲ್ಲಿಯೂ ನಾಲ್ಕು ವರ್ಣಗಳು ಶ್ರೇಷ್ಠ. ಆ ನಾಲ್ಕು ವರ್ಣಗಳಲ್ಲಿಯೂ ಬ್ರಾಹ್ಮಣರು ಶ್ರೇಷ್ಠರು. ಬ್ರಾಹ್ಮಣರಲ್ಲಿಯೂ ವೇದಗಳನ್ನು ತಿಳಿದವರು, ವೇದಜ್ಞರಲ್ಲಿಯೂ ವೇದಗಳ ತಾತ್ಪರ್ಯವನ್ನು ತಿಳಿದವರು ಶ್ರೇಷ್ಠರಾಗಿದ್ದಾರೆ. ॥ ೩೧ ॥ ತಾತ್ಪರ್ಯ ತಿಳಿದವರಲ್ಲಿ ಸಂಶಯವನ್ನು ಹೋಗಲಾಡಿಸುವವರೂ, ಅವರಿಗಿಂತಲೂ ತಮ್ಮ ವರ್ಣಾಶ್ರಮೋಚಿತವಾದ ಧರ್ಮವನ್ನು ಪಾಲಿಸುವವರು ಹಾಗೂ ಅವರಿಗಿಂತಲೂ ಆಸಕ್ತಿಯನ್ನು ತ್ಯಜಿಸಿದವರು ಮತ್ತು ತಮ್ಮ ಧರ್ಮವನ್ನು ನಿಷ್ಕಾಮ ಭಾವದಿಂದ ಆಚರಿಸುವವರು ಶ್ರೇಷ್ಠರಾಗಿದ್ದಾರೆ. ॥ ೩೨ ॥ ಅವರಿಗಿಂತಲೂ ತಮ್ಮ ಎಲ್ಲ ಕರ್ಮಗಳನ್ನು, ಅವುಗಳ ಫಲವನ್ನು ಹಾಗೂ ತಮ್ಮ ಶರೀರವನ್ನೂ ನನ್ನಲ್ಲಿ ಅರ್ಪಿಸಿ ಭೇದಭಾವವನ್ನು ಬಿಟ್ಟು ನನ್ನ ಉಪಾಸನೆ ಮಾಡುವವರು ಶ್ರೇಷ್ಠರಾಗಿದ್ದಾರೆ. ಹೀಗೆ ನನ್ನಲ್ಲಿಯೇ ಚಿತ್ತವನ್ನು ಮತ್ತು ಕರ್ಮವನ್ನು ಸಮರ್ಪಿಸುವ ಕರ್ತೃತ್ವವನ್ನು ತೊರೆದು, ಸಮದರ್ಶಿಗಳಾದ ಮನುಷ್ಯರಿಗಿಂತ ಹೆಚ್ಚಿನ ಬೇರೆ ಯಾವ ಪ್ರಾಣಿಯೂ ನನಗೆ ಕಂಡುಬರುವುದಿಲ್ಲ. ॥ ೩೩ ॥ ಆದ್ದರಿಂದ ಸಾಕ್ಷಾತ್ ಶ್ರೀಭಗವಂತನೇ ತನ್ನ ಜೀವರೂಪವಾದ ಅಂಶದಿಂದ ಎಲ್ಲದರಲ್ಲಿ ಪ್ರವೇಶಮಾಡಿದ್ದಾನೆ ಎಂದು ಭಾವಿಸಿ ಸಮಸ್ತ ಪ್ರಾಣಿಗಳನ್ನು ತುಂಬು ಆದರದಿಂದ ಮನಸ್ಸಿನಿಂದ ನಮಸ್ಕರಿಸಬೇಕು. ॥ ೩೪ ॥

ಅಮ್ಮಾ! ಹೀಗೆ ನಾನು ನಿನಗಾಗಿ ಭಕ್ತಿಯೋಗ ಮತ್ತು ಅಷ್ಟಾಂಗಯೋಗವನ್ನು ವರ್ಣಿಸಿರುವೆನು. ಇವುಗಳಲ್ಲಿ ಒಂದನ್ನಾದರೂ ಸಾಧನೆಮಾಡುವುದರಿಂದ ಜೀವನು ಪರಮಪುರುಷ ಭಗವಂತನನ್ನು ಪಡೆದುಕೊಳ್ಳಬಲ್ಲನು. ॥ ೩೫ ॥

ಏತದ್ಭಗವತೋ ರೂಪಂ ಬ್ರಹ್ಮಣಃ ಪರಮಾತ್ಮನಃ ।
ಪರಂ ಪ್ರಧಾನಂ ಪುರುಷಂ ದೈವಂ ಕರ್ಮವಿಚೇಷ್ಟಿತಮ್
॥ ೩೬ ॥

ರೂಪಭೇದಾಸ್ಪದಂ ದಿವ್ಯಂ ಕಾಲ ಇತ್ಯಭಿಧೀಯತೇ ।
ಭೂತಾನಾಂ ಮಹದಾದೀನಾಂ ಯತೋ ಭಿನ್ನದೃಶಾಂ ಭಯಮ್
॥ ೩೭ ॥

ಯೋಽನ್ತಃಪ್ರವಿಶ್ಯ ಭೂತಾನಿ ಭೂತೈರತ್ತ್ಯಖಿಲಾಶ್ರಯಃ ।
ಸ ವಿಷ್ಣ್ವಾಖ್ಯೋಽಧಿಯಜ್ಞೋಽಸೌ ಕಾಲಃ ಕಲಯತಾಂ ಪ್ರಭುಃ
॥ ೩೮ ॥

ನ ಚಾಸ್ಯ ಕಶ್ಚಿದ್ದಯಿತೋ ನ ದ್ವೇಷ್ಯೋ ನ ಚ ಬಾಂಧವಃ ।
ಆವಿಶತ್ಯಪ್ರಮತ್ತೋಽಸೌ ಪ್ರಮತ್ತಂ ಜನಮಂತಕೃತ್
॥ ೩೯ ॥

ಯದ್ಭಯಾದ್ವಾತಿ ವಾತೋಽಯಂ
ಸೂರ್ಯಸ್ತಪತಿ ಯದ್ಭಯಾತ್ ।
ಯದ್ಭಯಾದ್ವರ್ಷತೇ ದೇವೋ
ಭಗಣೋ ಭಾತಿ ಯದ್ಭಯಾತ್ ॥ ೪೦ ॥

ಯದ್ವನಸ್ಪತಯೋ ಭೀತಾ ಲತಾಶ್ಚೌಷಧಿಭಿಃ ಸಹ ।
ಸ್ವೇ ಸ್ವೇ ಕಾಲೇಽಭಿಗೃಹ್ಣಂತಿ ಪುಷ್ಪಾಣಿ ಚ ಫಲಾನಿ ಚ
॥ ೪೧ ॥

ಸ್ರವಂತಿ ಸರಿತೋ ಭೀತಾ ನೋತ್ಸರ್ಪತ್ಯುದಧಿರ್ಯತಃ ।
ಅಗ್ನಿರಿಂಧೇ ಸಗಿರಿಭಿರ್ಭೂರ್ನ ಮಜ್ಜತಿ ಯದ್ಭಯಾತ್
॥ ೪೨ ॥

ನಭೋ ದದಾತಿ ಶ್ವಸತಾಂ ಪದಂ ಯನ್ನಿಯಮಾದದಃ ।
ಲೋಕಂ ಸ್ವದೇಹಂ ತನುತೇ ಮಹಾನ್ಸಪ್ತಭಿರಾವೃತಮ್
॥ ೪೩ ॥

ಗುಣಾಭಿಮಾನಿನೋ ದೇವಾಃ ಸರ್ಗಾದಿಷ್ವಸ್ಯ ಯದ್ಭಯಾತ್ ।
ವರ್ತಂತೇಽನುಯುಗಂ ಯೇಷಾಂ ವಶ ಏತಚ್ಚರಾಚರಮ್
॥ ೪೪ ॥

ಸೋಽನಂತೋಽಂತಕರಃ ಕಾಲೋಽನಾದಿರಾದಿಕೃದವ್ಯಯಃ ।
ಜನಂ ಜನೇನ ಜನಯನ್ಮಾರಯನ್ಮೃತ್ಯುನಾಂತಕಮ್
॥ ೪೫ ॥

ಪರಮಾತ್ಮ ಪರಬ್ರಹ್ಮನಾದ ಭಗವಂತನ ಅದ್ಭುತವಾದ ಪ್ರಭಾವದಿಂದ ಸಂಪನ್ನವಾಗಿ, ಜಗತ್ತಿನ ಪದಾರ್ಥಗಳ ನಾನಾವಿಧ ವ್ಯತ್ಯಾಸಕ್ಕೆ ಕಾರಣವಾಗಿರುವ ಸ್ವರೂಪ ವಿಶೇಷವೇ 'ಕಾಲ'ವಾಗಿದೆ. ಪ್ರಕೃತಿ ಮತ್ತು ಪುರುಷರು ಇದರ ರೂಪಗಳೇ ಆಗಿವೆ ಹಾಗೂ ಈ ಎರಡರಿಂದಲೂ ಬೇರೆ ಆಗಿದೆ. ಇದು ನಾನಾ ಪ್ರಕಾರದ ಕರ್ಮಗಳಿಗೆ ಮೂಲವಾದ ಅದೃಷ್ಟವೂ ಆಗಿದೆ. ಮಹತ್ತತ್ತ್ವವೇ ಮುಂತಾದವುಗಳಲ್ಲಿ ಅಭಿಮಾನವನ್ನಿಟ್ಟಿರುವ ಭೇದದರ್ಶಿ ಪ್ರಾಣಿಗಳು ಸದಾ ಭಯಪಡುತ್ತಿರುವುದೂ ಇದಕ್ಕೆ. ॥ ೩೬-೩೭ ॥

ಇದು ಎಲ್ಲಕ್ಕೂ ಆಶ್ರಯವಾಗಿರುವುದರಿಂದ ಎಲ್ಲ ಪ್ರಾಣಿಗಳಲ್ಲಿಯೂ ಒಳಹೊಕ್ಕು ಭೂತಗಳ ಮೂಲಕವೇ ಅವುಗಳನ್ನು ಸಂಹರಿಸುವುದು. ಜಗತ್ತಿನ ಶಾಸನ ಮಾಡುವಂತಹ ಬ್ರಹ್ಮಾದಿಗಳಿಗೂ ಒಡೆಯನಾದ ಭಗವಾನ್ ಕಾಲನೇ ಯಜ್ಞಗಳ ಫಲವನ್ನು ಕೊಡುವ ವಿಷ್ಣುವಾಗಿದ್ದಾನೆ. ॥ ೩೮ ॥ ಇದಕ್ಕೆ ಮಿತ್ರರಾಗಲೀ, ಶತ್ರುಗಳಾಗಲೀ ಯಾರೂ ಇಲ್ಲ, ಬಂಧು-ಬಾಂಧವರೂ ಇಲ್ಲ. ಇದು ಸದಾಕಾಲ ಎಚ್ಚರವಾಗಿದ್ದು ತನ್ನ ಸ್ವರೂಪಭೂತ ಶ್ರೀಭಗವಂತನನ್ನು ಮರೆತು, ಭೋಗರೂಪವಾದ ಪ್ರಮಾದದಲ್ಲಿ ಬಿದ್ದಿರುವ ಪ್ರಾಣಿಗಳ ಮೇಲೆ ಆಕ್ರಮಣಗೈದು ಅವರನ್ನು ಸಂಹರಿಸುತ್ತದೆ. ॥ ೩೯ ॥ ಇದರ ಭಯದಿಂದಲೇ ಗಾಳಿಯು ಬೀಸುವುದು, ಇದರ ಭಯದಿಂದಲೇ ಸೂರ್ಯನು ಬೆಳಗುತ್ತಾನೆ. ಇದರ ಭಯದಿಂದಲೇ ಇಂದ್ರನು ಮಳೆಗರೆಯುವನು. ಇದರ ಭಯದಿಂದಲೇ ತಾರೆಗಳು ಮಿನುಗುತ್ತವೆ. ॥ ೪೦ ॥ ಇದರ ಭಯದಿಂದಲೇ ಓಷಧಿಗಳ ಸಹಿತ ಬಳ್ಳಿಗಳು ಮತ್ತು ಎಲ್ಲ ವನಸ್ಪತಿಗಳೂ ಕಾಲ-ಕಾಲದಲ್ಲಿ ಫಲ-ಪುಷ್ಪಗಳನ್ನು ಬಿಡುತ್ತವೆ. ॥ ೪೧ ॥ ಇದರ ಭಯದಿಂದಲೇ ನದಿಗಳು ಹರಿಯುತ್ತವೆ ಮತ್ತು ಸಮುದ್ರವು ಮೇರೆ ಮೀರುವುದಿಲ್ಲ. ಇದರ ಭಯದಿಂದಲೇ ಅಗ್ನಿಯು ಪ್ರಜ್ವಲಿಸುತ್ತಿರುವುದು ಹಾಗೂ ಪರ್ವತಗಳ ಸಹಿತ ಪೃಥ್ವಿಯು ನೀರಿನಲ್ಲಿ ಮುಳುಗುವುದಿಲ್ಲ. ॥ ೪೨ ॥ ಇದರ ಶಾಸನದಿಂದಲೇ ಈ ಆಕಾಶವು ಜೀವಂತ ಪ್ರಾಣಿಗಳಿಗೆ ಉಸಿರಾಡಲು ಅವಕಾಶ ಮಾಡಿ ಕೊಡುತ್ತದೆ ಮತ್ತು ಮಹತ್ತತ್ತ್ವವು ಅಹಂಕಾರರೂಪವಾದ ಶರೀರವನ್ನು ಏಳು ಆವರಣಗಳಿಂದ ಕೂಡಿರುವ ಬ್ರಹ್ಮಾಂಡದ ರೂಪದಲ್ಲಿ ವಿಸ್ತರಿಸುತ್ತದೆ. ॥ ೪೩ ॥

ಈ ಚರಾಚರ ಜಗತ್ತೆಲ್ಲವೂ ಯಾರ ಅಧೀನದಲ್ಲಿದೆಯೋ ಅಂತಹ ಸತ್ತ್ವಾದಿಗುಣಗಳ ನಿಯಾಮಕನಾದ ವಿಷ್ಣುವೇ ಮೊದಲಾದ ದೇವತೆಗಳೂ ಕೂಡ ಇದರ ಭಯದಿಂದಲೇ ಯುಗಗಳ ಕ್ರಮಕ್ಕೆ ಅನುಗುಣವಾಗಿ ಜಗತ್ತಿನ ಸೃಷ್ಟಿಯೇ ಮುಂತಾದ ಕಾರ್ಯಗಳಲ್ಲಿ ತತ್ಪರರಾಗಿರುತ್ತಾರೆ. ॥ ೪೪ ॥ ಅವಿನಾಶಿಯಾದ ಈ ಕಾಲವು ಸ್ವಯಂ ಅನಾದಿಯಾಗಿದ್ದರೂ, ಇತರ ತತ್ತ್ವಗಳಿಗೆ ಆದಿಯಾಗಿದೆ. ತಾನು ಅನಂತನಾಗಿದ್ದರೂ ಬೇರೆಯವರ ಅಂತವನ್ನು ಮಾಡುವುದಾಗಿದೆ. ಜನರಿಂದ ಜನರು ಹುಟ್ಟುವಂತೆ ಮಾಡಿ ಜಗತ್ತನ್ನು ರಚಿಸುತ್ತದೆ ಮತ್ತು ತನ್ನ ಸಂಹಾರಶಕ್ತಿಯಾದ ಮೃತ್ಯುವಿನ ಮೂಲಕ ಯಮರಾಜನನ್ನೂ ಕೂಡ ಕೊಂದು ಇದರ ಅಂತವನ್ನು ಮಾಡುತ್ತಾನೆ. ॥ ೪೫ ॥

ಇಪ್ಪತ್ತೊಂಭತ್ತನೆಯ ಅಧ್ಯಾಯವು ಮುಗಿಯಿತು. ॥ ೨೯ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ತೃತೀಯಸ್ಕಂಧೇ
ಕಾಪಿಲೇಯೋಪಾಖ್ಯಾನೇ ಏಕೋನತ್ರಿಂಶೋಽಧ್ಯಾಯಃ ॥ ೨೯ ॥

ಮೂವತ್ತನೆಯ ಅಧ್ಯಾಯ

ಶರೀರದಲ್ಲಿ – ಮನೆಯಲ್ಲಿ ಆಸಕ್ತರಾದ ಮನುಷ್ಯರು ಹೊಂದುವ ಅಧೋಗತಿಯ ವರ್ಣನೆ

ಕಪಿಲ ಉವಾಚ

ತಸ್ಯೈತಸ್ಯ ಜನೋ ನೂನಂ
ನಾಯಂ ವೇದೋರುವಿಕ್ರಮಮ್ ।
ಕಾಲ್ಯಮಾನೋಽಪಿ ಬಲಿನೋ
ವಾಯೋರಿವ ಘನಾವಲಿಃ ॥ ೧ ॥

ಯಂ ಯಮರ್ಥಮುಪಾದತ್ತೇ ದುಃಖೇನ ಸುಖಹೇತವೇ ।
ತಂ ತಂ ಧುನೋತಿ ಭಗವಾನ್ಪುಮಾನ್ ಶೋಚತಿ ಯತ್ಕೃತೇ ॥ ೨ ॥

ಯದಧ್ರುವಸ್ಯ ದೇಹಸ್ಯ ಸಾನುಬಂಧಸ್ಯ ದುರ್ಮತಿಃ ।
ಧ್ರುವಾಣಿ ಮನ್ಯತೇ ಮೋಹಾದ್ಗೃಹಕ್ಷೇತ್ರವಸೂನಿ ಚ ॥ ೩ ॥

ಜಂತುರ್ವೈ ಭವ ಏತಸ್ಮಿನ್ ಯಾಂ ಯಾಂ ಯೋನಿಮನುವ್ರಜೇತ್ ।
ತಸ್ಯಾಂ ತಸ್ಯಾಂ ಸ ಲಭತೇ ನಿರ್ವೃತಿಂ ನ ವಿರಜ್ಯತೇ ॥ ೪ ॥

ನರಕಸ್ಥೋಽಪಿ ದೇಹಂ ವೈ ನ ಪುಮಾಂಸ್ತ್ಯಕ್ತುಮಿಚ್ಛತಿ ।
ನಾರಕ್ಯಾಂ ನಿರ್ವೃತೌ ಸತ್ಯಾಂ ದೇವಮಾಯಾವಿಮೋಹಿತಃ ॥ ೫ ॥

ಆತ್ಮಜಾಯಾಸುತಾಗಾರಪಶುದ್ರವಿಣಬಂಧುಷು ।
ನಿರೂಢಮೂಲಹೃದಯ ಆತ್ಮಾನಂ ಬಹು ಮನ್ಯತೇ ॥ ೬ ॥

ಸಂದಹ್ಯಮಾನಸರ್ವಾಂಗ ಏಷಾಮುದ್ವಹನಾಧಿನಾ ।
ಕರೋತ್ಯವಿರತಂ ಮೂಢೋ ದುರಿತಾನಿ ದುರಾಶಯಃ ॥ ೭ ॥

ಆಕ್ಷಿಪ್ತಾತ್ಮೇಂದ್ರಿಯಃ ಸ್ತ್ರೀಣಾಮಸತೀನಾಂ ಚ ಮಾಯಯಾ ।
ರಹೋರಚಿತಯಾಲಾಪೈಃ ಶಿಶೂನಾಂ ಕಲಭಾಷಿಣಾಮ್ ॥ ೮ ॥

ಗೃಹೇಷು ಕೂಟಧರ್ಮೇಷು ದುಃಖತಂತ್ರೇಷ್ವತಂದ್ರಿತಃ ।
ಕುರ್ವನ್ ದುಃಖಪ್ರತೀಕಾರಂ ಸುಖವನ್ಮನ್ಯತೇ ಗೃಹೀ ॥ ೯ ॥

ಅರ್ಥೈರಾಪಾದಿತೈರ್ಗುರ್ವ್ಯಾ ಹಿಂಸಯೇತಸ್ತತಶ್ಚ ತಾನ್ ।
ಪುಷ್ಣಾತಿ ಯೇಷಾಂ ಪೋಷೇಣ ಶೇಷಭುಗ್ಯಾತ್ಯಧಃ ಸ್ವಯಮ್ ॥ ೧೦ ॥

ಶ್ರೀಕಪಿಲಭಗವಂತನು ಹೇಳುತ್ತಾನೆ – ಅಮ್ಮಾ! ಪ್ರಬಲವಾದ ಬಿರುಗಾಳಿಯು ಹೊಡೆದುಕೊಂಡು ಹೋಗುತ್ತಿರುವ ಮೇಘ ಸಮೂಹವು ಗಾಳಿಯ ಬಲವನ್ನು ಅರಿಯದಂತೆ, ಈ ಜೀವಿಯೂ ಕೂಡ ಬಲಶಾಲಿಯಾದ ಕಾಲನ ಪ್ರೇರಣೆಯಿಂದ ಬೇರೆ-ಬೇರೆ ಅವಸ್ಥೆಗಳಲ್ಲಿಯೂ ಹಾಗೂ ಯೋನಿಗಳಲ್ಲಿಯೂ ಅಲೆದಾಡುತ್ತಿದ್ದರೂ ಕಾಲದ ಪ್ರಬಲ ಪರಾಕ್ರಮವನ್ನು ತಿಳಿಯುವುದಿಲ್ಲ. ॥ ೧ ॥ ಜೀವಿಯು ಸುಖದ ಬಯಕೆಯಿಂದ ಯಾವ-ಯಾವ ವಸ್ತುಗಳನ್ನು ಬಹಳ ಕಷ್ಟಪಟ್ಟು ಗಳಿಸುತ್ತಾನೆಯೋ, ಅವನ್ನೆಲ್ಲಾ ಕಾಲರೂಪಿಯಾದ ಭಗವಂತನು ನಾಶಪಡಿಸಿ, ಈ ಜೀವಿಗೆ ಮಹಾಶೋಕವನ್ನು ತರುತ್ತಾನೆ. ॥ ೨ ॥ ಮಂದಮತಿಯಾದ ಜೀವಿಯು ತನ್ನ ಈ ನಾಶವುಳ್ಳ ಶರೀರವನ್ನೂ ಹಾಗೂ ಇದರ ಸಂಬಂಧಿಗಳನ್ನೂ, ಮನೆ, ಹೊಲ, ಧನಾದಿಗಳನ್ನು ನಿತ್ಯವೆಂದು ತಿಳಿಯುವುದೇ ಇದರ ಕಾರಣವಾಗಿದೆ. ॥ ೩ ॥ ಈ ಪ್ರಪಂಚದಲ್ಲಿ ಜೀವಿಯು ತಾನು ಹುಟ್ಟುವ ಯೋನಿಗಳಲ್ಲೇ ಆನಂದವನ್ನು ಅನುಭವಿಸತೊಡಗುತ್ತಾನೆ. ಆದರಿಂದ ಎಂದಿಗೂ ವಿರಕ್ತನಾಗುವುದೇ ಇಲ್ಲ. ॥ ೪ ॥ ಇವನು ಭಗವಂತನ ಮಾಯೆಯಿಂದ – ಕರ್ಮವಶನಾಗಿ ನರಕಸಂಬಂಧವಾದ ಯೋನಿಗಳಲ್ಲಿ ಹುಟ್ಟಿದರೂ ಅಲ್ಲಿಯ ಅಸಹ್ಯ ಪದಾರ್ಥಗಳ ಭೋಗಗಳಲ್ಲೇ ಸುಖವನ್ನೂ ತಿಳಿಯುವ ಕಾರಣದಿಂದ ಅದನ್ನು ಬಿಡಲಾರದವನು ಮೋಹಿತನಾಗುತ್ತಿದ್ದಾನೆ. ॥ ೫ ॥ ಈ ಮೂರ್ಖನು ತನ್ನ ಶರೀರ, ಪತ್ನೀ, ಪುತ್ರರು, ಮನೆ, ಪಶು, ಧನ, ಬಂಧು-ಬಾಂಧವರು ಇವರಲ್ಲಿ ಅತ್ಯಂತ ಆಸಕ್ತನಾಗಿ ಅವರ ಸಂಬಂಧದಲ್ಲಿ ನಾನಾ ಬಗೆಯ ಮನೋರಥಗಳನ್ನು ಮಾಡುತ್ತಾ, ತನ್ನನ್ನು ಮಹಾಭಾಗ್ಯಶಾಲಿಯೆಂದು ತಿಳಿಯುತ್ತಿರುವನು. ॥ ೬ ॥ ಅವರನ್ನು ಸಾಕಿ-ಸಲಹುವ ಚಿಂತೆಯಿಂದ ಈತನ ಅಂಗಾಂಗಗಳು ಉರಿಯುತ್ತಾ ಇರುತ್ತವೆ. ಆದರೂ ಹೃದಯವು ದುಷ್ಟವಾಸನೆಗಳಿಂದ ದೂಷಿತವಾಗಿರುವುದರಿಂದ ಈ ತಿಳಿಗೇಡಿಯು ಅವರಿಗಾಗಿಯೇ ನಾನಾರೀತಿಯ ಪಾಪಗಳನ್ನು ಮಾಡುತ್ತಾ ಇರುತ್ತಾನೆ. ॥ ೭ ॥ ಕುಲಟೆಯರು ಏಕಾಂತದಲ್ಲಿ ತೋರಿಸುವ ಕಪಟಪ್ರೇಮದಲ್ಲಿಯೂ, ಶಿಶುಗಳ ಮುದ್ದು ಮಾತುಗಳಲ್ಲಿಯೂ ಮನಸ್ಸು ಇಂದ್ರಿಯಗಳು ಸಿಕ್ಕಿಹಾಕಿಕೊಳ್ಳುವುದರಿಂದ ಗೃಹಸ್ಥನು ಮನೆಗೆ ಸಂಬಂಧಪಟ್ಟ ದುಃಖಪ್ರಧಾನವಾದ ಕಪಟಕರ್ಮಗಳಲ್ಲಿ ನಿರತನಾಗಿರುತ್ತಾನೆ. ಈ ನಡುವೆ ತನ್ನ ಯಾವುದಾದರೂ ಒಂದು ದುಃಖದ ಪ್ರತೀಕಾರಮಾಡಲು ತನಗೆ ಸಾಧ್ಯವಾದರೆ ಅದನ್ನೇ ಸುಖವೆಂದು ಭ್ರಮಿಸುವನು. ॥ ೮-೯ ॥ ಭಯಂಕರವಾದ ಹಿಂಸಾವೃತ್ತಿಯ ಮೂಲಕ ಎಲ್ಲೆಲ್ಲಿಂದಲೂ ಹಣವನ್ನು ಸಂಗ್ರಹಿಸಿ ಯಾರನ್ನು ಸಾಕುವುದರಿಂದ ತಾನು ನರಕಕ್ಕೆ ಹೋಗಬೇಕಾಗುತ್ತದೋ ಅವರನ್ನೇ ಸಾಕುವನು. ಅವರು ತಿಂದು-ಉಳಿದು ಮಿಕ್ಕಿದ್ದನ್ನು ತಾನು ಸೇವಿಸುವನು. ॥ ೧೦ ॥

ವಾರ್ತಾಯಾಂ ಲುಪ್ಯಮಾನಾಯಾ-
ಮಾರಬ್ಧಾಯಾಂ ಪುನಃ ಪುನಃ ।
ಲೋಭಾಭಿಭೂತೋ ನಿಃಸತ್ತ್ವಃ
ಪರಾರ್ಥೇ ಕುರುತೇ ಸ್ಪೃಹಾಮ್ ॥ ೧೧ ॥

ಕುಟುಂಬಭರಣಾಕಲ್ಪೋ ಮಂದಭಾಗ್ಯೋ ವೃಥೋದ್ಯಮಃ ।
ಶ್ರಿಯಾ ವಿಹೀನಃ ಕೃಪಣೋ ಧ್ಯಾಯನ್ ಶ್ವಸಿತಿ ಮೂಢಧೀಃ ॥ ೧೨ ॥

ಏವಂ ಸ್ವಭರಣಾಕಲ್ಪಂ ತತ್ಕಲತ್ರಾದಯಸ್ತಥಾ ।
ನಾದ್ರಿಯಂತೇ ಯಥಾ ಪೂರ್ವಂ ಕೀನಾಶಾ ಇವ ಗೋಜರಮ್ ॥ ೧೩ ॥

ತತ್ರಾಪ್ಯಜಾತನಿರ್ವೇದೋ ಭ್ರಿಯಮಾಣಃ ಸ್ವಯಂಭೃತೈಃ ।
ಜರಯೋಪಾತ್ತವೈರೂಪ್ಯೋ ಮರಣಾಭಿಮುಖೋ ಗೃಹೇ ॥ ೧೪ ॥

ಆಸ್ತೇಽವಮತ್ಯೋಪನ್ಯಸ್ತಂ ಗೃಹಪಾಲ ಇವಾಹರನ್ ।
ಆಮಯಾವ್ಯಪ್ರದೀಪ್ತಾಗ್ನಿರಲ್ಪಾಹಾರೋಽಲ್ಪಚೇಷ್ಟಿತಃ ॥ ೧೫ ॥

ವಾಯುನೋತ್ಕ್ರಮತೋತ್ತಾರಃ ಕಫಸಂರುದ್ಧನಾಡಿಕಃ ।
ಕಾಸಶ್ವಾಸಕೃತಾಯಾಸಃ ಕಂಠೇ ಘುರಘುರಾಯತೇ ॥ ೧೬ ॥

ಶಯಾನಃ ಪರಿಶೋಚದ್ಭಿಃ ಪರಿವೀತಃ ಸ್ವಬಂಧುಭಿಃ ।
ವಾಚ್ಯಮಾನೋಽಪಿ ನ ಬ್ರೂತೇ ಕಾಲಪಾಶವಶಂ ಗತಃ ॥ ೧೭ ॥

ಏವಂ ಕುಟುಂಬಭರಣೇ ವ್ಯಾಪೃತಾತ್ಮಾಜಿತೇಂದ್ರಿಯಃ ।
ಮ್ರಿಯತೇ ರುದತಾಂ ಸ್ವಾನಾಮುರುವೇದನಯಾಸ್ತಧೀಃ ॥ ೧೮ ॥

ಯಮದೂತೌ ತದಾ ಪ್ರಾಪ್ತೌ ಭೀಮೌ ಸರಭಸೇಕ್ಷಣೌ ।
ಸ ದೃಷ್ಟ್ವಾ ತ್ರಸ್ತಹೃದಯಃ ಶಕೃನ್ಮೂತ್ರಂ ವಿಮುಂಚತಿ ॥ ೧೯ ॥

ಯಾತನಾದೇಹ ಆವೃತ್ಯ ಪಾಶೈರ್ಬದ್ಧ್ವಾ ಗಲೇ ಬಲಾತ್ ।
ನಯತೋ ದೀರ್ಘಮಧ್ವಾನಂ ದಂಡ್ಯಂ ರಾಜಭಟಾ ಯಥಾ ॥ ೨೦ ॥

ತಯೋರ್ನಿರ್ಭಿನ್ನಹೃದಯಸ್ತರ್ಜನೈರ್ಜಾತವೇಪಥುಃ ।
ಪಥಿ ಶ್ವಭಿರ್ಭಕ್ಷ್ಯಮಾಣ ಆರ್ತೋಽಘಂ ಸ್ವಮನುಸ್ಮರನ್ ॥ ೨೧ ॥

ಕ್ಷುತ್ತೃಟ್ಪರೀತೋಽರ್ಕದವಾನಲಾನಿಲೈಃ
ಸಂತಪ್ಯಮಾನಃ ಪಥಿ ತಪ್ತವಾಲುಕೇ ।
ಕೃಚ್ಛ್ರೇಣ ಪೃಷ್ಠೇ ಕಶಯಾ ಚ ತಾಡಿತ-
ಶ್ಚಲತ್ಯಶಕ್ತೋಽಪಿ ನಿರಾಶ್ರಮೋದಕೇ ॥ ೨೨ ॥

ಪದೇ-ಪದೇ ಪ್ರಯತ್ನಪಟ್ಟರೂ ಇವನ ಜೀವನವು ನಡೆಯದಿದ್ದರೆ ಇವನು ಲೋಭವಶದಿಂದ ಧೈರ್ಯಗೆಟ್ಟು ಮತ್ತೊಬ್ಬರ ಹಣವನ್ನು ಕಸಿದುಕೊಳ್ಳಲು ಆಸೆಪಡುವನು. ॥ ೧೧ ॥ ದುರದೃಷ್ಟದಿಂದ ತನ್ನ ಎಲ್ಲಾ ಪ್ರಯತ್ನವೂ ಫಲಿಸದಿದ್ದರೆ, ಆ ಮೂರ್ಖನು ಐಶ್ವರ್ಯದಿಂದ ಕುಟುಂಬವನ್ನು ಸಾಕಿ-ಸಲಹಲು ಅಸಮರ್ಥನಾದಾಗ ಅತಿದುಃಖದಿಂದ ಚಿಂತಾತುರನಾಗಿ ನಿಟ್ಟುಸಿರುಬಿಡಲು ತೊಡಗುವನು. ॥ ೧೨ ॥

ಈತನು ತಮ್ಮನ್ನು ಸಾಕಿ-ಸಲಹಲು ಅಸಮರ್ಥನೆಂದು ತಿಳಿದು ಪತ್ನೀ-ಪುತ್ರಾದಿಗಳು – ಲೋಭಿಯಾದ ರೈತನು ಮುದಿಯಾದ ಎತ್ತನ್ನು ಉಪೇಕ್ಷಿಸುವಂತೆ – ಇವನನ್ನು ಮೊದಲಿನಂತೆ ಆದರಿಸದೆ ಉಪೇಕ್ಷಿಸುತ್ತಾರೆ. ॥ ೧೩ ॥ ಆದರೂ ಇವನಿಗೆ ಸಂಸಾರದಲ್ಲಿ ವೈರಾಗ್ಯ ಉಂಟಾಗುವುದಿಲ್ಲ. ಈತನು ಹಿಂದೆ ಯಾರನ್ನು ಸಾಕಿದ್ದನೋ, ಅವರೇ ಈಗ ಈತನನ್ನು ಸಾಕುವರು. ಮುಪ್ಪಿನ ಕಾರಣದಿಂದ ಇವನ ರೂಪವು ವಿಕಾರಗೊಂಡಿರುವುದು. ಶರೀರವು ರೋಗಗ್ರಸ್ತವಾಗುವುದು. ಜಠರಾಗ್ನಿಯು ಮಂದವಾಗುತ್ತದೆ. ಆಹಾರ ಮತ್ತು ಪುರುಷಾರ್ಥವೆರಡೂ ಕಡಿಮೆಯಾಗುವುದು. ಅವನು ಮರಣೋನ್ಮುಖನಾಗಿ ಮನೆಯಲ್ಲಿ ಬಿದ್ದುಕೊಂಡಿದ್ದು, ಹೆಂಡಿರು – ಮಕ್ಕಳೇ ಮುಂತಾದವರು ತಿರಸ್ಕಾರಪೂರ್ವಕವಾಗಿ ಕೊಡುವ ಕೂಳು-ನೀರನ್ನು ತಿನ್ನುತ್ತಾ ನಾಯಿಯಂತೆ ಜೀವನವನ್ನು ಕಳೆಯುವನು. ॥ ೧೪-೧೫ ॥ ಸಾವಿನ ಸಮಯವು ಸಮೀಪಿಸಿದಾಗ ಮೇಲುಸಿರು ಬರುವುದರಿಂದ ಈತನ ಕಣ್ಣುಗಳು ಮೇಲೇರುವುವು. ಉಸಿರಾಟದ ನಾಳಗಳು ಕಫದಿಂದ ಕಟ್ಟಿಹೋಗುವುವು. ಕೆಮ್ಮುವುದಕ್ಕೂ, ಉಸಿರಾಡಲಿಕ್ಕೂ ತುಂಬಾ ಕಷ್ಟವಾಗುವುದು. ಕಫವು ಕಟ್ಟುವುದರಿಂದ ಗಂಟಲು ಗುರುಗುಟ್ಟತೊಡಗುವುದು. ॥ ೧೬ ॥ ಹಾಗೆ ಬಿದ್ದುಕೊಂಡಿರುವ ಈತನ ಸುತ್ತಲೂ ದುಃಖಿತರಾದ ನೆಂಟರಿಷ್ಟರು ನೆರೆಯುವರು. ಆದರೆ ಮೃತ್ಯುಪಾಶಕ್ಕೆ ಸಿಲುಕಿಕೊಂಡಿರುವುದರಿಂದ ಅವರು ಕರೆದರೂ ಈತನು ಮಾತನಾಡಲಾರನು. ॥ ೧೭ ॥

ಹೀಗೆ ಇಂದ್ರಿಯಗಳನ್ನು ಜಯಿಸದೆ ನಿರಂತರವಾಗಿ ಕುಟುಂಬ ಪೋಷಣೆಯಲ್ಲೇ ಆಸಕ್ತನಾಗಿರುವ ಆ ಮೂಢನಾದ ಮನುಷ್ಯನು ಅಳುತ್ತಾ ಗೋಳಾಡುವ ಸ್ವಜನರ ನಡುವೆ ಅತ್ಯಂತ ವೇದನೆಯಿಂದ ಪ್ರಜ್ಞೆತಪ್ಪಿ ಮರಣವನ್ನಪ್ಪುವನು. ॥ ೧೮ ॥

ಆ ಸಮಯದಲ್ಲಿ ತನ್ನನ್ನು ಎಳೆದೊಯ್ಯಲು ಬಂದ ಅತಿ ಭಯಂಕರರಾದ ಸಿಟ್ಟಿನಿಂದ ಕಣ್ಣುಗಳುಳ್ಳ ಇಬ್ಬರು ಯಮದೂತರನ್ನು ಕಂಡು ಭಯದಿಂದ ಮಲ-ಮೂತ್ರಗಳನ್ನು ವಿಸರ್ಜಿಸುವನು. ॥ ೧೯ ॥ ಆ ಯಮದೂತರು ಅವನಿಗೆ ಯಾತನಾದೇಹದೊಳಕ್ಕೆ ಹಾಕಿ ರಾಜಭಟರು ಅಪರಾಧಿಯನ್ನು ಎಳೆದೊಯ್ಯುವಂತೆ – ಕೊರಳಿಗೆ ಪಾಶವನ್ನು ಹಾಕಿ ಬಲವಂತವಾಗಿ ಯಮಲೋಕದ ದೂರಯಾತ್ರೆಗಾಗಿ ಎಳೆದುಕೊಂಡು ಹೋಗುವರು. ॥ ೨೦ ॥ ಅವರ ಬೆದರಿಕೆಯಿಂದ ಅತನ ಹೃದಯವು ಒಡೆದು, ದೇಹವು ನಡುಗತೊಡಗುವುದು. ದಾರಿಯಲ್ಲಿ ನಾಯಿಗಳು ಅತನನ್ನು ಕಚ್ಚಿ ತಿನ್ನುವುವು. ಆಗ ಅತನು ತನ್ನ ಪಾಪಗಳನ್ನು ನೆನೆಯುತ್ತಾ ದುಃಖದಿಂದ ಬಸವಳಿಯುವನು. ॥ ೨೧ ॥

ತತ್ರ ತತ್ರ ಪತನ್ ಶ್ರಾಂತೋ ಮೂರ್ಚ್ಛಿತಃ ಪುನರುತ್ಥಿತಃ ।
ಪಥಾ ಪಾಪೀಯಸಾ ನೀತಸ್ತರಸಾ ಯಮಸಾದನಮ್ ॥ ೨೩ ॥

ಯೋಜನಾನಾಂ ಸಹಸ್ರಾಣಿ ನವತಿಂ ನವ ಚಾಧ್ವನಃ ।
ತ್ರಿಭಿರ್ಮುಹೂರ್ತೈರ್ದ್ವಾಭ್ಯಾಂ ವಾ ನೀತಃ ಪ್ರಾಪ್ನೋತಿ ಯಾತನಾಃ ॥ ೨೪ ॥

ಆದೀಪನಂ ಸ್ವಗಾತ್ರಾಣಾಂ ವೇಷ್ಟಯಿತ್ವೋಲ್ಮುಕಾದಿಭಿಃ ।
ಆತ್ಮಮಾಂಸಾದನಂ ಕ್ವಾಪಿ ಸ್ವಕೃತ್ತಂ ಪರತೋಽಪಿ ವಾ ॥ ೨೫ ॥

ಜೀವತಶ್ಚಾಂತ್ರಾಭ್ಯುದ್ಧಾರಃ ಶ್ವಗೃಧ್ರೈರ್ಯಮಸಾದನೇ ।
ಸರ್ಪವೃಶ್ಚಿಕದಂಶಾದ್ಯೈರ್ದಶದ್ಭಿಶ್ಚಾತ್ಮವೈಶಸಮ್ ॥ ೨೬ ॥

ಕೃಂತನಂ ಚಾವಯವಶೋ ಗಜಾದಿಭ್ಯೋ ಭಿದಾಪನಮ್ ।
ಪಾತನಂ ಗಿರಿಶೃಂಗೇಭ್ಯೋ ರೋಧನಂ ಚಾಂಬುಗರ್ತಯೋಃ ॥ ೨೭ ॥

ಯಾಸ್ತಾಮಿಸ್ರಾಂಧತಾಮಿಸ್ರಾ ರೌರವಾದ್ಯಾಶ್ಚ ಯಾತನಾಃ ।
ಭುಂಕ್ತೇ ನರೋ ವಾ ನಾರೀ ವಾ ಮಿಥಃ ಸಂಗೇನ ನಿರ್ಮಿತಾಃ ॥ ೨೮ ॥

ಅತ್ರೈವ ನರಕಃ ಸ್ವರ್ಗ ಇತಿ ಮಾತಃ ಪ್ರಚಕ್ಷತೇ ।
ಯಾ ಯಾತನಾ ವೈ ನಾರಕ್ಯಸ್ತಾ ಇಹಾಪ್ಯುಪಲಕ್ಷಿತಾಃ ॥ ೨೯ ॥

ಏವಂ ಕುಟುಂಬಂ ಬಿಭ್ರಾಣ ಉದರಂಭರ ಏವ ವಾ ।
ವಿಸೃಜ್ಯೇಹೋಭಯಂ ಪ್ರೇತ್ಯ ಭುಂಕ್ತೇ ತತ್ಫಲಮೀದೃಶಮ್ ॥ ೩೦ ॥

ಏಕಃ ಪ್ರಪದ್ಯತೇ ಧ್ವಾಂತಂ ಹಿತ್ವೇದಂ ಸ್ವಕಲೇವರಮ್ ।
ಕುಶಲೇತರಪಾಥೇಯೋ ಭೂತದ್ರೋಹೇಣ ಯದ್ಭೃತಮ್ ॥ ೩೦ ॥

ಹಸಿವು-ಬಾಯಾರಿಕೆಗಳಿಂದ ಆತನು ಬಳಲಿ ಬೆಂಡಾಗಿ ಉರಿಯುತ್ತಿರುವ ಕಾಡ್ಗಿಚ್ಚಿನ ಜ್ವಾಲೆಗಳಿಂದ ಸುಟ್ಟುಹೋಗತೊಡಗುವನು. ಇಂತಹ ಸ್ಥಿತಿಯಲ್ಲಿ ನೀರು-ನೆರಳಿಲ್ಲದ ಕಾದ ಮರಳಿನ ದಾರಿಯಲ್ಲಿ ಒಂದು ಹೆಜ್ಜೆಯೂ ಮುಂದಿಡಲು ಶಕ್ತಿಯೂ ಇಲ್ಲದಿದ್ದಾಗ ಯಮದೂತರು ಬೆನ್ನಿನ ಮೇಲೆ ಚಾವಟಿಗೆಯ ಏಟುಗಳನ್ನು ಕೊಡುತ್ತಿರುತ್ತಾರೆ. ಆಗಲೂ ಅತಿಕಷ್ಟದಿಂದಲಾದರೂ ಮುಂದೆ ಹೋಗಲೇಬೇಕಾಗುತ್ತದೆ. ॥ ೨೨ ॥ ಅಲ್ಲಲ್ಲಿ ಬಳಲಿಕೆಯಿಂದ ಏಳುತ್ತಾ-ಬೀಳುತ್ತಾ ಮೂರ್ಛೆ ಬೀಳುತ್ತಿದ್ದರೂ, ಜ್ಞಾನ ಬಂದ ಮೇಲೆ ಮತ್ತೆ ಏಳುತ್ತಾನೆ. ಹೀಗೆ ಅತಿ ದುಃಖಮಯ ಮಾರ್ಗದಿಂದ ಅತ್ಯಂತ ಕ್ರೂರ ಯಮದೂತರು ಅವನನ್ನು ಶೀಘ್ರವಾಗಿ ಯಮಲೋಕಕ್ಕೆ ಒಯ್ಯುವರು. ॥ ೨೩ ॥ ಯಮಲೋಕದ ದಾರಿಯ ಉದ್ದ ತೊಂಬತ್ತೊಂಭತ್ತು ಸಾವಿರ ಯೋಜನಗಳು. ಅಷ್ಟು ದೂರದ ದಾರಿಯನ್ನು ಕೇವಲ ಎರಡು-ಮೂರು ಮುಹೂರ್ತಗಳಲ್ಲೇ ದಾಟಿ ಅವನು ನರಕದಲ್ಲಿ ಬಗೆ-ಬಗೆಯ ಯಾತನೆಗಳನ್ನು ಭೋಗಿಸುವನು. ॥ ೨೪ ॥ ಅಲ್ಲಿ ಆತನ ದೇಹವನ್ನು ಉರಿಯುತ್ತಿರುವ ಕಟ್ಟಿಗೆಗಳೇ ಮುಂತಾದವುಗಳ ನಡುವೆ ಹಾಕಿ ಸುಡಲಾಗುವುದು. ಕೆಲವು ಕಡೆ ತನ್ನ ದೇಹವನ್ನು ತಾನೇ ಕತ್ತರಿಸಿಕೊಂಡು ಅಥವಾ ಇತರರು ಕತ್ತರಿಸಿದ ತನ್ನ ಮಾಂಸವನ್ನೇ ತಿನ್ನಿಸಲಾಗುತ್ತದೆ. ॥ ೨೫ ॥ ಯಮಪುರಿಯ ನಾಯಿಗಳು ಅಥವಾ ಹದ್ದುಗಳು ಜೀವಂತವಾಗಿರುವಾಗಲೇ ಆತನ ಕರುಳುಗಳನ್ನೂ ಕಚ್ಚಿ ಕೀಳುತ್ತವೆ. ಹಾವು, ಚೇಳು, ಸೊಳ್ಳೆ, ಚಿಗಟ ಮುಂತಾದವುಗಳಿಂದ ಕಚ್ಚಿಸಿ ಹಿಂಸಿಸಲಾಗುತ್ತದೆ. ॥ ೨೬ ॥ ಆತನ ಶರೀರವನ್ನು ತುಂಡು-ತುಂಡಾಗಿ ಕತ್ತರಿಸಲಾಗುತ್ತದೆ. ಆನೆಯ ಕಾಲಿನಿಂದ ತುಳಿಸಲಾಗುವುದು. ಪರ್ವತಶಿಖರದಿಂದ ತಳ್ಳಲಾಗುತ್ತದೆ. ನೀರಿನಲ್ಲಿ ಅಥವಾ ಹೊಂಡದಲ್ಲಿ ಹಾಕಿ ಮುಚ್ಚಲಾಗುತ್ತದೆ. ॥ ೨೭ ॥ ಇವೆಲ್ಲ ಯಾತನೆಗಳನ್ನೂ ಹಾಗೂ ಇದೇ ರೀತಿಯಲ್ಲಿ ತಾಮಿಸ್ರ, ಅಂಧತಾಮಿಸ್ರ, ರೌರವಗಳೇ ಮುಂತಾದ ನರಕಗಳ ಇನ್ನೂ ಅನೇಕ ಯಾತನೆಗಳನ್ನು ಜೀವಿಯು ಹೆಂಗಸರಾಗಲೀ, ಗಂಡಸರಾಗಲಿ ಪರಸ್ಪರ ದುಷ್ಟವಾದ ಸಂಸರ್ಗದಿಂದ ಉಂಟಾದ ಪಾಪಗಳ ಫಲವಾಗಿ ಅನುಭವಿಸಬೇಕಾಗುತ್ತವೆ. ॥ ೨೮ ॥ ತಾಯೇ! ಸ್ವರ್ಗ ಮತ್ತು ನರಕಗಳಾದರೋ ಇದೇ ಭೂಲೋಕದಲ್ಲಿವೆ ಎಂದು ಕೆಲವರು ಹೇಳುತ್ತಾರೆ. ಏಕೆಂದರೆ, ನರಕದ ಯಾತನೆಗಳನ್ನು ಇಲ್ಲಿಯೂ ನೋಡಲಾಗುತ್ತದೆ. ॥ ೨೯ ॥

ಈ ವಿಧವಾಗಿ ಅನೇಕ ಕಷ್ಟಗಳನ್ನು ಭೋಗಿಸುತ್ತಾ ತನ್ನ ಕುಟುಂಬವನ್ನೇ ಸಾಕುತ್ತಾ ಅಥವಾ ಕೇವಲ ತನ್ನ ಹೊಟ್ಟೆಯನ್ನೇ ತುಂಬಿಸಿಕೊಳ್ಳುವ ಮನುಷ್ಯನು ಆ ಕುಟುಂಬವನ್ನು ಮತ್ತು ಶರೀರವನ್ನು ಎರಡನ್ನೂ ಇಲ್ಲಿಯೇ ಬಿಟ್ಟು ತಾನು ಮಾಡಿದ ಪಾಪಗಳ ಫಲವನ್ನು ಸತ್ತನಂತರ ಭೋಗಿಸಬೇಕಾಗುತ್ತದೆ. ॥ ೩೦ ॥ ತನ್ನ ಶರೀರವನ್ನು ಇಲ್ಲಿಯೇ ಬಿಟ್ಟು ಪ್ರಾಣಿಗಳಿಗೆ ದ್ರೋಹವನ್ನೆಸಗಿ ಸಂಗ್ರಹಿಸಿದ ಪಾಪರೂಪವಾದ ಬುತ್ತಿಯನ್ನು ಮಾತ್ರ ತೆಗೆದುಕೊಂಡು ಒಬ್ಬಂಟಿಗನಾಗಿ ನರಕಕ್ಕೆ ಹೋಗುತ್ತಾನೆ. ॥ ೩೦ ॥ ತನ್ನ ಕುಟುಂಬದ ಹೊಟ್ಟೆಹೊರೆಯಲು ತಾನು ಮಾಡಿದ ಅನ್ಯಾಯದ ಫಲವನ್ನು ಅವನು ತಾನೇ ಅನುಭವಿಸಬೇಕಾಗುವುದು. ದೈವದಿಂದ ನಿರ್ದಿಷ್ಟವಾದ ಆ ಪಾಪ

ದೈವೇನಾಸಾದಿತಂ ತಸ್ಯ ಶಮಲಂ ನಿರಯೇ ಪುಮಾನ್ ।
ಭುಂಕ್ತೇ ಕುಟುಂಬಪೋಷಸ್ಯ ಹೃತವಿತ್ತ ಇವಾತುರಃ ॥ ೩೨ ॥

ಕೇವಲೇನ ಹ್ಯಧರ್ಮೇಣ ಕುಟುಂಬಭರಣೋತ್ಸುಕಃ ।
ಯಾತಿ ಜೀವೋಽಂಧತಾಮಿಸ್ರಂ ಚರಮಂ ತಮಸಃ ಪದಮ್ ॥ ೩೩ ॥

ಅಧಸ್ತಾನ್ನರಲೋಕಸ್ಯ ಯಾವತೀರ್ಯಾತನಾದಯಃ ।
ಕ್ರಮಶಃ ಸಮನುಕ್ರಮ್ಯ ಪುನರತ್ರಾವ್ರಜೇಚ್ಛುಚಿಃ ॥ ೩೪ ॥

ಗಳ ಫಲವನ್ನು ತಾನು ನರಕದಲ್ಲಿ ಭೋಗಿಸುತ್ತಾನೆ. ತನ್ನ ಸರ್ವಸ್ವವೂ ಕಿತ್ತುಕೊಂಡು ಹೋದಂತೆ ಕಳವಳಕ್ಕೆ ಈಡಾಗುವನು. ॥ ೩೨ ॥ ಕೇವಲ ಅಧರ್ಮದಿಂದಲೇ ಕುಟುಂಬವನ್ನು ಸಾಕುವುದರಲ್ಲೇ ಆಸಕ್ತನಾಗಿರುವ ಜೀವಿಯು ಅಂಧತಾಮಿಸ್ರ ನರಕಕ್ಕೆ ಹೋಗುತ್ತಾನೆ. ಅದು ಎಲ್ಲ ನರಕಗಳಲ್ಲಿಯೂ ಚರಮಸೀಮೆಯ ಕಷ್ಟಪ್ರದವಾದುದಾಗಿದೆ. ॥ ೩೩ ॥ ಮನುಷ್ಯಜನ್ಮವನ್ನು ಪಡೆಯುವ ಮೊದಲು ಹಂದಿ-ನಾಯಿಗಳೇ ಮುಂತಾದ ಯೋನಿಗಳಲ್ಲಿ ಇರುವ ಕಷ್ಟಗಳೆಲ್ಲವನ್ನು ಕ್ರಮವಾಗಿ ಅನುಭವಿಸಿ ಶುದ್ಧನಾಗಿ ಮತ್ತೆ ಮನುಷ್ಯಯೋನಿಯಲ್ಲಿ ಹುಟ್ಟುವನು. ॥ ೩೪ ॥

ಮೂವತ್ತನೆಯ ಅಧ್ಯಾಯವು ಮುಗಿಯಿತು. ॥ ೩೦ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ತೃತೀಯಸ್ಕಂಧೇ
ಕಾಪಿಲೇಯೋಪಾಖ್ಯಾನೇ ಕರ್ಮವಿಪಾಕೋ ನಾಮ ತ್ರಿಂಶೋಽಧ್ಯಾಯಃ ॥ ೩೦ ॥

ಮೂವತ್ತೊಂದನೆಯ ಅಧ್ಯಾಯ

ಗರ್ಭಸ್ಥಜೀವಿಯ ಬೆಳವಣಿಗೆ

ಶ್ರೀಭಗವಾನುವಾಚ

ಕರ್ಮಣಾ ದೈವನೇತ್ರೇಣ ಜಂತುರ್ದೇಹೋಪಪತ್ತಯೇ ।
ಸ್ತ್ರಿಯಾಃ ಪ್ರವಿಷ್ಟ ಉದರಂ ಪುಂಸೋ ರೇತಃಕಣಾಶ್ರಯಃ ॥ ೧ ॥

ಕಲಲಂ ತ್ವೇಕರಾತ್ರೇಣ ಪಂಚರಾತ್ರೇಣ ಬುದ್ಬುದಮ್ ।
ದಶಾಹೇನ ತು ಕರ್ಕಂಧೂಃ ಪೇಶ್ಯಂಡಂ ವಾ ತತಃ ಪರಮ್ ॥ ೨ ॥

ಮಾಸೇನ ತು ಶಿರೋ ದ್ವಾಭ್ಯಾಂ ಬಾಹ್ವಂಘ್ರ್ಯಾದ್ಯಂಗವಿಗ್ರಹಃ ।
ನಖಲೋಮಾಸ್ಥಿಚರ್ಮಾಣಿ ಲಿಂಗಚ್ಛಿದ್ರೋದ್ಭವಸ್ತ್ರಿಭಿಃ ॥ ೩ ॥

ಚತುರ್ಭಿರ್ಧಾತವಃ ಸಪ್ತ ಪಂಚಭಿಃ ಕ್ಷುತ್ತೃಡುದ್ಭವಃ ।
ಷಡ್ಭಿರ್ಜರಾಯುಣಾ ವೀತಃ ಕುಕ್ಷೌ ಭ್ರಾಮ್ಯತಿ ದಕ್ಷಿಣೇ ॥ ೪ ॥

ಮಾತುರ್ಜಗ್ಧಾನ್ನಪಾನಾದ್ಯೈರೇಧದ್ಧಾತುರಸಮ್ಮತೇ ।
ಶೇತೇ ವಿಣ್ಮೂತ್ರಯೋರ್ಗರ್ತೇ ಸ ಜಂತುರ್ಜಂತುಸಂಭವೇ ॥ ೫ ॥

ಶ್ರೀಕಪಿಲಭಗವಂತನು ಹೇಳುತ್ತಾನೆ – ಅಮ್ಮಾ! ಜೀವಿಯು ಮನುಷ್ಯ ದೇಹವನ್ನು ಪಡೆಯಬೇಕಾದಾಗ ಅವನು ಭಗವಂತನ ಪ್ರೇರಣೆಯಿಂದ, ತನ್ನ ಹಿಂದಿನ ಕರ್ಮಾನುಸಾರವಾಗಿ – ಪುರುಷನ ವೀರ್ಯಕಣದ ಮೂಲಕ ಸ್ತ್ರೀಯ ಗರ್ಭಾಶಯವನ್ನು ಪ್ರವೇಶಿಸುವನು. ॥ ೧ ॥ ಅಲ್ಲಿ ಒಂದು ರಾತ್ರಿಯಲ್ಲಿ ಸ್ತ್ರೀಯ ರಜಸ್ಸಿನಲ್ಲಿ ಕಲೆತು 'ಕಲಲ' ಎಂಬ ರೂಪವನ್ನು ತಾಳುವನು. ಐದು ರಾತ್ರಿಗಳಲ್ಲಿ ಬುದ್ಬುದವಾಗಿ, ಹತ್ತು ದಿನಗಳಲ್ಲಿ ಬೋರೆಯ ಹಣ್ಣಿನಂತೆ ಸ್ವಲ್ಪ ಗಟ್ಟಿಯಾಗುವನು. ಅನಂತರ ಮಾಂಸದ ಮುದ್ದೆಯು ಅಥವಾ ಮೊಟ್ಟೆಯ ಆಕಾರವನ್ನು ತಳೆಯುವನು. ॥ ೨ ॥ ಒಂದು ತಿಂಗಳಲ್ಲಿ ಅವನಲ್ಲಿ ಅವನ ತಲೆಯು ಏರ್ಪಡುವುದು. ಎರಡು ತಿಂಗಳುಗಳಲ್ಲಿ ಕೈ, ಕಾಲು ಮುಂತಾದ ಅವಯವಗಳ ವಿಭಾಗವಾಗುತ್ತದೆ. ಮೂರು ತಿಂಗಳಲ್ಲಿ ಉಗುರು, ರೋಮ, ಎಲುಬು, ಚರ್ಮ, ಹೆಣ್ಣು-ಗಂಡು ಸೂಚಿಸುವ ಚಿಹ್ನೆ ಹಾಗೂ ಇತರ ಛಿದ್ರಗಳು ಉತ್ಪನ್ನವಾಗುತ್ತವೆ. ॥ ೩ ॥ ನಾಲ್ಕು ತಿಂಗಳುಗಳಲ್ಲಿ ಮಾಂಸವೇ ಮುಂತಾದ ಏಳು ಧಾತುಗಳೂ ಉಂಟಾಗುವವು. ಐದನೆಯ ತಿಂಗಳಲ್ಲಿ ಹಸಿವು-ಬಾಯಾರಿಕೆಗಳು ಆಗತೊಡಗುತ್ತವೆ. ಆರನೆಯ ತಿಂಗಳಿನಲ್ಲಿ ಅದು ಗರ್ಭದ ಚೀಲದಿಂದ ಆವರಿಸಲ್ಪಟ್ಟು ಗರ್ಭಕೋಶದ ಬಲಭಾಗದಲ್ಲಿ ತಿರುಗುವುದು. ॥ ೪ ॥ ಆಗ ತಾಯಿಯು ತಿಂದಿರುವ ಅನ್ನ-ನೀರುಗಳಿಂದ ಅದರ ಎಲ್ಲ ಧಾತುಗಳು ಪುಷ್ಟವಾಗತೊಡಗುವವು. ಹಾಗೆಯೇ ಅದು ಕ್ರಿಮಿ, ಕೀಟ ಮುಂತಾದ ಜಂತುಗಳಿಗೆ ಉತ್ಪತ್ತಿಸ್ಥಾನವಾದ ಮಲ-ಮೂತ್ರಗಳ ಹಳ್ಳದಲ್ಲಿ ಬಿದ್ದುಕೊಂಡಿರುವುದು. ॥ ೫ ॥

ಕೃಮಿಭಿಃ ಕ್ಷತಸರ್ವಾಂಗಃ ಸೌಕುಮಾರ್ಯಾತ್ಪ್ರತಿಕ್ಷಣಮ್ ।
ಮೂರ್ಛಾಮಾಪ್ನೋತ್ಯುರುಕ್ಲೇಶಸ್ತತ್ರತ್ಯೈಃ ಕ್ಷುಧಿತೈರ್ಮುಹುಃ ॥ ೬ ॥

ಕಟುತೀಕ್ಷ್ಣೋಷ್ಣಲವಣರೂಕ್ಷಾಮ್ಲಾದಿಭಿರುಲ್ಬಣೈಃ ।
ಮಾತೃಭುಕ್ತೈರುಪಸ್ಪೃಷ್ಟಃ ಸರ್ವಾಂಗೋತ್ಥಿತವೇದನಃ ॥ ೭ ॥

ಉಲ್ಬೇನ ಸಂವೃತಸ್ತಸ್ಮಿನ್ನಂತ್ರೈಶ್ಚ ಬಹಿರಾವೃತಃ ।
ಆಸ್ತೇ ಕೃತ್ವಾ ಶಿರಃ ಕುಕ್ಷೌ ಭುಗ್ನಪೃಷ್ಠಶಿರೋಧರಃ ॥ ೮ ॥

ಅಕಲ್ಪಃ ಸ್ವಾಂಗಚೇಷ್ಟಾಯಾಂ ಶಕುಂತ ಇವ ಪಂಜರೇ ।
ತತ್ರ ಲಬ್ಧ ಸ್ಮೃತಿರ್ದೈವಾತ್ಕರ್ಮ ಜನ್ಮಶತೋದ್ಭವಮ್ ।
ಸ್ಮರಂದೀರ್ಘಮನುಚ್ಛ್ವಾಸಂ ಶರ್ಮ ಕಿಂ ನಾಮ ವಿಂದತೇ ॥ ೯ ॥

ಆರಭ್ಯ ಸಪ್ತಮಾನ್ಮಾಸಾಲ್ಲಬ್ಧ ಬೋಧೋಽಪಿ ವೇಪಿತಃ ।
ನೈಕತ್ರಾಸ್ತೇ ಸೂತಿವಾತೈರ್ವಿಷ್ಠಾಭೂರಿವ ಸೋದರಃ ॥ ೧೦ ॥

ನಾಥಮಾನ ಋಷಿರ್ಭೀತಃ ಸಪ್ತವಧ್ರಿಃ ಕೃತಾಂಜಲಿಃ ।
ಸ್ತುವೀತ ತಂ ವಿಕ್ಲವಯಾ ವಾಚಾ ಯೇನೋದರೇಽರ್ಪಿತಃ ॥ ೧೧ ॥

ಜಂತುರುವಾಚ

ತಸ್ಯೋಪಸನ್ನಮವಿತುಂ ಜಗದಿಚ್ಛಯಾತ್ತ-
ನಾನಾತನೋರ್ಭುವಿ ಚಲಚ್ಚರಣಾರವಿಂದಮ್ ।
ಸೋಽಹಂ ವ್ರಜಾಮಿ ಶರಣಂ ಹ್ಯಕುತೋಭಯಂ ಮೇ
ಯೇನೇದೃಶೀ ಗತಿರದರ್ಶ್ಯಸತೋಽನುರೂಪಾ ॥ ೧೨ ॥

ಯಸ್ತ್ವತ್ರ ಬದ್ಧ ಇವ ಕರ್ಮಭಿರಾವೃತಾತ್ಮಾ
ಭೂತೇಂದ್ರಿಯಾಶಯಮಯೀಮವಲಂಬ್ಯ ಮಾಯಾಮ್ ।
ಆಸ್ತೇ ವಿಶುದ್ಧ ಮವಿಕಾರಮಖಂಡಬೋಧ-
ಮಾತಪ್ಯಮಾನಹೃದಯೇಽವಸಿತಂ ನಮಾಮಿ ॥ ೧೩ ॥

ಯಃ ಪಂಚಭೂತರಚಿತೇ ರಹಿತಃ ಶರೀರೇ-
ಚ್ಛನ್ನೋಽಯಥೇಂದ್ರಿಯಗುಣಾರ್ಥಚಿದಾತ್ಮಕೋಽಹಮ್ ।
ತೇನಾವಿಕುಂಠ ಮಹಿಮಾನಮೃಷಿಂ ತಮೇನಂ
ವಂದೇ ಪರಂ ಪ್ರಕೃತಿಪೂರುಷಯೋಃ ಪುಮಾಂಸಮ್ ॥ ೧೪ ॥

ಅದರ ದೇಹವು ತುಂಬಾ ಕೋಮಲವಾಗಿರುವುದರಿಂದ ಅಲ್ಲಿಯ ಹಸಿದ ಕ್ರಿಮಿಗಳು ಅದರ ಅಂಗಾಂಗಗಳನ್ನು ಕಚ್ಚುವವು. ಆ ಕ್ಲೇಶವನ್ನು ತಾಳಲಾರದೆ ಕ್ಷಣ-ಕ್ಷಣಕ್ಕೂ ಮೂರ್ಛಿತನಾಗುವನು. ॥ ೬ ॥ ತಾಯಿಯು ತಿಂದಿರುವ ಕಹಿ, ಖಾರ, ಒಗರು, ಉಪ್ಪು, ಹುಳಿ ಮುಂತಾದ ತೀಕ್ಷ್ಣ ಪದಾರ್ಥಗಳ ಸ್ಪರ್ಶದಿಂದ ಅದರ ದೇಹಕ್ಕೆಲ್ಲ ಪೀಡೆಯುಂಟಾಗುವುದು. ॥ ೭॥ ■ ಜೀವಿಯು ತಾಯಿಯ ಗರ್ಭಾಶಯದಲ್ಲಿ ಗರ್ಭಚೀಲದಿಂದ ಮುಚ್ಚಲ್ಪಟ್ಟು ಕರುಳುಬಳ್ಳಿಗಳಿಂದ ಸುತ್ತುವರಿಯಲ್ಪಡುತ್ತದೆ. ಅದು ಬೆನ್ನನ್ನೂ ಕೊರಳನ್ನೂ ಕುಂಡಲಾಕಾರವಾಗಿ ಬಗ್ಗಿಸಿಕೊಂಡು ತಲೆಯು ಹೊಟ್ಟೆಯ ಕಡೆಗೆ ವಾಲಿರುತ್ತದೆ. ॥ ೮ ॥

ಅದು ಪಂಜರದಲ್ಲಿ ಸೆರೆಸಿಕ್ಕಿದ ಹಕ್ಕಿಯಂತೆ ಪರಾಧೀನವಾಗಿ, ತನ್ನ ಅಂಗಾಂಗಗಳನ್ನು ಅಡಿಸುವುದಕ್ಕೂ ಅಸಮರ್ಥವಾಗಿರುತ್ತದೆ. ಆಗಲೇ ಅದೃಷ್ಟದ ಪ್ರೇರಣೆಯಿಂದ ಅದಕ್ಕೆ ಸ್ಮರಣಶಕ್ತಿಯು ಉಂಟಾಗುತ್ತದೆ. ಆಗ ತನ್ನ ನೂರಾರು ಜನ್ಮಗಳ ಕರ್ಮಗಳು ನೆನಪಾಗಿ ಪಶ್ಚಾತ್ತಾಪದಿಂದ ನಿಟ್ಟುಸಿರುಬಿಡುತ್ತಾನೆ. ಅಂತಹ ಸ್ಥಿತಿಯಲ್ಲಿ ಅದಕ್ಕೆ ನೆಮ್ಮದಿಯಾದರೂ ಹೇಗೆ ತಾನೇ ದೊರೆಯಬಲ್ಲದು ? ॥ ೯ ॥ ಏಳನೆಯ ತಿಂಗಳು ಪ್ರಾರಂಭವಾದಾಗಿನಿಂದ ಅದಕ್ಕೆ ಜ್ಞಾನಶಕ್ತಿಯೂ ಉಂಟಾಗುವುದು. ಆದರೆ ಪ್ರಸೂತಿವಾಯುವಿನಿಂದ ಅತ್ತ-ಇತ್ತ ಕದಲಿಸಲ್ಪಡುತ್ತಾ, ಅದೇ ಹೊಟ್ಟೆಯಲ್ಲಿ ಹುಟ್ಟಿಕೊಂಡ ಮಲದ ಕ್ರಿಮಿಯಂತೆ ಒಂದೆಡೆಯಲ್ಲಿ ನಿಲ್ಲದೆ ಅಲ್ಲಿಯೇ ಚಲಿಸುತ್ತಿರುತ್ತದೆ. ॥ ೧೦ ॥ ಆಗ ಸಪ್ತಧಾತುಗಳಿಂದ ಸ್ಥೂಲಶರೀರದಲ್ಲಿ ಬಂಧಿತನಾದ ■ ದೇಹಾತ್ಮದರ್ಶಿ ಜೀವವು ಅತ್ಯಂತ ಭಯಭೀತನಾಗಿ ದೀನವಾಣಿಯಿಂದ ಪರಮಾತ್ಮನ ಕೃಪೆಯನ್ನು ಯಾಚಿಸುವುದು. ತನ್ನನ್ನು ಆ ತಾಯಿಯ ಗರ್ಭವಾಸಕ್ಕೆ ಸೇರಿಸಿದ ಸ್ವಾಮಿಯನ್ನು ಕೈಜೋಡಿಸಿಕೊಂಡು ಹೀಗೆ ಸ್ತುತಿಸುವನು. ॥ ೧೧ ॥

ಜೀವವು ಹೇಳುತ್ತದೆ – ಪ್ರಭೋ! ನಾನು ತುಂಬಾ ಅಧಮನಾಗಿರುವೆನು. ಭಗವಂತನು ಕೊಟ್ಟಿರುವ ಈ ಗತಿಯು ನನಗೆ ಯೋಗ್ಯವೇ ಆಗಿದೆ. ಅವನು ಶರಣು ಬಂದಿರುವ ನಶ್ವರ ಜಗತ್ತಿನ ರಕ್ಷಣೆಗಾಗಿ ಅನೇಕ ವಿಧದ ರೂಪಗಳನ್ನು ಧರಿಸುತ್ತಾನೆ. ಆದ್ದರಿಂದ ನಾನು ಕೂಡ ಭೂತಲದಲ್ಲಿ ವಿಚರಣಮಾಡುವ ಅವನ ನಿರ್ಭಯ ಚರಣಾರವಿಂದಗಳಲ್ಲಿ ಶರಣಾಗಿರುವೆನು. ॥ ೧೨ ॥ ನಾನು (ಜೀವ) ನನ್ನ ಕರ್ಮವಾಸನೆಯಿಂದ ಬಂಧಿತನಾಗಿದ್ದೇನೆ. ಅಲ್ಲದೆ ಭೂತ, ಇಂದ್ರಿಯಗಳಿಗೆ ಆಶ್ರಯವಾಗಿರುವ ದೇಹರೂಪಿ ಮಾಯೆಯನ್ನು ಆಶ್ರಯಿಸಿದ್ದೇನೆ. ನನ್ನ ಪರಿತಪ್ತ ಹೃದಯದಲ್ಲಿಯೇ ನೀನು ಇದ್ದರೂ ನಿನ್ನ ಸ್ವರೂಪವು ಶುದ್ಧವೂ ಅವಿಕಾರಿಯೂ, ಅಖಂಡ ಜ್ಞಾನಸ್ವರೂಪವೂ ಆಗಿದೆ. ಅಂತಹ ಪರಮಪುರುಷನಿಗೆ ನಾನು ನಮಸ್ಕರಿಸುತ್ತೇನೆ. ॥ ೧೩ ॥ ನಾನು ವಾಸ್ತವವಾಗಿ ಶರೀರಾದಿಗಳಿಂದ ರಹಿತ (ಅಸಂಗ)ನಾಗಿದ್ದರೂ ನೋಡಲು ಪಾಂಚಭೌತಿಕ ಶರೀರದಿಂದ ಬದ್ಧನಾಗಿದ್ದೇನೆ. ಇದರಿಂದ ಇಂದ್ರಿಯ, ಗುಣ, ಶಬ್ದಾದಿ ವಿಷಯ ಮತ್ತು ಚಿದಾಭಾಸ (ಅಹಂಕಾರ) ರೂಪನಾಗಿ ತಿಳಿಯಲ್ಪಡುವೆನು. ಆದ್ದರಿಂದ ಈ ಶರೀರಾದಿ ಆವರಣಗಳಿಂದ ಯಾರ ಮಹಿಮೆಯು ಮುಚ್ಚಲ್ಪಟ್ಟಿಲ್ಲವೋ, ಆ ಪ್ರಕೃತಿ ಮತ್ತು ಪುರುಷರ ನಿಯಾಮಕನೂ, ಸರ್ವಜ್ಞನೂ ಆದ ಪರಮಪುರುಷನನ್ನು ನಾನು ವಂದಿಸುತ್ತಿದ್ದೇನೆ. ॥ ೧೪ ॥

ಯನ್ಮಾಯಯೋರುಗುಣಕರ್ಮನಿಬಂಧನೇಽಸ್ಮಿನ್
ಸಾಂಸಾರಿಕೇ ಪಥಿ ಚರಂಸ್ತದಭಿಶ್ರಮೇಣ ।
ನಷ್ಟಸ್ಮೃತಿಃ ಪುನರಯಂ ಪ್ರವೃಣೀತ ಲೋಕಂ
ಯುಕ್ತ್ಯಾ ಕಯಾ ಮಹದನುಗ್ರಹಮಂತರೇಣ ॥ ೧೫ ॥

ಜ್ಞಾನಂ ಯದೇತದದಧಾತ್ಕತಮಃ ಸ ದೇವ-
ಸ್ತ್ರೈಕಾಲಿಕಂ ಸ್ಥಿರಚರೇಷ್ವನುವರ್ತಿತಾಂಶಃ ।
ತಂ ಜೀವಕರ್ಮಪದವೀಮನುವರ್ತಮಾನಾ-
ಸ್ತಾಪತ್ರಯೋಪಶಮನಾಯ ವಯಂ ಭಜೇಮ ॥ ೧೬ ॥

ದೇಹ್ಯನ್ಯದೇಹವಿವರೇ ಜಠರಾಗ್ನಿನಾಸೃಗ್
ವಿಣ್ಮೂತ್ರಕೂಪಪತಿತೋ ಭೃಶತಪ್ತದೇಹಃ ।
ಇಚ್ಛನ್ನಿತೋ ವಿವಸಿತುಂ ಗಣಯನ್ಸ್ವಮಾಸಾನ್
ನಿರ್ವಾಸ್ಯತೇ ಕೃಪಣಧೀರ್ಭಗವನ್ಕದಾ ನು ॥ ೧೭ ॥

ಯೇನೇದೃಶೀಂ ಗತಿಮಸೌ ದಶಮಾಸ್ಯ ಈಶ
ಸಂಗ್ರಾಹಿತಃ ಪುರುದಯೇನ ಭವಾದೃಶೇನ ।
ಸ್ವೇನೈವ ತುಷ್ಯತು ಕೃತೇನ ಸ ದೀನನಾಥಃ
ಕೋ ನಾಮ ತತ್ಪ್ರತಿ ವಿನಾಂಜಲಿಮಸ್ಯ ಕುರ್ಯಾತ್ ॥ ೧೮ ॥

ಪಶ್ಯತ್ಯಯಂ ಧಿಷಣಯಾ ನನು ಸಪ್ತವಧ್ರಿಃ
ಶಾರೀರಕೇ ದಮಶರೀರ್ಯಪರಃ ಸ್ವದೇಹೇ ।
ಯತ್ಸೃಷ್ಟಯಾಸಂ ತಮಹಂ ಪುರುಷಂ ಪುರಾಣಂ
ಪಶ್ಯೇ ಬಹಿರ್ಹೃದಿ ಚ ಚೈತ್ಯಮಿವ ಪ್ರತೀತಮ್ ॥ ೧೯ ॥

ಸೋಽಹಂ ವಸನ್ನಪಿ ವಿಭೋ ಬಹುದುಃಖವಾಸಂ
ಗರ್ಭಾನ್ನ ನಿರ್ಜಿಗಮಿಷೇ ಬಹಿರಂಧಕೂಪೇ ।
ಯತ್ರೋಪಯಾತಮುಪಸರ್ಪತಿ ದೇವಮಾಯಾ
ಮಿಥ್ಯಾಮತಿರ್ಯದನು ಸಂಸೃತಿಚಕ್ರಮೇತತ್ ॥ ೨೦ ॥

ತಸ್ಮಾದಹಂ ವಿಗತವಿಕ್ಲವ ಉದ್ಧರಿಷ್ಯ
ಆತ್ಮಾನಮಾಶು ತಮಸಃ ಸುಹೃದಾತ್ಮನೈವ ।
ಭೂಯೋ ಯಥಾ ವ್ಯಸನಮೇತದನೇಕರಂಧ್ರಂ
ಮಾ ಮೇ ಭವಿಷ್ಯದುಪಸಾದಿತವಿಷ್ಣುಪಾದಃ ॥ ೨೧ ॥

ಆವನ ಮಾಯೆಯಿಂದಲೇ ತನ್ನ ಸ್ವರೂಪದ ಸ್ಮೃತಿಯು ನಾಶವಾದ ಕಾರಣ ಈ ಜೀವನು ಅನೇಕ ರೀತಿಯ ಸತ್ತ್ವಾದಿ ಗುಣಗಳ ಮತ್ತು ಕರ್ಮಗಳ ಬಂಧನದಿಂದ ಕೂಡಿದ್ದು ಈ ಸಂಸಾರದಲ್ಲಿ ಬಗೆ-ಬಗೆಯ ಕಷ್ಟಗಳನ್ನು ಸಹಿಸುತ್ತಾ ಅಲೆಯುತ್ತಿರುವನು. ಅಷ್ಟರಿಂದ ಆ ಪರಮಪುರುಷ ಪರಮಾತ್ಮನ ಕೃಪೆಯಿಲ್ಲದೆ ಬೇರೆ ಯಾವುದೇ ಯುಕ್ತಿಗಳಿಂದ ನನಗೆ ನನ್ನ ಸ್ವರೂಪದ ಜ್ಞಾನವು ಉಂಟಾಗಲಾರದು. ॥ ೧೫ ॥ ನನಗೆ ಉಂಟಾದ ತ್ರೈಕಾಲಿಕ ಜ್ಞಾನವೂ ಆತನು ದಯಪಾಲಿಸಿದುದೇ ಆಗಿದೆ. ಆತನಲ್ಲದೆ ಬೇರೆ ಯಾರು ತಾನೇ ಇವನ್ನು ಕೊಡಬಲ್ಲರು ? ಸ್ಥಾವರಜಂಗಮರೂಪವಾದ ಸಮಸ್ತ ಪ್ರಾಣಿಗಳಲ್ಲಿಯೂ ಅವನೊಬ್ಬನೇ ಅಂತರ್ಯಾಮಿ ರೂಪವಾದ ಅಂಶದಿಂದ ನೆಲೆಸಿರುವನು. ಆದುದರಿಂದ ಜೀವಿಗಳ ಕರ್ಮಮಾರ್ಗವನ್ನು ಅನುಸರಿಸುತ್ತಿರುವ ನಾನು ತ್ರಿವಿಧತಾಪಗಳ ಶಮನಕ್ಕಾಗಿ ಆತನನ್ನೇ ಭಜಿಸುತ್ತೇನೆ. ॥ ೧೬ ॥

ಓ ಭಗವಂತಾ ! ಈ ದೇಹಧಾರಿಯಾದ ಜೀವನು ಮತ್ತೊಂದು (ತಾಯಿಯ) ದೇಹದಲ್ಲಿ ಮಲ-ಮೂತ್ರ, ರಕ್ತ ಇವುಗಳ ಮಡುವಿನಲ್ಲಿ ಬಿದ್ದಿರುವನು. ಅವಳ ಜಠರಾಗ್ನಿಯಿಂದ ಇವನ ದೇಹವು ಸುಡುತ್ತಿದೆ. ಇಲ್ಲಿಂದ ಯಾವಾಗ ಹೊರಬಿದ್ದೇನು ಎಂದು ತಿಂಗಳುಗಳನ್ನು ಎಣಿಸುತ್ತಿರುವನು. ಭಗವಂತಾ ! ಈ ದೀನನು ಯಾವಾಗ ಇಲ್ಲಿಂದ ಹೊರಬರುವನೋ ತಿಳಿಯದಾಗಿದೆ. ॥ ೧೭ ॥ ಸ್ವಾಮಿಯೇ ! ನೀನು ಪರಮದಯಾಳು ಆಗಿರುವೆ. ನಿನ್ನಂತಹ ಉದಾರಿಯಾದ ಪ್ರಭುವೇ ! ಈ ಹತ್ತು ತಿಂಗಳ ಜೀವಕ್ಕೆ ಈ ಉತ್ಕೃಷ್ಟವಾದ ಜ್ಞಾನವನ್ನು ಕೊಟ್ಟಿರುವೆ. ಓ ದೀನಬಂಧುವೇ ! ನಿನಗೆ ಕೈ ಜೋಡಿಸುತ್ತೇನೆ. ಅದರಿಂದಲೇ ಪ್ರಸನ್ನನಾಗು. ಏಕೆಂದರೆ, ಅದಲ್ಲದೆ ನೀನು ಮಾಡಿದ ಉಪಕಾರವನ್ನು ಯಾರಾದರೂ ಹೇಗೆ ತೀರಿಸಬಲ್ಲರು ? ॥ ೧೮ ॥

ಪ್ರಭುವೇ ! ಪ್ರಪಂಚದ ಈ ಪಶು-ಪಕ್ಷಿ ಮುಂತಾದ ಬೇರೆ ಜೀವರಾದರೋ ತಮ್ಮ ಮೂಢ ಬುದ್ಧಿಗನುಸಾರವಾಗಿ ತಮ್ಮ ಶರೀರದಲ್ಲಾಗುವ ಸುಖ-ದುಃಖಾದಿಗಳನ್ನೇ ಅನುಭವಿಸುತ್ತಿರುತ್ತಾರೆ. ಆದರೆ ನಾನಾದರೋ ನಿನ್ನ ಕೃಪೆಯಿಂದ ಶಮ-ದಮಾದಿ ಸಾಧನ ಸಂಪನ್ನ ಶರೀರದಿಂದ ಕೂಡಿರುವೆನು. ಆದ್ದರಿಂದ ನೀನು ಕೊಟ್ಟಿರುವ ವಿವೇಕದಿಂದ ಕೂಡಿದ ಬುದ್ಧಿಯಿಂದ ಪುರಾಣಪುರುಷನಾದ ನಿನ್ನನ್ನು ನನ್ನ ಶರೀರದ ಹೊರಗೂ, ಹೃದಯದ ಒಳಗೂ ಆತ್ಮ ಚೈತನ್ಯಸ್ವರೂಪದಂತೆ ಪ್ರತ್ಯಕ್ಷವಾಗಿ ಅನುಭವಿಸುತ್ತಿದ್ದೇನೆ. ॥ ೧೯ ॥ ಶ್ರೀಭಗವಂತನೇ ! ಅತ್ಯಂತ ದುಃಖದಿಂದ ತುಂಬಿರುವ ಈ ಗರ್ಭಾಶಯದಲ್ಲಿ ನಾನು ಬಹು ಕಷ್ಟದಿಂದ ಇದ್ದರೂ, ಇದರಿಂದ ಹೊರಬಂದು ಸಂಸಾರರೂಪವಾದ ಕತ್ತಲೆಯ ಬಾವಿಯಲ್ಲಿ ಬೀಳಲು ಖಂಡಿತವಾಗಿ ನನಗೆ ಇಷ್ಟವಿಲ್ಲ. ಏಕೆಂದರೆ, ಅಲ್ಲಿಗೆ ಹೋಗುವ ಜೀವನನ್ನು ನಿನ್ನ ಮಾಯೆಯು ಆವರಿಸಿಬಿಡುತ್ತದೆ. ಇದರಿಂದ ಅವನಿಗೆ ಶರೀರದಲ್ಲಿ ಅಹಂ ಬುದ್ಧಿಯು ಉಂಟಾಗುತ್ತದೆ ಹಾಗೂ ಅದರ ಪರಿಣಾಮದಿಂದ ಪುನಃ ಈ ಸಂಸಾರಚಕ್ರದಲ್ಲೇ ಬೀಳಬೇಕಾಗುತ್ತದೆ. ॥ ೨೦ ॥ ಆದ್ದರಿಂದ ನಾನು ಕಳವಳವನ್ನು ಬಿಟ್ಟು ಹೃದಯದಲ್ಲಿ ಭಗವಾನ್ ಶ್ರೀವಿಷ್ಣುವಿನ ಚರಣಗಳನ್ನು ನೆಲೆಗೊಳಿಸಿಕೊಂಡು, ತನ್ನ ಬುದ್ಧಿಯ ಸಹಾಯದಿಂದಲೇ ತನ್ನನ್ನು ಬಹು ಬೇಗನೇ ಈ ಸಂಸಾರಸಮುದ್ರದಿಂದ ಉದ್ಧರಿಸಿಕೊಳ್ಳುವೆನು. ಆದ

ಕಪಿಲ ಉವಾಚ

**ಏವಂ ಕೃತಮತಿರ್ಗರ್ಭೇ ದಶಮಾಸ್ಯಃ ಸ್ತುವನ್ನೃಷಿಃ ।
ಸದ್ಯಃ ಕ್ಷಿಪತ್ಯವಾಚೀನಂ ಪ್ರಸೂತ್ಯೈ ಸೂತಿಮಾರುತಃ ॥ ೨೨ ॥**

**ತೇನಾವಸೃಷ್ಟಃ ಸಹಸಾ ಕೃತ್ವಾವಾಕ್ಶಿರ ಆತುರಃ ।
ವಿನಿಷ್ಕ್ರಾಮತಿ ಕೃಚ್ಛ್ರೇಣ ನಿರುಚ್ಛ್ವಾಸೋ ಹತಸ್ಮೃತಿಃ ॥ ೨೩ ॥**

**ಪತಿತೋ ಭುವ್ಯಸೃಙ್ಮೂತ್ರೇ ವಿಷ್ಠಾಭೂರಿವ ಚೇಷ್ಟತೇ ।
ರೋರೂಯತಿ ಗತೇ ಜ್ಞಾನೇ ವಿಪರೀತಾಂ ಗತಿಂ ಗತಃ ॥ ೨೪ ॥**

**ಪರಚ್ಛಂದಂ ನ ವಿದುಷಾ ಪುಷ್ಯಮಾಣೋ ಜನೇನ ಸಃ ।
ಅನಭಿಪ್ರೇತಮಾಪನ್ನಃ ಪ್ರತ್ಯಾಖ್ಯಾತುಮನೀಶ್ವರಃ ॥ ೨೫ ॥**

**ಶಾಯಿತೋಽಶುಚಿಪರ್ಯಂಕೇ ಜಂತುಃ ಸ್ವೇದಜದೂಷಿತೇ ।
ನೇಶಃ ಕಂಡೂಯನೇಽಂಗಾನಾಮಾಸನೋತ್ಥಾನಚೇಷ್ಟನೇ ॥ ೨೬ ॥**

**ತುದಂತ್ಯಾಮತ್ವಚಂ ದಂಶಾ ಮಶಕಾ ಮತ್ಕುಣಾದಯಃ ।
ರುದಂತಂ ವಿಗತಜ್ಞಾನಂ ಕೃಮಯಃ ಕೃಮಿಕಂ ಯಥಾ ॥ ೨೭ ॥**

**ಇತ್ಯೇವಂ ಶೈಶವಂ ಭುಕ್ತ್ವಾ ದುಃಖಂ ಪೌಗಂಡಮೇವ ಚ ।
ಅಲಬ್ಧಾಭೀಷ್ಟೋಽಜ್ಞಾನಾದಿದ್ಧಮನ್ಯುಃ ಶುಚಾರ್ಪಿತಃ ॥ ೨೮ ॥**

**ಸಹ ದೇಹೇನ ಮಾನೇನ ವರ್ಧಮಾನೇನ ಮನ್ಯುನಾ ।
ಕರೋತಿ ವಿಗ್ರಹಂ ಕಾಮೀ ಕಾಮಿಷ್ವಂತಾಯ ಚಾತ್ಮನಃ ॥ ೨೯ ॥**

**ಭೂತೈಃ ಪಂಚಭಿರಾರಬ್ಧೇ ದೇಹೇ ದೇಹ್ಯಬುಧೋಽಸಕೃತ್ ।
ಅಹಂ ಮಮೇತ್ಯಸದ್ಗ್ರಾಹಃ ಕರೋತಿ ಕುಮತಿರ್ಮತಿಮ್ ॥ ೩೦ ॥**

**ತದರ್ಥಂ ಕುರುತೇ ಕರ್ಮ ಯದ್ಬದ್ಧೋ ಯಾತಿ ಸಂಸೃತಿಮ್ ।
ಯೋಽನುಯಾತಿ ದದತ್ಕ್ಲೇಶಮವಿದ್ಯಾಕರ್ಮಬಂಧನಃ ॥ ೩೧ ॥**

ರಿಂದ ಅನೇಕ ಪ್ರಕಾರದ ದೋಷಗಳಿಂದ ಕೂಡಿದ ಈ ಸಂಸಾರದ ದುಃಖವು ನನಗೆ ಪುನಃ ದೊರಕದಿರಲಿ. ॥ ೨೧ ॥

ಶ್ರೀಕಪಿಲ ಭಗವಂತನು ಹೇಳುತ್ತಾನೆ – ತಾಯೇ! ಆ ಹತ್ತು ತಿಂಗಳ ಜೀವವು ಹೀಗೆ ಗರ್ಭದಲ್ಲೇ ವಿವೇಕಸಂಪನ್ನವಾಗಿ ಭಗವಂತನನ್ನು ಸ್ತುತಿಸಿರುತ್ತದೆ. ಆಗ ಕೆಳಮುಖವಾಗಿರುವ ಶಿಶುವನ್ನು ಪ್ರಸವ ಕಾಲದ ವಾಯುವು ಒಡನೆಯೇ ಹೊರಬರಲು ತಳ್ಳಿಬಿಡುತ್ತದೆ. ॥ ೨೨ ॥ ಹೀಗೆ ಇದ್ದಕ್ಕಿದ್ದಂತೆ ಆ ವಾಯು ಹೊರಗೆ ನೂಕಿದಾಗ ಆ ಮಗುವು ತುಂಬಾ ಕಳವಳಗೊಂಡು ತಲೆಕೆಳಗಾಗಿ ಅತಿಕಷ್ಟದಿಂದ ಹೊರಗೆ ಬರುವುದು. ಆಗ ಅದರ ಶ್ವಾಸಗತಿಯು ತಡೆಯಲ್ಪಟ್ಟು ಹಿಂದಿನ ಸ್ಮೃತಿಯು ಕಳೆದುಹೋಗುವುದು. ॥ ೨೩ ॥ ತಾಯಿಯ ರಕ್ತ ಮತ್ತು ಮೂತ್ರಗಳೊಡನೆ ಭೂಮಿಯ ಮೇಲೆ ಬಿದ್ದ ಆ ಶಿಶುವು ಮಲದ ಹುಳದಂತೆ ವಿಲವಿಲನೆ ಚಡಪಡಿಸುವುದು. ಅದರ ಗರ್ಭವಾಸದಲ್ಲಿ ಉಂಟಾದ ಎಲ್ಲ ಜ್ಞಾನವು ನಾಶಹೊಂದಿ, ಅದಕ್ಕೆ ವಿರುದ್ಧವಾದ ಗತಿಯನ್ನು – ಅಂದರೆ, ಅಜ್ಞಾನಾವಸ್ಥೆಯನ್ನು ಹೊಂದಿ ಅದು ಗಟ್ಟಿಯಾಗಿ ಅಳತೊಡಗುವುದು. ॥ ೨೪ ॥

ಮತ್ತೆ ಶಿಶುವಿನ ಅಭಿಪ್ರಾಯವನ್ನು ಅರಿಯದಿರುವ ಜನರು ಅದನ್ನು ಸಾಕಿ ಸಲಹುತ್ತಾರೆ. ಇಂತಹ ಸ್ಥಿತಿಯಲ್ಲಿ ಅದಕ್ಕೆ ಆಗುವ ಪ್ರತಿಕೂಲತೆಗಳನ್ನೂ ಕೂಡ ನಿಷೇಧಿಸುವ ಶಕ್ತಿಯೂ ಅದರಲ್ಲಿ ಇರುವುದಿಲ್ಲ. ॥ ೨೫ ॥ ತಿಗಣೆಯೇ ಮುಂತಾದ ಬೆವರಿನಿಂದ ಹುಟ್ಟುವ ಜಂತುಗಳಿಂದ ತುಂಬಿರುವ ಕೊಳಕು ಮಂಚ-ತೊಟ್ಟಿಲು-ಹಾಸಿಗೆಯಲ್ಲಿ ಅದನ್ನು ಮಲಗಿಸುವರು. ಆಗ ಅದಕ್ಕೆ ತನ್ನ ಅಂಗಗಳನ್ನು ಕೆರೆದುಕೊಳ್ಳುವುದಕ್ಕೂ, ಏಳುವುದಕ್ಕೂ, ಹೊರಳಾಡುವುದಕ್ಕೂ ಶಕ್ತಿಯಿಲ್ಲದೆ ಕಷ್ಟಪಡುವುದು. ॥ ೨೬ ॥ ಅದರ ಚರ್ಮವು ತುಂಬಾ ಕೋಮಲವಾಗಿರುತ್ತದೆ. ಅದನ್ನು ನೊಣ, ತಿಗಣೆ, ಸೊಳ್ಳೆ ಮುಂತಾದ ಕೀಟಗಳು ಚಿಕ್ಕಹುಳುಗಳು ದೊಡ್ಡ ಹುಳುಗಳನ್ನು ಕಚ್ಚುವಂತೆ ನೋಯಿಸುತ್ತಾ ಇರುತ್ತವೆ. ಈಗ ಅದರ ಗರ್ಭಾವಸ್ಥೆಯ ಎಲ್ಲ ಜ್ಞಾನವೂ ಹೊರಟುಹೋಗಿ, ಅಳುವುದಲ್ಲದೆ ಅದರಿಂದ ಬೇರೆ ಏನನ್ನೂ ಮಾಡಲಾಗುವುದಿಲ್ಲ. ॥ ೨೭ ॥

ಈ ಪ್ರಕಾರ ಬಾಲ್ಯ (ಕೌಮಾರ) ಮತ್ತು ಪೌಗಂಡವೆಂಬ ಬಾಲ್ಯ-ಯೌವನಗಳ ಮಧ್ಯಾವಸ್ಥೆಯ ದುಃಖವನ್ನು ಅನುಭವಿಸಿದ ಬಾಲಕನು ಯೌವನವನ್ನು ಹೊಂದುವನು. ಆಗ ಅವನಿಗೆ ಇಷ್ಟವಾದ ಭೋಗವು ಸಿಗದೆ ಇದ್ದರೆ ಅಜ್ಞಾನದಿಂದ ಕೋಪವು ಕೆರಳಿ ದುಃಖವೇಗಕ್ಕೆ ಒಳಗಾಗುವನು. ॥ ೨೮ ॥ ದೇಹದೊಂದಿಗೆ ಅಭಿಮಾನವೂ, ಕ್ರೋಧವೂ ಹೆಚ್ಚುವುದರಿಂದ ಆ ಕಾಮಪರವಶನಾದ ಜೀವನು ಇತರ ಕಾಮುಕರೊಡನೆ ತನ್ನ ವಿನಾಶಕರವಾದ ರೀತಿಯಲ್ಲಿ ಸ್ಪರ್ಧಿಸಿ ಕಾದಾಡುವನು. ॥ ೨೯ ॥ ದುರ್ಬುದ್ಧಿಯಿಂದ ಕೂಡಿದ ಅಜ್ಞಾನಿಯಾದ ಆ ಜೀವನು ಪಂಚಭೂತಗಳಿಂದ ನಿರ್ಮಿತವಾಗಿರುವ ಶರೀರದಲ್ಲಿ 'ನಾನು-ನನ್ನದು' ಎಂಬ ಅಭಿಮಾನ ಆಗ್ರಹವನ್ನು ಹೊಂದುವನು. ॥ ೩೦ ॥ ಮುಪ್ಪು, ಖಾಯಿಲೆ ಮುಂತಾದ ಬಗೆ-ಬಗೆಯ ಕಷ್ಟಗಳನ್ನೇ ಕೊಡುತ್ತಾ; ಅವಿದ್ಯೆ, ಕಾಮ ಮತ್ತು ಕರ್ಮಗಳಿಗೆ ಕಟ್ಟುಬಿದ್ದು ಸದಾ ಈತನನ್ನು ಹಿಂಬಾಲಿಸುತ್ತಿರುವ ಆ ದೇಹದ ರಕ್ಷಣೆಗಾಗಿಯೇ ಕರ್ಮಗಳನ್ನು ಮಾಡುತ್ತಾ ಸಂಸಾರ ಚಕ್ರದಲ್ಲಿ ಸಿಕ್ಕಿಬೀಳುವನು. ॥ ೩೧ ॥

ಯದ್ಯಸದ್ಭಿಃ ಪಥಿ ಪುನಃ ಶಿಶ್ನೋದರಕೃತೋದ್ಯಮೈಃ ।
ಆಸ್ಥಿತೋ ರಮತೇ ಜಂತುಸ್ತಮೋ ವಿಶತಿ ಪೂರ್ವವತ್ ॥ ೩೨ ॥

ಸತ್ಯಂ ಶೌಚಂ ದಯಾ ಮೌನಂ ಬುದ್ಧಿಃ ಶ್ರೀರ್ಹ್ರೀರ್ಯಶಃ ಕ್ಷಮಾ ।
ಶಮೋ ದಮೋ ಭಗಶ್ಚೇತಿ ಯತ್ಸಂಗಾದ್ಯಾತಿ ಸಂಕ್ಷಯಮ್ ॥ ೩೩ ॥

ತೇಷ್ವಶಾಂತೇಷು ಮೂಢೇಷು ಖಂಡಿತಾತ್ಮಸ್ವಸಾಧುಷು ।
ಸಂಗಂ ನ ಕುರ್ಯಾಚ್ಛೋಚ್ಯೇಷು ಯೋಷಿತ್ಕ್ರೀಡಾಮೃಗೇಷು ಚ ॥ ೩೪ ॥

ನ ತಥಾಸ್ಯ ಭವೇನ್ಮೋಹೋ ಬಂಧಶ್ಚಾನ್ಯಪ್ರಸಂಗತಃ ।
ಯೋಷಿತ್ಸಂಗಾದ್ಯಥಾ ಪುಂಸೋ ಯಥಾ ತತ್ಸಂಗಿಸಂಗತಃ ॥ ೩೫ ॥

ಪ್ರಜಾಪತಿಃ ಸ್ವಾಂ ದುಹಿತರಂ ದೃಷ್ಟ್ವಾ ತದ್ರೂಪಧರ್ಷಿತಃ ।
ರೋಹಿದ್ಭೂತಾಂ ಸೋಽನ್ವಧಾವದೃಕ್ಷರೂಪೀ ಹತತ್ರಪಃ ॥ ೩೬ ॥

ತತ್ಸೃಷ್ಟಸೃಷ್ಟಸೃಷ್ಟೇಷು ಕೋ ನ್ವಖಂಡಿತಧೀಃ ಪುಮಾನ್ ।
ಋಷಿಂ ನಾರಾಯಣಮೃತೇ ಯೋಷಿನ್ಮಯ್ಯೇಹ ಮಾಯಯಾ ॥ ೩೭ ॥

ಬಲಂ ಮೇ ಪಶ್ಯ ಮಾಯಾಯಾಃ
ಸ್ತ್ರೀಮಯ್ಯಾ ಜಯಿನೋ ದಿಶಾಮ್ ।
ಯಾ ಕರೋತಿ ಪದಾಕ್ರಾಂತಾನ್
ಭ್ರೂವಿಜೃಂಭೇಣ ಕೇವಲಮ್ ॥ ೩೮ ॥

ಸಂಗಂ ನ ಕುರ್ಯಾತ್ಪ್ರಮದಾಸು ಜಾತು
ಯೋಗಸ್ಯ ಪಾರಂ ಪರಮಾರುರುಕ್ಷುಃ ।
ಮತ್ಸೇವಯಾ ಪ್ರತಿಲಬ್ಧಾತ್ಮಲಾಭೋ
ವದಂತಿ ಯಾ ನಿರಯದ್ವಾರಮಸ್ಯ ॥ ೩೯ ॥

ಯೋಪಯಾತಿ ಶನೈರ್ಮಾಯಾ ಯೋಷಿದ್ದೇವವಿನಿರ್ಮಿತಾ ।
ತಾಮೀಕ್ಷೇತಾತ್ಮನೋ ಮೃತ್ಯುಂ ತೃಣೈಃ ಕೂಪಮಿವಾವೃತಮ್ ॥ ೪೦ ॥

ಯಾಂ ಮನ್ಯತೇ ಪತಿಂ ಮೋಹಾನ್ಮನ್ಮಾಯಾಮೃಷಭಾಯತೀಮ್ ।
ಸ್ತ್ರೀತ್ವಂ ಸ್ತ್ರೀಸಂಗತಃ ಪ್ರಾಪ್ತೋ ವಿತ್ತಾಪತ್ಯಗೃಹಪ್ರದಮ್ ॥ ೪೧ ॥

ಸನ್ಮಾರ್ಗದಲ್ಲಿ ನಡೆಯುತ್ತಿರುವಾಗ ಜೀವನಿಗೆ ಎಲ್ಲಾದರೂ ಆಹಾರ-ಮೈಥುನಗಳಿಗೆ ಪ್ರಯತ್ನಿಸುವ ವಿಷಯಿ-ಜನರೊಡನೆ ಸಹವಾಸ ಉಂಟಾದರೆ ಅವರ ದಾರಿಯನ್ನೇ ಹಿಡಿದು ಹಿಂದಿನಂತೆಯೇ ಮತ್ತೆ ನರಕಯೋನಿಗಳಲ್ಲಿಯೇ ಬೀಳಬೇಕಾಗುವುದು. ॥ ೩೨ ॥ ಯಾರ ಸಂಗದಿಂದ ಸತ್ಯ, ಶೌಚ (ಒಳ-ಹೊರಗಿನ ಪವಿತ್ರ), ದಯೆ, ಮಿತಭಾಷಣ, ಸದ್ಬುದ್ಧಿ, ಸಂಪತ್ತು, ನಾಚಿಕೆ, ಕೀರ್ತಿ, ಕ್ಷಮೆ, ಮನ-ಇಂದ್ರಿಯಗಳ ಸಂಯಮ ಮತ್ತು ಐಶ್ವರ್ಯ ಮುಂತಾದ ಎಲ್ಲ ಸದ್ಗುಣಗಳು ನಾಶವಾಗಿ ಹೋಗುವವೋ, ಅಂತಹ ಅತ್ಯಂತ ಶೋಚನೀಯರಾದ ಹೆಂಗಸರ ಆಟದ ಬೊಂಬೆಯಂತಿರುವ – ಅಶಾಂತರೂ, ಮೂರ್ಖರೂ, ದೇಹಾತ್ಮದರ್ಶಿಗಳೂ, ಆದ ದುಷ್ಟಜನರ ಸಹವಾಸವನ್ನು ಎಂದಿಗೂ ಮಾಡಬಾರದು. ॥ ೩೩-೩೪ ॥ ಮನುಷ್ಯನಿಗೆ ಸ್ತ್ರೀಯರ ಮತ್ತು ಸ್ತ್ರೀಸಂಗಿಗಳ ಸಂಗದಿಂದ ಉಂಟಾಗುವ ಮೋಹ-ಬಂಧನಗಳು ಬೇರೆ ಯಾವುದರಿಂದಲೂ ಅಂತಹ ಮೋಹ-ಬಂಧನಗಳಂತೆ ಉಂಟಾಗುವುದಿಲ್ಲ. ॥ ೩೫ ॥ ಒಮ್ಮೆ ತನ್ನ ಪುತ್ರಿಯಾದ ಸರಸ್ವತಿಯನ್ನು ನೋಡಿ ಬ್ರಹ್ಮದೇವರೂ ಕೂಡ ಅವಳ ರೂಪಲಾವಣ್ಯಗಳಿಗೆ ಮರುಳಾಗಿದ್ದರು. ಆಕೆಯು ಮೃಗರೂಪವಾಗಿ ಓಡುತ್ತಿದ್ದರೂ ತಾವು ನಾಚಿಕೆಗೆಟ್ಟು ಮೃಗರೂಪವಾಗಿ ಓಡತೊಡಗಿದರು. ॥ ೩೬ ॥ ಹೀಗಿರುವ ಅದೇ ಬ್ರಹ್ಮನು ಸೃಷ್ಟಿಸಿದ ಮರೀಚಿಯೇ ಮುಂತಾದವರಿಂದ ಸೃಷ್ಟಿಸಲ್ಪಟ್ಟ, ಕಶ್ಯಪರೇ ಮುಂತಾದವರಿಂದ ಬೆಳೆದು ಬಂದಿರುವ ಈ ಜೀವಿಗಳಲ್ಲಿ ಯಾರು ತಾನೇ ಸ್ತ್ರೀರೂಪವಾದ ಮಾಯೆಗೆ ಒಳಗಾಗದೇ ಇರುವನು ? ಆ ಮಾಯೆಗೆ ಒಳಗಾಗದ ಬುದ್ಧಿಯುಳ್ಳವನು ಋಷಿಶ್ರೇಷ್ಠನಾದ ನಾರಾಯಣಮುನಿಯೊಬ್ಬನೇ. ॥ ೩೭ ॥ ಆಹಾ ! ನನ್ನ ಈ ಸ್ತ್ರೀರೂಪಿಯಾದ ಮಾಯೆಯ ಬಲವನ್ನು ನೋಡು ! ಇದು ತನ್ನ ಹುಬ್ಬಿನಾಟದಿಂದಲೇ ದಿಗ್ವಿಜಯಿಗಳಾದ ದೊಡ್ಡ-ದೊಡ್ಡ ವೀರರನ್ನು ಕಾಲಿನಿಂದ ಹೊಸೆದು ಹಾಕುವುದು. ॥ ೩೮ ॥

ಯೋಗದ ಪರಮ ಪದದಲ್ಲಿ ಆರೂಢನಾಗಲು ಬಯಸುವವನು, ಅಥವಾ ನನ್ನ ಸೇವೆಯ ಪ್ರಭಾವದಿಂದ ಆತ್ಮಲಾಭವನ್ನು ಪಡೆದ ವಿವೇಕಿಯು ಸ್ತ್ರೀಯರ ಸಂಗವನ್ನು ಮಾಡಲೇ ಬಾರದು. ಏಕೆಂದರೆ, ಸ್ತ್ರೀಸಂಗಿಗಳಿಗೆ ನರಕದ ಬಾಗಿಲು ತೆರೆದುಕೊಂಡಿರುತ್ತದೆ ಎಂದು ಹೇಳುತ್ತಾರೆ. ॥ ೩೯ ॥ ಭಗವಂತನು ರಚಿಸಿದ ಈ ಸ್ತ್ರೀರೂಪಿಯಾದ ಮಾಯೆಯು ಮೆಲ್ಲ-ಮೆಲ್ಲನೆ ಸೇವಾದಿಗಳ ನೆಪದಿಂದ ಬಳಿಗೆ ಬರುತ್ತಾಳೆ. ಇವಳು ಹುಲ್ಲು ಮುಚ್ಚಿಕೊಂಡಿರುವ ಬಾವಿಯಂತೆ ತನ್ನ ಮೃತ್ಯುವೆಂದೇ ತಿಳಿಯಬೇಕು. ॥ ೪೦ ॥

ಸ್ತ್ರೀಯಲ್ಲೇ ಸದಾ ಆಸಕ್ತನಾದ್ದರಿಂದ ಮನುಷ್ಯನು ಅಂತ್ಯಕಾಲದಲ್ಲಿಯೂ ಸ್ತ್ರೀಯನ್ನೇ ಚಿಂತನೆ ಮಾಡುವುದರಿಂದ ಮುಂದೆ ಸ್ತ್ರೀಯೋನಿಯಲ್ಲೇ ಜನಿಸುತ್ತಾನೆ. ಹೀಗೆ ಸ್ತ್ರೀಯೋನಿಯಲ್ಲಿ ಬಂದ ಜೀವನು ಪುರುಷರೂಪದಲ್ಲಿ ಕಾಣುವ ನನ್ನ ಮಾಯೆಯನ್ನೇ ಧನ, ಪುತ್ರ, ಮನೆ ಮುಂತಾದವುಗಳನ್ನು ಕೊಡುವ ತನ್ನ ಪತಿಯೆಂದು ತಿಳಿಯುತ್ತಿರುತ್ತಾನೆ. ವ್ಯಾಧನ ಕಿವಿಗಿಂಪಾದ ಗಾನವನ್ನು ಕೇಳುವ

ತಾಮಾತ್ಮನೋ ವಿಜಾನೀಯಾತ್ಪತ್ಯಪತ್ಯಗೃಹಾತ್ಮಕಮ್ ।
ದೈವೋಪಸಾದಿತಂ ಮೃತ್ಯುಂ ಮೃಗಯೋರ್ಗಾಯನಂ ಯಥಾ ॥ ೪೨ ॥

ದೇಹೇನ ಜೀವಭೂತೇನ ಲೋಕಾಲ್ಲೋಕಮನುವ್ರಜನ್ ।
ಭುಂಜಾನ ಏವ ಕರ್ಮಾಣಿ ಕರೋತ್ಯವಿರತಂ ಪುಮಾನ್ ॥ ೪೩ ॥

ಜೀವೋ ಹ್ಯಸ್ಯಾನುಗೋ ದೇಹೋ ಭೂತೇಂದ್ರಿಯಮನೋಮಯಃ ।
ತನ್ನಿರೋಧೋಽಸ್ಯ ಮರಣಮಾವಿರ್ಭಾವಸ್ತು ಸಂಭವಃ ॥ ೪೪ ॥

ದ್ರವ್ಯೋಪಲಬ್ಧಿಸ್ಥಾನಸ್ಯ ದ್ರವ್ಯೇಕ್ಷಾಯೋಗ್ಯತಾ ಯದಾ ।
ತತ್ಪಂಚತ್ವಮಹಂಮಾನಾದುತ್ಪತ್ತಿರ್ದ್ರವ್ಯದರ್ಶನಮ್ ॥ ೪೫ ॥

ಯಥಾಕ್ಷ್ಣೋರ್ದ್ರವ್ಯಾವಯವದರ್ಶನಾಯೋಗ್ಯತಾ ಯದಾ ।
ತದೈವ ಚಕ್ಷುಷೋ ದ್ರಷ್ಟುರ್ದ್ರಷ್ಟೃತ್ವಾಯೋಗ್ಯತಾನಯೋಃ ॥ ೪೬ ॥

ತಸ್ಮಾನ್ನ ಕಾರ್ಯಃ ಸಂತ್ರಾಸೋ ನ ಕಾರ್ಪಣ್ಯಂ ನ ಸಂಭ್ರಮಃ ।
ಬುದ್ಧ್ವಾ ಜೀವಗತಿಂ ಧೀರೋ ಮುಕ್ತಸಂಗಶ್ಚರೇದಿಹ ॥ ೪೭ ॥

ಸಮ್ಯಗ್ದರ್ಶನಯಾ ಬುದ್ಧ್ಯಾ ಯೋಗವೈರಾಗ್ಯಯುಕ್ತಯಾ ।
ಮಾಯಾವಿರಚಿತೇ ಲೋಕೇ ಚರೇನ್ನ್ಯಸ್ಯ ಕಲೇವರಮ್ ॥ ೪೮ ॥

ಬಡಪಾಯಿ ಪಶು-ಪಕ್ಷಿಗಳು ಮೋಸಹೋಗಿ ಬಲೆಯಲ್ಲಿ ಸಿಕ್ಕಿಬಿದ್ದು ತಮ್ಮ ನಾಶಕ್ಕೆ ಕಾರಣವಾಗುವಂತೆ – ಆ ಜೀವನು ಪುತ್ರ, ಪತಿ, ಗೃಹಾದಿಗಳು ವಿಧಾತನು ನಿಶ್ಚಯಿಸಿದ ತನ್ನ ಮೃತ್ಯುವೆಂದೇ ತಿಳಿಯಬೇಕು. ಪುರುಷಸಂಗದಿಂದ ದೂರವುಳಿಯಬೇಕು. ॥ ೪೧-೪೨ ॥ ಅಮ್ಮಾ! ಜೀವನು ತನ್ನ ಲಿಂಗದೇಹದಿಂದ ಒಂದು ಲೋಕದಿಂದ ಮತ್ತೊಂದು ಲೋಕಕ್ಕೆ ಹೋಗುತ್ತಿರುತ್ತಾನೆ. ತನ್ನ ಪ್ರಾರಬ್ಧಕರ್ಮಗಳನ್ನು ಅನುಭವಿಸುತ್ತಾ ಬೇರೆ ದೇಹಗಳನ್ನು ಪಡೆಯಲಿಕ್ಕಾಗಿ ನಿರಂತರ ಬೇರೆ ಕರ್ಮಗಳನ್ನು ಮಾಡುತ್ತಾ ಇರುತ್ತಾನೆ. ॥ ೪೩ ॥ ಜೀವಿಯ ಈ ಉಪಾಧಿರೂಪವಾದ ಲಿಂಗಶರೀರವಾದರೋ ಮೋಕ್ಷದವರೆಗೂ ಜೊತೆಯಲ್ಲೇ ಇರುತ್ತದೆ. ಭೂತಗಳು, ಇಂದ್ರಿಯಗಳು, ಮನಸ್ಸು ಇವುಗಳ ಕಾರ್ಯರೂಪವಾದ ಸ್ಥೂಲದೇಹವು ಭೋಗಕ್ಕೆ ಅಧಿಷ್ಠಾನವು. ಈ ಲಿಂಗದೇಹ ಮತ್ತು ಸ್ಥೂಲದೇಹಗಳು ಒಟ್ಟಿಗೆ ಸೇರಿ ಕೆಲಸಮಾಡದೇ ಇರುವುದು ಮೃತ್ಯುವು. ಅವೆರಡೂ ಒಟ್ಟಿಗೆ ಸೇರಿ ಕಾರ್ಯಮಾಡುವುದನ್ನೇ ಜನ್ಮ ಎಂದು ಕರೆಯುತ್ತಾರೆ. ॥ ೪೪ ॥ ಪದಾರ್ಥಗಳನ್ನು ಪಡೆಯುವ ಸ್ಥಾನವಾದ ಈ ಸ್ಥೂಲಶರೀರದಲ್ಲಿ ಅವುಗಳನ್ನು ಗ್ರಹಿಸುವ ಯೋಗ್ಯತೆಯು ಇಲ್ಲದಿದ್ದಾಗ ಅದರ ಮರಣವಾಗಿದೆ; ಮತ್ತು ಈ ಸ್ಥೂಲಶರೀರವೇ 'ನಾನಾಗಿದ್ದೇನೆ' ಈ ಅಭಿಮಾನದೊಂದಿಗೆ ಅದನ್ನು ನೋಡುವುದೇ ಜನ್ಮವಾಗಿದೆ. ॥ ೪೫ ॥ ಕಣ್ಣುಗಳಲ್ಲಿ ಯಾವುದೋ ದೋಷದಿಂದ ರೂಪಾದಿಗಳನ್ನು ನೋಡುವ ಯೋಗ್ಯತೆಯು ಇಲ್ಲದಿದ್ದಾಗ ಅದರಲ್ಲಿರುವ ಚಕ್ಷುರಿಂದ್ರಿಯವು ರೂಪವನ್ನು ನೋಡಲು ಅಸಮರ್ಥವಾಗುತ್ತದೆ. ಕಣ್ಣು ಮತ್ತು ಅದರಲ್ಲಿರುವ ಇಂದ್ರಿಯ ಇವೆರಡೂ ರೂಪವನ್ನು ನೋಡಲು ಅಸಮರ್ಥವಾಗುತ್ತದೆ. ಹೀಗೆ ಅಸಮರ್ಥವಾದಾಗ ಇವೆರಡರ ಸಾಕ್ಷಿಯಾದ ಜೀವನಲ್ಲಿಯೂ ಆ ಯೋಗ್ಯತೆ ಉಳಿಯುವುದಿಲ್ಲ. ॥ ೪೬ ॥ ಆದುದರಿಂದ ಮುಮುಕ್ಷುವಾದವನು ಮರಣಕ್ಕೆ ಭಯಪಡಬಾರದು. ಜೀವನಕ್ಕಾಗಿ ದೀನನಾಗಬಾರದು ಅಥವಾ ಮೋಹಿತನಾಗಬಾರದು. ಅವನು ಜೀವಿಯ ಸ್ವರೂಪವನ್ನು ಅರಿತುಕೊಂಡು ಧೈರ್ಯವಾಗಿ ನಿಸ್ಸಂಗ ಭಾವದಿಂದ ವಿಚರಿಸುತ್ತಿರಬೇಕು. ಈ ಮಾಯಾಮಯ ಸಂಸಾರದಲ್ಲಿ ಯೋಗ-ವೈರಾಗ್ಯಗಳಿಂದ ಕೂಡಿ ಸಮ್ಯಕ್ ಜ್ಞಾನಮಯ ಬುದ್ಧಿಯಿಂದ ಶರೀರವು ಗಿರವಿಯಿಟ್ಟಿರುವಂತೆ ತಿಳಿದು ಅದರ ಕುರಿತು ಅನಾಸಕ್ತನಾಗಿದ್ದುಕೊಂಡು ವಿಚರಿಸುತ್ತಿರಬೇಕು. ॥ ೪೭-೪೮ ॥

ಮೂವತ್ತೊಂದನೆಯ ಅಧ್ಯಾಯವು ಮುಗಿಯಿತು. ॥ ೩೧ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ತೃತೀಯಸ್ಕಂಧೇ
ಕಾಪಿಲೇಯೋಪಾಖ್ಯಾನೇ ಜೀವಗತಿರ್ನಾಮೈಕತ್ರಿಂಶೋಽಧ್ಯಾಯಃ ॥ ೩೧ ॥

ಮೂವತ್ತೆರಡನೆಯ ಅಧ್ಯಾಯ

ಧೂಮಮಾರ್ಗ ಮತ್ತು ಅರ್ಚಿರಾದಿ ಮಾರ್ಗಗಳಿಂದ ಹೋಗುವವರ ಗತಿಯ ಮತ್ತು ಭಕ್ತಿಯೋಗದ ಶ್ರೇಷ್ಠತೆ

[illegible]

ಅಥ ಯೋ ಗೃಹಮೇಧೀಯಾನ್-
ಧರ್ಮಾನೇವಾವಸನ್ಗೃಹೇ ।
ಕಾಮಮರ್ಥಂ ಚ ಧರ್ಮಾನ್ಸ್ವಾನ್-
ದೋಗ್ಧಿ ಭೂಯಃ ಪಿಪರ್ತಿ ತಾನ್ ॥ ೧ ॥

ಸ ಚಾಪಿ ಭಗವದ್ಧರ್ಮಾತ್ಕಾಮಮೂಢಃ ಪರಾಙ್ಮುಖಃ ।
ಯಜತೇ ಕ್ರತುಭಿರ್ದೇವಾನ್ಪಿತೄಂಶ್ಚ ಶ್ರದ್ಧಯಾನ್ವಿತಃ ॥ ೨ ॥

ತಚ್ಛ್ರದ್ಧಯಾಕ್ರಾಂತಮತಿಃ ಪಿತೃದೇವವ್ರತಃ ಪುಮಾನ್ ।
ಗತ್ವಾ ಚಾಂದ್ರಮಸಂ ಲೋಕಂ ಸೋಮಪಾಃ ಪುನರೇಷ್ಯತಿ ॥ ೩ ॥

ಯದಾ ಚಾಹೀಂದ್ರಶಯ್ಯಾಯಾಂ ಶೇತೇಽನಂತಾಸನೋ ಹರಿಃ ।
ತದಾ ಲೋಕಾ ಲಯಂ ಯಾಂತಿ ತ ಏತೇ ಗೃಹಮೇಧಿನಾಮ್ ॥ ೪ ॥

ಯೇ ಸ್ವಧರ್ಮಾನ್ನ ದುಹ್ಯಂತಿ ಧೀರಾಃ ಕಾಮಾರ್ಥಹೇತವೇ ।
ನಿಃಸಂಗಾ ನ್ಯಸ್ತಕರ್ಮಾಣಃ ಪ್ರಶಾಂತಾಃ ಶುದ್ಧಚೇತಸಃ ॥ ೫ ॥

ನಿವೃತ್ತಿಧರ್ಮನಿರತಾ ನಿರ್ಮಮಾ ನಿರಹಂಕೃತಾಃ ।
ಸ್ವಧರ್ಮಾಪ್ತೇನ ಸತ್ತ್ವೇನ ಪರಿಶುದ್ಧೇನ ಚೇತಸಾ ॥ ೬ ॥

ಸೂರ್ಯದ್ವಾರೇಣ ತೇ ಯಾಂತಿ ಪುರುಷಂ ವಿಶ್ವತೋಮುಖಮ್ ।
ಪರಾವರೇಶಂ ಪ್ರಕೃತಿಮಸ್ಯೋತ್ಪತ್ತ್ಯಂತಭಾವನಮ್ ॥ ೭ ॥

ದ್ವಿಪರಾರ್ಧಾವಸಾನೇ ಯಃ ಪ್ರಲಯೋ ಬ್ರಹ್ಮಣಸ್ತು ತೇ ।
ತಾವದಧ್ಯಾಸತೇ ಲೋಕಂ ಪರಸ್ಯ ಪರಚಿಂತಕಾಃ ॥ ೮ ॥

ಕ್ಷ್ಮಾಂಭೋಽನಲಾನಿಲವಿಯನ್ಮನಇಂದ್ರಿಯಾರ್ಥ-
ಭೂತಾದಿಭಿಃ ಪರಿವೃತಂ ಪ್ರತಿಸಂಜಿಹೀರ್ಷುಃ ।
ಅವ್ಯಾಕೃತಂ ವಿಶತಿ ಯರ್ಹಿ ಗುಣತ್ರಯಾತ್ಮಾ
ಕಾಲಂ ಪರಾಖ್ಯಮನುಭೂಯ ಪರಃ ಸ್ವಯಂಭೂಃ ॥ ೯ ॥

ಶ್ರೀಭಗವಾನ್ ಕಪಿಲರು ಹೇಳುತ್ತಾರೆ – ಅಮ್ಮಾ! ಮನೆಯಲ್ಲೇ ಇದ್ದುಕೊಂಡು ಸಕಾಮಭಾವದಿಂದ ಗೃಹಸ್ಥಧರ್ಮಗಳನ್ನು ಪಾಲಿಸುತ್ತಾ, ಅವುಗಳ ಫಲವಾಗಿ ಅರ್ಥ ಮತ್ತು ಕಾಮಗಳನ್ನು ಅನುಭವಿಸುತ್ತಾ ಪುನಃ ಅವನ್ನೇ ಅನುಷ್ಠಾನ ಮಾಡುತ್ತಾ ಇರುವವನು, ಬಗೆ-ಬಗೆಯ ಕಾಮನೆಗಳಿಂದ ಮೋಹಿತನಾದ್ದರಿಂದ ಭಗವದ್ಧರ್ಮಗಳಿಂದ ವಿಮುಖನಾಗುತ್ತಾನೆ ಹಾಗೂ ಯಜ್ಞಗಳ ಮೂಲಕ ಶ್ರದ್ಧೆಯಿಂದ ದೇವತೆಗಳನ್ನೂ, ಪಿತೃಗಳನ್ನೂ ಆರಾಧಿಸುತ್ತಾ ಇರುತ್ತಾನೆ ॥ ೧–೨ ॥

ಆತನ ಬುದ್ಧಿಯು ಅದೇ ರೀತಿಯ ಶ್ರದ್ಧೆಯಿಂದ ತುಂಬಿರುತ್ತದೆ. ದೇವತೆಗಳು ಮತ್ತು ಪಿತೃಗಳೇ ಆತನ ಉಪಾಸ್ಯದೇವತೆಗಳಾಗಿರುತ್ತಾರೆ. ಆದ್ದರಿಂದ ಅವನು ಚಂದ್ರಲೋಕಕ್ಕೆ ಹೋಗಿ ಅವರೊಂದಿಗೆ ಸೋಮಪಾನ ಮಾಡುತ್ತಾನೆ. ಮತ್ತೆ ಪುಣ್ಯಕ್ಷೀಣವಾದಾಗ ಇದೇ ಲೋಕಕ್ಕೆ ಮರಳುತ್ತಾನೆ. ॥ ೩ ॥ ಪ್ರಳಯಕಾಲದಲ್ಲಿ ಭಗವಾನ್ ಶೇಷಶಾಯಿಯು ಪವಡಿಸಿದಾಗ ಸಕಾಮ ಗೃಹಸ್ಥಾಶ್ರಮಿಗಳಿಗೆ ದೊರೆಯುವ ಈ ಲೋಕಗಳೆಲ್ಲ ಲೀನವಾಗಿ ಹೋಗುತ್ತವೆ. ॥ ೪ ॥

ವಿವೇಕಿಗಳಾದ ಮನುಷ್ಯರು ತಮ್ಮ ಧರ್ಮಗಳನ್ನೂ ಅರ್ಥ-ಕಾಮಗಳ ಭೋಗ-ವಿಲಾಸಕ್ಕಾಗಿ ಉಪಯೋಗಿಸುವುದಿಲ್ಲ. ಅವರು ಶ್ರೀಭಗವಂತನ ಪ್ರಸನ್ನತೆಗಾಗಿಯೇ ಅವನ್ನು ಪಾಲಿಸುತ್ತಾರೆ. ಅಂತಹ ಅನಾಸಕ್ತರೂ, ಪ್ರಶಾಂತರೂ, ಶುದ್ಧಚಿತ್ತರೂ, ನಿವೃತ್ತಿ ಧರ್ಮಪಾರಾಯಣರೂ, ಮಮತಾ ರಹಿತರೂ, ಅಹಂಕಾರಶೂನ್ಯರೂ ಆದ ಸುಕೃತಿಗಳು ಸ್ವಧರ್ಮಪಾಲನರೂಪವಾದ ಸತ್ತ್ವಗುಣದಿಂದ ಸರ್ವಥಾ ಶುದ್ಧಚಿತ್ತರಾಗುತ್ತಾರೆ. ॥ ೫–೬ ॥ ಅವರು ಕೊನೆಯಲ್ಲಿ ಸೂರ್ಯಮಾರ್ಗ (ಅರ್ಚಿಮಾರ್ಗ ಅಥವಾ ದೇವಯಾನ)ದ ಮೂಲಕ ಸರ್ವವ್ಯಾಪಿ ಪೂರ್ಣಪುರುಷ ಶ್ರೀಹರಿಯನ್ನೇ ಪಡೆದುಕೊಳ್ಳುವರು. ಅವನೇ ಕಾರ್ಯಕಾರಣರೂಪೀ ಜಗತ್ತಿನ ನಿಯಾಮಕನೂ, ಪ್ರಪಂಚದ ಉಪಾದಾನ ಕಾರಣನೂ ಹಾಗೂ ಅದರ ಉತ್ಪತ್ತಿ ಪಾಲನೆ, ಸಂಹಾರ ಮಾಡುವವನಾಗಿದ್ದಾನೆ. ॥ ೭ ॥ ಯಾರು ಸ್ವಾಮಿಯಾದ ಹಿರಣ್ಯಗರ್ಭನನ್ನು ಪರಮಾತ್ಮದೃಷ್ಟಿಯಿಂದ ಉಪಾಸನೆ ಮಾಡುವರೋ ಅವರು ಎರಡು ಪರಾರ್ಧದಲ್ಲಿ ಆಗುವ ಬ್ರಹ್ಮದೇವರ ಪ್ರಳಯದವರೆಗೆ ಸತ್ಯಲೋಕದಲ್ಲೇ ವಾಸಿಸುತ್ತಾರೆ. ॥ ೮ ॥ ಯಾವಾಗ ದೇವಶ್ರೇಷ್ಠರಾದ ಬ್ರಹ್ಮದೇವರು ತಮ್ಮ ದ್ವಿಪರಾರ್ಧಕಾಲದ ಅಧಿಕಾರವನ್ನು ಮುಗಿಸಿಕೊಂಡು, ಪೃಥ್ವಿ, ಜಲ, ಅಗ್ನಿ, ವಾಯು, ಆಕಾಶ, ಮನ, ಇಂದ್ರಿಯಗಳು, ಅವುಗಳ ವಿಷಯ (ಶಬ್ದಾದಿ)ಗಳು ಮತ್ತು ಅಹಂಕಾರವೇ ಮುಂತಾದವುಗಳ ಸಹಿತ ಇಡೀ ವಿಶ್ವವನ್ನು ಉಪಸಂಹಾರ ಮಾಡಿಕೊಳ್ಳುವ ಇಚ್ಛೆಯಿಂದ ತ್ರಿಗುಣಾತ್ಮವಾದ ಪ್ರಕೃತಿಯೊಂದಿಗೆ ಒಂದಾಗಿ [illegible] ಪರಮಾತ್ಮನಲ್ಲಿ ಲೀನವಾಗಿ ಹೋಗುವರೋ, ಆಗ ಪ್ರಾಣಗಳನ್ನೂ

ಏವಂ ಪರೇತ್ಯ ಭಗವಂತಮನುಪ್ರವಿಷ್ಟಾ
ಯೇ ಯೋಗಿನೋ ಜಿತಮರುನ್ಮನಸೋ ವಿರಾಗಾಃ ।
ತೇನೈವ ಸಾಕಮಮೃತಂ ಪುರುಷಂ ಪುರಾಣಂ
ಬ್ರಹ್ಮ ಪ್ರಧಾನಮುಪಯಾಂತ್ಯಗತಾಭಿಮಾನಾಃ ॥ ೧೦ ॥

ಅಥ ತಂ ಸರ್ವಭೂತಾನಾಂ ಹೃತ್ಪದ್ಮೇಷು ಕೃತಾಲಯಮ್ ।
ಶ್ರುತಾನುಭಾವಂ ಶರಣಂ ವ್ರಜ ಭಾವೇನ ಭಾಮಿನಿ ॥ ೧೧ ॥

ಆದ್ಯಃ ಸ್ಥಿರಚರಾಣಾಂ ಯೋ ವೇದಗರ್ಭಃ ಸಹರ್ಷಿಭಿಃ ।
ಯೋಗೇಶ್ವರೈಃ ಕುಮಾರಾದ್ಯೈಃ ಸಿದ್ಧೈರ್ಯೋಗಪ್ರವರ್ತಕೈಃ ॥ ೧೨ ॥

ಭೇದದೃಷ್ಟ್ಯಾಭಿಮಾನೇನ ನಿಃಸಂಗೇನಾಪಿ ಕರ್ಮಣಾ ।
ಕರ್ತೃತ್ವಾತ್ಸಗುಣಂ ಬ್ರಹ್ಮ ಪುರುಷಂ ಪುರುಷರ್ಷಭಮ್ ॥ ೧೩ ॥

ಸ ಸಂಸೃತ್ಯ ಪುನಃ ಕಾಲೇ ಕಾಲೇನೇಶ್ವರಮೂರ್ತಿನಾ ।
ಜಾತೇ ಗುಣವ್ಯತಿಕರೇ ಯಥಾಪೂರ್ವಂ ಪ್ರಜಾಯತೇ ॥ ೧೪ ॥

ಐಶ್ವರ್ಯಂ ಪಾರಮೇಷ್ಠ್ಯಂ ಚ ತೇಽಪಿ ಧರ್ಮವಿನಿರ್ಮಿತಮ್ ।
ನಿಷೇವ್ಯ ಪುನರಾಯಾಂತಿ ಗುಣವ್ಯತಿಕರೇ ಸತಿ ॥ ೧೫ ॥

ಯೇ ತ್ವಿಹಾಸಕ್ತಮನಸಃ ಕರ್ಮಸು ಶ್ರದ್ಧಯಾನ್ವಿತಾಃ ।
ಕುರ್ವಂತ್ಯಪ್ರತಿಷಿದ್ಧಾನಿ ನಿತ್ಯಾನ್ಯಪಿ ಚ ಕೃತ್ಸ್ನಶಃ ॥ ೧೬ ॥

ರಜಸಾ ಕುಂಠಮನಸಃ ಕಾಮಾತ್ಮಾನೋಽಜಿತೇಂದ್ರಿಯಾಃ ।
ಪಿತೄನ್ಯಜಂತ್ಯನುದಿನಂ ಗೃಹೇಷ್ವಭಿರತಾಶಯಾಃ ॥ ೧೭ ॥

ತ್ರೈವರ್ಗಿಕಾಸ್ತೇ ಪುರುಷಾ ವಿಮುಖಾ ಹರಿಮೇಧಸಃ ।
ಕಥಾಯಾಂ ಕಥನೀಯೋರುವಿಕ್ರಮಸ್ಯ ಮಧುದ್ವಿಷಃ ॥ ೧೮ ॥

ನೂನಂ ದೈವೇನ ವಿಹತಾ ಯೇ ಚಾಚ್ಯುತಕಥಾಸುಧಾಮ್ ।
ಹಿತ್ವಾ ಶೃಣ್ವಂತ್ಯಸದ್ಗಾಥಾಃ ಪುರೀಷಮಿವ ವಿಡ್ಭುಜಃ ॥ ೧೯ ॥

ದಕ್ಷಿಣೇನ ಪಥಾರ್ಯಮ್ಣಃ ಪಿತೃಲೋಕಂ ವ್ರಜಂತಿ ತೇ ।
ಪ್ರಜಾಮನು ಪ್ರಜಾಯಂತೇ ಶ್ಮಶಾನಾಂತಕ್ರಿಯಾಕೃತಃ ॥ ೨೦ ॥

ಮನಸ್ಸನ್ನೂ ಗೆದ್ದುಕೊಂಡಿರುವ ಆ ವಿರಕ್ತ ಯೋಗಿಗಳೂ ಕೂಡ ದೇಹಗಳನ್ನು ತೊರೆದು ಬ್ರಹ್ಮದೇವರ ದೇಹದಲ್ಲಿ ಪ್ರವೇಶಿಸುವರು. ಮತ್ತೆ ಅವರೊಂದಿಗೆ ಪರಮಾನಂದಸ್ವರೂಪನೂ, ಪುರಾಣಪುರುಷನೂ ಆದ ಪರಬ್ರಹ್ಮ ಪರಮಾತ್ಮನಲ್ಲಿ ಲೀನವಾಗಿ ಹೋಗುವರು. ಇದಕ್ಕೆ ಮೊದಲು ಅವರು ಭಗವಂತನಲ್ಲಿ ಏಕೆ ಲೀನವಾಗಲಿಲ್ಲ ಎಂದರೆ ಅವರಲ್ಲಿ ಅಹಂಕಾರ ಶೇಷವಾಗಿತ್ತು. ॥ ೯-೧೦ ॥ ಆದ್ದರಿಂದ ಅಮ್ಮಾ! ಈಗ ನೀನೂ ಕೂಡ ಅತ್ಯಂತ ಭಕ್ತಿ-ಭಾವದಿಂದ ಆ ಶ್ರೀಹರಿಯ ಚರಣಕಮಲಗಳಲ್ಲಿ ಶರಣಾಗು. ಸಮಸ್ತ ಪ್ರಾಣಿಗಳ ಹೃದಯಕಮಲವೇ ಅವನ ವಾಸಮಂದಿರವಾಗಿದೆ. ಅವನ ಮಹಿಮೆಯನ್ನು ನಾನು ನಿನಗೆ ವರ್ಣಿಸಿರುವೆನಲ್ಲ! ॥ ೧೧ ॥

ಸಮಸ್ತ ಸ್ಥಾವರ ಜಂಗಮ ಪ್ರಾಣಿಗಳಿಗೆ ಆದಿಕಾರಣರಾದ, ವೇದಗರ್ಭ ಬ್ರಹ್ಮದೇವರೂ ಕೂಡ, ಮರೀಚಿಗಳೇ ಮುಂತಾದ ಋಷಿಗಳೂ, ಯೋಗೇಶ್ವರರೂ, ಸನಕಾದಿಗಳೂ ಹಾಗೂ ಯೋಗಪ್ರವರ್ತಕ ಸಿದ್ಧರೊಡನೆ ನಿಷ್ಕಾಮಕರ್ಮಗಳ ಮೂಲಕ ಆದಿಪುರುಷನೂ ಆದ ಸಗುಣಬ್ರಹ್ಮನನ್ನು ಹೊಂದಿದ್ದರೂ ಆಗಲೇ ಅವನಲ್ಲಿ ಸೇರಿ ಮುಕ್ತರಾಗುವುದಿಲ್ಲ. ಏಕೆಂದರೆ, ಅವರಲ್ಲಿಯೂ ಭೇದದೃಷ್ಟಿಯೂ, ಕರ್ತೃತ್ವಾಭಿಮಾನವೂ ಇರುವುದರಿಂದ ಭಗವಂತನ ಇಚ್ಛೆಯಂತೆ ಸೃಷ್ಟಿಕಾಲವು ಬಂದಾಗ ಕಾಲರೂಪವಾದ ಪರಮೇಶ್ವರನ ಪ್ರೇರಣೆಯಂತೆ ತ್ರಿಗುಣಗಳಲ್ಲಿ ಕ್ಷೋಭೆಯುಂಟಾದಾಗ ಹಿಂದಿನಂತೆಯೇ ಅವರು ಮತ್ತೆ ಪ್ರಕಟಗೊಳ್ಳುವರು. ॥ ೧೨-೧೪ ॥ ಹಾಗೆಯೇ ಹಿಂದೆ ಹೇಳಿದ ಸಿದ್ಧ-ಋಷಿಗಣಗಳೂ ಕೂಡ ತಮ್ಮ ಕರ್ಮಾನುಸಾರವಾಗಿ ಬ್ರಹ್ಮಲೋಕದ ಐಶ್ವರ್ಯವನ್ನು ಭೋಗಿಸಿ ಶ್ರೀಭಗವಂತನ ಇಚ್ಛೆಯಿಂದ ಗುಣಗಳಲ್ಲಿ ಕ್ಷೋಭೆಯುಂಟಾದಾಗ ಪುನಃ ಈ ಲೋಕಕ್ಕೆ ಮರಳಿಬರುವರು. ॥ ೧೫ ॥

ಯಾರ ಚಿತ್ತವು ಈ ಲೋಕದಲ್ಲಿಯೇ ಆಸಕ್ತವಾಗಿ, ಕರ್ಮಗಳಲ್ಲಿ ಶ್ರದ್ಧೆಯನ್ನು ಇಟ್ಟುಕೊಂಡಿರುವರೋ, ಅವರು ವೇದೋಕ್ತವಾದ ಕಾಮ್ಯಕರ್ಮಗಳನ್ನು ಹಾಗೂ ನಿತ್ಯಕರ್ಮಗಳನ್ನು ಸಾಂಗೋಪಾಂಗವಾಗಿ ಅನುಷ್ಠಾನ ಮಾಡುವುದರಲ್ಲಿಯೇ ತೊಡಗಿರುತ್ತಾರೆ. ॥ ೧೬ ॥ ಅವರ ಬುದ್ಧಿಯು ರಜೋಗುಣದ ಹೆಚ್ಚಳದಿಂದ ಕುಂಠಿತವಾಗಿರುತ್ತದೆ. ಹೃದಯದಲ್ಲಿ ಕಾಮನೆಗಳ ಬಲೆಯು ಹರಡಿಕೊಂಡಿರುತ್ತದೆ. ಇಂದ್ರಿಯಗಳು ಅವರ ವಶದಲ್ಲಿರುವುದಿಲ್ಲ. ಅದರಿಂದ ಅವರು ತಮ್ಮ ಮನೆಯಲ್ಲೇ ಆಸಕ್ತರಾಗಿ ಪ್ರತಿದಿನವೂ ಪಿತೃಗಳ ಪೂಜೆಯಲ್ಲೇ ತೊಡಗಿರುತ್ತಾರೆ. ॥ ೧೭ ॥ ಅವರು ಅರ್ಥ, ಧರ್ಮ, ಕಾಮಗಳಲ್ಲಿಯೇ ಪರಾಯಣರಾಗಿರುತ್ತಾರೆ. ಆದ್ದರಿಂದ ಕೀರ್ತನೆಗೆ ಯೋಗ್ಯನಾದ, ಮಹಾಪರಾಕ್ರಮವುಳ್ಳ, ಭವಭಯ ಹಾರಿಯಾದ ಶ್ರೀಮಧುಸೂದನನ ಕಥಾ-ಕೀರ್ತನೆಯಿಂದ ವಿಮುಖರಾಗಿರುತ್ತಾರೆ. ॥ ೧೮ ॥ ಅಯ್ಯೋ! ಹೇಸಿಗೆಯನ್ನೇ ತಿನ್ನುವ ಹಂದಿ-ನಾಯಿಗಳು ಅದನ್ನೇ ಬಯಸುವಂತೆ — ಶ್ರೀಭಗವಂತನ ಕಥಾಮೃತವನ್ನು ಬಿಟ್ಟು ನಿಂದಿತವಾದ ವಿಷಯ-ವಾರ್ತೆಗಳನ್ನೇ ಕೇಳುತ್ತಿರುವ ಜನರು ಎಂತಹ ದೈವಹತರು! ಮಂದ ಭಾಗ್ಯರು! ॥ ೧೯ ॥ ಗರ್ಭಾಧಾನದಿಂದ ಹಿಡಿದು ಅಂತ್ಯೇಷ್ಟಿಯವರೆಗಿನ ಎಲ್ಲ ಸಂಸ್ಕಾರಗಳನ್ನೂ ವಿಧಿಪೂರ್ವಕ ಆಚರಿಸುವ ಈ ಸಕಾಮಕರ್ಮ

ತತಸ್ತೇ ಕ್ಷೀಣಸುಕೃತಾಃ ಪುನರ್ಲೋಕಮಿಮಂ ಸತಿ ।
ಪತಂತಿ ವಿವಶಾ ದೇವೈಃ ಸದ್ಯೋ ವಿಭ್ರಂಶಿತೋದಯಾಃ ॥ ೨೧ ॥

ತಸ್ಮಾತ್ತ್ವಂ ಸರ್ವಭಾವೇನ ಭಜಸ್ವ ಪರಮೇಷ್ಠಿನಮ್ ।
ತದ್ಗುಣಾಶ್ರಯಯಾ ಭಕ್ತ್ಯಾ ಭಜನೀಯಪದಾಂಬುಜಮ್ ॥ ೨೨ ॥

ವಾಸುದೇವೇ ಭಗವತಿ ಭಕ್ತಿಯೋಗಃ ಪ್ರಯೋಜಿತಃ ।
ಜನಯತ್ಯಾಶು ವೈರಾಗ್ಯಂ ಜ್ಞಾನಂ ಯದ್ಬ್ರಹ್ಮದರ್ಶನಮ್ ॥ ೨೩ ॥

ಯದಾಸ್ಯ ಚಿತ್ತಮರ್ಥೇಷು ಸಮೇಷ್ವಿಂದ್ರಿಯವೃತ್ತಿಭಿಃ ।
ನ ವಿಗೃಹ್ಣಾತಿ ವೈಷಮ್ಯಂ ಪ್ರಿಯಮಪ್ರಿಯಮಿತ್ಯುತ ॥ ೨೪ ॥

ಸ ತದೈವಾತ್ಮನಾಽಽತ್ಮಾನಂ ನಿಃಸಂಗಂ ಸಮದರ್ಶನಮ್ ।
ಹೇಯೋಪಾದೇಯರಹಿತಮಾರೂಢಂ ಪದಮೀಕ್ಷತೇ ॥ ೨೫ ॥

ಜ್ಞಾನಮಾತ್ರಂ ಪರಂ ಬ್ರಹ್ಮ ಪರಮಾತ್ಮೇಶ್ವರಃ ಪುಮಾನ್ ।
ದೃಶ್ಯಾದಿಭಿಃ ಪೃಥಗ್ಭಾವೈರ್ಭಗವಾನೇಕ ಈಯತೇ ॥ ೨೬ ॥

ಏತಾವಾನೇವ ಯೋಗೇನ ಸಮಗ್ರೇಣೇಹ ಯೋಗಿನಃ ।
ಯುಜ್ಯತೇಽಭಿಮತೋ ಹ್ಯರ್ಥೋ ಯದಸಂಗಸ್ತು ಕೃತ್ಸ್ನಶಃ ॥ ೨೭ ॥

ಜ್ಞಾನಮೇಕಂ ಪರಾಚೀನೈರಿಂದ್ರಿಯೈರ್ಬ್ರಹ್ಮ ನಿರ್ಗುಣಮ್ ।
ಅವಭಾತ್ಯರ್ಥರೂಪೇಣ ಭ್ರಾಂತ್ಯಾ ಶಬ್ದಾದಿಧರ್ಮಿಣಾ ॥ ೨೮ ॥

ಯಥಾ ಮಹಾನಹಂರೂಪಸ್ತ್ರಿವೃತ್ಪಂಚವಿಧಃ ಸ್ವರಾಟ್ ।
ಏಕಾದಶವಿಧಸ್ತಸ್ಯ ವಪುರಂಡಂ ಜಗದ್ಯತಃ ॥ ೨೯ ॥

ಏತದ್ವೈ ಶ್ರದ್ಧಯಾ ಭಕ್ತ್ಯಾ ಯೋಗಾಭ್ಯಾಸೇನ ನಿತ್ಯಶಃ ।
ಸಮಾಹಿತಾತ್ಮಾ ನಿಃಸಂಗೋ ವಿರಕ್ತ್ಯಾ ಪರಿಪಶ್ಯತಿ ॥ ೩೦ ॥

ಇತ್ಯೇತತ್ಕಥಿತಂ ಗುರ್ವಿ ಜ್ಞಾನಂ ತದ್ಬ್ರಹ್ಮದರ್ಶನಮ್ ।
ಯೇನಾನುಬುದ್ಧ್ಯತೇ ತತ್ತ್ವಂ ಪ್ರಕೃತೇಃ ಪುರುಷಸ್ಯ ಚ ॥ ೩೧ ॥

ಗಳು ಪಿತೃಯಾನ ಅಥವಾ ಧೂಮಯಾನವೆಂಬ ಮಾರ್ಗದಿಂದ ಪಿತೃಲೋಕಕ್ಕೆ ಹೋಗಿ ಮತ್ತೆ ತಮ್ಮ ಸಂತಾನದ ವಂಶದಲ್ಲೇ ಜನಿಸುವರು. ॥ ೨೦ ॥ ತಾಯೇ! ಪಿತೃಲೋಕದ ಭೋಗಗಳನ್ನು ಅನುಭವಿಸಿದ ಬಳಿಕ ಅವರ ಪುಣ್ಯವೆಲ್ಲ ಕ್ಷೀಣವಾದಾಗ ದೇವತೆಗಳು ಅವರನ್ನು ಅಲ್ಲಿಯ ಐಶ್ವರ್ಯದಿಂದ ತಳ್ಳಿಬಿಡುತ್ತಾರೆ. ಮತ್ತೆ ಅವರು ವಿವಶರಾಗಿ ಈ ಲೋಕದಲ್ಲೇ ಬಂದುಬೀಳಬೇಕಾಗುವುದು. ॥ ೨೧ ॥ ಅಮ್ಮಾ! ಆದುದರಿಂದ ನೀನು ಸದಾ ಭಜಿಸಲು ಯೋಗ್ಯವಾದ ಚರಣಕಮಲಗಳುಳ್ಳ ಶ್ರೀಭಗವಂತನನ್ನು, ಆತನ ಕಲ್ಯಾಣಗುಣಗಳನ್ನು ಆಶ್ರಯಿಸಿರುವ ಭಕ್ತಿಯ ಮೂಲಕ ಸರ್ವ ಪ್ರಕಾರದಿಂದಲೂ ಭಜಿಸುವವಳಾಗು. ॥ ೨೨ ॥

ಭಗವಾನ್ ವಾಸುದೇವನ ಕುರಿತು ಮಾಡಿದ ಭಕ್ತಿಯೋಗವು ಶೀಘ್ರವಾಗಿ ಸಂಸಾರದಿಂದ ವೈರಾಗ್ಯ ಮತ್ತು ಬ್ರಹ್ಮಸಾಕ್ಷಾತ್ಕಾರ ರೂಪವಾದ ಜ್ಞಾನವನ್ನು ದೊರಕಿಸಿಕೊಡುತ್ತದೆ. ॥ ೨೩ ॥ ವಸ್ತುತಃ ಎಲ್ಲ ಇಂದ್ರಿಯವಿಷಯಗಳು ಭಗವದ್ರೂಪವೇ ಇರುವುದರಿಂದ ಸಮಾನವಾಗಿವೆ. ಆದ್ದರಿಂದ ಇಂದ್ರಿಯ ವೃತ್ತಿಗಳ ಮೂಲಕವೂ ಭಗವದ್ಭಕ್ತನ ಚಿತ್ತವು ಅವುಗಳಲ್ಲಿ ಪ್ರಿಯ-ಅಪ್ರಿಯಗಳೆಂಬ ಭೇದ ಕಲ್ಪಿಸದೆ ಸರ್ವತ್ರ ಭಗವಂತನನ್ನೇ ದರ್ಶಿಸುತ್ತದೆ. ಆಗಲೇ ಅವನು ಸಂಗದೋಷರಹಿತನಾಗಿ 'ಇದು ಗ್ರಾಹ್ಯ' 'ಇದು ಗ್ರಾಹ್ಯವಲ್ಲ' ಎಂಬ ಗುಣದೋಷಗಳಿಂದ ರಹಿತನಾಗಿ ಎಲ್ಲದರಲ್ಲಿಯೂ ಸಮವಾಗಿರುವ ತನ್ನ ಸ್ವರೂಪ ಮಹಿಮೆಯಲ್ಲಿ ಆರೂಢನಾಗಿ, ತನಗೆ ಆತ್ಮನಾಗಿರುವ ಪರಬ್ರಹ್ಮನನ್ನು ಸಾಕ್ಷಾತ್ಕರಿಸಿ ಕೊಳ್ಳುವನು. ॥ ೨೪-೨೫ ॥ ಆ ಭಗವಂತನೇ ಜ್ಞಾನಸ್ವರೂಪನೂ, ಪರಬ್ರಹ್ಮನೂ, ಪರಮಾತ್ಮನೂ, ಈಶ್ವರನೂ, ಪರಮಪುರುಷನೂ ಆಗಿರುವನು. ನಾನಾರೂಪಗಳಲ್ಲಿ ಕಾಣಿಸುವವನೂ ಅವನೊಬ್ಬನೇ. ॥ ೨೬ ॥ ಇಡೀ ಪ್ರಪಂಚದ ಕುರಿತು ಅನಾಸಕ್ತಿಯನ್ನು ಹೊಂದುವುದೇ ಯೋಗಿಗಳು ಆಚರಿಸುವ ಎಲ್ಲ ಯೋಗಸಾಧನೆಗಳಿಗೂ ಏಕಮಾತ್ರ ಉದ್ದೇಶವಾಗಿದೆ. ॥ ೨೭ ॥ ಬ್ರಹ್ಮವಸ್ತುವು ಒಂದೇ ಆಗಿದ್ದು, ಜ್ಞಾನಸ್ವರೂಪನೂ, ನಿರ್ಗುಣನೂ ಆಗಿರುವನು. ಆದರೂ ಅವನು ಬಾಹ್ಯವೃತ್ತಿಗಳುಳ್ಳ ಇಂದ್ರಿಯಗಳ ಮೂಲಕ ಭ್ರಾಂತಿಯಿಂದ ಶಬ್ದಾದಿ ಧರ್ಮವುಳ್ಳ ಬೇರೆ-ಬೇರೆ ಪದಾರ್ಥಗಳ ರೂಪಗಳಲ್ಲಿ ಕಂಡು ಬರುತ್ತಾನೆ. ॥ ೨೮ ॥ ಹೇಗೆ ಒಂದೇ ಪರಬ್ರಹ್ಮವು ಮಹತ್ತತ್ತ್ವ; ವೈಕಾರಿಕ, ರಾಜಸ, ತಾಮಸ-ಮೂರು ರೀತಿಯ ಅಹಂಕಾರ; ಪಂಚಭೂತಗಳೂ ಹಾಗೂ ಹನ್ನೊಂದು ಇಂದ್ರಿಯಗಳೂ ಆಗಿರುವನೋ ಮತ್ತು ಪುನಃ ಅದೇ ಸ್ವಯಂ ಪ್ರಕಾಶವು ಇವುಗಳ ಸಂಯೋಗದಿಂದ ಜೀವನೆನಿಸಿದನೋ – ಹಾಗೆಯೇ ಜೀವನ ಶರೀರರೂಪೀ ಈ ಬ್ರಹ್ಮಾಂಡವೂ ವಸ್ತುತಃ ಬ್ರಹ್ಮವೇ ಆಗಿದೆ. ಏಕೆಂದರೆ, ಬ್ರಹ್ಮನಿಂದಲೇ ಇದರ ಉತ್ಪತ್ತಿಯಾಗಿದೆ. ॥ ೨೯ ॥ ಆದರೆ ಶ್ರದ್ಧಾ-ಭಕ್ತಿ, ವೈರಾಗ್ಯ, ನಿರಂತರ ಯೋಗಾಭ್ಯಾಸದ ಮೂಲಕ ಏಕಾಗ್ರಚಿತ್ತನೂ, ಅಸಂಗ ಬುದ್ಧಿಯವನೂ ಆದವನೇ ಇದನ್ನು ಬ್ರಹ್ಮರೂಪದಿಂದ ನೋಡಬಲ್ಲನು. ॥ ೩೦ ॥

ಪೂಜನೀಯಳಾದ ಮಾತೆಯೇ! ಇದುವರೆಗೆ ನಾನು ನಿನಗೆ ಬ್ರಹ್ಮದರ್ಶನರೂಪವಾದ ಶ್ರೇಷ್ಠಜ್ಞಾನವನ್ನು ವಿವರಿಸಿದೆನು. ಇದರ ಮೂಲಕ ಪ್ರಕೃತಿ ಮತ್ತು ಪುರುಷರ ಸ್ವರೂಪವನ್ನೂ ಯಥಾವತ್ತಾಗಿ ತಿಳಿಯುವನು. ॥ ೩೧ ॥

ಜ್ಞಾನಯೋಗಶ್ಚ ಮನ್ನಿಷ್ಠೋ ನೈರ್ಗುಣ್ಯೋ ಭಕ್ತಿಲಕ್ಷಣಃ ।
ದ್ವಯೋರಪ್ಯೇಕ ಏವಾರ್ಥೋ ಭಗವಚ್ಛಬ್ದಲಕ್ಷಣಃ ॥ ೩೨ ॥

ಯಥೇಂದ್ರಿಯೈಃ ಪೃಥಗ್ದ್ವಾರೈರರ್ಥೋ ಬಹುಗುಣಾಶ್ರಯಃ ।
ಏಕೋ ನಾನೇಯತೇ ತದ್ವದ್ಭಗವಾನ್ ಶಾಸ್ತ್ರವರ್ತ್ಮಭಿಃ ॥ ೩೩ ॥

ಕ್ರಿಯಯಾ ಕ್ರತುಭಿರ್ದಾನೈಸ್ತಪಃಸ್ವಾಧ್ಯಾಯಮರ್ಶನೈಃ ।
ಆತ್ಮೇಂದ್ರಿಯಜಯೇನಾಪಿ ಸಂನ್ಯಾಸೇನ ಚ ಕರ್ಮಣಾಮ್ ॥ ೩೪ ॥

ಯೋಗೇನ ವಿವಿಧಾಂಗೇನ ಭಕ್ತಿಯೋಗೇನ ಚೈವ ಹಿ ।
ಧರ್ಮೇಣೋಭಯಚಿಹ್ನೇನ ಯಃ ಪ್ರವೃತ್ತಿನಿವೃತ್ತಿಮಾನ್ ॥ ೩೫ ॥

ಆತ್ಮತತ್ತ್ವಾವಬೋಧೇನ ವೈರಾಗ್ಯೇಣ ದೃಢೇನ ಚ ।
ಈಯತೇ ಭಗವಾನೇಭಿಃ ಸಗುಣೋ ನಿರ್ಗುಣಃ ಸ್ವದೃಕ್ ॥ ೩೬ ॥

ಪ್ರಾವೋಚಂ ಭಕ್ತಿಯೋಗಸ್ಯ ಸ್ವರೂಪಂ ತೇ ಚತುರ್ವಿಧಮ್ ।
ಕಾಲಸ್ಯ ಚಾವ್ಯಕ್ತಗತೇರ್ಯೋಽನ್ತರ್ಧಾವತಿ ಜಂತುಷು ॥ ೩೭ ॥

ಜೀವಸ್ಯ ಸಂಸೃತೀರ್ಬಹ್ವೀರವಿದ್ಯಾಕರ್ಮನಿರ್ಮಿತಾಃ ।
ಯಾಸ್ವಂಗ ಪ್ರವಿಶನ್ನಾತ್ಮಾ ನ ವೇದ ಗತಿಮಾತ್ಮನಃ ॥ ೩೮ ॥

ನೈತತ್ಖಲಾಯೋಪದಿಶೇನ್ನಾವಿನೀತಾಯ ಕರ್ಹಿಚಿತ್ ।
ನ ಸ್ತಬ್ಧಾಯ ನ ಭಿನ್ನಾಯ ನೈವ ಧರ್ಮಧ್ವಜಾಯ ಚ ॥ ೩೯ ॥

ನ ಲೋಲುಪಾಯೋಪದಿಶೇನ್ನ ಗೃಹಾರೂಢಚೇತಸೇ ।
ನಾಭಕ್ತಾಯ ಚ ಮೇ ಜಾತು ನ ಮದ್ಭಕ್ತದ್ವಿಷಾಮಪಿ ॥ ೪೦ ॥

ಶ್ರದ್ದಧಾನಾಯ ಭಕ್ತಾಯ ವಿನೀತಾಯಾನಸೂಯವೇ ।
ಭೂತೇಷು ಕೃತಮೈತ್ರಾಯ ಶುಶ್ರೂಷಾಭಿರತಾಯ ಚ ॥ ೪೧ ॥

ಬಹಿರ್ಜಾತವಿರಾಗಾಯ ಶಾಂತಚಿತ್ತಾಯ ದೀಯತಾಮ್ ।
ನಿರ್ಮತ್ಸರಾಯ ಶುಚಯೇ ಯಸ್ಯಾಹಂ ಪ್ರೇಯಸಾಂ ಪ್ರಿಯಃ ॥ ೪೨ ॥

ಯ ಇದಂ ಶೃಣುಯಾದಂಬ ಶ್ರದ್ಧಯಾ ಪುರುಷಃ ಸಕೃತ್ ।
ಯೋ ವಾಭಿಧತ್ತೇ ಮಚ್ಚಿತ್ತಃ ಸ ಹ್ಯೇತಿ ಪದವೀಂ ಚ ಮೇ ॥ ೪೩ ॥

ದೇವಿ! ನಿರ್ಗುಣ ಬ್ರಹ್ಮವಿಷಯಕ ಜ್ಞಾನಯೋಗ ಹಾಗೂ ನನ್ನ ಕುರಿತಾಗಿ ಆಚರಿಸಿದ ಭಕ್ತಿಯೋಗ – ಇವೆರಡರ ಫಲವು ಒಂದೇ ಆಗಿದೆ. ಅದನ್ನೇ 'ಭಗವಂತ'ನೆಂಬ ಶಬ್ದದಿಂದ ಹೇಳುತ್ತಾರೆ. ॥ ೩೨ ॥ ರೂಪ, ರಸ, ಗಂಧ ಮುಂತಾದ ಅನೇಕ ಗುಣಗಳಿಗೆ ಆಶ್ರಯವಾಗಿರುವ ಒಂದೇ ಪದಾರ್ಥವು ಬೇರೆ-ಬೇರೆ ಇಂದ್ರಿಯಗಳ ಮೂಲಕ ಭಿನ್ನ-ಭಿನ್ನವಾಗಿ ಅನುಭವಕ್ಕೆ ಬರುವುದು. ಹಾಗೆಯೇ ಶಾಸ್ತ್ರಗಳ ವಿಭಿನ್ನ ಮಾರ್ಗಗಳಿಂದ ಒಬ್ಬನೇ ಭಗವಂತನು ಅನೇಕ ಪ್ರಕಾರಗಳಿಂದ ಅನುಭವಕ್ಕೆ ಬರುವನು. ॥ ೩೩ ॥

ನಾನಾರೀತಿಯ ಕರ್ಮಕಲಾಪಗಳು, ಯಜ್ಞಗಳು, ದಾನಗಳು, ತಪಸ್ಸುಗಳು, ವೇದಾಧ್ಯಯನ, ವೇದವಿಚಾರ (ಮೀಮಾಂಸಾ), ಮನಸ್ಸು ಇಂದ್ರಿಯಗಳ ಸಂಯಮ, ಕರ್ಮಗಳ ತ್ಯಾಗ, ವಿವಿಧ ಅಂಗಗಳುಳ್ಳ ಯೋಗಗಳು, ಭಕ್ತಿಯೋಗ, ನಿವೃತ್ತಿ ಮತ್ತು ಪ್ರವೃತ್ತಿ ರೂಪವಾದ ಎರಡೂ ರೀತಿಯ ಧರ್ಮಗಳು, ಆತ್ಮತತ್ತ್ವದ ಜ್ಞಾನ ಹಾಗೂ ದೃಢವಾದ ವೈರಾಗ್ಯ ಇವೆಲ್ಲ ಸಾಧನೆಗಳಿಂದ ಸಗುಣ-ನಿರ್ಗುಣರೂಪನಾದ ಸ್ವಯಂಪ್ರಕಾಶ ಭಗವಂತನನ್ನೇ ಪಡೆಯಲಾಗುತ್ತದೆ. ॥ ೩೪-೩೬ ॥

ಜನನಿಯೇ! ನಾನು ನಿನಗೆ ಸಾತ್ತ್ವಿಕ, ರಾಜಸ, ತಾಮಸ ಮತ್ತು ನಿರ್ಗುಣಗಳೆಂಬ ನಾಲ್ಕು ಪ್ರಕಾರದ ಭಕ್ತಿಯೋಗಗಳನ್ನು ವರ್ಣಿಸಿರುವೆನು. ಹೀಗೆಯೇ ಪ್ರಾಣಿಗಳ ಜನ್ಮಾದಿ ವಿಕಾರಗಳಿಗೆ ಕಾರಣ ಮತ್ತು ಯಾವುದರ ಗತಿಯು ತಿಳಿಯುವುದಿಲ್ಲವೋ ಅಂತಹ ಕಾಲದ ಸ್ವರೂಪವನ್ನೂ ವಿವರಿಸಿದ್ದೇನೆ. ॥ ೩೭ ॥ ದೇವಿ! ಅವಿದ್ಯೆಯಿಂದ ಉಂಟಾದ ಕರ್ಮದ ಕಾರಣ ಜೀವಕ್ಕೆ ಅನೇಕಗತಿಗಳು ಉಂಟಾಗುತ್ತವೆ. ಅವುಗಳಲ್ಲಿ ಹೋದಾಗ ಜೀವನು ತನ್ನ ಸ್ವರೂಪವನ್ನು ಗುರುತಿಸಿಕೊಳ್ಳಲಾರನು. ॥ ೩೮ ॥ ನಾನು ನಿನಗೆ ಮಾಡಿರುವ ಈ ಜ್ಞಾನೋಪದೇಶವನ್ನು ದುಷ್ಟರಿಗೂ, ಅವಿನೀತರಿಗೂ, ಅಹಂಕಾರಿಗಳಿಗೂ, ದುರಾಚಾರಿಗಳಿಗೂ, ಧರ್ಮದ ಸೋಗು ಹಾಕುವ ಡಾಂಭಿಕರಿಗೂ ಹೇಳಬಾರದು. ॥ ೩೯ ॥ ಹಾಗೆಯೇ ವಿಷಯಲಂಪಟರೂ, ಗೃಹಾಸಕ್ತರೂ, ನನ್ನ ಭಕ್ತರಲ್ಲದವರೂ ಅಥವಾ ನನ್ನ ಭಕ್ತರನ್ನು ದ್ವೇಷಿಸುವವರೂ – ಇವರಿಗೂ ಇದನ್ನು ಎಂದೂ ಉಪದೇಶಿಸಬಾರದು. ॥ ೪೦ ॥ ಯಾರು ಅತ್ಯಂತ ಶ್ರದ್ಧಾಳುವೂ, ಭಕ್ತನೂ, ವಿನಯಶಾಲಿಯೂ, ಬೇರೆಯವರ ಕುರಿತು ದೋಷದೃಷ್ಟಿಯಿಲ್ಲದವನೂ, ಎಲ್ಲ ಪ್ರಾಣಿಗಳಲ್ಲಿ ಮೈತ್ರಿಯನ್ನಿಡುವವನೂ, ಗುರುಸೇವಾ ತತ್ಪರನೂ, ಬಾಹ್ಯವಿಷಯಗಳಲ್ಲಿ ಅನಾಸಕ್ತನೂ, ಶಾಂತಚಿತ್ತನೂ, ಮತ್ಸರವಿಲ್ಲದವನೂ, ಶುದ್ಧಚಿತ್ತನೂ, ನನ್ನನ್ನು ಪರಮಪ್ರಿಯನೆಂದು ತಿಳಿಯುವವನೂ, ಇಂಥವನಿಗೆ ಮಾತ್ರ ಇದನ್ನು ಅವಶ್ಯವಾಗಿ ಉಪದೇಶಿಸಬೇಕು. ॥ ೪೧-೪೨ ॥ ತಾಯೇ! ನನ್ನಲ್ಲಿ ಚಿತ್ತವನ್ನು ತೊಡಗಿಸಿ ಇದನ್ನು ಶ್ರದ್ಧೆಯಿಂದ ಒಮ್ಮೆಯಾದರೂ ಕೇಳುವವನೂ, ಹೇಳುವವನೂ, ಆದ ಪುರುಷನು ನನ್ನ ಪರಮಪದವನ್ನೇ ಪಡೆಯುವನು. ॥ ೪೩ ॥

ಮೂವತ್ತೆರಡನೆಯ ಅಧ್ಯಾಯವು ಮುಗಿಯಿತು. ॥ ೩೨ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ತೃತೀಯಸ್ಕಂಧೇ
ಕಾಪಿಲೇಯೇ ದ್ವಾತ್ರಿಂಶೋಽಧ್ಯಾಯಃ ॥ ೩೨ ॥

ಮೂವತ್ತಮೂರನೆಯ ಅಧ್ಯಾಯ

ದೇವಹೂತಿಗೆ ತತ್ತ್ವಜ್ಞಾನವುಂಟಾಗಿ ಮೋಕ್ಷಪದವಿ ಪ್ರಾಪ್ತವಾದುದು

ಮೈತ್ರೇಯ ಉವಾಚ

ಏವಂ ನಿಶಮ್ಯ ಕಪಿಲಸ್ಯ ವಚೋ ಜನಿತ್ರೀ
ಸಾ ಕರ್ದಮಸ್ಯ ದಯಿತಾ ಕಿಲ ದೇವಹೂತಿಃ ।
ವಿಸ್ರಸ್ತಮೋಹಪಟಲಾ ತಮಭಿಪ್ರಣಮ್ಯ
ತುಷ್ಟಾವ ತತ್ತ್ವವಿಷಯಾಂಕಿತಸಿದ್ಧಿ ಭೂಮಿಮ್ ॥ ೧ ॥

ದೇವಹೂತಿರುವಾಚ

ಅಥಾಪ್ಯಜೋಽಂತಸ್ಸಲಿಲೇ ಶಯಾನಂ
ಭೂತೇಂದ್ರಿಯಾರ್ಥಾತ್ಮಮಯಂ ವಪುಸ್ತೇ ।
ಗುಣಪ್ರವಾಹಂ ಸದಶೇಷಬೀಜಂ
ದಧ್ಯೌ ಸ್ವಯಂ ಯಜ್ಜಠರಾಬ್ಜ ಜಾತಃ ॥ ೨ ॥

ಸ ಏವ ವಿಶ್ವಸ್ಯ ಭವಾನ್ವಿಧತ್ತೇ
ಗುಣಪ್ರವಾಹೇಣ ವಿಭಕ್ತವೀರ್ಯಃ ।
ಸರ್ಗಾದ್ಯನೀಹೋಽವಿತಥಾಭಿಸಂಧಿ-
ರಾತ್ಮೇಶ್ವರೋಽತರ್ಕ್ಯಸಹಸ್ರಶಕ್ತಿಃ ॥ ೩ ॥

ಸ ತ್ವಂ ಭೃತೋ ಮೇ ಜಠರೇಣ ನಾಥ
ಕಥಂ ನು ಯಸ್ಯೋದರ ಏತದಾಸೀತ್ ।
ವಿಶ್ವಂ ಯುಗಾಂತೇ ವಟಪತ್ರ ಏಕಃ
ಶೇತೇ ಸ್ಮ ಮಾಯಾಶಿಶುರಂಘ್ರಿಪಾನಃ ॥ ೪ ॥

ತ್ವಂ ದೇಹತಂತ್ರಃ ಪ್ರಶಮಾಯ ಪಾಪ್ಮನಾಂ
ನಿದೇಶಭಾಜಾಂ ಚ ವಿಭೋ ವಿಭೂತಯೇ ।
ಯಥಾವತಾರಾಸ್ತವ ಸೂಕರಾದಯ-
ಸ್ತಥಾಯಮಪ್ಯಾತ್ಮಪಥೋಪಲಬ್ಧಯೇ ॥ ೫ ॥

ಯನ್ನಾಮಧೇಯಶ್ರವಣಾನುಕೀರ್ತನಾದ್
ಯತ್ಪ್ರಹ್ವಣಾದ್ಯತ್ಸ್ಮರಣಾದಪಿ ಕ್ವಚಿತ್ ।
ಶ್ವಾದೋಽಪಿ ಸದ್ಯಃ ಸವನಾಯ ಕಲ್ಪತೇ
ಕುತಃ ಪುನಸ್ತೇ ಭಗವನ್ನು ದರ್ಶನಾತ್ ॥ ೬ ॥

ಅಹೋ ಬತ ಶ್ವಪಚೋಽತೋ ಗರೀಯಾನ್
ಯಜ್ಜಿಹ್ವಾಗ್ರೇ ವರ್ತತೇ ನಾಮ ತುಭ್ಯಮ್ ।
ತೇಪುಸ್ತಪಸ್ತೇ ಜುಹುವುಃ ಸಸ್ನುರಾರ್ಯಾ
ಬ್ರಹ್ಮಾನೂಚುರ್ನಾಮ ಗೃಣಂತಿ ಯೇ ತೇ ॥ ೭ ॥

ಶ್ರೀಮೈತ್ರೇಯರು ಹೇಳುತ್ತಾರೆ – ಅಯ್ಯಾ ! ವಿದುರನೇ ! ಶ್ರೀಕಪಿಲಭಗವಂತನ ಈ ವಚನಗಳನ್ನು ಕೇಳಿ ಕರ್ದಮರ ಪ್ರಿಯಪತ್ನಿಯಾದ ಮಾತೆ ದೇವಹೂತಿಯ ಮೋಹದ ತೆರೆ ಕಳಚಿಹೋಯಿತು. ಆಕೆಯು ತತ್ತ್ವಪ್ರತಿಪಾದಕವಾದ ಸಾಂಖ್ಯಶಾಸ್ತ್ರಜ್ಞಾನದ ಆಧಾರಭೂಮಿಯಾಗಿರುವ ಶ್ರೀಕಪಿಲದೇವರಿಗೆ ನಮಸ್ಕಾರಮಾಡಿ ಅವನನ್ನು ಸ್ತುತಿಸತೊಡಗಿದಳು. ॥ ೧ ॥

ದೇವಹೂತಿಯು ಇಂತೆಂದಳು – ಪ್ರಭುವೇ ! ಬ್ರಹ್ಮದೇವರು ನಿನ್ನ ನಾಭಿಕಮಲದಿಂದಲೇ ಪ್ರಕಟರಾಗಿದ್ದರು. ಅವರು ಪ್ರಳಯಕಾಲದಲ್ಲಿ ಪವಡಿಸಿದ್ದ – ಪಂಚಭೂತಗಳೂ, ಇಂದ್ರಿಯಗಳೂ, ಶಬ್ದಾದಿ ವಿಷಯಗಳೂ, ಮನೋಮಯವಾದ ನಿನ್ನ ವಿಗ್ರಹವನ್ನೇ ಧ್ಯಾನಮಾಡಿದರು. ಸತ್ತ್ವಾದಿಗುಣಗಳ ಪ್ರವಾಹದಿಂದ ಕೂಡಿರುವ, ಸತ್ತ್ವರೂಪವೂ, ಕಾರ್ಯ- ಕಾರಣಗಳೆರಡಕ್ಕೂ ಬೀಜರೂಪವೂ ಆದ ನಿನ್ನ ಮಂಗಳವಿಗ್ರಹವನ್ನು ಅವರು ಧ್ಯಾನಮಾಡಿದರು. ॥ ೨ ॥ ನೀನು ನಿಷ್ಕ್ರಿಯನೂ, ಸತ್ಯಸಂಕಲ್ಪನೂ, ಸಮಸ್ತ ಜೀವರ ಪ್ರಭುವೂ, ಸಾವಿರಾರು ಅಚಿಂತ್ಯ ಶಕ್ತಿಗಳಿಂದಲೂ ಸಂಪನ್ನನಾಗಿರುವೆ. ತನ್ನ ಶಕ್ತಿಯನ್ನು ಗುಣಪ್ರವಾಹರೂಪದಿಂದ ಬ್ರಹ್ಮಾದಿ ಅನಂತಮೂರ್ತಿಗಳಲ್ಲಿ, ವಿಭಕ್ತಗೊಳಿಸಿ, ಅವುಗಳ ಮೂಲಕ ಸ್ವತಃ ವಿಶ್ವದ ರಚನಾದಿಗಳನ್ನು ಮಾಡುತ್ತಿರುವೆ. ॥ ೩ ॥ ಸ್ವಾಮಿ ! ಯಾರ ಉದರದಲ್ಲಿ ಪ್ರಳಯಕಾಲವು ಬಂದಾಗ ಈ ಇಡೀ ಪ್ರಪಂಚವು ಲೀನವಾಗಿ ಹೋಗುತ್ತದೋ, ಯಾರು ಕಲ್ಪಾಂತ್ಯದಲ್ಲಿ ಮಾಯಾಶಿಶುವಿನ ರೂಪದಲ್ಲಿ ಕಾಲುಹೆಬ್ಬೆರಳನ್ನು ಚೀಪುತ್ತಾ ಒಬ್ಬಂಟಿಗನಾಗಿ ವಟವೃಕ್ಷದ ಎಲೆಯಮೇಲೆ ಪವಡಿಸುರುವನೋ, ಅಂತಹ ನಿನ್ನನ್ನು ನಾನು ಗರ್ಭದಲ್ಲಿ ಧರಿಸಿದೆನಲ್ಲ! ಇದೆಂತಹ ಆಶ್ಚರ್ಯವಾದುದು. ॥ ೪॥ ವಿಭುವೇ ! ನೀನು ಪಾಪಿಗಳನ್ನು ದಮನಗೊಳಿಸಲು ಮತ್ತು ನಿನ್ನ ಆಜ್ಞಾಕಾರಿಯಾದ ಭಕ್ತರ ಅಭ್ಯುದಯ ಮತ್ತು ನಿಃಶ್ರೇಯಸ್ಸನ್ನು ಉಂಟುಮಾಡುವುದಕ್ಕಾಗಿ ಸ್ವೇಚ್ಛೆಯಿಂದ ದೇಹವನ್ನು ಧರಿಸುತ್ತೀಯೆ. ವರಾಹನೇ ಮುಂತಾದ ಅವತಾರಗಳಂತೆಯೇ ಈ ಕಪಿಲಾವತಾರವನ್ನು ಮುಮುಕ್ಷುಗಳಿಗೆ ಜ್ಞಾನಮಾರ್ಗವನ್ನು ತೋರುವುದಕ್ಕಾಗಿಯೇ ಕೈಗೊಂಡಿದ್ದೀಯೆ. ॥ ೫ ॥ ಭಗವಂತಾ ! ನಿನ್ನ ನಾಮಗಳನ್ನು ಶ್ರವಣಿಸಿದರೂ, ಕೀರ್ತಿಸಿದರೂ ಅಥವಾ ಅಪ್ಪಿ-ತಪ್ಪಿ ಎಂದಾದರೂ ನಿನ್ನನ್ನು ವಂದಿಸಿ, ಸ್ಮರಿಸಿದರೂ ಚಾಂಡಾಲನೂ ಕೂಡ ಸೋಮಯಾಜಿ ಬ್ರಾಹ್ಮಣನಿಗೆ ಸಮಾನವಾಗಿ ಪೂಜ್ಯನಾಗುತ್ತಾನೆ. ಮತ್ತೆ ನಿನ್ನ ದರ್ಶನದಿಂದ ಕೃತಕೃತ್ಯರಾದ ಮನುಷ್ಯರ ಕುರಿತು ಹೇಳುವುದೇನಿದೆ ? ॥ ೬ ॥ ಆಹಾ ! ಅತನ ನಾಲಿಗೆಯ ತುದಿಯಲ್ಲಿ ನಿನ್ನ ನಾಮವು ವಿರಾಜಮಾನವಾಗಿದೆ. ಆದುದರಿಂದ ಆ ಚಾಂಡಾಲನೂ ಸರ್ವಶ್ರೇಷ್ಠನೇ ಆಗಿದ್ದಾನೆ. ನಿನ್ನ ನಾಮಗಳನ್ನು ಉಚ್ಚರಿಸಿದ ಶ್ರೇಷ್ಠ ಪುರುಷರು ತಪಸ್ಸು, ಹೋಮ, ತೀರ್ಥಸ್ನಾನ, ಸದಾಚಾರ ಪಾಲನೆ ಮತ್ತು ವೇದಾಧ್ಯಯನ – ಎಲ್ಲವನ್ನು ಮಾಡಿದಂತೆಯೇ ಸರಿ. ॥ ೭ ॥

ತಂ ತ್ವಾಮಹಂ ಬ್ರಹ್ಮ ಪರಂ ಪುಮಾಂಸಂ
ಪ್ರತ್ಯಕ್ಸ್ರೋತಸ್ಯಾತ್ಮನಿ ಸಂವಿಭಾವ್ಯಮ್ ।
ಸ್ವತೇಜಸಾ ಧ್ವಸ್ತಗುಣಪ್ರವಾಹಂ
ವಂದೇ ವಿಷ್ಣುಂ ಕಪಿಲಂ ವೇದಗರ್ಭಮ್ ॥ ೮ ॥

ಸ್ವಾಮಿ! ನೀನು ಸಾಕ್ಷಾತ್ ಪರಬ್ರಹ್ಮನಾಗಿರುವೆ. ಪರಮಪುರುಷನೂ ನೀನೇ. ಚಿತ್ತವೃತ್ತಿಗಳ ಪ್ರವಾಹವನ್ನು ಅಂತರ್ಮುಖವಾಗಿಸಿ ಅಂತಃಕರಣದಲ್ಲಿ ನಿನ್ನನ್ನೇ ಚಿಂತಿಸಲಾಗುವುದು. ನೀನು ತನ್ನ ತೇಜದಿಂದ ಮಾಯೆಯ ಕಾರ್ಯವಾದ ಗುಣಪ್ರವಾಹವನ್ನು ಶಾಂತಗೊಳಿಸುವೆ ಹಾಗೂ ನಿನ್ನ ಉದರದಲ್ಲೇ ಸಮಸ್ತ ವೇದತತ್ತ್ವಗಳು ಅಡಗಿವೆ. ಇಂತಹ ಸಾಕ್ಷಾತ್ ವಿಷ್ಣುರೂಪನಾದ ನಿನಗೆ ನಾನು ನಮಸ್ಕರಿಸುತ್ತೇನೆ. ॥ ೮ ॥

ಮೈತ್ರೇಯ ಉವಾಚ

ಈಡಿತೋ ಭಗವಾನೇವಂ ಕಪಿಲಾಖ್ಯಃ ಪರಃ ಪುಮಾನ್ ।
ವಾಚಾಽವಿಕ್ಲವಯೇತ್ಯಾಹ ಮಾತರಂ ಮಾತೃವತ್ಸಲಃ ॥ ೯ ॥

ಶ್ರೀಮೈತ್ರೇಯರು ಹೇಳುತ್ತಾರೆ – ತಾಯಿಯು ಹೀಗೆ ಸ್ತುತಿಸಿದಾಗ ಮಾತೃವತ್ಸಲನಾದ ಪರಮಪುರುಷ ಭಗವಾನ್ ಕಪಿಲದೇವರು ಗಂಭೀರವಾದ ವಾಣಿಯಿಂದ ಇಂತೆಂದರು. ॥ ೯ ॥

ಕಪಿಲ ಉವಾಚ

ಮಾರ್ಗೇಣಾನೇನ ಮಾತಸ್ತೇ ಸುಸೇವ್ಯೇನೋದಿತೇನ ಮೇ ।
ಆಸ್ಥಿತೇನ ಪರಾಂ ಕಾಷ್ಠಾಮಚಿರಾದವರೋತ್ಸ್ಯಸಿ ॥ ೧೦ ॥

ಶ್ರದ್ಧತ್ಸ್ವೈತನ್ಮತಂ ಮಹ್ಯಂ ಜುಷ್ಟಂ ಯದ್ಬ್ರಹ್ಮವಾದಿಭಿಃ ।
ಯೇನ ಮಾಮಭಯಂ ಯಾಯಾ ಮೃತ್ಯುಮೃಚ್ಛಂತ್ಯತದ್ವಿದಃ ॥ ೧೧ ॥

ಶ್ರೀಕಪಿಲಭಗವಂತನು ಹೇಳುತ್ತಾನೆ – ಅಮ್ಮಾ! ನಾನು ನಿನಗೆ ಹೇಳಿದ ಈ ಸುಗಮ ಮಾರ್ಗವನ್ನು ಅವಲಂಬಿಸುವುದರಿಂದ ನೀನು ಶೀಘ್ರವಾಗಿ ಪರಮಪದವನ್ನು ಪಡೆದುಕೊಳ್ಳುವೆ. ॥ ೧೦ ॥ ನನ್ನ ಈ ಮತದಲ್ಲಿ ಶ್ರದ್ಧೆಯನ್ನಿಡು. ಬ್ರಹ್ಮವಾದಿ ಜನರು ಇದನ್ನು ಸೇವನಮಾಡಿರುವರು. ಇದರ ಮೂಲಕ ನೀನು ನನ್ನ ಜನ್ಮ-ಮರಣರಹಿತವಾದ ಸ್ವರೂಪವನ್ನು ಪಡೆಯುವೆ. ಈ ಮತವನ್ನು ತಿಳಿಯದವರು ಜನ್ಮ-ಮರಣದ ಚಕ್ರದಲ್ಲಿ ಸಿಲುಕಿಕೊಳ್ಳುವರು. ॥ ೧೧ ॥

ಮೈತ್ರೇಯ ಉವಾಚ

ಇತಿ ಪ್ರದರ್ಶ್ಯ ಭಗವಾನ್ಸತೀಂ ತಾಮಾತ್ಮನೋ ಗತಿಮ್ ।
ಸ್ವಮಾತ್ರಾ ಬ್ರಹ್ಮವಾದಿನ್ಯಾ ಕಪಿಲೋಽನುಮತೋ ಯಯೌ ॥ ೧೨ ॥

ಸಾ ಚಾಪಿ ತನಯೋಕ್ತೇನ ಯೋಗಾದೇಶೇನ ಯೋಗಯುಕ್ ।
ತಸ್ಮಿನ್ನಾಶ್ರಮ ಆಪೀಡೇ ಸರಸ್ವತ್ಯಾಃ ಸಮಾಹಿತಾ ॥ ೧೩ ॥

ಅಭೀಕ್ಷ್ಣಾವಗಾಹಕಪಿಶಾನ್ ಜಟಿಲಾನ್ಕುಟಿಲಾಲಕಾನ್ ।
ಆತ್ಮಾನಂ ಚೋಗ್ರತಪಸಾ ಬಿಭ್ರತೀ ಚೀರಿಣಂ ಕೃಶಮ್ ॥ ೧೪ ॥

ಪ್ರಜಾಪತೇಃ ಕರ್ದಮಸ್ಯ ತಪೋಯೋಗವಿಜೃಂಭಿತಮ್ ।
ಸ್ವಗಾರ್ಹಸ್ಥ್ಯಮನೌಪಮ್ಯಂ ಪ್ರಾರ್ಥ್ಯಂ ವೈಮಾನಿಕೈರಪಿ ॥ ೧೫ ॥

ಪಯಃಫೇನನಿಭಾಃ ಶಯ್ಯಾ ದಾಂತಾ ರುಕ್ಮಪರಿಚ್ಛದಾಃ ।
ಆಸನಾನಿ ಚ ಹೈಮಾನಿ ಸುಸ್ಪರ್ಶಾಸ್ತರಣಾನಿ ಚ ॥ ೧೬ ॥

ಸ್ವಚ್ಛಸ್ಫಟಿಕಕುಡ್ಯೇಷು ಮಹಾಮಾರಕತೇಷು ಚ ।
ರತ್ನಪ್ರದೀಪಾ ಆಭಾಂತಿ ಲಲನಾರತ್ನಸಂಯುತಾಃ ॥ ೧೭ ॥

ಗೃಹೋದ್ಯಾನಂ ಕುಸುಮಿತೈ ರಮ್ಯಂ ಬಹ್ವಮರದ್ರುಮೈಃ ।
ಕೂಜದ್ವಿಹಂಗಮಿಥುನಂ ಗಾಯನ್ಮತ್ತಮಧುವ್ರತಮ್ ॥ ೧೮ ॥

ಶ್ರೀಮೈತ್ರೇಯ ಮಹರ್ಷಿಗಳು ಹೇಳುತ್ತಾರೆ – ವಿದುರನೇ! ಶ್ರೀಕಪಿಲಭಗವಂತನು ಹೀಗೆ ತನ್ನ ಶ್ರೇಷ್ಠವಾದ ಆತ್ಮಜ್ಞಾನವನ್ನು ಉಪದೇಶಿಸಿ, ಬ್ರಹ್ಮವಾದಿನಿಯಾದ ಆ ತಾಯಿಯ ಅನುಮತಿಯನ್ನು ಪಡೆದು ಅಲ್ಲಿಂದ ಹೊರಟು ಹೋದನು. ॥ ೧೨ ॥ ಆಗ ದೇವಹೂತಿಯೂ ಸರಸ್ವತಿನದಿಗೆ ಶಿರೋಭೂಷಣದಂತಿದ್ದ ತನ್ನ ಆಶ್ರಮದಲ್ಲಿ ಪುತ್ರನು ಉಪದೇಶಿಸಿರುವ ಯೋಗಸಾಧನೆಯ ಮೂಲಕ ಯೋಗಾಭ್ಯಾಸವನ್ನು ಮಾಡುತ್ತಾ ಸಮಾಧಿಯಲ್ಲಿ ಸ್ಥಿತಳಾದಳು. ॥ ೧೩ ॥ ತ್ರಿಕಾಲಸ್ನಾನ ಮಾಡುವುದರಿಂದ ಅವಳ ಗುಂಗುರುಕೂದಲುಗಳು ಜಟೆಗಟ್ಟಿದವು. ನಾರುಮಡಿಯನ್ನು ಧರಿಸಿದ ಆಕೆಯ ದೇಹವು ಉಗ್ರವಾದ ತಪಸ್ಸಿನಿಂದಾಗಿ ದುರ್ಬಲವಾಯಿತು. ॥ ೧೪ ॥ ಆಕೆಯು ಕರ್ದಮರ ತಪಸ್ಸು ಮತ್ತು ಯೋಗಬಲಗಳಿಂದ ದೊರಕಿದ್ದ, ದೇವತೆಗಳೂ ಆಶಿಸುತ್ತಿದ್ದ, ಅನುಪಮವಾದ ಗಾರ್ಹಸ್ಥ್ಯ ಸುಖವನ್ನು ತೊರೆದುಬಿಟ್ಟಳು. ॥ ೧೫ ॥ ಅದರಲ್ಲಿ ಹಾಲಿನ ನೊರೆಯಂತೆ ಬಿಳುಪಾದ ಮೃದು ಹಾಸಿಗೆಗಳು, ಹಸ್ತಿದಂತದಿಂದ ಕೂಡಿದ ಮಂಚಗಳೂ, ಸುವರ್ಣದ ಪಾತ್ರೆಗಳು, ಮೆದುವಾದ ಮೆತ್ತೆಗಳಿಂದ ಕೂಡಿದ ಚಿನ್ನದ ಸಿಂಹಾಸನಗಳೂ, ಮಹಾಮರಕತಮಣಿಗಳಿಂದ ಅಲಂಕೃತವಾಗಿದ್ದ ಸ್ಫಟಿಕದ ಸ್ವಚ್ಛ ಗೋಡೆಗಳಲ್ಲಿ ರತ್ನಗಳಿಂದ ಕೆತ್ತಿದ ರಮಣಿಯರ ಮೂರ್ತಿಗಳಿಂದ ಕೂಡಿದ್ದು, ಮಣಿಮಯ ದೀಪಗಳು ಬೆಳಗುತ್ತಿದ್ದವು. ಅದು ಹೂಗೊಂಚಲುಗಳಿಂದ ಕಂಗೊಳಿಸುವ ಅನೇಕ ದಿವ್ಯ ವೃಕ್ಷಗಳಿಂದ ಶೋಭಿತವಾಗಿತ್ತು. ಅವುಗಳಲ್ಲಿ ಅನೇಕ ಪ್ರಕಾರದ ಪಕ್ಷಿಗಳು ಕಲರವ ಮಾಡುತ್ತಾ, ಮತ್ತ ಭೃಂಗಗಳು ಝೇಂಕರಿಸುತ್ತಿದ್ದವು. ಕಮಲಗಳ ಕಂಪಿನಿಂದ ಸುವಾಸಿತವಾಗಿದ್ದ ತಿಳಿಗೊಳಗಳಿಂದಲೂ ಸೊಗಸುಗೊಂಡು, ಕರ್ದಮರಿಂದ ಮುದ್ದಿಸಲ್ಪಟ್ಟು ತಾನು ಅಲ್ಲಿಗೆ ವಿಹಾರಕ್ಕಾಗಿ ಪ್ರವೇಶಿಸಿದೊಡನೆ ಗಂಧರ್ವಗಣಗಳು ಸ್ತುತಿಸುತ್ತಿರುವಾಗ,

ಯತ್ರ ಪ್ರವಿಷ್ಟಮಾತ್ಮಾನಂ ವಿಬುಧಾನುಚರಾ ಜಗುಃ ।
ವಾಪ್ಯಾಮುತ್ಪಲಗಂಧಿನ್ಯಾಂ ಕರ್ದಮೇನೋಪಲಾಲಿತಮ್ ॥ ೧೯ ॥

ಹಿತ್ವಾ ತದೀಪ್ಸಿತತಮಮಪ್ಯಾಖಂಡಲಯೋಷಿತಾಮ್ ।
ಕಿಂಚಿಚ್ಚಕಾರ ವದನಂ ಪುತ್ರವಿಶ್ಲೇಷಣಾತುರಾ ॥ ೨೦ ॥

ವನಂ ಪ್ರವ್ರಜಿತೇ ಪತ್ಯಾವಪತ್ಯವಿರಹಾತುರಾ ।
ಜ್ಞಾತತತ್ತ್ವಾಪ್ಯಭೂನ್ನಷ್ಟೇ ವತ್ಸೇ ಗೌರಿವ ವತ್ಸಲಾ ॥ ೨೧ ॥

ತಮೇವ ಧ್ಯಾಯತೀ ದೇವಮಪತ್ಯಂ ಕಪಿಲಂ ಹರಿಮ್ ।
ಬಭೂವಾಚಿರತೋ ವತ್ಸ ನಿಸ್ಪೃಹಾ ತಾದೃಶೇ ಗೃಹೇ ॥ ೨೨ ॥

ಧ್ಯಾಯತೀ ಭಗವದ್ರೂಪಂ ಯದಾಹ ಧ್ಯಾನಗೋಚರಮ್ ।
ಸುತಃ ಪ್ರಸನ್ನವದನಂ ಸಮಸ್ತವ್ಯಸ್ತಚಿಂತಯಾ ॥ ೨೩ ॥

ಭಕ್ತಿಪ್ರವಾಹಯೋಗೇನ ವೈರಾಗ್ಯೇಣ ಬಲೀಯಸಾ ।
ಯುಕ್ತಾನುಷ್ಠಾನಜಾತೇನ ಜ್ಞಾನೇನ ಬ್ರಹ್ಮಹೇತುನಾ ॥ ೨೪ ॥

ವಿಶುದ್ಧೇನ ತದಾಽಽತ್ಮಾನಮಾತ್ಮನಾ ವಿಶ್ವತೋಮುಖಮ್ ।
ಸ್ವಾನುಭೂತ್ಯಾ ತಿರೋಭೂತಮಾಯಾಗುಣವಿಶೇಷಣಮ್ ॥ ೨೫ ॥

ಬ್ರಹ್ಮಣ್ಯವಸ್ಥಿತಮತಿರ್ಭಗವತ್ಯಾತ್ಮಸಂಶ್ರಯೇ ।
ನಿವೃತ್ತಜೀವಾಪತ್ತಿತ್ವಾತ್ಕ್ಷೀಣಕ್ಲೇಶಾಽಽಪ್ತನಿರ್ವೃತಿಃ ॥ ೨೬ ॥

ನಿತ್ಯಾರೂಢಸಮಾಧಿತ್ವಾತ್ಪರಾವೃತ್ತಗುಣಭ್ರಮಾ ।
ನ ಸಸ್ಮಾರ ತದಾಽಽತ್ಮಾನಂ ಸ್ವಪ್ನೇ ದೃಷ್ಟಮಿವೋತ್ಥಿತಃ ॥ ೨೭ ॥

ತದ್ದೇಹಃ ಪರತಃ ಪೋಷೋಽಪ್ಯಕೃಶಶ್ಚಾಧ್ಯಸಂಭವಾತ್ ।
ಬಭೌ ಮಲೈರವಚ್ಛನ್ನಃ ಸಧೂಮ ಇವ ಪಾವಕಃ ॥ ೨೮ ॥

ಸ್ವಾಂಗಂ ತಪೋಯೋಗಮಯಂ ಮುಕ್ತಕೇಶಂ ಗತಾಂಬರಮ್ ।
ದೈವಗುಪ್ತಂ ನ ಬುಬುಧೇ ವಾಸುದೇವಪ್ರವಿಷ್ಟಧೀಃ ॥ ೨೯ ॥

ಏವಂ ಸಾ ಕಪಿಲೋಕ್ತೇನ ಮಾರ್ಗೇಣಾಚಿರತಃ ಪರಮ್ ।
ಆತ್ಮಾನಂ ಬ್ರಹ್ಮ ನಿರ್ವಾಣಂ ಭಗವಂತಮವಾಪ ಹ ॥ ೩೦ ॥

ತದ್ವೀರಾಸೀತ್ಪುಣ್ಯತಮಂ ಕ್ಷೇತ್ರಂ ತ್ರೈಲೋಕ್ಯವಿಶ್ರುತಮ್ ।
ನಾಮ್ನಾ ಸಿದ್ಧಪದಂ ಯತ್ರ ಸಾ ಸಂಸಿದ್ಧಿಮುಪೇಯುಷೀ ॥ ೩೧ ॥

ಇಂದ್ರನ ಮಡದಿಯರೂ ಆಸೆ ಪಡುತ್ತಿದ್ದ ಆ ಗೃಹೋದ್ಯಾನಗಳ ಮಮತೆಯನ್ನು ಆಕೆಯು ತ್ಯಜಿಸಿಬಿಟ್ಟಿದ್ದಳು. ಆದರೆ ಪುತ್ರವಿಯೋಗದ ದುಃಖವುಮಾತ್ರ ಆಕೆಯ ಮುಖದಲ್ಲಿ ಕೊಂಚ ಕಾಣುತ್ತಿತ್ತು. ॥ ೧೯-೨೦ ॥

ಪತಿಯು ಅರಣ್ಯಕ್ಕೆ ತೆರಳಿದ ಬಳಿಕ ಪುತ್ರನೂ ಅಗಲಿ ದೂರ ಹೋಗಲು ಆಕೆಯು ಆತ್ಮಜ್ಞಾನಸಂಪನ್ನಳಾಗಿದ್ದರೂ ಕರುವನ್ನು ಅಗಲಿದ ಹಸುವಿನಂತೆ ಕಳವಳಗೊಂಡಳು. ॥ ೨೧ ॥ ವಿದುರನೇ! ಆದರೆ ಆಕೆಯು ತನ್ನ ಪುತ್ರನಾಗಿದ್ದ ಕಪಿಲರೂಪಿಯಾದ ಶ್ರೀಹರಿಯ ಧ್ಯಾನದಲ್ಲಿ ತೊಡಗಿ ಕೆಲವೇ ದಿನಗಳಲ್ಲಿ ವೈರಾಗ್ಯಸಂಪನ್ನೆಯಾಗಿ ಆ ವೈಭವದ ಮನೆಯನ್ನು ಬಿಟ್ಟುಬಿಟ್ಟಳು. ॥ ೨೨ ॥ ಅನಂತರ ಆಕೆಯು ಶ್ರೀಕಪಿಲಭಗವಂತನು ತನಗೆ ಧ್ಯಾನಯೋಗ್ಯವಾದ ಪ್ರಸನ್ನ ವದನಾರವಿಂದದಿಂದ ಕೂಡಿದ ಸ್ವರೂಪವನ್ನು ವರ್ಣನೆಮಾಡಿದ ಸ್ವರೂಪದ ಒಂದೊಂದು ಅವಯವವನ್ನೂ ಮತ್ತು ಇಡೀ ವಿಗ್ರಹವನ್ನು ಚಿಂತಿಸುತ್ತಾ ಧ್ಯಾನಮಗ್ನಳಾದಳು. ॥ ೨೩ ॥ ಭಗವದ್ಭಕ್ತಿಯ ಪ್ರವಾಹ, ಪ್ರಬಲವಾದ ವೈರಾಗ್ಯ, ಯಥೋಚಿತವಾದ ಕರ್ಮಾನುಷ್ಠಾನದಿಂದ ಉಂಟಾದ ಬ್ರಹ್ಮಸಾಕ್ಷಾತ್ಕಾರವನ್ನುಂಟು ಮಾಡಿಸುವ ಜ್ಞಾನದಿಂದ ಚಿತ್ತವು ಶುದ್ಧವಾದ್ದರಿಂದ ಆಕೆಯು ತನ್ನ ಸ್ವರೂಪ ಪ್ರಕಾಶದಿಂದ ಮಾಯೆಯ ಆವರಣವನ್ನು ಕಳಚಿ ಹಾಕುವ ಸರ್ವವ್ಯಾಪಕನಾದ ಪರಮಾತ್ಮನ ಧ್ಯಾನದಲ್ಲಿ ಮುಳುಗಿಹೋದಳು. ॥ ೨೪-೨೫ ॥ ಹೀಗೆ ಜೀವಕ್ಕೆ ಅಧಿಷ್ಠಾನನಾಗಿರುವ ಪರಬ್ರಹ್ಮನಾದ ಭಗವಂತನಲ್ಲಿ ಬುದ್ಧಿಯು ನೆಲೆಗೊಳ್ಳಲು ಆಕೆಯ ಜೀವಭಾವವು ಕಳೆದುಹೋಯಿತು ಹಾಗೂ ಸಮಸ್ತ ಕ್ಲೇಶಗಳಿಂದ ಮುಕ್ತಳಾಗಿ ಪರಮಾನಂದದಲ್ಲಿ ಮಗ್ನಳಾದಳು. ॥ ೨೬ ॥ ಈಗ ನಿರಂತರ ಸಮಾಧಿಸ್ಥಳಾದ ಕಾರಣ ಆಕೆಗೆ ವಿಷಯಗಳಲ್ಲಿರುವ ಸತ್ಯತ್ವದ ಭ್ರಾಂತಿಯು ಅಳಿದುಹೋಯಿತು. ನಿದ್ದೆಯಿಂದ ಎಚ್ಚರಗೊಂಡವನು ಕನಸಿನಲ್ಲಿನ ದೇಹವನ್ನು ಮರೆಯುವಂತೆ ಆಕೆಗೆ ತನ್ನ ದೇಹದ ಎಚ್ಚರವೂ ಇರಲಿಲ್ಲ. ॥ ೨೭ ॥ ಆಕೆಯ ಶರೀರದ ಪೋಷಣೆಯನ್ನು ಇತರರು ಮಾಡುತ್ತಿದ್ದರು. ಆದರೂ ಯಾವುದೇ ಮಾನಸಿಕ ಕ್ಲೇಶವಿಲ್ಲದ ಕಾರಣ ಅವಳ ದೇಹವು ದುರ್ಬಲಗೊಂಡಿಲ್ಲ, ಅದರ ತೇಜಸ್ಸು ಇನ್ನೂ ಹೆಚ್ಚಿತ್ತು. ಹೊರಗಿನ ಕೊಳೆಯಿಂದ ಕೂಡಿದ್ದ ದೇಹವು ಹೊಗೆಯಾಡುವ ಅಗ್ನಿಯಂತೆ ಶೋಭಿಸತೊಡಗಿತು. ಆಕೆಯ ಕೂದಲು ಕೆದರಿಹೋಗಿದ್ದವು. ಬಟ್ಟೆಯೂ ಕಳಚಿ ಹೋಗಿತ್ತು. ಆದರೂ ನಿರಂತರವಾಗಿ ಅವಳ ಚಿತ್ತವು ಭಗವಂತನಲ್ಲೇ ನೆಟ್ಟಿದ್ದರಿಂದ ಆಕೆಗೆ ತನ್ನ ತಪೋಮಯವಾಗಿದ್ದ ಶರೀರದ ಅರಿವು ಕಿಂಚಿತ್ತೂ ಇರಲಿಲ್ಲ. ಕೇವಲ ಪ್ರಾರಬ್ಧವೇ ಅದನ್ನು ರಕ್ಷಿಸುತ್ತಿತ್ತು. ॥ ೨೮-೨೯ ॥

ಎಲೈ ವಿದುರನೇ! ಹೀಗೆ ದೇವಹೂತಿಯೂ ಶ್ರೀಕಪಿಲ ಭಗವಂತನು ಹೇಳಿದ್ದ ಮಾರ್ಗದಲ್ಲಿ ನಡೆದು ಸ್ವಲ್ಪ ಸಮಯದಲ್ಲೇ ಪರಮಾನಂದಸ್ವರೂಪನಾದ ಶ್ರೀಪರಮಾತ್ಮನನ್ನು ಪಡೆದು ಕೊಂಡಳು. ॥ ೩೦ ॥ ಎಲೈ ವೀರವರನೇ! ಆಕೆಗೆ ಸಿದ್ಧಿಯು ದೊರೆತ ಸ್ಥಾನವು ಪರಮಪವಿತ್ರ 'ಸಿದ್ಧಪದ' (ಇದು ಈಗ ಗುಜರಾತದಲ್ಲಿದೆ.) ಎಂಬ ಹೆಸರಿನಿಂದ ಮೂರು ಲೋಕಗಳಲ್ಲಿ ಪ್ರಸಿದ್ಧವಾಯಿತು. ॥ ೩೧ ॥

ತಸ್ಯಾಸ್ತದ್ಯೋಗವಿಧುತಮಾರ್ತ್ಯಂ ಮರ್ತ್ಯಮಭೂತ್ಸರಿತ್ ।
ಸ್ರೋತಸಾಂ ಪ್ರವರಾ ಸೌಮ್ಯ ಸಿದ್ಧಿದಾ ಸಿದ್ಧಸೇವಿತಾ ॥ ೩೨ ॥

ಕಪಿಲೋಽಪಿ ಮಹಾಯೋಗೀ ಭಗವಾನ್ಪಿತುರಾಶ್ರಮಾತ್ ।
ಮಾತರಂ ಸಮನುಜ್ಞಾಪ್ಯ ಪ್ರಾಗುದೀಚೀಂ ದಿಶಂ ಯಯೌ ॥ ೩೩ ॥

ಸಿದ್ಧಚಾರಣಗಂಧರ್ವೈರ್ಮುನಿಭಿಶ್ಚಾಪ್ಸರೋಗಣೈಃ ।
ಸ್ತೂಯಮಾನಃ ಸಮುದ್ರೇಣ ದತ್ತಾರ್ಹಣನಿಕೇತನಃ ॥ ೩೪ ॥

ಆಸ್ತೇ ಯೋಗಂ ಸಮಾಸ್ಥಾಯ ಸಾಂಖ್ಯಾಚಾರ್ಯೈರಭಿಷ್ಟುತಃ ।
ತ್ರಯಾಣಾಮಪಿ ಲೋಕಾನಾಮುಪಶಾಂತ್ಯೈ ಸಮಾಹಿತಃ ॥ ೩೫ ॥

ಏತನ್ನಿಗದಿತಂ ತಾತ ಯತ್ಪೃಷ್ಟೋಽಹಂ ತವಾನಘ ।
ಕಪಿಲಸ್ಯ ಚ ಸಂವಾದೋ ದೇವಹೂತ್ಯಾಶ್ಚ ಪಾವನಃ ॥ ೩೬ ॥

ಯ ಇದಮನುಶೃಣೋತಿ ಯೋಽಭಿಧತ್ತೇ
ಕಪಿಲಮುನೇರ್ಮತಮಾತ್ಮ ಯೋಗಗುಹ್ಯಮ್ ।
ಭಗವತಿ ಕೃತಧೀಃ ಸುಪರ್ಣಕೇತಾ-
ವುಪಲಭತೇ ಭಗವತ್ಪದಾರವಿಂದಮ್ ॥ ೩೭ ॥

ಸಾಧುಶ್ರೇಷ್ಠನೇ! ಯೋಗಸಾಧನೆಯಿಂದ ಆಕೆಯ ಶರೀರದ ಎಲ್ಲ ದೈಹಿಕ ಕೊಳೆಯು ಕಳೆದುಹೋಗಿ ಶುದ್ಧವಾಗಿ ಅದು ಒಂದು ನದಿಯರೂಪವನ್ನು ತಾಳಿತು. ಅದು ಸಿದ್ಧಗಣರಿಂದ ಸೇವಿಸಲ್ಪಡುತ್ತಾ ಸರ್ವಸಿದ್ಧಿಗಳನ್ನೂ ಕೊಡುವುದಾಗಿದೆ. ॥ ೩೨ ॥

ಯೋಗಿವರೇಣ್ಯರಾದ ಭಗವಾನ್ ಕಪಿಲದೇವರು ತಾಯಿಯ ಅಪ್ಪಣೆಯನ್ನು ಪಡೆದು, ತಂದೆಯ ಆಶ್ರಮದಿಂದ ಈಶಾನ್ಯದಿಕ್ಕಿನ ಕಡೆಗೆ ಹೊರಟುಹೋದರು. ॥ ೩೩ ॥ ಅಲ್ಲಿ ಸ್ವತಃ ಸಮುದ್ರರಾಜನು ಅವರಿಗೆ ಪೂಜೆಮಾಡಿ ಇರಲು ಜಾಗವನ್ನು ನೀಡಿದನು. ಅಲ್ಲಿ ಅವರು ಮೂರು ಲೋಕಗಳಿಗೂ ಶಾಂತಿಯನ್ನು ಕೊಡುವುದಕ್ಕಾಗಿ ಯೋಗಮಾರ್ಗವನ್ನು ಅವಲಂಬಿಸಿ ಸಮಾಧಿಯಲ್ಲಿ ಸ್ಥಿತರಾದರು. ಸಿದ್ಧ, ಚಾರಣ, ಗಂಧರ್ವ, ಮುನಿಗಳು ಹಾಗೂ ಅಪ್ಸರೆಯರು ಹೀಗೆ ಎಲ್ಲರೂ ಅವರನ್ನು ಸ್ತುತಿಸುತ್ತಿದ್ದಾರೆ ಮತ್ತು ಸಾಂಖ್ಯಾಚಾರ್ಯರ ಸಮೂಹವೂ ಅವರನ್ನು ಎಲ್ಲ ವಿಧದಿಂದ ಸ್ತೋತ್ರ ಮಾಡುತ್ತಿವೆ. ॥ ೩೪-೩೫ ॥

ಪುಣ್ಯಾತ್ಮರಾದ ವಿದುರನೇ! ನೀನು ಕೇಳಿದ್ದಂತೆ ನಾನು ನಿನಗೆ ಭಗವಾನ್ ಕಪಿಲರ ಮತ್ತು ದೇವಹೂತಿಯ ಪರಮ ಪವಿತ್ರವಾದ ಸಂವಾದವನ್ನು ಹೇಳಿರುವೆನು. ॥ ೩೬ ॥ ಶ್ರೀಕಪಿಲಭಗವಂತನ ಈ ಸಿದ್ಧಾಂತವು ಅಧ್ಯಾತ್ಮಯೋಗದ ಪರಮ ರಹಸ್ಯವಾಗಿದೆ. ಇದನ್ನು ಶ್ರವಣಿಸುವ ಅಥವಾ ವರ್ಣಿಸುವವನು ಭಗವಾನ್ ಗರುಡಧ್ವಜನ ಭಕ್ತಿಯಿಂದ ಕೂಡಿಕೊಂಡು ಬೇಗನೇ ಶ್ರೀಹರಿಯ ಚರಣಾರವಿಂದಗಳನ್ನು ಹೊಂದುವನು. ॥ ೩೭ ॥

ಮೂವತ್ತಮೂರನೆಯ ಅಧ್ಯಾಯವು ಮುಗಿಯಿತು. ॥ ೩೩ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ತೃತೀಯಸ್ಕಂಧೇ
ಕಾಪಿಲೇಯೋಪಾಖ್ಯಾನೇ ತ್ರಯಸ್ತ್ರಿಂಶೋಽಧ್ಯಾಯಃ ॥ ೩೩ ॥

ಮೂರನೆಯ ಸ್ಕಂಧವು ಸಂಪೂರ್ಣವಾಯಿತು.

॥ ಓಂ ನಮೋ ಭಗವತೇ ವಾಸುದೇವಾಯ ॥

ಶ್ರೀಮದ್ಭಾಗವತಮಹಾಪುರಾಣಮ್

ಚತುರ್ಥಃ ಸ್ಕಂಧಃ

ಮೊದಲನೆಯ ಅಧ್ಯಾಯ

ಸ್ವಾಯಂಭುವ ಮನುವಿನ ಕನ್ಯೆಯರ ವಂಶದ ವರ್ಣನೆ

ಮೈತ್ರೇಯ ಉವಾಚ

ಮನೋಸ್ತು ಶತರೂಪಾಯಾಂ ತಿಸ್ರಃ ಕನ್ಯಾಶ್ಚ ಜಜ್ಞಿರೇ ।
ಆಕೂತಿರ್ದೇವಹೂತಿಶ್ಚ ಪ್ರಸೂತಿರಿತಿ ವಿಶ್ರುತಾಃ ॥ ೧ ॥

ಆಕೂತಿಂ ರುಚಯೇ ಪ್ರಾದಾದಪಿ ಭ್ರಾತೃಮತೀಂ ನೃಪಃ ।
ಪುತ್ರಿಕಾಧರ್ಮಮಾಶ್ರಿತ್ಯ ಶತರೂಪಾನುಮೋದಿತಃ ॥ ೨ ॥

ಪ್ರಜಾಪತಿಃ ಸ ಭಗವಾನ್ರುಚಿಸ್ತಸ್ಯಾಮಜೀಜನತ್ ।
ಮಿಥುನಂ ಬ್ರಹ್ಮವರ್ಚಸ್ವೀ ಪರಮೇಣ ಸಮಾಧಿನಾ ॥ ೩ ॥

ಯಸ್ತಯೋಃ ಪುರುಷಃ ಸಾಕ್ಷಾದ್ವಿಷ್ಣುರ್ಯಜ್ಞಸ್ವರೂಪಧೃಕ್ ।
ಯಾ ಸ್ತ್ರೀ ಸಾ ದಕ್ಷಿಣಾ ಭೂತೇರಂಶಭೂತಾನಪಾಯಿನೀ ॥ ೪ ॥

ಆನಿನ್ಯೇ ಸ್ವಗೃಹಂ ಪುತ್ರ್ಯಾಃ ಪುತ್ರಂ ವಿತತರೋಚಿಷಮ್ ।
ಸ್ವಾಯಂಭುವೋ ಮುದಾ ಯುಕ್ತೋ ರುಚಿರ್ಜಗ್ರಾಹ ದಕ್ಷಿಣಾಮ್ ॥ ೫ ॥

ತಾಂ ಕಾಮಯಾನಾಂ ಭಗವಾನುವಾಹ ಯಜುಷಾಂ ಪತಿಃ ।
ತುಷ್ಟಾಯಾಂ ತೋಷಮಾಪನ್ನೋಽಜನಯದ್ದ್ವಾದಶಾತ್ಮಜಾನ್ ॥ ೬ ॥

ತೋಷಃ ಪ್ರತೋಷಃ ಸಂತೋಷೋ ಭದ್ರಃ ಶಾಂತಿರಿಡಸ್ಪತಿಃ ।
ಇಧ್ಮಃ ಕವಿರ್ವಿಭುಃ ಸ್ವಹ್ನಃ ಸುದೇವೋ ರೋಚನೋ ದ್ವಿಷಟ್ ॥ ೭ ॥

ತುಷಿತಾ ನಾಮ ತೇ ದೇವಾ ಆಸನ್ ಸ್ವಾಯಮ್ಭುವಾಂತರೇ ।
ಮರೀಚಿಮಿಶ್ರಾ ಋಷಯೋ ಯಜ್ಞಃ ಸುರಗಣೇಶ್ವರಃ ॥ ೮ ॥

ಶ್ರೀಮೈತ್ರೇಯ ಮಹರ್ಷಿಗಳು ಹೇಳುತ್ತಾರೆ – ವಿದುರನೇ! ಸ್ವಾಯಂಭುವ ಮನುವು ತನ್ನ ಪತ್ನಿಯಾದ ಶತರೂಪಾದೇವಿಯಲ್ಲಿ ಪ್ರಿಯವ್ರತ ಮತ್ತು ಉತ್ತಾನಪಾದರೆಂಬ ಇಬ್ಬರು ಪುತ್ರರು, ಅಲ್ಲದೆ ಮೂವರು ಪುತ್ರಿಯರನ್ನು ಪಡೆದನು. ಅವರು ಆಕೂತಿ, ದೇವಹೂತಿ, ಪ್ರಸೂತಿ ಎಂಬ ಹೆಸರುಗಳಿಂದ ವಿಖ್ಯಾತರಾದರು. ॥ ೧ ॥ ಆಕೂತಿಯನ್ನು ಸೋದರರಿಬ್ಬರು ಇದ್ದರೂ ಮಹಾರಾಣಿ ಶತರೂಪೆಯ ಅನುಮತಿಯನ್ನು ಪಡೆದು ರುಚಿ ಪ್ರಜಾಪತಿಯೊಂದಿಗೆ 'ಪುತ್ರಿಕಾ ಧರ್ಮ'ಕ್ಕನುಸಾರವಾಗಿ* ವಿವಾಹಮಾಡಿ ಕೊಟ್ಟನು. ॥ ೨ ॥

ಭಗವಂತನ ಅನನ್ಯ ಚಿಂತನೆಯಿಂದ ಪ್ರಜಾಪತಿರುಚಿಯು ಬ್ರಹ್ಮತೇಜದಿಂದ ಸಂಪನ್ನನಾಗಿದ್ದನು. ಆತನು ತನ್ನ ಪರಮ ಸಮಾಧಿ ಯೋಗದ ಫಲವಾಗಿ ಆಕೂತಿಯಲ್ಲಿ ಒಂದು ಗಂಡುಮಗು ಮತ್ತು ಒಂದು ಹೆಣ್ಣುಮಗು ಹೀಗೆ ಅವಳಿ ಮಕ್ಕಳನ್ನು ಪಡೆದನು. ॥ ೩ ॥ ಅವರಲ್ಲಿ ಗಂಡುಮಗುವು ಸಾಕ್ಷಾತ್ ಯಜ್ಞಸ್ವರೂಪಧರನಾದ ಭಗವಾನ್ ವಿಷ್ಣುವಾಗಿದ್ದನು. ಹೆಣ್ಣುಮಗುವು ಭಗವಂತನಿಂದ ಎಂದಿಗೂ ಅಗಲದೆ ಇರುವ ಸಾಕ್ಷಾತ್ ಶ್ರೀಮಹಾಲಕ್ಷ್ಮಿಯ ಅಂಶರೂಪಳಾದ 'ದಕ್ಷಿಣಾ'ದೇವಿಯಾಗಿದ್ದಳು. ॥ ೪ ॥ ಸ್ವಾಯಂಭುವ ಮನುವು ತನ್ನ ಪುತ್ರಿಯಾದ ಆಕೂತಿಯ ಆ ಪರಮ ತೇಜಸ್ವೀ ಪುತ್ರನನ್ನು ಅತ್ಯಂತ ಪ್ರಸನ್ನತೆಯಿಂದ ಮನೆಗೆ ತಂದನು ಮತ್ತು ದಕ್ಷಿಣಾಳನ್ನು ರುಚಿ ಪ್ರಜಾಪತಿಯು ತನ್ನ ಬಳಿ ಇರಿಸಿಕೊಂಡನು. ॥ ೫ ॥ ದಕ್ಷಿಣಾದೇವಿಯು ವಿವಾಹಯೋಗ್ಯಳಾದಾಗ ಅವಳು ಭಗವಾನ್ ಯಜ್ಞನನ್ನೇ ಪತಿರೂಪದಿಂದ ಪಡೆಯುವ ಇಚ್ಛೆಯನ್ನು ಪ್ರಕಟಿಸಿದಳು. ಆಗ ಭಗವಾನ್ ಯಜ್ಞಪುರುಷನು ಅವಳೊಂದಿಗೆ ವಿವಾಹವಾದನು. ಇದರಿಂದ ಪತಿ-ಪತ್ನಿಯರಿಬ್ಬರಿಗೂ ಪರಸ್ಪರ ಸಂತೋಷವಾಯಿತು. ಹೀಗೆ ಸಂತುಷ್ಟಳಾದ ದಕ್ಷಿಣಾದೇವಿಯಲ್ಲಿ ಯಜ್ಞನು ಹನ್ನೆರಡು ಪುತ್ರರನ್ನು ಪಡೆದನು. ॥ ೬ ॥ ಅವರ ಹೆಸರು ಇಂತಿವೆ – ತೋಷ, ಪ್ರತೋಷ, ಸಂತೋಷ, ಭದ್ರ, ಶಾಂತಿ, ಇಡಸ್ಪತಿ, ಇಧ್ಮ, ಕವಿ, ವಿಭು, ಸ್ವಹ್ನ, ಸುದೇವ ಮತ್ತು ರೋಚನ. ॥ ೭ ॥ ಈ ಹನ್ನೆರಡು ಮಂದಿ ಪುತ್ರರೇ ಸ್ವಾಯಂಭುವ ಮನ್ವಂತರದಲ್ಲಿ 'ತುಷಿತ'ರೆಂಬ ದೇವತೆಗಳಾದರು. ಆ ಮನ್ವಂತರದಲ್ಲಿ ಮರೀಚಿಯೇ ಮುಂತಾದವರು ಸಪ್ತರ್ಷಿಗಳಾಗಿದ್ದರು. ಭಗವಂತನಾದ ಯಜ್ಞನೇ ದೇವತೆಗಳೊಡೆಯ ಇಂದ್ರನಾಗಿದ್ದನು. ಮಹಾನ್

* 'ಪುತ್ರಿಕಾಧರ್ಮ'ಕ್ಕನುಸಾರವಾಗಿ ಮಾಡುವ ವಿವಾಹದಲ್ಲಿ ಮಗಳಲ್ಲಿ ಹುಟ್ಟುವ ಮೊದಲನೆಯ ಮಗನನ್ನು ಮಗಳ ತಂದೆಯು ಪಡೆಯುವುದೆಂಬ ನಿಬಂಧನೆ ಇರುತ್ತದೆ.

ಪ್ರಿಯವ್ರತೋತ್ತಾನಪಾದೌ ಮನುಪುತ್ರೌ ಮಹೌಜಸೌ ।
ತತ್ಪುತ್ರಪೌತ್ರನಪ್ತೄಣಾಮನುವೃತ್ತಂ ತದಂತರಮ್ ॥ ೯ ॥

ದೇವಹೂತಿಮದಾತ್ತಾತ ಕರ್ದಮಾಯಾತ್ಮಜಾಂ ಮನುಃ ।
ತತ್ಸಂಬಂಧಿ ಶ್ರುತಪ್ರಾಯಂ ಭವತಾ ಗದತೋ ಮಮ ॥ ೧೦ ॥

ದಕ್ಷಾಯ ಬ್ರಹ್ಮಪುತ್ರಾಯ ಪ್ರಸೂತಿಂ ಭಗವಾನ್ಮನುಃ ।
ಪ್ರಾಯಚ್ಛದ್ಯತ್ಕೃತಃ ಸರ್ಗಸ್ತ್ರಿಲೋಕ್ಯಾಂ ವಿತತೋ ಮಹಾನ್ ॥ ೧೧ ॥

ಯಾಃ ಕರ್ದಮಸುತಾಃ ಪ್ರೋಕ್ತಾ ನವ ಬ್ರಹ್ಮರ್ಷಿಪತ್ನಯಃ ।
ತಾಸಾಂ ಪ್ರಸೂತಿಪ್ರಸವಂ ಪ್ರೋಚ್ಯಮಾನಂ ನಿಬೋಧ ಮೇ ॥ ೧೨ ॥

ಪತ್ನೀ ಮರೀಚೇಸ್ತು ಕಲಾ ಸುಷುವೇ ಕರ್ದಮಾತ್ಮಜಾ ।
ಕಶ್ಯಪಂ ಪೂರ್ಣಿಮಾನಂ ಚ ಯಯೋರಾಪೂರಿತಂ ಜಗತ್ ॥ ೧೩ ॥

ಪೂರ್ಣಿಮಾಸೂತ ವಿರಜಂ ವಿಶ್ವಗಂ ಚ ಪರಂತಪ ।
ದೇವಕುಲ್ಯಾಂ ಹರೇಃ ಪಾದಶೌಚಾದ್ಯಾಭೂತ್ಸರಿದ್ದಿವಃ ॥ ೧೪ ॥

ಅತ್ರೇಃ ಪತ್ನ್ಯನಸೂಯಾ ತ್ರೀನ್ ಜಜ್ಞೇ ಸುಯಶಸಃ ಸುತಾನ್ ।
ದತ್ತಂ ದುರ್ವಾಸಸಂ ಸೋಮಮಾತ್ಮೇಶಬ್ರಹ್ಮಸಂಭವಾನ್ ॥ ೧೫ ॥

ವಿದುರ ಉವಾಚ

ಅತ್ರೇರ್ಗೃಹೇ ಸುರಶ್ರೇಷ್ಠಾಃ ಸ್ಥಿತ್ಯುತ್ಪತ್ತ್ಯಂತಹೇತವಃ ।
ಕಿಂಚಿಚ್ಚಿಕೀರ್ಷವೋ ಜಾತಾ ಏತದಾಖ್ಯಾಹಿ ಮೇ ಗುರೋ ॥ ೧೬ ॥

ಮೈತ್ರೇಯ ಉವಾಚ

ಬ್ರಹ್ಮಣಾ ನೋದಿತಃ ಸೃಷ್ಟಾವತ್ರಿರ್ಬ್ರಹ್ಮವಿದಾಂ ವರಃ ।
ಸಹ ಪತ್ನ್ಯಾ ಯಯಾವೃಕ್ಷಂ ಕುಲಾದ್ರಿಂ ತಪಸಿ ಸ್ಥಿತಃ ॥ ೧೭ ॥

ತಸ್ಮಿನ್ ಪ್ರಸೂನಸ್ತಬಕಪಲಾಶಾಶೋಕಕಾನನೇ ।
ವಾರ್ಭಿಃ ಸ್ರವದ್ಭಿರುದ್ಘುಷ್ಟೇ ನಿರ್ವಿಂಧ್ಯಾಯಾಃ ಸಮಂತತಃ ॥ ೧೮ ॥

ಪ್ರಾಣಾಯಾಮೇನ ಸಂಯಮ್ಯ ಮನೋ ವರ್ಷಶತಂ ಮುನಿಃ ।
ಅತಿಷ್ಠದೇಕಪಾದೇನ ನಿರ್ದ್ವಂದ್ವೋಽನಿಲಭೋಜನಃ ॥ ೧೯ ॥

ಪ್ರಭಾವಶಾಲಿ ಪ್ರಿಯವ್ರತ ಮತ್ತು ಉತ್ತಾನಪಾದರೇ ಮನುಪುತ್ರರಾಗಿದ್ದರು. ಆ ಮನ್ವಂತರವು ಇವರಿಬ್ಬರ ಪುತ್ರರ, ಪೌತ್ರರ ದೌಹಿತ್ರರ ವಂಶಗಳಿಂದ ತುಂಬಿಹೋಗಿತ್ತು. ॥ ೮-೯ ॥

ಪ್ರಿಯ ವಿದುರನೇ! ಮನುವಿನ ಎರಡನೆಯ ಮಗಳಾದ ದೇವಹೂತಿಯು ಕರ್ದಮರನ್ನು ವಿವಾಹವಾಗಿದ್ದಳು. ಅವಳ ಸಂಬಂಧವಾದ ಎಲ್ಲ ವಿಷಯಗಳನ್ನು ಸಾಮಾನ್ಯವಾಗಿ ನಿನಗೆ ಹೇಳಿಯೇ ಆಗಿದೆ. ॥ ೧೦ ॥ ಭಗವಾನ್ ಮನುವು ತನ್ನ ಮೂರನೆಯ ಮಗಳು ಪ್ರಸೂತಿಯನ್ನು ಬ್ರಹ್ಮಪುತ್ರನಾದ ದಕ್ಷಪ್ರಜಾಪತಿಗೆ ವಿವಾಹ ಮಾಡಿಕೊಟ್ಟಿದ್ದನು. ಆಕೆಯ ವಿಶಾಲ ವಂಶಪರಂಪರೆಯು ತ್ರಿಲೋಕಗಳಲ್ಲಿ ಹರಡಿಕೊಂಡಿದೆ. ॥ ೧೧ ॥

ಕರ್ದಮರು ತಮ್ಮ ಒಂಭತ್ತುಮಂದಿ ಕನ್ಯೆಯರನ್ನು ಒಂಭತ್ತು ಬ್ರಹ್ಮರ್ಷಿಗಳಿಗೆ ವಿವಾಹಮಾಡಿಕೊಟ್ಟ ವಿಷಯವನ್ನು ಈ ಮೊದಲೇ ವರ್ಣಿಸಿರುವೆನು. ಈಗ ಅವರ ವಂಶಪರಂಪರೆಯನ್ನು ವರ್ಣಿಸುತ್ತೇನೆ; ಕೇಳು. ॥ ೧೨ ॥ ಮರೀಚಿ ಋಷಿಗಳು ತಮ್ಮ ಪತ್ನಿಯಾದ ಕರ್ದಮಪುತ್ರಿಯಾದ ಕಲಾದೇವಿಯಿಂದ ಕಶ್ಯಪ ಮತ್ತು ಪೂರ್ಣಿಮಾ ಎಂಬ ಈರ್ವರು ಮಕ್ಕಳನ್ನು ಪಡೆದರು. ಇವರ ವಂಶದಿಂದಲೇ ಇಡೀ ಜಗತ್ತು ತುಂಬಿಹೋಗಿದೆ. ॥ ೧೩ ॥ ಎಲೈ ಪರಂತಪನೇ! ಪೂರ್ಣಿಮಾಗೆ ವಿರಜ ಮತ್ತು ವಿಶ್ವಗ ಎಂಬ ಇಬ್ಬರು ಪುತ್ರರು ಹಾಗೂ ದೇವಕುಲ್ಯಾ ಎಂಬ ಕನ್ಯೆಯು ಹುಟ್ಟಿದರು. ಈ ದೇವಕುಲ್ಯೆಯೇ ಮುಂದಿನ ಜನ್ಮದಲ್ಲಿ ಬ್ರಹ್ಮದೇವರು ಶ್ರೀಹರಿಯ ಚರಣಗಳನ್ನು ತೊಳೆದಾಗ ದೇವನದಿ ಗಂಗೆಯರೂಪದಿಂದ ಪ್ರಕಟಗೊಂಡಳು. ॥ ೧೪ ॥ ಅತ್ರಿ ಮಹರ್ಷಿಗಳ ಪತ್ನೀ ಅನಸೂಯೆಯಲ್ಲಿ ದತ್ತಾತ್ರೇಯ, ದುರ್ವಾಸ ಮತ್ತು ಚಂದ್ರ ಎಂಬ ಪರಮ ಯಶಸ್ವಿಗಳಾದ ಮೂವರು ಪುತ್ರರು ಹುಟ್ಟಿದರು. ಇವರು ಕ್ರಮವಾಗಿ ವಿಷ್ಣು, ಶಂಕರ ಮತ್ತು ಬ್ರಹ್ಮದೇವರ ಅಂಶಗಳಿಂದ ಜನಿಸಿದವರು. ॥ ೧೫ ॥

ವಿದುರನು ಕೇಳಿದನು – ಗುರುಗಳೇ! ಜಗತ್ತಿನ ಉತ್ಪತ್ತಿ, ಸ್ಥಿತಿ, ಲಯಗಳಿಗೆ ಕಾರಣರಾದ ಸರ್ವಶ್ರೇಷ್ಠ ದೇವತೆಗಳು ಏತಕ್ಕಾಗಿ ಅತ್ರಿಮಹರ್ಷಿಗಳ ಗೃಹದಲ್ಲಿ ಅವತರಿಸಿದರು? ದಯವಿಟ್ಟು ತಿಳಿಸುವವರಾಗಿರಿ. ॥ ೧೬॥

ಶ್ರೀಮೈತ್ರೇಯರು ಹೇಳಿದರು – ವಿದುರನೇ! ಬ್ರಹ್ಮದೇವರು ಬ್ರಹ್ಮಜ್ಞಾನಿಗಳಲ್ಲಿ ಶ್ರೇಷ್ಠರಾದ ಅತ್ರಿಮಹರ್ಷಿಗಳಿಗೆ ಸೃಷ್ಟಿಯನ್ನು ಮಾಡುವಂತೆ ಆಜ್ಞಾಪಿಸಲು ಅವರು ತಮ್ಮ ಸಹಧರ್ಮಿಣಿ ಅನಸೂಯೆಯೊಂದಿಗೆ ತಪಸ್ಸನ್ನಾಚರಿಸುವುದಕ್ಕಾಗಿ 'ಋಕ್ಷ' ಎಂಬ ಕುಲಪರ್ವತಕ್ಕೆ ಹೋದರು. ॥ ೧೭ ॥ ಅಲ್ಲಿ ಮುತ್ತುಗ ಮತ್ತು ಅಶೋಕ ವೃಕ್ಷಗಳ ಒಂದು ವಿಶಾಲವಾದ ವನವಿತ್ತು. ಅದರ ಎಲ್ಲ ವೃಕ್ಷಗಳು ಹೂವಿನ ಗೊಂಚಲುಗಳಿಂದ ತುಂಬಿದ್ದವು. ಆ ವನದ ಎಲ್ಲ ಕಡೆಗಳಲ್ಲಿ 'ನಿರ್ವಿಂಧ್ಯಾ' ಎಂಬ ನದಿಯ ಕಲರವವು ಪ್ರತಿಧ್ವನಿಸುತ್ತಿತ್ತು. ॥ ೧೮ ॥ ಆ ವನದಲ್ಲಿ ಮುನಿಶ್ರೇಷ್ಠರು ಪ್ರಾಣಾಯಾಮದ ಮೂಲಕ ಚಿತ್ತವನ್ನು ವಶಪಡಿಸಿಕೊಂಡು ನೂರು ವರ್ಷಗಳ ಕಾಲ ಕೇವಲ ಗಾಳಿಯನ್ನೇ ಕುಡಿದು, ಚಳಿ-ಸೆಕೆಗಳೆಂಬ ದ್ವಂದ್ವಗಳನ್ನು ಪರಿಗಣಿಸದೆ ಒಂಟಿಕಾಲಿನ ಮೇಲೆ ನಿಂತು ತಪಸ್ಸನ್ನಾಚರಿಸಿದರು. ॥ ೧೯ ॥

ಶರಣಂ ತಂ ಪ್ರಪದ್ಯೇಽಹಂ ಯ ಏವ ಜಗದೀಶ್ವರಃ ।
ಪ್ರಜಾಮಾತ್ಮಸಮಾಂ ಮಹ್ಯಂ ಪ್ರಯಚ್ಛತ್ವಿತಿ ಚಿಂತಯನ್ ॥ ೨೦ ॥

ಅವರು ಆಗ ಮನಸ್ಸಿನಲ್ಲಿಯೇ – 'ಸಮಸ್ತ ಜಗತ್ತಿಗೆ ಸ್ವಾಮಿಯಾದ ಯಾವ ಭಗವಂತನಿರುವನೋ ಆತನನ್ನು ನಾನು ಶರಣು ಹೊಂದುತ್ತೇನೆ. ಅವನು ತನಗೆ ಸಮಾನರಾದ ಪುತ್ರರನ್ನು ನನಗೆ ಕರುಣಿಸಲಿ' ಎಂದು ಪ್ರಾರ್ಥಿಸುತ್ತಿದ್ದರು. ॥ ೨೦ ॥

ತಪ್ಯಮಾನಂ ತ್ರಿಭುವನಂ ಪ್ರಾಣಾಯಾಮೈಧಸಾಗ್ನಿನಾ ।
ನಿರ್ಗತೇನ ಮುನೇರ್ಮೂರ್ಧ್ನಃ ಸಮೀಕ್ಷ್ಯ ಪ್ರಭವಸ್ತ್ರಯಃ ॥ ೨೧ ॥

ಅಪ್ಸರೋಮುನಿಗಂಧರ್ವಸಿದ್ಧವಿದ್ಯಾಧರೋರಗೈಃ ।
ವಿತಾಯಮಾನಯಶಸಸ್ತದಾಶ್ರಮಪದಂ ಯಯುಃ ॥ ೨೨ ॥

ಆಗ ಪ್ರಾಣಾಯಾಮವೆಂಬ ಕಟ್ಟಿಗೆಯಿಂದ ಭುಗಿಲೆದ್ದ ಅತ್ರಿ ಮಹರ್ಷಿಗಳ ತೇಜಸ್ಸು ಅವರ ಮಸ್ತಕದಿಂದ ಹೊರಬಿದ್ದು ಮೂರು ಲೋಕಗಳನ್ನು ಸುಡುತ್ತಿರುವುದನ್ನು ಕಂಡು – ಜಗತ್ತಿಗೆ ಅಧಿಪತಿಗಳಾದ ಬ್ರಹ್ಮ, ವಿಷ್ಣು, ಮಹೇಶ್ವರರು ಮಹರ್ಷಿಯ ಆಶ್ರಮಕ್ಕೆ ದಯಮಾಡಿಸಿದರು. ಆಗ ಅಪ್ಸರೆಯರೂ, ಮುನಿಗಳೂ, ಗಂಧರ್ವರೂ, ಸಿದ್ಧರೂ, ವಿದ್ಯಾಧರರೂ, ನಾಗರೂ ಹೀಗೆ ಎಲ್ಲರೂ ಅವರ ಸುಕೀರ್ತಿಯನ್ನು ಕೊಂಡಾಡುತ್ತಿದ್ದರು. ॥ ೨೧-೨೨ ॥

ತತ್ಪ್ರಾದುರ್ಭಾವಸಂಯೋಗವಿದ್ಯೋತಿತಮನಾ ಮುನಿಃ ।
ಉತ್ತಿಷ್ಠನ್ನೇಕಪಾದೇನ ದದರ್ಶ ವಿಬುಧರ್ಷಭಾನ್ ॥ ೨೩ ॥

ಪ್ರಣಮ್ಯ ದಂಡವದ್ಭೂಮಾವುಪತಸ್ಥೇಽರ್ಹಣಾಂಜಲಿಃ ।
ವೃಷಹಂಸಸುಪರ್ಣಸ್ಥಾನ್ ಸ್ವೈಃ ಸ್ವೈಶ್ಚಿಹ್ನೈಶ್ಚ ಚಿಹ್ನಿತಾನ್ ॥ ೨೪ ॥

ಆ ಮೂವರೂ ದೇವತೆಗಳು ಒಟ್ಟಿಗೆ ಪ್ರಾದುರ್ಭವಿಸಿದ್ದರಿಂದ ಅತ್ರಿ ಮುನಿಗಳ ಅಂತಃಕರಣವು ಹರ್ಷದಿಂದ ತುಂಬಿಹೋಯಿತು. ಅವರು ಒಂಟಿಕಾಲಿನಲ್ಲಿ ನಿಂತಿದ್ದಂತೆಯೇ ಅವರನ್ನು ನೋಡಿದರು. ಒಡನೆಯೇ ಅವರಿಗೆ ದೀರ್ಘದಂಡ ನಮಸ್ಕಾರಮಾಡಿ, ಅರ್ಘ್ಯ-ಪುಷ್ಪಾದಿ ಸಾಮಗ್ರಿಗಳಿಂದ ಪೂಜೆಯನ್ನು ಸಲ್ಲಿಸಿದರು. ಆ ಮೂವರೂ ತಮ್ಮ-ತಮ್ಮ ವಾಹನಗಳಾದ ಹಂಸ, ಗರುಡ, ವೃಷಭಗಳ ಮೇಲೆ ಕುಳಿತಿದ್ದು, ಕಮಂಡಲು, ಚಕ್ರ, ತ್ರಿಶೂಲ ಮುಂತಾದ ತಮ್ಮ-ತಮ್ಮ ಆಯುಧಗಳನ್ನು ಧರಿಸಿದ್ದರು. ॥ ೨೩-೨೪ ॥

ಕೃಪಾವಲೋಕೇನ ಹಸದ್ವದನೇನೋಪಲಂಭಿತಾನ್ ।
ತದ್ರೋಚಿಷಾ ಪ್ರತಿಹತೇ ನಿಮೀಲ್ಯ ಮುನಿರಕ್ಷಿಣೀ ॥ ೨೫ ॥

ಅವರು ಕಣ್ಣುಗಳಿಂದ ಕರುಣೆಯ ಮಳೆಯನ್ನು ಕರೆಯುತ್ತಾ, ಮುಖದಿಂದ ಮುಗುಳ್ನಗೆಯ ಬೆಳದಿಂಗಳನ್ನು ಚೆಲ್ಲುತ್ತಾ, ಪ್ರಸನ್ನ ಮೂರ್ತಿಗಳಾಗಿದ್ದರು. ಮುನಿವರ್ಯರು ಅವರ ಕೋರೈಸುವ ತೇಜಸ್ಸನ್ನು ಕಂಡು ಕಣ್ಣುಗಳನ್ನು ಮುಚ್ಚಿಕೊಂಡರು. ॥ ೨೫ ॥

ಚೇತಸ್ತತ್ಪ್ರವಣಂ ಯುಂಜನ್ನಸ್ತಾವೀತ್ಸಂಹತಾಂಜಲಿಃ ।
ಶ್ಲಕ್ಷ್ಣಯಾ ಸೂಕ್ತಯಾ ವಾಚಾ ಸರ್ವಲೋಕಗರೀಯಸಃ ॥ ೨೬ ॥

ಅವರು ತನ್ನ ಚಿತ್ತವನ್ನು ಅವರಲ್ಲೇ ನಟ್ಟು ಕೈಜೋಡಿಸಿಕೊಂಡು, ಅತಿಮಧುರವೂ, ಭಾವಪೂರ್ಣವೂ ಆದ ನುಡಿಗಳಿಂದ ಸರ್ವಲೋಕಗಳಲ್ಲಿಯೂ ಶ್ರೇಷ್ಠತಮರಾದ ಅವರನ್ನು ಸ್ತುತಿಸತೊಡಗಿದರು. ॥ ೨೬ ॥

ಅತ್ರಿರುವಾಚ

ವಿಶ್ವೋದ್ಭವಸ್ಥಿತಿಲಯೇಷು ವಿಭಜ್ಯಮಾನೈ-
ರ್ಮಾಯಾಗುಣೈರನುಯುಗಂ ವಿಗೃಹೀತದೇಹಾಃ ।
ತೇ ಬ್ರಹ್ಮವಿಷ್ಣುಗಿರಿಶಾಃ ಪ್ರಣತೋಽಸ್ಮ್ಯಹಂ ವ-
ಸ್ತೇಭ್ಯಃ ಕ ಏವ ಭವತಾಂ ಮ ಇಹೋಪಹೂತಃ ॥ ೨೭ ॥

ಅತ್ರಿಮಹರ್ಷಿಗಳು ಹೇಳುತ್ತಾರೆ – ಓ ಭಗವಂತರೇ! ಪ್ರತಿಯೊಂದು ಕಲ್ಪದ ಪ್ರಾರಂಭದಲ್ಲೂ ಜಗತ್ತಿನ ಸೃಷ್ಟಿ, ಸ್ಥಿತಿ, ಸಂಹಾರಗಳನ್ನು ಮಾಡುವುದಕ್ಕಾಗಿ ಅದ್ಭುತವಾದ ಮಾಯಾಶಕ್ತಿಯ ಸತ್ತ್ವಾದಿ ಮೂರು ಗುಣಗಳನ್ನು ವಿಭಾಗಗೈದು ಬೇರೆ-ಬೇರೆ ಶರೀರವನ್ನು ಧರಿಸುವಿರಿ. ಬ್ರಹ್ಮಾ, ವಿಷ್ಣು, ಮಹೇಶ್ವರರಾದ ನಿಮಗೆ ನಮಸ್ಕರಿಸುತ್ತಿದ್ದೇನೆ. ನಿಮ್ಮ ಮೂವರಲ್ಲಿ ನಾನು ಆಹ್ವಾನಿಸಿದ ಮಹಾನುಭಾವರು ಯಾರು? ಎಂಬುದನ್ನು ದಯವಿಟ್ಟು ತಿಳಿಸಿರಿ. ॥ ೨೭ ॥

ಏಕೋ ಮಯೇಹ ಭಗವಾನ್ವಿವಿಧಪ್ರಧಾನ-
ಶ್ಚಿತ್ತೀಕೃತಃ ಪ್ರಜನನಾಯ ಕಥಂ ನು ಯೂಯಮ್ ।
ಅತ್ರಾಗತಾಸ್ತನುಭೃತಾಂ ಮನಸೋಽಪಿ ದೂರಾ-
ದ್ಬ್ರೂತ ಪ್ರಸೀದತ ಮಹಾನಿಹ ವಿಸ್ಮಯೋ ಮೇ ॥ ೨೮ ॥

ಏಕೆಂದರೆ, ನಾನಾದರೋ ಸಂತಾನದ ಇಚ್ಛೆಯಿಂದ ಸುರೇಶ್ವರನಾದ ಒಬ್ಬನೇ ಭಗವಂತನನ್ನು ಚಿಂತಿಸಿದ್ದೆ. ಹಾಗಿರುವಾಗ ನೀವು ಮೂವರು ಇಲ್ಲಿಗೆ ಏಕೆ ದಯಮಾಡಿಸಿದಿರಿ. ದೇಹಧಾರಿಗಳ ಮನಸ್ಸಿಗೆ ದೂರವಾಗಿರುವ ನೀವು ಮೂವರೂ ಹೀಗೆ ಬಂದುದು ನನಗೆ ಪರಮಾಶ್ಚರ್ಯವನ್ನುಂಟುಮಾಡಿದೆ. ಪ್ರಭುಗಳೇ! ಕೃಪೆಗೈದು ನೀವು ಈ ರಹಸ್ಯವನ್ನು ತಿಳಿಸಿರಿ. ॥ ೨೮ ॥

ಮೈತ್ರೇಯ ಉವಾಚ

ಇತಿ ತಸ್ಯ ವಚಃ ಶ್ರುತ್ವಾ ತ್ರಯಸ್ತೇ ವಿಬುಧರ್ಷಭಾಃ ।
ಪ್ರತ್ಯಾಹುಃ ಶ್ಲಕ್ಷ್ಣಯಾ ವಾಚಾ ಪ್ರಹಸ್ಯ ತಮೃಷಿಂ ಪ್ರಭೋ ॥ ೨೯ ॥

ದೇವಾ ಊಚುಃ

ಯಥಾ ಕೃತಸ್ತೇ ಸಂಕಲ್ಪೋ ಭಾವ್ಯಂ ತೇನೈವ ನಾನ್ಯಥಾ ।
ಸತ್ಸಂಕಲ್ಪಸ್ಯ ತೇ ಬ್ರಹ್ಮನ್ಯದ್ವೈ ಧ್ಯಾಯತಿ ತೇ ವಯಮ್ ॥ ೩೦ ॥

ಅಥಾಸ್ಮದಂಶಭೂತಾಸ್ತೇ ಆತ್ಮಜಾ ಲೋಕವಿಶ್ರುತಾಃ ।
ಭವಿತಾರೋಽಂಗ ಭದ್ರಂ ತೇ ವಿಸ್ರಪ್ಸ್ಯಂತಿ ಚ ತೇ ಯಶಃ ॥ ೩೧ ॥

ಏವಂ ಕಾಮವರಂ ದತ್ತ್ವಾ ಪ್ರತಿಜಗ್ಮುಃ ಸುರೇಶ್ವರಾಃ ।
ಸಭಾಜಿತಾಸ್ತಯೋಃ ಸಮ್ಯಗ್ದಂಪತ್ಯೋರ್ಮಿಷತೋಸ್ತತಃ ॥ ೩೨ ॥

ಸೋಮೋಽಭೂದ್ಬ್ರಹ್ಮಣೋಽಂಶೇನ
ದತ್ತೋ ವಿಷ್ಣೋಸ್ತು ಯೋಗವಿತ್ ।
ದುರ್ವಾಸಾಃ ಶಂಕರಸ್ಯಾಂಶೋ
ನಿಬೋಧಾಂಗಿರಸಃ ಪ್ರಜಾಃ ॥ ೩೩ ॥

ಶ್ರದ್ಧಾ ತ್ವಂಗಿರಸಃ ಪತ್ನೀ ಚತಸ್ರೋಽಸೂತ ಕನ್ಯಕಾಃ ।
ಸಿನೀವಾಲೀ ಕುಹೂ ರಾಕಾ ಚತುರ್ಥ್ಯನುಮತಿಸ್ತಥಾ ॥ ೩೪ ॥

ತತ್ಪುತ್ರಾವಪರಾವಾಸ್ತಾಂ ಖ್ಯಾತೌ ಸ್ವಾರೋಚಿಷೇಽಂತರೇ ।
ಉತಥ್ಯೋ ಭಗವಾನ್ಸಾಕ್ಷಾದ್ಬ್ರಹ್ಮಿಷ್ಠಶ್ಚ ಬೃಹಸ್ಪತಿಃ ॥ ೩೫ ॥

ಪುಲಸ್ತ್ಯೋಽಜನಯತ್ಪತ್ನ್ಯಾಮಗಸ್ತ್ಯಂ ಚ ಹವಿರ್ಭುವಿ ।
ಸೋಽನ್ಯಜನ್ಮನಿ ದಹ್ರಾಗ್ನಿರ್ವಿಶ್ರವಾಶ್ಚ ಮಹಾತಪಾಃ ॥ ೩೬ ॥

ತಸ್ಯ ಯಕ್ಷಪತಿರ್ದೇವಃ ಕುಬೇರಸ್ತ್ವಿಡವಿಡಾಸುತಃ ।
ರಾವಣಃ ಕುಂಭಕರ್ಣಶ್ಚ ತಥಾನ್ಯಸ್ಯಾಂ ವಿಭೀಷಣಃ ॥ ೩೭ ॥

ಪುಲಹಸ್ಯ ಗತಿರ್ಭಾರ್ಯಾ ತ್ರೀನಸೂತ ಸತೀ ಸುತಾನ್ ।
ಕರ್ಮಶ್ರೇಷ್ಠಂ ವರೀಯಾಂಸಂ ಸಹಿಷ್ಣುಂ ಚ ಮಹಾಮತೇ ॥ ೩೮ ॥

ಕ್ರತೋರಪಿ ಕ್ರಿಯಾ ಭಾರ್ಯಾ ವಾಲಖಿಲ್ಯಾನಸೂಯತ ।
ಋಷೀನ್ ಷಷ್ಟಿಸಹಸ್ರಾಣಿ ಜ್ವಲತೋ ಬ್ರಹ್ಮತೇಜಸಾ ॥ ೩೯ ॥

ಊರ್ಜಾಯಾಂ ಜಜ್ಞಿರೇ ಪುತ್ರಾ ವಸಿಷ್ಠಸ್ಯ ಪರಂತಪ ।
ಚಿತ್ರಕೇತುಪ್ರಧಾನಾಸ್ತೇ ಸಪ್ತ ಬ್ರಹ್ಮರ್ಷಯೋಽಮಲಾಃ ॥ ೪೦ ॥

ಶ್ರೀಮೈತ್ರೇಯರು ಹೇಳುತ್ತಾರೆ – ವಿದುರನೇ! ಅತ್ರಿ ಮುನಿಯ ಆ ವಚನಗಳನ್ನು ಕೇಳಿ ಆ ಮೂವರು ದೇವಶ್ರೇಷ್ಠರು ನಕ್ಕು ಮಧುರ ವಾಣಿಯಿಂದ ಹೇಳತೊಡಗಿದರು. ॥ ೨೯ ॥

ಶ್ರೀದೇವತೆಗಳೆಂದರು – ಬ್ರಾಹ್ಮಣೋತ್ತಮನೇ! ನೀನು ಸತ್ಯಸಂಕಲ್ಪನಾಗಿರುವುದರಿಂದ ಹೇಗೆ ಸಂಕಲ್ಪಮಾಡಿದೆಯೋ ಹಾಗೆಯೇ ಆಗುವುದು. ಇದಕ್ಕೆ ವಿಪರೀತವಾಗಿ ಹೇಗಾಗಬಲ್ಲದು? ನೀನು ಧ್ಯಾನಮಾಡುತ್ತಿದ್ದ ಜಗದೀಶ್ವರ ತತ್ತ್ವವು ನಾವು ಮೂವರೂ ಆಗಿದ್ದೇವೆ. ॥ ೩೦ ॥ ಮಹರ್ಷಿಯೇ ನಿನಗೆ ಮಂಗಳವಾಗಲೀ. ನಮ್ಮ ಅಂಶಸ್ವರೂಪರೇ ಆಗಿ ಲೋಕವಿಖ್ಯಾತರಾಗಿರುವ ಮೂವರು ಪುತ್ರರು ನಿನಗೆ ಜನಿಸಿ ನಿನ್ನ ಕೀರ್ತಿಯನ್ನು ಹರಡುವರು. ॥ ೩೧ ॥

ಅತ್ರಿ ಮಹರ್ಷಿಗಳಿಗೆ ಹೀಗೆ ಅಭೀಷ್ಟವಾದ ವರವನ್ನು ಕರುಣಿಸಿ, ಪತಿ-ಪತ್ನಿಯರಿಂದ ಚೆನ್ನಾಗಿ ಪೂಜೆಗೊಂಡು ಅವರು ನೋಡುತ್ತಿರುವಂತೆ ಆ ಮೂವರು ದೇವಶ್ರೇಷ್ಠರು ತಮ್ಮ-ತಮ್ಮ ಲೋಕಗಳಿಗೆ ದಯಮಾಡಿಸಿದರು. ॥ ೩೨ ॥ ಬ್ರಹ್ಮದೇವರ ಅಂಶದಿಂದ ಚಂದ್ರನೂ, ವಿಷ್ಣುವಿನ ಅಂಶದಿಂದ ಯೋಗಜ್ಞನಾದ ದತ್ತಾತ್ರೇಯನೂ, ಶಂಕರನ ಅಂಶದಿಂದ ದುರ್ವಾಸ ಮಹರ್ಷಿಗಳೂ ಅತ್ರಿಗೆ ಪುತ್ರರೂಪದಲ್ಲಿ ಪ್ರಕಟಗೊಂಡರು. ಇನ್ನು ಅಂಗಿರಾ ಋಷಿಯ ಸಂತಾನದ ವರ್ಣನೆಯನ್ನು ಕೇಳು. ॥ ೩೩ ॥

ಮಹರ್ಷಿ ಅಂಗಿರಸರ ಪತ್ನಿಯಾದ ಶ್ರದ್ಧೆಯು – ಸಿನೀವಾಲೀ, ಕುಹು, ರಾಕಾ ಮತ್ತು ಅನುಮತಿ ಎಂಬ ನಾಲ್ವರು ಪುತ್ರಿಯರಿಗೆ ಜನ್ಮನೀಡಿದಳು. ॥ ೩೪ ॥ ಇದಲ್ಲದೆ ಅವಳಲ್ಲಿ ಸ್ವಾರೋಚಿಷ ಮನ್ವಂತರದಲ್ಲಿ ಖ್ಯಾತರಾದ ಅತ್ಯಂತ ಪೂಜ್ಯರಾದ ಭಗವಾನ್ ಉತಥ್ಯರು ಮತ್ತು ಬ್ರಹ್ಮನಿಷ್ಠರಾದ ಬೃಹಸ್ಪತಿ ಎಂಬ ಇಬ್ಬರು ಪುತ್ರರು ಜನಿಸಿದರು. ॥ ೩೫ ॥ ಪುಲಸ್ತ್ಯರಿಗೆ ಅವರ ಪತ್ನಿಯಾದ ಹವಿರ್ಭೂ ಎಂಬಾಕೆಯಲ್ಲಿ ಮಹರ್ಷಿಗಳಾದ ಅಗಸ್ತ್ಯರು ಮತ್ತು ಮಹಾತಪಸ್ವೀ ವಿಶ್ರವಸರೂ ಪುತ್ರರಾಗಿ ಜನಿಸಿದರು. ಇವರಲ್ಲಿ ಅಗಸ್ತ್ಯರು ಮುಂದಿನ ಜನ್ಮದಲ್ಲಿ ಜಠರಾಗ್ನಿಸ್ವರೂಪರಾದರು. ॥ ೩೬ ॥ ಮಹರ್ಷಿ ವಿಶ್ರವಸರಿಗೆ ಇಡವಿಡಾ ಎಂಬುವಳ ಗರ್ಭದಿಂದ ಯಕ್ಷರಾಜನಾದ ಕುಬೇರನು ಜನಿಸಿದನು. ಅವರ ಇನ್ನೊಬ್ಬ ಪತ್ನಿಯಾದ ಕೇಶಿನಿಯಿಂದ ರಾವಣ, ಕುಂಭಕರ್ಣ ಹಾಗೂ ವಿಭೀಷಣರೆಂಬ ಪುತ್ರರು ಹುಟ್ಟಿದರು. ॥ ೩೭ ॥

ಎಲೈ ಮಹಾಮತಿಯಾದ ವಿದುರನೇ! ಮಹರ್ಷಿ ಪುಲಹ ಪತ್ನಿಯಾದ ಸಾಧ್ವೀ ಗತಿ ಎಂಬಾಕೆಯಿಂದ ಕರ್ಮಶ್ರೇಷ್ಠ, ವರೀಯಾನ್ ಮತ್ತು ಸಹಿಷ್ಣು ಎಂಬ ಮೂವರು ಪುತ್ರರು ಜನಿಸಿದರು. ॥ ೩೮ ॥ ಹಾಗೆಯೇ ಕ್ರತುವಿನ ಪತ್ನಿಯಾದ ಕ್ರಿಯಾದೇವಿಯು ಬ್ರಹ್ಮತೇಜಸ್ಸಿನಿಂದ ಬೆಳಗುವ ವಾಲಖಿಲ್ಯರೆಂಬ ಅರವತ್ತುಸಾವಿರ ಋಷಿಗಳನ್ನು ಪುತ್ರರನ್ನಾಗಿ ಪಡೆದಳು. ॥ ೩೯ ॥ ಶತ್ರುಗಳಿಗೆ ತಾಪವನ್ನುಂಟುಮಾಡುವ ವಿದುರನೇ! ವಸಿಷ್ಠರ ಪತ್ನಿಯಾದ ಊರ್ಜಾ (ಅರುಂಧತಿ) ಎಂಬುವಳಿಗೆ ಚಿತ್ರಕೇತುವೇ ಮುಂತಾದ ಪರಿಶುದ್ಧಚಿತ್ತರಾದ ಏಳುಮಂದಿ ಬ್ರಹ್ಮರ್ಷಿಗಳು ಪುತ್ರರಾಗಿ ಜನಿಸಿದರು. ॥ ೪೦ ॥ ಅವರ ಹೆಸರು ಇಂತಿದೆ – ಚಿತ್ರಕೇತು, ಸುರೋಚಿ, ವಿರಜಾ, ಮಿತ್ರ, ಉಲ್ಬಣ, ವಸುಭೃದ್ಯಾನ ಮತ್ತು ದ್ಯುಮಾನ್.

ಚಿತ್ರಕೇತುಃ ಸುರೋಚಿಶ್ಚ ವಿರಜಾ ಮಿತ್ರ ಏವ ಚ ।
ಉಲ್ಬಣೋ ವಸುಭೃದ್ಯಾನೋ ದ್ಯುಮಾನ್ ಶಕ್ತ್ಯಾದಯೋಽಪರೇ ॥ ೪೧ ॥

ಚಿತ್ತಿಸ್ತ್ವಥರ್ವಣಃ ಪತ್ನೀ ಲೇಭೇ ಪುತ್ರಂ ಧೃತವ್ರತಮ್ ।
ದಧ್ಯಞ್ಚಮಶ್ವಶಿರಸಂ ಭೃಗೋರ್ವಂಶಂ ನಿಬೋಧ ಮೇ ॥ ೪೨ ॥

ಭೃಗುಃ ಖ್ಯಾತ್ಯಾಂ ಮಹಾಭಾಗಃ ಪತ್ನ್ಯಾಂ ಪುತ್ರಾನಜೀಜನತ್ ।
ಧಾತಾರಂ ಚ ವಿಧಾತಾರಂ ಶ್ರಿಯಂ ಚ ಭಗವತ್ಪರಾಮ್ ॥ ೪೩ ॥

ಆಯತಿಂ ನಿಯತಿಂ ಚೈವ ಸುತೇ ಮೇರುಸ್ತಯೋರದಾತ್ ।
ತಾಭ್ಯಾಂ ತಯೋರಭವತಾಂ ಮೃಕಂಡಃ ಪ್ರಾಣ ಏವ ಚ ॥ ೪೪ ॥

ಮಾರ್ಕಂಡೇಯೋ ಮೃಕಂಡಸ್ಯ ಪ್ರಾಣಾದ್ವೇದಶಿರಾ ಮುನಿಃ ।
ಕವಿಶ್ಚ ಭಾರ್ಗವೋ ಯಸ್ಯ ಭಗವಾನುಶನಾ ಸುತಃ ॥ ೪೫ ॥

ತ ಏತೇ ಮುನಯಃ ಕ್ಷತ್ತರ್ಲೋಕಾನ್ಸರ್ಗೈರಭಾವಯನ್ ।
ಏಷ ಕರ್ದಮದೌಹಿತ್ರಸಂತಾನಃ ಕಥಿತಸ್ತವ ।
ಶೃಣ್ವತಃ ಶ್ರದ್ದಧಾನಸ್ಯ ಸದ್ಯಃ ಪಾಪಹರಃ ಪರಃ ॥ ೪೬ ॥

ಪ್ರಸೂತಿಂ ಮಾನವೀಂ ದಕ್ಷ ಉಪಯೇಮೇ ಹ್ಯಜಾತ್ಮಜಃ ।
ತಸ್ಯಾಂ ಸಸರ್ಜ ದುಹಿತೄಃ ಷೋಡಶಾಮಲಲೋಚನಾಃ ॥ ೪೭ ॥

ತ್ರಯೋದಶಾದಾದ್ಧರ್ಮಾಯ ತಥೈಕಾಮಗ್ನಯೇ ವಿಭುಃ ।
ಪಿತೃಭ್ಯ ಏಕಾಂ ಯುಕ್ತೇಭ್ಯೋ ಭವಾಯೈಕಾಂ ಭವಚ್ಛಿದೇ ॥ ೪೮ ॥

ಶ್ರದ್ಧಾ ಮೈತ್ರೀ ದಯಾ ಶಾಂತಿಸ್ತುಷ್ಟಿಃ ಪುಷ್ಟಿಃ ಕ್ರಿಯೋನ್ನತಿಃ ।
ಬುದ್ಧಿರ್ಮೇಧಾ ತಿತಿಕ್ಷಾ ಹ್ರೀರ್ಮೂರ್ತಿರ್ಧರ್ಮಸ್ಯ ಪತ್ನಯಃ ॥ ೪೯ ॥

ಶ್ರದ್ಧಾಸೂತ ಶುಭಂ ಮೈತ್ರೀ ಪ್ರಸಾದಮಭಯಂ ದಯಾ ।
ಶಾಂತಿಃ ಸುಖಂ ಮುದಂ ತುಷ್ಟಿಃ ಸ್ಮಯಂ ಪುಷ್ಟಿರಸೂಯತ ॥ ೫೦ ॥

ಯೋಗಂ ಕ್ರಿಯೋನ್ನತಿರ್ದರ್ಪಮರ್ಥಂ ಬುದ್ಧಿರಸೂಯತ ।
ಮೇಧಾ ಸ್ಮೃತಿಂ ತಿತಿಕ್ಷಾ ತು ಕ್ಷೇಮಂ ಹ್ರೀಃ ಪ್ರಶ್ರಯಂ ಸುತಮ್ ॥ ೫೧ ॥

ಮೂರ್ತಿಃ ಸರ್ವಗುಣೋತ್ಪತ್ತಿರ್ನರನಾರಾಯಣಾವೃಷೀ ॥ ೫೨ ॥

ಯಯೋರ್ಜನ್ಮನ್ಯದೋ ವಿಶ್ವಮಭ್ಯನಂದತ್ಸುನಿರ್ವೃತಮ್ ।
ಮನಾಂಸಿ ಕಕುಭೋ ವಾತಾಃ ಪ್ರಸೇದುಃ ಸರಿತೋಽದ್ರಯಃ ॥ ೫೩ ॥

ಇವರಲ್ಲದೆ ಅವರ ಇನ್ನೊಂದು ಪತ್ನಿಯಿಂದ ಶಕ್ತಿ ಮುಂತಾದ ಇನ್ನೂ ಅನೇಕ ಪುತ್ರರನ್ನು ಪಡೆದರು. ॥ ೪೧ ॥

ಅಥರ್ವಾಮುನಿಯ ಪತ್ನಿಯಾದ ಚಿತ್ತಿಯು ದಧ್ಯಂಚ (ದಧೀಚಿ) ಎಂಬ ತಪೋನಿಷ್ಠನಾದ ಪುತ್ರನನ್ನು ಪಡೆದಳು. ಈ ದಧೀಚಿ ಋಷಿಗಳಿಗೆ 'ಅಶ್ವಶಿರಾ' ಎಂಬ ಮತ್ತೊಂದು ಹೆಸರಿತ್ತು. ಇನ್ನು ಭೃಗುವಂಶವನ್ನು ವರ್ಣಿಸುವೆನು ಕೇಳು. ॥ ೪೨ ॥

ಮಹಾಭಾಗರಾದ ಭೃಗುಮಹರ್ಷಿಗಳು ತಮ್ಮ ಪತ್ನಿಯಾದ ಖ್ಯಾತಿಯಲ್ಲಿ ಧಾತಾ ಮತ್ತು ವಿಧಾತಾ ಎಂಬ ಇಬ್ಬರು ಪುತ್ರರನ್ನೂ ಹಾಗೂ ಭಗವತ್ಪರಾಯಣೆಯಾದ ಶ್ರೀ ಎಂಬ ಕನ್ಯೆಯನ್ನು ಪಡೆದರು. ॥ ೪೩ ॥ ಮೇರು ಋಷಿಗಳು ತಮ್ಮ ಆಯತಿ ಮತ್ತು ನಿಯತಿ ಎಂಬ ಕನ್ಯೆಯರನ್ನು ಕ್ರಮವಾಗಿ ಧಾತಾ ಮತ್ತು ವಿಧಾತಾ ಇವರಿಗೆ ವಿವಾಹ ಮಾಡಿಕೊಟ್ಟರು. ಅವರಿಗೆ ಮೃಕಂಡ ಹಾಗೂ ಪ್ರಾಣರೆಂಬ ಇಬ್ಬರು ಪುತ್ರರು ಜನಿಸಿದರು. ॥ ೪೪ ॥ ಅವರಿಬ್ಬರಲ್ಲಿ ಮೃಕಂಡರಿಗೆ ಮಾರ್ಕಂಡೇಯರೂ, ಪ್ರಾಣನಿಗೆ ಮುನಿವರ್ಯರಾದ ವೇದಶಿರಾ ಹುಟ್ಟಿದರು. ಭೃಗುಮಹರ್ಷಿಗಳಿಗೆ ಕವಿ ಎಂಬ ಓರ್ವ ಪುತ್ರನೂ ಇದ್ದನು. ಆ ಕವಿಯ ಪುತ್ರರೇ ಭಗವಾನ್ ಉಶನಾ (ಶುಕ್ರಾಚಾರ್ಯ)ರವರು. ॥ ೪೫ ॥ ವಿದುರನೇ ! ಇವೆಲ್ಲ ಮುನೀಶ್ವರರೂ ಸಂತಾನಗಳನ್ನು ಪಡೆದು ಸೃಷ್ಟಿಯನ್ನು ಮುಂದುವರಿಸಿದರು. ಹೀಗೆ ನಿನಗೆ ಕರ್ದಮ ಋಷಿಗಳ ಪುತ್ರಿಯರ ಸಂತಾನಗಳನ್ನು ವರ್ಣಿಸಿರುವೆನು. ಇದನ್ನು ಶ್ರದ್ಧೆಯಿಂದ ಕೇಳುವವನ ಪಾಪಗಳು ಬೇಗನೆಯೇ ನಾಶಹೊಂದುವುವು. ॥ ೪೬ ॥

ಬ್ರಹ್ಮದೇವರ ಪುತ್ರರಾದ ದಕ್ಷಪ್ರಜಾಪತಿಯು ಮನುಪುತ್ರಿಯಾದ ಪ್ರಸೂತಿಯನ್ನು ವಿವಾಹವಾಗಿ ಆಕೆಯಲ್ಲಿ ಸುಂದರವಾದ ಕಣ್ಣುಗಳುಳ್ಳ ಹದಿನಾರು ಮಂದಿ ಕನ್ಯೆಯರನ್ನು ಪಡೆದನು. ॥ ೪೭ ॥ ಪ್ರಭುವಾದ ದಕ್ಷಪ್ರಜಾಪತಿಯು ಅವರಲ್ಲಿ ಹದಿಮೂರು ಕನ್ಯೆಯರನ್ನು ಧರ್ಮನಿಗೂ, ಒಬ್ಬಳನ್ನು ಅಗ್ನಿಗೂ, ಒಬ್ಬಳನ್ನು ಸಮಸ್ತ ಪಿತೃಗಣಗಳಿಗೂ, ಮತ್ತೊಬ್ಬಳನ್ನು ಜಗತ್ಸಂಹಾರಕನೂ, ಸಂಸಾರ ಬಂಧನವನ್ನು ನಾಶಪಡಿಸುವವನೂ ಆದ ಭಗವಾನ್ ಶ್ರೀಶಂಕರನಿಗೂ ವಿವಾಹಮಾಡಿ ಕೊಟ್ಟನು. ॥ ೪೮ ॥ ಅವರಲ್ಲಿ ಶ್ರದ್ಧಾ, ಮೈತ್ರೀ, ದಯಾ, ಶಾಂತಿ, ತುಷ್ಟಿ, ಪುಷ್ಟಿ, ಕ್ರಿಯಾ, ಉನ್ನತಿ, ಬುದ್ಧಿ, ಮೇಧಾ, ತಿತಿಕ್ಷಾ, ಹ್ರೀ ಮತ್ತು ಮೂರ್ತಿ – ಈ ಹದಿಮೂರು ಮಂದಿ ಧರ್ಮನ ಪತ್ನಿಯರು. ॥ ೪೯ ॥ ಇವರಲ್ಲಿ ಶ್ರದ್ಧಾದೇವಿಯು ಶುಭನನ್ನೂ, ಮೈತ್ರಿಯು ಪ್ರಸಾದನನ್ನೂ, ದಯೆಯು ಅಭಯನನ್ನೂ, ಶಾಂತಿಯು ಸುಖನನ್ನೂ, ತುಷ್ಟಿಯು ಮೋದನನ್ನೂ, ಪುಷ್ಟಿಯು ಅಹಂಕಾರನನ್ನೂ ಜನ್ಮವಿತ್ತರು. ॥ ೫೦ ॥ ಕ್ರಿಯೆಯು ಯೋಗನನ್ನೂ, ಉನ್ನತಿಯು ದರ್ಪವನ್ನೂ, ಬುದ್ಧಿಯು ಅರ್ಥವನ್ನೂ, ಮೇಧೆಯು ಸ್ಮೃತಿಯನ್ನೂ, ತಿತಿಕ್ಷೆಯು ಕ್ಷೇಮವನ್ನೂ, ಹ್ರೀ (ಲಜ್ಜಾ) ದೇವಿಯು ಪ್ರಶ್ರಯ (ವಿನಯ)ವನ್ನೂ ಸಂತಾನವಾಗಿ ಪಡೆದರು. ॥ ೫೧ ॥ ಸಮಸ್ತ ಸದ್ಗುಣಗಳಿಗೂ ನಿಧಿಯಾಗಿದ್ದ ಮೂರ್ತಿದೇವಿಯು ನರ-ನಾರಾಯಣ ಮಹರ್ಷಿಗಳಿಗೆ ಜನ್ಮವನ್ನಿತ್ತಳು. ॥ ೫೨ ॥ ಆ ನರ-ನಾರಾಯಣರು ಅವತರಿಸಿದೊಡನೆಯೇ ಇಡೀ ವಿಶ್ವವೇ ಆನಂದಿತವಾಗಿ ಪ್ರಸನ್ನತೆಯನ್ನು ಪ್ರಕಟಿಸಿತು. ಆಗ ಜನರ ಮನಸ್ಸಿನಲ್ಲೂ, ದಿಕ್ಕುಗಳಲ್ಲೂ, ವಾಯುವಿನಲ್ಲೂ, ನದಿ-ಪರ್ವತಗಳಲ್ಲೂ ಪ್ರಸನ್ನತೆ ಹರಡಿತು. ॥ ೫೩ ॥

ದಿವ್ಯವಾದ್ಯಂತ ತೂರ್ಯಾಣಿ ಪೇತುಃ ಕುಸುಮವೃಷ್ಟಯಃ ।
ಮುನಯಸ್ತುಷ್ಟುವುಸ್ತುಷ್ಟಾ ಜಗುರ್ಗಂಧರ್ವಕಿನ್ನರಾಃ ॥ ೫೪ ॥

ನೃತ್ಯಂತಿ ಸ್ಮ ಸ್ತ್ರಿಯೋ ದೇವ್ಯ ಆಸೀತ್ಪರಮಮಂಗಲಮ್ ।
ದೇವಾ ಬ್ರಹ್ಮಾದಯಃ ಸರ್ವೇ ಉಪತಸ್ಥುರಭಿಷ್ಟವೈಃ ॥ ೫೫ ॥

ದೇವಾ ಊಚುಃ

ಯೋ ಮಾಯಯಾ ವಿರಚಿತಂ ನಿಜಯಾಽಽತ್ಮನೀದಂ
ಖೇ ರೂಪಭೇದಮಿವ ತತ್ಪ್ರತಿಚಕ್ಷಣಾಯ ।
ಏತೇನ ಧರ್ಮಸದನೇ ಋಷಿಮೂರ್ತಿನಾದ್ಯ
ಪ್ರಾದುಶ್ಚಕಾರ ಪುರುಷಾಯ ನಮಃ ಪರಸ್ಮೈ ॥ ೫೬ ॥

ಸೋಽಯಂ ಸ್ಥಿತಿವ್ಯತಿಕರೋಪಶಮಾಯ ಸೃಷ್ಟಾನ್
ಸತ್ತ್ವೇನ ನಃ ಸುರಗಣಾನನುಮೇಯತತ್ತ್ವಃ ।
ದೃಶ್ಯಾದದಭ್ರಕರುಣೇನ ವಿಲೋಕನೇನ
ಯಚ್ಛ್ರೀನಿಕೇತಮಮಲಂ ಕ್ಷಿಪತಾರವಿಂದಮ್ ॥ ೫೭ ॥

ಏವಂ ಸುರಗಣೈಸ್ತಾತ ಭಗವಂತಾವಭಿಷ್ಟುತೌ ।
ಲಬ್ಧಾವಲೋಕೈರ್ಯಯತುರರ್ಚಿತೌ ಗಂಧಮಾದನಮ್ ॥ ೫೮ ॥

ತಾವಿಮೌ ವೈ ಭಗವತೋ ಹರೇರಂಶಾವಿಹಾಗತೌ ।
ಭಾರವ್ಯಯಾಯ ಚ ಭುವಃ ಕೃಷ್ಣೌ ಯದುಕುರೂದ್ವಹೌ ॥ ೫೯ ॥

ಸ್ವಾಹಾಭಿಮಾನಿನಶ್ಚಾಗ್ನೇರಾತ್ಮಜಾಂಸ್ತ್ರೀನಜೀಜನತ್ ।
ಪಾವಕಂ ಪವಮಾನಂ ಚ ಶುಚಿಂ ಚ ಹುತಭೋಜನಮ್ ॥ ೬೦ ॥

ತೇಭ್ಯೋಽಗ್ನಯಃ ಸಮಭವನ್ ಚತ್ವಾರಿಂಶಚ್ಚ ಪಂಚ ಚ ।
ತ ಏವೈಕೋನಪಂಚಾಶತ್ಸಾಕಂ ಪಿತೃಪಿತಾಮಹೈಃ ॥ ೬೧ ॥

ವೈತಾನಿಕೇ ಕರ್ಮಣಿ ಯನ್ನಾಮಭಿರ್ಬ್ರಹ್ಮವಾದಿಭಿಃ ।
ಆಗ್ನೇಯ್ಯ ಇಷ್ಟಯೋ ಯಜ್ಞೇ ನಿರೂಪ್ಯಂತೇಽಗ್ನಯಸ್ತು ತೇ ॥ ೬೨ ॥

ಅಗ್ನಿಷ್ವಾತ್ತಾ ಬರ್ಹಿಷದಃ ಸೌಮ್ಯಾಃ ಪಿತರ ಆಜ್ಯಪಾಃ ।
ಸಾಗ್ನಯೋಽನಗ್ನಯಸ್ತೇಷಾಂ ಪತ್ನೀ ದಾಕ್ಷಾಯಣೀ ಸ್ವಧಾ ॥ ೬೩ ॥

ಆಕಾಶದಲ್ಲಿ ಮಂಗಳವಾದ್ಯಗಳು ಮೊಳಗತೊಡಗಿದವು. ದೇವತೆಗಳು ಹೂಮಳೆಯನ್ನು ಸುರಿಸಿದರು. ಗಂಧರ್ವರೂ, ಕಿನ್ನರರೂ ಹಾಡತೊಡಗಿದರು. ॥ ೫೪ ॥ ಅಪ್ಸರೆಯರು ನೃತ್ಯಮಾಡ ತೊಡಗಿದರು. ಹೀಗೆ ಆಗ ಎಲ್ಲೆಲ್ಲಿಯೂ ಆನಂದ-ಮಂಗಳ ವಾಯಿತು. ಬ್ರಹ್ಮಾದಿ ಸಮಸ್ತ ದೇವತೆಗಳು ದಿವ್ಯ ಸ್ತೋತ್ರಗಳಿಂದ ಭಗವಂತನನ್ನು ಸ್ತುತಿಸತೊಡಗಿದರು. ॥ ೫೫ ॥

ದೇವತೆಗಳು ಹೇಳಿದರು – ಭಗವಂತನೇ! ಆಕಾಶದಲ್ಲಿ ಬಗೆ-ಬಗೆಯ ರೂಪಗಳ ಕಲ್ಪನೆ ಮಾಡಿದಂತೆ, ಭಗವಂತನು ತನ್ನ ಸ್ವರೂಪದಲ್ಲಿಯೇ ಮಾಯಾಶಕ್ತಿಯಿಂದ ಈ ವಿವಿಧರೂಪಗಳುಳ್ಳ ಜಗತ್ತನ್ನು ರಚಿಸುವವನು. ಈಗ ತನ್ನ ಸ್ವರೂಪವನ್ನು ಪ್ರಕಾಶ ಪಡಿಸುವುದಕ್ಕಾಗಿ ಈ ನರ-ನಾರಾಯಣ ಮಹರ್ಷಿಗಳ ರೂಪ ದಲ್ಲಿ ಧರ್ಮನ ಮನೆಯಲ್ಲಿ ಪ್ರಕಟಗೊಂಡಿರುವನು. ಇಂತಹ ಪರಮಪುರುಷನಿಗೆ ನಮೋ ನಮಃ ॥ ೫೬ ॥ ಯಾರ ತತ್ತ್ವವನ್ನು ಶಾಸ್ತ್ರದ ಆಧಾರದಿಂದ ನಾವುಗಳು ಕೇವಲ ಅನುಮಾನಿಸಬಹುದೇ ಹೊರತು ಪ್ರತ್ಯಕ್ಷವಾಗಿ ತಿಳಿದುಕೊಳ್ಳುವುದು ಸಾಧ್ಯವಾಗದು – ಅಂತಹ ಭಗವಂತನೇ ಜಗತ್ತಿನ ಮರ್ಯಾದೆಯನ್ನು ಕಾಪಾಡು ವುದಕ್ಕಾಗಿಯೇ ಸತ್ತ್ವಗುಣದಿಂದ ದೇವತೆಗಳಾದ ನಮ್ಮನ್ನು ನಿರ್ಮಿಸಿದ್ದಾನೆ. ದಯಾಮೂರ್ತಿಯಾದ ಈ ಭಗವಂತನು ಸಮಸ್ತ ಸೌಂದರ್ಯ-ಲಾವಣ್ಯಗಳಿಗೆ ನೆಲೆಮನೆಯಾದ ತಾವರೆಯ ಹೂವನ್ನೂ ನಾಚಿಸುವಂತಹ ತನ್ನ ಪರಮ ಕರುಣೆಯ ನೋಟವನ್ನು ನಮ್ಮತ್ತ ಬೀರಲಿ ॥ ೫೭ ॥

ಪ್ರಿಯ ವಿದುರನೇ! ದೇವತೆಗಳು ಪ್ರಭುವಿನ ಸಾಕ್ಷಾತ್ ದರ್ಶನವನ್ನು ಪಡೆದು ಅವನನ್ನು ಈ ಪ್ರಕಾರವಾಗಿ ಪೂಜಿಸಿ, ಸ್ತುತಿಸಿ ದರು. ಅನಂತರ ಭಗವಾನ್ ನರ-ನಾರಾಯಣರು ಗಂಧಮಾದನ ಪರ್ವತಕ್ಕೆ ತೆರಳಿದರು. ॥ ೫೮ ॥ ಭಗವಾನ್ ಶ್ರೀಹರಿಯ ಅಂಶ ಸಂಭೂತರಾದ ನರ-ನಾರಾಯಣರೇ ಈಗ ಭೂಮಿಯ ಭಾರ ವನ್ನು ಇಳುಹುವುದಕ್ಕಾಗಿ ಯದುಕುಲಭೂಷಣನಾದ ಶ್ರೀಕೃಷ್ಣ ಮತ್ತು ಕುರುಕುಲಭೂಷಣನಾದ ಅರ್ಜುನ ಎಂಬ ರೂಪಗಳಿಂದ ಅವತರಿಸಿರುವರು. ॥ ೫೯ ॥

ಅಗ್ನಿದೇವರ ಪತ್ನಿಯಾದ ಸ್ವಾಹಾದೇವಿಯು ಅಗ್ನಿಯ ಅಭಿ ಮಾನಿಗಳಾದ ಪಾವಕ, ಪವಮಾನ ಮತ್ತು ಶುಚಿ ಎಂಬ ಮೂವರು ಪುತ್ರರನ್ನು ಪಡೆದಳು. ಅವರೂ ತಂದೆಯಂತೆ ಹವಿಸ್ಸನ್ನು ಭುಂಜಿಸು ವರು. ॥ ೬೦ ॥ ಈ ಮೂವರಿಂದಲೇ ನಲವತ್ತೈದು ಪ್ರಕಾರಗಳಾದ ಅಗ್ನಿಗಳು ಉಂಟಾದವು. ಇವರೇ ತಮ್ಮ ಮೂವರು ಪಿತೃಗಳು, ಒರ್ವ ಪಿತಾಮಹ ಸೇರಿ ನಲವತ್ತೊಂಭತ್ತು ಅಗ್ನಿಗಳೆಂದು ಪ್ರಸಿದ್ಧರಾದರು. ॥ ೬೧ ॥ ವೇದಜ್ಞ ಬ್ರಾಹ್ಮಣರು ವೈದಿಕ ಯಜ್ಞ ಕರ್ಮದಲ್ಲಿ ಆಗ್ನೇಯ ಇಷ್ಟಿಗಳನ್ನು ಇವೇ ನಲವತ್ತೊಂಭತ್ತು ಅಗ್ನಿಗಳ ಹೆಸರಿನಿಂದ ಮಾಡುವರು. ॥ ೬೨ ॥

ಅಗ್ನಿಷ್ವಾತ್ತ, ಬರ್ಹಿಷದ, ಸೋಮಪ ಮತ್ತು ಆಜ್ಯಪ ಇವರು ಪಿತೃಗಳಾಗಿದ್ದಾರೆ. ಇವರಲ್ಲಿ ಸಾಗ್ನಿಕರೂ (ಗೃಹಸ್ಥರು) ಇದ್ದಾರೆ, ನಿರಗ್ನಿಕರೂ (ಸಂನ್ಯಾಸಿಗಳು) ಇದ್ದಾರೆ. ಇವರೆಲ್ಲ ಪಿತೃಗಳ ಪತ್ನಿಯು ದಕ್ಷಕುಮಾರಿಯಾದ ಸ್ವಧಾದೇವಿಯಾಗಿದ್ದಳು. ॥ ೬೩ ॥

ತೇಭ್ಯೋ ದಧಾರ ಕನ್ಯೇ ದ್ವೇ ವಯುನಾಂ ಧಾರಿಣೀಂ ಸ್ವಧಾ ।
ಉಭೇ ತೇ ಬ್ರಹ್ಮವಾದಿನ್ಯೌ ಜ್ಞಾನವಿಜ್ಞಾನಪಾರಗೇ ॥ ೬೪ ॥

ಭವಸ್ಯ ಪತ್ನೀ ತು ಸತೀ ಭವಂ ದೇವಮನುವ್ರತಾ ।
ಆತ್ಮನಃ ಸದೃಶಂ ಪುತ್ರಂ ನ ಲೇಭೇ ಗುಣಶೀಲತಃ ॥ ೬೫ ॥

ಪಿತರ್ಯಪ್ರತಿರೂಪೇ ಸ್ವೇ ಭವಾಯಾನಾಗಸೇ ರುಷಾ ।
ಅಪ್ರೌಢೈವಾತ್ಮನಾಽಽತ್ಮಾನಮಜಹಾದ್ಯೋಗಸಂಯುತಾ ॥ ೬೬ ॥

ಈ ಪಿತೃಗಳಿಂದ ಸ್ವಧಾದೇವಿಗೆ ಧಾರಿಣೀ ಮತ್ತು ವಯುನಾ ಎಂಬ ಎರಡು ಕನ್ಯೆಗಳಾದರು. ಇವರಿಬ್ಬರೂ ಜ್ಞಾನ-ವಿಜ್ಞಾನ ಪಾರಂಗತೆಯರೂ, ಬ್ರಹ್ಮವಾದಿನಿಯರೂ ಆದರು. ॥ ೬೪ ॥ ಮಹಾದೇವನ ಪತ್ನಿ ಸಾಧ್ವೀಮಣಿಯಾದ ಸತೀದೇವಿಯು ಎಲ್ಲ ರೀತಿಯಿಂದಲೂ ಪತಿನಿಷ್ಠೆಯಿಂದ ಕೂಡಿದವಳಾಗಿ ಪತಿಸೇವಾ ಪರಾಯಣೆಯಾಗಿದ್ದಳು. ಆದರೆ ಆಕೆಗೆ ತನ್ನ ಗುಣಶೀಲಗಳಿಗೆ ಅನುರೂಪನಾದ ಪುತ್ರನು ಆಗಲಿಲ್ಲ. ॥ ೬೫ ॥ ಏಕೆಂದರೆ, ಶಿವನು ನಿರಪರಾಧಿಯಾಗಿದ್ದರೂ ಸತೀದೇವಿಯು ತನ್ನ ತಂದೆಯಾದ ದಕ್ಷಪ್ರಜಾಪತಿಯು ಆತನಿಗೆ ಪ್ರತಿಕೂಲವನ್ನು ಆಚರಿಸಿದ್ದರಿಂದ ಕ್ರುದ್ಧಳಾಗಿ ಆಕೆಯು ತಾರುಣ್ಯದಲ್ಲಿಯೇ ಯೋಗಸಮಾಧಿಯಿಂದ ತನ್ನ ದೇಹವನ್ನು ತ್ಯಜಿಸಿದ್ದಳು. ॥ ೬೬ ॥

ಮೊದಲನೆಯ ಅಧ್ಯಾಯವು ಮುಗಿಯಿತು. ॥ ೧ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಚತುರ್ಥಸ್ಕಂಧೇ ವಿದುರ-ಮೈತ್ರೇಯಸಂವಾದೇ ಪ್ರಥಮೋಽಧ್ಯಾಯಃ ॥ ೧ ॥

ಎರಡನೆಯ ಅಧ್ಯಾಯ

ಭಗವಾನ್ ಶಿವನಿಗೂ ಮತ್ತು ದಕ್ಷಪ್ರಜಾಪತಿಗೂ ಉಂಟಾದ ಮನಸ್ತಾಪ

ವಿದುರ ಉವಾಚ

ಭವೇ ಶೀಲವತಾಂ ಶ್ರೇಷ್ಠೇ ದಕ್ಷೋ ದುಹಿತೃವತ್ಸಲಃ ।
ವಿದ್ವೇಷಮಕರೋತ್ಕಸ್ಮಾದನಾದೃತ್ಯಾತ್ಮಜಾಂ ಸತೀಮ್ ॥ ೧ ॥

ಕಸ್ತಂ ಚರಾಚರಗುರುಂ ನಿರ್ವೈರಂ ಶಾಂತವಿಗ್ರಹಮ್ ।
ಆತ್ಮಾರಾಮಂ ಕಥಂ ದ್ವೇಷ್ಟಿ ಜಗತೋ ದೈವತಂ ಮಹತ್ ॥ ೨ ॥

ಏತದಾಖ್ಯಾಹಿ ಮೇ ಬ್ರಹ್ಮನ್ ಜಾಮಾತುಃ ಶ್ವಶುರಸ್ಯ ಚ ।
ವಿದ್ವೇಷಸ್ತು ಯತಃ ಪ್ರಾಣಾಂಸ್ತತ್ಯಜೇ ದುಸ್ತ್ಯಜಾನ್ಸತೀ ॥ ೩ ॥

ವಿದುರನು ಕೇಳಿದನು – ಬ್ರಾಹ್ಮಣೋತ್ತಮರೇ! ದಕ್ಷಪ್ರಜಾಪತಿಗೆ ತನ್ನ ಪುತ್ರಿಯರಲ್ಲಿ ಅತ್ಯಂತ ಪ್ರೀತಿಯಿತ್ತು. ಹಾಗಿರುವಾಗ ಅವನು ಪುತ್ರಿಯಾದ ಸತೀದೇವಿಯನ್ನು ಅನಾದರಿಸಿ, ಶೀಲವಂತರಾದ ಎಲ್ಲರಿಗಿಂತ ಶ್ರೇಷ್ಠನಾದ ಶ್ರೀಮಹಾದೇವನಲ್ಲಿ ದ್ವೇಷವನ್ನು ಏಕೆ ತಾಳಿದನು? ॥ ೧ ॥ ಪರಮೇಶ್ವರನಾದರೋ ಚರಾಚರಗಳಿಗೆಲ್ಲ ಗುರುವು. ಯಾರಲ್ಲಿಯೂ ವೈರವಿಲ್ಲದವನು. ಶಾಂತಮೂರ್ತಿಯು. ಆತ್ಮಾರಾಮನು. ಜಗತ್ತಿಗೆ ಪರಮಾರಾಧ್ಯನಾದ ಪರದೇವತೆಯು. ಅವನಲ್ಲಿ ಯಾರಾದರೂ ವೈರಹೂಡುವರೇ? ॥ ೨ ॥ ಪೂಜ್ಯರೇ! ಆ ಮಾವ-ಅಳಿಯಂದಿರಲ್ಲಿ ಇಂತಹ ದ್ವೇಷ ಹೇಗೆ ಉಂಟಾಯಿತು? ಅದರ ಕಾರಣದಿಂದ ಸತೀದೇವಿಯು ತ್ಯಜಿಸಲು ದುಸ್ತರವಾದ ತನ್ನ ಪ್ರಾಣಗಳನ್ನೇ ಬಲಿಗೊಟ್ಟಳಲ್ಲ! ಇದನ್ನು ನನಗೆ ತಿಳಿಸಿರಿ. ॥ ೩ ॥

ಮೈತ್ರೇಯ ಉವಾಚ

ಪುರಾ ವಿಶ್ವಸೃಜಾಂ ಸತ್ರೇ ಸಮೇತಾಃ ಪರಮರ್ಷಯಃ ।
ತಥಾಮರಗಣಾಃ ಸರ್ವೇ ಸಾನುಗಾ ಮುನಯೋಽಗ್ನಯಃ ॥ ೪ ॥

ತತ್ರ ಪ್ರವಿಷ್ಟಮೃಷಯೋ ದೃಷ್ಟ್ವಾರ್ಕಮಿವ ರೋಚಿಷಾ ।
ಭ್ರಾಜಮಾನಂ ವಿತಿಮಿರಂ ಕುರ್ವಂತಂ ತನ್ಮಹತ್ಸದಃ ॥ ೫ ॥

ಶ್ರೀಮೈತ್ರೇಯರು ಹೇಳಿದರು – ಎಲೈ ವಿದುರನೇ! ಹಿಂದೊಮ್ಮೆ ಪ್ರಜಾಪತಿಗಳು ಯಜ್ಞವನ್ನು ಮಾಡಿದಾಗ ಆ ಯಜ್ಞದಲ್ಲಿ ಎಲ್ಲ ಮಹರ್ಷಿಗಳೂ, ಮುನಿಗಳೂ, ಅಗ್ನಿಗಳೂ, ಸಮಸ್ತ ದೇವತೆಗಳೂ ತಮ್ಮ ಅನುಯಾಯಿಗಳೊಡನೆ ಬಂದು ಸೇರಿದ್ದರು. ॥ ೪ ॥ ಆಗ ದಕ್ಷಪ್ರಜಾಪತಿಯೂ ಆ ಸಭೆಯನ್ನು ಪ್ರವೇಶಿಸಿದನು. ಅವನು ತನ್ನ ತೇಜಸ್ಸಿನಿಂದ ಸೂರ್ಯನಂತೆ ಪ್ರಕಾಶಿಸುತ್ತಾ ಆ ವಿಶಾಲ ಸಭಾಭವನದ ಅಂಧಕಾರವನ್ನು ದೂರಗೊಳಿಸುತ್ತಿದ್ದನು. ಅವನು ಬಂದಿರುವುದನ್ನು ನೋಡಿ, ಅವನ ತೇಜಸ್ಸಿಗೆ ಬೆರಗಾಗಿ ಬ್ರಹ್ಮದೇವರು ಮತ್ತು ಮಹಾದೇವನನ್ನು ಬಿಟ್ಟು ಇತರ ಅಗ್ನಿ ಸಮೇತರಾದ ಎಲ್ಲ ಸಭಾಸದರು ತಮ್ಮ-ತಮ್ಮ ಆಸನಗಳನ್ನು ಬಿಟ್ಟು ಎದ್ದುನಿಂತರು. ॥ ೫-೬ ॥

ಉದತಿಷ್ಠನ್ಸದಸ್ಯಾಸ್ತೇ ಸ್ವಧಿಷ್ಣ್ಯೇಭ್ಯಃ ಸಹಾಗ್ನಯಃ ।
ಋತೇ ವಿರಿಂಚಾಂ ಶರ್ವಂ ಚ ತದ್ಭಾಸಾಽಽಕ್ಷಿಪ್ತಚೇತಸಃ ॥ ೬ ॥

ಸದಸಸ್ಪತಿಭಿರ್ದಕ್ಷೋ ಭಗವಾನ್ಸಾಧು ಸತ್ಕೃತಃ ।
ಅಜಂ ಲೋಕಗುರುಂ ನತ್ವಾ ನಿಷಸಾದ ತದಾಜ್ಞಯಾ ॥ ೭ ॥

ಪ್ರಾಙ್ನಿಷಣ್ಣಂ ಮೃಡಂ ದೃಷ್ಟ್ವಾ ನಾಮೃಷ್ಯತ್ತದನಾದೃತಃ ।
ಉವಾಚ ವಾಮಂ ಚಕ್ಷುರ್ಭ್ಯಾಮಭಿವೀಕ್ಷ್ಯ ದಹನ್ನಿವ ॥ ೮ ॥

ಶ್ರೂಯತಾಂ ಬ್ರಹ್ಮರ್ಷಯೋ ಮೇ ಸಹದೇವಾಃ ಸಹಾಗ್ನಯಃ ।
ಸಾಧೂನಾಂ ಬ್ರುವತೋ ವೃತ್ತಂ ನಾಜ್ಞಾನಾನ್ನ ಚ ಮತ್ಸರಾತ್ ॥ ೯ ॥

ಅಯಂ ತು ಲೋಕಪಾಲಾನಾಂ ಯಶೋಘ್ನೋ ನಿರಪತ್ರಪಃ ।
ಸದ್ಭಿರಾಚರಿತಃ ಪಂಥಾ ಯೇನ ಸ್ತಬ್ಧೇನ ದೂಷಿತಃ ॥ ೧೦ ॥

ಏಷ ಮೇ ಶಿಷ್ಯತಾಂ ಪ್ರಾಪ್ತೋ ಯನ್ಮೇ ದುಹಿತುರಗ್ರಹೀತ್ ।
ಪಾಣಿಂ ವಿಪ್ರಾಗ್ನಿಮುಖತಃ ಸಾವಿತ್ರ್ಯಾ ಇವ ಸಾಧುವತ್ ॥ ೧೧ ॥

ಗೃಹೀತ್ವಾ ಮೃಗಶಾವಾಕ್ಷ್ಯಾಃ ಪಾಣಿಂ ಮರ್ಕಟಲೋಚನಃ ।
ಪ್ರತ್ಯುತ್ಥಾನಾಭಿವಾದಾರ್ಹೇ ವಾಚಾಪ್ಯಕೃತ ನೋಚಿತಮ್ ॥ ೧೨ ॥

ಲುಪ್ತಕ್ರಿಯಾಯಾಶುಚಯೇ ಮಾನಿನೇ ಭಿನ್ನಸೇತವೇ ।
ಅನಿಚ್ಛನ್ನಪ್ಯದಾಂ ಬಾಲಾಂ ಶೂದ್ರಾಯೇವೋಶತೀಂ ಗಿರಮ್ ॥ ೧೩ ॥

ಪ್ರೇತಾವಾಸೇಷು ಘೋರೇಷು ಪ್ರೇತೈರ್ಭೂತಗಣೈರ್ವೃತಃ ।
ಅಟತ್ಯುನ್ಮತ್ತವನ್ನಗ್ನೋ ವ್ಯುಪ್ತಕೇಶೋ ಹಸನ್ರುದನ್ ॥ ೧೪ ॥

ಚಿತಾಭಸ್ಮಕೃತಸ್ನಾನಃ ಪ್ರೇತಸ್ರಙ್ನ್ರಸ್ಥಿಭೂಷಣಃ ।
ಶಿವಾಪದೇಶೋ ಹ್ಯಶಿವೋ ಮತ್ತೋ ಮತ್ತಜನಪ್ರಿಯಃ ।
ಪತಿಃ ಪ್ರಮಥಭೂತಾನಾಂ ತಮೋಮಾತ್ರಾತ್ಮಕಾತ್ಮನಾಮ್ ॥ ೧೫ ॥

ತಸ್ಮಾ ಉನ್ಮಾದನಾಥಾಯ ನಷ್ಟಶೌಚಾಯ ದುರ್ಹೃದೇ ।
ದತ್ತಾ ಬತ ಮಯಾ ಸಾಧ್ವೀ ಚೋದಿತೇ ಪರಮೇಷ್ಠಿನಾ ॥ ೧೬ ॥

ಹೀಗೆ ಎಲ್ಲ ಸಭಾಸದರಿಂದ ಸಮ್ಮಾನ ಪಡೆದು ತೇಜಸ್ವಿಯಾದ ದಕ್ಷಪ್ರಜಾಪತಿಯು ತಂದೆಯಾದ ಬ್ರಹ್ಮದೇವರಿಗೆ ವಂದಿಸಿ, ಅವರ ಅಪ್ಪಣೆಯಂತೆ ಆಸನದಲ್ಲಿ ಮಂಡಿಸಿದನು. ॥ ೭ ॥

ಆದರೆ ಪರಮೇಶ್ವರನು ಮಾತ್ರ ಕುಳಿತೇ ಇದ್ದು ತನಗೆ ಗೌರವವನ್ನು ಸಲ್ಲಿಸದೆ ಇದ್ದುದನ್ನು ಆತನು ಗಮನಿಸಿದನು. ಇದನ್ನು ಅವನು ಅನಾದರವೆಂದು ತಿಳಿದನು. ಆಗ ಆತನು ಶಿವನನ್ನು ತನ್ನ ಕ್ರೋಧಾಗ್ನಿಯಿಂದ ಸುಟ್ಟುಬಿಡುವನೋ ಎಂಬಂತೆ ಕಡೆಗಣ್ಣಿನಿಂದ ದುರ-ದುರನೆ ನೋಡುತ್ತಾ ಹೀಗೆ ಹೇಳತೊಡಗಿದನು. ॥ ೮ ॥ ದೇವತೆಗಳಿಂದಲೂ, ಅಗ್ನಿಗಳಿಂದಲೂ ಒಡಗೂಡಿರುವ ಎಲ್ಲ ಬ್ರಹ್ಮರ್ಷಿಗಳೇ! ನನ್ನ ಮಾತನ್ನು ಕೇಳಿರಿ. ನಾನು ಅಜ್ಞಾನದಿಂದಾಗಲೀ, ಮಾತ್ಸರ್ಯದಿಂದಾಗಲೀ ಮಾತನಾಡುತ್ತಿಲ್ಲ. ಕೇವಲ ಶಿಷ್ಟಾಚಾರ ವ್ಯವಹಾರದ ಕುರಿತೇ ಆಡುತ್ತಿದ್ದೇನೆ. ॥ ೯ ॥ ಈ ನಾಚಿಗೆಟ್ಟವನು ಎಲ್ಲ ಲೋಕಪಾಲರ ಪವಿತ್ರಕೀರ್ತಿಯನ್ನು ಕೆಡಿಸುತ್ತಿದ್ದಾನೆ. ನೋಡಿದಿರಾ! ಈ ದುರಹಂಕಾರಿಯು ಸತ್ಪುರುಷರು ನಡೆದು ಬಂದಿರುವ ದಾರಿಯನ್ನೇ ಕಲುಷಿತಗೊಳಿಸುತ್ತಿದ್ದಾನೆ. ॥ ೧೦ ॥ ಕಪಿಯ ಕಣ್ಣಂತಿರುವ ಇವನು ಸಾಧುವಿನಂತಿದ್ದ ನನ್ನ ಸಾವಿತ್ರಿ ಸದೃಶಳೂ, ಮೃಗನಯನಿಯೂ ಆದ ಪವಿತ್ರ ಕನ್ಯೆಯನ್ನು ಅಗ್ನಿ ಮತ್ತು ಬ್ರಾಹ್ಮಣರ ಸಮಕ್ಷಮದಲ್ಲಿ ಪಾಣಿಗ್ರಹಣಮಾಡಿದ್ದನು. ಇದರಿಂದ ಇವನು ಒಂದು ವಿಧದಲ್ಲಿ ನನಗೆ ಮಗನಂತೇ ಇದ್ದಾನೆ. ಇವನೂ ಎದ್ದು ನನಗೆ ಸ್ವಾಗತಿಸಿ, ನಮಸ್ಕರಿಸುತ್ತಿದ್ದರೆ ಉಚಿತವಾಗಿತ್ತು. ಆದರೆ ಇವನು ಮಾತಿನಿಂದಲೂ ನನ್ನನ್ನು ಸತ್ಕರಿಸಲಿಲ್ಲ. ॥ ೧೧-೧೨ ॥ ಅಯ್ಯೋ! ಅಯೋಗ್ಯನಿಗೆ ವೇದ ಹೇಳಿಕೊಟ್ಟಂತೆ – ನಾನು ಇಷ್ಟವಿಲ್ಲದಿದ್ದರೂ ಈತನಿಗೆ ನನ್ನ ಪುತ್ರಿಯನ್ನು ಕೊಟ್ಟೆನಲ್ಲ! ಈತನು ಸತ್ಕರ್ಮಗಳನ್ನು ಲೋಪಗೊಳಿಸಿರುವನು. ಅಶುಚಿಯು, ದುರಭಿಮಾನಿಯು. ಧರ್ಮದ ಮೇರೆಯನ್ನು ಮುರಿದು ಹಾಕಿದನು. ॥ ೧೩ ॥ ಇವನು ಪ್ರೇತಗಳಿಗೆ ನಿವಾಸಸ್ಥಾನವಾದ ಭಯಂಕರ ಸ್ಮಶಾನಗಳಲ್ಲಿ ಭೂತ-ಪ್ರೇತಗಳೊಡನೆ ಅಲೆಯುತ್ತಾ ಇರುತ್ತಾನೆ. ಹುಚ್ಚನಂತೆ ತಲೆಗೂದಲನ್ನು ಕೆದರಿಕೊಂಡು, ಬತ್ತಲೆಯಾಗಿ, ನಗುತ್ತಲೂ, ಅಳುತ್ತಲೂ ತಿರುಗಾಡುತ್ತಿರುತ್ತಾನೆ. ॥ ೧೪ ॥ ಇವನು ಅಪವಿತ್ರವಾದ ಚಿತಾಭಸ್ಮವನ್ನು ಮೈಗೆಲ್ಲ ಬಳಿದುಕೊಂಡು, ಕೊರಳಲ್ಲಿ ಭೂತಗಳು ಧರಿಸಲು ಯೋಗ್ಯವಾದ ನರಮುಂಡ ಮಾಲೆಯನ್ನೂ, ದೇಹದಲ್ಲೆಲ್ಲ ಮೂಳೆಗಳ ಒಡವೆಗಳನ್ನು ಹಾಕಿಕೊಂಡಿರುತ್ತಾನೆ. ಇವನು ಹೆಸರಿಗೆ ಮಾತ್ರ ಶಿವನಾಗಿದ್ದಾನೆ. ಆದರೆ ನಿಜವಾಗಿ ಅಶಿವ – ಅಮಂಗಳರೂಪಿಯಾಗಿದ್ದಾನೆ. ಮತ್ತೇರಿದವನಿಗೆ ಮತ್ತೇರಿದವರೇ ಪ್ರಿಯರಾಗಿರುವಂತೆ ಈತನಿಗೂ ಭೂತ-ಪ್ರೇತ-ಪಿಶಾಚಾದಿ ತಮೋಗುಣದ ಜೀವರೇ ಪ್ರಿಯರು. ಅವುಗಳಲ್ಲಿ ಈತನು ನಾಯಕನು. ॥ ೧೫ ॥ ಅಯ್ಯೋ! ನಾನು ಬ್ರಹ್ಮದೇವರ ಮಾತಿಗೆ ಮರುಳಾಗಿ, ಭೂತಪತಿಯೂ, ಆಚಾರಹೀನನೂ, ದುಷ್ಟಸ್ವಭಾವದವನೂ ಆದ ಇಂತಹವನಿಗೆ ಸಾಧ್ವಿಯೂ, ಸುಕುಮಾರಿಯೂ ಆದ ನನ್ನ ಕುಮಾರಿಯನ್ನು ವಿವಾಹಮಾಡಿ ಕೊಟ್ಟೆನಲ್ಲ! ॥ ೧೬ ॥

ಮೈತ್ರೇಯ ಉವಾಚ

ವಿನಿಂದ್ಯೈವಂ ಸ ಗಿರಿಶಮಪ್ರತೀಪಮವಸ್ಥಿತಮ್ ।
ದಕ್ಷೋಽಥಾಪ ಉಪಸ್ಪೃಶ್ಯ ಕ್ರುದ್ಧಃ ಶಪ್ತುಂ ಪ್ರಚಕ್ರಮೇ ॥ ೧೭ ॥

ಅಯಂ ತು ದೇವಯಜನ ಇಂದ್ರೋಪೇಂದ್ರಾದಿಭಿರ್ಭವಃ ।
ಸಹಭಾಗಂ ನ ಲಭತಾಂ ದೇವೈರ್ದೇವಗಣಾಧಮಃ ॥ ೧೮ ॥

ನಿಷಿಧ್ಯಮಾನಃ ಸ ಸದಸ್ಯಮುಖ್ಯೈ-
ರ್ದಕ್ಷೋ ಗಿರಿತ್ರಾಯ ವಿಸೃಜ್ಯ ಶಾಪಮ್ ।
ತಸ್ಮಾದ್ವಿನಿಷ್ಕ್ರಮ್ಯ ವಿವೃದ್ಧಮನ್ಯು-
ರ್ಜಗಾಮ ಕೌರವ್ಯ ನಿಜಂ ನಿಕೇತನಮ್ ॥ ೧೯ ॥

ವಿಜ್ಞಾಯ ಶಾಪಂ ಗಿರಿಶಾನುಗಾಗ್ರಣೀ-
ರ್ನಂದೀಶ್ವರೋ ರೋಷಕಷಾಯದೂಷಿತಃ ।
ದಕ್ಷಾಯ ಶಾಪಂ ವಿಸಸರ್ಜ ದಾರುಣಂ
ಯೇ ಚಾನ್ವಮೋದಂಸ್ತದವಾಚ್ಯತಾಂ ದ್ವಿಜಾಃ ॥ ೨೦ ॥

ಯ ಏತನ್ಮರ್ತ್ಯಮುದ್ದಿಶ್ಯ ಭಗವತ್ಯಪ್ರತಿದ್ರುಹಿ ।
ದ್ರುಹ್ಯತ್ಯಜ್ಞಃ ಪೃಥಗ್ದೃಷ್ಟಿಸ್ತತ್ತ್ವತೋ ವಿಮುಖೋ ಭವೇತ್ ॥ ೨೧ ॥

ಗೃಹೇಷು ಕೂಟಧರ್ಮೇಷು ಸಕ್ತೋ ಗ್ರಾಮ್ಯಸುಖೇಚ್ಛಯಾ ।
ಕರ್ಮತಂತ್ರಂ ವಿತನುತೇ ವೇದವಾದವಿಪನ್ನಧೀಃ ॥ ೨೨ ॥

ಬುದ್ಧ್ಯಾ ಪರಾಭಿಧ್ಯಾಯಿನ್ಯಾ ವಿಸ್ಮೃತಾತ್ಮಗತಿಃ ಪಶುಃ ।
ಸ್ತ್ರೀಕಾಮಃ ಸೋಽಸ್ತ್ವತಿತರಾಂ ದಕ್ಷೋ ಬಸ್ತಮುಖೋಽಚಿರಾತ್ ॥ ೨೩ ॥

ವಿದ್ಯಾಬುದ್ಧಿರವಿದ್ಯಾಯಾಂ ಕರ್ಮಮಯ್ಯಾಮಸೌ ಜಡಃ ।
ಸಂಸರಂತ್ವಿಹ ಯೇ ಚಾಮುಮನು ಶರ್ವಾವಮಾನಿನಮ್ ॥ ೨೪ ॥

ಗಿರಃ ಶ್ರುತಾಯಾಃ ಪುಷ್ಪಿಣ್ಯಾ ಮಧುಗಂಧೇನ ಭೂರಿಣಾ ।
ಮಥ್ನಾ ಚೋನ್ಮಥಿತಾತ್ಮಾನಃ ಸಂಮುಹ್ಯಂತು ಹರದ್ವಿಷಃ ॥ ೨೫ ॥

ಶ್ರೀಮೈತ್ರೇಯರು ಹೇಳುತ್ತಾರೆ – ಸಾಧುಸ್ವಭಾವದ ವಿದುರನೇ! ದಕ್ಷನು ತನ್ನನ್ನು ಹೀಗೆ ನಿಂದಿಸಿದರೂ ಭಗವಾನ್ ಮಹಾದೇವನು ಅದಕ್ಕೆ ಯಾವ ಪ್ರತಿಕ್ರಿಯೆಯನ್ನೂ ತೋರದೆ ಹಿಂದಿನಂತೆ ನಿಶ್ಚಲಭಾವದಿಂದಲೇ ಕುಳಿತಿದ್ದನು. ಇದರಿಂದ ದಕ್ಷನ ಕ್ರೋಧವು ಉಕ್ಕೇರಿ ಅವನು ಕೈಯಲ್ಲಿ ನೀರನ್ನು ತೆಗೆದುಕೊಂಡು ಶಿವನನ್ನು ಶಪಿಸಲು ಸಿದ್ಧನಾದನು. ॥ ೧೭ ॥ ದಕ್ಷನು – "ಈ ಮಹಾದೇವನು ದೇವತೆಗಳಲ್ಲಿ ಅಧಮನು. ಇಂದಿನಿಂದ ಈತನಿಗೆ ಇಂದ್ರ-ಉಪೇಂದ್ರ ಮುಂತಾದ ದೇವತೆಗಳೊಡನೆ ಯಜ್ಞದಲ್ಲಿ ಭಾಗವು ದೊರೆಯದಿರಲಿ" ಎಂದು ಶಾಪವಾಕ್ಯವನ್ನುಚ್ಚರಿಸಿದನು. ॥ ೧೮ ॥ ಸಭೆಯಲ್ಲಿ ನೆರೆದಿದ್ದ ಮುಖ್ಯ ಸದಸ್ಯರು 'ಬೇಡ! ಬೇಡ!' ಎಂದು ತಡೆಯುತ್ತಿದ್ದರೂ ಆತನು ಯಾರ ಮಾತನ್ನೂ ಕೇಳದೆ ಶಿವನಿಗೆ ಶಾಪವನ್ನು ಕೊಟ್ಟೇ ಬಿಟ್ಟನು. ಹಾಗೂ ಕಡುಕೋಪದಿಂದ ಸಭಾತ್ಯಾಗಮಾಡಿ ಮನೆಗೆ ಹೊರಟುಹೋದನು. ॥ ೧೯ ॥

ಸ್ವಾಮಿ ಶಂಕರನ ಅನುಯಾಯಿಗಳಲ್ಲಿ ಅಗ್ರಗಣ್ಯನಾದ ನಂದಿಕೇಶ್ವರನಿಗೆ ದಕ್ಷನು ಶಾಪವಿತ್ತುದನ್ನು ತಿಳಿಯುತ್ತಲೇ ಕ್ರೋಧದಿಂದ ಕಿಡಿ-ಕಿಡಿಯಾದನು. ■ ದಕ್ಷನಿಗೂ, ಅವನ ದುರ್ವಚನಗಳನ್ನು ಅನುಮೋದಿಸಿ ಮಾಡಿದ ಬ್ರಾಹ್ಮಣರಿಗೂ ಅವನು ಭಯಂಕರವಾದ ಶಾಪವನ್ನು ಕೊಟ್ಟನು. ॥ ೨೦ ॥ "ಮರಣಸ್ವಭಾವವುಳ್ಳ ಈ ದೇಹದಲ್ಲೇ ಅಭಿಮಾನ ಹೊಂದಿರುವ ಈ ಮೂರ್ಖ ದಕ್ಷನು – ಯಾರಿಗೂ ದ್ರೋಹಮಾಡದೇ ಇರುವ ಭಗವಾನ್ ಶಂಕರನ ವಿಷಯದಲ್ಲಿ ದ್ವೇಷವನ್ನು ಮಾಡಿರುವನು. ಭೇದಬುದ್ಧಿಯಿಂದ ಕೂಡಿದ ಈತನು ತತ್ತ್ವಜ್ಞಾನ ವಿಮುಖನಾಗಲಿ." ॥ ೨೧ ॥ ಇವನು 'ಚಾತುರ್ಮಾಸ್ಯ ಯಜ್ಞಮಾಡುವವನಿಗೆ ಅಕ್ಷಯಪುಣ್ಯವು ದೊರೆಯುವುದು' ಮುಂತಾದ ಅರ್ಥವಾದರೂಪೀ ವೇದವಾಕ್ಯಗಳಲ್ಲಿ ಮೋಹಿತನಾಗಿ ಹಾಗೂ ವಿವೇಕಭ್ರಷ್ಟನಾಗಿ ವಿಷಯಸುಖದ ಇಚ್ಛೆಯಿಂದ ಕಪಟಧರ್ಮಮಯ ಗೃಹಸ್ಥಾಶ್ರಮದಲ್ಲಿ ಆಸಕ್ತನಾಗಿದ್ದು ಕರ್ಮಕಾಂಡದಲ್ಲೇ ತೊಡಗಿರುತ್ತಾನೆ. ಇವನ ಬುದ್ಧಿಯು ದೇಹಾದಿಗಳಲ್ಲಿ ಆತ್ಮಭಾವವನ್ನು ಚಿಂತಿಸುವಂತಹುದು. ಇದರಿಂದ ಇವನಿಗೆ ಆತ್ಮಸ್ವರೂಪವು ಮರೆಯಾಗಿದೆ. ಇವನು ಸಾಕ್ಷಾತ್ ಪಶುವಿನಂತೆ ಆಗಿದ್ದಾನೆ. ಆದ್ದರಿಂದ ಈತನು ಅತ್ಯಂತ ಸ್ತ್ರೀಲಂಪಟನಾಗಲಿ ಮತ್ತು ಶೀಘ್ರದಲ್ಲಿಯೇ ಈತನಿಗೆ ಹೋತದಮುಖವು ಬರಲಿ. ॥ ೨೨-೨೩ ॥ ಈ ಮೂರ್ಖನು ಕರ್ಮಮಯವಾದ ಅವಿದ್ಯೆಯನ್ನೇ ವಿದ್ಯೆಯೆಂದು ತಿಳಿಯುತ್ತಿದ್ದಾನೆ. ಆದ್ದರಿಂದ ಈತನೂ ಮತ್ತು ಭಗವಾನ್ ಶಂಕರನಿಗೆ ಅಪಮಾನಮಾಡಿರುವ ಈತನ ಬೆಂಬಲಿಗರೆಲ್ಲರೂ ಜನ್ಮ-ಮರಣರೂಪವಾದ ಸಂಸಾರ ಚಕ್ರದಲ್ಲಿ ಸುತ್ತುತ್ತಿರಲಿ. ॥ ೨೪ ॥ ವೇದವಾಣಿಯೆಂಬ ಬಳ್ಳಿಯು ಫಲಶ್ರುತಿಯೆಂಬ ಪುಷ್ಪಗಳಿಂದ ಸುಶೋಭಿತವಾಗಿದೆ. ಕರ್ಮಫಲ ರೂಪವಾದ ಅದರ ಮೋಹಕವಾದ ಗಂಧಕ್ಕೆ ಇವರುಗಳ ಚಿತ್ತವು ಕಲಕಿಹೋಗುತ್ತದೆ. ಇದರಿಂದ ಈ ಶಂಕರದ್ರೋಹಿಗಳು ಕರ್ಮಗಳ ಬಲೆಯಲ್ಲಿ ಸಿಕ್ಕಿಹಾಕಿಕೊಂಡಿರಲಿ. ॥ ೨೫ ॥

ಸರ್ವಭಕ್ಷಾ ದ್ವಿಜಾ ವೃತ್ತ್ಯೈ ಧೃತವಿದ್ಯಾತಪೋವ್ರತಾಃ ।
ವಿತ್ತದೇಹೇಂದ್ರಿಯಾರಾಮಾ ಯಾಚಕಾ ವಿಚರಂತ್ವಿಹ ॥ ೨೬ ॥

ತಸ್ಯೈವಂ ದದತಃ ಶಾಪಂ ಶ್ರುತ್ವಾ ದ್ವಿಜಕುಲಾಯ ವೈ ।
ಭೃಗುಃ ಪ್ರತ್ಯಸೃಜಚ್ಛಾಪಂ ಬ್ರಹ್ಮದಂಡಂ ದುರತ್ಯಯಮ್ ॥ ೨೭ ॥

ಭವವ್ರತಧರಾ ಯೇ ಚ ಯೇ ಚ ತಾನ್ಸಮನುವ್ರತಾಃ ।
ಪಾಖಂಡಿನಸ್ತೇ ಭವಂತು ಸಚ್ಛಾಸ್ತ್ರಪರಿಪಂಥಿನಃ ॥ ೨೮ ॥

ನಷ್ಟಶೌಚಾ ಮೂಢಧಿಯೋ ಜಟಾಭಸ್ಮಾಸ್ಥಿಧಾರಿಣಃ ।
ವಿಶಂತು ಶಿವದೀಕ್ಷಾಯಾಂ ಯತ್ರ ದೈವಂ ಸುರಾಸವಮ್ ॥ ೨೯ ॥

ಬ್ರಹ್ಮ ಚ ಬ್ರಾಹ್ಮಣಾಂಶ್ಚೈವ ಯದ್ಯೂಯಂ ಪರಿನಿಂದಥ ।
ಸೇತುಂ ವಿಧಾರಣಂ ಪುಂಸಾಮತಃ ಪಾಖಂಡಮಾಶ್ರಿತಾಃ ॥ ೩೦ ॥

ಏಷ ಏವ ಹಿ ಲೋಕಾನಾಂ ಶಿವಃ ಪಂಥಾಃ ಸನಾತನಃ ।
ಯಂ ಪೂರ್ವೇ ಚಾನುಸಂತಸ್ಥುರ್ಯತ್ಪ್ರಮಾಣಂ ಜನಾರ್ದನಃ ॥ ೩೧ ॥

ತದ್ಬ್ರಹ್ಮ ಪರಮಂ ಶುದ್ಧಂ ಸತಾಂ ವರ್ತ್ಮ ಸನಾತನಮ್ ।
ವಿಗರ್ಹ್ಯ ಯಾತ ಪಾಖಂಡಂ ದೈವಂ ವೋ ಯತ್ರ ಭೂತರಾಟ್ ॥ ೩೨ ॥

ಮೈತ್ರೇಯ ಉವಾಚ

ತಸ್ಯೈವಂ ವದತಃ ಶಾಪಂ ಭೃಗೋಃ ಸ ಭಗವಾನ್ಭವಃ ।
ನಿಶ್ಚಕ್ರಾಮ ತತಃ ಕಿಂಚಿದ್ವಿಮನಾ ಇವ ಸಾನುಗಃ ॥ ೩೩ ॥

ತೇಽಪಿ ವಿಶ್ವಸೃಜಃ ಸತ್ರಂ ಸಹಸ್ರಪರಿವತ್ಸರಾನ್ ।
ಸಂವಿಧಾಯ ಮಹೇಷ್ವಾಸ ಯತ್ರೇಜ್ಯ ಋಷಭೋ ಹರಿಃ ॥ ೩೪ ॥

ಆಪ್ಲುತ್ಯಾವಭೃಥಂ ಯತ್ರ ಗಂಗಾ ಯಮುನಯಾನ್ವಿತಾ ।
ವಿರಜೇನಾತ್ಮನಾ ಸರ್ವೇ ಸ್ವಂ ಸ್ವಂ ಧಾಮ ಯಯುಸ್ತತಃ ॥ ೩೫ ॥

ಈ ಬ್ರಾಹ್ಮಣರು ಭಕ್ಷ್ಯ-ಭಕ್ಷ್ಯದ ವಿವೇಕವಿಲ್ಲದೆ ಕೇವಲ ಉದರಂಭರಣಕ್ಕಾಗಿ ವಿದ್ಯೆ, ತಪಸ್ಸು, ವ್ರತ ಮುಂತಾದವುಗಳನ್ನು ಆಶ್ರಯಿಸಿ, ಧನ, ದೇಹೇಂದ್ರಿಯ ಸುಖವನ್ನು ಪರಮಸುಖವೆಂದು ಭಾವಿಸಿ ಅವುಗಳಿಗೆ ಗುಲಾಮರಾಗಿ ಲೋಕದಲ್ಲಿ ಭಿಕ್ಷೆಬೇಡುತ್ತಾ ಅಲೆದಾಡುತ್ತಿರಲಿ" ಎಂದು ಶಾಪವನ್ನಿತ್ತನು. ॥ ೨೬ ॥

ನಂದೀಶ್ವರನು ಹೀಗೆ ಬ್ರಾಹ್ಮಣಕುಲವನ್ನು ಶಪಿಸಿದ್ದನ್ನು ಕೇಳಿ ಅದರ ಬದಲಿಗೆ ಭೃಗುಮಹರ್ಷಿಗಳು ಕ್ರುದ್ಧರಾಗಿ ದುಸ್ತರವಾದ ಶಾಪರೂಪವಾದ ಬ್ರಹ್ಮದಂಡವನ್ನು ವಿಧಿಸಿದರು. ॥ ೨೭ ॥ "ಯಾರು ಉಪಾಸಕರು – ಶಿವಭಕ್ತರು ಹಾಗೂ ಅವರ ಅನುಯಾಯಿಗಳಿದ್ದಾರೋ ಅವರು ಸತ್ಶಾಸ್ತ್ರಗಳಿಗೆ ವಿರುದ್ಧವಾದ ಆಚರಣೆ ಮಾಡುವ ಪಾಷಂಡಿಗಳಾಗಲಿ. ॥ ೨೮ ॥ ಶೌಚಾಚಾರವನ್ನು ಬಿಟ್ಟು ಮಂದಬುದ್ಧಿಗಳಾಗಿ, ಜಟೆ, ಬೂದಿ, ಎಲುಬಿನ ಮಾಲೆಗಳನ್ನು ಧರಿಸುವವರೇ ಶೈವ ಸಂಪ್ರದಾಯದಲ್ಲಿ ದೀಕ್ಷಿತರಾಗಲಿ. ಅದರಲ್ಲಿ ಸುರೆ ಮತ್ತು ಆಸವಗಳೆಂಬ ಮದ್ಯಗಳೇ ದೇವತೆಗಳಂತೆ ಆದರಣೀಯವಾಗಿದೆ. ॥ ೨೯ ॥ ಎಲಾ! ನೀವೆಲ್ಲ ಧರ್ಮ ಮರ್ಯಾದೆಯ ಸಂಸ್ಥಾಪಕರೂ, ವರ್ಣಾಶ್ರಮಗಳ ರಕ್ಷಕರೂ ಆದ ವೇದ ಮತ್ತು ಬ್ರಾಹ್ಮಣರ ನಿಂದೆಯನ್ನು ಮಾಡುತ್ತಿರುವಿರಲ್ಲ! ನೀವು ಪಾಷಂಡಮತವನ್ನು ಆಶ್ರಯಿಸಿರುವಿರಿ ಎಂಬುದು ಇದರಿಂದ ತಿಳಿಯುತ್ತದೆ. ॥ ೩೦ ॥ ಈ ವೇದಮಾರ್ಗವೇ ಜನರಿಗಾಗಿ ಶ್ರೇಯಸ್ಕರ ಮತ್ತು ಸನಾತನಮಾರ್ಗವಾಗಿದೆ. ಹಿಂದಿನವರು ಇದೇ ದಾರಿಯಲ್ಲಿ ನಡೆದುಬಂದಿರುವರು ಹಾಗೂ ಇದರ ಮೂಲವು ಸಾಕ್ಷಾತ್ ಭಗವಾನ್ ವಿಷ್ಣುವೇ ಆಗಿರುವನು. ॥ ೩೧ ॥ ನೀವುಗಳು ಸತ್ಪುರುಷರಿಗೆ ಪರಮಪವಿತ್ರವೂ, ಸನಾತನ ಮಾರ್ಗವೂ ಆದ ವೇದವನ್ನು ನಿಂದಿಸುತ್ತಿರುವಿರಿ. ಆದ್ದರಿಂದ ನೀವು ಭೂತಗಳಿಗೆ ಅಧಿಪತಿಯಾಗಿರುವ, ನಿಮ್ಮ ಇಷ್ಟದೇವನು ವಾಸಿಸುವ ಪಾಷಂಡ ಮಾರ್ಗಕ್ಕೆ ಹೊರಟುಹೋಗಿರಿ. ॥ ೩೨ ॥

ಶ್ರೀಮೈತ್ರೇಯರು ಹೇಳುತ್ತಾರೆ – ವಿದುರನೇ! ಭೃಗುಮುನಿಗಳು ಹೀಗೆ ಶಪಿಸಿದಾಗ ಭಗವಾನ್ ಶಂಕರನು ಸ್ವಲ್ಪ ಖೇದಗೊಂಡವನಂತೆ ತನ್ನ ಅನುಯಾಯಿಗಳೊಡನೆ ಅಲ್ಲಿಂದ ಹೊರಟುಹೋದನು. ॥ ೩೩ ॥ ಪ್ರಜಾಪತಿಗಳು ಆಚರಿಸುತ್ತಿದ್ದ ಆ ಯಜ್ಞದ ಅವಧಿ ಒಂದುಸಾವಿರ ವರ್ಷಗಳಾಗಿದ್ದಿತು. ಅದರಲ್ಲಿ ಉಪಾಸ್ಯದೇವತೆಯಾದರೋ ಪುರುಷೋತ್ತಮ ಶ್ರೀಹರಿಯೇ ಆಗಿದ್ದನು. ಅಂತಹ ಯಜ್ಞವನ್ನು ಮುಗಿಸಿ ಆ ಪ್ರಜಾಪತಿಗಳು ಗಂಗಾ-ಯಮುನಾ ಸಂಗಮಸ್ಥಳದಲ್ಲಿ ಅವಭೃಥಸ್ನಾನಮಾಡಿ ಪ್ರಸನ್ನವಾದ ಮನಸ್ಸಿನಿಂದ ತಮ್ಮ-ತಮ್ಮ ಸ್ಥಾನಗಳಿಗೆ ಹೊರಟುಹೋದರು. ॥ ೩೪-೩೫ ॥

ಎರಡನೆಯ ಅಧ್ಯಾಯವು ಮುಗಿಯಿತು. ॥ ೨ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಚತುರ್ಥಸ್ಕಂಧೇ
ದಕ್ಷಶಾಪೋ ನಾಮ ದ್ವಿತೀಯೋಽಧ್ಯಾಯಃ ॥ ೨ ॥

ಮೂರನೆಯ ಅಧ್ಯಾಯ

ಸತೀದೇವಿಯು ತಂದೆಯು ಮಾಡುತ್ತಿದ್ದ ಯಜ್ಞೋತ್ಸವಕ್ಕೆ ಹೋಗಬೇಕೆಂದು ಹಠಮಾಡಿದುದು

ಮೈತ್ರೇಯ ಉವಾಚ

ಸದಾ ವಿದ್ವಿಷತೋರೇವಂ ಕಾಲೋ ವೈ ಧ್ರಿಯಮಾಣಯೋಃ ।
ಜಾಮಾತುಃ ಶ್ವಶುರಸ್ಯಾಪಿ ಸುಮಹಾನತಿಚಕ್ರಮೇ ॥ ೧ ॥

ಯದಾಭಿಷಿಕ್ತೋ ದಕ್ಷಸ್ತು ಬ್ರಹ್ಮಣಾ ಪರಮೇಷ್ಠಿನಾ ।
ಪ್ರಜಾಪತೀನಾಂ ಸರ್ವೇಷಾಮಾಧಿಪತ್ಯೇ ಸ್ಮಯೋಽಭವತ್ ॥ ೨ ॥

ಇಷ್ಟ್ವಾ ಸ ವಾಜಪೇಯೇನ ಬ್ರಹ್ಮಿಷ್ಠಾನಭಿಭೂಯ ಚ ।
ಬೃಹಸ್ಪತಿಸವಂ ನಾಮ ಸಮಾರೇಭೇ ಕ್ರತೂತ್ತಮಮ್ ॥ ೩ ॥

ತಸ್ಮಿನ್ ಬ್ರಹ್ಮರ್ಷಯಃ ಸರ್ವೇ ದೇವರ್ಷಿಪಿತೃದೇವತಾಃ ।
ಆಸನ್ ಕೃತಸ್ವಸ್ತ್ಯಯನಾಸ್ತತ್ಪತ್ನ್ಯಶ್ಚ ಸಭರ್ತೃಕಾಃ ॥ ೪ ॥

ತದುಪಶ್ರುತ್ಯ ನಭಸಿ ಖೇಚರಾಣಾಂ ಪ್ರಜಲ್ಪತಾಮ್ ।
ಸತೀ ದಾಕ್ಷಾಯಣೀ ದೇವೀ ಪಿತುರ್ಯಜ್ಞಮಹೋತ್ಸವಮ್ ॥ ೫ ॥

ವ್ರಜಂತೀಃ ಸರ್ವತೋ ದಿಗ್ಭ್ಯ ಉಪದೇವವರಸ್ತ್ರಿಯಃ ।
ವಿಮಾನಯಾನಾಃ ಸಪ್ರೇಷ್ಠಾ ನಿಷ್ಕಕಂಠೀಃ ಸುವಾಸಸಃ ॥ ೬ ॥

ದೃಷ್ಟ್ವಾ ಸ್ವನಿಲಯಾಭ್ಯಾಶೇ ಲೋಲಾಕ್ಷೀರ್ಮೃಷ್ಟಕುಂಡಲಾಃ ।
ಪತಿಂ ಭೂತಪತಿಂ ದೇವಮೌತ್ಸುಕ್ಯಾದಭ್ಯಭಾಷತ ॥ ೭ ॥

ಸತ್ಯುವಾಚ

ಪ್ರಜಾಪತೇಸ್ತೇ ಶ್ವಶುರಸ್ಯ ಸಾಂಪ್ರತಂ
ನಿರ್ಯಾಪಿತೋ ಯಜ್ಞಮಹೋತ್ಸವಃ ಕಿಲ ।
ವಯಂ ಚ ತತ್ರಾಭಿಸರಾಮ ವಾಮ ತೇ
ಯದ್ಯರ್ಥಿತಾಮೀ ವಿಬುಧಾ ವ್ರಜಂತಿ ಹಿ ॥ ೮ ॥

ತಸ್ಮಿನ್ಭಗಿನ್ಯೋ ಮಮ ಭರ್ತೃಭಿಃ ಸ್ವಕೈ-
ರ್ಧ್ರುವಂ ಗಮಿಷ್ಯಂತಿ ಸುಹೃದ್ದಿದೃಕ್ಷವಃ ।
ಅಹಂ ಚ ತಸ್ಮಿನ್ಭವತಾಭಿಕಾಮಯೇ
ಸಹೋಪನೀತಂ ಪರಿಬರ್ಹಮರ್ಹಿತುಮ್ ॥ ೯ ॥

ಶ್ರೀಮೈತ್ರೇಯರು ಹೇಳುತ್ತಾರೆ – ಎಲೈ ವಿದುರನೇ! ಹೀಗೆ ಮಾವ-ಅಳಿಯಂದಿರು ಪರಸ್ಪರ ವಿರೋಧವನ್ನು ಕಟ್ಟಿಕೊಂಡಿರುವಂತೆ ಬಹಳ ಕಾಲವು ಸಂದಿತು. ॥ ೧ ॥ ಇದೇ ಸಮಯದಲ್ಲಿ ಬ್ರಹ್ಮದೇವರು ದಕ್ಷನನ್ನು ಸಮಸ್ತ ಪ್ರಜಾಪತಿಗಳ ಅಧಿಪತಿಯಾಗಿಸಿದನು. ಇದರಿಂದ ಅವನ ಗರ್ವವು ಇನ್ನೂ ಹೆಚ್ಚಿತು. ॥ ೨ ॥ ಅವನು ಭಗವಾನ್ ಶಂಕರನೇ ಮುಂತಾದ ಬ್ರಹ್ಮನಿಷ್ಠರಿಗೆ ಯಜ್ಞಭಾಗವನ್ನು ಕೊಡದೆ, ಅವರನ್ನು ತಿರಸ್ಕರಿಸುತ್ತಾ ಮೊದಲಿಗೆ 'ವಾಜಪೇಯ' ಯಜ್ಞವನ್ನು ಮಾಡಿದನು. ಮತ್ತೆ 'ಬೃಹಸ್ಪತಿಸವ' ಎಂಬ ಮಹಾಯಜ್ಞವನ್ನು ಪ್ರಾರಂಭಿಸಿದನು. ॥ ೩ ॥ ಆ ಯಜ್ಞೋತ್ಸವದಲ್ಲಿ ಎಲ್ಲ ಬ್ರಹ್ಮರ್ಷಿಗಳೂ, ದೇವರ್ಷಿಗಳೂ, ಪಿತೃಗಳೂ, ದೇವತೆಗಳೂ ಮುಂತಾದವರು ತಮ್ಮ-ತಮ್ಮ ಪತ್ನಿಯರೊಂದಿಗೆ ದಯಮಾಡಿಸಿದರು. ಅವರೆಲ್ಲರೂ ಸೇರಿ ಅಲ್ಲಿ ಮಂಗಳಕಾರ್ಯಗಳನ್ನು ಸಂಪನ್ನಗೊಳಿಸಿದರು. ದಕ್ಷಪ್ರಜಾಪತಿಯು ಅವರೆಲ್ಲರನ್ನು ಹಾರ್ದಿಕವಾಗಿ ಸ್ವಾಗತಿಸಿದನು. ॥ ೪ ॥

ಅದೇ ಸಮಯದಲ್ಲಿ ಆಕಾಶಮಾರ್ಗವಾಗಿ ಹೋಗುತ್ತಿದ್ದ ದೇವತೆಗಳು ಆ ಯಜ್ಞದ ವಿಚಾರವಾಗಿಯೇ ಪರಸ್ಪರ ಚರ್ಚಿಸುತ್ತಿದ್ದರು. ಅವರ ಮಾತಿನ ಮೂಲಕವಾಗಿ ಸತೀದೇವಿಯು ತಂದೆಯ ಮನೆಯಲ್ಲಿ ನಡೆಯುತ್ತಿದ್ದ ಯಜ್ಞದ ಸಮಾಚಾರವನ್ನು ಕೇಳಿ ತಿಳಿದಳು. ॥ ೫ ॥ ತಮ್ಮ ವಾಸಸ್ಥಾನವಾದ ಕೈಲಾಸದ ಹತ್ತಿರವಾಗಿ ಎಲ್ಲ ಕಡೆಗಳಿಂದಲೂ ಚಂಚಲವಾದ ಕಣ್ಣುಗಳುಳ್ಳ ಗಂಧರ್ವಸ್ತ್ರೀಯರೂ, ಯಕ್ಷರ ಸ್ತ್ರೀಯರೂ ಥಳ-ಥಳಿಸುತ್ತಿರುವ ಕುಂಡಲಗಳನ್ನೂ, ಹಾರಗಳನ್ನೂ ಧರಿಸಿ ಚೆನ್ನಾಗಿ ಅಲಂಕರಿಸಿಕೊಂಡು ತಮ್ಮ-ತಮ್ಮ ಪತಿಗಳೊಡನೆ ವಿಮಾನಗಳಲ್ಲಿ ಕುಳಿತು ಆ ಯಜ್ಞೋತ್ಸವಕ್ಕೆ ಹೋಗುತ್ತಿರುವುದನ್ನು ಸತಿಯು ನೋಡಿದಳು. ಅದರಿಂದ ಆಕೆಗೂ ಯಜ್ಞಕ್ಕೆ ಹೋಗಬೇಕೆಂಬ ಕುತೂಹಲವುಂಟಾಗಿ, ಆಕೆಯು ತನ್ನ ಪತಿದೇವನಾದ ಭಗವಾನ್ ಭೂತನಾಥನಲ್ಲಿ ಪ್ರಾರ್ಥಿಸಿಕೊಂಡಳು. ॥ ೬-೭ ॥

ಸತೀದೇವಿಯು ಹೇಳಿದಳು – ಸ್ವಾಮಿ! ವಾಮದೇವರೇ! ಈಗ ನಿಮ್ಮ ಮಾವನಾದ ದಕ್ಷಪ್ರಜಾಪತಿಯ ಮನೆಯಲ್ಲಿ ಭಾರೀ ದೊಡ್ಡ ಯಜ್ಞೋತ್ಸವವು ನಡೆಯುತ್ತಿದೆ ಎಂದು ತಿಳಿಯಿತು. ನೋಡಿ, ಈ ದೇವತೆಗಳೆಲ್ಲರೂ ಅಲ್ಲಿಗೇ ಹೋಗುತ್ತಿದ್ದಾರೆ. ನೀವು ಇಷ್ಟಪಡುವುದಾದರೆ ನಾವೂ ಅದಕ್ಕೆ ಹೋಗೋಣ. ॥ ೮ ॥ ಆ ಸಮಯದಲ್ಲಿ ತಮ್ಮ ಆತ್ಮೀಯರನ್ನು ಭೆಟ್ಟಿಯಾಗಲು ನನ್ನ ಸೋದರಿಯರೂ ತಮ್ಮ-ತಮ್ಮ ಪತಿಗಳೊಡನೆ ಅಲ್ಲಿಗೆ ಅವಶ್ಯವಾಗಿ ಬರುವರು. ಅಲ್ಲಿಗೆ ನಿಮ್ಮೊಡನೆ ಹೋಗಿ ನನ್ನ ತಂದೆ-ತಾಯಿಗಳು ಕೊಡುವ ಒಡವೆ, ಉಡಿಗೆಗಳ ಉಡುಗೊರೆಯನ್ನು ಸ್ವೀಕರಿಸಬೇಕೆಂದು ನನಗೂ ಅನಿಸುತ್ತದೆ. ॥ ೯ ॥

ತತ್ರ ಸ್ವಸೄರ್ಮೇ ನನು ಭರ್ತೃಸಮ್ಮಿತಾ
ಮಾತೃಷ್ವಸೄಃ ಕ್ಲಿನ್ನಧಿಯಂ ಚ ಮಾತರಮ್ ।
ದ್ರಕ್ಷ್ಯೇ ಚಿರೋತ್ಕಂಠಮನಾ ಮಹರ್ಷಿಭಿ-
ರುನ್ನೀಯಮಾನಂ ಚ ಮೃಡಾಧ್ವರಧ್ವಜಮ್ ॥ ೧೦ ॥

ತ್ವಯ್ಯೇತದಾಶ್ಚರ್ಯಮಜಾತ್ಮಮಾಯಯಾ
ವಿನಿರ್ಮಿತಂ ಭಾತಿ ಗುಣತ್ರಯಾತ್ಮಕಮ್ ।
ತಥಾಪ್ಯಹಂ ಯೋಷಿದತತ್ತ್ವವಿಚ್ಚ ತೇ
ದೀನಾ ದಿದೃಕ್ಷೇ ಭವ ಮೇ ಭವಕ್ಷಿತಿಮ್ ॥ ೧೧ ॥

ಪಶ್ಯ ಪ್ರಯಾಂತೀರಭವಾನ್ಯಯೋಷಿತೋ-
ಽಪ್ಯಲಂಕೃತಾಃ ಕಾಂತಸಖಾ ವರೂಥಶಃ ।
ಯಾಸಾಂ ವ್ರಜದ್ಭಿಃ ಶಿತಿಕಂಠ ಮಂಡಿತಂ
ನಭೋ ವಿಮಾನೈಃ ಕಲಹಂಸಪಾಂಡುಭಿಃ ॥ ೧೨ ॥

ಕಥಂ ಸುತಾಯಾಃ ಪಿತೃಗೇಹಕೌತುಕಂ
ನಿಶಮ್ಯ ದೇಹಃ ಸುರವರ್ಯ ನೇಂಗತೇ ।
ಅನಾಹುತಾ ಅಪ್ಯಭಿಯಂತಿ ಸೌಹೃದಂ
ಭರ್ತುರ್ಗುರೋರ್ದೇಹಕೃತಶ್ಚ ಕೇತನಮ್ ॥ ೧೩ ॥

ತನ್ಮೇ ಪ್ರಸೀದೇದಮಮರ್ತ್ಯ ವಾಂಛಿತಂ
ಕರ್ತುಂ ಭವಾನ್ಕಾರುಣಿಕೋ ಬತಾರ್ಹತಿ ।
ತ್ವಯಾತ್ಮನೋಽರ್ಧೇಽಹಮದಭ್ರಚಕ್ಷುಷಾ
ನಿರೂಪಿತಾ ಮಾನುಗೃಹಾಣ ಯಾಚಿತಃ ॥ ೧೪ ॥

ಋಷಿರುವಾಚ

ಏವಂ ಗಿರಿತ್ರಃ ಪ್ರಿಯಯಾಭಿಭಾಷಿತಃ
ಪ್ರತ್ಯಭ್ಯಧತ್ತ ಪ್ರಹಸನ್ಸುಹೃತ್ಪ್ರಿಯಃ ।
ಸಂಸ್ಮಾರಿತೋ ಮರ್ಮಭಿದಃ ಕುವಾಗಿಷೂನ್
ಯಾನಾಹ ಕೋ ವಿಶ್ವಸೃಜಾಂ ಸಮಕ್ಷತಃ ॥ ೧೫ ॥

ಶ್ರೀಭಗವಾನುವಾಚ

ತ್ವಯೋದಿತಂ ಶೋಭನಮೇವ ಶೋಭನೇ
ಅನಾಹುತಾ ಅಪ್ಯಭಿಯಂತಿ ಬಂಧುಷು ।
ತೇ ಯದ್ಯನುತ್ಪಾದಿತದೋಷದೃಷ್ಟಯೋ
ಬಲೀಯಸಾನಾತ್ಮ್ಯಮದೇನ ಮನ್ಯುನಾ ॥ ೧೬ ॥

ಅಲ್ಲಿ ತಮ್ಮ ಪತಿಗಳಿಂದ ಸಮ್ಮಾನಿತರಾಗುವ ನನ್ನ ಸೋದರಿಯರು, ಚಿಕ್ಕಮ್ಮ-ದೊಡ್ಡಮ್ಮಂದಿರು, ಸ್ನೇಹದಿಂದ ನೆನೆದ ಮನಸ್ಸುಳ್ಳ ನನ್ನ ತಾಯಿ ಇವರೆಲ್ಲರನ್ನು ನೋಡಬೇಕೆಂದು ನನ್ನ ಮನಸ್ಸು ಬಹಳ ದಿನಗಳಿಂದ ಹಂಬಲಿಸುತ್ತಿದೆ. ಎಲೈ ಸುಖಕರನೇ! ಇದಲ್ಲದೆ ಅಲ್ಲಿಗೆ ಹೋದರೆ ಮಹರ್ಷಿಗಳು ರಚಿಸಿರುವ ಶ್ರೇಷ್ಠವಾದ ಯಜ್ಞವನ್ನೂ ಸಂದರ್ಶಿಸಬಹುದು. ॥ ೧೦ ॥ ಜನ್ಮರಹಿತರಾದ ಪ್ರಭುವೇ! ನೀವಾದರೋ ಜಗತ್ತಿನ ಉತ್ಪತ್ತಿಗೆ ಕಾರಣರಾದ ದೇವರು. ನಿಮ್ಮ ಮಾಯೆಯಿಂದ ರಚಿತವಾಗಿರುವ ಈ ತ್ರಿಗುಣಾತ್ಮಕವಾದ ಆಶ್ಚರ್ಯಮಯ ಈ ಜಗತ್ತು ನಿಮ್ಮಲ್ಲಿಯೇ ಪ್ರಕಾಶಿಸುತ್ತಿದೆ. ಆದರೆ ನಾನು ನಿಮ್ಮ ತತ್ತ್ವವನ್ನರಿಯದ ಹೆಣ್ಣು ಹೆಂಗಸು. ದೀನಳಾಗಿರುವ ನಾನು ಈಗ ನನ್ನ ಜನ್ಮಭೂಮಿಯನ್ನು ನೋಡಲು ತುಂಬಾ ಉತ್ಸುಕಳಾಗಿದ್ದೇನೆ. ॥ ೧೧ ॥ ಜನ್ಮಾದಿರಹಿತ ನೀಲಕಂಠಸ್ವಾಮಿಯೇ! ಅಲ್ಲಿ ನೋಡಿ! ಆ ಹೆಂಗಸರಲ್ಲಿ ಅನೇಕರಿಗೆ ದಕ್ಷನೊಡನೆ ಯಾವ ಸಂಬಂಧವೂ ಇಲ್ಲ. ಆದರೂ ಅವರು ತಮ್ಮ-ತಮ್ಮ ಪತಿಗಳೊಡನೆ ಗುಂಪು-ಗುಂಪಾಗಿ ಆ ಯಜ್ಞಕ್ಕೆ ಹೋಗುತ್ತಿದ್ದಾರೆ. ಅಲ್ಲಿಗೆ ಹೋಗುತ್ತಿರುವ ದೇವಾಂಗನೆಯರ ರಾಜಹಂಸಸದೃಶವಾದ ಬಿಳಿಯ ವಿಮಾನಗಳಿಂದ ಆಕಾಶಮಂಡಲವು ಹೇಗೆ ಶೋಭಾಯಮಾನವಾಗಿದೆ! ॥ ೧೨ ॥

ಎಲೈ ಸುರಶ್ರೇಷ್ಠರೇ! ಇಂತಹ ಸ್ಥಿತಿಯಲ್ಲಿ ತಂದೆಯ ಮನೆಯಲ್ಲಿ ಉತ್ಸವ ನಡೆಯುವ ಸಮಾಚಾರವನ್ನು ಕೇಳಿ ಅವನ ಮಗಳು ಅಲ್ಲಿಗೆ ಹೋಗಿ ಯಜ್ಞದಲ್ಲಿ ಭಾಗವಹಿಸಬೇಕೆಂದು ಹಾತೊರೆಯದೇ ಇರುವಳೇ? ಪತಿ, ಗುರುಗಳು, ತಂದೆ-ತಾಯಿಗಳು, ಗೆಳೆಯರು ಇವರ ಮನೆಗೆ ಕರೆಯದೆಯೂ ಹೋಗಬಹುದಲ್ಲ! ॥ ೧೩ ॥ ಆದುದರಿಂದ ಪತಿದೇವಾ! ನನ್ನ ಮೇಲೆ ಪ್ರಸನ್ನರಾಗಿ ನನ್ನ ಈ ಬಯಕೆಯನ್ನು ಅವಶ್ಯವಾಗಿ ಈಡೇರಿಸಬೇಕು. ನೀವು ತುಂಬಾ ಕರುಣಾಮಯರು. ಅದರಿಂದಲೇ ಪರಮಜ್ಞಾನಿಗಳಿದ್ದರೂ ನಿಮ್ಮ ದೇಹದ ಅರ್ಧಭಾಗದಲ್ಲಿ ನನಗೆ ಸ್ಥಾನವನ್ನು ಕರುಣಿಸಿದ್ದೀರಿ. ನನ್ನ ಈ ಬೇಡಿಕೆಯನ್ನು ಗಮನಿಸಿ ನನ್ನನ್ನು ಅನುಗ್ರಹಿಸಿರಿ. ॥ ೧೪ ॥

ಶ್ರೀಮೈತ್ರೇಯರು ಹೇಳುತ್ತಾರೆ – ಪ್ರಿಯ ಸತೀದೇವಿಯು ಹೀಗೆ ಪ್ರಾರ್ಥಿಸಿದಾಗ, ಸ್ನೇಹಿತರಿಗೂ, ಆತ್ಮೀಯರಿಗೂ ಪ್ರಿಯವನ್ನು ಉಂಟುಮಾಡುವ ಭಗವಾನ್ ಶಂಕರನಿಗೆ ದಕ್ಷಪ್ರಜಾಪತಿಯು ಸಮಸ್ತ ಪ್ರಜಾಪತಿಗಳ ಎದುರಿಗೆ ಹಿಂದೆ ಆಡಿದ ಆ ಮರ್ಮಭೇದಕವಾದ ದುರ್ವಚನರೂಪವಾದ ವಾಗ್ಬಾಣಗಳು ನೆನಪಾಗಿ, ನಗುತ್ತಾ ಹೀಗೆಂದನು – ॥ ೧೫ ॥

ಶ್ರೀಭಗವಾನ್ ಶಂಕರನು ಹೇಳಿದನು – ಎಲೈ ಸುಂದರಿಯೇ! 'ಬಂಧುಗಳ ಮನೆಗೆ ಆಹ್ವಾನವಿಲ್ಲದೆಯೂ ಹೋಗಬಹುದು' ಎಂದು ನೀನು ಹೇಳಿದ ಮಾತೇನೋ ಸಮೀಚೀನವಾಗಿದೆ. ಆದರೆ ಆ ಬಂಧುಗಳ ದೃಷ್ಟಿಯು ಅತಿಪ್ರಬಲವಾದ ದೇಹಾಭಿಮಾನದಿಂದ ಉಂಟಾದ ಮದ ಮತ್ತು ಕ್ರೋಧಗಳಿಂದ ದ್ವೇಷವೆಂಬ ದೋಷದಿಂದ ಕೂಡಿರದಿದ್ದರೆ ಮಾತ್ರ ಹಾಗೆ ಮಾಡಬೇಕು. ॥ ೧೬ ॥ ವಿದ್ಯೆ, ತಪಸ್ಸು, ಸಂಪತ್ತು, ಸುದೃಢಶರೀರ, ಯೌವನದ ವಯಸ್ಸು, ಉಚ್ಚವಾದ ಕುಲ – ಇವು ಆರು ಸತ್ಪುರುಷರಲ್ಲಿ ಗುಣಗಳಾಗಿ ಶೋಭಿಸುವುವು.

ವಿದ್ಯಾತಪೋವಿತ್ತವಪುರ್ವಯಃಕುಲೈಃ
ಸತಾಂ ಗುಣೈಃ ಷಡ್ಭಿರಸತ್ತಮೇತರೈಃ ।
ಸ್ಮೃತೌ ಹತಾಯಾಂ ಭೃತಮಾನದುರ್ದೃಶಃ
ಸ್ತಬ್ಧಾ ನ ಪಶ್ಯಂತಿ ಹಿ ಧಾಮ ಭೂಯಸಾಮ್ ॥ ೧೭ ॥

ನೈತಾದೃಶಾನಾಂ ಸ್ವಜನವ್ಯಪೇಕ್ಷಯಾ
ಗೃಹಾನ್ಪ್ರತೀಯಾದನವಸ್ಥಿತಾತ್ಮನಾಮ್ ।
ಯೇಽಭ್ಯಾಗತಾನ್ವಕ್ರಧಿಯಾಭಿಚಕ್ಷತೇ
ಆರೋಪಿತಭ್ರೂಭಿರಮರ್ಷಣಾಕ್ಷಿಭಿಃ ॥ ೧೮ ॥

ತಥಾರಿಭಿರ್ನ ವ್ಯಥತೇ ಶಿಲೀಮುಖೈಃ
ಶೇತೇಽರ್ದಿತಾಂಗೋ ಹೃದಯೇನ ದೂಯತಾ ।
ಸ್ವಾನಾಂ ಯಥಾ ವಕ್ರಧಿಯಾಂ ದುರುಕ್ತಿಭಿ-
ರ್ದಿವಾನಿಶಂ ತಪ್ಯತಿ ಮರ್ಮತಾಡಿತಃ ॥ ೧೯ ॥

ವ್ಯಕ್ತಂ ತ್ವಮುತ್ಕೃಷ್ಟಗತೇಃ ಪ್ರಜಾಪತೇಃ
ಪ್ರಿಯಾಽಽತ್ಮಜಾನಾಮಸಿ ಸುಭ್ರು ಸಮ್ಮತಾ ।
ಅಥಾಪಿ ಮಾನಂ ನ ಪಿತುಃ ಪ್ರಪತ್ಸ್ಯಸೇ
ಮದಾಶ್ರಯಾತ್ಕಃ ಪರಿತಪ್ಯತೇ ಯತಃ ॥ ೨೦ ॥

ಪಾಪಚ್ಯಮಾನೇನ ಹೃದಾಽಽತುರೇಂದ್ರಿಯಃ
ಸಮೃದ್ಧಿಭಿಃ ಪೂರುಷಬುದ್ಧಿಸಾಕ್ಷಿಣಾಮ್ ।
ಅಕಲ್ಪ ಏಷಾಮಧಿರೋಢುಮಂಜಸಾ
ಪರಂ ಪದಂ ದ್ವೇಷ್ಟಿ ಯಥಾಸುರಾ ಹರಿಮ್ ॥ ೨೧ ॥

ಪ್ರತ್ಯುದ್ಗಮಪ್ರಶ್ರಯಣಾಭಿವಾದನಂ
ವಿಧೀಯತೇ ಸಾಧು ಮಿಥಃ ಸುಮಧ್ಯಮೇ ।
ಪ್ರಾಜ್ಞೈಃ ಪರಸ್ಮೈ ಪುರುಷಾಯ ಚೇತಸಾ
ಗುಹಾಶಯಾಯೈವ ನ ದೇಹಮಾನಿನೇ ॥ ೨೨ ॥

ಸತ್ತ್ವಂ ವಿಶುದ್ಧಂ ವಸುದೇವಶಬ್ದಿತಂ
ಯದೀಯತೇ ತತ್ರ ಪುಮಾನಪಾವೃತಃ ।
ಸತ್ತ್ವೇ ಚ ತಸ್ಮಿನ್ಭಗವಾನ್ವಾಸುದೇವೋ
ಹ್ಯಧೋಕ್ಷಜೋ ಮೇ ನಮಸಾ ವಿಧೀಯತೇ ॥ ೨೩ ॥

ಆದರೆ ನೀಚರಾದ ಪುರುಷನಲ್ಲಿ ಅವೇ ಅವಗುಣಗಳಾಗಿ ಬಿಡುವುವು. ಏಕೆಂದರೆ, ಅವರಿಂದ ಅವನ ಗರ್ವವು ಹೆಚ್ಚುವುದು. ದೃಷ್ಟಿಯು ದೋಷಯುಕ್ತವಾಗುವುದು. ವಿವೇಕಶಕ್ತಿಯು ನಾಶವಾಗುವುದು. ಆದ್ದರಿಂದ ಅವರು ಮಹಾಪುರುಷರ ಪ್ರಭಾವವನ್ನು ನೋಡಲಾರರು. ॥ ೧೭ ॥ ಇದರಿಂದಲೇ ತಮ್ಮ ಬಳಿಗೆ ಬಂದ ಮನುಷ್ಯನನ್ನು ಕುಟಿಲಬುದ್ಧಿಯಿಂದ ಹುಬ್ಬುಗಂಟುಹಾಕಿಕೊಂಡು ಸಿಟ್ಟುಗೊಂಡ ದೃಷ್ಟಿಯಿಂದ ನೋಡುವಂತಹ ಅವ್ಯವಸ್ಥಿತಚಿತ್ತರಾದ ಜನರ ಮನೆಗೆ – 'ಇವರು ಎಷ್ಟಾದರೂ ನಮ್ಮ ಬಂಧುಗಳಲ್ಲವೇ!' ಎಂದು ತಿಳಿದು ಎಂದಿಗೂ ಹೋಗಬಾರದು. ॥ ೧೮ ॥ ದೇವೀ! ಕುಟಿಲಬುದ್ಧಿಯುಳ್ಳ ಬಂಧುಗಳ ಕುಟಿಲವಾದ ಚುಚ್ಚುಮಾತುಗಳಿಂದ ಉಂಟಾಗುವಷ್ಟು ನೋವು ಶತ್ರುಗಳ ಬಾಣಗಳು ಚುಚ್ಚಿದರೂ ಆಗುವುದಿಲ್ಲ. ಬಾಣಗಳು ಚುಚ್ಚಿದ ನೋವನ್ನಾದರೂ ಸಹಿಸಿಕೊಂಡು ನಿದ್ದೆ ಮಾಡಬಹುದು. ಆದರೆ ಕೆಟ್ಟಮಾತುಗಳು ಮರ್ಮಸ್ಥಾನಗಳನ್ನು ಭೇದಿಸಿದರೆ ಹಗಲೂ-ರಾತ್ರಿ ಮಾನಸಿಕ ಪೀಡೆಯಿಂದ ನರಳುತ್ತಿರಬೇಕಾಗುವುದು. ॥ ೧೯ ॥

ಸುಂದರೀ! ಪರಮೋನ್ನತಿಯನ್ನು ಪಡೆದಿರುವ ಆ ದಕ್ಷಪ್ರಜಾಪತಿಗೆ ಆತನ ಪುತ್ರಿಯರಲ್ಲಿ ನೀನು ಅತ್ಯಂತ ಪ್ರೀತಿಪಾತ್ರಳಾಗಿರುವೆ – ಎಂಬುದನ್ನು ನಾನು ಬಲ್ಲೆನು. ಆದರೂ ನೀನು ನನ್ನನ್ನು ಆಶ್ರಯಿಸಿರುವುದರಿಂದ ನಿನಗೆ ತಂದೆಯ ಮನ್ನಣೆ ಸಿಗಲಾರದು. ಏಕೆಂದರೆ, ಆತನಿಗೆ ನನ್ನಲ್ಲಿ ಮಿತಿಮೀರಿದ ಕಿಚ್ಚಿದೆ. ॥ ೨೦ ॥ ಅಹಂಕಾರಾದಿ ದೋಷಪೀಡಿತನಾಗಿ ಪ್ರಕೃತಿ-ಪುರುಷರ ತತ್ತ್ವಗಳ ಯಥಾರ್ಥಜ್ಞಾನವನ್ನು ತಿಳಿದಿರುವ ಸತ್ಪುರುಷರ ಸಮೃದ್ಧಿಯನ್ನು ಕಂಡು ಕರುಬುತ್ತಾ ಮನಸ್ಸು ಮತ್ತು ಇಂದ್ರಿಯಗಳಲ್ಲಿ ಸಂಕಟಪಡುವ ಕುಪುರುಷನಿಗೆ ಆ ಸತ್ಪುರುಷರ ಪದವಿಯಂತೂ ಸಿಗುವುದಿಲ್ಲ. ಆದರೆ ದೈತ್ಯಗಣಗಳು ಶ್ರೀಹರಿಯ ಮೇಲೆ ದ್ವೇಷವನ್ನು ಕಾರುವಂತೆ ಅವನು ಆ ಸತ್ಪುರುಷರ ಮೇಲೆ ದ್ವೇಷವನ್ನು ಕಾರುತ್ತಾ ಕೊರಗುತ್ತಿರುತ್ತಾನೆ, ಅಷ್ಟೆ! ॥ ೨೧ ॥

ಸುಂದರಾಂಗಿಯೇ! ನೀವು ಪ್ರಜಾಪತಿಗಳ ಸಭೆಯಲ್ಲಿ ನಮ್ಮ ತಂದೆಯನ್ನು ಏಕೆ ಆದರಿಸಲಿಲ್ಲ? ಎಂದು ನೀನು ನನ್ನನ್ನು ಕೇಳಬಹುದು. ಲೋಕವ್ಯವಹಾರದಲ್ಲಿ ಪರಸ್ಪರವಾಗಿ ಮುಂದೆ ಹೋಗಿ ವಿನಯ ತೋರುವುದು, ನಮಸ್ಕಾರ ಮಾಡುವುದು ಮುಂತಾದ ಕ್ರಿಯೆಗಳಿಂದ ಗೌರವವನ್ನು ಸೂಚಿಸುವರಲ್ಲವೆ? ತತ್ತ್ವಜ್ಞಾನಿಗಳು ಅದನ್ನೇ ಅತ್ಯುತ್ತಮ ರೀತಿಯಲ್ಲಿ ಮಾಡುತ್ತಾರೆ. ಅವರು ಆ ನಮಸ್ಕಾರಾದಿಗಳನ್ನು ಅಂತರ್ಯಾಮಿ ರೂಪದಲ್ಲಿ ಹೃದಯಗುಹೆಯಲ್ಲಿರುವ ಶ್ರೀವಾಸುದೇವನಿಗೇ ಮನಸ್ಸಿನಲ್ಲಿ ಸಮರ್ಪಿಸುತ್ತಾರೆ; ದೇಹಾಭಿಮಾನಿಯಾದ ಪುರುಷನಿಗೆ ಸಲ್ಲಿಸುವುದಿಲ್ಲ. ॥ ೨೨ ॥ ವಿಶುದ್ಧವಾದ ಸತ್ತ್ವ (ಅಂತಃಕರಣ)ದ ಹೆಸರು 'ವಸುದೇವ' ಎಂದಾಗಿದೆ. ಏಕೆಂದರೆ, ಅದರಲ್ಲಿಯೇ ಭಗವಂತನಾದ ಶ್ರೀವಾಸುದೇವನು ಪ್ರತ್ಯಕ್ಷವಾಗಿ ಆವಿರ್ಭವಿಸಿ ಅನುಭವಕ್ಕೆ ಬರುವನು. ಅಂತಹ ವಿಶುದ್ಧ ಚಿತ್ತದಲ್ಲಿ ನೆಲೆಸಿರುವ ಭಗವಂತನಾದ ಶ್ರೀವಾಸುದೇವನಿಗೇ ನಾನು ನಮಸ್ಕಾರಗಳನ್ನು ಮಾಡುತ್ತೇನೆ. ॥ ೨೩ ॥

ತತ್ತೇ ನಿರೀಕ್ಷ್ಯೋ ನ ಪಿತಾಪಿ ದೇಹಕೃದ್
ದಕ್ಷೋ ಮಮ ದ್ವಿಟ್ ತದನುವ್ರತಾಶ್ಚ ಯೇ ।
ಯೋ ವಿಶ್ವಸೃಗ್ಯಜ್ಞಗತಂ ವರೋರು ಮಾಮ್
ಅನಾಗಸಂ ದುರ್ವಚಸಾಕರೋತ್ತಿರಃ ॥ ೨೪ ॥

ಯದಿ ವ್ರಜಿಷ್ಯಸ್ಯತಿಹಾಯ ಮದ್ವಚೋ
ಭದ್ರಂ ಭವತ್ಯಾ ನ ತತೋ ಭವಿಷ್ಯತಿ ।
ಸಂಭಾವಿತಸ್ಯ ಸ್ವಜನಾತ್ಪರಾಭವೋ
ಯದಾ ಸ ಸದ್ಯೋ ಮರಣಾಯ ಕಲ್ಪತೇ ॥ ೨೫ ॥

ಆದುದರಿಂದ ಪ್ರಿಯೇ! ಆ ದಕ್ಷಪ್ರಜಾಪತಿಯು ನಿನಗೆ ಜನ್ಮವನ್ನು ಕೊಟ್ಟಿರುವ ತಂದೆಯೇ ಆಗಿದ್ದರೂ ನನ್ನನ್ನು ಮಿತಿಮೀರಿ ದ್ವೇಷಿಸುವ ಶತ್ರುವಾಗಿರುವುದರಿಂದ ನೀನು ಆತನನ್ನಾಗಲೀ, ಆತನ ಅನುಯಾಯಿಗಳನ್ನಾಗಲಿ ನೋಡುವ ವಿಚಾರವನ್ನೇ ಮಾಡಬಾರದು. ಆತನು ಪ್ರಜಾಪತಿಗಳ ಯಜ್ಞದಲ್ಲಿ ನಾನು ಯಾವುದೇ ಅಪರಾಧವನ್ನು ಮಾಡದಿದ್ದರೂ ನನ್ನನ್ನು ಕಟುವಾದ ಮಾತುಗಳಿಂದ ತಿರಸ್ಕರಿಸುತ್ತಿದ್ದಾನಲ್ಲ! ॥ ೨೪ ॥ ನನ್ನ ಮಾತನ್ನು ಮೀರಿ ನೀನು ಅಲ್ಲಿಗೆ ಹೋದರೆ ನಿನಗೆ ಖಂಡಿತವಾಗಿ ಒಳ್ಳೆಯದಾಗದು. ಏಕೆಂದರೆ, ಲೋಕದಲ್ಲಿ ಗೌರವಾನ್ವಿತ ಮನುಷ್ಯನಿಗೆ ಸ್ವಜನರಿಂದ ಏನಾದರೂ ಅಪಮಾನವು ಒದಗಿದರೆ ಅದು ಒಡನೆಯೇ ಅವನ ಮೃತ್ಯುವಿಗೆ ಕಾರಣವಾಗುವುದು. ॥ ೨೫ ॥

ಮೂರನೆಯ ಅಧ್ಯಾಯವು ಮುಗಿಯಿತು. ॥ ೩ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಚತುರ್ಥಸ್ಕಂಧೇ
ಉಮಾ-ರುದ್ರಸಂವಾದೇ ತೃತೀಯೋಽಧ್ಯಾಯಃ ॥ ೩ ॥

ನಾಲ್ಕನೆಯ ಅಧ್ಯಾಯ

ಸತೀದೇವಿಯ ಅಗ್ನಿಪ್ರವೇಶ

ಮೈತ್ರೇಯ ಉವಾಚ

ಏತಾವದುಕ್ತ್ವಾ ವಿರರಾಮ ಶಂಕರಃ
ಪತ್ನ್ಯಂಗನಾಶಂ ಹ್ಯುಭಯತ್ರ ಚಿಂತಯನ್ ।
ಸುಹೃದ್ದಿದೃಕ್ಷುಃ ಪರಿಶಂಕಿತಾ ಭವಾನ್
ನಿಷ್ಕ್ರಾಮತೀ ನಿರ್ವಿಶತೀ ದ್ವಿಧಾಽಽಸ ಸಾ ॥ ೧ ॥

ಶ್ರೀಮೈತ್ರೇಯರು ಹೇಳುತ್ತಾರೆ – ಎಲೈ ವಿದುರನೇ! ಸತೀದೇವಿಗೆ ಇಷ್ಟನ್ನು ಹೇಳಿ ಭಗವಾನ್ ಶಂಕರನು ಸುಮ್ಮನಾದನು. ದಕ್ಷನ ಮನೆಗೆ ಹೋಗಗೊಡುವುದು, ಅಥವಾ ತಡೆಯುವುದು ಎರಡೂ ಅವಸ್ಥೆಗಳಲ್ಲಿ ಸತಿಯ ಪ್ರಾಣತ್ಯಾಗದ ಸಂಭವವಿದೆ ಎಂದು ಅವನು ತಿಳಿದುಕೊಂಡನು. ಇತ್ತಕಡೆ ಸತೀದೇವಿಯೂ ಬಂಧುಗಳನ್ನು ನೋಡಬೇಕೆಂದು ಹೊರಗೆ ಹೋಗುವುದು ಮತ್ತು ಸ್ವಾಮಿಯಾದ ಶಂಕರನು ಕ್ರುದ್ಧನಾಗದಿರಲಿ ಎಂದು ಹಿಂದಿರುಗುವುದು ಹೀಗೆ ಯಾವುದನ್ನೂ ನಿಶ್ಚಯಿಸದೆ ಆಕೆಯು ಇಬ್ಬಂದಿಯಲ್ಲಿ ಸಿಲುಕಿ ಚಂಚಲಳಾದಳು. ॥ ೧ ॥

ಸುಹೃದ್ದಿದೃಕ್ಷಾಪ್ರತಿಘಾತದುರ್ಮನಾಃ
ಸ್ನೇಹಾದ್ರುದತ್ಯಶ್ರುಕಲಾತಿವಿಹ್ವಲಾ ।
ಭವಂ ಭವಾನ್ಯಪ್ರತಿಪೂರುಷಂ ರುಷಾ
ಪ್ರಧಕ್ಷ್ಯತೀವೈಕ್ಷತ ಜಾತವೇಪಥುಃ ॥ ೨ ॥

ತನ್ನ ಬಂಧುಗಳನ್ನು ಭೆಟ್ಟಿಯಾಗುವುದರಲ್ಲಿ ಬಾಧೆ ಉಂಟಾದ್ದರಿಂದ ಅವಳಿಗೆ ತುಂಬಾ ಖೇದವಾಯಿತು. ಬಂಧುಪ್ರೇಮದಿಂದ ಆಕೆಯ ಹೃದಯ ತುಂಬಿಬಂದು, ಕಣ್ಣುಗಳಲ್ಲಿ ನೀರನ್ನು ಸುರಿಸಿಕೊಂಡು ಅತ್ಯಂತ ವ್ಯಾಕುಲಳಾಗಿ ಅಳತೊಡಗಿದಳು. ಅವಳ ಶರೀರವು ಗಡಗಡನೆ ನಡುಗತೊಡಗಿತು. ಆಕೆಯು ಅಪ್ರತಿಮನಾದ ಭಗವಾನ್ ಶಂಕರನನ್ನು ಕೋಪದಿಂದ ಸುಟ್ಟುಬಿಡುವಳೋ ಎಂಬಂತೆ ದುರ-ದುರನೇ ನೋಡತೊಡಗಿದಳು. ॥ ೨ ॥

ತತೋ ವಿನಿಃಶ್ವಸ್ಯ ಸತೀ ವಿಹಾಯ ತಂ
ಶೋಕೇನ ರೋಷೇಣ ಚ ದೂಯತಾ ಹೃದಾ ।
ಪಿತ್ರೋರಗಾತ್ಸ್ತ್ರೈಣವಿಮೂಢಧೀರ್ಗೃಹಾನ್
ಪ್ರೇಮ್ಣಾಽಽತ್ಮನೋ ಯೋಽರ್ಧಮದಾತ್ಸತಾಂ ಪ್ರಿಯಃ ॥ ೩ ॥

ನಿಟ್ಟುಸಿರು ಬಿಡುತ್ತಾ ಸ್ತ್ರೀಸಹಜವಾದ ಅವಿವೇಕಕ್ಕೆ ಒಳಗಾಗಿ, ಶೋಕದಿಂದಲೂ, ಕೋಪದಿಂದಲೂ ಸಂತಾಪಗೊಂಡ ಮನಸ್ಸಿನಿಂದ ಆಕೆಯು ತನಗೆ ಪರಮಪ್ರೇಮದಿಂದ ಶರೀರದ ಅರ್ಧಭಾಗವನ್ನೇ ಕೊಟ್ಟಿದ್ದ ಸಜ್ಜನಪ್ರಿಯನಾದ ಭಗವಾನ್ ಶಂಕರನನ್ನು ಬಿಟ್ಟು ತೌರುಮನೆಯ ಕಡೆಗೆ ಹೊರಟೇಬಿಟ್ಟಳು. ॥ ೩ ॥

ತಾಮನ್ವಗಚ್ಛನ್ ದ್ರುತವಿಕ್ರಮಾಂ ಸತೀ-
ಮೇಕಾಂ ತ್ರಿನೇತ್ರಾನುಚರಾಃ ಸಹಸ್ರಶಃ ।
ಸಪಾರ್ಷದಾ ಯೇ ಮಣಿಮನ್ಮದಾದಯಃ
ಪುರೋವೃಷೇಂದ್ರಾಸ್ತರಸಾ ಗತವ್ಯಥಾಃ ॥ ೪ ॥

ತಾಂ ಸಾರಿಕಾಕಂದುಕದರ್ಪಣಾಂಬುಜ-
ಶ್ವೇತಾತಪತ್ರವ್ಯಜನಸ್ರಗಾದಿಭಿಃ ।
ಗೀತಾಯನೈರ್ದುಂದುಭಿಶಂಖವೇಣುಭಿ-
ರ್ವೃಷೇಂದ್ರಮಾರೋಪ್ಯ ವಿಟಂಕಿತಾ ಯಯುಃ ॥ ೫ ॥

ಆಬ್ರಹ್ಮಘೋಷೋರ್ಜಿತಯಜ್ಞವೈಶಸಂ
ವಿಪ್ರರ್ಷಿಜುಷ್ಟಂ ವಿಬುಧೈಶ್ಚ ಸರ್ವಶಃ ।
ಮೃದ್ದಾರ್ವಯಃಕಾಂಚನದರ್ಭಚರ್ಮಭಿ-
ರ್ನಿಸೃಷ್ಟಭಾಂಡಂ ಯಜನಂ ಸಮಾವಿಶತ್ ॥ ೬ ॥

ತಾಮಾಗತಾಂ ತತ್ರ ನ ಕಶ್ಚನಾದ್ರಿಯದ್
ವಿಮಾನಿತಾಂ ಯಜ್ಞಕೃತೋ ಭಯಾಜ್ಜನಃ ।
ಋತೇ ಸ್ವಸೄರ್ವೈ ಜನನೀಂ ಚ ಸಾದರಾಃ
ಪ್ರೇಮಾಶ್ರುಕಂಠ್ಯಃ ಪರಿಷಸ್ವಜುರ್ಮುದಾ ॥ ೭ ॥

ಸೌದರ್ಯಸಂಪ್ರಶ್ನಸಮರ್ಥವಾರ್ತಯಾ
ಮಾತ್ರಾ ಚ ಮಾತೃಷ್ವಸೃಭಿಶ್ಚ ಸಾದರಮ್ ।
ದತ್ತಾಂ ಸಪರ್ಯಾಂ ವರಮಾಸನಂ ಚ ಸಾ
ನಾದತ್ತ ಪಿತ್ರಾಪ್ರತಿನಂದಿತಾ ಸತೀ ॥ ೮ ॥

ಅರುದ್ರಭಾಗಂ ತಮವೇಕ್ಷ್ಯ ಚಾಧ್ವರಂ
ಪಿತ್ರಾ ಚ ದೇವೇ ಕೃತಹೇಲನಂ ವಿಭೌ ।
ಅನಾದೃತಾ ಯಜ್ಞಸದಸ್ಯಧೀಶ್ವರೀ
ಚುಕೋಪ ಲೋಕಾನಿವ ಧಕ್ಷ್ಯತೀ ರುಷಾ ॥ ೯ ॥

ಜಗರ್ಹ ಸಾಮರ್ಷವಿಪನ್ನಯಾ ಗಿರಾ
ಶಿವದ್ವಿಷಂ ಧೂಮಪಥಶ್ರಮಸ್ಮಯಮ್ ।
ಸ್ವತೇಜಸಾ ಭೂತಗಣಾನ್ಸಮುತ್ಥಿತಾನ್
ನಿಗೃಹ್ಯ ದೇವೀ ಜಗತೋಽಭಿಶೃಣ್ವತಃ ॥ ೧೦ ॥

ಹೀಗೆ ಒಡತಿಯು ಒಬ್ಬಂಟಿಗಳಾಗಿ ಹೆಚ್ಚಾದ ಸ್ಫೂರ್ತಿಯಿಂದ ಹೋಗುತ್ತಿರುವುದನ್ನು ಕಂಡು ಮಹಾದೇವನ ಪರಿವಾರಕ್ಕೆ ಸೇರಿದ ಮಣಿಮಂತ ಮತ್ತು ಮದ ಮುಂತಾದ ಸಾವಿರಾರು ಸೇವಕರು ಭಗವಂತನ ವಾಹನವಾದ ವೃಷಭವನ್ನು ಮುಂದಿಟ್ಟುಕೊಂಡು, ಇನ್ನೂ ಅನೇಕ ಪಾರ್ಷದರನ್ನೂ, ಯಕ್ಷರನ್ನೂ ಜೊತೆಯಲ್ಲಿ ಕರೆದುಕೊಂಡು ನಿರ್ಭಯರಾಗಿ ಮಹಾವೇಗದಿಂದ ಆಕೆಯನ್ನು ಹಿಂಬಾಲಿಸಿದರು. ॥ ೪ ॥ ಅವರು ಸತೀದೇವಿಯನ್ನು ವೃಷಭದ ಮೇಲೆ ಕುಳ್ಳಿರಿಸಿ, ಆಟದ ಅರಗಿಣಿ, ಚೆಂಡು, ಕನ್ನಡಿ, ಕಲಶ, ಕಮಲ, ಬೆಳ್ಗೊಡೆ, ಚಾಮರ, ಮಾಲೆಗಳೇ ಮುಂತಾದ ರಾಜಚಿಹ್ನೆಗಳನ್ನು ತೆಗೆದುಕೊಂಡು, ಶಂಖ, ಕೊಳಲು, ದುಂದುಭಿಗಳೇ ಮುಂತಾದ ವಾದ್ಯಗಳನ್ನು ಬಾರಿಸುತ್ತಾ ಗೌರವದಿಂದ ಕರೆದುಕೊಂಡು ಹೋದರು. ॥ ೫ ॥ ಹೀಗೆ ಪ್ರಯಾಣಮಾಡಿ ಸತೀದೇವಿಯು ತನ್ನ ಸಮಸ್ತ ಸೇವಕರೊಡನೆ ದಕ್ಷನ ಯಜ್ಞಶಾಲೆಯನ್ನು ಪ್ರವೇಶಿಸಿದಳು. ಅಲ್ಲಿ ಬ್ರಹ್ಮರ್ಷಿಗಳೂ, ದೇವತೆಗಳೂ ಎಲ್ಲೆಡೆಗಳಲ್ಲಿಯೂ ನೆರೆದಿದ್ದರು. ಋತ್ವಿಜರು ಗಂಭೀರವಾದ ವೇದಘೋಷವನ್ನು ಮಾಡುತ್ತಾ ಮಂತ್ರೋಚ್ಚಾರಣೆಯ ವೈಖರಿಯಲ್ಲಿ ಸ್ಪರ್ಧಿಸುತ್ತಿದ್ದರು. ಅಲ್ಲಿ ಮೃತ್ತಿಕೆ, ಮರ, ಕಬ್ಬಿಣ, ಚಿನ್ನ, ದರ್ಭೆ ಮತ್ತು ಚರ್ಮ ಇವುಗಳಿಂದ ರಚಿತವಾದ ಯಜ್ಞಪಾತ್ರೆಗಳು ಶಾಸ್ತ್ರವಿಧಿಗೆ ತಕ್ಕಂತೆ ಇರಿಸಲಾಗಿತ್ತು. ॥ ೬ ॥ ಸತೀದೇವಿಯು ಯಜ್ಞಶಾಲೆಯನ್ನು ಹೊಕ್ಕಾಗ ಯಜ್ಞದ ಯಜಮಾನನಾಗಿದ್ದ ದಕ್ಷನು ಆಕೆಯನ್ನು ತಿರಸ್ಕಾರದಿಂದಲೇ ನೋಡಿದನು. ಅದನ್ನು ಕಂಡು ಅವನಿಗೆ ಹೆದರಿದ ಇತರರೂ ಆಕೆಯನ್ನು ಆದರಿಸಲಿಲ್ಲ. ತಾಯಿ ಮತ್ತು ಸೋದರಿಯರು ಮಾತ್ರ ಆಕೆಯನ್ನು ಕಂಡು ಸಂತೋಷಗೊಂಡು ಪ್ರೇಮಾದರಗಳಿಂದ ಆಲಿಂಗಿಸಿಕೊಂಡರು. ॥ ೭ ॥ ಆದರೆ ತಂದೆಯು ಅಪಮಾನಮಾಡಿದ್ದರಿಂದ ಮನನೊಂದ ಆಕೆಯು ಸೋದರಿಯರ ಕುಶಲಪ್ರಶ್ನೆಯ ಸವಿಮಾತುಗಳನ್ನಾಗಲೀ, ತಾಯಿ-ಚಿಕ್ಕಮ್ಮ-ದೊಡ್ಡಮ್ಮಂದಿರು ಗೌರವಪೂರ್ವಕವಾಗಿ ಕೊಟ್ಟ ಬಳುವಳಿಯನ್ನಾಗಲೀ, ಶ್ರೇಷ್ಠವಾದ ಆಸನವನ್ನಾಗಲೀ, ಯಾವುದನ್ನೂ ಸ್ವೀಕರಿಸಲಿಲ್ಲ. ॥ ೮ ॥

ಸರ್ವಲೋಕೇಶ್ವರಿಯಾದ ಸತೀದೇವಿಗೆ ಯಜ್ಞಮಂಟಪದಲ್ಲಿ ತಿರಸ್ಕಾರವಾದದ್ದು ಮಾತ್ರವಲ್ಲದೇ, ಆಕೆಯ ಪತಿಗೂ ಅಪಚಾರವಾಗಿತ್ತು. ಹಾಗೆ ಭಗವಂತನಾದ ತನ್ನ ಪತಿಯಾದ ರುದ್ರನಿಗೆ ಯಜ್ಞದಲ್ಲಿ ಹವಿರ್ಭಾಗವನ್ನೇ ಕೊಡದೆ ದೊಡ್ಡ ದೈವಾಪರಾಧ ನಡೆದುದನ್ನು ಕಂಡು ಸತೀದೇವಿಯ ಕ್ರೋಧಜ್ವಾಲೆ ಭುಗಿಲೆದ್ದಿತು. ಆಗ ಆಕೆಯು ಇಡೀ ಲೋಕವನ್ನೇ ಕೋಪಾಗ್ನಿಯಿಂದ ಸುಟ್ಟುಬಿಡುವಳೋ ಎಂಬಂತೆ ಕಂಡುಬರುತ್ತಿದ್ದಳು. ॥ ೯ ॥ ದಕ್ಷನು ಕರ್ಮಮಾರ್ಗದ ಅಭ್ಯಾಸದಿಂದ ದುರಹಂಕಾರಿಯಾಗಿದ್ದನು. ಶಿವನನ್ನು ದ್ವೇಷಿಸುವ ಅವನನ್ನು ಕಂಡು ಸತಿಯ ಜೊತೆಗೆ ಬಂದ ಭೂತಗಣಗಳು ಅವನನ್ನು ಸಂಹರಿಸಲು ಸಿದ್ಧರಾದರು. ಆಗ ಸತೀದೇವಿಯು ತನ್ನ ತೇಜಸ್ಸಿನಿಂದ ಅವರನ್ನು ತಡೆಗಟ್ಟಿ, ಎಲ್ಲ ಜನರು ಕೇಳುವಂತೆ ಕೋಪಾವೇಶದಿಂದ ತೊದಲುವ ಬಿರುನುಡಿಗಳಿಂದ ತಂದೆಯಾದ ದಕ್ಷನನ್ನು ಸಂಬೋಧಿಸುತ್ತಾ ಇಂತೆಂದಳು. ॥ ೧೦ ॥

ಶ್ರೀದೇವ್ಯುವಾಚ

ನ ಯಸ್ಯ ಲೋಕೇಽಸ್ತ್ಯತಿಶಾಯನಃ ಪ್ರಿಯಃ
ತಥಾಪ್ರಿಯೋ ದೇಹಭೃತಾಂ ಪ್ರಿಯಾತ್ಮನಃ ।
ತಸ್ಮಿನ್ಸಮಸ್ತಾತ್ಮನಿ ಮುಕ್ತವೈರಕೇ
ಋತೇ ಭವಂತಂ ಕತಮಃ ಪ್ರತೀಪಯೇತ್ ॥ ೧೧ ॥

ದೋಷಾನ್ಪರೇಷಾಂ ಹಿ ಗುಣೇಷು ಸಾಧವೋ
ಗೃಹ್ಣಂತಿ ಕೇಚಿನ್ನ ಭವಾದೃಶಾ ದ್ವಿಜ ।
ಗುಣಾಂಶ್ಚ ಫಲ್ಗೂನ್ಬಹುಲೀಕರಿಷ್ಣವೋ
ಮಹತ್ತಮಾಸ್ತೇಷ್ವವಿದದ್ಭವಾನಘಮ್ ॥ ೧೨ ॥

ನಾಶ್ಚರ್ಯಮೇತದ್ಯದಸತ್ಸು ಸರ್ವದಾ
ಮಹದ್ವಿನಿಂದಾ ಕುಣಪಾತ್ಮವಾದಿಷು ।
ಸೇರ್ಷ್ಯಂ ಮಹಾಪೂರುಷಪಾದಪಾಂಸುಭಿ-
ರ್ನಿರಸ್ತತೇಜಸ್ಸು ತದೇವ ಶೋಭನಮ್ ॥ ೧೩ ॥

ಯದ್ದ್ವ್ಯಕ್ಷರಂ ನಾಮ ಗಿರೇರಿತಂ ನೃಣಾಂ
ಸಕೃತ್ಪ್ರಸಂಗಾದಘಮಾಶು ಹಂತಿ ತತ್ ।
ಪವಿತ್ರಕೀರ್ತಿಂ ತಮಲಂಘ್ಯಶಾಸನಂ
ಭವಾನಹೋ ದ್ವೇಷ್ಟಿ ಶಿವಂ ಶಿವೇತರಃ ॥ ೧೪ ॥

ಯತ್ಪಾದಪದ್ಮಂ ಮಹತಾಂ ಮನೋಽಲಿಭಿ-
ರ್ನಿಷೇವಿತಂ ಬ್ರಹ್ಮರಸಾಸವಾರ್ಥಿಭಿಃ ।
ಲೋಕಸ್ಯ ಯದ್ವರ್ಷತಿ ಚಾಶಿಷೋಽರ್ಥಿನ-
ಸ್ತಸ್ಮೈ ಭವಾನ್ದ್ರುಹ್ಯತಿ ವಿಶ್ವಬಂಧವೇ ॥ ೧೫ ॥

ಕಿಂ ವಾ ಶಿವಾಖ್ಯಮಶಿವಂ ನ ವಿದುಸ್ತ್ವದನ್ಯೇ
ಬ್ರಹ್ಮಾದಯಸ್ತಮವಕೀರ್ಯ ಜಟಾಃ ಶ್ಮಶಾನೇ ।
ತನ್ಮಾಲ್ಯಭಸ್ಮನೃಕಪಾಲ್ಯವಸತ್ಪಿಶಾಚೈ-
ರ್ಯೇ ಮೂರ್ಧಭಿರ್ದಧತಿ ತಚ್ಚರಣಾವಸೃಷ್ಟಮ್ ॥ ೧೬ ॥

ಸತೀದೇವಿಯು ಹೇಳಿದಳು – ಎಲೈ ತಂದೆಯೇ! ಜಗದೀಶ್ವರನಾದ ಶಂಕರನ ಮಹಿಮೆಯನ್ನು ನೀನೇನು ಬಲ್ಲೆ? ಆತನಿಂದ ಮಿಗಿಲಾದವರು ಲೋಕದಲ್ಲಿ ಯಾರೂ ಇಲ್ಲ. ಎಲ್ಲ ದೇಹಿಗಳಿಗೂ ಪ್ರಿಯನಾಗಿರುವ ಆತ್ಮಸ್ವರೂಪನವನು. ಸಮದರ್ಶನನಾದ ಅವನಿಗೆ ಯಾರೂ ಪ್ರಿಯರೂ ಇಲ್ಲ, ಅಪ್ರಿಯರೂ ಇಲ್ಲ. ಯಾವ ಪ್ರಾಣಿಗಳಲ್ಲೂ ವೈರವಿಲ್ಲದ ಶಾಂತಮೂರ್ತಿಯು ಅವನು. ಅಂತಹ ಮಹಾತ್ಮನನ್ನು ನಿನ್ನೊಬ್ಬನ ಹೊರತಾಗಿ ಬೇರೆ ಯಾರು ತಾನೇ ವಿರೋಧಿಸಿಯಾರು? ॥ ೧೧ ॥ ಎಲೈ ದ್ವಿಜವರನೇ! ನಿನ್ನಂತಹವರು ಬೇರೆಯವರ ಗುಣಗಳಲ್ಲಿಯೂ ದೋಷವನ್ನೇ ನೋಡುತ್ತಾರೆ. ಆದರೆ ಯಾರೇ ಸಾಧು-ಸತ್ಪುರುಷರು ಹೀಗೆ ಮಾಡುವುದಿಲ್ಲ. ಬೇರೆಯವರ ದೋಷಗಳನ್ನು ನೋಡುವುದು ದೂರವುಳಿಯಿತು. ಬೇರೆಯವರ ಅಲ್ಪವಾದ ಗುಣವನ್ನೂ ಕೂಡ ದೊಡ್ಡದಾಗಿ ನೋಡುವವರೇ ನಿಜವಾಗಿ ಎಲ್ಲರಿಗಿಂತ ದೊಡ್ಡವರು. ಆದರೆ ನೀನು ಅಂತಹ ಮಹಾಪುರುಷರಲ್ಲಿಯೂ ಅಪರಾಧವನ್ನಾಗಿ, ದೋಷಾರೋಪಣೆ ಮಾಡಿರುವೆ. ॥ ೧೨ ॥ ಶವಸಮಾನವಾಗಿರುವ ಈ ಜಡದೇಹವನ್ನೇ ಆತ್ಮವೆಂದು ಸದಾ ಭಾವಿಸುವ ದುಷ್ಟರು ಅಸೂಯೆಯಿಂದ ಮಹಾತ್ಮರನ್ನು ಸದಾ ನಿಂದಿಸುತ್ತಿದ್ದರೂ ಅದರಲ್ಲಿ ಆಶ್ಚರ್ಯವೇನಿಲ್ಲ. ಆ ಮಹಾತ್ಮರು ಅದನ್ನು ಮನಸ್ಸಿಗೆ ಹಚ್ಚಿಕೊಳ್ಳುವುದಿಲ್ಲ. ಆದರೆ ಆ ಸಾಧುಶ್ರೇಷ್ಠರ ಪಾದಧೂಳಿಯೇ ದುಷ್ಟರ ತೇಜಸ್ಸನ್ನು ನಾಶಪಡಿಸುವುದು. ಆದುದರಿಂದ ಮಹಾಪುರುಷರ ನಿಂದೆಯಂತಹ ನೀಚಕಾರ್ಯವು ಆ ದುಷ್ಟಪುರುಷರಿಗೆ ಮಾತ್ರವೇ ಶೋಭಿಸುತ್ತದೆ. ॥ ೧೩ ॥ 'ಶಿವ' ಎಂಬ ಎರಡು ಅಕ್ಷರಗಳ ನಾಮವು ಪ್ರಾಸಂಗಿಕವಾಗಿ ಒಮ್ಮೆ ಬಾಯಿಂದ ಬಂದರೂ ಮನುಷ್ಯರ ಸಮಸ್ತ ಪಾಪಗಳೂ ಒಡನೆಯೇ ನಾಶವಾಗಿಬಿಡುವುವೋ, ಯಾರ ಆಜ್ಞೆಯನ್ನು ಯಾರೂ ಉಲ್ಲಂಘಿಸಲಾರರೋ ಅಂತಹ ಪವಿತ್ರಕೀರ್ತಿಯಾದ ಪರಮೇಶ್ವರನನ್ನೇ ನೀನು ದ್ವೇಷಿಸುತ್ತಿರುವೆಯಲ್ಲ, ಅಯ್ಯೋ! ಮಂಗಳಮಯನಾದ ಶಿವನನ್ನು ದ್ವೇಷಿಸುವ ನೀನು ಅಮಂಗಳನೇ ಸರಿ. ॥ ೧೪ ॥ ಅಯ್ಯಾ! ಮಹಾಪುರುಷರ ಮನಸ್ಸೆಂಬ ಮಧುಕರಗಳು ಬ್ರಹ್ಮಾನಂದಮಯ ರಸವನ್ನು ಪಾನಮಾಡುವ ಇಚ್ಛೆಯಿಂದ ಯಾರ ಚರಣಕಮಲಗಳನ್ನು ನಿರಂತರ ಸೇವಿಸುತ್ತಿರುವವೋ, ಯಾರ ಚರಣಾರವಿಂದಗಳು ಸಕಾಮ ಪುರುಷರು ಬಯಸಿದ ಭೋಗಗಳನ್ನೂ ನೀಡುತ್ತವೆಯೋ, ಅಂತಹ ವಿಶ್ವಬಂಧು ಭಗವಾನ್ ಶಿವನಲ್ಲಿ ನೀನು ವೈರವನ್ನು ಸಾಧಿಸುತ್ತಿರುವೆಯಲ್ಲ! ॥ ೧೫ ॥

'ಈತನು ಹೆಸರಿಗೆ ಮಾತ್ರ ಶಿವನು. ಆದರೆ ರೂಪ, ಗುಣ, ವೇಷ ಮುಂತಾದವುಗಳಲ್ಲೆಲ್ಲ ಈತನು ಅಶಿವನೇ (ಅಮಂಗಳನೇ) ಆಗಿದ್ದಾನೆ' ಎಂದು ನೀನು ಶಿವನನ್ನು ನಿಂದಿಸಿದೆಯಲ್ಲ! ನೀನು ಹೇಳಿದ ಈ ತತ್ತ್ವವು ನಿನ್ನಿಂದ ಹೊರತು ಬಹುಶಃ ಬೇರೆ ಯಾವ ದೇವತೆಗಳಿಗೂ ತಿಳಿದಿಲ್ಲವೆಂದು ಕಾಣುತ್ತದೆ. ಅದಕ್ಕಾಗಿಯೇ ಬ್ರಹ್ಮಾದಿ ದೇವತೆಗಳು – ಸ್ಮಶಾನದಲ್ಲಿರುತ್ತಾ, ನರಮುಂಡಗಳ ಮಾಲೆ, ಚಿತಾಭಸ್ಮ ಮತ್ತು ಮೂಳೆಗಳನ್ನು ಧರಿಸಿ, ಜಟೆಗಳನ್ನು ಕೆದರಿಕೊಂಡು, ಭೂತ-ಪಿಶಾಚಿಗಳೊಂದಿಗೆ ವಾಸಮಾಡುವ ಭಗವಾನ್ ಶಿವನ ಪಾದಗಳಿಂದ ಉದುರಿದ ನಿರ್ಮಾಲ್ಯವನ್ನು ತಮ್ಮ ತಲೆಯಲ್ಲಿ ಧರಿಸಿಕೊಳ್ಳುತ್ತಾರೆ. ॥ ೧೬ ॥

ಕರ್ಣೌ ಪಿಧಾಯ ನಿರಯಾದ್ಯದಕಲ್ಪ ಈಶೇ
ಧರ್ಮಾವಿತರ್ಯಸೃಣಿಭಿರ್ನೃಭಿರಸ್ಯಮಾನೇ ।
ಛಿಂದ್ಯಾತ್ಪ್ರಸಹ್ಯ ರುಶತೀಮಸತೀಂ ಪ್ರಭುಶ್ಚೇತ್
ಜಿಹ್ವಾಮಸೂನಪಿ ತತೋ ವಿಸೃಜೇತ್ಸ ಧರ್ಮಃ ॥ ೧೭ ॥

ಸ್ವೇಚ್ಛಾಚಾರಿಗಳಾದ ಜನರು ಧರ್ಮಮರ್ಯಾದೆಯನ್ನು ರಕ್ಷಿಸುವ ಪೂಜ್ಯನಾದ ತನ್ನ ಸ್ವಾಮಿಯನ್ನು ನಿಂದಿಸಿದರೆ, ಅವನನ್ನು ದಂಡಿಸಲು ತನ್ನಲ್ಲಿ ಶಕ್ತಿ ಇಲ್ಲದಿದ್ದರೆ ಕಿವಿಗಳನ್ನು ಮುಚ್ಚಿಕೊಂಡು ಅಲ್ಲಿಂದ ಹೊರಟುಹೋಗಬೇಕು. ದಂಡಿಸಲು ಶಕ್ತಿಯಿದ್ದರೆ ಆ ದುಷ್ಟನನ್ನು ಬಲಾತ್ಕಾರವಾಗಿ ಹಿಡಿದು ಅಮಂಗಳವಾದ ನುಡಿಗಳನ್ನಾಡುವ ಅವನ ನಾಲಿಗೆಯನ್ನು ಕತ್ತರಿಸಿಹಾಕಬೇಕು. ಆ ಪಾಪವನ್ನು ತಡೆಗಟ್ಟುವುದಕ್ಕಾಗಿ ತನ್ನ ಪ್ರಾಣಗಳನ್ನೂ ತೊರೆಯಲು ಸಿದ್ಧನಾಗಬೇಕು. ಇದೇ ಧರ್ಮವಾಗಿದೆ. ॥ ೧೭ ॥

ಅತಸ್ತವೋತ್ಪನ್ನಮಿದಂ ಕಲೇವರಂ
ನ ಧಾರಯಿಷ್ಯೇ ಶಿತಿಕಂಠ ಗರ್ಹಿಣಃ ।
ಜಗ್ಧಸ್ಯ ಮೋಹಾದ್ಧಿ ವಿಶುದ್ಧಿ ಮಂಧಸೋ
ಜುಗುಪ್ಸಿತಸ್ಯೋದ್ಧರಣಂ ಪ್ರಚಕ್ಷತೇ ॥ ೧೮ ॥

ಅಪ್ಪಾ! ನೀನು ಭಗವಾನ್ ನೀಲಕಂಠನನ್ನೇ ನಿಂದಿಸುತ್ತಿರುವೆ. ಆದುದರಿಂದ ನಿನ್ನಿಂದ ಹುಟ್ಟಿದ ಈ ಶರೀರವನ್ನು ಇನ್ನು ನಾನು ಇಟ್ಟುಕೊಳ್ಳಲು ಬಯಸುವುದಿಲ್ಲ. ಯಾವುದಾದರೂ ನಿಂದಿತವಾದ ಪದಾರ್ಥವನ್ನು ತಿಳಿಯದೆ ತಿಂದುಬಿಟ್ಟರೆ, ಅದನ್ನು ವಾಂತಿಮಾಡಿ ಹೊರಕ್ಕೆ ತಳ್ಳಿಬಿಡುವುದೇ ಅದರ ಶುದ್ಧಿಯಾಗುವುದು ಎಂದು ಹೇಳಲಾಗಿದೆ. ॥ ೧೮ ॥

ನ ವೇದವಾದಾನನುವರ್ತತೇ ಮತಿಃ
ಸ್ವ ಏವ ಲೋಕೇ ರಮತೋ ಮಹಾಮುನೇಃ ।
ಯಥಾ ಗತಿರ್ದೇವಮನುಷ್ಯಯೋಃ ಪೃಥಕ್
ಸ್ವ ಏವ ಧರ್ಮೇ ನ ಪರಂ ಕ್ಷಿಪೇತ್ಸ್ಥಿತಃ ॥ ೧೯ ॥

ತಮ್ಮ ಆತ್ಮಸ್ವರೂಪದಲ್ಲೇ ಸದಾಕಾಲ ರಮಿಸುತ್ತಿರುವ ಮಹಾಮುನಿಗಳ ಬುದ್ಧಿಯು ವೇದಗಳಲ್ಲಿರುವ ವಿಧಿ-ನಿಷೇಧರೂಪವಾದ ವಾಕ್ಯಗಳನ್ನು ಅನುಸರಿಸುವುದಿಲ್ಲ. ದೇವತೆಗಳ ಮತ್ತು ಮನುಷ್ಯರ ಗತಿಗಳಲ್ಲಿ ಭೇದವಿರುವಂತೆ, ಜ್ಞಾನಿ ಮತ್ತು ಅಜ್ಞಾನಿಯ ಸ್ಥಿತಿ-ಗತಿಗಳಲ್ಲಿಯೂ ಭೇದವಿರುತ್ತದೆ. ಅದರಿಂದ ಮನುಷ್ಯರು ತಮ್ಮದೇ ಆದ ಧರ್ಮಮಾರ್ಗದಲ್ಲಿ ಸ್ಥಿರರಾಗಿದ್ದು ಬೇರೆಯವರ ಮಾರ್ಗವನ್ನು ಎಂದೂ ನಿಂದಿಸಬಾರದು. ॥ ೧೯ ॥

ಕರ್ಮ ಪ್ರವೃತ್ತಂ ಚ ನಿವೃತ್ತಮಪ್ಯೃತಂ
ವೇದೇ ವಿವಿಚ್ಯೋಭಯಲಿಂಗಮಾಶ್ರಿತಮ್ ।
ವಿರೋಧಿ ತದ್ಯೌಗಪದೈಕಕರ್ತರಿ
ದ್ವಯಂ ತಥಾ ಬ್ರಹ್ಮಣಿ ಕರ್ಮ ನರ್ಚ್ಛತಿ ॥ ೨೦ ॥

ಪ್ರವೃತ್ತಿ (ಯಜ್ಞ-ಯಾಗಾದಿ) ಮಾರ್ಗ ಮತ್ತು ನಿವೃತ್ತಿ (ಶಮ-ದಮಾದಿ ಅಧ್ಯಾತ್ಮ) ಮಾರ್ಗ – ಇವೆರಡೂ ವಿಧವಾದ ಕರ್ಮಗಳು ಸರಿಯಾಗಿವೆ. ವೇದಗಳಲ್ಲಿ ಅವುಗಳಿಗೆ ಬೇರೆ-ಬೇರೆ ಅಧಿಕಾರಿಗಳನ್ನು ಹೇಳಿದೆ. ಇವು ಪರಸ್ಪರ ವಿರುದ್ಧವಾಗಿರುವುದರಿಂದ ಎರಡೂ ಧರ್ಮಗಳನ್ನು ಒಬ್ಬನೇ ಮನುಷ್ಯನಿಂದ ಏಕಕಾಲದಲ್ಲಿ ಆಚರಿಸಲಾಗದು. ಭಗವಾನ್ ಶಂಕರನಾದರೋ ಪರಬ್ರಹ್ಮ ಪರಮಾತ್ಮನು. ಅವನಿಗೆ ಇವೆರಡರಲ್ಲಿ ಯಾವ ವಿಧದ ಕರ್ಮವನ್ನು ಮಾಡುವ ಅವಶ್ಯಕತೆ ಇಲ್ಲ. ॥ ೨೦ ॥

ಮಾ ವಃ ಪದವ್ಯಃ ಪಿತರಸ್ಮದಾಸ್ಥಿತಾ
ಯಾ ಯಜ್ಞಶಾಲಾಸು ನ ಧೂಮವರ್ತ್ಮಭಿಃ ।
ತದನ್ನತೃಪ್ತೈರಸುಭೃದ್ಭಿರೀಡಿತಾ
ಅವ್ಯಕ್ತಲಿಂಗಾ ಅವಧೂತಸೇವಿತಾಃ ॥ ೨೧ ॥

ಅಪ್ಪಾ! ನಮ್ಮ ಐಶ್ವರ್ಯ ಅವ್ಯಕ್ತವಾದುದು. ಅವಧೂತರಾದ ಜ್ಞಾನಿಶ್ರೇಷ್ಠರು ಮಾತ್ರ ಅದನ್ನು ಸೇವಿಸಬಲ್ಲರು. ನಿಮಗೆ ಅಂತಹ ಐಶ್ವರ್ಯವು ಎಲ್ಲಿಂದ ಬರಬೇಕು? ಯಜ್ಞಶಾಲೆಯಲ್ಲಿ ಸಿಕ್ಕುವ ಊಟದಿಂದ ತೃಪ್ತರಾಗಿ ಪ್ರಾಣಪೋಷಣ ಮಾಡುವಂತಹ ಕರ್ಮಠರಾದ ಉಂಡಾಡಿಗಳು ನಮ್ಮ ಅಕ್ಷಯವಾದ ಭಾಗ್ಯವನ್ನು ಹೇಗೆ ತಾನೇ ಹೊಗಳಿಯಾರು? ॥ ೨೧ ॥

ನೈತೇನ ದೇಹೇನ ಹರೇ ಕೃತಾಗಸೋ
ದೇಹೋದ್ಭವೇನಾಲಮಲಂ ಕುಜನ್ಮನಾ ।
ವ್ರೀಡಾ ಮಮಾಭೂತ್ಕುಜನಪ್ರಸಂಗತಃ
ತಜ್ಜನ್ಮ ಧಿಗ್ ಯೋ ಮಹತಾಮವದ್ಯಕೃತ್ ॥ ೨೨ ॥

ತಂದೆಯೇ! ನೀನು ಭಗವಾನ್ ಶಂಕರನಲ್ಲಿ ಅಪರಾಧವನ್ನು ಮಾಡಿರುವೆ. ಆದ್ದರಿಂದ ನಿನ್ನ ಶರೀರದಿಂದ ಉತ್ಪನ್ನವಾದ ಈ ನಿಂದನೀಯ ದೇಹವನ್ನು ಇರಿಸಿಕೊಂಡು ನಾನೇನು ಮಾಡಬೇಕಾಗಿದೆ? ನಿನ್ನಂತಹ ದುರ್ಜನ ವ್ಯಕ್ತಿಯ ಸಂಬಂಧವನ್ನು ಹೊಂದಿರುವುದಕ್ಕಾಗಿ ನನಗೆ ನಾಚಿಕೆಯಾಗುತ್ತಿದೆ. ಮಹಾಪುರುಷರ ಅಪರಾಧ ಮಾಡುವವನಿಂದ ಉಂಟಾದ ಜನ್ಮಕ್ಕೆ ಧಿಕ್ಕಾರವಿರಲಿ. ॥ ೨೨ ॥

ಗೋತ್ರಂ ತ್ವದೀಯಂ ಭಗವಾನ್ವೃಷಧ್ವಜೋ
ದಾಕ್ಷಾಯಣೀತ್ಯಾಹ ಯದಾ ಸುದುರ್ಮನಾಃ ।
ವ್ಯಪೇತನರ್ಮಸ್ಮಿತಮಾಶು ತದ್ಧ್ಯಹಂ
ವ್ಯುತ್ಸ್ರಕ್ಷ್ಯ ಏತತ್ಕುಣಪಂ ತ್ವದಂಗಜಮ್ ॥ ೨೩ ॥

ಮೈತ್ರೇಯ ಉವಾಚ

ಇತ್ಯಧ್ವರೇ ದಕ್ಷಮನೂದ್ಯ ಶತ್ರುಹನ್
ಕ್ಷಿತಾವುದೀಚೀಂ ನಿಷಸಾದ ಶಾಂತವಾಕ್ ।
ಸ್ಪೃಷ್ಟ್ವಾ ಜಲಂ ಪೀತದುಕೂಲಸಂವೃತಾ
ನಿಮೀಲ್ಯ ದೃಗ್ಯೋಗಪಥಂ ಸಮಾವಿಶತ್ ॥ ೨೪ ॥

ಕೃತ್ವಾ ಸಮಾನಾವನಿಲೌ ಜಿತಾಸನಾ
ಸೋದಾನಮುತ್ಥಾಪ್ಯ ಚ ನಾಭಿಚಕ್ರತಃ ।
ಶನೈರ್ಹೃದಿ ಸ್ಥಾಪ್ಯ ಧಿಯೋರಸಿ ಸ್ಥಿತಂ
ಕಂಠಾದ್ಭ್ರುವೋರ್ಮಧ್ಯಮನಿಂದಿತಾನಯತ್ ॥ ೨೫ ॥

ಏವಂ ಸ್ವದೇಹಂ ಮಹತಾಂ ಮಹೀಯಸಾ
ಮುಹುಃ ಸಮಾರೋಪಿತಮಂಕಮಾದರಾತ್ ।
ಜಿಹಾಸತೀ ದಕ್ಷರುಷಾ ಮನಸ್ವಿನೀ
ದಧಾರ ಗಾತ್ರೇಷ್ವನಿಲಾಗ್ನಿಧಾರಣಾಮ್ ॥ ೨೬ ॥

ತತಃ ಸ್ವಭರ್ತುಶ್ಚರಣಾಂಬುಜಾಸವಂ
ಜಗದ್ಗುರೋಶ್ಚಿಂತಯತೀ ನ ಚಾಪರಮ್ ।
ದದರ್ಶ ದೇಹೋ ಹತಕಲ್ಮಷಃ ಸತೀ
ಸದ್ಯಃ ಪ್ರಜಜ್ವಾಲ ಸಮಾಧಿಜಾಗ್ನಿನಾ ॥ ೨೭ ॥

ತತ್ಪಶ್ಯತಾಂ ಖೇ ಭುವಿ ಚಾದ್ಭುತಂ ಮಹದ್
ಹಾಹೇತಿ ವಾದಃ ಸುಮಹಾನಜಾಯತ ।
ಹಂತ ಪ್ರಿಯಾ ದೈವತಮಸ್ಯ ದೇವೀ
ಜಹಾವಸೂನ್ ಕೇನ ಸತೀ ಪ್ರಕೋಪಿತಾ ॥ ೨೮ ॥

ಅಹೋ ಅನಾತ್ಮ್ಯಂ ಮಹದಸ್ಯ ಪಶ್ಯತ
ಪ್ರಜಾಪತೇರ್ಯಸ್ಯ ಚರಾಚರಂ ಪ್ರಜಾಃ ।
ಜಹಾವಸೂನ್ಯದ್ವಿಮತಾಽಽತ್ಮಜಾ ಸತೀ
ಮನಸ್ವಿನೀ ಮಾನಮಭೀಕ್ಷ್ಣಮರ್ಹತಿ ॥ ೨೯ ॥

ಭಗವಂತನಾದ ಶಿವನು ನಿನ್ನೊಡನೆ ನನಗಿರುವ ಸಂಬಂಧವನ್ನು ನೆನೆಯುತ್ತಾ, ಹಾಸ್ಯಕ್ಕಾಗಿ – 'ದಾಕ್ಷಾಯಿಣೀ' ಎಂದು ನನ್ನನ್ನು ಕರೆದರೆ ಆಗ ಆ ನಗುವನ್ನು ಮರೆತು ನನಗೆ ನಾಚಿಕೆ ಮತ್ತು ದುಃಖವೇ ಆದೀತು. ಅದಕ್ಕಾಗಿ ಅದರ ಮೊದಲೇ ನಿನ್ನ ಅಂಗದಿಂದ ಉತ್ಪನ್ನವಾದ ಕುತ್ಸಿತವಾದ ಈ ದೇಹವನ್ನು ನಾನು ತೊರೆದು ಬಿಡುವೆನು. ॥ ೨೩ ॥

ಶ್ರೀಮೈತ್ರೇಯರು ಹೇಳುತ್ತಾರೆ – ಕಾಮಾದಿ ಶತ್ರುಗಳನ್ನು ಗೆದ್ದಿರುವ ವಿದುರನೇ! ಸತೀದೇವಿಯು ಯಜ್ಞಮಂಟಪದಲ್ಲಿ ದಕ್ಷನಿಗೆ ಹೀಗೆ ಹೇಳಿ ಮೌನವಾಗಿ ಉತ್ತರದಿಕ್ಕಿಗೆ ತಿರುಗಿಕೊಂಡು ನೆಲದಮೇಲೆ ಕುಳಿತುಬಿಟ್ಟಳು. ಶುದ್ಧಾಚಮನವನ್ನು ಮಾಡಿ ಹಳದಿ ಬಟ್ಟೆಯನ್ನು ಹೊದ್ದುಕೊಂಡು, ಕಣ್ಣುಗಳನ್ನು ಮುಚ್ಚಿಕೊಂಡು ದೇಹತ್ಯಾಗಮಾಡುವ ಸಂಕಲ್ಪದಿಂದ ಯೋಗಮಾರ್ಗದಲ್ಲಿ ಸ್ಥಿತಳಾದಳು. ॥ ೨೪ ॥ ಆಕೆಯು ಆಸನವನ್ನು ಸ್ಥಿರಗೊಳಿಸಿಕೊಂಡು ಪ್ರಾಣಾಯಾಮದ ಮೂಲಕ ಪ್ರಾಣ ಮತ್ತು ಅಪಾನವಾಯುಗಳನ್ನು ಸಮಗೊಳಿಸಿ ನಾಭಿಚಕ್ರದಲ್ಲಿ ನೆಲೆಗೊಳಿಸಿದಳು. ಉದಾನವಾಯುವನ್ನು ನಾಭಿಯಿಂದ ಮೇಲಕ್ಕೆ ಎಬ್ಬಿಸಿ ನಿಧಾನವಾಗಿ ಬುದ್ಧಿಯೊಡನೆ ಹೃದಯದಲ್ಲಿ ಸ್ಥಾಪಿಸಿದಳು. ಅನಂತರ ಆ ಮಹಾಯೋಗಿನಿಯು ಹೃದಯಸ್ಥಿತ ವಾಯುವನ್ನು ಕಂಠಮಾರ್ಗದಿಂದ ಭ್ರುಕುಟಿಯ ನಡುವಿಗೆ ಒಯ್ದಳು. ॥ ೨೫ ॥ ಈ ರೀತಿಯಲ್ಲಿ ದಕ್ಷನಲ್ಲಿ ಕುಪಿತಳಾದ ಆ ಸಾಧ್ವಿಮಣಿಯು – ಮಹಾಪುರುಷರ ಪೂಜನೀಯನಾದ ಮಹಾದೇವನು ಹಲವುಬಾರಿ ಅತ್ಯಂತ ಆದರದಿಂದ ತನ್ನ ತೊಡೆಯಮೇಲೆ ಕುಳ್ಳಿರಿಸಿಕೊಂಡಿದ್ದ ಪವಿತ್ರವಾದ ದೇಹವನ್ನು ತೊರೆಯಬೇಕೆಂದು ದೃಢವಾಗಿ ನಿಶ್ಚಯಿಸಿ, ತನ್ನ ಎಲ್ಲ ಅಂಗಗಳಲ್ಲಿ ವಾಯು ಮತ್ತು ಅಗ್ನಿಗಳನ್ನು ಧಾರಣೆ ಮಾಡಿದಳು. ॥ ೨೬ ॥ ಬಳಿಕ ಪಾಪರಹಿತೆಯಾದ ಆ ದೇವಿಯು ತನ್ನ ಪತಿದೇವನಾದ ಜಗದ್ಗುರು ಪರಶಿವನ ದಿವ್ಯ ಚರಣಕಮಲಗಳ ಮಕರಂದವನ್ನು ಧ್ಯಾನಿಸುತ್ತಾ ಬೇರೆಲ್ಲವನ್ನು ಮರೆತುಬಿಟ್ಟಳು. ಒಡನೆಯೇ ಆಕೆಯ ಪರಿಶುದ್ಧವಾದ ದೇಹವು ಯೋಗಾಗ್ನಿಯಲ್ಲಿ ಸುಟ್ಟುಹೋಯಿತು. ॥ ೨೭ ॥ ಆ ಅದ್ಭುತವನ್ನು ಕಂಡ ದೇವತೆಗಳೂ, ಮಹರ್ಷಿಗಳೂ – ಅಯ್ಯೋ! ಎಂತಹ ಅನ್ಯಾಯವಾಯಿತು! ಎಂದು ಹಾಹಾಕಾರ ಮಾಡಿದರು. ಅವರ ಆ ಕೋಲಾಹಲವು ಆಕಾಶದಲ್ಲೂ, ಭುವಿಯಲ್ಲೂ ಎಲ್ಲೆಡೆ ಹರಡಿತು. ಎಲ್ಲ ಕಡೆಗಳಿಂದಲೂ 'ಅಹಾ! ಎಂತಹ ಅನಾಹುತವಾಯಿತು! ದಕ್ಷನ ದುಷ್ಟವಾದ ಆಚರಣೆಯಿಂದ ಕ್ರುದ್ಧಳಾಗಿ ದೇವಾಧಿದೇವನಾದ ಮಹಾದೇವನ ಪತ್ನಿಯು ದೇಹವನ್ನೇ ತ್ಯಾಗಮಾಡಿಬಿಟ್ಟಳಲ್ಲ! ॥ ೨೮ ॥ ಆ ದಕ್ಷನಾದರೋ ಪ್ರಜಾಪತಿಯು. ಚರಾಚರವಾದ ಜೀವಗಳೆಲ್ಲವೂ ಈತನ ಸಂತಾನಗಳೇ ಆಗಿವೆ. ಅದರಲ್ಲಿಯೂ ಶುದ್ಧಹೃದಯಳಾದ ಈ ಸತೀದೇವಿಯು ಈತನ ಸಾಕ್ಷಾತ್ ಪುತ್ರಿಯು. ಸದಾ ಸತ್ಕಾರಕ್ಕೆ ಯೋಗ್ಯಳಾದವಳು. ಆದರೂ ಈಕೆಯ ವಿಷಯದಲ್ಲಿ ಈ ದುಷ್ಟನು ಎಂತಹ ಅನಾದರವನ್ನು ತೋರಿದನು. ಅದರ ಫಲವಾಗಿ ಈಕೆಯು ಪ್ರಾಣವನ್ನೇ ತೊರೆದುಬಿಟ್ಟಳು ॥ ೨೯ ॥

ಸೋಽಯಂ ದುರ್ಮರ್ಷಹೃದಯೋ ಬ್ರಹ್ಮಧ್ರುಕ್
ಲೋಕೇಽಪಕೀರ್ತಿಂ ಮಹತೀಮವಾಪ್ಸ್ಯತಿ ।
ಯದಂಗಜಾಂ ಸ್ವಾಂ ಪುರುಷದ್ವಿಡುದ್ಯತಾಂ
ನ ಪ್ರತ್ಯಷೇಧನ್ಮೃತಯೇಽಪರಾಧತಃ ॥ ೩೦ ॥

ವಾಸ್ತವವಾಗಿ ಈ ದಕ್ಷನು ದೊಡ್ಡ ಅಸಹಿಷ್ಣುವೂ, ಬ್ರಾಹ್ಮಣ ದ್ರೋಹಿಯೂ ಆಗಿರುವನು. ಈಗ ಇವನಿಗೆ ಜಗತ್ತಿನಲ್ಲಿ ಭಾರೀ ಅಪಕೀರ್ತಿಯು ಬಂದಿತು. ಇವನ ಪುತ್ರಿಯಾದ ಸತೀದೇವಿಯು ಇವನ ಅಪರಾಧದಿಂದ ದೇಹತ್ಯಾಗಮಾಡಲು ಸಿದ್ಧಳಾದಾಗ ಆಗಲೂ ಈ ಶಿವದ್ರೋಹಿಯು ಆಕೆಯನ್ನು ತಡೆಯಲಿಲ್ಲವಲ್ಲ!' ಎಂಬ ಆಕ್ರೋಶದ ಧ್ವನಿಗಳು ಕೇಳಿಬರತೊಡಗಿತು. ॥ ೩೦ ॥

ವದತ್ಯೇವಂ ಜನೇ ಸತ್ಯಾ ದೃಷ್ಟ್ವಾಸುತ್ಯಾಗಮದ್ಭುತಮ್ ।
ದಕ್ಷಂ ತತ್ಪಾರ್ಷದಾ ಹಂತುಮುದತಿಷ್ಠನ್ನುದಾಯುಧಾಃ ॥ ೩೧ ॥

ತೇಷಾಮಾಪತತಾಂ ವೇಗಂ ನಿಶಾಮ್ಯ ಭಗವಾನ್ಭೃಗುಃ ।
ಯಜ್ಞಘ್ನಘ್ನೇನ ಯಜುಷಾ ದಕ್ಷಿಣಾಗ್ನೌ ಜುಹಾವ ಹ ॥ ೩೨ ॥

ಅಧ್ವರ್ಯುಣಾ ಹೂಯಮಾನೇ ದೇವಾ ಉತ್ಪೇತುರೋಜಸಾ ।
ಋಭವೋ ನಾಮ ತಪಸಾ ಸೋಮಂ ಪ್ರಾಪ್ತಾಃ ಸಹಸ್ರಶಃ ॥ ೩೩ ॥

ತೈರಲಾತಾಯುಧೈಃ ಸರ್ವೇ ಪ್ರಮಥಾಃ ಸಹಗುಹ್ಯಕಾಃ ।
ಹನ್ಯಮಾನಾ ದಿಶೋ ಭೇಜುರುಶದ್ಭಿರ್ಬ್ರಹ್ಮತೇಜಸಾ ॥ ೩೪ ॥

ಜನರೆಲ್ಲರೂ ಹೀಗೆ ಹೇಳುತ್ತಿರುವಾಗಲೇ ಶಿವನ ಪಾರ್ಷದರು ಸತಿಯ ಈ ಅತ್ಯದ್ಭುತವಾದ ಪ್ರಾಣತ್ಯಾಗವನ್ನು ನೋಡಿ, ಅಸ್ತ್ರ-ಶಸ್ತ್ರಗಳನ್ನು ಧರಿಸಿಕೊಂಡು ದಕ್ಷನನ್ನು ಕೊಲ್ಲಲು ಎದ್ದುನಿಂತರು. ॥ ೩೧ ॥ ಅವರ ಆಕ್ರಮಣವನ್ನು ಭಗವಾನ್ ಭೃಗುಮುನಿಯು ಕಂಡು ಯಜ್ಞದಲ್ಲಿ ವಿಘ್ನವನ್ನೊಡ್ಡುವವರನ್ನು ನಾಶಮಾಡುವುದಕ್ಕಾಗಿ 'ಅಪಹತಂ ರಕ್ಷ......' ಮುಂತಾದ ಮಂತ್ರಗಳನ್ನು ಉಚ್ಚರಿಸುತ್ತಾ ದಕ್ಷಿಣಾಗ್ನಿಯಲ್ಲಿ ಹೋಮ ಮಾಡಿದರು. ॥ ೩೨ ॥ ಅಧ್ವರ್ಯುಗಳಾದ ಭೃಗುಮುನಿಯು ಆಹುತಿಯನ್ನು ಕೊಡುತ್ತಲೇ ಯಜ್ಞಕುಂಡದಿಂದ 'ಋಭು' ಎಂಬ ಸಾವಿರಾರು ತೇಜಸ್ವೀ ದೇವತೆಗಳು ಪ್ರಕಟರಾದರು. ಇವರು ತಮ್ಮ ತಪಃಪ್ರಭಾವದಿಂದ ಚಂದ್ರಲೋಕವನ್ನು ಪಡೆದಿದ್ದರು. ॥ ೩೩ ॥ ಆ ಬ್ರಹ್ಮತೇಜ ಸಂಪನ್ನರಾದ ದೇವತೆಗಳು ಉರಿಯುವ ಕೊಳ್ಳಿಗಳೆಂಬ ಆಯುಧದಿಂದ ಆಕ್ರಮಿಸಿದಾಗ ಸಮಸ್ತ ಶಿವನ ಪ್ರಮಥಗಣಗಳೂ, ಗುಹ್ಯಕರೂ ದಿಕ್ಕೆಟ್ಟು ಓಡಿಹೋದರು. ॥ ೩೪ ॥

ನಾಲ್ಕನೆಯ ಅಧ್ಯಾಯವು ಮುಗಿಯಿತು. ॥ ೪ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಚತುರ್ಥಸ್ಕಂಧೇ
ಸತೀದೇಹೋತ್ಸರ್ಗೋ ನಾಮ ಚತುರ್ಥೋಽಧ್ಯಾಯಃ ॥ ೪ ॥

ಐದನೆಯ ಅಧ್ಯಾಯ

ವೀರಭದ್ರನಿಂದ ದಕ್ಷಯಜ್ಞ ವಿಧ್ವಂಸ – ದಕ್ಷನ ವಧೆ

ಮೈತ್ರೇಯ ಉವಾಚ

ಭವೋ ಭವಾನ್ಯಾ ನಿಧನಂ ಪ್ರಜಾಪತೇ-
ರಸತ್ಕೃತಾಯಾ ಅವಗಮ್ಯ ನಾರದಾತ್ ।
ಸ್ವಪಾರ್ಷದಸೈನ್ಯಂ ಚ ತದಧ್ವರರ್ಭುಭಿ-
ರ್ವಿದ್ರಾವಿತಂ ಕ್ರೋಧಮಪಾರಮಾದಧೇ ॥ ೧ ॥

ಕ್ರುದ್ಧಃ ಸುದಷ್ಟೌಷ್ಠಪುಟಃ ಸ ಧೂರ್ಜಟಿ-
ರ್ಜಟಾಂ ತಡಿದ್ವಹ್ನಿಸಟೋಗ್ರರೋಚಿಷಮ್ ।
ಉತ್ಕೃತ್ಯ ರುದ್ರಃ ಸಹಸೋತ್ಥಿತೋ ಹಸನ್
ಗಂಭೀರನಾದೋ ವಿಸಸರ್ಜ ತಾಂ ಭುವಿ ॥ ೨ ॥

ಶ್ರೀಮೈತ್ರೇಯರು ಹೇಳುತ್ತಾರೆ – ವಿದುರನೇ! ತನ್ನ ತಂದೆಯಾದ ದಕ್ಷನಿಂದ ಅಪಮಾನಿತಳಾದ್ದರಿಂದ ಸತೀದೇವಿಯು ಪ್ರಾಣತ್ಯಾಗಮಾಡಿದಳು. ಯಜ್ಞವೇದಿಕೆಯಿಂದ ಪ್ರಕಟಗೊಂಡ ಋಭುಗಳೆಂಬ ದೇವತೆಗಳು ತನ್ನ ಪಾರ್ಷದರನ್ನು ಹೊಡೆದೋಡಿಸಿದರು. ಈ ವಾರ್ತೆಯನ್ನು ನಾರದರಿಂದ ಕೇಳಿದ ಮಹಾದೇವನಿಗೆ ಮಿತಿಮೀರಿದ ಕ್ರೋಧವುಂಟಾಯಿತು. ॥ ೧ ॥ ರುದ್ರದೇವನು ಎದ್ದು ನಿಂತು ಉಗ್ರರೂಪವನ್ನು ಧರಿಸಿ, ಕ್ರೋಧದಿಂದ ತುಟಿಗಳನ್ನು ಕಚ್ಚುತ್ತಾ ಮಿಂಚಿನಂತೆಯೂ, ಬೆಂಕಿಯಂತೆಯೂ, ಭಯಂಕರವಾಗಿ ಹೊಳೆಯುತ್ತಿದ್ದ ತನ್ನ ಒಂದು ಜಟೆಯನ್ನು ಕಿತ್ತು ಗಂಭೀರ ನಾದದಿಂದ ಅಟ್ಟಹಾಸ ಮಾಡುತ್ತಾ ಅದನ್ನು ನೆಲಕ್ಕೆ ಅಪ್ಪಳಿಸಿದನು. ॥ ೨ ॥ ತತ್‌ಕ್ಷಣವಲ್ಲೇ ಅದರಿಂದ ಸ್ವರ್ಗವನ್ನು ಮುಟ್ಟುತ್ತಿದ್ದ ವಿಶಾಲಕಾಯನಾಗಿದ್ದ ಒಬ್ಬ ಪುರುಷನು ಉತ್ಪನ್ನನಾದನು. ಆತನಿಗೆ ಸಾವಿರ ತೋಳುಗಳೂ, ನೀಲಮೇಘದಂತೆ ಶ್ಯಾಮವರ್ಣದ

ತತೋಽತಿಕಾಯಸ್ತನುವಾ ಸ್ಪೃಶನ್ದಿವಂ
ಸಹಸ್ರಬಾಹುರ್ಘನರುಕ್ ತ್ರಿಸೂರ್ಯದೃಕ್ ।
ಕರಾಲದಂಷ್ಟ್ರೋ ಜ್ವಲದಗ್ನಿಮೂರ್ಧಜಃ
ಕಪಾಲಮಾಲೀ ವಿವಿಧೋದ್ಯತಾಯುಧಃ ॥ ೩ ॥

ತಂ ಕಿಂ ಕರೋಮೀತಿ ಗೃಣಂತಮಾಹ
ಬದ್ಧಾಂಜಲಿಂ ಭಗವಾನ್ಭೂತನಾಥಃ ।
ದಕ್ಷಂ ಸಯಜ್ಞಂ ಜಹಿ ಮದ್ಭಟಾನಾಂ
ತ್ವಮಗ್ರಣೀ ರುದ್ರ ಭಟಾಂಶಕೋ ಮೇ ॥ ೪ ॥

ಆಜ್ಞಪ್ತ ಏವಂ ಕುಪಿತೇನ ಮನ್ಯುನಾ
ಸ ದೇವದೇವಂ ಪರಿಚಕ್ರಮೇ ವಿಭುಮ್ ।
ಮೇನೇ ತದಾಽಽತ್ಮಾನಮಸಂಗ ರಂಹಸಾ
ಮಹೀಯಸಾಂ ತಾತ ಸಹಃ ಸಹಿಷ್ಣುಮ್ ॥ ೫ ॥

ಅನ್ವೀಯಮಾನಃ ಸ ತು ರುದ್ರಪಾರ್ಷದೈ-
ರ್ಭೃಶಂ ನದದ್ಭಿರ್ವ್ಯನದತ್ಸುಭೈರವಮ್ ।
ಉದ್ಯಮ್ಯ ಶೂಲಂ ಜಗದಂತಕಾಂತಕಂ
ಸ ಪ್ರಾದ್ರವದ್ಘೋಷಣಭೂಷಣಾಂಘ್ರಿಃ ॥ ೬ ॥

ಅಥರ್ತ್ವಿಜೋ ಯಜಮಾನಃ ಸದಸ್ಯಾಃ
ಕಕುಭ್ಯುದೀಚ್ಯಾಂ ಪ್ರಸಮೀಕ್ಷ್ಯ ರೇಣುಮ್ ।
ತಮಃ ಕಿಮೇತತ್ಕುತ ಏತದ್ರಜೋಽಭೂ-
ದಿತಿ ದ್ವಿಜಾ ದ್ವಿಜಪತ್ನ್ಯಶ್ಚ ದಧ್ಯುಃ ॥ ೭ ॥

ವಾತಾ ನ ವಾಂತಿ ನ ಹಿ ಸಂತಿ ದಸ್ಯವಃ
ಪ್ರಾಚೀನಬರ್ಹಿರ್ಜೀವತಿ ಹೋಗ್ರದಂಡಃ ।
ಗಾವೋ ನ ಕಾಲ್ಯಂತ ಇದಂ ಕುತೋ ರಜೋ
ಲೋಕೋಽಧುನಾ ಕಿಂ ಪ್ರಲಯಾಯ ಕಲ್ಪತೇ ॥ ೮ ॥

ಪ್ರಸೂತಿಮಿಶ್ರಾಃ ಸ್ತ್ರಿಯ ಉದ್ವಿಗ್ನಚಿತ್ತಾ
ಊಚುರ್ವಿಪಾಕೋ ವೃಜಿನಸ್ಯೈವ ತಸ್ಯ ।
ಯತ್ಪಶ್ಯಂತೀನಾಂ ದುಹಿತೄಣಾಂ ಪ್ರಜೇಶಃ
ಸುತಾಂ ಸತೀಮವದಧ್ಯಾವನಾಗಾಮ್ ॥ ೯ ॥

ಅಂಗಕಾಂತಿಯೂ, ಸೂರ್ಯನಂತೆ ಬೆಳಗುತ್ತಿರುವ ಮೂರು ಕಣ್ಣುಗಳು, ಕರಾಳವಾದ ಕೋರೆದಾಡೆಗಳೂ, ಉರಿಯುತ್ತಿರುವ ಬೆಂಕಿಯಂತೆ ಕೆಂಪಾದ ಕೇಶರಾಶಿಗಳೂ, ಕುತ್ತಿಗೆಯಲ್ಲಿ ನರಮುಂಡಮಾಲೆಯೂ, ಕೈಗಳಲ್ಲಿ ಬಗೆ-ಬಗೆಯ ಅಸ್ತ್ರ-ಶಸ್ತ್ರಗಳಿದ್ದುವು. ॥ ೩ ॥ ಆವನು ಕೈಜೋಡಿಸಿಕೊಂಡು – ಜೀಯಾ! ನಾನೇನು ಮಾಡಲಿ? ಎಂದು ಪ್ರಾರ್ಥನೆಮಾಡಲು ಭಗವಾನ್ ಭೂತನಾಥನು – 'ವತ್ಸ! ವೀರಭದ್ರ! ನೀನು ನನ್ನ ಅಂಶಸಂಭೂತನು. ನನ್ನ ಭಟರಿಗೆ ಅಧಿನಾಯಕನಾಗಿ ಬೇಗನೇ ಇಲ್ಲಿಂದ ಹೋಗಿ ಆ ದಕ್ಷನನ್ನೂ, ಆತನ ಯಜ್ಞವನ್ನೂ ಧ್ವಂಸಮಾಡಿ ಬಾ ಎಂದು ಆತನಿಗೆ ಅಪ್ಪಣೆ ಕೊಟ್ಟನು. ॥ ೪ ॥

ಪ್ರಿಯ ವಿದುರನೇ! ದೇವಾಧಿದೇವನಾದ ಭಗವಾನ್ ಶಂಕರನು ಕ್ರೋಧಗೊಂಡು ಹೀಗೆ ಅಪ್ಪಣೆಮಾಡಲು, ■ ವೀರಭದ್ರನು ಆತನಿಗೆ ಪ್ರದಕ್ಷಿಣೆಮಾಡಿ ಅಲ್ಲಿಂದ ಹೊರಡಲು ಸಿದ್ಧನಾದನು. 'ನನ್ನನ್ನು ಪ್ರತಿಭಟಿಸುವವನು ಈ ಲೋಕದಲ್ಲಿ ಯಾರೂ ಇಲ್ಲ. ಇಲ್ಲಿ ನಾನು ಎಂತಹ ಪರಾಕ್ರಮಿಗಳ ವೇಗವನ್ನೂ, ಬಲವನ್ನೂ ಸಹಿಸಬಲ್ಲೆನು' – ಎಂಬ ವಿಶ್ವಾಸವು ಆತನ ಹೃದಯದಲ್ಲಿ ತುಂಬಿತ್ತು. ॥ ೫ ॥ ಆವನು ಭಯಂಕರವಾದ ಸಿಂಹನಾದವನ್ನು ಮಾಡುತ್ತಾ, ಕರಾಳವಾದ ಒಂದು ತ್ರಿಶೂಲವನ್ನು ಕೈಗೆತ್ತಿಕೊಂಡು, ಕಾಲ್ಗಡಗಗಳು ಝಣ-ಝಣಿಸುವಂತೆ ಹೆಜ್ಜೆಹಾಕುತ್ತಾ ದಕ್ಷನ ಯಜ್ಞಮಂಟಪದತ್ತ ದಡದಡನೆ ಓಡಿದನು. ಅವನ ತ್ರಿಶೂಲಕ್ಕೆ ಸಂಹಾರಕಾರಕನಾದ ಮೃತ್ಯುವನ್ನು ಸಂಹರಿಸುವ ಶಕ್ತಿಯಿತ್ತು. ಭಗವಾನ್ ರುದ್ರನ ಇತರ ಪ್ರಮಥಗಣಗಳು ಆರ್ಭಟಿಸುತ್ತಾ ಆತನನ್ನು ಹಿಂಬಾಲಿಸಿದವು. ॥ ೬ ॥

ಇತ್ತ ಯಜ್ಞಶಾಲೆಯಲ್ಲಿ ಕುಳಿತಿದ್ದ ಋತ್ವಿಜರೂ, ಯಜಮಾನನೂ, ಸದಸ್ಯರೂ, ಇತರ ಬ್ರಾಹ್ಮಣರೂ, ಬ್ರಾಹ್ಮಣ ಪತ್ನಿಯರೂ, ಉತ್ತರ ದಿಕ್ಕಿನ ಕಡೆ ಭಯಂಕರವಾಗಿ ಎದ್ದಿರುವ ಧೂಳನ್ನು ಕಂಡು ಅಯ್ಯೋ! ಈ ಕತ್ತಲೆ ಏಕೆ ಕವಿಯುತ್ತಿದೆ? ಧೂಳೀಪಟಲ ಎಲ್ಲಿಂದ, ಹೇಗೆ ಏಳುತ್ತಿದೆ? ಎಂದು ಯೋಚಿಸ ತೊಡಗಿದರು. ॥ ೭ ॥ ಇದೇನೋ ಬಿರುಗಾಳಿಯ ಸಮಯವಲ್ಲ, ಕಳ್ಳ-ಕಾಕರ ಹಾವಳಿಯೂ ಇಲ್ಲ. ಏಕೆಂದರೆ, ದುಷ್ಟರಿಗೆ ಉಗ್ರವಾದ ದಂಡನೆಯನ್ನು ಕೊಡುವ ಪ್ರಾಚೀನ ಬರ್ಹಿ ಮಹಾರಾಜನು ದೇಶವನ್ನು ಆಳುತ್ತಿದ್ದಾನೆ. ಹಸುಗಳು ಮನೆಗೆ ಬರುವ ಸಮಯವಾಗಿಲ್ಲ, ಹಾಗಿದ್ದರೂ ಧೂಳು ಏಕೆ ಏಳುತ್ತಿದೆ? ಜಗತ್ತಿನ ಪ್ರಳಯ ಕಾಲವೇ ಬಂದು ಬಿಟ್ಟಿದೆಯೋ ಏನೋ! ಎಂದು ಗಾಬರಿಗೊಂಡು ಚಿಂತಿಸತೊಡಗಿದರು. ॥ ೮ ॥ ಆಗ ದಕ್ಷನ ಪತ್ನಿಯಾದ ಪ್ರಸೂತಿಯೇ ಮುಂತಾದ ಸ್ತ್ರೀಯರು ಚಿಂತೆಗೀಡಾಗಿ – 'ಈ ದಕ್ಷಪ್ರಜಾಪತಿಯು ತನ್ನ ಎಲ್ಲ ಕನ್ಯೆಯರ ಎದುರಿಗೇ ನಿರಪರಾಧಿಯಾಗಿದ್ದ ಸತೀದೇವಿಯನ್ನು ಅವಮಾನ ಪಡಿಸಿದ್ದನು. ಈ ಪಾಪದ ಫಲವೇ ಇದು ಎಂದು ಕಾಣುತ್ತದೆ. ॥ ೯ ॥ (ಅಥವಾ ಸಂಹಾರಮೂರ್ತಿ ಭಗವಾನ್ ಶ್ರೀರುದ್ರನ ಅನಾದರದ ಪರಿಣಾಮವೂ ಇದ್ದರೂ ಇರಬಹುದು.) ಪ್ರಳಯಕಾಲವು ಬಂದೊದಗಿದಾಗ ರುದ್ರನು ತನ್ನ ಜಟಾಜೂಟವನ್ನು ಕೆದರಿಕೊಂಡು, ಶಸ್ತ್ರಾಸ್ತ್ರಗಳಿಂದ ಸಜ್ಜಿತವಾದ ಭುಜಗಳನ್ನು ಧ್ವಜದಂತೆ ಬೀಸುತ್ತಾ

ಯಸ್ತ್ವಂತಕಾಲೇ ವ್ಯುಪ್ತಜಟಾಕಲಾಪಃ
ಸ್ವಶೂಲಸೂಚ್ಯರ್ಪಿತದಿಗ್ಗಜೇಂದ್ರಃ ।
ವಿತತ್ಯ ನೃತ್ಯತ್ಯುದಿತಾಸ್ತ್ರದೋರ್ಧ್ವಜಾ-
ನುಚ್ಚಾಟ್ಟಹಾಸಸ್ತನಯಿತ್ನುಭಿನ್ನದಿಕ್ ॥ ೧೦ ॥

ಅಮರ್ಷಯಿತ್ವಾ ತಮಸಹ್ಯತೇಜಸಂ
ಮನ್ಯುಪ್ಲುತಂ ದುರ್ನಿರೀಕ್ಷ್ಯಂ ಭ್ರುಕುಟ್ಯಾ ।
ಕರಾಲದಂಷ್ಟ್ರಾಭಿರುದಸ್ತಭಾಗಣಂ
ಸ್ಯಾತ್ಸ್ವಸ್ತಿ ಕಿಂ ಕೋಪಯತೋ ವಿಧಾತುಃ ॥ ೧೧ ॥

ಬಹ್ವೇವಮುದ್ವಿಗ್ನದೃಶೋಚ್ಯಮಾನೇ
ಜನೇನ ದಕ್ಷಸ್ಯ ಮುಹುರ್ಮಹಾತ್ಮನಃ ।
ಉತ್ಪೇತುರುತ್ಪಾತತಮಾಃ ಸಹಸ್ರಶೋ
ಭಯಾವಹಾ ದಿವಿ ಭೂಮೌ ಚ ಪರ್ಯಕ್ ॥ ೧೨ ॥

ತಾವತ್ಸ ರುದ್ರಾನುಚರೈರ್ಮಹಾಮಖೋ ಮಹಾ-
ನ್ನಾನಾಯುಧೈರ್ವಾಮನಕೈರುದಾಯುಧೈಃ ।
ಪಿಂಗೈಃ ಪಿಶಂಗೈರ್ಮಕರೋದರಾನನೈಃ
ಪರ್ಯಾದ್ರವದ್ಭಿರ್ವಿದುರಾನ್ವರುಧ್ಯತ ॥ ೧೩ ॥

ಕೇಚಿದ್ಬಭಂಜುಃ ಪ್ರಾಗ್ವಂಶಂ ಪತ್ನೀಶಾಲಾಂ ತಥಾಪರೇ ।
ಸದ ಆಗ್ನೀಧ್ರಶಾಲಾಂ ಚ ತದ್ವಿಹಾರಂ ಮಹಾನಸಮ್ ॥ ೧೪ ॥

ರುರುಜುರ್ಯಜ್ಞಪಾತ್ರಾಣಿ ತಥೈಕೇಽಗ್ನೀನನಾಶಯನ್ ।
ಕುಂಡೇಷ್ವಮೂತ್ರಯನ್ಕೇಚಿದ್ಬಿಭಿದುರ್ವೇದಿಮೇಖಲಾಃ ॥ ೧೫ ॥

ಅಬಾಧಂತ ಮುನೀನನ್ಯೇ ಏಕೇ ಪತ್ನೀರತರ್ಜಯನ್ ।
ಅಪರೇ ಜಗೃಹುರ್ದೇವಾನ್ಪ್ರತ್ಯಾಸನ್ನಾನ್ಪಲಾಯಿತಾನ್ ॥ ೧೬ ॥

ಭೃಗುಂ ಬಬಂಧ ಮಣಿಮಾನ್ವೀರಭದ್ರಃ ಪ್ರಜಾಪತಿಮ್ ।
ಚಂಡೀಶಃ ಪೂಷಣಂ ದೇವಂ ಭಗಂ ನಂದೀಶ್ವರೋಽಗ್ರಹೀತ್ ॥ ೧೭ ॥

ಸರ್ವ ಏವರ್ತ್ವಿಜೋ ದೃಷ್ಟ್ವಾ ಸದಸ್ಯಾಃ ಸದಿವೌಕಸಃ ।
ತೈರರ್ದ್ಯಮಾನಾಃ ಸುಭೃಶಂ ಗ್ರಾವಭಿರ್ನೈಕಧಾದ್ರವನ್ ॥ ೧೮ ॥

ತಾಂಡವನೃತ್ಯವನ್ನು ಮಾಡುತ್ತಿರುವಾಗ ಅವನ ತ್ರಿಶೂಲದ ಅಲಗುಗಳಿಂದ ದಿಗ್ಗಜಗಳು ಗಾಯಗೊಳ್ಳುತ್ತವೆ. ಅವನ ಮೇಘ ಗರ್ಜನೆಯಂತಿದ್ದ ಭಯಂಕರ ಅಟ್ಟಹಾಸದಿಂದ ದಿಕ್ಕುಗಳು ಚೆಲ್ಲಾಪಿಲ್ಲಿಯಾಗಿ ಹೋಗುತ್ತವೆ. ॥ ೧೦ ॥ ಆಗ ಸಹಿಸಲಸದಳವಾದ ತೇಜಸ್ಸು ಆತನಲ್ಲಿ ಉಕ್ಕೇರಿ ಬರುತ್ತದೆ. ಕ್ರೋಧದಿಂದ ಹುಬ್ಬು ಗಂಟಿಕ್ಕಿಕೊಂಡು ನಿಂತ ಆತನನ್ನು ಯಾರೂ ಎದುರಿಸಲಾರರು. ಅವನ ಕರಾಳ ಕೋರೆಹಲ್ಲುಗಳಿಂದ ನಕ್ಷತ್ರಗಳೆಲ್ಲಾ ಚೆಲ್ಲಿಹೋಗುವುವು. ಅಂತಹ ರೋಷಭೀಷಣನಾದ ಭಗವಾನ್ ಶಂಕರನನ್ನು ಕೆಣಕಿದರೆ ಸಾಕ್ಷಾತ್ ಸೃಷ್ಟಿಕರ್ತನಿಗಾದರೂ ಕ್ಷೇಮವೆಲ್ಲಿಯದು ? ಎಂದು ಹೇಳತೊಡಗಿದರು. ॥ ೧೧ ॥

ದಕ್ಷನ ಯಜ್ಞಮಂಟಪದಲ್ಲಿ ಕುಳಿತಿದ್ದ ಮಹಾತ್ಮರು ಭಯಗ್ರಸ್ತರಾಗಿ ಒಬ್ಬರನ್ನೊಬ್ಬರು ಅಂಜಿಕೆಯ ದೃಷ್ಟಿಯಿಂದ ದಿಟ್ಟಿಸುತ್ತಾ ಬಗೆ-ಬಗೆಯಾಗಿ ಮಾತಾಡಿಕೊಳ್ಳುತ್ತಿರುವಂತೆ ಭೂಮಿಯಲ್ಲೂ ಆಕಾಶದಲ್ಲೂ ಎಲ್ಲ ಕಡೆಗಳಲ್ಲಿ ಸಾವಿರಾರು ಉತ್ಪಾತಗಳು ಕಾಣಿಸಿಕೊಂಡವು. ॥ ೧೨ ॥ ವಿದುರನೇ ! ಅಷ್ಟರಲ್ಲೇ ರುದ್ರನ ಸೇವಕರಾದ ಪ್ರಮಥಗಣಗಳು ಆ ದೊಡ್ಡ ಯಜ್ಞಮಂಟಪವನ್ನು ಸುತ್ತುವರಿದು ಮುತ್ತಿಗೆ ಹಾಕಿದರು. ಅವರೆಲ್ಲರೂ ಅಸ್ತ್ರ-ಶಸ್ತ್ರಗಳಿಂದ ಸಜ್ಜಿತರಾಗಿದ್ದರು. ಅವರಲ್ಲಿ ಕೆಲವರು ಕುಳ್ಳರು, ಕೆಲವರು ಕೆಂಪು ಬಣ್ಣದವರು, ಕೆಲವರು ಕಂದುಬಣ್ಣದವರು, ಕೆಲವರು ಹಳದಿ ಬಣ್ಣದವರು. ಕೆಲವರು ಮೊಸಳೆಯಂತೆ ಮುಖ-ಹೊಟ್ಟೆಗಳಿಂದ ಕಾಣುತ್ತಿದ್ದರು. ॥ ೧೩ ॥ ಅವರಲ್ಲಿ ಕೆಲವರು ಯಜ್ಞದ ಪ್ರಾಗ್ವಂಶವನ್ನು (ಯಜ್ಞಶಾಲೆಯ ಪೂರ್ವ ಮತ್ತು ಪಶ್ಚಿಮದ ಕಂಬಗಳ ಮೇಲೆ ಅಡ್ಡವಾಗಿ ಇರುವ ತೊಲೆ) ಮುರಿದು ಹಾಕಿದರು. ಮತ್ತೆ ಕೆಲವರು ಯಜ್ಞಶಾಲೆಯ ಪಶ್ಚಿಮಕ್ಕಿದ್ದ ಪತ್ನೀಶಾಲೆಯನ್ನು ನಾಶಗೊಳಿಸಿದರು. ಕೆಲವರು ಯಜ್ಞಶಾಲೆಯ ಮುಂಭಾಗದ ಸಭಾಮಂಟಪವನ್ನು ಮುಂದೆ ಉತ್ತರದಿಕ್ಕಿನತ್ತ ಇರುವ ಆಗ್ನೀಧ್ರಶಾಲೆಯನ್ನು ಕಿತ್ತುಹಾಕಿದರು. ಕೆಲವರು ಯಜಮಾನನ ಗೃಹ ಮತ್ತು ಪಾಕಶಾಲೆಯನ್ನು ಕೆಡವಿ ಹಾಳುಮಾಡಿದರು. ॥ ೧೪ ॥ ಕೆಲವರು ಯಜ್ಞಪಾತ್ರೆಗಳನ್ನು ಒಡೆದು ಹಾಕಿದರು. ಕೆಲವರು ಯಜ್ಞಾಗ್ನಿಗಳನ್ನು ಆರಿಸಿಬಿಟ್ಟರು. ಕೆಲವರು ಯಜ್ಞಕುಂಡದಲ್ಲಿ ಮೂತ್ರವಿಸರ್ಜನೆ ಮಾಡಿದರು. ಮತ್ತೆ ಕೆಲವರು ವೇದಿಕೆಯ ಸೀಮೆಯ ಸೂತ್ರಗಳನ್ನು ಹರಿದು ಹಾಕಿದರು. ॥ ೧೫ ॥ ಕೆಲವರು ಮುನಿಗಳನ್ನು ಪೀಡಿಸಿದರೆ, ಮತ್ತೆ ಕೆಲವರು ಹೆಂಗಸರನ್ನು ಗದರಿಸತೊಡಗಿದರು. ಕೆಲವರು ತಮ್ಮ ಬಳಿಯಿಂದ ಓಡುತ್ತಿದ್ದ ದೇವತೆಗಳನ್ನು ಹಿಡಿದುಕೊಂಡರು. ॥ ೧೬ ॥ ಮಣಿಮಂತನು ಭೃಗುಋಷಿಯನ್ನು ಕಟ್ಟಿಹಾಕಿದನು. ವೀರಭದ್ರನು ದಕ್ಷಪ್ರಜಾಪತಿಯನ್ನು ಸೆರೆಹಿಡಿದನು. ಚಂಡೀಶನು ಪೂಷಾನನ್ನೂ ಮತ್ತು ನಂದೀಶ್ವರನು ಭಗದೇವತೆಯನ್ನು ಹಿಡಿದುಕೊಂಡರು. ॥ ೧೭ ॥

ಭಗವಾನ್ ಶಂಕರನ ಪಾರ್ಷದರ ಈ ಭಯಂಕರ ಲೀಲೆಯನ್ನು ನೋಡಿ ಹಾಗೂ ಅವರ ಕಲ್ಲು-ಕವಣೆಗಳ ಏಟುಗಳನ್ನೂ ತಾಳಲಾರದೆ ಅಲ್ಲಿದ್ದ ಋತ್ವಿಜರೂ, ಸದಸ್ಯರೂ, ದೇವತೆಗಳೂ ಹೀಗೆ ಎಲ್ಲರೂ ದಿಕ್ಕಾಪಾಲಾಗಿ ಓಡಿಹೋದರು. ॥ ೧೮ ॥

ಜುಹ್ವತಃ ಸ್ರುವಹಸ್ತಸ್ಯ ಶ್ಮಶ್ರೂಣಿ ಭಗವಾನ್ಭವಃ ।
ಭೃಗೋರ್ಲುಲುಂಚೇ ಸದಸಿ ಯೋಽಹಸಚ್ಛ್ಮಶ್ರು ದರ್ಶಯನ್ ॥ ೧೯ ॥

ಭಗಸ್ಯ ನೇತ್ರೇ ಭಗವಾನ್ಪಾತಿತಸ್ಯ ರುಷಾ ಭುವಿ ।
ಉಜ್ಜಹಾರ ಸದಸ್ಥೋಽಕ್ಷ್ಣಾ ಯಃ ಶಪಂತಮಸೂಸುಚತ್ ॥ ೨೦ ॥

ಪೂಷ್ಣಶ್ಚಾಪಾತಯದ್ದಂತಾನ್ಕಾಲಿಂಗಸ್ಯ ಯಥಾ ಬಲಃ ।
ಶಪ್ಯಮಾನೇ ಗರಿಮಣಿ ಯೋಽಹಸದ್ದರ್ಶಯಂದತಃ ॥ ೨೧ ॥

ಆಕ್ರಮ್ಯೋರಸಿ ದಕ್ಷಸ್ಯ ಶಿತಧಾರೇಣ ಹೇತಿನಾ ।
ಛಿಂದನ್ನಪಿ ತದುದ್ಧರ್ತುಂ ನಾಶಕ್ನೋತ್ತ್ರ್ಯಂಬಕಸ್ತದಾ ॥ ೨೨ ॥

ಶಸ್ತ್ರೈರಸ್ತ್ರಾನ್ವಿತೈರೇವಮನಿರ್ಭಿನ್ನತ್ವಚಂ ಹರಃ ।
ವಿಸ್ಮಯಂ ಪರಮಾಪನ್ನೋ ದಧ್ಯೌ ಪಶುಪತಿಶ್ಚಿರಮ್ ॥ ೨೩ ॥

ದೃಷ್ಟ್ವಾ ಸಂಜ್ಞಪನಂ ಯೋಗಂ ಪಶೂನಾಂ ಸ ಪತಿರ್ಮಖೇ ।
ಯಜಮಾನಪಶೋಃ ಕಸ್ಯ ಕಾಯಾತ್ತೇನಾಹರಚ್ಛಿರಃ ॥ ೨೪ ॥

ಸಾಧುವಾದಸ್ತದಾ ತೇಷಾಂ ಕರ್ಮ ತತ್ತಸ್ಯ ಪಶ್ಯತಾಮ್ ।
ಭೂತಪ್ರೇತಪಿಶಾಚಾನಾಮನ್ಯೇಷಾಂ ತದ್ವಿಪರ್ಯಯಃ ॥ ೨೫ ॥

ಜುಹಾವೈತಚ್ಛಿರಸ್ತಸ್ಮಿನ್ ದಕ್ಷಿಣಾಗ್ನಾವಮರ್ಷಿತಃ ।
ತದ್ದೇವಯಜನಂ ದಗ್ಧ್ವಾ ಪ್ರಾತಿಷ್ಠದ್ ಗುಹ್ಯಕಾಲಯಮ್ ॥ ೨೬ ॥

ಭೃಗು ಮಹರ್ಷಿಗಳು ಕೈಯಲ್ಲಿ ಸ್ರುವೆಯನ್ನೆತ್ತಿಕೊಂಡು ಹೋಮ ಮಾಡುತ್ತಿದ್ದರು. ಅವರು ಪ್ರಜಾಪತಿಯರ ಸಭೆಯಲ್ಲಿ ಮೀಸೆಗಳನ್ನು ತಿರುಹುತ್ತಾ ಶಿವನ ಕುರಿತು ಅಪಹಾಸ್ಯಮಾಡಿದ್ದರು. ಆದ್ದರಿಂದ ವೀರಭದ್ರನು ಅವರ ಗಡ್ಡ-ಮೀಸೆಗಳನ್ನು ಕಿತ್ತು ಬಿಸಾಡಿದನು. ॥ ೧೯ ॥ ಭಗದೇವತೆಯು ಸಭೆಯಲ್ಲಿ ದಕ್ಷನು ಶಿವನನ್ನು ನಿಂದಿಸುವಾಗ ಕಣ್ಣನ್ನು ಮಿಟುಕಿಸಿ ಪ್ರೇರೇಪಿಸಿದ್ದನು. ಆದ್ದರಿಂದ ವೀರಭದ್ರನು ಅವನನ್ನು ಕೋಪದಿಂದ ಕೆಳಕ್ಕೆ ಕುಕ್ಕಿ ಆತನ ಕಣ್ಣನ್ನು ಕಿತ್ತುಹಾಕಿದನು. ॥ ೨೦ ॥ ಮತ್ತೆ ಪೂಷನನ್ನು ಹಿಡಿದು ಕೊಂಡು – ಮುಂದೆ ಬಲರಾಮನು ಅನಿರುದ್ಧನ ವಿವಾಹದಲ್ಲಿ ಕಳಿಂಗರಾಜನ ಹಲ್ಲುಗಳನ್ನು ಮುರಿದು ಹಾಕುವಂತೆ – ಆತನ ಹಲ್ಲುಗಳನ್ನು ಕಿತ್ತುಹಾಕಿದನು. ಏಕೆಂದರೆ, ದಕ್ಷನು ಮಹಾದೇವನನ್ನು ಬಯ್ಯುತ್ತಿದ್ದಾಗ ಈ ಪೂಷಾದೇವತೆಯು ಹಲ್ಲುಕಿರಿದು ನಕ್ಕಿದ್ದನು. ॥ ೨೧ ॥ ಬಳಿಕ ವೀರಭದ್ರನು ದಕ್ಷನ ಎದೆಯ ಮೇಲೆ ಕುಳಿತು ಹರಿತವಾದ ಕತ್ತಿಯಿಂದ ಅವನ ತಲೆಯನ್ನು ಕತ್ತರಿಸ ತೊಡಗಿದನು. ಆದರೆ ಎಷ್ಟು ಕಡಿದರೂ ಆ ತಲೆಯನ್ನು ಕಿತ್ತು ಹಾಕಲು ಸಾಧ್ಯವಾಗಲಿಲ್ಲ. ॥ ೨೨ ॥ ಯಾವ ರೀತಿಯಿಂದಲೂ ಅಸ್ತ್ರ-ಶಸ್ತ್ರಗಳಿಂದ ದಕ್ಷಪ್ರಜಾಪತಿಯ ಚರ್ಮವು ಕತ್ತರಿಸದೇ ಇರುವಾಗ, ವೀರಭದ್ರನಿಗೆ ತುಂಬಾ ಆಶ್ಚರ್ಯವಾಯಿತು ಮತ್ತು ಏನು ಮಾಡುವುದು ಎಂದು ಬಹಳ ಹೊತ್ತು ಯೋಚನೆ ಮಾಡಿದನು. ॥ ೨೩ ॥ ಅನಂತರ ಅವನು ಯಜ್ಞದಲ್ಲಿ ಪಶುವನ್ನು ಬಲಿಕೊಡುವಂತೆಯೇ ದಕ್ಷನೆಂಬ ಯಜಮಾನ ಪಶುವಿನ ಕತ್ತನ್ನು ಕತ್ತರಿಸಿ ಬೇರ್ಪಡಿಸಿದನು. ॥ ೨೪ ॥ ಹೀಗೆ ದಕ್ಷನನ್ನು ಬಲಿಕೊಟ್ಟು ವೀರಭದ್ರನು ಮಾಡಿದ ಆ ಕರ್ಮವನ್ನು ಭೂತ-ಪ್ರೇತ-ಪಿಶಾಚಾದಿಗಳು ಭಲೇ! ಭಲೇ! ಎಂದು ಕೊಂಡಾಡಿದರು. ದಕ್ಷನ ಕಡೆಯವರಲ್ಲಿ ಹಾಹಾಕಾರವೆದ್ದಿತು. ॥ ೨೫ ॥ ವೀರಭದ್ರನು ಅತ್ಯಂತ ಕ್ರೋಧಾವೇಶದಿಂದ ಕತ್ತರಿಸಿದ ದಕ್ಷನ ತಲೆಯನ್ನು ದಕ್ಷಿಣಾಗ್ನಿಯಲ್ಲಿ ಎಸೆದುಬಿಟ್ಟನು. ಮತ್ತೆ ಯಜ್ಞಶಾಲೆಗೆ ಬೆಂಕಿಹಚ್ಚಿ ಯಜ್ಞವನ್ನು ಧ್ವಂಸಗೊಳಿಸಿ, ಕೈಲಾಸಕ್ಕೆ ಹಿಂತಿರುಗಿದನು. ॥ ೨೬ ॥

ಐದನೆಯ ಅಧ್ಯಾಯವು ಮುಗಿಯಿತು. ॥ ೫ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಚತುರ್ಥಸ್ಕಂಧೇ
ದಕ್ಷಯಜ್ಞವಿಧ್ವಂಸೋ ನಾಮ ಪಂಚಮೋಽಧ್ಯಾಯಃ ॥ ೫ ॥

ಆರನೆಯ ಅಧ್ಯಾಯ

ದೇವತೆಗಳು ಕೈಲಾಸಕ್ಕೆ ಹೋಗಿ ಶಿವನನ್ನು ಪ್ರಸನ್ನಗೊಳಿಸಿದುದು

ಮೈತ್ರೇಯ ಉವಾಚ

ಅಥ ದೇವಗಣಾಃ ಸರ್ವೇ ರುದ್ರಾನೀಕೈಃ ಪರಾಜಿತಾಃ ।
ಶೂಲಪಟ್ಟಿಶನಿಸ್ತ್ರಿಂಶಗದಾಪರಿಘಮುದ್ಗರೈಃ ॥ ೧ ॥

ಶ್ರೀಮೈತ್ರೇಯರು ಹೇಳುತ್ತಾರೆ – ಮಹಾತ್ಮಾ ವಿದುರನೇ! ಈ ವಿಧವಾಗಿ ರುದ್ರದೇವರ ಸೈನಿಕರಿಂದ ಪರಾಜಿತರಾದ ದೇವತೆಗಳು ತ್ರಿಶೂಲ, ಪಟ್ಟಿಶ, ಖಡ್ಗ, ಗದೆ, ಪರಿಘ, ಮುದ್ಗರ – ಮುಂತಾದ ಆಯುಧಗಳಿಂದ ಅಂಗಾಂಗಗಳು ಛಿನ್ನ-ಭಿನ್ನವಾಗಿ ನೊಂದು, ಯಜ್ಞಕ್ಕೆ ಬಂದಿದ್ದ ಋತ್ವಿಜರೂ, ಸದಸ್ಯರು ಹೀಗೆ ಎಲ್ಲರೂ ಭಯ

ಸಂಭಿನ್ನಭಿನ್ನಸರ್ವಾಂಗಾಃ ಸರ್ತ್ವಿಕ್ಸಭ್ಯಾ ಭಯಾಕುಲಾಃ ।
ಸ್ವಯಂಭುವೇ ನಮಸ್ಕೃತ್ಯ ಕಾರ್ತ್ಸ್ನ್ಯೇನೈತನ್ನ್ಯವೇದಯನ್ ॥ ೨ ॥

ಉಪಲಭ್ಯ ಪುರೈವೈತದ್ಭಗವಾನಬ್ಜಸಂಭವಃ ।
ನಾರಾಯಣಶ್ಚ ವಿಶ್ವಾತ್ಮಾ ನ ಕಸ್ಯಾಧ್ವರಮೀಯತುಃ ॥ ೩ ॥

ತದಾಕರ್ಣ್ಯ ವಿಭುಃ ಪ್ರಾಹ ತೇಜೀಯಸಿ ಕೃತಾಗಸಿ ।
ಕ್ಷೇಮಾಯ ತತ್ರ ಸಾ ಭೂಯಾನ್ನ ಪ್ರಾಯೇಣ ಬುಭೂಷತಾಮ್ ॥ ೪ ॥

ಅಥಾಪಿ ಯೂಯಂ ಕೃತಕಿಲ್ಬಿಷಾ ಭವಂ
ಯೇ ಬರ್ಹಿಷೋ ಭಾಗಭಾಜಂ ಪರಾದುಃ ।
ಪ್ರಸಾದಯಧ್ವಂ ಪರಿಶುದ್ಧಚೇತಸಾ
ಕ್ಷಿಪ್ರಪ್ರಸಾದಂ ಪ್ರಗೃಹೀತಾಂಘ್ರಿಪದ್ಮಮ್ ॥ ೫ ॥

ಆಶಾಸಾನಾ ಜೀವಿತಮಧ್ವರಸ್ಯ
ಲೋಕಃ ಸಪಾಲಃ ಕುಪಿತೇ ನ ಯಸ್ಮಿನ್ ।
ತಮಾಶು ದೇವಂ ಪ್ರಿಯಯಾ ವಿಹೀನಂ
ಕ್ಷಮಾಪಯಧ್ವಂ ಹೃದಿ ವಿದ್ಧಂ ದುರುಕ್ತೈಃ ॥ ೬ ॥

ನಾಹಂ ನ ಯಜ್ಞೋ ನ ಚ ಯೂಯಮನ್ಯೇ
ಯೇ ದೇಹಭಾಜೋ ಮುನಯಶ್ಚ ತತ್ತ್ವಮ್ ।
ವಿದುಃ ಪ್ರಮಾಣಂ ಬಲವೀರ್ಯಯೋರ್ವಾ
ಯಸ್ಯಾತ್ಮತಂತ್ರಸ್ಯ ಕ ಉಪಾಯಂ ವಿಧಿತ್ಸೇತ್ ॥ ೭ ॥

ಸ ಇತ್ಥಮಾದಿಶ್ಯ ಸುರಾನಜಸ್ತೈಃ
ಸಮನ್ವಿತಃ ಪಿತೃಭಿಃ ಸಪ್ರಜೇಶೈಃ ।
ಯಯೌ ಸ್ವಧಿಷ್ಣ್ಯಾನ್ನಿಲಯಂ ಪುರದ್ವಿಷಃ
ಕೈಲಾಸಮದ್ರಿಪ್ರವರಂ ಪ್ರಿಯಂ ಪ್ರಭೋಃ ॥ ೮ ॥

ಜನ್ಮೌಷಧಿತಪೋಮಂತ್ರಯೋಗಸಿದ್ಧೈರ್ನರೇತರೈಃ ।
ಜುಷ್ಟಂ ಕಿನ್ನರಗಂಧರ್ವೈರಪ್ಸರೋಭಿರ್ವೃತಂ ಸದಾ ॥ ೯ ॥

ನಾನಾಮಣಿಮಯೈಃ ಶೃಂಗೈರ್ನಾನಾಧಾತುವಿಚಿತ್ರಿತೈಃ ।
ನಾನಾದ್ರುಮಲತಾಗುಲ್ಮೈರ್ನಾನಾಮೃಗಗಣಾವೃತೈಃ ॥ ೧೦ ॥

ಗ್ರಸ್ತರಾಗಿ ಬ್ರಹ್ಮದೇವರ ಬಳಿಗೆ ಹೋಗಿ ನಮಸ್ಕಾರಮಾಡಿ ಅವರ ಬಳಿಯಲ್ಲಿ ಎಲ್ಲ ವೃತ್ತಾಂತವನ್ನು ನಿವೇದಿಸಿಕೊಂಡರು ॥ ೧-೨ ॥ ಯಜ್ಞದಲ್ಲಿ ಹೀಗೆ ಉತ್ಪಾತವಾಗುವುದೆಂದು ಮೊದಲೇ ತಿಳಿದಿದ್ದ ಸರ್ವಾಂತರ್ಯಾಮಿ ನಾರಾಯಣನೂ, ಬ್ರಹ್ಮದೇವರೂ ಆ ಯಜ್ಞಕ್ಕೆ ಹೋಗಿರಲಿಲ್ಲ ॥ ೩ ॥ ಈಗ ದೇವತೆಗಳ ಬಾಯಿಂದ ಅಲ್ಲಿಯ ಎಲ್ಲ ವೃತ್ತಾಂತವನ್ನು ಕೇಳಿದ ಬ್ರಹ್ಮದೇವರು ಹೇಳಿದರು – ಎಲೈ ದೇವತೆಗಳಿರಾ! ಮಹಾಸಮರ್ಥನೂ, ತೇಜಸ್ವಿಯೂ ಆದ ಪುರುಷನಿಂದ ಒಂದು ವೇಳೆ ಯಾವುದಾದರೂ ಅಪರಾಧ ವಾದರೂ ಅದರ ಬದಲಾಗಿ ಅವರಿಗೆ ಅಪರಾಧ ಮಾಡಿದವರಿಗೆ ಒಳ್ಳೆಯದಾಗುವುದಿಲ್ಲ ॥ ೪ ॥ ಹಾಗಿರುವಾಗ ನೀವಾದರೋ ಯಜ್ಞದಲ್ಲಿ ಭಗವಾನ್ ಶಂಕರನಿಗೆ ದೊರೆಯಬೇಕಾದ ಯಜ್ಞ ಭಾಗವನ್ನು ಕೊಡದೆ ದೊಡ್ಡ ಅಪರಾಧವನ್ನೆಸಗಿದ್ದೀರಿ. ಆದರೆ ಪರಮೇಶ್ವರನು ಬೇಗನೆ ಪ್ರಸನ್ನನಾಗುವವನು. ಅದಕ್ಕಾಗಿ ನೀವೆಲ್ಲರೂ ಶುದ್ಧವಾದ ಮನಸ್ಸಿನಿಂದ ಅವನ ಪಾದಗಳನ್ನು ಹಿಡಿದುಕೊಂಡು, ಅವನಲ್ಲಿ ಕ್ಷಮೆಯನ್ನು ಯಾಚಿಸಿರಿ ॥ ೫ ॥ ದಕ್ಷನ ದುರ್ವಚನರೂಪವಾದ ಬಾಣಗಳಿಂದ ಅವನ ಹೃದಯ ಮೊದಲೇ ನೊಂದಿತ್ತು. ಅದರ ಜೊತೆಗೆ ಪ್ರಿಯಪತ್ನಿಯಾದ ಸತೀದೇವಿಯ ವಿಯೋಗವೂ ಉಂಟಾಯಿತು. ಆದುದರಿಂದ ಈ ಯಜ್ಞವು ಪುನಃ ಪ್ರಾರಂಭಗೊಂಡು ಪೂರ್ಣವಾಗಬೇಕೆಂದು ನೀವೆಲ್ಲ ಬಯಸುವಿರಾದರೆ, ಮೊದಲಿಗೆ ನೀವು ಬೇಗನೇ ಹೋಗಿ ನಿಮ್ಮ ಅಪರಾಧಗಳಿಗಾಗಿ ಕ್ಷಮೆಯನ್ನು ಬೇಡಿಕೊಳ್ಳಿ. ಹಾಗೇ ನಾದರೆ ಅವನು ಕುಪಿತನಾಗಿ ಬಿಟ್ಟರೆ ಲೋಕಪಾಲಕರ ಸಹಿತ ಈ ಸಮಸ್ತ ಲೋಕಗಳು ಉಳಿಯುವ ಸಂಭವವಿಲ್ಲ ॥ ೬ ॥ ಭಗವಾನ್ ಮಹಾರುದ್ರನು ಪರಮ ಸ್ವತಂತ್ರನು. ಅವನ ತತ್ತ್ವವನ್ನು, ಶಕ್ತಿ-ಸಾಮರ್ಥ್ಯಗಳನ್ನು ಋಷಿ-ಮುನಿಗಳು, ದೇವತೆಗಳು, ಯಜ್ಞಸ್ವರೂಪೀ ದೇವೇಂದ್ರನೂ, ಸ್ವತಃ ನಾನೂ ಕೂಡ ಅರಿಯೆನು. ಹೀಗಿರುವಾಗ ಬೇರೆಯವರ ಮಾತೇನು? ಇಂತಹ ಸ್ಥಿತಿಯಲ್ಲಿ ಅವನನ್ನು ಶಾಂತಗೊಳಿಸುವ ಉಪಾಯವನ್ನು ಯಾರು ಮಾಡಬಲ್ಲರು? ॥ ೭ ॥

ಬ್ರಹ್ಮದೇವರು ಅವರಿಗೆ ಹೀಗೆ ಹೇಳಿ ದೇವತೆಗಳನ್ನೂ, ಪ್ರಜಾಪತಿಗಳನ್ನೂ, ಪಿತೃದೇವತೆಗಳನ್ನೂ ಜೊತೆಯಲ್ಲಿ ಕರೆದುಕೊಂಡು, ತನ್ನ ಲೋಕದಿಂದ ಭಗವಾನ್ ಶಂಕರನ ಪ್ರಿಯಧಾಮವಾದ ಪರ್ವತಶ್ರೇಷ್ಠ ಕೈಲಾಸಕ್ಕೆ ಹೋದರು ॥ ೮ ॥ ಆ ಕೈಲಾಸದ ಪವಿತ್ರತೆ, ರಮಣೀಯತೆ ಅವರ್ಣನೀಯವಾಗಿತ್ತು. ಅದು ಔಷಧಿ-ವನಸ್ಪತಿಗಳು, ತಪಸ್ಸು, ಮಂತ್ರ, ಯೋಗ ಮುಂತಾದ ಉಪಾಯಗಳಿಂದ ಮತ್ತು ಹುಟ್ಟಿನಿಂದಲೇ ಸಿದ್ಧಿಯನ್ನು ಪಡೆದಿರುವ ದೇವತೆಗಳು ನಿತ್ಯವೂ ವಾಸಮಾಡುವ ದಿವ್ಯಧಾಮವು. ಕಿನ್ನರರೂ, ಗಂಧರ್ವರೂ, ಅಪ್ಸರೆಯರೂ ಸದಾಕಾಲ ಅಲ್ಲಿ ನೆರೆದಿರುತ್ತಾರೆ. ॥ ೯ ॥ ಅಲ್ಲಿ ನಾನಾಧಾತುಗಳಿಂದ ಚಿತ್ರ-ವಿಚಿತ್ರವಾಗಿ ವರ್ಣರಂಜಿತ ವಿವಿಧ ರತ್ನಮಯವಾಗಿರುವ ಉನ್ನತವಾದ ಶಿಖರಗಳು ಕಂಗೊಳಿಸುತ್ತಿವೆ. ಅವು ಬಗೆ-ಬಗೆಯ ಮರ-ಬಳ್ಳಿ-ಪೊದೆಗಳಿಂದ ಕೂಡಿದ್ದು ಅಲ್ಲಿ ಅನೇಕ ವನ್ಯ ಪ್ರಾಣಿಗಳು ಹಿಂಡು-ಹಿಂಡಾಗಿ ಸಂಚರಿಸುತ್ತಿವೆ. ॥ ೧೦ ॥

ನಾನಾಮಲಪ್ರಸ್ರವಣೈರ್ನಾನಾಕಂದರಸಾನುಭಿಃ ।
ರಮಣಂ ವಿಹರಂತೀನಾಂ ರಮಣೈಃ ಸಿದ್ಧಯೋಷಿತಾಮ್ ॥ ೧೧ ॥

ಮಯೂರಕೇಕಾಭಿರುತಂ ಮದಾಂಧಾಲಿವಿಮೂರ್ಛಿತಮ್ ।
ಪ್ಲಾವಿತೈ ರಕ್ತಕಂಠಾನಾಂ ಕೂಜಿತೈಶ್ಚ ಪತತ್ರಿಣಾಮ್ ॥ ೧೨ ॥

ಆಹ್ವಯಂತಮಿವೋದ್ಧಸ್ತೈರ್ದ್ವಿಜಾನ್ಕಾಮದುಘೈರ್ದ್ರುಮೈಃ ।
ವ್ರಜಂತಮಿವ ಮಾತಂಗೈರ್ಗೃಣಂತಮಿವ ನಿರ್ಝರೈಃ ॥ ೧೩ ॥

ಮಂದಾರೈಃ ಪಾರಿಜಾತೈಶ್ಚ ಸರಲೈಶ್ಚೋಪಶೋಭಿತಮ್ ।
ತಮಾಲೈಃ ಶಾಲತಾಲೈಶ್ಚ ಕೋವಿದಾರಾಸನಾರ್ಜುನೈಃ ॥ ೧೪ ॥

ಚೂತೈಃ ಕದಂಬೈರ್ನೀಪೈಶ್ಚ ನಾಗಪುನ್ನಾಗಚಂಪಕೈಃ ।
ಪಾಟಲಾಶೋಕಬಕುಲೈಃ ಕುಂದೈಃ ಕುರಬಕೈರಪಿ ॥ ೧೫ ॥

ಸ್ವರ್ಣಾರ್ಣಶತಪತ್ರೈಶ್ಚ ವರರೇಣುಕಜಾತಿಭಿಃ ।
ಕುಬ್ಜಕೈರ್ಮಲ್ಲಿಕಾಭಿಶ್ಚ ಮಾಧವೀಭಿಶ್ಚ ಮಂಡಿತಮ್ ॥ ೧೬ ॥

ಪನಸೋದುಂಬರಾಶ್ವತ್ಥಪ್ಲಕ್ಷನ್ಯಗ್ರೋಧಹಿಂಗುಭಿಃ ।
ಭೂರ್ಜೈರೋಷಧಿಭಿಃ ಪೂಗೈ ರಾಜಪೂಗೈಶ್ಚ ಜಂಬುಭಿಃ ॥ ೧೭ ॥

ಖರ್ಜೂರಾಮ್ರಾತಕಾಮ್ರಾದ್ಯೈಃ ಪ್ರಿಯಾಲಮಧುಕೇಂಗುದೈಃ ।
ದ್ರುಮಜಾತಿಭಿರನ್ಯೈಶ್ಚ ರಾಜಿತಂ ವೇಣುಕೀಚಕೈಃ ॥ ೧೮ ॥

ಕುಮುದೋತ್ಪಲಕಹ್ಲಾರಶತಪತ್ರವನರ್ದ್ಧಿಭಿಃ ।
ನಲಿನೀಷು ಕಲಂ ಕೂಜತ್ಖಗವೃಂದೋಪಶೋಭಿತಮ್ ॥ ೧೯ ॥

ಮೃಗೈಃ ಶಾಖಾಮೃಗೈಃ ಕ್ರೋಡೈರ್ಮೃಗೇಂದ್ರೈರೃಕ್ಷಶಲ್ಯಕೈಃ ।
ಗವಯೈಃ ಶರಭೈರ್ವ್ಯಾಘ್ರೈ ರುರುಭಿರ್ಮಹಿಷಾದಿಭಿಃ ॥ ೨೦ ॥

ಕರ್ಣಾಂತ್ರೈಕಪದಾಶ್ವಾಸ್ಯೈರ್ನಿರ್ಜುಷ್ಟಂ ವೃಕನಾಭಿಭಿಃ ।
ಕದಲೀಷಂಡಸಂರುದ್ಧ ನಲಿನೀಪುಲಿನಶ್ರಿಯಮ್ ॥ ೨೧ ॥

ಪರ್ಯಸ್ತಂ ನಂದಯಾ ಸತ್ಯಾಃ ಸ್ನಾನಪುಣ್ಯತರೋದಯಾ ।
ವಿಲೋಕ್ಯ ಭೂತೇಶಗಿರಿಂ ವಿಬುಧಾ ವಿಸ್ಮಯಂ ಯಯುಃ ॥ ೨೨ ॥

ದದೃಶುಸ್ತತ್ರ ತೇ ರಮ್ಯಾಮಲಕಾಂ ನಾಮ ವೈ ಪುರೀಮ್ ।
ವನಂ ಸೌಗಂಧಿಕಂ ಚಾಪಿ ಯತ್ರ ತನ್ನಾಮ ಪಂಕಜಮ್ ॥ ೨೩ ॥

ತಿಳಿನೀರಿನಿಂದ ಕೂಡಿದ ಅನೇಕ ಜಲಪ್ರವಾಹಗಳು ಹರಿಯುತ್ತಿರುವುದರಿಂದ, ತನ್ನ ಎತ್ತರವಾದ ಶಿಖರಗಳಿಂದಲೂ, ಆಳವಾದ ಕಂದರಗಳಿಂದಲೂ ಶೋಭಿಸುವ ಆ ಪರ್ವತವು ತಮ್ಮ ಪ್ರಿಯತಮರೊಂದಿಗೆ ವಿಹರಿಸುತ್ತಿರುವ ಸಿದ್ಧರ ಪತ್ನಿಯರಿಗೆ ಕ್ರೀಡಾಸ್ಥಳವಾಗಿದೆ. ॥ ೧೧ ॥ ಅಲ್ಲಿ ಎಲ್ಲೆಡೆ, ಕುಣಿಯುತ್ತಿರುವ ನವಿಲುಗಳ ಕೇಕಾರವಗಳೂ, ಮದವೇರಿದ ದುಂಬಿಗಳ ಝೇಂಕಾರಗಳು, ಕೋಗಿಲೆಗಳ ಪಂಚಮ ಇಂಚರಗಳ ಕೂಜನಗಳೂ, ಬೇರೆ ಪಕ್ಷಿಗಳ ಕಲರವಗಳೂ ಪ್ರತಿಧ್ವನಿಸುತ್ತಿದ್ದವು. ॥ ೧೨ ॥ ಅಲ್ಲಿ ಎತ್ತರವಾಗಿ ಬೆಳೆದಿರುವ ಕಲ್ಪವೃಕ್ಷಗಳು ಹಕ್ಕಿ ಮತ್ತು ಹಾರುವ ದ್ವಿಜಾತಿಗಳನ್ನು ತಮ್ಮ ಕೊಂಬೆಗಳಿಂದ ಕರೆಯುತ್ತಿರುವಂತೆಯೂ, ಕಾಡಾನೆಗಳ ಓಟದಿಂದ ಅವರ ಬಳಿಗೆ ಹೋಗುತ್ತಿರುವಂತೆಯೂ, ನದಿಗಳ ಕಲ-ಕಲಧ್ವನಿಯಿಂದ ಅವರನ್ನು ಮಾತನಾಡಿಸಿ ಕರೆಯುತ್ತಿರುವಂತೆ ಕಂಡುಬರುತ್ತಿತ್ತು. ॥ ೧೩ ॥

ಆ ರಜತಗಿರಿಯು ರಮಣೀಯವಾದ ಮಂದಾರ, ಪಾರಿಜಾತ, ಸರಳ, ತಮಾಲ, ಸಾಲ, ತಾಲ, ಕೋವಿದಾರ, ಅಸನ, ಅರ್ಜುನ, ಚೂತ, ಕದಂಬ, ನೀಪ, ನಾಗ, ಪುನ್ನಾಗ, ಚಂಪಕ, ಪಾಟಲ, ಅಶೋಕ, ಬಕುಳ, ಕುಂದ, ಕುರವಕ, ಸ್ವರ್ಣವರ್ಣದ ಶತಪತ್ರ ಮುಂತಾದ ವೃಕ್ಷಗಳಿಂದಲೂ, ಎಲಾ, ಮಾಲತೀ, ರೇಣುಕ, ಜಾಜಿ, ಕುಬ್ಜಕ, ಮಲ್ಲಿಕಾ, ಮಾಧವೀ ಮುಂತಾದ ಬಳ್ಳಿಗಳಿಂದಲೂ, ಹೆಚ್ಚಾಗಿ ಶೋಭಿಸುತ್ತಿತ್ತು. ॥ ೧೪-೧೬ ॥ ಪನಸ, ಔದುಂಬರ, ಅಶ್ವತ್ಥ, ಪ್ಲಕ್ಷ, ನ್ಯಗ್ರೋಧ, ಹಿಂಗು, ಭೂರ್ಜ, ಪೂಗ, ರಾಜಪೂಗ, ಜಂಬೂ, ಖರ್ಜೂರ, ಆಮ್ರಾತಕ, ಆಮ್ರ, ಪ್ರಿಯಾಳು, ಮಧುಕ, ಇಂಗುದ, ವೇಣು, ಕೀಚಕ ಮುಂತಾದ ವೃಕ್ಷ-ಔಷಧಿ-ವನಸ್ಪತಿಗಳಿಂದ ನೋಡುವವರ ಕಣ್ಮನಗಳನ್ನು ಸೆಳೆಯುತ್ತಿತ್ತು. ॥ ೧೭-೧೮ ॥ ಅದರ ಸರೋವರಗಳಲ್ಲಿ ಅರಳಿ ಆಡುತ್ತಿರುವ ಕುಮುದ, ಕನ್ನೈದಿಲೆ, ಕಲ್ಹಾರ, ಶತಪತ್ರ ಮುಂತಾದ ಕಮಲ ಪುಷ್ಪಕದಂಬಗಳಲ್ಲಿ ಕುಳಿತು ಹಂಸ-ಸಾರಸ-ಕಾರಂಡ ಮುಂತಾದ ಜಲಪಕ್ಷಿಗಳು ಹಿಂಡು-ಹಿಂಡಾಗಿ ಕಲರವಮಾಡುವುದರಿಂದ ಅವು ಶೋಭಿಸುತ್ತಿದ್ದವು. ॥ ೧೯ ॥ ಅಲ್ಲಲ್ಲಿ ಹುಲ್ಲೆಗಳು, ಕಪಿಗಳು, ಕರಡಿಗಳು, ಕಾಡುಹಂದಿಗಳು, ಸಿಂಹಗಳು, ಗವಯಗಳು, ಶರಭಗಳೂ, ವ್ಯಾಘ್ರಗಳೂ, ರುರುಮೃಗಗಳು, ಕೃಷ್ಣಮೃಗಗಳು, ಕಾಡುಕೋಣಗಳು, ಕರ್ಣಾಂತ್ರಗಳು, ಊರ್ಣಾಮೃಗಗಳು, ಒಕ್ಕಾಲಿನ ಮೃಗಗಳು, ಕುದುರೆಮುಖದ ಮೃಗಗಳು, ತೋಳಗಳು, ಕಸ್ತೂರಿಮೃಗಗಳು ಯಥೇಚ್ಛವಾಗಿ ಸಂಚರಿಸುತ್ತವೆ. ಸರೋವರದ ತೀರಗಳು ಬಾಳೆಯ ಸಾಲುಗಳಿಂದ ಶೋಭಿಸುತ್ತಿವೆ. ಸುತ್ತಲೂ ನಂದಾ, ಎಂಬ ನದಿಯು ಹರಿಯುತ್ತಿದ್ದು ಸತೀದೇವಿಯು ಸ್ನಾನದಿಂದಾಗಿ ಇನ್ನೂ ಪವಿತ್ರ ಸುಗಂಧಿತವಾದ ತಿಳಿನೀರಿನಿಂದ ಕೂಡಿದೆ. ಭಗವಾನ್ ಭೂತನಾಥನ ನಿವಾಸ ಸ್ಥಾನವಾದ ಆ ಕೈಲಾಸಪರ್ವತದ ಇಂತಹ ಸೊಬಗನ್ನು ಕಂಡು ದೇವತೆಗಳೂ ಸಹ ಅತ್ಯಂತ ಆಶ್ಚರ್ಯಭರಿತರಾದರು. ॥ ೨೦-೨೨ ॥

ಅಲ್ಲಿ ಅವರು ಅಲಕಾ ಎಂಬ ರಮಣೀಯವಾದ ನಗರಿಯನ್ನು ಮತ್ತು ಸುಗಂಧವನ್ನು ಹರಡುವ ಸೌಗಂಧಿಕವೆಂಬ ಕಮಲಗಳು ಅರಳಿರುವ ಸೌಗಂಧಿಕ ವನವನ್ನು ನೋಡಿದರು. ॥ ೨೩ ॥

ನಂದಾ ಚಾಲಕನಂದಾ ಚ ಸರಿತೌ ಬಾಹ್ಯತಃ ಪುರಃ ।
ತೀರ್ಥಪಾದಪದಾಂಭೋಜರಜಸಾತೀವ ಪಾವನೇ ॥ ೨೪ ॥

ಯಯೋಃ ಸುರಸ್ತ್ರಿಯಃ ಕ್ಷತ್ತರವರುಹ್ಯ ಸ್ವಧಿಷ್ಣ್ಯತಃ ।
ಕ್ರೀಡಂತಿ ಪುಂಸಃ ಸಿಂಚಂತ್ಯೋ ವಿಗಾಹ್ಯ ರತಿಕರ್ಶಿತಾಃ ॥ ೨೫ ॥

ಯಯೋಸ್ತತ್ಸ್ನಾನವಿಭ್ರಷ್ಟನವಕುಂಕುಮಪಿಂಜರಮ್ ।
ವಿತೃಷೋಽಪಿ ಪಿಬಂತ್ಯಂಭಃ ಪಾಯಯಂತೋ ಗಜಾ ಗಜೀಃ ॥ ೨೬ ॥

ತಾರಹೇಮಮಹಾರತ್ನವಿಮಾನಶತಸಂಕುಲಾಮ್ ।
ಜುಷ್ಟಾಂ ಪುಣ್ಯಜನಸ್ತ್ರೀಭಿರ್ಯಥಾ ಖಂ ಸತಡಿದ್ಘನಮ್ ॥ ೨೭ ॥

ಹಿತ್ವಾ ಯಕ್ಷೇಶ್ವರಪುರೀಂ ವನಂ ಸೌಗಂಧಿಕಂ ಚ ತತ್ ।
ದ್ರುಮೈಃ ಕಾಮದುಘೈರ್ಹೃದ್ಯಂ ಚಿತ್ರಮಾಲ್ಯಫಲಚ್ಛದೈಃ ॥ ೨೮ ॥

ರಕ್ತಕಂಠಖಗಾನೀಕಸ್ವರಮಂಡಿತಷಟ್ಪದಮ್ ।
ಕಲಹಂಸಕುಲಪ್ರೇಷ್ಠಂ ಖರದಂಡಜಲಾಶಯಮ್ ॥ ೨೯ ॥

ವನಕುಂಜರಸಂಘೃಷ್ಟಹರಿಚಂದನವಾಯುನಾ ।
ಅಧಿ ಪುಣ್ಯಜನಸ್ತ್ರೀಣಾಂ ಮುಹುರುನ್ಮಥಯನ್ಮನಃ ॥ ೩೦ ॥

ವೈದೂರ್ಯಕೃತಸೋಪಾನಾ ವಾಪ್ಯ ಉತ್ಪಲಮಾಲಿನೀಃ ।
ಪ್ರಾಪ್ತಂ ಕಿಂಪುರುಷೈರ್ದೃಷ್ಟ್ವಾ ತ ಆರಾದ್ದದೃಶುರ್ವಟಮ್ ॥ ೩೦ ॥

ಸ ಯೋಜನಶತೋತ್ಸೇಧಃ ಪಾದೋನವಿಟಪಾಯತಃ ।
ಪರ್ಯಕ್ಕೃತಾಚಲಚ್ಛಾಯೋ ನಿರ್ನೀಡಸ್ತಾಪವರ್ಜಿತಃ ॥ ೩೨ ॥

ತಸ್ಮಿನ್ಮಹಾಯೋಗಮಯೇ ಮುಮುಕ್ಷುಶರಣೇ ಸುರಾಃ ।
ದದೃಶುಃ ಶಿವಮಾಸೀನಂ ತ್ಯಕ್ತಾಮರ್ಷಮಿವಾಂತಕಮ್ ॥ ೩೩ ॥

ಆ ನಗರಿಯ ಹೊರಭಾಗದಲ್ಲಿ ತೀರ್ಥಪಾದನಾದ ಶ್ರೀಹರಿಯ ಚರಣಧೂಳಿಯ ಸಂಯೋಗದಿಂದ ಅತ್ಯಂತ ಪವಿತ್ರವಾಗಿರುವ ನಂದಾ ಮತ್ತು ಅಲಕನಂದಾ ಎಂಬ ಎರಡು ನದಿಗಳು ಹರಿಯುತ್ತಿವೆ. ॥ ೨೪ ॥ ರತಿವಿಲಾಸದಿಂದ ಆಯಾಸಗೊಂಡ ದೇವತಾಸ್ತ್ರೀಯರು ತಮ್ಮ ನಿವಾಸಸ್ಥಾನಗಳಿಂದ ಬಂದು ಆ ನದಿಗಳಲ್ಲಿ ಸ್ನಾನಮಾಡುತ್ತಾ, ತಮ್ಮ ಪ್ರಿಯತಮರ ಮೇಲೆ ನೀರನ್ನೆರಚುತ್ತಿದ್ದರು. ॥ ೨೫ ॥ ಸ್ನಾನಮಾಡುವಾಗ ಅವರ ಸ್ತನಗಳ ಮೇಲಿನ ಕೇಸರಿಯ ಲೇಪವು ತೊಳೆದುಹೋದ್ದರಿಂದ ಆ ನದಿಯ ನೀರು ಹಳದಿಯಾಗುತ್ತಿತ್ತು. ಆ ಕೇಸರಮಿಶ್ರಿತ ನೀರನ್ನು ಗಂಧದ ಆಸೆಯಿಂದ ಆನೆಗಳು ಬಾಯಾರಿಕೆ ಇಲ್ಲದಿದ್ದರೂ ಕುಡಿಯುತ್ತಾ, ಜೊತೆಯ ಹೆಣ್ಣಾನೆಗಳಿಗೂ ಕುಡಿಸುತ್ತಿದ್ದವು. ॥ ೨೬ ॥

ಅಲಕಾನಗರಿಯ ಮೇಲೆ ಚಿನ್ನ, ಬೆಳ್ಳಿ ಮತ್ತು ಬಹುಮೂಲ್ಯ ಮಣಿಗಳಿಂದ ನಿರ್ಮಿತವಾದ ನೂರಾರು ವಿಮಾನಗಳು ವಿರಾಜಿಸುತ್ತಿವೆ. ಅವುಗಳಲ್ಲಿ ಅನೇಕ ಯಕ್ಷಪತ್ನಿಯರು ವಾಸಮಾಡುತ್ತಿದ್ದರು. ಅವುಗಳ ಕಾರಣ ಆ ವಿಶಾಲನಗರಿಯು ಮಿಂಚು-ಮೋಡಗಳಿಂದ ಆವರಿಸಲ್ಪಟ್ಟಿರುವ ಆಕಾಶದಂತೆ ಮೆರೆಯುತ್ತಿದೆ. ॥ ೨೭ ॥ ಯಕ್ಷರಾಜ ಕುಬೇರನ ರಾಜಧಾನಿಯಾದ ಆ ಅಲಕಾಪುರಿಯನ್ನು ಹಿಂದೆ ಹಾಕಿ ದೇವತೆಗಳು ಸೌಗಂಧಿಕವನಕ್ಕೆ ಬಂದರು. ಅದು ಬಣ್ಣ-ಬಣ್ಣದ ಹಣ್ಣು-ಹೂವು ಮತ್ತು ಪತ್ರಗಳಿಂದ ಕೂಡಿದ ಅನೇಕ ಕಲ್ಪವೃಕ್ಷಗಳಿಂದ ಸುಶೋಭಿತವಾಗಿತ್ತು. ॥ ೨೮ ॥ ಅದರಲ್ಲಿ ಕೋಗಿಲೆಯೇ ಮುಂತಾದ ಪಕ್ಷಿಗಳ ಕಲರವವು ಮತ್ತು ದುಂಬಿಗಳ ಝೇಂಕಾರಗಳು ಎಲ್ಲೆಡೆ ಕೇಳಿ ಬರುತ್ತಿದ್ದವು. ರಾಜಹಂಸದ ಪರಮ ಪ್ರಿಯ ಕಮಲಕುಸುಮಗಳಿಂದ ಸುಶೋಭಿತವಾದ ಅನೇಕ ಸರೋವರಗಳು ಇದ್ದವು. ॥ ೨೯ ॥ ಆ ವನವು ಕಾಡಾನೆಗಳು ಉಜ್ಜಿದ್ದರಿಂದ ವಿಶೇಷವಾಗಿ ಗಂಧವನ್ನು ಸೂಸುವ ಹರಿಚಂದನ ವೃಕ್ಷಗಳನ್ನು ಹಾಯ್ದು ಬೀಸುವ ಸುಗಂಧಿತವಾಯುವು ಯಕ್ಷಪತ್ನಿಯರ ಮನಸ್ಸಿನಲ್ಲಿ ವಿಶೇಷವಾಗಿ ಮದವನ್ನೆರಿಸುತ್ತಿತ್ತು. ॥ ೩೦ ॥ ವೈಡೂರ್ಯ ಮಣಿಗಳಿಂದ ರಚಿತವಾದ ಸೋಪಾನಗಳಿಂದ ಕೂಡಿ, ಕಮಲಪುಷ್ಪಗಳ ಸಮೂಹವು ಅರಳಿನಿಂತಿದ್ದ ಅನೇಕ ಪುಷ್ಕರಿಣಿಗಳು ಅಲ್ಲಿ ಶೋಭಿಸುತ್ತಿದ್ದುವು. ಕಿಂಪುರುಷರು ಆಯಾಸ ಪರಿಹಾರಕ್ಕಾಗಿ ಹಾಗೂ ಮನೋವಿನೋದಗಳಿಗಾಗಿ ಅಲ್ಲಿಗೆ ಬಂದಿದ್ದರು. ಇಂತಹ ಮನೋಹರತೆಯನ್ನು ದಿಟ್ಟಿಸುತ್ತಾ ದೇವತೆಗಳು ಸ್ವಲ್ಪ ಮುಂದೆ ಹೋದಾಗ ಅವರಿಗೆ ಸನಿಹದಲ್ಲೇ ಒಂದು ವಿಶಾಲವಾದ ವಟವೃಕ್ಷ ಗೋಚರಿಸಿತು. ॥ ೩೧ ॥

ಆ ಅದ್ಭುತವಾದ ವಟವೃಕ್ಷವು ನೂರು ಯೋಜನಗಳಷ್ಟು ಎತ್ತರವಾಗಿತ್ತು. ಅದರ ಕೊಂಬೆಗಳು ಎಪ್ಪತ್ತೈದು ಯೋಜನ ಹರಡಿಕೊಂಡಿದ್ದವು. ಅದರ ಸುತ್ತಲೂ ನಿರಂತರ ನೆರಳು ಆವರಿಸಿದ್ದು ತಾಪವು ಲವಲೇಶವೂ ಇಲ್ಲದೆ ತಂಪಿನ ನೆಲೆಯಾಗಿತ್ತು. ಆ ವೃಕ್ಷದಲ್ಲಿ ಒಂದು ಗೂಡೂ ಇರಲಿಲ್ಲ. ॥ ೩೨ ॥ ಮಹಾಯೋಗಮಯವೂ, ಮುಮುಕ್ಷುಗಳಿಗೆ ಆಶ್ರಯವೂ ಆದ ಆ ವೃಕ್ಷದ ಕೆಳಗೆ ವಿರಾಜಿಸುತ್ತಿದ್ದ ಭಗವಾನ್ ಶಂಕರನನ್ನು ದೇವತೆಗಳು ನೋಡಿದರು. ಅವನು ಸಾಕ್ಷಾತ್ ಕ್ರೋಧವನ್ನು ತೊರೆದ ಕಾಲನಂತೆ ಬೆಳಗುತ್ತಿದ್ದನು. ॥ ೩೩ ॥

ಸನಂದಾದ್ಯೈರ್ಮಹಾಸಿದ್ಧೈಃ ಶಾಂತೈಃ ಸಂಶಾಂತವಿಗ್ರಹಮ್ ।
ಉಪಾಸ್ಯಮಾನಂ ಸಖ್ಯಾ ಚ ಭರ್ತ್ರಾ ಗುಹ್ಯಕರಕ್ಷಸಾಮ್ ॥ ೩೪ ॥

ವಿದ್ಯಾತಪೋಯೋಗಪಥಮಾಸ್ಥಿತಂ ತಮಧೀಶ್ವರಮ್ ।
ಚರಂತಂ ವಿಶ್ವಸುಹೃದಂ ವಾತ್ಸಲ್ಯಾಲ್ಲೋಕಮಂಗಲಮ್ ॥ ೩೫ ॥

ಲಿಂಗಂ ಚ ತಾಪಸಾಭೀಷ್ಟಂ ಭಸ್ಮದಂಡಜಟಾಜಿನಮ್ ।
ಅಂಗೇನ ಸಂಧ್ಯಾಭ್ರರುಚಾ ಚಂದ್ರಲೇಖಾಂ ಚ ಬಿಭ್ರತಮ್ ॥ ೩೬ ॥

ಉಪವಿಷ್ಟಂ ದರ್ಭಮಯ್ಯಾಂ ಬೃಸ್ಯಾಂ ಬ್ರಹ್ಮ ಸನಾತನಮ್ ।
ನಾರದಾಯ ಪ್ರವೋಚಂತಂ ಪೃಚ್ಛತೇ ಶೃಣ್ವತಾಂ ಸತಾಮ್ ॥ ೩೭ ॥

ಕೃತ್ವೋರೌ ದಕ್ಷಿಣೇ ಸವ್ಯಂ ಪಾದಪದ್ಮಂ ಚ ಜಾನುನಿ ।
ಬಾಹುಂ ಪ್ರಕೋಷ್ಠೇಽಕ್ಷಮಾಲಾಮಾಸೀನಂ ತರ್ಕಮುದ್ರಯಾ ॥ ೩೮ ॥

ತಂ ಬ್ರಹ್ಮನಿರ್ವಾಣಸಮಾಧಿಮಾಶ್ರಿತಂ
ವ್ಯುಪಾಶ್ರಿತಂ ಗಿರಿಶಂ ಯೋಗಕಕ್ಷಾಮ್ ।
ಸಲೋಕಪಾಲಾ ಮುನಯೋ ಮನೂನಾಂ
ಮಾದ್ಯಂ ಮನುಂ ಪ್ರಾಂಜಲಯಃ ಪ್ರಣೇಮುಃ ॥ ೩೯ ॥

ಸ ತೂಪಲಭ್ಯಾಗತಮಾತ್ಮಯೋನಿಂ
ಸುರಾಸುರೇಶೈರಭಿವಂದಿತಾಂಘ್ರಿಃ ।
ಉತ್ಥಾಯ ಚಕ್ರೇ ಶಿರಸಾಭಿವಂದನ-
ಮರ್ಹತ್ತಮಃ ಕಸ್ಯ ಯಥೈವ ವಿಷ್ಣುಃ ॥ ೪೦ ॥

ತಥಾಪರೇ ಸಿದ್ಧಗಣಾ ಮಹರ್ಷಿಭಿ-
ರ್ಯೇ ವೈ ಸಮಂತಾದನು ನೀಲಲೋಹಿತಮ್ ।
ನಮಸ್ಕೃತಃ ಪ್ರಾಹ ಶಶಾಂಕಶೇಖರಂ
ಕೃತಪ್ರಣಾಮಂ ಪ್ರಹಸನ್ನಿವಾತ್ಮಭೂಃ ॥ ೪೧ ॥

ಬ್ರಹ್ಮೋವಾಚ

ಜಾನೇ ತ್ವಾಮೀಶಂ ವಿಶ್ವಸ್ಯ ಜಗತೋ ಯೋನಿಬೀಜಯೋಃ ।
ಶಕ್ತೇಃ ಶಿವಸ್ಯ ಚ ಪರಂ ಯತ್ತದ್‌ಬ್ರಹ್ಮ ನಿರಂತರಮ್ ॥ ೪೨ ॥

ತ್ವಮೇವ ಭಗವನ್ನೇತಚ್ಛಿವಶಕ್ತ್ಯೋಃ ಸರೂಪಯೋಃ ।
ವಿಶ್ವಂ ಸೃಜಸಿ ಪಾಸ್ಯತ್ಸಿ ಕ್ರೀಡನ್ನೂರ್ಣಪಟೋ ಯಥಾ ॥ ೪೩ ॥

ಭಗವಾನ್ ಭೂತನಾಥನ ಅಂಗಾಂಗಗಳು ತುಂಬಾ ಪ್ರಶಾಂತವಾಗಿದ್ದವು. ಸನಂದನಾದಿ ಶಾಂತ ಸಿದ್ಧಗಣರು ಮತ್ತು ಗೆಳೆಯನಾದ ಯಕ್ಷಪತಿಯಾದ ಕುಬೇರನು ಸ್ವಾಮಿಯ ಸೇವೆ ಮಾಡುತ್ತಿದ್ದರು. ॥ ೩೪ ॥ ಜಗತ್ಪತಿಯಾದ ಮಹಾದೇವನು ಜಗತ್ತಿಗೆ ಮಿತ್ರನಾಗಿ, ವಾತ್ಸಲ್ಯದಿಂದ ಎಲ್ಲರಿಗೂ ಕಲ್ಯಾಣವನ್ನುಂಟುಮಾಡುವವನು. ಲೋಕಹಿತಕ್ಕಾಗಿಯೇ ಅವನು ಉಪಾಸನೆ, ತಪಸ್ಸು ಮತ್ತು ಸಮಾಧಿಗಳೇ ಮುಂತಾದ ಯೋಗ ಸಾಧನೆಗಳನ್ನು ಆಚರಿಸುತ್ತಿದ್ದನು. ॥ ೩೫ ॥ ಭಗವಂತನು ಸಂಜೆಯ ಮೋಡದಂತೆ ಬೆಳಗುತ್ತಿದ್ದು, ತನ್ನ ದೇಹದಲ್ಲಿ ತಪಸ್ವಿಗಳಿಗೆ ಇಷ್ಟ ಚಿಹ್ನೆಗಳಾದ ಭಸ್ಮ, ಯೋಗದಂಡ, ಮೃಗಚರ್ಮವನ್ನೂ, ತಲೆಯಲ್ಲಿ ಚಂದ್ರಕಲೆಯನ್ನೂ ಧರಿಸಿದ್ದನು. ॥ ೩೬ ॥ ದರ್ಭೆಯ ಆಸನದಲ್ಲಿ ವಿರಾಜಿಸುತ್ತಿದ್ದ ಪ್ರಭು ದಕ್ಷಿಣಾಮೂರ್ತಿಯು ಶ್ರೋತೃಗಳ ನಡುವೆ ಪ್ರಶ್ನಿಸುತ್ತಿದ್ದ ನಾರದಮಹರ್ಷಿಗಳಿಗೆ ಸನಾತನ ಪರಬ್ರಹ್ಮವನ್ನು ಕುರಿತು ಉಪದೇಶಿಸುತ್ತಿದ್ದನು. ॥ ೩೭ ॥ ಎಡಗಾಲನ್ನು ಬಲತೊಡೆಯ ಮೇಲೂ, ಎಡಗೈಯನ್ನು ಎಡಮಂಡಿಯ ಮೇಲೂ ಇರಿಸಿಕೊಂಡು ಮಣಿಕಟ್ಟಿನಲ್ಲಿ ರುದ್ರಾಕ್ಷಿ ಮಾಲೆಯನ್ನು ಧರಿಸಿ, ತರ್ಕಮುದ್ರೆಯಿಂದ * ಕೂಡಿ ವಿರಾಜಿಸುತ್ತಿದ್ದನು. ॥ ೩೮ ॥ ಅವನು ಯೋಗಪಟ್ಟವನ್ನು ಆಶ್ರಯಿಸಿ ಏಕಾಗ್ರಚಿತ್ತದಿಂದ ಬ್ರಹ್ಮಸಮಾಧಿಯ ಸುಖವನ್ನು ಅನುಭವಿಸುತ್ತಿದ್ದನು. ಲೋಕಪಾಲರ ಸಹಿತ ಸಮಸ್ತ ಮುನಿಗಳು ಮನನಶೀಲರಲ್ಲಿ ಸರ್ವಶ್ರೇಷ್ಠ ಭಗವಾನ್ ಶಂಕರನಿಗೆ ಕೈಜೋಡಿಸಿ ಪ್ರಣಾಮಮಾಡಿದರು. ॥ ೩೯ ॥ ಸಮಸ್ತ ದೇವಾಧಿಪತಿಗಳೂ, ದೈತ್ಯಾಧಿಪತಿಗಳೂ ದೇವದೇವನಾದ ಮಹಾದೇವನ ಚರಣಕಮಲಗಳನ್ನು ವಂದಿಸುತ್ತಿದ್ದರೂ, ಅವನು ಬ್ರಹ್ಮದೇವರು ತನ್ನ ಸ್ಥಾನಕ್ಕೆ ಬಂದಿರುವುದನ್ನು ನೋಡಿ ಕೂಡಲೇ ಮೇಲೆದ್ದು – ವಾಮನಾವತಾರದಲ್ಲಿ ಪರಮಪೂಜ್ಯ ಭಗವಾನ್ ಮಹಾವಿಷ್ಣುವು ಕಶ್ಯಪರಿಗೆ ವಂದಿಸಿದಂತೆಯೇ – ತಲೆತಗ್ಗಿಸಿ ಅವರಿಗೆ ನಮಸ್ಕಾರ ಮಾಡಿದನು. ॥ ೪೦ ॥ ಹಾಗೆಯೇ ಶಿವನ ಸುತ್ತಲೂ ಕುಳಿತಿದ್ದ ಮಹರ್ಷಿಸಹಿತರಾದ ಸಿದ್ಧಗಣಗಳೂ ಬ್ರಹ್ಮದೇವರಿಗೆ ಎದ್ದು ಪ್ರಣಾಮಮಾಡಿದರು. ಎಲ್ಲರೂ ನಮಸ್ಕಾರಮಾಡಿದ ಬಳಿಕ ಬ್ರಹ್ಮದೇವರು ತನಗೆ ನಮಸ್ಕಾರಮಾಡಿದ್ದ ಭಗವಾನ್ ಚಂದ್ರಶೇಖರನಿಗೆ ನಗುತ್ತಾ ಹೀಗೆಂದರು – ॥ ೪೧ ॥

ಬ್ರಹ್ಮದೇವರು ಹೇಳುತ್ತಾರೆ – ಓ ದೇವದೇವಾ! ನೀನು ಇಡೀ ಜಗತ್ತಿಗೆ ಕ್ಷೇತ್ರ ಮತ್ತು ಬೀಜಗಳಾಗಿರುವ ಪ್ರಕೃತಿ ಹಾಗೂ ಪುರುಷ ಇವರಿಬ್ಬರಿಗೂ ಪರನಾಗಿ ಏಕರಸನಾಗಿರುವ ಶಾಶ್ವತ ಪರಬ್ರಹ್ಮನೇ ಆಗಿದ್ದೀಯೆ ಎಂಬುದನ್ನು ನಾನು ಬಲ್ಲೆನು. ॥ ೪೨ ॥ ಎಲೈ ಭಗವಂತನೇ! ನೀನು ನಿನ್ನ ಸ್ವರೂಪಭೂತ ಶಿವ-ಶಕ್ತಿ (ಪ್ರಕೃತಿ-ಪುರುಷ) ರೂಪದಲ್ಲಿ ಕ್ರೀಡಿಸುತ್ತಾ ಜೇಡರ ಹುಳುವಿನಂತೆ ಬೇರಾವುದರ ಅಪೇಕ್ಷೆ ಇಲ್ಲದೆ ಲೀಲೆಯಿಂದ ಈ ಜಗತ್ತೆಂಬ ಬಲೆಯನ್ನು ರಚಿಸಿ, ರಕ್ಷಿಸಿ, ಉಪಸಂಹಾರ ಮಾಡಿಕೊಳ್ಳುತ್ತಿರುವೆ. ॥ ೪೩ ॥

* ತರ್ಜನಿಯನ್ನು ಅಂಗುಷ್ಠದೊಡನೆ ಸೇರಿಸಿ ಇತರ ಬೆರಳುಗಳನ್ನು ಒಟ್ಟಿಗೆ ಸೇರಿಸಿ ಚಾಚಿ, ಜ್ಞಾನವನ್ನು ಬೋಧಿಸುವ ಮುದ್ರೆಗೆ ತರ್ಕಮುದ್ರೆ ಎಂದು ಜ್ಞಾನಮುದ್ರೆ ಎಂದೂ ಹೇಳುತ್ತಾರೆ. ಚಿನ್ಮುದ್ರೆ ಎಂದೂ ಇದರದ್ದೇ ಹೆಸರು.

ತ್ವಮೇವ ಧರ್ಮಾರ್ಥದುಘಾಭಿಪತ್ತಯೇ
ದಕ್ಷೇಣ ಸೂತ್ರೇಣ ಸಸರ್ಜಿಥಾಧ್ವರಮ್ ।
ತ್ವಯೈವ ಲೋಕೇಽವಸಿತಾಶ್ಚ ಸೇತವೋ
ಯಾನ್ ಬ್ರಾಹ್ಮಣಾಃ ಶ್ರದ್ದಧತೇ ಧೃತವ್ರತಾಃ ॥ ೪೪ ॥

ತ್ವಂ ಕರ್ಮಣಾಂ ಮಂಗಲ ಮಂಗಲಾನಾಂ
ಕರ್ತುಃ ಸ್ವ ಲೋಕಂ ತನುಷೇ ಸ್ವಃ ಪರಂ ವಾ ।
ಅಮಂಗಲಾನಾಂ ಚ ತಮಿಸ್ರಮುಲ್ಬಣಂ
ವಿಪರ್ಯಯಃ ಕೇನ ತದೇವ ಕಸ್ಯಚಿತ್ ॥ ೪೫ ॥

ನ ವೈ ಸತಾಂ ತ್ವಚ್ಚರಣಾರ್ಪಿತಾತ್ಮನಾಂ
ಭೂತೇಷು ಸರ್ವೇಷ್ವಭಿಪಶ್ಯತಾಂ ತವ ।
ಭೂತಾನಿ ಚಾತ್ಮನ್ಯಪೃಥಗ್ದಿದೃಕ್ಷತಾಂ
ಪ್ರಾಯೇಣ ರೋಷೋಽಭಿಭವೇದ್ಯಥಾ ಪಶುಮ್ ॥ ೪೬ ॥

ಪೃಥಗ್ಧಿಯಃ ಕರ್ಮದೃಶೋ ದುರಾಶಯಾಃ
ಪರೋದಯೇನಾರ್ಪಿತಹೃದ್ರುಜೋಽನಿಶಮ್ ।
ಪರಾನ್ದುರುಕ್ತೈರ್ವಿತುದಂತ್ಯರುಂತುದಾ-
ಸ್ತಾನ್ಮಾವಧೀದ್ದೈವವಧಾನ್ಭವದ್ವಿಧಃ ॥ ೪೭ ॥

ಯಸ್ಮಿನ್ ಯದಾ ಪುಷ್ಕರನಾಭಮಾಯಯಾ
ದುರಂತಯಾ ಸ್ಪೃಷ್ಟಧಿಯಃ ಪೃಥಗ್ದೃಶಃ ।
ಕುರ್ವಂತಿ ತತ್ರ ಹ್ಯನುಕಂಪಯಾ ಕೃಪಾಂ
ನ ಸಾಧವೋ ದೈವಬಲಾತ್ಕೃತೇ ಕ್ರಮಮ್ ॥ ೪೮ ॥

ಭವಾಂಸ್ತು ಪುಂಸಃ ಪರಮಸ್ಯ ಮಾಯಯಾ
ದುರಂತಯಾಸ್ಪೃಷ್ಟಮತಿಃ ಸಮಸ್ತದೃಕ್ ।
ತಯಾ ಹತಾತ್ಮಸ್ವನುಕರ್ಮಚೇತಃ
ಸ್ವನುಗ್ರಹಂ ಕರ್ತುಮಿಹಾರ್ಹಸಿ ಪ್ರಭೋ ॥ ೪೯ ॥

ಕುರ್ವಧ್ವರಸ್ಯೋದ್ಧರಣಂ ಹತಸ್ಯ ಭೋಃ
ತ್ವಯಾಸಮಾಪ್ತಸ್ಯ ಮನೋ ಪ್ರಜಾಪತೇಃ ।
ನ ಯತ್ರ ಭಾಗಂ ತವ ಭಾಗಿನೋ ದದುಃ
ಕುಯಾಜಿನೋ ಯೇನ ಮಖೋ ನಿನೀಯತೇ ॥ ೫೦ ॥

ಧರ್ಮವನ್ನೂ - ಅರ್ಥವನ್ನೂ ದೊರಕಿಸಿಕೊಡುವ ವೇದಗಳ ರಕ್ಷಣೆಗಾಗಿ ದಕ್ಷನನ್ನು ನಿಮಿತ್ತವನ್ನಾಗಿಸಿಕೊಂಡು ಯಜ್ಞವನ್ನು ಪ್ರಕಟಪಡಿಸಿದವನೂ ನೀನೇ. ನಿಯಮನಿಷ್ಠರಾದ ಬ್ರಾಹ್ಮಣರು ಶ್ರದ್ಧೆಯಿಂದ ಪಾಲಿಸುತ್ತಿರುವ ವರ್ಣಾಶ್ರಮಗಳ ಮರ್ಯಾದೆಗಳನ್ನು ನೆಲೆಗೊಳಿಸಿದವನೂ ನೀನೇ ಆಗಿರುವೆ. ॥ ೪೪ ॥ ಮಂಗಳಮಯ ಮಹೇಶ್ವರನೇ! ನೀನು ಶುಭ ಕರ್ಮಗಳನ್ನು ಮಾಡುವವರಿಗೆ ಸ್ವರ್ಗಲೋಕವನ್ನು ಅಥವಾ ಮೋಕ್ಷವನ್ನು ಕರುಣಿಸುತ್ತಿರುವೆ ಹಾಗೂ ಅಮಂಗಳ ಪಾಪಕರ್ಮಗಳನ್ನು ಮಾಡುವವರಿಗೆ ಘೋರ ನರಕದಲ್ಲಿ ಕೆಡಹುವೆ. ಹಾಗಿರುವಾಗಲೂ ಕೆಲ-ಕೆಲವ್ಯಕ್ತಿಗಳಿಗೆ ಈ ಕರ್ಮಗಳ ಫಲಗಳು ವಿಪರೀತ ಹೇಗಾಗುತ್ತದೆ? ॥ ೪೫ ॥

ನಿನ್ನ ಚರಣಾರವಿಂದಗಳಲ್ಲಿ ತಮ್ಮನ್ನು ಅರ್ಪಿಸಿಕೊಂಡ ಮಹಾನುಭಾವರು ಸಮಸ್ತ ಪ್ರಾಣಿಗಳಲ್ಲಿ ನಿನ್ನನ್ನೇ ನೋಡುತ್ತಾರೆ ಹಾಗೂ ಸಮಸ್ತ ಜೀವರನ್ನು ಅಭೇದದೃಷ್ಟಿಯಿಂದ ಆತ್ಮನಲ್ಲೇ ನೋಡುತ್ತಾರೆ. ಅಂತಹವರು ಪಶುಗಳಂತೆ ಕ್ರೋಧಕ್ಕೆ ವಶರಾಗುವುದಿಲ್ಲ. ॥ ೪೬ ॥ ಭೇದ ಬುದ್ಧಿ ಇರುವ ಕಾರಣ ಕರ್ಮಗಳಲ್ಲೇ ಆಸಕ್ತರಾದ ಜನರ ನಿಯತ್ತು ಸರಿಯಿರುವುದಿಲ್ಲ. ಬೇರೆಯವರ ಉನ್ನತಿಯನ್ನು ನೋಡಿ ಹಗಲು-ರಾತ್ರಿ ಅವರ ಮನಸ್ಸು ಕುದಿಯುತ್ತಾ ಇರುತ್ತದೆ. ಮರ್ಮಭೇದಿಯಾದ ಕಟು ಮಾತುಗಳಿಂದ ಇತರರ ಮನಸ್ಸನ್ನು ನೋಯಿಸುತ್ತಿರುವ ಇಂತಹ ಅಜ್ಞಾನಿಗಳನ್ನು ಕೂಡ ನಿನ್ನಂತಹವರು ಕೊಲ್ಲುವುದು ಉಚಿತವಾಗಲಾರದು. ಏಕೆಂದರೆ, ಆ ಬಡಪಾಯಿಗಳಾದರೋ ವಿಧಿಯಿಂದಲೇ ಮರಣಕ್ಕೆ ತುತ್ತಾದವರು. ॥ ೪೭ ॥ ದೇವದೇವಾ! ಭಗವಾನ್ ಪದ್ಮನಾಭನ ಪ್ರಬಲ ಮಾಯೆಯಿಂದ ಮೋಹಿತರಾಗಿ ಯಾರಾದರೂ ಭೇದಬುದ್ಧಿಯನ್ನು ತೋರಿದರೂ ಸಾಧು-ಸತ್ಪುರುಷರು ತಮ್ಮ ಪರದುಃಖಕಾತರ ಸ್ವಭಾವದಿಂದಾಗಿ ಅವರ ಮೇಲೆ ಕೃಪೆಯನ್ನೇ ಮಾಡುತ್ತಾರೆ. ದೈವವಶದಿಂದ ಏನಾದರೂ ನಡೆದು ಹೋದರೆ 'ಇದೆಲ್ಲ ಕರ್ಮಗಳ ಫಲ'ವೆಂದು ಅದನ್ನು ತಡೆಯುವ ಪ್ರಯತ್ನ ಮಾಡುವುದಿಲ್ಲ. ॥ ೪೮ ॥

ಪ್ರಭುವೇ! ನೀನು ಸರ್ವಜ್ಞನಾಗಿರುವೆ. ಪರಮಪುರುಷ ಭಗವಂತನ ದುಸ್ತರ ಮಾಯೆಯು ನಿನ್ನ ಬುದ್ಧಿಯನ್ನು ಸ್ಪರ್ಶಿಸಲಾರದು. ಆದ್ದರಿಂದ ಯಾರ ಚಿತ್ತವು ಮಾಯೆಗೆ ವಶವಾಗಿ ಕರ್ಮ ಮಾರ್ಗದಲ್ಲಿ ಆಸಕ್ತವಾಗಿದೆಯೋ, ಅವನಿಂದ ಅಪರಾಧ ನಡೆದು ಹೋದರೂ ಕೂಡ ಅವನ ಮೇಲೆ ನೀನು ಕೃಪೆಯನ್ನೇ ತೋರಬೇಕು. ॥ ೪೯ ॥ ಭಗವಂತಾ! ನೀನೇ ಎಲ್ಲಕ್ಕೂ ಮುಖ್ಯನಾದವನು. ಎಲ್ಲ ಯಜ್ಞಗಳನ್ನು ಪೂರ್ಣಗೊಳಿಸುವವನೂ ನೀನೇ ಆಗಿರುವೆ. ಯಜ್ಞಭಾಗವನ್ನು ಪಡೆಯುವ ಪೂರ್ಣ ಅಧಿಕಾರ ನಿನಗಿದೆ. ಆದರೂ ಈ ದಕ್ಷಯಜ್ಞದ ಬುದ್ಧಿಹೀನರಾದ ಯಾಜಕರು ನಿನಗೆ ಯಜ್ಞದ ಹವಿರ್ಭಾಗವನ್ನು ಕೊಡಲಿಲ್ಲ. ಇದರಿಂದಲೇ ಇದು ಧ್ವಂಸವಾಯಿತು. ಈಗ ನೀನು ಅಪೂರ್ಣವಾಗಿರುವ ಯಜ್ಞವನ್ನು ಪೂರ್ಣಗೊಳಿಸುವ ಕೃಪೆಯನ್ನು ಮಾಡಬೇಕು. ॥ ೫೦ ॥

ಜೀವತಾದ್ಯಜಮಾನೋಽಯಂ ಪ್ರಪದ್ಯೇತಾಕ್ಷಿಣೀ ಭಗಃ ।
ಭೃಗೋಃ ಶ್ಮಶ್ರೂಣಿ ರೋಹಂತು ಪೂಷ್ಣೋ ದಂತಾಶ್ಚ ಪೂರ್ವವತ್
॥ ೫೧ ॥

ದೇವಾನಾಂ ಭಗ್ನಗಾತ್ರಾಣಾಮೃತ್ವಿಜಾಂ ಚಾಯುಧಾಶ್ಮಭಿಃ ।
ಭವತಾನುಗೃಹೀತಾನಾಮಾಶು ಮನ್ಯೋಽಸ್ತ್ವನಾತುರಮ್
॥ ೫೨ ॥

ಏಷ ತೇ ರುದ್ರ ಭಾಗೋಽಸ್ತು ಯದುಚ್ಛಿಷ್ಟೋಽಧ್ವರಸ್ಯ ವೈ ।
ಯಜ್ಞಸ್ತೇ ರುದ್ರ ಭಾಗೇನ ಕಲ್ಪತಾಮದ್ಯ ಯಜ್ಞಹನ್
॥ ೫೩ ॥

ಪ್ರಭೋ! ನಿನ್ನ ಅನುಗ್ರಹದಿಂದ – ಯಜ್ಞದ ಯಜಮಾನನಾದ ದಕ್ಷನು ಜೀವಂತನಾಗಲಿ. ಭಗದೇವತೆಗೆ ಕಣ್ಣುಗಳು ಬರಲಿ. ಭೃಗುಮಹರ್ಷಿಗಳಿಗೆ ಗಡ್ಡ-ಮೀಸೆಗಳು ಬರಲಿ. ಪೂಷಾದೇವತೆಗೆ ಮೊದಲಿನಂತೆ ಹಲ್ಲುಗಳು ಮೂಡಲಿ. ॥ ೫೧ ॥ ರುದ್ರದೇವನೇ! ಅಸ್ತ್ರ-ಶಸ್ತ್ರಗಳಿಂದ ಮತ್ತು ಕಲ್ಲುಮಳೆಯಿಂದ ದೇವತೆಗಳ, ಋತ್ವಿಜರ ಗಾಯಗೊಂಡ ಅಂಗಾಂಗಗಳೆಲ್ಲವೂ ನಿನ್ನ ಅನುಗ್ರಹದಿಂದ ಸರಿಯಾಗಲಿ. ॥ ೫೨ ॥ ಯಜ್ಞವು ಸಂಪೂರ್ಣವಾದ ಬಳಿಕ ಶೇಷವಾಗಿ ಉಳಿಯುವುದೆಲ್ಲವೂ ಯಾವಾಗಲೂ ನಿನ್ನ ಭಾಗವೇ ಆಗಿದೆ. ಓ ಯಜ್ಞವಿಧ್ವಂಸಕನೇ! ನಿನ್ನ ಈ ಯಜ್ಞಭಾಗದಿಂದಲೇ ಈಗ ಈ ಯಜ್ಞವು ಪೂರ್ಣವಾಗಲೀ. ॥ ೫೩ ॥

ಆರನೆಯ ಅಧ್ಯಾಯವು ಮುಗಿಯಿತು. ॥ ೬ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಚತುರ್ಥಸ್ಕಂಧೇ
ರುದ್ರಸಾಂತ್ವನಂ ನಾಮ ಷಷ್ಠೋಽಧ್ಯಾಯಃ ॥ ೬ ॥

ಏಳನೆಯ ಅಧ್ಯಾಯ

ದಕ್ಷಯಜ್ಞದ ಪರಿಸಮಾಪ್ತಿ

ಮೈತ್ರೇಯ ಉವಾಚ

ಇತ್ಯಜೇನಾನುನೀತೇನ ಭವೇನ ಪರಿತುಷ್ಯತಾ ।
ಅಭ್ಯಧಾಯಿ ಮಹಾಬಾಹೋ ಪ್ರಹಸ್ಯ ಶ್ರೂಯತಾಮಿತಿ
॥ ೧ ॥

ಶ್ರೀಮಹಾದೇವ ಉವಾಚ

ನಾಘಂ ಪ್ರಜೇಶ ಬಾಲಾನಾಂ ವರ್ಣಯೇ ನಾನುಚಿಂತಯೇ ।
ದೇವಮಾಯಾಭಿಭೂತಾನಾಂ ದಂಡಸ್ತತ್ರ ಧೃತೋ ಮಯಾ
॥ ೨ ॥

ಪ್ರಜಾಪತೇರ್ದಗ್ಧಶೀರ್ಷ್ಣೋ ಭವತ್ವಜಮುಖಂ ಶಿರಃ ।
ಮಿತ್ರಸ್ಯ ಚಕ್ಷುಷೇಕ್ಷೇತ ಭಾಗಂ ಸ್ವಂ ಬರ್ಹಿಷೋ ಭಗಃ
॥ ೩ ॥

ಪೂಷಾ ತು ಯಜಮಾನಸ್ಯ ದದ್ಭಿರ್ಜಕ್ಷತು ಪಿಷ್ಟಭುಕ್ ।
ದೇವಾಃ ಪ್ರಕೃತಸರ್ವಾಂಗಾ ಯೇ ಮ ಉಚ್ಛೇಷಣಂ ದದುಃ
॥ ೪ ॥

ಬಾಹುಭ್ಯಾಮಶ್ವಿನೋಃ ಪೂಷ್ಣೋ ಹಸ್ತಾಭ್ಯಾಂ ಕೃತಬಾಹವಃ ।
ಭವಂತ್ವಧ್ವರ್ಯವಶ್ಚಾನ್ಯೇ ಬಸ್ತಶ್ಮಶ್ರುರ್ಭೃಗುರ್ಭವೇತ್
॥ ೫ ॥

ಶ್ರೀಮೈತ್ರೇಯರು ಹೇಳುತ್ತಾರೆ – ಮಹಾಬಾಹುವಾದ ವಿದುರನೇ! ಬ್ರಹ್ಮದೇವರು ಈ ವಿಧವಾಗಿ ಪ್ರಾರ್ಥಿಸಿದಾಗ ಭಗವಾನ್ ಶಂಕರನು ಪ್ರಸನ್ನತೆಯಿಂದ ನಗುತ್ತಾ ಹೀಗೆ ಹೇಳಿದನು – ಕೇಳಿರಿ. ॥ ೧ ॥

ಶ್ರೀಮಹಾದೇವನಿಂತೆಂದನು – ಪ್ರಜಾಪತಿಯೇ! ಭಗವಂತನ ಮಾಯೆಯಿಂದ ಮೋಹಿತರಾದ ದಕ್ಷನಂತಹ ತಿಳಿಗೇಡಿಗಳ ಅಪರಾಧವನ್ನು ನಾನು ಚರ್ಚಿಸುವುದಿಲ್ಲ, ಹಾಗೂ ನೆನೆಯುವುದೂ ಇಲ್ಲ. ನಾನಾದರೋ ಕೇವಲ ಅವನನ್ನು ಎಚ್ಚರಿಸಲಿಕ್ಕಾಗಿ ಸ್ವಲ್ಪ ದಂಡನೆಯನ್ನು ವಿಧಿಸಿದ್ದೇನೆ. ॥ ೨ ॥ ದಕ್ಷಪ್ರಜಾಪತಿಯ ತಲೆಯು ಸುಟ್ಟುಹೋಗಿದೆ. ಅದಕ್ಕಾಗಿ ಅವನಿಗೆ ಹೋತದ ತಲೆ ಜೋಡಿಸಲಾಗುವುದು. ಭಗದೇವತೆಯು ಮಿತ್ರದೇವತೆಯ ಕಣ್ಣುಗಳಿಂದ ತನ್ನ ಯಜ್ಞಭಾಗವನ್ನು ನೋಡಲಿ. ॥ ೩ ॥ ಹಿಟ್ಟಿನ ರೂಪದಲ್ಲಿ ಆಹಾರವನ್ನು ತಿನ್ನುತ್ತಿದ್ದ ಪೂಷಾದೇವತೆಯು ಯಜಮಾನನ ಹಲ್ಲುಗಳಿಂದ ಹವಿರ್ಭಾಗವನ್ನು ತಿನ್ನುವಂತಾಗಲಿ. ಅಂಗವೈಕಲ್ಯವನ್ನು ಪಡೆದ ಇತರ ದೇವತೆಗಳ ಅಂಗೋಪಾಂಗಗಳು ಆರೋಗ್ಯವನ್ನು ಹೊಂದಲಿ. ಏಕೆಂದರೆ, ಅವರು ಯಜ್ಞದ ಶೇಷಭಾಗವಾದ 'ಸ್ವಿಷ್ಟಕೃತ್' ಎಂಬ ಹವಿರ್ಭಾಗವು ನನಗೆ ಸೇರತಕ್ಕದೆಂದು ನಿಶ್ಚಯಿಸಿರುವರು. ॥ ೪ ॥ ಅಧ್ವರ್ಯುಗಳೇ ಮುಂತಾದ ಋತ್ವಿಜರಲ್ಲಿ ಭುಜಗಳು ಮುರಿದು ಹೋಗಿರುವವರು ಅಶ್ವಿನೀದೇವತೆಗಳ ಭುಜಗಳಿಂದಲೂ, ಹಸ್ತಗಳನ್ನು ಕಳೆದು ಕೊಂಡಿರುವವರು ಪೂಷಾದೇವತೆಯ ಕೈಗಳಿಂದಲೂ ತಮ್ಮ ಕಾರ್ಯಗಳನ್ನು ಮಾಡಲಿ. ಭೃಗುಮಹರ್ಷಿಗಳಿಗೆ ಹೋತದಂತಹ ಗಡ್ಡ-ಮೀಸೆಗಳು ಉಂಟಾಗಲಿ. ॥ ೫ ॥

ಮೈತ್ರೇಯ ಉವಾಚ

ತದಾ ಸರ್ವಾಣಿ ಭೂತಾನಿ ಶ್ರುತ್ವಾ ಮೀಢುಷ್ಟಮೋದಿತಮ್ ।
ಪರಿತುಷ್ಟಾತ್ಮಭಿಸ್ತಾತ ಸಾಧು ಸಾಧ್ವಿತ್ಯಥಾಬ್ರುವನ್ ॥ ೬ ॥

ತತೋ ಮೀಢ್ವಾಂಸಮಾಮಂತ್ರ್ಯ ಶುನಾಸೀರಾಃ ಸಹರ್ಷಿಭಿಃ ।
ಭೂಯಸ್ತದ್ದೇವಯಜನಂ ಸಮೀಢ್ವದ್ವೇಧಸೋ ಯಯುಃ ॥ ೭ ॥

ವಿಧಾಯ ಕಾರ್ತ್ಸ್ನ್ಯೇನ ಚ ತದ್ಯದಾಹ ಭಗವಾನ್ಭವಃ ।
ಸಂದಧುಃ ಕಸ್ಯ ಕಾಯೇನ ಸವನೀಯಪಶೋಃ ಶಿರಃ ॥ ೮ ॥

ಸಂಧೀಯಮಾನೇ ಶಿರಸಿ ದಕ್ಷೋ ರುದ್ರಾಭಿವೀಕ್ಷಿತಃ ।
ಸದ್ಯಃ ಸುಪ್ತ ಇವೋತ್ತಸ್ಥೌ ದದೃಶೇ ಚಾಗ್ರತೋ ಮೃಡಮ್ ॥ ೯ ॥

ತದಾ ವೃಷಧ್ವಜದ್ವೇಷಕಲಿಲಾತ್ಮಾ ಪ್ರಜಾಪತಿಃ ।
ಶಿವಾವಲೋಕಾದಭವಚ್ಛರದ್ಧ್ರದ ಇವಾಮಲಃ ॥ ೧೦ ॥

ಭವಸ್ತವಾಯ ಕೃತಧೀರ್ನಾಶಕ್ನೋದನುರಾಗತಃ ।
ಔತ್ಕಂಠ್ಯಾದ್ಬಾಷ್ಪಕಲಯಾ ಸಂಪರೇತಾಂ ಸುತಾಂ ಸ್ಮರನ್ ॥ ೧೧ ॥

ಕೃಚ್ಛ್ರಾತ್ಸಂಸ್ತಭ್ಯ ಚ ಮನಃ ಪ್ರೇಮವಿಹ್ವಲಿತಃ ಸುಧೀಃ ।
ಶಶಂಸ ನಿರ್ವ್ಯಲೀಕೇನ ಭಾವೇನೇಶಂ ಪ್ರಜಾಪತಿಃ ॥ ೧೨ ॥

ದಕ್ಷ ಉವಾಚ

ಭೂಯಾನನುಗ್ರಹ ಅಹೋ ಭವತಾ ಕೃತೋ ಮೇ
ದಂಡಸ್ತ್ವಯಾ ಮಯಿ ಭೃತೋ ಯದಪಿ ಪ್ರಲಬ್ಧಃ ।
ನ ಬ್ರಹ್ಮಬಂಧುಷು ಚ ವಾಂ ಭಗವನ್ನವಜ್ಞಾ
ತುಭ್ಯಂ ಹರೇಶ್ಚ ಕುತ ಏವ ಧೃತವ್ರತೇಷು ॥ ೧೩ ॥

ವಿದ್ಯಾತಪೋವ್ರತಧರಾನ್ಮುಖತಃ ಸ್ಮ ವಿಪ್ರಾನ್
ಬ್ರಹ್ಮಾಽಽತ್ಮತತ್ತ್ವಮವಿತುಂ ಪ್ರಥಮಂ ತ್ವಮಸ್ರಾಕ್ ।
ತದ್ಬ್ರಾಹ್ಮಣಾನ್ಪರಮ ಸರ್ವವಿಪತ್ಸು ಪಾಸಿ
ಪಾಲಃ ಪಶೂನಿವ ವಿಭೋ ಪ್ರಗೃಹೀತದಂಡಃ ॥ ೧೪ ॥

ಯೋಽಸೌ ಮಯಾವಿದಿತತತ್ತ್ವದೃಶಾ ಸಭಾಯಾಂ
ಕ್ಷಿಪ್ತೋ ದುರುಕ್ತಿವಿಶಿಖೈರಗಣಯ್ಯ ತನ್ಮಾಮ್ ।
ಅರ್ವಾಕ್ಪತಂತಮರ್ಹತ್ತಮನಿಂದಯಾಪಾದ್
ದೃಷ್ಟ್ಯಾಽಽರ್ದ್ರಯಾ ಸ ಭಗವಾನ್ಸ್ವಕೃತೇನ ತುಷ್ಯೇತ್ ॥ ೧೫ ॥

ಶ್ರೀಮೈತ್ರೇಯರು ಹೇಳುತ್ತಾರೆ – ವತ್ಸ ವಿದುರನೇ! ಆಗ ಭಗವಾನ್ ಶಂಕರನ ಮಾತನ್ನು ಕೇಳಿ ಎಲ್ಲರೂ ಪ್ರಸನ್ನಾತ್ಮರಾಗಿ ಧನ್ಯ-ಧನ್ಯವೆಂದು ಕೊಂಡಾಡಿ ಜಯಕಾರಮಾಡಿದರು. ॥ ೬ ॥ ಮತ್ತೆ ಎಲ್ಲ ದೇವತೆಗಳೂ ಮತ್ತು ಋಷಿಗಳೂ ಮಹಾದೇವನನ್ನು ದಕ್ಷನ ಯಜ್ಞಕ್ಕೆ ದಯಮಾಡಿಸಬೇಕೆಂದು ಪ್ರಾರ್ಥಿಸಿ ಅವನನ್ನೂ ಮತ್ತು ಬ್ರಹ್ಮದೇವರನ್ನು ಕರೆದುಕೊಂಡು ಯಜ್ಞಶಾಲೆಗೆ ಹೋದರು. ॥ ೭ ॥ ಭಗವಾನ್ ಶಂಕರನು ಹೇಳಿದಂತೆಯೇ ಅಲ್ಲಿ ಎಲ್ಲವನ್ನು ಮಾಡಿದರು. ದಕ್ಷನ ದೇಹಕ್ಕೆ ಯಜ್ಞಪಶುವಿನ ತಲೆಯನ್ನು ಜೋಡಿಸಿದರು. ॥ ೮ ॥ ತಲೆಯು ಜೋಡಿಸಿದಾಗ ರುದ್ರದೇವರ ದೃಷ್ಟಿ ಬೀಳುತ್ತಲೇ ದಕ್ಷನು ನಿದ್ದೆಯಿಂದ ಎಚ್ಚೆತ್ತುಗೊಂಡವನಂತೆ ಮೇಲೆದ್ದು ತನ್ನ ಮುಂದೆ ನಿಂತಿದ್ದ ಭಗವಾನ್ ಶಿವನನ್ನು ನೋಡಿದನು. ॥ ೯ ॥ ಶಂಕರದ್ರೋಹದಿಂದ ಕಲುಷಿತವಾಗಿದ್ದ ಅವನ ಹೃದಯವು ಶಿವನ ದರ್ಶನದಿಂದ ಶರತ್ಕಾಲದ ಸರೋವರದಂತೆ ಸ್ವಚ್ಛವಾಗಿ ಬಿಟ್ಟಿತು. ॥ ೧೦ ॥ ಅವನು ಮಹಾದೇವನನ್ನು ಸ್ತುತಿಸಲು ಬಯಸಿದರೂ ಮೃತಿಯನ್ನೈದಿದ ತನ್ನ ಪುತ್ರಿಯು ಸ್ಮರಣೆಗೆ ಬಂದು ಪ್ರೀತಿಯಿಂದ ಹಾಗೂ ಉತ್ಕಂಠತೆಯ ಕಾರಣ ಅವನ ಕಣ್ಣುಗಳಲ್ಲಿ ನೀರುತುಂಬಿ, ಮಾತೇ ಹೊರಡದಾಯಿತು. ॥ ೧೧ ॥ ಪ್ರೇಮವಿಹ್ವಲ, ಮೇಧಾವಿಯಾದ ಪ್ರಜಾಪತಿಯು ಹೇಗೋ ತನ್ನ ಹೃದಯದ ಶೋಕವೇಗವನ್ನು ತಡೆದುಕೊಂಡು, ವಿಶುದ್ಧಭಾವದಿಂದ ಭಗವಾನ್ ಶಿವನನ್ನು ಸ್ತುತಿಸತೊಡಗಿದನು. ॥ ೧೨ ॥

ದಕ್ಷನು ಹೇಳುತ್ತಾನೆ – "ಭಗವಂತನೇ! ನಾನು ನಿನ್ನಲ್ಲಿ ಮಹಾಪರಾಧವನ್ನೇ ಮಾಡಿದ್ದೆ. ಆದರೆ ನೀನು ಅದರ ಬದಲಿಗೆ ನನ್ನನ್ನು ಶಿಕ್ಷೆಯ ಮೂಲಕ ಬಹುದೊಡ್ಡ ಅನುಗ್ರಹವನ್ನೇ ಮಾಡಿರುವೆ. ಆಹಾ! ಎಂತಹ ಕೃಪೆ ನಿನ್ನದು! ಪೂಜ್ಯನಾದ ನೀನು ಮತ್ತು ಶ್ರೀಹರಿಯಾದರೋ ಆಚಾರಹೀನರಾದ ಹೆಸರಿಗೆ ಮಾತ್ರ ಬ್ರಾಹ್ಮಣರನ್ನೂ ಕೂಡ ಉಪೇಕ್ಷಿಸುವುದಿಲ್ಲ. ಹಾಗಿರುವಾಗ ನಮ್ಮಂತಹ ಯಜ್ಞ ಮಾಡುವವರನ್ನು ಮರೆಯುವುದುಂಟೇ? ॥ ೧೩ ॥ ಪ್ರಭುವೇ! ನೀನೇ ಬ್ರಹ್ಮರೂಪದಿಂದ ಮೊಟ್ಟಮೊದಲು ಆತ್ಮತತ್ತ್ವವನ್ನು ರಕ್ಷಿಸಲಿಕ್ಕಾಗಿ ತನ್ನ ಮುಖದಿಂದ ವಿದ್ಯೆ, ತಪಸ್ಸು, ವ್ರತಾದಿಗಳನ್ನು ಧರಿಸುವ ಬ್ರಾಹ್ಮಣರನ್ನು ಸೃಷ್ಟಿಮಾಡಿದೆ. ಅನಂತರ ಗೋಪಾಲನು ದೊಣ್ಣೆ ಹಿಡಿದುಕೊಂಡು ಗೋವುಗಳನ್ನು ರಕ್ಷಿಸುತ್ತಿರುವಂತೆ ಆ ಬ್ರಾಹ್ಮಣರನ್ನು ಸಕಲ ವಿಪತ್ತುಗಳಿಂದ ರಕ್ಷಿಸುತ್ತಿರುವೆ. ॥ ೧೪ ॥ ನಾನು ನಿನ್ನ ತತ್ತ್ವವನ್ನು ತಿಳಿದಿರಲಿಲ್ಲ. ಆದರಿಂದ ತುಂಬಿದ ಸಭೆಯಲ್ಲಿ ನಿನ್ನನ್ನು ವಾಗ್ಬಾಣಗಳಿಂದ ಘಾತಿಗೊಳಿಸಿದೆ. ಆದರೆ ನೀನು ನನ್ನ ಆ ಅಪರಾಧವನ್ನು ಎಣಿಸಲೇ ಇಲ್ಲ. ನಾನಾದರೋ ನಿಮ್ಮಂತಹ ಪೂಜ್ಯತಮ ಮಹಾನುಭಾವರ ವಿಷಯದಲ್ಲಿ ಅಪರಾಧ ಮಾಡಿದ್ದರಿಂದ ನರಕಾದಿ ನೀಚ ಲೋಕಗಳಲ್ಲಿ ಬೀಳುವವನಾಗಿದ್ದೆ. ಆದರೆ ನೀನು ನಿನ್ನ ಕರುಣಾಪೂರ್ಣದೃಷ್ಟಿಯಿಂದ ನನ್ನನ್ನು ಉದ್ಧರಿಸಿಬಿಟ್ಟೆ. ಈಗಲೂ ನಿನ್ನನ್ನು ಸಂತೋಷಪಡಿಸುವಂತಹ ಯಾವ ಗುಣವೂ ನನ್ನಲ್ಲಿಲ್ಲ. ಆದರೆ ನೀನು ತನ್ನ ಔದಾರ್ಯದ ವರ್ತನೆಯಿಂದ ನನ್ನ ಮೇಲೆ ಪ್ರಸನ್ನನಾಗು." ॥ ೧೫ ॥

ಮೈತ್ರೇಯ ಉವಾಚ

ಕ್ಷಮಾಪ್ಯೈವಂ ಸ ಮೀಢ್ವಾಂಸಂ ಬ್ರಹ್ಮಣಾ ಚಾನುಮಂತ್ರಿತಃ ।
ಕರ್ಮ ಸಂತಾನಯಾಮಾಸ ಸೋಪಾಧ್ಯಾಯರ್ತ್ವಿಗಾದಿಭಿಃ ॥ ೧೬ ॥

ವೈಷ್ಣವಂ ಯಜ್ಞಸಂತತ್ಯೈ ತ್ರಿಕಪಾಲಂ ದ್ವಿಜೋತ್ತಮಾಃ ।
ಪುರೋಡಾಶಂ ನಿರವಪನ್ ವೀರಸಂಸರ್ಗಶುದ್ಧಯೇ ॥ ೧೭ ॥

ಅಧ್ವರ್ಯುಣಾಽಽತ್ತಹವಿಷಾ ಯಜಮಾನೋ ವಿಶಾಂಪತೇ ।
ಧಿಯಾ ವಿಶುದ್ಧಯಾ ದಧ್ಯೌ ತಥಾ ಪ್ರಾದುರಭೂದ್ಧರಿಃ ॥ ೧೮ ॥

ತದಾ ಸ್ವಪ್ರಭಯಾ ತೇಷಾಂ ದ್ಯೋತಯಂತ್ಯಾ ದಿಶೋ ದಶ ।
ಮುಷ್ಣಂಸ್ತೇಜ ಉಪಾನೀತಸ್ತಾರ್ಕ್ಷ್ಯೇಣ ಸ್ತೋತ್ರವಾಜಿನಾ ॥ ೧೯ ॥

ಶ್ಯಾಮೋ ಹಿರಣ್ಯರಶನೋಽರ್ಕಕಿರೀಟಜುಷ್ಟೋ
ನೀಲಾಲಕಭ್ರಮರಮಂಡಿತಕುಂಡಲಾಸ್ಯಃ ।
ಶಂಖಾಬ್ಜಚಕ್ರಶರಚಾಪಗದಾಸಿಚರ್ಮ-
ವ್ಯಗ್ರೈರ್ಹಿರಣ್ಮಯಭುಜೈರಿವ ಕರ್ಣಿಕಾರಃ ॥ ೨೦ ॥

ವಕ್ಷಸ್ಯಧಿಶ್ರಿತವಧೂರ್ವನಮಾಲ್ಯುದಾರ-
ಹಾಸಾವಲೋಕಕಲಯಾ ರಮಯಂಶ್ಚ ವಿಶ್ವಮ್ ।
ಪಾರ್ಶ್ವಭ್ರಮದ್ವ್ಯಜನಚಾಮರರಾಜಹಂಸಃ
ಶ್ವೇತಾತಪತ್ರಶಶಿನೋಪರಿ ರಜ್ಯಮಾನಃ ॥ ೨೧ ॥

ತಮುಪಾಗತಮಾಲಕ್ಷ್ಯ ಸರ್ವೇ ಸುರಗಣಾದಯಃ ।
ಪ್ರಣೇಮುಃ ಸಹಸೋತ್ಥಾಯ ಬ್ರಹ್ಮೇಂದ್ರತ್ರ್ಯಕ್ಷನಾಯಕಾಃ ॥ ೨೨ ॥

ತತ್ತೇಜಸಾ ಹತರುಚಃ ಸನ್ನಜಿಹ್ವಾಃ ಸಸಾಧ್ವಸಾಃ ।
ಮೂರ್ಧ್ನಾ ಧೃತಾಂಜಲಿಪುಟಾ ಉಪತಸ್ಥುರಧೋಕ್ಷಜಮ್ ॥ ೨೩ ॥

ಶ್ರೀಮೈತ್ರೇಯರು ಹೇಳುತ್ತಾರೆ – ವಿದುರಾ! ಹೀಗೆ ಪಶುಪತಿ ಶಂಕರನಲ್ಲಿ ತಾನು ಮಾಡಿದ ಅಪರಾಧಕ್ಕೆ ಕ್ಷಮೆಯನ್ನು ಯಾಚಿಸಿ, ದಕ್ಷಪ್ರಜಾಪತಿಯು ಬ್ರಹ್ಮದೇವರ ಆದೇಶದಂತೆ ಉಪಾಧ್ಯಾಯರೂ, ಋತ್ವಿಜರೂ ಮುಂತಾದವರ ಸಹಾಯದಿಂದ ಮತ್ತೆ ಯಜ್ಞವನ್ನು ಪ್ರಾರಂಭಿಸಿದನು. ॥ ೧೬ ॥ ಆಗ ಬ್ರಾಹ್ಮಣರು ಯಜ್ಞವನ್ನು ನೆರವೇರಿಸುವ ಉದ್ದೇಶದಿಂದ, ರುದ್ರಪರಿವಾರವಾದ ಭೂತ-ಪ್ರೇತಾದಿಗಳ ಸಂಬಂಧದಿಂದ ಉಂಟಾದ ದೋಷದ ಶಾಂತಿಗಾಗಿ ಮೂರು ಪಾತ್ರೆಗಳಲ್ಲಿ ಭಗವಾನ್ ವಿಷ್ಣುವಿಗಾಗಿ ಸಿದ್ಧಪಡಿಸಿದ ಪುರೋಡಾಶವೆಂಬ ಚರುವನ್ನು ಹೋಮಮಾಡಿದರು. ॥ ೧೭ ॥ ವಿದುರನೇ! ಆ ಹವಿಸ್ಸನ್ನು ಕೈಯಲ್ಲಿ ಎತ್ತಿಕೊಂಡು ನಿಂತಿರುವ ಅಧ್ವರ್ಯುವಿನೊಡನೆ ಯಜಮಾನನಾದ ದಕ್ಷನು ಪರಿಶುದ್ಧವಾದ ಚಿತ್ತದಿಂದ ಧ್ಯಾನಮಾಡುತ್ತಲೇ ಭಗವಂತನು ಅಲ್ಲಿ ಪ್ರಕಟನಾದನು. ॥ ೧೮ ॥ 'ಬೃಹತ್' ಮತ್ತು 'ರಥಂತರ' ಎಂಬ ಸಾಮಮಂತ್ರಗಳೇ ರೆಕ್ಕೆಗಳುಳ್ಳ ಗರುಡದೇವರಿಂದ ಹತ್ತಿರಕ್ಕೆ ಒಯ್ಯಲ್ಪಟ್ಟ ಆ ಭಗವಂತನು ಹತ್ತು ದಿಕ್ಕುಗಳನ್ನು ತನ್ನ ತೇಜಸ್ಸಿನಿಂದ ಬೆಳಗಿಸುತ್ತಾ, ತನ್ನ ಅಂಗಕಾಂತಿಯಿಂದ ಎಲ್ಲ ದೇವತೆಗಳ ತೇಜಸ್ಸನ್ನು ಕಸಿದುಕೊಂಡನು. ಅವನ ಮುಂದೆ ಎಲ್ಲರೂ ನಿಸ್ತೇಜರಾದರು. ॥ ೧೯ ॥ ಅವನ ನೀಲಮೇಘದಂತೆ ಶ್ಯಾಮಲವಾದ ದೇಹಕಾಂತಿಯು, ನಡುವಿನಲ್ಲಿ ಕನಕದ ಕಟಿಸೂತ್ರವೂ, ಮಿಂಚಿನಂತೆ ಮಿನುಗುವ ಪೀತಾಂಬರವೂ ಪ್ರಕಾಶಿಸುತ್ತದೆ. ತಲೆಯಮೇಲೆ ಸೂರ್ಯನಂತೆ ದೇದೀಪ್ಯಮಾನವಾದ ಕಿರೀಟವಿತ್ತು. ಮುಖಕಮಲವು ದುಂಬಿಗಳಂತಿರುವ ನೀಲ ಮುಂಗುರುಳುಗಳಿಂದ ಮತ್ತು ಹೊಳೆಯುವ ಕರ್ಣಕುಂಡಲಗಳಿಂದ ಶೋಭಿಸುತ್ತಿದೆ. ಭಕ್ತರ ರಕ್ಷಣೆಗಾಗಿ ಸದಾ ಸಿದ್ಧವಾಗಿರುವ ಎಂಟು ಭುಜಗಳು ಸುವರ್ಣಾಭರಣಗಳಿಂದ ಶೋಭಿಸುತ್ತಾ ಶಂಖ, ಪದ್ಮ, ಚಕ್ರ, ಬಾಣ, ಧನುಸ್ಸು, ಗದೆ, ಖಡ್ಗ ಮತ್ತು ಗುರಾಣಿಗಳೆಂಬ ದಿವ್ಯಾಯುಧಗಳನ್ನು ಧರಿಸಿ, ಪುಷ್ಪಗಳಿಂದ ತುಂಬಿದ ಕರ್ಣಿಕಾರವೃಕ್ಷದಂತೆ ವಿರಾಜಿಸುತ್ತಿವೆ. ॥ ೨೦ ॥ ಶ್ರೀಹರಿಯ ಹೃದಯದಲ್ಲಿ ಶ್ರೀವತ್ಸಚಿಹ್ನೆಯೂ, ಕೊರಳಿನಲ್ಲಿ ಕಮನೀಯ ವೈಜಯಂತೀವನಮಾಲೆಯೂ ಸುಶೋಭಿತವಾಗಿದೆ. ಅವನು ತನ್ನ ಉದಾರವಾದ ನಗುವಿನಿಂದಲೂ, ಕೃಪಾಕಟಾಕ್ಷದಿಂದಲೂ ಇಡೀ ವಿಶ್ವವನ್ನೇ ಆನಂದಮಗ್ನನಾಗಿಸುತ್ತಿದ್ದನು. ಪಾರ್ಷದರು ಇಕ್ಕೆಲಗಳಲ್ಲಿ ರಾಜಹಂಸದಂತಿರುವ ಬಿಳಿಯ ಚಾಮರಗಳನ್ನು ಬೀಸುತ್ತಿದ್ದರು. ಭಗವಂತನ ತಲೆಯಮೇಲೆ ಚಂದ್ರನಂತೆ ಶುಭ್ರವಾದ ಬೆಳ್ಗೊಡೆಯು ಶೋಭಿಸುತ್ತಿತ್ತು. ॥ ೨೧ ॥

ಭಗವಂತನು ದಯಮಾಡಿಸಿರುವುದನ್ನು ಕಂಡು – ಬ್ರಹ್ಮದೇವರು, ಮಹಾದೇವರು, ಇಂದ್ರನೇ ಮೊದಲಾದ ಸಮಸ್ತ ದೇವತೆಗಳು ಗಂಧರ್ವರು, ಋಷಿಗಳು ಹೀಗೆ ಎಲ್ಲರೂ ನಿಂತುಕೊಂಡು ಅವನಿಗೆ ಪ್ರಣಾಮಮಾಡಿದರು. ॥ ೨೨ ॥ ಅವನ ತೇಜಸ್ಸಿನಿಂದ ಎಲ್ಲರ ಕಾಂತಿಯು ಮಸುಕಾಯಿತು. ನಾಲಿಗೆ ತೊದಲಿತು. ಅವರೆಲ್ಲರೂ ಭಯ-ಭಕ್ತಿಗಳಿಂದ ತಲೆಯಮೇಲೆ ಕೈಜೋಡಿಸಿಕೊಂಡು ಭಗವಂತನ ಮುಂದೆ ನಿಂತುಕೊಂಡರು. ॥ ೨೩ ॥

ಅಪ್ಯರ್ವಾಗ್ವೃತ್ತಯೋ ಯಸ್ಯ ಮಹಿ ತ್ವಾತ್ಮಭುವಾದಯಃ ।
ಯಥಾಮತಿ ಗೃಣಂತಿ ಸ್ಮ ಕೃತಾನುಗ್ರಹವಿಗ್ರಹಮ್ ॥ ೨೭ ॥

ದಕ್ಷೋ ಗೃಹೀತಾರ್ಹಣಸಾದನೋತ್ತಮಂ
ಯಜ್ಞೇಶ್ವರಂ ವಿಶ್ವಸೃಜಾಂ ಪರಂ ಗುರುಮ್ ।
ಸುನಂದನಂದಾದ್ಯನುಗೈರ್ವೃತಂ ಮುದಾ
ಗೃಣನ್ ಪ್ರಪೇದೇ ಪ್ರಯತಃ ಕೃತಾಂಜಲಿಃ ॥ ೨೮ ॥

ದಕ್ಷ ಉವಾಚ

ಶುದ್ಧಂ ಸ್ವಧಾಮ್ನ್ಯುಪರತಾಖಿಲಬುದ್ಧ್ಯವಸ್ಥಂ
ಚಿನ್ಮಾತ್ರಮೇಕಮಭಯಂ ಪ್ರತಿಷಿಧ್ಯ ಮಾಯಾಮ್ ।
ತಿಷ್ಠಂಸ್ತಯೈವ ಪುರುಷತ್ವಮುಪೇತ್ಯ ತಸ್ಯಾ-
ಮಾಸ್ತೇ ಭವಾನಪರಿಶುದ್ಧ ಇವಾತ್ಮತಂತ್ರಃ ॥ ೨೯ ॥

ಋತ್ವಿಜ ಊಚುಃ

ತತ್ತ್ವಂ ನ ತೇ ವಯಮನಂಜನ ರುದ್ರಶಾಪಾತ್
ಕರ್ಮಣ್ಯವಗ್ರಹಧಿಯೋ ಭಗವನ್ವಿದಾಮಃ ।
ಧರ್ಮೋಪಲಕ್ಷಣಮಿದಂ ತ್ರಿವೃದಧ್ವರಾಖ್ಯಂ
ಜ್ಞಾತಂ ಯದರ್ಥಮಧಿದೈವಮದೋ ವ್ಯವಸ್ಥಾಃ ॥ ೩೦ ॥

ಸದಸ್ಯಾ ಊಚುಃ

ಉತ್ಪತ್ತ್ಯಧ್ವನ್ಯಶರಣ ಉರುಕ್ಲೇಶದುರ್ಗೇಽಂತಕೋಗ್ರ-
ವ್ಯಾಲಾನ್ವಿಷ್ಟೇ ವಿಷಯಮೃಗತೃಷ್ಯಾತ್ಮಗೇಹೋರುಭಾರಃ ।
ದ್ವಂದ್ವಶ್ವಭ್ರೇ ಖಲಮೃಗಭಯೇ ಶೋಕದಾವೇಽಜ್ಞಸಾರ್ಥಃ
ಪಾದೌಕಸ್ತೇ ಶರಣದ ಕದಾ ಯಾತಿ ಕಾಮೋಪಸೃಷ್ಟಃ ॥ ೩೧ ॥

ರುದ್ರ ಉವಾಚ

ತವ ವರದ ವರಾಂಘ್ರಾವಾಶಿಷೇಹಾಖಿಲಾರ್ಥೇ
ಹ್ಯಪಿ ಮುನಿಭಿರಸಕ್ತೈರಾದರೇಣಾರ್ಹಣೀಯೇ ।
ಯದಿ ರಚಿತಧಿಯಂ ಮಾವಿದ್ಯಲೋಕೋಽಪವಿದ್ಧಂ
ಜಪತಿ ನ ಗಣಯೇ ತತ್ತ್ವತ್ಪರಾನುಗ್ರಹೇಣ ॥ ೩೨ ॥

ಬ್ರಹ್ಮಾದಿ ದೇವತೆಗಳ ಮತಿಗಳು ಮುಟ್ಟಲಾರದ ಮಹಾಮಹಿಮನಾದನು. ಆದರೂ ಭಕ್ತರಮೇಲೆ ಕೃಪೆದೋರಲು ಹೀಗೆ ಸಾಕಾರನಾಗಿ ಪ್ರಕಟಗೊಂಡ ಆ ಶ್ರೀಹರಿಯನ್ನು ದೇವತೆಗಳು ತಮ್ಮ-ತಮ್ಮ ಬುದ್ಧಿಗನುಗುಣವಾಗಿ ಸ್ತುತಿಸತೊಡಗಿದರು. ॥ ೨೭ ॥ ಎಲ್ಲರಿಗಿಂತ ಮೊದಲಿಗೆ ದಕ್ಷಪ್ರಜಾಪತಿಯು ಒಂದು ಉತ್ತಮ ಪಾತ್ರೆಯಲ್ಲಿ ಪೂಜಾಸಾಮಗ್ರಿಗಳನ್ನು ತುಂಬಿಕೊಂಡು ನಂದ-ಸುನಂದರೇ ಮುಂತಾದ ಪಾರ್ಷದರಿಂದ ಪರಿವೃತನಾಗಿದ್ದ ಪ್ರಜಾಪತಿಗಳಿಗೆ ಪರಮಗುರುವಾದ ಭಗವಾನ್ ಯಜ್ಞಪತಿಯ ಬಳಿಗೆ ಬಂದು ವಿನೀತನಾಗಿ ಪರಮಾನಂದದಿಂದ ಕೈಜೋಡಿಸಿ ಪ್ರಾರ್ಥಿಸುತ್ತಾ ಪ್ರಭುವಿಗೆ ಶರಣಾದನು. ॥ ೨೮ ॥

ದಕ್ಷನು ಹೇಳಿದನು – ಭಗವಂತನೇ! ನಿರಂತರವೂ ಸ್ವಸ್ವರೂಪದಲ್ಲಿ ರಮಿಸುವ ನೀನು ಜಾಗ್ರದಾದಿ ಬುದ್ಧ್ಯವಸ್ಥಾತೀತನಾದ್ದರಿಂದ, ಮಾಯಾರಹಿತನಾಗಿಯೂ, ಚಿನ್ಮಾತ್ರನಾಗಿಯೂ, ಅದ್ವಿತೀಯನಾಗಿಯೂ, ನಿರ್ಭಯನಾಗಿಯೂ ಇರುವೆ. ಹೀಗೆ ನೀನು ಸ್ವತಂತ್ರನಾಗಿದ್ದರೂ, ಮಾಯೆಯಿಂದಾಗಿ ಜೀವಭಾವವನ್ನೂ ಸ್ವೀಕರಿಸಿ, ಅದೇ ಮಾಯೆಯಲ್ಲಿ ಸ್ಥಿತನಾದಾಗ ಅಜ್ಞಾನಿಯಂತೆ ಕಂಡುಬರುವೆ. ॥ ೨೯ ॥

ಋತ್ವಿಜರು ಹೇಳಿದರು – ನಿರಂಜನಸ್ವರೂಪನಾದ ನಾರಾಯಣನೇ! ನಂದೀಶ್ವರನ ಶಾಪದಿಂದ ನಮ್ಮ ಬುದ್ಧಿಯು ಕೇವಲ ಕರ್ಮಕಾಂಡದಲ್ಲೇ ಸಿಲುಕಿಕೊಂಡಿದೆ. ಅದರಿಂದ ನಾವು ನಿನ್ನ ತತ್ತ್ವವನ್ನು ತಿಳಿಯಲಾರದೆ ಹೋಗಿದ್ದೇವೆ. "ಈ ಕರ್ಮಕ್ಕೆ ಇದೇ ದೇವತೆಯು" ಎಂಬ ಧರ್ಮಪ್ರವೃತ್ತಿಯನ್ನು ಹೇಳುವ ಮೂರು ವೇದಗಳು ಪ್ರತಿಪಾದಿಸುವ ಯಜ್ಞವೇ ನಿನ್ನ ಸ್ವರೂಪವೆಂದು ಭಾವಿಸುತ್ತೇವೆ. ॥ ೩೦ ॥

ಸದಸ್ಯರು ಹೇಳಿದರು – ಶರಣಾಗತರಿಗೆ ಆಶ್ರಯನೀಡುವ ಪ್ರಭುವೇ! ಯಾವುದು ಅನೇಕ ಪ್ರಕಾರದ ಕ್ಲೇಶಗಳ ಕಾರಣ ಅತ್ಯಂತ ದುರ್ಗಮವಾಗಿದೆಯೋ, ಯಾವುದರಲ್ಲಿ ಕಾಲರೂಪೀ ಭಯಂಕರ ಸರ್ಪಗಳು ಹೊಂಚುಹಾಕುತ್ತಿವೆಯೋ, ದ್ವಂದ್ವರೂಪವಾದ ಬಹಳಷ್ಟು ಹಳ್ಳ-ಕೊಳ್ಳಗಳಿವೆಯೋ, ದುರ್ಜನರೆಂಬ ಕಾಡುಪ್ರಾಣಿಗಳ ಭಯವಿದೆಯೋ, ಶೋಕವೆಂಬ ಕಾಡ್ಗಿಚ್ಚು ಧಗ-ಧಗನೆ ಉರಿಯುತ್ತಿದೆಯೋ, ಇಂತಹ ವಿಶ್ರಾಂತಿ ಸ್ಥಳವಿಲ್ಲದ ಸಂಸಾರಮಾರ್ಗದಲ್ಲಿ ಅಜ್ಞಾನೀ ಜೀವರು ಕಾಮನೆಗಳಿಂದ ಪೀಡಿತರಾಗಿ, ವಿಷಯಗಳೆಂಬ ಮೃಗತೃಷ್ಣೆಯಿಂದಾಗಿ ದೇಹ-ಗೇಹಗಳೆಂಬ ಭಾರೀ ಹೊರೆಯನ್ನು ತಲೆಯ ಮೇಲೆ ಹೊತ್ತುಕೊಂಡು ಹೋಗುತ್ತಿರುವರಲ್ಲ! ಇಂತಹ ಪಥಿಕರು ಯಾವಾಗ ನಿನ್ನ ಚರಣಕಮಲಗಳಲ್ಲಿ ಶರಣು ಬರುವರೋ! ॥ ೩೧ ॥

ರುದ್ರದೇವರು ಹೇಳುತ್ತಾರೆ – ವರಪ್ರದನಾದ ವಾಸುದೇವನೇ! ನಿನ್ನ ಉತ್ತಮೋತ್ತಮವಾದ ಚರಣಕಮಲಗಳು ಈ ಜಗತ್ತಿನಲ್ಲಿ ಸಕಾಮರಾಗಿ ಪ್ರಾರ್ಥಿಸುವವರ ಎಲ್ಲ ಪುರುಷಾರ್ಥಗಳನ್ನು ಕರುಣಿಸುತ್ತವೆ. ಹಾಗೆಯೇ ನಿಷ್ಕಾಮರಾದ ಮಹಾಮುನಿಗಳೂ ನಿನ್ನ ಈ ಪಾದಾರವಿಂದಗಳನ್ನು ಆದರದಿಂದ ಆರಾಧಿಸುತ್ತಾರೆ. ಅವುಗಳಲ್ಲಿ ಸದಾ ಚಿತ್ತನಿಟ್ಟಿರುವ ನನ್ನನ್ನು ಅಜ್ಞಾನಿಗಳು

ಭೃಗುರುವಾಚ

ಯನ್ಮಾಯಯಾ ಗಹನಯಾಪಹೃತಾತ್ಮಬೋಧಾ
ಬ್ರಹ್ಮಾದಯಸ್ತನುಭೃತಸ್ತಮಸಿ ಸ್ವಪಂತಃ ।
ನಾತ್ಮನ್ ಶ್ರಿತಂ ತವ ವಿದಂತ್ಯಧುನಾಪಿ ತತ್ತ್ವಂ
ಸೋಽಯಂ ಪ್ರಸೀದತು ಭವಾನ್ಪ್ರಣತಾತ್ಮಬಂಧುಃ ॥ ೩೦ ॥

ಬ್ರಹ್ಮೋವಾಚ

ನೈತತ್ಸ್ವರೂಪಂ ಭವತೋಽಸೌ ಪದಾರ್ಥ-
ಭೇದಗ್ರಹೈಃ ಪುರುಷೋ ಯಾವದೀಕ್ಷೇತ್ ।
ಜ್ಞಾನಸ್ಯ ಚಾರ್ಥಸ್ಯ ಗುಣಸ್ಯ ಚಾಶ್ರಯೋ
ಮಾಯಾಮಯಾದ್ವ್ಯತಿರಿಕ್ತೋ ಯತಸ್ತ್ವಮ್ ॥ ೩೧ ॥

ಇಂದ್ರ ಉವಾಚ

ಇದಮಪ್ಯಚ್ಯುತ ವಿಶ್ವಭಾವನಂ
ವಪುರಾನಂದಕರಂ ಮನೋದೃಶಾಮ್ ।
ಸುರವಿದ್ವಿಟ್ಕ್ಷಪಣೈರುದಾಯುಧೈ-
ರ್ಭುಜದಂಡೈರುಪಪನ್ನಮಷ್ಟಭಿಃ ॥ ೩೨ ॥

ಪತ್ನ್ಯ ಊಚುಃ

ಯಜ್ಞೋಽಯಂ ತವ ಯಜನಾಯ ಕೇನ ಸೃಷ್ಟೋ
ವಿಧ್ವಸ್ತಃ ಪಶುಪತಿನಾದ್ಯ ದಕ್ಷಕೋಪಾತ್ ।
ತಂ ನಸ್ತ್ವಂ ಶವಶಯನಾಭಶಾಂತಮೇಧಂ
ಯಜ್ಞಾತ್ಮನ್ನಲಿನರುಚಾ ದೃಶಾ ಪುನೀಹಿ ॥ ೩೩ ॥

ಋಷಯ ಊಚುಃ

ಅನನ್ವಿತಂ ತೇ ಭಗವನ್ವಿಚೇಷ್ಟಿತಂ
ಯದಾತ್ಮನಾ ಚರಸಿ ಹಿ ಕರ್ಮ ನಾಜ್ಯಸೇ ।
ವಿಭೂತಯೇ ಯತ ಉಪಸೇದುರೀಶ್ವರೀಂ
ನ ಮನ್ಯತೇ ಸ್ವಯಮನುವರ್ತತೀಂ ಭವಾನ್ ॥ ೩೪ ॥

ಸಿದ್ಧಾ ಊಚುಃ

ಅಯಂ ತ್ವತ್ಕಥಾಮೃಷ್ಟಪೀಯೂಷನದ್ಯಾಂ
ಮನೋವಾರಣಃ ಕ್ಲೇಶದಾವಾಗ್ನಿದಗ್ಧಃ ।
ತೃಷಾರ್ತೋಽವಗಾಢೋ ನ ಸಸ್ಮಾರ ದಾವಂ
ನ ನಿಷ್ಕ್ರಾಮತಿ ಬ್ರಹ್ಮಸಂಪನ್ನವನ್ನಃ ॥ ೩೫ ॥

ಆಚಾರಭ್ರಷ್ಟನೆಂದು ಹೇಳಿದರೆ ಹೇಳಿಕೊಳ್ಳಲಿ. ನಿನ್ನ ಪರಮಾನುಗ್ರಹದಿಂದ ನಾನು ಅವರ ನಿಂದೆಯನ್ನು ಮನಸ್ಸಿಗೆ ಹಚ್ಚಿಕೊಳ್ಳುವುದೇ ಇಲ್ಲ. ॥ ೨೯ ॥

ಭೃಗುಮುನಿಗಳು ಹೇಳಿದರು – ಸ್ವಾಮಿ! ನಿನ್ನ ಗಹನವಾದ ಮಾಯೆಯಿಂದ ಆತ್ಮಜ್ಞಾನವು ಲೋಪವಾಗಿ, ಅಜ್ಞಾನ-ನಿದ್ರೆಯಲ್ಲಿ ನಿದ್ರಿಸುತ್ತಿರುವ ಬ್ರಹ್ಮದೇವರೇ ಮುಂತಾದ ದೇಹಧಾರಿಗಳಿಂದ ಆತ್ಮಜ್ಞಾನಕ್ಕೆ ಉಪಯೋಗಿಯಾದ ನಿನ್ನ ತತ್ತ್ವವನ್ನು ಇಲ್ಲಿಯವರೆಗೂ ತಿಳಿಯಲಾಗಲಿಲ್ಲ. ಹೀಗಿದ್ದರೂ ನೀನು ನಿನ್ನ ಶರಣಾಗತಭಕ್ತರ ಆತ್ಮನೂ, ಶ್ರೇಷ್ಠ ಸ್ನೇಹಿತನೂ ಆಗಿರುವೆ. ಅಂತಹ ನೀನು ನನ್ನಮೇಲೆ ಪ್ರಸನ್ನನಾಗು. ॥ ೩೦ ॥

ಬ್ರಹ್ಮದೇವರೆಂದರು – ಪ್ರಭುವೇ! ಬೇರೆ-ಬೇರೆ ಪದಾರ್ಥಗಳನ್ನು ಅರಿಯುವ ಇಂದ್ರಿಯಗಳಿಂದ ಪುರುಷನು ಏನೆಲ್ಲ ನೋಡುತ್ತಾನೋ, ಅದು ನಿನ್ನ ಸ್ವರೂಪವಲ್ಲ. ಏಕೆಂದರೆ, ನೀನು ಆ ಜ್ಞಾನಕ್ಕೂ, ಶಬ್ದ-ಸ್ಪರ್ಶಾದಿ ವಿಷಯಗಳಿಗೂ, ಶ್ರೋತ್ರಾದಿ ಇಂದ್ರಿಯಗಳಿಗೂ ಅಧಿಷ್ಠಾನನಾಗಿರುವೆ. ಇವೆಲ್ಲವೂ ನಿನ್ನಲ್ಲೇ ನೆಲೆಸಿವೆ. ಆದ್ದರಿಂದ ನೀನು ಈ ಮಾಯಾಮಯ ಪ್ರಪಂಚದಿಂದ ಅತಿರಿಕ್ತನಾಗಿರುವೆ. ॥ ೩೧ ॥

ಇಂದ್ರನು ಹೇಳಿದನು – ಅಚ್ಯುತನೇ! ದೇವದ್ರೋಹಿಗಳನ್ನು ಸಂಹಾರಮಾಡುವ ನಾನಾ ದಿವ್ಯಾಯುಧಗಳನ್ನು ಧರಿಸಿರುವ, ಅಷ್ಟಭುಜಗಳಿಂದ ಕಂಗೊಳಿಸುತ್ತಿರುವ, ಜಗತ್ತನ್ನು ಪ್ರಕಾಶಿಸುವಂತಹ ನಿನ್ನ ಈ ದಿವ್ಯರೂಪವು ನಮ್ಮ ಕಣ್ಣುಗಳಿಗೆ ಪರಮಾನಂದವನ್ನು ತುಂಬುತ್ತಿದೆ. ॥ ೩೨ ॥

ಯಜ್ಞಪತ್ನಿಯರು ಹೇಳಿದರು – ಎಲೈ ಯಜ್ಞಾತ್ಮಕನಾದ ಪ್ರಭುವೇ! ಬ್ರಹ್ಮದೇವರು ನಿನ್ನ ಆರಾಧನೆಗಾಗಿಯೇ ಈ ಯಜ್ಞವನ್ನು ರಚಿಸಿದ್ದರು. ಆದರೆ ದಕ್ಷನ ಮೇಲೆ ಕೋಪಗೊಂಡು ಭಗವಾನ್ ಪಶುಪತಿಯು ಇದನ್ನು ನಾಶಪಡಿಸಿರುವನು. ಯಜ್ಞಮೂರ್ತಿಯೇ! ಸ್ಮಶಾನ ಭೂಮಿಯಂತೆ ಉತ್ಸವಹೀನವಾದ ನಮ್ಮ ಈ ಯಜ್ಞವನ್ನು ನೀನು ನೀಲಕಮಲದಂತೆ ಕಾಂತಿಯಿಂದ ಕಂಗೊಳಿಸುವ ನಿನ್ನ ಅನುಗ್ರಹದೃಷ್ಟಿಯನ್ನು ಬೀರಿ ಅದನ್ನು ಪವಿತ್ರಗೊಳಿಸು. ॥ ೩೩ ॥

ಋಷಿಗಳು ಹೇಳಿದರು – ಭಗವಂತಾ! ನಿನ್ನ ಲೀಲೆಯು ತುಂಬಾ ಅದ್ಭುತವಾಗಿದೆ. ನೀನು ಕರ್ಮಗಳನ್ನು ಆಚರಿಸುತ್ತಿದ್ದರೂ ಅವು ನಿನಗೆ ಸ್ವಲ್ಪವೂ ಅಂಟಿಕೊಳ್ಳುವುದಿಲ್ಲ. ಇತರ ಜನರು ವೈಭವದ ಆಸೆಯಿಂದ ಯಾವ ಲಕ್ಷ್ಮಿಯನ್ನು ಉಪಾಸನೆ ಮಾಡುವರೋ ಆಕೆಯು ಸದಾ ನಿನ್ನ ಸೇವೆಯಲ್ಲೇ ತೊಡಗಿರುವಳು. ಆದರೂ ನೀನು ಆಕೆಯಲ್ಲಿ ನಿಸ್ಪೃಹನಾಗಿರುವೆಯಲ್ಲ! ॥ ೩೪ ॥

ಸಿದ್ಧರು ಹೇಳಿದರು – ಪ್ರಭುವೇ! ನಮ್ಮ ಮನಸ್ಸೆಂಬ ಆನೆಯು ಬಗೆ-ಬಗೆಯ ಕ್ಲೇಶಗಳೆಂಬ ಕಾಡ್ಗಿಚ್ಚಿನಿಂದ ಬೆಂದು, ಅತ್ಯಂತ ಬಾಯಾರಿಕೆಯಿಂದ ನಿನ್ನ ಕಥೆಗಳೆಂಬ ಪರಿಶುದ್ಧ ಅಮೃತಮಯ ಮಹಾನದಿಯಲ್ಲಿ ಮುಳುಗಿ-ತೇಲುತ್ತಿದೆ. ಅಲ್ಲಿ ಬ್ರಹ್ಮಾನಂದಾನುಭವದಲ್ಲಿ ಲಯಗೊಂಡಂತೆ ಇರುವ ಅದಕ್ಕೆ ಸಂಸಾರವೆಂಬ ಕಾಡ್ಗಿಚ್ಚಿನ ನೆನಪೂ ಬರುವುದಿಲ್ಲ. ಅದು ಆ ನದಿಯಿಂದ ಹೊರ ಬರಲೂ ಬಯಸುವುದಿಲ್ಲ. ॥ ೩೫ ॥

ಯಜಮಾನ್ಯುವಾಚ

ಸ್ವಾಗತಂ ತೇ ಪ್ರಸೀದೇಶ ತುಭ್ಯಂ ನಮಃ
ಶ್ರೀನಿವಾಸ ಶ್ರಿಯಾ ಕಾಂತಯಾ ತ್ರಾಹಿ ನಃ ।
ತ್ವಾಮೃತೇಽಧೀಶ ನಾಂಗೈರ್ಮಖಃ ಶೋಭತೇ
ಶೀರ್ಷಹೀನಃ ಕಬಂಧೋ ಯಥಾ ಪೂರುಷಃ ॥ ೩೬ ॥

ಯಜಮಾನನ ಪತ್ನಿಯು ಹೇಳಿದಳು – ಸರ್ವಸಮರ್ಥ ಪರಮೇಶ್ವರಾ! ನಿನಗೆ ಸ್ವಾಗತವು. ನಿನಗೆ ನಮೋ ನಮಃ. ನೀನು ನಮ್ಮ ಮೇಲೆ ಪ್ರಸನ್ನನಾಗು. ನಿನ್ನ ಮನದನ್ನೆಯಾದ ಶ್ರೀಲಕ್ಷ್ಮೀದೇವಿಯೊಡನೆ ನಮ್ಮನ್ನು ಕಾಪಾಡು. ಓ ಶ್ರೀನಿವಾಸನೇ! ಓ ಯಜ್ಞೇಶ್ವರನೇ! ಉಳಿದ ಎಲ್ಲ ಅಂಗಗಳಿದ್ದರೂ ತಲೆಯಿಲ್ಲದಿದ್ದರೆ ಮನುಷ್ಯದೇಹವು ಶೋಭಿಸುವುದಿಲ್ಲ. ಹಾಗೆಯೇ ನೀನಿಲ್ಲದಿದ್ದರೆ ಯಜ್ಞಕ್ಕೆ ಶೋಭೆಯೇ ಇರುವುದಿಲ್ಲ. ॥ ೩೬ ॥

ಲೋಕಪಾಲಾ ಊಚುಃ

ದೃಷ್ಟಃ ಕಿಂ ನೋ ದೃಗ್ಭಿರಸದ್ಗ್ರಹೈಸ್ತ್ವಂ
ಪ್ರತ್ಯಗ್ದ್ರಷ್ಟಾ ದೃಶ್ಯತೇ ಯೇನ ದೃಶ್ಯಮ್ ।
ಮಾಯಾ ಹ್ಯೇಷಾ ಭವದೀಯಾ ಹಿ ಭೂಮನ್
ಯಸ್ತ್ವಂ ಷಷ್ಠಃ ಪಂಚಭಿರ್ಭಾಸಿ ಭೂತೈಃ ॥ ೩೭ ॥

ಲೋಕಪಾಲಕರು ಹೇಳಿದರು – ಎಲೈ ಅನಂತನಾದ ಪರಮಾತ್ಮನೇ! ನೀನು ಸಮಸ್ತ ಅಂತಃಕರಣಗಳಿಗೆ ಸಾಕ್ಷಿಯಾಗಿರುವೆ. ಈ ಇಡೀ ಜಗತ್ತನ್ನು ನಿನ್ನ ಮೂಲಕವೇ ನೋಡಲಾಗುತ್ತದೆ. ಆದರೂ ಮಾಯಾಮಯವಾದ ಈ ಪ್ರಾಕೃತ ಪದಾರ್ಥಗಳನ್ನು ಗ್ರಹಿಸುವ ನಮ್ಮ ಕಣ್ಣುಗಳೇ ಮುಂತಾದ ಇಂದ್ರಿಯಗಳಿಗೆ ನೀನು ಪ್ರತ್ಯಕ್ಷನಾಗಲಾರೆ. ಏಕೆಂದರೆ ವಾಸ್ತವಿಕವಾಗಿ ನೀನಾದರೋ ಈ ಪಂಚಭೂತಗಳಿಂದ ಪ್ರತ್ಯೇಕವಾಗಿರುವೆ. ಆದರೂ ಈ ಪಾಂಚಭೌತಿಕ ಶರೀರಗಳೊಡನೆ ಕಂಡುಬರುವ ಸಂಬಂಧವು ನಿನ್ನ ಮಾಯೆಯೇ ಆಗಿದೆ. ॥ ೩೭ ॥

ಯೋಗೇಶ್ವರಾ ಊಚುಃ

ಪ್ರೇಯಾನ್ನತೇಽನ್ಯೋಽಸ್ತ್ಯಮುತಸ್ತ್ವಯಿ ಪ್ರಭೋ
ವಿಶ್ವಾತ್ಮನೀಕ್ಷೇನ್ನ ಪೃಥಗ್ಯ ಆತ್ಮನಃ ।
ಅಥಾಪಿ ಭಕ್ತ್ಯೇಶತಯೋಪಧಾವತಾ-
ಮನನ್ಯವೃತ್ತ್ಯಾನುಗೃಹಾಣ ವತ್ಸಲ ॥ ೩೮ ॥

ಜಗದುದ್ಭವಸ್ಥಿತಿಲಯೇಷು ದೈವತೋ
ಬಹುಭಿದ್ಯಮಾನಗುಣಯಾಽಽತ್ಮಮಾಯಯಾ ।
ರಚಿತಾತ್ಮಭೇದಮತಯೇ ಸ್ವಸಂಸ್ಥಯಾ
ವಿನಿವರ್ತಿತಭ್ರಮಗುಣಾತ್ಮನೇ ನಮಃ ॥ ೩೯ ॥

ಯೋಗೇಶ್ವರರು ಹೇಳಿದರು – ಇಡೀ ವಿಶ್ವಕ್ಕೆ ಆತ್ಮನಾಗಿರುವ ನಿನ್ನಿಂದ ತನ್ನನ್ನು ಅಭೇದವಾಗಿ ನೋಡುವವನಿಗಿಂತ ಹೆಚ್ಚಿನ ಪ್ರಿಯರು ನಿನಗೆ ಯಾರೂ ಇಲ್ಲ. ಆದರೂ ಭಕ್ತವತ್ಸಲಾ! ನಿನ್ನಲ್ಲಿ ಸ್ವಾಮಿಭಾವವನ್ನಿಟ್ಟು ಅನನ್ಯ ಭಕ್ತಿಯಿಂದ ನಿನ್ನನ್ನು ಸೇವೆಮಾಡುವ ಭಕ್ತರಮೇಲೂ ನೀನು ಕರುಣೆತೋರು. ॥ ೩೮ ॥ ಜೀವಿಗಳ ಅದೃಷ್ಟವಶದಿಂದ ಪ್ರಕೃತಿಯ ಸತ್ತ್ವಾದಿಗುಣಗಳಲ್ಲಿ ವಿಭಿನ್ನತೆ ಉಂಟಾಗುವುದು. ಅಂತಹ ವಿಚಿತ್ರವಾದ ಮಾಯಾಶಕ್ತಿಯಿಂದ ನೀನು ಜಗತ್ತಿನ ಸೃಷ್ಟಿ, ಸ್ಥಿತಿ, ಲಯಗಳಿಗಾಗಿ ಬ್ರಹ್ಮನೇ ಮುಂತಾದ ವಿಭಿನ್ನ ರೂಪಗಳನ್ನು ಧರಿಸಿ ಭೇದಬುದ್ಧಿಯನ್ನು ಉಂಟುಮಾಡುತ್ತೀಯೆ. ಆದರೆ ಸ್ವರೂಪತಃ ನೀನು ಆ ಭೇದಜ್ಞಾನಕ್ಕೂ ಮತ್ತು ಅದಕ್ಕೆ ಕಾರಣವಾದ ಸತ್ತ್ವಾದಿಗುಣಗಳಿಗೂ ಸರ್ವಥಾ ದೂರವಾಗಿರುವೆ. ಅಂತಹ ನಿನಗೆ ನಮೋ ನಮಃ. ॥ ೩೯ ॥

ಬ್ರಹ್ಮೋವಾಚ

ನಮಸ್ತೇ ಶ್ರಿತಸತ್ತ್ವಾಯ ಧರ್ಮಾದೀನಾಂ ಚ ಸೂತಯೇ ।
ನಿರ್ಗುಣಾಯ ಚ ಯತ್ಕಾಷ್ಠಾಂ ನಾಹಂ ವೇದಾಪರೇಽಪಿ ಚ ॥ ೪೦ ॥

ಬ್ರಹ್ಮಸ್ವರೂಪ ವೇದಗಳು ಹೇಳಿದವು – ನೀನೇ ಧರ್ಮಾದಿಗಳ ಉತ್ಪತ್ತಿಗಾಗಿ ಶುದ್ಧಸತ್ತ್ವವನ್ನು ಸ್ವೀಕರಿಸಿದರೂ – ನಿರ್ಗುಣನೇ ಆಗಿರುವೆ. ನಿನ್ನ ತತ್ತ್ವವನ್ನು ನಾವಾಗಲೀ, ಬ್ರಹ್ಮಾದಿಗಳಾಗಲೀ ಯಾರೂ ಅರಿಯರು. ಇಂತಹ ನಿನಗೆ ನಮಸ್ಕಾರವು. ॥ ೪೦ ॥

ಅಗ್ನಿರುವಾಚ

ಯತ್ತೇಜಸಾಹಂ ಸುಸಮಿದ್ಧತೇಜಾ
ಹವ್ಯಂ ವಹೇ ಸ್ವಧ್ವರ ಆಜ್ಯಸಿಕ್ತಮ್ ।
ತಂ ಯಜ್ಞಿಯಂ ಪಂಚವಿಧಂ ಚ ಪಂಚಭಿಃ
ಸ್ವಿಷ್ಟಂ ಯಜುರ್ಭಿಃ ಪ್ರಣತೋಽಸ್ಮಿ ಯಜ್ಞಮ್ ॥ ೪೧ ॥

ಅಗ್ನಿದೇವರು ಹೇಳಿದರು – ಓ ಭಗವಂತಾ! ನಿನ್ನ ತೇಜದಿಂದಲೇ ಪ್ರಕಾಶಿತನಾಗಿ ನಾನು ಶ್ರೇಷ್ಠವಾದ ಯಜ್ಞಗಳಲ್ಲಿ ದೇವತೆಗಳ ಬಳಿಗೆ ತುಪ್ಪವು ಬೆರೆತಿರುವ ಹವಿಸ್ಸನ್ನು ತಲುಪಿಸುತ್ತೇನೆ. ನೀನು ಸಾಕ್ಷಾತ್ ಯಜ್ಞಪುರುಷನೂ, ಯಜ್ಞಸಂರಕ್ಷಕನೂ ಆಗಿರುವೆ. ಅಗ್ನಿಹೋತ್ರ, ದರ್ಶ, ಪೌರ್ಣಮಾಸ್ಯ, ಚಾತುರ್ಮಾಸ್ಯ ಮತ್ತು ಪಶುಸೋಮ ಎಂಬ ಈ ಐದುಬಗೆಯ ಯಜ್ಞಗಳು ನಿನ್ನ ಸ್ವರೂಪಗಳೇ ಆಗಿವೆ. 'ಆಶ್ರಾವಯಾ', 'ಅಸ್ತುಶ್ರೌಷಟ್', 'ಯಜೆ', 'ಯೇಯಜಾಮಹೇ' ಮತ್ತು 'ವೌಷಟ್' – ಈ ಐದು ಬಗೆಯ ಯಜುರ್ಮಂತ್ರಗಳಿಂದ ನಿನ್ನದೇ ಪೂಜೆ ನಡೆಯುತ್ತಿದೆ. ನಾನು ನಿನಗೆ ವಂದಿಸುತ್ತಿದ್ದೇನೆ. ॥ ೪೧ ॥

ದೇವಾ ಊಚುಃ

ಪುರಾ ಕಲ್ಪಾಪಾಯೇ ಸ್ವಕೃತಮುದರೀಕೃತ್ಯ ವಿಕೃತಂ
ತ್ವಮೇವಾದ್ಯಸ್ತಸ್ಮಿನ್ಸಲಿಲ ಉರಗೇಂದ್ರಾಧಿಶಯನೇ ।
ಪುಮಾನ್ ಶೇಷೇ ಸಿದ್ಧೈರ್ಹೃದಿ ವಿಮೃಶಿತಾಧ್ಯಾತ್ಮಪದವಿಃ
ಸ ಏವಾದ್ಯಾಕ್ಷ್ಣೋರ್ಯಃ ಪಥಿ ಚರಸಿ ಭೃತ್ಯಾನವಸಿ ನಃ ॥ ೪೨ ॥

ದೇವತೆಗಳು ಹೇಳಿದರು – ದೇವಾ! ನೀನೇ ಆದಿಪುರುಷನಾಗಿರುವೆ. ಹಿಂದಿನ ಕಲ್ಪವು ಮುಗಿದಾಗ ನಿನ್ನ ಕಾರ್ಯರೂಪವಾದ ಈ ಪ್ರಪಂಚವನ್ನು ಉದರದಲ್ಲಿ ಲೀನಗೊಳಿಸಿಕೊಂಡು ನೀನೇ ಪ್ರಳಯಕಾಲದ ಜಲದೊಳಗೆ ಆದಿಶೇಷನೆಂಬ ಹಾಸಿಗೆಯ ಮೇಲೆ ಪವಡಿಸಿದ್ದೆ. ಆಗ ನಿನ್ನ ಆಧ್ಯಾತ್ಮಿಕ ಸ್ವರೂಪವನ್ನು ಸಿದ್ಧಗಣಗಳು ತಮ್ಮ ಹೃದಯದಲ್ಲಿ ಚಿಂತಿಸುತ್ತಾರೆ. ಅಂತಹ ಆದಿಪುರುಷನಾದ ನೀನೇ ಈಗ ಭಕ್ತರಾದ ನಮ್ಮ ಕಣ್ಣುಗಳಿಗೆ ವಿಷಯವಾಗಿ ನಮ್ಮನ್ನು ರಕ್ಷಿಸುತ್ತಿರುವೆಯ. ॥ ೪೨ ॥

ಗಂಧರ್ವಾ ಊಚುಃ

ಅಂಶಾಂಶಾಸ್ತೇ ದೇವ ಮರೀಚ್ಯಾದಯ ಏತೇ
ಬ್ರಹ್ಮೇಂದ್ರಾದ್ಯಾ ದೇವಗಣಾ ರುದ್ರಪುರೋಗಾಃ ।
ಕ್ರೀಡಾಭಾಂಡಂ ವಿಶ್ವಮಿದಂ ಯಸ್ಯ ವಿಭೂಮನ್
ತಸ್ಮೈ ನಿತ್ಯಂ ನಾಥ ನಮಸ್ತೇ ಕರವಾಮ ॥ ೪೩ ॥

ಗಂಧರ್ವರು ಹೇಳಿದರು – ದೇವಾ! ಮರೀಚಿಯೇ ಮುಂತಾದ ಋಷಿಗಳೂ ಮತ್ತು ಬ್ರಹ್ಮದೇವರು, ರುದ್ರದೇವರು, ಇಂದ್ರನೇ ಮೊದಲಾದ ದೇವತೆಗಳು, ನಿನ್ನ ಅಂಶದಲ್ಲಿಯೂ ಅಂಶವಾಗಿದ್ದಾರೆ. ಮಹತ್ತಮನಾದ ಪ್ರಭುವೇ! ಈ ಇಡೀ ವಿಶ್ವವು ನಿನ್ನ ಆಟದ ವಸ್ತುವೇ ಆಗಿದೆ. ಸ್ವಾಮಿ! ಅಂತಹ ನಿನಗೆ ನಾವು ಸದಾಕಾಲ ನಮಸ್ಕರಿಸುತ್ತೇವೆ. ॥ ೪೩ ॥

ವಿದ್ಯಾಧರಾ ಊಚುಃ

ತ್ವನ್ಮಾಯಯಾರ್ಥಮಭಿಪದ್ಯ ಕಲೇವರೇಽಸ್ಮಿನ್
ಕೃತ್ವಾ ಮಮಾಹಮಿತಿ ದುರ್ಮತಿರುತ್ಪಥೈಃ ಸ್ವೈಃ ।
ಕ್ಷಿಪ್ತೋಽಪ್ಯಸದ್ವಿಷಯಲಾಲಸ ಆತ್ಮಮೋಹಂ
ಯುಷ್ಮತ್ಕಥಾಮೃತನಿಷೇವಕ ಉದ್ವ್ಯುದಸ್ಯೇತ್ ॥ ೪೪ ॥

ವಿದ್ಯಾಧರರು ಹೇಳಿದರು – ಒಡೆಯಾ! ಪರಮ ಪುರುಷಾರ್ಥದ ಪ್ರಾಪ್ತಿಗಾಗಿ ಸಾಧನರೂಪವಾಗಿ ಈ ಮಾನವ ದೇಹವನ್ನು ಪಡೆದುಕೊಂಡರೂ ಜೀವನು ನಿನ್ನ ಮಾಯೆಯಿಂದ ಮೋಹಿತನಾಗಿ ಇದರಲ್ಲಿ 'ನಾನು-ನನ್ನದು' ಎಂಬ ಅಭಿಮಾನ ಪಡುತ್ತಾನೆ. ಮತ್ತೆ ಆ ದುರ್ಬುದ್ಧಿಯು ತನ್ನ ಆಪ್ತೀಯರಿಂದ ತಿರಸ್ಕೃತನಾದರೂ ಅಸತ್ ಪದಾರ್ಥಗಳಿಗಾಗಿಯೇ ಹಂಬಲಿಸುತ್ತಾನೆ. ಆದರೆ ಇಂತಹ ಅವಸ್ಥೆಯಲ್ಲೂ ನಿನ್ನ ಕಥಾಮೃತವನ್ನು ಸೇವಿಸುವವನು ಈ ಅಂತಃಕರಣದ ಮೋಹವನ್ನು ಪೂರ್ಣರೂಪದಿಂದ ತ್ಯಜಿಸುವನು. ॥ ೪೪ ॥

ಬ್ರಾಹ್ಮಣಾ ಊಚುಃ

ತ್ವಂ ಕ್ರತುಸ್ತ್ವಂ ಹವಿಸ್ತ್ವಂ ಹುತಾಶಃ ಸ್ವಯಂ
ತ್ವಂ ಹಿ ಮಂತ್ರಃ ಸಮಿದ್ದರ್ಭಪಾತ್ರಾಣಿ ಚ ।
ತ್ವಂ ಸದಸ್ಯರ್ತ್ವಿಜೋ ದಂಪತೀ ದೇವತಾ
ಅಗ್ನಿಹೋತ್ರಂ ಸ್ವಧಾ ಸೋಮ ಆಜ್ಯಂ ಪಶುಃ ॥ ೪೫ ॥

ಬ್ರಾಹ್ಮಣರು ಹೇಳಿದರು – ಭಗವಂತನೇ! ಯಜ್ಞವೂ ನೀನೇ. ಹವಿಸ್ಸು ನೀನೇ. ಅಗ್ನಿಯೂ ನೀನೇ. ಮಂತ್ರವೂ ನೀನೇ ಆಗಿರುವೆ. ಸಮಿತ್ತು, ದರ್ಭೆಗಳು, ಯಜ್ಞಪಾತ್ರೆಗಳೂ ನೀನೇ. ಹಾಗೆಯೇ ಸದಸ್ಯರೂ, ಋತ್ವಿಜರೂ, ಯಜಮಾನನೂ, ಯಜಮಾನಪತ್ನಿಯೂ, ದೇವತೆಯೂ, ಅಗ್ನಿಹೋತ್ರವೂ, ಸ್ವಧೆಯೂ, ಸೋಮರಸವೂ, ಘೃತವೂ ಮತ್ತು ಪಶುವೂ ನೀನೇ ಆಗಿರುವಿ. ॥ ೪೫ ॥

ತ್ವಂ ಪುರಾ ಗಾಂ ರಸಾಯಾ ಮಹಾಸೂಕರೋ
ದಂಷ್ಟ್ರಯಾ ಪದ್ಮಿನೀಂ ವಾರಣೇಂದ್ರೋ ಯಥಾ ।
ಸ್ತೂಯಮಾನೋ ನದಂಲ್ಲೀಲಯಾ ಯೋಗಿಭಿ-
ರ್ವ್ಯುಜ್ಜಹರ್ಥ ತ್ರಯೀಗಾತ್ರ ಯಜ್ಞಕ್ರತುಃ ॥ ೪೬ ॥

ವೇದಮೂರ್ತಿಯೇ! ಯಜ್ಞ ಮತ್ತು ಅದರ ಸಂಕಲ್ಪವೂ ನೀನೇ. ಹಿಂದೆ ನೀನೇ ವಿಶಾಲವಾದ ವರಾಹರೂಪವನ್ನು ಧರಿಸಿ ರಸಾತಲದಲ್ಲಿ ಮುಳುಗಿದ್ದ ಭೂಮಿಯನ್ನು – ಗಜರಾಜನು ನೀಲಕಮಲವನ್ನು ಎತ್ತಿ ತಂದಂತೆ – ತನ್ನ ಕೋರೆದಾಡೆಗಳ ಮೇಲೆ ಎತ್ತಿಕೊಂಡು ಲೀಲಾಜಾಲವಾಗಿಯೇ ಮೇಲಕ್ಕೆ ಎತ್ತಿಕೊಂಡು ಬಂದೆ. ಆಗ ಗಂಭೀರವಾಗಿ ಗರ್ಜಿಸುತ್ತಿದ್ದ ನಿನ್ನನ್ನು ಯೋಗಿಗಳು ಈ ಅಲೌಕಿಕ ಪರಾಕ್ರಮವನ್ನು ಕಂಡು ಸ್ತುತಿಸುತ್ತಿದ್ದರು. ॥ ೪೬ ॥

ಯಜ್ಞೇಶ್ವರನೇ! ಜನರು ನಿನ್ನ ನಾಮಗಳನ್ನು ಕೀರ್ತಿಸುವಾಗ ಯಜ್ಞದ ಎಲ್ಲ ವಿಘ್ನಗಳು ನಾಶವಾಗಿ ಹೋಗುತ್ತವೆ. ನಮ್ಮ ಈ ಯಜ್ಞಸ್ವರೂಪವಾದ ಸತ್ಕರ್ಮವು ನಾಶವಾಗಿ ಹೋಗಿತ್ತು. ಅದು

ಸ ಪ್ರಸೀದ ತ್ವಮಸ್ಮಾಕಮಾಕಾಂಕ್ಷತಾಂ
ದರ್ಶನಂ ತೇ ಪರಿಭ್ರಷ್ಟಸತ್ಕರ್ಮಣಾಮ್ ।
ಕೀರ್ತ್ಯಮಾನೇ ನೃಭಿರ್ನಾಮ್ನಿ ಯಜ್ಞೇಶ ತೇ
ಯಜ್ಞವಿಘ್ನಾಃ ಕ್ಷಯಂ ಯಾಂತಿ ತಸ್ಮೈ ನಮಃ ॥ ೪೭ ॥

ಮೈತ್ರೇಯ ಉವಾಚ

ಇತಿ ದಕ್ಷಃ ಕವಿರ್ಯಜ್ಞಂ ಭದ್ರ ರುದ್ರಾಭಿಮರ್ಶಿತಮ್ ।
ಕೀರ್ತ್ಯಮಾನೇ ಹೃಷೀಕೇಶೇ ಸನ್ನಿನ್ಯೇ ಯಜ್ಞಭಾವನೇ ॥ ೪೮ ॥

ಭಗವಾನ್ಸ್ವೇನ ಭಾಗೇನ ಸರ್ವಾತ್ಮಾ ಸರ್ವಭಾಗಭುಕ್ ।
ದಕ್ಷಂ ಬಭಾಷ ಆಭಾಷ್ಯ ಪ್ರೀಯಮಾಣ ಇವಾನಘ ॥ ೪೯ ॥

ಶ್ರೀಭಗವಾನುವಾಚ

ಅಹಂ ಬ್ರಹ್ಮಾ ಚ ಶರ್ವಶ್ಚ ಜಗತಃ ಕಾರಣಂ ಪರಮ್ ।
ಆತ್ಮೇಶ್ವರ ಉಪದ್ರಷ್ಟಾ ಸ್ವಯಂದೃಗವಿಶೇಷಣಃ ॥ ೫೦ ॥

ಆತ್ಮಮಾಯಾಂ ಸಮಾವಿಶ್ಯ ಸೋಽಹಂ ಗುಣಮಯೀಂ ದ್ವಿಜ ।
ಸೃಜನ್‌ರಕ್ಷನ್ ಹರನ್ವಿಶ್ವಂ ದಧ್ರೇ ಸಂಜ್ಞಾಂ ಕ್ರಿಯೋಚಿತಾಮ್ ॥ ೫೧ ॥

ತಸ್ಮಿನ್ ಬ್ರಹ್ಮಣ್ಯದ್ವಿತೀಯೇ ಕೇವಲೇ ಪರಮಾತ್ಮನಿ ।
ಬ್ರಹ್ಮರುದ್ರೌ ಚ ಭೂತಾನಿ ಭೇದೇನಾಜ್ಞೋಽನುಪಶ್ಯತಿ ॥ ೫೨ ॥

ಯಥಾ ಪುಮಾನ್ನ ಸ್ವಾಂಗೇಷು ಶಿರಃ ಪಾಣ್ಯಾದಿಷು ಕ್ವಚಿತ್ ।
ಪಾರಕ್ಯಬುದ್ಧಿಂ ಕುರುತೇ ಏವಂ ಭೂತೇಷು ಮತ್ಪರಃ ॥ ೫೩ ॥

ತ್ರಯಾಣಾಮೇಕಭಾವಾನಾಂ ಯೋ ನ ಪಶ್ಯತಿ ವೈ ಭಿದಾಮ್ ।
ಸರ್ವಭೂತಾತ್ಮನಾಂ ಬ್ರಹ್ಮನ್ ಸ ಶಾಂತಿಮಧಿಗಚ್ಛತಿ ॥ ೫೪ ॥

ಮೈತ್ರೇಯ ಉವಾಚ

ಏವಂ ಭಗವತಾದಿಷ್ಟಃ ಪ್ರಜಾಪತಿಪತಿರ್ಹರಿಮ್ ।
ಅರ್ಚಿತ್ವಾ ಕ್ರತುನಾ ಸ್ವೇನ ದೇವಾನುಭಯತೋಽಯಜತ್ ॥ ೫೫ ॥

ರುದ್ರಂ ಚ ಸ್ವೇನ ಭಾಗೇನ ಹ್ಯುಪಾಧಾವತ್ಸಮಾಹಿತಃ ।
ಕರ್ಮಣೋದವಸಾನೇನ ಸೋಮಪಾನಿತರಾನಪಿ ।
ಉದವಸ್ಯ ಸಹರ್ತ್ವಿಗ್ಭಿಃ ಸಸ್ನಾವವಭೃಥಂ ತತಃ ॥ ೫೬ ॥

ರಿಂದ ನಾವು ನಿನ್ನ ದಿವ್ಯದರ್ಶನವನ್ನು ಬಯಸುತ್ತಿದ್ದೇವೆ. ಈಗ ನಮ್ಮ ಮೇಲೆ ಪ್ರಸನ್ನನಾಗು. ನಿನಗೆ ಅನಂತ ವಂದನೆಗಳು. ॥ ೪೭ ॥

ಶ್ರೀಮೈತ್ರೇಯರು ಹೇಳುತ್ತಾರೆ – ಅಯ್ಯಾ ವಿದುರಾ! ಎಲ್ಲ ಜನರು ಹೀಗೆ ಯಜ್ಞರಕ್ಷಕನಾದ ಭಗವಾನ್ ಹೃಷೀಕೇಶನನ್ನು ಸ್ತುತಿಸತೊಡಗಿದಾಗ ಚತುರನಾದ ದಕ್ಷಪ್ರಜಾಪತಿಯು ರುದ್ರ ಪಾರ್ಷದನಾದ ವೀರಭದ್ರನಿಂದ ಧ್ವಂಸಮಾಡಲ್ಪಟ್ಟ ಯಜ್ಞವನ್ನು ಪುನಃ ಪ್ರಾರಂಭಿಸಿದನು. ॥ ೪೮ ॥ ಸರ್ವಾಂತರ್ಯಾಮಿಯಾದ ಶ್ರೀಹರಿಯಾದರೋ ಎಲ್ಲರ ಯಜ್ಞಭಾಗಗಳ ಭೋಕ್ತಾ ಆಗಿದ್ದರೂ ತ್ರಿಕಪಾಲ ಪುರೋಡಾಶರೂಪವಾದ ತನ್ನ ಭಾಗದಿಂದಲೇ ಹೆಚ್ಚು ಪ್ರಸನ್ನನಾಗಿ ದಕ್ಷನನ್ನು ಸಂಬೋಧಿಸಿ ಇಂತೆಂದನು. ॥ ೪೯ ॥

ಶ್ರೀಭಗವಂತನು ಹೇಳಿದನು – ದಕ್ಷ ಪ್ರಜಾಪತಿಯೇ! ಜಗತ್ತಿನ ಪರಮಕಾರಣನಾದ ನಾನೇ ಬ್ರಹ್ಮನೂ, ಮಹಾದೇವನೂ ಆಗಿದ್ದೇನೆ. ಎಲ್ಲರ ಆತ್ಮನೂ, ಈಶ್ವರನೂ, ಸಾಕ್ಷಿಯೂ ನಾನೇ ಆಗಿರುವೆ ಹಾಗೂ ಸ್ವಯಂಪ್ರಕಾಶನೂ ಉಪಾಧಿಶೂನ್ಯನೂ ಆಗಿರುವೆನು. ॥ ೫೦ ॥ ಬ್ರಾಹ್ಮಣೋತ್ತಮನೇ! ನಾನೇ ನನ್ನ ತ್ರಿಗುಣಾತ್ಮಿಕೆಯಾದ ಮಾಯೆಯನ್ನು ಸ್ವೀಕರಿಸಿ ಜಗತ್ತಿನ ಸೃಷ್ಟಿ ಸ್ಥಿತಿ, ಸಂಹಾರಗಳನ್ನು ಮಾಡುತ್ತಾ ಇರುವೆನು. ನಾನೇ ಆ ಕರ್ಮಗಳಿಗಾಗಿ ಬ್ರಹ್ಮಾ, ವಿಷ್ಣು, ಮಹೇಶ್ವರ ಎಂಬ ಹೆಸರುಗಳನ್ನು ಧರಿಸಿರುವೆನು. ॥ ೫೧ ॥ ಅಂತಹ ಭೇದರಹಿತನಾದ ವಿಶುದ್ಧ ಪರಬ್ರಹ್ಮಸ್ವರೂಪನು ನಾನೇ ಆಗಿರುವೆನು. ಅಜ್ಞಾನೀ ಜನರು ನನ್ನಲ್ಲೇ ಬ್ರಹ್ಮ-ರುದ್ರಾದಿ ಇತರ ಎಲ್ಲ ಜೀವರನ್ನು ಬೇರೆ-ಬೇರೆಯಾಗಿ ಕಾಣುತ್ತಾರೆ. ॥ ೫೨ ॥ ಮನುಷ್ಯನು ತನ್ನ ತಲೆ-ಕೈಕಾಲು ಮುಂತಾದ ಅಂಗಗಳಲ್ಲಿ – 'ಇವುಗಳು ನನ್ನಿಂದ ಬೇರೆಯಾಗಿವೆ' ಎಂಬುದಾಗಿ ಎಂದೂ ತಿಳಿಯುವುದಿಲ್ಲ, ನನ್ನ ಭಕ್ತನಾದವನು ಸಮಸ್ತ ಪ್ರಾಣಿಗಳನ್ನು ನನ್ನಿಂದ ಭಿನ್ನರೆಂದು ನೋಡುವುದಿಲ್ಲ. ॥ ೫೩ ॥ ಎಲೈ ಬ್ರಾಹ್ಮಣವರ್ಯಾ! ಬ್ರಹ್ಮಾ, ವಿಷ್ಣು, ಮಹೇಶ್ವರರೆಂಬ ನಾವು ಮೂವರೂ ಸ್ವರೂಪತಃ ಒಂದೇ ಆಗಿದ್ದೇವೆ. ಎಲ್ಲ ಜೀವರೂಪರೂ ನಾವೇ ಆಗಿರುವೆವು. ಆದ್ದರಿಂದ ನಮ್ಮಲ್ಲಿ ಸ್ವಲ್ಪವೂ ಭೇದಬುದ್ಧಿಯನ್ನು ಇರಿಸದವನೇ ಶಾಂತಿಯನ್ನು ಪಡೆಯುವನು. ॥ ೫೪ ॥

ಶ್ರೀಮೈತ್ರೇಯರು ಹೇಳುತ್ತಾರೆ – ಭಗವಂತನು ಹೀಗೆ ಅಪ್ಪಣೆ ಕೊಡಿಸಲು ಪ್ರಜಾಪತಿಗಳ ಅಧಿಪತಿಯಾದ ದಕ್ಷನು ತ್ರಿಕಪಾಲ ಯಜ್ಞದಿಂದ ಶ್ರೀಹರಿಯನ್ನು ಆರಾಧಿಸಿ, ಅನಂತರ ಅಂಗಭೂತ ಮತ್ತು ಪ್ರಧಾನವಾದ ಎರಡೂ ಬಗೆಯ ಯಜ್ಞಗಳಿಂದ ಇತರ ದೇವತೆಗಳನ್ನೂ ಪೂಜಿಸಿದನು. ॥ ೫೫ ॥ ಮತ್ತೆ ಏಕಾಗ್ರಚಿತ್ತನಾಗಿ ಯಜ್ಞಶೇಷವಾದ ಭಾಗದಿಂದ ಅಂದರೆ 'ಸ್ವಿಷ್ಟಕೃತ್' ಎಂಬ ಹವಿರ್ಭಾಗದಿಂದ ಭಗವಾನ್ ರುದ್ರನನ್ನು ಪೂಜಿಸಿದನು. ಕೊನೆಯಲ್ಲಿ ಮಾಡಲಾಗುವ 'ಉದವಸಾನ' ಎಂಬ ಕರ್ಮದಿಂದ ಇತರ ಸೋಮಪಾಯಿಗಳನ್ನು ಹಾಗೂ ಇತರ ದೇವತೆಗಳನ್ನೂ ಆರಾಧಿಸಿ ಯಜ್ಞವನ್ನು ಮುಗಿಸಿ ಕೊನೆಗೆ ಋತ್ವಿಜರ ಸಹಿತ ಅವಭೃತ ಸ್ನಾನವನ್ನು ಮಾಡಿದನು. ॥ ೫೬ ॥

ತಸ್ಮಾ ಅಪ್ಯನುಭಾವೇನ ಸ್ವೇನೈವಾವಾಪ್ತರಾಧಸೇ ।
ಧರ್ಮ ಏವ ಮತಿಂ ದತ್ತ್ವಾ ತ್ರಿದಶಾಸ್ತೇ ದಿವಂ ಯಯುಃ ॥ ೫೭ ॥

ಏವಂ ದಾಕ್ಷಾಯಣೀ ಹಿತ್ವಾ ಸತೀ ಪೂರ್ವಕಲೇವರಮ್ ।
ಜಜ್ಞೇ ಹಿಮವತಃ ಕ್ಷೇತ್ರೇ ಮೇನಾಯಾಮಿತಿ ಶುಶ್ರುಮ ॥ ೫೮ ॥

ತಮೇವ ದಯಿತಂ ಭೂಯ ಆವೃಂಕ್ತೇ ಪತಿಮಂಬಿಕಾ ।
ಅನನ್ಯಭಾವೈಕಗತಿಂ ಶಕ್ತಿಃ ಸುಪ್ತೇವ ಪೂರುಷಮ್ ॥ ೫೯ ॥

ಏತದ್ಭಗವತಃ ಶಂಭೋಃ ಕರ್ಮ ದಕ್ಷಾಧ್ವರದ್ರುಹಃ ।
ಶ್ರುತಂ ಭಾಗವತಾಚ್ಛಿಷ್ಯಾದುದ್ಧವಾನ್ಮೇ ಬೃಹಸ್ಪತೇಃ ॥ ೬೦ ॥

ಇದಂ ಪವಿತ್ರಂ ಪರಮೀಶಚೇಷ್ಟಿತಂ
ಯಶಸ್ಯಮಾಯುಷ್ಯಮಘೌಘಮರ್ಷಣಮ್ ।
ಯೋ ನಿತ್ಯದಾಽಽಕರ್ಣ್ಯ ನರೋಽನುಕೀರ್ತಯೇದ್
ಧುನೋತ್ಯಘಂ ಕೌರವ ಭಕ್ತಿಭಾವತಃ ॥ ೬೧ ॥

ಬಳಿಕ ತನ್ನ ಪುರುಷಾರ್ಥದಿಂದಲೇ ಎಲ್ಲ ರೀತಿಯ ಸಿದ್ಧಿಗಳನ್ನು ಪಡೆದುಕೊಂಡಿದ್ದ ದಕ್ಷಪ್ರಜಾಪತಿಯನ್ನು – 'ನಿನ್ನ ಬುದ್ಧಿಯು ಸದಾಕಾಲ ಧರ್ಮದಲ್ಲೇ ನೆಲೆಸಲಿ' ಎಂದು ಆಶೀರ್ವದಿಸಿ ಎಲ್ಲ ದೇವತೆಗಳು ಸ್ವರ್ಗಲೋಕಕ್ಕೆ ತೆರಳಿಹೋದರು. ॥ ೫೭ ॥

ವಿದುರನೇ! ದಕ್ಷಸುತೆಯಾದ ಸತೀದೇವಿಯು ಹೀಗೆ ತನ್ನ ಹಿಂದಿನ ಶರೀರವನ್ನು ತ್ಯಾಗಗೈದು ಮತ್ತೆ ಹಿಮವಂತನ ಪತ್ನಿಯಾದ ಮೇನಾದೇವಿಯ ಗರ್ಭದಿಂದ ಆವಿರ್ಭವಿಸಿದಳು. ॥ ೫೮ ॥ ಪ್ರಳಯಕಾಲದಲ್ಲಿ ಲೀನವಾದ ಶಕ್ತಿಯು ಸೃಷ್ಟಿಯ ಪ್ರಾರಂಭದಲ್ಲಿ ಪುನಃ ಈಶ್ವರನನ್ನು ಆಶ್ರಯಿಸುವಂತೆ, ಅನನ್ಯಪರಾಯಣೆಯಾದ ಶ್ರೀಜಗದಂಬೆಯು ಆ ಜನ್ಮದಲ್ಲಿಯೂ ತನ್ನ ಏಕಮಾತ್ರ ಆಶ್ರಯನೂ, ಪ್ರಿಯತಮನೂ ಆದ ಭಗವಾನ್ ಶ್ರೀಶಂಕರನನ್ನೇ ಪತಿಯಾಗಿ ವರಿಸಿದಳು. ॥ ೫೯ ॥ ವಿದುರನೇ! ದಕ್ಷಯಜ್ಞವನ್ನು ಧ್ವಂಸಮಾಡಿದ ಭಗವಾನ ಶಿವನ ಈ ಚರಿತ್ರವನ್ನು ನಾನು ಹಿಂದೆ ಬೃಹಸ್ಪತ್ಯಾಚಾರ್ಯರ ಶಿಷ್ಯನಾದ ಪರಮಭಾಗವತೋತ್ತಮ ಉದ್ಧವನ ಮುಖದಿಂದ ಕೇಳಿದ್ದೆನು. ॥ ೬೦ ॥ ಕುರುನಂದನಾ! ಶ್ರೀಪರಮೇಶ್ವರನ ಈ ಪಾವನ ಚರಿತ್ರವು, ಯಶಸ್ಸನ್ನೂ ಆಯುಸ್ಸನ್ನೂ ವೃದ್ಧಿಪಡಿಸುವುದು ಮತ್ತು ಪಾಪರಾಶಿಯನ್ನು ನಾಶ ಪಡಿಸುವಂತಹುದು. ಭಕ್ತಿಭಾವದಿಂದ ಇದನ್ನು ಪ್ರತಿದಿನವೂ ಶ್ರವಣ-ಕೀರ್ತನೆ ಮಾಡುವವನು ತನ್ನ ಸಕಲ ಪಾಪರಾಶಿಯನ್ನು ತೊಳೆದು ಪವಿತ್ರನಾಗುವನು. ॥ ೬೧ ॥

ಏಳನೆಯ ಅಧ್ಯಾಯವು ಮುಗಿಯಿತು. ॥ ೭ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಚತುರ್ಥಸ್ಕಂಧೇ
ದಕ್ಷಯಜ್ಞಸಂಧಾನಂ ನಾಮ ಸಪ್ತಮೋಽಧ್ಯಾಯಃ ॥ ೭ ॥

ಎಂಟನೆಯ ಅಧ್ಯಾಯ

ಧ್ರುವನ ವನ ಗಮನ

ಮೈತ್ರೇಯ ಉವಾಚ

ಸನಕಾದ್ಯಾ ನಾರದಶ್ಚ ಋಭುರ್ಹಂಸೋಽರುಣಿರ್ಯತಿಃ ।
ನೈತೇ ಗೃಹಾನ್ ಬ್ರಹ್ಮಸುತಾ ಹ್ಯಾವಸನ್ನೂರ್ಧ್ವರೇತಸಃ ॥ ೧ ॥

ಮೃಷಾಧರ್ಮಸ್ಯ ಭಾರ್ಯಾಸೀದ್ದಂಭಂ ಮಾಯಾಂ ಚ ಶತ್ರುಹನ್ ।
ಅಸೂತ ಮಿಥುನಂ ತತ್ತು ನಿರ್ಋತಿರ್ಜಗೃಹೇಽಪ್ರಜಃ ॥ ೨ ॥

ತಯೋಃ ಸಮಭವಲ್ಲೋಭೋ ನಿಕೃತಿಶ್ಚ ಮಹಾಮತೇ ।
ತಾಭ್ಯಾಂ ಕ್ರೋಧಶ್ಚ ಹಿಂಸಾ ಚ ಯದ್ದುರುಕ್ತಿಃ ಸ್ವಸಾ ಕಲಿಃ ॥ ೩ ॥

ಶ್ರೀಮೈತ್ರೇಯರು ಹೇಳುತ್ತಾರೆ – ಶತ್ರುಸೂದನನಾದ ವಿದುರನೇ! ಸನಕಾದಿಗಳು, ನಾರದರು, ಋಭು, ಹಂಸ, ಅರುಣಿ ಮತ್ತು ಯತಿ – ಎಂಬುವರು ಬ್ರಹ್ಮದೇವರ ನೈಷ್ಠಿಕ ಬ್ರಹ್ಮಚಾರಿಗಳಾದ ಪುತ್ರರು. ಇವರು ಗೃಹಸ್ಥಾಶ್ರಮವನ್ನು ಕೈಗೊಳ್ಳಲಿಲ್ಲ, ಆದ್ದರಿಂದ ಇವರ ವಂಶ ಬೆಳೆಯಲಿಲ್ಲ. ಅಧರ್ಮ ಎಂಬುವನೂ ಬ್ರಹ್ಮನ ಮಗನೇ. ಅವನ ಹೆಂಡತಿಯ ಹೆಸರು ಮೃಷಾ ಎಂದು. ಅವನಿಗೆ ಆಕೆಯಲ್ಲಿ 'ದಂಭ' ಎಂಬ ಪುತ್ರನೂ, ಮಾಯಾ ಎಂಬ ಪುತ್ರಿಯೂ ಜನಿಸಿದರು. ನಿರ್ಋತಿಗೆ ಸಂತಾನವಿಲ್ಲದ್ದರಿಂದ ಅವನು ಅವರಿಬ್ಬರನ್ನೂ ಕೊಂಡೊಯ್ದನು. ॥ ೧-೨ ॥ ದಂಭ ಮತ್ತು ಮಾಯೆ ಇವರಿಂದ ಲೋಭ ಹಾಗೂ ನಿಕೃತಿ (ಶಾಠ್ಯ) ಎಂಬುವರು ಜನಿಸಿದರು. ಅವರಿಂದ ಕ್ರೋಧ ಮತ್ತು ಹಿಂಸೆ ಹುಟ್ಟಿದರು. ಆ ಕ್ರೋಧ – ಹಿಂಸೆಯರ ಮಕ್ಕಳೇ ಕಲಿ (ಕಲಹ) ಮತ್ತು ಅವನ ತಂಗಿ ದುರುಕ್ತಿ (ಬೈಗುಳಗಳು) ಉತ್ಪನ್ನರಾದರು. ॥ ೩ ॥

ದುರುಕ್ತೌ ಕಲಿರಾಧತ್ತ ಭಯಂ ಮೃತ್ಯುಂ ಚ ಸತ್ತಮ ।
ತಯೋಶ್ಚ ಮಿಥುನಂ ಜಜ್ಞೇ ಯಾತನಾ ನಿರಯಸ್ತಥಾ
॥ ೪ ॥

ಸಂಗ್ರಹೇಣ ಮಯಾಖ್ಯಾತಃ ಪ್ರತಿಸರ್ಗಸ್ತವಾನಘ ।
ತ್ರಿಃಶ್ರುತ್ವೈತತ್ಪುಮಾನ್ಪುಣ್ಯಂ ವಿಧುನೋತ್ಯಾತ್ಮನೋ ಮಲಮ್
॥ ೫ ॥

ಅಥಾತಃ ಕೀರ್ತಯೇ ವಂಶಂ ಪುಣ್ಯಕೀರ್ತೇಃ ಕುರೂದ್ವಹ ।
ಸ್ವಾಯಂಭುವಸ್ಯಾಪಿ ಮನೋರ್ಹರೇರಂಶಾಂಶಜನ್ಮನಃ
॥ ೬ ॥

ಪ್ರಿಯವ್ರತೋತ್ತಾನಪಾದೌ ಶತರೂಪಾಪತೇಃ ಸುತೌ ।
ವಾಸುದೇವಸ್ಯ ಕಲಯಾ ರಕ್ಷಾಯಾಂ ಜಗತಃ ಸ್ಥಿತೌ
॥ ೭ ॥

ಜಾಯೇ ಉತ್ತಾನಪಾದಸ್ಯ ಸುನೀತಿಃ ಸುರುಚಿಸ್ತಯೋಃ ।
ಸುರುಚಿಃ ಪ್ರೇಯಸೀ ಪತ್ಯುರ್ನೇತರಾ ಯತ್ಸುತೋ ಧ್ರುವಃ
॥ ೮ ॥

ಏಕದಾ ಸುರುಚೇಃ ಪುತ್ರಮಂಕಮಾರೋಪ್ಯ ಲಾಲಯನ್ ।
ಉತ್ತಮಂ ನಾರುರುಕ್ಷಂತಂ ಧ್ರುವಂ ರಾಜಾಭ್ಯನಂದತ
॥ ೯ ॥

ತಥಾ ಚಿಕೀರ್ಷಮಾಣಂ ತಂ ಸಪತ್ನ್ಯಾಸ್ತನಯಂ ಧ್ರುವಮ್ ।
ಸುರುಚಿಃ ಶೃಣ್ವತೋ ರಾಜ್ಞಃ ಸೇರ್ಷ್ಯಮಾಹಾತಿಗರ್ವಿತಾ
॥ ೧೦ ॥

ನ ವತ್ಸ ನೃಪತೇರ್ಧಿಷ್ಣ್ಯಂ ಭವಾನಾರೋಢುಮರ್ಹತಿ ।
ನ ಗೃಹೀತೋ ಮಯಾ ಯತ್ತ್ವಂ ಕುಕ್ಷಾವಪಿ ನೃಪಾತ್ಮಜಃ
॥ ೧೧ ॥

ಬಾಲೋಽಸಿ ಬತ ನಾತ್ಮಾನಮನ್ಯಸ್ತ್ರೀಗರ್ಭಸಂಭೃತಮ್ ।
ನೂನಂ ವೇದ ಭವಾನ್ಯಸ್ಯ ದುರ್ಲಭೇಽರ್ಥೇ ಮನೋರಥಃ
॥ ೧೨ ॥

ತಪಸಾರಾಧ್ಯ ಪುರುಷಂ ತಸ್ಯೈವಾನುಗ್ರಹೇಣ ಮೇ ।
ಗರ್ಭೇ ತ್ವಂ ಸಾಧಯಾತ್ಮಾನಂ ಯದೀಚ್ಛಸಿ ನೃಪಾಸನಮ್
॥ ೧೩ ॥

ಸಾಧುಶಿರೋಮಣಿಯೇ! ಮತ್ತೆ ದುರುಕ್ತಿಯಿಂದ ಕಲಿಯು ಭಯ ಮತ್ತು ಮೃತ್ಯುವನ್ನು ಪಡೆದುಕೊಂಡನು. ಅವರಿಬ್ಬರ ಸಂಯೋಗದಿಂದ ಯಾತನೆ ಮತ್ತು ನಿರಯ (ನರಕ) ಎಂಬ ಜೋಡಿಯು ಜನಿಸಿತು. ॥ ೪ ॥ ಪುಣ್ಯಾತ್ಮನಾದ ವಿದುರಾ! ಹೀಗೆ ನಾನು ನಿನಗೆ ಪ್ರಳಯಕ್ಕೆ ಕಾರಣವಾದ ಈ ಅಧರ್ಮದ ವಂಶವನ್ನು ಸಂಕ್ಷೇಪವಾಗಿ ತಿಳಿಸಿದೆ. ಇದನ್ನು ಮೂರು ಬಾರಿ ಕೇಳಿದ ಮನುಷ್ಯನಿಗೆ ಅಧರ್ಮವನ್ನು ತ್ಯಜಿಸಿ ಪುಣ್ಯಸಂಪಾದನೆಯನ್ನು ಮಾಡಲು ಸಹಾಯವಾಗುವುದು. ॥ ೫ ॥ ಕುರುನಂದನಾ! ಇನ್ನು ನಾನು ನಿನಗೆ ಶ್ರೀಹರಿಯ ಅಂಶವಾದ ಬ್ರಹ್ಮದೇವರ ಅಂಶದಿಂದ ಜನಿಸಿದ ಪವಿತ್ರವಾದ ಕೀರ್ತಿಯುಳ್ಳ ಮಹಾರಾಜಾ ಸ್ವಾಯಂಭುವ ಮನುವಿನ ಪುತ್ರರ ವಂಶವನ್ನು ವರ್ಣಿಸುವೆನು. ॥ ೬ ॥

ಮಹಾರಾಣಿ ಶತರೂಪಾ ಮತ್ತು ಆಕೆಯ ಪತಿ ಸ್ವಾಯಂಭುವ ಮನು ಇವರಿಂದ ಪ್ರಿಯವ್ರತ ಮತ್ತು ಉತ್ತಾನಪಾದ ಎಂಬ ಇಬ್ಬರು ಪುತ್ರರು ಜನಿಸಿದರು. ಭಗವಾನ್ ವಾಸುದೇವನ ಅಂಶದಿಂದ ಉತ್ಪನ್ನರಾದ್ದರಿಂದ ಅವರೀರ್ವರೂ ಜಗತ್ತಿನ ರಕ್ಷಣೆಯಲ್ಲಿ ತತ್ಪರರಾಗಿರುತ್ತಿದ್ದರು. ॥ ೭ ॥ ಉತ್ತಾನಪಾದ ಮಹಾರಾಜನಿಗೆ ಸುನೀತಿ ಮತ್ತು ಸುರುಚಿ ಎಂಬ ಇಬ್ಬರು ಪತ್ನಿಯರಿದ್ದರು. ಅವರಿಬ್ಬರಲ್ಲಿ ಸುರುಚಿಯೇ ಮಹಾರಾಜನಿಗೆ ಹೆಚ್ಚು ಪ್ರೀತಿಪಾತ್ರದವಳಾಗಿದ್ದಳು. ಧ್ರುವಕುಮಾರನ ತಾಯಿಯಾಗಿದ್ದ ಸುನೀತಿಯಮೇಲೆ ಆತನಿಗೆ ಅಷ್ಟು ಪ್ರೀತಿ ಇರಲಿಲ್ಲ. ॥ ೮ ॥

ಒಂದು ದಿನ ಉತ್ತಾನಪಾದ ಮಹಾರಾಜನು ಸುರುಚಿಯ ಪುತ್ರನಾದ ಉತ್ತಮನನ್ನು ತೊಡೆಯಮೇಲೆ ಕುಳ್ಳಿರಿಸಿಕೊಂಡು ಮುದ್ದಿಸುತ್ತಿದ್ದನು. ಅದೇ ಸಮಯದಲ್ಲಿ ಧ್ರುವಕುಮಾರನು ಬಂದು ತಂದೆಯ ತೊಡೆಯ ಮೇಲೆ ಕುಳಿತುಕೊಳ್ಳಲು ಬಯಸಿದನು. ಆದರೆ ರಾಜನು ಆತನನ್ನು ಸ್ವಾಗತಿಸಲಿಲ್ಲ. ॥ ೯ ॥ ಆಗ ಗರ್ವಪೂರಿತಳಾಗಿದ್ದ ಸುರುಚಿಯು ತನ್ನ ಸವತಿಯ ಪುತ್ರನಾದ ಧ್ರುವನು ಮಹಾರಾಜನ ತೊಡೆಯನ್ನೇರಲು ಪ್ರಯತ್ನಿಸುತ್ತಿರುವುದನ್ನು ಕಂಡು ಮರ್ಮಾಘಾತವಾದ ಮಾತುಗಳನ್ನಾಡಿದಳು. ॥ ೧೦ ॥ "ಮಗು! ನೀನು ರಾಜಸಿಂಹಾಸನದಲ್ಲಿ ಕುಳಿತುಕೊಳ್ಳಲು ಅಧಿಕಾರಿಯಲ್ಲ. ನೀನು ಮಹಾರಾಜರ ಮಗನಾದರೇನಾಯಿತು? ನಿನ್ನನ್ನು ನಾನು ಗರ್ಭದಲ್ಲಿ ಧರಿಸಲಿಲ್ಲವಲ್ಲ! ॥ ೧೧ ॥ ನೀನು ಇನ್ನೂ ಹಸುಳೆಯಾಗಿರುವೆ. ನೀನು ನನ್ನನ್ನು ಬಿಟ್ಟು ಬೇರೊಬ್ಬಳ ಗರ್ಭದಲ್ಲಿ ಹುಟ್ಟಿದ್ದೀಯೆ ಎಂಬುದು ನಿನಗೆ ತಿಳಿಯದು. ಆದರಿಂದಲೇ ನೀನು ಈ ದುರ್ಲಭವಾದ ವಿಷಯಕ್ಕೆ ಆಸೆಪಡುತ್ತಿರುವೆ. ॥ ೧೨ ॥ ನಿನಗೆ ರಾಜಸಿಂಹಾಸನವನ್ನು ಪಡೆಯಬೇಕೆಂಬ ಇಚ್ಛೆಯಿದ್ದರೆ ತಪಸ್ಸುಮಾಡಿ ಪರಮಪುರುಷನಾದ ಶ್ರೀಮನ್ನಾರಾಯಣನನ್ನು ಆರಾಧಿಸು. ಅವನ ಕೃಪೆಯಿಂದ ನನ್ನ ಗರ್ಭದಿಂದ ಹುಟ್ಟಬೇಕು, ತಿಳಿಯಿತೇ?" ॥ ೧೩ ॥

ಶ್ರೀಮೈತ್ರೇಯರು ಹೇಳುತ್ತಾರೆ – ವಿದುರನೇ! ದೊಣ್ಣೆಯ ಏಟು ತಿಂದ ಸರ್ಪವು ಬುಸುಗುಟ್ಟುವಂತೆ ತನ್ನ ಮಲತಾಯಿಯ ಕಠೋರ ಮಾತುಗಳನ್ನು ಕೇಳಿದ ಧ್ರುವಕುಮಾರನು ಕ್ರೋಧಾತಿರೇಕದಿಂದ ನಿಟ್ಟುಸಿರುಬಿಡತೊಡಗಿದನು. ಅವನ ತಂದೆಯು

ಮೈತ್ರೇಯ ಉವಾಚ

ಮಾತುಃ ಸಪತ್ನ್ಯಾಃ ಸ ದುರುಕ್ತಿವಿದ್ಧಃ
ಶ್ವಸನ್ರುಷಾ ದಂಡ ಹತೋ ಯಥಾಹಿಃ ।
ಹಿತ್ವಾ ಮಿಷಂತಂ ಪಿತರಂ ಸನ್ನವಾಚಂ
ಜಗಾಮ ಮಾತುಃ ಪ್ರರುದನ್ಸಕಾಶಮ್ ॥ ೧೪ ॥

ತಂ ನಿಃಶ್ವಸಂತಂ ಸ್ಫುರಿತಾಧರೋಷ್ಠಂ
ಸುನೀತಿರುತ್ಸಂಗ ಉದೂಹ್ಯ ಬಾಲಮ್ ।
ನಿಶಮ್ಯ ತತ್ಪೌರಮುಖಾನ್ನಿತಾಂತಂ
ಸಾ ವಿವ್ಯಥೇ ಯದ್ಗದಿತಂ ಸಪತ್ನ್ಯಾ ॥ ೧೫ ॥

ಸೋತ್ಸೃಜ್ಯ ಧೈರ್ಯಂ ವಿಲಲಾಪ ಶೋಕ-
ದಾವಾಗ್ನಿನಾ ದಾವಲತೇವ ಬಾಲಾ ।
ವಾಕ್ಯಂ ಸಪತ್ನ್ಯಾಃ ಸ್ಮರತೀ ಸರೋಜ-
ಶ್ರಿಯಾ ದೃಶಾ ಬಾಷ್ಪಕಲಾಮುವಾಹ ॥ ೧೬ ॥

ದೀರ್ಘಂ ಶ್ವಸಂತೀ ವೃಜಿನಸ್ಯ ಪಾರ-
ಮಪಶ್ಯತೀ ಬಾಲಕಮಾಹ ಬಾಲಾ ।
ಮಾಮಂಗಲಂ ತಾತ ಪರೇಷು ಮಂಸ್ಥಾ
ಭುಂಕ್ತೇ ಜನೋ ಯತ್ಪರದುಃಖದಸ್ತತ್ ॥ ೧೭ ॥

ಸತ್ಯಂ ಸುರುಚ್ಯಾಭಿಹಿತಂ ಭವಾನ್ಮೇ
ಯದ್ದುರ್ಭಗಾಯಾ ಉದರೇ ಗೃಹೀತಃ ।
ಸ್ತನ್ಯೇನ ವೃದ್ಧಶ್ಚ ವಿಲಜ್ಜತೇ ಯಾಂ
ಭಾರ್ಯೇತಿ ವಾ ವೋಢುಮಿಡಸ್ಪತಿರ್ಮಾಮ್ ॥ ೧೮ ॥

ಆತಿಷ್ಠ ತತ್ತಾತ ವಿಮತ್ಸರಸ್ತ್ವ-
ಮುಕ್ತಂ ಸಮಾತ್ರಾಪಿ ಯದವ್ಯಲೀಕಮ್ ।
ಆರಾಧಯಾಧೋಕ್ಷಜಪಾದಪದ್ಮಂ
ಯದೀಚ್ಛಸೇಽಧ್ಯಾಸನಮುತ್ತಮೋ ಯಥಾ ॥ ೧೯ ॥

ಯಸ್ಯಾಂಘ್ರಿಪದ್ಮಂ ಪರಿಚರ್ಯ ವಿಶ್ವ-
ವಿಭಾವನಾಯಾತ್ತಗುಣಾಭಿಪತ್ತೇಃ ।
ಅಜೋಽಧ್ಯತಿಷ್ಠತ್ಖಲು ಪಾರಮೇಷ್ಠ್ಯಂ
ಪದಂ ಜಿತಾತ್ಮ ಶ್ವಸನಾಭಿವಂದ್ಯಮ್ ॥ ೨೦ ॥

ತಥಾ ಮನುರ್ವೋ ಭಗವಾನ್ಪಿತಾಮಹೋ
ಯಮೇಕಮತ್ಯಾ ಪುರುದಕ್ಷಿಣೈರ್ಮಖೈಃ ।
ಇಷ್ಟ್ವಾಭಿಪೇದೇ ದುರವಾಪ ಮನ್ಯತೋ
ಭೌಮಂ ಸುಖಂ ದಿವ್ಯಮಥಾಪವರ್ಗ್ಯಮ್ ॥ ೨೦ ॥

ತಮೇವ ವತ್ಸಾಶ್ರಯಭೃತ್ಯವತ್ಸಲಂ
ಮುಮುಕ್ಷುಭಿರ್ಮೃಗ್ಯಪದಾಬ್ಜಪದ್ಧತಿಮ್ ।
ಅನನ್ಯಭಾವೇ ನಿಜಧರ್ಮಭಾವಿತೇ
ಮನಸ್ಯವಸ್ಥಾಪ್ಯ ಭಜಸ್ವ ಪೂರುಷಮ್ ॥ ೨೨ ॥

ಇವೆಲ್ಲವನ್ನು ಸುಮ್ಮನೆ ನೋಡುತ್ತಿದ್ದನು. ಬಾಯಿಂದ ಒಂದು ಮಾತೂ ಹೊರಡಲಿಲ್ಲ. ಆಗ ಧ್ರುವನು ತಂದೆಯನ್ನು ಬಿಟ್ಟು ಅಳುತ್ತಾ ತಾಯಿಯ ಬಳಿಗೆ ಹೋದನು. ॥ ೧೪ ॥ ಎರಡೂ ತುಟಿಗಳು ಅದುರುತ್ತಿದ್ದವು. ಅವನು ಬಿಕ್ಕಿ-ಬಿಕ್ಕಿ ಅಳುತ್ತಿದ್ದನು. ತಾಯಿ ಸುನೀತಿಯು ಮಗುವನ್ನು ತೊಡೆಯಮೇಲೆ ಕುಳ್ಳಿರಿಸಿ ಕೊಂಡಳು. ಅರಮನೆಯ ಇತರ ಹೆಂಗಸರಿಂದ ಸವತಿಯಾದ ಸುರುಚಿಯು ಆಡಿದ ಮಾತುಗಳನ್ನು ಕೇಳಿದಾಗ ಅವಳಿಗೂ ತುಂಬಾ ದುಃಖವಾಯಿತು. ॥ ೧೫ ॥ ಆಕೆಯು ಧೈರ್ಯವನ್ನು ಕಳೆದುಕೊಂಡು ಕಾಡ್ಗಿಚ್ಚಿಗೆ ಸಿಕ್ಕಿದ ಬಳ್ಳಿಯಂತೆ ಸಂತಪ್ತಳಾಗಿ ಕಳೆ ಗುಂದಿ ದೈನ್ಯದಿಂದ ರೋದಿಸತೊಡಗಿದಳು. ಸವತಿಯ ಮಾತನ್ನು ನೆನೆ-ನೆನೆದು ಆಕೆಯ ಕಮಲದಂತಹ ಕಣ್ಣುಗಳಲ್ಲಿ ಕಂಬನಿ ತುಂಬಿ ಬಂತು. ॥ ೧೬ ॥ ಆ ದೀನಳಾದ ನಾರಿಗೆ ದುಃಖದ ದಡ ಕಾಣಿಸದೇ ಹೋಯಿತು. ಆಗ ಆಕೆಯು ನಿಟ್ಟುಸಿರುಬಿಡುತ್ತಾ ಧ್ರುವನಿಗೆ ಹೇಳಿದಳು – "ಮಗು! ನೀನು ಇನ್ನೊಬ್ಬರಿಗೆ ಯಾವ ಕೇಡನ್ನೂ ಬಯಸದಿರು. ಇತರರಿಗೆ ದುಃಖ ಕೊಡುವವನು ಸ್ವತಃ ದುಃಖಕ್ಕೆ ಈಡಾಗುವನು. ॥ ೧೭ ॥ ಸುರುಚಿಯು ಹೇಳಿದುದು ನಿಜವೇ ಆಗಿದೆ. ಏಕೆಂದರೆ, ಮಹಾರಾಜರು ನನ್ನನ್ನು ಹೆಂಡತಿ ಎಂದು ಒಪ್ಪುವುದಿರಲಿ, ದಾಸಿಯೆಂದೂ ಸ್ವೀಕರಿಸಲು ನಾಚಿಕೆ ಪಟ್ಟುಕೊಳ್ಳುವರು. ಅಂತಹ ದುರದೃಷ್ಟಶಾಲಿನಿಯಾದ ನನ್ನ ಹೊಟ್ಟೆಯಲ್ಲಿ ಹುಟ್ಟಿ ನನ್ನ ಸ್ತನ್ಯದಿಂದಲೇ ಬೆಳೆದವನು ನೀನು. ॥ ೧೮ ॥ ಮಗು! ಸುರುಚಿಯು ನಿನಗೆ ಮಲತಾಯಿಯಾಗಿದ್ದರೂ ಸರಿಯಾದ ಮಾತನ್ನೇ ಆಡಿರುವಳು. ಆದುದರಿಂದ ರಾಜಕುಮಾರನಾದ ಉತ್ತಮನಂತೆ ರಾಜ ಸಿಂಹಾಸನದಲ್ಲಿ ಕುಳಿತುಕೊಳ್ಳುವ ಇಚ್ಛೆ ನಿನಗಿದ್ದರೆ, ದ್ವೇಷಭಾವವನ್ನು ಬಿಟ್ಟು ಅವಳು ಹೇಳಿದಂತೆಯೇ ಮಾಡು. ಸರಿ ! ಅಧೋಕ್ಷಜನಾದ ಶ್ರೀಹರಿಯ ಪಾದಪದ್ಮಗಳನ್ನು ಆರಾಧಿಸಲು ತೊಡಗು. ॥ ೧೯ ॥ ಜಗತ್ತನ್ನು ಪಾಲಿಸಲಿಕ್ಕಾಗಿ ಸತ್ತ್ವ ಗುಣವನ್ನು ಸ್ವೀಕರಿಸಿದ ಆ ಶ್ರೀಹರಿಯ ಚರಣಗಳನ್ನು ಆರಾಧಿಸಿದ್ದರಿಂದಲೇ ನಿನ್ನ ಪ್ರಪಿತಾಮಹರಾದ ಬ್ರಹ್ಮದೇವರಿಗೆ – ಪ್ರಾಣಗಳನ್ನೂ, ಮನಸ್ಸನ್ನೂ ಜಯಿಸಿರುವ ಮುನಿಗಳಿಗೂ ವಂದನೀಯನಾಗಿರುವ ಸರ್ವ ಶ್ರೇಷ್ಠವಾದ 'ಪರಮೇಷ್ಠಿ' ಎಂಬ ಪದವಿಯು ದೊರೆಯಿತು. ॥ ೨೦ ॥ ಅದರಂತೆಯೇ ನಿನ್ನ ಪಿತಾಮಹರಾದ ಸ್ವಾಯಂಭುವ ಮನು ಮಹಾರಾಜರೂ ಮಹಾದಕ್ಷಿಣೆಗಳುಳ್ಳ ಯಜ್ಞಗಳ ಮೂಲಕ ಅನನ್ಯ ಭಾವದಿಂದ ಆ ಭಗವಂತನನ್ನು ಆರಾಧನೆಮಾಡಿದ್ದರಿಂದಲೇ ಇತರರಿಗೆ ದುರ್ಲಭವಾದ ಲೌಕಿಕ, ಅಲೌಕಿಕ ಹಾಗೂ ಮೋಕ್ಷಸುಖವೂ ದೊರೆಯಿತು. ॥ ೨೧ ॥ ಮಗು! ನೀನೂ ಆ ಭಕ್ತವತ್ಸಲನಾದ ಶ್ರೀಭಗವಂತನನ್ನೇ ಆಶ್ರಯಿಸು. ಜನ್ಮ-ಮರಣಗಳ ಸುಳಿಯಿಂದ ಬಿಡುಗಡೆ ಹೊಂದಲು ಬಯಸುವ ಮುಮುಕ್ಷುಗಳು ನಿರಂತರವಾಗಿ ಅವನ ಪಾದಾರವಿಂದಗಳನ್ನೇ ಅರಸುತ್ತಿರುತ್ತಾರೆ. ನೀನು ಸ್ವಧರ್ಮಪಾಲನೆಯಿಂದ ಪರಿಶುದ್ಧವಾದ ಚಿತ್ತದಲ್ಲಿ ಆ ಭಗವಾನ್ ಪುರುಷೋತ್ತಮನನ್ನು ನೆಲೆಗೊಳಿಸಿಕೊಂಡು, ಉಳಿದ ಎಲ್ಲ ಚಿಂತನೆಗಳನ್ನು ಬಿಟ್ಟು ಕೇವಲ ಅವನನ್ನೇ ಭಜಿಸುತ್ತಿರು. ॥ ೨೨ ॥

ನಾನ್ಯಂ ತತಃ ಪದ್ಮಪಲಾಶಲೋಚನಾದ್
ದುಃಖಚ್ಛಿದಂ ತೇ ಮೃಗಯಾಮಿ ಕಂಚನ ।
ಯೋ ಮೃಗ್ಯತೇ ಹಸ್ತಗೃಹೀತಪದ್ಮಯಾ
ಶ್ರಿಯೇತರೈರಂಗ ವಿಮೃಗ್ಯಮಾಣಯಾ ॥ ೨೩ ॥

ಮೈತ್ರೇಯ ಉವಾಚ

ಏವಂ ಸಂಜಲ್ಪಿತಂ ಮಾತುರಾಕರ್ಣ್ಯಾರ್ಥಾಗಮಂ ವಚಃ ।
ಸಂನಿಯಮ್ಯಾತ್ಮನಾಽಽತ್ಮಾನಂ ನಿಶ್ಚಕ್ರಾಮ ಪಿತುಃ ಪುರಾತ್ ॥ ೨೪ ॥

ನಾರದಸ್ತದುಪಾಕರ್ಣ್ಯ ಜ್ಞಾತ್ವಾ ತಸ್ಯ ಚಿಕೀರ್ಷಿತಮ್ ।
ಸ್ಪೃಷ್ಟ್ವಾ ಮೂರ್ಧನ್ಯಘಘ್ನೇನ ಪಾಣಿನಾ ಪ್ರಾಹ ವಿಸ್ಮಿತಃ ॥ ೨೫ ॥

ಅಹೋ ತೇಜಃ ಕ್ಷತ್ರಿಯಾಣಾಂ ಮಾನಭಂಗಮಮೃಷ್ಯತಾಮ್ ।
ಬಾಲೋಽಪ್ಯಯಂ ಹೃದಾ ಧತ್ತೇ ಯತ್ಸಮಾತುರಸದ್ವಚಃ ॥ ೨೬ ॥

ನಾರದ ಉವಾಚ

ನಾಧುನಾಪ್ಯವಮಾನಂ ತೇ ಸಮ್ಮಾನಂ ವಾಪಿ ಪುತ್ರಕ ।
ಲಕ್ಷಯಾಮಃ ಕುಮಾರಸ್ಯ ಸಕ್ತಸ್ಯ ಕ್ರೀಡನಾದಿಷು ॥ ೨೭ ॥

ವಿಕಲ್ಪೇ ವಿದ್ಯಮಾನೇಽಪಿ ನ ಹ್ಯಸಂತೋಷಹೇತವಃ ।
ಪುಂಸೋ ಮೋಹಮೃತೇ ಭಿನ್ನಾ ಯಲ್ಲೋಕೇ ನಿಜಕರ್ಮಭಿಃ ॥ ೨೮ ॥

ಪರಿತುಷ್ಯೇತ್ತತಸ್ತಾತ ತಾವನ್ಮಾತ್ರೇಣ ಪೂರುಷಃ ।
ದೈವೋಪಸಾದಿತಂ ಯಾವದ್ವೀಕ್ಷ್ಯೇಶ್ವರಗತಿಂ ಬುಧಃ ॥ ೨೯ ॥

ಅಥ ಮಾತ್ರೋಪದಿಷ್ಟೇನ ಯೋಗೇನಾವರುರುತ್ಸಸಿ ।
ಯತ್ಪ್ರಸಾದಂ ಸ ವೈ ಪುಂಸಾಂ ದುರಾರಾಧ್ಯೋ ಮತೋ ಮಮ ॥ ೩೦ ॥

ಮುನಯಃ ಪದವೀಂ ಯಸ್ಯ ನಿಃಸಂಗೇನೋರುಜನ್ಮಭಿಃ ।
ನ ವಿದುರ್ಮೃಗಯಂತೋಽಪಿ ತೀವ್ರಯೋಗಸಮಾಧಿನಾ ॥ ೩೦ ॥

ಅತೋ ನಿವರ್ತತಾಮೇಷ ನಿರ್ಬಂಧಸ್ತವ ನಿಷ್ಫಲಃ ।
ಯತಿಷ್ಯತಿ ಭವಾನ್ಕಾಲೇ ಶ್ರೇಯಸಾಂ ಸಮುಪಸ್ಥಿತೇ ॥ ೩೨ ॥

ಕಂದ! ನಿನ್ನ ದುಃಖವನ್ನು ದೂರಮಾಡಲು ಆ ಕಮಲನಯನನನ್ನು ಬಿಟ್ಟು ಬೇರೆ ಯಾರೂ ನನಗೆ ಕಾಣಿಸುತ್ತಿಲ್ಲ. ಬ್ರಹ್ಮಾದಿ ಇತರ ದೇವತೆಗಳು ಯಾರಿಗಾಗಿ ಹಾತೊರೆಯುತ್ತಿರುವರೋ ಅಂತಹ ಶ್ರೀಲಕ್ಷ್ಮೀದೇವಿಯೂ ಪದ್ಮವನ್ನು ಹಿಡಿದು ಕೊಂಡು ನಿರಂತರವಾಗಿ ಆ ಶ್ರೀಹರಿಯನ್ನೇ ಅರಸುತ್ತಿರುವಳು.'' ॥ ೨೩ ॥

ಶ್ರೀಮೈತ್ರೇಯರು ಹೇಳುತ್ತಾರೆ – ವಿದುರನೇ! ತಾಯಿ ಸುನೀತಿಯು ಹೇಳಿದ ಮಾತುಗಳು ಇಷ್ಟಾರ್ಥಸಿದ್ಧಿಯ ಮಾರ್ಗವನ್ನು ತೋರಿಸುವುದಾಗಿದ್ದವು. ಆದುದರಿಂದ ಅದನ್ನು ಕೇಳಿ ಧ್ರುವನು ಬುದ್ಧಿಯ ಮೂಲಕ ಚಿತ್ತಕ್ಕೆ ಸಮಾಧಾನವನ್ನು ತಂದುಕೊಂಡನು. ಒಡನೆಯೇ ತಂದೆಯ ನಗರವನ್ನು ಬಿಟ್ಟು ಹೊರಟುಹೋದನು. ॥ ೨೪ ॥ ಇವೆಲ್ಲ ಸಮಾಚಾರ ಕೇಳಿ, ಅವನು ಏನು ಮಾಡಲು ಇಷ್ಟಪಡುತ್ತಿರುವನೆಂದು ತಿಳಿದುಕೊಂಡು ನಾರದ ಮಹರ್ಷಿಗಳು ಅಲ್ಲಿಗೆ ಆಗಮಿಸಿದರು. ಅವರು ಧ್ರುವನ ಮಸ್ತಕದಲ್ಲಿ ತಮ್ಮ ಪಾಪನಾಶಕವಾದ ಕರಕಮಲವನ್ನು ಇಟ್ಟು, ಮನಸ್ಸಿನಲ್ಲೇ ವಿಸ್ಮಿತರಾಗಿ ಹೀಗೆ ಅಂದುಕೊಂಡರು – ॥ ೨೫ ॥ ಆಹಾ! ಕ್ಷತ್ರಿಯರ ತೇಜಸ್ಸು ಎಷ್ಟು ಅದ್ಭುತವಾಗಿದೆ! ಅವರು ಸ್ವಲ್ಪವಾದ ಮಾನಭಂಗವನ್ನು ಸಹಿಸಲಾರರು. ನೋಡಿ! ಇವನಾದರೋ ಇನ್ನೂ ಹಸುಳೆ. ಆದರೂ ಇವನ ಮನಸ್ಸಿನಲ್ಲಿ ಮಲತಾಯಿಯ ಕಟುವಚನಗಳು ಬೇರೂರಿಬಿಟ್ಟಿವೆ. ॥ ೨೬ ॥

ದೇವರ್ಷಿ ನಾರದರು ಹೇಳಿದರು – ಮಗು! ನೀನು ಇನ್ನೂ ಆಟ-ಪಾಠಗಳಲ್ಲಿ ಆಸಕ್ತನಾಗಿರುವ ಪುಟ್ಟ ಹುಡುಗ. ಈ ವಯಸ್ಸಿನಲ್ಲಿ ನಿನಗೆ ಅಪಮಾನವಾಗಲೀ, ಸಮ್ಮಾನವಾಗಲೀ ಎಲ್ಲಿಂದ ಬಂತು? ॥ ೨೭ ॥

ಆದರೂ ನೀನು ಮಾನಾಪಮಾನದ ಕುರಿತು ವಿಚಾರಮಾಡುವೆಯಾದರೆ, ಕಂದ! ನಿಜವಾಗಿ ಮನುಷ್ಯನ ಅಸಂತೋಷಕ್ಕೆ ಕಾರಣ ಮೋಹವಲ್ಲದೆ ಬೇರೆ ಏನೂ ಇಲ್ಲ. ಪ್ರಪಂಚದಲ್ಲಿ ಮನುಷ್ಯನು ತನ್ನ ಕರ್ಮಗಳನುಸಾರವೇ ಮಾನ-ಅಪಮಾನ, ಸುಖ-ದುಃಖಗಳನ್ನು ಪಡೆಯುವನು. ॥ ೨೮ ॥ ಮಗು! ಭಗವಂತನ ಗತಿಯು ತುಂಬಾ ವಿಚಿತ್ರವಾಗಿದೆ. ಆದುದರಿಂದ ವಿವೇಕಿಯಾದವರು ಅದನ್ನು ವಿಚಾರಮಾಡಿ, ದೈವವಶದಿಂದ ತನಗೆ ಒದಗಿದ ಪರಿಸ್ಥಿತಿಯಲ್ಲೇ ಸಂತೋಷಪಟ್ಟುಕೊಳ್ಳಬೇಕು. ॥ ೨೯ ॥ ಈಗ ನೀನು ತಾಯಿಯ ಉಪದೇಶದಂತೆ ಯೋಗ-ಸಾಧನೆಯ ಮೂಲಕ ಶ್ರೀಭಗವಂತನ ಕೃಪೆಯನ್ನು ಪಡೆಯಲು ಹೊರಟಿರುವೆ. ಆದರೆ ನನ್ನ ಅಭಿಪ್ರಾಯದಲ್ಲಿ ಶ್ರೀಭಗವಂತನನ್ನು ಒಲಿಸಿಕೊಳ್ಳುವುದು ಸಾಮಾನ್ಯ ಮನುಷ್ಯರಿಗೆ ಅತ್ಯಂತ ಕಠಿಣವೇ ಆಗಿದೆ. ॥ ೩೦ ॥ ಮಹಾಮುನಿಗಳು ಅನೇಕ ಜನ್ಮಗಳ ತನಕ ನಿಸ್ಸಂಗರಾಗಿ ಯೋಗಸಮಾಧಿಯ ಮೂಲಕ ಅತಿಕಠಿಣವಾದ ಸಾಧನೆಯನ್ನು ಮಾಡುತ್ತಿದ್ದರು. ಆದರೂ ಅವನ ಮಾರ್ಗವನ್ನು ತಿಳಿಯಲಾರರು. ॥ ೩೧ ॥ ಆದ್ದರಿಂದ ನೀನು ಈ ವ್ಯರ್ಥವಾದ ಹಠವನ್ನು ಬಿಟ್ಟು ಮನೆಗೆ ಹಿಂದಿರುಗು. ದೊಡ್ಡವನಾದಾಗ ಪರಮಾರ್ಥವನ್ನು ಸಾಧಿಸುವ ಸಮಯ ಬಂದಾಗ ಅದಕ್ಕಾಗಿ ಪ್ರಯತ್ನಮಾಡುವೆಯಂತೆ. ॥ ೩೨ ॥

ಯಸ್ಯ ಯದ್ದೈವವಿಹಿತಂ ಸ ತೇನ ಸುಖದುಃಖಯೋಃ ।
ಆತ್ಮಾನಂ ತೋಷಯನ್‌ದೇಹೀ ತಮಸಃ ಪಾರಮೃಚ್ಛತಿ
॥ ೩೩ ॥

ಗುಣಾಧಿಕಾನ್ಮುದಂ ಲಿಪ್ಸೇದನುಕ್ರೋಶಂ ಗುಣಾಧಮಾತ್ ।
ಮೈತ್ರೀಂ ಸಮಾನಾದನ್ವಿಚ್ಛೇನ್ನ ತಾಪೈರಭಿಭೂಯತೇ
॥ ೩೪ ॥

ಧ್ರುವ ಉವಾಚ

ಸೋಽಯಂ ಶಮೋ ಭಗವತಾ
ಸುಖದುಃಖಹತಾತ್ಮನಾಮ್ ।
ದರ್ಶಿತಃ ಕೃಪಯಾ ಪುಂಸಾಂ
ದುರ್ದರ್ಶೋಽಸ್ಮದ್ವಿಧೈಸ್ತು ಯಃ ॥ ೩೫ ॥

ಅಥಾಪಿ ಮೇಽವಿನೀತಸ್ಯ ಕ್ಷಾತ್ರಂ ಘೋರಮುಪೇಯುಷಃ ।
ಸುರುಚ್ಯಾ ದುರ್ವಚೋಬಾಣೈರ್ನ ಭಿನ್ನೇ ಶ್ರಯತೇ ಹೃದಿ
॥ ೩೬ ॥

ಪದಂ ತ್ರಿಭುವನೋತ್ಕೃಷ್ಟಂ ಜಿಗೀಷೋಃ ಸಾಧು ವರ್ತ್ಮ ಮೇ ।
ಬ್ರೂಹ್ಯಸ್ಮತ್ಪಿತೃಭಿರ್ಬ್ರಹ್ಮನ್ನನ್ಯೈರಪ್ಯನಧಿಷ್ಠಿತಮ್
॥ ೩೭ ॥

ನೂನಂ ಭವಾನ್ಭಗವತೋ ಯೋಽಂಗಜಃ ಪರಮೇಷ್ಠಿನಃ ।
ವಿತುದನ್ನಟತೇ ವೀಣಾಂ ಹಿತಾರ್ಥಂ ಜಗತೋಽರ್ಕವತ್
॥ ೩೮ ॥

ಮೈತ್ರೇಯ ಉವಾಚ

ಇತ್ಯುದಾಹೃತಮಾಕರ್ಣ್ಯ ಭಗವಾನ್ನಾರದಸ್ತದಾ ।
ಪ್ರೀತಃ ಪ್ರತ್ಯಾಹ ತಂ ಬಾಲಂ ಸದ್ವಾಕ್ಯಮನುಕಂಪಯಾ
॥ ೩೯ ॥

ನಾರದ ಉವಾಚ

ಜನನ್ಯಾಭಿಹಿತಃ ಪಂಥಾಃ ಸ ವೈ ನಿಶ್ಶ್ರೇಯಸಸ್ಯ ತೇ ।
ಭಗವಾನ್ವಾಸುದೇವಸ್ತಂ ಭಜ ತತ್ಪ್ರವಣಾತ್ಮನಾ
॥ ೪೦ ॥

ಧರ್ಮಾರ್ಥಕಾಮಮೋಕ್ಷಾಖ್ಯಂ ಯ ಇಚ್ಛೇಚ್ಛ್ರೇಯ ಆತ್ಮನಃ ।
ಏಕಮೇವ ಹರೇಸ್ತತ್ರ ಕಾರಣಂ ಪಾದಸೇವನಮ್
॥ ೪೧ ॥

ತತ್ತಾತ ಗಚ್ಛ ಭದ್ರಂ ತೇ ಯಮುನಾಯಾಸ್ತಟಂ ಶುಚಿ ।
ಪುಣ್ಯಂ ಮಧುವನಂ ಯತ್ರ ಸಾನ್ನಿಧ್ಯಂ ನಿತ್ಯದಾ ಹರೇಃ
॥ ೪೨ ॥

ಸ್ನಾತ್ವಾನುಸವನಂ ತಸ್ಮಿನ್ ಕಾಲಿಂದ್ಯಾಃ ಸಲಿಲೇ ಶಿವೇ ।
ಕೃತ್ವೋಚಿತಾನಿ ನಿವಸನ್ನಾತ್ಮನಃ ಕಲ್ಪಿತಾಸನಃ
॥ ೪೩ ॥

ದೈವದ ವಿಧಾನದಂತೆ ಪ್ರಾಪ್ತವಾದ ಸುಖ-ದುಃಖಗಳಲ್ಲೇ ಮನಸ್ಸನ್ನು ಸಂತೋಷವಾಗಿಟ್ಟುಕೊಳ್ಳುವ ಮನುಷ್ಯನು ಮೋಹಮಯ ಸಂಸಾರದಿಂದ ಪಾರಾಗುವನು. ॥ ೩೩ ॥ ಮನುಷ್ಯನು ತನಗಿಂತ ಹೆಚ್ಚಿನ ಗುಣಗಳುಳ್ಳವನನ್ನು ಕಂಡು ಸಂತೋಷಪಡಬೇಕು. ತನಗಿಂತ ಕಡಿಮೆ ಗುಣಗಳುಳ್ಳವನಲ್ಲಿ ದಯೆ ತೋರಬೇಕು. ತನಗೆ ಸಮಾನ ಗುಣಗಳುಳ್ಳವನೊಡನೆ ಮೈತ್ರಿಯನ್ನು ಬೆಳೆಸಬೇಕು. ಹೀಗೆ ಮಾಡುವವನಿಗೆ ದುಃಖಗಳು ಎಂದೂ ಸತಾಯಿಸಲಾರವು. ॥ ೩೪ ॥

ಧ್ರುವಕುಮಾರನು ಹೇಳಿದನು – ಪೂಜ್ಯರೇ! ಸುಖ-ದುಃಖಗಳಿಂದ ಚಿತ್ತವು ಚಂಚಲವಾದ ಜನರಿಗೆ ನೀವು ಕೃಪೆಗೈದು ಶಾಂತಿಯ ಈ ಉತ್ತಮ ಉಪಾಯವನ್ನು ಹೇಳಿದಿರಿ. ಆದರೆ ನನ್ನಂಥಹ ಅಜ್ಞಾನಿಗಳ ದೃಷ್ಟಿಯು ಅಲ್ಲಿಯವರೆಗೆ ತಲುಪಲಾರದು. ॥ ೩೫ ॥ ಇದಲ್ಲದೆ ನನ್ನದು ಘೋರವಾದ ಕ್ಷತ್ರಿಯ ಸ್ವಭಾವ. ಆದ್ದರಿಂದ ಪ್ರಾಯಶಃ ನನ್ನಲ್ಲಿ ವಿನಯದ ಅಭಾವವೇ ಇದೆ. ಸುರುಚಿಯ ಕಟುವಚನಗಳೆಂಬ ಬಾಣಗಳಿಂದ ಸೀಳಿ ಹೋದ ನನ್ನ ಹೃದಯದಲ್ಲಿ ನಿಮ್ಮ ಈ ಉಪದೇಶವು ನಿಲ್ಲುವುದಿಲ್ಲವಲ್ಲ! ॥ ೩೬ ॥ ದೇವರ್ಷಿಗಳೇ ತ್ರಿಲೋಕಗಳಲ್ಲೇ ಶ್ರೇಷ್ಠತಮವಾದ ಸ್ಥಾನವನ್ನು ತಂದೆ-ತಾತಂದಿರಾಗಲೀ ಅಥವಾ ಬೇರೆ ಯಾರೇ ಆಗಲೀ ಏರಲು ಸಾಧ್ಯವಾಗಲಿಲ್ಲವೋ ಅದನ್ನು ಪಡೆಯಬೇಕೆಂದು ನಾನು ಬಯಸುತ್ತಿರುವೆನು. ನೀವು ನನಗೆ ಅದರ ಪ್ರಾಪ್ತಿಗಾಗಿ ಯಾವುದಾದರೂ ಒಳ್ಳೆಯ ಮಾರ್ಗವನ್ನು ತೋರಿಸಿರಿ. ॥ ೩೭ ॥ ನೀವು ಭಗವಾನ್ ಬ್ರಹ್ಮದೇವರ ಪುತ್ರರು. ಜಗತ್ತಿನ ಹಿತಕ್ಕಾಗಿಯೇ ವೀಣೆಯನ್ನು ನುಡಿಸುತ್ತಾ ಸೂರ್ಯನಂತೆ ಮೂರು ಲೋಕಗಳಲ್ಲಿಯೂ ಸಂಚರಿಸುತ್ತಿರುವಿರಿ. ॥ ೩೮ ॥

ಶ್ರೀಮೈತ್ರೇಯರು ಹೇಳುತ್ತಾರೆ – ಧ್ರುವಕುಮಾರನ ಮಾತುಗಳನ್ನು ಕೇಳಿ ಪೂಜ್ಯರಾದ ನಾರದ ಮಹರ್ಷಿಗಳು ಅತ್ಯಂತ ಪ್ರಸನ್ನರಾದರು. ಅವರು ಅವನ ಮೇಲೆ ಕೃಪೆಗೈದು ಹೀಗೆ ಸದುಪದೇಶ ಮಾಡತೊಡಗಿದರು. ॥ ೩೯ ॥

ಶ್ರೀನಾರದರು ಹೇಳಿದರು – "ಮಗು! ತಾಯಿಯಾದ ಸುನೀತಿಯು ಹೇಳಿರುವುದೆಲ್ಲವೂ ನಿನಗೆ ಪರಮಕಲ್ಯಾಣಕರವಾದ ಮಾರ್ಗವೇ ಆಗಿದೆ. ಭಗವಾನ್ ಶ್ರೀವಾಸುದೇವನೇ ಆ ಉಪಾಯವು. ಆದುದರಿಂದ ದತ್ತಚಿತ್ತನಾಗಿ ಅವನನ್ನೇ ಭಜಿಸು. ॥ ೪೦ ॥ ಧರ್ಮ, ಅರ್ಥ, ಕಾಮ, ಮೋಕ್ಷಗಳೆಂಬ ಪುರುಷಾರ್ಥಗಳ ಅಭಿಲಾಷೆಯುಳ್ಳ ಮನುಷ್ಯನಿಗೆ ಅವುಗಳ ಪ್ರಾಪ್ತಿಯ ಏಕಮಾತ್ರ ಉಪಾಯವು ಶ್ರೀಹರಿಯ ಚರಣಸೇವೆಯೇ ಆಗಿದೆ. ॥ ೪೧ ॥ ಮಗು! ನಿನಗೆ ಮಂಗಳವಾಗಲಿ. ಈಗ ನೀನು ಯಮುನಾನದಿಯ ದಡದಲ್ಲಿರುವ ಪರಮಪವಿತ್ರವಾದ ಮಧುವನಕ್ಕೆ ಹೋಗು. ಅಲ್ಲಿ ಶ್ರೀಹರಿಯ ನಿತ್ಯಸಾನ್ನಿಧ್ಯವಿದೆ. ॥ ೪೨ ॥ ಅಲ್ಲಿ ಯಮುನಾನದಿಯ ನಿರ್ಮಲ ಜಲದಲ್ಲಿ ತ್ರಿಕಾಲಗಳಲ್ಲಿ ಸ್ನಾನಮಾಡಿ, ನಿತ್ಯಕರ್ಮಗಳನ್ನು ಮುಗಿಸಿಕೊಂಡು ಯಥಾವಿಧಿಯಾಗಿ ಆಸನವನ್ನು ಹಾಕಿಕೊಂಡು ಸ್ಥಿರವಾಗಿ ಕುಳಿತುಕೊಳ್ಳಬೇಕು. ॥ ೪೩ ॥

ಪ್ರಾಣಾಯಾಮೇನ ತ್ರಿವೃತಾ ಪ್ರಾಣೇಂದ್ರಿಯಮನೋಮಲಮ್ ।
ಶನೈರ್ವ್ಯುದಸ್ಯಾಭಿಧ್ಯಾಯೇನ್ಮನಸಾ ಗುರುಣಾ ಗುರುಮ್
॥ ೪೪ ॥

ಪ್ರಸಾದಾಭಿಮುಖಂ ಶಶ್ವತ್ಪ್ರಸನ್ನವದನೇಕ್ಷಣಮ್ ।
ಸುನಾಸಂ ಸುಭ್ರುವಂ ಚಾರುಕಪೋಲಂ ಸುರಸುಂದರಮ್
॥ ೪೫ ॥

ತರುಣಂ ರಮಣೀಯಾಂಗಮರುಣೋಷ್ಠೇಕ್ಷಣಾಧರಮ್ ।
ಪ್ರಣತಾಶ್ರಯಣಂ ನೃಮ್ಣಂ ಶರಣ್ಯಂ ಕರುಣಾರ್ಣವಮ್
॥ ೪೬ ॥

ಶ್ರೀವತ್ಸಾಂಕಂ ಘನಶ್ಯಾಮಂ ಪುರುಷಂ ವನಮಾಲಿನಮ್ ।
ಶಂಖಚಕ್ರಗದಾಪದ್ಮೈರಭಿವ್ಯಕ್ತಚತುರ್ಭುಜಮ್
॥ ೪೭ ॥

ಕಿರೀಟಿನಂ ಕುಂಡಲಿನಂ ಕೇಯೂರವಲಯಾನ್ವಿತಮ್ ।
ಕೌಸ್ತುಭಾಭರಣಗ್ರೀವಂ ಪೀತಕೌಶೇಯವಾಸಸಮ್
॥ ೪೮ ॥

ಕಾಂಚೀಕಲಾಪಪರ್ಯಸ್ತಂ ಲಸತ್ಕಾಂಚನನೂಪುರಮ್ ।
ದರ್ಶನೀಯತಮಂ ಶಾಂತಂ ಮನೋನಯನವರ್ಧನಮ್
॥ ೪೯ ॥

ಪದ್ಭ್ಯಾಂ ನಖಮಣಿಶ್ರೇಣ್ಯಾ ವಿಲಸದ್ಭ್ಯಾಂ ಸಮರ್ಚತಾಮ್ ।
ಹೃತ್ಪದ್ಮಕರ್ಣಿಕಾಧಿಷ್ಣ್ಯಮಾಕ್ರಮ್ಯಾತ್ಮನ್ಯವಸ್ಥಿತಮ್
॥ ೫೦ ॥

ಸ್ಮಯಮಾನಮಭಿಧ್ಯಾಯೇತ್ಸಾನುರಾಗಾವಲೋಕನಮ್ ।
ನಿಯತೇನೈಕಭೂತೇನ ಮನಸಾ ವರದರ್ಷಭಮ್
॥ ೫೧ ॥

ಏವಂ ಭಗವತೋ ರೂಪಂ ಸುಭದ್ರಂ ಧ್ಯಾಯತೋ ಮನಃ ।
ನಿರ್ವೃತ್ಯಾ ಪರಯಾ ತೂರ್ಣಂ ಸಂಪನ್ನಂ ನ ನಿವರ್ತತೇ
॥ ೫೨ ॥

ಜಪಶ್ಚ ಪರಮೋ ಗುಹ್ಯಃ ಶ್ರೂಯತಾಂ ಮೇ ನೃಪಾತ್ಮಜ ।
ಯಂ ಸಪ್ತರಾತ್ರಂ ಪ್ರಪಠನ್ ಪುಮಾನ್ಪಶ್ಯತಿ ಖೇಚರಾನ್
॥ ೫೩ ॥

ಮತ್ತೆ ರೇಚಕ, ಪೂರಕ, ಕುಂಭಕವೆಂಬ ಮೂರು ವಿಧದ ಪ್ರಾಣಾಯಾಮದಿಂದ ಮೆಲ್ಲ-ಮೆಲ್ಲನೆ ಪ್ರಾಣ-ಮನಗಳ, ಇಂದ್ರಿಯಗಳ ದೋಷಗಳನ್ನು ದೂರಗೊಳಿಸಿ, ಧೈರ್ಯದಿಂದ ಕೂಡಿದ ಮನಸ್ಸಿನಿಂದ ಪರಮಗುರು ಭಗವಂತನನ್ನು ಹೀಗೆ ಧ್ಯಾನಿಸ ಬೇಕು. ॥ ೪೪ ॥

ಭಗವಂತನ ನೇತ್ರಗಳೂ – ಮುಖವೂ ನಿರಂತರ ಪ್ರಸನ್ನ ವಾಗಿದೆ. ಅದನ್ನು ನೋಡುವಾಗ ಸಂತೋಷವಾಗಿ ಭಕ್ತರಿಗೆ ವರ ವನ್ನು ಕೊಡಲು ಅಭಿಮುಖವಾದಂತೆ ತೋರುತ್ತದೆ. ಅವನ ಮೂಗು, ಹುಬ್ಬುಗಳು, ಕೆನ್ನೆಗಳು ಅತ್ಯಂತ ಸುಶೋಭಿತವಾಗಿದೆ. ಅವನು ಸಮಸ್ತ ದೇವತೆಗಳಲ್ಲಿಯೂ ಅತ್ಯಂತ ಸುಂದರನಾಗಿದ್ದಾನೆ. ॥ ೪೫ ॥ ಅವನು ತರುಣವಯಸ್ಸಿನವನಾಗಿದ್ದು, ಅಂಗಾಂಗಗಳೆಲ್ಲ ರಮಣೀಯವಾಗಿವೆ. ತುಟಿಗಳು ಕೆಂಪಾಗಿದ್ದು, ಕಣ್ಣುಗಳು ನಸು ಗೆಂಪಾಗಿವೆ. ಅವನು ಶರಣಾಗತರಿಗೆ ಆಶ್ರಯನೂ, ಸುಖದಾಯ ಕನೂ, ಶರಣಾಗತವತ್ಸಲನೂ, ದಯಾಸಮುದ್ರನೂ ಆಗಿರುವನು. ॥ ೪೬ ॥ ಅವನ ವಕ್ಷಸ್ಥಳದಲ್ಲಿ ಶ್ರೀವತ್ಸಚಿಹ್ನೆಯಿದೆ. ಶರೀರವು ನೀರುತುಂಬಿದ ಮೋಡದಂತೆ ಶ್ಯಾಮಲವಾಗಿದೆ. ಆ ಪರಮ ಪುರುಷ ಶ್ಯಾಮಸುಂದರನು ಕೊರಳಲ್ಲಿ ಕಮನೀಯವಾದ ವನಮಾಲೆಯನ್ನೂ, ನಾಲ್ಕು ಭುಜಗಳಲ್ಲಿಯೂ ಶೋಭಿಸುತ್ತಿರುವ ಶಂಖ, ಚಕ್ರ, ಗದೆ, ಪದ್ಮಗಳನ್ನು ಧರಿಸಿರುವನು. ॥ ೪೭ ॥ ಅವನ ಅಂಗ- ಉಪಾಂಗಗಳು – ಕಿರೀಟ, ಕುಂಡಲ, ಕೇಯೂರ, ಕಂಕಣ ಮುಂತಾದ ಆಭರಣಗಳಿಂದ ವಿಭೂಷಿತವಾಗಿವೆ. ಕೊರಳ ನಲ್ಲಿ ಕೌಸ್ತುಭಮಣಿಯ ಕಾಂತಿ ಮತ್ತು ನಡುವಿನಲ್ಲಿ ರೇಷ್ಮೆಯ ಪೀತಾಂಬರ ಪ್ರಕಾಶಿಸುತ್ತಿದೆ. ॥ ೪೮ ॥ ಕಟಿಯಲ್ಲಿ ಕನಕ ಒಡ್ಯಾಣವೂ, ಕಾಲುಗಳಲ್ಲಿ ಕಾಂಚನ ಕಾಲಂದುಗೆಗಳೂ ಕಣ್ಣುಗಳಿಗೆ ಹಬ್ಬವಾಗಿದೆ. ಭಗವಂತನ ದಿವ್ಯಮಂಗಳ ವಿಗ್ರಹವು ದರ್ಶನೀಯ ವಾಗಿದ್ದು, ಶಾಂತವಾಗಿದ್ದು ನಯನಾನಂದಕರವಾಗಿದೆ. ॥ ೪೯ ॥ ಮಾನಸ ಪೂಜೆ ಮಾಡುವ ಅಂತರಂಗಭಕ್ತರ ಅಂತಃಕರಣದಲ್ಲಿ ಹೃದಯಕಮಲದ ಕರ್ಣಿಕೆಯ ಜಾಗದಲ್ಲಿ, ತನ್ನ ಉಗುರುಗಳೆಂಬ ಮಣಿಗಳ ಸಾಲುಗಳಿಂದ ಮಿನುಗುತ್ತಿರುವ ಪಾದಾರವಿಂದಗಳನ್ನು ನೆಲೆಗೊಳಿಸಿ ಶೋಭಿಸುತ್ತಿದ್ದಾನೆ. ॥ ೫೦॥ ಹೀಗೆ ಧಾರಣೆಯನ್ನು ಮಾಡುತ್ತಾ ಚಿತ್ತವು ಸ್ಥಿರವೂ, ಏಕಾಗ್ರವೂ ಆದ ಬಳಿಕ 'ವರ ಪ್ರದನಾದ ಪ್ರಭುವು ಕಿರುನಗೆಯನ್ನು ಸೂಸುತ್ತಾ ಅನುರಾಗ ತುಂಬಿದ ನೋಟವನ್ನು ನನ್ನ ಮೇಲೆ ಬೀರುತ್ತಿದ್ದಾನೆ' ಎಂದು ಮನಸ್ಸಿನೊಳಗೆ ಧ್ಯಾನಮಾಡಬೇಕು. ॥ ೫೧ ॥ ಶ್ರೀಭಗವಂತನ ಮಂಗಳಮೂರ್ತಿಯನ್ನು ಹೀಗೆ ನಿರಂತರವಾಗಿ ಧ್ಯಾನಿಸುವು ದರಿಂದ ಮನಸ್ಸು ಶೀಘ್ರವಾಗಿ ಪರಮಾನಂದದಲ್ಲಿ ಮುಳುಗಿ ತಲ್ಲೀನವಾಗಿಬಿಡುವುದು. ಮತ್ತೆ ಅದು ಅಲ್ಲಿಂದ ಹಿಂದಿರುಗು ವುದಿಲ್ಲ. ॥ ೫೨ ॥

ರಾಜಕುಮಾರಾ! ಈ ಧ್ಯಾನದ ಜೊತೆಯಲ್ಲೇ ಜಪ ಮಾಡು ವಂತಹ ಪರಮ ಗುಹ್ಯವಾದ ಮಂತ್ರವನ್ನು ಹೇಳುವೆನು, ಕೇಳು – ಇದನ್ನು ಏಳು ರಾತ್ರಿ ಜಪ ಮಾಡುವುದರಿಂದ ಮನುಷ್ಯನು ಆಕಾಶದಲ್ಲಿ ಸಂಚರಿಸುವ ಸಿದ್ಧರನ್ನು ದರ್ಶಿಸಬಲ್ಲನು. ॥ ೫೩ ॥

"ಓಂ ನಮೋ ಭಗವತೇ ವಾಸುದೇವಾಯ ।"
ಮಂತ್ರೇಣಾನೇನ ದೇವಸ್ಯ ಕುರ್ಯಾದ್ದ್ರವ್ಯಮಯೀಂ ಬುಧಃ ।
ಸಪರ್ಯಾಂ ವಿವಿಧೈರ್ದ್ರವ್ಯೈರ್ದೇಶಕಾಲವಿಭಾಗವಿತ್
॥ ೫೪ ॥

ಸಲಿಲೈಃ ಶುಚಿಭಿರ್ಮಾಲ್ಯೈರ್ವನ್ಯೈರ್ಮೂಲಫಲಾದಿಭಿಃ ।
ಶಸ್ತಾಂಕುರಾಂಶುಕೈಶ್ಚಾರ್ಚೇತ್ತುಲಸ್ಯಾ ಪ್ರಿಯಯಾ ಪ್ರಭುಮ್
॥ ೫೫ ॥

ಲಬ್ಧ್ವಾ ದ್ರವ್ಯಮಯೀಮರ್ಚಾಂ ಕ್ಷಿತ್ಯಂಬ್ವಾದಿಷು ವಾರ್ಚಯೇತ್ ।
ಆಭೃತಾತ್ಮಾ ಮುನಿಃ ಶಾಂತೋ ಯತವಾಙ್ಮಿತವನ್ಯಭುಕ್
॥ ೫೬ ॥

ಸ್ವೇಚ್ಛಾವತಾರಚರಿತೈರಚಿಂತ್ಯನಿಜಮಾಯಯಾ ।
ಕರಿಷ್ಯತ್ಯುತ್ತಮಶ್ಲೋಕಸ್ತದ್ಧ್ಯಾಯೇದ್ಧೃದಯಂಗಮಮ್
॥ ೫೭ ॥

ಪರಿಚರ್ಯಾ ಭಗವತೋ ಯಾವತ್ಯಃ ಪೂರ್ವಸೇವಿತಾಃ ।
ತಾ ಮಂತ್ರಹೃದಯೇನೈವ ಪ್ರಯುಂಜ್ಯಾನ್ಮಂತ್ರಮೂರ್ತಯೇ
॥ ೫೮ ॥

ಏವಂ ಕಾಯೇನ ಮನಸಾ ವಚಸಾ ಚ ಮನೋಗತಮ್ ।
ಪರಿಚರ್ಯಮಾಣೋ ಭಗವಾನ್ಭಕ್ತಿಮತ್ಪರಿಚರ್ಯಯಾ
॥ ೫೯ ॥

ಪುಂಸಾಮಮಾಯಿನಾಂ ಸಮ್ಯಗ್ಭಜತಾಂ ಭಾವವರ್ಧನಃ ।
ಶ್ರೇಯೋ ದಿಶತ್ಯಭಿಮತಂ ಯದ್ಧರ್ಮಾದಿಷು ದೇಹಿನಾಮ್
॥ ೬೦ ॥

ವಿರಕ್ತಶ್ಚೇಂದ್ರಿಯರತೌ ಭಕ್ತಿಯೋಗೇನ ಭೂಯಸಾ ।
ತಂ ನಿರಂತರಭಾವೇನ ಭಜೇತಾದ್ಧಾ ವಿಮುಕ್ತಯೇ
॥ ೬೧ ॥

ಇತ್ಯುಕ್ತಸ್ತಂ ಪರಿಕ್ರಮ್ಯ ಪ್ರಣಮ್ಯ ಚ ನೃಪಾರ್ಭಕಃ ।
ಯಯೌ ಮಧುವನಂ ಪುಣ್ಯಂ ಹರೇಶ್ಚರಣಚರ್ಚಿತಮ್
॥ ೬೨ ॥

ತಪೋವನಂ ಗತೇ ತಸ್ಮಿನ್ ಪ್ರವಿಷ್ಟೋಽಂತಃಪುರಂ ಮುನಿಃ ।
ಅರ್ಹಿತಾರ್ಹಣಕೋ ರಾಜ್ಞಾ ಸುಖಾಸೀನ ಉವಾಚ ತಮ್
॥ ೬೩ ॥

ನಾರದ ಉವಾಚ

ರಾಜನ್ಕಿಂ ಧ್ಯಾಯಸೇ ದೀರ್ಘಂ ಮುಖೇನ ಪರಿಶುಷ್ಯತಾ ।
ಕಿಂ ವಾ ನ ರಿಷ್ಯತೇ ಕಾಮೋ ಧರ್ಮೋ ವಾರ್ಥೇನ ಸಂಯುತಃ
॥ ೬೪ ॥

'ಓಂ ನಮೋ ಭಗವತೇ ವಾಸುದೇವಾಯ' ಎಂಬುದೇ ಆ ದಿವ್ಯಮಂತ್ರ. ಈ ಮಂತ್ರದಿಂದ ಭಗವಂತನಿಗೆ – ಆಯಾ ದೇಶ-ಕಾಲಗಳಿಗೆ ಅನುಗುಣವಾದ ಸಾಮಗ್ರಿಗಳಿಂದ ದ್ರವ್ಯಮಯವಾದ ಪೂಜೆಯನ್ನು ಬುದ್ಧಿಶಾಲಿಯಾದವನು ಮಾಡಬೇಕು. ॥ ೫೪ ॥ ಪರಮಾತ್ಮನ ಪೂಜೆಯನ್ನು ಪರಿಶುದ್ಧವಾದ ಜಲ, ಪುಷ್ಪಮಾಲೆ, ಅರಣ್ಯದಲ್ಲಿ ದೊರೆಯುವ ಗಡ್ಡೆ-ಗೆಣಸು, ಹಣ್ಣುಗಳು, ಪ್ರಶಸ್ತವಾದ ಗರಿಕೆ – ಮುಂತಾದ ಅಂಕುರಗಳು, ವಸ್ತ್ರಗಳು ಹಾಗೂ ಅವನಿಗೆ ಪ್ರಿಯವಾದ ತುಲಸೀ ಇವುಗಳಿಂದ ಮಾಡಬೇಕು. ॥ ೫೫ ॥ ಶಿಲಾಮೂರ್ತಿ, ಸಾಲಿಗ್ರಾಮ ಮುಂತಾದ ಮೂರ್ತಿ ದೊರೆತರೆ ಅದರಲ್ಲಿ ಸ್ವಾಮಿಯನ್ನು ಪೂಜಿಸಬೇಕು. ಅವುಗಳು ದೊರೆಯದಿದ್ದರೆ ಭೂಮಿ, ನೀರು ಇವುಗಳಲ್ಲಿ ಭಗವಂತನನ್ನು ಆರಾಧಿಸಬಹುದು. ಉಪಾಸಕನ ಮನಸ್ಸು ಸದಾ ಸಂಯಮದಲ್ಲಿದ್ದು, ಮನನಶೀಲ, ಶಾಂತ ಮತ್ತು ಮೌನವಾಗಿರಬೇಕು. ಕಾಡಿನಲ್ಲಿ ದೊರೆಯುವ ಫಲ ಮೂಲಾದಿಗಳನ್ನೇ ಮಿತವಾಗಿ ಸೇವಿಸಬೇಕು. ॥ ೫೬ ॥ ಇದಲ್ಲದೆ ಪುಣ್ಯಶ್ಲೋಕನಾದ ಶ್ರೀಹರಿಯು ತನ್ನ ಅಚಿಂತ್ಯವಾದ ಮಾಯೆಯಿಂದ ತನ್ನದೇ ಇಚ್ಛೆಗನುಸಾರವಾಗಿ ನಾನಾ ಅವತಾರಗಳನ್ನೆತ್ತಿ ಮಾಡಿದ ದಿವ್ಯಲೀಲೆಗಳನ್ನು ಮನಸ್ಸಿನಲ್ಲೇ ಚಿಂತಿಸುತ್ತಾ ಇರಬೇಕು. ॥ ೫೭ ॥ ಮಂತ್ರಮೂರ್ತಿಯಾದ ಶ್ರೀಭಗವಂತನಿಗೆ ಅರ್ಪಿಸುವ ಉಪಚಾರಗಳೆಲ್ಲವನ್ನು ವಿಧಾನಗಳಿಗನುಸಾರ ದ್ವಾದಶಾಕ್ಷರ ಮಹಾಮಂತ್ರದ ಮೂಲಕವೇ ಅರ್ಪಿಸಬೇಕು. ॥ ೫೮ ॥ ಹೀಗೆ ಹೃದಯದಲ್ಲಿ ನೆಲೆಸಿದ ಶ್ರೀಹರಿಯನ್ನು ಮನಸ್ಸು, ಮಾತು, ಶರೀರದಿಂದ ಭಕ್ತಿಪೂರ್ವಕವಾಗಿ ಪೂಜೆ ಮಾಡಿದರೆ, ಅವನು ನಿಶ್ಚಲಭಾವದಿಂದ ಚೆನ್ನಾಗಿ ಭಜಿಸುವ ಭಕ್ತರ ಭಾವವನ್ನು ವೃದ್ಧಿಪಡಿಸಿ, ಅವರ ಇಚ್ಛಾನುಸಾರವಾಗಿ ಧರ್ಮ, ಅರ್ಥ, ಕಾಮ, ಮೋಕ್ಷಗಳೆಂಬ ಪುರುಷಾರ್ಥರೂಪವಾದ ಶ್ರೇಯಸ್ಸನ್ನು ಕರುಣಿಸುವನು. ॥ ೫೯-೬೦ ॥ ಉಪಾಸಕನಿಗೆ ಇಂದ್ರಿಯ ಭೋಗಗಳಲ್ಲಿ ವೈರಾಗ್ಯ ಉಂಟಾಗಿದ್ದರೆ ಅವನು ಮೋಕ್ಷ ಪ್ರಾಪ್ತಿಗಾಗಿಯೇ ಅತ್ಯಂತ ಭಕ್ತಿಪೂರ್ವಕ ನಿರಂತರಭಾವದಿಂದ ಭಗವಂತನನ್ನು ಭಜಿಸಬೇಕು." ॥ ೬೧ ॥

ಹೀಗೆ ಶ್ರೀನಾರದಮುನಿಗಳ ಉಪದೇಶವನ್ನು ಪಡೆದು ರಾಜಕುಮಾರ ಧ್ರುವನು ಅವರಿಗೆ ಪ್ರದಕ್ಷಿಣೆ ಬಂದು ನಮಸ್ಕರಿಸಿದನು. ಅನಂತರ ಅವನು ಭಗವಂತನ ಚರಣಚಿಹ್ನೆಗಳಿಂದ ಅಂಕಿತವಾದ ಪರಮ ಪವಿತ್ರವಾದ ಮಧುವನಕ್ಕೆ ತೆರಳಿದನು. ॥ ೬೨ ॥ ಧ್ರುವನು ತಪೋವನದತ್ತ ಹೊರಟುಹೋದ ಬಳಿಕ ದೇವರ್ಷಿ ನಾರದರು ಉತ್ತಾನಪಾದನ ಅರಮನೆಗೆ ಬಂದರು. ರಾಜನು ಅವರನ್ನು ಯಥಾಯೋಗ್ಯ ಉಪಚಾರಾದಿಗಳಿಂದ ಪೂಜಿಸಿದನು. ಆಗ ಅವರು ಸುಖಾಸೀನರಾಗಿ ರಾಜನಲ್ಲಿ ಕುಶಲಪ್ರಶ್ನೆಗಳನ್ನು ಮಾಡಿದರು. ॥ ೬೩ ॥

ಶ್ರೀನಾರದಮುನಿಗಳು ಹೇಳಿದರು – ಮಹಾರಾಜನೇ ! ನಿನ್ನ ಮುಖವು ಬಾಡಿದೆಯಲ್ಲ! ಬಹಳ ಕಾಲದಿಂದ ಏನನ್ನೋ ಚಿಂತಿಸುತ್ತಿರುವ ಹಾಗಿದೆಯಲ್ಲ! ನಿನಗೆ ಧರ್ಮ, ಅರ್ಥ, ಕಾಮಗಳಲ್ಲಿ ಯಾವ ತೊಂದರೆಯೂ ಇಲ್ಲವಲ್ಲ ? ॥ ೬೪ ॥

ರಾಜೋವಾಚ

ಸುತೋ ಮೇ ಬಾಲಕೋ ಬ್ರಹ್ಮನ್ ಸ್ತ್ರೈಣೇನಾಕರುಣಾತ್ಮನಾ ।
ನಿರ್ವಾಸಿತಃ ಪಂಚವರ್ಷಃ ಸಹ ಮಾತ್ರಾ ಮಹಾನ್ಕವಿಃ ॥ ೬೫ ॥

ಅಪ್ಯನಾಥಂ ವನೇ ಬ್ರಹ್ಮನ್ಮಾಸ್ಮಾದಂತ್ಯರ್ಭಕಂ ವೃಕಾಃ ।
ಶ್ರಾಂತಂ ಶಯಾನಂ ಕ್ಷುಧಿತಂ ಪರಿಮ್ಲಾನಮುಖಾಂಬುಜಮ್ ॥ ೬೬ ॥

ಅಹೋ ಮೇ ಬತ ದೌರಾತ್ಮ್ಯಂ ಸ್ತ್ರೀಜಿತಸ್ಯೋಪಧಾರಯ ।
ಯೋಽಹಂ ಪ್ರೇಮ್ಣಾಽಽರುರುಕ್ಷಂತಂ ನಾಭ್ಯನಂದಮಸತ್ತಮಃ ॥ ೬೭ ॥

ನಾರದ ಉವಾಚ

ಮಾ ಮಾ ಶುಚಃ ಸ್ವತನಯಂ ದೇವಗುಪ್ತಂ ವಿಶಾಂಪತೇ ।
ತತ್ಪ್ರಭಾವಮವಿಜ್ಞಾಯ ಪ್ರಾವೃಙ್ಕ್ತೇ ಯದ್ಯಶೋ ಜಗತ್ ॥ ೬೮ ॥

ಸುದುಷ್ಕರಂ ಕರ್ಮ ಕೃತ್ವಾ ಲೋಕಪಾಲೈರಪಿ ಪ್ರಭುಃ ।
ಐಷ್ಯತ್ಯಚಿರತೋ ರಾಜನ್ಯಶೋ ವಿಪುಲಯಂಸ್ತವ ॥ ೬೯ ॥

ಮೈತ್ರೇಯ ಉವಾಚ

ಇತಿ ದೇವರ್ಷಿಣಾ ಪ್ರೋಕ್ತಂ ವಿಶ್ರುತ್ಯ ಜಗತೀಪತಿಃ ।
ರಾಜಲಕ್ಷ್ಮೀಮನಾದೃತ್ಯ ಪುತ್ರಮೇವಾನ್ವಚಿಂತಯತ್ ॥ ೭೦ ॥

ತತ್ರಾಭಿಷಿಕ್ತಃ ಪ್ರಯತಸ್ತಾಮುಪೋಷ್ಯ ವಿಭಾವರೀಮ್ ।
ಸಮಾಹಿತಃ ಪರ್ಯಚರದೃಷ್ಯಾದೇಶೇನ ಪೂರುಷಮ್ ॥ ೭೧ ॥

ತ್ರಿರಾತ್ರಾಂತೇ ತ್ರಿರಾತ್ರಾಂತೇ ಕಪಿತ್ಥಬದರಾಶನಃ ।
ಆತ್ಮವೃತ್ತ್ಯನುಸಾರೇಣ ಮಾಸಂ ನಿನ್ಯೇಽರ್ಚಯನ್ಹರಿಮ್ ॥ ೭೨ ॥

ದ್ವಿತೀಯಂ ಚ ತಥಾ ಮಾಸಂ ಷಷ್ಠೇ ಷಷ್ಠೇಽರ್ಭಕೋ ದಿನೇ ।
ತೃಣಪರ್ಣಾದಿಭಿಃ ಶೀರ್ಣೈಃ ಕೃತಾನ್ನೋಽಭ್ಯರ್ಚಯದ್ವಿಭುಮ್ ॥ ೭೩ ॥

ತೃತೀಯಂ ಚಾನಯನ್ಮಾಸಂ ನವಮೇ ನವಮೇಽಹನಿ ।
ಅಬ್ಭಕ್ಷ ಉತ್ತಮಶ್ಲೋಕಮುಪಾಧಾವತ್ಸಮಾಧಿನಾ ॥ ೭೪ ॥

ಚತುರ್ಥಮಪಿ ವೈ ಮಾಸಂ ದ್ವಾದಶೇ ದ್ವಾದಶೇಽಹನಿ ।
ವಾಯುಭಕ್ಷೋ ಜಿತಶ್ವಾಸೋ ಧ್ಯಾಯನ್ದೇವಮಧಾರಯತ್ ॥ ೭೫ ॥

ಉತ್ತಾನಪಾದ ರಾಜನೆಂದನು – ಮಹರ್ಷಿಗಳೇ! ಏನು ಹೇಳಲಿ? ಅಯ್ಯೋ! ನಾನು ಸ್ತ್ರೀಲೋಲನಾಗಿ, ನಿರ್ದಯನಾಗಿ ಅಕಾರ್ಯವನ್ನು ಮಾಡಿಬಿಟ್ಟೆ. ಮಹಾಮೇಧಾವಿಯಾಗಿದ್ದ ನನ್ನ ಐದು ವರ್ಷದ ಹಸುಳೆ ಬಾಲಕನನ್ನು ಅವನ ತಾಯಿಯೊಂದಿಗೆ ಮನೆಯಿಂದ ಹೊರ ಹಾಕಿದೆನು. ॥ ೬೫॥ (ಆ ಐದು ವರ್ಷದ ಮುದ್ದು ಮಗುವು ತಪಸ್ಸಿಗಾಗಿ ಕಾಡಿಗೆ ಹೋಗಿಬಿಟ್ಟಿರುವನು.) ಕಮಲದಂತಿರುವ ಅವನ ಮುಖವು ಹಸಿವಿನಿಂದ ಬಾಡಿಹೋಗಿರಬಹುದು. ಅವನು ಬಳಲಿ ದಾರಿಯಲ್ಲೇ ಎಲ್ಲಾದರೂ ಬಿದ್ದುಬಿಟ್ಟಿರಬಹುದು. ಅಸಹಾಯಕ ಮಗುವನ್ನು ಕಾಡಿನಲ್ಲಿ ತೋಳಗಳು ತಿಂದುಬಿಟ್ಟಿಲ್ಲತಾನೇ! ॥ ೬೬ ॥ ಅಯ್ಯೋ! ನಾನು ಎಂತಹ ಸ್ತ್ರೀದಾಸನಾದೆ. ನನ್ನ ಕುಟಿಲತೆಯನ್ನು ನೋಡಿರಲ್ಲ, ಆ ಬಾಲಕನು ಪ್ರೇಮದಿಂದ ನನ್ನ ತೊಡೆಯನ್ನೇರಲು ಬಯಸುತ್ತಿದ್ದನು. ಆದರೆ ದುಷ್ಟನಾದ ನಾನು ಅವನನ್ನು ಸ್ವಲ್ಪವೂ ಆದರಿಸಲಿಲ್ಲವಲ್ಲ. ॥ ೬೭ ॥

ಶ್ರೀನಾರದರು ಹೇಳಿದರು – ರಾಜನೇ! ನೀನು ನಿನ್ನ ಮಗನ ವಿಷಯದಲ್ಲಿ ಚಿಂತಿಸಬೇಡ. ಅವನ ರಕ್ಷಕನು ಭಗವಂತನೇ ಆಗಿರುವನು. ಅವನ ಪ್ರಭಾವವನ್ನು ನೀನು ಅರಿಯೆ. ಅವನ ಕೀರ್ತಿಯು ಇಡೀ ಜಗತ್ತಿನಲ್ಲೇ ಹರಡುತ್ತಿದೆ. ॥ ೬೮ ॥ ಆ ಬಾಲಕನು ಸರ್ವಸಮರ್ಥನಾಗಿದ್ದಾನೆ. ದೊಡ್ಡ-ದೊಡ್ಡ ಲೋಕಪಾಲಕರೂ ಮಾಡಲಾಗದ ಮಹತ್ಕಾರ್ಯವನ್ನು ಪೂರೈಸಿ ಅವನು ಶೀಘ್ರವಾಗಿ ನಿನ್ನ ಬಳಿಗೆ ಹಿಂತಿರುಗುವನು. ಅದರಿಂದ ನಿನ್ನ ಕೀರ್ತಿಯು ಹೆಚ್ಚುವುದು. ॥ ೬೯ ॥

ಶ್ರೀಮೈತ್ರೇಯಮಹರ್ಷಿಗಳು ಹೇಳುತ್ತಾರೆ – ದೇವರ್ಷಿ ನಾರದರ ಮಾತನ್ನು ಕೇಳಿದ ಉತ್ತಾನಪಾದರಾಜನು ರಾಜಕಾರ್ಯ-ರಾಜಭೋಗಗಳಲ್ಲಿ ಉದಾಸೀನನಾಗಿ ನಿರಂತರ ಆ ಪುತ್ರನ ಕುರಿತೇ ಚಿಂತಿಸುತ್ತಿದ್ದನು. ॥ ೭೦ ॥ ಇತ್ತ ಧ್ರುವಕುಮಾರನು ಮಧುವನವನ್ನು ತಲುಪಿ, ಯಮುನಾನದಿಯಲ್ಲಿ ಸ್ನಾನಮಾಡಿ ರಾತ್ರಿ ಪರಿಶುದ್ಧಿಯಿಂದ ಉಪವಾಸಮಾಡಿ, ನಾರದರ ಉಪದೇಶಾನುಸಾರ ಏಕಾಗ್ರಚಿತ್ತದಿಂದ ಪರಮಪುರುಷ ಶ್ರೀನಾರಾಯಣನ ಉಪಾಸನೆಯನ್ನು ಪ್ರಾರಂಭಿಸಿದನು. ॥ ೭೧ ॥ ಅವನು ಮೂರು-ಮೂರು ರಾತ್ರಿಗಳಿಗೆ ಒಂದು ಬಾರಿಯಂತೆ ಬೇಲದ ಹಣ್ಣು ಮತ್ತು ಬೋರೆಹಣ್ಣುಗಳನ್ನು ಮಾತ್ರ ಶರೀರಧಾರಣೆಗೆ ಬೇಕಾದಷ್ಟೇ ಸೇವಿಸುತ್ತಾ ಶ್ರೀಭಗವದಾರಾಧನೆಯಲ್ಲಿ ಒಂದು ತಿಂಗಳನ್ನು ಕಳೆದನು. ॥ ೭೨ ॥ ಎರಡನೇ ತಿಂಗಳಲ್ಲಿ ಅವನು ಆರಾರು ದಿನಗಳಿಗೆ ಒಂದು ಬಾರಿಯಂತೆ ಒಣಗಿದ ಎಲೆ ಮತ್ತು ಹುಲ್ಲನ್ನು ತಿಂದು ಭಗವಂತನನ್ನು ಭಜಿಸಿದನು. ॥ ೭೩ ॥ ಮೂರನೆಯ ತಿಂಗಳನ್ನು ಒಂಭತ್ತು-ಒಂಭತ್ತು ದಿನಗಳಿಗೊಮ್ಮೆ ಕೇವಲ ನೀರು ಕುಡಿದು ಸಮಾಧಿಯೋಗದ ಮೂಲಕ ಪುಣ್ಯಶ್ಲೋಕನಾದ ಪ್ರಭುವಿನ ಭಜನೆಯಲ್ಲಿ ಕಳೆದನು. ॥ ೭೪ ॥ ನಾಲ್ಕನೆಯ ತಿಂಗಳಲ್ಲಿ ಅವನು ಶ್ವಾಸವನ್ನು ಜಯಿಸಿ ಹನ್ನೆರಡು ದಿನಗಳಿಗೊಮ್ಮೆ ವಾಯುವನ್ನು ಮಾತ್ರ ಸ್ವೀಕರಿಸಿ ಧ್ಯಾನಯೋಗದ ಮೂಲಕ ಭಗವಂತನನ್ನು ಆರಾಧಿಸಿದನು. ॥ ೭೫ ॥

ಪಂಚಮೇ ಮಾಸ್ಯನುಪ್ರಾಪ್ತೇ ಜಿತಶ್ವಾಸೋ ನೃಪಾತ್ಮಜಃ ।
ಧ್ಯಾಯನ್ ಬ್ರಹ್ಮ ಪದೈಕೇನ ತಸ್ಥೌ ಸ್ಥಾಣುರಿವಾಚಲಃ ॥ ೭೬ ॥

ಸರ್ವತೋ ಮನ ಆಕೃಷ್ಯ ಹೃದಿ ಭೂತೇಂದ್ರಿಯಾಶಯಮ್ ।
ಧ್ಯಾಯನ್ ಭಗವತೋ ರೂಪಂ ನಾದ್ರಾಕ್ಷೀತ್ಕಿಂಚನಾಪರಮ್ ॥ ೭೭ ॥

ಆಧಾರಂ ಮಹದಾದೀನಾಂ ಪ್ರಧಾನಪುರುಷೇಶ್ವರಮ್ ।
ಬ್ರಹ್ಮ ಧಾರಯಮಾಣಸ್ಯ ತ್ರಯೋ ಲೋಕಾಶ್ಚಕಂಪಿರೇ ॥ ೭೮ ॥

ಯದೈಕಪಾದೇನ ಸ ಪಾರ್ಥಿವಾರ್ಭಕಃ
ತಸ್ಥೌ ತದಂಗುಷ್ಠನಿಪೀಡಿತಾ ಮಹೀ ।
ನನಾಮ ತತ್ರಾರ್ಧಮಿಭೇಂದ್ರಧಿಷ್ಠಿತಾ
ತರೀವ ಸವ್ಯೇತರತಃ ಪದೇ ಪದೇ ॥ ೭೯ ॥

ತಸ್ಮಿನ್ನಭಿಧ್ಯಾಯತಿ ವಿಶ್ವಮಾತ್ಮನೋ
ದ್ವಾರಂ ನಿರುಧ್ಯಾಸುಮನನ್ಯಯಾ ಧಿಯಾ ।
ಲೋಕಾ ನಿರುಚ್ಛ್ವಾಸನಿಪೀಡಿತಾ ಭೃಶಂ
ಸಲೋಕಪಾಲಾಃ ಶರಣಂ ಯಯುರ್ಹರಿಮ್ ॥ ೮೦ ॥

ದೇವಾ ಊಚುಃ

ನೈವಂ ವಿದಾಮೋ ಭಗವನ್ ಪ್ರಾಣರೋಧಂ
ಚರಾಚರಸ್ಯಾಖಿಲಸತ್ತ್ವಧಾಮ್ನಃ ।
ವಿಧೇಹಿ ತನ್ನೋ ವೃಜಿನಾದ್ವಿಮೋಕ್ಷಂ
ಪ್ರಾಪ್ತಾ ವಯಂ ತ್ವಾಂ ಶರಣಂ ಶರಣ್ಯಮ್ ॥ ೮೧ ॥

ಶ್ರೀಭಗವಾನುವಾಚ

ಮಾ ಭೈಷ್ಟ ಬಾಲಂ ತಪಸೋ ದುರತ್ಯಯಾತ್
ನಿವರ್ತಯಿಷ್ಯೇ ಪ್ರತಿಯಾತ ಸ್ವಧಾಮ ।
ಯತೋ ಹಿ ವಃ ಪ್ರಾಣನಿರೋಧ ಆಸೀತ್
ಔತ್ತಾನಪಾದಿರ್ಮಯಿ ಸಂಗತಾತ್ಮಾ ॥ ೮೨ ॥

ಐದನೆಯ ತಿಂಗಳಿನಲ್ಲಿ ಶ್ವಾಸವನ್ನು ಸಂಪೂರ್ಣವಾಗಿ ಜಯಿಸಿ ಪರಬ್ರಹ್ಮನನ್ನೇ ಚಿಂತಿಸುತ್ತಾ ಒಂಟಿಕಾಲಿನ ಮೇಲೆ ಮೋಟು ಮರದಂತೆ ನಿಶ್ಚಲನಾಗಿ ನಿಂತು ತಪಸ್ಸನ್ನಾಚರಿಸುತ್ತಿದ್ದನು. ॥ ೭೬ ॥ ಆಗ ಅವನು ಶಬ್ದಾದಿ ವಿಷಯಗಳನ್ನು ಇಂದ್ರಿಯಗಳನ್ನು ಮತ್ತು ಅವುಗಳಿಗೆ ನಿಯಾಮಕವಾಗಿರುವ ಮನಸ್ಸನ್ನು ಇತರ ಎಲ್ಲ ಕಡೆಗಳಿಂದಲೂ ಸೆಳೆದು ಹೃದಯಸ್ಥನಾಗಿದ್ದ ಶ್ರೀಹರಿಯ ಸ್ವರೂಪದಲ್ಲಿ ನೆಲೆಗೊಳಿಸಿದನು. ಚಿತ್ತವನ್ನು ಬೇರೆಲ್ಲಿಗೂ ಹೋಗಗೊಡಲಿಲ್ಲ. ॥ ೭೭ ॥ ಹೀಗೆ ಅವನು ಮಹತ್ತೇ ಮುಂತಾದ ಎಲ್ಲ ತತ್ತ್ವಗಳಿಗೂ ಆಧಾರವಾಗಿ, ಪ್ರಕೃತಿ ಮತ್ತು ಪುರುಷರಿಗೂ ಅಧೀಶ್ವರನಾದ ಪರಬ್ರಹ್ಮ ಪುರುಷೋತ್ತಮನಲ್ಲಿ ಮನಸ್ಸನ್ನು ಧಾರಣೆ ಮಾಡಿದನು. ಅವನ ತೇಜಸ್ಸನ್ನು ಸಹಿಸಲಾರದೇ ಮೂರು ಲೋಕಗಳು ನಡುಗಿಹೋದವು. ॥ ೭೮ ॥ ಅವನು ಒಂಟಿಕಾಲಿನ ಮೇಲೆ ನಿಂತುಕೊಂಡಾಗ ಅವನ ಕಾಲಿನ ಹೆಬ್ಬೆರಳಿನಿಂದ ತುಳಿಯಲ್ಪಟ್ಟ ಭೂಮಿಯು ಗಜರಾಜನು ಏರಿದ ಹಡಗಿನಂತೆ ಎಡ-ಬಲಕ್ಕೆ ತೂಗತೊಡಗಿತು. ॥ ೭೯ ॥ ಧ್ರುವನು ತನ್ನ ಇಂದ್ರಿಯ ದ್ವಾರಗಳನ್ನು ಹಾಗೂ ಪ್ರಾಣಗಳನ್ನು ಸ್ತಂಭಿಸಿ ಅನನ್ಯ ಬುದ್ಧಿಯಿಂದ ವಿಶ್ವಾತ್ಮನಾದ ವಿಷ್ಣುವನ್ನು ಧ್ಯಾನಿಸತೊಡಗಿದಾಗ ಸರ್ವಲೋಕಗಳಿಗೂ ಉಸಿರು ಕಟ್ಟಿಹೋಯಿತು. ಎಲ್ಲ ಲೋಕಗಳು ಮತ್ತು ಲೋಕಪಾಲಕರೂ ತಡೆಯಲಾಗದ ಪೀಡೆಗೆ ಒಳಗಾದರು. ಆಗ ಅವರೆಲ್ಲರೂ ಗಾಬರಿಗೊಂಡು ಶ್ರೀಹರಿಯನ್ನು ಶರಣು ಹೋದರು. ॥ ೮೦ ॥

ದೇವತೆಗಳು ಹೇಳಿದರು – ಭಗವಂತನೇ! ಸಮಸ್ತ ಸ್ಥಾವರ-ಜಂಗಮ ಪ್ರಾಣಿಗಳ ಪ್ರಾಣಗಳು ಸ್ತಬ್ಧವಾಗಿವೆ. ನಮಗೆ ಇಂತಹ ಅನುಭವವು ಮೊದಲೂ ಎಂದೂ ಆಗಿರಲಿಲ್ಲ. ನೀನು ಶರಣಾಗತರಕ್ಷಕನು. ನಿನ್ನಲ್ಲಿ ಶರಣು ಬಂದಿರುವ ನಮ್ಮನ್ನು ಈ ದುಃಖದಿಂದ ಪಾರುಮಾಡು. ॥ ೮೧ ॥

ಶ್ರೀಭಗವಂತನು ಹೇಳಿದನು – ದೇವತೆಗಳಿರಾ! ಹೆದರಬೇಡಿರಿ. ಉತ್ತಾನಪಾದನ ಪುತ್ರನಾದ ಧ್ರುವಕುಮಾರನು ತನ್ನ ಚಿತ್ತವನ್ನು ವಿಶ್ವಾತ್ಮನಾದ ನನ್ನಲ್ಲಿ ಲೀನಗೊಳಿಸಿರುವನು. ಅದರಿಂದ ಅವನು ನನ್ನಲ್ಲಿ ಅಭೇದಧ್ಯಾನ-ಧಾರಣೆಯಿಂದ ಚಿತ್ತವನ್ನು ಒಂದಾಗಿಸಿರುವನು. ಅವನು ಪ್ರಾಣಸ್ತಂಭನ ಮಾಡಿರುವುದರಿಂದ ನಿಮ್ಮೆಲ್ಲರ ಪ್ರಾಣಗಳೂ ಸ್ತಬ್ಧಗೊಂಡಿವೆ. ನಾನು ಆ ಬಾಲಕನು ತಪಸ್ಸನ್ನು ನಿಲ್ಲಿಸುವಂತೆ ಮಾಡುವೆನು. ನೀವು ನಿಮ್ಮ-ನಿಮ್ಮ ಲೋಕಗಳಿಗೆ ತೆರಳಿರಿ. ॥ ೮೨ ॥

ಎಂಟನೆಯ ಅಧ್ಯಾಯವು ಮುಗಿಯಿತು. ॥ ೮ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಚತುರ್ಥಸ್ಕಂಧೇ
ಧ್ರುವಚರಿತೇಽಷ್ಟಮೋಽಧ್ಯಾಯಃ ॥ ೮ ॥

ಒಂಭತ್ತನೆಯ ಅಧ್ಯಾಯ

ಧ್ರುವನು ವರವನ್ನು ಪಡೆದು ಹಿಂದಿರುಗಿದುದು

ಮೈತ್ರೇಯ ಉವಾಚ

ತ ಏವಮುತ್ಸನ್ನಭಯಾ ಉರುಕ್ರಮೇ
ಕೃತಾವನಾಮಾಃ ಪ್ರಯಯುಸ್ತ್ರಿವಿಷ್ಟಪಮ್ ।
ಸಹಸ್ರಶೀರ್ಷಾಪಿ ತತೋ ಗರುತ್ಮತಾ
ಮಧೋರ್ವನಂ ಭೃತ್ಯದಿದೃಕ್ಷಯಾ ಗತಃ ॥ ೧ ॥

ಸ ವೈ ಧಿಯಾ ಯೋಗವಿಪಾಕತೀವ್ರಯಾ
ಹೃತ್ಪದ್ಮಕೋಶೇ ಸ್ಫುರಿತಂ ತಡಿತ್ಪ್ರಭಮ್ ।
ತಿರೋಹಿತಂ ಸಹಸೈವೋಪಲಕ್ಷ್ಯ
ಬಹಿಃಸ್ಥಿತಂ ತದವಸ್ಥಂ ದದರ್ಶ ॥ ೨ ॥

ತದ್ದರ್ಶನೇನಾಗತಸಾಧ್ವಸಃ ಕ್ಷಿತಾ-
ವವಂದತಾಂಗಂ ವಿನಮಯ್ಯ ದಂಡವತ್ ।
ದೃಗ್ಭ್ಯಾಂ ಪ್ರಪಶ್ಯನ್ಪ್ರಪಿಬನ್ನಿವಾರ್ಭಕ-
ಶ್ಚುಂಬನ್ನಿವಾಸ್ಯೇನ ಭುಜೈರಿವಾಶ್ಲಿಷನ್ ॥ ೩ ॥

ಸ ತಂ ವಿವಕ್ಷಂತಮತದ್ವಿದಂ ಹರಿಃ
ಜ್ಞಾತ್ವಾಸ್ಯ ಸರ್ವಸ್ಯ ಚ ಹೃದ್ಯವಸ್ಥಿತಃ ।
ಕೃತಾಂಜಲಿಂ ಬ್ರಹ್ಮಮಯೇನ ಕಂಬುನಾ
ಪಸ್ಪರ್ಶ ಬಾಲಂ ಕೃಪಯಾ ಕಪೋಲೇ ॥ ೪ ॥

ಸ ವೈ ತದೈವ ಪ್ರತಿಪಾದಿತಾಂ ಗಿರಂ
ದೈವೀಂ ಪರಿಜ್ಞಾತಪರಾತ್ಮನಿರ್ಣಯಃ ।
ತಂ ಭಕ್ತಿಭಾವೋಽಭ್ಯಗೃಣಾದಸತ್ವರಂ
ಪರಿಶ್ರುತೋರುಶ್ರವಸಂ ಧ್ರುವಕ್ಷಿತಿಃ ॥ ೫ ॥

ಧ್ರುವ ಉವಾಚ

ಯೋಽಂತಃ ಪ್ರವಿಶ್ಯ ಮಮ ವಾಚಮಿಮಾಂ ಪ್ರಸುಪ್ತಾಂ
ಸಂಜೀವಯತ್ಯಖಿಲಶಕ್ತಿಧರಃ ಸ್ವಧಾಮ್ನಾ ।
ಅನ್ಯಾಂಶ್ಚ ಹಸ್ತಚರಣಶ್ರವಣತ್ವಗಾದೀನ್
ಪ್ರಾಣಾನ್ನಮೋ ಭಗವತೇ ಪುರುಷಾಯ ತುಭ್ಯಮ್ ॥ ೬ ॥

ಶ್ರೀಮೈತ್ರೇಯರು ಹೇಳಿದರು – ಎಲೈ ವಿದುರನೇ! ಶ್ರೀ ಭಗವಂತನ ಆಶ್ವಾಸನೆಯಿಂದ, ಅಭಯಪ್ರದಾನದಿಂದ ದೇವತೆಗಳು ಭಯವನ್ನು ತೊರೆದು ದೇವದೇವನಿಗೆ ವಂದಿಸಿ ಸ್ವರ್ಗಲೋಕಕ್ಕೆ ಹೊರಟುಹೋದರು. ಅನಂತರ ವಿರಾಟ್‌ಸ್ವರೂಪಿ ಭಗವಂತನು ಗರುಡನನ್ನೇರಿ ತನ್ನ ಭಕ್ತನನ್ನು ನೋಡಲು ಮಧುವನಕ್ಕೆ ದಯಮಾಡಿಸಿದನು. ॥ ೧ ॥ ಆಗ ಯೋಗಾಭ್ಯಾಸದಿಂದ ಏಕಾಗ್ರವಾಗಿದ್ದ ಬುದ್ಧಿಯಿಂದ ಮಿಂಚಿನಂತೆ ಹೊಳೆಯುತ್ತಿದ್ದ ಯಾವ ಭಗವನ್ಮೂರ್ತಿಯನ್ನು ಧ್ರುವನು ಹೃದಯಕಮಲದಲ್ಲಿ ಧ್ಯಾನಿಸುತ್ತಿದ್ದನೋ ಆ ಮೂರ್ತಿಯು ಇದ್ದಕ್ಕಿದ್ದಂತೆ ಕಣ್ಮರೆಯಾಯಿತು. 'ಇದೇನು ಹೀಗಾಯಿತಲ್ಲ!' ಎಂದು ಅವನು ಕಣ್ತೆರೆದಾಗ ಅದೇ ಭಗವದ್ರೂಪವೇ ಕಣ್ಣುಗಳ ಮುಂದೆ ನಿಂತಿರುವುದು ಆತನಿಗೆ ಗೋಚರಿಸಿತು. ॥ ೨ ॥ ಪ್ರಭುವಿನ ದರ್ಶನಪಡೆದು ಬಾಲಕ ಧ್ರುವನಿಗೆ ಅತೀವ ಸಂಭ್ರಮವಾಯಿತು. ಅವನು ಪ್ರೇಮದಲ್ಲಿ ಮೈಮರೆತು, ಸ್ವಾಮಿಗೆ ದೀರ್ಘದಂಡ ಪ್ರಣಾಮಮಾಡಿದನು. ಮತ್ತೆ ಆ ಸುಂದರಮೂರ್ತಿಯನ್ನು ಕಣ್ಣುಗಳಿಂದ ಕುಡಿದುಬಿಡುವನೋ, ಬಾಯಿಂದ ಮುತ್ತಿಕ್ಕುತ್ತಿರುವನೋ, ಭುಜಗಳಿಂದ ಆಲಿಂಗಿಸುತ್ತಿರುವನೋ ಎಂಬಂತೆ ಪ್ರೇಮಪೂರ್ಣವಾದ ದೃಷ್ಟಿಯಿಂದ ಎವೆಯಿಕ್ಕದೆ ನೋಡತೊಡಗಿದನು. ॥ ೩ ॥ ಅವನು ಕೈಜೋಡಿಸಿಕೊಂಡು ಸ್ವಾಮಿಯ ಎದುರಿಗೆ ನಿಂತಿದ್ದನು. ಅವನನ್ನು ಸ್ತುತಿಸಬೇಕೆಂದು ಬಯಸುತ್ತಿದ್ದನು. ಆದರೆ ಹೇಗೆ ಸ್ತುತಿಸಬೇಕೆಂದು ತಿಳಿಯದಾದನು. ಸರ್ವಾಂತರ್ಯಾಮಿ ಶ್ರೀಹರಿಯು ಅವನ ಮನಸ್ಸಿನ ಬಯಕೆಯನ್ನು ತಿಳಿದುಕೊಂಡು ಕೃಪೆಯಿಂದ ತನ್ನ ವೇದಮಯ ಶಂಖವನ್ನು ಅವನ ಗಲ್ಲಕ್ಕೆ ಮುಟ್ಟಿಸಿದನು. ॥ ೪ ॥ ಧ್ರುವನು ಭವಿಷ್ಯದಲ್ಲಿ ಅವಿಚಲ ಪದವನ್ನು ಪಡೆಯುವವನಿದ್ದನು. ಈಗ ಭಗವಂತನ ಪಾಂಚಜನ್ಯ ಶಂಖದ ಸ್ಪರ್ಶವಾಗುತ್ತಲೇ ಅವನಿಗೆ ವೇದಮಯ ದಿವ್ಯವಾಣಿಯು ಪ್ರಾಪ್ತವಾಯಿತು. ಜೀವ-ಬ್ರಹ್ಮರ ಸ್ವರೂಪದ ನಿಶ್ಚಯ ಜ್ಞಾನವೂ ಉಂಟಾಯಿತು. ಅವನು ಅತ್ಯಂತ ಭಕ್ತಿಭಾವದಿಂದೊಡಗೂಡಿ ಧೈರ್ಯದಿಂದ ವಿಶ್ವವಿಖ್ಯಾತ ಕೀರ್ತಿಯುಳ್ಳ ಶ್ರೀಹರಿಯನ್ನು ಸ್ತುತಿಸತೊಡಗಿದನು. ॥ ೫ ॥

ಧ್ರುವನು ಹೇಳಿದನು – ಸ್ವಾಮಿಯೇ! ನೀನು ಸರ್ವಶಕ್ತಿಸಂಪನ್ನನಾಗಿರುವೆ. ನೀನೇ ನನ್ನೊಳಗೆ ಪ್ರವೇಶಿಸಿ ನನ್ನ ಸುಪ್ತವಾದ ವಾಣಿಯನ್ನು ನಿನ್ನ ತೇಜಸ್ಸಿನಿಂದ ಉಜ್ಜೀವನಗೊಳಿಸುತ್ತೀಯೆ. ಹಾಗೆಯೇ ಕೈ-ಕಾಲು-ಕಿವಿ-ಚರ್ಮ ಮುಂತಾದ ಇತರ ಇಂದ್ರಿಯಗಳಿಗೂ, ಪ್ರಾಣಗಳಿಗೂ ಚೈತನ್ಯವನ್ನು ಕೊಡುತ್ತಿರುವೆ. ಇಂತಹ ಅಂತರ್ಯಾಮಿ ಭಗವಂತನಾದ ನಿನಗೆ ನಮೋ ನಮಃ ॥ ೬ ॥ ಭಗವಂತನೇ! ನೀನು ಒಬ್ಬನೇ ಆಗಿದ್ದರೂ ಅನಂತಗುಣಮಯ ನಿನ್ನ ಮಾಯಾಶಕ್ತಿಯಿಂದ ಈ ಮಹತ್ತೇ ಮುಂತಾದ ಸಮಸ್ತ ಪ್ರಪಂಚವನ್ನು ರಚಿಸಿ, ಅಂತರ್ಯಾಮಿಯಾಗಿ ಅದರಲ್ಲಿ ಒಳಹೊಕ್ಕಿರುವೆ.

ಏಕಸ್ತ್ವಮೇವ ಭಗವನ್ನಿದಮಾತ್ಮಶಕ್ತ್ಯಾ
ಮಾಯಾಖ್ಯಯೋರುಗುಣಯಾ ಮಹದಾದ್ಯಶೇಷಮ್ ।
ಸೃಷ್ಟ್ವಾನುವಿಶ್ಯ ಪುರುಷಸ್ತದಸದ್ಗುಣೇಷು
ನಾನೇವ ದಾರುಷು ವಿಭಾವಸುವದ್ವಿಭಾಸಿ ॥ ೭ ॥

ತ್ವದ್ದತ್ತಯಾ ವಯುನಯೇದಮಚಷ್ಟ ವಿಶ್ವಂ
ಸುಪ್ತಪ್ರಬುದ್ಧ ಇವ ನಾಥ ಭವತ್ಪ್ರಪನ್ನಃ ।
ತಸ್ಯಾಪವರ್ಗ್ಯಶರಣಂ ತವ ಪಾದಮೂಲಂ
ವಿಸ್ಮರ್ಯತೇ ಕೃತವಿದಾ ಕಥಮಾರ್ತಬಂಧೋ ॥ ೮ ॥

ನೂನಂ ವಿಮುಷ್ಟಮತಯಸ್ತವ ಮಾಯಯಾ ತೇ
ಯೇ ತ್ವಾಂ ಭವಾಪ್ಯಯವಿಮೋಕ್ಷಣಮನ್ಯಹೇತೋಃ ।
ಅರ್ಚಂತಿ ಕಲ್ಪಕತರುಂ ಕುಣಪೋಪಭೋಗ್ಯ-
ಮಿಚ್ಛಂತಿ ಯತ್ಸ್ಪರ್ಶಜಂ ನಿರಯೇಽಪಿ ನೃಣಾಮ್ ॥ ೯ ॥

ಯಾ ನಿರ್ವೃತಿಸ್ತನುಭೃತಾಂ ತವ ಪಾದಪದ್ಮ-
ಧ್ಯಾನಾದ್ಭವಜ್ಜನಕಥಾಶ್ರವಣೇನ ವಾ ಸ್ಯಾತ್ ।
ಸಾ ಬ್ರಹ್ಮಣಿ ಸ್ವಮಹಿಮನ್ಯಪಿ ನಾಥ ಮಾ ಭೂತ್
ಕಿಂ ತ್ವಂತಕಾಸಿಲುಲಿತಾತ್ಪತತಾಂ ವಿಮಾನಾತ್ ॥ ೧೦ ॥

ಭಕ್ತಿಂ ಮುಹುಃ ಪ್ರವಹತಾಂ ತ್ವಯಿ ಮೇ ಪ್ರಸಂಗೋ
ಭೂಯಾದನಂತ ಮಹತಾಮಮಲಾಶಯಾನಾಮ್ ।
ಯೇನಾಂಜಸೋಲ್ಬಣಮುರುವ್ಯಸನಂ ಭವಾಬ್ಧಿಂ
ನೇಷ್ಯೇ ಭವದ್ಗುಣಕಥಾಮೃತಪಾನಮತ್ತಃ ॥ ೧೧ ॥

ತೇ ನ ಸ್ಮರಂತ್ಯತಿತರಾಂ ಪ್ರಿಯಮೀಶ ಮರ್ತ್ಯಂ
ಯೇ ಚಾನ್ವದಃ ಸುತಸುಹೃದ್ಗೃಹವಿತ್ತದಾರಾಃ ।
ಯೇ ತ್ವಬ್ಜನಾಭ ಭವದೀಯಪದಾರವಿಂದ-
ಸೌಗಂಧ್ಯಲುಬ್ಧಹೃದಯೇಷು ಕೃತಪ್ರಸಂಗಾಃ ॥ ೧೨ ॥

ತಿರ್ಯಙ್ನಗದ್ವಿಜಸರೀಸೃಪದೇವದೈತ್ಯ-
ಮರ್ತ್ಯಾದಿಭಿಃ ಪರಿಚಿತಂ ಸದಸದ್ವಿಶೇಷಮ್ ।
ರೂಪಂ ಸ್ಥವಿಷ್ಠಮಜ ತೇ ಮಹದಾದ್ಯನೇಕಂ
ನಾತಃ ಪರಂ ಪರಮ ವೇದ್ಮಿ ನ ಯತ್ರ ವಾದಃ ॥ ೧೩ ॥

ಕಲ್ಪಾಂತ ಏತದಖಿಲಂ ಜಠರೇಣ ಗೃಹ್ಣನ್
ಶೇತೇ ಪುಮಾನ್ ಸ್ವದೃಗನಂತಸಖಸ್ತದಂಕೇ ।
ಯನ್ನಾಭಿಸಿಂಧುರುಹಕಾಂಚನಲೋಕಪದ್ಮ-
ಗರ್ಭೇ ದ್ಯುಮಾನ್ ಭಗವತೇ ಪ್ರಣತೋಽಸ್ಮಿ ತಸ್ಮೈ ॥ ೧೪ ॥

ಬಗೆ-ಬಗೆಯ ಕಟ್ಟಿಗೆಗಳಲ್ಲಿ ಪ್ರಕಟಗೊಳ್ಳುವ ಅಗ್ನಿಯು ತನ್ನ ಉಪಾಧಿಗಳಿಗನುಸಾರವಾಗಿ ಭಿನ್ನ-ಭಿನ್ನರೂಪವಾಗಿ ಕಾಣುವಂತೆ ನೀನು ಇಂದ್ರಿಯಾದಿ ಅಸದ್ಗುಣಗಳಲ್ಲಿ ಅವುಗಳ ಅಧಿಷ್ಠಾತೃ ದೇವತೆಗಳ ರೂಪದಲ್ಲಿದ್ದು ಅನೇಕರೂಪವಾಗಿ ಕಾಣಿಸಿಕೊಳ್ಳುತ್ತಿರುವೆ. ॥ ೭ ॥ ಒಡೆಯಾ! ಬ್ರಹ್ಮದೇವರು ಕೂಡ ನಿನ್ನಲ್ಲಿ ಶರಣಾಗಿ ಸೃಷ್ಟಿಯ ಪ್ರಾರಂಭದಲ್ಲಿ ನೀನೇ ದಯಪಾಲಿಸಿದ ಜ್ಞಾನದ ಪ್ರಭಾವದಿಂದಲೇ ಈ ಜಗತ್ತನ್ನು ನಿದ್ರೆಯಿಂದ ಎಚ್ಚತ್ತ ಪುರುಷನಂತೆ ಕಂಡರು. ದೀನಬಂಧುವೇ! ಮುಕ್ತ ಪುರುಷರೂ ಕೂಡ ನಿನ್ನ ಚರಣ ಕಮಲಗಳನ್ನು ಆಶ್ರಯಿಸುತ್ತಾರೆ. ಅಂತಹ ಪಾದಕಮಲಗಳನ್ನು ಕೃತಜ್ಞನಾದವರೂ ಯಾರು ತಾನೇ ಮರೆಯಬಲ್ಲರು? ॥ ೮ ॥ ಶವಕ್ಕೆ ಸಮವಾದ ಈ ಶರೀರಗಳ ಮೂಲಕ ಅನುಭವಿಸಲ್ಪಡುವ, ಇಂದ್ರಿಯಗಳ ಮತ್ತು ಅವುಗಳ ವಿಷಯಗಳ ಸಂಸರ್ಗದಿಂದ ಉಂಟಾಗುವ ಸುಖವು ಮನುಷ್ಯರಿಗೆ ನರಕದಲ್ಲಿಯೂ ದೊರೆಯಬಲ್ಲದು. ಇಂತಹ ವಿಷಯಸುಖಗಳಿಗಾಗಿ ಹಾತೊರೆಯುವವರು ಹುಟ್ಟು-ಸಾವುಗಳ ಕಟ್ಟಿನಿಂದ ಬಿಡುಗಡೆಗೊಳಿಸುವ ಕಲ್ಪತರು ಎನಿಸಿರುವ ನಿನ್ನ ಉಪಾಸನೆಯನ್ನು, ನಿನ್ನ ಪ್ರಾಪ್ತಿಯನ್ನು ಬಿಟ್ಟು ಇತರ ಉದ್ದೇಶಗಳಿಗಾಗಿ ಮಾಡುವಂತಹವರ ಬುದ್ಧಿಯು ನಿಜವಾಗಿ ನಿನ್ನ ಮಾಯೆಯಿಂದ ಮೋಸಹೋಗಿದೆ ಎಂದೇ ತಿಳಿಯಬೇಕು. ॥ ೯ ॥ ಸ್ವಾಮಿಯೇ! ನಿನ್ನ ಚರಣಕಮಲಗಳ ಧ್ಯಾನದಿಂದ ಮತ್ತು ನಿನ್ನ ಭಕ್ತರ ಪವಿತ್ರ ಚರಿತ್ರೆಗಳನ್ನು ಕೇಳುವುದರಿಂದ ಪ್ರಾಣಿಗಳಿಗೆ ದೊರೆಯುವ ಆನಂದವು ನಿಜಾನಂದಸ್ವರೂಪವಾದ ಬ್ರಹ್ಮನಲ್ಲಿಯೂ ಸಿಕ್ಕುವುದಿಲ್ಲ. ಹೀಗಿರುವಾಗ ಕಾಲದ ಕತ್ತಿಯಿಂದ ಕತ್ತರಿಸಲ್ಪಡುವ ಸ್ವರ್ಗದ ವಿಮಾನಗಳಿಂದ ಕೆಳಗೆ ಬೀಳುವಂತಹ ಜನರಿಗೆ ಆ ಸುಖವು ಹೇಗೆ ದೊರೆಯಬಲ್ಲದು? ॥ ೧೦ ॥ ಓ ಅನಂತನೇ! ನಿನ್ನಲ್ಲಿ ಅವಿಚ್ಛಿನ್ನವಾದ ಭಕ್ತಿಭಾವವುಳ್ಳ ಶುದ್ಧಹೃದಯರಾದ ಮಹಾತ್ಮಾಭಕ್ತರ ಸಂಗವನ್ನು ನನಗೆ ಕರುಣಿಸು. ಅವರ ಸಂಗದಲ್ಲಿದ್ದು ನಾನು ನಿನ್ನ ಲೀಲಾ-ಗುಣಗಳ ಕಥಾಮೃತವನ್ನು ಕುಡಿ-ಕುಡಿದು ಮತ್ತನಾಗಿ ದುಃಖಪೂರ್ಣವಾದ ಭಯಂಕರ ಸಂಸಾರಸಾಗರವನ್ನು ದಾಟಿಬಿಡುವೆನು. ॥ ೧೧ ॥ ಓ ಪದ್ಮನಾಭ ಪ್ರಭುವೇ! ನಿನ್ನ ಚರಣ ಕಮಲಗಳ ಸುಗಂಧದಲ್ಲೇ ರಮಿಸುವ ಚಿತ್ತವುಳ್ಳ ಮಹಾನುಭಾವರ ಸಂಗಮಾಡುವವರಿಗೆ ತಮ್ಮ ಈ ಅತ್ಯಂತ ಪ್ರಿಯ ಶರೀರ ಮತ್ತು ಇದರ ಸಂಬಂಧೀ ಪುತ್ರ, ಮಿತ್ರ, ಗೃಹ, ಪತ್ನೀ ಮುಂತಾದವರ ನೆನಪೂ ಕೂಡ ಇರುವುದಿಲ್ಲ. ॥ ೧೨ ॥ ಜನ್ಮರಹಿತನಾದ ಜಗತ್ಪತಿಯೇ! ಪಶು, ಪಕ್ಷಿ, ವೃಕ್ಷ, ಪರ್ವತ, ಸರೀಸೃಪ, ದೇವತೆಗಳು, ದೈತ್ಯರು, ಮನುಷ್ಯರು ಮುಂತಾದವುಗಳಿಂದ ತುಂಬಿದ ಈ ಸದಸದಾತ್ಮಕವಾದ ಸ್ಥೂಲವಿಶ್ವವನ್ನು ಮಾತ್ರ ನಾನು ತಿಳಿದಿರುವೆನು. ಇದರಿಂದ ಹೊರತಾದ ಮಾತು-ಮನಸ್ಸು ತಲುಪಲಾರದ ನಿನ್ನ ಪರಮಸ್ವರೂಪವನ್ನು ತಿಳಿಯಲಾರೆನು. ॥ ೧೩ ॥

ಕಲ್ಪಾಂತ್ಯದಲ್ಲಿ ಪರಮಪುರುಷನಾದ ನೀನು ಯೋಗನಿದ್ರೆಯಲ್ಲಿದ್ದು ಇಡೀ ವಿಶ್ವವನ್ನು ಉದರದಲ್ಲಿ ಅಡಗಿಸಿಕೊಂಡು ಆದಿಶೇಷನ ಮಡಿಲಲ್ಲಿ ಮಲಗುತ್ತೀಯೆ. ಆಗ ನಿನ್ನ ನಾಭಿಸಮುದ್ರದಿಂದ ಪ್ರಕಟವಾದ, ಸರ್ವಲೋಕಮಯ ಸುವರ್ಣ ಕಮಲದಿಂದ

ತ್ವಂ ನಿತ್ಯಮುಕ್ತಪರಿಶುದ್ಧವಿಬುದ್ಧ ಆತ್ಮಾ
ಕೂಟಸ್ಥ ಆದಿಪುರುಷೋ ಭಗವಾಂಸ್ತ್ರ್ಯಧೀಶಃ ।
ಯದ್ಬುದ್ಧ್ಯವಸ್ಥಿತಿಮಖಂಡಿತಯಾ ಸ್ವದೃಷ್ಟ್ಯಾ
ದ್ರಷ್ಟಾ ಸ್ಥಿತಾವಧಿಮಖೋ ವ್ಯತಿರಿಕ್ತ ಆಸ್ಸೇ ॥ ೧೫ ॥

ಯಸ್ಮಿನ್ ವಿರುದ್ಧಗತಯೋ ಹ್ಯನಿಶಂ ಪತಂತಿ
ವಿದ್ಯಾದಯೋ ವಿವಿಧಶಕ್ತಯ ಆನುಪೂರ್ವ್ಯಾತ್ ।
ತದ್ಬ್ರಹ್ಮ ವಿಶ್ವಭವಮೇಕಮನಂತಮಾದ್ಯ-
ಮಾನಂದಮಾತ್ರಮವಿಕಾರಮಹಂ ಪ್ರಪದ್ಯೇ ॥ ೧೬ ॥

ಸತ್ಯಾಽಽಶಿಷೋ ಹಿ ಭಗವಂಸ್ತವ ಪಾದಪದ್ಮ-
ಮಾಶೀಸ್ತಥಾನುಭಜತಃ ಪುರುಷಾರ್ಥಮೂರ್ತೇಃ ।
ಅಪ್ಯೇವಮರ್ಯ ಭಗವಾನ್ ಪರಿಪಾತಿ ದೀನಾನ್
ವಾಶ್ರೇವ ವತ್ಸಕಮನುಗ್ರಹಕಾತರೋಽಸ್ಮಾನ್ ॥ ೧೭ ॥

ಮೈತ್ರೇಯ ಉವಾಚ

ಅಥಾಭಿಷ್ಟುತ ಏವಂ ವೈ ಸತ್ಸಂಕಲ್ಪೇನ ಧೀಮತಾ ।
ಭೃತ್ಯಾನುರಕ್ತೋ ಭಗವಾನ್ ಪ್ರತಿನಂದ್ಯೇದಮಬ್ರವೀತ್ ॥ ೧೮ ॥

ಶ್ರೀಭಗವಾನುವಾಚ

ವೇದಾಹಂ ತೇ ವ್ಯವಸಿತಂ ಹೃದಿ ರಾಜನ್ಯಬಾಲಕ ।
ತತ್ಪ್ರಯಚ್ಛಾಮಿ ಭದ್ರಂ ತೇ ದುರಾಪಮಪಿ ಸುವ್ರತ ॥ ೧೯ ॥

ನಾನ್ಯೈರಧಿಷ್ಠಿತಂ ಭದ್ರ ಯದ್ಭ್ರಾಜಿಷ್ಣು ಧ್ರುವಕ್ಷಿತಿ ।
ಯತ್ರ ಗ್ರಹರ್ಕ್ಷತಾರಾಣಾಂ ಜ್ಯೋತಿಷಾಂ ಚಕ್ರಮಾಹಿತಮ್ ॥ ೨೦ ॥

ಮೇಢ್ಯಾಂ ಗೋಚಕ್ರವತ್ಸ್ಥಾಸ್ನು ಪರಸ್ತಾತ್ಕಲ್ಪವಾಸಿನಾಮ್ ।
ಧರ್ಮೋಽಗ್ನಿಃ ಕಶ್ಯಪಃ ಶುಕ್ರೋ ಮುನಯೋ ಯೇ ವನೌಕಸಃ ।
ಚರಂತಿ ದಕ್ಷಿಣೀಕೃತ್ಯ ಭ್ರಮಂತೋ ಯತ್ಸತಾರಕಾಃ ॥ ೨೧ ॥

ಪರಮ ತೇಜೋಮಯ ಬ್ರಹ್ಮದೇವರು ಉತ್ಪನ್ನರಾದರು. ಇಂತಹ ಮಹಾಮಹಿಮನಾದ ನಿನಗೆ ವಂದಿಸುತ್ತೇನೆ. ॥ ೧೪ ॥

ಪ್ರಭೋ! ನೀನು ನಿನ್ನ ಅಖಂಡ ಚಿನ್ಮಯೀ ದೃಷ್ಟಿಯಿಂದ ಬುದ್ಧಿಯ ಎಲ್ಲ ಅವಸ್ಥೆಗಳ ಸಾಕ್ಷಿಯಾಗಿರುವೆ. ಹಾಗೆಯೇ ನಿತ್ಯ ಮುಕ್ತನೂ, ಶುದ್ಧಸತ್ತ್ವಮಯನೂ, ಸರ್ವಜ್ಞನೂ, ಪರಮಾತ್ಮ ಸ್ವರೂಪನೂ, ನಿರ್ವಿಕಾರನೂ, ಆದಿಪುರುಷನೂ, ಷಡೈಶ್ವರ್ಯ ಸಂಪನ್ನನೂ, ಮೂರುಗುಣಗಳ ಅಧೀಶ್ವರನೂ ಆಗಿರುವೆ. ನೀನು ಜೀವನಿಂದ ಸರ್ವಥಾ ಭಿನ್ನನಾಗಿರುವೆ. ಪ್ರಪಂಚದ ಸ್ಥಿತಿಗಾಗಿ ಯಜ್ಞಾಧಿಷ್ಠಾತನಾದ ವಿಷ್ಣುರೂಪದಿಂದ ವಿರಾಜಿಸುತ್ತೀಯೆ. ॥ ೧೫ ॥

ನಿನ್ನಿಂದಲೇ ವಿದ್ಯೆ-ಅವಿದ್ಯೆ ಮುಂತಾದ ವಿರುದ್ಧ ಗತಿಯುಳ್ಳ ಅನೇಕ ಶಕ್ತಿಗಳು ಧಾರಾವಾಹಿಯಾಗಿ ನಿರಂತರ ಪ್ರಕಟಗೊಳ್ಳುತ್ತಾ ಇರುತ್ತವೆ. ನೀನೇ ಜಗತ್ತಿನ ಕಾರಣನೂ, ಅಖಂಡನೂ, ಅನಾದಿಯೂ, ಅನಂತನೂ, ಆನಂದಮಯನೂ, ನಿರ್ವಿಕಾರನೂ, ಬ್ರಹ್ಮಸ್ವರೂಪನೂ ಆಗಿರುವೆ. ಅಂತಹ ನಿನಗೆ ನಾನು ಶರಣಾಗಿದ್ದೇನೆ. ॥ ೧೬ ॥

ಓ ಸರ್ವಪುರುಷಾರ್ಥಪ್ರದನೇ! ನಿನ್ನನ್ನು ಪರಮಪುರುಷಾರ್ಥ ಮೂರ್ತಿ, ಪರಮಾನಂದಮೂರ್ತಿ ಎಂದು ತಿಳಿದು ನಿಷ್ಕಾಮ ಭಾವದಿಂದ ನಿರಂತರವಾಗಿ ಭಜಿಸುವವರಿಗೆ ರಾಜ್ಯವೇ ಮುಂತಾದ ಭೋಗಗಳಿಗಿಂತ ನಿನ್ನ ಚರಣಕಮಲಗಳನ್ನು ಹೊಂದುವುದೇ ಭಜನೆಯ ನಿಜವಾದ ಫಲವಾಗಿರುತ್ತದೆ. ಹಾಗಿದ್ದರೂ ಆಕಳು ಆಗತಾನೇ ಹುಟ್ಟಿದ ಕರುವಿಗೆ ಹಾಲುಣಿಸಿ, ರಕ್ಷಿಸುವಂತೆ ನೀನು ಭಕ್ತರ ರಕ್ಷಣೆಯಲ್ಲಿ ಸದಾ ಕಾತರನಾಗಿದ್ದು, ದೀನರಾಗಿರುವ ನಮ್ಮಂತಹ ಸಕಾಮಭಕ್ತರ ಇಷ್ಟಾರ್ಥಗಳನ್ನೂ ಈಡೇರಿಸಿ ಅವರನ್ನು ಸಂಸಾರಭಯದಿಂದ ಸಂರಕ್ಷಿಸುತ್ತಿರುವೆ." ॥ ೧೭ ॥

ಶ್ರೀಮೈತ್ರೇಯರು ಹೇಳುತ್ತಾರೆ – ವಿದುರನೇ! ಶುಭ ಸಂಕಲ್ಪವುಳ್ಳ ಧೀಮಂತನಾದ ಧ್ರುವನು ಹೀಗೆ ಸ್ತುತಿಸಿದಾಗ ಭಕ್ತ ವತ್ಸಲನಾದ ಭಗವಂತನು ಅವನನ್ನು ಪ್ರಶಂಸಿಸುತ್ತಾ ಹೀಗೆಂದನು – ॥ ೧೮ ॥

ಶ್ರೀಭಗವಂತನು ಹೇಳಿದನು – ಸುವ್ರತನಾದ ರಾಜಕುಮಾರನೇ! ನಿನ್ನ ಹೃದಯದ ಸಂಕಲ್ಪವನ್ನು ನಾನು ಅರಿತಿರುವೆನು. ಆ ಪದವನ್ನು ಪಡೆಯುವುದು ಬಹು ಕಠಿಣವಾಗಿದ್ದರೂ ನಾನು ನಿನಗೆ ಅದನ್ನು ಕೊಡುವೆನು. ನಿನಗೆ ಮಂಗಳವಾಗಲಿ. ॥ ೧೯ ॥

ಎಲೈ ಮಂಗಳಮತಿಯೇ! ಯಾವ ಅವಿನಾಶಿಯಾದ ಸ್ಥಾನವನ್ನು ಇಲ್ಲಿಯವರೆಗೆ ಯಾರೂ ಪಡೆದಿಲ್ಲವೋ, ಯಾವುದು ಗ್ರಹ-ನಕ್ಷತ್ರ-ತಾರಾಗಣಗಳಿಗೆ ಮೇಟಿಕಂಭದಂತೆ ಮೇರುವಾಗಿದೆಯೋ, ಅವಾಂತರ ಪ್ರಳಯದವರೆಗೆ ಮಾತ್ರ ಇರುವ ಇತರ ಲೋಕಗಳು ನಾಶಹೊಂದಿದರೂ ಯಾವುದು ಸ್ಥಿರವಾಗಿರುತ್ತದೋ, ಮತ್ತು ಯಾವುದನ್ನು ತಾರಾಗಣಗಳೊಡನೆ ಕೂಡಿ ಧರ್ಮ, ಅಗ್ನಿ ಕಶ್ಯಪ, ಶುಕ್ರರೇ ಮುಂತಾದ ಗ್ರಹನಕ್ಷತ್ರಗಳು ಪ್ರದಕ್ಷಿಣೆಮಾಡುತ್ತಿರುವರೋ ಅಂತಹ ಧ್ರುವಲೋಕವನ್ನು ನಾನು ನಿನಗೆ ಕೊಡುತ್ತಿದ್ದೇನೆ. ॥ ೨೦-೨೧ ॥

ಪ್ರಸ್ಥಿತೇ ತು ವನಂ ಪಿತ್ರಾ ದತ್ತ್ವಾ ಗಾಂ ಧರ್ಮಸಂಶ್ರಯಃ ।
ಷಟ್‌ತ್ರಿಂಶದ್ವರ್ಷಸಾಹಸ್ರಂ ರಕ್ಷಿತಾವ್ಯಾಹತೇಂದ್ರಿಯಃ ॥ ೨೨ ॥

ತ್ವದ್ಭ್ರಾತರ್ಯುತ್ತಮೇ ನಷ್ಟೇ ಮೃಗಯಾಯಾಂ ತು ತನ್ಮನಾಃ ।
ಅನ್ವೇಷಂತೀ ವನಂ ಮಾತಾ ದಾವಾಗ್ನಿಂ ಸಾ ಪ್ರವೇಕ್ಷ್ಯತಿ ॥ ೨೩ ॥

ಇಷ್ಟ್ವಾ ಮಾಂ ಯಜ್ಞಹೃದಯಂ ಯಜ್ಞೈಃ ಪುಷ್ಕಲದಕ್ಷಿಣೈಃ ।
ಭುಕ್ತ್ವಾ ಚೇಹಾಶಿಷಃ ಸತ್ಯಾ ಅಂತೇ ಮಾಂ ಸಂಸ್ಮರಿಷ್ಯಸಿ ॥ ೨೪ ॥

ತತೋ ಗಂತಾಸಿ ಮತ್ಸ್ಥಾನಂ ಸರ್ವಲೋಕನಮಸ್ಕೃತಮ್ ।
ಉಪರಿಷ್ಟಾದೃಷಿಭ್ಯಸ್ತ್ವಂ ಯತೋ ನಾವರ್ತತೇ ಗತಃ ॥ ೨೫ ॥

ಮೈತ್ರೇಯ ಉವಾಚ

ಇತ್ಯರ್ಚಿತಃ ಸ ಭಗವಾನತಿದಿಶ್ಯಾತ್ಮನಃ ಪದಮ್ ।
ಬಾಲಸ್ಯ ಪಶ್ಯತೋ ಧಾಮ ಸ್ವಮಗಾದ್‌ಗರುಡಧ್ವಜಃ ॥ ೨೬ ॥

ಸೋಽಪಿ ಸಂಕಲ್ಪಜಂ ವಿಷ್ಣೋಃ ಪಾದಸೇವೋಪಸಾದಿತಮ್ ।
ಪ್ರಾಪ್ಯ ಸಂಕಲ್ಪನಿರ್ವಾಣಂ ನಾತಿಪ್ರೀತೋಽಭ್ಯಗಾತ್ಪುರಮ್ ॥ ೨೭ ॥

ವಿದುರ ಉವಾಚ

ಸುದುರ್ಲಭಂ ಯತ್ಪರಮಂ ಪದಂ ಹರೇ-
ರ್ಮಾಯಾವಿನಸ್ತಚ್ಚರಣಾರ್ಚನಾರ್ಜಿತಮ್ ।
ಲಬ್ಧ್ವಾಪ್ಯಸಿದ್ಧಾರ್ಥಮಿವೈಕಜನ್ಮನಾ
ಕಥಂ ಸ್ವಮಾತ್ಮಾನಮಮನ್ಯತಾರ್ಥವಿತ್ ॥ ೨೮ ॥

ಮೈತ್ರೇಯ ಉವಾಚ

ಮಾತುಃ ಸಪತ್ನ್ಯಾ ವಾಗ್ಬಾಣೈರ್ಹೃದಿ ವಿದ್ಧಸ್ತು ತಾನ್ ಸ್ಮರನ್ ।
ನೈಚ್ಛನ್ಮುಕ್ತಿಪತೇರ್ಮುಕ್ತಿಂ ತಸ್ಮಾತ್ತಾಪಮುಪೇಯಿವಾನ್ ॥ ೨೯ ॥

ಧ್ರುವ ಉವಾಚ

ಸಮಾಧಿನಾ ನೈಕಭವೇನ ಯತ್ಪದಂ
ವಿದುಃ ಸನಂದಾದಯ ಊರ್ಧ್ವರೇತಸಃ ।
ಮಾಸೈರಹಂ ಷಡ್ಭಿರಮುಷ್ಯ ಪಾದಯೋ-
ಶ್ಛಾಯಾಮುಪೇತ್ಯಾಪಗತಃ ಪೃಥಙ್ಮತಿಃ ॥ ೩೦ ॥

ನಿನ್ನ ತಂದೆಯು ನಿನಗೆ ರಾಜ್ಯಸಿಂಹಾಸನವನ್ನು ಕೊಟ್ಟು ವನಕ್ಕೆ ಹೋದಬಳಿಕ ನೀನು ಮೂವತ್ತಾರುಸಾವಿರ ವರ್ಷಗಳವರೆಗೆ ಧರ್ಮದಿಂದ ಭೂಮಂಡಲವನ್ನು ಆಳುವೆ. ಆಗಲೂ ನಿನ್ನ ಇಂದ್ರಿಯಗಳ ಶಕ್ತಿಯು ಹಿಂದಿನಂತೆಯೇ ಇರುವುದು. ॥ ೨೨ ॥ ಮುಂದೆ ಒಂದು ದಿನ ನಿನ್ನ ತಮ್ಮನಾದ ಉತ್ತಮನು ಬೇಟೆಯಾಡುವುದಕ್ಕಾಗಿ ಅರಣ್ಯಕ್ಕೆ ಹೋದಾಗ ಅಲ್ಲಿ ಸಾವಿಗೆ ಈಡಾಗುವನು. ಆಗ ಅವನ ತಾಯಿ ಸುರುಚಿಯು ಪುತ್ರಪ್ರೇಮದಿಂದ ಹುಚ್ಚೇರಿ ಕಾಡಿನಲ್ಲಿ ಹುಡುಕುತ್ತಾ ಕಾಡ್ಗಿಚ್ಚಿನಲ್ಲಿ ಪ್ರವೇಶಿಸಿ ಬಿಡುವಳು. ॥ ೨೩ ॥ ಯಜ್ಞವು ನನ್ನ ಮೂರ್ತಿಯಾಗಿದೆ. ನೀನು ಬಹುದಕ್ಷಿಣೆಗಳಿಂದ ಕೂಡಿದ ಅನೇಕ ಯಜ್ಞಗಳಿಂದ ನನ್ನನ್ನು ಪೂಜಿಸಿ, ಈ ಲೋಕದಲ್ಲಿ ಉತ್ತಮ ಭೋಗಗಳನ್ನನುಭವಿಸಿ ಕೊನೆಯಲ್ಲಿ ನನ್ನನ್ನೇ ಸ್ಮರಿಸುವೆ. ॥ ೨೪ ॥ ಇದರಿಂದ ನೀನು ಕೊನೆಯಲ್ಲಿ ಸಮಸ್ತ ಲೋಕಗಳಿಗೂ ವಂದನೀಯವಾದ ಸಪ್ತರ್ಷಿಗಳಿಗಿಂತಲೂ ಮೇಲಿರುವ ನನ್ನ ನಿಜಧಾಮಕ್ಕೆ ಹೋಗುವೆ. ಅಲ್ಲಿಗೆ ತಲುಪಿದ ಬಳಿಕ ಮತ್ತೆ ಪ್ರಪಂಚಕ್ಕೆ ಮರಳಿ ಬರಬೇಕಾಗುವುದಿಲ್ಲ. ॥ ೨೫ ॥

ಶ್ರೀಮೈತ್ರೇಯರು ಹೇಳುತ್ತಾರೆ – ಹೀಗೆ ಬಾಲಕ ಧ್ರುವನಿಂದ ಪೂಜಿತನಾಗಿ ಅವನಿಗೆ ತನ್ನ ಪದವನ್ನು ಅನುಗ್ರಹಿಸಿ ಅವನು ನೋಡುತ್ತಿರುವಂತೆಯೇ ಗರುಡಧ್ವಜನು ತನ್ನ ಲೋಕಕ್ಕೆ ಹೊರಟು ಹೋದನು. ॥ ೨೬ ॥ ನಾರಾಯಣನ ಪಾದಸೇವೆಯಿಂದ ಧ್ರುವನಿಗೆ ಸಂಕಲ್ಪಿಸಿದ್ದ ಇಷ್ಟವೇನೋ ಈಡೇರಿತು. ಆದರೆ ಅವನ ಚಿತ್ತಕ್ಕೆ ವಿಶೇಷವಾದ ಸಂತೋಷ ಉಂಟಾಗಲಿಲ್ಲ. ಹಾಗೆಯೇ ಅವನು ತನ್ನ ನಗರಿಗೆ ಹಿಂದಿರುಗಿದನು. ॥ ೨೭ ॥

ವಿದುರನು ಕೇಳಿದನು – ಮುನಿಶ್ರೇಷ್ಠರೇ! ಮಾಯಾಪತಿ ಶ್ರೀಹರಿಯ ಪರಮಪದವಾದರೋ ಅತ್ಯಂತ ದುರ್ಲಭವಾಗಿದೆ ಮತ್ತು ಅದು ಅವನ ಚರಣಕಮಲಗಳ ಉಪಾಸನೆಯಿಂದಲೇ ದೊರೆಯುವುದು. ಅಂತಹ ದುರ್ಲಭವಾದ ಪದವನ್ನು ಒಂದೇ ಜನ್ಮದಲ್ಲಿ ಗಳಿಸಿದ್ದರೂ ವಿವೇಕಿಯಾದ ಧ್ರುವಕುಮಾರನು ತನ್ನನ್ನು ಏಕೆ ಕೃತಕೃತ್ಯನಾಗಿ ಭಾವಿಸಲಿಲ್ಲ? ॥ ೨೮ ॥

ಶ್ರೀಮೈತ್ರೇಯರು ಹೇಳುತ್ತಾರೆ – ವಿದುರನೇ! ಧ್ರುವನ ಹೃದಯವು ಮಲತಾಯಿಯ ವಾಗ್ಬಾಣಗಳಿಂದ ಗಾಯಗೊಂಡಿತ್ತು. ಭಗವಂತನು ವರಕೊಡಲು ಬಂದಿದ್ದನು. ಆಗ ಅವನಿಗೆ ಆ ವಾಗ್ಬಾಣಗಳು ನೆನಪಾಗಿ ಮುಕ್ತಿಯನ್ನು ಕೊಡುವಂತಹ ಶ್ರೀಹರಿಯಲ್ಲಿ ಮುಕ್ತಿಯನ್ನು ಕೇಳಲಿಲ್ಲ. ಈಗ ಭಗವದ್ದರ್ಶನದಿಂದ ಆ ಮನೋಮಾಲಿನ್ಯವು ದೂರವಾದಾಗ ಅವನಿಗೆ ತನ್ನ ತಪ್ಪಿಗಾಗಿ ಪಶ್ಚಾತ್ತಾಪವುಂಟಾಯಿತು. ॥ ೨೯ ॥

ಧ್ರುವನು ಮನಸ್ಸಿನಲ್ಲೇ ಹೀಗೆ ಅಂದುಕೊಂಡನು – ಸನಕಾದಿ ಊರ್ಧ್ವರೇತ (ನೈಷ್ಠಿಕ ಬ್ರಹ್ಮಚಾರಿ)ರಾದ ಸಿದ್ಧರೂ ಕೂಡ ಯಾವುದನ್ನು ಸಮಾಧಿಯ ಮೂಲಕ ಅನೇಕ ಜನ್ಮಗಳ ಬಳಿಕ ಪಡೆಯುವರೋ, ಆ ಭಗವಚ್ಚರಣಗಳ ನೆರಳನ್ನು ನಾನು ಆರೇ ತಿಂಗಳಲ್ಲಿ ಪಡೆದೆನು. ಆದರೆ ಆಗಲೂ ಚಿತ್ತದಲ್ಲಿ ಬೇರೆ ವಾಸನೆಯು ಇದ್ದುದರಿಂದ ನಾನು ಆ ಪಾದಗಳಿಂದ ದೂರವಾದೆನಲ್ಲ! ಅಹಾ! ॥ ೩೦ ॥

ಅಹೋ ಬತ ಮಮಾನಾತ್ಮ್ಯಂ ಮಂದಭಾಗ್ಯಸ್ಯ ಪಶ್ಯತ ।
ಭವಚ್ಛಿದಃ ಪಾದಮೂಲಂ ಗತ್ವಾಯಾಚೇ ಯದಂತವತ್ ॥ ೩೦ ॥

ಮತಿರ್ವಿದೂಷಿತಾ ದೇವೈಃ ಪತದ್ಭಿರಸಹಿಷ್ಣುಭಿಃ ।
ಯೋ ನಾರದವಚಸ್ತಥ್ಯಂ ನಾಗ್ರಾಹಿಷಮಸತ್ತಮಃ ॥ ೩೧ ॥

ದೈವೀಂ ಮಾಯಾಮುಪಾಶ್ರಿತ್ಯ ಪ್ರಸುಪ್ತ ಇವ ಭಿನ್ನದೃಕ್ ।
ತಪ್ಯೇ ದ್ವಿತೀಯೇಽಪ್ಯಸತಿ ಭ್ರಾತೃಭ್ರಾತೃವ್ಯಹೃದ್ರುಜಾ ॥ ೩೨ ॥

ಮಯೈತತ್ಪ್ರಾರ್ಥಿತಂ ವ್ಯರ್ಥಂ ಚಿಕಿತ್ಸೇವ ಗತಾಯುಷಿ ।
ಪ್ರಸಾದ್ಯ ಜಗದಾತ್ಮಾನಂ ತಪಸಾ ದುಷ್ಪ್ರಸಾದನಮ್ ।
ಭವಚ್ಛಿದಮಯಾಚೇಽಹಂ ಭವಂ ಭಾಗ್ಯವಿವರ್ಜಿತಃ ॥ ೩೩ ॥

ಸ್ವಾರಾಜ್ಯಂ ಯಚ್ಛತೋ ಮೌಢ್ಯಾನ್ಮಾನೋ ಮೇ ಭಿಕ್ಷಿತೋ ಬತ ।
ಈಶ್ವರಾತ್ ಕ್ಷೀಣಪುಣ್ಯೇನ ಫಲೀಕಾರಾನಿವಾಧನಃ ॥ ೩೪ ॥

ಮೈತ್ರೇಯ ಉವಾಚ

ನ ವೈ ಮುಕುಂದಸ್ಯ ಪದಾರವಿಂದಯೋಃ
ರಜೋಜುಷಸ್ತಾತ ಭವಾದೃಶಾ ಜನಾಃ ।
ವಾಂಛಂತಿ ತದ್ದಾಸ್ಯಮೃತೇಽರ್ಥಮಾತ್ಮನೋ
ಯದೃಚ್ಛಯಾ ಲಬ್ಧಮನಃಸಮೃದ್ಧಯಃ ॥ ೩೫ ॥

ಆಶ್ರುತ್ಯಾತ್ಮಜಮಾಯಾಂತಂ ಸಂಪರೇತ್ಯ ಯಥಾಽಽಗತಮ್ ।
ರಾಜಾ ನ ಶ್ರದ್ದಧೇ ಭದ್ರಮಭದ್ರಸ್ಯ ಕುತೋ ಮಮ ॥ ೩೬ ॥

ಶ್ರದ್ಧಾಯ ವಾಕ್ಯಂ ದೇವರ್ಷೇರ್ಹರ್ಷವೇಗೇನ ಧರ್ಷಿತಃ ।
ವಾರ್ತಾಹರ್ತುರತಿಪ್ರೀತೋ ಹಾರಂ ಪ್ರಾದಾನ್ಮಹಾಧನಮ್ ॥ ೩೭ ॥

ಸದಶ್ವಂ ರಥಮಾರುಹ್ಯ ಕಾರ್ತಸ್ವರಪರಿಷ್ಕೃತಮ್ ।
ಬ್ರಾಹ್ಮಣೈಃ ಕುಲವೃದ್ಧೈಶ್ಚ ಪರ್ಯಸ್ತೋಽಮಾತ್ಯಬಂಧುಭಿಃ ॥ ೩೮ ॥

ಅಯ್ಯೋ! ನಾನು ಎಂತಹ ಮೂರ್ಖತನದ ಕೆಲಸಮಾಡಿದೆನಲ್ಲ! ಮಂದಭಾಗ್ಯನಾದ ನನ್ನ ಅವಿವೇಕವನ್ನು ನೋಡಿರಿ! ಭವಪಾಶವನ್ನು ಕತ್ತರಿಸುವಂತಹ ಪ್ರಭುವಿನ ಪಾದಪದ್ಮಗಳನ್ನು ತಲುಪಿದರೂ ಅವನಿಂದ ನಾಶವುಳ್ಳ ವಸ್ತುವನ್ನೇ ಬೇಡಿದೆನಲ್ಲ! ॥ ೩೦ ॥ ಪುಣ್ಯವು ಕ್ಷಯಿಸಿದ ನಂತರ ತಾವು ಪತನವಾಗುವುದರಿಂದ ನಾನು ಪರಮ ಶ್ರೇಯಸ್ಸಿನ ಮುಕ್ತಿಯನ್ನು ಪಡೆಯುವುದನ್ನು ಸಹಿಸದೆ ದೇವತೆಗಳು ನನ್ನ ಮನಸ್ಸನ್ನು ಕೆಡಿಸಿಬಿಟ್ಟರು. ಅದರಿಂದಲೇ ದುಷ್ಟನಾದ ನಾನು ನಾರದರ ಯಥಾರ್ಥವಾದ ಮಾತನ್ನು ಕೇಳದೇ ಹೋದೆ. ॥ ೩೧ ॥ ಕನಸಿನಲ್ಲಿ ತನ್ನನ್ನು ಬಿಟ್ಟು ಬೇರೆ ಏನೂ ಇಲ್ಲದಿದ್ದರೂ ಮನುಷ್ಯನು ತಾನೇ ಕಲ್ಪಿಸಿಕೊಂಡ ಹುಲಿ, ಹಾವು ಮುಂತಾದವುಗಳಿಗೆ ಹೆದರುವಂತೆ, ಜಗತ್ತಿನಲ್ಲಿ ವಾಸುದೇವನನ್ನು ಬಿಟ್ಟು ಬೇರಾರೂ ಇಲ್ಲದಿದ್ದರೂ, ಭಗವಂತನ ಮಾಯೆಗೆ ಮರುಳಾಗಿ ನಾನು ಒಡಹುಟ್ಟಿದವನನ್ನೇ ವೈರಿಯೆಂದು ಭಾವಿಸಿ ದ್ವೇಷರೂಪವಾದ ಮನೋರೋಗದಿಂದ ಸಂತಪ್ತನಾದೆನಲ್ಲ! ॥ ೩೨ ॥ ಆಯುಸ್ಸು ತೀರಿದವನ ಚಿಕಿತ್ಸೆಯು ವ್ಯರ್ಥವಾಗುವಂತೆ, ಯಾರನ್ನು ಪ್ರಸನ್ನಗೊಳಿಸುವುದು ಅತ್ಯಂತ ಕಠಿಣವೋ ಅಂತಹ ವಿಶ್ವಾತ್ಮನಾದ ವಿಷ್ಣುವನ್ನು ತಪಸ್ಸಿನಿಂದ ಮೆಚ್ಚಿಸಿದ ನಾನು ಅವನಿಂದ ಕೇಳಿಕೊಂಡುದು ವ್ಯರ್ಥವಾಯಿತಲ್ಲ! ಅಯ್ಯೋ! ನಾನು ಎಂತಹ ಭಾಗ್ಯಹೀನನು? ಸಂಸಾರಬಂಧನವನ್ನು ಬಿಡಿಸುವ ಪ್ರಭುವಿನಿಂದ ನಾನು ಪುನಃ ಸಂಸಾರವನ್ನೇ ಕೇಳಿದೆನಲ್ಲ! ॥ ೩೩ ॥ ಸಾರ್ವಭೌಮನು ಪ್ರಸನ್ನನಾಗಿರುವಾಗ ಬುದ್ಧಿಹೀನನಾದವನು ಒಂದು ಮುಷ್ಟಿ ಅಕ್ಕಿಯನ್ನು ಬೇಡುವಂತೆ ದುರದೃಷ್ಟಶಾಲಿಯಾದ ನಾನು ಬುದ್ಧಿಹೀನನಾಗಿ ಸ್ವಾರಾಜ್ಯ (ಮೋಕ್ಷ)ವನ್ನು ಕೊಡುವ ಸ್ವಾಮಿ ಶ್ರೀಹರಿಯಿಂದ ಅಭಿಮಾನವನ್ನು ಬೆಳೆಸುವ ಪದವಿಯನ್ನು ಕೇಳಿಕೊಂಡೆನಲ್ಲ! ॥ ೩೪ ॥

ಶ್ರೀಮೈತ್ರೇಯರು ಹೇಳುತ್ತಾರೆ - ಭಾಗವತೋತ್ತಮನಾದ ವಿದುರನೇ! ಶ್ರೀಮುಕುಂದನ ಪಾದಾರವಿಂದಗಳ ಮಕರಂದವನ್ನು ಪಾನಮಾಡುವ ದುಂಬಿಯಂತಿರುವ ನಿಮ್ಮಂತಹವರು ಪ್ರಭುವಿನ ಪಾದಧೂಳಿಯನ್ನೇ ಸೇವಿಸುವರು. ತಾನಾಗಿಯೇ ಒದಗಿಬಂದ ಪರಿಸ್ಥಿತಿಯಲ್ಲಿ ಸಂತುಷ್ಟ ಮನಸ್ಸುಳ್ಳ ಅವರು ಭಗವಂತನಲ್ಲಿ ಅವನ ಸೇವೆಯನ್ನಲ್ಲದೆ ಬೇರೆ ಏನನ್ನೂ ಬೇಡುವುದಿಲ್ಲ. ॥ ೩೫ ॥

ಇತ್ತ ಉತ್ತಾನಪಾದರಾಜನು ತನ್ನ ಪುತ್ರನಾದ ಧ್ರುವನು ಮನೆಗೆ ಹಿಂದಿರುಗುತ್ತಿರುವನೆಂಬ ಸಮಾಚಾರ ಕೇಳಿ – 'ಸತ್ತುಹೋದವನು ಯಮಲೋಕದಿಂದ ಮರಳಿ ಬಂದನು' ಎಂಬ ವಾರ್ತೆಯಂತೆ ಅವನು ನಂಬಲಿಲ್ಲ. ನನ್ನಂತಹ ಭಾಗ್ಯಹೀನನಿಗೆ ಇಂತಹ ಭಾಗ್ಯವು ಎಲ್ಲಿದೆ? ಎಂದು ಚಿಂತಿಸಿದನು. ॥ ೩೬ ॥ ಆದರೆ ದೇವರ್ಷಿ ನಾರದರು ಹೇಳಿದ್ದ ಮಾತು ನೆನಪಾಗಿ ಅವನಿಗೆ ಅದರಲ್ಲಿ ನಂಬಿಕೆ ಉಂಟಾಯಿತು ಹಾಗೂ ಪರಮಾನಂದದ ವೇಗದಿಂದ ಪರವಶನಾದನು. ಅವನು ಅತ್ಯಂತ ಪ್ರಸನ್ನನಾಗಿ ಆ ಶುಭಸಮಾಚಾರ ತಂದವನಿಗೆ ಒಂದು ಅಮೂಲ್ಯವಾದ ಹಾರವನ್ನು ಕೊಟ್ಟನು. ॥ ೩೭ ॥ ಪುತ್ರನ ಮುಖವನ್ನು ನೋಡಲು ಉತ್ಸುಕನಾದ ರಾಜನು ಬಹಳಮಂದಿ ಬ್ರಾಹ್ಮಣರನ್ನೂ, ಕುಲವೃದ್ಧರನ್ನೂ, ಮಂತ್ರಿಗಳನ್ನೂ,

ಶಂಖದುಂದುಭಿನಾದೇನ ಬ್ರಹ್ಮ-ಘೋಷೇಣ ವೇಣುಭಿಃ ।
ನಿಶ್ಚಕ್ರಾಮ ಪುರಾತ್ತೂರ್ಣಮಾತ್ಮಜಾಭೀಕ್ಷಣೋತ್ಸುಕಃ ॥ ೪೦ ॥

ಸುನೀತಿಃ ಸುರುಚಿಶ್ಚಾಸ್ಯ ಮಹಿಷ್ಯೌ ರುಕ್ಮಭೂಷಿತೇ ।
ಆರುಹ್ಯ ಶಿಬಿಕಾಂ ಸಾರ್ಧಮುತ್ತಮೇನಾಭಿಜಗ್ಮತುಃ ॥ ೪೧ ॥

ತಂ ದೃಷ್ಟ್ವೋಪವನಾಭ್ಯಾಶ ಆಯಾಂತಂ ತರಸಾ ರಥಾತ್ ।
ಅವರುಹ್ಯ ನೃಪಸ್ತೂರ್ಣಮಾಸಾದ್ಯ ಪ್ರೇಮವಿಹ್ವಲಃ ॥ ೪೨ ॥

ಪರಿರೇಭೇಽಂಗಜಂ ದೋರ್ಭ್ಯಾಂ
ದೀರ್ಘೋತ್ಕಂಠಮನಾಃ ಶ್ವಸನ್ ।
ವಿಷ್ವಕ್ಸೇನಾಂಘ್ರಿಸಂಸ್ಪರ್ಶ-
ಹತಾಶೇಷಾಘಬಂಧನಮ್ ॥ ೪೩ ॥

ಅಥಾಜಿಘ್ರನ್ಮುಹುರ್ಮೂರ್ಧ್ನಿ ಶೀತೈರ್ನಯನವಾರಿಭಿಃ ।
ಸ್ನಾಪಯಾಮಾಸ ತನಯಂ ಜಾತೋದ್ದಾಮಮನೋರಥಃ ॥ ೪೪ ॥

ಅಭಿವಂದ್ಯ ಪಿತುಃ ಪಾದಾವಾಶೀರ್ಭಿಶ್ಚಾಭಿಮಂತ್ರಿತಃ ।
ನನಾಮ ಮಾತರೌ ಶೀರ್ಷ್ಣಾ ಸತ್ಕೃತಃ ಸಜ್ಜನಾಗ್ರಣೀಃ ॥ ೪೫ ॥

ಸುರುಚಿಸ್ತಂ ಸಮುತ್ಥಾಪ್ಯ ಪಾದಾವನತಮರ್ಭಕಮ್ ।
ಪರಿಷ್ವಜ್ಯಾಹ ಜೀವೇತಿ ಬಾಷ್ಪಗದ್ಗದಯಾ ಗಿರಾ ॥ ೪೬ ॥

ಯಸ್ಯ ಪ್ರಸನ್ನೋ ಭಗವಾನ್ಗುಣೈರ್ಮೈತ್ರ್ಯಾದಿಭಿರ್ಹರಿಃ ।
ತಸ್ಮೈ ನಮಂತಿ ಭೂತಾನಿ ನಿಮ್ನಮಾಪ ಇವ ಸ್ವಯಮ್ ॥ ೪೭ ॥

ಉತ್ತಮಶ್ಚ ಧ್ರುವಶ್ಚೋಭಾವನ್ಯೋನ್ಯಂ ಪ್ರೇಮವಿಹ್ವಲೌ ।
ಅಂಗಸಂಗಾದುತ್ಪುಲಕಾವಸ್ರೌಘಂ ಮುಹುರೂಹತುಃ ॥ ೪೮ ॥

ಸುನೀತಿರಸ್ಯ ಜನನೀ ಪ್ರಾಣೇಭ್ಯೋಽಪಿ ಪ್ರಿಯಂ ಸುತಮ್ ।
ಉಪಗುಹ್ಯ ಜಹಾವಾಧಿಂ ತದಂಗಸ್ಪರ್ಶನಿರ್ವೃತಾ ॥ ೪೯ ॥

ಪಯಃ ಸ್ತನಾಭ್ಯಾಂ ಸುಸ್ರಾವ ನೇತ್ರಜೈಃ ಸಲಿಲೈಃ ಶಿವೈಃ ।
ತದಾಭಿಷಿಚ್ಯಮಾನಾಭ್ಯಾಂ ವೀರ ವೀರಸುವೋ ಮುಹುಃ ॥ ೫೦ ॥

ಪರಿಜನರನ್ನೂ ಜೊತೆಯಲ್ಲಿ ಕರೆದುಕೊಂಡು, ಉತ್ತಮವಾದ ಅಶ್ವಗಳಿಂದ ಹೂಡಲ್ಪಟ್ಟ ಸುವರ್ಣಖಚಿತವಾದ ರಥದಲ್ಲಿ ಕುಳಿತು ಬಗುಬಗೆಯಿಂದ ನಗರದಿಂದ ಹೊರಬಂದನು. ಅವನ ಮುಂದೆ ಶುಭವಾದ ವೇದಪಾರಾಯಣದ ಘೋಷ ನಡೆಯುತ್ತಿತ್ತು. ಶಂಖ, ದುಂದುಭಿ, ಕೊಳಲು ಮುಂತಾದ ಮಂಗಳವಾದ್ಯಗಳು ಮೊಳಗುತ್ತಿದ್ದವು. ॥ ೩೯-೪೦ ॥ ಅವನ ರಾಣಿಯರಾದ ಸುನೀತಿ ಮತ್ತು ಸುರುಚಿಯರು ಸುವರ್ಣಾಭರಣಗಳಿಂದ ಅಲಂಕೃತರಾಗಿ, ರಾಜಕುಮಾರ ಉತ್ತಮನೊಡನೆ ಪಲ್ಲಕ್ಕಿಯಲ್ಲಿ ಕುಳಿತು ಬರುತ್ತಿದ್ದರು. ॥ ೪೧ ॥ ಧ್ರುವಕುಮಾರನು ಉಪವನದ ಬಳಿಗೆ ಬರುತ್ತಲೇ ಮಹಾರಾಜನು ರಥದಿಂದ ಥಟ್ಟನೆ ಕೆಳಗಿಳಿದು, ಮಗನ ಮುಖವನ್ನು ನೋಡಲು ಎಷ್ಟೋ ದಿನಗಳಿಂದ ಹಂಬಲಿಸುತ್ತಿದ್ದ ಅವನು ರಭಸದಿಂದ ಮುನ್ನುಗ್ಗಿ ಪ್ರೇಮಾತುರನಾಗಿ, ನಿಟ್ಟುಸಿರುಬಿಡುತ್ತಾ, ಪುತ್ರನನ್ನು ಬಾಚಿ ತಬ್ಬಿಕೊಂಡನು. ಈಗ ಬಂದಿದ್ದ ಧ್ರುವನು ಹಿಂದಿನಂತಿರಲಿಲ್ಲ. ಪರಮಾತ್ಮನ ಪವಿತ್ರವಾದ ಪಾದಪದ್ಮಗಳ ಸ್ಪರ್ಶದಿಂದ ಇವನ ಸಮಸ್ತ ಪಾಪಬಂಧನವನ್ನು ಕಳಕೊಂಡ ಪುಣ್ಯಮೂರ್ತಿಯಾಗಿದ್ದನು. ॥ ೪೩ ॥ ಉತ್ತಾನಪಾದರಾಜನ ಬಹುದೊಡ್ಡ ಮನೋರಥವು ಪೂರ್ಣವಾಗಿತ್ತು. ಅವನು ಪದೇ-ಪದೇ ಮಗನ ತಲೆಯನ್ನು ನೇವರಿಸುತ್ತಾ, ನೆತ್ತಿಯನ್ನು ಮೂಸುತ್ತಾ, ತಂಪಾದ ಆನಂದಾಶ್ರುಗಳಿಂದ ಅವನನ್ನು ತೋಯಿಸಿಬಿಟ್ಟನು. ॥ ೪೪ ॥

ಮತ್ತೆ ಸಜ್ಜನಶಿರೋಮಣಿಯಾದ ಧ್ರುವನು ತಂದೆಯ ಪಾದಗಳಿಗೆ ನಮಸ್ಕರಿಸಿ ಆತನ ಆಶೀರ್ವಾದಗಳನ್ನು ಪಡೆದು, ಕುಶಲಪ್ರಶ್ನೆಗಳಿಂದ ಸತ್ಕೃತನಾಗಿ ಇಬ್ಬರೂ ತಾಯಂದಿರ ಚರಣಗಳಿಗೆ ತಲೆಮುಟ್ಟಿ ನಮಸ್ಕಾರಮಾಡಿದನು. ॥ ೪೫ ॥ ಚಿಕ್ಕಮ್ಮನಾದ ಸುರುಚಿಯು ಕಾಲಿಗೆ ಬಿದ್ದ ಬಾಲಕ ಧ್ರುವನನ್ನು ಮೇಲೆತ್ತಿ ಅಪ್ಪಿಕೊಂಡು 'ಚಿರಂಜೀವಿಯಾಗು' ಎಂದು ಕಂಬನಿತುಂಬಿದ ಗದ್ಗದವಾದ ವಾಣಿಯಿಂದ ಆಶೀರ್ವದಿಸಿದಳು. ॥ ೪೬ ॥ ನೀರು ತಾನಾಗಿಯೇ ತಗ್ಗಿನ ಕಡೆಗೆ ಹರಿಯುವಂತೆ – ಮೈತ್ರಿ, ಕರುಣೆ ಮುಂತಾದ ಗುಣಗಳಿಂದ ಪರಮಾತ್ಮನ ಪ್ರಸನ್ನತೆಗೆ ಪಾತ್ರನಾದವನ ಮುಂದೆ ಎಲ್ಲ ಜೀವಿಗಳು ತಲೆಬಾಗುತ್ತವೆ. ॥ ೪೭ ॥ ಇತ್ತ ಕಡೆ ಉತ್ತಮ ಮತ್ತು ಧ್ರುವನೂ ಪ್ರೇಮದಿಂದ ವಿಹ್ವಲರಾಗಿ ಒಬ್ಬರನ್ನೊಬ್ಬರು ಆಲಿಂಗಿಸಿಕೊಂಡರು. ಪರಸ್ಪರ ಅಂಗಸ್ಪರ್ಶದಿಂದ ಆನಂದಪುಳಕಿತರಾದ ಅವರಿಬ್ಬರ ಕಣ್ಣುಗಳಿಂದಲೂ ಕಂಬನಿಯ ಧಾರೆ ಹರಿಯತೊಡಗಿತು. ॥ ೪೮ ॥ ತಾಯಿ ಸುನೀತಿಯು ಪ್ರಾಣಕ್ಕಿಂತಲೂ ಪ್ರಿಯನಾದ ಪುತ್ರನನ್ನು ಆಲಿಂಗಿಸಿಕೊಂಡು ತನ್ನ ಎಲ್ಲ ಸಂತಾಪಗಳನ್ನು ಮರೆತುಬಿಟ್ಟಳು. ಅವನ ಸುಕುಮಾರವಾದ ಅಂಗಗಳ ಸ್ಪರ್ಶದಿಂದ ಆಕೆಯು ಮೇರೆಮೀರಿದ ಆನಂದದಲ್ಲಿ ಮುಳುಗಿದಳು. ॥ ೪೯ ॥ ವೀರನಾದ ವಿದುರನೇ! ಆ ವೀರಮಾತೆಯಾದ ಸುನೀತಿಯ ಸ್ತನಗಳು ಕಂಗಳಿಂದ ಹರಿಯುತ್ತಿದ್ದ ಮಂಗಳಮಯ ಅಶ್ರುಧಾರೆಗಳಿಂದ ನೆನೆದು ಅವುಗಳಿಂದ ಮತ್ತೆ-ಮತ್ತೆ ಹಾಲು ಸುರಿಯತೊಡಗಿತು. ॥ ೫೦ ॥

ತಾಂ ಶಶಂಸುರ್ಜನಾ ರಾಜ್ಞೀಂ ದಿಷ್ಟ್ಯಾ ತೇ ಪುತ್ರ ಆರ್ತಿಹಾ ।
ಪ್ರತಿಲಬ್ಧಶ್ಚಿರಂ ನಷ್ಟೋ ರಕ್ಷಿತಾ ಮಂಡಲಂ ಭುವಃ ॥ ೪೧ ॥

ಅಭ್ಯರ್ಚಿತಸ್ತ್ವಯಾ ನೂನಂ ಭಗವಾನ್ಪ್ರಣತಾರ್ತಿಹಾ ।
ಯದನುಧ್ಯಾಯಿನೋ ಧೀರಾ ಮೃತ್ಯುಂ ಜಿಗ್ಯುಃ ಸುದುರ್ಜಯಮ್ ॥ ೪೨ ॥

ಲಾಲ್ಯಮಾನಂ ಜನೈರೇವಂ ಧ್ರುವಂ ಸಭ್ರಾತರಂ ನೃಪಃ ।
ಆರೋಪ್ಯ ಕರಿಣೀಂ ಹೃಷ್ಟಃ ಸ್ತೂಯಮಾನೋಽವಿಶತ್ಪುರಮ್ ॥ ೪೩ ॥

ತತ್ರ ತತ್ರೋಪಸಂಕ್ಲೃಪ್ತೈರ್ಲಸನ್ಮಕರತೋರಣೈಃ ।
ಸವೃಂದೈಃ ಕದಲೀಸ್ತಂಭೈಃ ಪೂಗಪೋತೈಶ್ಚ ತದ್ವಿಧೈಃ ॥ ೪೪ ॥

ಚೂತಪಲ್ಲವವಾಸಸ್ಸ್ರಙ್ಮುಕ್ತಾದಾಮವಿಲಂಬಿಭಿಃ ।
ಉಪಸ್ಕೃತಂ ಪ್ರತಿದ್ವಾರಮಪಾಂ ಕುಂಭೈಃ ಸದೀಪಕೈಃ ॥ ೪೫ ॥

ಪ್ರಾಕಾರೈರ್ಗೋಪುರಾಗಾರೈಃ ಶಾತಕುಂಭಪರಿಚ್ಛದೈಃ ।
ಸರ್ವತೋಽಲಂಕೃತಂ ಶ್ರೀಮದ್ವಿಮಾನಶಿಖರದ್ಯುಭಿಃ ॥ ೪೬ ॥

ಮೃಷ್ಟಚತ್ವರರಥ್ಯಾಟ್ಟಮಾರ್ಗಂ ಚಂದನಚರ್ಚಿತಮ್ ।
ಲಾಜಾಕ್ಷತೈಃ ಪುಷ್ಪಫಲೈಸ್ತಂಡುಲೈರ್ಬಲಿಭಿರ್ಯುತಮ್ ॥ ೪೭ ॥

ಧ್ರುವಾಯ ಪಥಿ ದೃಷ್ಟಾಯ ತತ್ರ ತತ್ರ ಪುರಸ್ತ್ರಿಯಃ ।
ಸಿದ್ಧಾರ್ಥಾಕ್ಷತದಧ್ಯಂಬುದೂರ್ವಾಪುಷ್ಪಫಲಾನಿ ಚ ॥ ೪೮ ॥

ಉಪಜಹ್ರುಃ ಪ್ರಯುಂಜಾನಾ ವಾತ್ಸಲ್ಯಾದಾಶಿಷಃ ಸತೀಃ ।
ಶೃಣ್ವಂಸ್ತದ್ವಲ್ಗುಗೀತಾನಿ ಪ್ರಾವಿಶದ್ಭವನಂ ಪಿತುಃ ॥ ೪೯ ॥

ಮಹಾಮಣಿವ್ರಾತಮಯೇ ಸ ತಸ್ಮಿನ್ ಭವನೋತ್ತಮೇ ।
ಲಾಲಿತೋ ನಿತರಾಂ ಪಿತ್ರಾ ನ್ಯವಸದ್ದಿವಿ ದೇವವತ್ ॥ ೫೦ ॥

ಪಯಃಫೇನನಿಭಾಃ ಶಯ್ಯಾ ದಾಂತಾ ರುಕ್ಮಪರಿಚ್ಛದಾಃ ।
ಆಸನಾನಿ ಮಹಾರ್ಹಾಣಿ ಯತ್ರ ರೌಕ್ಮಾ ಉಪಸ್ಕರಾಃ ॥ ೫೧ ॥

ಆಗ ಪುರಜನರು ಸುನೀತಿಯನ್ನು ಕುರಿತು – ಮಹಾರಾಣಿಯವರೇ! ಬಹುದಿನಗಳಿಂದ ಕಳೆದುಹೋಗಿದ್ದ ನಿಮ್ಮ ಕಣ್ಮಣಿ ಕಂದಮ್ಮನು ಹಿಂತಿರುಗಿ ಬಂದನು. ಎಂತಹ ಮಹಾಭಾಗ್ಯ! ಇವನು ನಮ್ಮೆಲ್ಲರ ದುಃಖವನ್ನು ದೂರಮಾಡುವನು. ಬಹಳ ಕಾಲ ಭೂಮಂಡಲವನ್ನು ರಕ್ಷಿಸುವನು. ॥ ೪೧ ॥ ನೀವು ನಿಜವಾಗಿಯೂ ಶರಣಾಗತರ ಭಯವನ್ನು ಭಂಜಿಸುವ ಶ್ರೀಹರಿಯನ್ನು ಚೆನ್ನಾಗಿ ಆರಾಧಿಸಿದ್ದೀರಿ. ಅವನನ್ನು ನಿರಂತರವಾಗಿ ಧ್ಯಾನಿಸುವ ಧೀರ ಪುರುಷರು ಪರಮ ದುರ್ಜಯವಾದ ಮೃತ್ಯುವನ್ನೂ ಗೆದ್ದು ಬಿಡುತ್ತಾರೆ' ಎಂದು ಹೇಳಿ ಅಭಿನಂದಿಸಿದರು. ॥ ೪೨ ॥

ಹೀಗೆ ಎಲ್ಲ ಜನರು ಧ್ರುವಕುಮಾರನನ್ನು ಮುದ್ದಿಸುತ್ತಿರಲು ಉತ್ತಾನಪಾದಮಹಾರಾಜನು ಆತನನ್ನೂ ಮತ್ತು ಆತನ ತಮ್ಮ ಉತ್ತಮನನ್ನೂ ಹೆಣ್ಣಾನೆಯ ಮೇಲೆ ಕುಳ್ಳಿರಿಸಿ ಎಲ್ಲರಿಂದಲೂ ಹೊಗಳಿಸಿಕೊಳ್ಳುತ್ತಾ ಪರಮ ಹರ್ಷದಿಂದ ಪುರವನ್ನು ಪ್ರವೇಶಿಸಿದನು. ॥ ೪೩ ॥ ಧ್ರುವನನ್ನು ಸ್ವಾಗತಿಸಲು ಜನರು ನಗರದ ಎಲ್ಲೆಡೆ ಮಕರಾಕಾರದ ಸುಂದರವಾದ ದ್ವಾರತೋರಣಗಳನ್ನು ರಚಿಸಿದ್ದರು. ಹೂವು-ಹಣ್ಣುಗಳ ಗೊಂಚಲು-ಗೊನೆಗಳಿಂದ ಕೂಡಿದ ಬಾಳೆಯ ಕಂಬಗಳಿಂದಲೂ, ಎಳೆಯ ಅಡಿಕೆಯ ಸಸಿಗಳಿಂದಲೂ ಸಿಂಗರಿಸಿದ್ದರು. ॥ ೪೪ ॥ ಪ್ರತಿಯೊಂದು ಬಾಗಿಲುಗಳಲ್ಲಿಯೂ ಜಲಕಲಶಗಳನ್ನಿಟ್ಟು ದೀಪಗಳನ್ನು ಬೆಳಗಿಸಿದ್ದರು. ಮಾವಿನ ಚಿಗುರುಗಳನ್ನೂ, ವಸ್ತ್ರಗಳನ್ನೂ, ಹೂಮಾಲೆಗಳನ್ನೂ, ಮುತ್ತಿನ ಹಾರಗಳನ್ನೂ ಕಟ್ಟಿ ಅಲಂಕರಿಸಿದ್ದರು. ॥ ೪೫ ॥ ನಗರದ ಪ್ರಾಕಾರಗಳೂ, ಹೆಬ್ಬಾಗಿಲುಗಳೂ, ಭವ್ಯ ಭವನಗಳೂ ಚಿನ್ನದ ಕೆತ್ತನೆಗಳಿಂದ ಎಲ್ಲೆಡೆಯಲ್ಲೂ ಅಲಂಕೃತವಾಗಿದ್ದವು. ಅವುಗಳ ಗೋಪುರಗಳು ವಿಮಾನಗಳ ಶಿಖರಗಳಂತೆ ಹೊಳೆಯುತ್ತಿದ್ದವು. ॥ ೪೬ ॥ ನಗರದ ರಸ್ತೆಗಳನ್ನೂ, ವೃತ್ತಗಳನ್ನೂ, ಜಗುಲಿಗಳನ್ನು ಗುಡಿಸಿ-ಸಾರಿಸಿ ಅವುಗಳ ಮೇಲೆ ಗಂಧೋದಕವನ್ನು ಚಿಮುಕಿಸಲಾಗಿತ್ತು. ಅರಳು-ಅಕ್ಷತೆಗಳು, ಅಕ್ಕಿ-ಹೂವು-ಹಣ್ಣುಗಳೇ ಮುಂತಾದ ಮಂಗಳೋಪಹಾರಗಳು ಅಳವಡಿಸಲ್ಪಟ್ಟಿದ್ದವು. ॥ ೪೭ ॥ ಧ್ರುವನು ರಾಜಮಾರ್ಗದಲ್ಲಿ ಮೆರವಣಿಗೆ ಹೋಗುತ್ತಿರುವಾಗ ಅಲ್ಲಲ್ಲಿ ನಗರದ ಸುಂದರ ಸುಮಂಗಲಿಯರು ಅವನ ದರ್ಶನಪಡೆಯಲು ನೆರೆದಿದ್ದರು. ಅವರು ವಾತ್ಸಲ್ಯದಿಂದ ಶುಭಾಶೀರ್ವಾದಗಳನ್ನು ಮಾಡುತ್ತಾ ಆತನ ಮೇಲೆ ಬಿಳಿಸಾಸುವೆ, ಅಕ್ಷತೆ, ಮೊಸರು, ತೀರ್ಥೋದಕ, ಗರಿಕೆ, ಹೂವು-ಹಣ್ಣುಗಳ ಮಳೆಗರೆಯುತ್ತಿದ್ದರು. ಅವರು ಹಾಡುತ್ತಿದ್ದ ಇಂಪಾದ ಗೀತೆಗಳನ್ನು ಕೇಳುತ್ತಾ ಧ್ರುವನು ತನ್ನ ತಂದೆಯ ಅರಮನೆಯನ್ನು ಪ್ರವೇಶಿಸಿದನು. ॥ ೪೮-೪೯ ॥

ಆ ಭವ್ಯ ಭವನವು ಬಹುಮೂಲ್ಯವಾದ ವಿವಿಧ ರತ್ನಗಳಿಂದ ವಿಚಿತ್ರವಾಗಿ ಕಂಗೊಳಿಸುತ್ತಿತ್ತು. ಅಲ್ಲಿ ತಂದೆಯ ವಾತ್ಸಲ್ಯದ ಸುಖವನ್ನು ಅನುಭವಿಸುತ್ತಾ ಧ್ರುವನು ಸ್ವರ್ಗದಲ್ಲಿ ದೇವತೆಗಳು ವಾಸಿಸುವಂತೆ ಪರಮಾನಂದದಿಂದ ಇರುತ್ತಿದ್ದನು. ॥ ೫೦ ॥ ಅಲ್ಲಿ ಹಾಲಿನ ನೊರೆಯಂತೆ ಬೆಳ್ಳಗಿದ್ದ ಮೃದುವಾದ ತಲ್ಪಗಳೂ, ಆನೆಯ ದಂತದ ಮಂಚಗಳೂ, ಚಿನ್ನದ ಕುಸುರಿಕೆಲಸದಿಂದ ಕೂಡಿದ ಪರದೆಗಳೂ, ಬಹುಮೂಲ್ಯವಾದ ಪೀಠಗಳೂ, ಹೇರಳವಾದ ಚಿನ್ನದ ಸಲಕರಣೆಗಳು ಇದ್ದುವು. ॥ ೫೧ ॥

ಯತ್ರ ಸ್ಫಟಿಕಕುಡ್ಯೇಷು ಮಹಾಮಾರಕತೇಷು ಚ ।
ಮಣಿಪ್ರದೀಪಾ ಆಭಾಂತಿ ಲಲನಾರತ್ನಸಂಯುತಾಃ ॥ ೬೨ ॥

ಉದ್ಯಾನಾನಿ ಚ ರಮ್ಯಾಣಿ ವಿಚಿತ್ರೈರಮರದ್ರುಮೈಃ ।
ಕೂಜದ್ವಿಹಂಗಮಿಥುನೈರ್ಗಾಯನ್ಮತ್ತಮಧುವ್ರತೈಃ ॥ ೬೩ ॥

ವಾಪ್ಯೋ ವೈದೂರ್ಯಸೋಪಾನಾಃ ಪದ್ಮೋತ್ಪಲಕುಮುದ್ವತೀಃ ।
ಹಂಸಕಾರಂಡವಕುಲೈರ್ಜುಷ್ಟಾಶ್ಚಕ್ರಾಹ್ವಸಾರಸೈಃ ॥ ೬೪ ॥

ಉತ್ತಾನಪಾದೋ ರಾಜರ್ಷಿಃ ಪ್ರಭಾವಂ ತನಯಸ್ಯ ತಮ್ ।
ಶ್ರುತ್ವಾ ದೃಷ್ಟ್ವಾದ್ಭುತತಮಂ ಪ್ರಪೇದೇ ವಿಸ್ಮಯಂ ಪರಮ್ ॥ ೬೫ ॥

ವೀಕ್ಷ್ಯೋಢವಯಸಂ ತಂ ಚ ಪ್ರಕೃತೀನಾಂ ಚ ಸಮ್ಮತಮ್ ।
ಅನುರಕ್ತಪ್ರಜಂ ರಾಜಾ ಧ್ರುವಂ ಚಕ್ರೇ ಭುವಃ ಪತಿಮ್ ॥ ೬೬ ॥

ಆತ್ಮಾನಂ ಚ ಪ್ರವಯಸಮಾಕಲಯ್ಯ ವಿಶಾಂಪತಿಃ ।
ವನಂ ವಿರಕ್ತಃ ಪ್ರಾತಿಷ್ಠದ್ವಿಮೃಶನ್ನಾತ್ಮನೋ ಗತಿಮ್ ॥ ೬೭ ॥

ಸ್ಫಟಿಕದಿಂದಲೂ, ಮರಕತಮಣಿಗಳಿಂದಲೂ ರಚಿತವಾಗಿದ್ದ ಗೋಡೆಗಳಲ್ಲಿ ಕೆತ್ತಿದ ರತ್ನಖಚಿತ ಹೆಣ್ಣುಗೊಂಬೆಗಳ ಕೈಯಲ್ಲಿ ನೂರಾರು ಮಣಿದೀಪಗಳು ಬೆಳಗುತ್ತಿದ್ದುವು. ॥ ೬೨ ॥ ಅರಮನೆಯ ಸುತ್ತಲೂ ನಾನಾಜಾತಿಯ ದಿವ್ಯ ವೃಕ್ಷಗಳಿಂದ ಕೂಡಿದ ಸುಂದರ ಉದ್ಯಾನವನಗಳಿದ್ದುವು. ಅದರಲ್ಲಿ ಗಂಡು ಮತ್ತು ಹೆಣ್ಣು ಹಕ್ಕಿಗಳ ಕಲರವದಿಂದ ಹಾಗೂ ದುಂಬಿಗಳ ಝೇಂಕಾರಗಳಿಂದ ಕಿವಿಗಳು ತಣಿಯುತ್ತಿದ್ದುವು. ॥ ೬೩ ॥ ಆ ಹೂದೋಟಗಳಲ್ಲಿ ವೈಡೂರ್ಯ ಮಣಿಗಳ ಸೋಪಾನಗಳಿಂದ ರಚಿತವಾದ ತಿಳಿನೀರಿನ ಕೊಳಗಳು ಶೋಭಿಸುತ್ತಿದ್ದುವು. ಅವುಗಳಲ್ಲಿ ಕೆಂಪು, ನೀಲಿ, ಬಿಳಿಯ ಬಣ್ಣಗಳ ಅರಳಿದ ಕಮಲಗಳಿಂದಲೂ, ಆಟವಾಡುತ್ತಿದ್ದ ಹಂಸ, ಕಾರಂಡವ, ಚಕ್ರವಾಕ, ಸಾರಸಗಳೇ ಮುಂತಾದ ಪಕ್ಷಿಗಳಿಂದಲೂ ಕಂಗೊಳಿಸುತ್ತಿದ್ದುವು. ॥ ೬೪ ॥

ರಾಜರ್ಷಿಯಾದ ಉತ್ತಾನಪಾದನು ಪುತ್ರನ ಅತ್ಯಂತ ಅದ್ಭುತವಾದ ಪ್ರಭಾವವನ್ನು ದೇವರ್ಷಿ ನಾರದರಿಂದ ಹಿಂದೆ ಕೇಳಿದ್ದನು. ಈಗ ಅದನ್ನು ಪ್ರತ್ಯಕ್ಷವಾಗಿಯೇ ನೋಡಿ ಅವನಿಗೆ ತುಂಬಾ ಆಶ್ಚರ್ಯವಾಯಿತು. ॥ ೬೫ ॥ ಅನಂತರ ಅವನು – ಧ್ರುವನು ವಿವಾಹದ ವಯಸ್ಸಿಗೆ ಬಂದಿರುವುದನ್ನೂ, ಅಮಾತ್ಯವರ್ಗವು ಅವನನ್ನು ಆದರಬುದ್ಧಿಯಿಂದ ನೋಡುವುದನ್ನೂ, ಪ್ರಜೆಗಳೂ ಕೂಡ ಅವನಲ್ಲಿ ಅನುರಕ್ತವಾಗಿರುವುದನ್ನೂ ಗಮನಿಸಿ ಅವನಿಗೆ ಅಖಿಲ ಭೂಮಂಡಲದ ಅಧಿಪತ್ಯದ ಪಟ್ಟಾಭಿಷೇಕವನ್ನು ಮಾಡಿದನು. ॥ ೬೬ ॥ ಮತ್ತೆ ತನಗೆ ಮುಪ್ಪು ಬಂದಿರುವುದನ್ನು ತಿಳಿದು ಆತ್ಮೋದ್ಧಾರದ ಗತಿಯನ್ನು ಚಿಂತಿಸುತ್ತಾ ಸಂಸಾರದಲ್ಲಿ ವಿರಕ್ತನಾಗಿ ವನಕ್ಕೆ ಹೊರಟುಹೋದನು. ॥ ೬೭ ॥

ಒಂಭತ್ತನೆಯ ಅಧ್ಯಾಯವು ಮುಗಿಯಿತು. ॥ ೯ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಚತುರ್ಥಸ್ಕಂಧೇ
ಧ್ರುವರಾಜ್ಯಾಭಿಷೇಕವರ್ಣನಂ ನಾಮ ನವಮೋಽಧ್ಯಾಯಃ ॥ ೯ ॥

ಹತ್ತನೆಯ ಅಧ್ಯಾಯ

ಯಕ್ಷನಿಂದ ಉತ್ತಮನ ಸಾವು – ಧ್ರುವನು ಯಕ್ಷರೊಡನೆ ಮಾಡಿದ ಯುದ್ಧ

ಮೈತ್ರೇಯ ಉವಾಚ

ಪ್ರಜಾಪತೇರ್ದುಹಿತರಂ ಶಿಶುಮಾರಸ್ಯ ವೈ ಧ್ರುವಃ ।
ಉಪಯೇಮೇ ಭ್ರಮಿಂ ನಾಮ ತತ್ಸುತೌ ಕಲ್ಪವತ್ಸರೌ ॥ ೧ ॥

ಇಲಾಯಾಮಪಿ ಭಾರ್ಯಾಯಾಂ ವಾಯೋಃ ಪುತ್ರ್ಯಾಂ ಮಹಾಬಲಃ ।
ಪುತ್ರಮುತ್ಕಲನಾಮಾನಂ ಯೋಷಿದ್ರತ್ನಮಜೀಜನತ್ ॥ ೨ ॥

ಶ್ರೀಮೈತ್ರೇಯರು ಹೇಳುತ್ತಾರೆ – ಎಲೈ ವಿದುರನೇ! ಧ್ರುವನು ಶಿಶುಮಾರನೆಂಬ ಪ್ರಜಾಪತಿಯ ಪುತ್ರಿಯಾದ ಭ್ರಮಿ ಎಂಬಾಕೆಯೊಂದಿಗೆ ವಿವಾಹವಾಗಿ, ಅವಳಲ್ಲಿ ಕಲ್ಪ ಮತ್ತು ವತ್ಸರ ಎಂಬ ಇಬ್ಬರು ಪುತ್ರರನ್ನು ಪಡೆದನು. ॥ ೧ ॥ ಆ ಮಹಾಬಲಿಯಾದ ಧ್ರುವನು ತನ್ನ ಮತ್ತೊಬ್ಬ ಭಾರ್ಯೆಯಾಗಿದ್ದ ವಾಯು ಪುತ್ರಿಯಾದ ಇಳಾದೇವಿಯಿಂದ ಉತ್ಕಲನೆಂಬ ಪುತ್ರನನ್ನೂ ಒಂದು ಕನ್ಯಾರತ್ನವನ್ನೂ ಪಡೆದನು. ॥ ೨ ॥ ಉತ್ತಮ ಕುಮಾರನು ವಿವಾಹವಾಗುವುದಕ್ಕೆ ಮೊದಲೇ ಒಮ್ಮೆ ಬೇಟೆಯಾಡುತ್ತಿದ್ದಾಗ ಹಿಮಾಲಯ ಪರ್ವತದಲ್ಲಿ ಒಬ್ಬ ಮಹಾಬಲಶಾಲಿಯಾದ

ಉತ್ತಮಸ್ತ್ವಕೃತೋದ್ವಾಹೋ ಮೃಗಯಾಯಾಂ ಬಲೀಯಸಾ ।
ಹತಃ ಪುಣ್ಯಜನೇನಾದ್ರೌ ತನ್ಮಾತಾಸ್ಯ ಗತಿಂ ಗತಾ
॥ ೩ ॥

ಧ್ರುವೋ ಭ್ರಾತೃವಧಂ ಶ್ರುತ್ವಾ ಕೋಪಾಮರ್ಷಶುಚಾರ್ಪಿತಃ ।
ಜೈತ್ರಂ ಸ್ಯಂದನಮಾಸ್ಥಾಯ ಗತಃ ಪುಣ್ಯಜನಾಲಯಮ್
॥ ೪ ॥

ಗತ್ವೋದೀಚೀಂ ದಿಶಂ ರಾಜಾ ರುದ್ರಾನುಚರಸೇವಿತಾಮ್ ।
ದದರ್ಶ ಹಿಮವದ್ದ್ರೋಣ್ಯಾಂ ಪುರೀಂ ಗುಹ್ಯಕಸಂಕುಲಾಮ್
॥ ೫ ॥

ದಧ್ಮೌ ಶಂಖಂ ಬೃಹದ್ಬಾಹುಃ ಖಂ ದಿಶಶ್ಚಾನುನಾದಯನ್ ।
ಯೇನೋದ್ವಿಗ್ನದೃಶಃ ಕ್ಷತ್ತರುಪದೇವ್ಯೋಽತ್ರಸನ್ ಭೃಶಮ್
॥ ೬ ॥

ತತೋ ನಿಷ್ಕ್ರಮ್ಯ ಬಲಿನ ಉಪದೇವಮಹಾಭಟಾಃ ।
ಅಸಹಂತಸ್ತನ್ನಿನಾದಮಭಿಪೇತುರುದಾಯುಧಾಃ
॥ ೭ ॥

ಸ ತಾನಾಪತತೋ ವೀರ ಉಗ್ರಧನ್ವಾ ಮಹಾರಥಃ ।
ಏಕೈಕಂ ಯುಗಪತ್ಸರ್ವಾನಹನ್ ಬಾಣೈಸ್ತ್ರಿಭಿಸ್ತ್ರಿಭಿಃ
॥ ೮ ॥

ತೇ ವೈ ಲಲಾಟಲಗ್ನೈಸ್ತೈರಿಷುಭಿಃ ಸರ್ವ ಏವ ಹಿ ।
ಮತ್ವಾ ನಿರಸ್ತಮಾತ್ಮಾನಮಾಶಂಸನ್ ಕರ್ಮ ತಸ್ಯ ತತ್
॥ ೯ ॥

ತೇಽಪಿ ಚಾಮುಮಮೃಷ್ಯಂತಃ ಪಾದಸ್ಪರ್ಶಮಿವೋರಗಾಃ ।
ಶರೈರವಿಧ್ಯನ್ ಯುಗಪದ್ದ್ವಿಗುಣಂ ಪ್ರಚಿಕೀರ್ಷವಃ
॥ ೧೦ ॥

ತತಃ ಪರಿಘನಿಸ್ತ್ರಿಂಶೈಃ ಪ್ರಾಸಶೂಲಪರಶ್ವಧೈಃ ।
ಶಕ್ತ್ಯೃಷ್ಟಿಭಿರ್ಭುಶುಂಡೀಭಿಶ್ಚಿತ್ರವಾಜೈಃ ಶರೈರಪಿ
॥ ೧೧ ॥

ಅಭ್ಯವರ್ಷನ್ಪ್ರಕುಪಿತಾಃ ಸರಥಂ ಸಹಸಾರಥಿಮ್ ।
ಇಚ್ಛಂತಸ್ತತ್ಪ್ರತೀಕರ್ತುಮಯುತಾನಿ ತ್ರಯೋದಶ
॥ ೧೨ ॥

ಔತ್ತಾನಪಾದಿಃ ಸ ತದಾ ಶಸ್ತ್ರವರ್ಷೇಣ ಭೂರಿಣಾ ।
ನ ಉಪಾದೃಶ್ಯತಚ್ಛನ್ನ ಆಸಾರೇಣ ಯಥಾ ಗಿರಿಃ
॥ ೧೩ ॥

ಹಾಹಾಕಾರಸ್ತದೈವಾಸೀತ್ಸಿದ್ಧಾನಾಂ ದಿವಿ ಪಶ್ಯತಾಮ್ ।
ಹತೋಽಯಂ ಮಾನವಃ ಸೂರ್ಯೋ ಮಗ್ನಃ ಪುಣ್ಯಜನಾರ್ಣವೇ
॥ ೧೪ ॥

ಯಕ್ಷನು ಅವನನ್ನು ಕೊಂದುಹಾಕಿದನು. ಅತನ ತಾಯಿಯಾದ ಸುರುಚಿಯು ಅತನೊಂದಿಗೆ ಪರಲೋಕವನ್ನೈದಿದಳು. ॥ ೩ ॥

ತಮ್ಮನ ಸಾವಿನ ಸಮಾಚಾರವನ್ನು ಕೇಳಿದ ಧ್ರುವನು ಕ್ರೋಧ, ಶೋಕ ಮತ್ತು ಉದ್ವೇಗಗೊಂಡು ಒಂದು ವಿಜಯರಥವನ್ನು ಏರಿ ಯಕ್ಷರ ನೆಲೆಯಾದ ಅಲಕಾವತಿಗೆ ಪ್ರಯಾಣ ಬೆಳೆಸಿದನು. ॥ ೪ ॥ ಉತ್ತರದಿಕ್ಕಿಗೆ ಹೋಗಿ ಅವನು ಹಿಮಾಲಯದ ತಪ್ಪಲಿನಲ್ಲಿ ಯಕ್ಷರಿಂದ ತುಂಬಿದ್ದ ಕುಬೇರನ ರಾಜಧಾನಿಯನ್ನು ಕಂಡನು. ಅಲ್ಲಿ ರುದ್ರದೇವರ ಅನುಚರರಾದ ಅನೇಕ ಭೂತ-ಪ್ರೇತ-ಪಿಶಾಚಿಗಳು ವಾಸವಾಗಿದ್ದವು. ॥ ೫ ॥ ವಿದುರನೇ! ಅಲ್ಲಿಗೆ ತಲುಪಿ ಮಹಾಬಾಹುವಾದ ಧ್ರುವನು ಹತ್ತುದಿಕ್ಕುಗಳಲ್ಲಿಯೂ ತುಂಬಿ ಮೊಳಗುವಂತೆ ಶಂಖಧ್ವನಿಯನ್ನು ಗೈದನು. ಆ ಧ್ವನಿಯನ್ನು ಕೇಳಿ ಯಕ್ಷಪತ್ನಿಯರು ತುಂಬಾ ಹೆದರಿ ಹೋದರು. ಅವರ ಕಣ್ಣುಗಳು ಭಯದಿಂದ ಕಾತರಗೊಂಡವು. ॥ ೬ ॥

ವೀರನಾದ ವಿದುರನೇ! ಮಹಾಬಲಶಾಲಿಗಳಾದ ಯಕ್ಷವೀರರು ಆ ಶಂಖನಾದವನ್ನು ಸಹಿಸಲಾರದೆ ಕ್ರೋಧೋದ್ರಿಕ್ತರಾಗಿ ಬಗೆ-ಬಗೆಯ ಅಸ್ತ್ರ-ಶಸ್ತ್ರಗಳನ್ನು ಹಿಡಿದುಕೊಂಡು ನಗರದಿಂದ ಹೊರಬಿದ್ದು ಧ್ರುವನನ್ನು ಮುತ್ತಿದರು. ॥ ೭ ॥ ಮಹಾರಥಿಯಾದ ಧ್ರುವನು ಪ್ರಚಂಡ ಧನುರ್ಧರನಾಗಿದ್ದನು. ಅವನು ಒಮ್ಮೆಗೆ ಬಾಣಪ್ರಯೋಗಮಾಡಿ ಆ ಯಕ್ಷರಲ್ಲಿ ಒಬ್ಬೊಬ್ಬರಿಗೂ ಮೂರು-ಮೂರು ಬಾಣಗಳನ್ನು ಹೊಡೆದನು. ॥ ೮ ॥ ತಮ್ಮಲ್ಲಿ ಪ್ರತಿಯೊಬ್ಬರ ತಲೆಗೆ ಮೂರು-ಮೂರು ಬಾಣಗಳು ನೆಟ್ಟಿದ್ದನ್ನು ನೋಡಿದಾಗ ಯಕ್ಷರಿಗೆ ನಿಶ್ಚಿತವಾಗಿಯೂ ಸೋತು ಹೋಗಿದೆವೆಂಬ ವಿಶ್ವಾಸವುಂಟಾಯಿತು. ಧ್ರುವನ ಅದ್ಭುತ ಪರಾಕ್ರಮವನ್ನು ಅವರು ಪ್ರಶಂಸೆ ಮಾಡತೊಡಗಿದರು. ॥ ೯ ॥ ಸರ್ಪವು ಮತ್ತೊಬ್ಬರ ಕಾಲ್ತುಳಿತವನ್ನು ಸಹಿಸದೆ ಕೆರಳುವಂತೆ – ಅವರೂ ಧ್ರುವನ ಪರಾಕ್ರಮವನ್ನು ಸಹಿಸಲಾರದೆ ಕೋಪದಿಂದ ಕೆರಳಿ ಅವನ ಬಾಣಗಳಿಗೆ ಉತ್ತರವಾಗಿ ಅತನ ಮೇಲೆ ಅವನ ಬಾಣಗಳಿಗೆ ಎರಡರಷ್ಟು ಬಾಣಗಳನ್ನು ಒಟ್ಟಿಗೆ ಪ್ರಯೋಗಿಸಿದರು. ॥ ೧೦ ॥ ಅಲ್ಲಿದ್ದ ಒಂದು ಲಕ್ಷದ ಮೂವತ್ತುಸಾವಿರ ಮಂದಿಯೂ ಒಟ್ಟಿಗೆ ಬಾಣಪ್ರಯೋಗ ಮಾಡಿದರು. ಧ್ರುವನ ಮೇಲೆ ಸೇಡುತೀರಿಸಿಕೊಳ್ಳಲು ಅವರು ಅತ್ಯಂತ ಕ್ರುದ್ಧರಾಗಿ ರಥ, ಸಾರಥಿಸಹಿತ ಅವನ ಮೇಲೆ ಪರಿಘ, ಖಡ್ಗ, ಪ್ರಾಸ, ತ್ರಿಶೂಲ, ಪರಶು, ಶಕ್ತಿ, ಋಷ್ಟಿ, ಭುಶುಂಡಿ ಮತ್ತು ಚಿತ್ರ-ವಿಚಿತ್ರವಾದ ಗರಿಕಟ್ಟಿದ ಬಾಣಗಳ ಮಳೆಯನ್ನೇ ಸುರಿಸಿದರು. ॥ ೧೧-೧೨ ॥ ಭಯಂಕರವಾದ ಬಾಣಗಳ ಮಳೆಯಲ್ಲಿ ಧ್ರುವನು ಪೂರ್ಣವಾಗಿ ಮುಚ್ಚಿಹೋದನು. ದೊಡ್ಡದಾದ ಮಳೆಯಿಂದ ಪರ್ವತವು ಕಾಣದಂತೆ ಆ ಬಾಣವರ್ಷದಿಂದ ಧ್ರುವನು ಕಾಣಿಸದಾದನು. ॥ ೧೩ ॥ ಆಗ ಆಕಾಶದಲ್ಲಿದ್ದು ಆ ದೃಶ್ಯವನ್ನು ನೋಡುತ್ತಿದ್ದ ಸಿದ್ಧಗಣವು 'ಹಾ! ಹಾ! ಈ ಮನುವಂಶದ ಸೂರ್ಯನು ಯಕ್ಷಸೇನೆಯೆಂಬ ಸಮುದ್ರದಲ್ಲಿ ಮುಳುಗಿ ಅಸ್ತಂಗತನಾದನಲ್ಲ!' ಎಂದು ಗೋಳಾಡಿದರು. ॥ ೧೪ ॥ ಯಕ್ಷರು ತಮ್ಮ ವಿಜಯವನ್ನು ಘೋಷಿಸುತ್ತಾ ಯುದ್ಧಕ್ಷೇತ್ರದಲ್ಲಿ ಸಿಂಹದಂತೆ ಗರ್ಜಿಸತೊಡಗಿದರು. ಆದರೆ ಈ ನಡುವೆ ಸೂರ್ಯಭಗವಂತನು ಮಂಜನ್ನು ಭೇದಿಸಿ

ಸದಸ್ಸು ಯಾತುಧಾನೇಷು ಜಯಕಾಶಿಷ್ವಥೋ ಮೃಧೇ ।
ಉದತಿಷ್ಠದ್ರಥಸ್ತಸ್ಯ ನೀಹಾರಾದಿವ ಭಾಸ್ಕರಃ ॥ ೧೫ ॥

ಧನುರ್ವಿಸ್ಫೂರ್ಜಯನ್ ದಿವ್ಯಂ ದ್ವಿಷತಾಂ ಖೇದಮುದ್ವಹನ್ ।
ಅಸ್ತ್ರೌಘಂ ವ್ಯಧಮದ್ಬಾಣೈರ್ಘನಾನೀಕಮಿವಾನಿಲಃ ॥ ೧೬ ॥

ತಸ್ಯ ತೇ ಚಾಪನಿರ್ಮುಕ್ತಾ ಭಿತ್ತ್ವಾ ವರ್ಮಾಣಿ ರಕ್ಷಸಾಮ್ ।
ಕಾಯಾನಾವಿವಿಶುಸ್ತಿಗ್ಮಾ ಗಿರೀನಶನಯೋ ಯಥಾ ॥ ೧೭ ॥

ಭಲ್ಲೈಃ ಸಂಛಿದ್ಯಮಾನಾನಾಂ ಶಿರೋಭಿಶ್ಚಾರುಕುಂಡಲೈಃ ।
ಊರುಭಿರ್ಹೇಮತಾಲಾಭೈರ್ದೋರ್ಭಿರ್ವಲಯವಲ್ಗುಭಿಃ ॥ ೧೮ ॥

ಹಾರಕೇಯೂರಮುಕುಟೈರುಷ್ಣೀಷೈಶ್ಚ ಮಹಾಧನೈಃ ।
ಆಸ್ತೃತಾಸ್ತಾ ರಣಭುವೋ ರೇಜುರ್ವೀರಮನೋಹರಾಃ ॥ ೧೯ ॥

ಹತಾವಶಿಷ್ಟಾ ಇತರೇ ರಣಾಜಿರಾದ್
ರಕ್ಷೋಗಣಾಃ ಕ್ಷತ್ರಿಯವರ್ಯಸಾಯಕೈಃ ।
ಪ್ರಾಯೋ ವಿವೃಕ್ಣಾವಯವಾ ವಿದುದ್ರುವು-
ರ್ಮೃಗೇಂದ್ರವಿಕ್ರೀಡಿತಯೂಥಪಾ ಇವ ॥ ೨೦ ॥

ಅಪಶ್ಯಮಾನಃ ಸ ತದಾಽಽತತಾಯಿನಂ
ಮಹಾಮೃಧೇ ಕಂಚನ ಮಾನವೋತ್ತಮಃ ।
ಪುರೀಂ ದಿದೃಕ್ಷನ್ನಪಿ ನಾವಿಶದ್ದ್ವಿಷಾಂ
ನ ಮಾಯಿನಾಂ ವೇದ ಚಿಕೀರ್ಷಿತಂ ಜನಃ ॥ ೨೧ ॥

ಇತಿ ಬ್ರುವನ್‌ಶ್ಚಿತ್ರರಥಃ ಸ್ವಸಾರಥಿಂ
ಯತ್ತಃ ಪರೇಷಾಂ ಪ್ರತಿಯೋಗಶಂಕಿತಃ ।
ಶುಶ್ರಾವ ಶಬ್ದಂ ಜಲಧೇರಿವೇರಿತಂ
ನಭಸ್ವತೋ ದಿಕ್ಷು ರಜೋಽನ್ವದೃಶ್ಯತ ॥ ೨೨ ॥

ಕ್ಷಣೇನಾಚ್ಛಾದಿತಂ ವ್ಯೋಮ ಘನಾನೀಕೇನ ಸರ್ವತಃ ।
ವಿಸ್ಫುರತ್ತಡಿತಾ ದಿಕ್ಷು ತ್ರಾಸಯತ್ಸ್ತನಯಿತ್ನುನಾ ॥ ೨೩ ॥

ವವೃಷೂ ರುಧಿರೌಘಾಸೃಕ್ಪೂಯವಿಣ್ಮೂತ್ರಮೇದಸಃ ।
ನಿಪೇತುರ್ಗಗನಾದಸ್ಯ ಕಬಂಧಾನ್ಯಗ್ರತೋಽನಘ ॥ ೨೪ ॥

ಕೊಂಡು ಹೊರಬರುವಂತೆ ಧ್ರುವನು ರಥದೊಂದಿಗೆ ಇದ್ದಕ್ಕಿದ್ದಂತೆ ಹೊರಗೆ ಪ್ರಕಟನಾದನು. ॥ ೧೫ ॥

ಧ್ರುವನು ತನ್ನ ದಿವ್ಯವಾದ ಧನುಸ್ಸನ್ನು ಟಂಕಾರಮಾಡಿ ಶತ್ರುಗಳ ಎದೆಯನ್ನು ನಡುಗಿಸಿಬಿಟ್ಟನು. ಪ್ರಚಂಡವಾದ ಬಾಣಗಳ ಮಳೆಯನ್ನೇ ಸುರಿಸಿ – ಬಿರುಗಾಳಿಯು ಮೋಡಗಳನ್ನು ಚದುರಿಸಿ ಬಿಡುವಂತೆ ಅವರ ಅಸ್ತ್ರ-ಶಸ್ತ್ರಗಳನ್ನು ಛಿನ್ನ-ಭಿನ್ನವಾಗಿಸಿದನು. ॥ ೧೬ ॥ ಆತನ ಧನುಸ್ಸಿನಿಂದ ಹೊರಟ ತೀಕ್ಷ್ಣವಾದ ಬಾಣಗಳು ಯಕ್ಷ-ರಾಕ್ಷಸರ ಕವಚಗಳನ್ನು ಭೇದಿಸಿ – ಇಂದ್ರನು ಪ್ರಯೋಗಿಸಿದ ವಜ್ರವು ಪರ್ವತದೊಳಗೆ ನುಗ್ಗುವಂತೆ ಅವರ ಶರೀರದೊಳಗೆ ನುಗ್ಗಿದವು. ॥ ೧೭ ॥ ವಿದುರನೇ! ಧ್ರುವನ ಬಾಣಗಳಿಂದ ಕತ್ತರಿಸಲ್ಪಟ್ಟ ಯಕ್ಷರ ಸುಂದರವಾದ ಕುಂಡಲಸಹಿತವಾದ ತಲೆಗಳಿಂದಲೂ, ಸುವರ್ಣವರ್ಣವಾದ ತಾಳೆಮರದಂತಿರುವ ತೊಡೆ ಕಾಲುಗಳಿಂದಲೂ, ಬಳೆಗಳಿಂದ ಭೂಷಿತವಾದ ಬಾಹುಗಳಿಂದಲೂ, ಹಾರಗಳು – ತೋಳಬಂದಿಗಳು – ಕಿರೀಟಗಳು ಮತ್ತು ಬಹುಮೂಲ್ಯವಾದ ರುಮಾಲುಗಳಿಂದಲೂ ನಿಬಿಡವಾಗಿ, ವೀರರಿಗೆ ಉತ್ಸಾಹ ವರ್ಧಕವಾದ ಆ ಯುದ್ಧಭೂಮಿಯು ಅತ್ಯಂತ ರಮಣೀಯವಾಗಿ ಕಾಣುತ್ತಿತ್ತು. ॥ ೧೮-೧೯ ॥ ಅಳಿದುಳಿದ ಯಕ್ಷರು ಕ್ಷತ್ರಿಯಶ್ರೇಷ್ಠನಾದ ಧ್ರುವನ ಬಾಣಗಳಿಂದ ಅಂಗಗಳೆಲ್ಲ ಛಿನ್ನ-ಭಿನ್ನವಾಗಿದ್ದರಿಂದ ಸಿಂಹದೊಡನೆ ಸೆಣಸಿ ಸೋತ ಗಜರಾಜನಂತೆ ಭಯಗ್ರಸ್ತರಾಗಿ ರಣರಂಗದಿಂದ ಪಲಾಯನ ಮಾಡಿಬಿಟ್ಟರು. ॥ ೨೦ ॥ ಆ ವಿಸ್ತಾರವಾದ ರಣಭೂಮಿಯಲ್ಲಿ ಅಸ್ತ್ರ-ಶಸ್ತ್ರಗಳನ್ನು ಹಿಡಿದಿದ್ದ ಶತ್ರುಗಳಲ್ಲಿ ಒಂದು ಹಕ್ಕಿಯೂ ಕಾಣದಿರಲು, ನರಶ್ರೇಷ್ಠನಾದ ಧ್ರುವನಿಗೆ ಅಲಕಾಪುರಿಯನ್ನು ನೋಡಬೇಕೆಂಬ ಬಯಕೆ ಉಂಟಾಯಿತು. ಆದರೆ ಅವನು ಪುರದೊಳಗೆ ಹೋಗಲಿಲ್ಲ. 'ಈ ಮಾಯಾವಿಗಳು ಏನು ಮಾಡಲು ಬಯಸುತ್ತಾರೋ ಎಂಬುದು ಮನುಷ್ಯರಿಗೆ ತಿಳಿಯುವುದಿಲ್ಲ' ಎಂದು ಸಾರಥಿಗೆ ಹೇಳಿ ಆತನು ಆ ವಿಚಿತ್ರವಾದ ರಥದಲ್ಲಿಯೇ ಕುಳಿತುಕೊಂಡು, ಶತ್ರುಗಳು ಹೊಸದಾಗಿ ಆಕ್ರಮಣಮಾಡಬಹುದೆಂಬ ಆಶಂಕೆಯಿಂದ ಎಚ್ಚರವಾಗಿಯೇ ಇದ್ದನು. ಅಷ್ಟರಲ್ಲೇ ಅವನಿಗೆ ಸಮುದ್ರದ ಗರ್ಜನೆಯಂತೆ ಚಂಡಮಾರುತದ ಭಯಂಕರ ಶಬ್ದ ಕೇಳಿಬಂತು. ಎಲ್ಲ ದಿಕ್ಕುಗಳಲ್ಲಿಯೂ ಬಿರುಗಾಳಿ ಬೀಸತೊಡಗಿ ಧೂಳು ತುಂಬಿಹೋಯಿತು. ॥ ೨೧-೨೨ ॥

ಕ್ಷಣಕಾಲದಲ್ಲೇ ಇಡೀ ಆಕಾಶವು ಮೋಡಗಳ ಸಾಲುಗಳಿಂದ ತುಂಬಿಹೋಯಿತು. ಎಲ್ಲೆಡೆ ಭಯಂಕರವಾದ ಗುಡುಗುಗಳೊಡನೆ ಮಿಂಚುಗಳು ಥಳ-ಥಳಿಸತೊಡಗಿತು. ॥ ೨೩ ॥ ಪುಣ್ಯಾತ್ಮನಾದ ವಿದುರನೇ! ಮೋಡಗಳಿಂದ ರಕ್ತ, ಮಾಂಸ, ಕೀವು, ಮಲ-ಮೂತ್ರ, ಚರ್ಬಿ ಮುಂತಾದವುಗಳ ಮಳೆ ಸುರಿಯತೊಡಗಿತು. ಅನೇಕ ತಲೆಯಿಲ್ಲದ ದೇಹಗಳು ಮುಗಿಲಿನಿಂದ ಧ್ರುವನ ಮುಂದೆಯೇ ಬೀಳತೊಡಗಿದವು. ॥ ೨೪ ॥ ಮತ್ತೆ ಆಕಾಶದಲ್ಲಿ ಒಂದು ಪರ್ವತವು ಕಾಣಿಸಿಕೊಂಡು ಎಲ್ಲ ದಿಕ್ಕುಗಳಿಂದಲೂ

ತತಃ ಖೇಽದೃಶ್ಯತ ಗಿರಿರ್ನಿಪೇತುಃ ಸರ್ವತೋದಿಶಮ್ ।
ಗದಾಪರಿಘನಿಸ್ತ್ರಿಂಶಮುಸಲಾಃ ಸಾಶ್ಮವರ್ಷಿಣಃ ॥ ೨೫ ॥

ಕಲ್ಲುಗಳ ಮಳೆಯೇ ಸುರಿಯತೊಡಗಿತು. ಜೊತೆಗೆ ಗದೆಗಳು, ಪರಿಘಗಳು, ಕತ್ತಿಗಳು, ಒನಕೆಗಳು ಬೀಳತೊಡಗಿದವು. ॥ ೨೫ ॥

ಅಹಯೋಽಶನಿನಿಃಶ್ವಾಸಾ ವಮಂತೋಽಗ್ನಿಂ ರುಷಾಕ್ಷಿಭಿಃ ।
ಅಭ್ಯಧಾವನ್ಗಜಾ ಮತ್ತಾಃ ಸಿಂಹವ್ಯಾಘ್ರಾಶ್ಚ ಯೂಥಶಃ ॥ ೨೬ ॥

ಪಾಪಿಗಳಾದ ಸರ್ಪಗಳು ಸಿಡಿಲಿನಂತೆ ಬುಸುಗುಟ್ಟುತ್ತಾ ರೋಷಪೂರ್ಣವಾದ ಕಣ್ಣುಗಳಿಂದ ಕೆಂಡಗಳನ್ನು ಕಾರುತ್ತಿರುವುದು ಕಾಣಿಸಿತು. ಮದಿಸಿದ ಆನೆಗಳು, ಸಿಂಹಗಳು, ಹುಲಿಗಳು, ಹಿಂಡು-ಹಿಂಡಾಗಿ ಓಡೋಡಿ ಬರುತ್ತಿರುವುದು ಗೋಚರಿಸಿತು. ॥ ೨೬ ॥

ಸಮುದ್ರ ಊರ್ಮಿಭಿರ್ಭೀಮಃ ಪ್ಲಾವಯನ್ಸರ್ವತೋ ಭುವಮ್ ।
ಆಸಸಾದ ಮಹಾಹ್ರಾದಃ ಕಲ್ಪಾಂತ ಇವ ಭೀಷಣಃ ॥ ೨೭ ॥

ಸಮುದ್ರಗಳು ಪ್ರಳಯಕಾಲದಂತೆ ಭೀಕರವಾಗಿ ಭೋರ್ಗರೆಯುತ್ತಾ ಮುಗಿಲೆತ್ತರದ ಅಲೆಗಳಿಂದ ಎಲ್ಲ ಕಡೆಗಳಿಂದಲೂ ಭೂಮಿಯನ್ನು ಮುಳುಗಿಸುತ್ತಾ ಬರುತ್ತಿರುವಂತೆ ಕಾಣಿಸಿತು. ॥ ೨೭ ॥

ಏವಂ ವಿಧಾನ್ಯನೇಕಾನಿ ತ್ರಾಸನಾನ್ಯಮನಸ್ವಿನಾಮ್ ।
ಸಸೃಜುಸ್ತಿಗ್ಮಗತಯ ಆಸುರ್ಯಾ ಮಾಯಯಾಸುರಾಃ ॥ ೨೮ ॥

ಕ್ರೂರಿಗಳಾದ ಅಸುರರು ತಮ್ಮ ಆಸುರೀ ಮಾಯೆಯಿಂದ ಹೇಡಿಗಳ ಹೃದಯ ನಡುಗಿಸುವಂತಹ ಅನೇಕ ಉತ್ಪಾತಗಳನ್ನು ತೋರಿದರು. ॥ ೨೮ ॥

ಧ್ರುವೇ ಪ್ರಯುಕ್ತಾಮಸುರೈಸ್ತಾಂ ಮಾಯಾಮತಿದುಸ್ತರಾಮ್ ।
ನಿಶಾಮ್ಯ ತಸ್ಯ ಮುನಯಃ ಶಮಾಶಂಸನ್ಸಮಾಗತಾಃ ॥ ೨೯ ॥

ಧ್ರುವನ ಮೇಲೆ ಅಸುರರು ದುಸ್ತರವಾದ ಮಾಯೆಯನ್ನು ಸೃಷ್ಟಿಸುತ್ತಿದ್ದಾರೆ ಎಂಬುದನ್ನು ಕೇಳಿ ಮುನಿಗಳು ಅಲ್ಲಿಗೆ ಬಂದು ಆತನಿಗೆ ಮಂಗಳವನ್ನು ಹಾರೈಸಿದರು. ॥ ೨೯ ॥

ಮುನಯ ಊಚುಃ

ಔತ್ತಾನಪಾದೇ ಭಗವಾಂಸ್ತವ ಶಾರ್ಙ್ಗಧನ್ವಾ
ದೇವಃ ಕ್ಷಿಣೋತ್ವವನತಾರ್ತಿಹರೋ ವಿಪಕ್ಷಾನ್ ।
ಯನ್ನಾಮಧೇಯಮಭಿಧಾಯ ನಿಶಮ್ಯ ಚಾದ್ಧಾ
ಲೋಕೋಽಂಜಸಾ ತರತಿ ದುಸ್ತರಮಂಗ ಮೃತ್ಯುಮ್ ॥ ೩೦ ॥

ಮುನಿಗಳು ಹೇಳುತ್ತಾರೆ – ಉತ್ತಾನಪಾದನ ಸುಪುತ್ರನೇ! ಧ್ರುವನೇ! ಶರಣಾಗತರ ಭಯವನ್ನು ಭಂಜಿಸುವ ಶಾರ್ಙ್ಗಪಾಣಿ ಭಗವಾನ್ ನಾರಾಯಣನು ನಿನ್ನ ಶತ್ರುಗಳನ್ನು ಸಂಹರಿಸಲಿ. ಶ್ರೀಭಗವಂತನ ನಾಮವನ್ನು ಕೇಳುವುದರಿಂದ, ಕೀರ್ತಿಸುವುದರಿಂದ ಮನುಷ್ಯನು ದುಸ್ತರವಾದ ಮೃತ್ಯುವನ್ನು ಅನಾಯಾಸವಾಗಿಯೇ ಬೇಗನೇ ದಾಟಿಬಿಡುವನು ॥ ೩೦ ॥

ಹತ್ತನೆಯ ಅಧ್ಯಾಯವು ಮುಗಿಯಿತು. ॥ ೧೦ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಚತುರ್ಥಸ್ಕಂಧೇ ದಶಮೋಽಧ್ಯಾಯಃ ॥ ೧೦ ॥

ಹನ್ನೊಂದನೆಯ ಅಧ್ಯಾಯ

ಸ್ವಾಯಂಭುವ ಮನುವು ಯುದ್ಧವನ್ನು ನಿಲ್ಲಿಸುವಂತೆ ಧ್ರುವನಿಗೆ ಆದೇಶ ನೀಡಿದುದು

ಮೈತ್ರೇಯ ಉವಾಚ

ನಿಶಮ್ಯ ಗದತಾಮೇವಮೃಷೀಣಾಂ ಧನುಷಿ ಧ್ರುವಃ ।
ಸಂದಧೇಽಸ್ತ್ರಮುಪಸ್ಪೃಶ್ಯ ಯನ್ನಾರಾಯಣನಿರ್ಮಿತಮ್ ॥ ೧ ॥

ಶ್ರೀಮೈತ್ರೇಯ ಮಹರ್ಷಿಗಳು ಹೇಳುತ್ತಾರೆ – ಎಲೈ ವಿದುರನೇ! ಋಷಿಗಳು ಹೀಗೆ ಹೇಳಿದುದನ್ನು ಕೇಳಿ ಮಹಾರಾಜಾ ಧ್ರುವನು ಶುದ್ಧಾಚಮನಮಾಡಿ ಶ್ರೀಮನ್ನಾರಾಯಣನು ನಿರ್ಮಿಸಿದ ನಾರಾಯಣಾಸ್ತ್ರವನ್ನು ಧನುಸ್ಸಿಗೆ ಹೂಡಿದನು. ॥ ೧ ॥

ಸಂಧೀಯಮಾನ ಏತಸ್ಮಿನ್ಮಾಯಾ ಗುಹ್ಯಕನಿರ್ಮಿತಾಃ ।
ಕ್ಷಿಪ್ರಂ ವಿನೇಶುರ್ವಿದುರ ಕ್ಲೇಶಾ ಜ್ಞಾನೋದಯೇ ಯಥಾ ॥ ೨ ॥

ನಾರಾಯಣಾಸ್ತ್ರವನ್ನು ಸಂಧಾನಮಾಡುತ್ತಲೇ – ಜ್ಞಾನೋದಯವಾಗುತ್ತಲೇ ಅವಿದ್ಯೆಯೇ ಮುಂತಾದ ಎಲ್ಲ ಕ್ಲೇಶಗಳು ನಾಶ ಹೊಂದುವಂತೆ ಯಕ್ಷರು ರಚಿಸಿದ ನಾನಾ ಮಾಯೆಗಳೆಲ್ಲ ಕಣ್ಮರೆಯಾದುವು. ॥ ೨ ॥

ತಸ್ಯಾರ್ಷಾಸ್ತ್ರಂ ಧನುಷಿ ಪ್ರಯುಂಜತಃ
ಸುವರ್ಣಪುಂಖಾಃ ಕಲಹಂಸವಾಸಸಃ ।
ವಿನಿಸ್ಸೃತಾ ಆವಿವಿಶುರ್ದ್ವಿಷದ್ಬಲಂ
ಯಥಾ ವನಂ ಭೀಮರವಾಃ ಶಿಖಂಡಿನಃ ॥ ೩ ॥

ನಾರಾಯಣ ಋಷಿಯಿಂದ ಆವಿಷ್ಕೃತವಾದ ಅಸ್ತ್ರವನ್ನು ಧನುಸ್ಸಿಗೆ ಸಂಧಾನಮಾಡಿದೊಡನೆಯೇ ಅದರಿಂದ ರಾಜಹಂಸದ ಗರಿಗಳಂತೆ ಚಿನ್ನದ ಗರಿಗಳಿಂದ ಕೂಡಿದ ತೀಕ್ಷ್ಣವಾದ ಬಾಣಗಳು ಹೊರಬಂದು ನವಿಲುಗಳು ಕೇಕೆಹಾಕುತ್ತಾ ಅರಣ್ಯಕ್ಕೆ ನುಗ್ಗುವಂತೆ ಭಯಂಕರವಾಗಿ ಶಬ್ದಮಾಡುತ್ತಾ ಶತ್ರುಸೈನ್ಯವನ್ನು ಹೊಕ್ಕವು. ॥ ೩ ॥

ತೈಸ್ತಿಗ್ಮಧಾರೈಃ ಪ್ರಧನೇ ಶಿಲೀಮುಖೈ-
ರಿತಸ್ತತಃ ಪುಣ್ಯಜನಾ ಉಪದ್ರುತಾಃ ।
ತಮಭ್ಯಧಾವನ್ಕುಪಿತಾ ಉದಾಯುಧಾಃ
ಸುಪರ್ಣಮುನ್ನದ್ಧಫಣಾ ಇವಾಹಯಃ ॥ ೪ ॥

ಸ ತಾನ್ಪೃಷತ್ಕೈರಭಿಧಾವತೋ ಮೃಧೇ
ನಿಕೃತ್ತಬಾಹೂರುಶಿರೋಧರೋದರಾನ್ ।
ನಿನಾಯ ಲೋಕಂ ಪರಮರ್ಕಮಂಡಲಂ
ವ್ರಜಂತಿ ನಿರ್ಭಿದ್ಯ ಯಮೂರ್ಧ್ವರೇತಸಃ ॥ ೫ ॥

ತಾನ್ ಹನ್ಯಮಾನಾನಭಿವೀಕ್ಷ್ಯ ಗುಹ್ಯಕಾ-
ನನಾಗಸಶ್ಚಿತ್ರರಥೇನ ಭೂರಿಶಃ ।
ಔತ್ತಾನಪಾದಿಂ ಕೃಪಯಾ ಪಿತಾಮಹೋ
ಮನುರ್ಜಗಾದೋಪಗತಃ ಸಹರ್ಷಿಭಿಃ ॥ ೬ ॥

ಮನುರುವಾಚ

ಅಲಂ ವತ್ಸಾತಿರೋಷೇಣ ತಮೋದ್ವಾರೇಣ ಪಾಪ್ಮನಾ ।
ಯೇನ ಪುಣ್ಯಜನಾನೇತಾನವಧೀಸ್ತ್ವಮನಾಗಸಃ ॥ ೭ ॥

ನಾಸ್ಮತ್ಕುಲೋಚಿತಂ ತಾತ ಕರ್ಮೈತತ್ಸದ್ವಿಗರ್ಹಿತಮ್ ।
ವಧೋ ಯದುಪದೇವಾನಾಮಾರಬ್ಧಸ್ತೇಽಕೃತೈನಸಾಮ್ ॥ ೮ ॥

ನನ್ವೇಕಸ್ಯಾಪರಾಧೇನ ಪ್ರಸಂಗಾದ್ಬಹವೋ ಹತಾಃ ।
ಭ್ರಾತುರ್ವಧಾಭಿತಪ್ತೇನ ತ್ವಯಾಂಗ ಭ್ರಾತೃವತ್ಸಲ ॥ ೯ ॥

ನಾಯಂ ಮಾರ್ಗೋ ಹಿ ಸಾಧೂನಾಂ
ಹೃಷೀಕೇಶಾನುವರ್ತಿನಾಮ್ ।
ಯದಾತ್ಮಾನಂ ಪರಾಗ್ಗೃಹ್ಯ
ಪಶುವದ್ಭೂತವೈಶಸಮ್ ॥ ೧೦ ॥

ಸರ್ವಭೂತಾತ್ಮಭಾವೇನ ಭೂತಾವಾಸಂ ಹರಿಂ ಭವಾನ್ ।
ಆರಾಧ್ಯಾಪ ದುರಾರಾಧ್ಯಂ ವಿಷ್ಣೋಸ್ತತ್ಪರಮಂ ಪದಮ್ ॥ ೧೧ ॥

ಸ ತ್ವಂ ಹರೇರನುಧ್ಯಾತಸ್ತತ್ಪುಂಸಾಮಪಿ ಸಮ್ಮತಃ ।
ಕಥಂ ತ್ವವದ್ಯಂ ಕೃತವಾನನುಶಿಕ್ಷನ್ಸತಾಂ ವ್ರತಮ್ ॥ ೧೨ ॥

ತಿತಿಕ್ಷಯಾ ಕರುಣಯಾ ಮೈತ್ರ್ಯಾ ಚಾಖಿಲಜಂತುಷು ।
ಸಮತ್ವೇನ ಚ ಸರ್ವಾತ್ಮಾ ಭಗವಾನ್ ಸಂಪ್ರಸೀದತಿ ॥ ೧೩ ॥

ಹರಿತವಾದ ಆ ಬಾಣಗಳು ಶತ್ರುಗಳನ್ನು ಬಹಳವಾಗಿ ಉಪದ್ರವಗೊಳಿಸಿದವು. ಆಗ ರಣಾಂಗಣದಲ್ಲಿ ಅನೇಕ ಯಕ್ಷರು ಕುಪಿತರಾಗಿ ಅಸ್ತ್ರ-ಶಸ್ತ್ರಗಳನ್ನು ಸಿದ್ಧಪಡಿಸಿಕೊಂಡು ಗರುಡನು ಕೆಣಕಿದಾಗ ದೊಡ್ಡ-ದೊಡ್ಡ ಸರ್ಪಗಳು ಹೆಡೆಗಳನ್ನು ಬಿಚ್ಚಿಕೊಂಡು ಅದರ ಕಡೆಗೆ ಓಡುವಂತೆ ನಾನಾಕಡೆಗಳಿಂದ ಧ್ರುವನ ಮೇಲೆ ಮುತ್ತಿಗೆ ಹಾಕಿದರು. ॥ ೪ ॥ ಹೀಗೆ ಮುಂದಕ್ಕೆ ಬರುತ್ತಿರುವ ಯಕ್ಷರನ್ನು ನೋಡಿ ಧ್ರುವನು ತನ್ನ ಬಾಣಗಳಿಂದ ಅವರ ಭುಜಗಳನ್ನೂ, ತೊಡೆಗಳನ್ನೂ, ಹೆಗಲು-ಹೊಟ್ಟೆಯೇ ಮುಂತಾದ ಅಂಗೋಪಾಂಗಗಳನ್ನು ಕತ್ತರಿಸಿ ಊರ್ಧ್ವರೇತಸ್ಕರಾದ ಮುನಿಗಳು ಸೂರ್ಯಮಂಡಲವನ್ನು ಭೇದಿಸಿಕೊಂಡು ಹೋಗುವಂತೆ – ಅವರೆಲ್ಲರನ್ನು ಸರ್ವಶ್ರೇಷ್ಠಲೋಕ (ಸತ್ಯಲೋಕ)ಕ್ಕೆ ಕಳಿಸಿಕೊಟ್ಟನು. ॥ ೫ ॥ ವಿಚಿತ್ರವಾದ ರಥವನ್ನು ಏರಿದ್ದ ಧ್ರುವನು ನಿರಪರಾಧಿಗಳಾದ ಯಕ್ಷರನ್ನು ಕೊಲ್ಲುತ್ತಿರುವುದನ್ನು ಕಂಡು ಆತನ ಪಿತಾಮಹನಾದ ಸ್ವಾಯಂಭುವಮನುವಿಗೆ ಅವರ ಮೇಲೆ ಕನಿಕರ ಉಂಟಾಯಿತು. ಅವನು ಅನೇಕ ಮಹರ್ಷಿಗಳೊಡನೆ ಅಲ್ಲಿಗೆ ಬಂದು ತನ್ನ ಮೊಮ್ಮಗನಿಗೆ ಹೀಗೆ ತಿಳುವಳಿಕೆ ನೀಡಿದನು. ॥ ೬ ॥

ಮನುವು ಹೇಳಿದನು – ಮಗು, ಧ್ರುವನೇ! ಸಾಕು-ಸಾಕು! ಹೀಗೆ ಹೆಚ್ಚಾದ ಕ್ರೋಧವನ್ನು ತೋರುವುದು ತರವಲ್ಲ. ಈ ಕೋಪವು ನರಕದ ಬಾಗಿಲು ಆಗಿದೆ. ಅದಕ್ಕೆ ವಶನಾಗಿ ನೀನು ಈ ನಿರಪರಾಧಿ ಯಕ್ಷರನ್ನು ವಧಿಸಿಬಿಟ್ಟೆ ॥ ೭ ॥ ವತ್ಸ! ನೀನು ಯಾವ ಅಪರಾಧವನ್ನು ಮಾಡದೇ ಇರುವ ಯಕ್ಷರ ಸಂಹಾರಕ್ಕೆ ತೊಡಗಿರುವುದು ನಮ್ಮ ವಂಶಕ್ಕೆ ತಕ್ಕುದಾದ ಕರ್ಮವಲ್ಲ, ಸಾಧುಗಳು ಇದನ್ನು ಮೆಚ್ಚುವುದಿಲ್ಲ. ॥ ೮ ॥ ಮಗು! ನಿನಗೆ ತಮ್ಮನ ಮೇಲೆ ಅತಿಶಯವಾದ ಪ್ರೀತಿಯಿರುವುದು ಸರಿಯೆ. ಆದರೆ ಆತನ ವಧೆಯಿಂದ ಸಂತಾಪಗೊಂಡು ಒಬ್ಬ ಯಕ್ಷನು ಮಾಡಿದ ಅಪರಾಧಕ್ಕಾಗಿ ಬಹುಮಂದಿ ಯಕ್ಷರ ಹತ್ಯೆ ಮಾಡಿಬಿಟ್ಟೆಯಲ್ಲ! ॥ ೯ ॥ ಈ ಜಡವಾದ ದೇಹವನ್ನೇ ಆತ್ಮವೆಂದು ತಿಳಿದು ಇದಕ್ಕಾಗಿ ಪಶುಗಳಂತೆ ಪ್ರಾಣಹಿಂಸೆ ಮಾಡುವುದು ಭಗವದ್ಭಕ್ತರಾದ ಸಾಧುಗಳು ಅನುಸರಿಸುವ ಮಾರ್ಗವಲ್ಲ. ॥ ೧೦ ॥ ಶ್ರೀಭಗವಂತನನ್ನು ಆರಾಧಿಸಿ ಅವನನ್ನು ಒಲಿಸಿಕೊಳ್ಳುವುದು ಬಹಳ ಕಠಿಣವಾದ ಕೆಲಸ. ಆದರೆ ನೀನು ಬಾಲ್ಯದಲ್ಲಿಯೇ ಸಮಸ್ತ ಭೂತಗಳಿಗೆ ಆಶ್ರಯನಾದ ಶ್ರೀಹರಿಯನ್ನು ಸರ್ವಭೂತಾತ್ಮಭಾವನೆಯಿಂದ ಆರಾಧಿಸಿ ಪರಮಪದವನ್ನು ಪಡೆದುಕೊಂಡಿರುವೆ. ॥ ೧೧ ॥ ನಿನ್ನನ್ನಾದರೋ ಆ ಪ್ರಭುವು ತನ್ನ ಪ್ರಿಯ ಭಕ್ತನೆಂದು ತಿಳಿದಿರುವನು. ನಿನ್ನನ್ನು ಪ್ರಭುವಿನ ಭಕ್ತರಾದ ಸಾಧುಗಳು ಆದರಿಸುತ್ತಾರೆ ಹಾಗೂ ನೀನು ಅವರಿಗೆ ಮಾರ್ಗದರ್ಶಕನೂ ಆಗಿರುವೆ. ಹೀಗಿದ್ದರೂ ನೀನು ಇಂತಹ ನಿಂದನೀಯ ಕರ್ಮವನ್ನು ಹೇಗೆ ಮಾಡಿದೆ? ॥ ೧೨ ॥ ಸರ್ವಾತ್ಮನಾದ ಶ್ರೀಹರಿಯು – ತನಗಿಂತ ಹಿರಿಯವರಲ್ಲಿ ಸಹನೆತೋರುವುದು, ಕಿರಿಯವರಲ್ಲಿ ದಯೆತೋರುವುದು, ಸರಿಸಮಾನರಲ್ಲಿ ಸ್ನೇಹವನ್ನು ಬೆಳೆಸುವುದು ಹಾಗೂ ಸಮಸ್ತ ಜೀವರೊಡನೆ ಸಮತೆಯ ವರ್ತನೆಯಿಂದಲೇ ಪ್ರಸನ್ನನಾಗುವನು. ॥ ೧೩ ॥

ಸಂಪ್ರಸನ್ನೇ ಭಗವತಿ ಪುರುಷಃ ಪ್ರಾಕೃತೈರ್ಗುಣೈಃ ।
ವಿಮುಕ್ತೋ ಜೀವನಿರ್ಮುಕ್ತೋ ಬ್ರಹ್ಮನಿರ್ವಾಣಮೃಚ್ಛತಿ ॥ ೧೪ ॥

ಭೂತೈಃ ಪಂಚಭಿರಾರಬ್ಧೈ-
ರ್ಯೋಷಿತ್ಪುರುಷ ಏವ ಹಿ ।
ತಯೋರ್ವ್ಯವಾಯಾತ್ ಸಂಭೂತಿ-
ರ್ಯೋಷಿತ್ಪುರುಷಯೋರಿಹ ॥ ೧೫ ॥

ಏವಂ ಪ್ರವರ್ತತೇ ಸರ್ಗಃ ಸ್ಥಿತಿಃ ಸಂಯಮ ಏವ ಚ ।
ಗುಣವ್ಯತಿಕರಾದ್ರಾಜನ್ಮಾಯಯಾ ಪರಮಾತ್ಮನಃ ॥ ೧೬ ॥

ನಿಮಿತ್ತಮಾತ್ರಂ ತತ್ರಾಸೀನ್ನಿರ್ಗುಣಃ ಪುರುಷರ್ಷಭಃ ।
ವ್ಯಕ್ತಾವ್ಯಕ್ತಮಿದಂ ವಿಶ್ವಂ ಯತ್ರ ಭ್ರಮತಿ ಲೋಹವತ್ ॥ ೧೭ ॥

ಸ ಖಲ್ವಿದಂ ಭಗವಾನ್ ಕಾಲಶಕ್ತ್ಯಾ
ಗುಣಪ್ರವಾಹೇಣ ವಿಭಕ್ತವೀರ್ಯಃ ।
ಕರೋತ್ಯಕರ್ತೈವ ನಿಹಂತ್ಯಹಂತಾ
ಚೇಷ್ಟಾ ವಿಭೂಮ್ನಃ ಖಲು ದುರ್ವಿಭಾವ್ಯಾ ॥ ೧೮ ॥

ಸೋಽನಂತೋಽಂತಕರಃ ಕಾಲೋಽನಾದಿರಾದಿಕೃದವ್ಯಯಃ ।
ಜನಂ ಜನೇನ ಜನಯನ್ಮಾರಯನ್ಮೃತ್ಯುನಾಂತಕಮ್ ॥ ೧೯ ॥

ನ ವೈ ಸ್ವಪಕ್ಷೋಽಸ್ಯ ವಿಪಕ್ಷ ಏವ ವಾ
ಪರಸ್ಯ ಮೃತ್ಯೋರ್ವಿಶತಃ ಸಮಂ ಪ್ರಜಾಃ ।
ತಂ ಧಾವಮಾನಮನುಧಾವಂತ್ಯನೀಶಾ
ಯಥಾ ರಜಾಂಸ್ಯನಿಲಂ ಭೂತಸಂಘಾಃ ॥ ೨೦ ॥

ಆಯುಷೋಽಪಚಯಂ ಜಂತೋ-
ಸ್ತಥೈವೋಪಚಯಂ ವಿಭುಃ ।
ಉಭಾಭ್ಯಾಂ ರಹಿತಃ ಸ್ವಸ್ಥೋ
ದುಃಸ್ಥಸ್ಯ ವಿದಧಾತ್ಯಸೌ ॥ ೨೧ ॥

ಕೇಚಿತ್ಕರ್ಮ ವದಂತ್ಯೇನಂ ಸ್ವಭಾವಮಪರೇ ನೃಪ ।
ಏಕೇ ಕಾಲಂ ಪರೇ ದೈವಂ ಪುಂಸಃ ಕಾಮಮುತಾಪರೇ ॥ ೨೨ ॥

ಅವ್ಯಕ್ತಸ್ಯಾಪ್ರಮೇಯಸ್ಯ ನಾನಾಶಕ್ತ್ಯುದಯಸ್ಯ ಚ ।
ನ ವೈ ಚಿಕೀರ್ಷಿತಂ ತಾತ ಕೋ ವೇದಾಥ ಸ್ವಸಂಭವಮ್ ॥ ೨೩ ॥

ಪ್ರಭುವು ಪ್ರಸನ್ನನಾದ ಪುರುಷನು ಪ್ರಾಕೃತಗುಣಗಳಿಂದ ಮತ್ತು ಅವುಗಳ ಕಾರ್ಯರೂಪವಾದ ಲಿಂಗಶರೀರದಿಂದ ಬಿಡುಗಡೆಹೊಂದಿ ಪರಮಾನಂದಸ್ವರೂಪನಾದ ಬ್ರಹ್ಮಪದವನ್ನು ಹೊಂದುವನು. ॥ ೧೪ ॥

ಮಗು ಧ್ರುವನೇ! ದೇಹವೇ ಮುಂತಾದ ರೂಪದಲ್ಲಿ ಪರಿಣಾಮಹೊಂದಿರುವ ಪಂಚಭೂತಗಳಿಂದಲೇ ಸ್ತ್ರೀ-ಪುರುಷರು ಹುಟ್ಟುತ್ತಾರೆ ಮತ್ತು ಅವರ ಪರಸ್ಪರ ಸೇರುವಿಕೆಯಿಂದ ಬೇರೆ ಸ್ತ್ರೀ-ಪುರುಷರು ಉತ್ಪನ್ನರಾಗುತ್ತಾರೆ. ॥ ೧೫ ॥ ಹೀಗೆ ಶ್ರೀಭಗವಂತನ ಮಾಯೆಯಿಂದ ಸತ್ತ್ವಾದಿಗುಣಗಳಲ್ಲಿ ಉಂಟಾಗುವ ವೈಷಮ್ಯದಿಂದಲೇ ಭೂತಗಳಿಂದ ಶರೀರಗಳ ರಚನೆಯಾಗುವಂತೆಯೇ ಅವುಗಳ ಸ್ಥಿತಿ ಮತ್ತು ಲಯಗಳೂ ಆಗುತ್ತವೆ. ॥ ೧೬ ॥ ಎಲೈ ಪುರುಷಶ್ರೇಷ್ಠನೇ! ಗುಣಾತೀತನಾದ ಪರಮಾತ್ಮನಾದರೋ ಇವರಲ್ಲಿ ಕೇವಲ ನಿಮಿತ್ತಮಾತ್ರನಾಗಿದ್ದಾನೆ. ಅವನ ಆಶ್ರಯದಿಂದಲೇ ಈ ಕಾರ್ಯಕಾರಣಾತ್ಮಕವಾದ ಜಗತ್ತು ಸೂಜಿಗಲ್ಲಿನ ಆಶ್ರಯದಿಂದ ಕಬ್ಬಿಣವು ಚಲಿಸುವಂತೆ ಸುತ್ತುತ್ತಿರುವುದು. ॥ ೧೭ ॥ ಕಾಲಶಕ್ತಿಯ ಮೂಲಕ ಕ್ರಮವಾಗಿ ಸತ್ತ್ವಾದಿಗುಣಗಳಲ್ಲಿ ಕ್ಷೋಭೆಯುಂಟಾದ್ದರಿಂದ ಲೀಲಾಮಯ ಭಗವಂತನ ಶಕ್ತಿಯೂ ಸೃಷ್ಟಿಯೇ ಮುಂತಾದ ರೂಪಗಳಲ್ಲಿ ವಿಭಜನೆ ಹೊಂದುತ್ತದೆ. ಆದ್ದರಿಂದ ಭಗವಂತನು ವಾಸ್ತವವಾಗಿ ಅಕರ್ತನಾಗಿದ್ದರೂ ಜಗತ್ತನ್ನು ಸೃಷ್ಟಿಸುತ್ತಾನೆ. ಸಂಹಾರಕನಲ್ಲದಿದ್ದರೂ ಸಂಹಾರ ಮಾಡುತ್ತಾನೆ. ನಿಜವಾಗಿ ಅನಂತನಾದ ಆ ಪ್ರಭುವಿನ ಲೀಲೆಯು ಅತ್ಯಂತ ಅಚಿಂತ್ಯವಾಗಿದೆ. ॥ ೧೮ ॥ ಧ್ರುವನೇ! ಕಾಲಸ್ವರೂಪನಾದ ಅವ್ಯಯ ಪರಮಾತ್ಮನೇ ತಾನು ಅಂತರಹಿತನಾಗಿದ್ದರೂ ಜಗತ್ತನ್ನು ಅಂತ್ಯಗೊಳಿಸುವವನಾಗಿದ್ದಾನೆ. ಅನಾದಿಯಾಗಿದ್ದರೂ ಎಲ್ಲರ ಆದಿಕರ್ತನಾಗಿದ್ದಾನೆ. ಆತನೇ ಒಂದು ಜೀವದಿಂದ ಮತ್ತೊಂದು ಜೀವವನ್ನು ಹುಟ್ಟಿಸಿ, ಜಗತ್ತನ್ನು ಸೃಷ್ಟಿಸುತ್ತಾನೆ. ಮೃತ್ಯುವಿನ ಮೂಲಕ ಸಾಯುವವರನ್ನು ಸಂಹರಿಸುತ್ತಾನೆ. ॥ ೧೯ ॥ ಆ ಕಾಲಸ್ವರೂಪನಾದ ಭಗವಂತನು ಸಮಸ್ತ ಸೃಷ್ಟಿಯಲ್ಲಿ ಸಮಾನರೂಪದಿಂದ ಒಳಹೊಕ್ಕಿರುವನು. ಅವನಿಗೆ ಸ್ವಪಕ್ಷವೂ ಇಲ್ಲ, ಶತ್ರುಪಕ್ಷವೂ ಇಲ್ಲ. ಗಾಳಿಗೆ ಎದ್ದಿರುವ ಧೂಳು ಗಾಳಿಗೆ ಅಧೀನವಾಗಿ ಅದರ ಜೊತೆಗೆ ಹಾರಿಹೋಗುವಂತೆ, ಸಮಸ್ತ ಜೀವಿಗಳು ತಮ್ಮ-ತಮ್ಮ ಕರ್ಮಗಳಿಗೆ ಅಧೀನವಾಗಿ ಸುಖ-ದುಃಖಾದಿ ಫಲಗಳನ್ನು ಅನುಭವಿಸುತ್ತವೆ. ॥ ೨೦ ॥ ಸರ್ವಸಮರ್ಥನಾದ ಶ್ರೀಹರಿಯು ಕರ್ಮಬಂಧನದಿಂದ ಬಾಧಿತರಾದ ಜೀವಿಗಳ ಆಯುಸ್ಸಿನ ವೃದ್ಧಿ-ಕ್ಷಯದ ವಿಧಾನವನ್ನು ಮಾಡುತ್ತಾನೆ. ತಾನು ಇವೆರಡರಿಂದಲೂ ರಹಿತನಾಗಿ ಸ್ವಸ್ವರೂಪದಲ್ಲಿ ನೆಲೆಗೊಂಡಿದ್ದಾನೆ. ॥ ೨೧ ॥ ರಾಜನೇ! ಈ ಪರಮಾತ್ಮನನ್ನೇ ಮೀಮಾಂಸಕರು ಕರ್ಮವೆಂದೂ, ಚಾರ್ವಾಕರು ಸ್ವಭಾವವೆಂದೂ, ವೈಶೇಷಿಕರು ಕಾಲನೆಂದು, ಜ್ಯೋತಿಷ್ಯರು ಅದೃಷ್ಟ (ದೈವ)ವೆಂದೂ, ಕಾಮಶಾಸ್ತ್ರದವರು ಕಾಮವೆಂದೂ ಕರೆಯುತ್ತಾರೆ. ॥ ೨೨ ॥ ಅವನು ಯಾವುದೇ ಇಂದ್ರಿಯಕ್ಕೂ, ಪ್ರಮಾಣಕ್ಕೂ ವಿಷಯನಾಗಿರುವುದಿಲ್ಲ. ಮಹತ್ತೇ ಮುಂತಾದ ಶಕ್ತಿಗಳೂ ಕೂಡ ಅವನಿಂದಲೇ

ನ ಚೈತೇ ಪುತ್ರಕ ಭ್ರಾತುರ್ಹಂತಾರೋ ಧನದಾನುಗಾಃ ।
ವಿಸರ್ಗಾದಾನಯೋಸ್ತಾತ ಪುಂಸೋ ದೈವಂ ಹಿ ಕಾರಣಮ್ ॥ ೨೪ ॥

ಸ ಏವ ವಿಶ್ವಂ ಸೃಜತಿ ಸ ಏವಾವತಿ ಹಂತಿ ಚ ।
ಅಥಾಪಿ ಹ್ಯನಹಂಕಾರಾನ್ನಾಜ್ಯತೇ ಗುಣಕರ್ಮಭಿಃ ॥ ೨೫ ॥

ಏಷ ಭೂತಾನಿ ಭೂತಾತ್ಮಾ ಭೂತೇಶೋ ಭೂತಭಾವನಃ ।
ಸ್ವಶಕ್ತ್ಯಾ ಮಾಯಯಾ ಯುಕ್ತಃ ಸೃಜತ್ಯತ್ತಿ ಚ ಪಾತಿ ಚ ॥ ೨೬ ॥

ತಮೇವ ಮೃತ್ಯುಮಮೃತಂ ತಾತ ದೈವಂ
ಸರ್ವಾತ್ಮನೋಪೇಹಿ ಜಗತ್ಪರಾಯಣಮ್ ।
ಯಸ್ಮೈ ಬಲಿಂ ವಿಶ್ವಸೃಜೋ ಹರಂತಿ
ಗಾವೋ ಯಥಾ ವೈ ನಸಿ ದಾಮಯಂತ್ರಿತಾಃ ॥ ೨೭ ॥

ಯಃ ಪಂಚವರ್ಷೋ ಜನನೀಂ ತ್ವಂ ವಿಹಾಯ
ಮಾತುಃ ಸಪತ್ನ್ಯಾ ವಚಸಾ ಭಿನ್ನಮರ್ಮಾ ।
ವನಂ ಗತಸ್ತಪಸಾ ಪ್ರತ್ಯಗಕ್ಷ-
ಮಾರಾಧ್ಯ ಲೇಭೇ ಮೂರ್ಧ್ನಿ ಪದಂ ತ್ರಿಲೋಕ್ಯಾಃ ॥ ೨೮ ॥

ತಮೇನಮಂಗಾತ್ಮನಿ ಮುಕ್ತವಿಗ್ರಹೇ
ವ್ಯಪಾಶ್ರಿತಂ ನಿರ್ಗುಣಮೇಕಮಕ್ಷರಮ್ ।
ಆತ್ಮಾನಮನ್ವಿಚ್ಛ ವಿಮುಕ್ತಮಾತ್ಮದೃಗ್
ಯಸ್ಮಿನ್ನಿದಂಭೇದಮಸತ್ಪ್ರತೀಯತೇ ॥ ೨೯ ॥

ತ್ವಂ ಪ್ರತ್ಯಗಾತ್ಮನಿ ತದಾ ಭಗವತ್ಯನಂತ
ಆನಂದಮಾತ್ರ ಉಪಪನ್ನ ಸಮಸ್ತಶಕ್ತೌ ।
ಭಕ್ತಿಂ ವಿಧಾಯ ಪರಮಾಂ ಶನಕೈರವಿದ್ಯಾ-
ಗ್ರಂಥಿಂ ವಿಭೇತ್ಸ್ಯಸಿ ಮಮಾಹಮಿತಿ ಪ್ರರೂಢಮ್ ॥ ೩೦ ॥

ಸಂಯಚ್ಛ ರೋಷಂ ಭದ್ರಂ ತೇ ಪ್ರತೀಪಂ ಶ್ರೇಯಸಾಂ ಪರಮ್ ।
ಶ್ರುತೇನ ಭೂಯಸಾ ರಾಜನ್ನಗದೇನ ಯಥಾಽಽಮಯಮ್ ॥ ೩೧ ॥

ಯೇನೋಪಸೃಷ್ಟಾತ್ಪುರುಷಾಲ್ಲೋಕ ಉದ್ವಿಜತೇ ಭೃಶಮ್ ।
ನ ಬುಧಸ್ತದ್ವಶಂ ಗಚ್ಛೇದಿಚ್ಛನ್ನಭಯಮಾತ್ಮನಃ ॥ ೩೨ ॥

ಪ್ರಕಟಗೊಂಡಿವೆ. ಅವನು ಏನು ಮಾಡಲು ಬಯಸುತ್ತಿರುವನೋ ಎಂಬುದನ್ನು ಜಗತ್ತಿನಲ್ಲಿ ಯಾರೂ ಅರಿಯರು. ಹೀಗಿರುವಾಗ ಎಲ್ಲಕ್ಕೂ ಮೂಲಕಾರಣನಾದ ಆ ಪ್ರಭುವನ್ನು ಹೇಗೆ ಅರಿಯಬಲ್ಲರು ! ॥ ೨೩ ॥

ಮಗು ! ಕುಬೇರನ ಈ ಅನುಚರರು ನಿನ್ನ ತಮ್ಮನನ್ನು ವಾಸ್ತವವಾಗಿ ಕೊಂದವರಲ್ಲ. ಏಕೆಂದರೆ, ಮನುಷ್ಯನ ಜನ್ಮ-ಮರಣದ ನಿಜವಾದ ಕಾರಣ ಈಶ್ವರನೇ ಆಗಿರುವನು. ॥ ೨೪ ॥ ಅವನೊಬ್ಬನೇ ಪ್ರಪಂಚವನ್ನು ಸೃಷ್ಟಿಸುತ್ತಾನೆ, ಪಾಲಿಸುತ್ತಾನೆ, ನಾಶಗೊಳಿಸುತ್ತಾನೆ; ಆದರೆ ಅವನು ಅಹಂಕಾರರಹಿತನಾಗಿರುವುದರಿಂದ ಇದರ ಗುಣ-ಕರ್ಮ ಅವನಿಗೆ ಅಂಟುವುದಿಲ್ಲ. ॥ ೨೫ ॥ ಅವನು ಸಮಸ್ತ ಪ್ರಾಣಿಗಳ ಅಂತರಾತ್ಮನೂ, ನಿಯಾಮಕನೂ, ರಕ್ಷಕನೂ ಆಗಿರುವ ಆ ಪ್ರಭುವೇ ತನ್ನ ಮಾಯಾಶಕ್ತಿಯಿಂದ ಕೂಡಿಕೊಂಡು ಸಮಸ್ತ ಜೀವಿಗಳ ಸೃಷ್ಟಿ, ಸ್ಥಿತಿ, ಸಂಹಾರಗಳನ್ನು ಮಾಡುತ್ತಾನೆ. ॥ ೨೬ ॥ ಮೂಗುದಾರ ಹಾಕಿದ ಎತ್ತುಗಳು ತನ್ನ ಯಜಮಾನನ ಹೊರೆಯನ್ನು ಹೊರುವಂತೆ ಜಗತ್ತಿನ ಸೃಷ್ಟಿಮಾಡುವ ಬ್ರಹ್ಮಾದಿದೇವತೆಗಳು ನಾಮ-ರೂಪವೆಂಬ ಹಗ್ಗದಿಂದ ಬಂಧಿತರಾಗಿ ಅವನ ಆಜ್ಞೆಯನ್ನೇ ಪಾಲಿಸುತ್ತಾರೆ. ಅವನು ಭಕ್ತರಲ್ಲದವರಿಗೆ ಮೃತ್ಯುರೂಪನೂ, ಭಕ್ತರಾದವರಿಗೆ ಅಮೃತರೂಪನೂ ಆಗಿರುವನು. ಇಡೀ ಜಗತ್ತಿಗೆ ಏಕಮಾತ್ರ ಆಶ್ರಯನೂ ಅವನೇ ಆಗಿರುವನು. ಮಗೂ ! ನೀನು ಎಲ್ಲ ವಿಧದಿಂದ ಆ ಪರಮಾತ್ಮನನ್ನೇ ಶರಣುಹೊಂದು. ॥ ೨೭ ॥ ನೀನು ಐದನೇ ವಯಸ್ಸಿನಲ್ಲೇ ಮಲತಾಯಿಯ ವಾಗ್ಬಾಣಗಳಿಂದ ಮನನೊಂದು ತಾಯಿಯನ್ನು ಬಿಟ್ಟು ವನಕ್ಕೆ ಹೊರಟುಹೋದೆ. ಅಲ್ಲಿ ತಪಸ್ಸಿನ ಮೂಲಕ ಯಾವ ಹೃಷೀಕೇಶ ಭಗವಂತನನ್ನು ಆರಾಧಿಸಿ ನೀನು ತ್ರಿಲೋಕದಿಂದಲೂ ಮೇಲಿನ ಧ್ರುವಪದವನ್ನು ಪಡೆದುಕೊಂಡೆಯೋ ಮತ್ತು ಯಾರು ನಿನ್ನ ವೈರಭಾವರಹಿತವಾದ ಸರಳ ಹೃದಯದಲ್ಲಿ ವಾತ್ಸಲ್ಯದಿಂದ ವಿಶೇಷವಾಗಿ ವಿರಾಜಿಸುತ್ತಿದ್ದಾನೋ ಅಂತಹ ಗುಣಾತೀತನೂ, ಅದ್ವಿತೀಯನೂ, ಅವಿನಾಶಿಯೂ, ನಿತ್ಯಮುಕ್ತನೂ ಆದ ಪರಮಾತ್ಮನನ್ನು ಅಧ್ಯಾತ್ಮದೃಷ್ಟಿಯಿಂದ ನಿನ್ನ ಅಂತಃಕರಣದಲ್ಲಿ ಹುಡುಕುವವನಾಗು. ಅವನಲ್ಲಿ ವಾಸ್ತವವಾಗಿ ಇಲ್ಲದಿದ್ದರೂ ಈ ಭೇದರೂಪವಾದ ಪ್ರಪಂಚವು ತೋರಿಬರುತ್ತಿದೆ. ॥ ೨೮-೨೯ ॥ ಹೀಗೆ ಮಾಡುವುದರಿಂದ ಸರ್ವಶಕ್ತಿಸಂಪನ್ನನೂ, ಪರಮಾನಂದಸ್ವರೂಪನೂ, ಸರ್ವಾಂತರ್ಯಾಮಿಯೂ ಆಗಿರುವ ಶ್ರೀಭಗವಂತನಾದ ಅನಂತನಲ್ಲಿ ನಿನಗೆ ದೃಢವಾದ ಭಕ್ತಿಯುಂಟಾಗುವುದು. ಅದರ ಪ್ರಭಾವದಿಂದ ನೀನು ಅಹಂಕಾರ-ಮಮಕಾರರೂಪದಲ್ಲಿರುವ ದೃಢವಾದ ಅವಿದ್ಯೆಯ ಗಂಟನ್ನು ಕತ್ತರಿಸಿಕೊಳ್ಳುವೆ. ॥ ೩೦ ॥

ರಾಜನೇ ! ಔಷಧಗಳಿಂದ ರೋಗವನ್ನು ಶಮನಗೊಳಿಸಿಕೊಳ್ಳುವಂತೆ ನಾನು ಮಾಡಿರುವ ಉಪದೇಶದ ಕುರಿತು ವಿಚಾರ ಮಾಡಿ ನಿನ್ನ ಕ್ರೋಧವನ್ನು ಶಾಂತಗೊಳಿಸಿಕೋ. ಕ್ರೋಧವು ಎಲ್ಲ ಶ್ರೇಯಸ್ಸುಗಳಿಗೂ ವಿರೋಧಿಯಾದುದು. ಭಗವಂತನು ನಿನಗೆ ಮಂಗಳವನ್ನುಂಟುಮಾಡಲಿ. ॥ ೩೧ ॥ ಕ್ರೋಧವಶನಾದ ಮನುಷ್ಯನನ್ನು ಕಂಡರೆ ಎಲ್ಲರಿಗೂ ಭಯವುಂಟಾಗುವುದು. ಆದ್ದರಿಂದ 'ತನ್ನಿಂದ ಯಾವ ಪ್ರಾಣಿಗೂ ಭಯ ಉಂಟಾಗಬಾರದು ಮತ್ತು

ಹೇಲನಂ ಗಿರಿಶಭ್ರಾತುರ್ಧನದಸ್ಯ ತ್ವಯಾ ಕೃತಮ್ ।
ಯಜ್ಜಘ್ನಿವಾನ್ ಪುಣ್ಯಜನಾನ್ ಭ್ರಾತೃಘ್ನಾನಿತ್ಯಮರ್ಷಿತಃ
॥ ೩೩ ॥

ತಂ ಪ್ರಸಾದಯ ವತ್ಸಾಶು ಸಂನತ್ಯಾ ಪ್ರಶ್ರಯೋಕ್ತಿಭಿಃ ।
ನ ಯಾವನ್ಮಹತಾಂ ತೇಜಃ ಕುಲಂ ನೋಽಭಿಭವಿಷ್ಯತಿ
॥ ೩೪ ॥

ಏವಂ ಸ್ವಾಯಂಭುವಃ ಪೌತ್ರಮನುಶಾಸ್ಯ ಮನುರ್ಧ್ರುವಮ್ ।
ತೇನಾಭಿವಂದಿತಃ ಸಾಕಮೃಷಿಭಿಃ ಸ್ವಪುರಂ ಯಯೌ
॥ ೩೫ ॥

ತನಗೂ ಯಾವ ಪ್ರಾಣಿಯಿಂದ ಭಯ ಉಂಟಾಗಬಾರದು' ಎಂದು ಬಯಸುವ ಬುದ್ಧಿವಂತನಾದವನು ಎಂದಿಗೂ ಕ್ರೋಧಕ್ಕೆ ವಶನಾಗಬಾರದು. ॥ ೩೨ ॥ 'ಇವರು ನನ್ನ ತಮ್ಮನನ್ನು ಕೊಂದು ಹಾಕಿದವರು' ಎಂದು ತಿಳಿದು ನೀನು ಇಷ್ಟೆಲ್ಲಾ ಯಕ್ಷರನ್ನು ಸಂಹಾರ ಮಾಡಿದೆ. ಇದರಿಂದ ಭಗವಾನ್ ಶಂಕರನ ಸಖನಾದ ಕುಬೇರನಲ್ಲಿ ಅಪರಾಧಮಾಡಿದಂತಾಗಿದೆ. ॥ ೩೩ ॥ ಆದುದರಿಂದ ಮಗು! ಮಹಾಪುರುಷರ ತೇಜಸ್ಸು ನಮ್ಮ ಕುಲವನ್ನು ಆಕ್ರಮಿಸಿಕೊಳ್ಳುವ ಮೊದಲೇ ನೀನು ವಿನಯಪೂರ್ವಕವಾಗಿ ಮಾತು, ವರ್ತನೆಯಿಂದ ಬೇಗನೇ ಆ ಕುಬೇರನನ್ನು ಪ್ರಸನ್ನಗೊಳಿಸಿಕೋ. ॥ ೩೪ ॥

ಹೀಗೆ ಸ್ವಾಯಂಭುವಮನುವು ತನ್ನ ಮೊಮ್ಮಗನಾದ ಧ್ರುವನಿಗೆ ತಿಳಿವಳಿಕೆ ನೀಡಿದನು. ಆಗ ಧ್ರುವನು ಆತನಿಗೆ ನಮಸ್ಕರಿಸಿದನು. ಇದಾದ ಬಳಿಕ ಮನುವು ಮಹರ್ಷಿಗಳೊಡನೆ ತನ್ನ ಲೋಕಕ್ಕೆ ಹೊರಟುಹೋದನು. ॥ ೩೫ ॥

ಹನ್ನೊಂದನೆಯ ಅಧ್ಯಾಯವು ಮುಗಿಯಿತು. ॥ ೧೧ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಚತುರ್ಥಸ್ಕಂಧೇ ಏಕಾದಶೋಽಧ್ಯಾಯಃ ॥ ೧೧ ॥

ಹನ್ನೆರಡನೆಯ ಅಧ್ಯಾಯ

ಧ್ರುವನಿಗೆ ಕುಬೇರನಿಂದ ವರಪ್ರದಾನ – ಧ್ರುವನು ವಿಷ್ಣುಲೋಕವನ್ನು ಸೇರಿದುದು

ಮೈತ್ರೇಯ ಉವಾಚ

ಧ್ರುವಂ ನಿವೃತ್ತಂ ಪ್ರತಿಬುದ್ಧ್ಯ ವೈಶಸಾತ್
ಅಪೇತಮನ್ಯುಂ ಭಗವಾನ್ ಧನೇಶ್ವರಃ ।
ತತ್ರಾಗತಶ್ಚಾರಣಯಕ್ಷಕಿನ್ನರೈಃ
ಸಂಸ್ತೂಯಮಾನೋಽಭ್ಯವದತ್ಕೃತಾಂಜಲಿಮ್ ॥ ೧ ॥

ಧನದ ಉವಾಚ

ಭೋ ಭೋಃ ಕ್ಷತ್ರಿಯದಾಯಾದ ಪರಿತುಷ್ಟೋಽಸ್ಮಿ ತೇಽನಘ ।
ಯತ್ತ್ವಂ ಪಿತಾಮಹಾದೇಶಾದ್ವೈರಂ ದುಸ್ತ್ಯಜಮತ್ಯಜಃ
॥ ೨ ॥

ನ ಭವಾನವಧೀದ್ಯಕ್ಷಾನ್ನ ಯಕ್ಷಾ ಭ್ರಾತರಂ ತವ ।
ಕಾಲ ಏವ ಹಿ ಭೂತಾನಾಂ ಪ್ರಭುರಪ್ಯಯಭಾವಯೋಃ
॥ ೩ ॥

ಅಹಂ ತ್ವಮಿತ್ಯಪಾರ್ಥಾ ಧೀರಜ್ಞಾನಾತ್ಪುರುಷಸ್ಯ ಹಿ ।
ಸ್ವಾಪ್ನೀವಾಭಾತ್ಯತದ್ಧ್ಯಾನಾದ್ಯಯಾ ಬಂಧವಿಪರ್ಯಯೌ
॥ ೪ ॥

ಶ್ರೀಮೈತ್ರೇಯರು ಹೇಳುತ್ತಾರೆ – ಎಲೈ ವಿದುರನೇ! ಧ್ರುವನ ಕೋಪವು ಶಾಂತವಾಗಿದೆ ಮತ್ತು ಯಕ್ಷವಧೆಯನ್ನು ನಿಲ್ಲಿಸಿರುವನೆಂದು ತಿಳಿದ ಭಗವಾನ್ ಕುಬೇರನು ಅಲ್ಲಿಗೆ ಬಂದನು. ಆಗ ಯಕ್ಷರು, ಚಾರಣರು, ಕಿನ್ನರರು ವೈಶ್ರವಣನನ್ನು ಸ್ತೋತ್ರ ಮಾಡುತ್ತಿದ್ದರು. ಅವನನ್ನು ನೋಡುತ್ತಲೇ ಧ್ರುವನು ಕೈಮುಗಿದು ನಿಂತುಕೊಂಡನು. ಆಗ ಕುಬೇರನು ಇಂತೆಂದನು – ॥ ೧ ॥

ಶ್ರೀಕುಬೇರನು ಹೇಳಿದನು – ಎಲೈ ಶುದ್ಧಾತ್ಮನಾದ ಕ್ಷತ್ರಿಯ ಶ್ರೇಷ್ಠನೇ! ನೀನು ನಿನ್ನ ತಾತನ ಉಪದೇಶದಂತೆ ಬಿಡಲು ಕಷ್ಟಕರವಾದ ವೈರವನ್ನು ಬಿಟ್ಟಿರುವೆ. ಇದರಿಂದ ನಾನು ನಿನ್ನ ಮೇಲೆ ತುಂಬಾ ಪ್ರಸನ್ನನಾಗಿರುವೆನು. ॥ ೨ ॥ ವಾಸ್ತವದಲ್ಲಿ ನೀನು ಯಕ್ಷರನ್ನು ಕೊಂದಿಲ್ಲ, ಯಕ್ಷರು ನಿನ್ನ ತಮ್ಮನನ್ನೂ ಕೊಂದಿಲ್ಲ. ಸಮಸ್ತ ಜೀವಿಗಳ ಉತ್ಪತ್ತಿ ಮತ್ತು ವಿನಾಶದ ಕಾರಣವಾದರೋ ಕಾಲವೊಂದೇ ಆಗಿದೆ. ॥ ೩ ॥ ಈ ನಾನು-ನೀನು ಮುಂತಾದ ಮಿಥ್ಯಾಬುದ್ಧಿಯಾದರೋ ಜೀವಿಗೆ ಅಜ್ಞಾನವಶದಿಂದ ಸ್ವಪ್ನದಂತೆ ಶರೀರಾದಿಗಳನ್ನೇ ಆತ್ಮನೆಂದು ತಿಳಿಯುವುದರಿಂದ ಉಂಟಾಗುತ್ತದೆ. ಇದರಿಂದ ಮನುಷ್ಯನಿಗೆ ಬಂಧನ ಹಾಗೂ ಸುಖ-ದುಃಖಾದಿ ವಿಪರೀತ ಅವಸ್ಥೆಗಳು ಉಂಟಾಗುವುವು. ॥ ೪ ॥ ಧ್ರುವನೇ! ನೀನಿನ್ನು ಹೋಗು. ಭಗವಂತನು ನಿನಗೆ ಮಂಗಳವನ್ನು ಉಂಟುಮಾಡಲಿ. ಸಂಸಾರಬಂಧನದಿಂದ ಬಿಡುಗಡೆಹೊಂದಲು ನೀನು

ತದ್ಗಚ್ಛ ಧ್ರುವ ಭದ್ರಂ ತೇ ಭಗವಂತಮಧೋಕ್ಷಜಮ್ ।
ಸರ್ವಭೂತಾತ್ಮಭಾವೇನ ಸರ್ವಭೂತಾತ್ಮ ವಿಗ್ರಹಮ್ ॥ ೫ ॥

ಭಜಸ್ವ ಭಜನೀಯಾಂಘ್ರಿಮಭವಾಯ ಭವಚ್ಛಿದಮ್ ।
ಯುಕ್ತಂ ವಿರಹಿತಂ ಶಕ್ತ್ಯಾ ಗುಣಮಯ್ಯಾಽಽತ್ಮಮಾಯಯಾ ॥ ೬ ॥

ವೃಣೀಹಿ ಕಾಮಂ ನೃಪ ಯನ್ಮನೋಗತಂ
ಮತ್ತಸ್ತ್ವಮೌತ್ತಾನಪದೇಽವಿಶಂಕಿತಃ ।
ವರಂ ವರಾರ್ಹೋಽಂಬುಜನಾಭಪಾದಯೋ-
ರನಂತರಂ ತ್ವಾಂ ವಯಮಂಗ ಶುಶ್ರುಮ ॥ ೭ ॥

ಮೈತ್ರೇಯ ಉವಾಚ

ಸ ರಾಜರಾಜೇನ ವರಾಯ ಚೋದಿತೋ
ಧ್ರುವೋ ಮಹಾಭಾಗವತೋ ಮಹಾಮತಿಃ ।
ಹರೌ ಸ ವವ್ರೇಽಚಲಿತಾಂ ಸ್ಮೃತಿಂ ಯಯಾ
ತರತ್ಯಯತ್ನೇನ ದುರತ್ಯಯಂ ತಮಃ ॥ ೮ ॥

ತಸ್ಯ ಪ್ರೀತೇನ ಮನಸಾ ತಾಂ ದತ್ತ್ವೈಡವಿಡಸ್ತತಃ ।
ಪಶ್ಯತೋಽಂತರ್ದಧೇ ಸೋಽಪಿ ಸ್ವಪುರಂ ಪ್ರತ್ಯಪದ್ಯತ ॥ ೯ ॥

ಅಥಾಯಜತ ಯಜ್ಞೇಶಂ ಕ್ರತುಭಿರ್ಭೂರಿದಕ್ಷಿಣೈಃ ।
ದ್ರವ್ಯಕ್ರಿಯಾದೇವತಾನಾಂ ಕರ್ಮ ಕರ್ಮಫಲಪ್ರದಮ್ ॥ ೧೦ ॥

ಸರ್ವಾತ್ಮನ್ಯಚ್ಯುತೇಽಸರ್ವೇ ತೀವ್ರೌಘಾಂ ಭಕ್ತಿಮುದ್ವಹನ್ ।
ದದರ್ಶಾತ್ಮನಿ ಭೂತೇಷು ತಮೇವಾವಸ್ಥಿತಂ ವಿಭುಮ್ ॥ ೧೧ ॥

ತಮೇವಂ ಶೀಲಸಂಪನ್ನಂ ಬ್ರಹ್ಮಣ್ಯಂ ದೀನವತ್ಸಲಮ್ ।
ಗೋಪ್ತಾರಂ ಧರ್ಮಸೇತೂನಾಂ ಮೇನಿರೇ ಪಿತರಂ ಪ್ರಜಾಃ ॥ ೧೨ ॥

ಷಟ್ತ್ರಿಂಶದ್ವರ್ಷಸಾಹಸ್ರಂ ಶಶಾಸ ಕ್ಷಿತಿಮಂಡಲಮ್ ।
ಭೋಗೈಃ ಪುಣ್ಯಕ್ಷಯಂ ಕುರ್ವನ್ನಭೋಗೈರಶುಭಕ್ಷಯಮ್ ॥ ೧೩ ॥

ಏವಂ ಬಹುಸವಂ ಕಾಲಂ ಮಹಾತ್ಮಾ ವಿಚಲೇಂದ್ರಿಯಃ ।
ತ್ರಿವರ್ಗೌಪಯಿಕಂ ನೀತ್ವಾ ಪುತ್ರಾಯಾದಾನ್ನೃಪಾಸನಮ್ ॥ ೧೪ ॥

ಸರ್ವಜೀವಿಗಳಲ್ಲಿಯೂ ಸಮದೃಷ್ಟಿಯನ್ನಿಟ್ಟು ಸರ್ವಭೂತಾತ್ಮನಾದ ಭಗವಾನ್ ಶ್ರೀಹರಿಯನ್ನು ಭಜಿಸು. ಅವನೇ ಭವಬಂಧನವನ್ನು ಕತ್ತರಿಸುವವನು. ಜಗತ್ತಿನ ಉತ್ಪತ್ತಿ ಮುಂತಾದವುಗಳಿಗೆ ತನ್ನ ತ್ರಿಗುಣಾತ್ಮಕವಾದ ಮಾಯಾಶಕ್ತಿಯಿಂದ ಕೂಡಿಕೊಂಡಿದ್ದರೂ ವಾಸ್ತವವಾಗಿ ಅದರಿಂದ ರಹಿತನೇ ಆಗಿದ್ದಾನೆ. ಅವನ ಚರಣ ಕಮಲಗಳೇ ಎಲ್ಲರಿಗಾಗಿ ಭಜಿಸಲು ಯೋಗ್ಯವಾಗಿವೆ. ॥ ೫-೬ ॥ ಪ್ರಿಯ ನೃಪಾಲನೇ! ನೀನು ಸದಾ ಭಗವಾನ್ ಪದ್ಮನಾಭನ ಚರಣಕಮಲದ ಬಳಿಯೇ ಇರುವವನೆಂದು ನಾನು ಕೇಳಿರುವೆನು. ಆದ್ದರಿಂದ ನೀನು ಅವಶ್ಯವಾಗಿ ವರವನ್ನು ಪಡೆಯಲು ಯೋಗ್ಯನಾಗಿರುವೆ. ಯಾವ ಸಂಕೋಚವೂ ಇಲ್ಲದೆ, ನಿಶಂಕನಾಗಿ ನಿನಗೆ ಇಷ್ಟವಾದ ವರವನ್ನು ಕೇಳಿಕೊ. ॥ ೭ ॥

ಶ್ರೀಮೈತ್ರೇಯರು ಹೇಳುತ್ತಾರೆ – ಎಲೈ ವಿದುರನೇ! ರಾಜರಾಜನಾದ ಕುಬೇರನು ವರವನ್ನು ಕೇಳುವಂತೆ ಧ್ರುವನನ್ನು ಒತ್ತಾಯಿಸಿದಾಗ ಮಹಾಭಾಗವತೋತ್ತಮನೂ, ಮಹಾ ಬುದ್ಧಿಶಾಲಿಯೂ ಆದ ಧ್ರುವನು 'ಶ್ರೀಹರಿಯ ಸ್ಮರಣೆಯು ನನಗೆ ಸದಾ ಸ್ಥಿರವಾಗಿರಲಿ' ಎಂಬ ವರವನ್ನು ಬೇಡಿದನು. ಅದರಿಂದಲೇ ಜನರು ದಾಟಲಶಕ್ಯವಾದ ಸಂಸಾರಸಾಗರವನ್ನು ಆಯಾಸವಿಲ್ಲದೆ ದಾಟಿಹೋಗುತ್ತಾರೆ. ॥ ೮ ॥ ಇಡವಿಡಾದೇವಿಯ ಪುತ್ರನಾದ ಕುಬೇರನು ಮನಸ್ಸಿನಲ್ಲಿ ತುಂಬಾ ಸಂತೋಷಗೊಂಡು ಧ್ರುವನಿಗೆ ಅವನು ಬೇಡಿದ್ದ ವರವನ್ನು ಅನುಗ್ರಹಿಸಿ ಅವನು ನೋಡುತ್ತಿರುವಂತೆ ಅಂತರ್ಧಾನನಾದನು. ಇದಾದ ಬಳಿಕ ಧ್ರುವನು ತನ್ನ ರಾಜಧಾನಿಗೆ ಮರಳಿದನು. ॥ ೯ ॥ ತನ್ನ ನಗರಿಯಲ್ಲಿರುತ್ತಾ ಧ್ರುವಸಾರ್ವಭೌಮನು ಬಹುದಕ್ಷಿಣೆಗಳುಳ್ಳ ಅನೇಕ ಯಜ್ಞಗಳಿಂದ ಭಗವಾನ್ ಯಜ್ಞಪುರುಷನನ್ನು ಆರಾಧಿಸಿದನು. ಭಗವಂತನೇ ದ್ರವ್ಯ, ಕ್ರಿಯೆ, ದೇವತಾಸಂಬಂಧೀ ಸಮಸ್ತಕರ್ಮಗಳು, ಅವುಗಳ ಫಲವೂ ಆಗಿರುವನು ಹಾಗೂ ಕರ್ಮಫಲವನ್ನು ಕೊಡುವವನೂ ಅವನೇ ಆಗಿದ್ದಾನೆ. ॥ ೧೦ ॥ ಸರ್ವಾತ್ಮನೂ, ಸರ್ವೋಪಾಧಿರಹಿತನೂ ಆದ ಅಚ್ಯುತನಲ್ಲಿ ತೀವ್ರವಾಗಿ ಪ್ರವಹಿಸುವ ಭಕ್ತಿಯನ್ನಿಟ್ಟು ಆ ಭಕ್ತಶ್ರೇಷ್ಠನು ತನ್ನಲ್ಲಿಯೂ ಮತ್ತು ಸಮಸ್ತ ಪ್ರಾಣಿಗಳಲ್ಲಿಯೂ ಸರ್ವವ್ಯಾಪಕನಾದ ಶ್ರೀಹರಿಯೇ ವಿರಾಜಮಾನನಾಗಿರುವುದನ್ನು ನೋಡತೊಡಗಿದನು. ॥ ೧೧ ॥ ಧ್ರುವರಾಜನು ಅತ್ಯಂತ ವಿನಯಶೀಲನೂ, ಬ್ರಾಹ್ಮಣಭಕ್ತನೂ, ದೀನವತ್ಸಲನೂ, ಧರ್ಮಮರ್ಯಾದೆಯ ಸಂರಕ್ಷಕನೂ ಆಗಿದ್ದನು. ಅವನ ಪ್ರಜೆಗಳು ಅತನನ್ನು ಸಾಕ್ಷಾತ್ ತಮ್ಮ ತಂದೆಯಂತೆಯೇ ಭಾವಿಸುತ್ತಿದ್ದರು. ॥ ೧೨ ॥ ಹೀಗೆ ಅವನು ಬಗೆ-ಬಗೆಯಾದ ಐಶ್ವರ್ಯಭೋಗಗಳಿಂದ ಪುಣ್ಯವನ್ನೂ ಮತ್ತು ಫಲತ್ಯಾಗಪೂರ್ವಕವಾದ ಯಜ್ಞಾದಿಕರ್ಮಗಳ ಅನುಷ್ಠಾನದಿಂದ ಪಾಪವನ್ನೂ ಕಳೆದುಕೊಳ್ಳುತ್ತಾ, ಮೂವತ್ತಾರುಸಾವಿರ ವರ್ಷಗಳ ಕಾಲ ಭೂಮಂಡಲವನ್ನು ಆಳಿದನು. ॥ ೧೩ ॥ ಜಿತೇಂದ್ರಿಯನಾದ ಆ ಮಹಾಪುರುಷ ಧ್ರುವನು ಇದೇ ರೀತಿಯಲ್ಲಿ ಧರ್ಮ, ಅರ್ಥ ಮತ್ತು ಕಾಮಗಳ ಸಂಗ್ರಹದಲ್ಲಿ ಬಹಳ ವರ್ಷಗಳು ಕಳೆದ ಬಳಿಕ ತನ್ನ ಪುತ್ರನಾದ ಉತ್ಕಲನಿಗೆ ರಾಜಸಿಂಹಾಸನವನ್ನು ಒಪ್ಪಿಸಿದನು. ॥ ೧೪ ॥

ಮನ್ಯಮಾನ ಇದಂ ವಿಶ್ವಂ ಮಾಯಾರಚಿತಮಾತ್ಮನಿ ।
ಅವಿದ್ಯಾರಚಿತಸ್ವಪ್ನಗಂಧರ್ವನಗರೋಪಮಮ್ ॥ ೧೫ ॥

ಆತ್ಮಸ್ತ್ರ್ಯಪತ್ಯಸುಹೃದೋ ಬಲಮೃದ್ಧಕೋಶ-
ಮಂತಃಪುರಂ ಪರಿವಿಹಾರಭುವಶ್ಚ ರಮ್ಯಾಃ ।
ಭೂಮಂಡಲಂ ಜಲಧಿಮೇಖಲಮಾಕಲಯ್ಯ
ಕಾಲೋಪಸೃಷ್ಟಮಿತಿ ಸ ಪ್ರಯಯೌ ವಿಶಾಲಾಮ್ ॥ ೧೬ ॥

ತಸ್ಯಾಂ ವಿಶುದ್ಧಕರಣಃ ಶಿವವಾರ್ವಿಗಾಹ್ಯ
ಬದ್ಧ್ವಾಽಽಸನಂ ಜಿತಮರುನ್ಮನಸಾಹೃತಾಕ್ಷಃ ।
ಸ್ಥೂಲೇ ದಧಾರ ಭಗವತ್ಪ್ರತಿರೂಪ ಏತ-
ದ್ಧ್ಯಾಯಂಸ್ತದವ್ಯವಹಿತೋ ವ್ಯಸೃಜತ್ಸಮಾಧೌ ॥ ೧೭ ॥

ಭಕ್ತಿಂ ಹರೌ ಭಗವತಿ ಪ್ರವಹನ್ನಜಸ್ರ-
ಮಾನಂದಬಾಷ್ಪಕಲಯಾ ಮುಹುರರ್ದ್ಯಮಾನಃ ।
ವಿಕ್ಲಿದ್ಯಮಾನಹೃದಯಃ ಪುಲಕಾಚಿತಾಂಗೋ
ನಾತ್ಮಾನಮಸ್ಮರದಸಾವಿತಿ ಮುಕ್ತಲಿಂಗಃ ॥ ೧೮ ॥

ಸ ದದರ್ಶ ವಿಮಾನಾಗ್ರ್ಯಂ ನಭಸೋಽವತರದ್ಧ್ರುವಃ ।
ವಿಭ್ರಾಜಯದ್ದಶ ದಿಶೋ ರಾಕಾಪತಿಮಿವೋದಿತಮ್ ॥ ೧೯ ॥

ತತ್ರಾನು ದೇವಪ್ರವರೌ ಚತುರ್ಭುಜೌ
ಶ್ಯಾಮೌ ಕಿಶೋರಾವರುಣಾಂಬುಜೇಕ್ಷಣೌ ।
ಸ್ಥಿತಾವವಷ್ಟಭ್ಯ ಗದಾಂ ಸುವಾಸಸೌ
ಕಿರೀಟಹಾರಾಂಗದಚಾರುಕುಂಡಲೌ ॥ ೨೦ ॥

ವಿಜ್ಞಾಯ ತಾವುತ್ತಮಗಾಯಕಿಂಕರಾ-
ವಭ್ಯುತ್ಥಿತಃ ಸಾಧ್ವಸವಿಸ್ಮೃತಕ್ರಮಃ ।
ನನಾಮ ನಾಮಾನಿ ಗೃಣನ್ಮಧುದ್ವಿಷಃ
ಪಾರ್ಷತ್ಪ್ರಧಾನಾವಿತಿ ಸಂಹತಾಂಜಲಿಃ ॥ ೨೧ ॥

ಈ ಸಮಸ್ತ ದೃಶ್ಯಪ್ರಪಂಚವನ್ನು ಅವಿದ್ಯೆಯಿಂದ ಉಂಟಾಗಿ ಸ್ವಪ್ನ ಮತ್ತು ಗಂಧರ್ವನಗರಿಯಂತೆ ಮಾಯೆಯಿಂದ ತನ್ನಲ್ಲೇ ಕಲ್ಪಿತವಾಗಿದೆ ಎಂದು ತಿಳಿದುಕೊಂಡು ಹಾಗೂ ಶರೀರ, ಪತ್ನೀ, ಪುತ್ರ, ಮಿತ್ರ, ಸೇನೆ, ತುಂಬಿದ ಭಂಡಾರ, ಅಂತಃಪುರ, ರಮಣೀಯ ಕ್ರೀಡಾಪ್ರದೇಶಗಳು ಮತ್ತು ಸಮುದ್ರಪರ್ಯಂತವಾದ ಭೂಮಂಡಲದ ಸಾಮ್ರಾಜ್ಯ – ಇವೆಲ್ಲವೂ ಕಾಲದ ದವಡೆಯಲ್ಲಿ ಸಿಕ್ಕಿಕೊಂಡಿದೆ ಎಂದು ಭಾವಿಸಿಕೊಂಡು ಆತನು ಎಲ್ಲವನ್ನು ತ್ಯಜಿಸಿ ಬದರಿಕಾಶ್ರಮಕ್ಕೆ ಹೊರಟುಹೋದನು. ॥ ೧೫-೧೬ ॥

ಅಲ್ಲಿ ಅವನು ಪವಿತ್ರ ಜಲದಲ್ಲಿ ಸ್ನಾನಮಾಡಿ ಇಂದ್ರಿಯಗಳನ್ನು ಪರಿಶುದ್ಧವಾಗಿಸಿಕೊಂಡನು. ಮತ್ತೆ ಸ್ಥಿರ-ಸುಖ ಆಸನದಲ್ಲಿ ಕುಳಿತು ಪ್ರಾಣಾಯಾಮದ ಮೂಲಕ ವಾಯುವನ್ನು ವಶಪಡಿಸಿಕೊಂಡನು. ಅನಂತರ ಮನಸ್ಸಿನಿಂದ ಇಂದ್ರಿಯಗಳನ್ನು ಬಾಹ್ಯ ವಿಷಯಗಳ ಕಡೆಯಿಂದ ಸೆಳೆದುಕೊಂಡು ಮನಸ್ಸನ್ನು ಭಗವಂತನ ಸ್ಥೂಲ ರೂಪದಲ್ಲಿ ಸ್ಥಿರಗೊಳಿಸಿದನು. ಆ ಸ್ಥೂಲರೂಪವನ್ನೇ ಚಿಂತನೆ ಮಾಡುತ್ತಾ ಸಮಾಧಿಸ್ಥಿತಿಯನ್ನು ಪಡೆಯಲು ಆಗ ಆ ಸ್ಥೂಲ ರೂಪವೂ ಚಿಂತನೆಯಿಂದ ಹೊರಟುಹೋಯಿತು. ॥ ೧೭ ॥ ಹೀಗೆ ಆತನೊಳಗೆ ಭಗವಂತನಾದ ಶ್ರೀಹರಿಯ ನಿರಂತರವಾದ ಭಕ್ತಿ ಪ್ರವಾಹವು ಹರಿಯುತ್ತಿದ್ದುದರಿಂದ ಆತನ ಕಣ್ಣುಗಳಿಂದ ಮತ್ತೆ-ಮತ್ತೆ ಆನಂದಬಾಷ್ಪಗಳು ಧಾರೆ-ಧಾರೆಯಾಗಿ ಸುರಿಯತೊಡಗಿದುವು. ಅದರಿಂದ ಅವನ ಹೃದಯವು ಕರಗಿ ಶರೀರದಲ್ಲಿ ರೋಮಾಂಚನವುಂಟಾಯಿತು. ದೇಹಾಭಿಮಾನವು ಪೂರ್ಣವಾಗಿ ಕರಗಿಹೋದುದರಿಂದ ಅವನಿಗೆ 'ನಾನು ಧ್ರುವನಾಗಿದ್ದೇನೆ' ಎನ್ನುವ ಸ್ಮೃತಿಯೂ ಉಳಿಯಲಿಲ್ಲ. ॥ ೧೮ ॥

ಅದೇ ಸಮಯದಲ್ಲಿ ಆಕಾಶದಿಂದ ಒಂದು ಅತಿಸುಂದರವಾದ ವಿಮಾನವು ಇಳಿದುಬರುತ್ತಿರುವುದನ್ನು ಅವನು ನೋಡಿದನು. ಅದು ಹುಣ್ಣಿಮೆಯ ಚಂದ್ರನು ಆಗತಾನೇ ಉದಯಿಸಿದಂತೆ ತನ್ನ ಪ್ರಕಾಶದಿಂದ ಹತ್ತು ದಿಕ್ಕುಗಳನ್ನೂ ಬೆಳಗುತ್ತಿತ್ತು. ॥ ೧೯ ॥ ಅದರಲ್ಲಿ ಭಗವಂತನ ಪಾರ್ಷದರಿಬ್ಬರು ಗದೆಯನ್ನು ಊರಿಕೊಂಡು ನಿಂತಿದ್ದರು. ಅವರಿಗೆ ನಾಲ್ಕು ಭುಜಗಳಿದ್ದು, ಸುಂದರ ಶ್ಯಾಮಲ ಶರೀರವಿತ್ತು. ತರುಣಾವಸ್ಥೆಯಲ್ಲಿದ್ದ ಅವರ ಕಣ್ಣುಗಳು ಕೆಂದಾವರೆಯಂತೆ ಹೊಳೆಯುತ್ತಿದ್ದುವು. ಅವರು ಸುಂದರ ವಸ್ತ್ರಗಳನ್ನುಟ್ಟುಕೊಂಡು, ಕಿರೀಟ, ಹಾರ, ತೋಳುಬಂದಿಗಳಿಂದ ಅಲಂಕೃತರಾಗಿದ್ದರು. ಕಿವಿಗಳಲ್ಲಿ ಮನೋಹರವಾದ ಕುಂಡಲಗಳನ್ನು ಧರಿಸಿದ್ದರು. ॥ ೨೦ ॥ ಅವರನ್ನು ಪುಣ್ಯಶ್ಲೋಕನಾದ ಶ್ರೀಹರಿಯ ಸೇವಕರೆಂದು ಅರಿತು ಧ್ರುವನು ಒಡನೆಯೇ ಎದ್ದು ನಿಂತು, ಅವರಿಗೆ ಸಲ್ಲಿಸಬೇಕಾಗಿದ್ದ ಪೂಜೆ ಮುಂತಾದವುಗಳನ್ನು ಆ ಸಂಭ್ರಮದಲ್ಲಿ ಮರೆತುಬಿಟ್ಟನು. ಅವರು ಶ್ರೀಭಗವಂತನ ಪಾರ್ಷದರಲ್ಲಿ ಮುಖ್ಯರಾದವರು ಎಂದು ತಿಳಿದು ಅವರ ಮುಂದೆ ಶ್ರೀಮಧುಸೂದನನ ದಿವ್ಯನಾಮಗಳನ್ನು ಸಂಕೀರ್ತನೆ ಮಾಡುತ್ತಾ ಕೈಜೋಡಿಸಿ ನಮಸ್ಕಾರ ಮಾಡಿದನು. ॥ ೨೧ ॥

ತಂ ಕೃಷ್ಣಪಾದಾಭಿನಿವಿಷ್ಟಚೇತಸಂ
ಬದ್ಧಾಂಜಲಿಂ ಪ್ರಶ್ರಯನಮ್ರಕಂಧರಮ್ ।
ಸುನಂದನಂದಾವುಪಸೃತ್ಯ ಸಸ್ಮಿತಂ
ಪ್ರತ್ಯೂಚತುಃ ಪುಷ್ಕರನಾಭಸಮ್ಮತೌ ॥ ೨೨ ॥

ಸುನಂದನಂದಾವೂಚತುಃ

ಭೋ ಭೋ ರಾಜನ್ಸುಭದ್ರಂ ತೇ ವಾಚಂ ನೋಽವಹಿತಃ ಶೃಣು ।
ಯಃ ಪಂಚವರ್ಷಸ್ತಪಸಾ ಭವಾಂದೇವಮತೀತೃಪತ್ ॥ ೨೩ ॥

ತಸ್ಯಾಖಿಲಜಗದ್ಧಾತುರಾವಾಂ ದೇವಸ್ಯ ಶಾರ್ಙ್ಗಿಣಃ ।
ಪಾರ್ಷದಾವಿಹ ಸಂಪ್ರಾಪ್ತೌ ನೇತುಂ ತ್ವಾಂ ಭಗವತ್ಪದಮ್ ॥ ೨೪ ॥

ಸುದುರ್ಜಯಂ ವಿಷ್ಣುಪದಂ ಜಿತಂ ತ್ವಯಾ
ಯತ್ಸೂರಯೋಽಪ್ರಾಪ್ಯ ವಿಚಕ್ಷತೇ ಪರಮ್ ।
ಆತಿಷ್ಠ ತಚ್ಚಂದ್ರದಿವಾಕರಾದಯೋ
ಗ್ರಹರ್ಕ್ಷತಾರಾಃ ಪರಿಯಂತಿ ದಕ್ಷಿಣಮ್ ॥ ೨೫ ॥

ಅನಾಸ್ಥಿತಂ ತೇ ಪಿತೃಭಿರನ್ಯೈರಪ್ಯಂಗ ಕರ್ಹಿಚಿತ್ ।
ಆತಿಷ್ಠ ಜಗತಾಂ ವಂದ್ಯಂ ತದ್ವಿಷ್ಣೋಃ ಪರಮಂ ಪದಮ್ ॥ ೨೬ ॥

ಏತದ್ವಿಮಾನಪ್ರವರಮುತ್ತಮಶ್ಲೋಕಮೌಲಿನಾ ।
ಉಪಸ್ಥಾಪಿತಮಾಯುಷ್ಮನ್ನಧಿರೋಢುಂ ತ್ವಮರ್ಹಸಿ ॥ ೨೭ ॥

ಮೈತ್ರೇಯ ಉವಾಚ

ನಿಶಮ್ಯ ವೈಕುಂಠನಿಯೋಜ್ಯಮುಖ್ಯಯೋ-
ರ್ಮಧುಚ್ಯುತಂ ವಾಚಮುರುಕ್ರಮಪ್ರಿಯಃ ।
ಕೃತಾಭಿಷೇಕಃ ಕೃತನಿತ್ಯಮಂಗಲೋ
ಮುನೀನ್ ಪ್ರಣಮ್ಯಾಶಿಷಮಭ್ಯವಾದಯತ್ ॥ ೨೮ ॥

ಪರೀತ್ಯಾಭ್ಯರ್ಚ್ಯ ಧಿಷ್ಣ್ಯಾಗ್ರ್ಯಂ ಪಾರ್ಷದಾವಭಿವಂದ್ಯ ಚ ।
ಇಯೇಷ ತದಧಿಷ್ಠಾತುಂ ಬಿಭ್ರದ್ರೂಪಂ ಹಿರಣ್ಮಯಮ್ ॥ ೨೯ ॥

ತದೋತ್ತಾನಪದಃ ಪುತ್ರೋ
ದದರ್ಶಾಂತಕಮಾಗತಮ್ ।
ಮೃತ್ಯೋರ್ಮೂರ್ಧ್ನಿ ಪದಂ ದತ್ತ್ವಾ
ಆರುರೋಹಾದ್ಭುತಂ ಗೃಹಮ್ ॥ ೩೦ ॥

ತದಾ ದುಂದುಭಯೋ ನೇದುರ್ಮೃದಂಗಪಣವಾದಯಃ ।
ಗಂಧರ್ವಮುಖ್ಯಾಃ ಪ್ರಜಗುಃ ಪೇತುಃ ಕುಸುಮವೃಷ್ಟಯಃ ॥ ೩೧ ॥

ಧ್ರುವನ ಮನಸ್ಸು ಭಗವಂತನ ಚರಣಕಮಲಗಳಲ್ಲಿ ತಲ್ಲೀನವಾಗಿ ಬಿಟ್ಟಿರಲು ಆತನು ಅವರ ಮುಂದೆ ಕೈಜೋಡಿಸಿಕೊಂಡು ವಿನಯದಿಂದ ತಲೆಬಾಗಿ ಸುಮ್ಮನೇ ನಿಂತುಕೊಂಡನು. ಆಗ ಶ್ರೀಹರಿಯ ಪ್ರಿಯಪಾರ್ಷದರಾದ ಸುನಂದ ಮತ್ತು ನಂದ ಇವರು ಆತನ ಬಳಿಗೆ ಬಂದು ಮುಗುಳ್ನಗೆ ಬೀರುತ್ತಾ ಹೀಗೆಂದರು ॥ ೨೨ ॥

ಸುನಂದ ಮತ್ತು ನಂದರು ಹೇಳತೊಡಗಿದರು – ರಾಜನೇ! ನಿನಗೆ ಮಂಗಳವಾಗಲಿ. ನಮ್ಮ ಮಾತನ್ನು ಸಾವಧಾನವಾಗಿ ಕೇಳು. ನೀನು ಐದು ವರ್ಷದವನಾಗಿದ್ದಾಗಲೇ ತಪಸ್ಸನ್ನಾಚರಿಸಿ ಸರ್ವೇಶ್ವರನಾದ ಭಗವಂತನನ್ನು ಒಲಿಸಿಕೊಂಡಿದ್ದೆ ॥ ೨೩ ॥ ನಾವು ಅದೇ ಸರ್ವಲೋಕನಿಯಾಮಕನಾದ ಶಾರ್ಙ್ಗಪಾಣಿಯಾದ ಶ್ರೀಮನ್ನಾರಾಯಣನ ಸೇವಕರು. ನಿನ್ನನ್ನು ಆ ಭಗವಂತನ ಧಾಮಕ್ಕೆ ಕರೆದೊಯ್ಯಲು ಬಂದಿದ್ದೇವೆ ॥ ೨೪ ॥ ನೀನು ನಿನ್ನ ಭಕ್ತಿಯ ಪ್ರಭಾವದಿಂದ ಇತರರಿಗೆ ಅತಿದುರ್ಲಭವಾದ ವಿಷ್ಣುಲೋಕವನ್ನು ಗಳಿಸಿರುವೆ. ಪರಮಜ್ಞಾನಿಗಳಾದ ಸಪ್ತರ್ಷಿಗಳೂ ಕೂಡ ಅಲ್ಲಿಯವರೆಗೆ ತಲುಪಲಾರದೆ, ಕೇವಲ ಕೆಳಗಡೆಯಿಂದ ನೋಡುತ್ತಾ ಇರುತ್ತಾರೆ. ಸೂರ್ಯ-ಚಂದ್ರರೂ, ಇತರ ಗ್ರಹ-ನಕ್ಷತ್ರ-ತಾರಾಗಣಗಳೂ ಅದರ ಪ್ರದಕ್ಷಿಣೆ ಮಾಡುತ್ತಾ ಇರುತ್ತಾರೆ. ನಡೆಯಿರಿ! ನೀವು ಅದೇ ವಿಷ್ಣುಧಾಮದಲ್ಲಿ ವಾಸಮಾಡಿರಿ. ॥ ೨೫ ॥ ಪ್ರಿಯಕುಮಾರನೇ! ಇಲ್ಲಿಯವರೆಗೆ ನಿನ್ನ ಪೂರ್ವಿಕರಾಗಲೀ ಅಥವಾ ಇತರ ಯಾರೇ ಆಗಲೀ ಆ ಪದವನ್ನು ತಲುಪಲು ಸಾಧ್ಯವಾಗಲಿಲ್ಲ. ಸಮಸ್ತ ಲೋಕಗಳಿಗೂ ವಂದನೀಯವಾದ ಆ ವಿಷ್ಣುವಿನ ಪರಮಧಾಮಕ್ಕೆ ಬಂದು ನೀನು ವಿರಾಜಿಸುವವನಾಗು. ॥ ೨೬ ॥ ಆಯುಷ್ಮಂತನೇ! ಈ ಶ್ರೇಷ್ಠವಾದ ವಿಮಾನವನ್ನು ಪುಣ್ಯಶ್ಲೋಕಶಿಖಾಮಣಿಯಾದ ಶ್ರೀಹರಿಯು ನಿನಗೋಸ್ಕರವೇ ಕಳಿಸಿಕೊಟ್ಟಿರುವನು. ಇದನ್ನು ಹತ್ತಲು ನೀನೇ ಯೋಗ್ಯನಾಗಿದ್ದೀಯೇ. ॥ ೨೭ ॥

ಶ್ರೀಮೈತ್ರೇಯರು ಹೇಳುತ್ತಾರೆ – ವೈಕುಂಠಪತಿಯ ಶ್ರೇಷ್ಠರಾದ ಪಾರ್ಷದರು ನುಡಿದ ಅಮೃತಮಯ ಮಾತನ್ನು ಕೇಳಿ ಪ್ರಭು ತ್ರಿವಿಕ್ರಮನಿಗೆ ಪ್ರಿಯನಾದ ಪರಮ ಭಾಗವತೋತ್ತಮ ಧ್ರುವನು ಸ್ನಾನಮಾಡಿ, ನಿತ್ಯಕರ್ಮಗಳನ್ನೂ, ಮಂಗಳಕಾರ್ಯಗಳನ್ನೂ ನೆರವೇರಿಸಿ, ಬದರಿಕಾಶ್ರಮದಲ್ಲಿದ್ದ ಮುನಿಗಳಿಗೆ ನಮಸ್ಕಾರ ಮಾಡಿ ಅವರಿಂದ ಆಶೀರ್ವಾದವನ್ನು ಪಡೆದುಕೊಂಡನು. ॥ ೨೮ ॥ ಇದಾದ ಬಳಿಕ ಆ ಶ್ರೇಷ್ಠ ವಿಮಾನವನ್ನು ಪೂಜಿಸಿ, ಪ್ರದಕ್ಷಿಣೆ ಬಂದು, ಶ್ರೀವಿಷ್ಣು ಪಾರ್ಷದರಿಗೆ ಪ್ರಣಾಮ ಮಾಡಿ, ಚಿನ್ನದಂತೆ ಥಳ-ಥಳಿಸುತ್ತಿದ್ದ ದಿವ್ಯರೂಪವನ್ನುತಾಳಿ ಅದನ್ನು ಹತ್ತಲು ಸಿದ್ಧನಾದನು. ॥ ೨೯ ॥ ಅಷ್ಟರಲ್ಲಿ ಮೃತ್ಯುದೇವತೆಯು ಬಂದು ಧ್ರುವನಿಗೆ ವಂದಿಸಿಕೊಂಡನು. ಆಗ ಧ್ರುವನು ಮೃತ್ಯುವಿನ ತಲೆಯ ಮೇಲೆ ಕಾಲಿಟ್ಟು ■ ಅದ್ಭುತವಾದ ವಿಮಾನವನ್ನು ಏರಿದನು. ॥ ೩೦ ॥ ಆಗ ಆಕಾಶದಲ್ಲಿ ದುಂದುಭಿಗಳು, ಮೃದಂಗ, ಮದ್ದಲೆ ಮುಂತಾದ ವಾದ್ಯಗಳು ಮೊಳಗಿದವು. ಗಂಧರ್ವಶ್ರೇಷ್ಠರು ಗಾನಮಾಡತೊಡಗಿದರು. ಪುಷ್ಪಗಳ ಮಳೆ ಸುರಿಯತೊಡಗಿತು. ॥ ೩೧ ॥

ಹೀಗೆ ವಿಮಾನದಲ್ಲಿ ಕುಳಿತು ಭಗವಂತನ ಧಾಮಕ್ಕೆ ಹೋಗಲು ಸಿದ್ಧನಾಗುತ್ತಿದ್ದಾಗ ಧ್ರುವನಿಗೆ ಇದ್ದಕ್ಕಿದ್ದಂತೆ ತನ್ನ ತಾಯಿಯಾದ

ಸ ಚ ಸ್ವರ್ಲೋಕಮಾರೋಕ್ಷ್ಯನ್ ಸುನೀತಿಂ ಜನನೀಂ ಧ್ರುವಃ ।
ಅನ್ವಸ್ಮರದಗಂ ಹಿತ್ವಾ ದೀನಾಂ ಯಾಸ್ಯೇ ತ್ರಿವಿಷ್ಟಪಮ್
॥ ೩೨ ॥

ಇತಿ ವ್ಯವಸಿತಂ ತಸ್ಯ ವ್ಯವಸಾಯ ಸುರೋತ್ತಮೌ ।
ದರ್ಶಯಾಮಾಸತುರ್ದೇವೀಂ ಪುರೋ ಯಾನೇನ ಗಚ್ಛತೀಮ್
॥ ೩೩ ॥

ತತ್ರ ತತ್ರ ಪ್ರಶಂಸದ್ಭಿಃ ಪಥಿ ವೈಮಾನಿಕೈಃ ಸುರೈಃ ।
ಅವಕೀರ್ಯಮಾಣೋ ದದೃಶೇ ಕುಸುಮೈಃ ಕ್ರಮಶೋ ಗ್ರಹಾನ್
॥ ೩೪ ॥

ತ್ರಿಲೋಕೀಂ ದೇವಯಾನೇನ ಸೋಽತಿವ್ರಜ್ಯ ಮುನೀನಪಿ ।
ಪರಸ್ತಾದ್ಯದ್ಧ್ರುವಗತಿರ್ವಿಷ್ಣೋಃ ಪದಮಥಾಭ್ಯಗಾತ್
॥ ೩೫ ॥

ಯದ್ಭ್ರಾಜಮಾನಂ ಸ್ವರುಚೈವ ಸರ್ವತೋ
ಲೋಕಾಸ್ತ್ರಯೋ ಹ್ಯನು ವಿಭ್ರಾಜಂತ ಏತೇ ।
ಯನ್ನಾವ್ರಜಂಜಂತುಷು ಯೇಽನನುಗ್ರಹಾ
ವ್ರಜಂತಿ ಭದ್ರಾಣಿ ಚರಂತಿ ಯೇಽನಿಶಮ್ ॥ ೩೬ ॥

ಶಾಂತಾಃ ಸಮದೃಶಃ ಶುದ್ಧಾಃ ಸರ್ವಭೂತಾನುರಂಜನಾಃ ।
ಯಾಂತ್ಯಂಜಸಾಚ್ಯುತಪದಮಚ್ಯುತಪ್ರಿಯಬಾಂಧವಾಃ
॥ ೩೭ ॥

ಇತ್ಯುತ್ತಾನಪದಃ ಪುತ್ರೋ ಧ್ರುವಃ ಕೃಷ್ಣಪರಾಯಣಃ ।
ಅಭೂತ್ತ್ರಯಾಣಾಂ ಲೋಕಾನಾಂ ಚೂಡಾಮಣಿರಿವಾಮಲಃ
॥ ೩೮ ॥

ಗಂಭೀರವೇಗೋಽನಿಮಿಷಂ ಜ್ಯೋತಿಷಾಂ ಚಕ್ರಮಾಹಿತಮ್ ।
ಯಸ್ಮಿನ್ ಭ್ರಮತಿ ಕೌರವ್ಯ ಮೇಢ್ಯಾಮಿವ ಗವಾಂ ಗಣಃ
॥ ೩೯ ॥

ಮಹಿಮಾನಂ ವಿಲೋಕ್ಯಾಸ್ಯ ನಾರದೋ ಭಗವಾನೃಷಿಃ ।
ಆತೋದ್ಯಂ ವಿತುದನ್ ಶ್ಲೋಕಾನ್ಸತ್ರೇಽಗಾಯತ್ಪ್ರಚೇತಸಾಮ್
॥ ೪೦ ॥

ನಾರದ ಉವಾಚ

ನೂನಂ ಸುನೀತೇಃ ಪತಿದೇವತಾಯಾ-
ಸ್ತಪಃಪ್ರಭಾವಸ್ಯ ಸುತಸ್ಯ ತಾಂ ಗತಿಮ್ ।
ದೃಷ್ಟ್ವಾಭ್ಯುಪಾಯಾನಪಿ ವೇದವಾದಿನೋ
ನೈವಾಧಿಗಂತುಂ ಪ್ರಭವಂತಿ ಕಿಂ ನೃಪಾಃ ॥ ೪೧ ॥

ಸುನೀತಿಯ ನೆನಪಾಯಿತು. 'ದೀನಳಾಗಿರುವ ನನ್ನ ತಾಯಿಯನ್ನು ಬಿಟ್ಟು ನಾನೊಬ್ಬನೇ ದುರ್ಲಭವಾದ ವಿಷ್ಣುಧಾಮಕ್ಕೆ ಹೇಗೆ ಹೋಗಲಿ?' ಎಂದು ಯೋಚಿಸತೊಡಗಿದನು. ॥ ೩೨ ॥ ಧ್ರುವನ ಮನಸ್ಸಿನ ಮಾತನ್ನು ಅರಿತ ನಂದ-ಸುನಂದರು ಆತನಿಗೆ – 'ಅದೋ ನೋಡು! ನಿನ್ನ ತಾಯಿ ಸುನೀತಿದೇವಿಯು ಬೇರೊಂದು ವಿಮಾನದಲ್ಲಿ ಕುಳಿತು ಮುಂದೆ-ಮುಂದೆ ಹೋಗುತ್ತಿದ್ದಾಳೆ' ಎಂದು ತೋರಿಸಿದರು. ॥ ೩೩ ॥ ಆತನು ಕ್ರಮವಾಗಿ ಸೂರ್ಯನೇ ಮುಂತಾದ ಗ್ರಹಗಳನ್ನು ನೋಡಿದನು. ಮಾರ್ಗದಲ್ಲಿ ಅಲ್ಲಲ್ಲಿ ವಿಮಾನಗಳಲ್ಲಿ ಕುಳಿತಿದ್ದ ದೇವತೆಗಳು ಆತನನ್ನು ಪ್ರಶಂಸಿಸುತ್ತಾ ಹೂವಿನ ಮಳೆಯನ್ನು ಸುರಿಸುತ್ತಾ ಹೋಗುತ್ತಿದ್ದರು. ॥ ೩೪ ॥ ಆ ದಿವ್ಯವಾದ ವಿಮಾನದಲ್ಲಿ ಕುಳಿತ ಧ್ರುವನು ಮೂರು ಲೋಕಗಳನ್ನೂ ದಾಟಿ, ಸಪ್ತರ್ಷಿಮಂಡಲದಿಂದಲೂ ಮೇಲಿರುವ ಭಗವಾನ್ ಶ್ರೀವಿಷ್ಣುವಿನ ಧ್ರುವವಾದ ಧಾಮವನ್ನು ತಲುಪಿ, ನಿತ್ಯವಾದ ಗತಿಯನ್ನು ಪಡೆದನು. ॥ ೩೫ ॥ ಈ ದಿವ್ಯಧಾಮವು ತನ್ನ ಪ್ರಕಾಶದಿಂದಲೇ ಬೆಳಗುತ್ತಿದೆ. ಇದರ ಪ್ರಕಾಶದಿಂದಲೇ ಮೂರೂ ಲೋಕಗಳು ಬೆಳಗುತ್ತಿವೆ. ಜೀವಿಗಳ ಮೇಲೆ ದಯಾರಹಿತರಾದ ಜನರು ಅಲ್ಲಿಗೆ ತಲುಪಲಾರರು. ಪ್ರತಿದಿನವೂ ಪ್ರಾಣಿಗಳ ಕಲ್ಯಾಣಕ್ಕಾಗಿ ಶುಭಕರ್ಮಗಳನ್ನು ಮಾಡುವಂತಹ ಸುಕೃತಿಗಳೇ ಅಲ್ಲಿಗೆ ಹೋಗಬಲ್ಲರು. ॥ ೩೬ ॥ ಶಾಂತರಾಗಿ, ಸಮದರ್ಶಿಗಳಾಗಿ, ಶುದ್ಧರಾಗಿ, ಎಲ್ಲ ಪ್ರಾಣಿಗಳನ್ನೂ ಪ್ರಸನ್ನಗೊಳಿಸುವವರಾದ, ಭಗವದ್ಭಕ್ತರನ್ನು ಮಾತ್ರವೇ ತಮ್ಮ ಪರಮಾತ್ಮ ಬಂಧು-ಮಿತ್ರರನ್ನಾಗಿ ತಿಳಿಯುವಂತಹ ಮಹಾತ್ಮರು ಮಾತ್ರ ಸುಲಭವಾಗಿ ಈ ಭಗವದ್ಧಾಮವನ್ನು ಪಡೆಯುತ್ತಾರೆ. ॥ ೩೭ ॥

ಈ ರೀತಿಯಲ್ಲಿ ಭಾಗವತೋತ್ತಮನಾದ ಉತ್ತಾನಪಾದನ ಪುತ್ರ ಧ್ರುವನು ಮೂರೂ ಲೋಕಗಳಿಗೂ ಮೇಲ್ಗಡೆ ಅವುಗಳ ನಿರ್ಮಲ ಶಿರೋಭೂಷಣನಾಗಿ ವಿರಾಜಿಸತೊಡಗಿದನು. ॥ ೩೮ ॥ ಕುರುಕುಲನಂದನಾ! ಮೇಟಿಯ ಕಂಭವನ್ನು ಎತ್ತುಗಳು ಸುತ್ತಲೂ ಸುತ್ತುವಂತೆ ಗಂಭೀರವಾದ ವೇಗವುಳ್ಳ ಜ್ಯೋತಿಶ್ಚಕ್ರವು ಆ ಅವಿನಾಶಿಯಾದ ಧ್ರುವಧಾಮವನ್ನೇ ಆಶ್ರಯಿಸಿ ಅದನ್ನು ಸದಾ ಸುತ್ತುತ್ತಿರುತ್ತದೆ. ॥ ೩೯ ॥ ಅದರ ಮಹಿಮೆಯನ್ನು ನೋಡಿ ದೇವಋಷಿ ನಾರದರು ಪ್ರಚೇತಸರ ಯಜ್ಞಶಾಲೆಯಲ್ಲಿ ವೀಣೆಯನ್ನು ನುಡಿಸುತ್ತಾ ಈ ಮೂರು ಶ್ಲೋಕಗಳನ್ನು ಹಾಡಿದರು. ॥ ೪೦ ॥

ಶ್ರೀನಾರದರು ಹೇಳಿದ್ದು – ಪತಿಪರಾಯಣಳಾದ ಸುನೀತಿಯ ಪುತ್ರನಾದ ಧ್ರುವನು ತಪಸ್ಸನ್ನಾಚರಿಸಿ ಅದರ ಪ್ರಭಾವದಿಂದ ಅದ್ಭುತವಾದ ಗತಿಯನ್ನು ಗಳಿಸಿದ್ದನು. ಅದನ್ನು ಭಾಗವತ ಧರ್ಮಗಳನ್ನು ವಿಮರ್ಶೆಮಾಡಿ ವೇದವಾದಿಗಳಾದ ಮುನಿಗಳೂ ಕೂಡ ಪಡೆಯಲಾರರು. ಇದರಲ್ಲಿ ಸಂದೇಹವೇ ಇಲ್ಲ. ಹೀಗಿರುವಾಗ ಸಾಧಾರಣ ಉಳಿದ ರಾಜರ ಮಾತೇನು! ॥ ೪೧ ॥ ಆಹಾ! ಆತನು ಕೇವಲ ಐದು ವರ್ಷದ ವಯಸ್ಸಿನಲ್ಲಿಯೇ ಮಲತಾಯಿಯ ವಾಗ್ಬಾಣಗಳಿಂದ ನೊಂದು ದುಃಖಿತನಾದ ಹೃದಯದಿಂದ ಕಾಡಿಗೆ ತೆರಳಿದನು. ಅಲ್ಲಿ ನನ್ನ ಉಪದೇಶಕ್ಕನುಸಾರವಾಗಿ ಆಚರಣೆಗೈದು – ಭಕ್ತರ ಗುಣಗಳಿಂದ ಮಾತ್ರವೇ ವಶನಾಗುವ 'ಅಜಿತ' (ಯಾರಿಂದಲೂ ಜಯಿಸಲ್ಪಡದವನು)ನಾದ ಶ್ರೀಹರಿಯನ್ನು ಜಯಿಸಿಕೊಂಡಿದ್ದನು.

ಯಃ ಪಂಚವರ್ಷೋ ಗುರುದಾರವಾಕ್ಶರೈ-
ರ್ಭಿನ್ನೇನ ಯಾತೋ ಹೃದಯೇನ ದೂಯತಾ ।
ವನಂ ಮದಾದೇಶಕರೋಽಜಿತಂ ಪ್ರಭುಂ
ಜಿಗಾಯ ತದ್ಭಕ್ತಗುಣೈಃ ಪರಾಜಿತಮ್ ॥ ೪೨ ॥

ಯಃ ಕ್ಷತ್ರಬಂಧುರ್ಭುವಿ ತಸ್ಯಾಧಿರೂಢ-
ಮನ್ವಾರುರುಕ್ಷೇದಪಿ ವರ್ಷಪೂಗೈಃ ।
ಷಟ್ಪಂಚವರ್ಷೋ ಯದಹೋಭಿರಲ್ಪೈಃ
ಪ್ರಸಾದ್ಯ ವೈಕುಂಠಮವಾಪ ತತ್ಪದಮ್ ॥ ೪೩ ॥

ಮೈತ್ರೇಯ ಉವಾಚ

ಏತತ್ತೇಽಭಿಹಿತಂ ಸರ್ವಂ ಯತ್ಪೃಷ್ಟೋಽಹಮಿಹ ತ್ವಯಾ ।
ಧ್ರುವಸ್ಯೋದ್ದಾಮಯಶಸಶ್ಚರಿತಂ ಸಮ್ಮತಂ ಸತಾಮ್ ॥ ೪೪ ॥

ಧನ್ಯಂ ಯಶಸ್ಯಮಾಯುಷ್ಯಂ ಪುಣ್ಯಂ ಸ್ವಸ್ತ್ಯಯನಂ ಮಹತ್ ।
ಸ್ವರ್ಗ್ಯಂ ಧ್ರೌವ್ಯಂ ಸೌಮನಸ್ಯಂ ಪ್ರಶಸ್ಯಮಘಮರ್ಷಣಮ್ ॥ ೪೫ ॥

ಶ್ರುತ್ವೈತಚ್ಛ್ರದ್ಧಯಾಭೀಕ್ಷ್ಣಮಚ್ಯುತಪ್ರಿಯಚೇಷ್ಟಿತಮ್ ।
ಭವೇದ್ಭಕ್ತಿರ್ಭಗವತಿ ಯಯಾ ಸ್ಯಾತ್ ಕ್ಲೇಶಸಂಕ್ಷಯಃ ॥ ೪೬ ॥

ಮಹತ್ತ್ವಮಿಚ್ಛತಾಂ ತೀರ್ಥಂ
ಶ್ರೋತುಃ ಶೀಲಾದಯೋ ಗುಣಾಃ ।
ಯತ್ರ ತೇಜಸ್ತದಿಚ್ಛೂನಾಂ
ಮಾನೋ ಯತ್ರ ಮನಸ್ವಿನಾಮ್ ॥ ೪೭ ॥

ಪ್ರಯತಃ ಕೀರ್ತಯೇತ್ಪ್ರಾತಃ ಸಮವಾಯೇ ದ್ವಿಜನ್ಮನಾಮ್ ।
ಸಾಯಂ ಚ ಪುಣ್ಯಶ್ಲೋಕಸ್ಯ ಧ್ರುವಸ್ಯ ಚರಿತಂ ಮಹತ್ ॥ ೪೮ ॥

ಪೌರ್ಣಮಾಸ್ಯಾಂ ಸಿನೀವಾಲ್ಯಾಂ ದ್ವಾದಶ್ಯಾಂ ಶ್ರವಣೇಽಥವಾ ।
ದಿನಕ್ಷಯೇ ವ್ಯತೀಪಾತೇ ಸಂಕ್ರಮೇಽರ್ಕದಿನೇಽಪಿ ವಾ ॥ ೪೯ ॥

ಶ್ರಾವಯೇಚ್ಛ್ರದ್ದಧಾನಾನಾಂ ತೀರ್ಥಪಾದಪದಾಶ್ರಯಃ ।
ನೇಚ್ಛಂಸ್ತತ್ರಾತ್ಮನಾಽಽತ್ಮಾನಂ ಸಂತುಷ್ಟ ಇತಿ ಸಿಧ್ಯತಿ ॥ ೫೦ ॥

ಜ್ಞಾನಮಜ್ಞಾತತತ್ತ್ವಾಯ ಯೋ ದದ್ಯಾತ್ಸತ್ಪಥೇಽಮೃತಮ್ ।
ಕೃಪಾಲೋರ್ದೀನನಾಥಸ್ಯ ದೇವಾಸ್ತಸ್ಯಾನುಗೃಹ್ಣತೇ ॥ ೫೧ ॥

ಇದಂ ಮಯಾ ತೇಽಭಿಹಿತಂ ಕುರೂದ್ವಹ
ಧ್ರುವಸ್ಯ ವಿಖ್ಯಾತವಿಶುದ್ಧಕರ್ಮಣಃ ।
ಹಿತ್ವಾರ್ಭಕಃ ಕ್ರೀಡನಕಾನಿ ಮಾತು-
ರ್ಗೃಹಂ ಚ ವಿಷ್ಣುಂ ಶರಣಂ ಯೋ ಜಗಾಮ ॥ ೫೨ ॥

॥ ೪೨ ॥ ನಮ್ಮ ಈ ಧ್ರುವಸಾರ್ವಭೌಮನು ಐದಾರು ವರ್ಷದ ಬಾಲಕನಾಗಿದ್ದಾಗಲೇ ಕೆಲವೇ ದಿನಗಳ ತಪಸ್ಸಿನಿಂದ ಶ್ರೀಭಗವಂತನನ್ನು ಒಲಿಸಿ ಪರಮಪದವನ್ನು ಪಡೆದುಕೊಂಡನು. ಅಂತಹ ಪರಮ ಪದವನ್ನು ಅನೇಕ ವರ್ಷಗಳ ಕಾಲ ತಪಸ್ಸನ್ನು ಮಾಡಿದರೂ ಬೇರಾವ ಕ್ಷತ್ರಿಯನು ಪಡೆಯಬಲ್ಲನು? ॥ ೪೩ ॥

ಶ್ರೀಮೈತ್ರೇಯರು ಹೇಳುತ್ತಾರೆ – ಎಲೈ ವಿದುರನೇ! ನೀನು ಕೇಳಿಕೊಂಡಂತೆ ನಾನು ಉದಾರ ಕೀರ್ತಿಯುಳ್ಳ ಧ್ರುವನ ಚರಿತ್ರೆಯನ್ನು ಪೂರ್ಣವಾಗಿ ತಿಳಿಸಿರುವೆನು. ಸಾಧು-ಸಜ್ಜನರು ಈ ಚರಿತ್ರವನ್ನು ತುಂಬಾ ಪ್ರಶಂಸಿಸುತ್ತಾರೆ. ॥ ೪೪ ॥ ಇದು ಸಂಪತ್ತನ್ನೂ, ಯಶಸ್ಸನ್ನೂ, ಆಯುಸ್ಸನ್ನೂ, ವೃದ್ಧಿಪಡಿಸುವ ಪರಮ ಪವಿತ್ರ ಮಂಗಳಕರವಾದ ಕಥೆಯಾಗಿದೆ. ಇದರಿಂದ ಸ್ವರ್ಗ ಮತ್ತು ಅವಿನಾಶಿಯಾದ ಪದವೂ ದೊರೆಯಬಲ್ಲದು. ದೇವತ್ವವನ್ನೂ ನೀಡಬಲ್ಲದು. ಬಹಳ ಪ್ರಶಂಸನೀಯವಾಗಿದ್ದು ಸಮಸ್ತ ಪಾಪಗಳನ್ನು ನಾಶಮಾಡುವಂತಹುದು. ॥ ೪೫ ॥ ಭಗವದ್ಭಕ್ತನಾದ ಧ್ರುವನ ಈ ಪವಿತ್ರ ಚರಿತ್ರವನ್ನು ಶ್ರದ್ಧೆಯಿಂದ ಪದೇ-ಪದೇ ಕೇಳುವವನಿಗೆ ಶ್ರೀಭಗವಂತನ ಭಕ್ತಿಯು ಪ್ರಾಪ್ತವಾಗುತ್ತದೆ. ಅದರಿಂದ ಅವನ ಎಲ್ಲ ದುಃಖಗಳು ನಾಶವಾಗಿ ಹೋಗುತ್ತವೆ. ॥ ೪೬ ॥ ಇದನ್ನು ಶ್ರವಣಿಸುವವನಿಗೆ ಶೀಲವೇ ಮುಂತಾದ ಗುಣಗಳು ಲಭಿಸುವುವು. ಮಹತ್ತ್ವವನ್ನು ಬಯಸುವವರಿಗೆ ಅತಿ ಮಹತ್ವದ ಸ್ಥಾನವು ದೊರೆಯುವುದು. ತೇಜಸ್ಸನ್ನು ಬಯಸುವವರಿಗೆ ತೇಜಸ್ಸು, ಮಾನವನ್ನು ಅಪೇಕ್ಷಿಸುವ ಮನಸ್ವಿಗಳಿಗೆ ಒಳ್ಳೆಯ ಮಾನವೂ ಸಿಗುವುದು. ॥ ೪೭ ॥ ಪವಿತ್ರಕೀರ್ತಿ ಧ್ರುವನ ಈ ಮಹಾನ್ ಚರಿತ್ರವನ್ನು ಪ್ರಾತಃಕಾಲ ಮತ್ತು ಸಾಯಂಕಾಲಗಳಲ್ಲಿ ಸತ್ಪುರುಷರ ಸಮಾಜದಲ್ಲಿ ಏಕಾಗ್ರವಾದ ಮನಸ್ಸಿನಿಂದ ಕೀರ್ತನೆ ಮಾಡಬೇಕು. ॥ ೪೮ ॥ ಶ್ರೀಭಗವಂತನ ಪವಿತ್ರವಾದ ಪಾದಾರವಿಂದಗಳನ್ನು ಆಶ್ರಯಿಸಿರುವ ಭಕ್ತನು ಇದನ್ನು ನಿಷ್ಕಾಮಭಾವದಿಂದ ಪೂರ್ಣಿಮೆ, ಅಮಾವಾಸ್ಯೆ, ದ್ವಾದಶೀ, ಶ್ರವಣಾನಕ್ಷತ್ರ, ತಿಥಿಕ್ಷಯ, ವ್ಯತೀಪಾತ, ಸಂಕ್ರಾಂತಿ ಅಥವಾ ಭಾನುವಾರಗಳಂದು ಶ್ರದ್ಧಾಳುಗಳಾದ ಸಜ್ಜನರಿಗೆ ಶ್ರವಣ ಮಾಡಿಸಿ ಸ್ವತಃ ಆತ್ಮನಲ್ಲೇ ಸಂತುಷ್ಟನಾಗಿ, ಸಿದ್ಧನಾಗಿ ಹೋಗುತ್ತಾನೆ. ॥ ೪೯-೫೦ ॥ ತತ್ತ್ವವನ್ನು ಅರಿಯದ ಅಜ್ಞಾನಿಗಳಿಗೆ ಈ ಜ್ಞಾನಾಮೃತವನ್ನು ದಾನಮಾಡುವಂತಹ ಕರುಣಾಳುವೂ, ದೀನವತ್ಸಲನೂ ಆದ ಸುಕೃತಿಯ ಮೇಲೆ ದೇವತೆಗಳು ಅನುಗ್ರಹವನ್ನು ಮಾಡುವರು. ॥ ೫೧ ॥

ಕುರುಕುಲಚೂಡಾಮಣಿಯಾದ ವಿದುರನೇ! ಧ್ರುವನು ಮಾಡಿದ ಪರಮ ಪರಿಶುದ್ಧವಾದ ಕರ್ಮವು ಎಲ್ಲೆಡೆಗಳಲ್ಲಿಯೂ ಪ್ರಸಿದ್ಧವಾಗಿದೆ. ಬಾಲ್ಯದಲ್ಲಿಯೇ ಅವನು ತಾಯಿ, ಮನೆ, ಆಟಿಕೆ ಮುಂತಾದವುಗಳ ಮೋಹವನ್ನು ತೊರೆದು ಭಗವಾನ್ ಮಹಾವಿಷ್ಣುವನ್ನು ಶರಣುಹೊಂದಿದ್ದನು. ಅವನ ಈ ಪವಿತ್ರವಾದ ಚರಿತ್ರವನ್ನು ನಾನು ನಿನಗೆ ತಿಳಿಸಿರುವೆನು. ॥ ೫೨ ॥

ಹನ್ನೆರಡನೆಯ ಅಧ್ಯಾಯವು ಮುಗಿಯಿತು. ॥ ೧೨ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಚತುರ್ಥಸ್ಕಂಧೇ ಧ್ರುವಚರಿತಂ ನಾಮ ದ್ವಾದಶೋಽಧ್ಯಾಯಃ ॥ ೧೨ ॥

ಹದಿಮೂರನೆಯ ಅಧ್ಯಾಯ

ಧ್ರುವನ ವಂಶದ ವರ್ಣನೆ – ಅಂಗಮಹಾರಾಜನ ಚರಿತ್ರೆ

ಸೂತ ಉವಾಚ

**ನಿಶಮ್ಯ ಕೌಷಾರವಿಣೋಪವರ್ಣಿತಂ
ಧ್ರುವಸ್ಯ ವೈಕುಂಠ ಪದಾಧಿರೋಹಣಮ್ ।
ಪ್ರರೂಢಭಾವೋ ಭಗವತ್ಯಧೋಕ್ಷಜೇ
ಪ್ರಷ್ಟುಂ ಪುನಸ್ತಂ ವಿದುರಃ ಪ್ರಚಕ್ರಮೇ ॥ ೧ ॥**

ವಿದುರ ಉವಾಚ

**ಕೇ ತೇ ಪ್ರಚೇತಸೋ ನಾಮ ಕಸ್ಯಾಪತ್ಯಾನಿ ಸುವ್ರತ ।
ಕಸ್ಯಾನ್ವವಾಯೇ ಪ್ರಖ್ಯಾತಾಃ ಕುತ್ರ ವಾ ಸತ್ರಮಾಸತ ॥ ೨ ॥**

**ಮನ್ಯೇ ಮಹಾಭಾಗವತಂ ನಾರದಂ ದೇವದರ್ಶನಮ್ ।
ಯೇನ ಪ್ರೋಕ್ತಃ ಕ್ರಿಯಾಯೋಗಃ ಪರಿಚರ್ಯಾವಿಧಿರ್ಹರೇಃ ॥ ೩ ॥**

**ಸ್ವಧರ್ಮಶೀಲೈಃ ಪುರುಷೈರ್ಭಗವಾನ್ಯಜ್ಞಪೂರುಷಃ ।
ಇಜ್ಯಮಾನೋ ಭಕ್ತಿಮತಾ ನಾರದೇನೇರಿತಃ ಕಿಲ ॥ ೪ ॥**

**ಯಾಸ್ತಾ ದೇವರ್ಷಿಣಾ ತತ್ರ ವರ್ಣಿತಾ ಭಗವತ್ಕಥಾಃ ।
ಮಹ್ಯಂ ಶುಶ್ರೂಷವೇ ಬ್ರಹ್ಮನ್ಕಾರ್ತ್ಸ್ನ್ಯೇನಾಚಷ್ಟುಮರ್ಹಸಿ ॥ ೫ ॥**

ಮೈತ್ರೇಯ ಉವಾಚ

**ಧ್ರುವಸ್ಯ ಚೋತ್ಕಲಃ ಪುತ್ರಃ ಪಿತರಿ ಪ್ರಸ್ಥಿತೇ ವನಮ್ ।
ಸಾರ್ವಭೌಮಶ್ರಿಯಂ ನೈಚ್ಛದಧಿರಾಜಾಸನಂ ಪಿತುಃ ॥ ೬ ॥**

**ಸ ಜನ್ಮನೋಪಶಾಂತಾತ್ಮಾ ನಿಃಸಂಗಃ ಸಮದರ್ಶನಃ ।
ದದರ್ಶ ಲೋಕೇ ವಿತತಮಾತ್ಮಾನಂ ಲೋಕಮಾತ್ಮನಿ ॥ ೭ ॥**

**ಆತ್ಮಾನಂ ಬ್ರಹ್ಮ ನಿರ್ವಾಣಂ ಪ್ರತ್ಯಸ್ತಮಿತವಿಗ್ರಹಮ್ ।
ಅವಬೋಧರಸೈಕಾತ್ಮ್ಯಮಾನಂದಮನುಸಂತತಮ್ ॥ ೮ ॥**

**ಅವ್ಯವಚ್ಛಿನ್ನಯೋಗಾಗ್ನಿದಗ್ಧಕರ್ಮಮಲಾಶಯಃ ।
ಸ್ವರೂಪಮವರುಂಧಾನೋ ನಾತ್ಮನೋಽನ್ಯಂ ತದೈಕ್ಷತ ॥ ೯ ॥**

**ಜಡಾಂಧಬಧಿರೋನ್ಮತ್ತಮೂಕಾಕೃತಿರತನ್ಮತಿಃ ।
ಲಕ್ಷಿತಃ ಪಥಿ ಬಾಲಾನಾಂ ಪ್ರಶಾಂತಾರ್ಚಿರಿವಾನಲಃ ॥ ೧೦ ॥**

ಸೂತಪುರಾಣಿಕರು ಹೇಳುತ್ತಾರೆ – ಶೌನಕಾದಿ ಮಹರ್ಷಿಗಳೇ! ಪರಮಭಾಗವತೋತ್ತಮನಾದ ಧ್ರುವನು ವಿಷ್ಣುಪದವನ್ನು ಆರೂಢನಾದ ವೃತ್ತಾಂತವನ್ನು ಕೇಳಿ ವಿದುರನ ಹೃದಯದಲ್ಲಿ ಭಗವಾನ್ ಶ್ರೀವಿಷ್ಣುವಿನ ವಿಷಯದಲ್ಲಿ ಭಕ್ತಿಯು ಬೇರೂರಿತು. ಅವನು ಮತ್ತೆ ಶ್ರೀಮೈತ್ರೇಯರಲ್ಲಿ ಪ್ರಶ್ನಿಸತೊಡಗಿದನು. ॥ ೧ ॥

ವಿದುರನು ಕೇಳಿದನು – ಭಗವತ್ಪರಾಯಣರಾದ ಮುನಿಶ್ರೇಷ್ಠರೇ! ಈ ಪ್ರಚೇತಸರೆಂಬುವರು ಯಾರು? ಯಾರ ಪುತ್ರರು? ಯಾರ ವಂಶದಲ್ಲಿ ಪ್ರಸಿದ್ಧರಾಗಿದ್ದರು? ಅವರು ಎಲ್ಲಿ ಯಜ್ಞವನ್ನು ಮಾಡಿದ್ದರು? ॥ ೨ ॥ ಶ್ರೀಹರಿಯ ಆರಾಧನೆಯ ವಿಧಿಯಾಗಿರುವ ಪಾಂಚರಾತ್ರ ಆಗಮದ ಮೂಲಕ ಉಪದೇಶ ಮಾಡಿದ ದೇವರ್ಷಿ ನಾರದರು ದೇವದೇವನ ದರ್ಶನದಿಂದ ಕೃತಾರ್ಥರಾದ ಮಹಾಭಾಗವತೋತ್ತಮರು. ॥ ೩ ॥ ಪ್ರಚೇತಸರು ಸ್ವಧರ್ಮವನ್ನು ಆಚರಿಸುತ್ತಾ ಭಗವಂತನಾದ ಯಜ್ಞಪುರುಷನನ್ನು ಆರಾಧನೆ ಮಾಡುತ್ತಿದ್ದ ಸಮಯದಲ್ಲಿ ಭಕ್ತವರೇಣ್ಯರಾದ ಶ್ರೀನಾರದರು ಧ್ರುವನ ಗುಣಗಳನ್ನು ಗಾನ ಮಾಡಿದರೆಂದು ಹೇಳಿದರಲ್ಲ! ॥ ೪ ॥ ಬ್ರಾಹ್ಮಣಶ್ರೇಷ್ಠರೇ! ಆ ದೇವರ್ಷಿಗಳು ಅಲ್ಲಿ ಯಾವ-ಯಾವ ಭಗವತ್ಕಥೆಗಳನ್ನು ವರ್ಣಿಸಿದರು? ಎಂಬುದನ್ನು ನನಗೆ ಪೂರ್ಣವಾಗಿ ತಿಳಿಸಿರಿ. ಅವುಗಳನ್ನು ಕೇಳಬೇಕೆಂದು ನಾನು ಉತ್ಸುಕನಾಗಿದ್ದೇನೆ. ॥ ೫ ॥

ಶ್ರೀಮೈತ್ರೇಯರು ಹೇಳಿದರು – ಎಲೈ ವಿದುರನೇ! ಮಹಾರಾಜಾ ಧ್ರುವನು ವನಕ್ಕೆ ತೆರಳಿಹೋದ ಬಳಿಕ ಅವನ ಪುತ್ರ ಉತ್ಕಲನು ತನ್ನ ತಂದೆಯ ಸಾರ್ವಭೌಮಸಂಪತ್ತನ್ನೂ, ರಾಜ್ಯ ಸಿಂಹಾಸನವನ್ನೂ ಸ್ವೀಕರಿಸಲಿಲ್ಲ. ॥ ೬ ॥ ಅವನು ಹುಟ್ಟಿನಿಂದಲೇ ಪ್ರಶಾಂತಸ್ವಭಾವದವನೂ, ಆಸಕ್ತಿಶೂನ್ಯನೂ, ಸಮದರ್ಶಿಯೂ ಆಗಿದ್ದು ಸಮಸ್ತ ಲೋಕಗಳನ್ನು ತನ್ನ ಆತ್ಮನಲ್ಲಿಯೂ, ತನ್ನ ಆತ್ಮವನ್ನು ಸಮಸ್ತಲೋಕಗಳಲ್ಲಿಯೂ ಸ್ಥಿತವೆಂದು ನೋಡುತ್ತಿದ್ದನು. ॥ ೭ ॥ ಅವನ ಅಂತಃಕರಣದ ವಾಸನಾರೂಪವಾದ ಮಲವು ಅಖಂಡ ಯೋಗಾಗ್ನಿಯಿಂದ ಸುಟ್ಟುಹೋಗಿತ್ತು. ಅದಕ್ಕಾಗಿ ಅವನು ತನ್ನ ಆತ್ಮವನ್ನು ವಿಶುದ್ಧ ಜ್ಞಾನರಸದೊಂದಿಗೆ ಆನಂದಮಯನೂ, ಸರ್ವತ್ರವ್ಯಾಪ್ತನೂ ಆಗಿರುವನೆಂದು ಅಭಿನ್ನವಾಗಿ ನೋಡುತ್ತಿದ್ದನು. ಎಲ್ಲ ವಿಧದ ಭೇದಗಳಿಂದ ರಹಿತನಾದ ಪ್ರಶಾಂತಬ್ರಹ್ಮವೇ ತನ್ನ ಸ್ವರೂಪವೆಂದು ಅವನು ತಿಳಿಯುತ್ತಿದ್ದನು ಹಾಗೂ ತನ್ನ ಆತ್ಮನಿಗಿಂತ ಬೇರೆ ಏನೂ ಇಲ್ಲವೆಂದು ನೋಡುತ್ತಿದ್ದನು. ॥ ೮-೯ ॥ ಅವನು ಪೂರ್ಣಜ್ಞಾನಿಯಾಗಿದ್ದರೂ ಬೀದಿಗಳಲ್ಲಿ ಅಜ್ಞಾನಿಗಳಿಗೆ ಮೂರ್ಖನಂತೆಯೂ, ಕುರುಡನಂತೆಯೂ, ಕಿವುಡನಂತೆಯೂ, ಹುಚ್ಚನಂತೆಯೂ, ಮೂಗನಂತೆಯೂ ಕಂಡುಬರುತ್ತಿದ್ದನು. ॥ ೧೦ ॥

ಮತ್ವಾ ತಂ ಜಡಮುನ್ಮತ್ತಂ ಕುಲವೃದ್ಧಾಃ ಸಮಂತ್ರಿಣಃ ।
ವತ್ಸರಂ ಭೂಪತಿಂ ಚಕ್ರುರ್ಯವೀಯಾಂಸಂ ಭ್ರಮೇಃ ಸುತಮ್ ॥ ೧೧ ॥

ಸ್ವರ್ವೀಥಿರ್ವತ್ಸರಸ್ಯೇಷ್ಟಾ ಭಾರ್ಯಾಸೂತ ಷಡಾತ್ಮಜಾನ್ ।
ಪುಷ್ಪಾರ್ಣಂ ತಿಗ್ಮಕೇತುಂ ಚ ಇಷಮೂರ್ಜಂ ವಸುಂ ಜಯಮ್ ॥ ೧೨ ॥

ಪುಷ್ಪಾರ್ಣಸ್ಯ ಪ್ರಭಾ ಭಾರ್ಯಾ ದೋಷಾ ಚ ದ್ವೇ ಬಭೂವತುಃ ।
ಪ್ರಾತರ್ಮಧ್ಯಂದಿನಂ ಸಾಯಮಿತಿ ಹ್ಯಾಸನ್ ಪ್ರಭಾಸುತಾಃ ॥ ೧೩ ॥

ಪ್ರದೋಷೋ ನಿಶಿಥೋ ವ್ಯುಷ್ಟ ಇತಿ ದೋಷಾಸುತಾಸ್ತ್ರಯಃ ।
ವ್ಯುಷ್ಟಃ ಸುತಂ ಪುಷ್ಕರಿಣ್ಯಾಂ ಸರ್ವತೇಜಸಮಾದಧೇ ॥ ೧೪ ॥

ಸ ಚಕ್ಷುಃ ಸುತಮಾಕೂತ್ಯಾಂ ಪತ್ನ್ಯಾಂ ಮನುಮವಾಪ ಹ ।
ಮನೋರಸೂತ ಮಹಿಷೀ ವಿರಜಾನ್ನಡ್ವಲಾ ಸುತಾನ್ ॥ ೧೫ ॥

ಪುರುಂ ಕುತ್ಸಂ ತ್ರಿತಂ ದ್ಯುಮ್ನಂ ಸತ್ಯವಂತಮೃತಂ ವ್ರತಮ್ ।
ಅಗ್ನಿಷ್ಟೋಮಮತೀರಾತ್ರಂ ಪ್ರದ್ಯುಮ್ನಂ ಶಿಬಿಮುಲ್ಮುಕಮ್ ॥ ೧೬ ॥

ಉಲ್ಮುಕೋಽಜನಯತ್ಪುತ್ರಾನ್ಪುಷ್ಕರಿಣ್ಯಾಂ ಷಡುತ್ತಮಾನ್ ।
ಅಂಗಂ ಸುಮನಸಂ ಖ್ಯಾತಿಂ ಕ್ರತುಮಂಗಿರಸಂ ಗಯಮ್ ॥ ೧೭ ॥

ಸುನೀಥಾಂಗಸ್ಯ ಯಾ ಪತ್ನೀ ಸುಷುವೇ ವೇನಮುಲ್ಬಣಮ್ ।
ಯದ್ದೌಃಶೀಲ್ಯಾತ್ಸ ರಾಜರ್ಷಿರ್ನಿರ್ವಿಣ್ಣೋ ನಿರಗಾತ್ಪುರಾತ್ ॥ ೧೮ ॥

ಯಮಂಗ ಶೇಪುಃ ಕುಪಿತಾ ವಾಗ್ವಜ್ರಾ ಮುನಯಃ ಕಿಲ ।
ಗತಾಸೋಸ್ತಸ್ಯ ಭೂಯಸ್ತೇ ಮಮಂಥುರ್ದಕ್ಷಿಣಂ ಕರಮ್ ॥ ೧೯ ॥

ಅರಾಜಕೇ ತದಾ ಲೋಕೇ ದಸ್ಯುಭಿಃ ಪೀಡಿತಾಃ ಪ್ರಜಾಃ ।
ಜಾತೋ ನಾರಾಯಣಾಂಶೇನ ಪೃಥುರಾದ್ಯಃ ಕ್ಷಿತೀಶ್ವರಃ ॥ ೨೦ ॥

ವಿದುರ ಉವಾಚ

ತಸ್ಯ ಶೀಲನಿಧೇಃ ಸಾಧೋರ್ಬ್ರಹ್ಮಣ್ಯಸ್ಯ ಮಹಾತ್ಮನಃ ।
ರಾಜ್ಞಃ ಕಥಮಭೂದ್ದುಷ್ಟಾ ಪ್ರಜಾ ಯದ್ವಿಮನಾ ಯಯೌ ॥ ೨೧ ॥

ಕಿಂ ವಾಂಹೋ ವೇನ ಉದ್ದಿಶ್ಯ ಬ್ರಹ್ಮದಂಡಮಯೂಯುಜನ್ ।
ದಂಡವ್ರತಧರೇ ರಾಜ್ಞಿ ಮುನಯೋ ಧರ್ಮಕೋವಿದಾಃ ॥ ೨೨ ॥

ನಾವಧ್ಯೇಯಃ ಪ್ರಜಾಪಾಲಃ ಪ್ರಜಾಭಿರಘವಾನಪಿ ।
ಯದಸೌ ಲೋಕಪಾಲಾನಾಂ ಬಿಭರ್ತ್ಯೋಜಃ ಸ್ವತೇಜಸಾ ॥ ೨೩ ॥

ಆದ್ದರಿಂದ ರಾಜಕುಲದ ಹಿರಿಯರೂ, ಮಂತ್ರಿಗಳೂ ಆತನನ್ನು ಮೂರ್ಖನೆಂದೂ, ಹುಚ್ಚನೆಂದೂ ತಿಳಿದು ಆತನ ತಮ್ಮನಾದ ಭ್ರಮಿಪುತ್ರ ವತ್ಸರನನ್ನು ರಾಜನನ್ನಾಗಿಸಿದರು. ॥ ೧೧ ॥

ಮಹಾರಾಜಾ ವತ್ಸರನು ಪತ್ನಿಯಾದ ಸ್ವರ್ವೀಥಿಯಿಂದ ಪುಷ್ಪಾರ್ಣ, ತಿಗ್ಮಕೇತು, ಇಷ, ಊರ್ಜ, ವಸು ಮತ್ತು ಜಯ ಎಂಬ ಆರು ಪುತ್ರರನ್ನು ಪಡೆದನು. ॥ ೧೨ ॥ ಅವರಲ್ಲಿ ಪುಷ್ಪಾರ್ಣನಿಗೆ ಪ್ರಭಾ ಮತ್ತು ದೋಷಾ ಎಂಬ ಇಬ್ಬರು ಭಾರ್ಯೆಯರಿದ್ದರು. ಅವರಲ್ಲಿ ಪ್ರಭಾಗೆ ಪ್ರಾತಃ, ಮಧ್ಯಂದಿನ, ಸಾಯಂ ಎಂಬ ಮೂವರು ಪುತ್ರರು ಹುಟ್ಟಿದರು. ॥ ೧೩ ॥ ದೋಷಾಳಲ್ಲಿ ಪ್ರದೋಷ, ನಿಶಿಥ ಮತ್ತು ವ್ಯುಷ್ಟ ಎಂಬ ಮೂರು ಪುತ್ರರಾದರು. ಅವರಲ್ಲಿ ವ್ಯುಷ್ಟನು ತನ್ನ ಭಾರ್ಯೆಯಾದ ಪುಷ್ಕರಣಿಯಲ್ಲಿ ಸರ್ವತೇಜಸನೆಂಬ ಪುತ್ರನನ್ನು ಪಡೆದನು. ॥ ೧೪ ॥ ಅತನ ಪತ್ನಿಯಾದ ಆಕೂತಿಯಲ್ಲಿ ಚಕ್ಷುವೆಂಬ ಪುತ್ರನು ಹುಟ್ಟಿದನು. ಅವನೇ ಚಾಕ್ಷುಷ ಮನ್ವಂತರದಲ್ಲಿ ಮನು ಆದನು. ಚಕ್ಷುಮನುವಿನ ಪತ್ನೀ ನಡ್ವಲಾದೇವಿಯಲ್ಲಿ ಪುರು, ಕುತ್ಸ ತ್ರಿತ, ದ್ಯುಮ್ನ ಸತ್ಯವಾನ್, ಋತ, ವ್ರತ, ಅಗ್ನಿಷ್ಟೋಮ, ಅತಿರಾತ್ರ, ಪ್ರದ್ಯುಮ್ನ, ಶಿಬಿ ಮತ್ತು ಉಲ್ಮುಕ ಎಂಬ ಹನ್ನೆರಡು ಸತ್ತ್ವಗುಣೀ ಪುತ್ರರು ಜನಿಸಿದರು. ॥ ೧೫-೧೬ ॥ ಅವರಲ್ಲಿ ಉಲ್ಮುಕನು ತನ್ನ ಪತ್ನಿ ಪುಷ್ಕರಿಣಿಯಲ್ಲಿ ಅಂಗ, ಸುಮನಾ, ಖ್ಯಾತಿ, ಕ್ರತು, ಅಂಗಿರಾ, ಗಯ ಈ ಆರು ಉತ್ತಮ ಪುತ್ರರನ್ನು ಪಡೆದನು. ॥ ೧೭ ॥ ಅಂಗನ ಪತ್ನೀ ಸುನೀಥಾದೇವಿಯಲ್ಲಿ ವೇನನೆಂಬ ಅತಿದುಷ್ಟನಾದ ಪುತ್ರನು ಜನಿಸಿದನು. ಅವನ ದುಷ್ಟತೆಯಿಂದ ಉದ್ವಿಗ್ನನಾಗಿ ರಾಜರ್ಷಿ ಅಂಗನು ನಗರವನ್ನು ಬಿಟ್ಟು ಹೊರಟುಹೋಗಿದ್ದನು. ॥ ೧೮ ॥ ಪ್ರಿಯ ವಿದುರನೇ! ಮುನಿಗಳ ಮಾತುಗಳು ವಜ್ರದಂತೆ ಅಮೋಘವಾಗಿರುತ್ತವೆ. ಅವರು ಕುಪಿತರಾಗಿ ವೇನನನ್ನು ಶಪಿಸಿದ್ದರು. ವೇನನು ಸತ್ತುಹೋದಾಗ ಅರಾಜಕವಾದ ಆ ರಾಜ್ಯದಲ್ಲಿ ದರೋಡೆಕೋರರಿಂದ ಪ್ರಜೆಗಳಿಗೆ ತುಂಬಾ ಕಷ್ಟಗಳು ಆಗತೊಡಗಿದವು. ಇದನ್ನು ನೋಡಿ ಮುನಿಗಳು ವೇನನ ಬಲಗೈಯನ್ನು ಕಡೆದರು. ಅದರಿಂದ ಭಗವಾನ್ ವಿಷ್ಣುವಿನ ಅಂಶಾವತಾರವಾದ ಆದಿ ಸಾಮ್ರಾಟ ಮಹಾರಾಜಾ ಪೃಥು ಪ್ರಗಟಗೊಂಡನು. ॥ ೧೯-೨೦ ॥

ವಿದುರನು ಕೇಳಿದನು – ಮಹರ್ಷಿಗಳೇ! ಅಂಗಮಹಾರಾಜನಾದರೋ ಶೀಲಸಂಪನ್ನನೂ, ಸಾಧು ಸ್ವಭಾವದವನೂ, ಬ್ರಾಹ್ಮಣಭಕ್ತನೂ, ಮಹಾತ್ಮನೂ ಆಗಿದ್ದನು. ಅಂತಹವನಿಗೆ ರಾಜ್ಯವನ್ನು ಕೊಟ್ಟು ಅತನು ದುಃಖದಿಂದ ಕಾಡಿಗೆ ಹೋಗುವಂತೆ ಮಾಡಿದ ದುಷ್ಟಪುತ್ರನು ಹೇಗೆ ಹುಟ್ಟಿದನು? ॥ ೨೧ ॥ ತಪ್ಪಿತಸ್ಥರಿಗೆ ಶಿಕ್ಷೆಯನ್ನು ಕೊಡುವ ಅಧಿಕಾರದಲ್ಲಿದ್ದ ದಂಡಧಾರಿ ವೇನನಾದರೂ ಧರ್ಮಜ್ಞರಾದ ಮುನಿಶ್ರೇಷ್ಠರಿಂದ ಶಾಪರೂಪವಾದ ಬ್ರಹ್ಮದಂಡವನ್ನು ಪಡೆಯುವಂತಹ ಯಾವ ಅಪರಾಧವನ್ನು ಮಾಡಿದ್ದನು? ॥ ೨೨ ॥ ಪ್ರಜಾಪಾಲಕ ರಾಜನಿಂದ ಯಾವುದಾದರೂ ಪಾಪವು ಘಟಿಸಿದರೂ ಅವನನ್ನು ತಿರಸ್ಕರಿಸಬಾರದು ಎಂಬುದು ಪ್ರಜೆಯ ಧರ್ಮವಾಗಿದೆ. ಏಕೆಂದರೆ, ರಾಜನು ತನ್ನ ಪ್ರಭಾವದಿಂದ ಅಷ್ಟ ದಿಕ್ಪಾಲಕರ ತೇಜಸ್ಸನ್ನೇ ಧರಿಸುತ್ತಾನೆ. ॥ ೨೩ ॥

ಏತದಾಖ್ಯಾಹಿ ಮೇ ಬ್ರಹ್ಮನ್ ಸುನೀಥಾತ್ಮಜಚೇಷ್ಟಿತಮ್ ।
ಶ್ರದ್ದಧಾನಾಯ ಭಕ್ತಾಯ ತ್ವಂ ಪರಾವರವಿತ್ತಮಃ ॥ ೨೪ ॥

ಮೈತ್ರೇಯ ಉವಾಚ

ಅಂಗೋಽಶ್ವಮೇಧಂ ರಾಜರ್ಷಿರಾಜಹಾರ ಮಹಾಕ್ರತುಮ್ ।
ನಾಜಗ್ಮುರ್ದೇವತಾಸ್ತಸ್ಮಿನ್ನಾಹೂತಾ ಬ್ರಹ್ಮವಾದಿಭಿಃ ॥ ೨೫ ॥

ತಮೂಚುರ್ವಿಸ್ಮಿತಾಸ್ತತ್ರ ಯಜಮಾನಮಥರ್ತ್ವಿಜಃ ।
ಹವೀಂಷಿ ಹೂಯಮಾನಾನಿ ನ ತೇ ಗೃಹ್ಣಂತಿ ದೇವತಾಃ ॥ ೨೬ ॥

ರಾಜನ್ ಹವೀಂಷ್ಯದುಷ್ಟಾನಿ ಶ್ರದ್ಧಯಾಽಽಸಾದಿತಾನಿ ತೇ ।
ಛಂದಾಂಸ್ಯ ಯಾತಯಾಮಾನಿ ಯೋಜಿತಾನಿ ಧೃತವ್ರತೈಃ ॥ ೨೭ ॥

ನ ವಿದಾಮೇಹ ದೇವಾನಾಂ ಹೇಲನಂ ವಯಮಣ್ವಪಿ ।
ಯನ್ನ ಗೃಹ್ಣಂತಿ ಭಾಗಾನ್ಸ್ವಾನ್ಯೇ ದೇವಾಃ ಕರ್ಮಸಾಕ್ಷಿಣಃ ॥ ೨೮ ॥

ಮೈತ್ರೇಯ ಉವಾಚ

ಅಂಗೋ ದ್ವಿಜವಚಃ ಶ್ರುತ್ವಾ ಯಜಮಾನಃ ಸುದುರ್ಮನಾಃ ।
ತತ್ಪ್ರಷ್ಟುಂ ವ್ಯಸೃಜದ್ವಾಚಂ ಸದಸ್ಯಾಂಸ್ತದನುಜ್ಞಯಾ ॥ ೨೯ ॥

ನಾಗಚ್ಛಂತ್ಯಾಹುತಾ ದೇವಾ ನ ಗೃಹ್ಣಂತಿ ಗ್ರಹಾನಿಹ ।
ಸದಸಸ್ಪತಯೋ ಬ್ರೂತ ಕಿಮವದ್ಯಂ ಮಯಾ ಕೃತಮ್ ॥ ೩೦ ॥

ಸದಸಸ್ಪತಯ ಊಚುಃ

ನರದೇವೇಹ ಭವತೋ ನಾಘಂ ತಾವನ್ಮನಾಕ್ ಸ್ಥಿತಮ್ ।
ಅಸ್ತ್ಯೇಕಂ ಪ್ರಾಕ್ತನಮಘಂ ಯದಿಹೇದೃಕ್ತ್ವಮಪ್ರಜಃ ॥ ೩೧ ॥

ತಥಾ ಸಾಧಯ ಭದ್ರಂ ತೇ ಆತ್ಮಾನಂ ಸುಪ್ರಜಂ ನೃಪ ।
ಇಷ್ಟಸ್ತೇ ಪುತ್ರಕಾಮಸ್ಯ ಪುತ್ರಂ ದಾಸ್ಯತಿ ಯಜ್ಞಭುಕ್ ॥ ೩೨ ॥

ತಥಾ ಸ್ವಭಾಗಧೇಯಾನಿ ಗ್ರಹೀಷ್ಯಂತಿ ದಿವೌಕಸಃ ।
ಯದ್ಯಜ್ಞಪುರುಷಃ ಸಾಕ್ಷಾದಪತ್ಯಾಯ ಹರಿರ್ವೃತಃ ॥ ೩೩ ॥

ತಾಂಸ್ತಾನ್ಕಾಮಾನ್ ಹರಿರ್ದದ್ಯಾದ್ಯಾನ್ಯಾನ್ಕಾಮಯತೇ ಜನಃ ।
ಆರಾಧಿತೋ ಯಥೈವೈಷ ತಥಾ ಪುಂಸಾಂ ಫಲೋದಯಃ ॥ ೩೪ ॥

ಬ್ರಾಹ್ಮಣೋತ್ತಮರೇ! ನೀವು ಭೂತ-ಭವಿಷ್ಯದ ಮಾತುಗಳನ್ನು ತಿಳಿಯುವಂತಹ ಸರ್ವಶ್ರೇಷ್ಠರಾಗಿದ್ದೀರಿ. ಆದಕ್ಕಾಗಿ ನೀವು ಸುನೀಥೆಯ ಪುತ್ರನಾದ ವೇನನ ಎಲ್ಲ ವೃತ್ತಾಂತವನ್ನು ತಿಳಿಸಿರಿ. ನಾನು ನಿಮ್ಮ ಭಕ್ತನೂ, ಶ್ರದ್ಧಾಳುವೂ ಆಗಿರುವೆನು. ॥ ೨೪ ॥

ಶ್ರೀಮೈತ್ರೇಯರು ಹೇಳುತ್ತಾರೆ– ವಿದುರನೇ! ಒಮ್ಮೆ ರಾಜರ್ಷಿ ಅಂಗನು ಅಶ್ವಮೇಧ ಮಹಾಯಜ್ಞದ ಅನುಷ್ಠಾನ ಮಾಡಿದನು. ಅದರಲ್ಲಿ ವೇದವಾದಿಗಳಾದ ಬ್ರಾಹ್ಮಣರು ದೇವತೆಗಳನ್ನು ಆಹ್ವಾನಿಸಿದರೂ ಅವರು ತಮ್ಮ ಭಾಗವನ್ನು ಸ್ವೀಕರಿಸಲು ಬರಲಿಲ್ಲ. ॥ ೨೫ ॥ ಆಗ ಋತ್ವಿಜರು ಆಶ್ಚರ್ಯಚಕಿತರಾಗಿ ಯಜಮಾನನಾದ ಅಂಗಮಹಾರಾಜನನ್ನು ಕೇಳಿದರು – 'ರಾಜನೇ! ನಾವು ಆಹುತಿಗಳ ರೂಪದಲ್ಲಿ ಹೋಮಮಾಡುತ್ತಿರುವ ತುಪ್ಪವೇ ಮುಂತಾದ ನಿನ್ನ ಪದಾರ್ಥಗಳನ್ನು ದೇವತೆಗಳು ಸ್ವೀಕರಿಸುತ್ತಿಲ್ಲ. ॥ ೨೬ ॥ ನಿನ್ನ ಹೋಮಸಾಮಗ್ರಿಯು ದೂಷಿತವಾಗಿಲ್ಲವೆಂಬುದನ್ನು ನಾವು ತಿಳಿದಿರುವೆವು. ನೀನು ಅದನ್ನು ಬಹು ಶ್ರದ್ಧೆಯಿಂದಲೇ ಸಂಗ್ರಹಿಸಿರುವೆ. ವೇದಮಂತ್ರಗಳು ಯಾವ ರೀತಿಯಿಂದಲೂ ಬಲಹೀನವಾಗಿಲ್ಲ, ಏಕೆಂದರೆ, ಅವುಗಳನ್ನು ಪ್ರಯೋಗಿಸುವ ಋತ್ವಿಜರು ಎಲ್ಲ ವ್ರತ-ನಿಯಮಗಳನ್ನು ಪಾಲಿಸುತ್ತಿದ್ದಾರೆ. ॥ ೨೭ ॥ ಈ ಯಜ್ಞದಲ್ಲಿ ದೇವತೆಗಳ ತಿರಸ್ಕಾರವು ಕಿಂಚಿತ್ತಾದರೂ ಆದಂತೆ ಕಂಡುಬರುವುದಿಲ್ಲ. ಹೀಗಿದ್ದರೂ ಕರ್ಮಾಧ್ಯಕ್ಷರಾದ ದೇವತೆಗಳು ಏಕೆ ತಮ್ಮ ಭಾಗವನ್ನು ಸ್ವೀಕರಿಸದೇ ಹೋಗಿದ್ದಾರೆ?' ॥ ೨೮ ॥

ಶ್ರೀಮೈತ್ರೇಯರು ಹೇಳುತ್ತಾರೆ – ಋತ್ವಿಜರ ಮಾತುಗಳನ್ನು ಕೇಳಿ ಅಂಗರಾಜನ ಮನಸ್ಸು ಖಿನ್ನವಾಯಿತು. ಆಗ ಅವನು ಯಾಜಕರ ಅನುಮತಿಯನ್ನು ಪಡೆದು ಮೌನವನ್ನು ಮುರಿದು ಸದಸ್ಯರಲ್ಲಿ ಕೇಳಿದನು. ॥ ೨೯ ॥ 'ಎಲೈ ಸದಸ್ಯರೇ! ದೇವತೆಗಳು ಆವಾಹನೆ ಮಾಡಿದರೂ ಯಜ್ಞದಲ್ಲಿ ಏಕೆ ಬರುತ್ತಿಲ್ಲ! ತಮ್ಮ ಸೋಮಪಾತ್ರೆಗಳನ್ನೂ ಏಕೆ ಗ್ರಹಿಸುವುದಿಲ್ಲ! ನಾನು ಮಾಡಿದ ಅಪರಾಧ ಯಾವುದೂ ಇದೆ? ತಿಳಿಸಿರಿ.' ॥ ೩೦ ॥

ಸದಸ್ಯರು ಹೇಳಿದರು – ಎಲೈ ರಾಜನೇ! ಈ ಜನ್ಮದಲ್ಲಾದರೋ ನಿನ್ನಿಂದ ಯಾವ ಅಪರಾಧವೂ ನಡೆದಿಲ್ಲ. ಆದರೆ ಹಿಂದಿನ ಜನ್ಮದಲ್ಲಿ ನಿನ್ನಿಂದ ಒಂದು ಅಪರಾಧ ನಡೆದಿದೆ. ಅದರಿಂದಾಗಿ ನಿನ್ನಂತಹ ಸರ್ವಗುಣಸಂಪನ್ನನಾಗಿದ್ದರೂ ಪುತ್ರಹೀನನಾಗಿರುವೆ. ॥ ೩೧ ॥ ನಿನಗೆ ಮಂಗಳವಾಗಲಿ. ಅದಕ್ಕಾಗಿ ಚಿಂತಿಸಬೇಡ. ಮೊದಲಿಗೆ ನೀನು ಸತ್ಪುತ್ರನನ್ನು ಪಡೆಯುವ ಉಪಾಯವನ್ನು ಮಾಡು. ನೀನು ಪುತ್ರಪ್ರಾಪ್ತಿಯ ಬಯಕೆಯಿಂದ ಯಜ್ಞಮಾಡಿದರೆ ಭಗವಾನ್ ಯಜ್ಞೇಶ್ವರನು ನಿನಗೆ ನಿಶ್ಚಿತವಾಗಿ ಪುತ್ರನನ್ನು ಅನುಗ್ರಹಿಸುವನು. ॥ ೩೨ ॥ ಸಂತಾನಕ್ಕಾಗಿ ಸಾಕ್ಷಾತ್ ಯಜ್ಞಪುರುಷ ಶ್ರೀಹರಿಯನ್ನು ಆವಾಹನೆ ಮಾಡಿದಾಗ ದೇವತೆಗಳೂ ಕೂಡ ತಮ್ಮ-ತಮ್ಮ ಯಜ್ಞಭಾಗವನ್ನು ಸ್ವೀಕಾರಮಾಡುವರು. ॥ ೩೩ ॥ ಭಕ್ತರು ಬಯಸಿದ ವಸ್ತುವನ್ನು ಶ್ರೀಹರಿಯು ಕೊಡುತ್ತಾನೆ. ಯಾವ ವಿಧದಿಂದ ಅವನ ಆರಾಧನೆ ಮಾಡಲಾಗುತ್ತದೋ ಉಪಾಸಕನಿಗೆ ಅದೇ ಫಲವು ಸಿಗುವುದು.' ॥ ೩೪ ॥

ಇತಿ ವ್ಯವಸಿತಾ ವಿಪ್ರಾಸ್ತಸ್ಯ ರಾಜ್ಞಃ ಪ್ರಜಾತಯೇ ।
ಪುರೋಡಾಶಂ ನಿರವಪನ್ ಶಿಪಿವಿಷ್ಟಾಯ ವಿಷ್ಣವೇ ॥ ೩೫ ॥

ತಸ್ಮಾತ್ಪುರುಷ ಉತ್ತಸ್ಥೌ ಹೇಮಮಾಲ್ಯ ಮಲಾಂಬರಃ ।
ಹಿರಣ್ಮಯೇನ ಪಾತ್ರೇಣ ಸಿದ್ಧಮಾದಾಯ ಪಾಯಸಮ್ ॥ ೩೬ ॥

ಸ ವಿಪ್ರಾನುಮತೋ ರಾಜಾ ಗೃಹೀತ್ವಾಂಜಲಿನೌದನಮ್ ।
ಅವಘ್ರಾಯ ಮುದಾ ಯುಕ್ತಃ ಪ್ರಾದಾತ್ಪತ್ನ್ಯಾ ಉದಾರಧೀಃ ॥ ೩೭ ॥

ಸಾ ತತ್ಪುಂಸವನಂ ರಾಜ್ಞೀ ಪ್ರಾಶ್ಯ ವೈ ಪತ್ಯುರಾದಧೇ ।
ಗರ್ಭಂ ಕಾಲ ಉಪಾವೃತ್ತೇ ಕುಮಾರಂ ಸುಷುವೇಽಪ್ರಜಾ ॥ ೩೮ ॥

ಸ ಬಾಲ ಏವ ಪುರುಷೋ ಮಾತಾಮಹಮನುವ್ರತಃ ।
ಅಧರ್ಮಾಂಶೋದ್ಭವಂ ಮೃತ್ಯುಂ ತೇನಾಭವದಧಾರ್ಮಿಕಃ ॥ ೩೯ ॥

ಸ ಶರಾಸನಮುದ್ಯಮ್ಯ ಮೃಗಯುರ್ವನಗೋಚರಃ ।
ಹಂತ್ಯಸಾಧುರ್ಮೃಗಾನ್ ದೀನಾನ್ವೇನೋಽಸಾವಿತ್ಯರೌಜ್ಜನಃ ॥ ೪೦ ॥

ಆಕ್ರೀಡೇ ಕ್ರೀಡತೋ ಬಾಲಾನ್ವಯಸ್ಯಾನತಿದಾರುಣಃ ।
ಪ್ರಸಹ್ಯ ನಿರನುಕ್ರೋಶಃ ಪಶುಮಾರಮಮಾರಯತ್ ॥ ೪೧ ॥

ತಂ ವಿಚಕ್ಷ್ಯ ಖಲಂ ಪುತ್ರಂ ಶಾಸನೈರ್ವಿವಿಧೈರ್ನೃಪಃ ।
ಯದಾ ನ ಶಾಸಿತುಂ ಕಲ್ಪೋ ಭೃಶಮಾಸೀತ್ಸುದುರ್ಮನಾಃ ॥ ೪೨ ॥

ಪ್ರಾಯೇಣಾಭ್ಯರ್ಚಿತೋ ದೇವೋ
ಯೇಽಪ್ರಜಾ ಗೃಹಮೇಧಿನಃ ।
ಕದಪತ್ಯ ಭೃತಂ ದುಃಖಂ
ಯೇ ನ ವಿಂದಂತಿ ದುರ್ಭರಮ್ ॥ ೪೩ ॥

ಯತಃ ಪಾಪೀಯಸೀ ಕೀರ್ತಿರಧರ್ಮಶ್ಚ ಮಹಾನ್ನೃಣಾಮ್ ।
ಯತೋ ವಿರೋಧಃ ಸರ್ವೇಷಾಂ ಯತ ಆಧಿರನಂತಕಃ ॥ ೪೪ ॥

ಕಸ್ತಂ ಪ್ರಜಾಪದೇಶಂ ವೈ ಮೋಹಬಂಧನಮಾತ್ಮನಃ ।
ಪಂಡಿತೋ ಬಹು ಮನ್ಯೇತ ಯದರ್ಥಾಃ ಕ್ಲೇಶದಾ ಗೃಹಾಃ ॥ ೪೫ ॥

ಹೀಗೆ ಅಂಗರಾಜನಿಗೆ ಪುತ್ರನನ್ನು ದೊರಕಿಸಿಕೊಡುವ ನಿಶ್ಚಯ ಮಾಡಿ ಋತ್ವಿಜರು ಪಶುಗಳಲ್ಲಿ ಯಜ್ಞರೂಪದಲ್ಲಿ ನೆಲೆಗೊಂಡಿರುವ ಭಗವಾನ್ ಶ್ರೀವಿಷ್ಣುವಿನ ತೃಪ್ತಿಗಾಗಿ ಪುರೋಡಾಶವೆಂಬ ಚರುವನ್ನು ಸಮರ್ಪಣೆ ಮಾಡಿದರು. ॥ ೩೫ ॥

ಅಗ್ನಿಯಲ್ಲಿ ಆಹುತಿಯನ್ನು ಕೊಡುತ್ತಲೇ ಅಗ್ನಿಕುಂಡದಿಂದ ಸುವರ್ಣದ ಹಾರಗಳಿಂದಲೂ, ಶುಭ್ರವಾದ ವಸ್ತ್ರಗಳಿಂದಲೂ ವಿಭೂಷಿತನಾದ ಓರ್ವ ದಿವ್ಯ ಪುರುಷನು ಪ್ರಕಟಗೊಂಡನು. ಅವನು ಸಿದ್ಧವಾದ ಪಾಯಸವನ್ನು ಸ್ವರ್ಣಪಾತ್ರೆಯಲ್ಲಿ ಹಿಡಿದು ಕೊಂಡಿದ್ದನು. ॥ ೩೬ ॥ ಉದಾರಬುದ್ಧಿಯುಳ್ಳ ಅಂಗರಾಜನು ಯಾಜಕರ ಅನುಮತಿಯಿಂದ ತನ್ನ ಅಂಜಲಿಯಲ್ಲಿ ಆ ಪಾಯಸವನ್ನು ಸ್ವೀಕರಿಸಿ, ಸಂತೋಷದಿಂದ ಮೂಸಿನೋಡಿ ಅನಂತರ ಅದನ್ನು ತನ್ನ ಪತ್ನಿಗೆ ಕೊಟ್ಟನು. ॥ ೩೭ ॥ ಪುತ್ರಹೀನಳಾಗಿದ್ದ ಮಹಾರಾಣಿಯು ಆ ಪುತ್ರಪ್ರದಾಯಕವಾದ ಪಾಯಸವನ್ನು ತಿಂದು, ಗರ್ಭವನ್ನು ಧರಿಸಿದಳು. ಸಕಾಲದಲ್ಲಿ ಆಕೆಗೆ ಒಬ್ಬ ಪುತ್ರನು ಜನಿಸಿದನು. ॥ ೩೮ ॥ ಆ ಬಾಲಕನು ಅಧರ್ಮವಂಶದಲ್ಲಿ ಜನಿಸಿದ್ದರಿಂದ ತನ್ನ ಅಜ್ಜನಾದ ಮೃತ್ಯುವನ್ನೇ ಅನುಸರಿಸಿದ್ದರಿಂದ ತಾನೂ ಅಧಾರ್ಮಿಕ ನಾಗಿಯೇ ಬೆಳೆದನು. (ಸುನೀಥೆಯು ಮೃತ್ಯುವಿನ ಮಗಳಾಗಿದ್ದಳು.) ॥ ೩೯ ॥

ಆ ದುಷ್ಟನು ಧನುಷ್ಯ-ಬಾಣಗಳನ್ನು ಧರಿಸಿಕೊಂಡು ಕಾಡಿಗೆ ಹೋಗುತ್ತಿದ್ದನು. ಅಲ್ಲಿ ಬೇಡನಂತೆ ಬಡಪಾಯಿ ಸಾಧುಪ್ರಾಣಿಗಳಾದ ಜಿಂಕೆಗಳನ್ನು ಕೊಲ್ಲುತ್ತಿದ್ದನು. ಅವನನ್ನು ಕಂಡೊಡನೆ ಪುರಜನರು ವೇನ ಬಂದನು ! ವೇನ ಬಂದನು ! ಎಂದು ಕೂಗಿಕೊಳ್ಳುತ್ತಿದ್ದರು. ॥ ೪೦ ॥ ಅವನು ತನ್ನ ಜೊತೆಯಲ್ಲಿ ಆಟವಾಡುತ್ತಿದ್ದ ಸಮವಯಸ್ಸಿನ ಹುಡುಗರನ್ನು ಪಶುಗಳಂತೆ ಬಲಾತ್ಕಾರವಾಗಿ ಹಿಡಿದು ಕೊಂದುಬಿಡುವಷ್ಟು ಕ್ರೂರಿಯಾಗಿದ್ದನು. ॥ ೪೧ ॥ ತನ್ನ ಪುತ್ರನ ಈ ದುಷ್ಟ ಸ್ವಭಾವವನ್ನು ಕಂಡು ಅಂಗಮಹಾರಾಜನು ಆತನನ್ನು ಸರಿದಾರಿಗೆ ತರಲು ಬಗೆ-ಬಗೆಯ ಪ್ರಯತ್ನ ಮಾಡಿದನು. ಆದರೆ ಆತನನ್ನು ಹತೋಟಿಗೆ ತರಲು ಅಸಮರ್ಥನಾದಾಗ ಅವನಿಗೆ ತಡೆಯಲಾರದ ಸಂಕಟವಾಯಿತು. ॥ ೪೨ ॥ (ಅವನು ಮನಸ್ಸಿನಲ್ಲೇ ಹೀಗೆ ಅಂದುಕೊಂಡನು.) ಪುತ್ರಹೀನರಾದ ಗೃಹಸ್ಥರೇ ಬಹುಶಃ ಪುಣ್ಯಶಾಲಿಗಳು. ಅವರು ಹಿಂದಿನ ಜನ್ಮದಲ್ಲಿ ಶ್ರೀಹರಿಯನ್ನು ಆರಾಧನೆ ಮಾಡಿರಬೇಕು. ಆದರಿಂದಲೇ ಅವರಿಗೆ ಕುಪುತ್ರನು ಮಾಡುವ ಕುಕರ್ಮಗಳಿಂದುಂಟಾಗುವ ಅಸಹ್ಯ ಕ್ಲೇಶಗಳು ಅನುಭವಿಸುವ ಸಂದರ್ಭ ಬಂದಿಲ್ಲ. ॥ ೪೩ ॥ ಯಾರು ಮಾಡುವ ಕುಕರ್ಮಗಳಿಂದ ತಂದೆ-ತಾಯಿಗಳ ಕೀರ್ತಿಯು ಮಣ್ಣುಪಾಲಾಗಿ, ಅವರು ಅಧರ್ಮಕ್ಕೆ ಗುರಿಯಾಗಿ, ಎಲ್ಲರೊಡನೆಯೂ ವಿರೋಧವುಂಟಾಗಿ ಎಂದಿಗೂ ತೊಲಗದಿರುವ ಮನೋವ್ಯಾಧಿಗೆ ತುತ್ತಾಗಿ, ಮನೆಯೆಲ್ಲ ದುಃಖದಿಂದ ತುಂಬಿಹೋಗುವುದೋ, ಅಂತಹ ಹೆಸರಿಗಷ್ಟೇ ಇರುವ ಸಂತಾನಕ್ಕಾಗಿ ಯಾವ ವಿವೇಕಿಯು ಹಂಬಲಿಸಿಯಾನು ? ಅಂತಹ ಸಂತಾನವು ಆತ್ಮನಿಗಾಗಿ ಒಂದು ರೀತಿಯ ಮೋಹಮಯ ಬಂಧನವೇ ಆಗಿದೆ. ॥ ೪೪–೪೫ ॥ ಈ ದೃಷ್ಟಿಯಿಂದ ನಾನು ಕುಪುತ್ರನೇ ಒಳ್ಳೆಯವ

ಕದಪತ್ಯಂ ವರಂ ಮನ್ಯೇ ಸದಪತ್ಯಾಚ್ಛುಚಾಂ ಪದಾತ್ ।
ನಿರ್ವಿದ್ಯೇತ ಗೃಹಾನ್ಮರ್ತ್ಯೋ ಯತ್ಕ್ಲೇಶನಿವಹಾ ಗೃಹಾಃ ॥ ೪೬ ॥

ಏವಂ ಸ ನಿರ್ವಿಣ್ಣಮನಾ ನೃಪೋ ಗೃಹಾನ್
ನಿಶೀಥ ಉತ್ಥಾಯ ಮಹೋದಯೋದಯಾತ್ ।
ಅಲಬ್ಧನಿದ್ರೋಽನುಪಲಕ್ಷಿತೋ ನೃಭಿ-
ರ್ಹಿತ್ವಾ ಗತೋ ವೇನಸುವಂ ಪ್ರಸುಪ್ತಾಮ್ ॥ ೪೭ ॥

ವಿಜ್ಞಾಯ ನಿರ್ವಿದ್ಯ ಗತಂ ಪತಿಂ ಪ್ರಜಾಃ
ಪುರೋಹಿತಾಮಾತ್ಯ ಸುಹೃದ್ಗಣಾದಯಃ ।
ವಿಚಿಕ್ಯುರುರ್ವ್ಯಾಮತಿಶೋಕಕಾತರಾ
ಯಥಾ ನಿಗೂಢಂ ಪುರುಷಂ ಕುಯೋಗಿನಃ ॥ ೪೮ ॥

ಅಲಕ್ಷಯಂತಃ ಪದವೀಂ ಪ್ರಜಾಪತೇ-
ರ್ಹತೋದ್ಯಮಾಃ ಪ್ರತ್ಯುಪಸೃತ್ಯ ತೇ ಪುರೀಮ್ ।
ಋಷೀನ್ಸಮೇತಾನಭಿವಂದ್ಯ ಸಾಶ್ರವೋ
ನ್ಯವೇದಯನ್ಪೌರವ ಭರ್ತೃವಿಪ್ಲವಮ್ ॥ ೪೯ ॥

ನೆಂದು ತಿಳಿಯುತ್ತೇನೆ. ಏಕೆಂದರೆ, ಸತ್ಪುತ್ರನನ್ನು ಬಿಡಲು ತುಂಬಾ ದುಃಖವಾಗುತ್ತದೆ. ಕುಪುತ್ರನು ಮನೆಯನ್ನೇ ನರಕವಾಗಿಸುತ್ತಾನೆ. ಅದ್ದರಿಂದ ಅವನಿಂದ ಸಹಜವಾಗಿಯೇ ಬಿಡುಗಡೆ ಆಗಿ ಹೋಗುತ್ತದೆ. ॥ ೪೬ ॥

ಈ ಪ್ರಕಾರ ಯೋಚಿಸುತ್ತಾ ಚಿಂತೆಯಿಂದ ಅಂಗಮಹಾರಾಜನಿಗೆ ರಾತ್ರಿಯಲ್ಲಿ ನಿದ್ದೆ ಬಂದಿಲ್ಲ. ಅವನಿಗೆ ಗೃಹಸ್ಥ ಜೀವನದಲ್ಲೇ ಬೇಸರವುಂಟಾಯಿತು. ಅರ್ಧರಾತ್ರಿಯಲ್ಲಿ ವೇನನ ತಾಯಿಯು ನಿದ್ದೆಯಲ್ಲಿ ಮುಳುಗಿದ್ದಾಗ ಆತನು ಹಾಸಿಗೆಯಿಂದೆದ್ದು ವೈರಾಗ್ಯದಿಂದ ಎಲ್ಲ ಮೋಹ-ಪಾಶಗಳನ್ನು ಕಿತ್ತೊಗೆದು ಯಾರಿಗೂ ಸುಳಿವು ಕೊಡದೆ ಸುಮ್ಮನೆ ಐಶ್ವರ್ಯಶಾಲಿಯಾದ ಅರಮನೆಯನ್ನು ತೊರೆದು ಅರಣ್ಯಕ್ಕೆ ಹೊರಟು ಹೋದನು. ॥ ೪೭ ॥ ಮಹಾರಾಜರು ವಿರಕ್ತರಾಗಿ ಮನೆಯಿಂದ ಹೊರಟುಹೋದರೆಂದು ತಿಳಿದು ಎಲ್ಲ ಪ್ರಜೆಗಳೂ, ಪುರೋಹಿತರೂ, ಮಂತ್ರಿಗಳೂ, ಸ್ನೇಹಿತರೂ – ಎಲ್ಲರೂ ತುಂಬಾ ಕಳವಳಗೊಂಡು ಪೃಥ್ವಿಯಲ್ಲೆಲ್ಲ ಹುಡುಕತೊಡಗಿದರು. ಯೋಗದ ಪರಮಾರ್ಥವನ್ನು ತಿಳಿಯದಿರುವ ಜನರು ತಮ್ಮ ಹೃದಯದಲ್ಲಿ ಅಡಗಿರುವ ಭಗವಂತನನ್ನು ಹೊರಗೆ ಹುಡುಕುವಂತೆ ಅವರೆಲ್ಲ ಹುಡುಕುತ್ತಿದ್ದರು. ॥ ೪೮ ॥ ಅವರಿಗೆ ಒಡೆಯನ ಸುಳಿವು ಎಲ್ಲಿಯೂ ಸಿಕ್ಕದಿದ್ದಾಗ ಅವರು ನಿರಾಶರಾಗಿ ನಗರಕ್ಕೆ ಮರಳಿದರು. ಅಲ್ಲಿ ನೆರೆದಿದ್ದ ಮುನಿಗಳಿಗೆ ನಮಸ್ಕರಿಸಿ, ಕಣ್ಣೀರನ್ನು ತುಂಬಿಕೊಂಡು ಮಹಾರಾಜರು ಸಿಕ್ಕದಿರುವ ವೃತ್ತಾಂತವನ್ನು ತಿಳಿಸಿದರು. ॥ ೪೯ ॥

ಹದಿಮೂರನೆಯ ಅಧ್ಯಾಯವು ಮುಗಿಯಿತು. ॥ ೧೩ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಚತುರ್ಥಸ್ಕಂಧೇ ತ್ರಯೋದಶೋಽಧ್ಯಾಯಃ ॥ ೧೩ ॥

ಹದಿನಾಲ್ಕನೆಯ ಅಧ್ಯಾಯ

ವೇನರಾಜನ ಚರಿತ್ರೆ

ಮೈತ್ರೇಯ ಉವಾಚ

ಭೃಗ್ವಾದಯಸ್ತೇ ಮುನಯೋ ಲೋಕಾನಾಂ ಕ್ಷೇಮದರ್ಶಿನಃ ।
ಗೋಪ್ತರ್ಯಸತಿ ವೈ ನೄಣಾಂ ಪಶ್ಯಂತಃ ಪಶುಸಾಮ್ಯತಾಮ್ ॥ ೧ ॥

ವೀರಮಾತರಮಾಹೂಯ ಸುನೀಥಾಂ ಬ್ರಹ್ಮವಾದಿನಃ ।
ಪ್ರಕೃತ್ಯಸಮ್ಮತಂ ವೇನಮಭ್ಯಷಿಂಚನ್ ಪತಿಂ ಭುವಃ ॥ ೨ ॥

ಶ್ರುತ್ವಾ ನೃಪಾಸನಗತಂ ವೇನಮತ್ಯುಗ್ರಶಾಸನಮ್ ।
ನಿಲಿಲ್ಯುರ್ದಸ್ಯವಃ ಸದ್ಯಃ ಸರ್ಪತ್ರಸ್ತಾ ಇವಾಖವಃ ॥ ೩ ॥

ಸ ಆರೂಢನೃಪಸ್ಥಾನ ಉನ್ನದ್ಧೋಽಷ್ಟವಿಭೂತಿಭಿಃ ।
ಅವಮೇನೇ ಮಹಾಭಾಗಾನ್ ಸ್ತಬ್ಧಃ ಸಂಭಾವಿತಃ ಸ್ವತಃ ॥ ೪ ॥

ಶ್ರೀಮೈತ್ರೇಯರು ಹೇಳುತ್ತಾರೆ – ಎಲೈ ವಿದುರನೇ! ಅಲ್ಲಿ ನೆರೆದಿದ್ದ ಭೃಗುವೇ ಮುಂತಾದ ಮಹರ್ಷಿಗಳು ಎಲ್ಲ ಲೋಕಗಳಿಗೆ ಕ್ಷೇಮವಾಗಿರಬೇಕಾದರೆ ಏನು ಮಾಡಬಹುದೆಂದು ಚಿಂತಿಸಿದರು. ಅಂಗರಾಜನು ಹೊರಟುಹೋದ ಬಳಿಕ ಪ್ರಜಾಪಾಲಕನಾದ ರಾಜನಿಲ್ಲದಿದ್ದರೆ ಎಲ್ಲರೂ ಪಶುಗಳಂತೆ ಸ್ವೇಚ್ಛಾಚಾರಿಗಳಾಗಿ ನಾಶವಾಗುವರು. ॥ ೧ ॥ ಆಗ ಅವರು ವೀರನಾದ ರಾಜಪುತ್ರನ ತಾಯಿಯಾದ ಸುನೀಥಾದೇವಿಯ ಸಮ್ಮತಿಯನ್ನು ಪಡೆದು, ಮಂತ್ರಿಗಳಿಗೆ ಸಹಮತವಿಲ್ಲದಿದ್ದರೂ ವೇನನನ್ನು ಭೂಮಂಡಲದ ರಾಜ್ಯಕ್ಕೆ ಪಟ್ಟಾಭಿಷೇಕ ಮಾಡಿದರು. ॥ ೨ ॥ ವೇನನು ತುಂಬಾ ಕಠೋರ ಶಾಸಕನಾಗಿದ್ದನು. ಅವನೇ ಸಿಂಹಾಸನಾಧಿಪತಿಯಾಗಿದ್ದಾನೆಂದು ಕೇಳಿದ ಕಳ್ಳ-ಕಾಕರು ಹಾವಿಗೆ ಹೆದರಿದ ಇಲಿಗಳಂತೆ ಒಡನೆಯೇ ಅಲ್ಲಲ್ಲೇ ಅಡಗಿಕೊಂಡರು. ॥ ೩ ॥ ಸಿಂಹಾಸನವು ದೊರೆತಾಗ ವೇನನು ಅಷ್ಟದಿಕ್ಪಾಲಕರ ಐಶ್ವರ್ಯದ ಕಳೆಯ ಕಾರಣದಿಂದ ಉನ್ಮತ್ತನಾದನು. ಅವನು ದುರಭಿಮಾನದಿಂದ ತನ್ನನ್ನೇ ಸರ್ವಶ್ರೇಷ್ಠನೆಂದು ಭಾವಿಸಿಕೊಂಡು ಮಹಾಪುರುಷರನ್ನು ಅವಮಾನಿಸತೊಡಗಿದನು. ॥ ೪ ॥

ಏವಂ ಮದಾಂಧ ಉತ್ಸಿಕ್ತೋ ನಿರಂಕುಶ ಇವ ದ್ವಿಪಃ ।
ಪರ್ಯಟನ್ರಥಮಾಸ್ಥಾಯ ಕಂಪಯನ್ನಿವ ರೋದಸೀ ॥ ೫ ॥

ನ ಯಷ್ಟವ್ಯಂ ನ ದಾತವ್ಯಂ ನ ಹೋತವ್ಯಂ ದ್ವಿಜಾಃ ಕ್ವಚಿತ್ ।
ಇತಿ ನ್ಯವಾರಯದ್ಧರ್ಮಂ ಭೇರೀಘೋಷೇಣ ಸರ್ವಶಃ ॥ ೬ ॥

ವೇನಸ್ಯಾವೇಕ್ಷ್ಯ ಮುನಯೋ ದುರ್ವೃತ್ತಸ್ಯ ವಿಚೇಷ್ಟಿತಮ್ ।
ವಿಮೃಶ್ಯ ಲೋಕವ್ಯಸನಂ ಕೃಪಯೋಚುಃ ಸ್ಮ ಸತ್ರಿಣಃ ॥ ೭ ॥

ಅಹೋ ಉಭಯತಃ ಪ್ರಾಪ್ತಂ ಲೋಕಸ್ಯ ವ್ಯಸನಂ ಮಹತ್ ।
ದಾರುಣ್ಯುಭಯತೋ ದೀಪ್ತೇ ಇವ ತಸ್ಕರಪಾಲಯೋಃ ॥ ೮ ॥

ಅರಾಜಕಭಯಾದೇಷ ಕೃತೋ ರಾಜಾತದರ್ಹಣಃ ।
ತತೋಽಪ್ಯಾಸೀದ್ಭಯಂ ತ್ವದ್ಯ ಕಥಂ ಸ್ಯಾತ್ಸ್ವಸ್ತಿ ದೇಹಿನಾಮ್ ॥ ೯ ॥

ಅಹೇರಿವ ಪಯಃಪೋಷಃ ಪೋಷಕಸ್ಯಾಪ್ಯನರ್ಥಭೃತ್ ।
ವೇನಃ ಪ್ರಕೃತ್ಯೈವ ಖಲಃ ಸುನೀಥಾಗರ್ಭಸಂಭವಃ ॥ ೧೦ ॥

ನಿರೂಪಿತಃ ಪ್ರಜಾಪಾಲಃ ಸ ಜಿಘಾಂಸತಿ ವೈ ಪ್ರಜಾಃ ।
ತಥಾಪಿ ಸಾಂತ್ವಯೇಮಾಮುಂ ನಾಸ್ಮಾಂಸ್ತತ್ಪಾತಕಂ ಸ್ಪೃಶೇತ್ ॥ ೧೧ ॥

ತದ್ವಿದ್ವದ್ಭಿರಸದ್ವೃತ್ತೋ ವೇನೋಽಸ್ಮಾಭಿಃ ಕೃತೋ ನೃಪಃ ।
ಸಾಂತ್ವಿತೋ ಯದಿ ನೋ ವಾಚಂ ನ ಗ್ರಹೀಷ್ಯತ್ಯಧರ್ಮಕೃತ್ ॥ ೧೨ ॥

ಲೋಕಧಿಕ್ಕಾರಸಂದಗ್ಧಂ ದಹಿಷ್ಯಾಮಃ ಸ್ವತೇಜಸಾ ।
ಏವಮಧ್ಯವಸಾಯೈನಂ ಮುನಯೋ ಗೂಢಮನ್ಯವಃ ।
ಉಪವ್ರಜ್ಯಾಬ್ರುವನ್ವೇನಂ ಸಾಂತ್ವಯಿತ್ವಾ ಚ ಸಾಮಭಿಃ ॥ ೧೩ ॥

ಮುನಯ ಊಚುಃ

ನೃಪವರ್ಯ ನಿಬೋಧೈತದ್ಯತ್ತೇ ವಿಜ್ಞಾಪಯಾಮ ಭೋಃ ।
ಆಯುಃಶ್ರೀಬಲಕೀರ್ತೀನಾಂ ತವ ತಾತ ವಿವರ್ಧನಮ್ ॥ ೧೪ ॥

ಧರ್ಮ ಆಚರಿತಃ ಪುಂಸಾಂ ವಾಙ್ಮನಃಕಾಯಬುದ್ಧಿಭಿಃ ।
ಲೋಕಾನ್ವಿಶೋಕಾನ್ವಿತರತ್ಯಥಾನಂತ್ಯಮಸಂಗಿನಾಮ್ ॥ ೧೫ ॥

ಅವನು ಐಶ್ವರ್ಯಮದದಿಂದ ಕುರುಡನಾಗಿ ರಥವನ್ನು ಏರಿ ನಿರಂಕುಶವಾದ ಗಜರಾಜನಂತೆ ಭೂಮಿ ಮತ್ತು ಆಕಾಶಗಳನ್ನು ನಡುಗಿಸುತ್ತಾ ಎಲ್ಲೆಡೆ ಸಂಚರಿಸ ತೊಡಗಿದನು. ॥ ೫ ॥ ಇನ್ನು ಮುಂದೆ ಯಾವ ದ್ವಿಜರು ಯಾವುದೇ ರೀತಿಯ ಯಜ್ಞವನ್ನಾಗಲೀ, ದಾನವನ್ನಾಗಲೀ, ಹವನವನ್ನಾಗಲೀ ಮಾಡಕೂಡದೆಂದು ರಾಜ್ಯದಲ್ಲಿ ಡಂಗುರ ಹೊಡೆಸಿದನು. ಎಲ್ಲ ಧರ್ಮ-ಕರ್ಮಗಳನ್ನು ತಡೆದು ನಿಲ್ಲಿಸಿಬಿಟ್ಟನು. ॥ ೬ ॥

ದುಷ್ಟ ವೇನನ ಇಂತಹ ಅತ್ಯಾಚಾರವನ್ನು ನೋಡಿ ಋಷಿ-ಮುನಿಗಳು ಒಂದೆಡೆ ಸೇರಿ, ಪ್ರಪಂಚಕ್ಕೆ ಮಹಾಸಂಕಟ ಬಂದೊದಗಿದೆ ಎಂದು ತಿಳಿದು ಕನಿಕರದಿಂದ ತಮ್ಮಲ್ಲೇ ಮಾತನಾಡಿಕೊಂಡರು. ॥ ೭ ॥ "ಅಯ್ಯೋ! ಯಾವುದಾದರೂ ಮರವು ಎರಡೂ ಕಡೆಯಿಂದ ಉರಿಯುತ್ತಿರುವಾಗ ಅದರ ನಡುವೆ ಸಿಕ್ಕಿದ ಇರುವೆಯೇ ಮುಂತಾದ ಪ್ರಾಣಿಗಳು ಸಂಕಟಪಡುವಂತೆ ಈಗ ಸಮಸ್ತ ಪ್ರದೇಶವು ಒಂದೆಡೆ ರಾಜನ ಅತ್ಯಾಚಾರಗಳಿಂದ ಉಂಟಾದ ವಿಪತ್ತು, ಮತ್ತೊಂದೆಡೆ ಕಳ್ಳ-ಕಾಕರಿಂದ ಒದಗಿಬಂದ ವಿಪತ್ತುಗಳಿಂದ ಮಹಾಸಂಕಟಕ್ಕೆ ಸಿಲುಕಿದೆ. ॥ ೮ ॥ ಈ ವೇನನು ಅಯೋಗ್ಯನೆಂದು ತಿಳಿದಿದ್ದರೂ ಅರಾಜಕತೆಯು ಬರದಿರಲೆಂದು ನಾವು ಈತನನ್ನು ರಾಜನನ್ನಾಗಿ ಮಾಡಿದೆವು. ಆದರೆ ಈ ರಾಜನಿಂದಲೇ ಪ್ರಜೆಗಳಿಗೆ ಭಯವು ಉಂಟಾಗಿದೆ. ಇಂತಹ ಸ್ಥಿತಿಯಲ್ಲಿ ಪ್ರಜೆಗಳಿಗೆ ಹೇಗೆ ತಾನೇ ಸುಖಶಾಂತಿಗಳು ದೊರಕುವುವು? ॥ ೯ ॥ ಸುನೀಥಾಳ ಗರ್ಭದಲ್ಲಿ ಹುಟ್ಟಿರುವ ಈ ವೇನನು ಸ್ವಭಾವದಿಂದಲೇ ದುಷ್ಟನು. ಈತನನ್ನು ನಾವು ರಕ್ಷಿಸಿದುದು ಹಾವಿಗೆ ಹಾಲೆರೆದಂತೆ ಅನರ್ಥಕ್ಕೆ ಕಾರಣವಾಯಿತು. ॥ ೧೦ ॥ ಪ್ರಜೆಗಳನ್ನು ರಕ್ಷಿಸುವ ಸಲುವಾಗಿ ನಾವು ಈತನನ್ನು ನೇಮಕಮಾಡಿದೆವು. ಆದರೆ ಇವನು ಪ್ರಜೆಗಳನ್ನೇ ನಾಶಮಾಡುವುದಕ್ಕಾಗಿ ಬಯಸುತ್ತಿದ್ದಾನೆ. ಆದರೂ ನಾವು ಈತನಿಗೆ ಸಮಾಧಾನದಿಂದ ತಿಳುವಳಿಕೆ ನೀಡೋಣ. ಹೀಗೆ ಮಾಡಿದರೆ ನಮಗೆ ಈತನ ಪಾಪಗಳು ಅಂಟಿಕೊಳ್ಳುವುದಿಲ್ಲ. ॥ ೧೧ ॥ ನಾವು ತಿಳಿದು-ತಿಳಿದು ಈ ದುರಾಚಾರಿಯನ್ನು ರಾಜನನ್ನಾಗಿ ಮಾಡಿದೆವು. ಆದರೆ ತಿಳುವಳಿಕೆ ನೀಡಿದರೂ ಈತನು ನಮ್ಮ ಮಾತನ್ನು ಕೇಳದೆಹೋದರೆ, ಲೋಕದ ಧಿಕ್ಕಾರದಿಂದ ಈಗಾಗಲೇ ಸುಟ್ಟುಹೋಗಿರುವ ಈತನನ್ನು ನಮ್ಮ ತೇಜಸ್ಸಿನಿಂದ ಸುಟ್ಟುಹಾಕಿಬಿಡೋಣ." ಹೀಗೆ ವಿಚಾರ ಮಾಡಿದ ಮಹರ್ಷಿಗಳು ವೇನನ ಬಳಿಗೆ ಹೋಗಿ ತಮ್ಮ ಕೋಪವನ್ನು ಪ್ರಕಟಿಸದೆ ಅಡಗಿಸಿಕೊಂಡು ಅವನನ್ನು ಸವಿನುಡಿಗಳಿಂದ ಸಂತೈಸುತ್ತಾ ಹೀಗೆ ಹೇಳತೊಡಗಿದರು. ॥ ೧೨-೧೩ ॥

ಮುನಿಗಳು ಹೇಳಿದರು - ರಾಜನೇ! ನಾವು ನಿನ್ನಲ್ಲಿ ಹೇಳುವ ಮಾತುಗಳ ಕುರಿತು ಗಮನಕೊಟ್ಟು ಕೇಳು. ಇದರಿಂದ ನಿನ್ನ ಆಯುಸ್ಸು, ಸಂಪತ್ತು, ಬಲ, ಕೀರ್ತಿಗಳು ವೃದ್ಧಿಹೊಂದುವವು. ॥ ೧೪ ॥ ಅಯ್ಯಾ! ಮನುಷ್ಯನು ಮನಸ್ಸು, ಮಾತು, ಶರೀರ ಮತ್ತು ಬುದ್ಧಿಗಳಿಂದ ಧರ್ಮವನ್ನು ಆಚರಿಸಿದರೆ ಅವನಿಗೆ ಸ್ವರ್ಗಾದಿ ಶೋಕರಹಿತವಾದ ಲೋಕಗಳು ದೊರೆಯುವುವು. ಅದನ್ನೇ ಅವನು ನಿಷ್ಕಾಮಭಾವದಿಂದ ಆಚರಿಸಿದರೆ ಆ ಧರ್ಮವು ಅವನನ್ನು ಮೋಕ್ಷಪದಕ್ಕೆ ಒಯ್ಯುವುದು. ॥ ೧೫ ॥

ಸ ತೇ ಮಾ ವಿನಶೇದ್ವೀರ ಪ್ರಜಾನಾಂ ಕ್ಷೇಮಲಕ್ಷಣಃ ।
ಯಸ್ಮಿನ್ವಿನಷ್ಟೇ ನೃಪತಿರೈಶ್ವರ್ಯಾದವರೋಹತಿ ॥ ೧೬ ॥

ರಾಜನ್ನಸಾಧ್ವಮಾತ್ಯೇಭ್ಯಶ್ಚೋರಾದಿಭ್ಯಃ ಪ್ರಜಾ ನೃಪಃ ।
ರಕ್ಷನ್ ಯಥಾ ಬಲಿಂ ಗೃಹ್ಣನ್ನಿಹ ಪ್ರೇತ್ಯ ಚ ಮೋದತೇ ॥ ೧೭ ॥

ಯಸ್ಯ ರಾಷ್ಟ್ರೇ ಪುರೇ ಚೈವ ಭಗವಾನ್ಯಜ್ಞಪೂರುಷಃ ।
ಇಜ್ಯತೇ ಸ್ವೇನ ಧರ್ಮೇಣ ಜನೈರ್ವರ್ಣಾಶ್ರಮಾನ್ವಿತೈಃ ॥ ೧೮ ॥

ತಸ್ಯ ರಾಜ್ಞೋ ಮಹಾಭಾಗ ಭಗವಾನ್ ಭೂತಭಾವನಃ ।
ಪರಿತುಷ್ಯತಿ ವಿಶ್ವಾತ್ಮಾ ತಿಷ್ಠತೋ ನಿಜಶಾಸನೇ ॥ ೧೯ ॥

ತಸ್ಮಿಂಸ್ತುಷ್ಟೇ ಕಿಮಪ್ರಾಪ್ಯಂ ಜಗತಾಮೀಶ್ವರೇಶ್ವರೇ ।
ಲೋಕಾಃ ಸಪಾಲಾ ಹ್ಯೇತಸ್ಮೈ ಹರಂತಿ ಬಲಿಮಾದೃತಾಃ ॥ ೨೦ ॥

ತಂ ಸರ್ವಲೋಕಾಮರಯಜ್ಞಸಂಗ್ರಹಂ
ತ್ರಯೀಮಯಂ ದ್ರವ್ಯಮಯಂ ತಪೋಮಯಮ್ ।
ಯಜ್ಞೈರ್ವಿಚಿತ್ರೈರ್ಯಜತೋ ಭವಾಯ ತೇ
ರಾಜನ್ ಸ್ವದೇಶಾನನುರೋದ್ಧುಮರ್ಹಸಿ ॥ ೨೧ ॥

ಯಜ್ಞೇನ ಯುಷ್ಮದ್ವಿಷಯೇ ದ್ವಿಜಾತಿಭಿ-
ರ್ವಿತಾಯಮಾನೇನ ಸುರಾಃ ಕಲಾ ಹರೇಃ ।
ಸ್ವಿಷ್ಟಾಃ ಸುತುಷ್ಟಾಃ ಪ್ರದಿಶಂತಿ ವಾಂಛಿತಂ
ತದ್ಧೇಲನಂ ನಾರ್ಹಸಿ ವೀರ ಚೇಷ್ಟಿತುಮ್ ॥ ೨೨ ॥

ವೇನ ಉವಾಚ

ಬಾಲಿಶಾ ಬತ ಯೂಯಂ ವಾ ಅಧರ್ಮೇ ಧರ್ಮಮಾನಿನಃ ।
ಯೇ ವೃತ್ತಿದಂ ಪತಿಂ ಹಿತ್ವಾ ಜಾರಂ ಪತಿಮುಪಾಸತೇ ॥ ೨೩ ॥

ಅವಜಾನಂತ್ಯಮೀ ಮೂಢಾ ನೃಪರೂಪಿಣಮೀಶ್ವರಮ್ ।
ನಾನುವಿಂದಂತಿ ತೇ ಭದ್ರಮಿಹ ಲೋಕೇ ಪರತ್ರ ಚ ॥ ೨೪ ॥

ಆದುದರಿಂದ ಎಲೈ ವೀರವರನೇ! ಪ್ರಜೆಗಳ ಕಲ್ಯಾಣರೂಪವಾದ ಈ ಧರ್ಮವು ನಿನ್ನ ಕಾರಣದಿಂದ ನಾಶವಾಗಬಾರದು. ಧರ್ಮವು ನಷ್ಟವಾದ್ದೇ ಆದರೆ ಅದರಿಂದ ರಾಜನೂ ಐಶ್ವರ್ಯದಿಂದ ಚ್ಯುತನಾಗುವನು. ॥ ೧೬ ॥ ದುಷ್ಟರಾದ ಮಂತ್ರಿಗಳಿಂದ ಮತ್ತು ಕಳ್ಳ-ಕಾಕರೇ ಮುಂತಾದವರಿಂದ ತನ್ನ ಪ್ರಜೆಗಳನ್ನು ರಕ್ಷಿಸುತ್ತಾ, ನ್ಯಾಯಕ್ಕನುಗುಣವಾದ ಕಂದಾಯ, ಕಪ್ಪ-ಕಾಣಿಕೆಗಳನ್ನು ಪ್ರಜೆಗಳಿಂದ ಸ್ವೀಕರಿಸುವ ರಾಜನು ಇಹಲೋಕ ಮತ್ತು ಪರಲೋಕಗಳೆರಡರಲ್ಲಿಯೂ ಸುಖವನ್ನು ಪಡೆಯುವನು. ॥ ೧೭ ॥

ಎಲೈ ಮಹಾಭಾಗನೇ! ಯಾವ ರಾಜನ ರಾಜ್ಯದಲ್ಲಿ ಅಥವಾ ನಗರದಲ್ಲಿ ಜನರು ವರ್ಣಾಶ್ರಮ ಧರ್ಮವನ್ನು ಪಾಲಿಸುವರೋ, ಸ್ವಧರ್ಮಪಾಲನೆಯ ಮೂಲಕ ಭಗವಾನ್ ಯಜ್ಞಪುರುಷನನ್ನು ಆರಾಧಿಸುತ್ತಾರೆಯೋ, ಅಂತಹ ತನ್ನ ಆಜ್ಞೆಯನ್ನು ಪಾಲಿಸುವ ರಾಜನ ವಿಷಯದಲ್ಲಿ ಶ್ರೀಭಗವಂತನು ಪ್ರಸನ್ನನಾಗಿರುತ್ತಾನೆ. ಏಕೆಂದರೆ, ಆ ಭಗವಂತನೇ ಇಡೀ ವಿಶ್ವಕ್ಕೆ ಆತ್ಮಸ್ವರೂಪನಾಗಿ, ಸಮಸ್ತ ಪ್ರಾಣಿಗಳನ್ನು ಸಂರಕ್ಷಿಸುತ್ತಿರುವನು. ॥ ೧೮-೧೯ ॥ ಶ್ರೀಭಗವಂತನೇ ಬ್ರಹ್ಮಾದಿ ಜಗದೀಶ್ವರರಿಗೂ ಈಶ್ವರನಾಗಿದ್ದಾನೆ. ಆತನ ಪ್ರಸನ್ನತೆಯನ್ನು ಸಂಪಾದಿಸಿದರೆ ಯಾವ ವಸ್ತುವೂ ದುರ್ಲಭವಾಗುವುದಿಲ್ಲ. ಅದಕ್ಕಾಗಿಯೇ ಇಂದ್ರನೇ ಮುಂತಾದ ಲೋಕಪಾಲಕರಿಂದೊಡಗೂಡಿದ ಸಮಸ್ತ ಲೋಕಗಳು ಆತನಿಗೆ ಅತ್ಯಂತ ಆದರದಿಂದ ಪೂಜೆ-ಉಪಹಾರಗಳನ್ನು ಸಮರ್ಪಿಸುತ್ತವೆ. ॥ ೨೦ ॥ ಎಲೈ ರಾಜನೇ! ಭಗವಾನ್ ಶ್ರೀಹರಿಯು ಸಮಸ್ತಲೋಕಗಳಿಗೂ, ಲೋಕಪಾಲಕರಿಗೂ, ಯಜ್ಞಗಳಿಗೂ ನಿಯಾಮಕನಾಗಿದ್ದಾನೆ. ವೇದತ್ರಯರೂಪನೂ, ದ್ರವ್ಯರೂಪನೂ, ತಪೋರೂಪನೂ ಆಗಿರುವನು. ಆದುದರಿಂದ ನಿನ್ನ ದೇಶದಲ್ಲಿ ವಾಸಿಸುವ ಜನರು ನಿನ್ನ ಏಳಿಗೆಗಾಗಿ ಹಲವಾರು ಯಜ್ಞಗಳ ಮೂಲಕ ಶ್ರೀಭಗವಂತನ ಆರಾಧನೆಯನ್ನು ಮಾಡಿದಾಗ ನೀನು ಅದಕ್ಕೆ ಅನುಕೂಲವಾಗಿಯೇ ವರ್ತಿಸಬೇಕು. ॥ ೨೧ ॥ ನಿನ್ನ ರಾಜ್ಯದಲ್ಲಿ ಬ್ರಾಹ್ಮಣರು ಯಜ್ಞಗಳನ್ನು ಆಚರಿಸಿದಾಗ ಶ್ರೀಭಗವಂತನ ಅಂಶರೂಪವಾದ ದೇವತೆಗಳು ಅವರ ಪೂಜೆಯಿಂದ ಪ್ರಸನ್ನರಾಗಿ ನಿನ್ನ ಮನಸ್ಸಿಗೆ ಇಷ್ಟವಾದ ಫಲವನ್ನು ಅನುಗ್ರಹಿಸುವರು. ಆದುದರಿಂದ ಎಲೈ ವೀರನೇ! ನೀನು ಯಜ್ಞವೇ ಮುಂತಾದ ಧರ್ಮಾನುಷ್ಠಾನಗಳನ್ನು ನಿಲ್ಲಿಸಿ ದೇವತೆಗಳನ್ನು ತಿರಸ್ಕರಿಸುವುದು ಉಚಿತವಲ್ಲ. ॥ ೨೨ ॥

ವೇನನು ಹೇಳಿದನು – ಮುನಿಜನರೇ! ನೀವು ತುಂಬಾ ಮೂರ್ಖರಾಗಿದ್ದೀರಿ. ಅಯ್ಯೋ! ನೀವು ಅಧರ್ಮದಲ್ಲೇ ಧರ್ಮಬುದ್ಧಿಯನ್ನಿರಿಸಿದ್ದೀರಿ. ಅದರಿಂದಲೇ ನಿಮಗೆ ಜೀವನವೃತ್ತಿಯನ್ನು ಕೊಡುವ ಸಾಕ್ಷಾತ್ ಪತಿಯಾಗಿರುವ ನನ್ನನ್ನು ಬಿಟ್ಟು ಬೇರೆ ಯಾವನೋ ಜಾರನಾದ ಪತಿಯನ್ನು ಉಪಾಸನೆ ಮಾಡುತ್ತಿದ್ದೀರಿ. ॥ ೨೩ ॥ ರಾಜನ ರೂಪದಲ್ಲಿರುವ ಈಶ್ವರನನ್ನು ಮೂರ್ಖತನದಿಂದಾಗಿ ಅನಾದರಿಸುವ ಜನರಿಗೆ ಈ ಲೋಕದಲ್ಲಿಯೂ ಸುಖ ಸಿಗುವುದಿಲ್ಲ; ಪರಲೋಕದಲ್ಲಿಯೂ ಸುಖ ದೊರೆಯುವುದಿಲ್ಲ. ॥ ೨೪ ॥

ಕೋ ಯಜ್ಞಪುರುಷೋ ನಾಮ ಯತ್ರ ವೋ ಭಕ್ತಿರೀದೃಶೀ ।
ಭರ್ತೃಸ್ನೇಹವಿದೂರಾಣಾಂ ಯಥಾ ಜಾರೇ ಕುಯೋಷಿತಾಮ್ ॥ ೨೫ ॥

ವಿಷ್ಣುರ್ವಿರಿಂಚೋ ಗಿರಿಶ ಇಂದ್ರೋ ವಾಯುರ್ಯಮೋ ರವಿಃ ।
ಪರ್ಜನ್ಯೋ ಧನದಃ ಸೋಮಃ ಕ್ಷಿತಿರಗ್ನಿರಪಾಂಪತಿಃ ॥ ೨೬ ॥

ಏತೇ ಚಾನ್ಯೇ ಚ ವಿಬುಧಾಃ ಪ್ರಭವೋ ವರಶಾಪಯೋಃ ।
ದೇಹೇ ಭವಂತಿ ನೃಪತೇಃ ಸರ್ವದೇವಮಯೋ ನೃಪಃ ॥ ೨೭ ॥

ತಸ್ಮಾನ್ಮಾಂ ಕರ್ಮಭಿರ್ವಿಪ್ರಾ ಯಜಧ್ವಂ ಗತಮತ್ಸರಾಃ ।
ಬಲಿಂ ಚ ಮಹ್ಯಂ ಹರತ ಮತ್ತೋಽನ್ಯಃ ಕೋಽಗ್ರಭುಕ್ಪುಮಾನ್ ॥ ೨೮ ॥

ಮೈತ್ರೇಯ ಉವಾಚ

ಇತ್ಥಂ ವಿಪರ್ಯಯಮತಿಃ ಪಾಪೀಯಾನುತ್ಪಥಂ ಗತಃ ।
ಅನುನೀಯಮಾನಸ್ತದ್ಯಾಂಚಾಂ ನ ಚಕ್ರೇ ಭ್ರಷ್ಟಮಂಗಲಃ ॥ ೨೯ ॥

ಇತಿ ತೇಽಸತ್ಕೃತಾಸ್ತೇನ ದ್ವಿಜಾಃ ಪಂಡಿತಮಾನಿನಾ ।
ಭಗ್ನಾಯಾಂ ಭವ್ಯಯಾಂಚ್ಞಾಯಾಂ ತಸ್ಮೈ ವಿದುರ ಚುಕ್ರುಧುಃ ॥ ೩೦ ॥

ಹನ್ಯತಾಂ ಹನ್ಯತಾಮೇಷ ಪಾಪಃ ಪ್ರಕೃತಿದಾರುಣಃ ।
ಜೀವಂಜಗದಸಾವಾಶು ಕುರುತೇ ಭಸ್ಮಸಾದ್ಧ್ರುವಮ್ ॥ ೩೧ ॥

ನಾಯಮರ್ಹತ್ಯಸದ್‌ವೃತ್ತೋ ನರದೇವವರಾಸನಮ್ ।
ಯೋಽಧಿಯಜ್ಞಪತಿಂ ವಿಷ್ಣುಂ ವಿನಿಂದತ್ಯನಪತ್ರಪಃ ॥ ೩೨ ॥

ಕೋ ವೈನಂ ಪರಿಚಕ್ಷೀತ ವೇನಮೇಕಮೃತೇಽಶುಭಮ್ ।
ಪ್ರಾಪ್ತ ಈದೃಶಮೈಶ್ವರ್ಯಂ ಯದನುಗ್ರಹಭಾಜನಃ ॥ ೩೩ ॥

ಇತ್ಥಂ ವ್ಯವಸಿತಾ ಹಂತುಮೃಷಯೋ ರೂಢಮನ್ಯವಃ ।
ನಿಜಘ್ನುರ್ಹುಂಕೃತೈರ್ವೇನಂ ಹತಮಚ್ಯುತನಿಂದಯಾ ॥ ೩೪ ॥

ಋಷಿಭಿಃ ಸ್ವಾಶ್ರಮಪದಂ ಗತೇ ಪುತ್ರಕಲೇವರಮ್ ।
ಸುನೀಥಾ ಪಾಲಯಾಮಾಸ ವಿದ್ಯಾಯೋಗೇನ ಶೋಚತೀ ॥ ೩೫ ॥

ಏಕದಾ ಮುನಯಸ್ತೇ ತು ಸರಸ್ವತ್ಸಲಿಲಾಪ್ಲುತಾಃ ।
ಹುತ್ವಾಗ್ನೀನ್ ಸತ್ಕಥಾಶ್ಚಕ್ರುರುಪವಿಷ್ಟಾಃ ಸರಿತ್ತಟೇ ॥ ೩೬ ॥

ನೀವೆಲ್ಲ ಇಷ್ಟು ಭಕ್ತಿಯನ್ನು ಯಾರಲ್ಲಿ ತೋರಿಸುತ್ತಿರುವಿರೋ ಆ ಯಜ್ಞಪುರುಷನು ಯಾರು? ಕೈಹಿಡಿದ ಗಂಡನಲ್ಲಿ ಪ್ರೀತಿಯನ್ನು ತೋರದ ಮಿಂಡನಲ್ಲಿ ಆಸಕ್ತರಾಗಿರುವ ಹೆಂಗಸರಂತೆ ಆಯಿತು ಇದು. ॥ ೨೫ ॥ ವಿಷ್ಣು ಬ್ರಹ್ಮ ಶಿವ, ಇಂದ್ರ, ವಾಯು, ಯಮ, ಸೂರ್ಯ, ಪರ್ಜನ್ಯ, ಕುಬೇರ, ಚಂದ್ರ, ಪೃಥಿವಿ, ಅಗ್ನಿ, ವರುಣ – ಇವರಲ್ಲದೆ ವರವನ್ನೂ, ಶಾಪವನ್ನೂ ಕೊಡುವ ಸಾಮರ್ಥ್ಯವುಳ್ಳ ಇತರ ದೇವತೆಗಳೆಲ್ಲರೂ ರಾಜನ ಶರೀರದಲ್ಲಿ ವಾಸಮಾಡುತಿರುವುದರಿಂದ ರಾಜನೇ ಸರ್ವದೇವಮಯನು. ಎಲ್ಲ ದೇವತೆಗಳೂ ಆತನ ಅಂಶಗಳು ಮಾತ್ರ ಆಗಿದ್ದಾರೆ. ॥ ೨೬-೨೭ ॥ ಅದಕ್ಕಾಗಿ ಎಲೈ ಬ್ರಾಹ್ಮಣರೇ! ನೀವು ಮಾತ್ಸರ್ಯವನ್ನು ಬಿಟ್ಟು ನಿಮ್ಮ ಎಲ್ಲ ಕರ್ಮಗಳ ಮೂಲಕ ನನ್ನನ್ನೇ ಪೂಜಿಸಿರಿ. ನನಗೇ ಕಪ್ಪ- ಕಾಣಿಕೆಗಳನ್ನು ಸಮರ್ಪಿಸಿರಿ. ಅಗ್ರಪೂಜೆಯ ಅಧಿಕಾರ ನನಗಲ್ಲದೆ ಬೇರೆ ಯಾರಿಗೆ ತಾನೇ ಇದೆ? ॥ ೨೮ ॥

ಶ್ರೀಮೈತ್ರೇಯರು ಹೇಳುತ್ತಾರೆ – ವಿದುರನೇ! ಈ ರೀತಿಯಲ್ಲಿ ವಿಪರೀತ ಬುದ್ಧಿಯಿಂದ ಕೂಡಿ ಕಡುಪಾಪಿಯಾಗಿ, ದುರ್ಮಾರ್ಗವನ್ನು ಹಿಡಿದಿದ್ದ ವೇನನಿಗೆ ಪುಣ್ಯವು ಕ್ಷೀಣಿಸಿದ್ದರಿಂದ ಅವನು ಮುನಿಗಳ ವಿನಯಪೂರ್ವಕ ವಿಜ್ಞಾಪನೆಗೂ ಕಿವಿಗೊಡಲಿಲ್ಲ. ॥ ೨೯ ॥ ವಿದುರನೇ! ದುರಹಂಕಾರದಿಂದ ತನ್ನನ್ನು ಅತ್ಯಂತ ಬುದ್ಧಿಶಾಲಿಯೆಂದು ತಿಳಿದುಕೊಂಡು ವೇನನು ಹೀಗೆ ಆ ಮುನಿಗಳ ಅಪಮಾನ ಮಾಡಿದಾಗ ತಮ್ಮ ಬೇಡಿಕೆಯು ವ್ಯರ್ಥವಾದುದನ್ನು ಕಂಡು ಅವರಿಗೆ ಮಿತಿಮೀರಿದ ಕೋಪ ಉಂಟಾಯಿತು. ॥ ೩೦ ॥ ಸ್ವಭಾವದಿಂದಲೇ ದುಷ್ಟ ಪಾಪಿಯಾದ ಇವನನ್ನು ಸಾಯಿಸಿಬಿಡಬೇಕು. ಕೊಂದುಹಾಕಲೇಬೇಕು. ಈತನೇನಾದರೂ ಬದುಕಿದ್ದರೆ ಕೆಲವೇ ದಿನಗಳಲ್ಲಿ ಜಗತ್ತನ್ನೇ ಸುಟ್ಟು ಬೂದಿಮಾಡಿಬಿಡುವನು. ॥ ೩೧ ॥ ಈ ದುರಾಚಾರಿಯೂ ಯಾವ ರೀತಿಯಿಂದಲೂ ರಾಜ ಸಿಂಹಾಸನಕ್ಕೆ ಯೋಗ್ಯನಾಗಿಲ್ಲ. ಏಕೆಂದರೆ, ಈ ನಿರ್ಲಜ್ಜನು ಯಜ್ಞಪತಿಯಾದ ಸಾಕ್ಷಾತ್ ಮಹಾವಿಷ್ಣುವನ್ನೇ ನಿಂದೆ ಮಾಡುತ್ತಿರುವನು. ॥ ೩೨ ॥ ಯಾರ ಅನುಗ್ರಹದಿಂದ ಇಷ್ಟೆಲ್ಲಾ ಐಶ್ವರ್ಯವು ದೊರೆತಿದೆಯೋ, ಅಂತಹ ಶ್ರೀಹರಿಯನ್ನು ಅಶುಭ ಸ್ವಭಾವದ ವೇನನನ್ನು ಬಿಟ್ಟು ಬೇರೆ ಯಾರು ತಾನೇ ನಿಂದಿಸಿಯಾರು? ॥ ೩೩ ॥

ತಾವು ಅಡಗಿಸಿಕೊಂಡಿದ್ದ ಕೋಪವನ್ನು ಹೀಗೆ ಪ್ರಕಟಪಡಿಸಿದ ಮುನಿಗಳು ಅವನನ್ನು ಕೊಂದುಬಿಡಲು ನಿಶ್ಚಯಿಸಿದರು. ಅವನಾದರೋ ಭಗವಂತನನ್ನು ನಿಂದಿಸಿದ ಕಾರಣದಿಂದ ಮೊದಲೇ ಸತ್ತಿದ್ದನು. ಅದಕ್ಕಾಗಿ ಅವರು ಕೇವಲ ಹುಂಕಾರದಿಂದಲೇ ಆತನ ಕತೆಯನ್ನು ಮುಗಿಸಿಬಿಟ್ಟರು. ॥ ೩೪ ॥ ಮುನಿಗಳು ತಮ್ಮ-ತಮ್ಮ ಆಶ್ರಮಗಳಿಗೆ ಹೊರಟುಹೋದ ಬಳಿಕ ಇತ್ತ ವೇನನ ಶೋಕಾಕುಲ ತಾಯಿ ಸುನೀಥೆಯು ಮಾತ್ರ ಮಂತ್ರಾದಿಗಳ ಬಲದಿಂದ ಹಾಗೂ ಇತರ ಯುಕ್ತಿಗಳಿಂದ ತನ್ನ ಪುತ್ರನ ಕಳೇಬರವನ್ನು ರಕ್ಷಿಸಿದಳು. ॥ ೩೫ ॥

ಒಂದು ದಿನ ಆ ಮುನಿಗಳು ಸರಸ್ವತಿಯ ಪವಿತ್ರಜಲದಲ್ಲಿ ಸ್ನಾನಮಾಡಿ, ಅಗ್ನಿಹೋತ್ರಾದಿಗಳಿಂದ ನಿವೃತ್ತರಾಗಿ ನದೀತೀರದಲ್ಲಿ ಕುಳಿತು ಶ್ರೀಹರಿಯ ಕುರಿತು ಚರ್ಚೆಮಾಡುತ್ತಿದ್ದರು. ॥ ೩೬ ॥

ವೀಕ್ಷ್ಯೋತ್ಥಿತಾಂಸ್ತದೋತ್ಪಾತಾ-
ನಾಹುರ್ಲೋಕಭಯಂಕರಾನ್ ।
ಅಪ್ಯಭದ್ರಮನಾಥಾಯಾ
ದಸ್ಯುಭ್ಯೋ ನ ಭವೇದ್ಭುವಃ ॥ ೩೭ ॥

ಏವಂ ಮೃಶಂತ ಋಷಯೋ
ಧಾವತಾಂ ಸರ್ವತೋದಿಶಮ್ ।
ಪಾಂಸುಃ ಸಮುತ್ಥಿತೋ ಭೂರಿಶ್ಚೋ-
ರಾಣಾಮಭಿಲುಂಪತಾಮ್ ॥ ೩೮ ॥

ತದುಪದ್ರವಮಾಜ್ಞಾಯ ಲೋಕಸ್ಯ ವಸು ಲುಂಪತಾಮ್ ।
ಭರ್ತರ್ಯುಪರತೇ ತಸ್ಮಿನ್ನನ್ಯೋನ್ಯಂ ಚ ಜಿಘಾಂಸತಾಮ್
॥ ೩೯ ॥

ಚೋರಪ್ರಾಯಂಜನಪದಂ ಹೀನಸತ್ತ್ವಮರಾಜಕಮ್ ।
ಲೋಕಾನ್ನಾವಾರಯಂಛಕ್ತಾ ಅಪಿ ತದ್ದೋಷದರ್ಶಿನಃ
॥ ೪೦ ॥

ಬ್ರಾಹ್ಮಣಃ ಸಮದೃಕ್ ಶಾಂತೋ ದೀನಾನಾಂ ಸಮುಪೇಕ್ಷಕಃ ।
ಸ್ರವತೇ ಬ್ರಹ್ಮ ತಸ್ಯಾಪಿ ಭಿನ್ನಭಾಂಡಾತ್ಪಯೋ ಯಥಾ
॥ ೪೧ ॥

ನಾಂಗಸ್ಯ ವಂಶೋ ರಾಜರ್ಷೇರೇಷ ಸಂಸ್ಥಾತುಮರ್ಹತಿ ।
ಅಮೋಘವೀರ್ಯಾ ಹಿ ನೃಪಾ ವಂಶೇಽಸ್ಮಿನ್ಕೇಶವಾಶ್ರಯಾಃ
॥ ೪೨ ॥

ವಿನಿಶ್ಚಿತ್ಯೈವಮೃಷಯೋ ವಿಪನ್ನಸ್ಯ ಮಹೀಪತೇಃ ।
ಮಮಂಥುರೂರುಂ ತರಸಾ ತತ್ರಾಸೀದ್ಬಾಹುಕೋ ನರಃ
॥ ೪೩ ॥

ಕಾಕಕೃಷ್ಣೋಽತಿಹ್ರಸ್ವಾಂಗೋ ಹ್ರಸ್ವಬಾಹುರ್ಮಹಾಹನುಃ ।
ಹ್ರಸ್ವಪಾನ್ನಿಮ್ನನಾಸಾಗ್ರೋ ರಕ್ತಾಕ್ಷಸ್ತಾಮ್ರಮೂರ್ಧಜಃ
॥ ೪೪ ॥

ತಂ ತು ತೇಽವನತಂ ದೀನಂ ಕಿಂ ಕರೋಮೀತಿ ವಾದಿನಮ್ ।
ನಿಷೀದೇತ್ಯಬ್ರುವನ್‌ಸ್ತಾತ ಸ ನಿಷಾದಸ್ತತೋಽಭವತ್
॥ ೪೫ ॥

ತಸ್ಯ ವಂಶ್ಯಾಸ್ತು ನೈಷಾದಾ ಗಿರಿಕಾನನಗೋಚರಾಃ ।
ಯೇನಾಹರಜ್ಜಾಯಮಾನೋ ವೇನಕಲ್ಮಷಮುಲ್ಬಣಮ್
॥ ೪೬ ॥

ಆಗ ಲೋಕಗಳಲ್ಲೆಲ್ಲ ಆತಂಕವನ್ನು ಹರಡುವ ಅನೇಕ ಉಪದ್ರವಗಳು ಆಗುತ್ತಿರುವುದನ್ನು ನೋಡಿ ತಮ್ಮ-ತಮ್ಮಲ್ಲೇ ಹೇಳಿಕೊಂಡರು. 'ಇಂದು ಪೃಥ್ವಿಯ ರಕ್ಷಕರು ಯಾರೂ ಇಲ್ಲ, ಆದರಿಂದ ಕಳ್ಳ-ಕಾಕರ ಕಾರಣದಿಂದ ಇಡೀ ಭೂಮಿಗೆ ಕೇಡು ಉಂಟಾದರೆ ಏನು ಗತಿ ? ॥ ೩೭ ॥ ಋಷಿಗಳು ಹೀಗೆ ವಿಚಾರ ಮಾಡುತ್ತಿರುವಾಗಲೇ ಎಲ್ಲ ದಿಕ್ಕುಗಳಲ್ಲಿಯೂ ಧಾಳಿ ಮಾಡಲು ಬರುತ್ತಿದ್ದ ಕಳ್ಳರ ಮತ್ತು ದರೋಡೆಕೋರರ ಕಡೆಯಿಂದ ಧೂಳಿನ ರಾಶಿಯು ಏಳುತ್ತಿದ್ದುದು ಅವರಿಗೆ ಕಾಣಿಸಿತು. ॥ ೩೮ ॥ ರಾಜನಾದ ವೇನನು ಮೃತನಾದುದರಿಂದ ದೇಶದಲ್ಲಿ ಅರಾಜಕತೆಯು ಹರಡಿದೆ. ರಾಜ್ಯವು ಶಕ್ತಿಹೀನವಾಗಿ ಬಿಟ್ಟಿದೆ. ಕಳ್ಳ-ಕಾಕರ ಸಂಖ್ಯೆ ಹೆಚ್ಚಿದೆ. ಹಣವನ್ನು ಲೂಟಿಮಾಡುವ ಮತ್ತು ಒಬ್ಬರನ್ನೊಬ್ಬರು ತಿಂದುಹಾಕುವ ದರೋಡೆಗಾರರಿಂದಲೇ ಈ ಹಾವಳಿಯು ಉಂಟಾಗಿದೆ' ಎಂಬುದು ಅವರಿಗೆ ತಿಳಿಯಿತು. ತಮ್ಮ ತೇಜಸ್ಸಿನಿಂದ ಅಥವಾ ತಪೋಬಲದಿಂದ ಜನರನ್ನು ಕುತ್ಸಿತವಾದ ಪ್ರವೃತ್ತಿಯಿಂದ ತಡೆಯುವ ಸಾಮರ್ಥ್ಯವು ತಮ್ಮಲ್ಲಿದ್ದರೂ, ಹೀಗೆ ಮಾಡುವುದರಲ್ಲಿ ಹಿಂಸಾದಿ ದೋಷಗಳನ್ನು ಕಂಡು ಅವರು ಅದನ್ನು ನಿವಾರಣೆ ಮಾಡಲಿಲ್ಲ. ॥ ೩೯-೪೦ ॥ ಮತ್ತೆ ಯೋಚಿಸಿದರು – ಬ್ರಾಹ್ಮಣರು ಸಮದರ್ಶಿ, ಶಾಂತಸ್ವಭಾವದವರಾಗಿದ್ದರೂ ದೀನರನ್ನು ಉಪೇಕ್ಷೆ ಮಾಡಿದರೆ – ಒಡೆದುಹೋದ ಮಡಕೆಯಿಂದ ನೀರು ಸೋರಿ ಹೋಗುವಂತೆ ಅವರ ತಪಸ್ಸು ನಾಶವಾಗಿ ಹೋಗುತ್ತದೆ. ॥ ೪೧ ॥ ಇದಲ್ಲದೆ ರಾಜರ್ಷಿಯಾದ ಅಂಗಮಹಾರಾಜನ ವಂಶವೂ ನಾಶವಾಗಬಾರದು. ಏಕೆಂದರೆ, ಇದರಲ್ಲಿ ಅನೇಕರು ಅಮೋಘಶಕ್ತಿ ಸಂಪನ್ನರೂ, ಭಗವತ್ಪರಾಯಣ ರಾಜರೂ ಆಗಿಹೋಗಿದ್ದಾರೆ. ॥ ೪೨ ॥ ಹೀಗೆ ನಿಶ್ಚಯಿಸಿ ಅವರು ಮೃತನಾಗಿದ್ದ ವೇನರಾಜನ ತೊಡೆಯನ್ನು ಬಲವಾಗಿ ಕಡೆದರು. ಆಗ ಅದರಿಂದ ಒಬ್ಬ ಕುಳ್ಳ ಮನುಷ್ಯನು ಆವಿರ್ಭವಿಸಿದನು. ॥ ೪೩ ॥ ಅವನು ಕಾಗೆಯಂತೆ ಕಪ್ಪಾಗಿದ್ದು, ಅವನ ಎಲ್ಲ ಅವಯವಗಳು ಮತ್ತು ವಿಶೇಷವಾಗಿ ತೋಳುಗಳು ತುಂಬಾ ಗಿಡ್ಡವಾಗಿದ್ದುವು. ಅವನ ಗಲ್ಲವು ಮಾತ್ರ ಉದ್ದವಾಗಿತ್ತು. ಅತಿ ಚಿಕ್ಕ ಕಾಲುಗಳು, ತಗ್ಗಾದ ಮೂಗು, ಕೆಂಪು ಕಣ್ಣುಗಳು, ತಾಮ್ರದಂತೆ ಕಡುಕೆಂಪಾದ ಕೂದಲುಗಳಿದ್ದುವು. ॥ ೪೪ ॥ ಅವನು ಬಹಳ ದೈನ್ಯದಿಂದಲೂ, ವಿನಯದಿಂದಲೂ ಮಹರ್ಷಿಗಳನ್ನು 'ನಾನೇನು ಮಾಡಲಿ'? ಎಂದು ಕೇಳಿದಾಗ, ಅವರು 'ನಿಷೀದ (ಕುಳಿತುಕೋ)' ಎಂದು ಹೇಳಿದರು. ಇದರಿಂದ ಅವನಿಗೆ ನಿಷಾದನೆಂಬ ಹೆಸರಾಯಿತು. ॥ ೪೫ ॥ ಅವನು ಹುಟ್ಟುವಾಗಲೇ ರಾಜಾ ವೇನನ ಭಯಂಕರ ಪಾಪಗಳನ್ನು ಹೊತ್ತುಬಂದಿದ್ದರಿಂದ ಅವನ ವಂಶದವರಾದ ನಿಷಾದರೂ ಕೂಡ ಹಿಂಸೆ, ಲೂಟಿ, ದರೋಡೆಗಳೇ ಮುಂತಾದ ಪಾಪಕರ್ಮಗಳಲ್ಲಿ ನಿರತರಾದರು. ಅವರು ಊರು- ನಗರಗಳಲ್ಲಿ ವಾಸಿಸದೆ ವನ-ಪರ್ವತಗಳಲ್ಲೇ ವಾಸಮಾಡುತ್ತಾರೆ. ॥ ೪೬ ॥

ಹದಿನಾಲ್ಕನೆಯ ಅಧ್ಯಾಯವು ಮುಗಿಯಿತು. ॥ ೧೪ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಚತುರ್ಥಸ್ಕಂಧೇ
ಪೃಥುಚರಿತೇ ನಿಷಾದೋತ್ಪತ್ತಿರ್ನಾಮ ಚತುರ್ದಶೋಽಧ್ಯಾಯಃ ॥ ೧೪ ॥

ಹದಿನೈದನೆಯ ಅಧ್ಯಾಯ

ಪೃಥು ಚಕ್ರವರ್ತಿಯ ಆವಿರ್ಭಾವ ಮತ್ತು ರಾಜ್ಯಾಭಿಷೇಕ

ಮೈತ್ರೇಯ ಉವಾಚ

ಅಥ ತಸ್ಯ ಪುನರ್ವಿಪ್ರೈರಪುತ್ರಸ್ಯ ಮಹೀಪತೇಃ ।
ಬಾಹುಭ್ಯಾಂ ಮಥ್ಯಮಾನಾಭ್ಯಾಂ ಮಿಥುನಂ ಸಮಪದ್ಯತ ॥ ೧ ॥

ತದ್ ದೃಷ್ಟ್ವಾ ಮಿಥುನಂ ಜಾತಮೃಷಯೋ ಬ್ರಹ್ಮವಾದಿನಃ ।
ಊಚುಃ ಪರಮಸಂತುಷ್ಟಾ ವಿದಿತ್ವಾ ಭಗವತ್ಕಲಾಮ್ ॥ ೨ ॥

ಋಷಯ ಊಚುಃ

ಏಷ ವಿಷ್ಣೋರ್ಭಗವತಃ ಕಲಾ ಭುವನಪಾಲಿನೀ ।
ಇಯಂ ಚ ಲಕ್ಷ್ಮ್ಯಾಃ ಸಂಭೂತಿಃ ಪುರುಷಸ್ಯಾನಪಾಯಿನೀ ॥ ೩ ॥

ಅಯಂ ತು ಪ್ರಥಮೋ ರಾಜ್ಞಾಂ ಪುಮಾನ್ ಪ್ರಥಯಿತಾ ಯಶಃ ।
ಪೃಥುರ್ನಾಮ ಮಹಾರಾಜೋ ಭವಿಷ್ಯತಿ ಪೃಥುಶ್ರವಾಃ ॥ ೪ ॥

ಇಯಂ ಚ ಸುದತೀ ದೇವೀ ಗುಣಭೂಷಣಭೂಷಣಾ ।
ಅರ್ಚಿರ್ನಾಮ ವರಾರೋಹಾ ಪೃಥುಮೇವಾವರುಂಧತೀ ॥ ೫ ॥

ಏಷ ಸಾಕ್ಷಾದ್ಧರೇರಂಶೋ ಜಾತೋ ಲೋಕರಿರಕ್ಷಯಾ ।
ಇಯಂ ಚ ತತ್ಪರಾ ಹಿ ಶ್ರೀರನುಜಜ್ಞೇಽನಪಾಯಿನೀ ॥ ೬ ॥

ಮೈತ್ರೇಯ ಉವಾಚ

ಪ್ರಶಂಸಂತಿ ಸ್ಮ ತಂ ವಿಪ್ರಾ ಗಂಧರ್ವಪ್ರವರಾ ಜಗುಃ ।
ಮುಮುಚುಃ ಸುಮನೋಧಾರಾಃ ಸಿದ್ಧಾ ನೃತ್ಯಂತಿ ಸ್ವಃಸ್ತ್ರಿಯಃ ॥ ೭ ॥

ಶಂಖತೂರ್ಯಮೃದಂಗಾದ್ಯಾ ನೇದುರ್ದುಂದುಭಯೋ ದಿವಿ ।
ತತ್ರ ಸರ್ವ ಉಪಾಜಗ್ಮುರ್ದೇವರ್ಷಿಪಿತೄಣಾಂ ಗಣಾಃ ॥ ೮ ॥

ಬ್ರಹ್ಮಾ ಜಗದ್ಗುರುರ್ದೇವೈಃ ಸಹಾಸೃತ್ಯ ಸುರೇಶ್ವರೈಃ ।
ವೈನ್ಯಸ್ಯ ದಕ್ಷಿಣೇ ಹಸ್ತೇ ದೃಷ್ಟ್ವಾ ಚಿಹ್ನಂ ಗದಾಭೃತಃ ॥ ೯ ॥

ಪಾದಯೋರರವಿಂದಂ ಚ ತಂ ವೈ ಮೇನೇ ಹರೇಃ ಕಲಾಮ್ ।
ಯಸ್ಯಾಪ್ರತಿಹತಂ ಚಕ್ರಮಂಶಃ ಸ ಪರಮೇಷ್ಠಿನಃ ॥ ೧೦ ॥

ಶ್ರೀಮೈತ್ರೇಯರು ಹೇಳುತ್ತಾರೆ – ಎಲೈ ವಿದುರನೇ! ಅನಂತರ ಆ ಮಹರ್ಷಿಗಳು ಪುತ್ರಹೀನನಾದ ವೇನರಾಜನ ಭುಜಗಳನ್ನು ಕಡೆದಾಗ ಅವುಗಳಿಂದ ಒಂದು ಗಂಡುಮಗು, ಒಂದು ಹೆಣ್ಣುಮಗುವಿನ ಜೋಡಿಯು ಪ್ರಕಟವಾಯಿತು. ॥ ೧ ॥ ಆ ಜೋಡಿಯು ಉತ್ಪನ್ನವಾಗಿರುವುದನ್ನು ನೋಡಿ ಬ್ರಹ್ಮವಾದಿಗಳಾದ ಮಹರ್ಷಿಗಳು 'ಇದು ಭಗವಂತನ ಅಂಶಾವತಾರ' ಎಂದು ತಿಳಿದು ಅತ್ಯಂತ ಸಂತುಷ್ಟರಾಗಿ ಹೀಗೆಂದರು. ॥ ೨ ॥

ಋಷಿಗಳು ಹೇಳಿದರು – ಈ ಗಂಡುಮಗುವು ಭಗವಾನ್ ಶ್ರೀವಿಷ್ಣುವಿನ ಭುವನಪಾಲಿನಿಯಾದ ಕಲೆಯಿಂದ (ಅಂಶದಿಂದ) ಪ್ರಕಟವಾಗಿದೆ. ಹಾಗೆಯೇ ಈ ಹೆಣ್ಣುಮಗುವು ಆ ಪರಮಪುರುಷನನ್ನು ಎಂದೂ ಅಗಲದೇ ಇರುವ ಶ್ರೀಲಕ್ಷ್ಮೀದೇವಿಯ ಅಂಶಾವತಾರವಾಗಿದೆ. ॥ ೩ ॥ ಈ ಪುರುಷನು ರಾಜರಿಗೆಲ್ಲ ಮೊದಲಿಗನಾಗಿ ತನ್ನ ಸುಕೀರ್ತಿಯನ್ನು ಎಲ್ಲೆಲ್ಲಿಯೂ ಪ್ರಥನ (ವಿಸ್ತಾರ) ಪಡಿಸುವುದರಿಂದ 'ಪೃಥು' ಎಂಬ ನಾಮಧೇಯದಿಂದ ಪ್ರಖ್ಯಾತನಾಗುವನು. ॥ ೪ ॥ ಅಂತೆಯೇ ಸುಂದರವಾದ ಹಲ್ಲುಗಳಿಂದ ಕೂಡಿ, ಸದ್ಗುಣಗಳಿಂದ ಭೂಷಿತೆಯಾಗಿ ದಿವ್ಯ ಪ್ರಕಾಶದಿಂದ ಬೆಳಗುತ್ತಿರುವ ಈ ಹೆಣ್ಣುಮಗುವು 'ಅರ್ಚಿ' (ಪ್ರಕಾಶ) ಎಂಬ ಹೆಸರಿನಿಂದ ಪ್ರಸಿದ್ಧಳಾಗಿ ಈ ಪೃಥು ಚಕ್ರವರ್ತಿಯನ್ನೇ ತನ್ನ ಪತಿಯನ್ನಾಗಿ ವರಿಸುವಳು. ॥ ೫ ॥ ಪೃಥುವಿನ ರೂಪದಲ್ಲಿ ಸಾಕ್ಷಾತ್ ಶ್ರೀಮನ್ನಾರಾಯಣನ ಅಂಶವೇ ಲೋಕರಕ್ಷಣೆಗಾಗಿ ಅವತರಿಸಿದೆ. ಹಾಗೆಯೇ ಅರ್ಚಿಯ ರೂಪದಲ್ಲಿ ನಿರಂತರವಾಗಿ ಶ್ರೀಹರಿಯ ಸೇವೆಯಲ್ಲಿ ಸದಾ ನಿರತಳಾಗಿ, ಆತನ ಸಹಚರಿಯಾದ ಶ್ರೀಲಕ್ಷ್ಮೀದೇವಿಯೇ ಆವಿರ್ಭವಿಸಿದ್ದಾಳೆ. ॥ ೬ ॥

ಶ್ರೀಮೈತ್ರೇಯರು ಹೇಳುತ್ತಾರೆ – ವಿದುರನೇ! ಆಗ ಬ್ರಾಹ್ಮಣರು ಪೃಥುವನ್ನು ಸ್ತುತಿಸತೊಡಗಿದರು. ಗಂಧರ್ವಶ್ರೇಷ್ಠರು ಆತನ ಗುಣಗಾನ ಮಾಡಿದರು. ಸಿದ್ಧರು ಪುಷ್ಪವೃಷ್ಟಿಯನ್ನು ಗೈದರು. ಅಪ್ಸರೆಯರು ನಾಟ್ಯವಾಡತೊಡಗಿದರು. ॥ ೭ ॥ ಆಕಾಶದಲ್ಲಿ ಶಂಖ, ತೂರ್ಯ, ಮೃದಂಗ, ದುಂದುಭಿ ಮುಂತಾದ ವಾದ್ಯಗಳು ಮೊಳಗಿದವು. ಸಮಸ್ತ ದೇವತೆಗಳೂ, ಋಷಿಗಳೂ, ಪಿತೃಗಳೂ ತಮ್ಮ-ತಮ್ಮ ಲೋಕಗಳಿಂದ ಅಲ್ಲಿಗೆ ಆಗಮಿಸಿದರು. ॥ ೮ ॥ ಜಗತ್ತಿಗೆ ಗುರುವಾದ ಬ್ರಹ್ಮದೇವರೂ ಇತರ ದೇವತಾ ಮುಖ್ಯರೊಂದಿಗೆ ದಯಮಾಡಿಸಿದರು. ಅವರು ಆ ವೇನಪುತ್ರ ಪೃಥುವಿನ ಬಲಗೈಯಲ್ಲಿ ಭಗವಾನ್ ಶ್ರೀವಿಷ್ಣುವಿನ ಹಸ್ತರೇಖೆಗಳನ್ನೂ, ಕಾಲುಗಳಲ್ಲಿ ಕಮಲದ ಚಿಹ್ನೆಗಳನ್ನು ಕಂಡು ಅವನು ಶ್ರೀಹರಿಯ ಅಂಶವೆಂದೇ ತಿಳಿದರು. ಏಕೆಂದರೆ ಯಾರ ಕೈಯಲ್ಲಿ ಇತರ ರೇಖೆಗಳ ಮಿಶ್ರಣವಿಲ್ಲದ ಚಕ್ರದ ಚಿಹ್ನೆಯು ಇರುತ್ತದೋ ಅವನು ಭಗವಂತನ ಅಂಶನೇ ಆಗಿರುತ್ತಾನೆ. ॥ ೯-೧೦ ॥

ತಸ್ಯಾಭಿಷೇಕ ಆರಬ್ಧೋ ಬ್ರಾಹ್ಮಣೈರ್ಬ್ರಹ್ಮವಾದಿಭಿಃ ।
ಆಭಿಷೇಚನಿಕಾನ್ಯಸ್ಮೈ ಆಜಹ್ರುಃ ಸರ್ವತೋ ಜನಾಃ ॥ ೧೧ ॥

ಸರಿತ್ಸಮುದ್ರಾ ಗಿರಯೋ ನಾಗಾ ಗಾವಃ ಖಗಾ ಮೃಗಾಃ ।
ದ್ಯೌಃ ಕ್ಷಿತಿಃ ಸರ್ವಭೂತಾನಿ ಸಮಾಜಹ್ರುರುಪಾಯನಮ್ ॥ ೧೨ ॥

ಸೋಽಭಿಷಿಕ್ತೋ ಮಹಾರಾಜಃ ಸುವಾಸಾಃ ಸಾಧ್ವಲಂಕೃತಃ ।
ಪತ್ನ್ಯಾರ್ಚಿಷಾಲಂಕೃತಯಾ ವಿರೇಜೇಽಗ್ನಿರಿವಾಪರಃ ॥ ೧೩ ॥

ತಸ್ಮೈ ಜಹಾರ ಧನದೋ ಹೈಮಂ ವೀರ ವರಾಸನಮ್ ।
ವರುಣಃ ಸಲಿಲಸ್ರಾವಮಾತಪತ್ರಂ ಶಶಿಪ್ರಭಮ್ ॥ ೧೪ ॥

ವಾಯುಶ್ಚ ವಾಲವ್ಯಜನೇ ಧರ್ಮಃ ಕೀರ್ತಿಮಯೀಂ ಸ್ರಜಮ್ ।
ಇಂದ್ರಃ ಕಿರೀಟಮುತ್ಕೃಷ್ಟಂ ದಂಡಂ ಸಂಯಮನಂ ಯಮಃ ॥ ೧೫ ॥

ಬ್ರಹ್ಮಾ ಬ್ರಹ್ಮಮಯಂ ವರ್ಮ ಭಾರತೀ ಹಾರಮುತ್ತಮಮ್ ।
ಹರಿಃ ಸುದರ್ಶನಂ ಚಕ್ರಂ ತತ್ಪತ್ನ್ಯವ್ಯಾಹತಾಂ ಶ್ರಿಯಮ್ ॥ ೧೬ ॥

ದಶಚಂದ್ರಮಸಿಂ ರುದ್ರಃ ಶತಚಂದ್ರಂ ತಥಾಂಬಿಕಾ ।
ಸೋಮೋಽಮೃತಮಯಾನಶ್ವಾಂಸ್ತ್ವಷ್ಟಾ ರೂಪಾಶ್ರಯಂ ರಥಮ್ ॥ ೧೭ ॥

ಅಗ್ನಿರಾಜಗವಂ ಚಾಪಂ ಸೂರ್ಯೋ ರಶ್ಮಿಮಯಾನಿಷೂನ್ ।
ಭೂಃ ಪಾದುಕೇ ಯೋಗಮಯ್ಯೌ ದ್ಯೌಃ ಪುಷ್ಪಾವಲಿಮನ್ವಹಮ್ ॥ ೧೮ ॥

ನಾಟ್ಯಂ ಸುಗೀತಂ ವಾದಿತ್ರಮಂತರ್ಧಾನಂ ಚ ಖೇಚರಾಃ ।
ಋಷಯಶ್ಚಾಶಿಷಃ ಸತ್ಯಾಃ ಸಮುದ್ರಃ ಶಂಖಮಾತ್ಮಜಮ್ ॥ ೧೯ ॥

ಸಿಂಧವಃ ಪರ್ವತಾ ನದ್ಯೋ ರಥವೀಥೀರ್ಮಹಾತ್ಮನಃ ।
ಸೂತೋಽಥ ಮಾಗಧೋ ವಂದೀ ತಂ ಸ್ತೋತುಮುಪತಸ್ಥಿರೇ ॥ ೨೦ ॥

ಸ್ತಾವಕಾಂಸ್ತಾನಭಿಪ್ರೇತ್ಯ ಪೃಥುರ್ವೈನ್ಯಃ ಪ್ರತಾಪವಾನ್ ।
ಮೇಘನಿರ್ಹ್ರಾದಯಾ ವಾಚಾ ಪ್ರಹಸನ್ನಿದಮಬ್ರವೀತ್ ॥ ೨೧ ॥

ವೇದವಾದಿಗಳಾದ ಬ್ರಾಹ್ಮಣರು ಮಹಾರಾಜಾ ಪೃಥುವಿನ ಪಟ್ಟಾಭಿಷೇಕ ಮಾಡಬೇಕೆಂದು ಸಿದ್ಧತೆ ನಡೆಸಿದರು. ಎಲ್ಲ ಜನರೂ ಅದಕ್ಕಾಗಿ ಸಾಮಗ್ರಿಗಳನ್ನು ಸಂಗ್ರಹಿಸತೊಡಗಿದರು. ॥ ೧೧ ॥ ಆಗ ನದಿಗಳು, ಸಮುದ್ರಗಳು, ಪರ್ವತಗಳು, ಸರ್ಪಗಳು, ಗೋವುಗಳು, ಪಕ್ಷಿಗಳು, ಮೃಗಗಳು, ಸ್ವರ್ಗಲೋಕ, ಭೂಲೋಕಗಳು, ಇತರ ಪ್ರಾಣಿಗಳೂ ಆ ರಾಜನಿಗೆ ನಾನಾಬಗೆಯ ಕಾಣಿಕೆಗಳನ್ನು ಅರ್ಪಿಸಿದರು. ॥ ೧೨ ॥ ಸುಂದರವಾದ ಉಡುಗೆ-ತೊಡಿಗೆಗಳಿಂದ ಅಲಂಕೃತನಾಗಿದ್ದ ಪೃಥುಮಹಾರಾಜನಿಗೆ ವಿಧಿವತ್ತಾಗಿ ಪಟ್ಟಾಭಿಷೇಕ ನಡೆಯಿತು. ಆಗ ದಿವ್ಯ ವಸ್ತ್ರಾಭರಣಗಳಿಂದ ಅಲಂಕೃತೆಯಾದ ಮಹಾರಾಣಿ ಅರ್ಚಿಯಿಂದೊಡಗೂಡಿದ ಪೃಥುವು ಮತ್ತೊಬ್ಬ ಅಗ್ನಿದೇವನಂತೆ ಬೆಳಗುತ್ತಿದ್ದನು. ॥ ೧೩ ॥

ವೀರನಾದ ವಿದುರನೇ! ಆಗ ಕುಬೇರನು ಅವನಿಗೆ ಅತಿ ಸುಂದರವಾದ ಸಿಂಹಾಸನವನ್ನು ಸಮರ್ಪಿಸಿದನು. ವರುಣನು ನೀರಿನ ಹನಿಗಳು ತೊಟ್ಟಿಕ್ಕುತ್ತಿದ್ದ ಚಂದ್ರನಂತೆ ಪ್ರಕಾಶಮಯ ಶ್ವೇತ ಛತ್ರವನ್ನು ಅರ್ಪಣೆಮಾಡಿದನು. ॥ ೧೪ ॥ ವಾಯುವು ಎರಡು ದಿವ್ಯವಾದ ಚಾಮರಗಳನ್ನು, ಧರ್ಮದೇವತೆಯು ಕೀರ್ತಿಮಯವಾದ ಮಾಲೆಯನ್ನು, ಇಂದ್ರನು ಮನೋಹರ ಕಿರೀಟವನ್ನೂ, ಯಮನು ದುಷ್ಟರನ್ನು ದಮನಗೊಳಿಸುವ ದಂಡವನ್ನೂ, ಬ್ರಹ್ಮದೇವನು ವೇದಮಯ ಕವಚವನ್ನು, ಸರಸ್ವತಿಯು ಸುಂದರವಾದ ಹಾರವನ್ನು, ಭಗವಾನ್ ಮಹಾವಿಷ್ಣುವು ಸುದರ್ಶನಚಕ್ರವನ್ನು, ಅವನ ಪತ್ನಿಯಾದ ಲಕ್ಷ್ಮೀದೇವಿಯು ಶಾಶ್ವತವಾದ ಐಶ್ವರ್ಯವನ್ನು, ರುದ್ರದೇವನು ಹತ್ತು ಚಂದ್ರಾಕಾರದ ಚಿಹ್ನೆಗಳಿಂದ ಬೆಳಗುತ್ತಿದ್ದ ಒರೆಸಹಿತ ಖಡ್ಗವನ್ನು, ಅಂಬಿಕಾದೇವಿಯು ನೂರು ಚಂದ್ರಾಕಾರ ಚಿಹ್ನೆಗಳಿಂದ ಶೋಭಿಸುವ ಗುರಾಣಿಯನ್ನು, ಚಂದ್ರನು ಅಮೃತಮಯವಾದ ಅಶ್ವಗಳನ್ನು, ವಿಶ್ವಕರ್ಮನು ಸುಂದರವಾದ ರಥವನ್ನು, ಅಗ್ನಿಯು ಆಜಗವ ಎಂಬ ದೃಢವಾದ ಧನುಸ್ಸನ್ನು, ಸೂರ್ಯನು ತೇಜೋಮಯವಾದ ಬಾಣಗಳನ್ನು, ಭೂದೇವಿಯು ಇಷ್ಟಬಂದ ಕಡೆಗೆ ಕೊಂಡೊಯ್ಯುವ ಯೋಗಶಕ್ತಿಯಿಂದ ಕೂಡಿದ ಪಾದುಕೆಗಳನ್ನು, ಸ್ವರ್ಗಾಭಿಮಾನಿ ದ್ಯುದೇವತೆಯು ಎಂದೆಂದಿಗೂ ಬಾಡದಿರುವ ಪುಷ್ಪಮಾಲೆಯನ್ನು, ಆಕಾಶವಿಹಾರಿಗಳಾದ ಸಿದ್ಧ-ಗಂಧರ್ವಾದಿಗಳು ನೃತ್ಯ-ಗಾನ-ವಾದ್ಯವಾದನ ಮಾಡುವ ಕಲೆಯನ್ನು ಮತ್ತು ಇಷ್ಟಬಂದಾಗ ಅಂತರ್ಧಾನಹೊಂದುವ ಶಕ್ತಿಗಳನ್ನು ಬಳುವಳಿಯಾಗಿ ಕೊಟ್ಟರು. ಋಷಿಗಳು ಅಮೋಘವಾದ ಆಶೀರ್ವಾದಗಳನ್ನು ಅನುಗ್ರಹಿಸಿದರು. ಸಮುದ್ರರಾಜನು ತನ್ನಲ್ಲಿ ದೊರೆತ ದಿವ್ಯ ಶಂಖವನ್ನು ಸಮರ್ಪಿಸಿದನು. ಸಪ್ತಸಾಗರಗಳೂ, ಪರ್ವತಗಳೂ, ನದಿಗಳೂ ಅವನ ರಥಕ್ಕೆ ಅಡೆ-ತಡೆಯಿಲ್ಲದ ಮಾರ್ಗವನ್ನು ಕಾಣಿಕೆಯಾಗಿ ಕೊಟ್ಟವು. ಇದಾದ ಬಳಿಕ ಸೂತರು, ವಂದಿಗಳು, ಮಾಗಧರೆಂಬ ಹೊಗಳುಭಟ್ಟರು ಅವನಿಗೆ ಸ್ತೋತ್ರ ಸೇವೆಯನ್ನು ಸಮರ್ಪಿಸಲು ಮುಂದೆ ಬಂದರು. ॥ ೧೫-೨೦ ॥ ಆಗ ಆ ಪ್ರತಾಪಶಾಲಿಯಾದ ಪೃಥುಚಕ್ರವರ್ತಿಯು ಅವರ ಆಶಯವನ್ನು ಅರಿತು, ನಗುತ್ತಾ ಮೇಘದಂತೆ ಗಂಭೀರವಾದ ಮಾತುಗಳಿಂದ ಹೀಗೆಂದನು. ॥ ೨೧ ॥

ಪೃಥುರುವಾಚ

ಭೋಃ ಸೂತ ಹೇ ಮಾಗಧ ಸೌಮ್ಯ ವಂದಿ-
ಲ್ಲೋಕೇಽಧುನಾಸ್ಪಷ್ಟಗುಣಸ್ಯ ಮೇ ಸ್ಯಾತ್ ।
ಕಿಮಾಶ್ರಯೋ ಮೇ ಸ್ತವ ಏಷ ಯೋಜ್ಯತಾಂ
ಮಾ ಮಯ್ಯಭೂವನ್ವಿತಥಾ ಗಿರೋ ವಃ ॥ ೨೨ ॥

ತಸ್ಮಾತ್ಪರೋಕ್ಷೇಽಸ್ಮ ದುಪಶ್ರುತಾನ್ಯಲಂ-
ಕರಿಷ್ಯಥ ಸ್ತೋತ್ರಮಪೀಚ್ಯವಾಚಃ ।
ಸತ್ಯುತ್ತಮಶ್ಲೋಕಗುಣಾನುವಾದೇ
ಜುಗುಪ್ಸಿತಂ ನ ಸ್ತವಯಂತಿ ಸಭ್ಯಾಃ ॥ ೨೩ ॥

ಮಹದ್ಗುಣಾನಾತ್ಮನಿ ಕರ್ತುಮೀಶಃ
ಕಃ ಸ್ತಾವಕೈಃ ಸ್ತಾವಯತೇಽಸತೋಽಪಿ ।
ತೇಽಸ್ಯಾಭವಿಷ್ಯನ್ನಿತಿ ವಿಪ್ರಲಬ್ಧೋ
ಜನಾವಹಾಸಂ ಕುಮತಿರ್ನ ವೇದ ॥ ೨೪ ॥

ಪ್ರಭವೋ ಹ್ಯಾತ್ಮನಃ ಸ್ತೋತ್ರಂ ಜುಗುಪ್ಸಂತ್ಯಪಿ ವಿಶ್ರುತಾಃ ।
ಹ್ರೀಮಂತಃ ಪರಮೋದಾರಾಃ ಪೌರುಷಂ ವಾ ವಿಗರ್ಹಿತಮ್ ॥ ೨೫ ॥

ವಯಂ ತ್ವವಿದಿತಾ ಲೋಕೇ ಸೂತಾದ್ಯಾಪಿ ವರೀಮಭಿಃ ।
ಕರ್ಮಭಿಃ ಕಥಮಾತ್ಮಾನಂ ಗಾಪಯಿಷ್ಯಾಮ ಬಾಲವತ್ ॥ ೨೬ ॥

ಪೃಥುವು ಹೇಳಿದನು – ಸೌಮ್ಯರಾದ ಸೂತ-ಮಾಗಧ-ವಂದಿಗಳೇ! ನನ್ನ ಯಾವ ಗುಣವೂ ಇಲ್ಲಿಯವರೆಗೆ ಲೋಕದಲ್ಲಿ ಪ್ರಕಟವಾಗಿಲ್ಲ, ಹೀಗಿರುವಾಗ ನನ್ನ ಯಾವಗುಣಗಳನ್ನು ಸ್ತೋತ್ರ ಮಾಡುವಿರಿ? ನಿಮ್ಮ ಮಾತುಗಳು ವ್ಯರ್ಥವಾಗಬಾರದು. ನನ್ನ ಬಗೆಗೆ ಸುಳ್ಳುಹೊಗಳಿಕೆಯಾಗಬಾರದು. ಆದ್ದರಿಂದ ನನ್ನಿಂದ ಬೇರೆ ಯಾರನ್ನಾದರೂ ಸ್ತುತಿಮಾಡಿರಿ. ॥ ೨೨ ॥ ಎಲೈ ಮೃದುಭಾಷಿಗಳೇ! ಕಾಲಾಂತರದಲ್ಲಿ ನನ್ನ ಗುಣಗಳು ಪ್ರಕಟವಾದಾಗ ಅವುಗಳನ್ನು ಬಾಯ್ತುಂಬಾ ಸವಿಮಾತುಗಳಿಂದ ಸ್ತುತಿಸುವಿರಂತೆ. ಪವಿತ್ರಕೀರ್ತಿಯುಳ್ಳ ಶ್ರೀಭಗವಂತನ ಗುಣಗಳನ್ನು ಸ್ತೋತ್ರಮಾಡಬಹುದಾಗಿರುವಾಗ ಅದನ್ನು ಬಿಟ್ಟು ಶಿಷ್ಟರಾದವರು ತುಚ್ಛವಾದ ನರಸ್ತುತಿಯನ್ನು ಮಾಡುವುದಿಲ್ಲ. ॥ ೨೩ ॥ ಮಹಾನ್ ಗುಣಗಳನ್ನು ಧಾರಣೆ ಮಾಡಲು ಸಾಮರ್ಥ್ಯವಿದ್ದರೂ, ಯಾವುದು ತನ್ನಲ್ಲಿ ಇಲ್ಲದಿದ್ದರೂ ಕೇವಲ ಊಹಾಮಾತ್ರದಿಂದ ಸ್ತುತಿಮಾಡುವವರ ಮೂಲಕ ಯಾವ ಬುದ್ಧಿವಂತ ಮನುಷ್ಯನು ತನ್ನನ್ನು ಹೊಗಳಿಸಿಕೊಳ್ಳಬಲ್ಲನು? ಏಕೆಂದರೆ ಗುಣಗಳು ಪ್ರಕಟಗೊಳ್ಳುವ ಮೊದಲೇ ಸ್ತುತಿಸುವುದು ವಂಚನೆಯೇ ಆಗಿದೆ. ಜನರು ಈ ರೀತಿ ತನ್ನನ್ನು ಉಪಹಾಸ ಮಾಡುತ್ತಿದ್ದಾರೆ ಎಂಬುದನ್ನು ಆ ತಿಳಿಗೇಡಿಯು ತಿಳಿಯುವುದಿಲ್ಲ. ॥ ೨೪ ॥ ಲಜ್ಜೆಯುಳ್ಳ ಉದಾರ ಪುರುಷನು ತನ್ನ ಯಾವುದೋ ನಿಂದಿತ ಪರಾಕ್ರಮದ ಚರ್ಚೆ ನಡೆದರೆ ಅದರ ಕುರಿತು ಜುಗುಪ್ಸೆಪಡುತ್ತಾರೆ. ಹೀಗೆಯೇ ಲೋಕವಿಖ್ಯಾತ ಸಮರ್ಥ ಮನುಷ್ಯರು ತನ್ನ ಸ್ತುತಿಯನ್ನೂ ನಿಂದೆಯೆಂದೇ ತಿಳಿಯುತ್ತಾರೆ. ॥ ೨೫ ॥ ಎಲೈ ಸೂತರೇ! ಇನ್ನೂ ನಾವು ನಮ್ಮ ಶ್ರೇಷ್ಠವಾದ ಕರ್ಮಗಳಿಂದ ಲೋಕದಲ್ಲಿ ಪ್ರಸಿದ್ಧಿಗೆ ಬರಲಿಲ್ಲ. ಪ್ರಶಂಸೆಗೆ ಯೋಗ್ಯವಾದ ಯಾವ ಕರ್ಮವನ್ನೂ ಮಾಡಿಲ್ಲ. ಹೀಗಿರುವಾಗ ಬಾಲಕರಂತೆ ನಿಮ್ಮಿಂದ ಹೇಗೆ ಹೊಗಳಿಸಿಕೊಳ್ಳಲಿ? ॥ ೨೬ ॥

ಹದಿನೈದನೆಯ ಅಧ್ಯಾಯವು ಮುಗಿಯಿತು. ॥ ೧೫ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಚತುರ್ಥಸ್ಕಂಧೇ
ಪೃಥುಚರಿತೇ ಪಂಚದಶೋಽಧ್ಯಾಯಃ ॥ ೧೫ ॥

ಹದಿನಾರನೆಯ ಅಧ್ಯಾಯ

ವಂದಿ ಮಾಗಧರಿಂದ ಪೃಥುಚಕ್ರವರ್ತಿಯ ಸ್ತುತಿ

ಮೈತ್ರೇಯ ಉವಾಚ

ಇತಿ ಬ್ರುವಾಣಂ ನೃಪತಿಂ ಗಾಯಕಾ ಮುನಿಚೋದಿತಾಃ ।
ತುಷ್ಟುವುಸ್ತುಷ್ಟಮನಸಸ್ತದ್ವಾಗಮೃತಸೇವಯಾ ॥ ೧ ॥

ನಾಲಂ ವಯಂ ತೇ ಮಹಿಮಾನುವರ್ಣನೇ
ಯೋ ದೇವವರ್ಯೋಽವತತಾರ ಮಾಯಯಾ ।

ಶ್ರೀಮೈತ್ರೇಯರು ಹೇಳುತ್ತಾರೆ – ಹೀಗೆ ಪೃಥು ಮಹಾರಾಜನು 'ತನ್ನನ್ನು ಈಗ ಸ್ತುತಿಸಬಾರದು' ಎಂದು ಹೇಳಿದಾಗ ಅವನ ವಚನಾಮೃತವನ್ನು ಆಸ್ವಾದಿಸಿದ ಸೂತರೇ ಮುಂತಾದ ಗಾಯಕರ ಮನಸ್ಸು ಆನಂದದಿಂದ ತುಂಬಿಹೋಯಿತು. ಮತ್ತೆ ಮುನಿಗಳ ಪ್ರೇರಣೆಯಿಂದ ಅವರು ಪೃಥುಚಕ್ರವರ್ತಿಯನ್ನು ಹೀಗೆ ಸ್ತುತಿಸತೊಡಗಿದರು. ॥ ೧ ॥ "ಮಹಾಪ್ರಭುವೇ! ನೀನು ಸಾಕ್ಷಾತ್ ದೇವಶ್ರೇಷ್ಠನಾದ ಶ್ರೀನಾರಾಯಣನೇ ಆಗಿರುವೆ. ನಿನ್ನ ಮಾಯೆ

ವೇನಾಂಗ ಜಾತಸ್ಯ ಚ ಪೌರುಷಾಣಿ ತೇ
ವಾಚಸ್ಪತೀನಾಮಪಿ ಬಭ್ರಮುರ್ಧಿಯಃ ॥ ೨ ॥

ಅಥಾಪ್ಯುದಾರಶ್ರವಸಃ ಪೃಥೋರ್ಹರೇಃ
ಕಲಾವತಾರಸ್ಯ ಕಥಾಮೃತಾದೃತಾಃ ।
ಯಥೋಪದೇಶಂ ಮುನಿಭಿಃ ಪ್ರಚೋದಿತಾಃ
ಶ್ಲಾಘ್ಯಾನಿ ಕರ್ಮಾಣಿ ವಯಂ ವಿತನ್ಮಹಿ ॥ ೩ ॥

ಏಷ ಧರ್ಮಭೃತಾಂ ಶ್ರೇಷ್ಠೋ
ಲೋಕಂ ಧರ್ಮೇಽನುವರ್ತಯನ್ ।
ಗೋಪ್ತಾ ಚ ಧರ್ಮಸೇತೂನಾಂ
ಶಾಸ್ತಾ ತತ್ಪರಿಪಂಥಿನಾಮ್ ॥ ೪ ॥

ಏಷ ವೈ ಲೋಕಪಾಲಾನಾಂ
ಬಿಭರ್ತ್ಯೇಕಸ್ತನೌ ತನೂಃ ।
ಕಾಲೇ ಕಾಲೇ ಯಥಾಭಾಗಂ
ಲೋಕಯೋರುಭಯೋರ್ಹಿತಮ್ ॥ ೫ ॥

ವಸು ಕಾಲ ಉಪಾದತ್ತೇ ಕಾಲೇ ಚಾಯಂ ವಿಮುಂಚತಿ ।
ಸಮಃ ಸರ್ವೇಷು ಭೂತೇಷು ಪ್ರತಪನ್ಸೂರ್ಯವದ್ವಿಭುಃ
॥ ೬ ॥

ತಿತಿಕ್ಷತ್ಯಕ್ರಮಂ ವೈನ್ಯ ಉಪರ್ಯಾಕ್ರಮತಾಮಪಿ ।
ಭೂತಾನಾಂ ಕರುಣಃ ಶಶ್ವದಾರ್ತಾನಾಂ ಕ್ಷಿತಿವೃತ್ತಿಮಾನ್
॥ ೭ ॥

ದೇವೇಽವರ್ಷತ್ಯಸೌ ದೇವೋ ನರದೇವವಪುರ್ಹರಿಃ ।
ಕೃಚ್ಛ್ರಪ್ರಾಣಾಃ ಪ್ರಜಾ ಹ್ಯೇಷ ರಕ್ಷಿಷ್ಯತ್ಯಂಜಸೇಂದ್ರವತ್
॥ ೮ ॥

ಆಪ್ಯಾಯಯತ್ಯಸೌ ಲೋಕಂ ವದನಾಮೃತಮೂರ್ತಿನಾ ।
ಸಾನುರಾಗಾವಲೋಕೇನ ವಿಶದಸ್ಮಿತಚಾರುಣಾ
॥ ೯ ॥

ಅವ್ಯಕ್ತವರ್ತ್ಮೈಷ ನಿಗೂಢಕಾರ್ಯೋ
ಗಂಭೀರವೇಧಾ ಉಪಗುಪ್ತವಿತ್ತಃ ।
ಅನಂತಮಾಹಾತ್ಮ್ಯಗುಣೈಕಧಾಮಾ
ಪೃಥುಃ ಪ್ರಚೇತಾ ಇವ ಸಂವೃತಾತ್ಮಾ ॥ ೧೦ ॥

ಯಿಂದ ಅವತರಿಸಿರುವೆ. ನಿನ್ನ ಮಹಿಮೆಯನ್ನು ವರ್ಣಿಸಲು ನಮಗೇನೂ ಶಕ್ತಿಯಿಲ್ಲ. ರಾಜಾ ವೇನನ ಮೃತಶರೀರದಿಂದ ಆವಿರ್ಭವಿಸಿದ್ದರೂ ನೀನು ಅಪ್ರಾಕೃತನಾದ ಭಗವಂತನೇ ಆಗಿರುವುದರಿಂದ ನಿನ್ನ ದಿವ್ಯವಾದ ಪೌರುಷಗಳನ್ನು ವರ್ಣಿಸಲು ಸಾಕ್ಷಾತ್ ಬ್ರಹ್ಮಾದಿಗಳ ಬುದ್ಧಿಯೂ ಮಸಳಿ ಹೋಗುವುದು. ॥ ೨ ॥ ಆದರೂ ನಿನ್ನ ಕಥಾಮೃತವನ್ನು ಸವಿಯುವುದರಲ್ಲಿ ಆದರ ಬುದ್ಧಿಯನ್ನು ಹೊಂದಿ, ನಾವು ಮುನಿಗಳ ಉಪದೇಶಕ್ಕನುಸಾರ, ಅವರ ಪ್ರೇರಣೆಯಿಂದಲೇ ನಿನ್ನ ಪರಮ ಪ್ರಶಂಸನೀಯವಾದ ಕರ್ಮಗಳನ್ನು ಸ್ವಲ್ಪ ವಿವರಿಸಲು ಬಯಸುತ್ತೇವೆ. ನೀನು ಸಾಕ್ಷಾತ್ ಶ್ರೀಹರಿಯ ಕಲಾವತಾರನಾಗಿದ್ದು, ಉದಾರವಾದ ಕೀರ್ತಿಯುಳ್ಳವನು. ॥ ೩ ॥

ಈ ಪೃಥುಚಕ್ರವರ್ತಿಯು ಧರ್ಮವನ್ನು ಧರಿಸಿ ಪೋಷಿಸುವವರಲ್ಲಿ ಅತ್ಯಂತ ಶ್ರೇಷ್ಠನು. ಲೋಕವನ್ನು ಧರ್ಮದಲ್ಲಿ ನೆಲೆಗೊಳಿಸಿ ಧರ್ಮಮಾರ್ಗದಲ್ಲಿ ನಡೆಸುವನು. ಧರ್ಮಸೇತುವನ್ನು ಕಾಪಾಡುವನು. ಧರ್ಮವಿರೋಧಿಗಳನ್ನು ದಂಡಿಸುವನು. ॥ ೪ ॥ ಇವನು ಒಬ್ಬನೇ ಆಗಿದ್ದರೂ ತನ್ನ ಶರೀರದಲ್ಲಿ ಇಂದ್ರನೇ ಮುಂತಾದ ಎಲ್ಲ ಲೋಕಪಾಲಕರ ಮೂರ್ತಿಗಳನ್ನು ಧರಿಸಿಕೊಂಡು ಆಯಾ ಸಮಯದಲ್ಲಿ ಭೂಲೋಕ, ಸ್ವರ್ಗಲೋಕ ಈ ಎರಡಕ್ಕೂ ಹಿತ ಉಂಟಾಗುವಂತೆ ಧರ್ಮಗಳನ್ನು ಕಾಪಾಡುವನು. ಯಜ್ಞಾದಿಗಳ ಮೂಲಕ ಲೋಕಕ್ಕೆ ಮಳೆ-ಬೆಳೆಗಳನ್ನೂ, ದೇವತೆಗಳಿಗೆ ಹವಿರ್ಭಾಗಗಳನ್ನೂ ನೀಡುತ್ತಾ ಎರಡೂ ಲೋಕಗಳನ್ನೂ ಪೊರೆಯುವನು. ॥ ೫ ॥ ಈತನು ಸೂರ್ಯನಿಗೆ ಸಮಾನನಾಗಿ ಮಹಾಪ್ರತಾಪಿಯೂ, ಸಮದರ್ಶಿಯೂ, ವ್ಯಾಪಕನೂ ಆಗಿರುವನು. ಆದಿತ್ಯನು ಎಂಟು ತಿಂಗಳ ಕಾಲ ಬಿಸಿಲಿನಿಂದ ಜಲವನ್ನು ಸೆಳೆದುಕೊಂಡು ವರ್ಷಾಕಾಲದಲ್ಲಿ ಹೇರಳವಾಗಿ ಮಳೆಗರೆದು ಲೋಕಕ್ಕೆ ಹಿತವನ್ನುಂಟುಮಾಡುವಂತೆ ಈತನು ಸುಭಿಕ್ಷಕಾಲದಲ್ಲಿ ಜನರಿಂದ ಕಂದಾಯದ ಮೂಲಕ ಧನವನ್ನು ಸಂಗ್ರಹಿಸಿ ಅದನ್ನು ಪ್ರಜೆಯ ಹಿತಕ್ಕಾಗಿ ವ್ಯಯಮಾಡುವನು. ॥ ೬ ॥ ಈ ಮಹಾತ್ಮನು ಕ್ಷಮಾಗುಣದಲ್ಲಿ ಭೂದೇವಿಗೆ ಸಮಾನನಾಗಿರುವನು. ಯಾರಾದರೂ ದೀನ ಜನರು ತನ್ನ ಮೇಲೆ ಆಕ್ರಮಣಮಾಡಿದರೂ ಕರುಣೆಯಿಂದ ಅವರ ಅಪರಾಧಗಳನ್ನು ಸೈರಿಸಿಕೊಳ್ಳುವನು. ॥ ೭ ॥ ಎಂದಾದರೂ ಮಳೆಬರದೆ ಪ್ರಜೆಗಳು ಸಂಕಟಕ್ಕೊಳಗಾದರೆ ಈ ರಾಜರೂಪಿಯಾದ ಶ್ರೀಹರಿಯು ಇಂದ್ರನಂತೆ ಮಳೆಗರೆದು ಸಹಜವಾಗಿ ಅವರನ್ನು ಪೊರೆಯುವನು. ॥ ೮ ॥ ಇವನು ತನ್ನ ಅಮೃತಮಯ ಮುಖ ಚಂದ್ರದ ಮನೋಹರ ಮುಗುಳ್ನಗೆಯಿಂದ, ಪ್ರೀತಿಯನ್ನೊಸರಿಸುವ ನವಿನೋಟದಿಂದ ಸಮಸ್ತಲೋಕಕ್ಕೆ ಆನಂದವನ್ನು ಉಂಟುಮಾಡುವನು. ॥ ೯ ॥ ಇವನ ಗತಿಯನ್ನು ಇತರರು ಅರಿಯಲಾರರು. ಇವನ ಕಾರ್ಯಗಳೂ ಕೂಡ ಗುಪ್ತವಾಗಿರುವುವು. ಅವನ್ನು ಯಶಸ್ವಿಯಾಗಿಸುವ ಕ್ರಮವೂ ತುಂಬಾ ಗಂಭೀರವಾಗಿರುವುದು. ಇವನ ಧನವು ಸದಾಕಾಲ ಸುರಕ್ಷಿತವಾಗಿರುವುದು. ಅನಂತ ಮಹಾತ್ಮ್ಯ ಮತ್ತು ಗುಣ ರತ್ನಗಳಿಗೆ ಏಕಮಾತ್ರ ಆಶ್ರಯನಾಗಿರುವನು. ಹೀಗೆ ಈ ಪೃಥುವು ಸಾಕ್ಷಾತ್ ವರುಣನಿಗೆ ಸಮಾನನಾಗುವನು. ॥ ೧೦ ॥

ದುರಾಸದೋ ದುರ್ವಿಷಹ ಆಸನ್ನೋಽಪಿ ವಿದೂರವತ್ ।
ನೈವಾಭಿಭವಿತುಂ ಶಕ್ಯೋ ವೇನಾರಣ್ಯುತ್ಥಿತೋಽನಲಃ
॥ ೧೧ ॥

ಅಂತರ್ಬಹಿಶ್ಚ ಭೂತಾನಾಂ ಪಶ್ಯನ್ಕರ್ಮಾಣಿ ಚಾರಣೈಃ ।
ಉದಾಸೀನ ಇವಾಧ್ಯಕ್ಷೋ ವಾಯುರಾತ್ಮೇವ ದೇಹಿನಾಮ್
॥ ೧೨ ॥

ನಾದಂಡ್ಯಂ ದಂಡಯತ್ಯೇಷ ಸುತಮಾತ್ಮದ್ವಿಷಾಮಪಿ ।
ದಂಡಯತ್ಯಾತ್ಮಜಮಪಿ ದಂಡ್ಯಂ ಧರ್ಮಪಥೇ ಸ್ಥಿತಃ
॥ ೧೩ ॥

ಅಸ್ಯಾಪ್ರತಿಹತಂ ಚಕ್ರಂ ಪೃಥೋರಾಮಾನಸಾಚಲಾತ್ ।
ವರ್ತತೇ ಭಗವಾನರ್ಕೋ ಯಾವತ್ತಪತಿ ಗೋಗಣೈಃ
॥ ೧೪ ॥

ರಂಜಯಿಷ್ಯತಿ ಯಲ್ಲೋಕಮಯಮಾತ್ಮವಿಚೇಷ್ಟಿತೈಃ ।
ಅಥಾಮುಮಾಹೂ ರಾಜಾನಂ ಮನೋರಂಜನಕೈಃ ಪ್ರಜಾಃ
॥ ೧೫ ॥

ದೃಢವ್ರತಃ ಸತ್ಯಸಂಧೋ ಬ್ರಹ್ಮಣ್ಯೋ ವೃದ್ಧಸೇವಕಃ ।
ಶರಣ್ಯಃ ಸರ್ವಭೂತಾನಾಂ ಮಾನದೋ ದೀನವತ್ಸಲಃ
॥ ೧೬ ॥

ಮಾತೃಭಕ್ತಿಃ ಪರಸ್ತ್ರೀಷು ಪತ್ನ್ಯಾಮರ್ಧ ಇವಾತ್ಮನಃ ।
ಪ್ರಜಾಸು ಪಿತೃವತ್ಸ್ನಿಗ್ಧಃ ಕಿಂಕರೋ ಬ್ರಹ್ಮವಾದಿನಾಮ್
॥ ೧೭ ॥

ದೇಹಿನಾಮಾತ್ಮವತ್ಪ್ರೇಷ್ಠಃ ಸುಹೃದಾಂ ನಂದಿವರ್ಧನಃ ।
ಮುಕ್ತಸಂಗಪ್ರಸಂಗೋಽಯಂ ದಂಡಪಾಣಿರಸಾಧುಷು
॥ ೧೮ ॥

ಅಯಂ ತು ಸಾಕ್ಷಾದ್ಭಗವಾನ್‌ಸ್ತ್ರ್ಯಧೀಶಃ
ಕೂಟಸ್ಥ ಆತ್ಮಾ ಕಲಯಾವತೀರ್ಣಃ ।
ಯಸ್ಮಿನ್ನವಿದ್ಯಾರಚಿತಂ ನಿರರ್ಥಕಂ
ಪಶ್ಯಂತಿ ನಾನಾತ್ವಮಪಿ ಪ್ರತೀತಮ್ ॥ ೧೯ ॥

ಅಯಂ ಭುವೋ ಮಂಡಲಮೋದಯಾದ್ರೇ-
ಗೋಪ್ತೈಕವೀರೋ ನರದೇವನಾಥಃ ।
ಆಸ್ಥಾಯ ಜೈತ್ರಂ ರಥಮಾತ್ತಚಾಪಃ
ಪರ್ಯಸ್ಯತೇ ದಕ್ಷಿಣತೋ ಯಥಾರ್ಕಃ ॥ ೨೦ ॥

ಅಸ್ಮೈ ನೃಪಾಲಾಃ ಕಿಲ ತತ್ರ ತತ್ರ
ಬಲಿಂ ಹರಿಷ್ಯಂತಿ ಸಲೋಕಪಾಲಾಃ ।
ಮಂಸ್ಯಂತ ಏಷಾಂ ಸ್ತ್ರಿಯ ಆದಿರಾಜಂ
ಚಕ್ರಾಯುಧಂ ತದ್ಯಶ ಉದ್ಧರಂತ್ಯಃ ॥ ೨೦ ॥

ಮಹಾರಾಜಾ ಪೃಥುವು ವೇನರೂಪೀ ಅರಣಿಯ ಮಂಥನದಿಂದ ಪ್ರಕಟನಾದವನು ಅಗ್ನಿಗೆ ಸಮಾನನಾಗಿದ್ದಾನೆ. ಶತ್ರುಗಳಿಗೆ ದುರ್ಧರ್ಷನೂ, ದುಸ್ಸಹನೂ ಆಗುವನು. ಅವರಿಗೆ ಇವನು ಬಳಿಯಲ್ಲೇ ಇದ್ದರೂ ಸೇನಾದಿಗಳಿಂದ ಸುರಕ್ಷಿತನಾಗಿರುವುದರಿಂದ ಬಹುದೂರವಿದ್ದಂತೆ ಕಾಣುವನು. ಶತ್ರುಗಳು ಎಂದೂ ಇವನನ್ನು ಸೋಲಿಸಲಾರರು. ॥ ೧೧ ॥ ಪ್ರಾಣಿಗಳೊಳಗೆ ಇರುವ ಪ್ರಾಣರೂಪೀ ಸೂತ್ರಾತ್ಮನು ಶರೀರದ ಒಳಗಿನ-ಹೊರಗಿನ ಎಲ್ಲ ವ್ಯಾಪಾರಗಳನ್ನು ನೋಡುತ್ತಾ ಇದ್ದರೂ ಕೂಡ ಉದಾಸೀನನಾಗಿರುವಂತೆ ಇವನು ಗುಪ್ತಚರರ ಮೂಲಕ ಪ್ರಾಣಿಗಳ ಗುಪ್ತ ಮತ್ತು ಪ್ರಕಟ ಎಲ್ಲ ರೀತಿಯ ವ್ಯಾಪಾರಗಳನ್ನು ನೋಡುತ್ತಿದ್ದರೂ, ತನ್ನ ನಿಂದಾ-ಸ್ತುತಿ ಮುಂತಾದವುಗಳ ಕುರಿತು ಉದಾಸೀನನಂತೆ ಇರುವನು. ॥ ೧೨॥ ಇವನು ಧರ್ಮಮಾರ್ಗದಲ್ಲಿ ಸ್ಥಿರನಾಗಿ ನೆಲೆನಿಂತು ತನ್ನ ಶತ್ರುವಿನ ಪುತ್ರನನ್ನೂ ಕೂಡ ದಂಡನೀಯನಾಗದಿದ್ದರೆ ಯಾವುದೇ ಶಿಕ್ಷೆ ಕೊಡಲಾರನು. ಆದರೆ ದಂಡನೀಯನಾಗಿದ್ದರೆ ತನ್ನ ಪುತ್ರನನ್ನು ಬಿಡಲಾರನು. ॥ ೧೩ ॥ ಭಗವಾನ್ ಸೂರ್ಯನಾರಾಯಣನು ಮಾನಸೋತ್ತರ ಪರ್ವತದವರೆಗೆ ತನ್ನ ಕಿರಣಗಳಿಂದ ಬೆಳಗುತ್ತಿರುವ ಆ ಸಮಸ್ತ ಕ್ಷೇತ್ರದಲ್ಲಿ ಇವನ ನಿಷ್ಕಂಟಕವಾದ ರಾಜ್ಯವು ಇರುವುದು. ॥ ೧೪॥ ಇವನು ತನ್ನ ಕಾರ್ಯಗಳಿಂದ ಎಲ್ಲ ಜನರಿಗೂ ಸುಖವನ್ನು ಕೊಡುತ್ತಾ, ಅವರಿಗೆ ರಂಜನೆಯನ್ನುಂಟುಮಾಡುವನು. ಇದರಿಂದ ಆ ಮನೋರಂಜನಾತ್ಮಕವಾದ ಕರ್ಮಗಳಿಂದ ಪ್ರಜೆಯು ಇವನನ್ನು 'ರಾಜಾ' ಎಂದು ಕರೆಯುವರು. ॥ ೧೫ ॥ ಇವನು ದೃಢಸಂಕಲ್ಪನೂ, ಸತ್ಯಪ್ರತಿಜ್ಞನೂ, ಬ್ರಾಹ್ಮಣಭಕ್ತನೂ, ವೃದ್ಧರ ಸೇವೆ ಮಾಡುವವನೂ, ಶರಣಾಗತವತ್ಸಲನೂ, ಎಲ್ಲ ಪ್ರಾಣಿಗಳನ್ನು ಗೌರವಿಸುವವನೂ, ದೀನರ ಮೇಲೆ ದಯೆತೋರುವವನೂ ಆಗುವನು. ॥ ೧೬ ॥ ಇವನು ಪರಸ್ತ್ರೀಯರಲ್ಲಿ ತಾಯಿಯಂತೆ ಭಕ್ತಿಯನ್ನಿರಿಸುವನು. ಪತ್ನಿಯನ್ನು ತನ್ನ ಶರೀರದ ಅರ್ಧಭಾಗದಂತೆಯೂ, ಪ್ರಜೆಗಳನ್ನು ತಂದೆಯು ಪುತ್ರರನ್ನು ಪ್ರೀತಿಸುವಂತೆ ಪ್ರೀತಿಸುವನು. ಬ್ರಹ್ಮವಾದಿಗಳಲ್ಲಿ ಸೇವಕರಂತೆ ನಡೆದುಕೊಳ್ಳುವನು. ॥ ೧೭ ॥ ಇವನು ಎಲ್ಲ ಪ್ರಾಣಿಗಳಿಗೂ ಅವುಗಳ ದೇಹದಂತೆಯೂ, ಆತ್ಮದಂತೆಯೂ ಅತ್ಯಂತಪ್ರಿಯನಾಗುವನು. ಮಿತ್ರರಿಗೆ ಆನಂದವನ್ನುಂಟುಮಾಡುವನು. ವೈರಾಗ್ಯವುಳ್ಳ ಸತ್ಪುರುಷರಲ್ಲಿ ವಿಶೇಷ ಪ್ರೇಮವಿರಿಸುವನು. ದುಷ್ಟರಾದವರಿಗೆ ದಂಡಪಾಣಿ ಯಮನಂತೆ ದಂಡಿಸಲು ತತ್ಪರನಾಗುವನು. ॥ ೧೮ ॥

ಪಂಡಿತರು ಅವಿದ್ಯಾವಶದಿಂದ ಕಂಡುಬರುವ ನಾನಾತ್ವವನ್ನು ಮಿಥ್ಯೆಯೆಂದು ತಿಳಿಯುವ ಅಂತಹ ತ್ರಿಗುಣಗಳ ಅಧಿಷ್ಠಾತೃವೂ, ನಿರ್ವಿಕಾರನೂ ಆದ ಸಾಕ್ಷಾತ್ ಶ್ರೀಮನ್ನಾರಾಯಣನೇ ತನ್ನ ಅಂಶದಿಂದ ಇವನ ರೂಪದಲ್ಲಿ ಅವತರಿಸಿರುವನು. ॥ ೧೯ ॥ ಇವನು ಅದ್ವಿತೀಯ ವೀರನೂ, ಏಕಚ್ಛತ್ರ ಸಾಮ್ರಾಟನಾಗಿ ಒಬ್ಬನೇ ಉದಯಾಚಲದವರೆಗಿನ ಸಮಸ್ತ ಭೂಮಂಡಲವನ್ನು ರಕ್ಷಿಸುವನು., ತನ್ನ ಜಯಶೀಲವಾದ ರಥವನ್ನು ಹತ್ತಿ ಧನುಸ್ಸನ್ನು ಕೈಯಲ್ಲಿ ಧರಿಸಿ ಸೂರ್ಯನಂತೆ ಎಲ್ಲೆಡೆ ಪ್ರದಕ್ಷಿಣೆ ಮಾಡುವನು. ॥ ೨೦ ॥

ಆ ಸಮಯದಲ್ಲಿ ಎಲ್ಲ ಲೋಕಪಾಲಕರೂ, ಭೂಪಾಲಕರೂ ಈತನಿಗೆ ಕಪ್ಪ-ಕಾಣಿಕೆಗಳನ್ನು ಸಮರ್ಪಿಸುವರು ಹಾಗೂ ಆ

ಅಯಂ ಮಹೀಂ ಗಾಂ ದುದುಹೇಽಧಿರಾಜಃ
ಪ್ರಜಾಪತಿರ್ವೃತ್ತಿಕರಃ ಪ್ರಜಾನಾಮ್ ।
ಯೋ ಲೀಲಯಾದ್ರೀನ್ಸ್ವಶರಾಸಕೋಟ್ಯಾ
ಭಿಂದನ್ ಸಮಾಂ ಗಾಮಕರೋದ್ಯಥೇಂದ್ರಃ ॥ ೨೨ ॥

ವಿಸ್ಫೂರ್ಜಯನ್ನಾಜಗವಂ ಧನುಃ ಸ್ವಯಂ
ಯದಾಚರತ್ ಕ್ಷ್ಮಾಮವಿಷಹ್ಯಮಾಜೌ ।
ತದಾ ನಿಲಿಲ್ಯುರ್ದಿಶಿ ದಿಶ್ಯಸಂತೋ
ಲಾಂಗೂಲಮುದ್ಯಮ್ಯ ಯಥಾ ಮೃಗೇಂದ್ರಃ ॥ ೨೩ ॥

ಏಷೋಽಶ್ವಮೇಧಾನ್ ಶತಮಾಜಹಾರ
ಸರಸ್ವತೀ ಪ್ರಾದುರಭಾವಿ ಯತ್ರ ।
ಅಹಾರ್ಷೀದ್ಯಸ್ಯ ಹಯಂ ಪುರಂದರಃ
ಶತಕ್ರತುಶ್ಚರಮೇ ವರ್ತಮಾನೇ ॥ ೨೪ ॥

ಏಷ ಸ್ವಸದ್ಮೋಪವನೇ ಸಮೇತ್ಯ
ಸನತ್ಕುಮಾರಂ ಭಗವಂತಮೇಕಮ್ ।
ಆರಾಧ್ಯ ಭಕ್ತ್ಯಾ ಲಭತಾಮಲಂ ತಜ್
ಜ್ಞಾನಂ ಯತೋ ಬ್ರಹ್ಮ ಪರಂ ವಿದಂತಿ ॥ ೨೫ ॥

ತತ್ರ ತತ್ರ ಗಿರಸ್ತಾಸ್ತಾ ಇತಿ ವಿಶ್ರುತವಿಕ್ರಮಃ ।
ಶ್ರೋಷ್ಯತ್ಯಾತ್ಮಾಶ್ರಿತಾ ಗಾಥಾಃ ಪೃಥುಃ ಪೃಥುಪರಾಕ್ರಮಃ ॥ ೨೬ ॥

ದಿಶೋ ವಿಜಿತ್ಯಾಪ್ರತಿರುದ್ಧಚಕ್ರಃ
ಸ್ವತೇಜಸೋತ್ಪಾಟಿತಲೋಕಶಲ್ಯಃ ।
ಸುರಾಸುರೇಂದ್ರೈರುಪಗೀಯಮಾನ-
ಮಹಾನುಭಾವೋ ಭವಿತಾ ಪತಿರ್ಭುವಃ ॥ ೨೭ ॥

ಪುರವಾಸಿಗಳ ಸ್ತ್ರೀಯರು ಇವನನ್ನು ಗುಣಗಾನ ಮಾಡುತ್ತಾ ಈ ಆದಿರಾಜನನ್ನು ಸಾಕ್ಷಾತ್ ಶ್ರೀಹರಿಯೆಂದೇ ತಿಳಿಯುವರು. ॥ ೨೧ ॥ ಇವನು ಪ್ರಜಾಪಾಲಕ ರಾಜಾಧಿರಾಜನಾಗಿ ಪ್ರಜೆಗಾಗಿ ಜೀವನ ನಿರ್ವಾಹಕ್ಕಾಗಿ ಗೋರೂಪೀ ಪೃಥ್ವಿಯನ್ನು ಕರೆಯುವನು ಮತ್ತು ಇಂದ್ರನಂತೆ ಲೀಲಾಜಾಲವಾಗಿ ಪರ್ವತಗಳನ್ನು ತನ್ನ ಧನುಸ್ಸಿನ ತುದಿಯಿಂದ ಒಡೆದುಹಾಕಿ ಭೂಮಿಯನ್ನು ಸಮತಟ್ಟಾಗಿಸುವನು. ॥ ೨೨ ॥ ಯುದ್ಧಭೂಮಿಯಲ್ಲಿ ಯಾರೂ ಕೂಡ ಈ ವೀರಾಧಿವೀರನ ವೇಗವನ್ನು ಸಹಿಸಲಾರರು. ಅರಣ್ಯದಲ್ಲಿ ಬಾಲವನ್ನು ಎತ್ತಿಕೊಂಡು ಸಂಚರಿಸುವ ಸಿಂಹದಂತೆ ತನ್ನ 'ಆಜಗವ'ವೆಂಬ ಧನುಷ್ಯವನ್ನು ಟಂಕಾರಮಾಡುತ್ತಾ ಭೂಮಂಡಲದಲ್ಲಿ ಸಂಚರಿಸತೊಡಗಿದಾಗ ದುಷ್ಟಜನರೆಲ್ಲರೂ ಕಾಣದಾಗುವರು. ॥ ೨೩ ॥ ಈ ಚಕ್ರವರ್ತಿಯು ಸರಸ್ವತೀನದಿ ಉಗಮಸ್ಥಾನದಲ್ಲಿ ನೂರು ಅಶ್ವಮೇಧ ಯಜ್ಞಗಳನ್ನು ಮಾಡುವನು. ಅವುಗಳಲ್ಲಿ ಕೊನೆಯ ಯಜ್ಞವನ್ನು ಆಚರಿಸುವಾಗ ಇಂದ್ರನು ಈತನ ಯಜ್ಞಾಶ್ವವನ್ನು ಅಪಹರಿಸಿಕೊಂಡು ಹೋಗುವನು. ॥ ೨೪ ॥ ಈ ಮಹಾತ್ಮನಿಗೆ ಒಮ್ಮೆ ತನ್ನ ಅರಮನೆಯ ಉದ್ಯಾನವನದಲ್ಲಿ ಭಗವಾನ್ ಸನತ್ಕುಮಾರರ ಭೇಟಿಯಾಗುವುದು. ಆಗ ಆ ಮುನಿಶ್ರೇಷ್ಠರನ್ನು ಏಕಾಂತದಲ್ಲಿ ಈತನೊಬ್ಬನೇ ಭಕ್ತಿಯಿಂದ ಆರಾಧಿಸಿ, ಅವರಿಂದ ಶುದ್ಧವಾದ ಜ್ಞಾನವನ್ನು ಪಡೆಯುವನು. ಅದರಿಂದ ಪರಬ್ರಹ್ಮನ ಪ್ರಾಪ್ತಿಯುಂಟಾಗುವುದು. ॥ ೨೫ ॥ ಈ ಪ್ರಕಾರ ಇವನ ಪರಾಕ್ರಮಗಳು ಜನರ ಮುಂದೆ ಪ್ರಕಟವಾದಾಗ ತನ್ನ ಚರಿತ್ರೆಯೇ ಅಲ್ಲಲ್ಲಿ ಈ ಪರಮ ಪರಾಕ್ರಮಿ ಮಹಾರಾಜನ ಕಿವಿಗೆ ಬೀಳುವುದು. ॥ ೨೬ ॥ ಇವನ ಆಜ್ಞೆಯನ್ನು ಯಾರೂ ಅಲ್ಲಗಳೆಯಲಾರರು. ಇವನು ಎಲ್ಲ ದಿಕ್ಕುಗಳನ್ನು ಗೆದ್ದು, ತನ್ನ ತೇಜಸ್ಸಿನಿಂದ ಪ್ರಜೆಗಳ ಕಷ್ಟ-ಕಾರ್ಪಣ್ಯವೆಂಬ ಮುಳ್ಳನ್ನು ತೆಗೆದುಹಾಕಿ ಸಮಸ್ತ ಭೂಮಂಡಲಕ್ಕೆ ಶಾಸಕನಾಗುವನು. ಆಗ ದೇವತೆಗಳು, ಅಸುರರೂ ಕೂಡ ಇವನ ವಿಪುಲವಾದ ಪ್ರಭಾವವನ್ನು ವರ್ಣಿಸುವರು." ॥ ೨೭ ॥

ಹದಿನಾರನೆಯ ಅಧ್ಯಾಯವು ಮುಗಿಯಿತು. ॥ ೧೬ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಚತುರ್ಥಸ್ಕಂಧೇ
ಪೃಥುಚರಿತೇ ಷೋಡಶೋಽಧ್ಯಾಯಃ ॥ ೧೬ ॥

ಹದಿನೇಳನೆಯ ಅಧ್ಯಾಯ

ಪೃಥು ಮಹಾರಾಜನು ಭೂದೇವಿಯ ಮೇಲೆ ಕೋಪಗೊಂಡುದು ; ಭೂದೇವಿಯು ಆತನನ್ನು ಸ್ತುತಿಸಿದುದು

ಮೈತ್ರೇಯ ಉವಾಚ

ಏವಂ ಸ ಭಗವಾನ್ವೈನ್ಯಃ ಖ್ಯಾಪಿತೋ ಗುಣಕರ್ಮಭಿಃ ।
ಛಂದಯಾಮಾಸ ತಾನ್ಕಾಮೈಃ ಪ್ರತಿಪೂಜ್ಯಾಭಿನಂದ್ಯ ಚ ॥ ೧ ॥

ಶ್ರೀಮೈತ್ರೇಯರು ಹೇಳುತ್ತಾರೆ – ಹೀಗೆ ವಂದಿ-ಮಾಗಧರು ತನ್ನ ಗುಣ ಮತ್ತು ಕರ್ಮಗಳೆಲ್ಲವನ್ನು ವರ್ಣಿಸಿ ಸ್ತೋತ್ರಮಾಡಿದಾಗ ಆ ಪೃಥುಮಹಾರಾಜನೂ ಅವರನ್ನು ಅಭಿನಂದಿಸಿ, ಇಷ್ಟವಾದ ವಸ್ತುಗಳನ್ನು ಕೊಟ್ಟು ಸಂತೋಷಪಡಿಸಿದನು. ॥ ೧ ॥ ಹಾಗೆಯೇ ಬ್ರಾಹ್ಮಣರೇ ಮುಂತಾದ ನಾಲ್ಕು ವರ್ಣದವರನ್ನೂ, ಸೇವಕ

ಬ್ರಾಹ್ಮಣಪ್ರಮುಖಾನ್ ವರ್ಣಾನ್ ಭೃತ್ಯಾಮಾತ್ಯ ಪುರೋಧಸಃ ।
ಪೌರಾಂಜಾನಪದಾನ್ ಶ್ರೇಣೀಃ ಪ್ರಕೃತೀಃ ಸಮಪೂಜಯತ್ ॥ ೨ ॥

ವಿದುರ ಉವಾಚ

ಕಸ್ಮಾದ್ದಧಾರ ಗೋರೂಪಂ ಧರಿತ್ರೀ ಬಹುರೂಪಿಣೀ ।
ಯಾಂ ದುದೋಹ ಪೃಥುಸ್ತತ್ರ ಕೋ ವತ್ಸೋ ದೋಹನಂ ಚ ಕಿಮ್ ॥ ೩ ॥

ಪ್ರಕೃತ್ಯಾ ವಿಷಮಾ ದೇವೀ ಕೃತಾ ತೇನ ಸಮಾ ಕಥಮ್ ।
ತಸ್ಯ ಮೇಧ್ಯಂ ಹಯಂ ದೇವಃ ಕಸ್ಯ ಹೇತೋರಪಾಹರತ್ ॥ ೪ ॥

ಸನತ್ಕುಮಾರಾದ್ಭಗವತೋ ಬ್ರಹ್ಮನ್ ಬ್ರಹ್ಮವಿದುತ್ತಮಾತ್ ।
ಲಬ್ಧ್ವಾ ಜ್ಞಾನಂ ಸವಿಜ್ಞಾನಂ ರಾಜರ್ಷಿಃ ಕಾಂ ಗತಿಂ ಗತಃ ॥ ೫ ॥

ಯಚ್ಚಾನ್ಯದಪಿ ಕೃಷ್ಣಸ್ಯ ಭವಾನ್ ಭಗವತಃ ಪ್ರಭೋಃ ।
ಶ್ರವಃ ಸುಶ್ರವಸಃ ಪುಣ್ಯಂ ಪೂರ್ವದೇಹಕಥಾಶ್ರಯಮ್ ॥ ೬ ॥

ಭಕ್ತಾಯ ಮೇಽನುರಕ್ತಾಯ ತವ ಚಾಧೋಕ್ಷಜಸ್ಯ ಚ ।
ವಕ್ತುಮರ್ಹಸಿ ಯೋಽದುಹ್ಯದ್ವೈನ್ಯರೂಪೇಣ ಗಾಮಿಮಾಮ್ ॥ ೭ ॥

ಸೂತ ಉವಾಚ

ಚೋದಿತೋ ವಿದುರೇಣೈವಂ ವಾಸುದೇವಕಥಾಂ ಪ್ರತಿ ।
ಪ್ರಶಸ್ಯ ತಂ ಪ್ರೀತಮನಾ ಮೈತ್ರೇಯಃ ಪ್ರತ್ಯಭಾಷತ ॥ ೮ ॥

ಮೈತ್ರೇಯ ಉವಾಚ

ಯದಾಭಿಷಿಕ್ತಃ ಪೃಥುರಂಗ ವಿಪ್ರೈ-
ರಾಮನ್ತ್ರಿತೋ ಜನತಾಯಾಶ್ಚ ಪಾಲಃ ।
ಪ್ರಜಾ ನಿರನ್ನೇ ಕ್ಷಿತಿಪೃಷ್ಠ ಏತ್ಯ
ಕ್ಷುತ್ ಕ್ಷಾಮದೇಹಾಃ ಪತಿಮಭ್ಯವೋಚನ್ ॥ ೯ ॥

ವಯಂ ರಾಜಂಜಾಠರೇಣಾಭಿತಪ್ತಾ
ಯಥಾಗ್ನಿನಾ ಕೋಟರಸ್ಥೇನ ವೃಕ್ಷಾಃ ।
ತ್ವಾಮದ್ಯ ಯಾತಾಃ ಶರಣಂ ಶರಣ್ಯಂ
ಯಃ ಸಾಧಿತೋ ವೃತ್ತಿಕರಃ ಪತಿರ್ನಃ ॥ ೧೦ ॥

ತನ್ನೋ ಭವಾನೀಹತು ರಾತವೇಽನ್ನಂ
ಕ್ಷುಧಾರ್ದಿತಾನಾಂ ನರದೇವದೇವ ।
ಯಾವನ್ನ ನಂಕ್ಷ್ಯಾಮಹ ಉಜ್ಝಿತೋರ್ಜಾ
ವಾರ್ತಾಪತಿಸ್ತ್ವಂ ಕಿಲ ಲೋಕಪಾಲಃ ॥ ೧೧ ॥

ರನ್ನೂ, ಮಂತ್ರಿಗಳನ್ನೂ, ಪುರೋಹಿತರನ್ನೂ, ಪುರಜನರನ್ನೂ, ದೇಶವಾಸಿಗಳನ್ನೂ, ಬೇರೆ-ಬೇರೆ ವ್ಯವಸಾಯದವರನ್ನೂ, ಇತರ ಪ್ರಜೆಗಳನ್ನೂ ಸತ್ಕರಿಸಿದನು. ॥ ೨ ॥

ವಿದುರನು ಕೇಳಿದನು – ಪೂಜ್ಯರೇ! ಪೃಥ್ವಿಯಾದರೋ ಅನೇಕ ರೂಪಗಳನ್ನು ತಾಳಬಲ್ಲವಳು. ಆಕೆಯು ಏತಕ್ಕಾಗಿ ಗೋವಿನ ರೂಪವನ್ನೇ ಧರಿಸಿದುದು? ಪೃಥು ಮಹಾರಾಜನು ಆಕೆಯನ್ನು ಕರೆದಾಗ ಕರು ಯಾರು ಆದರು? ಹಾಲು ಕರೆಯುವ ಪಾತ್ರೆ ಯಾವುದಿತ್ತು? ॥ ೩ ॥ ಪೃಥ್ವಿಯಾದರೋ ಮೊದಲಿನಿಂದಲೇ ಸ್ವಭಾವತಃ ಎತ್ತರ-ತಗ್ಗುಗಳಿಂದ ಕೂಡಿರುವುದೇ ಆಗಿತ್ತು. ಅವನು ಸಮತಲವಾಗಿ ಹೇಗೆ ಮಾಡಿದನು? ಇಂದ್ರನು ಅವನ ಯಜ್ಞಾಶ್ವವನ್ನು ಏಕೆ ಅಪಹರಿಸಿದನು? ॥ ೪ ॥ ಬ್ರಹ್ಮಜ್ಞಾನಿಗಳಲ್ಲಿ ಶ್ರೇಷ್ಠರಾದ ಸನತ್ಕುಮಾರರಿಂದ ಜ್ಞಾನ ಮತ್ತು ವಿಜ್ಞಾನವನ್ನು ಪಡೆದು ಆ ರಾಜರ್ಷಿಯು ಯಾವ ಗತಿಯನ್ನು ಹೊಂದಿದನು? ॥ ೫ ॥ ಪೃಥುರಾಜನ ರೂಪದಲ್ಲಿ ಸರ್ವೇಶ್ವರ ಭಗವಾನ್ ಶ್ರೀಕೃಷ್ಣನೇ ಅವತರಿಸಿದ್ದನು; ಆದ್ದರಿಂದ ಪುಣ್ಯಕೀರ್ತಿಯಾದ ಶ್ರೀಹರಿಯು ಅವತರಿಸಿದ ಆ ಪೃಥುವಿಗೆ ಸಂಬಂಧಪಟ್ಟ ಇನ್ನೂ ಪವಿತ್ರ ಚರಿತ್ರೆಗಳಿದ್ದರೆ ಅದನ್ನೂ ನನಗೆ ಹೇಳಿರಿ. ನಾನು ತಮ್ಮ ಮತ್ತು ಶ್ರೀಕೃಷ್ಣಚಂದ್ರನ ಅತ್ಯಂತ ಅನುರಾಗವುಳ್ಳ ಭಕ್ತನಾಗಿರುವೆನು. ದಯಮಾಡಿ ಆ ವೃತ್ತಾಂತವೆಲ್ಲವನ್ನು ಹೇಳುವವರಾಗಿರಿ. ॥ ೬-೭ ॥

ಶ್ರೀಸೂತಪುರಾಣಿಕರು ಹೇಳುತ್ತಾರೆ – ಋಷಿಗಳಿರಾ! ವಿದುರನು ಭಗವಾನ್ ಶ್ರೀವಾಸುದೇವನ ಕಥೆಯನ್ನು ಹೇಳಬೇಕೆಂದು ಪ್ರೇರೇಪಿಸಿದಾಗ ಶ್ರೀಮೈತ್ರೇಯರು ಮನಸ್ಸಿನಲ್ಲಿ ಸಂತೋಷಗೊಂಡು ಅವನನ್ನು ಪ್ರಶಂಸಿಸುತ್ತಾ ಹೇಳತೊಡಗಿದರು. ॥ ೮ ॥

ಶ್ರೀಮೈತ್ರೇಯರು ಹೇಳಿದರು – ಎಲೈ ವಿದುರನೇ! ಬ್ರಾಹ್ಮಣರು ಮಹಾರಾಜಾ ಪೃಥುವಿಗೆ ಪಟ್ಟಾಭಿಷೇಕಮಾಡಿ ಅವನನ್ನು ಪ್ರಜಾಪಾಲಕನನ್ನಾಗಿ ಘೋಷಿಸಿದರು. ಆಗ ಭೂಮಿಯಲ್ಲಿ ಅನ್ನವೇ ಇಲ್ಲದಿರಲು ಪ್ರಜೆಗಳು ಹಸಿವಿನಿಂದ ಕೃಶಕಾಯರಾಗಿ ತಮ್ಮ ಸ್ವಾಮಿಯಾದ ಪೃಥುವಿನ ಬಳಿಗೆ ಬಂದು ಹೇಳಿದರು. ॥ ೯ ॥ ಮಹಾರಾಜರೇ! ಪೊಟರೆಯಲ್ಲಿರುವ ಬೆಂಕಿಯಿಂದ ಮರಗಳು ಕರಕಾಗಿ ಸುಟ್ಟುಹೋಗುವಂತೆ, ನಾವು ಭಯಂಕರವಾದ ಜಠರಾಗ್ನಿಯಿಂದ ಬೆಂದುಹೋಗುತ್ತಿದ್ದೇವೆ. ನೀನು ಶರಣಾಗತವತ್ಸಲನು ಮತ್ತು ನಮಗೆ ಅನ್ನದಾತನಾಗಿ, ಪ್ರಭುವಾಗಿ ಮಹರ್ಷಿಗಳು ನಿನ್ನನ್ನು ನೇಮಿಸಿದ್ದಾರೆ. ಆದಕ್ಕಾಗಿ ನಾವು ನಿನಗೆ ಶರಣಾಗಿದ್ದೇವೆ. ॥ ೧೦ ॥ ನೀನು ಸಮಸ್ತ ಲೋಕಗಳನ್ನು ರಕ್ಷಿಸುವವನಾಗಿರುವೆ. ನೀನೇ ನಮ್ಮ ಜೀವನೋಪಾಯಕ್ಕೆ ಒಡೆಯನಾಗಿರುವೆ. ಆದ್ದರಿಂದ ರಾಜೇಶ್ವರನೇ! ಹಸಿವಿನಿಂದ ಬಳಲಿದ ನಮಗೆ ನೀನು ಬೇಗನೆ ಅನ್ನ ಕೊಡುವ ವ್ಯವಸ್ಥೆ ಮಾಡು. ಅನ್ನ ಸಿಗುವ ಮೊದಲೇ ನಾಶವಾಗದಂತೆ ಪ್ರಜಾಪಾಲಕನಾದ ನೀನು ಪ್ರಜೆಗಳಾದ ನಮ್ಮನ್ನು ಕಾಪಾಡು. ॥ ೧೧ ॥

ಮೈತ್ರೇಯ ಉವಾಚ

ಪೃಥುಃ ಪ್ರಜಾನಾಂ ಕರುಣಂ ನಿಶಮ್ಯ ಪರಿದೇವಿತಮ್ ।
ದೀರ್ಘಂ ದಧ್ಯೌ ಕುರುಶ್ರೇಷ್ಠ ನಿಮಿತ್ತಂ ಸೋಽನ್ವಪದ್ಯತ ॥ ೧೨ ॥

ಇತಿ ವ್ಯವಸಿತೋ ಬುದ್ಧ್ಯಾ ಪ್ರಗೃಹೀತಶರಾಸನಃ ।
ಸಂದಧೇ ವಿಶಿಖಂ ಭೂಮೇಃ ಕ್ರುದ್ಧಸ್ತ್ರಿಪುರಹಾ ಯಥಾ ॥ ೧೩ ॥

ಪ್ರವೇಪಮಾನಾ ಧರಣೀ ನಿಶಾಮ್ಯೋದಾಯುಧಂ ಚ ತಮ್ ।
ಗೌಃ ಸತ್ಯಪಾದ್ರವದ್ಭೀತಾ ಮೃಗೀವ ಮೃಗಯುದ್ರುತಾ ॥ ೧೪ ॥

ತಾಮನ್ವಧಾವತ್ತದ್ವೈನ್ಯಃ ಕುಪಿತೋಽತ್ಯರುಣೇಕ್ಷಣಃ ।
ಶರಂ ಧನುಷಿ ಸಂಧಾಯ ಯತ್ರ ಯತ್ರ ಪಲಾಯತೇ ॥ ೧೫ ॥

ಸಾ ದಿಶೋ ವಿದಿಶೋ ದೇವೀ ರೋದಸೀ ಚಾಂತರಂ ತಯೋಃ ।
ಧಾವಂತೀ ತತ್ರ ತತ್ರೈನಂ ದದರ್ಶಾನೂದ್ಯತಾಯುಧಮ್ ॥ ೧೬ ॥

ಲೋಕೇ ನಾವಿಂದತ ತ್ರಾಣಂ ವೈನ್ಯಾನ್ಮೃತ್ಯೋರಿವ ಪ್ರಜಾಃ ।
ತ್ರಸ್ತಾ ತದಾ ನಿವವೃತೇ ಹೃದಯೇನ ವಿದೂಯತಾ ॥ ೧೭ ॥

ಉವಾಚ ಚ ಮಹಾಭಾಗಂ ಧರ್ಮಜ್ಞಾಪನ್ನವತ್ಸಲ ।
ತ್ರಾಹಿ ಮಾಮಪಿ ಭೂತಾನಾಂ ಪಾಲನೇಽವಸ್ಥಿತೋ ಭವಾನ್ ॥ ೧೮ ॥

ಸ ತ್ವಂ ಜಿಘಾಂಸಸೇ ಕಸ್ಮಾದ್ದೀನಾಮಕೃತಕಿಲ್ಬಿಷಾಮ್ ।
ಅಹನಿಷ್ಯತ್ಕಥಂ ಯೋಷಾಂ ಧರ್ಮಜ್ಞ ಇತಿ ಯೋ ಮತಃ ॥ ೧೯ ॥

ಪ್ರಹರಂತಿ ನ ವೈ ಸ್ತ್ರೀಷು ಕೃತಾಗಸ್ಸ್ವಪಿ ಜಂತವಃ ।
ಕಿಮುತ ತ್ವದ್ವಿಧಾ ರಾಜನ್ ಕರುಣಾ ದೀನವತ್ಸಲಾಃ ॥ ೨೦ ॥

ಮಾಂ ವಿಪಾಟ್ಯಾಜರಾಂ ನಾವಂ ಯತ್ರ ವಿಶ್ವಂ ಪ್ರತಿಷ್ಠಿತಮ್ ।
ಆತ್ಮಾನಂ ಚ ಪ್ರಜಾಶ್ಚೇಮಾಃ ಕಥಮಂಭಸಿ ಧಾಸ್ಯಸಿ ॥ ೨೧ ॥

ಪೃಥುರುವಾಚ

ವಸುಧೇ ತ್ವಾಂ ವಧಿಷ್ಯಾಮಿ ಮಚ್ಛಾಸನಪರಾಙ್ಮುಖೀಮ್ ।
ಭಾಗಂ ಬರ್ಹಿಷಿ ಯಾ ವೃಂಕ್ತೇ ನ ತನೋತಿ ಚ ನೋ ವಸು ॥ ೨೨ ॥

ಯವಸಂ ಜಗ್ಧ್ಯನುದಿನಂ ನೈವ ದೋಗ್ಧ್ಯೌಧಸಂ ಪಯಃ ।
ತಸ್ಯಾಮೇವಂ ಹಿ ದುಷ್ಟಾಯಾಂ ದಂಡೋ ನಾತ್ರ ನ ಶಸ್ಯತೇ ॥ ೨೩ ॥

ಶ್ರೀಮೈತ್ರೇಯರು ಹೇಳುತ್ತಾರೆ – ಕುರುಶ್ರೇಷ್ಠನೇ! ಪ್ರಜೆಗಳ ಕರುಣಾಕ್ರಂದನವನ್ನು ಕೇಳಿ ಪೃಥುಮಹಾರಾಜನು ಬಹಳ ಹೊತ್ತು ಚಿಂತಿಸಿ, ಕೊನೆಗೆ ಆ ಅನ್ನಾಭಾವದ ಕಾರಣವನ್ನು ಕಂಡುಕೊಂಡನು. ॥ ೧೨ ॥ ಭೂಮಿಯು ಅನ್ನ-ಔಷಧಿಗಳನ್ನು ತನ್ನೊಳಗೇ ಅಡಗಿಸಿಕೊಳ್ಳುತ್ತಿದೆ. ಹೊರಕ್ಕೆ ಬಿಡುವುದಿಲ್ಲ ಎಂಬುದನ್ನು ಬುದ್ಧಿಯಿಂದ ನಿಶ್ಚಯಿಸಿ, ಅವನು ತ್ರಿಪುರಸಂಹಾರಿಯಾದ ರುದ್ರದೇವರಂತೆ ಕಡುಕೋಪದಿಂದ ಬಿಲ್ಲನ್ನೆತ್ತಿಕೊಂಡು ಭೂಮಿಯನ್ನು ಗುರಿಯಾಗಿಸಿ ಬಾಣವನ್ನು ಹೂಡಿದನು. ॥ ೧೩ ॥ ಅದನ್ನು ಕಂಡು ಭೂದೇವಿಯು ಭಯಗೊಂಡು ಗಡ-ಗಡನೆ ನಡುಗುತ್ತಾ ಹಸುವಿನ ರೂಪವನ್ನು ತಾಳಿ, ಬೇಡನು ಬೆನ್ನಟ್ಟಿದ ಜಿಂಕೆಯಂತೆ ಓಡತೊಡಗಿದಳು. ॥ ೧೪ ॥

ಇದನ್ನು ನೋಡಿದ ಮಹಾರಾಜಾ ಪೃಥುವಿನ ಕಣ್ಣುಗಳು ಕ್ರೋಧದಿಂದ ಕೆಂಪೇರಿದವು. ಆತನು ಬಿಲ್ಲಿನಲ್ಲಿ ಬಾಣವನ್ನು ಹೂಡಿ ಭೂದೇವಿಯು ಓಡಿದಲ್ಲೆಲ್ಲ ಅಟ್ಟಿಕೊಂಡು ಹೋದನು. ॥ ೧೫ ॥ ದಿಕ್ಕು-ವಿದಿಕ್ಕುಗಳಲ್ಲಿ ಸ್ವರ್ಗದಲ್ಲಿ, ಆಕಾಶದಲ್ಲಿ ಹೀಗೆ ಭೂ ದೇವಿಯು ಓಡಿದಲ್ಲೆಲ್ಲ ಪೃಥುಮಹಾರಾಜನು ಆಯುಧಗಳನ್ನು ಕೈಯಲ್ಲೆತ್ತಿಕೊಂಡು ಆಕೆಯ ಹಿಂದೆ ಕಾಣಿಸಿಕೊಳ್ಳುತ್ತಿದ್ದನು. ॥ ೧೬ ॥ ಮನುಷ್ಯನನ್ನು ಮೃತ್ಯುವಿನ ದವಡೆಯಿಂದ ಯಾರೂ ರಕ್ಷಿಸಲಾರದಂತೆ ಆಕೆಯು ಅತ್ಯಂತ ಭಯಭೀತಳಾಗಿ ಹಿಂದಿರುಗಿದಳು. ॥ ೧೭ ॥ ಮತ್ತೆ ಮಹಾಭಾಗನಾದ ಪೃಥುವಿನಲ್ಲಿ ಮೊರೆಯಿಟ್ಟಳು – 'ಧರ್ಮಜ್ಞನೂ – ಶರಣಾಗತವತ್ಸಲನೂ ಆದ ಎಲೈ ರಾಜೇಂದ್ರನೇ! ಸಮಸ್ತ ಪ್ರಾಣಿಗಳನ್ನು ರಕ್ಷಿಸುವುದರಲ್ಲಿ ತತ್ಪರನಾದ ನೀನು ನನ್ನನ್ನೂ ರಕ್ಷಿಸು. ॥ ೧೮ ॥ ಹಾಗಿರುವಾಗ ಅತ್ಯಂತ ದೀನಳೂ, ನಿರಪರಾಧಿಯೂ ಆದ ನನ್ನನ್ನು ನೀನು ಏಕೆ ಕೊಲ್ಲಲು ಬಯಸುತ್ತಿರುವೆ. ಇದಲ್ಲದೆ ನೀನು ಧರ್ಮಜ್ಞನೆಂದು ತಿಳಿಯಲಾಗುತ್ತದೆ ಎಂದಾಗ ಸ್ತ್ರೀಯಾದ ನನ್ನನ್ನು ಹೇಗೆ ಕೊಲ್ಲಬಲ್ಲೆ? ॥ ೧೯ ॥ ಸ್ತ್ರೀಯರು ಅಪರಾಧ ಮಾಡಿದರೂ ಸಾಮಾನ್ಯ ಮನುಷ್ಯನೂ ಅವಳ ಮೇಲೆ ಕೈ ಎತ್ತುವುದಿಲ್ಲ. ಹಾಗಿರುವಾಗ ಕರುಣಾಳುವೂ, ದೀನವತ್ಸಲನೂ ಆದ ನಿನ್ನಂತಹವನು ಇದನ್ನು ಹೇಗೆ ಮಾಡಬಲ್ಲನು? ॥ ೨೦ ॥ ನಾನಾದರೋ ಒಂದು ದೃಢವಾದ ಹಡಗಿನಂತಿದ್ದು, ಇಡೀ ಜಗತ್ತು ನನ್ನ ಆಧಾರದಲ್ಲಿ ನಿಂತಿದೆ. ಇಂತಹ ನನ್ನನ್ನು ಕೊಂದು ನೀನು ಪ್ರಜೆಗಳನ್ನು ನೀರಿನಮೇಲೆ ಹೇಗೆ ಹಾನೇ ನೆಲೆಗೊಳಿಸುವೆ? ॥ ೨೧ ॥

ಪೃಥುಮಹಾರಾಜನು ಹೇಳಿದನು – ಎಲೈ ಭೂಮಿಯೇ! ನೀನು ಪ್ರಜಾಪಾಲಕನಾದ ನನ್ನ ಆಜ್ಞೆಯನ್ನು ಉಲ್ಲಂಘಿಸಿರುವೆ. ನೀನು ಯಜ್ಞದಲ್ಲಿ ಹವಿರ್ಭಾಗವನ್ನು ದೇವತಾರೂಪದಿಂದ ಸ್ವೀಕರಿಸಿದ್ದರೂ ಅನ್ನ-ಧಾನ್ಯಾದಿಗಳನ್ನು ನಮಗೆ ಕೊಡುತ್ತಿಲ್ಲ. ಅದರಿಂದ ಇಂದು ನಾನು ನಿನ್ನನ್ನು ಕೊಂದು ಹಾಕುವೆನು. ॥ ೨೨ ॥ ಹಸಿರು ಹುಲ್ಲನ್ನು ಪ್ರತಿದಿನವೂ ತೃಪ್ತಿಯಾಗಿ ಮೇಯುತ್ತಿದ್ದರೂ ನೀನು ಹಾಲನ್ನು ಮಾತ್ರ ಕೊಡದೆ ವಂಚನೆ ಮಾಡುತ್ತಿರುವ ಗೋವು. ಇಂತಹ ದುಷ್ಟತನವನ್ನು ಮಾಡುವ ನಿನ್ನನ್ನು ಶಿಕ್ಷಿಸಿದರೆ ಅನುಚಿತವಾಗಲಾರದು. ॥ ೨೩ ॥

ತ್ವಂ ಖಲ್ವೋಷಧಿಬೀಜಾನಿ ಪ್ರಾಕ್ಸೃಷ್ಟಾನಿ ಸ್ವಯಂಭುವಾ ।
ನ ಮುಂಚಸ್ಯಾತ್ಮರುದ್ಧಾನಿ ಮಾಮವಜ್ಞಾಯ ಮಂದಧೀಃ ॥ ೨೪ ॥

ಅಮೂಷಾಂ ಕ್ಷುತ್ಪರೀತಾನಾಮಾರ್ತಾನಾಂ ಪರಿದೇವಿತಮ್ ।
ಶಮಯಿಷ್ಯಾಮಿ ಮದ್ಬಾಣೈರ್ಭಿನ್ನಾಯಾಸ್ತವ ಮೇದಸಾ ॥ ೨೫ ॥

ಪುಮಾನ್ಯೋಷಿದುತ ಕ್ಲೀಬ ಆತ್ಮಸಂಭಾವನೋಽಧಮಃ ।
ಭೂತೇಷು ನಿರನುಕ್ರೋಶೋ ನೃಪಾಣಾಂ ತದ್ವಧೋಽವಧಃ ॥ ೨೬ ॥

ತ್ವಾಂ ಸ್ತಬ್ಧಾಂ ದುರ್ಮದಾಂ ನೀತ್ವಾ ಮಾಯಾಗಾಂ ತಿಲಶಃ ಶರೈಃ ।
ಆತ್ಮಯೋಗಬಲೇನೇಮಾ ಧಾರಯಿಷ್ಯಾಮ್ಯಹಂ ಪ್ರಜಾಃ ॥ ೨೭ ॥

ಏವಂ ಮನ್ಯುಮಯೀಂ ಮೂರ್ತಿಂ ಕೃತಾಂತಮಿವ ಬಿಭ್ರತಮ್ ।
ಪ್ರಣತಾ ಪ್ರಾಂಜಲಿಃ ಪ್ರಾಹ ಮಹೀ ಸಂಜಾತವೇಪಥುಃ ॥ ೨೮ ॥

ಧರೋವಾಚ

ನಮಃ ಪರಸ್ಮೈ ಪುರುಷಾಯ ಮಾಯಯಾ
ವಿನ್ಯಸ್ತನಾನಾತನವೇ ಗುಣಾತ್ಮನೇ ।
ನಮಃ ಸ್ವರೂಪಾನುಭವೇನ ನಿರ್ಧುತ-
ದ್ರವ್ಯಕ್ರಿಯಾಕಾರಕವಿಭ್ರಮೋರ್ಮಯೇ ॥ ೨೯ ॥

ಯೇನಾಹಮಾತ್ಮಾಯತನಂ ವಿನಿರ್ಮಿತಾ
ಧಾತ್ರಾ ಯತೋಽಯಂ ಗುಣಸರ್ಗಸಂಗ್ರಹಃ ।
ಸ ಏವ ಮಾಂ ಹಂತುಮುದಾಯುಧಃ ಸ್ವರಾ-
ಡುಪಸ್ಥಿತೋಽನ್ಯಂ ಶರಣಂ ಕಮಾಶ್ರಯೇ ॥ ೩೦ ॥

ಯ ಏತದಾದಾವಸೃಜಚ್ಚರಾಚರಂ
ಸ್ವಮಾಯಯಾಽಽತ್ಮಾಶ್ರಯಯಾವಿತರ್ಕ್ಯಯಾ ।
ತಯೈವ ಸೋಽಯಂ ಕಿಲ ಗೋಪ್ತುಮುದ್ಯತಃ
ಕಥಂ ನು ಮಾಂ ಧರ್ಮಪರೋ ಜಿಘಾಂಸತಿ ॥ ೩೧ ॥

ನೂನಂ ಬತೇಶಸ್ಯ ಸಮೀಹಿತಂ ಜನೈ-
ಸ್ತನ್ಮಾಯಯಾ ದುರ್ಜಯಯಾಕೃತಾತ್ಮಭಿಃ ।
ನ ಲಕ್ಷ್ಯತೇ ಯಸ್ತ್ವಕರೋದಕಾರಯದ್
ಯೋಽನೇಕ ಏಕಃ ಪರತಶ್ಚ ಈಶ್ವರಃ ॥ ೩೨ ॥

ಹಿಂದೆ ಬ್ರಹ್ಮದೇವರು ಲೋಕರಕ್ಷಣೆಗಾಗಿ ಉತ್ಪಾದನೆಮಾಡಿದ ಅನ್ನಾದಿ ಬೀಜಗಳನ್ನು ನೀನು ನಿನ್ನಲ್ಲಿ ಲೀನಗೊಳಿಸಿಕೊಂಡು ಬಿಟ್ಟಿರುವೆ. ಈಗ ನನ್ನನ್ನೂ ತಿರಸ್ಕರಿಸಿ ಸಸ್ಯಗಳನ್ನು ಮೊಳೆಯಿಸದೆ ನೀನು ಅಪರಾಧಿನಿಯೂ, ಮೂರ್ಖಳೂ ಆಗಿರುವೆ. ॥ ೨೪ ॥ ನಿನ್ನನ್ನು ನನ್ನ ಬಾಣಗಳಿಂದ ತುಂಡರಿಸಿ ಹಸಿವಿನಿಂದ ಕಂಗೆಟ್ಟಿರುವ ನನ್ನ ಪ್ರಜೆಗಳಿಗೆ ನಿನ್ನ ಕೊಬ್ಬಿನಿಂದಲೇ ಅನ್ನ ಆಹಾರಗಳ ತೃಪ್ತಿಯನ್ನು ಉಂಟುಮಾಡುವೆನು. ॥ ೨೫ ॥ ಅಧಮನಾದ ಮನುಷ್ಯನು ಪ್ರಾಣಿಗಳಲ್ಲಿ ದಯೆಯನ್ನು ತೋರದೆ ಕೇವಲ ತನ್ನ ಪೋಷಣೆಯನ್ನೇ ಮಾಡಿಕೊಳ್ಳುವವನು ಪುರುಷನಾಗಲೀ, ಸ್ತ್ರೀಯಾಗಲೀ, ನಪುಂಸಕನಾಗಲೀ ಅಂತಹವನನ್ನು ಕೊಲ್ಲುವುದು ರಾಜರಿಗಾಗಿ ವಧೆಯೇ ಅಲ್ಲ. ॥ ೨೬ ॥ ನೀನು ಅತಿಗರ್ವಿಷ್ಠೆಯಾಗಿ, ಮದದಿಂದ ಕೊಬ್ಬಿದವಳಾಗಿ ಮಾಯೆಯಿಂದ ಗೋರೂಪವನ್ನು ತಾಳಿರುವ ನಿನ್ನನ್ನು ನನ್ನ ಬಾಣಗಳಿಂದ ತುಂಡು-ತುಂಡಾಗಿಸಿ ಈ ಪ್ರಜೆಗಳನ್ನು ನನ್ನ ಯೋಗಬಲದಿಂದಲೇ ಧರಿಸಿ ಕಾಪಾಡುವೆನು. ॥ ೨೭ ॥

ಹೀಗೆ ಮೃತ್ಯುವಿನಂತೆ, ಕ್ರೋಧಮಯ ಮೂರ್ತಿಯಾಗಿದ್ದ ಆ ಭೂಪತಿಯನ್ನು ಕಂಡು ಭೂದೇವಿಯು ಆತನಿಗೆ ನಮಸ್ಕರಿಸಿ ಕೈಜೋಡಿಸಿಕೊಂಡು ನಡುಗುತ್ತಾ ಅತ್ಯಂತ ವಿನಮ್ರಭಾವದಿಂದ ಹೀಗೆಂದಳು. ॥ ೨೮ ॥

ಪೃಥಿವಿಯು ಹೇಳಿದಳು – ನೀನು ಸಾಕ್ಷಾತ್ ಪರಮ ಪುರುಷನು. ಮಾಯೆಯಿಂದ ಬಗೆ-ಬಗೆಯ ದೇಹಗಳನ್ನು ಧರಿಸಿ ಗುಣಮಯನಂತೆ ಕಾಣುತ್ತಿದ್ದರೂ ವಾಸ್ತವವಾಗಿ ತ್ರಿಗುಣಾತೀತನು. ಆತ್ಮಾನುಭಾವದಿಂದ ಅಧಿಭೂತ, ಅಧ್ಯಾತ್ಮ, ಅಧಿದೈವ ಸಂಬಂಧವಾದ ಅಭಿಮಾನ ಮತ್ತು ಅದರಿಂದ ಉಂಟಾದ ರಾಗ-ದ್ವೇಷಾದಿಗಳಿಂದ ಸರ್ವಥಾ ರಹಿತನಾಗಿರುವೆ. ಅಂತಹ ನಿನಗೆ ನಾನು ಪದೇ-ಪದೇ ನಮಸ್ಕರಿಸುತ್ತಿದ್ದೇನೆ. ॥ ೨೯ ॥ ನೀನು ಇಡೀ ಜಗತ್ತನ್ನು ನಿರ್ಮಾಣಮಾಡಿದವನು. ಈ ತ್ರಿಗುಣಾತ್ಮಕವಾದ ಸೃಷ್ಟಿಯನ್ನು ರಚಿಸಿ, ನನ್ನನ್ನು ಸಮಸ್ತ ಜೀವಿಗಳಿಗೂ ಆಶ್ರಯವಾಗಿರುವಂತೆ ಮಾಡಿದವನೂ ನೀನೆ. ಹೀಗೆ ಸರ್ವಸ್ವತಂತ್ರನಾಗಿ, ಸರ್ವೇಶ್ವರನಾಗಿ, ನಿಯಾಮಕನಾಗಿರುವ ನೀನೇ ಆಯುಧಧಾರಿಯಾಗಿ ನನ್ನನ್ನು ಕೊಲ್ಲಲು ಬರುವಾಗ ನಾನು ಬೇರೆ ಯಾರನ್ನು ಶರಣು ಹೋಗಲಿ ? ॥ ೩೦ ॥ ಕಲ್ಪದ ಪ್ರಾರಂಭದಲ್ಲಿ ನೀನೇ ನಿನಗೆ ಆಶ್ರಿತವಾಗಿರುವ ಅನಿರ್ವಚನೀಯ ಮಾಯೆಯಿಂದಲೇ ಈ ಚರಾಚರ ಜಗತ್ತನ್ನು ರಚಿಸಿದ್ದೆ. ಆ ಮಾಯೆಯ ಮೂಲಕವೇ ನೀನು ಇದನ್ನು ಪಾಲಿಸಲು ಸಿದ್ಧನಾಗಿರುವೆ. ನೀನು ಧರ್ಮಪರಾಯಣನಾಗಿರುವೆ. ಹಾಗಿರುವಾಗ ಗೋರೂಪಧಾರಿಣಿಯಾದ ನನ್ನನ್ನು ಏಕೆ ಕೊಲ್ಲಲು ಬಯಸುವೆ ? ॥ ೩೧ ॥ ನೀನು ಒಬ್ಬನೇ ಆಗಿದ್ದರೂ ಮಾಯೆಯಿಂದ ಅನೇಕರೂಪಿಯಾಗಿ ಕಾಣಿಸುತ್ತಿದ್ದೀಯೆ. ನೀನೇ ಬ್ರಹ್ಮದೇವರನ್ನು ಸೃಷ್ಟಿಸಿ ಅವರಿಂದ ವಿಶ್ವದ ರಚನೆಯನ್ನು ಮಾಡಿಸಿದ್ದೀಯೆ. ನೀನು ಸಾಕ್ಷಾತ್ ಸರ್ವೇಶ್ವರನಾಗಿರುವೆ. ನಿನ್ನ ಲೀಲೆಗಳನ್ನು ಜಿತೇಂದ್ರಿಯರಲ್ಲದವರು ಹೇಗೆ ತಾನೇ ತಿಳಿಯ ಬಲ್ಲರು ? ಅವರ ಬುದ್ಧಿಯಾದರೋ ದಾಟಲಶಕ್ಯವಾದ ಮಾಯೆಯಿಂದ ವಿಕ್ಷಿಪ್ತವಾಗಿದೆ. ॥ ೩೨ ॥

ಸರ್ಗಾದಿ ಯೋಽಸ್ಯಾನುರುಣದ್ಧಿ ಶಕ್ತಿಭಿ-
  ರ್ದ್ರವ್ಯಕ್ರಿಯಾಕಾರಕಚೇತನಾತ್ಮಭಿಃ ।
ತಸ್ಮೈ ಸಮುನ್ನದ್ಧ ನಿರುದ್ಧ ಶಕ್ತಯೇ
  ನಮಃ ಪರಸ್ಮೈ ಪುರುಷಾಯ ವೇಧಸೇ ॥ ೩೩ ॥

ಸ ವೈ ಭವಾನಾತ್ಮವಿನಿರ್ಮಿತಂ ಜಗದ್
  ಭೂತೇಂದ್ರಿಯಾಂತಃಕರಣಾತ್ಮಕಂ ವಿಭೋ ।
ಸಂಸ್ಥಾಪಯಿಷ್ಯನ್ನಜ ಮಾಂ ರಸಾತಲಾ-
  ದಭ್ಯುಜ್ಜಹಾರಾಮ್ಭಸ ಆದಿಸೂಕರಃ ॥ ೩೪ ॥

ಅಪಾಮುಪಸ್ಥೇ ಮಯಿ ನಾವ್ಯವಸ್ಥಿತಾಃ
  ಪ್ರಜಾ ಭವಾನದ್ಯ ರಿರಕ್ಷಿಷುಃ ಕಿಲ ।
ಸ ವೀರಮೂರ್ತಿಃ ಸಮಭೂದ್ಧರಾಧರೋ
  ಯೋ ಮಾಂ ಪಯಸ್ಯುಗ್ರಶರೋ ಜಿಘಾಂಸಸಿ ॥ ೩೫ ॥

ನೂನಂ ಜನೈರೀಹಿತಮೀಶ್ವರಾಣಾ-
  ಮಸ್ಮದ್ವಿಧೈಸ್ತದ್ಗುಣಸರ್ಗಮಾಯಯಾ ।
ನ ಜ್ಞಾಯತೇ ಮೋಹಿತಚಿತ್ತ ವರ್ತ್ಮಭಿ-
  ಸ್ತೇಭ್ಯೋ ನಮೋ ವೀರಯಶಸ್ಕರೇಭ್ಯಃ ॥ ೩೬ ॥

ಪಂಚಭೂತಗಳು, ಇಂದ್ರಿಯಗಳು, ಅವುಗಳ ಅಧಿಷ್ಠಾತೃ ದೇವತೆಗಳು, ಬುದ್ಧಿ ಮತ್ತು ಅಹಂಕಾರರೂಪವಾದ ಸ್ವಶಕ್ತಿಗಳಿಂದ ಜಗತ್ತಿನ ಸೃಷ್ಟಿ, ಸ್ಥಿತಿ, ಸಂಹಾರಗಳನ್ನು ಕ್ರಮವಾಗಿ ಮಾಡುವ ಪರಮೇಶ್ವರನು ನೀನೇ. ನಿನ್ನ ಈ ಶಕ್ತಿಗಳು ಬೇರೆ-ಬೇರೆ ಕಾರ್ಯಗಳಿಗಾಗಿ ಬೇರೆ-ಬೇರೆ ಸಮಯಗಳಲ್ಲಿ ಪ್ರಕಟವಾಗಿ, ಮರೆಯಾಗುತ್ತವೆ. ನೀನು ಸಾಕ್ಷಾತ್ ಪರಮಪುರುಷನಾಗಿದ್ದು ಜಗದ್ವಿಧಾತನಾದ ನಿನಗೆ ನಾನು ನಮಸ್ಕರಿಸುತ್ತೇನೆ. ॥ ೩೩ ॥ ಓ ಜನ್ಮರಹಿತನಾದ ಪ್ರಭುವೇ! ನೀನು ರಚಿಸಿದ ಭೂತಗಳು, ಇಂದ್ರಿಯಗಳು, ಅಂತಃಕರಣರೂಪವಾದ ಜಗತ್ತಿನ ಸ್ಥಿತಿಗಾಗಿ ಆದಿವರಾಹರೂಪವನ್ನು ಧರಿಸಿ ನನ್ನನ್ನು ರಸಾತಲದ ನೀರಿನಿಂದ ಹೊರಗೆ ತಂದು ಕಾಪಾಡಿರುವನು. ॥ ೩೪ ॥ ಹೀಗೆ ಒಂದು ಬಾರಿ ನನ್ನನ್ನು ಉದ್ಧಾರ ಮಾಡಿ 'ಧರಾಧರ' ಎಂಬ ಹೆಸರು ಪಡೆದ ನೀನೇ ವೀರಮೂರ್ತಿಯಾಗಿ ಜಲದ ಮೇಲೆ ಹಡಗಿನಂತೆ ನಿಂತಿರುವ ನನ್ನನ್ನು ಆಶ್ರಯಿಸಿರುವ ಪ್ರಜೆಗಳನ್ನು ರಕ್ಷಿಸುವುದಕ್ಕಾಗಿ, ಅತಿತೀಕ್ಷ್ಣವಾದ ಬಾಣಗಳನ್ನು ಹೂಡಿ, ಹಾಲುಕೊಡಲಿಲ್ಲ ಎಂಬ ತಪ್ಪಿಗಾಗಿ ನನ್ನನ್ನು ಕೊಲ್ಲಲು ಬಯಸುತ್ತಿರುವೆಯಲ್ಲ. ॥ ೩೫ ॥ ಈ ತ್ರಿಗುಣಾತ್ಮಕ ಸೃಷ್ಟಿಯನ್ನು ರಚಿಸುವ ನಿನ್ನ ಮಾಯೆಯಿಂದ ನನ್ನಂತಹ ಸಾಧಾರಣ ಜನರ ಚಿತ್ತವು ಮೋಹಿತವಾಗಿದೆ. ನನ್ನಂತಹವರಾದರೋ ನಿನ್ನ ಭಕ್ತರ ಲೀಲೆಗಳನ್ನು ಕೂಡ ನಿಂದಿತವಾಗಿ ತಿಳಿಯಲಾರರು. ಹಾಗಿರುವಾಗ ನಿನ್ನ ಯಾವುದೇ ಕ್ರಿಯೆಯ ಉದ್ದೇಶವನ್ನು ತಿಳಿಯದಿರುವುದರಲ್ಲಿ ಆಶ್ಚರ್ಯವೇನಿದೆ? ಆದ್ದರಿಂದ ಇಂದ್ರಿಯ ಸಂಯಮಾದಿಗಳ ಮೂಲಕ ವೀರೋಚಿತ ಕಾರ್ಯಗಳನ್ನು ಮಾಡುವ ನಿನ್ನ ಭಕ್ತರನ್ನು ಕೂಡ ನಮಸ್ಕರಿಸುತ್ತೇನೆ. ॥ ೩೬ ॥

ಹದಿನೇಳನೆಯ ಅಧ್ಯಾಯವು ಮುಗಿಯಿತು. ॥ ೧೭ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಚತುರ್ಥಸ್ಕಂಧೇ
ಪೃಥುವಿಜಯೇ ಧರಿತ್ರೀನಿಗ್ರಹೋ ನಾಮ ಸಪ್ತದಶೋಽಧ್ಯಾಯಃ ॥ ೧೭ ॥

ಹದಿನೆಂಟನೆಯ ಅಧ್ಯಾಯ

ಗೋರೂಪವಾದ ಭೂದೇವಿಯಿಂದ ಹಾಲನ್ನು ಕರೆದುದು

ಮೈತ್ರೇಯ ಉವಾಚ

ಇತ್ಥಂ ಪೃಥುಮಭಿಷ್ಟೂಯ ರುಷಾ ಪ್ರಸ್ಫುರಿತಾಧರಮ್ ।
ಪುನರಾಹಾವನಿರ್ಭೀತಾ ಸಂಸ್ತಭ್ಯಾತ್ಮಾನಮಾತ್ಮನಾ ॥ ೧ ॥

ಸಂನಿಯಚ್ಛಾಭಿಭೋ ಮನ್ಯುಂ ನಿಬೋಧ ಶ್ರಾವಿತಂ ಚ ಮೇ ।
ಸರ್ವತಃ ಸಾರಮಾದತ್ತೇ ಯಥಾ ಮಧುಕರೋ ಬುಧಃ ॥ ೨ ॥

ಶ್ರೀಮೈತ್ರೇಯರು ಹೇಳುತ್ತಾರೆ – ಎಲೈ ವಿದುರನೇ! ಕೋಪದಿಂದ ತುಟಿಗಳು ಅದುರುತ್ತಿದ್ದ ಪೃಥುರಾಜನನ್ನು ಭೂದೇವಿಯು ಹೀಗೆ ಸ್ತೋತ್ರಮಾಡಿದರೂ ಭಯವು ಹೋಗದಿರಲು ತನ್ನನ್ನು ತಾನೇ ಸಮಾಧಾನಮಾಡಿಕೊಂಡು ಪುನಃ ಅವನಲ್ಲಿ ಹೀಗೆಂದಳು– ॥ ೧ ॥ ರಾಜೇಂದ್ರನೇ! ಕೋಪವನ್ನು ಉಪಸಂಹಾರಮಾಡು. ನನ್ನ ವಿಜ್ಞಾಪನೆಯನ್ನು ಆಲಿಸು. ಬುದ್ಧಿವಂತರಾದವರು ದುಂಬಿಯಂತೆ ಎಲ್ಲ ಕಡೆಗಳಿಂದಲೂ ಸಾರವನ್ನು ಗ್ರಹಿಸಿಕೊಳ್ಳಬಲ್ಲರು. ॥ ೨ ॥ ತತ್ತ್ವದರ್ಶಿಗಳಾದ ಮುನಿಗಳು ಈ ಲೋಕದಲ್ಲೂ ಮತ್ತು ಪರಲೋಕದಲ್ಲೂ ಮನುಷ್ಯರಿಗೆ ಶ್ರೇಯಸ್ಸನ್ನುಂಟುಮಾಡಲು ಕೃಷಿ,

ಅಸ್ಮಿನ್ಲೋಕೇಽಥವಾಮುಷ್ಮಿನ್ಮುನಿಭಿಸ್ತತ್ತ್ವದರ್ಶಿಭಿಃ ।
ದೃಷ್ಟಾ ಯೋಗಾಃ ಪ್ರಯುಕ್ತಾಶ್ಚ ಪುಂಸಾಂ ಶ್ರೇಯಃಪ್ರಸಿದ್ಧಯೇ ॥ ೩ ॥

ತಾನಾತಿಷ್ಠತಿ ಯಃ ಸಮ್ಯಗುಪಾಯಾನ್ಪೂರ್ವದರ್ಶಿತಾನ್ ।
ಅವರಃ ಶ್ರದ್ಧಯೋಪೇತ ಉಪೇಯಾನ್ವಿಂದತೇಽಂಜಸಾ ॥ ೪ ॥

ತಾನನಾದೃತ್ಯ ಯೋಽವಿದ್ವಾನರ್ಥಾನಾರಭತೇ ಸ್ವಯಮ್ ।
ತಸ್ಯ ವ್ಯಭಿಚರಂತ್ಯರ್ಥಾ ಆರಬ್ಧಾಶ್ಚ ಪುನಃ ಪುನಃ ॥ ೫ ॥

ಪುರಾ ಸೃಷ್ಟಾ ಹ್ಯೋಷಧಯೋ ಬ್ರಹ್ಮಣಾ ಯಾ ವಿಶಾಂಪತೇ ।
ಭುಜ್ಯಮಾನಾ ಮಯಾ ದೃಷ್ಟಾ ಅಸದ್ಭಿರಧೃತವ್ರತೈಃ ॥ ೬ ॥

ಅಪಾಲಿತಾನಾದೃತಾ ಚ
ಭವದ್ಭಿರ್ಲೋಕಪಾಲಕೈಃ ।
ಚೋರೀಭೂತೇಽಥ ಲೋಕೇಽಹಂ
ಯಜ್ಞಾರ್ಥೇಽಗ್ರಸಮೋಷಧೀಃ ॥ ೭ ॥

ನೂನಂ ತಾ ವೀರುಧಃ ಕ್ಷೀಣಾ ಮಯಿ ಕಾಲೇನ ಭೂಯಸಾ ।
ತತ್ರ ಯೋಗೇನ ದೃಷ್ಟೇನ ಭವಾನಾದಾತುಮರ್ಹತಿ ॥ ೮ ॥

ವತ್ಸಂ ಕಲ್ಪಯ ಮೇ ವೀರ
ಯೇನಾಹಂ ವತ್ಸಲಾ ತವ ।
ಧೋಕ್ಷ್ಯೇ ಕ್ಷೀರಮಯಾನ್ ಕಾಮಾ-
ನನುರೂಪಂ ಚ ದೋಹನಮ್ ॥ ೯ ॥

ದೋಗ್ಧಾರಂ ಚ ಮಹಾಬಾಹೋ ಭೂತಾನಾಂ ಭೂತಭಾವನ ।
ಅನ್ನಮೀಪ್ಸಿತಮೂರ್ಜಸ್ವದ್ಭಗವಾನ್ ವಾಂಛತೇ ಯದಿ ॥ ೧೦ ॥

ಸಮಾಂ ಚ ಕುರು ಮಾಂ ರಾಜನ್ದೇವವೃಷ್ಟಂ ಯಥಾ ಪಯಃ ।
ಅಪರ್ತಾವಪಿ ಭದ್ರಂ ತೇ ಉಪಾವರ್ತೇತ ಮೇ ವಿಭೋ ॥ ೧೧ ॥

ಇತಿ ಪ್ರಿಯಂ ಹಿತಂ ವಾಕ್ಯಂ ಭುವ ಆದಾಯ ಭೂಪತಿಃ ।
ವತ್ಸಂ ಕೃತ್ವಾ ಮನುಂ ಪಾಣಾವದುಹತ್ಸಕಲೌಷಧೀಃ ॥ ೧೨ ॥

ತಥಾ ಪರೇ ಚ ಸರ್ವತ್ರ ಸಾರಮಾದದತೇ ಬುಧಾಃ ।
ತತೋಽನ್ಯೇ ಚ ಯಥಾಕಾಮಂ ದುದುಹುಃ ಪೃಥುಭಾವಿತಾಮ್ ॥ ೧೩ ॥

ಋಷಯೋ ದುದುಹುರ್ದೇವೀಮಿಂದ್ರಿಯೇಷ್ವಥ ಸತ್ತಮ ।
ವತ್ಸಂ ಬೃಹಸ್ಪತಿಂ ಕೃತ್ವಾ ಪಯಶ್ಛಂದೋಮಯಂ ಶುಚಿ ॥ ೧೪ ॥

ಅಗ್ನಿಹೋತ್ರ ಮುಂತಾದ ಅನೇಕ ಉಪಾಯಗಳನ್ನು ಕಂಡುಹಿಡಿದಿರುವರು. ಅವು ಉಪಯೋಗಿಯಾಗಿವೆ. ॥ ೩ ॥ ■ ಪ್ರಾಚೀನ ಋಷಿಗಳು ತೋರಿಸಿಕೊಟ್ಟ ಉಪಾಯಗಳನ್ನು ಈಗಲೂ ಶ್ರದ್ಧೆಯಿಂದ ಚೆನ್ನಾಗಿ ಆಚರಿಸಿದ ಮನುಷ್ಯರು ಸುಲಭವಾಗಿ ಇಷ್ಟಾರ್ಥ ಸಿದ್ಧಿಯನ್ನು ಪಡೆದುಕೊಳ್ಳುವರು. ॥ ೪ ॥ ಆದರೆ ಅಜ್ಞಾನಿಯಾದವನು ಅವನ್ನು ಆದರಿಸದೆಯೇ ತನ್ನ ಮನಸ್ಸಿಗೆ ತೋಚಿದ ಉಪಾಯಗಳನ್ನು ಆಶ್ರಯಿಸುತ್ತಾನೆಯೋ ಅವನ ಎಲ್ಲ ಉಪಾಯಗಳು, ಪ್ರಯತ್ನಗಳು ಪದೇ-ಪದೇ ನಿಷ್ಫಲವಾಗುತ್ತಾ ಇರುತ್ತವೆ. ॥ ೫ ॥ ಎಲೈ ರಾಜನೇ! ಹಿಂದೆ ಬ್ರಹ್ಮದೇವರು ಪ್ರಾಣಿಗಳ ಆಹಾರಕ್ಕಾಗಿ ಸೃಷ್ಟಿಮಾಡಿದ ಧಾನ್ಯಗಳನ್ನು ಯಮ-ನಿಯಮಾದಿ ವ್ರತಗಳನ್ನು ಆಚರಿಸದ ದುರಾಚಾರಿಗಳು ತಿನ್ನುತ್ತಾ ಇರುವುದನ್ನು ನಾನು ನೋಡಿದ್ದೇನೆ. ॥ ೬ ॥ ಲೋಕಪಾಲನೆಯ ಹೊಣೆಯನ್ನು ಹೊತ್ತಿರುವ ನಿಮ್ಮಂತಹ ರಾಜರು ನನ್ನನ್ನು ಪಾಲಿಸುವುದನ್ನು, ಆದರಿಸುವುದನ್ನು ಬಿಟ್ಟುಬಿಟ್ಟರು. ಅದರಿಂದ ಎಲ್ಲ ಜನರು ಕಳ್ಳರಂತೆ ಆಗಿದ್ದಾರೆ. ಅದರಿಂದಲೇ ನಾನು ಮುಂದೆ ಯಜ್ಞಾದಿಗಳಿಗೆ ಒದಗಿಬರಲೆಂದು ಉಳಿದ ಔಷಧಿ-ಬೀಜಗಳನ್ನು ಅಡಗಿಸಿಬಿಟ್ಟಿರುವೆನು. ॥ ೭ ॥ ಈಗ ಬಹಳ ಕಾಲವು ಕಳೆದುಹೋದುದರಿಂದ ಆ ಧಾನ್ಯಗಳೆಲ್ಲ ನನ್ನ ಹೊಟ್ಟೆಯಲ್ಲೇ ಜೀರ್ಣವಾಗಿಹೋಗಿವೆ. ಅವುಗಳನ್ನು ನೀನೀಗ ಹಿಂದಿನ ಆಚಾರ್ಯರು ಹೇಳಿದ ಉಪಾಯಗಳಿಂದ ಪಡೆದುಕೊಳ್ಳಬಹುದು. ॥ ೮ ॥ ಎಲೈ ಲೋಕಪಾಲನಾದ ವೀರನೇ! ಈಗ ನಿನಗೆ ಸಕಲಲೋಕಗಳಿಗೂ ಇಷ್ಟವಾಗಿ ಹಿತಕರವಾಗಿರುವ ಅನ್ನವನ್ನು ದೊರಕಿಸಿಕೊಡುವ ಬಯಕೆಯಿದ್ದರೆ – ನನಗೆ ಯೋಗ್ಯವಾದ ಕರುವನ್ನು, ಹಾಲುಕರೆಯುವ ಪಾತ್ರೆಯನ್ನು, ಹಾಲುಕರೆಯುವವರನ್ನು ಏರ್ಪಡಿಸು. ಆ ಕರುವಿನ ಮೇಲಿನ ವಾತ್ಸಲ್ಯದಿಂದಾಗಿ ನಾನು ಹಾಲಿನ ರೂಪದಲ್ಲಿ ನಿನಗೆ ನಿನ್ನ ಎಲ್ಲ ಇಷ್ಟಾರ್ಥವನ್ನು ಈಡೇರಿಸಿಕೊಡುವೆನು. ॥ ೯-೧೦ ॥ ರಾಜನೇ! ಇನ್ನೊಂದು ಮಾತಿದೆ. ನೀನು ನನ್ನನ್ನು ಹಳ್ಳ-ತಿಟ್ಟುಗಳಿಲ್ಲದೆ ಸಮತಲವಾಗಿಸಬೇಕು. ಅದರಿಂದ ಇಂದ್ರನು ಸುರಿಸಿದ ಮಳೆಯ ನೀರು ವರ್ಷಾಕಾಲವು ಕಳೆದುಹೋದ ಬಳಿಕವೂ ಎಲ್ಲ ಕಡೆಗಳಲ್ಲಿ ಉಳಿಯುವುದು. ನನ್ನೊಳಗಿನ ತೇವವು ಒಣಗಿಹೋಗದು. ನೀನು ಹೀಗೆ ಮಾಡಿದರೆ ನಿನಗೆ ತುಂಬಾ ಒಳ್ಳೆಯದಾಗಬಹುದು. ॥ ೧೧ ॥

ಭೂದೇವಿಯು ಹೇಳಿದ ಪ್ರಿಯವೂ, ಹಿತಕರವೂ ಆದ ಮಾತನ್ನು ಪೃಥುಮಹಾರಾಜನು ಸ್ವೀಕರಿಸಿ, ಸ್ವಾಯಂಭುವ ಮನುವನ್ನೇ ಕರುವಾಗಿಸಿಕೊಂಡು ಗೋರೂಪಿಣಿಯಾಗಿದ್ದ ಭೂದೇವಿಯಿಂದ ತನ್ನ ಕೈಗಳಲ್ಲೇ ಎಲ್ಲ ಧಾನ್ಯಗಳನ್ನು ಕರೆದುಕೊಂಡನು. ॥ ೧೨ ॥ ಹಾಗೆಯೇ ಪೃಥುವಿನಂತೆ ತಿಳಿವಳಿಕೆಯುಳ್ಳ ಇತರ ಎಲ್ಲ ಜನರೂ ಎಲ್ಲ ಕಡೆಗಳಿಂದ ಸಾರವನ್ನು ಪರಿಗ್ರಹಿಸಿದರು. ಅವರು ಪೃಥುರಾಜನ ಮೂಲಕ ವಶಪಡಿಸಿಕೊಂಡ ಭೂಮಿಯಿಂದ ತಮ್ಮ-ತಮ್ಮ ಇಷ್ಟಾರ್ಥಗಳನ್ನು ಕರೆದುಕೊಂಡರು. ॥ ೧೩ ॥ ಋಷಿಗಳು ಬೃಹಸ್ಪತಿಯನ್ನು ಕರುವನ್ನಾಗಿ ಮಾಡಿಕೊಂಡು ಇಂದ್ರಿಯ (ವಾಣಿ, ಮನಸ್ಸು, ಶ್ರೋತ್ರ) ರೂಪವಾದ ಪಾತ್ರೆಯಲ್ಲಿ ವೇದರೂಪವಾದ, ಪವಿತ್ರವಾದ ಕ್ಷೀರವನ್ನು ಕರೆದುಕೊಂಡರು. ॥ ೧೪ ॥ ದೇವತೆಗಳು

ಕೃತ್ವಾ ವತ್ಸಂ ಸುರಗಣಾ ಇಂದ್ರಂ ಸೋಮಮದೂದುಹನ್ ।
ಹಿರಣ್ಮಯೇನ ಪಾತ್ರೇಣ ವೀರ್ಯಮೋಜೋ ಬಲಂ ಪಯಃ ॥ ೧೫ ॥

ದೈತೇಯಾ ದಾನವಾ ವತ್ಸಂ ಪ್ರಹ್ಲಾದಮಸುರರ್ಷಭಮ್ ।
ವಿಧಾಯಾದೂದುಹನ್ ಕ್ಷೀರಮಯಃಪಾತ್ರೇ ಸುರಾಸವಮ್ ॥ ೧೬ ॥

ಗಂಧರ್ವಾಪ್ಸರಸೋಽಧುಕ್ಷನ್ಪಾತ್ರೇ ಪದ್ಮಮಯೇ ಪಯಃ ।
ವತ್ಸಂ ವಿಶ್ವಾವಸುಂ ಕೃತ್ವಾ ಗಾಂಧರ್ವಂ ಮಧು ಸೌಭಗಮ್ ॥ ೧೭ ॥

ವತ್ಸೇನ ಪಿತರೋಽರ್ಯಮ್ಣಾ ಕವ್ಯಂ ಕ್ಷೀರಮಧುಕ್ಷತ ।
ಆಮಪಾತ್ರೇ ಮಹಾಭಾಗಾಃ ಶ್ರದ್ಧಯಾ ಶ್ರಾದ್ಧದೇವತಾಃ ॥ ೧೮ ॥

ಪ್ರಕಲ್ಪ್ಯ ವತ್ಸಂ ಕಪಿಲಂ ಸಿದ್ಧಾಃ ಸಂಕಲ್ಪನಾಮಯೀಮ್ ।
ಸಿದ್ಧಿಂ ನಭಸಿ ವಿದ್ಯಾಂ ಚ ಯೇ ಚ ವಿದ್ಯಾಧರಾದಯಃ ॥ ೧೯ ॥

ಅನ್ಯೇ ಚ ಮಾಯಿನೋ ಮಾಯಾ-
ಮಂತರ್ಧಾನಾದ್ಭುತಾತ್ಮನಾಮ್ ।
ಮಯಂ ಪ್ರಕಲ್ಪ್ಯ ವತ್ಸಂ ತೇ
ದುದುಹುರ್ಧಾರಣಾಮಯೀಮ್ ॥ ೨೦ ॥

ಯಕ್ಷರಕ್ಷಾಂಸಿ ಭೂತಾನಿ ಪಿಶಾಚಾಃ ಪಿಶಿತಾಶನಾಃ ।
ಭೂತೇಶವತ್ಸಾ ದುದುಹುಃ ಕಪಾಲೇ ಕ್ಷತಜಾಸವಮ್ ॥ ೨೦ ॥

ತಥಾಹಯೋ ದಂದಶೂಕಾಃ ಸರ್ಪಾ ನಾಗಾಶ್ಚ ತಕ್ಷಕಮ್ ।
ವಿಧಾಯ ವತ್ಸಂ ದುದುಹುರ್ಬಿಲಪಾತ್ರೇ ವಿಷಂ ಪಯಃ ॥ ೨೨ ॥

ಪಶವೋ ಯವಸಂ ಕ್ಷೀರಂ ವತ್ಸಂ ಕೃತ್ವಾ ಚ ಗೋವೃಷಮ್ ।
ಅರಣ್ಯಪಾತ್ರೇ ಚಾಧುಕ್ಷನ್ ಮೃಗೇಂದ್ರೇಣ ಚ ದಂಷ್ಟ್ರಿಣಃ ॥ ೨೩ ॥

ಕ್ರವ್ಯಾದಾಃ ಪ್ರಾಣಿನಃ ಕ್ರವ್ಯಂ ದುದುಹುಃ ಸ್ವೇ ಕಲೇವರೇ ।
ಸುಪರ್ಣವತ್ಸಾ ವಿಹಗಾಶ್ಚರಂ ಚಾಚರಮೇವ ಚ ॥ ೨೪ ॥

ವಟವತ್ಸಾ ವನಸ್ಪತಯಃ ಪೃಥಗ್ರಸಮಯಂ ಪಯಃ ।
ಗಿರಯೋ ಹಿಮವದ್ವತ್ಸಾ ನಾನಾಧಾತೂನ್ಸ್ವಸಾನುಷು ॥ ೨೫ ॥

ಇಂದ್ರನನ್ನು ಕರುವನ್ನಾಗಿಸಿ ಸುವರ್ಣಮಯ ಪಾತ್ರದಲ್ಲಿ ಸೋಮರಸ (ಅಮೃತ), ವೀರ್ಯ (ಮನೋಬಲ), ಓಜ (ಇಂದ್ರಿಯ ಬಲ) ಮತ್ತು ಶಾರೀರಿಕ ಬಲರೂಪವಾದ ಹಾಲನ್ನು ಕರೆದುಕೊಂಡರು. ॥ ೧೫ ॥ ದೈತ್ಯರು ಮತ್ತು ದಾನವರು ಅಸುರಶ್ರೇಷ್ಠನಾದ ಪ್ರಹ್ಲಾದನನ್ನು ಕರುವಾಗಿಸಿಕೊಂಡು ಕಬ್ಬಿಣದ ಪಾತ್ರೆಯಲ್ಲಿ ಮದಿರಾ ಮತ್ತು ಆಸವ (ಸುರೆ) ಮುಂತಾದ ಮದ್ಯಗಳನ್ನು ಹಾಲನ್ನಾಗಿ ಕರೆದುಕೊಂಡರು. ॥ ೧೬ ॥ ಗಂಧರ್ವರು ಮತ್ತು ಅಪ್ಸರೆಯರು ವಿಶ್ವಾವಸುವನ್ನು ಕರುವಾಗಿಸಿಕೊಂಡು ಕಮಲರೂಪವಾದ ಪಾತ್ರೆಯಲ್ಲಿ ಸಂಗೀತಮಾಧುರ್ಯ ಹಾಗೂ ಸೌಂದರ್ಯರೂಪವಾದ ಹಾಲನ್ನು ಕರೆದುಕೊಂಡರು. ॥ ೧೭ ॥ ಶ್ರಾದ್ಧದ ಅಧಿಷ್ಠಾತೃದೇವತೆಗಳಾದ ಪಿತೃದೇವತೆಗಳು ಅರ್ಯಮನನ್ನು ಕರುವನ್ನಾಗಿಸಿಕೊಂಡು ಮಣ್ಣಿನ ಮಡಕೆಯಲ್ಲಿ ಕವ್ಯರೂಪವಾದ ಹಾಲನ್ನು ಹಿಂಡಿಕೊಂಡರು. ॥ ೧೮ ॥ ಅನಂತರ ಸಿದ್ಧರು ಕಪಿಲ ಮಹರ್ಷಿಗಳನ್ನು ಕರುವನ್ನಾಗಿಸಿಕೊಂಡು ಆಕಾಶವೆಂಬ ಪಾತ್ರೆಯಲ್ಲಿ ಅಣಿಮಾದಿ ಅಷ್ಟಸಿದ್ಧಿಗಳನ್ನು, ಹಾಗೆಯೇ ವಿದ್ಯಾಧರರು ಆಕಾಶಗಮನವೇ ಮುಂತಾದ ಸಿದ್ಧಿಗಳನ್ನು ಹಾಲನ್ನಾಗಿ ಪಡೆದುಕೊಂಡರು. ॥ ೧೯ ॥ ಕಿಂಪುರುಷರೇ ಮುಂತಾದ ಇತರ ಮಾಯಾವಿಗಳು ಮಯ ದಾನವನನ್ನು ಕರುವನ್ನಾಗಿಸಿಕೊಂಡು ಅಂತರ್ಧಾನಹೊಂದುವಿಕೆ, ವಿಚಿತ್ರರೂಪವನ್ನು ಧರಿಸುವುದು ಮುಂತಾದ ಧಾರಣಾಶಕ್ತಿಯನ್ನು ಹಾಲನ್ನಾಗಿ ಗಳಿಸಿಕೊಂಡರು. ॥ ೨೦ ॥ ಹಾಗೆಯೇ ಯಕ್ಷ-ರಾಕ್ಷಸ ಹಾಗೂ ಭೂತ-ಪಿಶಾಚಾದಿ ಮಾಂಸಾಹಾರಿಗಳು ಭೂತನಾಥನಾದ ರುದ್ರನನ್ನು ಕರುವನ್ನಾಗಿಸಿಕೊಂಡು ಕಪಾಲ (ತಲೆಬುರುಡೆ)ವೆಂಬ ಪಾತ್ರೆಯಲ್ಲಿ ರುಧಿರಾಸವರೂಪವಾದ ಹಾಲನ್ನು ಕರೆದುಕೊಂಡರು. ॥ ೨೧ ॥ ಹೆಡೆಯಿಲ್ಲದ ಹಾವುಗಳು, ಹೆಡೆಯುಳ್ಳ ಸರ್ಪಗಳು, ನಾಗಗಳು ಮತ್ತು ಚೇಳುಗಳು ಮುಂತಾದ ವಿಷಪೂರಿತ ಪ್ರಾಣಿಗಳು ತಕ್ಷಕನನ್ನು ಕರುವನ್ನಾಗಿಸಿಕೊಂಡು ತಮ್ಮ-ತಮ್ಮ ಬಾಯಿಯೆಂಬ ಪಾತ್ರೆಯಲ್ಲಿ ವಿಷರೂಪವಾದ ಹಾಲನ್ನು ಹಿಂಡಿಕೊಂಡವು. ॥ ೨೨ ॥ ಪಶುಗಳು ಭಗವಾನ್ ರುದ್ರದೇವರ ವಾಹನವಾದ ವೃಷಭನನ್ನು ಕರುವನ್ನಾಗಿ ಮಾಡಿಕೊಂಡು ಅರಣ್ಯವೆಂಬ ಪಾತ್ರೆಯಲ್ಲಿ ಹುಲ್ಲಿನ ರೂಪವಾದ ಹಾಲನ್ನು ಪಡೆದುಕೊಂಡರು. ದೊಡ್ಡ-ದೊಡ್ಡ ಕೋರೆದಾಡೆಗಳುಳ್ಳ ಮಾಂಸಭಕ್ಷಕ ಮೃಗಗಳು ಸಿಂಹವೆಂಬ ಕರುವನ್ನು ಮುಂದಿಟ್ಟುಕೊಂಡು ತಮ್ಮ ಶರೀರವೆಂಬ ಪಾತ್ರೆಯಲ್ಲಿ ಹಸಿಯ ಮಾಂಸವೆಂಬ ಹಾಲನ್ನು ಪಡೆದುಕೊಂಡರು. ಹಾಗೆಯೇ ಪಕ್ಷಿಗಳು ಗರುಡನನ್ನು ಕರುವಾಗಿಸಿಕೊಂಡು ಹುಳು-ಹುಪ್ಪಟೆ ಮುಂತಾದ ಚರಪದಾರ್ಥಗಳನ್ನು, ಹಣ್ಣು ಮುಂತಾದ ಸ್ಥಿರಪದಾರ್ಥಗಳನ್ನು ಹಾಲಿನರೂಪದಲ್ಲಿ ಹಿಂಡಿಕೊಂಡವು. ॥ ೨೩-೨೪ ॥ ವೃಕ್ಷಗಳು ಆಲದಮರವನ್ನು ಕರುವನ್ನಾಗಿಸಿಕೊಂಡು ನಾನಾರಸರೂಪವಾದ ಹಾಲನ್ನು ಕರೆದುಕೊಂಡವು. ಪರ್ವತಗಳು ಹಿಮಾಲಯವನ್ನು ಕರುವನ್ನಾಗಿ ಮಾಡಿಕೊಂಡು ತಮ್ಮ ಶಿಖರಗಳೆಂಬ ಪಾತ್ರೆಯಲ್ಲಿ ಅನೇಕ ಪ್ರಕಾರದ ಧಾತುಗಳನ್ನು ಪಡೆದುಕೊಂಡವು. ॥ ೨೫ ॥

ಸರ್ವೇ ಸ್ವಮುಖ್ಯವತ್ಸೇನ
ಸ್ವೇ ಸ್ವೇ ಪಾತ್ರೇ ಪೃಥಕ್ಪಯಃ ।
ಸರ್ವಕಾಮದುಘಾಂ ಪೃಥ್ವೀಂ
ದುದುಹುಃ ಪೃಥುಭಾವಿತಾಮ್ ॥ ೨೬ ॥

ಪೃಥ್ವಿಯಾದರೋ ಬಯಸಿದ ವಸ್ತುಗಳನ್ನು ಕೊಡುವಂತಹ ವಳು. ಈಗ ಅವಳು ಪೃಥುರಾಜನ ಅಧೀನದಲ್ಲಿದ್ದಳು. ಆದ್ದರಿಂದ ಅವಳಿಂದ ಎಲ್ಲರೂ ತಮ್ಮ-ತಮ್ಮ ವರ್ಗದ ಮುಖ್ಯನಾಯಕನನ್ನು ಕರುವನ್ನಾಗಿಸಿಕೊಂಡು ಬೇರೆ-ಬೇರೆ ಪಾತ್ರಗಳಲ್ಲಿ ಬಗೆ-ಬಗೆಯ ಪದಾರ್ಥಗಳನ್ನು ಹಾಲಿನರೂಪದಲ್ಲಿ ಹಿಂಡಿಕೊಂಡರು. ॥ ೨೬ ॥

ಏವಂ ಪೃಥ್ವಾದಯಃ ಪೃಥ್ವೀಮನ್ನಾದಾಃ ಸ್ವನ್ನಮಾತ್ಮನಃ ।
ದೋಹವತ್ಸಾದಿಭೇದೇನ ಕ್ಷೀರಭೇದಂ ಕುರೂದ್ವಹ ॥ ೨೭ ॥

ಕುರುಶ್ರೇಷ್ಠ ವಿದುರನೇ! ಹೀಗೆ ಪೃಥುಮಹಾರಾಜನೇ ಮೊದಲ್ಗೊಂಡು ಅನ್ನವನ್ನು ತಿನ್ನುವ ಎಲ್ಲ ಜೀವಿಗಳು ನಾನಾಪ್ರಕಾರದ ಕರು ಮತ್ತು ಪಾತ್ರ ಇವುಗಳ ಮೂಲಕವಾಗಿ ತಮ್ಮ-ತಮ್ಮ ಬೇರೆ-ಬೇರೆ ಅನ್ನರೂಪವಾದ ಹಾಲನ್ನು ಭೂದೇವಿಯಿಂದ ಹಿಂಡಿಕೊಂಡರು. ॥ ೨೭ ॥

ತತೋ ಮಹೀಪತಿಃ ಪ್ರೀತಃ ಸರ್ವಕಾಮದುಘಾಂ ಪೃಥುಃ ।
ದುಹಿತೃತ್ವೇ ಚಕಾರೇಮಾಂ ಪ್ರೇಮ್ಣಾ ದುಹಿತೃವತ್ಸಲಃ ॥ ೨೮ ॥

ಆದರಿಂದ ಮಹಾರಾಜಾ ಪೃಥುವಿಗೆ ಬಹಳ ಸಂತೋಷವಾಗಿ ಸರ್ವಕಾಮನೆಗಳನ್ನು ಕರೆಯುವ ಪೃಥಿವಿಯಲ್ಲಿ ಪುತ್ರಿಯಂತೆ ಪ್ರೀತಿ ಉಂಟಾಯಿತು. ಅವಳನ್ನು ತನ್ನ ಪುತ್ರಿಯಾಗಿಯೇ ಸ್ವೀಕರಿಸಿದನು. ॥ ೨೮ ॥

ಚೂರ್ಣಯನ್ ಸ್ವಧನುಷ್ಕೋಟ್ಯಾ ಗಿರಿಕೂಟಾನಿ ರಾಜರಾಟ್ ।
ಭೂಮಂಡಲಮಿದಂ ವೈನ್ಯಃ ಪ್ರಾಯಶ್ಚಕ್ರೇ ಸಮಂ ವಿಭುಃ ॥ ೨೯ ॥

ಮತ್ತೆ ರಾಜಾಧಿರಾಜ ಪೃಥುವು ತನ್ನ ಧನುಷ್ಯದ ತುದಿಯಿಂದ ಪರ್ವತಗಳನ್ನು ಒಡೆದು ಈ ಇಡೀ ಭೂಮಂಡಲವನ್ನು ಬಹುಮಟ್ಟಿಗೆ ಸಮತಲವಾಗಿಸಿದನು. ॥ ೨೯ ॥

ಅಥಾಸ್ಮಿನ್ಭಗವಾನ್ ವೈನ್ಯಃ ಪ್ರಜಾನಾಂ ವೃತ್ತಿದಃ ಪಿತಾ ।
ನಿವಾಸಾನ್ ಕಲ್ಪಯಾಂಚಕ್ರೇ ತತ್ರ ತತ್ರ ಯಥಾರ್ಹತಃ ॥ ೩೦ ॥

ಆ ವೇನಪುತ್ರನಾದ ಭಗವಾನ್ ಪೃಥುವು ತನ್ನ ಪ್ರಜೆಗಳಿಗೆ ತಂದೆಯಂತೆ ಇದ್ದು ಅವರ ಪಾಲನೆ-ಪೋಷಣೆಯ ವ್ಯವಸ್ಥೆಯಲ್ಲಿ ತೊಡಗಿದ್ದನು. ಅವನು ಸಮತಲವಾದ ಭೂಮಿಯಲ್ಲಿ ಪ್ರಜೆಗಳಿಗೆ ಅಲ್ಲಲ್ಲಿ ಯಥೋಚಿತವಾದ ವಾಸಸ್ಥಾನಗಳನ್ನು ವಿಭಾಗಿಸಿ ಕೊಟ್ಟನು. ॥ ೩೦ ॥

ಗ್ರಾಮಾನ್ ಪುರಃ ಪತ್ತನಾನಿ ದುರ್ಗಾಣಿ ವಿವಿಧಾನಿ ಚ ।
ಘೋಷಾನ್ವ್ರಜಾನ್ಸಶಿಬಿರಾನಾಕರಾನ್ಖೇಟಖರ್ವಟಾನ್ ॥ ೩೧ ॥

ಅವರಿಗಾಗಿ ಅನೇಕ ಗ್ರಾಮಗಳು, ಪುರಗಳು, ಪಟ್ಟಣಗಳು, ದುರ್ಗಗಳು, ಗೊಲ್ಲರ ಊರು-ಕೇರಿಗಳು, ಗೋಶಾಲೆಗಳು, ಶಿಬಿರಗಳು, ಗಣಿಗಳು, ರೈತರ ಹಳ್ಳಿಗಳು, ಪರ್ವತ ತಪ್ಪಲುಗಳ ಹಳ್ಳಿಗಳು ಮುಂತಾದ ಬೇರೆ-ಬೇರೆ ವಾಸಸ್ಥಾನಗಳನ್ನು ಕಲ್ಪಿಸಿದನು. ॥ ೩೧ ॥

ಪ್ರಾಕ್ಪೃಥೋರಿಹ ನೈವೈಷಾ ಪುರಗ್ರಾಮಾದಿಕಲ್ಪನಾ ।
ಯಥಾಸುಖಂ ವಸಂತಿ ಸ್ಮ ತತ್ರ ತತ್ರಾಕುತೋಭಯಾಃ ॥ ೩೨ ॥

ಮಹಾರಾಜಾ ಪೃಥುವಿನ ಆಳ್ವಿಕೆಗೆ ಮೊದಲು ಈ ಪೃಥಿವಿಯಲ್ಲಿ ಪುರ-ಗ್ರಾಮಾದಿಗಳ ವಿಭಾಗವಿರಲಿಲ್ಲ. ಎಲ್ಲ ಜನರೂ ತಮ್ಮ-ತಮ್ಮ ಅನುಕೂಲತೆಗನುಸಾರ ಅಡೆ-ತಡೆಯಿಲ್ಲದೆ ಅಲ್ಲಲ್ಲಿ ವಾಸಿಸುತ್ತಿದ್ದರು. (ಈಗ ಪೃಥುಮಹಾರಾಜನು ಏರ್ಪಡಿಸಿ ಕೊಟ್ಟ ವಾಸಸ್ಥಾನಗಳಲ್ಲಿ ಯಾವ ಭಯವೂ ಇಲ್ಲದೆ ಸಂತೋಷವಾಗಿ ವಾಸಿಸತೊಡಗಿದರು.) ॥ ೩೨ ॥

ಹದಿನೆಂಟನೆಯ ಅಧ್ಯಾಯವು ಮುಗಿಯಿತು. ॥ ೧೮ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಚತುರ್ಥಸ್ಕಂಧೇ
ಪೃಥುವಿಜಯೇಽಷ್ಟಾದಶೋಽಧ್ಯಾಯಃ ॥ ೧೮ ॥

ಹತ್ತೊಂಭತ್ತನೆಯ ಅಧ್ಯಾಯ

ಪೃಥುಮಹಾರಾಜನಿಂದ ನೂರು ಅಶ್ವಮೇಧ ಯಜ್ಞಗಳ ಆಚರಣೆ

ಮೈತ್ರೇಯ ಉವಾಚ

ಅಥಾದೀಕ್ಷತ ರಾಜಾ ತು ಹಯಮೇಧಶತೇನ ಸಃ ।
ಬ್ರಹ್ಮಾವರ್ತೇ ಮನೋಃ ಕ್ಷೇತ್ರೇ ಯತ್ರ ಪ್ರಾಚೀ ಸರಸ್ವತೀ ॥ ೧ ॥

ಶ್ರೀಮೈತ್ರೇಯರು ಹೇಳುತ್ತಾರೆ – ಎಲೈ ವಿದುರನೇ! ಮನುಸಾರ್ವಭೌಮನಿಗೆ ಸೇರಿದ ಸರಸ್ವತೀ ನದಿಯು ಪೂರ್ವದಿಕ್ಕಿಗೆ ಹರಿಯುವ, ಬ್ರಹ್ಮಾವರ್ತವೆಂಬ ಕ್ಷೇತ್ರದಲ್ಲಿ ಆ ಪೃಥುಚಕ್ರವರ್ತಿಯು ನೂರು ಅಶ್ವಮೇಧಯಜ್ಞಗಳನ್ನು ಮಾಡಬೇಕೆಂದು ಸಂಕಲ್ಪಿಸಿ ದೀಕ್ಷೆಯನ್ನು ಕೈಗೊಂಡನು. ॥ ೧ ॥

ತದಭಿಪ್ರೇತ್ಯ ಭಗವಾನ್ ಕರ್ಮಾತಿಶಯಮಾತ್ಮನಃ ।
ಶತಕ್ರತುರ್ನ ಮಮೃಷೇ ಪೃಥೋರ್ಯಜ್ಞಮಹೋತ್ಸವಮ್ ॥ ೨ ॥

ಯತ್ರ ಯಜ್ಞಪತಿಃ ಸಾಕ್ಷಾದ್ಭಗವಾನ್ ಹರಿರೀಶ್ವರಃ ।
ಅನ್ವಭೂಯತ ಸರ್ವಾತ್ಮಾ ಸರ್ವಲೋಕಗುರುಃ ಪ್ರಭುಃ ॥ ೩ ॥

ಅನ್ವಿತೋ ಬ್ರಹ್ಮಶರ್ವಾಭ್ಯಾಂ ಲೋಕಪಾಲೈಃ ಸಹಾನುಗೈಃ ।
ಉಪಗೀಯಮಾನೋ ಗಂಧರ್ವೈರ್ಮುನಿಭಿಶ್ಚಾಪ್ಸರೋಗಣೈಃ ॥ ೪ ॥

ಸಿದ್ಧಾ ವಿದ್ಯಾಧರಾ ದೈತ್ಯಾ ದಾನವಾ ಗುಹ್ಯಕಾದಯಃ ।
ಸುನಂದನಂದಪ್ರಮುಖಾಃ ಪಾರ್ಷದಪ್ರವರಾ ಹರೇಃ ॥ ೫ ॥

ಕಪಿಲೋ ನಾರದೋ ದತ್ತೋ ಯೋಗೇಶಾಃ ಸನಕಾದಯಃ ।
ತಮನ್ವೀಯುರ್ಭಾಗವತಾ ಯೇ ಚ ತತ್ಸೇವನೋತ್ಸುಕಾಃ ॥ ೬ ॥

ಯತ್ರ ಧರ್ಮದುಘಾ ಭೂಮಿಃ ಸರ್ವಕಾಮದುಘಾ ಸತೀ ।
ದೋಗ್ಧಿ ಸ್ಮಾಭೀಪ್ಸಿತಾನರ್ಥಾನ್ ಯಜಮಾನಸ್ಯ ಭಾರತ ॥ ೭ ॥

ಊಹುಃ ಸರ್ವರಸಾನ್ನದ್ಯಃ ಕ್ಷೀರದಧ್ಯನ್ನಗೋರಸಾನ್ ।
ತರವೋ ಭೂರಿವರ್ಷ್ಮಾಣಃ ಪ್ರಾಸೂಯಂತ ಮಧುಚ್ಯುತಃ ॥ ೮ ॥

ಸಿಂಧವೋ ರತ್ನನಿಕರಾನ್ ಗಿರಯೋಽನ್ನಂ ಚತುರ್ವಿಧಮ್ ।
ಉಪಾಯನಮುಪಾಜಹ್ರುಃ ಸರ್ವೇ ಲೋಕಾಃ ಸಪಾಲಕಾಃ ॥ ೯ ॥

ಇತಿ ಚಾಧೋಕ್ಷಜೇಶಸ್ಯ ಪೃಥೋಸ್ತು ಪರಮೋದಯಮ್ ।
ಅಸೂಯನ್ ಭಗವಾನಿಂದ್ರಃ ಪ್ರತಿಘಾತಮಚೀಕರತ್ ॥ ೧೦ ॥

ಚರಮೇಣಾಶ್ವಮೇಧೇನ ಯಜಮಾನೇ ಯಜುಷ್ಪತಿಮ್ ।
ವೈನ್ಯೇ ಯಜ್ಞಪಶುಂ ಸ್ಪರ್ಧನ್ನಪೋವಾಹ ತಿರೋಹಿತಃ ॥ ೧೧ ॥

ತಮತ್ರಿರ್ಭಗವಾನೈಕ್ಷತ್ತ್ವರಮಾಣಂ ವಿಹಾಯಸಾ ।
ಆಮುಕ್ತಮಿವ ಪಾಖಂಡಂ ಯೋಽಧರ್ಮೇ ಧರ್ಮವಿಭ್ರಮಃ ॥ ೧೨ ॥

ಅತ್ರಿಣಾ ಚೋದಿತೋ ಹಂತುಂ ಪೃಥುಪುತ್ರೋ ಮಹಾರಥಃ ।
ಅನ್ವಧಾವತ ಸಂಕ್ರುದ್ಧಸ್ತಿಷ್ಠ ತಿಷ್ಠೇತಿ ಚಾಬ್ರವೀತ್ ॥ ೧೩ ॥

ಇದನ್ನು ನೋಡಿ ಭಗವಾನ್ ಇಂದ್ರನಿಗೆ ಈ ಪೃಥುವಿನ ಕರ್ಮವು ತನ್ನ ಕರ್ಮಗಳಿಂದಲೂ ಹೆಚ್ಚಾಗುವುದು ಎಂದು ಅನಿಸಿತು. ಅದಕ್ಕಾಗಿ ಅವನು ರಾಜನ ಯಜ್ಞೋತ್ಸವವನ್ನು ಸಹಿಸದಾದನು. ॥ ೨ ॥ ಪೃಥುಮಹಾರಾಜನ ಯಜ್ಞದಲ್ಲಿ ಎಲ್ಲರ ಆತ್ಮನೂ, ಸರ್ವಲೋಕಪೂಜ್ಯನೂ, ಜಗದೀಶ್ವರನೂ ಆದ ಭಗವಾನ್ ಶ್ರೀಹರಿಯು ಯಜ್ಞೇಶ್ವರನ ರೂಪದಿಂದ ಪ್ರತ್ಯಕ್ಷವಾಗಿ ದರ್ಶನವನ್ನು ಕೊಟ್ಟಿದ್ದನು. ॥ ೩ ॥ ಅವನೊಂದಿಗೆ ಬ್ರಹ್ಮದೇವರು, ರುದ್ರದೇವರು ಹಾಗೂ ತಮ್ಮ-ತಮ್ಮ ಅನುಚರರ ಸಹಿತ ಲೋಕಪಾಲಕರೂ ಕೂಡ ಆಗಮಿಸಿದ್ದರು. ಆಗ ಗಂಧರ್ವರು, ಮುನಿಗಳು, ಅಪ್ಸರೆಯರು ಪ್ರಭುವಿನ ಕೀರ್ತಿಯನ್ನು ಕೊಂಡಾಡುತ್ತಿದ್ದರು. ॥ ೪ ॥ ಸಿದ್ಧರು, ವಿದ್ಯಾಧರರು, ದೈತ್ಯರು, ದಾನವರು, ಯಕ್ಷರು, ಸುನಂದ-ನಂದ ಮೊದಲಾದ ಭಗವಂತನ ಪಾರ್ಷದರು ಮತ್ತು ಸದಾ ಭಗವಂತನ ಸೇವೆಯಲ್ಲಿಯೇ ಉತ್ಸುಕರಾದ ಕಪಿಲರು, ನಾರದರು, ದತ್ತಾತ್ರೇಯರು, ಸನಕಾದಿ ಯೋಗೀಶ್ವರರು ಪ್ರಭುವನ್ನು ಹಿಂಬಾಲಿಸಿಬಂದಿದ್ದರು. ॥ ೫-೬ ॥

ಎಲೈ ಭರತಕುಲಮಣಿಯೇ! ಆ ಯಜ್ಞದಲ್ಲಿ ಯಜ್ಞಸಾಮಗ್ರಿಗಳನ್ನು ಕೊಡುವಂತ ಭೂಮಿಯು ಕಾಮಧೇನುರೂಪವನ್ನು ತಾಳಿ ಯಜಮಾನನ ಎಲ್ಲ ಇಷ್ಟಾರ್ಥಗಳನ್ನು ಪೂರ್ಣಮಾಡಿತ್ತು. ॥ ೭ ॥ ನದಿಗಳು ಹಾಲು-ಮೊಸರು-ತುಪ್ಪಗಳೇ ಮುಂತಾದ ಗೋರಸಗಳನ್ನು, ಇಕ್ಷು-ದ್ರಾಕ್ಷಾದಿ ಎಲ್ಲ ರೀತಿಯ ರಸಗಳನ್ನು ಹರಿಯಿಸುತ್ತಿದ್ದವು. ಮಹಾವೃಕ್ಷಗಳು ಹೇರಳವಾಗಿ ಕಾಣಿಸಿಕೊಂಡು ಜೇನುತುಪ್ಪವನ್ನು, ಜೇನಿನಂತಹ ಸವಿಯುಳ್ಳ ಹಣ್ಣುಗಳನ್ನು ಸಮರ್ಪಿಸುತ್ತಿದ್ದವು. ॥ ೮ ॥ ಸಮುದ್ರಗಳು ರತ್ನರಾಶಿಗಳನ್ನೂ, ಪರ್ವತಗಳು ಭಕ್ಷ್ಯ, ಭೋಜ್ಯ-ಚೋಷ್ಯ-ಲೇಹ್ಯಗಳೆಂಬ ನಾಲ್ಕು ವಿಧದ ಅನ್ನಗಳನ್ನು ಮತ್ತು ಲೋಕಪಾಲರಿಂದ ಸಹಿತವಾದ ಸಮಸ್ತ ಲೋಕಗಳು ಬಗೆ-ಬಗೆಯ ಕಾಣಿಕೆಗಳನ್ನು ಪೃಥುವಿಗೆ ಸಮರ್ಪಿಸುತ್ತಿದ್ದವು. ॥ ೯ ॥

ಪೃಥುಮಹಾರಾಜನಾದರೋ ಏಕಮಾತ್ರ ಶ್ರೀಹರಿಯನ್ನೇ ತನ್ನ ಪ್ರಭುವೆಂದು ತಿಳಿಯುತ್ತಿದ್ದನು. ಅವನ ಕೃಪೆಯಿಂದ ಆ ಯಜ್ಞಾನುಷ್ಠಾನದಲ್ಲಿ ಅವನ ಬಹಳ ಉತ್ಕರ್ಷವಾಯಿತು. ಆದರೆ ಇದು ದೇವೇಂದ್ರನಿಗೆ ಸಹನೆಯಾಗಲಿಲ್ಲ. ಅವನು ಆ ಯಜ್ಞದಲ್ಲಿ ವಿಘ್ನವನ್ನೊಡ್ಡಲು ಪ್ರಯತ್ನಿಸಿದನು. ॥ ೧೦ ॥ ಮಹಾರಾಜಾ ಪೃಥುವು ಕೊನೆಯ ಯಜ್ಞದ ಮೂಲಕ ಭಗವಾನ್ ಯಜ್ಞಪತಿಯ ಆರಾಧನೆ ಮಾಡುತ್ತಿರುವಾಗ ಇಂದ್ರನು ಅಸೂಯೆಯಿಂದ ಗುಟ್ಟಾಗಿ ಆತನ ಯಜ್ಞಾಶ್ವವನ್ನು ಅಪಹರಿಸಿದನು. ॥ ೧೧ ॥ ಇಂದ್ರನು ತನ್ನ ರಕ್ಷಣೆಗಾಗಿ ಪಾಷಂಡವೇಷವನ್ನು ಧರಿಸಿದ್ದನು. ಅದು ಅಧರ್ಮದಲ್ಲಿ ಧರ್ಮದ ಭ್ರಮೆಯನ್ನು ಉಂಟುಮಾಡುವಂತಹುದು. ಅದನ್ನು ಆಶ್ರಯಿಸಿದರೆ ಪಾಪೀ ಮನುಷ್ಯನೂ ಕೂಡ ಧರ್ಮಾತ್ಮನಂತೆ ಕಂಡುಬರುತ್ತಾನೆ. ಈ ವೇಷದಲ್ಲಿ ಇಂದ್ರನು ಕುದುರೆಯನ್ನು ಅಪಹರಿಸಿ ಶೀಘ್ರವಾಗಿ ಆಕಾಶಮಾರ್ಗವಾಗಿ ಹೋಗುತ್ತಿರುವಾಗ ಮಹಾತ್ಮರಾದ ಅತ್ರಿಮಹರ್ಷಿಗಳ ದೃಷ್ಟಿಗೆ ಬಿದ್ದನು. ಅವರ ಪ್ರೇರಣೆಯಿಂದ ಮಹಾರಾಜಾ ಪೃಥುವಿನ ಮಹಾರಥಿ ಪುತ್ರನು ಇಂದ್ರನನ್ನು ಕೊಲ್ಲಲು ಅವನನ್ನು ಬೆನ್ನಟ್ಟಿಕೊಂಡು ಹೋಗಿ ಮಿತಿಮೀರಿದ ಕೋಪದಿಂದ 'ಎಲವೋ! ನಿಲ್ಲು ನಿಲ್ಲು!' ಎಂದು ಕೂಗಿದನು. ॥ ೧೨-೧೩ ॥

ತಂ ತಾದೃಶಾಕೃತಿಂ ವೀಕ್ಷ್ಯ ಮೇನೇ ಧರ್ಮಂ ಶರೀರಿಣಮ್ ।
ಜಟಿಲಂ ಭಸ್ಮನಾಚ್ಛನ್ನಂ ತಸ್ಮೈ ಬಾಣಂ ನ ಮುಂಚತಿ ॥ ೧೪ ॥

ವಧಾನ್ನಿವೃತ್ತಂ ತಂ ಭೂಯೋ ಹಂತವೇಽತ್ರಿರಚೋದಯತ್ ।
ಜಹಿ ಯಜ್ಞಹನಂ ತಾತ ಮಹೇಂದ್ರಂ ವಿಬುಧಾಧಮಮ್ ॥ ೧೫ ॥

ಏವಂ ವೈನ್ಯಸುತಃ ಪ್ರೋಕ್ತಸ್ತ್ವರಮಾಣಂ ವಿಹಾಯಸಾ ।
ಅನ್ವದ್ರವದಭಿಕ್ರುದ್ಧೋ ರಾವಣಂ ಗೃಧ್ರರಾಡಿವ ॥ ೧೬ ॥

ಸೋಽಶ್ವಂ ರೂಪಂ ಚ ತದ್ಧಿತ್ವಾ ತಸ್ಮಾ ಅಂತರ್ಹಿತಃ ಸ್ವರಾಟ್ ।
ವೀರಃ ಸ್ವಪಶುಮಾದಾಯ ಪಿತುರ್ಯಜ್ಞಮುಪೇಯಿವಾನ್ ॥ ೧೭ ॥

ತತ್ತಸ್ಯ ಚಾದ್ಭುತಂ ಕರ್ಮ ವಿಚಕ್ಷ್ಯ ಪರಮರ್ಷಯಃ ।
ನಾಮಧೇಯಂ ದದುಸ್ತಸ್ಮೈ ವಿಜಿತಾಶ್ವ ಇತಿ ಪ್ರಭೋ ॥ ೧೮ ॥

ಉಪಸೃಜ್ಯ ತಮಸ್ತೀವ್ರಂ ಜಹಾರಾಶ್ವಂ ಪುನರ್ಹರಿಃ ।
ಚಷಾಲಯೂಪತಶ್ಛನ್ನೋ ಹಿರಣ್ಯರಶನಂ ವಿಭುಃ ॥ ೧೯ ॥

ಅತ್ರಿಃ ಸಂದರ್ಶಯಾಮಾಸ ತ್ವರಮಾಣಂ ವಿಹಾಯಸಾ ।
ಕಪಾಲಖಟ್ವಾಂಗಧರಂ ವೀರೋ ನೈನಮಬಾಧತ ॥ ೨೦ ॥

ಅತ್ರಿಣಾ ಚೋದಿತಸ್ತಸ್ಮೈ ಸಂದಧೇ ವಿಶಿಖಂ ರುಷಾ ।
ಸೋಽಶ್ವಂ ರೂಪಂ ಚ ತದ್ಧಿತ್ವಾ ತಸ್ಥಾವಂತರ್ಹಿತಃ ಸ್ವರಾಟ್ ॥ ೨೧ ॥

ವೀರಶ್ಚಾಶ್ವಮುಪಾದಾಯ ಪಿತೃಯಜ್ಞಮಥಾವ್ರಜತ್ ।
ತದವದ್ಯಂ ಹರೇ ರೂಪಂ ಜಗೃಹುರ್ಜ್ಞಾನದುರ್ಬಲಾಃ ॥ ೨೨ ॥

ಯಾನಿ ರೂಪಾಣಿ ಜಗೃಹೇ ಇಂದ್ರೋ ಹಯಜಿಹೀರ್ಷಯಾ ।
ತಾನಿ ಪಾಪಸ್ಯ ಖಂಡಾನಿ ಲಿಂಗಂ ಖಂಡಮಿಹೋಚ್ಯತೇ ॥ ೨೩ ॥

ಏವಮಿಂದ್ರೇ ಹರತ್ಯಶ್ವಂ ವೈನ್ಯಯಜ್ಞಜಿಘಾಂಸಯಾ ।
ತದ್ಗೃಹೀತವಿಸೃಷ್ಟೇಷು ಪಾಖಂಡೇಷು ಮತಿರ್ನೃಣಾಮ್ ॥ ೨೪ ॥

ಆಗ ಇಂದ್ರನ ತಲೆಯಲ್ಲಿ ಜಟಾಜೂಟವಿತ್ತು. ಮೈಗೆ ಭಸ್ಮವನ್ನು ಬಳಿದುಕೊಂಡಿದ್ದನು. ಅದನ್ನು ಕಂಡು ಪೃಥು ಪುತ್ರನು ಆತನನ್ನು ಧರ್ಮಮೂರ್ತಿ ಎಂದು ಭಾವಿಸಿ ಅವನ ಮೇಲೆ ಬಾಣವನ್ನು ಪ್ರಯೋಗಿಸಲಿಲ್ಲ. ॥ ೧೪ ॥ ಅವನು ಇಂದ್ರನ ಮೇಲೆ ಆಕ್ರಮಣ ಮಾಡದೆ ಹಿಂದಿರುಗಿದಾಗ ಅತ್ರಿ ಮಹರ್ಷಿಗಳು 'ವತ್ಸ! ಈತನು ಯಜ್ಞವನ್ನು ಕೆಡಿಸಲು ಬಂದ ದೇವತಾಧಮನಾದ ಇಂದ್ರನು. ಇವನನ್ನು ಸಂಹರಿಸು' ಎಂದು ಆಣತಿ ನೀಡಿದರು. ॥ ೧೫ ॥ ಅತ್ರಿ ಮಹರ್ಷಿಗಳು ಹೀಗೆ ಪ್ರೋತ್ಸಾಹಿಸಿದಾಗ ಪೃಥುಕುಮಾರನಲ್ಲಿ ಕ್ರೋಧವು ಉಕ್ಕೇರಿ ಬಂತು. ಅವನು ರಾವಣನನ್ನು ಬೆನ್ನಟ್ಟಿಹೋದ ಜಟಾಯುವಿನಂತೆ ಆಕಾಶದಲ್ಲಿ ವೇಗವಾಗಿ ಹೋಗುತ್ತಿದ್ದ ಇಂದ್ರನನ್ನು ಬೆನ್ನಟ್ಟಿದನು. ॥ ೧೬ ॥ ಇದನ್ನು ನೋಡಿದ ಇಂದ್ರನು ಹೆದರಿ ತನ್ನ ಆ ಪಾಷಂಡವೇಷವನ್ನೂ, ಯಜ್ಞದ ಕುದುರೆಯನ್ನು ಅಲ್ಲಿಯೇ ಬಿಟ್ಟು ಕಣ್ಮರೆಯಾದನು. ವೀರನಾದ ಪೃಥುಪುತ್ರನು ತನ್ನ ಯಜ್ಞಾಶ್ವವನ್ನು ತೆಗೆದುಕೊಂಡು ತಂದೆಯ ಯಜ್ಞಶಾಲೆಗೆ ಮರಳಿದನು. ॥ ೧೭ ॥ ಶಕ್ತಿಶಾಲಿ ವಿದುರನೇ! ಅವನ ಆ ಅದ್ಭುತ ಪರಾಕ್ರಮವನ್ನು ಕಂಡು ಮಹರ್ಷಿಗಳು ಆತನಿಗೆ 'ವಿಜಿತಾಶ್ವ' ಎಂಬ ಬಿರುದಾಂಕಿತವನ್ನು ಕೊಟ್ಟರು. ॥ ೧೮ ॥

ಯಜ್ಞದ ಅಶ್ವವನ್ನು ಚಷಾಲ ಮತ್ತು ಯೂಪಸ್ತಂಭಗಳಿಗೆ ಕಟ್ಟಲಾಗಿತ್ತು. ಶಕ್ತಿಶಾಲಿಯಾದ ಇಂದ್ರನು ಅಲ್ಲಿ ಘೋರವಾದ ಅಂಧಕಾರವನ್ನು ಉಂಟುಮಾಡಿ ಆ ಕತ್ತಲೆಯಲ್ಲಿ ಅಡಗಿಕೊಂಡು ಯಜ್ಞಾಶ್ವವನ್ನು ಅದರ ಚಿನ್ನದ ಸರಪಣಿಯೊಡನೆ ಕದ್ದುಕೊಂಡು ಹೋದನು. ॥ ೧೯ ॥ ಅತ್ರಿಮುನಿಗಳು ಪುನಃ ಆಕಾಶಮಾರ್ಗವಾಗಿ ಹೋಗುತ್ತಿರುವ ಇಂದ್ರನನ್ನು ರಾಜಕುಮಾರನಿಗೆ ತೋರಿಸಿದರು. ಆದರೆ ಇಂದ್ರನು ಕಪಾಲವನ್ನು, ಖಟ್ವಾಂಗವನ್ನು ಧರಿಸಿ ತಪಸ್ವಿಯಂತೆ ಕಾಣುತ್ತಿದ್ದುದರಿಂದ ಪೃಥುಪುತ್ರನು ಅವನ ದಾರಿಗೆ ಅಡ್ಡಿಪಡಿಸಲಿಲ್ಲ. ॥ ೨೦ ॥ ಆಗ ಅತ್ರಿಮಹರ್ಷಿಯು ಮತ್ತೆ ಅವನಿಗೆ ಉತ್ಸಾಹತುಂಬಿ ಪ್ರೇರೇಪಿಸಲು ಪೃಥುಪುತ್ರನು ಕ್ರೋಧದಿಂದ ಇಂದ್ರನ ಮೇಲೆ ಬಾಣವನ್ನು ಗುರಿಯಿಟ್ಟು ಪ್ರಯೋಗಿಸಿದನು. ಅದನ್ನು ನೋಡಿದೊಡನೆಯೇ ದೇವರಾಜನು ತನ್ನ ಛದ್ಮವೇಷವನ್ನೂ, ಯಜ್ಞಾಶ್ವವನ್ನು ಅಲ್ಲಿಯೇ ಬಿಟ್ಟು ಅಂತರ್ಧಾನನಾದನು. ॥ ೨೧ ॥ ವೀರನಾದ ವಿಜಿತಾಶ್ವನು ಕುದುರೆಯನ್ನು ಹಿಡಿದುಕೊಂಡು ತಂದೆಯ ಯಜ್ಞಶಾಲೆಗೆ ಹಿಂದಿರುಗಿದನು. ಇಂದ್ರನು ಬಿಟ್ಟುಹೋದ ಆ ನಿಂದನೀಯವಾದ ವೇಷವನ್ನು ಮಂದಮತಿಗಳಾದ ಜನರು ಸ್ವೀಕರಿಸಿದರು. ॥ ೨೨ ॥ ಇಂದ್ರನು ಯಜ್ಞಾಶ್ವವನ್ನು ಅಪಹರಿಸುವ ದೃಷ್ಟಿಯಿಂದ ಧರಿಸಿದ ರೂಪಗಳೆಲ್ಲವೂ ಪಾಪದ ಖಂಡಗಳಾದುದರಿಂದ 'ಪಾಖಂಡ' ಎನಿಸಿದುವು. ಇಲ್ಲಿ 'ಖಂಡ'ವೆಂದರೆ ಚಿಹ್ನೆಯ ವಾಚಕವಾಗಿದೆ. ॥ ೨೩ ॥ ಹೀಗೆ ಪೃಥುವಿನ ಯಜ್ಞವನ್ನು ಧ್ವಂಸಮಾಡಲಿಕ್ಕಾಗಿ, ಯಜ್ಞಪಶುವನ್ನು ಕದಿಯುವಾಗ ಇಂದ್ರನು ಹಲವು ಬಾರಿ ಧರಿಸಿ ತ್ಯಾಗಮಾಡಿದ ದಿಗಂಬರತ್ವ, ಕೆಂಪುವಸ್ತ್ರಗಳ ಧಾರಣೆ, ಕಾಪಾಲಿಕ ಮುಂತಾದ ಪಾಖಂಡಪೂರ್ಣ ಆಚಾರಗಳಲ್ಲಿ ಮನುಷ್ಯರ ಬುದ್ಧಿಯು ಮೋಹಿತವಾಗುತ್ತದೆ. ಏಕೆಂದರೆ ನಾಸ್ತಿಕಮತಗಳು ನೋಡಲು ಸುಂದರವಾಗಿದ್ದು, ದೊಡ್ಡ-ದೊಡ್ಡ ಯುಕ್ತಿಗಳಿಂದ ತಮ್ಮ ಪಕ್ಷವನ್ನು

ಧರ್ಮ ಇತ್ಯುಪಧರ್ಮೇಷು ನಗ್ನರಕ್ತಪಟಾದಿಷು ।
ಪ್ರಾಯೇಣ ಸಜ್ಜತೇ ಭ್ರಾಂತ್ಯಾ ಪೇಶಲೇಷು ಚ ವಾಗ್ಮಿಷು ॥ ೨೫ ॥

ತದಭಿಜ್ಞಾಯ ಭಗವಾನ್ ಪೃಥುಃ ಪೃಥುಪರಾಕ್ರಮಃ ।
ಇಂದ್ರಾಯ ಕುಪಿತೋ ಬಾಣಮಾದತ್ತೋದ್ಯತಕಾರ್ಮುಕಃ ॥ ೨೬ ॥

ತಮೃತ್ವಿಜಃ ಶಕ್ರವಧಾಭಿಸಂಧಿತಂ
ವಿಚಕ್ಷ್ಯ ದುಷ್ಪ್ರೇಕ್ಷ್ಯಮಸಹ್ಯರಂಹಸಮ್ ।
ನಿವಾರಯಾಮಾಸುರಹೋ ಮಹಾಮತೇ
ನ ಯುಜ್ಯತೇಽತ್ರಾನ್ಯವಧಃ ಪ್ರಚೋದಿತಾತ್ ॥ ೨೭ ॥

ವಯಂ ಮರುತ್ವಂತಮಿಹಾರ್ಥನಾಶನಂ
ಹ್ವಯಾಮಹೇ ತ್ವಚ್ಛ್ರವಸಾ ಹತತ್ವಿಷಮ್ ।
ಅಯಾತಯಾಮೋಪಹವೈರನಂತರಂ
ಪ್ರಸಹ್ಯ ರಾಜನ್ ಜುಹವಾಮ ತೇಽಹಿತಮ್ ॥ ೨೮ ॥

ಇತ್ಯಾಮಂತ್ರ್ಯ ಕ್ರತುಪತಿಂ ವಿದುರಾಸ್ಯರ್ತ್ವಿಜೋ ರುಷಾ ।
ಸ್ರುಗ್ಘಸ್ತಾಂಜುಹ್ವತೋಽಭ್ಯೇತ್ಯ ಸ್ವಯಂಭೂಃ ಪ್ರತ್ಯಷೇಧತ ॥ ೨೯ ॥

ನ ವಧ್ಯೋ ಭವತಾಮಿಂದ್ರೋ ಯದ್ಯಜ್ಞೋ ಭಗವತ್ತನುಃ ।
ಯಂ ಜಿಘಾಂಸಥ ಯಜ್ಞೇನ ಯಸ್ಯೇಷ್ಟಾಸ್ತನವಃ ಸುರಾಃ ॥ ೩೦ ॥

ತದಿದಂ ಪಶ್ಯತ ಮಹದ್ಧರ್ಮವ್ಯತಿಕರಂ ದ್ವಿಜಾಃ ।
ಇಂದ್ರೇಣಾನುಷ್ಠಿತಂ ರಾಜ್ಞಃ ಕರ್ಮೈತದ್ವಿಜಿಘಾಂಸತಾ ॥ ೩೧ ॥

ಪೃಥುಕೀರ್ತೇಃ ಪೃಥೋರ್ಭೂಯಾತ್ತರ್ಹ್ಯೇಕೋನಶತಕ್ರತುಃ ।
ಅಲಂ ತೇ ಕ್ರತುಭಿಃ ಸ್ವಿಷ್ಟೈರ್ಯದ್ಭವಾನ್ಮೋಕ್ಷಧರ್ಮವಿತ್ ॥ ೩೨ ॥

ಸಮರ್ಥಿಸುತ್ತವೆ. ವಾಸ್ತವವಾಗಿ ಇವು ಧರ್ಮಗಳೇ ಅಲ್ಲ. ಧರ್ಮವೆಂಬ ಭ್ರಾಂತಿಯಿಂದ ಪಾಮರ ಜನರು ಇವುಗಳಲ್ಲಿ ಆಸಕ್ತರಾಗುತ್ತಾರೆ. ॥ ೨೪-೨೫ ॥

ಇಂದ್ರನ ಈ ಕುಕೃತ್ಯವನ್ನು ಕಂಡು ಪರಮ ಪರಾಕ್ರಮಿಯಾದ ಪೃಥುಮಹಾರಾಜನಿಗೆ ಆತನ ಮೇಲೆ ತುಂಬಾ ಕ್ರೋಧವು ಉಂಟಾಯಿತು. ಆತನು ತನ್ನ ಬಿಲ್ಲನ್ನೆತ್ತಿಕೊಂಡು ಬಾಣವನ್ನು ಹೂಡಿದನು. ॥ ೨೬ ॥ ಆಗ ಕ್ರೋಧದಿಂದ ಕೆರಳಿದ್ದ ಆತನನ್ನು ನೋಡುವುದಕ್ಕೂ ಕಷ್ಟವಾಗಿತ್ತು. ಸಹಿಸಲಸದಳವಾದ ಪರಾಕ್ರಮವುಳ್ಳ ಪೃಥುವು ಇಂದ್ರನನ್ನು ವಧಿಸಲು ಸಿದ್ಧನಾಗಿಬಿಟ್ಟಿದ್ದಾನೆ ಎಂಬುದನ್ನು ತಿಳಿದು ಋತ್ವಿಜರು ಆತನನ್ನು ತಡೆಯುತ್ತಾ ಮಹಾರಾಜಾ! ನೀನು ಮಹಾಬುದ್ಧಿಶಾಲಿಯು. ಯಜ್ಞದೀಕ್ಷೆಯನ್ನು ವಹಿಸಿಕೊಂಡ ಮೇಲೆ ಶಾಸ್ತ್ರವಿಹಿತವಾದ ಯಜ್ಞಪಶುವನ್ನು ಬಿಟ್ಟು ಬೇರೆ ಯಾರನ್ನೂ ವಧಿಸಬಾರದು. ॥ ೨೭ ॥ ಈ ಯಜ್ಞಕಾರ್ಯದಲ್ಲಿ ನಿನಗೆ ವಿಘ್ನವನ್ನುಂಟುಮಾಡುತ್ತಿರುವ ಇಂದ್ರನು ನಿನ್ನ ಕೀರ್ತಿಯಿಂದ ಅಸೂಯೆಗೊಂಡು ಈಗಾಗಲೇ ತೇಜೋಹೀನನಾಗಿದ್ದಾನೆ. ನಾವು ಅಮೋಘವಾದ ಮಂತ್ರಗಳಿಂದ ಆತನನ್ನು ಇಲ್ಲಿಯೇ ಆವಾಹನೆ ಮಾಡಿ ಬಲಾತ್ಕಾರವಾಗಿ ಅಗ್ನಿಯಲ್ಲಿ ಹೋಮಮಾಡಿಬಿಡುವೆವು ಎಂದು ಸಮಾಧಾನಪಡಿಸಿದರು. ॥ ೨೮ ॥

ವಿದುರನೇ! ಯಜಮಾನನಲ್ಲಿ ಹೀಗೆ ಹೇಳಿ ಅವನ ಅನುಮತಿಯನ್ನು ಪಡೆದು ಯಾಜಕರು ಕ್ರೋಧದಿಂದ ಇಂದ್ರನನ್ನು ಆಹ್ವಾನಿಸಿದರು. ಅವರು ಸ್ರುವೆಯಿಂದ ಅಗ್ನಿಯಲ್ಲಿ ಆಹುತಿಯನ್ನು ಇನ್ನೇನು ಹಾಕಬೇಕು ಎನ್ನುವಷ್ಟರಲ್ಲಿ ಬ್ರಹ್ಮದೇವರು ಅಲ್ಲಿಗೆ ಬಂದು ಅವರನ್ನು ತಡೆದರು. ॥ ೨೯ ॥ ಅವರು ಹೇಳಿದರು ಎಲೈ ಯಾಜಕರೇ! ನೀವು ಇಂದ್ರನನ್ನು ವಧಿಸುವುದು ಉಚಿತವಲ್ಲ. ಇವನು ಯಜ್ಞಸಂಜ್ಞಕ ಇಂದ್ರನಾಮಕ ಭಗವಂತನ ಮೂರ್ತಿಯೇ ಆಗಿದ್ದಾನೆ. ಯಜ್ಞದಲ್ಲಿ ನೀವು ಆರಾಧಿಸುವ ದೇವತೆಗಳೆಲ್ಲರೂ ಇಂದ್ರನಿಗೆ ಶರೀರದಂತೆ ಇದ್ದಾರೆ. ಇಂತಹವನನ್ನು ನೀವು ಯಜ್ಞದಮೂಲಕವೇ ಕೊಲ್ಲಲು ಬಯಸುತ್ತೀರಲ್ಲ! ॥ ೩೦ ॥ ಪೃಥುಮಹಾರಾಜನ ಯಜ್ಞಾನುಷ್ಠಾನದಲ್ಲಿ ವಿಘ್ನವನ್ನು ಉಂಟುಮಾಡಲು ಇಂದ್ರನು ಹರಡಿರುವ ಪಾಖಂಡವು ಧರ್ಮದ ನಾಶಮಾಡುವಂತಹುದು. ಈ ಮಾತಿನ ಕಡೆಗೆ ಗಮನಕೊಡಿರಿ. ಈಗ ಅವನಲ್ಲಿ ಹೆಚ್ಚು ವಿರೋಧಮಾಡಬೇಡಿ. ಇಲ್ಲವಿದ್ದರೆ ಅವನು ಇನ್ನೂ ಪಾಖಂಡಮಾರ್ಗಗಳನ್ನು ಪ್ರಚಾರಮಾಡುವನು. ॥ ೩೧ ॥ ಈ ಪೃಥುವಿಗೂ – ಇಂದ್ರನಿಗೂ ಯಜ್ಞದಲ್ಲಿ ಸ್ಪರ್ಧೆಯೇ ಬೇಡ. ಪೃಥುಮಹಾರಾಜನ ಕೀರ್ತಿಯು ಈಗಾಗಲೇ ತುಂಬಾ ವಿಸ್ತಾರಗೊಂಡಿದೆ. ಈತನಿಗೆ ನೂರನೆಯ ಯಜ್ಞದ ಅವಶ್ಯಕತೆಯೇ ಇಲ್ಲ. ಆದ್ದರಿಂದ ಈ ಪೃಥುರಾಜನ ತೊಂಭತ್ತೊಂಭತ್ತು ಯಜ್ಞಗಳಲ್ಲೇ ಪರಿಸಮಾಪ್ತಿಯಾಗಲಿ. ಅನಂತರ ರಾಜರ್ಷಿ ಪೃಥುವಿನಲ್ಲಿ ಹೇಳಿದರು – ರಾಜೇಂದ್ರನೇ! ನೀನಾದರೋ ಮೋಕ್ಷಧರ್ಮವನ್ನು ಬಲ್ಲವನು. ಆದ್ದರಿಂದ ನಿನಗೆ ಈ ಯಜ್ಞಾನುಷ್ಠಾನಗಳ ಅವಶ್ಯಕತೆಯೇ ಇಲ್ಲ. ॥ ೩೨ ॥

ನೈವಾತ್ಮನೇ ಮಹೇಂದ್ರಾಯ ರೋಷಮಾಹರ್ತುಮರ್ಹಸಿ ।
ಉಭಾವಪಿ ಹಿ ಭದ್ರಂ ತೇ ಉತ್ತಮಶ್ಲೋಕವಿಗ್ರಹೌ ॥ ೩೩ ॥

ಮಾಸ್ಮಿನ್ಮಹಾರಾಜ ಕೃಥಾಃ ಸ್ಮ ಚಿಂತಾಂ
ನಿಶಾಮಯಾಸ್ಮದ್ವಚ ಆದೃತಾತ್ಮಾ ।
ಯದ್ಧ್ಯಾಯತೋ ದೈವಹತಂ ನು ಕರ್ತುಂ
ಮನೋಽತಿರುಷ್ಟಂ ವಿಶತೇ ತಮೋಽಂಧಮ್ ॥ ೩೪ ॥

ಕ್ರತುರ್ವಿರಮತಾಮೇಷ ದೇವೇಷು ದುರವಗ್ರಹಃ ।
ಧರ್ಮವ್ಯತಿಕರೋ ಯತ್ರ ಪಾಖಂಡೈರಿಂದ್ರನಿರ್ಮಿತೈಃ ॥ ೩೫ ॥

ಏಭಿರಿಂದ್ರೋಪಸಂಸೃಷ್ಟೈಃ ಪಾಖಂಡೈರ್ಹಾರಿಭಿರ್ಜನಮ್ ।
ಹ್ರಿಯಮಾಣಂ ವಿಚಕ್ಷ್ವೈನಂ ಯಸ್ತೇ ಯಜ್ಞಧ್ರುಗಶ್ವಮುಟ್ ॥ ೩೬ ॥

ಭವಾನ್ಪರಿತ್ರಾತುಮಿಹಾವತೀರ್ಣೋ
ಧರ್ಮಂ ಜನಾನಾಂ ಸಮಯಾನುರೂಪಮ್ ।
ವೇನಾಪಚಾರಾದವಲುಪ್ತಮದ್ಯ
ತದ್ದೇಹತೋ ವಿಷ್ಣುಕಲಾಸಿ ವೈನ್ಯ ॥ ೩೭ ॥

ಸ ತ್ವಂ ವಿಮೃಶ್ಯಾಸ್ಯ ಭವಂ ಪ್ರಜಾಪತೇ
ಸಂಕಲ್ಪನಂ ವಿಶ್ವಸೃಜಾಂ ಪಿಪೀಪೃಹಿ ।
ಐಂದ್ರೀಂ ಚ ಮಾಯಾಮುಪಧರ್ಮಮಾತರಂ
ಪ್ರಚಂಡಪಾಖಂಡಪಥಂ ಪ್ರಭೋ ಜಹಿ ॥ ೩೮ ॥

ಮೈತ್ರೇಯ ಉವಾಚ

ಇತ್ಥಂ ಸ ಲೋಕಗುರುಣಾ ಸಮಾದಿಷ್ಟೋ ವಿಶಾಂಪತಿಃ ।
ತಥಾ ಚ ಕೃತ್ವಾ ವಾತ್ಸಲ್ಯಂ ಮಘೋನಾಪಿ ಚ ಸಂದಧೇ ॥ ೩೯ ॥

ಕೃತಾವಭೃಥಸ್ನಾನಾಯ ಪೃಥವೇ ಭೂರಿಕರ್ಮಣೇ ।
ವರಾಂದದುಸ್ತೇ ವರದಾ ಯೇ ತದ್ಬರ್ಹಿಷಿ ತರ್ಪಿತಾಃ ॥ ೪೦ ॥

ವಿಪ್ರಾಃ ಸತ್ಯಾಶಿಷಸ್ತುಷ್ಟಾಃ ಶ್ರದ್ಧಯಾ ಲಬ್ಧದಕ್ಷಿಣಾಃ ।
ಆಶಿಷೋ ಯುಯುಜುಃ ಕ್ಷತ್ತರಾದಿರಾಜಾಯ ಸತ್ಕೃತಾಃ ॥ ೪೧ ॥

ತ್ವಯಾಽಽಹೂತಾ ಮಹಾಬಾಹೋ ಸರ್ವ ಏವ ಸಮಾಗತಾಃ ।
ಪೂಜಿತಾ ದಾನಮಾನಾಭ್ಯಾಂ ಪಿತೃದೇವರ್ಷಿಮಾನವಾಃ ॥ ೪೨ ॥

ನಿನಗೆ ಮಂಗಳವಾಗಲಿ. ನೀನು ಮತ್ತು ಇಂದ್ರನು ಇಬ್ಬರೂ ಪವಿತ್ರವಾದ ಕೀರ್ತಿಯುಳ್ಳ ಭಗವಾನ್ ಶ್ರೀಹರಿಯ ಶರೀರವಾಗಿದ್ದೀರಿ. ಆದಕ್ಕಾಗಿ ನಿನ್ನದೇ ಸ್ವರೂಪಭೂತನಾದ ಇಂದ್ರನ ಕುರಿತು ನೀನು ಕ್ರೋಧವನ್ನು ಮಾಡಬಾರದು. ॥ ೩೩ ॥ ನಿನ್ನ ಈ ಯಜ್ಞವು ನಿರ್ವಿಘ್ನವಾಗಿ ಸಮಾಪ್ತವಾಗಲಿಲ್ಲವೆಂದು ನೀನು ಚಿಂತಿಸಬೇಡ. ನನ್ನ ಮಾತನ್ನು ಆದರದಿಂದ ಸ್ವೀಕರಿಸು. ದೈವವು ತಪ್ಪಿಸಿದ ಕೆಲಸವನ್ನು ತಾನು ಮಾಡಬೇಕೆಂದು ವಿಚಾರಮಾಡುವವನ ಮನಸ್ಸು ಅತ್ಯಂತ ಕ್ರೋಧಗೊಂಡು ಭಯಂಕರ ಮೋಹದಲ್ಲಿ ಸಿಲುಕಿಕೊಳ್ಳುವನು. ॥ ೩೪ ॥ ರಾಜನೇ! ಈ ಯಜ್ಞವನ್ನು ಇಲ್ಲಿಗೆ ನಿಲ್ಲಿಸು. ಇದರ ಕಾರಣದಿಂದ ಇಂದ್ರನು ನಡೆಸಿದ ಪಾಖಂಡಗಳಿಂದ ಧರ್ಮದ ನಾಶವಾಗುತ್ತಾ ಇದೆ. ಏಕೆಂದರೆ, ದೇವತೆಗಳಲ್ಲಿ ತುಂಬಾ ದುರಾಗ್ರಹವಿರುತ್ತದೆ. ॥ ೩೫ ॥ ಇಂದ್ರನು ಕುದುರೆಯನ್ನು ಅಪಹರಿಸಿ ನಿನ್ನ ಯಜ್ಞದಲ್ಲಿ ವಿಘ್ನವನ್ನು ಮಾಡುತ್ತಿದ್ದಾಗ ಅವನಿಂದ ರಚಿಸಲ್ಪಟ್ಟ ಮನೋಹರ ಪಾಖಂಡಗಳ ಕಡೆಗೆ ಜನರ ಮನಸ್ಸು ಸೆಳೆಯಲ್ಪಡುತ್ತಿದೆ ನೋಡು. ॥ ೩೬ ॥ ನೀನು ಸಾಕ್ಷಾತ್ ಮಹಾವಿಷ್ಣುವಿನ ಅಂಶನೇ ಆಗಿರುವೆ. ವೇನನ ದುರಾಚರಣೆಯಿಂದ ಧರ್ಮವು ಲೋಪವಾಗುತ್ತಿರುವಾಗ ಸಮಯೋಚಿತವಾದ ಧರ್ಮವನ್ನು ರಕ್ಷಿಸಲಿಕ್ಕಾಗಿಯೇ ನೀನು ಅವನ ಶರೀರದಿಂದ ಅವತರಿಸಿರುವೆ. ॥ ೩೭ ॥ ಆದ್ದರಿಂದ ಪ್ರಜಾಪಾಲಕನಾದ ಪೃಥುವೇ! ಈ ನಿನ್ನ ಅವತಾರದ ಉದ್ದೇಶವನ್ನು ವಿಚಾರಮಾಡಿ ಭೃಗುವೇ ಮುಂತಾದ ವಿಶ್ವರಚಕರಾದ ಮುನೀಶ್ವರರ ಸಂಕಲ್ಪವನ್ನು ಪೂರ್ಣಗೊಳಿಸು. ಈ ಪ್ರಚಂಡವಾದ ಪಾಷಂಡಮಾರ್ಗವೆಂಬ ಇಂದ್ರನ ಮಾಯೆಯು ಅಧರ್ಮದ ಜನನಿಯಾಗಿದೆ. ನೀನು ಅದನ್ನು ನಾಶಮಾಡಿಬಿಡು. ॥ ೩೮ ॥

ಶ್ರೀಮೈತ್ರೇಯರು ಹೇಳುತ್ತಾರೆ – ಲೋಕಗುರುವಾದ ಭಗವಾನ್ ಬ್ರಹ್ಮದೇವರು ಹೀಗೆ ತಿಳಿವಳಿಕೆ ನೀಡಿದ ಬಳಿಕ ಪ್ರಬಲ ಪರಾಕ್ರಮಿ ಮಹಾರಾಜ ಪೃಥುವು ಯಜ್ಞದ ಆಗ್ರಹವನ್ನು ಬಿಟ್ಟುಬಿಟ್ಟನು ಮತ್ತು ಇಂದ್ರನೊಂದಿಗೆ ಪ್ರೀತಿಯಿಂದ ಸಂಧಿಮಾಡಿ ಕೊಂಡನು. ॥ ೩೯ ॥ ಇದಾದನಂತರ ರಾಜನು ಯಜ್ಞಾಂತ ಸ್ನಾನವನ್ನು ಮಾಡಿ ನಿವೃತ್ತನಾದಾಗ ಅವನ ಯಜ್ಞದಿಂದ ತೃಪ್ತರಾದ ದೇವತೆಗಳು ಅವನಿಗೆ ಅಭೀಷ್ಟವಾದ ವರಗಳನ್ನು ಅನುಗ್ರಹಿಸಿದರು. ॥ ೪೦ ॥ ಆದಿರಾಜನಾದ ಪೃಥುವು ಅತ್ಯಂತ ಶ್ರದ್ಧೆಯಿಂದ ಬ್ರಾಹ್ಮಣರಿಗೆ ದಕ್ಷಿಣೆಗಳನ್ನು ಕೊಟ್ಟನು. ಬ್ರಾಹ್ಮಣರು ಆತನ ಸತ್ಕಾರಗಳಿಂದ ಸಂತೋಷಗೊಂಡು ಅವನಿಗೆ ಅಮೋಘವಾದ ಆಶೀರ್ವಾದಗಳನ್ನು ನೀಡಿದರು. ॥ ೪೧ ॥ ಹಾಗೂ ಹೇಳಿದರು – "ಓ ಮಹಾಬಾಹುವೇ! ನಿನ್ನ ಆಹ್ವಾನದಂತೆ ಆಗಮಿಸಿದ್ದ ಪಿತೃಗಳು, ದೇವತೆಗಳು, ಮನುಷ್ಯರು ಮುಂತಾದವರೆಲ್ಲರೂ ದಾನ-ಮಾನಗಳಿಂದ ಚೆನ್ನಾಗಿ ಸತ್ಕರಿಸಲ್ಪಟ್ಟರು" ಎಂದು ಆತನನ್ನು ಅಭಿನಂದಿಸಿದರು. ॥ ೪೨ ॥

ಹತ್ತೊಂಭತ್ತನೆಯ ಅಧ್ಯಾಯವು ಮುಗಿಯಿತು. ॥ ೧೯ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಚತುರ್ಥಸ್ಕಂಧೇ ಪೃಥುವಿಜಯೇ ಏಕೋನವಿಂಶೋಽಧ್ಯಾಯಃ ॥ ೧೯ ॥

ಇಪ್ಪತ್ತನೆಯ ಅಧ್ಯಾಯ

ಪೃಥು ಚಕ್ರವರ್ತಿಯ ಯಜ್ಞಶಾಲೆಯಲ್ಲಿ ಶ್ರೀಭಗವಂತನು ಆವಿರ್ಭವಿಸಿ ಆತನನ್ನು ಅನುಗ್ರಹಿಸಿದುದು

ಮೈತ್ರೇಯ ಉವಾಚ

ಭಗವಾನಪಿ ವೈಕುಂಠಃ ಸಾಕಂ ಮಘವತಾ ವಿಭುಃ ।
ಯಜ್ಞೈರ್ಯಜ್ಞಪತಿಸ್ತುಷ್ಟೋ ಯಜ್ಞಭುಕ್ತಮಭಾಷತ ॥ ೧ ॥

ಶ್ರೀಭಗವಾನುವಾಚ

ಏಷ ತೇಽಕಾರ್ಷೀದ್ಭಂಗಂ ಹಯಮೇಧಶತಸ್ಯ ಹ ।
ಕ್ಷಮಾಪಯತ ಆತ್ಮಾನಮಮುಷ್ಯ ಕ್ಷಂತುಮರ್ಹಸಿ ॥ ೨ ॥

ಸುಧಿಯಃ ಸಾಧವೋ ಲೋಕೇ ನರದೇವ ನರೋತ್ತಮಾಃ ।
ನಾಭಿದ್ರುಹ್ಯಂತಿ ಭೂತೇಭ್ಯೋ ಯರ್ಹಿ ನಾತ್ಮಾ ಕಲೇವರಮ್ ॥ ೩ ॥

ಪುರುಷಾ ಯದಿ ಮುಹ್ಯಂತಿ ತ್ವಾದೃಶಾ ದೇವಮಾಯಯಾ ।
ಶ್ರಮ ಏವ ಪರಂ ಜಾತೋ ದೀರ್ಘಯಾ ವೃದ್ಧಸೇವಯಾ ॥ ೪ ॥

ಅತಃ ಕಾಯಮಿಮಂ ವಿದ್ವಾನವಿದ್ಯಾಕಾಮಕರ್ಮಭಿಃ ।
ಆರಬ್ಧ ಇತಿ ನೈವಾಸ್ಮಿನ್ ಪ್ರತಿಬುದ್ಧೋಽನುಷಜ್ಜತೇ ॥ ೫ ॥

ಅಸಂಸಕ್ತಃ ಶರೀರೇಽಸ್ಮಿನ್ನಮುನೋತ್ಪಾದಿತೇ ಗೃಹೇ ।
ಅಪತ್ಯೇ ದ್ರವಿಣೇ ವಾಪಿ ಕಃ ಕುರ್ಯಾನ್ಮಮತಾಂ ಬುಧಃ ॥ ೬ ॥

ಏಕಃ ಶುದ್ಧಃ ಸ್ವಯಂಜ್ಯೋತಿರ್ನಿರ್ಗುಣೋಽಸೌ ಗುಣಾಶ್ರಯಃ ।
ಸರ್ವಗೋಽನಾವೃತಃ ಸಾಕ್ಷೀ ನಿರಾತ್ಮಾಽಽತ್ಮಾಽಽತ್ಮನಃ ಪರಃ ॥ ೭ ॥

ಯ ಏವಂ ಸಂತಮಾತ್ಮಾನಮಾತ್ಮಸ್ಥಂ ವೇದ ಪೂರುಷಃ ।
ನಾಜ್ಯತೇ ಪ್ರಕೃತಿಸ್ಥೋಽಪಿ ತದ್ಗುಣೈಃ ಸ ಮಯಿ ಸ್ಥಿತಃ ॥ ೮ ॥

ಯಃ ಸ್ವಧರ್ಮೇಣ ಮಾಂ ನಿತ್ಯಂ ನಿರಾಶೀಃ ಶ್ರದ್ಧಯಾನ್ವಿತಃ ।
ಭಜತೇ ಶನಕೈಸ್ತಸ್ಯ ಮನೋ ರಾಜನ್ಪ್ರಸೀದತಿ ॥ ೯ ॥

ಪರಿತ್ಯಕ್ತಗುಣಃ ಸಮ್ಯಗ್ದರ್ಶನೋ ವಿಶದಾಶಯಃ ।
ಶಾಂತಿಂ ಮೇ ಸಮವಸ್ಥಾನಂ ಬ್ರಹ್ಮ ಕೈವಲ್ಯಮಶ್ನುತೇ ॥ ೧೦ ॥

ಶ್ರೀಮೈತ್ರೇಯರು ಹೇಳುತ್ತಾರೆ – ಎಲೈ ವಿದುರನೇ! ಯಜ್ಞಪತಿಯೂ, ಯಜ್ಞಭೋಕ್ತೃವೂ ಆದ ಭಗವಾನ್ ಶ್ರೀವಿಷ್ಣುವು ಪೃಥುಮಹಾರಾಜನ ಯಜ್ಞಗಳಿಂದ ಸಂತುಷ್ಟನಾಗಿ ಇಂದ್ರನೊಡನೆ ಅಲ್ಲಿಗೆ ದಯಮಾಡಿಸಿ ರಾಜನಲ್ಲಿ ಹೀಗೆಂದನು. ॥ ೧ ॥

ಶ್ರೀಭಗವಂತನು ಹೇಳಿದನು – ಎಲೈ ರಾಜೇಂದ್ರನೇ! ನೂರು ಅಶ್ವಮೇಧಯಜ್ಞಗಳನ್ನು ಪೂರ್ಣಗೊಳಿಸಬೇಕೆಂಬ ನಿನ್ನ ಸಂಕಲ್ಪಕ್ಕೆ ಈ ಇಂದ್ರನು ವಿಘ್ನವನ್ನುಂಟುಮಾಡಿದ್ದಕ್ಕಾಗಿ ನಿನ್ನಲ್ಲಿ ಕ್ಷಮೆಯಾಚಿಸುತ್ತಿದ್ದಾನೆ. ನೀನು ಈತನನ್ನು ಕ್ಷಮಿಸು. ॥ ೨ ॥ ಜ್ಞಾನಿಗಳೂ, ಸಾಧುಗಳೂ ಆದ ನರಶ್ರೇಷ್ಠರು ಯಾವ ಜೀವಿಗಳಿಗೂ ದ್ರೋಹವನ್ನೆಸಗುವುದಿಲ್ಲ. ಏಕೆಂದರೆ 'ಈ ಶರೀರವು ಆತ್ಮನಲ್ಲ' ಎಂಬುದು ಅವರಿಗೆ ತಿಳಿದಿರುತ್ತದೆ. ॥ ೩ ॥ ನಿನ್ನಂತಹ ನರಶ್ರೇಷ್ಠರು ನನ್ನ ಮಾಯೆಗೆ ಮರುಳಾಗಬಾರದು. ಹಾಗೆ ಮರುಳಾದರೆ ಬಹುದಿನಗಳವರೆಗೂ ಮಾಡಿದ ಜ್ಞಾನಿಜನರ ಸೇವೆಯು ಕೇವಲ ಶ್ರಮವೆಂದೇ ತಿಳಿಯಲಾಗುತ್ತದೆ. ॥ ೪ ॥ ಜ್ಞಾನದಿಂದ ಎಚ್ಚೆತ್ತಗೊಂಡವನು ಈ ಶರೀರವನ್ನು – ಅವಿದ್ಯೆ, ವಾಸನೆ ಮತ್ತು ಕರ್ಮಗಳಿಂದ ನಿರ್ಮಿತವಾಗಿರುವ ದೇಹವೆಂದು ತಿಳಿಯುತ್ತಾನೆ. ಆದ್ದರಿಂದ ಆತನು ಇದರಲ್ಲಿ ಆಸಕ್ತನಾಗುವುದಿಲ್ಲ. ॥ ೫ ॥ ಹೀಗೆ ಶರೀರದಲ್ಲಿಯೇ ಅನಾಸಕ್ತನಾಗಿರುವುದರಿಂದ ಆ ವಿವೇಕಿಯು ಈ ಶರೀರ ಸಂಬಂಧದಿಂದ ಉಂಟಾದ ಮನೆ, ಮಡದಿ, ಮಕ್ಕಳು ಮತ್ತು ಹಣ ಮುಂತಾದವುಗಳಲ್ಲಿ ಹೇಗೆ ತಾನೇ ಮಮತೆಯಿಂದ ಇರಬಲ್ಲನು? ॥ ೬ ॥

ಈ ಆತ್ಮನು ಶರೀರದಿಂದ ಭಿನ್ನನಾದವನು. ಏಕೆಂದರೆ, ಈತನು ಕೇವಲನೂ, ಶುದ್ಧನೂ, ಸ್ವಯಂಪ್ರಕಾಶಸ್ವರೂಪವುಳ್ಳವನೂ, ತ್ರಿಗುಣರಹಿತನಾಗಿ ತ್ರಿಗುಣಗಳಿಗೆ ಆಶ್ರಯಸ್ಥಾನನೂ, ಸರ್ವವ್ಯಾಪಕನೂ, ಆವರಣಶೂನ್ಯನೂ, ಎಲ್ಲಕ್ಕೂ ಸಾಕ್ಷಿಯೂ ಹಾಗೂ ಬೇರೊಂದು ಆತ್ಮವಿಲ್ಲದವನೂ ಆಗಿರುತ್ತಾನೆ. ॥ ೭ ॥ ಈ ದೇಹದಲ್ಲಿರುವ ಆತ್ಮನು ಹೀಗೆ ಶರೀರಸ್ಥ: ಶರೀರದಿಂದ ಭಿನ್ನನಾದವನು – ಎಂದು ತಿಳಿಯುವ ಜ್ಞಾನೀ ಮನುಷ್ಯನು ಪ್ರಕೃತಿಯಲ್ಲೇ ಇದ್ದರೂ ಅದರ ಗುಣಗಳಿಂದ ಲಿಪ್ತನಾಗುವುದಿಲ್ಲ, ಏಕೆಂದರೆ, ಅವನ ಸ್ಥಿತಿ ಪರಮಾತ್ಮನಾದ ನನ್ನಲ್ಲೇ ಇರುತ್ತದೆ. ॥ ೮ ॥ ಎಲೈ ರಾಜೇಂದ್ರನೇ! ಯಾವ ರೀತಿಯ ಕಾಮನೆಯನ್ನು ಇರಿಸಿಕೊಳ್ಳದೆ ತನ್ನ ವರ್ಣಾಶ್ರಮದ ಧರ್ಮಗಳ ಮೂಲಕ ಪ್ರತಿದಿನವೂ ಶ್ರದ್ಧೆಯಿಂದ ನನ್ನನ್ನು ಆರಾಧಿಸುವವನ ಚಿತ್ತವು ನಿಧಾನವಾಗಿ ಶುದ್ಧವಾಗಿಬಿಡುವುದು. ॥ ೯ ॥ ಚಿತ್ತವು ಶುದ್ಧವಾದ ಮೇಲೆ ಅವನಿಗೆ ವಿಷಯಗಳೊಂದಿಗೆ ಸಂಬಂಧ ಉಳಿಯುವುದಿಲ್ಲ ಮತ್ತು ಅವನಿಗೆ ತತ್ತ್ವಜ್ಞಾನ ಉಂಟಾಗುತ್ತದೆ. ಮತ್ತೆ ಅವನು ನನ್ನ ಸಮತಾರೂಪವಾದ ಸ್ಥಿತಿಯನ್ನು ಪಡೆದುಕೊಳ್ಳುವನು. ಇದೇ ಪರಮಶಾಂತಿಯು, ಬ್ರಹ್ಮವು ಅಥವಾ ಕೈವಲ್ಯವೆನಿಸುವುದು. ॥ ೧೦ ॥

ಉದಾಸೀನಮಿವಾಧ್ಯಕ್ಷಂ ದ್ರವ್ಯಜ್ಞಾನಕ್ರಿಯಾತ್ಮನಾಮ್ ।
ಕೂಟಸ್ಥಮಿಮಮಾತ್ಮಾನಂ ಯೋ ವೇದಾಪ್ನೋತಿ ಶೋಭನಮ್
॥ ೧೧ ॥

ಭಿನ್ನಸ್ಯ ಲಿಂಗಸ್ಯ ಗುಣಪ್ರವಾಹೋ
ದ್ರವ್ಯಕ್ರಿಯಾಕಾರಕಚೇತನಾತ್ಮನಃ ।
ದೃಷ್ಟಾಸು ಸಂಪತ್ಸು ವಿಪತ್ಸು ಸೂರಯೋ
ನ ವಿಕ್ರಿಯಂತೇ ಮಯಿ ಬದ್ಧಸೌಹೃದಾಃ ॥ ೧೨ ॥

ಸಮಃ ಸಮಾನೋತ್ತಮಮಧ್ಯಮಾಧಮಃ
ಸುಖೇ ಚ ದುಃಖೇ ಚ ಜಿತೇಂದ್ರಿಯಾಶಯಃ ।
ಮಯೋಪಕ್ಲೃಪ್ತಾಖಿಲಲೋಕಸಂಯುತೋ
ವಿಧತ್ಸ್ವ ವೀರಾಖಿಲಲೋಕರಕ್ಷಣಮ್ ॥ ೧೩ ॥

ಶ್ರೇಯಃ ಪ್ರಜಾಪಾಲನಮೇವ ರಾಜ್ಞೋ
ಯತ್ಸಾಂಪರಾಯೇ ಸುಕೃತಾತ್ ಷಷ್ಠಮಂಶಮ್ ।
ಹರ್ತಾನ್ಯಥಾ ಹೃತಪುಣ್ಯಃ ಪ್ರಜಾನಾ-
ಮರಕ್ಷಿತಾ ಕರಹಾರೋಽಘಮತ್ತಿ ॥ ೧೪ ॥

ಏವಂ ದ್ವಿಜಾಗ್ರ್ಯಾನುಮತಾನುವೃತ್ತ-
ಧರ್ಮಪ್ರಧಾನೋಽನ್ಯತಮೋಽವಿತಾಸ್ಯಾಃ ।
ಹ್ರಸ್ವೇನ ಕಾಲೇನ ಗೃಹೋಪಯಾತಾನ್
ದ್ರಷ್ಟಾಸಿ ಸಿದ್ಧಾನನುರಕ್ತಲೋಕಃ ॥ ೧೫ ॥

ವರಂ ಚ ಮತ್ ಕಂಚನ ಮಾನವೇಂದ್ರ
ವೃಣೀಷ್ವ ತೇಽಹಂ ಗುಣಶೀಲಯಂತ್ರಿತಃ ।
ನಾಹಂ ಮಖೈರ್ವೈ ಸುಲಭಸ್ತಪೋಭಿ-
ರ್ಯೋಗೇನ ವಾ ಯತ್ಸಮಚಿತ್ತವರ್ತೀ ॥ ೧೬ ॥

ಮೈತ್ರೇಯ ಉವಾಚ

ಸ ಇತ್ಥಂ ಲೋಕಗುರುಣಾ ವಿಷ್ವಕ್ಸೇನೇನ ವಿಶ್ವಜಿತ್ ।
ಅನುಶಾಸಿತ ಆದೇಶಂ ಶಿರಸಾ ಜಗೃಹೇ ಹರೇಃ
॥ ೧೭ ॥

ಸ್ಪೃಶಂತಂ ಪಾದಯೋಃ ಪ್ರೇಮ್ಣಾ ವ್ರೀಡಿತಂ ಸ್ವೇನ ಕರ್ಮಣಾ ।
ಶತಕ್ರತುಂ ಪರಿಷ್ವಜ್ಯ ವಿದ್ವೇಷಂ ವಿಸಸರ್ಜ ಹ
॥ ೧೮ ॥

ಈ ಶರೀರ, ಜ್ಞಾನ, ಕ್ರಿಯೆ ಮತ್ತು ಮನಸ್ಸಿನ ಸಾಕ್ಷಿಯಾಗಿದ್ದರೂ ಈ ಕೂಟಸ್ಥ ಆತ್ಮನು ಇವುಗಳಿಂದ ನಿರ್ಲಿಪ್ತನೇ ಆಗಿರುತ್ತಾನೆ. ಹೀಗೆ ತಿಳಿದುಕೊಂಡು ಮನುಷ್ಯನು ಪರಮ ಮಂಗಳಮಯ ಮೋಕ್ಷ ಪದವನ್ನು ಪಡೆದುಕೊಳ್ಳುವನು. ॥ ೧೧ ॥

ರಾಜನೇ! ಗುಣಪ್ರವಾಹರೂಪವಾದ ಆವಾಗಮನವಾದರೋ ಪಂಚಭೂತಗಳು, ಇಂದ್ರಿಯಗಳು, ಇಂದ್ರಿಯಾಭಿಮಾನಿ ದೇವತೆಗಳು ಮತ್ತು ಚಿದಾಭಾಸ – ಇವೆಲ್ಲವುಗಳ ಸಮಷ್ಟಿರೂಪವಾದ ಪರಿಚ್ಛಿನ್ನ ಲಿಂಗಶರೀರಕ್ಕೆ ಆಗುವುದಲ್ಲದೆ, ಇದರ ಸಾಕ್ಷಿಯಾದ ಆತ್ಮನಿಗೆ ಯಾವ ಸಂಬಂಧವೂ ಇಲ್ಲ. ನನ್ನಲ್ಲೇ ದೃಢವಾದ ಅನುರಾಗವುಳ್ಳ ಬುದ್ಧಿವಂತನಾದ ಮನುಷ್ಯನು ಸಂಪತ್ತು-ವಿಪತ್ತುಗಳು ಪ್ರಾಪ್ತವಾದರೂ ಎಂದಿಗೂ ಹರ್ಷ–ಶೋಕ ಮುಂತಾದ ವಿಕಾರಗಳಿಗೆ ಒಳಗಾಗುವುದಿಲ್ಲ. ॥ ೧೨ ॥ ಆದುದರಿಂದ ಎಲೈ ವೀರವರನೇ! ನೀನು ಉತ್ತಮ, ಮಧ್ಯಮ, ಅಧಮರೆಂಬ ಎಲ್ಲ ಪುರುಷರಲ್ಲಿಯೂ ಸಮಾನಭಾವವನ್ನು ಇಟ್ಟುಕೊಂಡು, ಸುಖ-ದುಃಖಗಳನ್ನು ಸಮಾನವಾಗಿ ತಿಳಿಯಬೇಕು. ಮನಸ್ಸು ಇಂದ್ರಿಯಗಳನ್ನು ಗೆದ್ದು ನಾನು ಒದಗಿಸಿಕೊಟ್ಟಿರುವ ಮಂತ್ರಿಗಳೇ ಮುಂತಾದ ಪರಿವಾರದ ಸಹಾಯದಿಂದ ಸಮಸ್ತ ಲೋಕಗಳನ್ನು ರಕ್ಷಿಸುತ್ತಿರು. ॥ ೧೩ ॥ ಪ್ರಜೆಗಳ ರಕ್ಷಣೆಯಲ್ಲೇ ರಾಜನಿಗೆ ಕಲ್ಯಾಣವುಂಟಾಗುವುದು. ಹೀಗೆ ಅವರನ್ನು ರಕ್ಷಿಸಿದರೆ ಆತನಿಗೆ ಪರಲೋಕದಲ್ಲಿ ಪ್ರಜೆಗಳ ಪುಣ್ಯದಲ್ಲಿ ಆರನೆಯ ಒಂದು ಭಾಗವು ಸಿಗುತ್ತದೆ. ಇದಕ್ಕೆ ವಿಪರೀತವಾಗಿ ಪ್ರಜೆಗಳನ್ನು ರಕ್ಷಿಸದೆ ಅವರಿಂದ ಕಂದಾಯವನ್ನು ಮಾತ್ರ ತೆಗೆದುಕೊಳ್ಳುವಂತಹ ರಾಜನ ಇಡೀ ಪುಣ್ಯವನ್ನು ಪ್ರಜೆಗಳು ಕಿತ್ತುಕೊಳ್ಳುವರು. ಇಷ್ಟೇ ಅಲ್ಲ, ಪ್ರಜೆಗಳ ಪಾಪಕ್ಕೂ ಭಾಗಿಯಾಗಬೇಕಾಗುತ್ತದೆ. ॥ ೧೪ ॥ ಇದನ್ನರಿತು ನೀನು ಶ್ರೇಷ್ಠರಾದ ಬ್ರಾಹ್ಮಣರ ಸಮ್ಮತಿಪಡೆದು, ಪರಂಪರೆಯಿಂದ ಪ್ರಾಪ್ತವಾದ ಧರ್ಮವನ್ನೇ ಪ್ರಧಾನವಾಗಿಟ್ಟುಕೊಂಡು ಎಲ್ಲದರಲ್ಲೂ ಅನಾಸಕ್ತನಾಗಿ ಈ ಪೃಥಿವಿಯನ್ನು ನ್ಯಾಯವಾಗಿ ಆಳುತ್ತಿದ್ದರೆ ಪ್ರಜೆಗಳು ನಿನ್ನನ್ನು ಪ್ರೀತಿಸುವರು. ಮತ್ತೆ ಕೆಲವೇ ದಿನಗಳಲ್ಲಿ ಸನಕಾದಿ ಸಿದ್ಧರು ನಿನ್ನ ಮನೆಗೇ ಬಂದು ದರ್ಶನ ಕೊಡುವರು. ॥ ೧೫ ॥ ರಾಜೇಂದ್ರನೇ! ನಾನು ನಿನ್ನ ಗುಣ–ಶೀಲಗಳಿಗೆ ವಶನಾಗಿಬಿಟ್ಟಿದ್ದೇನೆ. ಆದುದರಿಂದ ನಿನಗೆ ಇಷ್ಟವಾದ ವರವನ್ನು ಬೇಡಿಕೋ. ನಾನು ಯಜ್ಞಗಳಿಂದಾಗಲೀ, ತಪಸ್ಸಿನಿಂದಾಗಲೀ, ಯೋಗದಿಂದಾಗಲೀ ಸುಲಭನಾಗಿ ದೊರೆಯುವವನಲ್ಲ. ಯಾರಲ್ಲಿ ಸಮಭಾವವಿರುವುದೋ ಅಂತಹವರ ಚಿತ್ತದಲ್ಲಿ ಮಾತ್ರ ಇರುವವನು. ॥ ೧೬ ॥

ಶ್ರೀಮೈತ್ರೇಯರು ಹೇಳುತ್ತಾರೆ – ಎಲೈ ವಿದುರನೇ! ಸರ್ವಲೋಕಗುರುವಾದ ವಿಷ್ವಕ್ಸೇನನು ಹೀಗೆ ಆದೇಶನೀಡಲು ಸರ್ವಲೋಕ ವಿಜಯಿಯಾದ ಆ ರಾಜೇಂದ್ರನು ಅದನ್ನು ಶಿರಸಾ ವಹಿಸಿದನು. ॥ ೧೭ ॥ ಆಗ ದೇವರಾಜ ಇಂದ್ರನು ತನ್ನ ದುಷ್ಕಾರ್ಯಕ್ಕಾಗಿ ತಾನೇ ನಾಚಿಕೆಪಟ್ಟು ಪೃಥುವಿನ ಪಾದಗಳಿಗೆ ಬೀಳುವಷ್ಟರಲ್ಲಿ ರಾಜನು ಆತನನ್ನು ಪ್ರೇಮದಿಂದ ಆಲಿಂಗಿಸಿಕೊಂಡು ಮನೋಮಾಲಿನ್ಯವನ್ನು ದೂರಮಾಡಿದನು. ॥ ೧೮ ॥

ಭಗವಾನಥ ವಿಶ್ವಾತ್ಮಾ ಪೃಥುನೋಪಹೃತಾರ್ಹಣಃ ।
ಸಮುಜ್ಜಿಹಾನಯಾ ಭಕ್ತ್ಯಾ ಗೃಹೀತಚರಣಾಂಬುಜಃ ॥ ೧೯ ॥

ಪ್ರಸ್ಥಾನಾಭಿಮುಖೋಽಪ್ಯೇನಮನುಗ್ರಹವಿಲಂಬಿತಃ ।
ಪಶ್ಯನ್ಪದ್ಮಪಲಾಶಾಕ್ಷೋ ನ ಪ್ರತಸ್ಥೇ ಸುಹೃತ್ಸತಾಮ್ ॥ ೨೦ ॥

ಸ ಆದಿರಾಜೋ ರಚಿತಾಂಜಲಿರ್ಹರಿಂ
ವಿಲೋಕಿತುಂ ನಾಶಕದಶ್ರುಲೋಚನಃ ।
ನ ಕಿಂಚನೋವಾಚ ಸ ಬಾಷ್ಪವಿಕ್ಲವೋ
ಹೃದೋಪಗುಹ್ಯಾಮುಮಧಾದವಸ್ಥಿತಃ ॥ ೨೧ ॥

ಅಥಾವಮೃಜ್ಯಾಶ್ರುಕಲಾ ವಿಲೋಕಯನ್
ಅತೃಪ್ತದೃಗ್ಗೋಚರಮಾಹ ಪೂರುಷಮ್ ।
ಪದಾ ಸ್ಪೃಶಂತಂ ಕ್ಷಿತಿಮಂಸ ಉನ್ನತೇ
ವಿನ್ಯಸ್ತಹಸ್ತಾಗ್ರಮುರಂಗವಿದ್ವಿಷಃ ॥ ೨೨ ॥

ಪೃಥುರುವಾಚ

ವರಾನ್ ವಿಭೋ ತ್ವದ್ವರದೇಶ್ವರಾದ್ ಬುಧಃ
ಕಥಂ ವೃಣೀತೇ ಗುಣವಿಕ್ರಿಯಾತ್ಮನಾಮ್ ।
ಯೇ ನಾರಕಾಣಾಮಪಿ ಸಂತಿ ದೇಹಿನಾಂ
ತಾನೀಶ ಕೈವಲ್ಯಪತೇ ವೃಣೇ ನ ಚ ॥ ೨೩ ॥

ನ ಕಾಮಯೇ ನಾಥ ತದಪ್ಯಹಂ ಕ್ವಚಿನ್
ನ ಯತ್ರ ಯುಷ್ಮಚ್ಚರಣಾಂಬುಜಾಸವಃ ।
ಮಹತ್ತಮಾಂತರ್ಹೃದಯಾನ್ಮುಖಚ್ಯುತೋ
ವಿಧತ್ಸ್ವ ಕರ್ಣಾಯುತಮೇಷ ಮೇ ವರಃ ॥ ೨೪ ॥

ಸ ಉತ್ತಮಶ್ಲೋಕ ಮಹನ್ಮುಖಚ್ಯುತೋ
ಭವತ್ಪದಾಂಭೋಜಸುಧಾಕಣಾನಿಲಃ ।
ಸ್ಮೃತಿಂ ಪುನರ್ವಿಸ್ಮೃತತತ್ತ್ವವರ್ತ್ಮನಾಂ
ಕುಯೋಗಿನಾಂ ನೋ ವಿತರತ್ಯಲಂ ವರೈಃ ॥ ೨೫ ॥

ಯಶಃ ಶಿವಂ ಸುಶ್ರವ ಆರ್ಯಸಂಗಮೇ
ಯದೃಚ್ಛಯಾ ಚೋಪಶೃಣೋತಿ ತೇ ಸಕೃತ್ ।
ಕಥಂ ಗುಣಜ್ಞೋ ವಿರಮೇದ್ವಿನಾ ಪಶುಂ
ಶ್ರೀರ್ಯತ್ಪ್ರವವ್ರೇ ಗುಣಸಂಗ್ರಹೇಚ್ಛಯಾ ॥ ೨೬ ॥

ಮತ್ತೆ ಪೃಥು ಮಹಾರಾಜನು ವಿಶ್ವಾತ್ಮನಾದ ಭಕ್ತವತ್ಸಲ ಭಗವಂತನನ್ನು ಪೂಜಿಸಿ, ಅಡಿಗಡಿಗೆ ಉಕ್ಕಿಬರುತ್ತಿದ್ದ ಭಕ್ತಿಯಿಂದ ಆತನ ಅಡಿದಾವರೆಗಳನ್ನು ಹಿಡಿದುಕೊಂಡನು. ॥ ೧೯ ॥ ಶ್ರೀಹರಿಯು ಅಲ್ಲಿಂದ ಹೊರಡಬೇಕೆಂದು ಬಯಸುತ್ತಿದ್ದರೂ ಪೃಥುವಿನ ಕುರಿತು ಇದ್ದ ವಾತ್ಸಲ್ಯಭಾವವು ಅವನನ್ನು ತಡೆಯಿತು. ಅವನು ತನ್ನ ಕಮಲದಂತಿರುವ ಕಣ್ಣುಗಳಿಂದ ರಾಜನ ಕಡೆಗೆ ನೋಡುತ್ತಲೇ ಇದ್ದನು. ಅಲ್ಲಿಂದ ಹೊರಡಲೇ ಇಲ್ಲ. ॥ ೨೦ ॥ ಆದಿರಾಜನಾದ ಪೃಥುಮಹಾರಾಜನೂ ಕೂಡ ಕಣ್ಣುಗಳಲ್ಲಿ ಕಂಬನಿಯು ತುಂಬಿದ್ದರಿಂದ ಶ್ರೀಭಗವಂತನನ್ನು ನೋಡುವುದಕ್ಕೂ ಸಮರ್ಥನಾಗಲಿಲ್ಲ, ಗಂಟಲು ಗದ್ಗದವಾಗಿದ್ದರಿಂದ ಏನನ್ನೂ ಆಡುವುದಕ್ಕೂ ಸಮರ್ಥನಾಗಲಿಲ್ಲ. ಆತನನ್ನು ಹೃದಯದಲ್ಲಿ ಆಲಿಂಗಿಸಿಕೊಂಡು, ಕೈಮುಗಿದುಕೊಂಡು ಹಾಗೆಯೇ ನಿಂತು ಬಿಟ್ಟನು. ॥ ೨೧ ॥ ಪ್ರಭುವು ತನ್ನ ಚರಣಕಮಲಗಳಿಂದ ಪೃಥಿವಿಯನ್ನು ಸ್ಪರ್ಶಿಸುತ್ತಾ ನಿಂತಿದ್ದು, ಅವನ ಕೈತುದಿಯನ್ನು ಉನ್ನತವಾದ ಗರುಡನ ಹೆಗಲಮೇಲೆ ಇರಿಸಿಕೊಂಡಿದ್ದನು. ಮಹಾರಾಜಾ ಪೃಥುವು ಕಂಬನಿಯನ್ನು ಒರೆಸಿಕೊಂಡು ಅತೃಪ್ತನಯನಗಳಿಂದ ಅವನ ಕಡೆಗೆ ನೋಡುತ್ತಾ ಹೀಗೆ ವಿಜ್ಞಾಪಿಸಿಕೊಂಡನು. ॥ ೨೨ ॥

ಪೃಥುಮಹಾರಾಜನು ಹೇಳಿದನು – ಓ ಕೈವಲ್ಯಪತಿಯಾದ ಪ್ರಭುವೇ! ವರವನ್ನು ಕೊಡುವ ಬ್ರಹ್ಮಾದಿ ದೇವತೆಗಳಿಗೂ ವರವನ್ನು ಕೊಡುವುದರಲ್ಲಿ ಸಮರ್ಥನು ನೀನು. ದೇಹಾಭಿಮಾನಿಗಳು ಭೋಗಿಸಲು ಯೋಗ್ಯವಾದ ವಿಷಯಗಳನ್ನು ವಿವೇಕಿಗಳು ನಿನ್ನಿಂದ ಹೇಗೆ ತಾನೇ ಬೇಡಿಯಾರು? ಅವುಗಳಾದರೋ ನರಕಕ್ಕೆ ಯೋಗ್ಯರಾದ ಸಂಸಾರಿಗಳಿಗೂ ದೊರೆಯುವುವು. ಆದರೆ ನಾನು ಅವುಗಳನ್ನು ಬೇಡುವುದಿಲ್ಲ. ॥ ೨೩ ॥ ಮಹಾಪುರುಷರ ಹೃದಯದಿಂದ ಅವರ ಬಾಯಿಯ ಮೂಲಕ ಹರಿದುಬರುವ ನಿನ್ನ ಚರಣಾರವಿಂದಗಳ ಮಕರಂದವು ಇಲ್ಲದಿರುವ, ನಿನ್ನ ಕೀರ್ತಿಕಥೆಗಳನ್ನು ಕೇಳುವ ಸುಖವು ಸಿಗದಿರುವ ಆ ಮೋಕ್ಷಪದವನ್ನು ನಾನು ಇಚ್ಛಿಸುವುದಿಲ್ಲ. ಆದುದರಿಂದ ನೀನು ನನಗೆ ಹತ್ತುಸಾವಿರ ಕಿವಿಗಳನ್ನು ಕೊಡು. ಅದರಿಂದ ನಾನು ನಿನ್ನ ದಿವ್ಯಲೀಲಾಕಥೆಗಳನ್ನು ಕೇಳುತ್ತಲೇ ಇರುವೆನು. ಇದೇ ನನ್ನ ಪ್ರಾರ್ಥನೆಯಾಗಿದೆ. ॥ ೨೪ ॥ ಪುಣ್ಯಕೀರ್ತಿಯಾದ ಪ್ರಭುವೇ! ನಿನ್ನ ಅಡಿದಾವರೆಗಳ ರಸಾಮೃತದ ಕಣಗಳನ್ನು ಹೊತ್ತುತರುತ್ತಾ ಮಹಾತ್ಮರ ಮುಖಾರವಿಂದಗಳಿಂದ ಯಾವ ಗಾಳಿಯು ಹೊರಹೊಮ್ಮುವುದೋ ಅದಕ್ಕೆ – ತತ್ತ್ವವನ್ನು ಮರೆತಿರುವ ನಮ್ಮಂತಹ ಕುಯೋಗಿಗಳಿಗೂ ಪುನಃ ತತ್ತ್ವದ ಅರಿವನ್ನುಂಟು ಮಾಡುವ ಅದ್ಭುತವಾದ ಶಕ್ತಿಯಿದೆ. ಆದುದರಿಂದ ಆ ಕಥಾಮೃತ ಶ್ರವಣವನ್ನು ಬಿಟ್ಟು ಬೇರಾವ ವರವೂ ಬೇಡ. ॥ ೨೫ ॥ ಪುಣ್ಯಶ್ಲೋಕನಾದ ಪರಮಾತ್ಮನೇ! ಸತ್ಸಂಗದಲ್ಲಿ ನಿನ್ನ ಮಂಗಳಮಯವಾದ ಕೀರ್ತಿಯನ್ನು ಆಕಸ್ಮಾತ್ತಾಗಿ ಒಮ್ಮೆ ಕಿವಿಗೆ ಬಿದ್ದಾಗ ಅಷ್ಟರಲ್ಲೇ ತೃಪ್ತಿಯಾಯಿತು ಎನ್ನುವವನು ಪಶುವಲ್ಲದೆ ಮತ್ತೇನು? ಗುಣಗ್ರಾಹಿಗಳಾದ ಧನ್ಯಜೀವಿಗಳು ಅದನ್ನು ಸದಾ ಕೇಳುತ್ತಿರಬೇಕೆಂದು ಬಯಸುತ್ತಾರೆ. ಎಲ್ಲ ರೀತಿಯ ಪುರುಷಾರ್ಥಗಳ ಸಿದ್ಧಿಗಾಗಿ ಜಗನ್ಮಾತೆಯಾದ ಶ್ರೀಲಕ್ಷ್ಮೀದೇವಿಯೂ ನಿನ್ನ ದಿವ್ಯಕಥೆಗಳನ್ನು ನಿರಂತರವಾಗಿ ಶ್ರವಣಿಸಲು ಬಯಸುತ್ತಿರುವಳು. ॥ ೨೬ ॥

ಅಥಾಭಜೇ ತ್ವಾಖಿಲಪೂರುಷೋತ್ತಮಂ
ಗುಣಾಲಯಂ ಪದ್ಮಕರೇವ ಲಾಲಸಃ ।
ಅಪ್ಯಾವಯೋರೇಕಪತಿಸ್ಪೃಧೋಃ ಕಲಿ-
ರ್ನ ಸ್ಯಾತ್ಕೃತತ್ವಚ್ಚರಣೈಕತಾನಯೋಃ ॥ ೨೭ ॥

ಜಗಜ್ಜನನ್ಯಾಂ ಜಗದೀಶ ವೈಶಸಂ
ಸ್ಯಾದೇವ ಯತ್ಕರ್ಮಣಿ ನಃ ಸಮೀಹಿತಮ್ ।
ಕರೋಷಿ ಫಲ್ಗ್ವಪ್ಯುರು ದೀನವತ್ಸಲಃ
ಸ್ವ ಏವ ಧಿಷ್ಣ್ಯೇಽಭಿರತಸ್ಯ ಕಿಂ ತಯಾ ॥ ೨೮ ॥

ಭಜಂತ್ಯಥ ತ್ವಾಮತ ಏವ ಸಾಧವೋ
ವ್ಯುದಸ್ತಮಾಯಾಗುಣವಿಭ್ರಮೋದಯಮ್ ।
ಭವತ್ಪದಾನುಸ್ಮರಣಾದೃತೇ ಸತಾಂ
ನಿಮಿತ್ತಮನ್ಯದ್ಭಗವನ್ನ ವಿದ್ಮಹೇ ॥ ೨೯ ॥

ಮನ್ಯೇ ಗಿರಂ ತೇ ಜಗತಾಂ ವಿಮೋಹಿನೀಂ
ವರಂ ವೃಣೀಷ್ವೇತಿ ಭಜಂತಮಾತ್ಥ ಯತ್ ।
ವಾಚಾ ನು ತಂತ್ಯಾ ಯದಿ ತೇ ಜನೋಽಸಿತಃ
ಕಥಂ ಪುನಃ ಕರ್ಮ ಕರೋತಿ ಮೋಹಿತಃ ॥ ೩೦ ॥

ತ್ವನ್ಮಾಯಯಾದ್ಧಾ ಜನ ಈಶ ಖಂಡಿತೋ
ಯದನ್ಯದಾಶಾಸ್ತ ಋತಾತ್ಮನೋಽಬುಧಃ ।
ಯಥಾ ಚರೇದ್ಬಾಲಹಿತಂ ಪಿತಾ ಸ್ವಯಂ
ತಥಾ ತ್ವಮೇವಾರ್ಹಸಿ ನಃ ಸಮೀಹಿತುಮ್ ॥ ೩೧ ॥

ಮೈತ್ರೇಯ ಉವಾಚ

ಇತ್ಯಾದಿರಾಜೇನ ನುತಃ ಸ ವಿಶ್ವದೃಕ್
ತಮಾಹ ರಾಜನ್ಮಯಿ ಭಕ್ತಿರಸ್ತು ತೇ ।
ದಿಷ್ಟ್ಯೇದೃಶೀ ಧೀರ್ಮಯಿ ತೇ ಕೃತಾ ಯಯಾ
ಮಾಯಾಂ ಮದೀಯಾಂ ತರತಿ ಸ್ಮ ದುಸ್ತ್ಯಜಾಮ್ ॥ ೩೨ ॥

ತತ್ತ್ವಂ ಕುರು ಮಯಾದಿಷ್ಟಮಪ್ರಮತ್ತಃ ಪ್ರಜಾಪತೇ ।
ಮದಾದೇಶಕರೋ ಲೋಕಃ ಸರ್ವತ್ರಾಪ್ನೋತಿ ಶೋಭನಮ್ ॥ ೩೩ ॥

ಆ ಲಕ್ಷ್ಮೀದೇವಿಯಂತೆ ನಾನೂ ಕೂಡ ಪುರುಷೋತ್ತಮನೂ, ಕಲ್ಯಾಣಗುಣ ಪರಿಪೂರ್ಣನೂ ಆಗಿರುವ ನಿನ್ನ ಸೇವೆಯನ್ನು ಮಾಡಲು ಬಯಸುತ್ತೇನೆ. ಆದರೆ ನಿನ್ನ ಅಡಿದಾವರೆಗಳಲ್ಲೇ ಮನಸ್ಸನ್ನು ಏಕಾಗ್ರಗೊಳಿಸಿ ನಿನ್ನೊಬ್ಬನನ್ನೇ ಪತಿಯನ್ನಾಗಿ ಭಾವಿಸಿ ಸೇವೆಮಾಡುತ್ತಿರುವ ಜಗನ್ಮಾತೆ ಮಹಾಲಕ್ಷ್ಮಿಗೂ ನನಗೂ ಈ ನಿನ್ನ ಸೇವೆಯೆಂಬ ಸ್ಪರ್ಧೆಯಲ್ಲಿ ಕಲಹವುಂಟಾಗಬಾರದು ಅಷ್ಟೆ. ॥ ೨೭ ॥ ಓ ಜಗತ್ಪತಿಯೇ! ಆದರೆ ಆ ಜಗನ್ಮಾತೆ ಲಕ್ಷ್ಮಿಯ ಹೃದಯದಲ್ಲಿ ನನ್ನ ಕುರಿತು ವಿರೋಧವು ಉಂಟಾಗುವ ಸಂಭವವು ಇದ್ದೇ ಇದೆ. ಏಕೆಂದರೆ, ನಾವಿಬ್ಬರೂ ಒಂದೇ ಸೇವಾ ಕೈಂಕರ್ಯಕ್ಕೆ ಆಸೆಪಡುತ್ತಿದ್ದೇವೆ. ಆದರೆ ನೀನು ದೀನವತ್ಸಲನು. ದೀನರಾದ ಭಕ್ತರು ಮಾಡುವ ಅತ್ಯಲ್ಪ ಸೇವೆಯನ್ನು ಬಲುದೊಡ್ಡದೆಂದು ಭಾವಿಸುವವನು. ಆದುದರಿಂದ ನಮ್ಮಿಬ್ಬರ ಜಗಳದಲ್ಲಿ ನೀನು ನನ್ನ ಪಕ್ಷವನ್ನೇ ವಹಿಸುವೆಯೆಂದು ಆಶಿಸುತ್ತೇನೆ. ಸ್ವಸ್ವರೂಪದಲ್ಲಿಯೇ ವಿಹರಿಸುತ್ತಿರುವ ನಿನಗೆ ಆಕೆಯಿಂದಾದರೂ ಆಗಬೇಕಾದುದೇನು? ॥ ೨೮ ॥ ಹೀಗೆ ನೀನು ದೀನವತ್ಸಲನಾಗಿರುವುದರಿಂದಲೇ ಮಾಯಾಗುಣವಿಲಾಸವನ್ನು ಮೀರಿದ, ಮಾಯಾತೀತನಾದ ನಿನ್ನನ್ನು ಸಾಧುಗಳು ನಿರಂತರವೂ ಧ್ಯಾನಿಸುವರು. ಸತ್ಪುರುಷರಿಗೆ ನಿನ್ನ ಚರಣಾರವಿಂದಗಳ ಸೇವೆಯ ಹೊರತು ಬೇರಾವ ಪ್ರಯೋಜನವೂ ಇಲ್ಲವೆಂದೇ ನಾನು ತಿಳಿದಿದ್ದೇನೆ. ॥ ೨೯ ॥ ಶ್ರೀಭಗವಂತನೇ! ಹೀಗೆ ನಿನ್ನ ಭಜನೆಯೇ ಅನನ್ಯ ಪ್ರಯೋಜನವೆಂದು ತಿಳಿದ ಭಕ್ತನಾದ ನನ್ನನ್ನು ಕುರಿತು ನೀನು 'ಯಾವುದಾದರೂ ವರವನ್ನು ಕೇಳಿಕೋ' ಎಂದು ಮೋಹಕವಾದ ಮಾತನ್ನಾಡಿದೆಯಲ್ಲ! ಇದು ಲೋಕವನ್ನು ಮರುಳುಮಾಡುವ ಮಾತಲ್ಲವೇ? ನಿನ್ನ ವಾಣಿಯೇ ಆದ ವೈದಿಕಕರ್ಮಕಾಂಡವೂ ಕೂಡ ಇಂತಹ ಪಾಶಗಳಿಂದ ಜನರನ್ನು ಕಟ್ಟಿಹಾಕಿದೆ. ಹಾಗಿಲ್ಲದಿದ್ದರೆ ಜನರು ಮೋಹವಶರಾಗಿ ಸಕಾಮಕರ್ಮಗಳನ್ನು ಏಕೆ ಆಚರಿಸುತ್ತಿದ್ದರು? ॥ ೩೦ ॥ ಪ್ರಭೋ! ನಿನ್ನ ಮಾಯೆಯಿಂದಲೇ ಮನುಷ್ಯನು ತನ್ನ ವಾಸ್ತವಿಕ ಸ್ವರೂಪನಾದ ನಿನ್ನಿಂದ ವಿಮುಖನಾಗಿ ಅಜ್ಞಾನಕ್ಕೆ ವಶನಾಗಿ ಬೇರೆ ಪತ್ನೀ, ಪುತ್ರಾದಿಗಳನ್ನು ಬಯಸುತ್ತಾನೆ. ಆದರೂ ತನ್ನ ಬೇಡಿಕೆಗಳನ್ನು ಸಲ್ಲಿಸದೇ ಇದ್ದರೂ ತಂದೆಯು ತಾನೇ ಅವರ ಕಲ್ಯಾಣವನ್ನು ಮಾಡುವಂತೆ, ನೀನೂ ಸಹ ನಾವು ಪ್ರಾರ್ಥಿಸದೇ ಇದ್ದರೂ ನಮಗೆ ಯಾವುದು ಹಿತಕರವೋ ಅದನ್ನೇ ಮಾಡು ಎಂದು ಬೇಡಿಕೊಂಡನು. ॥ ೩೧ ॥

ಶ್ರೀಮೈತ್ರೇಯರು ಹೇಳುತ್ತಾರೆ – ಆದಿರಾಜನಾದ ಪೃಥುವು ಹೀಗೆ ಸ್ತುತಿಸಿದಾಗ ಸರ್ವಸಾಕ್ಷಿ ಶ್ರೀಹರಿಯು ಅವನಲ್ಲಿ ಹೇಳಿದನು – ರಾಜನೇ! ನಿನಗೆ ನನ್ನಲ್ಲಿ ಭಕ್ತಿ ಉಂಟಾಗಲಿ. ನಿನ್ನ ಚಿತ್ತವು ಹೀಗೆ ನನ್ನಲ್ಲಿ ಲೀನವಾಗಿರುವುದು ಅದೃಷ್ಟವಿಶೇಷವೇ. ಹೀಗಾದರೆ ಮನುಷ್ಯನು ಸಹಜವಾಗಿ ತೊರೆಯಲು ಅತಿಕಷ್ಟವಾದ ನನ್ನ ಆ ಮಾಯೆಯಿಂದ ಬಿಡುಗಡೆಹೊಂದುವನು. ಈಗ ನೀನು ಜಾಗರೂಕನಾಗಿ ನನ್ನ ಆಜ್ಞೆಯನ್ನು ಪಾಲಿಸುತ್ತಾ ಇರು. ಪ್ರಜಾಪಾಲಕನೇ! ನನ್ನ ಆಣತಿಯನ್ನು ಪಾಲಿಸುವವನಿಗೆ ಎಲ್ಲೆಡೆ ಮಂಗಳವೇ ಉಂಟಾಗುತ್ತದೆ. ॥ ೩೨-೩೩ ॥

ಮೈತ್ರೇಯ ಉವಾಚ

ಇತಿ ವೈನ್ಯಸ್ಯ ರಾಜರ್ಷೇಃ ಪ್ರತಿನಂದ್ಯಾರ್ಥವದ್ವಚಃ ।
ಪೂಜಿತೋಽನುಗೃಹೀತ್ವೈನಂ ಗಂತುಂ ಚಕ್ರೇಽಚ್ಯುತೋ ಮತಿಮ್ ॥ ೩೪ ॥

ದೇವರ್ಷಿಪಿತೃಗಂಧರ್ವಸಿದ್ಧಚಾರಣಪನ್ನಗಾಃ ।
ಕಿನ್ನರಾಪ್ಸರಸೋ ಮರ್ತ್ಯಾಃ ಖಗಾ ಭೂತಾನ್ಯನೇಕಶಃ ॥ ೩೫ ॥

ಯಜ್ಞೇಶ್ವರಧಿಯಾ ರಾಜ್ಞಾ ವಾಗ್ವಿತ್ತಾಂಜಲಿಭಕ್ತಿತಃ ।
ಸಭಾಜಿತಾ ಯಯುಃ ಸರ್ವೇ ವೈಕುಂಠಾನುಗತಾಸ್ತತಃ ॥ ೩೬ ॥

ಭಗವಾನಪಿ ರಾಜರ್ಷೇಃ ಸೋಪಾಧ್ಯಾಯಸ್ಯ ಚಾಚ್ಯುತಃ ।
ಹರನ್ನಿವ ಮನೋಽಮುಷ್ಯ ಸ್ವಧಾಮ ಪ್ರತ್ಯಪದ್ಯತ ॥ ೩೭ ॥

ಅದೃಷ್ಟಾಯ ನಮಸ್ಕೃತ್ಯ ನೃಪಃ ಸಂದರ್ಶಿತಾತ್ಮನೇ ।
ಅವ್ಯಕ್ತಾಯ ಚ ದೇವಾನಾಂ ದೇವಾಯ ಸ್ವಪುರಂ ಯಯೌ ॥ ೩೮ ॥

ಶ್ರೀಮೈತ್ರೇಯರು ಹೇಳುತ್ತಾರೆ – ಎಲೈ ವಿದುರನೇ! ಹೀಗೆ ಭಗವಂತನು ಪೃಥುವಿನ ಅರ್ಥಪೂರ್ಣವಾದ ವಚನಗಳನ್ನು ಅಭಿನಂದಿಸಿದನು. ಮತ್ತೆ ಪೃಥುವು ಅವನನ್ನು ಪೂಜಿಸಿದನು. ಪ್ರಭುವು ಆತನನ್ನು ಎಲ್ಲ ರೀತಿಯಿಂದ ಅನುಗ್ರಹಿಸಿ ಅಲ್ಲಿಂದ ಹೊರಡಲು ಸನ್ನದ್ಧನಾದನು. ॥ ೩೪ ॥ ಪೃಥುಮಹಾರಾಜನು ಅಲ್ಲಿಗೆ ಬಂದಿದ್ದ ದೇವತೆಗಳು, ಋಷಿಗಳು, ಪಿತೃಗಳು, ಗಂಧರ್ವರು, ಸಿದ್ಧರು, ಚಾರಣರು, ನಾಗರು, ಕಿನ್ನರರು, ಅಪ್ಸರೆಯರು, ಮನುಷ್ಯರು ಮತ್ತು ಪಕ್ಷಿಗಳು ಮುಂತಾದ ಅನೇಕ ಬಗೆಯ ಪ್ರಾಣಿಗಳಿಗೂ ಹಾಗೂ ಭಗವಂತನ ಪಾರ್ಷದರಿಗೂ ಹೀಗೆ ಎಲ್ಲರಿಗೂ ಭಗವದ್ಬುದ್ಧಿಯಿಂದ ಭಕ್ತಿಪೂರ್ವಕವಾಗಿ ಮಾತು, ಮನಸ್ಸು ಮತ್ತು ಧನದ ಮೂಲಕ ಕೈಮುಗಿದು ಪೂಜಿಸಿದನು. ಇದಾದ ಬಳಿಕ ಅವರೆಲ್ಲರೂ ತಮ್ಮ-ತಮ್ಮ ಸ್ಥಾನಗಳಿಗೆ ಹೊರಟು ಹೋದರು. ॥ ೩೫-೩೬ ॥ ಭಗವಂತನಾದ ಅಚ್ಯುತನೂ ಪೃಥುರಾಜನ ಮತ್ತು ಪುರೋಹಿತರ ಚಿತ್ತವನ್ನು ಸೆಳೆದುಕೊಂಡು ತನ್ನ ಧಾಮಕ್ಕೆ ಬಿಜಯಂಗೈದನು. ॥ ೩೭ ॥ ಅನಂತರ ತನ್ನ ಸ್ವರೂಪವನ್ನು ತೋರಿ ಅಂತರ್ಧಾನನಾದ ಅವ್ಯಕ್ತಸ್ವರೂಪೀ ದೇವಾಧಿದೇವ ಭಗವಂತನನ್ನು ನಮಸ್ಕರಿಸುತ್ತಾ ಪೃಥುರಾಜನೂ ತನ್ನ ರಾಜಧಾನಿಗೆ ತೆರಳಿದನು. ॥ ೩೮ ॥

ಇಪ್ಪತ್ತನೆಯ ಅಧ್ಯಾಯವು ಮುಗಿಯಿತು. ॥ ೨೦ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಚತುರ್ಥಸ್ಕಂಧೇ
ಪೃಥುಚರಿತೇ ವಿಂಶೋಽಧ್ಯಾಯಃ ॥ ೨೦ ॥

ಇಪ್ಪತ್ತೊಂದನೆಯ ಅಧ್ಯಾಯ

ಪೃಥುಮಹಾರಾಜನು ತನ್ನ ಪ್ರಜೆಗಳಿಗೆ ಮಾಡಿದ ಉಪದೇಶ

ಮೈತ್ರೇಯ ಉವಾಚ

ಮೌಕ್ತಿಕೈಃ ಕುಸುಮಸ್ರಗ್ಭಿರ್ದುಕೂಲೈಃ ಸ್ವರ್ಣತೋರಣೈಃ ।
ಮಹಾಸುರಭಿಭಿರ್ಧೂಪೈರ್ಮಂಡಿತಂ ತತ್ರ ತತ್ರ ವೈ ॥ ೧ ॥

ಚಂದನಾಗುರುತೋಯಾರ್ದ್ರರಥ್ಯಾಚತ್ವರಮಾರ್ಗವತ್ ।
ಪುಷ್ಪಾಕ್ಷತಫಲೈಸ್ತೋಕ್ಮೈರ್ಲಾಜೈರರ್ಚಿರ್ಭಿರರ್ಚಿತಮ್ ॥ ೨ ॥

ಸವೃಂದೈಃ ಕದಲೀಸ್ತಂಭೈಃ ಪೂಗಪೋತೈಃ ಪರಿಷ್ಕೃತಮ್ ।
ತರುಪಲ್ಲವಮಾಲಾಭಿಃ ಸರ್ವತಃ ಸಮಲಂಕೃತಮ್ ॥ ೩ ॥

ಪ್ರಜಾಸ್ತಂ ದೀಪಬಲಿಭಿಃ ಸಂಭೃತಾಶೇಷಮಂಗಲೈಃ ।
ಅಭೀಯುರ್ಮೃಷ್ಟಕನ್ಯಾಶ್ಚ ಮೃಷ್ಟಕುಂಡಲಮಂಡಿತಾಃ ॥ ೪ ॥

ಶ್ರೀಮೈತ್ರೇಯರು ಹೇಳುತ್ತಾರೆ – ಎಲೈ ವಿದುರನೇ! ಆ ಪೃಥುಮಹಾರಾಜನ ರಾಜಧಾನಿಯು ಎಲ್ಲ ಕಡೆಗಳಲ್ಲಿಯೂ ಮುತ್ತಿನ ಸರಗಳಿಂದಲೂ, ಹೂಮಾಲೆಗಳಿಂದಲೂ, ರೇಷ್ಮೆಬಟ್ಟೆಗಳಿಂದಲೂ, ಚಿನ್ನದ ತೋರಣಗಳಿಂದಲೂ, ಸುವಾಸಿತ ಘಮ-ಘಮಿಸುತ್ತಿದ್ದ ಧೂಪಗಳಿಂದಲೂ ಅಲಂಕೃತವಾಗಿತ್ತು. ॥ ೧ ॥ ರಾಜಮಾರ್ಗಗಳಲ್ಲಿಯೂ, ಚೌಕಗಳಲ್ಲಿಯೂ, ಬೀದಿ-ಬೀದಿಗಳಲ್ಲಿಯೂ ಚಂದನ-ಅಗರುಮಿಶ್ರಿತ ನೀರನ್ನು ಸಿಂಪಡಿಸಿ ಹೂವು, ಅಕ್ಷತೆ, ಹಣ್ಣು, ಎಳೆಗರಿಕೆ, ಅರಳು, ದೀಪಗಳೇ ಮುಂತಾದ ಮಂಗಳ ದ್ರವ್ಯಗಳಿಂದ ಅವುಗಳನ್ನು ಸಿಂಗರಿಸಲಾಗಿತ್ತು. ॥ ೨ ॥ ಆ ರಾಜಪುರಿಯು ಅಲ್ಲಲ್ಲಿ ಇರಿಸಿದ್ದ ಹಣ್ಣು-ಹೂವುಗಳ ಗೊಂಚಲುಗಳಿಂದ ಕೂಡಿದ ಬಾಳೆಯ ಕಂಬಗಳಿಂದಲೂ, ಅಡಿಕೆಯ ಮರಗಳಿಂದಲೂ ಅತಿ ಮನೋಹರವಾಗಿತ್ತು. ಎಲ್ಲೆಡೆಗಳಲ್ಲಿಯೂ ಮಾವಿನಮರದ ಚಿಗುರೆಲೆಗಳ ತೋರಣಗಳಿಂದ ವಿಭೂಷಿತವಾಗಿತ್ತು. ॥ ೩ ॥ ಚಕ್ರವರ್ತಿಯು ಆ ನಗರವನ್ನು ಪ್ರವೇಶಿಸಿದಾಗ ದೀಪಗಳನ್ನೂ, ಕಾಣಿಕೆಗಳನ್ನೂ, ಅನೇಕ ಮಂಗಳ ದ್ರವ್ಯಗಳನ್ನೂ ತೆಗೆದುಕೊಂಡು ಪ್ರಜೆಗಳೂ ಮತ್ತು ಮನೋಹರವಾದ ಕುಂಡಲಗಳಿಂದ ಶೋಭಿಸುವ ಚೆಲುವೆಯರಾದ ಕನ್ನೆಯರೂ ಆತನನ್ನು ಎದಿರುಗೊಂಡು ಸ್ವಾಗತಿಸಿದರು. ॥ ೪ ॥

ಶಂಖದುಂದುಭಿಘೋಷೇಣ ಬ್ರಹ್ಮಘೋಷೇಣ ಚರ್ತ್ವಿಜಾಮ್ ।
ವಿವೇಶ ಭವನಂ ವೀರಃ ಸ್ತೂಯಮಾನೋ ಗತಸ್ಮಯಃ ॥ ೫ ॥

ಪೂಜಿತಃ ಪೂಜಯಾಮಾಸ ತತ್ರ ತತ್ರ ಮಹಾಯಶಾಃ ।
ಪೌರಾಂಜಾನಪದಾಂಸ್ತಾನ್‌ಸ್ತಾನ್ ಪ್ರೀತಃ ಪ್ರಿಯವರಪ್ರದಃ ॥ ೬ ॥

ಸ ಏವಮಾದೀನ್ಯನವದ್ಯಚೇಷ್ಟಿತಃ
ಕರ್ಮಾಣಿ ಭೂಯಾಂಸಿ ಮಹಾನ್ಮಹತ್ತಮಃ ।
ಕುರ್ವನ್ ಶಶಾಸಾವನಿಮಂಡಲಂ ಯಶಃ
ಸ್ಫೀತಂ ನಿಧಾಯಾರುರುಹೇ ಪರಂ ಪದಮ್ ॥ ೭ ॥

ಸೂತ ಉವಾಚ

ತದಾದಿರಾಜಸ್ಯ ಯಶೋ ವಿಜೃಂಭಿತಂ
ಗುಣೈರಶೇಷೈರ್ಗುಣವತ್ಸಭಾಜಿತಮ್ ।
ಕ್ಷತ್ತಾ ಮಹಾಭಾಗವತಃ ಸದಸ್ಪತೇ
ಕೌಷಾರವಿಂ ಪ್ರಾಹ ಗೃಣಂತಮರ್ಚಯನ್ ॥ ೮ ॥

ವಿದುರ ಉವಾಚ

ಸೋಽಭಿಷಿಕ್ತಃ ಪೃಥುರ್ವಿಪ್ರೈ-
ರ್ಲಬ್ಧಾಶೇಷಸುರಾರ್ಹಣಃ ।
ಬಿಭ್ರತ್ಸ ವೈಷ್ಣವಂ ತೇಜೋ
ಬಾಹ್ವೋರ್ಯಾಭ್ಯಾಂ ದುದೋಹ ಗಾಮ್ ॥ ೯ ॥

ಕೋ ನ್ವಸ್ಯ ಕೀರ್ತಿಂ ನ ಶೃಣೋತ್ಯಭಿಜ್ಞೋ
ಯದ್ವಿಕ್ರಮೋಚ್ಛಿಷ್ಟಮಶೇಷಭೂಪಾಃ ।
ಲೋಕಾಃ ಸಪಾಲಾ ಉಪಜೀವಂತಿ ಕಾಮ-
ಮದ್ಯಾಪಿ ತನ್ಮೇ ವದ ಕರ್ಮ ಶುದ್ಧಮ್ ॥ ೧೦ ॥

ಮೈತ್ರೇಯ ಉವಾಚ

ಗಂಗಾಯಮುನಯೋರ್ನದ್ಯೋರಂತರಾಕ್ಷೇತ್ರಮಾವಸನ್ ।
ಆರಬ್ಧಾನೇವ ಬುಭುಜೇ ಭೋಗಾನ್ ಪುಣ್ಯಜಿಹಾಸಯಾ ॥ ೧೧ ॥

ಸರ್ವತ್ರಾಸ್ಖಲಿತಾದೇಶಃ ಸಪ್ತದ್ವೀಪೈಕದಂಡಧೃಕ್ ।
ಅನ್ಯತ್ರ ಬ್ರಾಹ್ಮಣಕುಲಾದನ್ಯತ್ರಾಚ್ಯುತಗೋತ್ರತಃ ॥ ೧೨ ॥

ಏಕದಾಽಽಸೀನ್ಮಹಾಸತ್ರದೀಕ್ಷಾ ತತ್ರ ದಿವೌಕಸಾಮ್ ।
ಸಮಾಜೋ ಬ್ರಹ್ಮರ್ಷೀಣಾಂ ಚ ರಾಜರ್ಷೀಣಾಂ ಚ ಸತ್ತಮ ॥ ೧೩ ॥

ಆಗ ಶಂಖ, ದುಂದುಭಿಗಳೇ ಮುಂತಾದ ವಾದ್ಯಗಳು ಮೊಳಗತೊಡಗಿದವು. ಋತ್ವಿಜರು ವೇದಮಂತ್ರಗಳನ್ನು ಪಠಿಸತೊಡಗಿದರು. ವಂದಿ-ಮಾಗಧರು ಸ್ತೋತ್ರಗಾನವನ್ನು ಪ್ರಾರಂಭಿಸಿದರು. ಇವೆಲ್ಲವನ್ನು ನೋಡುತ್ತಿದ್ದರೂ ಪೃಥುಮಹಾರಾಜನಿಗೆ ಸ್ವಲ್ಪವೂ ಅಹಂಕಾರ ಉಂಟಾಗಲಿಲ್ಲ. ॥ ೫ ॥ ಮಾರ್ಗದಲ್ಲಿ ಅಲ್ಲಲ್ಲಿ ಪುರವಾಸಿಗಳೂ, ದೇಶವಾಸಿಗಳೂ, ಆತನನ್ನು ಅಭಿನಂದಿಸಿದರು. ಮಹಾಯಶಸ್ವಿಯಾದ ಮಹಾರಾಜನೂ ಅವರಲ್ಲಿ ಪ್ರಸನ್ನತೆಯಿಂದ ಕೂಡಿ ಅವರಿಗೆ ಇಷ್ಟವಾದ ವರಗಳನ್ನಿತ್ತು, ಅವರನ್ನು ಸಂತೋಷಪಡಿಸುತ್ತಾ ತನ್ನ ಅರಮನೆಯನ್ನು ಪ್ರವೇಶಿಸಿದನು. ॥ ೬ ॥ ಆ ಪೃಥುಮಹಾರಾಜನು ಶ್ರೇಷ್ಠತಮನಾದ ಮಹಾಪುರುಷನಾಗಿ ಸರ್ವರಿಗೂ ಪೂಜನೀಯನಾಗಿದ್ದನು. ಇಂತಹ ಅನೇಕ ಉದಾರವಾದ ಕಾರ್ಯಗಳನ್ನು ಮಾಡುತ್ತಾ ಭೂಮಿಯನ್ನು ಆಳಿದನು. ತನ್ನ ವಿಸ್ತಾರವಾದ ಕೀರ್ತಿಯನ್ನು ಎಲ್ಲೆಡೆ ಹರಡಿದವನಾಗಿ ಕೊನೆಗೆ ಶ್ರೀಭಗವಂತನ ಪರಮಪದವನ್ನು ಪಡೆದುಕೊಂಡನು. ॥ ೭ ॥

ಸೂತಪುರಾಣಿಕರು ಹೇಳುತ್ತಾರೆ – ಮುನಿವರ ಶೌನಕರೇ! ಈ ರೀತಿಯಲ್ಲಿ ಪೂಜ್ಯರಾದ ಶ್ರೀಮೈತ್ರೇಯರ ಬಾಯಿಂದ ನಾನಾ ಗುಣಸಂಪನ್ನನಾಗಿ, ಗುಣಶಾಲಿಗಳಿಂದ ಹೊಗಳಲ್ಪಟ್ಟು ವಿಸ್ತಾರಗೊಂಡ ಆದಿರಾಜ ಪೃಥುವಿನ ಯಶಸ್ಸನ್ನು ಕೇಳಿ ಪರಮಭಾಗವತೋತ್ತಮನಾದ ವಿದುರನು ಅವರನ್ನು ಅಭಿನಂದಿಸುತ್ತಾ ಕೇಳಿದನು. ॥ ೮ ॥

ವಿದುರನು ಕೇಳಿದನು – ಬ್ರಾಹ್ಮಣೋತ್ತಮರೇ! ಬ್ರಾಹ್ಮಣರು ಪೃಥುಮಹಾರಾಜನಿಗೆ ಅಭಿಷೇಕಮಾಡಿದ್ದು, ಸಮಸ್ತದೇವತೆಗಳೂ ಆತನಿಗೆ ಕಾಣಿಕೆಗಳನ್ನು ಸಮರ್ಪಿಸಿದುದು, ತನ್ನ ಭುಜಗಳಲ್ಲಿ ವೈಷ್ಣವತೇಜಸ್ಸನ್ನು ಧರಿಸಿ, ಗೋರೂಪೀ ಪೃಥ್ವಿಯನ್ನು ಕರೆದುದು ಹೀಗೆ ಇವೆಲ್ಲವನ್ನು ನೀವು ನನಗೆ ತಿಳಿಸಿದಿರಿ. ॥ ೯ ॥ ಆತನು ಅನುಭವಿಸಿ ಮಿಕ್ಕಿರುವ ಈ ಪರಾಕ್ರಮದ ವಿಷಯಭೋಗಗಳಿಂದಲೇ ಇಂದಿಗೂ ಸಮಸ್ತರಾಜರೂ ಹಾಗೂ ಲೋಕಪಾಲಕರಿಂದೊಡಗೂಡಿದ ಸಮಸ್ತ ಲೋಕಗಳು ತಮ್ಮ ಇಷ್ಟಾನುಸಾರ ಜೀವನವನ್ನು ನಡೆಸುತ್ತಿದ್ದಾರೆ. ಆತನ ಪವಿತ್ರವಾದ ಕೀರ್ತಿಯನ್ನು ಕೇಳಲು ವಿವೇಕಿಗಳಾದವರು ಸದಾ ಬಯಸುತ್ತಾರೆ. ಆದ್ದರಿಂದ ತಾವು ಕೃಪೆಯಿಟ್ಟು ಆ ಮಹಾತ್ಮನ ಇನ್ನೂ ಪವಿತ್ರವಾದ ಚರಿತ್ರೆಗಳನ್ನು ನನಗೆ ಹೇಳಿರಿ ಎಂದು ಪ್ರಾರ್ಥಿಸಿದನು. ॥ ೧೦ ॥

ಶ್ರೀಮೈತ್ರೇಯರು ಹೇಳುತ್ತಾರೆ – ಎಲೈ ವಿದುರನೇ! ಪೃಥುಮಹಾರಾಜನು ಗಂಗಾ-ಯಮುನೆಗಳ ಮಧ್ಯದಲ್ಲಿರುವ ಬ್ರಹ್ಮಾವರ್ತದೇಶದಲ್ಲಿ ವಾಸಿಸುತ್ತಾ, ತನ್ನ ಪುಣ್ಯಕರ್ಮಗಳನ್ನೂ ಕ್ಷಯಿಸುವುದಕ್ಕಾಗಿ ಪ್ರಾರಬ್ಧವಶದಿಂದ ಬಂದ ಸುಖೋಪಭೋಗಗಳನ್ನು ಅನುಭವಿಸುತ್ತಿದ್ದನು. ॥ ೧೧ ॥ ಬ್ರಾಹ್ಮಣಕುಲಗಳನ್ನೂ ಮತ್ತು ಭಗವದ್ಭಕ್ತರನ್ನು ಬಿಟ್ಟು ಸಪ್ತದ್ವೀಪಗಳಲ್ಲಿರುವ ಉಳಿದ ಎಲ್ಲ ಜನರ ಮೇಲೂ ಅಖಂಡವೂ, ನಿಷ್ಕಂಟಕವೂ ಆದ ಅಧಿಕಾರವನ್ನು ನಡೆಸಿದನು. ॥ ೧೨ ॥ ಒಮ್ಮೆ ಆತನು ಒಂದು ಮಹಾಸತ್ರದ ದೀಕ್ಷೆಯನ್ನು ಕೈಗೊಂಡನು. ಆಗ ಅಲ್ಲಿ ದೇವತೆಗಳ, ಬ್ರಹ್ಮರ್ಷಿಗಳ, ರಾಜರ್ಷಿಗಳ ದೊಡ್ಡ ಸಭೆಯೇ ನೆರೆದಿತ್ತು. ॥ ೧೩ ॥

ತಸ್ಮಿನ್ನರ್ಹತ್ಸು ಸರ್ವೇಷು ಸ್ವರ್ಚಿತೇಷು ಯಥಾರ್ಹತಃ ।
ಉತ್ಥಿತಃ ಸದಸೋ ಮಧ್ಯೇ ತಾರಾಣಾಮುಡುರಾಡಿವ ॥ ೧೪ ॥

ಪ್ರಾಂಶುಃ ಪೀನಾಯತಭುಜೋ ಗೌರಃ ಕಂಜಾರುಣೇಕ್ಷಣಃ ।
ಸುನಾಸಃ ಸುಮುಖಃ ಸೌಮ್ಯಃ ಪೀನಾಂಸಃ ಸುದ್ವಿಜಸ್ಮಿತಃ ॥ ೧೫ ॥

ವ್ಯೂಢವಕ್ಷಾ ಬೃಹಚ್ಛ್ರೋಣಿರ್ವಲಿವಲ್ಗುದಲೋದರಃ ।
ಆವರ್ತನಾಭಿರೋಜಸ್ವೀ ಕಾಂಚನೋರುರುದಗ್ರಪಾತ್ ॥ ೧೬ ॥

ಸೂಕ್ಷ್ಮವಕ್ರಾಸಿತಸ್ನಿಗ್ಧಮೂರ್ಧಜಃ ಕಂಬುಕಂಧರಃ ।
ಮಹಾಧನೇ ದುಕೂಲಾಗ್ರ್ಯೇ ಪರಿಧಾಯೋಪವೀಯ ಚ ॥ ೧೭ ॥

ವ್ಯಂಜಿತಾಶೇಷಗಾತ್ರಶ್ರೀರ್ನಿಯಮೇ ನ್ಯಸ್ತಭೂಷಣಃ ।
ಕೃಷ್ಣಾಜಿನಧರಃ ಶ್ರೀಮಾನ್ ಕುಶಪಾಣಿಃ ಕೃತೋಚಿತಃ ॥ ೧೮ ॥

ಶಿಶಿರಸ್ನಿಗ್ಧತಾರಾಕ್ಷಃ ಸಮೈಕ್ಷತ ಸಮಂತತಃ ।
ಊಚಿವಾನಿದಮುರ್ವೀಶಃ ಸದಃ ಸಂಹರ್ಷಯನ್ನಿವ ॥ ೧೯ ॥

ಚಾರು ಚಿತ್ರಪದಂ ಶ್ಲಕ್ಷ್ಣಂ ಮೃಷ್ಟಂ ಗೂಢಮವಿಕ್ಲವಮ್ ।
ಸರ್ವೇಷಾಮುಪಕಾರಾರ್ಥಂ ತದಾ ಅನುವದನ್ನಿವ ॥ ೨೦ ॥

ರಾಜೋವಾಚ

ಸಭ್ಯಾಃ ಶೃಣುತ ಭದ್ರಂ ವಃ ಸಾಧವೋ ಯ ಇಹಾಗತಾಃ ।
ಸತ್ಸು ಜಿಜ್ಞಾಸುಭಿರ್ಧರ್ಮಮಾವೇದ್ಯಂ ಸ್ವಮನೀಷಿತಮ್ ॥ ೨೧ ॥

ಅಹಂ ದಂಡಧರೋ ರಾಜಾ ಪ್ರಜಾನಾಮಿಹ ಯೋಜಿತಃ ।
ರಕ್ಷಿತಾ ವೃತ್ತಿದಃ ಸ್ವೇಷು ಸೇತುಷು ಸ್ಥಾಪಿತಾ ಪೃಥಕ್ ॥ ೨೨ ॥

ಪೃಥುಮಹಾರಾಜನು ಆ ಸಭೆಯಲ್ಲಿ ಸೇರಿದ್ದ ಪೂಜನೀಯರಾದ ಅತಿಥಿಗಳನ್ನು ಯಥೋಚಿತವಾಗಿ ಸತ್ಕಾರಮಾಡಿ ಅಲ್ಲಿ ನಕ್ಷತ್ರಮಂಡಲದ ನಡುವೆ ಶೋಭಿಸುವ ಚಂದ್ರನಂತೆ ನಿಂತಿದ್ದನು. ॥ ೧೪ ॥ ಹಾಗೆ ನಿಂತುಕೊಂಡಿದ್ದ ಅವನ ಸೌಂದರ್ಯ, ಗಾಂಭೀರ್ಯಗಳನ್ನು ಹೇಗೆ ತಾನೇ ವರ್ಣಿಸೋಣ! ಉನ್ನತವಾದ ದೇಹ, ತುಂಬಿಕೊಂಡ ವಿಶಾಲವಾದ ಭುಜಗಳು, ಗೌರವರ್ಣದ ಅಂಗಕಾಂತಿ, ಕೆಂದಾವರೆಯಂತೆ ಕಂಗೊಳಿಸುತ್ತಿದ್ದ ಕಣ್ಣುಗಳು, ಸುಂದರವಾದ ಮೂಗು-ಮುಖ, ಸೌಮ್ಯವಾದ ಆಕೃತಿ, ಎತ್ತರವಾದ ಹೆಗಲು, ಕಿರುನಗೆಯಿಂದ ಕೂಡಿದ ಸುಂದರ ದಂತಪಂಕ್ತಿ, ವಿಶಾಲವಾದ ಎದೆ, ಸ್ಥೂಲವಾದ ಸೊಂಟದ ಹಿಂಭಾಗ, ಅರಳಿಯ ಎಲೆಯಂತೆ ರಮಣೀಯವಾದ ತ್ರಿವಳಿರೇಖೆಗಳಿಂದ ಒಪ್ಪುತ್ತಿದ್ದ ಹೊಟ್ಟೆ, ಸುಳಿಯಂತೆ ಆಳವಾಗಿದ್ದ ಹೊಕ್ಕುಳು, ತೇಜಸ್ಸಿನಿಂದ ಕೂಡಿದ ದೇಹ, ಚಿನ್ನದಂತೆ ಹೊಳೆಯುತ್ತಿದ್ದ ತೊಡೆಗಳು ಮತ್ತು ಎತ್ತರವಾಗಿ ಒಪ್ಪುತ್ತಿದ್ದ ಪಾದಗಳು, ಗುಂಗುರು-ಗುಂಗುರಾಗಿ ನುಣುಪಾಗಿದ್ದ ತಲೆಗೂದಲು, ಶಂಖದಂತೆ ಸುಳಿಗೊಂಡಿದ್ದ ಕಂಠ ಇವುಗಳಿಂದ ಅತ್ಯಂತ ಕಮನೀಯವಾಗಿದ್ದ ದೇಹದಿಂದ ಆ ಮಹಾಪುರುಷನು ಎಣೆಯಿಲ್ಲದ ಸೊಬಗಿನಿಂದ ವಿರಾಜಿಸುತ್ತಿದ್ದನು. ಆತನು ಬಹುಮೂಲ್ಯ ಧೋತ್ರವನ್ನುಟ್ಟು, ಅಂತಹುದೇ ಉತ್ತರೀಯವನ್ನು ಹೊದ್ದುಕೊಂಡಿದ್ದನು. ॥ ೧೫-೧೭ ॥ ದೀಕ್ಷೆಯ ನಿಯಮಕ್ಕನುಸಾರವಾಗಿ ಎಲ್ಲ ಆಭರಣಗಳನ್ನು ಕಳಚಿಟ್ಟಿದ್ದರಿಂದ ಆತನ ಶರೀರದ ಅಂಗ-ಪ್ರತ್ಯಂಗಗಳು ಸ್ವಾಭಾವಿಕ ಕಾಂತಿ-ಸೌಂದರ್ಯಗಳಿಂದ ಒಪ್ಪುತ್ತಿದ್ದವು. ದೇಹದಲ್ಲಿ ಕೃಷ್ಣಾಜಿನವನ್ನು ಧರಿಸಿ, ಕೈಯಲ್ಲಿ ದರ್ಭೆಗಳನ್ನು ಹಿಡಿದಿದ್ದನು. ಇವುಗಳಿಂದ ಆತನ ದೇಹದ ಕಾಂತಿಯು ಮತ್ತೂ ಮಿಗಿಲೆನಿಸಿತ್ತು. ಅವನು ತನ್ನ ಎಲ್ಲ ನಿತ್ಯಕರ್ಮಗಳನ್ನು ಯಥಾವಿಧಿಯಾಗಿ ಮುಗಿಸಿ ಅಲ್ಲಿ ನಿಂತುಕೊಂಡಿದ್ದನು. ॥ ೧೮ ॥ ಆ ಪೃಥು ಮಹಾರಾಜನು ಇಡೀಸಭೆಯನ್ನು ಆನಂದದಿಂದ ನಲಿಸುತ್ತಾ ಸ್ನೇಹಪೂರ್ಣವಾದ ಕಣ್ಣುಗಳಿಂದ ನಾಲ್ಕು ಕಡೆಗಳಲ್ಲಿಯೂ ದೃಷ್ಟಿಯನ್ನು ಹರಿಸಿ, ಸಭೆಯನ್ನುದ್ದೇಶಿಸಿ ಒಂದು ಭಾಷಣವನ್ನು ಮಾಡಿದನು. ॥ ೧೯ ॥ ಆ ಭಾಷಣವು ಅತ್ಯಂತ ಸುಂದರವಾಗಿ, ವಿಚಿತ್ರಪದಗಳಿಂದ ಕೂಡಿದ್ದು, ಸ್ಪಷ್ಟವೂ, ಮಧುರವೂ, ಗಂಭೀರವೂ, ಶಂಕಾರಹಿತವೂ ಆದ ಶಬ್ದಗಳಿಂದ ಶೋಭಾಯಮಾನವಾಗಿತ್ತು. ಎಲ್ಲರಿಗೂ ಉಪಕಾರ ಮಾಡುವುದಕ್ಕಾಗಿ ತನ್ನ ಅನುಭವವನ್ನೇ ವ್ಯಕ್ತ ಮಾಡುತ್ತಿರುವನೋ ಎಂಬಂತಿತ್ತು. ॥ ೨೦ ॥

ರಾಜಾಪೃಥುವು ಹೇಳಿದನು – ಎಲೈ ಸಜ್ಜನರೇ! ನಿಮಗೆ ಮಂಗಳವಾಗಲಿ. ಇಲ್ಲಿಗೆ ಆಗಮಿಸಿದ ಮಹಾನುಭಾವರೆಲ್ಲರೂ ನನ್ನ ಪ್ರಾರ್ಥನೆಯನ್ನು ಕೇಳಿರಿ. ಜಿಜ್ಞಾಸುವಾದ ಪುರುಷನು ಸಂತ-ಸಜ್ಜನರ ಸಮಾಜದಲ್ಲಿ ತನ್ನ ನಿಶ್ಚಯವನ್ನು ನಿವೇದಿಸಿಕೊಳ್ಳಬೇಕು. ॥ ೨೧ ॥ ಈ ಲೋಕದಲ್ಲಿ ನನ್ನನ್ನು ಪ್ರಜೆಗಳ ಆಳ್ವಿಕೆ, ಅವರ ರಕ್ಷಣೆ, ಅವರಿಗೆ ವೃತ್ತಿ-ಉದ್ಯೋಗಗಳನ್ನು ಒದಗಿಸಿಕೊಡುವುದು, ಅವರನ್ನು ಬೇರೆ-ಬೇರೆ ಮರ್ಯಾದೆಗಳಲ್ಲಿ ಸ್ಥಾಪಿಸುವುದಕ್ಕಾಗಿ ರಾಜನನ್ನಾಗಿ ಮಾಡಿದ್ದಾರೆ. ॥ ೨೨ ॥

ತಸ್ಯ ಮೇ ತದನುಷ್ಠಾನಾದ್ಯಾನಾಹುರ್ಬ್ರಹ್ಮವಾದಿನಃ ।
ಲೋಕಾಃ ಸ್ಯುಃ ಕಾಮಸಂದೋಹಾ ಯಸ್ಯ ತುಷ್ಯತಿ ದಿಷ್ಟದೃಕ್ ॥ ೨೩ ॥

ಯ ಉದ್ಧರೇತ್ಕರಂ ರಾಜಾ ಪ್ರಜಾ ಧರ್ಮೇಷ್ವಶಿಕ್ಷಯನ್ ।
ಪ್ರಜಾನಾಂ ಶಮಲಂ ಭುಂಕ್ತೇ ಭಗಂ ಚ ಸ್ವಂ ಜಹಾತಿ ಸಃ ॥ ೨೪ ॥

ತತ್ಪ್ರಜಾ ಭರ್ತೃಪಿಂಡಾರ್ಥಂ ಸ್ವಾರ್ಥಮೇವಾನಸೂಯವಃ ।
ಕುರುತಾಧೋಕ್ಷಜಧಿಯಸ್ತರ್ಹಿ ಮೇಽನುಗ್ರಹಃ ಕೃತಃ ॥ ೨೫ ॥

ಯೂಯಂ ತದನುಮೋದಧ್ವಂ ಪಿತೃದೇವರ್ಷಯೋಽಮಲಾಃ ।
ಕರ್ತುಃ ಶಾಸ್ತುರನುಜ್ಞಾತುಸ್ತುಲ್ಯಂ ಯತ್ಪ್ರೇತ್ಯ ತತ್ಫಲಮ್ ॥ ೨೬ ॥

ಅಸ್ತಿ ಯಜ್ಞಪತಿರ್ನಾಮ ಕೇಷಾಂಚಿದರ್ಹಸತ್ತಮಾಃ ।
ಇಹಾಮುತ್ರ ಚ ಲಕ್ಷ್ಯಂತೇ ಜ್ಯೋತ್ಸ್ನಾವತ್ಯಃ ಕ್ವಚಿದ್ಭುವಃ ॥ ೨೭ ॥

ಮನೋರುತ್ತಾನಪಾದಸ್ಯ ಧ್ರುವಸ್ಯಾಪಿ ಮಹೀಪತೇಃ ।
ಪ್ರಿಯವ್ರತಸ್ಯ ರಾಜರ್ಷೇರಂಗಸ್ಯಾಸ್ಮತ್ಪಿತುಃ ಪಿತುಃ ॥ ೨೮ ॥

ಈದೃಶಾನಾಮಥಾನ್ಯೇಷಾಮಜಸ್ಯ ಚ ಭವಸ್ಯ ಚ ।
ಪ್ರಹ್ರಾದಸ್ಯ ಬಲೇಶ್ಚಾಪಿ ಕೃತ್ಯಮಸ್ತಿ ಗದಾಭೃತಾ ॥ ೨೯ ॥

ದೌಹಿತ್ರಾದೀನೃತೇ ಮೃತ್ಯೋಃ
ಶೋಚ್ಯಾಂಧರ್ಮವಿಮೋಹಿತಾನ್ ।
ವರ್ಗಸ್ವರ್ಗಾಪವರ್ಗಾಣಾಂ
ಪ್ರಾಯೇಣೈಕಾತ್ಮ್ಯಹೇತುನಾ ॥ ೩೦ ॥

ಯತ್ಪಾದಸೇವಾಭಿರುಚಿಸ್ತಪಸ್ವಿನಾ-
ಮಶೇಷಜನ್ಮೋಪಚಿತಂ ಮಲಂ ಧಿಯಃ ।
ಸದ್ಯಃ ಕ್ಷಿಣೋತ್ಯನ್ವಹಮೇಧತೀ ಸತೀ
ಯಥಾ ಪದಾಂಗುಷ್ಠವಿನಿಃಸೃತಾ ಸರಿತ್ ॥ ೩೧ ॥

ವಿನಿರ್ಧುತಾಶೇಷಮನೋಮಲಃ ಪುಮಾನ್
ಅಸಂಗವಿಜ್ಞಾನವಿಶೇಷವೀರ್ಯವಾನ್ ।
ಯದಂಘ್ರಿಮೂಲೇ ಕೃತಕೇತನಃ ಪುನಃ
ನ ಸಂಸೃತಿಂ ಕ್ಲೇಶವಹಾಂ ಪ್ರಪದ್ಯತೇ ॥ ೩೨ ॥

ಆದ್ದರಿಂದ ಇವುಗಳನ್ನು ಪಾಲಿಸುವುದರಿಂದ ನನಗೆ ವೇದಜ್ಞರಾದ ಮುನಿಗಳ ಸಿದ್ಧಾಂತದಂತೆ ಸರ್ವಕರ್ಮಗಳಿಗೂ ಸಾಕ್ಷಿಯಾಗಿರುವ ಶ್ರೀಹರಿಯು ಪ್ರಸನ್ನನಾದಾಗ ದೊರೆಯುವ ಲೋಕಗಳು ದೊರೆಯುತ್ತವೆ. ॥ ೨೩ ॥ ಪ್ರಜೆಗಳಿಗೆ ಧರ್ಮಮಾರ್ಗದ ಶಿಕ್ಷಣ ನೀಡದೆ ಕೇವಲ ಅವರಿಂದ ತೆರಿಗೆಯನ್ನು ಸಂಗ್ರಹಿಸುವುದರಲ್ಲೇ ತತ್ಪರನಾದ ರಾಜನು ಪ್ರಜೆಗಳ ಪಾಪಕ್ಕೆ ಭಾಗಿಯಾಗಬೇಕಾಗುತ್ತದೆ. ಅಲ್ಲದೆ ಐಶ್ವರ್ಯವನ್ನು ಕಳಕೊಳ್ಳಬೇಕಾಗುತ್ತದೆ. ॥ ೨೪ ॥ ಆದುದರಿಂದ ಪ್ರಿಯ ಪ್ರಜೆಗಳೇ! ನೀವು ನಿಮ್ಮ ಈ ರಾಜನಿಗೆ ಪರಲೋಕದಲ್ಲಿ ಹಿತವನ್ನುಂಟುಮಾಡುವುದಕ್ಕಾಗಿ ಪರಸ್ಪರ ದೋಷದೃಷ್ಟಿಯನ್ನು ಬಿಟ್ಟು ಹೃದಯದಲ್ಲಿ ಶ್ರೀಭಗವಂತನನ್ನು ನೆನೆಯುತ್ತಾ ನಿಮ್ಮ-ನಿಮ್ಮ ಕರ್ತವ್ಯಗಳನ್ನು ಪಾಲಿಸುತ್ತಿರಬೇಕು. ಹೀಗೆ ಮಾಡಿದರೆ ನಿಮ್ಮ ಸ್ವಾರ್ಥವು ಸಿದ್ಧಿಸುವುದು ಮತ್ತು ನನ್ನ ಮೇಲೆಯೂ ದೊಡ್ಡ ಅನುಗ್ರಹ ಮಾಡಿದಂತಾದೀತು. ॥ ೨೫ ॥ ಪರಿಶುದ್ಧರಾದ ಪಿತೃದೇವತೆಗಳೇ! ದೇವತೆಗಳೇ! ಮಹರ್ಷಿಗಳೇ! ನೀವೆಲ್ಲರೂ ನನ್ನ ಪ್ರಾರ್ಥನೆಯನ್ನು ಅನುಮೋದಿಸಿರಿ. ಏಕೆಂದರೆ, ಕರ್ಮಗಳ ಫಲವು ಮರಣಾನಂತರ ಅವುಗಳ ಕರ್ತೃವಿಗೆ, ಅವುಗಳನ್ನು ಉಪದೇಶಿಸಿದವನಿಗೆ ಮತ್ತು ಅನುಮೋದಿಸಿದವನಿಗೆ ಸಮಾನವಾಗಿಯೇ ದೊರೆಯುತ್ತದೆ. ॥ ೨೬ ॥ ಪೂಜ್ಯರಾದ ಸಜ್ಜನರೇ! 'ಕರ್ಮಗಳ ಫಲವನ್ನು ಕೊಡುವವನು ಯಜ್ಞಪತಿಯಾದ ಭಗವಂತನೇ ಆಗಿದ್ದಾನೆ' ಎಂಬುದು ಮಹಾನುಭಾವರ ಮತವಾಗಿದೆ. ಏಕೆಂದರೆ, ಇಹಲೋಕ ಮತ್ತು ಪರಲೋಕವೆರಡರಲ್ಲಿಯೂ ಕೆಲ-ಕೆಲವು ಭಾರೀ ತೇಜೋಮಯ ಶರೀರಗಳು ಕಾಣಸಿಗುತ್ತವೆ. ॥ ೨೭ ॥ ಮನು, ಉತ್ತಾನಪಾದ, ಧ್ರುವ, ರಾಜರ್ಷಿಯಾದ ಪ್ರಿಯವ್ರತ, ನಮ್ಮ ಅಜ್ಜ ಅಂಗಮಹಾರಾಜನು ಹಾಗೂ ಬ್ರಹ್ಮಾ, ರುದ್ರ, ಪ್ರಹ್ಲಾದ, ಬಲಿ ಹಾಗೂ ಇದೇ ವರ್ಗಕ್ಕೆ ಸೇರಿದ ಇತರ ಮಹಾನುಭಾವರ ಮತದಲ್ಲಾದರೋ ಧರ್ಮ-ಅರ್ಥ-ಕಾಮ-ಮೋಕ್ಷರೂಪವಾದ ಚತುರ್ವರ್ಗ ಮತ್ತು ಸ್ವರ್ಗ-ಮೋಕ್ಷಗಳಿಗೂ ನಿಯಾಮಕನಾದ, ಕರ್ಮಫಲಪ್ರದನಾದ ಭಗವಾನ್ ಗದಾಧರನ ಆವಶ್ಯಕತೆ ಇದ್ದೇ ಇದೆ. ಈ ವಿಷಯದಲ್ಲಾದರೋ ಕೇವಲ ಮೃತ್ಯುವಿನ ದೌಹಿತ್ರನಾದ ವೇನನೇ ಮುಂತಾದ ಕೆಲವುಮಂದಿ ಶೋಚನೀಯರಾದ ಧರ್ಮವಿಮೂಢ ಜನರಲ್ಲೇ ಮತಭೇದವಿದೆ. ಆದ್ದರಿಂದ ಅದರ ವಿಶೇಷ ಮಹತ್ವವೇನೂ ಇಲ್ಲ. ॥ ೨೮-೩೦ ॥

'ಶ್ರೀಭಗವಂತನ ಚರಣಕಮಲಗಳನ್ನು ಸೇವಿಸಬೇಕು' ಎಂಬ ಅಭಿಲಾಷೆಯೂ – ಆತನ ಪಾದನಖದಿಂದ ಉದ್ಭವಿಸಿದ ಗಂಗೆಯಂತೆ ಸಂಸಾರತಾಪಗಳಿಂದ ಸಂತಪ್ತರಾದ ಜೀವರ ಜನ್ಮ-ಜನ್ಮಾಂತರಗಳ ಕೊಳೆಗಳನ್ನು ಒಡನೆಯೇ ತೊಳೆದು ಹಾಕುವುದು. ಆತನ ಚರಣತಲವನ್ನು ಆಶ್ರಯಿಸಿದ ಮನುಷ್ಯನು ಎಲ್ಲ ಮನೋದೋಷಗಳನ್ನು ತೊಳೆದುಕೊಳ್ಳುವನು. ವೈರಾಗ್ಯವನ್ನೂ, ತತ್ತ್ವಸಾಕ್ಷಾತ್ಕಾರ ಬಲವನ್ನೂ ಪಡೆದುಕೊಳ್ಳುವನು. ಈ ದುಃಖಮಯವಾದ ಸಂಸಾರಚಕ್ರದಲ್ಲಿ ಮತ್ತೆ ಬೀಳುವುದಿಲ್ಲ. ಆತನ ಅಡಿದಾವರೆ ಎಲ್ಲ ಪುರುಷಾರ್ಥಗಳನ್ನೂ ಈಡೇರಿಸುವುವು. ಇಂತಹ ಪ್ರಭುವನ್ನು

ತಮೇವ ಯೂಯಂ ಭಜತಾತ್ಮವೃತ್ತಿಭಿ-
ರ್ಮನೋವಚಃಕಾಯಗುಣೈಃ ಸ್ವಕರ್ಮಭಿಃ ।
ಅಮಾಯಿನಃ ಕಾಮದುಘಾಂಘ್ರಿಪಂಕಜಂ
ಯಥಾಧಿಕಾರಾವಸಿತಾರ್ಥಸಿದ್ಧಯಃ ॥ ೩೩ ॥

ಅಸಾವಿಹಾನೇಕಗುಣೋಽಗುಣೋಽಧ್ವರಃ
ಪೃಥಗ್ವಿಧದ್ರವ್ಯಗುಣಕ್ರಿಯೋಕ್ತಿಭಿಃ ।
ಸಂಪದ್ಯತೇಽರ್ಥಾಶಯಲಿಂಗನಾಮಭಿ-
ರ್ವಿಶುದ್ಧವಿಜ್ಞಾನಘನಃ ಸ್ವರೂಪತಃ ॥ ೩೪ ॥

ಪ್ರಧಾನಕಾಲಾಶಯಧರ್ಮಸಂಗ್ರಹೇ
ಶರೀರ ಏಷ ಪ್ರತಿಪದ್ಯ ಚೇತನಾಮ್ ।
ಕ್ರಿಯಾಫಲತ್ವೇನ ವಿಭುರ್ವಿಭಾವ್ಯತೇ
ಯಥಾನಲೋ ದಾರುಷು ತದ್ಗುಣಾತ್ಮಕಃ ॥ ೩೫ ॥

ಅಹೋ ಮಮಾಮೀ ವಿತರಂತ್ಯನುಗ್ರಹಂ
ಹರಿಂ ಗುರುಂ ಯಜ್ಞಭುಜಾಮಧೀಶ್ವರಮ್ ।
ಸ್ವಧರ್ಮಯೋಗೇನ ಯಜಂತಿ ಮಾಮಕಾ
ನಿರಂತರಂ ಕ್ಷೋಣಿತಲೇ ದೃಢವ್ರತಾಃ ॥ ೩೬ ॥

ಮಾ ಜಾತು ತೇಜಃ ಪ್ರಭವೇನ್ಮಹರ್ದ್ಧಿಭಿಃ
ತಿತಿಕ್ಷಯಾ ತಪಸಾ ವಿದ್ಯಯಾ ಚ ।
ದೇದೀಪ್ಯಮಾನೇಽಜಿತದೇವತಾನಾಂ
ಕುಲೇ ಸ್ವಯಂ ರಾಜಕುಲಾದ್ದ್ವಿಜಾನಾಮ್ ॥ ೩೭ ॥

ಬ್ರಹ್ಮಣ್ಯದೇವಃ ಪುರುಷಃ ಪುರಾತನೋ
ನಿತ್ಯಂ ಹರಿರ್ಯಚ್ಚರಣಾಭಿವಂದನಾತ್ ।
ಅವಾಪ ಲಕ್ಷ್ಮೀಮನಪಾಯಿನೀಂ ಯಶೋ
ಜಗತ್ಪವಿತ್ರಂ ಚ ಮಹತ್ತಮಾಗ್ರಣೀಃ ॥ ೩೮ ॥

ಯತ್ಸೇವಯಾಶೇಷಗುಹಾಶಯಃ ಸ್ವರಾಡ್
ವಿಪ್ರಪ್ರಿಯಸ್ತುಷ್ಯತಿ ಕಾಮಮೀಶ್ವರಃ ।
ತದೇವ ತದ್ಧರ್ಮಪರೈರ್ವಿನೀತೈಃ
ಸರ್ವಾತ್ಮನಾ ಬ್ರಹ್ಮಕುಲಂ ನಿಷೇವ್ಯತಾಮ್ ॥ ೩೯ ॥

ನೀವು ನಿಮ್ಮ ಜೀವನವೃತ್ತಿಗೆ ಉಪಯೋಗವಾಗುವ ವರ್ಣಾಶ್ರಮೋಚಿತವಾದ ಅಧ್ಯಯನ, ಅಧ್ಯಾಪನಗಳೇ ಮುಂತಾದ ಕರ್ಮಗಳಿಂದಲೂ, ಧ್ಯಾನ-ಸ್ತೋತ್ರ-ಪೂಜೆ ಮುಂತಾದ ಮನ, ವಚನ, ದೇಹಗಳ ಕರ್ಮಗಳಿಂದಲೂ ಆರಾಧಿಸಿರಿ. ಮನಸ್ಸಿನಲ್ಲಿ ಯಾವ ಕಪಟವನ್ನೂ ಇರಿಸಿಕೊಳ್ಳಬೇಡಿರಿ. ನಮಗೆ ನಮ್ಮ-ನಮ್ಮ ಕರ್ಮಾನುಸಾರವಾಗಿ ಫಲವು ದೊರಕೇ ದೊರೆಯುವುದು ಎಂದು ನಿಶ್ಚಯಿಸಿಕೊಳ್ಳಿ. ॥ ೩೧-೩೩ ॥

ಶ್ರೀಭಗವಂತನು ಸ್ವರೂಪತಃ ವಿಶುದ್ಧ ವಿಜ್ಞಾನಘನ ಮತ್ತು ಸಮಸ್ತ ವಿಶೇಷಣಗಳಿಂದ ರಹಿತನಾಗಿದ್ದಾನೆ. ಆದರೂ ಯಜ್ಞದಲ್ಲಿ ಬಳಸುವ ಅಕ್ಕಿಯೇ ಮುಂತಾದ ದ್ರವ್ಯಗಳು, ಶುಕ್ಲಾದಿ ಗುಣಗಳು, ಕುಟ್ಟುವುದು ಮುಂತಾದ ಕ್ರಿಯೆಗಳು, ಮಂತ್ರಗಳ ಮೂಲಕವೂ ಬಗೆ-ಬಗೆಯ ಅರ್ಥ, ಆಶಯ, ಸಂಕಲ್ಪ, ಪದಾರ್ಥಶಕ್ತಿಗಳು ಹಾಗೂ ಅಗ್ನಿಷ್ಟೋಮಾದಿ ಹೆಸರುಗಳಿಂದ ಸಂಪನ್ನವಾಗುವ ಅನೇಕ ವಿಶೇಷಣಗಳಿಂದ ಕೂಡಿದ ಯಜ್ಞಗಳ ರೂಪದಲ್ಲಿ ಪ್ರಕಾಶಗೊಳ್ಳುತ್ತಾನೆ. ॥ ೩೪ ॥ ಒಂದೇ ಅಗ್ನಿಯು ಬೇರೆ-ಬೇರೆ ಕಟ್ಟಿಗೆಗಳಲ್ಲಿ ಅವುಗಳ ಆಕಾರದಂತೆ ಕಂಡುಬರುತ್ತದೋ ಹಾಗೆಯೇ ಸರ್ವವ್ಯಾಪಕ ಪ್ರಭುವು ಪರಮಾನಂದಮಯ ಸ್ವರೂಪನಾಗಿದ್ದರೂ ಪ್ರಕೃತಿ, ಕಾಲ, ವಾಸನೆ ಮತ್ತು ಅದೃಷ್ಟಗಳಿಂದ ಉತ್ಪನ್ನವಾದ ಶರೀರದಲ್ಲಿ ವಿಷಯಾಕಾರವನ್ನು ತಳೆದಿರುವ ಬುದ್ಧಿಯಲ್ಲಿ ಸ್ಥಿತನಾಗಿದ್ದು ಆ ಯಜ್ಞ-ಯಾಗಾದಿ ಕ್ರಿಯೆಗಳ ಫಲರೂಪದಲ್ಲಿ ಅನೇಕ ಪ್ರಕಾರನಾಗಿರುವಂತೆ ಕಂಡುಬರುತ್ತಾನೆ. ॥ ೩೫ ॥ ಈ ಭೂಮಂಡಲದಲ್ಲಿರುವ ನನ್ನ ಪ್ರಜೆಗಳು – ಯಜ್ಞಗಳನ್ನು ಭೋಗಿಸುವ ದೇವತೆಗಳಿಗೂ ಅಧೀಶ್ವರನಾದ ಸರ್ವಗುರುವಾದ ಶ್ರೀಹರಿಯನ್ನು ದೃಢವಾದ ವ್ರತನಿಷ್ಠೆಗಳಿಂದ ತಮ್ಮ-ತಮ್ಮ ಧರ್ಮಗಳ ಮೂಲಕ ನಿರಂತರವಾಗಿ ಸೇವಿಸಿದರೆ ಅವರು ನನ್ನ ಮೇಲೆ ದೊಡ್ಡ ಕೃಪೆಮಾಡಿದಂತಾಗುವುದು. ॥ ೩೬ ॥ ಸಹನಶೀಲತೆ, ತಪಸ್ಸು ಮತ್ತು ಜ್ಞಾನಗಳೆಂಬ ಐಶ್ವರ್ಯಗಳ ಕಾರಣದಿಂದ ವೈಷ್ಣವರೂ, ಬ್ರಾಹ್ಮಣರೂ ಇವರ ವಂಶಗಳು ಸ್ವಾಭಾವಿಕವಾಗಿಯೇ ಉಜ್ಜ್ವಲವಾಗಿರುತ್ತವೆ. ಅವರ ಮೇಲೆ ರಾಜಕುಲಗಳು ತಮ್ಮ ತೇಜಸ್ಸು, ಧನ-ಸಂಪತ್ತುಗಳೇ ಮುಂತಾದ ಸಮೃದ್ಧಿಯ ಪ್ರಭಾವವನ್ನು ಬೀರಬಾರದು. ॥ ೩೭ ॥ ಬ್ರಹ್ಮದೇವರೇ ಮುಂತಾದ ಸಮಸ್ತ ದೇವತೆಗಳಿಗೆ ಅಗ್ರಗಣ್ಯನೂ, ಬ್ರಾಹ್ಮಣಭಕ್ತನೂ ಆದ ಪುರಾಣಪುರುಷ ಶ್ರೀಹರಿಯೂ ಕೂಡ ನಿರಂತರ ಅವರ ಚರಣಗಳನ್ನು ನಮಸ್ಕರಿಸಿದ್ದರಿಂದಲೇ ಸ್ಥಿರವಾದ ಲಕ್ಷ್ಮಿಯನ್ನೂ ಹಾಗೂ ಜಗತ್ತನ್ನು ಪವಿತ್ರಗೊಳಿಸುವಂತಹ ಕೀರ್ತಿಯನ್ನು ಗಳಿಸಿದ್ದಾನೆ. ॥ ೩೮ ॥ ನೀವೆಲ್ಲರೂ ಭಗವಂತನ ಲೋಕಸಂಗ್ರಹ ರೂಪವಾದ ಧರ್ಮವನ್ನು ಪಾಲಿಸುವವರಾಗಿದ್ದೀರಿ. ಸರ್ವಾಂತರ್ಯಾಮಿ ಸ್ವಯಂಪ್ರಕಾಶ, ಬ್ರಾಹ್ಮಣಪ್ರಿಯ ಶ್ರೀಹರಿಯು ಬ್ರಾಹ್ಮಣವಂಶವನ್ನು ಸೇವಿಸುವುದರಿಂದಲೇ ಪರಮ ಸಂತುಷ್ಟನಾಗುತ್ತಾನೆ. ಆದ್ದರಿಂದ ನೀವೆಲ್ಲರೂ ಎಲ್ಲ ವಿಧದಿಂದ ವಿನಯಪೂರ್ವಕ ಬ್ರಾಹ್ಮಣಕುಲದ ಸೇವೆ ಮಾಡಬೇಕು. ॥ ೩೯ ॥ ಅವರನ್ನು ನಿತ್ಯ ಸೇವೆ ಮಾಡುವುದರಿಂದ ಶೀಘ್ರವಾಗಿಯೇ ಚಿತ್ತಶುದ್ಧವಾಗಿ ಮನುಷ್ಯನು ಸ್ವಯಂ (ಜ್ಞಾನ ಮತ್ತು ಅಭ್ಯಾಸವಿಲ್ಲ

ವೃಮಾಲ್ಲಭೇತಾನತಿವೇಲಮಾತ್ಮನಃ
ಪ್ರಸೀದತೋಽತ್ಯಂತಶಮಂ ಸ್ವತಃ ಸ್ವಯಮ್ ।
ಯನ್ನಿತ್ಯಸಂಬಂಧನಿಷೇವಯಾ ತತಃ
ಪರಂ ಕಿಮತ್ರಾಸ್ತಿ ಮುಖಂ ಹವಿರ್ಭುಜಾಮ್ ॥ ೪೦ ॥

ಅಶ್ನಾತ್ಯನಂತಃ ಖಲು ತತ್ತ್ವಕೋವಿದೈಃ
ಶ್ರದ್ಧಾಹುತಂ ಯನ್ಮುಖ ಇಜ್ಯನಾಮಭಿಃ ।
ನ ವೈ ತಥಾ ಚೇತನಯಾ ಬಹಿಷ್ಕೃತೇ
ಹುತಾಶನೇ ಪಾರಮಹಂಸ್ಯಪರ್ಯಗುಃ ॥ ೪೧ ॥

ಯದ್‌ಬ್ರಹ್ಮ ನಿತ್ಯಂ ವಿರಜಂ ಸನಾತನಂ
ಶ್ರದ್ಧಾತಪೋಮಂಗಲಮೌನಸಂಯಮೈಃ ।
ಸಮಾಧಿನಾ ಬಿಭ್ರತಿ ಹಾರ್ಥದೃಷ್ಟಯೇ
ಯತ್ರೇದಮಾದರ್ಶ ಇವಾವಭಾಸತೇ ॥ ೪೨ ॥

ತೇಷಾಮಹಂ ಪಾದಸರೋಜರೇಣುಂ
ಆರ್ಯಾ ವಹೇಯಾಧಿಕಿರೀಟಮಾಽಽಯುಃ ।
ಯಂ ನಿತ್ಯದಾ ಬಿಭ್ರತ ಆಶು ಪಾಪಂ
ನಶ್ಯತ್ಯಮುಂ ಸರ್ವಗುಣಾ ಭಜಂತಿ ॥ ೪೩ ॥

ಗುಣಾಯನಂ ಶೀಲಧನಂ ಕೃತಜ್ಞಂ
ವೃದ್ಧಾಶ್ರಯಂ ಸಂವೃಣತೇಽನು ಸಂಪದಃ ।
ಪ್ರಸೀದತಾಂ ಬ್ರಹ್ಮಕುಲಂ ಗವಾಂ ಚ
ಜನಾರ್ದನಃ ಸಾನುಚರಶ್ಚ ಮಹ್ಯಮ್ ॥ ೪೪ ॥

ಮೈತ್ರೇಯ ಉವಾಚ

ಇತಿ ಬ್ರುವಾಣಂ ನೃಪತಿಂ ಪಿತೃದೇವದ್ವಿಜಾತಯಃ ।
ತುಷ್ಟುವುರ್ಹೃಷ್ಟಮನಸಃ ಸಾಧುವಾದೇನ ಸಾಧವಃ
॥ ೪೫ ॥

ಪುತ್ರೇಣ ಜಯತೇ ಲೋಕಾನಿತಿ ಸತ್ಯವತೀ ಶ್ರುತಿಃ ।
ಬ್ರಹ್ಮದಂಡಹತಃ ಪಾಪೋ ಯದ್ವೇನೋಽತ್ಯತರತ್ತಮಃ
॥ ೪೬ ॥

ಹಿರಣ್ಯಕಶಿಪುಶ್ಚಾಪಿ ಭಗವನ್ನಿಂದಯಾ ತಮಃ ।
ವಿವಿಕ್ಷುರತ್ಯಗಾತ್ಸೂನೋಃ ಪ್ರಹ್ಲಾದಸ್ಯಾನುಭಾವತಃ
॥ ೪೭ ॥

ದೆಯೇ) ಪರಮ ಶಾಂತಿರೂಪವಾದ ಮೋಕ್ಷವನ್ನು ಪಡೆದು ಕೊಳ್ಳುವನು. ಹವಿಸ್ಸನ್ನು ಸ್ವೀಕರಿಸುವ ದೇವತೆಗಳಿಗೆ ಮುಖ್ಯವಾಗುವ ಶಕ್ತಿಯು ಇಂತಹ ಮಹಾತ್ಮರಾದ ಬ್ರಾಹ್ಮಣರಿಗಲ್ಲದೆ ಬೇರಾರಿಗುಂಟು ? ॥ ೪೦ ॥ ಇಂತಹ ಜ್ಞಾನಿಗಳು ಅಗ್ನಿಗೆ ಮಾತ್ರವಲ್ಲದೆ ಭಗವಾನ್ ಶ್ರೀಹರಿಗೂ ಮುಖವಾಗಿದ್ದಾರೆ. ಏಕೆಂದರೆ, ಪರಮಹಂಸರಿಂದ ಹೊಂದಲ್ಪಡುವವನೂ, ಜ್ಞಾನಪರವಾದ ಉಪನಿಷತ್ತಿನ ವಾಕ್ಯಗಳಿಂದ ಪ್ರತಿಪಾದಿಸಲ್ಪಡುವವನೂ ಆದ ಭಗವಾನ್ ಶ್ರೀಅನಂತನು ಇಂದ್ರಾದಿಯಜ್ಞದ ದೇವತೆಗಳ ಹೆಸರನ್ನು ಹೇಳುತ್ತಾ ತತ್ತ್ವಜ್ಞಾನಿಗಳು ಬ್ರಾಹ್ಮಣರ ಮುಖದಲ್ಲಿ ಶ್ರದ್ಧೆಯಿಂದ ಹೋಮ ಮಾಡುವ ಪದಾರ್ಥಗಳನ್ನು ಅತ್ಯಂತ ಪ್ರೀತಿಯಿಂದ ಆಸ್ವಾದಿಸುತ್ತಾನೆ. ಅಗ್ನಿಯಲ್ಲಿ ಹೋಮಮಾಡುವ ದ್ರವ್ಯಗಳನ್ನೂ ಕೂಡ ಶ್ರೀಭಗವಂತನು ಅಷ್ಟು ಪ್ರೀತಿಯಿಂದ ಗ್ರಹಿಸುವುದಿಲ್ಲ ॥ ೪೧ ॥ ಓ ಸಭ್ಯಮಹಾಶಯರೇ ! ಸ್ವಚ್ಛವಾದ ಕನ್ನಡಿಯಲ್ಲಿ ಪ್ರತಿಬಿಂಬವು ಶುದ್ಧವಾಗಿ ತೋರುವಂತೆ ಇಡೀ ವಿಶ್ವದ ಅರಿವನ್ನು ಚೆನ್ನಾಗಿ ಮಾಡಿಕೊಡುವಂತಹ ನಿತ್ಯವೂ, ಶುದ್ಧವೂ, ಸನಾತನವೂ ಆದ ವೇದವೆಂಬ ಬ್ರಹ್ಮವನ್ನು ಪರಮಾರ್ಥತತ್ತ್ವದ ಪ್ರಾಪ್ತಿಗಾಗಿ ಶ್ರದ್ಧೆ ತಪಸ್ಸು, ಮಂಗಳಕರವಾದ ಆಚರಣೆ, ಮೌನ, ಸಂಯಮ ಸಮಾಧಿಗಳಿಂದ ಯಾರೂ ಆ ಪರಬ್ರಹ್ಮನನ್ನು ಸಾಕ್ಷಾತ್ಕರಿಸಿಕೊಂಡಿದ್ದಾರೆಯೋ ಅಂತಹ ಬ್ರಾಹ್ಮಣರ ಚರಣ ಕಮಲಗಳ ಧೂಳಿಯನ್ನು ನಾನು ಆಯುಸ್ಸು ಇರುವ ತನಕ ನನ್ನ ಕಿರೀಟದಲ್ಲಿ ಧರಿಸುವೆನು. ಏಕೆಂದರೆ, ಅದನ್ನು ಸದಾ ತಲೆಯಲ್ಲಿ ಧರಿಸುತ್ತಿದ್ದರೆ ಮನುಷ್ಯನ ಸಮಸ್ತ ಪಾಪಗಳು ಆಗಲೇ ನಾಶಹೊಂದುವುವು ಮತ್ತು ಸಮಸ್ತ ಸದ್ಗುಣಗಳೂ ಆತನನ್ನು ಆಶ್ರಯಿಸುವುವು. ॥ ೪೨-೪೩ ॥ ಅಂತಹ ಗುಣಶಾಲಿಯೂ, ಶೀಲಸಂಪನ್ನನೂ, ಕೃತಜ್ಞನೂ, ಗುರು-ಹಿರಿಯರ ಸೇವೆಮಾಡುವವನೂ ಆದವನ ಬಳಿಗೆ ಸಮಸ್ತ ಸಂಪತ್ತುಗಳು ತಾವಾಗಿಯೇ ಬಂದು ಸೇರುವುವು. ಆದುದರಿಂದ ಅಂತಹ ಬ್ರಾಹ್ಮಣಕುಲಗಳೂ, ಗೋವಂಶವೂ ಮತ್ತು ಭಕ್ತರಿಂದೊಡಗೂಡಿದ ಶ್ರೀಭಗವಂತನೂ ನನ್ನಲ್ಲಿ ಸದಾ ಪ್ರಸನ್ನನಾಗಿರಲಿ ಎಂದು ಆಶಿಸುತ್ತೇನೆ. ॥ ೪೪ ॥

ಶ್ರೀಮೈತ್ರೇಯರು ಹೇಳುತ್ತಾರೆ – ಪೃಥುಮಹಾರಾಜನ ಈ ಭಾಷಣವನ್ನು ಕೇಳಿ ದೇವತೆಗಳೂ, ಪಿತೃಗಳೂ, ಬ್ರಾಹ್ಮಣರೇ ಮುಂತಾದ ಸಮಸ್ತ ಸಜ್ಜನರು ಅತ್ಯಂತ ಪ್ರಸನ್ನರಾಗಿ ಭಲೇ ! ಭಲೇ ! ಎಂದು ಆತನನ್ನು ತಮ್ಮ-ತಮ್ಮಲ್ಲೇ ಪ್ರಶಂಸೆಮಾಡತೊಡಗಿದರು. ॥ ೪೫ ॥ ಎಲೈ ಪುಣ್ಯಾತ್ಮನೇ ! ಪುತ್ರರ ಮೂಲಕ ತಂದೆಯು ಪುಣ್ಯಲೋಕವನ್ನು ಪಡೆಯುತ್ತಾನೆ ಎಂಬ ಶ್ರುತಿವಾಕ್ಯವು ಸಾರ್ಥಕವಾಯಿತು. ಏಕೆಂದರೆ ಪಾಪಿಯಾದ ವೇನನು ಬ್ರಾಹ್ಮಣರ ಶಾಪದಿಂದ ದಗ್ಧನಾಗಿದ್ದರೂ ಸತ್ಪುತ್ರನಾದ ಈ ಪೃಥುವಿನ ಪುಣ್ಯಬಲದಿಂದ ನರಕವನ್ನು ದಾಟಿಬಿಟ್ಟನು. ॥ ೪೬ ॥ ಹೀಗೆಯೇ ಹಿರಣ್ಯಕಶಿಪುವೂ ಭಗವನ್ನಿಂದೆಯಿಂದ ನರಕದಲ್ಲಿ ಬೀಳುವವನಿದ್ದರೂ ತನ್ನ ಸುಪುತ್ರನಾದ ಪ್ರಹ್ಲಾದನ ಮಹಿಮೆಯಿಂದ ಉದ್ಧಾರವಾಗಿ ಹೋದನು. ॥ ೪೭ ॥ ಎಲೈ ವೀರವರನಾದ ಪೃಥುಸಾರ್ವಭೌಮನೇ ! ನೀನು ಪೃಥಿವಿಗೆಲ್ಲ ತಂದೆಯಾಗಿರುವುದಲ್ಲದೆ ಸಮಸ್ತ ಲೋಕ

ವೀರವರ್ಯ ಪಿತಃ ಪೃಥ್ವ್ಯಾಃ ಸಮಾಃ ಸಂಜೀವ ಶಾಶ್ವತೀಃ ।
ಯಸ್ಯೇದೃಶ್ಯಚ್ಯುತೇ ಭಕ್ತಿಃ ಸರ್ವಲೋಕೈಕಭರ್ತರಿ ॥ ೪೮ ॥

ಅಹೋ ವಯಂ ಹ್ಯದ್ಯ ಪವಿತ್ರಕೀರ್ತೇ
ತ್ವಯೈವ ನಾಥೇನ ಮುಕುಂದನಾಥಾಃ ।
ಯ ಉತ್ತಮಶ್ಲೋಕತಮಸ್ಯ ವಿಷ್ಣೋ-
ರ್ಬ್ರಹ್ಮಣ್ಯದೇವಸ್ಯ ಕಥಾಂ ವ್ಯನಕ್ತಿ ॥ ೪೯ ॥

ನಾತ್ಯದ್ಭುತಮಿದಂ ನಾಥ ತವಾಜೀವ್ಯಾನುಶಾಸನಮ್ ।
ಪ್ರಜಾನುರಾಗೋ ಮಹತಾಂ ಪ್ರಕೃತಿಃ ಕರುಣಾತ್ಮನಾಮ್ ॥ ೫೦ ॥

ಅದ್ಯ ನಸ್ತಮಸಃ ಪಾರಸ್ತ್ವಯೋಪಾಸಾದಿತಃ ಪ್ರಭೋ ।
ಭ್ರಾಮ್ಯತಾಂ ನಷ್ಟದೃಷ್ಟೀನಾಂ ಕರ್ಮಭಿರ್ದೈವಸಂಜ್ಞಿತೈಃ ॥ ೫೧ ॥

ನಮೋ ವಿವೃದ್ಧಸತ್ತ್ವಾಯ ಪುರುಷಾಯ ಮಹೀಯಸೇ ।
ಯೋ ಬ್ರಹ್ಮ ಕ್ಷತ್ರಮಾವಿಶ್ಯ ಬಿಭರ್ತೀದಂ ಸ್ವತೇಜಸಾ ॥ ೫೨ ॥

ಗಳಿಗೂ ಏಕೈಕಸ್ವಾಮಿಯಾಗಿರುವ ಶ್ರೀಹರಿಯಲ್ಲಿ ನಿಶ್ಚಲವಾದ ಭಕ್ತಿಯಿಂದ ಸಂಪನ್ನನೂ ಆಗಿರುವೆ. ಅಂತಹ ನೀನು ಅನಂತವರ್ಷಗಳ ಕಾಲ ಸುಖಿಯಾಗಿ ಬಾಳು. ॥ ೪೮ ॥ ನಿನ್ನ ಸತ್ಕೀರ್ತಿಯು ಅತ್ಯಂತ ಪವಿತ್ರವಾದುದು. ನೀನು ಉದಾರಕೀರ್ತಿಯುಳ್ಳ ಬ್ರಹ್ಮಣ್ಯದೇವನಾದ ಶ್ರೀಹರಿಯ ಕಥೆಗಳನ್ನು ಪ್ರಚಾರಗೊಳಿಸುತ್ತಿರುವೆ. ಇದು ನಮ್ಮ ಸೌಭಾಗ್ಯವೇ ಆಗಿದೆ. ಇಂತಹ ನಿನ್ನನ್ನು ರಾಜನನ್ನಾಗಿ ಪಡೆದ ನಾವುಗಳು ನಮ್ಮನ್ನು ಭಗವಂತನ ರಾಜ್ಯದಲ್ಲಿಯೇ ಇರುವವರನ್ನಾಗಿ ತಿಳಿಯುತ್ತಿದ್ದೇವೆ. ॥ ೪೯ ॥ ಪ್ರಭುವೇ! ನೀನು ಆಶ್ರಿತ ಜನರಿಗೆ ಹೀಗೆ ಶ್ರೇಷ್ಠವಾದ ಉಪದೇಶ ನೀಡುತ್ತಿರುವುದರಲ್ಲಿ ಆಶ್ಚರ್ಯವೇನೂ ಇಲ್ಲ. ಏಕೆಂದರೆ, ತನ್ನ ಪ್ರಜೆಗಳಲ್ಲಿ ಅನುರಾಗವನ್ನು ಹೊಂದುವುದು ಕರುಣಾಳುಗಳಾದ ಮಹಾತ್ಮರ ಸ್ವಭಾವವೇ ಆಗಿದೆ. ॥ ೫೦ ॥ ದುರದೃಷ್ಟವಶದಿಂದ ವಿವೇಕಹೀನರಾಗಿ ಸಂಸಾರವೆಂಬ ಅರಣ್ಯದಲ್ಲಿ ಅಲೆಯುತ್ತಿದ್ದ ನಮ್ಮನ್ನು ನೀನು ಇಂದು ಅಜ್ಞಾನಾಂಧಕಾರದಿಂದ ಪಾರುಗೊಳಿಸಿರುವೆ. ॥ ೫೧ ॥ ನೀನು ಶುದ್ಧಸತ್ತ್ವಮಯ ಪರಮಪುರುಷನಾಗಿರುವೆ. ಬ್ರಾಹ್ಮಣಜಾತಿ ಮತ್ತು ಕ್ಷತ್ರಿಯಜಾತಿಗಳೆರಡನ್ನೂ ಒಳಹೊಕ್ಕು ಬ್ರಾಹ್ಮಣರ ಮತ್ತು ಈ ಎರಡೂ ಜಾತಿಗಳಲ್ಲಿಯೂ ಪ್ರವಿಷ್ಟನಾಗಿ ಇಡೀ ಜಗತ್ತನ್ನು ತನ್ನ ತೇಜಸ್ಸಿನಿಂದ ಸಂರಕ್ಷಿಸುತ್ತಿರುವ ಪರಮಪುರುಷನಾದ ನಿನಗೆ ನಮಸ್ಕಾರವು. ॥ ೫೨ ॥

ಇಪ್ಪತ್ತೊಂದನೆಯ ಅಧ್ಯಾಯವು ಮುಗಿಯಿತು. ॥ ೨೧ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಚತುರ್ಥಸ್ಕಂಧೇ ಏಕವಿಂಶೋಽಧ್ಯಾಯಃ ॥ ೨೧ ॥

ಇಪ್ಪತ್ತೆರಡನೆಯ ಅಧ್ಯಾಯ

ಪೃಥು ಮಹಾರಾಜನಿಗೆ ಸನಕಾದಿಗಳ ಉಪದೇಶ

ಮೈತ್ರೇಯ ಉವಾಚ

ಜನೇಷು ಪ್ರಗೃಣತ್ಸ್ವೇವಂ ಪೃಥುಂ ಪೃಥುಲವಿಕ್ರಮಮ್ ।
ತತ್ರೋಪಜಗ್ಮುರ್ಮುನಯಶ್ಚತ್ವಾರಃ ಸೂರ್ಯವರ್ಚಸಃ ॥ ೧ ॥

ತಾಂಸ್ತು ಸಿದ್ಧೇಶ್ವರಾನ್ ರಾಜಾ ವ್ಯೋಮ್ನೋಽವತರತೋಽರ್ಚಿಷಾ ।
ಲೋಕಾನಪಾಪಾನ್ಕುರ್ವಾಣಾನ್ ಸಾನುಗೋಽಚಷ್ಟ ಲಕ್ಷಿತಾನ್ ॥ ೨ ॥

ತದ್ದರ್ಶನೋದ್ಗತಾನ್ ಪ್ರಾಣಾನ್ ಪ್ರತ್ಯಾದಿತ್ಸುರಿವೋತ್ಥಿತಃ ।
ಸಸದಸ್ಯಾನುಗೋ ವೈನ್ಯ ಇಂದ್ರಿಯೇಶೋ ಗುಣಾನಿವ ॥ ೩ ॥

ಗೌರವಾದ್ಯಂತ್ರಿತಃ ಸಭ್ಯಃ ಪ್ರಶ್ರಯಾನತಕಂಧರಃ ।
ವಿಧಿವತ್ಪೂಜಯಾಂಚಕ್ರೇ ಗೃಹೀತಾಧ್ಯರ್ಹಣಾಸನಾನ್ ॥ ೪ ॥

ಶ್ರೀಮೈತ್ರೇಯರು ಹೇಳುತ್ತಾರೆ – ವಿಪುಲ ಪರಾಕ್ರಮಿಯಾದ ಪೃಥುಸಾರ್ವಭೌಮನನ್ನು ಜನರು ಹೀಗೆ ಅಭಿನಂದಿಸುತ್ತಿರುವಾಗಲೇ ಸೂರ್ಯನಂತೆ ದೇದೀಪ್ಯಮಾನರಾಗಿದ್ದ ಸನಕರೇ ಮುಂತಾದ ನಾಲ್ವರು ಮುನಿಶ್ರೇಷ್ಠರು ಅಲ್ಲಿಗೆ ದಯಮಾಡಿಸಿದರು. ॥ ೧ ॥ ತಮ್ಮ ದಿವ್ಯವಾದ ಕಾಂತಿಯಿಂದ ಲೋಕಗಳ ಪಾಪಗಳನ್ನು ಕಳೆಯುತ್ತಾ ಆಕಾಶದಿಂದ ಇಳಿದು ಬರುತ್ತಿದ್ದ ■ ಸಿದ್ಧೇಶ್ವರರನ್ನು ಪೃಥುವೂ, ಅವನ ಅನುಚರರೂ ಗುರುತಿಸಿದರು. ॥ ೨ ॥ ಅವರನ್ನು ದರ್ಶಿಸುತ್ತಲೇ ರಾಜನ ಪ್ರಾಣಗಳು – ವಿಷಯಾಸಕ್ತ ಜೀವರು ವಿಷಯಗಳ ಕಡೆಗೆ ಓಡುವಂತೆ – ಅವರ ಕಡೆಗೆ ಧಾವಿಸಿದವು. ಅವುಗಳನ್ನು ಹಿಂದಕ್ಕೆ ಬರಮಾಡಿಕೊಳ್ಳುವುದಕ್ಕಾಗಿಯೋ ಎಂಬಂತೆ ಅವನು ತನ್ನ ಸದಸ್ಯರು ಮತ್ತು ಅನುಯಾಯಿಗಳೊಂದಿಗೆ ತಟ್ಟನೆ ಎದ್ದುನಿಂತನು. ॥ ೩ ॥ ಆ ಮುನೀಶ್ವರರು ಅರ್ಘ್ಯವನ್ನು ಸ್ವೀಕರಿಸಿ ಆಸೀನರಾದಾಗ ಶಿಷ್ಟಾಗ್ರೇಸರನಾದ ಪೃಥುಮಹಾರಾಜನು ಅವರ ಗೌರವದಿಂದ ಪ್ರಭಾವಿತನಾಗಿ ವಿನಯದಿಂದ ತಲೆಯನ್ನು ತಗ್ಗಿಸಿ ಅವರನ್ನು ವಿಧಿಪೂರ್ವಕವಾಗಿ ಪೂಜಿಸಿದನು. ॥ ೪ ॥

ತತ್ಪಾದಶೌಚಸಲಿಲೈರ್ಮಾರ್ಜಿತಾಲಕಬಂಧನಃ ।
ತತ್ರ ಶೀಲವತಾಂ ವೃತ್ತಮಾಚರನ್ಮಾನಯನ್ನಿವ ॥ ೫ ॥

ಹಾಟಕಾಸನ ಆಸೀನಾನ್ ಸ್ವಧಿಷ್ಣ್ಯೇಷ್ವಿವ ಪಾವಕಾನ್ ।
ಶ್ರದ್ಧಾಸಂಯಮಸಂಯುಕ್ತಃ ಪ್ರೀತಃ ಪ್ರಾಹ ಭವಾಗ್ರಜಾನ್ ॥ ೬ ॥

ಪೃಥುರುವಾಚ

ಅಹೋ ಆಚರಿತಂ ಕಿಂ ಮೇ ಮಂಗಲಂ ಮಂಗಲಾಯನಾಃ ।
ಯಸ್ಯ ವೋ ದರ್ಶನಂ ಹ್ಯಾಸೀದ್ದುರ್ದರ್ಶಾನಾಂ ಚ ಯೋಗಿಭಿಃ ॥ ೭ ॥

ಕಿಂ ತಸ್ಯ ದುರ್ಲಭತರಮಿಹ ಲೋಕೇ ಪರತ್ರ ಚ ।
ಯಸ್ಯ ವಿಪ್ರಾಃ ಪ್ರಸೀದಂತಿ ಶಿವೋ ವಿಷ್ಣುಶ್ಚ ಸಾನುಗಃ ॥ ೮ ॥

ನೈವ ಲಕ್ಷಯತೇ ಲೋಕೋ ಲೋಕಾನ್ ಪರ್ಯಟತೋಽಪಿ ಯಾನ್ ।
ಯಥಾ ಸರ್ವದೃಶಂ ಸರ್ವ ಆತ್ಮಾನಂ ಯೇಽಸ್ಯ ಹೇತವಃ ॥ ೯ ॥

ಅಧನಾ ಅಪಿ ತೇ ಧನ್ಯಾಃ ಸಾಧವೋ ಗೃಹಮೇಧಿನಃ ।
ಯದ್ಗೃಹಾ ಹ್ಯರ್ಹವರ್ಯಾಂಬುತೃಣಭೂಮೀಶ್ವರಾವರಾಃ ॥ ೧೦ ॥

ವ್ಯಾಲಾಲಯದ್ರುಮಾ ವೈ ತೇಽಷ್ವರಿಕ್ತಾಖಿಲಸಂಪದಃ ।
ಯದ್ಗೃಹಾಸ್ತೀರ್ಥಪಾದೀಯಪಾದತೀರ್ಥವಿವರ್ಜಿತಾಃ ॥ ೧೧ ॥

ಸ್ವಾಗತಂ ವೋ ದ್ವಿಜಶ್ರೇಷ್ಠಾ ಯದ್ವ್ರತಾನಿ ಮುಮುಕ್ಷವಃ ।
ಚರಂತಿ ಶ್ರದ್ಧಯಾ ಧೀರಾ ಬಾಲಾ ಏವ ಬೃಹಂತಿ ಚ ॥ ೧೨ ॥

ಕಚ್ಚಿನ್ನಃ ಕುಶಲಂ ನಾಥಾ ಇಂದ್ರಿಯಾರ್ಥಾರ್ಥವೇದಿನಾಮ್ ।
ವ್ಯಸನಾವಾಪ ಏತಸ್ಮಿನ್ ಪತಿತಾನಾಂ ಸ್ವಕರ್ಮಭಿಃ ॥ ೧೩ ॥

ಭವತ್ಸು ಕುಶಲಪ್ರಶ್ನ ಆತ್ಮಾರಾಮೇಷು ನೇಷ್ಯತೇ ।
ಕುಶಲಾಕುಶಲಾ ಯತ್ರ ನ ಸಂತಿ ಮತಿವೃತ್ತಯಃ ॥ ೧೪ ॥

ತದಹಂ ಕೃತವಿಶ್ರಂಭಃ ಸುಹೃದೋ ವಸ್ತಪಸ್ವಿನಾಮ್ ।
ಸಂಪೃಚ್ಛೇ ಭವ ಏತಸ್ಮಿನ್ ಕ್ಷೇಮಃ ಕೇನಾಂಜಸಾ ಭವೇತ್ ॥ ೧೫ ॥

ಅನಂತರ ಅವರ ಚರಣೋದಕವನ್ನು ತನ್ನ ತಲೆಯಮೇಲೆ ಪ್ರೋಕ್ಷಿಸಿಕೊಂಡು ಶೀಲವಂತರಾದ ಶಿಷ್ಟಜನರ ಆಚರಣೆಯು ಅಂತಹ ಸಮಯದಲ್ಲಿ ಹೇಗಿರಬೇಕು ಎಂಬುದಕ್ಕೆ ಆದರ್ಶನಾದನು. ॥ ೫ ॥ ಭಗವಾನ್ ಶಂಕರರಿಗೂ ಅಣ್ಣಂದಿರಾಗಿದ್ದ ಆ ಮುನೀಶ್ವರರು ತಮ್ಮ-ತಮ್ಮ ಸ್ಥಾನಗಳಲ್ಲಿ ಬೆಳಗುತ್ತಿರುವ ಅಗ್ನಿಗಳಂತೆ ಸ್ವರ್ಣಸಿಂಹಾಸನಗಳಲ್ಲಿ ಶೋಭಿಸಿದರು. ಪೃಥು ಮಹಾರಾಜನು ಅತ್ಯಂತ ಶ್ರದ್ಧಾ-ಸಂಯಮಗಳೊಡನೆ ಪ್ರೇಮಪೂರ್ವಕ ಅವರಲ್ಲಿ ಹೀಗೆ ವಿಜ್ಞಾಪಿಸಿಕೊಂಡನು. ॥ ೬ ॥

ಪೃಥು ಮಹಾರಾಜನು ಕೇಳಿದನು – ಮಂಗಳಮೂರ್ತಿಗಳಾದ ಮುನೀಶ್ವರರೇ! ಯೋಗಿಗಳಿಗೂ ದುರ್ಲಭವಾದ ನಿಮ್ಮ ದರ್ಶನವು ನನಗೆ ತಾನಾಗಿಯೇ ಒದಗಿ ಬಂದಿತಲ್ಲ! ನಾನು ಎಂತಹ ಪುಣ್ಯವನ್ನು ಆಚರಿಸಿರಬೇಕು! ಆಹಾ! ಎಂತಹ ಭಾಗ್ಯವೇ ನನ್ನದು! ॥ ೭ ॥ ಜ್ಞಾನಿಗಳಾದ ಬ್ರಾಹ್ಮಣರಾಗಲೀ, ಅನುಚರ ಸಹಿತನಾದ ಶಿವನಾಗಲೀ, ಶ್ರೀವಿಷ್ಣುವಾಗಲೀ ಯಾರ ಮೇಲೆ ಪ್ರಸನ್ನರಾಗುವರೋ ಅವರಿಗೆ ಇಹಲೋಕದಲ್ಲಾಗಲೀ – ಪರಲೋಕದಲ್ಲಾಗಲೀ ದುರ್ಲಭವಾದ ವಸ್ತು ಯಾವುದಿದೆ? ॥ ೮ ॥ ದೃಶ್ಯಪ್ರಪಂಚದ ಕಾರಣವಾಗಿರುವ ಮಹತ್ತತ್ತ್ವವೇ ಮುಂತಾದವುಗಳು – ಆತ್ಮನು ಸರ್ವಸಾಕ್ಷಿಯಾಗಿ ಸರ್ವಗತವಾಗಿದ್ದರೂ ಆತನನ್ನು ನೋಡಲಾಗುವುದಿಲ್ಲವೋ, ಹಾಗೆಯೇ ನೀವು ಸಮಸ್ತ ಲೋಕಗಳಲ್ಲಿಯೂ ಸದಾ ಸಂಚರಿಸುತ್ತಿದ್ದರೂ ಸಾಧಾರಣ ಮನುಷ್ಯರು ನಿಮ್ಮನ್ನು ನೋಡಲಾರರು. ॥ ೯ ॥ ನಿಮ್ಮಂತಹ ಪೂಜ್ಯತಮರಾದ ಮಹಾಪುರುಷರು ಯಾವನಾದರೂ ಗೃಹಸ್ಥನ ಮನೆಯಲ್ಲಿ ನೀರು, ನೆಲ, ಹುಲ್ಲು, ಮನೆಯ ಯಜಮಾನನ ಅಥವಾ ಸೇವಕರ ಸೇವೆಯನ್ನು ಸ್ವೀಕರಿಸಿದರೆ ಅವನು ಧನಹೀನನಾಗಿದ್ದರೂ ಧನ್ಯತಮನೇ ಆಗುವನು. ॥ ೧೦ ॥ ಹಾಗೆಯೇ ಭಗವದ್ಭಕ್ತರ ಪರಮ ಪವಿತ್ರವಾದ ಪಾದೋದಕದ ಬಿಂದುಗಳು ಯಾರ ಮನೆಯಲ್ಲಿ ಎಂದಿಗೂ ಬಿದ್ದಿಲ್ಲವೋ, ಆ ಮನೆಗಳು ಎಲ್ಲ ರೀತಿಯ ಸಿರಿ-ಸಂಪತ್ತುಗಳಿಂದ ತುಂಬಿದ್ದರೂ ಹಾವುಗಳು ವಾಸಿಸುವ ವೃಕ್ಷಗಳಂತೆ ಆಗಿವೆ. ॥ ೧೧ ॥ ಮುನೀಶ್ವರರೇ! ನಿಮಗೆ ಸ್ವಾಗತವು. ನೀವುಗಳಾದರೋ ಬಾಲ್ಯದಿಂದಲೇ ಮುಮುಕ್ಷುಗಳ ಮಾರ್ಗವನ್ನು ಅನುಸರಿಸುತ್ತಾ ಏಕಾಗ್ರವಾದ ಚಿತ್ತದಿಂದ ಬ್ರಹ್ಮಚರ್ಯವೇ ಮುಂತಾದ ಮಹಾನ್ ವ್ರತಗಳನ್ನು ಅತಿ ಶ್ರದ್ಧೆಯಿಂದ ಆಚರಿಸುತ್ತಿರುವಿರಿ. ॥ ೧೨ ॥ ಸ್ವಾಮಿಗಳೇ! ನಾವುಗಳು ಕರ್ಮವಶರಾಗಿ ವಿಪತ್ತುಗಳಿಗೆ ಕ್ಷೇತ್ರರೂಪವಾದ ಈ ಸಂಸಾರದಲ್ಲಿ ಬಿದ್ದುಕೊಂಡು ಕೇವಲ ಇಂದ್ರಿಯಸಂಬಂಧವಾದ ಭೋಗಗಳನ್ನೇ ಪರಮಪುರುಷಾರ್ಥವೆಂದು ತಿಳಿಯುತ್ತಿದ್ದೇವೆ. ಇಂತಹ ನಮಗೆ ಶ್ರೇಯಸ್ಸಿನ ದಾರಿ ನೀವೇ ತೋರಬೇಕು. ॥ ೧೩ ॥ ನಿಮ್ಮಲ್ಲಿ ಕುಶಲದ ಬಗ್ಗೆ ಪ್ರಶ್ನಿಸುವುದು ಉಚಿತವಲ್ಲ. ಏಕೆಂದರೆ, ನೀವು ನಿರಂತರ ಆತ್ಮನಲ್ಲೇ ರಮಿಸುತ್ತಿರುವವರು. ಕುಶಲಾಕುಶಲಗಳೆಂಬ ವೃತ್ತಿಗಳೇ ನಿಮ್ಮಲ್ಲಿ ಎಂದಿಗೂ ಇರುವುದಿಲ್ಲ. ॥ ೧೪ ॥ ನೀವು ಸಂಸಾರದಲ್ಲಿ ನೊಂದು-ಬೆಂದ ಜೀವಿಗಳಿಗೆಲ್ಲ ಪರಮಮಿತ್ರರಾಗಿದ್ದೀರಿ. ಆದ್ದರಿಂದ ನಿಮ್ಮಲ್ಲಿ ನಂಬಿಕೆಯನ್ನಿಟ್ಟು ಈ ಸಂಸಾರದಲ್ಲಿ ಮನುಷ್ಯನಿಗೆ ಅತಿಶೀಘ್ರವಾಗಿ ಮತ್ತು ಸುಲಭವಾಗಿ ಶ್ರೇಯಸ್ಸು

ವ್ಯಕ್ತಮಾತ್ಮವತಾಮಾತ್ಮಾ ಭಗವಾನಾತ್ಮಭಾವನಃ ।
ಸ್ವಾನಾಮನುಗ್ರಹಾಯೇಮಾಂ ಸಿದ್ಧರೂಪೀ ಚರತ್ಯಜಃ
॥ ೧೬ ॥

ಮೈತ್ರೇಯ ಉವಾಚ

ಪೃಥೋಸ್ತತ್ಸೂಕ್ತಮಾಕರ್ಣ್ಯ ಸಾರಂ ಸುಷ್ಠು ಮಿತಂ ಮಧು ।
ಸ್ಮಯಮಾನ ಇವ ಪ್ರೀತ್ಯಾ ಕುಮಾರಃ ಪ್ರತ್ಯುವಾಚ ಹ
॥ ೧೭ ॥

ಸನತ್ಕುಮಾರ ಉವಾಚ

ಸಾಧು ಪೃಷ್ಟಂ ಮಹಾರಾಜ ಸರ್ವಭೂತಹಿತಾತ್ಮನಾ ।
ಭವತಾ ವಿದುಷಾ ಚಾಪಿ ಸಾಧೂನಾಂ ಮತಿರೀದೃಶೀ
॥ ೧೮ ॥

ಸಂಗಮಃ ಖಲು ಸಾಧೂನಾಮುಭಯೇಷಾಂ ಚ ಸಮ್ಮತಃ ।
ಯತ್ಸಂಭಾಷಣಸಂಪ್ರಶ್ನಃ ಸರ್ವೇಷಾಂ ವಿತನೋತಿ ಶಮ್
॥ ೧೯ ॥

ಅಸ್ತ್ಯೇವ ರಾಜನ್ ಭವತೋ ಮಧುದ್ವಿಷಃ
ಪಾದಾರವಿಂದಸ್ಯ ಗುಣಾನುವಾದನೇ ।
ರತಿರ್ದುರಾಪಾ ವಿಧುನೋತಿ ನೈಷ್ಠಿಕೀ
ಕಾಮಂ ಕಷಾಯಂ ಮಲಮಂತರಾತ್ಮನಃ ॥ ೨೦ ॥

ಶಾಸ್ತ್ರೇಷ್ವಿಯಾನೇವ ಸುನಿಶ್ಚಿತೋ ನೃಣಾಂ
ಕ್ಷೇಮಸ್ಯ ಸಧ್ರ್ಯಗ್ವಿಮೃಶೇಷು ಹೇತುಃ ।
ಅಸಂಗ ಆತ್ಮವ್ಯತಿರಿಕ್ತ ಆತ್ಮನಿ
ದೃಢಾ ರತಿರ್ಬ್ರಹ್ಮಣಿ ನಿರ್ಗುಣೇ ಚ ಯಾ ॥ ೨೧ ॥

ಸಾ ಶ್ರದ್ಧಯಾ ಭಗವದ್ಧರ್ಮಚರ್ಯಯಾ
ಜಿಜ್ಞಾಸಯಾಽಽಧ್ಯಾತ್ಮಿಕಯೋಗನಿಷ್ಠಯಾ ।
ಯೋಗೇಶ್ವರೋಪಾಸನಯಾ ಚ ನಿತ್ಯಂ
ಪುಣ್ಯಶ್ರವಃ ಕಥಯಾ ಪುಣ್ಯಯಾ ಚ ॥ ೨೨ ॥

ಅರ್ಥೇಂದ್ರಿಯಾರಾಮಸಗೋಷ್ಠ್ಯತೃಷ್ಣಯಾ
ತತ್ಸಮ್ಮತಾನಾಮಪರಿಗ್ರಹೇಣ ಚ ।
ವಿವಿಕ್ತರುಚ್ಯಾ ಪರಿತೋಷ ಆತ್ಮನ್
ವಿನಾ ಹರೇರ್ಗುಣಪೀಯೂಷಪಾನಾತ್ ॥ ೨೩ ॥

ಯಾವುದರಿಂದ ಉಂಟಾಗುವುದು ? ಎಂದು ನಿಮ್ಮಲ್ಲಿ ಕೇಳಿ ಕೊಳ್ಳುತ್ತೇನೆ. ॥ ೧೫ ॥ ಆತ್ಮಜ್ಞಾನಿಗಳಾದ ಧೀರರಿಗೆಲ್ಲ 'ಆತ್ಮ' ನಾಗಿ ಪ್ರಕಾಶಿಸುತ್ತಾ, ಉಪಾಸಕರ ಹೃದಯದಲ್ಲಿ ತನ್ನ ಸ್ವರೂಪವನ್ನು ಪ್ರಕಟಪಡಿಸುವಂತಹ ಜನ್ಮರಹಿತನಾದ ಭಗವಾನ್ ನಾರಾಯಣನೇ ತನ್ನ ಭಕ್ತರನ್ನು ಅನುಗ್ರಹಿಸಲಿಕ್ಕಾಗಿ ನಿಮ್ಮಂತಹ ಸಿದ್ಧರ ರೂಪದಲ್ಲಿ ಭೂಮಿಯಲ್ಲಿ ಸಂಚರಿಸುತ್ತಾನೆಂಬುದರಲ್ಲಿ ಸಂದೇಹವೇ ಇಲ್ಲ. ॥ ೧೬ ॥

ಶ್ರೀಮೈತ್ರೇಯರು ಹೇಳುತ್ತಾರೆ – ಪೃಥು ಮಹಾರಾಜನ ಯುಕ್ತಿಯುಕ್ತವೂ, ಗಂಭೀರವೂ, ಸಂಕ್ಷಿಪ್ತವೂ ಆದ ಮಧುರವಚನಗಳನ್ನು ಕೇಳಿ ಸನತ್ಕುಮಾರರಿಗೆ ಅತೀವ ಸಂತೋಷವಾಗಿ ನಗು ನಗುತ್ತಾ ರಾಜನಲ್ಲಿ ಇಂತೆಂದರು. ॥ ೧೭ ॥

ಶ್ರೀಸನತ್ಕುಮಾರರು ಹೇಳುತ್ತಾರೆ – ಎಲೈ ಮಹಾರಾಜಾ ! ನೀನು ಸ್ವತಃ ಇವೆಲ್ಲವನ್ನು ತಿಳಿದುಕೊಂಡಿದ್ದರೂ ಸಮಸ್ತ ಪ್ರಾಣಿಗಳಿಗೂ ಒಳ್ಳೆಯದಾಗಲಿ ಎಂಬ ದೃಷ್ಟಿಯಿಂದ ಇಂತಹ ಒಳ್ಳೆಯ ಪ್ರಶ್ನೆಯನ್ನೇ ಕೇಳಿರುವೆ. ನಿಜವಾಗಿ ಸಾಧು-ಸತ್ಪುರುಷರ ಬುದ್ಧಿಯು ಹೀಗೆಯೇ ಇರುತ್ತದಲ್ಲ! ॥ ೧೮ ॥ ಸತ್ಪುರುಷರ ಸಮಾಗಮವು ಕೇಳುವವರಿಗೆ ಮತ್ತು ಹೇಳುವವರಿಬ್ಬರಿಗೂ ಸಮ್ಮತವೇ ಆಗಿರುತ್ತದೆ. ಏಕೆಂದರೆ, ಅವರ ಪ್ರಶ್ನೋತ್ತರಗಳು ಎಲ್ಲರ ಶ್ರೇಯಸ್ಸನ್ನೇ ಮಾಡುವುವು. ॥ ೧೯ ॥ ರಾಜನೇ ! ನಿನಗೆ ಭಗವಾನ್ ಮಧುಸೂದನನ ಅಡಿದಾವರೆಗಳ ಗುಣಗಳನ್ನು ವರ್ಣಿಸುವುದರಲ್ಲೇ ಸ್ಥಿರವಾದ ಪ್ರೀತಿಯಿದೆ. ಎಲ್ಲರಿಗೆ ಈ ಪ್ರೀತಿಯು ಸುಲಭವಾಗಿ ಸಾಧ್ಯವಾಗುವುದಿಲ್ಲ. ಅದು ಭಾಗ್ಯವಶದಿಂದ ದೊರಕಿದ್ದೇ ಆದರೆ – ಬೇರಾವ ಉಪಾಯದಿಂದಲೂ ಬಿಟ್ಟುಹೋಗದಿರುವ ಹೃದಯಸ್ಥ ವಾಸನಾರೂಪವಾದ ಮಲವನ್ನು ಪೂರ್ಣವಾಗಿ ನಾಶಮಾಡಿಬಿಡುತ್ತದೆ. ॥ ೨೦ ॥ ಶಾಸ್ತ್ರಗಳು ಜೀವಿಗಳ ಶ್ರೇಯಸ್ಸಿಗಾಗಿಯೇ ಚೆನ್ನಾಗಿ ವಿಚಾರಮಾಡಿ, ಆತ್ಮನಿಂದ ಬೇರೆಯಾದ ದೇಹಾದಿಗಳ ಕುರಿತು ವೈರಾಗ್ಯ ಉಂಟಾಗುವುದೇ ಶ್ರೇಯಸ್ಸಿನ ಸಾಧನೆಯೆಂದು ನಿಶ್ಚಯಿಸಿವೆ. ॥ ೨೧ ॥ ಗುರುಗಳ ಮತ್ತು ಶಾಸ್ತ್ರಗಳ ವಚನಗಳಲ್ಲಿ ವಿಶ್ವಾಸವಿರಿಸುವುದರಿಂದ, ಭಾಗವತ ಧರ್ಮಗಳನ್ನು ಆಚರಿಸುವುದರಿಂದ, ತತ್ತ್ವಜಿಜ್ಞಾಸೆಯಿಂದ, ಜ್ಞಾನಯೋಗದ ನಿಷ್ಠೆಯಿಂದ, ಯೋಗೇಶ್ವರ ಶ್ರೀಹರಿಯ ಉಪಾಸನೆಯಿಂದ, ಪ್ರತಿದಿನವೂ ಪುಣ್ಯಕೀರ್ತಿಯಾದ ಶ್ರೀಭಗವಂತನ ಪಾವನ ಕಥೆಗಳನ್ನು ಶ್ರವಣಿಸುವುದರಿಂದ, ಧನ, ಇಂದ್ರಿಯಗಳ ಭೋಗದಲ್ಲಿ ತೊಡಗಿರುವ ಮನುಷ್ಯರ ಗೋಷ್ಠಿಯನ್ನು ಪ್ರೀತಿಸದೆ ಇರುವುದರಿಂದ, ಅವರಿಗೆ ಪ್ರಿಯವಾದ ಪದಾರ್ಥಗಳನ್ನು ಆಸಕ್ತಿಯಿಂದ ಸಂಗ್ರಹಿಸದೇ ಇರುವುದರಿಂದ, ಭಗವದ್ಗುಣಾಮೃತವನ್ನು ಪಾನಮಾಡುವ ಕಾಲವನ್ನು ಬಿಟ್ಟು ಉಳಿದ ಎಲ್ಲ ಸಮಯಗಳಲ್ಲಿಯೂ ಆತ್ಮನಲ್ಲೇ ಸಂತೋಷಿಸುತ್ತಾ ಏಕಾಂತಸೇವನೆಯಲ್ಲಿ ಪ್ರೀತಿಯನ್ನಿಡುವುದರಿಂದ, ಯಾವುದೇ ಜೀವಿಗೆ ಕಷ್ಟವನ್ನು ಕೊಡದಿರುವುದರಿಂದ, ನಿವೃತ್ತಿನಿಷ್ಠೆಯಿಂದ, ಆತ್ಮಹಿತವನ್ನೇ ಅನುಸಂಧಾನಮಾಡುವುದರಿಂದ, ಶ್ರೀಹರಿಯ ಪವಿತ್ರಚರಿತ್ರರೂಪವಾದ ಶ್ರೇಷ್ಠ ಅಮೃತವನ್ನು ಸವಿಯುವುದ

ಅಹಿಂಸಯಾ ಪಾರಮಹಂಸ್ಯ ಚರ್ಯಯಾ
ಸ್ಮೃತ್ಯಾ ಮುಕುಂದಾ ಚರಿತಾಗ್ರ್ಯಸೀಧುನಾ ।
ಯಮೈರಕಾಮೈರ್ನಿಯಮೈಶ್ಚಾಪ್ಯನಿಂದಯಾ
ನಿರೀಹಯಾ ದ್ವಂದ್ವ ತಿತಿಕ್ಷಯಾ ಚ ॥ ೨೪ ॥

ಹರೇರ್ಮುಹುಸ್ತತ್ಪರಕರ್ಣಪೂರ-
ಗುಣಾಭಿಧಾನೇನ ವಿಜೃಂಭಮಾಣಯಾ ।
ಭಕ್ತ್ಯಾ ಹ್ಯಸಂಗಃ ಸದಸತ್ಯನಾತ್ಮನಿ
ಸ್ಯಾನ್ನಿರ್ಗುಣೇ ಬ್ರಹ್ಮಣಿ ಚಾಂಜಸಾ ರತಿಃ ॥ ೨೫ ॥

ಯದಾ ರತಿರ್ಬ್ರಹ್ಮಣಿ ನೈಷ್ಠಿಕೀ ಪುಮಾ-
ನಾಚಾರ್ಯವಾನ್ ಜ್ಞಾನವಿರಾಗರಂಹಸಾ ।
ದಹತ್ಯವೀರ್ಯಂ ಹೃದಯಂ ಜೀವಕೋಶಂ
ಪಂಚಾತ್ಮಕಂ ಯೋನಿಮಿವೋತ್ಥಿತೋಽಗ್ನಿಃ ॥ ೨೬ ॥

ದಗ್ಧಾಶಯೋ ಮುಕ್ತ ಸಮಸ್ತ ತದ್ಗುಣೋ
ನೈವಾತ್ಮನೋ ಬಹಿರಂತರ್ವಿಚಷ್ಟೇ ।
ಪರಾತ್ಮನೋರ್ಯದ್ವ್ಯವಧಾನಂ ಪುರಸ್ತಾತ್
ಸ್ವಪ್ನೇ ಯಥಾ ಪುರುಷಸ್ತದ್ವಿನಾಶೇ ॥ ೨೭ ॥

ಆತ್ಮಾನಮಿಂದ್ರಿಯಾರ್ಥಂ ಚ ಪರಂ ಯದುಭಯೋರಪಿ ।
ಸತ್ಯಾಶಯ ಉಪಾಧೌ ವೈ ಪುಮಾನ್ ಪಶ್ಯತಿ ನಾನ್ಯದಾ ॥ ೨೮ ॥

ನಿಮಿತ್ತೇ ಸತಿ ಸರ್ವತ್ರ ಜಲಾದಾವಪಿ ಪೂರುಷಃ ।
ಆತ್ಮನಶ್ಚ ಪರಸ್ಯಾಪಿ ಭಿದಾಂ ಪಶ್ಯತಿ ನಾನ್ಯದಾ ॥ ೨೯ ॥

ಇಂದ್ರಿಯೈರ್ವಿಷಯಾಕೃಷ್ಟೈರಾಕ್ಷಿಪ್ತಂ ಧ್ಯಾಯತಾಂ ಮನಃ ।
ಚೇತನಾಂ ಹರತೇ ಬುದ್ಧೇಃ ಸ್ತಂಬಸ್ತೋಯಮಿವ ಹ್ರದಾತ್ ॥ ೩೦ ॥

ಭ್ರಶ್ಯತ್ಯನುಸ್ಮೃತಿಶ್ಚಿತ್ತಂ ಜ್ಞಾನಭ್ರಂಶಃ ಸ್ಮೃತಿಕ್ಷಯೇ ।
ತದ್ರೋಧಂ ಕವಯಃ ಪ್ರಾಹುರಾತ್ಮಾಪಹ್ನವಮಾತ್ಮನಃ ॥ ೩೧ ॥

ರಿಂದ, ನಿಷ್ಕಾಮಭಾವದಿಂದ ಯಮ-ನಿಯಮಗಳನ್ನು ಪಾಲಿಸುವುದರಿಂದ, ಎಂದೂ ಯಾರನ್ನೂ ನಿಂದಿಸದೆ ಇರುವುದರಿಂದ, ಯೋಗಕ್ಷೇಮಕ್ಕಾಗಿ ಪ್ರಯತ್ನಿಸದೇ ಇರುವುದರಿಂದ, ಶೀತೋಷ್ಣಗಳೇ ಮುಂತಾದ ದ್ವಂದ್ವಗಳನ್ನು ಸಹಿಸುವುದರಿಂದ, ಭಕ್ತರಿಗೆ ಕರ್ಣಾನಂದಕರವಾದ ಶ್ರೀಹರಿಯ ಗುಣಗಳನ್ನು ಪದೇ-ಪದೇ ವರ್ಣಿಸುವುದರಿಂದ ಮತ್ತು ಭಕ್ತಿಭಾವವನ್ನು ವೃದ್ಧಿಪಡಿಸುವುದರಿಂದ ಮನುಷ್ಯನಿಗೆ ಕಾರ್ಯ-ಕಾರಣರೂಪವಾದ ಇಡೀ ಜಡ-ಜಗತ್ತಿನ ಕುರಿತು ವೈರಾಗ್ಯ ಉಂಟಾಗುವುದು ಮತ್ತು ಆತ್ಮಸ್ವರೂಪೀ ನಿರ್ಗುಣ ಪರಬ್ರಹ್ಮನಲ್ಲಿ ಆಯಾಸವಿಲ್ಲದೆ ಅವನಿಗೆ ಪ್ರೀತಿ ಉಂಟಾಗುತ್ತದೆ ಎಂಬುದಾಗಿಯೂ ಶಾಸ್ತ್ರಗಳು ಹೇಳುತ್ತವೆ. ॥ ೨೨-೨೫ ॥ ಪರಬ್ರಹ್ಮನಲ್ಲಿ ದೃಢವಾದ ಪ್ರೀತಿಯುಂಟಾದಾಗ ಮನುಷ್ಯನು ಸದ್ಗುರುವಿಗೆ ಶರಣು ಹೋಗುತ್ತಾನೆ. ಮತ್ತೆ ಜ್ಞಾನ ಮತ್ತು ವೈರಾಗ್ಯದ ಪ್ರಬಲವಾದ ವೇಗದಿಂದ ವಾಸನಾಶೂನ್ಯನಾಗಿ, ಅವಿದ್ಯೆಯೇ ಮುಂತಾದ ಐದು ಕ್ಲೇಶಗಳಿಂದ ಕೂಡಿದ ಅಹಂಕಾರಾತ್ಮಕವಾದ ತನ್ನ ಲಿಂಗಶರೀರವನ್ನು – ಅಗ್ನಿಯು ಕಟ್ಟಿಗೆಯಿಂದ ಪ್ರಕಟವಾಗಿ ಆ ಕಟ್ಟಿಗೆಯನ್ನೇ ಸುಟ್ಟುಹಾಕುವಂತೆ – ಸುಟ್ಟು ಬೂದಿ ಮಾಡಿಬಿಡುತ್ತಾನೆ. ॥ ೨೬ ॥ ಹೀಗೆ ಲಿಂಗಶರೀರವು ನಾಶವಾದ ಬಳಿಕ ಅವನು ಕರ್ತೃತ್ವಾದಿ ಎಲ್ಲ ಗುಣಗಳಿಂದ ಮುಕ್ತನಾಗುತ್ತಾನೆ. ಮತ್ತೆ ಸ್ವಪ್ನಾವಸ್ಥೆಯಲ್ಲಿ ಕಂಡುಬರುವ ನಾನಾಪದಾರ್ಥಗಳು ಎಚ್ಚರವಾದಾಗ ಯಾವುದೂ ಕಂಡುಬಾರದಿರುವಂತೆಯೇ ಅವನಿಗೆ ಶರೀರದ ಹೊರಗೆ ಕಂಡುಬರುವ ಘಟ-ಪಟಾದಿಗಳು ಮತ್ತು ಒಳಗೆ ಅನುಭವಕ್ಕೆ ಬರುವ ಸುಖ-ದುಃಖಾದಿಗಳೂ ಕಂಡುಬರುವುದಿಲ್ಲ. ಈ ಸ್ಥಿತಿಯು ಪ್ರಾಪ್ತವಾಗುವ ಮೊದಲು ಈ ಪದಾರ್ಥಗಳೇ ಜೀವಾತ್ಮಾ ಮತ್ತು ಪರಮಾತ್ಮರ ನಡುವೆ ಇದ್ದುಕೊಂಡು ಅವುಗಳ ಭೇದವನ್ನು ಉಂಟುಮಾಡುತ್ತಿದ್ದುವು. ॥ ೨೭ ॥

ಅಂತಃಕರಣರೂಪವಾದ ಉಪಾಧಿಯು ಇರುವ ತನಕ ಪುರುಷನಿಗೆ ಜೀವಾತ್ಮಾ, ಇಂದ್ರಿಯಗಳ ವಿಷಯಗಳು ಮತ್ತು ಇವೆರಡರ ಸಂಬಂಧವನ್ನುಂಟುಮಾಡುವ ಅಹಂಕಾರದ ಅನುಭವವಾಗುತ್ತದೆ. ಅದರ ನಂತರ ಇರುವುದಿಲ್ಲ. ॥ ೨೮ ॥ ಬಾಹ್ಯಜಗತ್ತಿನಲ್ಲಿಯೂ ನೀರು, ಕನ್ನಡಿ ಮುಂತಾದ ನಿಮಿತ್ತಗಳು ಇರುವಾಗಲೇ ಬಿಂಬ-ಪ್ರತಿಬಿಂಬಗಳ ಭೇದವು ಕಾಣುತ್ತದೆ. ಅವುಗಳು ಇಲ್ಲವಾದಾಗ ಕಾಣುವುದಿಲ್ಲ. ॥ ೨೯ ॥ ವಿಷಯ ಚಿಂತನದಲ್ಲೇ ತೊಡಗಿರುವ ಮನುಷ್ಯರ ಇಂದ್ರಿಯಗಳು ವಿಷಯಗಳಲ್ಲಿ ಸಿಕ್ಕಿಕೊಳ್ಳುವುವು ಹಾಗೂ ಮನಸ್ಸನ್ನೂ ಅವುಗಳತ್ತ ಸೆಳೆಯುತ್ತಿರುತ್ತದೆ. ಹಾಗೆಯೇ ಆ ವಿಷಯಾಸಕ್ತ ಮನಸ್ಸು-ಬೇರುಗಳು ಜಲಾಶಯದ ನೀರನ್ನು ಸೆಳೆದುಕೊಳ್ಳುವಂತೆ ಬುದ್ಧಿಯ ವಿಚಾರಶಕ್ತಿಯನ್ನು ಕ್ರಮವಾಗಿ ಕಸಿದುಕೊಳ್ಳುತ್ತದೆ. ॥ ೩೦ ॥ ವಿಚಾರಶಕ್ತಿಯು ನಾಶವಾದಮೇಲೆ ಹಿಂದು-ಮುಂದಿನ ಸ್ಮೃತಿಯು ಹೊರಟುಹೋಗುತ್ತದೆ. ಸ್ಮೃತಿಯು ನಾಶವಾದ ಬಳಿಕ ಜ್ಞಾನವು ಉಳಿಯುವುದಿಲ್ಲ. ಈ ಜ್ಞಾನದ ನಾಶವನ್ನೇ ಪಂಡಿತರು – 'ತಾನೇ ತನ್ನನ್ನು ಹತ್ಯೆ ಮಾಡಿಕೊಳ್ಳುವುದು' ಎಂದು ಹೇಳುತ್ತಾರೆ. ॥ ೩೧ ॥ ಯಾವುದರ ಉದ್ದೇಶದಿಂದ ಬೇರೆ ಎಲ್ಲ ಪದಾರ್ಥಗಳಲ್ಲಿ 'ಇದು ಪ್ರಿಯ' ಎಂಬ

ನಾತಃ ಪರತರೋ ಲೋಕೇ ಪುಂಸಃ ಸ್ವಾರ್ಥವ್ಯತಿಕ್ರಮಃ ।
ಯದಧ್ಯನ್ಯಸ್ಯ ಪ್ರೇಯಸ್ತ್ವಮಾತ್ಮನಃ ಸ್ವವ್ಯತಿಕ್ರಮಾತ್ ॥ ೩೨ ॥

ಅರ್ಥೇಂದ್ರಿಯಾರ್ಥಾಭಿಧ್ಯಾನಂ
ಸರ್ವಾರ್ಥಾಪಹ್ನವೋ ನೃಣಾಮ್ ।
ಭ್ರಂಶಿತೋ ಜ್ಞಾನವಿಜ್ಞಾನಾ-
ದ್ಯೇನಾವಿಶತಿ ಮುಖ್ಯತಾಮ್ ॥ ೩೩ ॥

ನ ಕುರ್ಯಾತ್ಕರ್ಹಿಚಿತ್ಸಂಗಂ ತಮಸ್ತೀವ್ರಂ ತಿತೀರಿಷುಃ ।
ಧರ್ಮಾರ್ಥಕಾಮಮೋಕ್ಷಾಣಾಂ ಯದತ್ಯಂತವಿಘಾತಕಮ್ ॥ ೩೪ ॥

ತತ್ರಾಪಿ ಮೋಕ್ಷ ಏವಾರ್ಥ ಆತ್ಯಂತಿಕತಯೇಷ್ಯತೇ ।
ತ್ರೈವರ್ಗ್ಯೋಽರ್ಥೋ ಯತೋ ನಿತ್ಯಂ ಕೃತಾಂತಭಯಸಂಯುತಃ ॥ ೩೫ ॥

ಪರೇಽವರೇ ಚ ಯೇ ಭಾವಾ ಗುಣವ್ಯತಿಕರಾದನು ।
ನ ತೇಷಾಂ ವಿದ್ಯತೇ ಕ್ಷೇಮಮೀಶವಿಧ್ವಂಸಿತಾಶಿಷಾಮ್ ॥ ೩೬ ॥

ತತ್ತ್ವಂ ನರೇಂದ್ರ ಜಗತಾಮಥ ತಸ್ಥುಷಾಂ ಚ
ದೇಹೇಂದ್ರಿಯಾಸುಧಿಷಣಾತ್ಮಭಿರಾವೃತಾನಾಮ್ ।
ಯಃ ಕ್ಷೇತ್ರವಿತ್ತಪತಯಾ ಹೃದಿ ವಿಶ್ವಗಾವಿಃ
ಪ್ರತ್ಯಕ್ಚಕಾಸ್ತಿ ಭಗವಾಂಸ್ತಮವೇಹಿ ಸೋಽಸ್ಮಿ ॥ ೩೭ ॥

ಯಸ್ಮಿನ್ನಿದಂ ಸದಸದಾತ್ಮತಯಾ ವಿಭಾತಿ
ಮಾಯಾವಿವೇಕವಿಧುತಿ ಸ್ರಜಿ ವಾಹಿಬುದ್ಧಿಃ ।
ತಂ ನಿತ್ಯಮುಕ್ತಪರಿಶುದ್ಧವಿಬುದ್ಧತತ್ತ್ವಂ
ಪ್ರತ್ಯೂಢಕರ್ಮಕಲಿಲಪ್ರಕೃತಿಂ ಪ್ರಪದ್ಯೇ ॥ ೩೮ ॥

ಯತ್ಪಾದಪಂಕಜಪಲಾಶವಿಲಾಸಭಕ್ತ್ಯಾ
ಕರ್ಮಾಶಯಂ ಗ್ರಥಿತಮುದ್ಗ್ರಥಯಂತಿ ಸಂತಃ ।
ತದ್ವನ್ನ ರಿಕ್ತಮತಯೋ ಯತಯೋಽಪಿ ರುದ್ಧ-
ಸ್ರೋತೋಗಣಾಸ್ತಮರಣಂ ಭಜ ವಾಸುದೇವಮ್ ॥ ೩೯ ॥

ಭಾವ ಉಂಟಾಗುತ್ತದೋ ಆ ಆತ್ಮನು ತನ್ನ ಮೂಲಕವೇ ನಾಶವಾಗುವುದರಿಂದ ಸ್ವಾರ್ಥ ಹಾನಿಯುಂಟಾಗುತ್ತದೆ. ಜಗತ್ತಿನಲ್ಲಿ ಇದಕ್ಕಿಂತ ಮಿಗಿಲಾದ ಬೇರೆ ಯಾವ ಹಾನಿಯೂ ಇಲ್ಲ. ॥ ೩೨ ॥

ಧನ ಮತ್ತು ಇಂದ್ರಿಯಗಳ ವಿಷಯಗಳನ್ನು ಚಿಂತಿಸುತ್ತಿದ್ದರೆ ಮನುಷ್ಯನ ಎಲ್ಲ ಪುರುಷಾರ್ಥಗಳು ನಾಶಹೊಂದುವುವು. ಏಕೆಂದರೆ, ಇವುಗಳ ಚಿಂತನೆಯಿಂದ ಅವನು ಜ್ಞಾನ-ವಿಜ್ಞಾನಗಳಿಂದ ಭ್ರಷ್ಟನಾಗಿ ಮರ-ಬಳ್ಳಿಗಳೇ ಮುಂತಾದ ಸ್ಥಾವರ ಯೋನಿಯಲ್ಲಿ ಹುಟ್ಟುತ್ತಾನೆ. ॥ ೩೩ ॥ ಅದಕ್ಕಾಗಿ ಅಜ್ಞಾನಾಂಧಕಾರದಿಂದ ದಾಟಿಹೋಗುವ ಇಚ್ಛೆಯುಳ್ಳವನು ವಿಷಯಗಳಲ್ಲಿ ಎಂದಿಗೂ ಆಸಕ್ತನಾಗಬಾರದು. ಏಕೆಂದರೆ, ಇದು ಧರ್ಮ, ಅರ್ಥ, ಕಾಮ, ಮೋಕ್ಷ ಇವುಗಳ ಪ್ರಾಪ್ತಿಯಲ್ಲಿ ದೊಡ್ಡ ಬಾಧಕವಾಗಿದೆ. ॥ ೩೪ ॥ ಈ ನಾಲ್ಕು ಪುರುಷಾರ್ಥಗಳಲ್ಲಿ ಎಲ್ಲಕ್ಕಿಂತ ಶ್ರೇಷ್ಠವಾದುದು ಮೋಕ್ಷವಾಗಿದೆ. ಏಕೆಂದರೆ ಉಳಿದ ಮೂರು ಪುರುಷಾರ್ಥಗಳಲ್ಲಿಯೂ ಕಾಲದ ಭಯವು ಅಂಟಿಕೊಂಡೇ ಇರುವುದು. ॥ ೩೫ ॥ ಪ್ರಕೃತಿಯಲ್ಲಿ ಗುಣಗಳ ಕ್ಷೋಭೆಯುಂಟಾದ ನಂತರ ಪ್ರಕಟವಾದ ಎಲ್ಲ ಉತ್ತಮ ಮತ್ತು ಅಧಮ ಭಾವ ಪದಾರ್ಥಗಳಲ್ಲಿ ಸದಾ ಕ್ಷೇಮವಾಗಿಯೇ ಇರುವಂತಹುದು ಯಾವುದೂ ಇಲ್ಲ. ಭಗವಂತನಾದ ಕಾಲನು ಆ ಎಲ್ಲ ಕುಶಲಗಳನ್ನು ತುಳಿದು ಹಾಕುತ್ತಾ ಇರುತ್ತಾನೆ. ॥ ೩೬ ॥

ಆದುದರಿಂದ ಎಲೈ ರಾಜನೇ! ದೇಹ, ಇಂದ್ರಿಯ, ಪ್ರಾಣ, ಬುದ್ಧಿ ಮತ್ತು ಅಹಂಕಾರ ಇವುಗಳಿಂದ ಆವರಿಸಲ್ಪಡುವ ಎಲ್ಲ ಸ್ಥಾವರ-ಜಂಗಮ ಪ್ರಾಣಿಗಳ ಹೃದಯದಲ್ಲಿ ಜೀವಕ್ಕೆ ನಿಯಾಮಕನಾಗಿ, ಅಂತರ್ಯಾಮಿಯಾಗಿ ಆತ್ಮರೂಪದಿಂದ ಎಲ್ಲೆಲ್ಲಿಯೂ ಬೆಳಗುತ್ತಿರುವ ಪರಮಾತ್ಮನನ್ನು 'ಸೋಽಹಮಸ್ಮಿ' 'ನಾನೇ ಆಗಿದ್ದೇನೆ' ಎಂದು ನೀನು ತಿಳಿ. ॥ ೩೭ ॥ ಅಜ್ಞಾನವಶದಿಂದ ಹೂಮಾಲೆಯಲ್ಲಿ ಸರ್ಪವೆಂಬ ಬುದ್ಧಿಯುಂಟಾದರೂ ಅದು ಹೂಮಾಲೆಯೆಂಬ ಜ್ಞಾನ ಉಂಟಾದಾಗ ತೊಲಗಿಹೋಗುವಂತೆ – ವಿವೇಕವುಂಟಾದಾಗ ತೊಲಗಿ ಹೋಗುವಂತಹ ಈ ಮಾಯಾಮಯವಾದ ಪ್ರಪಂಚವು ಯಾವನಲ್ಲಿ ಕಾರ್ಯಕಾರಣ ರೂಪದಲ್ಲಿ ಕಾಣಿಸುತ್ತದೆಯೋ, ಯಾರು ಕರ್ಮಫಲಗಳಿಂದ ಕಲುಷಿತವಾದ ಪ್ರಕೃತಿಯಿಂದ ಹೊರಗಿರುತ್ತಾನೋ, ಆ ನಿತ್ಯಮುಕ್ತನೂ, ನಿರ್ಮಲನೂ, ಜ್ಞಾನಸ್ವರೂಪನೂ ಆದ ಪರಮಾತ್ಮನನ್ನು ನೀನು ಹೊಂದುತ್ತಿರುವೆ. ॥ ೩೮ ॥ ಸಂತರಾದ ಮಹಾತ್ಮರು ಆವನ ಚರಣಕಮಲಗಳ ಬೆರಳುಗಳ ದಳಗಳಿಂದ ಹೊರಹೊಮ್ಮುವ ಕಾಂತಿಯನ್ನು ಸ್ಮರಿಸುತ್ತಾ ಕರ್ಮಗಳಿಂದ ಕಟ್ಟಲ್ಪಟ್ಟ ಅಹಂಕಾರವೆಂಬ ಹೃದಯಗ್ರಂಥಿಯನ್ನು ಭಿನ್ನ-ಭಿನ್ನಗೊಳಿಸುತ್ತಾರೆ. ಎಲ್ಲ ಇಂದ್ರಿಯಗಳನ್ನು ಪ್ರತ್ಯಾಹಾರದಿಂದ ಹಿಂದಕ್ಕೆ ಸೆಳೆದುಕೊಂಡು ವಿಷಯಶೂನ್ಯವನ್ನಾಗಿ ಮಾಡುವ ಸಂನ್ಯಾಸಿಗಳೂ ಕತ್ತರಿಸಿಹಾಕಲು ಅತಿಕಷ್ಟಸಾಧ್ಯವಾಗಿರುವ ಆ ಹೃದಯದ ಗಂಟನ್ನು ಆದರಿಂದ ಸುಲಭವಾಗಿ ಕತ್ತರಿಸಿಹಾಕುವರು. ಆದುದರಿಂದ ನೀನು ಸರ್ವಾಶ್ರಯನಾದ ಭಗವಾನ್ ವಾಸುದೇವನನ್ನು ಭಜಿಸು. ॥ ೩೯ ॥

ಕೃಚ್ಛ್ರೋ ಮಹಾನಿಹ ಭವಾರ್ಣವಮಪ್ಲವೇಶಾಂ
ಷಡ್ವರ್ಗನಕ್ರಮಸುಖೇನ ತಿತೀರ್ಷಂತಿ ।
ತತ್ತ್ವಂ ಹರೇರ್ಭಗವತೋ ಭಜನೀಯಮಂಘ್ರಿಂ
ಕೃತ್ವೋಡುಪಂ ವ್ಯಸನಮುತ್ತರ ದುಸ್ತರಾರ್ಣಮ್ ॥ ೪೦ ॥

ಮನಸ್ಸು ಮತ್ತು ಇಂದ್ರಿಯಗಳೆಂಬ ಮೊಸಳೆಗಳಿಂದ ತುಂಬಿರುವ ಈ ಸಂಸಾರಸಾಗರವನ್ನು ಯೋಗವೇ ಮುಂತಾದ ದುಷ್ಕರವಾದ ಸಾಧನೆಗಳಿಂದ ದಾಟಲು ಕೆಲವರು ಬಯಸುತ್ತಾರೆ. ಅವರು ಅದನ್ನು ದಾಟುವುದು ಕಠಿಣವೇ ಆಗಿದೆ. ಏಕೆಂದರೆ, ಅವರಿಗೆ ಶ್ರೀಹರಿಯೆಂಬ ಅಂಬಿಗನ ಆಶ್ರಯವಿರುವುದಿಲ್ಲ. ಆದುದರಿಂದ ಎಲೈ ರಾಜನೇ! ನೀನು ಆರಾಧಿಸಲು ಯೋಗ್ಯವಾದ ಭಗವಂತನ ಚರಣಕಮಲಗಳನ್ನು ಹಡಗನ್ನಾಗಿಸಿಕೊಂಡು ಅನಾಯಾಸವಾಗಿ ಈ ದುಸ್ತರವಾದ ಸಮುದ್ರವನ್ನು ದಾಟಿಬಿಡು. ॥ ೪೦ ॥

ಮೈತ್ರೇಯ ಉವಾಚ

ಸ ಏವಂ ಬ್ರಹ್ಮಪುತ್ರೇಣ ಕುಮಾರೇಣಾತ್ಮಮೇಧಸಾ ।
ದರ್ಶಿತಾತ್ಮಗತಿಃ ಸಮ್ಯಕ್ಪ್ರಶಸ್ಯೋವಾಚ ತಂ ನೃಪಃ ॥ ೪೧ ॥

ಶ್ರೀಮೈತ್ರೇಯರು ಹೇಳುತ್ತಾರೆ – ಎಲೈ ವಿದುರನೇ! ಬ್ರಹ್ಮದೇವರ ಪುತ್ರರಾದ ಆತ್ಮಜ್ಞಾನಿ ಸನತ್ಕುಮಾರರಿಂದ ಈ ವಿಧವಾಗಿ ಆತ್ಮತತ್ತ್ವವನ್ನು ಉಪದೇಶಪಡೆದ ಪೃಥುಮಹಾರಾಜನು ಅವರನ್ನು ಬಹಳವಾಗಿ ಪ್ರಶಂಸಿಸುತ್ತಾ ಇಂತೆಂದನು. ॥ ೪೧ ॥

ರಾಜೋವಾಚ

ಕೃತೋ ಮೇಽನುಗ್ರಹಃ ಪೂರ್ವಂ ಹರಿಣಾಽಽರ್ತಾನುಕಂಪಿನಾ ।
ತಮಾಪಾದಯಿತುಂ ಬ್ರಹ್ಮನ್ ಭಗವನ್ಯೂಯಮಾಗತಾಃ ॥ ೪೨ ॥

ನಿಷ್ಪಾದಿತಶ್ಚ ಕಾರ್ತ್ಸ್ನ್ಯೇನ ಭಗವದ್ಭಿರ್ಘೃಣಾಲುಭಿಃ ।
ಸಾಧೂಚ್ಛಿಷ್ಟಂ ಹಿ ಮೇ ಸರ್ವಮಾತ್ಮನಾ ಸಹ ಕಿಂ ದದೇ ॥ ೪೩ ॥

ಪ್ರಾಣಾ ದಾರಾಃ ಸುತಾ ಬ್ರಹ್ಮನ್ಗೃಹಾಶ್ಚ ಸಪರಿಚ್ಛದಾಃ ।
ರಾಜ್ಯಂ ಬಲಂ ಮಹೀ ಕೋಶ ಇತಿ ಸರ್ವಂ ನಿವೇದಿತಮ್ ॥ ೪೪ ॥

ಸೈನಾಪತ್ಯಂ [illegible] ರಾಜ್ಯಂ ಚ ದಂಡನೇತೃತ್ವಮೇವ ಚ ।
ಸರ್ವಲೋಕಾಧಿಪತ್ಯಂ ಚ ವೇದಶಾಸ್ತ್ರವಿದರ್ಹತಿ ॥ ೪೫ ॥

ಸ್ವಮೇವ ಬ್ರಾಹ್ಮಣೋ ಭುಂಕ್ತೇ ಸ್ವಂ ವಸ್ತೇ ಸ್ವಂ ದದಾತಿ ಚ ।
ತಸ್ಯೈವಾನುಗ್ರಹೇಣಾನ್ನಂ ಭುಂಜತೇ ಕ್ಷತ್ರಿಯಾದಯಃ ॥ ೪೬ ॥

ಯೈರೀದೃಶೀ ಭಗವತೋ ಗತಿರಾತ್ಮವಾದೇ
ಏಕಾಂತತೋ ನಿಗಮಿಭಿಃ ಪ್ರತಿಪಾದಿತಾ ನಃ ।
ತುಷ್ಯಂತ್ವದಭ್ರಕರುಣಾಃ ಸ್ವಕೃತೇನ ನಿತ್ಯಂ
ಕೋ ನಾಮ ತತ್ಪ್ರತಿಕರೋತಿ ವಿನೋದಪಾತ್ರಮ್ ॥ ೪೭ ॥

ಪೃಥುರಾಜನು ಹೇಳಿದನು – ಪೂಜ್ಯರೇ! ದೀನದಯಾಳುವಾದ ಶ್ರೀಹರಿಯು ಮೊದಲೇ ನನ್ನ ಮೇಲೆ ಕೃಪೆದೋರಿದ್ದನು. ಅದನ್ನು ಪೂರ್ಣಗೊಳಿಸಲೆಂದೇ ತಾವು ದಯಮಾಡಿಸಿರುವಿರಿ. ॥ ೪೨ ॥ ನೀವು ಅತ್ಯಂತ ಕರುಣಾಳುಗಳು. ಇಲ್ಲಿಗೆ ನೀವು ಬಂದಿರುವ ಉದ್ದೇಶವನ್ನು ಚೆನ್ನಾಗಿ ಸಂಪನ್ನವಾಗಿಸಿರುವಿರಿ. ಇದರ ಬದಲಿಗೆ ಈಗ ನಾನು ನಿಮಗೆ ಏನನ್ನು ಸಮರ್ಪಿಸಲಿ? ನನ್ನ ಬಳಿ ನನ್ನ ದೇಹ ಮತ್ತು ಅದರೊಡನೆ ಇರುವುದೆಲ್ಲವೂ ಮಹಾಪುರುಷರ ಪ್ರಸಾದವೇ ಆಗಿದೆ. ॥ ೪೩ ॥ ಬ್ರಾಹ್ಮಣೋತ್ತಮರೇ! ನನ್ನ ಬಳಿ ಇರುವ – ಪ್ರಾಣ, ಪತ್ನೀ, ಪುತ್ರರು, ಎಲ್ಲ ಬಗೆಯ ಸಾಮಗ್ರಿಗಳಿಂದ ತುಂಬಿರುವ ಅರಮನೆ, ರಾಜ್ಯ, ಸೇನೆ, ಪೃಥಿವಿ, ಭಂಡಾರ ಇವೆಲ್ಲವೂ ನಿಮ್ಮದೇ ಆಗಿವೆ. ಆದ್ದರಿಂದ ಇವೆಲ್ಲವನ್ನು ನಿಮ್ಮ ಅಡಿದಾವರೆಗಳಲ್ಲೇ ಸಮರ್ಪಿಸುತ್ತಿದ್ದೇನೆ. ॥ ೪೪ ॥ ವಾಸ್ತವವಾಗಿ ಯಾವರೋ ಸೇನಾಪತಿತ್ವ, ರಾಜ್ಯದ ಪಟ್ಟ, ದಂಡವನ್ನು ವಿಧಿಸುವ ಅಧಿಕಾರ, ಎಲ್ಲ ಲೋಕಗಳ ಆಧಿಪತ್ಯವನ್ನು ಪಡೆದು ನಿರ್ವಹಿಸುವ ಅಧಿಕಾರ, ವೇದ-ಶಾಸ್ತ್ರಗಳನ್ನರಿತ ಬ್ರಾಹ್ಮಣನಿಗೇ ಇದೆ. ॥ ೪೫ ॥ ಬ್ರಾಹ್ಮಣನು ತನ್ನದಾದುದನ್ನೇ ಉಣ್ಣುವನು. ತನ್ನದನ್ನೇ ಉಡುವನು, ತನ್ನದನ್ನೇ ದಾನಮಾಡುವನು. ಬೇರೆ ಕ್ಷತ್ರಿಯರೇ ಮುಂತಾದವರಾದರೋ ಅವರ ಕೃಪೆಯಿಂದಲೇ ತಿನ್ನಲು ಅನ್ನವನ್ನು ಪಡೆಯುತ್ತಾರೆ. ॥ ೪೬ ॥ ವೇದಪಾರಂಗತರಾದ ನೀವು ಅಧ್ಯಾತ್ಮತತ್ತ್ವವನ್ನು ವಿಚಾರಪೂರ್ವಕವಾಗಿ ತಿಳಿಸುತ್ತಾ 'ಶ್ರೀಭಗವಂತನಲ್ಲಿ ಏಕಾಂತಭಕ್ತಿಯನ್ನು ಇರಿಸುವುದೇ ಆತನನ್ನು ಪಡೆಯಲು ಪ್ರಧಾನವಾದ ಸಾಧನ' ಎಂಬುದನ್ನು ನಮಗೆ ನಿಶ್ಚಿತವಾಗಿ ತಿಳಿಸಿರುವಿರಿ. ನೀವು ಪರಮಕೃಪಾಳುಗಳು. ಈ ದೀನೋದ್ಧಾರ ಕಾರ್ಯವನ್ನು ಮಾಡುವುದರಿಂದಲೇ ನೀವು ಸಂತುಷ್ಟರಾಗಿರುವಿರಿ. ಈ ಉಪಕಾರಕ್ಕೆ ಬದಲಾಗಿ ಯಾರಾದರೂ ಏನನ್ನಾದರೂ ಕೊಡಬಲ್ಲರೇ? ಅದಕ್ಕಾಗಿ ಪ್ರತ್ಯುಪಕಾರ ಮಾಡುವೆನೆಂದು ಪ್ರಯತ್ನಿಸುವುದೂ ಹಾಸ್ಯಾಸ್ಪದವೇ ಆಗಿದೆ. ॥ ೪೭ ॥

ಮೈತ್ರೇಯ ಉವಾಚ

ತ ಆತ್ಮಯೋಗಪತಯ ಆದಿರಾಜೇನ ಪೂಜಿತಾಃ ।
ಶೀಲಂ ತದೀಯಂ ಶಂಸಂತಃ ಖೇಽಭೂವನ್ಮಿಷತಾಂ ನೃಣಾಮ್ ॥ ೪೮ ॥

ಶ್ರೀಮೈತ್ರೇಯರು ಹೇಳುತ್ತಾರೆ – ಎಲೈ ವಿದುರನೇ! ಮತ್ತೆ ಆದಿರಾಜನಾದ ಪೃಥುವು ಆತ್ಮಜ್ಞಾನಿಗಳಲ್ಲಿ ಶ್ರೇಷ್ಠರಾದ ಸನಕಾದಿಗಳನ್ನು ಪೂಜಿಸಿದನು. ಅವರು ರಾಜನ ಶೀಲವನ್ನು ಕೊಂಡಾಡುತ್ತಾ ಎಲ್ಲರೂ ನೋಡುತ್ತಿರುವಂತೆ ಆಕಾಶಮಾರ್ಗವಾಗಿ ಹೊರಟುಹೋದರು. ॥ ೪೮ ॥

ವೈನ್ಯಸ್ತು ಧುರ್ಯೋ ಮಹತಾಂ ಸಂಸ್ಥಿತ್ಯಾಧ್ಯಾತ್ಮಶಿಕ್ಷಯಾ ।
ಆಪ್ತಕಾಮಮಿವಾತ್ಮಾನಂ ಮೇನ ಆತ್ಮನ್ಯವಸ್ಥಿತಃ ॥ ೪೯ ॥

ಕರ್ಮಾಣಿ ಚ ಯಥಾಕಾಲಂ ಯಥಾದೇಶಂ ಯಥಾಬಲಮ್ ।
ಯಥೋಚಿತಂ ಯಥಾವಿತ್ತಮಕರೋದ್ಬ್ರಹ್ಮಸಾತ್ಕೃತಮ್ ॥ ೫೦ ॥

ಫಲಂ ಬ್ರಹ್ಮಣಿ ವಿನ್ಯಸ್ಯ ನಿರ್ವಿಷಂಗಃ ಸಮಾಹಿತಃ ।
ಕರ್ಮಾಧ್ಯಕ್ಷಂ ಚ ಮನ್ವಾನ ಆತ್ಮಾನಂ ಪ್ರಕೃತೇಃ ಪರಮ್ ॥ ೫೧ ॥

ಗೃಹೇಷು ವರ್ತಮಾನೋಽಪಿ ಸ ಸಾಮ್ರಾಜ್ಯಶ್ರಿಯಾನ್ವಿತಃ ।
ನಾಸಜ್ಜತೇಂದ್ರಿಯಾರ್ಥೇಷು ನಿರಹಂಮತಿರರ್ಕವತ್ ॥ ೫೨ ॥

ಏವಮಧ್ಯಾತ್ಮಯೋಗೇನ ಕರ್ಮಾಣ್ಯನುಸಮಾಚರನ್ ।
ಪುತ್ರಾನುತ್ಪಾದಯಾಮಾಸ ಪಂಚಾರ್ಚಿಷ್ಯಾತ್ಮಸಮ್ಮತಾನ್ ॥ ೫೩ ॥

ವಿಜಿತಾಶ್ವಂ ಧೂಮ್ರಕೇಶಂ ಹರ್ಯಕ್ಷಂ ದ್ರವಿಣಂ ವೃಕಮ್ ।
ಸರ್ವೇಷಾಂ ಲೋಕಪಾಲಾನಾಂ ದಧಾರೈಕಃ ಪೃಥುರ್ಗುಣಾನ್ ॥ ೫೪ ॥

ಗೋಪೀಥಾಯ ಜಗತ್ ಸೃಷ್ಟೇಃ
ಕಾಲೇ ಸ್ವೇ ಸ್ವೇಽಚ್ಯುತಾತ್ಮಕಃ ।
ಮನೋವಾಗ್ವೃತ್ತಿಭಿಃ ಸೌಮ್ಯೈ-
ರ್ಗುಣೈಃ ಸಂರಂಜಯನ್ ಪ್ರಜಾಃ ॥ ೫೫ ॥

ರಾಜೇತ್ಯಧಾನ್ನಾಮಧೇಯಂ ಸೋಮರಾಜ ಇವಾಪರಃ ।
ಸೂರ್ಯವದ್ವಿಸೃಜನ್ಗೃಹ್ಣನ್ ಪ್ರತಪಂಶ್ಚ ಭುವೋ ವಸು ॥ ೫೬ ॥

ದುರ್ಧರ್ಷಸ್ತೇಜಸೇವಾಗ್ನಿರ್ಮಹೇಂದ್ರ ಇವ ದುರ್ಜಯಃ ।
ತಿತಿಕ್ಷಯಾ ಧರಿತ್ರೀವ ದ್ಯೌರಿವಾಭೀಷ್ಟದೋ ನೃಣಾಮ್ ॥ ೫೭ ॥

ವರ್ಷತಿ ಸ್ಮ ಯಥಾಕಾಮಂ ಪರ್ಜನ್ಯ ಇವ ತರ್ಪಯನ್ ।
ಸಮುದ್ರ ಇವ ದುರ್ಬೋಧಃ ಸತ್ತ್ವೇನಾಚಲರಾಡಿವ ॥ ೫೮ ॥

ಮಹಾತ್ಮರಲ್ಲಿ ಅಗ್ರಗಣ್ಯನಾದ ಪೃಥುವು ಅವರಿಂದ ಆತ್ಮೋಪದೇಶವನ್ನು ಪಡೆದು ಚಿತ್ತದ ಏಕಾಗ್ರತೆಯಿಂದ ಆತ್ಮನಲ್ಲೇ ನೆಲೆಸಿದ ಕಾರಣ ತನ್ನನ್ನು ಕೃತಕೃತ್ಯನೆಂದೇ ಭಾವಿಸಿದನು. ॥ ೪೯ ॥ ಅವನು ಬ್ರಹ್ಮಾರ್ಪಣ ಬುದ್ಧಿಯಿಂದ ಸಮಯ, ಸ್ಥಾನ, ಶಕ್ತಿ, ನ್ಯಾಯ, ಧನ ಇವುಗಳನುಸಾರ ಎಲ್ಲ ಕರ್ಮಗಳನ್ನು ಮಾಡುತ್ತಿದ್ದನು. ॥ ೫೦ ॥ ಹೀಗೆ ಏಕಾಗ್ರಚಿತ್ತದಿಂದ ಸಮಸ್ತ ಕರ್ಮಗಳ ಫಲವನ್ನು ಪರಮಾತ್ಮನಿಗೆ ಅರ್ಪಿಸಿ, ಆತ್ಮವನ್ನು ಕರ್ಮಗಳ ಸಾಕ್ಷಿ ಹಾಗೂ ಪ್ರಕೃತಿಗಿಂತ ಅತೀತವೆಂದು ನೋಡುವುದರಿಂದ ಸಂಪೂರ್ಣವಾಗಿ ನಿರ್ಲಿಪ್ತನಾಗಿದ್ದನು. ॥ ೫೧ ॥ ಭಗವಾನ್ ಸೂರ್ಯನು ಎಲ್ಲೆಡೆಗಳಲ್ಲಿ ಪ್ರಕಾಶವನ್ನು ಚೆಲ್ಲಿದರೂ ವಸ್ತುಗಳ ಗುಣ-ದೋಷಗಳಿಂದ ನಿರ್ಲಿಪ್ತನಾಗಿರುವಂತೆ, ಪೃಥುಸಾರ್ವಭೌಮನು ಸಾಮ್ರಾಜ್ಯಲಕ್ಷ್ಮಿಯಿಂದ ಸಂಪನ್ನನಾಗಿ ಗೃಹಸ್ಥಾಶ್ರಮದಲ್ಲಿಯೇ ಇದ್ದರೂ ಅಹಂಕಾರಶೂನ್ಯನಾಗಿದ್ದುದರಿಂದ ಅವನು ಇಂದ್ರಿಯಗಳ ವಿಷಯದಲ್ಲಿ ಆಸಕ್ತನಾಗಲಿಲ್ಲ. ॥ ೫೨ ॥

ಪೃಥುಮಹಾರಾಜನು ಹೀಗೆ ಆತ್ಮನಿಷ್ಠನಾಗಿ ಎಲ್ಲ ಕರ್ತವ್ಯ-ಕರ್ಮಗಳನ್ನು ಯಥೋಚಿತವಾಗಿ ಮಾಡುತ್ತಾ ತನ್ನ ಮಡದಿಯಾದ ಅರ್ಚಿಯಲ್ಲಿ ತನಗೆ ಅನುರೂಪರಾದ ಐದು ಪುತ್ರರನ್ನು ಪಡೆದನು. ॥ ೫೩ ॥ ವಿಜಿತಾಶ್ವ, ಧೂಮ್ರಕೇಶ, ಹರ್ಯಕ್ಷ, ದ್ರವಿಣ, ವೃಕ ಎಂಬ ಹೆಸರು ಅವರದಾಗಿತ್ತು. ಮಹಾರಾಜನಾದ ಪೃಥುವು ಭಗವಂತನ ಅಂಶನೇ ಆಗಿದ್ದನು. ಅವನು ಕಾಲ-ಕಾಲಗಳಲ್ಲಿ ಅವಶ್ಯಕತೆಗೆ ಅನುಗುಣವಾಗಿ ಜಗತ್ತಿನ ಪ್ರಾಣಿಗಳನ್ನು ರಕ್ಷಿಸುವುದಕ್ಕಾಗಿ ತಾನೊಬ್ಬನೇ ಎಲ್ಲ ಲೋಕಪಾಲಕರ ಗುಣಗಳನ್ನು ಧರಿಸಿದ್ದನು. ತನ್ನ ಉದಾರವಾದ ಮನಸ್ಸು, ಪ್ರಿಯವೂ-ಹಿತಕರವೂ ಆದ ಸವಿಮಾತು, ಮನೋಹರವಾದ ಮೂರ್ತಿ ಮತ್ತು ಸೌಮ್ಯವಾದ ಗುಣಗಳಿಂದ ಪ್ರಜಾರಂಜನೆಯನ್ನು ಮಾಡುತ್ತಿದ್ದುದರಿಂದ ಮತ್ತೊಬ್ಬ ಚಂದ್ರನಂತೆ 'ರಾಜ' ಎಂಬ ಹೆಸರನ್ನು ಅನ್ವರ್ಥಗೊಳಿಸಿದನು. ಸೂರ್ಯನು ಬೇಸಿಗೆಯ ಕಾಲದಲ್ಲಿ ಪೃಥಿವಿಯಿಂದ ನೀರನ್ನು ಸೆಳೆದುಕೊಂಡು ಮಳೆಗಾಲದಲ್ಲಿ ಅದನ್ನು ಮಳೆಯರೂಪದಲ್ಲಿ ಭೂಮಿಗೆ ಸುರಿಸುವನು ಹಾಗೂ ತನ್ನ ಕಿರಣಗಳಿಂದ ಎಲ್ಲರಿಗೆ ಬಿಸಿಲನ್ನು ಉಂಟುಮಾಡುತ್ತಾನೆ. ಹಾಗೆಯೇ ಪೃಥುಚಕ್ರವರ್ತಿಯು ಪ್ರಜೆಗಳಿಂದ ಕಪ್ಪ-ಕಾಣಿಕೆಗಳನ್ನು ತೆಗೆದುಕೊಂಡು ಅದನ್ನು ದುರ್ಭಿಕ್ಷವೇ ಮುಂತಾದ ಕಷ್ಟಕಾಲದಲ್ಲಿ ಕೊಡುಗೈಯಿಂದ ಪ್ರಜೆಗಳ ಹಿತದಲ್ಲಿ ತೊಡಗಿಸುತ್ತಿದ್ದನು. ಹೀಗೆ ಎಲ್ಲರ ಮೇಲೆಯೂ ತನ್ನ ಪ್ರಭಾವವನ್ನು ಬೀರುತ್ತಿದ್ದನು. ॥ ೫೪-೫೬ ॥ ಅವನು ಅಗ್ನಿಯಂತೆ ದುರ್ಧರ್ಷನೂ, ಇಂದ್ರನಂತೆ ಅಜೇಯನೂ, ಪೃಥಿವಿಯಂತೆ ಕ್ಷಮಾಶೀಲನೂ, ಸ್ವರ್ಗದಂತೆ ಸಮಸ್ತ ಮನುಷ್ಯರ ಎಲ್ಲ ಕಾಮನೆಗಳನ್ನು ಪೂರೈಸುತ್ತಿದ್ದನು. ॥ ೫೭ ॥ ಕಾಲ-ಕಾಲಗಳಲ್ಲಿ ಪ್ರಜೆಗಳನ್ನು, ತೃಪ್ತಿಪಡಿಸಲಿಕ್ಕಾಗಿ ಮೇಘದಂತೆ ಧಾರಾಳವಾಗಿ ಅವರೆಲ್ಲರ ಅಭೀಷ್ಟಪದಾರ್ಥಗಳನ್ನು ಮುಕ್ತಹಸ್ತದಿಂದ ಪೂರೈಸುತ್ತಿದ್ದನು. ಅವನು ಸಮುದ್ರದಂತೆ ಗಂಭೀರನೂ, ಪರ್ವತರಾಜ ಸುಮೇರುವಿನಂತೆ ಧೈರ್ಯಶಾಲಿಯೂ ಆಗಿದ್ದನು. ॥ ೫೮ ॥

ಪೃಥುಮಹಾರಾಜನು ದುಷ್ಟರನ್ನು ದಮನಮಾಡುವುದರಲ್ಲಿ ಯಮಧರ್ಮನಂತೆಯೂ, ಆಶ್ಚರ್ಯಪೂರ್ಣವಾದ ವಸ್ತುಗಳ

ಧರ್ಮರಾಡಿವ ಶಿಕ್ಷಾಯಾಮಾಶ್ಚರ್ಯೇ ಹಿಮವಾನಿವ ।
ಕುಬೇರ ಇವ ಕೋಶಾಢ್ಯೋ ಗುಪ್ತಾರ್ಥೋ ವರುಣೋ ಯಥಾ
॥ ೫೯ ॥

ಮಾತರಿಶ್ವೇವ ಸರ್ವಾತ್ಮಾ ಬಲೇನ ಸಹಸೌಜಸಾ ।
ಅವಿಷಹ್ಯತಯಾ ದೇವೋ ಭಗವಾನ್ ಭೂತರಾಡಿವ
॥ ೬೦ ॥

ಕಂದರ್ಪ ಇವ ಸೌಂದರ್ಯೇ ಮನಸ್ವೀ ಮೃಗರಾಡಿವ ।
ವಾತ್ಸಲ್ಯೇ ಮನುವನ್ನೃಣಾಂ ಪ್ರಭುತ್ವೇ ಭಗವಾನಜಃ
॥ ೬೧ ॥

ಬೃಹಸ್ಪತಿರ್ಬ್ರಹ್ಮವಾದೇ ಆತ್ಮವತ್ತ್ವೇ ಸ್ವಯಂ ಹರಿಃ ।
ಭಕ್ತ್ಯಾ ಗೋಗುರುವಿಪ್ರೇಷು ವಿಷ್ವಕ್ಸೇನಾನುವರ್ತಿಷು ।
ಹ್ರಿಯಾ ಪ್ರಶ್ರಯಶೀಲಾಭ್ಯಾಮಾತ್ಮತುಲ್ಯಃ ಪರೋದ್ಯಮೇ
॥ ೬೨ ॥

ಕೀರ್ತ್ಯೋರ್ಧ್ವಗೀತಯಾ ಪುಂಭಿಸ್ತ್ರೈಲೋಕ್ಯೇ ತತ್ರ ತತ್ರ ಹ ।
ಪ್ರವಿಷ್ಟಃ ಕರ್ಣರಂಧ್ರೇಷು ಸ್ತ್ರೀಣಾಂ ರಾಮಃ ಸತಾಮಿವ
॥ ೬೩ ॥

ಸಂಗ್ರಹದಲ್ಲಿ ಹಿಮಾಲಯದಂತೆಯೂ, ಭಂಡಾರದ ಸಮೃದ್ಧಿಯಲ್ಲಿ ಕುಬೇರನಂತೆಯೂ, ಧನವನ್ನು ಗುಪ್ತವಾಗಿಡುವುದರಲ್ಲಿ ವರುಣನಂತೆಯೂ ಆಗಿದ್ದನು. ॥ ೫೯ ॥ ಶಾರೀರಿಕ ಬಲದಲ್ಲಿ, ಇಂದ್ರಿಯಗಳ ಪಾಟವದಲ್ಲಿ, ಪರಾಕ್ರಮದಲ್ಲಿ, ಎಲ್ಲೆಡೆ ಸಂಚರಿಸುವ ವಾಯುವಿನಂತೆಯೂ, ಸಹಿಸಲಸದಳವಾದ ತೇಜಸ್ಸಿನಲ್ಲಿ ಭಗವಾನ್ ಶಂಕರನಂತೆಯೇ ಆಗಿದ್ದನು. ॥ ೬೦ ॥ ಸೌಂದರ್ಯದಲ್ಲಿ ಮನ್ಮಥನಂತೆಯೂ, ಉತ್ಸಾಹದಲ್ಲಿ ಸಿಂಹದಂತೆಯೂ, ವಾತ್ಸಲ್ಯದಲ್ಲಿ ಮನುವಿನಂತೆಯೂ, ಮನುಷ್ಯರ ಅಧಿಪತ್ಯದಲ್ಲಿ ಸರ್ವಸಮರ್ಥ ಬ್ರಹ್ಮದೇವನಿಗೆ ಸಮಾನನಾಗಿದ್ದನು. ॥ ೬೧ ॥ ಬ್ರಹ್ಮವಿಚಾರದಲ್ಲಿ ಬೃಹಸ್ಪತಿಯಂತೆಯೂ, ಇಂದ್ರಿಯ ವಿಜಯದಲ್ಲಿ ಸಾಕ್ಷಾತ್ ಶ್ರೀಹರಿಯನ್ನು ಹೋಲುತ್ತಿದ್ದನು. ಗೋವುಗಳು, ಬ್ರಾಹ್ಮಣರು, ಗುರುಹಿರಿಯರು ಮತ್ತು ಭಗವದ್ಭಕ್ತರ ವಿಷಯದಲ್ಲಿ ಭಕ್ತಿ, ಲಜ್ಜೆ, ವಿನಯಶೀಲತೆ, ಪರೋಪಕಾರಗಳೇ ಮುಂತಾದ ಗುಣಸಂಪತ್ತಿನಲ್ಲಿ ತನಗೆ-ತಾನೇ ಸಮಾನನಾಗಿದ್ದನು; ಅನುಪಮನಾಗಿದ್ದನು. ॥ ೬೨ ॥ ಮೂರು ಲೋಕಗಳಲ್ಲಿಯೂ ಅವನ ಕೀರ್ತಿಯು ಉಚ್ಚಸ್ವರದಲ್ಲಿ ಹಾಡಲ್ಪಡುತ್ತಿತ್ತು. ಇದರಿಂದ ಅವನು ಸತ್ಪುರುಷರ ಹೃದಯಗಳಲ್ಲಿ ಶ್ರೀರಾಮನು ಹೇಗೋ ಹಾಗೆಯೇ ಸ್ತ್ರೀ ಪುರುಷರೆಲ್ಲರ ಕಿವಿಗಳಲ್ಲಿ ಪ್ರವೇಶಪಡೆದುಕೊಂಡಿದ್ದನು. (ಅಂದರೆ ಎಲ್ಲೆಡೆ ಅವನ ಕೀರ್ತಿ ಚರ್ಚಾಸ್ಪದವಾಗಿತ್ತು.) ॥ ೬೩ ॥

ಇಪ್ಪತ್ತೆರಡನೆಯ ಅಧ್ಯಾಯವು ಮುಗಿಯಿತು. ॥ ೨೨ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಚತುರ್ಥಸ್ಕಂಧೇ ಪೃಥುಚರಿತೇ ದ್ವಾವಿಂಶೋಽಧ್ಯಾಯಃ ॥ ೨೨ ॥

ಇಪ್ಪತ್ತಮೂರನೆಯ ಅಧ್ಯಾಯ

ಪೃಥುಮಹಾರಾಜನ ತಪಸ್ಸು ಮತ್ತು ಪರಮಪದದ ಪ್ರಾಪ್ತಿ

ಮೈತ್ರೇಯ ಉವಾಚ

ದೃಷ್ಟ್ವಾಽಽತ್ಮಾನಂ ಪ್ರವಯಸಮೇಕದಾ ವೈನ್ಯ ಆತ್ಮವಾನ್ ।
ಆತ್ಮನಾ ವರ್ಧಿತಾಶೇಷಸ್ವಾನುಸರ್ಗಃ ಪ್ರಜಾಪತಿಃ
॥ ೧ ॥

ಜಗತಸ್ತಸ್ಥುಷಶ್ಚಾಪಿ ವೃತ್ತಿದೋ ಧರ್ಮಭೃತ್ಸತಾಮ್ ।
ನಿಷ್ಪಾದಿತೇಶ್ವರಾದೇಶೋ ಯದರ್ಥಮಿಹ ಜಜ್ಞಿವಾನ್
॥ ೨ ॥

ಆತ್ಮಜೇಷ್ವಾತ್ಮಜಾಂ ನ್ಯಸ್ಯ ವಿರಹಾದ್ರುದತೀಮಿವ ।
ಪ್ರಜಾಸು ವಿಮನಃಸ್ವೇಕಃ ಸದಾರೋಽಗಾತ್ತಪೋವನಮ್
॥ ೩ ॥

ಶ್ರೀಮೈತ್ರೇಯರು ಹೇಳುತ್ತಾರೆ – ಪ್ರಜಾಪಾಲಕನಾದ ಪೃಥುವು ಹೀಗೆ ತನ್ನ ಪ್ರಜೆಗಳಿಗಾಗಿ ನಗರ ಗ್ರಾಮಾದಿ ಸರ್ವವಸ್ತುಗಳನ್ನೂ ತಾನೇ ಮಾಡಿಕೊಟ್ಟು, ಸ್ಥಾವರ-ಜಂಗಮರೂಪವಾದ ಎಲ್ಲ ಪ್ರಾಣಿಗಳಿಗೂ ಜೀವನವೃತ್ತಿಗಳನ್ನು ಕಲ್ಪಿಸಿ ಸತ್ಪುರುಷರ ಧರ್ಮವನ್ನು ಪಾಲಿಸಿದನು. ತಾನು ಯಾವ ಕಾರಣಕ್ಕಾಗಿ ಜನಿಸಿದ್ದನೋ ಆ ಭಗವದಾಜ್ಞೆಯನ್ನು ನೆರವೇರಿಸಿದಂತಾಯಿತು ಎಂದು ಮನಗಂಡನು. ತನಗೆ ವೃದ್ಧಾಪ್ಯವು ಬಂದಿದೆ; ಇನ್ನು ನನಗೆ ರಾಜ್ಯದ ಕರ್ತವ್ಯವಿಲ್ಲ ಎಂಬುದನ್ನೂ ಅರಿತು ಅವನು ತನ್ನ ವಿರಹದಲ್ಲಿ ಅಳುತ್ತಿರುವ ಪುತ್ರಿಯ ಸ್ಥಾನದಲ್ಲಿದ್ದ ಪೃಥಿವಿಯನ್ನು ಪುತ್ರರಿಗೆ ಒಪ್ಪಿಸಿ, ಪ್ರಜಾಜನರು ದುಃಖದಿಂದ ಮರುಗುತ್ತಿರುವಾಗಲೇ ಅವರನ್ನು ಬಿಟ್ಟು ಪತ್ನೀಸಹಿತನಾಗಿ ತಾನೊಬ್ಬನೇ ತಪೋವನಕ್ಕೆ ತೆರಳಿದನು. ॥ ೧-೩ ॥

ತತ್ರಾಪ್ಯದಾಭ್ಯನಿಯಮೋ ವೈಖಾನಸಸುಸಮ್ಮತೇ ।
ಆರಬ್ಧ ಉಗ್ರತಪಸಿ ಯಥಾ ಸ್ವವಿಜಯೇ ಪುರಾ
॥ ೪ ॥

ಕಂದಮೂಲಫಲಾಹಾರಃ ಶುಷ್ಕಪರ್ಣಾಶನಃ ಕ್ವಚಿತ್ ।
ಅಬ್ಭಕ್ಷಃ ಕತಿಚಿತ್ಪಕ್ಷಾನ್ವಾಯುಭಕ್ಷಸ್ತತಃ ಪರಮ್
॥ ೫ ॥

ಗ್ರೀಷ್ಮೇ ಪಂಚತಪಾ ವೀರೋ ವರ್ಷಾಸ್ವಾಸಾರಷಾಣ್ಮುನಿಃ ।
ಆಕಂಠಮಗ್ನಃ ಶಿಶಿರೇ ಉದಕೇ ಸ್ಥಂಡಿಲೇಶಯಃ
॥ ೬ ॥

ತಿತಿಕ್ಷುರ್ಯತವಾಗ್ದಾಂತ ಊರ್ಧ್ವರೇತಾ ಜಿತಾನಿಲಃ ।
ಆರಿರಾಧಯಿಷುಃ ಕೃಷ್ಣಮಚರತ್ತಪ ಉತ್ತಮಮ್
॥ ೭ ॥

ತೇನ ಕ್ರಮಾನುಸಿದ್ಧೇನ ಧ್ವಸ್ತಕರ್ಮಮಲಾಶಯಃ ।
ಪ್ರಾಣಾಯಾಮೈಃ ಸಂನಿರುದ್ಧಷಡ್ವರ್ಗಶ್ಛಿನ್ನಬಂಧನಃ
॥ ೮ ॥

ಸನತ್ಕುಮಾರೋ ಭಗವಾನ್ಯದಾಹಾಧ್ಯಾತ್ಮಿಕಂ ಪರಮ್ ।
ಯೋಗಂ ತೇನೈವ ಪುರುಷಮಭಜತ್ಪುರುಷರ್ಷಭಃ
॥ ೯ ॥

ಭಗವದ್ಧರ್ಮಿಣಃ ಸಾಧೋಃ ಶ್ರದ್ಧಯಾ ಯತತಃ ಸದಾ ।
ಭಕ್ತಿರ್ಭಗವತಿ ಬ್ರಹ್ಮಣ್ಯನನ್ಯವಿಷಯಾಭವತ್
॥ ೧೦ ॥

ತಸ್ಯಾನಯಾ ಭಗವತಃ ಪರಿಕರ್ಮಶುದ್ಧ-
ಸತ್ತ್ವಾತ್ಮನಸ್ತದನು ಸಂಸ್ಮರಣಾನುಪೂರ್ತ್ಯಾ ।
ಜ್ಞಾನಂ ವಿರಕ್ತಿಮದಭೂನ್ನಿಶಿತೇನ ಯೇನ
ಚಿಚ್ಛೇದ ಸಂಶಯಪದಂ ನಿಜಜೀವಕೋಶಮ್ ॥ ೧೧ ॥

ಛಿನ್ನಾನ್ಯಧೀರಧಿಗತಾತ್ಮಗತಿರ್ನಿರೀಹ-
ಸ್ತತ್ತತ್ಯಜೇಽಚ್ಛಿನದಿದಂ ವಯುನೇನ ಯೇನ ।
ತಾವನ್ನ ಯೋಗಗತಿಭಿರ್ಯತಿರಪ್ರಮತ್ತೋ
ಯಾವದ್ಗದಾಗ್ರಜಕಥಾಸು ರತಿಂ ನ ಕುರ್ಯಾತ್ ॥ ೧೨ ॥

ಹಿಂದೆ ಗೃಹಸ್ಥಾಶ್ರಮದಲ್ಲಿದ್ದಾಗ ವ್ರತನಿಷ್ಠನಾಗಿ ಭೂಮಿಯನ್ನು ಜಯಿಸುವುದರಲ್ಲಿ ತೊಡಗಿದ್ದನೋ, ಹಾಗೆಯೇ ಈಗಲೂ ವಾನಪ್ರಸ್ಥಾಶ್ರಮದ ನಿಯಮಾನುಸಾರ ಕಠೋರ ತಪಸ್ಸಿನಲ್ಲಿ ತೊಡಗಿದನು. ॥ ೪ ॥ ಆ ತಪಸ್ಸಿನಲ್ಲಿ ಕೆಲವು ದಿನಗಳ ಕಾಲ ಗೆಡ್ಡೆ-ಗೆಣಸು, ಹಣ್ಣು-ಹಂಪಲುಗಳನ್ನು ಮಾತ್ರವೇ ತಿನ್ನುತ್ತಿದ್ದನು. ಕೆಲವು ದಿನಗಳು ಒಣಗಿದ ಎಲೆಗಳನ್ನು ತಿನ್ನುತ್ತಾ, ಮತ್ತೆ ಕೆಲವುದಿನ ಕೇವಲ ನೀರನ್ನು ಕುಡಿಯುತ್ತಲೂ, ಕೆಲವು ದಿವಸಗಳ ಕಾಲ ಕೇವಲ ಗಾಳಿಯನ್ನೇ ಸೇವಿಸಿ ತಪಸ್ಸು ಮಾಡುತ್ತಿದ್ದನು. ॥ ೫ ॥ ಮುನಿವೃತ್ತಿಯಲ್ಲಿದ್ದ ವೀರವರನು ಬೇಸಿಗೆಯಲ್ಲಿ ನಾಲ್ಕು ದಿಕ್ಕುಗಳಲ್ಲಿ ಅಗ್ನಿಗಳು ಮತ್ತು ಮೇಲ್ಗಡೆಯಲ್ಲಿ ಸುಡುತ್ತಿರುವ ಸೂರ್ಯ ಹೀಗೆ ಪಂಚಾಗ್ನಿಗಳನ್ನು ಸೇವಿಸುತ್ತಿದ್ದನು. ಮಳೆಗಾಲದಲ್ಲಿ ಬಯಲಿನಲ್ಲಿದ್ದು ತನ್ನ ಮೇಲೆ ಸುರಿಯುತ್ತಿದ್ದ ಮಳೆಯ ನೀರನ್ನು ಸಹಿಸುತ್ತಿದ್ದನು. ಚಳಿಗಾಲದಲ್ಲಿ ಕತ್ತಿನವರೆಗೆ ನೀರಿನಲ್ಲಿ ನಿಂತು ತಪಸ್ಸು ಮಾಡುತ್ತಿದ್ದನು. ಅವನು ಪ್ರತಿದಿನವೂ ಮಣ್ಣಿನ ವೇದಿಕೆಯಲ್ಲೇ ಮಲಗುತ್ತಿದ್ದನು. ॥ ೬ ॥ ಅವನು ಚಳಿ-ಸೆಕೆಗಳೇ ಮುಂತಾದ ದ್ವಂದ್ವಗಳನ್ನು ಸಹಿಸುತ್ತಾ ಮಾತು-ಮನಸ್ಸುಗಳನ್ನು ಸಂಯಮಿಸಿಕೊಂಡು ಬ್ರಹ್ಮಚರ್ಯವನ್ನು ಪಾಲಿಸುತ್ತಾ, ಪ್ರಾಣಗಳನ್ನು ತನ್ನ ಅಧೀನಪಡಿಸಿಕೊಂಡನು. ಹೀಗೆ ಶ್ರೀಕೃಷ್ಣನನ್ನು ಆರಾಧಿಸುವುದಕ್ಕಾಗಿ ಅವನು ಉತ್ತಮವಾದ ತಪಸ್ಸನ್ನು ಮಾಡಿದನು. ॥ ೭ ॥ ಈ ಕ್ರಮದಿಂದ ಅವನ ತಪಸ್ಸು ಬೆಳವಣಿಗೆ ಹೊಂದಿ ಸಿದ್ಧಿಸುತ್ತಿರಲಾಗಿ, ಅವನ ಚಿತ್ತವು ಸಂಪೂರ್ಣವಾಗಿ ಶುದ್ಧಿಹೊಂದಿತು. ಪ್ರಾಣಾಯಾಮಗಳ ಮೂಲಕ ಮನಸ್ಸು ಮತ್ತು ಇಂದ್ರಿಯಗಳು ನಿರುದ್ಧವಾಗಿ ಕರ್ಮವಾಸನೆಗಳಿಂದ ಉಂಟಾದ ಕಟ್ಟುಗಳು ಬಿಟ್ಟುಹೋದುವು. ॥ ೮ ॥ ಆಗ ಭಗವಾನ್ ಸನತ್ಕುಮಾರನು ಉಪದೇಶಿಸಿದ್ದ ಶ್ರೇಷ್ಠತಮವಾದ ಅಧ್ಯಾತ್ಮಯೋಗದ ಶಿಕ್ಷಣದಂತೆಯೇ ಪೃಥುವು ಪುರುಷೋತ್ತಮನಾದ ಶ್ರೀಹರಿಯನ್ನು ಆರಾಧಿಸತೊಡಗಿದನು. ॥ ೯ ॥ ಹೀಗೆ ಭಗವತ್ಪರಾಯಣನಾಗಿ ಶ್ರದ್ಧೆಯಿಂದ ಸದಾಚಾರವನ್ನು ಪಾಲಿಸುತ್ತಾ ನಿರಂತರವಾಗಿ ಸಾಧನೆಮಾಡಿದ್ದರಿಂದ ಅವನಿಗೆ ಪರಬ್ರಹ್ಮ ಪರಮಾತ್ಮನಲ್ಲಿ ಅನನ್ಯಭಕ್ತಿಯು ಬೇರೂರಿತು. ॥ ೧೦ ॥

ಈ ವಿಧವಾದ ಭಗವದುಪಾಸನೆಯಿಂದ ಅವನ ಅಂತಃಕರಣವು ಶುದ್ಧಸತ್ತ್ವಮಯವಾಯಿತು. ನಿರಂತರ ಭಗವಚ್ಚಿಂತನದ ಪ್ರಭಾವದಿಂದ ಉಂಟಾದ ಆ ಅನನ್ಯಭಕ್ತಿಯಿಂದ ಅವನಿಗೆ ವೈರಾಗ್ಯಸಹಿತ ಜ್ಞಾನವು ಸಿದ್ಧಿಸಿತು. ಮತ್ತೆ ತೀವ್ರವಾದ ಜ್ಞಾನದ ಮೂಲಕ ಸಂಶಯ-ವಿಪರ್ಯಯಗಳಿಗೆ ಆಸರೆಯಾದ ಜೀವನ ಉಪಾಧಿಭೂತ ಅಹಂಕಾರವನ್ನು ನಾಶಪಡಿಸಿದನು. ॥ ೧೧ ॥ ಅನಂತರ ದೇಹಾತ್ಮಬುದ್ಧಿಯು ತೊಲಗಿ ಪರಮಾತ್ಮನಾದ ಶ್ರೀಕೃಷ್ಣನಲ್ಲಿ ಅನುಭೂತಿ ಉಂಟಾದಾಗ ಎಲ್ಲ ಬಗೆಯ ಸಿದ್ಧಿ ಮುಂತಾದವುಗಳ ವಿಷಯಗಳಲ್ಲಿಯೂ ಉದಾಸೀನತೆ ಉಂಟಾದ ಕಾರಣ ತನ್ನ ಜ್ಞಾನಕ್ಕೆ ಆವರಣವಾಗಿದ್ದ ಉಪಾಧಿಯನ್ನು ನಾಶಪಡಿಸುವಂತಹ ಜ್ಞಾನದ ಸಾಧನೆಯನ್ನು ಅವನು ನಿಲ್ಲಿಸಿಬಿಟ್ಟನು. ಏಕೆಂದರೆ, ಸಾಧಕನಿಗೆ ಯೋಗಮಾರ್ಗದ ಮೂಲಕ ಶ್ರೀಕೃಷ್ಣಕಥಾಮೃತದಲ್ಲಿ ಅನುರಾಗ ಉಂಟಾಗುವವರೆಗೆ ಕೇವಲ ಯೋಗ ಸಾಧನದಿಂದ ಮೋಹಜನಿತ ಪ್ರಮಾದವು ದೂರವಾಗುವುದಿಲ್ಲ; ಭ್ರಮೆಯು ಅಳಿಯುವುದಿಲ್ಲ. ॥ ೧೨ ॥

ಏವಂ ಸ ವೀರಪ್ರವರಃ ಸಂಯೋಜ್ಯಾತ್ಮಾನಮಾತ್ಮನಿ ।
ಬ್ರಹ್ಮಭೂತೋ ದೃಢಂ ಕಾಲೇ ತತ್ಯಾಜ ಸ್ವಂ ಕಲೇವರಮ್ ॥ ೧೩ ॥

ಸಂಪೀಡ್ಯ ಪಾಯುಂ ಪಾರ್ಷ್ಣಿಭ್ಯಾಂ
ವಾಯುಮುತ್ಸಾರಯನ್ ಛನೈಃ ।
ನಾಭ್ಯಾಂ ಕೋಷ್ಠೇಷ್ವವಸ್ಥಾಪ್ಯ
ಹೃದುರಃಕಂಠಶೀರ್ಷಣಿ ॥ ೧೪ ॥

ಉತ್ಸರ್ಪಯಂಸ್ತು ತಂ ಮೂರ್ಧ್ನಿ
ಕ್ರಮೇಣಾವೇಶ್ಯ ನಿಃಸ್ಪೃಹಃ ।
ವಾಯುಂ ವಾಯೌ ಕ್ಷಿತೌ ಕಾಯಂ
ತೇಜಸ್ತೇಜಸ್ಯಯೂಯುಜತ್ ॥ ೧೫ ॥

ಖಾನ್ಯಾಕಾಶೇ ದ್ರವಂ ತೋಯೇ ಯಥಾಸ್ಥಾನಂ ವಿಭಾಗಶಃ ।
ಕ್ಷಿತಿಮಂಭಸಿ ತತ್ತೇಜಸ್ಯದೋ ವಾಯೌ ನಭಸ್ಯಮುಮ್ ॥ ೧೬ ॥

ಇಂದ್ರಿಯೇಷು ಮನಸ್ತಾನಿ ತನ್ಮಾತ್ರೇಷು ಯಥೋದ್ಭವಮ್ ।
ಭೂತಾದಿನಾಮೂನ್ಯುತ್ಕೃಷ್ಯ ಮಹತ್ಯಾತ್ಮನಿ ಸಂದಧೇ ॥ ೧೭ ॥

ತಂ ಸರ್ವಗುಣವಿನ್ಯಾಸಂ ಜೀವೇ ಮಾಯಾಮಯೇ ನ್ಯಧಾತ್ ।
ತಂ ಚಾನುಶಯಮಾತ್ಮಸ್ಥಮಸಾವನುಶಯೀ ಪುಮಾನ್ ।
ಜ್ಞಾನವೈರಾಗ್ಯವೀರ್ಯೇಣ ಸ್ವರೂಪಸ್ಥೋಽಜಹಾತ್ಪ್ರಭುಃ ॥ ೧೮ ॥

ಅರ್ಚಿರ್ನಾಮ ಮಹಾರಾಜ್ಞೀ ತತ್ಪತ್ನ್ಯನುಗತಾ ವನಮ್ ।
ಸುಕುಮಾರ್ಯತದರ್ಹಾ ಚ ಯತ್ಪದ್ಭ್ಯಾಂ ಸ್ಪರ್ಶನಂ ಭುವಃ ॥ ೧೯ ॥

ಅತೀವ ಭರ್ತುರ್ವ್ರತಧರ್ಮನಿಷ್ಠಯಾ
ಶುಶ್ರೂಷಯಾ ಚಾರ್ಷದೇಹಯಾತ್ರಯಾ ।
ನಾವಿಂದತಾರ್ತಿಂ ಪರಿಕರ್ಶಿತಾಪಿ ಸಾ
ಪ್ರೇಯಸ್ಕರಸ್ಪರ್ಶನಮಾನನಿರ್ವೃತಿಃ ॥ ೨೦ ॥

ದೇಹಂ ವಿಪನ್ನಾಖಿಲಚೇತನಾದಿಕಂ
ಪತ್ಯುಃ ಪೃಥಿವ್ಯಾ ದಯಿತಸ್ಯ ಚಾತ್ಮನಃ ।
ಆಲಕ್ಷ್ಯ ಕಿಂಚಿಚ್ಚ ವಿಲಪ್ಯ ಸಾ ಸತೀ
ಚಿತಾಮಥಾರೋಪಯದದ್ರಿಸಾನುನಿ ॥ ೨೧ ॥

ಮತ್ತೆ ಅಂತ್ಯಕಾಲವು ಸಮೀಪಿಸಿದಾಗ ವೀರವರನಾದ ಪೃಥುವು ತನ್ನ ಚಿತ್ತವನ್ನು ಪರಮಾತ್ಮನಲ್ಲಿ ದೃಢವಾಗಿ ನೆಲೆಗೊಳಿಸಿ, ಬ್ರಹ್ಮನಿಷ್ಠೆಯಲ್ಲಿ ಬ್ರಹ್ಮಭೂತನಾಗಿ ತನ್ನ ಶರೀರವನ್ನು ತೊರೆದುಬಿಟ್ಟನು. ॥ ೧೩ ॥ ಅವನು ಹಿಮ್ಮಡಿಯಿಂದ ಗುದದ್ವಾರವನ್ನು ತಡೆದು ಮೂಲಾಧಾರದಲ್ಲಿರುವ ಪ್ರಾಣವಾಯುವನ್ನು ನಿಧಾನವಾಗಿ ಮೇಲಕ್ಕೆ ಏರಿಸುತ್ತಾ ಕ್ರಮವಾಗಿ ನಾಭಿ, ಹೃದಯ, ಕಂಠ ಮತ್ತು ಭ್ರೂಮಧ್ಯದಲ್ಲಿ ನಿಲ್ಲಿಸಿದನು. ॥ ೧೪ ॥ ಅಲ್ಲಿಂದ ಅದನ್ನು ಮೇಲಕ್ಕೆ ಸೆಳೆದು ಬ್ರಹ್ಮರಂಧ್ರದಲ್ಲಿ ಸ್ಥಾಪಿಸಿದನು. ಈಗ ಅವನಿಗೆ ಯಾವ ಸಾಂಸಾರಿಕ ಭೋಗಗಳ ಆಸೆಯೂ ಉಳಿಯಲಿಲ್ಲ. ಮತ್ತೆ ಆ ವಾಯುವನ್ನು ಸಮಷ್ಟಿ ವಾಯುವಿನಲ್ಲಿಯೂ ಪಾರ್ಥಿವ ಶರೀರವನ್ನು ಪೃಥಿವಿಯಲ್ಲಿಯೂ, ಶರೀರದ ತೇಜವನ್ನು ಸಮಷ್ಟಿತೇಜದಲ್ಲಿಯೂ ಲೀನಗೊಳಿಸಿಬಿಟ್ಟನು. ॥ ೧೫ ॥ ಹೃದಯಾಕಾಶಾದಿ ದೇಹಾವಚ್ಛಿನ್ನ ಆಕಾಶವನ್ನು ಮಹಾಕಾಶದಲ್ಲಿಯೂ, ರುಧಿರಾದಿ ನೀರಿನ ಅಂಶವನ್ನು ಸಮಷ್ಟಿ ಜಲದಲ್ಲಿ ಲೀನಗೊಳಿಸಿದನು. ಹೀಗೆಯೇ ಮತ್ತೆ ಪೃಥಿವಿಯನ್ನು ಜಲದಲ್ಲಿಯೂ, ಜಲವನ್ನು ತೇಜದಲ್ಲಿಯೂ, ತೇಜವನ್ನು ವಾಯುವಿನಲ್ಲಿಯೂ, ವಾಯುವನ್ನು ಆಕಾಶದಲ್ಲಿಯೂ ಲೀನಗೊಳಿಸಿದನು. ॥ ೧೬ ॥ ಅನಂತರ ಮನಸ್ಸನ್ನು (ಸವಿಕಲ್ಪ ಜ್ಞಾನವನ್ನು) ಇಂದ್ರಿಯಗಳಲ್ಲಿಯೂ, ಇಂದ್ರಿಯಗಳನ್ನು ಅವುಗಳ ಕಾರಣವಾಗಿರುವ ತನ್ಮಾತ್ರೆಗಳಲ್ಲಿಯೂ, ತನ್ಮಾತ್ರೆಗಳಿಗೆ ಕಾರಣವಾದ ಅಹಂಕಾರದ ಮೂಲಕ ಆಕಾಶ, ಇಂದ್ರಿಯಗಳು ಮತ್ತು ತನ್ಮಾತ್ರೆಗಳನ್ನು ಅದೇ ಅಹಂಕಾರದಲ್ಲಿ ಲಯಗೊಳಿಸಿ, ಅಹಂಕಾರವನ್ನು ಮಹತ್ತತ್ತ್ವದಲ್ಲಿ ಲೀನಗೊಳಿಸಿದನು. ॥ ೧೭ ॥ ಮತ್ತೆ ಸಮಸ್ತ ಗುಣಗಳನ್ನು ಅಭಿವ್ಯಕ್ತಗೊಳಿಸುವ ಆ ಮಹತ್ತತ್ತ್ವವನ್ನು ಮಾಯೋಪಾಧಿಕ ಜೀವದಲ್ಲಿ ಸ್ಥಿರಗೊಳಿಸಿದನು. ಅನಂತರ ಆ ಮಾಯಾರೂಪವಾದ ಉಪಾಧಿಯನ್ನೂ ಕೂಡ ಅವನು ಜ್ಞಾನ-ವೈರಾಗ್ಯದ ಪ್ರಭಾವದಿಂದ ತನ್ನ ಶುದ್ಧ ಬ್ರಹ್ಮಸ್ವರೂಪದಲ್ಲಿ ಸ್ಥಿತನಾಗಿ ಆನಂದಸ್ವರೂಪನಾದನು. ॥ ೧೮ ॥

ಪೃಥುಮಹಾರಾಜನ ಪತ್ನಿಯಾದ ಅರ್ಚಿಯೂ ಕೂಡ ಅವನೊಡನೆ ತಪೋವನಕ್ಕೆ ಹೋಗಿದ್ದಳಷ್ಟೆ! ಆಕೆಯು ಪಾದಗಳನ್ನು ನೆಲಕ್ಕೆ ಸೋಕಿದರೂ ನೊಂದುಪಡುವಷ್ಟು ಸುಕುಮಾರಿಯಾಗಿದ್ದಳು. ॥ ೧೯ ॥ ಹೀಗಿರುವಾಗಲೂ ಆಕೆಯು ತನ್ನ ಪತಿಯು ಕೈಗೊಂಡಿದ್ದ ವ್ರತ-ನಿಯಮಗಳನ್ನು ಪಾಲಿಸುತ್ತಾ ಅವನ ತುಂಬು ಸೇವೆ ಮಾಡಿದಳು. ಮುನಿವೃತ್ತಿಗನುಸಾರ ಕಂದ-ಮೂಲಾದಿಗಳಿಂದಲೇ ತನ್ನ ಜೀವನ ನಿರ್ವಾಹಮಾಡಿದಳು. ಇದರಿಂದ ಅವಳು ಬಹಳ ದುರ್ಬಲಳಾಗಿದ್ದರೂ ಪ್ರಿಯತಮನ ಕರಸ್ಪರ್ಶದಿಂದ ಸಮ್ಮಾನಿತಳಾಗಿ ಅದರಲ್ಲೇ ಆನಂದವನ್ನು ಪಡೆದ ಕಾರಣ ಅವಳಿಗೆ ಯಾವುದೇ ಕಷ್ಟವಾಗುತ್ತಿರಲಿಲ್ಲ. ॥ ೨೦ ॥ ಪೃಥಿವಿಗೆ ಪತಿಯಾಗಿ, ತನಗೂ ಪ್ರಿಯತಮನಾದ ಮಹಾರಾಜನ ದೇಹವು ಚೇತನಾಧರ್ಮಗಳೆಲ್ಲವನ್ನೂ ಕಳೆದುಕೊಂಡಿದ್ದರಿಂದ ಆ ಸಾಧ್ವಿಯು ಸ್ವಲ್ಪಹೊತ್ತು ವಿಲಾಪಿಸಿದಳು. ಮತ್ತೆ ಪರ್ವತದ ಮೇಲೆ ಚಿತೆಯನ್ನು ರಚಿಸಿ ಪತಿಯ ಪವಿತ್ರವಾದ ದೇಹವನ್ನು ಅದರ ಮೇಲೆ ಇರಿಸಿದಳು. ॥ ೨೧ ॥

ವಿಧಾಯ ಕೃತ್ಯಂ ಹ್ರದಿನೀಜಲಾಪ್ಲುತಾ
ದತ್ತ್ವೋದಕಂ ಭರ್ತುರುದಾರಕರ್ಮಣಃ ।
ನತ್ವಾ ದಿವಿಸ್ಥಾಂಸ್ತ್ರಿದಶಾಂಸ್ತ್ರಿಃ ಪರೀತ್ಯ
ವಿವೇಶ ವಹ್ನಿಂ ಧ್ಯಾಯತೀ ಭರ್ತೃಪಾದೌ ॥ ೨೨ ॥

ವಿಲೋಕ್ಯಾನುಗತಾಂ ಸಾಧ್ವೀಂ ಪೃಥುಂ ವೀರವರಂ ಪತಿಮ್ ।
ತುಷ್ಟುವುರ್ವರದಾ ದೇವೈರ್ದೇವಪತ್ನ್ಯಃ ಸಹಸ್ರಶಃ ॥ ೨೩ ॥

ಕುರ್ವತ್ಯಃ ಕುಸುಮಾಸಾರಂ ತಸ್ಮಿನ್ಮಂದರಸಾನುನಿ ।
ನದತ್ಸ್ವಮರತೂರ್ಯೇಷು ಗೃಣಂತಿ ಸ್ಮ ಪರಸ್ಪರಮ್ ॥ ೨೪ ॥

ದೇವ್ಯ ಊಚುಃ

ಅಹೋ ಇಯಂ ವಧೂರ್ಧನ್ಯಾ
ಯಾ ಚೈವಂ ಭೂಭುಜಾಂ ಪತಿಮ್ ।
ಸರ್ವಾತ್ಮನಾ ಪತಿಂ ಭೇಜೇ
ಯಜ್ಞೇಶಂ ಶ್ರೀರ್ವಧೂರಿವ ॥ ೨೫ ॥

ಸೈಷಾ ನೂನಂ ವ್ರಜತ್ಯೂರ್ಧ್ವಮನು ವೈನ್ಯಂ ಪತಿಂ ಸತೀ ।
ಪಶ್ಯತಾಸ್ಮಾನತೀತ್ಯಾರ್ಚಿರ್ದುರ್ವಿಭಾವ್ಯೇನ ಕರ್ಮಣಾ ॥ ೨೬ ॥

ತೇಷಾಂ ದುರಾಪಂ ಕಿಂ ತ್ವನ್ಯನ್
ಮರ್ತ್ಯಾನಾಂ ಭಗವತ್ಪದಮ್ ।
ಭುವಿ ಲೋಲಾಯುಷೋ ಯೇ ವೈ
ನೈಷ್ಕರ್ಮ್ಯಂ ಸಾಧಯಂತ್ಯುತ ॥ ೨೭ ॥

ಸ ವಂಚಿತೋ ಬತಾತ್ಮಧ್ರುಕ್ಕೃಚ್ಛ್ರೇಣ ಮಹತಾ ಭುವಿ ।
ಲಬ್ಧ್ವಾಪವರ್ಗ್ಯಂ ಮಾನುಷ್ಯಂ ವಿಷಯೇಷು ವಿಷಜ್ಜತೇ ॥ ೨೮ ॥

ಮೈತ್ರೇಯ ಉವಾಚ

ಸ್ತುವತೀಷ್ವಮರಸ್ತ್ರೀಷು ಪತಿಲೋಕಂ ಗತಾ ವಧೂಃ ।
ಯಂ ವಾ ಆತ್ಮವಿದಾಂ ಧುರ್ಯೋ ವೈನ್ಯಃ ಪ್ರಾಪಾಚ್ಯುತಾಶ್ರಯಃ ॥ ೨೯ ॥

ಇತ್ಥಂಭೂತಾನುಭಾವೋಽಸೌ ಪೃಥುಃ ಸ ಭಗವತ್ತಮಃ ।
ಕೀರ್ತಿತಂ ತಸ್ಯ ಚರಿತಮುದ್ದಾಮಚರಿತಸ್ಯ ತೇ ॥ ೩೦ ॥

ಯ ಇದಂ ಸುಮಹತ್ಪುಣ್ಯಂ ಶ್ರದ್ಧಯಾವಹಿತಃ ಪಠೇತ್ ।
ಶ್ರಾವಯೇಚ್ಛೃಣುಯಾದ್ವಾಪಿ ಸ ಪೃಥೋಃ ಪದವೀಮಿಯಾತ್ ॥ ೩೧ ॥

ಬ್ರಾಹ್ಮಣೋ ಬ್ರಹ್ಮವರ್ಚಸ್ವೀ ರಾಜನ್ಯೋ ಜಗತೀಪತಿಃ ।
ವೈಶ್ಯಃ ಪಠನ್ವಿಟ್ಪತಿಃ ಸ್ಯಾಚ್ಛೂದ್ರಃ ಸತ್ತಮತಾಮಿಯಾತ್ ॥ ೩೨ ॥

ಇದಾದ ಬಳಿಕ ಆ ಸಮಯದಲ್ಲಿ ಮಾಡಬೇಕಾದ ಎಲ್ಲ ವಿಧಿಗಳನ್ನು ಮುಗಿಸಿ ನದಿಯಲ್ಲಿ ಸ್ನಾನಮಾಡಿದಳು. ತನ್ನ ಆ ಪರಾಕ್ರಮಿಯಾದ ಪತಿಗೆ ಜಲಾಂಜಲಿಯನ್ನು ಸಮರ್ಪಿಸಿದಳು. ಆಕಾಶದಲ್ಲಿ ಬಂದ ದೇವತೆಗಳಿಗೆ ಪ್ರಣಾಮವನ್ನು ಸಲ್ಲಿಸಿ, ಮೂರುಬಾರಿ ಚಿತೆಗೆ ಪ್ರದಕ್ಷಿಣೆ ಬಂದು ಪತಿದೇವರ ಚರಣಗಳನ್ನು ಧ್ಯಾನಿಸುತ್ತಾ ಅಗ್ನಿಯಲ್ಲಿ ಪ್ರವೇಶಿಸಿದಳು. ॥ ೨೨ ॥ ಪರಮಸಾಧ್ವಿಯಾದ ಅರ್ಚಿಯು ಈ ರೀತಿಯಾಗಿ ತನ್ನ ಪತಿಯಾದ ವೀರವರೇಣ್ಯನಾದ ಪೃಥುವಿನೊಡನೆ ಸಹಗಮನ ಮಾಡುತ್ತಿದ್ದುದನ್ನು ನೋಡಿ ಸಾವಿರಾರು ವರದ ವರಪ್ರದಾಯಕ ದೇವಿಯರು ತಮ್ಮ-ತಮ್ಮ ಪತಿಗಳೊಡನೆ ಅವಳನ್ನು ಸ್ತುತಿಸಿದರು. ॥ ೨೩ ॥ ಅಲ್ಲಿ ದೇವತೆಗಳ ವಾದ್ಯಗಳು ಮೊಳಗಿದವು. ಆಗ ಆ ಮಂದರಾಚಲದ ಶಿಖರದಲ್ಲಿ ಆ ದೇವಾಂಗನೆಯರು ಪುಷ್ಪಗಳ ಮಳೆಯನ್ನೇ ಸುರಿಸುತ್ತಾ ತಮ್ಮ-ತಮ್ಮಲ್ಲಿ ಹೀಗೆ ಮಾತಾಡಿಕೊಳ್ಳತೊಡಗಿದರು. ॥ ೨೪ ॥

ದೇವಾಂಗನೆಯರು ಹೇಳಿದರು – ಆಹಾ! ಎಂತಹ ಧನ್ಯಳು ಈಕೆ! ಶ್ರೀಲಕ್ಷ್ಮೀದೇವಿಯು ಯಜ್ಞೇಶ್ವರನಾದ ಶ್ರೀಮಹಾವಿಷ್ಣುವಿನ ಸೇವೆಮಾಡುವಂತೆಯೇ ಇವಳು ತನ್ನ ಪತಿಯಾದ ರಾಜರಾಜೇಶ್ವರ ಪೃಥುವಿನ ಮನಸಾ, ವಾಚಾ, ಶರೀರದಿಂದ ಹಾಗೆಯೇ ಸೇವೆಯನ್ನು ಮಾಡಿದಳು. ॥ ೨೫ ॥ ಅವಶ್ಯವಾಗಿಯೂ ಈ ಸಾಧ್ವಿಮಣಿಯು ಚಿಂತಿಸಲು ಅಸದಳವಾದ ತನ್ನ ಪುಣ್ಯಕರ್ಮದ ಪ್ರಭಾವದಿಂದ ನಮ್ಮನ್ನು ಸ್ವರ್ಗವನ್ನೂ ದಾಟಿ ತನ್ನ ಪತಿಯೊಡನೆ ಉತ್ತಮೋತ್ತಮ ಲೋಕಗಳಿಗೆ ಹೋಗುತ್ತಿದ್ದಾಳೆ. ॥ ೨೬ ॥ ಈ ಲೋಕದಲ್ಲಿ ಕೆಲವೇ ದಿನಗಳ ಕಾಲ ಬದುಕುವವರು. ಭಗವಂತನ ಪರಮಪದಕ್ಕೆ ಒಯ್ಯುವಂತಹ ಆತ್ಮಜ್ಞಾನವನ್ನು ಪಡೆದಂತಹ ಧನ್ಯಾತ್ಮರಿಗೆ ಪ್ರಪಂಚದಲ್ಲಿ ಯಾವುದೂ ದುರ್ಲಭವಿಲ್ಲ. ॥ ೨೭ ॥ ಆದ್ದರಿಂದ ಮನುಷ್ಯದೇಹವನ್ನು ಅತಿಪ್ರಯಾಸದಿಂದ ಪಡೆದ ನಂತರವೂ ಮೋಕ್ಷಕ್ಕಾಗಿ ಪ್ರಯತ್ನಿಸದೆ ವಿಷಯ ಸುಖಗಳಲ್ಲಿ ಆಸಕ್ತರಾದ ಮನುಷ್ಯರು ನಿಜವಾಗಿಯೂ ಆತ್ಮಘಾತಿಗಳೆಂದೇ ತಿಳಿಯಬೇಕು. 'ಅಯ್ಯೋ ಪಾಪ! ಅವರು ಮೋಸಹೋದರಲ್ಲ!' ಎಂದು ಮಾತಾಡಿಕೊಳ್ಳುತ್ತಿದ್ದರು. ॥ ೨೮ ॥

ಶ್ರೀಮೈತ್ರೇಯರು ಹೇಳುತ್ತಾರೆ – ಎಲೈ ವಿದುರನೇ! ದೇವಾಂಗನೆಯರು ಹೀಗೆ ಸ್ತುತಿಸುತ್ತಿರುವಾಗಲೇ ಆತ್ಮಜ್ಞಾನಿಗಳಲ್ಲಿ ಶ್ರೇಷ್ಠನಾದ ಭಗವದ್ಭಕ್ತಶಿರೋಮಣಿಯಾಗಿದ್ದ ಪೃಥು ಮಹಾರಾಜನು ಸೇರಿದ ಭಗವಂತನ ಪರಮಧಾಮವನ್ನೇ ಮಹಾರಾಣಿ ಅರ್ಚಿಯು ಅದೇ ಪತಿಲೋಕಕ್ಕೆ ಹೊರಟುಹೋದಳು. ॥ ೨೯ ॥ ಪ್ರಭಾವಶಾಲಿಯಾದ ಪರಮಭಾಗವತೋತ್ತಮ ಪೃಥುವಿನ ಚರಿತ್ರೆಯು ಅತ್ಯಂತ ಉದಾರವಾದುದು. ಅದನ್ನು ನಾನು ನಿನಗೆ ವರ್ಣಿಸಿರುವೆನು. ॥ ೩೦ ॥ ಆ ಪರಮಪವಿತ್ರ ಚರಿತ್ರವನ್ನು ಶ್ರದ್ಧೆಯಿಂದ (ನಿಷ್ಕಾಮಭಾವದಿಂದ) ಏಕಾಗ್ರತೆಯಿಂದ ಓದುವವನೂ, ಕೇಳುವವನೂ ಕೂಡ ಪೃಥು ಮಹಾರಾಜನ ಪದವನ್ನೇ ಅಂದರೆ ಭಗವಂತನ ಪರಮಧಾಮವನ್ನು ಪಡೆಯುವನು. ॥ ೩೧ ॥ ಇದನ್ನು ಸಕಾಮಭಾವದಿಂದ ಪಠಿಸಿದರೆ ಬ್ರಾಹ್ಮಣನು ಬ್ರಹ್ಮತೇಜಸ್ಸನ್ನು ಪಡೆಯುತ್ತಾನೆ. ಕ್ಷತ್ರಿಯನು ಪೃಥಿವೀಪತಿಯಾಗುತ್ತಾನೆ. ವೈಶ್ಯನು ವ್ಯಾಪಾರಿಗಳಲ್ಲಿ ಪ್ರಧಾನನಾಗುತ್ತಾನೆ. ಶೂದ್ರನು ಶ್ರೇಷ್ಠತಮ ಸಾಧುವಾಗುತ್ತಾನೆ. ॥ ೩೨ ॥

ತ್ರಿಕೃತ್ವ ಇದಮಾಕರ್ಣ್ಯ ನರೋ ನಾರ್ಯಥವಾಽಽದೃತಾ ।
ಅಪ್ರಜಃ ಸುಪ್ರಜತಮೋ ನಿರ್ಧನೋ ಧನವತ್ತಮಃ
॥ ೩೩ ॥

ಅಸ್ಪಷ್ಟಕೀರ್ತಿಃ ಸುಯಶಾ ಮೂರ್ಖೋ ಭವತಿ ಪಂಡಿತಃ ।
ಇದಂ ಸ್ವಸ್ತ್ಯಯನಂ ಪುಂಸಾಮಮಂಗಲ್ಯನಿವಾರಣಮ್
॥ ೩೪ ॥

ಧನ್ಯಂ ಯಶಸ್ಯಮಾಯುಷ್ಯಂ ಸ್ವರ್ಗ್ಯಂ ಕಲಿಮಲಾಪಹಮ್ ।
ಧರ್ಮಾರ್ಥಕಾಮಮೋಕ್ಷಾಣಾಂ ಸಮ್ಯಕ್ಸಿದ್ಧಿಮಭೀಪ್ಸುಭಿಃ ।
ಶ್ರದ್ಧಯೈತದನುಶ್ರಾವ್ಯಂ ಚತುರ್ಣಾಂ ಕಾರಣಂ ಪರಮ್
॥ ೩೫ ॥

ವಿಜಯಾಭಿಮುಖೋ ರಾಜಾ ಶ್ರುತ್ವೈತದಭಿಯಾತಿ ಯಾನ್ ।
ಬಲಿಂ ತಸ್ಮೈ ಹರಂತ್ಯಗ್ರೇ ರಾಜಾನಃ ಪೃಥವೇ ಯಥಾ
॥ ೩೬ ॥

ಮುಕ್ತಾನ್ಯಸಂಗೋ ಭಗವತ್ಯಮಲಾಂ ಭಕ್ತಿಮುದ್ವಹನ್ ।
ವೈನ್ಯಸ್ಯ ಚರಿತಂ ಪುಣ್ಯಂ ಶೃಣುಯಾಚ್ಛ್ರಾವಯೇತ್ಪಠೇತ್
॥ ೩೭ ॥

ವೈಚಿತ್ರವೀರ್ಯಾಭಿಹಿತಂ ಮಹನ್ಮಾಹಾತ್ಮ್ಯಸೂಚಕಮ್ ।
ಅಸ್ಮಿನ್ಕೃತಮತಿಮರ್ತ್ಯಂ ಪಾರ್ಥವೀಂ ಗತಿಮಾಪ್ನುಯಾತ್
॥ ೩೮ ॥

ಅನುದಿನಮಿದಮಾದರೇಣ ಶೃಣ್ವನ್
ಪೃಥುಚರಿತಂ ಪ್ರಥಯನ್ವಿಮುಕ್ತಸಂಗಃ ।
ಭಗವತಿ ಭವಸಿಂಧುಪೋತಪಾದೇ
ಸ ಚ ನಿಪುಣಾಂ ಲಭತೇ ರತಿಂ ಮನುಷ್ಯಃ ॥ ೩೯ ॥

ಸ್ತ್ರೀಯಾಗಿರಲಿ ಅಥವಾ ಪುರುಷನಾಗಿರಲಿ ಇದನ್ನು ಆದರದಿಂದ ಮೂರುಬಾರಿ ಕೇಳಿದರೆ ಅವರು ಸಂತಾನಹೀನರಾಗಿದ್ದರೆ ಸಂತತಿಯನ್ನು, ಧನಹೀನನಾಗಿದ್ದರೆ ಐಶ್ವರ್ಯವನ್ನು, ಕೀರ್ತಿಹೀನನಾಗಿದ್ದರೆ ಕೀರ್ತಿಯನ್ನು, ಮೂರ್ಖನಾಗಿದ್ದರೆ ಪಂಡಿತನು ಆಗಿಹೋಗುತ್ತಾನೆ. ಈ ಚರಿತೆಯು ಎಲ್ಲ ಮನುಷ್ಯರ ಶ್ರೇಯಸ್ಸು ಮಾಡುವುದಾಗಿಯೂ, ಅಮಂಗಳವನ್ನು ಕಳೆಯುವಂತಹುದೂ ಆಗಿದೆ. ॥ ೩೩-೩೪ ॥ ಇದು ಧನ, ಕೀರ್ತಿ ಮತ್ತು ಆಯುಸ್ಸುಗಳನ್ನು ವೃದ್ಧಿಪಡಿಸುವುದು. ಸ್ವರ್ಗವನ್ನು ದೊರಕಿಸಿಕೊಡುವಂತಹುದು ಹಾಗೂ ಕಲಿಯುಗದ ದೋಷಗಳನ್ನು ನಾಶಮಾಡುವುದೂ ಆಗಿದೆ. ಧರ್ಮವೇ ಮುಂತಾದ ನಾಲ್ಕೂ ಪುರುಷಾರ್ಥಗಳ ಉತ್ತಮಸಿದ್ಧಿಯನ್ನು ಪಡೆಯಲು ಬಯಸುವವರು ಇದನ್ನು ಶ್ರದ್ಧಾಪೂರ್ವಕವಾಗಿ ಶ್ರವಣಿಸಬೇಕು. ॥ ೩೫ ॥ ವಿಜಯಕ್ಕಾಗಿ ಪ್ರಸ್ಥಾನ ಮಾಡುವಾಗ ಇದನ್ನು ಕೇಳಿ ಹೊರಟ ರಾಜನ ಮುಂದೆ ಪೃಥುಮಹಾರಾಜನಿಗೆ ರಾಜರು ಕಾಣಿಕೆಗಳನ್ನು ಒಪ್ಪಿಸುತ್ತಿದ್ದಂತೆ ಅವನಿಗೂ ಒಪ್ಪಿಸುವರು. ॥ ೩೬ ॥ ಮನುಷ್ಯನು ಬೇರೆ ಎಲ್ಲ ರೀತಿಯ ಆಸಕ್ತಿಯನ್ನು ಬಿಟ್ಟು, ಭಗವಂತನಲ್ಲಿ ಶುದ್ಧವಾದ ನಿಷ್ಕಾಮ ಭಾವವನ್ನಿಟ್ಟು ಪೃಥುಮಹಾರಾಜನ ಈ ನಿರ್ಮಲ ಚರಿತ್ರವನ್ನು ಕೇಳಬೇಕು, ಹೇಳಬೇಕು ಮತ್ತು ಓದಬೇಕು. ॥ ೩೭ ॥ ವಿದುರನೇ! ಭಗವಂತನ ಮಹಿಮೆಯನ್ನು ಪ್ರಕಟಪಡಿಸುವ ಈ ಪವಿತ್ರವಾದ ಚರಿತ್ರೆಯನ್ನು ನಾನು ನಿನಗೆ ಹೇಳಿದೆ. ಇದರಲ್ಲಿ ಪೂರ್ಣವಾದ ಭಕ್ತಿ-ಶ್ರದ್ಧೆಯನ್ನಿಡುವವನು ಪೃಥುಮಹಾರಾಜನು ಪಡೆದ ಗತಿಯನ್ನೇ ಪಡೆಯುವನು. ॥ ೩೮ ॥ ಈ ಪೃಥುಚರಿತ್ರೆಯನ್ನು ಪ್ರತಿದಿನವೂ ಆದರದಿಂದ ನಿಷ್ಕಾಮಭಾವದೊಂದಿಗೆ ಶ್ರವಣ-ಕೀರ್ತನಮಾಡುವ ಮನುಷ್ಯನು ಸಂಸಾರಸಾಗರವನ್ನು ಪಾರಾಗಿಸಲು ನೌಕೆಯಂತಿರುವ ಪಾದಗಳುಳ್ಳ ಶ್ರೀಹರಿಯಲ್ಲಿ ದೃಢವಾದ ಅನುರಾಗವನ್ನು ಹೊಂದುವನು. ॥ ೩೯ ॥

ಇಪ್ಪತ್ತಮೂರನೆಯ ಅಧ್ಯಾಯವು ಮುಗಿಯಿತು. ॥ ೨೩ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಚತುರ್ಥಸ್ಕಂಧೇ ತ್ರಯೋವಿಂಶೋಽಧ್ಯಾಯಃ ॥ ೨೩ ॥

ಇಪ್ಪತ್ತನಾಲ್ಕನೆಯ ಅಧ್ಯಾಯ

ಪೃಥುವಿನ ವಂಶಪರಂಪರೆ ಮತ್ತು ಪ್ರಾಚೇತಸರಿಗೆ ಭಗವಾನ್ ರುದ್ರನಿಂದ ಉಪದೇಶ

ಮೈತ್ರೇಯ ಉವಾಚ

ವಿಜಿತಾಶ್ವೋಽಧಿರಾಜಾಽಽಸೀತ್-
ಪೃಥುಪುತ್ರಃ ಪೃಥುಶ್ರವಾಃ ।
ಯವೀಯೋಭ್ಯೋಽದದಾತ್ಕಾಷ್ಠಾ
ಭ್ರಾತೃಭ್ಯೋ ಭ್ರಾತೃವತ್ಸಲಃ ॥ ೧ ॥

ಶ್ರೀಮೈತ್ರೇಯರು ಹೇಳುತ್ತಾರೆ – ಎಲೈ ವಿದುರನೇ! ಪೃಥುಮಹಾರಾಜನ ಬಳಿಕ ಪರಮ ಯಶಸ್ವಿಯಾದ ಅವನ ಪುತ್ರ ವಿಜಿತಾಶ್ವನು ರಾಜನಾದನು. ಅವನಿಗೆ ತನ್ನ ತಮ್ಮಂದಿರಲ್ಲಿ ತುಂಬಿದ ವಾತ್ಸಲ್ಯವಿತ್ತು. ಅದರಿಂದ ಅವನು ನಾಲ್ಕೂ ತಮ್ಮಂದಿರಿಗೆ ಒಂದೊಂದು ದಿಕ್ಕಿನ ರಾಜ್ಯಾಧಿಕಾರವನ್ನು ಕೊಟ್ಟನು. ॥ ೧ ॥ ಅದರಲ್ಲಿ ಹರ್ಯಕ್ಷನಿಗೆ ಪೂರ್ವದಿಕ್ಕಿನ, ಧೂಮ್ರಕೇಶನಿಗೆ ದಕ್ಷಿಣದಿಕ್ಕಿನ, ವೃಕನಿಗೆ ಪಶ್ಚಿಮದ ಮತ್ತು ದ್ರವಿಣನಿಗೆ ಉತ್ತರದ ರಾಜ್ಯಾಧಿ

ಹರ್ಯಕ್ಷಾಯಾದಿಶತ್ಪ್ರಾಚೀಂ ಧೂಮ್ರಕೇಶಾಯ ದಕ್ಷಿಣಾಮ್ ।
ಪ್ರತೀಚೀಂ ವೃಕಸಂಜ್ಞಾಯ ತುರ್ಯಾಂ ದ್ರವಿಣಸೇ ವಿಭುಃ ॥ ೨ ॥

ಅಂತರ್ಧಾನಗತಿಂ ಶಕ್ರಾಲ್ಲಬ್ಧ್ವಾಂತರ್ಧಾನಸಂಜ್ಞಿತಃ ।
ಅಪತ್ಯತ್ರಯಮಾಧತ್ತ ಶಿಖಂಡಿನ್ಯಾಂ ಸುಸಮ್ಮತಮ್ ॥ ೩ ॥

ಪಾವಕಃ ಪವಮಾನಶ್ಚ ಶುಚಿರಿತ್ಯಗ್ನಯಃ ಪುರಾ ।
ವಸಿಷ್ಠಶಾಪಾದುತ್ಪನ್ನಾಃ ಪುನರ್ಯೋಗಗತಿಂ ಗತಾಃ ॥ ೪ ॥

ಅಂತರ್ಧಾನೋ ನಭಸ್ವತ್ಯಾಂ ಹವಿರ್ಧಾನಮವಿಂದತ ।
ಯ ಇಂದ್ರಮಶ್ವಹರ್ತಾರಂ ವಿದ್ವಾನಪಿ ನ ಜಘ್ನಿವಾನ್ ॥ ೫ ॥

ರಾಜ್ಞಾಂ ವೃತ್ತಿಂ ಕರಾದಾನದಂಡಶುಲ್ಕಾದಿದಾರುಣಾಮ್ ।
ಮನ್ಯಮಾನೋ ದೀರ್ಘಸತ್ರವ್ಯಾಜೇನ ವಿಸಸರ್ಜ ಹ ॥ ೬ ॥

ತತ್ರಾಪಿ ಹಂಸಂ ಪುರುಷಂ ಪರಮಾತ್ಮಾನಮಾತ್ಮದೃಕ್ ।
ಯಜಂಸ್ತಲ್ಲೋಕತಾಮಾಪ ಕುಶಲೇನ ಸಮಾಧಿನಾ ॥ ೭ ॥

ಹವಿರ್ಧಾನಾದ್ಧವಿರ್ಧಾನೀ ವಿದುರಾಸೂತ ಷಟ್ಸುತಾನ್ ।
ಬರ್ಹಿಷದಂ ಗಯಂ ಶುಕ್ಲಂ ಕೃಷ್ಣಂ ಸತ್ಯಂ ಜಿತವ್ರತಮ್ ॥ ೮ ॥

ಬರ್ಹಿಷತ್ ಸುಮಹಾಭಾಗೋ ಹಾವಿರ್ಧಾನಿಃ ಪ್ರಜಾಪತಿಃ ।
ಕ್ರಿಯಾಕಾಂಡೇಷು ನಿಷ್ಣಾತೋ ಯೋಗೇಷು ಚ ಕುರೂದ್ವಹ ॥ ೯ ॥

ಯಸ್ಯೇದಂ ದೇವಯಜನಮನುಯಜ್ಞಂ ವಿತನ್ವತಃ ।
ಪ್ರಾಚೀನಾಗ್ರೈಃ ಕುಶೈರಾಸೀದಾಸ್ತೃತಂ ವಸುಧಾತಲಮ್ ॥ ೧೦ ॥

ಸಾಮುದ್ರೀಂ ದೇವದೇವೋಕ್ತಾಮುಪಯೇಮೇ ಶತದ್ರುತಿಮ್ ।
ಯಾಂ ವೀಕ್ಷ್ಯ ಚಾರುಸರ್ವಾಂಗೀಂ ಕಿಶೋರೀಂ ಸುಷ್ಠ್ವಲಂಕೃತಾಮ್ ।
ಪರಿಕ್ರಮಂತೀಮುದ್ವಾಹೇ ಚಕಮೇಽಗ್ನಿಃ ಶುಕೀಮಿವ ॥ ೧೧ ॥

ಕಾರವನ್ನು ಕೊಟ್ಟನು. ॥ ೨ ॥ ವಿಜಿತಾಶ್ವನು ಇಂದ್ರನಿಂದ ಅಂತರ್ಧಾನನಾಗುವ ಶಕ್ತಿಯನ್ನು ಸಂಪಾದಿಸಿದ್ದನು. ಅದರಿಂದ ಅವನನ್ನು 'ಅಂತರ್ಧಾನ' ಎಂಬ ಹೆಸರಿನಿಂದಲೂ ಕರೆಯುತ್ತಿದ್ದರು. ಅವನು ತನ್ನ ಪತ್ನಿಯಾದ ಶಿಖಂಡಿನಿಯಲ್ಲಿ ಮೂರು ಸತ್ಪುತ್ರರನ್ನು ಪಡೆದನು. ॥ ೩ ॥ ಅವರ ಹೆಸರು ಪಾವಕ, ಪವಮಾನ ಮತ್ತು ಶುಚಿ ಎಂದಿತ್ತು. ಹಿಂದೆ ವಸಿಷ್ಠರ ಶಾಪದಿಂದ ಈ ಹೆಸರುಗಳಿಂದ ಅಗ್ನಿಯೇ ಇವರ ರೂಪದಿಂದ ಹುಟ್ಟಿದ್ದನು. ಮುಂದೆ ಯೋಗಮಾರ್ಗದಿಂದ ಇವರು ಪುನಃ ಅಗ್ನಿರೂಪವನ್ನೇ ಪಡೆದುಕೊಂಡರು. ॥ ೪ ॥

ಅಂತರ್ಧಾನನಿಗೆ ನಭಸ್ವತಿ ಎಂಬ ಪತ್ನಿಯಲ್ಲಿ ಹವಿರ್ಧಾನನೆಂಬ ಪುತ್ರಶ್ರೇಷ್ಠನು ಜನಿಸಿದನು. ಅಂತರ್ಧಾನ ಮಹಾರಾಜನು ತುಂಬಾ ಉದಾರಿಯಾಗಿದ್ದನು. ಇಂದ್ರನು ತನ್ನ ತಂದೆ ಪೃಥು ಚಕ್ರವರ್ತಿಯ ಯಜ್ಞಾಶ್ವವನ್ನು ಅಪಹರಿಸಿ, ತಿಳಿದಿದ್ದಾಗಲೂ ಅವನು ಇಂದ್ರನನ್ನು ವಧಿಸಲಿಲ್ಲ. ॥ ೫ ॥ ಕಂದಾಯವನ್ನು ಸಂಗ್ರಹಿಸುವುದು, ದಂಡನೆಯನ್ನು ವಿಧಿಸುವುದು, ದಂಡಹಾಕುವುದು ಮುಂತಾದವುಗಳು ಕಠೋರವಾದ ಕರ್ತವ್ಯಗಳು. ಇವುಗಳಿಂದ ಇತರರಿಗೆ ಕಷ್ಟವುಂಟಾಗುತ್ತದೆ ಎಂದು ಭಾವಿಸಿ ಅವನು ಒಂದು ದೀರ್ಘಕಾಲದ ಯಜ್ಞದೀಕ್ಷೆಯನ್ನು ಕೈಗೊಂಡನು. ಯಜ್ಞದೀಕ್ಷಿತನು ಲೌಕಿಕ ರಾಜಕಾರ್ಯದಲ್ಲಿ ಭಾಗವಹಿಸಬಾರದು ಎಂಬ ನೆಪದಿಂದ ತನ್ನ ರಾಜವೃತ್ತಿಯನ್ನು ಬಿಟ್ಟುಬಿಟ್ಟನು. ॥ ೬ ॥ ಆ ಆತ್ಮಜ್ಞಾನಿಯಾದ ರಾಜನು ಯಜ್ಞಕಾರ್ಯದಲ್ಲಿ ತೊಡಗಿರುವಾಗಲೇ ಭಕ್ತಭಯಭಂಜಕನೂ, ಪರಿಪೂರ್ಣನೂ ಆದ ಪರಮಾತ್ಮನನ್ನು ಆರಾಧಿಸುತ್ತಾ ತೀವ್ರವಾದ ಸಮಾಧಿಯ ಮೂಲಕ ಶ್ರೀಭಗವಂತನ ವಿಷ್ಣುಲೋಕವನ್ನು ಪಡೆದುಕೊಂಡನು. ॥ ೭ ॥

ಎಲೈ ವಿದುರನೇ! ಮುಂದೆ ಹವಿರ್ಧಾನನು ತನ್ನ ಪತ್ನೀ ಹವಿರ್ಧಾನಿಯಲ್ಲಿ ಬರ್ಹಿಷದ, ಗಯ, ಶುಕ್ಲ, ಕೃಷ್ಣ, ಸತ್ಯ ಮತ್ತು ಜಿತವ್ರತ ಎಂಬ ಆರು ಪುತ್ರರನ್ನು ಪಡೆದನು. ॥ ೮ ॥ ಕುರುಶ್ರೇಷ್ಠ ವಿದುರನೇ! ಇವರಲ್ಲಿ ಹವಿರ್ಧಾನನ ಪುತ್ರನಾದ ಮಹಾತ್ಮನಾದ ಬರ್ಹಿಷದನು ಯಜ್ಞಾದಿ ಕರ್ಮಕಾಂಡದಲ್ಲಿಯೂ, ಯೋಗಾಭ್ಯಾಸದಲ್ಲಿಯೂ ಕುಶಲನಾಗಿದ್ದನು. ಅವನು ಪ್ರಜಾಪತಿಯ ಪದವಿಯನ್ನು ಪಡೆದುಕೊಂಡನು. ॥ ೯ ॥

ಅವನು ನಾನಾ ಸ್ಥಾನಗಳಲ್ಲಿ ನಿರಂತರವಾಗಿ ಎಷ್ಟು ಯಜ್ಞಗಳನ್ನು ಮಾಡಿದ್ದನೆಂದರೆ, ಈ ಸಮಸ್ತ ಭೂಮಂಡಲವು ಆತನು ಯಜ್ಞದಲ್ಲಿ ಹರಡಿದ ಪೂರ್ವಾಗ್ರವಾದ ದರ್ಭೆಗಳಿಂದ ತುಂಬಿ ಹೋಯಿತು. ಅದ್ದರಿಂದ ಮುಂದೆ ಅವನು 'ಪ್ರಾಚೀನಬರ್ಹಿ' ಎಂಬ ಹೆಸರಿನಿಂದಲೇ ವಿಖ್ಯಾತನಾದನು. ॥ ೧೦ ॥

ಪ್ರಾಚೀನಬರ್ಹಿರಾಜನು ಬ್ರಹ್ಮದೇವರ ಮಾತಿನಂತೆ ಸಮುದ್ರನ ಕನ್ಯೆಯಾದ ಶತದ್ರುತಿಯೊಂದಿಗೆ ವಿವಾಹಿತನಾದನು. ಸರ್ವಾಂಗ ಸುಂದರಿಯಾದ ಆ ಶತದ್ರುತಿಯು ಸುಂದರವಾದ ಉಡಿಗೆ-ತೊಡಿಗೆಗಳಿಂದ ಅಲಂಕರಿಸಿಕೊಂಡು ವಿವಾಹಮಂಟಪಕ್ಕೆ ಬಂದು ಪತಿಯೊಡನೆ ಅಗ್ನಿಯನ್ನು ಪ್ರದಕ್ಷಿಣೆ ಮಾಡುತ್ತಿದ್ದಾಗ ಅಗ್ನಿದೇವನೇ – ಹಿಂದೆ ಹೆಣ್ಣುಗಿಳಿಯ ರೂಪವನ್ನು ಧರಿಸಿದ್ದ ಸ್ವಾಹಾದೇವಿಯನ್ನು ಕಾಮಿಸಿದಂತೆಯೇ ಆಕೆಯಲ್ಲಿ ಮೋಹಿತನಾದನು. ॥ ೧೧ ॥

ವಿಬುಧಾಸುರಗಂಧರ್ವಮುನಿಸಿದ್ಧನರೋರಗಾಃ ।
ವಿಜಿತಾಃ ಸೂರ್ಯಯಾ ದಿಕ್ಷು ಕ್ವಣಯಂತ್ಯೈವ ನೂಪುರೈಃ ॥ ೧೨ ॥

ಪ್ರಾಚೀನಬರ್ಹಿಷಃ ಪುತ್ರಾಃ ಶತದ್ರುತ್ಯಾಂ ದಶಾಭವನ್ ।
ತುಲ್ಯನಾಮವ್ರತಾಃ ಸರ್ವೇ ಧರ್ಮಸ್ನಾತಾಃ ಪ್ರಚೇತಸಃ ॥ ೧೩ ॥

ಪಿತ್ರಾಽಽದಿಷ್ಟಾಃ ಪ್ರಜಾಸರ್ಗೇ ತಪಸೇಽರ್ಣವಮಾವಿಶನ್ ।
ದಶವರ್ಷಸಹಸ್ರಾಣಿ ತಪಸಾಽಽರ್ಚಂಸ್ತಪಸ್ಪತಿಮ್ ॥ ೧೪ ॥

ಯದುಕ್ತಂ ಪಥಿ ದೃಷ್ಟೇನ ಗಿರಿಶೇನ ಪ್ರಸೀದತಾ ।
ತದ್ಧ್ಯಾಯಂತೋ ಜಪಂತಶ್ಚ ಪೂಜಯಂತಶ್ಚ ಸಂಯತಾಃ ॥ ೧೫ ॥

ವಿದುರ ಉವಾಚ

ಪ್ರಚೇತಸಾಂ ಗಿರಿತ್ರೇಣ ಯಥಾಽಽಸೀತ್ಪಥಿ ಸಂಗಮಃ ।
ಯದುತಾಹ ಹರಃ ಪ್ರೀತಸ್ತನ್ನೋ ಬ್ರಹ್ಮನ್ ವದಾರ್ಥವತ್ ॥ ೧೬ ॥

ಸಂಗಮಃ ಖಲು ವಿಪ್ರರ್ಷೇ ಶಿವೇನೇಹ ಶರೀರಿಣಾಮ್ ।
ದುರ್ಲಭೋ ಮುನಯೋ ದಧ್ಯುರಸಂಗಾದ್ಯಮಭೀಪ್ಸಿತಮ್ ॥ ೧೭ ॥

ಆತ್ಮಾರಾಮೋಽಪಿ ಯಸ್ತ್ವಸ್ಯ ಲೋಕಕಲ್ಪಸ್ಯ ರಾಧಸೇ ।
ಶಕ್ತ್ಯಾ ಯುಕ್ತೋ ವಿಚರತಿ ಘೋರಯಾ ಭಗವಾನ್ಭವಃ ॥ ೧೮ ॥

ಮೈತ್ರೇಯ ಉವಾಚ

ಪ್ರಚೇತಸಃ ಪಿತುರ್ವಾಕ್ಯಂ ಶಿರಸಾಽಽದಾಯ ಸಾಧವಃ ।
ದಿಶಂ ಪ್ರತೀಚೀಂ ಪ್ರಯಯುಸ್ತಪಸ್ಯಾದೃತಚೇತಸಃ ॥ ೧೯ ॥

ಸಮುದ್ರಮುಪ ವಿಸ್ತೀರ್ಣಮಪಶ್ಯನ್ಸುಮಹತ್ಸರಃ ।
ಮಹನ್ಮನ ಇವ ಸ್ವಚ್ಛಂ ಪ್ರಸನ್ನಸಲಿಲಾಶಯಮ್ ॥ ೨೦ ॥

ನೀಲರಕ್ತೋತ್ಪಲಾಂಭೋಜಕಹ್ಲಾರೇಂದೀವರಾಕರಮ್ ।
ಹಂಸಸಾರಸಚಕ್ರಾಹ್ವಕಾರಂಡವನಿಕೂಜಿತಮ್ ॥ ೨೧ ॥

ಮದುವಣಗಿತ್ತಿಯಾದ ಆಕೆಯು ಝಣ-ಝಣಿಸುವ ನೂಪುರಗಳನ್ನು ಧರಿಸಿ ಬಂದಾಗ ಆ ಕಾಲಂದುಗೆಗಳ ಧ್ವನಿಗೆ ದಶ-ದಿಕ್ಕುಗಳಲ್ಲಿರುವ ದೇವತೆಗಳು, ಅಸುರರು, ಗಂಧರ್ವರು, ಮುನಿಗಳು, ಸಿದ್ಧರು, ಮನುಷ್ಯರು, ನಾಗರು ಹೀಗೆ ಎಲ್ಲರೂ ಮನಸೋತು ಪರವಶರಾದರು. ॥ ೧೨ ॥ ಪ್ರಾಚೀನಬರ್ಹಿಯು ಶತದ್ರುತಿಯ ಗರ್ಭದಿಂದ ಪ್ರಚೇತಸರೆಂಬ ಹತ್ತು ಪುತ್ರರನ್ನು ಪಡೆದನು. ಅವರೆಲ್ಲರೂ ಅತ್ಯಂತ ಧರ್ಮಜ್ಞರಾಗಿದ್ದು, ಅವರ ಹೆಸರುಗಳು ಮತ್ತು ಆಚರಣೆಗಳು ಒಂದೇ ರೀತಿಯಲ್ಲಿದ್ದುವು. ॥ ೧೩ ॥ ತಂದೆಯು ಅವರಿಗೆ ಸಂತಾನವನ್ನು ಪಡೆಯಿರಿ ಎಂದು ಆದೇಶ ನೀಡಿದಾಗ ಅವರೆಲ್ಲರೂ ತಪಸ್ಸನ್ನಾಚರಿಸಲಿಕ್ಕಾಗಿ ಸಮುದ್ರವನ್ನು ಪ್ರವೇಶಿಸಿದರು. ಅಲ್ಲಿ ಹತ್ತುಸಾವಿರ ವರ್ಷಗಳ ಕಾಲ ತಪಸ್ಸನ್ನು ಮಾಡುತ್ತಾ ತಪಸ್ಸಿನ ಫಲವನ್ನು ನೀಡುವ ಶ್ರೀಹರಿಯನ್ನು ಆರಾಧಿಸಿದರು. ॥ ೧೪ ॥ ಮನೆಯಿಂದ ತಪಸ್ಸಿಗೆ ಹೋಗುವಾಗ ದಾರಿಯಲ್ಲಿ ಶ್ರೀಮಹಾದೇವನು ಅವರಿಗೆ ದರ್ಶನವಿತ್ತು ಕರುಣೆಯಿಂದ ಉಪದೇಶ ಮಾಡಿದ ತತ್ತ್ವವನ್ನು ಕುರಿತು ಅವರು ಏಕಾಗ್ರತೆಯಿಂದ ಧ್ಯಾನ, ಜಪ, ಪೂಜೆಗಳನ್ನು ಆಚರಿಸುತ್ತಾ ಇದ್ದರು. ॥ ೧೫ ॥

ವಿದುರನು ಕೇಳಿದನು – ಮಹಾತ್ಮರೇ! ಪ್ರಚೇತಸರಿಗೆ ಮಾರ್ಗದಲ್ಲಿ ಶ್ರೀಮಹಾದೇವನ ಭೇಟಿ ಹೇಗಾಯಿತು? ಅವರ ಮೇಲೆ ಪ್ರಸನ್ನನಾಗಿ ಭಗವಾನ್ ಶಂಕರನು ಅವರಿಗೆ ಏನನ್ನು ಉಪದೇಶ ಮಾಡಿದನು? ಆ ಸಾರಯುಕ್ತವಾದ ಮಾತನ್ನು ನೀವು ಕೃಪೆಯಿಟ್ಟು ನನಗೆ ತಿಳಿಸಿರಿ. ॥ ೧೬ ॥ ಬ್ರಹ್ಮರ್ಷಿಗಳೇ! ದೇಹಧಾರಿಗಳಾದ ಸಂಸಾರಿಗಳಿಗೆ ಶಿವನ ದರ್ಶನವಾಗುವುದು ಅತ್ಯಂತ ದುರ್ಲಭ. ಮುನಿಜನರೂ ಎಲ್ಲ ಬಗೆಯ ಆಸಕ್ತಿಯನ್ನು ಬಿಟ್ಟು ಅವನನ್ನು ಪಡೆಯುವುದಕ್ಕಾಗಿ ನಿರಂತರವಾಗಿ ಧ್ಯಾನಮಾಡಿದರೂ ಸುಲಭವಾಗಿ ಪಡೆಯಲಾಗುವುದಿಲ್ಲ. ಹೀಗಿರುವಾಗ ಇತರರ ವಿಷಯದಲ್ಲಿ ಹೇಳುವುದೇನಿದೆ? ॥ ೧೭ ॥ ಭಗವಾನ್ ಶಂಕರನು ಆತ್ಮಾರಾಮನು. ತನಗಾಗಿ ಏನನ್ನೂ ಮಾಡಬೇಕಾಗಿಲ್ಲ, ಏನನ್ನೂ ಪಡೆಯಬೇಕಾಗಿಲ್ಲ; ಆದರೂ ಲೋಕರಕ್ಷಣೆಯ ದೃಷ್ಟಿಯಿಂದಲೇ ಅವನು ತನ್ನ ಘೋರರೂಪವಾದ ಶಕ್ತಿದೇವಿಯೊಡನೆ ಎಲ್ಲೆಲ್ಲಿಯೂ ಸಂಚರಿಸುತ್ತಿರುವನು. ॥ ೧೮ ॥

ಶ್ರೀಮೈತ್ರೇಯರು ಹೇಳುತ್ತಾರೆ – ಎಲೈ ವಿದುರನೇ! ಸಾಧುಸ್ವಭಾವವುಳ್ಳ ಪ್ರಚೇತಸರು ತಂದೆಯ ಮಾತನ್ನು ಶಿರಸಾವಹಿಸಿ ತಪಸ್ಸಿನಲ್ಲಿ ಚಿತ್ತವನ್ನು ನೆಟ್ಟು ಪಶ್ಚಿಮದಿಕ್ಕಿಗೆ ಹೊರಟರು. ॥ ೧೯ ॥ ಹಾಗೇ ಹೋಗುತ್ತಿರುವಾಗ ಅವರಿಗೆ ಸಮುದ್ರದಂತೆ ವಿಶಾಲವಾದ ಒಂದು ಸರೋವರವು ಕಾಣಿಸಿತು. ಅದು ಮಹಾಪುರುಷರ ಮನಸ್ಸಿನಂತೆ ಸ್ವಚ್ಛವಾಗಿದ್ದು ಅದರಲ್ಲಿದ್ದ ಮೀನುಗಳೇ ಮುಂತಾದ ಜಲಚರ ಪ್ರಾಣಿಗಳು ಪ್ರಸನ್ನವಾಗಿ ಕಾಣುತ್ತಿದ್ದುವು. ॥ ೨೦ ॥ ಅದರಲ್ಲಿ ಕನ್ನೈದಿಲೆ, ಕೆಂದಾವರೆಗಳು ರಾತ್ರಿಯಲ್ಲಿ, ಹಗಲಿನಲ್ಲಿ, ಸಂಧ್ಯಾಸಮಯದಲ್ಲಿ ಅರಳುವ ಕಮಲಗಳು ಹಾಗೂ ಇಂದೀವರ ಮುಂತಾದ ಬೇರೆ ಅನೇಕ ಬಗೆಯ ಕಮಲಗಳು ಸುಶೋಭಿತವಾಗಿದ್ದುವು. ಹಂಸ, ಸಾರಸ, ಚಕ್ರವಾಕ, ಕಾರಂಡವಗಳೇ ಮುಂತಾದ ನೀರುಹಕ್ಕಿಗಳು ಅದರ ದಡದಲ್ಲಿ ಕಲರವ ಮಾಡುತ್ತಿದ್ದುವು. ॥ ೨೧ ॥

ಮತ್ತಭ್ರಮರಸೌಸ್ವರ್ಯಹೃಷ್ಟರೋಮಲತಾಂಘ್ರಿಪಮ್ ।
ಪದ್ಮಕೋಶರಜೋ ದಿಕ್ಷು ವಿಕ್ಷಿಪತ್ಪವನೋತ್ಸವಮ್
॥ ೨೨ ॥

ತತ್ರ ಗಾಂಧರ್ವಮಾಕರ್ಣ್ಯ ದಿವ್ಯಮಾರ್ಗಮನೋಹರಮ್ ।
ವಿಸಿಸ್ಮ್ಯೂ ರಾಜಪುತ್ರಾಸ್ತೇ ಮೃದಂಗಪಣವಾದ್ಯನು
॥ ೨೩ ॥

ತರ್ಹ್ಯೇವ ಸರಸಸ್ತಸ್ಮಾನ್ನಿಷ್ಕ್ರಾಮಂತಂ ಸಹಾನುಗಮ್ ।
ಉಪಗೀಯಮಾನಮಮರಪ್ರವರಂ ವಿಬುಧಾನುಗೈಃ
॥ ೨೪ ॥

ತಪ್ತಹೇಮನಿಕಾಯಾಭಂ ಶಿತಿಕಂಠಂ ತ್ರಿಲೋಚನಮ್ ।
ಪ್ರಸಾದಸುಮುಖಂ ವೀಕ್ಷ್ಯ ಪ್ರಣೇಮುರ್ಜಾತಕೌತುಕಾಃ
॥ ೨೫ ॥

ಸ ತಾನ್ಪ್ರಪನ್ನಾರ್ತಿಹರೋ ಭಗವಾನ್ ಧರ್ಮವತ್ಸಲಃ ।
ಧರ್ಮಜ್ಞಾನ್ ಶೀಲಸಂಪನ್ನಾನ್ ಪ್ರೀತಃ ಪ್ರೀತಾನುವಾಚ ಹ
॥ ೨೬ ॥

ಶ್ರೀರುದ್ರ ಉವಾಚ

ಯೂಯಂ ವೇದಿಷದಃ ಪುತ್ರಾ ವಿದಿತಂ ವಶ್ಚಿಕೀರ್ಷಿತಮ್ ।
ಅನುಗ್ರಹಾಯ ಭದ್ರಂ ವ ಏವಂ ಮೇ ದರ್ಶನಂ ಕೃತಮ್
॥ ೨೭ ॥

ಯಃ ಪರಂ ರಂಹಸಃ ಸಾಕ್ಷಾತ್ತ್ರಿಗುಣಾಜ್ಜೀವಸಂಜ್ಞಿತಾತ್ ।
ಭಗವಂತಂ ವಾಸುದೇವಂ ಪ್ರಪನ್ನಃ ಸ ಪ್ರಿಯೋ ಹಿ ಮೇ
॥ ೨೮ ॥

ಸ್ವಧರ್ಮನಿಷ್ಠಃ ಶತಜನ್ಮಭಿಃ ಪುಮಾನ್
ವಿರಿಂಚತಾಮೇತಿ ತತಃ ಪರಂ ಹಿ ಮಾಮ್ ।
ಅವ್ಯಾಕೃತಂ ಭಾಗವತೋಽಥ ವೈಷ್ಣವಂ
ಪದಂ ಯಥಾಹಂ ವಿಬುಧಾಃ ಕಲಾತ್ಯಯೇ ॥ ೨೯ ॥

ಅಥ ಭಾಗವತಾ ಯೂಯಂ ಪ್ರಿಯಾಃ ಸ್ಥ ಭಗವಾನ್ ಯಥಾ ।
ನ ಮದ್ಭಾಗವತಾನಾಂ ಚ ಪ್ರೇಯಾನನ್ಯೋಽಸ್ತಿ ಕರ್ಹಿಚಿತ್
॥ ೩೦ ॥

ಅದರ ಸುತ್ತಲೂ ಸೊಂಪಾಗಿ ಬೆಳೆದಿದ್ದ ಬಗೆ-ಬಗೆಯ ಮರ-ಬಳ್ಳಿಗಳ ಮೇಲೆ ಮತ್ತದುಂಬಿಗಳು ಝೇಂಕರಿಸುತ್ತಿದ್ದುವು. ಅವುಗಳ ಮಧುರ ಧ್ವನಿಯಿಂದ ಗಿಡ-ಮರ-ಬಳ್ಳಿಗಳು ಹರ್ಷದಿಂದ ರೋಮಾಂಚಿತವಾಗಿವೆಯೋ ಎಂಬಂತೆ ಶೋಭಿಸುತ್ತಿದ್ದುವು. ತಾವರೆಯ ಪೂಧೂಳಿಯನ್ನು ಗಾಳಿಯು ಎಲ್ಲೆಡೆ ಚೆಲ್ಲುತ್ತಾ ಜನರಿಗೆ ಆನಂದೋತ್ಸವವನ್ನು ಉಂಟುಮಾಡುವಂತಿತ್ತು. ॥ ೨೨ ॥ ಅಲ್ಲಿ ಮೃದಂಗ, ಪಣವಗಳೇ ಮುಂತಾದ ವಾದ್ಯಗಳೊಂದಿಗೆ ಅನೇಕ ವಿಧ ರಾಗ-ರಾಗಿಣಿಯರ ಕ್ರಮದಿಂದ ಸಂಗೀತದ ಮಧುರ ಧ್ವನಿಯನ್ನು ಕೇಳಿ ಆ ರಾಜಕುಮಾರರಿಗೆ ತುಂಬಾ ಆಶ್ಚರ್ಯವಾಯಿತು. ॥ ೨೩ ॥ ಅಷ್ಟರಲ್ಲೇ ಅವರಿಗೆ ಅಲ್ಲಿ ದೇವಾಧಿದೇವನಾದ ಭಗವಾನ್ ಶಂಕರನು ತನ್ನ ಅನುಚರರೊಂದಿಗೆ ಆ ಸರೋವರದಿಂದ ಹೊರಗೆ ಬರುತ್ತಿರುವುದು ಕಾಣಿಸಿತು. ಆ ಸ್ವಾಮಿಯ ದೇಹವು ಪುಟವಿಟ್ಟ ಭಂಗಾರದ ರಾಶಿಯಂತೆ ಥಳ-ಥಳಿಸುತ್ತಿತ್ತು. ನೀಲಿಬಣ್ಣದ ಕಂಠದಿಂದಲೂ, ವಿಶಾಲವಾದ ಮೂರು ಕಣ್ಣುಗಳಿಂದಲೂ ಒಪ್ಪುತ್ತಿದ್ದ ಶಂಕರನು ಪ್ರಸನ್ನಮುದ್ರೆಯಿಂದ ಭಕ್ತರ ಮೇಲೆ ಅನುಗ್ರಹವನ್ನು ಬೀರುತ್ತಿದ್ದನು. ಗಂಧರ್ವರು ಶ್ರುತಿ ಮಧುರವಾಗಿ ಆತನ ಗುಣಗಾನ ಮಾಡುತ್ತಿದ್ದರು. ಹೀಗೆ ಇದ್ದಕ್ಕಿದ್ದಂತೆ ಆತನ ದರ್ಶನ ಭಾಗ್ಯವನ್ನು ಪಡೆದ ಪ್ರಚೇತಸರಿಗೆ ತುಂಬಾ ಕುತೂಹಲವುಂಟಾಗಿ ಅವರು ಶಿವನ ಚರಣಗಳಲ್ಲಿ ಪ್ರಣಾಮಗಳನ್ನು ಸಲ್ಲಿಸಿದರು. ॥ ೨೪-೨೫ ॥ ಆಗ ಶರಣಾಗತರ ಭವಭಯಹಾರಿಯೂ, ಧರ್ಮವತ್ಸಲನೂ ಆದ ಭಗವಾನ್ ಶಂಕರನು ತನ್ನ ದರ್ಶನದಿಂದ ಸಂತಸಗೊಂಡ ಆ ಧರ್ಮಜ್ಞರೂ, ಶೀಲಸಂಪನ್ನರೂ ಆದ ರಾಜಕುಮಾರರಲ್ಲಿ ಪ್ರಸನ್ನನಾಗಿ ಇಂತೆಂದನು. ॥ ೨೬ ॥

ಶ್ರೀಮಹಾದೇವನು ಹೇಳಿದನು – ನೀವು ಪ್ರಾಚೀನ ಬರ್ಹಿ ರಾಜನ ಸುಪುತ್ರರು. ನಿಮಗೆ ಮಂಗಳವಾಗಲಿ. ನೀವು ಏನು ಮಾಡಬೇಕೆಂಬುದನ್ನು ನಾನು ತಿಳಿದಿರುವೆ. ಈಗ ನಿಮ್ಮನ್ನು ಅನುಗ್ರಹಿಸುವುದಕ್ಕಾಗಿಯೇ ನಾನು ನಿಮಗೆ ದರ್ಶನವನ್ನು ನೀಡಿದ್ದೇನೆ. ॥ ೨೭ ॥ ಯಾರು ಅವ್ಯಕ್ತ ಪ್ರಕೃತಿ ಹಾಗೂ ಜೀವಸಂಜ್ಞಕ ಪುರುಷ ಇವೆರಡರ ನಿಯಾಮಕನಾದ ಭಗವಾನ್ ವಾಸುದೇವನಲ್ಲಿ ಶರಣಾಗುತ್ತಾನೋ ಅವನು ನನಗೆ ಪರಮಪ್ರಿಯನು. ॥ ೨೮ ॥ ತನ್ನ ವರ್ಣಾಶ್ರಮ ಧರ್ಮವನ್ನು ಚೆನ್ನಾಗಿ ಪಾಲಿಸುವ ಮನುಷ್ಯನು ನೂರು ಜನ್ಮಗಳ ನಂತರ ಬ್ರಹ್ಮದೇವರ ಪದವನ್ನು ಪಡೆಯುತ್ತಾನೆ. ಅದಕ್ಕಿಂತಲೂ ಹೆಚ್ಚು ಪುಣ್ಯವನ್ನು ಗಳಿಸಿದರೆ ಆತನು ನನ್ನನ್ನು ಹೊಂದುವನು. ಆದರೆ ಭಗವಂತನ ಅನನ್ಯ ಭಕ್ತನಾದರೋ ನೇರವಾಗಿ ಭಗವಾನ್ ವಿಷ್ಣುವಿನ ಆ ಪ್ರಪಂಚಾತೀತ ಪರಮಪದವನ್ನು ಪಡೆದುಕೊಳ್ಳುವನು. ನಾವು ಮತ್ತು ನಮ್ಮಂತಹ ಅಧಿಕಾರಿದೇವತೆಗಳೂ ನಮ್ಮ-ನಮ್ಮ ಅಧಿಕಾರದ ಕಾಲವು ಮುಗಿದ ನಂತರ ಹೋಗಿ ಸೇರುವ ಪರಮೋತ್ತಮಪದವದು. ॥ ೨೯ ॥ ನೀವು ಭಾಗವದ್ಭಕ್ತರಾಗಿರುವುದರಿಂದಲೇ ನನಗೂ ಶ್ರೀಭಗವಂತನಷ್ಟೇ ಪ್ರಿಯರಾಗಿದ್ದೀರಿ. ಅಂತೆಯೇ ಭಗವಂತನ ಭಕ್ತರಿಗೂ ಕೂಡ ನನಗಿಂತ ಮಿಗಿಲಾದ ಪ್ರಿಯನು ಯಾರು ಎಂದಿಗೂ ಇರುವುದಿಲ್ಲ. ॥ ೩೦ ॥

ಇದಂ ವಿವಿಕ್ತಂ ಜಪ್ತವ್ಯಂ ಪವಿತ್ರಂ ಮಂಗಲಂ ಪರಮ್ ।
ನಿಃಶ್ರೇಯಸಕರಂ ಚಾಪಿ ಶ್ರೂಯತಾಂ ತದ್ವದಾಮಿ ವಃ
॥ ೩೧ ॥

ಮೈತ್ರೇಯ ಉವಾಚ

ಇತ್ಯನುಕ್ರೋಶಹೃದಯೋ ಭಗವಾನಾಹ ತಾಂಛಿವಃ ।
ಬದ್ಧಾಂಜಲೀನ್ರಾಜಪುತ್ರಾನ್ನಾರಾಯಣಪರೋ ವಚಃ
॥ ೩೨ ॥

ಶ್ರೀರುದ್ರ ಉವಾಚ

ಜಿತಂ ತ ಆತ್ಮವಿದ್ಧುರ್ಯಸ್ವಸ್ತಯೇ ಸ್ವಸ್ತಿರಸ್ತು ಮೇ ।
ಭವತಾ ರಾಧಸಾ ರಾದ್ಧಂ ಸರ್ವಸ್ಮಾ ಆತ್ಮನೇ ನಮಃ
॥ ೩೩ ॥

ನಮಃ ಪಂಕಜನಾಭಾಯ ಭೂತಸೂಕ್ಷ್ಮೇಂದ್ರಿಯಾತ್ಮನೇ ।
ವಾಸುದೇವಾಯ ಶಾಂತಾಯ ಕೂಟಸ್ಥಾಯ ಸ್ವರೋಚಿಷೇ
॥ ೩೪ ॥

ಸಂಕರ್ಷಣಾಯ ಸೂಕ್ಷ್ಮಾಯ ದುರಂತಾಯಾಂತಕಾಯ ಚ ।
ನಮೋ ವಿಶ್ವಪ್ರಬೋಧಾಯ ಪ್ರದ್ಯುಮ್ನಾಯಾಂತರಾತ್ಮನೇ
॥ ೩೫ ॥

ನಮೋ ನಮೋಽನಿರುದ್ಧಾಯ ಹೃಷೀಕೇಶೇಂದ್ರಿಯಾತ್ಮನೇ ।
ನಮಃ ಪರಮಹಂಸಾಯ ಪೂರ್ಣಾಯ ನಿಭೃತಾತ್ಮನೇ
॥ ೩೬ ॥

ಸ್ವರ್ಗಾಪವರ್ಗದ್ವಾರಾಯ ನಿತ್ಯಂ ಶುಚಿಷದೇ ನಮಃ ।
ನಮೋ ಹಿರಣ್ಯವೀರ್ಯಾಯ ಚಾತುರ್ಹೋತ್ರಾಯ ತಂತವೇ
॥ ೩೭ ॥

ನಮ ಊರ್ಜ ಇಷೇ ತ್ರಯ್ಯಾಃ ಪತಯೇ ಯಜ್ಞರೇತಸೇ ।
ತೃಪ್ತಿದಾಯ ಚ ಜೀವಾನಾಂ ನಮಃ ಸರ್ವರಸಾತ್ಮನೇ
॥ ೩೮ ॥

ಸರ್ವಸತ್ತ್ವಾತ್ಮದೇಹಾಯ ವಿಶೇಷಾಯ ಸ್ಥವೀಯಸೇ ।
ನಮಸ್ತ್ರೈಲೋಕ್ಯಪಾಲಾಯ ಸಹ ಓಜೋಬಲಾಯ ಚ
॥ ೩೯ ॥

ಈಗ ನಾನು ನಿಮಗೆ ಅತ್ಯಂತ ಪವಿತ್ರವೂ, ಮಂಗಳಕರವೂ, ಮೋಕ್ಷಪ್ರದವೂ ಆದ ಒಂದು ಸ್ತೋತ್ರವನ್ನು ಉಪದೇಶಿಸುತ್ತೇನೆ. ಇದನ್ನು ನೀವು ಶುದ್ಧವಾದ ಭಾವದಿಂದ ಜಪಿಸಬೇಕು. ॥ ೩೧ ॥

ಶ್ರೀಮೈತ್ರೇಯರು ಹೇಳುತ್ತಾರೆ – ಆಗ ಕರುಣಾರ್ದ್ರ ಹೃದಯನಾದ ನಾರಾಯಣಪರಾಯಣನಾದ ಭಗವಾನ್ ಶಿವನು ತನ್ನ ಮುಂದೆ ಕೈಜೋಡಿಸಿಕೊಂಡು ನಿಂತಿದ್ದ ರಾಜಪುತ್ರರಿಗೆ ಈ ಸ್ತೋತ್ರವನ್ನು ಉಪದೇಶಿಸಿದನು. ॥ ೩೨ ॥

ಭಗವಾನ್ ರುದ್ರನು ಸ್ತುತಿಮಾಡತೊಡಗಿದನು – ಓ ಭಗವಂತಾ! ನಿನ್ನ ಜಯ (ಉತ್ಕರ್ಷ)ವು ಉಚ್ಚಕೋಟಿಯ ಆತ್ಮಜ್ಞಾನಿಗಳ ಶ್ರೇಯಸ್ಸಿಗಾಗಿಯೇ – ನಿಜಾನಂದ ಲಾಭಕ್ಕಾಗಿಯೇ ಇದೆ. ಅದರಿಂದ ನನಗೂ ಕ್ಷೇಮ ಉಂಟಾಗಲಿ. ನೀನು ಸದಾ ನಿರತಿಶಯ ಪರಮಾನಂದ ಸ್ವರೂಪದಲ್ಲಿಯೇ ನೆಲೆಗೊಂಡಿರುವವನು. ಇಂತಹ ಸರ್ವಾತ್ಮಕ ಆತ್ಮಸ್ವರೂಪನಾದ ನಿನಗೆ ನಮಸ್ಕಾರವು. ॥ ೩೩ ॥ ನೀನು ಪದ್ಮನಾಭ (ಸಮಸ್ತಲೋಕಗಳ ಆದಿಕಾರಣ)ನಾಗಿರುವೆ. ಭೂತಸೂಕ್ಷ್ಮ (ತನ್ಮಾತ್ರೆಗಳು) ಮತ್ತು ಇಂದ್ರಿಯಗಳ ನಿಯಾಮಕನೂ, ಶಾಂತನೂ, ವೃದ್ಧಿ ಕ್ಷಯಗಳನ್ನು ಹೊಂದದ ಏಕರಸನೂ ಹಾಗೂ ಸ್ವಯಂಪ್ರಕಾಶ ವಾಸುದೇವ (ಚಿತ್ತದ ಅಧಿಷ್ಠಾತೃ)ನೂ ನೀನೇ ಆಗಿರುವೆ. ಅಂತಹ ನಿನಗೆ ನಮಸ್ಕಾರವು. ॥ ೩೪॥ ಸೂಕ್ಷ್ಮ (ಅವ್ಯಕ್ತ)ರೂಪಿಯೂ, ಅನಂತನೂ, ಸರ್ವಸಂಹಾರಕನೂ ಆಗಿರುವ ಸಂಕರ್ಷಣರೂಪಿಯಾದ ನಿನಗೆ ನಮಸ್ಕಾರವು. ವಿಶ್ವವನ್ನು ಎಚ್ಚರಗೊಳಿಸುವ, ವಿಶ್ವಕ್ಕೆ ಅಂತರಾತ್ಮನಾಗಿರುವ ಪ್ರದ್ಯುಮ್ನರೂಪಿಯಾದ ನಿನಗೆ ನಮಸ್ಕಾರವು. ॥ ೩೫ ॥ ಇಂದ್ರಿಯಗಳಿಗೆ ಅಧಿಪತಿಯಾಗಿ, ಅವುಗಳ ಅಂತರಾತ್ಮನಾಗಿ ಮನಸ್ತತ್ತ್ವಾಭಿಮಾನಿಯಾದ ಅನಿರುದ್ಧರೂಪಿಯಾದ ನಿನಗೆ ನಮಸ್ಕಾರವು. ನೀನೇ ನಿನ್ನ ತೇಜಸ್ಸಿನಿಂದ ಜಗತ್ತನ್ನು ತುಂಬಿರುವ ಸೂರ್ಯದೇವನಾಗಿರುವೆ. ಪೂರ್ಣನಾದ್ದರಿಂದ ವೃದ್ಧಿ-ಕ್ಷಯಗಳಿಲ್ಲದ ನಿನಗೆ ನಮಸ್ಕಾರವು. ॥ ೩೬ ॥ ಸ್ವರ್ಗ ಮತ್ತು ಮೋಕ್ಷಗಳೆರಡಕ್ಕೂ ದ್ವಾರವಾಗಿರುವ ಹಾಗೂ ನಿರಂತರ ಅಂತಃಕರಣದಲ್ಲಿರುವ ನಿನಗೆ ನಮಸ್ಕಾರವು. ಸುವರ್ಣವನ್ನು ವೀರ್ಯವಾಗಿ ಉಳ್ಳವನೂ, ಚಾತುರ್ಹೋತ್ರ ಮುಂತಾದ ಯಜ್ಞಗಳಿಗೆ ಸಾಧನವಾಗಿ ಅವುಗಳನ್ನು ವಿಸ್ತರಿಸುವವನೂ ಆದ ಅಗ್ನಿದೇವ ಸ್ವರೂಪಿಯಾದ ನಿನಗೆ ನಮಸ್ಕಾರವು. ॥ ೩೭ ॥ ದೇವತೆಗಳಿಗೂ, ಪಿತೃಗಳಿಗೂ ಪೋಷಕನಾದ ಸೋಮರೂಪಿಗೆ ನಮಸ್ಕಾರವು. ವೇದಗಳಿಗೆ ಪತಿಯಾದ ಯಜ್ಞೇಶ್ವರನಿಗೆ ನಮಸ್ಕಾರವು. ಎಲ್ಲ ಜೀವಿಗಳಿಗೂ ತೃಪ್ತಿಯನ್ನುಂಟುಮಾಡುವ ಸರ್ವರಸ (ಜಲ)ರೂಪನಾದ ನಿನಗೆ ನಮಸ್ಕಾರವು. ॥ ೩೮ ॥ ಎಲ್ಲ ಪ್ರಾಣಿಗಳಿಗೆ ನೆಲೆಯಾದ ಸ್ಥೂಲವಿರಾಟ್ ಪುರುಷರೂಪಿಗೆ, ಮೂರು ಲೋಕಗಳ ಪಾಲಕನಿಗೆ, ಮಾನಸಿಕ, ಐಂದ್ರಿಯಿಕ ಮತ್ತು ಶಾರೀರಿಕ ಶಕ್ತಿರೂಪಿಯಾದ ವಾಯು (ಪ್ರಾಣ)ರೂಪಿಗೆ ನಮೋ ನಮಃ ॥ ೩೯ ॥ ನೀನೇ ನಿನ್ನ ಗುಣ ಶಬ್ದದ ಮೂಲಕ ಸಮಸ್ತ ಪದಾರ್ಥಗಳ ಅರಿವನ್ನುಂಟುಮಾಡುತ್ತಾ ಒಳ-ಹೊರಗಿನ ಭೇದವನ್ನುಂಟುಮಾಡುವ ಆಕಾಶನಾಗಿರುವೆ. ನೀನೇ ಮಹಾನ್ ಪುಣ್ಯ

ಅರ್ಥಲಿಂಗಾಯ ನಭಸೇ ನಮೋಽಂತರ್ಬಹಿರಾತ್ಮನೇ ।
ನಮಃ ಪುಣ್ಯಾಯ ಲೋಕಾಯ ಅಮುಷ್ಮೈ ಭೂರಿವರ್ಚಸೇ ॥ ೪೦ ॥

ಪ್ರವೃತ್ತಾಯ ನಿವೃತ್ತಾಯ ಪಿತೃದೇವಾಯ ಕರ್ಮಣೇ ।
ನಮೋಽಧರ್ಮವಿಪಾಕಾಯ ಮೃತ್ಯವೇ ದುಃಖದಾಯ ಚ ॥ ೪೧ ॥

ನಮಸ್ತ ಆಶಿಷಾಮೀಶ ಮನವೇ ಕಾರಣಾತ್ಮನೇ ।
ನಮೋ ಧರ್ಮಾಯ ಬೃಹತೇ ಕೃಷ್ಣಾಯಾಕುಂಠಮೇಧಸೇ ।
ಪುರುಷಾಯ ಪುರಾಣಾಯ ಸಾಂಖ್ಯಯೋಗೇಶ್ವರಾಯ ಚ ॥ ೪೨ ॥

ಶಕ್ತಿತ್ರಯಸಮೇತಾಯ ಮೀಢುಷೇಽಹಂಕೃತಾತ್ಮನೇ ।
ಚೇತಆಕೂತಿರೂಪಾಯ ನಮೋ ವಾಚೋವಿಭೂತಯೇ ॥ ೪೩ ॥

ದರ್ಶನಂ ನೋ ದಿದೃಕ್ಷೂಣಾಂ
ದೇಹಿ ಭಾಗವತಾರ್ಚಿತಮ್ ।
ರೂಪಂ ಪ್ರಿಯತಮಂ ಸ್ವಾನಾಂ
ಸರ್ವೇಂದ್ರಿಯಗುಣಾಂಜನಮ್ ॥ ೪೪ ॥

ಸ್ನಿಗ್ಧಪ್ರಾವೃಡ್ಘನಶ್ಯಾಮಂ ಸರ್ವಸೌಂದರ್ಯಸಂಗ್ರಹಮ್ ।
ಚಾರ್ವಾಯತಚತುರ್ಬಾಹು ಸುಜಾತರುಚಿರಾನನಮ್ ॥ ೪೫ ॥

ಪದ್ಮಕೋಶಪಲಾಶಾಕ್ಷಂ ಸುಂದರಭ್ರು ಸುನಾಸಿಕಮ್ ।
ಸುದ್ವಿಜಂ ಸುಕಪೋಲಾಸ್ಯಂ ಸಮಕರ್ಣವಿಭೂಷಣಮ್ ॥ ೪೬ ॥

ಪ್ರೀತಿಪ್ರಹಸಿತಾಪಾಂಗಮಲಕೈರುಪಶೋಭಿತಮ್ ।
ಲಸತ್ಪಂಕಜಕಿಂಜಲ್ಕದುಕೂಲಂ ಮೃಷ್ಟಕುಂಡಲಮ್ ॥ ೪೭ ॥

ಸ್ಫುರತ್ಕಿರೀಟವಲಯಹಾರನೂಪುರಮೇಖಲಮ್ ।
ಶಂಖಚಕ್ರಗದಾಪದ್ಮಮಾಲಾಮಣ್ಯುತ್ತಮರ್ಧಿಮತ್ ॥ ೪೮ ॥

ಸಿಂಹಸ್ಕಂಧತ್ವಿಷೋ ಬಿಭ್ರತ್ಸೌಭಗಗ್ರೀವಕೌಸ್ತುಭಮ್ ।
ಶ್ರಿಯಾನಪಾಯಿನ್ಯಾ ಕ್ಷಿಪ್ತನಿಕಷಾಶ್ಮೋರಸೋಲ್ಲಸತ್ ॥ ೪೯ ॥

ಗಳಿಂದ ದೊರೆಯುವಂತಹ ಪರಮ ತೇಜೋಮಯ ಸ್ವರ್ಗ-ವೈಕುಂಠವೇ ಮುಂತಾದ ಲೋಕಗಳೂ ಆಗಿರುವೆ. ಅಂತಹ ನಿನಗೆ ಪದೇ-ಪದೇ ನಮಸ್ಕಾರಗಳು. ॥ ೪೦ ॥ ಪಿತೃಲೋಕವನ್ನು ದೊರಕಿಸಿಕೊಡುವ ಪ್ರವೃತ್ತಿಕರ್ಮರೂಪಿಯೂ, ದೇವಲೋಕವನ್ನು ದೊರಕಿಸಿಕೊಡುವ ನಿವೃತ್ತಿಕರ್ಮರೂಪಿಯೂ ನೀನೇ ಆಗಿರುವೆ. ನೀನೇ ಅಧರ್ಮದ ಫಲಸ್ವರೂಪವಾದ ದುಃಖದಾಯಕ ಮೃತ್ಯುವೂ ಆಗಿರುವೆ. ಅಂತಹ ನಿನಗೆ ನಮಸ್ಕಾರವು. ॥ ೪೧ ॥ ಸ್ವಾಮೀ! ನೀನೇ ಪುರಾಣಪುರುಷನೂ, ಸಾಂಖ್ಯ ಮತ್ತು ಯೋಗದ ಅಧೀಶ್ವರನಾದ ಭಗವಾನ್ ಶ್ರೀಕೃಷ್ಣನಾಗಿರುವೆ. ನೀನೇ ಎಲ್ಲ ರೀತಿಯ ಕಾಮನೆಗಳನ್ನು ಪೂರ್ಣಗೊಳಿಸುವ ಸಾಕ್ಷಾತ್ ಮಂತ್ರಸ್ವರೂಪಿಯೂ, ಮಹಾನ್ ಧರ್ಮಸ್ವರೂಪನೂ ಆಗಿರುವೆ. ನಿನ್ನ ಜ್ಞಾನಶಕ್ತಿಯು ಎಂದಿಗೂ ಕುಂಠಿತವಾಗುವಂತಹುದಲ್ಲ. ಅಂತಹ ನಿನಗೆ ನಮೋ ನಮಃ ॥ ೪೨ ॥ ನೀನೇ ಕರ್ತಾ-ಕರಣ-ಕರ್ಮ ಮೂರೂ ಶಕ್ತಿಗಳ ಏಕಮಾತ್ರ ಆಶ್ರಯನಾಗಿರುವೆ. ನೀನೇ ಅಹಂಕಾರದತತ್ತ್ವಕ್ಕೆ ಅಧಿಪತಿಯಾದ ರುದ್ರರೂಪಿಯಾಗಿರುವೆ. ನೀನೇ ಜ್ಞಾನ ಮತ್ತು ಕ್ರಿಯಾಸ್ವರೂಪನಾಗಿರುವೆ ಹಾಗೂ ಪರಾ, ಪಶ್ಯಂತಿ, ಮಧ್ಯಮಾ, ವೈಖರಿ ಎಂಬ ನಾಲ್ಕು ಬಗೆಯ ವಾಣೀಪ್ರಕಾರನೂ ಆಗಿರುವ ನಿನಗೆ ನಮಸ್ಕಾರಗಳು. ॥ ೪೩ ॥

ಪ್ರಭುವೇ! ನಿನ್ನ ಮಂಗಳವಿಗ್ರಹವನ್ನು ನೋಡಬೇಕೆಂದು ಹಂಬಲಿಸುತ್ತಿರುವ ನಮಗೆ – ಭಾಗವತಶ್ರೇಷ್ಠರಿಂದ ಪೂಜಿತನಾಗಿ, ಆತ್ಮೀಯಭಕ್ತರಿಗೆ ಅತ್ಯಂತ ಪ್ರಿಯತಮನಾಗಿ, ಎಲ್ಲ ಇಂದ್ರಿಯಗಳಿಗೂ ತೃಪ್ತಿಯನ್ನುಂಟುಮಾಡುವ ಗುಣಗಳಿಂದ ಸಂಪನ್ನನಾಗಿರುವ ದಿವ್ಯಮೂರ್ತಿಯ ದರ್ಶನವನ್ನು ದಯಪಾಲಿಸು. ॥ ೪೪ ॥ ಅದಾದರೋ ಕಾರ್ಮುಗಿಲಿನಂತೆ ಸ್ನಿಗ್ಧ ಶ್ಯಾಮಲವರ್ಣದಿಂದಿದ್ದು, ಸಮಸ್ತ ಸೌಂದರ್ಯದ ಸಾರ ಸಂಗ್ರಹವಾಗಿದೆ. ಸುಂದರವಾದ ನಾಲ್ಕು ವಿಶಾಲಭುಜಗಳು, ಮನೋಹರ ಮುಖಾರವಿಂದವು, ಕಮಲದ ಎಸಳಿನಂತಿರುವ ಕಣ್ಣುಗಳು, ಸುಂದರವಾದ ಹುಬ್ಬುಗಳು, ಎಸಳಾದ ಮೂಗು, ಮನೋಹರವಾದ ದಂತಪಂಕ್ತಿಗಳು, ಕಮನೀಯವಾದ ಕಪೋಲಗಳಿಂದ ಕೂಡಿದ ಸೊಗಸಾದ ಮುಖಮಂಡಲವು ಸಮವಾದ ಎರಡು ಕಿವಿಗಳಲ್ಲಿ ಆಭರಣಗಳು ಶೋಭಿಸುತ್ತಿವೆ. ॥ ೪೫-೪೬ ॥ ಪ್ರೀತಿಯಿಂದ ನಗುವನ್ನು ಹೊರಸೂಸುವ ಕಡೆಗಣ್ಣುನೋಟ, ಕಪ್ಪಾದ ಮುಂಗುರುಳುಗಳು, ಕಮಲಪುಷ್ಪದ ಕೇಸರದಂತೆ ಕಾಂತಿಕಿರಣಗಳನ್ನು ಚೆಲ್ಲುತ್ತಿರುವ ಪೀತಾಂಬರ, ಥಳ-ಥಳಿಸುವ ಕುಂಡಲಗಳು, ಮಿರುಗುತ್ತಿರುವ ಕಿರೀಟ, ಕಂಕಣ, ಹಾರ, ಕಾಲಂದುಗೆ, ಒಡ್ಯಾಣಗಳೇ ಮುಂತಾದ ವಿಚಿತ್ರವಾದ ಆಭರಣಗಳು ಹಾಗೂ ಶಂಖ, ಚಕ್ರ, ಗದಾ, ಪದ್ಮ, ವನಮಾಲೆ, ಕೌಸ್ತುಭಮಣಿಯಿಂದಾಗಿ ಅವನ ರೂಪವು ಅಪೂರ್ವವಾದ ಕಾಂತಿಯಿಂದ ಕಂಗೊಳಿಸುತ್ತಿದೆ. ॥ ೪೭-೪೮ ॥ ಸಿಂಹದ ಹೆಗಲನ್ನು ಹೋಲುವ ಉಬ್ಬಿದ ಹೆಗಲಿನ ಸೊಗಸು, ಸುಂದರವಾದ ಕೊರಳಿನಲ್ಲಿ ಹೊಳೆಯುತ್ತಿರುವ ಹಾರ, ಕೇಯೂರ, ಕುಂಡಲಗಳ ಕಾಂತಿಯು, ಶ್ರೀಲಕ್ಷ್ಮೀದೇವಿಗೆ ನಿತ್ಯನಿವಾಸಮಂದಿರವಾಗಿ ಶ್ರೀವತ್ಸಚಿಹ್ನೆಯಿಂದ ಶೋಭಿತವಾದ ವಕ್ಷಃಸ್ಥಳವು ಕಣ್ಣುಗಳಿಗೆ ಹಬ್ಬವಾಗಿದೆ. ॥ ೪೯ ॥

ಪೂರರೇಚಕಸಂವಿಗ್ನವಲಿವಲ್ಗುದಲೋದರಮ್ ।
ಪ್ರತಿಸಂಕ್ರಾಮಯದ್ವಿಶ್ವಂ ನಾಭ್ಯಾಽಽವರ್ತಗಭೀರಯಾ ॥ ೫೦ ॥

ಶ್ಯಾಮಶ್ರೋಣ್ಯಧಿರೋಚಿಷ್ಣು ದುಕೂಲಸ್ವರ್ಣಮೇಖಲಮ್ ।
ಸಮಚಾರ್ವಂಘ್ರಿಜಂಘೋರುನಿಮ್ನಜಾನುಸುದರ್ಶನಮ್ ॥ ೫೧ ॥

ಪದಾ ಶರತ್ಪದ್ಮಪಲಾಶರೋಚಿಷಾ
ನಖದ್ಯುಭಿರ್ನೋಽಂತರಘಂ ವಿಧುನ್ವತಾ ।
ಪ್ರದರ್ಶಯ ಸ್ವೀಯಮಪಾಸ್ತ ಸಾಧ್ವಸಂ
ಪದಂ ಗುರೋ ಮಾರ್ಗಗುರುಸ್ತಮೋಜುಷಾಮ್ ॥ ೫೨ ॥

ಏತದ್ರೂಪಮನುಧ್ಯೇಯಮಾತ್ಮಶುದ್ಧಿಮಭೀಪ್ಸತಾಮ್ ।
ಯದ್ಭಕ್ತಿಯೋಗೋಽಭಯದಃ ಸ್ವಧರ್ಮಮನುತಿಷ್ಠತಾಮ್ ॥ ೫೩ ॥

ಭವಾನ್ ಭಕ್ತಿಮತಾ ಲಭ್ಯೋ ದುರ್ಲಭಃ ಸರ್ವದೇಹಿನಾಮ್ ।
ಸ್ವಾರಾಜ್ಯಸ್ಯಾಪ್ಯಭಿಮತ ಏಕಾಂತೇನಾತ್ಮವಿದ್ಗತಿಃ ॥ ೫೪ ॥

ತಂ ದುರಾರಾಧ್ಯಮಾರಾಧ್ಯ ಸತಾಮಪಿ ದುರಾಪಯಾ ।
ಏಕಾಂತಭಕ್ತ್ಯಾ ಕೋ ವಾಂಛೇತ್ಪಾದಮೂಲಂ ವಿನಾ ಬಹಿಃ ॥ ೫೫ ॥

ಯತ್ರ ನಿರ್ವಿಷ್ಟಮರಣಂ ಕೃತಾಂತೋ ನಾಭಿಮನ್ಯತೇ ।
ವಿಶ್ವಂ ವಿಧ್ವಂಸಯನ್ ವೀರ್ಯಶೌರ್ಯವಿಸ್ಫೂರ್ಜಿತಭ್ರುವಾ ॥ ೫೬ ॥

ಕ್ಷಣಾರ್ಧೇನಾಪಿ ತುಲಯೇ ನ ಸ್ವರ್ಗಂ ನಾಪುನರ್ಭವಮ್ ।
ಭಗವತ್ಸಂಗಿಸಂಗಸ್ಯ ಮರ್ತ್ಯಾನಾಂ ಕಿಮುತಾಶಿಷಃ ॥ ೫೭ ॥

ಅಥಾನಘಾಂಘ್ರೇಸ್ತವ ಕೀರ್ತಿತೀರ್ಥಯೋ-
ರಂತರ್ಬಹಿಃಸ್ನಾನವಿಧೂತಪಾಪ್ಮನಾಮ್ ।
ಭೂತೇಷ್ವನುಕ್ರೋಶಸುಸತ್ತ್ವಶೀಲಿನಾಂ
ಸ್ಯಾತ್ಸಂಗಮೋಽನುಗ್ರಹ ಏಷ ನಸ್ತವ ॥ ೫೮ ॥

ಉಚ್ಛ್ವಾಸ- ನಿಶ್ವಾಸಗಳ ಏರಿಳಿತದಿಂದ ಚಲಿಸುತ್ತಿರುವ ತ್ರಿವಳಿಗಳಿಂದ ಒಪ್ಪುತ್ತಿರುವ ಕೆಳುವಾದ ಹೊಟ್ಟೆಯಲ್ಲಿ ತನ್ನಿಂದ ಹೊರಟಂದ ವಿಶ್ವವನ್ನು ತನ್ನಲ್ಲೇ ಲಯಗೊಳಿಸಿಕೊಂಡಿದೆಯೋ ಎಂಬಂತಿರುವ ಆಳವಾದ ಸುಳಿನಾಭಿಯು ಶೋಭಿಸುತ್ತಿದೆ. ॥ ೫೦ ॥ ಶ್ಯಾಮಲವಾದ ಕಟಿಭಾಗದಲ್ಲಿ ಪೀತಾಂಬರವೂ, ಉಡಿದಾರವೂ ರಾರಾಜಿಸುತ್ತಿವೆ. ಪರಸ್ಪರ ಸಮನಾಗಿರುವ ಪಾದಗಳು, ಮೇಗಾಲು, ಮೊಣ ಕಾಲು ಮತ್ತು ತೊಡೆಗಳಿಂದ ಕೂಡಿದ ನಿನ್ನ ದಿವ್ಯ ಶ್ರೀದೇಹವು ರಮಣೀಯವಾಗಿದೆ. ॥ ೫೧ ॥ ಶರತ್ಕಾಲದ ಕಮಲದಳದ ಕಾಂತಿಯನ್ನು ನಾಚಿಸುವ ಅಡಿದಾವರೆಗಳು, ಅದರಲ್ಲಿ ರಾರಾಜಿಸುತ್ತಿರುವ ಆ ಕಾಲುಗುರುಗಳಿಂದ ಹೊರಹೊಮ್ಮುತ್ತಿರುವ ಪ್ರಕಾಶವು ಜೀವರ ಹೃದಯದ ಕತ್ತಲೆಯನ್ನು ತೊಡೆದುಹಾಕುತ್ತಿದೆ. ಭಕ್ತರ ಭಯವನ್ನು ನೀಗಿಸಿ ಅವರಿಗೆ ಆಶ್ರಯಸ್ವರೂಪವಾಗಿರುವ ನಿನ್ನ ದಿವ್ಯರೂಪದ ದರ್ಶನವನ್ನು ದಯಪಾಲಿಸು. ಜಗದ್ಗುರೋ! ಅಜ್ಞಾನದಿಂದೊಡಗೊಂಡ ನಮ್ಮಂತಹ ಬದ್ಧಜೀವಿಗಳಿಗೆ ದಾರಿ ತೋರುವ ಸದ್ಗುರುವು ನೀನೇ ಅಲ್ಲವೇ! ॥ ೫೨ ॥

ಪ್ರಭೋ! ಆತ್ಮಶುದ್ಧಿಯನ್ನು ಬಯಸುವವನು – ಇಂತಹ ನಿನ್ನ ದಿವ್ಯಮೂರ್ತಿಯನ್ನೇ ಧ್ಯಾನಿಸಬೇಕು. ಇದರಲ್ಲಿ ನೆಲೆಗೊಂಡ ಭಕ್ತಿಯೋಗವೇ ಸ್ವಧರ್ಮಾಚರಣೆಯನ್ನು ಮಾಡುವವರಿಗೆ ಅಭಯವನ್ನು ನೀಡುವುದು. ॥ ೫೩ ॥ ಇತರ ಎಲ್ಲ ದೇಹಿಗಳಿಗೂ ದುರ್ಲಭನಾಗಿದ್ದರೂ, ಭಕ್ತರಿಗೆ ಸುಲಭನಾಗಿ ನೀನು ದೊರೆಯುವೆ. ಸ್ವರ್ಗದಲ್ಲಿರುವ ಇಂದ್ರಾದಿಗಳೂ ನಿನ್ನನ್ನೇ ಬಯಸುವರು. ಏಕಾಂತಭಾವವುಳ್ಳ ಆತ್ಮಜ್ಞರಿಗೆ ನೀನೇ ಗತಿಯಾಗಿರುವೆ. ॥ ೫೪ ॥ ಸತ್ಪುರುಷರಿಗೂ ದುರ್ಲಭವಾಗಿರುವ ಅನನ್ಯವಾದ ಮತ್ತು ದುಸ್ಸಾಧ್ಯವಾದ ಭಕ್ತಿಯೋಗದಿಂದ ನಿನ್ನನ್ನು ಪ್ರಸನ್ನಗೊಳಿಸಿದ ಬಳಿಕ ಆ ನಿನ್ನ ಪಾದಕಮಲಗಳನ್ನು ಬಿಟ್ಟು ಬೇರಾವುದನ್ನಾದರೂ ಯಾರು ತಾನೇ ಬಯಸಿಯಾರು? ॥ ೫೫ ॥ ವೀರ್ಯ- ಶೌರ್ಯಗಳಿಂದ ಅದುರುತ್ತಿರುವ ಹುಬ್ಬಿನಾಟಗಳಿಂದಲೇ ಇಡೀ ಜಗತ್ತನ್ನು ಸಂಹಾರಮಾಡುವ ಯಮನೂ ಕೂಡ ನಿನ್ನ ಚರಣಗಳಲ್ಲಿ ಶರಣಾದ ಪ್ರಾಣಿಗಳ ಮೇಲೆ ತನ್ನ ಅಧಿಕಾರವನ್ನು ನಡೆಸಲಾರನು. ॥ ೫೬ ॥

ಭಗವಂತನ ಅಂತಹ ಪ್ರೇಮಿ ಭಕ್ತರ ಕ್ಷಣಾರ್ಧದ ಸತ್ಸಂಗ ಉಂಟಾದರೆ, ಅದಕ್ಕೆ ಸಮವಾಗಿ ಸ್ವರ್ಗವಾಗಲೀ, ಮೋಕ್ಷವಾಗಲೀ ನಾನು ಲೆಕ್ಕಿಸುವುದಿಲ್ಲ, ಹಾಗಿರುವಾಗ ಮರ್ತ್ಯಲೋಕದ ತುಚ್ಛ ಭೋಗಗಳ ಬಗ್ಗೆ ಹೇಳುವುದೇನಿದೆ? ॥ ೫೭ ॥ ಪ್ರಭೋ! ನಿನ್ನ ಚರಣಗಳು ಸಮಸ್ತ ಪಾಪರಾಶಿಯನ್ನು ಕಳೆಯುವಂತಹವುಗಳು. ನಿನ್ನ ಕೀರ್ತಿಯಲ್ಲಿಯೂ ಮತ್ತು ನಿನ್ನ ಶ್ರೀಪಾದ ತೀರ್ಥವಾದ ಗಂಗೆಯಲ್ಲಿ ಅಂತರಿಕ ಮತ್ತು ಬಾಹ್ಯ ಸ್ನಾನವನ್ನು ಮಾಡಿ ಮಾನಸಿಕ ಹಾಗೂ ಶಾರೀರಿಕ ಎರಡೂ ವಿಧದ ಪಾಪಗಳನ್ನು ತೊಳೆದುಕೊಳ್ಳುವರು. ಜೀವಿಗಳ ಕುರಿತು ದಯೆ ತೋರುವ, ರಾಗ-ದ್ವೇಷಾದಿರಹಿತ ಚಿತ್ತವುಳ್ಳ ಸರಳವಾದ ಸರ್ವಗುಣಗಳಿಂದ ಕೂಡಿದ ಆ ಭಾಗವತೋತ್ತಮರ ಸಂಗವು ನಮಗೆ ದೊರೆಯುತ್ತಿರಲಿ. ಇದೇ ಅನುಗ್ರಹವನ್ನು ನೀನು ನಮ್ಮ ಮೇಲೆ ತೋರಬೇಕು. ॥ ೫೮ ॥

ನ ಯಸ್ಯ ಚಿತ್ತಂ ಬಹಿರರ್ಥವಿಭ್ರಮಂ
ತಮೋಗುಹಾಯಾಂ ಚ ವಿಶುದ್ಧಮಾವಿಶತ್ ।
ಯದ್ಭಕ್ತಿಯೋಗಾನುಗೃಹೀತಮಂಜಸಾ
ಮುನಿರ್ವಿಚಷ್ಟೇ ನನು ತತ್ರ ತೇ ಗತಿಮ್ ॥ ೫೯ ॥

ಯತ್ರೇದಂ ವ್ಯಜ್ಯತೇ ವಿಶ್ವಂ ವಿಶ್ವಸ್ಮಿನ್ನವಭಾತಿ ಯತ್ ।
ತತ್ ತ್ವಂ ಬ್ರಹ್ಮ ಪರಂ ಜ್ಯೋತಿರಾಕಾಶಮಿವ ವಿಸ್ತೃತಮ್ ॥ ೬೦ ॥

ಯೋ ಮಾಯಯೇದಂ ಪುರುರೂಪಯಾಸೃಜತ್
ಬಿಭರ್ತಿ ಭೂಯಃ ಕ್ಷಪಯತ್ಯವಿಕ್ರಿಯಃ ।
ಯದ್ಭೇದಬುದ್ಧಿಃ ಸದಿವಾತ್ಮದುಃಸ್ಥಯಾ
ತ್ವಮಾತ್ಮತಂತ್ರಂ ಭಗವನ್ ಪ್ರತೀಮಹಿ ॥ ೬೧ ॥

ಕ್ರಿಯಾಕಲಾಪೈರಿದಮೇವ ಯೋಗಿನಃ
ಶ್ರದ್ಧಾನ್ವಿತಾಃ ಸಾಧು ಯಜಂತಿ ಸಿದ್ಧಯೇ ।
ಭೂತೇಂದ್ರಿಯಾಂತಃಕರಣೋಪಲಕ್ಷಿತಂ
ವೇದೇ ಚ ತಂತ್ರೇ ಚ ತ ಏವ ಕೋವಿದಾಃ ॥ ೬೨ ॥

ತ್ವಮೇಕ ಆದ್ಯಃ ಪುರುಷಃ ಸುಪ್ತಶಕ್ತಿ-
ಸ್ತಯಾ ರಜಃಸತ್ತ್ವತಮೋ ವಿಭಿದ್ಯತೇ ।
ಮಹಾನಹಂ ಖಂ ಮರುದಗ್ನಿವಾರ್ಧರಾಃ
ಸುರರ್ಷಯೋ ಭೂತಗಣಾ ಇದಂ ಯತಃ ॥ ೬೩ ॥

ಸೃಷ್ಟಂ ಸ್ವಶಕ್ತ್ಯೇದಮನುಪ್ರವಿಷ್ಟ-
ಶ್ಚತುರ್ವಿಧಂ ಪುರಮಾತ್ಮಾಂಶಕೇನ ।
ಅಥೋ ವಿದುಸ್ತಂ ಪುರುಷಂ ಸಂತಮಂತ-
ರ್ಭುಂಕ್ತೇ ಹೃಷೀಕೈರ್ಮಧು ಸಾರಘಂ ಯಃ ॥ ೬೪ ॥

ಸ ಏಷ ಲೋಕಾನತಿಚಂಡ ವೇಗೋ
ವಿಕರ್ಷಸಿ ತ್ವಂ ಖಲು ಕಾಲಯಾನಃ ।
ಭೂತಾನಿ ಭೂತೈರನುಮೇಯತತ್ತ್ವೋ
ಘನಾವಲೀರ್ವಾಯುರಿವಾವಿಷಹ್ಯಃ ॥ ೬೫ ॥

ಪ್ರಮತ್ತಮುಚ್ಚೈರಿತಿಕೃತ್ಯಚಿಂತಯಾ
ಪ್ರವೃದ್ಧಲೋಭಂ ವಿಷಯೇಷು ಲಾಲಸಮ್ ।
ತ್ವಮಪ್ರಮತ್ತಃ ಸಹಸಾಭಿಪದ್ಯಸೇ
ಕ್ಷುಲ್ಲೇಲಿಹಾನೋಽಹಿರಿವಾಖುಮಂತಕಃ ॥ ೬೬ ॥

ಯಾವ ಸಾಧಕನ ಚಿತ್ತವು ಭಕ್ತಿಯೋಗದಿಂದ ಅನುಗ್ರಹಿಸಲ್ಪಟ್ಟು ಪರಿಶುದ್ಧವಾಗಿ ಹೊರಗಿನ ವಿಷಯಗಳಲ್ಲಿ ಅಲೆದಾಡುತ್ತಿಲ್ಲವೋ, ಅವನು ಆಯಾಸ ವಿಲ್ಲದೆಯೇ ನಿನ್ನ ಸ್ವರೂಪದ ದರ್ಶನವನ್ನು ಪಡೆದುಕೊಳ್ಳುವನು. ॥ ೫೯ ॥ ಈ ವಿಶ್ವವೆಲ್ಲವೂ ಯಾರಲ್ಲಿ ಅಭಿವ್ಯಕ್ತವಾಗಿದೆಯೋ, ಯಾವುದು ಈ ಇಡೀ ವಿಶ್ವದಲ್ಲಿ ಬೆಳಗುತ್ತಿದೆಯೋ, ಆ ಆಕಾಶದಂತೆ ಸರ್ವ ವ್ಯಾಪಕವು ಪರಮಪ್ರಕಾಶ ಮಯವೂ ಆದ ಪರಬ್ರಹ್ಮ ಪರಂಜ್ಯೋತಿಯು ನೀನೇ ಆಗಿರುವೆ. ॥ ೬೦ ॥ ಓ ಭಗವಂತಾ! ನೀನು ನಾನಾರೂಪಗಳನ್ನು ಧರಿಸಿರುವ ಮಾಯೆಯಿಂದ ಈ ಜಗತ್ತನ್ನು ಸೃಷ್ಟಿ, ಸಲಹಿ, ಸಂಹರಿಸುತ್ತಿದ್ದರೂ ಯಾವ ವಿಕಾರಕ್ಕೂ ಒಳಪಡದವನಾಗಿರುವೆ. ಭೇದಬುದ್ಧಿಯ ಸೃಷ್ಟಿಮಾಡುತ್ತಾ ಜಗತ್ತಿನಲ್ಲಿ ಎಲ್ಲರ ಮೇಲೂ ಪ್ರಭಾವವನ್ನು ಬೀರುತ್ತಿರುವ ಆ ಮಾಯೆಯು ಪರಮಾತ್ಮನಾದ ನಿನ್ನ ಮೇಲೆ ತನ್ನ ಯಾವುದೇ ಪ್ರಭಾವವನ್ನು ಬೀರಲು ಅಸಮರ್ಥಳಾಗಿದ್ದಾಳೆ. ನೀನಾದರೋ ಪರಮಸ್ವತಂತ್ರನೆಂದೇ ನಾವು ತಿಳಿಯುತ್ತೇವೆ. ॥ ೬೧ ॥ ಪಂಚಭೂತಗಳು, ಇಂದ್ರಿಯಗಳು, ಅಂತಃಕರಣ ಇವುಗಳ ಪ್ರೇರಕನು ನೀನೇ ಆಗಿರುವ ಮತ್ತು ಅವುಗಳ ಮೂಲಕವೇ ಸೂಚಿತನಾಗುತ್ತೀಯೆ. ಕರ್ಮಯೋಗಿಗಳು ಸಿದ್ಧಿಯನ್ನು ಹೊಂದಲಿಕ್ಕಾಗಿ ಬಗೆ-ಬಗೆಯ ಕರ್ಮಗಳ ಮೂಲಕ ನಿನ್ನ ಈ ಸಗುಣ ಸಾಕಾರ ಸ್ವರೂಪವನ್ನೇ ಶ್ರದ್ಧೆಯಿಂದ ಚೆನ್ನಾಗಿ ಪೂಜಿಸುತ್ತಾರೆ. ಅಂತಹ ಯೋಗಿಗಳೇ ವೇದ-ಶಾಸ್ತ್ರಗಳಲ್ಲಿ ಪ್ರವೀಣರೆಂದು ತಿಳಿಯಬೇಕು. ॥ ೬೨ ॥ ಓ ಸರ್ವಮೂಲನಾದ ಸ್ವಾಮಿಯೇ! ನೀನೇ ಅದ್ವಿತೀಯನಾದ ಆದಿಪುರುಷನು. ಸೃಷ್ಟಿಗೆ ಮೊದಲು ಮಾಯಾಶಕ್ತಿಯು ನಿನ್ನಲ್ಲೇ ನಿದ್ರಿಸುತ್ತದೆ. ಅನಂತರ ಸೃಷ್ಟಿಕಾಲದಲ್ಲಿ ಅದರಿಂದಲೇ – ಸತ್ತ್ವ, ರಜ, ತಮ ಎಂಬ ಗುಣಗಳ ವಿಭಾಗವಾಗಿ ಮಹತ್ತತ್ತ್ವ, ಅಹಂಕಾರ, ಆಕಾಶ, ವಾಯು, ಅಗ್ನಿ, ಜಲ ಮತ್ತು ಪೃಥಿವಿಗಳೆಂಬ ತತ್ತ್ವಗಳೂ, ದೇವತೆಗಳೂ, ಋಷಿಗಳೂ ಹಾಗೂ ಸಮಸ್ತ ಪ್ರಾಣಿಗಳಿಂದ ಕೂಡಿದ ಈ ಜಗತ್ತಿನ ಉತ್ಪತ್ತಿಯಾಗುತ್ತದೆ. ॥ ೬೩ ॥

ಜೇನುಹುಳುಗಳು ತಾವೇ ತಯಾರಿಸಿದ ಜೇನನ್ನು ತಿನ್ನುವಂತೆ ಪುರುಷನು ನಿನ್ನ ಶಕ್ತಿಯಿಂದ ಸೃಷ್ಟಿಸಲ್ಪಟ್ಟ ಈ ಜರಾಯುಜ, ಅಂಡಜ, ಸ್ವೇದಜ, ಉದ್ಭಿಜ್ಜಗಳೆಂಬ ನಾಲ್ಕು ಬಗೆಯ ದೇಹಗಳಲ್ಲಿ ಒಳಹೊಕ್ಕು ಇಂದ್ರಿಯಗಳ ಮೂಲಕ ವಿಷಯಸುಖಗಳನ್ನು ಅನುಭವಿಸುತ್ತಾನೆ. ಈ ಪುರುಷನು ನಿನ್ನ ಅಂಗವೇ ಆಗಿದ್ದಾನೆ. ಇವನನ್ನೇ ಜೀವನೆಂದೂ ಹೇಳುತ್ತಾರೆ. ॥ ೬೪ ॥ ಸಹಿಸಲು ಅಶಕ್ಯವಾದ ಪ್ರಚಂಡವೇಗದಿಂದ ಬೀಸುವ ಗಾಳಿಯು ಮೋಡಗಳ ಸಮೂಹವನ್ನು ಚದುರಿಸುವಂತೆ – ನೀನೇ ಕಾಲವೆಂಬ ರಥದಲ್ಲಿ ಕುಳಿತು ಸಹಿಸಲು ಅಸಾಧ್ಯವಾದ ಪ್ರಚಂಡವೇಗದಿಂದ ಭೂತಗಳನ್ನು ಚದುರಿಸಿ ಲಯಗೊಳಿಸುವೆ. ನಿನ್ನ ತತ್ತ್ವವನ್ನು ಅನುಮಾನ ಪ್ರಮಾಣದಿಂದ ಅರಿಯಬೇಕೇ ಹೊರತು ಪ್ರತ್ಯಕ್ಷದಿಂದ ತಿಳಿಯಲಾಗುವುದಿಲ್ಲ. ॥ ೬೫ ॥

'ಇದನ್ನು ಮಾಡಬೇಕು, ಅದನ್ನು ಮಾಡಬೇಕು' ಮುಂತಾದ ಚಿಂತಾಪರಂಪರೆಗಳಿಂದ ಲೋಭವು ಹೆಚ್ಚಿ ವಿಷಯಭೋಗಗಳಲ್ಲಿ

ಕಸ್ತ್ವತ್ಪದಾಬ್ಜಂ ವಿಜಹಾತಿ ಪಂಡಿತೋ
ಯಸ್ತೇಽವಮಾನವ್ಯಯಮಾನಕೇತನಃ ।
ವಿಶಂಕಯಾಸ್ಮದ್ಗುರುರರ್ಚತಿ ಸ್ಮ ಯದ್
ವಿನೋಪಪತ್ತಿಂ ಮನವಶ್ಚತುರ್ದಶ ॥ ೬೭ ॥

ಅಥ ತ್ವಮಸಿ ನೋ ಬ್ರಹ್ಮನ್ಪರಮಾತ್ಮನ್ವಿಪಶ್ಚಿತಾಮ್ ।
ವಿಶ್ವಂ ರುದ್ರಭಯಧ್ವಸ್ತಮಕುತಶ್ಚಿದ್ಭಯಾ ಗತಿಃ ॥ ೬೮ ॥

ಇದಂ ಜಪತ ಭದ್ರಂ ವೋ ವಿಶುದ್ಧಾ ನೃಪನಂದನಾಃ ।
ಸ್ವಧರ್ಮಮನುತಿಷ್ಠಂತೋ ಭಗವತ್ಯರ್ಪಿತಾಶಯಾಃ ॥ ೬೯ ॥

ತಮೇವಾತ್ಮಾನಮಾತ್ಮಸ್ಥಂ ಸರ್ವಭೂತೇಷ್ವವಸ್ಥಿತಮ್ ।
ಪೂಜಯಧ್ವಂ ಗೃಣಂತಶ್ಚ ಧ್ಯಾಯಂತಶ್ಚಾಸಕೃದ್ಧರಿಮ್ ॥ ೭೦ ॥

ಯೋಗಾದೇಶಮುಪಾಸಾದ್ಯ ಧಾರಯಂತೋ ಮುನಿವ್ರತಾಃ ।
ಸಮಾಹಿತಧಿಯಃ ಸರ್ವ ಏತದಭ್ಯಸತಾದೃತಾಃ ॥ ೭೧ ॥

ಇದಮಾಹ ಪುರಾಸ್ಮಾಕಂ ಭಗವಾನ್ವಿಶ್ವಸೃಕ್ಪತಿಃ ।
ಭೃಗ್ವಾದೀನಾಮಾತ್ಮಜಾನಾಂ ಸಿಸೃಕ್ಷುಃ ಸಂಸಿಸೃಕ್ಷತಾಮ್ ॥ ೭೨ ॥

ತೇ ವಯಂ ನೋದಿತಾಃ ಸರ್ವೇ ಪ್ರಜಾಸರ್ಗೇ ಪ್ರಜೇಶ್ವರಾಃ ।
ಅನೇನ ಧ್ವಸ್ತತಮಸಃ ಸಿಸೃಕ್ಷ್ಮೋ ವಿವಿಧಾಃ ಪ್ರಜಾಃ ॥ ೭೩ ॥

ಅಥೇದಂ ನಿತ್ಯದಾ ಯುಕ್ತೋ ಜಪನ್ನವಹಿತಃ ಪುಮಾನ್ ।
ಅಚಿರಾಚ್ಛ್ರೇಯ ಆಪ್ನೋತಿ ವಾಸುದೇವಪರಾಯಣಃ ॥ ೭೪ ॥

ಶ್ರೇಯಸಾಮಿಹ ಸರ್ವೇಷಾಂ ಜ್ಞಾನಂ ನಿಃಶ್ರೇಯಸಂ ಪರಮ್ ।
ಸುಖಂ ತರತಿ ದುಷ್ಪಾರಂ ಜ್ಞಾನನೌರ್ವ್ಯಸನಾರ್ಣವಮ್ ॥ ೭೫ ॥

ಯ ಇಮಂ ಶ್ರದ್ಧಯಾ ಯುಕ್ತೋ ಮದ್ಗೀತಂ ಭಗವತ್ಸ್ತವಮ್ ।
ಅಧೀಯಾನೋ ದುರಾರಾಧ್ಯಂ ಹರಿಮಾರಾಧಯತ್ಯಸೌ ॥ ೭೬ ॥

ಆಸಕ್ತನಾದ ಮೈಮರೆತಿರುವ ಜೀವನನ್ನು – ಎಂದೆಂದೂ ಎಚ್ಚರವಾಗಿರುವ ಕಾಲರೂಪಿಯಾದ ನೀನು ದಿಢೀರನೆ ಆಕ್ರಮಿಸಿಬಿಡುತ್ತೀಯೆ. ಹಸಿವಿನಿಂದ ನಾಲಿಗೆಯನ್ನು ಚಾಚಿರುವ ಸರ್ಪವು ಇಲಿಯನ್ನು ಕಬಳಿಸುವಂತೆ ಮೈಮರೆತಿರುವ ಜೀವಿಯನ್ನು ಕಬಳಿಸಿಬಿಡುವೆ. ॥ ೬೬ ॥ ಯಾವ ಪಂಡಿತನು ತಾನೇ ನಿನ್ನನ್ನು ಅನಾದರಿಸಿ ತನ್ನ ಆಯುಸ್ಸನ್ನು ವ್ಯರ್ಥಮಾಡಿಕೊಂಡು ನಿನ್ನ ಪಾದಾರವಿಂದವನ್ನು ತೊರೆದಾನು? ನಮ್ಮ ಗುರುಗಳಾದ ಬ್ರಹ್ಮದೇವರೂ, ಹದಿನಾಲ್ಕು ಮಂದಿ ಮನುಗಳೂ ಕೂಡ ಯಾವ ವಿಚಾರವೂ ಇಲ್ಲದೆ ಕೇವಲ ಶ್ರದ್ಧೆಯಿಂದಲೇ ಅದನ್ನು ಪೂಜಿಸಿದ್ದರು. ॥ ೬೭ ॥ ಓ ಪರಬ್ರಹ್ಮನೇ! ಈ ಜಗತ್ತೆಲ್ಲವೂ ರುದ್ರರೂಪವಾದ ಕಾಲನ ಭಯದಿಂದ ವ್ಯಾಕುಲಗೊಂಡಿದೆ. ಆದ್ದರಿಂದ ಓ ಪರಮಾತ್ಮನೇ! ಈ ತತ್ತ್ವವನ್ನು ತಿಳಿದಿರುವ ನಮಗಾದರೋ ಈಗ ನೀನೇ ಪೂರ್ಣ ಭಯರಹಿತ ಆಶ್ರಯನಾಗಿರುವೆ." ॥ ೬೮ ॥

ರಾಜಕುಮಾರರೇ! ನೀವುಗಳು ವಿಶುದ್ಧಭಾವದಿಂದ ಸ್ವಧರ್ಮವನ್ನು ಆಚರಿಸುತ್ತಾ, ಭಗವಂತನಲ್ಲಿ ಚಿತ್ತವನ್ನು ನೆಟ್ಟು ನಾನು ಹೇಳಿರುವ ಈ ಸ್ತೋತ್ರವನ್ನು ಜಪಿಸುತ್ತಾ ಇರಿ. ಭಗವಂತನು ನಿಮಗೆ ಮಂಗಳವನ್ನು ಉಂಟುಮಾಡುವನು. ॥ ೬೯ ॥ ನೀವು ನಿಮ್ಮ ಅಂತಃಕರಣದಲ್ಲಿ ನೆಲೆಸಿದ ಸರ್ವಾಂತರ್ಯಾಮಿ ಪರಮಾತ್ಮನಾದ ಶ್ರೀಹರಿಯನ್ನು ಪದೇ-ಪದೇ ಸ್ತುತಿಸುತ್ತಾ, ಚಿಂತಿಸುತ್ತಾ, ಪೂಜಿಸುತ್ತಿರಿ. ॥ ೭೦ ॥ ನಾನು ನಿಮಗೆ ಉಪದೇಶಿಸಿದ ಈ ಯೋಗಾದೇಶವೆಂಬ ಸ್ತೋತ್ರವನ್ನು ನೀವೆಲ್ಲರೂ ಮನಸ್ಸಿನಲ್ಲಿ ಧರಿಸಿ, ಮುನಿವ್ರತವನ್ನು ಆಚರಿಸುತ್ತಾ, ಅತ್ಯಂತ ಆದರದಿಂದ ಕೂಡಿ ಏಕಾಗ್ರಭಾವದಿಂದ ಅಭ್ಯಾಸಮಾಡುತ್ತಿರಿ. ॥ ೭೧ ॥ ಈ ಸ್ತೋತ್ರವನ್ನು ಹಿಂದೆ ಜಗದ್ವಿಸ್ತಾರದ ಇಚ್ಛೆಯುಳ್ಳ ಪ್ರಜಾಪತಿಗಳ ಒಡೆಯನಾದ ಭಗವಾನ್ ಬ್ರಹ್ಮದೇವರು ಪ್ರಜೆಯನ್ನು ಉಂಟುಮಾಡಬೇಕೆಂಬ ಇಚ್ಛೆಯುಳ್ಳ ಭೃಗುವೇ ಮುಂತಾದ ತನ್ನ ಪುತ್ರರಿಗೆ ಉಪದೇಶಮಾಡಿದ್ದರು. ॥ ೭೨ ॥ ಪ್ರಜಾಪತಿಗಳಾದ ನಮಗೆ ಪ್ರಜೆಯನ್ನು ವಿಸ್ತರಿಸುವ ಆಜ್ಞೆಯು ಕೊಡಲ್ಪಟ್ಟಾಗ ಇದರ ಮೂಲಕವೇ ನಾವು ನಮ್ಮ ಅಜ್ಞಾನವನ್ನು ಕಳೆದುಕೊಂಡು ಅನೇಕ ಬಗೆಯ ಪ್ರಜೆಯನ್ನು ಉತ್ಪನ್ನಮಾಡಿದೆವು. ॥ ೭೩ ॥

ಈಗಲೂ ಭಗವತ್ಪರಾಯಣನಾದ ಪುರುಷನು ಇದನ್ನು ಏಕಾಗ್ರಚಿತ್ತದಿಂದ ಪ್ರತಿದಿನವೂ ಜಪಿಸಿದರೆ ಅವನಿಗೆ ಶೀಘ್ರವಾಗಿಯೇ ಶ್ರೇಯಸ್ಸುಂಟಾಗುವುದು. ॥ ೭೪ ॥ ಈ ಲೋಕದಲ್ಲಿ ಎಲ್ಲ ರೀತಿಯ ಶ್ರೇಯಸ್ಕರ ಸಾಧನೆಗಳಲ್ಲಿ ಮೋಕ್ಷದಾಯಕವಾದ ಜ್ಞಾನವೇ ಸರ್ವಶ್ರೇಷ್ಠವಾಗಿದೆ. ಜ್ಞಾನನೌಕೆಯನ್ನು ಹತ್ತಿದವನು ಆಯಾಸವಿಲ್ಲದೆಯೇ ಈ ದಾಟಲಶಕ್ಯವಾದ ಸಂಸಾರಸಾಗರವನ್ನು ದಾಟಿಬಿಡುವನು. ॥ ೭೫ ॥ ಭಗವಂತನ ಆರಾಧನೆಯು ಬಹಳ ಕಷ್ಟವಾಗಿದ್ದರೂ ನಾನು ಹೇಳಿದ ಈ ಸ್ತೋತ್ರವನ್ನು ಶ್ರದ್ಧೆಯಿಂದ ಪಠಿಸುವವನು ಸುಲಭವಾಗಿಯೇ ಅವನ ಪ್ರಸನ್ನತೆಯನ್ನು ಪಡೆದುಕೊಳ್ಳುವನು. ॥ ೭೬ ॥

ವಿಂದತೇ ಪುರುಷೋಽಮುಷ್ಮಾದ್ಯದ್ಯದಿಚ್ಛತ್ಯಸತ್ವರಮ್ ।
ಮದ್ಗೀತಗೀತಾತ್ಸುಪ್ರೀತಾಚ್ಛ್ರೇಯಸಾಮೇಕವಲ್ಲಭಾತ್ ॥ ೬೮ ॥

ಇದಂ ಯಃ ಕಲ್ಯ ಉತ್ಥಾಯ ಪ್ರಾಂಜಲಿಃ ಶ್ರದ್ಧಯಾನ್ವಿತಃ ।
ಶೃಣುಯಾಚ್ಛ್ರಾವಯೇನ್ಮರ್ತ್ಯೋ ಮುಚ್ಯತೇ ಕರ್ಮಬಂಧನೈಃ ॥ ೬೯ ॥

ಗೀತಂ ಮಯೇದಂ ನರದೇವನಂದನಾಃ
ಪರಸ್ಯ ಪುಂಸಃ ಪರಮಾತ್ಮನಃ ಸ್ತವಮ್ ।
ಜಪಂತ ಏಕಾಗ್ರಧಿಯಸ್ತಪೋ ಮಹ-
ಚ್ಚರಧ್ವಮಂತೇ ತತ ಆಪ್ಸ್ಯಥೇಪ್ಸಿತಮ್ ॥ ೭೦ ॥

ಭಗವಂತನೇ ಎಲ್ಲ ಕಲ್ಯಾಣಸಾಧನೆಗಳ ಏಕಮಾತ್ರ ಧ್ಯೇಯವಾಗಿ ಪ್ರಿಯತಮನಾಗಿರುವನು. ಆದ್ದರಿಂದ ನಾನು ಹಾಡಿರುವ ಈ ಸ್ತೋತ್ರಗಾಯನದಿಂದ ಭಗವಂತನನ್ನು ಪ್ರಸನ್ನಗೊಳಿಸಿ, ಅವನು ಸ್ಥಿರಚಿತ್ತನಾಗಿ ಭಗವಂತನಿಂದ ಬೇಕಾದುದೆಲ್ಲವನ್ನು ಪಡೆದುಕೊಳ್ಳುವನು. ॥ ೬೮ ॥ ಉಷಃಕಾಲದಲ್ಲಿ ಎದ್ದು ಇದನ್ನು ಶ್ರದ್ಧೆಯಿಂದ ಕೈಜೋಡಿಸಿಕೊಂಡು ಕೇಳುವವನು ಎಲ್ಲ ಪ್ರಕಾರದ ಕರ್ಮಬಂಧನದಿಂದ ಮುಕ್ತನಾಗಿ ಹೋಗುವನು. ॥ ೬೯ ॥ ರಾಜಕುಮಾರರೇ! ನಾನು ನಿಮಗೆ ಹೇಳಿರುವ ಈ ಪರಮಪುರುಷ ಪರಮಾತ್ಮನ ಸ್ತೋತ್ರವನ್ನು ಏಕಾಗ್ರಚಿತ್ತದಿಂದ ಜಪಿಸುತ್ತಾ ನೀವು ಮಹಾತಪಸ್ಸನ್ನು ಆಚರಿಸಿರಿ. ತಪಸ್ಸು ಪೂರ್ಣವಾದಾಗ ಇದರಿಂದಲೇ ನಿಮ್ಮ ಇಷ್ಟಾರ್ಥಫಲವು ಈಡೇರುವುದು. ॥ ೭೦ ॥

ಇಪ್ಪತ್ತನಾಲ್ಕನೆಯ ಅಧ್ಯಾಯವು ಮುಗಿಯಿತು. ॥ ೨೪ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಚತುರ್ಥಸ್ಕಂಧೇ ರುದ್ರಗೀತಂ ನಾಮ ಚತುರ್ವಿಂಶೋಽಧ್ಯಾಯಃ ॥ ೨೪ ॥

ಇಪ್ಪತ್ತೈದನೆಯ ಅಧ್ಯಾಯ

ಪುರಂಜನೋಪಾಖ್ಯಾನದ ಪ್ರಾರಂಭ

ಮೈತ್ರೇಯ ಉವಾಚ

ಇತಿ ಸಂದಿಶ್ಯ ಭಗವಾನ್ ಬಾರ್ಹಿಷದೈರಭಿಪೂಜಿತಃ ।
ಪಶ್ಯತಾಂ ರಾಜಪುತ್ರಾಣಾಂ ತತ್ರೈವಾಂತರ್ದಧೇ ಹರಃ ॥ ೧ ॥

ರುದ್ರಗೀತಂ ಭಗವತಃ ಸ್ತೋತ್ರಂ ಸರ್ವೇ ಪ್ರಚೇತಸಃ ।
ಜಪಂತಸ್ತೇ ತಪಸ್ತೇಪುರ್ವರ್ಷಾಣಾಮಯುತಂ ಜಲೇ ॥ ೨ ॥

ಪ್ರಾಚೀನಬರ್ಹಿಷಂ ಕ್ಷತ್ತಃ ಕರ್ಮಸ್ವಾಸಕ್ತಮಾನಸಮ್ ।
ನಾರದೋಽಧ್ಯಾತ್ಮತತ್ತ್ವಜ್ಞಃ ಕೃಪಾಲುಃ ಪ್ರತ್ಯಬೋಧಯತ್ ॥ ೩ ॥

ಶ್ರೇಯಸ್ತ್ವಂ ಕತಮದ್ರಾಜನ್ ಕರ್ಮಣಾಽಽತ್ಮನ ಈಹಸೇ ।
ದುಃಖಹಾನಿಃ ಸುಖಾವಾಪ್ತಿಃ ಶ್ರೇಯಸ್ತನ್ನೇಹ ಚೇಷ್ಯತೇ ॥ ೪ ॥

ರಾಜೋವಾಚ

ನ ಜಾನಾಮಿ ಮಹಾಭಾಗ ಪರಂ ಕರ್ಮಾಪವಿದ್ಧಧೀಃ ।
ಬ್ರೂಹಿ ಮೇ ವಿಮಲಂ ಜ್ಞಾನಂ ಯೇನ ಮುಚ್ಯೇಯ ಕರ್ಮಭಿಃ ॥ ೫ ॥

ಶ್ರೀಮೈತ್ರೇಯರು ಹೇಳುತ್ತಾರೆ – ಎಲೈ ವಿದುರನೇ! ಭಗವಾನ್ ಶಂಕರನು ಹೀಗೆ ಪ್ರಚೇತಸರಿಗೆ ಉಪದೇಶಿಸಿದ ಬಳಿಕ ಪ್ರಚೇತಸರು ಶಂಕರನನ್ನು ತುಂಬು ಭಕ್ತಿಯಿಂದ ಪೂಜಿಸಿದರು. ಅನಂತರ ಆ ರಾಜಕುಮಾರರು ನೋಡುತ್ತಿರುವಂತೆ ಶಿವನು ಅಂತರ್ಧಾನನಾದನು. ॥ ೧ ॥ ಮತ್ತೆ ಪ್ರಾಚೇತಸರೆಲ್ಲರೂ ರುದ್ರದೇವರು ಉಪದೇಶಿಸಿದ ಸ್ತೋತ್ರವನ್ನು ಜಪಿಸುತ್ತಾ, ನೀರಿನಲ್ಲಿ ನಿಂತುಕೊಂಡು ಹತ್ತುಸಾವಿರ ವರ್ಷಗಳವರೆಗೆ ತಪಸ್ಸನ್ನು ಆಚರಿಸುತ್ತಿದ್ದರು. ॥ ೨ ॥ ಇತ್ತ ಕಡೆ ಪ್ರಾಚೀನಬರ್ಹಿಯ ಚಿತ್ತವು ಕರ್ಮಕಾಂಡದಲ್ಲಿ ಅತ್ಯಂತ ಆಸಕ್ತವಾಗಿ ಅಧ್ಯಾತ್ಮದ ವಿಷಯದಲ್ಲಿ ಪ್ರೀತಿಯಿಲ್ಲದೇ ಇರುವುದನ್ನು ಗಮನಿಸಿ, ಅಧ್ಯಾತ್ಮವಿದ್ಯಾವಿಶಾರದರಾದ ಪರಮದಯಾಳುಗಳಾದ ನಾರದರು ಅವನ ಬಳಿಗೆ ಬಂದು ಹೀಗೆ ಉಪದೇಶಿಸಿದರು. ॥ ೩ ॥

ಎಲೈ ರಾಜನೇ! ಈ ಕರ್ಮಗಳ ಮೂಲಕ ನೀನು ತನ್ನ ಯಾವ ಶ್ರೇಯಸ್ಸನ್ನು ಪಡೆಯಲು ಇಚ್ಛಿಸುತ್ತಿರುವೆ? ದುಃಖದ ಆತ್ಯಂತಿಕ ನಾಶ ಮತ್ತು ಪರಮಾನಂದದ ಪ್ರಾಪ್ತಿಯ ಹೆಸರೇ ಶ್ರೇಯಸ್ಸಾಗಿದೆ. ಇದಾದರೋ ಕರ್ಮಗಳಿಂದಾಗುವುದಿಲ್ಲ. ॥ ೪ ॥

ರಾಜನು ಹೇಳಿದನು – ಮಹಾಭಾಗವತರಾದ ನಾರದರೇ! ನನ್ನ ಬುದ್ಧಿಯು ಕರ್ಮದಲ್ಲೇ ಸಿಕ್ಕಿಹಾಕಿಕೊಂಡಿದೆ. ಆದರಿಂದ ಪರಮ ಶ್ರೇಯಸ್ಸೇನೆಂಬುದು ನನಗೆ ತಿಳಿಯದಾಗಿದೆ. ಈ ಕರ್ಮಬಂಧನದಿಂದ ನಾನು ಬಿಡುಗಡೆ ಹೊಂದುವಂತಹ ವಿಶುದ್ಧ ಜ್ಞಾನವನ್ನು ನೀವು ನನಗೆ ಉಪದೇಶಿಸಿರಿ. ॥ ೫ ॥

ಗೃಹೇಷು ಕೂಟಧರ್ಮೇಷು ಪುತ್ರದಾರಧನಾರ್ಥಧೀಃ ।
ನ ಪರಂ ವಿಂದತೇ ಮೂಢೋ ಭ್ರಾಮ್ಯನ್ಸಂಸಾರವರ್ತ್ಮಸು ॥ ೬ ॥

ಕಪಟಧರ್ಮಮಯ ಗೃಹಸ್ಥಾಶ್ರಮದಲ್ಲೇ ಇದ್ದುಕೊಂಡು ಪತ್ನೀ, ಪುತ್ರ, ಧನ ಇವುಗಳನ್ನೇ ಪರಮ ಪುರುಷಾರ್ಥವೆಂದು ತಿಳಿಯುವವನಿಗೆ ಮತ್ತು ಅಜ್ಞಾನವಶದಿಂದ ಸಂಸಾರಾರಣ್ಯದಲ್ಲೇ ಅಲೆಯುತ್ತಾ ಇರುವುದರಿಂದ ಅವನಿಗೆ ಪರಮಶ್ರೇಯಸ್ಸು ದೊರೆಯುವುದಿಲ್ಲ. ॥ ೬ ॥

ನಾರದ ಉವಾಚ

ಭೋ ಭೋಃ ಪ್ರಜಾಪತೇ ರಾಜನ್ ಪಶೂನ್ಪಶ್ಯ ತ್ವಯಾಧ್ವರೇ ।
ಸಂಜ್ಞಾಪಿತಾಂಜೀವಸಂಘಾನ್ನಿರ್ಘೃಣೇನ ಸಹಸ್ರಶಃ ॥ ೭ ॥

ಏತೇ ತ್ವಾಂ ಸಂಪ್ರತೀಕ್ಷಂತೇ ಸ್ಮರಂತೋ ವೈಶಸಂ ತವ ।
ಸಂಪರೇತಮಯಃ ಕೂಟೈಶ್ಛಿಂದಂತ್ಯುತ್ಥಿತಮನ್ಯವಃ ॥ ೮ ॥

ಅತ್ರ ತೇ ಕಥಯಿಷ್ಯೇಽಮುಮಿತಿಹಾಸಂ ಪುರಾತನಮ್ ।
ಪುರಂಜನಸ್ಯ ಚರಿತಂ ನಿಬೋಧ ಗದತೋ ಮಮ ॥ ೯ ॥

ಆಸೀತ್ಪುರಂಜನೋ ನಾಮ ರಾಜಾ ರಾಜನ್ ಬೃಹಚ್ಛ್ರವಾಃ ।
ತಸ್ಯಾ ವಿಜ್ಞಾತನಾಮಾಽಽಸೀತ್ಸಖಾವಿಜ್ಞಾತಚೇಷ್ಟಿತಃ ॥ ೧೦ ॥

ಸೋಽನ್ವೇಷಮಾಣಃ ಶರಣಂ ಬಭ್ರಾಮ ಪೃಥಿವೀಂ ಪ್ರಭುಃ ।
ನಾನುರೂಪಂ ಯದಾವಿಂದದಭೂತ್ಸ ವಿಮನಾ ಇವ ॥ ೧೧ ॥

ನ ಸಾಧು ಮೇನೇ ತಾಃ ಸರ್ವಾ ಭೂತಲೇ ಯಾವತೀಃ ಪುರಃ ।
ಕಾಮಾನ್ ಕಾಮಯಮಾನೋಽಸೌ ತಸ್ಯ ತಸ್ಯೋಪಪತ್ತಯೇ ॥ ೧೨ ॥

ಸ ಏಕದಾ ಹಿಮವತೋ ದಕ್ಷಿಣೇಷ್ವಥ ಸಾನುಷು ।
ದದರ್ಶ ನವಭಿರ್ದ್ವಾರ್ಭಿಃ ಪುರಂ ಲಕ್ಷಿತಲಕ್ಷಣಾಮ್ ॥ ೧೩ ॥

ಪ್ರಾಕಾರೋಪವನಾಟ್ಟಾಲಪರಿಖೈರಕ್ಷತೋರಣೈಃ ।
ಸ್ವರ್ಣರೌಪ್ಯಾಯಸೈಃ ಶೃಂಗೈಃ ಸಂಕುಲಾಂ ಸರ್ವತೋ ಗೃಹೈಃ ॥ ೧೪ ॥

ನೀಲಸ್ಫಟಿಕವೈದೂರ್ಯಮುಕ್ತಾಮರಕತಾರುಣೈಃ ।
ಕ್ಲೃಪ್ತಹರ್ಮ್ಯಸ್ಥಲೀಂ ದೀಪ್ತಾಂ ಶ್ರಿಯಾ ಭೋಗವತೀಮಿವ ॥ ೧೫ ॥

ಸಭಾಚತ್ವರರಥ್ಯಾಭಿರಾಕ್ರೀಡಾಯತನಾಪಣೈಃ ।
ಚೈತ್ಯಧ್ವಜಪತಾಕಾಭಿರ್ಯುಕ್ತಾಂ ವಿದ್ರುಮವೇದಿಭಿಃ ॥ ೧೬ ॥

ಶ್ರೀನಾರದರು ಹೇಳಿದರು – ಎಲೈ ರಾಜೇಂದ್ರನೇ! ನೀನು ಯಜ್ಞದಲ್ಲಿ ನಿರ್ದಯೆಯಿಂದ ಸಾವಿರಾರು ಪಶುಗಳನ್ನು ಬಲಿ ಕೊಟ್ಟಿರುವೆ. ಅವೆಲ್ಲವನ್ನು ಇದೋ ಆಕಾಶದಲ್ಲಿ ನೋಡು, ಎಂದು ತೋರಿಸಿದರು. ॥ ೭ ॥ ಅವೆಲ್ಲವೂ ನೀನು ಅವರಿಗೆ ಕೊಟ್ಟ ಹಿಂಸೆಯನ್ನು ನೆನೆಸಿಕೊಂಡು ಸೇಡು ತೀರಿಸಿಕೊಳ್ಳುವುದಕ್ಕಾಗಿ ನಿನ್ನ ದಾರಿಯನ್ನು ನೋಡುತ್ತಿವೆ. ನೀನು ಸತ್ತು ಪರಲೋಕಕ್ಕೆ ಹೋದಾಗ ಅವು ಅತ್ಯಂತ ಕ್ರೋಧದಿಂದ ತಮ್ಮ ಕಬ್ಬಿಣದಂತಹ ಕೊಂಬುಗಳಿಂದ ತಿವಿಯುವುವು. ॥ ೮ ॥ ಇರಲಿ. ಈ ವಿಷಯದಲ್ಲಿ ನಾನು ನಿನಗೆ ಒಂದು ಪ್ರಾಚೀನ ಉಪಾಖ್ಯಾನವನ್ನು ಹೇಳುವೆನು. ಅದು ರಾಜಾ ಪುರಂಜನನ ಚರಿತ್ರೆ. ನೀನು ಸಾವಧಾನವಾಗಿ ಕೇಳುವವನಾಗು. ॥ ೯ ॥ ಎಲೈ ರಾಜನೇ! ಹಿಂದೆ ಪುರಂಜನನೆಂಬ ಓರ್ವ ಮಹಾಯಶಸ್ವಿಯಾದ ರಾಜನಿದ್ದನು. ಅವನಿಗೆ ಅವಿಜ್ಞಾತನೆಂಬ ಒಬ್ಬ ಸ್ನೇಹಿತನಿದ್ದನು. ಆ ಸ್ನೇಹಿತನ ಯಾವುದೇ ಕೆಲಸ-ಕಾರ್ಯಗಳು ಯಾರಿಗೂ ತಿಳಿಯುತ್ತಿರಲಿಲ್ಲ. ॥ ೧೦ ॥ ರಾಜನು ತಾನು ವಾಸ ಮಾಡಲು ಯೋಗ್ಯವಾದ ಸ್ಥಾನವನ್ನು ಹುಡುಕುತ್ತಾ ಪೃಥಿವಿಯಲ್ಲೆಲ್ಲ ಅಲೆದಾಡಿದನು. ಆದರೂ ಅವನಿಗೆ ಯಾವುದೇ ಅನುಕೂಲಕರ ಸ್ಥಾನ ದೊರೆಯದಿದ್ದಾಗ ಅವನು ಬೇಸರಗೊಂಡನು. ॥ ೧೧ ॥ ಅವನಿಗೆ ನಾನಾ ಭೋಗಗಳ ಬಯಕೆ ಉತ್ಕಟವಾಗಿತ್ತು. ಅವುಗಳನ್ನು ಭೋಗಿಸಲಿಕ್ಕಾಗಿ ಅವನು ಜಗತ್ತಿನಲ್ಲಿ ನೋಡಿದ ಯಾವುದೇ ನಗರವು ಅವನಿಗೆ ಸರಿಬೀಳಲಿಲ್ಲ. ॥ ೧೨ ॥

ಒಂದು ದಿನ ಅವನು ಹಿಮಾಲಯದ ದಕ್ಷಿಣದ ತಪ್ಪಲಿನ ಕರ್ಮಭೂಮಿಯಲ್ಲಿ ಒಂದು ಒಂಭತ್ತು ಬಾಗಿಲುಗಳುಳ್ಳ ನಗರವನ್ನು ನೋಡಿದನು. ಅದು ಎಲ್ಲ ಸುಲಕ್ಷಣಗಳಿಂದ ಸಂಪನ್ನವಾಗಿತ್ತು. ॥ ೧೩ ॥ ಅದರ ಸುತ್ತಲೂ ಎತ್ತರವಾದ ಕೋಟೆ-ಕೊತ್ತಲಗಳೂ, ಕಂದಕಗಳೂ ಶೋಭಿಸುತ್ತಿದ್ದವು. ಉದ್ಯಾನವನಗಳೂ, ಗವಾಕ್ಷಗಳೂ, ತೋರಣದ್ವಾರಗಳೂ, ಚಿನ್ನ, ಬೆಳ್ಳಿ, ಕಬ್ಬಿಣಗಳ ಕಲಶಗಳಿಂದ ರಮಣೀಯವಾಗಿದ್ದ ವಿಶಾಲವಾದ ಭವನಗಳೂ ಅದನ್ನು ಅಲಂಕರಿಸಿದ್ದವು. ॥ ೧೪ ॥ ಅಲ್ಲಿಯ ಭವನಗಳು – ನೆಲಗಳು ಇಂದ್ರನೀಲಮಣಿ, ಸ್ಫಟಿಕ, ವಜ್ರ-ವೈಡೂರ್ಯ, ಮುತ್ತು, ಮರಕತಮಣಿ, ಕೆಂಪು ರತ್ನಗಳಿಂದ ಖಚಿತವಾಗಿದ್ದವು. ತನ್ನ ಕಾಂತಿಯಿಂದ ಅದು ನಾಗಗಳ ರಾಜಧಾನಿ ಯಾದ ಭೋಗವತೀನಗರದಂತೆ ಕಂಡು ಬರುತ್ತಿತ್ತು. ॥ ೧೫ ॥ ಅದರಲ್ಲಿ ಅಲ್ಲಲ್ಲಿ ಅನೇಕಸಭಾಭವನಗಳೂ, ಚೌಕಗಳೂ, ರಸ್ತೆಗಳೂ, ಕ್ರೀಡಾಗೃಹಗಳೂ, ಅಂಗಡಿಬೀದಿಗಳೂ, ವಿಶ್ರಾಂತಿಧಾಮಗಳೂ, ಬಾವುಟ – ಪತಾಕೆಗಳೂ, ಹವಳದ ಜಗುಲಿಗಳೂ ರಾರಾಜಿಸುತ್ತಿದ್ದವು. ॥ ೧೬ ॥

ಆ ನಗರದ ಹೊರಗೆ ದಿವ್ಯವಾದ ಮರ-ಬಳ್ಳಿಗಳಿಂದ ಕೂಡಿದ ಒಂದು ಸುಂದರವಾದ ಉದ್ಯಾನವನವೂ, ಅದರ ಮಧ್ಯದಲ್ಲಿ

ಪುರ್ಯಾಸ್ತು ಬಾಹ್ಯೋಪವನೇ ದಿವ್ಯದ್ರುಮಲತಾಕುಲೇ ।
ನದದ್ವಿಹಂಗಾಲಿಕುಲಕೋಲಾಹಲಜಲಾಶಯೇ ॥ ೧೭ ॥

ಹಿಮನಿರ್ಝರವಿಪ್ರುಷ್ಮತ್ಕುಸುಮಾಕರವಾಯುನಾ ।
ಚಲತ್ಪ್ರವಾಲವಿಟಪನಲಿನೀತಟಸಂಪದಿ ॥ ೧೮ ॥

ನಾನಾರಣ್ಯಮೃಗವ್ರಾತೈರನಾಬಾಧೇ ಮುನಿವ್ರತೈಃ ।
ಆಹೂತಂ ಮನ್ಯತೇ ಪಾಂಥೋ ಯತ್ರ ಕೋಕಿಲಕೂಜಿತೈಃ ॥ ೧೯ ॥

ಯದೃಚ್ಛಯಾಽಽಗತಾಂ ತತ್ರ ದದರ್ಶ ಪ್ರಮದೋತ್ತಮಾಮ್ ।
ಭೃತ್ಯೈರ್ದಶಭಿರಾಯಾಂತೀಮೇಕೈಕಶತನಾಯಕೈಃ ॥ ೨೦ ॥

ಪಂಚಶೀರ್ಷಾಹಿನಾ ಗುಪ್ತಾಂ ಪ್ರತೀಹಾರೇಣ ಸರ್ವತಃ ।
ಅನ್ವೇಷಮಾಣಾಮೃಷಭಮಪ್ರೌಢಾಂ ಕಾಮರೂಪಿಣೀಮ್ ॥ ೨೧ ॥

ಸುನಾಸಾಂ ಸುದತೀಂ ಬಾಲಾಂ ಸುಕಪೋಲಾಂ ವರಾನನಾಮ್ ।
ಸಮವಿನ್ಯಸ್ತಕರ್ಣಾಭ್ಯಾಂ ಬಿಭ್ರತೀಂ ಕುಂಡಲಶ್ರಿಯಮ್ ॥ ೨೨ ॥

ಪಿಶಂಗನೀವೀಂ ಸುಶ್ರೋಣೀಂ ಶ್ಯಾಮಾಂ ಕನಕಮೇಖಲಾಮ್ ।
ಪದ್ಭ್ಯಾಂ ಕ್ವಣದ್ಭ್ಯಾಂ ಚಲತೀಂ ನೂಪುರೈರ್ದೇವತಾಮಿವ ॥ ೨೩ ॥

ಸ್ತನೌ ವ್ಯಂಜಿತಕೈಶೋರೌ ಸಮವೃತ್ತೌ ನಿರಂತರೌ ।
ವಸ್ತ್ರಾಂತೇನ ನಿಗೂಹಂತೀಂ ವ್ರೀಡಯಾ ಗಜಗಾಮಿನೀಮ್ ॥ ೨೪ ॥

ತಾಮಾಹ ಲಲಿತಂ ವೀರಃ ಸವ್ರೀಡಸ್ಮಿತಶೋಭನಾಮ್ ।
ಸ್ನಿಗ್ಧೇನಾಪಾಂಗಪುಂಖೇನ ಸ್ಪೃಷ್ಟಃ ಪ್ರೇಮೋದ್ಭ್ರಮದ್ಭ್ರುವಾ ॥ ೨೫ ॥

ಕಾ ತ್ವಂ ಕಂಜಪಲಾಶಾಕ್ಷಿ ಕಸ್ಯಾಸೀಹ ಕುತಃ ಸತಿ ।
ಇಮಾಮುಪ ಪುರೀಂ ಭೀರು ಕಿಂ ಚಿಕೀರ್ಷಸಿ ಶಂಸ ಮೇ ॥ ೨೬ ॥

ಒಂದು ಸರೋವರವೂ ಶೋಭಿಸುತ್ತಿತ್ತು. ಅದರ ಅಕ್ಕ-ಪಕ್ಕಗಳಲ್ಲಿ ಬಗೆ-ಬಗೆಯ ಪಕ್ಷಿಗಳು ಚಿಲಿಪಿಲಿಗುಟ್ಟುತ್ತಿದ್ದವು. ದುಂಬಿಗಳು ಝೇಂಕರಿಸುತ್ತಿದ್ದವು. ॥ ೧೭ ॥ ಸರೋವರದ ಪಕ್ಕದಲ್ಲಿದ್ದ ವೃಕ್ಷಗಳ ಕೊಂಬೆಗಳೂ ಮತ್ತು ಎಲೆಗಳೂ ಶೀತಲವಾದ ಝರಿಗಳು ನೀರಿನ ಹನಿಗಳು ಬೆರೆತಿದ್ದ ವಸಂತಮಾರುತದಿಂದ ಮೆಲ್ಲಗೆ ಅಲುಗಾಡುತ್ತಾ ದಡದಲ್ಲಿದ್ದ ನೆಲದ ಶೋಭೆಯನ್ನು ಹೆಚ್ಚಿಸಿದ್ದವು. ॥ ೧೮ ॥ ಅಲ್ಲಿಯ ಕಾಡುಮೃಗಗಳೂ ಕೂಡ ಮುನಿಗಳಿಗುಚಿತವಾದ ಅಹಿಂಸಾದಿ ವ್ರತಗಳನ್ನು ಪಾಲಿಸುತ್ತಿದ್ದವು. ಅದರಿಂದ ಅಲ್ಲಿ ಯಾರಿಗೂ ಯಾವ ವಿಧವಾದ ತೊಂದರೆಯೂ ಆಗುತ್ತಿರಲಿಲ್ಲ. ಆ ಉದ್ಯಾನವನದಲ್ಲಿ ಕೋಗಿಲೆಗಳು ಕುಹೂ-ಕುಹೂ ಎಂದು ಇಂಪಾದ ದನಿಗೈಯುತ್ತಾ ದಾರಿಹೋಕರಿಗೆ 'ವಿಶ್ರಾಂತಿ ಪಡೆಯಲು ಇಲ್ಲಿಗೆ ಬನ್ನಿರಿ' ಎಂದು ಸ್ವಾಗತಿಸುತ್ತವೋ ಎಂಬ ಭ್ರಮೆಯುಂಟಾಗುತ್ತಿತ್ತು. ॥ ೧೯ ॥

ಆ ಅದ್ಭುತವಾದ ಉದ್ಯಾನವನದಲ್ಲಿ ಸಂಚರಿಸುತ್ತಿದ್ದ ಪುರಂಜನರಾಜನಿಗೆ ಆಗ ಅಕಸ್ಮಾತ್ತಾಗಿ ಅಲ್ಲಿಗೆ ಬರುತ್ತಿದ್ದ ಒಬ್ಬ ಸುಂದರಿಯು ಕಾಣಿಸಿದಳು. ಆಕೆಗೆ ಹತ್ತುಮಂದಿ ಸೇವಕರು ಬೆಂಗಾವಲಾಗಿದ್ದರು. ಆ ಸೇವಕರಲ್ಲಿ ಒಬ್ಬೊಬ್ಬನೂ ನೂರು ಮಂದಿ ಸ್ತ್ರೀಯರಿಗೆ ನಾಯಕರಾಗಿದ್ದರು. ॥ ೨೦ ॥ ಐದು ಹೆಡೆಯ ಹಾವೊಂದು ಅವಳ ದ್ವಾರಪಾಲಕನಾಗಿದ್ದು ಅಂಗರಕ್ಷಕನಾಗಿ ಅವಳನ್ನು ಎಲ್ಲೆಡೆಗಳಿಂದಲೂ ಕಾಪಾಡುತ್ತಿತ್ತು. ಮುಗ್ಧೆಯಾಗಿ ಇಷ್ಟಬಂದ ರೂಪವನ್ನು ಧರಿಸಬಲ್ಲವಳಾಗಿದ್ದ ಆ ರಮಣಿಯು ತನಗೆ ಅನುರೂಪನಾದ ರಮಣನನ್ನು ಅರಸುತ್ತಿದ್ದಳು. ॥ ೨೧ ॥ ಅವಳ ನೀಳವಾದ ಮೂಗು, ದಂತಪಂಕ್ತಿಗಳು, ಕಮನೀಯ ಕಪೋಲಗಳಿಂದ ಕೂಡಿದ ಮುಖವು ಬಹಳ ಸುಂದರವಾಗಿತ್ತು. ಅವಳಿಗೆ ತಕ್ಕುದಾದ ಕುಂಡಲಗಳು ಕಿವಿಗಳಲ್ಲಿ ಥಳ-ಥಳಿಸುತ್ತಿದ್ದುವು. ॥ ೨೨ ॥ ಅವಳ ಮೈಬಣ್ಣ ಶ್ಯಾಮಲವಾಗಿದ್ದು ನಡುವು ಸುಂದರವಾಗಿತ್ತು. ಹಳದಿಯ ಸೀರೆಯನ್ನುಟ್ಟು ಚಿನ್ನದ ಡಾಬನ್ನು ಧರಿಸಿ, ಕಾಲಂದುಗೆಗಳು ಝಣ-ಝಣಿಸುವಂತೆ ವೈಯ್ಯಾರದಿಂದ ನಡೆದುಬರುತ್ತಿದ್ದ ಆ ರಮಣಿಯು ಧರೆಗೆ ಇಳಿದು ಬಂದ ಓರ್ವದೇವಿಯಂತೆ ಕಾಣುತ್ತಿದ್ದಳು. ॥ ೨೩ ॥

ಆ ಗಜಗಾಮಿನಿಯು ತಾರುಣ್ಯವನ್ನು ಸೂಚಿಸುತ್ತಿರುವ ದುಂಡಾಗಿ ಒಂದಕ್ಕೊಂದು ಸೇರಿಕೊಂಡಿದ್ದ ತನ್ನ ಸ್ತನಗಳನ್ನು ಲಜ್ಜೆಯಿಂದ ಬಾರಿ-ಬಾರಿಗೂ ಸೆರಗಿನಿಂದ ಮುಚ್ಚಿಕೊಳ್ಳುತ್ತಿದ್ದಳು. ॥ ೨೪ ॥ ಲಜ್ಜೆಯಿಂದ ಕೂಡಿದ್ದ ಮುಗುಳುನಗೆಯಿಂದ ಶೋಭಿಸುತ್ತಾ, ಪ್ರೇಮದಿಂದ ಕೂಡಿದ ಭ್ರೂಮಾಟದಿಂದಲೂ, ಮನೋಹರವಾದ ಕಡೆಗಣ್ಣ ನೋಟವೆಂಬ ಬಾಣದಿಂದಲೂ ಘಾಸಿಯಾದ ವೀರ ಪುರಂಜನರಾಜನು ಪರವಶನಾಗಿ ಧೈರ್ಯವನ್ನು ಕಳೆದುಕೊಂಡು ಸವಿಮಾತುಗಳಿಂದ ಆಕೆಯನ್ನು ಹೀಗೆ ಪ್ರಶ್ನಿಸಿದನು. ॥ ೨೫ ॥ ಎಲೈ ಕಮಲಾಕ್ಷಿಯೇ! ನೀನು ಯಾರು? ಯಾರ ಮಗಳು? ಎಲ್ಲಿಂದ ಬರುತ್ತಿರುವೆ? ಸಾಧ್ವಿಯೇ! ಈ ಪುರಿಯ ಬಳಿ ಏನು ಮಾಡಬೇಕೆಂದಿರುವೆ? ॥ ೨೬ ॥

ಕ ಏತೇಽನುಪಥಾ ಯೇ ತ ಏಕಾದಶ ಮಹಾಭಟಾಃ ।
ಏತಾ ವಾ ಲಲನಾಃ ಸುಭ್ರು ಕೋಽಯಂ ತೇಽಹಿಃ ಪುರಃಸರಃ ॥ ೨೭ ॥

ತ್ವಂ ಹ್ರೀರ್ಭವಾನ್ಯಸ್ಯಥ ವಾಗ್ರಮಾ ಪತಿಂ
ವಿಚಿನ್ವತೀ ಕಿಂ ಮುನಿವದ್ರಹೋ ವನೇ ।
ತ್ವದಂಘ್ರಿಕಾಮಾಪ್ತಸಮಸ್ತಕಾಮಂ
ಕ್ವ ಪದ್ಮಕೋಶಃ ಪತಿತಃ ಕರಾಗ್ರಾತ್ ॥ ೨೮ ॥

ನಾಸಾಂ ವರೋರ್ವನ್ಯತಮಾ ಭುವಿಸ್ಪೃಕ್
ಪುರೀಮಿಮಾಂ ವೀರವರೇಣ ಸಾಕಮ್ ।
ಅರ್ಹಸ್ಯಲಂಕರ್ತುಮದಭ್ರಕರ್ಮಣಾ
ಲೋಕಂ ಪರಂ ಶ್ರೀರಿವ ಯಜ್ಞಪುಂಸಾ ॥ ೨೯ ॥

ಯದೇಷ ಮಾಪಾಂಗವಿಖಂಡಿತೇಂದ್ರಿಯಂ
ಸವ್ರೀಡಭಾವಸ್ಮಿತವಿಭ್ರಮದ್ಭ್ರುವಾ ।
ತ್ವಯೋಪಸೃಷ್ಟೋ ಭಗವಾನ್ಮನೋಭವಃ
ಪ್ರಬಾಧತೇಽಥಾನುಗೃಹಾಣ ಶೋಭನೇ ॥ ೩೦ ॥

ತ್ವದಾನನಂ ಸುಭ್ರು ಸುತಾರಲೋಚನಂ
ವ್ಯಾಲಂಬಿನೀಲಾಲಕವೃಂದಸಂವೃತಮ್ ।
ಉನ್ನೀಯ ಮೇ ದರ್ಶಯ ವಲ್ಗುವಾಚಕಂ
ಯದ್ವ್ರೀಡಯಾ ನಾಭಿಮುಖಂ ಶುಚಿಸ್ಮಿತೇ ॥ ೩೧ ॥

ನಾರದ ಉವಾಚ

ಇತ್ಥಂ ಪುರಂಜನಂ ನಾರೀ ಯಾಚಮಾನಮಧೀರವತ್ ।
ಅಭ್ಯನಂದತ ತಂ ವೀರಂ ಹಸಂತೀ ವೀರ ಮೋಹಿತಾ ॥ ೩೨ ॥

ನ ವಿದಾಮ ವಯಂ ಸಮ್ಯಕ್ಕರ್ತಾರಂ ಪುರುಷರ್ಷಭ ।
ಆತ್ಮನಶ್ಚ ಪರಸ್ಯಾಪಿ ಗೋತ್ರಂ ನಾಮ ಚ ಯತ್ಕೃತಮ್ ॥ ೩೩ ॥

ಇಹಾದ್ಯ ಸಂತಮಾತ್ಮಾನಂ ವಿದಾಮ ನ ತತಃ ಪರಮ್ ।
ಯೇನೇಯಂ ನಿರ್ಮಿತಾ ವೀರ ಪುರೀ ಶರಣಮಾತ್ಮನಃ ॥ ೩೪ ॥

ಏತೇ ಸಖಾಯಃ ಸಖ್ಯೋ ಮೇ
ನರಾ ನಾರ್ಯಶ್ಚ ಮಾನದ ।
ಸುಪ್ತಾಯಾಂ ಮಯಿ ಜಾಗರ್ತಿ
ನಾಗೋಽಯಂ ಪಾಲಯನ್ ಪುರೀಮ್ ॥ ೩೫ ॥

ಎಲೈ ಭೀರುವೇ! ಬೆಂಗಾವಲಾಗಿ ನಿನ್ನನ್ನು ಹಿಂಬಾಲಿಸುತ್ತಿರುವ ಈ ಹನ್ನೊಂದು ಮಂದಿ ವೀರಭಟರು ಯಾರು? ಈ ಸ್ತ್ರೀಯರು ಯಾರು? ನಿನ್ನ ಮುಂದೆ ಕಾವಲಾಗಿ ಬರುತ್ತಿರುವ ಈ ಸರ್ಪವು ಯಾರು? ॥ ೨೭ ॥ ಸುಂದರಿಯೇ! ನೀನು ಪತಿಯನ್ನು ಅರಸುತ್ತಾ ಬಂದಿರುವ ಸಾಕ್ಷಾತ್ ಲಜ್ಜಾದೇವಿಯೋ, ಉಮಾದೇವಿಯೋ, ಸರಸ್ವತಿಯೋ ಅಥವಾ ರಮಾದೇವಿಯೋ? ನೀನು ಮುನಿಗಳಂತೆ ಈ ವನದಲ್ಲಿ ಏಕಾಂತವಾಸವನ್ನು ಏಕೆ ಮಾಡುತ್ತಿರುವೆ? ನಿನ್ನ ಚರಣಾನುಗ್ರಹದಿಂದಲೇ ಪತಿಯ ಎಲ್ಲ ಕಾಮನೆಗಳು ಈಡೇರುವಂತಾಗುವುವು. ನೀನು ಲಕ್ಷ್ಮೀದೇವಿಯೇ ಆಗಿದ್ದರೆ, ನಿನ್ನ ಕೈಯಲ್ಲಿದ್ದ ಲೀಲಾಕಮಲವು ಎಲ್ಲಿ ಬಿದ್ದು ಹೋಯಿತು? ॥ ೨೮ ॥ ಆದರೆ ನೀನು ಅವರಲ್ಲಿ ಯಾರೂ ಆಗಿರಲಾರೆ. ಏಕೆಂದರೆ, ನಿನ್ನ ಪಾದಗಳು ಭೂಮಿಯನ್ನು ಮುಟ್ಟುತ್ತಿವೆ. ನೀನು ಮನುಷ್ಯ ಸ್ತ್ರೀಯೇ ಆಗಿರಬೇಕು. ಒಳ್ಳೆಯದು, ಹಾಗಾದರೆ ಲಕ್ಷ್ಮೀದೇವಿಯು ಭಗವಾನ್ ವಿಷ್ಣುವಿನೊಡನೆ ವೈಕುಂಠವನ್ನು ಬೆಳಗುತ್ತಿರುವಂತೆ ನೀನು ವೀರವರನಾದ ನನ್ನೊಡನೆ ಈ ನಗರಿಯನ್ನು ಅಲಂಕರಿಸುವವಳಾಗು. ॥ ೨೯ ॥ ನಾನು ಮಹಾಪರಾಕ್ರಮಿಯೇ ಆಗಿದ್ದರೂ ಈಗ ನಿನ್ನ ಕಟಾಕ್ಷಗಳು ನನ್ನ ಮನಸ್ಸನ್ನು ಸೂರೆಗೊಂಡುಬಿಟ್ಟಿವೆ. ಲಜ್ಜೆಯಿಂದ ಕೂಡಿ ರತಿಭಾವದಿಂದ ತುಂಬಿರುವ ಕಿರುನಗೆಯಿಂದ ಕೂಡಿರುವ ನಿನ್ನ ಈ ಹುಬ್ಬುಗಳ ಪ್ರೇರಣೆಪಡೆದು ಕಡುಗಲಿಯಾದ ಕಾಮದೇವನು ನನ್ನನ್ನು ಪೀಡಿಸುತ್ತಿದ್ದಾನೆ. ಆದುದರಿಂದ ಸುಂದರಿಯೇ ನನ್ನಲ್ಲಿ ಕೃಪೆದೋರು. ॥ ೩೦ ॥ ಶುಚಿಯಾದ ಮುಗುಳ್ನಗೆಯುಳ್ಳ ಮೋಹಿನಿಯೇ! ಸುಮಧುರವಾದ ವಾಣಿಯನ್ನು ನುಡಿಯುವ ನಿನ್ನ ಮುಖಾರವಿಂದವನ್ನು ನಾಚಿಕೆಯಿಂದ ಏಕೆ ಹಿಂದಿರುಗಿಸಿ ಕೊಂಡಿರುವೆ? ಮುಖವನ್ನು ಮೇಲೆತ್ತಿ ನನಗೆ ತೋರಿಸು. ಸುಂದರವಾದ ಹುಬ್ಬುಗಳಿಂದ ಕೂಡಿದ ವಿಶಾಲ ಕಣ್ಣುಗಳಿಂದ ಶೋಭಿಸುತ್ತಿರುವ ನಿನ್ನ ಈ ಮುಖಕಮಲವನ್ನು ಕಮನೀಯವಾದ ಕರಿಯ ಮುಂಗುರುಳುಗಳು ಆವರಿಸಿಕೊಂಡಿವೆ. ॥ ೩೧ ॥

ಶ್ರೀನಾರದರು ಹೇಳುತ್ತಾರೆ – ಎಲೈ ರಾಜನೇ! ಪುರಂಜನ ರಾಜನು ಧೈರ್ಯದಿಂದ ಬೇಡುತ್ತಿರುವುದನ್ನು ಕಂಡು ಅವನಲ್ಲಿ ಮೋಹಗೊಂಡ ಆ ರಮಣಿಯು ನಸುನಗುತ್ತಾ, ಅನುಮೋದಿಸುತ್ತಾ ಹೇಳತೊಡಗಿದಳು. ॥ ೩೨ ॥

ಎಲೈ ನರಪುಂಗವನೇ! ನಮ್ಮನ್ನು ಹುಟ್ಟುಮಾಡಿದವರು ಯಾರು ಎಂಬುದು ನಮಗೆ ಸರಿಯಾಗಿ ತಿಳಿಯದು. ನಮ್ಮ ಅಥವಾ ಬೇರೆಯವರ ಹೆಸರು – ಕುಲಗೋತ್ರಗಳೂ ನಮಗೆ ತಿಳಿಯದು. ॥ ೩೩ ॥ ವೀರವರನೇ! ಇಂದು ನಾವೆಲ್ಲರೂ ಈ ನಗರದಲ್ಲಿದ್ದೇವೆ ಇದನ್ನು ಬಿಟ್ಟು ನಾನು ಬೇರೇನೂ ತಿಳಿಯಲಾರೆ. ನಮಗೆ ವಾಸಿಸಲು ಈ ಪುರವನ್ನು ಯಾರು ರಚಿಸಿದರು? ಇದೂ ಕೂಡ ನನಗೆ ತಿಳಿಯದು. ॥ ೩೪ ॥ ಪ್ರಿಯನೇ! ಈ ಪುರುಷರು ನನ್ನ ಸ್ನೇಹಿತರು ಹಾಗೂ ಈ ಸ್ತ್ರೀಯರು ನನ್ನ ಗೆಳತಿಯರು. ಈ ಸರ್ಪವು ನನ್ನ ರಕ್ಷಕನು. ನಾನು ಮಲಗಿದಾಗಲೂ ಇದು ಎಚ್ಚರವಾಗಿದ್ದು ಈ ಪುರಿಯನ್ನು ರಕ್ಷಿಸುತ್ತದೆ. ॥ ೩೫ ॥

ದಿಷ್ಟ್ಯಾSSಗತೋSಸಿ ಭದ್ರಂ ತೇ ಗ್ರಾಮ್ಯಾನ್ಕಾಮಾನಭೀಪ್ಸಸೇ ।
ಉದ್ವಹಿಷ್ಯಾಮಿ ತಾಂಸ್ತೇSಹಂ ಸ್ವಬಂಧುಭಿರರಿಂದಮ ॥ ೩೬ ॥

ಇಮಾಂ ತ್ವಮಧಿತಿಷ್ಠಸ್ವ ಪುರೀಂ ನವಮುಖೀಂ ವಿಭೋ ।
ಮಯೋಪನೀತಾನ್ಗೃಹ್ಣಾನಃ ಕಾಮಭೋಗಾನ್ ಶತಂ ಸಮಾಃ ॥ ೩೭ ॥

ಕಂ ನು ತ್ವದನ್ಯಂ ರಮಯೇ ಹ್ಯರತಿಜ್ಞಮಕೋವಿದಮ್ ।
ಅಸಂಪರಾಯಾಭಿಮುಖಮಶ್ವಸ್ತನವಿದಂ ಪಶುಮ್ ॥ ೩೮ ॥

ಧರ್ಮೋ ಹ್ಯತ್ರಾರ್ಥಕಾಮೌ ಚ
ಪ್ರಜಾನಂದೋSಮೃತಂ ಯಶಃ ।
ಲೋಕಾ ವಿಶೋಕಾ ವಿರಜಾ
ಯಾನ್ ನ ಕೇವಲಿನೋ ವಿದುಃ ॥ ೩೯ ॥

ಪಿತೃದೇವರ್ಷಿಮರ್ತ್ಯಾನಾಂ ಭೂತಾನಾಮಾತ್ಮನಶ್ಚ ಹ ।
ಕ್ಷೇಮ್ಯಂ ವದಂತಿ ಶರಣಂ ಭವೇSಸ್ಮಿನ್ ಯದ್ ಗೃಹಾಶ್ರಮಃ ॥ ೪೦ ॥

ಕಾ ನಾಮ ವೀರ ವಿಖ್ಯಾತಂ ವದಾನ್ಯಂ ಪ್ರಿಯದರ್ಶನಮ್ ।
ನ ವೃಣೀತ ಪ್ರಿಯಂ ಪ್ರಾಪ್ತಂ ಮಾದೃಶೀ ತ್ವಾದೃಶಂ ಪತಿಮ್ ॥ ೪೧ ॥

ಕಸ್ಯಾ ಮನಸ್ತೇ ಭುವಿ ಭೋಗಿಭೋಗಯೋಃ
ಸ್ತ್ರಿಯಾ ನ ಸಜ್ಜೇದ್ಭುಜಯೋರ್ಮಹಾಭುಜ ।
ಯೋSನಾಥವರ್ಗಾಧಿಮಲಂ ಘೃಣೋದ್ಧತ-
ಸ್ಮಿತಾವಲೋಕೇನ ಚರತ್ಯಪೋಹಿತುಮ್ ॥ ೪೨ ॥

ನಾರದ ಉವಾಚ

ಇತಿ ತೌ ದಂಪತೀ ತತ್ರ ಸಮುದ್ಯ ಸಮಯಂ ಮಿಥಃ ।
ತಾಂ ಪ್ರವಿಶ್ಯ ಪುರೀಂ ರಾಜನ್ಮುಮುದಾತೇ ಶತಂ ಸಮಾಃ ॥ ೪೩ ॥

ಉಪಗೀಯಮಾನೋ ಲಲಿತಂ ತತ್ರ ತತ್ರ ಚ ಗಾಯಕೈಃ ।
ಕ್ರೀಡನ್ಪರಿವೃತಃ ಸ್ತ್ರೀಭಿರ್ಹ್ರದಿನೀಮಾವಿಶಚ್ಛುಚೌ ॥ ೪೪ ॥

ಸಪ್ತೋಪರಿ ಕೃತಾ ದ್ವಾರಃ ಪುರಸ್ತಸ್ಯಾಸ್ತು ದ್ವೇ ಅಧಃ ।
ಪೃಥಗ್ವಿಷಯಗತ್ಯರ್ಥಂ ತಸ್ಯಾಂ ಯಃ ಕಶ್ಚನೇಶ್ವರಃ ॥ ೪೫ ॥

ಎಲೈ ಶತ್ರುಸೂದನನೇ! ನೀನು ಭಾಗ್ಯವಶದಿಂದ ಇಲ್ಲಿಗೆ ದಯಮಾಡಿಸಿರುವೆ. ಗ್ರಾಮ್ಯಸುಖಗಳನ್ನು ಬಯಸುತ್ತಿರುವೆ. ನಿನಗೆ ಮಂಗಳವಾಗಲೀ. ನಾನು ನನ್ನ ಗೆಳೆಯ-ಗೆಳತಿಯರೊಡನೆ ನಿನಗೆ ಎಲ್ಲ ವಿಷಯಸುಖಗಳನ್ನು ಒದಗಿಸಿಕೊಡುತ್ತಾ ಇರುವೆನು. ॥ ೩೬ ॥ ಪ್ರಭೋ! ಒಂಬತ್ತು ಬಾಗಿಲುಗಳುಳ್ಳ ಈ ನಗರಿಯಲ್ಲಿ ಇಷ್ಟಬಂದ ಭೋಗಗಳನ್ನು ಅನುಭವಿಸುತ್ತಾ ನೀನು ನೂರಾರು ವರ್ಷಗಳ ಕಾಲ ಇಲ್ಲಿ ವಾಸಿಸುತ್ತಿರು. ॥ ೩೭ ॥ ನಾನು ನಿನ್ನನ್ನು ಬಿಟ್ಟು ಬೇರೆ ಯಾರ ಜೊತೆಯಲ್ಲಿ ರಮಿಸಲಿ? ಇತರ ಜನರಿಗೆ ರತಿಸುಖವೂ ಗೊತ್ತಿಲ್ಲ. ಭೋಗಗಳು ಯಾವುವು ಎಂಬುದನ್ನೂ ಅವರು ಅರಿಯರು. ಪರಲೋಕದ ವಿಚಾರವನ್ನೂ, ನಾಳೆ ಏನಾಗುವುದು ಎಂಬುದನ್ನೂ ತಿಳಿಯರು. ಅವರು ಪಶುಗಳಿಗೆ ಸಮಾನರು. ॥ ೩೮ ॥ ಆಹಾ! ಈ ಲೋಕದಲ್ಲಿ ಗೃಹಸ್ಥಾಶ್ರಮದಲ್ಲೇ ಧರ್ಮ, ಅರ್ಥ, ಕಾಮ, ಸಂತಾನ-ಸುಖ, ಮೋಕ್ಷ, ಸತ್ಕೀರ್ತಿ ಮತ್ತು ಸ್ವರ್ಗಾದಿ ದಿವ್ಯ ಲೋಕಗಳ ಪ್ರಾಪ್ತಿಯೂ ಆಗಬಲ್ಲದು. ಸಂಸಾರವನ್ನು ತೊರೆದ ಯತಿಗಳಾದರೋ ಇವೆಲ್ಲದರ ಕಲ್ಪನೆಯೇ ಮಾಡಲಾರರು. ॥ ೩೯ ॥ ಈ ಲೋಕದಲ್ಲಿ ಪಿತೃಗಳು, ದೇವತೆಗಳು, ಋಷಿಗಳು, ಮನುಷ್ಯರು- ಇವರೆಲ್ಲರ ಹಾಗೂ ಸಮಸ್ತ ಪ್ರಾಣಿಗಳ ಮತ್ತು ತನ್ನದೂ ಕೂಡ ಶ್ರೇಯಸ್ಸಿನ ಏಕಮಾತ್ರ ಆಶ್ರಯ ಗೃಹಸ್ಥಾಶ್ರಮವೇ ಆಗಿದೆ ಎಂದು ಮಹಾ ಪುರುಷರು ಹೇಳಿರುವರು. ॥ ೪೦ ॥ ಎಲೈ ವೀರಶಿರೋಮಣಿಯೇ! ತಾನಾಗಿಯೇ ಕಾಮಿಸಿ ಬಂದಿರುವ ನಿನ್ನಂತಹ ಸುಪ್ರಸಿದ್ಧನೂ, ಉದಾರಚಿತ್ತನೂ, ಸುಂದರನೂ ಆದ ಪತಿಯನ್ನು ಈ ಲೋಕದಲ್ಲಿ ನನ್ನಂತಹ ಯಾವ ಹೆಂಗಸು ತಾನೇ ವರಿಸುವುದಿಲ್ಲ? ॥ ೪೧ ॥ ಮಹಾಬಾಹುವೇ! ಸರ್ಪದಂತೆ ದುಂಡಾಗಿ ಕೋಮಲವಾಗಿರುವ ನಿನ್ನ ಭುಜಗಳಲ್ಲಿ ಸ್ಥಾನವನ್ನು ಪಡೆಯಲು ಯಾವ ಕಾಮಿನಿಯ ಚಿತ್ತವು ತಾನೇ ಆಸೆಪಡುವುದಿಲ್ಲ! ನೀನು ಸುಂದರವಾದ ಮುಗುಳುನಗೆಯಿಂದ ಕೂಡಿದ ಕರುಣಾಪೂರ್ಣವಾದ ದೃಷ್ಟಿಯಿಂದ ನಮ್ಮಂತಹ ಅನಾಥೆಯರ ಮನಸ್ಸಿನ ಸಂತಾಪವನ್ನು ಶಮನಗೊಳಿಸುವುದಕ್ಕಾಗಿಯೇ ಭೂಮಿಯಲ್ಲಿ ಸಂಚರಿಸುತ್ತಿದ್ದೀಯೆ. ॥ ೪೨ ॥

ಶ್ರೀನಾರದಮಹರ್ಷಿಗಳು ಹೇಳುತ್ತಾರೆ - ಎಲೈ ಪ್ರಾಚೀನಬರ್ಹಿನೃಪತಿಯೇ! ಹೀಗೆ ಆ ದಂಪತಿಗಳು ಪರಸ್ಪರ ಒಪ್ಪಂದ ಮಾಡಿಕೊಂಡು ಆ ನಗರಿಯನ್ನು ಪ್ರವೇಶಿಸಿ ನೂರುವರ್ಷಗಳ ಕಾಲ ಅಲ್ಲಿ ಆನಂದವನ್ನು ಅನುಭವಿಸಿದರು. ॥ ೪೩ ॥

ಸಂಗೀತಗಾರರು ಅಲ್ಲಲ್ಲಿ ಆ ರಾಜನ ಕೀರ್ತಿಯನ್ನು ಸುಮಧುರವಾಗಿ ಹಾಡುತ್ತಿದ್ದರು. ಬೇಸಿಗೆಯಕಾಲ ಬಂದಾಗ ಹಲವಾರು ಲಲನೆಯರೊಡನೆ ಕೂಡಿ ಅವನು ನದೀ ಸರೋವರಗಳಲ್ಲಿ ಜಲಕ್ರೀಡೆಯನ್ನಾಡುತ್ತಿದ್ದನು. ॥ ೪೪ ॥ ಆ ನಗರಕ್ಕೆ ಇದ್ದ ಒಂಬತ್ತು ಬಾಗಿಲುಗಳಲ್ಲಿ ಏಳು ನಗರಿಯ ಮೇಲ್ಭಾಗದಲ್ಲಿದ್ದುವು. ಎರಡು ಕೆಳಭಾಗಕ್ಕೆ ಸೇರಿದ್ದವು. ■ ನಗರಕ್ಕೆ ಯಾರೇ ರಾಜನಾಗಿ ಬಂದರೂ ಅವನಿಗೆ ಬೇರೆ-ಬೇರೆ ದೇಶಗಳಿಗೆ ಹೋಗುವುದಕ್ಕಾಗಿ ಆ ಬಾಗಿಲುಗಳು ನಿರ್ಮಿತವಾಗಿದ್ದುವು. ॥ ೪೫ ॥ ರಾಜೇಂದ್ರನೇ! ಇವುಗಳಲ್ಲಿ ಐದು ಬಾಗಿಲುಗಳು ಪೂರ್ವದ ಕಡೆಗೂ, ಒಂದು ದಕ್ಷಿಣದ ಕಡೆಗೂ, ಒಂದು ಉತ್ತರದ ಕಡೆಗೂ, ಎರಡು ಪಶ್ಚಿಮದ

ಪಂಚ ದ್ವಾರಸ್ತು ಪೌರಸ್ತ್ಯಾ ದಕ್ಷಿಣೈಕಾ ತಥೋತ್ತರಾ ।
ಪಶ್ಚಿಮೇ ದ್ವೇ ಅಮೂಷಾಂ ತೇ ನಾಮಾನಿ ನೃಪ ವರ್ಣಯೇ ॥ ೪೬ ॥

ಖದ್ಯೋತಾಽಽವಿರ್ಮುಖೀ ಚ ಪ್ರಾಗ್ದ್ವಾರಾವೇಕತ್ರ ನಿರ್ಮಿತೇ ।
ವಿಭ್ರಾಜಿತಂ ಜನಪದಂ ಯಾತಿ ತಾಭ್ಯಾಂ ದ್ಯುಮತ್ಸಖಃ ॥ ೪೭ ॥

ನಲಿನೀ ನಾಲಿನೀ ಚ ಪ್ರಾಗ್ದ್ವಾರಾವೇಕತ್ರ ನಿರ್ಮಿತೇ ।
ಅವಧೂತಸಖಸ್ತಾಭ್ಯಾಂ ವಿಷಯಂ ಯಾತಿ ಸೌರಭಮ್ ॥ ೪೮ ॥

ಮುಖ್ಯಾ ನಾಮ ಪುರಸ್ತಾದ್ದ್ವಾಸ್ತಯಾಽಽಪಣಬಹೂದನೌ ।
ವಿಷಯೌ ಯಾತಿ ಪುರರಾಡ್ರಸಜ್ಞ ವಿಪಣಾನ್ವಿತಃ ॥ ೪೯ ॥

ಪಿತೃಹೂರ್ನೃಪ ಪುರ್ಯಾ ದ್ವಾರ್ದಕ್ಷಿಣೇನ ಪುರಂಜನಃ ।
ರಾಷ್ಟ್ರಂ ದಕ್ಷಿಣಪಂಚಾಲಂ ಯಾತಿ ಶ್ರುತಧರಾನ್ವಿತಃ ॥ ೫೦ ॥

ದೇವಹೂರ್ನಾಮ ಪುರ್ಯಾ ದ್ವಾ ಉತ್ತರೇಣ ಪುರಂಜನಃ ।
ರಾಷ್ಟ್ರಮುತ್ತರಪಂಚಾಲಂ ಯಾತಿ ಶ್ರುತಧರಾನ್ವಿತಃ ॥ ೫೧ ॥

ಆಸುರೀ ನಾಮ ಪಶ್ಚಾದ್ದ್ವಾಸ್ತಯಾ ಯಾತಿ ಪುರಂಜನಃ ।
ಗ್ರಾಮಕಂ ನಾಮ ವಿಷಯಂ ದುರ್ಮದೇನ ಸಮನ್ವಿತಃ ॥ ೫೨ ॥

ನಿರ್ಋತಿರ್ನಾಮ ಪಶ್ಚಾದ್ದ್ವಾಸ್ತಯಾ ಯಾತಿ ಪುರಂಜನಃ ।
ವೈಶಸಂ ನಾಮ ವಿಷಯಂ ಲುಬ್ಧಕೇನ ಸಮನ್ವಿತಃ ॥ ೫೩ ॥

ಅಂಧಾವಮೀಷಾಂ ಪೌರಾಣಾಂ ನಿರ್ವಾಕ್ಪೇಶಸ್ಕೃತಾವುಭೌ ।
ಅಕ್ಷಣ್ವತಾಮಧಿಪತಿಸ್ತಾಭ್ಯಾಂ ಯಾತಿ ಕರೋತಿ ಚ ॥ ೫೪ ॥

ಸ ಯರ್ಹ್ಯಂತಃ ಪುರಗತೋ
ವಿಷೂಚೀನಸಮನ್ವಿತಃ ।
ಮೋಹಂ ಪ್ರಸಾದಂ ಹರ್ಷಂ ವಾ
ಯಾತಿ ಜಾಯಾತ್ಮಜೋದ್ಭವಮ್ ॥ ೫೫ ॥

ಏವಂ ಕರ್ಮಸು ಸಂಸಕ್ತಃ ಕಾಮಾತ್ಮಾ ವಂಚಿತೋಽಬುಧಃ ।
ಮಹಿಷೀ ಯದ್ಯದೀಹೇತ ತತ್ತದೇವಾನ್ವವರ್ತತ ॥ ೫೬ ॥

ಕ್ವಚಿತ್ಪಿಬಂತ್ಯಾಂ ಪಿಬತಿ ಮದಿರಾಂ ಮದವಿಹ್ವಲಃ ।
ಅಶ್ನಂತ್ಯಾಂ ಕ್ವಚಿದಶ್ನಾತಿ ಜಕ್ಷತ್ಯಾಂ ಸಹ ಜಕ್ಷತಿ ॥ ೫೭ ॥

ಕಡೆಗೂ ಇದ್ದವು. ಅವುಗಳ ಹೆಸರುಗಳನ್ನು ಹೇಳುವೆನು ಕೇಳು. ॥ ೪೬ ॥ ಪೂರ್ವದ ಕಡೆಗಿದ್ದ ಖದ್ಯೋತಾ ಮತ್ತು ಆವಿರ್ಮುಖೀ ಎಂಬ ಎರಡು ದ್ವಾರಗಳು ಒಂದೇ ಕಡೆ ನಿರ್ಮಿತವಾಗಿದ್ದವು. ಇವುಗಳ ಮೂಲಕ ಪುರಂಜನನು ತನ್ನ ಮಿತ್ರನಾದ ದ್ಯುಮಂತ ನೊಡನೆ ವಿಭ್ರಾಜಿತವೆಂಬ ದೇಶಕ್ಕೆ ಹೋಗುತ್ತಿದ್ದನು. ॥ ೪೭ ॥ ಹಾಗೆಯೇ ಪೂರ್ವಕ್ಕಿದ್ದ ನಲಿನೀ ಮತ್ತು ನಾಲಿನೀ ಎಂಬ ಇನ್ನೆರಡು ದ್ವಾರಗಳೂ ಕೂಡ ಒಂದೇ ಕಡೆ ನಿರ್ಮಿತವಾಗಿದ್ದವು. ಅವುಗಳ ಮೂಲಕ ರಾಜನು ಅವಧೂತ ಎಂಬಾತನೊಡನೆ ಸೌರಭದೇಶಕ್ಕೆ ಹೋಗುತ್ತಿದ್ದನು. ॥ ೪೮ ॥ ಪೂರ್ವದಿಕ್ಕಿಗಿದ್ದ ಮುಖ್ಯಾ ಎಂಬ ಐದನೆಯ ದ್ವಾರದ ಮೂಲಕ ರಾಜನು ರಸಜ್ಞ ಮತ್ತು ವಿಪಣ ಎಂಬುವರೊಡನೆ ಕ್ರಮವಾಗಿ ಬಹೂದನ ಹಾಗೂ ಆಪಣ ಎಂಬ ದೇಶಗಳಿಗೆ ಹೋಗುತ್ತಿದ್ದನು. ॥ ೪೯ ॥ ನಗರಿಯ ದಕ್ಷಿಣಕ್ಕಿದ್ದ ಪಿತೃಹೂ ಎಂಬ ದ್ವಾರದಿಂದ ಅವನು ಶ್ರುತಧರ ಎಂಬುವನೊಡನೆ ದಕ್ಷಿಣಪಾಂಚಾಲ ದೇಶಕ್ಕೆ ಹೋಗುತ್ತಿದ್ದನು. ॥ ೫೦ ॥ ಹಾಗೆಯೇ ಉತ್ತರಕ್ಕಿದ್ದ ದೇವಹೂ ಎಂಬ ಬಾಗಿಲಿನಿಂದ ರಾಜನು ಶ್ರುತಧರ ನೊಡನೆ ಉತ್ತರಪಾಂಚಾಲ ದೇಶಕ್ಕೆ ಹೋಗುತ್ತಿದ್ದನು. ॥ ೫೧॥ ಪಶ್ಚಿಮ ದಿಕ್ಕಿನಲ್ಲಿದ್ದ ಆಸುರೀ ಎಂಬ ದ್ವಾರದ ಮೂಲಕ ಅವನು ದುರ್ಮದನೊಂದಿಗೆ ಗ್ರಾಮಕವೆಂಬ ದೇಶಕ್ಕೆ ಹೋಗುತ್ತಿದ್ದನು. ॥ ೫೨ ॥ ಹಾಗೆಯೇ ನಿರ್ಋತಿ ಎಂಬ ಹೆಸರಿನ ಮತ್ತೊಂದು ಪಶ್ಚಿಮದ ಬಾಗಿಲಿನಿಂದ ಲುಬ್ಧಕನೆಂಬುವನೊಡನೆ ಅವನು ವೈಶಸ ವೆಂಬ ದೇಶಕ್ಕೆ ಹೋಗುತ್ತಿದ್ದನು. ॥ ೫೩ ॥ ■ ನಗರದ ನಿವಾಸಿ ಗಳಲ್ಲಿ ನಿರ್ವಾಕ್ ಮತ್ತು ಪೇಶಸ್ಕೃತ್ ಎಂಬ ಇಬ್ಬರು ಪೌರರು ಕುರುಡರಾಗಿದ್ದರು. ಪುರಂಜನರಾಜನು ಕಣ್ಣುಗಳುಳ್ಳ ಪೌರರಿಗೆ ಅಧಿಪತಿಯಾಗಿದ್ದರೂ ಆ ಇಬ್ಬರು ಕುರುಡರ ಸಹಾಯದಿಂದಲೇ ಅಲ್ಲಲ್ಲಿಗೆ ಹೋಗಿ ಎಲ್ಲ ಬಗೆಯ ಕಾರ್ಯಗಳನ್ನು ಮಾಡು ತ್ತಿದ್ದನು. ॥ ೫೪ ॥

ರಾಜನು ಎಂದಾದರೂ ತನ್ನ ಪ್ರಧಾನ ಸೇವಕ ವಿಷೂಚೀನ ನೊಡನೆ ಅಂತಃಪುರಕ್ಕೆ ಹೋದಾಗ ಅವನಿಗೆ ಹೆಂಡತಿ, ಮಕ್ಕಳ ಕಾರಣದಿಂದ ಉಂಟಾಗುವ ಮೋಹ, ಪ್ರಸನ್ನತೆ, ಹರ್ಷ ಮುಂತಾದ ವಿಕಾರಗಳ ಅನುಭವವಾಗುತ್ತಿತ್ತು. ॥ ೫೫ ॥ ಅವನ ಚಿತ್ತವು ಕೆಲವೊಮ್ಮೆ ಪ್ರಸನ್ನವಾದರೆ, ಕೆಲವು ವೇಳೆ ಸಂತೋಷದಿಂದ ಹಿಗ್ಗು ತ್ತಿತ್ತು. ಹೀಗೆ ಬಗೆ-ಬಗೆಯ ಕರ್ಮಗಳ ಬಲೆಯಲ್ಲಿ ಸಿಕ್ಕಿಹಾಕಿ ಕೊಂಡು ಕಾಮಪರವಶನಾಗಿ ರಾಜನು ಮೂಢನಾಗಿ ದೈವದ ವಂಚನೆಗೊಳಗಾಗಿದ್ದನು. ರಮಣಿಯ ಮೋಹಕ್ಕೆ ತುತ್ತಾಗಿ ಅವಳು ಏನೇನು ಮಾಡುತ್ತಿದ್ದಳೋ ಅವನ್ನೇ ಇವನೂ ಮಾಡತೊಡಗುತ್ತಿ ದ್ದನು. ॥ ೫೬ ॥ ಆಕೆಯು ಮದ್ಯಪಾನ ಮಾಡಿದಾಗ ಅವನೂ ಮದ್ಯವನ್ನು ಕುಡಿದು ಮತ್ತೇರುತ್ತಿದ್ದನು. ಅವಳು ಊಟಮಾಡಿ ದಾಗ ತಾನೂ ಊಟಮಾಡುತ್ತಿದ್ದನು. ಆಕೆಯು ಏನನ್ನಾದರೂ ಅಗಿಯುತ್ತಿದ್ದರೆ ತಾನೂ ಅಗಿಯುತ್ತಿದ್ದನು. ॥ ೫೭ ॥

ಕ್ವಚಿದ್ಗಾಯತಿ ಗಾಯಂತ್ಯಾಂ ರುದತ್ಯಾಂ ರುದತಿ ಕ್ವಚಿತ್ ।
ಕ್ವಚಿದ್ಧಸಂತ್ಯಾಂ ಹಸತಿ ಜಲ್ಪಂತ್ಯಾಮನು ಜಲ್ಪತಿ ॥ ೫೮ ॥

ಕ್ವಚಿದ್ಧಾವತಿ ಧಾವಂತ್ಯಾಂ ತಿಷ್ಠಂತ್ಯಾಮನು ತಿಷ್ಠತಿ ।
ಅನು ಶೇತೇ ಶಯಾನಾಯಾಮನ್ವಾಸ್ತೇ ಕ್ವಚಿದಾಸತೀಮ್ ॥ ೫೯ ॥

ಕ್ವಚಿಚ್ಛೃಣೋತಿ ಶೃಣ್ವಂತ್ಯಾಂ ಪಶ್ಯಂತ್ಯಾಮನು ಪಶ್ಯತಿ ।
ಕ್ವಚಿಜ್ಜಿಘ್ರತಿ ಜಿಘ್ರಂತ್ಯಾಂ ಸ್ಪೃಶಂತ್ಯಾಂ ಸ್ಪೃಶತಿ ಕ್ವಚಿತ್ ॥ ೬೦ ॥

ಕ್ವಚಿಚ್ಚ ಶೋಚತೀಂ ಜಾಯಾಮನುಶೋಚತಿ ದೀನವತ್ ।
ಅನು ಹೃಷ್ಯತಿ ಹೃಷ್ಯಂತ್ಯಾಂ ಮುದಿತಾಮನು ಮೋದತೇ ॥ ೬೧ ॥

ವಿಪ್ರಲಬ್ಧೋ ಮಹಿಷ್ಯೈವಂ ಸರ್ವಪ್ರಕೃತಿವಂಚಿತಃ ।
ನೇಚ್ಛನ್ನನುಕರೋತ್ಯಜ್ಞಃ ಕ್ಲೈಬ್ಯಾತ್ಕ್ರೀಡಾಮೃಗೋ ಯಥಾ ॥ ೬೨ ॥

ಹೀಗೆಯೇ ಆಕೆಯು ಹಾಡಿದರೆ ತಾನೂ ಹಾಡುವನು. ಅತ್ತಾಗ ಅಳುವನು. ನಗುವಾಗ ನಗುತ್ತಿದ್ದನು. ಅವಳು ಮಾತನಾಡಿದರೆ ಇವನೂ ಮಾತನಾಡುವನು. ॥ ೫೮ ॥ ಅವಳು ಓಡಿದರೆ ತಾನೂ ಓಡುವನು. ನಿಂತರೆ ನಿಲ್ಲುವನು. ಮಲಗಿದರೆ ಅವಳೊಡನೆ ತಾನೂ ಮಲಗುತ್ತಿದ್ದನು. ಆಕೆಯು ಕುಳಿತುಕೊಂಡರೆ ತಾನೂ ಕುಳಿತುಕೊಳ್ಳುವನು. ॥ ೫೯ ॥ ಎಂದಾದರೂ ಅವಳು ಕೇಳತೊಡಗಿದರೆ ತಾನೂ ಕೇಳುತ್ತಿದ್ದನು. ನೋಡಿದರೆ ನೋಡುತ್ತಿದ್ದನು. ಯಾವುದನ್ನಾದರೂ ಮೂಸಿದರೆ ಮೂಸುತ್ತಿದ್ದನು. ಏನನ್ನಾದರೂ ಮುಟ್ಟಿದರೆ ಮುಟ್ಟುತ್ತಿದ್ದನು. ॥ ೬೦ ॥ ಎಂದಾದರೂ ಅವನ ಪ್ರಿಯೆಯು ಶೋಕಾಕುಲೆಯಾದರೆ ತಾನೂ ಅತ್ಯಂತ ದೀನನಂತೆ ವ್ಯಾಕುಲನಾಗುತ್ತಿದ್ದನು. ಆಕೆಯು ಪ್ರಸನ್ನಳಾದರೆ ತಾನೂ ಸಂತೋಷಗೊಳ್ಳುವನು. ಅವಳು ಆನಂದಿತಳಾದರೆ ಇವನೂ ಆನಂದಿತನಾಗಿ ಹೋಗುತ್ತಿದ್ದನು. ॥ ೬೧ ॥ ಹೀಗೆ ಪುರಂಜನರಾಜನು ತನ್ನ ಸುಂದರರಾಣಿಯಿಂದ ವಂಚನೆಗೊಳಗಾದನು. ಇಡೀ ಪ್ರಕೃತಿವರ್ಗ-ಪರಿಕರಗಳು ಅವನನ್ನು ವಂಚಿಸಿದವು. ಆ ಮೂರ್ಖನು ವಿವಶನಾಗಿ ಇಚ್ಛೆ ಇಲ್ಲದಿದ್ದರೂ, ಆಟದ ಕೋತಿಯು ಯಜಮಾನನ ಸಂಕೇತದಂತೆ ಕುಣಿಯುತ್ತದೆ. ಹಾಗೆಯೇ ಪ್ರಿಯೆಯ ಕೈಗೊಂಬೆಯಾಗಿ ಅವಳನ್ನೇ ಅನುಕರಣೆ ಮಾಡುತ್ತಿದ್ದನು. ॥ ೬೨ ॥

ಇಪ್ಪತ್ತೈದನೆಯ ಅಧ್ಯಾಯವು ಮುಗಿಯಿತು. ॥ ೨೫ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಚತುರ್ಥಸ್ಕಂಧೇ ಪುರಂಜನೋಪಾಖ್ಯಾನೇ ಪಂಚವಿಂಶೋಽಧ್ಯಾಯಃ ॥ ೨೫ ॥

ಇಪ್ಪತ್ತಾರನೆಯ ಅಧ್ಯಾಯ

ಪುರಂಜನನ ಬೇಟೆಯ ವರ್ಣನೆ – ರಾಣಿಯ ಪ್ರಣಯಕೋಪ

ನಾರದ ಉವಾಚ

ಸ ಏಕದಾ ಮಹೇಷ್ವಾಸೋ ರಥಂ ಪಂಚಾಶ್ವಮಾಶುಗಮ್ ।
ದ್ವೀಷಂ ದ್ವಿಚಕ್ರಮೇಕಾಕ್ಷಂ ತ್ರಿವೇಣುಂ ಪಂಚಬಂಧುರಮ್ ॥ ೧ ॥

ಏಕರಶ್ಮ್ಯೇಕದಮನಮೇಕನೀಡಂ ದ್ವಿಕೂಬರಮ್ ।
ಪಂಚಪ್ರಹರಣಂ ಸಪ್ತವರೂಥಂ ಪಂಚವಿಕ್ರಮಮ್ ॥ ೨ ॥

ಹೈಮೋಪಸ್ಕರಮಾರುಹ್ಯ ಸ್ವರ್ಣವರ್ಮಾಕ್ಷಯೇಷುಧಿಃ ।
ಏಕಾದಶಚಮೂನಾಥಃ ಪಂಚಪ್ರಸ್ಥಮಗಾದ್ವನಮ್ ॥ ೩ ॥

ಶ್ರೀನಾರದರು ಹೇಳುತ್ತಾರೆ – ಎಲೈ ರಾಜನೇ! ಒಮ್ಮೆ ಮಹಾಧನುರ್ಧರನಾದ ಪುರಂಜನರಾಜನು ತನ್ನ ಧನುಸ್ಸನ್ನು ಎತ್ತಿಕೊಂಡು, ಚಿನ್ನದ ಕವಚವನ್ನು ತೊಟ್ಟು, ಅಕ್ಷಯಬಾಣಗಳಿರುವ ಬತ್ತಳಿಕೆಯನ್ನು ಧರಿಸಿ, ತನ್ನ ಹನ್ನೊಂದನೆಯ ಸೇನಾಪತಿಯೊಡನೆ ಭಂಗಾರದ ಒಂದು ರಥದಲ್ಲಿ ಕುಳಿತು ಬೇಟೆಯಾಡಲು ಪಂಚಪ್ರಸ್ಥವೆಂಬ ಕಾಡಿಗೆ ಹೊರಟನು. ಆ ರಥವು ಐದು ಕುದುರೆಗಳಿಂದಲೂ, ಎರಡು ಪಕ್ಕಗಳಲ್ಲಿರುವ ಬೊಂಬುಗಳು, ಎರಡು ಗಾಲಿಗಳಿಂದಲೂ, ಒಂದು ಅಚ್ಚುಮರದಿಂದಲೂ, ಮೂರು ಧ್ವಜಗಳಿಂದಲೂ, ಐದು ಕಟ್ಟುಗಳಿಂದಲೂ, ಒಂದೇ ಹಗ್ಗವನ್ನು ಹಿಡಿದುಕೊಂಡಿದ್ದ ಒಬ್ಬ ಸಾರಥಿಯಿಂದಲೂ, ಒಂದು ಸಾರಥಿಯ ಸ್ಥಾನ – ಎರಡು ಯುಗಸ್ಥಾನಗಳಿಂದಲೂ, ಏಳು ಆವರಣಗಳಿಂದಲೂ, ಐದು ಆಯುಧಗಳಿಂದಲೂ, ಐದು ಪ್ರಕಾರದ ಗತಿಗಳಿಂದಲೂ ಕೂಡಿ ಅತ್ಯಂತ ಶೋಭಾಯಮಾನವಾಗಿದ್ದಿತು. ॥ ೧-೩ ॥

ಚಚಾರ ಮೃಗಯಾಂ ತತ್ರ ದೃಪ್ತ ಆತ್ತೇಷುಕಾರ್ಮುಕಃ ।
ವಿಹಾಯ ಜಾಯಾಮತದರ್ಹಾಂ ಮೃಗವ್ಯಸನಲಾಲಸಃ ॥ ೪ ॥

ಆಸುರೀಂ ವೃತ್ತಿಮಾಶ್ರಿತ್ಯ ಘೋರಾತ್ಮಾ ನಿರನುಗ್ರಹಃ ।
ನ್ಯಹನನ್ನಿಶಿತೈರ್ಬಾಣೈರ್ವನೇಷು ವನಗೋಚರಾನ್ ॥ ೫ ॥

ತೀರ್ಥೇಷು ಪ್ರತಿದೃಷ್ಟೇಷು ರಾಜಾ ಮೇಧ್ಯಾನ್ಪಶೂನ್ವನೇ ।
ಯಾವದರ್ಥಮಲಂ ಲುಬ್ಧೋ ಹನ್ಯಾದಿತಿ ನಿಯಮ್ಯತೇ ॥ ೬ ॥

ಯ ಏವಂ ಕರ್ಮ ನಿಯತಂ ವಿದ್ವಾನ್ಕುರ್ವೀತ ಮಾನವಃ ।
ಕರ್ಮಣಾ ತೇನ ರಾಜೇಂದ್ರ ಜ್ಞಾನೇನ ನ ಸ ಲಿಪ್ಯತೇ ॥ ೭ ॥

ಅನ್ಯಥಾ ಕರ್ಮ ಕುರ್ವಾಣೋ ಮಾನಾರೂಢೋ ನಿಬಧ್ಯತೇ ।
ಗುಣಪ್ರವಾಹಪತಿತೋ ನಷ್ಟಪ್ರಜ್ಞೋ ವ್ರಜತ್ಯಧಃ ॥ ೮ ॥

ತತ್ರ ನಿರ್ಭಿನ್ನಗಾತ್ರಾಣಾಂ ಚಿತ್ರವಾಜೈಃ ಶಿಲೀಮುಖೈಃ ।
ವಿಪ್ಲವೋಽಭೂದ್ದುಃಖಿತಾನಾಂ ದುಃಸಹಃ ಕರುಣಾತ್ಮನಾಮ್ ॥ ೯ ॥

ಶಶಾನ್ವರಾಹಾನ್ಮಹಿಷಾನ್ಗವಯಾನ್ರುರುಶಲ್ಯಕಾನ್ ।
ಮೇಧ್ಯಾನನ್ಯಾಂಶ್ಚ ವಿವಿಧಾನ್ವಿನಿಘ್ನನ್ ಶ್ರಮಮಧ್ಯಗಾತ್ ॥ ೧೦ ॥

ತತಃ ಕ್ಷುತ್ತೃಟ್ಪರಿಶ್ರಾಂತೋ ನಿವೃತ್ತೋ ಗೃಹಮೇಯಿವಾನ್ ।
ಕೃತಸ್ನಾನೋಚಿತಾಹಾರಃ ಸಂವಿವೇಶ ಗತಕ್ಲಮಃ ॥ ೧೧ ॥

ಆತ್ಮಾನಮರ್ಹಯಾಂಚಕ್ರೇ ಧೂಪಾಲೇಪಸ್ರಗಾದಿಭಿಃ ।
ಸಾಧ್ವಲಂಕೃತಸರ್ವಾಂಗೋ ಮಹಿಷ್ಯಾಮಾದಧೇ ಮನಃ ॥ ೧೨ ॥

ತೃಪ್ತೋ ಹೃಷ್ಟಃ ಸುದೃಪ್ತಶ್ಚ ಕಂದರ್ಪಾಕೃಷ್ಟಮಾನಸಃ ।
ನ ವ್ಯಚಷ್ಟ ವರಾರೋಹಾಂ ಗೃಹಿಣೀಂ ಗೃಹಮೇಧಿನೀಮ್ ॥ ೧೩ ॥

ಅಂತಃಪುರಸ್ತ್ರಿಯೋಽಪೃಚ್ಛದ್ವಿಮನಾ ಇವ ವೇದಿಷತ್ ।
ಅಪಿ ವಃ ಕುಶಲಂ ರಾಮಾಃ ಸೇಶ್ವರೀಣಾಂ ಯಥಾ ಪುರಾ ॥ ೧೪ ॥

ರಾಜನಿಗೆ ತನ್ನ ಪ್ರಿಯತಮೆಯನ್ನು ಕ್ಷಣಮಾತ್ರವೂ ಬಿಟ್ಟಿರುವುದು ಕಷ್ಟವಾಗಿದ್ದರೂ ಅಂದು ಅವನಿಗೆ ಬೇಟೆಯ ಮದವು ಏರಿದ್ದರಿಂದ ಆಕೆಯ ಪರಿವೆಯಿಲ್ಲದೆ ಗರ್ವದಿಂದ ಕಾಡಿಗೆ ಬಂದು ಧನುರ್ಬಾಣಗಳನ್ನು ಎತ್ತಿಕೊಂಡು ಬೇಟೆಯಾಡತೊಡಗಿದನು. ॥ ೪ ॥ ಆಗ ಆಸುರೀವೃತ್ತಿಯು ಅವನನ್ನು ಆವರಿಸಿದ್ದರಿಂದ ಕಠೋರ ಚಿತ್ತದಿಂದ, ನಿರ್ದಯನಾಗಿ ಅವನು ತನ್ನ ತೀಕ್ಷ್ಣವಾದ ಬಾಣಗಳಿಂದ ಅರಣ್ಯದ ಮೃಗಗಳನ್ನು ಕೊಂದುಹಾಕಿದನು. ದೋಷರಹಿತವಾಗಿದ್ದ ಸಾಧುಮೃಗಗಳನ್ನೂ ಸಂಹರಿಸಿದನು. ॥ ೫ ॥ ಮೋಹದಲ್ಲಿ ಅತ್ಯಂತ ಆಸಕ್ತಿ ಉಳ್ಳವನಾದ ರಾಜನು ಕೇವಲ ಶಾಸ್ತ್ರದಲ್ಲಿ ಹೇಳಿದ ಕರ್ಮಗಳಿಗಾಗಿಯೇ ಕಾಡಿಗೆ ಹೋಗಿ ಅವಶ್ಯಕತೆಗೆ ತಕ್ಕಂತೆ ನಿಷಿದ್ಧವಲ್ಲದ ಪಶುಗಳನ್ನು ಮಾತ್ರ ವಧಿಸಬೇಕು. ವ್ಯರ್ಥವಾಗಿ ಪಶುಹಿಂಸೆಯನ್ನು ಮಾಡಬಾರದು. ಈ ರೀತಿಯ ಉಚ್ಛೃಂಖಲ ಪ್ರವೃತ್ತಿಯನ್ನು ಶಾಸ್ತ್ರವು ನಿಯಂತ್ರಿಸುತ್ತದೆ. ॥ ೬ ॥ ರಾಜನೇ! ಹೀಗೆ ಶಾಸ್ತ್ರವು ನಿಯತಮಾಡಿರುವ ಕರ್ಮಗಳನ್ನು ಆಚರಿಸುವ ವಿದ್ವಾನ್ ಮನುಷ್ಯನಿಗೆ ಆ ಕರ್ಮಾನುಷ್ಠಾನದಿಂದ ದೊರೆತ ಜ್ಞಾನದಿಂದ ಕರ್ಮದ ಲೇಪವುಂಟಾಗುವುದಿಲ್ಲ. ॥ ೭ ॥ ಇಲ್ಲದಿದ್ದರೆ ಮನಸ್ಸಿಗೆ ಬಂದಂತೆ ಕರ್ಮಮಾಡುವುದರಿಂದ ಮನುಷ್ಯನು ಅಭಿಮಾನಕ್ಕೆ ವಶನಾಗಿ ಕರ್ಮಗಳಲ್ಲಿ ಬಂಧಿತನಾಗುತ್ತಾನೆ ಹಾಗೂ ಗುಣಪ್ರವಾಹರೂಪವಾದ ಸಂಸಾರಚಕ್ರದಲ್ಲಿ ಸಿಲುಕಿ, ವಿವೇಕಬುದ್ಧಿಯು ನಾಶವಾದ್ದರಿಂದ ಅವನು ಅಧಮ ಯೋನಿಗಳಲ್ಲಿ ಹುಟ್ಟುತ್ತಾನೆ. ॥ ೮ ॥

ಪುರಂಜನನ ಬಗೆ-ಬಗೆಯ ಗರಿಗಳುಳ್ಳ ಬಾಣಗಳಿಂದ ಕತ್ತರಿಸಲ್ಪಟ್ಟು ಅನೇಕ ಜೀವರುಗಳು ಅತೀವ ಕಷ್ಟದಿಂದ ಪ್ರಾಣತ್ಯಾಗ ಮಾಡತೊಡಗಿದವು. ಅವನ ಆ ನಿರ್ದಯವಾದ ಪ್ರಾಣಿಸಂಹಾರವನ್ನು ನೋಡಿ ಎಲ್ಲ ದಯಾಳುಗಳು ಬಹಳ ದುಃಖಿತರಾದರು. ಅವರು ಇದನ್ನು ಸಹಿಸದಾದರು. ॥ ೯ ॥ ಹೀಗೆ ಅಲ್ಲಿ ಮೊಲಗಳು, ಹಂದಿಗಳೂ, ಕಾಡುಕೋಣಗಳೂ, ಕಾಡುಹಸುಗಳೂ, ಕೃಷ್ಣಮೃಗಗಳೂ, ಜಿಂಕೆಗಳೂ ಹಾಗೂ ಇನ್ನೂ ಅನೇಕಜಾತಿಯ ನೂರಾರು ನಿರ್ದೋಷ ಮೃಗಗಳನ್ನು ಕೊಂದುದರಿಂದ ಪುರಂಜನರಾಜನು ತುಂಬಾ ಆಯಾಸಗೊಂಡನು. ॥ ೧೦ ॥ ಆಗ ಹಸಿವು-ಬಾಯಾರಿಕೆಯಿಂದ ಬಳಲಿದ ಅವನು ವನದಿಂದ ಮರಳಿ ಅರಮನೆಗೆ ಬಂದಿದ್ದನು. ಅಲ್ಲಿ ಅವನು ಯಥಾ-ಯೋಗ್ಯರೀತಿಯಿಂದ ಸ್ನಾನ-ಭೋಜನಾದಿಗಳನ್ನು ಮಾಡಿ, ಕೊಂಚ ವಿಶ್ರಾಂತಿಪಡೆದು ಆಯಾಸವನ್ನು ಪರಿಹರಿಸಿಕೊಂಡನು. ॥ ೧೧ ॥ ಮತ್ತೆ ಗಂಧ-ಚಂದನ, ಮಾಲೆ ಮುಂತಾದವುಗಳಿಂದ ಸುಸಜ್ಜಿತನಾಗಿ ಅಂಗಾಂಗಗಳಲ್ಲೆಲ್ಲ ಸುಂದರವಾದ ಆಭೂಷಣಗಳನ್ನು ತೊಟ್ಟುಕೊಂಡನು. ಆಗ ಅವನಿಗೆ ತನ್ನ ಪ್ರಿಯೆಯ ನೆನಪಾಯಿತು. ॥ ೧೨ ॥ ಅವನು ಭೋಜನಾದಿಗಳಿಂದ ತೃಪ್ತನಾಗಿ, ಸಂತೋಷಭರಿತನಾಗಿ ಮದವೇರಿ ಕಾಮಪೀಡಿತನಾಗಿ, ತನ್ನ ಸುಂದರಿಯಾದ ಭಾರ್ಯೆಯನ್ನು ಹುಡುಕತೊಡಗಿದನು. ಆದರೆ ಅವನಿಗೆ ಆಕೆಯು ಎಲ್ಲಿಯೂ ಕಂಡುಬಂದಿಲ್ಲ. ॥ ೧೩ ॥

ಪ್ರಾಚೀನಬರ್ಹಿರಾಜನೇ! ಆಗ ಅವನು ಮನಸ್ಸಿನಲ್ಲಿ ಬೇಸರಗೊಂಡು ಅಂತಃಪುರದ ಸ್ತ್ರೀಯರಲ್ಲಿ ಕೇಳಿದನು – 'ಸುಂದರಿಯರೇ! ನಿಮ್ಮ ಒಡತಿಯೊಂದಿಗೆ ನೀವೆಲ್ಲರೂ ಮೊದಲಿನಂತೆ ಕುಶಲರಾಗಿದ್ದೀರಿ ತಾನೇ? ॥ ೧೪ ॥

ನ ತಥೈತರ್ಹಿ ರೋಚಂತೇ ಗೃಹೇಷು ಗೃಹಸಂಪದಃ ।
ಯದಿ ನ ಸ್ಯಾದ್ಗೃಹೇ ಮಾತಾ ಪತ್ನೀ ವಾ ಪತಿದೇವತಾ ।
ವ್ಯಂಗೇ ರಥ ಇವ ಪ್ರಾಜ್ಞಃ ಕೋ ನಾಮಾಸೀತ ದೀನವತ್ ॥ ೧೫ ॥

ಕ್ವ ವರ್ತತೇ ಸಾ ಲಲನಾ ಮಜ್ಜಂತಂ ವ್ಯಸನಾರ್ಣವೇ ।
ಯಾ ಮಾಮುದ್ಧರತೇ ಪ್ರಜ್ಞಾಂ ದೀಪಯಂತೀ ಪದೇ ಪದೇ ॥ ೧೬ ॥

ರಾಮಾ ಊಚುಃ

ನರನಾಥ ನ ಜಾನೀಮಸ್ತ್ವತ್ಪ್ರಿಯಾ ಯದ್ವ್ಯವಸ್ಯತಿ ।
ಭೂತಲೇ ನಿರವಸ್ತಾರೇ ಶಯಾನಾಂ ಪಶ್ಯ ಶತ್ರುಹನ್ ॥ ೧೭ ॥

ನಾರದ ಉವಾಚ

ಪುರಂಜನಃ ಸ್ವಮಹಿಷೀಂ ನಿರೀಕ್ಷ್ಯಾವಧುತಾಂ ಭುವಿ ।
ತತ್ಸಂಗೋನ್ಮಥಿತಜ್ಞಾನೋ ವೈಕ್ಲವ್ಯಂ ಪರಮಂ ಯಯೌ ॥ ೧೮ ॥

ಸಾಂತ್ವಯನ್ ಶ್ಲಕ್ಷ್ಣಯಾ ವಾಚಾ ಹೃದಯೇನ ವಿದೂಯತಾ ।
ಪ್ರೇಯಸ್ಯಾಃ ಸ್ನೇಹಸಂರಂಭಲಿಂಗಮಾತ್ಮನಿ ನಾಭ್ಯಗಾತ್ ॥ ೧೯ ॥

ಅನುನಿನ್ಯೇಽಥ ಶನಕೈರ್ವೀರೋಽನುನಯಕೋವಿದಃ ।
ಪಸ್ಪರ್ಶ ಪಾದಯುಗಲಮಾಹ ಚೋತ್ಸಂಗ ಲಾಲಿತಾಮ್ ॥ ೨೦ ॥

ಪುರಂಜನ ಉವಾಚ

ನೂನಂ ತ್ವಕೃತಪುಣ್ಯಾಸ್ತೇ ಭೃತ್ಯಾ ಯೇಷ್ವೀಶ್ವರಾಃ ಶುಭೇ ।
ಕೃತಾಗಸ್ಸ್ವಾತ್ಮಸಾತ್ಕೃತ್ವಾ ಶಿಕ್ಷಾದಂಡಂ ನ ಯುಂಜತೇ ॥ ೨೧ ॥

ಪರಮೋಽನುಗ್ರಹೋ ದಂಡೋ ಭೃತ್ಯೇಷು ಪ್ರಭುಣಾರ್ಪಿತಃ ।
ಬಾಲೋ ನ ವೇದ ತತ್ತನ್ವಿ ಬಂಧುಕೃತ್ಯಮಮರ್ಷಣಃ ॥ ೨೨ ॥

ಸಾ ತ್ವಂ ಮುಖಂ ಸುದತಿ ಸುಭ್ರ್ವನುರಾಗಭಾರ-
ವ್ರೀಡಾವಿಲಂಬವಿಲಸದ್ಧಸಿತಾವಲೋಕಮ್ ।
ನೀಲಾಲಕಾಲಿಭಿರುಪಸ್ಕೃತಮುನ್ನಸಂ ನಃ
ಸ್ವಾನಾಂ ಪ್ರದರ್ಶಯ ಮನಸ್ವಿನಿ ವಲ್ಗುವಾಕ್ಯಮ್ ॥ ೨೩ ॥

ಇಂದು ಈ ಮನೆಯ ಸಂಪತ್ತು ಹಿಂದಿನಂತೆ ಸುಂದರವಾಗಿ ಕಾಣುತ್ತಿಲ್ಲವಲ್ಲ! ಮನೆಯಲ್ಲಿ ತಾಯಿಯಾಗಲೀ ಅಥವಾ ಪತಿನಿಷ್ಠೆಯಾದ ಹೆಂಡತಿಯಾಗಲೀ ಇಲ್ಲದಿದ್ದಾಗ ಆ ಮನೆಯು ಚಕ್ರವಿಲ್ಲದ ರಥದಂತೆ ಆಗಿಬಿಡುವುದು. ಅಂತಹ ಮನೆಯಲ್ಲಿ ಯಾವ ಬುದ್ಧಿವಂತನು ದೀನಜನರಂತೆ ವಾಸಿಸಲು ಇಷ್ಟಪಡುವನು ? ॥ ೧೫ ॥ ಆದ್ದರಿಂದ ನಾನು, ದುಃಖಸಮುದ್ರದಲ್ಲಿ ಮುಳುಗಿದಾಗಲೆಲ್ಲ ನನ್ನ ವಿವೇಕಬುದ್ಧಿಯನ್ನು ಹೆಜ್ಜೆ-ಹೆಜ್ಜೆಗೆ ಎಚ್ಚರಗೊಳಿಸುತ್ತಾ, ಆ ಸಂಕಟದಿಂದ ಉದ್ಧರಿಸುವ ಸುಂದರಿಯಾದ ಆ ಪ್ರಿಯತಮೆಯು ಎಲ್ಲಿದ್ದಾಳೆ ?' ಎಂದು ಪ್ರಶ್ನಿಸಿದನು. ॥ ೧೬ ॥

ಸ್ತ್ರೀಯರೆಂದರು – ನರೇಂದ್ರನೇ ! ನಿಮ್ಮ ಆ ಇನಿಯಳು ಇಂದು ಏನು ಮಾಡಲು ನಿಶ್ಚಯಿಸಿರುವಳು ಎಂಬುದು ನಮಗೆ ತಿಳಿಯದು. ಶತ್ರುಸಂಹಾರಕನೇ ! ನೋಡು, ಅವಳು ಹಾಸಿಗೆಯಿಲ್ಲದೆ ಬರಿ ನೆಲದಮೇಲೆ ಮಲಗಿಕೊಂಡಿರುವಳು. ॥ ೧೭ ॥

ಶ್ರೀನಾರದರು ಹೇಳುತ್ತಾರೆ – ಮಹಾರಾಜಾ ! ಆ ಸ್ತ್ರೀಯ ಸಂಗದಿಂದ ಪುರಂಜನರಾಜನ ವಿವೇಕವು ನಾಶವಾಗಿಬಿಟ್ಟಿತ್ತು. ಆದ್ದರಿಂದ ತನ್ನ ರಾಣಿಯು ನೆಲದ ಮೇಲೆ ಅಸ್ತವ್ಯಸ್ತವಾಗಿ ಬಿದ್ದುಕೊಂಡಿರುವುದನ್ನು ನೋಡಿ ಅವನಿಗೆ ತಡೆಯಲಾರದ ಶೋಕ ಉಂಟಾಯಿತು. ॥ ೧೮ ॥ ಅವನು ನೊಂದ ಹೃದಯದಿಂದ ಆಕೆಯನ್ನು ಸವಿಮಾತುಗಳಿಂದ ಸಂತೈಸಿದನು. ಆದರೆ ಆಕೆಗೆ ತನ್ನಲ್ಲಿ ಪ್ರೀತಿಯುಂಟಾಗುವ ಯಾವ ಚಿಹ್ನೆಯೂ ಅವನಿಗೆ ಕಂಡುಬರಲಿಲ್ಲ. ॥ ೧೯ ॥ ಪುರಂಜನನು ಸಂತೈಸುವ ಕಲೆಯಲ್ಲಿ ತುಂಬಾ ಕುಶಲನಾಗಿದ್ದನು. ಅವನು ಆಕೆಯನ್ನು ಮೆಲ್ಲ-ಮೆಲ್ಲನೆ ಅನುನಯ ವಿನಯಗಳಿಂದ ಸಾಂತ್ವನಗೊಳಿಸಲು ಪ್ರಾರಂಭಿಸಿದನು. ಮೊದಲಿಗೆ ಆಕೆಯ ಪಾದಗಳನ್ನು ತನ್ನ ತೊಡೆಯಮೇಲಿಟ್ಟುಕೊಂಡು ಪ್ರೀತಿಯಿಂದ ಆಕೆಯನ್ನು ಮುದ್ದಿಸುತ್ತಾ ಹೀಗೆಂದನು. ॥ ೨೦ ॥

ಪುರಂಜನನು ಹೇಳುತ್ತಾನೆ – ಸುಂದರೀ ! ಯಾವ ಸೇವಕರು – ಅಪರಾಧವನ್ನು ಮಾಡಿದಾಗ ಒಡೆಯನಿಂದ ಅದಕ್ಕೆ ತಕ್ಕ ದಂಡನೆಯನ್ನು ಪಡೆಯುವುದಿಲ್ಲವೋ – ಅವರು ನಿಜವಾಗಿಯೂ ಮಂದಭಾಗ್ಯರು. ॥ ೨೧ ॥ ಸ್ವಾಮಿಯು ಸೇವಕರಿಗೆ ದಂಡನೆಯನ್ನು ಕೊಟ್ಟರೆ ಅವರ ಮೇಲೆ ದೊಡ್ಡ ಅನುಗ್ರಹವನ್ನು ತೋರಿದಂತೆ ಆಗುತ್ತದೆ. ಹಿತಕಾರಿಯಾದ ತನ್ನ ಪ್ರಭುವು ಬಂಧುವಿನಂತೆ ಮಾಡಿದ ಆ ದಂಡನೆಯೆಂಬ ಉಪಕಾರವನ್ನು ಸ್ವೀಕರಿಸದೆ ಇರುವವನು ನಿಜವಾಗಿಯೂ ಮೂರ್ಖನು. ॥ ೨೨ ॥ ಸುಂದರವಾದ ಸುಲಿಹಲ್ಲುಗಳಿಂದಲೂ, ರಮಣೀಯವಾದ ಹುಬ್ಬುಗಳಿಂದಲೂ ಶೋಭಿಸುತ್ತಿರುವ ಶುಭಾಂಗಿಯೇ ! ಈಗ ಈ ಕೋಪವನ್ನು ತೊರೆದು 'ನಾನು ನಿನ್ನವನು' ಎಂಬುದನ್ನು ನೆನೆದು ಪ್ರೇಮಾತಿಶಯದಿಂದ ಕೂಡಿದ, ನಾಚಿಕೆಯಿಂದ ತಗ್ಗಿ ಮಧುರವಾದ ಕಿರುನಗೆಯಿಂದ ಮೆರೆಯುವ ನಿನ್ನ ಮನೋಹರವಾದ ಮುಖವನ್ನು ತೋರಿಸುವವಳಾಗು. ಆಹಾ ! ದುಂಬಿಗಳ ಸಾಲಿನಂತೆ ನೀಲಿಯ ಬಣ್ಣದಿಂದ ಕಂಗೊಳಿಸುತ್ತಿರುವ ಮುಂಗುರುಳು, ಉನ್ನತವಾದ ಮೂಗು ಮತ್ತು ಸವಿನುಡಿಗಳಿಂದ ನಿನ್ನ ಮುಖಾರವಿಂದವು ಎಷ್ಟು ಮನಮೋಹಕವಾಗಿದೆ ? ॥ ೨೩ ॥

ತಸ್ಮಿನ್ ದಧೇ ದಮಮಹಂ ತವ ವೀರಪತ್ನಿ
ಯೋಽನ್ಯತ್ರ ಭೂಸುರಕುಲಾತ್ಕೃತಕಿಲ್ಬಿಷಸ್ತಮ್ ।
ಪಶ್ಯೇ ನ ವೀತಭಯಮುನ್ಮುದಿತಂ ತ್ರಿಲೋಕ್ಯಾ-
ಮನ್ಯತ್ರ ವೈ ಮುರರಿಪೋರಿತರತ್ರ ದಾಸಾತ್ ॥ ೨೪ ॥

ವಕ್ತ್ರಂ ನ ತೇ ವಿತಿಲಕಂ ಮಲಿನಂ ವಿಹರ್ಷಂ
ಸಂರಂಭಭೀಮಮವಿಮೃಷ್ಟಮಪೇತರಾಗಮ್ ।
ಪಶ್ಯೇ ಸ್ತನಾವಪಿ ಶುಚೋಪಹತೌ ಸುಜಾತೌ
ಬಿಂಬಾಧರಂ ವಿಗತಕುಂಕುಮಪಂಕರಾಗಮ್ ॥ ೨೫ ॥

ತನ್ಮೇ ಪ್ರಸೀದ ಸುಹೃದಃ ಕೃತಕಿಲ್ಬಿಷಸ್ಯ
ಸ್ವೈರಂ ಗತಸ್ಯ ಮೃಗಯಾಂ ವ್ಯಸನಾತುರಸ್ಯ ।
ಕಾ ದೇವರಂ ವಶಗತಂ ಕುಸುಮಾಸ್ತ್ರವೇಗ-
ವಿಸ್ರಸ್ತಪೌಂಸ್ನಮುಶತೀ ನ ಭಜೇತ ಕೃತ್ಯೇ ॥ ೨೬ ॥

ವೀರಪತ್ನಿಯೇ! ಬೇರೆ ಯಾರಾದರೂ ನಿನಗೆ ಅಪರಾಧವೆಸಗಿದ್ದರೆ ಅದನ್ನು ಒಡನೆಯೇ ತಿಳಿಸು. ಆ ಅಪರಾಧಿಯು ಬ್ರಾಹ್ಮಣ ಕುಲದವನಲ್ಲದೇ ಇದ್ದರೆ ನಾನು ಅವನಿಗೆ ಈಗಲೇ ಉಗ್ರಶಿಕ್ಷೆಯನ್ನು ವಿಧಿಸುತ್ತೇನೆ. ಮೂರುಲೋಕಗಳಲ್ಲಾಗಲೀ, ಅಥವಾ ಅವುಗಳ ಹೊರಗಾಗಲೀ ಶ್ರೀಭಗವಂತನ ಭಕ್ತರನ್ನು ಬಿಟ್ಟು ಬೇರೆ ಯಾರೂ ನಿನ್ನಲ್ಲಿ ಅಪರಾಧಮಾಡಿ ನಿರ್ಭಯನಾಗಿಯೂ, ಸುಖಿಯಾಗಿಯೂ ಇರಲಾರನು. ॥ ೨೪ ॥ ಪ್ರಿಯೇ! ನಿನ್ನ ಮುಖವು ತಿಲಕವಿಲ್ಲದೆ, ಕಾಂತಿಹೀನವಾಗಿ, ಬಾಡಿ-ಬಸವಳಿದು ಕೋಪದಿಂದ ಭೀಕರವಾಗಿ ಇದ್ದುದನ್ನು ನಾನು ಇಂದಿನವರೆಗೂ ಎಂದೂ ಕಂಡಿರಲಿಲ್ಲ. ಹಾಗೆಯೇ ನಿನ್ನ ಸುಂದರವಾದ ಸ್ತನಗಳು ಕಣ್ಣೀರಿನಿಂದ ನೆನೆದಿರುವುದಾಗಲೀ, ತೊಂಡೆಹಣ್ಣಿನಂತಿರುವ ತುಟಿಗಳು ಕೇಸರಿಯ ಲೇಪದಿಂದ ಕೆಂಪಾಗದೆ ಇರುವುದನ್ನು ನಾನು ಎಂದೂ ನೋಡಲಿಲ್ಲ. ॥ ೨೫ ॥ ನಾನು ಬೇಟೆಯ ವ್ಯಸನದಿಂದ ನಿನ್ನನ್ನು ಕೇಳದೆಯೇ ದೇಟೆಯಾಡಲು ಹೋಗಿ ನಿಜವಾಗಿಯೂ ಅಪರಾಧವನ್ನು ಮಾಡಿರುವೆನು. ಆದರೂ ನಾನು ನಿನ್ನವನೆಂದು ತಿಳಿದು ನನ್ನಲ್ಲಿ ಪ್ರಸನ್ನಳಾಗು. ಮನ್ಮಥನ ವಿಷಮ ಬಾಣಗಳಿಂದ ಪೀಡಿತನಾಗಿ, ಸದಾ ತನಗೆ ಅಧೀನನಾಗಿ ಬೇಡಿಕೊಳ್ಳುತ್ತಿರುವ ತನ್ನ ಪ್ರಿಯನಾದ ಪತಿಯನ್ನು ಯಾವ ಕಾಮಿನಿಯು ತಾನೇ ಉಚಿತವಾದ ಕಾರ್ಯಕ್ಕಾಗಿ ಸ್ವೀಕರಿಸುವುದಿಲ್ಲ? ಹೀಗೆ ಸವಿಮಾತು - ವರ್ತನೆಗಳಿಂದ ಪುರಂಜನನು ತನ್ನ ಕಾಮಿನಿಯನ್ನು ಸಂತೈಸಿದನು. ॥ ೨೬ ॥

ಇಪ್ಪತ್ತಾರನೆಯ ಅಧ್ಯಾಯವು ಮುಗಿಯಿತು. ॥ ೨೬ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಚತುರ್ಥಸ್ಕಂಧೇ
ಪುರಂಜನೋಪಾಖ್ಯಾನೇ ಷಡ್ವಿಂಶೋಽಧ್ಯಾಯಃ ॥ ೨೬ ॥

ಇಪ್ಪತ್ತೇಳನೆಯ ಅಧ್ಯಾಯ

ಪುರಂಜನನ ಪುರಿಯಮೇಲೆ ಚಂಡವೇಗನ ಧಾಳಿ, ಕಾಲಕನ್ಯೆಯ ಚರಿತ್ರೆ

ನಾರದ ಉವಾಚ

ಇತ್ಥಂ ಪುರಂಜನಂ ಸಮ್ಯಗ್ವಶಮಾನೀಯ ವಿಭ್ರಮೈಃ ।
ಪುರಂಜನೀ ಮಹಾರಾಜ ರೇಮೇ ರಮಯತೀ ಪತಿಮ್ ॥ ೧ ॥

ಸ ರಾಜಾ ಮಹಿಷೀಂ ರಾಜನ್ಸುಸ್ನಾತಾಂ ರುಚಿರಾನನಾಮ್ ।
ಕೃತಸ್ವಸ್ತ್ಯಯನಾಂ ತೃಪ್ತಾಮಭ್ಯನಂದದುಪಾಗತಾಮ್ ॥ ೨ ॥

ತಯೋಪಗೂಢಃ ಪರಿರಬ್ಧಕಂಧರೋ
ರಹೋಽನುಮಂತ್ರೈರಪಕೃಷ್ಟಚೇತನಃ ।
ನ ಕಾಲರಂಹೋ ಬುಬುಧೇ ದುರತ್ಯಯಂ
ದಿವಾ ನಿಶೇತಿ ಪ್ರಮದಾಪರಿಗ್ರಹಃ ॥ ೩ ॥

ಶ್ರೀನಾರದರು ಹೇಳುತ್ತಾರೆ – ಎಲೈ ರಾಜೇಂದ್ರನೇ! ಹೀಗೆ ಪುರಂಜನನ ಮಡದಿಯು ತನ್ನ ಪತಿಯನ್ನು ಬಗೆ-ಬಗೆಯ ವಿಲಾಸಗಳಿಂದ ಸಂಪೂರ್ಣವಾಗಿ ವಶಪಡಿಸಿಕೊಂಡು ಆತನನ್ನು ಆನಂದಗೊಳಿಸುತ್ತಾ ವಿಹರಿಸತೊಡಗಿದಳು. ॥ ೧ ॥ ಅವಳು ಸ್ನಾನಮಾಡಿ ಚೆನ್ನಾಗಿ ಸಿಂಗರಿಸಿಕೊಂಡು, ಭೋಜನಾದಿಗಳಿಂದ ತೃಪ್ತಳಾಗಿ ರಾಜನ ಬಳಿಗೆ ಬಂದಳು. ರಾಜನು ಆ ಮನೋಹರ ಮುಖವುಳ್ಳ ರಾಣಿಯನ್ನು ಆದರದಿಂದ ಅಭಿನಂದಿಸಿದನು. ॥ ೨ ॥ ಪುರಂಜನಿಯು ರಾಜನನ್ನು ಆಲಿಂಗಿಸಿಕೊಳ್ಳಲು ಅವನೂ ಆಕೆಯನ್ನು ಅಪ್ಪಿಕೊಂಡನು. ಮತ್ತೆ ಏಕಾಂತದಲ್ಲಿ ಮನಸ್ಸಿಗನುಕೂಲವಾದ ರಹಸ್ಯವಾದ ಮಾತುಗಳನ್ನಾಡುತ್ತಾ ಆಕೆಯಲ್ಲಿ ಮಿತಿಮೀರಿ ಮೋಹಗೊಂಡನು. ಆ ಕಾಮಿನಿಯಲ್ಲಿ ಚಿತ್ತವು ನೆಟ್ಟುಹೋಗಿ – ಹಗಲು-ರಾತ್ರಿ ಎಂಬ ವ್ಯತ್ಯಾಸದಿಂದ ನಿರಂತರ ಕಳೆದುಹೋಗುತ್ತಿರುವ ದುಸ್ತರವಾದ ಕಾಲಗತಿಯು ಅವನ ಗಮನಕ್ಕೆ ಬಾರದಷ್ಟು ಮೋಹವುಂಟಾಯಿತು. ॥ ೩ ॥

ಶಯಾನ ಉನ್ನದ್ಧಮದೋ ಮಹಾಮನಾ
ಮಹಾರ್ಹತಲ್ಪೇ ಮಹಿಷೀಭುಜೋಪಧಿಃ ।
ತಾಮೇವ ವೀರೋ ಮನುತೇ ಪರಂ ಯತ-
ಸ್ತಮೋಽಭಿಭೂತೋ ನ ನಿಜಂ ಪರಂ ಚ ಯತ್ ॥ ೪ ॥

ತಯೈವಂ ರಮಮಾಣಸ್ಯ ಕಾಮಕಶ್ಮಲಚೇತಸಃ ।
ಕ್ಷಣಾರ್ಧಮಿವ ರಾಜೇಂದ್ರ ವ್ಯತಿಕ್ರಾಂತಂ ನವಂ ವಯಃ ॥ ೫ ॥

ತಸ್ಯಾಮಜನಯತ್ಪುತ್ರಾನ್ಪುರಂಜನ್ಯಾಂ ಪುರಂಜನಃ ।
ಶತಾನ್ಯೇಕಾದಶ ವಿರಾಡಾಯುಷೋಽರ್ಧಮಥಾತ್ಯಗಾತ್ ॥ ೬ ॥

ದುಹಿತೄರ್ದಶೋತ್ತರಶತಂ ಪಿತೃಮಾತೃಯಶಸ್ಕರೀಃ ।
ಶೀಲೌದಾರ್ಯಗುಣೋಪೇತಾಃ ಪೌರಂಜನ್ಯಃ ಪ್ರಜಾಪತೇ ॥ ೭ ॥

ಸ ಪಂಚಾಲಪತಿಃ ಪುತ್ರಾನ್ಪಿತೃವಂಶವಿವರ್ಧನಾನ್ ।
ದಾರೈಃ ಸಂಯೋಜಯಾಮಾಸ ದುಹಿತೄಃ ಸದೃಶೈರ್ವರೈಃ ॥ ೮ ॥

ಪುತ್ರಾಣಾಂ ಚಾಭವನ್ ಪುತ್ರಾ ಏಕೈಕಸ್ಯ ಶತಂ ಶತಮ್ ।
ಯೈರ್ವೈ ಪೌರಂಜನೋ ವಂಶಃ ಪಂಚಾಲೇಷು ಸಮೇಧಿತಃ ॥ ೯ ॥

ತೇಷು ತದ್ರಿಕ್ಥಹಾರೇಷು ಗೃಹಕೋಶಾನುಜೀವಿಷು ।
ನಿರೂಢೇನ ಮಮತ್ವೇನ ವಿಷಯೇಷ್ವನ್ವಬಧ್ಯತ ॥ ೧೦ ॥

ಈಜೇ ಚ ಕ್ರತುಭಿರ್ಘೋರೈರ್ದೀಕ್ಷಿತಃ ಪಶುಮಾರಕೈಃ ।
ದೇವಾನ್ಪಿತೄನ್ಭೂತಪತೀನ್ನಾನಾಕಾಮೋ ಯಥಾ ಭವಾನ್ ॥ ೧೧ ॥

ಯುಕ್ತೇಷ್ವೇವಂ ಪ್ರಮತ್ತಸ್ಯ ಕುಟುಂಬಾಸಕ್ತಚೇತಸಃ ।
ಆಸಸಾದ ಸ ವೈ ಕಾಲೋ ಯೋಽಪ್ರಿಯಃ ಪ್ರಿಯಯೋಷಿತಾಮ್ ॥ ೧೨ ॥

ಚಂಡವೇಗ ಇತಿ ಖ್ಯಾತೋ ಗಂಧರ್ವಾಧಿಪತಿರ್ನೃಪ ।
ಗಂಧರ್ವಾಸ್ತಸ್ಯ ಬಲಿನಃ ಷಷ್ಟ್ಯುತ್ತರಶತತ್ರಯಮ್ ॥ ೧೩ ॥

ಗಂಧರ್ವ್ಯಸ್ತಾದೃಶೀರಸ್ಯ ಮೈಥುನ್ಯಶ್ಚ ಸಿತಾಸಿತಾಃ ।
ಪರಿವೃತ್ತ್ಯಾ ವಿಲುಂಪಂತಿ ಸರ್ವಕಾಮವಿನಿರ್ಮಿತಾಮ್ ॥ ೧೪ ॥

ತೇ ಚಂಡವೇಗಾನುಚರಾಃ ಪುರಂಜನಪುರಂ ಯದಾ ।
ಹರ್ತುಮಾರೇಭಿರೇ ತತ್ರ ಪ್ರತ್ಯಷೇಧತ್ಪ್ರಜಾಗರಃ ॥ ೧೫ ॥

ಮತ್ತೇರಿದ ಮನಸ್ಸುಳ್ಳವನಾದ ಪುರಂಜನನು ತನ್ನ ಪ್ರಿಯೆಯ ಭುಜದ ಮೇಲೆ ತಲೆಯನ್ನಿಟ್ಟುಕೊಂಡು ಅಮೂಲ್ಯವಾದ ಹಂಸತೂಲಿಕಾತಲ್ಪದಲ್ಲಿ ಬಿದ್ದಿರುತ್ತಿದ್ದನು. ಅವನಿಗೆ ಆ ರಮಣಿಯೇ ಜೀವನದ ಪರಮಫಲವೆಂದು ತೋರುತ್ತಿತ್ತು. ಅಜ್ಞಾನದಿಂದ ಆವೃತನಾಗಿದ್ದ ಕಾರಣ ಅವನಿಗೆ ಆತ್ಮಾ ಅಥವಾ ಪರಮಾತ್ಮನ ಯಾವ ಜ್ಞಾನವೂ ಉಳಿಯಲಿಲ್ಲ. ॥ ೪ ॥

ಎಲೈ ರಾಜನೇ! ಹೀಗೆ ಕಾಮಾತುರವಾದ ಚಿತ್ತದಿಂದ ಆ ಸ್ತ್ರೀಯೊಡನೆ ವಿಹರಿಸುತ್ತಾ ಇದ್ದ ಪುರಂಜನನ ಯೌವನವು ಅರ್ಧಕ್ಷಣದಂತೆ ಕಳೆದುಹೋಯಿತು. ॥ ೫ ॥ ಪ್ರಜಾಪತಿಯೇ! ಆ ಪುರಂಜನಿಯಲ್ಲಿ ರಾಜನಿಗೆ ಸಾವಿರದನೂರು ಮಂದಿ ಪುತ್ರರೂ, ಒಂದುನೂರಹತ್ತು ಪುತ್ರಿಯರೂ ಜನಿಸಿದರು. ಅವರೆಲ್ಲರೂ ತಂದೆ-ತಾಯಿಗಳ ಕೀರ್ತಿಯನ್ನು ವೃದ್ಧಿಪಡಿಸುವ ಹಾಗೂ ಸೌಶೀಲ್ಯ-ಔದಾರ್ಯಗಳೇ ಮುಂತಾದ ಉತ್ತಮಗುಣಗಳಿಂದ ಸಂಪನ್ನರಾಗಿದ್ದರು. ಅವರು ಪೌರಂಜನಿಯರೆಂದೇ ವಿಖ್ಯಾತರಾದರು. ಇಷ್ಟರಲ್ಲಿ ಆ ಸಾಮ್ರಾಟನ ದೀರ್ಘವಾದ ಆಯುಸ್ಸಿನ ಅರ್ಧಭಾಗ ಕಳೆದುಹೋಗಿತ್ತು. ॥ ೬-೭ ॥ ಮತ್ತೆ ಪಾಂಚಾಲನರೇಶ ಪುರಂಜನನು ಪಿತೃವಂಶವನ್ನು ವೃದ್ಧಿಪಡಿಸುವ ಪುತ್ರರ ಯೋಗ್ಯವಧುಗಳೊಂದಿಗೂ ಮತ್ತು ಕನ್ಯೆಯರನ್ನು ಅವರಿಗೆ ತಕ್ಕವರಾದ ವರರೊಂದಿಗೂ ವಿವಾಹ ಮಾಡಿದನು. ॥ ೮ ॥ ಅವನ ಪುತ್ರರಲ್ಲಿ ಒಬ್ಬೊಬ್ಬರಿಗೆ ನೂರು-ನೂರು ಪುತ್ರರು ಹುಟ್ಟಿದರು. ಅವರಿಂದ ವಂಶವು ವೃದ್ಧಿಯನ್ನು ಹೊಂದಿ ಇಡೀ ಪಾಂಚಾಲದೇಶದಲ್ಲಿ ಪುರಂಜನನವಂಶ ಹರಡಿಹೋಯಿತು. ॥ ೯ ॥ ಈ ಮಕ್ಕಳು, ಮೊಮ್ಮಕ್ಕಳು, ಮನೆ, ಕೋಶ, ಸೇವಕರು, ಮಂತ್ರಿಗಳು ಮುಂತಾದವುಗಳಲ್ಲಿ ದೃಢವಾದ ಮಮತೆ ಉಂಟಾದ್ದರಿಂದ ಅವನು ಈ ವಿಷಯಗಳಲ್ಲೇ ಬಂಧಿತನಾದನು. ॥ ೧೦ ॥ ಮತ್ತೆ ನಿನ್ನಂತೆಯೇ ಅವನೂ ಕೂಡ ಅನೇಕ ಪ್ರಕಾರದ ಭೋಗಗಳ ಕಾಮನೆಯಿಂದ ಯಜ್ಞದೀಕ್ಷೆಯನ್ನು ಕೈಗೊಂಡು ಹಲವಾರು ಬಗೆಯ ಹಿಂಸಾಮಯವಾದ ಘೋರ ಯಜ್ಞಗಳಿಂದ ದೇವತೆಗಳನ್ನು, ಪಿತೃಗಳನ್ನು, ಭೂತಪತಿಗಳನ್ನು ಆರಾಧಿಸಿದನು. ॥ ೧೧ ॥ ಹೀಗೆ ಅವನು ತನ್ನ ಆಯುಸ್ಸಿನಲ್ಲಿ ಆತ್ಮಕಲ್ಯಾಣವನ್ನುಂಟುಮಾಡುವ ಕರ್ಮಗಳ ಕಡೆಗೆ ಗಮನಕೊಡದೆ ಕುಟುಂಬಪಾಲನೆಯಲ್ಲೇ ಆಸಕ್ತನಾದನು. ಕೊನೆಗೆ ಸ್ತ್ರೀಲಂಪಟರಿಗೆ ಅತ್ಯಂತ ಅಪ್ರಿಯವಾದ ವೃದ್ಧಾಪ್ಯವು ಬಂದೊದಗಿತು. ॥ ೧೨ ॥

ರಾಜನೇ! ಚಂಡವೇಗನೆಂಬ ಒಬ್ಬ ಗಂಧರ್ವರಾಜನಿದ್ದನು. ಮುನ್ನೂರ ಅರವತ್ತು ಮಂದಿ ಮಹಾಶೂರರಾದ ಗಂಧರ್ವರು ಅವನ ಅಧೀನದಲ್ಲಿದ್ದರು. ॥ ೧೩ ॥ ಕಪ್ಪು ಮತ್ತು ಬಿಳುಪು ಬಣ್ಣಗಳಿಂದ ಕೂಡಿದ ಅಷ್ಟೇ ಸಂಖ್ಯೆಯ ಗಂಧರ್ವಸ್ತ್ರೀಯರು ಅವನೊಡನೆ ಮಡದಿಯರಂತೆ ಇದ್ದರು. ಅವರು ಒಬ್ಬರಾದ ಬಳಿಕ ಮತ್ತೊಬ್ಬರಂತೆ ಸುತ್ತಾಡುತ್ತಾ ಭೋಗ-ವಿಲಾಸಗಳಿಂದ ತುಂಬಿ ತುಳುಕುವ ನಗರಗಳನ್ನು ಸೂರೆಮಾಡುತ್ತಿದ್ದರು. ॥ ೧೪ ॥ ಗಂಧರ್ವರಾಜ ಚಂಡವೇಗನ ಆ ಅನುಚರರು ಪುರಂಜನನ ನಗರವನ್ನು ಲೂಟಿಮಾಡಲು ಪ್ರಾರಂಭಿಸಿದಾಗ ಅವರನ್ನು ಐದು ಹೆಡೆಯುಳ್ಳ ಪ್ರಜಾಗರ ಸರ್ಪವು ತಡೆಯಿತು. ॥ ೧೫ ॥

ಸ ಸಪ್ತಭಿಃ ಶತೈರೇಕೋ ವಿಂಶತ್ಯಾ ಚ ಶತಂ ಸಮಾಃ ।
ಪುರಂಜನಪುರಾಧ್ಯಕ್ಷೋ ಗಂಧರ್ವೈರ್ಯುಯುಧೇ ಬಲೀ ॥ ೧೬ ॥

ಕ್ಷೀಯಮಾಣೇ ಸ್ವಸಂಬಂಧೇ ಏಕಸ್ಮಿನ್ಬಹುಭಿರ್ಯುಧಾ ।
ಚಿಂತಾಂ ಪರಾಂ ಜಗಾಮಾರ್ತಃ ಸರಾಷ್ಟ್ರಪುರಬಾಂಧವಃ ॥ ೧೭ ॥

ಸ ಏವ ಪುರ್ಯಾಂ ಮಧುಭುಕ್ಪಂಚಾಲೇಷು ಸ್ವಪಾರ್ಷದೈಃ ।
ಉಪನೀತಂ ಬಲಿಂ ಗೃಹ್ಣನ್ ಸ್ತ್ರೀಜಿತೋ ನಾವಿದದ್ಭಯಮ್ ॥ ೧೮ ॥

ಕಾಲಸ್ಯ ದುಹಿತಾ ಕಾಚಿತ್ತ್ರಿಲೋಕೀಂ ವರಮಿಚ್ಛತೀ ।
ಪರ್ಯಟಂತೀ ನ ಬರ್ಹಿಷ್ಮನ್ಪ್ರತ್ಯನಂದತ ಕಶ್ಚನ ॥ ೧೯ ॥

ದೌರ್ಭಾಗ್ಯೇನಾತ್ಮನೋ ಲೋಕೇ ವಿಶ್ರುತಾ ದುರ್ಭಗೇತಿ ಸಾ ।
ಯಾ ತುಷ್ಟಾ ರಾಜರ್ಷಯೇ ತು ವೃತಾದಾತ್ಪೂರವೇ ವರಮ್ ॥ ೨೦ ॥

ಕದಾಚಿದಟಮಾನಾ ಸಾ ಬ್ರಹ್ಮಲೋಕಾನ್ಮಹೀಂ ಗತಮ್ ।
ವವ್ರೇ ಬೃಹದ್ವ್ರತಂ ಮಾಂ ತು ಜಾನತೀ ಕಾಮಮೋಹಿತಾ ॥ ೨೧ ॥

ಮಯಿ ಸಂರಭ್ಯ ವಿಪುಲಮದಾಚ್ಛಾಪಂ ಸುದುಃಸಹಮ್ ।
ಸ್ಥಾತುಮರ್ಹಸಿ ನೈಕತ್ರ ಮದ್ಯಾಚ್ಞಾವಿಮುಖೋ ಮುನೇ ॥ ೨೨ ॥

ತತೋ ವಿಹತಸಂಕಲ್ಪಾ ಕನ್ಯಕಾ ಯವನೇಶ್ವರಮ್ ।
ಮಯೋಪದಿಷ್ಟಮಾಸಾದ್ಯ ವವ್ರೇ ನಾಮ್ನಾ ಭಯಂ ಪತಿಮ್ ॥ ೨೩ ॥

ಋಷಭಂ ಯವನಾನಾಂ ತ್ವಾಂ ವೃಣೇ ವೀರೇಪ್ಸಿತಂ ಪತಿಮ್ ।
ಸಂಕಲ್ಪಸ್ತ್ವಯಿ ಭೂತಾನಾಂ ಕೃತಃ ಕಿಲ ನ ರಿಷ್ಯತಿ ॥ ೨೪ ॥

ದ್ವಾವಿಮಾವನುಶೋಚಂತಿ ಬಾಲಾವಸದವಗ್ರಹೌ ।
ಯಲ್ಲೋಕಶಾಸ್ತ್ರೋಪನತಂ ನ ರಾತಿ ನ ತದಿಚ್ಛತಿ ॥ ೨೫ ॥

ಈ ಪುರಂಜನಪುರಿಯನ್ನು ಕಾವಲು ಕಾಯುತ್ತಿದ್ದ ಮಹಾಬಲಶಾಲಿಯಾದ ಸರ್ಪವು ನೂರು ವರ್ಷಗಳ ಕಾಲ ಒಬ್ಬಂಟಿಗನಾಗಿ ಆ ಏಳುನೂರಿಪ್ಪತ್ತು ಗಂಧರ್ವ-ಗಂಧರ್ವಿಯರೊಡನೆ ಯುದ್ಧ ಮಾಡುತ್ತಲೇ ಇತ್ತು. ॥ ೧೬ ॥ ಅನೇಕ ವೀರರೊಂದಿಗೆ ಒಬ್ಬನೇ ಯುದ್ಧಮಾಡಿದ್ದರಿಂದ ತನ್ನ ಏಕಮಾತ್ರ ಬಂಧುವಾಗಿದ್ದ ಪ್ರಜಾಗರನು ಬಲಹೀನನಾದುದನ್ನು ನೋಡಿ ಪುರಂಜನರಾಜನಿಗೆ ತನ್ನ ರಾಷ್ಟ್ರ ಮತ್ತು ನಗರದಲ್ಲಿ ವಾಸಿಸುವ ಇತರ ಬಂಧುಗಳೊಡನೆ ಬಹಳ ಚಿಂತೆ ಇಟ್ಟುಕೊಂಡಿತು. ॥ ೧೭ ॥ ಅವನು ಇಷ್ಟು ದಿನಗಳವರೆಗೆ ಪಾಂಚಾಲದೇಶದ ಆ ನಗರದಲ್ಲಿ ತನ್ನ ದೂತರು ತಂದು ಕೊಡುತ್ತಿದ್ದ ಕಂದಾಯವನ್ನು ಪಡೆದು ವಿಷಯ ಭೋಗಗಳಲ್ಲಿ ಮುಳುಗಿದ್ದನು. ಸ್ತ್ರೀಯರಿಗೆ ವಶೀಭೂತನಾದ್ದರಿಂದ ಮುಂದೆ ಅವಶ್ಯವಾಗಿ ಬಂದೊದಗುವ ಇಂತಹ ಭಯದ ಸುಳಿವೇ ಅವನಿಗೆ ಹತ್ತಲಿಲ್ಲ. ॥ ೧೮ ॥

ಬರ್ಹಿಷ್ಮಂತನೇ! ಅದೇ ದಿನಗಳಲ್ಲಿ ಕಾಲಪುರುಷನ ಕನ್ಯೆಯೊಬ್ಬಳು ತನಗಾಗಿ ವರನನ್ನು ಹುಡುಕುತ್ತಾ ಮೂರು ಲೋಕಗಳಲ್ಲಿಯೂ ಅಲೆಯುತ್ತಿದ್ದಳು. ಆದರೆ ಆಕೆಯನ್ನು ಯಾರೂ ಸ್ವೀಕರಿಸಲಿಲ್ಲ. ॥ ೧೯ ॥ ಆ ಜರಾ (ಮುಪ್ಪು) ಎಂಬ ಕಾಲಕನ್ಯೆಯು ಅತ್ಯಂತ ಭಾಗ್ಯಹೀನಳಾದ್ದರಿಂದ ಆಕೆಯನ್ನು ಜನರು ದುರ್ಭಗಾ ಎಂದೇ ಕರೆಯುತ್ತಿದ್ದರು. ಒಮ್ಮೆ ರಾಜರ್ಷಿ ಪುರುವು ತಂದೆಗೆ ತನ್ನ ಯೌವನವನ್ನು ಕೊಡುವುದಕ್ಕಾಗಿ ಸ್ವೇಚ್ಛೆಯಿಂದ ಅವಳನ್ನು ವರಿಸಿದ್ದನು. ಇದರಿಂದ ಪ್ರಸನ್ನಳಾಗಿ ಅವಳು ರಾಜನಿಗೆ ರಾಜ್ಯ ಪ್ರಾಪ್ತಿಯ ವರವನ್ನು ಕೊಟ್ಟಿದ್ದಳು. ॥ ೨೦ ॥ ಒಮ್ಮೆ ನಾನು ಬ್ರಹ್ಮಲೋಕದಿಂದ ಭೂಮಿಗೆ ಬರುತ್ತಿದ್ದಾಗ ಆ ಕನ್ಯೆಯು ಅಲ್ಲಲ್ಲಿ ಸುತ್ತಾಡುತ್ತಾ ನನ್ನನ್ನೂ ಸಂಧಿಸಿದ್ದಳು. ನಾನು ನೈಷ್ಠಿಕಬ್ರಹ್ಮಚಾರಿ ಎಂದು ತಿಳಿದಿದ್ದರೂ ಆಕೆಯು ಕಾಮಮೋಹಿತಳಾಗಿ ನನ್ನನ್ನು ವರಿಸಲು ಬಯಸಿದಳು. ॥ ೨೧ ॥ ನಾನು ಅವಳ ಬಯಕೆಯನ್ನು ತಿರಸ್ಕರಿಸಲು ಅವಳು ಅತ್ಯಂತ ಕುಪಿತಳಾಗಿ ನನ್ನನ್ನು – 'ಎಲೈ ಮುನಿಯೇ! ನನ್ನ ಬೇಡಿಕೆಯನ್ನು ತಿರಸ್ಕರಿಸಿದ್ದೀಯೆ. ಆದ್ದರಿಂದ ನೀನು ಒಂದೇ ಜಾಗದಲ್ಲಿ ಹೆಚ್ಚುಕಾಲ ನಿಲ್ಲದಿರುವಂತಾಗಲಿ' ಎಂದು ಸಹಿಸಲು ಕಷ್ಟವಾದ ಶಾಪವನ್ನು ಕೊಟ್ಟಳು. ॥ ೨೨ ॥

ಹೀಗೆ ನನ್ನಿಂದ ನಿರಾಶಳಾದ ಅವಳು ನನ್ನ ಸಲಹೆಯನ್ನು ಪಡೆದು ಯವನರಾಜನಾದ ಭಯ ಎಂಬುವನ ಬಳಿಗೆ ಹೋಗಿ ಅವನನ್ನು ಪತಿಯನ್ನಾಗಿ ವರಿಸಿಕೊಂಡಳು ಹಾಗೂ ಹೇಳಿದಳು – ॥ ೨೩ ॥ ಎಲೈ ವೀರವರನೇ! ನೀನು ಯವನರಲ್ಲಿ ಶ್ರೇಷ್ಠನು. ಇಂತಹ ನಿನ್ನನ್ನು ನಾನು ಪ್ರೇಮಿಸಿ ಪತಿಯನ್ನಾಗಿ ಪಡೆಯಲು ಬಯಸಿದ್ದೇನೆ. ನಿನ್ನ ಕುರಿತು ಜೀವಿಗಳು ಮಾಡಿದ ಸಂಕಲ್ಪವು ಎಂದಿಗೂ ವ್ಯರ್ಥವಾಗುವುದಿಲ್ಲ. ॥ ೨೪ ॥ ಯಾವ ಮನುಷ್ಯನು ಲೋಕದ ದೃಷ್ಟಿಯಿಂದ ಅಥವಾ ಶಾಸ್ತ್ರದೃಷ್ಟಿಯಿಂದ ದಾನಮಾಡಲು ಯೋಗ್ಯವಾದ ವಸ್ತುವನ್ನು ದಾನಮಾಡುವುದಿಲ್ಲವೋ, ಯಾರು ಶಾಸ್ತ್ರದೃಷ್ಟಿಯಿಂದ ಆ ದಾನವನ್ನು ತೆಗೆದುಕೊಳ್ಳಲು ಯೋಗ್ಯನಾಗಿದ್ದೂ ತೆಗೆದುಕೊಳ್ಳುವುದಿಲ್ಲವೋ, ಅವರಿಬ್ಬರೂ ದುರಾಗ್ರಹಿಗಳು ಮತ್ತು ಮೂಢರು. ಆದ್ದರಿಂದ ಶೋಚನೀಯರು. ॥ ೨೫ ॥

ಅಥೋ ಭಜಸ್ವ ಮಾಂ ಭದ್ರ ಭಜಂತೀಂ ಮೇ ದಯಾಂ ಕುರು ।
ಏತಾವಾನ್ಪೌರುಷೋ ಧರ್ಮೋ ಯದಾರ್ತಾನನುಕಂಪತೇ ॥ ೨೬ ॥

ಕಾಲಕನ್ಯೋದಿತವಚೋ ನಿಶಮ್ಯ ಯವನೇಶ್ವರಃ ।
ಚಿಕೀರ್ಷುರ್ದೇವಗುಹ್ಯಂ ಸ ಸಸ್ಮಿತಂ ತಾಮಭಾಷತ ॥ ೨೭ ॥

ಮಯಾ ನಿರೂಪಿತಸ್ತುಭ್ಯಂ ಪತಿರಾತ್ಮಸಮಾಧಿನಾ ।
ನಾಭಿನಂದತಿ ಲೋಕೋಽಯಂ ತ್ವಾಮಭದ್ರಾಮಸಮ್ಮತಾಮ್ ॥ ೨೮ ॥

ತ್ವಮವ್ಯಕ್ತಗತಿರ್ಭುಂಕ್ಷ್ವ ಲೋಕಂ ಕರ್ಮವಿನಿರ್ಮಿತಮ್ ।
ಯಾಹಿ ಮೇ ಪೃತನಾಯುಕ್ತಾ ಪ್ರಜಾನಾಶಂ ಪ್ರಣೇಷ್ಯಸಿ ॥ ೨೯ ॥

ಪ್ರಜ್ವಾರೋಽಯಂ ಮಮ ಭ್ರಾತಾ ತ್ವಂ ಚ ಮೇ ಭಗಿನೀ ಭವ ।
ಚರಾಮ್ಯುಭಾಭ್ಯಾಂ ಲೋಕೇಽಸ್ಮಿನ್ನವ್ಯಕ್ತೋ ಭೀಮಸೈನಿಕಃ ॥ ೩೦ ॥

ಮಂಗಳಾಂಗನೇ! ಈಗ ನಾನು ನಿನ್ನ ಸೇವೆಗಾಗಿ ಸಿದ್ಧಳಾಗಿ ಬಂದಿದ್ದೇನೆ. ನನ್ನನ್ನು ಸ್ವೀಕರಿಸಿ ಅನುಗ್ರಹಿಸು. ದೀನರ ಮೇಲೆ ದಯೆತೋರುವುದೇ ಮನುಷ್ಯರ ಶ್ರೇಷ್ಠ ಧರ್ಮವಾಗಿದೆ. ॥ ೨೬ ॥

ಕಾಲಕನ್ಯೆಯ ಮಾತನ್ನು ಕೇಳಿ ಯವನರಾಜನು ದೈವಸಂಕಲ್ಪದಲ್ಲಿದ್ದ ಒಂದು ಗುಪ್ತವಾದ ಕಾರ್ಯವನ್ನು ಆಕೆಯಿಂದ ನೆರವೇರಿಸಲು ಇಚ್ಛಿಸುತ್ತಾ ನಸುನಗುತ್ತಾ ಆಕೆಗೆ ಹೀಗೆಂದನು - ॥ ೨೭ ॥ ನಾನು ಯೋಗದೃಷ್ಟಿಯಿಂದ ನಿನಗೆ ಒಬ್ಬ ವರನನ್ನು ನಿಶ್ಚಯಿಸಿರುವೆನು. ನೀನು ಎಲ್ಲರಿಗೆ ಅನಿಷ್ಟವನ್ನು ಉಂಟುಮಾಡುವುದರಿಂದ ಯಾರಿಗೂ ಬೇಕೆನಿಸುವುದಿಲ್ಲ. ಅದಕ್ಕಾಗಿಯೇ ಯಾರೂ ನಿನ್ನನ್ನು ಸ್ವೀಕರಿಸುವುದಿಲ್ಲ. ಆದುದರಿಂದ ನೀನು ಕರ್ಮದಿಂದ ಉಂಟಾದ ಈ ಲೋಕವನ್ನು ಗುಪ್ತಳಾಗಿ ಬಲಾತ್ಕಾರದಿಂದ ಭೋಗಿಸು. ಜೊತೆಗೆ ನನ್ನ ಸೈನ್ಯವನ್ನೂ ಕರೆದುಕೊಂಡು ಹೋಗು. ಅದರ ಸಹಾಯದಿಂದ ನೀನು ಎಲ್ಲ ಪ್ರಜೆಗಳನ್ನು ನಾಶಮಾಡಲು ಸಮರ್ಥಳಾಗುವೆ. ನಿನ್ನನ್ನು ಯಾರೂ ಎದುರಿಸಲಾರರು. ॥ ೨೮-೨೯ ॥ ನೋಡು! ಈ 'ಪ್ರಜ್ವಾರ' ಎಂಬುವನು ನನ್ನ ಸೋದರನು. ನೀನು ನನ್ನ ಸೋದರಿಯಾಗು. ನಿಮ್ಮಿಬ್ಬರೊಡಗೂಡಿ ನಾನು ನನ್ನ ಅವ್ಯಕ್ತಗತಿಯಿಂದ ಭಯಂಕರವಾದ ಸೈನ್ಯವನ್ನು ಜೊತೆಯಲ್ಲಿ ಕರೆದುಕೊಂಡು ಈ ಲೋಕದಲ್ಲೆಲ್ಲ ಸಂಚರಿಸುವೆನು. ॥ ೩೦ ॥

ಇಪ್ಪತ್ತೇಳನೆಯ ಅಧ್ಯಾಯವು ಮುಗಿಯಿತು. ॥ ೨೭ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಚತುರ್ಥಸ್ಕಂಧೇ
ಪುರಂಜನೋಪಾಖ್ಯಾನೇ ಸಪ್ತವಿಂಶೋಽಧ್ಯಾಯಃ ॥ ೨೭ ॥

ಇಪ್ಪತ್ತೆಂಟನೆಯ ಅಧ್ಯಾಯ

ಪುರಂಜನನು ಜನ್ಮಾಂತರದಲ್ಲಿ ಹೆಂಗಸಾಗಿ ಹುಟ್ಟಿದುದು, ಅವಿಜ್ಞಾತನ ಉಪದೇಶದಿಂದ ಮುಕ್ತನಾದುದು

ನಾರದ ಉವಾಚ

ಸೈನಿಕಾ ಭಯನಾಮ್ನೋ ಯೇ ಬರ್ಹಿಷ್ಮಂದಿಷ್ಟಕಾರಿಣಃ ।
ಪ್ರಜ್ವಾರಕಾಲಕನ್ಯಾಭ್ಯಾಂ ವಿಚೇರುರವನೀಮಿಮಾಮ್ ॥ ೧ ॥

ತ ಏಕದಾ ತು ರಭಸಾ ಪುರಂಜನಪುರೀಂ ನೃಪ ।
ರುರುಧುರ್ಭೌಮಭೋಗಾಢ್ಯಾಂ ಜರತ್ಪನ್ನಗಪಾಲಿತಾಮ್ ॥ ೨ ॥

ಕಾಲಕನ್ಯಾಪಿ ಬುಭುಜೇ ಪುರಂಜನಪುರಂ ಬಲಾತ್ ।
ಯಯಾಭಿಭೂತಃ ಪುರುಷಃ ಸದ್ಯೋ ನಿಃಸಾರತಾಮಿಯಾತ್ ॥ ೩ ॥

ಶ್ರೀನಾರದಮಹರ್ಷಿಗಳು ಹೇಳುತ್ತಾರೆ - ಬರ್ಹಿಷ್ಮಂತನೇ! ಕೇಳು. ಅನಂತರ ಆ ಭಯನೆಂಬ ಯವನರಾಜನ ಸೈನಿಕರು ಪ್ರಜ್ವಾರ ಮತ್ತು ಕಾಲಕನ್ಯೆ ಜರೆಯೊಡನೆ ಈ ಭೂಮಿಯಲ್ಲಿ ಎಲ್ಲೆಲ್ಲೂ ಸಂಚರಿಸತೊಡಗಿದರು. ॥ ೧ ॥ ಒಮ್ಮೆ ಅವರು ಮುದಿಸರ್ಪದಿಂದ ಸಂರಕ್ಷಿತವಾದ ಎಲ್ಲ ರೀತಿಯ ಸುಖ-ಸಾಮಗ್ರಿಗಳಿಂದಲೂ ಸಂಪನ್ನವಾಗಿದ್ದ ಪುರಂಜನಪುರಿಗೆ ರಭಸದಿಂದ ಧಾಳಿಯಿಟ್ಟರು. ॥ ೨ ॥ ಆಗ ಕಾಲಕನ್ಯೆಯು ಆ ಪುರಿಯ ಪ್ರಜೆಗಳನ್ನು ಬಲಾತ್ಕಾರವಾಗಿ ಭೋಗಿಸತೊಡಗಿದಳು. ಆಕೆಯ ಹಿಡಿತಕ್ಕೆ ಸಿಕ್ಕಿದ ಮನುಷ್ಯರು ಬೇಗನೇ ಸತ್ತ್ವಹೀನರಾಗಿ ಬಿಡುವರು. ॥ ೩ ॥ ಅದೇ ಸಮಯದಲ್ಲಿ ಆ ಯವನರಾಜನೂ ಕಾಲಕನ್ಯೆಯಿಂದ ಭೋಗಿಸಲ್ಪಡುತ್ತಿದ್ದ ಆ ಪುರದೊಳಗೆ ನಾಲ್ಕೂ

ತಯೋಪಭುಜ್ಯಮಾನಾಂ ವೈ ಯವನಾಃ ಸರ್ವತೋದಿಶಮ್ ।
ದ್ವಾರ್ಭಿಃ ಪ್ರವಿಶ್ಯ ಸುಭೃಶಂ ಪ್ರಾರ್ದಯನ್ಸಕಲಾಂ ಪುರೀಮ್
॥ ೪ ॥

ತಸ್ಯಾಂ ಪ್ರಪೀಡ್ಯಮಾನಾಯಾಮಭಿಮಾನೀ ಪುರಂಜನಃ ।
ಅವಾಪೋರುವಿಧಾಂಸ್ತಾಪಾನ್ಕುಟುಂಬೀ ಮಮತಾಕುಲಃ
॥ ೫ ॥

ಕನ್ಯೋಪಗೂಢೋ ನಷ್ಟಶ್ರೀಃ ಕೃಪಣೋ ವಿಷಯಾತ್ಮಕಃ ।
ನಷ್ಟಪ್ರಜ್ಞೋ ಹೃತೈಶ್ವರ್ಯೋ ಗಂಧರ್ವಯವನೈರ್ಬಲಾತ್
॥ ೬ ॥

ವಿಶೀರ್ಣಾಂ ಸ್ವಪುರೀಂ ವೀಕ್ಷ್ಯ ಪ್ರತಿಕೂಲಾನನಾದೃತಾನ್ ।
ಪುತ್ರಾನ್ಪೌತ್ರಾನುಗಾಮಾತ್ಯಾಂಜಾಯಾಂ ಚ ಗತಸೌಹೃದಾಮ್
॥ ೭ ॥

ಆತ್ಮಾನಂ ಕನ್ಯಯಾ ಗ್ರಸ್ತಂ ಪಂಚಾಲಾನರಿದೂಷಿತಾನ್ ।
ದುರಂತಚಿಂತಾಮಾಪನ್ನೋ ನ ಲೇಭೇ ತತ್ಪ್ರತಿಕ್ರಿಯಾಮ್
॥ ೮ ॥

ಕಾಮಾನಭಿಲಷಂದೀನೋ ಯಾತಯಾಮಾಂಶ್ಚ ಕನ್ಯಯಾ ।
ವಿಗತಾತ್ಮಗತಿಸ್ನೇಹಃ ಪುತ್ರದಾರಾಂಶ್ಚ ಲಾಲಯನ್
॥ ೯ ॥

ಗಂಧರ್ವಯವನಾಕ್ರಾಂತಾಂ ಕಾಲಕನ್ಯೋಪಮರ್ದಿತಾಮ್ ।
ಹಾತುಂ ಪ್ರಚಕ್ರಮೇ ರಾಜಾ ತಾಂ ಪುರೀಮನಿಕಾಮತಃ
॥ ೧೦ ॥

ಭಯನಾಮ್ನೋಽಗ್ರಜೋ ಭ್ರಾತಾ ಪ್ರಜ್ವಾರಃ ಪ್ರತ್ಯುಪಸ್ಥಿತಃ ।
ದದಾಹ ತಾಂ ಪುರೀಂ ಕೃತ್ಸ್ನಾಂ ಭ್ರಾತುಃ ಪ್ರಿಯಚಿಕೀರ್ಷಯಾ
॥ ೧೧ ॥

ತಸ್ಯಾಂ ಸಂದಹ್ಯಮಾನಾಯಾಂ ಸಪೌರಃ ಸಪರಿಚ್ಛದಃ ।
ಕೌಟುಂಬಿಕಃ ಕುಟುಂಬಿನ್ಯಾ ಉಪಾತಪ್ಯತ ಸಾನ್ವಯಃ
॥ ೧೨ ॥

ಯವನೋಪರುದ್ಧಾಯತನೋ ಗ್ರಸ್ತಾಯಾಂ ಕಾಲಕನ್ಯಯಾ ।
ಪುರ್ಯಾಂ ಪ್ರಜ್ವಾರಸಂಸೃಷ್ಟಃ ಪುರಪಾಲೋಽನ್ವತಪ್ಯತ
॥ ೧೩ ॥

ನ ಶೇಕೇ ಸೋಽವಿತುಂ ತತ್ರ ಪುರುಕೃಚ್ಛ್ರೋರುವೇಪಥುಃ ।
ಗಂತುಮೈಚ್ಛತ್ತತೋ ವೃಕ್ಷಕೋಟರಾದಿವ ಸಾನಲಾತ್
॥ ೧೪ ॥

ಕಡೆಗಳಿಂದಲೂ ಬೇರೆ-ಬೇರೆ ದ್ವಾರಗಳಿಂದ ನುಗ್ಗಿ ಅದನ್ನು ನಾಶ ಮಾಡತೊಡಗಿದರು. ॥ ೪ ॥ ಹೀಗೆ ತನ್ನ ಪುರಿಯು ಪೀಡಿತವಾಗುತ್ತಿದ್ದಾಗ 'ನಾನು ಈ ಪುರಕ್ಕೆ ಒಡೆಯನು, ಅದು ತನಗೆ ಸೇರಿದ್ದು' ಎಂಬ ಅಭಿಮಾನದಿಂದ ಕೂಡಿ ಮಮತೆಗೆ ವಶನಾಗಿದ್ದ ದೊಡ್ಡ ಕುಟುಂಬಿಯಾದ ಪುರಂಜನರಾಜನನ್ನೂ ನಾನಾರೀತಿಯ ಸಂತಾಪಗಳು ಪೀಡಿಸತೊಡಗಿದವು. ॥ ೫ ॥

ಕಾಲಕನ್ಯೆಯ ಆಲಿಂಗನದಿಂದ ಅವನ ಎಲ್ಲ ಸಂಪತ್ತು ನಾಶವಾಯಿತು. ಅತ್ಯಂತ ವಿಷಯಾಸಕ್ತನಾದ್ದರಿಂದ ಅವನು ದೀನನಾಗಿ ವಿವೇಕಶಕ್ತಿಯನ್ನು ಕಳಕೊಂಡನು. ಗಂಧರ್ವರೂ ಮತ್ತು ಯವನರೂ ಬಲಾತ್ಕಾರವಾಗಿ ಅವನ ಸಂಪತ್ತೆಲ್ಲವನ್ನು ಲೂಟಿ ಮಾಡಿದರು. ॥ ೬ ॥ 'ನಗರವೆಲ್ಲ ಧ್ವಂಸವಾಗಿಬಿಟ್ಟಿದೆ. ಮಕ್ಕಳು-ಮೊಮ್ಮಕ್ಕಳು, ಸೇವಕರು, ಮಂತ್ರಿವರ್ಗದವರೆಲ್ಲರೂ ತನಗೆ ಪ್ರತಿಕೂಲರಾಗಿ ತನ್ನನ್ನು ತಿರಸ್ಕರಿಸುತ್ತಿದ್ದಾರೆ. ಹೆಂಡತಿಯೂ ಸ್ನೇಹಶೂನ್ಯಳಾಗಿಬಿಟ್ಟಿದ್ದಾಳೆ. ಕಾಲಕನ್ಯೆಯು ದೇಹವನ್ನು ವಶಪಡಿಸಿಕೊಂಡಿರುವಳು. ಪಾಂಚಾಲದೇಶವು ಶತ್ರುಗಳ ವಶವಾಗಿ ವಿನಾಶ ಹೊಂದಿದೆ' ಎಂಬುದನ್ನು ಗಮನಿಸಿ ಅವನು ಚಿಂತಾಸಾಗರದಲ್ಲಿ ಮುಳುಗಿಹೋದನು. ಈ ವಿಪತ್ತಿನಿಂದ ಪಾರಾಗುವ ಯಾವ ಉಪಾಯವೂ ಅವನಿಗೆ ತೋಚದೆ ಹೋಯಿತು. ॥ ೭-೮ ॥ ಕಾಲಕನ್ಯೆಯು ನಿಸ್ಸಾರವನ್ನಾಗಿ ಮಾಡಿಬಿಟ್ಟಿದ್ದ ಆ ಭೋಗಗಳಿಗೆ ಆಸೆಪಡುತ್ತಾ ಅವನು ದೀನನಾಗಿದ್ದನು. ತನ್ನ ಪರಲೋಕಗತಿಯನ್ನೂ, ಪರಮಾತ್ಮಸ್ನೇಹವನ್ನೂ ಮರೆತು ಅವನ ಚಿತ್ತವು ಕೇವಲ ಹೆಂಡತಿ-ಮಕ್ಕಳನ್ನು ಸಾಕುವುದರಲ್ಲೇ ತೊಡಗಿಹೋಗಿತ್ತು. ॥ ೯ ॥ ಇಂತಹ ಸ್ಥಿತಿಯಲ್ಲಿ ಅದರಿಂದ ಅಗಲಿರಲು ಇಷ್ಟವಿಲ್ಲದಿದ್ದರೂ, ಅವನು ಆ ನಗರವನ್ನು ಬಿಟ್ಟುಹೋಗಲೇಬೇಕಾಯಿತು. ಏಕೆಂದರೆ, ಅದನ್ನು ಗಂಧರ್ವರೂ, ಯವನರೂ ಮುತ್ತಿ ಲೂಟಿಮಾಡಿಬಿಟ್ಟಿದ್ದರು ಮತ್ತು ಕಾಲಕನ್ಯೆಯು ತುಳಿದುಹಾಕಿಬಿಟ್ಟಿದ್ದಳು. ॥ ೧೦ ॥ ಇಷ್ಟರಲ್ಲೇ ಯವನರಾಜನ ಅಣ್ಣನಾದ ಪ್ರಜ್ವಾರನು ತಮ್ಮನಿಗೆ ಪ್ರಿಯವನ್ನುಂಟುಮಾಡುವ ಸಲುವಾಗಿ ಆ ಇಡೀ ನಗರಿಗೆ ಬೆಂಕಿಯನ್ನು ಹಚ್ಚಿಬಿಟ್ಟನು. ॥ ೧೧ ॥

ಆ ನಗರಿಯು ಹೊತ್ತಿ ಉರಿಯುತ್ತಿದ್ದಾಗ ಪುರವಾಸಿಗಳೂ, ಸೇವಕವೃಂದವೂ, ಸಂತಾನಸಮೂಹವೂ, ಕುಟುಂಬದ ಯಜಮಾನಿಯೊಂದೊಡಗೂಡಿದ ಕುಟುಂಬವತ್ಸಲ ಪುರಂಜನನಿಗೂ ಅತೀವ ದುಃಖವಾಯಿತು. ॥ ೧೨ ॥ ನಗರವು ಕಾಲಕನ್ಯೆಯ ವಶವಾದುದನ್ನು ಕಂಡು ನಗರವನ್ನು ರಕ್ಷಿಸುತ್ತಿದ್ದ ಸರ್ಪಕ್ಕೂ ಬಹಳ ಪೀಡೆಯುಂಟಾಯಿತು. ಏಕೆಂದರೆ, ಯವನರು ಅವನ ವಾಸಸ್ಥಾನದ ಮೇಲೂ ಅಧಿಕಾರ ಪಡೆದುಕೊಂಡಿದ್ದರು ಮತ್ತು ಪ್ರಜ್ವಾರನು ಅದರ ಮೇಲೂ ಆಕ್ರಮಣ ನಡೆಸಿದ್ದನು. ॥ ೧೩ ॥ ಆ ನಗರವನ್ನು ರಕ್ಷಿಸುವ ಸಾಮರ್ಥ್ಯವು ತನಗೆ ಇಲ್ಲದೇ ಹೋದಾಗ ಆ ಮಹಾಸರ್ಪವು – ಉರಿಯುತ್ತಿರುವ ಮರದ ಪೊಟರೆಯಲ್ಲಿರುವ ಸರ್ಪವು ಅಲ್ಲಿಂದ ಹೊರಟುಹೋಗುವಂತೆ – ಅತಿ ಕಷ್ಟದಿಂದ ನಡುಗುತ್ತಾ ಅಲ್ಲಿಂದ ಓಡಿಹೋಗಲು ಬಯಸಿತು. ॥ ೧೪ ॥ ಅದರ ಅಂಗಾಂಗಗಳು ಶಿಥಿಲವಾಗಿ ಹೋಗಿದ್ದವು. ಗಂಧರ್ವರು

ಶಿಥಿಲಾವಯವೋ ಯರ್ಹಿ ಗಂಧರ್ವೈರ್ಹೃತಪೌರುಷಃ ।
ಯವನೈರರಿಭೀ ರಾಜನ್ನುಪರುದ್ಧೋ ರುರೋದ ಹ ॥ ೧೫ ॥

ದುಹಿತೄಃ ಪುತ್ರಪೌತ್ರಾಂಶ್ಚ ಜಾಮಿಜಾಮಾತೃಪಾರ್ಷದಾನ್ ।
ಸ್ವತ್ವಾವಶಿಷ್ಟಂ ಯತ್ಕಿಂಚಿದ್ಗೃಹಕೋಶಪರಿಚ್ಛದಮ್ ॥ ೧೬ ॥

ಅಹಂ ಮಮೇತಿ ಸ್ವೀಕೃತ್ಯ ಗೃಹೇಷು ಕುಮತಿರ್ಗೃಹೀ ।
ದಧ್ಯೌ ಪ್ರಮದಯಾ ದೀನೋ ವಿಪ್ರಯೋಗ ಉಪಸ್ಥಿತೇ ॥ ೧೭ ॥

ಲೋಕಾಂತರಂ ಗತವತಿ ಮಯ್ಯನಾಥಾ ಕುಟುಂಬಿನೀ ।
ವರ್ತಿಷ್ಯತೇ ಕಥಂ ತ್ವೇಷಾ ಬಾಲಕಾನನುಶೋಚತೀ ॥ ೧೮ ॥

ನ ಮಯ್ಯನಾಶಿತೇ ಭುಂಕ್ತೇ ನಾಸ್ನಾತೇ ಸ್ನಾತಿ ಮತ್ಪರಾ ।
ಮಯಿ ರುಷ್ಟೇ ಸುಸಂತ್ರಸ್ತಾ ಭರ್ತ್ಸಿತೇ ಯತವಾಗ್ಭಯಾತ್ ॥ ೧೯ ॥

ಪ್ರಬೋಧಯತಿ ಮಾವಿಜ್ಞಂ ವ್ಯುಷಿತೇ ಶೋಕಕರ್ಶಿತಾ ।
ವರ್ತ್ಮೈತದ್ಗೃಹಮೇಧೀಯಂ ವೀರಸೂರಪಿ ನೇಷ್ಯತಿ ॥ ೨೦ ॥

ಕಥಂ ನು ದಾರಕಾ ದೀನಾ ದಾರಕೀರ್ವಾಪರಾಯಣಾಃ ।
ವರ್ತಿಷ್ಯಂತೇ ಮಯಿ ಗತೇ ಭಿನ್ನನಾವ ಇವೋದಧೌ ॥ ೨೧ ॥

ಏವಂ ಕೃಪಣಯಾ ಬುದ್ಧ್ಯಾ ಶೋಚಂತಮತದರ್ಹಣಮ್ ।
ಗ್ರಹೀತುಂ ಕೃತಧೀರೇನಂ ಭಯನಾಮಾಭ್ಯಪದ್ಯತ ॥ ೨೨ ॥

ಪಶುವದ್ಯವನೈರೇಷ ನೀಯಮಾನಃ ಸ್ವಕಂ ಕ್ಷಯಮ್ ।
ಅನ್ವದ್ರವನ್ನನುಪಥಾಃ ಶೋಚಂತೋ ಭೃಶಮಾತುರಾಃ ॥ ೨೩ ॥

ಅವರ ಎಲ್ಲ ಶಕ್ತಿಯನ್ನು ನಾಶಪಡಿಸಿಬಿಟ್ಟಿದ್ದರು. ಆದುದರಿಂದ ಯವನ ಶತ್ರುಗಳು ತಡೆದಾಗ ಅದು ದುಃಖದಿಂದ ಗೋಳಾಡ ತೊಡಗಿತು. ॥ ೧೫ ॥

ಮನೆ, ಒಡಲು ಮೊದಲಾದುವುಗಳಲ್ಲಿ 'ನಾನು-ನನ್ನದು' ಎಂಬ ಭಾವವನ್ನು ಇಟ್ಟುಕೊಂಡಿದ್ದರಿಂದ ಪುರಂಜನನು ಬುದ್ಧಿಹೀನನಾಗಿಬಿಟ್ಟಿದ್ದನು. ಪತ್ನಿಯ ಪ್ರೇಮಪಾಶದಲ್ಲಿ ಸಿಲುಕಿ ಅವನು ಅತ್ಯಂತ ದೀನನಾಗಿದ್ದನು. ಇವೆಲ್ಲವುಗಳನ್ನು ಅಗಲಿ ಹೋಗುವ ಕಾಲವು ಬಂದಾಗ ಅವನು ತನ್ನ ಮಕ್ಕಳು, ಮೊಮ್ಮಕ್ಕಳು, ಸೊಸೆಯರು, ಅಳಿಯಂದಿರು, ಸೇವಕರು, ಮನೆ, ಭಂಡಾರ, ಮತ್ತು ಇತರ ಪದಾರ್ಥಗಳಲ್ಲಿ ಆತನಿಗೆ ಮಮತೆಯು ಇನ್ನೂ ಉಳಿದುಕೊಂಡಿತ್ತು (ಅವುಗಳ ಭೋಗವಾದರೋ ಎಂದೋ ಬಿಟ್ಟುಹೋಗಿತ್ತು). ಅವರೆಲ್ಲರಿಗಾಗಿ ಹೀಗೆ ಚಿಂತಿಸತೊಡಗಿದನು. ॥ ೧೬-೧೭ ॥

ಅಯ್ಯೋ! ನಾನು ಪರಲೋಕಕ್ಕೆ ಹೋದ ಬಳಿಕ ದೊಡ್ಡ ಕುಟುಂಬಕ್ಕೆ ಒಡತಿಯಾದ ನನ್ನ ಈ ಹೆಂಡತಿಯು ಅಸಹಾಯಕಳಾಗಿ ಹೇಗೆ ತಾನೇ ತನ್ನನ್ನು ನಿರ್ವಹಿಸಿಕೊಳ್ಳಬಲ್ಲಳು ? ಈ ಮಕ್ಕಳು ಮರಿಮಕ್ಕಳನ್ನು ಕುರಿತು ಚಿಂತೆಯೇ ಈಕೆಯನ್ನು ತಿಂದುಬಿಡುವುದಲ್ಲ! ॥ ೧೮ ॥ ಈಕೆಗೆ ನನ್ನ ಮೇಲೆ ಅದೆಷ್ಟು ಪ್ರೀತಿ! ನಾನು ಊಟಮಾಡಿದ ಹೊರತು ತಾನು ಊಟ ಮಾಡುತ್ತಿರಲಿಲ್ಲ, ನಾನು ಸ್ನಾನ ಮಾಡಿದ ಹೊರತು ಸ್ನಾನಮಾಡುತ್ತಿರಲಿಲ್ಲ, ಸದಾ ನನ್ನ ಸೇವೆಯಲ್ಲೇ ಆಸಕ್ತಳಾಗಿರುತ್ತಿದ್ದಳು. ನಾನೇನಾದರೂ ಮುನಿದರೆ ಭಯದಿಂದ ನಡುಗುತ್ತಿದ್ದಳು. ನಾನು ಗದರಿಸಿದರೆ ಹೆದರಿಕೆಯಿಂದ ಬಾಯಿಮುಚ್ಚಿಕೊಂಡು ಬಿಡುತ್ತಿದ್ದಳು. ॥ ೧೯ ॥ ನನ್ನಿಂದ ಏನಾದರೂ ತಪ್ಪುಗಳಾದರೆ ಎಚ್ಚರಿಕೆ ನೀಡುತ್ತಿದ್ದಳು. ಈಕೆಗೆ ನನ್ನ ಮೇಲೆ ಎಷ್ಟು ಪ್ರೀತಿ ಇತ್ತೆಂದರೆ, ನಾನೇನಾದರೂ ಪರದೇಶಕ್ಕೆ ಹೋದರೆ ಆಗ ಈಕೆಯು ಅಗಲಿಕೆಯ ದುಃಖದಿಂದ ಒಣಗಿ ಹೋಗುತ್ತಿದ್ದಳು. ಈಕೆಯು ವೀರಮಾತೆಯೇನೋ ಹೌದು. ಆದರೂ ನನ್ನ ಬಳಿಕ ಈ ಗೃಹಸ್ಥಾಶ್ರಮದ ವ್ಯವಹಾರವನ್ನು ಹೇಗೆ ನಿಭಾಯಿಸಬಲ್ಲಳು ? ॥ ೨೦ ॥ ನನ್ನನ್ನೇ ಏಕಮಾತ್ರ ಆಧಾರವನ್ನಾಗಿ ಹೊಂದಿ ಇಲ್ಲಿರುವ ನನ್ನ ಪುತ್ರ-ಪುತ್ರಿಯರು ನಾನು ಹೊರಟುಹೋದ ಬಳಿಕ ಹೇಗೆ ತಾನೇ ಜೀವನವನ್ನು ಧರಿಸಿಯಾರು ? ಸಮುದ್ರಮಧ್ಯದಲ್ಲಿ ಹಡಗು ಒಡೆದುಹೋಗಲಾಗಿ ಕಳವಳಪಡುವ ಪ್ರಯಾಣಿಕರಂತೆ ಒದ್ದಾಡುವರಲ್ಲ! ಮುಂತಾಗಿ ಪುರಂಜನನು ಚಿಂತಿಸತೊಡಗಿದನು. ॥ ೨೧ ॥

ಜ್ಞಾನದೃಷ್ಟಿಯಿಂದ ಹೀಗೆಲ್ಲ ಶೋಕಪಡುವುದು ಅನುಚಿತವಾಗಿದ್ದರೂ, ಪುರಂಜನನು ಅಜ್ಞಾನಕ್ಕೆ ಒಳಪಟ್ಟು ಹೀಗೆ ದೀನಬುದ್ಧಿಯಿಂದ ತನ್ನ ಹೆಂಡತಿ-ಮಕ್ಕಳಿಗಾಗಿ ದುಃಖದಿಂದ ಕಳವಳಪಡುತ್ತಿದ್ದನು. ಆಗಲೇ ಆ ಬಡಪಾಯಿಯನ್ನು ಹಿಡಿಯುವುದಕ್ಕಾಗಿ ಭಯನೆಂಬ ಯವನರಾಜನು ಅಲ್ಲಿಗೆ ಬಂದನು. ॥ ೨೨ ॥

ಯವನರು ಪಶುವನ್ನು ಎಳೆದುಕೊಂಡು ಹೋಗುವಂತೆ ರಾಜನನ್ನು ಕಟ್ಟಿಕೊಂಡು ತಮ್ಮ ಸ್ಥಾನಕ್ಕೆ ಸೆಳೆದೊಯ್ಯತೊಡಗಿದರು. ಆಗ ಆತನ ಅನುಚರರೂ ಕಡುಶೋಕದಿಂದ ಪೀಡಿತರಾಗಿ ದುಗುಡದಿಂದ ಆತನನ್ನು ಹಿಂಬಾಲಿಸಿದರು. ॥ ೨೩ ॥

ಪುರೀಂ ವಿಹಾಯೋಪಗತ ಉಪರುದ್ಧೋ ಭುಜಂಗಮಃ ।
ಯದಾ ತಮೇವಾನು ಪುರೀ ವಿಶೀರ್ಣಾ ಪ್ರಕೃತಿಂ ಗತಾ
॥ ೨೪ ॥

ವಿಕೃಷ್ಯಮಾಣಃ ಪ್ರಸಭಂ ಯವನೇನ ಬಲೀಯಸಾ ।
ನಾವಿಂದತ್ತಮಸಾಽಽವಿಷ್ಟಃ ಸಖಾಯಂ ಸುಹೃದಂ ಪುರಃ
॥ ೨೫ ॥

ತಂ ಯಜ್ಞಪಶವೋಽನೇನ ಸಂಜ್ಞಪ್ತಾ ಯೇಽದಯಾಲುನಾ ।
ಕುಠಾರೈಶ್ಚಿಚ್ಛಿದುಃ ಕ್ರುದ್ಧಾಃ ಸ್ಮರಂತೋಽಮೀವಮಸ್ಯ ತತ್
॥ ೨೬ ॥

ಅನಂತಪಾರೇ ತಮಸಿ ಮಗ್ನೋ ನಷ್ಟಸ್ಮೃತಿಃ ಸಮಾಃ ।
ಶಾಶ್ವತೀರನುಭೂಯಾರ್ತಿಂ ಪ್ರಮದಾಸಂಗ ದೂಷಿತಃ
॥ ೨೭ ॥

ತಾಮೇವ ಮನಸಾ ಗೃಹ್ಣನ್ಬಭೂವ ಪ್ರಮದೋತ್ತಮಾ ।
ಅನಂತರಂ ವಿದರ್ಭಸ್ಯ ರಾಜಸಿಂಹಸ್ಯ ವೇಶ್ಮನಿ
॥ ೨೮ ॥

ಉಪಯೇಮೇ ವೀರ್ಯಪಣಾಂ ವೈದರ್ಭೀಂ ಮಲಯಧ್ವಜಃ ।
ಯುಧಿ ನಿರ್ಜಿತ್ಯ ರಾಜನ್ಯಾನ್ಪಾಂಡ್ಯಃ ಪರಪುರಂಜಯಃ
॥ ೨೯ ॥

ತಸ್ಯಾಂ ಸ ಜನಯಾಂಚಕ್ರ ಆತ್ಮಜಾಮಸಿತೇಕ್ಷಣಾಮ್ ।
ಯವೀಯಸಃ ಸಪ್ತ ಸುತಾನ್ ಸಪ್ತ ದ್ರವಿಡಭೂಭೃತಃ
॥ ೩೦ ॥

ಏಕೈಕಸ್ಯಾಭವತ್ತೇಷಾಂ ರಾಜನ್ನರ್ಬುದಮರ್ಬುದಮ್ ।
ಭೋಕ್ಷ್ಯತೇ ಯದ್ವಂಶಧರೈರ್ಮಹೀ ಮನ್ವಂತರಂ ಪರಮ್
॥ ೩೧ ॥

ಅಗಸ್ತ್ಯಃ ಪ್ರಾಗ್ದುಹಿತರಮುಪಯೇಮೇ ಧೃತವ್ರತಾಮ್ ।
ಯಸ್ಯಾಂ ದೃಢಚ್ಯುತೋ ಜಾತ ಇಧ್ಮವಾಹಾತ್ಮಜೋ ಮುನಿಃ
॥ ೩೨ ॥

ವಿಭಜ್ಯ ತನಯೇಭ್ಯಃ ಕ್ಷ್ಮಾಂ ರಾಜರ್ಷಿರ್ಮಲಯಧ್ವಜಃ ।
ಆರಿರಾಧಯಿಷುಃ ಕೃಷ್ಣಂ ಸ ಜಗಾಮ ಕುಲಾಚಲಮ್
॥ ೩೩ ॥

ಹಿತ್ವಾ ಗೃಹಾನ್ಸುತಾನ್ಭೋಗಾನ್ವೈದರ್ಭೀ ಮದಿರೇಕ್ಷಣಾ ।
ಅನ್ವಧಾವತ ಪಾಂಡ್ಯೇಶಂ ಜ್ಯೋತ್ಸ್ನೇವ ರಜನೀಕರಮ್
॥ ೩೪ ॥

ಯವನನಿಂದ ತಡೆಯಲ್ಪಟ್ಟ ಸರ್ಪವೂ ಆಗ ಆ ಪುರಿಯನ್ನು ಬಿಟ್ಟು ಇವರೊಂದಿಗೆ ಹೊರಟಿತು. ಅದು ಹೊರಟುಹೋಗುತ್ತಲೇ ಇಡೀ ನಗರವು ಛಿನ್ನ-ಭಿನ್ನವಾಗಿ ತನ್ನ ಕಾರಣದಲ್ಲಿ ಲೀನವಾಗಿ ಹೋಯಿತು. ॥ ೨೪ ॥ ಹೀಗೆ ಮಹಾಬಲಶಾಲಿಯಾದ ಯವನ ರಾಜನು ಬಲಾತ್ಕಾರದಿಂದ ಸೆಳೆದೊಯ್ಯುತ್ತಿದ್ದರೂ ಅಜ್ಞಾನದಲ್ಲಿ ಮುಳುಗಿಹೋಗಿದ್ದ ಪುರಂಜನನು ತನ್ನ ಹಿತೈಷಿಯೂ, ಹಳೆಯಮಿತ್ರನೂ ಆದ ಅವಿಜ್ಞಾತನನ್ನು ಸ್ಮರಿಸಲಿಲ್ಲ. ॥ ೨೫ ॥ ಹಿಂದೆ ಪುರಂಜನನು ಯಜ್ಞದಲ್ಲಿ ಬಲಿ ಕೊಟ್ಟಿದ್ದ ಪಶುಗಳೇ ಈಗ ಅವನು ಕೊಟ್ಟಿದ್ದ ಪೀಡೆಯನ್ನು ನೆನೆಸಿಕೊಂಡು ಕ್ರೋಧದಿಂದ ಅವನನ್ನು ಕೊಡಲಿಗಳಿಂದ ಕತ್ತರಿಸತೊಡಗಿದವು. ॥ ೨೬ ॥ ಅನೇಕ ವರ್ಷಗಳ ಕಾಲ ಅವಿವೇಕದ ಸ್ಥಿತಿಯಲ್ಲೇ ಬಿದ್ದು ಆತನು ನಿರಂತರ ವಾಗಿ ಕಷ್ಟಗಳನ್ನು ಅನುಭವಿಸುತ್ತಿದ್ದನು. ಸ್ತ್ರೀಯಲ್ಲಿ ಇಟ್ಟಿದ್ದ ಆಸಕ್ತಿ ಯಿಂದಲೇ ಅವನಿಗೆ ಇಂತಹ ದುರ್ಗತಿಯು ಉಂಟಾಗಿತ್ತು. ॥ ೨೭ ॥ ತನ್ನ ಕೊನೆಯ ಕಾಲದಲ್ಲಿಯೂ ಸ್ತ್ರೀಚಿಂತನೆಯನ್ನೇ ಮಾಡುತ್ತಿದ್ದುದರಿಂದ ಪುರಂಜನನು ಮುಂದಿನ ಜನ್ಮದಲ್ಲಿ ನೃಪ ಶ್ರೇಷ್ಠನಾದ ವಿದರ್ಭರಾಜನ ಮನೆಯಲ್ಲಿ ಓರ್ವ ಸುಂದರಿಯಾಗಿ ಹುಟ್ಟಿದನು. ॥ ೨೮ ॥ ಆ ವಿದರ್ಭಪುತ್ರಿಯ ವಿವಾಹಕಾಲವು ಒದಗಿದಾಗ ತಂದೆ ವಿದರ್ಭಭೂಪತಿಯು – 'ಸರ್ವಶ್ರೇಷ್ಠನಾದ ವೀರ ಪರಾಕ್ರಮಿಯು ಮಾತ್ರವೇ ನನ್ನ ಈ ಪುತ್ರಿಯ ಕೈಹಿಡಿಯ ಬಲ್ಲನು' ಎಂದು ಘೋಷಿಸಿದನು. ಆಗ ಶತ್ರು ಪುರಗಳನ್ನು ಗೆಲ್ಲು ವುದರಲ್ಲಿ ಸಮರ್ಥನಾದ ಪಾಂಡ್ಯನರೇಶ ಮಲಯಧ್ವಜನು ಯುದ್ಧಭೂಮಿಯಲ್ಲಿ ಎಲ್ಲ ರಾಜರನ್ನೂ ಸೋಲಿಸಿ ವಿದರ್ಭಪುತ್ರಿ ಯನ್ನು ಮದುವೆಯಾದನು. ॥ ೨೯ ॥ ಆಕೆಯಲ್ಲಿ ಆ ಮಲಯ ಧ್ವಜನು ಸುಂದರಿಯಾಗಿದ್ದ ಒಬ್ಬ ಕನ್ಯೆಯನ್ನೂ ಮತ್ತು ಆಕೆಯ ತಮ್ಮಂದಿರನ್ನಾಗಿ ಏಳು ಮಂದಿ ಪುತ್ರರನ್ನೂ ಪಡೆದನು. ಆ ಪುತ್ರರೇ ಮುಂದೆ ದ್ರವಿಡದೇಶದ ಏಳು ಮಂದಿ ರಾಜರಾದರು. ॥ ೩೦ ॥ ಎಲೈ ರಾಜನೇ! ಮತ್ತೆ ಅವರಲ್ಲಿ ಪ್ರತಿಯೊರ್ವ ಪುತ್ರರಿಗೂ ಬಹುಮಂದಿ ಪುತ್ರರು ಹುಟ್ಟಿದರು. ಆ ವಂಶದವರು ಈ ಭೂಮಿ ಯನ್ನು ಮನ್ವಂತರದ ಕೊನೆಯವರೆಗೂ ಮತ್ತು ಅನಂತರವು ಅನು ಭವಿಸುವರು. ॥ ೩೧ ॥ ಮಲಯಧ್ವಜ ರಾಜನ ಮೊದಲನೆಯ ಪುತ್ರಿಯು ತುಂಬಾ ವ್ರತನಿಷ್ಠಳಾಗಿದ್ದಳು. ಅಗಸ್ತ್ಯಮಹರ್ಷಿಗಳು ಆಕೆ ಯನ್ನು ವಿವಾಹವಾಗಿ ದೃಢಚ್ಯುತನೆಂಬ ಪುತ್ರನನ್ನು ಆಕೆಯಿಂದ ಪಡೆದರು. ದೃಢಚ್ಯುತನ ಸುಪುತ್ರನೇ ಇಧ್ಮವಾಹನೆನಿಸಿದನು. ॥ ೩೨ ॥

ಕೊನೆಗೆ ■ ರಾಜರ್ಷಿ ಮಲಯಧ್ವಜನು ಭೂಮಿಯನ್ನು ತನ್ನ ಪುತ್ರರಿಗೆ ಹಂಚಿಕೊಟ್ಟು ಭಗವಾನ್ ಶ್ರೀಕೃಷ್ಣನನ್ನು ಆರಾಧಿಸ ಬೇಕೆಂಬ ಇಚ್ಛೆಯಿಂದ ಮಲಯಪರ್ವತಕ್ಕೆ ತೆರಳಿದನು. ॥ ೩೩ ॥ ಆಗ ಚಂದ್ರಿಕೆಯು ಚಂದ್ರನನ್ನು ಅನುಸರಿಸುವಂತೆ ಸುಂದರಿಯಾದ ವೈದರ್ಭಿಯು ತನ್ನ ಮನೆ, ಮಕ್ಕಳು ಮತ್ತು ಭೋಗಗಳೆಲ್ಲವನ್ನೂ ತೊರೆದು ತನ್ನ ಪತಿಯಾದ ಪಾಂಡ್ಯನರೇಶನನ್ನು ಅನುಸರಿಸಿ ಹೋದಳು. ॥ ೩೪ ॥

ತತ್ರ ಚಂದ್ರವಸಾ ನಾಮ ತಾಮ್ರಪರ್ಣೀ ವಟೋದಕಾ ।
ತತ್ಪುಣ್ಯಸಲಿಲೈರ್ನಿತ್ಯಮುಭಯತ್ರಾತ್ಮನೋ ಮೃಜನ್
॥ ೩೫ ॥

ಕಂದಾಷ್ಟಿಭಿರ್ಮೂಲಫಲೈಃ ಪುಷ್ಪಪರ್ಣೈಸ್ತೃಣೋದಕೈಃ ।
ವರ್ತಮಾನಃ ಶನೈರ್ಗಾತ್ರಕರ್ಶನಂ ತಪ ಆಸ್ಥಿತಃ
॥ ೩೬ ॥

ಶೀತೋಷ್ಣವಾತವರ್ಷಾಣಿ ಕ್ಷುತ್ಪಿಪಾಸೇ ಪ್ರಿಯಾಪ್ರಿಯೇ ।
ಸುಖದುಃಖೇ ಇತಿ ದ್ವಂದ್ವಾನ್ಯಜಯತ್ಸಮದರ್ಶನಃ
॥ ೩೭ ॥

ತಪಸಾ ವಿದ್ಯಯಾ ಪಕ್ವಕಷಾಯೋ ನಿಯಮೈರ್ಯಮೈಃ ।
ಯುಯುಜೇ ಬ್ರಹ್ಮಣ್ಯಾತ್ಮಾನಂ ವಿಜಿತಾಕ್ಷಾನಿಲಾಶಯಃ
॥ ೩೮ ॥

ಆಸ್ತೇ ಸ್ಥಾಣುರಿವೈಕತ್ರ ದಿವ್ಯಂ ವರ್ಷಶತಂ ಸ್ಥಿರಃ ।
ವಾಸುದೇವೇ ಭಗವತಿ ನಾನ್ಯದ್ವೇದೋದ್ವಹನ್ರತಿಮ್
॥ ೩೯ ॥

ಸ ವ್ಯಾಪಕತಯಾಽಽತ್ಮಾನಂ ವ್ಯತಿರಿಕ್ತತಯಾಽಽತ್ಮನಿ ।
ವಿದ್ವಾನ್ಸ್ವಪ್ನ ಇವಾಮರ್ಶಸಾಕ್ಷಿಣಂ ವಿರರಾಮ ಹ
॥ ೪೦ ॥

ಸಾಕ್ಷಾದ್ಭಗವತೋಕ್ತೇನ ಗುರುಣಾ ಹರಿಣಾ ನೃಪ ।
ವಿಶುದ್ಧ ಜ್ಞಾನದೀಪೇನ ಸ್ಫುರತಾ ವಿಶ್ವತೋಮುಖಮ್
॥ ೪೧ ॥

ಪರೇ ಬ್ರಹ್ಮಣಿ ಚಾತ್ಮಾನಂ ಪರಂ ಬ್ರಹ್ಮ ತಥಾತ್ಮನಿ ।
ವೀಕ್ಷಮಾಣೋ ವಿಹಾಯೇಕ್ಷಾಮಸ್ಮಾದುಪರರಾಮ ಹ
॥ ೪೨ ॥

ಪತಿಂ ಪರಮಧರ್ಮಜ್ಞಂ ವೈದರ್ಭೀ ಮಲಯಧ್ವಜಮ್ ।
ಪ್ರೇಮ್ಣಾ ಪರ್ಯಚರದ್ಧಿತ್ವಾ ಭೋಗಾನ್ ಸಾ ಪತಿದೇವತಾ
॥ ೪೩ ॥

ಚೀರವಾಸಾ ವ್ರತಕ್ಷಾಮಾ ವೇಣೀಭೂತಶಿರೋರುಹಾ ।
ಬಭಾವುಪ ಪತಿಂ ಶಾಂತಾ ಶಿಖಾ ಶಾಂತಮಿವಾನಲಮ್
॥ ೪೪ ॥

ಅಜಾನತೀ ಪ್ರಿಯತಮಂ ಯದೋಪರತಮಂಗನಾ ।
ಸುಸ್ಥಿರಾಸನಮಾಸಾದ್ಯ ಯಥಾಪೂರ್ವಮುಪಾಚರತ್
॥ ೪೫ ॥

ಪಾಂಡ್ಯಭೂಪತಿಯು ಬಂದ ಆ ತಪೋವನದಲ್ಲಿ ಚಂದ್ರವಸಾ, ತಾಮ್ರಪರ್ಣೀ ಮತ್ತು ವಟೋದಕಾ ಎಂಬ ಮೂರು ನದಿಗಳಿದ್ದವು. ರಾಜನು ಪವಿತ್ರವಾದ ಆ ತೀರ್ಥಗಳಲ್ಲಿ ಸ್ನಾನಮಾಡಿ ಪ್ರತಿದಿನವೂ ತನ್ನ ದೇಹವನ್ನೂ, ಮನಸ್ಸನ್ನೂ ಶುಚಿಪಡಿಸಿಕೊಳ್ಳುತ್ತಿದ್ದನು. ॥ ೩೫ ॥ ಅಲ್ಲಿ ಇದ್ದುಕೊಂಡು ಅವನು ಕಂದ-ಮೂಲ, ಬೀಜ, ಫಲ-ಪುಷ್ಪ ಎಲೆ, ಹುಲ್ಲು ಮತ್ತು ನೀರು ಇವುಗಳಿಂದಲೇ ದೇಹಯಾತ್ರೆಯನ್ನು ನಡೆಸುತ್ತಾ ಬಹು ಕಠೋರವಾದ ತಪಸ್ಸನ್ನಾಚರಿಸಿದನು. ಇದರಿಂದ ದಿನಗಳೆದಂತೆ ಅವನ ಶರೀರವು ತುಂಬಾ ಸೊರಗಿಹೋಯಿತು. ॥ ೩೬ ॥ ಅವನು ಎಲ್ಲರಲ್ಲೂ ಸಮದೃಷ್ಟಿಯನ್ನಿಟ್ಟುಕೊಂಡು ಶೀತೋಷ್ಣ ಮಳೆ-ಗಾಳಿ, ಹಸಿವು-ಬಾಯಾರಿಕೆ, ಪ್ರಿಯ-ಅಪ್ರಿಯ, ಸುಖ-ದುಃಖಗಳೇ ಮುಂತಾದ ಎಲ್ಲ ದ್ವಂದ್ವಗಳನ್ನು ಗೆದ್ದುಕೊಂಡನು. ॥ ೩೭ ॥ ತಪಸ್ಸು ಮತ್ತು ಉಪಾಸನೆಗಳಿಂದ ವಾಸನೆಗಳನ್ನು ನಿರ್ಮೂಲನೆಗೊಳಿಸಿ, ಯಮ-ನಿಯಮಾದಿಗಳ ಮೂಲಕ ಇಂದ್ರಿಯಗಳನ್ನು ಪ್ರಾಣಗಳನ್ನು ಮತ್ತು ಮನವನ್ನು ವಶಪಡಿಸಿಕೊಂಡು ಅವನು ಆತ್ಮವನ್ನು ಪರಬ್ರಹ್ಮನಲ್ಲಿ ಒಂದಾಗಿಸಿದನು. ॥ ೩೮ ॥ ಹೀಗೆ ನೂರು ದಿವ್ಯವರ್ಷಗಳವರೆಗೆ ಕಂಬದಂತೆ ನಿಶ್ಚಲಭಾವದಿಂದ ಒಂದೇ ಸ್ಥಾನದಲ್ಲಿ ಕುಳಿತಿದ್ದನು. ಭಗವಾನ್ ವಾಸುದೇವನಲ್ಲಿ ದೃಢವಾದ ಪ್ರೇಮಾಭಕ್ತಿ ಉಂಟಾದಕಾರಣ ಇಷ್ಟು ಸಮಯದವರೆಗೆ ಅವನಿಗೆ ಶರೀರಾದಿಗಳಲ್ಲಿ ಎಚ್ಚರವೇ ಇರಲಿಲ್ಲ. ॥ ೩೯ ॥ ರಾಜನೇ! ಗುರುಸ್ವರೂಪಿಯಾದ ಸಾಕ್ಷಾತ್ ಶ್ರೀಹರಿಯು ಉಪದೇಶಿಸಿರುವ ಹಾಗೂ ತನ್ನ ಅಂತಃಕರಣದಲ್ಲಿ ಎಲ್ಲಕಡೆಗೆ ಸ್ಫುರಣೆಗೊಳ್ಳುವ ವಿಶುದ್ಧ ವಿಜ್ಞಾನದೀಪದಿಂದ - ಅಂತಃಕರಣದ ಪ್ರವೃತ್ತಿಯು ಪ್ರಕಾಶಕನಾದ ಆತ್ಮನು ಸ್ವಪ್ನಾವಸ್ಥೆಯಂತೆ ದೇಹಾದಿ ಸಮಸ್ತ ಉಪಾಧಿಗಳಲ್ಲಿ ವ್ಯಾಪ್ತವೂ ಹಾಗೂ ಅದರಿಂದ ಬೇರೆಯೂ ಆಗಿದ್ದಾನೆ ಎಂದು ಅವನು ನೋಡಿದನು. ಹೀಗೆ ಅನುಭವಪಡೆದು ಎಲ್ಲದರಲ್ಲಿ ಉದಾಸೀನನಾದನು. ॥ ೪೦-೪೧ ॥ ಮತ್ತೆ ತನ್ನ ಆತ್ಮನನ್ನು ಪರಬ್ರಹ್ಮನಲ್ಲಿಯೂ ಮತ್ತು ಪರಬ್ರಹ್ಮನನ್ನು ತನ್ನಾತ್ಮನಲ್ಲೂ ಅಭಿನ್ನರೂಪದಿಂದ ನೋಡಿದನು ಮತ್ತು ಕೊನೆಗೆ ಈ ಅಭೇದ ಚಿಂತನೆಯನ್ನೂ ತ್ಯಜಿಸಿ ಪೂರ್ಣವಾಗಿ ಶಾಂತನಾದನು. ॥ ೪೨ ॥

ರಾಜೇಂದ್ರನೇ! ಪತಿವ್ರತಾಶಿರೋಮಣಿಯಾದ ವಿದರ್ಭರಾಜನ ಪುತ್ರಿಯು ಅಲ್ಲಿ ಎಲ್ಲ ಭೋಗಗಳನ್ನು ತೊರೆದು ಪ್ರೇಮದಿಂದ ಪರಮಧರ್ಮಜ್ಞನಾದ ತನ್ನ ಪತಿ ಮಲಯಧ್ವಜನ ಸೇವೆಯನ್ನು ಮಾಡುತ್ತಿದ್ದಳು. ॥ ೪೩ ॥ ಆಕೆಯು ನಾರುಮಡಿಯನ್ನುಟ್ಟು ವ್ರತ-ಉಪವಾಸಾದಿಗಳನ್ನು ಮಾಡುತ್ತಿದ್ದುದರಿಂದ ಆಕೆಯ ಶರೀರವು ತುಂಬಾ ಕೃಶವಾಗಿಬಿಟ್ಟಿತ್ತು. ತಲೆಗೂದಲು ಸಂಸ್ಕಾರವಿಲ್ಲದೆ ಜಟೆಯಾಗಿಬಿಟ್ಟಿತ್ತು. ಆಗ ಆಕೆಯು ತನ್ನ ಪತಿದೇವನ ಪಕ್ಕದಲ್ಲಿ ಶಾಂತವಾದ ಅಗ್ನಿಜ್ವಾಲೆಯಂತೆ ಪ್ರಶಾಂತವಾದ ಮುಖಮುದ್ರೆಗಳಿಂದ ಶೋಭಿಸುತ್ತಿದ್ದಳು. ॥ ೪೪ ॥ ಆ ವೇಳೆಗಾಗಲೇ ಪತಿದೇವನು ಪರಮಪದವನ್ನು ಸೇರಿಕೊಂಡುಬಿಟ್ಟಿದ್ದನು. ಆದರೂ ಆತನ ಆಸನ ಬಂಧವು ಹಾಗೆಯೇ ಸ್ಥಿರವಾಗಿತ್ತು. ಈ ರಹಸ್ಯವನ್ನರಿಯದೆ ಆ ಮುಗ್ಧೆಯು ಆತನ ದೇಹದ ಬಳಿಗೆ ಹೋಗಿ ಹಿಂದಿನಂತೆಯೇ ಸೇವೆ ಮಾಡತೊಡಗಿದಳು. ॥ ೪೫ ॥

ಯದಾ ನೋಪಲಭೇತಾಂಘ್ರಾವೂಷ್ಮಾಣಂ ಪತ್ಯುರರ್ಚತೀ ।
ಆಸೀತ್ಸಂವಿಗ್ನಹೃದಯಾ ಯೂಥಭ್ರಷ್ಟಾ ಮೃಗೀ ಯಥಾ
॥ ೪೬ ॥

ಆತ್ಮಾನಂ ಶೋಚತೀ ದೀನಮಬಂಧುಂ ವಿಕ್ಲವಾಶ್ರುಭಿಃ ।
ಸ್ತನಾವಾಸಿಚ್ಯ ವಿಪಿನೇ ಸುಸ್ವರಂ ಪ್ರರುರೋದ ಸಾ
॥ ೪೭ ॥

ಉತ್ತಿಷ್ಠೋತ್ತಿಷ್ಠ ರಾಜರ್ಷೇ ಇಮಾಮುದಧಿಮೇಖಲಾಮ್ ।
ದಸ್ಯುಭ್ಯಃ ಕ್ಷತ್ರಬಂಧುಭ್ಯೋ ಬಿಭ್ಯತೀಂ ಪಾತುಮರ್ಹಸಿ
॥ ೪೮ ॥

ಏವಂ ವಿಲಪತೀ ಬಾಲಾ ವಿಪಿನೇಽನುಗತಾ ಪತಿಮ್ ।
ಪತಿತಾ ಪಾದಯೋರ್ಭರ್ತೂ ರುದತ್ಯಶ್ರೂಣ್ಯವರ್ತಯತ್
॥ ೪೯ ॥

ಚಿತಿಂ ದಾರುಮಯೀಂ ಚಿತ್ವಾ ತಸ್ಯಾಂ ಪತ್ಯುಃ ಕಲೇವರಮ್ ।
ಆದೀಪ್ಯ ಚಾನುಮರಣೇ ವಿಲಪಂತೀ ಮನೋ ದಧೇ
॥ ೫೦ ॥

ತತ್ರ ಪೂರ್ವತರಃ ಕಶ್ಚಿತ್ಸಖಾ ಬ್ರಾಹ್ಮಣ ಆತ್ಮವಾನ್ ।
ಸಾಂತ್ವಯನ್ವಲ್ಗುನಾ ಸಾಮ್ನಾ ತಾಮಾಹ ರುದತೀಂ ಪ್ರಭೋ
॥ ೫೧ ॥

ಬ್ರಾಹ್ಮಣ ಉವಾಚ

ಕಾ ತ್ವಂ ಕಸ್ಯಾಸಿ ಕೋ ವಾಯಂ ಶಯಾನೋ ಯಸ್ಯ ಶೋಚಸಿ ।
ಜಾನಾಸಿ ಕಿಂ ಸಖಾಯಂ ಮಾಂ ಯೇನಾಗ್ರೇ ವಿಚಚರ್ಥ ಹ
॥ ೫೨ ॥

ಅಪಿ ಸ್ಮರಸಿ ಚಾತ್ಮಾನಮವಿಜ್ಞಾತಸಖಂ ಸಖೇ ।
ಹಿತ್ವಾ ಮಾಂ ಪದಮನ್ವಿಚ್ಛನ್ಭೌಮ ಭೋಗರತೋ ಗತಃ
॥ ೫೩ ॥

ಹಂಸಾವಹಂ ಚ ತ್ವಂ ಚಾರ್ಯ ಸಖಾಯೌ ಮಾನಸಾಯನೌ ।
ಅಭೂತಾಮಂತರಾ ವೌಕಃ ಸಹಸ್ರಪರಿವತ್ಸರಾನ್
॥ ೫೪ ॥

ಸ ತ್ವಂ ವಿಹಾಯ ಮಾಂ ಬಂಧೋ
ಗತೋ ಗ್ರಾಮ್ಯಮತಿರ್ಮಹೀಮ್ ।
ವಿಚರನ್ಪದಮದ್ರಾಕ್ಷೀಃ
ಕಯಾಚಿನ್ನಿರ್ಮಿತಂ ಸ್ತ್ರಿಯಾ ॥ ೫೫ ॥

ಪಂಚಾರಾಮಂ ನವದ್ವಾರಮೇಕಪಾಲಂ ತ್ರಿಕೋಷ್ಠಕಮ್ ।
ಷಟ್ಕುಲಂ ಪಂಚವಿಪಣಂ ಪಂಚಪ್ರಕೃತಿ ಸ್ತ್ರೀಧವಮ್
॥ ೫೬ ॥

ಪಾದಸೇವೆ ಮಾಡುತ್ತಿದ್ದಾಗ ಪತಿಯ ಚರಣಗಳಲ್ಲಿ ಸ್ವಲ್ಪವೂ ಕಾವು ಕಾಣದೆ ಹೋಗಲು – ಆಕೆಯು ಹಿಂಡನ್ನು ಅಗಲಿದ ಹೆಣ್ಣು ಹುಲ್ಲೆಯಂತೆ ಮನಸ್ಸಿನಲ್ಲಿ ಅತ್ಯಂತ ಕಳವಳಗೊಂಡಳು. ॥ ೪೬ ॥ ಆ ನಿಬಿಡವಾದ ಕಾಡಿನಲ್ಲಿ ತನ್ನನ್ನು ಒಬ್ಬಂಟಿಗಳೆಂದು ನೋಡಿ ದೀನಾವಸ್ಥೆಯನ್ನು ಹೊಂದಿ ಅವಳು ಶೋಕಿಸುತ್ತಾ ಕಣ್ಣೀರ ಧಾರೆಯಿಂದ ಸ್ತನಗಳು ನೆನೆದುಹೋಗಲು ಗಟ್ಟಿಯಾಗಿ ಅಳತೊಡಗಿದಳು. ॥ ೪೭ ॥ ಓ ರಾಜರ್ಷಿಯೇ ಏಳು! ಏಳು! ಸಮುದ್ರದಿಂದ ಸುತ್ತುವರಿಯಲ್ಪಟ್ಟಿರುವ ಈ ಭೂದೇವಿಯು ದರೋಡೆಗಾರರಿಂದಲೂ, ಅಧಾರ್ಮಿಕರಾದ ರಾಜರಿಂದಲೂ ಭಯಪಡುತ್ತಿರುವಳು. ನೀನು ಈಕೆಯನ್ನು ರಕ್ಷಿಸು ಎಂದು ವಿಲಪಿಸಿದಳು. ॥ ೪೮ ॥ ಪತಿಯೊಡನೆ ಅರಣ್ಯಕ್ಕೆ ತೆರಳಿದ್ದ ಆ ಅಬಲೆಯು ಹೀಗೆ ಗೋಳಿಡುತ್ತಾ ಪತಿಯ ಪಾದಗಳ ಮೇಲೆ ಬಿದ್ದು ಅಳುತ್ತಾ ಕಣ್ಣೀರು ಸುರಿಸುತ್ತಿದ್ದಳು. ॥ ೪೯ ॥ ಆಕೆಯು ಕಟ್ಟಿಗೆಗಳಿಂದ ಚಿತೆಯನ್ನು ರಚಿಸಿ ಅದರ ಮೇಲೆ ಪತಿಯ ಶವವನ್ನಿರಿಸಿ, ಬೆಂಕಿಯನ್ನಿಟ್ಟು ರೋದಿಸುತ್ತಾ ತಾನೂ ಸಹಗಮನ ಮಾಡಲು ನಿಶ್ಚಯಿಸಿದಳು. ॥ ೫೦ ॥ ರಾಜೇಂದ್ರನೇ! ಆಗಲೇ ಆಕೆಯ ಯಾರೋ ಹಳೆಯ ಗೆಳೆಯನಾದ ಓರ್ವ ಆತ್ಮಜ್ಞಾನಿ ಬ್ರಾಹ್ಮಣನು ಅಲ್ಲಿಗೆ ಬಂದನು. ಅವನು ಅಳುತ್ತಿದ್ದ ಆ ಅಬಲೆಯನ್ನು ಸವಿಮಾತುಗಳಿಂದ ಸಂತೈಸುತ್ತಾ ಹೀಗೆಂದನು. ॥ ೫೧ ॥

ಬ್ರಾಹ್ಮಣನು ಹೇಳಿದನು – "ಯಾರಮ್ಮ ನೀನು? ಯಾರ ಮಗಳು? ಮಲಗಿಕೊಂಡಿರುವ ಯಾವನೋ ಪುರುಷನನ್ನು ಕುರಿತು ಅಳುತ್ತಿರುವೆಯಲ್ಲ! ಈತನು ಯಾರು? ನಾನು ಯಾರೆಂಬುದು ನಿನಗೆ ಗೊತ್ತಿಲ್ಲವೇ? ನೀನು ಹಿಂದೆ ನನ್ನೊಡನೆ ಓಡಾಡುತ್ತಿದ್ದೆಯಲ್ಲ, ಆ ಮಿತ್ರನೇ ನಾನಮ್ಮ." ॥ ೫೨ ॥ ಸ್ನೇಹಿತನೇ! ನಿನಗೆ ಅವಿಜ್ಞಾತನೆಂಬ ಒಬ್ಬ ಗೆಳೆಯನಿದ್ದನೆಂಬುದು ನೆನಪಿದೆಯೇ? ಆ ಅವಿಜ್ಞಾತನೇ ನಾನು. ನೀನು ಭೂಮಿಯ ಭೋಗಗಳನ್ನು ಅನುಭವಿಸುವುದಕ್ಕಾಗಿ ವಾಸಸ್ಥಾನವನ್ನು ಹುಡುಕುತ್ತಾ ನನ್ನನ್ನು ಬಿಟ್ಟು ಹೊರಟುಬಿಟ್ಟೆ. ॥ ೫೩ ॥ ಆರ್ಯನೇ! ನೀನು ಮತ್ತು ನಾನು ಇಬ್ಬರೂ ಹಿಂದೆ ಪರಸ್ಪರ ಮಿತ್ರರಾಗಿದ್ದು ಮಾನಸಸರೋವರ ನಿವಾಸಿ ಹಂಸಗಳಾಗಿದ್ದೆವು. ನಾವಿಬ್ಬರೂ ಸಾವಿರಾರು ವರ್ಷಗಳವರೆಗೆ ಯಾವುದೇ ವಾಸಸ್ಥಾನವಿಲ್ಲದೆ ಇರುತ್ತಿದ್ದೆವು. ॥ ೫೪ ॥ ಆದರೆ ಗೆಳೆಯನೇ! ನೀನು ವಿಷಯಗಳನ್ನು ಭೋಗಿಸುವ ಇಚ್ಛೆಯಿಂದ ನನ್ನನ್ನು ಬಿಟ್ಟು ಈ ಭೂಮಿಗೆ ಬಂದೆ. ಇಲ್ಲಿ ಅಲೆದಾಡುತ್ತಾ ಇರುವಾಗ ಓರ್ವ ಹೆಂಗಸು ನಿರ್ಮಿಸಿದ್ದ ಜಾಗವನ್ನು ನೋಡಿದೆ. ॥ ೫೫ ॥ ಅದರಲ್ಲಿ ಐದು ಉದ್ಯಾನಗಳೂ, ಒಂಭತ್ತು ಬಾಗಿಲುಗಳೂ, ಒಬ್ಬ ದ್ವಾರಪಾಲನೂ, ಮೂರು ಕೋಟೆಗಳೂ, ಆರುಮಂದಿ ವರ್ತಕರು, ಐದು ಅಂಗಡಿಗಳೂ ಇದ್ದುವು. ಅದು ಐದು ಉಪಾದಾನ ಕಾರಣಗಳಿಂದ ರಚಿತವಾಗಿದ್ದು, ಅದರ ಒಡತಿ ಒಬ್ಬಳು ಸ್ತ್ರೀಯಾಗಿದ್ದಳು. ॥ ೫೬ ॥

ಮಹಾರಾಜನೇ! ಇಂದ್ರಿಯಗಳ ಐದು ವಿಷಯಗಳು ಅದರ ಉದ್ಯಾನಗಳು. ಒಂಭತ್ತು ಇಂದ್ರಿಯಗಳು ಅದರ ಬಾಗಿಲುಗಳ

ಪಂಚೇಂದ್ರಿಯಾರ್ಥಾ ಆರಾಮಾ ದ್ವಾರಃ ಪ್ರಾಣಾ ನವಪ್ರಭೋ ।
ತೇಜೋಽಬನ್ನಾನಿ ಕೋಷ್ಠಾನಿ ಕುಲಮಿಂದ್ರಿಯಸಂಗ್ರಹಃ ॥ ೫೭ ॥

ವಿಪಣಸ್ತು ಕ್ರಿಯಾಶಕ್ತಿರ್ಭೂತಪ್ರಕೃತಿರವ್ಯಯಾ ।
ಶಕ್ತ್ಯಧೀಶಃ ಪುಮಾಂಸ್ತತ್ರ ಪ್ರವಿಷ್ಟೋ ನಾವಬುಧ್ಯತೇ ॥ ೫೮ ॥

ತಸ್ಮಿಂಸ್ತ್ವಂ ರಾಮಯಾ ಸ್ಪೃಷ್ಟೋ ರಮಮಾಣೋಽಶ್ರುತಸ್ಮೃತಿಃ ।
ತತ್ಸಂಗಾದೀದೃಶೀಂ ಪ್ರಾಪ್ತೋ ದಶಾಂ ಪಾಪೀಯಸೀಂ ಪ್ರಭೋ ॥ ೫೯ ॥

ನ ತ್ವಂ ವಿದರ್ಭದುಹಿತಾ ನಾಯಂ ವೀರಃ ಸುಹೃತ್ತವ ।
ನ ಪತಿಸ್ತ್ವಂ ಪುರಂಜನ್ಯಾ ರುದ್ಧೋ ನವಮುಖೇ ಯಯಾ ॥ ೬೦ ॥

ಮಾಯಾ ಹ್ಯೇಷಾ ಮಯಾ ಸೃಷ್ಟಾ
ಯತ್ಪುಮಾಂಸಂ ಸ್ತ್ರಿಯಂ ಸತೀಮ್ ।
ಮನ್ಯಸೇ ನೋಭಯಂ ಯದ್ವೈ
ಹಂಸೌ ಪಶ್ಯಾವಯೋರ್ಗತಿಮ್ ॥ ೬೧ ॥

ಅಹಂ ಭವಾನ್ನ ಚಾನ್ಯಸ್ತ್ವಂ ತ್ವಮೇವಾಹಂ ವಿಚಕ್ಷ್ವ ಭೋಃ ।
ನ ನೌ ಪಶ್ಯಂತಿ ಕವಯಶ್ಛಿದ್ರಂ ಜಾತು ಮನಾಗಪಿ ॥ ೬೨ ॥

ಯಥಾ ಪುರುಷ ಆತ್ಮಾನಮೇಕಮಾದರ್ಶಚಕ್ಷುಷೋಃ ।
ದ್ವಿಧಾಭೂತಮವೇಕ್ಷೇತ ತಥೈವಾಂತರಮಾವಯೋಃ ॥ ೬೩ ॥

ಏವಂ ಸ ಮಾನಸೋ ಹಂಸೋ ಹಂಸೇನ ಪ್ರತಿಬೋಧಿತಃ ।
ಸ್ವಸ್ಥಸ್ತದ್ವ್ಯಭಿಚಾರೇಣ ನಷ್ಟಾಮಾಪ ಪುನಃ ಸ್ಮೃತಿಮ್ ॥ ೬೪ ॥

ಬರ್ಹಿಷ್ಮನ್ನೇತದಧ್ಯಾತ್ಮಂ ಪಾರೋಕ್ಷ್ಯೇಣ ಪ್ರದರ್ಶಿತಮ್ ।
ಯತ್ಪರೋಕ್ಷಪ್ರಿಯೋ ದೇವೋಭಗವಾನ್ವಿಶ್ವಭಾವನಃ ॥ ೬೫ ॥

ದ್ರವ್ಯ. ತೇಜಸ್ಸು, ಜಲ ಮತ್ತು ಅನ್ನ ಇವು ಮೂರು ಕೋಟೆಗಳು. ಮನಸ್ಸು ಮತ್ತು ಐದು ಜ್ಞಾನೇಂದ್ರಿಯಗಳು ಸೇರಿ ಒಟ್ಟಿಗೆ ಆರು ಮಂದಿ ಅಲ್ಲಿಯ ವರ್ತಕರಾಗಿದ್ದರು. ಕ್ರಿಯಾಶಕ್ತಿರೂಪವಾದ ಕರ್ಮೇಂದ್ರಿಯಗಳೇ ಅಲ್ಲಿಯ ಅಂಗಡಿಗಳು. ಪಂಚಮಹಾಭೂತಗಳೇ ಎಂದಿಗೂ ಕ್ಷೀಣಿಸದೇ ಇರುವ ಅದರ ಉಪಾದಾನ ಕಾರಣಗಳಾಗಿದ್ದವು ಮತ್ತು ಬುದ್ಧಿಶಕ್ತಿಯೇ ಅದರ ಒಡತಿಯು. ಅದರಲ್ಲಿ ಪ್ರವೇಶಿಸಿದಾಗ ಪುರುಷನು ಜ್ಞಾನಶೂನ್ಯನಾಗಿ, ತನ್ನ ಸ್ವರೂಪವನ್ನು ಮರೆತು ಹೋಗುವಂತಹ ವಿಚಿತ್ರವಾದ ಆ ನಗರಿಯು. ॥ ೫೭-೫೮ ॥

ಅಯ್ಯಾ! ಆ ನಗರದಲ್ಲಿ ಅದರ ಒಡತಿಯ ಹಿಡಿತದಲ್ಲಿ ಸಿಕ್ಕಿಕೊಂಡು, ಅವಳೊಂದಿಗೆ ವಿಹಾರಮಾಡುತ್ತಾ ನೀನೂ ನಿನ್ನ ಸ್ವರೂಪವನ್ನು ಮರೆತುಬಿಟ್ಟೆ. ಅವಳ ಸಹವಾಸದಿಂದಲೇ ನಿನಗೆ ಇಂತಹ ದುರ್ದಶೆ ಉಂಟಾಯಿತು. ॥ ೫೯ ॥ ನೋಡು, ನೀನಾದರೋ ವಿದರ್ಭರಾಜನ ಪುತ್ರಿಯೂ ಅಲ್ಲ, ಈ ವೀರ ಮಲಯಧ್ವಜನು ನಿನ್ನ ಪತಿಯೂ ಅಲ್ಲ, ಒಂಭತ್ತು ದ್ವಾರಗಳ ನಗರದಲ್ಲಿ ನಿನ್ನನ್ನು ಸೆರೆಹಿಡಿದಿಟ್ಟಿದ್ದ ಆ ಪುರಂಜನಿಯ ಪತಿಯೂ ನೀನಲ್ಲ. ॥ ೬೦ ॥ ನೀನು ಕಳೆದ ಜನ್ಮದಲ್ಲಿ ತನ್ನನ್ನು ಪುರುಷನೆಂದು ತಿಳಿದುಕೊಂಡಿದ್ದೆ, ಈಗ ಸಾಧ್ವಿಯಾದ ಸ್ತ್ರೀಯೆಂದು ಭಾವಿಸಿಕೊಂಡಿರುವೆ. ಇವೆಲ್ಲವೂ ನಾನೇ ಹರಡಿದ ಮಾಯೆಯಾಗಿದೆ. ವಾಸ್ತವವಾಗಿ ನೀನು ಪುರುಷನಲ್ಲ, ಸ್ತ್ರೀಯಲ್ಲ. ನಾವಿಬ್ಬರೂ ಹಂಸಗಳು. ನಮ್ಮ ವಾಸ್ತವಿಕವಾಗಿರುವ ಸ್ವರೂಪವನ್ನು ಅನುಭವಕ್ಕೆ ತಂದುಕೋ. ॥ ೬೧ ॥ ಮಿತ್ರನೇ! ನಾನು ಈಶ್ವರನಾಗಿದ್ದೇನೆ. ನೀನು ಜೀವನಾಗಿರುವೆ. ನೀನು ನನ್ನಿಂದ ಬೇರೆಯಲ್ಲ. ವಿಚಾರಪೂರ್ವಕವಾಗಿ ನೋಡು. ನಾನು ಏನಾಗಿರುವೆನೋ ನೀನೂ ಅವನೇ ಆಗಿರುವೆ. ಜ್ಞಾನಿಗಳು ನಮ್ಮಿಬ್ಬರಲ್ಲಿ ಎಂದೂ ಸ್ವಲ್ಪವೂ ಭೇದವನ್ನು ನೋಡುವುದಿಲ್ಲ. ॥ ೬೨ ॥ ಮನುಷ್ಯನು ತನ್ನ ಶರೀರದ ಪ್ರತಿಬಿಂಬವನ್ನು ಕನ್ನಡಿಯಲ್ಲಿ ನೋಡಬಹುದು. ಅದನ್ನೇ ಯಾರೋ ಮನುಷ್ಯನ ಕಣ್ಣಿನಲ್ಲೂ ಕಾಣಬಹುದು. ಹಾಗೆಯೇ ಒಂದೇ ಆತ್ಮನು ವಿದ್ಯೆ ಮತ್ತು ಅವಿದ್ಯೆ ಎಂಬ ಉಪಾಧಿಯ ಭೇದದಿಂದ ತನ್ನನ್ನು ಈಶ್ವರ ಮತ್ತು ಜೀವನಾಗಿ ಎರಡು ರೀತಿಯಿಂದ ನೋಡುತ್ತಿದ್ದಾನೆ. ॥ ೬೩ ॥

ಹೀಗೆ ಹಂಸ (ಈಶ್ವರ)ನು ಅದನ್ನು ಎಚ್ಚರಿಸಿದಾಗ ಆ ಮಾನಸ ಸರೋವರದ ಹಂಸವು (ಜೀವ) ತನ್ನ ಸ್ವರೂಪದಲ್ಲಿ ಸ್ಥಿತನಾಗಿ, ತನ್ನ ಮಿತ್ರನಿಂದ ಉಂಟಾದ ಅಗಲಿಕೆಯಿಂದ ಮರೆತಿರುವ ಆತ್ಮಜ್ಞಾನವನ್ನು ಪುನಃ ಪಡೆದುಕೊಂಡಿತು. ॥ ೬೪ ॥ ಪ್ರಾಚೀನಬರ್ಹಿಯೇ! ನಾನು ನಿನಗೆ ಪರೋಕ್ಷರೂಪದಿಂದ ಈ ಆತ್ಮಜ್ಞಾನದ ದಿಗ್ದರ್ಶನ ಮಾಡಿರುವೆನು. ಏಕೆಂದರೆ ಜಗತ್ಕರ್ತೃವಾದ ಜಗದೀಶ್ವರನಿಗೆ ಪರೋಕ್ಷವರ್ಣನೆಯೇ ಹೆಚ್ಚು ಪ್ರಿಯವಾದುದು. ॥ ೬೫ ॥

ಇಪ್ಪತ್ತೆಂಟನೆಯ ಅಧ್ಯಾಯವು ಮುಗಿಯಿತು. ॥ ೨೮ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಚತುರ್ಥಸ್ಕಂಧೇ
ಪುರಂಜನೋಪಾಖ್ಯಾನೇಽಷ್ಟಾವಿಂಶೋಽಧ್ಯಾಯಃ ॥ ೨೮ ॥

ಇಪ್ಪತ್ತೊಂಭತ್ತನೆಯ ಅಧ್ಯಾಯ

ಪುರಂಜನೋಪಾಖ್ಯಾನದ ತಾತ್ಪರ್ಯ

ಪ್ರಾಚೀನಬರ್ಹಿರುವಾಚ

ಭಗವಂಸ್ತೇ ವಚೋಽಸ್ಮಾಭಿರ್ನ ಸಮ್ಯಗವಗಮ್ಯತೇ ।
ಕವಯಸ್ತದ್ವಿಜಾನಂತಿ ನ ವಯಂ ಕರ್ಮಮೋಹಿತಾಃ ॥ ೧ ॥

ನಾರದ ಉವಾಚ

ಪುರುಷಂ ಪುರಂಜನಂ ವಿದ್ಯಾದ್ಯದ್ವ್ಯನಕ್ತ್ಯಾತ್ಮನಃ ಪುರಮ್ ।
ಏಕದ್ವಿತ್ರಿಚತುಷ್ಪಾದಂ ಬಹುಪಾದಮಪಾದಕಮ್ ॥ ೨ ॥

ಯೋಽವಿಜ್ಞಾತಾಹೃತಸ್ತಸ್ಯ ಪುರುಷಸ್ಯ ಸಖೇಶ್ವರಃ ।
ಯನ್ನ ವಿಜ್ಞಾಯತೇ ಪುಂಭಿರ್ನಾಮಭಿರ್ವಾ ಕ್ರಿಯಾಗುಣೈಃ ॥ ೩ ॥

ಯದಾ ಜಿಘೃಕ್ಷನ್ಪುರುಷಃ ಕಾರ್ತ್ಸ್ನ್ಯೇನ ಪ್ರಕೃತೇರ್ಗುಣಾನ್ ।
ನವದ್ವಾರಂ ದ್ವಿಹಸ್ತಾಂಘ್ರಿ ತತ್ರಾಮನುತ ಸಾಧ್ವಿತಿ ॥ ೪ ॥

ಬುದ್ಧಿಂ ತು ಪ್ರಮದಾಂ ವಿದ್ಯಾ-
ನ್ಮಮಾಹಮಿತಿ ಯತ್ಕೃತಮ್ ।
ಯಾಮಧಿಷ್ಠಾಯ ದೇಹೇಽಸ್ಮಿ-
ನ್ಪುಮಾನ್ಭುಂಕ್ತೇಽಕ್ಷಭಿರ್ಗುಣಾನ್ ॥ ೫ ॥

ಸಖಾಯ ಇಂದ್ರಿಯಗಣಾ ಜ್ಞಾನಂ ಕರ್ಮ ಚ ಯತ್ಕೃತಮ್ ।
ಸಖ್ಯಸ್ತದ್ವೃತ್ತಯಃ ಪ್ರಾಣಃ ಪಂಚ ವೃತ್ತಿರ್ಯಥೋರಗಃ ॥ ೬ ॥

ಬೃಹದ್ಬಲಂ ಮನೋ ವಿದ್ಯಾದುಭಯೇಂದ್ರಿಯನಾಯಕಮ್ ।
ಪಂಚಾಲಾಃ ಪಂಚ ವಿಷಯಾ ಯನ್ಮಧ್ಯೇ ನವಖಂ ಪುರಮ್ ॥ ೭ ॥

ಅಕ್ಷಿಣೀ ನಾಸಿಕೇ ಕರ್ಣೌ ಮುಖಂ ಶಿಶ್ನಗುದಾವಿತಿ ।
ದ್ವೇ ದ್ವೇ ದ್ವಾರೌ ಬಹಿರ್ಯಾತಿ ಯಸ್ತದಿಂದ್ರಿಯಸಂಯುತಃ ॥ ೮ ॥

ರಾಜಾ ಪ್ರಾಚೀನಬರ್ಹಿಯು ಹೇಳಿದನು – ಪೂಜ್ಯರಾದ ಮುನಿಗಳೇ! ತಮ್ಮ ನುಡಿಗಳ ಅಭಿಪ್ರಾಯವೇನೆಂಬುದು ಪೂರ್ಣವಾಗಿ ನನ್ನ ಮನಸ್ಸಿಗೆ ಬರಲಿಲ್ಲ. ವಿವೇಕಿಗಳೇ ಇದರ ತಾತ್ಪರ್ಯವನ್ನು ಅರಿಯಬಲ್ಲರು. ಕರ್ಮಮೋಹಿತರಾದ ನಮ್ಮಂತಹ ಜೀವರು ತಿಳಿಯಲಾರರು. ॥ ೧ ॥

ನಾರದರೆಂದರು – ರಾಜನೇ! ಪುರಂಜನ (ನಗರದ ನಿರ್ಮಾತೃನು) ಜೀವನಾಗಿದ್ದಾನೆ. ಅವನು ತನಗಾಗಿ ಒಂದು, ಎರಡು, ಮೂರು, ನಾಲ್ಕು ಅಥವಾ ಅನೇಕ ಕಾಲುಗಳುಳ್ಳ ಅಥವಾ ಕಾಲುಗಳೇ ಇಲ್ಲದಿರುವ ಶರೀರರೂಪೀ ಪುರವನ್ನು ನಿರ್ಮಿಸಿಕೊಳ್ಳುವನು. ॥ ೨ ॥ ಆತನ ಗೆಳೆಯ ಅವಿಜ್ಞಾತನೆಂದು ಹೇಳಿರುವವನೇ ಈಶ್ವರನಾಗಿರುವನು. ಏಕೆಂದರೆ, ಯಾವುದೇ ವಿಧವಾದ ಹೆಸರುಗಳಿಂದಾಗಲೀ, ಗುಣಗಳಿಂದಾಗಲೀ, ಕರ್ಮಗಳಿಂದಾಗಲೀ ಜೀವರಿಗೆ ಆತನ ಸುಳಿವು ಹತ್ತುವುದಿಲ್ಲ. ॥ ೩ ॥ ಜೀವನು ಸುಖ-ದುಃಖರೂಪವಾದ ಎಲ್ಲ ಪ್ರಾಕೃತ ವಿಷಯಗಳನ್ನು ಅನುಭವಿಸಲು ಇಚ್ಛಿಸಿದಾಗ, ಅವನು ಬೇರೆ ಶರೀರಗಳಿಗಿಂತ ಒಂಭತ್ತು ಬಾಗಿಲುಗಳುಳ್ಳ, ಎರಡು ಕೈಗಳು, ಎರಡು ಕಾಲುಗಳುಳ್ಳ ಮಾನವ ದೇಹವನ್ನೇ ಮೆಚ್ಚಿಕೊಂಡನು. ॥ ೪ ॥ ಬುದ್ಧಿ ಅಥವಾ ಅವಿದ್ಯೆಯನ್ನೇ ನೀನು ಪುರಂಜನಿ ಎಂಬ ಸ್ತ್ರೀಯೆಂದು ತಿಳಿ. ಇವಳಿಂದಾಗಿಯೇ ದೇಹ ಮತ್ತು ಇಂದ್ರಿಯಗಳಲ್ಲಿ 'ನಾನು-ನನ್ನದು' ಎಂಬ ಭಾವ ಉಂಟಾಗುತ್ತದೆ. ಪುರುಷನು ಇದನ್ನು ಆಶ್ರಯಿಸಿಯೇ ಶರೀರದಲ್ಲಿ ಇಂದ್ರಿಯಗಳ ಮೂಲಕ ವಿಷಯಗಳನ್ನು ಅನುಭವಿಸುತ್ತಾನೆ. ॥ ೫ ॥ ಹತ್ತು ಇಂದ್ರಿಯಗಳೇ ಆವನ ಮಿತ್ರರು. ಇವುಗಳಿಂದಲೇ ಎಲ್ಲ ರೀತಿಯ ಜ್ಞಾನ ಮತ್ತು ಕರ್ಮಗಳು ಆಗುತ್ತವೆ. ಇಂದ್ರಿಯಗಳ ವೃತ್ತಿಗಳೇ ಆವನ ಸಖಿಯರು. ಪ್ರಾಣ-ಅಪಾನ-ವ್ಯಾನ-ಉದಾನ-ಸಮಾನಗಳೆಂಬ ಐದು ವೃತ್ತಿಗಳುಳ್ಳ ಪ್ರಾಣವಾಯುವೇ ನಗರವನ್ನು ರಕ್ಷಿಸುವ ಐದು ಹೆಡೆಯ ಸರ್ಪವು. ॥ ೬ ॥ ಜ್ಞಾನೇಂದ್ರಿಯ ಮತ್ತು ಕರ್ಮೇಂದ್ರಿಯಗಳೆಂಬ ಎರಡು ರೀತಿಯ ಇಂದ್ರಿಯಗಳ ನಾಯಕವಾದ ಮನಸ್ಸನ್ನೇ ಹನ್ನೊಂದನೆಯದಾಗಿರುವ ಮಹಾಬಲಶಾಲಿಯಾದ ಭಟನೆಂದು ತಿಳಿಯಬೇಕು. ಶಬ್ದಾದಿ ಐದು ವಿಷಯಗಳೇ ಪಾಂಚಾಲದೇಶ. ಅದರ ನಡುವೆ ಆ ಒಂಭತ್ತು ಬಾಗಿಲುಗಳುಳ್ಳ ನಗರ ನೆಲೆಸಿದೆ. ॥ ೭ ॥

ಆ ನಗರದಲ್ಲಿ ಒಂದೇ ಜಾಗದಲ್ಲಿ ಎರಡೆರಡು ದ್ವಾರಗಳು ಹೇಳಿವೆಯೋ, ಅದು ಎರಡು ಕಣ್ಣುಗಳು, ಎರಡು ಮೂಗಿನ ಹೊಳ್ಳೆಗಳು ಮತ್ತು ಎರಡು ಕರ್ಣರಂಧ್ರಗಳಿವೆ. ಇವುಗಳೊಂದಿಗೆ ಮುಖ, ಲಿಂಗ, ಗುದ ಇವುಗಳು ಮೂರು, ಹೀಗೆ ಒಟ್ಟಿಗೆ ಸೇರಿ ಒಂಭತ್ತು ದ್ವಾರಗಳಿವೆ. ಇವುಗಳ ಮೂಲಕವೇ ಜೀವನು ಇಂದ್ರಿಯಗಳೊಂದಿಗೆ ಹೊರಗಿನ ವಿಷಯಗಳಲ್ಲಿ ಸಂಚರಿಸುತ್ತಾನೆ. ॥ ೮ ॥

ಅಕ್ಷಿಣೀ ನಾಸಿಕೇ ಆಸ್ಯಮಿತಿ ಪಂಚ ಪುರಃ ಕೃತಾಃ ।
ದಕ್ಷಿಣಾ ದಕ್ಷಿಣಃ ಕರ್ಣ ಉತ್ತರಾ ಚೋತ್ತರಃ ಸ್ಮೃತಃ ॥ ೯ ॥

ಪಶ್ಚಿಮೇ ಇತ್ಯಧೋದ್ವಾರೌ ಗುದಂ ಶಿಶ್ನಮಿಹೋಚ್ಯತೇ ।
ಖದ್ಯೋತಾವಿರ್ಮುಖೀ ಚಾತ್ರ ನೇತ್ರೇ ಏಕತ್ರ ನಿರ್ಮಿತೇ ।
ರೂಪಂ ವಿಭ್ರಾಜಿತಂ ತಾಭ್ಯಾಂ ವಿಚಷ್ಟೇ ಚಕ್ಷುಷೇಶ್ವರಃ ॥ ೧೦ ॥

ನಲಿನೀ ನಾಲಿನೀ ನಾಸೇ ಗಂಧಃ ಸೌರಭ ಉಚ್ಯತೇ ।
ಘ್ರಾಣೋಽವಧೂತೋ ಮುಖ್ಯಾಸ್ಯಂ ವಿಪಣೋ ವಾಗ್ರಸವಿದ್ರಸಃ ॥ ೧೧ ॥

ಆಪಣೋ ವ್ಯವಹಾರೋಽತ್ರ ಚಿತ್ರಮಂಧೋ ಬಹೂದನಮ್ ।
ಪಿತೃಹೂರ್ದಕ್ಷಿಣಃ ಕರ್ಣ ಉತ್ತರೋ ದೇವಹೂಃ ಸ್ಮೃತಃ ॥ ೧೨ ॥

ಪ್ರವೃತ್ತಂ ಚ ನಿವೃತ್ತಂ ಚ ಶಾಸ್ತ್ರಂ ಪಂಚಾಲಸಂಜ್ಞಿತಮ್ ।
ಪಿತೃಯಾನಂ ದೇವಯಾನಂ ಶ್ರೋತ್ರಾಚ್ಛ್ರುತಧರಾದ್ವ್ರಜೇತ್ ॥ ೧೩ ॥

ಆಸುರೀ ಮೇಢ್ರಮರ್ವಾಗ್ದ್ವಾರ್ವ್ಯ-
ವಾಯೋ ಗ್ರಾಮಿಣಾಂ ರತಿಃ ।
ಉಪಸ್ಥೋ ದುರ್ಮದಃ ಪ್ರೋಕ್ತೋ
ನಿರ್ಋತಿರ್ಗುದ ಉಚ್ಯತೇ ॥ ೧೪ ॥

ವೈಶಸಂ ನರಕಂ ಪಾಯುರ್ಲುಬ್ಧಕೋಽಂಧೌ ತು ಮೇ ಶೃಣು ।
ಹಸ್ತಪಾದೌ ಪುಮಾಂಸ್ತಾಭ್ಯಾಂ ಯುಕ್ತೋ ಯಾತಿ ಕರೋತಿ ಚ ॥ ೧೫ ॥

ಅಂತಃಪುರಂ ಚ ಹೃದಯಂ ವಿಷೂಚಿರ್ಮನ ಉಚ್ಯತೇ ।
ತತ್ರ ಮೋಹಂ ಪ್ರಸಾದಂ ವಾ ಹರ್ಷಂ ಪ್ರಾಪ್ನೋತಿ ತದ್ಗುಣೈಃ ॥ ೧೬ ॥

ಯಥಾ ಯಥಾ ವಿಕ್ರಿಯತೇ ಗುಣಾಕ್ತೋ ವಿಕರೋತಿ ವಾ ।
ತಥಾ ತಥೋಪದ್ರಷ್ಟಾಽಽತ್ಮಾ ತದ್ವೃತ್ತೀರನುಕಾರ್ಯತೇ ॥ ೧೭ ॥

ಇವುಗಳಲ್ಲಿ ಎರಡು ಕಣ್ಣುಗಳು, ಎರಡು ಮೂಗಿನ ಹೊಳ್ಳೆಗಳು, ಒಂದು ಬಾಯಿ ಹೀಗೆ ಐದು ಪೂರ್ವದ ದ್ವಾರಗಳು. ಬಲಕಿವಿಯು ದಕ್ಷಿಣದ ದ್ವಾರ, ಎಡಕಿವಿಯು ಉತ್ತರದ ದ್ವಾರವೆಂದು ತಿಳಿಯಬೇಕು. ॥ ೯ ॥ ಗುದ ಮತ್ತು ಲಿಂಗ ಇವು ಕೆಳಗಿನ ಎರಡು ರಂಧ್ರಗಳು ಪಶ್ಚಿಮದ ದ್ವಾರಗಳು. ಖದ್ಯೋತಾ ಮತ್ತು ಆವಿರ್ಮುಖಿ ಎಂಬ ಎರಡು ದ್ವಾರಗಳು ಒಂದೇ ಸ್ಥಾನದಲ್ಲಿ ಹೇಳಿರುವುದು ಎರಡು ಕಣ್ಣುಗಳು. ರೂಪ, ವಿಭ್ರಾಜಿತ ಎಂಬ ದೇಶಗಳನ್ನು ಈ ದ್ವಾರಗಳಿಂದ ಜೀವನು ಚಕ್ಷುರಿಂದ್ರಿಯದ ಸಹಾಯದಿಂದ ಅನುಭವಿಸುತ್ತಾನೆ (ಚಕ್ಷು – ಇಂದ್ರಿಯವನ್ನೇ ಮೊದಲು ದ್ಯುಮಾನ್ ಎಂಬ ಮಿತ್ರನೆಂದು ಹೇಳಿತ್ತು). ॥ ೧೦ ॥ ಎರಡು ಮೂಗುಹೊಳ್ಳೆಗಳೇ ನಲಿನೀ ಮತ್ತು ನಾಲಿನೀ ಎಂಬ ದ್ವಾರಗಳು ಮತ್ತು ಮೂಗಿನ ವಿಷಯಗಂಧವೇ ಸೌರಭದೇಶ. ಘ್ರಾಣೇಂದ್ರಿಯವೇ ಅವಧೂತನೆಂಬ ಮಿತ್ರನು. ಮುಖವು ಮುಖ್ಯವೆಂಬ ದ್ವಾರವಾಗಿದೆ. ಅದರಲ್ಲಿ ಇರುವ ವಾಗಿಂದ್ರಿಯವೇ ವಿಪಣವು ಮತ್ತು ರಸನೇಂದ್ರಿಯವೇ ರಸವಿದ್ (ರಸಜ್ಞ) ಎಂಬ ಮಿತ್ರನಾಗಿದ್ದಾನೆ. ॥ ೧೧ ॥ ವಾಣಿಯ ವ್ಯವಹಾರಕ್ಕೆ ಆಪಣವೆಂದೂ, ಬಗೆ-ಬಗೆಯ ಅನ್ನಗಳಿಗೆ ಬಹೂದನವೆಂದೂ ಹಾಗೂ ಬಲಕಿವಿಗೆ ಪಿತೃಹೂ ಮತ್ತು ಎಡಕಿವಿಗೆ ದೇವಹೂ ಎಂದು ಹೇಳಲಾಗಿದೆ. ॥ ೧೨ ॥ ಕರ್ಮಕಾಂಡರೂಪವಾದ ಪ್ರವೃತ್ತಿಮಾರ್ಗದ ಶಾಸ್ತ್ರ ಮತ್ತು ಉಪಾಸನಾರೂಪವಾದ ನಿವೃತ್ತಿಮಾರ್ಗದ ಶಾಸ್ತ್ರಗಳೇ ಕ್ರಮವಾಗಿ ದಕ್ಷಿಣ ಹಾಗೂ ಉತ್ತರ ಪಾಂಚಾಲ ದೇಶಗಳು. ಇವುಗಳನ್ನು ಶ್ರವಣೇಂದ್ರಿಯರೂಪವಾದ ಶ್ರುತಧರನ ಸಹಾಯದಿಂದ ಕೇಳಿಕೊಂಡು ಜೀವನು ಕ್ರಮವಾಗಿ ಪಿತೃಯಾನ ಮತ್ತು ದೇವಯಾನ ಮಾರ್ಗಗಳಲ್ಲಿ ಹೋಗುತ್ತಾನೆ. ॥ ೧೩ ॥ ಲಿಂಗವೇ ಆಸುರೀ ಎಂಬ ಪಶ್ಚಿಮದ ದ್ವಾರವಾಗಿದೆ. ಸ್ತ್ರೀಪ್ರಸಂಗವೇ ಗ್ರಾಮಕವೆಂಬ ದೇಶವು. ಲಿಂಗದಲ್ಲಿರುವ ಉಪಸ್ಥೇಂದ್ರಿಯವೇ ದುರ್ಮದ ಎಂಬ ಮಿತ್ರನು. ಗುದವು ನಿರ್ಋತಿ ಎಂಬ ಪಶ್ಚಿಮದ ದ್ವಾರವಾಗಿದೆ. ॥ ೧೪ ॥ ನರಕ ವೈಶಸ ಎಂಬ ದೇಶ, ಗುದದಲ್ಲಿರುವ ಪಾಯು ಇಂದ್ರಿಯವೇ ಲುಬ್ಧಕನೆಂಬ ಮಿತ್ರನು. ಇವರಲ್ಲದೆ ಇಬ್ಬರು ಕುರುಡರು ಹೇಳಲಾಗಿತ್ತು. ಅವರ ರಹಸ್ಯವನ್ನು ಕೇಳು. ಅವು ಕೈ ಮತ್ತು ಕಾಲುಗಳಾಗಿವೆ. ಇವುಗಳ ಸಹಾಯದಿಂದಲೇ ಜೀವಿಯು ಕ್ರಮವಾಗಿ ಎಲ್ಲ ಕೆಲಸವನ್ನು ಮಾಡುತ್ತಾನೆ ಮತ್ತು ಅಲ್ಲಲ್ಲಿಗೆ ಹೋಗುತ್ತಾನೆ. ॥ ೧೫ ॥ ಹೃದಯವೇ ಅಂತಃಪುರವು. ಅದರಲ್ಲಿ ವಾಸಿಸುವ ಮನಸ್ಸೇ ವಿಷೂಚಿ (ವಿಷೂಚೀನ್) ಎಂಬ ಪ್ರಧಾನ ಸೇವಕನು. ಜೀವನು ಆ ಮನಸ್ಸಿನ ಸತ್ತ್ವಾದಿ ಗುಣಗಳಿಂದಾಗಿಯೇ ಪ್ರಸನ್ನತೆ, ಹರ್ಷ ಮುಂತಾದ ವಿಕಾರಗಳನ್ನು ಅಥವಾ ಮೋಹವನ್ನು ಪಡೆಯುತ್ತಾನೆ. ॥ ೧೬ ॥ ಜೀವನು ಸ್ವತಃ ವಿಕಾರ ರಹಿತನಾಗಿದ್ದರೂ, ಸಾಕ್ಷಿಮಾತ್ರನೇ ಆಗಿದ್ದರೂ ಬುದ್ಧಿಗೆ (ಮಹಾರಾಣಿ ಪುರಂಜನಿ) ಅಡಿಯಾಳಿನಂತೆ ಇರುತ್ತಾನೆ. ಬುದ್ಧಿಯ ಗುಣಗಳಿಂದ ಲೇಪಿಸಲ್ಪಟ್ಟು ಬುದ್ಧಿಯು ಕನಸಿನ ಸ್ಥಿತಿಯಲ್ಲಿ ವಿಕಾರಹೊಂದುತ್ತದೆಯೋ, ಎಚ್ಚರದ ಸ್ಥಿತಿಯಲ್ಲಿ ಇಂದ್ರಿಯಗಳೇ ಮುಂತಾದವುಗಳನ್ನು ವಿಕಾರಗೊಳಿಸುತ್ತದೆಯೋ ಹಾಗೆಯೇ ಅವನು ಅದರ ವೃತ್ತಿಗಳನ್ನು ಅನುಸರಿಸಬೇಕಾಗುತ್ತದೆ. ॥ ೧೭ ॥

ದೇಹೋ ರಥಸ್ತ್ವಿಂದ್ರಿಯಾಶ್ವಃ ಸಂವತ್ಸರರಯೋಽಗತಿಃ ।
ದ್ವಿಕರ್ಮಚಕ್ರಸ್ತ್ರಿಗುಣಧ್ವಜಃ ಪಂಚಾಸುಬಂಧುರಃ
॥ ೧೮ ॥

ಮನೋರಶ್ಮಿರ್ಬುದ್ಧಿಸೂತೋ ಹೃನ್ನೀಡೋ ದ್ವಂದ್ವಕೂಬರಃ ।
ಪಂಚೇಂದ್ರಿಯಾರ್ಥಪ್ರಕ್ಷೇಪಃ ಸಪ್ತಧಾತುವರೂಥಕಃ
॥ ೧೯ ॥

ಆಕೂತಿರ್ವಿಕ್ರಮೋ ಬಾಹ್ಯೋ ಮೃಗತೃಷ್ಣಾಂ ಪ್ರಧಾವತಿ ।
ಏಕಾದಶೇಂದ್ರಿಯಚಮೂಃ ಪಂಚಸೂನಾವಿನೋದಕೃತ್
॥ ೨೦ ॥

ಸಂವತ್ಸರಶ್ಚಂಡವೇಗಃ ಕಾಲೋ ಯೇನೋಪಲಕ್ಷಿತಃ ।
ತಸ್ಯಾಹಾನೀಹ ಗಂಧರ್ವಾ ಗಂಧರ್ವ್ಯೋ ರಾತ್ರಯಃ ಸ್ಮೃತಾಃ ।
ಹರಂತ್ಯಾಯುಃ ಪರಿಕ್ರಾಂತ್ಯಾ ಷಷ್ಟ್ಯುತ್ತರಶತತ್ರಯಮ್
॥ ೨೧ ॥

ಕಾಲಕನ್ಯಾ ಜರಾ ಸಾಕ್ಷಾಲ್ಲೋಕಸ್ತಾಂ ನಾಭಿನಂದತಿ ।
ಸ್ವಸಾರಂ ಜಗೃಹೇ ಮೃತ್ಯುಃ ಕ್ಷಯಾಯ ಯವನೇಶ್ವರಃ
॥ ೨೨ ॥

ಆಧಯೋ ವ್ಯಾಧಯಸ್ತಸ್ಯ ಸೈನಿಕಾ ಯವನಾಶ್ಚರಾಃ ।
ಭೂತೋಪಸರ್ಗಾಶುರಯಃ ಪ್ರಜ್ವಾರೋ ದ್ವಿವಿಧೋ ಜ್ವರಃ
॥ ೨೩ ॥

ಏವಂ ಬಹುವಿಧೈರ್ದುಃಖೈರ್ದೈವಭೂತಾತ್ಮಸಂಭವೈಃ ।
ಕ್ಲಿಶ್ಯಮಾನಃ ಶತಂ ವರ್ಷಂ ದೇಹೇ ದೇಹೀ ತಮೋವೃತಃ
॥ ೨೪ ॥

ಪ್ರಾಣೇಂದ್ರಿಯಮನೋಧರ್ಮಾನಾತ್ಮನ್ಯಧ್ಯಸ್ಯ ನಿರ್ಗುಣಃ ।
ಶೇತೇ ಕಾಮಲವಾನ್ ಧ್ಯಾಯನ್ಮಮಾಹಮಿತಿ ಕರ್ಮಕೃತ್
॥ ೨೫ ॥

ಯದಾಽಽತ್ಮಾನಮವಿಜ್ಞಾಯ ಭಗವಂತಂ ಪರಂ ಗುರುಮ್ ।
ಪುರುಷಸ್ತು ವಿಷಜ್ಜೇತ ಗುಣೇಷು ಪ್ರಕೃತೇಃ ಸ್ವದೃಕ್
॥ ೨೬ ॥

ಶರೀರವೇ ರಥವಾಗಿದೆ. ಅದರಲ್ಲಿ ಜ್ಞಾನೇಂದ್ರಿಯರೂಪೀ ಐದು ಕುದುರೆಗಳು ಹೂಡಲ್ಪಟ್ಟಿವೆ. ವಾಸ್ತವವಾಗಿ ಅವು ಗತಿಹೀನವಾಗಿದ್ದರೂ ನೋಡುವುದಕ್ಕೆ ಸಂವತ್ಸರರೂಪವಾದ ಕಾಲದಂತೆಯೇ ಅಡೆ-ತಡೆಗಳಿಲ್ಲದ ವೇಗವನ್ನು ಹೊಂದಿರುವುದು. ಪುಣ್ಯ ಮತ್ತು ಪಾಪಗಳೆಂಬ ಎರಡು ರೀತಿಯ ಕರ್ಮಗಳೇ ಆ ರಥದ ಎರಡು ಗಾಲಿಗಳು. ತ್ರಿಗುಣಗಳೇ ಆ ರಥದ ಧ್ವಜಗಳು. ಪಂಚಪ್ರಾಣಗಳೇ ಹಗ್ಗಗಳಾಗಿವೆ. ॥ ೧೮ ॥ ಮನಸ್ಸೇ ಲಗಾಮು, ಬುದ್ಧಿಯೇ ಸಾರಥಿ. ಹೃದಯವೇ ಕುಳಿತುಕೊಳ್ಳುವ ಸ್ಥಾನ. ಸುಖ-ದುಃಖಾದಿ ದ್ವಂದ್ವಗಳೇ ಅದರ ನೊಗ. ಶಬ್ದ-ಸ್ಪರ್ಶಾದಿ ವಿಷಯಗಳೇ ಅದರಲ್ಲಿರಿಸಿದ ಆಯುಧಗಳು. ಚರ್ಮವೇ ಮುಂತಾದ ಸಪ್ತಧಾತುಗಳು ಅದರ ಆವರಣಗಳು. ॥ ೧೯ ॥ ಐದು ಕರ್ಮೇಂದ್ರಿಯಗಳೇ ಅದರ ಐದು ಬಗೆಯ ಗತಿಗಳಾಗಿವೆ. ಇಂತಹ ರಥವನ್ನೇರಿ ರಥಿಯಾಗಿರುವ ಜೀವನು ಬಿಸಿಲ್ಗುದುರೆಯಂತಿರುವ ಮಿಥ್ಯಾ ವಿಷಯಗಳ ಕಡೆಗೆ ವೇಗದಿಂದ ಓಡುತ್ತಾನೆ. ಹನ್ನೊಂದು ಇಂದ್ರಿಯಗಳೇ ಆತನ ಸೇನೆಯಾಗಿದೆ. ಐದೂ ಜ್ಞಾನೇಂದ್ರಿಯಗಳ ಮೂಲಕ ಆಯಾ ಇಂದ್ರಿಯ ವಿಷಯಗಳನ್ನು ಅನ್ಯಾಯದಿಂದ ಗ್ರಹಣಮಾಡುವುದೇ ಬೇಟೆಯಾಡುವುದು. ॥ ೨೦ ॥

ಕಾಲದ ಜ್ಞಾನವನ್ನುಂಟುಮಾಡುವ ಸಂವತ್ಸರವೇ ಚಂಡವೇಗನೆಂಬ ಗಂಧರ್ವರಾಜನು. ಆತನ ಅಧೀನದಲ್ಲಿ ಮುನ್ನೂರ ಅರವತ್ತು ಮಂದಿ ಗಂಧರ್ವರಿದ್ದಾರೆಂದು ಹೇಳಿತ್ತಲ್ಲ, ಅವರೇ ಹಗಲುಗಳು. ಮುನ್ನೂರಅರವತ್ತು ಮಂದಿ ಗಂಧರ್ವಸ್ತ್ರೀಯರು ರಾತ್ರಿಗಳು. ಅವರು ಮೇಲಿಂದಮೇಲೆ ಸುತ್ತುತ್ತಾ ಮನುಷ್ಯರ ಆಯುಸ್ಸನ್ನು ಅಪಹರಿಸುತ್ತಿರುವರು. ॥ ೨೧ ॥ ವೃದ್ಧಾವಸ್ಥೆಯೇ ಸಾಕ್ಷಾತ್ ಕಾಲಕನ್ಯೆಯು. ಆಕೆಯನ್ನು ಯಾವ ಮನುಷ್ಯನೂ ಮೆಚ್ಚುವುದಿಲ್ಲ. ಮೃತ್ಯುವೆಂಬ ಯವನರಾಜನು ಲೋಕವನ್ನು ಸಂಹರಿಸುವುದಕ್ಕೋಸ್ಕರ ಆಕೆಯನ್ನು ತನ್ನ ತಂಗಿಯಾಗಿ ಸ್ವೀಕರಿಸಿದನು. ॥ ೨೨ ॥ ಆಧಿ(ಮಾನಸಿಕ) ಮತ್ತು ವ್ಯಾಧಿ (ದೈಹಿಕ) ರೋಗಗಳೇ ಆತನ ಕಾಲಾಳು ಪಡೆಗಳು. ಪ್ರಾಣಿಗಳಿಗೆ ಪೀಡೆಯನ್ನುಂಟುಮಾಡಿ ಮೃತ್ಯುವಿನ ಮುಖಕ್ಕೆ ಒಯ್ಯುವ ಶೀತಜ್ವರ ಮತ್ತು ಉಷ್ಣಜ್ವರಗಳೆಂಬ ಎರಡೂ ಆತನ ಸೋದರನೆಂದು ಹೇಳಿದ ಪ್ರಜ್ವಾರನು. ॥ ೨೩ ॥

ಈ ಪ್ರಕಾರ ದೇಹಾಭಿಮಾನಿಯಾದ ಜೀವನು ಅಜ್ಞಾನದಿಂದ ಆಚ್ಛಾದಿತನಾಗಿ ಬಗೆ-ಬಗೆಯ ಆಧಿಭೌತಿಕ, ಆಧ್ಯಾತ್ಮಿಕ, ಆಧಿದೈವಿಕ ಕ್ಲೇಶಗಳನ್ನು ಅನುಭವಿಸುತ್ತಾ ನೂರು ವರ್ಷಗಳವರೆಗೆ ಮನುಷ್ಯಶರೀರದಲ್ಲಿರುತ್ತಾನೆ. ॥ ೨೪॥ ವಾಸ್ತವವಾಗಿ ಅವನು ತ್ರಿಗುಣರಹಿತನು. ಆದರೆ ಪ್ರಾಣ, ಇಂದ್ರಿಯಗಳು ಮತ್ತು ಮನಸ್ಸಿನ ಧರ್ಮಗಳನ್ನು ತನ್ನಲ್ಲಿ ಆರೋಪಿಸಿಕೊಂಡು 'ನಾನು-ನನ್ನದು' ಎಂಬ ಅಭಿಮಾನದಿಂದ ಬಂಧಿತನಾಗಿ ಕ್ಷುದ್ರ ವಿಷಯಗಳನ್ನು ಚಿಂತಿಸುತ್ತಾ, ಬಗೆ-ಬಗೆಯ ಕರ್ಮಗಳನ್ನು ಮಾಡುತ್ತಿರುತ್ತಾನೆ. ॥ ೨೫ ॥ ಈ ಜೀವನು ಸ್ವಯಂಪ್ರಕಾಶನಾಗಿದ್ದರೂ – ಎಲ್ಲರ ಪರಮಗುರು ಆತ್ಮಸ್ವರೂಪವಾದ ಶ್ರೀಭಗವಂತನ ಸ್ವರೂಪವನ್ನು ತಿಳಿದುಕೊಳ್ಳುವವರೆಗೆ ಪ್ರಕೃತಿಯ ಗುಣಗಳಲ್ಲೇ ಬಂಧಿತನಾಗಿರುತ್ತಾನೆ. ॥ ೨೬ ॥

ಗುಣಾಭಿಮಾನೀ ಸ ತದಾ ಕರ್ಮಾಣಿ ಕುರುತೇಽವಶಃ ।
ಶುಕ್ಲಂ ಕೃಷ್ಣಂ ಲೋಹಿತಂ ವಾ ಯಥಾಕರ್ಮಾಭಿಜಾಯತೇ
॥ ೨೭ ॥

ಶುಕ್ಲಾತ್ಪ್ರಕಾಶಭೂಯಿಷ್ಠಾ-
ಲ್ಲೋಕಾನಾಪ್ನೋತಿ ಕರ್ಹಿಚಿತ್ ।
ದುಃಖೋದರ್ಕಾನ್ ಕ್ರಿಯಾಯಾಸಾಂ-
ಸ್ತಮಃ ಶೋಕೋತ್ಕಟಾನ್ ಕ್ವಚಿತ್ ॥ ೨೮ ॥

ಕ್ವಚಿತ್ಪುಮಾನ್ಕ್ವಚಿಚ್ಚ ಸ್ತ್ರೀ ಕ್ವಚಿನ್ನೋಭಯಮಂಧಧೀಃ ।
ದೇವೋ ಮನುಷ್ಯಸ್ತಿರ್ಯಗ್ವಾ ಯಥಾಕರ್ಮಗುಣಂ ಭವಃ
॥ ೨೯ ॥

ಕ್ಷುತ್ಪರೀತೋ ಯಥಾ ದೀನಃ ಸಾರಮೇಯೋ ಗೃಹಂ ಗೃಹಮ್ ।
ಚರನ್ವಿಂದತಿ ಯದ್ದಿಷ್ಟಂ ದಂಡ ಮೋದನಮೇವ ವಾ
॥ ೩೦ ॥

ತಥಾ ಕಾಮಾಶಯೋ ಜೀವ
ಉಚ್ಚಾವಚಪಥಾ ಭ್ರಮನ್ ।
ಉಪರ್ಯಧೋ ವಾ ಮಧ್ಯೇ ವಾ
ಯಾತಿ ದಿಷ್ಟಂ ಪ್ರಿಯಾಪ್ರಿಯಮ್ ॥ ೩೧ ॥

ದುಃಖೇಷ್ವೇಕತರೇಣಾಪಿ ದೈವಭೂತಾತ್ಮಹೇತುಷು ।
ಜೀವಸ್ಯ ನ ವ್ಯವಚ್ಛೇದಃ ಸ್ಯಾಚ್ಚೇತ್ತತ್ತತ್ಪ್ರತಿಕ್ರಿಯಾ
॥ ೩೨ ॥

ಯಥಾ ಹಿ ಪುರುಷೋ ಭಾರಂ ಶಿರಸಾ ಗುರುಮುದ್ವಹನ್ ।
ತಂ ಸ್ಕಂಧೇನ ಸ ಆಧತ್ತೇ ತಥಾ ಸರ್ವಾಃ ಪ್ರತಿಕ್ರಿಯಾಃ
॥ ೩೩ ॥

ನೈಕಾಂತತಃ ಪ್ರತೀಕಾರಃ ಕರ್ಮಣಾಂ ಕರ್ಮ ಕೇವಲಮ್ ।
ದ್ವಯಂ ಹ್ಯವಿದ್ಯೋಪಸೃತಂ ಸ್ವಪ್ನೇ ಸ್ವಪ್ನ ಇವಾನಘ
॥ ೩೪ ॥

ಅರ್ಥೇ ಹ್ಯವಿದ್ಯಮಾನೇಽಪಿ ಸಂಸೃತಿರ್ನ ನಿವರ್ತತೇ ।
ಮನಸಾ ಲಿಂಗರೂಪೇಣ ಸ್ವಪ್ನೇ ವಿಚರತೋ ಯಥಾ
॥ ೩೫ ॥

ಈ ಗುಣಗಳಲ್ಲಿ ಅಭಿಮಾನಪರವಶನಾಗಿ ಈತನು ಸಾತ್ತ್ವಿಕ, ರಾಜಸ, ತಾಮಸ ಕರ್ಮಗಳನ್ನು ಆಚರಿಸುತ್ತಾ, ಅವುಗಳಿಗೆ ತಕ್ಕಂತೆ ಬೇರೆ-ಬೇರೆ ಯೋನಿಗಳಲ್ಲಿ ಜನ್ಮತಾಳುತ್ತಿರುತ್ತಾನೆ. ॥ ೨೭ ॥ ಕೆಲವೊಮ್ಮೆ ಸಾತ್ತ್ವಿಕ ಕರ್ಮಗಳ ಮೂಲಕ ಅವನು ಪ್ರಕಾಶವೇ ಹೆಚ್ಚಾಗಿರುವ ಸ್ವರ್ಗಾದಿ ಲೋಕಗಳನ್ನು ಹೊಂದುವನು. ಕೆಲವೊಮ್ಮೆ ರಾಜಸ ಕರ್ಮಗಳ ಮೂಲಕ ದುಃಖಮಯ ರಾಜಸೀ ಲೋಕಗಳನ್ನು ಪಡೆದು, ಬಗೆ-ಬಗೆಯ ಕರ್ಮಗಳ ಕ್ಲೇಶಗಳನ್ನು ಅನುಭವಿಸುವನು ಮತ್ತು ಕೆಲವೊಮ್ಮೆ ತಮೋಗುಣದ ಕರ್ಮಗಳ ಮೂಲಕ ಅತ್ಯಧಿಕ ಶೋಕದಿಂದ ತುಂಬಿದ ಯೋನಿಗಳಲ್ಲಿ ಹುಟ್ಟುವನು. ॥ ೨೮ ॥ ಹೀಗೆ ತನ್ನ ಕರ್ಮ ಮತ್ತು ಗುಣಗಳನು ಸಾರವಾಗಿ ದೇವಯೋನಿ, ಮನುಷ್ಯಯೋನಿ ಅಥವಾ ಪಶು-ಪಕ್ಷಿ ಯೋನಿಗಳಲ್ಲಿ ಹುಟ್ಟಿ ಅಜ್ಞಾನದಿಂದ ಕುರುಡನಾದ ಈ ಜೀವಿಯು ಕೆಲವೊಮ್ಮೆ ಪುರುಷನಾಗಿ, ಕೆಲವೊಮ್ಮೆ ಸ್ತ್ರೀಯಾಗಿ, ಕೆಲವೊಮ್ಮೆ ನಪುಂಸಕನಾಗುತ್ತಾನೆ. ॥ ೨೯ ॥ ಬಡಪಾಯಿಯಾದ ನಾಯಿಯು ಹಸಿವಿಗೆ ತುತ್ತಾಗಿ ಮನೆ-ಮನೆಗೆ ಅಲೆಯುತ್ತಾ ತನ್ನ ಅದೃಷ್ಟದಂತೆ ಕೆಲವೊಮ್ಮೆ ಜನರಿಂದ ಏಟು ತಿನ್ನುವುದು, ಕೆಲವೊಮ್ಮೆ ಅನ್ನವನು ತಿನ್ನುವಂತೆಯೇ ಈ ಜೀವನು ಚಿತ್ತದಲ್ಲಿ ಬಗೆ-ಬಗೆಯ ವಾಸನೆಗಳನ್ನು ತುಂಬಿಕೊಂಡು ಮೇಲಿನ ಮತ್ತು ಕೆಳಗಿನ ಮಾರ್ಗಗಳಿಂದ ಮೇಲಿನ ಲೋಕಗಳಿಗೋ, ಕೆಳಗಿನ ಲೋಕಗಳಿಗೋ ಅಥವಾ ಮಧ್ಯದ ಲೋಕಗಳಿಗೋ ಹೋಗಿ ಅಲೆಯುತ್ತಾ ತನ್ನ ಕರ್ಮಗಳಿಗೆ ಅನುಸಾರವಾಗಿ ಸುಖ-ದುಃಖಗಳನ್ನು ಅನುಭವಿಸುವನು. ॥ ೩೦-೩೧ ॥

ಅಜ್ಞಾನಿಯಾದ ಜೀವನು ಆಧಿದೈವಿಕ, ಆಧಿಭೌತಿಕ ಮತ್ತು ಆಧ್ಯಾತ್ಮಿಕ ಈ ಮೂರು ಪ್ರಕಾರದ ದುಃಖಗಳಲ್ಲಿ ಯಾವುದರಿಂದಲೂ ಪೂರ್ಣವಾಗಿ ಬಿಡುಗಡೆ ಹೊಂದಲಾರನು. ಎಂದಾದರೂ ಏನಾದರೂ ಸ್ವಲ್ಪ ಬಿಡುಗಡೆಯಾದಂತೆ ತೋರಿದರೂ ಅದು ಕೇವಲ ತಾತ್ಕಾಲಿಕವಾದ ನಿವೃತ್ತಿಯೇ ಆಗಿದೆ. ॥ ೩೨ ॥ ತಲೆಯ ಮೇಲೆ ದೊಡ್ಡ ಭಾರವನ್ನು ಹೊತ್ತುಕೊಂಡು ಹೋಗುವವನು ಅದನ್ನು ಹೆಗಲಮೇಲೆ ಇರಿಸಿಕೊಂಡಂತೆಯೇ ಇದು ಆಗಿದೆ. ಹೀಗೆಯೇ ಎಲ್ಲ ಪ್ರತಿಕ್ರಿಯೆ (ದುಃಖ-ನಿವೃತ್ತಿ) ಎಂದು ತಿಳಿಯ ಬೇಕು. ಯಾವುದೇ ಉಪಾಯದಿಂದ ಮನುಷ್ಯನು ಒಂದು ರೀತಿಯ ದುಃಖದಿಂದ ಬಿಡುಗಡೆ ಹೊಂದಿದರೆ ಮತ್ತೊಂದು ದುಃಖವು ಅವನ ತಲೆಗಡರುತ್ತದೆ. ॥ ೩೩ ॥ ಎಲೈ ಪಾಪರಹಿತನಾದ ರಾಜೇಂದ್ರನೇ! ಸ್ವಪ್ನದಲ್ಲಿ ಉಂಟಾಗುವ ಸ್ವಪ್ನಾಂತರವು ಆ ಸ್ವಪ್ನದಿಂದ ಪೂರ್ಣವಾಗಿ ಬಿಡುಗಡೆಯಲ್ಲ ತಾನೇ! ಹಾಗೆಯೇ ಕೇವಲ ಕರ್ಮವೇ ಕರ್ಮಫಲಭೋಗದಿಂದ ಪೂರ್ಣವಾಗಿ ಪಾರಾಗುವುದಕ್ಕೆ ಉಪಾಯವಾಗಲಾರದು. ಏಕೆಂದರೆ, ಕರ್ಮ ಮತ್ತು ಕರ್ಮಫಲ ಇವೆರಡೂ ಅವಿದ್ಯೆ ಯಿಂದಲೇ ಕೂಡಿವೆ. ॥ ೩೪ ॥ ಸ್ವಪ್ನಾವಸ್ಥೆಯಲ್ಲಿ ತನ್ನ ಮನೋ ಮಯವಾದ ಲಿಂಗಶರೀರದಿಂದ ಸಂಚರಿಸುವ ಪ್ರಾಣಿಗೆ ಕನಸಿನಲ್ಲಿ ಪದಾರ್ಥಗಳಿಲ್ಲದೆಯೇ ಕಾಣುತ್ತವೆ. ಹಾಗೆಯೇ ಅಜ್ಞಾನ ನಿದ್ರೆಯು ಕಳೆದು ಹೋಗುವವರೆಗೂ ಈ ದೃಶ್ಯ ಪದಾರ್ಥಗಳೂ ಕಂಡೇ ಕಾಣುತ್ತವೆ. ಹುಟ್ಟು ಸಾವುಗಳ ರೂಪವಾದ ಸಂಸಾರದಿಂದ ಬಿಡುಗಡೆಯುಂಟಾಗು

ಅಥಾತ್ಮನೋಽರ್ಥಭೂತಸ್ಯ ಯತೋಽನರ್ಥಪರಂಪರಾ ।
ಸಂಸೃತಿಸ್ತದ್ವ್ಯವಚ್ಛೇದೋಭಕ್ತ್ಯಾ ಪರಮಯಾ ಗುರೌ
॥ ೩೬ ॥

ವಾಸುದೇವೇಭಗವತಿ ಭಕ್ತಿಯೋಗಃ ಸಮಾಹಿತಃ ।
ಸಧ್ರೀಚೀನೇನ ವೈರಾಗ್ಯಂ ಜ್ಞಾನಂ ಚ ಜನಯಿಷ್ಯತಿ
॥ ೩೭ ॥

ಸೋಽಚಿರಾದೇವ ರಾಜರ್ಷೇ ಸ್ಯಾದಚ್ಯುತಕಥಾಶ್ರಯಃ ।
ಶೃಣ್ವತಃ ಶ್ರದ್ದಧಾನಸ್ಯ ನಿತ್ಯದಾ ಸ್ಯಾದಧೀಯತಃ
॥ ೩೮ ॥

ಯತ್ರ ಭಾಗವತಾ ರಾಜನ್ಸಾಧವೋ ವಿಶದಾಶಯಾಃ ।
ಭಗವದ್ಗುಣಾನುಕಥನಶ್ರವಣವ್ಯಗ್ರಚೇತಸಃ
॥ ೩೯ ॥

ತಸ್ಮಿನ್ಮಹನ್ಮುಖರಿತಾ ಮಧುಭಿಚ್ಚರಿತ್ರ-
ಪೀಯೂಷಶೇಷಸರಿತಃ ಪರಿತಃ ಸ್ರವಂತಿ ।
ತಾ ಯೇ ಪಿಬಂತ್ಯವಿತೃಷೋ ನೃಪ ಗಾಢಕರ್ಣೈಃ
ತಾನ್ನ ಸ್ಪೃಶಂತ್ಯಶನತೃಡ್ಭಯಶೋಕಮೋಹಾಃ ॥ ೪೦ ॥

ಏತೈರುಪದ್ರುತೋ ನಿತ್ಯಂ ಜೀವಲೋಕಃ ಸ್ವಭಾವಜೈಃ ।
ನ ಕರೋತಿ ಹರೇರ್ನೂನಂ ಕಥಾಮೃತನಿಧೌ ರತಿಮ್
॥ ೪೧ ॥

ಪ್ರಜಾಪತಿಪತಿಃ ಸಾಕ್ಷಾದ್ಭಗವಾನ್ಗಿರಿಶೋ ಮನುಃ ।
ದಕ್ಷಾದಯಃ ಪ್ರಜಾಧ್ಯಕ್ಷಾ ನೈಷ್ಠಿಕಾಃ ಸನಕಾದಯಃ
॥ ೪೨ ॥

ಮರೀಚಿರತ್ರ್ಯಂಗಿರಸೌ ಪುಲಸ್ತ್ಯಃ ಪುಲಹಃ ಕ್ರತುಃ ।
ಭೃಗುರ್ವಸಿಷ್ಠ ಇತ್ಯೇತೇ ಮದಂತಾ ಬ್ರಹ್ಮವಾದಿನಃ
॥ ೪೩ ॥

ಅದ್ಯಾಪಿ ವಾಚಸ್ಪತಯಸ್ತಪೋವಿದ್ಯಾ ಸಮಾಧಿಭಿಃ ।
ಪಶ್ಯಂತೋಽಪಿ ನ ಪಶ್ಯಂತಿ ಪಶ್ಯಂತಂ ಪರಮೇಶ್ವರಮ್
॥ ೪೪ ॥

ಶಬ್ದಬ್ರಹ್ಮಣಿ ದುಷ್ಪಾರೇ ಚರಂತ ಉರುವಿಸ್ತರೇ ।
ಮಂತ್ರಲಿಂಗೈರ್ವ್ಯವಚ್ಛಿನ್ನಂ ಭಜಂತೋ ನ ವಿದುಃ ಪರಮ್
॥ ೪೫ ॥

ಯದಾ ಯಮನುಗೃಹ್ಣಾತಿ ಭಗವಾನಾತ್ಮಭಾವಿತಃ ।
ಸ ಜಹಾತಿ ಮತಿಂ ಲೋಕೇ ವೇದೇ ಚ ಪರಿನಿಷ್ಠಿತಾಮ್
॥ ೪೬ ॥

ವುದೇ ಇಲ್ಲ. ಆತ್ಮಜ್ಞಾನವೊಂದೇ ಇವುಗಳನ್ನು ಅವಶ್ಯವಾಗಿ ತೊಲಗಿಸುವ ಉಪಾಯವಾಗಿದೆ. ॥ ೩೫ ॥

ಎಲೈ ರಾಜನೇ! ಪರಮಾರ್ಥಸ್ವರೂಪನಾದ ಆತ್ಮನ ಹುಟ್ಟುಸಾವುಗಳ ರೂಪವಾದ ಈ ಅನರ್ಥಪರಂಪರೆಗೆ ಕಾರಣವಾದ ಅವಿದ್ಯೆಯು ಗುರುಸ್ವರೂಪನಾದ ಶ್ರೀಹರಿಯಲ್ಲಿ ದೃಢವಾದ ಭಕ್ತಿಯುಂಟಾದಾಗಲೇ ತೊಲಗುವುದು. ॥ ೩೬ ॥ ಭಗವಾನ್ ವಾಸುದೇವನಲ್ಲಿ ಭಕ್ತಿಯೋಗವು ಚೆನ್ನಾಗಿ ನೆಲೆಗೊಂಡರೆ ಅದರಿಂದ ಜ್ಞಾನ-ವೈರಾಗ್ಯಗಳು ಉಂಟಾಗುವುವು. ॥ ೩೭ ॥ ರಾಜರ್ಷಿಯೇ! ಈ ಭಕ್ತಿಭಾವವು ಭಗವಂತನ ಕಥೆಗಳಲ್ಲಿ ಆಶ್ರಿತವಾಗಿರುತ್ತದೆ. ಅದಕ್ಕಾಗಿ ಶ್ರದ್ಧೆಯಿಂದ ಅವನ್ನು ಕೇಳುವವನು ಅಥವಾ ಓದುವವನು ಅದನ್ನು ಬೇಗನೇ ಪಡೆದುಕೊಳ್ಳುವನು. ॥ ೩೮ ॥ ರಾಜನೇ! ಶ್ರೀಭಗವಂತನ ಗುಣಗಳನ್ನು ಹೇಳುವುದರಲ್ಲಿಯೂ, ಕೇಳುವುದರಲ್ಲಿಯೂ ಆಸಕ್ತರಾಗಿರುವ ಪರಿಶುದ್ಧ ಚಿತ್ತವುಳ್ಳ ಭಕ್ತ ಜನರು ಇರುವ ಸಾಧುಸಮಾಜದಲ್ಲಿ ಎಲ್ಲ ಕಡೆಗಳಲ್ಲಿಯೂ ಮಹಾಪುರುಷರ ಮುಖದಿಂದ ಹೊರಟ ಭಗವಾನ್ ಮಧುಸೂದನನ ಚರಿತ್ರವೆಂಬ ಶುದ್ಧ ಅಮೃತದ ನದಿಗಳು ಹರಿಯುತ್ತಿರುತ್ತವೆ. ಯಾರು ಎಷ್ಟು ಕೇಳಿದರೂ ತೃಪ್ತಿಹೊಂದದಿರುವ ಮನಸ್ಸಿನಿಂದ ಆ ಶ್ರೀಭಗವಂತನ ಚರಿತ್ರೆಯ ಶ್ರವಣದಲ್ಲಿ ತತ್ಪರರಾಗಿ ತಮ್ಮ ಕಿವಿಗಳೆಂಬ ಪಾತ್ರೆಯಗಳಿಂದ ಆ ಅಮೃತವನ್ನು ಕುಡಿಯುತ್ತಾರೋ, ಅವರನ್ನು ಹಸಿವು, ಬಾಯಾರಿಕೆ, ಭಯ, ಶೋಕ, ಮೋಹ ಮುಂತಾದ ಯಾವುದೂ ಪೀಡಿಸಲಾರವು. ॥ ೩೯-೪೦॥ ಅಕಟಾ! ಸ್ವಭಾವದಿಂದಲೇ ಉಂಟಾಗುವ ಈ ಹಸಿವು-ಬಾಯಾರಿಕೆ ಮುಂತಾದ ವಿಘ್ನಗಳಿಂದ ಸುತ್ತುವರಿಯಲ್ಪಟ್ಟ ಜೀವ ಸಮುದಾಯವು ಶ್ರೀಹರಿಯ ಕಥಾಮೃತಸಿಂಧುವನ್ನು ಪ್ರೀತಿಸುವುದಿಲ್ಲವಲ್ಲ! ॥ ೪೧ ॥ ಎಲ್ಲ ಪ್ರಜಾಪತಿಗಳಿಗೆ ಅಧಿಪತಿಯಾದ ಸಾಕ್ಷಾತ್ ಬ್ರಹ್ಮದೇವರು, ಶ್ರೀರುದ್ರದೇವರು, ಸ್ವಾಯಂಭುವ ಮನು, ದಕ್ಷನೇ ಮುಂತಾದ ಪ್ರಜಾಪತಿಗಳು, ಸನಕಾದಿ ನೈಷ್ಠಿಕ ಬ್ರಹ್ಮಚಾರಿಗಳು, ಮರೀಚಿ, ಅತ್ರಿ, ಅಂಗಿರಾ, ಪುಲಸ್ತ್ಯ, ಪುಲಹ, ಕ್ರತು, ಭೃಗು, ವಸಿಷ್ಠ ಮತ್ತು ನನ್ನವರೆಗಿನ ಬ್ರಹ್ಮಜ್ಞರಾದ ಈ ಮುನಿಗಳ ಸಮೂಹವು ಸಮಸ್ತ ವಾಙ್ಮಯಕ್ಕೆ ಅಧಿಪತಿಗಳಾಗಿದ್ದರೂ ಕೂಡ ತಪಸ್ಸು, ಉಪಾಸನೆ ಮತ್ತು ಸಮಾಧಿಗಳ ಮೂಲಕ ಆತನನ್ನು ಹುಡುಕಿ-ಹುಡುಕಿ ಸೋತರು. ಆದರೂ ಅವರು ಇಂದಿನವರೆಗೆ ಸರ್ವಸಾಕ್ಷಿಯಾಗಿರುವ ಆ ಪರಮೇಶ್ವರನನ್ನು ನೋಡಲಾಗಲಿಲ್ಲ. ॥ ೪೨-೪೪ ॥ ವೇದಗಳು ಅನಂತವಾಗಿವೆ. ಅಪಾರವಾಗಿವೆ. ಅನೇಕ ಮಹಾನುಭಾವರು ಆ ವೇದವನ್ನು ವಿಚಾರ ಮಾಡಿ ಮಂತ್ರಗಳಲ್ಲಿ ಹೇಳಿರುವ ಲಕ್ಷಣಗಳಿಂದ ಕೂಡಿರುವ ಇಂದ್ರನೇ ಮುಂತಾದ ದೇವತೆಗಳ ರೂಪದಲ್ಲಿ ಬೇರೆ-ಬೇರೆ ಕರ್ಮಗಳ ಮೂಲಕ ಆ ಪರಮಾತ್ಮನೊಬ್ಬನನ್ನೇ ಆರಾಧಿಸುತ್ತಾರೆ. ಆದರೂ ಆತನ ಸ್ವರೂಪವನ್ನು ಅವರೂ ಅರಿತಿಲ್ಲ. ॥ ೪೫ ॥ ನಿರಂತರವಾಗಿ ಹೃದಯದಲ್ಲಿ ಚಿಂತನೆಮಾಡುತ್ತಿರುವ ಯಾವುದಾದರೂ ಜೀವಿಯ ಮೇಲೆ ಭಗವಂತನು ಅನುಗ್ರಹವನ್ನು ಹರಿಸಿದಾಗಲೇ ಅವನು ಲೌಕಿಕ ವ್ಯವಹಾರದಿಂದಲೂ, ವೈದಿಕಕರ್ಮಮಾರ್ಗದಲ್ಲಿ ಬೇರೂರಿದ್ದ ಆಸೆಗಳಿಂದಲೂ ಬಿಡುಗಡೆ ಹೊಂದುವನು. ॥ ೪೬ ॥

ತಸ್ಮಾತ್ಕರ್ಮಸು ಬರ್ಹಿಷ್ಮನ್ನಜ್ಞಾನಾದರ್ಥಕಾಶಿಷು ।
ಮಾರ್ಥದೃಷ್ಟಿಂ ಕೃಥಾಃ ಶ್ರೋತ್ರಸ್ಪರ್ಶಿಷ್ವಸ್ಪೃಷ್ಟವಸ್ತುಷು ॥ ೪೭ ॥

ಸ್ವಂ ಲೋಕಂ ನ ವಿದುಸ್ತೇ ವೈ ಯತ್ರ ದೇವೋ ಜನಾರ್ದನಃ ।
ಆಹುರ್ಧೂಮ್ರಧಿಯೋ ವೇದಂ ಸಕರ್ಮಕಮತದ್ವಿದಃ ॥ ೪೮ ॥

ಆಸ್ತೀರ್ಯ ದರ್ಭೈಃ ಪ್ರಾಗಗ್ರೈಃ ಕಾರ್ತ್ಸ್ನ್ಯೇನ ಕ್ಷಿತಿಮಂಡಲಮ್ ।
ಸ್ತಬ್ಧೋ ಬೃಹದ್ವಧಾನ್ಮಾನೀ ಕರ್ಮ ನಾವೈಷಿ ಯತ್ಪರಮ್ ।
ತತ್ಕರ್ಮ ಹರಿತೋಷಂ ಯತ್ಸಾ ವಿದ್ಯಾ ತನ್ಮತಿರ್ಯಯಾ ॥ ೪೯ ॥

ಹರಿರ್ದೇಹಭೃತಾಮಾತ್ಮಾ ಸ್ವಯಂ ಪ್ರಕೃತಿರೀಶ್ವರಃ ।
ತತ್ಪಾದಮೂಲಂ ಶರಣಂ ಯತಃ ಕ್ಷೇಮೋ ನೃಣಾಮಿಹ ॥ ೫೦ ॥

ಸ ವೈ ಪ್ರಿಯತಮಶ್ಚಾತ್ಮಾ ಯತೋ ನ ಭಯಮಣ್ವಪಿ ।
ಇತಿ ವೇದ ಸ ವೈ ವಿದ್ವಾನ್ಯೋ ವಿದ್ವಾನ್ಸ ಗುರುರ್ಹರಿಃ ॥ ೫೧ ॥

ನಾರದ ಉವಾಚ

ಪ್ರಶ್ನ ಏವಂ ಹಿ ಸಂಛಿನ್ನೋ ಭವತಃ ಪುರುಷರ್ಷಭ ।
ಅತ್ರ ಮೇ ವದತೋ ಗುಹ್ಯಂ ನಿಶಾಮಯ ಸುನಿಶ್ಚಿತಮ್ ॥ ೫೨ ॥

ಕ್ಷುದ್ರಂಚರಂ ಸುಮನಸಾಂ ಶರಣೇ ಮಿಥಿತ್ವಾ
ರಕ್ತಂ ಷಡಂಘ್ರಿಗಣಸಾಮಸು ಲುಬ್ಧಕರ್ಣಮ್ ।
ಅಗ್ರೇ ವೃಕಾನಸುತೃಪೋಽವಿಗಣಯ್ಯ ಯಾಂತಂ
ಪೃಷ್ಠೇ ಮೃಗಂ ಮೃಗಯ ಲುಬ್ಧಕಬಾಣಭಿನ್ನಮ್ ॥ ೫೩ ॥

ಬರ್ಹಿಷ್ಮರಾಜನೇ! ನೀನು ಈ ಕರ್ಮಗಳಲ್ಲಿ ಪರಮಾರ್ಥ ಬುದ್ಧಿಯನ್ನಿಡಬೇಡ. ಇವು ಕೇಳುವುದಕ್ಕೆ ಪ್ರಿಯವಾಗಿ ಕಂಡು ಬರುತ್ತಿದ್ದರೂ ಪರಮಾರ್ಥವನ್ನು ಮುಟ್ಟುವುದಿಲ್ಲ. ಈ ಕರ್ಮ ಕಾಂಡವು ಪರಮಾರ್ಥವೆಂದು ಕಂಡುಬರುವುದಕ್ಕೆ ಕಾರಣ ಅಜ್ಞಾನ ವೊಂದೇ. ॥ ೪೭ ॥ ಮಲಿನಮತಿಗಳಾದ ಕರ್ಮವಾದಿ ಜನರು ವೇದವನ್ನು ಕರ್ಮಪರವೆಂದೇ ಹೇಳುವವರು ವಾಸ್ತವವಾಗಿ ಅದರ ಮರ್ಮವನ್ನು ತಿಳಿದವರಲ್ಲ. ಅವರು ಸಾಕ್ಷಾತ್ ಭಗವಾನ್ ಶ್ರೀಜನಾರ್ದನನು ವಿರಾಜಮಾನನಾಗಿರುವ ತಮ್ಮ ಸ್ವರೂಪ ಭೂತಲೋಕ (ಆತ್ಮತತ್ತ್ವ)ವನ್ನು ತಿಳಿಯದೇ ಇರುವ ಕಾರಣವೂ ಇದೇ ಆಗಿದೆ. ॥ ೪೮ ॥ ಪೂರ್ವಾಗ್ರವಾಗಿ ದರ್ಭೆಗಳನ್ನು ಇಡೀ ಭೂಮಂಡಲದ ಮೇಲೆ ಹರಡಿ ಅನೇಕ ಪಶುಗಳನ್ನು ಯಜ್ಞಗಳಲ್ಲಿ ವಧೆಮಾಡಿರುವುದರಿಂದ ನಿನಗೆ ಮದ ಉಂಟಾಗಿಬಿಟ್ಟಿದೆ. ಆದರೆ ವಸ್ತುತಃ ನಿನಗೆ ಕರ್ಮದ ರಹಸ್ಯವಾಗಲೀ, ಉಪಾಸನೆಯ ರಹಸ್ಯವಾಗಲೀ ಯಾವುದೂ ತಿಳಿಯದು. ವಾಸ್ತವವಾಗಿ ಶ್ರೀಹರಿಯನ್ನು ಪ್ರಸನ್ನಗೊಳಿಸುವಂತಹ ಕರ್ಮವೇ ಕರ್ಮವಾಗಿದೆ. ಭಗವಂತನಲ್ಲಿ ಚಿತ್ತವು ನೆಲಸುವಂತಹ ವಿದ್ಯೆಯೇ ವಿದ್ಯೆಯಾಗಿದೆ. ॥ ೪೯ ॥ ಶ್ರೀಹರಿಯು ಸಮಸ್ತ ದೇಹಧಾರಿಗಳ ಆತ್ಮನೂ, ನಿಯಾಮಕನೂ, ಸ್ವತಂತ್ರ ಕಾರಣನೂ ಆಗಿದ್ದಾನೆ. ಅದರಿಂದ ಅವನ ಅಡಿದಾವರೆಗಳೇ ಮನುಷ್ಯರಿಗೆ ಏಕಮಾತ್ರ ಆಶ್ರಯವಾಗಿವೆ. ಅವುಗಳಿಂದಲೇ ಪ್ರಪಂಚದಲ್ಲಿ ಎಲ್ಲರ ಶ್ರೇಯಸ್ಸು ಆಗಬಲ್ಲದು. ॥ ೫೦ ॥ 'ಯಾವುದರಿಂದ ಯಾರಿಗೂ ಎಳ್ಳಷ್ಟು ಭಯವುಂಟಾಗುವುದಿಲ್ಲವೋ – ಅದೇ ಅವನ ಪ್ರಿಯತಮ ಆತ್ಮವಾಗಿದೆ' ಎಂದು ತಿಳಿಯುವವನೇ ಜ್ಞಾನಿಯು. ಆ ಜ್ಞಾನಿಯೇ ಗುರುವು ಮತ್ತು ಸಾಕ್ಷಾತ್ ಶ್ರೀಹರಿಯು ಆತನೇ. ॥ ೫೧ ॥

ಶ್ರೀನಾರದರು **ಹೇಳುತ್ತಾರೆ** – ಎಲೈ ಪುರುಷಶ್ರೇಷ್ಠನೇ! ಇಲ್ಲಿಯವರೆಗೆ ನಿನ್ನ ಪ್ರಶ್ನೆಯ ಉತ್ತರ ಸಂಕ್ಷಿಪ್ತವಾಗಿ ಹೇಳಿ ಯಾಯಿತು. ಈಗ ನಾನು ನಿನಗೆ ಒಂದು ಅತ್ಯಂತ ರಹಸ್ಯವಾದ, ಚೆನ್ನಾಗಿ ನಿಶ್ಚಯಿಸಿರುವ ಸಾಧನೆಯನ್ನು ಹೇಳುವೆನು. ಲಕ್ಷ್ಯಕೊಟ್ಟು ಕೇಳು. ॥ ೫೨ ॥ ಹೂದೋಟವೊಂದರಲ್ಲಿ ಒಂದು ಗಂಡು ಹುಲ್ಲೆಯು ಹೆಣ್ಣುಹುಲ್ಲೆಯೊಡನೆ ವಿಹರಿಸುತ್ತಾ ಮತ್ತೇರಿ ಅಲೆ ದಾಡುತ್ತಾ ಎಳೆಗರಿಕೆಯೇ ಮುಂತಾದ ಸಣ್ಣ ಚಿಗುರುಗಳನ್ನು ಮೇಯುತ್ತಿದೆ. ಅದರ ಕಿವಿಗಳು ದುಂಬಿಗಳ ಮಧುರ ಝೇಂಕಾರ ವನ್ನು ಆಲಿಸುತ್ತಿದೆ. ಆ ಹುಲ್ಲೆಯ ಮುಂದೆಯೇ ಇತರ ಜೀವಿ ಗಳನ್ನು ತಿಂದು ಹೊಟ್ಟೆತುಂಬಿಸಿಕೊಳ್ಳುವ ತೋಳಗಳು ಹೊಂಚು ಹಾಕುತ್ತಾ ನಿಂತಿವೆ. ಹಿಂದುಗಡೆಯಿಂದ ಒಬ್ಬ ಬೇಟೆಗಾರನು ಹುಲ್ಲೆಯಮೇಲೆ ಬಾಣವನ್ನು ಬಿಟ್ಟು ಘಾಸಿಗೊಳಿಸುತ್ತಾನೆ. ಆದರೆ ಹುಲ್ಲೆಯು ಇವಾವುದನ್ನೂ ಗಮನಿಸದಷ್ಟು ಅಜಾಗರೂಕವಾಗಿದೆ. ಆ ಜಿಂಕೆಯ ಸ್ಥಿತಿಯನ್ನು ಕುರಿತು ಒಮ್ಮೆ ವಿಚಾರಮಾಡು. ॥ ೫೩ ॥

ಎಲೈ ರಾಜನೇ! ಈ ರೂಪಕದ ಅಭಿಪ್ರಾಯವನ್ನು ಕೇಳು – ಈ ಮೃತಪ್ರಾಯವಾದ ಜಿಂಕೆಯೇ ನೀನಾಗಿರುವೆ. ನೀನು ನಿನ್ನ ಸ್ಥಿತಿಯ ಬಗ್ಗೆ ವಿಚಾರಮಾಡು. ಹೂವುಗಳಂತಿರುವ ಈ ಸ್ತ್ರೀಯರು ಕೇವಲ ನೋಡಲಷ್ಟೇ ಸುಂದರರಾಗಿದ್ದಾರೆ. ಈ ಸ್ತ್ರೀಯರು ಇರುವ

(ಅನ್ವಯಾರ್ಥಃ)

ಸುಮನಃ ಸಧರ್ಮಣಾಂ ಸ್ತ್ರೀಣಾಂ ಶರಣ ಆಶ್ರಮೇ ಪುಷ್ಪಮಧುಗಂಧವತ್ಕ್ಷುದ್ರತಮಂ ಕಾಮ್ಯಕರ್ಮ ವಿಪಾಕಜಂ ಕಾಮಸುಖಲವಂ ಜೈಹ್ವ್ಯೌಪಸ್ಥ್ಯಾದಿವಿಚಿನ್ವಂತಂ ಮಿಥುನೀಭೂಯ ತದಭಿನಿವೇಶಿತಮನಸಂ ಷಡಂಘ್ರಿಗಣಸಾಮಗೀತವದತಿಮನೋಹರವನಿತಾದಿಜನಾಲಾಪೇಷ್ವತಿತರಾಮತಿಪ್ರಲೋಭಿತಕರ್ಣಮಗ್ರೇ ವೃಕಯೂಥವದಾತ್ಮನ ಆಯುರ್ಹರತೋಽಹೋರಾತ್ರಾಂತಾನ್ಕಾಲಲವವಿಶೇಷಾನವಿಗಣಯ್ಯ ಗೃಹೇಷು ವಿಹರಂತಂ ಪೃಷ್ಠತ ಏವ ಪರೋಕ್ಷಮನುಪ್ರವೃತ್ತೋ ಲುಬ್ಧಕಃ ಕೃತಾಂತೋಽಂತಃಶರೇಣ ಯಮಿಹಪರಾವಿಧ್ಯತಿ ತಮಿಮಮಾತ್ಮಾನಮಹೋ ರಾಜನ್ ಭಿನ್ನ ಹೃದಯಂ ದ್ರಷ್ಟುಮರ್ಹಸೀತಿ ॥ ೫೪ ॥

ಸ ತ್ವಂ ವಿಚಕ್ಷ್ವ ಮೃಗಚೇಷ್ಟಿತಮಾತ್ಮನೋಽಂತ-
ಶ್ಚಿತ್ತಂ ನಿಯಚ್ಛ ಹೃದಿ ಕರ್ಣಧುನೀಂ ಚ ಚಿತ್ತೇ ।
ಜಹ್ಯಂಗನಾಶ್ರಮಮಸತ್ತಮಯೂಥಗಾಥಂ
ಪ್ರೀಣೀಹಿ ಹಂಸಶರಣಂ ವಿರಮ ಕ್ರಮೇಣ ॥ ೫೫ ॥

ರಾಜೋವಾಚ

ಶ್ರುತಮನ್ವೀಕ್ಷಿತಂ ಬ್ರಹ್ಮನ್ ಭಗವಾನ್ ಯದಭಾಷತ ।
ನೈತಜ್ಜಾನಂತ್ಯುಪಾಧ್ಯಾಯಾಃ ಕಿಂ ನ ಬ್ರೂಯುರ್ವಿದುರ್ಯದಿ ॥ ೫೬ ॥

ಸಂಶಯೋಽತ್ರ ತು ಮೇ ವಿಪ್ರ ಸಂಛಿನ್ನಸ್ತತ್ಕೃತೋ ಮಹಾನ್ ।
ಋಷಯೋಽಪಿ ಹಿ ಮುಹ್ಯಂತಿ ಯತ್ರ ನೇಂದ್ರಿಯವೃತ್ತಯಃ ॥ ೫೭ ॥

ಕರ್ಮಾಣ್ಯಾರಭತೇ ಯೇನ ಪುಮಾನಿಹ ವಿಹಾಯ ತಮ್ ।
ಅಮುತ್ರಾನ್ಯೇನ ದೇಹೇನ ಜುಷ್ಟಾನಿ ಸ ಯದಶ್ನುತೇ ॥ ೫೮ ॥

ಇತಿ ವೇದವಿದಾಂ ವಾದಃ ಶ್ರೂಯತೇ ತತ್ರ ತತ್ರ ಹ ।
ಕರ್ಮ ಯತ್ಕ್ರಿಯತೇ ಪ್ರೋಕ್ತಂ ಪರೋಕ್ಷಂ ನ ಪ್ರಕಾಶತೇ ॥ ೫೯ ॥

ಮನೆಯೇ ಹೂದೋಟವು. ಇದರಲ್ಲಿದ್ದುಕೊಂಡು ನೀನು ಹೂವುಗಳ ಮಧುವಿಗೂ, ಪರಿಮಳಕ್ಕೂ ಸಮಾನವಾದ ಕ್ಷುದ್ರವಾದ ಸಕಾಮಕರ್ಮಗಳ ಫಲರೂಪವಾಗಿ ನಾಲಿಗೆಗೂ ಜನನೇಂದ್ರಿಯಕ್ಕೂ ಪ್ರಿಯವೆನಿಸುವ ಭೋಜನ, ಸ್ತ್ರೀಪ್ರಸಂಗಗಳೇ ಮುಂತಾದ ತುಚ್ಛ-ಭೋಗಗಳನ್ನು ಹುಡುಕುತ್ತಿರುವೆ. ಸ್ತ್ರೀಯರಿಂದ ಸುತ್ತುವರಿಯಲ್ಪಟ್ಟು, ತನ್ನ ಮನಸ್ಸನ್ನು ಅವರಲ್ಲೇ ನೆಟ್ಟಿರುವೆ. ಹೆಂಡಿರು-ಮಕ್ಕಳ ಸವಿಮಾತುಗಳೇ ದುಂಬಿಗಳ ಮಧುರ ಗುಂಜಾರವವಾಗಿದೆ. ನಿನ್ನ ಕಿವಿಗಳು ಅದರಲ್ಲೇ ಅತ್ಯಂತ ಆಸಕ್ತವಾಗಿವೆ. ಇದಿರ್ಗಡೆಯೇ ತೋಳಗಳ ಹಿಂಡಿನಂತೆ ಕಾಲದ ಅಂಶವಾದ ಹಗಲು-ರಾತ್ರಿಗಳು ನಿನ್ನ ಆಯುಸ್ಸನ್ನು ಕಸಿದುಕೊಳ್ಳುತ್ತಿವೆ. ಆದರ ನೀನು ಅದಾವುದನ್ನೂ ಗಮನಿಸದೆ ಗೃಹಸ್ಥಸುಖಗಳಲ್ಲೇ ರಮಿಸುತ್ತಿದ್ದೀಯೆ. ನಿನ್ನ ಹಿಂದುಗಡೆ ಕಾಲಪುರುಷನೆಂಬ ಬೇಟೆಗಾರನು ಸದ್ದಿಲ್ಲದೆ ನಿಂತುಕೊಂಡು ಬಾಣದಿಂದ ನಿನ್ನ ಹೃದಯವನ್ನು ದೂರದಿಂದಲೇ ಸೀಳಿಹಾಕಲು ಬಯಸುತ್ತಿದ್ದಾನೆ. ॥ ೫೪ ॥ ಹೀಗೆ ನಿನ್ನ ಸ್ಥಿತಿಯು ಆ ಮೃಗದ ಸ್ಥಿತಿಯಂತೆಯೇ ಇರುವುದನ್ನು ಗಮನಿಸಿ, ನೀನು ಚಿತ್ತವನ್ನು ಹೃದಯದೊಳಗೆ ಸ್ಥಿರಗೊಳಿಸು. ನದಿಯಂತೆ ಹರಿಯುತ್ತಿರುವ ಶ್ರವಣೇಂದ್ರಿಯದ ಬಾಹ್ಯವೃತ್ತಿಯನ್ನು ಚಿತ್ತದಲ್ಲಿ ನೆಲೆಗೊಳಿಸು (ಅಂತರ್ಮುಖಿಯಾಗು). ಕಾಮಿಗಳ ಚರ್ಚೆ ನಡೆಯುತ್ತಿರುವ ಗೃಹಾಶ್ರಮವನ್ನು ಬಿಟ್ಟು ಪರಮಹಂಸರಿಗೆ ಆಶ್ರಯನಾದ ಶ್ರೀಹರಿಯನ್ನು ಪ್ರಸನ್ನಗೊಳಿಸು ಮತ್ತು ಕ್ರಮವಾಗಿ ಎಲ್ಲ ವಿಷಯಗಳಿಂದ ದೂರವಾಗಿರು. ॥ ೫೫ ॥

ಪ್ರಾಚೀನ ಬರ್ಹಿರಾಜನು ಹೇಳಿದನು – ಭಗವಾನ್ ದೇವರ್ಷಿಗಳೇ! ತಾವು ಕರುಣೆಯಿಂದ ನನಗೆ ಅನುಗ್ರಹಿಸಿರುವ ಉಪದೇಶವನ್ನು ಆಲಿಸಿ ಅದರ ಬಗೆಗೆ ವಿಶೇಷವಾಗಿ ವಿಚಾರ ಮಾಡಿದೆನು. ನನಗೆ ಕರ್ಮವನ್ನೇ ಉಪದೇಶ ಮಾಡಿದ ಆ ಉಪಾಧ್ಯಾಯರಿಗೆ ನಿಶ್ಚಯವಾಗಿಯೂ ಈ ಜ್ಞಾನವಿಲ್ಲ. ಇದನ್ನು ಅವರು ತಿಳಿದಿದ್ದರೆ ನನಗೆ ಇಂತಹ ಉಪದೇಶವನ್ನು ಕೊಡುತ್ತಿರಲಿಲ್ಲವೇ? ॥ ೫೬ ॥ ವಿಪ್ರವರ್ಯರೇ! ನನ್ನ ಉಪಾಧ್ಯಾಯರ ಉಪದೇಶದಿಂದ ಆತ್ಮತತ್ತ್ವದ ವಿಷಯದಲ್ಲಿ ನನ್ನ ಹೃದಯದಲ್ಲಿ ಉಂಟಾದ ದೊಡ್ಡ ಸಂಶಯವನ್ನು ತಾವು ತೊಲಗಿಸಿದಿರಿ. ಇದು ಅತೀಂದ್ರಿಯವಾದ ವಿಷಯವಾದ್ದರಿಂದ ಋಷಿಗಳಿಗೂ ಇದರಲ್ಲಿ ಕೆಲವೊಮ್ಮೆ ಮೋಹ ಉಂಟಾಗುತ್ತದೆ. ॥ ೫೭ ॥ "ಮನುಷ್ಯನು ಈ ಲೋಕದಲ್ಲಿ ಯಾವ ದೇಹದಿಂದ ಕರ್ಮಗಳನ್ನು ಆಚರಿಸುತ್ತಾನೆಯೋ, ಆ ಸ್ಥೂಲದೇಹವನ್ನು ಇಲ್ಲೇ ಬಿಟ್ಟು ಪರಲೋಕದಲ್ಲಿ ಕರ್ಮಗಳಿಂದಲೇ ನಿರ್ಮಿತವಾದ ಬೇರೊಂದು ಶರೀರವನ್ನು ಪಡೆದು ಅದರಿಂದ ಕರ್ಮಫಲವನ್ನು ಅನುಭವಿಸುವನು" ಎಂದು ವೇದವಾದಿಗಳು ಹೇಳುವುದು ಅಲ್ಲಲ್ಲಿ ಕೇಳಬರುತ್ತಿದೆ. ಆದರೆ ಈ ಮಾತು ಹೇಗಾಗಬಲ್ಲದು? (ಏಕೆಂದರೆ ಆ ಕರ್ಮಗಳ ಕರ್ತೃವಾದ ಸ್ಥೂಲಶರೀರವು ಇಲ್ಲೇ ನಷ್ಟವಾಗಿ ಹೋಗುತ್ತದೆ.) ಇದಲ್ಲದೆ ಯಾವ-ಯಾವ ಕರ್ಮಗಳನ್ನು ಇಲ್ಲಿ ಮಾಡಲಾಗುತ್ತದೋ ಅವುಗಳಾದರೋ ಮರುಕ್ಷಣದಲ್ಲೇ ಅದೃಶ್ಯವಾಗುತ್ತವೆ. ಅವು ಪರಲೋಕದಲ್ಲಿ ಫಲಕೊಡಲು ಹೇಗೆ ಪುನಃ ಪ್ರಕಟಗೊಳ್ಳಬಲ್ಲವು? ॥ ೫೮-೫೯ ॥

ನಾರದ ಉವಾಚ

ಯೇನೈವಾರಭತೇ ಕರ್ಮ ತೇನೈವಾಮುತ್ರ ತತ್ಪುಮಾನ್ ।
ಭುಂಕ್ತೇ ಹ್ಯವ್ಯವಧಾನೇನ ಲಿಂಗೇನ ಮನಸಾ ಸ್ವಯಮ್ ॥ ೬೦ ॥

ಶಯಾನಮಿಮಮುತ್ಸೃಜ್ಯ ಶ್ವಸಂತಂ ಪುರುಷೋ ಯಥಾ ।
ಕರ್ಮಾತ್ಮನ್ಯಾಹಿತಂ ಭುಂಕ್ತೇ ತಾದೃಶೇನೇತರೇಣ ವಾ ॥ ೬೧ ॥

ಮಮೈತೇ ಮನಸಾ ಯದ್ಯದಸಾವಹಮಿತಿ ಬ್ರುವನ್ ।
ಗೃಹ್ಣೀಯಾತ್ತತ್ಪುಮಾನ್ರಾದ್ಧಂ ಕರ್ಮ ಯೇನ ಪುನರ್ಭವಃ ॥ ೬೨ ॥

ಯಥಾನುಮೀಯತೇ ಚಿತ್ತಮುಭಯೈರಿಂದ್ರಿಯೇಹಿತೈಃ ।
ಏವಂ ಪ್ರಾಗ್ದೇಹಜಂ ಕರ್ಮ ಲಕ್ಷ್ಯತೇ ಚಿತ್ತವೃತ್ತಿಭಿಃ ॥ ೬೩ ॥

ನಾನುಭೂತಂ ಕ್ವ ಚಾನೇನ ದೇಹೇನಾದೃಷ್ಟಮಶ್ರುತಮ್ ।
ಕದಾಚಿದುಪಲಭ್ಯೇತ ಯದ್ರೂಪಂ ಯಾದೃಗಾತ್ಮನಿ ॥ ೬೪ ॥

ತೇನಾಸ್ಯ ತಾದೃಶಂ ರಾಜಲ್ಲಿಂಗಿನೋ ದೇಹಸಂಭವಮ್ ।
ಶ್ರದ್ಧತ್ಸ್ವಾನನುಭೂತೋಽರ್ಥೋ ನ ಮನಃ ಸ್ಪ್ರಷ್ಟುಮರ್ಹತಿ ॥ ೬೫ ॥

ಮನ ಏವ ಮನುಷ್ಯಸ್ಯ ಪೂರ್ವರೂಪಾಣಿ ಶಂಸತಿ ।
ಭವಿಷ್ಯತಶ್ಚ ಭದ್ರಂ ತೇ ತಥೈವ ನ ಭವಿಷ್ಯತಃ ॥ ೬೬ ॥

ಅದೃಷ್ಟಮಶ್ರುತಂ ಚಾತ್ರ ಕ್ವಚಿನ್ಮನಸಿ ದೃಶ್ಯತೇ ।
ಯಥಾ ತಥಾನುಮಂತವ್ಯಂ ದೇಶಕಾಲಕ್ರಿಯಾಶ್ರಯಮ್ ॥ ೬೭ ॥

ಶ್ರೀನಾರದರು ಹೇಳಿದರು – ಎಲೈ ರಾಜನೇ! (ಸ್ಥೂಲ ಶರೀರವಾದರೋ ಲಿಂಗಶರೀರದ ಅಧೀನವಾಗಿದೆ. ಆದ್ದರಿಂದ ಕರ್ಮಗಳ ಹೊಣೆಗಾರಿಕೆ ಅದರ ಮೇಲೆಯೇ ಇದೆ.) ಮನಃ ಪ್ರಧಾನವಾದ ಲಿಂಗಶರೀರದ ಸಹಾಯದಿಂದಲೇ ಮನುಷ್ಯನು ಕರ್ಮವನ್ನು ಮಾಡುತ್ತಾನೆ. ಅದಾದರೋ ಸತ್ತಬಳಿಕವೂ ಅವನೊಂದಿಗೆ ಇರುತ್ತದೆ. ಆದ್ದರಿಂದ ಅವನು ಪರಲೋಕದಲ್ಲಿ ಅಪರೋಕ್ಷವಾಗಿ ಸ್ವತಃ ಅದರ ಮೂಲಕವೇ ಫಲವನ್ನು ಅನುಭವಿಸುತ್ತಾನೆ. ॥ ೬೦ ॥ ಸ್ವಪ್ನಾವಸ್ಥೆಯಲ್ಲಿ ಮನುಷ್ಯನು ಈ ಜೀವಿತ ಶರೀರದ ಅಭಿಮಾನವನ್ನಾದರೋ ಬಿಟ್ಟುಬಿಡುತ್ತಾನೆ. ಆದರೆ ಅದರಂತೆ ಇರುವ ಅಥವಾ ಇದರಿಂದ ಭಿನ್ನವಾದ ಪಶು– ಪಕ್ಷಿ ಮುಂತಾದ ಶರೀರದಿಂದ ಅವನು ಮನಸ್ಸಿನಲ್ಲಿರುವ ಸಂಸ್ಕಾರ ರೂಪದಿಂದ ಇರುವ ಕರ್ಮಗಳ ಫಲವನ್ನು ಅನುಭವಿಸುತ್ತಾ ಇರುತ್ತಾನೆ. ॥ ೬೧ ॥ ಈ ಮನಸ್ಸಿನ ಮೂಲಕ ಜೀವನು ಪತ್ನೀ-ಪುತ್ರಾದಿಗಳನ್ನು 'ಇವರು ನನ್ನವರು' ಮತ್ತು ದೇಹಾದಿಗಳನ್ನು 'ಇದು ನಾನು' ಎಂದು ಹೇಳಿಕೊಂಡು ಒಪ್ಪಿಕೊಳ್ಳುವನು. ಅವರು ಮಾಡಿರುವ ಪಾಪ-ಪುಣ್ಯ ಮುಂತಾದ ಕರ್ಮಗಳನ್ನೂ ಕೂಡ ತಾನು ಪರಿಗ್ರಹಿಸಿ, ಅವುಗಳಿಂದಾಗಿ ಇವನಿಗೆ ವ್ಯರ್ಥವಾಗಿಯೇ ಪುನಃ ಹುಟ್ಟಬೇಕಾಗುತ್ತದೆ. ॥ ೬೨ ॥ ಜ್ಞಾನೇಂದ್ರಿಯ ಮತ್ತು ಕರ್ಮೇಂದ್ರಿಯ ಎರಡರ ಚೇಷ್ಟೆಗಳಿಂದ ಅವುಗಳಿಗೆ ಪ್ರೇರಕವಾದ ಚಿತ್ತದ ಅನುಮಾನ ಮಾಡಲಾಗುತ್ತದೆ. ಹಾಗೆಯೇ ಚಿತ್ತದ ಬೇರೆ–ಬೇರೆ ರೀತಿಯ ವೃತ್ತಿಗಳಿಂದ ಹಿಂದಿನ ಜನ್ಮದ ಕರ್ಮಗಳನ್ನೂ ಅನುಮಾನಿಸಬೇಕಾಗುತ್ತದೆ. (ಆದ್ದರಿಂದ ಕರ್ಮವು ಅದೃಷ್ಟರೂಪದಿಂದ ಫಲವನ್ನು ಕೊಡಲಿಕ್ಕಾಗಿ ಕಾಲಾಂತರ ದಲ್ಲಿಯೂ ಇರುವುದೆಂದು ತಿಳಿಯಬೇಕು.) ॥ ೬೩ ॥ ಕೆಲವೊಮ್ಮೆ ನಾವು ಈಗ ಇರುವ ದೇಹದಿಂದ ಎಲ್ಲಿಯೂ ಯಾವಾಗಲೂ ಕಾಣದಿರುವ ಮತ್ತು ಕೇಳದಿರುವ ಸಂಗತಿಗಳನ್ನು ಸ್ವಪ್ನದಲ್ಲಿ ಸ್ಪಷ್ಟವಾಗಿ ನಿಜವಾಗಿ ನಡೆದಂತೆ ಅನುಭವಿಸುತ್ತೇವೆ. (ಇದರಿಂದ ಪೂರ್ವಜನ್ಮದ ಕರ್ಮಗಳು ಇರುವುದೆಂದು ಊಹಿಸ ಬಹುದು.) ॥ ೬೪ ॥ ಎಲೈ ರಾಜನೇ ! ಲಿಂಗದೇಹದ ಅಭಿಮಾನೀ ಜೀವನಿಗೆ ಅವುಗಳ ಅನುಭವ ಹಿಂದಿನ ಜನ್ಮದಲ್ಲಿ ಆಗಿಹೋಗಿವೆ ಎಂದು ನೀನು ನಿಶ್ಚಯವಾಗಿ ತಿಳಿದುಕೋ. ಏಕೆಂದರೆ, ಮೊದಲು ಅನುಭವಿಸದೆ ಇರುವ ವಸ್ತುವಿನ ವಾಸನೆಯು ಮನಸ್ಸಿನಲ್ಲಿ ಬರಲು ಸಾಧ್ಯವೇ ಇಲ್ಲ. ॥ ೬೫ ॥

ಎಲೈ ರಾಜನೇ ! ನಿನಗೆ ಮಂಗಳವಾಗಲಿ. ಮನುಷ್ಯನ ಹಿಂದಿನ ರೂಪಗಳನ್ನು ಹಾಗೂ ಮುಂದಿನ ಶರೀರಾದಿಗಳನ್ನೂ ಕೂಡ ಮನಸ್ಸೇ ತಿಳಿಸುತ್ತದೆ ಮತ್ತು ಮುಂದೆ ಜನ್ಮವೇ ಆಗದಿರುವ ತತ್ತ್ವವೇತ್ತರಾದವರ ವಿದೇಹಮುಕ್ತಿಯ ಸ್ಥಿತಿಯನ್ನು ಅವರ ಮನಸ್ಸಿನಿಂದಲೇ ತಿಳಿಯುತ್ತದೆ. ॥ ೬೬ ॥ ಕೆಲವೊಮ್ಮೆ ಸ್ವಪ್ನದಲ್ಲಿ ದೇಶ, ಕಾಲ ಅಥವಾ ಕ್ರಿಯೆಯ ಸಂಬಂಧೀ ಮಾತುಗಳೂ ಮೊದಲೂ ಎಂದೂ ನೋಡದೆ ಇದ್ದ ಅಥವಾ ಕೇಳದೇ ಇದ್ದುದನ್ನು (ಪರ್ವತದ ತುದಿಯಲ್ಲಿ ಸಮುದ್ರವನ್ನು, ಹಗಲಿನಲ್ಲಿ ನಕ್ಷತ್ರಗಳು ಅಥವಾ ತನ್ನ ತಲೆಯೇ ತುಂಡಾದಂತೆ) ನೋಡಲಾಗುತ್ತದೆ. ಇವುಗಳನ್ನು ನೋಡುವುದರಲ್ಲಿ ನಿದ್ರಾದೋಷವನ್ನೇ ಕಾರಣವೆಂದು ತಿಳಿಯಬೇಕು. ॥ ೬೭ ॥ ಮನಸ್ಸಿನ ಮುಂದೆ ಇಂದ್ರಿಯಗಳಿಂದ ಅನುಭವಿಸಲು ಯೋಗ್ಯವಾದ ಪದಾರ್ಥಗಳೇ ಭೋಗರೂಪದಿಂದ

ಸರ್ವೇ ಕ್ರಮಾನುರೋಧೇನ ಮನಸೀಂದ್ರಿಯಗೋಚರಾಃ ।
ಆಯಾಂತಿ ವರ್ಗಶೋ ಯಾಂತಿ ಸರ್ವೇ ಸಮನಸೋ ಜನಾಃ
॥ ೬೮ ॥

ಸತ್ತ್ವೈಕನಿಷ್ಠೇ ಮನಸಿ ಭಗವತ್ಪಾರ್ಶ್ವವರ್ತಿನಿ ।
ತಮಶ್ಚಂದ್ರಮಸೀವೇದಮುಪರಜ್ಯಾವಭಾಸತೇ
॥ ೬೯ ॥

ನಾಹಂ ಮಮೇತಿ ಭಾವೋಽಯಂ
ಪುರುಷೇ ವ್ಯವಧೀಯತೇ ।
ಯಾವದ್ಬುದ್ಧಿಮನೋಽಕ್ಷಾರ್ಥ-
ಗುಣವ್ಯೂಹೋ ಹ್ಯನಾದಿಮಾನ್ ॥ ೭೦ ॥

ಸುಪ್ತಿಮೂರ್ಚ್ಛೋಪತಾಪೇಷು ಪ್ರಾಣಾಯನವಿಘಾತತಃ ।
ನೇಹತೇಽಹಮಿತಿ ಜ್ಞಾನಂ ಮೃತ್ಯುಪ್ರಜ್ವಾರಯೋರಪಿ
॥ ೭೧ ॥

ಗರ್ಭೇ ಬಾಲ್ಯೇಽಪ್ಯಪೌಷ್ಕಲ್ಯಾದೇಕಾದಶವಿಧಂ ತದಾ ।
ಲಿಂಗಂ ನ ದೃಶ್ಯತೇ ಯೂನಃ ಕುಹ್ವಾಂ ಚಂದ್ರಮಸೋ ಯಥಾ
॥ ೭೨ ॥

ಅರ್ಥೇ ಹ್ಯವಿದ್ಯಮಾನೇಽಪಿ ಸಂಸೃತಿರ್ನ ನಿವರ್ತತೇ ।
ಧ್ಯಾಯತೋ ವಿಷಯಾನಸ್ಯ ಸ್ವಪ್ನೇಽನರ್ಥಾಗಮೋ ಯಥಾ
॥ ೭೩ ॥

ಏವಂ ಪಂಚವಿಧಂ ಲಿಂಗಂ ತ್ರಿವೃತ್ಷೋಡಶವಿಸ್ತೃತಮ್ ।
ಏಷ ಚೇತನಯಾ ಯುಕ್ತೋ ಜೀವ ಇತ್ಯಭಿಧೀಯತೇ
॥ ೭೪ ॥

ಅನೇನ ಪುರುಷೋ ದೇಹಾನುಪಾದತ್ತೇ ವಿಮುಂಚತಿ ।
ಹರ್ಷಂ ಶೋಕಂ ಭಯಂ ದುಃಖಂ ಸುಖಂ ಚಾನೇನ ವಿಂದತಿ
॥ ೭೫ ॥

ಯಥಾ ತೃಣಜಲೂಕೇಯಂ ನಾಪಯಾತ್ಯಪಯಾತಿ ಚ ।
ನ ತ್ಯಜೇನ್ಮ್ರಿಯಮಾಣೋಽಪಿ ಪ್ರಾಗ್ದೇಹಾಭಿಮತಿಂ ಜನಃ
॥ ೭೬ ॥

ಯಾವದನ್ಯಂ ನ ವಿಂದೇತ ವ್ಯವಧಾನೇನ ಕರ್ಮಣಾಮ್ ।
ಮನ ಏವ ಮನುಷ್ಯೇಂದ್ರ ಭೂತಾನಾಂ ಭವಭಾವನಮ್
॥ ೭೭ ॥

ಪದೇ-ಪದೇ ಬರುತ್ತಿರುತ್ತವೆ ಮತ್ತು ಭೋಗವು ಸಮಾಪ್ತವಾದ ಮೇಲೆ ಹೊರಟುಹೋಗುತ್ತವೆ. ಇಂದ್ರಿಯಗಳಿಂದ ಅನುಭವಿಸಲಾರದ ಯಾವುದೇ ಪದಾರ್ಥಗಳು ಬರುವುದಿಲ್ಲ. ಇದರ ಕಾರಣ ಎಲ್ಲ ಜೀವರೂ ಮನಸಹಿತರೇ ಆಗಿದ್ದಾರೆ. ॥ ೬೮ ॥ ಸಾಮಾನ್ಯವಾಗಿ ವಿಷಯಗಳು ಎಲ್ಲರಿಗೂ ಕ್ರಮವಾಗಿ ಅನುಭವಕ್ಕೆ ಬರುತ್ತವೆ. ಆದರೆ ಮನಸ್ಸು ಶುದ್ಧಸತ್ತ್ವದಲ್ಲಿ ನೆಲೆಸಿ ಶ್ರೀಭಗವಂತನಲ್ಲಿ ತೊಡಗಿದಾಗ – ರಾಹುವು ದೃಷ್ಟಿಯ ವಿಷಯನಲ್ಲದಿದ್ದರೂ ಚಂದ್ರಬಿಂಬದಲ್ಲಿ ತೋರುವಂತೆ ಕೆಲವೊಮ್ಮೆ ಭಗವಂತನ ಸಂಸರ್ಗದಿಂದ ಸಮಸ್ತ ವಿಶ್ವವೂ, ಸಮಸ್ತ ವಾಸನೆಗಳೂ ಏಕಕಾಲದಲ್ಲಿ ತೋರುವುದೂ ಉಂಟು. ॥ ೬೯ ॥ ಬುದ್ಧಿ, ಮನಸ್ಸು, ಇಂದ್ರಿಯಗಳು ಮತ್ತು ಇಂದ್ರಿಯಗಳ ವಿಷಯಗಳು – ಈ ಗುಣಗಳ ಪರಿಣಾಮವಾದ ಅನಾದಿ ಲಿಂಗಶರೀರವು ಇರುವಲ್ಲಿಯವರೆಗೂ ಜೀವನಲ್ಲಿ ಸ್ಥೂಲದೇಹದ ಕುರಿತು 'ನಾನು-ನನ್ನದು' ಎಂಬ ಭಾವವು ನಾಶಹೊಂದುವುದಿಲ್ಲ. ॥ ೭೦ ॥ ಗಾಢನಿದ್ರೆ, ಮೂರ್ಛೆ, ಅತ್ಯಂತ ದುಃಖ ಹಾಗೂ ಮೃತ್ಯು, ತೀವ್ರವಾದ ಸನ್ನಿಪಾತ ಜ್ವರವೇ ಮುಂತಾದ ಸ್ಥಿತಿಯಲ್ಲಿ ಇಂದ್ರಿಯಗಳ ವ್ಯಾಕುಲತೆಯ ಕಾರಣ 'ನಾನು-ನನ್ನದು' ಇದರ ಸ್ಪಷ್ಟ ಅನುಭೂತಿ ಆಗದಿದ್ದರೂ ಆಗಲೂ ಅವುಗಳ ಅಭಿಮಾನ ಇದ್ದೇ ಇರುತ್ತದೆ. ॥ ೭೧ ॥ ಅಮಾವಾಸ್ಯೆಯ ರಾತ್ರಿಯಲ್ಲಿ ಚಂದ್ರನು ಇದ್ದೇ ಇದ್ದರೂ ನಮಗೆ ಗೋಚರಿಸುವುದಿಲ್ಲ. ಹಾಗೆಯೇ ಗರ್ಭದಶೆ ಮತ್ತು ಬಾಲ್ಯಾವಸ್ಥೆಗಳಲ್ಲಿ ಇಂದ್ರಿಯಗಳ ಪೂರ್ಣವಿಕಾಸವಾಗದಿದ್ದರಿಂದ ಈ ಹನ್ನೊಂದು ಇಂದ್ರಿಯಗಳಿಂದ ಕೂಡಿದ ಲಿಂಗದೇಹವು ತೋರಿಬರದಿದ್ದರೂ, ಯೌವನಾವಸ್ಥೆಯಲ್ಲಿರುವ ಮನುಷ್ಯನಲ್ಲಿ ಸ್ಪಷ್ಟ ತೋರಿಬರುವುದು. ॥ ೭೨ ॥ ಕನಸಿನಲ್ಲಿ ಯಾವ ವಸ್ತುವೂ ಇಲ್ಲದಿದ್ದರೂ ಕನಸಿನ ಅನರ್ಥವು ಎಚ್ಚರಿಕೆಯಾಗುವವರೆಗೆ ತೊಲಗುವುದಿಲ್ಲ. ಹಾಗೆಯೇ ಈ ಪ್ರಪಂಚದ ವಸ್ತುಗಳು ವಾಸ್ತವವಾಗಿ ಅಸತ್ಯವಾಗಿದ್ದರೂ ಅವಿದ್ಯೆಗೆ ವಶನಾದ ಜೀವನು ಅವುಗಳನ್ನು ಚಿಂತಿಸುತ್ತಿರುವನು. ಆದ್ದರಿಂದ ಅವನಿಗೆ ಹುಟ್ಟು- ಸಾವುಗಳ ರೂಪವಾದ ಈ ಸಂಸಾರವು ತೊಲಗುವುದಿಲ್ಲ. ॥ ೭೩ ॥

ಹೀಗೆ ಪಂಚತನ್ಮಾತ್ರೆಗಳಿಂದ ಉಂಟಾದ ಹಾಗೂ ಹದಿನಾರು ತತ್ತ್ವಗಳ ರೂಪದಲ್ಲಿ ವಿಕಸಿತವಾದ ಈ ತ್ರಿಗುಣಮಯ ಸಂಘಾತವೇ ಲಿಂಗಶರೀರವು. ಇದು ಚೇತನದಿಂದ ಕೂಡಿದಾಗ 'ಜೀವ' ಎನಿಸಿಕೊಳ್ಳುವುದು. ॥ ೭೪ ॥ ಇವನ ಮೂಲಕವೇ ಪುರುಷನು ಬೇರೆ-ಬೇರೆ ದೇಹಗಳನ್ನು ಗ್ರಹಿಸುತ್ತಾ, ತ್ಯಜಿಸುತ್ತಾ ಇರುವನು. ಹಾಗೂ ಇದರಿಂದಲೇ ಅವನಿಗೆ ಹರ್ಷ, ಶೋಕ, ಭಯ, ದುಃಖ ಮತ್ತು ಸುಖ ಮುಂತಾದ ಅನುಭವಗಳು ಉಂಟಾಗುತ್ತವೆ. ॥ ೭೫ ॥ ಜಿಗಣೆಯ ಹುಳುವು ಒಂದು ಹುಲ್ಲಿನಿಂದ ಮತ್ತೊಂದು ಹುಲ್ಲಿಗೆ ಹತ್ತುವಾಗ ಮುಂದಿನ ಹುಲ್ಲನ್ನು ಗಟ್ಟಿಯಾಗಿ ಹಿಡಿದುಕೊಳ್ಳುವ ವರೆಗೂ ಹಿಂದಿನ ಹುಲ್ಲನ್ನು ಬಿಡುವುದಿಲ್ಲ. ಹಾಗೆಯೇ ಜೀವನು ಮರಣಕಾಲವು ಒದಗಿದರೂ ದೇಹಾರಂಭದ ಕರ್ಮಗಳು ಮುಗಿದುಹೋದರೂ ಮತ್ತೊಂದು ಶರೀರವು ದೊರೆಯುವ ತನಕ ಹಿಂದಿನ ಶರೀರದ ಅಭಿಮಾನವನ್ನು ಬಿಡುವುದಿಲ್ಲ. ರಾಜೇಂದ್ರನೇ! ಈ ಮನಃಪ್ರಧಾನವಾದ ಲಿಂಗ

ಯದಾಕ್ಷೈಶ್ಚರಿತಾಂಧ್ಯಾಯನ್ಕರ್ಮಾಣ್ಯಾಚಿನುತೇಽಸಕೃತ್ ।
ಸತಿ ಕರ್ಮಣ್ಯವಿದ್ಯಾಯಾಂ ಬಂಧಃ ಕರ್ಮಣ್ಯನಾತ್ಮನಃ
॥ ೭೮ ॥

ಅತಸ್ತದಪವಾದಾರ್ಥಂ ಭಜ ಸರ್ವಾತ್ಮನಾ ಹರಿಮ್ ।
ಪಶ್ಯಂಸ್ತದಾತ್ಮಕಂ ವಿಶ್ವಂ ಸ್ಥಿತ್ಯುತ್ಪತ್ತ್ಯಪ್ಯಯಾ ಯತಃ
॥ ೭೯ ॥

ಮೈತ್ರೇಯ ಉವಾಚ

ಭಾಗವತಮುಖ್ಯೋ ಭಗವಾನ್
ನಾರದೋ ಹಂಸಯೋರ್ಗತಿಮ್ ।
ಪ್ರದರ್ಶ್ಯ ಹ್ಯಮುಮಾಮಂತ್ರ್ಯ
ಸಿದ್ಧಲೋಕಂ ತತೋಽಗಮತ್ ॥ ೮೦ ॥

ಪ್ರಾಚೀನಬರ್ಹೀ ರಾಜರ್ಷಿಃ ಪ್ರಜಾಸರ್ಗಾಭಿರಕ್ಷಣೇ ।
ಆದಿಶ್ಯ ಪುತ್ರಾನಗಮತ್ತಪಸೇ ಕಪಿಲಾಶ್ರಮಮ್
॥ ೮೧ ॥

ತತ್ರೈಕಾಗ್ರಮನಾ ವೀರೋ ಗೋವಿಂದ ಚರಣಾಂಬುಜಮ್ ।
ವಿಮುಕ್ತಸಂಗೋಽನುಭಜನ್ಭಕ್ತ್ಯಾ ತತ್ಸಾಮ್ಯತಾಮಗಾತ್
॥ ೮೨ ॥

ಏತದಧ್ಯಾತ್ಮ ಪಾರೋಕ್ಷ್ಯಂ ಗೀತಂ ದೇವರ್ಷಿಣಾನಘ ।
ಯಃ ಶ್ರಾವಯೇದ್ಯಃ ಶೃಣುಯಾತ್ಸ ಲಿಂಗೇನ ವಿಮುಚ್ಯತೇ
॥ ೮೩ ॥

ಏತನ್ಮುಕುಂದ ಯಶಸಾ ಭುವನಂ ಪುನಾನಂ
ದೇವರ್ಷಿವರ್ಯಮುಖನಿಸ್ಸೃತಮಾತ್ಮಶೌಚಮ್ ।
ಯಃ ಕೀರ್ತ್ಯಮಾನಮಧಿಗಚ್ಛತಿ ಪಾರಮೇಷ್ಠ್ಯಂ
ನಾಸ್ಮಿನ್ ಭವೇ ಭ್ರಮತಿ ಮುಕ್ತಸಮಸ್ತಬಂಧಃ ॥ ೮೪ ॥

ಅಧ್ಯಾತ್ಮ ಪಾರೋಕ್ಷ್ಯಮಿದಂ ಮಯಾಧಿಗತಮದ್ಭುತಮ್ ।
ಏವಂ ಸ್ತ್ರಿಯಾಽಽಶ್ರಮಃ ಪುಂಸಶ್ಛಿನ್ನೋಽಮುತ್ರ ಚ ಸಂಶಯಃ
॥ ೮೫ ॥

ಕಾರಣವೇ ಜೀವಿಯ ಜನ್ಮಾದಿಗಳಿಗೆ ಕಾರಣವಾಗಿದೆ. ॥ ೭೬-೭೭ ॥ ಜೀವನು ಇಂದ್ರಿಯಜನಿತ ಭೋಗಗಳನ್ನು ಚಿಂತಿಸುತ್ತಾ ಪದೇ-ಪದೇ ಅವುಗಳಿಗಾಗಿಯೇ ಕರ್ಮ ಮಾಡುತ್ತಿರುವಾಗ, ಆ ಕರ್ಮಗಳು ಆಗುತ್ತಾ ಇರುವುದರಿಂದ ಅವಿದ್ಯಾವಶನಾಗಿ ಅವನು ದೇಹಾದಿಗಳ ಕರ್ಮಗಳಲ್ಲಿ ಬಂಧಿತನಾಗುತ್ತಾನೆ. ॥ ೭೮ ॥ ಆದುದರಿಂದ ಆ ಕರ್ಮಬಂಧನದಿಂದ ಬಿಡುಗಡೆ ಹೊಂದಲಿಕ್ಕಾಗಿ ಸಮಸ್ತ ವಿಶ್ವವನ್ನು ಭಗವದ್ರೂಪವಾಗಿ ನೋಡುತ್ತಾ ಎಲ್ಲ ರೀತಿಯಿಂದ ಶ್ರೀಹರಿಯನ್ನು ಭಜಿಸು. ಅವನಿಂದಲೇ ಈ ವಿಶ್ವದ ಉತ್ಪತ್ತಿ, ಸ್ಥಿತಿ ಆಗುತ್ತದೆ ಹಾಗೂ ಅವನಲ್ಲೇ ಲಯಹೊಂದುತ್ತದೆ. ॥ ೭೯ ॥

ಶ್ರೀಮೈತ್ರೇಯರು ಹೇಳುತ್ತಾರೆ – ಎಲೈ ವಿದುರನೇ! ಭಾಗವತೋತ್ತಮರಾದ ಶ್ರೀನಾರದಮಹರ್ಷಿಗಳು ಹೀಗೆ ಪ್ರಾಚೀನಬರ್ಹಿರಾಜನಿಗೆ ಜೀವ ಮತ್ತು ಈಶ್ವರರ ಸ್ವರೂಪದ ದಿಗ್ದರ್ಶನ ಮಾಡಿದರು. ಬಳಿಕ ಅವರು ಅವನಿಂದ ಬೀಳ್ಕೊಂಡು ಸಿದ್ಧಲೋಕಕ್ಕೆ ಹೊರಟುಹೋದರು. ॥ ೮೦ ॥ ಅನಂತರ ಆ ರಾಜರ್ಷಿ ಪ್ರಾಚೀನಬರ್ಹಿಯು ಪ್ರಜಾಪಾಲನೆಯ ಹೊಣೆಯನ್ನು ತನ್ನ ಪುತ್ರನಿಗೆ ಒಪ್ಪಿಸಿ, ತಪಸ್ಸನ್ನಾಚರಿಸಲಿಕ್ಕಾಗಿ ಕಪಿಲಾಶ್ರಮಕ್ಕೆ ಹೊರಟು ಹೋದನು. ॥ ೮೧ ॥ ಅಲ್ಲಿ ಆ ವೀರವರನು ಸಮಸ್ತ ವಿಷಯಗಳ ಆಸಕ್ತಿಯನ್ನು ಬಿಟ್ಟು ಏಕಾಗ್ರ ಮನಸ್ಸಿನಿಂದ ಭಕ್ತಿಯಿಂದ ಶ್ರೀಹರಿಯ ಚರಣಕಮಲಗಳನ್ನು ಧ್ಯಾನಿಸುತ್ತಾ ಭಗವಂತನ ಸಾರೂಪ್ಯಪದವನ್ನು ಪಡೆದುಕೊಂಡನು. ॥ ೮೨ ॥

ಎಲೈ ಪುಣ್ಯಶಾಲಿಯಾದ ವಿದುರನೇ! ದೇವರ್ಷಿಗಳಾದ ನಾರದರು ಹಾಡಿದ ಈ ಪರೋಕ್ಷರೂಪವಾದ ಆತ್ಮಜ್ಞಾನವನ್ನು ಕೇಳುವ ಅಥವಾ ಹೇಳುವವನು ಶೀಘ್ರವಾಗಿ ಲಿಂಗದೇಹದ ಬಂಧನದಿಂದ ಬಿಡುಗಡೆ ಹೊಂದುವನು. ॥ ೮೩ ॥ ದೇವರ್ಷಿ ನಾರದರ ಮುಖದಿಂದ ಹೊರಟಿದ್ದ ಈ ಆತ್ಮಜ್ಞಾನವು ಭಗವಾನ್ ಮುಕುಂದನ ಕೀರ್ತಿಯಿಂದ ಕೂಡಿರುವ ಕಾರಣದಿಂದ ಮೂರುಲೋಕಗಳನ್ನು ಪವಿತ್ರಗೊಳಿಸುವ, ಅಂತಃಕರಣವನ್ನು ಶುದ್ಧಗೊಳಿಸುವ ಮತ್ತು ಪರಮಾತ್ಮಪದವನ್ನು ಪ್ರಕಾಶಗೊಳಿಸುವುದು. ಈ ಕಥಾಮೃತವನ್ನು ಕೇಳುವವನು ಹೇಳುವವನು ಎಲ್ಲ ಬಂಧನಗಳಿಂದ ಮುಕ್ತನಾಗುವನು ಮತ್ತು ಅವನಿಗೆ ಈ ಸಂಸಾರಚಕ್ರದಲ್ಲಿ ಸುತ್ತಾಟವಿರುವುದಿಲ್ಲ. ॥ ೮೪ ॥ ಎಲೈ ವಿದುರನೇ! ಗೃಹಸ್ಥಾಶ್ರಮಿ ಪುರಂಜನನ ರೂಪಕದಿಂದ ಪರೋಕ್ಷರೂಪದಿಂದ ಹೇಳಿರುವ ಈ ಅದ್ಭುತವಾದ ಆತ್ಮಜ್ಞಾನವನ್ನು ನಾನು ಗುರುಗಳ ಕೃಪೆಯಿಂದ ಪಡೆದಿದ್ದೆನು. ಇದರ ತಾತ್ಪರ್ಯವನ್ನು ಅರಿಯುವುದರಿಂದ ಬುದ್ಧಿಯಿಂದ ಕೂಡಿದ ಜೀವಿಯ ದೇಹಾಭಿಮಾನವು ತೊಲಗುವುದು ಮತ್ತು ಪರಲೋಕದಲ್ಲಿ ಜೀವನಿಗೆ ಕರ್ಮಫಲಭೋಗವು ಹೇಗೆ ಆಗುವುದು ಎಂಬ ಸಂಶಯವೂ ಪರಿಹಾರವಾಗುವುದು. ॥ ೮೫ ॥

ಇಪ್ಪತ್ತೊಂಭತ್ತನೆಯ ಅಧ್ಯಾಯವು ಮುಗಿಯಿತು. ॥ ೨೯ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಚತುರ್ಥಸ್ಕಂಧೇ
ವಿದುರ-ಮೈತ್ರೇಯಸಂವಾದೇ ಪ್ರಾಚೀನಬರ್ಹಿರ್ನಾರದಸಂವಾದೋ ನಾಮೈಕೋನತ್ರಿಂಶೋಽಧ್ಯಾಯಃ ॥ ೨೯ ॥

ಮೂವತ್ತನೆಯ ಅಧ್ಯಾಯ

ಪ್ರಚೇತಸರಿಗೆ ಭಗವಾನ್ ಮಹಾವಿಷ್ಣುವಿನಿಂದ ವರಪ್ರದಾನ

ವಿದುರ ಉವಾಚ

ಯೇ ತ್ವಯಾಭಿಹಿತಾ ಬ್ರಹ್ಮನ್ ಸುತಾ ಪ್ರಾಚೀನಬರ್ಹಿಷಃ ।
ತೇ ರುದ್ರಗೀತೇನ ಹರಿಂ ಸಿದ್ಧಿಮಾಪುಃ ಪ್ರತೋಷ್ಯ ಕಾಮ್ ॥ ೧ ॥

ಕಿಂ ಬಾರ್ಹಸ್ಪತ್ಯೇಹ ಪರತ್ರ ವಾಥ
ಕೈವಲ್ಯನಾಥಪ್ರಿಯಪಾರ್ಶ್ವವರ್ತಿನಃ ।
ಆಸಾದ್ಯ ದೇವಂ ಗಿರಿಶಂ ಯದೃಚ್ಛಯಾ
ಪ್ರಾಪುಃ ಪರಂ ನೂನಮಥ ಪ್ರಚೇತಸಃ ॥ ೨ ॥

ಮೈತ್ರೇಯ ಉವಾಚ

ಪ್ರಚೇತಸೋಽಂತರುದಧೌ ಪಿತುರಾದೇಶಕಾರಿಣಃ ।
ಜಪಯಜ್ಞೇನ ತಪಸಾ ಪುರಂಜನಮತೋಷಯನ್ ॥ ೩ ॥

ದಶವರ್ಷಸಹಸ್ರಾಂತೇ ಪುರುಷಸ್ತು ಸನಾತನಃ ।
ತೇಷಾಮಾವಿರಭೂತ್ಕೃಚ್ಛ್ರಂ ಶಾಂತೇನ ಶಮಯನ್ರುಚಾ ॥ ೪ ॥

ಸುಪರ್ಣಸ್ಕಂಧಮಾರೂಢೋ ಮೇರುಶೃಂಗಮಿವಾಂಬುದಃ ।
ಪೀತವಾಸಾ ಮಣಿಗ್ರೀವಃ ಕುರ್ವನ್ವಿತಿಮಿರಾ ದಿಶಃ ॥ ೫ ॥

ಕಾಶಿಷ್ಣುನಾ ಕನಕವರ್ಣವಿಭೂಷಣೇನ
ಭ್ರಾಜತ್ಕಪೋಲವದನೋ ವಿಲಸತ್ಕಿರೀಟಃ ।
ಅಷ್ಟಾಯುಧೈರನುಚರೈರ್ಮುನಿಭಿಃ ಸುರೇಂದ್ರೈ-
ರಾಸೇವಿತೋ ಗರುಡಕಿನ್ನರಗೀತಕೀರ್ತಿಃ ॥ ೬ ॥

ಪೀನಾಯತಾಷ್ಟಭುಜಮಂಡಲಮಧ್ಯಲಕ್ಷ್ಮ್ಯಾ
ಸ್ಪರ್ಧಚ್ಛ್ರಿಯಾ ಪರಿವೃತೋ ವನಮಾಲಯಾದ್ಯಃ ।
ಬರ್ಹಿಷ್ಮತಃ ಪುರುಷ ಆಹ ಸುತಾನ್ಪ್ರಪನ್ನಾನ್
ಪರ್ಜನ್ಯನಾದರುತಯಾ ಸಘೃಣಾವಲೋಕಃ ॥ ೭ ॥

ಶ್ರೀಭಗವಾನುವಾಚ

ವರಂ ವೃಣೀಧ್ವಂ ಭದ್ರಂ ವೋ
ಯೂಯಂ ಮೇ ನೃಪನಂದನಾಃ ।
ಸೌಹಾರ್ದೇನಾಪೃಥಗ್ಧರ್ಮಾ-
ಸ್ತುಷ್ಟೋಽಹಂ ಸೌಹೃದೇನ ವಃ ॥ ೮ ॥

ವಿದುರನು ಕೇಳಿದನು – ಮುನಿಶ್ರೇಷ್ಠರೇ! ತಾವು ಈವರೆಗೆ ವರ್ಣನೆಮಾಡಿದ ಪ್ರಾಚೀನಬರ್ಹಿ ಮಹಾರಾಜನ ಪುತ್ರರಾದ ಪ್ರಚೇತಸರು ರುದ್ರಗೀತೆಯ ಮೂಲಕ ಶ್ರೀಹರಿಯನ್ನು ಸ್ತುತಿಸಿ ಯಾವ ಸಿದ್ಧಿಯನ್ನು ಪಡೆದರು? ॥ ೧ ॥ ಬೃಹಸ್ಪತಿಶಿಷ್ಯರೇ! ಮೋಕ್ಷಾಧಿಪತಿಯಾದ ಶ್ರೀನಾರಾಯಣನಿಗೆ ಅತ್ಯಂತ ಪ್ರಿಯರಾದ ಭಗವಾನ್ ಶಂಕರನ ಸಾನ್ನಿಧ್ಯವನ್ನು ಆಕಸ್ಮಾತ್ತಾಗಿ ಪಡೆದ ಪ್ರಚೇತಸರು ಮುಕ್ತಿಯನ್ನೇನೋ ಪಡೆದಿರಬಹುದು. ಅದಕ್ಕೆ ಮೊದಲು ಈ ಲೋಕದಲ್ಲಿ ಅಥವಾ ಪರಲೋಕದಲ್ಲಿಯೂ ಅವರು ಏನನ್ನು ಪಡೆದರು? ಎಂಬುದನ್ನು ಹೇಳುವ ಕೃಪೆಮಾಡಬೇಕು. ॥ ೨ ॥

ಶ್ರೀಮೈತ್ರೇಯರು ಹೇಳಿದರು – ಎಲೈ ವಿದುರನೇ! ತಂದೆಯ ಆಜ್ಞಾಕಾರಿಗಳಾದ ಪ್ರಚೇತಸರು ಸಮುದ್ರದ ಒಳಗೆ ನಿಂತುಕೊಂಡೇ ರುದ್ರಗೀತೆಯನ್ನು ಜಪಿಸುತ್ತಾ, ಜಪಯಜ್ಞದಿಂದಲೂ, ತಪಸ್ಸಿನಿಂದಲೂ ಸಮಸ್ತ ಶರೀರಗಳ ಉತ್ಪಾದಕನಾದ ಭಗವಾನ್ ಶ್ರೀಹರಿಯನ್ನು ಪ್ರಸನ್ನಗೊಳಿಸಿದರು. ॥ ೩ ॥ ತಪಸ್ಸು ಮಾಡುತ್ತಾ-ಮಾಡುತ್ತಾ ಹತ್ತುಸಾವಿರ ವರ್ಷಗಳು ಕಳೆದುಹೋಗಲಾಗಿ ಪುರಾಣಪುರುಷನಾದ ಶ್ರೀನಾರಾಯಣನು ತನ್ನ ಮನೋಹರ ಕಾಂತಿಯಿಂದ ಅವರ ತಪಸ್ಸಿನಿಂದುಂಟಾದ ಕ್ಲೇಶವನ್ನು ಶಾಂತಗೊಳಿಸುತ್ತಾ ಸೌಮ್ಯವಾದ ದಿವ್ಯವಿಗ್ರಹದಿಂದ ಅವರ ಎದುರಿಗೆ ಪ್ರಕಟನಾದನು. ॥ ೪ ॥ ಗರುತ್ಮಂತನ ಹೆಗಲಿನ ಮೇಲೆ ಕುಳಿತಿರುವ ಶ್ಯಾಮಸುಂದರನಾದ ಸ್ವಾಮಿಯು ಮೇರುಪರ್ವತದ ಶಿಖರದಲ್ಲಿ ಕಂಗೊಳಿಸುವ ಮುಗಿಲಿನಂತೆ ಮೆರೆಯುತ್ತಿದ್ದನು. ಪರಮಾತ್ಮನ ಪ್ರಭಾಪುಂಜವು ಎಲ್ಲ ದಿಕ್ಕುಗಳ ಕತ್ತಲೆಯನ್ನು ಹೊಡೆದಟ್ಟುವಂತಿತ್ತು. ಅವನ ಶ್ರೀದೇಹದಲ್ಲಿ ಮನೋಹರ ಪೀತಾಂಬರವೂ, ಕಂಠದಲ್ಲಿ ಕೌಸ್ತುಭಮಣಿಯೂ ಶೋಭಿಸುತ್ತಿತ್ತು. ॥ ೫ ॥ ಥಳ-ಥಳಿಸುತ್ತಿದ್ದ ಸ್ವರ್ಣರತ್ನಾಭರಣಗಳ ಕಾಂತಿಯಿಂದ ಕೆನ್ನೆ-ಕದಪುಗಳೂ, ಮುಖಕಮಲವೂ ಕೊಳಕೊಳಗಿ ಬೆಳಗುತ್ತಿದ್ದವು. ತಲೆಯ ಮೇಲೆ ರತ್ನ ಕಿರೀಟವೂ, ಎಂಟು ಭುಜಗಳಲ್ಲಿಯೂ ಎಂಟು ದಿವ್ಯಾಯುಧಗಳು ಹೊಳೆಯುತ್ತಿದ್ದವು. ದೇವತೆಗಳೂ, ಮುನಿಗಳೂ, ಪಾರ್ಷದರೂ ಸ್ವಾಮಿಯನ್ನು ಸೇವಿಸುತ್ತಿದ್ದರು. ಗರುಡದೇವರು ಕಿನ್ನರರಂತೆ ತಮ್ಮ ಸಾಮವೇದ ಮಯವಾದ ರೆಕ್ಕೆಗಳ ಧ್ವನಿಯಿಂದ ದೇವದೇವನ ಕೀರ್ತಿಯನ್ನು ಗಾನಮಾಡುತ್ತಿದ್ದರು. ॥ ೬ ॥ ಅವನ ಎಂಟು ನೀಳವಾದ ಸ್ಥೂಲಭುಜಗಳ ನಡುವೆ ಶ್ರೀಲಕ್ಷ್ಮೀದೇವಿಯೊಡನೆ ಸ್ಪರ್ಧಿಸುತ್ತಿದ್ದ ವನಮಾಲೆಯು ಮೆರೆಯುತ್ತಿತ್ತು. ಆದಿಪುರುಷ ಶ್ರೀಮನ್ನಾರಾಯಣನು ತನ್ನಲ್ಲಿ ಶರಣಾಗತರಾಗಿದ್ದ ಪ್ರಚೇತಸರ ಮೇಲೆ ದಯಾದೃಷ್ಟಿಯನ್ನು ಬೀರುತ್ತಾ ಮೇಘಗಂಭೀರವಾಣಿಯಿಂದ ಇಂತೆಂದನು – ॥ ೭ ॥

ಶ್ರೀಭಗವಂತನು ಹೇಳಿದನು – ರಾಜಪುತ್ರರೇ! ನಿಮಗೆ ಮಂಗಳವಾಗಲಿ. ನಿಮಗಿಷ್ಟವಾದ ವರವನ್ನು ಬೇಡಿರಿ. ನಿಮ್ಮೆಲ್ಲರಲ್ಲಿ ಪರಸ್ಪರ ಪ್ರೀತಿಯುಳ್ಳ ಏಕಧರ್ಮವನ್ನು ಪಾಲಿಸುತ್ತಿರುವ ನಿಮ್ಮ ಈ

ಯೋಽನುಸ್ಮರತಿ ಸಂಧ್ಯಾಯಾಂ ಯುಷ್ಮಾನನುದಿನಂ ನರಃ ।
ತಸ್ಯ ಭ್ರಾತೃಷ್ವಾತ್ಮಸಾಮ್ಯಂ ತಥಾ ಭೂತೇಷು ಸೌಹೃದಮ್ ॥ ೯ ॥

ಯೇ ತು ಮಾಂ ರುದ್ರಗೀತೇನ ಸಾಯಂ ಪ್ರಾತಃ ಸಮಾಹಿತಾಃ ।
ಸ್ತುವಂತ್ಯಹಂ ಕಾಮವರಾನ್ ದಾಸ್ಯೇ ಪ್ರಜ್ಞಾಂ ಚ ಶೋಭನಾಮ್ ॥ ೧೦ ॥

ಯದ್ಯೂಯಂ ಪಿತುರಾದೇಶಮಗ್ರಹೀಷ್ಟ ಮುದಾನ್ವಿತಾಃ ।
ಅಥೋ ವ ಉಶತೀ ಕೀರ್ತಿರ್ಲೋಕಾನನು ಭವಿಷ್ಯತಿ ॥ ೧೧ ॥

ಭವಿತಾ ವಿಶ್ರುತಃ ಪುತ್ರೋಽನವಮೋ ಬ್ರಹ್ಮಣೋ ಗುಣೈಃ ।
ಯ ಏತಾಮಾತ್ಮವೀರ್ಯೇಣ ತ್ರಿಲೋಕೀಂ ಪೂರಯಿಷ್ಯತಿ ॥ ೧೨ ॥

ಕಂಡೋಃ ಪ್ರಮ್ಲೋಚಯಾ ಲಬ್ಧಾ ಕನ್ಯಾ ಕಮಲಲೋಚನಾ ।
ತಾಂ ಚಾಪವಿದ್ಧಾಂ ಜಗೃಹುರ್ಭೂರುಹಾ ನೃಪನಂದನಾಃ ॥ ೧೩ ॥

ಕ್ಷುತ್ಕ್ಷಾಮಾಯಾ ಮುಖೇ ರಾಜಾ ಸೋಮಃ ಪೀಯೂಷವರ್ಷಿಣೀಮ್ ।
ದೇಶಿನೀಂ ರೋದಮಾನಾಯಾ ನಿದಧೇ ಸ ದಯಾನ್ವಿತಃ ॥ ೧೪ ॥

ಪ್ರಜಾವಿಸರ್ಗ ಆದಿಷ್ಟಾಃ ಪಿತ್ರಾ ಮಾಮನುವರ್ತತಾ ।
ತತ್ರ ಕನ್ಯಾಂ ವರಾರೋಹಾಂ ತಾಮುದ್ವಹತ ಮಾಚಿರಮ್ ॥ ೧೫ ॥

ಅಪೃಥಗ್ಧರ್ಮಶೀಲಾನಾಂ ಸರ್ವೇಷಾಂ ವಃ ಸುಮಧ್ಯಮಾ ।
ಅಪೃಥಗ್ಧರ್ಮಶೀಲೇಯಂ ಭೂಯಾತ್ಪತ್ನ್ಯರ್ಪಿತಾಶಯಾ ॥ ೧೬ ॥

ದಿವ್ಯವರ್ಷಸಹಸ್ರಾಣಾಂ ಸಹಸ್ರಮಹತೌಜಸಃ ।
ಭೌಮಾನ್ಭೋಕ್ಷ್ಯಥ ಭೋಗಾನ್ವೈ ದಿವ್ಯಾಂಶ್ಚಾನುಗ್ರಹಾನ್ಮಮ ॥ ೧೭ ॥

ಅಥ ಮಯ್ಯನಪಾಯಿನ್ಯಾ ಭಕ್ತ್ಯಾ ಪಕ್ವಗುಣಾಶಯಾಃ ।
ಉಪಯಾಸ್ಯಥ ಮದ್ಧಾಮ ನಿರ್ವಿದ್ಯ ನಿರಯಾದತಃ ॥ ೧೮ ॥

ಗೃಹೇಷ್ವಾವಿಶತಾಂ ಚಾಪಿ ಪುಂಸಾಂ ಕುಶಲಕರ್ಮಣಾಮ್ ।
ಮದ್ವಾರ್ತಾಯಾತಯಾಮಾನಾಂ ನ ಬಂಧಾಯ ಗೃಹಾ ಮತಾಃ ॥ ೧೯ ॥

ಸೌಹಾರ್ದವು ನನಗೆ ಸಂತೋಷವನ್ನುಂಟುಮಾಡಿದೆ. ॥ ೮ ॥ ಪ್ರತಿ ದಿನವೂ ಸಾಯಂಕಾಲದಲ್ಲಿ ನಿಮ್ಮನ್ನು ಸ್ಮರಿಸುವವನಿಗೆ ಅಣ್ಣ ತಮ್ಮಂದಿರಲ್ಲಿ ನಿಮ್ಮಂತೆಯೇ ಪ್ರೇಮ ಉಂಟಾದೀತು ಹಾಗೂ ಸಮಸ್ತ ಜೀವರ ಕುರಿತು ಮೈತ್ರಿಯ ಭಾವ ಉಂಟಾಗುವುದು. ॥ ೯ ॥ ಸಾಯಂಕಾಲ ಮತ್ತು ಪ್ರಾತಃಕಾಲಗಳಲ್ಲಿ ಏಕಾಗ್ರ ಚಿತ್ತದಿಂದ ರುದ್ರಗೀತೆಯ ಮೂಲಕ ನನ್ನನ್ನು ಸ್ತುತಿಸುವವನಿಗೆ ನಾನು ಇಷ್ಟವಾದ ವರವನ್ನು ಮತ್ತು ಶುದ್ಧವಾದ ಬುದ್ಧಿಯನ್ನು ಕರುಣಿಸುವೆನು. ॥ ೧೦ ॥ ನೀವು ಸಂತೋಷದಿಂದ ತಂದೆಯ ಅಪ್ಪಣೆಯನ್ನು ಶಿರಸಾವಹಿಸಿದ್ದೀರಿ. ಆದರಿಂದ ನಿಮ್ಮ ಕಮನೀಯ ಕೀರ್ತಿಯು ಸಮಸ್ತ ಲೋಕಗಳಲ್ಲಿಯೂ ಹರಡುವುದು. ॥ ೧೧ ॥ ನಿಮಗೆ ಅತ್ಯಂತ ವಿಖ್ಯಾತನಾದ ಒಬ್ಬ ಸುಪುತ್ರನು ಜನಿಸುವನು. ಅವನು ಬ್ರಹ್ಮದೇವನಿಗೆ ಸ್ವಲ್ಪವೂ ಕಡಿಮೆಯಿಲ್ಲದ ಗುಣಗಳಿಂದ ಬೆಳಗುತ್ತಾ ತನ್ನ ಸಂತಾನದಿಂದ ಮೂರುಲೋಕಗಳನ್ನೂ ತುಂಬುವನು. ॥ ೧೨ ॥

ರಾಜಕುಮಾರರೇ! ತಪೋನಿಷ್ಠರಾಗಿದ್ದ ಕಂಡು ಮಹರ್ಷಿಯ ತಪಸ್ಸನ್ನು ಕೆಡಿಸಲು ಇಂದ್ರನು 'ಪ್ರಮ್ಲೋಚಾ' ಎಂಬ ಅಪ್ಸರೆಯನ್ನು ಕಳಿಸಿದಾಗ ಅವಳಲ್ಲಿ ಮಹರ್ಷಿಗೆ ಕಮಲಲೋಚನೆಯಾದ ಒಂದು ಕನ್ಯಾರತ್ನವು ಜನಿಸಿತು. ಆ ಮಗುವನ್ನು ಅಲ್ಲಿಯೇ ಬಿಟ್ಟು ಆಕೆಯು ಸ್ವರ್ಗಕ್ಕೆ ಹೊರಟುಹೋದಳು. ಆಗ ಅಲ್ಲಿದ್ದ ವೃಕ್ಷಗಳೇ ಆ ಮಗುವನ್ನು ಪಾಲಿಸಿ-ಪೋಷಿಸಿದವು. ॥ ೧೩ ॥ ಆ ಮಗುವು ಹಸಿವಿನಿಂದ ಪೀಡಿತವಾಗಿ ಅಳತೊಡಗಿದಾಗ ಓಷಧಿಗಳ ಅರಸನಾದ ಚಂದ್ರನು ಕರುಣೆಯಿಂದ ಅದರ ಬಾಯಲ್ಲಿ ಅಮೃತವನ್ನು ಸುರಿಸುವ ತನ್ನ ತೋರುಬೆರಳನ್ನು ಇರಿಸಿದನು. ॥ ೧೪ ॥ ನಿಮ್ಮ ತಂದೆಯು ಈಗ ನನ್ನ ಆಜ್ಞೆಯಲ್ಲಿ ತೊಡಗಿರುವನು. ನಿಮಗೆ ಸಂತಾನವನ್ನು ಪಡೆಯಬೇಕೆಂದು ಅಪ್ಪಣೆಯನ್ನು ಕೊಟ್ಟಿರುವನು. ಅದರಿಂದ ನೀವು ಬೇಗನೇ ದೇವತೋಪಮಳಾದ ಆ ಕನ್ಯಾಮಣಿಯನ್ನು ವಿವಾಹವಾಗಿರಿ. ॥ ೧೫ ॥ ನೀವೆಲ್ಲರೂ ಒಂದೇ ಧರ್ಮದಲ್ಲಿ ತತ್ಪರರಾಗಿರುವಿರಿ ಮತ್ತು ನಿಮ್ಮ ಸ್ವಭಾವವೂ ಒಂದೇ ರೀತಿಯಾಗಿದೆ. ಅದಕ್ಕಾಗಿ ನಿಮ್ಮಂತೆಯೇ ಸಮಾನಧರ್ಮ-ಸ್ವಭಾವವುಳ್ಳ ಆ ಸುಂದರಕನ್ಯೆಯು ನಿಮ್ಮೆಲ್ಲರ ಪತ್ನಿಯಾಗುವಳು. ನಿಮ್ಮೆಲ್ಲರಲ್ಲಿ ಅವಳಿಗೆ ಸಮಾನವಾದ ಅನುರಾಗವಿದ್ದೀತು. ॥ ೧೬ ॥ ನೀವು ನನ್ನ ಕೃಪೆಯಿಂದ ಹತ್ತುಲಕ್ಷ ವರ್ಷಗಳ ಕಾಲ ಪೂರ್ಣ ಬಲಶಾಲಿಗಳಾಗಿದ್ದು ನಾನಾರೀತಿಯ ಭೂಲೋಕದ ಭೋಗಗಳನ್ನು ಹಾಗೂ ಸ್ವರ್ಗಲೋಕದ ದಿವ್ಯಭೋಗಗಳನ್ನೂ ಅನುಭವಿಸುವಿರಿ. ॥ ೧೭ ॥ ಕೊನೆಯಲ್ಲಿ ನನ್ನ ನಿಶ್ಚಲವಾದ ಭಕ್ತಿಯಿಂದ ಹೃದಯದ ಸಮಸ್ತ ವಾಸನಾರೂಪವಾದ ದೋಷಗಳು ದಗ್ಧವಾದ ಬಳಿಕ ನೀವುಗಳು ಈ ಲೋಕ ಮತ್ತು ಪರಲೋಕದ ನರಕ ಸದೃಶವಾದ ಎಲ್ಲ ಭೋಗಗಳಿಂದಲೂ ವಿರಕ್ತರಾಗಿ ನನ್ನ ಪರಮಧಾಮಕ್ಕೆ ತೆರಳುವಿರಿ. ॥ ೧೮ ॥ ಭಗವದರ್ಪಣ ಬುದ್ಧಿಯಿಂದ ಕರ್ಮಗಳನ್ನು ಆಚರಿಸುತ್ತಾ, ತಮ್ಮ ಎಲ್ಲ ಕಾಲವನ್ನು ನನ್ನ ಕಥಾ-ಕೀರ್ತನೆಯಲ್ಲೇ ಕಳೆಯುವವರು ಗೃಹಸ್ಥಾಶ್ರಮದಲ್ಲೇ ಇದ್ದರೂ ಅವರಿಗೆ ಗೃಹವು ಬಂಧನಕಾರಕವಾಗುವುದಿಲ್ಲ. ॥ ೧೯ ॥

ಅವರು ಪ್ರತಿದಿನವೂ ನನ್ನ ಲೀಲೆಗಳನ್ನೇ ಕೇಳುತ್ತಿರುತ್ತಾರೆ. ಆದುದರಿಂದ ಬ್ರಹ್ಮವಾದಿಗಳಾದ ಜ್ಞಾನೋಪದೇಶಕರ ಮೂಲಕ

ನವ್ಯವದ್ಧೃದಯೇ ಯಜ್ಜ್ಞೋ ಬ್ರಹ್ಮೈತದ್ಬ್ರಹ್ಮವಾದಿಭಿಃ ।
ನ ಮುಹ್ಯಂತಿ ನ ಶೋಚಂತಿ ನ ಹೃಷ್ಯಂತಿ ಯತೋ ಗತಾಃ ॥ ೨೦ ॥

ಮೈತ್ರೇಯ ಉವಾಚ

ಏವಂ ಬ್ರುವಾಣಂ ಪುರುಷಾರ್ಥಭಾಜನಂ
ಜನಾರ್ದನಂ ಪ್ರಾಂಜಲಯಃ ಪ್ರಚೇತಸಃ ।
ತದ್ದರ್ಶನಧ್ವಸ್ತತಮೋರಜೋಮಲಾ
ಗಿರಾಗೃಣನ್ಗದ್ಗದಯಾ ಸುಹೃತ್ತಮಮ್ ॥ ೨೧ ॥

ಪ್ರಚೇತಸ ಊಚುಃ

ನಮೋ ನಮಃ ಕ್ಲೇಶವಿನಾಶನಾಯ
ನಿರೂಪಿತೋದಾರಗುಣಾಹ್ವಯಾಯ ।
ಮನೋವಚೋವೇಗಪುರೋಜವಾಯ
ಸರ್ವಾಕ್ಷಮಾರ್ಗೈರಗತಾಧ್ವನೇ ನಮಃ ॥ ೨೨ ॥

ಶುದ್ಧಾಯ ಶಾಂತಾಯ ನಮಃ ಸ್ವನಿಷ್ಠಯಾ
ಮನಸ್ಯಪಾರ್ಥಂ ವಿಲಸದ್‌ದ್ವಯಾಯ ।
ನಮೋ ಜಗತ್ಸ್ಥಾನಲಯೋದಯೇಷು
ಗೃಹೀತಮಾಯಾಗುಣವಿಗ್ರಹಾಯ ॥ ೨೩ ॥

ನಮೋ ವಿಶುದ್ಧಸತ್ತ್ವಾಯ ಹರಯೇ ಹರಿಮೇಧಸೇ ।
ವಾಸುದೇವಾಯ ಕೃಷ್ಣಾಯ ಪ್ರಭವೇ ಸರ್ವಸಾತ್ವತಾಮ್ ॥ ೨೪ ॥

ನಮಃ ಕಮಲನಾಭಾಯ ನಮಃ ಕಮಲಮಾಲಿನೇ ।
ನಮಃ ಕಮಲಪಾದಾಯ ನಮಸ್ತೇ ಕಮಲೇಕ್ಷಣ ॥ ೨೫ ॥

ನಮಃ ಕಮಲಕಿಂಜಲ್ಕಪಿಶಂಗಾಮಲವಾಸಸೇ ।
ಸರ್ವಭೂತನಿವಾಸಾಯ ನಮೋಽಯುಂಕ್ಷ್ಮಹಿ ಸಾಕ್ಷಿಣೇ ॥ ೨೬ ॥

ರೂಪಂ ಭಗವತಾ ತ್ವೇತದಶೇಷಕ್ಲೇಶಸಂಕ್ಷಯಮ್ ।
ಆವಿಷ್ಕೃತಂ ನಃ ಕ್ಲಿಷ್ಟಾನಾಂ ಕಿಮನ್ಯದನುಕಂಪಿತಮ್ ॥ ೨೭ ॥

ಏತಾವತ್ತ್ವಂ ಹಿ ವಿಭುಭಿರ್ಭಾವ್ಯಂ ದೀನೇಷು ವತ್ಸಲೈಃ ।
ಯದನುಸ್ಮರ್ಯತೇ ಕಾಲೇ ಸ್ವಬುದ್ಧ್ಯಾಭದ್ರರಂಧನ ॥ ೨೮ ॥

ಯೇನೋಪಶಾಂತಿರ್ಭೂತಾನಾಂ
ಕ್ಷುಲ್ಲಕಾನಾಮಪೀಹತಾಮ್ ।
ಅಂತರ್ಹಿತೋಽಂತರ್ಹೃದಯೇ
ಕಸ್ಮಾನ್ನೋ ವೇದ ನಾಶಿಷಃ ॥ ೨೯ ॥

ಆ ಶ್ರೋತೃಗಳ ಹೃದಯದಲ್ಲಿ ಜ್ಞಾನಸ್ವರೂಪನಾದ ಪರಬ್ರಹ್ಮನಾದ ನಾನು ಪ್ರತಿದಿನವೂ ಹೊಸಬನಂತೆ ಬೆಳಗುತ್ತಿರುತ್ತೇನೆ. ನನ್ನನ್ನು ಹೊಂದಿದ ಬಳಿಕ ಜೀವಿಗಳಿಗೆ ಶೋಕವಾಗಲೀ, ಮೋಹವಾಗಲೀ, ಹರ್ಷವಾಗಲೀ ಇರುವುದಿಲ್ಲ. ॥ ೨೦॥

ಶ್ರೀಮೈತ್ರೇಯರು ಹೇಳುತ್ತಾರೆ – ಸಕಲ ಪುರುಷಾರ್ಥಗಳಿಗೂ ಆಶ್ರಯನಾಗಿ, ಸರ್ವರಿಗೂ ಪರಮಸುಹೃದನೂ ಆದ ಶ್ರೀಹರಿಯು ಹೀಗೆ ಅಪ್ಪಣೆಕೊಡಿಸಲು, ಆತನ ದರ್ಶನದಿಂದಲೇ ರಜೋಗುಣ-ತಮೋಗುಣಗಳ ಮಲವನ್ನು ಕಳಕೊಂಡಿದ್ದ ಪ್ರಚೇತಸರು ಕೈಗಳನ್ನು ಜೋಡಿಸಿಕೊಂಡು ಗದ್ಗದವಾದ ವಾಣಿಯಿಂದ ಆತನನ್ನು ಸ್ತುತಿಸತೊಡಗಿದರು. ॥ ೨೧ ॥

ಪ್ರಚೇತಸರು ಹೇಳುತ್ತಾರೆ– ಭಕ್ತರ ಕ್ಲೇಶಗಳನ್ನು ದೂರಮಾಡುವ ಭಗವಂತನೇ ನಿನಗೆ ನಮೋ ನಮಃ. ವೇದಗಳಿಂದ ಹೊಗಳಲ್ಪಟ್ಟ ಉದಾರವಾದ ಗುಣಗಳಿಂದಲೂ, ನಾಮಗಳಿಂದಲೂ ಭೂಷಿತನಾದ ನಿನಗೆ ನಮಸ್ಕಾರವು. ಮನಸ್ಸು ಮತ್ತು ಮಾತುಗಳ ವೇಗಗಳನ್ನು ಮೀರಿದ ವೇಗವುಳ್ಳವನಾಗಿ ಎಲ್ಲ ಇಂದ್ರಿಯಗಳ ಗತಿಗಳಿಂದಲೂ ಹೊರಗೆ ಬೆಳಗುತ್ತಿರುವ ಸ್ವರೂಪವುಳ್ಳ ನಿನಗೆ ಮತ್ತೆ-ಮತ್ತೆ ನಮಸ್ಕಾರಗಳು. ॥ ೨೨ ॥ ಸ್ವಸ್ವರೂಪದಲ್ಲಿ ನೆಲೆಗೊಂಡಿರುವುದರಿಂದ ಸದಾಶುದ್ಧನಾಗಿ ಶಾಂತನಾಗಿರುವವನೂ, ಪರಮಾರ್ಥವಲ್ಲದಿರುವ ದ್ವೈತವನ್ನು ಮನಸ್ಸಿನಲ್ಲಿ ತೋರುತ್ತಿರುವವನೂ, ಸೃಷ್ಟಿ ಸ್ಥಿತಿ ಲಯಗಳಿಗಾಗಿ ಮಾಯೆಯ ಗುಣಗಳನ್ನು ಸ್ವೀಕರಿಸಿ ತ್ರಿಮೂರ್ತಿ ಸ್ವರೂಪದಿಂದ ಬೆಳಗುತ್ತಿರುವವನೂ ಆದ ನಿನಗೆ ನಮೋ ನಮಃ ॥ ೨೩ ॥ ಶುದ್ಧಸತ್ತ್ವಸ್ವರೂಪನೂ, ಸಂಸಾರವನ್ನು ದೂರಮಾಡುವ ಜ್ಞಾನವುಳ್ಳವನೂ, ವಸುದೇವನಂದನನೂ, ಸಮಸ್ತ ಭಾಗವತರ ಪ್ರಭುವೂ ಆಗಿರುವ ಭಗವಾನ್ ಶ್ರೀಹರಿ-ಕೃಷ್ಣನಿಗೆ ನಮಸ್ಕಾರವು. ॥ ೨೪ ॥ ನಾಭಿಯಲ್ಲಿ (ಜಗತ್ಕಾರಣವಾದ) ಕಮಲವುಳ್ಳವನೂ, ಕೊರಳಲ್ಲಿ ಕಮಲ ಕುಸುಮಗಳ ಮಾಲೆಯುಳ್ಳವನೂ, ಕಮಲವನ್ನು ಹೋಲುವ ಕೋಮಲ ಚರಣವುಳ್ಳವನೂ, ಕಮಲದಂತೆ ಕಣ್ಣುಗಳುಳ್ಳವನೂ ಆದ ನಿನಗೆ ನಮಸ್ಕಾರವು. ॥ ೨೫ ॥ ನೀನು ಕಮಲ ಕೇಸರದಂತೆ ಇರುವ ಸ್ವಚ್ಛ ಪೀತಾಂಬರವನ್ನು ಧರಿಸಿರುವೆ. ಸಮಸ್ತ ಪ್ರಾಣಿಗಳ ಆಶ್ರಯನೂ, ಎಲ್ಲರ ಸಾಕ್ಷಿಯೂ ಆದ ನಿನಗೆ ನಾವು ನಮಸ್ಕರಿಸುತ್ತೇವೆ. ॥ ೨೬ ॥

ಭಗವಂತನೇ! ನಿನ್ನ ಈ ಸ್ವರೂಪವು ಸಮಸ್ತ ಕ್ಲೇಶಗಳನ್ನು ದೂರಮಾಡುವುದಾಗಿದೆ. ಅವಿದ್ಯೆ, ಅಸ್ಮಿತೆ, ರಾಗ-ದ್ವೇಷ ಮುಂತಾದ ಕ್ಲೇಶಗಳಿಂದ ಪೀಡಿತರಾದ ನಮ್ಮ ಮುಂದೆ ಇದನ್ನು ಪ್ರಕಟಿಸಿರುವೆ. ಇದಕ್ಕಿಂತಲೂ ಮಿಗಿಲಾದ ಕೃಪೆಯು ಬೇರೇನಿರಬಹುದು? ॥ ೨೭ ॥ ಅಮಂಗಳವನ್ನು ತೊಡೆದು ಹಾಕುವ ಮಂಗಳ ಸ್ವರೂಪನೇ! ದೀನರಲ್ಲಿ ವಾತ್ಸಲ್ಯವುಳ್ಳ ಪ್ರಭುವು ದೀನಜನರನ್ನು 'ಇವರು ನಮ್ಮವರು' ಎಂದು ಸದಾಕಾಲ ಸ್ಮರಿಸಿಕೊಳ್ಳುವುದೇ ಪರಮಾನುಗ್ರಹವು. ॥ ೨೮ ॥ ಅದರಿಂದಲೇ ಅವರಿಗೆ ಶಾಂತಿ ಸಿಗುತ್ತದೆ. ನೀನಾದರೋ ಅತಿಕ್ಷುದ್ರ ಪ್ರಾಣಿಗಳ ಅಂತಃಕರಣದಲ್ಲಿ ಅಂತರ್ಯಾಮಿಯಾಗಿ ವಿರಾಜಿಸುತ್ತಿರುವೆ. ಮತ್ತೆ ನಿನ್ನ ಉಪಾಸಕರಾದ ನಾವುಗಳು ಮಾಡುವ ಕಾಮನೆಗಳು ನಿನಗೆ ತಿಳಿಯದೇ ಇರುವುದೇ? ॥ ೨೯॥ ಜಗದೀಶ್ವರನೇ! ನೀನು ಮೋಕ್ಷಮಾರ್ಗವನ್ನು ತೋರುವವನೂ, ಸ್ವತಃ ಪುರುಷಾರ್ಥಸ್ವರೂಪನೂ ಆಗಿರುವೆ. ನೀನು ನಮ್ಮ ಮೇಲೆ

ಅಸಾವೇವ ವರೋಽಸ್ಮಾಕಮೀಪ್ಸಿತೋ ಜಗತಃ ಪತೇ ।
ಪ್ರಸನ್ನೋ ಭಗವಾನ್ಯೇಷಾಮಪವರ್ಗಗುರುರ್ಗತಿಃ ॥ ೩೦ ॥

ವರಂ ವೃಣೀಮಹೇಽಥಾಪಿ ನಾಥ ತ್ವತ್ಪರತಃ ಪರಾತ್ ।
ನ ಹ್ಯಂತಸ್ತ್ವದ್ವಿಭೂತೀನಾಂ ಸೋಽನಂತ ಇತಿ ಗೀಯಸೇ ॥ ೩೧ ॥

ಪಾರಿಜಾತೇಽಂಜಸಾ ಲಬ್ಧೇ ಸಾರಂಗೋಽನ್ಯನ್ನ ಸೇವತೇ ।
ತ್ವದಂಘ್ರಿಮೂಲಮಾಸಾದ್ಯ ಸಾಕ್ಷಾತ್ಕಿಂ ಕಿಂ ವೃಣೀಮಹಿ ॥ ೩೨ ॥

ಯಾವತ್ತೇ ಮಾಯಯಾ ಸ್ಪೃಷ್ಟಾ ಭ್ರಮಾಮ ಇಹ ಕರ್ಮಭಿಃ ।
ತಾವದ್ಭವತ್ಪ್ರಸಂಗಾನಾಂ ಸಂಗಃ ಸ್ಯಾನ್ನೋ ಭವೇ ಭವೇ ॥ ೩೩ ॥

ತುಲಯಾಮ ಲವೇನಾಪಿ ನ ಸ್ವರ್ಗಂ ನಾಪುನರ್ಭವಮ್ ।
ಭಗವತ್ಸಂಗಿಸಂಗಸ್ಯ ಮರ್ತ್ಯಾನಾಂ ಕಿಮುತಾಶಿಷಃ ॥ ೩೪ ॥

ಯತ್ರೇಡ್ಯಂತೇ ಕಥಾ ಮೃಷ್ಟಾಸ್ತೃಷ್ಣಾಯಾಃ ಪ್ರಶಮೋ ಯತಃ ।
ನಿರ್ವೈರಂ ಯತ್ರ ಭೂತೇಷು ನೋದ್ವೇಗೋ ಯತ್ರ ಕಶ್ಚನ ॥ ೩೫ ॥

ಯತ್ರ ನಾರಾಯಣಃ ಸಾಕ್ಷಾದ್ಭಗವಾನ್ನ್ಯಾಸಿನಾಂ ಗತಿಃ ।
ಸಂಸ್ತೂಯತೇ ಸತ್ಕಥಾಸು ಮುಕ್ತಸಂಗೈಃ ಪುನಃ ಪುನಃ ॥ ೩೬ ॥

ತೇಷಾಂ ವಿಚರತಾಂ ಪದ್ಭ್ಯಾಂ ತೀರ್ಥಾನಾಂ ಪಾವನೇಚ್ಛಯಾ ।
ಭೀತಸ್ಯ ಕಿಂ ನ ರೋಚೇತ ತಾವಕಾನಾಂ ಸಮಾಗಮಃ ॥ ೩೭ ॥

ವಯಂ ತು ಸಾಕ್ಷಾದ್ಭಗವನ್ಭವಸ್ಯ
ಪ್ರಿಯಸ್ಯ ಸಖ್ಯುಃ ಕ್ಷಣಸಂಗಮೇನ ।
ಸುದುಶ್ಚಿಕಿತ್ಸ್ಯಸ್ಯ ಭವಸ್ಯ ಮೃತ್ಯೋ-
ರ್ಭಿಷಕ್ತಮಂ ತ್ವಾದ್ಯ ಗತಿಂ ಗತಾಃ ಸ್ಮ ॥ ೩೮ ॥

ಯನ್ನಃ ಸ್ವಧೀತಂ ಗುರವಃ ಪ್ರಸಾದಿತಾ
ವಿಪ್ರಾಶ್ಚ ವೃದ್ಧಾಶ್ಚ ಸದಾನುವೃತ್ತ್ಯಾ ।
ಆರ್ಯಾ ನತಾಃ ಸುಹೃದೋ ಭ್ರಾತರಶ್ಚ
ಸರ್ವಾಣಿ ಭೂತಾನ್ಯನಸೂಯಯೈವ ॥ ೩೯ ॥

ಯನ್ನಃ ಸುತಪ್ತಂ ತಪ ಏತದೀಶ
ನಿರಂಧಸಾಂ ಕಾಲಮದಭ್ರಮಪ್ಸು ।
ಸರ್ವಂ ತದೇತತ್ಪುರುಷಸ್ಯ ಭೂಮ್ನೋ
ವೃಣೀಮಹೇ ತೇ ಪರಿತೋಷಣಾಯ ॥ ೪೦ ॥

ಪ್ರಸನ್ನನಾಗಿರುವೆ. ಇದಕ್ಕಿಂತ ಬೇರೆ ಏನು ನಮಗೆ ಬೇಕು ? ನಿನ್ನ ಪ್ರಸನ್ನತೆಯೇ ನಮ್ಮ ಇಷ್ಟವಾದ ವರವಲ್ಲವೇ ! ॥ ೩೦ ॥ ಆದರೂ ಸ್ವಾಮಿ ! ನಾವು ಒಂದು ವರವನ್ನು ನಿನ್ನಲ್ಲಿ ಅವಶ್ಯವಾಗಿ ಕೇಳುತ್ತೇವೆ. ಪ್ರಭೋ ! ನೀನು ಪ್ರಕೃತಿಯಿಂದ ಅತೀತನಾಗಿರುವೆ. ನಿನ್ನ ವಿಭೂತಿಗಳಿಗೂ ಯಾವುದೇ ಕೊನೆಯಿಲ್ಲ. ಅದಕ್ಕಾಗಿ ನೀನು 'ಅನಂತ'ನೆಂದು ಹೇಳಿಸಿಕೊಳ್ಳುವೆ. ॥ ೩೧ ॥ ಭ್ರಮರಕ್ಕೆ ಆಯಾಸವಿಲ್ಲದೆಯೇ ಪಾರಿಜಾತ ವೃಕ್ಷವು ದೊರೆತರೆ, ಅದು ಯಾವುದೇ ಬೇರೆ ವೃಕ್ಷವನ್ನು ಆಶ್ರಯಿಸುತ್ತದೆಯೇ ? ಹೀಗಿರುವಾಗ ನಿನ್ನಲ್ಲಿ ಶರಣಾಗತರಾಗಿ ಬಂದ ನಾವು ಈಗ ಏನನ್ನು ಬೇಡಲಿ ? ॥ ೩೨ ॥ ನಿನ್ನ ಮಾಯೆಯಿಂದ ಮೋಹಿತರಾಗಿ ನಾವು ನಮ್ಮ ಕರ್ಮಾನುಸಾರ ಪ್ರಪಂಚದಲ್ಲಿ ಅಲೆದಾಡುತ್ತಿರುವವರೆಗೆ ಜನ್ಮ-ಜನ್ಮಗಳಲ್ಲಿಯೂ ನಮಗೆ ನಿನ್ನ ಪ್ರೇಮಿಭಕ್ತರ ಸಂಗವು ದೊರೆಯುತ್ತಿರಲಿ' ಇಷ್ಟು ಮಾತ್ರ ನಿನ್ನಲ್ಲಿ ಬೇಡಿಕೊಳ್ಳುತ್ತೇವೆ. ॥ ೩೩ ॥ ನಾವಾದರೋ ಭಗವದ್ಭಕ್ತರ ಕ್ಷಣಕಾಲದ ಸಂಗಕ್ಕೆ ಸಮಾನವಾಗಿ ಸ್ವರ್ಗ ಮತ್ತು ಮೋಕ್ಷವೂ ಕೂಡ ಏನೂ ಇಲ್ಲವೆಂದೇ ಭಾವಿಸುತ್ತೇವೆ. ಹಾಗಿರುವಾಗ ಮಾನುಷ ಭೋಗಗಳ ಬಗ್ಗೆ ಹೇಳುವುದಾದರೂ ಏನಿದೆ ? ॥ ೩೪ ॥ ಭಗವದ್ಭಕ್ತರ ಸಮಾಜದಲ್ಲಿ ಸದಾಕಾಲವೂ ಭಗವಂತನ ಮಧುರವಾದ ಕಥೆಗಳ ಕೀರ್ತನೆ ಆಗುತ್ತಾ ಇರುತ್ತದೆ. ಅದರ ಶ್ರವಣಮಾತ್ರದಿಂದ ಭೋಗತೃಷ್ಣೆಯು ಶಾಂತವಾಗಿ ಹೋಗುತ್ತದೆ. ಅಲ್ಲಿ ಪ್ರಾಣಿಗಳಲ್ಲಿ ಯಾವುದೇ ರೀತಿಯ ವೈರ-ವಿರೋಧ, ಉದ್ವೇಗಗಳು ಉಳಿಯುವುದಿಲ್ಲ. ॥ ೩೫ ॥ ಅಲ್ಲಿ ಶ್ರೇಷ್ಠ ಕಥಾ ಪ್ರಸಂಗಗಳ ಮೂಲಕ ಸಂನ್ಯಾಸಿಗಳ ಏಕಮಾತ್ರ ಆಶ್ರಯನಾದ ಸಾಕ್ಷಾತ್ ಶ್ರೀಮನ್ನಾರಾಯಣನ ಗುಣಗಾನವು ಪದೇ-ಪದೇ ನಿಷ್ಕಾಮಭಾವದಿಂದ ನಡೆಯುತ್ತಾ ಇರುತ್ತದೆ. ॥ ೩೬ ॥ ನಿನ್ನ ಆ ಭಕ್ತಜನರು ತೀರ್ಥಗಳನ್ನು ಪವಿತ್ರಗೊಳಿಸುವ ಉದ್ದೇಶದಿಂದಲೇ ಪೃಥ್ವಿಯಲ್ಲೆಲ್ಲ ಕಾಲ್ನಡಿಗೆಯಿಂದ ಸಂಚರಿಸುತ್ತಿರುತ್ತಾರೆ. ಅಂತಹ ಮಹಾತ್ಮರ ಸಮಾಗಮವು ಸಂಸಾರಭೀತರಾದ ಯಾವ ಮನುಷ್ಯನಿಗೆ ತಾನೇ ರುಚಿಸದು ? ॥ ೩೭ ॥

ಭಗವಂತನೇ ! ನಿನಗೆ ಪ್ರಿಯನಾದ ಭಗವಾನ್ ಶಂಕರನ ಕ್ಷಣಕಾಲದ ಸಮಾಗಮದಿಂದಲೇ ಇಂದು ನಮಗೆ ನಿನ್ನ ಸಾಕ್ಷಾತ್ತಾದ ದರ್ಶನದ ಭಾಗ್ಯವು ಒದಗಿದೆ. ದುಸ್ಸಾಧ್ಯವಾದ ಹುಟ್ಟು-ಸಾವುಗಳೆಂಬ ರೋಗಕ್ಕೆ ಶ್ರೇಷ್ಠವಾದ ವೈದ್ಯನು ನೀನೇ. ಆದ್ದರಿಂದ ನಾವು ನಿನ್ನನ್ನೇ ಆಶ್ರಯಿಸಿರುವೆವು. ॥ ೩೮ ॥ ಪ್ರಭೋ ! ನಾವು ವೇದ-ಶಾಸ್ತ್ರಾದಿಗಳನ್ನು ಚೆನ್ನಾಗಿ ಅಧ್ಯಯನ ಮಾಡಿರುವುದು ; ನಿರಂತರವಾಗಿ ಸೇವಾ-ಶುಶ್ರೂಷೆಗಳಿಂದ ಗುರುಗಳನ್ನೂ, ಬ್ರಾಹ್ಮಣರನ್ನೂ, ವೃದ್ಧರನ್ನು ಪ್ರಸನ್ನಗೊಳಿಸಿರುವುದು ; ಅಸೂಯೆಯನ್ನು ಬಿಟ್ಟು ಶ್ರೇಷ್ಠ ಪುರುಷರನ್ನು, ಸ್ನೇಹಿತವರ್ಗವನ್ನು, ಬಂಧುವರ್ಗವನ್ನೂ ಹಾಗೂ ಸಮಸ್ತ ಪ್ರಾಣಿಗಳನ್ನೂ ನಮಸ್ಕರಿಸುವುದು ಮತ್ತು ಅನ್ನಾಹಾರಾದಿಗಳನ್ನು ಬಿಟ್ಟು ದೀರ್ಘಕಾಲದವರೆಗೆ ನೀರಿನಲ್ಲಿ ನಿಂತು ತಪಸ್ಸು ಮಾಡಿರುವುದು – ಇವೆಲ್ಲವೂ ಸರ್ವವ್ಯಾಪಕನೂ, ಪುರುಷೋತ್ತಮನೂ ಆದ ನಿನ್ನ ಸಂತೋಷಕ್ಕೆ ಕಾರಣವಾಗಲಿ ಎಂದಿಷ್ಟೇ ವರವನ್ನು ನಿನ್ನಲ್ಲಿ ಬೇಡುತ್ತೇವೆ. ॥ ೩೯-೪೦ ॥

ಸ್ವಾಮಿ ! ಸ್ವಾಯಂಭುವ ಮನು, ಸಾಕ್ಷಾತ್ ಬ್ರಹ್ಮದೇವರು, ಭಗವಾನ್ ಶ್ರೀಶಂಕರ ಮತ್ತು ತಪಸ್ಸು-ಜ್ಞಾನಗಳಿಂದ ಶುದ್ಧಚಿತ್ತರಾದ ಇತರ ಮಹಾಪುರುಷರು ನಿನ್ನ ಮಹಿಮೆಯ ಪಾರವನ್ನು

ಮನುಃ ಸ್ವಯಂಭೂರ್ಭಗವಾನ್ ಭವಶ್ಚ
ಯೇಽನ್ಯೇ ತಪೋಜ್ಞಾನವಿಶುದ್ಧಸತ್ತ್ವಾಃ ।
ಅದೃಷ್ಟಪಾರಾ ಅಪಿ ಯನ್ಮಹಿಮ್ನಃ
ಸ್ತುವಂತ್ಯಥೋಽತ್ವಾಽತ್ಮಸಮಂ ಗೃಣೀಮಃ ॥ ೪೧ ॥

ನಮಃ ಸಮಾಯ ಶುದ್ಧಾಯ ಪುರುಷಾಯ ಪರಾಯ ಚ ।
ವಾಸುದೇವಾಯ ಸತ್ತ್ವಾಯ ತುಭ್ಯಂ ಭಗವತೇ ನಮಃ ॥ ೪೨ ॥

ಮೈತ್ರೇಯ ಉವಾಚ

ಇತಿ ಪ್ರಚೇತೋಭಿರಭಿಷ್ಟುತೋ ಹರಿಃ
ಪ್ರೀತಸ್ತಥೇತ್ಯಾಹ ಶರಣ್ಯವತ್ಸಲಃ ।
ಅನಿಚ್ಛತಾಂ ಯಾನಮತೃಪ್ತಚಕ್ಷುಷಾಂ
ಯಯೌ ಸ್ವಧಾಮಾನಪವರ್ಗವೀರ್ಯಃ ॥ ೪೩ ॥

ಅಥ ನಿರ್ಯಾಯ ಸಲಿಲಾ-
ತ್ಪ್ರಚೇತಸ ಉದನ್ವತಃ ।
ವೀಕ್ಷ್ಯಾಕುಪ್ಯಂದ್ರುಮೈಶ್ಛನ್ನಾಂ
ಗಾಂ ಗಾಂ ರೋದ್ಧುಮಿವೋಚ್ಛ್ರಿತೈಃ ॥ ೪೪ ॥

ತತೋಽಗ್ನಿಮಾರುತೌ ರಾಜನ್ನಮುಂಚನ್ಮುಖತೋ ರುಷಾ ।
ಮಹೀಂ ನಿರ್ವೀರುಧಂ ಕರ್ತುಂ ಸಂವರ್ತಕ ಇವಾತ್ಯಯೇ ॥ ೪೫ ॥

ಭಸ್ಮಸಾತ್ಕ್ರಿಯಮಾಣಾಂಸ್ತಾಂದ್ರುಮಾನ್ವೀಕ್ಷ್ಯ ಪಿತಾಮಹಃ ।
ಆಗತಃ ಶಮಯಾಮಾಸ ಪುತ್ರಾನ್ಬರ್ಹಿಷ್ಮತೋ ನಯೈಃ ॥ ೪೬ ॥

ತತ್ರಾವಶಿಷ್ಟಾ ಯೇ ವೃಕ್ಷಾ ಭೀತಾ ದುಹಿತರಂ ತದಾ ।
ಉಜ್ಜಹ್ರುಸ್ತೇ ಪ್ರಚೇತೋಭ್ಯ ಉಪದಿಷ್ಟಾಃ ಸ್ವಯಂಭುವಾ ॥ ೪೭ ॥

ತೇ ಚ ಬ್ರಹ್ಮಣ ಆದೇಶಾನ್ಮಾರಿಷಾಮುಪಯೇಮಿರೇ ।
ಯಸ್ಯಾಂ ಮಹದವಜ್ಞಾನಾದಜನ್ಯಜನಯೋನಿಜಃ ॥ ೪೮ ॥

ಚಾಕ್ಷುಷೇ ತ್ವಂತರೇ ಪ್ರಾಪ್ತೇ ಪ್ರಾಕ್ಸರ್ಗೇ ಕಾಲವಿದ್ರುತೇ ।
ಯಃ ಸಸರ್ಜ ಪ್ರಜಾ ಇಷ್ಟಾಃ ಸ ದಕ್ಷೋ ದೈವಚೋದಿತಃ ॥ ೪೯ ॥

ಯೋ ಜಾಯಮಾನಃ ಸರ್ವೇಷಾಂ ತೇಜಸ್ತೇಜಸ್ವಿನಾಂ ರುಚಾ ।
ಸ್ವಯೋಪಾದತ್ತ ದಾಕ್ಷ್ಯಾಚ್ಚ ಕರ್ಮಣಾಂ ದಕ್ಷಮಬ್ರುವನ್ ॥ ೫೦ ॥

ತಂ ಪ್ರಜಾಸರ್ಗರಕ್ಷಾಯಾ-
ಮನಾದಿರಭಿಷಿಚ್ಯ ಚ ।
ಯುಯೋಜ ಯುಯುಜೇಽನ್ಯಾಂಶ್ಚ
ಸ ವೈ ಸರ್ವಪ್ರಜಾಪತೀನ್ ॥ ೫೧ ॥

ಹೊಂದದೇ ಇದ್ದರೂ-ನಿರಂತರವಾಗಿ ನಿನ್ನ ಸ್ತುತಿಯನ್ನು ಮಾಡುತ್ತಾ ಬಂದಿದ್ದಾರೆ. ಆದುದರಿಂದ ನಾವೂ ಕೂಡ ನಮ್ಮ ಬುದ್ಧಿಗೆ ತಕ್ಕಂತೆ ನಿನ್ನ ಕೀರ್ತಿಗಾನವನ್ನು ಮಾಡುತ್ತೇವೆ. ॥ ೪೧ ॥ ನೀನು ಸರ್ವಸಮನೂ, ಶುದ್ಧಸ್ವರೂಪನೂ ಪರಮಪುರುಷನಾಗಿರುವೆ. ಇಂತಹ ಸತ್ತ್ವಮೂರ್ತಿಯಾದ ಭಗವಾನ್ ವಾಸುದೇವನೇ ನಿನಗೆ ನಮೋ ನಮಃ ॥ ೪೨ ॥

ಶ್ರೀಮೈತ್ರೇಯರು ಹೇಳುತ್ತಾರೆ – ಎಲೈ ವಿದುರನೇ! ಪ್ರಚೇತಸರು ಹೀಗೆ ಭಗವಂತನನ್ನು ಸ್ತೋತ್ರಮಾಡಲು ಶರಣಾಗತವತ್ಸಲನಾದ ಶ್ರೀಭಗವಂತನು ಪ್ರಸನ್ನನಾಗಿ 'ತಥಾಸ್ತು' ಎಂದು ಹೇಳಿ ಅನುಗ್ರಹ ಮಾಡಿದನು. ಅಪ್ರತಿಹತವಾದ ಪ್ರಭಾವವುಳ್ಳ ಶ್ರೀಹರಿಯ ಆ ಮಧುರವಾದ ಮೂರ್ತಿಯ ದರ್ಶನದಿಂದ ಪ್ರಚೇತಸರ ಕಣ್ಣುಗಳಿಗೆ ಇನ್ನು ತೃಪ್ತಿಯಾಗಿರಲೇ ಇಲ್ಲ. ಅದಕ್ಕಾಗಿ ಆತನನ್ನು ಕಳುಹಿಸಿಕೊಡಲು ಇಷ್ಟವೇ ಇರಲಿಲ್ಲ. ಆದರೂ ಶ್ರೀಭಗವಂತನು ತನ್ನ ಪರಮಧಾಮಕ್ಕೆ ಹೊರಟು ಹೋದನು. ॥ ೪೩ ॥ ಅದಾದನಂತರ ಪ್ರಚೇತಸರು ಸಮುದ್ರಜಲದಿಂದ ಹೊರಗೆ ಬಂದು ನೋಡಲು, ಇಡೀ ಭೂಮಂಡಲವನ್ನು – ಸ್ವರ್ಗದ ಮಾರ್ಗವನ್ನು ತಡೆಯುತ್ತಿವೆಯೋ ಎಂಬಂತೆ – ಮಿತಿಮೀರಿ ಎತ್ತರವಾಗಿ ಬೆಳೆದ ವೃಕ್ಷಗಳು ಮುಚ್ಚಿಬಿಟ್ಟಿರುವುದನ್ನು ಕಂಡರು. ಅದನ್ನು ನೋಡಿ ಅವರಿಗೆ ವೃಕ್ಷಗಳ ಮೇಲೆ ಭಾರೀ ಕೋಪವುಂಟಾಯಿತು. ॥ ೪೪ ॥ ಆಗ ಅವರು ಭೂಮಿಯನ್ನು ಮರಗಿಡಗಳಿಂದ ಶೂನ್ಯವನ್ನಾಗಿ ಮಾಡಬೇಕೆಂದು ಸಂಕಲ್ಪಿಸಿ, ಪ್ರಳಯಕಾಲದ ಕಾಲಾಗ್ನಿರುದ್ರನಂತೆ ತಮ್ಮ ಬಾಯಿಂದ ಪ್ರಚಂಡವಾದ ವಾಯುವನ್ನು ಮತ್ತು ಅಗ್ನಿಯನ್ನೂ ಹೊರಗೆ ಬಿಟ್ಟರು. ॥ ೪೫ ॥ ಅವರು ಹೀಗೆ ಸಮಸ್ತ ವೃಕ್ಷಗಳನ್ನೂ ಸುಟ್ಟು ಭಸ್ಮಮಾಡುತ್ತಿರುವುದನ್ನು ಕಂಡು ಬ್ರಹ್ಮದೇವರು ಅಲ್ಲಿಗೆ ಬಂದು ಪ್ರಾಚೀನಬರ್ಹಿ ಪುತ್ರರಿಗೆ ಯುಕ್ತಿಪೂರ್ವಕವಾಗಿ ತಿಳುವಳಿಕೆ ನೀಡಿ ಅವರ ಕೋಪವನ್ನು ಶಾಂತಗೊಳಿಸಿದರು. ॥ ೪೬ ॥ ಆಗ ಅಲ್ಲಿ ಉಳಿದುಳಿದಿದ್ದ ವೃಕ್ಷಗಳು ಹೆದರಿಕೊಂಡು ಬ್ರಹ್ಮದೇವರ ಆಜ್ಞೆಯಂತೆ ತಮ್ಮಲ್ಲಿದ್ದ ಆ ಕನ್ನೆಯನ್ನು ತಂದು ಪ್ರಚೇತಸರಿಗೆ ಒಪ್ಪಿಸಿದವು. ॥ ೪೭ ॥ ಪ್ರಚೇತಸರೂ ಕೂಡ ಬ್ರಹ್ಮದೇವರ ಆದೇಶದಂತೆ ಆ ಮಾರಿಷಾ ಎಂಬ ಕನ್ಯೆಯೊಡನೆ ವಿವಾಹಿತರಾದರು. ಶ್ರೀಮಹಾದೇವನನ್ನು ತಿರಸ್ಕರಿಸಿದ ಕಾರಣ ತನ್ನ ದೇಹವನ್ನು ತ್ಯಜಿಸಿದ್ದ ಬ್ರಹ್ಮಪುತ್ರನಾದ ದಕ್ಷನು ಆಕೆಯ ಗರ್ಭದಲ್ಲಿ ಜನಿಸಿದನು. ॥ ೪೮ ॥ ಆ ದಕ್ಷನೇ ಕಾಲಕ್ರಮದಲ್ಲಿ ಹಿಂದಿದ್ದ ಸೃಷ್ಟಿಯು ನಶಿಸಿಹೋಗಿ ಚಾಕ್ಷುಷ ಮನ್ವಂತರವು ಬಂದಾಗ ಶ್ರೀಭಗವಂತನ ಪ್ರೇರಣೆಯಂತೆ ಹೊಸ ಪ್ರಜೆಗಳನ್ನು ಸೃಷ್ಟಿಸಿದನು. ॥ ೪೯ ॥ ಇವನು ಹುಟ್ಟುವಾಗಲೇ ತನ್ನ ತೇಜಸ್ಸಿನಿಂದ ಎಲ್ಲ ತೇಜಸ್ವಿಗಳ ತೇಜಸ್ಸನ್ನು ಸೆಳೆದುಕೊಂಡನು. ಕರ್ಮಗಳನ್ನು ಆಚರಿಸುವುದರಲ್ಲಿ ಅತ್ಯಂತ ದಕ್ಷ(ಕುಶಲ) ನಾಗಿದ್ದುದರಿಂದ 'ದಕ್ಷ'ನೆಂದೇ ಆತನ ಹೆಸರಾಯಿತು. ॥ ೫೦ ॥ ಬ್ರಹ್ಮದೇವರು ಆತನನ್ನು ಪ್ರಜಾಪತಿಗಳಿಗೆಲ್ಲ ಅಧಿಪತಿಯನ್ನಾಗಿ ಪಟ್ಟವನ್ನು ಕಟ್ಟಿ ಸೃಷ್ಟಿಯನ್ನು ರಕ್ಷಿಸಲು ಆದೇಶ ವನ್ನಿತ್ತರು. ಆಗ ಆತನು ಮರೀಚಿಯೇ ಮುಂತಾದ ಇತರ ಎಲ್ಲ ಪ್ರಜಾಪತಿಗಳನ್ನೂ ಅವರವರ ಕಾರ್ಯದಲ್ಲಿ ನೇಮಕಮಾಡಿದನು. ॥ ೫೧ ॥

ಮೂವತ್ತನೆಯ ಅಧ್ಯಾಯವು ಮುಗಿಯಿತು. ॥ ೩೦ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಚತುರ್ಥಸ್ಕಂಧೇ ತ್ರಿಂಶೋಽಧ್ಯಾಯಃ ॥ ೩೦ ॥

ಮೂವತ್ತೊಂದನೆಯ ಅಧ್ಯಾಯ

ನಾರದರ ಉಪದೇಶದಿಂದ ಪ್ರಚೇತಸರಿಗೆ ಪರಮಪದ ಪ್ರಾಪ್ತಿ

ಮೈತ್ರೇಯ ಉವಾಚ

ತತ ಉತ್ಪನ್ನವಿಜ್ಞಾನಾ ಆಶ್ವಧೋಕ್ಷಜಭಾಷಿತಮ್ ।
ಸ್ಮರಂತ ಆತ್ಮಜೇ ಭಾರ್ಯಾಂ ವಿಸೃಜ್ಯ ಪ್ರಾವ್ರಜನ್ ಗೃಹಾತ್ ॥ ೧ ॥

ದೀಕ್ಷಿತಾ ಬ್ರಹ್ಮಸತ್ರೇಣ ಸರ್ವಭೂತಾತ್ಮಮೇಧಸಾ ।
ಪ್ರತೀಚ್ಯಾಂ ದಿಶಿ ವೇಲಾಯಾಂ ಸಿದ್ಧೋಽಭೂದ್ಯತ್ರ ಜಾಜಲಿಃ ॥ ೨ ॥

ತಾನ್ನಿರ್ಜಿತಪ್ರಾಣಮನೋವಚೋದೃಶೋ
ಜಿತಾಸನಾನ್ ಶಾಂತಸಮಾನವಿಗ್ರಹಾನ್ ।
ಪರೇಽಮಲೇ ಬ್ರಹ್ಮಣಿ ಯೋಜಿತಾತ್ಮನಃ
ಸುರಾಸುರೇಡ್ಯೋ ದದೃಶೇ ಸ್ಮ ನಾರದಃ ॥ ೩ ॥

ತಮಾಗತಂ ತ ಉತ್ಥಾಯ ಪ್ರಣಿಪತ್ಯಾಭಿನಂದ್ಯ ಚ ।
ಪೂಜಯಿತ್ವಾ ಯಥಾದೇಶಂ ಸುಖಾಸೀನಮಥಾಬ್ರುವನ್ ॥ ೪ ॥

ಪ್ರಚೇತಸ ಊಚುಃ

ಸ್ವಾಗತಂ ತೇ ಸುರರ್ಷೇಽದ್ಯ ದಿಷ್ಟ್ಯಾ ನೋ ದರ್ಶನಂ ಗತಃ ।
ತವ ಚಂಕ್ರಮಣಂ ಬ್ರಹ್ಮನ್ನಭಯಾಯ ಯಥಾ ರವೇಃ ॥ ೫ ॥

ಯದಾದಿಷ್ಟಂ ಭಗವತಾ ಶಿವೇನಾಧೋಕ್ಷಜೇನ ಚ ।
ತದ್ಗೃಹೇಷು ಪ್ರಸಕ್ತಾನಾಂ ಪ್ರಾಯಶಃ ಕ್ಷಪಿತಂ ಪ್ರಭೋ ॥ ೬ ॥

ತನ್ನಃ ಪ್ರದ್ಯೋತಯಾಧ್ಯಾತ್ಮಜ್ಞಾನಂ ತತ್ತ್ವಾರ್ಥದರ್ಶನಮ್ ।
ಯೇನಾಂಜಸಾ ತರಿಷ್ಯಾಮೋ ದುಸ್ತರಂ ಭವಸಾಗರಮ್ ॥ ೭ ॥

ಮೈತ್ರೇಯ ಉವಾಚ

ಇತಿ ಪ್ರಚೇತಸಾಂ ಪೃಷ್ಟೋ ಭಗವಾನ್ನಾರದೋ ಮುನಿಃ ।
ಭಗವತ್ಯುತ್ತಮಶ್ಲೋಕ ಆವಿಷ್ಟಾತ್ಮಾಬ್ರವೀನ್ನೃಪಾನ್ ॥ ೮ ॥

ನಾರದ ಉವಾಚ

ತಜ್ಜನ್ಮ ತಾನಿ ಕರ್ಮಾಣಿ ತದಾಯುಸ್ತನ್ಮನೋ ವಚಃ ।
ನೃಣಾಂ ಯೇನೇಹ ವಿಶ್ವಾತ್ಮಾ ಸೇವ್ಯತೇ ಹರಿರೀಶ್ವರಃ ॥ ೯ ॥

ಶ್ರೀಮೈತ್ರೇಯರು ಹೇಳುತ್ತಾರೆ – ಎಲೈ ಭಾಗವತಶ್ರೇಷ್ಠನೇ! ಹತ್ತು ಲಕ್ಷ ದಿವ್ಯವರ್ಷಗಳು ಕಳೆದುಹೋಗಲಾಗಿ ಪ್ರಚೇತಸರಿಗೆ ವಿವೇಕ ಉಂಟಾಯಿತು. ಆಗ ಅವರಿಗೆ ಭಗವಂತನ ಮಾತುಗಳು ನೆನಪಾದುವು ಮತ್ತು ಅವರು ತಮ್ಮ ಭಾರ್ಯೆಯಾದ ಮಾರಿಷಾಳನ್ನು ಮಗನ ಬಳಿಯಲ್ಲಿ ಬಿಟ್ಟು ಕೂಡಲೇ ಮನೆಯಿಂದ ಹೊರಬಿದ್ದರು. ॥ ೧ ॥ ಅವರು ಪಶ್ಚಿಮದಿಕ್ಕಿನಲ್ಲಿ ಜಾಜಲಿ ಮಹರ್ಷಿಯು ಸಿದ್ಧಿಯನ್ನು ಪಡೆದಿದ್ದ ಸಮುದ್ರ ತಟಕ್ಕೆ ತಲುಪಿ – 'ಸಮಸ್ತ ಭೂತಗಳಲ್ಲಿಯೂ ಒಂದೇ ಆತ್ಮತತ್ತ್ವವು ಬೆಳಗುತ್ತಿದೆ' ಎಂಬ ಜ್ಞಾನವನ್ನು ಉಂಟುಮಾಡುವ ಆತ್ಮವಿಚಾರರೂಪವಾದ ಬ್ರಹ್ಮಸತ್ರದ ಸಂಕಲ್ಪಗೈದು ಕುಳಿತುಬಿಟ್ಟರು. ॥ ೨ ॥ ಅವರು ಪ್ರಾಣ, ಮನಸ್ಸು, ವಾಣಿ ಮತ್ತು ದೃಷ್ಟಿಯನ್ನು ವಶಪಡಿಸಿಕೊಂಡು, ಶರೀರವನ್ನು ಅಲುಗಾಡದಂತೆ ಸ್ಥಿರವಾಗಿಯೂ, ನೇರವಾಗಿಯೂ ಇರಿಸಿಕೊಂಡು, ಆಸನಜಯವನ್ನು ಸಾಧಿಸಿ ಚಿತ್ತವನ್ನು ವಿಶುದ್ಧವಾದ ಪರಬ್ರಹ್ಮನಲ್ಲಿ ಒಂದುಗೂಡಿಸಿದರು. ಇಂತಹ ಸ್ಥಿತಿಯಲ್ಲಿ ಅವರಿಗೆ ದೇವಾಸುರರಿಗೂ ವಂದನೀಯರಾದ ಶ್ರೀನಾರದರ ದರ್ಶನವಾಯಿತು. ॥ ೩ ॥ ನಾರದರು ಬಂದಿರುವುದನ್ನು ನೋಡಿ ಪ್ರಚೇತಸರು ಎದ್ದು ನಿಂತು, ಪ್ರಣಾಮಮಾಡಿ ಆದರ ಸತ್ಕಾರಪೂರ್ವಕ ದೇಶ-ಕಾಲಕ್ಕನುಸಾರವಾಗಿ ಅವರನ್ನು ವಿಧಿವತ್ತಾಗಿ ಪೂಜಿಸಿದರು. ನಾರದರು ಸುಖಾಸೀನರಾಗಲು ಪ್ರಚೇತಸರು ಅವರಲ್ಲಿ ವಿಜ್ಞಾಪಿಸಿಕೊಂಡರು. ॥ ೪ ॥

ಪ್ರಚೇತಸರು ಹೇಳಿದರು – ದೇವರ್ಷಿಗಳೇ! ತಮಗೆ ಸ್ವಾಗತವು. ಮಹಾಭಾಗ್ಯ ವಿಶೇಷದಿಂದಲೇ ನಮಗೆ ತಮ್ಮ ದರ್ಶನಭಾಗ್ಯವು ಲಭಿಸಿತು. ತಮ್ಮ ಲೋಕಸಂಚಾರವು ಸೂರ್ಯದೇವರಂತೆ ಸಮಸ್ತ ಜೀವಿಗಳಿಗೆ ಜ್ಞಾನಪ್ರಕಾಶವನ್ನೂ, ಅಭಯದಾನವನ್ನೂ ಕೊಡುವುದಕ್ಕಾಗಿಯೇ ಆಗಿದೆ. ॥ ೫ ॥ ಸ್ವಾಮಿ! ಭಗವಂತನಾದ ಶ್ರೀಶಂಕರನೂ, ಭಗವಾನ್ ಶ್ರೀವಿಷ್ಣುವೂ ನಮಗೆ ಉಪದೇಶಮಾಡಿದ್ದ ಜ್ಞಾನವನ್ನು ನಾವು ಗೃಹಸ್ಥಾಶ್ರಮದಲ್ಲೇ ಆಸಕ್ತರಾಗಿದ್ದ ಕಾರಣದಿಂದ ಮರೆತುಬಿಟ್ಟಂತಾಗಿದೆ. ॥ ೬ ॥ ಆದ್ದರಿಂದ ನೀವು ನಮ್ಮ ಹೃದಯದಲ್ಲಿ ಪರಮಾರ್ಥತತ್ತ್ವದ ಸಾಕ್ಷಾತ್ಕಾರವಾಗಿಸುವಂತಹ ಅಧ್ಯಾತ್ಮಜ್ಞಾನವನ್ನು ಪುನಃ ಪ್ರಕಾಶಿತಗೊಳಿಸಿರಿ. ಅದರಿಂದ ನಾವು ಈ ದುಸ್ತರವಾದ ಸಂಸಾರಸಾಗರವನ್ನು ಸುಲಭವಾಗಿ ದಾಟಬಲ್ಲೆವು. ॥ ೭ ॥

ಶ್ರೀಮೈತ್ರೇಯರು ಹೇಳುತ್ತಾರೆ – ಭಗವನ್ಮಯ ಶ್ರೀನಾರದರ ಚಿತ್ತವು ಸದಾಕಾಲ ಭಗವಾನ್ ಶ್ರೀಕೃಷ್ಣನಲ್ಲೇ ನೆಲೆಸಿರುತ್ತದೆ. ಅವರು ಪ್ರಚೇತಸರ ವಿಜ್ಞಾಪನೆಯನ್ನು ಕೇಳಿ ಹೀಗೆಂದರು. ॥ ೮ ॥

ಶ್ರೀನಾರದರು ಹೇಳಿದರು – ಎಲೈ ರಾಜರುಗಳೇ! ಈ ಲೋಕದಲ್ಲಿ ಯಾವುದರಿಂದ ಸರ್ವಾತ್ಮನೂ, ಸರ್ವೇಶ್ವರನೂ ಆದ ಶ್ರೀಹರಿಯ ಸೇವೆಯಾಗುವುದೋ ಆ ಜನ್ಮ, ಕರ್ಮ, ಆಯುಸ್ಸು, ಮನಸ್ಸು, ಮಾತುಗಳು ಸಫಲವಾದುವುಗಳು. ॥ ೯ ॥

ಕಿಂ ಜನ್ಮಭಿಸ್ತ್ರಿಭಿರ್ವೇಹ
ಶೌಕ್ಲಸಾವಿತ್ರಯಾಜ್ಞಿಕೈಃ ।
ಕರ್ಮಭಿರ್ವಾ ತ್ರಯೀಪ್ರೋಕ್ತೈಃ
ಪುಂಸೋಽಪಿ ವಿಬುಧಾಯುಷಾ ॥ ೧೦ ॥

ಶ್ರುತೇನ ತಪಸಾ ವಾ ಕಿಂ ವಚೋಭಿಶ್ಚಿತ್ತವೃತ್ತಿಭಿಃ ।
ಬುದ್ಧ್ಯಾ ವಾ ಕಿಂ ನಿಪುಣಯಾ ಬಲೇನೇಂದ್ರಿಯರಾಧಸಾ
॥ ೧೧ ॥

ಕಿಂ ವಾ ಯೋಗೇನ ಸಾಂಖ್ಯೇನ ನ್ಯಾಸಸ್ವಾಧ್ಯಾಯಯೋರಪಿ ।
ಕಿಂ ವಾ ಶ್ರೇಯೋಭಿರನ್ಯೈಶ್ಚ ನ ಯತ್ರಾತ್ಮಪ್ರದೋ ಹರಿಃ
॥ ೧೨ ॥

ಶ್ರೇಯಸಾಮಪಿ ಸರ್ವೇಷಾಮಾತ್ಮಾ ಹ್ಯವಧಿರರ್ಥತಃ ।
ಸರ್ವೇಷಾಮಪಿ ಭೂತಾನಾಂ ಹರಿರಾತ್ಮಾಽಽತ್ಮದಃ ಪ್ರಿಯಃ
॥ ೧೩ ॥

ಯಥಾ ತರೋರ್ಮೂಲನಿಷೇಚನೇನ
ತೃಪ್ಯಂತಿ ತತ್ಸ್ಕಂಧಭುಜೋಪಶಾಖಾಃ ।
ಪ್ರಾಣೋಪಹಾರಾಚ್ಚ ಯಥೇಂದ್ರಿಯಾಣಾಂ
ತಥೈವ ಸರ್ವಾರ್ಹಣಮಚ್ಯುತೇಜ್ಯಾ ॥ ೧೪ ॥

ಯಥೈವ ಸೂರ್ಯಾತ್ಪ್ರಭವಂತಿ ವಾರಃ
ಪುನಶ್ಚ ತಸ್ಮಿನ್ಪ್ರವಿಶಂತಿ ಕಾಲೇ ।
ಭೂತಾನಿ ಭೂಮೌ ಸ್ಥಿರಜಂಗಮಾನಿ
ತಥಾ ಹರಾವೇವ ಗುಣಪ್ರವಾಹಃ ॥ ೧೫ ॥

ಏತತ್ಪದಂ ತಜ್ಜಗದಾತ್ಮನಃ ಪರಂ
ಸಕೃದ್ವಿಭಾತಂ ಸವಿತುರ್ಯಥಾ ಪ್ರಭಾ ।
ಯಥಾಸವೋ ಜಾಗ್ರತಿ ಸುಪ್ತಶಕ್ತಯೋ
ದ್ರವ್ಯಕ್ರಿಯಾಜ್ಞಾನಭಿದಾಭ್ರಮಾತ್ಯಯಃ ॥ ೧೬ ॥

ಆತ್ಮಾನುಭವವನ್ನು ಕರುಣಿಸುವ ಶ್ರೀಹರಿಯು ಯಾವುದರಿಂದ ದೊರಕುವುದಿಲ್ಲವೋ – ಅಂತಹ ಜನ್ಮದಿಂದಾಗಲೀ, ಯಜ್ಞೋಪವೀತ ಸಂಸ್ಕಾರ, ಗಾಯತ್ರಿ ಉಪದೇಶ, ಯಜ್ಞದೀಕ್ಷೆಗಳೆಂಬ ಮೂರು ಸಂಸ್ಕಾರಗಳಿಂದಾಗಲೀ, ವೇದೋಕ್ತ ಕರ್ಮಗಳಿಂದಾಗಲೀ, ದೇವಮಾನದ ಪೂರ್ಣಾಯುಷ್ಯದಿಂದಾಗಲೀ, ಶಾಸ್ತ್ರಜ್ಞಾನದಿಂದಾಗಲೀ, ತಪಸ್ಸಿನಿಂದಾಗಲೀ, ಮಾತಿನ ಚಾತುರ್ಯದಿಂದಾಗಲೀ, ಅದ್ಭುತವಾದ ಚಿತ್ತವೃತ್ತಿಗಳಿಂದಾಗಲೀ, ಸ್ಮರಣಶಕ್ತಿಯಿಂದಾಗಲೀ, ಸೂಕ್ಷ್ಮವಾದ ಬುದ್ಧಿಯಿಂದಾಗಲೀ, ಬಲದಿಂದಾಗಲೀ, ಇಂದ್ರಿಯಪಾಟವದಿಂದಾಗಲೀ, ಯೋಗದಿಂದಾಗಲೀ, ಸಾಂಖ್ಯ (ಆತ್ಮಾನಾತ್ಮವಿವೇಕ)ದಿಂದಾಗಲೀ, ಸಂನ್ಯಾಸದಿಂದಾಗಲೀ, ವೇದಾಧ್ಯಯನ, ವ್ರತ, ವೈರಾಗ್ಯಗಳೇ ಮುಂತಾದ ಇತರ ಶ್ರೇಯಃಸಾಧನೆಯ ಉಪಾಯಗಳಿಂದಾಗಲೀ ಮನುಷ್ಯನಿಗೆ ಆಗುವ ಪ್ರಯೋಜನವಾದರೂ ಏನು? ॥ ೧೦-೧೨ ॥ ವಾಸ್ತವವಾಗಿ ಎಲ್ಲ ಶ್ರೇಯಸ್ಸುಗಳಿಗೂ ಆತ್ಮನೇ ಅವಧಿಯು. ಆತ್ಮಜ್ಞಾನವನ್ನು ಕರುಣಿಸುವ ಶ್ರೀಹರಿಯೇ ಎಲ್ಲ ಪ್ರಾಣಿಗಳಿಗೂ ಪ್ರಿಯತಮನಾದ ಆತ್ಮನಾಗಿದ್ದಾನೆ. ॥ ೧೩ ॥ ವೃಕ್ಷದ ಬುಡಕ್ಕೆ ನೀರು ಹಾಯಿಸಿದರೆ ಅದರ ಕಾಂಡ, ಶಾಖೆ, ಉಪಶಾಖೆಗಳೆಲ್ಲಕ್ಕೂ ತೃಪ್ತಿಯುಂಟಾಗುವಂತೆಯೇ, ಊಟದ ಮೂಲಕ ಪ್ರಾಣಗಳನ್ನು ತೃಪ್ತಿಪಡಿಸಿದರೆ ಎಲ್ಲ ಇಂದ್ರಿಯಗಳೂ ಪುಷ್ಟವಾಗುವಂತೆಯೇ, (ಸರ್ವಮೂಲನಾಗಿರುವ) ಅಚ್ಯುತನನ್ನು ಪೂಜಿಸಿದರೆ ಅದರಿಂದ ಸರ್ವರ ಆರಾಧನೆಯು ಆಗುವುದು. ॥ ೧೪ ॥ ನೀರೆಲ್ಲವೂ ಮಳೆಗಾಲದಲ್ಲಿ ಸೂರ್ಯನಿಂದಲೇ ಉಂಟಾಗಿ ಬೇಸಗೆಯಲ್ಲಿ ಆತನ ಕಿರಣಗಳಲ್ಲಿಯೇ ಸೇರಿಕೊಳ್ಳುವುದೋ, ಚರಾಚರವಾದ ಸಮಸ್ತ ಪ್ರಾಣಿಗಳೂ ಭೂಮಿಯಿಂದಲೇ ಉತ್ಪನ್ನವಾಗಿ ಕಡೆಗೆ ಅದರಲ್ಲೇ ಸೇರಿಹೋಗುವಂತೆಯೇ ಗುಣಪ್ರವಾಹಕ್ಕೆ ಸೇರಿದ ಈ ಚೇತನಾಚೇತನಾತ್ಮಕವಾದ ಸಮಸ್ತ ಪ್ರಪಂಚವು ಶ್ರೀಹರಿಯಿಂದಲೇ ಉತ್ಪನ್ನವಾಗಿ ಕೊನೆಗೆ ಅವನಲ್ಲೇ ಲಯಹೊಂದುವುದು. ॥ ೧೫ ॥ ವಸ್ತುತಃ ಈ ಜಗತ್ತು ಭಗವಾನ್ ವಿಶ್ವಾತ್ಮನ ಶಾಸ್ತ್ರಪ್ರಸಿದ್ಧವಾದ ಸರ್ವ ಉಪಾಧಿರಹಿತವಾದ ಸ್ವರೂಪವೇ ಆಗಿದೆ. ಸೂರ್ಯನ ಪ್ರಭೆಯು ಅವನಿಂದ ಹೇಗೆ ಬೇರೆಯಾಗುವುದಿಲ್ಲವೋ ಹಾಗೆಯೇ ಗಂಧರ್ವನಗರದಂತೆ ಕೆಲವೊಮ್ಮೆ ಸ್ಫುರಿತವಾಗುವ ಈ ಜಗತ್ತು ಭಗವಂತನಿಂದ ಭಿನ್ನವಾಗಿಲ್ಲ. ಜಾಗ್ರತದಲ್ಲಿ ಇಂದ್ರಿಯಗಳು ಕ್ರಿಯಾಶೀಲವಾಗಿರುತ್ತವೆ. ಆದರೆ ಸುಷುಪ್ತಿಯಲ್ಲಿ ಅವುಗಳ ಶಕ್ತಿ ಲೀನವಾಗಿ ಹೋಗುತ್ತದೆ, ಹಾಗೆಯೇ ಈ ಜಗತ್ತು ಸೃಷ್ಟಿಯಕಾಲದಲ್ಲಿ ಭಗವಂತನಿಂದ ಪ್ರಕಟವಾಗುತ್ತದೆ ಮತ್ತು ಕಲ್ಪಾಂತ್ಯದಲ್ಲಿ ಅವನಲ್ಲೇ ಲೀನವಾಗಿ ಹೋಗುತ್ತದೆ. ಸ್ವರೂಪತಃ ಭಗವಂತನಲ್ಲಿ ದ್ರವ್ಯ, ಕ್ರಿಯೆ ಮತ್ತು ಜ್ಞಾನರೂಪೀ ತ್ರಿವಿಧ ಅಹಂಕಾರದ ಹಾಗೂ ಅವುಗಳ ನಿಮಿತ್ತದಿಂದಾಗುವ ಭೇದಭ್ರಮೆಯು ಇರುವುದೇ ಇಲ್ಲ. ॥ ೧೬ ॥ ಎಲೈ ನೃಪತಿಗಳೇ! ಬೆಳಕು, ಮೋಡ ಮತ್ತು ಕತ್ತಲೆ – ಇವು ಮೂರೂ ಕ್ರಮವಾಗಿ ಆಕಾಶದಲ್ಲಿಯೇ ಪ್ರಕಟಗೊಂಡು ಅದರಲ್ಲೇ ಲೀನವಾಗುವುವು, ಆದರೆ ಆಕಾಶವು ಇವುಗಳಿಂದ ಲಿಪ್ತವಾಗುವುದಿಲ್ಲ, ಹಾಗೆಯೇ ಈ ಸತ್ತ್ವ, ರಜ, ತಮ ಎಂಬ ಶಕ್ತಿಗಳು ಕೆಲವೊಮ್ಮೆ

ಯಥಾ ನಭಸ್ಯಭ್ರತಮಃಪ್ರಕಾಶಾ
ಭವಂತಿ ಭೂಪಾ ನ ಭವಂತ್ಯನುಕ್ರಮಾತ್ ।
ಏವಂ ಪರೇ ಬ್ರಹ್ಮಣಿ ಶಕ್ತಯಸ್ತ್ವಮೂ
ರಜಸ್ತಮಃಸತ್ತ್ವಮಿತಿ ಪ್ರವಾಹಃ ॥ ೧೭ ॥

ತೇನೈಕಮಾತ್ಮಾನಮಶೇಷದೇಹಿನಾಂ
ಕಾಲಂ ಪ್ರಧಾನಂ ಪುರುಷಂ ಪರೇಶಮ್ ।
ಸ್ವತೇಜಸಾ ಧ್ವಸ್ತಗುಣಪ್ರವಾಹ-
ಮಾತ್ಮೈಕಭಾವೇನ ಭಜಧ್ವಮದ್ಧಾ ॥ ೧೮ ॥

ದಯಯಾ ಸರ್ವಭೂತೇಷು ಸಂತುಷ್ಟ್ಯಾ ಯೇನ ಕೇನ ವಾ ।
ಸರ್ವೇಂದ್ರಿಯೋಪಶಾಂತ್ಯಾ ಚ ತುಷ್ಯತ್ಯಾಶು ಜನಾರ್ದನಃ ॥ ೧೯ ॥

ಅಪಹತಸಕಲೈಷಣಾಮಲಾತ್ಮ-
ನ್ಯವಿರತಮೇಧಿತಭಾವನೋಪಹೂತಃ ।
ನಿಜಜನವಶಗತ್ವಮಾತ್ಮನೋಽಯ-
ನ್ನ ಸರತಿ ಛಿದ್ರವದಕ್ಷರಃ ಸತಾಂ ಹಿ ॥ ೨೦ ॥

ನ ಭಜತಿ ಕುಮನೀಷಿಣಾಂ ಸ ಇಜ್ಯಾಂ
ಹರಿರಧನಾತ್ಮಧನಪ್ರಿಯೋ ರಸಜ್ಞಃ ।
ಶ್ರುತಧನಕುಲಕರ್ಮಣಾಂ ಮದೈರ್ಯೇ
ವಿದಧತಿ ಪಾಪಮಕಿಂಚನೇಷು ಸತ್ಸು ॥ ೨೧ ॥

ಶ್ರಿಯಮನುಚರತೀಂ ತದರ್ಥಿನಶ್ಚ
ದ್ವಿಪದಪತೀನ್ವಿಬುಧಾಂಶ್ಚ ಯತ್ಸ್ವಪೂರ್ಣಃ ।
ನ ಭಜತಿ ನಿಜಭೃತ್ಯವರ್ಗತಂತ್ರಃ
ಕಥಮಮುಮುದ್ವಿಸೃಜೇತ್ಪುಮಾನ್ ಕೃತಜ್ಞಃ ॥ ೨೨ ॥

ಮೈತ್ರೇಯ ಉವಾಚ

ಇತಿ ಪ್ರಚೇತಸೋ ರಾಜನ್
ಅನ್ಯಾಶ್ಚ ಭಗವತ್ಕಥಾಃ ।
ಶ್ರಾವಯಿತ್ವಾ ಬ್ರಹ್ಮಲೋಕಂ
ಯಯೌ ಸ್ವಾಯಂಭುವೋ ಮುನಿಃ ॥ ೨೩ ॥

ಪರಮಾತ್ಮನಿಂದಲೇ ಉತ್ಪನ್ನವಾಗುತ್ತವೆ ಹಾಗೂ ಕೆಲವೊಮ್ಮೆ ಅವನಲ್ಲೇ ಲೀನವಾಗಿ ಹೋಗುತ್ತವೆ. ಹೀಗೆಯೇ ಇವುಗಳ ಪ್ರವಾಹ ನಡೆಯುತ್ತಾ ಇರುತ್ತದೆ. ಆದರೆ ಇದರಿಂದ ಆಕಾಶದಂತೆ ಅಸಂಗ ಪರಮಾತ್ಮನಲ್ಲಿ ಯಾವ ವಿಕಾರವೂ ಉಂಟಾಗುವುದಿಲ್ಲ. ॥ ೧೭ ॥ ಆದ್ದರಿಂದ ಬ್ರಹ್ಮಾದಿ ಸಮಸ್ತ ಲೋಕಪಾಲಕರಿಗೂ ಅಧೀಶ್ವರನಾದ ಶ್ರೀಹರಿಯನ್ನು ತಮ್ಮಿಂದ ಅಭಿನ್ನನೆಂದು ತಿಳಿದು ನೀವು ಭಜಿಸಿರಿ. ಏಕೆಂದರೆ, ಅವನೇ ಸಮಸ್ತ ದೇಹಧಾರಿಗಳ ಆತ್ಮನಾಗಿರುವನು. ಅವನೇ ಜಗತ್ತಿನ ನಿಮಿತ್ತಕಾರಣನಾದ ಕಾಲ, ಉಪಾದಾನಕಾರಣನಾದ ಪ್ರಧಾನ ಮತ್ತು ನಿಯಾಮಕ ಪುರುಷೋತ್ತಮನಾಗಿದ್ದಾನೆ ಹಾಗೂ ತನ್ನ ಕಾಲಶಕ್ತಿಯಿಂದಲೇ ಈ ಗುಣಗಳ ಪ್ರವಾಹರೂಪವಾದ ಪ್ರಪಂಚವನ್ನು ಸಂಹಾರಮಾಡುತ್ತಾನೆ. ॥ ೧೮ ॥

ಸಮಸ್ತ ಪ್ರಾಣಿಗಳಲ್ಲಿ ದಯೆಯನ್ನು ತೋರುವಿಕೆ, ಏನು ದೊರೆಯುವುದೋ ಅದರಲ್ಲೇ ಸಂತುಷ್ಟನಾಗಿರುವುದು, ಸರ್ವೇಂದ್ರಿಯಗಳನ್ನು ವಿಷಯಗಳಿಂದ ಹಿಂದಿರುಗಿಸಿ ಶಾಂತಗೊಳಿಸುವುದು – ಈ ಮೂರರಿಂದ ಭಕ್ತವತ್ಸಲನಾದ ಭಗವಂತನು ಬೇಗನೇ ಪ್ರಸನ್ನನಾಗುತ್ತಾನೆ. ॥ ೧೯ ॥ ಪುತ್ರೈಷಣಾ ಮುಂತಾದ ಎಲ್ಲ ವಿಧದ ವಾಸನೆಗಳು ಹೊರಟುಹೋದ್ದರಿಂದ ನಿರಂತರವಾಗಿ ವೃದ್ಧಿಹೊಂದುತ್ತಿರುವ ಧ್ಯಾನದಿಂದ ಸೆಳೆಯಲ್ಪಟ್ಟವನಾಗಿ ಅವಿನಾಶಿಯಾದ ಶ್ರೀಹರಿಯು ಶುದ್ಧಾಂತಃಕರಣರಾದ ಸಂತರ ಹೃದಯಕ್ಕೆ ಬಂದುಬಿಡುತ್ತಾನೆ. ತನ್ನ ಭಕ್ತಪರಾಧೀನತೆಯನ್ನು ಅನುಸರಿಸಿ ಹೃದಯಾಕಾಶದಂತೆ ಅಲ್ಲಿಂದ ಸರಿಯದೆ ಅಲ್ಲಿಯೇ ನೆಲೆಗೊಳ್ಳುವನು. ॥ ೨೦ ॥ ಭಗವಂತನೇ ಸರ್ವಸ್ವವೆಂದು ಭಾವಿಸುವ, ಭೌತಿಕ ಶ್ರೀಮಂತಿಕೆಯಿಲ್ಲದ ಮನುಷ್ಯರ ಮೇಲೆಯೇ ಪರಮಾತ್ಮನು ಪ್ರೇಮವನ್ನಿಡುತ್ತಾನೆ. ಏಕೆಂದರೆ, ಆತನು ಪರಮರಸಜ್ಞನು. ನಿವ್ಯಾರ್ಜಭಕ್ತಿಯುಳ್ಳ ಅನನ್ಯಭಕ್ತರ ಭಕ್ತಿಯಲ್ಲಿ ಎಷ್ಟು ಮಾಧುರ್ಯವಿದೆಯೆಂಬುದನ್ನು ಆತನು ಚೆನ್ನಾಗಿ ಬಲ್ಲನು. ವಿದ್ಯಾಮದ, ಧನಮದ, ಕುಲಮದ, ಕರ್ಮಮದ ಇವುಗಳಿಂದ ಕೊಬ್ಬಿ ಅಕಿಂಚನ ಸಾಧುಜನರನ್ನು ತಿರಸ್ಕಾರ ಮಾಡುವ ಆ ದುರ್ಬುದ್ಧಿಯುಳ್ಳವರ ಪೂಜೆಯನ್ನು ಅವನು ಸ್ವೀಕರಿಸುವುದೇ ಇಲ್ಲ. ॥ ೨೧ ॥ ಭಗವಂತನಾದ ಶ್ರೀಹರಿಯು ಆಪ್ತಕಾಮನೂ, ಸ್ವಾನಂದಪೂರ್ಣನೂ ಆಗಿರುವುದರಿಂದ ಆತನು ತನ್ನನ್ನು ನಿರಂತರವಾಗಿ ಸೇವಿಸುತ್ತಿರುವ ಶ್ರೀಲಕ್ಷ್ಮೀದೇವಿಯನ್ನಾಗಲೀ, ಆ ಸಂಪತ್ತನ್ನು ಬಯಸುವ ರಾಜರನ್ನಾಗಲೀ, ಅಥವಾ ದೇವತೆಗಳನ್ನಾಗಲೀ ಯಾರನ್ನೂ ಅಪೇಕ್ಷಿಸುವುದಿಲ್ಲ. ಆದರೂ ಅವನು ತನ್ನ ಭಕ್ತರಿಗೆ ಅಧೀನನಾಗಿರುತ್ತಾನೆ. ಆಹಾ! ಇಂತಹ ಕರುಣಾಸಾಗರನಾದ ಸ್ವಾಮಿಯನ್ನು ಕೃತಜ್ಞನಾದ ಯಾರೇ ಮನುಷ್ಯನು ಸ್ವಲ್ಪ ಹೊತ್ತಾದರೂ ಬಿಟ್ಟಿರಲು ಸಾಧ್ಯವೇ? ॥ ೨೨ ॥

ಶ್ರೀಮೈತ್ರೇಯರು ಹೇಳುತ್ತಾರೆ – ಎಲೈ ವಿದುರನೇ! ಪೂಜ್ಯರಾದ ನಾರದಮಹರ್ಷಿಗಳು ಪ್ರಚೇತಸರಿಗೆ ಹೀಗೆ ಉಪದೇಶ ಮಾಡಿ, ಇನ್ನೂ ಅನೇಕ ಭಗವತ್ಕಥೆಗಳನ್ನೂ ಅವರಿಗೆ ಹೇಳಿದರು. ಅನಂತರ ಅವರು ಬ್ರಹ್ಮಲೋಕಕ್ಕೆ ಹೊರಟುಹೋದರು. ॥ ೨೩ ॥ ಪ್ರಚೇತಸರೂ ಕೂಡ ಜಗತ್ತಿನ ಸರ್ವಪಾಪಗಳನ್ನು ತೊಳೆದು

ತೇಽಪಿ ತನ್ಮುಖನಿರ್ಯಾತಂ ಯಶೋ ಲೋಕಮಲಾಪಹಮ್ ।
ಹರೇರ್ನಿಶಮ್ಯ ತತ್ಪಾದಂ ಧ್ಯಾಯಂತಸ್ತದ್ಗತಿಂ ಯಯುಃ ॥ ೨೪ ॥

ಏತತ್ತೇಽಭಿಹಿತಂ ಕ್ಷತ್ತರ್ಯನ್ಮಾಂ ತ್ವಂ ಪರಿಪೃಷ್ಟವಾನ್ ।
ಪ್ರಚೇತಸಾಂ ನಾರದಸ್ಯ ಸಂವಾದಂ ಹರಿಕೀರ್ತನಮ್ ॥ ೨೫ ॥

ಶ್ರೀಶುಕ ಉವಾಚ

ಯ ಏಷ ಉತ್ತಾನಪದೋ ಮಾನವಸ್ಯಾನುವರ್ಣಿತಃ ।
ವಂಶಃ ಪ್ರಿಯವ್ರತಸ್ಯಾಪಿ ನಿಬೋಧ ನೃಪಸತ್ತಮ ॥ ೨೬ ॥

ಯೋ ನಾರದಾದಾತ್ಮವಿದ್ಯಾಮಧಿಗಮ್ಯ ಪುನರ್ಮಹೀಮ್ ।
ಭುಕ್ತ್ವಾ ವಿಭಜ್ಯ ಪುತ್ರೇಭ್ಯ ಐಶ್ವರಂ ಸಮಗಾತ್ಪದಮ್ ॥ ೨೭ ॥

ಇಮಾಂ ತು ಕೌಷಾರವಿಣೋಪವರ್ಣಿತಾಂ
ಕ್ಷತ್ತಾ ನಿಶಮ್ಯಾಜಿತವಾದಸತ್ಕಥಾಮ್ ।
ಪ್ರವೃದ್ಧಭಾವೋಽಶ್ರುಕಲಾಕುಲೋ ಮುನೇ-
ರ್ದಧಾರ ಮೂರ್ಧ್ನಾ ಚರಣಂ ಹೃದಾ ಹರೇಃ ॥ ೨೮ ॥

ವಿದುರ ಉವಾಚ

ಸೋಽಯಮದ್ಯ ಮಹಾಯೋಗಿನ್ಭವತಾ ಕರುಣಾತ್ಮನಾ ।
ದರ್ಶಿತಸ್ತಮಸಃ ಪಾರೋ ಯತ್ರಾಕಿಂಚನಗೋ ಹರಿಃ ॥ ೨೯ ॥

ಶ್ರೀಶುಕ ಉವಾಚ

ಇತ್ಯಾನಮ್ಯ ತಮಾಮಂತ್ರ್ಯ ವಿದುರೋ ಗಜಸಾಹ್ವಯಮ್ ।
ಸ್ವಾನಾಂ ದಿದೃಕ್ಷುಃ ಪ್ರಯಯೌ ಜ್ಞಾತೀನಾಂ ನಿರ್ವೃತಾಶಯಃ ॥ ೩೦ ॥

ಏತದ್ಯಃ ಶೃಣುಯಾದ್ರಾಜನ್-
ರಾಜ್ಞಾಂ ಹರ್ಯರ್ಪಿತಾತ್ಮನಾಮ್ ।
ಆಯುರ್ಧನಂ ಯಶಃ ಸ್ವಸ್ತಿ
ಗತಿಮೈಶ್ವರ್ಯಮಾಪ್ನುಯಾತ್ ॥ ೩೧ ॥

ಹಾಡುವ ಭಗವಚ್ಚರಿತ್ರೆಗಳನ್ನು ಆ ಮಹರ್ಷಿಗಳ ಮುಖಕಮಲದಿಂದ ಕೇಳಿ ಶ್ರೀಭಗವಂತನ ಅಡಿದಾವರೆಗಳನ್ನು ಚಿಂತಿಸುತ್ತಾ ಕೊನೆಗೆ ಅವರು ಭಗವಂತನ ಧಾಮವನ್ನೂ ಸೇರಿದರು. ॥ ೨೪ ॥ ಹೀಗೆ ಶ್ರೀನಾರದರಿಗೂ ಮತ್ತು ಪ್ರಚೇತಸರಿಗೂ ನಡೆದ ಭಗವತ್ಕಥಾರೂಪವಾದ ಸಂಭಾಷಣೆಯು ಹೇಗೆ ನಡೆಯಿತೆಂದು ನೀನು ಕೇಳಿದೆಯಲ್ಲ, ಅದನ್ನು ನಾನು ನಿನಗೆ ತಿಳಿಸಿರುವೆನು. ॥ ೨೫ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿದ್ರಾಜನೇ! ಇಲ್ಲಿಯವರೆಗೆ ನಾನು ಸ್ವಾಯಂಭುವಮನುವಿನ ಪುತ್ರನಾದ ಉತ್ತಾನಪಾದನ ವಂಶವನ್ನು ವರ್ಣಿಸಿದೆ. ಇನ್ನು ಪ್ರಿಯವ್ರತನ ವಂಶವನ್ನೂ ವರ್ಣಿಸುವೆನು ಕೇಳು. ॥ ೨೬ ॥ ಪ್ರಿಯವ್ರತ ಮಹಾರಾಜನೂ ಶ್ರೀನಾರದರಿಂದ ಆತ್ಮಜ್ಞಾನದ ಉಪದೇಶವನ್ನು ಪಡೆದರೂ ಕೂಡ ರಾಜ್ಯಸೌಖ್ಯವನ್ನು ಕೆಲವುಕಾಲ ಅನುಭವಿಸಿದನು. ಕೊನೆಗೆ ಇಡೀ ಭೂಮಿಯನ್ನು ತನ್ನ ಪುತ್ರರಿಗೆ ಹಂಚಿ ಅವನು ಭಗವಂತನ ಪರಮಧಾಮವನ್ನು ಹೊಂದಿದನು. ॥ ೨೭ ॥

ರಾಜೇಂದ್ರನೇ! ಇತ್ತ ಮೈತ್ರೇಯ ಮಹರ್ಷಿಗಳ ಬಾಯಿಂದ ಶ್ರೀಭಗವಂತನ ಅನಂತಕಲ್ಯಾಣಗುಣಗಳಿಂದ ಕೂಡಿದ ಪವಿತ್ರತಮವಾದ ಭಗವತ್ಕಥೆಯನ್ನು ಕೇಳಿ ವಿದುರನು ಪ್ರೇಮಮಗ್ನನಾಗಿ, ಭಕ್ತಿಭಾವದ ಉದ್ರೇಕ ಉಂಟಾದ್ದರಿಂದ ಅವನ ಕಣ್ಣುಗಳಿಂದ ಪ್ರೇಮಾಶ್ರುಗಳು ಹರಿಯತೊಡಗಿದವು ಹಾಗೂ ಅವನು ಹೃದಯದಲ್ಲಿ ಭಗವಚ್ಚರಣಗಳನ್ನು ಸ್ಮರಿಸುತ್ತಾ ತನ್ನ ತಲೆಯನ್ನು ಮೈತ್ರೇಯ ಮುನಿವರ್ಯರ ಅಡಿದಾವರೆಗಳಲ್ಲಿರಿಸಿ, ಹೀಗೆ ವಿಜ್ಞಾಪಿಸಿಕೊಂಡರು. ॥ ೨೮ ॥

ವಿದುರನು ಹೇಳತೊಡಗಿದನು – ಮಹಾಯೋಗಿವರ್ಯರೇ! ತಾವು ಎಂತಹ ಕರುಣಾಮಯರು. ಇಂದು ತಾವು ನನ್ನನ್ನು ಅಜ್ಞಾನಾಂಧಕಾರದಿಂದ ದಾಟಿಸಿ ಅಕಿಂಚನರಿಗೆ ಸರ್ವಸ್ವನಾಗಿರುವ ಶ್ರೀಹರಿಯು ಬೆಳಗುತ್ತಿರುವಲ್ಲಿಗೆ ಮುಟ್ಟಿಸಿದಿರಿ. ॥ ೨೯ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ! ಭಾಗವತೋತ್ತಮನಾದ ವಿದುರನು ಮೈತ್ರೇಯರಲ್ಲಿ ಹೀಗೆ ಕೃತಜ್ಞತಾಪೂರ್ಣವಾದ ಮಾತುಗಳನ್ನು ಅರಿಕೆಮಾಡಿಕೊಂಡು ಅವರಿಗೆ ನಮಸ್ಕರಿಸಿ, ಅವರಿಂದ ಅಪ್ಪಣೆ ಪಡೆದು ಪ್ರಶಾಂತಚಿತ್ತರಾಗಿ ಬಂಧುಜನರನ್ನು ನೋಡಲು ಹಸ್ತಿನಾಪುರಕ್ಕೆ ಹೊರಟುಹೋದನು. ॥ ೩೦॥ ನೃಪಶ್ರೇಷ್ಠನೇ! ಭಗವಂತನ ಶರಣಾಗತ ಪರಮಭಾಗವತರಾದ ರಾಜರ ಈ ಪವಿತ್ರ ಚರಿತ್ರವನ್ನು ಕೇಳುವವರು – ದೀರ್ಘಾಯುಷ್ಯ, ಧನ, ಕೀರ್ತಿ, ಕ್ಷೇಮ, ಸದ್ಗತಿ ಮತ್ತು ಐಶ್ವರ್ಯವನ್ನು ಪಡೆಯುವರು. ॥ ೩೧ ॥

ಮೂವತ್ತೊಂದನೆಯ ಅಧ್ಯಾಯವು ಮುಗಿಯಿತು. ॥ ೩೧ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಚತುರ್ಥಸ್ಕಂಧೇ
ಪ್ರಚೇತಉಪಾಖ್ಯಾನಂ ನಾಮೈಕತ್ರಿಂಶೋಽಧ್ಯಾಯಃ ॥ ೩೧ ॥

ನಾಲ್ಕನೆಯ ಸ್ಕಂಧವು ಸಂಪೂರ್ಣವಾಯಿತು.

॥ ಓಂ ನಮೋ ಭಗವತೇ ವಾಸುದೇವಾಯ ॥

ಶ್ರೀಮದ್ಭಾಗವತಮಹಾಪುರಾಣಮ್

ಪಂಚಮಃ ಸ್ಕಂಧಃ

ಮೊದಲನೆಯ ಅಧ್ಯಾಯ

ಪ್ರಿಯವ್ರತ – ಚರಿತ್ರೆ

ರಾಜೋವಾಚ

ಪ್ರಿಯವ್ರತೋ ಭಾಗವತ ಆತ್ಮಾರಾಮಃ ಕಥಂ ಮುನೇ ।
ಗೃಹೇಽರಮತ ಯನ್ಮೂಲಃ ಕರ್ಮಬಂಧಃ ಪರಾಭವಃ ॥ ೧ ॥

ನ ನೂನಂ ಮುಕ್ತಸಂಗಾನಾಂ ತಾದೃಶಾನಾಂ ದ್ವಿಜರ್ಷಭ ।
ಗೃಹೇಷ್ವಭಿನಿವೇಶೋಽಯಂ ಪುಂಸಾಂ ಭವಿತುಮರ್ಹತಿ ॥ ೨ ॥

ಮಹತಾಂ ಖಲು ವಿಪ್ರರ್ಷೇ ಉತ್ತಮಶ್ಲೋಕಪಾದಯೋಃ ।
ಛಾಯಾನಿರ್ವೃತಚಿತ್ತಾನಾಂ ನ ಕುಟುಂಬೇ ಸ್ಪೃಹಾಮತಿಃ ॥ ೩ ॥

ಸಂಶಯೋಽಯಂ ಮಹಾನ್ ಬ್ರಹ್ಮನ್ ದಾರಾಗಾರಸುತಾದಿಷು ।
ಸಕ್ತಸ್ಯ ಯತ್ಸಿದ್ಧಿರಭೂತ್ಕೃಷ್ಣೇ ಚ ಮತಿರಚ್ಯುತಾ ॥ ೪ ॥

ಶ್ರೀಶುಕ ಉವಾಚ

ಬಾಢಮುಕ್ತಂ ಭಗವತ ಉತ್ತಮಶ್ಲೋಕಸ್ಯ ಶ್ರೀಮಚ್ಚರಣಾರವಿಂದಮಕರಂದರಸ ಆವೇಶಿತಚೇತಸೋ ಭಾಗವತಪರಮಹಂಸದಯಿತಕಥಾಂ ಕಿಂಚಿದಂತರಾಯವಿಹತಾಂ ಸ್ವಾಂ ಶಿವತಮಾಂ ಪದವೀಂ ನ ಪ್ರಾಯೇಣ ಹಿನ್ವಂತಿ ॥ ೫ ॥ ಯರ್ಹಿ ವಾವ ಹ ರಾಜನ್ ಸ ರಾಜಪುತ್ರಃ ಪ್ರಿಯವ್ರತಃ

ಪರೀಕ್ಷಿದ್ರಾಜನು ಕೇಳಿದನು – ಮುನಿವರ್ಯರೇ! ಪ್ರಿಯವ್ರತ ಮಹಾರಾಜನಾದರೋ ದೊಡ್ಡ ಭಗವದ್ಭಕ್ತನಾಗಿದ್ದನು; ಆತ್ಮಾರಾಮನಾಗಿದ್ದನು. ಅವನಿಗೆ ಗೃಹಸ್ಥಾಶ್ರಮದಲ್ಲಿ ಅಭಿರುಚಿಯು ಹೇಗೆ ಉಂಟಾಯಿತು? ಅದರಲ್ಲಿ ಸಿಕ್ಕಿಹಾಕಿಕೊಂಡ ಮನುಷ್ಯನಿಗೆ ತನ್ನ ಸ್ವರೂಪದ ವಿಸ್ಮೃತಿ ಉಂಟಾಗಿ ಅವನು ಕರ್ಮಗಳಲ್ಲಿ ಬಂಧಿತನಾಗುವನಲ್ಲ? ॥ ೧ ॥ ಬ್ರಹ್ಮರ್ಷಿಶ್ರೇಷ್ಠರೇ! ನಿಶ್ಚಯವಾಗಿಯೂ ಇಂತಹ ನಿಸ್ಸಂಗ ಮಹಾಪುರುಷರು ಹೀಗೆ ಗೃಹಸ್ಥಾಶ್ರಮದಲ್ಲಿ ಆಸಕ್ತರಾಗುವುದು ಉಚಿತವಲ್ಲ. ॥ ೨ ॥ ಯಾರ ಚಿತ್ತವು ಪುಣ್ಯಕೀರ್ತಿಯಾದ ಶ್ರೀಹರಿಯ ಚರಣಾರವಿಂದಗಳ ಶೀತಲ ಛಾಯೆಯ ಆಶ್ರಯಪಡೆದು ಪ್ರಶಾಂತವಾಗಿದೆಯೋ, ಆ ಮಹಾಪುರುಷರಿಗೆ ಕುಟುಂಬವೇ ಮುಂತಾದವುಗಳಲ್ಲಿ ಆಸಕ್ತಿ ಉಂಟಾಗಲಾರದು. ॥ ೩ ॥ ಬ್ರಾಹ್ಮಣೋತ್ತಮರೇ! ಮಹಾರಾಜಾ ಪ್ರಿಯವ್ರತನು ಪತ್ನೀ, ಗೃಹ, ಪುತ್ರಾದಿಗಳಲ್ಲಿ ಆಸಕ್ತನಾಗಿದ್ದರೂ ಹೇಗೆ ಸಿದ್ಧಿಯನ್ನು ಪಡೆದನು? ಅವನಿಗೆ ಶ್ರೀಕೃಷ್ಣಪರಮಾತ್ಮನಲ್ಲಿ ನಿಶ್ಚಲವಾದ ಭಕ್ತಿಯು ಹೇಗೆ ಉಂಟಾಯಿತು? ಇವೆಲ್ಲ ವಿಷಯದಲ್ಲಿ ನನಗೆ ಸಂದೇಹವುಂಟಾಗಿದೆ. ॥ ೪ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಮಹಾರಾಜನೇ! ನೀನು ಹೇಳುವುದು ಸರಿಯೇ ಆಗಿದೆ. ಯಾರ ಚಿತ್ತವು ಪುಣ್ಯಕೀರ್ತಿಯಾದ ಶ್ರೀಹರಿಯ ಪರಮಮಧುರವಾದ ಚರಣಕಮಲಗಳ ಮಕರಂದ ರಸವನ್ನು ಸವಿಯುವುದರಲ್ಲಿ ತತ್ಪರವಾಗಿದೆಯೋ – ಅವರು ಯಾವುದಾದರೂ ಅಡ್ಡಿ – ಆತಂಕಗಳಿಂದ ತಡೆಯುಂಟಾದರೂ ಕೂಡ ಭಗವದ್ಭಕ್ತ ಶಿರೋಮಣಿಗಳಾದ ಪರಮಹಂಸರಿಗೆ ಪ್ರಿಯವಾದ ಭಗವಾನ್ ಶ್ರೀವಾಸುದೇವನ ಕಥಾಶ್ರವಣವೆಂಬ ಪರಮ ಕಲ್ಯಾಣಮಯವಾದ ಮಾರ್ಗವನ್ನು ಸಾಮಾನ್ಯವಾಗಿ ಬಿಡಲಾರರು. ॥ ೫ ॥ ಪರೀಕ್ಷಿತ ರಾಜನೇ! ಆ ರಾಜಕುಮಾರನಾದ ಪ್ರಿಯವ್ರತನು ಪರಮಭಾಗವತೋತ್ತಮನಾಗಿದ್ದನು. ಶ್ರೀನಾರದಮಹರ್ಷಿಗಳ ಚರಣಗಳ ಸೇವೆಮಾಡಿದ್ದರಿಂದ ಅವನಿಗೆ ಸಹಜವಾಗಿಯೇ ಪರಮಾರ್ಥತತ್ತ್ವದ ಬೋಧ ಉಂಟಾಗಿತ್ತು. ಅವನು ನಿರಂತರವಾಗಿ ಬ್ರಹ್ಮಾಭ್ಯಾಸದಲ್ಲಿ ಜೀವನವನ್ನು ಕಳೆಯುವ ನಿಯಮವುಳ್ಳ ಬ್ರಹ್ಮಸತ್ರವೆಂಬ ಅಧ್ಯಾತ್ಮದೀಕ್ಷೆಯನ್ನು ಇನ್ನೇನು ತೆಗೆದುಕೊಳ್ಳಬೇಕು ಎನ್ನುವಷ್ಟರಲ್ಲಿ – ಅವನ ತಂದೆ ಸ್ವಾಯಂಭುವ ಮನುವು ಅವನಲ್ಲಿ

ಪರಮಭಾಗವತೋ ನಾರದಸ್ಯ ಚರಣೋಪಸೇವಯಾಂಜಸಾವಗತಪರಮಾರ್ಥಸತತ್ತ್ವೋ ಬ್ರಹ್ಮಸತ್ರೇಣ ದೀಕ್ಷಿಷ್ಯಮಾಣೋಽವನಿತಲಪರಿಪಾಲನಾಯಾಮ್ನಾತಪ್ರವರಗುಣಗಣೈಕಾಂತಭಾಜನತಯಾ ಸ್ವಪಿತ್ರೋಪಾಮಂತ್ರಿತೋ ಭಗವತಿ ವಾಸುದೇವ ಏವಾವ್ಯವಧಾನಸಮಾಧಿಯೋಗೇನ ಸಮಾವೇಶಿತಸಕಲಕಾರಕಕ್ರಿಯಾಕಲಾಪೋ ನೈವಾಭ್ಯನಂದದ್ಯದ್ಯಪಿ ತದಪ್ರತ್ಯಾಮ್ನಾತವ್ಯಂ ತದಧಿಕರಣ ಆತ್ಮನೋಽನ್ಯಸ್ಮಾದಸತೋಽಪಿ ಪರಾಭವಮನ್ವೀಕ್ಷಮಾಣಃ ॥ ೬ ॥

ಭೂಮಂಡಲವನ್ನು ಪಾಲಿಸಲು ಬೇಕಾದ ಎಲ್ಲ ಶ್ರೇಷ್ಠಗುಣಗಳೂ ಇರುವುದನ್ನು ಗಮನಿಸಿ – 'ನೀನು ರಾಜನಾಗಿ ರಾಜ್ಯವನ್ನಾಳು' ಎಂದು ಅಪ್ಪಣೆಯಿತ್ತನು. ಆದರೆ ಪ್ರಿಯವ್ರತನು ಆಗಲೇ ಅಖಂಡವಾದ ಸಮಾಧಿಯೋಗದ ಮೂಲಕ ತನ್ನ ಎಲ್ಲ ಇಂದ್ರಿಯಗಳನ್ನು ಮತ್ತು ಕ್ರಿಯೆಗಳನ್ನು ಭಗವಾನ್ ಶ್ರೀವಾಸುದೇವನ ಚರಣಗಳಲ್ಲಿ ಸಮರ್ಪಿಸಿ ಬಿಟ್ಟಿದ್ದನು. ಆದುದರಿಂದ ಆತನು ತಂದೆಯ ಆಜ್ಞೆಯನ್ನು ಉಲ್ಲಂಘಿಸುವುದು ಅನುಚಿತವಾಗಿದ್ದರೂ ರಾಜಪದವಿಯನ್ನು ಸ್ವೀಕರಿಸಲಿಲ್ಲ. 'ರಾಜ್ಯಾಧಿಕಾರವು ಬಂದೊಡನೆ ಪತ್ನೀ-ಪುತ್ರರೇ ಮುಂತಾದ ಅಸತ್‌ಪ್ರಪಂಚವು ಆತ್ಮಸ್ವರೂಪವನ್ನು ಮುಚ್ಚಿಬಿಡುವುದು; ಆ ಚಿಂತೆಯಲ್ಲೇ ಪರಮಾರ್ಥತತ್ತ್ವವು ಮರೆತು ಹೋಗುವುದು' ಎಂದು ಭಾವಿಸಿ ಆ ಪದವಿಯನ್ನು ಸ್ವೀಕರಿಸಲಿಲ್ಲ. ॥ ೬ ॥

ಅಥ ಹ ಭಗವಾನಾದಿದೇವ ಏತಸ್ಯ ಗುಣವಿಸರ್ಗಸ್ಯ ಪರಿಬೃಂಹಣಾನುಧ್ಯಾನವ್ಯವಸಿತಸಕಲಜಗದಭಿಪ್ರಾಯ ಆತ್ಮಯೋನಿರಖಿಲನಿಗಮನಿಜಗಣಪರಿವೇಷ್ಟಿತಃ ಸ್ವಭವನಾದ್ಅವತತಾರ ॥ ೭ ॥ ಸ ತತ್ರ ತತ್ರ ಗಗನತಲ ಉಡುಪತಿರಿವ ವಿಮಾನಾವಲಿಭಿರನುಪಥಮಮರಪರಿವೃಢೈರಭಿಪೂಜ್ಯಮಾನಃ ಪಥಿ ಪಥಿ ಚ ವರೂಥಶಃ ಸಿದ್ಧಗಂಧರ್ವಸಾಧ್ಯಚಾರಣಮುನಿಗಣೈರುಪಗೀಯಮಾನೋ ಗಂಧಮಾದನದ್ರೋಣೀಮವಭಾಸಯನ್ನುಪಸಸರ್ಪ ॥ ೮ ॥ ತತ್ರ ಹ ವಾ ಏನಂ ದೇವರ್ಷಿರ್ಹಂಸಯಾನೇನ ಪಿತರಂ ಭಗವಂತಂ ಹಿರಣ್ಯಗರ್ಭಮುಪಲಭಮಾನಃ ಸಹಸೈವೋತ್ಥಾಯಾರ್ಹಣೇನ ಸಹ ಪಿತಾಪುತ್ರಾಭ್ಯಾಮವಹಿತಾಂಜಲಿಃ ಉಪತಸ್ಥೇ ॥ ೯ ॥ ಭಗವಾನಪಿ ಭಾರತ ತದುಪನೀತಾರ್ಹಣಃ ಸೂಕ್ತವಾಕೇನಾತಿತರಾಮುದಿತಗುಣಗಣಾವತಾರಸುಜಯಃ ಪ್ರಿಯವ್ರತಮಾದಿಪುರುಷಸ್ತಂ ಸದಯಹಾಸಾವಲೋಕ ಇತಿ ಹೋವಾಚ ॥ ೧೦ ॥

ಆದಿದೇವ ಸ್ವಯಂಭೂ ಭಗವಾನ್‌ಬ್ರಹ್ಮದೇವರಿಗೆ ನಿರಂತರವಾಗಿ ಈ ಗುಣಮಯ ಪ್ರಪಂಚವನ್ನು ವೃದ್ಧಿಪಡಿಸುವ ವಿಚಾರವೇ ಇರುತ್ತದೆ. ಅವರು ಇಡೀ ಪ್ರಪಂಚದ ಜನರ ಅಭಿಪ್ರಾಯವನ್ನು ತಿಳಿಯುತ್ತಾ ಇರುತ್ತಾರೆ. ಪ್ರಿಯವ್ರತನ ಇಂತಹ ಸ್ಥಿತಿಯನ್ನು ನೋಡಿದಾಗ ಅವರು ಮೂರ್ತಿಮಂತ ನಾಲ್ಕು ವೇದಗಳನ್ನು ಮತ್ತು ಮರೀಚಿಯೇ ಮುಂತಾದ ಪಾರ್ಷದರನ್ನು ಜೊತೆಸೇರಿಸಿಕೊಂಡು ತನ್ನ ಲೋಕದಿಂದ ಇಳಿಗಿದರು. ॥ ೭ ॥ ಆಕಾಶದಲ್ಲಿ ಅಲ್ಲಲ್ಲಿ ವಿಮಾನಗಳನ್ನೇರಿದ್ದ ಇಂದ್ರಾದಿ ದೇವತೆಗಳು ಅವರನ್ನು ಪೂಜಿಸಿದರು. ಮಾರ್ಗದಲ್ಲಿ ಗುಂಪು-ಗುಂಪಾಗಿ ಬಂದಿದ್ದ ಸಿದ್ಧರೂ, ಗಂಧರ್ವರೂ, ಸಾಧ್ಯರೂ, ಚಾರಣರೂ, ಮುನಿಗಳೂ ಅವರನ್ನು ಸ್ತೋತ್ರಮಾಡಿದರು. ಹೀಗೆ ಹೆಜ್ಜೆ-ಹೆಜ್ಜೆಗೂ ಆದರ ಸನ್ಮಾನಗಳನ್ನು ಪಡೆಯುತ್ತಾ ಅವರು ಸಾಕ್ಷಾತ್ ತಾರಾನಾಥನಾದ ಚಂದ್ರನಂತೆ ಗಂಧಮಾದನದ ತಪ್ಪಲನ್ನು ಪ್ರಕಾಶಪಡಿಸುತ್ತಾ ಪ್ರಿಯವ್ರತನ ಬಳಿಗೆ ತಲುಪಿದರು. ॥ ೮ ॥ ಪ್ರಿಯವ್ರತನಿಗೆ ಆತ್ಮವಿದ್ಯೆಯನ್ನು ಉಪದೇಶ ಮಾಡಲು ಶ್ರೀನಾರದಮಹರ್ಷಿಗಳು ಅಲ್ಲಿಗೆ ದಯಮಾಡಿಸಿದ್ದರು. ಬ್ರಹ್ಮದೇವರು ಅಲ್ಲಿಗೆ ತಲುಪಿದಾಗ ಹಂಸವಾಹನವನ್ನು ಕಂಡು ತಂದೆಯಾದ ಬ್ರಹ್ಮದೇವರೇ ಬಂದಿದ್ದಾರೆ ಎಂದು ತಿಳಿದುಕೊಂಡು ನಾರದರು ಸ್ವಾಯಂಭುವಮನು ಮತ್ತು ಪ್ರಿಯವ್ರತರೊಡನೆ ಒಡನೆಯೇ ಎದ್ದುನಿಂತರು. ಎಲ್ಲರೂ ಅವರಿಗೆ ಕೈಜೋಡಿಸಿ ನಮಸ್ಕರಿಸಿದರು. ॥ ೯ ॥ ಪರೀಕ್ಷಿದ್ರಾಜನೇ! ನಾರದರು ಅವರನ್ನು ಅನೇಕ ವಿಧದಿಂದ ಪೂಜಿಸಿದರು, ಮಧುರ ವಚನಗಳಿಂದ ಅವರ ಗುಣಗಳನ್ನು ಅವತಾರದ ಮಹಿಮೆಯನ್ನು ಅಗ್ಗಳಿಕೆಯನ್ನು ವೇದಸೂಕ್ತಗಳಿಂದ ಹೊಗಳುತ್ತಿರಲು – ಆದಿಪುರುಷ ಬ್ರಹ್ಮದೇವರು ಪ್ರಿಯವ್ರತನನ್ನು ವಾತ್ಸಲ್ಯದಿಂದ ನೋಡಿ ಮುಗುಳ್ನಗೆಯಿಂದ ಹೀಗೆ ನುಡಿದರು. ॥ ೧೦ ॥

ಬ್ರಹ್ಮದೇವರು ಹೇಳಿದರು – ಮಗು ಪ್ರಿಯವ್ರತನೇ! ನಾನು ನಿನಗೆ ಸತ್ಯವಾದ ಸಿದ್ಧಾಂತದ ಮಾತನ್ನು ಹೇಳುವೆನು. ಲಕ್ಷ್ಯಕೊಟ್ಟು ಕೇಳು. ಅಪ್ರಮೇಯ ಶ್ರೀಹರಿಯ ಕುರಿತು ನೀನು ಯಾವ ವಿಧದಿಂದಲೂ ದೋಷದೃಷ್ಟಿಯನ್ನು ಇರಿಸಬಾರದು. ನೀನು ಮಾತ್ರ ಏನು – ನಾನೂ, ಶ್ರೀಮಹಾದೇವನೂ, ನಿನ್ನ ತಂದೆ

ಶ್ರೀ ಭಗವಾನುವಾಚ

ನಿಬೋಧ ತಾತೇದಮೃತಂ ಬ್ರವೀಮಿ
ಮಾಸೂಯಿತುಂ ದೇವಮರ್ಹಸ್ಯಪ್ರಮೇಯಮ್ ।
ವಯಂ ಭವಸ್ತೇ ತತ ಏಷ ಮಹರ್ಷಿ-
ರ್ವಹಾಮ ಸರ್ವೇ ವಿವಶಾ ಯಸ್ಯ ದಿಷ್ಟಮ್ ॥ ೧೧ ॥

ನ ತಸ್ಯ ಕಶ್ಚಿತ್ತಪಸಾ ವಿದ್ಯಯಾ ವಾ
ನ ಯೋಗವೀರ್ಯೇಣ ಮನೀಷಯಾ ವಾ ।
ನೈವಾರ್ಥಧರ್ಮೈಃ ಪರತಃ ಸ್ವತೋ ವಾ
ಕೃತಂ ವಿಹಂತುಂ ತನುಭೃದ್ವಿಭೂಯಾತ್ ॥ ೧೨ ॥

ಭವಾಯ ನಾಶಾಯ ಚ ಕರ್ಮ ಕರ್ತುಂ
ಶೋಕಾಯ ಮೋಹಾಯ ಸದಾ ಭಯಾಯ ।
ಸುಖಾಯ ದುಃಖಾಯ ಚ ದೇಹಯೋಗ-
ಮವ್ಯಕ್ತದಿಷ್ಟಂ ಜನತಾಂಗ ಧತ್ತೇ ॥ ೧೩ ॥

ಯದ್ವಾಚಿ ತಂತ್ಯಾಂ ಗುಣಕರ್ಮದಾಮಭಿಃ
ಸುದುಸ್ತರೈರ್ವತ್ಸ ವಯಂ ಸುಯೋಜಿತಾಃ ।
ಸರ್ವೇ ವಹಾಮೋ ಬಲಿಮೀಶ್ವರಾಯ
ಪ್ರೋತಾ ನಸೀವ ದ್ವಿಪದೇ ಚತುಷ್ಪದಃ ॥ ೧೪ ॥

ಈಶಾಭಿಸೃಷ್ಟಂ ಹ್ಯವರುನ್ಧ್ಮಹೇಽಂಗ
ದುಃಖಂ ಸುಖಂ ವಾ ಗುಣಕರ್ಮಸಂಗಾತ್ ।
ಆಸ್ಥಾಯ ತತ್ತದ್ಯದಯುಂಕ್ತ ನಾಥ-
ಶ್ಚಕ್ಷುಷ್ಮತಾಂಧಾ ಇವ ನೀಯಮಾನಾಃ ॥ ೧೫ ॥

ಮುಕ್ತೋಽಪಿ ತಾವದ್ಬಿಭೃಯಾತ್ಸ್ವದೇಹ-
ಮಾರಬ್ಧಮಶ್ನನ್ನಭಿಮಾನಶೂನ್ಯಃ ।
ಯಥಾನುಭೂತಂ ಪ್ರತಿಯಾತನಿದ್ರಃ
ಕಿಂ ತ್ವನ್ಯದೇಹಾಯ ಗುಣಾನ್ನ ವೃಂಕ್ತೇ ॥ ೧೬ ॥

ಭಯಂ ಪ್ರಮತ್ತಸ್ಯ ವನೇಷ್ವಪಿ ಸ್ಯಾ-
ದ್ಯತಃ ಸ ಆಸ್ತೇ ಸಹಷಟ್ಸಪತ್ನಃ ।
ಜಿತೇಂದ್ರಿಯಸ್ಯಾತ್ಮರತೇರ್ಬುಧಸ್ಯ
ಗೃಹಾಶ್ರಮಃ ಕಿಂ ನು ಕರೋತ್ಯವದ್ಯಮ್ ॥ ೧೭ ॥

ಯಃ ಷಟ್ ಸಪತ್ನಾನ್ ವಿಜಿಗೀಷಮಾಣೋ
ಗೃಹೇಷು ನಿರ್ವಿಶ್ಯ ಯತೇತ ಪೂರ್ವಮ್ ।
ಅತ್ಯೇತಿ ದುರ್ಗಾಶ್ರಿತ ಊರ್ಜಿತಾರೀನ್
ಕ್ಷೀಣೇಷು ಕಾಮಂ ವಿಚರೇದ್ವಿಪಶ್ಚಿತ್ ॥ ೧೮ ॥

ಸ್ವಾಯಂಭುವಮನು ಮತ್ತು ನಿನ್ನ ಗುರುಗಳಾದ ಈ ನಾರದಮಹರ್ಷಿಗಳೂ ಕೂಡ ಪರವಶರಾಗಿ ಅವನ ಆಜ್ಞೆಯನ್ನೇ ಪಾಲಿಸುತ್ತಿದ್ದಾರೆ. ॥ ೧೧ ॥ ಆ ಭಗವಂತನ ವಿಧಾನವನ್ನು ದೇಹಧಾರಿಯಾದ ಯಾವನೂ ಕೂಡ ತಪಸ್ಸಿನಿಂದಾಗಲೀ, ವಿದ್ಯೆಯಿಂದಾಗಲೀ, ಯೋಗಬಲದಿಂದಾಗಲೀ, ಬುದ್ಧಿಬಲದಿಂದಾಗಲೀ, ಅರ್ಥದಿಂದಾಗಲೀ ಅಥವಾ ಧರ್ಮಶಕ್ತಿಯಿಂದಾಗಲೀ, ಸ್ವತಃ ತನ್ನಿಂದಾಗಲೀ, ಬೇರೆಯವರ ಸಹಾಯದಿಂದಾಗಲೀ ಮೀರುವುದಕ್ಕೆ ಆಗುವುದಿಲ್ಲ. ॥ ೧೨ ॥ ಪ್ರಿಯವ್ರತ! ಆ ಅವ್ಯಕ್ತ ಈಶ್ವರನು ದಯಪಾಲಿಸಿದ ಶರೀರವನ್ನು ಧರಿಸಿಯೇ ಎಲ್ಲ ಜೀವಿಗಳು ಸದಾಕಾಲ ಹುಟ್ಟು, ಸಾವು, ಶೋಕ, ಮೋಹ, ಭಯ, ಸುಖ-ದುಃಖಗಳನ್ನು ಅನುಭವಿಸುತ್ತಾರೆ. ಈ ಶರೀರದ ಮೂಲಕವಾಗಿಯೇ ಕರ್ಮಗಳನ್ನು ಮಾಡುತ್ತಿರುತ್ತಾರೆ ಮತ್ತು ಮೋಕ್ಷವನ್ನೂ ಸಾಧಿಸುತ್ತಾರೆ. ॥ ೧೩ ॥ ವತ್ಸ! ಮೂಗುದಾರ ಹಾಕಲ್ಪಟ್ಟ ಪಶುಗಳು ಮನುಷ್ಯರ ಭಾರವನ್ನು ಹೊರುವಂತೆಯೇ ನಾವೆಲ್ಲರೂ ಆತನ ವಾಣಿಯಾದ ವೇದವೆಂಬ ಹಗ್ಗದಲ್ಲಿರುವ ತ್ರಿಗುಣಗಳು, ಅವುಗಳಿಗೆ ತಕ್ಕ ಕರ್ಮಗಳು, ಬ್ರಾಹ್ಮಣಾದಿ ವಾಕ್ಯಗಳು ಎಂಬ ಮುಪ್ಪುರಿಯಿಂದ ಬಲವಾಗಿ ಕಟ್ಟಲ್ಪಟ್ಟು ಆತನ ಇಚ್ಛೆಗನುಗುಣನಾಗಿಯೇ ಕರ್ಮಗಳಲ್ಲಿ ತೊಡಗಿ ಅವುಗಳ ಮೂಲಕ ಅವನ ಪೂಜೆಯನ್ನು ಮಾಡುತ್ತಾ ಇದ್ದೇವೆ. ॥ ೧೪ ॥ ಮಗು! ನಮ್ಮ ಗುಣ ಮತ್ತು ಕರ್ಮಗಳಿಗೆ ಅನುಸಾರ ಪ್ರಭುವು ನಮ್ಮನ್ನು ಯಾವ ಯೋನಿಯಲ್ಲಿ ಹಾಕಿರುವನೋ, ಅದನ್ನೇ ಸ್ವೀಕರಿಸಿ, ಅವನು ಮಾಡಿದ ವ್ಯವಸ್ಥೆಗನುಸಾರವಾಗಿ ನಾವು ಸುಖ ಅಥವಾ ದುಃಖಗಳನ್ನು ಅನುಭವಿಸುತ್ತಿದ್ದೇವೆ. ಕುರುಡನು ಕಣ್ಣುಳ್ಳವನಿಂದ ನಡೆಸಲ್ಪಡುವಂತೆ ನಾವುಗಳೂ ಕೂಡ ಅವನ ಇಚ್ಛೆಯನ್ನೇ ಅನುಸರಿಸಬೇಕಾಗುತ್ತದೆ. ॥ ೧೫ ॥ ಜೀವನ್ಮುಕ್ತರೂ ಕೂಡ ಶರೀರ ಧರಿಸಿಕೊಂಡು ಪ್ರಾರಬ್ಧ ಕರ್ಮಗಳನ್ನು ಭೋಗಿಸುತ್ತಾರೆ. ಅವರ ಶರೀರದಿಂದ ಕರ್ಮಗಳು ಜರುಗುತ್ತಿದ್ದರೂ ಕೂಡ ಕರ್ಮಗಳ ಬಂಧನದಲ್ಲಿ ಬೀಳುವುದಿಲ್ಲ. ಹೇಗೆ ಕನಸಿನಲ್ಲಿ ಅನುಭವಿಸಿದ ವಸ್ತುಗಳಿಗೆ ಜಾಗ್ರತ್ತಿನಲ್ಲಿ ಮಹತ್ವವಿರುವುದಿಲ್ಲವೋ ಹಾಗೆಯೇ ಜ್ಞಾನವಾದ ನಂತರ ಅವರಿಗೆ ಎಲ್ಲವೂ ಮಿಥ್ಯೆಯೇ. ॥ ೧೬ ॥ ಇಂದ್ರಿಯಗಳಿಗೆ ವಶೀಭೂತನಾಗಿ ವನ-ವನಗಳಲ್ಲಿ ಸಂಚರಿಸುತ್ತಿದ್ದರೂ ಅವನಿಗೆ ಜನ್ಮ-ಮರಣದ ಭಯ ಇದ್ದೇ ಇರುತ್ತದೆ. ಏಕೆಂದರೆ, ವಶವಲ್ಲದ ಮನಸ್ಸು ಮತ್ತು ಇಂದ್ರಿಯಗಳೆಂಬ ಆರು ಶತ್ರುಗಳು ಎಂದೂ ಅವನ ಬೆನ್ನುಬಿಡುವುದಿಲ್ಲ. ಬುದ್ಧಿವಂತನಾದವನು ಇಂದ್ರಿಯಗಳನ್ನು ಜಯಿಸಿ, ತನ್ನ ಆತ್ಮದಲ್ಲೇ ರಮಮಾಣನಾಗಿರುತ್ತಾನೆ. ಅಂತಹ ಜ್ಞಾನಿಗೆ ಗೃಹಸ್ಥಾಶ್ರಮವು ಯಾವ ಕೆಡುಕನ್ನೂ ಮಾಡುವುದಿಲ್ಲ. ॥ ೧೭ ॥ ಆ ಆರು ಶತ್ರುಗಳನ್ನು ಜಯಿಸಲು ಬಯಸುವವನು – ದುರ್ಗವನ್ನು ಆಶ್ರಯಿಸಿ ಶತ್ರುಗಳನ್ನು ಜಯಿಸುವ ರಾಜನಂತೆ ಮೊದಲು ಗೃಹಸ್ಥಾಶ್ರಮದಲ್ಲಿ ನೆಲಸಿ ಅದರ ರಕ್ಷಣೆಯಲ್ಲಿದ್ದು ಆ ಒಳ ಶತ್ರುಗಳನ್ನು ಗೆಲ್ಲಬೇಕು. ಆ ಶತ್ರುಗಳು ಬಲಗುಂದಿದ ಬಳಿಕ ಜ್ಞಾನಿಯು ತನ್ನ ಇಷ್ಟದಂತೆ ಸಂಚರಿಸಬಹುದು. ॥ ೧೮ ॥

ತ್ವಂ ತ್ವಬ್ಜನಾಭಾಂಘ್ರಿಸರೋಜಕೋಶ-
ದುರ್ಗಾಶ್ರಿತೋ ನಿರ್ಜಿತಷಟ್ಸಪತ್ನಃ ।
ಭುಂಕ್ಷ್ವೇಹ ಭೋಗಾನ್ ಪುರುಷಾತಿದಿಷ್ಟಾನ್
ವಿಮುಕ್ತಸಂಗಃ ಪ್ರಕೃತಿಂ ಭಜಸ್ವ ॥ ೧೯ ॥

ಶ್ರೀಶುಕ ಉವಾಚ

ಇತಿ ಸಮಭಿಹಿತೋ ಮಹಾಭಾಗವತೋ ಭಗವತಸ್ತ್ರಿಭುವನಗುರೋರನುಶಾಸನಮಾತ್ಮನೋ ಲಘುತಯಾವನತಶಿರೋಧರೋ ಬಾಢಮಿತಿ ಸಬಹುಮಾನಮುವಾಹ ॥ ೨೦॥ ಭಗವಾನಪಿ ಮನುನಾ ಯಥಾವದುಪಕಲ್ಪಿತಾಪಚಿತಿಃ ಪ್ರಿಯವ್ರತನಾರದಯೋರವಿಷಮಮಭಿಸಮೀಕ್ಷಮಾಣಯೋರಾತ್ಮಸಮವಸ್ಥಾನಮವಾಙ್ಮನಸಂ ಕ್ಷಯಮವ್ಯವಹೃತಂ ಪ್ರವರ್ತಯನ್ನಗಮತ್ ॥ ೨೧ ॥

ಮನುರಪಿ ಪರೇಣೈವಂ ಪ್ರತಿಸಂಧಿತಮನೋರಥಃ ಸುರರ್ಷಿವರಾನುಮತೇನಾತ್ಮಜಮಖಿಲಧರಾಮಂಡಲಸ್ಥಿತಿಗುಪ್ತಯ ಆಸ್ಥಾಪ್ಯ ಸ್ವಯಮತಿವಿಷಮವಿಷಯವಿಷಜಲಾಶಯಾಶಾಯಾ ಉಪರರಾಮ ॥ ೨೨ ॥ ಇತಿ ಹ ವಾವ ಸ ಜಗತೀಪತಿರೀಶ್ವರೇಚ್ಛಯಾಧಿನಿವೇಶಿತ ಕರ್ಮಾಧಿಕಾರೋಽಖಿಲಜಗದ್ಬಂಧಧ್ವಂಸನಪರಾನುಭಾವಸ್ಯ ಭಗವತ ಆದಿಪುರುಷಸ್ಯಾಂಘ್ರಿಯುಗಲಾನವರತಧ್ಯಾನಾನುಭಾವೇನ ಪರಿರಂಧಿತಕಷಾಯಾಶಯೋಽವದಾತೋಽಪಿ ಮಾನವರ್ಧನೋ ಮಹತಾಂ ಮಹೀತಲಮನುಶಶಾಸ ॥ ೨೩ ॥ ಅಥ ಚ ದುಹಿತರಂ ಪ್ರಜಾಪತೇರ್ವಿಶ್ವಕರ್ಮಣ ಉಪಯೇಮೇ ಬರ್ಹಿಷ್ಮತೀಂ ನಾಮ ತಸ್ಯಾಮು ಹ ವಾವ ಆತ್ಮಜಾನಾತ್ಮಸಮಾನಶೀಲಗುಣಕರ್ಮರೂಪವೀರ್ಯೋದಾರಾಂದಶ ಭಾವಯಾಂಬಭೂವ ಕನ್ಯಾಂ ಚ ಯವೀಯಸೀಮೂರ್ಜಸ್ವತೀಂ ನಾಮ ॥ ೨೪ ॥ ಆಗ್ನೀಧ್ರೇಧ್ಮಜಿಹ್ವಯಜ್ಞಬಾಹುಮಹಾವೀರಹಿರಣ್ಯರೇತೋಘೃತಪೃಷ್ಠಸವನಮೇಧಾತಿಥಿವೀತಿಹೋತ್ರಕವಯ ಇತಿ ಸರ್ವ ಏವಾಗ್ನಿನಾಮಾನಃ ॥ ೨೫ ॥ ಏತೇಷಾಂ ಕವಿರ್ಮಹಾವೀರಃ ಸವನ ಇತಿ ತ್ರಯ ಆಸನ್ನೂರ್ಧ್ವರೇತಸಸ್ತ ಆತ್ಮವಿದ್ಯಾಯಾಮ್ ಅರ್ಭಭಾವಾದಾರಭ್ಯ ಕೃತಪರಿಚಯಾಃ ಪಾರಮಹಂಸ್ಯಮೇವಾಶ್ರಮಮಭಜನ್ ॥ ೨೬ ॥ ತಸ್ಮಿನ್ನು

ನೀನು ಸ್ವಾಮಿಯಾದ ಪದ್ಮನಾಭನ ಅಡಿದಾವರೆಗಳೆಂಬ ದುರ್ಗವನ್ನು ಆಶ್ರಯಿಸಿ ಈಗಾಗಲೇ ಆ ಶತ್ರುಗಳನ್ನು ಜಯಿಸಿ ಬಿಟ್ಟಿರುವೆ. ಹೀಗಿದ್ದರೂ ಆ ಪುರಾಣಪುರುಷನು ದಯಪಾಲಿಸಿರುವ ಭೋಗಗಳನ್ನು ಅನುಭವಿಸು. ಅನಂತರ ನಿಸ್ಸಂಗನಾಗಿ ನಿನ್ನ ಸ್ವರೂಪದಲ್ಲಿ ನೆಲೆಗೊಳ್ಳುವೆಯಂತೆ. ॥ ೧೯ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ರಾಜನೇ! ತ್ರಿಲೋಕಗಳ ಗುರುಗಳಾದ ಬ್ರಹ್ಮದೇವರು ಹೀಗೆ ಹೇಳಲು ಪರಮಭಾಗವತ ಪ್ರಿಯವ್ರತನು ಆ ದೇವದೇವನ ಮುಂದೆ ತಾನು ಅತಿ ಚಿಕ್ಕವನು ಎಂದು ಅರಿತು ವಿನಯದಿಂದ ತಲೆಬಾಗಿ 'ಹಾಗೆಯೇ ಆಗಲಿ' ಎಂದು ಅತ್ಯಂತ ಗೌರವದಿಂದ ಅವರ ಆಜ್ಞೆಯನ್ನು ಶಿರಸಾವಹಿಸಿದನು. ॥ ೨೦ ॥ ಆಗ ಸ್ವಾಯಂಭುವ ಮನುವು ಪ್ರಸನ್ನನಾಗಿ ಭಗವಾನ್ ಬ್ರಹ್ಮದೇವರನ್ನು ಯಥಾವಿಧಿಯಾಗಿ ಪೂಜಿಸಿದನು. ಇದಾದ ಬಳಿಕ ಮನಸ್ಸು ಮತ್ತು ವಾಣಿಗೂ ವಿಷಯವಲ್ಲದ, ತನಗೆ ಆಶ್ರಯನಾದ, ಸರ್ವವ್ಯವಹಾರ ಅತೀತನಾದ ಪರಬ್ರಹ್ಮನನ್ನು ಚಿಂತಿಸುತ್ತಾ ಅವರು ತನ್ನ ಲೋಕಕ್ಕೆ ಹೊರಟು ಹೋದರು. ಆಗ ಪ್ರಿಯವ್ರತ ಮತ್ತು ನಾರದರು ಮುಗ್ಧರಾಗಿ ಅವರ ಕಡೆಗೆ ನೋಡುತ್ತಲೇ ಇದ್ದರು. ॥ ೨೧ ॥

ಹೀಗೆ ಬ್ರಹ್ಮದೇವರ ದಯೆಯಿಂದ ತಮ್ಮ ಮನೋರಥವು ಈಡೇರಲು ಸ್ವಾಯಂಭುವಮನುವು ಶ್ರೀನಾರದರ ಅಪ್ಪಣೆಯಂತೆ ಪ್ರಿಯವ್ರತನಿಗೆ ಸಮಸ್ತ ಭೂಮಂಡಲದ ಆಧಿಪತ್ಯವನ್ನು ವಹಿಸಿಕೊಟ್ಟು, ತಾನು ಇಂದ್ರಿಯವಿಷಯಗಳೆಂಬ ವಿಷಜಲದಿಂದ ತುಂಬಿರುವ ಗೃಹಸ್ಥಾಶ್ರಮರೂಪವಾದ ದುಸ್ತರವಾದ ಭವಾಬ್ಧಿಯ ಆಸೆಯನ್ನು ಬಿಟ್ಟು ನಿವೃತ್ತನಾದನು. ॥ ೨೨ ॥ ಈಗ ಆ ಪ್ರಿಯವ್ರತ ಭೂಪತಿಯು ಭಗವಂತನ ಇಚ್ಛೆಯಂತೆ ರಾಜ್ಯವನ್ನಾಳುವ ಕಾರ್ಯದಲ್ಲಿ ನಿಯುಕ್ತನಾದನು. ಸಮಸ್ತ ಜಗತ್ತನ್ನು ಬಂಧನದಿಂದ ಮುಕ್ತಗೊಳಿಸಲು ಪರಮಸಮರ್ಥನಾದ ಆದಿಪುರುಷನಾದ ಶ್ರೀಭಗವಂತನ ಅಡಿದಾವರೆಗಳನ್ನು ನಿರಂತರವಾಗಿ ಧ್ಯಾನಮಾಡುತ್ತಿದ್ದುದರಿಂದ ರಾಗಾದಿ ಕಲ್ಮಷಗಳೆಲ್ಲವೂ ನಾಶವಾಗಿ ಹೋಗಿ ಆತನ ಹೃದಯವು ಅತ್ಯಂತ ಶುದ್ಧವಾಗಿ ಹೋಗಿತ್ತು. ಆದರೂ ಅವನು ಹಿರಿಯರ ಮಾತನ್ನು ನಡೆಸಿಕೊಡುವುದಕ್ಕಾಗಿ ಭೂಮಿಯನ್ನು ಆಳತೊಡಗಿದನು. ॥ ೨೩ ॥ ಅನಂತರ ಅವನು ಪ್ರಜಾಪತಿ ವಿಶ್ವಕರ್ಮನ ಮಗಳಾದ ಬರ್ಹಿಷ್ಮತಿಯನ್ನು ವಿವಾಹವಾಗಿ ಅವಳಲ್ಲಿ ಹತ್ತುಮಂದಿ ಪುತ್ರರನ್ನು ಪಡೆದನು. ಅವರೆಲ್ಲರೂ ಶೀಲ, ಗುಣ, ಕರ್ಮನಿಷ್ಠೆ ಮತ್ತು ಪರಾಕ್ರಮಗಳಲ್ಲಿ ತಂದೆಗೆ ಸಮಾನರಾಗಿದ್ದರು. ಆ ಪುತ್ರರ ನಂತರ ಅವರಿಗೆ ತಂಗಿಯಾಗಿ 'ಊರ್ಜಸ್ವತಿ' ಎಂಬ ಕನ್ಯೆಯನ್ನು ಪಡೆದುಕೊಂಡನು. ॥ ೨೪ ॥ ಆಗ್ನೀಧ್ರ, ಇಧ್ಮಜಿಹ್ವ, ಯಜ್ಞಬಾಹು, ಮಹಾವೀರ, ಹಿರಣ್ಯರೇತಸ, ಘೃತಪೃಷ್ಠ, ಸವನ, ಮೇಧಾತಿಥಿ, ವೀತಿಹೋತ್ರ ಮತ್ತು ಕವಿ ಎಂಬುವರೇ ಪ್ರಿಯವ್ರತನ ಅಗ್ನಿನಾಮಕ ಹತ್ತುಮಂದಿ ಪುತ್ರರು. ॥ ೨೫ ॥ ಇವರಲ್ಲಿ ಕವಿ, ಮಹಾವೀರ, ಸವನ – ಎಂಬ ಮೂವರು ನೈಷ್ಠಿಕ ಬ್ರಹ್ಮಚಾರಿಗಳಾದರು. ಇವರು ಬಾಲ್ಯದಿಂದಲೇ ಆತ್ಮವಿದ್ಯೆಯನ್ನು ಅಭ್ಯಾಸ ಮಾಡುತ್ತಾ ಕೊನೆಗೆ ಸಂನ್ಯಾಸಾಶ್ರಮವನ್ನು ಸ್ವೀಕರಿಸಿದರು. ॥ ೨೬ ॥

ಯ ವಾ ಉಪಶಮಶೀಲಾಃ ಪರಮರ್ಷಯಃ ಸಕಲಜೀವನಿಕಾಯಾವಾಸಸ್ಯ ಭಗವತೋ ವಾಸುದೇವಸ್ಯ ಭೀತಾನಾಂ ಶರಣಭೂತಸ್ಯ ಶ್ರೀಮಚ್ಚರಣಾರವಿಂದಾವಿರತಸ್ಮರಣಾವಿಗಲಿತಪರಮಭಕ್ತಿಯೋಗಾನುಭಾವೇನ ಪರಿಭಾವಿತಾಂತರ್ಹೃದಯಾಧಿಗತೇ ಭಗವತಿ ಸರ್ವೇಷಾಂ ಭೂತಾನಾಮಾತ್ಮಭೂತೇ ಪ್ರತ್ಯಗಾತ್ಮನ್ಯೇವಾತ್ಮನಸ್ತಾದಾತ್ಮ್ಯಮವಿಶೇಷೇಣ ಸಮೀಯುಃ ॥ ೨೭ ॥ ಅನ್ಯಸ್ಯಾಮಪಿ ಜಾಯಾಯಾಂ ತ್ರಯಃ ಪುತ್ರಾ ಆಸನ್ನುತ್ತಮಸ್ತಾಮಸೋ ರೈವತ ಇತಿ ಮನ್ವಂತರಾಧಿಪತಯಃ ॥ ೨೮ ॥

ನಿವೃತ್ತಿ ಧರ್ಮನಿಷ್ಠರಾದ ಆ ಮಹರ್ಷಿಗಳು ಸಂನ್ಯಾಸಾಶ್ರಮದಲ್ಲೇ ಇದ್ದುಕೊಂಡು ಸಮಸ್ತ ಜೀವರಿಗೆ ಅಧಿಷ್ಠಾನ ಮತ್ತು ಭವ ಬಂಧನದಿಂದ ಹೆದರಿದ ಜನರಿಗೆ ಆಸರೆನೀಡುವ ಭಗವಾನ್ ಶ್ರೀವಾಸುದೇವನ ಪರಮ ಸುಂದರ ಚರಣಾರವಿಂದಗಳನ್ನು ನಿರಂತರವಾಗಿ ಧ್ಯಾನಮಾಡುತ್ತಿದ್ದರು. ಇದರಿಂದ ಪ್ರಾಪ್ತವಾದ ಶ್ರೇಷ್ಠವಾದ ಅಖಂಡಭಕ್ತಿಯೋಗದಿಂದ ಅವರ ಅಂತಃಕರಣವು ಪೂರ್ಣವಾಗಿ ಶುದ್ಧವಾಯಿತು. ಅದರಲ್ಲಿ ಶ್ರೀಭಗವಂತನು ಆವಿರ್ಭವಿಸಿದನು. ಆಗ ದೇಹವೇ ಮುಂತಾದ ಉಪಾಧಿಗಳು ತೊಲಗಿಹೋಯಿತು. ಅವರು ಎಲ್ಲ ಜೀವಿಗಳಿಗೂ ಆತ್ಮಭೂತನಾದ ಶ್ರೀಪರಮಾತ್ಮನಲ್ಲಿ ತಾದಾತ್ಮ್ಯವನ್ನು ಪಡೆದುಕೊಂಡರು. ॥ ೨೭ ॥ ಪ್ರಿಯವ್ರತನ ಮತ್ತೊಬ್ಬ ಮಡದಿಯಲ್ಲಿ ಉತ್ತಮ, ತಾಮಸ, ರೈವತ ಎಂಬ ಮೂವರು ಪುತ್ರರು ಜನಿಸಿದರು. ಅವರು ತಮ್ಮ ಹೆಸರಿನ ಮನ್ವಂತರಗಳಿಗೆ ಅಧಿಪತಿಗಳಾದರು. ॥ ೨೮ ॥

ಏವಮುಪಶಮಾಯನೇಷು ಸ್ವತನಯೇಷ್ವಥ ಜಗತೀಪತಿರ್ಜಗತೀಮರ್ಬುದಾನ್ಯೇಕಾದಶ ಪರಿವತ್ಸರಾಣಾಮವ್ಯಾಹತಾಖಿಲಪುರುಷಕಾರಸಾರಸಂಭೃತದೋರ್ದಂಡಯುಗಲಾಪೀಡಿತಮೌರ್ವೀಗುಣಸ್ತನಿತವಿರಮಿತಧರ್ಮಪ್ರತಿಪಕ್ಷೋ ಬರ್ಹಿಷ್ಮತ್ಯಾಶ್ಚಾನುದಿನಮೇಧಮಾನಪ್ರಮೋದಪ್ರಸರಣಯೌಷಿಣ್ಯವ್ರೀಡಾಪ್ರಮುಷಿತಹಾಸಾವಲೋಕರುಚಿರಕ್ಷ್ವೇಲ್ಯಾದಿಭಿಃ ಪರಾಭೂಯಮಾನವಿವೇಕ ಇವಾನವಬುಧ್ಯಮಾನ ಇವ ಮಹಾಮನಾ ಬುಭುಜೇ ॥ ೨೯ ॥

ಹೀಗೆ ಕಪಿಲರೇ ಮುಂತಾದ ಮೂವರು ಪುತ್ರರು ನಿವೃತ್ತಿ ಪರಾಯಣರಾದ ಬಳಿಕ ಪ್ರಿಯವ್ರತ ಮಹಾರಾಜನು ಹನ್ನೊಂದು ಅರ್ಬುದವರ್ಷಗಳವರೆಗೆ ರಾಜ್ಯಶಾಸನವನ್ನು ಮಾಡಿದನು. ಅಖಂಡಪುರುಷಾರ್ಥಮಯವೂ, ಪರಾಕ್ರಮನಿಧಿಯೂ ಆದ ಆತನು ತನ್ನ ಭುಜಗಳಿಂದ ಬಿಲ್ಲಿನ ನಾಣನ್ನೆಳೆದು ಟಂಕಾರ ಮಾಡಿದೊಡನೆಯೇ ಧರ್ಮದ್ರೋಹಿಗಳು ಗಡ-ಗಡನೆ ನಡುಗಿ ಎಲ್ಲಿಯೋ ಅವಿತುಕೊಂಡು ಬಿಡುತ್ತಿದ್ದರು. ಪ್ರಾಣವಲ್ಲಭೆಯಾದ ಬರ್ಹಿಷ್ಮತಿಯು ಪ್ರತಿದಿನವೂ ಹೆಚ್ಚುತ್ತಿರುವ ಆಮೋದ-ಪ್ರಮೋದ, ಇದಿರ್ಗೊಳ್ಳುವಿಕೆ ಮುಂತಾದ ಕ್ರೀಡೆಗಳಿಂದಾಗಿ ಹಾಗೂ ಸ್ತ್ರೀಸಹಜ ಹಾವ-ಭಾವಗಳನ್ನು ತೋರುವುದು, ಲಜ್ಜೆಯಿಂದ ಸಂಕೋಚಗೊಂಡು ಕಿರುನಗೆಯಿಂದ ಕೂಡಿದ ದೃಷ್ಟಿಯನ್ನು ಬೀರುವುದು, ಮನಸ್ಸಿಗೆ ರುಚಿಸುವ ವಿನೋದಗಳನ್ನು ಮಾಡುವುದು – ಇವೇ ಮುಂತಾದವುಗಳಿಂದ ಆಕೆಗೆ ವಶನಾಗಿ ವಿವೇಕಹೀನನಾದವನಂತೆ ಆತ್ಮಸ್ವರೂಪವನ್ನು ಮರೆತವನಂತೆ ಭೋಗಗಳನ್ನು ಅನುಭವಿಸುತ್ತಿದ್ದರೂ ವಾಸ್ತವವಾಗಿ ಆತನು ಅದರಲ್ಲಿ ಆಸಕ್ತನಾಗಿರಲಿಲ್ಲ. ॥ ೨೯ ॥

ಯಾವದವಭಾಸಯತಿ ಸುರಗಿರಿಮನುಪರಿಕ್ರಾಮನ್ ಭಗವಾನಾದಿತ್ಯೋ ವಸುಧಾತಲಮರ್ಧೇನೈವ ಪ್ರತಪತ್ಯರ್ಧೇನಾವಚ್ಛಾದಯತಿ ತದಾ ಹಿ ಭಗವದುಪಾಸನೋಪಚಿತಾತಿಪುರುಷಪ್ರಭಾವಸ್ತದನಭಿನಂದನ್ ಸಮಜವೇನ ರಥೇನ ಜ್ಯೋತಿರ್ಮಯೇನ ರಜನೀಮಪಿ ದಿನಂ ಕರಿಷ್ಯಾಮೀತಿ ಸಪ್ತಕೃತ್ವಸ್ತರಣಿಮನುಪರ್ಯಕ್ರಾಮದ್ದ್ವಿತೀಯ ಇವ ಪತಂಗಃ ॥ ೩೦ ॥ ಯೇ ವಾ ಉ ಹ ತದ್ರಥಚರಣನೇಮಿಕೃತಪರಿಖಾತಾಸ್ತೇ ಸಪ್ತ ಸಿಂಧವ ಆಸನ್ಯತ ಏವ ಕೃತಾಃ ಸಪ್ತ ಭುವೋ ದ್ವೀಪಾಃ ॥ ೩೧ ॥ ಜಂಬೂಪ್ಲಕ್ಷಶಾಲ್ಮಲಿ-

ಒಮ್ಮೆ ಆತನು – ಸೂರ್ಯನು ಸುಮೇರು ಪರ್ವತವನ್ನು ಪ್ರದಕ್ಷಿಣೆ ಮಾಡುತ್ತಾ ಲೋಕಾಲೋಕದವರೆಗೆ ಭೂಮಿಯ ಒಂದು ಭಾಗವನ್ನು ನೋಡಿದಾಗ ಅದರಲ್ಲಿ ಅರ್ಧಭಾಗಕ್ಕೆ ಮಾತ್ರ ಪ್ರಕಾಶ ಬೀಳುತ್ತಿದ್ದು, ಉಳಿದ ಅರ್ಧಭಾಗದಲ್ಲಿ ಕತ್ತಲೆಯು ಕವಿಯುತ್ತಿರುವುದನ್ನು ನೋಡಿ ಅವನಿಗೆ ಸರಿಬೀಳಲಿಲ್ಲ. 'ನಾನು ರಾತ್ರಿಯನ್ನು ಹಗಲನ್ನಾಗಿ ಮಾಡುವೆನು' ಎಂದು ಸಂಕಲ್ಪಿಸಿ, ಒಂದು ಜ್ಯೋತಿರ್ಮಯ ರಥವನ್ನು ಏರಿ ಇನ್ನೊಬ್ಬ ಸೂರ್ಯನಂತೆ ಆತನ ಹಿಂದೆ-ಹಿಂದೆಯೇ ಹೋಗುತ್ತಾ ಭೂಮಿಯನ್ನು ಏಳು ಬಾರಿ ಪ್ರದಕ್ಷಿಣೆ ಮಾಡಿದನು. ಭಗವಂತನ ಉಪಾಸನೆ ಮಾಡಿದ್ದರಿಂದ ಅವನಿಗೆ ಇಂತಹ ಅಲೌಕಿಕ ಪ್ರಭಾವವು ಹೆಚ್ಚಾಗಿ ಉಂಟಾಗಿತ್ತು. ॥ ೩೦ ॥ ಆ ಸಮಯದಲ್ಲಿ ಆತನ ರಥದ ಚಕ್ರಗಳು ಮಾಡಿದ ಗೆರೆಗಳ ಗುರುತುಗಳೇ ಏಳು ಸಮುದ್ರಗಳಾದುವು. ಅವುಗಳಿಂದ ಪೃಥ್ವಿಯಲ್ಲಿ ಏಳು ದ್ವೀಪಗಳು ಉಂಟಾದುವು. ॥ ೩೧ ॥

ಕುಶಕ್ರೌಂಚಶಾಕಪುಷ್ಕರಸಂಜ್ಞಾಸ್ತೇಷಾಂ ಪರಿಮಾಣಂ ಪೂರ್ವಸ್ಮಾತ್ಪೂರ್ವಸ್ಮಾದುತ್ತರ ಉತ್ತರೋ ಯಥಾಸಂಖ್ಯಂ ದ್ವಿಗುಣಮಾನೇನ ಬಹಿಃ ಸಮಂತತ ಉಪಕ್ಲೃಪ್ತಾಃ ॥ ೩೨ ॥ ಕ್ಷಾರೋದೇಕ್ಷುರಸೋದಸುರೋದಘೃತೋದಕ್ಷೀರೋದದಧಿಮಂಡೋದಶುದ್ಧೋದಾಃ ಸಪ್ತ ಜಲಧಯಃ ಸಪ್ತ ದ್ವೀಪಪರಿಖಾ ಇವಾಭ್ಯಂತರದ್ವೀಪಸಮಾನಾ ಏಕೈಕಶ್ಯೇನ ಯಥಾನುಪೂರ್ವಂ ಸಪ್ತಸ್ವಪಿ ಬಹಿರ್ದ್ವೀಪೇಷು ಪೃಥಕ್ಪರಿತ ಉಪಕಲ್ಪಿತಾಸ್ತೇಷು ಜಂಬ್ವಾದಿಷು ಬರ್ಹಿಷ್ಮತೀಪತಿರನುವ್ರತಾನಾತ್ಮಜಾನಾಗ್ನೀಧ್ರೇಧ್ಮಜಿಹ್ವಯಜ್ಞಬಾಹುಹಿರಣ್ಯರೇತೋಘೃತಪೃಷ್ಠಮೇಧಾತಿಥಿವೀತಿಹೋತ್ರಸಂಜ್ಞಾನ್ ಯಥಾಸಂಖ್ಯೇನೈಕೈಕಸ್ಮಿನ್ನೇಕಮೇವಾಧಿಪತಿಂ ವಿದಧೇ ॥ ೩೩ ॥ ದುಹಿತರಂ ಚೋರ್ಜಸ್ವತೀಂ ನಾಮೋಶನಸೇ ಪ್ರಾಯಚ್ಛದ್ಯಸ್ಯಾಮಾಸೀದ್ದೇವಯಾನೀ ನಾಮ ಕಾವ್ಯಸುತಾ ॥ ೩೪ ॥

ಅವುಗಳ ಹೆಸರು ಕ್ರಮವಾಗಿ ಜಂಬೂ, ಪ್ಲಕ್ಷ, ಶಾಲ್ಮಲಿ, ಕುಶ, ಕ್ರೌಂಚ, ಶಾಕ ಮತ್ತು ಪುಷ್ಕರವೆಂದಾಯಿತು. ಅವುಗಳಲ್ಲಿ ಮುಂದು-ಮುಂದಿನ ದ್ವೀಪಗಳು ಹಿಂದು-ಹಿಂದಿನ ದ್ವೀಪಕ್ಕೆ ಎರಡರಷ್ಟು ವಿಸ್ತಾರವಾಗಿದ್ದು ಆವು ಸಮುದ್ರದ ಹೊರಭಾಗದಲ್ಲಿ ಭೂಮಿಯ ನಾಲ್ಕೂ ಕಡೆಗಳಲ್ಲಿಯೂ ಹರಡಿಕೊಂಡಿವೆ. ॥ ೩೨ ॥ ಸಪ್ತ ಸಮುದ್ರಗಳು ಕ್ರಮವಾಗಿ ಉಪ್ಪುನೀರು, ಕಬ್ಬಿನ ರಸ, ಮದ್ಯರಸ, ತುಪ್ಪ, ಹಾಲು, ಮೊಸರು ಮತ್ತು ಶುದ್ಧೋದಕಗಳಿಂದ ತುಂಬಿವೆ. ಇವು ಏಳೂ ದ್ವೀಪಗಳಿಗೂ ಕಂದಕದಂತಿದ್ದು ತಮ್ಮೊಳಗೆ ಇರುವ ದ್ವೀಪಕ್ಕೆ ಸಮವಾಗಿ ವಿಸ್ತಾರ ಹೊಂದಿವೆ. ಇವುಗಳಲ್ಲಿ ಒಂದೊಂದು ಕ್ರಮವಾಗಿ ಬೇರೆ-ಬೇರೆ ಏಳೂ ದ್ವೀಪಗಳನ್ನು ಹೊರಗಿನಿಂದ ಸುತ್ತುವರಿದಿದೆ. ಬರ್ಹಿಷ್ಮತಿಪತಿಯಾದ ಪ್ರಿಯವ್ರತನು ತನಗೆ ವಿಧೇಯರಾಗಿದ್ದ ಆಗ್ನೀಧ್ರ, ಇಧ್ಮಜಿಹ್ವ, ಯಜ್ಞಬಾಹು, ಹಿರಣ್ಯರೇತಸ, ಘೃತಪೃಷ್ಠ, ಮೇಧಾತಿಥಿ ಮತ್ತು ವೀತಿಹೋತ್ರರೆಂಬ ಏಳು ಮಂದಿ ಪುತ್ರರನ್ನು ಕ್ರಮವಾಗಿ ಆ ಏಳು ದ್ವೀಪಗಳಲ್ಲಿ ಒಂದೊಂದಕ್ಕೆ ಒಬ್ಬೊಬ್ಬನನ್ನು ರಾಜನನ್ನಾಗಿ ನೇಮಿಸಿದನು. ॥ ೩೩ ॥ ತನ್ನ ಕನ್ಯೆಯಾಗಿದ್ದ ಊರ್ಜಸ್ವತಿಯನ್ನು ಶುಕ್ರಾಚಾರ್ಯರಿಗೆ ವಿವಾಹಮಾಡಿಕೊಟ್ಟನು. ಆಕೆಯಿಂದ ಶುಕ್ರನಿಗೆ ದೇವಯಾನಿಯು ಜನಿಸಿದಳು. ॥ ೩೪ ॥ ರಾಜನೇ! ಯಾರು ಭಗವಂತನ ಚರಣಾರವಿಂದಗಳ ರಜದ ಪ್ರಭಾವದಿಂದ ಶರೀರದ ಹಸಿವು-ಬಾಯಾರಿಕೆ, ಶೋಕ-ಮೋಹ, ಮುಪ್ಪು-ಮರಣ ಎಂಬ ಆರು ಗುಣಗಳನ್ನು ಅಥವಾ ಮನಸ್ಸಿನಿಂದೊಡಗೂಡಿದ ಆರು ಇಂದ್ರಿಯಗಳನ್ನು ಗೆದ್ದುಕೊಂಡಿರುವನೋ, ಅಂತಹ ಭಗವದ್ಭಕ್ತರಿಗೆ ಇಂತಹ ಪುರುಷಾರ್ಥವು ಇದ್ದಿರುವುದರಲ್ಲಿ ಆಶ್ಚರ್ಯವೇನೂ ಇಲ್ಲ. ಏಕೆಂದರೆ, ಎಲ್ಲ ವರ್ಣಗಳಿಂದಲೂ ಹೊರಗಾದ ಚಾಂಡಾಲರೇ ಆದಿ ನೀಚಯೋನಿಯ ಮನುಷ್ಯರೂ ಕೂಡ ಭಗವಂತನ ದಿವ್ಯನಾಮವನ್ನು ಕೇವಲ ಒಂದೇ ಬಾರಿ ಉಚ್ಚರಿಸಿದರೂ ಒಡನೆಯೇ ಸಂಸಾರಬಂಧನದಿಂದ ಬಿಡುಗಡೆ ಹೊಂದುತ್ತಾರೆ. ॥ ೩೫ ॥

ನೈವಂವಿಧಃ ಪುರುಷಕಾರ ಉರುಕ್ರಮಸ್ಯ
ಪುಂಸಾಂ ತದಂಘ್ರಿರಜಸಾ ಜಿತಷಡ್ಗುಣಾನಾಮ್ ।
ಚಿತ್ರಂ ವಿದೂರವಿಗತಃ ಸಕೃದಾದದೀತ
ಯನ್ನಾಮಧೇಯಮಧುನಾ ಸ ಜಹಾತಿ ಬಂಧಮ್ ॥ ೩೫ ॥

ಇಂತಹ ಎಣೆಯಿಲ್ಲದ ಬಲ-ಪರಾಕ್ರಮದಿಂದ ಸಂಪನ್ನನಾಗಿದ್ದ ಪ್ರಿಯವ್ರತ ಮಹಾರಾಜನು ತಾನು ದೇವರ್ಷಿ ನಾರದರ ಅಡಿದಾವರೆಗಳಲ್ಲಿ ಶರಣಾಗತನಾಗಿ ಪರಮಾತ್ಮತತ್ತ್ವವನ್ನು ಅರಿತಿದ್ದರೂ ಮತ್ತೆ ದೈವವಶದಿಂದ ಪ್ರಪಂಚದಲ್ಲಿ ಸಿಕ್ಕಿಹಾಕಿಕೊಂಡಿದ್ದರಿಂದ ನೆಮ್ಮದಿ ಕಳೆದುಕೊಂಡವನಂತೆ ಆಗಿದ್ದುದನ್ನು ಒಮ್ಮೆ ಗಮನಿಸಿ ಮನಸ್ಸಿನಲ್ಲೇ ವಿರಕ್ತನಾಗಿ ಹೀಗೆ ಅಂದುಕೊಂಡನು. ॥ ೩೬ ॥ ಅಯ್ಯೋ! ನಾನು ಎಂತಹ ತಪ್ಪು ಮಾಡಿದೆ! ವಿಷಯಾಸಕ್ತವಾದ ಇಂದ್ರಿಯಗಳು ನನ್ನನ್ನು ಅವಿದ್ಯೆಯಿಂದುಂಟಾದ ವಿಷಮಯವಾದ ವಿಷಯಗಳೆಂಬ ಪಾಳುಬಾವಿಯಲ್ಲಿ ತಳ್ಳಿಬಿಟ್ಟವಲ್ಲ! ಸಾಕು! ಸಾಕು! ಇದು ತುಂಬಾ ಹೆಚ್ಚಾಯಿತು. ಆಹಾ! ನಾನು ಹೆಂಗಸಿನ ಆಟದ ಮೃಗವಾಗಿಬಿಟ್ಟೆನು. ಆಕೆಯು ನನ್ನನ್ನು ಕಪಿಯಂತೆ ಕುಣಿಸಿದಳು. ನನಗೆ ಧಿಕ್ಕಾರವಿರಲಿ! ಎಂದು ತನ್ನನ್ನು ನಿಂದಿಸಿಕೊಂಡನು. ॥ ೩೭ ॥ ಪರಮಾರಾಧ್ಯನಾದ ಶ್ರೀಹರಿಯ ಕೃಪೆಯಿಂದ ಅವನ ವಿವೇಕವೃತ್ತಿಯು ಎಚ್ಚರಗೊಂಡಿತು. ಅವನು ಈ ಭೂಮಂಡಲವನ್ನು ವಿಧೇಯರಾಗಿದ್ದ ತನ್ನ ಪುತ್ರರಿಗೆ ಯಥಾಯೋಗ್ಯವಾಗಿ ಹಂಚಿಬಿಟ್ಟನು. ಯಾರೊಡನೆ ಅವನು ಬಗೆ-ಬಗೆಯ ಭೋಗಗಳನ್ನು

ಸ ಏವಮಪರಿಮಿತಬಲಪರಾಕ್ರಮ ಏಕದಾ ತು ದೇವರ್ಷಿಚರಣಾನುಶಯನಾನುಪತಿತಗುಣವಿಸರ್ಗಸಂಸರ್ಗೇಣಾನಿರ್ವೃತಮಿವಾತ್ಮಾನಂ ಮನ್ಯಮಾನ ಆತ್ಮನಿರ್ವೇದ ಇದಮಾಹ ॥ ೩೬ ॥ ಅಹೋ ಅಸಾಧ್ವನುಷ್ಠಿತಂ ಯದಭಿನಿವೇಶಿತೋಽಹಮಿಂದ್ರಿಯೈರವಿದ್ಯಾರಚಿತವಿಷಮವಿಷಯಾಂಧಕೂಪೇ ತದಲಮಲಮಮುಷ್ಯಾ ವನಿತಾಯಾ ವಿನೋದಮೃಗಂ ಮಾಂ ಧಿಗ್ಧಿಗಿತಿ ಗರ್ಹಯಾಂಚಕಾರ ॥ ೩೭ ॥ ಪರದೇವತಾಪ್ರಸಾದಾಧಿಗತಾತ್ಮಪ್ರತ್ಯ-

ವಮರ್ಶೇನಾನುಪ್ರವೃತ್ತೇಭ್ಯಃ ಪುತ್ರೇಭ್ಯ ಇಮಾಂ ಯಥಾದಾಯಂ ವಿಭಜ್ಯ ಭುಕ್ತಭೋಗಾಂ ಚ ಮಹಿಷೀಂ ಮೃತಕಮಿವ ಸಹಮಹಾವಿಭೂತಿಮಪಹಾಯ ಸ್ವಯಂ ನಿಹಿತನಿರ್ವೇದೋ ಹೃದಿ ಗೃಹೀತಹರಿವಿಹಾರಾನುಭಾವೋ ಭಗವತೋ ನಾರದಸ್ಯ ಪದವೀಂ ಪುನರೇವಾನುಸಸಾರ ॥ ೩೮ ॥

ತಸ್ಯ ಹ ವಾ ಏತೇ ಶ್ಲೋಕಾಃ –

ಪ್ರಿಯವ್ರತಕೃತಂ ಕರ್ಮ ಕೋ ನು ಕುರ್ಯಾದ್ವಿನೇಶ್ವರಮ್ ।
ಯೋ ನೇಮಿನಿಮ್ನೈರಕರೋಚ್ಛಾಯಾಂ ಘ್ನನ್ಸಪ್ತ ವಾರಿಧೀನ್ ॥ ೩೯ ॥

ಭೂಸಂಸ್ಥಾನಂ ಕೃತಂ ಯೇನ ಸರಿದ್ಗಿರಿವನಾದಿಭಿಃ ।
ಸೀಮಾ ಚ ಭೂತನಿರ್ವೃತ್ಯೈ ದ್ವೀಪೇ ದ್ವೀಪೇ ವಿಭಾಗಶಃ ॥ ೪೦ ॥

ಭೌಮಂ ದಿವ್ಯಂ ಮಾನುಷಂ ಚ ಮಹಿತ್ವಂ ಕರ್ಮಯೋಗಜಮ್ ।
ಯಶ್ಚಕ್ರೇ ನಿರಯೌಪಮ್ಯಂ ಪುರುಷಾನುಜನಪ್ರಿಯಃ ॥ ೪೧ ॥

ಅನುಭವಿಸಿದ್ದನೋ ಆ ಪಟ್ಟದರಾಣಿಯನ್ನು ಅಂತೆಯೇ ಸಾಮ್ರಾಜ್ಯ ಲಕ್ಷ್ಮಿಯನ್ನು ಮೃತದೇಹದಂತೆ ತ್ಯಜಿಸಿ, ಹೃದಯದಲ್ಲಿ ವೈರಾಗ್ಯವನ್ನು ತಾಳಿ ಭಗವಂತನ ದಿವ್ಯಕಥೆಗಳನ್ನು ಚಿಂತಿಸುತ್ತಾ ಅದರ ಪ್ರಭಾವದಿಂದ ಶ್ರೀನಾರದರು ತೋರಿದ ಮಾರ್ಗವನ್ನು ಪುನಃ ಅನುಸರಿಸತೊಡಗಿದನು. ॥ ೩೮ ॥

ಮಹಾರಾಜಾ ಪ್ರಿಯವ್ರತನ ವಿಷಯದಲ್ಲಿ ಈ ಪ್ರಶಂಸಾರ್ಹವಾದ ಶ್ಲೋಕಗಳು ಪ್ರಸಿದ್ಧವಾಗಿವೆ.

ಪ್ರಿಯವ್ರತ ಮಹಾರಾಜನು ಮಾಡಿದ ಕರ್ಮಗಳನ್ನು ಸರ್ವಶಕ್ತಿಶಾಲಿಯಾದ ಈಶ್ವರನ ಹೊರತು ಬೇರೆ ಯಾರು ಮಾಡಬಲ್ಲರು? ಅವನು ರಾತ್ರಿಯ ಅಂಧಕಾರವನ್ನು ಇಲ್ಲವಾಗಿಸಲು ಪ್ರಯತ್ನಿಸುತ್ತಾ ತನ್ನ ರಥದ ಗಾಲಿಗಳಿಂದ ಉಂಟಾದ ಗೆರೆಗಳಿಂದಲೇ ಏಳು ಸಮುದ್ರಗಳನ್ನು ನಿರ್ಮಿಸಿದನಲ್ಲವೇ! ॥ ೩೯ ॥ ಪ್ರಾಣಿಗಳ ಸಂರಕ್ಷಣೆಗಾಗಿ ಇಡೀ ಭೂಮಂಡಲವನ್ನು ದ್ವೀಪಗಳಾಗಿ ವಿಭಾಗಿಸಿ ಪ್ರತಿಯೊಂದು ದ್ವೀಪದಲ್ಲಿಯೂ ಬೇರೆ-ಬೇರೆ ನದಿಗಳೂ ಅರಣ್ಯಗಳೂ, ಪರ್ವತಗಳೂ ಮುಂತಾದವುಗಳಿಂದ ಎಲ್ಲೆಯನ್ನು ನಿಶ್ಚಿತಗೊಳಿಸಿದನು. ॥ ೪೦ ॥ ಅವನು ಭಗವದ್ಭಕ್ತ ನಾರದಾದಿಗಳ ಪ್ರೇಮೀಭಕ್ತನಾಗಿದ್ದನು. ಅವನು ಪಾತಾಳಲೋಕದ, ದೇವಲೋಕದ, ಭೂಲೋಕದ ಸಂಪತ್ತನ್ನು ಮತ್ತು ಕರ್ಮಗಳಿಂದಲೂ, ಯೋಗದಿಂದಲೂ ಸಂಪಾದಿಸಿದ್ದ ಐಶ್ವರ್ಯವನ್ನು ನರಕಸಮಾನವೆಂದು ತಿಳಿದಿದ್ದನು. ॥ ೪೧ ॥

ಮೊದಲನೆಯ ಅಧ್ಯಾಯವು ಮುಗಿಯಿತು. ॥ ೧ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಪಂಚಮಸ್ಕಂಧೇ
ಪ್ರಿಯವ್ರತವಿಜಯೇ ಪ್ರಥಮೋಽಧ್ಯಾಯಃ ॥ ೧ ॥

ಎರಡನೆಯ ಅಧ್ಯಾಯ

ಆಗ್ನೀಧ್ರನ ಚರಿತ್ರೆ

ಶ್ರೀಶುಕ ಉವಾಚ

ಏವಂ ಪಿತರಿ ಸಂಪ್ರವೃತ್ತೇ ತದನುಶಾಸನೇ ವರ್ತಮಾನ ಆಗ್ನೀಧ್ರೋ ಜಂಬೂದ್ವೀಪೌಕಸಃ ಪ್ರಜಾ ಔರಸವದ್ಧರ್ಮಾವೇಕ್ಷಮಾಣಃ ಪರ್ಯಗೋಪಾಯತ್ ॥ ೧ ॥ ಸ ಚ ಕದಾಚಿತ್ಪಿತೃಲೋಕಕಾಮಃ ಸುರವರವನಿತಾಕ್ರೀಡಾಚಲದ್ರೋಣ್ಯಾಂ ಭಗವಂತಂ ವಿಶ್ವಸೃಜಾಂ ಪತಿಮಾಭೃತಪರಿಚರ್ಯೋಪಕರಣ ಆತ್ಮೈಕಾಗ್ರ್ಯೇಣ ತಪಸ್ವ್ಯಾರಾಧಯಾಂಬಭೂವ ॥ ೨ ॥ ತದುಪಲಭ್ಯ ಭಗವಾನಾದಿಪುರುಷಃ ಸದಸಿ ಗಾಯಂತೀಂ ಪೂರ್ವಚಿತ್ತಿಂ ನಾಮಾಪ್ಸರಸಮಭಿಯಾಪಯಾಮಾಸ ॥ ೩ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿದ್ರಾಜನೇ! ತಂದೆಯಾದ ಪ್ರಿಯವ್ರತ ಮಹಾರಾಜನು ತಪೋನಿಷ್ಠನಾದ ಬಳಿಕ ಮಹಾರಾಜಾ ಆಗ್ನೀಧ್ರನು ಆತನ ಆಜ್ಞಾನುಸಾರವಾಗಿ ಜಂಬೂದ್ವೀಪದ ಪ್ರಜೆಗಳನ್ನು ಧರ್ಮಾನುಸಾರವಾಗಿ ಔರಸಪುತ್ರರಂತೆ ಪಾಲಿಸತೊಡಗಿದನು. ॥ ೧ ॥ ಒಮ್ಮೆ ಅವನು ಪಿತೃಲೋಕದ ಕಾಮನೆಗಾಗಿ ಸತ್ಪುತ್ರನನ್ನು ಪಡೆಯಲಿಕ್ಕಾಗಿ ಪೂಜೆಯ ಎಲ್ಲ ಸಾಮಗ್ರಿಗಳನ್ನು ಜೊತೆ ಸೇರಿಸಿಕೊಂಡು ಸುರಸುಂದರಿಯರ ಕ್ರೀಡಾಸ್ಥಳವಾದ ಮಂದರಪರ್ವತದ ತಪ್ಪಲಿಗೆ ಹೋಗಿ, ತಪಸ್ಸಿನಲ್ಲಿ ತತ್ಪರನಾಗಿ, ಏಕಾಗ್ರಚಿತ್ತದಿಂದ ಪ್ರಜಾಪತಿಗಳ ಅಧಿಪತಿಯಾದ ಬ್ರಹ್ಮದೇವರನ್ನು ಆರಾಧಿಸತೊಡಗಿದನು. ॥ ೨ ॥ ಆದಿದೇವರಾದ ಭಗವಾನ್ ಶ್ರೀಬ್ರಹ್ಮದೇವರು ಆತನ ಅಭಿಲಾಷೆಯನ್ನು ತಿಳಿದುಕೊಂಡರು. ಆದ್ದರಿಂದ ತಮ್ಮ ಸಭೆಯ ಗಾಯಕಿಯಾದ ಪೂರ್ವಚಿತ್ತಿ ಎಂಬ ಅಪ್ಸರೆಯನ್ನು ಅವನ ಬಳಿಗೆ ಕಳಿಸಿದರು. ॥ ೩ ॥

ಸಾ ಚ ತದಾಶ್ರಮೋಪವನಮತಿರಮಣೀಯಂ ವಿವಿಧನಿಬಿಡವಿಟಪಿವಿಟಪನಿಕರಸಂಶ್ಲಿಷ್ಟಪುರಟಲತಾರೂಢಸ್ಥಲವಿಹಂಗಮಮಿಥುನೈಃ ಪ್ರೋಚ್ಯಮಾನಶ್ರುತಿಭಿಃ ಪ್ರತಿಬೋಧ್ಯಮಾನಸಲಿಲಕುಕ್ಕುಟಕಾರಂಡವಕಲಹಂಸಾದಿಭಿರ್ವಿಚಿತ್ರಮುಪಕೂಜಿತಾಮಲಜಲಾಶಯಕಮಲಾಕರಮುಪ ಬಭ್ರಾಮ ॥ ೪ ॥

ತಸ್ಯಾಃ ಸುಲಲಿತಗಮನಪದವಿನ್ಯಾಸಗತಿವಿಲಾಸಾಯಾಶ್ಚಾನುಪದಂ ಖಣಖಣಾಯಮಾನರುಚಿರಚರಣಾಭರಣಸ್ವನಮುಪಾಕರ್ಣ್ಯ ನರದೇವಕುಮಾರಃ ಸಮಾಧಿಯೋಗೇನಾಮೀಲಿತನಯನನಲಿನಮುಕುಲಯುಗಲಮೀಷದ್ವಿಕಚಯ್ಯ ವ್ಯಚಷ್ಟ ॥ ೫ ॥ ತಾಮೇವಾವಿದೂರೇ ಮಧುಕರೀಮಿವ ಸುಮನಸ ಉಪಜಿಘ್ರಂತೀಂ ದಿವಿಜಮನುಜಮನೋನಯನಾಹ್ಲಾದದುಘೈರ್ಗತಿವಿಹಾರವ್ರೀಡಾವಿನಯಾವಲೋಕಸುಸ್ವರಾಕ್ಷರಾವಯವೈರ್ಮನಸಿ ನೃಣಾಂ ಕುಸುಮಾಯುಧಸ್ಯ ವಿದಧತೀಂ ವಿವರಂ ನಿಜಮುಖವಿಗಲಿತಾಮೃತಾಸವಸಹಾಸಭಾಷಣಾಮೋದಮದಾಂಧಮಧುಕರನಿಕರೋಪರೋಧೇನ ದ್ರುತಪದವಿನ್ಯಾಸೇನ ವಲ್ಗುಸ್ಪಂದನಸ್ತನಕಲಶಕಬರಭಾರರಶನಾಂ ದೇವೀಂ ತದವಲೋಕನೇನ ವಿವೃತಾವಸರಸ್ಯ ಭಗವತೋ ಮಕರಧ್ವಜಸ್ಯ ವಶಮುಪನೀತೋ ಜಡವದಿತಿ ಹೋವಾಚ ॥ ೬ ॥

ಆಗ್ನೀಧ್ರನ ಆಶ್ರಮದ ಬಳಿ ಒಂದು ಅತಿರಮಣೀಯವಾದ ಉಪವನವಿತ್ತು. ಆ ಅಪ್ಸರೆಯು ಅದರಲ್ಲಿ ಸಂಚರಿಸತೊಡಗಿದಳು. ಆ ಉಪವನದಲ್ಲಿ ನಾನಾ ರೀತಿಯ ದಟ್ಟವಾದ ಮರಗಳ ಕೊಂಬೆಗಳಲ್ಲಿ ಹೊಂಬಣ್ಣದ ಬಳ್ಳಿಗಳು ಹಬ್ಬಿಕೊಂಡಿದ್ದುವು. ಅವುಗಳ ಮೇಲೆ ನವಿಲುಗಳು – ಗಿಳಿಗಳು ಮುಂತಾದ ಪಕ್ಷಿದಂಪತಿಗಳು ಕುಳಿತು ಇಂಪಾಗಿ ಧ್ವನಿಮಾಡುತ್ತಿದ್ದುವು. ಅವುಗಳ ಷಡ್ಜವೇ ಮುಂತಾದ ಧ್ವನಿಗಳನ್ನು ಕೇಳಿ ಸ್ಫೂರ್ತಿಗೊಂಡ ನೀರ್ಕೋಳಿ, ಕಾರಂಡವ, ಕಲಹಂಸಗಳೇ ಮುಂತಾದ ನೀರುಹಕ್ಕಿಗಳು ಬಗೆ-ಬಗೆಯಾಗಿ ಕಲ-ಕಲನಿನಾದವನ್ನು ಮಾಡುತ್ತಿದ್ದವು. ಇದರಿಂದ ಅಲ್ಲಿಯ ಕಮಲಪುಷ್ಪಗಳಿಂದ ರಮಣೀಯವಾದ ನಿರ್ಮಲ ಸರೋವರವು ಪ್ರತಿಧ್ವನಿಸುತ್ತಿತ್ತು. ॥ ೪ ॥

ಆ ಪೂರ್ವಚಿತ್ತಿಯು ಸುಂದರವಾದ ಮಂದಗಮನದಿಂದ ಹೆಜ್ಜೆಹಾಕುತ್ತಾ ವೈಯ್ಯಾರದಿಂದ ಸಂಚರಿಸುತ್ತಿರುವಾಗ ಹೆಜ್ಜೆ-ಹೆಜ್ಜೆಗೆ ಅವಳ ನೂಪುರಗಳು ಝಣ-ಝಣಿಸುತ್ತಿದ್ದವು. ಅವುಗಳ ಇಂಪಾದ ನಾದವನ್ನು ಕೇಳಿ ರಾಜಕುಮಾರ ಆಗ್ನೀಧ್ರನು – ಸಮಾಧಿಯೋಗದಿಂದ ಮುಚ್ಚಿಕೊಂಡಿದ್ದ ತನ್ನ ಕಮಲದ ಮೊಗ್ಗಿನಂತಿರುವ ಸುಂದರ ಕಣ್ಣುಗಳನ್ನು ಸ್ವಲ್ಪ ತೆರೆದು ನೋಡಿದರೆ ಬಳಿಯಲ್ಲೇ ಆ ಅಪ್ಸರೆಯು ಅವನಿಗೆ ಕಾಣಿಸಿದಳು. ಆ ರಮಣಿಯು ಹೆಣ್ಣುದುಂಬಿಯಂತೆ ಒಂದೊಂದು ಹೂವಿನ ಬಳಿಗೂ ಹೋಗಿ ಅದನ್ನು ಮೂಸಿನೋಡುತ್ತಾ ದೇವತೆಗಳ ಮತ್ತು ಮನುಷ್ಯರ ಮನಸ್ಸನ್ನು ಹಾಗೂ ನಯನಗಳನ್ನು ಆಹ್ಲಾದಪಡಿಸುತ್ತಿದ್ದ ತನ್ನ ವಿಲಾಸಪೂರ್ಣವಾದ ನಡಿಗೆಯಿಂದಲೂ, ಕ್ರೀಡೆಯ ಚಾಪಲ್ಯದಿಂದಲೂ, ಲಜ್ಜೆಯಿಂದಲೂ, ವಿನಯದಿಂದಲೂ, ಓರೆನೋಟದಿಂದಲೂ, ಸುಮಧುರ ವಾಣಿಯಿಂದಲೂ, ಚೆಲುವಿನ ನೆಲೆಯಾದ ಸರ್ವಾವಯವಗಳಿಂದಲೂ ಮನುಷ್ಯರ ಮನಸ್ಸಿನಲ್ಲಿ ಮನ್ಮಥನ ಪ್ರವೇಶಕ್ಕೆ ದ್ವಾರದಂತೆ ಎಡೆಮಾಡಿಕೊಡುತ್ತಿದ್ದಳು. ಅವಳು ನಗು-ನಗುತ್ತಾ ಮಾತಾಡತೊಡಗಿದಾಗ ಆಕೆಯ ಮುಖದಿಂದ ಅಮೃತಮಯವಾದ ಮದವನ್ನುಂಟುಮಾಡುವ ಜೇನು ಒಸರುವಂತಿತ್ತು. ಮುಖಕಮಲದ ಪರಿಮಳದಿಂದ ಮತ್ತೇರಿದ ದುಂಬಿಗಳು ಆ ಮುಖಕಮಲವನ್ನು ಮುತ್ತುತ್ತಿರಲು ತನ್ನನ್ನು ಅವುಗಳಿಂದ ರಕ್ಷಿಸಿಕೊಳ್ಳಲು ಬೇಗ-ಬೇಗನೇ ಹೆಜ್ಜೆಹಾಕುತ್ತಿರುವಾಗ ಅವಳ ಸ್ತನಕಲಶಗಳೂ, ಕೇಶಪಾಶಗಳೂ, ನಡುವಿನ ಒಡ್ಯಾಣವೂ ಚಲಿಸುವುದರಿಂದ ಆಕರ್ಷಕವಾಗಿ ಕಾಣುತ್ತಿದ್ದವು. ಇಂತಹ ಸೊಬಗಿನಿಂದ ಕೂಡಿದ್ದ ಆಕೆಯನ್ನು ಕಂಡೊಡನೆ ಮನ್ಮಥನಿಗೆ ಆಗ್ನೀಧ್ರನ ಹೃದಯವನ್ನು ಪ್ರವೇಶಿಸಲು ಅವಕಾಶ ದೊರತಂತಾಯಿತು. ಆಗ್ನೀಧ್ರನು ಕಾಮಕ್ಕೆ ಅಧೀನನಾಗಿ ಆಕೆಯನ್ನು ಪ್ರಸನ್ನಗೊಳಿಸಲು ಹುಚ್ಚನಂತಾಗಿ ಹೀಗೆ ಹೇಳಲುಪಕ್ರಮಿಸಿದನು. ॥ ೫-೬ ॥

ಓ ಮುನಿವರ್ಯನೇ! ನೀನು ಯಾರು? ಈ ಪರ್ವತದ ಮೇಲೆ ಏನು ಮಾಡಬೇಕೆಂದಿರುವೆ? ನೀನು ಪರಮಪುರುಷ ಶ್ರೀನಾರಾಯಣನ ಮಾಯೆಯಲ್ಲ ತಾನೇ! ಸ್ನೇಹಿತನೇ! ನೀನು (ಈ ಹುಬ್ಬುಗಳ ರೂಪದಲ್ಲಿ) ನಾಣೇ ಇಲ್ಲದ ಎರಡು ಧನುಸ್ಸುಗಳನ್ನು ಏಕೆ ಧರಿಸಿದ್ದೀಯೇ? ಇದರಿಂದ ನಿನಗೆ ಏನಾದರೂ

ಕಾ ತ್ವಂ ಚಿಕೀರ್ಷಸಿ ಚ ಕಿಂ ಮುನಿವರ್ಯ ಶೈಲೇ
ಮಾಯಾಸಿ ಕಾಪಿ ಭಗವತ್ಪರದೇವತಾಯಾಃ ।
ವಿಜ್ಯೇ ಬಿಭರ್ಷಿ ಧನುಷೀ ಸುಹೃದಾತ್ಮನೋಽರ್ಥೇ
ಕಿಂ ವಾ ಮೃಗಾನ್ಮೃಗಯಸೇ ವಿಪಿನೇ ಪ್ರಮತ್ತಾನ್ ॥ ೭ ॥

ಬಾಣಾವಿಮೌ ಭಗವತಃ ಶತಪತ್ರಪತ್ರೌ
ಶಾಂತಾವಪುಂಖರುಚಿರಾವತಿತಿಗ್ಮದಂತೌ ।
ಕಸ್ಮೈ ಯುಯುಂಕ್ಷಸಿ ವನೇ ವಿಚರನ್ನ ವಿದ್ಮಃ
ಕ್ಷೇಮಾಯ ನೋ ಜಡಧಿಯಾಂ ತವ ವಿಕ್ರಮೋಽಸ್ತು ॥ ೮ ॥

ಶಿಷ್ಯಾ ಇಮೇ ಭಗವತಃ ಪರಿತಃ ಪಠಂತಿ
ಗಾಯಂತಿ ಸಾಮ ಸರಹಸ್ಯಮಜಸ್ರಮೀಶಮ್ ।
ಯುಷ್ಮಚ್ಛಿಖಾವಿಲುಲಿತಾಃ ಸುಮನೋಽಭಿವೃಷ್ಟೀಃ
ಸರ್ವೇ ಭಜಂತ್ಯೃಷಿಗಣಾ ಇವ ವೇದಶಾಖಾಃ ॥ ೯ ॥

ವಾಚಂ ಪರಂ ಚರಣಪಂಜರತಿತ್ತಿರೀಣಾಂ
ಬ್ರಹ್ಮನ್ನರೂಪಮುಖರಾಂ ಶೃಣವಾಮ ತುಭ್ಯಮ್ ।
ಲಬ್ಧಾ ಕದಂಬರುಚಿರಂಕವಿಟಂಕಬಿಂಬೇ
ಯಸ್ಯಾಮಲಾತಪರಿಧಿಃ ಕ್ವ ಚ ವಲ್ಕಲಂ ತೇ ॥ ೧೦ ॥

ಕಿಂ ಸಂಭೃತಂ ರುಚಿರಯೋರ್ದ್ವಿಜ ಶೃಂಗಯೋಸ್ತೇ
ಮಧ್ಯೇ ಕೃಶೋ ವಹಸಿ ಯತ್ರ ದೃಶಿಃ ಶ್ರಿತಾ ಮೇ ।
ಪಂಕೋಽರುಣಃ ಸುರಭಿರಾತ್ಮವಿಷಾಣ ಈದೃಗ್
ಯೇನಾಶ್ರಮಂ ಸುಭಗ ಮೇ ಸುರಭೀಕರೋಷಿ ॥ ೧೧ ॥

ಲೋಕಂ ಪ್ರದರ್ಶಯ ಸುಹೃತ್ತಮ ತಾವಕಂ ಮೇ
ಯತ್ರತ್ಯ ಇತ್ಥಮುರಸಾವಯವಾವಪೂರ್ವೌ ।
ಅಸ್ಮದ್ವಿಧಸ್ಯ ಮನಉನ್ನಯನೌ ಬಿಭರ್ತಿ
ಬಹ್ವದ್ಭುತಂ ಸರಸರಾಸಸುಧಾದಿ ವಕ್ತ್ರೇ ॥ ೧೨ ॥

ಪ್ರಯೋಜನವುಂಟೇ? ಅಥವಾ ಈ ಸಂಸಾರವೆಂಬ ಅರಣ್ಯದಲ್ಲಿ ನನ್ನಂತಹ ಉನ್ಮತ್ತ ಮೃಗಗಳನ್ನು ಬೇಟೆಯಾಡಲು ಬಯಸುತ್ತಿರುವೆಯಾ? ॥ ೭॥ ನಿನ್ನ ಈ (ಕಡೆಗಣ್ಣುಗಳ ನೋಟವೆಂಬ) ಎರಡು ಬಾಣಗಳು ಎಷ್ಟು ಚೂಪಾಗಿ ಚೆಲುವಾಗಿವೆ! ಆಹಾ! ಇವುಗಳಿಗೆ ಕಮಲದಳಗಳಂತೆ ರೆಕ್ಕೆಗಳಿವೆ. ನೋಡಲೂ ಶಾಂತವಾಗಿವೆ ಮತ್ತು ಹಿಂದಿನ ಭಾಗವು ಪುಂಖಹೀನವಾಗಿದೆ. ಇಲ್ಲಿ ಕಾಡಿನಲ್ಲಿ ಸಂಚರಿಸುತ್ತಾ ನೀನು ಇದನ್ನು ಯಾರ ಮೇಲೆ ಪ್ರಯೋಗಿಸಲು ಬಯಸುತ್ತಿರುವೆ? ಇಲ್ಲಿ ನಿನ್ನನ್ನು ಇದಿರಿಸುವವರು ಯಾರೂ ಕಾಣುತ್ತಿಲ್ಲವಲ್ಲ! ನಿನ್ನ ಈ ಪರಾಕ್ರಮವು ನಮ್ಮಂತಹ ಜಡಬುದ್ಧಿಯುಳ್ಳವರಿಗೆ ಕಲ್ಯಾಣಕಾರಿಯಾಗಲೀ. ॥ ೮ ॥ (ದುಂಬಿಗಳ ಕಡೆಗೆ ನಿರ್ದೇಶಿಸಿ) ಪೂಜ್ಯರೇ! ನಿಮ್ಮ ಸುತ್ತಲೂ ಅಧ್ಯಯನ ಮಾಡುತ್ತಿರುವ ಈ ಶಿಷ್ಯರು ನಿರಂತರವಾಗಿ ರಹಸ್ಯಪೂರ್ಣವಾದ ಸಾಮವೇದವನ್ನು ಗಾನಮಾಡುತ್ತಾ ಶ್ರೀಭಗವಂತನನ್ನು ಸ್ತುತಿಸುತ್ತಿರುವರಲ್ಲ! ಋಷಿಗಣಗಳು ವೇದಗಳ ಶಾಖೆಗಳನ್ನು ಅನುಸರಿಸುತ್ತಿರುವಂತೆಯೇ, ಇವರೆಲ್ಲರೂ ನಿನ್ನ ತುರುಬಿನಿಂದ ಜಾರುತ್ತಿರುವ ಹೂವುಗಳನ್ನು ಸೇವಿಸುತ್ತಾ ಆನಂದಪಡುತ್ತಿರುವರು. ॥ ೯ ॥ (ಆಕೆಯ ಕಾಲಂದುಗೆಗಳ ಕಡೆಗೆ ಕೈತೋರಿಸಿ) ಎಲೈ ಬ್ರಾಹ್ಮಣೋತ್ತಮನೇ! ನಿನ್ನ ಪಾದಗಳೆಂಬ ಪಂಜರದಲ್ಲಿ ತಿತ್ತಿರಿಪಕ್ಷಿಗಳಂತೆ ಅಡಗಿಕೊಂಡಿರುವ ಈ ರತ್ನಗಳ ನೂಪುರಗಳು ತೋರಿಕೊಳ್ಳದೆ ಶಬ್ದಮಾತ್ರ ಕೇಳಿಬರುತ್ತಿದೆಯಲ್ಲ! (ಆಕೆಯ ಒಡ್ಯಾಣಸಹಿತವಾದ ಪೀತಾಂಬರದಲ್ಲಿ ಅಂಗದ ಕಾಂತಿಯನ್ನು ಉತ್ಪ್ರೇಕ್ಷಿಸುತ್ತಾ) ನಿನ್ನ ನಿತಂಬಗಳ ಮೇಲೆ ಈ ಕದಂಬ ಕುಸುಮದ ಕಾಂತಿಯು ಎಲ್ಲಿಂದ ಬಂದಿದೆ? ಇವುಗಳ ಮೇಲಂತೂ (ರತ್ನದ ಒಡ್ಯಾಣವೆಂಬ) ಜ್ವಾಲೆಗಳ ಮಂಡಲವೇ ತೊಳ-ತೊಳಗಿ ಬೆಳಗುತ್ತಿದೆಯಲ್ಲ! ಆದರೆ ನಿನ್ನ ನಾರುಮಡಿಯ ಉಡಿಗೆ ಎಲ್ಲಿ? ॥ ೧೦ ॥ (ಕುಂಕುಮ ಮಂಡಿತ ಕುಚಗಳನ್ನು ನಿರ್ದೇಶಿಸುತ್ತಾ) ದ್ವಿಜವರ್ಯನೇ! ಅತಿ ಸುಂದರವಾಗಿ ನಿನ್ನ ಎದೆಯಲ್ಲಿ ಕಂಗೊಳಿಸುತ್ತಿರುವ ಈ ಕೊಂಬುಗಳಲ್ಲಿ ಏನು ತುಂಬಿದೆ? ಅವಶ್ಯವಾಗಿಯೂ ಇವುಗಳಲ್ಲಿ ಬಹಳ ಅಮೂಲ್ಯವಾದ ರತ್ನಗಳೇ ತುಂಬಿರಬೇಕು. ಅದಕ್ಕೆ ನಿನ್ನ ನಡುವು ಕೃಶವಾಗಿದ್ದರೂ ನೀನು ಇವುಗಳ ಭಾರವನ್ನು ಹೊತ್ತುಕೊಂಡಿರುವೆ. ಇವುಗಳನ್ನು ನೋಡಿ ನನ್ನ ದೃಷ್ಟಿಯು ಅಲ್ಲೇ ನೆಟ್ಟುಹೋಗಿದೆ. ಎಲೈ ಸುಭಗನೇ! ಈ ಕೊಂಬುಗಳ ಮೇಲೆ ನೀನು ಕೆಂಪಾದ ಲೇಪವನ್ನು ಹಚ್ಚಿಕೊಂಡಿರುವೆಯಲ್ಲ! ಅದು ಏನು? ಅದರ ಸುಗಂಧದಿಂದ ನನ್ನ ಆಶ್ರಮವೆಲ್ಲ ಘಮ-ಘಮಿಸುತ್ತಿದೆಯಲ್ಲ! ॥ ೧೧ ॥ ಮಿತ್ರನೇ! ನಿನ್ನ ಸ್ವಂತ ದೇಶ ಯಾವುದೆಂಬುದನ್ನು ನನಗೆ ತೋರಿಸು. ಅಲ್ಲಿಯ ನಿವಾಸಿಗಳು ತಮ್ಮ ವಕ್ಷಸ್ಥಳದ ಮೇಲೆ ನಮ್ಮಂತಹ ಪ್ರಾಣಿಗಳ ಚಿತ್ತವನ್ನು ಕಲಕುವ ಅದ್ಭುತವಾದ ಅವಯವಗಳನ್ನು ಧರಿಸಿರುತ್ತಾರೆ ಹಾಗೂ ಮುಖದಲ್ಲಿ ವಿಚಿತ್ರವಾದ ಹಾವ-ಭಾವ, ವಿಲಾಸ, ಸವಿಮಾತು ಮತ್ತು ಅಧರಾಮೃತದಂತಹ ಅದ್ಭುತವಾದ ವಸ್ತುಗಳನ್ನು ಧರಿಸುತ್ತಿರಬೇಕು. ॥ ೧೨ ॥

ಪ್ರಿಯನೇ! ಯಾವ ವಸ್ತುವನ್ನು ತಿನ್ನುವುದರಿಂದ ನಿನ್ನ ಮುಖದಿಂದ ಈ ಸುವಾಸನೆಯು ಹೊರಹೊಮ್ಮುತ್ತಿದೆ? ನಿನ್ನ

ಕಾ ವಾಽಽತ್ಮವೃತ್ತಿರದನಾದ್ಧವಿರಂಗ ವಾತಿ
ವಿಷ್ಣೋಃ ಕಲಾಸ್ಯನಿಮಿಷೋನ್ಮಕರೌ ಚ ಕರ್ಣೌ ।
ಉದ್ವಿಗ್ನಮೀನಯುಗಲಂ ದ್ವಿಜಪಂಕ್ತಿಶೋಚಿ-
ರಾಸನ್ನಭೃಂಗನಿಕರಂ ಸರ ಇನ್ಮುಖಂ ತೇ ॥ ೧೩ ॥

ಯೋಽಸೌ ತ್ವಯಾ ಕರಸರೋಜಹತಃ ಪತಂಗೋ
ದಿಕ್ಷು ಭ್ರಮನ್ ಭ್ರಮತ ಏಜಯತೇಽಕ್ಷಿಣೀ ಮೇ ।
ಮುಕ್ತಂ ನ ತೇ ಸ್ಮರಸಿ ವಕ್ರಜಟಾವರೂಥಂ
ಕಷ್ಟೋಽನಿಲೋ ಹರತಿ ಲಂಪಟ ಏಷ ನೀವೀಮ್ ॥ ೧೪ ॥

ರೂಪಂ ತಪೋಧನ ತಪಶ್ಚರತಾಂ ತಪೋಘ್ನಂ
ಹ್ಯೇತತ್ತು ಕೇನ ತಪಸಾ ಭವತೋಪಲಬ್ಧಮ್ ।
ಚರ್ತುಂ ತಪೋಽರ್ಹಸಿ ಮಯಾ ಸಹ ಮಿತ್ರ ಮಹ್ಯಂ
ಕಿಂ ವಾ ಪ್ರಸೀದತಿ ಸ ವೈ ಭವಭಾವನೋ ಮೇ ॥ ೧೫ ॥

ನ ತ್ವಾಂ ತ್ಯಜಾಮಿ ದಯಿತಂ ದ್ವಿಜದೇವದತ್ತಂ
ಯಸ್ಮಿನ್ಮನೋ ದೃಗಪಿ ನೋ ನ ವಿಯಾತಿ ಲಗ್ನಮ್ ।
ಮಾಂ ಚಾರುಶೃಂಗ್ಯರ್ಹಸಿ ನೇತುಮನುವ್ರತಂ ತೇ
ಚಿತ್ತಂ ಯತಃ ಪ್ರತಿಸರಂತು ಶಿವಾಃ ಸಚಿವ್ಯಃ ॥ ೧೬ ॥

ಶ್ರೀಶುಕ ಉವಾಚ

ಇತಿ ಲಲನಾನುನಯಾತಿವಿಶಾರದೋ ಗ್ರಾಮ್ಯವೈದಗ್ಧ್ಯಯಾ ಪರಿಭಾಷಯಾ ತಾಂ ವಿಬುಧವಧೂಂ ವಿಬುಧಮತಿರಧಿಸಭಾಜಯಾಮಾಸ ॥ ೧೭ ॥ ಸಾ ಚ ತತಸ್ತಸ್ಯ ವೀರಯೂಥಪತೇರ್ಬುದ್ಧಿಶೀಲರೂಪವಯಃಶ್ರಿಯೌದಾರ್ಯೇಣ ಪರಾಕ್ಷಿಪ್ತಮನಾಸ್ತೇನ ಸಹಾಯುತಾಯುತಪರಿವತ್ಸರೋಪಲಕ್ಷಣಂ ಕಾಲಂ ಜಂಬೂದ್ವೀಪಪತಿನಾ ಭೌಮಸ್ವರ್ಗಭೋಗಾನ್ ಬುಭುಜೇ ॥ ೧೮ ॥ ತಸ್ಯಾ ಮು ■ ವಾ ಆತ್ಮಜಾನ್ ಸ ರಾಜವರ ಆಗ್ನೀಧ್ರೋ ನಾಭಿಕಿಂಪುರುಷಹರಿವರ್ಷೇಲಾವೃತರಮ್ಯಕಹಿರಣ್ಮಯಕುರುಭದ್ರಾಶ್ವಕೇತುಮಾಲಸಂಜ್ಞಾನ್ನವ ಪುತ್ರಾನಜನಯತ್ ॥ ೧೯ ॥

ಆಹಾರವು ಯಾವುದು? ನೀನು ಮಹಾವಿಷ್ಣುವಿನ ಕಲೆಯೇ ಆಗಿರಬೇಕೆಂದು ಅನಿಸುತ್ತದೆ. ಅದಕ್ಕಾಗಿ ನಿನ್ನ ಕಿವಿಗಳಲ್ಲಿ ಮಿನುಗುವಂತಹ ಎರಡು ಮಕರಾಕೃತಿಯ ಕುಂಡಲಗಳು ಥಳಥಳಿಸುತ್ತಿವೆ. ನಿನ್ನ ಮುಖವು ಒಂದು ಸುಂದರ ಸರೋವರದಂತೆ ಇದೆ. ಅದರಲ್ಲಿ ನಿನ್ನ ಚಂಚಲವಾದ ಕಣ್ಣುಗಳೇ ಭಯದಿಂದ ಚಲಿಸುತ್ತಿರುವ ಎರಡು ಮೀನುಗಳು. ದಂತಪಂಕ್ತಿಗಳೇ ಹಂಸಗಳು. ಕಪ್ಪಾದ ಮುಂಗುರುಳುಗಳೇ ಭ್ರಮರದಂತೆ ಶೋಭಿಸುತ್ತಿವೆ. ॥ ೧೩ ॥ ನೀನು ಕರಕಮಲಗಳಿಂದ ಹೊಡೆದು ಪುಟಹಾರಿಸುತ್ತಿರುವ ■ ಆಟದ ಚೆಂಡು ದಿಕ್ಕು-ದಿಕ್ಕುಗಳಲ್ಲಿ ಓಡುತ್ತಾ ನನ್ನ ಕಣ್ಣುಗಳನ್ನು ಚಂಚಲಗೊಳಿಸುತ್ತಿದೆ. ಜೊತೆಗೆ ನನ್ನ ಮನಸ್ಸಿನಲ್ಲಿಯೂ ಗಲಿಬಿಲಿಯನ್ನುಂಟುಮಾಡುತ್ತದೆ. ಕೊಂಕಾದ ಜಡೆಕೂದಲು ಬಿಚ್ಚಿಹೋಗಿರುವುದನ್ನು ನೀನು ಗಮನಿಸುತ್ತಿಲ್ಲವಲ್ಲ. ಅರೇ! ಈ ಧೂರ್ತನಾದ ವಾಯುವು ಬಾರಿ-ಬಾರಿಗೂ ನಿನ್ನ ಮೇಲುವಸ್ತ್ರವನ್ನು ಹಾರಿಸುತ್ತಿದೆಯಲ್ಲ! ॥ ೧೪ ॥ ತಪೋಧನನೇ! ತಪಸ್ವಿಗಳ ತಪಸ್ಸನ್ನು ಭ್ರಷ್ಟಗೊಳಿಸುವ ಈ ಅನುಪಮವಾದ ರೂಪ-ಲಾವಣ್ಯಗಳನ್ನು ನೀನು ಯಾವ ತಪಸ್ಸಿನ ಪ್ರಭಾವದಿಂದ ಪಡೆದಿರುವೆ? ಮಿತ್ರನೇ! ಇಲ್ಲಿಗೆ ಬಾ! ಕೆಲವು ದಿನಗಳವರೆಗೆ ನನ್ನೊಡನೆ ಇದ್ದು ತಪಸ್ಸುಮಾಡು. ಅಥವಾ ವಿಶ್ವವನ್ನು ವಿಸ್ತರಿಸುವ ಇಚ್ಛೆಯಿಂದ ಎಲ್ಲಾದರೂ ಬ್ರಹ್ಮದೇವರೇ ನನ್ನ ಮೇಲೆ ಕೃಪೆ ಮಾಡಿರಬಹುದೇ? ॥ ೧೫ ॥ ನಿಜವಾಗಿ ನೀನು ಬ್ರಹ್ಮದೇವರು ಕರುಣಿಸಿದ ಪ್ರಿಯ ಕೊಡುಗೆಯೇ ಆಗಿರುವೆ. ಈಗ ನಾನು ನಿನ್ನನ್ನು ಬಿಟ್ಟಿರಲಾರೆ. ನಿನ್ನಲ್ಲಿ ನನ್ನ ಮನಸ್ಸು ಮತ್ತು ಕಣ್ಣುಗಳು ಬೇರೆಲ್ಲಿಗೂ ಹೋಗಲು ಬಯಸದಷ್ಟು ನೆಟ್ಟುಹೋಗಿವೆ. ಮನೋಹರವಾದ ಕೊಂಬುಗಳುಳ್ಳವಳೇ! ನಿನಗೆ ಮನಸ್ಸು ಬಂದಲ್ಲಿಗೆ ನನ್ನನ್ನು ಕರಕೊಂಡುಹೋಗು. ನಾನಾದರೋ ನಿನ್ನ ಅನುಚರನು. ನಿನ್ನ ಈ ಮಂಗಳಮಯರಾದ ಸಖಿಯರೂ ನಮ್ಮೊಡನೆ ಇರಲಿ. ॥ ೧೬ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಎಲೈ ರಾಜೇಂದ್ರಾ! ಆಗ್ನೀಧ್ರನು ದೇವತೆಗಳಂತೆ ಬುದ್ಧಿವಂತನೂ, ಸ್ತ್ರೀಯರನ್ನು ಪ್ರಸನ್ನಗೊಳಿಸುವುದರಲ್ಲಿ ಅತಿಕುಶಲನೂ ಆಗಿದ್ದನು. ಅವನು ಈ ರೀತಿಯಲ್ಲಿ ರತಿಚಾತುರ್ಯದಿಂದ ಕೂಡಿದ ಸವಿಮಾತುಗಳಿಂದ ಆ ಅಪ್ಸರೆಯನ್ನು ಒಲಿಸಿಕೊಂಡನು. ॥ ೧೭ ॥ ವೀರಾಧಿವೀರರಲ್ಲಿ ಅಗ್ರಗಣ್ಯನಾದ ಆಗ್ನೀಧ್ರನ ಬುದ್ಧಿ, ಶೀಲ, ರೂಪ, ವಯಸ್ಸು, ಕಾಂತಿ ಔದಾರ್ಯಗಳಿಗೆ ಆಕರ್ಷಿತಳಾದ ■ ಪೂರ್ವಚಿತ್ತಿಯು ಜಂಬೂದ್ವೀಪಾಧಿಪತಿಯೊಡನೆ ಅನೇಕ ಸಾವಿರವರ್ಷಗಳವರೆಗೆ ಪೃಥ್ವಿ ಮತ್ತು ಸ್ವರ್ಗದ ಭೋಗಗಳನ್ನು ಅನುಭವಿಸುತ್ತಿದ್ದಳು. ॥ ೧೮ ॥ ಅನಂತರ ಆಗ್ನೀಧ್ರನು ಆಕೆಯ ಗರ್ಭದಿಂದ ನಾಭಿ, ಕಿಂಪುರುಷ, ಹರಿವರ್ಷ, ಇಲಾವೃತ, ರಮ್ಯಕ, ಹಿರಣ್ಮಯ, ಕುರು, ಭದ್ರಾಶ್ವ ಮತ್ತು ಕೇತುಮಾಲ ಎಂಬ ಒಂಬತ್ತು ಪುತ್ರರನ್ನು ಪಡೆದನು. ॥ ೧೯ ॥

ಪೂರ್ವಚಿತ್ತಿಯು ಹೀಗೆ ವರ್ಷಕ್ಕೆ ಒಬ್ಬರಂತೆ ಒಂಬತ್ತು ಮಂದಿ ಪುತ್ರರನ್ನು ಪಡೆದು, ಅವರನ್ನು ಆಗ್ನೀಧ್ರನ ಅರಮನೆಯಲ್ಲೇ ಬಿಟ್ಟು ತಾನು ಬ್ರಹ್ಮಲೋಕಕ್ಕೆ ತೆರಳಿ ಅಲ್ಲಿ ಬ್ರಹ್ಮದೇವರ ಸೇವೆಯಲ್ಲಿ

ಸಾ ಸೂತ್ವಾಥ ಸುತಾನ್ನವಾನುವತ್ಸರಂ ಗೃಹ ಏವಾಪಹಾಯ ಪೂರ್ವಚಿತ್ತಿರ್ಭೂಯ ಏವಾಜಂ ದೇವಮುಪತಸ್ಥೇ ॥ ೨೦ ॥ ಆಗ್ನೀಧ್ರಸುತಾಸ್ತೇ ಮಾತುರನುಗ್ರಹಾದೌತ್ಪತ್ತಿಕೇನೈವ ಸಂಹನನಬಲೋಪೇತಾಃ ಪಿತ್ರಾ ವಿಭಕ್ತಾ ಆತ್ಮತುಲ್ಯನಾಮಾನಿ ಯಥಾಭಾಗಂ ಜಂಬೂದ್ವೀಪವರ್ಷಾಣಿ ಬುಭುಜುಃ ॥ ೨೧ ॥ ಆಗ್ನೀಧ್ರೋ ರಾಜಾತೃಪ್ತಃ ಕಾಮಾನಾಮಪ್ಸರಸಮೇವಾನುದಿನಮಧಿಮನ್ಯಮಾನಸ್ತಸ್ಯಾಃ ಸಲೋಕತಾಂ ಶ್ರುತಿಭಿರವಾರುಂಧ ಯತ್ರ ಪಿತರೋ ಮಾದಯಂತೇ ॥ ೨೨ ॥ ಸಂಪರೇತೇ ಪಿತರಿ ನವ ಭ್ರಾತರೋ ಮೇರುದುಹಿತೄರ್ಮೇರುದೇವೀಂ ಪ್ರತಿರೂಪಾಮುಗ್ರದಂಷ್ಟ್ರೀಂ ಲತಾಂ ರಮ್ಯಾಂ ಶ್ಯಾಮಾಂ ನಾರೀಂ ಭದ್ರಾಂ ದೇವವೀತಿಮಿತಿಸಂಜ್ಞಾ ನವೋದವಹನ್ ॥ ೨೩ ॥

ತೊಡಗಿದಳು. ॥ ೨೦ ॥ ಆಗ್ನೀಧ್ರನ ಆ ಪುತ್ರರು ತಾಯಿಯ ಅನುಗ್ರಹದಿಂದ ಸ್ವಾಭಾವಿಕವಾಗಿಯೇ ಸುಂದರ ಸುದೃಢ ದೇಹ-ಪರಾಕ್ರಮಗಳಿಂದ ಸಂಪನ್ನರಾಗಿದ್ದರು. ಆಗ್ನೀಧ್ರನು ಜಂಬೂದ್ವೀಪವನ್ನು ವಿಂಗಡಿಸಿ, ಆಯಾಪುತ್ರರ ಹೆಸರಿನಿಂದಲೇ ಕರೆಯಲ್ಪಡುವ ಒಂಭತ್ತು ವರ್ಷ (ಭೂಖಂಡ)ಗಳನ್ನಾಗಿ ಮಾಡಿ ಅವುಗಳನ್ನು ಆಯಾ ಪುತ್ರರಿಗೆ ಒಪ್ಪಿಸಿದನು. ಅವರೆಲ್ಲರೂ ತಮ್ಮ-ತಮ್ಮ ವರ್ಷಗಳಲ್ಲಿ ಆಧಿಪತ್ಯವನ್ನು ಅನುಭವಿಸ ತೊಡಗಿದರು. ॥ ೨೧ ॥ ಮಹಾರಾಜ ಆಗ್ನೀಧ್ರನಿಗೆ ಪ್ರತಿದಿನವೂ ಭೋಗಗಳನ್ನು ಅನುಭವಿಸುತ್ತಿದ್ದರೂ ಅವುಗಳಿಂದ ತೃಪ್ತಿಯುಂಟಾಗಲಿಲ್ಲ. ಆತನು ಆ ಅಪ್ಸರೆಯನ್ನೇ ಪರಮಪುರುಷಾರ್ಥವೆಂದು ಭಾವಿಸಿಕೊಂಡಿದ್ದನು. ಅದಕ್ಕಾಗಿ ಅವನು ವೈದಿಕ ಕರ್ಮಗಳ ಮೂಲಕ ಪಿತೃಗಣಗಳು ತಮ್ಮ ಸುಕೃತಗಳಿಗೆ ಅನುಸಾರವಾಗಿ ಬಗೆ-ಬಗೆಯ ಸುಖ-ಭೋಗಗಳನ್ನು ಅನುಭವಿಸುತ್ತಿರುವ ದಿವ್ಯಲೋಕವನ್ನು ಪಡೆದುಕೊಂಡನು. ॥ ೨೨ ॥ ತಂದೆಯು ಪರಲೋಕಕ್ಕೆ ತೆರಳಿದನಂತರ ನಾಭಿಯೇ ಮುಂತಾದ ಒಂಭತ್ತುಮಂದಿ ಸೋದರರು ಮೇರುವಿನ ಪುತ್ರಿಯರಾಗಿದ್ದ ಮೇರುದೇವೀ, ಪ್ರತಿರೂಪಾ, ಉಗ್ರದಂಷ್ಟ್ರೀ, ಲತಾ, ರಮ್ಯಾ, ಶ್ಯಾಮಾ, ನಾರೀ, ಭದ್ರಾ ಮತ್ತು ದೇವವೀತಿ ಎಂಬ ಒಂಭತ್ತು ಮಂದಿ ಕನ್ಯೆಯರನ್ನು ವಿವಾಹವಾದರು. ॥ ೨೩ ॥

ಎರಡನೆಯ ಅಧ್ಯಾಯವು ಮುಗಿಯಿತು. ॥ ೨ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಪಂಚಮಸ್ಕಂಧೇ
ಆಗ್ನೀಧ್ರವರ್ಣನಂ ನಾಮ ದ್ವಿತೀಯೋಽಧ್ಯಾಯಃ ॥ ೨ ॥

ಮೂರನೆಯ ಅಧ್ಯಾಯ

ನಾಭಿಮಹಾರಾಜನ ಚರಿತ್ರೆ

ಶ್ರೀಶುಕ ಉವಾಚ

ನಾಭಿರಪತ್ಯಕಾಮೋಽಪ್ರಜಯಾ ಮೇರುದೇವ್ಯಾ ಭಗವಂತಂ ಯಜ್ಞಪುರುಷಮವಹಿತಾತ್ಮಾಯಜತ ॥ ೧ ॥ ತಸ್ಯ ಹ ವಾವ ಶ್ರದ್ಧಯಾ ವಿಶುದ್ಧಭಾವೇನ ಯಜತಃ ಪ್ರವರ್ಗ್ಯೇಷು ಪ್ರಚರತ್ಸು ದ್ರವ್ಯದೇಶಕಾಲಮಂತ್ರರ್ತ್ವಿಗ್ದಕ್ಷಿಣಾವಿಧಾನಯೋಗೋಪಪತ್ತ್ಯಾ ದುರಧಿಗಮೋಽಪಿ ಭಗವಾನ್ ಭಾಗವತವಾತ್ಸಲ್ಯತಯಾ ಸುಪ್ರತೀಕ ಆತ್ಮಾನಮಪರಾಜಿತಂ ನಿಜಜನಾಭಿಪ್ರೇತಾರ್ಥವಿಧಿತ್ಸಯಾ ಗೃಹೀತಹೃದಯೋ ಹೃದಯಂಗಮಂ ಮನೋನಯನಾನಂದನಾವಯವಾಭಿರಾಮಮಾವಿಶ್ಚಕಾರ ॥ ೨ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ರಾಜೇಂದ್ರನೇ! ಆಗ್ನೀಧ್ರನ ಪುತ್ರನಾದ ನಾಭಿಮಹಾರಾಜನಿಗೆ ಸಂತಾನವಿರಲಿಲ್ಲ. ಅದಕ್ಕಾಗಿ ಅವನು ತನ್ನ ಭಾರ್ಯೆಯಾದ ಮೇರುದೇವಿಯೊಂದಿಗೆ ಪುತ್ರಕಾಮನೆಯಿಂದ ಏಕಾಗ್ರವಾದ ಮನಸ್ಸಿನಿಂದ ಭಗವಾನ್ ಯಜ್ಞಪುರುಷನನ್ನು ಆರಾಧಿಸಿದನು. ॥ ೧ ॥ ಸುಂದರಾಂಗನಾದ ಶ್ರೀಭಗವಂತನು – ದ್ರವ್ಯ, ದೇಶ, ಕಾಲ, ಮಂತ್ರ, ಋತ್ವಿಜ, ದಕ್ಷಿಣೆ ಮತ್ತು ವಿಧಿ ಮುಂತಾದ ಯಜ್ಞದ ಸಾಧನೆಗಳಿಂದ ಸಹಜವಾಗಿ ದೊರಕುವವನಲ್ಲವಾದರೂ ಅವನು ಭಕ್ತರ ಮೇಲೆ ಕೃಪೆ ಮಾಡುವವನಾಗಿದ್ದಾನೆ. ಅದಕ್ಕಾಗಿ ನಾಭಿಮಹಾರಾಜನು ಶ್ರದ್ಧೆಯಿಂದ ವಿಶುದ್ಧಭಾವದಿಂದ ಅವನ ಆರಾಧನೆಯನ್ನು ಮಾಡಿದಾಗ ಅವನ ಚಿತ್ತವು ತನ್ನ ಭಕ್ತನ ಅಭೀಷ್ಟವನ್ನು ಈಡೇರಿಸಲು ಉತ್ಸುಕವಾಯಿತು. ಅವನ ಸ್ವರೂಪವು ಸರ್ವಥಾ ಸ್ವತಂತ್ರವಾಗಿದ್ದರೂ ಅವನು ಪ್ರವರ್ಗ್ಯವೆಂಬ ಕರ್ಮದ ಅನುಷ್ಠಾನ ನಡೆಯುತ್ತಿದ್ದಾಗ ಕಣ್ಣುಗಳಿಗೆ ಆನಂದವನ್ನು ಈಯುವ ಅವಯವಗಳಿಂದ ಕೂಡಿ ಅವನು ಅತಿಸುಂದರವಾದ ಹೃದಯವನ್ನು ಸೂರೆಗೊಳ್ಳುವ ದಿವ್ಯ ಮಂಗಳ

ಅಥ ಹ ತಮಾವಿಷ್ಕೃತಭುಜಯುಗಲದ್ವಯಂ ಹಿರಣ್ಮಯಂ ಪುರುಷವಿಶೇಷಂ ಕಪಿಶಕೌಶೇಯಾಂಬರಧರಮುರಸಿ ವಿಲಸಚ್ಛ್ರೀವತ್ಸಲಲಾಮಂ ದರವರವನರುಹವನಮಾಲಾಚ್ಛೂರ್ಯಮೃತಮಣಿಗದಾದಿಭಿರುಪಲಕ್ಷಿತಂ ಸ್ಫುಟಕಿರಣಪ್ರವರಮುಕುಟಕುಂಡಲಕಟಕಕಟಿಸೂತ್ರಹಾರಕೇಯೂರನೂಪುರಾದ್ಯಂಗಭೂಷಣವಿಭೂಷಿತಮೃತ್ವಿಕ್ಸದಸ್ಯಗೃಹಪತಯೋಽಧನಾ ಇವೋತ್ತಮಧನಮುಪಲಭ್ಯ ಸಬಹುಮಾನಮರ್ಹಣೇನಾವನತಶೀರ್ಷಾಣ ಉಪತಸ್ಥುಃ ॥ ೩ ॥

ಋತ್ವಿಜ ಊಚುಃ

ಅರ್ಹಸಿ ಮುಹುರರ್ಹತ್ತಮಾರ್ಹಣಮಸ್ಮಾಕಮನುಪಥಾನಾಂ ನಮೋ ನಮ ಇತ್ಯೇತಾವತ್ಸದುಪಶಿಕ್ಷಿತಂ ಕೋಽರ್ಹತಿ ಪುಮಾನ್ ಪ್ರಕೃತಿಗುಣವ್ಯತಿಕರಮತಿರನೀಶ ಈಶ್ವರಸ್ಯ ಪರಸ್ಯ ಪ್ರಕೃತಿಪುರುಷಯೋರರ್ವಾಕ್ತನಾಭಿರ್ನಾಮರೂಪಾಕೃತಿಭೀ ರೂಪನಿರೂಪಣಮ್ ॥ ೪ ॥ ಸಕಲಜನನಿಕಾಯವೃಜಿನನಿರಸನಶಿವತಮಪ್ರವರಗುಣಗಣೈಕದೇಶಕಥನಾದೃತೇ ॥ ೫ ॥ ಪರಿಜನಾನುರಾಗವಿರಚಿತಶಬಲಸಂಶಬ್ದಸಲಿಲಸಿತಕಿಸಲಯತುಲಸಿಕಾದೂರ್ವಾಂಕುರೈರಪಿ ಸಂಭೃತಯಾ ಸಪರ್ಯಯಾ ಕಿಲ ಪರಮ ಪರಿತುಷ್ಯಸಿ ॥ ೬ ॥

ಅಥಾನಯಾಪಿ ನ ಭವತ ಇಜ್ಯಯೋರುಭಾರಭರಯಾ ಸಮುಚಿತಮರ್ಥಮಿಹೋಪಲಭಾಮಹೇ ॥ ೭ ॥ ಆತ್ಮನ ಏವಾನುಸವನಮಂಜಸಾವ್ಯತಿರೇಕೇಣ ಬೋಭೂಯಮಾನಾಶೇಷಪುರುಷಾರ್ಥಸ್ವರೂಪಸ್ಯ ಕಿಂತು ನಾಥಾಶಿಷ

ವಿಗ್ರಹದೊಡನೆ ಅಲ್ಲಿ ಪ್ರಕಟಗೊಂಡನು. ॥ ೨ ॥ ಶ್ರೀಸ್ವಾಮಿಯು ಹೊಂಬಣ್ಣದ ಪೀತಾಂಬರವನ್ನು ಧರಿಸಿದ್ದನು. ಆತನ ವಕ್ಷಸ್ಥಳದಲ್ಲಿ ಸುಮನೋಹರವಾದ ಶ್ರೀವತ್ಸಲಾಂಛನ ಶೋಭಿಸುತ್ತಿತ್ತು. ಭುಜಗಳಲ್ಲಿ ಶಂಖ, ಚಕ್ರ, ಗದೆ, ಪದ್ಮಗಳೂ ಹಾಗೂ ಕೊರಳಲ್ಲಿ ವನಮಾಲೆಯೂ, ಕೌಸ್ತುಭಮಣಿಯೂ ಶೋಭಿಸುತ್ತಿದ್ದವು. ಆವನ ಇಡೀ ಶರೀರವು – ಅಂಗ ಪ್ರತ್ಯಂಗಗಳ ಕಾಂತಿಯನ್ನು ಹೆಚ್ಚಿಸುತ್ತಿದ್ದ ಕಿರಣಜಾಲಗಳಿಂದ ಮಂಡಿತವಾಗಿ ಮಣಿಮಯವಾಗಿದ್ದ ಕಿರೀಟ, ಕುಂಡಲ, ಕಂಕಣ, ಉಡಿದಾರ, ಹಾರ, ತೋಳ್ಬಳೆ, ನೂಪುರ ಮುಂತಾದ ಭೂಷಣಗಳಿಂದ ಭೂಷಿತವಾಗಿತ್ತು. ಇಂತಹ ಪರಮತೇಜಸ್ವಿಯಾದ ಚತುರ್ಭುಜನಾದ ಪರಮಪುರುಷನ ಶ್ರೀಮೂರ್ತಿಯನ್ನು ಪ್ರತ್ಯಕ್ಷವಾಗಿ ಕಂಡೊಡನೆಯೇ ಋತ್ವಿಜರು, ಸದಸ್ಯರು ಮತ್ತು ಯಜಮಾನರೇ ಮುಂತಾದವರೆಲ್ಲರೂ ಧನರಾಶಿಯನ್ನು ಪಡೆದ ಕಡುಬಡವನಂತೆ ಪರಮಾನಂದದಿಂದ ಹಿರಿ-ಹಿರಿ ಹಿಗ್ಗಿದರು. ಅನಂತರ ಎಲ್ಲರೂ ತಲೆಬಾಗಿ ಅತ್ಯಂತ ಆದರದಿಂದ ಪ್ರಭುವನ್ನು ಅರ್ಘ್ಯಾದಿಗಳಿಂದ ಆರಾಧಿಸಿದರು. ಋತ್ವಿಜರು ಅವನನ್ನು ಸ್ತುತಿಸತೊಡಗಿದರು. ॥ ೩ ॥

ಋತ್ವಿಜರೆಂದರು – ಎಲೈ ಪೂಜ್ಯತಮನಾದ ಪ್ರಭುವೇ! ನಿನ್ನನ್ನೇ ಅನುಸರಿಸುತ್ತಿರುವ ಭಕ್ತರಾದ ನಮಗೆ ನೀನು ಮತ್ತೆ-ಮತ್ತೆ ಪೂಜನೀಯನಾಗಿದ್ದೀಯೆ. ಆದರೆ ನಿನ್ನನ್ನು ಪೂಜಿಸಲು ನಾವೇನು ಬಲ್ಲೆವು ? ಮಹಾಪುರುಷರು ನಮಗೆ ನಿನ್ನನ್ನು ಕುರಿತು 'ನಮೋ ನಮಃ' ಎಂಬುದನ್ನು ಮಾತ್ರ ಕಲಿಸಿಕೊಟ್ಟಿದ್ದಾರೆ. ನಮ್ಮ ಈ ವಂದನೆಯನ್ನೇ ಪೂಜೆಯೆಂದು ಸ್ವೀಕರಿಸು. ಸ್ವಾಮಿ ! ನೀನು ಪ್ರಕೃತಿಯನ್ನು ಪುರುಷನನ್ನು ಮೀರಿ ಅವುಗಳಿಗೆ ನಿಯಾಮಕನಾಗಿರುವವನು. ಅಪ್ರಾಕೃತನಾಗಿರುವ ಸಾಕ್ಷಾತ್ ಪರಮೇಶ್ವರನು. ಹೀಗಿರುವಾಗ ಪ್ರಾಕೃತ ಗುಣಗಳ ಕಾರ್ಯವಾಗಿರುವ ಈ ಪ್ರಪಂಚದಲ್ಲಿ ಬುದ್ಧಿಯು ಸಿಕ್ಕಿಕೊಂಡಿರುವುದರಿಂದ ನಿನ್ನ ಗುಣಗಳನ್ನು ಗಾನಮಾಡಲು ಅತ್ಯಂತ ಅಸಮರ್ಥನಾಗಿರುವ ಯಾವ ಪುರುಷನು ತಾನೇ ಪ್ರಾಕೃತವಾದ ನಾಮ, ರೂಪ, ಆಕೃತಿಗಳ ಮೂಲಕ ನಿನ್ನ ಸ್ವರೂಪವನ್ನು ನಿರೂಪಿಸಿಯಾನು ? ॥ ೪ ॥ ನಿನ್ನ ಪರಮ ಮಂಗಲಮಯ ಗುಣಗಳು ಎಲ್ಲ ಜನರ ದುಃಖಗಳನ್ನು ಹೋಗಲಾಡಿಸುವಂತಹುದು. ಯಾರಾದರೂ ಅದನ್ನು ವರ್ಣಿಸುವ ಸಾಹಸ ಮಾಡಿದರೆ ಕೇವಲ ಅತ್ಯಲ್ಪಭಾಗವನ್ನು ಮಾತ್ರ ವರ್ಣಿಸಬಲ್ಲನು. ॥ ೫ ॥ ಆದರೆ ಪ್ರಭುವೇ ! ನಿನ್ನ ಭಕ್ತರು ಪ್ರೇಮದಿಂದ ಗದ್ಗದವಾದ ವಾಣಿಯಿಂದ ಸ್ತುತಿಸುತ್ತಾ ಸಾಮಾನ್ಯವಾದ ನೀರು, ಶುದ್ಧವಾದ ಎಳೆ ತುಲಸೀದಳ ಮತ್ತು ಗರಿಕೆಗಳೇ ಮುಂತಾದ ಸಾಮಗ್ರಿಗಳಿಂದ ಪೂಜೆಮಾಡಿದರೂ ನೀನು ಅತ್ಯಂತ ಸಂತೋಷಪಡುವೆ. ॥ ೬ ॥

ಭಕ್ತಿಯೊಂದು ಇಲ್ಲದೆ ಇದ್ದ ಪಕ್ಷದಲ್ಲಿ ಈ ದ್ರವ್ಯ-ಕಾಲಗಳೇ ಮುಂತಾದ ಅನೇಕ ಅಂಗಗಳುಳ್ಳ ಯಜ್ಞದಿಂದಲೂ ನಿನಗೆ ಯಾವ ಪ್ರಯೋಜನವೂ ಇಲ್ಲವೆಂದು ನಾವು ಬಲ್ಲೆವು. ॥ ೭ ॥ ಏಕೆಂದರೆ, ನಿನಗೆ ತಾನೇ ಸದಾ ಸಂಪೂರ್ಣವಾಗಿ ಬೆಳಗುತ್ತಿರುವ ಸಮಸ್ತ ಪುರುಷಾರ್ಥಸ್ವರೂಪವಾದ ಯಾವ ಪರಮಾನಂದ ಇದೆಯೋ ಆ ಪರಮಾನಂದದ ಸಾಕ್ಷಾತ್ ಸ್ವರೂಪವೇ ನೀನು. ನಿನಗೆ ಈ ಪೂಜಾದಿ

ಆಶಾಸಾನಾನಾಮೇತದಭಿಸಂರಾಧನಮಾತ್ರಂ ಭವಿತುಮರ್ಹತಿ ॥ ೮ ॥ ತದ್ಯಥಾ ಬಾಲಿಶಾನಾಂ ಸ್ವಯಮಾತ್ಮನಃ ಶ್ರೇಯಃ ಪರಮವಿದುಷಾಂ ಪರಮಪರಮಪುರುಷಪ್ರಕರ್ಷಕರುಣಯಾ ಸ್ವಮಹಿಮಾನಂ ಚಾಪವರ್ಗಾಖ್ಯಮುಪಕಲ್ಪಯಿಷ್ಯನ್. ಸ್ವಯಂ ನಾಪಚಿತ ಏವೇತರವದಿಹೋಪಲಕ್ಷಿತಃ ॥ ೯ ॥ ಅಥಾಯಮೇವ ವರೋ ಹ್ಯರ್ಹತ್ತಮ ಯರ್ಹಿ ಬರ್ಹಿಷಿ ರಾಜರ್ಷೇರ್ವರದರ್ಷಭೋ ಭವಾನ್ನಿಜಪುರುಷೇಕ್ಷಣವಿಷಯ ಆಸೀತ್ ॥ ೧೦ ॥

ಅಸಂಗನಿಶಿತಜ್ಞಾನಾನಲವಿಧೂತಾಶೇಷಮಲಾನಾಂ ಭವತ್ ಸ್ವಭಾವಾನಾಮಾತ್ಮಾರಾಮಾಣಾಂ ಮುನೀನಾಮನವರತಪರಿಗುಣಿತಗುಣಗಣ ಪರಮಮಂಗಲಾಯನಗುಣಗಣಕಥನೋಽಸಿ ॥ ೧೧ ॥ ಅಥ ಕಥಂಚಿತ್ ಸ್ಖಲನಕ್ಷುತ್ಪತನಜೃಂಭಣದುರವಸ್ಥಾನಾದಿಷು ವಿವಶಾನಾಂ ನಃ ಸ್ಮರಣಾಯ ಜ್ವರಮರಣದಶಾಯಾಮಪಿ ಸಕಲಕಶ್ಮಲನಿರಸನಾನಿ ತವ ಗುಣಕೃತನಾಮಧೇಯಾನಿ ವಚನಗೋಚರಾಣಿ ಭವಂತು ॥ ೧೨ ॥

ಕಿಂಚಾಯಂ ರಾಜರ್ಷಿರಪತ್ಯಕಾಮಃ ಪ್ರಜಾಂ ಭವಾದೃಶೀಮಾಶಾಸಾನ ಈಶ್ವರಮಾಶಿಷಾಂ ಸ್ವರ್ಗಾಪವರ್ಗಯೋರಪಿ ಭವಂತಮುಪಧಾವತಿ ಪ್ರಜಾಯಾಮರ್ಥಪ್ರತ್ಯಯೋ ಧನದಮಿವಾಧನಃ ಫಲೀಕರಣಮ್ ॥ ೧೩ ॥ ಕೋ ವಾ ಇಹ ತೇಽಪರಾಜಿತೋಽಪರಾಜಿತಯಾ ಮಾಯಯಾನವಸಿತಪದವ್ಯಾನಾವೃತಮತಿರ್ವಿಷಯವಿಷ-

ಗಳಿಂದ ಯಾವುದೇ ಪ್ರಯೋಜನವೂ ಇಲ್ಲದಿದ್ದರೂ ಅನೇಕ ಪ್ರಕಾರದ ಕಾಮನೆಗಳ ಸಿದ್ಧಿಯನ್ನು ಬಯಸುವ ನಮ್ಮಂತಹವರಿಗೆ ಮನೋರಥಪೂರ್ತಿಯ ಸಾಧನ ಇದೇ ಆಗಿದೆ. ॥ ೮ ॥ ನೀನು ಬ್ರಹ್ಮದೇವರೇ ಮುಂತಾದ ಪರಮಪುರುಷರಿಗಿಂತಲೂ ಪರಮಶ್ರೇಷ್ಠನಾಗಿರುವೆ. ನಮ್ಮ ಪರಮ ಶ್ರೇಯಸ್ಸು ಯಾವುದರಲ್ಲಿದೆ ಎಂಬುನ್ನು ನಾವು ಅರಿಯೆವು. ಯಥೋಚಿತವಾದ ನಿನ್ನ ಪೂಜೆಯೂ ನಮ್ಮಿಂದ ನಡೆಯಲಿಲ್ಲ. ಆದರೂ ತತ್ತ್ವಜ್ಞರಾದ ಪುರುಷರು ಕರೆಯದೇ ಕೇವಲ ಕರುಣಾಪರರಾಗಿ ಅಜ್ಞಾನಿಗಳ ಬಳಿಗೆ ಹೋಗುವಂತೆ ನೀನೂ ಕೂಡ ನಮಗೆ ಮೋಕ್ಷವೆಂಬ ತನ್ನ ಪರಮಪದವನ್ನು ಮತ್ತು ನಮ್ಮ ಅಭೀಷ್ಟ ವಸ್ತುಗಳನ್ನು ಕರುಣಿಸಲಿಕ್ಕಾಗಿ ಬೇರೆ ಸಾಧಾರಣ ಯಜ್ಞದರ್ಶಕರಂತೆ ಇಲ್ಲಿ ಪ್ರಕಟನಾಗಿರುವೆ. ॥ ೯ ॥ ಪೂಜ್ಯತಮನಾದ ಪರಮಾತ್ಮನೇ! ಬ್ರಹ್ಮಾದಿ ಸಮಸ್ತ ವರಪ್ರದರಲ್ಲಿಯೂ ಶ್ರೇಷ್ಠನಾಗಿದ್ದರೂ ನೀನು ರಾಜರ್ಷಿ ನಾಭಿಯ ಈ ಯಜ್ಞಶಾಲೆಯಲ್ಲಿ ಸಾಕ್ಷಾತ್ ನಮ್ಮ ಕಣ್ಣುಗಳ ಮುಂದೆ ಪ್ರಕಟನಾಗಿರುವೆಯಲ್ಲ! ಇದೇ ನಮಗೆ ಎಲ್ಲಕ್ಕಿಂತ ದೊಡ್ಡ ವರವನ್ನು ನೀನು ಕೊಟ್ಟಿರುವೆ. ಈಗ ನಾವು ನಿನ್ನಲ್ಲಿ ಬೇರೆ ಯಾವ ವರವನ್ನು ಬೇಡಲಿ ? ॥ ೧೦ ॥

ಪ್ರಭೋ! ನಿನ್ನ ಗುಣಗಣಗಳ ಗಾನವು ಪರಮ ಮಂಗಳ ಮಯವಾದುದು. ವೈರಾಗ್ಯದಿಂದ ಪ್ರಜ್ವಲಿತವಾದ ಜ್ಞಾನಾಗ್ನಿಯ ಮೂಲಕ ತಮ್ಮ ಅಂತಃಕರಣದ ರಾಗ-ದ್ವೇಷಾದಿ ಎಲ್ಲ ದೋಷಗಳನ್ನು ಸುಟ್ಟುಹಾಕಿಕೊಂಡು, ನಿನ್ನಂತೆಯೇ ಪ್ರಶಾಂತಸ್ವಭಾವವಾಗಿರುವ ಆತ್ಮಾರಾಮ ಮುನಿಗಳೂ ಕೂಡ ನಿರಂತರವಾಗಿ ನಿನ್ನ ಗುಣಗಳನ್ನು ಗಾನಮಾಡುತ್ತಿರುತ್ತಾರೆ. ॥ ೧೧ ॥ ಆದ್ದರಿಂದ ಕೆಳಗೆ ಬೀಳುವುದು, ಎಡವುದು, ಸೀನುವುದು, ಆಕಳಿಸುವುದು, ಮಹಾ ಸಂಕಟಕ್ಕೆ ಒಳಗಾಗುವುದು, ಜ್ವರಕ್ಕೆ ತುತ್ತಾಗುವುದು, ಮರಣಕ್ಕೆ ಗುರಿಯಾಗುವುದು ಇವೇ ಮುಂತಾದ ಸಮಯಗಳಲ್ಲಿ ನಿನ್ನ ಸ್ಮರಣೆ ಆಗದಿದ್ದರೂ ಯಾವುದೇ ರೀತಿಯಿಂದ ಸಕಲಕಲಿಮಲನಾಶಕವಾದ 'ಭಕ್ತವತ್ಸಲ', 'ದೀನಬಂಧು' ಮುಂತಾದ ಗುಣದ್ಯೋತಕ ನಾಮಗಳನ್ನು ನಾವು ಉಚ್ಚರಿಸುವಂತಾಗಲಿ ಎಂಬುದೇ ನಿನ್ನಲ್ಲಿ ನಾವು ವರವನ್ನು ಬೇಡುತ್ತೇವೆ. ॥ ೧೨ ॥

ಇದಲ್ಲದೆ ನಮ್ಮದು ಇನ್ನೂ ಒಂದು ಪ್ರಾರ್ಥನೆಯುಂಟು. ಪ್ರಭುವೇ! ಈ ರಾಜರ್ಷಿನಾಭಿಯು ಸಂತಾನವನ್ನು ಬಯಸುತ್ತಾ ನಿನ್ನಂತಹ ಪುತ್ರನೇ ಬೇಕು ಎಂಬುದಾಗಿ ಆಸೆಪಡುತ್ತಿದ್ದಾನೆ. ನೀನು ಸರ್ವಫಲಪ್ರದನೂ, ಸ್ವರ್ಗ-ಮೋಕ್ಷಗಳನ್ನು ಕೊಡಬಲ್ಲವನೂ ಆಗಿದ್ದೀಯೆ. ಆದರೆ ಕಡುಬಡವನಾದವನು ಕೊಡುಗೈಯುಳ್ಳ ಧನಿಕನ ಬಳಿಗೆ ಹೋದರೂ ಆತನಿಂದ ಹೊಟ್ಟು, ನುಚ್ಚುಗಳನ್ನೇ ಬೇಡಿಕೊಳ್ಳುವಂತೆ ಈ ರಾಜರ್ಷಿಯು ಸಂತಾನವೇ ಪರಮಪುರುಷಾರ್ಥವೆಂದು ತಿಳಿದು ಸರ್ವೇಶ್ವರನಾದ ನಿನ್ನನ್ನು ಅದಕ್ಕೋಸ್ಕರವೇ ಆರಾಧನೆ ಮಾಡುತ್ತಿದ್ದಾನೆ. ॥ ೧೩ ॥ ಇದರಲ್ಲಿ ಆಶ್ಚರ್ಯವೇನೂ ಇಲ್ಲ. ನಿನ್ನ ಮಾಯೆಯ ಅಂತವನ್ನು ಯಾರೂ ಕಾಣಲಾರರು. ಅದು ಯಾರ ವಶಕ್ಕೂ ಸಿಗುವುದಿಲ್ಲ. ಮಹಾಪುರುಷರ ಪಾದಾರವಿಂದಗಳ ಆಶ್ರಯವನ್ನು ಪಡೆಯದೇ ಇದ್ದ ಯಾವನೂ ಅದಕ್ಕೆ

ಯಥಾನಾವೃತಪ್ರಕೃತಿರನುಪಾಸಿತಮಹಚ್ಚರಣಃ ॥ ೧೪ ॥ ಯದು ಹ ವಾವ ತವ ಪುನರದಭ್ರಕರ್ತರಿಹ ಸಮಾಹೂತಸ್ತತ್ರಾರ್ಥಧಿಯಾಂ ಮಂದಾನಾಂ ನಸ್ತದ್ಯದ್ದೇವಹೇಲನಂ ದೇವದೇವಾರ್ಹಸಿ ಸಾಮ್ಯೇನ ಸರ್ವಾನ್ ಪ್ರತಿವೋಢುಮವಿದುಷಾಮ್ ॥ ೧೫ ॥

ಶ್ರೀಶುಕ ಉವಾಚ

ಇತಿ ನಿಗದೇನಾಭಿಷ್ಟೂಯಮಾನೋ ಭಗವಾನನಿಮಿಷರ್ಷಭೋ ವರ್ಷಧರಾಭಿವಾದಿತಾಭಿವಂದಿತಚರಣಃ ಸದಯಮಿದಮಾಹ ॥ ೧೬ ॥

ಶ್ರೀಭಗವಾನುವಾಚ

ಅಹೋ ಬತಾಹಮೃಷಯೋ ಭವದ್ಭಿರವಿತಥಗೀರ್ಭಿರ್ವರಮಸುಲಭಮಭಿಯಾಚಿತೋ ಯದಮುಷ್ಯಾತ್ಮಜೋ ಮಯಾ ಸದೃಶೋ ಭೂಯಾದಿತಿ ಮಮಾಹಮೇವಾಭಿರೂಪಃ ಕೈವಲ್ಯಾದಥಾಪಿ ಬ್ರಹ್ಮವಾದೋ ನ ಮೃಷಾ ಭವಿತುಮರ್ಹತಿ ಮಮೈವ ಹಿ ಮುಖಂ ಯದ್ ದ್ವಿಜದೇವಕುಲಮ್ ॥ ೧೭ ॥ ತತ ಆಗ್ನೀಧ್ರೀಯೇಽಂಶಕಲಯಾವತರಿಷ್ಯಾಮ್ಯಾತ್ಮತುಲ್ಯಮನುಪಲಭಮಾನಃ ॥ ೧೮ ॥

ಶ್ರೀಶುಕ ಉವಾಚ

ಇತಿ ನಿಶಾಮಯಂತ್ಯಾ ಮೇರುದೇವ್ಯಾಃ ಪತಿಮಭಿಧಾಯಾಂತರ್ದಧೇ ಭಗವಾನ್ ॥ ೧೯ ॥ ಬರ್ಹಿಷಿ ತಸ್ಮಿನ್ನೇವ ವಿಷ್ಣುದತ್ತ ಭಗವಾನ್ಪರಮರ್ಷಿಭಿಃ ಪ್ರಸಾದಿತೋ ನಾಭೇಃ ಪ್ರಿಯಚಿಕೀರ್ಷಯಾ ತದವರೋಧಾಯನೇ ಮೇರುದೇವ್ಯಾಂ ಧರ್ಮಾಂದರ್ಶಯಿತುಕಾಮೋ ವಾತರಶನಾನಾಂ ಶ್ರಮಣಾನಾಮೃಷೀಣಾಮೂರ್ಧ್ವಮಂಥಿನಾಂ ಶುಕ್ಲಯಾ ತನುವಾವತತಾರ ॥ ೨೦ ॥

ವಶನಾಗದೆ ಇರಲಾರನು. ತನ್ನ ಬುದ್ಧಿಯ ಮೇಲೆ ಅದರ ತೆರೆಯು ಬೀಳದಂತೆ ಮಾಡಲಾರನು. ವಿಷಯವೆಂಬ ವಿಷದ ವೇಗದಿಂದ ತನ್ನ ಸ್ವಭಾವವು ದೂಷಿತವಾಗದಂತೆ ಮಾಡಿಕೊಳ್ಳಲಾರನು. ॥ ೧೪ ॥ ಓ ದೇವದೇವನೇ! ನೀನು ಭಕ್ತರ ಮಹಾ-ಮಹಾ ಕಾರ್ಯಗಳನ್ನೂ ಮಾಡಿಕೊಡುವ ಸರ್ವಶಕ್ತನು. ಮಂದಮತಿಗಳಾದ ನಾವು ಕಾಮನೆಗೆ ವಶರಾಗಿ ಈ ಅಲ್ಪಕಾರ್ಯಕ್ಕಾಗಿ ನಿನ್ನನ್ನು ಆವಾಹನಮಾಡಿ ನಿನಗೆ ಅಗೌರವ ತೋರಿದ್ದೇವೆ. ಆದರೆ ನೀನು ಸಮದರ್ಶಿಯಾದುದರಿಂದ ಅಜ್ಞಾನಿಗಳಾದ ನಮ್ಮ ಈ ದಿಟ್ಟತನವನ್ನು ಕ್ಷಮಿಸಬೇಕು, ಭಗವಂತನೇ! ॥ ೧೫ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಎಲೈ ರಾಜನೇ! ವರ್ಷಾಧಿಪತಿಯಾದ ನಾಭಿಮಹಾರಾಜನ ಪೂಜ್ಯರಾದ ಋತ್ವಿಜರು ಪ್ರಭುವಿನ ಅಡಿಗಳಿಗೆ ಎರಗಿ ಹೀಗೆ ಪ್ರಾರ್ಥನೆಮಾಡಲು ದೇವದೇವೋತ್ತಮನಾದ ಶ್ರೀಭಗವಂತನು ಕರುಣೆಯಿಂದ ಹೀಗೆ ಅಪ್ಪಣೆ ಕೊಡಿಸಿದನು. ॥ ೧೬ ॥

ಶ್ರೀಭಗವಂತನು ಹೇಳಿದನು – ಎಲೈ ಋಷಿಗಳೇ! ನೀವು ಸತ್ಯವಾದಿಗಳಾದ ಮಹಾತ್ಮರು. ಆದರೆ ರಾಜರ್ಷಿನಾಭಿಗೆ ನನ್ನಂತಹ ಪುತ್ರನು ಹುಟ್ಟಬೇಕು ಎಂಬ ದುರ್ಲಭವಾದ ವರವನ್ನು ಬೇಡಿದಿರಲ್ಲ, ಮುನಿಗಳೇ! ನನಗೆ ಸಮಾನನಾದರೋ ನಾನೇ ಆಗಿದ್ದೇನೆ. ಏಕೆಂದರೆ, ನಾನು ಅದ್ವಿತೀಯನಾಗಿದ್ದೇನೆ. ಆದರೂ ಬ್ರಾಹ್ಮಣರ ಮಾತುವು ಸುಳ್ಳಾಗಬಾರದು. ದ್ವಿಜಕುಲವು ನನ್ನದೇ ಮುಖವಾಗಿದ್ದಾರಲ್ಲ. ॥ ೧೭ ॥ ಅದಕ್ಕಾಗಿ ನಾನು ಸ್ವತಃ ನನ್ನ ಅಂಶಕಲೆಯಿಂದ ಆಗ್ನೀಧ್ರನಂದನ ನಾಭಿಯ ಮನೆಯಲ್ಲಿ ಅವತರಿಸುವೆನು. ಏಕೆಂದರೆ, ನನಗೆ ಸಮಾನರಾದವರು ಬೇರಾರೂ ಇಲ್ಲ. ॥ ೧೮ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಶ್ರೀಭಗವಂತನು ಮೇರುದೇವಿಯು ಕೇಳುವಂತೆ ಆಕೆಯ ಪತಿಗೆ ಹೀಗೆ ಹೇಳಿ ಅಂತರ್ಧಾನ ಹೊಂದಿದನು. ॥ ೧೯ ॥ ವಿಷ್ಣುದತ್ತ ಪರೀಕ್ಷಿತನೇ! ಹೀಗೆ ಯಜ್ಞದಲ್ಲಿ ಮಹರ್ಷಿಗಳಿಂದ ಪ್ರಸನ್ನಗೊಳಿಸಲ್ಪಟ್ಟ ಶ್ರೀಭಗವಂತನು ನಾಭಿಮಹಾರಾಜನಿಗೆ ಪ್ರಿಯವನ್ನುಂಟುಮಾಡಲು ಆತನ ಮಹಾರಾಣಿ ಮೇರುದೇವಿಯ ಗರ್ಭದಲ್ಲಿ ಶ್ರಮಣ (ದಿಗಂಬರ) ಸಂನ್ಯಾಸಿಗಳ ಮತ್ತು ನೈಷ್ಠಿಕ ಬ್ರಹ್ಮಚರ್ಯವುಳ್ಳ ಮುನಿಗಳ ಧರ್ಮವನ್ನು ಪ್ರಕಟಪಡಿಸಲಿಕ್ಕಾಗಿ ತನ್ನ ಶುದ್ಧ ಸತ್ತ್ವಮಯವಾದ ವಿಗ್ರಹದಿಂದ ಆವಿರ್ಭವಿಸಿದನು. ॥ ೨೦ ॥

ಮೂರನೆಯ ಅಧ್ಯಾಯವು ಮುಗಿಯಿತು. ॥ ೩ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಪಂಚಮಸ್ಕಂಧೇ ನಾಭಿಚರಿತೇ ಋಷಭಾವತಾರೋ ನಾಮ ತೃತೀಯೋಽಧ್ಯಾಯಃ ॥ ೩ ॥

ನಾಲ್ಕನೆಯ ಅಧ್ಯಾಯ

ಋಷಭದೇವರ ಮಹಿಮೆ – ರಾಜ್ಯಶಾಸನ

ಶ್ರೀಶುಕ ಉವಾಚ

ಅಥ ಹ ತಮುತ್ಪತ್ತ್ಯೈವಾಭಿವ್ಯಜ್ಯಮಾನಭಗವಲ್ಲಕ್ಷಣಂ ಸಾಮ್ಯೋಪಶಮವೈರಾಗ್ಯೈಶ್ವರ್ಯಮಹಾವಿಭೂತಿಭಿರನುದಿನಮೇಧಮಾನಾನುಭಾವಂ ಪ್ರಕೃತಯಃ ಪ್ರಜಾ ಬ್ರಾಹ್ಮಣಾ ದೇವತಾಶ್ಚಾವನಿತಲಸಮವನಾಯಾತಿತರಾಂ ಜಗೃಧುಃ ॥ ೧ ॥ ತಸ್ಯ ಹ ವಾ ಇತ್ಥಂ ವರ್ಷ್ಮಣಾ ವರೀಯಸಾ ಬೃಹಚ್ಛ್ಲೋಕೇನ ಚೌಜಸಾ ಬಲೇನ ಶ್ರಿಯಾ ಯಶಸಾ ವೀರ್ಯಶೌರ್ಯಾಭ್ಯಾಂ ಚ ಪಿತಾ ಋಷಭ ಇತೀದಂ ನಾಮ ಚಕಾರ ॥ ೨ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿದ್ರಾಜನೇ ! ನಾಭಿರಾಜನ ಪುತ್ರನಾಗಿ ಅವತರಿಸಿದವನು ಹುಟ್ಟಿನಿಂದಲೇ ಭಗವಾನ್ ನಾರಾಯಣನ ಚಿಹ್ನೆಗಳಾದ ವಜ್ರ, ಅಂಕುಶ ಮುಂತಾದವುಗಳಿಂದ ಅಲಂಕೃತನಾಗಿದ್ದು, ಶಾಂತಿ, ಸಮತೆ, ವೈರಾಗ್ಯ ಮತ್ತು ಐಶ್ವರ್ಯ ಮುಂತಾದ ದಿವ್ಯ ಲಕ್ಷಣಗಳಿಂದ ದಿನೇ-ದಿನೇ ವೃದ್ಧಿ ಹೊಂದುತ್ತಿದ್ದನು. ಇದನ್ನು ನೋಡಿ ಮಂತ್ರಿ, ಪುರೋಹಿತರೇ ಮುಂತಾದ ಪ್ರಕೃತಿಗಳಿಗೂ (ಮಂತ್ರಿಗಳಿಗೂ), ಪ್ರಜೆಗಳಿಗೂ ಬ್ರಾಹ್ಮಣರಿಗೂ, ದೇವತೆಗಳಿಗೂ ಈತನೇ ಮುಂದೆ ರಾಜನಾಗಿ ಭೂಮಿಯನ್ನು ಆಳಬೇಕೆಂಬ ಉತ್ಕಟವಾದ ಅಭಿಲಾಷೆಯುಂಟಾಯಿತು. ॥ ೧ ॥ ಆ ಶಿಶುವಿನ ಸುಂದರವೂ, ಸುಲಕ್ಷಣವೂ, ಸುದೃಢವೂ ಆದ ದೇಹವನ್ನೂ, ತೇಜಸ್ಸು ಯಶಸ್ಸು ಬಲ, ಐಶ್ವರ್ಯ, ಪರಾಕ್ರಮ, ಶೌರ್ಯ, ವೀರ್ಯ ಮುಂತಾದ ಗುಣಗಳಿಂದಾಗಿ ಮಹಾರಾಜಾ ನಾಭಿಯು ಅವನಿಗೆ 'ಋಷಭ' (ಶ್ರೇಷ್ಠ) ಎಂಬ ನಾಮಕರಣ ಮಾಡಿದನು. ॥ ೨ ॥

ತಸ್ಯ ಹೀಂದ್ರಃ ಸ್ಪರ್ಧಮಾನೋ ಭಗವಾನ್ ವರ್ಷೇ ನ ವವರ್ಷ ತದವಧಾರ್ಯ ಭಗವಾನೃಷಭದೇವೋ ಯೋಗೇಶ್ವರಃ ಪ್ರಹಸ್ಯಾತ್ಮಯೋಗಮಾಯಯಾ ಸ್ವವರ್ಷಮಜನಾಭಂ ನಾಮಾಭ್ಯವರ್ಷತ್ ॥ ೩ ॥ ನಾಭಿಸ್ತು ಯಥಾಭಿಲಷಿತಂ ಸುಪ್ರಜಸ್ತ್ವಮವರುಧ್ಯಾತಿಪ್ರಮೋದಭರವಿಹ್ವಲೋ ಗದ್ಗದಾಕ್ಷರಯಾ ಗಿರಾ ಸ್ವೈರಂ ಗೃಹೀತನರಲೋಕಸಧರ್ಮಂ ಭಗವಂತಂ ಪುರಾಣಪುರುಷಂ ಮಾಯಾವಿಲಸಿತಮತಿರ್ವತ್ಸ ತಾತೇತಿ ಸಾನುರಾಗಮುಪಲಾಲಯನ್ ಪರಾಂ ನಿರ್ವೃತಿಮುಪಗತಃ ॥ ೪ ॥

ಒಮ್ಮೆ ಭಗವಾನ್ ಇಂದ್ರನು ಅಸೂಯೆಗೊಂಡು ಆತನ ರಾಜ್ಯದಲ್ಲಿ ಮಳೆಯನ್ನೇ ಸುರಿಸಲಿಲ್ಲ. ಆಗ ಯೋಗೇಶ್ವರನಾದ ಭಗವಾನ್ ಋಷಭದೇವನು ಇಂದ್ರನ ಮೂರ್ಖತೆಯ ಬಗ್ಗೆ ನಗುತ್ತಾ ತನ್ನ ಯೋಗಮಾಯೆಯ ಪ್ರಭಾವದಿಂದ ಅಜನಾಭವೆಂಬ ಹೆಸರುಳ್ಳ ತನ್ನ ಭಾರತವರ್ಷದಲ್ಲಿ ಹೇರಳವಾಗಿ ಮಳೆಯನ್ನು ಸುರಿಸಿದನು. ॥ ೩ ॥ ತನ್ನ ಇಚ್ಛೆಗೆ ಅನುಗುಣವಾದ ಶ್ರೇಷ್ಠ ಪುತ್ರನು ದೊರಕಿದುದನ್ನು ಕಂಡು ನಾಭಿಮಹಾರಾಜನಿಗೆ ಪರಮಾನಂದವಾಯಿತು. ತನ್ನ ಸಂಕಲ್ಪದಿಂದಲೇ ಮನುಷ್ಯ-ಶರೀರವನ್ನು ಧರಿಸಿದ್ದ ಆ ಪುರಾಣಪುರುಷನ ಮಾಯಾವಿಲಾಸಕ್ಕೆ ಮರುಳಾಗಿ ಆತನು ಆ ಶಿಶುವನ್ನು ಪ್ರೀತಿಯಿಂದ ಮುದ್ದಿಸುತ್ತಾ ಅಪ್ಪ! ಮಗು! ಎಂದು ಪ್ರೇಮವಾಗಿ ಗದ್ಗದ ಕಂಠದಿಂದ ಕರೆಯುತ್ತಾ ಸುಖಸಾಗರದಲ್ಲಿ ಓಲಾಡುತ್ತಿದ್ದನು. ॥ ೪ ॥

ವಿದಿತಾನುರಾಗಮಾಪೌರಪ್ರಕೃತಿ ಜನಪದೋ ರಾಜಾ ನಾಭಿರಾತ್ಮಜಂ ಸಮಯಸೇತುರಕ್ಷಾಯಾಮಭಿಷಿಚ್ಯ ಬ್ರಾಹ್ಮಣೇಷೂಪನಿಧಾಯ ಸಹ ಮೇರುದೇವ್ಯಾ ವಿಶಾಲಾಯಾಂ ಪ್ರಸನ್ನನಿಪುಣೇನ ತಪಸಾ ಸಮಾಧಿಯೋಗೇನ ನರನಾರಾಯಣಾಖ್ಯಂ ಭಗವಂತಂ ವಾಸುದೇವಮುಪಾಸೀನಃ ಕಾಲೇನ ತನ್ಮಹಿಮಾನಮವಾಪ ॥ ೫ ॥

ಮಂತ್ರಿಮಂಡಲವೂ, ನಾಗರೀಕರೂ ಮತ್ತು ರಾಷ್ಟ್ರದ ಜನತೆಯೂ ಆ ಋಷಭದೇವನನ್ನು ಬಹಳವಾಗಿ ಪ್ರೀತಿಸುವುದನ್ನು ಕಂಡಾಗ ನಾಭಿಮಹಾರಾಜನು ಧರ್ಮಮರ್ಯಾದೆಯ ರಕ್ಷಣೆಗಾಗಿ ಆತನಿಗೆ ರಾಜ್ಯಾಭಿಷೇಕವನ್ನು ಮಾಡಿ ಬ್ರಾಹ್ಮಣರ ವಶಕ್ಕೆ ಒಪ್ಪಿಸಿದನು. ತಾನು ಪತ್ನಿಯಾದ ಮೇರುದೇವಿಯೊಡನೆ ಬದರಿಕಾಶ್ರಮಕ್ಕೆ ತೆರಳಿ, ಅಲ್ಲಿ ಯಾರಿಗೂ ಉದ್ವೇಗವನ್ನು ಉಂಟುಮಾಡದಿರುವ ಅಹಿಂಸಾವೃತ್ತಿಯಿಂದ ಕೂಡಿ, ಕುಶಲತೆಯಿಂದ ತೀವ್ರವಾದ ತಪಸ್ಸನ್ನಾಚರಿಸಿ ಸಮಾಧಿಯೋಗದ ಮೂಲಕ ಭಗವಾನ್ ವಾಸುದೇವನ ನರ-ನಾರಾಯಣರೂಪವನ್ನು ಆರಾಧಿಸುತ್ತಾ ಸಮಯ ಬಂದಾಗ ಭಗವಂತನ ಸ್ವರೂಪದಲ್ಲಿ ಲೀನನಾಗಿ ಹೋದನು. ॥ ೫ ॥

ಯಸ್ಯ ಹ ಪಾಂಡವೇಯ ಶ್ಲೋಕಾವುದಾಹರಂತಿ –

ಕೋ ನು ತತ್ಕರ್ಮ ರಾಜರ್ಷೇರ್ನಾಭೇರನ್ವಾಚರೇತ್ಪುಮಾನ್ ।
ಅಪತ್ಯತಾಮಗಾದ್ಯಸ್ಯ ಹರಿಃ ಶುದ್ಧೇನ ಕರ್ಮಣಾ ॥ ೬ ॥

ಬ್ರಹ್ಮಣ್ಯೋಽನ್ಯಃ ಕುತೋ ನಾಭೇರ್ವಿಪ್ರಾ ಮಂಗಲಪೂಜಿತಾಃ ।
ಯಸ್ಯ ಬರ್ಹಿಷಿ ಯಜ್ಞೇಶಂ ದರ್ಶಯಾಮಾಸುರೋಜಸಾ ॥ ೭ ॥

ಅಥ ಹ ಭಗವಾನೃಷಭದೇವಃ ಸ್ವವರ್ಷಂ ಕರ್ಮಕ್ಷೇತ್ರಮನುಮನ್ಯಮಾನಃ ಪ್ರದರ್ಶಿತಗುರುಕುಲವಾಸೋ ಲಬ್ಧವರೈರ್ಗುರುಭಿರನುಜ್ಞಾತೋ ಗೃಹಮೇಧಿನಾಂ ಧರ್ಮಾನನುಶಿಕ್ಷಮಾಣೋ ಜಯಂತ್ಯಾಮಿಂದ್ರದತ್ತಾಯಾಮುಭಯಲಕ್ಷಣಂ ಕರ್ಮ ಸಮಾಮ್ನಾಯಾಮ್ನಾತಮಭಿಯುಂಜನ್ನಾತ್ಮಜಾನಾಮಾತ್ಮಸಮಾನಾನಾಂ ಶತಂ ಜನಯಾಮಾಸ ॥ ೮ ॥ ಯೇಷಾಂ ಖಲು ಮಹಾಯೋಗೀ ಭರತೋ ಜ್ಯೇಷ್ಠಃ ಶ್ರೇಷ್ಠಗುಣ ಆಸೀದ್ಯೇನೇದಂ ವರ್ಷಂ ಭಾರತಮಿತಿ ವ್ಯಪದಿಶಂತಿ ॥ ೯ ॥ ತಮನು ಕುಶಾವರ್ತ ಇಲಾವರ್ತೋ ಬ್ರಹ್ಮಾವರ್ತೋ ಮಲಯಃ ಕೇತುರ್ಭದ್ರಸೇನ ಇಂದ್ರಸ್ಪೃಗ್ವಿದರ್ಭಃ ಕೀಕಟ ಇತಿ ನವ ನವತಿಪ್ರಧಾನಾಃ ॥ ೧೦ ॥

ಕವಿರ್ಹವಿರಂತರಿಕ್ಷಃ ಪ್ರಬುದ್ಧಃ ಪಿಪ್ಪಲಾಯನಃ ।
ಆವಿರ್ಹೋತ್ರೋಽಥ ದ್ರುಮಿಲಶ್ಚಮಸಃ ಕರಭಾಜನಃ ॥ ೧೧ ॥

ಇತಿ ಭಾಗವತಧರ್ಮದರ್ಶನಾ ನವ ಮಹಾಭಾಗವತಾಸ್ತೇಷಾಂ ಸುಚರಿತಂ ಭಗವನ್ಮಹಿಮೋಪಬೃಂಹಿತಂ ವಸುದೇವನಾರದಸಂವಾದಮುಪಶಮಾಯನಮುಪರಿಷ್ಟಾದ್ವರ್ಣಯಿಷ್ಯಾಮಃ ॥ ೧೨ ॥ ಯವೀಯಾಂಸ ಏಕಾಶೀತಿರ್ಜಾಯಂತೇಯಾಃ ಪಿತುರಾದೇಶಕರಾ ಮಹಾಶಾಲೀನಾ ಮಹಾಶ್ರೋತ್ರಿಯಾ ಯಜ್ಞಶೀಲಾಃ ಕರ್ಮವಿಶುದ್ಧಾ ಬ್ರಾಹ್ಮಣಾ ಬಭೂವುಃ ॥ ೧೩ ॥

ಪಾಂಡುನಂದನನೇ! ಆ ನಾಭಿರಾಜನ ವಿಷಯದಲ್ಲಿ ಈ ಲೋಕೋಕ್ತಿಯು ಪ್ರಸಿದ್ಧವಾಗಿದೆ –

ರಾಜರ್ಷಿಯಾದ ನಾಭಿರಾಜನ ಉದಾರವಾದ ಕರ್ಮಗಳನ್ನು ಆಚರಿಸಲು ಬೇರೆ ಯಾರಿಗೆ ತಾನೇ ಸಾಧ್ಯವಾಗುವುದು? ಆತನ ವಿಶುದ್ಧವಾದ ಕರ್ಮಗಳಿಂದ ಸಂತುಷ್ಟನಾಗಿ ಶ್ರೀಹರಿಯೇ ಆತನಿಗೆ ಪುತ್ರನಾದನಲ್ಲ! ॥ ೬ ॥ ಆ ನಾಭಿಮಹಾರಾಜನಿಗೆ ಸಮಾನವಾದ ಬ್ರಾಹ್ಮಣಭಕ್ತನು ಬೇರೆ ಯಾರು ಇದ್ದಾರೆ? ಮಂಗಳಕರ್ಮ-ಪೂಜಾದಿಗಳಿಂದ ಸಂತುಷ್ಟರಾದ ಬ್ರಾಹ್ಮಣ ಶ್ರೇಷ್ಠರು ತಮ್ಮ ಮಂತ್ರ ಬಲದಿಂದ ಯಜ್ಞಶಾಲೆಯಲ್ಲಿ ಆತನಿಗೆ ಸಾಕ್ಷಾತ್ ಶ್ರೀಮಹಾವಿಷ್ಣುವಿನ ದರ್ಶನ ಮಾಡಿಸಿದರು. ॥ ೭ ॥

ಭಗವಾನ್ ಋಷಭದೇವನು ತನ್ನ ದೇಶವಾದ ಅಜನಾಭಖಂಡವನ್ನು ಕರ್ಮಭೂಮಿಯೆಂದು ತಿಳಿದು ಲೋಕಸಂಗ್ರಹಕ್ಕಾಗಿ ಕೆಲಕಾಲ ಗುರುಕುಲವಾಸವನ್ನು ಮಾಡಿದನು. ಗುರುಗಳಿಗೆ ಯಥೋಚಿತವಾದ ದಕ್ಷಿಣೆಯನ್ನು ಸಮರ್ಪಿಸಿ, ಗೃಹಸ್ಥಾಶ್ರಮವನ್ನು ಕೈಗೊಳ್ಳಲು ಅವರಿಂದ ಅನುಮತಿಯನ್ನು ಪಡೆದನು. ಮತ್ತೆ ಜನರಿಗೆ ಗೃಹಸ್ಥಾಶ್ರಮದ ಆದರ್ಶವನ್ನು ತೋರುವುದಕ್ಕಾಗಿ ದೇವರಾಜನಾದ ಇಂದ್ರನು ತನಗೆ ಕನ್ಯಾದಾನಮಾಡಿಕೊಟ್ಟ ಜಯಂತೀದೇವಿಯನ್ನು ವಿವಾಹಮಾಡಿ ಕೊಂಡನು. ಅನಂತರ ಶ್ರೌತ, ಸ್ಮಾರ್ತ ಎರಡೂ ಬಗೆಯ ಶಾಸ್ತ್ರೀಯ ಕರ್ಮಗಳನ್ನು ಆಚರಿಸುತ್ತಾ ಜಯಂತಿಯಲ್ಲಿ ತನಗೆ ಸಮಾನವಾದ ಗುಣಗಳುಳ್ಳ ನೂರು ಮಂದಿ ಪುತ್ರರನ್ನು ಪಡೆದನು. ॥ ೮ ॥ ಮಹಾಯೋಗೀ ಭರತನು ಆ ನೂರುಮಂದಿಯಲ್ಲಿ ಎಲ್ಲರಿಗೆ ಹಿರಿಯವನಾಗಿದ್ದು ಎಲ್ಲರಿಂದ ಗುಣಗಳಲ್ಲಿಯೂ ಶ್ರೇಷ್ಠನಾಗಿದ್ದನು. ಆ ಭರತನ ಹೆಸರಿನಿಂದಲೇ ಈ ಅಜನಾಭಖಂಡಕ್ಕೆ "ಭಾರತವರ್ಷ" ಎಂಬ ಹೆಸರಾಯಿತು. ॥ ೯ ॥ ಅವನಿಂದ ಕಿರಿಯವರಾದ ಕುಶಾವರ್ತ, ಇಳಾವರ್ತ, ಬ್ರಹ್ಮಾವರ್ತ, ಮಲಯ, ಕೇತು, ಭದ್ರಸೇನ, ಇಂದ್ರಸ್ಪೃಕ್, ವಿದರ್ಭ ಮತ್ತು ಕೀಕಟ ಎಂಬ ಈ ಒಂಭತ್ತು ರಾಜಕುಮಾರರು ಉಳಿದ ತೊಂಭತ್ತು ತಮ್ಮಂದಿರಿಂದ ಹಿರಿಯವರೂ, ಶ್ರೇಷ್ಠರೂ ಆಗಿದ್ದರು. ॥ ೧೦ ॥ ಅವರಿಗಿಂತಲೂ ಕಿರಿಯವರಾದ ಕವಿ, ಹರಿ, ಅಂತರಿಕ್ಷ, ಪ್ರಬುದ್ಧ, ಪಿಪ್ಪಲಾಯನ, ಆವಿರ್ಹೋತ್ರ, ದ್ರುಮಿಲ, ಚಮಸ ಮತ್ತು ಕರಭಾಜನ ಎಂಬ ಒಂಭತ್ತು ಮಂದಿ ರಾಜಕುಮಾರರು ಭಾಗವತಧರ್ಮವನ್ನು ಪ್ರಚಾರಮಾಡಿದ ಭಗವದ್ಭಕ್ತಶಿರೋಮಣಿಗಳಾಗಿದ್ದರು. ಶ್ರೀಭಗವಂತನ ಮಹಿಮೆಯಿಂದ ಮಹಿಮಾನ್ವಿತರಾಗಿ ಪರಮಶಾಂತಿಯಿಂದ ಸಂಪನ್ನರಾಗಿದ್ದ ಇವರ ಪವಿತ್ರ ಚರಿತ್ರೆಯನ್ನು ನಾವು ಮುಂದೆ ನಾರದ-ವಸುದೇವರ ಸಂವಾದದ ಪ್ರಸಂಗದಲ್ಲಿ (ಏಕಾದಶಸ್ಕಂಧದಲ್ಲಿ) ಹೇಳುವೆವು. ॥ ೧೧-೧೨ ॥ ಇವರಿಂದಲೂ ಕಿರಿಯವರಾಗಿದ್ದ ಎಂಭತ್ತೊಂದು ಮಂದಿ ಜಯಂತಿಯ ಪುತ್ರರು ತಂದೆಯ ಆಜ್ಞೆಯನ್ನು ಪಾಲಿಸುವವರೂ, ಅತ್ಯಂತ ವಿನಯಶಾಲಿಗಳೂ, ವೇದಜ್ಞರೂ ಆಗಿದ್ದು ನಿರಂತರ ಯಜ್ಞಗಳನ್ನು ಆಚರಿಸುತ್ತಾ ಪುಣ್ಯಕರ್ಮಗಳ ಅನುಷ್ಠಾನದಿಂದ ಶುದ್ಧರಾಗಿ ಬ್ರಾಹ್ಮಣ್ಯವನ್ನು ಪಡೆದುಕೊಂಡರು. ॥ ೧೩ ॥

ಭಗವಾನೃಷಭಸಂಜ್ಞ ಆತ್ಮತಂತ್ರಃ ಸ್ವಯಂ ನಿತ್ಯನಿವೃತ್ತಾನರ್ಥಪರಂಪರಃ ಕೇವಲಾನಂದಾನುಭವ ಈಶ್ವರ ಏವ ವಿಪರೀತವತ್ಕರ್ಮಾಣ್ಯಾರಭಮಾಣಃ ಕಾಲೇನಾನುಗತಂ ಧರ್ಮಮಾಚರಣೇನೋಪಶಿಕ್ಷಯನ್ನತದ್ವಿದಾಂ ಸಮ ಉಪಶಾಂತೋ ಮೈತ್ರಃ ಕಾರುಣಿಕೋ ಧರ್ಮಾರ್ಥಯಶಃಪ್ರಜಾನಂದಾಮೃತಾವರೋಧೇನ ಗೃಹೇಷು ಲೋಕಂ ನಿಯಮಯತ್ ॥ ೧೪ ॥ ಯದ್ಯಚ್ಛೀರ್ಷಣ್ಯಾಚರಿತಂ ತತ್ತದನುವರ್ತತೇ ಲೋಕಃ ॥ ೧೫ ॥ ಯದ್ಯಪಿ ಸ್ವವಿದಿತಂ ಸಕಲಧರ್ಮಂ ಬ್ರಾಹ್ಮಂ ಗುಹ್ಯಂ ಬ್ರಾಹ್ಮಣೈರ್ದರ್ಶಿತಮಾರ್ಗೇಣ ಸಾಮಾದಿಭಿರುಪಾಯೈರ್ಜನತಾಮನುಶಶಾಸ ॥ ೧೬ ॥ ದ್ರವ್ಯದೇಶಕಾಲವಯಃಶ್ರದ್ಧರ್ತ್ವಿಗ್ವಿವಿಧೋದ್ದೇಶೋಪಚಿತೈಃ ಸರ್ವೈರಪಿ ಕ್ರತುಭಿರ್ಯಥೋಪದೇಶಂ ಶತಕೃತ್ವ ಇಯಾಜ ॥ ೧೭ ॥ ಭಗವತರ್ಷಭೇಣ ಪರಿರಕ್ಷ್ಯಮಾಣ ಏತಸ್ಮಿನ್ವರ್ಷೇ ನ ಕಶ್ಚನ ಪುರುಷೋ ವಾಂಛತ್ಯವಿದ್ಯಮಾನಮಿವಾತ್ಮನೋಽನ್ಯಸ್ಮಾತ್ಕಥಂಚನ ಕಿಮಪಿ ಕರ್ಹಿಚಿದವೇಕ್ಷತೇ ಭರ್ತರ್ಯನುಸವನಂ ವಿಜೃಂಭಿತಸ್ನೇಹಾತಿಶಯಮಂತರೇಣ ॥ ೧೮ ॥ ಸ ಕದಾಚಿದಟಮಾನೋ ಭಗವಾನೃಷಭೋ ಬ್ರಹ್ಮಾವರ್ತಗತೋ ಬ್ರಹ್ಮರ್ಷಿಪ್ರವರಸಭಾಯಾಂ ಪ್ರಜಾನಾಂ ನಿಶಾಮಯಂತೀನಾಮಾತ್ಮಜಾನವಹಿತಾತ್ಮನಃ ಪ್ರಶ್ರಯಪ್ರಣಯಭರಸುಯಂತ್ರಿತಾನಪ್ಯುಪಶಿಕ್ಷಯನ್ನಿತಿ ಹೋವಾಚ ॥ ೧೯ ॥

ಭಗವಾನ್ ಋಷಭದೇವರು ಭಗವದವತಾರಿಗಳಾಗಿದ್ದು ಆತ್ಮತಂತ್ರರಾಗಿದ್ದವರು. ಎಂದಿಗೂ ಯಾವ ಅನರ್ಥಪರಂಪರೆಗೂ ಸಿಲುಕದೆ ಕೇವಲ ಆನಂದಾನುಭವಸ್ವರೂಪದಲ್ಲೇ ನೆಲೆಗೊಂಡಿದ್ದರು. ಹೀಗೆ ಸಾಕ್ಷಾತ್ ಈಶ್ವರಸ್ವರೂಪರೇ ಆಗಿದ್ದರೂ ಅಜ್ಞಾನಿಗಳಂತೆ ಕರ್ಮಗಳನ್ನಾಚರಿಸುತ್ತಾ, ಕಾಲಾನುಸಾರವಾಗಿ ಪ್ರಾಪ್ತ ಧರ್ಮಗಳನ್ನು ಅನುಷ್ಠಾನಮಾಡುತ್ತಾ ಅದರ ತತ್ತ್ವವನ್ನು ಅರಿಯದ ಜನರಿಗೆ ಆ ಬಗೆಗೆ ಶಿಕ್ಷಣವನ್ನು ನೀಡುತ್ತಿದ್ದರು. ಜೊತೆಗೆ ಸರ್ವಸಮರೂ, ಶಾಂತರೂ, ಸುಹೃದಯರೂ, ಕಾರುಣಿಕರೂ ಆಗಿದ್ದು, ಧರ್ಮ, ಅರ್ಥ, ಯಶಸ್ಸು, ಸಂತಾನ, ಭೋಗಸುಖ ಮತ್ತು ಮೋಕ್ಷವನ್ನು ಸಂಗ್ರಹಿಸುತ್ತಾ ಜನರನ್ನು ಗೃಹಸ್ಥಾಶ್ರಮದಲ್ಲಿ ನಿಯಮಿಸುತ್ತಿದ್ದರು. ॥ ೧೪ ॥ ಮಹಾಪುರುಷರು ಹೇಗೆ-ಹೇಗೆ ಆಚರಿಸುತ್ತಾರೋ ಬೇರೆ ಜನರು ಅದನ್ನೇ ಅನುಕರಣ ಮಾಡತೊಡಗುವರು. ॥ ೧೫ ॥ ಧರ್ಮಗಳ ಸಾರರೂಪವಾದ ವೇದಗಳ ಗೂಢರಹಸ್ಯಗಳನ್ನು ತಾವು ಚೆನ್ನಾಗಿ ಅರಿತಿದ್ದರೂ, ಬ್ರಾಹ್ಮಣರು ತಿಳಿಸಿದ ವಿಧಿಯಂತೆ ಸಾಮ-ದಾನಗಳೇ ಮುಂತಾದ ನೀತಿಗೆ ಅನುಸಾರವಾಗಿಯೇ ಜನರನ್ನು ಪಾಲಿಸುತ್ತಿದ್ದರು. ॥ ೧೬ ॥ ಅವರು ಶಾಸ್ತ್ರಗಳ ಮತ್ತು ಶಾಸ್ತ್ರಜ್ಞರಾದ ಬ್ರಾಹ್ಮಣರ ಉಪದೇಶಗಳಂತೆ ಬೇರೆ-ಬೇರೆ ದೇವತೆಗಳನ್ನು ಉದ್ದೇಶಿಸಿ ದ್ರವ್ಯ, ದೇಶ, ಕಾಲ, ವಯಸ್ಸು, ಶ್ರದ್ಧೆ ಮತ್ತು ಋತ್ವಿಜರು ಮುಂತಾದವುಗಳಿಂದ ಸಂಪನ್ನವಾದ ಎಲ್ಲ ಯಜ್ಞಗಳನ್ನು ನೂರು ಬಾರಿ ಆಚರಿಸಿದರು. ॥ ೧೭ ॥ ಭಗವಾನ್ ಋಷಭದೇವರ ಆಳ್ವಿಕೆಯ ಕಾಲದಲ್ಲಿ ಭಾರತವರ್ಷದ ಜನರು ತಮ್ಮ ಪ್ರಭುವಿನ ವಿಷಯದಲ್ಲಿ ಪ್ರತಿದಿನವೂ ಬೆಳೆಯುತ್ತಿದ್ದ ಅನುರಾಗವಲ್ಲದೆ ಬೇರೆ ಯಾವ ವಸ್ತುವನ್ನು ಎಂದೂ ಬಯಸುತ್ತಿರಲಿಲ್ಲ. ಇಷ್ಟೇ ಅಲ್ಲ, ಪರರ ಪದಾರ್ಥಗಳನ್ನು ಆಕಾಶಕುಸುಮವೇ ಮುಂತಾದವುಗಳಂತೇ ಭಾವಿಸಿ ಯಾರೂ ಬಯಸುತ್ತಿರಲಿಲ್ಲ, ಅದರತ್ತ ದೃಷ್ಟಿಯನ್ನೂ ಹರಿಸುತ್ತಿರಲಿಲ್ಲ. ॥ ೧೮ ॥ ಭಗವಾನ್ ಋಷಭದೇವರು ದೇಶದಲ್ಲಿ ಸಂಚರಿಸುತ್ತಾ ಒಮ್ಮೆ ಬ್ರಹ್ಮಾವರ್ತಕ್ಕೆ ದಯಮಾಡಿಸಿದರು. ಅಲ್ಲಿ ಅವರು ದೊಡ್ಡ-ದೊಡ್ಡ ಮಹರ್ಷಿಗಳ ಸಭೆಯಲ್ಲಿ ಎಲ್ಲ ಪ್ರಜೆಗಳ ಎದುರಿಗೆ ಎಲ್ಲರೂ ಕೇಳುವಂತೇ ಜಿತೇಂದ್ರಿಯರೂ, ವಿನಯಶಾಲಿಗಳೂ, ಪಿತೃಭಕ್ತಿಸಂಪನ್ನರೂ ಆದ ತಮ್ಮ ಪುತ್ರರನ್ನು ಕುರಿತು ಹೀಗೆ ಉಪದೇಶ ಮಾಡಿದರು. ॥ ೧೯ ॥

ನಾಲ್ಕನೆಯ ಅಧ್ಯಾಯವು ಮುಗಿಯಿತು. ॥ ೪ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಪಂಚಮಸ್ಕಂಧೇ
ಚತುರ್ಥೋಽಧ್ಯಾಯಃ ॥ ೪ ॥

ಐದನೆಯ ಅಧ್ಯಾಯ

ಋಷಭದೇವರು ಪುತ್ರರಿಗೆ ಮಾಡಿದ ಉಪದೇಶ ಮತ್ತು ಸ್ವಯಂ ಅವಧೂತವೃತ್ತಿಯನ್ನು ಕೈಗೊಂಡಿದ್ದು

ಋಷಭ ಉವಾಚ

ನಾಯಂ ದೇಹೋ ದೇಹಭಾಜಾಂ ನೃಲೋಕೇ
ಕಷ್ಟಾನ್ ಕಾಮಾನರ್ಹತೇ ವಿಡ್ಭುಜಾಂ ಯೇ ।
ತಪೋ ದಿವ್ಯಂ ಪುತ್ರಕಾ ಯೇನ ಸತ್ತ್ವಂ
ಶುದ್ಧ್ಯೇದ್ಯಸ್ಮಾದ್ ಬ್ರಹ್ಮಸೌಖ್ಯಂ ತ್ವನಂತಮ್ ॥ ೧ ॥

ಮಹತ್ಸೇವಾಂ ದ್ವಾರಮಾಹುರ್ವಿಮುಕ್ತೇ-
ಸ್ತಮೋದ್ವಾರಂ ಯೋಷಿತಾಂ ಸಂಗಿಸಂಗಮ್ ।
ಮಹಾಂತಸ್ತೇ ಸಮಚಿತ್ತಾಃ ಪ್ರಶಾಂತಾ
ವಿಮನ್ಯವಃ ಸುಹೃದಃ ಸಾಧವೋ ಯೇ ॥ ೨ ॥

ಯೇ ವಾ ಮಯೀಶೇ ಕೃತಸೌಹೃದಾರ್ಥಾ
ಜನೇಷು ದೇಹಂಭರವಾರ್ತಿಕೇಷು ।
ಗೃಹೇಷು ಜಾಯಾತ್ಮಜರಾತಿಮತ್ಸು
ನ ಪ್ರೀತಿಯುಕ್ತಾ ಯಾವದರ್ಥಾಶ್ಚ ಲೋಕೇ ॥ ೩ ॥

ನೂನಂ ಪ್ರಮತ್ತಃ ಕುರುತೇ ವಿಕರ್ಮ
ಯದಿಂದ್ರಿಯಪ್ರೀತಯ ಆಪೃಣೋತಿ ।
ನ ಸಾಧು ಮನ್ಯೇ ಯತ ಆತ್ಮನೋಽಯ-
ಮಸನ್ನಪಿ ಕ್ಲೇಶದ ಆಸ ದೇಹಃ ॥ ೪ ॥

ಪರಾಭವಸ್ತಾವದಬೋಧಜಾತೋ
ಯಾವನ್ನ ಜಿಜ್ಞಾಸತ ಆತ್ಮತತ್ತ್ವಮ್ ।
ಯಾವತ್ಕ್ರಿಯಾಸ್ತಾವದಿದಂ ಮನೋ ವೈ
ಕರ್ಮಾತ್ಮಕಂ ಯೇನ ಶರೀರಬಂಧಃ ॥ ೫ ॥

ಏವಂ ಮನಃ ಕರ್ಮವಶಂ ಪ್ರಯುಂಕ್ತೇ
ಅವಿದ್ಯಯಾಽಽತ್ಮನ್ಯುಪಧೀಯಮಾನೇ ।
ಪ್ರೀತಿರ್ನ ಯಾವನ್ಮಯಿ ವಾಸುದೇವೇ
ನ ಮುಚ್ಯತೇ ದೇಹಯೋಗೇನ ತಾವತ್ ॥ ೬ ॥

ಯದಾ ನ ಪಶ್ಯತ್ಯಯಥಾ ಗುಣೇಹಾಂ
ಸ್ವಾರ್ಥೇ ಪ್ರಮತ್ತಃ ಸಹಸಾ ವಿಪಶ್ಚಿತ್ ।
ಗತಸ್ಮೃತಿರ್ವಿಂದತಿ ತತ್ರ ತಾಪಾ-
ನಾಸಾದ್ಯ ಮೈಥುನ್ಯಮಗಾರಮಜ್ಞಃ ॥ ೭ ॥

ಶ್ರೀಋಷಭದೇವರು ಹೇಳುತ್ತಾರೆ – ಎಲೈ ಪುತ್ರರೇ ! ಮನುಷ್ಯ ಲೋಕದಲ್ಲಿ ಈ ಮನುಷ್ಯಶರೀರವು ಕೇವಲ ದುಃಖ ಮಯವಾದ ವಿಷಯಸುಖಗಳನ್ನು ಪಡೆಯಲಿಕ್ಕಾಗಿ ಇದೆ ಎಂದು ತಿಳಿಯಬೇಡಿರಿ. ಈ ಭೋಗಗಳನ್ನಾದರೋ ಅಮೇಧ್ಯವನ್ನು ಭಕ್ಷಿಸುವ ಹಂದಿ–ನಾಯಿ ಮುಂತಾದವುಗಳೂ ಅನುಭವಿಸುತ್ತವೆ. ಈ ಶರೀರದಿಂದ ದಿವ್ಯ ತಪಸ್ಸನ್ನೇ ಆಚರಿಸಬೇಕು. ಅದರಿಂದ ಅಂತಃಕರಣವು ಶುದ್ಧವಾಗಿ, ಅನಂತ ಬ್ರಹ್ಮಾನಂದವು ದೊರೆಯುವುದು. ॥ ೧ ॥ ಮಹಾಪುರುಷರ ಸೇವೆಯು ಮುಕ್ತಿಗೆ ದ್ವಾರವೆಂದೂ, ಸ್ತ್ರೀಲಂಪಟರಾದ ಕಾಮುಕರ ಸಂಗವು ನರಕದ ದ್ವಾರವೆಂದು ತಿಳಿಸಲಾಗಿದೆ. ಸಮಚಿತ್ತರೂ, ಪ್ರಶಾಂತರೂ, ಕ್ರೋಧರಹಿತರೂ, ಸರ್ವರಿಗೆ ಹಿತವನ್ನೇ ಚಿಂತಿಸುವವರೂ, ಸದಾಚಾರಸಂಪನ್ನರೂ ಆದವರೇ ಮಹಾಪುರುಷರಾಗಿದ್ದಾರೆ. ॥ ೨ ॥ ಅಥವಾ ಪರಮಾತ್ಮನಾದ ನನ್ನ ಪ್ರೇಮವನ್ನೇ ಏಕೈಕ ಪುರುಷಾರ್ಥವೆಂದು ತಿಳಿಯುವವರೂ, ಕೇವಲ ವಿಷಯಗಳ ಚರ್ಚೆಯನ್ನೇ ಮಾಡುವ ಜನರಲ್ಲಿ ಹಾಗೂ ಪತ್ನೀ, ಪುತ್ರ, ಧನಾದಿ ಸಾಮಗ್ರಿಗಳಿಂದ ಸಂಪನ್ನವಾದ ಮನೆಯಲ್ಲಿ ರುಚಿಯಿಲ್ಲದಿರುವವರೂ, ತಮ್ಮ ಶರೀರದ ನಿರ್ವಾಹಕ್ಕಾಗಿ ಬೇಕಷ್ಟೇ ಲೌಕಿಕ ಕರ್ಮಗಳಲ್ಲಿ ಪ್ರವೃತ್ತರಾದವರೂ ಮಹಾತ್ಮರಾಗಿದ್ದಾರೆ. ॥ ೩ ॥ ಮನುಷ್ಯನು ನಿಜವಾಗಿಯೂ ಇಂದ್ರಿಯಗಳನ್ನು ತೃಪ್ತಿಪಡಿಸಲಿಕ್ಕಾಗಿಯೇ ಪ್ರಮಾದವಶನಾಗಿ ಕೆಟ್ಟಕೆಲಸಗಳನ್ನು ಮಾಡುತ್ತಾನೆ. ಇದನ್ನು ನಾನು ಒಳ್ಳೆಯದೆಂದು ತಿಳಿಯುವುದಿಲ್ಲ. ಏಕೆಂದರೆ, ಇದರಿಂದಲೇ ಆತ್ಮನಿಗೆ ಈ ಅಸತ್ತಾದ ದುಃಖಮಯ ಶರೀರವು ದೊರೆಯುತ್ತದೆ. ॥ ೪ ॥ ಜೀವಿಗೆ ಆತ್ಮತತ್ತ್ವದ ಜಿಜ್ಞಾಸೆ ಉಂಟಾಗುವವರೆಗೆ ಅಜ್ಞಾನವಶದಿಂದ ದೇಹಾದಿಗಳ ಮೂಲಕ ಆತ್ಮನ ಸ್ವರೂಪವು ಅಡಗಿಕೊಂಡಿರುತ್ತದೆ. ಈ ಲೌಕಿಕ– ವೈದಿಕ ಕರ್ಮಗಳಲ್ಲಿ ಸಿಕ್ಕಿಹಾಕಿಕೊಂಡಿರುವವರೆಗೆ ಮನುಷ್ಯನಲ್ಲಿ ಕರ್ಮಗಳ ವಾಸನೆಗಳು ಇದ್ದುಕೊಂಡಿರುತ್ತವೆ ಮತ್ತು ಅದರಿಂದಲೇ ಅವನಿಗೆ ಶರೀರ ಬಂಧನವು ಬಂದೇ ಬರುವುದು. ॥ ೫ ॥ ಹೀಗೆ ಅವಿದ್ಯೆಯ ಮೂಲಕ ಆತ್ಮತತ್ತ್ವವು ಮುಚ್ಚಿಹೋಗಿರುವುದರಿಂದ ಕರ್ಮವಾಸನೆಗೆ ತುತ್ತಾಗಿ ಚಿತ್ತವು ಮನುಷ್ಯನನ್ನು ಪುನಃ ಕರ್ಮಗಳಲ್ಲೇ ತೊಡಗಿಸುತ್ತದೆ. ಆದ್ದರಿಂದ ಜೀವಿಗೆ ವಾಸುದೇವನಾದ ನನ್ನಲ್ಲಿ ಪ್ರೀತಿಯುಂಟಾಗುವ ವರೆಗೆ ದೇಹಬಂಧನದಿಂದ ಬಿಡುಗಡೆಯಾಗಲಾರನು. ॥ ೬ ॥ ಸ್ವಾರ್ಥದಿಂದ ಮರುಳಾದ ಜೀವನು ವಿವೇಕವನ್ನು ಆಶ್ರಯಿಸಿ, ಇಂದ್ರಿಯಗಳ ಚೇಷ್ಟೆಗಳನ್ನು ಮಿಥ್ಯೆಗಳೆಂದು ನೋಡುವವರೆಗೆ ಆತ್ಮಸ್ವರೂಪದ ಸ್ಮೃತಿಯನ್ನು ಕಳಕೊಂಡ ಕಾರಣದಿಂದ ಅವನು ಅಜ್ಞಾನವಶನಾಗಿ ವಿಷಯ ಪ್ರಧಾನವಾದ ಮನೆಯೇ ಮುಂತಾದವುಗಳಲ್ಲಿ ಆಸಕ್ತನಾಗಿರುತ್ತಾನೆ ಮತ್ತು ನಾನಾರೀತಿಯ ಕ್ಲೇಶಗಳನ್ನು ಅನುಭವಿಸುತ್ತಿರುತ್ತಾನೆ. ॥ ೭ ॥

ಸ್ತ್ರೀ–ಪುರುಷರ ದಾಂಪತ್ಯಭಾವವೆಂಬುದು ಅವರ ಹೃದಯವನ್ನು ಸೇರಿಸುವ ಮತ್ತೊಂದು ಸ್ಥೂಲವಾದ ಹಾಗೂ ಕತ್ತರಿಸಲಾಗದ

ಪುಂಸಃ ಸ್ತ್ರಿಯಾ ಮಿಥುನೀಭಾವಮೇತಂ
ತಯೋರ್ಮಿಥೋ ಹೃದಯಗ್ರಂಥಿಮಾಹುಃ ।
ಅತೋ ಗೃಹಕ್ಷೇತ್ರಸುತಾಪ್ತವಿತ್ತೈ-
ರ್ಜನಸ್ಯ ಮೋಹೋಽಯಮಹಂ ಮಮೇತಿ ॥ ೮ ॥

ಯದಾ ಮನೋಹೃದಯಗ್ರಂಥಿರಸ್ಯ
ಕರ್ಮಾನುಬದ್ಧೋ ದೃಢ ಆಶ್ಲಥೇತ ।
ತದಾ ಜನಃ ಸಂಪರಿವರ್ತತೇಽಸ್ಮಾದ್
ಮುಕ್ತಃ ಪರಂ ಯಾತ್ಯತಿಹಾಯ ಹೇತುಮ್ ॥ ೯ ॥

ಹಂಸೇ ಗುರೌ ಮಯಿ ಭಕ್ತ್ಯಾನುವೃತ್ತ್ಯಾ
ವಿತೃಷ್ಣಯಾ ದ್ವಂದ್ವತಿತಿಕ್ಷಯಾ ಚ ।
ಸರ್ವತ್ರ ಜಂತೋರ್ವ್ಯಸನಾವಗತ್ಯಾ
ಜಿಜ್ಞಾಸಯಾ ತಪಸೇಹಾನಿವೃತ್ತ್ಯಾ ॥ ೧೦ ॥

ಮತ್ಕರ್ಮಭಿರ್ಮತ್ಕಥಯಾ ಚ ನಿತ್ಯಂ
ಮದ್ದೇವಸಂಗಾದ್ಗುಣಕೀರ್ತನಾನ್ಮೇ ।
ನಿರ್ವೈರಸಾಮ್ಯೋಪಶಮೇನ ಪುತ್ರಾ
ಜಿಹಾಸಯಾ ದೇಹಗೇಹಾತ್ಮಬುದ್ಧೇಃ ॥ ೧೧ ॥

ಅಧ್ಯಾತ್ಮಯೋಗೇನ ವಿವಿಕ್ತಸೇವಯಾ
ಪ್ರಾಣೇಂದ್ರಿಯಾತ್ಮಾಭಿಜಯೇನ ಸಧ್ರ್ಯಕ್ ।
ಸಚ್ಛ್ರದ್ಧಯಾ ಬ್ರಹ್ಮಚರ್ಯೇಣ ಶಶ್ವದ್
ಅಸಂಪ್ರಮಾದೇನ ಯಮೇನ ವಾಚಾಮ್ ॥ ೧೨ ॥

ಸರ್ವತ್ರ ಮದ್ಭಾವವಿಚಕ್ಷಣೇನ
ಜ್ಞಾನೇನ ವಿಜ್ಞಾನವಿರಾಜಿತೇನ ।
ಯೋಗೇನ ಧೃತ್ಯುದ್ಯಮಸತ್ತ್ವಯುಕ್ತೋ
ಲಿಂಗಂ ವ್ಯಪೋಹೇತ್ಕುಶಲೋಽಹಮಾಖ್ಯಮ್ ॥ ೧೩ ॥

ಕರ್ಮಾಶಯಂ ಹೃದಯಗ್ರಂಥಿಬಂಧ-
ಮವಿದ್ಯಯಾಽಽಸಾದಿತಮಪ್ರಮತ್ತಃ ।
ಅನೇನ ಯೋಗೇನ ಯಥೋಪದೇಶಂ
ಸಮ್ಯಗ್ವ್ಯಪೋಹ್ಯೋಪರಮೇತ ಯೋಗಾತ್ ॥ ೧೪ ॥

ಗಂಟು ಆಗಿದೆ ಎಂದು ಪಂಡಿತರು ಹೇಳುತ್ತಾರೆ. ದೇಹಾಭಿಮಾನ ರೂಪವಾದ ಒಂದೊಂದು ಸೂಕ್ಷ್ಮಗಂಟುಗಳಾದರೋ ಅವನಲ್ಲಿ ಬೇರೆ-ಬೇರೆಯಾಗಿ ಮೊದಲಿನಿಂದಲೇ ಇವೆ. ಇದರಿಂದಲೇ ಜೀವಿಗೆ ದೇಹೇಂದ್ರಿಯಗಳಲ್ಲದೆ ಮನೆ, ಹೊಲ, ಪುತ್ರರು, ಸ್ವಜನರು ಮತ್ತು ಧನ ಮುಂತಾದವುಗಳಲ್ಲಿಯೂ 'ನಾನು- ನನ್ನದು' ಎಂಬ ಮೋಹವು ಉಂಟಾಗುವುದು. ॥ ೮ ॥ ಕರ್ಮವಾಸನೆಯಿಂದ ಬಿದ್ದಿರುವ ಇವನ ಈ ಬಲವಾದ ಹೃದಯ ಗ್ರಂಥಿಯು ಸಡಿಲವಾದಾಗ ಈ ದಾಂಪತ್ಯಭಾವದಿಂದ ನಿವೃತ್ತಿಯಾಗಿ ಹೋಗುತ್ತಾನೆ. ಹಾಗೆಯೇ ಸಂಸಾರಬಂಧನಕ್ಕೆ ಕಾರಣವಾದ ಅಹಂಕಾರವನ್ನು ತ್ಯಜಿಸಿ ಎಲ್ಲವಿಧದ ಬಂಧನಗಳಿಂದ ಮುಕ್ತನಾಗಿ ಪರಮಪದವನ್ನು ಪಡೆದು ಕೊಳ್ಳುವನು. ॥ ೯ ॥ ಪುತ್ರರೇ! ಸಂಸಾರಸಾಗರದಿಂದ ದಾಟಲು ಕುಶಲನಾದ ಹಾಗೂ ಧೈರ್ಯ, ಉದ್ಯಮ, ಸತ್ತ್ವವಿಶಿಷ್ಟನಾದ ಮನುಷ್ಯನು - ಎಲ್ಲರ ಆತ್ಮಸ್ವರೂಪನೂ, ಗುರುಸ್ವರೂಪನೂ ■ ಭಗವಂತನಾದ ನನ್ನಲ್ಲಿ ಭಕ್ತಿ ಭಾವವನ್ನು ಇರಿಸುವುದರಿಂದ, ನನ್ನಲ್ಲಿ ಪರಾಯಣನಾಗುವುದರಿಂದ, ತೃಷ್ಣೆಯ ತ್ಯಾಗದಿಂದ, ಸುಖ-ದುಃಖಾದಿ ದ್ವಂದ್ವಗಳನ್ನು ಸಹಿಸುವುದರಿಂದ, 'ಜೀವಿಯ ಎಲ್ಲ ಯೋನಿಗಳಲ್ಲಿಯೂ ದುಃಖವೇ ಇರುವುದು' ಎಂಬ ವಿಚಾರದಿಂದ, ತತ್ತ್ವಜಿಜ್ಞಾಸೆಯಿಂದ, ತಪಸ್ಸಿನಿಂದ, ಸಕಾಮಕರ್ಮಗಳ ತ್ಯಾಗದಿಂದ, ನನಗಾಗಿಯೇ ಕರ್ಮಮಾಡುವುದರಿಂದ, ನನ್ನ ಕಥೆಗಳನ್ನು ಪ್ರತಿದಿನವೂ ಶ್ರವಣಿಸುವುದರಿಂದ, ನನ್ನ ಭಕ್ತರ ಸಮಾಗಮ ಮತ್ತು ನನ್ನ ಗುಣಗಳ ಕೀರ್ತನದಿಂದ, ವೈರತ್ಯಾಗದಿಂದ, ಸಮತೆಯಿಂದ, ಶಾಂತಿಯಿಂದ, ಶರೀರ ಮತ್ತು ಮನೆ ಮುಂತಾದವುಗಳಲ್ಲಿ 'ನಾನು-ನನ್ನದು' ಎಂಬ ಭಾವವನ್ನು ತ್ಯಜಿಸುವ ಇಚ್ಛೆಯಿಂದ, ಅಧ್ಯಾತ್ಮಶಾಸ್ತ್ರವನ್ನು ಅನುಸಂಧಾನಮಾಡುವುದರಿಂದ, ಏಕಾಂತ ಸೇವನೆಯಿಂದ, ಪ್ರಾಣ-ಇಂದ್ರಿಯಗಳು-ಮನಸ್ಸು ಇವುಗಳ ಸಂಯಮದಿಂದ, ಶಾಸ್ತ್ರಗಳಲ್ಲಿ ಮತ್ತು ಸತ್ಪುರುಷರ ವಚನಗಳಲ್ಲಿ ಶ್ರದ್ಧೆಯನ್ನಿಡುವುದರಿಂದ, ಪೂರ್ಣ ಬ್ರಹ್ಮಚರ್ಯದಿಂದ, ಕರ್ತವ್ಯ- ಕರ್ಮಗಳಲ್ಲಿ ನಿರಂತರ ಸಾವಧಾನನಾಗಿರುವುದರಿಂದ, ಮಾತಿನ ಸಂಯಮದಿಂದ, ಎಲ್ಲೆಡೆ ನನ್ನದೇ ಅಸ್ತಿತ್ವವನ್ನು ನೋಡುವುದರಿಂದ, ಅನುಭವಜ್ಞಾನ ಸಹಿತ ತತ್ತ್ವವಿಚಾರದಿಂದ ಮತ್ತು ಯೋಗಸಾಧನೆಯಿಂದ ಅಹಂಕಾರರೂಪವಾದ ತನ್ನ ಲಿಂಗಶರೀರವನ್ನು ಲೀನವಾಗಿಸಿ ಬಿಡಬೇಕು. ॥ ೧೦-೧೩ ॥ ಮನುಷ್ಯನು ಎಚ್ಚರವಾಗಿದ್ದು ಅವಿದ್ಯೆಯಿಂದ ಉಂಟಾದ ಹೃದಯದ ಗ್ರಂಥಿರೂಪವಾದ ಬಂಧನವನ್ನು ಶಾಸ್ತ್ರೋಕ್ತ ರೀತಿಯಿಂದ ಈ ಸಾಧನೆಗಳ ಮೂಲಕ ಚೆನ್ನಾಗಿ ಕತ್ತರಿಸಿ ಬಿಡಬೇಕು. ಏಕೆಂದರೆ, ಇದೇ ಕರ್ಮಸಂಸ್ಕಾರಗಳು ವಾಸಿಸುವ ಸ್ಥಾನವಾಗಿದೆ. ಅನಂತರ ಸಾಧನೆಗಳನ್ನೂ ತ್ಯಾಗಮಾಡಿ ಬಿಡಬೇಕು. ॥ ೧೪ ॥

ನನ್ನ ಲೋಕವನ್ನು ಪಡೆಯುವ ಇಚ್ಛೆಯಿದ್ದರೆ ಅಥವಾ ನನ್ನ ಅನುಗ್ರಹದ ಪ್ರಾಪ್ತಿಯೇ ಪರಮ ಪುರುಷಾರ್ಥವೆಂದು ತಿಳಿದಿರುವವನು ರಾಜನಾಗಿದ್ದರೆ ತಿಳುವಳಿಕೆಯಿಲ್ಲದ ತನ್ನ ಪ್ರಜೆಗಳಿಗೆ- ಗುರುವು ಶಿಷ್ಯರಿಗೆ ಮತ್ತು ತಂದೆಯು ಮಕ್ಕಳಿಗೆ ಶಿಕ್ಷಣವನ್ನು ಕೊಡುವಂತೆ ಪ್ರೀತಿಯಿಂದ ಶಿಕ್ಷಣವನ್ನು ಕೊಡಬೇಕು. ಅವರೇನಾದರೂ ಅಜ್ಞಾನದಿಂದ ಆ ಶಿಕ್ಷಣಕ್ಕೆ ಅನುಗುಣವಾಗಿ ನಡೆಯದೇ ಕರ್ಮ

ಪುತ್ರಾಂಶ್ಚ ಶಿಷ್ಯಾಂಶ್ಚ ನೃಪೋ ಗುರುರ್ವಾ
ಮಲ್ಲೋಕಕಾಮೋ ಮದನುಗ್ರಹಾರ್ಥಃ ।
ಇತ್ಥಂ ವಿಮನ್ಯುರನುಶಿಷ್ಯಾದತಜ್ಜ್ಞಾನ್
ನ ಯೋಜಯೇತ್ಕರ್ಮಸು ಕರ್ಮಮೂಢಾನ್ ।
ಕಂ ಯೋಜಯನ್ಮನುಜೋಽರ್ಥಂ ಲಭೇತ
ನಿಪಾತಯನ್ನಷ್ಟದೃಶಂ ಹಿ ಗರ್ತೇ ॥ ೧೫ ॥

ಲೋಕಃ ಸ್ವಯಂ ಶ್ರೇಯಸಿ ನಷ್ಟದೃಷ್ಟಿ-
ರ್ಯೋಽರ್ಥಾನ್ ಸಮೀಹೇತ ನಿಕಾಮಕಾಮಃ ।
ಅನ್ಯೋನ್ಯವೈರಃ ಸುಖಲೇಶಹೇತೋ-
ರನಂತದುಃಖಂ ಚ ನ ವೇದ ಮೂಢಃ ॥ ೧೬ ॥

ಕಸ್ತಂ ಸ್ವಯಂ ತದಭಿಜ್ಞೋ ವಿಪಶ್ಚಿದ್
ಅವಿದ್ಯಾಯಾಮಂತರೇ ವರ್ತಮಾನಮ್ ।
ದೃಷ್ಟ್ವಾ ಪುನಸ್ತಂ ಸಘೃಣಃ ಕುಬುದ್ಧಿಂ
ಪ್ರಯೋಜಯೇದುತ್ಪಥಗಂ ಯಥಾಂಧಮ್ ॥ ೧೭ ॥

ಗುರುರ್ನ ಸ ಸ್ಯಾತ್ಸ್ವಜನೋ ನ ಸ ಸ್ಯಾತ್
ಪಿತಾ ನ ಸ ಸ್ಯಾಜ್ಜನನೀ ನ ಸಾ ಸ್ಯಾತ್ ।
ದೈವಂ ನ ತತ್ಸ್ಯಾನ್ನ ಪತಿಶ್ಚ ಸ ಸ್ಯಾ-
ನ್ನ ಮೋಚಯೇದ್ಯಃ ಸಮುಪೇತಮೃತ್ಯುಮ್ ॥ ೧೮ ॥

ಇದಂ ಶರೀರಂ ಮಮ ದುರ್ವಿಭಾವ್ಯಂ
ಸತ್ತ್ವಂ ಹಿ ಮೇ ಹೃದಯಂ ಯತ್ರ ಧರ್ಮಃ ।
ಪೃಷ್ಠೇ ಕೃತೋ ಮೇ ಯದಧರ್ಮ ಆರಾದ್
ಅತೋ ಹಿ ಮಾಂ ಋಷಭಂ ಪ್ರಾಹುರಾರ್ಯಾಃ ॥ ೧೯ ॥

ತಸ್ಮಾದ್ಭವಂತೋ ಹೃದಯೇನ ಜಾತಾಃ
ಸರ್ವೇ ಮಹೀಯಾಂಸಮಮುಂ ಸನಾಭಮ್ ।
ಅಕ್ಲಿಷ್ಟಬುದ್ಧ್ಯಾ ಭರತಂ ಭಜಧ್ವಂ
ಶುಶ್ರೂಷಣಂ ತದ್ಭರಣಂ ಪ್ರಜಾನಾಮ್ ॥ ೨೦ ॥

ಭೂತೇಷು ವೀರುದ್ಭ್ಯ ಉದುತ್ತಮಾ ಯೇ
ಸರೀಸೃಪಾಸ್ತೇಷು ಸಬೋಧನಿಷ್ಠಾಃ ।
ತತೋ ಮನುಷ್ಯಾಃ ಪ್ರಮಥಾಸ್ತತೋಽಪಿ
ಗಂಧರ್ವಸಿದ್ಧಾ ವಿಬುಧಾನುಗಾ ಯೇ ॥ ೨೧ ॥

ವನ್ನೇ ಪರಮಪುರುಷಾರ್ಥವೆಂದು ತಿಳಿದುಕೊಂಡಿದ್ದರೆ ಅವರ ಮೇಲೆ ಸಿಟ್ಟಾಗದೆ ಅವರನ್ನು ಮೃದುವಾಗಿ ತಿಳಿವಳಿಕೆ ನೀಡಿ ಕಾಮ್ಯಕರ್ಮದಲ್ಲಿ ಅವರು ತೊಡಗದಂತೆ ಮಾಡಬೇಕು. ಅವರನ್ನು ವಿಷಯಾಸಕ್ತಿಯಿಂದ ಕೂಡಿದ ಕಾಮ್ಯಕರ್ಮಗಳಲ್ಲಿ ತೊಡಗಿಸುವುದು ಕುರುಡನನ್ನು ಬೇಕೆಂತಲೇ ಹಳ್ಳಕ್ಕೆ ತಳ್ಳಿದಂತೆ ಇದೆ. ಇದರಿಂದ ಯಾವ ಪುರುಷಾರ್ಥದ ಸಿದ್ಧಿಯಾದಂತಾದೀತು? ॥ ೧೫ ॥ ತಮ್ಮ ನಿಜವಾದ ಶ್ರೇಯಸ್ಸು ಯಾವುದರಲ್ಲಿದೆ ಎಂಬುದನ್ನು ಜನರು ತಿಳಿಯಲಾರರು. ಇದರಿಂದಲೇ ಅವರು ಬಗೆ-ಬಗೆಯ ಭೋಗ-ಕಾಮನೆಗಳಲ್ಲಿ ಸಿಕ್ಕಿಹಾಕಿಕೊಂಡು ತುಚ್ಛವಾದ ಕ್ಷಣಿಕ ಸುಖಕ್ಕಾಗಿ ಪರಸ್ಪರ ವೈರವನ್ನು ಕಟ್ಟಿಕೊಳ್ಳುತ್ತಾರೆ ಮತ್ತು ನಿರಂತರವಾಗಿ ವಿಷಯಭೋಗಗಳಿಗಾಗಿಯೇ ಪ್ರಯತ್ನಿಸುತ್ತಿರುತ್ತಾರೆ. ಈ ವೈರ-ವಿರೋಧದಿಂದ ನರಕಾದಿ ಅನಂತ ಘೋರ ದುಃಖಗಳು ಉಂಟಾಗುವುದೆಂಬುದನ್ನು ಆ ಮೂರ್ಖರು ವಿಚಾರ ಮಾಡುವುದೇ ಇಲ್ಲ. ॥ ೧೬ ॥ ಹಳ್ಳಕ್ಕೆ ಬೀಳುವಂತಹ ತಪ್ಪುದಾರಿಯಿಂದ ಕುರುಡನೊಬ್ಬನು ಹೋಗುತ್ತಿದ್ದರೆ, ಕಣ್ಣುಳ್ಳ ಮನುಷ್ಯನು ಅವನನ್ನು ಅಲ್ಲಿಗೆ ಹೋಗಲು ಬಿಡುವುದಿಲ್ಲ. ಹಾಗೆಯೇ ಅಜ್ಞಾನಿಯು ಅವಿದ್ಯೆಯಲ್ಲಿ ಸಿಕ್ಕಿಕೊಂಡು ದುಃಖದ ಕಡೆಗೆ ಹೋಗುತ್ತಿರುವುದನ್ನು ಕಂಡು ಯಾವ ದಯಾಳುವಾದ ಜ್ಞಾನಿಯು ತಿಳಿದು-ತಿಳಿದು ಅವನನ್ನು ಆ ತಪ್ಪುದಾರಿಯಲ್ಲಿ ಹೋಗಲು ಬಿಡುವನು ಅಥವಾ ಹೋಗಲು ಪ್ರೇರೇಪಿಸಬಹುದು? ॥ ೧೭ ॥ ತನಗೆ ಪ್ರಿಯನಾದ ಸಂಬಂಧಿಯನ್ನು ಅಥವಾ ಶಿಷ್ಯನನ್ನು ಭಗವದ್ಭಕ್ತಿಯ ಉಪದೇಶವನ್ನು ಕೊಟ್ಟು ಮೃತ್ಯುವಿನ ದವಡೆಯಿಂದ ಬಿಡಿಸದಿರುವ ಗುರುವು ನಿಜವಾದ ಗುರುವೇ ಅಲ್ಲ. ಸ್ವಜನನು-ಸ್ವಜನನಲ್ಲ, ತಂದೆಯು-ತಂದೆಯಲ್ಲ, ತಾಯಿಯು-ತಾಯಿಯಲ್ಲ, ದೈವವು-ಇಷ್ಟದೇವರಲ್ಲ, ಪತಿಯು- ಪತಿಯೇ ಅಲ್ಲ. ॥ ೧೮ ॥

ಎಲೈ ಪುತ್ರರೇ! ನನ್ನ ಈ ಅವತಾರ ಶರೀರದ ರಹಸ್ಯವು ಸಾಧಾರಣ ಮನುಷ್ಯರ ಬುದ್ಧಿಗೆ ನಿಲುಕುವುದಲ್ಲ. ಧರ್ಮಕ್ಕೆ ನೆಲೆಯಾಗಿರುವ ಶುದ್ಧಸತ್ತ್ವವೇ ನನ್ನ ಹೃದಯವು. ಅಧರ್ಮವನ್ನು ನಾನು ಬಹಳ ದೂರ ಹಿಂದಕ್ಕೆ ತಳ್ಳಿಬಿಟ್ಟಿರುವೆನು. ಇದರಿಂದ ಸತ್ಪುರುಷರು ನನ್ನನ್ನು 'ಋಷಭ'ನೆಂದು ಹೇಳುತ್ತಾರೆ. ॥ ೧೯ ॥ ನೀವೆಲ್ಲರೂ ನನ್ನ ಆ ಶುದ್ಧಸತ್ತ್ವಮಯ ಹೃದಯದಿಂದ ಉತ್ಪನ್ನರಾಗಿರುವಿರಿ. ಆದ್ದರಿಂದ ಮತ್ಸರವನ್ನು ಬಿಟ್ಟು ನಿಮ್ಮ ಹಿರಿಯಣ್ಣ ಭರತನ ಸೇವೆಯನ್ನು ಮಾಡಿರಿ. ಅವನನ್ನು ಸೇವಿಸುವುದು ನನ್ನ ಸೇವೆಯೇ ಆಗಿದೆ ಹಾಗೂ ಇದೇ ನಿಮ್ಮ ಪ್ರಜಾಪಾಲನೆಯೂ ಆಗಿದೆ. ॥ ೨೦ ॥ ಎಲ್ಲ ಸ್ಥಾವರಗಳಲ್ಲಿ ವೃಕ್ಷಗಳು ಅತ್ಯಂತ ಶ್ರೇಷ್ಠವಾಗಿವೆ. ಅವುಗಳಿಗಿಂತ ನಡೆಯುವ ಪ್ರಾಣಿಗಳು ಶ್ರೇಷ್ಠರು. ಅವುಗಳಲ್ಲಿಯೂ ಕೀಟಾದಿಗಳಿಗಿಂತ ಜ್ಞಾನವುಳ್ಳ ಪಶುಗಳು ಶ್ರೇಷ್ಠರು. ಪಶುಗಳಿಗಿಂತ ಮನುಷ್ಯ, ಮನುಷ್ಯರಿಗಿಂತ ಪ್ರಮಥಗಣಗಳು, ಪ್ರಮಥರಿಗಿಂತ ಗಂಧರ್ವರು, ಗಂಧರ್ವರಿಗಿಂತ ಸಿದ್ಧರು, ಸಿದ್ಧರುಗಳಿಗಿಂತ ದೇವತೆಗಳ ಅನುಯಾಯಿಗಳಾದ ಕಿನ್ನರರು ಶ್ರೇಷ್ಠರಾಗಿದ್ದಾರೆ. ॥ ೨೧ ॥ ಆ ಕಿನ್ನರರಿಗಿಂತಲೂ ಅಸುರರು, ಅಸುರರಿಗಿಂತಲೂ ದೇವತೆಗಳು, ದೇವತೆಗಳಿಗಿಂತಲೂ ಇಂದ್ರನು ಶ್ರೇಷ್ಠನಾಗಿದ್ದಾನೆ. ಇಂದ್ರನಿಗಿಂತಲೂ

ದೇವಾಸುರೇಭ್ಯೋ ಮಘವತ್ಪ್ರಧಾನಾ
ದಕ್ಷಾದಯೋ ಬ್ರಹ್ಮಸುತಾಸ್ತು ತೇಷಾಮ್ ।
ಭವಃ ಪರಃ ಸೋಽಥ ವಿರಿಂಚವೀರ್ಯಃ
ಸ ಮತ್ಪರೋಽಹಂ ದ್ವಿಜದೇವದೇವಃ ॥ ೨೨ ॥

ನ ಬ್ರಾಹ್ಮಣೈಸ್ತುಲಯೇ ಭೂತಮನ್ಯತ್
ಪಶ್ಯಾಮಿ ವಿಪ್ರಾಃ ಕಿಮತಃ ಪರಂ ತು ।
ಯಸ್ಮಿನ್ನೃಭಿಃ ಪ್ರಹುತಂ ಶ್ರದ್ಧಯಾಹ-
ಮಶ್ನಾಮಿ ಕಾಮಂ ನ ತಥಾಗ್ನಿಹೋತ್ರೇ ॥ ೨೩ ॥

ಧೃತಾ ತನೂರುಶತೀ ಮೇ ಪುರಾಣೀ
ಯೇನೇಹ ಸತ್ತ್ವಂ ಪರಮಂ ಪವಿತ್ರಮ್ ।
ಶಮೋ ದಮಃ ಸತ್ಯಮನುಗ್ರಹಶ್ಚ
ತಪಸ್ತಿತಿಕ್ಷಾನುಭವಶ್ಚ ಯತ್ರ ॥ ೨೪ ॥

ಮತ್ತೋಽಪ್ಯನಂತಾತ್ಪರತಃ ಪರಸ್ಮಾ-
ತ್ಸ್ವರ್ಗಾಪವರ್ಗಾಧಿಪತೇರ್ನ ಕಿಂಚಿತ್ ।
ಯೇಷಾಂ ಕಿಮು ಸ್ಯಾದಿತರೇಣ ತೇಷಾ-
ಮಕಿಂಚನಾನಾಂ ಮಯಿ ಭಕ್ತಿಭಾಜಾಮ್ ॥ ೨೫ ॥

ಸರ್ವಾಣಿ ಮದ್ಧಿಷ್ಣ್ಯತಯಾ ಭವದ್ಭಿ-
ಶ್ಚರಾಣಿ ಭೂತಾನಿ ಸುತಾ ಧ್ರುವಾಣಿ ।
ಸಂಭಾವಿತವ್ಯಾನಿ ಪದೇ ಪದೇ ವೋ
ವಿವಿಕ್ತದೃಗ್ಭಿಸ್ತದುಹಾರ್ಹಣಂ ಮೇ ॥ ೨೬ ॥

ಮನೋವಚೋದೃಕ್ಕರಣೇಹಿತಸ್ಯ
ಸಾಕ್ಷಾತ್ಕೃತಂ ಮೇ ಪರಿಬರ್ಹಣಂ ಹಿ ।
ವಿನಾ ಪುಮಾನ್ಯೇನ ಮಹಾವಿಮೋಹಾತ್
ಕೃತಾಂತಪಾಶಾನ್ನ ವಿಮೋಕ್ತುಮೀಶೇತ್ ॥ ೨೭ ॥

ಶ್ರೀಶುಕ ಉವಾಚ

ಏವಮನುಶಾಸ್ಯಾತ್ಮಜಾನ್ ಸ್ವಯಮನುಶಿಷ್ಟಾನಪಿ ಲೋಕಾನುಶಾಸನಾರ್ಥಂ ಮಹಾನುಭಾವಃ ಪರಮಸುಹೃದ್ಭಗವಾನೃಷಭಾಪದೇಶ ಉಪಶಮಶೀಲಾನಾಮುಪರತಕರ್ಮಣಾಂ ಮಹಾಮುನೀನಾಂ ಭಕ್ತಿಜ್ಞಾನವೈರಾಗ್ಯಲಕ್ಷಣಂ ಪಾರಮಹಂಸ್ಯಧರ್ಮಮುಪಶಿಕ್ಷಮಾಣಃ ಸ್ವತನಯಶತಜ್ಯೇಷ್ಠಂ ಪರಮಭಾಗವತಂ ಭಗವಜ್ಜನ-

ಬ್ರಹ್ಮದೇವರ ಪುತ್ರರಾದ ದಕ್ಷಾದಿ ಪ್ರಜಾಪತಿಗಳು ಶ್ರೇಷ್ಠರಾಗಿದ್ದಾರೆ. ಬ್ರಹ್ಮದೇವರ ಪುತ್ರರಲ್ಲಿ ರುದ್ರನು ಸರ್ವಶ್ರೇಷ್ಠನಾಗಿದ್ದಾನೆ. ಅವರು ಬ್ರಹ್ಮದೇವರಿಂದಲೇ ಉತ್ಪನ್ನರಾದವರು; ಅದಕ್ಕಾಗಿ ಬ್ರಹ್ಮದೇವರು ಅವರಿಗಿಂತಲೂ ಶ್ರೇಷ್ಠರು. ಅವರೂ ನನ್ನಿಂದಲೇ ಉತ್ಪನ್ನರಾದವರು ಮತ್ತು ನನ್ನನ್ನೇ ಉಪಾಸಿಸುತ್ತಾರೆ, ಅದಕ್ಕಾಗಿ ನಾನು ಅವರಿಗಿಂತಲೂ ಶ್ರೇಷ್ಠನಾಗಿದ್ದೇನೆ. ಆದರೆ ಬ್ರಾಹ್ಮಣರು ನನಗಿಂತಲೂ ಶ್ರೇಷ್ಠರಾಗಿದ್ದಾರೆ. ಏಕೆಂದರೆ, ಅವರನ್ನು ನಾನು ಪೂಜ್ಯರೆಂದು ತಿಳಿಯುತ್ತೇನೆ. ॥ ೨೨ ॥

(ಸಭೆಯಲ್ಲಿ ಉಪಸ್ಥಿತರಾಗಿದ್ದ ಬ್ರಾಹ್ಮಣರನ್ನು ಕುರಿತು –) ಎಲೈ ವಿಪ್ರಶ್ರೇಷ್ಠರೇ! ಇತರ ಯಾವ ಪ್ರಾಣಿಗಳೂ ಬ್ರಾಹ್ಮಣರಿಗೆ ಸಾಟಿಯೇ ಇಲ್ಲವೆಂದು ನಾನು ತಿಳಿಯುತ್ತೇನೆ. ಹೀಗಿರುವಾಗ ಅವರಿಂದ ಹೆಚ್ಚಿನವರೆಂದು ಯಾರನ್ನು ಹೇಳಬಹುದು? ಜನರು ಶ್ರದ್ಧಾಪೂರ್ವಕವಾಗಿ ಬ್ರಾಹ್ಮಣರ ಬಾಯಿಯಲ್ಲಿ ಸಮರ್ಪಿಸುವ ಅನ್ನವೇ ಮುಂತಾದ ಆಹುತಿಯನ್ನು ನಾನು ಅತ್ಯಂತ ಪ್ರಸನ್ನತೆಯಿಂದ ಸ್ವೀಕರಿಸುವಂತೆ ಅಗ್ನಿಹೋತ್ರದಲ್ಲಿ ಹೋಮಮಾಡಿದ ಆಹುತಿಯನ್ನು ಸ್ವೀಕರಿಸುವುದಿಲ್ಲ. ॥ ೨೩ ॥ ಯಾರು ಈ ಲೋಕದಲ್ಲಿ ಅಧ್ಯಯನದ ಮೂಲಕ ನನ್ನ ವೇದರೂಪವಾದ ಅತಿಸುಂದರವೂ, ಪುರಾತನವೂ ಆದ ಮೂರ್ತಿಯನ್ನು ಧರಿಸಿಕೊಂಡಿರುವರೋ, ಯಾರು ಪರಮಪವಿತ್ರ ಸತ್ತ್ವಗುಣ, ಶಮ, ದಮ, ಸತ್ಯ, ದಯೆ, ತಪಸ್ಸು, ತಿತಿಕ್ಷೆ ಮತ್ತು ಜ್ಞಾನವೇ ಮುಂತಾದ ಎಂಟು ಗುಣಗಳಿಂದ ಸಂಪನ್ನರಾಗಿರುವರೋ ಅಂತಹ ಬ್ರಾಹ್ಮಣರಿಗಿಂತ ಮಿಗಿಲಾದವರು ಯಾರು ತಾನೇ ಇರಬಲ್ಲರು? ॥ ೨೪ ॥ ನಾನು ಬ್ರಹ್ಮಾದಿಗಳಿಗಿಂತಲೂ ಶ್ರೇಷ್ಠನು. ಅನಂತನೂ ಆಗಿರುವೆನು ಹಾಗೂ ಸ್ವರ್ಗ-ಮೋಕ್ಷಗಳನ್ನೂ ಕೊಡುವ ಸಾಮರ್ಥ್ಯವುಳ್ಳವನು. ಆದರೆ ನನ್ನ ಅಕಿಂಚನರಾದ ನಿಷ್ಕಾಮ ಭಕ್ತರು ನನ್ನಿಂದ ಎಂದಿಗೂ ಏನನ್ನೂ ಬಯಸುವುದಿಲ್ಲ. ಅಂತಹ ನಿಸ್ಪೃಹರಾದವರು ರಾಜ್ಯವೇ ಮುಂತಾದ ಬೇರೆ ವಸ್ತುಗಳನ್ನು ಹೇಗೆ ಬಯಸಬಲ್ಲರು? ॥ ೨೫ ॥

ಎಲೈ ಪುತ್ರರೇ! ನೀವು ಸಮಸ್ತ ಚರಾಚರ ಪ್ರಾಣಿಗಳೂ ನನ್ನವೇ ಶರೀರವೆಂದರಿತು ಶುದ್ಧಬುದ್ಧಿಯಿಂದ ಹೆಜ್ಜೆ-ಹೆಜ್ಜೆಗೆ ಅವರ ಸೇವೆ ಮಾಡಿರಿ. ಇದೇ ನಿಜವಾದ ನನ್ನ ಪೂಜೆಯಾಗಿದೆ. ॥ ೨೬ ॥ ಮನಸ್ಸು, ಮಾತು, ದೃಷ್ಟಿ ಹಾಗೂ ಇತರ ಇಂದ್ರಿಯಗಳ ಕರ್ಮಗಳೆಲ್ಲವೂ ನನ್ನ ಆರಾಧನೆಯೇ ಫಲವೆಂದು ತಿಳಿಯಿರಿ. ಇದಲ್ಲದೆ ಮನುಷ್ಯನು ತನ್ನನ್ನು ಮಹಾಮೋಹಮಯ ಕಾಲಪಾಶದಿಂದ ಬಿಡಿಸಿಕೊಳ್ಳಲಾರನು. ॥ ೨೭ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ರಾಜೇಂದ್ರಾ! ಋಷಭದೇವರ ಪುತ್ರರೆಲ್ಲರೂ ಸ್ವತಃ ಎಲ್ಲ ವಿಧದಿಂದ ಸುಶಿಕ್ಷಿತರೇ ಆಗಿದ್ದರೂ ಜನರಿಗೆ ಶಿಕ್ಷಣವನ್ನು ಕೊಡುವ ಉದ್ದೇಶದಿಂದ ಮಹಾಪ್ರಭಾವಶಾಲಿ ಪರಮ ಸುಹೃದ್ ಭಗವಾನ್ ಋಷಭದೇವನು ಅವರಿಗೆ ಎಲ್ಲ ರೀತಿಯ ಉಪದೇಶವನ್ನು ಮಾಡಿದರು. ಋಷಭದೇವರ ನೂರು ಪುತ್ರರಲ್ಲಿ ಭರತನು ಎಲ್ಲರಿಗಿಂತ ಹಿರಿಯವನಾಗಿದ್ದನು. ಅವನು ಭಗವಂತನ ಪರಮ ಭಕ್ತನೂ, ಭಗವದ್ಭಕ್ತರ ಪರಾಯಣನೂ ಆಗಿದ್ದನು. ಋಷಭದೇವರು ಪೃಥ್ವಿಯನ್ನು ಪಾಲಿಸಲಿಕ್ಕಾಗಿ ಅವನನ್ನು ರಾಜಸಿಂಹಾಸನದ ಮೇಲೆ ಕುಳ್ಳಿರಿಸಿದರು ಮತ್ತು ಸ್ವತಃ ಶಮ-ದಮಾದಿ ಸಂಪನ್ನರಾದ, ನಿವೃತ್ತಿಧರ್ಮ

ಪರಾಯಣಂ ಭರತಂ ಧರಣಿಪಾಲನಾಯಾಭಿಷಿಚ್ಯ ಸ್ವಯಂ ಭವನ ಏವೋರ್ವರಿತಶರೀರಮಾತ್ರಪರಿಗ್ರಹ ಉನ್ಮತ್ತ ಇವ ಗಗನಪರಿಧಾನಃ ಪ್ರಕೀರ್ಣಕೇಶ ಆತ್ಮನ್ಯಾರೋಪಿತಾಹವನೀಯೋ ಬ್ರಹ್ಮಾವರ್ತಾತ್ಪ್ರವವ್ರಾಜ ॥ ೨೮ ॥ ಜಡಾಂಧಮೂಕಬಧಿರಪಿಶಾಚೋನ್ಮಾದಕವದವಧೂತವೇಷೋಽಭಿಭಾಷ್ಯಮಾಣೋಽಪಿ ಜನಾನಾಂ ಗೃಹೀತಮೌನವ್ರತಸ್ತೂಷ್ಣೀಂ ಬಭೂವ ॥ ೨೯ ॥ ತತ್ರ ತತ್ರ ಪುರಗ್ರಾಮಾಕರಖೇಟವಾಟಖರ್ವಟಶಿಬಿರವ್ರಜಘೋಷಸಾರ್ಥಗಿರಿವನಾಶ್ರಮಾದಿಷ್ವನುಪಥಮವನಿಚರಾಪಸದೈಃ ಪರಿಭೂಯಮಾನೋ ಮಕ್ಷಿಕಾಭಿರಿವ ವನಗಜಸ್ತರ್ಜನತಾಡನಾವಮೇಹನಷ್ಠೀವನಗ್ರಾವಶಕೃದ್ರಜಃಪ್ರಕ್ಷೇಪಪೂತಿವಾತದುರುಕ್ತೈಸ್ತದವಿಗಣಯನ್ನೇವಾಸತ್ಸಂಸ್ಥಾನ ಏತಸ್ಮಿನ್ ದೇಹೋಪಲಕ್ಷಣೇ ಸದಪದೇಶ ಉಭಯಾನುಭವಸ್ವರೂಪೇಣ ಸ್ವಮಹಿಮಾವಸ್ಥಾನೇನಾಸಮಾರೋಪಿತಾಹಂಮಮಾಭಿಮಾನತ್ವಾದವಿಖಂಡಿತಮನಾಃ ಪೃಥಿವೀಮೇಕಚರಃ ಪರಿಬಭ್ರಾಮ ॥ ೩೦ ॥ ಅತಿಸುಕುಮಾರಕರಚರಣೋರಃಸ್ಥಲವಿಪುಲಬಾಹ್ವಂಸಗಲವದನಾದ್ಯವಯವವಿನ್ಯಾಸಃ ಪ್ರಕೃತಿಸುಂದರಸ್ವಭಾವಹಾಸಸುಮುಖೋ ನವನಲಿನದಲಾಯಮಾನಶಿಶಿರತಾರಾರುಣಾಯತನಯನರುಚಿರಃ ಸದೃಶಸುಭಗಕಪೋಲಕರ್ಣಕಂಠನಾಸೋ ವಿಗೂಢಸ್ಮಿತವದನಮಹೋತ್ಸವೇನ ಪುರವನಿತಾನಾಂ ಮನಸಿ ಕುಸುಮಶರಾಸನಮುಪದಧಾನಃ ಪರಾಗವಲಂಬಮಾನಕುಟಿಲಜಟಿಲಕಪಿಶಕೇಶಭೂರಿಭಾರೋಽವಧೂತಮಲಿನನಿಜಶರೀರೇಣ ಗ್ರಹಗೃಹೀತ ಇವಾದೃಶ್ಯತ ॥ ೩೧ ॥

ಪರಾಯಣರಾದ ಮುನಿಗಳಿಗೆ ಭಕ್ತಿ, ಜ್ಞಾನ, ವೈರಾಗ್ಯರೂಪವಾದ ಪರಮಹಂಸೋಚಿತವಾದ ಧರ್ಮದ ಶಿಕ್ಷಣವನ್ನು ಕೊಡುವುದಕ್ಕಾಗಿ ಪೂರ್ಣವಾಗಿ ವಿರಕ್ತರಾದರು. ಕೇವಲ ಶರೀರವನ್ನು ಮಾತ್ರ ಇಟ್ಟುಕೊಂಡು ಬೇರೆ ಎಲ್ಲವನ್ನೂ ಮನೆಯಲ್ಲೇ ಬಿಟ್ಟುಬಿಟ್ಟರು. ಈಗ ಅವರು ವಸ್ತ್ರಗಳನ್ನೂ ತ್ಯಜಿಸಿ ಸರ್ವಥಾ ದಿಗಂಬರರಾದರು. ಆಗ ಅವರ ತಲೆ ಕೆದರಿತ್ತು, ಉನ್ಮತ್ತನಂತೆ ವೇಷವಿತ್ತು. ಈ ಸ್ಥಿತಿಯಲ್ಲಿ ಅವರು ಆಹವನೀಯವೇ ಮೊದಲಾದ ಅಗ್ನಿಗಳನ್ನು ತನ್ನಲ್ಲೇ ಲೀನವಾಗಿಸಿಕೊಂಡು ಸಂನ್ಯಾಸಿಗಳಾಗಿ, ಬ್ರಹ್ಮಾವರ್ತ ದೇಶದಿಂದ ಹೊರಗೆ ಹೊರಟುಹೋದರು. ॥ ೨೮ ॥ ಅವರು ಪೂರ್ಣವಾಗಿ ಮೌನವಾಗಿದ್ದರು. ಯಾರಾದರೂ ಮಾತನಾಡಿಸಿದರೂ ಮಾತನಾಡುತ್ತಿರಲಿಲ್ಲ. ಮೂರ್ಖರಂತೆ, ಕುರುಡರಂತೆ, ಕಿವುಡರಂತೆ ಮೂಗರಂತೆ, ಪಿಶಾಚಿಗಳಂತೆ ಹಾಗೂ ಹುಚ್ಚರಂತೆ ಆಚರಣೆಗಳನ್ನು ಆಚರಿಸುತ್ತಾ ಅವರು ಅವಧೂತರಾಗಿ ಅಲ್ಲಲ್ಲಿ ಸಂಚರಿಸತೊಡಗಿದರು. ॥ ೨೯ ॥ ಕೆಲವು ಸಲ ನಗರಗಳಿಗೋ, ಹಳ್ಳಿಗಳಿಗೋ ಹೋದರೆ, ಕೆಲವೊಮ್ಮೆ ಗಣಿಗಳಿಗೋ, ರೈತರ ವಸತಿಗಳಿಗೋ, ತೋಟಗಳಿಗೋ, ಬೆಟ್ಟದ ಹಳ್ಳಿಗಳಿಗೋ, ಸೇನಾ ಶಿಬಿರಗಳಿಗೋ, ಗೋಶಾಲೆಗಳಿಗೋ, ಗೊಲ್ಲರ ಕೇರಿಗಳಿಗೋ, ಯಾತ್ರಿಕರು ತಂಗುವ ಸ್ಥಳಗಳಿಗೆ ಹೋಗುತ್ತಿದ್ದರು. ಕೆಲವೊಮ್ಮೆ ಪರ್ವತಗಳಲ್ಲೂ, ಅರಣ್ಯಗಳಲ್ಲೂ, ಆಶ್ರಮಗಳಲ್ಲೂ ಸಂಚರಿಸುತ್ತಿದ್ದರು. ಅವರು ಯಾವುದೇ ಮಾರ್ಗವಾಗಿ ಹೋದರೂ ಕಾಡಿನಲ್ಲಿ ಸಂಚರಿಸುವ ಆನೆಯನ್ನು ನೊಣಗಳು ಮುತ್ತುವಂತೆ – ಮೂರ್ಖರೂ, ದುಷ್ಟರೂ ಅತನನ್ನು ಹಿಂಬಾಲಿಸಿ ಅವರಿಗೆ ಕಿರುಕುಳಕೊಡುತ್ತಿದ್ದರು. ಕೆಲವರು ಗದರಿಸಿದರೆ, ಕೆಲವರು ಹೊಡೆಯುತ್ತಿದ್ದರು. ಕೆಲವರು ಇವರ ಮುಂದೆ ಮೂತ್ರವಿಸರ್ಜನೆ ಮಾಡಿದರೆ, ಕೆಲವರು ಉಗುಳುತ್ತಿದ್ದರು. ಕೆಲವರು ಮಣ್ಣುಹೆಂಟೆಗಳನ್ನು ಎಸೆದರೆ, ಕೆಲವರು ಮಲವನ್ನೂ, ಧೂಳನ್ನೂ ಎರಚುತ್ತಿದ್ದರು. ಕೆಲವರು ಅಧೋವಾಯು ಇವರಮೇಲೆ ಬಿಟ್ಟರೆ, ಕೆಲವರು ಮನಸ್ವೀಯಾಗಿ ಬೈದು ತಿರಸ್ಕರಿಸುತ್ತಿದ್ದರು. ಆದರೆ ಅವರು ಇವೆಲ್ಲದರ ಕಡೆಗೆ ಸ್ವಲ್ಪವೂ ಲಕ್ಷ್ಯಕೊಡದೆ ಉದಾಸೀನರಾಗಿದ್ದರು. ಕಾರಣ – ಭ್ರಮೆಯಿಂದ ಸತ್ಯವೆಂದು ಹೇಳಲ್ಪಡುವ ಈ ಶರೀರದಲ್ಲಿ ಅವರಿಗೆ ಅಹಂತೆ-ಮಮತೆ ಸ್ವಲ್ಪವೂ ಇರಲಿಲ್ಲ. ಅವರು ಕಾರ್ಯಕಾರಣರೂಪವಾದ ಸಮಸ್ತ ಪ್ರಪಂಚದ ಸಾಕ್ಷಿಯಾಗಿ ತನ್ನ ಪರಮಾತ್ಮಸ್ವರೂಪದಲ್ಲೇ ಸ್ಥಿರರಾಗಿದ್ದರು. ಅದಕ್ಕಾಗಿ ಅಖಂಡ ಚಿತ್ತವೃತ್ತಿಯಿಂದ ಒಬ್ಬಂಟಿಗರಾಗಿಯೇ ಪೃಥ್ವಿಯಲ್ಲಿ ಸಂಚರಿಸುತ್ತಿದ್ದರು. ॥ ೩೦ ॥

ಋಷಭದೇವರು ಆಗಲೂ ಸುಂದರ ಸುಕುಮಾರವಾದ ದೇಹಸಂಪತ್ತಿನಿಂದ ಕೂಡಿದ್ದರು. ಅವರ ಕೈ-ಕಾಲುಗಳು, ಎದೆ, ನೀಳ ತೋಳುಗಳು, ಹೆಗಲು, ಕೊರಳು, ಮುಖ-ಮುಂತಾದ ಸರ್ವಾಂಗಗಳೂ ಅತ್ಯಂತ ಕೋಮಲವಾಗಿದ್ದವು. ಅವರ ಸಹಜ ಸುಂದರ ಮುಖವು ಮಧುರ ಮಂದಹಾಸದಿಂದ ಇನ್ನೂ ಮನೋಹರವಾಗಿ ಕಣ್ಮನಗಳನ್ನು ಸೆಳೆಯುತ್ತಿತ್ತು. ನೇತ್ರಗಳು ಹೊಸ ಕಮಲದಳಗಳಂತೆ ರಮಣೀಯವಾಗಿ ವಿಶಾಲವಾಗಿ ಕೊಂಚ ಕೆಂಬಣ್ಣದಿಂದ ಕೂಡಿದ್ದು ಶೀತಲವೂ, ಸಂತಾಪಹರವೂ ಆದ ಕಣ್ಣುಗುಡ್ಡೆಗಳಿಂದ ಕಂಗೊಳಿಸುತ್ತಿದ್ದವು. ಕೆನ್ನೆ ಕಿವಿ, ಮತ್ತು ಮೂಗುಗಳು ಸಮಾನವಾಗಿದ್ದು ಸೌಂದರ್ಯದ ರಸದೌತಣವನ್ನು ಮಾಡಿಸುತ್ತಿದ್ದವು. ಇವೆಲ್ಲದರ

ಯರ್ಹಿ ವಾವ ಸ ಭಗವಾನ್ ಲೋಕಮಿಮಂ ಯೋಗಸ್ಯಾದ್ಧಾ ಪ್ರತೀಪಮಿವಾಚಕ್ಷಾಣಸ್ತತ್ಪ್ರತಿಕ್ರಿಯಾಕರ್ಮ-ಬೀಭತ್ಸಿತಮಿತಿ ವ್ರತಮಾಜಗರಮಾಸ್ಥಿತಃ ಶಯಾನ ಏವಾ-ಶ್ನಾತಿ ಪಿಬತಿ ಖಾದತ್ಯವಮೇಹತಿ ಹದತಿ ಸ್ಮ ಚೇಷ್ಟಮಾನ ಉಚ್ಚರಿತ ಆದಿಗ್ಧೋದ್ದೇಶಃ ॥ ೩೨ ॥ ತಸ್ಯ ಹ ಯಃ ಪುರೀಷಸುರಭಿಸೌಗಂಧ್ಯವಾಯುಸ್ತಂ ದೇಶಂ ದಶಯೋ-ಜನಂ ಸಮಂತಾತ್ ಸುರಭಿಂ ಚಕಾರ ॥ ೩೩ ॥ ಏವಂ ಗೋಮೃಗಕಾಕಚರ್ಯಯಾ ವ್ರಜಂಸ್ತಿಷ್ಠನ್ನಾಸೀನಃ ಶಯಾನಃ ಕಾಕಮೃಗಗೋಚರಿತಃ ಪಿಬತಿ ಖಾದತ್ಯ-ವಮೇಹತಿ ಸ್ಮ ॥ ೩೪ ॥ ಇತಿ ನಾನಾಯೋಗಚರ್ಯಾ-ಚರಣೋ ಭಗವಾನ್ಕೈವಲ್ಯಪತಿರ್ಋಷಭೋಽವಿರತ-ಪರಮಮಹಾನಂದಾನುಭವ ಆತ್ಮನಿ ಸರ್ವೇಷಾಂ ಭೂತಾನಾಮಾತ್ಮಭೂತೇ ಭಗವತಿ ವಾಸುದೇವ ಆತ್ಮನೋಽವ್ಯವಧಾನಾನಂತರೋದರಭಾವೇನ ಸಿದ್ಧಸ-ಮಸ್ತಾರ್ಥಪರಿಪೂರ್ಣೋ ಯೋಗೈಶ್ವರ್ಯಾಣಿ ವೈಹಾಯಸ-ಮನೋಜವಾಂತರ್ಧಾನಪರಕಾಯಪ್ರವೇಶದೂರಗ್ರಹ-ಣಾದೀನಿ ಯದೃಚ್ಛಯೋಪಗತಾನಿ ನಾಂಜಸಾ ನೃಪ ಹೃದಯೇನಾಭ್ಯನಂದತ್ ॥ ೩೫ ॥

ಜೊತೆಗೆ ಆತನ ಕಿರುನಗೆಯ ಬೆಡಗಿನಿಂದ ಕೂಡಿದ ಮುಖಾರ ವಿಂದದ ಶೋಭೆಯನ್ನು ಕಂಡು ಪುರನಾರಿಯರ ಮನಸ್ಸು ಕಾಮ ದೇವನ ಆಕ್ರಮಣಕ್ಕೆ ಒಳಗಾಗುತ್ತಿತ್ತು. ಆದರೂ ಮುಖದ ಮುಂದೆ ಜೋತಾಡುತ್ತಿದ್ದ ಉದ್ದವಾದ, ಕಂದುಬಣ್ಣದ ಗುಂಗುರು ಕೂದಲುಗಳ ಭಾರದಿಂದಲೂ, ಅವಧೂತರಿಗೆ ತಕ್ಕುದಾದ ಧೂಳು ಮುಸುಕಿದ ದೇಹದಿಂದಲೂ ಅವರು ಗ್ರಹಹಿಡಿದವರಂತೆ ಕಾಣುತ್ತಿದ್ದರು. ॥ ೩೧ ॥

ಭಗವಾನ್ ಋಷಭದೇವರು ಈ ಜನರೆಲ್ಲರೂ ಯೋಗಕ್ಕೆ ವಿಘ್ನ ವನ್ನುಂಟುಮಾಡುವವರಾಗಿದ್ದಾರೆ ಎಂದು ನೋಡಿ ಇವರಿಂದ ಬಿಡುಗಡೆಯಾಗಲು ಬೀಭತ್ಸವೃತ್ತಿಯಿಂದ ಇರುವುದೇ ಸರಿಯೆಂದು ತಿಳಿದು ಅವರು ಅಜಗರ ವೃತ್ತಿಯನ್ನು ಧರಿಸಿದರು. ಅವರು ಮಲಗಿಕೊಂಡೇ ತಿನ್ನುವುದು, ಕುಡಿಯುವುದು, ಅಗಿಯುವುದು ಮತ್ತು ಮಲ-ಮೂತ್ರ ವಿಸರ್ಜನೆಮಾಡುವುದು ಮುಂತಾದವು ಗಳನ್ನು ಮಾಡತೊಡಗಿದರು. ತಾನು ವಿಸರ್ಜನೆಮಾಡಿದ ಮಲ ದಲ್ಲೇ ಹೊರಳಾಡುತ್ತಾ ಅದನ್ನು ಮೈಗೆಲ್ಲಾ ಬಳಿದುಕೊಳ್ಳುತ್ತಿ ದ್ದರು. ॥ ೩೨ ॥ ಆದರೆ ಅವರ ಮಲಕ್ಕೆ ದುರ್ಗಂಧವಿರಲಿಲ್ಲ, ಸುಗಂಧವೇ ಇತ್ತು. ವಾಯುವು ಆ ಸುಗಂಧವನ್ನು ಹೊತ್ತುಕೊಂಡು ಹೋಗಿ ಸುತ್ತಲೂ ಹತ್ತು ಯೋಜನಗಳವರೆಗೆ ಇಡೀ ದೇಶವನ್ನೇ ಸುಗಂಧಿತವಾಗಿಸುತ್ತಿತ್ತು. ॥ ೩೩ ॥ ಹೀಗೆಯೇ ಅವರು ಗೋವು ಗಳು, ಜಿಂಕೆಗಳು, ಕಾಗೆಗಳು ಮುಂತಾದವುಗಳ ಆಚರಣೆಯನ್ನು ಅನುಸರಿಸುತ್ತಾ ಕೆಲವೊಮ್ಮೆ ನಡೆಯುತ್ತಿರುವಾಗಲೂ, ಕೆಲವೊಮ್ಮೆ ನಿಂತಿರುವಾಗಲೂ, ಕೆಲವೊಮ್ಮೆ ಕುಳಿತಿರುವಾಗಲೂ, ಕೆಲವೊಮ್ಮೆ ಮಲಗಿರುವಾಗಲೂ ಆಹಾರ-ಪಾನೀಯಗಳನ್ನು ತಿನ್ನುತ್ತಾ-ಕುಡಿ ಯುತ್ತಾ ಮಲ-ಮೂತ್ರ ವಿಸರ್ಜನೆ ಮಾಡುತ್ತಿದ್ದರು. ॥ ೩೪ ॥ ಎಲೈ ಪರೀಕ್ಷಿತನೇ! ಪರಮಹಂಸರಿಗೆ ತ್ಯಾಗದ ಆದರ್ಶವನ್ನು ಕಲಿಸುವುದಕ್ಕಾಗಿ ಹೀಗೆ ಮೋಕ್ಷಪತಿಯಾದ ಭಗವಾನ್ ಋಷಭ ದೇವರು ಅನೇಕ ರೀತಿಯ ಯೋಗಚರ್ಯೆಗಳನ್ನು ಆಚರಿಸಿದರು. ಅವರು ನಿರಂತರ ಸರ್ವಶ್ರೇಷ್ಠ ಮಹಾ ಆನಂದವನ್ನು ಅನುಭವಿಸು ತ್ತಿದ್ದರು. ಅವರ ದೃಷ್ಟಿಯಲ್ಲಿ ನಿರುಪಾಧಿಕರೂಪದಿಂದ ಸಮಸ್ತ ಪ್ರಾಣಿಗಳ ಆತ್ಮನು - ತನ್ನ ಆತ್ಮಸ್ವರೂಪ ಭಗವಾನ್ ವಾಸು ದೇವನಿಂದ ಯಾವ ಪ್ರಕಾರದ ಭೇದವೂ ಇರಲಿಲ್ಲ. ಇದರಿಂದ ಅವರ ಎಲ್ಲ ಪುರುಷಾರ್ಥಗಳೂ ಪೂರ್ಣವಾಗಿ ಹೋಗಿದ್ದವು. ಅವರ ಬಳಿ ಆಕಾಶಗಮನ, ಮನೋವೇಗದಿಂದ ಇಷ್ಟಬಂದಲ್ಲಿಗೆ ತನ್ನ ಶರೀರವನ್ನು ಕೊಂಡೊಯ್ಯುವ ಶಕ್ತಿ, ಅಂತರ್ಧಾನಹೊಂದುವ ಸಿದ್ಧಿ, ಪರಕಾಯಪ್ರವೇಶ, ದೂರಶ್ರವಣ, ದೂರದರ್ಶನ ಮುಂ ತಾದ ಎಲ್ಲ ಸಿದ್ಧಿಗಳು ತಾವಾಗಿಯೇ ಸೇವೆಮಾಡಲು ಬಂದವು. ಆದರೆ ಅವರು ಅವನ್ನು ಮನಸ್ಸಿನಿಂದ ಆಶಿಸಲಿಲ್ಲ, ಆದರಿಸಲಿಲ್ಲ, ಸ್ವೀಕರಿಸಲಿಲ್ಲ. ॥ ೩೫ ॥

ಐದನೆಯ ಅಧ್ಯಾಯವು ಮುಗಿಯಿತು. ॥ ೫ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಪಂಚಮಸ್ಕಂಧೇ ಋಷಭದೇವಾನುಚರಿತೇ ಪಂಚಮೋಽಧ್ಯಾಯಃ ॥ ೫ ॥

ಆರನೆಯ ಅಧ್ಯಾಯ

ಋಷಭದೇವರ ದೇಹತ್ಯಾಗ

ರಾಜೋವಾಚ

ನ ನೂನಂ ಭಗವ ಆತ್ಮಾರಾಮಾಣಾಂ ಯೋಗಸಮೀರಿತಜ್ಞಾನಾವಭರ್ಜಿತಕರ್ಮಬೀಜಾನಾಮೈಶ್ವರ್ಯಾಣಿ ಪುನಃ ಕ್ಲೇಶದಾನಿ ಭವಿತುಮರ್ಹಂತಿ ಯದೃಚ್ಛಯೋಪಗತಾನಿ ॥ ೧ ॥

ಋಷಿರುವಾಚ

ಸತ್ಯಮುಕ್ತಂ ಕಿಂತ್ವಿಹ ವಾ ಏಕೇ ನ ಮನಸೋಽದ್ಧಾ ವಿಶ್ರಂಭಮನವಸ್ಥಾನಸ್ಯ ಶಠಕಿರಾತ ಇವ ಸಂಗಚ್ಛಂತೇ ॥ ೨ ॥

ತಥಾ ಚೋಕ್ತಮ್ –

ನ ಕುರ್ಯಾತ್ಕರ್ಹಿಚಿತ್ಸಖ್ಯಂ ಮನಸಿ ಹ್ಯನವಸ್ಥಿತೇ ।
ಯದ್ವಿಶ್ರಂಭಾಚ್ಚಿರಾಚ್ಚೀರ್ಣಂ ಚಸ್ಕಂದ ತಪ ಐಶ್ವರಮ್ ॥ ೩ ॥

ನಿತ್ಯಂ ದದಾತಿ ಕಾಮಸ್ಯ ಚ್ಛಿದ್ರಂ ತಮನು ಯೇಽರಯಃ ।
ಯೋಗಿನಃ ಕೃತಮೈತ್ರಸ್ಯ ಪತ್ಯುರ್ಜಾಯೇವ ಪುಂಶ್ಚಲೀ ॥ ೪ ॥

ಕಾಮೋ ಮನ್ಯುರ್ಮದೋ ಲೋಭಃ ಶೋಕಮೋಹಭಯಾದಯಃ ।
ಕರ್ಮಬಂಧಶ್ಚ ಯನ್ಮೂಲಃ ಸ್ವೀಕುರ್ಯಾತ್ಕೋ ನು ತದ್ಬುಧಃ ॥ ೫ ॥

ಅಥೈವಮಖಿಲಲೋಕಪಾಲಲಲಾಮೋಽಪಿ ವಿಲಕ್ಷಣೈರ್ಜಡವದವಧೂತವೇಷಭಾಷಾಚರಿತೈರವಿಲಕ್ಷಿತಭಗವತ್ಪ್ರಭಾವೋ ಯೋಗಿನಾಂ ಸಾಂಪರಾಯವಿಧಿಮನುಶಿಕ್ಷಯನ್ ಸ್ವಕಲೇವರಂ ಜಿಹಾಸುರಾತ್ಮನ್ಯಾತ್ಮಾನಮಸಂವ್ಯವಹಿತಮನರ್ಥಾಂತರಭಾವೇನಾನ್ವೀಕ್ಷಮಾಣ ಉಪರತಾನುವೃತ್ತಿರುಪರರಾಮ ॥ ೬ ॥ ತಸ್ಯ ಹ ವಾ ಏವಂ ಮುಕ್ತಲಿಂಗಸ್ಯ ಭಗವತ ಋಷಭಸ್ಯ ಯೋಗಮಾಯಾವಾಸನಯಾ ದೇಹ ಇಮಾಂ ಜಗತೀಮಭಿಮಾನಾಭಾಸೇನ ಸಂಕ್ರಮಮಾಣಃ ಕೊಂಕವೆಂಕಕುಟಕಾನ್ ದಕ್ಷಿಣಕರ್ಣಾಟಕಾನ್ದೇಶಾನ್ಯದೃಚ್ಛಯೋಪಗತಃ ಕುಟಕಾ-

ರಾಜಾ ಪರೀಕ್ಷಿತನು ಕೇಳಿದನು – ಮುನಿವರ್ಯರೇ! ಯೋಗರೂಪವಾದ ವಾಯುವಿನ ಮೂಲಕ ಪ್ರಜ್ವಲಿತವಾದ ಜ್ಞಾನಾಗ್ನಿಯಿಂದ ರಾಗಾದಿ ಕರ್ಮಬೀಜಗಳು ಸುಟ್ಟುಹೋಗಿರುವಂತಹ ಆತ್ಮಾರಾಮ ಮುನಿಗಳಿಗೆ ದೈವವಶಾತ್ ಸ್ವತಃ ಅಣಿಮಾದಿ ಸಿದ್ಧಿಗಳು ದೊರಕಿದರೆ, ಅವು ಅವರಿಗೆ ರಾಗ-ದ್ವೇಷಾದಿ ಕ್ಲೇಶಗಳಿಗೆ ಕಾರಣಗಳಾಗುವುದೇ ಇಲ್ಲ. ಹಾಗಿರುವಾಗ ಭಗವಾನ್ ಋಷಭದೇವರು ಅವನ್ನು ಏಕೆ ಸ್ವೀಕರಿಸಲಿಲ್ಲ? ॥ ೧ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ರಾಜೇಂದ್ರನೇ! ನೀನು ಹೇಳುವುದು ಸರಿಯಾಗಿದೆ. ಆದರೆ ಧೂರ್ತನಾದ ಬೇಡನು ಮೃಗಗಳು ತನ್ನ ಬಲೆಯಲ್ಲಿ ಬಂದು ಬಿದ್ದು ತನ್ನ ಹಿಡಿತದಲ್ಲಿದ್ದರೂ ಅವುಗಳ ಮೇಲೆ ಭರವಸೆಯನ್ನು ಇಡುವುದಿಲ್ಲ; ಹಾಗೆಯೇ ಬುದ್ಧಿವಂತರಾದವರು ಈ ಚಂಚಲವಾದ ಚಿತ್ತದ ಮೇಲೆ ಭರವಸೆಯನ್ನಿಡುವುದಿಲ್ಲ. ॥ ೨ ॥ ಈ ಪ್ರಸಿದ್ಧವಾದ ಶ್ಲೋಕಗಳು ಇದೇ ಅಭಿಪ್ರಾಯವನ್ನು ಸಾರುತ್ತಿವೆ –

ಈ ಚಂಚಲವಾದ ಚಿತ್ತದಲ್ಲಿ ಎಂದಿಗೂ ಸ್ನೇಹ-ನಂಬಿಕೆಗಳನ್ನಿಡಬಾರದು. ಇದರಲ್ಲಿ ನಂಬಿಕೆಯನ್ನಿಟ್ಟದ್ದರಿಂದಲೇ ಬಹುಮಂದಿ ಯೋಗೀಶ್ವರರು ತಾವು ಚಿರಕಾಲದಿಂದ ಸಂಪಾದಿಸಿದ್ದ ತಪಸ್ಸನ್ನು ಕಳಕೊಂಡರು. ಅವರ ತಪಶ್ಶಕ್ತಿಯು ಕ್ಷಯಹೊಂದಿತು. ॥ ೩ ॥ ವ್ಯಭಿಚಾರಿಣಿಯಾದ ಹೆಂಗಸು ಜಾರಪುರುಷರಿಗೆ ಅವಕಾಶಕೊಟ್ಟು ತನ್ನಲ್ಲಿ ನಂಬಿಕೆಯನ್ನಿಟ್ಟಿರುವ ಪತಿಯನ್ನು ಅವರ ಮೂಲಕ ಕೊಲ್ಲಿಸುವಂತೆಯೇ ಯೋಗಿಯು ತನ್ನ ಮನಸ್ಸಿನ ಮೇಲೆ ವಿಶ್ವಾಸವನ್ನಿಟ್ಟರೆ ಆ ಮನಸ್ಸು ಕಾಮಕ್ಕೂ, ಅದರ ಜೊತೆಗಾರರಾದ ಕ್ರೋಧವೇ ಮುಂತಾದವುಗಳು ಆ ಯೋಗಿಯ ಮೇಲೆ ಆಕ್ರಮಣಮಾಡಲು ಅವಕಾಶವನ್ನು ಕಲ್ಪಿಸಿಕೊಟ್ಟು ಅವನನ್ನು ನಷ್ಟ-ಭ್ರಷ್ಟನನ್ನಾಗಿ ಮಾಡುತ್ತದೆ. ॥ ೪ ॥ ಕಾಮ-ಕ್ರೋಧ-ಮದ-ಲೋಭ-ಶೋಕ-ಮೋಹ ಮತ್ತು ಭಯಗಳೇ ಮುಂತಾದ ಶತ್ರುಗಳಿಗೂ ಮತ್ತು ಕರ್ಮಬಂಧನಕ್ಕೂ ಈ ಮನಸ್ಸೇ ಮೂಲವಾದುದು. ಇದರ ಮೇಲೆ ಯಾವುದೇ ಬುದ್ಧಿವಂತನು ಭರವಸೆಯನ್ನಿಡಬಾರದು. ॥ ೫ ॥

ಇದರಿಂದಲೇ ಭಗವಾನ್ ಋಷಭದೇವರು ಇಂದ್ರಾದಿ ಸಮಸ್ತ ಲೋಕಪಾಲಕರಿಗೆ ಭೂಷಣಸ್ವರೂಪರಾಗಿದ್ದರೂ, ಅವರು ಜಡ-ಮೂರ್ಖಮನುಷ್ಯನಂತೆ ಅವಧೂತರಿಗೆ ಸರಿಹೋಲುವ ನಾನಾ ವೇಷ, ಭಾಷೆ. ಆಚರಣೆಗಳಿಂದ ತನ್ನ ಈಶ್ವರೀಯ ಪ್ರಭಾವವನ್ನು ಮರೆಮಾಚಿಕೊಂಡಿದ್ದರು. ಕೊನೆಗೆ ಅವರು ಯೋಗಿಗಳಿಗೆ ದೇಹತ್ಯಾಗದ ವಿಧಿಯನ್ನು ಕಲಿಸುವುದಕ್ಕಾಗಿ ತನ್ನ ಶರೀರವನ್ನು ತ್ಯಜಿಸಬಯಸಿದರು. ಅವರು ತನ್ನ ಅಂತಃಕರಣದಲ್ಲಿ ಅಭೇದರೂಪದಿಂದ ಸ್ಥಿತನಾದ ಪರಮಾತ್ಮನನ್ನು ಅಭಿನ್ನರೂಪದಿಂದ ನೋಡುತ್ತಾ ವಾಸನೆಗಳ ಅನುವೃತ್ತಿಯನ್ನು ಬಿಟ್ಟು ಲಿಂಗದೇಹದ ಅಭಿಮಾನವನ್ನೂ ಪೂರ್ಣವಾಗಿ ತೊರೆದಿದ್ದರು. ॥ ೬ ॥ ಹೀಗೆ ಲಿಂಗದೇಹದ ಅಭಿಮಾನದಿಂದ ಮುಕ್ತರಾದ ಭಗವಾನ್ ಋಷಭದೇವರ ಶರೀರವು ಯೋಗಮಾಯೆಯ ವಾಸನೆಯಿಂದ ಕೇವಲ ಅಭಿಮಾನದ ಆಭಾಸವನ್ನಾಶ್ರಯಿಸಿ ಭೂಮಿಯಲ್ಲಿ ಸಂಚರಿಸುತ್ತಿತ್ತು. ಅದು

ಚಲೋಪವನ ಆಸ್ಯಕೃತಾಶ್ಮಕವಲ ಉನ್ಮಾದ ಇವ ಮುಕ್ತಮೂರ್ಧಜೋಽಸಂವೀತ ಏವ ವಿಚಚಾರ ॥ ೭ ॥ ಅಥ ಸಮೀರವೇಗವಿಧೂತ ವೇಣುವಿಕರ್ಷಣಜಾತೋಗ್ರದಾವಾನಲಸ್ತದ್ವನಮಾಲೇಲಿಹಾನಃ ಸಹ ತೇನ ದದಾಹ ॥ ೮ ॥

ಯಸ್ಯ ಕಿಲಾನುಚರಿತಮುಪಾಕರ್ಣ್ಯ ಕೊಂಕವೇಂಕಕುಟಕಾನಾಂ ರಾಜಾರ್ಹನ್ನಾಮೋಪಶಿಕ್ಷ್ಯ ಕಲಾವಧರ್ಮ ಉತ್ಕೃಷ್ಯಮಾಣೇ ಭವಿತವ್ಯೇನ ವಿಮೋಹಿತಃ ಸ್ವಧರ್ಮಪಥಮಕುತೋಭಯ ಮಪಹಾಯ ಕುಪಥಪಾಖಂಡಮಸಮಂಜಸಂ ನಿಜಮನೀಷಯಾ ಮಂದಃ ಸಂಪ್ರವರ್ತಯಿಷ್ಯತೇ ॥ ೯ ॥ ಯೇನ [redacted] ವಾವ ಕಲೌ ಮನುಜಾಪಸದಾ ದೇವಮಾಯಾ ಮೋಹಿತಾಃ ಸ್ವವಿಧಿನಿಯೋಗಶೌಚಚಾರಿತ್ರವಿಹೀನಾ ದೇವಹೇಲನಾನ್ಯಪವ್ರತಾನಿ ನಿಜನಿಜೇಚ್ಛಯಾ ಗೃಹ್ಣಾನಾ ಅಸ್ನಾನಾನಾಚಮನಾಶೌಚಕೇಶೋಲ್ಲುಂಚನಾದೀನಿ ಕಲಿನಾಧರ್ಮಬಹುಲೇನೋಪಹತಧಿಯೋ ಬ್ರಹ್ಮಬ್ರಾಹ್ಮಣಯಜ್ಞಪುರುಷಲೋಕವಿದೂಷಕಾಃ ಪ್ರಾಯೇಣ ಭವಿಷ್ಯಂತಿ ॥ ೧೦ ॥ ತೇ ಚ ಹ್ಯರ್ವಾಕ್ತನಯಾ ನಿಜಲೋಕಯಾತ್ರಯಾಂಧಪರಂಪರಯಾಽಽಶ್ವಸ್ತಾಸ್ತಮಸ್ಯಂಧೇ ಸ್ವಯಮೇವ ಪ್ರಪತಿಷ್ಯಂತಿ ॥ ೧೧ ॥

ಅಯಮವತಾರೋ ರಜಸೋಪಪ್ಲುತಕೈವಲ್ಯೋಪಶಿಕ್ಷಣಾರ್ಥಃ ॥ ೧೨ ॥ ತಸ್ಯಾನುಗುಣಾನ್ ಶ್ಲೋಕಾನ್ ಗಾಯಂತಿ –

ಅಹೋ ಭುವಃ ಸಪ್ತಸಮುದ್ರವತ್ಯಾ
ದ್ವೀಪೇಷು ವರ್ಷೇಷ್ವಧಿಪುಣ್ಯಮೇತತ್ ।
ಗಾಯಂತಿ ಯತ್ರತ್ಯಜನಾ ಮುರಾರೇಃ
ಕರ್ಮಾಣಿ ಭದ್ರಾಣ್ಯವತಾರವಂತಿ ॥ ೧೩ ॥

ಅಹೋ ನು ವಂಶೋ ಯಶಸಾವದಾತಃ
ಪ್ರೈಯವ್ರತೋ ಯತ್ರ ಪುಮಾನ್ಪುರಾಣಃ ।
ಕೃತಾವತಾರಃ ಪುರುಷಃ ಸ ಆದ್ಯಃ
ಚಚಾರ ಧರ್ಮಂ ಯದಕರ್ಮಹೇತುಮ್ ॥ ೧೪ ॥

ಕೋ ನ್ವಸ್ಯ ಕಾಷ್ಠಾಮಪರೋಽನುಗಚ್ಛೇ-
ನ್ಮನೋರಥೇನಾಪ್ಯಭವಸ್ಯ ಯೋಗೀ ।
ಯೋ ಯೋಗಮಾಯಾಃ ಸ್ಪೃಹಯತ್ಯುದಸ್ತಾ
ಹ್ಯಸತ್ತಯಾ ಯೇನ ಕೃತಪ್ರಯತ್ನಾಃ ॥ ೧೫ ॥

ಪ್ರವಾಸದಿಂದ ಕೊಂಕಣ ವೆಂಕಟಾಚಲ ಮತ್ತು ದಕ್ಷಿಣದ ಕನ್ನಡದ ದೇಶಗಳಿಗೆ. ಕುಟಕಗಿರಿಯ ಉಪವನದಲ್ಲಿ ಬಾಯಿಗೆ ಕಲ್ಲುಗಳನ್ನು ಹಾಕಿಕೊಂಡು, ಕೂದಲನ್ನು ಕೆದರಿಕೊಂಡು ಉನ್ಮತ್ತರಂತೆ ದಿಗಂಬರರಾಗಿ ತಿರುಗಾಡತೊಡಗಿದರು. ॥ ೭ ॥ ಅದೇ ಸಮಯದಲ್ಲಿ ಬಿರುಗಾಳಿಯಿಂದ ಭಸ್ಸನೇ ಬೀಸಿ ಬಿದಿರುಮೆಳೆಗಳ ತಿಕ್ಕಾಟದಿಂದ ಹುಟ್ಟಿದ ಕಾಡುಗಿಚ್ಚು ಭುಗಿಲೆದ್ದು, ಕೆಂಪುಜ್ವಾಲೆಗಳಿಂದ ಇಡೀ ಅರಣ್ಯವನ್ನೂ ಹಾಗೂ ಅಲ್ಲಿ ಸಂಚರಿಸುತ್ತಿದ್ದ ಋಷಭದೇವರ ದೇಹವನ್ನೂ ಸುಟ್ಟು ಭಸ್ಮಮಾಡಿಬಿಟ್ಟಿತು. ॥ ೮ ॥

ಎಲೈ ರಾಜನೇ! ಕಲಿಯುಗದಲ್ಲಿ ಅಧರ್ಮವು ವೃದ್ಧಿಹೊಂದಿದಾಗ ಕೊಂಕ, ವೆಂಕ ಮತ್ತು ಕುಟಕದೇಶಗಳಿಗೆ ಅಧಿಪತಿಯಾದ ಮಂದಮತಿಯಾದ ಓರ್ವ ರಾಜನಾದ ಅರ್ಹತ್ ಎಂಬುವನು ಶ್ರೀಋಷಭದೇವರ ಆಶ್ರಮಧರ್ಮಗಳನ್ನು ಮೀರಿದ ಆಚರಣೆಯ ವೃತ್ತಾಂತವನ್ನು ಕೇಳಿ, ತಾನು ಅದಕ್ಕೆ ಅಧಿಕಾರಿಯಲ್ಲದಿದ್ದರೂ ಅದನ್ನು ಅನುಕರಿಸುತ್ತಾ ನಿರ್ಭಯನಾಗಿ ಸ್ವಧರ್ಮವನ್ನು ಬಿಟ್ಟು ಪಾಷಂಡಧರ್ಮದ ಮಾರ್ಗವನ್ನು ಜನರಲ್ಲಿ ಪ್ರಚಾರಮಾಡುವನು. ॥ ೯ ॥ ಆದರಿಂದ ಕಲಿಯುಗದಲ್ಲಿ ದೇವಮಾಯೆಯಿಂದ ಮೋಹಿತರಾದ ಅನೇಕ ಮನುಷ್ಯರು ತಮ್ಮ ಶಾಸ್ತ್ರವಿಹಿತವಾದ ಶೌಚಾಚಾರವನ್ನು ಬಿಟ್ಟುಬಿಡುವರು. ವೇದವನ್ನೂ, ಬ್ರಾಹ್ಮಣರನ್ನೂ, ಯಜ್ಞಪುರುಷನನ್ನೂ ನಿಂದಿಸತೊಡಗುವರು ಹಾಗೂ ವೇದ ವಿರುದ್ಧವಾದ ಅಂಧಪರಂಪರೆಯಿಂದ ಪ್ರೋತ್ಸಾಹಿತರಾಗಿ ಅವರಲ್ಲಿ ವಿಶ್ವಾಸವಿಟ್ಟು, ಸ್ನಾನಮಾಡದಿರುವುದು, ಆಚಮನ ಮಾಡದಿರುವುದು, ಅಶುದ್ಧವಾಗಿರುವುದು, ಕೇಶಗಳನ್ನು ಕೀಳಿಸಿಕೊಳ್ಳುವುದು ಮುಂತಾಗಿ ಸ್ವೇಚ್ಛೆಯಿಂದ ವರ್ತಿಸುತ್ತಾ ತಾವಾಗಿಯೇ ಅಂಧತಮಸ್ಸಿನಲ್ಲಿ ಬೀಳುವರು. ಅದು ಅವರ ಪತನಕ್ಕೆ ಕಾರಣವಾಗುವುದು. ॥ ೧೦-೧೧ ॥

ಶ್ರೀಭಗವಂತನು ರಜೋಗುಣದಿಂದ ತುಂಬಿರುವ ಜನರಿಗೆ ಮೋಕ್ಷಮಾರ್ಗದ ಶಿಕ್ಷಣಕೊಡಲು ಈ ಋಷಭಾವತಾರವನ್ನು ಮಾಡಿದನು. ॥ ೧೨ ॥ ಈ ಅವತಾರದ ದಿವ್ಯಗುಣಗಳನ್ನು ವರ್ಣಿಸುವ ಈ ಶ್ಲೋಕಗಳನ್ನು ವಿದ್ವಾಂಸರು ಹಾಡುತ್ತಾ ಬಂದಿದ್ದಾರೆ –

ಆಹಾ! ಏಳು ಸಮುದ್ರಗಳಿಂದ ಕೂಡಿದ ಸಮಸ್ತ ದ್ವೀಪಗಳಲ್ಲಿಯೂ, ವರ್ಷಗಳಲ್ಲಿಯೂ ಈ ಭಾರತವರ್ಷವು ಎಂತಹ ಪುಣ್ಯಭೂಮಿಯಾಗಿದೆ! ಇಲ್ಲಿಯ ಜನರು ಶ್ರೀಹರಿಯ ಮಂಗಳಮಯ ಅವತಾರ ಚರಿತ್ರೆಗಳನ್ನು ಹಾಡುತ್ತಾ ಇರುತ್ತಾರೆ. ॥ ೧೩ ॥ ಆಹಾ! ಮಹಾರಾಜಾ ಪ್ರಿಯವ್ರತನ ವಂಶವು ಉಜ್ವಲವಾದ ಕೀರ್ತಿಯಿಂದ ಕೂಡಿ ಅತ್ಯಂತ ಪವಿತ್ರವಾಗಿದೆ. ಅದರಲ್ಲಿಯೇ ಪುರಾಣಪುರುಷನಾದ ಆದಿನಾರಾಯಣನು ಋಷಭಾವತಾರವನ್ನು ತಾಳಿ ಮೋಕ್ಷವನ್ನು ದೊರಕಿಸುವಂತಹ ಪರಮಹಂಸಧರ್ಮವನ್ನು ಆಚರಿಸಿದನು. ॥ ೧೪ ॥ ಆಹಾ! ಈ ಜನ್ಮರಹಿತ ಭಗವಾನ್ ಋಷಭದೇವರ ಅಸಾಧಾರಣವಾದ ನಡೆವಳಿಕೆಯನ್ನು ಇತರ ಯೋಗಿಗಳು ಮನಸ್ಸಿನಿಂದಲೂ ಮುಟ್ಟಲಾರರು. ಏಕೆಂದರೆ, ಯೋಗಿಗಳು ಯಾವ ಯೋಗಸಿದ್ಧಿಗಳಿಗಾಗಿ ಆಶಿಸಿ ನಿರಂತರ ಪ್ರಯತ್ನಿಸುತ್ತಾರೋ, ಆ ಸಿದ್ಧಿಗಳೆಲ್ಲವೂ ತಾವಾಗಿಯೇ ಪ್ರಾಪ್ತವಾಗಿದ್ದರೂ ಅವನ್ನು ಅಸತ್ಯವೆಂದು ಭಾವಿಸಿ ನಿರಾಕರಿಸಿಬಿಟ್ಟನು. ॥ ೧೫ ॥

ಪರೀಕ್ಷಿದ್ರಾಜೇಂದ್ರ! ಹೀಗೆ ನಾನು ನಿನಗೆ ಸಮಸ್ತ ವೇದಗಳು, ಲೋಕಗಳು, ಬ್ರಾಹ್ಮಣರು ಮತ್ತು ಗೋವುಗಳು ಇವರೆಲ್ಲ

ಇತಿ ಹ ಸ್ಮ ಸಕಲವೇದಲೋಕದೇವಬ್ರಾಹ್ಮಣಗವಾಂ ಪರಮಗುರೋರ್ಭಗವತ ಋಷಭಾಖ್ಯಸ್ಯ ವಿಶುದ್ಧಾಚರಿತಮೀರಿತಂ ಪುಂಸಾಂ ಸಮಸ್ತದುಶ್ಚರಿತಾಭಿಹರಣಂ ಪರಮಮಹಾಮಂಗಲಾಯನಮಿದಮನು ಶ್ರದ್ಧಯೋಪಚಿತಯಾನುಶೃಣೋತ್ಯಾಶ್ರಾವಯತಿ ವಾವಹಿತೋ ಭಗವತಿ ತಸ್ಮಿನ್ವಾಸುದೇವ ಏಕಾಂತತೋ ಭಕ್ತಿರನಯೋರಪಿ ಸಮನುವರ್ತತೇ ॥ ೧೬ ॥ ಯಸ್ಯಾಮೇವ ಕವಯ ಆತ್ಮಾನಮವಿರತಂ ವಿವಿಧವೃಜಿನಸಂಸಾರಪರಿತಾಪೋಪತಪ್ಯಮಾನಮನುಸವನಂ ಸ್ನಾಪಯಂತಸ್ತಯೈವ ಪರಯಾ ನಿರ್ವೃತ್ಯಾ ಹ್ಯಪವರ್ಗಮಾತ್ಯಂತಿಕಂ ಪರಮ ಪುರುಷಾರ್ಥಮಪಿ ಸ್ವಯಮಾಸಾದಿತಂ ನೋ ಏವಾದ್ರಿಯಂತೇ ಭಗವದೀಯತ್ವೇನೈವ ಪರಿಸಮಾಪ್ತಸರ್ವಾರ್ಥಾಃ ॥ ೧೭ ॥

ರಾಜನ್ ಪತಿರ್ಗುರುರಲಂ ಭವತಾಂ ಯದೂನಾಂ
ದೈವಂ ಪ್ರಿಯಃ ಕುಲಪತಿಃ ಕ್ವ ಚ ಕಿಂಕರೋ ವಃ ।
ಅಸ್ತ್ವೇವಮಂಗ ಭಗವಾನ್ ಭಜತಾಂ ಮುಕುಂದೋ
ಮುಕ್ತಿಂ ದದಾತಿ ಕರ್ಹಿಚಿತ್ಸ್ಮ ನ ಭಕ್ತಿಯೋಗಮ್ ॥ ೧೮ ॥

ನಿತ್ಯಾನುಭೂತನಿಜಲಾಭನಿವೃತ್ತತೃಷ್ಣಃ
ಶ್ರೇಯಸ್ಯತದ್ರಚನಯಾ ಚಿರಸುಪ್ತಬುದ್ಧೇಃ ।
ಲೋಕಸ್ಯ ಯಃ ಕರುಣಯಾಭಯಮಾತ್ಮಲೋಕ-
ಮಾಖ್ಯಾನ್ನಮೋ ಭಗವತೇ ಋಷಭಾಯ ತಸ್ಮೈ ॥ ೧೯ ॥

ರಿಗೂ ಪರಮಗುರುವಾಗಿರುವ ಭಗವಾನ್ ಶ್ರೀಋಷಭದೇವರ ವಿಶುದ್ಧವಾದ ಚರಿತ್ರೆಯನ್ನು ವರ್ಣಿಸಿರುವೆನು. ಇದು ಮನುಷ್ಯರ ಸಮಸ್ತ ಪಾಪಗಳನ್ನು ಕಳೆಯುವಂತಹುದು. ಪರಮ ಮಂಗಳಮಯವಾದ ಈ ಪವಿತ್ರ ಚರಿತ್ರೆಯನ್ನು ಏಕಾಗ್ರಚಿತ್ತದಿಂದ ಶ್ರದ್ಧಾಪೂರ್ವಕ ನಿರಂತರವಾಗಿ ಕೇಳುವ, ಹೇಳುವ ಮನುಷ್ಯರಿಗೆ ಭಗವಾನ್ ವಾಸುದೇವನಲ್ಲಿ ಅನನ್ಯವಾದ ಭಕ್ತಿಯು ಉಂಟಾಗುವುದು. ॥ ೧೬ ॥ ಬಗೆ-ಬಗೆಯ ಪಾಪಗಳಿಂದ ತುಂಬಿರುವ ಸಾಂಸಾರಿಕ ತಾಪಗಳಿಂದ ಬೆಂದು-ನೊಂದಿರುವ ಪಂಡಿತರು ತಮ್ಮ ಅಂತಃಕರಣವನ್ನು ಈ ಭಕ್ತಿರಸವಾಹಿನಿಯಲ್ಲಿ ನಿರಂತರವಾಗಿ ಮೀಯಿಸುವರು. ಅದರಿಂದ ಅವರಿಗೆ ದೊರೆಯುವ ಪರಮ ಶಾಂತಿಯು ವರ್ಣನಾತೀತವಾದುದು. ಅದನ್ನು ಪಡೆದ ಸುಕೃತಿಗಳು ತಾನಾಗಿಯೇ ಒದಗಿ ಬರುವ ಮೋಕ್ಷವೆಂಬ ಪರಮಪುರುಷಾರ್ಥವನ್ನು ಕೂಡ ಆದರಿಸುವುದಿಲ್ಲ. ಶ್ರೀಭಗವಂತನಿಗೆ ಸ್ವಕೀಯರಾಗಿದ್ದರಿಂದಲೇ ಅವರ ಸಮಸ್ತ ಪುರುಷಾರ್ಥಗಳು ಈಡೇರುತ್ತವೆ. ॥ ೧೭ ॥

ಎಲೈ ರಾಜನೇ! ಭಗವಾನ್ ಶ್ರೀಕೃಷ್ಣನು ಸ್ವಯಂ ಪಾಂಡವರ ಮತ್ತು ಯದುವಂಶೀಯರ ರಕ್ಷಕನೂ, ಗುರುವೂ, ಇಷ್ಟದೇವನೂ, ಸುಹೃದನೂ, ಕುಲಪತಿಯೂ ಆಗಿದ್ದನು. ಇಷ್ಟು ಮಾತ್ರವಲ್ಲ; ಕೆಲವೊಮ್ಮೆ ನಿಮ್ಮ ಆಜ್ಞಾಕಾರಿ ಸೇವಕನೂ ಆಗುತ್ತಿದ್ದನು. ಹೀಗೆಯೇ ಶ್ರೀಭಗವಂತನು ತನ್ನನ್ನು ಭಜಿಸುವ ಇತರ ಭಕ್ತರಿಗೂ ಈ ಉಪಕಾರಗಳನ್ನಲ್ಲದೆ ಮುಕ್ತಿಯನ್ನು ದಯಪಾಲಿಸುವನು. ಆದರೆ ಅದಕ್ಕೂ ಅತಿಶಯವಾಗಿರುವ ಭಕ್ತಿಯೋಗವನ್ನು ಮಾತ್ರ ಸುಲಭವಾಗಿ ಕೊಡುವುದಿಲ್ಲ. ॥ ೧೮ ॥ ನಿರಂತರವಾಗಿ ಆತ್ಮಾನುಭವದಲ್ಲಿ ಮುಳುಗಿದವನಾಗಿ, ಎಲ್ಲ ಕಾಮನೆಗಳನ್ನು ಕಳೆದುಕೊಂಡವನಾಗಿದ್ದ ಕೃತಕೃತ್ಯನಾದ ಮಹಾಪುರುಷನು-ನಿರಂತರವಾಗಿ ವಿಷಯಭೋಗಗಳಲ್ಲಿ ಮುಳುಗಿ ತಮ್ಮ ವಾಸ್ತವಿಕ ಶ್ರೇಯಸ್ಸನ್ನು ಮರೆತಿರುವ ಜನರಲ್ಲಿ ದಯದೋರಿ ಅವರಿಗೆ ನಿರ್ಭಯವಾದ ಆತ್ಮಸ್ವರೂಪವನ್ನು ಉಪದೇಶಮಾಡಿದ ಆ ಭಗವಾನ್ ಋಷಭದೇವನಿಗೆ ನಮಸ್ಕಾರವು. ॥ ೧೯ ॥

ಆರನೆಯ ಅಧ್ಯಾಯವು ಮುಗಿಯಿತು. ॥ ೬ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಪಂಚಮಸ್ಕಂಧೇ
ಋಷಭದೇವಾನುಚರಿತೇ ಷಷ್ಠೋಽಧ್ಯಾಯಃ ॥ ೬ ॥

ಏಳನೆಯ ಅಧ್ಯಾಯ

ಭರತೋಪಾಖ್ಯಾನ

ಶ್ರೀಶುಕ ಉವಾಚ

ಭರತಸ್ತು ಮಹಾಭಾಗವತೋ ಯದಾ ಭಗವತಾವನಿತಲಪರಿಪಾಲನಾಯ ಸಂಚಿಂತಿತಸ್ತದನುಶಾಸನಪರಃ ಪಂಚಜನೀಂ ವಿಶ್ವರೂಪದುಹಿತರಮುಪಯೇಮೇ ॥ ೧ ॥ ತಸ್ಯಾಮು ಹ ವಾ ಆತ್ಮಜಾನ್ಕಾರ್ತ್ಸ್ನ್ಯೇನಾನುರೂಪಾನಾತ್ಮನಃ

ಶ್ರೀಶುಕಮುನಿಗಳು ಹೇಳುತ್ತಾರೆ – ಅಯ್ಯಾ ರಾಜೇಂದ್ರನೇ! ಭರತಮಹಾರಾಜನು ದೊಡ್ಡ ಭಗವದ್ಭಕ್ತನಾಗಿದ್ದನು. ಭಗವಾನ್ ಋಷಭದೇವರು ತಮ್ಮಿಚ್ಛೆಯಂತೆ ಅವನನ್ನು ಭೂಮಂಡಲವನ್ನು ಪಾಲಿಸಲಿಕ್ಕಾಗಿ ನೇಮಿಸಿದ್ದರು. ಭರತನು ತಂದೆಯ ಆಜ್ಞೆಯನ್ನು ಶಿರಸಾವಹಿಸಿ, ವಿಶ್ವರೂಪನ ಕನ್ಯೆಯಾದ ಪಂಚಜನಿಯನ್ನು ವಿವಾಹವಾದನು. ॥ ೧ ॥ ತಾಮಸಾಹಂಕಾರವು ಶಬ್ದ

ಪಂಚ ಜನಯಾಮಾಸ ಭೂತಾದಿರಿವ ಭೂತ-ಸೂಕ್ಷ್ಮಾಣಿ ॥ ೨ ॥ ಸುಮತಿಂ ರಾಷ್ಟ್ರಭೃತಂ ಸುದರ್ಶನ-ಮಾವರಣಂ ಧೂಮ್ರಕೇತುಮಿತಿ । ಅಜನಾಭಂ ನಾಮೈತ-ದ್ವರ್ಷಂ ಭಾರತಮಿತಿ ಯತ ಆರಭ್ಯ ವ್ಯಪದಿಶಂತಿ ॥ ೩ ॥

ಸ ಬಹುವಿನ್ಮಹೀಪತಿಃ ಪಿತೃಪಿತಾಮಹವದುರುವತ್ಸಲ-ತಯಾ ಸ್ವೇ ಸ್ವೇ ಕರ್ಮಣಿ ವರ್ತಮಾನಾಃ ಪ್ರಜಾಃ ಸ್ವಧ-ರ್ಮಮನುವರ್ತಮಾನಃ ಪರ್ಯಪಾಲಯತ್ ॥ ೪ ॥ ಈಜೇ ಚ ಭಗವಂತಂ ಯಜ್ಞಕ್ರತುರೂಪಂ ಕ್ರತುಭಿರುಚ್ಚಾ-ವಚೈಃ ಶ್ರದ್ಧಯಾಽಽಹೃತಾಗ್ನಿಹೋತ್ರದರ್ಶಪೂರ್ಣಮಾಸ-ಚಾತುರ್ಮಾಸ್ಯಪಶುಸೋಮಾನಾಂ ಪ್ರಕೃತಿವಿಕೃತಿಭಿರನು-ಸವನಂ ಚಾತುರ್ಹೋತ್ರವಿಧಿನಾ ॥ ೫ ॥ ಸಂಪ್ರಚರತ್ಸು ನಾನಾಯಾಗೇಷು ವಿರಚಿತಾಂಗಕ್ರಿಯೇಷ್ವಪೂರ್ವಂ ಯತ್ತ-ತ್ಕ್ರಿಯಾಫಲಂ ಧರ್ಮಾಖ್ಯಂ ಪರೇ ಬ್ರಹ್ಮಣಿ ಯಜ್ಞಪುರುಷೇ ಸರ್ವದೇವತಾಲಿಂಗಾನಾಂ ಮಂತ್ರಾಣಾಮರ್ಥನಿಯಾ-ಮಕತಯಾ ಸಾಕ್ಷಾತ್ಕರ್ತರಿ ಪರದೇವತಾಯಾಂ ಭಗವತಿ ವಾಸುದೇವ ಏವ ಭಾವಯಮಾನ ಆತ್ಮನೈಪುಣ್ಯಮೃದಿತಕ-ಷಾಯೋ ಹವಿಃಷ್ವಧ್ವರ್ಯುಭಿರ್ಗೃಹ್ಯಮಾಣೇಷು ಸ ಯಜಮಾನೋ ಯಜ್ಞಭಾಜೋ ದೇವಾಂಸ್ತಾನ್ಪುರುಷಾ-ವಯವೇಷ್ವಭ್ಯಧ್ಯಾಯತ್ ॥ ೬ ॥ ಏವಂ ಕರ್ಮವಿಶುದ್ಧ್ಯಾ ವಿಶುದ್ಧಸತ್ತ್ವಸ್ಯಾಂತರ್ಹೃದಯಾಕಾಶಶರೀರೇ ಬ್ರಹ್ಮಣಿ ಭಗ-ವತಿ ವಾಸುದೇವೇ ಮಹಾಪುರುಷರೂಪೋಪಲಕ್ಷಣೇ ಶ್ರೀವತ್ಸಕೌಸ್ತುಭವನಮಾಲಾರಿದರಗದಾದಿಭಿರುಪಲಕ್ಷಿತೇ ನಿಜಪುರುಷಹೃಲ್ಲಿಖಿತೇನಾತ್ಮನಿ ಪುರುಷರೂಪೇಣ ವಿರೋ-ಚಮಾನ ಉಚ್ಚೈಸ್ತರಾಂ ಭಕ್ತಿರನುದಿನಮೇಧಮಾನರಯಾ-ಜಾಯತ ॥ ೭ ॥

ಏವಂ ವರ್ಷಾಯುತಸಹಸ್ರಪರ್ಯಂತಾವಸಿತಕರ್ಮ-ನಿರ್ವಾಣಾವಸರೋಽಧಿಭುಜ್ಯಮಾನಂ ಸ್ವತನಯೇಭ್ಯೋ ರಿಕ್ಥಂ ಪಿತೃಪೈತಾಮಹಂ ಯಥಾದಾಯಂ ವಿಭಜ್ಯ ಸ್ವಯಂ ಸಕಲಸಂಪನ್ನಿಕೇತಾತ್ಸ್ವನಿಕೇತಾತ್ಪುಲಹಾಶ್ರಮಂ ಪ್ರವವ್ರಾಜ ॥ ೮ ॥ ಯತ್ರ ಹ ವಾವ ಭಗವಾನ್ ಹರಿರದ್ಯಾಪಿ ತತ್ರ-

ಮುಂತಾದ ಐದು ತನ್ಮಾತ್ರೆಗಳನ್ನು ಉತ್ಪನ್ನಮಾಡುವಂತೆ, ಭರತನು ಪಂಚಜನಿಯಲ್ಲಿ ತನಗೆ ಸಮಾನರಾದ ಸುಮತಿ, ರಾಷ್ಟ್ರಭೃತ್, ಸುದರ್ಶನ, ಆವರಣ ಮತ್ತು ಧೂಮ್ರಕೇತು ಎಂಬ ಐದು ಪುತ್ರರನ್ನು ಪಡೆದನು. ಅಜನಾಭವರ್ಷವೆಂದು ಕರೆಯಲ್ಪಡುತ್ತಿದ್ದ ಈ ವರ್ಷಕ್ಕೆ ಭರತಚಕ್ರವರ್ತಿಯ ಕಾಲದಿಂದ 'ಭಾರತವರ್ಷ' ಎಂಬ ಹೆಸರಾಯಿತು ॥ ೨-೩ ॥

ಮಹಾಪ್ರಾಜ್ಞನಾದ ಆ ಭರತಸಾರ್ವಭೌಮನು ತಮ್ಮ-ತಮ್ಮ ಕರ್ಮಗಳಲ್ಲಿ ತೊಡಗಿದ್ದ ಪ್ರಜೆಗಳನ್ನು ತನ್ನ ತಂದೆ, ತಾತಂದಿರಂತೆ ತಾನೂ ಸ್ವಧರ್ಮಾಚರಣೆಯಲ್ಲಿ ನಿರತನಾಗಿದ್ದು ಅತ್ಯಂತ ವಾತ್ಸಲ್ಯದಿಂದ ಪಾಲಿಸತೊಡಗಿದನು. ॥ ೪ ॥ ಅವನು ಹೋತಾ, ಅಧ್ವರ್ಯು, ಉದ್ಗಾತಾ ಮತ್ತು ಬ್ರಹ್ಮಾ ಎಂಬ ನಾಲ್ವರು ಋತ್ವಿಜರಿಂದ ನಡೆಸಲ್ಪಡಬೇಕಾದ ಚಾತುರ್ಹೋತ್ರವೆಂಬ ಕರ್ಮವಿಧಿಯಂತೆ ಅಗ್ನಿಹೋತ್ರ, ದರ್ಶ, ಪೂರ್ಣಮಾಸ, ಚಾತುರ್ಮಾಸ್ಯ, ಪಶು ಮತ್ತು ಸೋಮಗಳೆಂಬ ಯಜ್ಞಗಳನ್ನು ಅವುಗಳ ಪ್ರಕೃತಿ ಮತ್ತು ವಿಕೃತಿ ಎಂಬ ಎರಡು ವಿಧಾನಗಳಿಂದಲೂ ಆಯಾ ಕಾಲಗಳಲ್ಲಿ ಶ್ರದ್ಧಾಪೂರ್ವಕ ಆಚರಿಸಿ ಯಜ್ಞರೂಪನಾದ ಶ್ರೀಭಗವಂತನನ್ನು ಆರಾಧಿಸಿದನು. ॥ ೫ ॥ ಹೀಗೆ ಅಂಗ ಮತ್ತು ಕ್ರಿಯೆಗಳಿಂದ ಕೂಡಿದ ಬೇರೆ-ಬೇರೆ ಯಜ್ಞಗಳನ್ನು ಅನುಷ್ಠಾನಮಾಡುವಾಗ ಅಧ್ವರ್ಯುಗಳು ಆಹುತಿಯನ್ನು ಸಮರ್ಪಿಸುವುದಕ್ಕಾಗಿ ಹವಿಸ್ಸನ್ನು ಕೈಯಲ್ಲಿ ಎತ್ತಿಕೊಂಡಾಗ ಯಜಮಾನನಾದ ಭರತನು ಆ ಯಜ್ಞಕರ್ಮದಿಂದ ಉಂಟಾಗುವ ಪುಣ್ಯಫಲವನ್ನು ಯಜ್ಞಪುರುಷನಾದ ಭಗವಾನ್ ವಾಸುದೇವನಿಗೆ ಅರ್ಪಿಸುತ್ತಿದ್ದನು. ವಾಸ್ತವವಾಗಿ ಆ ಪರಬ್ರಹ್ಮನೇ ಇಂದ್ರಾದಿ ಸಮಸ್ತ ದೇವತೆಗಳ ಪ್ರಕಾಶಕನೂ, ಮಂತ್ರಗಳ ನಿಜವಾದ ಪ್ರತಿಪಾದ್ಯನೂ ಹಾಗೂ ಆ ದೇವತೆಗಳ ನಿಯಾಮಕನೂ ಆಗಿದ್ದರಿಂದ ಮುಖ್ಯಕರ್ತನೂ, ಪ್ರಧಾನದೇವನೂ ಅವನೇ ಆಗಿದ್ದಾನೆ. ಹೀಗೆ ತನ್ನ ಭಗವದರ್ಪಣ ಬುದ್ಧಿರೂಪವಾದ ಕುಶಲತೆಯಿಂದ ಹೃದಯದ ರಾಗ-ದ್ವೇಷಾದಿ ಕಲ್ಮಷಗಳನ್ನು ತೊಳೆದುಕೊಂಡು, ಅವನು ಯಜ್ಞಭೋಕ್ತೃಗಳಾದ ಸೂರ್ಯನೇ ಮುಂತಾದ ದೇವತೆಗಳನ್ನು ಭಗವಂತನ ನೇತ್ರವೇ ಮುಂತಾದ ಅವಯವಗಳಲ್ಲಿ ಧ್ಯಾನಮಾಡುತ್ತಿದ್ದನು. ॥ ೬ ॥ ಈ ರೀತಿಯ ಕರ್ಮಶುದ್ಧಿಯಿಂದ ಅವನ ಅಂತಃಕರಣವು ಪರಿಶುದ್ಧವಾಯಿತು. ಆಗ ಅವನಿಗೆ-ಶ್ರೀವತ್ಸ, ಕೌಸ್ತುಭ, ವನಮಾಲೆ, ಚಕ್ರ, ಶಂಖ ಮತ್ತು ಗದೆ ಮುಂತಾದ ದಿವ್ಯಾಭರಣ ಮತ್ತು ದಿವ್ಯಾಯುಧಗಳಿಂದ ಶೋಭಿಸುತ್ತಾ, ನಾರದರೇ ಮುಂತಾದ ತನ್ನ ಭಕ್ತರ ಹೃದಯದಲ್ಲಿ ಚಿತ್ರದಂತೆ ನಿಶ್ಚಲವಾಗಿ ನೆಲೆಸುವವನಾಗಿ, ಅಂತರ್ಯಾಮಿ ರೂಪದಲ್ಲಿ ಬೆಳಗುತ್ತಾ, ಹೃದಯಾಕಾಶದಲ್ಲೇ ಕಾಣಿಸಿಕೊಳ್ಳುವ ಬ್ರಹ್ಮಸ್ವರೂಪನೂ, ಮಹಾಪುರುಷ ಲಕ್ಷಣಸಂಪನ್ನನೂ ಆದ ಭಗವಾನ್ ಶ್ರೀವಾಸುದೇವನಲ್ಲಿ ದಿನ-ದಿನವೂ ವೇಗವಾಗಿ ವೃದ್ಧಿ ಹೊಂದುವ ಶ್ರೇಷ್ಠವಾದ ಭಕ್ತಿಯು ಉಂಟಾಯಿತು. ॥ ೭ ॥

ಈ ಪ್ರಕಾರ ಒಂದುಕೋಟಿ ವರ್ಷಗಳು ಕಳೆಯಲು, ಅವನಿಗೆ ರಾಜ್ಯಭೋಗದ ಪ್ರಾರಬ್ಧವು ಕ್ಷೀಣಿಸಿಹೋಯಿತು ಎಂದು ತಿಳಿದು, ತಾನು ಅನುಭವಿಸಿದ ವಂಶಪರಂಪರಾಗತವಾದ ತನ್ನ ಸಂಪತ್ತನ್ನು ಯಥೋಚಿತವಾಗಿ ತನ್ನ ಪುತ್ರರಿಗೆ ಹಂಚಿಕೊಟ್ಟನು. ಮತ್ತೆ ಸರ್ವಸಂಪತ್ತುಗಳಿಂದ ತುಂಬಿದ ತನ್ನ ಅರಮನೆಯನ್ನೂ ಬಿಟ್ಟು ಅವನು ಪುಲಹಾಶ್ರಮಕ್ಕೆ ಹೊರಟುಹೋದನು. ॥ ೮ ॥ ಪುಲಹಾಶ್ರಮ

ತ್ಯಾನಾಂ ನಿಜಜನಾನಾಂ ವಾತ್ಸಲ್ಯೇನ ಸಂನಿಧಾಪ್ಯತ ಇಚ್ಛಾರೂಪೇಣ ॥ ೯ ॥ ಯತ್ರಾಶ್ರಮಪದಾನ್ಯುಭಯತೋ ನಾಭಿಭಿರ್ದೃಷಚ್ಚಕ್ರೈಶ್ಚಕ್ರನದೀ ನಾಮ ಸರಿತ್ಪ್ರವರಾ ಸರ್ವತಃ ಪವಿತ್ರೀಕರೋತಿ ॥ ೧೦॥

ತಸ್ಮಿನ್ ವಾವ ಕಿಲ ಸ ಏಕಲಃ ಪುಲಹಾಶ್ರಮೋಪವನೇ ವಿವಿಧಕುಸುಮಕಿಸಲಯತುಲಸಿಕಾಂಬುಭಿಃ ಕಂದಮೂಲಫಲೋಪಹಾರೈಶ್ಚ ಸಮೀಹಮಾನೋ ಭಗವತ ಆರಾಧನಂ ವಿವಿಕ್ತ ಉಪರತ ವಿಷಯಾಭಿಲಾಷ ಉಪಭೃತೋಪಶಮಃ ಪರಾಂ ನಿರ್ವೃತಿಮವಾಪ ॥ ೧೧ ॥ ತಯೇತ್ಥಮವಿರತಪುರುಷಪರಿಚರ್ಯಯಾ ಭಗವತಿ ಪ್ರವರ್ಧಮಾನಾನುರಾಗಭರದ್ರುತಹೃದಯಶೈಥಿಲ್ಯಃ ಪ್ರಹರ್ಷವೇಗೇನಾತ್ಮನ್ಯುದ್ಭಿದ್ಯಮಾನರೋಮಪುಲಕಕುಲಕ ಔತ್ಕಂಠ್ಯಪ್ರವೃತ್ತಪ್ರಣಯಬಾಷ್ಪನಿರುದ್ಧಾವಲೋಕನಯನ ಏವಂ ನಿಜರಮಣಾರುಣಚರಣಾರವಿಂದಾನುಧ್ಯಾನಪರಿಚಿತಭಕ್ತಿಯೋಗೇನ ಪರಿಪ್ಲುತಪರಮಾಹ್ಲಾದಗಂಭೀರಹೃದಯಹ್ರದಾವಗಾಢಧಿಷಣಸ್ತಾಮಪಿ ಕ್ರಿಯಮಾಣಾಂ ಭಗವತ್ಸಪರ್ಯಾಂ ನ ಸಸ್ಮಾರ ॥ ೧೨ ॥ ಇತ್ಥಂ ಧೃತಭಗವದ್ವ್ರತ ಐಣೇಯಾಜಿನವಾಸಸಾನುಸವನಾಭಿಷೇಕಾರ್ದ್ರಕಪಿಶಕುಟಿಲಜಟಾಕಲಾಪೇನ ಚ ವಿರೋಚಮಾನಃ ಸೂರ್ಯರ್ಚಾ ಭಗವಂತಂ ಹಿರಣ್ಮಯಂ ಪುರುಷಮುಜ್ಜಿಹಾನೇ ಸೂರ್ಯಮಂಡಲೇಽಭ್ಯುಪತಿಷ್ಠನ್ನೇತದು ಹೋವಾಚ ॥ ೧೩॥

ಪರೋರಜಃ ಸವಿತುರ್ಜಾತವೇದೋ
ದೇವಸ್ಯ ಭರ್ಗೋ ಮನಸೇದಂ ಜಜಾನ ।
ಸುರೇತಸಾದಃ ಪುನರಾವಿಶ್ಯ ಚಷ್ಟೇ
ಹಂಸಂ ಗೃಧ್ರಾಣಂ ನೃಷದ್ರಿಂಗಿರಾಮಿಮಃ ॥ ೧೪॥

ದಲ್ಲಿ ವಾಸಿಸುವ ಭಕ್ತರಮೇಲೆ ಶ್ರೀಭಗವಂತನಿಗೆ ಅತೀವ ವಾತ್ಸಲ್ಯವಿದೆ. ಅವನು ಇಂದಿಗೂ ಕೂಡ ಅವರಿಗೆ ಇಷ್ಟದೇವತೆಯ ರೂಪದಲ್ಲಿ ದೊರೆಯುತ್ತಾನೆ. ॥ ೯ ॥ ಅಲ್ಲಿ ಚಕ್ರನದಿ (ಗಂಡಕೀ) ಎಂಬ ಪ್ರಸಿದ್ಧವಾದ ನದಿಯು ಮೇಲೆ ಮತ್ತು ಕೆಳಗೆ ಎರಡೂ ಕಡೆಗಳಲ್ಲಿಯೂ ನಾಭಿಯಂತಹ ಗುರುತುಗಳನ್ನು ಹೊಂದಿರುವ ಚಕ್ರಾಕಾರವಾದ ಸಾಲಿಗ್ರಾಮ ಶಿಲೆಯೊಡನೆ ಎಲ್ಲ ಕಡೆಗಳಿಂದಲೂ ಋಷಿಗಳ ಆಶ್ರಮಗಳನ್ನು ಪವಿತ್ರಗೊಳಿಸುತ್ತಿದೆ. ॥ ೧೦ ॥

ಆ ಪುಲಹಾಶ್ರಮದ ಉಪವನದಲ್ಲಿ ಭರತನು ಏಕಾಂತವಾದ ಜಾಗದಲ್ಲಿ ಒಬ್ಬಂಟಿಗನಾಗಿದ್ದು ಅನೇಕ ಪ್ರಕಾರದ ಪತ್ರ, ಪುಷ್ಪ, ತುಳಸೀದಳ, ಜಲ ಮತ್ತು ಗೆಡ್ಡೆ-ಗೆಣಸುಗಳೇ ಮುಂತಾದ ನೈವೇದ್ಯಗಳಿಂದ ಶ್ರೀಭಗವಂತನನ್ನು ಆರಾಧಿಸುತ್ತಿದ್ದನು. ಇದರಿಂದ ಅವನ ಅಂತಃಕರಣವು ಎಲ್ಲ ವಿಷಯಾಭಿಲಾಷೆಗಳನ್ನು ಕಳಕೊಂಡು ಪ್ರಶಾಂತವಾಯಿತು ಮತ್ತು ಅವನಿಗೆ ಪರಮಾನಂದ ಪ್ರಾಪ್ತವಾಯಿತು. ॥ ೧೧ ॥ ಹೀಗೆ ಅವನು ನಿಯಮಪೂರ್ವಕವಾಗಿ ಶ್ರೀಭಗವಂತನ ಕೈಂಕರ್ಯವನ್ನು ಮಾಡತೊಡಗಲು, ಅದರಿಂದ ಪ್ರೇಮದ ವೇಗವು ಹೆಚ್ಚುತ್ತಾ ಹೃದಯವು ಕರಗಿ ಶಾಂತವಾಯಿತು. ಆನಂದದ ಪ್ರಬಲವಾದ ವೇಗದಿಂದ ಶರೀರದಲ್ಲಿ ರೋಮಾಂಚನವುಂಟಾಯಿತು. ಉತ್ಕಂಠತೆಯ ಕಾರಣ ಕಣ್ಣುಗಳಲ್ಲಿ ಪ್ರೇಮಾಶ್ರುಗಳು ಹರಿದುಬಂದು ಕಣ್ಣುಗಳ ನೋಟವು ಮಂದವಾಯಿತು. ಕಡೆಗೆ ತನ್ನ ಪ್ರಿಯತಮನ ಕೆಂಪಾದ ಅಡಿದಾವರೆಗಳ ಧ್ಯಾನದಿಂದ ಭಕ್ತಿಯೋಗವು ಸಿದ್ಧಿಸಿತು. ಪರಮಾನಂದದಿಂದ ತುಂಬಿದ ಹೃದಯವೆಂಬ ಆಳವಾದ ಸರೋವರದಲ್ಲಿ ಬುದ್ಧಿಯು ಮುಳುಗಿ ಹೋಗಿದ್ದರಿಂದ ನಿಯಮಪೂರ್ವಕವಾಗಿ ಮಾಡುತ್ತಿದ್ದ ಶ್ರೀಭಗವಂತನ ಪೂಜೆಯ ಸ್ಮರಣೆಯೂ ಉಳಿಯಲಿಲ್ಲ. ॥ ೧೨ ॥ ಹೀಗೆ ಅವನು ಭಗವತ್ಸೇವೆಯ ನಿಯಮದಲ್ಲಿಯೇ ತತ್ಪರನಾಗಿರುತ್ತಿದ್ದನು. ದೇಹದಲ್ಲಿ ಜಿಂಕೆಯ ಚರ್ಮವನ್ನು ಧರಿಸುತ್ತಿದ್ದನು. ತ್ರಿಕಾಲಗಳಲ್ಲಿಯೂ ಸ್ನಾನಮಾಡಿ ನೆನೆಯುತ್ತಲೇ ಇದ್ದುದರಿಂದ ಕೂದಲುಗಳು ಬೂದುಬಣ್ಣದ ಗುಂಗುರುಕೂದಲುಗಳು ಜಟೆಗಳಾಗಿದ್ದವು. ಇದರಿಂದ ಅವನು ಬಹುಸುಂದರವಾಗಿ ಕಾಣುತ್ತಿದ್ದನು. ಉದಯಗೊಂಡ ಸೂರ್ಯಮಂಡಲದಲ್ಲಿ ಸೂರ್ಯಸಂಬಂಧವಾದ ಋಕ್ಕುಗಳ ಮೂಲಕ ಜ್ಯೋತಿರ್ಮಯ ಪರಮಪುರುಷ ಭಗವಂತನಾದ ಶ್ರೀಮನ್ನಾರಾಯಣನನ್ನು ಆರಾಧಿಸುತ್ತಾ ಈ ಪ್ರಕಾರ ಹೇಳುತ್ತಿದ್ದನು. ॥ ೧೩ ॥

ಭಗವಾನ್ ಸೂರ್ಯನ ಕರ್ಮಫಲದಾಯಕವಾದ ತೇಜಸ್ಸು ಪ್ರಕೃತಿಯಿಂದ ಅತೀತವಾಗಿದೆ. ತನ್ನ ಸಂಕಲ್ಪದ ಮೂಲಕ ಈ ಜಗತ್ತನ್ನು ಸೃಷ್ಟಿಸಿದ್ದಾನೆ. ಮತ್ತೆ ಅವನೇ ಅಂತರ್ಯಾಮಿ ರೂಪದಿಂದ ಇದರಲ್ಲಿ ಪ್ರವೇಶಮಾಡಿ ತನ್ನ ಚಿತ್ಶಕ್ತಿಯ ಮೂಲಕ ವಿಷಯಾಸಕ್ತಿಯುಳ್ಳ ಜೀವಿಗಳನ್ನು ರಕ್ಷಿಸುತ್ತಾನೆ. ನಾವು ಬುದ್ಧಿಪ್ರವರ್ತಕನಾದ ಆ ತೇಜಸ್ಸನ್ನು ಶರಣು ಹೊಂದುವೆನು. ॥ ೧೪ ॥

ಏಳನೆಯ ಅಧ್ಯಾಯವು ಮುಗಿಯಿತು. ॥ ೭ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಪಂಚಮಸ್ಕಂಧೇ
ಭರತಚರಿತೇ ಭಗವತ್ಪರಿಚರ್ಯಾಯಾಂ ಸಪ್ತಮೋಽಧ್ಯಾಯಃ ॥ ೭ ॥

ಎಂಟನೆಯ ಅಧ್ಯಾಯ

ಭರತನು ಜಿಂಕೆಯ ಮೋಹದಲ್ಲಿ ಸಿಲುಕಿ– ಜಿಂಕೆಯ ಯೋನಿಯಲ್ಲಿ ಜನ್ಮತಾಳುವುದು

ಶ್ರೀಶುಕ ಉವಾಚ

ಏಕದಾ ತು ಮಹಾನದ್ಯಾಂ ಕೃತಾಭಿಷೇಕನೈಯಮಿಕಾವಶ್ಯಕೋ ಬ್ರಹ್ಮಾಕ್ಷರಮಭಿಗೃಣಾನೋ ಮುಹೂರ್ತತ್ರಯಮುದಕಾಂತ ಉಪವಿವೇಶ ॥ ೧ ॥ ತತ್ರ ತದಾ ರಾಜನ್ ಹರಿಣೀ ಪಿಪಾಸಯಾ ಜಲಾಶಯಾಭ್ಯಾಶಮೇಕೈವೋಪಜಗಾಮ ॥ ೨ ॥ ತಯಾ ಪೇಪೀಯಮಾನ ಉದಕೇ ತಾವದೇವಾವಿದೂರೇಣ ನದತೋ ಮೃಗಪತೇರುನ್ನಾದೋ ಲೋಕಭಯಂಕರ ಉದಪತತ್ ॥ ೩ ॥ ತಮುಪಶ್ರುತ್ಯ ಸಾ ಮೃಗವಧೂಃ ಪ್ರಕೃತಿವಿಕ್ಲವಾ ಚಕಿತನಿರೀಕ್ಷಣಾ ಸುತರಾಮಪಿ ಹರಿಭಯಾಭಿನಿವೇಶವ್ಯಗ್ರಹೃದಯಾ ಪಾರಿಪ್ಲವದೃಷ್ಟಿರಗತತೃಷಾ ಭಯಾತ್ಸಹಸೈವೋಚ್ಚಕ್ರಾಮ ॥ ೪ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಎಲೈ ರಾಜನೇ! ಒಂದು ದಿನ ಆ ಮಹಾತ್ಮನಾದ ಭರತನು ಗಂಡಕೀನದಿಯಲ್ಲಿ ಸ್ನಾನಮಾಡಿ ನಿತ್ಯ-ನೈಮಿತ್ತಿಕಾದಿ ಆಹ್ನಿಕಗಳನ್ನು ಮುಗಿಸಿಕೊಂಡು ಪ್ರಣವವನ್ನು ಜಪಿಸುತ್ತಾ ಮೂರುಮುಹೂರ್ತಗಳ ಕಾಲದವರೆಗೆ ನದಿಯ ದಡದ ಬಳಿಯೇ ಕುಳಿತಿದ್ದನು. ॥ ೧ ॥ ಅದೇ ಸಮಯಕ್ಕೆ ಒಂದು ಹೆಣ್ಣು ಜಿಂಕೆಯು ಬಾಯಾರಿಕೆಯಿಂದ ಪೀಡಿತವಾಗಿ ನೀರು ಕುಡಿಯಲಿಕ್ಕಾಗಿ ಒಂಟಿಯಾಗಿಯೇ ನದೀತೀರಕ್ಕೆ ಬಂತು. ॥ ೨ ॥ ಅದು ಇನ್ನೇನು ನೀರು ಕುಡಿಯಬೇಕೆಂದಾಗ ಇದ್ದಕ್ಕಿದ್ದಂತೆ ಲೋಕಭಯಂಕರವಾದ ಒಂದು ಸಿಂಹಗರ್ಜನೆ ಕೇಳಿಬಂತು. ॥ ೩ ॥ ಜಿಂಕೆಯು ಸ್ವಭಾವವೇ ಅಂಜುಬುರುಕತನವಿರುತ್ತದೆ. ಆದುದರಿಂದ ಅದು ಮೊದಲೇ ಚಕಿತದೃಷ್ಟಿಯಿಂದ ಅತ್ತ-ಇತ್ತ ನೋಡುತ್ತಿತ್ತು. ಆ ಭೀಕರವಾದ ಶಬ್ದವು ಕಿವಿಗೆ ಬೀಳುತ್ತಲೆ ಸಿಂಹದ ಭಯದಿಂದ ಎದೆಯು ಡವಗುಟ್ಟುತ್ತಿರಲು, ಬಾಯಾರಿಕೆಯು ತಣಿಯುವುದಕ್ಕೆ ಮೊದಲೇ ಪ್ರಾಣಭಯದಿಂದ ನದಿಯನ್ನು ದಾಟಲೆಂದು ಛಂಗನೆ ಮೇಲೆ ನೆಗೆಯಿತು. ॥ ೪ ॥

ತಸ್ಯಾ ಉತ್ಪತಂತ್ಯಾ ಅಂತರ್ವತ್ನ್ಯಾ ಉರುಭಯಾವಗಲಿತೋ ಯೋನಿನಿರ್ಗತೋ ಗರ್ಭಃ ಸ್ರೋತಸಿ ನಿಪಪಾತ ॥ ೫ ॥ ತತ್ಪ್ರಸವೋತ್ಸರ್ಪಣಭಯಖೇದಾತುರಾ ಸ್ವಗಣೇನ ವಿಯುಜ್ಯಮಾನಾ ಕಸ್ಯಾಂಚಿದ್ದರ್ಯಾಂ ಕೃಷ್ಣಸಾರಸತೀ ನಿಪಪಾತಾಥ ಚ ಮಮಾರ ॥ ೬ ॥

ಅದು ಗರ್ಭಧರಿಸಿದ್ದ ಜಿಂಕೆಯಾದ್ದರಿಂದ ಮೇಲೆ ಹಾರಿದಾಗ ಭಯದಿಂದ ಅದರ ಗರ್ಭವು ತನ್ನ ಜಾಗದಿಂದ ಜಾರಿ ಯೋನಿದ್ವಾರದಿಂದ ಹೊರಬಂದು ನದಿಯ ಪ್ರವಾಹದಲ್ಲಿ ಬಿದ್ದುಬಿಟ್ಟಿತು. ॥ ೫ ॥ ಹಾಗೆ ಗರ್ಭಪಾತವು ಬಿದ್ದುಹೋದ ಆಯಾಸದಿಂದಲೂ, ಸಿಂಹದ ಭಯದಿಂದಲೂ ಅತಿಪೀಡಿತವಾದ ಆ ಜಿಂಕೆಯು ತನ್ನ ಹಿಂಡನ್ನು ಅಗಲಿ ಓಡುತ್ತಾ ಒಂದು ಗುಹೆಯಲ್ಲಿ ಬಿದ್ದು ಸತ್ತುಹೋಯಿತು. ॥ ೬ ॥

ತಂ ತ್ವೇಣಕುಣಕಂ ಕೃಪಣಂ ಸ್ರೋತಸಾನೂಹ್ಯಮಾನಮಭಿವೀಕ್ಷ್ಯಾಪವಿದ್ಧಂ ಬಂಧುರಿವಾನುಕಂಪಯಾ ರಾಜರ್ಷಿರ್ಭರತ ಆದಾಯ ಮೃತಮಾತರಮಿತ್ಯಾಶ್ರಮಪದಮನಯತ್ ॥ ೭ ॥ ತಸ್ಯ ಹ ವಾ ಏಣಕುಣಕ ಉಚ್ಚೈರೇತಸ್ಮಿನ್ ಕೃತನಿಜಾಭಿಮಾನಸ್ಯಾಹರಹಸ್ತತ್ಪೋಷಣಪಾಲನಲಾಲನಪ್ರೀಣನಾನುಧ್ಯಾನೇನಾತ್ಮನಿಯಮಾಃ ಸಹಯಮಾಃ ಪುರುಷಪರಿಚರ್ಯಾದಯ ಏಕೈಕಶಃ ಕತಿಪಯೇನಾಹರ್ಗಣೇನ ವಿಯುಜ್ಯಮಾನಾಃ ಕಿಲ ಸರ್ವ ಏವೋದವಸನ್ ॥ ೮ ॥ ಅಹೋ ಬತಾಯಂ ಹರಿಣಕುಣಕಃ ಕೃಪಣ

ಆಗ ಆ ಬಡಪಾಯಿಯಾದ ಜಿಂಕೆಯ ಮರಿಯು ತನ್ನ ಬಂಧುಗಳನ್ನಗಲಿ ನದಿಯ ಪ್ರವಾಹದಲ್ಲಿ ಕೊಚ್ಚಿಕೊಂಡು ಹೋಗುತ್ತಿರುವುದನ್ನು ಕಂಡ ರಾಜರ್ಷಿಯಾದ ಭರತನಿಗೆ ಕರುಣೆಯುಂಟಾಗಿ ಅವನು ತಬ್ಬಲಿಯಾದ ಆ ಮರಿಯನ್ನು ಆತ್ಮೀಯತೆಯಿಂದ ಎತ್ತಿಕೊಂಡು ತನ್ನ ಆಶ್ರಮಕ್ಕೆ ಬಂದನು. ॥ ೭ ॥ ಆ ಜಿಂಕೆಯ ಮರಿಯಮೇಲೆ ದಿನ-ದಿನಕ್ಕೆ ಭರತನ ಮಮತೆಯು ಹೆಚ್ಚತೊಡಗಿತು. ಅವನು ಪ್ರತಿದಿನವೂ ಅದಕ್ಕೆ ಆಹಾರ-ಪಾನೀಯಗಳನ್ನು ಒದಗಿಸುವುದು, ಅದನ್ನು ಹುಲಿ ಮುಂತಾದವುಗಳಿಂದ ರಕ್ಷಿಸುವುದು, ಮೈದಡವಿ ಮುದ್ದಿಸುವುದು ಮುಂತಾದ ಚಿಂತೆಗಳಲ್ಲೇ ಮುಳುಗತೊಡಗಿದನು. ಕೆಲವೇ ದಿನಗಳಲ್ಲಿ ಅವನ ಯಮ, ನಿಯಮ, ಭಗವತ್ಪೂಜೆ ಮುಂತಾದ ಆವಶ್ಯಕವಾದ ವಿಧಿಗಳು ಒಂದೊಂದಾಗಿ ಬಿಟ್ಟುಹೋಗುತ್ತಾ, ಕೊನೆಗೆ ಎಲ್ಲವೂ ಬಿಟ್ಟುಹೋಯಿತು. ॥ ೮ ॥ ಆತನು ಹೀಗೆ ವಿಚಾರಮಾಡತೊಡಗಿದನು – "ಅಹಾ! ಈ ಬಡಪಾಯಿಯಾದ ಜಿಂಕೆಯ ಮರಿಯು ಭಗವಂತನ ಕಾಲಚಕ್ರದ ವೇಗದಿಂದ ತನ್ನ ಹಿಂಡನ್ನೂ, ಗೆಳೆಯರನ್ನೂ, ನೆಂಟರಿಷ್ಟರನ್ನೂ ಅಗಲಿ ಕೊನೆಗೆ ನನ್ನ ಆಸರೆಗೆ ಬಂದು ಸೇರಿತಲ್ಲ!

ಈಶ್ವರರಥಚರಣಪರಿಭ್ರಮಣರಯೇಣ ಸ್ವಗಣಸುಹೃದ್ಬಂಧುಭ್ಯಃ ಪರಿವರ್ಜಿತಃ ಶರಣಂ ಚ ಮೋಪಸಾದಿತೋ ಮಾಮೇವ ಮಾತಾಪಿತರೌ ಭ್ರಾತೃಜ್ಞಾತೀನ್ ಯೌಥಿಕಾಂಶ್ಚೈವೋಪೇಯಾಯ ನಾನ್ಯಂ ಕಂಚನ ವೇದ ಮಯ್ಯತಿವಿಸ್ರಬ್ಧಶ್ಚಾತ ಏವ ಮಯಾ ಮತ್ಪರಾಯಣಸ್ಯ ಪೋಷಣಪಾಲನಪ್ರೀಣನಲಾಲನಮನಸೂಯುನಾನುಷ್ಠೇಯಂ ಶರಣ್ಯೋಪೇಕ್ಷಾದೋಷವಿದುಷಾ ॥ ೯ ॥ ನೂನಂ ಹ್ಯಾರ್ಯಾಃ ಸಾಧವ ಉಪಶಮಶೀಲಾಃ ಕೃಪಣಸುಹೃದ್ ಏವಂವಿಧಾರ್ಥೇ ಸ್ವಾರ್ಥಾನಪಿ ಗುರುತರಾನುಪೇಕ್ಷಂತೇ ॥ ೧೦ ॥

ಇತಿ ಕೃತಾನುಷಂಗ ಆಸನಶಯನಾಟನಸ್ನಾನಾಶನಾದಿಷು ಸಹ ಮೃಗಜಹುನಾ ಸ್ನೇಹಾನುಬದ್ಧಹೃದಯ ಆಸೀತ್ ॥ ೧೧ ॥ ಕುಶಕುಸುಮಸಮಿತ್ಪಲಾಶಫಲಮೂಲೋದಕಾನ್ಯಾಹರಿಷ್ಯಮಾಣೋ ವೃಕಸಾಲಾವೃಕಾದಿಭ್ಯೋ ಭಯಮಾಶಂಸಮಾನೋ ಯದಾ ಸಹ ಹರಿಣಕುಣಕೇನ ವನಂ ಸಮಾವಿಶತಿ ॥ ೧೨ ॥ ಪಥಿಷು ಚ ಮುಗ್ಧಭಾವೇನ ತತ್ರ ತತ್ರ ವಿಷಕ್ತಮತಿಪ್ರಣಯ ಭರಹೃದಯಃ ಕಾರ್ಪಣ್ಯಾತ್ಸ್ಕಂಧೇನೋದ್ವಹತಿ ಏವಮುತ್ಸಂಗ ಉರಸಿ ಚಾಧಾಯೋಪಲಾಲಯನ್ಮುದಂ ಪರಮಾಮವಾಪ ॥ ೧೩ ॥ ಕ್ರಿಯಾಯಾಂ ನಿರ್ವರ್ತ್ಯಮಾನಾಯಾಮಂತರಾಲೇಽಪ್ಯುತ್ಥಾಯೋತ್ಥಾಯ ಯದೈನಮಭಿಚಕ್ಷೀತ ತರ್ಹಿ ವಾವ ಸ ವರ್ಷಪತಿಃ ಪ್ರಕೃತಿಸ್ಥೇನ ಮನಸಾ ತಸ್ಮಾ ಆಶಿಷ ಆಶಾಸ್ತೇ ಸ್ವಸ್ತಿ ಸ್ತಾದ್ವತ್ಸ ತೇ ಸರ್ವತ ಇತಿ ॥ ೧೪ ॥

ಅನ್ಯದಾ ಭೃಶಮುದ್ವಿಗ್ನಮನಾ ನಷ್ಟದ್ರವಿಣ ಇವ ಕೃಪಣಃ ಸಕರುಣಮತಿತರ್ಷೇಣ ಹರಿಣಕುಣಕವಿರಹವಿಹ್ವಲಹೃದಯಸಂತಾಪಸ್ತಮೇವಾನುಶೋಚನ್ಕಿಲ ಕಶ್ಮಲಂ ಮಹದಭಿರಂಭಿತ ಇತಿ ಹೋವಾಚ ॥ ೧೫ ॥ ಅಪಿ ಬತ ಸ ವೈ ಕೃಪಣ ಏಣಬಾಲಕೋ ಮೃತಹರಿಣೀಸುತೋಽಹೋ ಮಮಾನಾರ್ಯಸ್ಯ ಶಠಕಿರಾತಮತೇರಕೃತಸುಕೃತಸ್ಯ ಕೃತವಿಸ್ರಂಭ ಆತ್ಮಪ್ರತ್ಯಯೇನ ತದವಿಗಣಯನ್ಸುಜನ ಇವಾಗಮಿಷ್ಯತಿ ॥ ೧೬ ॥ ಅಪಿ ಕ್ಷೇಮೇಣಾಸ್ಮಿನ್ನಾಶ್ರಮೋಪವನೇ ಶಷ್ಪಾಣಿ ಚರಂತಂ ದೇವಗುಪ್ತಂ ದ್ರಕ್ಷ್ಯಾಮಿ ॥ ೧೭ ॥ ಅಪಿ ಚ ನ ವೃಕಃ ಸಾಲಾವೃಕೋಽನ್ಯತಮೋ ವಾ ನೈಕಚರ ಏಕಚರೋ ವಾ ಭಕ್ಷಯತಿ ॥ ೧೮ ॥

ಈಗ ಇದು ನನ್ನನ್ನೇ ತನ್ನ ತಾಯಿಯೆಂದೂ, ತಂದೆಯೆಂದೂ, ಬಂಧುಬಳಗವೆಂದೂ, ಹಿಂಡಿನ ಗೆಳೆಯನೆಂದೂ ತಿಳಿದು ಕೊಂಡಿದೆ. ನನ್ನನ್ನು ಬಿಟ್ಟು ಇದಕ್ಕೆ ಬೇರೆ ಯಾರ ಪರಿಚಯವೂ ಇಲ್ಲ. ನನ್ನಲ್ಲಿ ಪೂರ್ಣವಾದ ನಂಬಿಕೆಯೂ ಇದಕ್ಕೆ ಉಂಟಾಗಿದೆ. ಶರಣು ಬಂದವರನ್ನು ಕೈಬಿಡುವುದು ಮಹಾದೋಷವೆಂದು ನನಗೆ ತಿಳಿದಿದೆ. ಆದುದರಿಂದ ನನ್ನಲ್ಲಿ ಶರಣಾದ ಈ ಪ್ರಾಣಿಯನ್ನು ನಾನು ಎಲ್ಲ ದೋಷಬುದ್ಧಿಯನ್ನು ಬಿಟ್ಟು ಸಾಕಿ-ಸಲಹಿ ಮುದ್ದಿಸುತ್ತಾ ಬೆಳೆಸಬೇಕು. ॥ ೯ ॥ ನಿಶ್ಚಯವಾಗಿಯೂ ಶಾಂತಸ್ವಭಾವದವರೂ, ದೀನರಕ್ಷಕರೂ ಆದ ಪರೋಪಕಾರಿಗಳಾದ ಸಜ್ಜನರು ಇಂತಹ ಶರಣಾಗತರನ್ನು ರಕ್ಷಿಸುವುದಕ್ಕಾಗಿ ದೊಡ್ಡ-ದೊಡ್ಡ ಸ್ವಾರ್ಥಗಳನ್ನು ಕಡೆಗಣಿಸಿಬಿಡುತ್ತಾರೆ. ॥ ೧೦ ॥

ಹೀಗೆ ■ ಹುಲ್ಲೆಮರಿಯಲ್ಲಿ ವ್ಯಾಮೋಹವು ಹೆಚ್ಚಿದ್ದರಿಂದ ಆತನ ಮನಸ್ಸು ಕುಳಿತಿರುವಾಗಲೂ, ಮಲಗುವಾಗಲೂ, ನಿಲ್ಲುವಾಗಲೂ, ಆಹಾರವನ್ನು ಸೇವಿಸುವಾಗಲೂ ಸದಾ ಅದನ್ನೇ ಯೋಚಿಸುತ್ತಾ ಸ್ನೇಹಪಾಶಕ್ಕೆ ಕಟ್ಟುಬಿದ್ದಿತು. ॥ ೧೧ ॥ ದರ್ಭೆ, ಸಮಿತ್ತು, ಪತ್ರ, ಪುಷ್ಪ, ಗೆಡ್ಡೆ ಗೆಣಸುಗಳನ್ನು ತರುವುದಕ್ಕೆ ಹೋದಾಗಲೂ ಆತನು - ತೋಳ, ನಾಯಿಗಳು ಮುತ್ತಬಹುದೆಂಬ ಭಯದಿಂದ ಅದನ್ನು ಜೊತೆಯಲ್ಲೇ ಅರಣ್ಯಕ್ಕೆ ಕರೆದುಕೊಂಡು ಹೋಗುತ್ತಿದ್ದನು. ॥ ೧೨ ॥ ದಾರಿಯಲ್ಲಿ ಅಲ್ಲಲ್ಲಿ ಆ ಹುಲ್ಲೆಯ ಮರಿಯು ಮೃದುವಾದ ಹುಲ್ಲನ್ನು ಕಂಡು ಮುಗ್ಧಭಾವದಿಂದ ಆಸಕ್ತವಾಗಿ ನಿಂತುಬಿದ್ದಾಗ, ಭರತನು ಅತ್ಯಂತ ಪ್ರೇಮಪೂರ್ಣವಾದ ಹೃದಯದಿಂದ ಅದನ್ನು ತನ್ನ ಹೆಗಲಮೇಲೆ ಏರಿಸಿಕೊಳ್ಳುತ್ತಿದ್ದನು. ಹೀಗೆಯೇ ಅದನ್ನು ತೊಡೆಯ ಮೇಲೆ ಮಲಗಿಸಿಕೊಳ್ಳುವುದು, ಎದೆಗಪ್ಪಿಕೊಂಡು ಮುದ್ದಾಡುವುದು ಇವುಗಳಿಂದ ಅವನಿಗೆ ಹೆಚ್ಚಿನ ಸಂತೋಷವುಂಟಾಗುತ್ತಿತ್ತು. ॥ ೧೩ ॥ ನಿತ್ಯ-ನೈಮಿತ್ತಿಕ ಕರ್ಮಗಳನ್ನು ಮಾಡುವಾಗಲೂ ಭರತಚಕ್ರವರ್ತಿಯು ನಡು-ನಡುವೆ ಎದ್ದು ಆ ಮರಿಯನ್ನು ನೋಡಲು ಹೋಗುತ್ತಿದ್ದನು. ಆಗ ಅದನ್ನು ಕಣ್ಣಿಂದ ಕಂಡಾಗಲೇ ಆತನ ಮನಸ್ಸಿಗೆ ನೆಮ್ಮದಿಯುಂಟಾಗುತ್ತಿತ್ತು. ಆಗ ಆತನು 'ಮಗೂ! ನಿನಗೆ ಎಲ್ಲೆಲ್ಲಿಯೂ ಮಂಗಳವುಂಟಾಗಲಿ' ಎಂದು ಶುಭ ಹಾರೈಸುತ್ತಿದ್ದನು. ॥ ೧೪ ॥

ಕೆಲವೊಮ್ಮೆ ಅದು ಏನಾದರೂ ಕಣ್ಣಿಗೆ ಕಾಣದೇ ಹೋದರೆ - ಹಣವನ್ನು ಕಳೆದುಕೊಂಡ ಕೃಪಣನಂತೆ ಮನಸ್ಸಿನಲ್ಲಿ ತುಂಬಾ ಕಳವಳಗೊಂಡು ಅದರ ಅಗಲಿಕೆಯಿಂದ ಕರುಣೆಯಿಂದವನಾಗಿ ಮೋಹಾವೇಶಗೊಂಡು ದುಃಖದಲ್ಲಿ ಮುಳುಗಿ ಹೀಗೆ ಉದ್ಗರಿಸುತ್ತಿದ್ದನು. ॥ ೧೫ ॥ ಅಯ್ಯೋ! ತಾಯಿಯಿಲ್ಲದ ಆ ದೀನವಾದ ಹುಲ್ಲೆಮರಿಯು ದುಷ್ಟಕಿರಾತನಂತೆ ಬುದ್ಧಿಯುಳ್ಳ, ಪುಣ್ಯಹೀನ, ಅನಾರ್ಯನಾದ ನನ್ನಲ್ಲಿ ನಂಬಿಕೆಯನ್ನಿಟ್ಟು ನನ್ನನ್ನು ತನ್ನವನೆಂದು ಭಾವಿಸಿ ಸತ್ಪುರುಷರಂತೆ ನಾನು ಮಾಡಿದ ಅಪರಾಧಗಳನ್ನು ಮರೆತು ಹಿಂದಿರುಗಿ ಬರುವುದು ತಾನೇ! ॥ ೧೬ ॥ ಅದು ಈ ಆಶ್ರಮದ ಉಪವನಕ್ಕೆ ಹಿಂದಿರುಗಿ ಶ್ರೀಭಗವಂತನ ಕೃಪೆಯಿಂದ ಸುರಕ್ಷಿತವಾಗಿ ನಿರ್ವಿಘ್ನವಾಗಿ ಹಸಿಯಹುಲ್ಲನ್ನು ಮೇಯುತ್ತಿರುವುದನ್ನು ನಾನು ಕಾಣುವೆನು ತಾನೇ! ॥ ೧೭ ॥ ಯಾವುದಾದರೂ

ನಿಮ್ಲೋಚತಿ ಹ ಭಗವಾನ್ಸಕಲಜಗತ್ ಕ್ಷೇಮೋದಯಸ್ತ್ರಯ್ಯಾತ್ಮಾದ್ಯಾಪಿ ಮಮ ನ ಮೃಗವಧೂನ್ಯಾಸ ಆಗಚ್ಛತಿ ॥ ೧೯ ॥ ಅಪಿಸ್ವಿದಕೃತಸುಕೃತಮಾಗತ್ಯ ಮಾಂ ಸುಖಯಿಷ್ಯತಿ ಹರಿಣ ರಾಜಕುಮಾರೋ ವಿವಿಧರುಚಿರದರ್ಶನೀಯನಿಜಮೃಗದಾರಕವಿನೋದೈರಸಂತೋಷಂ ಸ್ವಾನಾಮಪನುದನ್ ॥ ೨೦ ॥ ಕ್ಷ್ವೇಲಿಕಾಯಾಂ ಮಾಂ ಮೃಷಾಸಮಾಧಿನಾಽಽಮೀಲಿತದೃಶಂ ಪ್ರೇಮಸಂರಂಭೇಣ ಚಕಿತಚಕಿತ ಆಗತ್ಯ ಪೃಷದಪರುಷವಿಷಾಣಾಗ್ರೇಣ ಲುಠತಿ ॥ ೨೧ ॥ ಆಸಾದಿತಹವಿಷಿ ಬರ್ಹಿಷಿ ದೂಷಿತೇ ಮಯೋಪಾಲಬ್ಧೋ ಭೀತಭೀತಃ ಸಪದ್ಯುಪರತರಾಸ ಋಷಿಕುಮಾರವದವಹಿತಕರಣಕಲಾಪ ಆಸ್ತೇ ॥ ೨೨ ॥

ಕೋಳಿವೋ, ನಾಯಿಯೋ, ಹಿಂಡುಕಟ್ಟಿಕೊಂಡು ಓಡಾಡುವ ಹಂದಿಯೋ ಮುಂತಾದ ಪ್ರಾಣಿಗಳೋ ಒಂಟಿಯಾಗಿ ಸಂಚರಿಸುವ ಹುಲಿಯೋ ಅದನ್ನು ತಿಂದುಹಾಕಿಲ್ಲ ತಾನೇ! ಆದರೆ ಹೀಗಾಗದಿರಲಿ. ॥ ೧೮ ॥ ಅಯ್ಯೋ! ಇದೇನಿದು! ಇದೋ ಜಗತ್ತಿನ ಕ್ಷೇಮಕ್ಕಾಗಿ ಪ್ರಕಟಗೊಳ್ಳುವ ವೇದತ್ರಯ ಸ್ವರೂಪನಾದ ಭಗವಾನ್ ಸೂರ್ಯನು ಮುಳುಗಲು ಬಯಸುತ್ತಿದ್ದಾನೆ. ಆದರೂ ತಾಯಿಜಿಂಕೆಯು ನನ್ನಲ್ಲಿ ನ್ಯಾಸವಾಗಿ ಇಟ್ಟುಹೋಗಿರುವ ನಿಧಿಯು ಇನ್ನೂ ಹಿಂದಿರುಗಿ ಬಂದಿಲ್ಲವಲ್ಲ! ॥ ೧೯ ॥ ಆ ಹರಿಣ ರಾಜಕುಮಾರನು ಪುಣ್ಯಹೀನನಾದ ನನ್ನ ಬಳಿಗೆ ಬಂದು, ತನ್ನ ವಯಸ್ಸಿಗೂ, ಜಾತಿಗೂ ಉಚಿತವಾದ ಬಗೆ-ಬಗೆಯ ಮನೋಹರವಾದ ಆಟ-ಪಾಟಗಳಿಂದ ಸ್ವಜನರ ಶೋಕವನ್ನು ದೂರಮಾಡುತ್ತಾ ನನ್ನನ್ನು ಆನಂದಗೊಳಿಸೀತೇ? ॥ ೨೦ ॥ ಆಹಾ! ನಾನೇನಾದರೂ ಪ್ರೀತಿಯ ಕೋಪದಿಂದ ಆಟಕ್ಕಾಗಿ ಸುಳ್ಳು-ಸುಳ್ಳೇ ಸಮಾಧಿಯಲ್ಲಿರುವ ನೆಪದಿಂದ ಕಣ್ಣುಗಳನ್ನು ಮುಚ್ಚಿಕೊಂಡು ಕುಳಿತುಕೊಂಡರೆ, ಅದು ಚಕಿತವಾದ ಚಿತ್ತದಿಂದ ನನ್ನ ಬಳಿಗೆ ಬಂದು ನೀರಿನ ಹನಿಯಂತೆ ಮೃದುವಾದ ತನ್ನ ಎಳೆಯ ಕೊಂಬಿನ ತುದಿಯಿಂದ ಹೇಗೆ ನನ್ನ ಅಂಗಾಂಗಗಳನ್ನು ತುರಿಸುತ್ತಿತ್ತು. ॥ ೨೧ ॥ ನಾನು ಎಂದಾದರೂ ದರ್ಭೆಗಳ ಮೇಲೆ ಹವನ ಸಾಮಗ್ರಿಯನ್ನು ಇಟ್ಟಿರುವಾಗ ಅದು ಅವುಗಳನ್ನು ಹಲ್ಲಿನಿಂದ ಎಳೆದು ಅಪವಿತ್ರಗೊಳಿಸಿದಾಗ ನಾನು ಅದನ್ನು ಗದರಿಸುತ್ತಿದ್ದೆ. ಆಗ ಅದು ಹೆದರಿ ಭಯ-ಭೀತವಾಗಿ ಒಡನೆಯೇ ತನ್ನ ಜಿಗಿತ-ಕುಣಿತವನ್ನು ಬಿಟ್ಟು ಋಷಿಕುಮಾರನಂತೆ ಎಲ್ಲ ಇಂದ್ರಿಯಗಳನ್ನು ತಡೆದು ಸುಮ್ಮನೆ ಕುಳಿತಿರುತ್ತಿತ್ತು. ॥ ೨೨ ॥

ಕಿಂ ವಾ ಅರೇ ಆಚರಿತಂ ತಪಸ್ತಪಸ್ವಿನ್ಯಾನಯಾ ಯದಿಯಮವನಿಃ ಸವಿನಯಕೃಷ್ಣಸಾರತನಯತನುತರಸುಭಗಶಿವತಮಾಖರಖುರಪದಪಂಕ್ತಿಭಿರ್ದ್ರವಿಣವಿಧುರಾತುರಸ್ಯ ಕೃಪಣಸ್ಯ ಮಮ ದ್ರವಿಣಪದವೀಂ ಸೂಚಯಂತ್ಯಾತ್ಮಾನಂ ಚ ಸರ್ವತಃ ಕೃತಕೌತುಕಂ ದ್ವಿಜಾನಾಂ ಸ್ವರ್ಗಾಪವರ್ಗಕಾಮಾನಾಂ ದೇವಯಜನಂ ಕರೋತಿ ॥ ೨೩ ॥ ಅಪಿಸ್ವಿದಸೌ ಭಗವಾನುಡುಪತಿರೇನಂ ಮೃಗಪತಿಭಯಾನ್ಮೃತಮಾತರಂ ಮೃಗಬಾಲಕಂ ಸ್ವಾಶ್ರಮಪರಿಭ್ರಷ್ಟಮನುಕಂಪಯಾ ಕೃಪಣಜನವತ್ಸಲಃ ಪರಿಪಾತಿ ॥ ೨೪ ॥ ಕಿಂ ವಾಽಽತ್ಮಜವಿಶ್ಲೇಷಜ್ವರದವದಹನಶಿಖಾಭಿ-

ಭೂಮಿಯ ಮೇಲೆ ಆ ಜಿಂಕೆಯ ಮರಿಯ ಹೆಜ್ಜೆಗಳ ಗುರುತುಗಳು ಕಾಣಿಸಿದರೆ ಅವನ್ನು ನೋಡಿ ಭರತನು ಹೀಗೆ ಉದ್ಗರಿಸುತ್ತಿದ್ದನು – ಓಹೋ! ಈ ಭೂದೇವಿಯು ಎಂತಹ ತಪಸ್ಸು ಮಾಡಿರುವಳೋ! ಅದಕ್ಕೆ ಈಕೆಯು ಜಿಂಕೆಯ ಮರಿಯೆಂಬ ಮಹಾಧನವನ್ನು ಕಳೆದುಕೊಂಡು ಕಳವಳಗೊಂಡು ದೀನನಾಗಿರುವ ನನಗೆ ಅದರ ಸುಂದರವೂ, ಸುಖಕರವೂ ಆದ ಗೊರಸುಗಳಿಂದ ಹುಟ್ಟಿದ ಪದಚಿಹ್ನೆಗಳಿಂದ ಆ ದ್ರವ್ಯವು ದೊರಕುವ ಮಾರ್ಗವನ್ನು ತೋರಿಸುತ್ತಿದ್ದಾಳೆ ಮತ್ತು ತಾನೂ ಸ್ವರ್ಗ-ಮೋಕ್ಷಗಳನ್ನು ಬಯಸುವ ದ್ವಿಜರಿಗೆ ಯಜ್ಞಾನುಷ್ಠಾನದ ಸ್ಥಳವನ್ನು * ಸೂಚಿಸುವ ಆ ಪವಿತ್ರವಾದ ಪಾದಚಿಹ್ನೆಗಳಿಂದ ಅಲಂಕೃತವಾಗಿದ್ದಾಳೆ. ॥ ೨೩ ॥ (ಚಂದ್ರನಲ್ಲಿ ಜಿಂಕೆಯಂತೆ ಕಪ್ಪಾಗಿರುವ ಗುರುತನ್ನು ಕಂಡು ಅದನ್ನೇ ತನ್ನ ಪ್ರೀತಿಯ ಜಿಂಕೆಮರಿಯೆಂದು ಭಾವಿಸಿ) 'ಅಯ್ಯೋ! ಸಿಂಹದ ಭಯದಿಂದ ಪ್ರಾಣಕಳೆದುಕೊಂಡ ಜಿಂಕೆಯ ಮರಿಯು ಈಗ ನನ್ನ ಆಶ್ರಮವನ್ನು ಅಗಲಿಹೋಗಿದೆ. ಆದ್ದರಿಂದ ಅದನ್ನು ಅನಾಥವೆಂದು ತಿಳಿದು ಈ ದೀನವತ್ಸಲನಾದ ಭಗವಾನ್ ಚಂದ್ರನು ದಯೆಯಿಂದ ರಕ್ಷಿಸುತ್ತಿದ್ದಾನಲ್ಲ!' ॥ ೨೪ ॥

* ಕೃಷ್ಣಮೃಗವು ಎಲ್ಲಿ ಧಾರಾಳವಾಗಿ ಸಂಚರಿಸುವುದೋ, ಅದು ಯಜ್ಞಾನುಷ್ಠಾನಕ್ಕೆ ಮತ್ತು ಧರ್ಮಶ್ರವಣಕ್ಕೆ ಯೋಗ್ಯವಾದ ಸ್ಥಳ ಎಂದು ಶಾಸ್ತ್ರಗಳು ಹೇಳುತ್ತವೆ.

'ಮಿಥಿಲಾಸ್ಥಃ ಸ ಯೋಗೀಂದ್ರಃ ಕ್ಷಣಂ ಧ್ಯಾತ್ವಾ ಬ್ರವೀನ್ಮುನೀನ್ । ಯಸ್ಮಿನ್ ದೇಶೇ ಮೃಗಃ ಕೃಷ್ಣಃ ತಸ್ಮಿನ್ ಧರ್ಮಾನ್ನಿಬೋಧತ ॥' *(ಯಾಜ್ಞವಲ್ಕ್ಯ, ಸ್ಮೃತಿ)*

ರುಪತಪ್ಯಮಾನಹೃದಯಸ್ಥಲನಲಿನೀಕಂ ಮಾಮುಪಸೃತಮೃಗೀತನಯಂ ಶಿಶಿರಶಾಂತಾನುರಾಗಗುಣಿತನಿಜವದನಸಲಿಲಾಮೃತಮಯಗಭಸ್ತಿಭಿಃ ಸ್ವಧಯತೀತಿ ಚ ॥ ೨೫ ॥

ಏವಮಘಟಮಾನಮನೋರಥಾಕುಲಹೃದಯೋ ಮೃಗದಾರಕಾಭಾಸೇನ ಸ್ವಾರಬ್ಧಕರ್ಮಣಾ ಯೋಗಾರಂಭಣತೋ ವಿಭ್ರಂಶಿತಃ ಸ ಯೋಗತಾಪಸೋ ಭಗವದಾರಾಧನಲಕ್ಷಣಾಚ್ಚ ಕಥಮಿತರಥಾ ಜಾತ್ಯಂತರ ಏಣಕುಣಕ ಆಸಂಗಃ ಸಾಕ್ಷಾನ್ನಿಃಶ್ರೇಯಸಪ್ರತಿಪಕ್ಷತಯಾ ಪ್ರಾಕ್ಪರಿತ್ಯಕ್ತದುಸ್ತ್ಯಜಹೃದಯಾಭಿಜಾತಸ್ಯ ತಸ್ಯೈವಮಂತರಾಯವಿಹತಯೋಗಾರಂಭಣಸ್ಯ ರಾಜರ್ಷೇರ್ಭರತಸ್ಯ ತಾವನ್ಮೃಗಾರ್ಭಕಪೋಷಣಪಾಲನಪ್ರೀಣನಲಾಲನಾನುಷಂಗೇಣಾವಿಗಣಯತ ಆತ್ಮಾನಮಹಿರಿವಾಖುಬಿಲಂ ದುರತಿಕ್ರಮಃ ಕಾಲಃ ಕರಾಲರಭಸ ಆಪದ್ಯತ ॥ ೨೬ ॥

ತದಾನೀಮಪಿ ಪಾರ್ಶ್ವವರ್ತಿನಮಾತ್ಮಜಮಿವಾನುಶೋಚಂತಮಭಿವೀಕ್ಷಮಾಣೋ ಮೃಗ ಏವಾಭಿನಿವೇಶಿತಮನಾ ವಿಸೃಜ್ಯ ಲೋಕಮಿಮಂ ಸಹ ಮೃಗೇಣ ಕಲೇವರಂ ಮೃತಮನು ನ ಮೃತಜನ್ಮಾನುಸ್ಮೃತಿರಿತರವನ್ಮೃಗಶರೀರಮವಾಪ ॥ ೨೭ ॥ ತತ್ರಾಪಿ ಹ ವಾ ಆತ್ಮನೋ ಮೃಗತ್ವಕಾರಣಂ ಭಗವದಾರಾಧನಸಮೀಹಾನುಭಾವೇನಾನುಸ್ಮೃತ್ಯ ಭೃಶಮನುತಪ್ಯಮಾನ ಆಹ ॥ ೨೮ ॥ ಅಹೋ ಕಷ್ಟಂ ಭ್ರಷ್ಟೋಽಹಮಾತ್ಮವತಾಮನುಪಥಾದ್ಯದ್ವಿಮುಕ್ತಸಮಸ್ತಸಂಗಸ್ಯ ವಿವಿಕ್ತಪುಣ್ಯಾರಣ್ಯಶರಣ್ಯಸ್ಯಾತ್ಮವತ ಆತ್ಮನಿ

(ಮತ್ತೆ ಚಂದ್ರನ ತಂಪಾದ ಕಿರಣಗಳಿಂದ ಆಹ್ಲಾದಿತನಾಗಿ) 'ಅಥವಾ ಪುತ್ರರ ಅಗಲಿಕೆಯೆಂಬ ಕಾಡ್ಗಿಚ್ಚಿನ ವಿಷಮವಾದ ಜ್ವಾಲೆಯಿಂದ ಹೃದಯಕಮಲವು ಸುಟ್ಟುಹೋಗುತ್ತಿದ್ದುದರಿಂದ ನಾನು ಒಂದು ಜಿಂಕೆಯ ಮರಿಯ ಆಸರೆಯನ್ನು ಪಡೆದಿದ್ದೆ. ಈಗ ಅದು ಹೊರಟುಹೋಗಿರುವುದರಿಂದ ನನ್ನ ಹೃದಯವು ಮತ್ತೆ ಸುಡಲು ಆರಂಭವಾಗಿದೆ. ಆದುದರಿಂದ ಈ ಚಂದ್ರನು ತನ್ನ ಶೀತಲವೂ, ಶಾಂತವೂ, ಸ್ನೇಹಪೂರ್ಣವೂ ಆದ ಮುಖಾರವಿಂದ ರಸ ರೂಪವಾದ ಅಮೃತಕಿರಣಗಳಿಂದ ನನ್ನನ್ನು ಶಾಂತಗೊಳಿಸುತ್ತಿದ್ದಾನೆ.' ॥ ೨೫ ॥

ರಾಜೇಂದ್ರ! ಹೀಗೆ ಈಡೇರಿಸಲು ಅಸಂಭವವಾದ ವಿವಿಧ ಮನೋರಥಗಳಿಂದ ಭರತನ ಚಿತ್ತವು ಕಳವಳದಿಂದ ತುಂಬಿ ಹೋಯಿತು. ತಪಸ್ವೀ ಭರತನು ಜಿಂಕೆಯ ಮರಿಯ ರೂಪದಲ್ಲಿ ಕಾಣಿಸಿಕೊಂಡ ಪ್ರಾರಬ್ಧಕರ್ಮದಿಂದ ಶ್ರೀಭಗವಂತನ ಆರಾಧನೆಯ ರೂಪವಾದ ಕರ್ಮಗಳಿಂದಲೂ, ಯೋಗಾನುಷ್ಠಾನದಿಂದಲೂ ಜಾರಿಬಿಟ್ಟನು. ಮೋಕ್ಷಮಾರ್ಗಕ್ಕೆ ಸಾಕ್ಷಾತ್ತಾಗಿ ವಿಘ್ನರೂಪವೆಂದು ಭಾವಿಸಿ ಬಿಡುವುದಕ್ಕೆ ಅತಿಕಷ್ಟವಾಗಿದ್ದ ತನ್ನ ಪುತ್ರಾದಿಗಳನ್ನೂ ಕೂಡ ತ್ಯಜಿಸಿದ್ದನು. ಅಂತಹವನಿಗೆ ಬೇರೆ ಜಾತಿಯ ಪ್ರಾಣಿಯಾದ ಜಿಂಕೆಯ ಮರಿಯಲ್ಲಿ ಇಂತಹ ಆಸಕ್ತಿ ಉಂಟಾದುದಕ್ಕೆ ಪ್ರಾರಬ್ಧಕರ್ಮವಲ್ಲದೆ ಮತ್ತಾವ ಕಾರಣವಿದ್ದೀತು? ಹೀಗೆ ರಾಜರ್ಷಿ ಭರತನು ವಿಘ್ನಗಳಿಗೆ ವಶನಾಗಿ ಯೋಗಸಾಧನೆಯಿಂದ ಭ್ರಷ್ಟನಾಗಿ ಆ ಜಿಂಕೆಯ ಮರಿಯ ಪಾಲನೆ-ಪೋಷಣೆ ಮತ್ತು ಮುದ್ದಿಸುವುದರಲ್ಲೇ ತೊಡಗಿರುವುದರಿಂದ ಆತ್ಮಸ್ವರೂಪವನ್ನು ಮರೆತುಬಿಟ್ಟನು. ಆಗಲೇ ಯಾರಿಂದಲೂ ತಪ್ಪಿಸಿಕೊಳ್ಳುವುದು ಅಸಾಧ್ಯವಾದ ಬಲಶಾಲಿಯೂ, ವೇಗಶಾಲಿಯೂ ಆದ ಕರಾಳಕಾಲವು – ಇಲಿಯ ಬಿಲಕ್ಕೆ ಹಾವು ನುಗ್ಗುವಂತೆ – ಆ ರಾಜರ್ಷಿಯನ್ನು ಆಕ್ರಮಿಸಿತು. ॥ ೨೬ ॥ ಆಗಲೂ ತನ್ನ ಬಳಿಯಲ್ಲಿ ಪುತ್ರನಂತೆ ಶೋಕಾತುರವಾಗಿ ಕುಳಿತಿದ್ದ ಆ ಜಿಂಕೆಯ ಮರಿಯನ್ನೇ ನೋಡುತ್ತಾ ಅದರಲ್ಲೇ ಅವನ ಚಿತ್ತವು ತೊಡಗಿತ್ತು. ಇಂತಹ ಆಸಕ್ತಿಯಲ್ಲೇ ಮೃಗದೊಂದಿಗೆ ಅವನ ಶರೀರವು ಬಿಟ್ಟುಹೋಯಿತು. ಅನಂತರ ಅವನಿಗೆ ಅಂತ್ಯಕಾಲದ ಭಾವನೆಗನುಸಾರವಾಗಿ ಬೇರೆ ಸಾಧಾರಣ ಮನುಷ್ಯರಂತೆ ಮೃಗಶರೀರವೇ ದೊರೆಯಿತು. ಆದರೆ ಅವನ ಸಾಧನೆ ಪೂರ್ಣವಾಗಿತ್ತು. ಅದರಿಂದಾಗಿ ಅವನಿಗೆ ಹಿಂದಿನ ಜನ್ಮದ ಸ್ಮೃತಿಯು ನಾಶವಾಗಲಿಲ್ಲ. ॥ ೨೭ ॥ ಆ ಜಿಂಕೆಯ ಯೋನಿಯಲ್ಲಿಯೂ ಹಿಂದಿನ ಜನ್ಮದ ಭಗವದಾರಾಧನೆಯ ಪ್ರಭಾವದಿಂದ ತಾನು ಮೃಗರೂಪನಾದ ಕಾರಣವನ್ನು ಅರಿತುಕೊಂಡು ಅವನು ಅತ್ಯಂತ ಪಶ್ಚಾತ್ತಾಪಪಡುತ್ತಾ ಹೀಗೆ ಹೇಳಿಕೊಳ್ಳತೊಡಗಿದನು. ॥ ೨೮ ॥ ಅಯ್ಯೋ! ಕಷ್ಟವೇ! ನಾನು ಸಂಯಮಶೀಲ ಮಹಾನುಭಾವರ ಮಾರ್ಗದಿಂದ ಪತಿತನಾದೆನು. ನಾನಾದರೋ ಧೈರ್ಯದಿಂದ ಎಲ್ಲ ರೀತಿಯ ಆಸಕ್ತಿಯನ್ನು ಬಿಟ್ಟು ಏಕಾಂತವೂ, ಪವಿತ್ರವೂ ಆದ ವನವನ್ನು ಆಶ್ರಯಿಸಿದ್ದೆ. ಅಲ್ಲಿದ್ದುಕೊಂಡು ನನ್ನ ಚಿತ್ತವನ್ನು ಸರ್ವಭೂತಾತ್ಮಾ ಶ್ರೀವಾಸುದೇವನಲ್ಲಿ, ನಿರಂತರ ಅವನ ಗುಣಗಳನ್ನು

ಸರ್ವೇಷಾಮಾತ್ಮನಾಂ ಭಗವತಿ ವಾಸುದೇವೇ ತದನುಶ್ರವಣಮನನಸಂಕೀರ್ತನಾರಾಧನಾನುಸ್ಮರಣಾಭಿಯೋಗೇನಾಶೂನ್ಯಸಕಲಯಾಮೇನ ಕಾಲೇನ ಸಮಾವೇಶಿತಂ ಸಮಾಹಿತಂ ಕಾರ್ತ್ಸ್ನ್ಯೇನ ಮನಸ್ತತ್ತು ಪುನರ್ಮಮಾಬುಧಸ್ಯಾರಾನ್ಮೃಗಸುತಮನುಪರಿಸುಸ್ರಾವ ॥ ೨೯ ॥

ಶ್ರವಣಿಸುತ್ತಾ, ಮನನಮಾಡುತ್ತಾ, ಸಂಕೀರ್ತನಮಾಡುತ್ತಾ ಹಾಗೂ ಪ್ರತಿಯೊಂದು ಕ್ಷಣವನ್ನು ಅವನ ಆರಾಧನೆ ಮತ್ತು ಸ್ಮರಣಾದಿಗಳಿಂದ ಸಫಲಗೊಳಿಸಿಕೊಂಡು ಸ್ಥಿರಭಾವದಿಂದ ಪೂರ್ಣವಾಗಿ ತೊಡಗಿಸಿಬಿಟ್ಟಿದ್ದ ಆತ್ಮಜ್ಞಾನಿಯಾದ ನನ್ನನ್ನು ಅದೇ ಮನಸ್ಸು ಅಕಸ್ಮಾತ್ತಾಗಿ ಒಂದು ಎಳೆಯ ಜಿಂಕೆಯಮರಿಯ ಹಿಂದೆಬಿದ್ದು ನನ್ನ ಲಕ್ಷ್ಯದಿಂದ ಜಾರಿಬಿಟ್ಟಿತಲ್ಲ! ॥ ೨೯ ॥

ಇತ್ಯೇವಂ ನಿಗೂಢನಿರ್ವೇದೋ ವಿಸೃಜ್ಯ ಮೃಗೀಂ ಮಾತರಂ ಪುನರ್ಭಗವತ್ಕ್ಷೇತ್ರಮುಪಶಮಶೀಲಮುನಿಗಣದಯಿತಂ ಶಾಲಗ್ರಾಮಂ ಪುಲಸ್ತ್ಯಪುಲಹಾಶ್ರಮಂ ಕಾಲಂಜರಾತ್ಪ್ರತ್ಯಾಜಗಾಮ ॥ ೩೦ ॥ ತಸ್ಮಿನ್ನಪಿ ಕಾಲಂ ಪ್ರತೀಕ್ಷಮಾಣಃ ಸಂಗಾಚ್ಚ ಭೃಶಮುದ್ವಿಗ್ನ ಆತ್ಮಸಹಚರಃ ಶುಷ್ಕಪರ್ಣತೃಣವೀರುಧಾ ವರ್ತಮಾನೋ ಮೃಗತ್ವನಿಮಿತ್ತಾವಸಾನಮೇವ ಗಣಯನ್ಮೃಗಶರೀರಂ ತೀರ್ಥೋದಕಕ್ಲಿನ್ನಮುತ್ಸಸರ್ಜ ॥ ೩೧ ॥

ಮೃಗರೂಪನಾಗಿದ್ದ ರಾಜರ್ಷಿ ಭರತನು ಹೀಗೆ ತನ್ನ ಮನಸ್ಸಿನಲ್ಲಿ ಎಚ್ಚರಗೊಂಡಿದ್ದ ವೈರಾಗ್ಯಭಾವವನ್ನು ಅಡಗಿಸಿಟ್ಟುಕೊಂಡು, ತನ್ನ ತಾಯಿಯಾದ ಜಿಂಕೆಯನ್ನು ತೊರೆದು, ತಾನು ಹುಟ್ಟಿದ್ದ ಕಾಲಂಜರ ಪರ್ವತದಿಂದ ಮತ್ತೆ ಶಾಂತಸ್ವಭಾವರಾದ ಮುನಿಗಳಿಗೆ ಪ್ರಿಯವಾದ ಅದೇ ಭಗವತ್ಕ್ಷೇತ್ರವಾದ ಶಾಲಗ್ರಾಮ ತೀರ್ಥದಲ್ಲಿದ್ದ ಪುಲಸ್ತ್ಯ ಮತ್ತು ಪುಲಹ ಋಷಿಗಳ ಆಶ್ರಮಕ್ಕೆ ಬಂದು ಸೇರಿದನು. ॥ ೩೦ ॥ ಅಲ್ಲಿ ವಾಸವಿದ್ದಾಗಲೂ ಅವನು ಕಾಲವನ್ನೇ ಇದಿರುನೋಡುತ್ತಿದ್ದನು. 'ಆಸಕ್ತಿ' ಎಂದರೆ ಅವನಿಗೆ ಭಯವಾಗುತ್ತಿತ್ತು. ಅಲ್ಲಿ ಆತನು ಒಣ ಎಲೆ, ಹುಲ್ಲು, ಪೊದೆ ಮುಂತಾದವುಗಳಿಂದ ಜೀವನವನ್ನು ನಿರ್ವಹಿಸುತ್ತಾ, ತನಗೆ ಮೃಗಯೋನಿಯನ್ನುಂಟುಮಾಡಲು ಕಾರಣವಾಗಿದ್ದ ಪ್ರಾರಬ್ಧದ ಕ್ಷಯದ ದಾರಿಯನ್ನೇ ನೋಡುತ್ತಿದ್ದನು. ಕೊನೆಗೆ ಅವನು ತನ್ನ ಶರೀರದ ಅರ್ಧಭಾಗವನ್ನು ಗಂಡಕೀನದಿಯಲ್ಲಿ ಮುಳುಗಿಸಿಕೊಂಡು ಆ ಮೃಗಶರೀರವನ್ನು ತ್ಯಜಿಸಿಬಿಟ್ಟನು. ॥ ೩೧ ॥

ಎಂಟನೆಯ ಅಧ್ಯಾಯವು ಮುಗಿಯಿತು. ॥ ೮ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಪಂಚಮಸ್ಕಂಧೇ ಭರತಚರಿತೇಽಷ್ಟಮೋಽಧ್ಯಾಯಃ ॥ ೮ ॥

ಒಂಭತ್ತನೆಯ ಅಧ್ಯಾಯ

ಬ್ರಾಹ್ಮಣಕುಲದಲ್ಲಿ ಭರತನ ಜನ್ಮ - ಜಡನಂತೆ ಆಚರಣೆ

ಶ್ರೀಶುಕ ಉವಾಚ

ಅಥ ಕಸ್ಯಚಿದ್ ದ್ವಿಜವರಸ್ಯಾಂಗಿರಃಪ್ರವರಸ್ಯ ಶಮದಮತಪಃಸ್ವಾಧ್ಯಾಯಾಧ್ಯಯನತ್ಯಾಗಸಂತೋಷತಿತಿಕ್ಷಾಪ್ರಶ್ರಯವಿದ್ಯಾನಸೂಯಾತ್ಮಜ್ಞಾನಾನಂದಯುಕ್ತಸ್ಯಾತ್ಮಸದೃಶಶ್ರುತಶೀಲಾಚಾರರೂಪೌದಾರ್ಯಗುಣಾ ನವ ಸೋದರ್ಯಾ ಅಂಗಜಾ ಬಭೂವುರ್ಮಿಥುನಂ ಚ ಯವೀಯಸ್ಯಾಂ ಭಾರ್ಯಾಯಾಮ್ ॥ ೧ ॥ ಯಸ್ತು ತತ್ರ ಪುಮಾಂಸ್ತಂ ಪರಮಭಾಗವತಂ ರಾಜರ್ಷಿಪ್ರವರಂ ಭರತಮುತ್ಸೃಷ್ಟಮೃಗಶರೀರಂ ಚರಮಶರೀರೇಣ ವಿಪ್ರತ್ವಂ ಗತಮಾಹುಃ ॥ ೨ ॥ ತತ್ರಾಪಿ ಸ್ವಜನಸಂಗಾಚ್ಚ ಭೃಶಮುದ್ವಿಜಮಾನೋ

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿದ್ರಾಜನೇ! ಅಂಗಿರಸ ಗೋತ್ರದಲ್ಲಿ ಶಮ, ದಮ, ತಪಸ್ಸು, ಅಧ್ಯಯನ, ತ್ಯಾಗ, ಸಂತೋಷ, ಸಹನೆ, ವಿನಯ, ಕರ್ಮವಿದ್ಯೆ, ಅಸೂಯೆ ಇಲ್ಲದಿರುವಿಕೆ, ಆತ್ಮಜ್ಞಾನ ಮತ್ತು ಆನಂದಗಳೇ ಎಲ್ಲ ಸದ್ಗುಣಗಳಿಂದಲೂ ಸಂಪನ್ನನಾಗಿದ್ದ ಒಬ್ಬ ಬ್ರಾಹ್ಮಣ ಶ್ರೇಷ್ಠನಿದ್ದನು. ಅವನು ಹಿರಿಯ ಹೆಂಡತಿಯಲ್ಲಿ ವಿದ್ಯೆ, ಶೀಲ, ಆಚಾರ, ರೂಪ, ಔದಾರ್ಯ ಮುಂತಾದ ಗುಣಗಳುಳ್ಳ ತನಗೆ ಸಮಾನರಾದ ಒಂಭತ್ತು ಪುತ್ರರನ್ನು ಪಡೆದನು. ಕಿರಿಯ ಮಡದಿಯಲ್ಲಿ ಒಬ್ಬ ಪುತ್ರನೂ, ಒಬ್ಬಳು ಕನ್ಯೆಯೂ ಜನಿಸಿದರು. ॥ ೧ ॥ ಆ ಇಬ್ಬರು ಮಕ್ಕಳಲ್ಲಿ ಪುತ್ರನಾಗಿದ್ದವನೇ ಪರಮಭಾಗವತ ಶಿರೋಮಣಿಯೂ, ರಾಜರ್ಷಿಯೂ ಆಗಿದ್ದ ಭರತನಾಗಿದ್ದನು. 'ಅವನು ಮೃಗಶರೀರವನ್ನು ತೊರೆದು ಕೊನೆಯ ಜನ್ಮದಲ್ಲಿ ಬ್ರಾಹ್ಮಣನಾಗಿದ್ದನು' ಎಂದು ಮಹಾಪುರುಷರು ಹೇಳುತ್ತಾರೆ. ॥ ೨ ॥ ಈ ಜನ್ಮದಲ್ಲಿಯೂ

ಭಗವತಃ ಕರ್ಮಬಂಧವಿಧ್ವಂಸನಶ್ರವಣಸ್ಮರಣಗುಣವಿವ-ರಣಚರಣಾರವಿಂದಯುಗಲಂ ಮನಸಾ ವಿದಧದಾತ್ಮನಃ ಪ್ರತಿಘಾತಮಾಶಂಕಮಾನೋ ಭಗವದನುಗ್ರಹೇಣಾನು-ಸ್ಮೃತಸ್ವಪೂರ್ವಜನ್ಮಾವಲಿರಾತ್ಮಾನಮುನ್ಮತ್ತಜಡಾಂಧಬಧಿ-ರಸ್ವರೂಪೇಣ ದರ್ಶಯಾಮಾಸ ಲೋಕಸ್ಯ ॥ ೩ ॥ ತಸ್ಯಾಪಿ ಹ ವಾ ಆತ್ಮಜಸ್ಯ ವಿಪ್ರಃ ಪುತ್ರಸ್ನೇಹಾನುಬದ್ಧಮನಾ ಆಸಮಾವರ್ತನಾತ್ಸಂಸ್ಕಾರಾನ್ಯಥೋಪದೇಶಂ ವಿದಧಾನ ಉಪನೀತಸ್ಯ ಚ ಪುನಃ ಶೌಚಾಚಮನಾದೀನ್ಕರ್ಮನಿ-ಯಮಾನನಭಿಪ್ರೇತಾನಪಿ ಸಮಶಿಕ್ಷಯದನುಶಿಷ್ಟೇನ ಹಿ ಭಾವ್ಯಂ ಪಿತುಃ ಪುತ್ರೇಣೇತಿ ॥ ೪ ॥ ಸ ಚಾಪಿ ತದು ಹ ಪಿತೃಸಂನಿಧಾವೇವಾಸಧ್ರೀಚೀನಮಿವ ಸ್ಮ ಕರೋತಿ ಛಂದಾಂಸ್ಯ-ಧ್ಯಾಪಯಿಷ್ಯನ್ ಸಹ ವ್ಯಾಹೃತಿಭಿಃ ಸಪ್ರಣವಶಿರಸ್ತ್ರಿಪದೀಂ ಸಾವಿತ್ರೀಂ ಗ್ರೈಷ್ಮವಾಸಂತಿಕಾನ್ಮಾಸಾನಧೀಯಾನಮಪ್ಯ-ಸಮವೇತರೂಪಂ ಗ್ರಾಹಯಾಮಾಸ ॥ ೫ ॥

ಭಗವಂತನ ಕೃಪೆಯಿಂದ ತನ್ನ ಹಿಂದಿನ ಜನ್ಮಪರಂಪರೆಯ ನೆನಪು ಇದ್ದುದರಿಂದ ಅವನು – 'ತನ್ನ ಯೋಗದಲ್ಲಿ ಪುನಃ ವಿಘ್ನವು ಒದಗದಿರಲಿ' ಎಂಬ ಆಶಂಕೆಯಿಂದಲೇ ತನ್ನ ಬಂಧುಗಳ ಸಹವಾಸದಿಂದಲೂ ಹೆದರುತ್ತಿದ್ದನು. ಯಾರ ಸ್ಮರಣೆ ಮತ್ತು ಗುಣಕೀರ್ತನೆಗಳನ್ನು ಸದಾ ಮಾಡುತ್ತಿರುವುದರಿಂದ ಸಕಲ ಕರ್ಮಬಂಧನಗಳು ಕತ್ತರಿಸಿಹೋಗುವವೋ, ಆ ಭಗವಂತನ ಅಡಿದಾವರೆಗಳನ್ನೇ ತನ್ನ ಹೃದಯದಲ್ಲಿ ಧರಿಸಿಕೊಂಡಿದ್ದು, ಬೇರೆಯವರ ದೃಷ್ಟಿಗೆ ತಾನು ಹುಚ್ಚನಂತೆಯೂ, ಮೂರ್ಖನಂತೆಯೂ, ಕುರುಡನಂತೆಯೂ, ಕಿವುಡನಂತೆಯೂ ತೋರ್ಪಡಿಸಿಕೊಳ್ಳುತ್ತಿದ್ದನು. ॥ ೩ ॥

ತಂದೆಯಾದರೋ ಇತರ ಮಕ್ಕಳಲ್ಲಿರುವಷ್ಟೇ ಪ್ರೇಮ ಇವನಲ್ಲಿಯೂ ಇತ್ತು. ಆ ವಿಪ್ರವರ್ಯನು ಹುಚ್ಚನಂತೆ ಕಾಣುತ್ತಿದ್ದ ತನ್ನ ಈ ಮಗನಿಗೂ ಶಾಸ್ತ್ರಾನುಸಾರವಾಗಿ ಸಮಾವರ್ತನದವರೆಗಿನ ವಿವಾಹ ಪೂರ್ವಭಾವಿಯಾದ ಸಂಸ್ಕಾರಗಳೆಲ್ಲವನ್ನು ಮಾಡಬೇಕೆಂಬ ಮನಸ್ಸಿನಿಂದ ಅವನಿಗೆ ಉಪನಯನಸಂಸ್ಕಾರ ಮಾಡಿದನು. ಹುಡುಗನಿಗೆ ಇಷ್ಟವಿಲ್ಲದಿದ್ದರೂ ತಂದೆಯು ಶಾಸ್ತ್ರವಿಧಿಗನುಸಾರವಾಗಿ ಶೌಚ-ಆಚಮನವೇ ಮುಂತಾದ ಎಲ್ಲ ಆವಶ್ಯಕ ಕರ್ಮಗಳನ್ನು ತನ್ನ ಕರ್ತವ್ಯವೆಂಬ ಭಾವನೆಯಿಂದ ಅವನಿಗೆ ಕಲಿಸಿದನು. ॥ ೪ ॥ ಆದರೆ ಭರತನಾದರೋ ತನ್ನ ತಂದೆಯ ಎದುರಿನಲ್ಲಿಯೇ ಅವನ ಉಪದೇಶಕ್ಕೆ ವಿರುದ್ಧವಾಗಿಯೇ ಆಚರಿಸುತ್ತಿದ್ದನು. ವರ್ಷಾಕಾಲದಲ್ಲಿ ಅವನಿಗೆ ವೇದಾಧ್ಯಯನವನ್ನು ಪ್ರಾರಂಭಿಸಬೇಕೆಂದು ತಂದೆಯು ಬಯಸುತ್ತಿದ್ದನು. ಆದರೆ ವಸಂತ ಮತ್ತು ಗ್ರೀಷ್ಮಋತುಗಳ ನಾಲ್ಕು ತಿಂಗಳು ಹೇಳಿಕೊಟ್ಟರೂ ಭರತನಿಗೆ ವ್ಯಾಹೃತಿ ಮತ್ತು ಗಾಯತ್ರಿಶಿರಸ್ಸಿನಿಂದ ಕೂಡಿದ ತ್ರಿಪದಾ ಗಾಯತ್ರಿ ಮಂತ್ರವನ್ನೂ ಕೂಡ ಚೆನ್ನಾಗಿ ಕಲಿಸಲಾಗಲಿಲ್ಲ. ॥ ೫ ॥

ಏವಂ ಸ್ವತನುಜ ಆತ್ಮನ್ಯನುರಾಗಾವೇಶಿತಚಿತ್ತಃ ಶೌಚಾ-ಧ್ಯಯನವ್ರತನಿಯಮಗುರ್ವನಲಶುಶ್ರೂಷಣಾದ್ಯೌಪಕು-ರ್ವಾಣಕಕರ್ಮಾಣ್ಯನಭಿಯುಕ್ತಾನ್ಯಪಿ ಸಮನುಶಿಷ್ಟೇನ ಭಾವ್ಯಮಿತ್ಯಸದಾಗ್ರಹಃ ಪುತ್ರಮನುಶಾಸ್ಯ ಸ್ವಯಂ ತಾವದ-ನಧಿಗತಮನೋರಥಃ ಕಾಲೇನಾಪ್ರಮತ್ತೇನ ಸ್ವಯಂ ಗೃಹ ಏವ ಪ್ರಮತ್ತ ಉಪಸಂಹೃತಃ ॥ ೬ ॥ ಅಥ ಯವೀಯಸೀ ದ್ವಿಜಸತೀ ಸ್ವಗರ್ಭಜಾತಂ ಮಿಥುನಂ ಸಪತ್ನ್ಯಾ ಉಪನ್ಯಸ್ಯ ಸ್ವಯಮನುಸಂಸ್ಥಯಾ ಪತಿಲೋಕಮಗಾತ್ ॥ ೭ ॥

ಹೀಗಿದ್ದರೂ ತಂದೆಗೆ ಆ ಬಾಲಕನ ಮೇಲೆ ತನ್ನ ಆತ್ಮದಲ್ಲಿರುವಷ್ಟೇ ಪ್ರೇಮವು ತುಂಬಿತ್ತು. ಅದಕ್ಕಾಗಿ ಅವನಿಗೆ ಕಲಿಯುವ ಪ್ರವೃತ್ತಿಯೇ ಇಲ್ಲವಿದ್ದರೂ 'ಪುತ್ರನಿಗೆ ಒಳ್ಳೆಯ ಶಿಕ್ಷಣವನ್ನು ನೀಡಬೇಕು' ಎಂಬ ಆಗ್ರಹದಿಂದ ಅವನಿಗೆ ಶೌಚ, ವೇದಾಧ್ಯಯನ, ವ್ರತ, ನಿಯಮ, ಗುರುವಿನ ಮತ್ತು ಅಗ್ನಿಯ ಸೇವೆ ಇವೇ ಮುಂತಾದ ಬ್ರಹ್ಮಚರ್ಯಾಶ್ರಮದ ಆವಶ್ಯಕವಾದ ನಿಯಮಗಳನ್ನು ಕಲಿಸುತ್ತಲೇ ಇದ್ದನು. ಆದರೆ ಪುತ್ರನನ್ನು ಶಿಕ್ಷಿತನನ್ನಾಗಿ ನೋಡುವ ಅವನ ಮನೋರಥ ಪೂರ್ಣವಾಗಲೇ ಇಲ್ಲ. ಸ್ವತಃ ತಾನೂ ಕೂಡ ಭಗವದ್ಭಜನರೂಪವಾದ ಮುಖ್ಯ ಕರ್ತವ್ಯವನ್ನು ಮರೆತು ಕೇವಲ ಮನೆವಾರ್ತೆಯಲ್ಲೇ ತೊಡಗಿರುತ್ತಾ ಎಚ್ಚರಿಕೆ ಇಲ್ಲದಿರುವಾಗಲೇ ಕಾಲವಶನಾದನು. ॥ ೬ ॥ ಆಗ ಅವನ ಕಿರಿಯ ಹೆಂಡತಿಯು ತನ್ನಲ್ಲಿ ಹುಟ್ಟಿದ ಇಬ್ಬರು ಬಾಲಕರನ್ನು ತನ್ನ ಸವತಿಗೆ ಒಪ್ಪಿಸಿ ತಾನು ಸಹಗಮನಮಾಡಿ ಪತಿಲೋಕವನ್ನು ಸೇರಿದಳು. ॥ ೭ ॥

ಪಿತರ್ಯುಪರತೇ ಭ್ರಾತರ ಏನಮತತ್ಪ್ರಭಾವವಿದ-ಸ್ತ್ರಯ್ಯಾಂ ವಿದ್ಯಾಯಾಮೇವ ಪರ್ಯವಸಿತಮತಯೋ ನ ಪರವಿದ್ಯಾಯಾಂ ಜಡಮತಿರಿತಿ ಭ್ರಾತುರನುಶಾಸನ-ನಿರ್ಬಂಧಾನ್ನ್ಯವೃತ್ಸಂತ ॥ ೮ ॥ ಸ ಚ ಪ್ರಾಕೃತೈರ್ದ್ವಿಪದಪಶುಭಿ-

ಭರತನ ಒಡಹುಟ್ಟಿದವರೆಲ್ಲರೂ ಕರ್ಮಕಾಂಡವನ್ನೇ ಸರ್ವಶ್ರೇಷ್ಠವೆಂದು ತಿಳಿಯುತ್ತಿದ್ದರು. ಬ್ರಹ್ಮಜ್ಞಾನರೂಪವಾದ ಪರಾವಿದ್ಯೆಯ ಪರಿಚಯವೇ ಇಲ್ಲದವರೂ, ಭರತನ ಪ್ರಭಾವವನ್ನು ಅರಿಯದವರೂ ಆಗಿದ್ದು ಅವನನ್ನು ಶುದ್ಧಮೂರ್ಖನೆಂದೇ

ರುನ್ಮತ್ತಜಡಬಧಿರೇತ್ಯಭಿಭಾಷ್ಯಮಾಣೋ ಯದಾ ತದನುರೂಪಾಣಿ ಪ್ರಭಾಷತೇ ಕರ್ಮಾಣಿ ಚ ಸ ಕಾರ್ಯಮಾಣಃ ಪರೇಚ್ಛಯಾ ಕರೋತಿ ವಿಷ್ಟಿತೋ ವೇತನತೋ ವಾ ಯಾಂಚಯಾ ಯದೃಚ್ಛಯಾ ವೋಪಸಾದಿತಮಲ್ಪಂ ಬಹು ಮೃಷ್ಟಂ ಕದನ್ನಂ ವಾಭ್ಯವಹರತಿ ಪರಂ ನೇಂದ್ರಿಯಪ್ರೀತಿನಿಮಿತ್ತಮ್ । ನಿತ್ಯನಿವೃತ್ತನಿಮಿತ್ತಸ್ವಸಿದ್ಧವಿಶುದ್ಧಾನುಭವಾನಂದಸ್ವಾತ್ಮಲಾಭಾಧಿಗಮಃ । ಸುಖದುಃಖಯೋರ್ದ್ವಂದ್ವನಿಮಿತ್ತಯೋರಸಂಭಾವಿತದೇಹಾಭಿಮಾನಃ ॥ ೯ ॥ ಶೀತೋಷ್ಣವಾತವರ್ಷೇಷು ವೃಷ ಇವಾನಾವೃತಾಂಗಃ ಪೀನಃ ಸಂಹನನಾಂಗಃ ಸ್ಥಂಡಿಲಸಂವೇಶನಾನುನ್ಮರ್ದನಾಮಜ್ಜನರಜಸಾ ಮಹಾಮಣಿರಿವಾನಭಿವ್ಯಕ್ತಬ್ರಹ್ಮವರ್ಚಸಃ ಕುಪಟಾವೃತಕಟಿರುಪವೀತೇನೋರುಮಷಿಣಾ ದ್ವಿಜಾತಿರಿತಿ ಬ್ರಹ್ಮಬಂಧುರಿತಿ ಸಂಜ್ಞಯಾತಜ್ಜ್ಞಜನಾವಮತೋ ವಿಚಚಾರ ॥ ೧೦ ॥ ಯದಾ ತು ಪರತ ಆಹಾರಂ ಕರ್ಮವೇತನತ ಈಹಮಾನಃ ಸ್ವಭ್ರಾತೃಭಿರಪಿ ಕೇದಾರಕರ್ಮಣಿ ನಿರೂಪಿತಸ್ತದಪಿ ಕರೋತಿ ಕಿಂತು ನ ಸಮಂ ವಿಷಮಂ ನ್ಯೂನಮಧಿಕಮಿತಿ ವೇದ ಕಣಪಿಣ್ಯಾಕಫಲೀಕರಣಕುಲ್ಮಾಷಸ್ಥಾಲೀಪುರೀಷಾದೀನ್ಯಪ್ಯಮೃತವದಭ್ಯವಹರತಿ ॥ ೧೧ ॥

ಅಥ ಕದಾಚಿತ್ಕಶ್ಚಿದ್ ವೃಷಲಪತಿರ್ಭದ್ರಕಾಲ್ಯೈ ಪುರುಷಪಶುಮಾಲಭತಾಪತ್ಯಕಾಮಃ ॥ ೧೨ ॥ ತಸ್ಯ ಹ ದೈವಮುಕ್ತಸ್ಯ ಪಶೋಃ ಪದವೀಂ ತದನುಚರಾಃ ಪರಿಧಾವಂತೋ ನಿಶಿ ನಿಶೀಥಸಮಯೇ ತಮಸಾಽಽವೃತಾಯಾಮನಧಿಗತ-

ತಿಳಿಯುತ್ತಿದ್ದರು. ಆದ್ದರಿಂದ ತಂದೆಯು ಸ್ವರ್ಗಸ್ಥನಾದ ಬಳಿಕ ಅವರು ಅವನಿಗೆ ಓದು-ಬರಹವನ್ನು ಕಲಿಸುವ ಆಗ್ರಹವನ್ನು ಬಿಟ್ಟುಬಿಟ್ಟರು. ॥ ೮ ॥ ಭರತನಿಗೆ ಮಾನಾಪಮಾನದ ಭಾವನೆಯೇ ಇರಲಿಲ್ಲ. ಅದರಿಂದ ಸಾಧಾರಣ ನರಪಶುಗಳು ಅವನನ್ನು ಹುಚ್ಚ, ಮೂರ್ಖ ಅಥವಾ ಕಿವುಡ ಎಂದು ಹೇಳಿ ಕರೆದಾಗಲೂ ಅವನು ಅದಕ್ಕೆ ಅನುರೂಪವಾಗಿಯೇ ಮಾತಾಡುತ್ತಿದ್ದನು. ಯಾರಾದರೂ ತನ್ನಿಂದ ಏನೇ ಕೆಲಸವನ್ನು ಮಾಡಿಸಿಕೊಳ್ಳಲು ಬಯಸಿದರೆ ಅವರ ಇಚ್ಛೆಗನುಗುಣವಾಗಿ ಆ ಕೆಲಸವನ್ನು ಮಾಡಿಕೊಡುತ್ತಿದ್ದನು. ಕೂಲಿ ಇಲ್ಲದ ಬಿಟ್ಟಿಯ ಕೆಲಸವಾಗಲೀ, ಕೂಲಿಯ ಕೆಲಸವಾಗಲೀ, ಯಾರಾದರೂ ಮಾಡಲು ಬೇಡಿದರೆ ಅವನು ಏನೂ ಕೇಳದೆ ಅವರು ಸ್ವಲ್ಪವೋ ಹೆಚ್ಚಾಗಿಯೋ ಎಷ್ಟುಕೊಟ್ಟರೆ ಅಷ್ಟನ್ನು, ಒಳ್ಳೆಯ ಅನ್ನವೋ, ಕೆಟ್ಟ ಅನ್ನವೋ ಏನೂ ಕೊಟ್ಟರೂ ನಾಲಿಗೆಯ ರುಚಿ ನೋಡದೆಯೇ ತಿಂದುಬಿಡುತ್ತಿದ್ದನು. ಸ್ವತಃ ಸಿದ್ಧವಾದ ಕೇವಲ ಜ್ಞಾನಾನಂದಸ್ವರೂಪವಾದ ಆತ್ಮಜ್ಞಾನವು ಆತನಿಗೆ ಉಂಟಾಗಿದ್ದರಿಂದ ಶೀತ-ಉಷ್ಣ, ಮಾನ-ಅಪಮಾನ ಮುಂತಾದ ದ್ವಂದ್ವಗಳಿಂದುಂಟಾಗುವ ಸುಖ-ದುಃಖಾದಿಗಳಲ್ಲಿ ದೇಹಾಭಿಮಾನದ ಸ್ಫೂರ್ತಿಯೇ ಆತನಿಗೆ ಉಂಟಾಗುತ್ತಿರಲಿಲ್ಲ. ॥ ೯ ॥ ಚಳಿ, ಸೆಕೆ, ಮಳೆ, ಬಿರುಗಾಳಿ ಇವಾವುದನ್ನೂ ಲೆಕ್ಕಿಸದೆ ಬರಿಮೈಯಲ್ಲಿ ಎತ್ತಿನಂತೆ ಬಿದ್ದುಕೊಂಡಿರುತ್ತಿದ್ದನು. ಆದರೆ ಅವನ ಅಂಗಾಂಗಗಳೆಲ್ಲವೂ ದಷ್ಟಪುಷ್ಟವಾಗಿ ದೃಢವಾಗಿದ್ದವು. ಅವನು ಬರೀ ನೆಲದಲ್ಲೇ ಬಿದ್ದುಕೊಂಡಿರುತ್ತಿದ್ದನು. ಎಂದೂ ಎಣ್ಣೆ ಹಚ್ಚಿಕೊಳ್ಳುತ್ತಿರಲಿಲ್ಲ, ಸ್ನಾನವನ್ನು ಮಾಡುತ್ತಿರಲಿಲ್ಲ. ಇದರಿಂದ ದೇಹಕ್ಕೆ ಕೊಳೆಯು ಸದಾ ಮೆತ್ತಿಕೊಂಡಿರುತ್ತಿತ್ತು. ಅವನ ಬ್ರಹ್ಮತೇಜಸ್ಸು ಧೂಳಿನಿಂದ ಮುಚ್ಚಿಕೊಂಡಿರುವ ಅಮೂಲ್ಯವಾದ ಮಣಿ-ಮಾಣಿಕ್ಯದಂತೆ ಅಡಗಿಕೊಂಡಿತ್ತು. ನಡುವಿಗೆ ಒಂದು ಕೊಳೆಯಾದ ಬಟ್ಟೆಯನ್ನು ಸುತ್ತಿಕೊಂಡಿರುತ್ತಿದ್ದನು. ಅವನ ಜನಿವಾರವೂ ತುಂಬಾ ಕೊಳಕಾಗಿತ್ತು. ಆದ್ದರಿಂದ ಅಜ್ಞಾನಿಗಳು – 'ಈತನು ಯಾವನೋ ಒಬ್ಬ ಬ್ರಾಹ್ಮಣನು, ಆದರೆ ಅಧಮ ಬ್ರಾಹ್ಮಣನು' ಎಂದು ಹೇಳಿ ಅವನನ್ನು ತಿರಸ್ಕರಿಸುತ್ತಿದ್ದರು. ಆದರೆ ಭರತನು ಇವಾವುದನ್ನೂ ವಿಚಾರ ಮಾಡದೆ ಸ್ವಚ್ಛಂದವಾಗಿ ಓಡಾಡುತ್ತಿದ್ದನು. ॥ ೧೦ ॥ ಇತರರ ಮನೆಗಳಲ್ಲಿ ಕೆಲಸವನ್ನು ಮಾಡಿ ಹೊಟ್ಟೆಹೊರೆಯುವುದನ್ನು ಕಂಡು ಭರತನ ಸೋದರರು ಆತನನ್ನು ಕೆಸರುಗದ್ದೆಯ ಕೆಲಸಕ್ಕೆ ನೇಮಿಸಿದರು. ಆ ಮಹಾತ್ಮನು ಅದನ್ನೂ ಮಾಡತೊಡಗಿದನು. ಆದರೆ ಆತನಿಗೆ ಗದ್ದೆಯ ಭೂಮಿಯು ಸಮತಲವಾಗಿದೆಯೋ, ಎತ್ತರ-ತಗ್ಗಾಗಿದೆಯೋ, ಚಿಕ್ಕದಾಗಿದೆಯೋ, ದೊಡ್ಡದಾಗಿದೆಯೋ ಎಂಬುದರ ಕಡೆಗೆ ಸ್ವಲ್ಪವೂ ಗಮನವಿರಲಿಲ್ಲ. ಸಹೋದರರು ಆತನಿಗೆ ನುಚ್ಚನ್ನೋ, ಹಿಂಡಿಯನ್ನೋ, ತೌಡನ್ನೋ, ಹಳಸಿಹೋದ ಉಸ್ಲಿಯನ್ನೋ, ಪಾತ್ರೆಯಲ್ಲಿ ಅಂಟಿಕೊಂಡಿದ್ದ ಸೀದುಹೋದ ಅನ್ನವನ್ನೋ ತಿನ್ನಲು ಕೊಡುತ್ತಿದ್ದರು. ಅದನ್ನು ಅವನು ಅಮೃತತುಲ್ಯವೆಂದು ಭಾವಿಸಿ ತಿಂದುಬಿಡುತ್ತಿದ್ದನು. ॥ ೧೧ ॥

ಹೀಗಿರುವಾಗ ಒಮ್ಮೆ ಅಧರ್ಮಿಷ್ಠನಾದ ಕಳ್ಳರತಂಡದ ನಾಯಕನು ಪುತ್ರಕಾಮನೆಯಾಗಿ ಭದ್ರಕಾಲಿಗೆ ನರಬಲಿಯನ್ನು

ಪಶವ ಆಕಸ್ಮಿಕೇನ ವಿಧಿನಾ ಕೇದಾರಾನ್ ವೀರಾಸನೇನ ಮೃಗ-ವರಾಹಾದಿಭ್ಯಃ ಸಂರಕ್ಷಮಾಣಮಂಗಿರಃಪ್ರವರ ಸುತಮ-ಪಶ್ಯನ್ ॥ ೧೩ ॥

ಅಥ ತ ಏನಮನವದ್ಯಲಕ್ಷಣಮವಮೃಶ್ಯ ಭರ್ತೃ-ಕರ್ಮನಿಷ್ಪತ್ತಿಂ ಮನ್ಯಮಾನಾ ಬದ್ಧ್ವಾ ರಶನಯಾ ಚಂಡಿ-ಕಾಗೃಹಮುಪನಿನ್ಯುರ್ಮುದಾ ವಿಕಸಿತವದನಾಃ ॥ ೧೪ ॥

ಅಥ ಪಣಯಸ್ತಂ ಸ್ವವಿಧಿನಾಭಿಷಿಚ್ಯಾಹತೇನ ವಾಸ-ಸಾಽಽಚ್ಛಾದ್ಯ ಭೂಷಣಾಲೇಪಸ್ರಕ್‌ತಿಲಕಾದಿಭಿರು-ಪಸ್ಕೃತಂ ಭುಕ್ತವಂತಂ ಧೂಪದೀಪಮಾಲ್ಯಲಾಜಕಿಸಲ-ಯಾಂಕುರ ಫಲೋಪಹಾರೋಪೇತಯಾ ವೈಶಸ-ಸಂಸ್ಥಯಾ ಮಹತಾ ಗೀತಸ್ತುತಿಮೃದಂಗಪಣವಘೋ-ಷೇಣ ಚ ಪುರುಷಪಶುಂ ಭದ್ರಕಾಲ್ಯಾಃ ಪುರತ ಉಪವೇಶ-ಯಾಮಾಸುಃ ॥ ೧೫ ॥ ಅಥ ವೃಷಲರಾಜಪಣಿಃ ಪುರುಷ-ಪಶೋರಸೃಗಾಸವೇನ ದೇವೀಂ ಭದ್ರಕಾಲೀಂ ಯಕ್ಷ್ಯಮಾಣ-ಸ್ತದಭಿಮಂತ್ರಿತಮಸಿಮತಿಕರಾಲನಿಶಿತಮುಪಾದದೇ ॥ ೧೬ ॥

ಇತಿ ತೇಷಾಂ ವೃಷಲಾನಾಂ ರಜಸ್ತಮಃಪ್ರಕೃತೀನಾಂ ಧನಮದರಜಉತ್ಸಿಕ್ತಮನಸಾಂ ಭಗವತ್ಕಲಾವೀರಕುಲಂ ಕದರ್ಥೀಕೃತ್ಯೋತ್ಪಥೇನ ಸ್ವೈರಂ ವಿಹರತಾಂ ಹಿಂಸಾವಿ-ಹಾರಾಣಾಂ ಕರ್ಮಾತಿದಾರುಣಂ ಯದ್ಬ್ರಹ್ಮಭೂತಸ್ಯ ಸಾಕ್ಷಾದ್ಬ್ರಹ್ಮರ್ಷಿಸುತಸ್ಯ ನಿರ್ವೈರಸ್ಯ ಸರ್ವಭೂತಸುಹೃದಃ ಸೂನಾಯಾಮಪ್ಯನನುಮತಮಾಲಂಭನಂ ತದುಪಲಭ್ಯ ಬ್ರಹ್ಮತೇಜಸಾತಿದುರ್ವಿಷಹೇಣ ದಂದಹ್ಯಮಾನೇನವಪುಷಾ ಸಹಸೋಚ್ಚಚಾಟ ಸೈವ ದೇವೀ ಭದ್ರಕಾಲೀ ॥ ೧೭ ॥

ಕೊಡುವ ಸಂಕಲ್ಪ ಮಾಡಿದನು. ॥ ೧೨ ॥ ಅವನು ಬಲಿಕೊಡುವುದಕ್ಕಾಗಿ ಹಿಡಿದುಹಾಕಿದ್ದ ಮನುಷ್ಯರೂಪದ ಪಶುವು ದೈವವಶದಿಂದ ಸೆರೆಯಿಂದ ತಪ್ಪಿಸಿಕೊಂಡು ಓಡಿಹೋಯಿತು. ಅವನನ್ನು ಹುಡುಕುವುದಕ್ಕಾಗಿ ನಾಯಕನ ಸೇವಕರು ನಾಲ್ಕೂ ಕಡೆಗಳಲ್ಲಿ ಓಡಿದರು. ಆದರೆ ಕಗ್ಗತ್ತಲೆ ಕವಿದಿದ್ದ ಅರ್ಧರಾತ್ರಿಯಲ್ಲಿ ಅವನು ಎಲ್ಲಿಯೂ ಸಿಗಲಿಲ್ಲ. ಅದೇ ಸಮಯದಲ್ಲಿ ದೈವಯೋಗದಿಂದ ಅವರ ದೃಷ್ಟಿಯು ಆಕಸ್ಮಾತ್ತಾಗಿ ಜಿಂಕೆ-ಹಂದಿ ಮುಂತಾದ ಪ್ರಾಣಿಗಳಿಂದ ಹೊಲವನ್ನು ಕಾಯುವುದಕ್ಕಾಗಿ ವೀರಾಸನದಲ್ಲಿ ಕುಳಿತಿದ್ದ ಆಂಗೀರಸ ಗೋತ್ರದ ಬ್ರಾಹ್ಮಣಕುಮಾರ ಭರತನ ಮೇಲೆ ಬಿತ್ತು. ॥ ೧೩ ॥ 'ಇದು ತುಂಬಾ ಒಳ್ಳೆಯ ಲಕ್ಷಣಗಳಿಂದ ಕೂಡಿದ ನರಪಶುವಾಗಿದೆ. ಇದರಿಂದ ನಮ್ಮ ಒಡೆಯನ ಕಾರ್ಯವು ಖಂಡಿತವಾಗಿ ಸಿದ್ಧಿಸುವುದು' ಎಂಬ ಭಾವನೆಯಿಂದ ಅವರ ಮುಖಗಳು ಆನಂದದಿಂದ ಅರಳಿದವು. ಒಡನೆಯೇ ಅವನನ್ನು ಹಗ್ಗಗಳಿಂದ ಕಟ್ಟಿ ಚಂಡಿಕಾದೇವಿಯ ದೇವಾಲಯಕ್ಕೆ ತಂದರು. ॥ ೧೪ ॥

ಅನಂತರ ಆ ಕಳ್ಳರು ತಮ್ಮ ಪದ್ಧತಿಯಂತೆ ಅವನಿಗೆ ವಿಧಿಪೂರ್ವಕವಾಗಿ ಸ್ನಾನಮಾಡಿಸಿ, ಹೊಸ ಬಟ್ಟೆಗಳನ್ನು ಉಡಿಸಿ, ಬಗೆ-ಬಗೆಯ ಒಡವೆಗಳಿಂದಲೂ, ಗಂಧ, ಮಾಲೆ, ತಿಲಕ ಮುಂತಾದವುಗಳಿಂದ ಚೆನ್ನಾಗಿ ಅಲಂಕರಿಸಿ, ಊಟ ಮಾಡಿಸಿದರು. ಮತ್ತೆ ಧೂಪ, ದೀಪ, ಮಾಲೆ, ಅರಳು, ಎಲೆ, ಧಾನ್ಯದ ಮೊಳಕೆ, ಫಲಗಳು ಮುಂತಾದ ಪೂಜಾಸಾಮಗ್ರಿಗಳೊಡನೆ ಬಲಿದಾನದ ವಿಧಿಯಂತೆ ಹಾಡುಗಳನ್ನು ಹಾಡುತ್ತಾ, ಸ್ತುತಿಸುತ್ತಾ, ಮೃದಂಗ, ಡೋಲು ಮುಂತಾದ ವಾದ್ಯಗಳನ್ನು ನುಡಿಸುತ್ತಾ ಆ ನರಪಶುವನ್ನು ಭದ್ರಕಾಳಿಯ ಮುಂದೆ ಕುಳ್ಳಿರಿಸಿದರು. ॥ ೧೫ ॥ ಅನಂತರ ಕಳ್ಳರ ಪುರೋಹಿತನಾದ ದರೋಡೆಕೋರನು ಆ ನರಪಶುವಿನ ರಕ್ತದಿಂದ ದೇವಿಯನ್ನು ತೃಪ್ತಿಪಡಿಸಲಿಕ್ಕಾಗಿ ದೇವೀಮಂತ್ರಗಳಿಂದ ಅಭಿಮಂತ್ರಿಸಿದ ಒಂದು ಹರಿತವಾದ ಖಡ್ಗವನ್ನು ಎತ್ತಿಕೊಂಡನು. ॥ ೧೬ ॥

ಆ ದರೋಡೆಕೋರರಾದರೋ ಸ್ವಾಭಾವಿಕವಾಗಿಯೇ ರಜೋಗುಣ-ತಮೋಗುಣಿಗಳಾಗಿದ್ದರು. ಅಲ್ಲದೆ ಧನಮದದಿಂದ ಅವರ ಚಿತ್ತವು ಮತ್ತೇರಿತ್ತು. ಹಿಂಸೆಯಲ್ಲೇ ಅವರಿಗೆ ಅಭಿರುಚಿಯಿತ್ತು. ಆ ಸಮಯದಲ್ಲಿ ಅವರು ಶ್ರೀಭಗವಂತನ ಅಂಶಸ್ವರೂಪನಾದ ಬ್ರಾಹ್ಮಣಕುಲವನ್ನು ತಿರಸ್ಕರಿಸಿ ಸ್ವಚ್ಛಂದವಾಗಿ ದುರ್ಮಾರ್ಗದ ಕಡೆಗೆ ಮುನ್ನುಗ್ಗಿದ್ದರು. ಆಪತ್ಕಾಲದಲ್ಲಿ ಯಾವ ಹಿಂಸೆಯನ್ನು ಅನುಮೋದಿಸಲಾಗಿದೆಯೋ ಅದರಲ್ಲಿಯೂ ಬ್ರಾಹ್ಮಣನ ವಧೆಯನ್ನು ಪೂರ್ಣವಾಗಿ ನಿಷೇಧಿಸಲ್ಪಟ್ಟಿದೆ. ಅದರಲ್ಲಿಯೂ ಇವನು ಸಾಕ್ಷಾತ್ ಬ್ರಹ್ಮಭಾವವನ್ನು ಹೊಂದಿದ, ವೈರಭಾವಹೀನ ಹಾಗೂ ಸಮಸ್ತ ಪ್ರಾಣಿಗಳಲ್ಲಿಯೂ ಸೌಹಾರ್ದವನ್ನೂ ಹೊಂದಿದ್ದ ಬ್ರಹ್ಮರ್ಷಿಕುಮಾರನನ್ನು ಬಲಿಕೊಡಲು ಬಯಸುತ್ತಿದ್ದರು.

ಇಂತಹ ಭಯಂಕರವಾದ ಕುಕರ್ಮವನ್ನು ಕಂಡು ಭದ್ರಕಾಳಿಯ ಶರೀರದಲ್ಲಿ ತಡೆಯಲಸಾಧ್ಯವಾದ ಭರತನ ಬ್ರಹ್ಮತೇಜಸ್ಸಿನ ತಾಪವು ತುಂಬಿ ಆಕೆಯು ಇದ್ದಕ್ಕಿದ್ದಂತೆ ಮೂರ್ತಿಯನ್ನು ಒಡೆದುಕೊಂಡು ಅಲ್ಲಿ ಪ್ರಕಟಳಾದಳು. ॥ ೧೭ ॥ ಕಡುರೋಷದಿಂದಲೂ, ಅಸಹನೆಯಿಂದಲೂ ಆಕೆಯ ಹುಬ್ಬುಗಳು ಮೇಲೆದ್ದು

ಭೃಶಮಮರ್ಷರೋಷಾವೇಶರಭಸವಿಲಸಿತಭ್ರುಕುಟಿವಿಟಪಕುಟಿಲದಂಷ್ಟ್ರಾರುಣೇಕ್ಷಣಾಟೋಪಾತಿಭಯಾನಕವದನಾ ಹಂತುಕಾಮೇವೇದಂ ಮಹಾಟ್ಟಹಾಸಮತಿಸಂರಂಭೇಣ ವಿಮುಂಚಂತೀ ತತ ಉತ್ಪತ್ಯ ಪಾಪೀಯಸಾಂ ದುಷ್ಟಾನಾಂ ತೇನೈವಾಸಿನಾ ವಿವೃಕ್ಣಶೀರ್ಷ್ಣಾಂ ಗಲಾತ್ಸ್ರವಂತಮಸೃಗಾಸವಮತ್ಯುಷ್ಣಂ ಸಹ ಗಣೇನ ನಿಪೀಯಾತಿಪಾನಮದವಿಹ್ವಲೋಚ್ಚೈಸ್ತರಾಂ ಸ್ವಪಾರ್ಷದೈಃ ಸಹ ಜಗೌ ನನರ್ತ ಚ ವಿಜಹಾರ ಚ ಶಿರಃಕಂದುಕಲೀಲಯಾ ॥ ೧೮ ॥ ಏವಮೇವ ಖಲು ಮಹದಭಿಚಾರಾತಿಕ್ರಮಃ ಕಾರ್ತ್ಸ್ನ್ಯೇನಾತ್ಮನೇ ಫಲತಿ ॥ ೧೯ ॥ ನ ವಾ ಏತದ್ವಿಷ್ಣುದತ್ತ ಮಹದದ್ಭುತಂ ಯದಸಂಭ್ರಮಃ ಸ್ವಶಿರಶ್ಛೇದನ ಆಪತಿತೇಽಪಿ ವಿಮುಕ್ತದೇಹಾದ್ಯಾತ್ಮಭಾವಸುದೃಢಹೃದಯಗ್ರಂಥೀನಾಂ ಸರ್ವಸತ್ತ್ವಸುಹೃದಾತ್ಮನಾಂ ನಿರ್ವೈರಾಣಾಂ ಸಾಕ್ಷಾದ್ಭಗವತಾನಿಮಿಷಾರಿವರಾಯುಧೇನಾಪ್ರಮತ್ತೇನ ತೈಸ್ತೈರ್ಭಾವೈಃ ಪರಿರಕ್ಷ್ಯಮಾಣಾನಾಂ ತತ್ಪಾದಮೂಲಮಕುತಶ್ಚಿದ್ಭಯಮುಪಸೃತಾನಾಂ ಭಾಗವತಪರಮಹಂಸಾನಾಮ್ ॥ ೨೦ ॥

ಗಂಟುಹಾಕಿಕೊಂಡಿದ್ದವು. ಕರಾಳವಾದ ಕೋರೆದಾಡೆಗಳು ಹೊರಗೆ ಚಾಚಿಕೊಂಡಿದ್ದವು. ಕಣ್ಣುಗಳು ಕೆಂಪಾಗಿ ಆಕೆಯ ಮುಖವು ಅತ್ಯಂತ ಭೀಕರವಾಗಿತ್ತು. ಆಕೆಯ ಆ ಕರಾಳವಾದ ರೂಪವನ್ನು ನೋಡಿದಾಗ ಆಕೆಯು ಈ ಜಗತ್ತನ್ನೇ ಸಂಹರಿಸಿಬಿಡುವಳೋ ಎಂಬಂತೆ ತೋರುತ್ತಿತ್ತು. ದೇವಿಯು ರೋಷಾವೇಶದಿಂದ ಗಟ್ಟಿಯಾಗಿ ಅಟ್ಟಹಾಸ ಮಾಡಿ ಪುರೋಹಿತನ ಕೈಯಿಂದ ಅಭಿಮಂತ್ರಿತವಾದ ಆ ಖಡ್ಗವನ್ನು ಕಿತ್ತುಕೊಂಡು ಅದರಿಂದಲೇ ಆ ಎಲ್ಲ ಪಾಪಿಗಳ ತಲೆಗಳನ್ನೂ ಕಡಿದು ಹಾಕಿದಳು ಮತ್ತು ತನ್ನ ಗಣಗಳೊಡನೆ ಆ ದುಷ್ಟರ ಕುತ್ತಿಗೆಗಳಿಂದ ಹರಿಯುತ್ತಿದ್ದ ಬಿಸಿರಕ್ತರೂಪದ ಮದ್ಯವನ್ನು ಕುಡಿದು ಹುಚ್ಚೆದ್ದು ಗಟ್ಟಿಯಾಗಿ ಹಾಡುತ್ತಾ ಕುಣಿದು ಕುಪ್ಪಳಿಸುತ್ತಾ ಅವರ ತಲೆಬುರುಡೆಗಳನ್ನು ಚೆಂಡಾಡಿದಳು. ॥ ೧೮ ॥ ಮಹಾಪುರುಷರಿಗೆ ಅತ್ಯಾಚಾರದ ಅಪಚಾರವನ್ನೆಸಗಿದರೆ ಅದು ಹೀಗೆಯೇ ಅದನ್ನು ಮಾಡಿದವನ ಮೇಲೆ ಬಂದು ಎರಗುವುದು. ಇದು ಸತ್ಯ. ॥ ೧೯ ॥ ವಿಷ್ಣುದತ್ತ ಮಹಾರಾಜನೇ! ಯಾರ ದೇಹಾಭಿಮಾನರೂಪವಾದ ದೃಢವಾದ ಹೃದಯಗ್ರಂಥಿಯು ಬಿಚ್ಚಿಹೋಗಿದೆಯೋ, ಯಾರು ಸಮಸ್ತ ಪ್ರಾಣಿಗಳ ಆತ್ಮಸ್ವರೂಪನೂ, ಸುಹೃದನೂ, ವೈರಹೀನನಾಗಿರುವನೋ, ಸಾಕ್ಷಾತ್ ಭಗವಂತನೇ ಭದ್ರಕಾಳಿ ಮುಂತಾದ ಬೇರೆ-ಬೇರೆ ರೂಪಗಳನ್ನು ಧರಿಸಿ – ಎಂದಿಗೂ ಗುರಿತಪ್ಪದಿರುವ ಕಾಲಚಕ್ರವೆಂಬ ಶ್ರೇಷ್ಠವಾದ ಶಸ್ತ್ರದಿಂದ ರಕ್ಷಿಸುತ್ತಾನೋ, ಯಾರು ಭಗವಂತನ ನಿರ್ಭಯ ಚರಣಕಮಲಗಳನ್ನು ಆಶ್ರಯಿಸಿರುವನೋ, ಅಂತಹ ಭಗವದ್ಭಕ್ತ ಪರಮಹಂಸರಿಗೆ ತಮ್ಮ ತಲೆಯು ಕತ್ತರಿಸಿ ಹೋಗುವ ಕಾಲವು ಬಂದರೂ ಯಾವರೀತಿಯ ಕಳವಳವೂ ಉಂಟಾಗುವುದಿಲ್ಲ ಎಂಬುದರಲ್ಲಿ ಆಶ್ಚರ್ಯವೇನೂ ಇಲ್ಲ. ॥ ೨೦ ॥

ಒಂಭತ್ತನೆಯ ಅಧ್ಯಾಯವು ಮುಗಿಯಿತು. ॥ ೯ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಪಂಚಮಸ್ಕಂಧೇ ಜಡಭರತಚರಿತೇ ನವಮೋಽಧ್ಯಾಯಃ ॥ ೯ ॥

ಹತ್ತನೆಯ ಅಧ್ಯಾಯ

ಜಡಭರತ ಮತ್ತು ರಹೂಗಣ ರಾಜನ ಭೇಟಿ

ಶ್ರೀಶುಕ ಉವಾಚ

ಅಥ ಸಿಂಧುಸೌವೀರಪತೇ ರಹೂಗಣಸ್ಯ ವ್ರಜತ ಇಕ್ಷುಮತ್ಯಾಸ್ತಟೇ ತತ್ಕುಲಪತಿನಾ ಶಿಬಿಕಾವಾಹಪುರುಷಾನ್ವೇಷಣಸಮಯೇ ದೈವೇನೋಪಸಾದಿತಃ ಸ ದ್ವಿಜವರ ಉಪಲಬ್ಧ ಏಷ ಪೀವಾ ಯುವಾ ಸಂಹನನಾಂಗೋ ಗೋಖರವದ್ಧುರಂ ವೋಢುಮಲಮಿತಿ ಪೂರ್ವವಿಷ್ಟಿ-

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿದ್ರಾಜನೇ! ಒಮ್ಮೆ ಸಿಂಧು-ಸೌವೀರ ದೇಶದ ಒಡೆಯ ರಹೂಗಣ ಮಹಾರಾಜನು ಪಲ್ಲಕ್ಕಿಯನ್ನೇರಿ ಹೋಗುತ್ತಿದ್ದಾಗ ದಾರಿಯಲ್ಲಿ ಇಕ್ಷುಮತಿ ನದಿಯ ತೀರದಲ್ಲಿ ಪಲ್ಲಕ್ಕಿಯನ್ನು ಹೊರುವ ಬೋಯಿಗಳ ನಾಯಕನಿಗೆ ಒಬ್ಬ ಬೋಯಿಯ ಆವಶ್ಯಕತೆ ಒದಗಿತು. ಅದಕ್ಕಾಗಿ ಬೋಯಿಯನ್ನು ಹುಡುಕುತ್ತಿದ್ದಾಗ ದೈವವಶದಿಂದ ಅವನಿಗೆ ಬ್ರಾಹ್ಮಣಶ್ರೇಷ್ಠನಾದ ಈ ಜಡಭರತನು ಸಿಕ್ಕಿದನು. 'ಈ ಮನುಷ್ಯನು ಹೃಷ್ಟ-ಪುಷ್ಟನಾಗಿ ದೃಢಕಾಯನಾಗಿದ್ದಾನೆ, ತರುಣ

ಗೃಹೀತಃ ಸಹ ಗೃಹೀತಃ ಪ್ರಸಭಮತದರ್ಹ ಉವಾಹ ಶಿಬಿಕಾಂ ಸ ಮಹಾನುಭಾವಃ ॥ ೧ ॥

ಯದಾ ಹಿ ದ್ವಿಜವರಸ್ಯೇಷುಮಾತ್ರಾವಲೋಕಾನುಗತೇರ್ನ ಸಮಾಹಿತಾ ಪುರುಷಗತಿಸ್ತದಾ ವಿಷಮಗತಾಂ ಸ್ವಶಿಬಿಕಾಂ ರಹೂಗಣ ಉಪಧಾರ್ಯ ಪುರುಷಾನಧಿವಹತ ಆಹ ಹೇ ವೋಢಾರಃ । ಸಾಧ್ವತಿಕ್ರಮತ ಕಿಮಿತಿ ವಿಷಮಮುಹ್ಯತೇ ಯಾನಮಿತಿ ॥ ೨ ॥

ಅಥ ತ ಈಶ್ವರವಚಃ ಸೋಪಾಲಂಭಮುಪಾಕರ್ಣ್ಯೋಪಾಯತುರೀಯಾಚ್ಛಂಕಿತಮನಸಸ್ತಂ ವಿಜ್ಞಾಪಯಾಂಬಭೂವುಃ ॥ ೩ ॥ ನ ವಯಂ ನರದೇವ ಪ್ರಮತ್ತಾ ಭವನ್ನಿಯಮಾನುಪಥಾಃ ಸಾಧ್ವೇವ ವಹಾಮಃ । ಅಯಮಧುನೈವ ನಿಯುಕ್ತೋಽಪಿ ನ ದ್ರುತಂ ವ್ರಜತಿ ನಾನೇನ ಸಹ ವೋಢುಮು ಹ ವಯಂ ಪಾರಯಾಮ ಇತಿ ॥ ೪ ॥

ಸಾಂಸರ್ಗಿಕೋ ದೋಷ ಏವ ನೂನಮೇಕಸ್ಯಾಪಿ ಸರ್ವೇಷಾಂ ಸಾಂಸರ್ಗಿಕಾಣಾಂ ಭವಿತುಮರ್ಹತೀತಿ ನಿಶ್ಚಿತ್ಯ ನಿಶಮ್ಯ ಕೃಪಣವಚೋ ರಾಜಾ ರಹೂಗಣ ಉಪಾಸಿತವೃದ್ಧೋಽಪಿ ನಿಸರ್ಗೇಣ ಬಲಾತ್ಕೃತ ಈಷದುತ್ಥಿತಮನ್ಯುರವಿಸ್ಪಷ್ಟಬ್ರಹ್ಮತೇಜಸಂ ಜಾತವೇದಸಮಿವ ರಜಸಾಽಽವೃತಮತಿರಾಹ ॥ ೫ ॥ ಅಹೋ ಕಷ್ಟಂ ಭ್ರಾತರ್ವ್ಯಕ್ತಮುರು ಪರಿಶ್ರಾಂತೋ ದೀರ್ಘಮಧ್ವಾನಮೇಕ ಏವ ಊಹಿವಾನ್ಸುಚಿರಂ ನಾತಿಪೀವಾ ನ ಸಂಹನನಾಂಗೋ ಜರಸಾ ಚೋಪದ್ರುತೋ ಭವಾನ್ ಸಖೇ ನೋ ಏವಾಪರ ಏತೇ ಸಂಘಟ್ಟಿನ ಇತಿ ಬಹು ವಿಪ್ರಲಬ್ಧೋಽಪ್ಯವಿದ್ಯಯಾ ರಚಿತದ್ರವ್ಯಗುಣಕರ್ಮಾಶಯಸ್ವಚರಮಕಲೇವ-

ನಾಗಿದ್ದಾನೆ. ಇವನ ಅಂಗಾಂಗಗಳು ಗಟ್ಟಿ-ಮುಟ್ಟಾಗಿವೆ. ಆದ್ದರಿಂದ ಈತನು ಎತ್ತು-ಕತ್ತೆಗಳಂತೆ ಭಾರವನ್ನು ಚೆನ್ನಾಗಿ ಹೊರಬಲ್ಲನು' ಎಂದು ಯೋಚಿಸಿ, ಆತನು ಬಿಟ್ಟಿ ಕೆಲಸಕ್ಕೆ ಸಿಕ್ಕಿದ್ದರಿಂದ ಇತರ ಬೋಯಿಗಳ ಜೊತೆಗೆ ಭರತನನ್ನೂ ಬಲಾತ್ಕಾರವಾಗಿ ಹಿಡಿದುತಂದು ಪಲ್ಲಕ್ಕಿಯನ್ನು ಹೊರಿಸಿಬಿಟ್ಟನು. ಮಹಾತ್ಮನಾದ ಭರತನು ಯಾವ ರೀತಿಯಿಂದಲೂ ಇಂತಹ ಕೆಲಸಕ್ಕೆ ಯೋಗ್ಯನಲ್ಲದಿದ್ದರೂ ಆತನು ಏನನ್ನೂ ಮರುಮಾತಾಡದೆ ಸುಮ್ಮನೆ ಪಲ್ಲಕ್ಕಿಯನ್ನು ಹೊತ್ತುನಡೆದನು. ॥ ೧ ॥

ಆ ದ್ವಿಜಶ್ರೇಷ್ಠನು ತನ್ನ ಕಾಲ್ಕೆಳಗೆ ಯಾವುದೇ ಜೀವಿಯೂ ಹಿಂಸೆಗೊಳಗಾಗಬಾರದೆಂಬ ಭಯದಿಂದ ಒಂದು ಬಾಣದಷ್ಟು ಮುಂದಿನ ಭೂಮಿಯನ್ನು ನೋಡಿ ನಡೆಯುತ್ತಿದ್ದನು. ಆದರಿಂದ ಬೇರೆ ಬೋಯಿಗಳ ಜೊತೆಗೆ ಇವನ ನಡಿಗೆ ಸರಿಹೊಂದುತ್ತಿರಲಿಲ್ಲ. ಅದ್ದರಿಂದ ಪಲ್ಲಕ್ಕಿಯು ಅಡ್ಡಾದಿಡ್ಡಿಯಾಗುವುದನ್ನು ಕಂಡು ರಾಜಾ ರಹೂಗಣನು ಪಲ್ಲಕ್ಕಿಯನ್ನು ಹೊರುವವರಿಗೆ ಕುರಿತು – 'ಎಲೈ ಬೋಯಿಗಳೇ! ಸರಿಯಾಗಿ ನಡೆಯಿರಿ. ಪಲ್ಲಕ್ಕಿಯನ್ನು ಏಕೆ ಹೀಗೆ ಮೇಲಕ್ಕೂ-ಕೆಳಕ್ಕೂ ತೂಗುತ್ತಾ ಹೆಜ್ಜೆಹಾಕುತ್ತಿದ್ದೀರಲ್ಲ?' ಎಂದು ಆಕ್ಷೇಪಿಸಿದನು. ॥ ೨ ॥

ರಾಜನ ಆ ಆಕ್ಷೇಪಾರ್ಹವಾದ ಮಾತನ್ನು ಕೇಳಿ, ತಮಗೆ ಶಿಕ್ಷೆಯಾದೀತೆಂಬ ಭಯದಿಂದ ಅವರು ರಾಜನಲ್ಲಿ ಹೀಗೆ ವಿನಂತಿಸಿಕೊಂಡರು. ॥ ೩ ॥ ಮಹಾಪ್ರಭುಗಳೇ! ನಾವೇನು ಮೈಮರೆತಿಲ್ಲ. ತಮ್ಮ ನಿಯಮ-ಮರ್ಯಾದೆಗಳಿಗೆ ಅನುಗುಣವಾಗಿ ಸರಿಯಾಗಿಯೇ ಪಲ್ಲಕ್ಕಿಯನ್ನು ಸಾಗಿಸುತ್ತಿದ್ದೇವೆ. ಆದರೆ ಈ ಹೊಸ ಬೋಯಿಯು ಈಗ ತಾನೇ ಪಲ್ಲಕ್ಕಿಯನ್ನು ಹೊರಲು ನೇಮಿಸಲ್ಪಟ್ಟಿದ್ದರೂ ಬೇಗ-ಬೇಗನೇ ನಡೆಯುತ್ತಿಲ್ಲ. ನಾವು ಈತನೊಡನೆ ಪಲ್ಲಕ್ಕಿಯನ್ನು ಹೊರಲಾರೆವು. ॥ ೪ ॥

ಬೋಯಿಗಳ ಈ ದೀನವಾದ ಮಾತನ್ನು ಕೇಳಿ ರಹೂಗಣ ರಾಜನು – 'ಸಂಸರ್ಗದಿಂದ ಉಂಟಾದ ದೋಷವು ಒಬ್ಬನಲ್ಲಿದ್ದರೂ ಆತನೊಡನೆ ಸಂಬಂಧವನ್ನು ಇಟ್ಟುಕೊಂಡಿರುವ ಎಲ್ಲ ಮನುಷ್ಯರಲ್ಲಿಯೂ ಹರಡುವುದು. ಆದ್ದರಿಂದ ಇದಕ್ಕೆ ಪ್ರತೀಕಾರ ಮಾಡದೇ ಇದ್ದರೆ ಎಲ್ಲ ಬೋಯಿಗಳ ನಡಿಗೆಯು ಕೆಟ್ಟುಹೋಗುವುದು.' ಈ ರೀತಿಯಲ್ಲಿ ಯೋಚಿಸಿದ ರಾಜನಿಗೆ ಸ್ವಲ್ಪ ಕೋಪವೂ ಉಂಟಾಯಿತು. ಅವನು ಮಹಾಪುರುಷರ ಸೇವೆಮಾಡಿದ್ದರೂ ಕ್ಷತ್ರಿಯಸ್ವಭಾವಕ್ಕೆ ವಶನಾಗಿ ಬಲವಂತವಾಗಿ ಅವನ ಬುದ್ಧಿಯು ರಜೋಗುಣದಿಂದ ತುಂಬಿಹೋಯಿತು. ಆಗ ಆತನು ಬೂದಿ ಮುಚ್ಚಿದ್ದ ಕೆಂಡದಂತೆ ಬ್ರಹ್ಮತೇಜಸ್ಸು ಪ್ರಕಟವಾಗದೆ ಮರೆಗೊಂಡಿದ್ದ ಆ ಬ್ರಾಹ್ಮಣಶ್ರೇಷ್ಠನಿಗೆ ಈ ರೀತಿಯಾಗಿ ವ್ಯಂಗ್ಯದಿಂದ ತುಂಬಿದ ಮಾತುಗಳನ್ನು ಆಡಿದನು – ॥ ೫ ॥ 'ಅಯ್ಯೋ ಪಾಪ! ನಿನಗೆ ತುಂಬಾ ಆಯಾಸವಾಗಿರಬೇಕು. ಯಾರ ಸಹಾಯವೂ ಇಲ್ಲದೆ ಬಹುದೂರ ಬಹುಕಾಲದವರೆಗೂ ನೀನೊಬ್ಬನೇ ಪಲ್ಲಕ್ಕಿಯನ್ನು ಹೊತ್ತು ಬಂದಿರುವೆ. ನಿನ್ನ ದೇಹವೂ ಅಷ್ಟೇನೂ ದಪ್ಪವಾಗಿಲ್ಲ. ಅಂಗಗಳೂ ದೃಢವಾಗಿಲ್ಲ. ಜೊತೆಗೆ ಮುಪ್ಪು ನಿನ್ನನ್ನು ಆಕ್ರಮಿಸಿ ಆದುಮಿಹಾಕಿದೆಯಲ್ಲವೇ?' ಹೀಗೆ ಬಹಳಷ್ಟು

ರೇಪವಸ್ತುನಿ ಸಂಸ್ಥಾನವಿಶೇಷೇಽಹಂಮಮೇತ್ಯನಧ್ಯಾರೋಪಿತಮಿಥ್ಯಾಪ್ರತ್ಯಯೋ ಬ್ರಹ್ಮಭೂತಸ್ತೂಷ್ಣೀಂ ಶಿಬಿಕಾಂ ಪೂರ್ವವದುವಾಹ ॥ ೬ ॥

ಅಥ ಪುನಃ ಸ್ವಶಿಬಿಕಾಯಾಂ ವಿಷಮಗತಾಯಾಂ ಪ್ರಕುಪಿತ ಉವಾಚ ರಹೂಗಣಃ ಕಿಮಿದಮರೇ ತ್ವಂ ಜೀವನ್ಮೃತೋ ಮಾಂ ಕದರ್ಥೀಕೃತ್ಯ ಭರ್ತೃಶಾಸನಮತಿಚರಸಿ ಪ್ರಮತ್ತಸ್ಯ ಚ ತೇ ಕರೋಮಿ ಚಿಕಿತ್ಸಾಂ ದಂಡಪಾಣಿರಿವ ಜನತಾಯಾ ಯಥಾ ಪ್ರಕೃತಿಂ ಸ್ವಾಂ ಭಜಿಷ್ಯಸ ಇತಿ ॥ ೭ ॥

ಏವಂ ಬಹ್ವಬದ್ಧಮಪಿ ಭಾಷಮಾಣಂ ನರದೇವಾಭಿಮಾನಂ ರಜಸಾ ತಮಸಾನುವಿದ್ಧೇನ ಮದೇನ ತಿರಸ್ಕೃತಾಶೇಷಭಗವತ್ಪ್ರಿಯನಿಕೇತಂ ಪಂಡಿತಮಾನಿನಂ ಸ ಭಗವಾನ್ ಬ್ರಾಹ್ಮಣೋ ಬ್ರಹ್ಮಭೂತಃ ಸರ್ವಭೂತಸುಹೃದಾತ್ಮಾ ಯೋಗೇಶ್ವರಚರ್ಯಾಯಾಂ ನಾತಿವ್ಯುತ್ಪನ್ನಮತಿಂ ಸ್ಮಯಮಾನ ಇವ ವಿಗತಸ್ಮಯ ಇದಮಾಹ ॥ ೮ ॥

ಬ್ರಾಹ್ಮಣ ಉವಾಚ

ತ್ವಯೋದಿತಂ ವ್ಯಕ್ತಮವಿಪ್ರಲಬ್ಧಂ
ಭರ್ತುಃ ಸ ಮೇ ಸ್ಯಾದ್ಯದಿ ವೀರ ಭಾರಃ ।
ಗಂತುರ್ಯದಿ ಸ್ಯಾದಧಿಗಮ್ಯಮಧ್ವಾ
ಪೀವೇತಿ ರಾಶೌ ನ ವಿದಾಂ ಪ್ರವಾದಃ ॥ ೯ ॥

ಸ್ಥೌಲ್ಯಂ ಕಾರ್ಶ್ಯಂ ವ್ಯಾಧಯ ಆಧಯಶ್ಚ
ಕ್ಷುತ್ತೃಡ್ಭಯಂ ಕಲಿರಿಚ್ಛಾ ಜರಾ ಚ ।
ನಿದ್ರಾ ರತಿರ್ಮನ್ಯುರಹಂಮದಃ ಶುಚೋ
ದೇಹೇನ ಜಾತಸ್ಯ ಹಿ ಮೇ ನ ಸಂತಿ ॥ ೧೦ ॥

ಕಟುಕಿಯನ್ನು ರಾಜನು ನುಡಿದರೂ ಅವನು ಹಿಂದಿನಂತೆಯೇ ಸುಮ್ಮನೆ ಪಲ್ಲಕ್ಕಿಯನ್ನು ಹೊತ್ತು ನಡೆಯುತ್ತಿದ್ದನು. ರಾಜನ ಮಾತುಗಳನ್ನು ಆತನು ಸ್ವಲ್ಪವೂ ಕೆಟ್ಟದಾಗಿ ಭಾವಿಸಲಿಲ್ಲ. ಏಕೆಂದರೆ, ಪಂಚಭೂತಗಳು, ಇಂದ್ರಿಯಗಳು, ಅಂತಃಕರಣಗಳ ಸಮುದಾಯವಾದ ಈ ತನ್ನ ಕೊನೆಯ ಶರೀರವು ಅವಿದ್ಯೆಯ ಕಾರ್ಯವೇ ಆಗಿದೆ ಎಂದು ಆತನು ಅರಿತಿದ್ದನು. ಅದು ವಿವಿಧ ಅಂಗಗಳಿಂದ ಕೂಡಿಕೊಂಡು ಕಾಣಿಸಿಕೊಂಡಿದ್ದರೂ ವಸ್ತುತಃ ಇರಲೇ ಇಲ್ಲ. ಅದಕ್ಕಾಗಿ ಅದರಲ್ಲಿ ಅವನಿಗೆ 'ನಾನು-ನನ್ನದು' ಎಂಬ ಮಿಥ್ಯಾ ಅಧ್ಯಾಸವು ಸರ್ವಥಾ ಹೊರಟುಹೋಗಿತ್ತು ಮತ್ತು ಅವನು ಬ್ರಹ್ಮಸ್ವರೂಪನೇ ಆಗಿದ್ದನು. ॥ ೬ ॥

ತಾನು ಇಷ್ಟು ಹೇಳಿದರೂ ಪಲ್ಲಕ್ಕಿಯು ಸರಿಯಾಗಿ ಹೋಗದೆ ಇರುವುದನ್ನು ಕಂಡು ರಾಜನು ಕ್ರೋಧದಿಂದ ಕೆಂಡಕಾರುತ್ತಾ ಆ ಭರತಮುನಿಯನ್ನು – 'ಎಲವೋ! ಇದೇನಿದು ? ನೀನು ಜೀವಂತನಾಗಿದ್ದರೂ ಸತ್ತಿರುವೆಯಾ ? ನನ್ನನ್ನು ತಿರಸ್ಕರಿಸಿ ನನ್ನ ಆಜ್ಞೆಯನ್ನು ಉಲ್ಲಂಘಿಸಿದ್ದೀಯೆ. ದಂಡಪಾಣಿಯಾದ ಯಮಧರ್ಮರಾಜನು ಜನರಿಗೆ ಅಪರಾಧಕ್ಕಾಗಿ ಶಿಕ್ಷೆಯನ್ನು ಕೊಡುವಂತೆ ನಾನು ನಿನಗೆ ಈಗಲೇ ತಕ್ಕ ಚಿಕಿತ್ಸೆಯನ್ನು ಮಾಡುತ್ತೇನೆ. ಆಗ ನಿನ್ನ ಬುದ್ಧಿಯು ಸರಿಹೋಗುವುದು' ಎಂದು ಗದರಿಸಿದನು. ॥ ೭ ॥

ಹೀಗೆ ತಾನು ರಾಜನೆಂಬ ದುರಭಿಮಾನದಿಂದ ರಹೂಗಣ ರಾಜನು ಮನಬಂದಂತೆ ಮಾತುಗಳನ್ನಾಡಿದನು. ತನ್ನನ್ನು ಮಹಾಪಂಡಿತನೆಂದು ಭಾವಿಸಿಕೊಂಡು ರಜೋಗುಣ- ತಮೋಗುಣಗಳಿಂದ ಕೂಡಿದ ಅಹಂಕಾರಕ್ಕೆ ವಶನಾಗಿ ಶ್ರೀಭಗವಂತನ ಅನನ್ಯ ಪ್ರೇಮಕ್ಕೆ ಪಾತ್ರನಾದ, ಭಕ್ತಶ್ರೇಷ್ಠನಾದ ಭರತನನ್ನು ತಿರಸ್ಕಾರ ಮಾಡಿದನು. ಯೋಗೇಶ್ವರರ ನಡೆಯು ಹೇಗಿರುತ್ತದೆ ? ಎಂಬುದರ ಪರಿಚಯವೇ ಆತನಿಗೆ ಇರಲಿಲ್ಲ. ಆತನ ಆ ಅಪಕ್ವವಾದ ಬುದ್ಧಿಯನ್ನು ನೋಡಿ ಸಮಸ್ತಪ್ರಾಣಿಗಳಲ್ಲಿಯೂ ಸೌಹಾರ್ದ ತುಂಬಿದ ಆತ್ಮವುಳ್ಳವನಾಗಿ ಬ್ರಹ್ಮದಲ್ಲಿ ನೆಲೆಗೊಂಡಿದ್ದ ಆ ಬ್ರಾಹ್ಮಣೋತ್ತಮನು ನಸುನಕ್ಕು ಯಾವ ಬಗೆಯ ಅಭಿಮಾನವೂ ಇಲ್ಲದೆ ಆ ರಾಜನಿಗೆ ಹೀಗೆಂದನು – ॥ ೮ ॥

ಜಡಭರತನು ಹೇಳಿದನು – ಎಲೈ ವೀರನೇ ! ನೀನು ಹೇಳಿರುವುದು ಯಥಾರ್ಥವಾಗಿದೆ. ಅದರಲ್ಲಿ ಉಪಹಾಸವೇನೂ ಇಲ್ಲ. ಭಾರವೆಂಬ ವಸ್ತು ಇರುವುದಾದರೆ ಅದು ಹೊರುವವನಿಗೆ ಇದೆ. ಮಾರ್ಗ ಇರುವುದಾದರೆ ಅದು ನಡೆಯುವವನಿಗೆ ಇದೆ. ದಪ್ಪನಾಗಿರುವುದು ಅದರದ್ದೇ ಆಗಿದೆ ; ಇವೆಲ್ಲವೂ ಶರೀರಕ್ಕಾಗಿಯೇ ಹೇಳಲಾಗುವುದು, ಆತ್ಮನಿಗೆ ಅಲ್ಲ. ಜ್ಞಾನಿಗಳು ಹೀಗೆ ಮಾತಾಡುವುದಿಲ್ಲ. ॥ ೯ ॥ ದಪ್ಪನಾಗಿರುವಿಕೆ, ತೆಳ್ಳಗಿರುವಿಕೆ, ದೈಹಿಕ-ಮಾನಸಿಕ ರೋಗಗಳು, ಹಸಿವು-ಬಾಯಾರಿಕೆಗಳು, ಭಯ, ದ್ವೇಷ, ಇಚ್ಛೆ, ಮುಪ್ಪು, ನಿದ್ರೆ, ಸ್ತ್ರೀ-ಪುರುಷರತಿ, ಕ್ರೋಧ, ದೈನ್ಯ, ಅಹಂಕಾರ, ಮದ ಮತ್ತು ಶೋಕ ಇವೆಲ್ಲ ಧರ್ಮಗಳು ದೇಹಾಭಿಮಾನದಿಂದಾಗಿ ಉಂಟಾಗುವ ಜೀವನಲ್ಲಿ ಇರುತ್ತವೆ. ನನ್ನಲ್ಲಿ ಇವುಗಳು ಲೇಶಮಾತ್ರವೂ ಇಲ್ಲ. ॥ ೧೦ ॥ ರಾಜನೇ ! ಬದುಕಿದ್ದರೂ ಸತ್ತವನು ಎಂದು ನೀನು ಹೇಳಿದ ಮಾತು – ಎಷ್ಟು ವಿಕಾರಿ

ಜೀವನ್ಮೃತತ್ವಂ ನಿಯಮೇನ ರಾಜನ್
ಆದ್ಯಂತವದ್ಯದ್ವಿಕೃತಸ್ಯ ದೃಷ್ಟಮ್ ।
ಸ್ವಸ್ವಾಮ್ಯಭಾವೋ ಧ್ರುವ ಈಡ್ಯ ಯತ್ರ
ತರ್ಹ್ಯುಚ್ಯತೇಽಸೌ ವಿಧಿಕೃತ್ಯಯೋಗಃ ॥ ೧೧ ॥

ವಿಶೇಷಬುದ್ಧೇರ್ವಿವರಂ ಮನಾಕ್ ಚ
ಪಶ್ಯಾಮ ಯನ್ನ ವ್ಯವಹಾರತೋಽನ್ಯತ್ ।
ಕ ಈಶ್ವರಸ್ತತ್ರ ಕಿಮೀಶಿತವ್ಯಂ
ತಥಾಪಿ ರಾಜನ್ ಕರವಾಮ ಕಿಂ ತೇ ॥ ೧೨ ॥

ಉನ್ಮತ್ತಮತ್ತಜಡವತ್ಸ್ವಸಂಸ್ಥಾಂ
ಗತಸ್ಯ ಮೇ ವೀರ ಚಿಕಿತ್ಸಿತೇನ ।
ಅರ್ಥಃ ಕಿಯಾನ್ ಭವತಾ ಶಿಕ್ಷಿತೇನ
ಸ್ತಬ್ಧಪ್ರಮತ್ತಸ್ಯ ಚ ಪಿಷ್ಟಪೇಷಃ ॥ ೧೩ ॥

ಶ್ರೀಶುಕ ಉವಾಚ

ಏತಾವದನುವಾದಪರಿಭಾಷಯಾ ಪ್ರತ್ಯುದೀರ್ಯ ಮುನಿವರ ಉಪಶಮಶೀಲ ಉಪರತಾನಾತ್ಮ್ಯನಿಮಿತ್ತ ಉಪಭೋಗೇನ ಕರ್ಮಾರಬ್ಧಂ ವ್ಯಪನಯನ್ ರಾಜಯಾನಮಪಿ ತಥೋವಾಹ ॥ ೧೪ ॥ ಸ ಚಾಪಿ ಪಾಂಡವೇಯ ಸಿಂಧುಸೌವೀರಪತಿಸ್ತತ್ತ್ವಜಿಜ್ಞಾಸಾಯಾಂ ಸಮ್ಯಕ್ಶ್ರದ್ಧಯಾಧಿಕೃತಾಧಿಕಾರಸ್ತದ್ಧೃದಯಗ್ರಂಥಿಮೋಚನಂ ದ್ವಿಜವಚ ಆಶ್ರುತ್ಯ ಬಹುಯೋಗಗ್ರಂಥಸಮ್ಮತಂ ತ್ವರಯಾವರುಹ್ಯ ಶಿರಸಾ ಪಾದಮೂಲಮುಪಸೃತಃ ಕ್ಷಮಾಪಯನ್ ವಿಗತನೃಪದೇವಸ್ಮಯ ಉವಾಚ ॥ ೧೫ ॥

ಕಸ್ತ್ವಂ ನಿಗೂಢಶ್ಚರಸಿ ದ್ವಿಜಾನಾಂ
ಬಿಭರ್ಷಿ ಸೂತ್ರಂ ಕತಮೋಽವಧೂತಃ ।
ಕಸ್ಯಾಸಿ ಕುತ್ರತ್ಯ ಇಹಾಪಿ ಕಸ್ಮಾತ್
ಕ್ಷೇಮಾಯ ನಶ್ಚೇದಸಿ ನೋತ ಶುಕ್ಲಃ ॥ ೧೬ ॥

ಪದಾರ್ಥಗಳಿವೆಯೋ ಅವೆಲ್ಲವುಗಳಲ್ಲಿ ನಿಯಮಿತರೂಪದಿಂದ ಇವೆರಡು ಮಾತುಗಳು ಕಂಡುಬರುತ್ತವೆ. ಏಕೆಂದರೆ, ಅವೆಲ್ಲವೂ ಆದಿ-ಅಂತ್ಯಗಳು ಇರುವಂತಹವುಗಳು. ಎಲೈ ಯಶಸ್ವೀರಾಜನೇ! ಸ್ವಾಮಿ-ಸೇವಕ-ಭಾವ ಸ್ಥಿರವಾಗಿರುವಲ್ಲಿಯೇ ಆಜ್ಞಾ-ಪಾಲನಾದಿಗಳ ನಿಯಮ ಹೊಂದಬಲ್ಲದು. ॥ ೧೧ ॥ 'ನೀನು ರಾಜನಾಗಿದ್ದೀ ಮತ್ತು ನಾನು ಪ್ರಜೆಯಾಗಿದ್ದೇನೆ' ಈ ರೀತಿಯ ಭೇದಬುದ್ಧಿಯು ವ್ಯವಹಾರವಲ್ಲದೆ ಬೇರೆ ಯಾವುದೂ ಕಂಡುಬರುವುದಿಲ್ಲ. ಪರಮಾರ್ಥ ದೃಷ್ಟಿಯಿಂದ ನೋಡಿದರೆ, ಯಾರನ್ನು ಸ್ವಾಮಿ ಯಾರನ್ನು ಸೇವಕನೆಂದು ಹೇಳುವುದು? ಆದರೂ ರಾಜನೇ! ನಿನಗೆ ಸ್ವಾಮಿತ್ವದ ಅಭಿಮಾನವಿದ್ದರೆ ಹೇಳು, ನಾನು ನಿನ್ನ ಯಾವ ಸೇವೆಮಾಡಲಿ? ॥ ೧೨ ॥ ವೀರನೇ! ನಾನು ಉನ್ಮತ್ತ, ಜಡನಂತೆ ನನ್ನ ಸ್ಥಿತಿಯಲ್ಲೇ ಇರುತ್ತೇನೆ. ನನಗೆ ಚಿಕಿತ್ಸೆಮಾಡಿ ನಿನಗೆ ಏನು ಸಿಗುವುದಿದೆ? ವಾಸ್ತವವಾಗಿ ನಾನು ಜಡ ಮತ್ತು ಪ್ರಮಾದಿಯೇ ಆಗಿದ್ದರೆ ನನಗೆ ಶಿಕ್ಷೆ ಕೊಡುವುದು ಪಿಷ್ಟಪೇಷಣದಂತೆ ವ್ಯರ್ಥವೇ ಆದೀತಲ್ಲ! ॥ ೧೩ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಎಲೈ ಪರೀಕ್ಷಿತನೇ! ಜಡಭರತ ಮಹಾಮುನಿಯು ರಾಜನಿಗೆ ಯಥಾರ್ಥವಾದ ತತ್ತ್ವವನ್ನು ಉಪದೇಶಮಾಡುತ್ತಾ ಹೀಗೆ ಉತ್ತರ ಹೇಳಿ ಮೌನವಾದನು. ಅವನಲ್ಲಿ ದೇಹಾತ್ಮಬುದ್ಧಿಗೆ ಹೇತುಭೂತವಾದ ಅಜ್ಞಾನವು ನಿವೃತ್ತವಾಗಿ ಹೋಗಿತ್ತು. ಆದರಿಂದ ಅವನು ಪರಮ ಶಾಂತನಾಗಿದ್ದನು. ಆದ್ದರಿಂದ ಇಷ್ಟು ಹೇಳಿ ಭೋಗದ ಮೂಲಕ ಪ್ರಾರಬ್ಧವನ್ನು ಕ್ಷಯಗೊಳಿಸಲಿಕ್ಕಾಗಿ ಅವನು ಪುನಃ ಮೊದಲಿನಂತೆಯೇ ಆ ಪಲ್ಲಕ್ಕಿಯನ್ನು ಹೆಗಲಮೇಲೇರಿಸಿ ನಡೆಯತೊಡಗಿದನು. ॥ ೧೪ ॥ ಸಿಂಧು-ಸೌವೀರಪತಿಯಾದ ರಹೂಗಣನೂ ಕೂಡ ತನ್ನ ಉತ್ತಮ ಶ್ರದ್ಧೆಯಿಂದ ತತ್ತ್ವಜ್ಞಾನದ ಪೂರ್ಣ ಅಧಿಕಾರಿಯಾಗಿದ್ದನು. ಅನೇಕ ಯೋಗ ಗ್ರಂಥಗಳಿಂದ ಸಮರ್ಥಿತವಾದ ಹೃದಯ ಗ್ರಂಥಿಯು ಕತ್ತರಿಸುವಂತಹ ಆ ಬ್ರಾಹ್ಮಣೋತ್ತಮನ ಮಾತನ್ನು ಕೇಳಿ ಆ ರಾಜನು ಒಡನೆಯೇ ಪಲ್ಲಕ್ಕಿಯಿಂದ ಇಳಿದುಬಂದನು. ಅವನ ರಾಜಮದವು ಪೂರ್ಣವಾಗಿ ಹೊರಟುಹೋಗಿತ್ತು. ಅವನು ಜಡಭರತನ ಕಾಲಿಗೆ ಬಿದ್ದು ತನ್ನ ಅಪರಾಧಕ್ಕೆ ಕ್ಷಮೆಯನ್ನು ಬೇಡುತ್ತಾ ಹೀಗೆಂದನು. ॥ ೧೫ ॥

ಎಲೈ ಮಹಾತ್ಮರೇ! ವೇಷಾಂತರದಲ್ಲಿ ಸಂಚರಿಸುತ್ತಿರುವ ತಾವು ಯಾರು? ಯಜ್ಞೋಪವೀತವನ್ನು ಧರಿಸಿರುವುದರಿಂದ ತಾವು ಬ್ರಾಹ್ಮಣರಿರಬೇಕು. ದತ್ತಾತ್ರೇಯರೇ ಮುಂತಾದ ಅವಧೂತರಲ್ಲಿ ಯಾರಾಗಿದ್ದೀರಿ? ತಾವು ಯಾರ ಪುತ್ರರು? ತಮ್ಮ ಜನ್ಮಸ್ಥಳ ಯಾವುದು? ಇಲ್ಲಿಗೆ ತಾವು ಹೇಗೆ ಪಾದ ಬೆಳೆಸಿದಿರಿ? ನಮಗೆ ಮಂಗಳವನ್ನುಂಟುಮಾಡುವುದಕ್ಕಾಗಿ ತಾವು ದಯಮಾಡಿಸಿದ್ದರೆ – ಶುದ್ಧ ಸತ್ತ್ವಮಯ ಮೂರ್ತಿಯಾದ ಸಾಕ್ಷಾತ್ ಭಗವಾನ್ ಕಪಿಲದೇವರೇ ತಾವಲ್ಲ ತಾನೇ? ॥ ೧೬ ॥ ನಾನು ಇಂದ್ರನ ವಜ್ರಾಯುಧಕ್ಕೆ ಹೆದರುವುದಿಲ್ಲ, ಮಹಾದೇವನ ತ್ರಿಶೂಲಕ್ಕೂ ಭಯಪಡುವುದಿಲ್ಲ, ಯಮರಾಜನ ದಂಡಕ್ಕೂ ಅಂಜುವುದಿಲ್ಲ, ನನಗೆ

ನಾಹಂ ವಿಶಂಕೇ ಸುರರಾಜವಜ್ರಾತ್
ನ ತ್ರ್ಯಕ್ಷಶೂಲಾನ್ನ ಯಮಸ್ಯ ದಂಡಾತ್ ।
ನಾಗ್ನ್ಯರ್ಕಸೋಮಾನಿಲವಿತ್ತಶಸ್ತ್ರಾ-
ಚ್ಛಂಕೇ ಭೃಶಂ ಬ್ರಹ್ಮಕುಲಾವಮಾನಾತ್ ॥ ೧೭ ॥

ತದ್ ಬ್ರೂಹ್ಯಸಂಗೋ ಜಡವನ್ನಿಗೂಢ-
ವಿಜ್ಞಾನವೀರ್ಯೋ ವಿಚರಸ್ಯಪಾರಃ ।
ವಚಾಂಸಿ ಯೋಗಗ್ರಥಿತಾನಿ ಸಾಧೋ
ನ ನಃ ಕ್ಷಮಂತೇ ಮನಸಾಪಿ ಭೇತ್ತುಮ್ ॥ ೧೮ ॥

ಅಹಂ ಚ ಯೋಗೇಶ್ವರಮಾತ್ಮತತ್ತ್ವ-
ವಿದಾಂ ಮುನೀನಾಂ ಪರಮಂ ಗುರುಂ ವೈ ।
ಪ್ರಷ್ಟುಂ ಪ್ರವೃತ್ತಃ ಕಿಮಿಹಾರಣಂ ತತ್
ಸಾಕ್ಷಾದ್ಧರಿಂ ಜ್ಞಾನಕಲಾವತೀರ್ಣಮ್ ॥ ೧೯ ॥

ಸ ವೈ ಭವಾಂಲ್ಲೋಕನಿರೀಕ್ಷಣಾರ್ಥ-
ಮವ್ಯಕ್ತಲಿಂಗೋ ವಿಚರತ್ಯಪಿಸ್ವಿತ್ ।
ಯೋಗೇಶ್ವರಾಣಾಂ ಗತಿಮಂಧಬುದ್ಧಿಃ
ಕಥಂ ವಿಚಕ್ಷೀತ ಗೃಹಾನುಬಂಧಃ ॥ ೨೦ ॥

ದೃಷ್ಟಃ ಶ್ರಮಃ ಕರ್ಮತ ಆತ್ಮನೋ ವೈ
ಭರ್ತುರ್ಗಂತುರ್ಭವತಶ್ಚಾನುಮನ್ಯೇ ।
ಯಥಾಸತೋದಾನಯನಾದ್ಯಭಾವಾತ್
ಸಮೂಲ ಇಷ್ಟೋ ವ್ಯವಹಾರಮಾರ್ಗಃ ॥ ೨೧ ॥

ಸ್ಥಾಲ್ಯಗ್ನಿತಾಪಾತ್ಪಯಸೋಽಭಿತಾಪ-
ಸ್ತತ್ತಾಪತಸ್ತಂಡುಲಗರ್ಭರಂಧಿಃ ।
ದೇಹೇಂದ್ರಿಯಾಸ್ವಾಶಯಸನ್ನಿಕರ್ಷಾತ್
ತತ್ಸಂಸೃತಿಃ ಪುರುಷಸ್ಯಾನುರೋಧಾತ್ ॥ ೨೨ ॥

ಶಾಸ್ತಾಭಿಗೋಪ್ತಾ ನೃಪತಿಃ ಪ್ರಜಾನಾಂ
ಯಃ ಕಿಂಕರೋ ವೈ ನ ಪಿನಷ್ಟಿ ಪಿಷ್ಟಮ್ ।
ಸ್ವಧರ್ಮಮಾರಾಧನಮಚ್ಯುತಸ್ಯ
ಯದೀಹಮಾನೋ ವಿಜಹಾತ್ಯಘೌಘಮ್ ॥ ೨೩ ॥

ಅಗ್ನಿ, ಸೂರ್ಯ, ಚಂದ್ರ, ವಾಯು ಮತ್ತು ಕುಬೇರ ಇವರ ಅಸ್ತ್ರಶಸ್ತ್ರಗಳ ಯಾವ ಭಯವೂ ಇಲ್ಲ. ಆದರೆ ನಾನು ಬ್ರಾಹ್ಮಣಕುಲದ ಅಪಮಾನದಿಂದ ತುಂಬಾ ಹೆದರುತ್ತೇನೆ. ॥ ೧೭ ॥ ಆದ್ದರಿಂದ ಜ್ಞಾನ-ಶಕ್ತಿಗಳು ಪೂರ್ಣವಾಗಿದ್ದರೂ ಅವುಗಳನ್ನು ತೋರ್ಪಡಿಸದೆ ಮೂಢರಂತೆ ಕಾಣುತ್ತಾ, ಯಾರ ಸಂಗಕ್ಕೂ ಸೇರದೆ ಒಂಟಿಯಾಗಿ ಸಂಚರಿಸುತ್ತಿರುವ ತಾವು ಯಾರು ? ತಮ್ಮ ಆಳವೇನು ಎಂಬುದು ತಿಳಿಯುತ್ತಿಲ್ಲ. ಯೋಗತತ್ತ್ವದಿಂದ ಸಂಪನ್ನವಾಗಿರುವ ತಮ್ಮ ಮಾತುಗಳು ಬುದ್ಧಿಯಿಂದ ಎಷ್ಟು ಆಲೋಚಿಸಿದರೂ ನನಗೆ ಅರ್ಥವಾಗುತ್ತಿಲ್ಲ, ನನ್ನ ಸಂದೇಹವೂ ಹೋಗುತ್ತಿಲ್ಲ. ॥ ೧೮ ॥ ಈ ಲೋಕದಲ್ಲಿ ಶರಣುಹೊಂದುವುದಕ್ಕೆ ಯೋಗ್ಯವಾದ ಏಕೈಕ ವಸ್ತು ಯಾವುದು ? ಎಂಬುದನ್ನು ಕೇಳುವುದಕ್ಕಾಗಿ ನಾನು ಆತ್ಮಜ್ಞಾನಿಗಳಾದ ಮುನಿಗಳಿಗೆಲ್ಲ ಪರಮಗುರುಗಳಾದ ಜ್ಞಾನಕಲೆಯಿಂದ ಅವತಾರಮಾಡಿರುವ ಸಾಕ್ಷಾತ್ ಶ್ರೀಹರಿಯಾಗಿರುವ ಭಗವಾನ್ ಕಪಿಲರಲ್ಲಿಗೆ ಹೋಗುತ್ತಿದ್ದೇನೆ. ॥ ೧೯ ॥ ಲೋಕಗಳ ಸ್ಥಿತಿಯನ್ನು ನೋಡುವುದಕ್ಕೋಸ್ಕರ ತಮ್ಮ ರೂಪವನ್ನು ಮರೆಸಿಕೊಂಡು ಓಡಾಡುತ್ತಿರುವ ಆ ಕಪಿಲಮುನಿಗಳೇ ತಾವಾಗಿದ್ದೀರೋ ? ಗೃಹದಲ್ಲಿ ಆಸಕ್ತನಾಗಿರುವ ಬುದ್ಧಿಹೀನನಿಗೆ ಯೋಗೇಶ್ವರರ ಗತಿಯನ್ನು ಹೇಗೆ ತಾನೇ ತಿಳಿಯಲು ಸಾಧ್ಯವಾದೀತು ? ॥ ೨೦ ॥

"ನನಗೂ ಯುದ್ಧಾದಿ ಕರ್ಮಗಳಲ್ಲಿ ನನಗೆ ಶ್ರಮವಾಗುವುದನ್ನು ನೋಡಿದ್ದೇನೆ. ಅದಕ್ಕಾಗಿ ಭಾರಹೊತ್ತುಕೊಂಡು ಮಾರ್ಗದಲ್ಲಿ ನಡೆಯುವುದರಿಂದ ನಿಮಗೂ ಕೂಡ ಅವಶ್ಯವಾಗಿ ಶ್ರಮವಾಗಿರಬಹುದೆಂದು ತಿಳಿದೆ. ನನಗಾದರೋ ವ್ಯವಹಾರ ಮಾರ್ಗವೇ ಸತ್ಯವೆಂದು ತಿಳಿಯುತ್ತದೆ. ಏಕೆಂದರೆ ಮಿಥ್ಯವಾದ ಗಡಿಗೆಯಿಂದ ನೀರು ತರುವುದು ಮುಂತಾದ ಕಾರ್ಯಗಳು ಆಗುವುದಿಲ್ಲ. ॥ ೨೧ ॥ (ದೇಹಾದಿ ಧರ್ಮಗಳು ಆತ್ಮನ ಮೇಲೆ ಯಾವ ಪ್ರಭಾವವನ್ನೂ ಉಂಟು ಮಾಡುವುದಿಲ್ಲ ಎಂಬ ಮಾತೂ ಇಲ್ಲ.) ಒಲೆಯ ಮೇಲಿಟ್ಟ ನೀರುತುಂಬಿದ ಪಾತ್ರೆಯು ಬೆಂಕಿಯಿಂದ ಕಾದಾಗ ಆ ನೀರು ಕುದಿಯತೊಡಗುತ್ತದೆ ಮತ್ತು ಅದರಲ್ಲಿ ಹಾಕಿದ ಅಕ್ಕಿಯ ಒಳಭಾಗವೂ ಬೆಂದುಹೋಗುತ್ತದೆ. ಹೀಗೆಯೇ ತನ್ನ ಉಪಾಧಿಗಳನ್ನು ಅನುವರ್ತಿಸುವ ಕಾರಣದಿಂದ ದೇಹ, ಇಂದ್ರಿಯಗಳು, ಪ್ರಾಣ ಮತ್ತು ಮನಸ್ಸು ಇವುಗಳ ಸನ್ನಿಧಿಯಿಂದ ಆತ್ಮನಿಗೂ ಕೂಡ ಅವುಗಳ ಧರ್ಮಗಳಾದ ಶ್ರಮಾದಿಗಳ ಅನುಭವ ಆಗಿಯೇ ಆಗುವುದು. ॥ ೨೨ ॥ ರಾಜನು ಚಿತ್ತ್ವಯ ರೂಪದಲ್ಲಿ ಅಪರಾಧಿಗಳಿಗೆ ದಂಡಾದಿವಿಧಿಗಳನ್ನು ವಿಧಿಸುವುದು ವ್ಯರ್ಥವೆಂದು ತಾವು ಹೇಳಿದಿರಿ. ಆದರೆ ರಾಜನಾದರೋ ಪ್ರಜೆಯ ಶಾಸನ ಮತ್ತು ಪಾಲನೆ ಮಾಡಲಿಕ್ಕಾಗಿ ನಿಯುಕ್ತನಾದ ಅವರ ದಾಸನೇ ಆಗಿದ್ದಾನೆ. ಅವನು ಉನ್ಮತ್ತರಿಗೆ ದಂಡವಿಧಿಸುವುದು ಹಿಟ್ಟನ್ನು ಪುನಃ ಬೀಸುವಂತೆ ವ್ಯರ್ಥವಾಗಲಾರದು. ಏಕೆಂದರೆ, ತನ್ನ ಧರ್ಮವನ್ನು ಪಾಲಿಸುವುದು ಭಗವಂತನ ಸೇವೆಯೇ ಆಗಿದೆ. ಅದನ್ನು ಆಚರಿಸುವವನು ತನ್ನ ಸಮಸ್ತ ಪಾಪರಾಶಿಯನ್ನು ನಾಶಮಾಡಿಬಿಡುತ್ತಾನೆ. ॥ ೨೩ ॥

ತನ್ಮೇ ಭವಾನ್ನರದೇವಾಭಿಮಾನ-
ಮದೇನ ತುಚ್ಛೀಕೃತಸತ್ತಮಸ್ಯ ।
ಕೃಷೀಷ್ಟ ಮೈತ್ರೀದೃಶಮಾರ್ತಬಂಧೋ
ಯಥಾ ತರೇ ಸದವಧ್ಯಾನಮಂಹಃ ॥ ೨೪ ॥

ನ ವಿಕ್ರಿಯಾ ವಿಶ್ವಸುಹೃತ್ಸಖಸ್ಯ
ಸಾಮ್ಯೇನ ವೀತಾಭಿಮತೇಸ್ತವಾಪಿ ।
ಮಹದ್ವಿಮಾನಾತ್ಸ್ವಕೃತಾದ್ಧಿ ಮಾದೃಙ್
ನಂಕ್ಷ್ಯತ್ಯದೂರಾದಪಿ ಶೂಲಪಾಣಿಃ ॥ ೨೫ ॥

ದೀನಬಂಧುಗಳೇ! ರಾಜನೆಂಬ ಅಭಿಮಾನದಿಂದ ಉನ್ಮತ್ತನಾಗಿ ನಾನು ನಿಮ್ಮಂತಹ ಪರಮ ಸಾಧುಗಳ ತಿರಸ್ಕಾರ ಮಾಡಿದೆ. ಈಗ ಇಂತಹ ಸಾಧುಗಳ ಅವಜ್ಞೆಯಂತಹ ಅಪರಾಧದಿಂದ ನಾನು ಮುಕ್ತನಾಗುವಂತೆ ಕೃಪೆದೋರಿರಿ. ॥ ೨೪ ॥ ನೀವು ದೇಹಾಭಿಮಾನ ಶೂನ್ಯರೂ, ವಿಶ್ವಬಂಧುಗಳೂ, ಶ್ರೀಹರಿಯ ಅನನ್ಯ ಭಕ್ತರೂ ಆಗಿರುವಿರಿ. ಇದಕ್ಕಾಗಿ ಎಲ್ಲದರಲ್ಲಿ ಸಮಾನದೃಷ್ಟಿ ಇರುವುದರಿಂದ ಈ ಮಾನಾಪಮಾನದಿಂದಾಗಿ ನಿಮ್ಮಲ್ಲಿ ಯಾವುದೇ ವಿಕಾರ ಉಂಟಾಗಲಾರದು. ಆದರೂ ಓರ್ವ ಮಹಾಪುರುಷರ ಅಪಮಾನಮಾಡುವುದರಿಂದ ನನ್ನಂಥವನು ಸಾಕ್ಷಾತ್ ತ್ರಿಶೂಲಪಾಣಿಯಾದ ಮಹಾದೇವನಂತೆ ಪ್ರಭಾಶಾಲಿಯಾಗಿದ್ದರೂ ತನ್ನ ಅಪರಾಧದಿಂದ ಖಂಡಿತವಾಗಿ ಕೆಲವೇ ದಿನಗಳಲ್ಲಿ ನಾಶವಾಗಿ ಹೋಗುವನು. ॥ ೨೫ ॥

ಹತ್ತನೆಯ ಅಧ್ಯಾಯವು ಮುಗಿಯಿತು. ॥ ೧೦ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಪಂಚಮಸ್ಕಂಧೇ ದಶಮೋಽಧ್ಯಾಯಃ ॥ ೧೦ ॥

ಹನ್ನೊಂದನೆಯ ಅಧ್ಯಾಯ

ರಹೂಗಣರಾಜನಿಗೆ ಭರತಮುನಿಯ ಉಪದೇಶ

ಬ್ರಾಹ್ಮಣ ಉವಾಚ

ಅಕೋವಿದಃ ಕೋವಿದವಾದವಾದಾನ್
ವದಸ್ಯಥೋ ನಾತಿವಿದಾಂ ವರಿಷ್ಠಃ ।
ನ ಸೂರಯೋ ಹಿ ವ್ಯವಹಾರಮೇನಂ
ತತ್ತ್ವಾವಮರ್ಶೇನ ಸಹಾಮನಂತಿ ॥ ೧ ॥

ತಥೈವ ರಾಜನ್ನುರುಗಾರ್ಹಮೇಧ-
ವಿತಾನವಿದ್ಯೋರುವಿಜೃಂಭಿತೇಷು ।
ನ ವೇದವಾದೇಷು ಹಿ ತತ್ತ್ವವಾದಃ
ಪ್ರಾಯೇಣ ಶುದ್ಧೋ ನು ಚಕಾಸ್ತಿ ಸಾಧುಃ ॥ ೨ ॥

ನ ತಸ್ಯ ತತ್ತ್ವಗ್ರಹಣಾಯ ಸಾಕ್ಷಾದ್
ವರೀಯಸೀರಪಿ ವಾಚಃ ಸಮಾಸನ್ ।
ಸ್ವಪ್ನೇ ನಿರುಕ್ತ್ಯಾ ಗೃಹಮೇಧಿಸೌಖ್ಯಂ
ನ ಯಸ್ಯ ಹೇಯಾನುಮಿತಂ ಸ್ವಯಂ ಸ್ಯಾತ್ ॥ ೩ ॥

ಯಾವನ್ಮನೋ ರಜಸಾ ಪೂರುಷಸ್ಯ
ಸತ್ತ್ವೇನ ವಾ ತಮಸಾ ವಾನುರುದ್ಧಮ್ ।
ಚೇತೋಭಿರಾಕೂತಿಭಿರಾತನೋತಿ
ನಿರಂಕುಶಂ ಕುಶಲಂ ಚೇತರಂ ವಾ ॥ ೪ ॥

ಜಡಭರತನು ಹೇಳಿದನು – ಎಲೈ ರಾಜನೇ! ನೀನು ಅಜ್ಞಾನಿಯಾಗಿದ್ದರೂ ಪಂಡಿತರಂತೆ ಪ್ರೌಢವಾದ ವಾದ-ವಿವಾದಗಳ ಮಾತನ್ನು ಆಡುತ್ತಿರುವೆ. ಇದರಿಂದ ಶ್ರೇಷ್ಠ ಜ್ಞಾನಿಗಳಲ್ಲಿ ನಿನ್ನನ್ನು ಪರಿಗಣಿಸಲಾಗುವುದಿಲ್ಲ. ತತ್ತ್ವಜ್ಞಾನಿಗಳು ಈ ಅವಿಚಾರಸಿದ್ಧವಾದ ಸ್ವಾಮಿ-ಸೇವಕ ಮುಂತಾದ ವ್ಯವಹಾರಗಳನ್ನು ಪರಮಾರ್ಥದೊಡನೆ ಸೇರಿಸಿ ಹೇಳುವುದಿಲ್ಲ. ॥ ೧ ॥ ರಾಜನೇ! ಗೃಹಸ್ಥಜನರಿಗೆ ಉಚಿತವಾಗಿರುವ ಯಜ್ಞವಿಧಿಯ ವಿಸ್ತಾರದಲ್ಲಿಯೇ ಹೆಚ್ಚಾಗಿ ಆಸಕ್ತವಾಗಿರುವ ವೈದಿಕ ಕರ್ಮಕಾಂಡದ ಬಗೆಗೂ ಇದೇ ಮಾತನ್ನು ಹೇಳಬೇಕಾಗುತ್ತದೆ. ಪರಿಶುದ್ಧವಾದ ತತ್ತ್ವಜ್ಞಾನದ ಅಭಿವ್ಯಕ್ತಿಯು ಸಾಮಾನ್ಯವಾಗಿ ಆ ವೇದವಾದಗಳಲ್ಲಿಯೂ ಪೂರ್ಣವಾಗಿ ಆಗಿಲ್ಲ. ॥ ೨ ॥ ಈ ಗೃಹಸ್ಥ ಜನೋಚಿತ ಯಜ್ಞಾದಿ ಕರ್ಮಗಳಿಂದ ದೊರೆಯುವ ಸ್ವರ್ಗಾದಿ ಸುಖಗಳು ಕನಸಿನಂತೆ ಹೇಯವೆಂದು ಯಾವನಿಗೆ ತಿಳಿಯುವುದಿಲ್ಲವೋ ಅವನಿಗೆ ತತ್ತ್ವಜ್ಞಾನವನ್ನುಂಟು ಮಾಡುವುದಕ್ಕೆ ಶ್ರೇಷ್ಠತಮವಾದ ಉಪನಿಷತ್ತುಗಳೂ ಸಮರ್ಥವಾಗಿಲ್ಲ. ॥ ೩ ॥ ಮನುಷ್ಯನ ಮನಸ್ಸು ಸತ್ತ್ವ, ರಜ, ತಮ ಈ ಗುಣಗಳಿಗೆ ವಶವಾಗಿರುವ ತನಕ ಅದು ನಿರಂಕುಶವಾಗಿ ಅವನ ಜ್ಞಾನೇಂದ್ರಿಯ ಮತ್ತು ಕರ್ಮೇಂದ್ರಿಯಗಳಿಂದ ಶುಭಾಶುಭ ಕರ್ಮಗಳನ್ನು ಮಾಡಿಸುತ್ತಲೇ ಇರುತ್ತದೆ. ॥ ೪ ॥ ಈ ಮನಸ್ಸು ವಾಸನಾಮಯ, ವಿಷಯಾಸಕ್ತ ಗುಣಗಳಿಂದ ಪ್ರೇರಿತವಾಗಿ,

ಸ ವಾಸನಾತ್ಮಾ ವಿಷಯೋಪರಕ್ತೋ
ಗುಣಪ್ರವಾಹೋ ವಿಕೃತಃ ಷೋಡಶಾತ್ಮಾ ।
ಬಿಭ್ರತ್ಪೃಥಙ್ನಾಮಭಿ ರೂಪಭೇದ-
ಮಂತರ್ಬಹಿಷ್ಟ್ವಂ ಚ ಪುರೈಸ್ತನೋತಿ ॥ ೫ ॥

ದುಃಖಂ ಸುಖಂ ವ್ಯತಿರಿಕ್ತಂ ಚ ತೀವ್ರಂ
ಕಾಲೋಪಪನ್ನಂ ಫಲಮಾವ್ಯನಕ್ತಿ ।
ಆಲಿಂಗ್ಯ ಮಾಯಾರಚಿತಾಂತರಾತ್ಮಾ
ಸ್ವದೇಹಿನಂ ಸಂಸೃತಿಚಕ್ರಕೂಟಃ ॥ ೬ ॥

ತಾವಾನಯಂ ವ್ಯವಹಾರಃ ಸದಾವಿಃ
ಕ್ಷೇತ್ರಜ್ಞ ಸಾಕ್ಷ್ಯೋ ಭವತಿ ಸ್ಥೂಲಸೂಕ್ಷ್ಮಃ ।
ತಸ್ಮಾನ್ಮನೋ ಲಿಂಗಮದೋ ವದಂತಿ
ಗುಣಾಗುಣತ್ವಸ್ಯ ಪರಾವರಸ್ಯ ॥ ೭ ॥

ಗುಣಾನುರಕ್ತಂ ವ್ಯಸನಾಯ ಜಂತೋಃ
ಕ್ಷೇಮಾಯ ನೈರ್ಗುಣ್ಯಮಥೋ ಮನಃ ಸ್ಯಾತ್ ।
ಯಥಾ ಪ್ರದೀಪೋ ಘೃತವರ್ತಿಮಶ್ನನ್
ಶಿಖಾಃ ಸಧೂಮಾ ಭಜತಿ ಹ್ಯನ್ಯದಾ ಸ್ವಮ್ ।
ಪದಂ ತಥಾ ಗುಣಕರ್ಮಾನುಬದ್ಧಂ
ವೃತ್ತೀರ್ಮನಃ ಶ್ರಯತೇಽನ್ಯತ್ರ ತತ್ತ್ವಮ್ ॥ ೮ ॥

ಏಕಾದಶಾಸನ್ಮನಸೋ ಹಿ ವೃತ್ತಯ
ಆಕೂತಯಃ ಪಂಚ ಧಿಯೋಽಭಿಮಾನಃ ।
ಮಾತ್ರಾಣಿ ಕರ್ಮಾಣಿ ಪುರಂ ಚ ತಾಸಾಂ
ವದಂತಿ ಹೈಕಾದಶ ವೀರ ಭೂಮೀಃ ॥ ೯ ॥

ಗಂಧಾಕೃತಿಸ್ಪರ್ಶರಸಶ್ರವಾಂಸಿ
ವಿಸರ್ಗರತ್ಯರ್ತ್ಯಭಿಜಲ್ಪಶಿಲ್ಪಾಃ ।
ಏಕಾದಶಂ ಸ್ವೀಕರಣಂ ಮಮೇತಿ
ಶಯ್ಯಾಮಹಂ ದ್ವಾದಶಮೇಕ ಆಹುಃ ॥ ೧೦ ॥

ದ್ರವ್ಯಸ್ವಭಾವಾಶಯಕರ್ಮಕಾಲೈ-
ರೇಕಾದಶಾಮೀ ಮನಸೋ ವಿಕಾರಾಃ ।
ಸಹಸ್ರಶಃ ಶತಶಃ ಕೋಟಿಶಶ್ಚ
ಕ್ಷೇತ್ರಜ್ಞತೋ ನ ಮಿಥೋ ನ ಸ್ವತಃ ಸ್ಯುಃ ॥ ೧೧ ॥

ವಿಕಾರಿ ಮತ್ತು ಭೂತಗಳು ಹಾಗೂ ಇಂದ್ರಿಯರೂಪವಾದ ಹದಿನಾರು ಕಲೆಗಳಲ್ಲಿ ಮುಖ್ಯವಾದುದು. ಇದೇ ಬೇರೆ-ಬೇರೆ ಹೆಸರುಗಳಿಂದ ದೇವತೆಗಳು ಹಾಗೂ ಮನುಷ್ಯರೇ ಮುಂತಾದ ರೂಪವನ್ನು ಧರಿಸಿ ಹೊರಗಿನ-ಒಳಗಿನ ಉಪಾಧಿಗಳ ಭೇದದಿಂದ ಜೀವನಲ್ಲಿ ಉಚ್ಚ-ನೀಚಭಾವಗಳನ್ನು ತೋರ್ಪಡಿಸುತ್ತದೆ. ॥ ೫ ॥ ಈ ಮಾಯಾಮಯ ಮನಸ್ಸು ಸಂಸಾರಚಕ್ರಕ್ಕೆ ಮೂಲವಾದುದು. ಇದೇ ತನ್ನ ದೇಹದ ಅಭಿಮಾನೀ ಜೀವಿಯೊಂದಿಗೆ ಸೇರಿಕೊಂಡು ಆಯಾ ಕಾಲಕ್ಕೆ ಅನುಗುಣವಾಗಿ ಅವಶ್ಯವಾಗಿ ಬರುವ ಸುಖ-ದುಃಖಗಳನ್ನಾಗಲೀ, ಮೋಹವನ್ನಾಗಲೀ ಜೀವನಿಗೆ ಉಂಟು ಮಾಡುವುದು. ॥ ೬ ॥ ಈ ಮನಸ್ಸು ಇರುವ ತನಕ ಜಾಗ್ರತ್ ಮತ್ತು ಸ್ವಪ್ನಾವಸ್ಥೆಯ ವ್ಯವಹಾರಗಳು ಪ್ರಕಾಶಿತವಾಗಿ ಜೀವಿಯು ದೃಶ್ಯನಾಗುತ್ತಾನೆ. ಅದಕ್ಕಾಗಿ ಪಂಡಿತರು ಮನಸ್ಸನ್ನೇ ತ್ರಿಗುಣಮಯ ಅಥವಾ ಸಂಸಾರದ ಮತ್ತು ಗುಣಾತೀತ ಪರಮೋತ್ಕೃಷ್ಟ ಮೋಕ್ಷಪದದ ಕಾರಣವೆಂದು ಹೇಳುತ್ತಾರೆ. ॥ ೭ ॥ ವಿಷಯಾಸಕ್ತ ಮನಸ್ಸೇ ಜೀವಿಯನ್ನು ಸಂಸಾರದ ಸಂಕಟದಲ್ಲಿ ಕೆಡಹುತ್ತದೆ. ವಿಷಯಹೀನವಾದಾಗ ಅದು ಜೀವಿಗೆ ಶಾಂತಿಮಯ ಮೋಕ್ಷಪದವನ್ನು ದೊರಕಿಸಿಕೊಡುತ್ತದೆ. ದೀಪವು ತುಪ್ಪದ ಬತ್ತಿಯಲ್ಲಿ ಹೊತ್ತಿಕೊಂಡು ಉರಿಯುವಾಗ ಹೊಗೆಯಿಂದ ಕೂಡಿದ ಜ್ವಾಲೆಗಳನ್ನು ಉಗುಳುವುದು. ತುಪ್ಪವು ಮುಗಿದಾಗ ಅದು ತನ್ನ ಕಾರಣ ಅಗ್ನಿತತ್ತ್ವದಲ್ಲಿ ಲೀನವಾಗಿ ಹೋಗುತ್ತದೆ. ಹೀಗೆಯೇ ವಿಷಯ ಮತ್ತು ಕರ್ಮಗಳಲ್ಲಿ ಆಸಕ್ತವಾದ ಮನಸ್ಸು ಬಗೆ-ಬಗೆಯ ವೃತ್ತಿಗಳನ್ನು ಆಶ್ರಯಿಸಿ ಇರುತ್ತದೆ ಮತ್ತು ಇವುಗಳಿಂದ ಮುಕ್ತವಾದಾಗ ಅದು ತನ್ನ ತತ್ತ್ವದಲ್ಲಿ ಲೀನವಾಗುತ್ತದೆ. ॥ ೮ ॥

ಎಲೈ ವೀರನೇ! ಐದು ಕರ್ಮೇಂದ್ರಿಯಗಳು, ಐದು ಜ್ಞಾನೇಂದ್ರಿಯಗಳು, ಒಂದು ಅಹಂಕಾರ ಈ ಹನ್ನೊಂದು ಮನಸ್ಸಿನ ವೃತ್ತಿಗಳು. ಐದು ಪ್ರಕಾರದ ಕರ್ಮಗಳು, ಐದು ತನ್ಮಾತ್ರೆಗಳು, ಒಂದು ಶರೀರ ಈ ಹನ್ನೊಂದು ಆ ವೃತ್ತಿಗಳಿಗೆ ಆಧಾರವಾಗಿರುವ ವಿಷಯಗಳೆಂದು ಹೇಳಲಾಗಿದೆ. ॥ ೯ ॥ ಗಂಧ, ಶಬ್ದ, ಸ್ಪರ್ಶ, ರೂಪ, ರಸ, ಗಂಧ – ಈ ಐದು ಜ್ಞಾನೇಂದ್ರಿಯಗಳ ವಿಷಯಗಳು. ಮಲತ್ಯಾಗ, ಸಂಭೋಗ, ನಡಿಗೆ, ಭಾಷಣ, ಕೊಟ್ಟು-ಕೊಳ್ಳುವ ವ್ಯಾಪಾರ ಈ ಐದು ಕರ್ಮೇಂದ್ರಿಯಗಳ ವಿಷಯಗಳು. ಶರೀರವನ್ನು 'ಇದು ನನ್ನದು' ಎಂದು ಸ್ವೀಕರಿಸುವುದು ಅಹಂಕಾರದ ವಿಷಯವಾಗಿದೆ. ಕೆಲವರು ಅಹಂಕಾರವನ್ನು ಮನಸ್ಸಿನ ಹನ್ನೆರಡನೆಯ ವೃತ್ತಿ ಮತ್ತು ಅದರ ಆಶ್ರಯ ಶರೀರವನ್ನು ಹನ್ನೆರಡನೆಯ ವಿಷಯವೆಂದು ತಿಳಿಯುತ್ತಾರೆ. ॥ ೧೦ ॥ ಮನಸ್ಸಿನ ಈ ಹನ್ನೊಂದು ವೃತ್ತಿಗಳೂ ದ್ರವ್ಯ (ವಿಷಯ), ಸ್ವಭಾವ, ಆಶಯ (ಸಂಸ್ಕಾರ), ಕರ್ಮ ಮತ್ತು ಕಾಲದ ಮೂಲಕ ನೂರಾರು, ಸಾವಿರಾರು, ಕೋಟ್ಯಂತರ ಭೇದಗಳಾಗಿ ಪರಿಣಾಮ ಹೊಂದುತ್ತವೆ. ಆದರೆ ಅವುಗಳ ಇರುವಿಕೆಯು ಕ್ಷೇತ್ರಜ್ಞನಾದ ಆತ್ಮನ ಇರುವಿಕೆಯಿಂದಲೇ ಇವೆ. ಸ್ವತಃ ಅಥವಾ ಪರಸ್ಪರ ಸೇರುವಿಕೆಯಿಂದಲ್ಲ. ॥ ೧೧ ॥

ಕ್ಷೇತ್ರಜ್ಞ ಏತಾ ಮನಸೋ ವಿಭೂತೀ-
ರ್ಜೀವಸ್ಯ ಮಾಯಾರಚಿತಸ್ಯ ನಿತ್ಯಾಃ ।
ಆವಿರ್ಹಿತಾಃ ಕ್ವಾಪಿ ತಿರೋಹಿತಾಶ್ಚ
ಶುದ್ಧೋ ವಿಚಷ್ಟೇ ಹ್ಯವಿಶುದ್ಧಕರ್ತುಃ ॥ ೧೨ ॥

ಕ್ಷೇತ್ರಜ್ಞ ಆತ್ಮಾ ಪುರುಷಃ ಪುರಾಣಃ
ಸಾಕ್ಷಾತ್ಸ್ವಯಂಜ್ಯೋತಿರಜಃ ಪರೇಶಃ ।
ನಾರಾಯಣೋ ಭಗವಾನ್ವಾಸುದೇವಃ
ಸ್ವಮಾಯಯಾಽಽತ್ಮನ್ಯವಧೀಯಮಾನಃ ॥ ೧೩ ॥

ಯಥಾನಿಲಃ ಸ್ಥಾವರಜಂಗಮಾನಾ-
ಮಾತ್ಮಸ್ವರೂಪೇಣ ನಿವಿಷ್ಟ ಈಶೇತ್ ।
ಏವಂ ಪರೋ ಭಗವಾನ್ವಾಸುದೇವಃ
ಕ್ಷೇತ್ರಜ್ಞ ಆತ್ಮೇದಮನುಪ್ರವಿಷ್ಟಃ ॥ ೧೪ ॥

ನ ಯಾವದೇತಾಂ ತನುಭೃನ್ನರೇಂದ್ರ
ವಿಧೂಯ ಮಾಯಾಂ ವಯುನೋದಯೇನ ।
ವಿಮುಕ್ತಸಂಗೋ ಜಿತಷಟ್ಸಪತ್ನೋ
ವೇದಾತ್ಮತತ್ತ್ವಂ ಭ್ರಮತೀಹ ತಾವತ್ ॥ ೧೫ ॥

ನ ಯಾವದೇತನ್ಮನ ಆತ್ಮಲಿಂಗಂ
ಸಂಸಾರತಾಪಾವಪನಂ ಜನಸ್ಯ ।
ಯಚ್ಛೋಕಮೋಹಾಮಯರಾಗಲೋಭ-
ವೈರಾನುಬಂಧಂ ಮಮತಾಂ ವಿಧತ್ತೇ ॥ ೧೬ ॥

ಭ್ರಾತೃವ್ಯಮೇನಂ ತದದಭ್ರವೀರ್ಯ-
ಮುಪೇಕ್ಷಯಾಧ್ಯೇಧಿತಮಪ್ರಮತ್ತಃ ।
ಗುರೋರ್ಹರೇಶ್ಚರಣೋಪಾಸನಾಸ್ತ್ರೋ
ಜಹಿ ವ್ಯಲೀಕಂ ಸ್ವಯಮಾತ್ಮಮೋಷಮ್ ॥ ೧೭ ॥

ಹೀಗಿದ್ದರೂ ಮನಸ್ಸಿನೊಂದಿಗೆ ಕ್ಷೇತ್ರಜ್ಞನಿಗೆ ಯಾವ ಸಂಬಂಧವೂ ಇಲ್ಲ. ಇದಾದರೋ ಜೀವಿಯದೇ ಮಾಯಾನಿರ್ಮಿತ ಉಪಾಧಿಯಾಗಿದೆ. ಇದು ಪ್ರಾಯಶಃ ಸಂಸಾರಬಂಧನದಲ್ಲಿ ಕೆಡಹುವ ಅಶುದ್ಧ ಕರ್ಮಗಳಲ್ಲೇ ಪ್ರವೃತ್ತವಾಗಿರುತ್ತದೆ. ಮೇಲೆ ಹೇಳಿದ ಇವುಗಳ ವೃತ್ತಿಗಳು ಪ್ರವಾಹರೂಪದಿಂದ ನಿತ್ಯವಾಗಿಯೇ ಇರುತ್ತವೆ. ಜಾಗ್ರತ್ ಮತ್ತು ಸ್ವಪ್ನದ ಸಮಯದಲ್ಲಿ ಅವು ಪ್ರಕಟಗೊಳ್ಳುತ್ತವೆ ಮತ್ತು ಸುಷುಪ್ತಿಯಲ್ಲಿ ಅಡಗಿರುತ್ತವೆ. ಇವೆರಡೂ ಅವಸ್ಥೆಗಳಲ್ಲಿ ವಿಶುದ್ಧನೂ, ಚಿನ್ಮಾತ್ರನೂ ಆದ ಕ್ಷೇತ್ರಜ್ಞನು ಮನಸ್ಸಿನ ಈ ವೃತ್ತಿಗಳನ್ನು ಸಾಕ್ಷಿರೂಪದಿಂದ ನೋಡುತ್ತಾನೆ. ॥ ೧೨ ॥

ಈ ಕ್ಷೇತ್ರಜ್ಞ ಪರಮಾತ್ಮನು ಸರ್ವವ್ಯಾಪಕನೂ, ಜಗತ್ತಿನ ಮೂಲ ಕಾರಣನೂ, ಪರಿಪೂರ್ಣನೂ, ಅಪರೋಕ್ಷನೂ, ಸ್ವಯಂ ಪ್ರಕಾಶನೂ, ಜನ್ಮರಹಿತನೂ, ಬ್ರಹ್ಮಾದಿಗಳಿಗೂ ನಿಯಾಮಕನೂ ಮತ್ತು ತನ್ನ ಅಧೀನದಲ್ಲಿರುವ ಮಾಯೆಯ ಮೂಲಕ ಎಲ್ಲರ ಅಂತಃಕರಣದಲ್ಲಿ ಇದ್ದು ಜೀವರನ್ನು ಪ್ರೇರಿತಗೊಳಿಸುವ ಸಮಸ್ತ ಪ್ರಾಣಿಗಳ ಆಶ್ರಯಸ್ವರೂಪನೂ ಆದ ಭಗವಾನ್ ವಾಸುದೇವನೇ ಆಗಿದ್ದಾನೆ. ॥ ೧೩ ॥ ವಾಯುವು ಸಮಸ್ತ ಸ್ಥಾವರ-ಜಂಗಮ ಪ್ರಾಣಿಗಳಲ್ಲಿ ಪ್ರಾಣರೂಪದಿಂದ ಸೇರಿಕೊಂಡು ಅವುಗಳನ್ನು ಪ್ರೇರೇಪಿಸುವಂತೆಯೇ ಆ ಪರಮೇಶ್ವರ ಭಗವಾನ್ ವಾಸುದೇವನು ಸರ್ವಸಾಕ್ಷಿ ಆತ್ಮಸ್ವರೂಪದಿಂದ ಈ ಸಮಸ್ತ ಪ್ರಪಂಚದಲ್ಲಿ ಓತಪ್ರೋತನಾಗಿದ್ದಾನೆ. ॥ ೧೪ ॥ ರಾಜನೇ! ಮನುಷ್ಯನು ಜ್ಞಾನೋದಯದ ಮೂಲಕ ಈ ಮಾಯೆಯನ್ನು ತಿರಸ್ಕರಿಸಿ, ಎಲ್ಲದರ ಆಸಕ್ತಿಯನ್ನು ಬಿಟ್ಟು, ಕಾಮ-ಕ್ರೋಧಾದಿ ಆರು ಶತ್ರುಗಳನ್ನು ಗೆದ್ದುಕೊಂಡು ಆತ್ಮತತ್ತ್ವವನ್ನು ತಿಳಿದುಕೊಳ್ಳುವುದಿಲ್ಲವೋ ಮತ್ತು ಆತ್ಮನ ಉಪಾಧಿರೂಪವಾದ ಮನಸ್ಸನ್ನು ಸಂಸಾರವು ದುಃಖದ ಕ್ಷೇತ್ರವೆಂದು ತಿಳಿಯುವುದಿಲ್ಲವೋ ಅವನು ಈ ಲೋಕದಲ್ಲಿ ಹೀಗೆಯೇ ಅಲೆಯುತ್ತಾ ಇರುತ್ತಾನೆ. ಏಕೆಂದರೆ, ಈ ಚಿತ್ತವೇ ಅವನ ಶೋಕ, ಮೋಹ, ರೋಗ, ರಾಗ, ಲೋಭ ಮತ್ತು ವೈರ ಮುಂತಾದ ಸಂಸ್ಕಾರಗಳು ಹಾಗೂ ಮಮತೆಯನ್ನು ವೃದ್ಧಿಪಡಿಸುತ್ತಾ ಇರುತ್ತದೆ. ॥ ೧೫-೧೬ ॥ ಈ ಮನಸ್ಸೇ ನಿನ್ನ ದೊಡ್ಡ ಬಲಿಷ್ಠವಾದ ಶತ್ರುವಾಗಿದೆ. ನೀನು ಉಪೇಕ್ಷೆ ಮಾಡಿದ್ದರಿಂದ ಇದರ ಶಕ್ತಿಯು ಇನ್ನೂ ಹೆಚ್ಚಿದೆ. ಇದು ಸ್ವಯಂ ಸರ್ವಥಾ ಮಿಥ್ಯೆಯಾಗಿದ್ದರೂ ನಿನ್ನ ಆತ್ಮಸ್ವರೂಪವನ್ನು ಮರೆಮಾಚುತ್ತಿದೆ. ಅದಕ್ಕಾಗಿ ನೀನು ಸಾವಧಾನವಾಗಿದ್ದು ಶ್ರೀಗುರು ಮತ್ತು ಹರಿಯ ಚರಣಗಳ ಉಪಾಸನೆಯೆಂಬ ಶಸ್ತ್ರದಿಂದ ಇದನ್ನು ಕೊಂದುಬಿಡು. ॥ ೧೭ ॥

ಹನ್ನೊಂದನೆಯ ಅಧ್ಯಾಯವು ಮುಗಿಯಿತು. ॥ ೧೧ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಪಂಚಮಸ್ಕಂಧೇ
ಬ್ರಾಹ್ಮಣ - ರಹೂಗಣಸಂವಾದೇ ಏಕಾದಶೋಽಧ್ಯಾಯಃ ॥ ೧೧ ॥

ಹನ್ನೆರಡನೆಯ ಅಧ್ಯಾಯ

ರಹೂಗಣನ ಪ್ರಶ್ನೆ ಮತ್ತು ಭರತಮುನಿಯ ಉತ್ತರ

ರಹೂಗಣ ಉವಾಚ

ನಮೋ ನಮಃ ಕಾರಣವಿಗ್ರಹಾಯ
ಸ್ವರೂಪತುಚ್ಛೀಕೃತವಿಗ್ರಹಾಯ ।
ನಮೋಽವಧೂತ ದ್ವಿಜಬಂಧುಲಿಂಗ-
ನಿಗೂಢನಿತ್ಯಾನುಭವಾಯ ತುಭ್ಯಮ್ ॥ ೧ ॥

ಜ್ವರಾಮಯಾರ್ತಸ್ಯ ಯಥಾಗದಂ ಸತ್
ನಿದಾಘದಗ್ಧಸ್ಯ ಯಥಾ ಹಿಮಾಂಭಃ ।
ಕುದೇಹಮಾನಾಹಿವಿದಷ್ಟದೃಷ್ಟೇಃ
ಬ್ರಹ್ಮನ್ವಚಸ್ತೇಽಮೃತಮೌಷಧಂ ಮೇ ॥ ೨ ॥

ತಸ್ಮಾದ್ಭವಂತಂ ಮಮ ಸಂಶಯಾರ್ಥಂ
ಪ್ರಕ್ಷ್ಯಾಮಿ ಪಶ್ಚಾದಧುನಾ ಸುಬೋಧಮ್ ।
ಅಧ್ಯಾತ್ಮಯೋಗಗ್ರಥಿತಂ ತವೋಕ್ತ-
ಮಾಖ್ಯಾಹಿ ಕೌತೂಹಲಚೇತಸೋ ಮೇ ॥ ೩ ॥

ಯದಾಹ ಯೋಗೇಶ್ವರ ದೃಶ್ಯಮಾನಂ
ಕ್ರಿಯಾಫಲಂ ಸದ್ವ್ಯವಹಾರಮೂಲಮ್ ।
ನ ಹ್ಯಂಜಸಾ ತತ್ತ್ವವಿಮರ್ಶನಾಯ
ಭವಾನಮುಷ್ಮಿನ್ ಭ್ರಮತೇ ಮನೋ ಮೇ ॥ ೪ ॥

ಬ್ರಾಹ್ಮಣ ಉವಾಚ

ಅಯಂ ಜನೋ ನಾಮ ಚಲನ್ಪೃಥಿವ್ಯಾಂ
ಯಃ ಪಾರ್ಥಿವಃ ಪಾರ್ಥಿವ ಕಸ್ಯ ಹೇತೋಃ ।
ತಸ್ಯಾಪಿ ಚಾಂಘ್ರ್ಯೋರಧಿ ಗುಲ್ಫಜಂಘಾ-
ಜಾನೂರುಮಧ್ಯೋರಶಿರೋಧರಾಂಸಾಃ ॥ ೫ ॥

ಅಂಸೇಽಧಿ ದಾರ್ವೀ ಶಿಬಿಕಾ ಚ ಯಸ್ಯಾಂ
ಸೌವೀರರಾಜೇತ್ಯಪದೇಶ ಆಸ್ತೇ ।
ಯಸ್ಮಿನ್ ಭವಾನ್ರೂಢನಿಜಾಭಿಮಾನೋ
ರಾಜಾಸ್ಮಿ ಸಿಂಧುಷ್ವಿತಿ ದುರ್ಮದಾಂಧಃ ॥ ೬ ॥

ರಹೂಗಣರಾಜನು ಹೇಳಿದನು – ಪೂಜ್ಯರೇ! ನಾನು ನಿಮಗೆ ನಮಸ್ಕಾರ ಮಾಡುತ್ತೇನೆ. ತಾವು ಜಗತ್ತಿನ ಉದ್ಧಾರಕ್ಕಾಗಿಯೇ ಈ ದೇಹವನ್ನು ಧರಿಸಿರುವಿರಿ. ಯೋಗೀಶ್ವರರೇ! ತಾವು ಪರಮಾನಂದಮಯ ನಿಜಸ್ವರೂಪವನ್ನು ಅನುಭವಿಸುತ್ತಿದ್ದರೂ, ಅದನ್ನು ಮರೆಮಾಚಿ ಜನಸಾಮಾನ್ಯರ ದೃಷ್ಟಿಯಲ್ಲಿ ಓರ್ವ ಜಡ ಬ್ರಾಹ್ಮಣನಂತೆ ಕಾಣಿಸಿಕೊಂಡಿರುವ ಅವಧೂತರಾದ ನಿಮಗೆ ಮತ್ತೆ-ಮತ್ತೆ ನಮಸ್ಕಾರವು. ॥ ೧ ॥ ಬ್ರಾಹ್ಮಣಶ್ರೇಷ್ಠರೇ! ಜ್ವರದಿಂದ ಪೀಡಿತನಾದ ರೋಗಿಗೆ ದಿವ್ಯವಾದ ಔಷಧಿಯೂ, ಬಿಸಿಲಿನ ಬೇಗೆಯಿಂದ ಬೆಂದವನಿಗೆ ಶೀತಲ ಜಲವೂ ಅಮೃತತುಲ್ಯವಾಗಿರುವಂತೆಯೇ – ದೇಹಾಭಿಮಾನವೆಂಬ ವಿಷಸರ್ಪದಿಂದ ಕಚ್ಚಲ್ಪಟ್ಟು ವಿವೇಕದೃಷ್ಟಿಯನ್ನು ಕಳಕೊಂಡ ನನಗೆ ನಿಮ್ಮ ಮಾತುಗಳು ಅಮೃತಮಯ ಔಷಧದಂತೆ ಇವೆ. ॥ ೨ ॥ ಭೂಸುರರೇ! ಅಧ್ಯಾತ್ಮರಹಸ್ಯದ ಬಗ್ಗೆ ನನಗೆ ಉಂಟಾದ ಸಂಶಯಗಳನ್ನು ಆಮೇಲೆ ಅರಿಕೆಮಾಡಿಕೊಳ್ಳುವೆನು. ಮೊದಲಿಗೆ ಈಗ ನೀವು ನುಡಿದ ಅಧ್ಯಾತ್ಮಯೋಗಮಯ ಉಪದೇಶವನ್ನು ಅರ್ಥಮಾಡಿಕೊಳ್ಳುವುದು ನನಗೆ ಕಷ್ಟವಾಗಿದೆ. ಅದನ್ನು ಸರಳವಾಗಿ ತಿಳಿಸಿರಿ. ಇದನ್ನು ತಿಳಿಯಬೇಕೆಂಬ ಉತ್ಕಂಠೆ ನನಗೆ ಇದೆ. ॥ ೩ ॥ ಯೋಗೇಶ್ವರರೇ! 'ಭಾರವನ್ನು ಎತ್ತುವ ಕ್ರಿಯೆಯು, ಅದರಿಂದ ಉಂಟಾಗುವ ಶ್ರಮರೂಪೀ ಫಲವು ಇವೆರಡೂ ಪ್ರತ್ಯಕ್ಷವಾಗಿದ್ದರೂ ಕೇವಲ ವ್ಯವಹಾರಕ್ಕಾಗಿಯೇ ಇದೆ. ವಾಸ್ತವವಾಗಿ ಸತ್ಯವಾಗಿಲ್ಲ. ತತ್ತ್ವವಿಚಾರವನ್ನು ಮಾಡಿದಾಗ ಇವು ನಿಲ್ಲುವುದಿಲ್ಲ' – ಎಂದು ನೀವು ಹೇಳಿದಿರಲ್ಲ, ಈ ವಿಷಯದಲ್ಲಿ ನನ್ನ ಬುದ್ಧಿಯು ಭ್ರಮಿಸುತ್ತಿದೆ. ಇದರ ಮರ್ಮವು ನನ್ನ ಅರಿವಿಗೆ ಬರುತ್ತಿಲ್ಲ. ನಿಮ್ಮ ಆಶಯವನ್ನು ವಿವರಿಸುವವರಾಗಿರಿ. ॥ ೪ ॥

ಜಡಭರತನೆಂದನು – ಎಲೈ ಪೃಥಿವೀಪತೇ! ಈ ದೇಹವು ಪೃಥಿವಿಯ ವಿಕಾರವಾಗಿದೆ. ಕಲ್ಲು-ಮಣ್ಣುಗಳಿಗೂ ಇದಕ್ಕೂ ಯಾವ ಭೇದವಿದೆ? ಯಾವುದೋ ಕಾರಣದಿಂದ ಈ ವಿಕಾರವು ಭೂಮಿಯಲ್ಲಿ ನಡೆಯತೊಡಗಿದಾಗ ಭಾರಹೊರುವುದು ಮುಂತಾದ ಹೆಸರುಗಳು ಉಂಟಾಗುತ್ತವೆ. ಇದಕ್ಕೆ ಎರಡು ಕಾಲುಗಳಿವೆ. ಕ್ರಮವಾಗಿ ಮೇಲಕ್ಕೆ ಹಿಮ್ಮಡಿಗಳು, ಮೀಗಾಲು, ಮಂಡಿಗಳು, ತೊಡೆಗಳು, ಸೊಂಟವೂ, ಎದೆಯೂ, ಕುತ್ತಿಗೆಯೂ, ಭುಜಗಳೂ ಮುಂತಾದ ಅವಯವಗಳಿವೆ. ॥ ೫ ॥ ಆ ಹೆಗಲ ಮೇಲೆ ಮರದ ಪಲ್ಲಕ್ಕಿ ಇಡಲ್ಪಟ್ಟಿದೆ. ಅದರಲ್ಲಿಯೂ ಸೌವೀರರಾಜನೆಂಬ ಒಂದು ಪಾರ್ಥಿವ ವಿಕಾರ ಕುಳಿತಿದೆ. ಅದರಲ್ಲಿ ಆತ್ಮಬುದ್ಧಿಯನ್ನು ಆರೋಪಗೊಳಿಸಿದ್ದರಿಂದ ನೀನು – 'ನಾನು ಸಿಂಧುದೇಶದ ರಾಜನಾಗಿದ್ದೇನೆ' ಎಂಬ ಪ್ರಬಲ ಮದದಿಂದ ಕುರುಡನಾಗಿದ್ದೀಯೆ. ॥ ೬ ॥ ಆದರೆ ಇದರಿಂದ ನಿನ್ನ ಯಾವುದೇ ಶ್ರೇಷ್ಠತೆ ಸಿದ್ಧವಾಗುವುದಿಲ್ಲ. ನಿಜವಾಗಿ ನೀನೊಬ್ಬ ಕಡುಕ್ರೂರಿಯಾಗಿರುವೆ.

ಶೋಚ್ಯಾನಿಮಾಂಸ್ತ್ವಮಧಿಕಷ್ಟದೀನಾನ್
ವಿಷ್ಟ್ಯಾ ನಿಗೃಹ್ಣನ್ನಿರನುಗ್ರಹೋಽಸಿ ।
ಜನಸ್ಯ ಗೋಪ್ತಾಸ್ಮಿ ವಿಕತ್ಥಮಾನೋ
ನ ಶೋಭಸೇ ವೃದ್ಧಸಭಾಸು ಧೃಷ್ಟ ॥ ೭ ॥

ಯದಾ ಕ್ಷಿತಾವೇವ ಚರಾಚರಸ್ಯ
ವಿದಾಮ ನಿಷ್ಠಾಂ ಪ್ರಭವಂ ಚ ನಿತ್ಯಮ್ ।
ತನ್ನಾಮತೋಽನ್ಯದ್ ವ್ಯವಹಾರಮೂಲಂ
ನಿರೂಪ್ಯತಾಂ ಸತ್ಕ್ರಿಯಯಾನುಮೇಯಮ್ ॥ ೮ ॥

ಏವಂ ನಿರುಕ್ತಂ ಕ್ಷಿತಿಶಬ್ದವೃತ್ತ-
ಮಸನ್ನಿಧಾನಾತ್ಪರಮಾಣವೋ ಯೇ ।
ಅವಿದ್ಯಯಾ ಮನಸಾ ಕಲ್ಪಿತಾಸ್ತೇ
ಯೇಷಾಂ ಸಮೂಹೇನ ಕೃತೋ ವಿಶೇಷಃ ॥ ೯ ॥

ಏವಂ ಕೃಶಂ ಸ್ಥೂಲಮಣುರ್ಬೃಹದ್ಯದ್
ಅಸಚ್ಚ ಸಜ್ಜೀವಮಜೀವಮನ್ಯತ್ ।
ದ್ರವ್ಯಸ್ವಭಾವಾಶಯಕಾಲಕರ್ಮ-
ನಾಮ್ನಾಜಯಾವೇಹಿ ಕೃತಂ ದ್ವಿತೀಯಮ್ ॥ ೧೦ ॥

ಜ್ಞಾನಂ ವಿಶುದ್ಧಂ ಪರಮಾರ್ಥಮೇಕ-
ಮನಂತರಂ ತ್ವಬಹಿರ್ಬ್ರಹ್ಮ ಸತ್ಯಮ್ ।
ಪ್ರತ್ಯಕ್ ಪ್ರಶಾಂತಂ ಭಗವಚ್ಛಬ್ದಸಂಜ್ಞಂ
ಯದ್ವಾಸುದೇವಂ ಕವಯೋ ವದಂತಿ ॥ ೧೧ ॥

ರಹೂಗಣೈತತ್ತಪಸಾ ನ ಯಾತಿ
ನ ಚೇಜ್ಯಯಾ ನಿರ್ವಪಣಾದ್ ಗೃಹಾದ್ವಾ ।
ನ ಛಂದಸಾ ನೈವ ಜಲಾಗ್ನಿಸೂರ್ಯೈ-
ರ್ವಿನಾ ಮಹತ್ಪಾದರಜೋಽಭಿಷೇಕಮ್ ॥ ೧೨ ॥

ಯತ್ರೋತ್ತಮಶ್ಲೋಕಗುಣಾನುವಾದಃ
ಪ್ರಸ್ತೂಯತೇ ಗ್ರಾಮ್ಯಕಥಾವಿಘಾತಃ ।
ನಿಷೇವ್ಯಮಾಣೋಽನುದಿನಂ ಮುಮುಕ್ಷೋ-
ರ್ಮತಿಂ ಸತೀಂ ಯಚ್ಛತಿ ವಾಸುದೇವೇ ॥ ೧೩ ॥

ಅಹಂ ಪುರಾ ಭರತೋ ನಾಮ ರಾಜಾ
ವಿಮುಕ್ತದೃಷ್ಟಶ್ರುತಸಂಗಬಂಧಃ ।
ಆರಾಧನಂ ಭಗವತ ಈಹಮಾನೋ
ಮೃಗೋಽಭವಂ ಮೃಗಸಂಗಾದ್ಧತಾರ್ಥಃ ॥ ೧೪ ॥

ನೀನು ಈ ಬಡಪಾಯಿ ಬೋಯಿಗಳನ್ನು ಹಿಡಿದುತಂದು ಬಿಟ್ಟಿಯಾಗಿ ಪಲ್ಲಕ್ಕಿಯನ್ನು ಹೊರಿಸುತ್ತಿರುವೆ. ಮತ್ತೆ 'ನಾನು ಪ್ರಜೆಗಳನ್ನು ರಕ್ಷಿಸುವವನು' ಎಂದು ಮಹಾಪುರುಷರ ಸಭೆಯಲ್ಲಿ ಬಡಾಯಿ ಕೊಚ್ಚಿಕೊಂಡಿರುವೆ. ಇದು ನಿನಗೆ ಏನೂ ಶೋಭಿಸುವುದಿಲ್ಲ. ॥ ೭ ॥ ಸಮಸ್ತ ಚರಾಚರ ಪ್ರಾಣಿಗಳು ಯಾವಾಗಲೂ ಪೃಥಿವಿಯಿಂದಲೇ ಉಂಟಾಗಿ, ಪೃಥಿವಿಯಲ್ಲೇ ಲೀನವಾಗಿ ಹೋಗುತ್ತವೆ ಎಂಬುದನ್ನು ನಾವು ನೋಡುತ್ತೇವೆ. ಆದ್ದರಿಂದ ಅವುಗಳ ಕ್ರಿಯಾಭೇದದಿಂದ ಅವಕ್ಕೆ ಬೇರೆ-ಬೇರೆ ಹೆಸರುಗಳು ಉಂಟಾಗಿವೆ. ಇದಲ್ಲದೆ ವ್ಯವಹಾರಕ್ಕೆ ಇನ್ನೇನು ಮೂಲವಿದೆ ಹೇಳು. ॥ ೮ ॥

ಹೀಗೆಯೇ 'ಪೃಥಿವಿ' ಶಬ್ದದ ವ್ಯವಹಾರವೂ ಮಿಥ್ಯೆಯೇ ಆಗಿದೆ, ವಾಸ್ತವಿಕವಾಗಿಲ್ಲ. ಏಕೆಂದರೆ, ಇದೂ ತನ್ನ ಉಪಾದಾನ ಕಾರಣವಾದ ಸೂಕ್ಷ್ಮ ಪರಮಾಣುಗಳಲ್ಲಿ ಲೀನವಾಗಿ ಹೋಗುತ್ತದೆ. ಯಾವುದರ ಸೇರುವಿಕೆಯಿಂದ ಪೃಥಿವೀರೂಪವಾದ ಕಾರ್ಯದ ಸಿದ್ಧಿಯಾಗುತ್ತದೋ ಆ ಪರಮಾಣುಗಳೂ ಅವಿದ್ಯೆಗೆ ವಶವಾದ ಮನಸ್ಸಿನ ಕಲ್ಪನೆಯೇ ಆಗಿದೆ. ನಿಜವಾಗಿ ಅದರ ಅಸ್ತಿತ್ವವೂ ಇಲ್ಲ ॥ ೯ ॥ ಹೀಗೆಯೇ ಇನ್ನೂ ಏನೆಲ್ಲ ದಪ್ಪ-ತೆಳ್ಳಗೆ, ಚಿಕ್ಕದು-ದೊಡ್ಡದು, ಕಾರ್ಯ-ಕಾರಣ ಹಾಗೂ ಚೇತನ-ಅಚೇತನ ಮುಂತಾದ ಗುಣಗಳಿಂದ ಕೂಡಿದ ದ್ವೈತ ಪ್ರಪಂಚವಿದೆಯೋ ಅದನ್ನು ಕೂಡ ದ್ರವ್ಯ, ಸ್ವಭಾವ, ಆಶಯ, ಕಾಲ ಮತ್ತು ಕರ್ಮ ಮುಂತಾದ ಹೆಸರುಗಳುಳ್ಳ ಭಗವಂತನ ಮಾಯೆಯ ಕಾರ್ಯವೇ ಆಗಿದೆ ಎಂದು ತಿಳಿ. ॥ ೧೦ ॥ ವಿಶುದ್ಧವೂ, ಜ್ಞಾನಸ್ವರೂಪವೂ, ಪರಮಾರ್ಥವೂ, ವಿಕಾರ ರಹಿತವೂ, ನಿರಂತರವಾಗಿ ಒಳಗೆ-ಹೊರಗೆ ತುಂಬಿಕೊಂಡಿರುವುದೂ, ಪ್ರತ್ಯಗಾನಂದವೂ ಆದ ಪರಬ್ರಹ್ಮಪರಮಾತ್ಮನೇ ಪರಮ ಸತ್ಯವು. ಅದನ್ನೇ 'ಭಗವಂತ' ಎಂದೂ ವಾಸುದೇವನೆಂದೂ ಜ್ಞಾನಿಗಳು ಹೇಳುತ್ತಾರೆ. ॥ ೧೧ ॥ ರಹೂಗಣನೇ! ಮಹಾಪುರುಷರ ಪಾದಧೂಳಿಯಿಂದ ಅಭಿಷೇಕ ಮಾಡಿಕೊಳ್ಳದಿದ್ದರೆ – ಕೇವಲ ತಪಸ್ಸು, ಯಜ್ಞವೇ ಮುಂತಾದ ವೈದಿಕ ಕರ್ಮಗಳು, ಅನ್ನಾದಿದಾನಗಳು, ಅತಿಥಿಸೇವೆ, ದೀನ ದರಿದ್ರರ ಸೇವೆ ಮುಂತಾದ ಗೃಹಸ್ಥೋಚಿತವಾದ ಧರ್ಮಗಳ ಅನುಷ್ಠಾನದಿಂದಾಗಲೀ, ವೇದಾಧ್ಯಯನದಿಂದಾಗಲೀ ಜಲ, ಅಗ್ನಿ ಅಥವಾ ಸೂರ್ಯರೇ ಮುಂತಾದವರ ಉಪಾಸನೆಯಿಂದಾಗಲೀ, ಯಾವುದೇ ಸಾಧನೆಯಿಂದಾಗಲೀ ಈ ಪರಮಾತ್ಮಜ್ಞಾನವು ಲಭಿಸಲಾರದು. ॥ ೧೨ ॥ ಇದರ ಕಾರಣ – ಮಹಾಪುರುಷರ ಸಮಾಜದಲ್ಲಿ ಸದಾ ಪವಿತ್ರವಾದ ಕೀರ್ತಿಯುಳ್ಳ ಶ್ರೀಹರಿಯ ಗುಣಗಳ ವರ್ಣನೆಯೇ ನಡೆಯುತ್ತದೆ. ಗ್ರಾಮ್ಯಸುಖಗಳ ಸಮಾಚಾರ ಅಲ್ಲಿಗೆ ಸುಳಿಯುವುದೇ ಇಲ್ಲ. ಅಂತಹ ಸಂತರ ಸಂಗದಲ್ಲಿ ಶ್ರೀಭಗವಂತನ ಕಥೆಗಳನ್ನು ನಿತ್ಯವೂ ಸೇವನೆ ಮಾಡುತ್ತಿದ್ದರೆ, ಅದು ಮೋಕ್ಷವನ್ನು ಬಯಸುವ ಮನುಷ್ಯನ ಶುದ್ಧವಾದ ಬುದ್ಧಿಯನ್ನು ಭಗವಾನ್ ವಾಸುದೇವನಲ್ಲಿ ನೆಲೆಗೊಳಿಸುವುದು. ॥ ೧೩ ॥

ಹಿಂದಿನ ಜನ್ಮದಲ್ಲಿ ನಾನು ಭರತನೆಂಬ ರಾಜನಾಗಿದ್ದೆನು. ಐಹಿಕ ಮತ್ತು ಪಾರಲೌಕಿಕ ಎರಡೂ ವಿಧದ ವಿಷಯಗಳಿಂದ ವಿರಕ್ತನಾಗಿ ಭಗವಂತನ ಆರಾಧನೆಯಲ್ಲಿ ತೊಡಗಿದ್ದೆ. ಹೀಗಿದ್ದರೂ ಒಂದು ಮೃಗದಲ್ಲಿ ಆಸಕ್ತನಾದ್ದರಿಂದ ನಾನು ಪರಮಾರ್ಥದಿಂದ ಭ್ರಷ್ಟನಾಗಿ ಮುಂದಿನ ಜನ್ಮದಲ್ಲಿ ಜಿಂಕೆಯಾಗಿ ಹುಟ್ಟಬೇಕಾಯಿತು. ॥ ೧೪ ॥ ಆದರೆ ಭಗವಾನ್ ಶ್ರೀಕೃಷ್ಣನ ಆರಾಧನೆಯ ಪ್ರಭಾವ

ಸಾ ಮಾಂ ಸ್ಮೃತಿರ್ಮೃಗದೇಹೇಽಪಿ ವೀರ
ಕೃಷ್ಣಾರ್ಚನಪ್ರಭವಾ ನೋ ಜಹಾತಿ ।
ಅಥೋ ಅಹಂ ಜನಸಂಗಾದಸಂಗೋ
ವಿಶಂಕಮಾನೋಽವಿವೃತಶ್ಚರಾಮಿ ॥ ೧೫ ॥

ತಸ್ಮಾನ್ನರೋಽಸಂಗ ಸುಸಂಗಜಾತ-
ಜ್ಞಾನಾಸಿನೇಹೈವ ವಿವೃಕ್ಣಮೋಹಃ ।
ಹರಿಂ ತದೀಹಾಕಥನಶ್ರುತಾಭ್ಯಾಂ
ಲಬ್ಧಸ್ಮೃತಿರ್ಯಾತ್ಯತಿಪಾರಮಧ್ವನಃ ॥ ೧೬ ॥

ದಿಂದ ಆ ಜಿಂಕೆಯ ಯೋನಿಯಲ್ಲಿಯೂ ನನ್ನ ಪೂರ್ವಜನ್ಮದ ಸ್ಮೃತಿಯು ಅಳಿಯಲಿಲ್ಲ. ಅದರಿಂದಲೇ ಈಗ ನಾನು ಜನರ ಸಹವಾಸಕ್ಕೆ ಹೆದರಿ ಯಾವಾಗಲೂ ಅಸಂಗಭಾವದಿಂದ ಗುಪ್ತರೂಪದಿಂದಲೇ ಸಂಚರಿಸುತ್ತಿದ್ದೇನೆ. ॥ ೧೫ ॥ ಸಾರಾಂಶ ಇಷ್ಟೇ – ವಿರಕ್ತರಾದ ಮಹಾಪುರುಷರ ಸಂಗದಿಂದ ಉಂಟಾದ ಜ್ಞಾನವೆಂಬ ಖಡ್ಗದಿಂದ ಮನುಷ್ಯನು ಈ ಲೋಕದಲ್ಲಿಯೇ ತನ್ನ ಮೋಹ ಬಂಧನವನ್ನು ಕತ್ತರಿಸಿಹಾಕಿ, ಶ್ರೀಹರಿಯ ಲೀಲಾಕಥೆಗಳ ಶ್ರವಣ, ಕೀರ್ತನ, ಮನನ ಇವುಗಳಿಂದ ಶ್ರೀಭಗವಂತನ ನಿರಂತರ ಸ್ಮೃತಿಯನ್ನು ಪಡೆದು ಸುಲಭವಾಗಿ ಸಂಸಾರಮಾರ್ಗವನ್ನು ದಾಟಿ ಶ್ರೀಭಗವಂತನನ್ನು ಹೊಂದುವನು. ॥ ೧೬ ॥

ಹನ್ನೆರಡನೆಯ ಅಧ್ಯಾಯವು ಮುಗಿಯಿತು. ॥ 12 ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಪಂಚಮಸ್ಕಂಧೇ
ಬ್ರಾಹ್ಮಣ-ರಹೂಗಣಸಂವಾದೇ ದ್ವಾದಶೋಽಧ್ಯಾಯಃ ॥ ೧೨ ॥

ಹದಿಮೂರನೆಯ ಅಧ್ಯಾಯ

ಭರತಮುನಿಯಿಂದ ಭವಾಟವಿಯ ವರ್ಣನೆ – ರಹೂಗಣನ ಸಂಶಯ ಪರಿಹಾರ

ಬ್ರಾಹ್ಮಣ ಉವಾಚ

ದುರತ್ಯಯೇಽಧ್ವನ್ಯಜಯಾ ನಿವೇಶಿತೋ
ರಜಸ್ತಮಃಸತ್ತ್ವವಿಭಕ್ತಕರ್ಮದೃಕ್ ।
ಸ ಏಷ ಸಾರ್ಥೋಽರ್ಥಪರಃ ಪರಿಭ್ರಮನ್
ಭವಾಟವೀಂ ಯಾತಿ ನ ಶರ್ಮ ವಿಂದತಿ ॥ ೧ ॥

ಯಸ್ಯಾಮಿಮೇ ಷಣ್ನರದೇವ ದಸ್ಯವಃ
ಸಾರ್ಥಂ ವಿಲುಂಪಂತಿ ಕುನಾಯಕಂ ಬಲಾತ್ ।
ಗೋಮಾಯವೋ ಯತ್ರ ಹರಂತಿ ಸಾರ್ಥಿಕಂ
ಪ್ರಮತ್ತಮಾವಿಶ್ಯ ಯಥೋರಣಂ ವೃಕಾಃ ॥ ೨ ॥

ಪ್ರಭೂತವೀರುತ್ತೃಣಗುಲ್ಮಗಹ್ವರೇ
ಕಠೋರದಂಶೈರ್ಮಶಕೈರುಪದ್ರುತಃ ।
ಕ್ವಚಿತ್ತು ಗಂಧರ್ವಪುರಂ ಪ್ರಪಶ್ಯತಿ
ಕ್ವಚಿತ್ಕ್ವಚಿಚ್ಚಾಶುರಯೋಲ್ಮುಕಗ್ರಹಮ್ ॥ ೩ ॥

ಜಡ ಭರತನು ಹೇಳುತ್ತಾನೆ – ಎಲೈ ರಾಜೇಂದ್ರನೇ! ಈ ಜೀವಸಮುದಾಯವು ಸುಖರೂಪವಾದ ಧನದಲ್ಲಿ ಆಸಕ್ತವಾಗಿ ದೇಶ-ದೇಶಾಂತರದಲ್ಲಿ ಸುತ್ತಾಡಿ ವ್ಯಾಪಾರ ಮಾಡುವಂತಹ ವ್ಯಾಪಾರಿಗಳ ಗುಂಪಿನಂತೆ ಇದೆ. ಇದನ್ನು ಮಾಯೆಯು ದುಸ್ತರವಾದ ಪ್ರವೃತ್ತಿಮಾರ್ಗದಲ್ಲಿ ತೊಡಗಿಸಿದೆ. ಅದಕ್ಕಾಗಿ ಇದರ ದೃಷ್ಟಿಯು ಸಾತ್ತ್ವಿಕ, ರಾಜಸ, ತಾಮಸ ಎಂಬ ಭೇದದಿಂದ ನಾನಾ ವಿಧದ ಕರ್ಮಗಳ ಕಡೆಗೆ ಹೋಗುತ್ತಿರುತ್ತದೆ. ಕರ್ಮಗಳಲ್ಲಿ ಅಲೆಯುತ್ತಾ-ಅಲೆಯುತ್ತಾ ಈ ಸಂಸಾರರೂಪವಾದ ಗೊಂಡಾರಣ್ಯಕ್ಕೆ ತಲುಪುತ್ತದೆ. ಅಲ್ಲಿ ಅದಕ್ಕೆ ಸ್ವಲ್ಪವೂ ನೆಮ್ಮದಿಯು ಸಿಗುವುದಿಲ್ಲ. ॥ ೧ ॥ ಮಹಾರಾಜನೇ! ಆ ಅರಣ್ಯದಲ್ಲಿ ಆರು ಕಳ್ಳರಿದ್ದಾರೆ. ಈ ವ್ಯಾಪಾರಿಗಳ ತಂಡದ ನಾಯಕನು ಅತಿದುಷ್ಟನಾಗಿರುವನು. ಅವನ ನೇತೃತ್ವದಲ್ಲಿ ಇವನು ಅಲ್ಲಿಗೆ ತಲುಪಿದಾಗ ಈ ದರೋಡೆಕೋರರು ಬಲಾತ್ಕಾರದಿಂದ ಇವನ ಎಲ್ಲ ಸಂಪತ್ತನ್ನು ಲೂಟಿಮಾಡುತ್ತಾರೆ. ತೋಳಗಳು ಕುರಿಯ ಮಂದೆಯಲ್ಲಿ ನುಗ್ಗಿ ಅವನ್ನು ಎಳೆದುಕೊಂಡು ಹೋಗುವಂತೆ, ಅವುಗಳ ಜೊತೆಯಲ್ಲಿರುವ ನರಿಗಳು ಇವನು ಅಸಾವಧಾನನೆಂದರಿತು ಇವನ ಧನವನ್ನು ಅತ್ತ-ಇತ್ತ ಸೆಳೆದಾಡುತ್ತವೆ. ॥ ೨ ॥ ಆ ಕಾಡು ಬಹಳಷ್ಟು ಲತೆ, ಹುಲ್ಲು, ಪೊದೆಗಳಿಂದ ನಿಬಿಡವಾಗಿದ್ದು ತುಂಬಾ ದುರ್ಗಮವಾಗಿದೆ. ಅದರಲ್ಲಿ ಕ್ರೂರವಾದ ಕಾಡುನೊಣ, ಕಾಡುಸೊಳ್ಳೆಗಳು ಇವನನ್ನು ನೆಮ್ಮದಿಯಾಗಿರಲು ಬಿಡುವುದಿಲ್ಲ. ಅಲ್ಲಿ ಇವನಿಗೆ ಕೆಲವೊಮ್ಮೆ ಗಂಧರ್ವನಗರವು ಕಂಡುಬಂದರೆ, ಕೆಲವೊಮ್ಮೆ ಥಳ-ಥಳಿಸುವ ಕೊಳ್ಳಿ-ಪಿಶಾಚಿಗಳೂ ಕಣ್ಮುಂದೆ ಬಂದು ಬಿಡುತ್ತವೆ. ॥ ೩ ॥ ಈ ವ್ಯಾಪಾರಿ ಸಮುದಾಯವು ಈ ಕಾಡಿನಲ್ಲಿ

ನಿವಾಸತೋಯದ್ರವಿಣಾತ್ಮಬುದ್ಧಿ-
ಸ್ತತಸ್ತತೋ ಧಾವತಿ ಭೋ ಅಟವ್ಯಾಮ್ ।
ಕ್ವಚಿಚ್ಚ ವಾತ್ಯೋತ್ಥಿತಪಾಂಸುಧೂಮ್ರಾ
ದಿಶೋ ನ ಜಾನಾತಿ ರಜಸ್ವಲಾಕ್ಷಃ ॥ ೪ ॥

ಅದೃಶ್ಯಝಿಲ್ಲೀಸ್ವನಕರ್ಣಶೂಲ
ಉಲೂಕವಾಗ್ಭಿರ್ವ್ಯಥಿತಾಂತರಾತ್ಮಾ ।
ಅಪುಣ್ಯವೃಕ್ಷಾನ್ ಶ್ರಯತೇ ಕ್ಷುಧಾರ್ದಿತೋ
ಮರೀಚಿತೋಯಾನ್ಯಭಿಧಾವತಿ ಕ್ವಚಿತ್ ॥ ೫ ॥

ಕ್ವಚಿದ್ವಿತೋಯಾಃ ಸರಿತೋಽಭಿಯಾತಿ
ಪರಸ್ಪರಂ ಚಾಲಷತೇ ನಿರಂಧಃ ।
ಆಸಾದ್ಯ ದಾವಂ ಕ್ವಚಿದಗ್ನಿತಪ್ತೋ
ನಿರ್ವಿದ್ಯತೇ ಕ್ವ ಚ ಯಕ್ಷೈರ್ಹೃತಾಸುಃ ॥ ೬ ॥

ಶೂರೈರ್ಹೃತಸ್ವಃ ಕ್ವ ಚ ನಿರ್ವಿಣ್ಣಚೇತಾಃ
ಶೋಚನ್ ವಿಮುಹ್ಯನ್ನುಪಯಾತಿ ಕಶ್ಮಲಮ್ ।
ಕ್ವಚಿಚ್ಚ ಗಂಧರ್ವಪುರಂ ಪ್ರವಿಷ್ಟಃ
ಪ್ರಮೋದತೇ ನಿರ್ವೃತವನ್ಮುಹೂರ್ತಮ್ ॥ ೭ ॥

ಚಲನ್ ಕ್ವಚಿತ್ಕಂಟಕಶರ್ಕರಾಂಘ್ರಿ-
ರ್ನಗಾರುರುಕ್ಷುರ್ವಿಮನಾ ಇವಾಸ್ತೇ ।
ಪದೇ ಪದೇಽಭ್ಯಂತರವಹ್ನಿನಾರ್ದಿತಃ
ಕೌಟುಂಬಿಕಃ ಕ್ರುಧ್ಯತಿ ವೈ ಜನಾಯ ॥ ೮ ॥

ಕ್ವಚಿನ್ನಿಗೀರ್ಣೋಽಜಗರಾಹಿನಾ ಜನೋ
ನಾವೈತಿ ಕಿಂಚಿದ್ವಿಪಿನೇಽಪವಿದ್ಧಃ ।
ದಷ್ಟಃ ಸ್ಮ ಶೇತೇ ಕ್ವ ಚ ದಂದಶೂಕೈ-
ರಂಧೋಽಂಧಕೂಪೇ ಪತಿತಸ್ತಮಿಸ್ರೇ ॥ ೯ ॥

ಕರ್ಹಿ ಸ್ಮ ಚಿತ್ ಕ್ಷುದ್ರರಸಾನ್ವಿಚಿನ್ವಂ-
ಸ್ತನ್ಮಕ್ಷಿಕಾಭಿರ್ವ್ಯಥಿತೋ ವಿಮಾನಃ ।
ತತ್ರಾತಿಕೃಚ್ಛ್ರಾತ್ಪ್ರತಿಲಬ್ಧಮಾನೋ
ಬಲಾದ್ವಿಲುಂಪಂತ್ಯಥ ತಂ ತತೋಽನ್ಯೇ ॥ ೧೦ ॥

ಕ್ವಚಿಚ್ಚ ಶೀತಾತಪವಾತವರ್ಷ-
ಪ್ರತಿಕ್ರಿಯಾಂ ಕರ್ತುಮನೀಶ ಆಸ್ತೇ ।
ಕ್ವಚಿನ್ ಮಿಥೋ ವಿಪಣನ್ಯಚ್ಚ ಕಿಂಚಿದ್
ವಿದ್ವೇಷಮೃಚ್ಛತ್ಯುತ ವಿತ್ತಶಾಠ್ಯಾತ್ ॥ ೧೧ ॥

ವಾಸಸ್ಥಾನ, ನೀರು ಮತ್ತು ಧನಾದಿಗಳಲ್ಲಿ ಆಸಕ್ತನಾಗಿ ಅತ್ತ-ಇತ್ತ ಅಲೆಯುತ್ತಿರುತ್ತದೆ. ಕೆಲವೊಮ್ಮೆ ಬಿರುಗಾಳಿಯಿಂದ ಎದ್ದಿರುವ ಧೂಳಿನಿಂದ ಎಲ್ಲ ದಿಕ್ಕುಗಳು ಮುಚ್ಚಿದಂತೆ ಆಗುತ್ತವೆ. ಮತ್ತು ಇವನ ಕಣ್ಣುಗಳಲ್ಲಿಯೂ ತುಂಬಿಹೋಗುತ್ತದೆ. ಆಗ ಇವನಿಗೆ ದಿಗ್ಭ್ರಮೆಯುಂಟಾಗುತ್ತದೆ. ॥ ೪ ॥ ಕೆಲವೊಮ್ಮೆ ಇವನಿಗೆ ಕಾಣಿಸಿಗದಿರುವ ಝಿಲ್ಲೀಕ್ರಿಮಿಗಳ ಕರ್ಣಕಠೋರವಾದ ಶಬ್ದಗಳು ಕೇಳಿಸುತ್ತಿದ್ದರೆ, ಕೆಲವೊಮ್ಮೆ ಗೂಬೆಗಳ ಕೂಗಿನಿಂದ ಇವನ ಚಿತ್ತವು ದುಃಖಿತವಾಗುತ್ತದೆ. ಕೆಲವೊಮ್ಮೆ ಇವನಿಗೆ ಹಸಿವು ಕಾಡಿದಾಗ ಇವನು ನಿಂದನೀಯ ವೃಕ್ಷಗಳನ್ನು ಆಶ್ರಯಿಸತೊಡಗುವನು. ಕೆಲವೊಮ್ಮೆ ಬಾಯಾರಿಕೆಯಿಂದ ಬಳಲಿದಾಗ ಬಿಸಿಲ್ಗುದುರೆಯ ಕಡೆಗೆ ಓಡತೊಡಗುವನು. ॥ ೫ ॥ ಕೆಲವೊಮ್ಮೆ ನೀರಿಲ್ಲದ ನದಿಗಳ ಕಡೆಗೆ ಹೋಗುತ್ತಾನೆ. ಕೆಲವೊಮ್ಮೆ ಅನ್ನವು ಸಿಗದಿದ್ದಾಗ ಪರಸ್ಪರ ಒಬ್ಬರನ್ನೊಬ್ಬರು ಭೋಜನವನ್ನು ಬಯಸುತ್ತಾರೆ. ಕೆಲವೊಮ್ಮೆ ಕಾಡುಗಿಚ್ಚಿನಲ್ಲಿ ನುಗ್ಗಿ ಬೆಂಕಿಯಿಂದ ಬೆಂದುಹೋಗುತ್ತಾರೆ. ಕೆಲವೊಮ್ಮೆ ಯಕ್ಷರು ಇವನ ಪ್ರಾಣಗಳನ್ನು ಎಳೆದಾಡತೊಡಗಿದಾಗ ಇವನು ದುಃಖಿತನಾಗುವನು. ॥ ೬ ॥ ಕೆಲವೊಮ್ಮೆ ತನ್ನಿಂದ ಬಲಿಷ್ಠರಾದವರು ಇವನ ಧನವನ್ನು ಕಸಿದುಕೊಂಡಾಗ ಇವನು ದುಃಖಿತನಾಗಿ ಶೋಕ ಮತ್ತು ಮೋಹದಿಂದ ಎಚ್ಚರತಪ್ಪುವನು. ಕೆಲವೊಮ್ಮೆ ಗಂಧರ್ವನಗರವನ್ನು ತಲುಪಿ ಒಂದು ಕ್ಷಣವಾದರೂ ಎಲ್ಲ ದುಃಖಗಳನ್ನು ಮರೆತು ಸಂತೋಷಪಡುವನು. ॥ ೭ ॥ ಕೆಲವೊಮ್ಮೆ ಪರ್ವತಗಳ ಮೇಲೆ ಹತ್ತಲು ಬಯಸಿದರೆ ಕಲ್ಲು-ಮುಳ್ಳುಗಳಿಂದ ಕಾಲು ಜರಡಿಯಂತಾಗಿ ಖಿನ್ನನಾಗುವನು. ಕುಟುಂಬವು ದೊಡ್ಡದಾಗಿ ಬೆಳೆದು ಜೀವಿಕೆಯು ನಡೆಯದಿದ್ದಾಗ ಹಸಿವಿನ ಬಾಧೆಯಿಂದ ತನ್ನ ಬಂಧು-ಬಾಂಧವರ ಮೇಲೆ ರೇಗತೊಡಗುತ್ತಾನೆ. ॥ ೮ ॥ ಕೆಲವೊಮ್ಮೆ ಹೆಬ್ಬಾವಿಗೆ ತುತ್ತಾಗಿ ಕಾಡಿನಲ್ಲಿ ಎಸೆದಿರುವ ಹೆಣದಂತೆ ಬಿದ್ದುಕೊಳ್ಳುವನು. ಆಗ ಇವನಿಗೆ ಯಾವ ಎಚ್ಚರವೂ ಇರುವುದಿಲ್ಲ. ಕೆಲವೊಮ್ಮೆ ಬೇರೆ ವಿಷಸರ್ಪದ ಪ್ರಭಾವದಿಂದ ಕುರುಡನಾಗಿ ಯಾವುದೋ ಕತ್ತಲ ಬಾವಿಯಲ್ಲಿ ಬಿದ್ದುಬಿಡುತ್ತಾನೆ ಹಾಗೂ ಘೋರವಾದ ದುಃಖಮಯ ಅಂಧಕಾರದಲ್ಲಿ ಜ್ಞಾನತಪ್ಪಿ ಬಿದ್ದಿರುತ್ತಾನೆ. ॥ ೯ ॥ ಕೆಲವೊಮ್ಮೆ ಜೇನನ್ನು ಹುಡುಕತೊಡಗುವನು. ಆಗ ಜೇನುನೊಣಗಳು ಇವನನ್ನು ಕಚ್ಚಿ ಪೀಡಿಸುವವು ಹಾಗೂ ಇವನ ಅಭಿಮಾನವೆಲ್ಲವೂ ನಾಶವಾಗಿ ಹೋಗುತ್ತದೆ. ಯಾವುದೇ ರೀತಿಯಿಂದ ಅನೇಕ ಕಷ್ಟಗಳನ್ನು ಎದುರಿಸಿ ಜೇನು ಸಿಕ್ಕಿದರೂ ಬಲಾತ್ಕಾರದಿಂದ ಬೇರೆಯವರು ಕಸಿದುಕೊಳ್ಳುವರು. ॥ ೧೦ ॥ ಕೆಲವೊಮ್ಮೆ ಚಳಿ, ಸೆಕೆ, ಚಂಡಮಾರುತ, ಮಳೆ ಇವುಗಳಿಂದ ತನ್ನನ್ನು ಕಾಪಾಡಿಕೊಳ್ಳಲು ಅಸಮರ್ಥನಾಗುತ್ತಾನೆ. ಕೆಲವೊಮ್ಮೆ ತಮ್ಮ-ತಮ್ಮಲ್ಲಿ ಸ್ವಲ್ಪ ವ್ಯಾಪಾರ ಮಾಡುತ್ತಾನೆ. ಧನದ ಲೋಭದಿಂದ ಬೇರೆಯವರಿಗೆ ಮೋಸಮಾಡಿ ಅವರಲ್ಲಿ ವೈರವನ್ನು ಕಟ್ಟಿಕೊಳ್ಳುತ್ತಾನೆ. ॥ ೧೧ ॥ ಕೆಲವೊಮ್ಮೆ ಆ ಸಂಸಾರಾರಣ್ಯದಲ್ಲಿ ಹಣವನ್ನು ಕಳೆದುಕೊಂಡು ಹಾಸಿಗೆ, ಹೊದಿಕೆ, ಆಸನ, ಮನೆ, ವಾಹನ ಯಾವುದೂ ಇಲ್ಲದೆ ಅವುಗಳಿಗಾಗಿ ಇತರರನ್ನು ಬೇಡಬೇಕಾಗುವುದು. ಅವರು ಕೊಡದೆ ಹೋದರೆ ಅವುಗಳನ್ನು

ಕ್ವಚಿತ್ ಕ್ವಚಿತ್ ಕ್ಷೀಣಧನಸ್ತು ತಸ್ಮಿನ್
ಶಯ್ಯಾಸನಸ್ಥಾನವಿಹಾರಹೀನಃ ।
ಯಾಚನ್ ಪರಾದಪ್ರತಿಲಬ್ಧಕಾಮಃ
ಪಾರಕ್ಯದೃಷ್ಟಿರ್ಲಭತೇಽವಮಾನಮ್ ॥ ೧೩ ॥

ಅನ್ಯೋನ್ಯವಿತ್ತವ್ಯತಿಷಂಗವೃದ್ಧ-
ವೈರಾನುಬಂಧೋ ವಿವಹನ್ಮಿಥಶ್ಚ ।
ಅಧ್ವನ್ಯಮುಷ್ಮಿನ್ನುರುಕೃಚ್ಛ್ರವಿತ್ತ-
ಬಾಧೋಪಸರ್ಗೈರ್ವಿಹರನ್ ವಿಪನ್ನಃ ॥ ೧೪ ॥

ತಾಂಸ್ತಾನ್ವಿಪನ್ನಾನ್ ಸ ಹಿ ತತ್ರ ತತ್ರ
ವಿಹಾಯ ಜಾತಂ ಪರಿಗೃಹ್ಯ ಸಾರ್ಥಃ ।
ಆವರ್ತತೇಽದ್ಯಾಪಿ ನ ಕಶ್ಚಿದತ್ರ
ವೀರಾಧ್ವನಃ ಪಾರಮುಪೈತಿ ಯೋಗಮ್ ॥ ೧೫ ॥

ಮನಸ್ವಿನೋ ನಿರ್ಜಿತದಿಗ್ಗಜೇಂದ್ರಾ
ಮಮೇತಿ ಸರ್ವೇ ಭುವಿ ಬದ್ಧವೈರಾಃ ।
ಮೃಧೇ ಶಯೀರನ್ನ ತು ತದ್ ವ್ರಜಂತಿ
ಯನ್ನ್ಯಸ್ತದಂಡೋ ಗತವೈರೋಽಭಿಯಾತಿ ॥ ೧೬ ॥

ಪ್ರಸಜ್ಜತಿ ಕ್ವಾಪಿ ಲತಾಭುಜಾಶ್ರಯ-
ಸ್ತದಾಶ್ರಯಾವ್ಯಕ್ತಪದದ್ವಿಜಸ್ಪೃಹಃ ।
ಕ್ವಚಿತ್ಕದಾಚಿದ್ಧರಿಚಕ್ರತಸ್ತ್ರಸನ್
ಸಖ್ಯಂ ವಿಧತ್ತೇ ಬಕಕಂಕಗೃಧ್ರೈಃ ॥ ೧೭ ॥

ತೈರ್ವಂಚಿತೋ ಹಂಸಕುಲಂ ಸಮಾವಿಶನ್
ನರೋಚಯನ್ ಶೀಲಮುಪೈತಿ ವಾನರಾನ್ ।
ತಜ್ಜಾತಿರಾಸೇನ ಸುನಿರ್ವೃತೇಂದ್ರಿಯಃ
ಪರಸ್ಪರೋದ್ವೀಕ್ಷಣವಿಸ್ಮೃತಾವಧಿಃ ॥ ೧೮ ॥

ದ್ರುಮೇಷು ರಂಸ್ಯನ್ ಸುತದಾರವತ್ಸಲೋ
ವ್ಯವಾಯದೀನೋ ವಿವಶಃ ಸ್ವಬಂಧನೇ ।
ಕ್ವಚಿತ್ಪ್ರಮಾದಾದ್ಗಿರಿಕಂದರೇ ಪತನ್
ವಲ್ಲೀಂ ಗೃಹೀತ್ವಾ ಗಜಭೀತ ಆಸ್ಥಿತಃ ॥ ೧೯ ॥

ಅತಃ ಕಥಂಚಿತ್ಸ ವಿಮುಕ್ತ ಆಪದಃ
ಪುನಶ್ಚ ಸಾರ್ಥಂ ಪ್ರವಿಶತ್ಯರಿಂದಮ ।
ಅಧ್ವನ್ಯಮುಷ್ಮಿನ್ನಜಯಾ ನಿವೇಶಿತೋ
ಭ್ರಮಂಜನೋಽದ್ಯಾಪಿ ನ ವೇದ ಕಶ್ಚನ ॥ ೨೦ ॥

ಹೇಗಾದರೂ ಕಸಿದುಕೊಳ್ಳುವ ಕಳ್ಳದೃಷ್ಟಿಯನ್ನಿಟ್ಟು ತಿರಸ್ಕಾರಕ್ಕೆ ಒಳಗಾಗಬೇಕಾಗುತ್ತದೆ. ॥ ೧೩ ॥

ಹೀಗೆ ವ್ಯಾವಹಾರಿಕ ಸಂಬಂಧದಿಂದ ಪರಸ್ಪರ ದ್ವೇಷಭಾವವನ್ನು ಬೆಳೆಸಿದ್ದರೂ ಆ ವಣಿಕ್ ಸಮೂಹವು ತಮ್ಮ-ತಮ್ಮಲ್ಲೇ ವಿವಾಹಾದಿ ಸಂಬಂಧಗಳನ್ನು ಸ್ಥಾಪಿಸುತ್ತದೆ. ಮತ್ತೆ ಈ ಮಾರ್ಗದಲ್ಲಿ ಬಗೆ-ಬಗೆಯ ಕಷ್ಟ, ಧನಕ್ಷಯ ಮುಂತಾದ ಕಷ್ಟಗಳನ್ನು ಅನುಭವಿಸುತ್ತಾ ಹೆಣವಂತೆ ಬದುಕಬೇಕಾಗುತ್ತದೆ. ॥ ೧೪ ॥ ಜೊತೆಯವರಲ್ಲಿ ಸತ್ತು ಹೋದವರನ್ನು ಅಲ್ಲಲ್ಲೇ ಬಿಟ್ಟು, ಹೊಸದಾಗಿ ಹುಟ್ಟಿದವರೊಂದಿಗೆ ಆ ವ್ಯಾಪಾರಿ ಸಮೂಹವು ಪದೇ-ಪದೇ ಮುಂದೆ ಹೋಗುತ್ತಾ ಇರುತ್ತದೆ. ಎಲೈ ವೀರನೇ! ಅವರಲ್ಲಿ ಯಾವ ಪ್ರಾಣಿಯೂ ಇಂದಿನವರೆಗೆ ಮರಳಲಿಲ್ಲ. ಯಾರೂ ಕೂಡ ಈ ಸಂಕಟಮಯ ಮಾರ್ಗವನ್ನು ದಾಟಿ ಪರಮಾನಂದಮಯ ಯೋಗವನ್ನು ಆಶ್ರಯಿಸಲಿಲ್ಲ. ॥ ೧೫ ॥ ಮಹಾವೀರಾಧಿವೀರರಾಗಿ ದೊಡ್ಡ-ದೊಡ್ಡ ದಿಗ್ಗಜಗಳನ್ನು, ದಿಕ್ಪಾಲಕರನ್ನೂ ಗೆದ್ದವರೂ ಕೂಡ 'ಈ ಭೂಮಿ ನನ್ನದು, ಈ ರಾಜ್ಯ ನನ್ನದು' ಎಂಬ ಅಭಿಮಾನದಿಂದ ಪರಸ್ಪರ ದ್ವೇಷವನ್ನು ಕಟ್ಟಿಕೊಂಡು ಯುದ್ಧಭೂಮಿಯಲ್ಲಿ ಮಡಿದುಹೋಗುವರು. ಆದರೂ ಅವರಿಗೆ ವೈರಹೀನ ಪರಮಹಂಸನಿಗೆ ದೊರೆಯಬಹುದಾದ ಭಗವಾನ್ ವಿಷ್ಣುವಿನ ಆ ಅವಿನಾಶಿಯಾದ ಪದವು ಸಿಗುವುದಿಲ್ಲ. ॥ ೧೬ ॥

ಈ ಭವಾಟವಿಯಲ್ಲಿ ಅಲೆಯುತ್ತಿರುವ ವರ್ತಕರ ಗುಂಪು ಕೆಲವೊಮ್ಮೆ ಯಾವುದೋ ಲತೆಗಳನ್ನು ಆಶ್ರಯಿಸಿ, ಅದರ ಮೇಲೆ ವಾಸಿಸುವ ಮಧುರವಾಗಿ ಹಾಡುವ ಪಕ್ಷಿಗಳ ಮೋಹದಲ್ಲಿ ಸಿಕ್ಕಿಕೊಂಡುಬಿಡುತ್ತಾರೆ. ಕೆಲವೊಮ್ಮೆ ಸಿಂಹಗಳ ಗುಂಪಿಗೆ ಹೆದರಿ ಕೊಕ್ಕರೆ, ಗಿಡುಹಕ್ಕಿ, ಹದ್ದು ಇವುಗಳೊಡನೆ ಸ್ನೇಹ ಬೆಳೆಸುವರು. ॥ ೧೭ ॥ ಅವರ ಮೋಸಕ್ಕೆ ಒಳಗಾದಾಗ ಹಂಸಪಕ್ಷಿಗಳ ಸಮೂಹವನ್ನು ಸೇರಲು ಬಯಸುತ್ತಾರೆ. ಆದರೆ ಅವರಿಗೆ ಇವುಗಳ ಆಚಾರ ಹಿಡಿಸುವುದಿಲ್ಲ. ಅದಕ್ಕಾಗಿ ಕಪಿಗಳೊಡನೆ ಸೇರಿ ಅವುಗಳ ಜಾತಿ ಸ್ವಭಾವಕ್ಕನುಸಾರ ದಾಂಪತ್ಯಸುಖದಲ್ಲಿ ತೊಡಗಿದ್ದು ವಿಷಯ ಭೋಗಗಳಿಂದ ಇಂದ್ರಿಯಗಳನ್ನು ತೃಪ್ತಿಪಡಿಸಿಕೊಳ್ಳುತ್ತಿರುತ್ತಾರೆ. ಒಬ್ಬರ ಮತ್ತೊಬ್ಬರ ಮುಖವನ್ನು ನೋಡುತ್ತಾ-ನೋಡುತ್ತಾ ತಮ್ಮ ಆಯುಸ್ಸಿನ ಅವಧಿಯನ್ನು ಮರೆತುಬಿಡುತ್ತಾರೆ. ॥ ೧೮ ॥ ಅಲ್ಲಿ ವೃಕ್ಷಗಳಲ್ಲಿ ಕ್ರೀಡಿಸುತ್ತಾ ಪತ್ನೀ-ಪುತ್ರರ ಸ್ನೇಹಪಾಶದಲ್ಲಿ ಬಂಧಿತನಾಗುತ್ತಾನೆ. ಇವರಲ್ಲಿ ಮೈಥುನದ ವಾಸನೆ ಎಷ್ಟು ಬೆಳೆಯುತ್ತದೆ ಎಂದರೆ ಬಗೆ-ಬಗೆಯ ದುರ್ವ್ಯವಹಾರಗಳಿಂದ ದೀನರಾಗಿದ್ದರೂ ಕೂಡ ಇವನು ವಿವಶನಾಗಿ ತನ್ನ ಬಂಧನವನ್ನು ಕಿತ್ತೊಗೆಯಲು ಸಾಹಸಮಾಡುವುದಿಲ್ಲ. ಕೆಲವೊಮ್ಮೆ ಎಚ್ಚರತಪ್ಪಿ ಪರ್ವತದ ಗುಹೆಯಲ್ಲಿ ಬೀಳತೊಡಗಿದಾಗ ಅದರಲ್ಲಿ ವಾಸಿಸುವ ಆನೆಗೆ ಹೆದರಿಕೊಂಡು ಯಾವುದೋ ಬಳ್ಳಿಯನ್ನು ಆಶ್ರಯಿಸಿ ನೇತಾಡುತ್ತಿರುವನು. ॥ ೧೯ ॥ ಎಲೈ ಪರಂತಪ! ಯಾವ ರೀತಿಯಿಂದಲಾದರೂ ಇವನು ಆ ಆಪತ್ತುಗಳಿಂದ ಬಿಡುಗಡೆ ಹೊಂದಿದರೂ ಪುನಃ ತನ್ನ ಗುಂಪನ್ನೇ ಸೇರಿಕೊಳ್ಳುವನು. ಮಾಯೆಯ ಪ್ರೇರಣೆಯಿಂದ ಒಮ್ಮೆ ಈ ಮಾರ್ಗಕ್ಕೆ ಬಂದುಬಿಟ್ಟರೆ, ಅವನಿಗೆ ಅಲೆಯುತ್ತಾ-ಅಲೆಯುತ್ತಾ ಕೊನೆಯವರೆಗೂ ತನ್ನ ಪರಮ ಪುರುಷಾರ್ಥದ ಅರಿವೇ ಉಂಟಾಗುವುದಿಲ್ಲ. ॥ ೨೦ ॥ ರಹೂಗಣ ರಾಜನೇ! ನೀನೂ ಕೂಡ ಇದೇ ಮಾರ್ಗದಲ್ಲಿ ಅಲೆಯುತ್ತಿರುವೆ. ಅದಕ್ಕಾಗಿ ಈಗ ಪ್ರಜೆಗಳನ್ನು ದಂಡಿಸುವ ಕಾರ್ಯವನ್ನು ಬಿಟ್ಟು, ಸಮಸ್ತ ಪ್ರಾಣಿಗಳಿಗೂ ಮಿತ್ರ

ರಹೂಗಣ ತ್ವಮಪಿ ಹ್ಯಧ್ವನೋಽಸ್ಯ
ಸಂನ್ಯಸ್ತದಂಡಃ ಕೃತಭೂತಮೈತ್ರಃ ।
ಅಸಜ್ಜಿತಾತ್ಮಾ ಹರಿಸೇವಯಾ ಶಿತಂ
ಜ್ಞಾನಾಸಿಮಾದಾಯ ತರಾತಿಪಾರಮ್ ॥ ೨೦ ॥

ರಾಜೋವಾಚ

ಅಹೋ ನೃಜನ್ಮಾಖಿಲಜನ್ಮಶೋಭನಂ
ಕಿಂ ಜನ್ಮಭಿಸ್ತ್ವಪರೈರಪ್ಯಮುಷ್ಮಿನ್ ।
ನ ಯದ್ಧೃಷೀಕೇಶಯಶಃ ಕೃತಾತ್ಮನಾಂ
ಮಹಾತ್ಮನಾಂ ವಃ ಪ್ರಚುರಃ ಸಮಾಗಮಃ ॥ ೨೧ ॥

ನ ಹ್ಯದ್ಭುತಂ ತ್ವಚ್ಚರಣಾಬ್ಜರೇಣುಭಿ-
ರ್ಹತಾಂಹಸೋ ಭಕ್ತಿರಧೋಕ್ಷಜೇಽಮಲಾ ।
ಮೌಹೂರ್ತಿಕಾದ್ಯಸ್ಯ ಸಮಾಗಮಾಚ್ಚ ಮೇ
ದುಸ್ತರ್ಕಮೂಲೋಽಪಹತೋಽವಿವೇಕಃ ॥ ೨೨ ॥

ನಮೋ ಮಹದ್ಭ್ಯೋಽಸ್ತು ನಮಃ ಶಿಶುಭ್ಯೋ
ನಮೋ ಯುವಭ್ಯೋ ನಮ ಆ ವಟುಭ್ಯಃ ।
ಯೇ ಬ್ರಾಹ್ಮಣಾ ಗಾಮವಧೂತಲಿಂಗಾ-
ಶ್ಚರಂತಿ ತೇಭ್ಯಃ ಶಿವಮಸ್ತು ರಾಜ್ಞಾಮ್ ॥ ೨೩ ॥

ಶ್ರೀಶುಕ ಉವಾಚ

ಇತ್ಯೇವಮುತ್ತರಾಮಾತಃ ಸ ವೈ ಬ್ರಹ್ಮರ್ಷಿಸುತಃ ಸಿಂಧುಪತಯ ಆತ್ಮಸತತ್ತ್ವಂ ವಿಗಣಯತಃ ಪರಾನುಭಾವಃ ಪರಮಕಾರುಣಿಕತಯೋಪದಿಶ್ಯ ರಹೂಗಣೇನ ಸಕರುಣಮಭಿವಂದಿತಚರಣ ಆಪೂರ್ಣಾರ್ಣವ ಇವ ನಿಭೃತಕರಣೋರ್ಮ್ಯಾಶಯೋ ಧರಣಿಮಿಮಾಂ ವಿಚಚಾರ ॥ ೨೪ ॥ ಸೌವೀರಪತಿರಪಿ ಸುಜನಸಮವಗತಪರಮಾತ್ಮಸತತ್ತ್ವ ಆತ್ಮನ್ಯವಿದ್ಯಾಧ್ಯಾರೋಪಿತಾಂ ಚ ದೇಹಾತ್ಮಮತಿಂ ವಿಸಸರ್ಜ । ಏವಂ ಹಿ ನೃಪ ಭಗವದಾಶ್ರಿತಾಶ್ರಿತಾನುಭಾವಃ ॥ ೨೫ ॥

ರಾಜೋವಾಚ

ಯೋ ಹ ವಾ ಇಹ ಬಹುವಿದಾ ಮಹಾಭಾಗವತ ತ್ವಯಾಭಿಹಿತಃ ಪರೋಕ್ಷೇಣ ವಚಸಾ ಜೀವಲೋಕಭವಾಧ್ವಾ ಸ ಹ್ಯಾರ್ಯಮನೀಷಯಾ ಕಲ್ಪಿತವಿಷಯೋ ನಾಂಜಸಾವ್ಯುತ್ಪನ್ನಲೋಕಸಮಧಿಗಮಃ । ಅಥ ತದೇವೈತದ್ದುರವಗಮಂ ಸಮವೇತಾನುಕಲ್ಪೇನ ನಿರ್ದಿಶ್ಯತಾಮಿತಿ ॥ ೨೬ ॥

ನಾಗು. ವಿಷಯಗಳಲ್ಲಿ ಅನಾಸಕ್ತನಾಗಿ ಭಗವತ್ಸೇವೆ ಎಂಬ ಹರಿತವಾದ ಜ್ಞಾನಖಡ್ಗದಿಂದ ಈ ಮಾರ್ಗದಿಂದ ಪಾರಾಗಿಬಿಡು. ॥ ೨೦ ॥

ರಹೂಗಣರಾಜನು ಹೇಳಿದನು – ಆಹಾ! ಸಮಸ್ತ ಯೋನಿಗಳಲ್ಲಿ ಈ ಮನುಷ್ಯ ಜನ್ಮವೇ ಶ್ರೇಷ್ಠವಾಗಿದೆ. ಭಗವಾನ್ ಹೃಷೀಕೇಶನ ಪವಿತ್ರಕೀರ್ತಿಯಿಂದ ಶುದ್ಧಾಂತಃಕರಣವುಳ್ಳ ನಿಮ್ಮಂತಹ ಮಹಾತ್ಮರ ಸಮಾಗಮವು ಹೆಚ್ಚು-ಹೆಚ್ಚಾಗಿ ದೊರೆಯದಿರುವಲ್ಲಿ ಬೇರೆ-ಬೇರೆ ಲೋಕಗಳಲ್ಲಿ ಪ್ರಾಪ್ತವಾಗುವ ದೇವತೆಗಳೇ ಮುಂತಾದ ಶ್ರೇಷ್ಠ ಜನ್ಮಗಳಿಂದ ಯಾವ ಲಾಭವಿದೆ? ॥ ೨೧ ॥ ನಿಮ್ಮ ಅಡಿದಾವರೆಗಳ ಧೂಳನ್ನು ಸೇವಿಸುವುದರಿಂದ ಎಲ್ಲ ಪಾಪ-ತಾಪಗಳು ನಾಶಹೊಂದಿರುವಂತಹ ಮಹಾನುಭಾವರಿಗೆ ಭಗವಂತನ ವಿಶುದ್ಧವಾದ ಭಕ್ತಿಯು ದೊರೆಯುವುದು ಏನೂ ವಿಚಿತ್ರವಲ್ಲ. ನನಗಾದರೋ ಎರಡುಗಳಿಗೆ ದೊರೆತ ನಿಮ್ಮ ಸತ್ಸಂಗದಿಂದ ನನ್ನ ಎಲ್ಲ ಕುತರ್ಕಮೂಲವಾದ ಅಜ್ಞಾನವು ನಾಶವಾಗಿಹೋಯಿತು. ॥ ೨೨ ॥ ಬ್ರಹ್ಮಜ್ಞಾನಿಗಳಾದ ಮಹಾತ್ಮರು ಯಾವ ವಯಸ್ಸು ಯಾವರೂಪದಲ್ಲಿ ಸಂಚರಿಸುವರೋ ತಿಳಿಯದು. ಆದ್ದರಿಂದ ಬ್ರಹ್ಮಜ್ಞಾನಿಗಳಲ್ಲಿ ವಯೋವೃದ್ಧರಾದವರಿಗೆ ನಮಸ್ಕಾರವು. ಶಿಶುಗಳಿಗೆ ನಮಸ್ಕಾರವು. ಯುವಕರಾಗಿರುವವರಿಗೆ ನಮಸ್ಕಾರವು. ವಟುಗಳಿಗೆ ನಮಸ್ಕಾರವು. ನಿಮ್ಮಂತಹ ಬ್ರಹ್ಮಜ್ಞಾನಿಗಳಾದ ಬ್ರಾಹ್ಮಣರು ಅವಧೂತವೇಷದಿಂದ ಭೂಮಿಯಲ್ಲಿ ಸಂಚರಿಸುತ್ತಿರುವುದರಿಂದ ನಮ್ಮಂತಹ ಐಶ್ವರ್ಯಮದೋನ್ಮತ್ತ ರಾಜರಿಗೆ ಕಲ್ಯಾಣವೇ ಆಗಲಿ. ॥ ೨೩ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಎಲೈ ಉತ್ತರಾನಂದನನೇ! ಹೀಗೆ ಆ ಪರಮಪ್ರಭಾವಶಾಲಿಯಾದ ಬ್ರಹ್ಮರ್ಷಿಪುತ್ರರು ತನ್ನನ್ನು ಅಪಮಾನಗೊಳಿಸಿದ ಸಿಂಧುನರೇಶ ರಹೂಗಣನನ್ನೂ ಕೂಡ ಅತ್ಯಂತ ಕರುಣೆಯಿಂದ ಆತ್ಮತತ್ತ್ವವನ್ನು ಉಪದೇಶಿಸಿದರು. ಆಗ ರಹೂಗಣರಾಜನು ದೀನನಾಗಿ ಅವರ ಚರಣಗಳಿಗೆ ವಂದಿಸಿಕೊಂಡನು. ಮತ್ತೆ ಅವನು ತುಂಬಿದ ಸಮುದ್ರದಂತೆ ಶಾಂತಚಿತ್ತನಾಗಿ, ಇಂದ್ರಿಯಗಳಿಂದ ಉಪರತನಾಗಿ ಭೂಮಿಯಲ್ಲಿ ಸಂಚರಿಸತೊಡಗಿದನು. ॥ ೨೪ ॥ ಅವರ ಸತ್ಸಂಗದಿಂದ ಪರಮಾತ್ಮತತ್ತ್ವದ ಜ್ಞಾನವನ್ನು ಪಡೆದು ಸೌವೀರದೊರೆ ರಹೂಗಣನೂ ಕೂಡ ಅಂತಃಕರಣದಲ್ಲಿ ಅವಿದ್ಯೆಯಿಂದ ಆರೋಪಿತವಾದ ದೇಹಾತ್ಮಬುದ್ಧಿಯನ್ನು ತ್ಯಜಿಸಿದನು. ರಾಜನೇ! ಭಗವದಾಶ್ರಿತ ಅನನ್ಯ ಭಕ್ತರಲ್ಲಿ ಶರಣಾಗುವವನ ಪ್ರಭಾವ ಹೀಗೆ ಇರುತ್ತದೆ. ಅವರ ಬಳಿಯಲ್ಲಿ ಅವಿದ್ಯೆಯು ನಿಲ್ಲಲಾರದು. ॥ ೨೫ ॥

ಪರೀಕ್ಷಿದ್ರಾಜನು ಹೇಳಿದನು – ಭಾಗವತೋತ್ತಮರಾದ ಮುನಿಶ್ರೇಷ್ಠರೇ! ತಾವು ವಿದ್ವಾಂಸರಾಗಿದ್ದೀರಿ. ನೀವು ರೂಪಕದ ಮೂಲಕ ಅಪ್ರತ್ಯಕ್ಷರೂಪದಿಂದ ಜೀವಿಗಳ ಸಂಸಾರರೂಪವಾದ ಮಾರ್ಗವನ್ನು ವರ್ಣಿಸಿರುವಿರಿ. ಆ ವಿಷಯದ ಕಲ್ಪನೆಯನ್ನು ವಿವೇಕಿಗಳ ಬುದ್ಧಿಯೇ ಮಾಡಬಲ್ಲದು; ಅಲ್ಪಬುದ್ಧಿಯುಳ್ಳವರ ಅರಿವಿಗೆ ಅದು ಸುಲಭವಾಗಿ ಬರಲಾರದು. ಆದ್ದರಿಂದ ಈ ದುರ್ಬೋಧ ವಿಷಯದ ರೂಪಕವನ್ನು ಸ್ಪಷ್ಟವಾಗಿ ಬಿಡಿಸಿಹೇಳಬೇಕು ಎಂದು ಪ್ರಾರ್ಥಿಸಿಕೊಂಡನು. ॥ ೨೬ ॥

ಹದಿಮೂರನೆಯ ಅಧ್ಯಾಯವು ಮುಗಿಯಿತು. ॥ ೧೩ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಪಂಚಮಸ್ಕಂಧೇ ತ್ರಯೋದಶೋಽಧ್ಯಾಯಃ ॥ ೧೩ ॥

ಹದಿನಾಲ್ಕನೆಯ ಅಧ್ಯಾಯ

ಭವಾಟವಿಯ ಸ್ಪಷ್ಟೀಕರಣ

ಸ ಹೋವಾಚ

ಸ ಏಷ ದೇಹಾತ್ಮಮಾನಿನಾಂ ಸತ್ತ್ವಾದಿಗುಣವಿಶೇಷವಿಕಲ್ಪಿತಕುಶಲಾಕುಶಲಸಮವಹಾರವಿನಿರ್ಮಿತವಿವಿಧದೇಹಾವಲಿಭಿರ್ವಿಯೋಗಸಂಯೋಗಾದ್ಯನಾದಿಸಂಸಾರಾನುಭವಸ್ಯ ದ್ವಾರಭೂತೇನ ಷಡಿಂದ್ರಿಯವರ್ಗೇಣ ತಸ್ಮಿಂದುರ್ಗಾಧ್ವವದಸುಗಮೇಽಧ್ವನ್ಯಾಪತಿತ ಈಶ್ವರಸ್ಯ ಭಗವತೋ ವಿಷ್ಣೋರ್ವಶವರ್ತಿನ್ಯಾ ಮಾಯಯಾ ಜೀವಲೋಕೋಽಯಂ ಯಥಾ ವಣಿಕ್ಸಾರ್ಥೋಽರ್ಥಪರಃ ಸ್ವದೇಹನಿಷ್ಪಾದಿತಕರ್ಮಾನುಭವಃ ಶ್ಮಶಾನವದಶಿವತಮಾಯಾಂ ಸಂಸಾರಾಟವ್ಯಾಂ ಗತೋ ನಾದ್ಯಾಪಿ ವಿಫಲಬಹುಪ್ರತಿಯೋಗೇಹಸ್ತತ್ತಾಪೋಪಶಮನೀಂ ಹರಿಗುರುಚರಣಾರವಿಂದಮಧುಕರಾನುಪದವೀಮವರುಂಧೇ ಯಸ್ಯಾಮು ಹ ವಾ ಏತೇ ಷಡಿಂದ್ರಿಯನಾಮಾನಃ ಕರ್ಮಣಾ ದಸ್ಯವ ಏವ ತೇ ॥ ೧ ॥ ತದ್ಯಥಾ ಪುರುಷಸ್ಯ ಧನಂ ಯತ್ಕಿಂಚಿದ್ಧರ್ಮೌಪಯಿಕಂ ಬಹುಕೃಚ್ಛ್ರಾಧಿಗತಂ ಸಾಕ್ಷಾತ್ಪರಮಪುರುಷಾರಾಧನಲಕ್ಷಣೋ ಯೋಽಸೌ ಧರ್ಮಸ್ತಂ ತು ಸಾಂಪರಾಯ ಉದಾಹರಂತಿ। ತದ್ಧರ್ಮ್ಯಂ ಧನಂ ದರ್ಶನಸ್ಪರ್ಶನಶ್ರವಣಾಸ್ವಾದನಾವಘ್ರಾಣಸಂಕಲ್ಪವ್ಯವಸಾಯಗೃಹಗ್ರಾಮ್ಯೋಪಭೋಗೇನ ಕುನಾಥಸ್ಯಾಜಿತಾತ್ಮನೋ ಯಥಾ ಸಾರ್ಥಸ್ಯ ವಿಲುಂಪಂತಿ ॥ ೨ ॥ ಅಥ ಚ ಯತ್ರ ಕೌಟುಂಬಿಕಾ ದಾರಾಪತ್ಯಾದಯೋ ನಾಮ್ನಾ ಕರ್ಮಣಾ ವೃಕಸೃಗಾಲಾ ಏವಾನಿಚ್ಛತೋಽಪಿ ಕದರ್ಯಸ್ಯ

ಶ್ರೀಶುಕಮಹಾಮುನಿಗಳು ಹೇಳುತ್ತಾರೆ - ಪರೀಕ್ಷಿತ ರಾಜನೇ! ದೇಹಾಭಿಮಾನಿಗಳಾದ ಜೀವರಿಂದ ಸತ್ತ್ವಾದಿ ಗುಣಗಳ ಭೇದದಿಂದ ಶುಭ, ಅಶುಭ ಮತ್ತು ಮಿಶ್ರ ಎಂಬ ಮೂರು ವಿಧದ ಕರ್ಮಗಳು ಆಗುತ್ತಾ ಇರುತ್ತವೆ. ಆ ಕರ್ಮಗಳ ಮೂಲಕವೇ ಉಂಟಾದ ನಾನಾರೀತಿಯ ಶರೀರಗಳೊಂದಿಗೆ ಉಂಟಾಗುವ ಸಂಯೋಗ-ವಿಯೋಗವೇ ಮುಂತಾದ ಅನಾದಿ ಸಂಸಾರವು ಜೀವಿಗೆ ಪ್ರಾಪ್ತವಾಗುತ್ತದೆ. ಅದನ್ನು ಅನುಭವಿಸಲು ಮನಸ್ಸು ಮತ್ತು ಐದು ಜ್ಞಾನೇಂದ್ರಿಯಗಳೆಂಬ ಆರು ಬಾಗಿಲುಗಳಿವೆ. ಅವುಗಳಿಂದ ವಿವಶನಾಗಿ ಈ ಜೀವಸಮೂಹವು ನಿಜವಾದ ಮಾರ್ಗವನ್ನು ಮರೆತು ಭಯಂಕರ ಕಾಡಿನಲ್ಲಿ ಅಲೆಯುತ್ತಾ ಧನದ ಲೋಭಿಗಳಾದ ವ್ಯಾಪಾರಿಗಳಂತೆ ಪರಮ ಸಮರ್ಥ ಭಗವಾನ್ ವಿಷ್ಣುವಿನಲ್ಲಿ ಆಶ್ರಿತವಾಗಿರುವ ಮಾಯೆಯ ಪ್ರೇರಣೆಯಿಂದ ದಟ್ಟವಾದ ಅಡವಿಯಂತಿರುವ ದುರ್ಗಮ ಮಾರ್ಗದಲ್ಲಿ ಬಿದ್ದು ಸಂಸಾರವನಕ್ಕೆ ಬಂದು ತಲುಪುತ್ತಾನೆ. ಈ ವನವು ಸ್ಮಶಾನದಂತೆ ಅತ್ಯಂತ ಅಮಂಗಳವಾಗಿದೆ. ಇದರಲ್ಲಿ ಅಲೆಯುತ್ತಿರುವಾಗ ಅವನಿಗೆ ತನ್ನ ಶರೀರದಿಂದ ಮಾಡಿರುವ ಕರ್ಮಗಳನ್ನು ಅನುಭವಿಸಬೇಕಾಗುತ್ತದೆ. ಇಲ್ಲಿ ಅನೇಕ ವಿಘ್ನಗಳ ಕಾರಣದಿಂದ ಅವನಿಗೆ ತನ್ನ ವ್ಯಾಪಾರದಲ್ಲಿ ಸಫಲತೆ ದೊರೆಯದಿದ್ದರೂ ಇವನು ಅವರ ಶ್ರಮವನ್ನು ಶಾಂತಗೊಳಿಸುವಂತಹ ಶ್ರೀಹರಿಯ ಹಾಗೂ ಸದ್ಗುರುವಿನ ಚರಣಾರವಿಂದ ಮಕರಂದ-ಮಧುವಿನ ರಸಿಕ ಭಕ್ತ-ಭ್ರಮರಗಳ ಮಾರ್ಗವನ್ನು ಅನುಸರಿಸುವುದಿಲ್ಲ. ಈ ಸಂಸಾರವನದಲ್ಲಿ ಮನಸ್ಸಿನಸಹಿತ ಆರು ಇಂದ್ರಿಯಗಳೇ ನಮ್ಮ ಕರ್ಮಗಳ ದೃಷ್ಟಿಯಿಂದ ಕಳ್ಳರಂತೆ ಇದ್ದಾರೆ. ॥ ೧ ॥ ಪುರುಷನು ಬಹಳ ಕಷ್ಟಪಟ್ಟು ಗಳಿಸಿದ ಧನವನ್ನು ಧರ್ಮಕ್ಕಾಗಿ ಉಪಯೋಗಿಸಬೇಕು. ಆ ಧರ್ಮವನ್ನು ಸಾಕ್ಷಾತ್ ಭಗವಾನ್ ಪರಮ ಪುರುಷನ ಆರಾಧನೆಯ ರೂಪದಲ್ಲಿ ಆಚರಿಸಿದರೆ ಅದನ್ನು ಪರಲೋಕದಲ್ಲಿ ನಿಶ್ರೇಯಸ್ಸಿನ ಸಾಧನವೆಂದು ತಿಳಿಯಲಾಗಿದೆ. ಆದರೆ ಬುದ್ಧಿರೂಪೀ ಸಾರಥಿಯು ವಿವೇಕಹೀನನಾದಾಗ, ಮನಸ್ಸು ವಶದಲ್ಲಿ ಇಲ್ಲದಿದ್ದಾಗ ಆ ಮನುಷ್ಯನ ಧರ್ಮೋಪಯೋಗಿ ಆ ಧನವನ್ನು ಈ ಮನಸಹಿತ ಆರು ಇಂದ್ರಿಯಗಳು ನೋಡುವುದು, ಸ್ಪರ್ಶಿಸುವುದು, ಕೇಳುವುದು, ರುಚಿ ನೋಡುವುದು, ಮೂಸುವುದು, ಸಂಕಲ್ಪ-ವಿಕಲ್ಪಗಳನ್ನು ಮಾಡುವುದು ಮತ್ತು ನಿಶ್ಚಯಿಸುವುದು – ಈ ವೃತ್ತಿಗಳ ಮೂಲಕ ಗೃಹಸ್ಥೋಚಿತವಾದ ವಿಷಯಭೋಗಗಳಲ್ಲಿ ಸಿಕ್ಕಿಕೊಂಡು – ವಂಚಕನಾದ ಮುಖಂಡನನ್ನು ಅನುಸರಿಸುತ್ತಿರುವ ಹಾಗೂ ಎಚ್ಚರತಪ್ಪಿದ ವ್ಯಾಪಾರಿಗಳ ಗುಂಪಿನ ಧನವನ್ನು ಕಳ್ಳ-ಕಾಕರು ಲೂಟಿಮಾಡುವಂತೆ - ಲೂಟಿಮಾಡುತ್ತವೆ. ॥ ೨ ॥ ಇಷ್ಟೇ ಅಲ್ಲ, ಆ ಸಂಸಾರವನದಲ್ಲಿ ವಾಸಿಸುವ ಅವನ ಸಂಬಂಧಿಗಳೂ ಕೂಡ – ಹೆಸರಿಗೆ ಪತ್ನಿ-ಪುತ್ರರೆಂದು ಹೇಳಲ್ಪಟ್ಟರೂ ಅವರ ಕರ್ಮಗಳು ಸಾಕ್ಷಾತ್ ತೋಳ,

ಕುಟುಂಬಿನ ಉರಣಕವತ್‌ಸಂರಕ್ಷ್ಯಮಾಣಂ ಮಿಷತೋಽಪಿ ಹರಂತಿ ॥ ೩ ॥ ಯಥಾ ಹ್ಯನುವತ್ಸರಂ ಕೃಷ್ಯಮಾಣಮಪ್ಯದಗ್ಧಬೀಜಂ ಕ್ಷೇತ್ರಂ ಪುನರೇವಾವಪನಕಾಲೇ ಗುಲ್ಮತೃಣವೀರುದ್ಭಿರ್ಗಹ್ವರಮಿವ ಭವತ್ಯೇವಮೇವ ಗೃಹಾಶ್ರಮಃ ಕರ್ಮಕ್ಷೇತ್ರಂ ಯಸ್ಮಿನ್ನ ಹಿ ಕರ್ಮಾಣ್ಯುತ್ಸೀದಂತಿ ಯದಯಂ ಕಾಮಕರಂಡ ಏಷ ಆವಸಥಃ ॥ ೪ ॥

ತತ್ರ ಗತೋ ದಂಶಮಶಕಸಮಾಪಸದೈರ್ಮನುಜೈಃ ಶಲಭಶಕುಂತತಸ್ಕರಮೂಷಕಾದಿಭಿರುಪರುಧ್ಯಮಾನಬಹಿಃಪ್ರಾಣಃ ಕ್ವಚಿತ್ ಪರಿವರ್ತಮಾನೋಽಸ್ಮಿನ್ನಧ್ವನ್ಯವಿದ್ಯಾಕಾಮಕರ್ಮಭಿರುಪರಕ್ತಮನಸಾನುಪಪನ್ನಾರ್ಥಂ ನರಲೋಕಂ ಗಂಧರ್ವನಗರಮುಪಪನ್ನಮಿತಿ ಮಿಥ್ಯಾದೃಷ್ಟಿರನುಪಶ್ಯತಿ ॥ ೫ ॥ ತತ್ರ ಚ ಕ್ವಚಿದಾತಪೋದಕನಿಭಾನ್ವಿಷಯಾನುಪಧಾವತಿ ಪಾನಭೋಜನವ್ಯವಾಯಾದಿವ್ಯಸನಲೋಲುಪಃ ॥ ೬ ॥ ಕ್ವಚಿಚ್ಚಾಶೇಷದೋಷನಿಷದನಂ ಪುರೀಷವಿಶೇಷಂ ತದ್ವರ್ಣಗುಣನಿರ್ಮಿತಮತಿಃ ಸುವರ್ಣಮುಪಾದಿತ್ಸತ್ಯಗ್ನಿಕಾಮಕಾತರ ಇವೋಲ್ಮುಕಪಿಶಾಚಮ್ ॥ ೭ ॥ ಅಥ ಕದಾಚಿನ್ನಿವಾಸಪಾನೀಯದ್ರವಿಣಾದ್ಯನೇಕಾತ್ಮೋಪಜೀವನಾಭಿನಿವೇಶ ಏತಸ್ಯಾಂ ಸಂಸಾರಾಟವ್ಯಾಮಿತಸ್ತತಃ ಪರಿಧಾವತಿ ॥ ೮ ॥ ಕ್ವಚಿಚ್ಚ ವಾತ್ಯೌಪಮ್ಯಯಾ ಪ್ರಮದಯಾಽಽರೋಹಮಾರೋಪಿತಸ್ತತ್ಕಾಲರಜಸಾ ರಜನೀಭೂತ ಇವಾಸಾಧುಮರ್ಯಾದೋ ರಜಸ್ವಲಾಕ್ಷೋಽಪಿ ದಿಗ್ದೇವತಾ ಅತಿರಜಸ್ವಲಮತಿರ್ನ ವಿಜಾನಾತಿ ॥ ೯ ॥ ಕ್ವಚಿತ್ಸಕೃದವಗತವಿಷಯವೈತಥ್ಯಃ ಸ್ವಯಂ ಪರಾಭಿಧ್ಯಾನೇನ ವಿಭ್ರಂಶಿತಸ್ಮೃ-

ನರಿಗಳಂತೆ ಇರುತ್ತವೆ. ಆ ಅರ್ಥಲೋಲುಪ ಕುಟುಂಬಿಯ ಧನವನ್ನು ಅವನು ಇಚ್ಛಿಸದಿದ್ದರೂ – ಕುರಿಕಾಯುವವರ ರಕ್ಷಣೆಯಲ್ಲಿದ್ದರೂ ತೋಳವು ಕುರಿಗಳನ್ನು ಎತ್ತಿಕೊಂಡು ಹೋಗುವಂತೆ – ಅವನು ನೋಡು-ನೋಡುತ್ತಾ ಕಿತ್ತುಕೊಳ್ಳುವರು. ॥ ೩ ॥ ಯಾವುದೇ ಹೊಲದಲ್ಲಿರುವ ಕಳೆ-ಕಡ್ಡಿಗಳ ಬೀಜಗಳನ್ನು ಬೆಂಕಿಯಿಂದ ಸುಡದೆ ಇದ್ದರೆ ಪ್ರತಿವರ್ಷವೂ ಉಳುಮೆ ಮಾಡಿದರೂ ಬೀಜನೆಡುವ ವೇಳೆಗೆ ಅವು ಪುನಃ ಕಳೆ-ಮೊಳೆಗಳು, ಬಳ್ಳಿಗಳು-ಪೊದೆಗಳು, ಹುಲ್ಲು ಮುಂತಾದವುಗಳು ದಟ್ಟವಾಗಿ ಬೆಳೆಯುವುವು. ಹೀಗೆಯೇ ಈ ಗೃಹಸ್ಥಾಶ್ರಮವೂ ಕರ್ಮಭೂಮಿಯಾಗಿದೆ. ಇದರಲ್ಲಿಯೂ ಕರ್ಮಗಳನ್ನು ಪೂರ್ಣವಾಗಿ ಕಿತ್ತುಹಾಕಲು ಬರುವುದಿಲ್ಲ. ಏಕೆಂದರೆ, ಈ ಮನೆಯು ಕಾಮನೆಗಳ ಪೆಟ್ಟಿಗೆಯಾಗಿದೆ. ॥ ೪ ॥

ಈ ಗೃಹಸ್ಥಾಶ್ರಮದಲ್ಲಿರುವ ವ್ಯಕ್ತಿಗೆ ಹಣವು ಹೊರಗೆ ಓಡಾಡುವ ಪ್ರಾಣದಂತೆ ಪ್ರಿಯವಾಗಿರುವುದು. ಅವನಿಗೆ ಕಾಡುಕೋಣ, ಕಾಡುಸೊಳ್ಳೆಗಳಂತಿರುವ ನೀಚಪುರುಷರಿಂದ ಹಾಗೂ ಮಿಡತೆ, ಪಕ್ಷಿಗಳು, ಕಳ್ಳರು, ಇಲಿಗಳು ಮುಂತಾದವುಗಳಿಂದ ತೊಂದರೆ ಆಗುತ್ತಾ ಇರುತ್ತದೆ. ಕೆಲವೊಮ್ಮೆ ಈ ಮಾರ್ಗದಲ್ಲಿ ಅಲೆಯುತ್ತಾ-ಅಲೆಯುತ್ತಾ ಇವನು ಅವಿದ್ಯೆ, ಕಾಮನೆ ಮತ್ತು ಕರ್ಮಗಳಿಂದ ಕಲುಷಿತವಾದ ತನ್ನ ಚಿತ್ತದಿಂದ ದೃಷ್ಟಿದೋಷದ ಕಾರಣ ಈ ಮರ್ತ್ಯಲೋಕವನ್ನು ಗಂಧರ್ವನಗರದಂತೆ ಅಸತ್ತಾಗಿದ್ದರೂ ಸತ್ಯವೆಂದೇ ತಿಳಿಯತೊಡಗುತ್ತಾನೆ. ॥ ೫ ॥ ಮತ್ತೆ ಊಟ-ತಿಂಡಿ, ಸ್ತ್ರೀಪ್ರಸಂಗಾದಿ ವ್ಯಸನಗಳಲ್ಲಿ ಸಿಕ್ಕಿಬಿದ್ದು ಬಿಸಿಲ್ಗುದುರೆಯಂತೆ ಮಿಥ್ಯಾವಿಷಯಗಳ ಕಡೆಗೆ ಓಡಲು ತೊಡಗುತ್ತಾನೆ. ॥ ೬ ॥ ಕೆಲವೊಮ್ಮೆ ಬುದ್ಧಿಯ ರಜೋಗುಣದಿಂದ ಪ್ರಭಾವಿತನಾದಾಗ ಎಲ್ಲ ಅನರ್ಥಗಳಿಗೆ ಮೂಲವಾದ ಅಗ್ನಿಯ ಮಲರೂಪವಾದ ಭಂಗಾರವನ್ನೇ ಸುಖದ ಸಾಧನವೆಂದು ತಿಳಿದು, ಅದನ್ನು ಪಡೆಯಲಿಕ್ಕಾಗಿ ಚಡಪಡಿಸುತ್ತಾ – ಕಾಡಿನಲ್ಲಿ ಛಳಿಯಿಂದ ಗಡ-ಗಡನೆ ನಡುಗುತ್ತಿರುವ ವ್ಯಕ್ತಿಯು ಬೆಂಕಿಗಾಗಿ ವ್ಯಾಕುಲನಾಗಿ ಕಾಡಿನಲ್ಲಿ ಓಡಾಡುವ ಕೊಳ್ಳಿ ಪಿಶಾಚಿಗಳನ್ನೇ ಬೆಂಕಿಯೆಂದು ಭ್ರಮಿಸಿ ಅವರ ಬಳಿ ಓಡಿಹೋಗಿ ಅವರ ಕೈಗೆ ಸಿಕ್ಕಿ ಒದ್ದಾಡುವಂತೆ – ಪ್ರಯತ್ನಿಸುತ್ತಿರುತ್ತಾನೆ. ॥ ೭ ॥ ಕೆಲವೊಮ್ಮೆ ತನ್ನ ದೇಹಯಾತ್ರೆಗೆ ಬೇಕಾದ ಅನ್ನ, ನೀರು, ಹಣ ಮುಂತಾದವುಗಳನ್ನು ಗಳಿಸಬೇಕೆಂದು ಈ ಸಂಸಾರಾರಣ್ಯದಲ್ಲಿ ಅಲ್ಲಲ್ಲಿ ಅಲೆದಾಡುತ್ತಿರುವನು. ॥ ೮ ॥ ಕೆಲವೊಮ್ಮೆ ಸುಂಟರಗಾಳಿಯಂತೆ ಕಣ್ಣಿಗೆ ಮಣ್ಣೆರಚುವ ಸ್ತ್ರೀಗೆ ಮರುಳಾಗಿ ಅವಳ ತೊಡೆಯಲ್ಲಿ ಕುಳಿತು ಕಾಮರಾಗದಿಂದ ಕುರುಡನಾಗಿ ಸತ್ಪುರುಷರ ಮರ್ಯಾದೆಯನ್ನೂ ಲೆಕ್ಕಿಸುವುದಿಲ್ಲ. ಆಗ ಕಣ್ಣುಗಳಲ್ಲಿ ರಜೋಗುಣದ ಧೂಳು ತುಂಬಿದ್ದರಿಂದ ತನ್ನ ಕರ್ಮಗಳ ಸಾಕ್ಷಿಯಾಗಿರುವ ದಿಕ್ಕುಗಳ ದೇವತೆಗಳನ್ನೂ ಮರೆಯುವಷ್ಟು ಬುದ್ಧಿಯು ಮಲಿನವಾಗಿ ಹೋಗುತ್ತದೆ. ॥ ೯ ॥ ಕೆಲವೊಮ್ಮೆ ತಾನಾಗಿಯೇ ವಿಷಯಗಳ ಮಿಥ್ಯತ್ವವು ತಿಳಿದುಬಂದರೂ ಅನಾದಿಕಾಲದಿಂದ ದೇಹದಲ್ಲಿ ಆತ್ಮಬುದ್ಧಿಯು ಇರುವುದರಿಂದ ವಿವೇಕಬುದ್ಧಿಯು ನಾಶವಾದ ಕಾರಣ ಆ ಬಿಸಿಲ್ಗುದುರೆಯಂತಿರುವ ವಿಷಯಗಳ ಕಡೆಗೆ ಪುನಃ ಓಡತೊಡಗುವನು. ॥ ೧೦ ॥

ತಿಸ್ತಯ್ಯೈವ ಮರೀಚಿತೋಯಪ್ರಾಯಾಂಸ್ತಾನೇವಾಭಿಧಾವತಿ ॥ ೧೦ ॥ ಕ್ವಚಿದುಲೂಕಝಿಲ್ಲೀಸ್ವನವದತಿಪರುಷರಭಸಾಟೋಪಂ ಪ್ರತ್ಯಕ್ಷಂ ಪರೋಕ್ಷಂ ವಾ ರಿಪುರಾಜಕುಲನಿರ್ಭರ್ತ್ಸಿತೇನಾತಿವ್ಯಥಿತಕರ್ಣಮೂಲಹೃದಯಃ ॥ ೧೧ ॥

ಸ ಯದಾ ದುಗ್ಧಪೂರ್ವಸುಕೃತಸ್ತದಾ ಕಾರಸ್ಕರಕಾಕತುಂಡಾದ್ಯಪುಣ್ಯದ್ರುಮಲತಾವಿಷೋದಪಾನವದುಭಯಾರ್ಥಶೂನ್ಯದ್ರವಿಣಾನ್ ಜೀವನ್ಮೃತಾನ್ ಸ್ವಯಂ ಜೀವನ್ಮ್ರಿಯಮಾಣ ಉಪಧಾವತಿ ॥ ೧೨ ॥ ಏಕದಾಸತ್ಪ್ರಸಂಗಾನ್ನಿಕೃತಮತಿರ್ವ್ಯುದಕಸ್ರೋತಃಸ್ಖಲನವದುಭಯತೋಽಪಿ ದುಃಖದಂ ಪಾಖಂಡಮಭಿಯಾತಿ ॥ ೧೩ ॥ ಯದಾ ತು ಪರಬಾಧಯಾಂಧ ಆತ್ಮನೇ ನೋಪನಮತಿ ತದಾ ಹಿ ಪಿತೃಪುತ್ರಬರ್ಹಿಷ್ಮತಃ ಪಿತೃಪುತ್ರಾನ್ವಾ ಸ ಖಲು ಭಕ್ಷಯತಿ ॥ ೧೪ ॥ ಕ್ವಚಿದಾಸಾದ್ಯ ಗೃಹಂ ದಾವವತ್ಪ್ರಿಯಾರ್ಥವಿಧುರಮಸುಖೋದರ್ಕಂ ಶೋಕಾಗ್ನಿನಾ ದಹ್ಯಮಾನೋ ಭೃಶಂ ನಿರ್ವೇದಮುಪಗಚ್ಛತಿ ॥ ೧೫ ॥ ಕ್ವಚಿತ್ ಕಾಲವಿಷಮಿತರಾಜಕುಲರಕ್ಷಸಾಪಹೃತಪ್ರಿಯತಮಧನಾಸುಃ ಪ್ರಮೃತಕ ಇವ ವಿಗತಜೀವಲಕ್ಷಣ ಆಸ್ತೇ ॥ ೧೬ ॥ ಕದಾಚಿನ್ಮನೋರಥೋಪಗತಪಿತೃಪಿತಾಮಹಾದ್ಯಸತ್ಸದಿತಿ ಸ್ವಪ್ನನಿರ್ವೃತಿಲಕ್ಷಣಮನುಭವತಿ ॥ ೧೭ ॥ ಕ್ವಚಿದ್ಗೃಹಾಶ್ರಮಕರ್ಮಚೋದನಾತಿಭರಗಿರಿಮಾರುರುಕ್ಷಮಾಣೋ ಲೋಕವ್ಯಸನಕರ್ಷಿತಮನಾಃ ಕಂಟಕಶರ್ಕರಾಕ್ಷೇತ್ರಂ ಪ್ರವಿಶನ್ನಿವ ಸೀದತಿ ॥ ೧೮ ॥ ಕ್ವಚಿಚ್ಚ ದುಃಸಹೇನ ಕಾಯಾಭ್ಯಂತರವಹ್ನಿನಾ ಗೃಹೀತಸಾರಃ ಸ್ವಕುಟುಂಬಾಯ ಕ್ರುಧ್ಯತಿ ॥ ೧೯ ॥ ಸ ಏವ ಪುನರ್ನಿದ್ರಾಜಗರಗೃಹೀತೋಽಂಧೇ ತಮಸಿ ಮಗ್ನಃ ಶೂನ್ಯಾರಣ್ಯ ಇವ ಶೇತೇ ನಾನ್ಯತ್ಕಿಂಚನ ವೇದ ಶವ ಇವಾಪವಿದ್ಧಃ ॥ ೨೦ ॥

ಕೆಲವೊಮ್ಮೆ ಗೂಗೆಯ ಕೂಗಿನಂತೆ ಎದುರಿನಲ್ಲೇ ಕಟುವಾಗಿ ಮಾತನಾಡುವ ಶತ್ರುಗಳ ಮಾತುಗಳು ಮತ್ತು ಹುಳುವಿನಂತೆ ಪರೋಕ್ಷವಾಗಿ ರಾಜನ ಬೆದರಿಕೆಯ ಭೀಕರವಾದ ಭಾಷಣದಿಂದ ಕಿವಿಗಳಿಗೆ ಹಾಗೂ ಮನಸ್ಸಿಗೆ ತುಂಬಾ ವ್ಯಥೆ ಉಂಟಾಗುತ್ತದೆ. ॥ ೧೧ ॥

ಪೂರ್ವಪುಣ್ಯವನ್ನು ಕಳೆದುಕೊಂಡ ಈತನು ಬದುಕಿದ್ದರೂ ಸತ್ತವನಂತೆ ಆಗುವನು. ಕಡುಬಡವನಾಗಿ ದೈನ್ಯದಿಂದ ಕೂಡಿ ಇಹ-ಪರ ಜೀವನಗಳೆರಡಕ್ಕೂ ಸಾಧನವಾಗದಂತೆ ಹುಚ್ಚುಬೇವು, ಕಾಗೆಮೋರೆಯೇ ಮುಂತಾದ ಪಾಪವೃಕ್ಷಗಳಿಗೂ, ವಿಷದ ಬಳ್ಳಿ - ವಿಷದ ಬಾವಿಗಳಿಗೂ ಸಮನಾಗಿರುವ ಜಿಪುಣರಾದ ಹಣವಂತರನ್ನು ಆಶ್ರಯಿಸಬೇಕಾಗುವುದು. ॥ ೧೨ ॥ ಕೆಲವೊಮ್ಮೆ ದುಷ್ಟ ಮನುಷ್ಯರ ಸಂಗದಿಂದ ಬುದ್ಧಿಯು ಕೆಟ್ಟುಹೋಗಿ ಒಣಗಿದ ನದಿಯಲ್ಲಿ ಬಿದ್ದು ದುಃಖಿಯಾಗುವಂತೆ ಈ ಲೋಕ ಮತ್ತು ಪರಲೋಕದಲ್ಲಿ ದುಃಖವನ್ನು ಕೊಡುವಂತಹ ಪಾಷಂಡಮತದಲ್ಲಿ ಸಿಕ್ಕಿಕೊಳ್ಳುವನು. ॥ ೧೩ ॥ ಬೇರೆಯವರನ್ನು ತೊಂದರೆಗೆ ಗುರಿಪಡಿಸಿದ್ದರಿಂದ ಅವನಿಗೆ ಅನ್ನವೂ ಸಿಗದಿದ್ದಾಗ, ಅವನು ತನ್ನ ತಂದೆ-ಮಕ್ಕಳಲ್ಲಿ ಅಥವಾ ಬಂಧುಗಳಲ್ಲಿ ಹುಲ್ಲುಕಡ್ಡಿಯಷ್ಟು ದ್ರವ್ಯವು ಕಂಡುಬಂದರೆ ತಂದೆ-ಮಕ್ಕಳನ್ನಾದರೂ ಪೀಡಿಸಿ ಅದನ್ನು ಕಸಿದುಕೊಳ್ಳಲು ಸಿದ್ಧನಾಗುತ್ತಾನೆ. ॥ ೧೪ ॥ ಕೆಲವೊಮ್ಮೆ ಕಾಡ್ಗಿಚ್ಚಿನಂತಹ ಪ್ರಿಯ ವಿಷಯಗಳಿಂದ ಶೂನ್ಯವಾದ ಹಾಗೂ ಪರಿಣಾಮದಲ್ಲಿ ದುಃಖಮಯವಾದ ಮನೆಗೆ ತಲುಪುತ್ತಾನೆ. ಆಗ ಅಲ್ಲಿ ಪ್ರಿಯಜನರ ವಿಯೋಗಾದಿಗಳಿಂದ ಅವನ ಶೋಕಾಗ್ನಿಯು ಭುಗಿಲೇಳುತ್ತದೆ. ಇದರಿಂದ ಸಂತಪ್ತನಾಗಿ ಅವನು ಬಹಳ ಖಿನ್ನನಾಗತೊಡಗುವನು. ॥ ೧೫ ॥ ಕೆಲವೊಮ್ಮೆ ಕಾಲನಂತೆ ಭಯಂಕರ ರಾಜಕುಲರೂಪವಾದ ರಾಕ್ಷಸನು ಇವನ ಪರಮಪ್ರಿಯ ಧನರೂಪೀ ಪ್ರಾಣಗಳನ್ನು ಕಸಿದುಕೊಂಡಾಗ, ಇವನು ಸತ್ತವನಂತೆ ನಿರ್ಜೀವನಾಗಿ ಹೋಗುತ್ತಾನೆ. ॥ ೧೬ ॥ ಕೆಲವೊಮ್ಮೆ ಮನೋರಥ ಪದಾರ್ಥಗಳಂತೆ ಅತ್ಯಂತ ಅಸತ್ಯವಾದ ಪಿತಾ-ಪಿತಾಮಹರು ಮುಂತಾದ ಸಂಬಂಧಿಗಳನ್ನು ಸತ್ಯವೆಂದು ತಿಳಿದುಕೊಂಡು ಅವರ ಸಹವಾಸದಿಂದ ಸ್ವಪ್ನದಂತಿರುವ ಕ್ಷಣಿಕ ಸುಖವನ್ನು ಅನುಭವಿಸುತ್ತಾ ಇರುತ್ತಾನೆ. ॥ ೧೭ ॥ ಗೃಹಸ್ಥಾಶ್ರಮಕ್ಕಾಗಿ ವಿಸ್ತಾರಮಾಡಲ್ಪಟ್ಟ ಮಹಾನ್ ಕರ್ಮವಿಧಾನದ ಅನುಷ್ಠಾನ ಮಾಡುವುದು ಯಾವುದೋ ಕಠಿಣವಾದ ಪರ್ವತವನ್ನು ಹತ್ತುವಂತೆಯೇ ಇದೆ. ಜನರು ಅತ್ತಕಡೆ ಪ್ರವೃತ್ತರಾಗಿರುವುದನ್ನು ಕಂಡು ಅವರಂತೆಯೇ ಇವನೂ ಅದನ್ನು ಆಚರಿಸಲು ಪ್ರಯತ್ನಿಸಿದಾಗ ಬಗೆ-ಬಗೆಯ ಕಷ್ಟಗಳಿಂದ ಕ್ಲೇಶಗೊಂಡು ಕಲ್ಲು-ಮುಳ್ಳುಗಳಿಂದ ತುಂಬಿದ ಭೂಮಿಯನ್ನು ತಲುಪಿದ ವ್ಯಕ್ತಿಯಂತೆ ದುಃಖಿತನಾಗುತ್ತಾನೆ. ॥ ೧೮ ॥ ಕೆಲವೊಮ್ಮೆ ಜಠರಾಗ್ನಿಯ ಜ್ವಾಲೆಯೆಂಬ ಹಸಿವಿನಿಂದ ಪೀಡಿತನಾಗಿ ತನ್ನ ಕುಟುಂಬದ ಮೇಲೆಯೇ ಕ್ರೋಧಗೊಳ್ಳುವನು. ॥ ೧೯ ॥ ಮತ್ತೆ ನಿದ್ದೆಯೆಂಬ ಹೆಬ್ಬಾವಿನ ಹಿಡಿತಕ್ಕೆ ಸಿಕ್ಕಿಬಿದ್ದಾಗ ಅಜ್ಞಾನರೂಪವಾದ ಘೋರ ಅಂಧಕಾರದಲ್ಲಿ ಮುಳುಗಿ – ಶೂನ್ಯವಾದ ಅರಣ್ಯದಲ್ಲಿ ಎಸೆಯಲ್ಪಟ್ಟ ಹೆಣದಂತೆ ಬಿದ್ದುಕೊಳ್ಳುವನು. ಆಗ ಅವನಿಗೆ ಯಾವುದರ ಜ್ಞಾನವೂ ಇರುವುದಿಲ್ಲ. ॥ ೨೦ ॥

ಕದಾಚಿದ್ಭಗ್ನಮಾನದಂಷ್ಟ್ರೋ ದುರ್ಜನದಂದಶೂಕೈರಲಬ್ಧನಿದ್ರಾಕ್ಷಣೋ ವ್ಯಥಿತಹೃದಯೇನಾನುಕ್ಷೀಯಮಾಣವಿಜ್ಞಾನೋಽಂಧಕೂಪೇಽಂಧವತ್ಪತತಿ ॥ ೨೦ ॥ ಕರ್ಹಿ ಸ್ಮ ಚಿತ್ಕಾಮಮಧುಲವಾನ್ವಿಚಿನ್ವನ್ಯದಾ ಪರದಾರ ಪರದ್ರವ್ಯಾಣ್ಯವರುಂಧಾನೋ ರಾಜ್ಞಾ ಸ್ವಾಮಿಭಿರ್ವಾ ನಿಹತಃ ಪತತ್ಯಪಾರೇ ನಿರಯೇ ॥ ೨೧ ॥ ಅಥ ಚ ತಸ್ಮಾದುಭಯಥಾಪಿ ಹಿ ಕರ್ಮಾಸ್ಮಿನ್ನಾತ್ಮನಃ ಸಂಸಾರಾವಪನಮುದಾಹರಂತಿ ॥ ೨೨ ॥ ಮುಕ್ತಸ್ತತೋ ಯದಿ ಬಂಧಾದ್ದೇವದತ್ತ ಉಪಾಚ್ಛಿನತ್ತಿ ತಸ್ಮಾದಪಿ ವಿಷ್ಣುಮಿತ್ರ ಇತ್ಯನವಸ್ಥಿತಿಃ ॥ ೨೩ ॥ ಕ್ವಚಿಚ್ಚ ಶೀತವಾತಾದ್ಯನೇಕಾಧಿದೈವಿಕಭೌತಿಕಾತ್ಮೀಯಾನಾಂ ದಶಾನಾಂ ಪ್ರತಿನಿವಾರಣೇಽಕಲ್ಪೋ ದುರಂತಚಿಂತಯಾ ವಿಷಣ್ಣ ಆಸ್ತೇ ॥ ೨೪ ॥ ಕ್ವಚಿನ್ಮಿಥೋ ವ್ಯವಹರನ್ಯತ್ಕಿಂಚಿದ್ಧನಮನ್ಯೇಭ್ಯೋ ವಾ ಕಾಕಿಣಿಕಾಮಾತ್ರಮಪ್ಯಪಹರನ್ ಯತ್ಕಿಂಚಿದ್ವಾ ವಿದ್ವೇಷಮೇತಿ ವಿತ್ತಶಾಠ್ಯಾತ್ ॥ ೨೫ ॥

ಕೆಲವೊಮ್ಮೆ ದುರ್ಜನರೆಂಬ ವಿಷಸರ್ಪಗಳು ಈತನನ್ನು ಬಲವಾಗಿ ಕಚ್ಚಿ ತಿರಸ್ಕರಿಸುತ್ತವೆ. ಆಗ ಇತರರನ್ನು ಕಚ್ಚಲು ಸಾಧನವಾಗಿದ್ದ ಇವನ ಗರ್ವವೆಂಬ ಹಲ್ಲುಗಳು ಮುರಿದು ಬೀಳುತ್ತವೆ. ಈತನಿಗೆ ಅಶಾಂತಿಯಿಂದ ನಿದ್ರೆಯು ಹತ್ತುವುದಿಲ್ಲ, ಮರ್ಮಸ್ಥಾನದಲ್ಲಿ ಪೀಡೆಯುಂಟಾಗುವುದರಿಂದ ಕ್ಷಣ-ಕ್ಷಣಕ್ಕೂ ವಿವೇಕಶಕ್ತಿಯು ಕ್ಷೀಣಿಸುತ್ತಿರುವಾಗ ಕೊನೆಗೆ ಕುರುಡನಂತೆ ಇವನು ನರಕರೂಪವಾದ ಕತ್ತಲ ಬಾವಿಯಲ್ಲಿ ಬಿದ್ದುಬಿಡುತ್ತಾನೆ. ॥ ೨೦ ॥ ಕೆಲವೊಮ್ಮೆ ವಿಷಯಸುಖರೂಪವಾದ ಜೇನಹನಿಗಳನ್ನು ಅರಸುತ್ತಾ ಈತನು ಕಳ್ಳತನದಿಂದ ಪರಸ್ತ್ರೀಯರನ್ನೂ, ಪರಧನವನ್ನೂ ಅಪಹರಿಸಲು ಹೋಗಿ ಅವರ ಯಜಮಾನನಿಂದಲೂ, ರಾಜನಿಂದಲೂ ಹೊಡೆದು ಸಾಯಿಸಲ್ಪಟ್ಟು ಅನಂತವೂ, ಅಪಾರವೂ ಆದ ನರಕದಲ್ಲಿ ಹೋಗಿ ಬೀಳುವನು. ॥ ೨೧ ॥ ಇದರಿಂದಲೇ ಪ್ರವೃತ್ತಿಮಾರ್ಗದಲ್ಲಿದ್ದುಕೊಂಡು ಮಾಡಿದ ಲೌಕಿಕ ಮತ್ತು ವೈದಿಕ ಎರಡೂ ರೀತಿಯ ಕರ್ಮಗಳು ಜೀವನಿಗೆ ಸಂಸಾರವನ್ನೇ ದೊರಕಿಸಿಕೊಡುವವು ಎಂದು ಹೇಳುತ್ತಾರೆ. ॥ ೨೨ ॥ ಈ ರಾಜರೇ ಮುಂತಾದವರ ಬಂಧನದಿಂದ ಅತಿ ಪ್ರಯಾಸದಿಂದ ಬಿಡುಗಡೆ ಹೊಂದಿದರೂ, ಅನ್ಯಾಯದಿಂದ ಅಪಹರಿಸಿದ್ದ ಆ ಸ್ತ್ರೀ ಮತ್ತು ಧನವನ್ನು ದೇವದತ್ತನೆಂಬ ಯಾರೋ ಮತ್ತೊಬ್ಬನು ಕಸಿದುಕೊಳ್ಳುವನು ಮತ್ತೆ ಅವನಿಂದಲೂ ವಿಷ್ಣುಮಿತ್ರನೆಂಬ ಯಾವನೋ ಮೂರನೇ ವ್ಯಕ್ತಿಯು ಕಿತ್ತುಕೊಳ್ಳುವನು. ಹೀಗೆ ಆ ಭೋಗಗಳು ಒಬ್ಬರಿಂದ ಮತ್ತೊಬ್ಬರ ಬಳಿಗೆ ಹೋಗುತ್ತಾ ಇರುತ್ತವೆ; ಒಂದೇ ಕಡೆ ಸ್ಥಿರವಾಗಿ ನಿಲ್ಲುವುದಿಲ್ಲ. ॥ ೨೩ ॥ ಕೆಲವೊಮ್ಮೆ ಚಳಿ-ಗಾಳಿ ಮುಂತಾದ ಅನೇಕ ಆಧಿದೈವಿಕ, ಆಧಿಭೌತಿಕ, ಆಧ್ಯಾತ್ಮಿಕ ದುಃಖಗಳನ್ನು ನಿವಾರಿಸಲು ಅಸಮರ್ಥನಾದ್ದರಿಂದ ಇವನು ಅಪಾರವಾದ ಚಿಂತೆಗಳಲ್ಲಿ ಮುಳುಗಿ ಮರುಗುವನು. ॥ ೨೪ ॥ ಕೆಲವೊಮ್ಮೆ ಕೊಟ್ಟು-ಕೊಳ್ಳುವ ವ್ಯವಹಾರ ಮಾಡುವಾಗ ಬೇರೆಯವರ ಕವಡೆಯಷ್ಟು ಸ್ವಲ್ಪ ಅಥವಾ ಅದಕ್ಕಿಂತಲೂ ಕಡಿಮೆ ಹಣವನ್ನು ಅಪಹರಿಸಿದರೆ ಈ ಮೋಸದಿಂದ ಅವನ ದ್ವೇಷಕ್ಕೆ ಪಾತ್ರನಾಗುತ್ತಾನೆ. ॥ ೨೫ ॥

ಅಧ್ವನ್ಯಮುಷ್ಮಿನ್ನಿಮ ಉಪಸರ್ಗಾಸ್ತಥಾ ಸುಖದುಃಖರಾಗದ್ವೇಷಭಯಾಭಿಮಾನಪ್ರಮಾದೋನ್ಮಾದಶೋಕಮೋಹಲೋಭಮಾತ್ಸರ್ಯೇರ್ಷ್ಯಾವಮಾನಕ್ಷುತ್ಪಿಪಾಸಾಧಿವ್ಯಾಧಿಜನ್ಮಜರಾಮರಣಾದಯಃ ॥ ೨೬ ॥ ಕ್ವಾಪಿ ದೇವಮಾಯಯಾ ಸ್ತ್ರಿಯಾ ಭುಜಲತೋಪಗೂಢಃ ಪ್ರಸ್ಕನ್ನವಿವೇಕವಿಜ್ಞಾನೋ ಯದ್ವಿಹಾರಗೃಹಾರಂಭಾಕುಲಹೃದಯಸ್ತದಾಶ್ರಯಾವಸಕ್ತಸುತದುಹಿತೃಕಲತ್ರಭಾಷಿತಾವಲೋಕವಿಚೇಷ್ಟಿತಾಪಹೃತಹೃದಯ ಆತ್ಮಾನಮಜಿತಾತ್ಮಾಪಾರೇಽಂಧೇ ತಮಸಿ ಪ್ರಹಿಣೋತಿ ॥ ೨೭ ॥

ಎಲೈ ರಾಜನೇ! ಈ ಮಾರ್ಗದಲ್ಲಿ ಹಿಂದೆ ಹೇಳಿದ ವಿಘ್ನಗಳಲ್ಲದೆ ಸುಖ-ದುಃಖ, ರಾಗ-ದ್ವೇಷ, ಭಯ, ಅಭಿಮಾನ, ಪ್ರಮಾದ, ಉನ್ಮಾದ, ಶೋಕ, ಮೋಹ, ಲೋಭ, ಮತ್ಸರ, ಈರ್ಷ್ಯೆ, ಅಪಮಾನ, ಹಸಿವು-ಬಾಯಾರಿಕೆ, ಆಧಿ-ವ್ಯಾಧಿ, ಹುಟ್ಟು ಮುಪ್ಪು ಸಾವು ಮುಂತಾದ ಇನ್ನೂ ಅನೇಕ ವಿಘ್ನಗಳಿವೆ. ॥ ೨೬ ॥ (ಈ ಬಹು ವಿಘ್ನಗಳುಳ್ಳ ಮಾರ್ಗದಲ್ಲಿ ಹೀಗೆ ಅಲೆಯುತ್ತಿರುವ ಜೀವನು) ಎಂದೋ ದೇವಮಾಯಾರೂಪಿಣಿಯಾದ ಸ್ತ್ರೀಯಳ ತೋಳ್ತೆಕ್ಕೆಯಲ್ಲಿ ಬಿದ್ದು ವಿವೇಕಹೀನನಾಗುವನು. ಅವಳಿಗಾಗಿ ವಿಹಾರಭವನ ಮುಂತಾದವುಗಳನ್ನು ಒದಗಿಸುವ ಚಿಂತೆಯಲ್ಲಿ ಮುಳುಗಿರುತ್ತಾನೆ. ಅವನ ಆಶ್ರಿತವಾಗಿರುವ ಪುತ್ರರು, ಪುತ್ರಿಯರು ಹಾಗೂ ಬೇರೆ-ಬೇರೆ ಸ್ತ್ರೀಯರ ಸವಿಮಾತು, ಒರೆನೋಟ ಮತ್ತು ಚೇಷ್ಟೆಗಳಲ್ಲಿ ಆಸಕ್ತನಾಗಿ, ಅವರಲ್ಲೇ ಚಿತ್ತವು ಸಿಕ್ಕಿಹಾಕಿಕೊಂಡಿರುವುದರಿಂದ ಅವನು ಇಂದ್ರಿಯಗಳ ಗುಲಾಮನಾಗಿ ಅಪಾರ ಅಂಧಕಾರಮಯ ನರಕದಲ್ಲಿ ಬೀಳುತ್ತಾನೆ. ॥ ೨೭ ॥

ಕದಾಚಿದೀಶ್ವರಸ್ಯ ಭಗವತೋ ವಿಷ್ಣೋಶ್ಚಕ್ರಾತ್ಪರಮಾಣ್ವಾದಿದ್ವಿಪರಾರ್ಧಾಪವರ್ಗಕಾಲೋಪಲಕ್ಷಣಾತ್ಪರಿವರ್ತಿತೇನ ವಯಸಾ ರಂಹಸಾ ಹರತ ಆಬ್ರಹ್ಮತೃಣಸ್ತಂಬಾದೀನಾಂ ಭೂತಾನಾಮನಿಮಿಷತೋ ಮಿಷತಾಂ ವಿತ್ರಸ್ತಹೃದಯಸ್ತಮೇವೇಶ್ವರಂ ಕಾಲಚಕ್ರನಿಜಾಯುಧಂ ಸಾಕ್ಷಾದ್ಭಗವಂತಂ ಯಜ್ಞಪುರುಷಮ್ ಅನಾದೃತ್ಯ ಪಾಖಂಡದೇವತಾಃ ಕಂಕಗೃಧ್ರಬಕವಟಪ್ರಾಯಾ ಆರ್ಯಸಮಯಪರಿಹೃತಾಃ ಸಾಂಕೇತ್ಯೇನಾಭಿಧತ್ತೇ ॥ ೨೯ ॥ ಯದಾ ಪಾಖಂಡಿಭಿರಾತ್ಮವಂಚಿತೈಸ್ತೈರುರು ವಂಚಿತೋ ಬ್ರಹ್ಮಕುಲಂ ಸಮಾವಸಂಸ್ತೇಷಾಂ ಶೀಲಮುಪನಯನಾದಿಶ್ರೌತಸ್ಮಾರ್ತಕರ್ಮಾನುಷ್ಠಾನೇನ ಭಗವತೋ ಯಜ್ಞಪುರುಷಸ್ಯಾರಾಧನಮೇವ ತದರೋಚಯನ್ ಶೂದ್ರಕುಲಂ ಭಜತೇ ನಿಗಮಾಚಾರೇಽಶುದ್ಧಿತೋ ಯಸ್ಯ ಮಿಥುನೀಭಾವಃ ಕುಟುಂಬಭರಣಂ ಯಥಾ ವಾನರಜಾತೇಃ ॥ ೩೦ ॥ ತತ್ರಾಪಿ ನಿರವರೋಧಃ ಸ್ವೈರೇಣ ವಿಹರನ್ನತಿಕೃಪಣಬುದ್ಧಿರನ್ಯೋನ್ಯಮುಖನಿರೀಕ್ಷಣಾದಿನಾ ಗ್ರಾಮ್ಯಕರ್ಮಣೈವ ವಿಸ್ಮೃತಕಾಲಾವಧಿಃ ॥ ೩೧ ॥ ಕ್ವಚಿದ್ ದ್ರುಮವದೈಹಿಕಾರ್ಥೇಷು ಗೃಹೇಷು ರಂಸ್ಯನ್ಯಥಾ ವಾನರಃ ಸುತದಾರವತ್ಸಲೋ ವ್ಯವಾಯಕ್ಷಣಃ ॥ ೩೨ ॥

ಕಾಲಚಕ್ರವು ಸಾಕ್ಷಾತ್ ಭಗವಾನ್ ವಿಷ್ಣುವಿನ ಆಯುಧವಾಗಿದೆ. ಅದು ಪರಮಾಣುವಿನಿಂದ ಹಿಡಿದು ದ್ವಿಪರಾರ್ಧದವರೆಗೆ ಕ್ಷಣ-ಘಟಿ ಮುಂತಾದ ಅವಯವಗಳಿಂದ ಕೂಡಿದೆ. ಅದು ಎಚ್ಚರವಾಗಿದ್ದು ನಿರಂತರವಾಗಿ ತಿರುಗುತ್ತಾ ಇರುತ್ತದೆ. ವೇಗ-ವೇಗನೆ ಬದಲಾಗುತ್ತಿರುವ ಬಾಲ್ಯ, ಯೌವನ ಮುಂತಾದ ಅವಸ್ಥೆಗಳೇ ಅದರ ವೇಗವಾಗಿದೆ. ಅದರ ಮೂಲಕ ಅದು ಬ್ರಹ್ಮನಿಂದ ಹಿಡಿದು ಅತಿಕ್ಷುದ್ರ ತೃಣದವರೆಗಿನ ಎಲ್ಲ ಪ್ರಾಣಿಗಳನ್ನು ನಿರಂತರ ಸಂಹಾರಮಾಡುತ್ತಾ ಇರುತ್ತದೆ. ಯಾರೂ ಅದರ ಗತಿ (ವೇಗ)ಯಲ್ಲಿ ಬಾಧೆಯನ್ನೊಡ್ಡಲಾರರು. ಅದಕ್ಕೆ ಭಯಪಟ್ಟುಕೊಂಡಾದರೂ, ಈ ಕಾಲಚಕ್ರವು ಯಾರ ನಿಜ ಆಯುಧವಾಗಿದೆಯೋ ಆ ಸಾಕ್ಷಾತ್ ಭಗವಾನ್ ಯಜ್ಞಪುರುಷನ ಆರಾಧನೆಯನ್ನು ಬಿಟ್ಟು ಈ ಮಂದಮತಿ ಮನುಷ್ಯನು ಪಾಷಂಡಿಗಳ ವಂಚನೆಗೆ ಸಿಕ್ಕಿ, ಹದ್ದು, ಗೂಗೆ, ಬಕ ಮುಂತಾದ ಸಮೂಹದಂತೆ ಆರ್ಯಶಾಸ್ತ್ರ ಬಹಿಷ್ಕೃತ ದೇವತೆಗಳನ್ನು ಆಶ್ರಯಿಸುತ್ತಾನೆ. ಅವುಗಳನ್ನು ಕೇವಲ ವೇದಬಾಹ್ಯ ಅಪ್ರಾಮಾಣಿಕ ಆಗಮಗಳಲ್ಲೇ ಉಲ್ಲೇಖಿಸಲ್ಪಟ್ಟಿದೆ. ॥ ೨೯ ॥ ಈ ಪಾಷಂಡರಾದರೋ ಸ್ವತಃ ಆಪತ್ತಿನಲ್ಲೇ ಇದ್ದಾರೆ. ಇವನೂ ಕೂಡ ಅವರ ಮೋಸದಲ್ಲಿ ಸಿಲುಕಿ ದುಃಖಿಯಾದಾಗ ಬ್ರಾಹ್ಮಣರನ್ನು ಶರಣಾಗುತ್ತಾನೆ. ಆದರೆ ಉಪನಯನ ಸಂಸ್ಕಾರದ ಬಳಿಕ ಶ್ರೌತ-ಸ್ಮಾರ್ತಕರ್ಮಗಳಿಂದ ಭಗವಾನ್ ಯಜ್ಞಪುರುಷನನ್ನು ಆರಾಧಿಸುವುದು ಮುಂತಾದ ಅವರ ಶಾಸ್ತ್ರೋಕ್ತ ಆಚಾರವು ಇವನಿಗೆ ಸರಿಬೀಳುವುದಿಲ್ಲ, ಅದಕ್ಕಾಗಿ ವೇದೋಕ್ತ ಆಚಾರಕ್ಕನುಕೂಲವಾಗಿ ತನ್ನಲ್ಲಿ ಶುದ್ಧಿ ಇಲ್ಲದ ಕಾರಣ ಇವನು ಕರ್ಮಶೂನ್ಯ ಶೂದ್ರಕುಲದಲ್ಲಿ ಪ್ರವೇಶಿಸುತ್ತಾನೆ. ಅವನ ಸ್ವಭಾವವು ಕಪಿಗಳಂತೆ ಕೇವಲ ಕುಟುಂಬಪೋಷಣೆ ಮತ್ತು ಸ್ತ್ರೀಸೇವನೆ ಮಾಡುವುದೇ ಆಗಿರುತ್ತದೆ. ॥ ೩೦ ॥ ಅಲ್ಲಿ ಅಡೆ-ತಡೆ ಇಲ್ಲದೆ ಸ್ವೇಚ್ಛೆಯಿಂದ ವಿಹರಿಸುವುದರಿಂದ ಇವನ ಬುದ್ಧಿಯು ಅತ್ಯಂತ ದೈನ್ಯವನ್ನು ಹೊಂದುವುದು. ಪರಸ್ಪರ ಮುಖನೋಡುತ್ತಿರುವುದು ಮುಂತಾದ ವಿಷಯ-ಭೋಗಗಳಲ್ಲಿ ಸಿಕ್ಕಿಕೊಂಡು ಅವನಿಗೆ ತನ್ನ ಮರಣಕಾಲದ ನೆನಪೂ ಕೂಡ ಇರುವುದಿಲ್ಲ. ॥ ೩೧ ॥ ವೃಕ್ಷಗಳಂತೆ ಐಹಿಕ ಸುಖಗಳ ಫಲವನ್ನು ಮಾತ್ರ ಕೊಡುವ ಮನೆಗಳಲ್ಲೇ ಸುಖವೆಂದು ತಿಳಿದು ವಾನರರಂತೆ ಸ್ತ್ರೀ-ಪುತ್ರಾದಿಗಳಲ್ಲಿಯೇ ಆಸಕ್ತನಾಗಿ ಇವನು ತನ್ನ ಎಲ್ಲ ಸಮಯವನ್ನು ಮೈಥುನಾದಿ ವಿಷಯಭೋಗಗಳಲ್ಲೇ ಕಳೆಯುತ್ತಾನೆ. ॥ ೩೨ ॥

ಏವಮಧ್ವನ್ಯವರುಂಧಾನೋ ಮೃತ್ಯುಗಜಭಯಾತ್ತಮಸಿ ಗಿರಿಕಂದರಪ್ರಾಯೇ ॥ ೩೩ ॥ ಕ್ವಚಿಚ್ಛೀತವಾತಾದ್ಯನೇಕಾಧಿದೈವಿಕಭೌತಿಕಾತ್ಮೀಯಾನಾಂ ದುಃಖಾನಾಂ ಪ್ರತಿನಿವಾರಣೇಽಕಲ್ಪೋ ದುರಂತವಿಷಯವಿಷಣ್ಣ ಆಸ್ತೇ ॥ ೩೪ ॥ ಕ್ವಚಿನ್ಮಿಥೋ ವ್ಯವಹರನ್ ಯತ್ಕಿಂಚಿದ್ಧನಮುಪಯಾತಿ ವಿತ್ತಶಾಠ್ಯೇನ ॥ ೩೫ ॥ ಕ್ವಚಿತ್ ಕ್ಷೀಣಧನಃ ಶಯ್ಯಾಸನಾಶ-

ಹೀಗೆ ಪ್ರವೃತ್ತಿಮಾರ್ಗದಲ್ಲಿ ಬಿದ್ದು ಸುಖ-ದುಃಖಗಳನ್ನು ಅನುಭವಿಸುತ್ತಾ ಈ ಜೀವನು ರೋಗರೂಪವಾದ ಗಿರಿಗುಹೆಯಲ್ಲಿ ಬಿದ್ದು ಆವರಿಸಿರುವ ಮೃತ್ಯುರೂಪೀ ಮಹಾಗಜಕ್ಕೆ ಹೆದರುತ್ತಿರುತ್ತಾನೆ. ॥ ೩೩ ॥ ಕೆಲವೊಮ್ಮೆ ಚಳಿ, ಗಾಳಿ ಮುಂತಾದ ಅನೇಕ ರೀತಿಯ ಆಧಿದೈವಿಕ, ಆಧಿಭೌತಿಕ ಮತ್ತು ಆಧ್ಯಾತ್ಮಿಕ ದುಃಖಗಳ ನಿವೃತ್ತಿಯನ್ನು ಮಾಡಿಕೊಳ್ಳಲು ಅಸಫಲನಾದಾಗ ಅಪಾರ ವಿಷಯಗಳ ಚಿಂತೆಗಳಿಂದ ಇವನು ಕಳವಳಪಡುವನು. ॥ ೩೪ ॥ ಕೆಲವೊಮ್ಮೆ ಪರಸ್ಪರ ಕ್ರಯ-ವಿಕ್ರಯಗಳೇ ಮುಂತಾದ ವ್ಯಾಪಾರ ಮಾಡಿ ವಂಚಕತನದಿಂದ ವರ್ತಿಸಿದಾಗ ಇವನಿಗೆ ಸ್ವಲ್ಪ ಹಣವೂ ದೊರೆಯುತ್ತದೆ. ॥ ೩೫ ॥

ನಾದ್ಯುಪಭೋಗವಿಹೀನೋ ಯಾವದಪ್ರತಿಲಬ್ಧಮನೋರಥೋಪಗತಾದಾನೇಽವಸಿತಮತಿಸ್ತತಸ್ತತೋಽವಮಾನಾದೀನಿ ಜನಾದಭಿಲಭತೇ ॥ ೩೬ ॥ ಏವಂ ವಿತ್ತವ್ಯತಿಷಂಗವಿವೃದ್ಧವೈರಾನುಬಂಧೋಽಪಿ ಪೂರ್ವವಾಸನಯಾ ಮಿಥ ಉದ್ವಹಮಥಾಪವಹತಿ ॥ ೩೭ ॥ ಏತಸ್ಮಿನ್ ಸಂಸಾರಾಧ್ವನಿ ನಾನಾಕ್ಲೇಶೋಪಸರ್ಗಬಾಧಿತ ಆಪನ್ನವಿಪನ್ನೋ ಯತ್ರ ಯಸ್ತಮು ಹ ವಾವೇತರಸ್ತತ್ರ ವಿಸೃಜ್ಯ ಜಾತಂ ಜಾತಮುಪಾದಾಯ ಶೋಚನ್ಮುಹ್ಯನ್ ಬಿಭ್ಯದ್ವಿವದನ್ ಕ್ರಂದನ್ ಸಂಹೃಷ್ಯನ್ಗಾಯನ್ನಹ್ಯಮಾನಃ ಸಾಧುವರ್ಜಿತೋ ನೈವಾವರ್ತತೇಽದ್ಯಾಪಿ ಯತ ಆರಬ್ಧ ಏಷ ನರಲೋಕಸಾರ್ಥೋ ಯಮಧ್ವನಃ ಪಾರಮುಪದಿಶಂತಿ ॥ ೩೮ ॥ ಯದಿದಂ ಯೋಗಾನುಶಾಸನಂ ನ ವಾ ಏತದವರುಂಧತೇ ಯನ್ನ್ಯಸ್ತದಂಡಾ ಮುನಯ ಉಪಶಮಶೀಲಾ ಉಪರತಾತ್ಮಾನಃ ಸಮವಗಚ್ಛಂತಿ ॥ ೩೯ ॥ ಯದಪಿ ದಿಗಿಭಜಯಿನೋ ಯಜ್ವಿನೋ ಯೇ ವೈ ರಾಜರ್ಷಯಃ ಕಿಂ ತು ಪರಂ ಮೃಧೇ ಶಯೀರನ್ನಸ್ಯಾಮೇವ ಮಮೇಯಮಿತಿ ಕೃತವೈರಾನುಬಂಧಾ ಯಾಂ ವಿಸೃಜ್ಯ ಸ್ವಯಮುಪಸಂಹೃತಾಃ ॥ ೪೦ ॥ ಕರ್ಮವಲ್ಲೀಮವಲಂಬ್ಯ ತತ ಆಪದಃ ಕಥಂಚಿನ್ನರಕಾದ್ವಿಮುಕ್ತಃ ಪುನರಪ್ಯೇವಂ ಸಂಸಾರಾಧ್ವನಿ ವರ್ತಮಾನೋ ನರಲೋಕಸಾರ್ಥಮುಪಯಾತಿ ಏವಮುಪರಿ ಗತೋಽಪಿ ॥ ೪೧ ॥

ಕೆಲವೊಮ್ಮೆ ಧನವು ನಷ್ಟವಾಗಿ ಹೋಗಿ ಇವನ ಬಳಿ ಮಲಗಲು, ಕುಳಿತುಕೊಳ್ಳಲು ಮತ್ತು ತಿನ್ನುವುದೇ ಮುಂತಾದ ಯಾವ ಸಾಮಗ್ರಿಯೂ ಇರದಿದ್ದಾಗ, ತನಗೆ ಇಷ್ಟವಾದ ಭೋಗಗಳು ಸಿಗದಿರುವಾಗ ಅವನು ಕಳ್ಳತನವೇ ಮುಂತಾದ ಕೆಟ್ಟ ಉಪಾಯಗಳಿಂದ ಪಡೆಯಲು ನಿಶ್ಚಯಿಸುವನು. ಇದರಿಂದ ಅವನು ಅಲ್ಲಲ್ಲಿ ದೊರೆಯುವರ ಕೈಯಲ್ಲಿ ತುಂಬಾ ಅಪಮಾನಿತನಾಗಬೇಕಾಗುತ್ತದೆ. ॥ ೩೬ ॥ ಹೀಗೆ ಧನದ ಆಸಕ್ತಿಯಿಂದ ಪರಸ್ಪರ ವೈರಭಾವವು ಹುಟ್ಟಿದಾಗಲೂ ಕೂಡ ಇವನು ತನ್ನ ಹಿಂದಿನ ವಾಸನೆಗಳಿಂದ ವಿವಶನಾಗಿ ತಮ್ಮ-ತಮ್ಮಲ್ಲಿ ವಿವಾಹಾದಿ ಸಂಬಂಧವನ್ನು ಮಾಡುತ್ತಾ-ಬಿಡುತ್ತಾ ಇರುತ್ತಾನೆ. ॥ ೩೭ ॥ ಈ ಸಂಸಾರಮಾರ್ಗದಲ್ಲಿ ನಡೆಯುವ ಈ ಜೀವನು ಅನೇಕ ಪ್ರಕಾರದ ಕ್ಲೇಶ ಮತ್ತು ವಿಘ್ನ-ಬಾಧೆಗಳಿಂದ ತೊಂದರೆಗೊಳಗಾದರೂ, ಮಾರ್ಗದಲ್ಲಿ ಯಾರ ಮೇಲಾದರೂ ಆಪತ್ತು ಬಂದರೆ ಅಥವಾ ಯಾರಾದರೂ ಸತ್ತರೆ ಅವನನ್ನು ಅಲ್ಲೇ ಬಿಟ್ಟುಬಿಡುತ್ತಾನೆ ಮತ್ತು ಹೊಸದಾಗಿ ಹುಟ್ಟಿದವರೊಂದಿಗೆ ಕೂಡಿಕೊಳ್ಳುತ್ತಾನೆ. ಕೆಲವೊಮ್ಮೆ ಯಾರಿಗಾದರೂ ಶೋಕಪಡುತ್ತಾನೆ, ಯಾರದೋ ದುಃಖ ನೋಡಿ ಮೂರ್ಛಿತನಾಗುತ್ತಾನೆ. ಯಾರದಾದರೂ ವಿಯೋಗ ಉಂಟಾಗುವ ಆಶಂಕೆಯಿಂದ ಭಯಗೊಳ್ಳುವನು. ಯಾರೊಂದಿಗಾದರೂ ಜಗಳ ಕಾಯುತ್ತಾನೆ. ಎಲ್ಲಾದರೂ ಯಾವುದಾದರೂ ಮನಸ್ಸಿಗೆ ಅನುಕೂಲವಾದ ಮಾತು ನಡೆದರೆ ಸಂತೋಷದಿಂದ ಉಬ್ಬಿಹೋಗುತ್ತಾನೆ. ಕೆಲವೊಮ್ಮೆ ಹಾಡತೊಡಗುವನು. ಕೆಲವೊಮ್ಮೆ ಹಾಗೆ ಅನುಕೂಲವಾಗಿ ಮಾತಾಡಿದವರಿಗಾಗಿ ಬಂಧನಕ್ಕೆ ಸಿಲುಕಲು ಹಿಂಜರಿಯುವುದಿಲ್ಲ, ಸಾಧುಗಳು ಇವನ ಬಳಿಗೆ ಎಂದಿಗೂ ಬರುವುದಿಲ್ಲ, ಇವನು ಸಾಧುಸಂಗದಿಂದ ಸದಾಕಾಲ ವಂಚಿತನಾಗಿರುತ್ತಾನೆ. ಹೀಗೆ ಇವನು ನಿರಂತರ ಮುಂದರಿಯುತ್ತಾ ಇರುತ್ತಾನೆ. ಎಲ್ಲಿಂದ ಈ ಯಾತ್ರೆಯ ಪ್ರಾರಂಭವಾಯಿತೋ, ಯಾರನ್ನು ಈ ಯಾತ್ರೆಯ ಕೊನೆಯ ನೆಲೆ ಎಂದು ಹೇಳುತ್ತಾರೋ, ಆ ಪರಮಾತ್ಮನ ಬಳಿಗೆ ಇವನು ಇಂದಿನವರೆಗೆ ಮರಳಲಿಲ್ಲ. ॥ ೩೮ ॥ ಪರಮಾತ್ಮನವರೆಗಾದರೂ ಯೋಗಶಾಸ್ತ್ರದ ಗತಿಯೂ ಇಲ್ಲ. ಎಲ್ಲ ಪ್ರಕಾರದ ದಂಡ (ಶಾಸನ)ಗಳನ್ನು ತ್ಯಾಗಮಾಡಿಬಿಟ್ಟಿರುವ, ನಿವೃತ್ತಿಪರಾಯಣರೂ ಆತ್ಮಸಂಯಮಿಗಳೂ ಆದ ಮುನಿಜನರು ಅವನನ್ನು ಪಡೆದುಕೊಳ್ಳಬಲ್ಲರು. ॥ ೩೯ ॥ ದಿಗ್ಗಜಗಳನ್ನು ಗೆದ್ದುಕೊಂಡು ದೊಡ್ಡ-ದೊಡ್ಡ ಯಜ್ಞಗಳ ಅನುಷ್ಠಾನಗಳನ್ನು ಮಾಡುವ ರಾಜರ್ಷಿಗಳಿಗೂ ಅಲ್ಲಿಯವರೆಗೆ ಗತಿಯು ಇರುವುದಿಲ್ಲ. ಅವರು ರಣರಂಗದಲ್ಲಿ ಶತ್ರುಗಳೊಡನೆ ಹೋರಾಡುತ್ತಾ ಪ್ರಾಣಗಳನ್ನು ಕಳೆದುಕೊಳ್ಳುವರು. ಯಾವ ಭೂಮಿಗಾಗಿ 'ಇದು ನನ್ನದು' ಎಂದು ಅಭಿಮಾನಪಟ್ಟು ವೈರಕಟ್ಟಿಕೊಂಡಿದ್ದರೋ ಆ ಪೃಥಿವಿಯಲ್ಲೇ ತನ್ನ ಶರೀರವನ್ನು ತ್ಯಜಿಸಿ ಪರಲೋಕಕ್ಕೆ ಹೊರಟುಹೋಗುತ್ತಾರೆ. ಈ ಸಂಸಾರದಿಂದ ಅವರೂ ಪಾರಾಗಿ ಹೋಗುವುದಿಲ್ಲ. ॥ ೪೦ ॥

ತಸ್ಯೇದಮುಪಗಾಯಂತಿ –

ಆರ್ಷಭಸ್ಯೇಹ ರಾಜರ್ಷೇರ್ಮನಸಾಪಿ ಮಹಾತ್ಮನಃ ।
ನಾನುವರ್ತ್ಮಾರ್ಹತಿ ನೃಪೋ ಮಕ್ಷಿಕೇವ ಗರುತ್ಮತಃ
॥ ೪೨ ॥

ಯೋ ದುಸ್ತ್ಯಜಾನ್ ದಾರಸುತಾನ್ಸುಹೃದ್ರಾಜ್ಯಂ ಹೃದಿಸ್ಪೃಶಃ ।
ಜಹೌ ಯುವೈವ ಮಲವದುತ್ತಮಶ್ಲೋಕಲಾಲಸಃ
॥ ೪೩ ॥

ಯೋ ದುಸ್ತ್ಯಜಾನ್ ಕ್ಷಿತಿಸುತಸ್ವಜನಾರ್ಥದಾರಾನ್
ಪ್ರಾರ್ಥ್ಯಾಂ ಶ್ರಿಯಂ ಸುರವರೈಃ ಸದಯಾವಲೋಕಾಮ್ ।
ನೈಚ್ಛನ್ನೃಪಸ್ತದುಚಿತಂ ಮಹತಾಂ ಮಧುದ್ವಿಟ್
ಸೇವಾನುರಕ್ತಮನಸಾಮಭವೋಽಪಿ ಫಲ್ಗುಃ ॥ ೪೪ ॥

ಯಜ್ಞಾಯ ಧರ್ಮಪತಯೇ ವಿಧಿನೈಪುಣಾಯ
ಯೋಗಾಯ ಸಾಂಖ್ಯಶಿರಸೇ ಪ್ರಕೃತೀಶ್ವರಾಯ ।
ನಾರಾಯಣಾಯ ಹರಯೇ ನಮ ಇತ್ಯುದಾರಂ
ಹಾಸ್ಯನ್ಮೃಗತ್ವಮಪಿ ಯಃ ಸಮುದಾಜಹಾರ ॥ ೪೫ ॥

ಯ ಇದಂ ಭಾಗವತಸಭಾಜಿತಾವದಾತಗುಣ-ಕರ್ಮಣೋ ರಾಜರ್ಷೇರ್ಭರತಸ್ಯಾನುಚರಿತಂ ಸ್ವಸ್ತ್ಯಯನಮಾಯುಷ್ಯಂ ಧನ್ಯಂ ಯಶಸ್ಯಂ ಸ್ವರ್ಗ್ಯಾಪವರ್ಗ್ಯಂ ವಾನುಶೃಣೋತ್ಯಾಖ್ಯಾಸ್ಯತ್ಯಭಿನಂದತಿ ಚ ಸರ್ವಾ ಏವಾಶಿಷ ಆತ್ಮನ ಆಶಾಸ್ತೇ ನ ಕಾಂಚನ ಪರತ ಇತಿ ॥ ೪೬ ॥

ತಮ್ಮ ಪುಣ್ಯಕರ್ಮರೂಪಿಯಾದ ಲತೆಯನ್ನು ಆಶ್ರಯಿಸಿ ಯಾವ ರೀತಿಯಿಂದಾದರೂ ಈ ಜೀವನು ಈ ಆಪತ್ತುಗಳಿಂದ ಅಥವಾ ನರಕದಿಂದ ಬಿಡುಗಡೆಯು ಹೊಂದಿದರೂ ಪುನಃ ಇದೇ ಸಂಸಾರಮಾರ್ಗದಲ್ಲಿ ಅಲೆಯುತ್ತಾ ಈ ಜನ ಸಮುದಾಯದಲ್ಲಿ ಸೇರಿಕೊಳ್ಳುವನು. ಸ್ವರ್ಗಾದಿ ಮೇಲಿನ ಲೋಕಗಳಿಗೆ ಹೋಗುವವರ ಸ್ಥಿತಿಯು ಇದೇ ಆಗಿದೆ. ॥ ೪೧ ॥

ಮಹಾರಾಜ ಪರೀಕ್ಷಿತನೇ! ರಾಜರ್ಷಿಯಾದ ಭರತನ ವಿಷಯದಲ್ಲಿ ಪಂಡಿತರಾದವರು ಹೀಗೆ ಹೇಳುತ್ತಾರೆ – ಗರುಡನೊಡನೆ ಒಂದು ನೊಣವು ಹೇಗೆ ಸ್ಪರ್ಧಿಸಲಾರದೋ ಹಾಗೆಯೇ ರಾಜರ್ಷಿ ಮಹಾತ್ಮಾ ಭರತನ ಮಾರ್ಗವನ್ನು ಬೇರೆ ಯಾವ ರಾಜನೂ ಮನಸ್ಸಿನಿಂದಲೂ ಅನುಸರಿಸಲಾರನು. ॥ ೪೨ ॥ ಅವನು ಪುಣ್ಯಶ್ಲೋಕನಾದ ಶ್ರೀಹರಿಯಲ್ಲಿ ಅನುರಕ್ತನಾಗಿ ಬೇರೆಯವರಿಗೆ ತ್ಯಾಗಮಾಡಲು ಬಹುಕಷ್ಟಕರವಾದ ಅತಿಮನೋಹರವಾದ ಪತ್ನೀ, ಪುತ್ರ, ರಾಜ್ಯಾದಿಗಳನ್ನು ಯುವಕನಾಗಿರುವಾಗಲೇ ಮಲದಂತೆ ತ್ಯಜಿಸಿಬಿಟ್ಟಿದ್ದನು. ॥ ೪೩ ॥ ತ್ಯಜಿಸಲು ಅತಿಕಷ್ಟವಾಗಿರುವ ರಾಜ್ಯ, ಪುತ್ರರು, ಸ್ವಜನರು, ಸಂಪತ್ತು ಮತ್ತು ಪತ್ನಿಯನ್ನೂ ಹಾಗೂ ಯಾವಳ ದಯಾಕಟಾಕ್ಷ ಬೀಳಬೇಕೆಂದು ದೊಡ್ಡ-ದೊಡ್ಡ ದೇವತೆಗಳು ಹಾತೊರೆಯುತ್ತಿರುತ್ತಾರೋ ಅಂತಹ ಲಕ್ಷ್ಮಿಯನ್ನೂ ಕೂಡ ಲೇಶಮಾತ್ರವೂ ಬಯಸಲಿಲ್ಲವೋ ಅಂತಹ ಭರತ ಚಕ್ರವರ್ತಿಗೆ ಇವೆಲ್ಲವೂ ಉಚಿತವೇ ಆಗಿದೆ. ಏಕೆಂದರೆ, ಯಾವ ಮಹಾನುಭಾವರ ಚಿತ್ತವು ಭಗವಾನ್ ಮಧುಸೂದನನ ಸೇವೆಯಲ್ಲಿ ಅನುರಕ್ತವಾಗಿದೆಯೋ ಅವರ ದೃಷ್ಟಿಯಲ್ಲಿ ಮೋಕ್ಷಪದವೂ ಅತ್ಯಂತ ತುಚ್ಛವಾಗಿದೆ. ॥ ೪೪ ॥ ಅವನು ಮೃಗಶರೀರವನ್ನು ಬಿಡಲು ಇಚ್ಛಿಸಿದಾಗ ಉಚ್ಚಸ್ವರದಲ್ಲಿ – ಧರ್ಮವನ್ನು ರಕ್ಷಿಸುತ್ತಿರುವವನೂ, ಧರ್ಮಾನುಷ್ಠಾನದಲ್ಲಿ ನಿಪುಣನೂ, ಯೋಗಗಮ್ಯನೂ, ಸಾಂಖ್ಯದ ಪ್ರತಿಪಾದಕನೂ, ಪ್ರಕೃತಿಗೆ ಅಧೀಶ್ವರನೂ. ಆದ ಯಜ್ಞಮೂರ್ತಿ ಸರ್ವಾಂತರ್ಯಾಮಿ ಶ್ರೀಹರಿಗೆ ನಮಸ್ಕಾರವು ಎಂದು ಹೇಳಿದ್ದನು. ॥ ೪೫ ॥

ಎಲೈ ರಾಜೇಂದ್ರಾ! ರಾಜರ್ಷಿ ಭರತನ ಪವಿತ್ರ ಗುಣ-ಕರ್ಮಗಳನ್ನು ಭಕ್ತರೂ ಕೂಡ ಪ್ರಶಂಸಿಸುತ್ತಾರೆ. ಅವನ ಈ ಪವಿತ್ರ ಚರಿತ್ರವು ಶ್ರೇಯಸ್ಕರವು. ಆಯುಸ್ಸು, ಸಂಪತ್ತನ್ನು ವೃದ್ಧಿಪಡಿಸುವುದೂ, ಲೋಕದಲ್ಲಿ ಸತ್ಕೀರ್ತಿಯನ್ನು ಹೆಚ್ಚಿಸುವಂತಹುದೂ ಮತ್ತು ಸ್ವರ್ಗ-ಮೋಕ್ಷಗಳನ್ನು ದೊರಕಿಸಿ ಕೊಡುವುದೂ ಆಗಿದೆ. ಇದನ್ನು ಕೇಳುವವನೂ, ಹೇಳುವವನೂ ಮತ್ತು ಇದನ್ನು ಅಭಿನಂದಿಸುವವನೂ ಆದವನ ಎಲ್ಲ ಕಾಮನೆಗಳು ಪೂರ್ಣವಾಗಿ ಹೋಗುತ್ತವೆ. ಬೇರೆಯವರಲ್ಲಿ ಅವನಿಗೆ ಏನನ್ನೂ ಬೇಡಬೇಕಾಗಿ ಬರುವುದಿಲ್ಲ. ॥ ೪೬ ॥

ಹದಿನಾಲ್ಕನೆಯ ಅಧ್ಯಾಯವು ಮುಗಿಯಿತು. ॥ ೧೪ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಪಂಚಮಸ್ಕಂಧೇ
ಭರತೋಪಾಖ್ಯಾನೇ ಪಾರೋಕ್ಷ್ಯವಿವರಣಂ ನಾಮ ಚತುರ್ದಶೋಽಧ್ಯಾಯಃ ॥ ೧೪ ॥

ಹದಿನೈದನೆಯ ಅಧ್ಯಾಯ

ಭರತವಂಶದ ವರ್ಣನೆ

ಶ್ರೀಶುಕ ಉವಾಚ

ಭರತಸ್ಯಾತ್ಮಜಃ ಸುಮತಿರ್ನಾಮಾಭಿಹಿತೋ ಯಮು ಹ ವಾವ ಕೇಚಿತ್ಪಾಖಂಡಿನ ಋಷಭಪದವೀಮನುವರ್ತಮಾನಂ ಚಾನಾರ್ಯಾ ಅವೇದಸಮಾಮ್ನಾತಾಂ ದೇವತಾಂ ಸ್ವಮನೀಷಯಾ ಪಾಪೀಯಸ್ಯಾ ಕಲೌ ಕಲ್ಪಯಿಷ್ಯಂತಿ ॥ ೧ ॥ ತಸ್ಮಾದ್ ವೃದ್ಧಸೇನಾಯಾಂ ದೇವತಾಜಿನ್ನಾಮ ಪುತ್ರೋಽಭವತ್ ॥ ೨ ॥ ಅಥಾಸುರ್ಯಾಂ ತತ್ತನಯೋ ದೇವದ್ಯುಮ್ನಸ್ತತೋ ಧೇನುಮತ್ಯಾಂ ಸುತಃ ಪರಮೇಷ್ಠೀ ತಸ್ಯ ಸುವರ್ಚಲಾಯಾಂ ಪ್ರತೀಹ ಉಪಜಾತಃ ॥ ೩ ॥ ಯ ಆತ್ಮವಿದ್ಯಾಮಾಖ್ಯಾಯ ಸ್ವಯಂ ಸಂಶುದ್ಧೋ ಮಹಾಪುರುಷಮನುಸಸ್ಮಾರ ॥ ೪ ॥ ಪ್ರತೀಹಾತ್ಸುವರ್ಚಲಾಯಾಂ ಪ್ರತಿಹರ್ತ್ರಾದಯಸ್ತ್ರಯ ಆಸನ್ನಿಜ್ಯಾಕೋವಿದಾಃ ಸೂನವಃ ಪ್ರತಿಹರ್ತುಃ ಸ್ತುತ್ಯಾಮಜಭೂಮಾನಾವಜನಿಷಾತಾಮ್ ॥ ೫ ॥ ಭೂಮ್ನ ಋಷಿಕುಲ್ಯಾಯಾಮುದ್ಗೀಥಸ್ತತಃ ಪ್ರಸ್ತಾವೋ ದೇವಕುಲ್ಯಾಯಾಂ ಪ್ರಸ್ತಾವಾನ್ನಿಯುತ್ಸಾಯಾಂ ಹೃದಯಜ ಆಸೀದ್ವಿಭುರ್ವಿಭೋ ರತ್ಯಾಂ ಚ ಪೃಥುಷೇಣಸ್ತಸ್ಮಾನ್ನಕ್ತ ಆಕೂತ್ಯಾಂ ಜಜ್ಞೇ ನಕ್ತಾದ್ ದ್ರುತಿಪುತ್ರೋ ಗಯೋ ರಾಜರ್ಷಿಪ್ರವರ ಉದಾರಶ್ರವಾ ಅಜಾಯತ ಸಾಕ್ಷಾದ್ಭಗವತೋ ವಿಷ್ಣೋರ್ಜಗದ್ರಿರಕ್ಷಿಷಯಾ ಗೃಹೀತಸತ್ತ್ವಸ್ಯ ಕಲಾಽಽತ್ಮವತ್ತ್ವಾದಿಲಕ್ಷಣೇನ ಮಹಾಪುರುಷತಾಂ ಪ್ರಾಪ್ತಃ ॥ ೬ ॥ ಸ ವೈ ಸ್ವಧರ್ಮೇಣ ಪ್ರಜಾಪಾಲನಪೋಷಣಪ್ರೀಣನೋಪಲಾಲನಾನುಶಾಸನಲಕ್ಷಣೇನೇಜ್ಯಾದಿನಾ ಚ ಭಗವತಿ ಮಹಾಪುರುಷೇ ಪರಾವರೇ ಬ್ರಹ್ಮಣಿ ಸರ್ವಾತ್ಮನಾರ್ಪಿತಪರಮಾರ್ಥಲಕ್ಷಣೇನ ಬ್ರಹ್ಮವಿಚ್ಚರಣಾನುಸೇವಯಾಽಽಪಾದಿತಭಗವದ್ಭಕ್ತಿಯೋಗೇನ ಚಾಭೀಕ್ಷ್ಣಶಃ ಪರಿಭಾವಿತಾತಿಶುದ್ಧಮತಿರುಪರತಾನಾತ್ಮ್ಯ

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಎಲೈ ರಾಜೇಂದ್ರನೇ! ಭರತನ ಪುತ್ರನು ಸುಮತಿ ಎಂಬುದನ್ನು ಹಿಂದೆಯೇ ಹೇಳಿಯಾಗಿದೆ. ಅವನು ಋಷಭದೇವರ ಮಾರ್ಗವನ್ನು ಅನುಸರಿಸಿದ ಮಹಾತ್ಮನು. ಇದರಿಂದಲೇ ಕಲಿಯುಗದಲ್ಲಿ ಅನೇಕ ಪಾಷಂಡಿಗಳಾದ ಅನಾರ್ಯರೂ ತಮ್ಮ ದುಷ್ಟಬುದ್ಧಿಯಿಂದಾಗ ಅತನನ್ನು ಅವೈದಿಕವಾದ ಒಂದು ದೇವತೆಯೆಂದು ಕಲ್ಪಿಸಿಕೊಳ್ಳುವರು. ॥ ೧ ॥ ಅವನ ಪತ್ನಿಯಾದ ವೃದ್ಧಸೇನೆಯಲ್ಲಿ ದೇವಾಜಿತ್ ಎಂಬ ಪುತ್ರನು ಹುಟ್ಟಿದನು. ॥ ೨ ॥ ದೇವಾಜಿತನ ಪತ್ನೀ ಅಸುರಿಯ ಗರ್ಭದಿಂದ ದೇವದ್ಯುಮ್ನನೂ, ದೇವದ್ಯುಮ್ನನ ಪತ್ನಿ ಧೇನುಮತಿಯಿಂದ ಪರಮೇಷ್ಠಿಯೂ ಮತ್ತು ಅವನ ಪತ್ನೀ ಸುವರ್ಚಲೆಯ ಗರ್ಭದಿಂದ ಪ್ರತೀಹನೆಂಬ ಪುತ್ರನು ಜನಿಸಿದನು. ॥ ೩ ॥ ಇವನು ಅನೇಕ ಬೇರೆ ಜನರಿಗೆ ಆತ್ಮವಿದ್ಯೆಯನ್ನು ಉಪದೇಶಿಸಿದ್ದನು. ಸ್ವತಃ ಶುದ್ಧಚಿತ್ತನಾಗಿ ಪರಮಪುರುಷ ಶ್ರೀನಾರಾಯಣನ ಸಾಕ್ಷಾತ್ಕಾರದ ಅನುಭವವನ್ನು ಪಡೆದಿದ್ದನು. ॥ ೪ ॥ ಪ್ರತೀಹನ ಪತ್ನೀಯಾದ ಇನ್ನೊಬ್ಬ ಸುವರ್ಚಲಾದೇವಿಯ ಗರ್ಭದಲ್ಲಿ ಪ್ರತಿಹರ್ತಾ, ಪ್ರಸ್ತೋತಾ, ಉದ್ಗಾತಾ ಎಂಬ ಮೂರು ಪುತ್ರರು ಹುಟ್ಟಿದರು. ಇವರು ಯಜ್ಞಾದಿ ಕರ್ಮಗಳಲ್ಲಿ ಬಹಳ ನಿಪುಣರಾಗಿದ್ದರು. ಇವರಲ್ಲಿ ಪ್ರತಿಹರ್ತಾನ ಭಾರ್ಯೆಯಾದ ಸ್ತುತಿ ಎಂಬುವಳ ಗರ್ಭದಿಂದ ಅಜ ಮತ್ತು ಭೂಮಾ ಎಂಬ ಎರಡು ಪುತ್ರರು ಜನಿಸಿದರು. ॥ ೫ ॥ ಅವರಲ್ಲಿ ಭೂಮಾನ ಪತ್ನೀ ಋಷಿಕುಲ್ಯಾ ಎಂಬುವಳಲ್ಲಿ ಉದ್ಗೀಥನೂ, ಅವನ ಪತ್ನಿ ದೇವಕುಲ್ಯೆಯಿಂದ ಪ್ರಸ್ತಾವನೂ, ಪ್ರಸ್ತಾವನ ಪತ್ನೀ ನಿಯುತ್ಸುವಿನಲ್ಲಿ ವಿಭು ಎಂಬ ಪುತ್ರನು ಜನಿಸಿದನು. ವಿಭುವಿನ ಹೆಂಡತಿ ರತಿಯ ಉದರದಲ್ಲಿ ಪೃಥುಷೇಣ, ಪೃಥುಷೇಣನ ಪತ್ನೀ ಆಕೂತಿಯಿಂದ ನಕ್ತನೂ, ನಕ್ತನ ಪತ್ನೀ ದ್ರುತಿಯಲ್ಲಿ ಉದಾರಕೀರ್ತಿಶಾಲಿಯಾದ ರಾಜರ್ಷಿಶ್ರೇಷ್ಠಗಯನ ಜನ್ಮವಾಯಿತು. ಇವನು ಜಗತ್ತನ್ನು ರಕ್ಷಿಸಲು ಸತ್ತ್ವಗುಣವನ್ನು ಸ್ವೀಕರಿಸಿರುವ ಸಾಕ್ಷಾತ್ ಭಗವಾನ್ ವಿಷ್ಣುವಿನ ಅಂಶನೆಂದು ಹೇಳಲಾಗುತ್ತದೆ. ಸಂಯಮಾದಿ ಅನೇಕಗುಣಗಳಿಂದ ಇವನನ್ನು ಮಹಾಪುರುಷರಲ್ಲಿ ಪರಿಗಣಿಸುತ್ತಾರೆ. ॥ ೬ ॥ ಮಹಾರಾಜಾ ಗಯನು ಪ್ರಜೆಗಳ ಪಾಲನೆ, ಪೋಷಣೆ, ರಂಜನೆಗಳನ್ನು ಮಾಡುತ್ತಾ ಪ್ರೀತಿಯಿಂದ ಅವರನ್ನು ಲಾಲಿಸುತ್ತಾ ಹಾಗೆಯೇ ಅವರನ್ನು ಆಳುತ್ತಾ, ಬಗೆ-ಬಗೆಯ ಯಜ್ಞಗಳನ್ನು ಆಚರಿಸುತ್ತಾ ನಿಷ್ಕಾಮಭಾವದಿಂದ ಕೇವಲ ಭಗವತ್ಪ್ರೀತಿಗಾಗಿ ತನ್ನ ಧರ್ಮಗಳನ್ನು ಆಚರಿಸುತ್ತಿದ್ದನು. ಇದರಿಂದ ಅವನ ಎಲ್ಲ ಕರ್ಮಗಳು ಸರ್ವಶ್ರೇಷ್ಠ ಪರಮಪುರುಷ ಪರಮಾತ್ಮ ಶ್ರೀಹರಿಗೆ ಅರ್ಪಿತವಾಗಿ ಪರಮಾರ್ಥರೂಪವಾಗಿದ್ದುವು. ಬ್ರಹ್ಮಜ್ಞಾನಿಗಳಾದ ಮಹಾಪುರುಷರ ಚರಣಗಳ ಸೇವೆಯಿಂದ ಅವನಿಗೆ ಭಕ್ತಿಯೋಗದ ಪ್ರಾಪ್ತಿಯಾಯಿತು. ನಿರಂತರ ಭಗವಚ್ಚಿಂತನೆಯಿಂದ ಅವನು ತನ್ನ ಚಿತ್ತವನ್ನು ಶುದ್ಧವಾಗಿಸಿಕೊಂಡು, ದೇಹಾದಿ ಅನಾತ್ಮವಸ್ತುಗಳಲ್ಲಿರುವ ಅಹಂಕಾರವನ್ನು ತೊರೆದು

ಆತ್ಮನಾ ಸ್ವಯಮುಪಲಭ್ಯಮಾನಬ್ರಹ್ಮಾತ್ಮಾನುಭವೋಽಪಿ ನಿರಭಿಮಾನ ಏವ ಅವನಿಮ್ ಅಜೂಗುಪತ್ ॥ ೭ ॥

ತಸ್ಯೇಮಾಂ ಗಾಥಾಂ ಪಾಂಡವೇಯ ಪುರಾವಿದ ಉಪಗಾಯಂತಿ ॥ ೮ ॥

ಗಯಂ ನೃಪಃ ಕಃ ಪ್ರತಿಯಾತಿ ಕರ್ಮಭಿ-
ರ್ಯಜ್ವಾಭಿಮಾನೀ ಬಹುವಿದ್ಧರ್ಮಗೋಪ್ತಾ ।
ಸಮಾಗತಶ್ರೀಃ ಸದಸಸ್ಪತಿಃ ಸತಾಂ
ಸತ್ಸೇವಕೋಽನ್ಯೋ ಭಗವತ್ಕಲಾಮೃತೇ ॥ ೯ ॥

ಯಮಭ್ಯಷಿಂಚನ್ ಪರಯಾ ಮುದಾ ಸತೀಃ
ಸತ್ಯಾಶಿಷೋ ದಕ್ಷಕನ್ಯಾಃ ಸರಿದ್ಭಿಃ ।
ಯಸ್ಯ ಪ್ರಜಾನಾಂ ದುದುಹೇ ಧರಾಽಽಶಿಷೋ
ನಿರಾಶಿಷೋ ಗುಣವತ್ಸಸ್ನುತೋಧಾಃ ॥ ೧೦ ॥

ಛಂದಾಂಸ್ಯಕಾಮಸ್ಯ ಚ ಯಸ್ಯ ಕಾಮಾನ್
ದುದೂಹುರಾಜಹ್ರುರಥೋ ಬಲಿಂ ನೃಪಾಃ ।
ಪ್ರತ್ಯಂಚಿತಾ ಯುಧಿ ಧರ್ಮೇಣ ವಿಪ್ರಾ-
ಯದಾಶಿಷಾಂ ಷಷ್ಠಮಂಶಂ ಪರೇತ್ಯ ॥ ೧೧ ॥

ಯಸ್ಯಾಧ್ವರೇ ಭಗವಾನಧ್ವರಾತ್ಮಾ
ಮಘೋನಿ ಮಾದ್ಯತ್ಯುರುಸೋಮಪೀಥೇ ।
ಶ್ರದ್ಧಾವಿಶುದ್ಧಾಚಲಭಕ್ತಿಯೋಗ-
ಸಮರ್ಪಿತೇಜ್ಯಾಫಲಮಾಜಹಾರ ॥ ೧೨ ॥

ಯತ್ಪ್ರೀಣನಾದ್ಬರ್ಹಿಷಿ ದೇವತಿರ್ಯಙ್
ಮನುಷ್ಯವೀರುತ್ತೃಣಮಾವಿರಿಂಚಾತ್ ।
ಪ್ರೀಯೇತ ಸದ್ಯಃ ಸ ಹ ವಿಶ್ವಜೀವಃ
ಪ್ರೀತಃ ಸ್ವಯಂ ಪ್ರೀತಿಮಗಾದ್ಗಯಸ್ಯ ॥ ೧೩ ॥

ಗಯಾದ್ಗಯಂತ್ಯಾಂ ಚಿತ್ರರಥಃ ಸುಗತಿರವರೋಧನ ಇತಿ ತ್ರಯಃ ಪುತ್ರಾ ಬಭೂವುಶ್ಚಿತ್ರರಥಾದೂರ್ಣಾಯಾಂ ಸಮ್ರಾಡಜನಿಷ್ಟ ॥ ೧೪ ॥ ತತ ಉತ್ಕಲಾಯಾಂ ಮರೀಚಿರ್ಮರೀಚೇರ್ಬಿಂದುಮತ್ಯಾಂ ಬಿಂದುಮಾನುದಪದ್ಯತ ತಸ್ಮಾತ್ಸರಘಾಯಾಂ ಮಧುರ್ನಾಮಾಭವತ್ತಸ್ಯ ಸುಮನಸಿ

ಪರಬ್ರಹ್ಮಾತ್ಮಭಾವದ ಅನುಭವವನ್ನು ಪಡೆದನು. ಇದೆಲ್ಲವೂ ಇದ್ದ ಬಳಿಕವೂ ಅವನು ನಿರಭಿಮಾನಿಯಾಗಿ ಪೃಥಿವಿಯನ್ನು ಪಾಲಿಸುತ್ತಿದ್ದನು. ॥ ೭ ॥

ಪರೀಕ್ಷಿದ್ರಾಜನೇ! ಪ್ರಾಚೀನ ಇತಿಹಾಸವನ್ನು ತಿಳಿದ ಮಹಾತ್ಮರು ರಾಜರ್ಷಿಯಾದ ಗಯನ ವಿಷಯದಲ್ಲಿ ಈ ಗಾಥೆಯನ್ನು ಹೇಳುವರು – ॥ ೮ ॥

ಆಹಾ! ಈ ಗಯಮಹಾರಾಜನಿಗೆ ಸತ್ಕರ್ಮಾಚರಣೆಯಲ್ಲಿ ಸಾಟಿಯಾದವನು ಯಾರಿದ್ದಾನೆ? ಅವನು ಸಾಕ್ಷಾತ್ ಭಗವಂತನ ಕಲೆಯೇ ಆಗಿದ್ದನು. ಅವನನ್ನು ಬಿಟ್ಟು ಬೇರಾವನು ಈ ರೀತಿಯಲ್ಲಿ ಯಜ್ಞಗಳನ್ನು ಅನುಷ್ಠಾನ ಮಾಡುವನು? ಪ್ರಶಸ್ತವಾದ ಮನಸ್ಸುಳ್ಳವನೂ, ಬಹುಜ್ಞನೂ, ಧರ್ಮರಕ್ಷಕನೂ, ಲಕ್ಷ್ಮಿಗೆ ಪ್ರೀತಿಪಾತ್ರನೂ, ಸಾಧುಸಮಾಜದಲ್ಲಿ ಶಿರೋಮಣಿಯೂ, ಸತ್ಪುರುಷರ ನಿಜವಾದ ಸೇವಕನೂ, ಬೇರಾವನಿರಲು ಸಾಧ್ಯ? ॥ ೯ ॥ ಸತ್ಯ ಸಂಕಲ್ಪವುಳ್ಳ ಪರಮಸಾಧ್ವಿಯರಾದ ಶ್ರದ್ಧೆ, ಮೈತ್ರಿ, ದಯೆ ಮುಂತಾದ ದಕ್ಷಕನ್ಯೆಯರು ಗಂಗಾದಿ ನದಿಗಳ ಸಹಿತ ಅತಿ ಪ್ರಸನ್ನತೆಯಿಂದ ಅವನಿಗೆ ಅಭಿಷೇಕ ಮಾಡಿದ್ದರು. ಆತನು ಬಯಸದಿದ್ದರೂ ಭೂದೇವಿಯು ಆತನ ಗುಣಗಳಿಗೆ ಅಧೀನಳಾಗಿ ಆತನ ಪ್ರಜೆಗಳಿಗೆ – ಆಕಳು ತನ್ನ ಕರುವಿಗೆ ಸ್ನೇಹದಿಂದ ಹಾಲನ್ನು ಉಣಿಸುವಂತೆ – ಧನ-ರತ್ನಾದಿ ಎಲ್ಲ ಅಭೀಷ್ಟ ಪದಾರ್ಥಗಳನ್ನು ಹೇರಳವಾಗಿ ಕೊಟ್ಟಿದ್ದಳು. ॥ ೧೦ ॥ ಅವನಿಗೆ ಯಾವುದೇ ಕಾಮನೆ ಇಲ್ಲದಿದ್ದರೂ ವೇದೋಕ್ತ ಕರ್ಮಗಳು ಎಲ್ಲ ರೀತಿಯ ಭೋಗಗಳನ್ನು ಕೊಟ್ಟಿದ್ದವು. ರಾಜರುಗಳು ಯುದ್ಧದಲ್ಲಿ ಅವನ ಬಾಣಗಳಿಂದ ಸತ್ಕೃತರಾಗಿ ನಾನಾ ರೀತಿಯ ಕಪ್ಪ-ಕಾಣಿಕೆಗಳನ್ನು ಕೊಡುತ್ತಿದ್ದರು. ಬ್ರಾಹ್ಮಣರು ದಕ್ಷಿಣೆಯೇ ಮುಂತಾದ ಧರ್ಮಗಳಿಂದ ಸಂತುಷ್ಟರಾಗಿ ತಮಗೆ ಪರಲೋಕದಲ್ಲಿ ದೊರೆಯಬಹುದಾದ ಧರ್ಮಫಲದ ಆರನೆಯ ಒಂದು ಭಾಗವನ್ನು ಕೊಟ್ಟಿದ್ದರು. ॥ ೧೧ ॥ ಅವನ ಯಜ್ಞದಲ್ಲಿ ಇಂದ್ರನು ಅತ್ಯಧಿಕ ಸೋಮಪಾನಮಾಡಿ ಮತ್ತೇರಿ ಹೋಗಿದ್ದನು. ಅವನು ಅತ್ಯಂತ ಶ್ರದ್ಧೆಯಿಂದಲೂ, ಪರಿಶುದ್ಧವಾದ ನಿಶ್ಚಲಭಕ್ತಿಯಿಂದಲೂ ಸಮರ್ಪಣೆ ಮಾಡಿದ ಯಜ್ಞಫಲವನ್ನು ಭಗವಾನ್ ಯಜ್ಞಪುರುಷನು ಸಾಕ್ಷಾತ್ತಾಗಿ ಪ್ರಕಟಗೊಂಡು ಸ್ವೀಕರಿಸಿದ್ದನು. ॥ ೧೨ ॥ ಯಾರು ತೃಪ್ತಿಗೊಂಡರೆ ಬ್ರಹ್ಮದೇವರಿಂದ ಹಿಡಿದು ದೇವತೆಗಳೂ, ಮನುಷ್ಯರೂ, ಪಶು-ಪಕ್ಷಿಗಳೂ, ವೃಕ್ಷಗಳೂ ಹಾಗೂ ತೃಣದವರೆಗಿನ ಸಮಸ್ತ ಜೀವಿಗಳು ಆಗಲೇ ತೃಪ್ತವಾಗುತ್ತವೋ, ಅಂತಹ ವಿಶ್ವಾತ್ಮನಾದ ಶ್ರೀಹರಿಯು ನಿತ್ಯತೃಪ್ತನಾಗಿದ್ದರೂ ರಾಜರ್ಷಿ ಗಯನ ಯಜ್ಞದಲ್ಲಿ ತೃಪ್ತನಾಗಿದ್ದನು. ಅದರಿಂದ ಅವನಿಗೆ ಸರಿಸಮಾನರಾದವರು ಬೇರೆ ವ್ಯಕ್ತಿಯು ಹೇಗೆ ಇರಬಲ್ಲನು? ॥ ೧೩ ॥

ಮಹಾರಾಜಾ! ಗಯನ ಪತ್ನಿಯಾದ ಗಯಂತಿಯಿಂದ ಚಿತ್ರರಥ, ಸುಗತಿ, ಅವರೋಧನ ಎಂಬ ಮೂವರು ಪುತ್ರರು ಹುಟ್ಟಿದರು. ಅವರಲ್ಲಿ ಚಿತ್ರರಥನ ಪತ್ನಿಯಾದ ಊರ್ಣಾಳಿಂದ 'ಸಾಮ್ರಾಟ್' ಎಂಬ ಪುತ್ರನು ಜನಿಸಿದನು. ॥ ೧೪ ॥ ಸಾಮ್ರಾಟನ ಹೆಂಡತಿ ಉತ್ಕಲೆಯಿಂದ ಮರೀಚಿಯೂ, ಮರೀಚಿಯ ಪತ್ನೀ ಬಿಂದುಮತಿಯಿಂದ ಬಿಂದುಮಾನ್ ಎಂಬ ಪುತ್ರನು ಹುಟ್ಟಿದನು. ಅವನ ಪತ್ನೀ

ವೀರವ್ರತಸ್ತತೋ ಭೋಜಾಯಾಂ ಮಂಥುಪ್ರಮಂಥೂ ಜಜ್ಞಾತೇ ಮಂಥೋಃ ಸತ್ಯಾಯಾಂ ಭೌವನಸ್ತತೋ ದೂಷಣಾಯಾಂ ತ್ವಷ್ಟಾಜನಿಷ್ಟ ತ್ವಷ್ಟುರ್ವಿರೋಚನಾಯಾಂ ವಿರಜೋ ವಿರಜಸ್ಯ ಶತಜಿತ್ಪ್ರವರಂ ಪುತ್ರಶತಂ ಕನ್ಯಾ ಚ ವಿಷೂಚ್ಯಾಂ ಕಿಲ ಜಾತಮ್ ॥ ೧೪ ॥

ತತ್ರಾಯಂ ಶ್ಲೋಕಃ

ಪ್ರೈಯವ್ರತಂ ವಂಶಮಿಮಂ ವಿರಜಶ್ಚರಮೋದ್ಭವಃ ।
ಅಕರೋದತ್ಯಲಂ ಕೀರ್ತ್ಯಾ ವಿಷ್ಣುಃ ಸುರಗಣಂ ಯಥಾ ॥ ೧೫ ॥

ಸರಸ್ವಾ ಇವಳಿಂದ ಮಧು, ಮಧುವಿನ ಪತ್ನೀ ಸುಮನಸೆಯಿಂದ ವೀರವ್ರತ ಮತ್ತು ವೀರವ್ರತನು ಭೋಜಾಳಿಂದ ಮಂಥು ಹಾಗೂ ಪ್ರಮಂಥು ಎಂಬ ಎರಡು ಪುತ್ರರನ್ನು ಪಡೆದನು. ಅವರಲ್ಲಿ ಮಂಥುವಿನ ಹೆಂಡತಿಯಾದ ಸತ್ಯೆಯ ಗರ್ಭದಿಂದ ಭೌವನನೂ, ಭೌವನನ ಪತ್ನೀ ದೂಷಣೆಯ ಉದರದಿಂದ ತ್ವಷ್ಟಾ ಎಂಬುವನೂ, ತ್ವಷ್ಟನ ಪತ್ನೀ ವಿರೋಚನೆಯಿಂದ ವಿರಜ ಮತ್ತು ವಿರಜನ ಪತ್ನಿ ವಿಷೂಚಿ ಎಂಬ ಭಾರ್ಯೆಯಲ್ಲಿ ಶತಜಿತ್ ಮುಂತಾದ ನೂರು ಪುತ್ರರು ಹಾಗೂ ಓರ್ವ ಕನ್ಯೆಯು ಜನಿಸಿದರು. ॥ ೧೪ ॥ ವಿರಜನ ವಿಷಯದಲ್ಲಿ ಈ ಶ್ಲೋಕವು ಪ್ರಸಿದ್ಧವಾಗಿದೆ – ಭಗವಾನ್ ವಿಷ್ಣುವು ದೇವತೆಗಳ ಶೋಭೆಯನ್ನು ಹೆಚ್ಚಿಸುವಂತೆ ಈ ಪ್ರಿಯವ್ರತ ವಂಶವನ್ನು ಇದರಲ್ಲಿ ಬಹಳ ಹಿಂದೆ ಉತ್ಪನ್ನನಾದ ರಾಜಾ ವಿರಜನು ತನ್ನ ಸತ್ಕೀರ್ತಿಯಿಂದ ವಿಭೂಷಿತಗೊಳಿಸಿದ್ದನು. ॥ ೧೫ ॥

ಹದಿನೈದನೆಯ ಅಧ್ಯಾಯವು ಮುಗಿಯಿತು. ॥ ೧೫ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಪಂಚಮಸ್ಕಂಧೇ ಪ್ರಿಯವ್ರತವಂಶಾನುಕೀರ್ತನಂ ನಾಮ ಪಂಚದಶೋಽಧ್ಯಾಯಃ ॥ ೧೫ ॥

ಹದಿನಾರನೆಯ ಅಧ್ಯಾಯ

ಭುವನ ಕೋಶದ ವರ್ಣನೆ

ರಾಜೋವಾಚ

ಉಕ್ತಸ್ತ್ವಯಾ ಭೂಮಂಡಲಾಯಾಮವಿಶೇಷೋ ಯಾವದಾದಿತ್ಯಸ್ತಪತಿ ಯತ್ರ ಚಾಸೌ ಜ್ಯೋತಿಷಾಂ ಗಣೈಶ್ಚಂದ್ರಮಾ ವಾ ಸಹ ದೃಶ್ಯತೇ ॥ ೧ ॥ ತತ್ರಾಪಿ ಪ್ರಿಯವ್ರತರಥಚರಣಪರಿಖಾತೈಃ ಸಪ್ತಭಿಃ ಸಪ್ತ ಸಿಂಧವ ಉಪಕ್ಲೃಪ್ತಾ ಯತ ಏತಸ್ಯಾಃ ಸಪ್ತದ್ವೀಪವಿಶೇಷವಿಕಲ್ಪಸ್ತ್ವಯಾ ಭಗವನ್ಖಲು ಸೂಚಿತ ಏತದೇವಾಖಿಲಮಹಂ ಮಾನತೋ ಲಕ್ಷಣತಶ್ಚ ಸರ್ವಂ ವಿಜಿಜ್ಞಾಸಾಮಿ ॥ ೨ ॥ ಭಗವತೋ ಗುಣಮಯೇ ಸ್ಥೂಲರೂಪ ಆವೇಶಿತಂ ಮನೋ ಹ್ಯಗುಣೇಽಪಿ ಸೂಕ್ಷ್ಮತಮ ಆತ್ಮಜ್ಯೋತಿಷಿ ಪರೇ ಬ್ರಹ್ಮಣಿ ಭಗವತಿ ವಾಸುದೇವಾಖ್ಯೇ ಕ್ಷಮಮಾವೇಶಿತುಂ ತದು ಹೈತದ್ಗುರೋಽರ್ಹಸ್ಯನುವರ್ಣಯಿತುಮಿತಿ ॥ ೩ ॥

ಋಷಿರುವಾಚ

ನ ವೈ ಮಹಾರಾಜ ಭಗವತೋ ಮಾಯಾಗುಣವಿಭೂತೇಃ ಕಾಷ್ಠಾಂ ಮನಸಾ ವಚಸಾ ವಾಧಿಗಂತುಮಲಂ ವಿಬುಧಾಯುಷಾಪಿ ಪುರುಷಸ್ತಸ್ಮಾತ್ಪ್ರಾಧಾನ್ಯೇನೈವ ಭೂಗೋ–

ಪರೀಕ್ಷಿದ್ರಾಜನು ಕೇಳಿದನು – ಮುನಿವರ್ಯರೇ! ಸೂರ್ಯನ ಪ್ರಕಾಶವು ಎಲ್ಲಿಯವರೆಗೆ ಹರಡಿದೆಯೋ, ನಕ್ಷತ್ರಗಣಸಮೇತನಾಗಿ ಚಂದ್ರನು ಕಾಣುತ್ತಾನೋ ಅಲ್ಲಿಯವರೆಗಿನ ಭೂಮಂಡಲದ ವಿಸ್ತಾರವನ್ನು ತಾವು ಸಂಕ್ಷೇಪವಾಗಿ ತಿಳಿಸಿರುವಿರಿ. ॥ ೧ ॥ ಅದರಲ್ಲಿಯೂ ಪ್ರಿಯವ್ರತ ಮಹಾರಾಜನ ರಥದ ಚಕ್ರಗಳಿಂದ ಏಳುಕೋಣೆಗಳಿಂದ ಏಳು ಸಮುದ್ರಗಳು ಉಂಟಾಗಿದ್ದವು. ಅದರಿಂದ ಈ ಭೂಮಂಡಲದಲ್ಲಿ ಏಳು ದ್ವೀಪಗಳ ವಿಭಾಗವಾಯಿತು ಎಂದು ತಾವು ತಿಳಿಸಿದ್ದೀರಿ. ಆದ್ದರಿಂದ ಪೂಜ್ಯರೇ! ಈಗ ನಾನು ಇವೆಲ್ಲವುಗಳ ವಿಸ್ತಾರ ಮತ್ತು ಲಕ್ಷಣಗಳ ಸಹಿತ ಎಲ್ಲ ವಿವರಣೆಯನ್ನು ಕೇಳಲು ಬಯಸುತ್ತೇನೆ. ॥ ೨ ॥ ಏಕೆಂದರೆ, ಯಾವ ಮನಸ್ಸು ಭಗವಂತನ ಈ ಗುಣಮಯ ಸ್ಥೂಲವಿಗ್ರಹದಲ್ಲಿ ತೊಡಗಿದರೆ, ಅವನ ವಾಸುದೇವ ಎಂದು ಕರೆಯಲ್ಪಡುವ ಸ್ವಯಂಪ್ರಕಾಶವೂ, ನಿರ್ಗುಣವೂ, ಬ್ರಹ್ಮರೂಪವೂ ಆದ ಸೂಕ್ಷ್ಮತಮ ಸ್ವರೂಪದಲ್ಲಿ ನೆಲೆಗೊಳ್ಳಲು ಸಂಭವವಿದೆ. ಆದ್ದರಿಂದ ಗುರುವರ್ಯರೇ! ಈ ವಿಷಯವನ್ನು ವಿಶದವಾಗಿ ವರ್ಣಿಸುವ ಕೃಪೆ ಮಾಡಬೇಕು. ॥ ೩ ॥

ಶ್ರೀಶುಕಮಹಾಮುನಿಗಳು ಹೇಳಿದರು – ಎಲೈ ಮಹಾರಾಜನೇ! ಭಗವಂತನ ಮಾಯೆಯ ಗುಣಗಳು ಅಂತ್ಯವನ್ನು ಮೀರಿವೆ. ಅವು ಎಷ್ಟು ವಿಸ್ತಾರವಾಗಿದೆ ಎಂದರೆ – ದೇವತೆಗಳ ಆಯುಸ್ಸನ್ನು ಪಡೆದರೂ ಮನಸ್ಸು ಮತ್ತು ಮಾತುಗಳಿಂದ ಅವುಗಳ ಮಹಿಮೆಯನ್ನು, ನಾಮ–ರೂಪಗಳನ್ನು ತಿಳಿಸಲು ಸಾಧ್ಯವಾಗ

ಲಕವಿಶೇಷಂ ನಾಮರೂಪಮಾನಲಕ್ಷಣತೋ ವ್ಯಾಖ್ಯಾಸ್ಯಾಮಃ ॥ ೪ ॥ ಯೋ ವಾಯಂ ದ್ವೀಪಃ ಕುವಲಯಕಮಲಕೋಶಾಭ್ಯಂತರಕೋಶೋ ನಿಯುತಯೋಜನವಿಶಾಲಃ ಸಮವರ್ತುಲೋ ಯಥಾ ಪುಷ್ಕರಪತ್ರಮ್ ॥ ೫ ॥ ಯಸ್ಮಿನ್ನವ ವರ್ಷಾಣಿ ನವಯೋಜನಸಹಸ್ರಾಯಾಮಾನ್ಯಷ್ಟಭಿರ್ಮರ್ಯಾದಾಗಿರಿಭಿಃ ಸುವಿಭಕ್ತಾನಿ ಭವಂತಿ ॥ ೬ ॥ ಏಷಾಂ ಮಧ್ಯೇ ಇಲಾವೃತಂ ನಾಮಾಭ್ಯಂತರವರ್ಷಂ ಯಸ್ಯ ನಾಭ್ಯಾಮವಸ್ಥಿತಃ ಸರ್ವತಃ ಸೌವರ್ಣಃ ಕುಲಗಿರಿರಾಜೋ ಮೇರುರ್ದ್ವೀಪಾಯಾಮಸಮುನ್ನಾಹಃ ಕರ್ಣಿಕಾಭೂತಃ ಕುವಲಯಕಮಲಸ್ಯ ಮೂರ್ಧನಿ ದ್ವಾತ್ರಿಂಶತ್ಸಹಸ್ರಯೋಜನವಿತತೋ ಮೂಲೇ ಷೋಡಶಸಹಸ್ರಂ ತಾವತಾಂತರ್ಭೂಮ್ಯಾಂ ಪ್ರವಿಷ್ಟಃ ॥ ೭ ॥ ಉತ್ತರೋತ್ತರೇಣೇಲಾವೃತಂ ನೀಲಃ ಶ್ವೇತಃ ಶೃಂಗವಾನಿತಿ ತ್ರಯೋ ರಮ್ಯಕಹಿರಣ್ಮಯಕುರೂಣಾಂ ವರ್ಷಾಣಾಂ ಮರ್ಯಾದಾಗಿರಯಃ ಪ್ರಾಗಾಯತಾ ಉಭಯತಃ ಕ್ಷಾರೋದಾವಧಯೋ ದ್ವಿಸಹಸ್ರಪೃಥವ ಏಕೈಕಶಃ ಪೂರ್ವಸ್ಮಾತ್ಪೂರ್ವಸ್ಮಾದುತ್ತರ ಉತ್ತರೋ ದಶಾಂಶಾಧಿಕಾಂಶೇನ ದೈರ್ಘ್ಯ ಏವ ಹ್ರಸಂತಿ ॥ ೮ ॥

ಏವಂ ದಕ್ಷಿಣೇನೇಲಾವೃತಂ ನಿಷಧೋ ಹೇಮಕೂಟೋ ಹಿಮಾಲಯ ಇತಿ ಪ್ರಾಗಾಯತಾ ಯಥಾನೀಲಾದಯೋಽಯುತಯೋಜನೋತ್ಸೇಧಾ ಹರಿವರ್ಷಕಿಂಪುರುಷಭಾರತಾನಾಂ ಯಥಾಸಂಖ್ಯಮ್ ॥ ೯ ॥ ತಥೈವೇಲಾವೃತಮಪರೇಣ ಪೂರ್ವೇಣ ಚ ಮಾಲ್ಯವದ್ಗಂಧಮಾದನಾವಾನೀಲನಿಷಧಾಯತೌ ದ್ವಿಸಹಸ್ರಂ ಪಪ್ರಥತುಃ ಕೇತುಮಾಲಭದ್ರಾಶ್ವಯೋಃ ಸೀಮಾನಂ ವಿದಧಾತೇ ॥ ೧೦ ॥ ಮಂದರೋ

ಾರದು. ಆದುದರಿಂದ ನಾನು ಮುಖ್ಯವಾಗಿ ಭೂಗೋಳದ ನಾಮ, ರೂಪ, ಪ್ರಮಾಣ ಮತ್ತು ಲಕ್ಷಣಗಳನ್ನು ವರ್ಣಿಸುವೆನು. ॥ ೪ ॥ ಭೂಮಂಡಲರೂಪೀ ಕಮಲದ ಕೋಶದಂತಿರುವ ಸಪ್ತ ದ್ವೀಪಗಳಲ್ಲಿ ಎಲ್ಲಕ್ಕಿಂತ ಒಳಗಿನ ಕೋಶವು ನಾವು ವಾಸಮಾಡುತ್ತಿರುವ ಈ ಜಂಬೂದ್ವೀಪವಾಗಿದೆ. ಇದರ ವಿಸ್ತಾರವು ಒಂದು ಲಕ್ಷಯೋಜನಗಳು. ಇದು ಕಮಲಪತ್ರದಂತೆ ದುಂಡಗೆ ಸಮವಾಗಿದೆ. ॥ ೫ ॥ ಈ ಜಂಬೂದ್ವೀಪದೊಳಗೆ ಒಂಭತ್ತು ಸಾವಿರ ಯೋಜನಗಳಷ್ಟು ವಿಸ್ತಾರವುಳ್ಳ (ಇಳಾವೃತ, ಭರತವರ್ಷ, ಹರಿವರ್ಷ, ಕಿಂಪುರುಷವರ್ಷ, ರಮ್ಯಕ, ಹಿರಣ್ಮಯ, ಕುರು, ಭದ್ರಾಶ್ವ ಮತ್ತು ಕೇತುಮಾಲ) ಒಂಭತ್ತು ವರ್ಷ (ವಿಭಾಗ) ಗಳಿವೆ. ಈ ವರ್ಷಗಳು (ನೀಲ, ಶ್ವೇತ, ಶೃಂಗವಂತ, ನಿಷಧ, ಹೇಮಕೂಟ, ಹಿಮಾಲಯ, ಮಾಲ್ಯವಂತ ಮತ್ತು ಗಂಧಮಾದನ ಎಂಬ) ಎಂಟು ಕುಲಪರ್ವತಗಳಿಂದ ವಿಂಗಡಿಸಲ್ಪಟ್ಟಿವೆ. ॥ ೬ ॥ ಇವುಗಳ ನಟ್ಟನಡುವೆ ಇಳಾವೃತವೆಂಬ ಹತ್ತನೆಯ ವರ್ಷವಿದೆ. ಇದರ ಮಧ್ಯದಲ್ಲಿ ಕುಲಪರ್ವತಗಳ ರಾಜ ಮೇರು ಪರ್ವತವಿದೆ. ಅದು ಭೂಮಂಡಲರೂಪೀ ಕಮಲದ ಕರ್ಣಿಕೆಯಂತೆ ಇದೆ. ಅದು ಮೇಲಿಂದ-ಕೆಳಗಿನವರೆಗೆ ಇಡೀ ಸುವರ್ಣಮಯವಾಗಿದೆ ಮತ್ತು ಒಂದು ಲಕ್ಷಯೋಜನ ಎತ್ತರವಾಗಿದೆ. ಅದರ ಶಿಖರದ ವಿಸ್ತಾರವು ಮೂವತ್ತೆರಡು ಸಾವಿರ ಯೋಜನಗಳು. ಕೆಳಗಡೆಯಲ್ಲಿ ಹದಿನಾರು ಸಾವಿರ ಯೋಜನಗಳಷ್ಟು ಭೂಮಿಯಲ್ಲಿ ಹೂತಿದೆ. ಅಂದರೆ ಭೂಮಿಯ ಮೇಲೆ ಎಂಭತ್ತನಾಲ್ಕು ಲಕ್ಷಯೋಜನ ಎತ್ತರವಾಗಿ ಕಾಣುವುದು. ॥ ೭ ॥ ಇಳಾವೃತವರ್ಷದ ಉತ್ತರದಲ್ಲಿ ಕ್ರಮಶಃ ನೀಲ, ಶ್ವೇತ ಮತ್ತು ಶೃಂಗವಾನ್ ಎಂಬ ಮೂರು ಪರ್ವತಗಳಿವೆ. ಅವು ರಮ್ಯಕ, ಹಿರಣ್ಮಯ, ಮತ್ತು ಕುರು ಎಂಬ ವರ್ಷಗಳ ಸೀಮೆಯನ್ನು ನಿರ್ಧರಿಸುತ್ತವೆ. ಅವು ಪೂರ್ವದಿಂದ ಪಶ್ಚಿಮದವರೆಗೆ ಉಪ್ಪುನೀರಿನ ಸಮುದ್ರದವರೆಗೆ ಹರಡಿಕೊಂಡಿವೆ. ಅವುಗಳಲ್ಲಿ ಪ್ರತಿಯೊಂದರ ಅಗಲವು ಎರಡುಸಾವಿರ ಯೋಜನಗಳಿವೆ ಹಾಗೂ ಉದ್ದದಲ್ಲಿ ಮೊದಲನೆಯದಕ್ಕಿಂತ ಹಿಂದಿನದು ಕ್ರಮವಾಗಿ ಹತ್ತನೆಯ ಒಂದಂಶದಿಂದ ಹೆಚ್ಚು-ಕಡಿಮೆ ಇದೆ. ಅಗಲ ಮತ್ತು ಎತ್ತರ ಎಲ್ಲದರಲ್ಲಿ ಒಂದೇ ಸಮವಾಗಿದೆ. ॥ ೮ ॥

ಇದೇ ರೀತಿಯಲ್ಲಿ ಇಳಾವೃತದ ದಕ್ಷಿಣದಲ್ಲಿ ಒಂದಾದ ಮೇಲೆ ಒಂದರಂತೆ ನಿಷಧ, ಹೇಮಕೂಟ, ಹಿಮಾಲಯ ಎಂಬ ಮೂರು ಪರ್ವತಗಳಿವೆ. ಇವೂ ಕೂಡ ನೀಲವೇ ಮುಂತಾದ ಪರ್ವತಗಳಂತೆ ಪೂರ್ವ-ಪಶ್ಚಿಮದ ಕಡೆಗೆ ಹರಡಿಕೊಂಡಿವೆ ಮತ್ತು ಹತ್ತುಸಾವಿರ ಯೋಜನ ಎತ್ತರವಾಗಿವೆ. ಇವುಗಳಿಂದ ಕ್ರಮವಾಗಿ ಹರಿವರ್ಷ, ಕಿಂಪುರುಷವರ್ಷ, ಭಾರತವರ್ಷದ ಸೀಮೆಗಳು ವಿಭಾಗವಾಗುತ್ತದೆ. ॥ ೯ ॥ ಇಳಾವೃತದ ಪೂರ್ವ ಮತ್ತು ಪಶ್ಚಿಮದ ಕಡೆಗೆ ಉತ್ತರದಲ್ಲಿ ನೀಲಪರ್ವತ ಮತ್ತು ದಕ್ಷಿಣದಲ್ಲಿ ನಿಷಧ ಪರ್ವತದವರೆಗೆ ಹರಡಿರುವ ಗಂಧಮಾದನ ಹಾಗೂ ಮಾಲ್ಯವಾನ್ ಎಂಬ ಎರಡು ಪರ್ವತಗಳಿವೆ. ಇವುಗಳ ಅಗಲ ಎರಡೆರಡು ಸಾವಿರ ಯೋಜನಗಳಿವೆ. ಇವು ಭದ್ರಾಶ್ವ ಹಾಗೂ ಕೇತುಮಾಲ ಎಂಬ ಎರಡು ವರ್ಷಗಳ ಸೀಮೆಯನ್ನು ನಿಶ್ಚಯಿಸುತ್ತವೆ. ॥ ೧೦ ॥

ಮೇರುಮಂದರಃ ಸುಪಾರ್ಶ್ವಃ ಕುಮುದ ಇತ್ಯಯುತಯೋಜನವಿಸ್ತಾರೋನ್ನಾಹಾ ಮೇರೋಶ್ಚತುರ್ದಿಶಮವಷ್ಟಂಭಗಿರಯ ಉಪಕ್ಲೃಪ್ತಾಃ ॥ ೧೧ ॥ ಚತುರ್ಷ್ವೇತೇಷು ಚೂತಜಂಬೂಕದಂಬನ್ಯಗ್ರೋಧಾಶ್ಚತ್ವಾರಃ ಪಾದಪಪ್ರವರಾಃ ಪರ್ವತಕೇತವ ಇವಾಧಿಸಹಸ್ರಯೋಜನೋನ್ನಾಹಾಸ್ತಾವದ್ ವಿಟಪವಿತತಯಃ ಶತಯೋಜನಪರಿಣಾಹಾಃ ॥ ೧೨ ॥ ಹ್ರದಾಶ್ಚತ್ವಾರಃ ಪಯೋಮಧ್ವಿಕ್ಷುರಸಮೃಷ್ಟಜಲಾ ಯದುಪಸ್ಪರ್ಶಿನ ಉಪದೇವಗಣಾ ಯೋಗೈಶ್ವರ್ಯಾಣಿ ಸ್ವಾಭಾವಿಕಾನಿ ಭರತರ್ಷಭ ಧಾರಯಂತಿ ॥ ೧೩ ॥ ದೇವೋದ್ಯಾನಾನಿ ಚ ಭವಂತಿ ಚತ್ವಾರಿ ನಂದನಂ ಚೈತ್ರರಥಂ ವೈಭ್ರಾಜಕಂ ಸರ್ವತೋಭದ್ರಮಿತಿ ॥ ೧೪ ॥ ಯೇಷ್ವಮರಪರಿವೃಢಾಃ ಸಹ ಸುರಲಲನಾಲಲಾಮಯೂಥಪತಯ ಉಪದೇವಗಣೈರುಪಗೀಯಮಾನಮಹಿಮಾನಃ ಕಿಲ ವಿಹರಂತಿ ॥ ೧೫ ॥

ಮಂದರೋತ್ಸಂಗ ಏಕಾದಶಶತಯೋಜನೋತ್ತುಂಗದೇವಚೂತಶಿರಸೋ ಗಿರಿಶಿಖರಸ್ಥೂಲಾನಿ ಫಲಾನ್ಯಮೃತಕಲ್ಪಾನಿ ಪತಂತಿ ॥ ೧೬ ॥ ತೇಷಾಂ ವಿಶೀರ್ಯಮಾಣಾನಾಮತಿಮಧುರಸುರಭಿಸುಗಂಧಿಬಹುಲಾರುಣರಸೋದೇನಾರುಣೋದಾ ನಾಮ ನದೀ ಮಂದರಗಿರಿಶಿಖರಾನ್ನಿಪತಂತೀ ಪೂರ್ವೇಣೇಲಾವೃತಮುಪಪ್ಲಾವಯತಿ ॥ ೧೭ ॥ ಯದುಪಜೋಷಣಾದ್ಭವಾನ್ಯಾ ಅನುಚರೀಣಾಂ ಪುಣ್ಯಜನವಧೂನಾಮವಯವಸ್ಪರ್ಶಸುಗಂಧವಾತೋ ದಶಯೋಜನಂ ಸಮಂತಾದನುವಾಸಯತಿ ॥ ೧೮ ॥ ಏವಂ ಜಂಬೂಫಲಾನಾಮತ್ಯುಚ್ಚನಿಪಾತವಿಶೀರ್ಣಾನಾಮನಸ್ಥಿಪ್ರಾಯಾಣಾಮಿಭಕಾಯನಿಭಾನಾಂ ರಸೇನ ಜಂಬೂ ನಾಮ ನದೀ ಮೇರುಮಂದರಶಿಖರಾದಯುತಯೋಜನಾದವನಿತಲೇ ನಿಪತಂತೀ ದಕ್ಷಿಣೇನಾತ್ಮಾನಂ ಯಾವದಿಲಾವೃತಮುಪಸ್ಯಂದಯತಿ ॥ ೧೯ ॥ ತಾವದುಭಯೋರಪಿ ರೋಧಸೋರ್ಯಾ ಮೃತ್ತಿಕಾ ತದ್ರಸೇನಾನುವಿಧ್ಯಮಾನಾ ವಾಯ್ವರ್ಕಸಂಯೋಗವಿಪಾಕೇನ ಸದಾಮರಲೋಕಾಭರಣಂ ಜಾಂಬೂನದಂ ನಾಮ ಸುವರ್ಣಂ ಭವತಿ ॥ ೨೦ ॥

ಇವಲ್ಲದೆ ಮಂದರ, ಮೇರುಮಂದರ, ಸುಪಾರ್ಶ್ವ, ಕುಮುದ ಎಂಬ ಹತ್ತುಸಾವಿರ ಯೋಜನಗಳಷ್ಟು ಎತ್ತರ ಮತ್ತು ಅಷ್ಟೇ ವಿಸ್ತಾರವುಳ್ಳ ನಾಲ್ಕು ಪರ್ವತಗಳು ಮೇರುಪರ್ವತಕ್ಕೆ ನಾಲ್ಕೂ ಕಡೆಗಳಲ್ಲಿ ಆಧಾರಸ್ತಂಭಗಳಂತೆ ಉಂಟಾಗಿವೆ. ॥ ೧೧ ॥ ಈ ನಾಲ್ಕು ಗಿರಿಗಳಲ್ಲಿಯೂ ಕ್ರಮವಾಗಿ ಅತಿದೊಡ್ಡದಾದ ಮಾವು, ನೇರಳೆ, ಕಡವಲು ಮತ್ತು ಆಲದ ಮರಗಳು ಧ್ವಜಗಳಂತೆ ಕಂಗೊಳಿಸುತ್ತಿವೆ. ಇವುಗಳಲ್ಲಿ ಪ್ರತಿಯೊಂದು ಹನ್ನೊಂದು ಸಾವಿರಯೋಜನ ಎತ್ತರವಾಗಿವೆ ಹಾಗೂ ಇಷ್ಟೇ ಇವುಗಳ ಶಾಖೆ (ಕೊಂಬೆ) ಗಳ ವಿಸ್ತಾರವಾಗಿದೆ. ಇವುಗಳ ದಪ್ಪವೂ ನೂರು-ನೂರು ಯೋಜನಗಳಷ್ಟಿದೆ. ॥ ೧೨ ॥ ಎಲೈ ಭರತಶ್ರೇಷ್ಠನೇ! ಈ ಪರ್ವತಗಳ ಮೇಲೆ ಕ್ರಮವಾಗಿ ಹಾಲು, ಜೇನುತುಪ್ಪ, ಕಬ್ಬಿನರಸ ಮತ್ತು ಸಿಹಿನೀರಿನಿಂದ ತುಂಬಿರುವ ನಾಲ್ಕು ಸರೋವರಗಳೂ ಇವೆ. ಇವುಗಳನ್ನು ಸೇವಿಸುವ ಯಕ್ಷ-ಕಿನ್ನರರೇ ಮುಂತಾದ ಉಪದೇವತೆಗಳಿಗೆ ಸ್ವಾಭಾವಿಕವಾಗಿಯೇ ಯೋಗಸಿದ್ಧಿಗಳು ಪ್ರಾಪ್ತವಾಗಿವೆ. ॥ ೧೩ ॥ ಇವುಗಳ ಮೇಲೆ ಕ್ರಮವಾಗಿ ನಂದನ, ಚೈತ್ರರಥ, ವೈಭ್ರಾಜಕ, ಸರ್ವತೋಭದ್ರ ಎಂಬ ನಾಲ್ಕು ದಿವ್ಯವಾದ ಉಪವನಗಳೂ ಇವೆ. ॥ ೧೪ ॥ ಇವುಗಳಲ್ಲಿ ಪ್ರಧಾನ-ಪ್ರಧಾನರಾದ ದೇವತೆಗಳು ಅನೇಕ ಸುರಸುಂದರಿಯರ ನಾಯಕರಾಗಿ ಜೊತೆ-ಜೊತೆಗೆ ವಿಹರಿಸುತ್ತಿರುತ್ತಾರೆ. ಆಗ ಗಂಧರ್ವರೇ ಮುಂತಾದ ಉಪದೇವತಾಗಣಗಳು ಇವರ ಮಹಿಮೆಯನ್ನು ಹೊಗಳುತ್ತಾ ಇರುತ್ತಾರೆ. ॥ ೧೫ ॥

ಮಂದರಗಿರಿಯ ತಪ್ಪಲಿನಲ್ಲಿರುವ ಹನ್ನೊಂದುಸಾವಿರಯೋಜನ ಎತ್ತರವಾದ ಆ ಮಾವಿನ ಮರದಿಂದ ಗಿರಿಶಿಖರಗಳಷ್ಟು ದೊಡ್ಡದಾದ, ಅಮೃತದಂತೆ ಸ್ವಾದಿಷ್ಟವಾದ ಹಣ್ಣುಗಳು ಉದುರುತ್ತಾ ಇರುತ್ತವೆ. ॥ ೧೬ ॥ ಅವು ಉದುರಿ ಒಡೆದುಹೋದಾಗ ಅವುಗಳಿಂದ ಅದ್ಭುತವಾದ ಸುಗಂಧದಿಂದ ಕೂಡಿದ, ಸಿಹಿಯಾದ, ಕೆಂಪಾದ ರಸವು ಹರಿಯತೊಡಗುತ್ತದೆ. ಅದೇ ಅರುಣೋದಾ ಎಂಬ ನದಿಯಾಗಿ ಮಂದರಾಚಲದ ಶಿಖರದಿಂದ ಧುಮುಕಿ ತನ್ನ ಜಲದಿಂದ ಇಳಾವೃತವರ್ಷದ ಪೂರ್ವಭಾಗವನ್ನು ನೆನೆಸುತ್ತದೆ. ॥ ೧೭ ॥ ಶ್ರೀಪಾರ್ವತಿಯ ಅನುಚರಿಯರಾದ ಯಕ್ಷಪತ್ನಿಯರು ಈ ಜಲವನ್ನು ಸೇವಿಸುತ್ತಾರೆ. ಇದರಿಂದ-ಅವರ ಅಂಗಸ್ಪರ್ಶಮಾಡಿ ಬೀಸುವ ಗಾಳಿಯು ಸುತ್ತಲೂ ಹತ್ತತ್ತು ಯೋಜನದವರೆಗಿನ ಪ್ರದೇಶವನ್ನು ಸುಗಂಧದಿಂದ ತುಂಬಿ ಬಿಡುವಷ್ಟು ಸುಗಂಧ ಅವರ ಮೈಯಿಂದ ಹೊರಡುತ್ತಿರುತ್ತದೆ. ॥ ೧೮ ॥ ಹೀಗೆಯೇ ನೇರಳೇ ಮರದಿಂದ ಆನೆಗಳಷ್ಟು ಗಾತ್ರದ ದೊಡ್ಡ-ದೊಡ್ಡದಾದ ಬೀಜಗಳೇ ಇಲ್ಲದ ಹಣ್ಣುಗಳು ಉದುರುತ್ತವೆ. ಬಹಳ ಎತ್ತರದಿಂದ ಬೀಳುವುದರಿಂದ ಅವು ಒಡೆದು ಅದರ ರಸವು ಜಂಬೂ ಎಂಬ ನದಿಯಾಗಿ ಪ್ರಕಟಗೊಂಡು ಮಂದರಪರ್ವತದ ಹತ್ತುಸಾವಿರಯೋಜನ ಎತ್ತರವಾದ ಶಿಖರದಿಂದ ಕೆಳಗೆ ಧುಮುಕಿ ಇಳಾವೃತದ ದಕ್ಷಿಣದ ಭೂಭಾಗವನ್ನು ನೆನೆಸುತ್ತದೆ. ॥ ೧೯ ॥ ಆ ನದಿಯ ಎರಡೂ ದಡದ ಮಣ್ಣು ಆ ರಸದಿಂದ ನೆನೆದು ವಾಯು ಮತ್ತು ಸೂರ್ಯರ ಸಂಯೋಗದಿಂದ ಒಣಗಿದಾಗ ಅದೇ ದೇವಲೋಕವನ್ನು ವಿಭೂಷಿತಗೊಳಿಸುವ 'ಜಾಂಬೂನದ' ಎಂಬ ಭಂಗಾರವಾಗುತ್ತದೆ. ॥ ೨೦ ॥

ಯದುಹ ವಾವ ವಿಬುಧಾದಯಃ ಸಹ ಯುವತಿಭಿರ್ಮುಕುಟಕಟಕಕಟಿಸೂತ್ರಾದ್ಯಾಭರಣರೂಪೇಣ ಖಲು ಧಾರಯಂತಿ ॥ ೨೧ ॥

ಯಸ್ತು ಮಹಾಕದಂಬಃ ಸುಪಾರ್ಶ್ವನಿರೂಢೋ ಯಾಸ್ತಸ್ಯ ಕೋಟರೇಭ್ಯೋ ವಿನಿಃಸೃತಾಃ ಪಂಚಾಯಾಮಪರಿಣಾಹಾಃ ಪಂಚ ಮಧುಧಾರಾಃ ಸುಪಾರ್ಶ್ವಶಿಖರಾತ್ಪತಂತ್ಯೋಽಪರೇಣಾತ್ಮಾನಮಿಲಾವೃತಮನುಮೋದಯಂತಿ ॥ ೨೨ ॥ ಯಾ ಹ್ಯುಪಯುಂಜಾನಾನಾಂ ಮುಖನಿರ್ವಾಸಿತೋ ವಾಯುಃ ಸಮಂತಾಚ್ಛತಯೋಜನಮನುವಾಸಯತಿ ॥ ೨೩ ॥

ಏವಂ ಕುಮುದನಿರೂಢೋ ಯಃ ಶತವಲ್ಶೋ ನಾಮ ವಟಸ್ತಸ್ಯ ಸ್ಕಂಧೇಭ್ಯೋ ನೀಚೀನಾಃ ಪಯೋದಧಿಮಧುಘೃತಗುಡಾನ್ನಾದ್ಯಂಬರಶಯ್ಯಾಸನಾಭರಣಾದಯಃ ಸರ್ವ ಏವ ಕಾಮದುಘಾ ನದಾಃ ಕುಮುದಾಗ್ರಾತ್ಪತಂತಸ್ತಮುತ್ತರೇಣೇಲಾವೃತಮುಪಯೋಜಯಂತಿ ॥ ೨೪ ॥ ಯಾನುಪಜುಷಾಣಾನಾಂ ನ ಕದಾಚಿದಪಿ ಪ್ರಜಾನಾಂ ವಲೀಪಲಿತಕ್ಲಮಸ್ವೇದದೌರ್ಗಂಧ್ಯಜರಾಮಯಮೃತ್ಯುಶೀತೋಷ್ಣವೈವರ್ಣ್ಯೋಪಸರ್ಗಾದಯಸ್ತಾಪವಿಶೇಷಾ ಭವಂತಿ ಯಾವಜ್ಜೀವಂ ಸುಖಂ ನಿರತಿಶಯಮೇವ ॥ ೨೫ ॥

ಕುರಂಗಕುರರಕುಸುಂಭವೈಕಂಕತ್ರಿಕೂಟಶಿಶಿರಪತಂಗರುಚಕನಿಷಧಶಿನೀವಾಸಕಪಿಲಶಂಖವೈದೂರ್ಯಜಾರುಧಿಹಂಸರ್ಷಭನಾಗಕಾಲಂಜರನಾರದಾದಯೋ ವಿಂಶತಿಗಿರಯೋ ಮೇರೋಃ ಕರ್ಣಿಕಾಯಾ ಇವ ಕೇಸರಭೂತಾ ಮೂಲದೇಶೇ ಪರಿತ ಉಪಕ್ಲೃಪ್ತಾಃ ॥ ೨೬ ॥ ಜಠರದೇವಕೂಟೌ ಮೇರುಂ ಪೂರ್ವೇಣಾಷ್ಟಾದಶಯೋಜನಸಹಸ್ರಮುದಗಾಯತೌ ದ್ವಿಸಹಸ್ರಂ ಪೃಥುತುಂಗೌ ಭವತಃ । ಏವಮಪರೇಣ ಪವನಪಾರಿಯಾತ್ರೌ ದಕ್ಷಿಣೇನ ಕೈಲಾಸಕರವೀರೌ ಪ್ರಾಗಾಯತಾವೇವಮುತ್ತರತಸ್ತ್ರಿಶೃಂಗಮಕರಾವಷ್ಟಭಿರೇತೈಃ ಪರಿಸೃತೋಽಗ್ನಿರಿವ ಪರಿತಶ್ಚಕಾಸ್ತಿ

ಇದನ್ನು ದೇವತೆಗಳು, ಗಂಧರ್ವರು ಮುಂತಾದವರು ತರುಣಿಯರಾದ ಸ್ತ್ರೀಯರ ಸಹಿತ ಕಿರೀಟ, ಕಂಕಣ, ಉಡಿದಾರ ಮುಂತಾದ ಆಭರಣಗಳ ರೂಪದಲ್ಲಿ ಧರಿಸುತ್ತಾರೆ. ॥ ೨೧ ॥

ಸುಪಾರ್ಶ್ವಪರ್ವತದ ಮೇಲೆ ಇರುವ ಕದಂಬಮರದ ಐದು ಪೊಟರೆಗಳಿಂದ ಐದು ಮಾರುಗಳ ಗಾತ್ರವಿರುವ ಐದು ಜೇನುತುಪ್ಪದ ಧಾರೆಗಳು ಹರಿದುಬರುತ್ತವೆ. ಅವು ಸುಪಾರ್ಶ್ವ ಶಿಖರದಿಂದ ಧುಮುಕಿ ಇಳಾವೃತವರ್ಷದ ಪಶ್ಚಿಮದ ಭಾಗವನ್ನು ತನ್ನ ಸುಗಂಧದಿಂದ ಸುವಾಸನೆಗೊಳಿಸುತ್ತವೆ. ॥ ೨೨ ॥ ಆ ಜೇನುರಸವನ್ನು ಕುಡಿದವರ ಮುಖದಿಂದ ಹೊರಟ ವಾಯುವು ಸುತ್ತಲೂ ನೂರು-ನೂರು ಯೋಜನಗಳವರೆಗೆ ಅದರ ಸುಗಂಧವನ್ನು ಹರಡಿಕೊಳ್ಳುತ್ತದೆ. ॥ ೨೩ ॥

ಇದೇ ರೀತಿ ಕುಮುದ ಪರ್ವತದಮೇಲೆ ಬೆಳೆದಿರುವ ಶತವಲ್ಶವೆಂಬ ಆಲದ ಮರದ ದೊಡ್ಡ ಕೊಂಬೆಗಳಿಂದ ಹರಿದುಬರುವ ಅನೇಕ ನದಗಳಿವೆ. ಅವೆಲ್ಲವೂ ಇಷ್ಟಾನುಸಾರವಾದ ಭೋಗಗಳನ್ನು ಕೊಡುತ್ತವೆ. ಅವುಗಳಿಂದ ಹಾಲು, ಮೊಸರು, ಜೇನು, ತುಪ್ಪ, ಬೆಲ್ಲ, ಅನ್ನ, ವಸ್ತ್ರ, ಶಯ್ಯೆ, ಆಸನ ಮತ್ತು ಆಭೂಷಣ ಮುಂತಾದ ಎಲ್ಲ ಪದಾರ್ಥಗಳು ದೊರೆಯಬಲ್ಲವು. ಅವೆಲ್ಲವೂ ಕುಮುದ ಶಿಖರದಿಂದ ಧುಮುಕಿ ಇಳಾವೃತದ ಉತ್ತರದ ಭಾಗವನ್ನು ನೆನೆಸುತ್ತವೆ. ॥ ೨೪ ॥ ಇವುಗಳು ಕೊಟ್ಟಿರುವ ಪದಾರ್ಥಗಳನ್ನು ಉಪಭೋಗಿಸುವುದರಿಂದ ಅಲ್ಲಿಯ ಪ್ರಜೆಗಳಲ್ಲಿ ತ್ವಚೆಯಲ್ಲಿ ನೆರಿಗೆ ಬೀಳುವುದು, ಕೂದಲು ಹಣ್ಣಾಗುವುದು, ಬಳಲಿಕೆ ಉಂಟಾಗುವುದು, ಮುಪ್ಪು, ರೋಗ, ಮೃತ್ಯು, ಶೀತ, ಸೆಕೆಯಬಾಧೆ, ಶರೀರವು ಕಾಂತಿಹೀನವಾಗುವುದು ಹಾಗೂ ಅವಯವಗಳು ತುಂಡರಿಸುವುದು ಮುಂತಾದ ಕಷ್ಟಗಳು ಎಂದೂ ತೊಂದರೆ ಕೊಡುವುದಿಲ್ಲ ಮತ್ತು ಜೀವನವಿಡೀ ಪೂರ್ಣಸುಖವು ದೊರೆಯುತ್ತದೆ. ॥ ೨೫ ॥

ಎಲೈ ರಾಜನೇ! ಕಮಲದ ಕರ್ಣಿಕೆಯ ಸುತ್ತಲೂ ಕೇಸರವಿರುವಂತೆ ಮೇರು ಪರ್ವತದ ಬುಡದಲ್ಲಿ ಅದರ ಸುತ್ತಲೂ ಕುರಂಗ, ಕುರರ, ಕುಸುಂಭ, ವೈಕಂಕ, ತ್ರಿಕೂಟ, ಶಿಶಿರ, ಪತಂಗ, ರುಚಕ, ನಿಷಧ, ಶಿನೀವಾಸ, ಕಪಿಲ, ಶಂಖ, ವೈಡೂರ್ಯ, ಜಾರುಧಿ, ಹಂಸ, ಋಷಭ, ನಾಗ, ಕಾಲಂಜರ ಮತ್ತು ನಾರದ ಮುಂತಾದ ಇಪ್ಪತ್ತು ಪರ್ವತಗಳು ಇನ್ನೂ ಇವೆ. ॥ ೨೬ ॥ ಇವಲ್ಲದೆ ಮೇರುವಿನ ಪೂರ್ವಕ್ಕೆ ಜಠರ, ದೇವಕೂಟ ಎಂಬ ಎರಡು ಪರ್ವತಗಳಿವೆ. ಅವು ಹದಿನೆಂಟು-ಹದಿನೆಂಟುಸಾವಿರ ಯೋಜನ ಉದ್ದ ಹಾಗೂ ಎರಡೆರಡು ಸಾವಿರ ಯೋಜನ ಅಗಲ ಮತ್ತು ಎತ್ತರವಾಗಿವೆ. ಹೀಗೆಯೇ ಪಶ್ಚಿಮದ ಕಡೆಗೆ ಪವನ, ಪಾರಿಯಾತ್ರ, ದಕ್ಷಿಣದ ಕಡೆಗೆ ಕೈಲಾಸ, ಕರವೀರ ಹಾಗೂ ಉತ್ತರಕ್ಕೆ ತ್ರಿಶೃಂಗ ಮಕರ ಎಂಬ ಪರ್ವತಗಳು ಇವೆ. ಈ ಎಂಟು ಪರ್ವತಗಳಿಂದ ಸುತ್ತುವರಿದ ಸುವರ್ಣಗಿರಿ ಮೇರುವು ಅಗ್ನಿಯಂತೆ ಹೊಳೆಯುತ್ತದೆ. ॥ ೨೭ ॥ ಮೇರುವಿನ ಶಿಖರದ ನಟ್ಟನಡುವೆ ಭಗವಾನ್ ಬ್ರಹ್ಮದೇವರ ಸುವರ್ಣಮಯ ಪುರಿಯು ಇದೆ ಎಂದು ಹೇಳುತ್ತಾರೆ. ಅದು ಆಕಾರದಲ್ಲಿ ಚೌಕಾಕಾರವಾಗಿದ್ದು ಕೋಟಿ ಯೋಜನ ವಿಸ್ತಾರವಾಗಿದೆ. ॥ ೨೮ ॥

ಕಾಂಚನಗಿರಿಃ ॥ ೨೭ ॥ ಮೇರೋರ್ಮೂರ್ಧನಿ ಭಗವತ ಆತ್ಮಯೋನೇರ್ಮಧ್ಯತ ಉಪಕ್ಲೃಪ್ತಾಂ ಪುರೀಮಯುತಯೋಜನಸಾಹಸ್ರೀಂ ಸಮಚತುರಸ್ರಾಂ ಶಾತಕೌಂಭೀಂ ವದಂತಿ ॥ ೨೮ ॥ ತಾಮನು ಪರಿತೋ ಲೋಕಪಾಲಾನಾಮಷ್ಟಾನಾಂ ಯಥಾದಿಶಂ ಯಥಾರೂಪಂ ತುರೀಯಮಾನೇನ ಪುರೋಽಷ್ಟಾವುಪಕ್ಲೃಪ್ತಾಃ ॥ ೨೯ ॥

ಅದರ ಕೆಳಗೆ ಪೂರ್ವವೇ ಮುಂತಾದ ನಾಲ್ಕು ದಿಕ್ಕುಗಳಲ್ಲಿ ಮತ್ತು ಉಪದಿಕ್ಕುಗಳಲ್ಲಿ ಅವುಗಳ ಅಧಿಪತಿಗಳಾದ ಇಂದ್ರಾದಿ ಎಂಟು ಲೋಕಪಾಲಕರ ಎಂಟು ಪುರಗಳು ಇವೆ. ಅವು ತಮ್ಮ-ತಮ್ಮ ಒಡೆಯರಿಗನುರೂಪವಾಗಿ ಆಯಾಯಾ ದಿಕ್ಕುಗಳಲ್ಲಿ ಇವೆ ಹಾಗೂ ವಿಸ್ತಾರದಲ್ಲಿ ಬ್ರಹ್ಮದೇವರ ಪುರಕ್ಕಿಂತ ನಾಲ್ಕನೆಯ ಒಂದಂಶ ಇವೆ ॥ ೨೯ ॥

ಹದಿನಾರನೆಯ ಅಧ್ಯಾಯವು ಮುಗಿಯಿತು. ॥ ೧೬ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಪಂಚಮಸ್ಕಂಧೇ
ಭುವನಕೋಶವರ್ಣನೇ ನಾಮ ಷೋಡಶೋಽಧ್ಯಾಯಃ ॥ ೧೬ ॥

ಹದಿನೇಳನೆಯ ಅಧ್ಯಾಯ

ಗಂಗಾದೇವಿಯ ವರ್ಣನೆ– ಭಗವಾನ್ ಶಂಕರನು ಮಾಡಿದ ಸಂಕರ್ಷಣಸ್ತುತಿ

ಶ್ರೀಶುಕ ಉವಾಚ

ತತ್ರ ಭಗವತಃ ಸಾಕ್ಷಾದ್ಯಜ್ಞಲಿಂಗಸ್ಯ ವಿಷ್ಣೋರ್ವಿಕ್ರಮತೋ ವಾಮಪಾದಾಂಗುಷ್ಠನಖನಿರ್ಭಿನ್ನೋರ್ಧ್ವಾಂಡಕಟಾಹವಿವರೇಣಾಂತಃಪ್ರವಿಷ್ಟಾ ಯಾ ಬಾಹ್ಯಜಲಧಾರಾ ತಚ್ಚರಣಪಂಕಜಾವನೇಜನಾರುಣಕಿಂಜಲ್ಕೋಪರಂಜಿತಾಖಿಲಜಗದಘಮಲಾಪಹೋಪಸ್ಪರ್ಶನಾಮಲಾ ಸಾಕ್ಷಾದ್ಭಗವತ್ಪದೀತ್ಯನುಪಲಕ್ಷಿತವಚೋಽಭಿಧೀಯಮಾನಾತಿಮಹತಾ ಕಾಲೇನ ಯುಗಸಹಸ್ರೋಪಲಕ್ಷಣೇನ ದಿವೋ ಮೂರ್ಧನ್ಯವತತಾರ ಯತ್ತದ್ವಿಷ್ಣುಪದಮಾಹುಃ ॥ ೧ ॥ ಯತ್ರ ಹ ವಾವ ವೀರವ್ರತ ಔತ್ತಾನಪಾದಿಃ ಪರಮಭಾಗವತೋಽಸ್ಮತ್ಕುಲದೇವತಾಚರಣಾರವಿಂದೋದಕಮಿತಿ ಯಾಮನುಸವನಮುತ್ಕೃಷ್ಯಮಾಣಭಗವದ್ಭಕ್ತಿಯೋಗೇನ ದೃಢಂ ಕ್ಲಿದ್ಯಮಾನಾಂತರ್ಹೃದಯ ಔತ್ಕಂಠ್ಯವಿವಶಾಮೀಲಿತಲೋಚನಯುಗಲಕುಡ್ಮಲವಿಗಲಿತಾಮಲಬಾಷ್ಪಕಲಯಾಭಿವ್ಯಜ್ಯಮಾನರೋಮಪುಲಕಕುಲಕೋಽಧುನಾಪಿ ಪರಮಾದರೇಣ ಶಿರಸಾ ಬಿಭರ್ತಿ ॥ ೨ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಯಜ್ಞಮೂರ್ತಿಯಾದ ಸಾಕ್ಷಾತ್ ಭಗವಾನ್ ಮಹಾವಿಷ್ಣುವು ಬಲಿಚಕ್ರವರ್ತಿಯ ಯಜ್ಞಶಾಲೆಯಲ್ಲಿ ಮೂರು ಲೋಕಗಳನ್ನು ಅಳೆಯಲು ತನ್ನ ಪಾದಗಳನ್ನು ಚಾಚಿದಾಗ ಅವನ ಎಡಪಾದದ ಅಂಗುಷ್ಠದ ಉಗುರಿನಿಂದ ಬ್ರಹ್ಮಾಂಡಕಟಾಹದ ಮೇಲ್ಭಾಗವು ಒಡೆದು ಹೋಯಿತು. ಆ ರಂಧ್ರದ ಮೂಲಕ ಬ್ರಹ್ಮಾಂಡದ ಹೊರಗೆ ಹರಿದುಬಂದ ಜಲಧಾರೆಯು ಭಗವಂತನ ಚರಣಕಮಲವನ್ನು ತೊಳೆದುದರಿಂದ ಅದಕ್ಕೆ ಅಂಟಿಕೊಂಡಿದ್ದ ಕುಂಕುಮ-ಕೇಸರಗಳಿಂದ ಅದು ಕೆಂಪೇರಿತು. ಆ ನಿರ್ಮಲಧಾರೆಯ ಸ್ಪರ್ಶವಾದೊಡನೆಯೇ ಜಗತ್ತಿನ ಸರ್ವಪಾಪಗಳೂ ತೊಳೆದುಹೋಗುತ್ತವೆ. ಆದರೆ ಅದು ಮಾತ್ರ ಪೂರ್ಣವಾಗಿ ಶುದ್ಧವಾಗಿಯೇ ಇರುತ್ತದೆ. ಮೊದಲಿಗೆ ಬೇರೆ ಯಾವುದೇ ಹೆಸರಿನಿಂದ ಕರೆಯದೆ 'ಭಗವತ್ಪದೀ' ಎಂದೇ ಕರೆಯುತ್ತಿದ್ದರು. ■ ಧಾರೆಯು ಸಾವಿರ ಯುಗಗಳು ಕಳೆದ ಬಳಿಕ ಸ್ವರ್ಗದ ಶಿರೋಭಾಗದಲ್ಲಿ 'ವಿಷ್ಣುಪದ'ವೆಂದೂ ಕರೆಯಲ್ಪಡುವ ಧ್ರುವಲೋಕಕ್ಕೆ ಇಳಿಯಿತು. ॥ ೧ ॥ ವೀರವ್ರತ ಪರೀಕ್ಷಿತನೇ! ಆ ಧ್ರುವಲೋಕದಲ್ಲಿಯೇ ಉತ್ತಾನಪಾದನ ಪುತ್ರನೂ ಪರಮ ಭಾಗವತೋತ್ತಮನೂ ಆದ ಧ್ರುವನು ವಾಸಿಸುವನು. ಅವನು ಪ್ರತಿದಿನವೂ ವೃದ್ಧಿಹೊಂದುತ್ತಿರುವ ಭಕ್ತಿಯೋಗದಿಂದ – 'ಇದು ನಮ್ಮ ಕುಲದೇವತೆಯ ಶ್ರೀಪಾದತೀರ್ಥವಾಗಿದೆ' ಎಂದು ತಿಳಿದುಕೊಂಡು ಇಂದೂ ಕೂಡ ಆ ಜಲವನ್ನು ತುಂಬಾ ಆದರದಿಂದ ತಲೆಯಲ್ಲಿ ಧರಿಸುತ್ತಾನೆ. ದೃಢವಾದ ಭಕ್ತಿಯೋಗದಿಂದ ಹೃದಯವು ಗದ್ಗದಿತವಾಗಿ ಉತ್ಕಂಠತೆಯಿಂದ ಪರವಶನಾಗಿ ಮುಚ್ಚಿಕೊಂಡಿರುವ ತನ್ನ ನೇತ್ರಕಮಲಗಳಿಂದ ನಿರ್ಮಲವಾದ ಆನಂದಬಾಷ್ಪಗಳು ಹರಿಯತೊಡಗಿ, ಶರೀರವು ರೋಮಾಂಚವಾಗುತ್ತದೆ. ॥ ೨ ॥

ತತಃ ಸಪ್ತಋಷಯಸ್ತತ್ಪ್ರಭಾವಾಭಿಜ್ಞಾ ಯಾಂ ನನು ತಪಸ ಆತ್ಯಂತಿಕೀ ಸಿದ್ಧಿರೇತಾವತೀ ಭಗವತಿ ಸರ್ವಾತ್ಮನಿ ವಾಸುದೇವೇಽನುಪರತಭಕ್ತಿಯೋಗಲಾಭೇನೈವೋಪೇಕ್ಷಿತಾನ್ಯಾರ್ಥಾತ್ಮಗತಯೋ ಮುಕ್ತಿಮಿವಾಗತಾಂ ಮುಮುಕ್ಷವ ಇವ ಸಬಹುಮಾನಮದ್ಯಾಪಿ ಜಟಾಜೂಟೈರುದ್ವಹಂತಿ ॥ ೩ ॥ ತತೋಽನೇಕಸಹಸ್ರಕೋಟಿವಿಮಾನಾನೀಕಸಂಕುಲದೇವಯಾನೇನಾವತರಂತೀಂದುಮಂಡಲಮಾವಾರ್ಯ ಬ್ರಹ್ಮಸದನೇ ನಿಪತತಿ ॥ ೪ ॥

ತತ್ರ ಚತುರ್ಧಾ ಭಿದ್ಯಮಾನಾ ಚತುರ್ಭಿರ್ನಾಮಭಿಶ್ಚತುರ್ದಿಶಮಭಿಸ್ಪಂದಂತೀ ನದನದೀಪತಿಮೇವಾಭಿನಿವಿಶತಿ ಸೀತಾಲಕನಂದಾ ಚಕ್ಷುರ್ಭದ್ರೇತಿ ॥ ೫ ॥ ಸೀತಾ ತು ಬ್ರಹ್ಮಸದನಾತ್ಕೇಸರಾಚಲಾದಿಗಿರಿಶಿಖರೇಭ್ಯೋಽಧೋಽಧಃ ಪ್ರಸ್ರವಂತೀ ಗಂಧಮಾದನಮೂರ್ಧಸು ಪತಿತ್ವಾಂತರೇಣ ಭದ್ರಾಶ್ವವರ್ಷಂ ಪ್ರಾಚ್ಯಾಂ ದಿಶಿ ಕ್ಷಾರಸಮುದ್ರಮಭಿಪ್ರವಿಶತಿ ॥ ೬ ॥ ಏವಂ ಮಾಲ್ಯವಚ್ಛಿಖರಾನ್ನಿಷ್ಪತಂತೀ ತತೋಽನುಪರತವೇಗಾ ಕೇತುಮಾಲಮಭಿ ಚಕ್ಷುಃ ಪ್ರತೀಚ್ಯಾಂ ದಿಶಿ ಸರಿತ್ಪತಿಂ ಪ್ರವಿಶತಿ ॥ ೭ ॥ ಭದ್ರಾ ಚೋತ್ತರತೋ ಮೇರುಶಿರಸೋ ನಿಪತಿತಾ ಗಿರಿಶಿಖರಾದ್ಗಿರಿಶಿಖರಮತಿಹಾಯ ಶೃಂಗವತಃ ಶೃಂಗಾದವಸ್ಯಂದಮಾನಾ ಉತ್ತರಾಂಸ್ತು ಕುರೂನಭಿತ ಉದೀಚ್ಯಾಂ ದಿಶಿ ಜಲಧಿಮಭಿಪ್ರವಿಶತಿ ॥ ೮ ॥ ತಥೈವಾಲಕನಂದಾ ದಕ್ಷಿಣೇನ ಬ್ರಹ್ಮಸದನಾದ್ಬಹೂನಿ ಗಿರಿಕೂಟಾನ್ಯತಿಕ್ರಮ್ಯ ಹೇಮಕೂಟಾದ್ಧೈಮಕೂಟಾನ್ಯತಿರಭಸತರರಂಹಸಾ ಲುಠಯಂತೀ ಭಾರತಮಭಿವರ್ಷಂ ದಕ್ಷಿಣಸ್ಯಾಂ ದಿಶಿ ಜಲಧಿಮಭಿಪ್ರವಿಶತಿ ಯಸ್ಯಾಂ ಸ್ನಾನಾರ್ಥಂ ಚಾಗಚ್ಛತಃ ಪುಂಸಃ ಪದೇ ಪದೇಽಶ್ವಮೇಧರಾಜಸೂಯಾದೀನಾಂ ಫಲಂ ನ ದುರ್ಲಭಮಿತಿ ॥ ೯ ॥ ಅನ್ಯೇ ಚ ನದಾ ನದ್ಯಶ್ಚ ವರ್ಷೇ ವರ್ಷೇ ಸಂತಿ ಬಹುಶೋ ಮೇರ್ವಾದಿಗಿರಿದುಹಿತರಃ ಶತಶಃ ॥ ೧೦ ॥

ಇದಾದ ಬಳಿಕ ಆತ್ಮನಿಷ್ಠರಾದ ಸಪ್ತರ್ಷಿಗಳು ■ ತೀರ್ಥದ ಮಹಿಮೆಯನ್ನರಿತು – 'ಇದೇ ನಮ್ಮ ತಪಸ್ಸಿನ ಕೊನೆಯ ಸಿದ್ಧಿ' ಎಂದು ತಿಳಿದುಕೊಂಡು ಇಂದೂ ಕೂಡ – ಮುಮುಕ್ಷುಗಳು ಪ್ರಾಪ್ತವಾದ ಮುಕ್ತಿಯನ್ನು ತಮ್ಮ ಜಟಾಜೂಟದಲ್ಲಿ ಧರಿಸಿಕೊಳ್ಳುವಂತೆ – ಇದನ್ನು ಆದರಪೂರ್ವಕವಾಗಿ ಧರಿಸಿಕೊಳ್ಳುವರು. ಆ ಸಪ್ತರ್ಷಿಗಳು ತತ್ತ್ವಜ್ಞಾನವನ್ನು ಕಡೆಗಣಿಸಿ ಸರ್ವಾತ್ಮಕನಾದ ವಾಸುದೇವನನ್ನು ಕುರಿತು ನಿಶ್ಚಲವಾದ ಭಕ್ತಿಯೋಗವನ್ನೇ ತಮ್ಮ ಪರಮಾರ್ಥವೆಂದು ಭಾವಿಸಿ ಇತರ ಎಲ್ಲ ಕಾಮನೆಗಳನ್ನು ತೊರೆಯುವರು. ಇಂತಹ ನಿಷ್ಕಾಮರೂ ಕೂಡ ತಮ್ಮ ಶಿರಸ್ಸಿನಲ್ಲಿ ಪರಮಾದರದಿಂದ ತಳೆಯುತ್ತಿರುವ ತೀರ್ಥವಿದು. ॥ ೩ ॥ ಈ ದಿವ್ಯಗಂಗೆಯು ಅಲ್ಲಿಂದ ಕೋಟ್ಯಂತರ ವಿಮಾನಗಳಿಂದ ಸುತ್ತುವರಿಯಲ್ಪಟ್ಟಿರುವ ಆಕಾಶಮಾರ್ಗವಾಗಿ ಹರಿದುಬಂದು ಚಂದ್ರಮಂಡಲವನ್ನು ನೆನೆಸುತ್ತಾ, ಮೇರುವಿನ ಶಿಖರದಲ್ಲಿರುವ ಬ್ರಹ್ಮಲೋಕದಲ್ಲಿ ಬಂದು ಬೀಳುವಳು. ॥ ೪ ॥

ಅಲ್ಲಿ ಅದು ಸೀತಾ, ಅಲಕನಂದಾ, ಚಕ್ಷು ಮತ್ತು ಭದ್ರಾ ಎಂಬ ನಾಲ್ಕು ಹೆಸರುಗಳಿಂದ ಕವಲೊಡೆದು ಬೇರೆ-ಬೇರೆಯಾಗಿ ನಾಲ್ಕು ದಿಕ್ಕುಗಳಲ್ಲಿ ಹರಿಯುತ್ತಾ ಕಡೆಗೆ ನದ-ನದಿಗಳಿಗೆ ಅಧಿಪತಿಯಾದ ಸಮುದ್ರವನ್ನು ಸೇರುವುದು. ॥ ೫ ॥ ಇವುಗಳಲ್ಲಿ ಸೀತಾ ಎಂಬ ಧಾರೆಯು ಬ್ರಹ್ಮಪುರಿಯಿಂದ ಧುಮುಕಿ ಕೇಸರಾಚಲವೇ ಮುಂತಾದ ಗಿರಿಗಳ ಸರ್ವೋಚ್ಚ ಶಿಖರಗಳ ಮಾರ್ಗವಾಗಿ ಕೆಳಗಡೆಗೆ ಹರಿಯುತ್ತಾ ಗಂಧಮಾದನದ ಶಿಖರಗಳ ಮೇಲೆ ಬಂದು ಬೀಳುವುದು. ಮತ್ತೆ ಭದ್ರಾಶ್ವವರ್ಷವನ್ನು ನೆನೆಸುತ್ತಾ ಪೂರ್ವದ ಲವಣಸಮುದ್ರದಲ್ಲಿ ಹೋಗಿಸೇರುವುದು. ॥ ೬ ॥ ಹೀಗೆಯೇ ಚಕ್ಷು ಎಂಬ ಧಾರೆಯು ಮಾಲ್ಯವತ್ಪರ್ವತದ ಶಿಖರವನ್ನು ತಲುಪಿ ಅಲ್ಲಿಂದ ಅಡೆ-ತಡೆಯಿಲ್ಲದೆ ಕೇತುಮಾಲವರ್ಷದಲ್ಲಿ ಹರಿಯುತ್ತಾ ಪಶ್ಚಿಮದ ಕ್ಷಾರಸಮುದ್ರವನ್ನು ಸೇರುತ್ತದೆ. ॥ ೭ ॥ ಭದ್ರಾ ಎಂಬ ಧಾರೆಯು ಮೇರುಪರ್ವತದ ಶಿಖರದಿಂದ ಉತ್ತರದ ಕಡೆಗೆ ಧುಮುಕಿ ಒಂದು ಪರ್ವತದಿಂದ ಇನ್ನೊಂದು ಪರ್ವತಕ್ಕೆ ಹೋಗುತ್ತಾ ಕೊನೆಗೆ ಶೃಂಗವಾನ್ ಶಿಖರದಿಂದ ಧುಮುಕಿ ಉತ್ತರ ಕುರುದೇಶದ ಮಾರ್ಗವಾಗಿ ಉತ್ತರದ ಕಡೆಗೆ ಹರಿಯುತ್ತಾ ಸಮುದ್ರವನ್ನು ಸೇರುವುದು. ॥ ೮ ॥ ಅಲಕನಂದಾ ಎಂಬ ಧಾರೆಯು ಬ್ರಹ್ಮಪುರದಿಂದ ದಕ್ಷಿಣದ ಕಡೆಗೆ ಧುಮುಕಿ ಅನೇಕ ಗಿರಿ-ಶಿಖರಗಳನ್ನು ದಾಟಿ ಹೇಮಕೂಟ ಪರ್ವತಕ್ಕೆ ತಲುಪುವುದು. ಅಲ್ಲಿಂದ ಮಿತಿಮೀರಿದ ವೇಗದಿಂದ ಹಿಮಾಲಯದ ಶಿಖರಗಳನ್ನು ಸೀಳುತ್ತಾ ಭಾರತವರ್ಷಕ್ಕೆ ಬಂದು ಮತ್ತೆ ದಕ್ಷಿಣದ ಕಡೆಗೆ ಸಮುದ್ರವನ್ನು ಸೇರುವುದು. ಇದರಲ್ಲಿ ಸ್ನಾನಮಾಡಲು ಬರುವ ಜನರಿಗೆ ಹೆಜ್ಜೆ-ಹೆಜ್ಜೆಗೆ ಅಶ್ವಮೇಧ ಮತ್ತು ರಾಜಸೂಯ ಮುಂತಾದ ಯಜ್ಞಗಳ ಫಲವೂ ಸುಲಭವಾಗಿ ದೊರೆಯುವುದರಲ್ಲಿ ಸಂಶಯವೇ ಇಲ್ಲ. ॥ ೯ ॥ ಇದಲ್ಲದೆ ಪ್ರತಿವರ್ಷದಲ್ಲಿಯೂ ಮೇರುವೇ ಮುಂತಾದ ಪರ್ವತಗಳಿಂದ ಹುಟ್ಟಿಬರುವ ಇನ್ನೂ ನೂರಾರು ನದ-ನದಿಗಳು ಇವೆ. ॥ ೧೦ ॥

ತತ್ರಾಪಿ ಭಾರತಮೇವ ವರ್ಷಂ ಕರ್ಮಕ್ಷೇತ್ರಮನ್ಯಾನ್ಯಷ್ಟ ವರ್ಷಾಣಿ ಸ್ವರ್ಗಿಣಾಂ ಪುಣ್ಯಶೇಷೋಪಭೋಗಸ್ಥಾನಾನಿ ಭೌಮಾನಿ ಸ್ವರ್ಗಪದಾನಿ ವ್ಯಪದಿಶಂತಿ ॥ ೧೧ ॥ ಏಷು ಪುರುಷಾಣಾಮಯುತಪುರುಷಾಯುರ್ವರ್ಷಾಣಾಂ ದೇವಕಲ್ಪಾನಾಂ ನಾಗಾಯುತಪ್ರಾಣಾನಾಂ ವಜ್ರಸಂಹನನಬಲವಯೋಮೋದಪ್ರಮುದಿತಮಹಾಸೌರತಮಿಥುನವ್ಯವಾಯಾಪವರ್ಗವರ್ಷಧೃತೈಕಗರ್ಭಕಲತ್ರಾಣಾಂ ತತ್ರ ತು ತ್ರೇತಾಯುಗಸಮಃ ಕಾಲೋ ವರ್ತತೇ ॥ ೧೨ ॥ ಯತ್ರ ಹ ದೇವಪತಯಃ ಸ್ವೈಃ ಸ್ವೈರ್ಗಣನಾಯಕೈರ್ವಿಹಿತಮಹಾರ್ಹಣಾಃ ಸರ್ವರ್ತುಕುಸುಮಸ್ತಬಕಫಲಕಿಸಲಯಶ್ರಿಯಾಽಽನಮ್ಯಮಾನವಿಟಪಲತಾವಿಟಪಿಭಿರುಪಶುಂಭಮಾನರುಚಿರಕಾನನಾಶ್ರಮಾಯತನವರ್ಷಗಿರಿದ್ರೋಣೀಷು ತಥಾ ಚಾಮಲಜಲಾಶಯೇಷು ವಿಕಚವಿವಿಧನವವನರುಹಾಮೋದಮುದಿತರಾಜಹಂಸಜಲಕುಕ್ಕುಟಕಾರಂಡವಸಾರಸಚಕ್ರವಾಕಾದಿಭಿರ್ಮಧುಕರನಿಕರಾಕೃತಿಭಿರುಪಕೂಜಿತೇಷು ಜಲಕ್ರೀಡಾದಿಭಿರ್ವಿಚಿತ್ರವಿನೋದೈಃ ಸುಲಲಿತಸುರಸುಂದರೀಣಾಂ ಕಾಮಕಲಿಲವಿಲಾಸಹಾಸಲೀಲಾವಲೋಕಾಕೃಷ್ಟಮನೋದೃಷ್ಟಯಃ ಸ್ವೈರಂ ವಿಹರಂತಿ ॥ ೧೩ ॥

ನವಸ್ವಪಿ ವರ್ಷೇಷು ಭಗವಾನ್ನಾರಾಯಣೋ ಮಹಾಪುರುಷಃ ಪುರುಷಾಣಾಂ ತದನುಗ್ರಹಾಯಾತ್ಮತತ್ತ್ವವ್ಯೂಹೇನಾತ್ಮನಾದ್ಯಾಪಿ ಸಂನಿಧೀಯತೇ ॥ ೧೪ ॥ ಇಲಾವೃತೇ ತು ಭಗವಾನ್ ಭವ ಏಕ ಏವ ಪುಮಾನ್ನ ಹ್ಯನ್ಯಸ್ತತ್ರಾಪರೋ ನಿರ್ವಿಶತಿ ಭವಾನ್ಯಾಃ ಶಾಪನಿಮಿತ್ತಜ್ಞೋ ಯತ್ಪ್ರವೇಕ್ಷ್ಯತಃ ಸ್ತ್ರೀಭಾವಸ್ತತ್ಪಶ್ಚಾದ್ವಕ್ಷ್ಯಾಮಿ ॥ ೧೫ ॥ ಭವಾನೀನಾಥೈಃ ಸ್ತ್ರೀಗಣಾರ್ಬುದಸಹಸ್ರೈರವರುಧ್ಯಮಾನೋ ಭಗವತಶ್ಚತುರ್ಮೂರ್ತೇರ್ಮಹಾಪುರುಷಸ್ಯ ತುರೀಯಾಂ

ಈ ಎಲ್ಲ ವರ್ಷಗಳಲ್ಲಿಯೂ ಭಾರತವರ್ಷವೇ ಕರ್ಮಭೂಮಿಯಾಗಿದೆ. ಉಳಿದ ಎಂಟು ವರ್ಷಗಳೂ ಸ್ವರ್ಗವಾಸಿಗಳಾದ ಜೀವರು ಸ್ವರ್ಗದಲ್ಲಿ ತಮ್ಮ ಭೋಗಗಳನ್ನು ಅನುಭವಿಸಿದ ಬಳಿಕ ಉಳಿದ ಪುಣ್ಯಫಲಗಳನ್ನು ಅನುಭವಿಸುವ ಸ್ಥಾನಗಳು. ಆದುದರಿಂದ ಇದನ್ನು ಭೂಲೋಕದ ಸ್ವರ್ಗವೆಂದೂ ಹೇಳುತ್ತಾರೆ. ॥ ೧೧ ॥ ಅಲ್ಲಿಯ ದೇವತುಲ್ಯರಾದ ಮನುಷ್ಯರಿಗೆ ಮಾನವರ ಗಣನೆಗನುಸಾರವಾಗಿ ಹತ್ತುಸಾವಿರ ವರ್ಷದ ಆಯುಸ್ಸು ಇರುತ್ತದೆ. ಅವರಲ್ಲಿ ಹತ್ತುಸಾವಿರ ಆನೆಗಳ ಬಲವಿರುತ್ತದೆ. ಅವರ ವಜ್ರದಂತಹ ದೃಢವಾದ ಶರೀರದಲ್ಲಿರುವ ಶಕ್ತಿ, ಯೌವನ, ಉಲ್ಲಾಸ ಇವುಗಳಿಂದ ಅವರು ಹೆಚ್ಚು ಕಾಲದವರೆಗೆ ಮೈಥುನ ಮುಂತಾದ ವಿಷಯಗಳನ್ನು ಅನುಭವಿಸುತ್ತಿರುತ್ತಾರೆ. ಕೊನೆಯಲ್ಲಿ ಭೋಗಗಳು ಮುಗಿದುಹೋಗಿ ಇನ್ನು ಒಂದು ವರ್ಷ ಬಾಕಿ ಇರುವಾಗ ಅವರ ಸ್ತ್ರೀಯರು ಗರ್ಭವತಿಯರಾಗುತ್ತಾರೆ. ಹೀಗೆ ಅಲ್ಲಿ ಸದಾಕಾಲ ತ್ರೇತಾಯುಗದಂತೆ ಸಮಯ ಇರುತ್ತದೆ. ॥ ೧೨ ॥ ಅಲ್ಲಿ ಇರುವ ಆಶ್ರಮ, ಭವನ, ವರ್ಷ, ಪರ್ವತದ ತಪ್ಪಲುಗಳು, ಅಲ್ಲಿಯ ಸುಂದರ ವನ-ಉಪವನಗಳೂ ಎಲ್ಲ ಋತುಗಳಲ್ಲಿ ಹೂವುಗಳ ಗೊಂಚಲು, ಫಲಗಳು ಮತ್ತು ಹೊಸ ಚಿಗುರುಗಳ ಶೋಭೆಯ ಭಾರದಿಂದ ಬಾಗಿರುವ ಕೊಂಬೆಗಳಿಂದ, ಲತೆಗಳಿಂದ ವೃಕ್ಷಗಳಿಂದ ಸುಶೋಭಿತವಾಗಿವೆ. ಅಲ್ಲಿ ನಿರ್ಮಲ ನೀರಿನಿಂದ ತುಂಬಿರುವ ಅನೇಕ ಜಲಾಶಯಗಳೂ ಇವೆ. ಅವುಗಳಲ್ಲಿ ಬಗೆ-ಬಗೆಯ ಕಮಲಗಳು ಅರಳಿವೆ. ಆ ಕಮಲಗಳ ಸುಗಂಧದಿಂದ ಆನಂದಿತವಾದ ರಾಜಹಂಸ, ನೀರುಕೋಳಿ, ಕಾರಂಡವ, ಸಾರಸ, ಚಕ್ರವಾಕ ಮುಂತಾದ ನೀರುಹಕ್ಕಿಗಳು ಬಗೆ-ಬಗೆಯಾಗಿ ಚಿಲಿಪಿಲಿಗುಟ್ಟುತ್ತಾ ಕ್ರೀಡಿಸುತ್ತವೆ. ಬೇರೆ-ಬೇರೆ ಜಾತಿಯ ಮತ್ತಭೃಂಗಗಳು ಮಧುರವಾಗಿ ಝೇಂಕರಿಸುತ್ತಿವೆ. ಈ ಆಶ್ರಮಗಳಲ್ಲಿ, ಭವನಗಳಲ್ಲಿ, ತಪ್ಪಲುಗಳಲ್ಲಿ, ಜಲಾಶಯಗಳಲ್ಲಿ ಅಲ್ಲಿರುವ ದೇವೇಶ್ವರರು ಪರಮ ಸುಂದರಿಯಾದ ದೇವಾಂಗನೆಯರೊಡನೆ, ಅವರ ಕಾಮೋನ್ಮಾದ ಸೂಚಕ ಕಿರುನಗೆ, ಸವಿನೋಟಗಳಿಂದ ಮನಸ್ಸು, ನೇತ್ರಗಳು ಸೂರೆಹೋದ ಕಾರಣ ಜಲಕ್ರೀಡಾದಿ ನಾನಾರೀತಿಯ ಆಟಗಳನ್ನಾಡುತ್ತಾ ಸ್ವಚ್ಛಂದವಾಗಿ ವಿಹರಿಸುತ್ತಿರುವರು. ಅವರ ಪ್ರಧಾನವಾದ ಅನುಚರರು ಅನೇಕ ಪ್ರಕಾರದ ಸಾಮಗ್ರಿಗಳಿಂದ ಅವರನ್ನು ಆದರಿಸುತ್ತಾ-ಸತ್ಕರಿಸುತ್ತಾ ಇರುತ್ತಾರೆ. ॥ ೧೩ ॥

ಈ ಒಂಭತ್ತು ವರ್ಷಗಳಲ್ಲಿಯೂ ಪರಮಪುರುಷ ಭಗವಾನ್ ನಾರಾಯಣನು ಅಲ್ಲಿಯ ಜನರನ್ನು ಅನುಗ್ರಹಿಸುವುದಕ್ಕಾಗಿ ಈಗಲೂ ಕೂಡ ತನ್ನ ವ್ಯೂಹಾತ್ಮಕವಾದ ಬೇರೆ-ಬೇರೆ ಮೂರ್ತಿಗಳಿಂದ ವಿರಾಜಮಾನನಾಗಿದ್ದಾನೆ. ॥ ೧೪ ॥ ಇಲಾವೃತ ವರ್ಷದಲ್ಲಿ ಭಗವಾನ್ ಶಂಕರನೊಬ್ಬನೇ ಪುರುಷನು. ಪಾರ್ವತೀದೇವಿಯು ಕೊಟ್ಟಿರುವ ಶಾಪವನ್ನು ಅರಿತವರಾದ ಯಾವ ಪುರುಷನೂ ಅಲ್ಲಿ ಪ್ರವೇಶಿಸುವುದಿಲ್ಲ. ಏಕೆಂದರೆ ಅಲ್ಲಿಗೆ ಹೋದವನು ಸ್ತ್ರೀರೂಪವನ್ನೇ ಪಡೆಯುವನು. ಈ ಪ್ರಸಂಗವನ್ನು ನಾವು ಮುಂದೆ (ನವಮಸ್ಕಂಧದಲ್ಲಿ) ವರ್ಣಿಸುವೆವು. ॥ ೧೫ ॥ ಅಲ್ಲಿ ಪಾರ್ವತೀದೇವಿಯು ಮತ್ತು ಅವಳ ಕೋಟ್ಯಂತರ ದಾಸಿಯರಿಂದ ಸೇವಿತನಾದ

ತಾಮಸೀಂ ಮೂರ್ತಿಂ ಪ್ರಕೃತಿಮಾತ್ಮನಃ ಸಂಕರ್ಷಣಸಂಜ್ಞಾಮಾತ್ಮಸಮಾಧಿರೂಪೇಣ ಸನ್ನಿಧಾಪ್ಯೈತದಭಿಗೃಣನ್ ಭವ ಉಪಧಾವತಿ ॥ ೧೬ ॥

ಶ್ರೀಭಗವಾನುವಾಚ

ಓಂ ನಮೋ ಭಗವತೇ ಮಹಾಪುರುಷಾಯ ಸರ್ವಗುಣಸಂಖ್ಯಾನಾಯಾನಂತಾಯಾವ್ಯಕ್ತಾಯ ನಮ ಇತಿ ॥ ೧೭ ॥

ಭಜೇ ಭಜನ್ಯಾರಣಪಾದಪಂಕಜಂ
ಭಗಸ್ಯ ಕೃತ್ಸ್ನಸ್ಯ ಪರಂ ಪರಾಯಣಮ್ ।
ಭಕ್ತೇಷ್ವಲಂ ಭಾವಿತಭೂತಭಾವನಂ
ಭವಾಪಹಂ ತ್ವಾ ಭವಭಾವಮೀಶ್ವರಮ್ ॥ ೧೮ ॥

ನ ಯಸ್ಯ ಮಾಯಾಗುಣಚಿತ್ತವೃತ್ತಿಭಿಃ
ನಿರೀಕ್ಷತೋ ಹ್ಯಣ್ವಪಿ ದೃಷ್ಟಿರಜ್ಯತೇ ।
ಈಶೇ ಯಥಾ ನೋಽಜಿತಮನ್ಯುರಂಹಸಾಂ
ಕಸ್ತಂ ನ ಮನ್ಯೇತ ಜಿಗೀಷುರಾತ್ಮನಃ ॥ ೧೯ ॥

ಅಸದ್ದೃಶೋ ಯಃ ಪ್ರತಿಭಾತಿ ಮಾಯಯಾ
ಕ್ಷೀಬೇವ ಮಧ್ವಾಸವತಾಮ್ರಲೋಚನಃ ।
ನ ನಾಗವಧ್ವೋಽರ್ಹಣ ಈಶಿರೇ ಹ್ರಿಯಾ
ಯತ್ಪಾದಯೋಃ ಸ್ಪರ್ಶನಧರ್ಷಿತೇಂದ್ರಿಯಾಃ ॥ ೨೦ ॥

ಯಮಾಹುರಸ್ಯ ಸ್ಥಿತಿಜನ್ಮಸಂಯಮಂ
ತ್ರಿಭಿರ್ವಿಹೀನಂ ಯಮನಂತಮೃಷಯಃ ।
ನ ವೇದ ಸಿದ್ಧಾರ್ಥಮಿವ ಕ್ವಚಿತ್ಸ್ಥಿತಂ
ಭೂಮಂಡಲಂ ಮೂರ್ಧಸಹಸ್ರಧಾಮಸು ॥ ೨೧ ॥

ಭಗವಾನ್ ಶಂಕರನು ಪರಮಪುರುಷ ಪರಮಾತ್ಮನ ವಾಸುದೇವ, ಪ್ರದ್ಯುಮ್ನ, ಅನಿರುದ್ಧ ಮತ್ತು ಸಂಕರ್ಷಣ ಎಂಬ ಚತುರ್ವ್ಯೂಹ ಮೂರ್ತಿಗಳಲ್ಲಿ ತನಗೆ ಕಾರಣವಾಗಿರುವ ಸಂಕರ್ಷಣ ಎಂಬ ತಮೋಗುಣ ಪ್ರಧಾನವಾದ ನಾಲ್ಕನೆಯ ಮೂರ್ತಿಯನ್ನು ಧ್ಯೇಯ ಮೂರ್ತಿಯನ್ನಾಗಿ ಮನಸ್ಸಿನಲ್ಲಿ ನೆಲೆಗೊಳಿಸಿಕೊಂಡು, ಈ ಮಂತ್ರವನ್ನು ಜಪಿಸುತ್ತಾ ಉಪಾಸನೆ ಮಾಡುತ್ತಿರುವನು.* ॥ ೧೬ ॥

ಭಗವಾನ್ ಶಂಕರನು ಹೇಳುತ್ತಾನೆ – ಓಂ ಸರ್ವಗುಣಗಳ ಅಭಿವ್ಯಕ್ತಿಗೆ ಕಾರಣವಾಗಿರುವ, ಅನಂತನೂ, ಅವ್ಯಕ್ತ ಮೂರ್ತಿಯೂ ಆಗಿರುವುದು. ಓಂಕಾರಸ್ವರೂಪಿಯಾದ ಪರಮಪುರುಷ ಶ್ರೀಭಗವಂತನಿಗೆ ನಮೋ ನಮಃ. ಭಜನೆಗೆ ಯೋಗ್ಯವಾದ ಭಗವಂತನೇ! ನಿನ್ನ ಅಡಿದಾವರೆಗಳು ಭಕ್ತರಿಗೆ ಪರಮಾಶ್ರಯವಾಗಿವೆ. ನೀನು ಸಮಸ್ತ ಐಶ್ವರ್ಯಗಳಿಗೂ ಪರಮಾಶ್ರಯನು. ಭಕ್ತರ ಮುಂದೆ ಭೂತಭಾವನನಾದ ನಿನ್ನ ಸ್ವರೂಪವನ್ನು ಪ್ರಕಟಗೊಳಿಸಿ, ಅವರನ್ನು ಭವಬಂಧನದಿಂದ ಬಿಡುಗಡೆ ಮಾಡುವವನು ನೀನೇ. ಭಕ್ತರಲ್ಲದವರನ್ನು ಸಂಸಾರ ಬಂಧನದಲ್ಲಿ ಕೆಡಹುವವನೂ ನೀನೇ. ಇಂತಹ ಸರ್ವೇಶ್ವರನಾದ ನಿನ್ನನ್ನು ನಾನು ಭಜಿಸುತ್ತೇನೆ. ॥ ೧೭-೧೮ ॥ ಪ್ರಭೋ! ನಾವು ಕ್ರೋಧದ ವೇಗವನ್ನು ಜಯಿಸಲು ಅಸಮರ್ಥರು ಮತ್ತು ತತ್ಕಾಲದಲ್ಲೇ ಪಾಪದಿಂದ ಲಿಪ್ತರಾಗಿ ಹೋಗುತ್ತೇವೆ. ಆದರೆ ನೀನಾದರೋ ಜಗತ್ತನ್ನು ನಿಯಮಿಸಲಿಕ್ಕಾಗಿ ನಿರಂತರವಾಗಿ ಸಾಕ್ಷಿರೂಪದಿಂದ ಅದರ ಎಲ್ಲ ವ್ಯಾಪಾರಗಳನ್ನು ನೋಡುತ್ತಾ ಇರುವೆ. ಆದರೂ ಈ ಮಾಯಾಮಯವಾದ ಗುಣ ಮತ್ತು ಚಿತ್ತವೃತ್ತಿಗಳು ನಿನ್ನ ಮೇಲೆ ಎಳ್ಳಷ್ಟು ಪ್ರಭಾವವನ್ನು ಬೀರುವುದಿಲ್ಲ. ಹೀಗಿರುವಾಗ ಮನಸ್ಸನ್ನು ವಶಪಡಿಸಿಕೊಳ್ಳಬೇಕೆಂಬ ಇಚ್ಛೆಯುಳ್ಳ ಯಾವನು ತಾನು ನಿನ್ನನ್ನು ಆದರಿಸುವುದಿಲ್ಲ. ॥ ೧೯ ॥ ನಿನ್ನ ಮಾಯೆಗೆ ವಶರಾಗಿ, ಅಸತ್ತಾಗಿರುವ ಶರೀರಾದಿಗಳಲ್ಲಿ ಆತ್ಮಬುದ್ಧಿಯನ್ನಿಟ್ಟಿರುವ ಪಾಮರರ ದೃಷ್ಟಿಗೆ ನೀನು ಮಧ್ಯ, ಆಸವ ಮುಂತಾದವುಗಳ ಸೇವನೆಯಿಂದ ಮತ್ತೇರಿ ಕಣ್ಣು ಕೆಂಪೇರಿದವನಂತೆ ಕಾಣುತ್ತಿದ್ದೀಯೇ. ನೀನು ಪರಮ ರಮಣೀಯ ಮೂರ್ತಿಯು. ನಿನ್ನ ಸೇವೆಮಾಡಲು ಬಂದ ನಾಗಪತ್ನಿಯರು ನಿನ್ನ ಚರಣಸ್ಪರ್ಶದಿಂದಲೇ ಮನಸ್ಸು ಚಂಚಲಗೊಂಡವರಾಗಿ ಲಜ್ಜೆಯಿಂದ ನಿನ್ನನ್ನು ಪೂಜಿಸಲು ಅಸಮರ್ಥರಾಗುವರು. ॥ ೨೦ ॥ ಜಗತ್ತಿನ ಉತ್ಪತ್ತಿ, ಸ್ಥಿತಿ ಮತ್ತು ಲಯಗಳಿಗೆ ನೀನೇ ಕಾರಣವೆಂದು ವೇದಮಂತ್ರಗಳು ಹೇಳುತ್ತವೆ. ಆದರೂ ನೀನು ಸ್ವತಃ ಈ ಮೂರು ವಿಕಾರಗಳಿಂದ ರಹಿತನಾಗಿರುವೆ. ಅದಕ್ಕಾಗಿ ನಿನ್ನನ್ನು 'ಅನಂತ' ಎಂದು ಹೇಳುತ್ತಾರೆ. ನಿನ್ನ ಸಾವಿರ ಹೆಡೆಗಳ ಮೇಲೆ ಈ ಬ್ರಹ್ಮಾಂಡವು ಸಾಸಿವೆ ಕಾಳಿನಂತೆ ಇಡಲ್ಪಟ್ಟಿದೆ. ಅದರ ಅರಿವೇ ನಿನಗ ಆಗದಷ್ಟು ಹಗುರವಾಗಿ ಅದನ್ನು ಧರಿಸಿಕೊಂಡಿರುವೆ. ॥ ೨೧ ॥ ಯಾರಿಂದ ಉತ್ಪನ್ನನಾದ ನಾನು ಅಹಂಕಾರರೂಪವಾದ ನಿನ್ನ ತ್ರಿಗುಣಮಯವಾದ ತೇಜಸ್ಸಿನಿಂದ ದೇವತೆಗಳನ್ನು, ಇಂದ್ರಿಯಗಳನ್ನು ಮತ್ತು ಪ್ರಾಣ

* ಭಗವಂತನ ವಿಗ್ರಹವು ಶುದ್ಧ ಸತ್ತ್ವಮಯವೇ ಆಗಿದ್ದರೂ ಸಂಹಾರವೇ ಮುಂತಾದ ಕಾರ್ಯಗಳಿಗಾಗಿ ತಮೋಗುಣ ಪ್ರಧಾನವಾದ ಸಂಕರ್ಷಣ ದೇಹವನ್ನು ಧರಿಸುತ್ತಾನೆ. ಅದಕ್ಕಾಗಿ ಇದನ್ನು ತಾಮಸೀಮೂರ್ತಿ ಎಂದು ಹೇಳುತ್ತಾರೆ. ಅದರ ಆತನಲ್ಲಿ ಯಾವ ವಿಕಾರವನ್ನೂ ಉಂಟುಮಾಡುವುದಿಲ್ಲ.

ಯಸ್ಮಾದದ್ಯ ಆಸೀದ್ಗುಣವಿಗ್ರಹೋ ಮಹಾನ್
ವಿಜ್ಞಾನಧಿಷ್ಣ್ಯೋ ಭಗವಾನಜಃ ಕಿಲ ।
ಯತ್ಸಂಭವೋಽಹಂ ತ್ರಿವೃತಾ ಸ್ವತೇಜಸಾ
ವೈಕಾರಿಕಂ ತಾಮಸಮೈಂದ್ರಿಯಂ ಸೃಜೇ ॥ ೨೨ ॥

ಏತೇ ವಯಂ ಯಸ್ಯ ವಶೇ ಮಹಾತ್ಮನಃ
ಸ್ಥಿತಾಃ ಶಕುಂತಾ ಇವ ಸೂತ್ರಯಂತ್ರಿತಾಃ ।
ಮಹಾನಹಂ ವೈಕೃತ ತಾಮಸೇಂದ್ರಿಯಾಃ
ಸೃಜಾಮ ಸರ್ವೇ ಯದನುಗ್ರಹಾದಿದಮ್ ॥ ೨೩ ॥

ಯನ್ನಿರ್ಮಿತಾಂ ಕರ್ಹ್ಯಪಿ ಕರ್ಮಪರ್ವಣೀಂ
ಮಾಯಾಂ ಜನೋಽಯಂ ಗುಣಸರ್ಗಮೋಹಿತಃ ।
ನ ವೇದ ನಿಸ್ತಾರಣಯೋಗಮಂಜಸಾ
ತಸ್ಮೈ ನಮಸ್ತೇ ವಿಲಯೋದಯಾತ್ಮನೇ ॥ ೨೪ ॥

ಗಳನ್ನು ರಚಿಸುತ್ತೇನೆಯೋ, ಆ ವಿಜ್ಞಾನಕ್ಕೆ ಆಶ್ರಯರಾದ ಬ್ರಹ್ಮದೇವರೂ ಕೂಡ ನಿನ್ನ ಮಹತ್ತತ್ತ್ವವೆಂಬ ಮೊದಲನೆಯ ಗುಣಮಯ ಸ್ವರೂಪರೇ ಆಗಿದ್ದಾರೆ ॥ ೨೨ ॥ ಎಲೈ ಮಹಾತ್ಮನೇ! ಮಹತ್ತತ್ತ್ವ, ಅಹಂಕಾರ, ಇಂದ್ರಿಯಾಭಿಮಾನಿದೇವತೆಗಳು, ಇಂದ್ರಿಯಗಳು, ಪಂಚಭೂತಗಳೇ ಮುಂತಾದ ನಾವೆಲ್ಲರೂ ದಾರದಿಂದ ಕಟ್ಟಲ್ಪಟ್ಟ ಪಕ್ಷಿಯಂತೆ ನಿನ್ನ ಕ್ರಿಯಾಶಕ್ತಿಗೆ ವಶರಾಗಿ ನಿನ್ನ ಕೃಪೆಯಿಂದಲೇ ಈ ಜಗತ್ತನ್ನು ನಿರ್ಮಿಸುತ್ತೇವೆ. ॥ ೨೩ ॥ ಸತ್ತ್ವಾದಿ ಗುಣಗಳ ಸೃಷ್ಟಿಯಿಂದ ಮೋಹಿತನಾದ ಈ ಜೀವನು ನೀನೇ ರಚಿಸಿರುವ ಮತ್ತು ಕರ್ಮಬಂಧನದಲ್ಲಿ ಕಟ್ಟಿಹಾಕುವ ಮಾಯೆಯನ್ನು ಎಂದಾದರೂ ತಿಳಿದುಕೊಳ್ಳಬಹುದು. ಆದರೆ ಅದರಿಂದ ಬಿಡುಗಡೆಹೊಂದುವ ಉಪಾಯವು ಆತನಿಗೆ ಸುಲಭವಾಗಿ ತಿಳಿಯುವುದಿಲ್ಲ. ಈ ಜಗತ್ತಿನ ಉತ್ಪತ್ತಿ ಮತ್ತು ಪ್ರಳಯವು ನಿನ್ನ ರೂಪಗಳೇ ಆಗಿವೆ. ಇಂತಹ ನಿನಗೆ ನಾನು ಪದೇ-ಪದೇ ನಮಸ್ಕರಿಸುತ್ತೇನೆ. ॥ ೨೪ ॥

ಹದಿನೇಳನೆಯ ಅಧ್ಯಾಯವು ಮುಗಿಯಿತು. ॥ ೧೭ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಪಂಚಮಸ್ಕಂಧೇ ಸಪ್ತದಶೋಽಧ್ಯಾಯಃ ॥ ೧೭ ॥

ಹದಿನೆಂಟನೆಯ ಅಧ್ಯಾಯ

ಬೇರೆ-ಬೇರೆ ವರ್ಷಗಳ ವರ್ಣನೆ

ಶ್ರೀಶುಕ ಉವಾಚ

ತಥಾ ಚ ಭದ್ರಶ್ರವಾ ನಾಮ ಧರ್ಮಸುತಸ್ತತ್ಕುಲಪತಯಃ ಪುರುಷಾ ಭದ್ರಾಶ್ವವರ್ಷೇ ಸಾಕ್ಷಾದ್ಭಗವತೋ ವಾಸುದೇವಸ್ಯ ಪ್ರಿಯಾಂ ತನುಂ ಧರ್ಮಮಯೀಂ ಹಯಶೀರ್ಷಾಭಿಧಾನಾಂ ಪರಮೇಣ ಸಮಾಧಿನಾ ಸಂನಿಧಾಪ್ಯೇದಮಭಿಗೃಣಂತ ಉಪಧಾವಂತಿ ॥ ೧ ॥

ಭದ್ರಶ್ರವಸ ಊಚುಃ

ಓಂ ನಮೋ ಭಗವತೇ ಧರ್ಮಾಯಾತ್ಮವಿಶೋಧನಾಯ ನಮ ಇತಿ ॥ ೨ ॥

ಅಹೋ ವಿಚಿತ್ರಂ ಭಗವದ್ವಿಚೇಷ್ಟಿತಂ
ಘ್ನಂತಂ ಜನೋಽಯಂ ಹಿ ಮಿಷನ್ನ ಪಶ್ಯತಿ ।
ಧ್ಯಾಯನ್ನಸದ್ಯರ್ಹಿ ವಿಕರ್ಮ ಸೇವಿತುಂ
ನಿರ್ಹೃತ್ಯ ಪುತ್ರಂ ಪಿತರಂ ಜಿಜೀವಿಷತಿ ॥ ೩ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಎಲೈ ರಾಜನೇ! ಭದ್ರಾಶ್ವವೆಂಬ ವರ್ಷದಲ್ಲಿ ಧರ್ಮಪುತ್ರ ಭದ್ರಶ್ರವನೂ ಮತ್ತು ಆತನ ಮುಖ್ಯರಾದ ಸೇವಕರು ಭಗವಾನ್ ವಾಸುದೇವನನ್ನು 'ಹಯಗ್ರೀವ' ಎಂಬ ಧರ್ಮಮಯವೂ, ಪ್ರಿಯವೂ ಆದ ಮೂರ್ತಿಯನ್ನು ಅತ್ಯಂತ ಸಮಾಧಿನಿಷ್ಠೆಯಿಂದ ಹೃದಯದಲ್ಲಿ ನೆಲೆ ಗೊಳಿಸಿಕೊಂಡು ಈ ಮಂತ್ರವನ್ನು ಜಪಿಸುತ್ತಾ ಹೀಗೆ ಸ್ತುತಿಸುತ್ತಾರೆ. ॥ ೧ ॥

ಭದ್ರಶ್ರವನೂ ಮತ್ತು ಆತನ ಸೇವಕರು ಹೇಳುತ್ತಾರೆ – 'ಚಿತ್ತವನ್ನು ವಿಶುದ್ಧಗೊಳಿಸುವಂತಹ ಓಂಕಾರಸ್ವರೂಪನಾದ ಭಗವಾನ್ ಧರ್ಮಮೂರ್ತಿಗೆ ನಮೋ ನಮಃ ॥ ೨ ॥ ಆಹಾ! ಭಗವಂತನ ಲೀಲೆಗಳು ತುಂಬಾ ವಿಚಿತ್ರವಾಗಿದೆ. ಅದರಿಂದಲೇ ಇಡೀ ಜಗತ್ತನ್ನು ಸಂಹರಿಸುತ್ತಿರುವ ಮೃತ್ಯುವನ್ನು ಕಣ್ಣಾರೆ ಕಾಣುತ್ತಿದ್ದರೂ ಕಾಣದವನಂತೆ ಇದ್ದಾನೆ ಈ ಜೀವನು. ತುಚ್ಛವಾದ ವಿಷಯಸುಖಗಳನ್ನು ಸೇವಿಸುವುದಕ್ಕಾಗಿಯೇ ಪಾಪಮಯ ವಿಚಾರಗಳನ್ನೇ ಚಿಂತಿಸುತ್ತಿದ್ದಾನೆ. ಮೃತನಾದ ತಮ್ಮ ಪುತ್ರನ ಮತ್ತು ತಂದೆಯ ಶವವನ್ನು ತಮ್ಮ ಕೈಯಿಂದಲೇ ದಹನಮಾಡಿ ಬಂದಿದ್ದರೂ ತಾವು ಬದುಕಿರಬೇಕೆಂದು ಬಯಸುತ್ತಾರಲ್ಲ! ॥ ೩ ॥ ಎಲೈ ಜನ್ಮರಹಿತನಾದ ಪ್ರಭುವೇ! ಜಗತ್ತನ್ನು ನಶ್ವರವೆಂದು ವಿದ್ವಾಂಸರು ಹೇಳುತ್ತಾರೆ ಮತ್ತು ಸೂಕ್ಷ್ಮದರ್ಶಿಗಳಾದ ಆತ್ಮಜ್ಞಾನಿಗಳು ಹೀಗೆಯೇ ನೋಡಿಯೂ ನೋಡುತ್ತಾರೆ. ಆದರೂ ನಿನ್ನ ಮಾಯೆಯಿಂದ ಜನರು ಮೋಹಿತರಾಗುತ್ತಿದ್ದಾರೆ. ನೀನು ಅನಾದಿಯಾಗಿದ್ದು ನಿನ್ನ

ವದಂತಿ ವಿಶ್ವಂ ಕವಯಃ ಸ್ಮ ನಶ್ವರಂ
ಪಶ್ಯಂತಿ ಚಾಧ್ಯಾತ್ಮವಿದೋ ವಿಪಶ್ಚಿತಃ ।
ತಥಾಪಿ ಮುಹ್ಯಂತಿ ತವಾಜ ಮಾಯಯಾ
ಸುವಿಸ್ಮಿತಂ ಕೃತ್ಯಮಜಂ ನತೋಽಸ್ಮಿ ತಮ್ ॥ ೪ ॥

ವಿಶ್ವೋದ್ಭವಸ್ಥಾನನಿರೋಧಕರ್ಮ ತೇ
ಹ್ಯಕರ್ತುರಂಗೀಕೃತಮಪ್ಯಪಾವೃತಃ ।
ಯುಕ್ತಂ ನ ಚಿತ್ರಂ ತ್ವಯಿ ಕಾರ್ಯಕಾರಣೇ
ಸರ್ವಾತ್ಮನಿ ವ್ಯತಿರಿಕ್ತೇ ಚ ವಸ್ತುತಃ ॥ ೫ ॥

ವೇದಾನ್ ಯುಗಾಂತೇ ತಮಸಾ ತಿರಸ್ಕೃತಾನ್
ರಸಾತಲಾದ್ಯೋ ನೃತುರಂಗವಿಗ್ರಹಃ ।
ಪ್ರತ್ಯಾದದೇ ವೈ ಕವಯೇಽಭಿಯಾಚತೇ
ತಸ್ಮೈ ನಮಸ್ತೇಽವಿತಥೇಹಿತಾಯ ಇತಿ ॥ ೬ ॥

ಹರಿವರ್ಷೇ ಚಾಪಿ ಭಗವಾನ್ನರಹರಿರೂಪೇಣಾಸ್ತೇ । ತದ್ರೂಪಗ್ರಹಣನಿಮಿತ್ತಮುತ್ತರತ್ರಾಭಿಧಾಸ್ಯೇ । ತದ್ದಯಿತಂ ರೂಪಂ ಮಹಾಪುರುಷಗುಣಭಾಜನೋ ಮಹಾಭಾಗವತೋ ದೈತ್ಯದಾನವಕುಲತೀರ್ಥೀಕರಣಶೀಲಾಚರಿತಃ ಪ್ರಹ್ಲಾದೋಽವ್ಯವಧಾನಾನನ್ಯಭಕ್ತಿಯೋಗೇನ ಸಹ ತದ್ವರ್ಷಪುರುಷೈರುಪಾಸ್ತೇ ಇದಂ ಚೋದಾಹರತಿ ॥ ೭ ॥
ಓಂ ನಮೋ ಭಗವತೇ ನರಸಿಂಹಾಯ ನಮಸ್ತೇಜಸ್ತೇಜಸೇ ಆವಿರಾವಿರ್ಭವ ವಜ್ರನಖ ವಜ್ರದಂಷ್ಟ್ರ ಕರ್ಮಾಶಯಾನ್ ರಂಧಯ ರಂಧಯ ತಮೋ ಗ್ರಸ ಗ್ರಸ ಓಂ ಸ್ವಾಹಾ । ಅಭಯಮಭಯಮಾತ್ಮನಿ ಭೂಯಿಷ್ಠಾ ಓಂ ಕ್ಷ್ರೌಮ್ ॥ ೮ ॥

ಸ್ವಸ್ತ್ಯಸ್ತು ವಿಶ್ವಸ್ಯ ಖಲಃ ಪ್ರಸೀದತಾಂ
ಧ್ಯಾಯಂತು ಭೂತಾನಿ ಶಿವಂ ಮಿಥೋ ಧಿಯಾ ।
ಮನಶ್ಚ ಭದ್ರಂ ಭಜತಾದಧೋಕ್ಷಜೇ
ಆವೇಶ್ಯತಾಂ ನೋ ಮತಿರಪ್ಯಹೈತುಕೀ ॥ ೯ ॥

ಕೃತ್ಯಗಳು ತುಂಬಾ ವಿಸ್ಮಯಮಯವಾಗಿವೆ. ನಾವು ನಿನಗೆ ನಮಸ್ಕರಿಸುತ್ತಿದ್ದೇವೆ. ॥ ೪ ॥ ಓ ಪರಮಾತ್ಮನೇ! ನೀನು ಕರ್ತೃತ್ವರಹಿತನೂ, ಮಾಯೆಯ ಆವರಣದಿಂದ ಅತೀತನಾಗಿದ್ದರೂ ಜಗತ್ತಿನ ಉತ್ಪತ್ತಿ, ಸ್ಥಿತಿ, ಪ್ರಳಯ – ಇವುಗಳನ್ನು ನಿನ್ನದೇ ಕರ್ಮಗಳೆಂದು ತಿಳಿಯಲಾಗಿದೆ. ಅದು ಸರಿಯೇ. ಇದರಲ್ಲಿ ಯಾವ ಆಶ್ಚರ್ಯದ ಮಾತೂ ಇಲ್ಲ. ಏಕೆಂದರೆ, ಸರ್ವಾತ್ಮರೂಪದಿಂದ ನೀನೇ ಸಮಸ್ತ ಕಾರ್ಯಗಳ ಕಾರಣನಾಗಿರುವೆ ಮತ್ತು ತನ್ನ ಶುದ್ಧಸ್ವರೂಪದಲ್ಲಿ ಇದ್ದು ಈ ಕಾರ್ಯ-ಕಾರಣಭಾವದಿಂದ ಅತೀತನಾಗಿರುವೆ. ॥ ೫ ॥ ನಿನ್ನ ದಿವ್ಯಮಂಗಳ ವಿಗ್ರಹವು ಮನುಷ್ಯ ಮತ್ತು ಕುದುರೆ ಸೇರಿದ ಹಯಗ್ರೀವರೂಪವಾಗಿದೆ. ಪ್ರಳಯಕಾಲದಲ್ಲಿ ತಮೋಗುಣ ಪ್ರಧಾನರಾದ ದೈತ್ಯರು ವೇದಗಳನ್ನು ಕದ್ದುಕೊಂಡು ಹೋಗಿದ್ದಾಗ ಬ್ರಹ್ಮದೇವರ ಪ್ರಾರ್ಥನೆಯಂತೆ ನೀನು ಆ ವೇದಗಳನ್ನು ರಸಾತಲದಿಂದ ತಂದುಕೊಟ್ಟೆ. ಇಂತಹ ಅಮೋಘ ಲೀಲೆಗಳನ್ನು ನಡೆಸುವ ಸತ್ಯಸಂಕಲ್ಪನಾದ ನಿನಗೆ ನಾವು ನಮಸ್ಕರಿಸುತ್ತೇವೆ. ॥ ೬ ॥

ಹರಿವರ್ಷಖಂಡದಲ್ಲಿ ಭಗವಂತನು ನರಸಿಂಹರೂಪದಿಂದ ಬೆಳಗುತ್ತಿದ್ದಾನೆ. ಅವನು ಈ ರೂಪವನ್ನು ಏಕೆ ಧರಿಸಿದನು ಎಂಬುದನ್ನು ಮುಂದೆ (ಏಳನೆಯ ಸ್ಕಂಧದಲ್ಲಿ) ವರ್ಣಿಸಲಾಗುವುದು. ಭಗವಂತನ ಆ ಪ್ರಿಯರೂಪವನ್ನು ಮಹಾಭಾಗವತೋತ್ತಮ ಪ್ರಹ್ಲಾದನು ಆ ವರ್ಷದ ಇತರ ಪುರುಷರೊಂದಿಗೆ ನಿಷ್ಕಾಮ ಹಾಗೂ ಅನನ್ಯಭಕ್ತಿಯಿಂದ ಉಪಾಸಿಸುತ್ತಾನೆ. ಈ ಪ್ರಹ್ಲಾದರು ಮಹಾಪುರುಷರಿಗೆ ಉಚಿತವಾದ ಗುಣಗಳಿಂದ ಸಂಪನ್ನರಾಗಿರುವರು. ಇವರು ತಮ್ಮ ಶೀಲ, ಆಚರಣೆಗಳಿಂದ ದೈತ್ಯ ಮತ್ತು ದಾನವರ ಕುಲವನ್ನು ಪವಿತ್ರಗೊಳಿಸಿದವರು. ಇವರು ಈ ಮಂತ್ರದ ಸ್ತೋತ್ರ-ಜಪ-ಪಾರಾಯಣೆಯನ್ನು ಮಾಡುತ್ತಾ ಇರುತ್ತಾರೆ – ॥ ೭ ॥ 'ಓಂಕಾರಸ್ವರೂಪನಾದ ಭಗವಾನ್ ಶ್ರೀನರಸಿಂಹನಿಗೆ ನಮಸ್ಕಾರವು. ತೇಜಸ್ಸುಗಳಿಗೆಲ್ಲ ತೇಜಸ್ಸನ್ನು ಅನುಗ್ರಹಿಸುವ ಪರಮ ತೇಜೋಮಯ ಮೂರ್ತಿಯಾದ ನಿನಗೆ ನಮಸ್ಕಾರವು. ಹೇ ವಜ್ರನಖನೇ! ಹೇ ವಜ್ರದಂಷ್ಟ್ರನೇ! ನೀನು ನಮ್ಮ ಮುಂದೆ ಪ್ರಕಟನಾಗು! ಪ್ರಕಟನಾಗು! ನಮ್ಮ ಕರ್ಮವಾಸನೆಗಳನ್ನು ಸುಟ್ಟುಹಾಕು! ಸುಟ್ಟುಹಾಕು! ನಮ್ಮ ಅಜ್ಞಾನರೂಪವಾದ ಅಂಧಕಾರವನ್ನು ನಾಶಮಾಡು! ನಾಶಮಾಡು! ಓಂ ಸ್ವಾಹಾ! ನಮ್ಮ ಅಂತಃಕರಣದಲ್ಲಿ ಅಭಯದಾನವನ್ನು ನೀಡುತ್ತಾ ಪ್ರಕಾಶಿತನಾಗು. 'ಓಂ ಕ್ಷ್ರೌಮ್' ॥ ೮ ॥ ಸ್ವಾಮಿ! ವಿಶ್ವಕ್ಕೆ ಕಲ್ಯಾಣವುಂಟಾಗಲಿ. ದುಷ್ಟರ ಬುದ್ಧಿಯು ಶುದ್ಧವಾಗಲೀ. ಎಲ್ಲ ಪ್ರಾಣಿಗಳಲ್ಲಿಯೂ ಪರಸ್ಪರ ಸದ್ಭಾವನೆ ಉಂಟಾಗಲಿ. ಎಲ್ಲರೂ ಒಬ್ಬರನ್ನೊಬ್ಬರ ಹಿತವನ್ನು ಚಿಂತಿಸಲಿ. ನಮ್ಮ ಮನಸ್ಸು ಶುಭವಾದ ಮಾರ್ಗದಲ್ಲಿ ಪ್ರವೃತ್ತವಾಗಲಿ. ನಮ್ಮೆಲ್ಲರ ಬುದ್ಧಿಯು ನಿಷ್ಕಾಮಭಾವದಿಂದ ಭಗವಾನ್ ಶ್ರೀಹರಿಯಲ್ಲಿ ಪ್ರವೇಶಿಸಲಿ. ॥ ೯ ॥ ಪ್ರಭೋ! ಮನೆ, ಹೆಂಡತಿ, ಮಕ್ಕಳು, ಹಣ, ಬಂಧು-ಬಾಂಧವರಲ್ಲಿ ನಮಗೆ ಆಸಕ್ತಿಯು ಇಲ್ಲದಿರಲಿ. ಇರುವುದಾದರೆ ಕೇವಲ ಭಗವಂತನ ಪ್ರೇಮೀಭಕ್ತರಲ್ಲಿ ಇರಲಿ. ಶರೀರನಿರ್ವಹಣೆಗಾಗಿ ಅನಿವಾರ್ಯವಾಗಿ ಬೇಕಾಗಿರುವಷ್ಟು ದ್ರವ್ಯಗಳಿಂದಲೇ ಸಂತೋಷಪಡುವ ಸಂಯಮಿಗಳಿಗೆ ಶೀಘ್ರ

ಮಾಗಾರದಾರಾತ್ಮಜವಿತ್ತಬಂಧುಷು
ಸಂಗೋ ಯದಿ ಸ್ಯಾದ್ಭಗವತ್ಪ್ರಿಯೇಷು ನಃ ।
ಯಃ ಪ್ರಾಣವೃತ್ತ್ಯಾ ಪರಿತುಷ್ಟ ಆತ್ಮವಾನ್
ಸಿದ್ಧ್ಯತ್ಯದೂರಾನ್ನ ತಥೇಂದ್ರಿಯಪ್ರಿಯಃ ॥ ೧೦ ॥

ಯತ್ಸಂಗಲಬ್ಧಂ ನಿಜವೀರ್ಯವೈಭವಂ
ತೀರ್ಥಂ ಮುಹುಃ ಸಂಸ್ಪೃಶತಾಂ ಹಿ ಮಾನಸಮ್ ।
ಹರತ್ಯಜೋಽಂತಃ ಶ್ರುತಿಭಿರ್ಗತೋಽಂಗಜಂ
ಕೋ ವೈ ನ ಸೇವೇತ ಮುಕುಂದವಿಕ್ರಮಮ್ ॥ ೧೧ ॥

ಯಸ್ಯಾಸ್ತಿ ಭಕ್ತಿರ್ಭಗವತ್ಯಕಿಂಚನಾ
ಸರ್ವೈರ್ಗುಣೈಸ್ತತ್ರ ಸಮಾಸತೇ ಸುರಾಃ ।
ಹರಾವಭಕ್ತಸ್ಯ ಕುತೋ ಮಹದ್ಗುಣಾ
ಮನೋರಥೇನಾಸತಿ ಧಾವತೋ ಬಹಿಃ ॥ ೧೨ ॥

ಹರಿರ್ಹಿ ಸಾಕ್ಷಾದ್ಭಗವಾನ್ ಶರೀರಿಣಾ-
ಮಾತ್ಮಾ ಝಷಾಣಾಮಿವ ತೋಯಮೀಪ್ಸಿತಮ್ ।
ಹಿತ್ವಾ ಮಹಾಂಸ್ತಂ ಯದಿ ಸಜ್ಜತೇ ಗೃಹೇ
ತದಾ ಮಹತ್ತ್ವಂ ವಯಸಾ ದಂಪತೀನಾಮ್ ॥ ೧೩ ॥

ತಸ್ಮಾದ್ರಜೋರಾಗವಿಷಾದಮನ್ಯು-
ಮಾನಸ್ಪೃಹಾಭಯದೈನ್ಯಾಧಿಮೂಲಮ್ ।
ಹಿತ್ವಾ ಗೃಹಂ ಸಂಸೃತಿಚಕ್ರವಾಲಂ
ನೃಸಿಂಹಪಾದಂ ಭಜತಾಕುತೋಭಯಮಿತಿ ॥ ೧೪ ॥

ಕೇತುಮಾಲೇಽಪಿ ಭಗವಾನ್ ಕಾಮದೇವಸ್ವರೂಪೇಣ ಲಕ್ಷ್ಮ್ಯಾಃ ಪ್ರಿಯಚಿಕೀರ್ಷಯಾ ಪ್ರಜಾಪತೇರ್ದುಹಿತೄಣಾಂ ಪುತ್ರಾಣಾಂ ತದ್ವರ್ಷಪತೀನಾಂ ಪುರುಷಾಯುಷಾಹೋರಾತ್ರಪರಿಸಂಖ್ಯಾನಾನಾಂ ಯಾಸಾಂ ಗರ್ಭಾ ಮಹಾಪುರುಷಮಹಾಸ್ತ್ರತೇಜಸೋದ್ವೇಜಿತಮನಸಾಂ ವಿಧ್ವಸ್ತಾ ವ್ಯಸವಃ ಸಂವತ್ಸರಾಂತೇ ವಿನಿಪತಂತಿ ॥ ೧೫ ॥ ಅತೀವ ಸುಲಲಿತಗತಿವಿಲಾಸವಿಲಸಿತರುಚಿರಹಾ-

ದಲ್ಲಿಯೇ ಸಿದ್ಧಿಯು ಉಂಟಾಗುವುದು. ಇಂದ್ರಿಯ ಲೋಲುಪ ರಾದ ಜನರಿಗೆ ಸಿದ್ಧಿಯು ದೊರೆಯುವುದೇ ಇಲ್ಲ. ॥ ೧೦ ॥ ಆ ಭಕ್ತರ ಸಂಗದಲ್ಲಿದ್ದರೆ ಶ್ರೀಭಗವಂತನ ಅಸಾಧಾರಣವಾದ ಶಕ್ತಿಯನ್ನು ಮತ್ತು ಪ್ರಭಾವವನ್ನು ಪ್ರಕಟಿಸುವ ತೀರ್ಥಸಮಾನವಾದ ಪವಿತ್ರ ಕಥೆಗಳ ಶ್ರವಣಭಾಗ್ಯ ಉಂಟಾಗುವುದು. ಅವನ್ನು ಮತ್ತೆ-ಮತ್ತೆ ಕೇಳುವವರ ಕಿವಿಗಳ ಮೂಲಕ ಹೃದಯವನ್ನು ಪ್ರವೇಶಮಾಡಿ ಅವರ ಎಲ್ಲ ರೀತಿಯ ದೈಹಿಕ ಮತ್ತು ಮಾನಸಿಕ ದೋಷಗಳನ್ನು ನಾಶಪಡಿಸುವುದು. ಹೀಗಿರುವಾಗ ಭಗವದ್ಭಕ್ತರ ಸಂಗವನ್ನು ಯಾರು ತಾನೇ ಮಾಡುವುದಿಲ್ಲ. ॥ ೧೧ ॥ ಭಗವಂತನಲ್ಲಿ ನಿಷ್ಕಾಮ-ಭಕ್ತಿಯುಳ್ಳವನ ಹೃದಯದಲ್ಲಿ ಸಮಸ್ತ ದೇವತೆಗಳು ಧರ್ಮ-ಜ್ಞಾನಾದಿ ಸಮಸ್ತ ಸದ್ಗುಣಗಳೊಡನೆ ಸದಾ ವಾಸಿಸುತ್ತವೆ. ಆದರೆ ಭಗವಂತನ ಭಕ್ತನಲ್ಲದವನಲ್ಲಿ ಮಹಾಪುರುಷರ ಆ ಗುಣಗಳು ಹೇಗೆ ಬರಬಲ್ಲವು? ಅವನಾದರೋ ಬಗೆ-ಬಗೆಯ ಸಂಕಲ್ಪಗಳನ್ನು ಮಾಡಿ ನಿರಂತರವಾಗಿ ತುಚ್ಛವಾದ ಹೊರಗಿನ ವಿಷಯಗಳ ಕಡೆಗೆ ಓಡುತ್ತಿರುತ್ತಾನೆ. ॥ ೧೨ ॥ ನೀರು ಮೀನುಗಳಿಗೆ ಪ್ರಿಯವಾಗಿದ್ದು, ಅವುಗಳ ಜೀವನವೇ ಆಗಿರುವಂತೆ, ಸಾಕ್ಷಾತ್ ಶ್ರೀಹರಿಯೇ ಸಮಸ್ತ ದೇಹಧಾರಿಗಳ ಪ್ರಿಯತಮ ಆತ್ಮಾ ಆಗಿದ್ದಾನೆ. ಅವನನ್ನು ಬಿಟ್ಟು ಯಾರಾದರೂ ಮಹತ್ವಾಭಿಮಾನಿಯು ಮನೆಯಲ್ಲೇ ಆಸಕ್ತನಾಗಿದ್ದರೆ ಆ ಸ್ಥಿತಿಯಲ್ಲಿ ಪತ್ನೀ-ಪುತ್ರರಿಂದ ಉಂಟಾದ ದೊಡ್ಡಸ್ತಿಕೆಯು ಕೇವಲ ವಯಸ್ಸಿನಿಂದಲೇ ತಿಳಿಯಲಾಗುತ್ತದೆ. ಗುಣಗಳ ದೃಷ್ಟಿಯಿಂದ ಅಲ್ಲ. ॥ ೧೩ ॥ ಆದ್ದರಿಂದ ಅಸುರರೇ! ನೀವು ತೃಷ್ಣೆ, ಆಸಕ್ತಿ, ವಿಷಾದ, ಕ್ರೋಧ, ಅಭಿಮಾನ, ಇಚ್ಛೆ, ಭಯ, ದೈನ್ಯ ಮತ್ತು ಮಾನಸಿಕ ಸಂತಾಪ ಇವುಗಳ ಮೂಲವಾದ ಹಾಗೂ ಜನ್ಮ-ಮರಣರೂಪವಾದ ಸಂಸಾರಕ್ಕೆ ಕಾರಣವಾದ ಮನೆಯೇ ಮುಂತಾದವುಗಳನ್ನು ತ್ಯಜಿಸಿ ಭಗವಾನ್ ನರಸಿಂಹನ ನಿರ್ಭಯ ಚರಣಗಳನ್ನು ಆಶ್ರಯಿಸಿರಿ. ॥ ೧೪ ॥

ಕೇತುಮಾಲವರ್ಷದಲ್ಲಿ ಭಗವಂತನು ಶ್ರೀಲಕ್ಷ್ಮೀದೇವಿಗೂ ಹಾಗೂ ಸಂವತ್ಸರನೆಂಬ ಪ್ರಜಾಪತಿಯ ಪುತ್ರ-ಪುತ್ರಿಯರಿಗೂ ಪ್ರಿಯವನ್ನುಂಟುಮಾಡುವುದಕ್ಕಾಗಿ ಭಗವಾನ್ ಕಾಮದೇವನ (ಪ್ರದ್ಯುಮ್ನಮೂರ್ತಿ) ರೂಪದಲ್ಲಿ ನೆಲೆಸುವನು. ಆ ಸಂವತ್ಸರ ಪ್ರಜಾಪತಿಯ ಪುತ್ರಿಯರು ರಾತ್ರಿಗೂ, ಪುತ್ರರು ಹಗಲಿಗೂ ಅಭಿಮಾನಿದೇವತೆಗಳು. ಇವರ ಸಂಖ್ಯೆಯು ಮನುಷ್ಯರ ನೂರು ವರ್ಷಗಳ ಆಯುಸ್ಸಿನ ಹಗಲೂ-ರಾತ್ರಿಗಳಷ್ಟು ಅಂದರೆ ಪುತ್ರರ ಸಂಖ್ಯೆಯು ಮೂವತ್ತಾರುಸಾವಿರ ಮತ್ತು ಪುತ್ರಿಯರ ಸಂಖ್ಯೆಯು ಅಷ್ಟೇ ಇರುತ್ತದೆ. ಇವರೇ ಈ ವರ್ಷದ ಅಧಿಪತಿಗಳು. ಆ ಕನ್ಯೆಯರು ಪರಮಪುರುಷ ನಾರಾಯಣನ ಶ್ರೇಷ್ಠ ಅಸ್ತ್ರವಾದ ಸುದರ್ಶನಚಕ್ರದ (ಕಾಲಚಕ್ರದ) ತೇಜದಿಂದ ಹೆದರಿ, ಪ್ರತೀ ವರ್ಷದ ಕೊನೆಯಲ್ಲಿ ಅವರ ಗರ್ಭ (ಕಲಾ-ಕಾಷ್ಠಾ ಮುಂತಾದ ಕಾಲವಿಭಾಗಗಳು) ಗಳು ಬಿದ್ದುಹೋಗುವುವು. ॥ ೧೫ ॥ ಅಲ್ಲಿ ಪ್ರದ್ಯುಮ್ನರೂಪಿಯಾದ ಶ್ರೀಭಗವಂತನು ತನ್ನ ಮನೋಹರವಾದ ಮಂದಗಮನದಿಂದಲೂ, ಕಮನೀಯವಾದ ಕಿರುನಗೆಯಿಂದಲೂ, ಬೆಡಗಿನಿಂದ ಕೂಡಿದ

ಸಲೇಶಾವಲೋಕಲೀಲಯಾಕಿಂಚಿದುತ್ತಂಭಿತಸುಂದರ-ಭ್ರೂಮಂಡಲಸುಭಗವದನಾರವಿಂದಶ್ರಿಯಾ ರಮಾಂ ರಮಯನ್ನಿಂದ್ರಿಯಾಣಿ ರಮಯತೇ ॥ ೧೬ ॥

ತದ್ಭಗವತೋ ಮಾಯಾಮಯಂ ರೂಪಂ ಪರಮಸಮಾಧಿಯೋಗೇನ ರಮಾದೇವೀ ಸಂವತ್ಸರಸ್ಯ ರಾತ್ರಿಷು ಪ್ರಜಾಪತೇರ್ದುಹಿತೃಭಿರುಪೇತಾಹಃಸು ಚ ತದ್ಭರ್ತೃಭಿರುಪಾಸ್ತೇ ಇದಂ ಚೋದಾಹರತಿ ॥ ೧೭ ॥ ಓಂ ಹ್ರಾಂ ಹ್ರೀಂ ಹ್ರೂಂ ಓಂ ನಮೋ ಭಗವತೇ ಹೃಷೀಕೇಶಾಯ ಸರ್ವಗುಣವಿಶೇಷೈರ್ವಿಲಕ್ಷಿತಾತ್ಮನೇ ಆಕೂತೀನಾಂ ಚಿತ್ತೀನಾಂ ಚೇತಸಾಂ ವಿಶೇಷಾಣಾಂ ಚಾಧಿಪತಯೇ ಷೋಡಶಕಲಾಯಚ್ಛಂದೋಮಯಾಯ ಅನ್ನಮಯಾಯ ಅಮೃತಮಯಾಯ ಸರ್ವಮಯಾಯ ಸಹಸೇ ಓಜಸೇ ಬಲಾಯ ಕಾಂತಾಯ ಕಾಮಾಯ ನಮಸ್ತೇ ಉಭಯತ್ರ ಭೂಯಾತ್ ॥ ೧೮ ॥

ಸ್ತ್ರಿಯೋ ವ್ರತೈಸ್ತ್ವಾ ಹೃಷಿಕೇಶ್ವರಂ ಸ್ವತೋ
ಹ್ಯಾರಾಧ್ಯ ಲೋಕೇ ಪತಿಮಾಶಾಸತೇಽನ್ಯಮ್ ।
ತಾಸಾಂ ನ ತೇ ವೈ ಪರಿಪಾಂತ್ಯಪತ್ಯಂ
ಪ್ರಿಯಂ ಧನಾಯೂಂಷಿ ಯತೋಽಸ್ವತಂತ್ರಾಃ ॥ ೧೯ ॥

ಸ ವೈ ಪತಿಃ ಸ್ಯಾದಕುತೋಭಯಃ ಸ್ವಯಂ
ಸಮಂತತಃ ಪಾತಿ ಭಯಾತುರಂ ಜನಮ್ ।
ಸ ಏಕ ಏವೇತರಥಾ ಮಿಥೋ ಭಯಂ
ನೈವಾತ್ಮಲಾಭಾದಧಿ ಮನ್ಯತೇ ಪರಮ್ ॥ ೨೦ ॥

ಯಾ ತಸ್ಯ ತೇ ಪಾದಸರೋರುಹಾರ್ಹಣಂ
ನಿಕಾಮಯೇತ್ಸಾಖಿಲಕಾಮಲಂಪಟಾ ।
ತದೇವ ರಾಸೀಪ್ಸಿತಮೀಪ್ಸಿತೋಽರ್ಚಿತೋ
ಯದ್ಭಗ್ನಯಾಚ್ಞಾ ಭಗವನ್ ಪ್ರತಪ್ಯತೇ ॥ ೨೧ ॥

ಕಡೆಗಣ್ಣ ವಿಲಾಸದಿಂದಲೂ, ಕೊಂಚ ಮೇಲೆದ್ದ ಸುಂದರವಾದ ಹುಬ್ಬುಗಳಿಂದಲೂ ಮೆರೆಯುತ್ತಿರುವ ವದನಾರವಿಂದದಿಂದ ರೂಪ-ಲಾವಣ್ಯಗಳ ಕಾಂತಿಯ ಮಳೆಗರೆಯುತ್ತಾ ರಮಾದೇವಿಯನ್ನು ಆನಂದಗೊಳಿಸುತ್ತಾ ತಾನೂ ಆನಂದಪಡುತ್ತಿರುವನು. ॥ ೧೬ ॥ ಶ್ರೀಲಕ್ಷ್ಮೀದೇವಿಯು ಶ್ರೀಭಗವಂತನ ಅದ್ಭುತವಾದ ಸ್ವರೂಪವನ್ನು ಪರಮ ಸಮಾಧಿಯೋಗದಿಂದ ರಾತ್ರಿಯಲ್ಲಿ ಸಂವತ್ಸರ ಪ್ರಜಾಪತಿಯ ಪುತ್ರಿಯರೊಡನೆಯೂ, ಹಗಲಿನಲ್ಲಿ ಆತನ ಪುತ್ರರೊಡನೆಯೂ ಆರಾಧನೆಮಾಡುತ್ತಾ ಈ ಮಂತ್ರದ ಜಪದಿಂದ ಸ್ವಾಮಿಯನ್ನು ಸ್ತುತಿಸುವಳು. ॥ ೧೭ ॥

'ಓಂ ಹ್ರಾಂ ಹ್ರೀಂ ಹ್ರೂಂ ಬೀಜಮಂತ್ರಗಳಿಂದ ನಿನಗೆ ನಮೋ ನಮಃ. ಇಂದ್ರಿಯಗಳಿಗೆ ನಿಯಾಮಕನೂ, ಸಮಸ್ತ ಕಲ್ಯಾಣಗುಣಾತಿಶಯಗಳ ಮೂರ್ತಿಯೂ, ಕ್ರಿಯಾಶಕ್ತಿಗೂ, ಜ್ಞಾನಶಕ್ತಿಗೂ, ಸಂಕಲ್ಪ-ನಿಶ್ಚಯಗಳೇ ಮುಂತಾದ ಚಿತ್ತದ ಧರ್ಮಗಳಿಗೂ, ಅವುಗಳ ವಿಷಯಗಳಿಗೆ ಅಧಿಪತಿಯೂ, ಹನ್ನೊಂದು ಇಂದ್ರಿಯಗಳು ಮತ್ತು ಐದು ವಿಷಯಗಳೆಂಬ ಹದಿನಾರು ಕಲೆಗಳಿಂದ ತುಂಬಿರುವವನೂ, ವೇದಮಯನೂ, ಅನ್ನಮಯನೂ, ಅಮೃತಮಯನೂ, ಸರ್ವಮಯನೂ, ಸಹಸ್ಸು (ಮನಶ್ಶಕ್ತಿ) ಓಜಸ್ಸು (ಇಂದ್ರಿಯಶಕ್ತಿ) ಬಲ (ದೇಹಶಕ್ತಿ) ಸ್ವರೂಪನೂ, ಪರಮಸುಂದರನೂ ಆದ ಭಗವಂತನಾದ ಕಾಮದೇವನಿಗೆ (ಒಳಗೆ ಮತ್ತು ಹೊರಗೆ) ಎರಡೂ ಕಡೆಗಳಲ್ಲಿಯೂ ನಮಸ್ಕಾರವು. ॥ ೧೮ ॥

ಭಗವಂತಾ! ನೀನು ಇಂದ್ರಿಯಗಳ ಅಧೀಶ್ವರನಾಗಿರುವೆ. ಸ್ತ್ರೀಯರು ಬಗೆ-ಬಗೆಯ ಕಠೋರ ವ್ರತಗಳಿಂದ ನಿನ್ನನ್ನೇ ಆರಾಧಿಸುತ್ತಾ ಬೇರೆ ಲೌಕಿಕ ಪತಿಗಳನ್ನು ಬಯಸುತ್ತಾ ಇರುತ್ತಾರೆ. ಪತಿ ಎಂದರೆ ಪಾಲಿಸುವವನೆಂದರ್ಥ. ಆದರೆ ಅವರು ತನ್ನ ಪ್ರಿಯ ಪುತ್ರ, ಧನ ಮತ್ತು ಆಯುಸ್ಸನ್ನು ರಕ್ಷಿಸಿಕೊಳ್ಳಲಾರರು. ಏಕೆಂದರೆ ಅವರು ಸ್ವತಃ ಅಸ್ವತಂತ್ರರಾಗಿರುವರು. ॥ ೧೯ ॥ ನಿಜವಾದ ಪತಿಯು (ಪಾಲಿಸುವವನು) - ಸ್ವಯಂ ಪೂರ್ಣವಾಗಿ ನಿರ್ಭಯನಾಗಿ, ಭಯಭೀತರಾದ ಇತರ ಜನರನ್ನು ಎಲ್ಲ ರೀತಿಯಿಂದ ರಕ್ಷಿಸಬಲ್ಲನೋ ಅವನೇ ಆಗಿರುವನು. ಇಂತಹ ಪತಿಯು ಏಕಮಾತ್ರ ನೀನೇ ಆಗಿರುವೆ. ಒಂದಕ್ಕಿಂತ ಹೆಚ್ಚು ಈಶ್ವರರನ್ನು ಒಪ್ಪಿಕೊಂಡರೆ ಅವರಲ್ಲಿ ಪರಸ್ಪರದಿಂದ ಭಯ ಉಂಟಾಗುವ ಸಂಭವವು ಇದೆ. ಆದುದರಿಂದ ವಿಶ್ವಕ್ಕೆಲ್ಲಾ ಒಬ್ಬನೇ ಪತಿಯಾಗಿರುವ ನಿನ್ನ ಲಾಭಕ್ಕಿಂತಲೂ ಅಧಿಕವಾದ ಬೇರಾವುದನ್ನೂ ನಾನು ಎಣಿಸುವುದಿಲ್ಲ. ॥ ೨೦ ॥ ಭಗವಂತಾ! ನಿನ್ನ ಚರಣಕಮಲಗಳನ್ನು ಪೂಜಿಸುತ್ತಾ ಬೇರೆ ಏನನ್ನೂ ಬಯಸದಿರುವ ಸ್ತ್ರೀಯಳ ಎಲ್ಲ ಕಾಮನೆಗಳು ಪೂರ್ಣವಾಗುತ್ತವೆ. ಆದರೆ ಯಾವುದಾದರೊಂದು ಕಾಮನೆಯಿಂದ ನಿನ್ನನ್ನು ಉಪಾಸನೆ ಮಾಡಿದರೆ, ಅವಳಿಗೆ ಭೋಗವು ಸಮಾಪ್ತವಾದಾಗ ನಾಶಹೊಂದುವಂತಹ ವಸ್ತುವನ್ನೇ ಕೊಡುವೆ. ಅದರಿಂದ ಅವಳು ಸಂತಪ್ತಳಾಗಬೇಕಾಗುತ್ತದೆ. ॥ ೨೧ ॥ ಎಲೈ ಅಜಿತನೇ! ನನ್ನನ್ನು (ಐಶ್ವರ್ಯವನ್ನು) ಪಡೆಯಲಿಕ್ಕಾಗಿ ಇಂದ್ರಿಯಸುಖದ ಅಭಿಲಾಷಿಗಳಾದ ಬ್ರಹ್ಮ-ರುದ್ರರೇ ಮುಂತಾದ ಸಮಸ್ತ ಸುರಾಸುರರು ಘೋರತಪಸ್ಸನ್ನು ಆಚರಿಸುತ್ತಾರೆ. ಆದರೆ ನಿನ್ನ

ಮತ್ಪ್ರಾಪ್ತಯೇಽಜೇಶಸುರಾಸುರಾದಯ-
ಸ್ತಪ್ಯಂತ ಉಗ್ರಂ ತಪ ಐಂದ್ರಿಯೇಧಿಯಃ ।
ಋತೇ ಭವತ್ಪಾದಪರಾಯಣಾನ್ನ ಮಾಂ
ವಿಂದಂತ್ಯಹಂ ತ್ವದ್ಧೃದಯಾ ಯತೋಽಜಿತ ॥ ೨೨ ॥

ಸ ತ್ವಂ ಮಮಾಪ್ಯಚ್ಯುತ ಶೀರ್ಷ್ಣಿ ವಂದಿತಂ
ಕರಾಂಬುಜಂ ಯತ್ತ್ವದಧಾಯಿ ಸಾತ್ವತಾಮ್ ।
ಬಿಭರ್ಷಿ ಮಾಂ ಲಕ್ಷ್ಮ ವರೇಣ್ಯ ಮಾಯಯಾ
ಕ ಈಶ್ವರಸ್ಯೇಹಿತಮೂಹಿತುಂ ವಿಭುರಿತಿ ॥ ೨೩ ॥

ರಮ್ಯಕೇ ಚ ಭಗವತಃ ಪ್ರಿಯತಮಂ ಮಾತ್ಸ್ಯಮವತಾರರೂಪಂ ತದ್ವರ್ಷಪುರುಷಸ್ಯ ಮನೋಃ ಪ್ರಾಕ್ಪ್ರದರ್ಶಿತಂ ಸ ಇದಾನೀಮಪಿ ಮಹತಾ ಭಕ್ತಿಯೋಗೇನಾರಾಧಯತೀದಂ ಚೋದಾಹರತಿ ॥ ೨೪ ॥ ಓಂ ನಮೋ ಭಗವತೇ ಮುಖ್ಯತಮಾಯ ನಮಃ ಸತ್ತ್ವಾಯ ಪ್ರಾಣಾಯೌಜಸೇ ಸಹಸೇ ಬಲಾಯ ಮಹಾಮತ್ಸ್ಯಾಯ ನಮ ಇತಿ ॥ ೨೫ ॥

ಅಂತರ್ಬಹಿಶ್ಚಾಖಿಲಲೋಕಪಾಲಕೈ-
ರದೃಷ್ಟರೂಪೋ ವಿಚರಸ್ಯುರುಸ್ವನಃ ।
ಸ ಈಶ್ವರಸ್ತ್ವಂ ಯ ಇದಂ ವಶೇಽನಯ-
ನ್ನಾಮ್ನಾ ಯಥಾ ದಾರುಮಯೀಂ ನರಃ ಸ್ತ್ರಿಯಮ್ ॥ ೨೬ ॥

ಯಂ ಲೋಕಪಾಲಾಃ ಕಿಲ ಮತ್ಸರಜ್ವರಾ
ಹಿತ್ವಾ ಯತಂತೋಽಪಿ ಪೃಥಕ್ಸಮೇತ್ಯ ಚ ।
ಪಾತುಂ ನ ಶೇಕುರ್ದ್ವಿಪದಶ್ಚತುಷ್ಪದಃ
ಸರೀಸೃಪಂ ಸ್ಥಾಣು ಯದತ್ರ ದೃಶ್ಯತೇ ॥ ೨೭ ॥

ಭವಾನ್ ಯುಗಾಂತಾರ್ಣವ ಊರ್ಮಿಮಾಲಿನಿ
ಕ್ಷೋಣೀಮಿಮಾಮೋಷಧಿವೀರುಧಾಂ ನಿಧಿಮ್ ।
ಮಯಾ ಸಹೋರು ಕ್ರಮತೇಽಜ ಓಜಸಾ
ತಸ್ಮೈ ಜಗತ್ಪ್ರಾಣಗಣಾತ್ಮನೇ ನಮ ಇತಿ ॥ ೨೮ ॥

ಹಿರಣ್ಮಯೇಽಪಿ ಭಗವಾನ್ನಿವಸತಿ ಕೂರ್ಮತನುಂ ಬಿಭ್ರಾಣಸ್ತಸ್ಯ ತತ್ಪ್ರಿಯತಮಾಂ ತನುಮರ್ಯಮಾ ಸಹ ವರ್ಷಪುರುಷೈಃ ಪಿತೃಗಣಾಧಿಪತಿರುಪಧಾವತಿ ಮಂತ್ರಮಿಮಂ ಚಾನುಜಪತಿ ॥ ೨೯ ॥ ಓಂ ನಮೋ ಭಗವತೇ

ಚರಣಕಮಲಗಳ ಆಶ್ರಯ ಪಡೆದ ಭಕ್ತರಲ್ಲದೆ ನನ್ನನ್ನು ಯಾರೂ ಪಡೆಯಲಾರರು. ಏಕೆಂದರೆ, ನನ್ನ ಮನಸ್ಸಾದರೋ ನಿನ್ನಲ್ಲೇ ನೆಲೆಸಿದೆ. ॥ ೨೨ ॥ ಅಚ್ಯುತನೇ! ನೀನು ನಿನ್ನ ವಂದನೀಯ ಕರಕಮಲವನ್ನು ಭಕ್ತರ ಮಸ್ತಕದಲ್ಲಿರಿಸುವಂತೆ ನನ್ನ ತಲೆಯ ಮೇಲೆಯೂ ಇರಿಸು. ಎಲೈ ವರೇಣ್ಯನೇ! ನನ್ನನ್ನು ಕೇವಲ ಶ್ರೀಲಾಂಛನ (ಚಿಹ್ನೆ) ರೂಪದಲ್ಲಿ ವಕ್ಷಃಸ್ಥಳದಲ್ಲಿ ಧರಿಸಿದ್ದೀಯೆ. ಸರ್ವಸಮರ್ಥನು ನೀನು. ನೀನು ನಿನ್ನ ಮಾಯೆಯಿಂದ ಮಾಡುವ ಲೀಲೆಗಳ ರಹಸ್ಯವನ್ನು ಯಾವನು ತಿಳಿಯಬಲ್ಲನು? ॥ ೨೩ ॥

ರಮ್ಯಕ ವರ್ಷದಲ್ಲಿ ಭಗವಂತನು ಅಲ್ಲಿಯ ಅಧಿಪತಿಯಾದ ಮನುವಿಗೆ ಹಿಂದೆ ತನ್ನ ಪರಮಪ್ರಿಯ ಮತ್ಸ್ಯರೂಪವನ್ನು ತೋರಿದ್ದನು. ಮನುವು ಈಗಲೂ ಭಗವಂತನ ಅದೇ ರೂಪವನ್ನು ಅತ್ಯಂತ ಭಕ್ತಿಭಾವದಿಂದ ಉಪಾಸನೆ ಮಾಡುತ್ತಿದ್ದಾನೆ. ಅವನು ಈ ಮಂತ್ರವನ್ನು ಜಪಿಸುತ್ತಾ, ಸ್ತುತಿಸುತ್ತಿದ್ದಾನೆ – ಬಲರೂಪವಾದ ಮುಖ್ಯಪ್ರಾಣರೂಪಿಯೂ, ಮನೋಬಲ-ಬುದ್ಧಿಬಲ-ದೇಹಬಲ ರೂಪಿಯೂ, ಓಂಕಾರದ ಪರಮಾರ್ಥವೂ ಆಗಿರುವ ಸರ್ವಶ್ರೇಷ್ಠನಾದ ಭಗವಾನ್ ಮಹಾಮತ್ಸ್ಯನಿಗೆ ಮತ್ತೆ-ಮತ್ತೆ ನಮಸ್ಕಾರಗಳು. ॥ ೨೪-೨೫ ॥

ಪ್ರಭೋ! ನಟನು ಸೂತ್ರದ ಬೊಂಬೆಯನ್ನು ಕುಣಿಸುವಂತೆಯೇ ನೀನು ಬ್ರಾಹ್ಮಣಾದಿ ನಾಮಗಳ ಹಗ್ಗದಿಂದ ಇಡೀ ವಿಶ್ವವನ್ನು ತನ್ನ ಅಧೀನದಲ್ಲಿಟ್ಟುಕೊಂಡು ಕುಣಿಸುತ್ತಿರುವೆ. ಆದ್ದರಿಂದ ನೀನೇ ಎಲ್ಲರ ಪ್ರೇರಕನಾಗಿರುವೆ. ನಿನ್ನನ್ನು ಬ್ರಹ್ಮಾದಿ ಲೋಕಪಾಲರೂ ಕೂಡ ನೋಡಲಾರರು. ಆದರೂ ನೀನು ಸಮಸ್ತ ಪ್ರಾಣಿಗಳ ಒಳಗೆ ಪ್ರಾಣರೂಪದಿಂದ, ಹೊರಗೆ ವಾಯುರೂಪದಿಂದ ನಿರಂತರವಾಗಿ ಸಂಚರಿಸುತ್ತಿರುವೆ. ವೇದವೇ ನಿನ್ನ ಮಹಾಶಬ್ದವಾಗಿದೆ. ॥ ೨೬ ॥ ಒಮ್ಮೆ ಇಂದ್ರಾದಿ ಇಂದ್ರಿಯಾಭಿಮಾನಿ ದೇವತೆಗಳಿಗೆ ಪ್ರಾಣಸ್ವರೂಪನಾದ ನಿನ್ನಲ್ಲಿ ಮತ್ಸರ ಉಂಟಾಗಿ ನಿನ್ನೊಡನೆ ಸ್ಪರ್ಧಿಸಿದರು. ಆಗ ನೀನು ಅವರನ್ನು ಬಿಟ್ಟು ದೇಹದಿಂದ ಅಗಲಿದಾಗ, ಅವರು ಎಷ್ಟೇ ಪ್ರಯತ್ನಿಸಿದರೂ ಒಬ್ಬೊಬ್ಬರಾಗಲೀ ಅಥವಾ ಒಟ್ಟಿಗೆ ಸೇರಿಕೊಂಡಾಗಲೀ ಮನುಷ್ಯ, ಪಶು, ಸ್ಥಾವರ-ಜಂಗಮ ಮುಂತಾದ ಕಂಡುಬರುವ ಯಾವ ದೇಹವನ್ನೂ ರಕ್ಷಿಸಲಾರದೆ ಹೋದರು. ॥ ೨೭ ॥ 'ಎಲೈ ಜನ್ಮರಹಿತನಾದ ಸ್ವಾಮಿಯೇ! ನೀನು ನನ್ನೊಡನೆ ಸಮಸ್ತ ಓಷಧಿಗಳಿಗೂ ಮತ್ತು ಲತೆಗಳಿಗೂ ಆಶ್ರಯವಾಗಿರುವ ಈ ಪೃಥಿವಿಯನ್ನು ತೆಗೆದುಕೊಂಡು ದೊಡ್ಡ-ದೊಡ್ಡ ಎತ್ತರವಾದ ಅಲೆಗಳಿಂದ ಕೂಡಿದ ಪ್ರಳಯಸಮುದ್ರದಲ್ಲಿ ಭಾರೀ ಉತ್ಸಾಹದಿಂದ ವಿಹರಿಸಿದೆ. ನೀನು ಜಗತ್ತಿನ ಸಮಸ್ತ ಪ್ರಾಣಿಸಮುದಾಯದ ನಿಯಾಮಕನಾಗಿರುವೆ. ನಿನಗೆ ನನ್ನ ನಮಸ್ಕಾರವು.' ॥ ೨೮ ॥

ಹಿರಣ್ಮಯವರ್ಷದಲ್ಲಿ ಶ್ರೀಭಗವಂತನು ಕಚ್ಛಪರೂಪವನ್ನು ಧರಿಸಿ ವಾಸಿಸುವನು. ಅಲ್ಲಿಯ ನಿವಾಸಿಗಳೊಡನೆ ಪಿತೃಗಳ ಒಡೆಯನಾದ ಅರ್ಯಮನು ಭಗವಂತನ ಪ್ರಿಯತಮವಾದ ಕೂರ್ಮಮೂರ್ತಿಯನ್ನು ಉಪಾಸನೆ ಮಾಡುತ್ತಾ ಈ ಮಂತ್ರವನ್ನು ನಿರಂತರವಾಗಿ ಜಪಿಸುತ್ತಿರುವನು. ॥ ೨೯ ॥ 'ಸಮಸ್ತ ಸತ್ತ್ವಗುಣ ಸಂಪನ್ನನೂ, ತಿಳಿಯಲಾಗದ ನೆಲೆಯುಳ್ಳವನೂ, ಮಹಾದೇಹನೂ, ಮಹಾ

ಅಕೂಪಾರಾಯ ಸರ್ವಸತ್ತ್ವಗುಣವಿಶೇಷಣಾಯಾನುಪಲಕ್ಷಿತಸ್ಥಾನಾಯ ನಮೋ ವರ್ಷ್ಮಣೇ ನಮೋ ಭೂಮ್ನೇ ನಮೋ ನಮೋಽವಸ್ಥಾನಾಯ ನಮಸ್ತೇ ॥ ೩೦ ॥

ಯದ್ರೂಪಮೇತನ್ನಿಜಮಾಯಯಾರ್ಪಿತ
ಮರ್ಥಸ್ವರೂಪಂ ಬಹುರೂಪರೂಪಿತಮ್ ।
ಸಂಖ್ಯಾ ನ ಯಸ್ಯಾಸ್ತ್ಯಯಥೋಪಲಂಭನಾತ್
ತಸ್ಮೈ ನಮಸ್ತೇಽವ್ಯಪದೇಶರೂಪಿಣೇ ॥ ೩೧ ॥

ಜರಾಯುಜಂ ಸ್ವೇದಜಮಂಡಜೋದ್ಭಿದಂ
ಚರಾಚರಂ ದೇವರ್ಷಿಪಿತೃಭೂತಮೈಂದ್ರಿಯಮ್ ।
ದ್ಯೌಃ ಖಂ ಕ್ಷಿತಿಃ ಶೈಲಸರಿತ್ಸಮುದ್ರ-
ದ್ವೀಪಗ್ರಹರ್ಕ್ಷೇತ್ಯಭಿಧೇಯ ಏಕಃ ॥ ೩೨ ॥

ಯಸ್ಮಿನ್ನಸಂಖ್ಯೇಯವಿಶೇಷನಾಮ-
ರೂಪಾಕೃತೌ ಕವಿಭಿಃ ಕಲ್ಪಿತೇಯಮ್ ।
ಸಂಖ್ಯಾ ಯಯಾ ತತ್ತ್ವದೃಶಾಪನೀಯತೇ
ತಸ್ಮೈ ನಮಃ ಸಾಂಖ್ಯನಿದರ್ಶನಾಯ ತೇ ಇತಿ ॥ ೩೩ ॥

ಉತ್ತರೇಷು ಚ ಕುರುಷು ಭಗವಾನ್ಯಜ್ಞಪುರುಷಃ ಕೃತವರಾಹರೂಪ ಆಸ್ತೇ ತಂ ತು ದೇವೀ ಹೈಷಾ ಭೂಃ ಸಹ ಕುರುಭಿರಸ್ಖಲಿತಭಕ್ತಿಯೋಗೇನೋಪಧಾವತಿ ಇಮಾಂ ಚ ಪರಮಾಮುಪನಿಷದಮಾವರ್ತಯತಿ ॥ ೩೪ ॥ ಓಂ ನಮೋ ಭಗವತೇ ಮಂತ್ರತತ್ತ್ವಲಿಂಗಾಯ ಯಜ್ಞಕ್ರತವೇ ಮಹಾಧ್ವರಾವಯವಾಯ ಮಹಾಪುರುಷಾಯ ನಮಃ ಕರ್ಮಶುಕ್ಲಾಯ ತ್ರಿಯುಗಾಯ ನಮಸ್ತೇ ॥ ೩೫ ॥

ಯಸ್ಯ ಸ್ವರೂಪಂ ಕವಯೋ ವಿಪಶ್ಚಿತೋ
ಗುಣೇಷು ದಾರುಷ್ವಿವ ಜಾತವೇದಸಮ್ ।
ಮಥ್ನಂತಿ ಮಥ್ನಾ ಮನಸಾ ದಿದೃಕ್ಷವೋ
ಗೂಢಂ ಕ್ರಿಯಾರ್ಥೈರ್ನಮ ಈರಿತಾತ್ಮನೇ ॥ ೩೬ ॥

ಪುರುಷನೂ, ವಿನಾಶರಹಿತನೂ, ಸರ್ವಾಧಾರನೂ ಆದ ಕೂರ್ಮರೂಪೀ ಭಗವಂತನೇ! ನಿನಗೆ ಮತ್ತೆ-ಮತ್ತೆ ನಮಸ್ಕಾರಗಳು. ॥ ೩೦ ॥

ಭಗವಂತನೇ! ಅನೇಕ ರೂಪಗಳಲ್ಲಿ ಕಂಡು ಬರುವ ಈ ದೃಶ್ಯ ಪ್ರಪಂಚವು ಮಿಥ್ಯೆಯೇ ಆಗಿದ್ದು, ವಾಸ್ತವವಾಗಿ ಇದರ ಯಾವುದೇ ಗಣನೆ ಇಲ್ಲದಿದ್ದರೂ, ಇದು ಮಾಯೆಯಿಂದ ಪ್ರಕಾಶಿತವಾಗುವ ನಿನ್ನ ಸ್ವರೂಪವೇ ಆಗಿದೆ. ಇಂತಹ ಅನಿರ್ವಚನೀಯನಾದ ನಿನಗೆ ನನ್ನ ನಮಸ್ಕಾರಗಳು. ॥ ೩೧ ॥ ಜರಾಯುಜ, ಸ್ವೇದಜ, ಅಂಡಜ, ಉದ್ಭಿಜ್ಜ, ಜಂಗಮ, ಸ್ಥಾವರ, ದೇವತೆಗಳು, ಪಿತೃಗಳು, ಋಷಿಗಳು, ಭೂತಗಳು, ಇಂದ್ರಿಯಗಳು, ಸ್ವರ್ಗ, ಆಕಾಶ, ಪೃಥಿವಿ, ಪರ್ವತ, ನದಿ, ಸಮುದ್ರ, ದ್ವೀಪ, ಗ್ರಹ ಮತ್ತು ನಕ್ಷತ್ರ ಮುಂತಾದ ಬೇರೆ-ಬೇರೆ ಹೆಸರುಗಳಿಂದ ಕರೆಯಲ್ಪಡುವವನು ನೀನೊಬ್ಬನೇ. ॥ ೩೨ ॥ ನೀನು ಅಸಂಖ್ಯವಾದ ನಾಮ-ರೂಪ-ಆಕೃತಿಗಳಿಂದ ಕೂಡಿರುವೆ. ನಿನ್ನಲ್ಲಿ ಕಪಿಲರೇ ಮುಂತಾದ ಮಹರ್ಷಿಗಳಿಂದ ಕಲ್ಪಿತವಾದ ೨೪ ತತ್ತ್ವಗಳು ಯಾವ ತತ್ತ್ವಜ್ಞಾನದಿಂದ ನೀಗಿಸಲ್ಪಡುವುವೋ ಅಂತಹ ಸಾಂಖ್ಯಸಿದ್ಧಾಂತ ರೂಪಿಯಾದ ನಿನಗೆ ನನ್ನ ನಮಸ್ಕಾರಗಳು. ॥ ೩೩ ॥

ಉತ್ತರಕುರುವರ್ಷದಲ್ಲಿ ಭಗವಾನ್ ಯಜ್ಞಪುರುಷನು ವರಾಹ ರೂಪವನ್ನು ಧರಿಸಿ ವಿರಾಜಿಸುತ್ತಿರುವನು. ಅಲ್ಲಿಯ ನಿವಾಸಿಗಳೊಡನೆ ಸಾಕ್ಷಾತ್ ಪೃಥಿವಿದೇವಿಯು ನಿಶ್ಚಲವಾದ ಭಕ್ತಿಯೋಗದಿಂದ ಆ ಯಜ್ಞವರಾಹಸ್ವಾಮಿಯನ್ನು ಉಪಾಸನೆಮಾಡುತ್ತಾ ಈ ಮಂತ್ರವನ್ನು ಜಪಿಸುತ್ತಿರುವಳು – ॥ ೩೪ ॥ ಓಂ ಭಗವಂತನೇ! ಯಾರ ತತ್ತ್ವವು ಮಂತ್ರಗಳಿಂದ ತಿಳಿಯಲಾಗುತ್ತದೋ, ಯಾರು ಯಜ್ಞ ಮತ್ತು ಕ್ರತುಸ್ವರೂಪನೋ, ದೊಡ್ಡ-ದೊಡ್ಡ ಯಜ್ಞಗಳು ಯಾರ ಅವಯವಗಳಾಗಿವೆಯೋ, ಆ ಓಂಕಾರಸ್ವರೂಪನೂ, ಶುಕ್ಲಮಯ ತ್ರಿಯುಗಮೂರ್ತಿಯೂ, ಆದ ಭಗವಾನ್ ಪುರುಷೋತ್ತಮ ವರಾಹಸ್ವಾಮಿಗೆ ಮತ್ತೆ-ಮತ್ತೆ ನಮಸ್ಕಾರಗಳು. ॥ ೩೫ ॥

ಋತ್ವಿಜರು ಅರಣಿ ಎಂಬ ಕಟ್ಟಿಗೆಯನ್ನು ಕಡೆದು ಅಡಗಿರುವ ಅಗ್ನಿಯನ್ನು ಪ್ರಕಟಗೊಳಿಸುವಂತೆಯೇ ಕರ್ಮಾಸಕ್ತಿ ಮತ್ತು ಕರ್ಮಫಲದ ಕಾಮನೆಯಿಂದ ಅಡಗಿರುವ ಯಾರ ರೂಪವನ್ನು ನೋಡುವ ಇಚ್ಛೆಯಿಂದ ತತ್ತ್ವಾನ್ವೇಷಣೆಯಲ್ಲಿ ನಿಷ್ಣಾತರಾದ ಪಂಡಿತ ಜ್ಞಾನಿಗಳು ತಮ್ಮ ವಿವೇಕದಿಂದ ಕೂಡಿದ ಮನರೂಪೀ ಮಂಥನಾಸ್ತ್ರದಿಂದ ಶರೀರ ಮತ್ತು ಇಂದ್ರಿಯಗಳನ್ನು ಕಡೆದು ನಿನ್ನ ಸ್ವರೂಪವನ್ನು ಕಾಣುವರು. ಹೀಗೆ ಭಕ್ತರಿಗೆ ಮಾತ್ರ ನಿಜಸ್ವರೂಪವನ್ನು ತೋರಿಸುವ ನಿನಗೆ ನಮಸ್ಕಾರವು. ॥ ೩೬ ॥ ವಿಚಾರ ಹಾಗೂ ಯಮ-ನಿಯಮಾದಿ ಯೋಗಸಾಧನೆಯಿಂದ ನಿಶ್ಚಯಾತ್ಮಕವಾದ ಬುದ್ಧಿಯು ಉಂಟಾದ ಮಹಾಪುರುಷರು – ದ್ರವ್ಯ (ವಿಷಯ), ಕ್ರಿಯೆ (ಇಂದ್ರಿಯಗಳ ವ್ಯಾಪಾರ), ಹೇತು (ಇಂದ್ರಿಯಾಧಿಷ್ಠಿತ ದೇವತೆಗಳು), ಅಯನ (ಶರೀರ), ಈಶ, ಕಾಲ ಮತ್ತು ಕರ್ತಾ (ಅಹಂಕಾರ) ಮುಂತಾದ ಮಾಯೆಯ ಕಾರ್ಯವನ್ನು ನೋಡಿ ಯಾರ ನಿಜವಾದ ಸ್ವರೂಪವನ್ನು ನಿಶ್ಚಯಿಸುವರೋ, ಅಂತಹ

ದ್ರವ್ಯಕ್ರಿಯಾಹೇತ್ವಯನೇಶಕರ್ತೃಭಿ-
ರ್ಮಾಯಾಗುಣೈರ್ವಸ್ತುನಿರೀಕ್ಷಿತಾತ್ಮನೇ ।
ಅನ್ವೀಕ್ಷಯಾಂಗಾತಿಶಯಾತ್ಮಬುದ್ಧಿಭಿ-
ರ್ನಿರಸ್ತಮಾಯಾಕೃತಯೇ ನಮೋ ನಮಃ ॥ ೩೭ ॥

ಕರೋತಿ ವಿಶ್ವಸ್ಥಿತಿ ಸಂಯಮೋದಯಂ
ಯಸ್ಯೇಪ್ಸಿತಂ ನೇಪ್ಸಿತಮೀಕ್ಷಿತುರ್ಗುಣೈಃ ।
ಮಾಯಾ ಯಥಾಽಯೋ ಭ್ರಮತೇ ತದಾಶ್ರಯಂ
ಗ್ರಾವ್ಣೋ ನಮಸ್ತೇ ಗುಣಕರ್ಮಸಾಕ್ಷಿಣೇ ॥ ೩೮ ॥

ಪ್ರಮಥ್ಯ ದೈತ್ಯಂ ಪ್ರತಿವಾರಣಂ ಮೃಧೇ
ಯೋ ಮಾಂ ರಸಾಯಾ ಜಗದಾದಿಸೂಕರಃ ।
ಕೃತ್ವಾಗ್ರದಂಷ್ಟ್ರೇ ನಿರಗಾದುದನ್ವತಃ
ಕ್ರೀಡನ್ನಿವೇಭಃ ಪ್ರಣತಾಸ್ಮಿ ತಂ ವಿಭುಮಿತಿ ॥ ೩೯ ॥

ಮಾಯಾ ಆಕೃತಿಗಳಿಂದ ರಹಿತನಾದ ನಿನಗೆ ಮತ್ತೆ-ಮತ್ತೆ ನಮಸ್ಕಾರಗಳು. ॥ ೩೭॥ ಸರ್ವರಿಗೂ ಸಾಕ್ಷಿಯಾಗಿರುವ ನಿನ್ನ ಸೃಷ್ಟಿಯೇ ಮುಂತಾದ ಸಂಕಲ್ಪವು ತನಗಾಗಿ ಇರದೆ ಸಮಸ್ತ ಪ್ರಾಣಿಗಳಿಗಾಗಿ ಇರುತ್ತದೆ. ಮಾಯೆ ಎಂಬುದು ಜಡವಾಗಿದ್ದರೂ ನಿನ್ನ ಸಾನ್ನಿಧ್ಯವನ್ನು ಪಡೆದು – ಸೂಜಿಗಲ್ಲು ಜಡವಾದ ಕಬ್ಬಿಣವನ್ನು ಆಡಿಸುವಂತೆ – ತನ್ನ ಗುಣಗಳಿಂದ ಜಗತ್ತಿನ ಸೃಷ್ಟಿಯೇ ಮುಂತಾದ ಕಾರ್ಯಗಳನ್ನು ನಡೆಸುತ್ತಿದೆ. ಹೀಗೆ ಎಲ್ಲರ ಮನಸ್ಸುಗಳಿಗೂ, ಗುಣಗಳಿಗೂ, ಕರ್ಮಗಳಿಗೂ ಸಾಕ್ಷಿಯಾಗಿರುವ ನಿನಗೆ ಅನಂತ ನಮಸ್ಕಾರಗಳು. ॥ ೩೮ ॥ ನೀನು ಜಗತ್ತಿನ ಕಾರಣವಾದ ಆದಿಸೂಕರನಾಗಿರುವೆ. ಒಂದು ಆನೆಯು ಮತ್ತೊಂದು ಆನೆಯನ್ನು ಹಿಡಿಯುವಂತೆ, ಗಜರಾಜನಂತೆ ಕ್ರೀಡಿಸುತ್ತಾ ನೀನು ಪ್ರತಿದ್ವಂದೀ ಹಿರಣ್ಯಾಕ್ಷ ದೈತ್ಯನನ್ನು ಯುದ್ಧದಲ್ಲಿ ಸಂಹರಿಸಿ ನನ್ನನ್ನು ತನ್ನ ಕೋರೆದಾಡೆಗಳ ತುದಿಯಲ್ಲಿ ಇಟ್ಟುಕೊಂಡು ರಸಾತಳದಿಂದ ಪ್ರಳಯಪಯೋಧಿಯಿಂದ ಹೊರಗೆ ತಂದಿದ್ದ ಸರ್ವಶಕ್ತಿವಂತನಾದ ನಿನಗೆ ನಾನು ಪುನಃ ಪುನಃ ನಮಸ್ಕರಿಸುತ್ತೇನೆ. ॥ ೩೯ ॥

ಹದಿನೆಂಟನೆಯ ಅಧ್ಯಾಯವು ಮುಗಿಯಿತು. ॥ ೧೮ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಪಂಚಮಸ್ಕಂಧೇ
ಭುವನಕೋಶವರ್ಣನಂ ನಾಮಾಷ್ಟಾದಶೋಽಧ್ಯಾಯಃ ॥ ೧೮ ॥

ಹತ್ತೊಂಭತ್ತನೆಯ ಅಧ್ಯಾಯ

ಕಿಂಪುರುಷವರ್ಷ ಮತ್ತು ಭಾರತವರ್ಷಗಳ ವರ್ಣನೆ

ಶ್ರೀಶುಕ ಉವಾಚ

ಕಿಂಪುರುಷೇ ವರ್ಷೇ ಭಗವಂತಮಾದಿಪುರುಷಂ ಲಕ್ಷ್ಮಣಾಗ್ರಜಂ ಸೀತಾಭಿರಾಮಂ ರಾಮಂ ತಚ್ಚರಣಸಂನಿಕರ್ಷಾಭಿರತಃ ಪರಮಭಾಗವತೋ ಹನುಮಾನ್ ಸಹ ಕಿಂಪುರುಷೈರವಿರತಭಕ್ತಿರುಪಾಸ್ತೇ ॥ ೧ ॥ ಆರ್ಷ್ಟಿಷೇಣೇನ ಸಹ ಗಂಧರ್ವೈರನುಗೀಯಮಾನಾಂ ಪರಮಕಲ್ಯಾಣೀಂ ಭರ್ತೃಭಗವತ್ಕಥಾಂ ಸಮುಪಶೃಣೋತಿ ಸ್ವಯಂ ಚೇದಂ ಗಾಯತಿ ॥ ೨ ॥ ಓಂ ನಮೋ ಭಗವತೇ ಉತ್ತಮಶ್ಲೋಕಾಯ ನಮ ಆರ್ಯಲಕ್ಷಣಶೀಲವ್ರತಾಯ ನಮ ಉಪಶಿಕ್ಷಿತಾತ್ಮನ ಉಪಾಸಿತಲೋಕಾಯ ನಮಃ ಸಾಧುವಾದನಿಕಷಣಾಯ ನಮೋ ಬ್ರಹ್ಮಣ್ಯದೇವಾಯ ಮಹಾಪುರುಷಾಯ ಮಹಾರಾಜಾಯ ನಮ ಇತಿ ॥ ೩ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಎಲೈ ಮಹಾರಾಜನೇ! ಕಿಂಪುರುಷವರ್ಷದಲ್ಲಿ ಶ್ರೀಲಕ್ಷ್ಮಣನ ಅಣ್ಣನೂ, ಆದಿಪುರುಷನೂ, ಸೀತೆಯ ಹೃದಯಾಭಿರಾಮನೂ ಆದ ಭಗವಾನ್ ಶ್ರೀರಾಮಚಂದ್ರನ ಅಡಿದಾವರೆಗಳ ಸಾನ್ನಿಧ್ಯದಲ್ಲಿ ಸದಾ ಆಸಕ್ತನಾಗಿರುವ ಪರಮಭಾಗವತೋತ್ತಮ ಆಂಜನೇಯನು ಇತರ ಕಿನ್ನರರಿಂದೊಡಗೂಡಿ ನಿಶ್ಚಲವಾದ ಭಕ್ತಿಭಾವದಿಂದ ಶ್ರೀರಾಮದೇವರನ್ನು ಉಪಾಸನೆ ಮಾಡುತ್ತಿರುವನು. ॥ ೧ ॥ ಅಲ್ಲಿ ಇತರ ಗಂಧರ್ವರೊಡನೆ ಆರ್ಷ್ಟಿಷೇಣನು ಪ್ರಭುವಾದ ಶ್ರೀರಾಮದೇವರ ಪರಮಕಲ್ಯಾಣಗುಣಮಯವಾದ ಕಥೆಯನ್ನು ಗಾನಮಾಡುತ್ತಿರುವನು. ಹನುಮಂತನು ಅದನ್ನು ಕೇಳಿ ಸವಿಯುತ್ತಾ ತಾನು ಈ ಮಂತ್ರವನ್ನು ಜಪಿಸುತ್ತಾ ಶ್ರೀರಾಮದೇವರನ್ನು ಹೀಗೆ ಸ್ತುತಿಸುವನು. ॥ ೨ ॥ ಓಂಕಾರಸ್ವರೂಪನೂ, ಉತ್ತಮಕೀರ್ತಿಯುಳ್ಳವನೂ ಆದ ಭಗವಾನ್ ಶ್ರೀರಾಮನಿಗೆ ನಮಸ್ಕಾರವು. ಆರ್ಯರ ಲಕ್ಷಣ, ಶೀಲ ಮತ್ತು ವ್ರತಗಳಿಂದ ಸಂಪನ್ನನಾಗಿರುವ ಪ್ರಭುವಿಗೆ ನಮಸ್ಕಾರವು. ಪರಮ ಸಂಯಮದಿಂದ ಕೂಡಿದ ಚಿತ್ತವುಳ್ಳವನಾಗಿ, ಲೋಕಾರಾಧನೆಯಲ್ಲಿ ತತ್ಪರನಾಗಿ, ಸಾಧುತ್ವಕ್ಕೆ ಒರೆಗಲ್ಲಾಗಿರುವ ಸ್ವಾಮಿಗೆ ನಮಸ್ಕಾರವು. ಬ್ರಾಹ್ಮಣರಿಗೆ ಹಿತಕರವಾಗಿರುವ

ಯತ್ತದ್ವಿಶುದ್ಧಾನುಭವಮಾತ್ರಮೇಕಂ
ಸ್ವತೇಜಸಾ ಧ್ವಸ್ತಗುಣವ್ಯವಸ್ಥಮ್ ।
ಪ್ರತ್ಯಕ್ ಪ್ರಶಾಂತಂ ಸುಧಿಯೋಪಲಂಭನಂ
ಹ್ಯನಾಮರೂಪಂ ನಿರಹಂ ಪ್ರಪದ್ಯೇ ॥ ೪ ॥

ಮರ್ತ್ಯಾವತಾರಸ್ತ್ವಿಹ ಮರ್ತ್ಯಶಿಕ್ಷಣಂ
ರಕ್ಷೋವಧಾಯೈವ ನ ಕೇವಲಂ ವಿಭೋಃ ।
ಕುತೋಽನ್ಯಥಾ ಸ್ಯಾದ್ರಮತಃ ಸ್ವ ಆತ್ಮನಃ
ಸೀತಾಕೃತಾನಿ ವ್ಯಸನಾನೀಶ್ವರಸ್ಯ ॥ ೫ ॥

ನ ವೈ ಸ ಆತ್ಮಾಽಽತ್ಮವತಾಂ ಸುಹೃತ್ತಮಃ
ಸಕ್ತಸ್ತ್ರಿಲೋಕ್ಯಾಂ ಭಗವಾನ್ವಾಸುದೇವಃ ।
ನ ಸ್ತ್ರೀಕೃತಂ ಕಶ್ಮಲಮಶ್ನುವೀತ
ನ ಲಕ್ಷ್ಮಣಂ ಚಾಪಿ ವಿಹಾತುಮರ್ಹತಿ ॥ ೬ ॥

ನ ಜನ್ಮ ನೂನಂ ಮಹತೋ ನ ಸೌಭಗಂ
ನ ವಾಙ್ನ ಬುದ್ಧಿರ್ನಾಕೃತಿಸ್ತೋಷಹೇತುಃ ।
ತೈರ್ಯದ್ವಿಸೃಷ್ಟಾನಪಿ ನೋ ವನೌಕಸ-
ಶ್ಚಕಾರ ಸಖ್ಯೇ ಬತ ಲಕ್ಷ್ಮಣಾಗ್ರಜಃ ॥ ೭ ॥

ಸುರೋಽಸುರೋ ವಾಪ್ಯಥ ವಾನರೋ ನರಃ
ಸರ್ವಾತ್ಮನಾ ಯಃ ಸುಕೃತಜ್ಞಮುತ್ತಮಮ್ ।
ಭಜೇತ ರಾಮಂ ಮನುಜಾಕೃತಿಂ ಹರಿಂ
ಯ ಉತ್ತರಾನನಯತ್ಕೋಸಲಾನ್ದಿವಮಿತಿ ॥ ೮ ॥

ದೇವನಿಗೆ ನಮಸ್ಕಾರವು. ಮಹಾಪುರುಷನೂ, ಮಹಾರಾಜನೂ ಆದ ಶ್ರೀರಾಮಚಂದ್ರನಿಗೆ ಪುನಃ ಪುನಃ ನನ್ನ ನಮಸ್ಕಾರಗಳು. ॥ ೩ ॥
ಓ ಭಗವಂತಾ! ಪರಿಶುದ್ಧ ಜ್ಞಾನಸ್ವರೂಪನೂ, ಅದ್ವಿತೀಯನೂ, ತ್ರಿಗುಣಾತೀತವಾದ ತನ್ನ ತೇಜಸ್ಸ್ವರೂಪದ ತ್ರಿಗುಣ ಕಾರ್ಯಗಳ ರಚನೆಯನ್ನು ತೊಡೆದುಹಾಕಿದ ತುರೀಯನೂ, ಅಂತರಾತ್ಮನೂ, ಪ್ರಶಾಂತನೂ, ಶುದ್ಧವಾದ ಬುದ್ಧಿಯಿಂದಲೇ ಗ್ರಹಿಸಲ್ಪಡುವವನೂ, ನಾಮ-ರೂಪರಹಿತನೂ, ಅಹಂಭಾವ ರಹಿತನೂ ಆದ ನಿನ್ನನ್ನು ಶರಣು ಹೊಂದುತ್ತೇನೆ. ॥ ೪ ॥ ಪ್ರಭೋ! ನಿನ್ನ ಮನುಷ್ಯಾವತಾರವು ಕೇವಲ ರಾಕ್ಷಸರ ಸಂಹಾರಕ್ಕಷ್ಟೇ ಅಲ್ಲ; ಇದರ ಮುಖ್ಯ ಉದ್ದೇಶ ಮನುಷ್ಯರಿಗೆ ಶಿಕ್ಷಣ ನೀಡುವುದೇ ಆಗಿದೆ. ಇಲ್ಲದಿದ್ದರೆ ತನ್ನ ಸ್ವರೂಪದಲ್ಲೇ ಸದಾ ರಮಿಸುತ್ತಿರುವ ಆನಂದಮಯನೂ, ಸರ್ವೇಶ್ವರನೂ ಆದ ನಿನಗೆ ಸೀತಾದೇವಿಯ ಅಗಲಿಕೆಯ ದುಃಖವು ತಾಗಲು ಹೇಗೆ ಬಲ್ಲದು? ॥ ೫॥ ನೀನು ಧೀರ ಪುರುಷರ ಆತ್ಮನಾಗಿದ್ದು,* ಪ್ರಿಯತಮ ಭಗವಾನ್ ವಾಸುದೇವನಾಗಿರುವೆ. ಮೂರುಲೋಕಗಳಲ್ಲಿ ಯಾವುದೇ ವಸ್ತುವಿನಲ್ಲಿಯೂ ನಿನಗೆ ಆಸಕ್ತಿಯು ಇಲ್ಲ. ಇಂತಹ ನಿನಗೆ ಸ್ತ್ರೀಸಂಬಂಧವಾದ ದುಃಖ ತಾಗಲೀ, ಪ್ರಾಣಪ್ರಿಯನಾದ ತಮ್ಮನಾದ ಲಕ್ಷ್ಮಣನನ್ನು ತೊರೆಯುವ ಪ್ರಸಂಗವಾಗಲೀ ಹೇಗೆ ಒದಗುತ್ತಿದ್ದವು? ॥ ೬ ॥ ನಿನ್ನ ಈ ವ್ಯಾಪಾರಗಳೆಲ್ಲ ಕೇವಲ ಲೋಕಶಿಕ್ಷಣಕ್ಕಾಗಿಯೇ ಇವೆ. ಲಕ್ಷ್ಮಣಾಗ್ರಜನೇ! ಉತ್ತಮ ಕುಲದಲ್ಲಿ ಹುಟ್ಟುವುದು, ಸುಂದರತೆ, ವಾಕ್ಚಾತುರ್ಯ, ಬುದ್ಧಿಮತ್ತೆ, ಉತ್ತಮವಾದ ಆಕೃತಿ ಇವುಗಳಲ್ಲಿ ಯಾವ ಗುಣವೂ ನಿನ್ನ ಪ್ರಸನ್ನತೆಗೆ ಕಾರಣವಾಗಲಾರದು. ಇದನ್ನು ತೋರಿಸುವುದಕ್ಕಾಗಿ ಇವೆಲ್ಲ ಗುಣಗಳಿಂದ ರಹಿತರಾದ ನಮ್ಮಂತಹ ವನವಾಸೀ ವಾನರರೊಂದಿಗೆ ಸ್ನೇಹವನ್ನು ಬೆಳೆಸಿದೆ. ॥ ೭ ॥ ದೇವತೆಗಳು, ಅಸುರರು, ವಾನರರು, ಮನುಷ್ಯರು – ಇವರಲ್ಲಿ ಯಾರೇ ಆಗಿರಲೀ, ಎಲ್ಲ ರೀತಿಯಿಂದಲೂ ಶ್ರೀರಾಮರೂಪನಾದ ನಿನ್ನನ್ನೇ ಭಜಿಸಬೇಕು. ಏಕೆಂದರೆ, ನೀನು ಮನುಷ್ಯರೂಪದಲ್ಲಿ ಸಾಕ್ಷಾತ್ ಶ್ರೀಹರಿಯೇ ಆಗಿರುವೆ. ನಿನ್ನ ಸೇವಕರು ಮಾಡಿದ ಅಲ್ಪ ಸೇವೆಯನ್ನು ಬಹಳ ಹೆಚ್ಚು ಎಂದು ನೀನು ತಿಳಿಯುತ್ತೀಯೆ. ನೀನು ನಿನ್ನ ದಿವ್ಯಧಾಮಕ್ಕೆ ತೆರಳುವಾಗ ಸಮಸ್ತ ಉತ್ತರಕೋಸಲ ನಿವಾಸಿಗಳನ್ನು ನಿನ್ನ ಜೊತೆಗೆ ಒಯ್ದಿರುವಂತಹ ಆಶ್ರಿತವತ್ಸಲನಾಗಿರುವೆ. ॥ ೮ ॥

* 'ಭಗವಂತನಾದರೋ ಎಲ್ಲರ ಆತ್ಮನಾಗಿರುವನು. ಹಾಗಿರುವಾಗ ಇಲ್ಲಿ ಅವನನ್ನು ಆತ್ಮವಾನ್ (ಧೀರ) ಪುರುಷರ ಆತ್ಮಾ ಎಂದು ಏಕೆ ಹೇಳಲಾಗಿದೆ?' ಎಂಬ ಪ್ರಶ್ನೆ ಇಲ್ಲಿ ಉಂಟಾಗಬಹುದು. ಇದರ ಉತ್ತರ – ಅವನು ಎಲ್ಲರ ಆತ್ಮನಾಗಿದ್ದರೂ ಅವನನ್ನು ಕೇವಲ ಆತ್ಮಜ್ಞಾನಿಗಳೇ ತಮ್ಮ ಆತ್ಮರೂಪದಿಂದ ಅನುಭವಿಸುತ್ತಾರೆ – ಬೇರೆಯವರು ಇಲ್ಲ. ಶ್ರುತಿಯಲ್ಲಿ ಆತ್ಮಸಾಕ್ಷಾತ್ಕಾರ ಮಾಡುವುದರಲ್ಲಿ ಆತ್ಮನನ್ನು ತಿಳಿದವರಿಗೆ 'ಧೀರ' ಎಂಬ ಶಬ್ದದ ಪ್ರಯೋಗ ಮಾಡಲಾಗಿದೆ. 'ಕಶ್ಚಿದ್ಧೀರಃ ಪ್ರತ್ಯಗಾತ್ಮಾನಮೈಕ್ಷತ್' 'ಆ ಶುಶ್ರೂಮ ಧೀರಾಣಾಮ್' ಇತ್ಯಾದಿ. ಆದ್ದರಿಂದ ಇಲ್ಲಿಯೂ ಭಗವಂತನನ್ನು ಆತ್ಮವಾನ್ ಅಥವಾ ಧೀರಪುರುಷರ ಆತ್ಮಾ ಎಂದು ಹೇಳಲಾಗಿದೆ.

ಒಮ್ಮೆ ಭಗವಾನ್ ಶ್ರೀರಾಮನು ಏಕಾಂತದಲ್ಲಿ ಓರ್ವ ದೇವದೂತನೊಂದಿಗೆ ಮಾತಾಡುತ್ತಿದ್ದನು. ಆಗ ಲಕ್ಷ್ಮಣನು ಕಾವಲಾಗಿದ್ದನು. 'ಈ ಸಮಯದಲ್ಲಿ ಯಾರಾದರೂ ಒಳಗೆ ಬಂದರೆ ಅವನು ನನ್ನ ಕೈಯಿಂದ ಕೊಲ್ಲಲ್ಪಡುವನು' ಎಂಬ ಭಗವಂತನ ಆಜ್ಞೆ ಇತ್ತು. ಇಷ್ಟರಲ್ಲಿ ದುರ್ವಾಸಮಹಾಮುನಿಗಳು ಆಗಮಿಸಿದರು. ಅವರು ಲಕ್ಷ್ಮಣನನ್ನು ಒಳಗೆ ಹೋಗಿ ತಾನು ಬಂದಿರುವ ಸಮಾಚಾರ ತಿಳಿಸುವಂತೆ ಒತ್ತಾಯಿಸಿದರು. ಲಕ್ಷ್ಮಣನು ಹಾಗೆ ಮಾಡಲು – ಇದರಿಂದ ತನ್ನ ಪ್ರತಿಜ್ಞೆಗನುಸಾರ ಭಗವಂತನು ಚಿಂತಿತನಾದನು. ಆಗ ವಸಿಷ್ಠರು ಹೇಳಿದರು – ಲಕ್ಷ್ಮಣನನ್ನು ಕೊಲ್ಲದೆ ಅವನನ್ನು ತ್ಯಜಿಸಿಬಿಡು. ಏಕೆಂದರೆ ತನ್ನ ಪ್ರಿಯಜನರ ತ್ಯಾಗವು ಮರಣದಂಡನೆಗೆ ಸಮಾನವಾಗಿದೆ. ಇದರಿಂದ ಭಗವಂತನು ಅವನನ್ನು ತ್ಯಜಿಸಿಬಿಟ್ಟನು.

ಭಾರತೇಽಪಿ ವರ್ಷೇ ಭಗವಾನ್ನರನಾರಾಯಣಾಖ್ಯ ಆಕಲ್ಪಾಂತಮುಪಚಿತಧರ್ಮಜ್ಞಾನವೈರಾಗ್ಯೈಶ್ವರ್ಯೋಪಶಮೋಪರಮಾತ್ಮೋಪಲಂಭನಮನುಗ್ರಹಾಯಾತ್ಮವತಾಮನುಕಂಪಯಾ ತಪೋಽವ್ಯಕ್ತಗತಿಶ್ಚರತಿ ॥ ೯ ॥ ತಂ ಭಗವಾನ್ನಾರದೋ ವರ್ಣಾಶ್ರಮವತೀಭಿರ್ಭಾರತೀಭಿಃ ಪ್ರಜಾಭಿರ್ಭಗವತ್ಪ್ರೋಕ್ತಾಭ್ಯಾಂ ಸಾಂಖ್ಯಯೋಗಾಭ್ಯಾಂ ಭಗವದನುಭಾವೋಪವರ್ಣನಂ ಸಾವರ್ಣೇರುಪದೇಕ್ಷ್ಯಮಾಣಃ ಪರಮಭಕ್ತಿಭಾವೇನೋಪಸರತಿ ಇದಂ ಚಾಭಿಗೃಣಾತಿ ॥ ೧೦ ॥ ಓಂ ನಮೋ ಭಗವತೇ ಉಪಶಮಶೀಲಾಯೋಪರತಾನಾತ್ಮ್ಯಾಯ ನಮೋಽಕಿಂಚನವಿತ್ತಾಯ ಋಷಿಋಷಭಾಯ ನರನಾರಾಯಣಾಯ ಪರಮಹಂಸಪರಮಗುರವೇ ಆತ್ಮಾರಾಮಾಧಿಪತಯೇ ನಮೋ ನಮ ಇತಿ ॥ ೧೧ ॥ ಗಾಯತಿ ಚೇದಮ್

ಕರ್ತಾಸ್ಯ ಸರ್ಗಾದಿಷು ಯೋ ನ ಬಧ್ಯತೇ
ನ ಹನ್ಯತೇ ದೇಹಗತೋಽಪಿ ದೈಹಿಕೈಃ ।
ದ್ರಷ್ಟುರ್ನ ದೃಗ್ಯಸ್ಯ ಗುಣೈರ್ವಿದೂಷ್ಯತೇ
ತಸ್ಮೈ ನಮೋಽಸಕ್ತವಿವಿಕ್ತಸಾಕ್ಷಿಣೇ ॥ ೧೨ ॥

ಇದಂ ಹಿ ಯೋಗೇಶ್ವರ ಯೋಗನೈಪುಣಂ
ಹಿರಣ್ಯಗರ್ಭೋ ಭಗವಾಂಜಗಾದ ಯತ್ ।
ಯದಂತಕಾಲೇ ತ್ವಯಿ ನಿರ್ಗುಣೇ ಮನೋ
ಭಕ್ತ್ಯಾ ದಧೀತೋಜ್ಝಿತದುಷ್ಕಲೇವರಃ ॥ ೧೩ ॥

ಯಥೈಹಿಕಾಮುಷ್ಮಿಕಕಾಮಲಂಪಟಃ
ಸುತೇಷು ದಾರೇಷು ಧನೇಷು ಚಿಂತಯನ್ ।
ಶಂಕೇತ ವಿದ್ವಾನ್ಕುಕಲೇವರಾತ್ಯಯಾದ್
ಯಸ್ತಸ್ಯ ಯತ್ನಃ ಶ್ರಮ ಏವ ಕೇವಲಮ್ ॥ ೧೪ ॥

ತನ್ನಃ ಪ್ರಭೋ ತ್ವಂ ಕುಕಲೇವರಾರ್ಪಿತಾಂ
ತ್ವನ್ಮಾಯಯಾಹಂಮಮತಾಮಧೋಕ್ಷಜ ।
ಭಿಂದ್ಯಾಮ ಯೇನಾಶು ವಯಂ ಸುದುರ್ಭಿದಾಂ
ವಿಧೇಹಿ ಯೋಗಂ ತ್ವಯಿ ನಃ ಸ್ವಭಾವಮಿತಿ ॥ ೧೫ ॥

ಭಾರತವರ್ಷದಲ್ಲಿಯೂ ಭಗವಂತನು ಕರುಣೆಯಿಂದ ನರ-ನಾರಾಯಣರೂಪವನ್ನು ಧರಿಸಿ ಸಂಯಮಶೀಲರಾದ ಮನುಷ್ಯರ ಮೇಲೆ ಅನುಗ್ರಹವನ್ನು ತೋರುವುದಕ್ಕಾಗಿ ಕಲ್ಪದ ಕೊನೆಯವರೆಗೂ ಅವ್ಯಕ್ತರೂಪದಿಂದ ತಪಸ್ಸು ಮಾಡುತ್ತಾ ಇರುವನು. ಧರ್ಮ, ಜ್ಞಾನ, ವೈರಾಗ್ಯ, ಐಶ್ವರ್ಯ, ಇಂದ್ರಿಯಜಯ, ಶಾಂತಿ ಇವುಗಳು ಉತ್ತರೋತ್ತರ ವೃದ್ಧಿಹೊಂದಿ ಆತ್ಮಸಾಕ್ಷಾತ್ಕಾರವನ್ನು ದೊರಕಿಸುವ ತಪಸ್ಸಿನ ಆದರ್ಶವನ್ನು ತೋರುತ್ತಿದ್ದಾನೆ. ॥ ೯ ॥ ಅಲ್ಲಿ ಭಗವಾನ್ ನಾರದಮುನಿಗಳು ಶ್ರೀಭಗವಂತನು ಸ್ವತಃ ಉಪದೇಶಿಸಿದ ಸಾಂಖ್ಯ ಮತ್ತು ಯೋಗಶಾಸ್ತ್ರದ ಸಹಿತ ಭಗವನ್ಮಹಿಮೆಯನ್ನು ಪ್ರಕಟಪಡಿಸುವ ಪಾಂಚರಾತ್ರಾಗಮವನ್ನು ಸಾವರ್ಣಿ ಮನುವಿಗೆ ಉಪದೇಶ ಮಾಡುತ್ತಾ - ಅತ್ಯಂತ ಭಕ್ತಿಯಿಂದ ವರ್ಣಾಶ್ರಮಧರ್ಮಗಳನ್ನು ಪಾಲಿಸುತ್ತಿರುವ ಭಾರತವರ್ಷದ ಪ್ರಜೆಗಳೊಂದಿಗೆ ಭಗವಾನ್ ನರ-ನಾರಾಯಣಸ್ವಾಮಿಯನ್ನು ಉಪಾಸನೆಮಾಡುತ್ತಾ, ಈ ಮಂತ್ರವನ್ನು ಜಪಿಸುತ್ತಾ, ಭಗವಂತನ ಸ್ತೋತ್ರಗಳನ್ನು ಹಾಡುತ್ತಾ ಸ್ತುತಿಸುತ್ತಿರುವರು. ॥ ೧೦ ॥ 'ಓಂಕಾರಸ್ವರೂಪನೂ, ಅಹಂಕಾರರಹಿತನೂ, ನಿರ್ಧನರ ನಿಧಿಯೂ, ಶಾಂತಸ್ವಭಾವನೂ ಆದ ಋಷಿಶ್ರೇಷ್ಠ ಭಗವಾನ್ ನರ-ನಾರಾಯಣನಿಗೆ ನಮಸ್ಕಾರವು. ಪರಮಹಂಸರಿಗೆ ಪರಮಗುರುವೂ, ಆತ್ಮಾರಾಮರ ಅಧೀಶ್ವರನೂ ಆದ ಆತನಿಗೆ ಮತ್ತೆ-ಮತ್ತೆ ನಮಸ್ಕಾರಗಳು.' ॥ ೧೧ ॥ ಮತ್ತೆ ಹೀಗೆ ಹಾಡುತ್ತಿರುತ್ತಾರೆ - 'ಯಾವಾತನು ವಿಶ್ವದ ಉತ್ಪತ್ತಿ ಮುಂತಾದವುಗಳ ಕರ್ತಾ ಆಗಿದ್ದರೂ ಕರ್ತೃತ್ವದ ಅಭಿಮಾನದಿಂದ ಬಂಧಿತನಾಗುವುದಿಲ್ಲವೋ, ಶರೀರದಲ್ಲಿದ್ದರೂ ಅದರ ಧರ್ಮಗಳಾದ ಹಸಿವು-ಬಾಯಾರಿಕೆ ಮುಂತಾದವುಗಳಿಗೆ ವಶನಾಗುವುದಿಲ್ಲವೋ, ದ್ರಷ್ಟಾ ಆಗಿದ್ದರೂ ಯಾರ ದೃಷ್ಟಿಯು ದೃಶ್ಯದ ಗುಣ-ದೋಷಗಳಿಂದ ದೂಷಿತವಾಗುವುದಿಲ್ಲವೋ, ಅಂತಹ ಅಸಂಗ ಹಾಗೂ ವಿಶುದ್ಧ ಸಾಕ್ಷಿರೂಪನಾದ ಭಗವಾನ್ ನರ-ನಾರಾಯಣನಿಗೆ ನಮಸ್ಕಾರವು. ॥ ೧೨ ॥ ಎಲೈ ಯೋಗೇಶ್ವರನೇ! ಹಿರಣ್ಯಗರ್ಭ ಬ್ರಹ್ಮದೇವರು - 'ಮನುಷ್ಯನು ಅಂತ್ಯಕಾಲದಲ್ಲಿ ದೇಹಾಭಿಮಾನವನ್ನು ಬಿಟ್ಟು ಭಕ್ತಿಯಿಂದ ಪ್ರಾಕೃತಗುಣರಹಿತವಾದ ನಿನ್ನ ಸ್ವರೂಪದಲ್ಲಿ ಮನಸ್ಸನ್ನು ತೊಡಗಿಸುವುದೇ ಯೋಗಸಾಧನೆಯ ಎಲ್ಲಕ್ಕಿಂತ ದೊಡ್ಡ ಕುಶಲತೆಯಾಗಿದೆ' ಎಂದು ಹೇಳಿರುವರು. ॥ ೧೩ ॥ ಲೌಕಿಕ ಮತ್ತು ಪಾರಲೌಕಿಕ ಭೋಗಗಳಲ್ಲಿ ಲಂಪಟನಾಗಿರುವ ಮೂಢ ಮನುಷ್ಯನು - ಮಕ್ಕಳು, ಮಡದಿ, ಹಣ ಮುಂತಾದವುಗಳನ್ನೇ ಚಿಂತಿಸುತ್ತಾ ಮೃತ್ಯುವಿಗೆ ಹೆದರುವಂತೆಯೇ - ವಿದ್ವಾಂಸರೂ ಕೂಡ 'ಈ ನಿಂದ್ಯವಾದ ದೇಹವನ್ನು ಬಿಟ್ಟುಹೋಗಬೇಕಲ್ಲ' ಎಂದು ಹೆದರಿದರೆ, ಅವನು ಜ್ಞಾನವನ್ನು ಪಡೆಯಲು ಮಾಡಿದ ಪ್ರಯತ್ನಗಳೆಲ್ಲವೂ ವ್ಯರ್ಥವೇ ಸರಿ. ॥ ೧೪ ॥ ಆದ್ದರಿಂದ ಓ ಅಧೋಕ್ಷಜನೇ! ನೀನು ನಮಗೆ ನಿನ್ನ ಸ್ವಾಭಾವಿಕವಾದ ಪ್ರೇಮರೂಪವಾದ ಭಕ್ತಿಯೋಗವನ್ನು ಅನುಗ್ರಹಿಸು. ಹೇ ಪ್ರಭೋ! ಈ ನಿಂದನೀಯವಾದ ಶರೀರದಲ್ಲಿ ನಿನ್ನ ಮಾಯೆಯಿಂದ ಬೇರುಬಿಟ್ಟಿರುವ, ಭೇದಿಸಲು ಅತಿಕಷ್ಟವಾಗಿರುವ ಅಹಂತೆ-ಮಮತೆಯನ್ನು ಆ ಭಕ್ತಿಯೋಗದಿಂದ ನಾವು ಒಡನೆಯೇ ಕತ್ತರಿಸಿ ಹಾಕುವೆವು. ॥ ೧೫ ॥

ಭಾರತೇಽಪ್ಯಸ್ಮಿನ್ ವರ್ಷೇ ಸರಿಚ್ಛೈಲಾಃ ಸಂತಿ ಬಹವೋ ಮಲಯೋ ಮಂಗಲಪ್ರಸ್ಥೋ ಮೈನಾಕಸ್ತ್ರಿಕೂಟ ಋಷಭಃ ಕೂಟಕಃ ಕೊಲ್ಲಕಃ ಸಹ್ಯೋ ದೇವಗಿರಿರ್ಋಷ್ಯಮೂಕಃ ಶ್ರೀಶೈಲೋ ವೇಂಕಟೋ ಮಹೇಂದ್ರೋ ವಾರಿಧಾರೋ ವಿಂಧ್ಯಃ ಶುಕ್ತಿಮಾನೃಕ್ಷಗಿರಿಃ ಪಾರಿಯಾತ್ರೋ ದ್ರೋಣಶ್ಚಿತ್ರಕೂಟೋ ಗೋವರ್ಧನೋ ರೈವತಕಃ ಕಕುಭೋ ನೀಲೋ ಗೋಕಾಮುಖ ಇಂದ್ರಕೀಲಃ ಕಾಮಗಿರಿರಿತಿ ಚಾನ್ಯೇ ಚ ಶತಸಹಸ್ರಶಃ ಶೈಲಾಸ್ತೇಷಾಂ ನಿತಂಬಪ್ರಭವಾ ನದಾ ನದ್ಯಶ್ಚ ಸಂತ್ಯಸಂಖ್ಯಾತಾಃ ॥ ೧೬ ॥

ಏತಾಸಾಮಪೋ ಭಾರತ್ಯಃ ಪ್ರಜಾ ನಾಮಭಿರೇವ ಪುನಂತೀನಾಮಾತ್ಮನಾ ಚೋಪಸ್ಪೃಶಂತಿ ॥ ೧೭ ॥ ಚಂದ್ರವಸಾ ತಾಮ್ರಪರ್ಣೀ ಅವಟೋದಾ ಕೃತಮಾಲಾ ವೈಹಾಯಸೀ ಕಾವೇರಿ ವೇಣೀ ಪಯಸ್ವಿನೀ ಶರ್ಕರಾವರ್ತಾ ತುಂಗಭದ್ರಾ ಕೃಷ್ಣಾ ವೇಣ್ಯಾ ಭೀಮರಥೀ ಗೋದಾವರೀ ನಿರ್ವಿಂಧ್ಯಾ, ಪಯೋಷ್ಣೀ ತಾಪೀ ರೇವಾ ಸುರಸಾ ನರ್ಮದಾ ಚರ್ಮಣ್ವತೀ ಸಿಂಧುರಂಧಃ ಶೋಣಶ್ಚ ನದೌ ಮಹಾನದೀ ವೇದಸ್ಮೃತಿರ್ಋಷಿಕುಲ್ಯಾ ತ್ರಿಸಾಮಾ ಕೌಶಿಕೀ ಮಂದಾಕಿನೀ ಯಮುನಾ ಸರಸ್ವತೀ ದೃಷದ್ವತೀ ಗೋಮತೀ ಸರಯೂ ರೋಧಸ್ವತೀ ಸಪ್ತವತೀ ಸುಷೋಮಾ ಶತದ್ರೂಶ್ಚಂದ್ರಭಾಗಾ ಮರುದ್ವೃಧಾ ವಿತಸ್ತಾ ಅಸಿಕ್ನೀ ವಿಶ್ವೇತಿ ಮಹಾನದ್ಯಃ ॥ ೧೮ ॥ ಅಸ್ಮಿನ್ನೇವ ವರ್ಷೇ ಪುರುಷೈರ್ಲಬ್ಧಜನ್ಮಭಿಃ ಶುಕ್ಲ-ಲೋಹಿತ-ಕೃಷ್ಣವರ್ಣೇನ ಸ್ವಾರಬ್ಧೇನ ಕರ್ಮಣಾ ದಿವ್ಯಮಾನುಷನಾರಕಗತಯೋ ಬಹ್ವ್ಯ ಆತ್ಮನ ಆನುಪೂರ್ವ್ಯೇಣ ಸರ್ವಾ ಹ್ಯೇವ ಸರ್ವೇಷಾಂ ವಿಧೀಯಂತೇ ಯಥಾವರ್ಣವಿಧಾನಮಪವರ್ಗಶ್ಚಾಪಿ ಭವತಿ ॥ ೧೯ ॥ ಯೋಽಸೌ ಭಗವತಿ ಸರ್ವಭೂತಾತ್ಮನ್ಯನಾತ್ಮ್ಯೇಽನಿರುಕ್ತೇಽನಿಲಯನೇ ಪರಮಾತ್ಮನಿ ವಾಸುದೇವೇಽನನ್ಯನಿಮಿತ್ತಭಕ್ತಿಯೋಗಲಕ್ಷಣೋ ನಾನಾಗತಿನಿಮಿತ್ತಾವಿದ್ಯಾಗ್ರಂಥಿರಂಧನದ್ವಾರೇಣ ಯದಾ ಹಿ ಮಹಾಪುರುಷಪುರುಷಪ್ರಸಂಗಃ ॥ ೨೦ ॥

ಎಲೈ ರಾಜೇಂದ್ರನೇ! ಈ ಭಾರತವರ್ಷದಲ್ಲಿಯೂ ಕೂಡ ಬಹುಸಂಖ್ಯೆಯ ಪರ್ವತಗಳೂ, ನದಿಗಳೂ ಇವೆ. ಮಲಯ, ಮಂಗಲಪ್ರಸ್ಥ ಮೈನಾಕ, ತ್ರಿಕೂಟ, ಋಷಭ, ಕೂಟಕ, ಕೊಲ್ಲಕ, ಸಹ್ಯ, ದೇವಗಿರಿ, ಋಷ್ಯಮೂಕ, ಶ್ರೀಶೈಲ, ವೇಂಕಟ, ಮಹೇಂದ್ರ ವಾರಿಧಾರ, ವಿಂಧ್ಯ, ಶುಕ್ತಿಮಾನ್, ಋಕ್ಷಗಿರಿ, ಪಾರಿಯಾತ್ರ, ದ್ರೋಣ, ಚಿತ್ರಕೂಟ, ಗೋವರ್ಧನ, ರೈವತಕ, ಕಕುಭ, ನೀಲ, ಗೋಕಾಮುಖ, ಇಂದ್ರಕೀಲ ಮತ್ತು ಕಾಮಗಿರಿ ಮುಂತಾದವುಗಳು – ಇನ್ನೂ ನೂರಾರು, ಸಾವಿರಾರು ಗಿರಿಗಳೂ ಹಾಗೂ ಅವುಗಳ ತಪ್ಪಲುಗಳಿಂದ ಹುಟ್ಟುವ ನದ-ನದಿಗಳು ಲೆಕ್ಕವಿಲ್ಲದಷ್ಟಿವೆ. ॥ ೧೬ ॥ ಈ ನದಿಗಳ ನಾಮಸ್ಮರಣೆಯೂ ಕೂಡ ಜೀವರನ್ನು ಪವಿತ್ರಗೊಳಿಸುತ್ತದೆ. ಇವುಗಳ ತೀರ್ಥದಲ್ಲಿ ಭಾರತ ವರ್ಷದ ಪ್ರಜೆಗಳು ಸ್ನಾನಾದಿಗಳನ್ನು ಮಾಡುತ್ತಾರೆ. ॥ ೧೭ ॥ ಈ ನದಿಗಳಲ್ಲಿ – ಚಂದ್ರವಸಾ, ತಾಮ್ರಪರ್ಣೀ, ಅವಟೋದಾ, ಕೃತಮಾಲಾ, ವೈಹಾಯಸೀ, ಕಾವೇರೀ, ವೇಣೀ, ಪಯಸ್ವಿನೀ, ಶರ್ಕರಾವರ್ತಾ, ತುಂಗಭದ್ರಾ, ಕೃಷ್ಣಾ ವೇಣ್ಯಾ, ಭೀಮರಥೀ, ಗೋದಾವರೀ, ನಿರ್ವಿಂಧ್ಯಾ, ಪಯೋಷ್ಣೀ, ತಾಪೀ, ರೇವಾ, ಸುರಸಾ, ನರ್ಮದಾ, ಚರ್ಮಣ್ವತೀ, ಸಿಂಧು, ಅಂಧ, ಶೋಣ (ನದಿಗಳು), ಮಹಾನದೀ, ವೇದಸ್ಮೃತಿ, ಋಷಿಕುಲ್ಯಾ, ತ್ರಿಸಾಮಾ, ಕೌಶಿಕೀ, ಮಂದಾಕಿನೀ, ಯಮುನಾ, ಸರಸ್ವತೀ, ದೃಷದ್ವತೀ, ಗೋಮತೀ, ಸರಯೂ, ರೋಧಸ್ವತೀ, ಸಪ್ತವತೀ, ಸುಷೋಮಾ, ಶತದ್ರೂ, ಚಂದ್ರಭಾಗಾ, ಮರುದ್ವೃಧಾ, ವಿತಸ್ತಾ, ಅಸಿಕ್ನೀ, ವಿಶ್ವಾ ಎಂಬುವು ಮಹಾನದಿಗಳೆನಿಸುವುವು. ॥ ೧೮ ॥ ಈ ಭಾರತವರ್ಷದಲ್ಲಿ ಜನ್ಮವನ್ನು ಪಡೆದ ಮನುಷ್ಯರು ತಾವು ಮಾಡಿದ ಸಾತ್ತ್ವಿಕ, ರಾಜಸ, ತಾಮಸ ಎಂಬ ಕರ್ಮಗಳನುಸಾರವಾಗಿ ಕ್ರಮವಾಗಿ ನಾನಾ ರೀತಿಯ ದೇವತಾ, ಮನುಷ್ಯ ಮತ್ತು ನಾರಕೀ ಯೋನಿಗಳು ದೊರೆಯುತ್ತವೆ. ಏಕೆಂದರೆ, ಕರ್ಮಾನುಸಾರವಾಗಿ ಎಲ್ಲ ಜೀವರಿಗೆ ಎಲ್ಲಾ ಯೋನಿಗಳು ದೊರೆಯಬಲ್ಲವು. ಇದೇ ವರ್ಷದಲ್ಲಿ ತಮ್ಮ-ತಮ್ಮ ವರ್ಣಾಶ್ರಮ ಧರ್ಮಗಳನ್ನು ವಿಧಿವತ್ತಾಗಿ ಅನುಷ್ಠಾನ ಮಾಡುವುದರಿಂದ ಮೋಕ್ಷವೂ ಕೂಡ ಪ್ರಾಪ್ತವಾಗ ಬಲ್ಲುದು. ॥ ೧೯ ॥ ಪರೀಕ್ಷಿತನೇ! ಸಮಸ್ತ ಭೂತಗಳಿಗೂ ಆತ್ಮನಾಗಿಯೂ, ರಾಗಾದಿ ದೋಷಗಳಿಂದ ರಹಿತನೂ, ಅನಿರ್ವಚನೀಯನೂ, ನಿರಾಧಾರನಾದ ಪರಮಾತ್ಮ ಭಗವಾನ್ ವಾಸುದೇವನಲ್ಲಿ ಅನನ್ಯ, ಅಹೈತುಕೀ ಭಕ್ತಿಭಾವವೇ ಈ ಮೋಕ್ಷಪದವಾಗಿದೆ. ಈ ಭಕ್ತಿಭಾವವು – ಅನೇಕ ರೀತಿಯ ಗತಿಗಳನ್ನು ಪ್ರಕಟಗೊಳಿಸುವ ಅವಿದ್ಯೆ ಎಂಬ ಹೃದಯ ಗ್ರಂಥಿಯು ಕಡಿಮೆಹೋಗಿ, ಭಗವಂತನ ಪ್ರೇಮೀಭಕ್ತರ ಸಮಾಗಮ ದೊರೆತಾಗಲೇ ಉಂಟಾಗುತ್ತದೆ. ॥ ೨೦ ॥

ದೇವತೆಗಳೂ ಕೂಡ ಭಾರತವರ್ಷದಲ್ಲಿ ಹುಟ್ಟಿದ ಮನುಷ್ಯರ ಮಹಿಮೆಯನ್ನು ಈ ರೀತಿ ಹಾಡುತ್ತಾರೆ – ಆಹಾ! ಭಾರತವರ್ಷದಲ್ಲಿ ಭಗವಂತನ ಸೇವೆಗೆ ಯೋಗ್ಯವಾದ ಮನುಷ್ಯಜನ್ಮವನ್ನು ಪಡೆದವರು ಯಾವ ಪುಣ್ಯ ಮಾಡಿರುವರೋ! ಅಥವಾ ಇವರ ಮೇಲೆ ಸ್ವಯಂ ಶ್ರೀಹರಿಯೇ ಪ್ರಸನ್ನನಾಗಿರುವನೇ! ಇಂತಹ ಪರಮ ಸೌಭಾಗ್ಯಕ್ಕಾಗಿಯೇ ನಾವು ನಿರಂತರವಾಗಿ ಆಸೆಪಡುತ್ತಿರುತ್ತೇವೆ. ॥ ೨೧ ॥ ಭಾರೀ ಕಷ್ಟಮಯ ಯಜ್ಞಗಳನ್ನು,

ಏತದೇವ ಹಿ ದೇವಾ ಗಾಯಂತಿ –

ಅಹೋ ಅಮೀಷಾಂ ಕಿಮಕಾರಿ ಶೋಭನಂ
ಪ್ರಸನ್ನ ಏಷಾಂ ಸ್ವಿದುತ ಸ್ವಯಂ ಹರಿಃ ।
ಯೈರ್ಜನ್ಮ ಲಬ್ಧಂ ನೃಷು ಭಾರತಾಜಿರೇ
ಮುಕುಂದಸೇವೌಪಯಿಕಂ ಸ್ಪೃಹಾ ಹಿ ನಃ ॥ ೨೧ ॥

ಕಿಂ ದುಷ್ಕರೈರ್ನಃ ಕ್ರತುಭಿಸ್ತಪೋವ್ರತೈ-
ರ್ದಾನಾದಿಭಿರ್ವಾ ದ್ಯುಜಯೇನ ಫಲ್ಗುನಾ ।
ನ ಯತ್ರ ನಾರಾಯಣಪಾದಪಂಕಜ-
ಸ್ಮೃತಿಃ ಪ್ರಮುಷ್ಟಾತಿಶಯೇಂದ್ರಿಯೋತ್ಸವಾತ್ ॥ ೨೨ ॥

ಕಲ್ಪಾಯುಷಾಂ ಸ್ಥಾನಜಯಾತ್ಪುನರ್ಭವಾತ್
ಕ್ಷಣಾಯುಷಾಂ ಭಾರತಭೂಜಯೋ ವರಮ್ ।
ಕ್ಷಣೇನ ಮರ್ತ್ಯೇನ ಕೃತಂ ಮನಸ್ವಿನಃ
ಸಂನ್ಯಸ್ಯ ಸಂಯಾಂತ್ಯಭಯಂ ಪದಂ ಹರೇಃ ॥ ೨೩ ॥

ನ ಯತ್ರ ವೈಕುಂಠಕಥಾಸುಧಾಪಗಾ
ನ ಸಾಧವೋ ಭಾಗವತಾಸ್ತದಾಶ್ರಯಾಃ ।
ನ ಯತ್ರ ಯಜ್ಞೇಶಮಖಾ ಮಹೋತ್ಸವಾಃ
ಸುರೇಶಲೋಕೋಽಪಿ ನ ವೈ ಸ ಸೇವ್ಯತಾಮ್ ॥ ೨೪ ॥

ಪ್ರಾಪ್ತಾ ನೃಜಾತಿಂ ತ್ವಿಹ ಯೇ ಚ ಜಂತವೋ
ಜ್ಞಾನಕ್ರಿಯಾದ್ರವ್ಯಕಲಾಪಸಂಭೃತಾಮ್ ।
ನ ವೈ ಯತೇರನ್ನಪುನರ್ಭವಾಯ ತೇ
ಭೂಯೋ ವನೌಕಾ ಇವ ಯಾಂತಿ ಬಂಧನಮ್ ॥ ೨೫ ॥

ಯೈಃ ಶ್ರದ್ಧಯಾ ಬರ್ಹಿಷಿ ಭಾಗಶೋ ಹವಿ-
ರ್ನಿರುಪ್ತಮಿಷ್ಟಂ ವಿಧಿಮಂತ್ರವಸ್ತುತಃ ।
ಏಕಃ ಪೃಥಙ್ನಾಮಭಿರಾಹುತೋ ಮುದಾ
ಗೃಹ್ಣಾತಿ ಪೂರ್ಣಃ ಸ್ವಯಮಾಶಿಷಾಂ ಪ್ರಭುಃ ॥ ೨೬ ॥

ಸತ್ಯಂ ದಿಶತ್ಯರ್ಥಿತಮರ್ಥಿತೋ ನೃಣಾಂ
ನೈವಾರ್ಥದೋ ಯತ್ಪುನರರ್ಥಿತಾ ಯತಃ ।
ಸ್ವಯಂ ವಿಧತ್ತೇ ಭಜತಾಮನಿಚ್ಛತಾ-
ಮಿಚ್ಛಾಪಿಧಾನಂ ನಿಜಪಾದಪಲ್ಲವಮ್ ॥ ೨೭ ॥

ತಪಸ್ಸನ್ನು, ವ್ರತಗಳನ್ನು ಮಾಡಿ ಪಡೆದ ಈ ತುಚ್ಛವಾದ ಸ್ವರ್ಗದ ಅಧಿಕಾರದಿಂದಲಾದರೂ ಏನು ಲಾಭವಿದೆ? ಇಲ್ಲಿ ಇಂದ್ರಿಯಗಳ ಭೋಗಗಳ ಹೆಚ್ಚಳದಿಂದ ಸ್ಮರಣಶಕ್ತಿಯು ಕಸಿಯಲ್ಪಟ್ಟು ಶ್ರೀಮನ್ನಾರಾಯಣನ ಚರಣಕಮಲಗಳ ಸ್ಮೃತಿಯು ಉಂಟಾಗುವುದೇ ಇಲ್ಲ. ॥ ೨೨ ॥ ಇಲ್ಲಿಯ ಸ್ವರ್ಗದ ನಿವಾಸಿಗಳ ಆಯುಸ್ಸು ಒಂದು ಕಲ್ಪದವರೆಗೆ ಇದ್ದರೂ ಇಲ್ಲಿಂದ ಪುನಃ ಸಂಸಾರಚಕ್ರಕ್ಕೆ ಮರಳಬೇಕಾಗುತ್ತದೆ. ಬ್ರಹ್ಮಲೋಕಕ್ಕಿಂತಲೂ ಭಾರತ ಭೂಮಿಯಲ್ಲಿ ಅಲ್ಪಾಯುವಾಗಿ ಹುಟ್ಟುವುದು ಶ್ರೇಷ್ಠವಾಗಿದೆ. ಏಕೆಂದರೆ, ಇಲ್ಲಿ ಧೀರಪುರುಷರು ಒಂದು ಕ್ಷಣದಲ್ಲಿ ತನ್ನ ಈ ಮರ್ತ್ಯಶರೀರದಿಂದ ಮಾಡಿರುವ ಸಮಸ್ತ ಕರ್ಮಗಳನ್ನು ಶ್ರೀಭಗವಂತನಿಗೆ ಅರ್ಪಿಸಿ ಅವನ ಅಭಯಪದವನ್ನು ಪಡೆದುಕೊಳ್ಳಬಲ್ಲರು. ॥ ೨೩ ॥

ಎಲ್ಲಿ ಶ್ರೀಹರಿಯ ಕಥಾಮೃತದ ನದಿಗಳು ಹರಿಯುವುದಿಲ್ಲವೋ, ಆ ನದಿಗಳ ಉಗಮಸ್ಥಾನವಾದ ಭಗವದ್ಭಕ್ತರಾದ ಸಾಧುಗಳು ವಾಸಿಸುವುದಿಲ್ಲವೋ, ಎಲ್ಲಿ ನೃತ್ಯ-ಗೀತಾದಿಗಳೊಂದಿಗೆ ಭಗವಾನ್ ಯಜ್ಞಪುರುಷನ ಪೂಜೆ-ಅರ್ಚನೆಗಳು ನಡೆಯುವುದಿಲ್ಲವೋ – ಅದು ಬ್ರಹ್ಮಲೋಕವೇ ಆಗಿದ್ದರೂ ಅದನ್ನು ಸೇವಿಸಬಾರದು. ॥ ೨೪ ॥ ಭಾರತವರ್ಷದಲ್ಲಿ ವಿವೇಕ ಬುದ್ಧಿ, ಅದಕ್ಕೆ ಅನುಗುಣವಾದ ಕರ್ಮಗಳು ಮತ್ತು ಆ ಕರ್ಮಗಳನ್ನು ಆಚರಿಸುವುದಕ್ಕೆ ಉಪಯೋಗಿಸುವ ದ್ರವ್ಯವೇ ಮುಂತಾದ ಸಾಮಗ್ರಿಗಳಿಂದ ಸಂಪನ್ನವಾದ ಮನುಷ್ಯಜನ್ಮವನ್ನು ಪಡೆದಿದ್ದರೂ ಯಾರು ಹುಟ್ಟು-ಸಾವುಗಳ ಸುಳಿಯಿಂದ ತಪ್ಪಿಸಿಕೊಳ್ಳಲು ಪ್ರಯತ್ನ ಮಾಡುವುದಿಲ್ಲವೋ – ಅವರು ಬೇಡನು ಒಡ್ಡಿದ ಬೋನು-ಬಲೆಗಳಿಂದ ತಪ್ಪಿಸಿಕೊಂಡರೂ ಆಮಿಷಗಳ ಆಸೆಯಿಂದ ಮತ್ತೆ ಅಲ್ಲಿ ಸಿಕ್ಕಿಹಾಕಿಕೊಳ್ಳುವ ಅರಣ್ಯವಾಸಿಗಳಾದ ಪಶು-ಪಕ್ಷಿಗಳಿಗೆ ಸಮಾನರು. ॥ ೨೫ ॥

ಆಹಾ! ಎಂತಹ ಭಾಗ್ಯಶಾಲಿಗಳು ಈ ಭಾರತದೇಶದ ನಿವಾಸಿಗಳು! ಇವರು ಯಜ್ಞಗಳಲ್ಲಿ ಬೇರೆ-ಬೇರೆ ದೇವತೆಗಳನ್ನು ಉದ್ದೇಶಿಸಿ ಭಾಗಗಳನ್ನು ಇರಿಸಿ ವಿಧಿ, ಮಂತ್ರ ಮತ್ತು ದ್ರವ್ಯಾದಿಗಳೊಡನೆ ಶ್ರದ್ಧೆಯಿಂದ ಹವಿಸ್ಸನ್ನು ಸಮರ್ಪಿಸಿದಾಗ ಇಂದ್ರಾದಿ ನಾನಾ ನಾಮಗಳಿಂದ ಕರೆಯಲ್ಪಡುವ ಸಮಸ್ತ ಕಾಮನೆಗಳನ್ನು ಪೂರ್ಣಗೊಳಿಸುವ ಪೂರ್ಣಕಾಮನಾದ ಶ್ರೀಹರಿಯು ಅವೆಲ್ಲವನ್ನು ತಾನೇ ಪ್ರಸನ್ನತೆಯಿಂದ ಸ್ವೀಕಾರಮಾಡುವನು. ॥ ೨೬ ॥ ಭಕ್ತರು ಯಾವುದಾದರೂ ಕಾಮನೆಯಿಂದ ಭಗವಂತನಲ್ಲಿ ಬೇಡಿದರೂ, ಅವನು ಅವರಿಗೆ ಬೇಡಿದ ಪದಾರ್ಥಗಳನ್ನು ಕರುಣಿಸುತ್ತಾನೆ ಎಂಬುದು ಸರಿಯೇ. ಆದರೆ ಇದು ಭಗವಂತನ ನಿಜವಾದ ವರದಾನವಾಗಲಾರದು. ಏಕೆಂದರೆ, ಆ ಪದಾರ್ಥಗಳನ್ನು ಪಡೆದ ಬಳಿಕವೂ ಮನುಷ್ಯನ ಮನಸ್ಸಿನಲ್ಲಿ ಪುನಃ ಕಾಮನೆಗಳು ಏಳುತ್ತವೆ. ಇದರ ಬದಲಿಗೆ ಭಗವಂತನನ್ನು ನಿಷ್ಕಾಮರಾಗಿ ಭಜಿಸುವವರಿಗೆ ಅವನು ತನ್ನ ಸಾಕ್ಷಾತ್ ಚರಣಕಮಲಗಳನ್ನೇ ಕರುಣಿಸುವನು. ಅವು ಬೇರೆ ಎಲ್ಲ ಇಚ್ಛೆಗಳನ್ನು ಇಲ್ಲವಾಗಿಸುವಂತಹವುಗಳಾಗಿವೆ. ॥ ೨೭ ॥ ಆದ್ದರಿಂದ ಇಷ್ಟರವರೆಗೆ ಸ್ವರ್ಗಸುಖಗಳನ್ನು ಭೋಗಿಸಿದ ಬಳಿಕ ನಾವು ಹಿಂದೆ ಮಾಡಿದ ಯಜ್ಞ, ಪ್ರವಚನ, ಶುಭಕರ್ಮಗಳಿಂದ

ಯದ್ಯತ್ರ ನಃ ಸ್ವರ್ಗಸುಖಾವಶೇಷಿತಂ
ಸ್ವಿಷ್ಟಸ್ಯ ಸೂಕ್ತಸ್ಯ ಕೃತಸ್ಯ ಶೋಭನಮ್ ।
ತೇನಾಜನಾಭೇ ಸ್ಮೃತಿಮಜ್ಜನ್ಮ ನಃ ಸ್ಯಾದ್
ವರ್ಷೇ ಹರಿರ್ಯದ್ಭಜತಾಂ ಶಂ ತನೋತಿ ॥ ೨೮ ॥

ಶ್ರೀಶುಕ ಉವಾಚ

ಜಂಬೂದ್ವೀಪಸ್ಯ ಚ ರಾಜನ್ನುಪದ್ವೀಪಾನಷ್ಟೌ ಹೈಕ ಉಪದಿಶಂತಿ ಸಗರಾತ್ಮಜೈರಶ್ವಾನ್ವೇಷಣ ಇಮಾಂ ಮಹೀಂ ಪರಿತೋ ನಿಖನದ್ಭಿರುಪಕಲ್ಪಿತಾನ್ ॥ ೨೯ ॥ ತದ್ಯಥಾ ಸ್ವರ್ಣಪ್ರಸ್ಥಶ್ಚಂದ್ರಶುಕ್ಲ ಆವರ್ತನೋ ರಮಣಕೋ ಮಂದರಹರಿಣಃ ಪಾಂಚಜನ್ಯಃ ಸಿಂಹಲೋ ಲಂಕೇತಿ ॥ ೩೦ ॥ ಏವಂ ತವ ಭಾರತೋತ್ತಮ ಜಂಬೂದ್ವೀಪವರ್ಷವಿಭಾಗೋ ಯಥೋಪದೇಶಮುಪವರ್ಣಿತ ಇತಿ ॥ ೩೧ ॥

ಏನಾದರೂ ಪುಣ್ಯ ಉಳಿದಿದ್ದರೆ, ಅದರ ಪ್ರಭಾವದಿಂದ ನಮಗೆ ಈ ಭಾರತವರ್ಷದಲ್ಲಿ ಭಗವಂತನ ಸ್ಮೃತಿಯಿಂದ ಕೂಡಿದ ಮನುಷ್ಯ ಜನ್ಮವು ಸಿಗಲಿ. ಏಕೆಂದರೆ, ಶ್ರೀಹರಿಯು ತನ್ನನ್ನು ಭಜಿಸುವವನ ಎಲ್ಲ ರೀತಿಯ ಶ್ರೇಯಸ್ಸನ್ನು ಮಾಡುತ್ತಾನೆ. ॥ ೨೮ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಎಲೈ ಪರೀಕ್ಷಿದ್ರಾಜನೇ! ಹಿಂದೆ ಸಗರನ ಪುತ್ರರು ತಮ್ಮ ಯಜ್ಞಾಶ್ವವನ್ನು ಹುಡುಕುತ್ತಿರುವಾಗ ಈ ಪೃಥ್ವಿಯನ್ನು ನಾಲ್ಕೂ ಕಡೆಗಳಿಂದ ಅಗೆದಿದ್ದರು. ಅದರಿಂದ ಜಂಬೂದ್ವೀಪದ ಅಂತರ್ಗತ ಎಂಟು ಉಪದ್ವೀಪಗಳು ಉಂಟಾದುವು ಎಂದು ಕೆಲವರು ಹೇಳುತ್ತಾರೆ. ॥ ೨೯ ॥ ಅವು ಸ್ವರ್ಣಪ್ರಸ್ಥ, ಚಂದ್ರಶುಕ್ಲ, ಆವರ್ತನ, ರಮಣಕ, ಮಂದರಹರಿಣ, ಪಾಂಚಜನ್ಯ, ಸಿಂಹಳ ಮತ್ತು ಲಂಕಾ ಎಂಬುದಾಗಿವೆ. ॥ ೩೦ ॥ ಭರತಶ್ರೇಷ್ಠನೇ! ಹೀಗೆ ನಾನು ಗುರುಮುಖದಿಂದ ಕೇಳಿದಂತೆಯೇ ನಿನಗೆ ಜಂಬೂದ್ವೀಪದ ವರ್ಷಗಳ ವಿಭಾಗವನ್ನು ಹೇಳಿರುವೆನು. ॥ ೩೧ ॥

ಹತ್ತೊಂಭತ್ತನೆಯ ಅಧ್ಯಾಯವು ಮುಗಿಯಿತು. ॥ ೧೯ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಪಂಚಮಸ್ಕಂಧೇ
ಜಂಬೂದ್ವೀಪವರ್ಣನಂ ನಾಮೈಕೋನವಿಂಶೋಽಧ್ಯಾಯಃ ॥ ೧೯ ॥

ಇಪ್ಪತ್ತನೆಯ ಅಧ್ಯಾಯ

ಇತರ ಆರು ದ್ವೀಪಗಳ ಮತ್ತು ಲೋಕಾಲೋಕ ಪರ್ವತದ ವರ್ಣನೆ

ಶ್ರೀಶುಕ ಉವಾಚ

ಅತಃ ಪರಂ ಪ್ಲಕ್ಷಾದೀನಾಂ ಪ್ರಮಾಣಲಕ್ಷಣಸಂಸ್ಥಾನತೋ ವರ್ಷವಿಭಾಗ ಉಪವರ್ಣ್ಯತೇ ॥ ೧ ॥ ಜಂಬೂದ್ವೀಪೋಽಯಂ ಯಾವತ್‌ಪ್ರಮಾಣವಿಸ್ತಾರಸ್ತಾವತಾ ಕ್ಷಾರೋದಧಿನಾ ಪರಿವೇಷ್ಟಿತೋ ಯಥಾ ಮೇರುರ್ಜಂಬ್ವಾಖ್ಯೇನ ಲವಣೋದಧಿರಪಿ ತತೋ ದ್ವಿಗುಣವಿಶಾಲೇನ ಪ್ಲಕ್ಷಾಖ್ಯೇನ ಪರಿಕ್ಷಿಪ್ತೋ ಯಥಾ ಪರಿಖಾ ಬಾಹ್ಯೋಪವನೇನ । ಪ್ಲಕ್ಷೋ ಜಂಬೂಪ್ರಮಾಣೋ ದ್ವೀಪಾಖ್ಯಾಕರೋ ಹಿರಣ್ಮಯ ಉತ್ಥಿತೋ ಯತ್ರಾಗ್ನಿರುಪಾಸ್ತೇ ಸಪ್ತಜಿಹ್ವಸ್ತಸ್ಯಾಧಿಪತಿಃ ಪ್ರಿಯವ್ರತಾತ್ಮಜ ಇಧ್ಮಜಿಹ್ವಃ ಸ್ವಂ ದ್ವೀಪಂ ಸಪ್ತವರ್ಷಾಣಿ ವಿಭಜ್ಯ ಸಪ್ತವರ್ಷನಾಮಭ್ಯ ಆತ್ಮಜೇಭ್ಯ ಆಕಲಯ್ಯ ಸ್ವಯಮಾತ್ಮಯೋಗೇನೋಪರರಾಮ ॥ ೨ ॥ ಶಿವಂ ಯವಸಂ ಸುಭದ್ರಂ

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಎಲೈ ರಾಜೇಂದ್ರನೇ! ಇನ್ನು ಪ್ರಮಾಣ, ಲಕ್ಷಣ ಮತ್ತು ಸ್ಥಿತಿಗನುಸಾರ ಪ್ಲಕ್ಷವೇ ಮುಂತಾದ ದ್ವೀಪಗಳ ವರ್ಷವಿಭಾಗಗಳನ್ನು ವರ್ಣಿಸಲಾಗುವುದು. ॥ ೧ ॥ ಮೇರು ಪರ್ವತವು ಜಂಬೂದ್ವೀಪದಿಂದ ಸುತ್ತುವರಿದಂತೆಯೇ ಜಂಬೂದ್ವೀಪವು ತನ್ನಷ್ಟೇ ಅಳತೆ-ವಿಸ್ತಾರಗಳುಳ್ಳ ಲವಣಸಮುದ್ರದಿಂದ ಸುತ್ತುವರೆಯಲ್ಪಟ್ಟಿದೆ. ಕಂದಕವು ಹೊರಗಿನ ಉಪವನಗಳಿಂದ ಬಳಸಿಕೊಂಡಿರುವಂತೆಯೇ ಲವಣಸಮುದ್ರವೂ ಕೂಡ ತನ್ನಿಂದ ಎರಡರಷ್ಟು ವಿಸ್ತಾರವುಳ್ಳ ಪ್ಲಕ್ಷದ್ವೀಪದಿಂದ ಸುತ್ತುವರೆಯಲ್ಪಟ್ಟಿದೆ. ಜಂಬೂದ್ವೀಪದಲ್ಲಿ ಎಷ್ಟು ದೊಡ್ಡ ನೇರಳೆಮರವಿರುವುದೋ ಇಲ್ಲಿ ಅಷ್ಟೇ ವಿಸ್ತಾರವುಳ್ಳ ಸುವರ್ಣಮಯ ಪ್ಲಕ್ಷ (ಬಸರೀಮರ) ವೃಕ್ಷವಿದೆ. ಆದರಿಂದಲೇ ಇದರ ಹೆಸರು ಪ್ಲಕ್ಷದ್ವೀಪವೆಂದಾಯಿತು. ಇಲ್ಲಿ ಏಳು ನಾಲಿಗೆಗಳುಳ್ಳ ಅಗ್ನಿದೇವನು ವಿರಾಜಿಸುತ್ತಿರುವನು. ಈ ದ್ವೀಪದ ಅಧಿಪತಿಯು ಪ್ರಿಯವ್ರತಪುತ್ರ ಇಧ್ಮಜಿಹ್ವ ಮಹಾರಾಜನಿದ್ದನು. ಅವನು ಇದನ್ನು ಏಳುವರ್ಷಗಳಾಗಿ ವಿಂಗಡಿಸಿ, ಅವನ್ನು ಆಯಾ ವರ್ಷದ ಹೆಸರನ್ನೇ ಹೊಂದಿದ ತನ್ನ ಪುತ್ರರಿಗೆ ಒಪ್ಪಿಸಿ, ತಾನು ಅಧ್ಯಾತ್ಮಯೋಗವನ್ನು ಆಶ್ರಯಿಸಿ ಮುಕ್ತನಾದನು. ॥ ೨ ॥ ಶಿವ, ಯವಸ, ಸುಭದ್ರ, ಶಾಂತ, ಕ್ಷೇಮ, ಅಮೃತ ಮತ್ತು ಅಭಯ ಎಂಬಿವೇ ಆ ಏಳು ವರ್ಷಗಳು. ಇವುಗಳಲ್ಲಿಯೂ ಏಳು ಪರ್ವತಗಳು ಹಾಗೂ ಏಳು ನದಿಗಳೂ

ಶಾಂತಂ ಕ್ಷೇಮಮಮೃತಮಭಯಮಿತಿ ವರ್ಷಾಣಿ ತೇಷು ಗಿರಯೋ ನದ್ಯಶ್ಚ ಸಪ್ತೈವಾಭಿಜ್ಞಾತಾಃ ॥ ೩ ॥

ಮಣಿಕೂಟೋ ವಜ್ರಕೂಟ ಇಂದ್ರಸೇನೋ ಜ್ಯೋತಿಷ್ಮಾನ್ಸುಪರ್ಣೋ ಹಿರಣ್ಯಷ್ಠೀವೋ ಮೇಘಮಾಲ ಇತಿ ಸಪ್ತಶೈಲಾಃ। ಅರುಣಾ ನೃಮ್ಣಾಽಽಂಗಿರಸೀ ಸಾವಿತ್ರೀ ಸುಪ್ರಭಾತಾ ಋತಂಭರಾ ಸತ್ಯಂಭರಾ ಇತಿ ಮಹಾನದ್ಯಃ। ಯಾಸಾಂ ಜಲೋಪಸ್ಪರ್ಶನವಿಧೂತರಜಸ್ತಮಸೋ ಹಂಸಪತಂಗೋರ್ಧ್ವಾಯನಸತ್ಯಾಂಗಸಂಜ್ಞಾಶ್ಚತ್ವಾರೋ ವರ್ಣಾಃ ಸಹಸ್ರಾಯುಷೋ ವಿಬುಧೋಪಮಸಂದರ್ಶನಪ್ರಜನನಾಃ ಸ್ವರ್ಗದ್ವಾರಂ ತ್ರಯ್ಯಾ ವಿದ್ಯಯಾ ಭಗವಂತಂ ತ್ರಯೀಮಯಂ ಸೂರ್ಯಮಾತ್ಮಾನಂ ಯಜಂತೇ ॥ ೪ ॥

ಪ್ರತ್ನಸ್ಯ ವಿಷ್ಣೋ ರೂಪಂ ಯತ್ಸತ್ಯಸ್ಯರ್ತಸ್ಯ ಬ್ರಹ್ಮಣಃ ।
ಅಮೃತಸ್ಯ ಚ ಮೃತ್ಯೋಶ್ಚ ಸೂರ್ಯಮಾತ್ಮಾನಮೀಮಹೀತಿ ॥ ೫ ॥

ಪ್ಲಕ್ಷಾದಿಷು ಪಂಚಸು ಪುರುಷಾಣಾಮಾಯುರಿಂದ್ರಿಯಮೋಜಃ ಸಹೋ ಬಲಂ ಬುದ್ಧಿರ್ವಿಕ್ರಮ ಇತಿ ಚ ಸರ್ವೇಷಾಮೌತ್ಪತ್ತಿಕೀ ಸಿದ್ಧಿರವಿಶೇಷೇಣ ವರ್ತತೇ ॥ ೬ ॥

ಪ್ಲಕ್ಷಃ ಸ್ವಸಮಾನೇನೇಕ್ಷುರಸೋದೇನಾವೃತೋ ಯಥಾ ತಥಾ ದ್ವೀಪೋಽಪಿ ಶಾಲ್ಮಲೋ ದ್ವಿಗುಣವಿಶಾಲಃ ಸಮಾನೇನ ಸುರೋದೇನಾವೃತಃ ಪರಿವೃಂಕ್ತೇ ॥ ೭ ॥ ಯತ್ರ ಹ ವೈ ಶಾಲ್ಮಲೀ ಪ್ಲಕ್ಷಾಯಾಮಾ ಯಸ್ಯಾಂ ವಾವ ಕಿಲ ನಿಲಯಮಾಹುರ್ಭಗವತಶ್ಛಂದಸ್ತುತಃ ಪತತ್ತ್ರಿರಾಜಸ್ಯ ಸಾ ದ್ವೀಪಹೂತಯೇ ಉಪಲಕ್ಷ್ಯತೇ ॥ ೮ ॥ ತದ್ದ್ವೀಪಾಧಿಪತಿಃ ಪ್ರಿಯವ್ರತಾತ್ಮಜೋ ಯಜ್ಞಬಾಹುಃ ಸ್ವಸುತೇಭ್ಯಃ ಸಪ್ತಭ್ಯಸ್ತನ್ನಾಮಾನಿ ಸಪ್ತವರ್ಷಾಣಿ ವ್ಯಭಜತ್ಸುರೋಚನಂ ಸೌಮನಸ್ಯಂ ರಮಣಕಂ ದೇವವರ್ಷಂ ಪಾರಿಭದ್ರಮಾಪ್ಯಾಯನಮವಿಜ್ಞಾತಮಿತಿ ॥ ೯ ॥ ತೇಷು ವರ್ಷಾದ್ರಯೋ ನದ್ಯಶ್ಚ ಸಪ್ತೈವಾಭಿಜ್ಞಾತಾಃ । ಸ್ವರಸಃ ಶತಶೃಂಗೋ ವಾಮದೇವಃ ಕುಂದೋ ಮುಕುಂದಃ ಪುಷ್ಪವರ್ಷಃ ಸಹಸ್ರಶ್ರುತಿರಿತಿ । ಅನುಮತಿಃ ಸಿನೀವಾಲೀ ಸರಸ್ವತೀ ಕುಹೂ ರಜನೀ ನಂದಾ ರಾಕೇತಿ ॥ ೧೦ ॥

ಪ್ರಸಿದ್ಧವಾಗಿವೆ. ॥ ೩ ॥ ಮಣಿಕೂಟ, ವಜ್ರಕೂಟ, ಇಂದ್ರಸೇನ, ಜ್ಯೋತಿಷ್ಮಾನ್, ಸುಪರ್ಣ, ಹಿರಣ್ಯಷ್ಠೀವ ಮತ್ತು ಮೇಘಮಾಲ ಎಂಬ ಏಳು ಮೆರೆಯಾಗಿರುವ ಪರ್ವತಗಳು. ಅರುಣಾ, ನೃಮ್ಣಾ, ಆಂಗೀರಸೀ, ಸಾವಿತ್ರೀ, ಸುಪ್ರಭಾತಾ, ಋತಂಭರಾ ಹಾಗೂ ಸತ್ಯಂಭರಾ ಎಂಬ ಏಳು ಮಹಾನದಿಗಳು. ಅಲ್ಲಿ ಹಂಸ, ಪತಂಗ, ಊರ್ಧ್ವಾಯನ, ಸತ್ಯಾಂಗ ಎಂಬ ನಾಲ್ಕು ವರ್ಣಗಳಿಗೆ ಸೇರಿದ ಜನರಿದ್ದಾರೆ. ಇವರು ಮೇಲೆ ಹೇಳಿದ ನದಿಗಳಲ್ಲಿ ಸ್ನಾನಮಾಡಿ ಇವರ ರಜೋಗುಣ-ತಮೋಗುಣ ಕಳೆದುಕೊಂಡವರಾಗಿ ಸಾವಿರ ವರ್ಷಗಳ ಆಯುಸ್ಸುಳ್ಳವರಾಗಿದ್ದಾರೆ. ಇವರ ಶರೀರಗಳಲ್ಲಿ ದೇವತೆಗಳಂತೆ ಬಳಲಿಕೆ, ಬೆವರು ಮುಂತಾದವುಗಳು ಇರುವುದಿಲ್ಲ. ಸಂತಾನೋತ್ಪತ್ತಿಯೂ ಅವರಂತೆಯೇ ಇರುತ್ತದೆ. ಇವರು ತ್ರಯೀ ವಿದ್ಯೆಮೂಲಕ ಮೂರೂ ವೇದಗಳಲ್ಲಿ ವರ್ಣಿಸಿರುವ ಸ್ವರ್ಗದ ದ್ವಾರದಂತಿರುವ ಆತ್ಮಸ್ವರೂಪನಾದ ಭಗವಾನ್ ಸೂರ್ಯನನ್ನು ಉಪಾಸಿಸುತ್ತಾರೆ. ॥ ೪ ॥ 'ಸತ್ಯಕ್ಕೂ (ಆಚರಣೆಯಲ್ಲಿರುವ ಧರ್ಮ), ಋತಕ್ಕೂ (ನಿಯಮರೂಪದಲ್ಲಿರುವ ಧರ್ಮ), ವೇದಕ್ಕೂ, ಅಮೃತಕ್ಕೂ, ಮೃತ್ಯುವಿಗೂ ಆತ್ಮಸ್ವರೂಪನಾದ ಪುರಾಣಪುರುಷನಾದ, ವಿಷ್ಣುಸ್ವರೂಪಿಯಾದ ಸೂರ್ಯಭಗವಂತನನ್ನು ನಾವು ಶರಣು ಹೊಂದುತ್ತೇವೆ' ಎಂದು [illegible] ಸೂರ್ಯದೇವನನ್ನು ಸ್ತೋತ್ರಮಾಡುತ್ತಾರೆ. ॥ [illegible] ॥ ಪ್ಲಕ್ಷ ಮುಂತಾದ ಐದು ದ್ವೀಪಗಳಲ್ಲಿ ಎಲ್ಲ ಮನುಷ್ಯರಿಗೂ ಹುಟ್ಟಿನಿಂದಲೇ ಆಯುಸ್ಸು, ಮನೋಬಲ, ಇಂದ್ರಿಯಬಲ, ಶಾರೀರಿಕಬಲ, ಬುದ್ಧಿ ಪರಾಕ್ರಮ ಇವುಗಳು ಸಮಾನವಾಗಿ ಸಿದ್ಧವಾಗಿಯೇ ಇರುತ್ತವೆ. ॥ ೬ ॥

ಪ್ಲಕ್ಷದ್ವೀಪವು ತನ್ನಷ್ಟೇ ವಿಸ್ತಾರವುಳ್ಳ ಕಬ್ಬಿನರಸದ ಸಮುದ್ರದಿಂದ ಸುತ್ತುವರಿಯಲ್ಪಟ್ಟಿದೆ. ಇದರ ಮುಂದೆ ಅದಕ್ಕೆ ಎರಡರಷ್ಟು ವಿಸ್ತಾರವಾದ ಶಾಲ್ಮಲೀದ್ವೀಪವಿದೆ. ಇದು ತನ್ನಷ್ಟೇ ವಿಸ್ತಾರವುಳ್ಳ ಮದ್ಯದ ಸಮುದ್ರದಿಂದ ಬಳಸಲ್ಪಟ್ಟಿದೆ. ॥ ೭ ॥ ಪ್ಲಕ್ಷದ್ವೀಪದ ಬಸರೀಮರದಂತೆ ಇದರಲ್ಲಿ ಶಾಲ್ಮಲೀ (ಬೂರುಗದ) ವೃಕ್ಷವಿದೆ. ಈ ವೃಕ್ಷವೇ ತನ್ನ ವೇದಮಯ ರೆಕ್ಕೆಗಳಿಂದ ಭಗವಂತನನ್ನು ಸ್ತುತಿಸುವ ಪಕ್ಷಿರಾಜ ಗರುಡದೇವರ ನಿವಾಸಸ್ಥಾನವಾಗಿದೆ. ಇದೇ ಈ ದ್ವೀಪದ ಹೆಸರಿಗೆ ಕಾರಣವೆಂದು ಹೇಳುತ್ತಾರೆ. ॥ ೮ ॥ ಈ ದ್ವೀಪಕ್ಕೆ ಅಧಿಪತಿಯಾಗಿ ಪ್ರಿಯವ್ರತಪುತ್ರ ಯಜ್ಞಬಾಹು ಮಹಾರಾಜನಿದ್ದನು. ಅವನು ಇದನ್ನು ಸುಲೋಚನ, ಸೌಮನಸ್ಯ, ರಮಣಕ, ದೇವವರ್ಷ, ಪಾರಿಭದ್ರ, ಆಪ್ಯಾಯನ ಮತ್ತು [illegible]ವಿಜ್ಞಾತ ಎಂಬ ಏಳು ವಿಭಾಗ ಮಾಡಿದನು. ಇವುಗಳನ್ನು ಅದೇ ಹೆಸರುಳ್ಳ ತನ್ನ ಪುತ್ರರಿಗೆ ಒಪ್ಪಿಸಿಕೊಟ್ಟಿದ್ದನು. ॥ ೯ ॥ ಇದರಲ್ಲಿಯೂ ಏಳು ವರ್ಷಪರ್ವತಗಳೂ, ಏಳು ನದಿಗಳೂ ಪ್ರಸಿದ್ಧವಾಗಿವೆ. ಸ್ವರಸ, ಶತಶೃಂಗ, ವಾಮದೇವ, ಕುಂದ, ಮುಕುಂದ, ಪುಷ್ಪವರ್ಷ, ಹಾಗೂ ಸಹಸ್ರಶ್ರುತಿ – ಇವು ಏಳು ಪರ್ವತಗಳು ಹಾಗೂ ಅನುಮತಿ, ಸಿನೀವಾಲಿ, ಸರಸ್ವತಿ, ಕುಹೂ, ರಜನೀ, ನಂದಾ ಮತ್ತು ರಾಕಾ ಎಂಬ ಏಳು ನದಿಗಳು. ॥ ೧೦ ॥ ಈ ವರ್ಷದಲ್ಲಿ ಶ್ರುತಧರ, ವೀರ್ಯಧರ, ವಸುಂಧರ, ಇಷಂಧರ ಎಂಬ ನಾಲ್ಕು ವರ್ಣದ ಜನರು ವಾಸಿಸುತ್ತಾ, ವೇದಮಯ ಆತ್ಮಸ್ವರೂಪನಾದ ಭಗವಾನ್ ಚಂದ್ರನನ್ನು

ತದ್ವರ್ಷಪುರುಷಾಃ ಶ್ರುತಧರವೀರ್ಯಧರವಸುಂಧರೇಷಂಧರಸಂಜ್ಞಾ ಭಗವಂತಂ ವೇದಮಯಂ ಸೋಮಮಾತ್ಮಾನಂ ವೇದೇನ ಯಜಂತೇ ॥ ೧೧ ॥

ಸ್ವಗೋಭಿಃ ಪಿತೃದೇವೇಭ್ಯೋ ವಿಭಜನ್ ಕೃಷ್ಣಶುಕ್ಲಯೋಃ ।
ಪ್ರಜಾನಾಂ ಸರ್ವಾಸಾಂ ರಾಜಾಂಧಃ ಸೋಮೋ ನ ಆಸ್ತ್ವಿತಿ ॥ ೧೨ ॥

ಏವಂ ಸುರೋದಾದ್ಬಹಿಸ್ತದ್ದ್ವಿಗುಣಃ ಸಮಾನೇನಾವೃತೋ ಘೃತೋದೇನ ಯಥಾಪೂರ್ವಃ ಕುಶದ್ವೀಪೋ ಯಸ್ಮಿನ್ಕುಶಸ್ತಂಬೋ ದೇವಕೃತಸ್ತದ್ದ್ವೀಪಾಖ್ಯಾಕರೋ ಜ್ವಲನ ಇವಾಪರಃ ಸ್ವಶಷ್ಪರೋಚಿಷಾ ದಿಶೋ ವಿರಾಜಯತಿ ॥ ೧೩ ॥ ತದ್ದ್ವೀಪಪತಿಃ ಪ್ರೈಯವ್ರತೋ ರಾಜನ್ ಹಿರಣ್ಯರೇತಾ ನಾಮ ಸ್ವಂ ದ್ವೀಪಂ ಸಪ್ತಭ್ಯಃ ಸ್ವಪುತ್ರೇಭ್ಯೋ ಯಥಾಭಾಗಂ ವಿಭಜ್ಯ ಸ್ವಯಂ ತಪ ಆತಿಷ್ಠತ । ವಸುವಸುದಾನದೃಢರುಚಿನಾಭಿಗುಪ್ತಸ್ತುತ್ಯವ್ರತವಿವಿಕ್ತವಾಮದೇವನಾಮಭ್ಯಃ ॥ ೧೪ ॥ ತೇಷಾಂ ವರ್ಷೇಷು ಸೀಮಾಗಿರಯೋ ನದ್ಯಶ್ಚಾಭಿಜ್ಞಾತಾಃ ಸಪ್ತಸಪ್ತೈವ ಚಕ್ರಶ್ಚತುಃಶೃಂಗಃ ಕಪಿಲಶ್ಚಿತ್ರಕೂಟೋ ದೇವಾನೀಕ ಊರ್ಧ್ವರೋಮಾ ದ್ರವಿಣ ಇತಿ ರಸಕುಲ್ಯಾ ಮಧುಕುಲ್ಯಾ ಮಿತ್ರವಿಂದಾ ಶ್ರುತವಿಂದಾ ದೇವಗರ್ಭಾ ಘೃತಚ್ಯುತಾ ಮಂತ್ರ ಮಾಲೇತಿ ॥ ೧೫ ॥ ಯಾಸಾಂ ಪಯೋಭಿಃ ಕುಶದ್ವೀಪೌಕಸಃ ಕುಶಲಕೋವಿದಾಭಿಯುಕ್ತಕುಲಕಸಂಜ್ಞಾ ಭಗವಂತಂ ಜಾತವೇದಸರೂಪಿಣಂ ಕರ್ಮಕೌಶಲೇನ ಯಜಂತೇ ॥ ೧೬ ॥

ಪರಸ್ಯ ಬ್ರಹ್ಮಣಃ ಸಾಕ್ಷಾಜ್ಜಾತವೇದೋಽಸಿ ಹವ್ಯವಾಟ್ ।
ದೇವಾನಾಂ ಪುರುಷಾಂಗಾನಾಂ ಯಜ್ಞೇನ ಪುರುಷಂ ಯಜೇತಿ ॥ ೧೭ ॥

ತಥಾ ಘೃತೋದಾದ್ಬಹಿಃ ಕ್ರೌಂಚದ್ವೀಪೋ ದ್ವಿಗುಣಃ ಸ್ವಮಾನೇನ ಕ್ಷೀರೋದೇನ ಪರಿತ ಉಪಕ್ಲೃಪ್ತೋ ವೃತೋ ಯಥಾ ಕುಶದ್ವೀಪೋ ಘೃತೋದೇನ ಯಸ್ಮಿನ್ ಕ್ರೌಂಚೋ ನಾಮ ಪರ್ವತರಾಜೋ ದ್ವೀಪನಾಮನಿರ್ವರ್ತಕ ಆಸ್ತೇ ॥ ೧೮ ॥ ಯೋಽಸೌ ಗುಹಪ್ರಹರಣೋನ್ಮಥಿತನಿತಂಬಕುಂಜೋಽಪಿ ಕ್ಷೀರೋದೇನಾಸಿಚ್ಯಮಾನೋ ಭಗವತಾ ವರುಣೇನಾಭಿಗುಪ್ತೋ ವಿಭಯೋ ಬಭೂವ ॥ ೧೯ ॥

ವೇದಮಂತ್ರಗಳಿಂದ ಉಪಾಸನೆ ಮಾಡುತ್ತಾರೆ. ॥ ೧೧ ॥ ಶುಕ್ಲಪಕ್ಷ ಮತ್ತು ಕೃಷ್ಣಪಕ್ಷಗಳಲ್ಲಿ ತನ್ನ ಕಿರಣಗಳಿಂದ ವಿಭಾಗಗೈದು ದೇವತೆಗಳಿಗೆ, ಪಿತೃಗಳಿಗೆ ಹಾಗೂ ಸಮಸ್ತ ಪ್ರಾಣಿಗಳಿಗೆ ಅನ್ನವನ್ನು ಕೊಡುವಂತಹ ಆ ಚಂದ್ರದೇವನು ನಮಗೆ ರಾಜ (ರಂಜನೆ ಮಾಡುವವ)ನಾಗಲೀ – ಎಂದು ಸ್ತುತಿಸುತ್ತಾರೆ. ॥ ೧೨ ॥

ಇದೇ ರೀತಿಯಲ್ಲಿ ಮದ್ಯಸಮುದ್ರದ ಮುಂದೆ ಅದಕ್ಕೆ ಎರಡರಷ್ಟು ವಿಸ್ತಾರವುಳ್ಳ ಕುಶದ್ವೀಪವಿದೆ. ಹಿಂದೆ ಹೇಳಿದ ದ್ವೀಪಗಳಂತೆ ಇದೂ ಕೂಡ ತನ್ನಷ್ಟೇ ವಿಸ್ತಾರವಾದ ತುಪ್ಪದ ಸಮುದ್ರದಿಂದ ಬಳಸಲ್ಪಟ್ಟಿದೆ. ಇದರಲ್ಲಿ ಭಗವಂತನು ರಚಿಸಿದ ಒಂದು ದರ್ಭೆಯ ಪೊದೆಯಿರುವುದರಿಂದಲೇ ಇದಕ್ಕೆ ಕುಶದ್ವೀಪ ಎಂಬ ಹೆಸರಾಯಿತು. ಇದು ಮತ್ತೊಂದು ಅಗ್ನಿದೇವನಂತೆ ತನ್ನ ಕೋಮಲ ಹುಲ್ಲುಗಳ ಕಾಂತಿಯಿಂದ ಎಲ್ಲ ದಿಕ್ಕುಗಳನ್ನು ಬೆಳಗಿಸುತ್ತದೆ. ॥ ೧೩ ॥ ರಾಜೇಂದ್ರನೇ! ಪ್ರಿಯವ್ರತನ ಪುತ್ರ ಹಿರಣ್ಯರೇತ ಮಹಾರಾಜನು ಈ ದ್ವೀಪಕ್ಕೆ ಅಧಿಪತಿಯು. ಇವನು ಇದನ್ನು ಏಳು ವಿಭಾಗಗಳಾಗಿ ವಿಂಗಡಿಸಿ ಅವುಗಳನ್ನು ತನ್ನ ಏಳು ಪುತ್ರರಾದ ವಸು, ವಸುದಾನ, ದೃಢರುಚಿ, ನಾಭಿಗುಪ್ತ, ಸ್ತುತ್ಯವ್ರತ, ವಿವಿಕ್ತ ಮತ್ತು ವಾಮದೇವ – ಇವರಿಗೆ ಹಂಚಿಕೊಟ್ಟು ತಾನು ತಪಸ್ಸನ್ನಾಚರಿಸಲು ಹೊರಟು ಹೋದನು. ॥ ೧೪ ॥ ಅವುಗಳ ಗಡಿಗಳನ್ನು ನಿರ್ಧರಿಸುವ ಏಳು ಪರ್ವತಗಳು ಮತ್ತು ಏಳು ನದಿಗಳೂ ಇವೆ. ಚಕ್ರ, ಚತುಃಶೃಂಗ, ಕಪಿಲ, ಚಿತ್ರಕೂಟ, ದೇವಾನೀಕ, ಊರ್ಧ್ವರೋಮಾ ಮತ್ತು ದ್ರವಿಣ – ಇವು ಏಳು ಪರ್ವತಗಳೂ, ರಸಕುಲ್ಯಾ, ಮಧುಕುಲ್ಯಾ, ಮಿತ್ರವಿಂದಾ, ಶ್ರುತವಿಂದಾ, ದೇವಗರ್ಭಾ, ಘೃತಚ್ಯುತಾ ಮತ್ತು ಮಂತ್ರಮಾಲಾ ಎಂಬ ಏಳು ನದಿಗಳು ಪ್ರಸಿದ್ಧವಾಗಿವೆ. ॥ ೧೫ ॥ ಈ ನದಿಗಳಲ್ಲಿ ಮಿಂದು ಕುಶದ್ವೀಪ ನಿವಾಸಿಗಳಾದ ಕುಶಲ, ಕೋವಿದ, ಅಭಿಯುಕ್ತ ಹಾಗೂ ಕುಲಕರೆಂಬ ನಾಲ್ಕು ವರ್ಣದ ಪುರುಷರು ಅಗ್ನಿಸ್ವರೂಪನಾದ ಭಗವಾನ್ ಶ್ರೀಹರಿಯನ್ನು ಯಜ್ಞಾದಿ ಕರ್ಮಕೌಶಲ್ಯದಿಂದ ಉಪಾಸನೆಮಾಡಿ ಹೀಗೆ ಸ್ತುತಿಸುತ್ತಾರೆ. ॥ ೧೬ ॥ ಎಲೈ ಅಗ್ನಿದೇವನೇ! ನೀನು ಪರಬ್ರಹ್ಮನಿಗೆ ಸಾಕ್ಷಾತ್ತಾಗಿ ಹವಿಸ್ಸನ್ನು ಮುಟ್ಟಿಸುವವನಾಗಿರುವೆ. ಆದ್ದರಿಂದ ಶ್ರೀಭಗವಂತನಿಗೆ ಅಂಗಭೂತರಾದ ದೇವತೆಗಳ ಕುರಿತು ನಾವು ಮಾಡುವ ಯಜ್ಞಗಳ ಮೂಲಕ ಶ್ರೀಹರಿಗೆ ಯಜ್ಞಪೂಜೆಯು ಸಂತೃಪ್ತಿಯುಂಟಾಗುವಂತೆ ಮಾಡು. ॥ ೧೭ ॥

ಎಲೈ ರಾಜನೇ! ಮತ್ತೆ ಘೃತಸಮುದ್ರದ ಮುಂದೆ ಅದಕ್ಕೆ ಎರಡರಷ್ಟು ವಿಸ್ತಾರವುಳ್ಳ ಕ್ರೌಂಚದ್ವೀಪವಿದೆ. ಕುಶದ್ವೀಪವು ತುಪ್ಪದ ಸಮುದ್ರದಿಂದ ಸುತ್ತುವರಿದಂತೆ ತನ್ನಷ್ಟೇ ವಿಸ್ತಾರವಾದ ಹಾಲಿನ ಸಮುದ್ರದಿಂದ ಈ ಕ್ರೌಂಚದ್ವೀಪವು ಸುತ್ತುವರಿಯಲ್ಪಟ್ಟಿದೆ. ಇಲ್ಲಿ ಕ್ರೌಂಚವೆಂಬ ದೊಡ್ಡ ಪರ್ವತವಿದೆ. ಆದರಿಂದ ಇದರ ಹೆಸರು ಕ್ರೌಂಚದ್ವೀಪವೆಂದಾಯಿತು. ॥ ೧೮ ॥ ಈ ಪರ್ವತವು ಹಿಂದೆ ಕಾರ್ತಿಕೇಯಸ್ವಾಮಿಯ ಶಸ್ತ್ರಾಯುಧದಿಂದ ಭೇದಿಸಲ್ಪಟ್ಟು ಗಾಯಗೊಳಿಸಿದ್ದರೂ ಕ್ಷೀರಸಮುದ್ರದಿಂದ ನೆನೆಸಲ್ಪಟ್ಟು, ವರುಣದೇವರಿಂದ ರಕ್ಷಣೆಗೊಂಡು ನಿರ್ಭಯವಾಯಿತು. ॥ ೧೯ ॥ ಪ್ರಿಯವ್ರತನ ಪುತ್ರ ಮಹಾರಾಜಾ ಘೃತ

ತಸ್ಮಿನ್ನಪಿ ಪ್ರೈಯವ್ರತೋ ಘೃತಪೃಷ್ಠೋ ನಾಮಾಧಿಪತಿಃ ಸ್ವೇ ದ್ವೀಪೇ ವರ್ಷಾಣಿ ಸಪ್ತ ವಿಭಜ್ಯ ತೇಷು ಪುತ್ರನಾಮಸು ಸಪ್ತರಿಕ್ಥಾದಾನ್ ವರ್ಷಪಾನ್ನಿವೇಶ್ಯ ಸ್ವಯಂ ಭಗವಾನ್ಭಗವತಃ ಪರಮಕಲ್ಯಾಣಯಶಸ ಆತ್ಮಭೂತಸ್ಯ ಹರೇಶ್ಚರಣಾರವಿಂದಮುಪಜಗಾಮ ॥ ೨೦ ॥ ಆಮೋ ಮಧುರುಹೋ ಮೇಘಪೃಷ್ಠಃ ಸುಧಾಮಾ ಭ್ರಾಜಿಷ್ಠೋ ಲೋಹಿತಾರ್ಣೋ ವನಸ್ಪತಿರಿತಿ ಘೃತಪೃಷ್ಠಸುತಾಸ್ತೇಷಾಂ ವರ್ಷಗಿರಯಃ ಸಪ್ತ ಸಪ್ತೈವ ನದ್ಯಶ್ಚಾಭಿಖ್ಯಾತಾಃ ಶುಕ್ಲೋ ವರ್ಧಮಾನೋ ಭೋಜನ ಉಪಬರ್ಹಿಣೋ ನಂದೋ ನಂದನಃ ಸರ್ವತೋಭದ್ರ ಇತಿ ಅಭಯಾ ಅಮೃತೌಘಾ ಆರ್ಯಕಾ ತೀರ್ಥವತೀ ವೃತ್ತಿರೂಪವತೀ ಪವಿತ್ರವತೀ ಶುಕ್ಲೇತಿ ॥ ೨೧ ॥ ಯಾಸಾಮಂಭಃ ಪವಿತ್ರಮಮಲಮುಪಯುಂಜಾನಾಃ ಪುರುಷಋಷಭದ್ರವಿಣದೇವಕಸಂಜ್ಞಾ ವರ್ಷಪುರುಷಾ ಆಪೋಮಯಂ ದೇವಮಪಾಂ ಪೂರ್ಣೇನಾಂಜಲಿನಾ ಯಜಂತೇ ॥ ೨೨ ॥

ಆಪಃ ಪುರುಷವೀರ್ಯಾಃ ಸ್ಥ ಪುನಂತೀರ್ಭೂರ್ಭುವಃ ಸುವಃ ।
ತಾ ನಃ ಪುನೀತಾಮೀವಘ್ನೀಃ ಸ್ಪೃಶತಾಮಾತ್ಮನಾ ಭುವ ಇತಿ
॥ ೨೩ ॥

ಏವಂ ಪುರಸ್ತಾತ್ಕ್ಷೀರೋದಾತ್ಪರಿತ ಉಪವೇಶಿತಃ ಶಾಕದ್ವೀಪೋ ದ್ವಾತ್ರಿಂಶಲ್ಲಕ್ಷಯೋಜನಾಯಾಮಃ ಸಮಾನೇನ ಚ ದಧಿಮಂಡೋದೇನ ಪರೀತೋ ಯಸ್ಮಿನ್ ಶಾಕೋ ನಾಮ ಮಹೀರುಹಃ ಸ್ವಕ್ಷೇತ್ರವ್ಯಪದೇಶಕೋ ಯಸ್ಯ ಹ ಮಹಾಸುರಭಿಗಂಧಸ್ತಂ ದ್ವೀಪಮನುವಾಸಯತಿ ॥ ೨೪॥ ತಸ್ಯಾಪಿ ಪ್ರೈಯವ್ರತ ಏವಾಧಿಪತಿರ್ನಾಮ್ನಾ ಮೇಧಾತಿಥಿಃ ಸೋಽಪಿ ವಿಭಜ್ಯ ಸಪ್ತ ವರ್ಷಾಣಿ ಪುತ್ರನಾಮಾನಿ ತೇಷು ಸ್ವಾತ್ಮಜಾನ್ ಪುರೋಜವಮನೋಜವಪವಮಾನಧೂಮ್ರಾನೀಕಚಿತ್ರರೇಫಬಹುರೂಪವಿಶ್ವಧಾರಸಂಜ್ಞಾನ್ನಿಧಾಪ್ಯಾಧಿಪತೀನ್ಸ್ವಯಂ ಭಗವತ್ಯನಂತ ಆವೇಶಿತಮತಿಸ್ತಪೋವನಂ ಪ್ರವಿವೇಶ ॥ ೨೫ ॥ ಏತೇಷಾಂ ವರ್ಷಮರ್ಯಾದಾಗಿರಯೋ ನದ್ಯಶ್ಚ ಸಪ್ತ ಸಪ್ತೈವ

ಪೃಷ್ಠನು ಇಲ್ಲಿಯ ಅಧಿಪತಿಯು. ಅವನು ಮಹಾಜ್ಞಾನಿಯಾಗಿದ್ದನು. ಅವನು ಇದನ್ನು ಏಳು ವರ್ಷಗಳಾಗಿ ವಿಂಗಡಿಸಿ ಅವುಗಳಲ್ಲಿ ಅದೇ ಹೆಸರಿನ ತನ್ನ ಏಳು ಪುತ್ರರನ್ನು ಉತ್ತರಾಧಿಕಾರಿಗಳಾಗಿ ನೇಮಿಸಿ ತಾನು ಸಮಸ್ತ ಜೀವಿಗಳಿಗೆ ಅಂತರಾತ್ಮನಾಗಿ ಪರಮ ಮಂಗಲಮಯ ಕೀರ್ತಿಯುಳ್ಳ ಭಗವಾನ್ ಶ್ರೀಹರಿಯ ಅಡಿದಾವರೆಗಳನ್ನು ಶರಣು ಹೊಂದಿದನು. ॥ ೨೦ ॥ ಆಮ, ಮಧುರುಹ, ಮೇಘಪೃಷ್ಠ, ಸುಧಾಮಾ, ಭ್ರಾಜಿಷ್ಠ, ಲೋಹಿತಾರ್ಣ ಮತ್ತು ವನಸ್ಪತಿ ಎಂಬುವರೇ ಘೃತಪೃಷ್ಠನ ಏಳು ಪುತ್ರರು. ಅವರ ವರ್ಷಗಳಲ್ಲಿಯೂ ಏಳು ಪರ್ವತಗಳು ಮತ್ತು ಏಳು ನದಿಗಳು ಹರಿಯುತ್ತಿದ್ದುವು. ಶುಕ್ಲ, ವರ್ಧಮಾನ, ಭೋಜನ, ಉಪಬರ್ಹಿಣ, ನಂದ, ನಂದನ ಮತ್ತು ಸರ್ವತೋಭದ್ರ ಎಂಬ ಏಳು ಪರ್ವತಗಳೂ; ಅಭಯಾ, ಅಮೃತೌಘಾ, ಆರ್ಯಕಾ, ತೀರ್ಥವತಿ, ವೃತ್ತಿರೂಪವತೀ, ಪವಿತ್ರವತೀ ಹಾಗೂ ಶುಕ್ಲಾ ಎಂಬ ಏಳು ನದಿಗಳು. ॥ ೨೧ ॥ ಅವುಗಳ ಪವಿತ್ರವೂ, ನಿರ್ಮಲವೂ ಆದ ಜಲವನ್ನು ಸೇವಿಸುವ - ಪುರುಷ, ಋಷಭ, ದ್ರವಿಣ ಮತ್ತು ದೇವಕ ಎಂಬ ನಾಲ್ಕು ವರ್ಣಗಳಿಗೆ ಸೇರಿದ ಅಲ್ಲಿಯ ನಿವಾಸಿಗಳು ನೀರುತುಂಬಿದ ಅಂಜಲಿಗಳಿಂದ ನೀರಿನ ದೇವತೆಯಾದ ವರುಣದೇವರನ್ನು ಉಪಾಸನೆಮಾಡುವರು. ॥ ೨೨ ॥ (ಅವರು ಈ ಮಂತ್ರದಿಂದ ಜಲಾಧಿಪತಿಯನ್ನು ಸ್ತುತಿಸುವರು) - ಎಲೈ ಜಲದೇವತೆಯೇ! ನೀನು ಪರಮಪುರುಷನಿಂದ ಸಾಮರ್ಥ್ಯವನ್ನು ಪಡೆದಿದ್ದೀಯೆ. ಭೂಃ ಭುವಃ ಸುವಃ ಎಂಬ ಮೂರು ಲೋಕಗಳನ್ನೂ ಪವಿತ್ರಗೊಳಿಸುತ್ತಿರುವೆ. ಏಕೆಂದರೆ, ಸ್ವಾಭಾವಿಕವಾಗಿಯೇ ಪಾಪಗಳನ್ನು ನಾಶಮಾಡುವವನಾಗಿರುವೆ. ನಾವು ನಮ್ಮ ಶರೀರಗಳಿಂದ ನಿನ್ನನ್ನು ಸ್ಪರ್ಶಿಸುತ್ತೇವೆ, ನೀನು ನಮ್ಮ ಅಂಗಗಳನ್ನು ಪವಿತ್ರಗೊಳಿಸು. ॥ ೨೩. ॥

ಹೀಗೆಯೇ ಕ್ಷೀರಸಮುದ್ರದಿಂದ ಮುಂದೆ ಅದರ ನಾಲ್ಕು ಕಡೆಗಳಲ್ಲಿಯೂ ಮೂವತ್ತೆರಡುಲಕ್ಷ ಯೋಜನ ವಿಸ್ತಾರವುಳ್ಳ ಶಾಕದ್ವೀಪವಿದೆ. ಇದು ತನ್ನಷ್ಟೇ ವಿಸ್ತಾರವಾದ ಮೊಸರಿನ ಸಮುದ್ರದಿಂದ ಬಳಸಿಕೊಂಡಿದೆ. ಈ ದ್ವೀಪದಲ್ಲಿ ಶಾಕವೆಂಬ ಹೆಸರಿನ ಮಹಾವೃಕ್ಷವೊಂದುಂಟು. ಈ ಕ್ಷೇತ್ರಕ್ಕೆ ಶಾಕದ್ವೀಪವೆಂಬ ಹೆಸರು ಬರಲು ಈ ವೃಕ್ಷವೇ ಕಾರಣವು. ಈ ವೃಕ್ಷವು ಅದ್ಭುತವಾದ ಪರಿಮಳದಿಂದ ಘಮಘಮಿಸುತ್ತಾ ಇಡೀ ದ್ವೀಪವನ್ನು ತನ್ನ ಸುವಾಸನೆಯಿಂದ ತುಂಬುತ್ತಿದೆ. ॥ ೨೪ ॥ ಇದರ ಅಧಿಪತಿಯಾದ ಮೇಧಾತಿಥಿಯೂ ಪ್ರಿಯವ್ರತರಾಜನ ಪುತ್ರನೇ. ಅವನೂ ಕೂಡ ತನ್ನ ಈ ದ್ವೀಪವನ್ನು ಏಳು ವರ್ಷಗಳನ್ನಾಗಿ ವಿಂಗಡಿಸಿ, ಅವುಗಳ ಅಧಿಪತ್ಯವನ್ನು ಆಯಾ ದ್ವೀಪದ ಹೆಸರನ್ನೇ ಹೊಂದಿರುವ ತನ್ನ ಪುತ್ರರಾದ - ಪುರೋಜವ, ಮನೋಜವ, ಪವಮಾನ, ಧೂಮ್ರಾನೀಕ, ಚಿತ್ರರೇಫ, ಬಹುರೂಪ ಮತ್ತು ವಿಶ್ವಧಾರ - ಎಂಬ ಏಳು ಮಂದಿಗೆ ಒಪ್ಪಿಸಿಕೊಟ್ಟು ತಾನು ಭಗವಾನ್ ಅನಂತನಲ್ಲಿ ದತ್ತಚಿತ್ತನಾಗಿ ತಪೋವನಕ್ಕೆ ತೆರಳಿದನು. ॥ ೨೫ ॥ ಈ ವರ್ಷಗಳಲ್ಲಿಯೂ ಏಳು ಪರ್ವತಗಳೂ, ಏಳು ನದಿಗಳು ಇವೆ. ಈಶಾನ, ಉರುಶೃಂಗ, ಬಲಭದ್ರ, ಶತಕೇಸರ, ಸಹಸ್ರಸ್ರೋತ, ದೇವಪಾಲ ಮತ್ತು ಮಹಾನಸ

ಈಶಾನ ಉರುಶೃಂಗೋ ಬಲಭದ್ರಃ ಶತಕೇಸರಃ ಸಹಸ್ರಸ್ರೋತೋ ದೇವಪಾಲೋ ಮಹಾನಸ ಇತಿ ಅನಘಾಽಽಯುರ್ದಾ ಉಭಯಸ್ಪೃಷ್ಟಿರಪರಾಜಿತಾ ಪಂಚಪದೀ ಸಹಸ್ರಸ್ರುತಿರ್ನಿಜಧೃತಿರಿತಿ ॥ ೨೬ ॥ ತದ್ವರ್ಷಪುರುಷಾ ಋತವ್ರತಸತ್ಯವ್ರತದಾನವ್ರತಾನುವ್ರತನಾಮಾನೋ ಭಗವಂತಂ ವಾಯ್ವಾತ್ಮಕಂ ಪ್ರಾಣಾಯಾಮವಿಧೂತ ರಜಸ್ತಮಸಃ ಪರಮಸಮಾಧಿನಾ ಯಜಂತೇ ॥ ೨೭ ॥

ಅಂತಃ ಪ್ರವಿಶ್ಯ ಭೂತಾನಿ ಯೋ ಬಿಭರ್ತ್ಯಾತ್ಮಕೇತುಭಿಃ ।
ಅಂತರ್ಯಾಮೀಶ್ವರಃ ಸಾಕ್ಷಾತ್ಪಾತು ನೋ ಯದ್ವಶೇ ಸ್ಫುಟಮ್ ॥ ೨೮ ॥

ಏವಮೇವ ದಧಿಮಂಡೋದಾತ್ಪರತಃ ಪುಷ್ಕರದ್ವೀಪಸ್ತತೋ ದ್ವಿಗುಣಾಯಾಮಃ ಸಮಂತತ ಉಪಕಲ್ಪಿತಃ ಸಮಾನೇನ ಸ್ವಾದೂದಕೇನ ಸಮುದ್ರೇಣ ಬಹಿರಾವೃತೋ ಯಸ್ಮಿನ್ಬೃಹತ್ಪುಷ್ಕರಂ ಜ್ವಲನಶಿಖಾಮಲಕನಕಪತ್ರಾಯುತಾಯುತಂ ಭಗವತಃ ಕಮಲಾಸನಸ್ಯಾಧ್ಯಾಸನಂ ಪರಿಕಲ್ಪಿತಮ್ ॥ ೨೯ ॥ ತದ್ವೀಪಮಧ್ಯೇ ಮಾನಸೋತ್ತರನಾಮೈಕ ಏವಾರ್ವಾಚೀನ ಪರಾಚೀನವರ್ಷಯೋರ್ಮರ್ಯಾದಾಚಲೋಽಯುತಯೋಜನೋಚ್ಛ್ರಾಯಾಯಾಮೋ ಯತ್ರ ತು ಚತಸೃಷು ದಿಕ್ಷು ಚತ್ವಾರಿ ಪುರಾಣಿ ಲೋಕಪಾಲಾನಾಮಿಂದ್ರಾದೀನಾಂ ಯದುಪರಿಷ್ಟಾತ್ಸೂರ್ಯರಥಸ್ಯ ಮೇರುಂ ಪರಿಭ್ರಮತಃ ಸಂವತ್ಸರಾತ್ಮಕಂ ಚಕ್ರಂ ದೇವಾನಾಮಹೋರಾತ್ರಾಭ್ಯಾಂ ಪರಿಭ್ರಮತಿ ॥ ೩೦ ॥ ತದ್ವೀಪಸ್ಯಾಪ್ಯಧಿಪತಿಃ ಪ್ರೈಯವ್ರತೋ ವೀತಿಹೋತ್ರೋ ನಾಮೈತಸ್ಯಾತ್ಮಜೌ ರಮಣಕಧಾತಕಿನಾಮಾನೌ ವರ್ಷಪತೀ ನಿಯುಜ್ಯ ಸ ಸ್ವಯಂ ಪೂರ್ವಜವದ್ಭಗವತ್ಕರ್ಮಶೀಲ ಏವಾಸ್ತೇ ॥ ೩೧ ॥ ತದ್ವರ್ಷಪುರುಷಾ ಭಗವಂತಂ ಬ್ರಹ್ಮರೂಪಿಣಂ ಸಕರ್ಮಕೇಣ ಕರ್ಮಣಾಽಽರಾಧಯಂತೀದಂ ಚೋದಾಹರಂತಿ ॥ ೩೨ ॥

ಯತ್ತತ್ಕರ್ಮಮಯಂ ಲಿಂಗಂ ಬ್ರಹ್ಮಲಿಂಗಂ ಜನೋಽರ್ಚಯೇತ್ ।
ಏಕಾಂತಮದ್ವಯಂ ಶಾಂತಂ ತಸ್ಮೈ ಭಗವತೇ ನಮ ಇತಿ ॥ ೩೩ ॥

ಎಂಬ ಏಳು ಗಿರಿಗಳು ಇವರ ಎಲ್ಲೆಯನ್ನು ನಿರ್ಧರಿಸುವುವು. ಅನಘಾ, ಆಯುರ್ದಾ, ಉಭಯಸ್ಪೃಷ್ಟಿ, ಅಪರಾಜಿತಾ, ಪಂಚಪದೀ, ಸಹಸ್ರಸ್ರುತಿ, ಹಾಗೂ ನಿಜಧೃತಿ – ಎಂಬಿವೇ ಆ ಏಳು ಮಹಾನದಿಗಳು. ॥ ೨೬ ॥ ಆ ವರ್ಷದಲ್ಲಿರುವ ಋತವ್ರತ, ಸತ್ಯವ್ರತ, ದಾನವ್ರತ ಮತ್ತು ಅನುವ್ರತರೆಂಬ ನಾಲ್ಕು ವರ್ಣದವರು. ಇವರು ಪ್ರಾಣಾಯಾಮದಿಂದ ತಮ್ಮ ರಜೋಗುಣ-ತಮೋಗುಣಗಳನ್ನು ನೀಗಿದವರಾಗಿ ವಾಯುರೂಪೀ ಶ್ರೀಹರಿಯನ್ನು ಆರಾಧಿಸುತ್ತಾರೆ. ಈ ಮಂತ್ರವನ್ನು ಜಪಿಸುತ್ತಾ ಅವರು ಶ್ರೀಹರಿಯನ್ನು ಉಪಾಸನೆ ಮಾಡುತ್ತಾರೆ. ॥ ೨೭ ॥ ಯಾರು ತನ್ನ ಪ್ರಾಣಾಪಾನಾದಿ ವೃತ್ತಿಗಳೆಂಬ ಧ್ವಜಗಳೊಡನೆ ಕೂಡಿ ಪ್ರಾಣಿಗಳ ಒಳಹೊಕ್ಕು ಅವುಗಳನ್ನು ರಕ್ಷಿಸುತ್ತಿರುವನೋ ಮತ್ತು ಸಮಸ್ತ ದೃಶ್ಯ ಜಗತ್ತು ಯಾರ ಅಧೀನವಾಗಿದೆಯೋ ಆ ಸಾಕ್ಷಾತ್ ಅಂತರ್ಯಾಮಿ ವಾಯುರೂಪನಾದ ಭಗವಂತನು ನಮ್ಮನ್ನು ರಕ್ಷಿಸಲಿ. ॥ ೨೮ ॥

ಹೀಗೆಯೇ ಮೊಸರಿನ ಸಮುದ್ರದ ಮುಂದೆ ಅದರ ನಾಲ್ಕೂ ಕಡೆಗಳಲ್ಲಿ ಅದಕ್ಕೆ ಎರಡರಷ್ಟು ವಿಸ್ತಾರವುಳ್ಳ ಪುಷ್ಕರದ್ವೀಪವಿದೆ. ಅದನ್ನು ಸುತ್ತಲೂ ಅಷ್ಟೇ ವಿಸ್ತಾರವಾದ ಸಿಹಿನೀರಿನ ಸಮುದ್ರವು ಬಳಸಿಕೊಂಡಿದೆ. ಅಲ್ಲಿ ಲಕ್ಷಾಂತರ ಸುವರ್ಣಮಯವಾದ ದಳಗಳಿಂದ ಕೂಡಿದ ಅಗ್ನಿಶಿಖೆಯಂತೆ ಬೆಳಗುತ್ತಿರುವ ಒಂದು ದೊಡ್ಡ ಕೆಂದಾವರೆ ಇದೆ. ಅದು ಬ್ರಹ್ಮದೇವರ ಆಸನವೆಂದು ತಿಳಿಯಲಾಗುತ್ತದೆ. (ಆ ಕಮಲದಿಂದಲೇ ಆ ದ್ವೀಪಕ್ಕೆ ಪುಷ್ಕರದ್ವೀಪವೆಂಬ ಹೆಸರಾಯಿತು). ॥ ೨೯ ॥ ಅದರ ನಟ್ಟನಡುವೆ ಪೂರ್ವ-ಪಶ್ಚಿಮಗಳ ಗಡಿಯನ್ನು ನಿರ್ಧರಿಸುವ ಮಾನಸೋತ್ತರವೆಂಬ ಒಂದೇ ಪರ್ವತವಿದೆ. ಇದು ಹತ್ತುಸಾವಿರ ಯೋಜನ ಎತ್ತರವೂ, ಅಷ್ಟೇ ಉದ್ದವೂ ಇದೆ. ಅದರ ಮೇಲೆ ನಾಲ್ಕೂ ದಿಕ್ಕುಗಳಲ್ಲಿಯೂ ಕ್ರಮವಾಗಿ ಇಂದ್ರನೇ ಮುಂತಾದ ಲೋಕಪಾಲರ ನಾಲ್ಕು ಪುರಗಳಿವೆ. ಆ ಪರ್ವತದ ಮೇಲ್ಗಡೆಯಲ್ಲಿ ಸಂಚರಿಸುವ ಸೂರ್ಯದೇವರ ರಥದ ಸಂವತ್ಸರವೆಂಬ ಚಕ್ರವು ದೇವತೆಗಳಿಗೆ ಹಗಲೂ-ರಾತ್ರಿಗಳೆನಿಸಿದ ಉತ್ತರಾಯಣ ಮತ್ತು ದಕ್ಷಿಣಾಯನರೂಪವಾಗಿ ಸದಾ ಸುತ್ತುತ್ತಿರುತ್ತದೆ. ॥ ೩೦ ॥ ಆ ದ್ವೀಪಕ್ಕೆ ಅಧಿಪತಿಯಾಗಿ ಪ್ರಿಯವ್ರತಪುತ್ರನಾದ ವೀತಿಹೋತ್ರ ಮಹಾರಾಜನೂ ಕೂಡ ತನ್ನ ಪುತ್ರರಾದ ರಮಣಕ ಮತ್ತು ಧಾತಕಿ ಎಂಬುವರಿಗೆ ಎರಡು ವರ್ಷಗಳ ಆಧಿಪತ್ಯವನ್ನು ಒಪ್ಪಿಸಿ ತನ್ನ ಅಣ್ಣಂದಿರಂತೆ ಭಗವತ್ಸೇವೆಯಲ್ಲೇ ತತ್ಪರನಾಗಿದ್ದಾನೆ. ॥ ೩೧ ॥ ಅಲ್ಲಿಯ ನಿವಾಸಿಗಳು ಬ್ರಹ್ಮರೂಪಿಯಾದ ಶ್ರೀಭಗವಂತನನ್ನು ಬ್ರಹ್ಮಲೋಕಪ್ರಾಪ್ತಿಯನ್ನು ಮಾಡಿಸುವಂತಹ ಕರ್ಮಗಳಿಂದ ಆರಾಧಿಸುತ್ತಾ ಈ ಮಂತ್ರಜಪದಿಂದ ಸ್ತುತಿಸುತ್ತಾರೆ – ॥ ೩೨ ॥ ಕರ್ಮಫಲಸ್ವರೂಪನೂ, ಬ್ರಹ್ಮಸ್ವರೂಪವನ್ನು ಪ್ರಕಾಶಪಡಿಸುವವನೂ, ಬ್ರಹ್ಮ (ವೇದ) ಪ್ರತಿಪಾದ್ಯನೂ, ಪರಬ್ರಹ್ಮವೊಂದರಲ್ಲೇ ತತ್ಪರನೂ, ಅದ್ವಿತೀಯನೂ, ಸರ್ವರಿಂದ ಪೂಜಿತನೂ, ಶಾಂತಸ್ವರೂಪಿಯೂ ಆದ ಭಗವಾನ್ ಬ್ರಹ್ಮದೇವರಿಗೆ ನಮಸ್ಕಾರವು. ॥ ೩೩ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿದ್ರಾಜನೇ! ಆ ಸಿಹಿನೀರಿನಿಂದಾಚೆ ಲೋಕಾಲೋಕವೆಂಬ ಪರ್ವತವಿದೆ. ಅದು ಸೂರ್ಯನ ಬೆಳಕುಬೀಳುವ ಪ್ರದೇಶಗಳಿಗೂ ಮತ್ತು ಬೆಳಕು

ಋಷಿರುವಾಚ

ತತಃ ಪರಸ್ತಾಲ್ಲೋಕಾಲೋಕನಾಮಾಚಲೋ ಲೋಕಾಲೋಕಯೋರಂತರಾಲೇ ಪರಿತ ಉಪಕ್ಷಿಪ್ತಃ ॥ ೩೪ ॥ ಯಾವನ್ಮಾನಸೋತ್ತರಮೇರ್ವೋರಂತರಂ ತಾವತೀ ಭೂಮಿಃ ಕಾಂಚನ್ಯನ್ಯಾಽಽದರ್ಶತಲೋಪಮಾ ಯಸ್ಯಾಂ ಪ್ರಹಿತಃ ಪದಾರ್ಥೋ ನ ಕಥಂಚಿತ್ಪುನಃ ಪ್ರತ್ಯುಪಲಭ್ಯತೇ ತಸ್ಮಾತ್ಸರ್ವಸತ್ತ್ವಪರಿಹೃತಾಽಽಸೀತ್ ॥ ೩೫ ॥

ಲೋಕಾಲೋಕ ಇತಿ ಸಮಾಖ್ಯಾ ಯದನೇನಾಚಲೇನ ಲೋಕಾಲೋಕಸ್ಯಾಂತರ್ವರ್ತಿನಾವಸ್ಥಾಪ್ಯತೇ ॥ ೩೬ ॥ ಸ ಲೋಕತ್ರಯಾಂತೇ ಪರಿತ ಈಶ್ವರೇಣ ವಿಹಿತೋ ಯಸ್ಮಾತ್ಸೂರ್ಯಾದೀನಾಂ ಧ್ರುವಾಪವರ್ಗಾಣಾಂ ಜ್ಯೋತಿರ್ಗಣಾನಾಂ ಗಭಸ್ತಯೋಽರ್ವಾಚೀನಾಂಸ್ತ್ರೀಲ್ಲೋಕಾನಾವಿತನ್ವಾನಾ ನ ಕದಾಚಿತ್ಪರಾಚೀನಾ ಭವಿತುಮುತ್ಸಹಂತೇ ತಾವದುನ್ನಹನಾಯಾಮಃ ॥ ೩೭ ॥

ಏತಾವಾಲ್ಲೋಕವಿನ್ಯಾಸೋ ಮಾನಲಕ್ಷಣಸಂಸ್ಥಾಭಿರ್ವಿಚಿಂತಿತಃ ಕವಿಭಿಃ ಸ ತು ಪಂಚಾಶತ್ಕೋಟಿಗಣಿತಸ್ಯ ಭೂಗೋಲಸ್ಯ ತುರೀಯಭಾಗೋಽಯಂ ಲೋಕಾಲೋಕಾಚಲಃ ॥ ೩೮ ॥ ತದುಪರಿಷ್ಟಾಚ್ಚತಸೃಷ್ವಾಶಾಸ್ವಾತ್ಮಯೋನಿನಾಖಿಲಜಗದ್ಗುರುಣಾಧಿನಿವೇಶಿತಾ ಯೇ ದ್ವಿರದಪತಯ ಋಷಭಃ ಪುಷ್ಕರಚೂಡೋ ವಾಮನೋಽಪರಾಜಿತ ಇತಿ ಸಕಲಲೋಕಸ್ಥಿತಿಹೇತವಃ ॥ ೩೯ ॥ ತೇಷಾಂ ಸ್ವವಿಭೂತೀನಾಂ ಲೋಕಪಾಲಾನಾಂ ಚ ವಿವಿಧವೀರ್ಯೋಪಬೃಂಹಣಾಯ ಭಗವಾನ್ಪರಮಮಹಾಪುರುಷೋ ಮಹಾವಿಭೂತಿಪತಿರಂತರ್ಯಾಮ್ಯಾತ್ಮನೋ ವಿಶುದ್ಧ ಸತ್ತ್ವಂ ಧರ್ಮಜ್ಞಾನವೈರಾಗ್ಯೈಶ್ವರ್ಯಾದ್ಯಷ್ಟಮಹಾಸಿದ್ಧ್ಯುಪಲಕ್ಷಣಂ ವಿಷ್ವಕ್ಸೇನಾದಿಭಿಃ ಸ್ವಪಾರ್ಷದಪ್ರವರೈಃ ಪರಿವಾರಿತೋ ನಿಜವರಾಯುಧೋಪಶೋಭಿತೈರ್ನಿಜಭುಜದಂಡೈಃ ಸಂಧಾರಯಮಾಣಸ್ತಸ್ಮಿನ್ ಗಿರಿವರೇ ಸಮಂತಾತ್ಸಕಲಲೋಕಸ್ವಸ್ತಯ ಆಸ್ತೇ ॥ ೪೦ ॥ ಆಕಲ್ಪಮೇವಂ ವೇಷಂ ಗತ ಏಷ ಭಗವಾನಾತ್ಮಯೋಗಮಾಯಯಾ ವಿರಚಿತವಿವಿಧಲೋಕಯಾತ್ರಾಗೋಪೀಥಾಯೇತ್ಯರ್ಥಃ ॥ ೪೧ ॥ ಯೋಽಂತರ್ವಿಸ್ತಾರ ಏತೇನ ಹ್ಯಲೋಕಪರಿಮಾಣಂ ಚ ವ್ಯಾಖ್ಯಾತಂ ಯದ್ಬಹಿರ್ಲೋಕಾಲೋಕಾಚಲಾತ್ । ತತಃ ಪರಸ್ತಾದ್ಯೋಗೇಶ್ವರಗತಿಂ ವಿಶುದ್ಧಾಮುದಾಹರಂತಿ ॥ ೪೨ ॥

ಬೆಳಕಿನ ಕತ್ತಲೆಯ ಪ್ರದೇಶಗಳಿಗೂ ಗಡಿಯಾಗಿ ಮಧ್ಯಭಾಗದಲ್ಲಿದೆ. ॥ ೩೪ ॥ ಮೇರುವಿನಿಂದ ಹಿಡಿದು ಮಾನಸೋತ್ತರ ಪರ್ವತದವರೆಗೆ ಎಷ್ಟು ದೂರವಿದೆಯೋ, ಅಷ್ಟೇ ವಿಸ್ತಾರವುಳ್ಳ ಭೂಮಿಯು ಸಿಹಿನೀರಿನ ಸಮುದ್ರದ ಆಚೆಗೆ ಇದೆ. ಅದರ ಮುಂದೆ ಕನ್ನಡಿಯಂತೆ ಶುದ್ಧವಾದ ಸ್ವರ್ಣಭೂಮಿಯಿದೆ. ಅದರಲ್ಲಿ ಬಿದ್ದ ವಸ್ತುವು ಮತ್ತೆ ಸಿಗುವುದಿಲ್ಲ, ಅದ್ದರಿಂದ ಅಲ್ಲಿ ದೇವತೆಗಳಲ್ಲದೆ ಬೇರೆ ಯಾವ ಪ್ರಾಣಿಯೂ ವಾಸಿಸುವುದಿಲ್ಲ. ॥ ೩೫ ॥ ಲೋಕಾಲೋಕ ಪರ್ವತವು ಬೆಳಕು ಮತ್ತು ಕತ್ತಲೆಗಳ ಪ್ರದೇಶಗಳೆರಡಕ್ಕೂ ನಡುವೆ ಗಡಿಯಾಗಿದೆ. ಇದರಿಂದಲೇ ಇದಕ್ಕೆ ಈ ಹೆಸರು ಬಂದಿದೆ. ॥ ೩೬ ॥ ಪರಮಾತ್ಮನು ಇದನ್ನು ಮೂರೂ ಲೋಕಗಳಿಗೂ ಹೊರಗೆ ಅವುಗಳ ನಾಲ್ಕೂ ಕಡೆಗಳ ಎಲ್ಲೆಗಳ ರೂಪದಲ್ಲಿ ಸ್ಥಾಪಿಸಿರುವನು. ಇದರ ಒಂದು ಕಡೆಯಿಂದ-ಮೂರು ಲೋಕಗಳನ್ನು ಪ್ರಕಾಶಿತಗೊಳಿಸುವ ಸೂರ್ಯನಿಂದ ಹಿಡಿದು ಧ್ರುವಲೋಕದವರೆಗಿನ ಸಮಸ್ತ ಜ್ಯೋತಿಮಂಡಲಗಳ ಕಿರಣಗಳು ಮತ್ತೊಂದು ಕಡೆಗೆ ಹೋಗದಷ್ಟು ಈ ಪರ್ವತವು ಎತ್ತರ ಮತ್ತು ಉದ್ದವಿದೆ. ॥ ೩೭ ॥

ವಿದ್ವಾಂಸರು – ಪ್ರಮಾಣ, ಲಕ್ಷಣ ಮತ್ತು ಸ್ಥಿತಿಗನುಸಾರವಾಗಿ ಸಮಸ್ತ ಲೋಕಗಳ ವಿಸ್ತಾರವು ಇಷ್ಟೇ ಎಂದು ನಿರೂಪಿಸಿದ್ದಾರೆ. ಈ ಇಡೀ ಭೂಗೋಳವು ಐವತ್ತು ಕೋಟಿ ಯೋಜನ ವಿಸ್ತಾರವಾಗಿದೆ. ಇದರ ನಾಲ್ಕನೆಯ ಒಂದಂಶ (ಹನ್ನೆರಡುವರೆ ಕೋಟಿ ಯೋಜನ ವಿಸ್ತಾರವುಳ್ಳ) ಈ ಲೋಕಾಲೋಕ ಪರ್ವತವಿದೆ. ॥ ೩೮ ॥ ಇದರ ಮೇಲೆ ನಾಲ್ಕೂ ದಿಕ್ಕುಗಳಲ್ಲಿ ಸಮಸ್ತ ಜಗತ್ತಿಗೆ ಗುರುವಾದ ಸ್ವಯಂಭೂಬ್ರಹ್ಮದೇವರು ಸಮಸ್ತ ಲೋಕಗಳ ಸ್ಥಿತಿಗಾಗಿ ಋಷಭ, ಪುಷ್ಕರಚೂಡ, ವಾಮನ ಮತ್ತು ಅಪರಾಜಿತ ಎಂಬ ನಾಲ್ಕು ಗಜರಾಜರನ್ನು ನಿಯುಕ್ತಗೊಳಿಸಿರುವರು. ॥ ೩೯ ॥ ಆ ದಿಗ್ಗಜಗಳ ಮತ್ತು ತನ್ನ ಅಂಶಸ್ವರೂಪರಾದ ಇಂದ್ರಾದಿ ಲೋಕಪಾಲರ ವಿವಿಧ ಶಕ್ತಿಯನ್ನು ವೃದ್ಧಿಪಡಿಸಲಿಕ್ಕಾಗಿ ಹಾಗೂ ಸಮಸ್ತ ಲೋಕಗಳ ಕ್ಷೇಮಕ್ಕಾಗಿಯೂ ಪರಮೈಶ್ವರ್ಯದ ಅಧಿಪತಿಯೂ, ಸರ್ವಾಂತರ್ಯಾಮಿಯೂ ಆದ ಪರಮಪುರುಷ ಶ್ರೀಹರಿಯು ತನ್ನ ವಿಷ್ವಕ್ಸೇನ ಮುಂತಾದ ಪಾರ್ಷದರೊಂದಿಗೆ ಈ ಪರ್ವತದಲ್ಲಿ ಎಲ್ಲ ಕಡೆಗಳಲ್ಲಿಯೂ ವಿರಾಜಿಸುತ್ತಿರುವನು. ಸ್ವಾಮಿಯು ಧರ್ಮ, ಜ್ಞಾನ, ವೈರಾಗ್ಯ, ಐಶ್ವರ್ಯಗಳೇ ಮುಂತಾದ ಅಷ್ಟಸಿದ್ಧಿಗಳಿಂದ ಸಂಪನ್ನನಾಗಿ ತನ್ನ ದಿವ್ಯ ಶುದ್ಧ ಸತ್ತ್ವಮಯವಾದ ದಿವ್ಯ ಮಂಗಳ ವಿಗ್ರಹದಲ್ಲಿ ಶಂಖ-ಚಕ್ರಾದಿ ದಿವ್ಯಾಯುಧಗಳನ್ನು ಕರಗಳಲ್ಲಿ ಧರಿಸಿ ಮೆರೆಯುತ್ತಿದ್ದಾನೆ. ॥ ೪೦ ॥ ಹೀಗೆ ತನ್ನ ಯೋಗಮಾಯೆಯಿಂದ ರಚಿಸಿದ ವಿವಿಧ ಲೋಕಗಳ ವ್ಯವಸ್ಥೆಯನ್ನು ಸುರಕ್ಷಿತವಾಗಿಡಲು ಅವನು ಇದೇ ಲೀಲಾಮಯರೂಪದಿಂದ ಕಲ್ಪಾಂತ್ಯದವರೆಗೆ ಅಲ್ಲಿ ಎಲ್ಲ ಕಡೆಗಳಲ್ಲಿ ನೆಲೆಸುವವನು. ॥ ೪೧ ॥

ಲೋಕಾಲೋಕದ ಒಳಗಿನ ಭೂಭಾಗದ ಎಷ್ಟು ವಿಸ್ತಾರವಿದೆಯೋ, ಅದರಿಂದ ಅದರ ಹೊರಗಿನ ಕತ್ತಲೆಯ ಪ್ರದೇಶದ ವಿಸ್ತಾರದ ವ್ಯಾಖ್ಯೆಯನ್ನು ಮಾಡಿದಂತಾಯಿತು. ಅಲ್ಲಿಂದ ಆಚೆಗಾದರೋ ಕೇವಲ ಯೋಗೇಶ್ವರರೇ ಸಂಚರಿಸಬಲ್ಲರು. ॥ ೪೨ ॥

ಅಂಡಮಧ್ಯಗತಃ ಸೂರ್ಯೋ
ದ್ಯಾವಾಭೂಮ್ಯೋರ್ಯದಂತರಮ್ ।
ಸೂರ್ಯಾಂಡಗೋಲಯೋರ್ಮಧ್ಯೇ
ಕೋಟ್ಯಃ ಸ್ಯುಃ ಪಂಚವಿಂಶತಿಃ ॥ ೪೩ ॥

ಮೃತೇಽಂಡ ಏಷ ಏತಸ್ಮಿನ್ ಯದಭೂತ್ತತೋ
ಮಾರ್ತಂಡ ಇತಿ ವ್ಯಪದೇಶಃ ।
ಹಿರಣ್ಯಗರ್ಭ ಇತಿ ಯದ್ ಹಿರಣ್ಯಾಂಡಸಮುದ್ಭವಃ
॥ ೪೪ ॥

ಸೂರ್ಯೇಣ ಹಿ ವಿಭಜ್ಯಂತೇ ದಿಶಃ ಖಂ ದ್ಯೌರ್ಮಹೀ ಭಿದಾ ।
ಸ್ವರ್ಗಾಪವರ್ಗೌ ನರಕಾ ರಸೌಕಾಂಸಿ ಚ ಸರ್ವಶಃ
॥ ೪೫ ॥

ದೇವತಿರ್ಯಙ್ಮನುಷ್ಯಾಣಾಂ ಸರೀಸೃಪಸವೀರುಧಾಮ್ ।
ಸರ್ವಜೀವನಿಕಾಯಾನಾಂ ಸೂರ್ಯ ಆತ್ಮಾ ದೃಗೀಶ್ವರಃ
॥ ೪೬ ॥

ಎಲೈ ರಾಜನೇ! ಸ್ವರ್ಗ – ಪೃಥಿವಿಯ ನಡುವೆ ಬ್ರಹ್ಮಾಂಡದ ಕೇಂದ್ರವೇ ಸೂರ್ಯನ ಸ್ಥಿತಿಯಾಗಿದೆ. ಸೂರ್ಯ ಹಾಗೂ ಬ್ರಹ್ಮಾಂಡಗೋಲದ ನಡುವೆ ಎಲ್ಲ ಕಡೆಯಿಂದ ಇಪ್ಪತ್ತೈದು ಕೋಟಿ ಯೋಜನಗಳ ಅಂತರವಿದೆ. ॥ ೪೩ ॥ ಸೂರ್ಯನು ಈ ಮೃತ ಅರ್ಥಾತ್ ಸತ್ತಂತೆ (ಅಚೇತನ) ಇರುವ ಅಂಡದಲ್ಲಿ ವೈರಾಜ ರೂಪದಿಂದ ಬೆಳಗುತ್ತಿರುವುದರಿಂದಲೇ ಇವನ ಹೆಸರು 'ಮಾರ್ತಾಂಡ' ವೆಂದಾಯಿತು. ಇವನು ಹಿರಣ್ಮಯ (ಜ್ಯೋತಿರ್ಮಯ) ಬ್ರಹ್ಮಾಂಡದಿಂದ ಪ್ರಕಟನಾದ್ದರಿಂದ ಇವನನ್ನು 'ಹಿರಣ್ಯಗರ್ಭ' ಎಂದೂ ಹೇಳುತ್ತಾರೆ. ॥ ೪೪ ॥ ಸೂರ್ಯನಿಂದಲೇ ದಿಕ್ಕು, ಆಕಾಶ, ದ್ಯುಲೋಕ (ಅಂತರಿಕ್ಷ), ಭೂರ್ಲೋಕ, ಸ್ವರ್ಗ ಮತ್ತು ಮೋಕ್ಷದ ಪ್ರದೇಶ, ನರಕ ಮತ್ತು ರಸಾತಳ ಹಾಗೂ ಎಲ್ಲ ಭಾಗಗಳ ವಿಭಾಗವಾಗುತ್ತದೆ. ॥ ೪೫ ॥ ಸೂರ್ಯನೇ ದೇವತೆಗಳು, ತಿರ್ಯಕ್, ಮನುಷ್ಯ, ಸರೀಸೃಪ ಮತ್ತು ವೃಕ್ಷ-ಲತಾದಿ ಸಮಸ್ತ ಜೀವಸಮೂಹದ ಆತ್ಮಾ ಹಾಗೂ ನೇತ್ರೇಂದ್ರಿಯದ ಅಧಿಷ್ಠಾತೃವಾಗಿದ್ದಾನೆ. ॥ ೪೬ ॥

ಇಪ್ಪತ್ತನೆಯ ಅಧ್ಯಾಯವು ಮುಗಿಯಿತು. ॥ ೨೦ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಪಂಚಮಸ್ಕಂಧೇ
ಭುವನಕೋಶವರ್ಣನೇ ಸಮುದ್ರವರ್ಷಸಂನಿವೇಶಪರಿಮಾಣಲಕ್ಷಣೋ ವಿಂಶೋಽಧ್ಯಾಯಃ ॥ ೨೦ ॥

ಇಪ್ಪತ್ತೊಂದನೆಯ ಅಧ್ಯಾಯ

ಸೂರ್ಯನ ರಥ ಮತ್ತು ಅದರ ಗತಿಗಳ ವರ್ಣನೆ

ಶ್ರೀಶುಕ ಉವಾಚ

ಏತಾವಾನೇವ ಭೂವಲಯಸ್ಯ ಸಂನಿವೇಶಃ ಪ್ರಮಾಣ ಲಕ್ಷಣತೋ ವ್ಯಾಖ್ಯಾತಃ ॥ ೧ ॥ ಏತೇನ ಹಿ ದಿವೋ ಮಂಡಲಮಾನಂ ತದ್ವಿದ ಉಪದಿಶಂತಿ ಯಥಾ ದ್ವಿದಲಯೋರ್ನಿಷ್ಪಾವಾದೀನಾಂ ತೇ ಅಂತರೇಣಾಂತರಿಕ್ಷಂ ತದುಭಯಸಂಧಿತಮ್ ॥ ೨ ॥ ಯನ್ಮಧ್ಯಗತೋ ಭಗವಾಂಸ್ತಪತಾಂಪತಿಸ್ತಪನ ಆತಪೇನ ತ್ರಿಲೋಕೀಂ ಪ್ರತಪತ್ಯವಭಾಸಯತ್ಯಾತ್ಮಭಾಸಾ ಸ ಏಷ ಉದಗಯನದಕ್ಷಿಣಾಯನವೈಷುವತಸಂಜ್ಞಾಭಿರ್ಮಾಂದ್ಯಶೈಘ್ರ್ಯಸಮಾನಾಭಿರ್ಗತಿಭಿರಾರೋಹಣಾವರೋಹಣಸಮಾನಸ್ಥಾನೇಷು ಯಥಾಸವನಮಭಿಪದ್ಯಮಾನೋ ಮಕರಾದಿಷು ರಾಶಿಷ್ವಹೋರಾತ್ರಾಣಿ

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಎಲೈ ರಾಜನೇ! ಇಲ್ಲಿಯವರೆಗೆ ನಿನಗೆ ಇಡೀ ಭೂಮಂಡಲದ ವಿಸ್ತಾರವನ್ನು ಲಕ್ಷಣ-ಪ್ರಮಾಣಗಳೊಡನೆ ವಿವರಿಸಿದೆನು. (ಇನ್ನು ಖಗೋಳದ ಸ್ವರೂಪವನ್ನು ವಿವರಿಸುವೆನು.) ॥ ೧ ॥ ಭೂಮಂಡಲದ ವಿಸ್ತಾರ ಕ್ಕನುಸಾರವಾಗಿಯೇ ದ್ಯುಲೋಕದ ಪರಿಮಾಣವನ್ನು ವಿದ್ವಾಂಸರು ನಿರೂಪಿಸುತ್ತಾರೆ. ಅವರೆಯೇ ಮುಂತಾದ ದ್ವಿದಳ ಧಾನ್ಯಗಳ ಒಂದು ಹೋಳಿನ ಪರಿಮಾಣವನ್ನು ತಿಳಿದಾಗ ಮತ್ತೊಂದರ ಪರಿಮಾಣವೂ ತಿಳಿಯುವಂತೆ ಭೂಲೋಕದ ಪರಿಮಾಣದಿಂದಲೇ ದ್ಯುಲೋಕದ ಪರಿಮಾಣವನ್ನು ತಿಳಿದುಕೊಳ್ಳಬೇಕು. ಇವೆರಡರ ನಡುವೆ ಅಂತರಿಕ್ಷಲೋಕವಿದೆ. ಇದು ಇವೆರಡರ ಸಂಧಿಸ್ಥಾನವಾಗಿದೆ. ॥ ೨ ॥ ಇದರ ಮಧ್ಯಭಾಗದಲ್ಲಿ ಇರುವ ಗ್ರಹ-ನಕ್ಷತ್ರಗಳ ಅಧಿಪತಿ ಭಗವಾನ್ ಸೂರ್ಯನು ಮೂರೂ ಲೋಕಗಳಿಗೆ ತನ್ನ ಬಿಸಿಲು ಮತ್ತು ಪ್ರಕಾಶಗಳನ್ನು ಬೀರುತ್ತಿರುವನು. ಅವನು ಉತ್ತರಾಯಣ, ದಕ್ಷಿಣಾಯನ ಮತ್ತು ವಿಷುವತ್ ಎಂಬ ನಾಮಗಳಿಂದ ಕ್ರಮವಾಗಿ ಮಂದ, ಶೀಘ್ರ ಮತ್ತು ಸಮಾನ ಗತಿಗಳಿಂದ ನಡೆಯುತ್ತಾ ಸಮಯಕ್ಕೆ ಸರಿಯಾಗಿ ಮಕರಾದಿ ರಾಶಿಗಳಲ್ಲಿ ಮೇಲೆ, ಕೆಳಗೆ ಮತ್ತು ಸಮಾನ ಸ್ಥಾನಗಳಲ್ಲಿ ಸಂಚರಿಸುತ್ತಾ ಹಗಲು-ರಾತ್ರಿಗಳನ್ನು ದೊಡ್ಡದು-ಸಣ್ಣದು ಅಥವಾ ಸಮಾನವಾಗಿ

ದೀರ್ಘಹ್ರಸ್ವಸಮಾನಾನಿ ವಿಧತ್ತೇ ॥ ೩ ॥ ಯದಾ ಮೇಷತುಲಯೋರ್ವರ್ತತೇ ತದಾಹೋರಾತ್ರಾಣಿ ಸಮಾನಾನಿ ಭವಂತಿ ಯದಾ ವೃಷಭಾದಿಷು ಪಂಚಸು ಚ ರಾಶಿಷು ಚರತಿ ತದಾಹಾನ್ಯೇವ ವರ್ಧಂತೇ ಹ್ರಸತಿ ಚ ಮಾಸಿ ಮಾಸ್ಯೇಕೈಕಾ ಘಟಿಕಾ ರಾತ್ರಿಷು ॥ ೪ ॥ ಯದಾ ವೃಶ್ಚಿಕಾದಿಷು ಪಂಚಸು ವರ್ತತೇ ತದಾಹೋರಾತ್ರಾಣಿ ವಿಪರ್ಯಯಾಣಿ ಭವಂತಿ ॥ ೫ ॥ ಯಾವದ್ದಕ್ಷಿಣಾಯನಮಹಾನಿ ವರ್ಧಂತೇ ಯಾವದುದಗಯನಂ ರಾತ್ರಯಃ ॥ ೬ ॥

ಏವಂ ನವ ಕೋಟಯ ಏಕಪಂಚಾಶಲ್ಲಕ್ಷಾಣಿ ಯೋಜನಾನಾಂ ಮಾನಸೋತ್ತರಗಿರಿಪರಿವರ್ತನಸ್ಯೋಪದಿಶಂತಿ ತಸ್ಮಿನ್ನೈಂದ್ರೀಂ ಪುರೀಂ ಪೂರ್ವಸ್ಮಾನ್ಮೇರೋರ್ದೇವಧಾನೀಂ ನಾಮ ದಕ್ಷಿಣತೋ ಯಾಮ್ಯಾಂ ಸಂಯಮನೀಂ ನಾಮ ಪಶ್ಚಾದ್ವಾರುಣೀಂ ನಿಮ್ಲೋಚನೀಂ ನಾಮ ಉತ್ತರತಃ ಸೌಮ್ಯಾಂ ವಿಭಾವರೀಂ ನಾಮ ತಾಸೂದಯಮಧ್ಯಾಹ್ನಾಸ್ತಮಯನಿಶೀಥಾನೀತಿ ಭೂತಾನಾಂ ಪ್ರವೃತ್ತಿನಿವೃತ್ತಿನಿಮಿತ್ತಾನಿ ಸಮಯವಿಶೇಷೇಣ ಮೇರೋಶ್ಚತುರ್ದಿಶಮ್ ॥ ೭ ॥ ತತ್ರತ್ಯಾನಾಂ ದಿವಸಮಧ್ಯಂಗತ ಏವ ಸದಾಽಽದಿತ್ಯಸ್ತಪತಿ ಸವ್ಯೇನಾಚಲಂ ದಕ್ಷಿಣೇನ ಕರೋತಿ ॥ ೮ ॥ ಯತ್ರೋದೇತಿ ತಸ್ಯ ಹ ಸಮಾನ- ಸೂತ್ರನಿಪಾತೇ ನಿಮ್ಲೋಚತಿ ಯತ್ರ ಕ್ವಚನ ಸ್ಯಂದೇನಾಭಿತಪತಿ ತಸ್ಯ ಹೈಷ ಸಮಾನಸೂತ್ರನಿಪಾತೇ ಪ್ರಸ್ವಾಪಯತಿ ತತ್ರ ಗತಂ ನ ಪಶ್ಯಂತಿ ಯೇ ತಂ ಸಮನುಪಶ್ಯೇರನ್ ॥ ೯ ॥ ಯದಾ ಚೈಂದ್ರ್ಯಾಃ ಪುರ್ಯಾಃ ಪ್ರಚಲತೇ ಪಂಚದಶಘಟಿಕಾಭಿರ್ಯಾಮ್ಯಾಂ ಸಪಾದಕೋಟಿದ್ವಯಂ ಯೋಜನಾನಾಂ ಸಾರ್ಧದ್ವಾದಶಲಕ್ಷಾಣಿ ಸಾಧಿಕಾನಿ ಚೋಪಯಾತಿ ॥ ೧೦ ॥ ಏವಂ ತತೋ ವಾರುಣೀಂ ಸೌಮ್ಯಾಮೈಂದ್ರೀಂ ಚ ಪುನಸ್ತಥಾನ್ಯೇ ಚ ಗ್ರಹಾಃ ಸೋಮಾದಯೋ ನಕ್ಷತ್ರೈಃ ಸಹ ಜ್ಯೋತಿಶ್ಚಕ್ರೇ ಸಮಭ್ಯುದ್ಯಂತಿ ಸಹ ವಾ ನಿಮ್ಲೋಚಂತಿ ॥ ೧೧ ॥ ಏವಂ

ಮಾಡುತ್ತಾನೆ ॥ ೩ ॥ ಸೂರ್ಯನು ಮೇಷರಾಶಿ-ತುಲಾರಾಶಿಯಲ್ಲಿ ಬಂದಾಗ ಹಗಲು-ರಾತ್ರಿಗಳು ಸಮವಾಗಿರುತ್ತವೆ. ವೃಷಭವೇ ಮುಂತಾದ ಐದು ರಾಶಿಗಳಲ್ಲಿ ಸಂಚರಿಸುವಾಗ ಪ್ರತಿತಿಂಗಳ ರಾತ್ರಿಗಳಲ್ಲಿ ಒಂದೊಂದು ಗಳಿಗೆ ಕಡಿಮೆಯಾಗುತ್ತಾ ಹೋಗುತ್ತದೆ ಮತ್ತು ಅದೇ ಲೆಕ್ಕದಲ್ಲಿ ಹಗಲು ಬೆಳೆಯುತ್ತಾ ಹೋಗುತ್ತದೆ. ॥ ೪ ॥ ವೃಶ್ಚಿಕವೇ ಮುಂತಾದ ಐದು ರಾಶಿಗಳಲ್ಲಿ ಅವನು ಸಂಚರಿಸುವಾಗ ಹಗಲು-ರಾತ್ರಿಗಳ ಪ್ರಮಾಣವು ಅದಕ್ಕೆ ವಿರುದ್ಧವಾಗಿ ಆಗುವುದು. ॥ ೫ ॥ ಹೀಗೆ ದಕ್ಷಿಣಾಯನವು ಪ್ರಾರಂಭವಾಗುವ ತನಕ ಹಗಲು ಹಿಗ್ಗುತ್ತಾ ಹೋಗುವುವು. ಉತ್ತರಾಯಣವು ಬರುವವರೆವಿಗೂ ರಾತ್ರಿಯು ಹೆಚ್ಚುತ್ತಾ ಹೋಗುವುದು. ॥ ೬ ॥

ಹೀಗೆ ಮಾನಸೋತ್ತರ ಪರ್ವತದ ಮೇಲೆ ಸೂರ್ಯನ ಪ್ರದಕ್ಷಿಣೆಯ ಮಾರ್ಗವು ಒಂಭತ್ತುಕೋಟಿ ಐವತ್ತೊಂದು ಲಕ್ಷ ಯೋಜನವೆಂದು ವಿದ್ವಾಂಸರು ಹೇಳುತ್ತಾರೆ. ಆ ಪರ್ವತದಲ್ಲಿ ಮೇರುವಿನ ಪೂರ್ವದ ಕಡೆಗೆ ಇಂದ್ರನ ದೇವಧಾನೀ, ದಕ್ಷಿಣದಲ್ಲಿ ಯಮರಾಜನ ಸಂಯಮನೀ, ಪಶ್ಚಿಮದಲ್ಲಿ ವರುಣನ ನಿಮ್ಲೋಚನೀ ಮತ್ತು ಉತ್ತರದಲ್ಲಿ ಚಂದ್ರನ ವಿಭಾವರೀ ಹೆಸರಿನ ಪುರಿಗಳು ಇವೆ. ಈ ಪುರಿಗಳಲ್ಲಿ ಮೇರುವಿನ ನಾಲ್ಕೂ ಕಡೆಗಳಲ್ಲಿ ಕಾಲ-ಕಾಲಗಳಲ್ಲಿ ಕ್ರಮವಾಗಿ ಸೂರ್ಯೋದಯ, ಮಧ್ಯಾಹ್ನ, ಸಾಯಂಕಾಲ ಮತ್ತು ಅರ್ಧರಾತ್ರಿ ಆಗುತ್ತಾ ಇರುತ್ತವೆ. ಇವುಗಳಿಂದಾಗಿಯೇ ಸಮಸ್ತ ಜೀವನ ಪ್ರವೃತ್ತಿ ಮತ್ತು ನಿವೃತ್ತಿಗಳು ಆಗುತ್ತಾ ಇರುತ್ತವೆ ॥ ೭ ॥ ಸುಮೇರು ಪರ್ವತದಲ್ಲಿ ವಾಸಿಸುವವರಿಗಾದರೋ ಸೂರ್ಯನ ಸದಾಕಾಲ ಮಧ್ಯಾಹ್ನದಲ್ಲಿರುವಂತೆಯೇ ಸುಡುತ್ತಿರುವನು. ಅವನು ತನ್ನ ಗತಿಗನುಸಾರವಾಗಿ ಅಶ್ವಿನಿಯೇ ಮುಂತಾದ ನಕ್ಷತ್ರಗಳ ಕಡೆಗೆ – ಮೇರುವನ್ನು ಎಡಗಡೆ ಇರುವಂತೆ ನಡೆದರೂ ಇಡೀ ಜ್ಯೋತಿರ್ಮಂಡಲವನ್ನು ತಿರುಗಿಸುವಂತಹ ನಿರಂತರ ಬಲಗಡೆಗೆ ಬೀಸುತ್ತಾ ವಾಯುವಿನ ಮೂಲಕ ತಿರುಗಿಸುವುದರಿಂದ ಸೂರ್ಯನು ಬಲಗಡೆಗೆ ಇರಿಸಿ ನಡೆದಂತೆ ಕಂಡು ಬರುತ್ತಾನೆ. ॥ ೮ ॥ ಯಾವ ಪುರದಲ್ಲಿ ಭಗವಾನ್ ಸೂರ್ಯನು ಉದಯಿಸುತ್ತಾನೋ ಅದರ ಸರಿಯಾಗಿ ಇನ್ನೊಂದು ತುದಿಯ ಪುರಿಯಲ್ಲಿ ಅವನು ಅಸ್ತನಾದಂತೆ ಕಾಣುತ್ತಾನೆ. ಎಲ್ಲಿ ಮಧ್ಯಾಹ್ನದ ಉರಿಬಿಸಿಲಲ್ಲಿ ಬೆವರಿನಿಂದ ಉರಿಯುತ್ತಾರೋ ಅದಕ್ಕೆ ಸರಿಯಾಗಿ ಇನ್ನೊಂದು ತುದಿಯಲ್ಲಿ ಅರ್ಧರಾತ್ರಿಯಾದ ಕಾರಣ ಅವರು ನಿದ್ರಾವಶರಾಗಿರುವರು. ಯಾವ ಜನರಿಗೆ ಮಧ್ಯಾಹ್ನದ ಸಮಯದಲ್ಲಿ ಸೂರ್ಯನು ಸ್ಪಷ್ಟವಾಗಿ ಕಾಣುತ್ತಿರುವವರಿಗೆ ಸೂರ್ಯನು ಸೌಮ್ಯದಿಶೆಯಲ್ಲಿ ತಲುಪಿದಾಗ ಅವನ ದರ್ಶನವಾಗಲಾರದು. ॥ ೯ ॥

ಸೂರ್ಯನು ಇಂದ್ರನ ಪುರಿಯಿಂದ ಹೊರಟಾಗ ಮೊದಲ ಹದಿನೈದು ಗಳಿಗೆಯಲ್ಲಿ ಎರಡುಕೋಟಿ ಮೂವತ್ತೇಳುಲಕ್ಷ ಎಪ್ಪತ್ತೈದು ಸಾವಿರ ಯೋಜನಗಳ ದೂರದಲ್ಲಿರುವ ಯಮನಪುರಿಯನ್ನು ತಲುಪುವನು. ॥ ೧೦ ॥ ಹೀಗೆಯೇ ಕ್ರಮವಾಗಿ ವರುಣನ ಮತ್ತು ಚಂದ್ರನ ಪುರಗಳನ್ನು ದಾಟಿ ಅರವತ್ತು ಗಳಿಗೆಯಲ್ಲಿ ಪುನಃ ಇಂದ್ರನ ಪುರಿಯನ್ನು ತಲುಪುತ್ತಾನೆ. ಹೀಗೆಯೇ ಚಂದ್ರನೇ ಮುಂತಾದ ಬೇರೆ ಗ್ರಹಗಳೂ ಜ್ಯೋತಿಶ್ಚಕ್ರದಲ್ಲಿ ಬೇರೆ ನಕ್ಷತ್ರಗಳೊಂದಿಗೆ ಉದಯಿಸಿ, ಅಸ್ತವಾಗುತ್ತಾ ಇರುತ್ತಾರೆ. ॥ ೧೧ ॥ ಹೀಗೆಯೇ ಸೂರ್ಯದೇವನ ವೇದಮಯ ರಥವು ಒಂದು ಮುಹೂರ್ತದಲ್ಲಿ

ಮುಹೂರ್ತೇನ ಚತುಸ್ತ್ರಿಂಶಲ್ಲಕ್ಷಯೋಜನಾನ್ಯಷ್ಟಶತಾಧಿಕಾನಿ ಸೌರೋ ರಥಸ್ತ್ರಯೀಮಯೋಽಸೌ ಚತಸೃಷು ಪರಿವರ್ತತೇ ಪುರೀಷು ॥ ೧೨ ॥

ಯಸ್ಯೈಕಂ ಚಕ್ರಂ ದ್ವಾದಶಾರಂ ಷಣ್ನೇಮಿ ತ್ರಿಣಾಭಿ ಸಂವತ್ಸರಾತ್ಮಕಂ ಸಮಾಮನಂತಿ ತಸ್ಯಾಕ್ಷೋ ಮೇರೋರ್ಮೂರ್ಧನಿ ಕೃತೋ ಮಾನಸೋತ್ತರೇ ಕೃತೇತರಭಾಗೋ ಯತ್ರ ಪ್ರೋತಂ ರವಿರಥಚಕ್ರಂ ತೈಲಯಂತ್ರಚಕ್ರವದ್ಭ್ರಮನ್ಮಾನಸೋತ್ತರಗಿರೌ ಪರಿಭ್ರಮತಿ ॥ ೧೩ ॥ ತಸ್ಮಿನ್ನಕ್ಷೇ ಕೃತಮೂಲೋ ದ್ವಿತೀಯೋಽಕ್ಷಸ್ತುರ್ಯಮಾನೇನ ಸಮ್ಮಿತಸ್ತೈಲಯಂತ್ರಾಕ್ಷವದ್ಧ್ರುವೇ ಕೃತೋಪರಿಭಾಗಃ ॥ ೧೪ ॥

ರಥನೀಡಸ್ತು ಷಟ್‌ತ್ರಿಂಶಲ್ಲಕ್ಷಯೋಜನಾಯತಸ್ತತ್ತುರೀಯಭಾಗವಿಶಾಲಸ್ತಾವಾನ್ರವಿರಥಯುಗೋ ಯತ್ರ ಹಯಾಶ್ಛಂದೋನಾಮಾನಃ ಸಪ್ತಾರುಣಯೋಜಿತಾ ವಹಂತಿ ದೇವಮಾದಿತ್ಯಮ್ ॥ ೧೫ ॥ ಪುರಸ್ತಾತ್ಸವಿತುರರುಣಃ ಪಶ್ಚಾಚ್ಚ ನಿಯುಕ್ತಃ ಸೌತ್ಯೇ ಕರ್ಮಣಿ ಕಿಲಾಸ್ತೇ ॥ ೧೬ ॥ ತಥಾ ವಾಲಖಿಲ್ಯಾ ಋಷಯೋಽಂಗುಷ್ಠಪರ್ವಮಾತ್ರಾಃ ಷಷ್ಟಿಸಹಸ್ರಾಣಿ ಪುರತಃ ಸೂರ್ಯಂ ಸೂಕ್ತವಾಕಾಯ ನಿಯುಕ್ತಾಃ ಸಂಸ್ತುವಂತಿ ॥ ೧೭ ॥ ತಥಾನ್ಯೇ ಚ ಋಷಯೋ ಗಂಧರ್ವಾಪ್ಸರಸೋ ನಾಗಾಗ್ರಾಮಣ್ಯೋ ಯಾತುಧಾನಾ ದೇವಾ ಇತ್ಯೇಕೈಕಶೋ ಗಣಾಃ ಸಪ್ತ ಚತುರ್ದಶ ಮಾಸಿ ಮಾಸಿ ಭಗವಂತಂ ಸೂರ್ಯಮಾತ್ಮಾನಂ ನಾನಾನಾಮಾನಂ ಪೃಥಙ್ನಾನಾನಾಮಾನಃ ಪೃಥಕ್ಕರ್ಮಭಿರ್ದ್ವಂದ್ವಶ ಉಪಾಸತೇ ॥ ೧೮ ॥ ಲಕ್ಷೋತ್ತರಂ ಸಾರ್ಧನವಕೋಟಿಯೋಜನಪರಿಮಂಡಲಂ ಭೂವಲಯಸ್ಯ ಕ್ಷಣೇನ ಸಗವ್ಯೂತ್ಯುತ್ತರಂ ದ್ವಿಸಹಸ್ರಯೋಜನಾನಿ ಸ ಭುಂಕ್ತೇ ॥ ೧೯ ॥

ಮೂವತ್ತನಾಲ್ಕುಲಕ್ಷ ಎಂಟುನೂರು ಯೋಜನಗಳ ಲೆಕ್ಕದಲ್ಲಿ ನಡೆಯುತ್ತಾ ನಾಲ್ಕೂ ಪುರಗಳಲ್ಲಿ ಸಂಚರಿಸುತ್ತಿರುವುದು. ॥ ೧೨ ॥

ಸೂರ್ಯದೇವನ ರಥಕ್ಕೆ ಸಂವತ್ಸರವೆಂಬ ಒಂದೇ ಒಂದು ಚಕ್ರವಿದೆ. ಹನ್ನೆರಡು ಮಾಸಗಳೇ ಅದರ ಅರೆಕಾಲುಗಳು. ಆರು ಋತುಗಳೇ ಅದರ ಪಟ್ಟಿ (ಅಂಚು)ಗಳು. ಚಾತುರ್ಮಾಸ್ಯವೇ (ನಾಲ್ಕು ತಿಂಗಳುಗಳು) ಅದರ ನಾಭಿಯು. ಈ ರಥದ ಅಚ್ಚಿನ ಒಂದು ತುದಿಯು ಮೇರುಪರ್ವತದ ಶಿಖರದಲ್ಲಿ ನಿಂತಿದೆ ಮತ್ತು ಇನ್ನೊಂದು ಮಾನಸೋತ್ತರ ಪರ್ವತದ ಮೇಲಿದೆ. ಅಚ್ಚಿಗೆ ಸೇರಿಕೊಂಡಿರುವ ಈ ಚಕ್ರವು ಎಣ್ಣೆಯ ಗಾಣದ ಚಕ್ರದಂತೆ ಮಾನಸೋತ್ತರ ಪರ್ವತದ ಮೇಲೆ ಸುತ್ತುತ್ತಾ ಇರುತ್ತದೆ. ॥ ೧೩ ॥ ಈ ಅಚ್ಚಿನಲ್ಲಿ ಜೋಡಿಸಲ್ಪಟ್ಟ ಮೂಲಭಾಗವುಳ್ಳ ಮತ್ತೊಂದು ಅಚ್ಚು ಇದೆ. ಅದು ಉದ್ದದಲ್ಲಿ ಇದರ ನಾಲ್ಕನೆಯ ಒಂದಂಶವಿದೆ. ಅದರ ಮೇಲ್ಭಾಗವು ಎಣ್ಣೆಯ ಗಾಣದ ಅಚ್ಚಿನಂತೆ ಧ್ರುವಲೋಕಕ್ಕೆ ಜೋಡಿಸಲ್ಪಟ್ಟಿದೆ. ॥ ೧೪ ॥

ಈ ರಥದಲ್ಲಿ ಕೂರುವ ಜಾಗವು ಮೂವತ್ತಾರು ಲಕ್ಷಯೋಜನ ಉದ್ದವೂ, ಒಂಭತ್ತು ಲಕ್ಷಯೋಜನ ಅಗಲವೂ ಇದೆ. ಇದರ ನೊಗವು ಮೂವತ್ತಾರು ಲಕ್ಷಯೋಜನ ಉದ್ದವಾಗಿದೆ. ಅದರಲ್ಲಿ ಅರುಣನೆಂಬ ಸಾರಥಿಯು ಗಾಯತ್ರಿಯೇ ಮುಂತಾದ ಹೆಸರುಳ್ಳ ಏಳು ಕುದುರೆಗಳನ್ನು ಹೂಡಿರುವನು. ಅವನೇ ಈ ರಥದಲ್ಲಿ ಕುಳಿತಿರುವ ಭಗವಾನ್ ಸೂರ್ಯದೇವನನ್ನು ಕೊಂಡುಹೋಗುತ್ತಾನೆ. ॥ ೧೫ ॥ ಸೂರ್ಯದೇವನ ಮುಂದೆ ಅವನ ಕಡೆಗೆ ಮುಖಮಾಡಿ ಕುಳಿತಿರುವ ಅರುಣನು ಅವನ ಸಾರಥ್ಯದ ಕಾರ್ಯವನ್ನು ಮಾಡುತ್ತಾನೆ. ॥ ೧೬ ॥ ಭಗವಾನ್ ಸೂರ್ಯನ ಮುಂದೆ ಹೆಬ್ಬೆರಳಿನ ಗಿಣ್ಣಿನಷ್ಟು ಪ್ರಮಾಣವುಳ್ಳ ವಾಲಖಿಲ್ಯರೇ ಮುಂತಾದ ಅರವತ್ತುಸಾವಿರ ಮಂದಿ ಋಷಿಗಳು ಸ್ವಸ್ತಿವಾಚನಕ್ಕಾಗಿ ನಿಯುಕ್ತರಾಗಿದ್ದಾರೆ. ಅವರು ಸೂರ್ಯನನ್ನು ಸ್ತುತಿಸುತ್ತಾ ಇರುತ್ತಾರೆ. ॥ ೧೭ ॥ ಇವರಲ್ಲದೆ ಋಷಿಗಳು, ಗಂಧರ್ವರು, ಅಪ್ಸರೆಯರು, ನಾಗರು, ಯಕ್ಷರು, ರಾಕ್ಷಸರು, ದೇವತೆಗಳು ಇವರುಗಳೂ ಕೂಡ ಆತನನ್ನು ಆರಾಧಿಸುತ್ತಿರುವರು. ಇವರ ಸಂಖ್ಯೆ ಒಟ್ಟು ಹದಿನಾಲ್ಕು, ಆದರೆ ಜೋಡಿಗಳಾಗಿರುವುದರಿಂದ ಏಳು ಗಣಗಳೆನಿಸುತ್ತಾರೆ. ಪ್ರತಿಯೊಂದು ತಿಂಗಳಲ್ಲಿ ಬೇರೆ-ಬೇರೆ ಹೆಸರುಳ್ಳವರಾಗಿ ತಮ್ಮ ಬೇರೆ-ಬೇರೆ ಕರ್ಮಗಳಿಂದ ಪ್ರತಿಯೊಂದು ತಿಂಗಳಿನಲ್ಲಿಯೂ ಬೇರೆ-ಬೇರೆ ಹೆಸರುಗಳನ್ನು ಧರಿಸುವ ಆತ್ಮಸ್ವರೂಪ ಭಗವಾನ್ ಸೂರ್ಯನನ್ನು ಇಬ್ಬರಿಬ್ಬರು ಕೂಡಿ ಉಪಾಸನೆ ಮಾಡುತ್ತಾರೆ. ॥ ೧೮ ॥ ಹೀಗೆ ಸೂರ್ಯಭಗವಂತನು ಭೂಮಂಡಲದ ಒಂಭತ್ತುಕೋಟಿ ಐವತ್ತೊಂದುಲಕ್ಷ ಯೋಜನ ಉದ್ದದ ಪ್ರದಕ್ಷಿಣೆಯಲ್ಲಿ ಪ್ರತಿಯೊಂದು ಕ್ಷಣದಲ್ಲಿ ಎರಡುಸಾವಿರದ ಎರಡು ಯೋಜನವನ್ನು ದಾಟಿಬಿಡುವನು. ॥ ೧೯ ॥

ಇಪ್ಪತ್ತೊಂದನೆಯ ಅಧ್ಯಾಯವು ಮುಗಿಯಿತು. ॥ ೨೧ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಪಂಚಮಸ್ಕಂಧೇ
ಜ್ಯೋತಿಶ್ಚಕ್ರಸೂರ್ಯರಥಮಂಡಲವರ್ಣನಂ ನಾಮೈಕವಿಂಶೋಽಧ್ಯಾಯಃ ॥ ೨೧ ॥

ಇಪ್ಪತ್ತೆರಡನೆಯ ಅಧ್ಯಾಯ

ಬೇರೆ-ಬೇರೆ ಗ್ರಹಗಳ ಸ್ಥಿತಿ ಮತ್ತು ಗತಿಗಳ ವರ್ಣನೆ

ರಾಜೋವಾಚ

ಯದೇತದ್ಭಗವತ ಆದಿತ್ಯಸ್ಯ ಮೇರುಂ ಧ್ರುವಂ ಚ ಪ್ರದಕ್ಷಿಣೇನ ಪರಿಕ್ರಾಮತೋ ರಾಶೀನಾಮಭಿಮುಖಂ ಪ್ರಚಲಿತಂ ಚಾಪ್ರದಕ್ಷಿಣಂ ಭಗವತೋಪವರ್ಣಿತಮಮುಷ್ಯ ವಯಂ ಕಥಮನುಮಿಮೀಮಹೀತಿ ॥ ೧ ॥

ಸ ಹೋವಾಚ

ಯಥಾ ಕುಲಾಲಚಕ್ರೇಣ ಭ್ರಮತಾ ಸಹ ಭ್ರಮತಾಂ ತದಾಶ್ರಯಾಣಾಂ ಪಿಪೀಲಿಕಾದೀನಾಂ ಗತಿರನ್ಯೈವ ಪ್ರದೇಶಾಂತರೇಷ್ವಪ್ಯುಪಲಭ್ಯಮಾನತ್ವಾದೇವಂ ನಕ್ಷತ್ರರಾಶಿಭಿರುಪಲಕ್ಷಿತೇನ ಕಾಲಚಕ್ರೇಣ ಧ್ರುವಂ ಮೇರುಂ ಚ ಪ್ರದಕ್ಷಿಣೇನ ಪರಿಧಾವತಾ ಸಹ ಪರಿಧಾವಮಾನಾನಾಂ ತದಾಶ್ರಯಾಣಾಂ ಸೂರ್ಯಾದೀನಾಂ ಗ್ರಹಾಣಾಂ ಗತಿರನ್ಯೈವ ನಕ್ಷತ್ರಾಂತರೇ ರಾಶ್ಯಂತರೇ ಚೋಪಲಭ್ಯಮಾನತ್ವಾತ್ ॥ ೨ ॥ ಸ ಏಷ ಭಗವಾನಾದಿಪುರುಷ ಏವ ಸಾಕ್ಷಾನ್ನಾರಾಯಣೋ ಲೋಕಾನಾಂ ಸ್ವಸ್ತಯ ಆತ್ಮಾನಂ ತ್ರಯೀಮಯಂ ಕರ್ಮವಿಶುದ್ಧಿನಿಮಿತ್ತಂ ಕವಿಭಿರಪಿ ಚ ವೇದೇನ ವಿಜಿಜ್ಞಾಸ್ಯಮಾನೋ ದ್ವಾದಶಧಾ ವಿಭಜ್ಯ ಷಟ್ಸು ವಸಂತಾದಿಷ್ವೃತುಷು ಯಥೋಪಜೋಷಮೃತುಗುಣಾನ್ವಿದಧಾತಿ ॥ ೩ ॥ ತಮೇತಮಿಹ ಪುರುಷಾಸ್ತ್ರಯ್ಯಾ ವಿದ್ಯಯಾ ವರ್ಣಾಶ್ರಮಾಚಾರಾನುಪಥಾ ಉಚ್ಚಾವಚೈಃ ಕರ್ಮಭಿರಾಮ್ನಾತೈರ್ಯೋಗವಿತಾನೈಶ್ಚ ಶ್ರದ್ಧಯಾ ಯಜಂತೋಽಂಜಸಾ ಶ್ರೇಯಃ ಸಮಧಿಗಚ್ಛಂತಿ ॥ ೪ ॥ ಅಥ ಸ ಏಷ ಆತ್ಮಾ ಲೋಕಾನಾಂ ದ್ಯಾವಾಪೃಥಿವ್ಯೋರಂತರೇಣ ನಭೋವಲಯಸ್ಯ ಕಾಲಚಕ್ರಗತೋ ದ್ವಾದಶ ಮಾಸಾನ್ ಭುಂಕ್ತೇ ರಾಶಿಸಂಜ್ಞಾನ್ ಸಂವತ್ಸರಾವಯವಾನ್ಮಾಸಃ ಪಕ್ಷದ್ವಯಂ ದಿವಾ ನಕ್ತಂ ಚೇತಿ ಸಪಾದರ್ಕ್ಷದ್ವಯಮುಪದಿಶಂತಿ

ಪರೀಕ್ಷಿದ್ರಾಜನು ಕೇಳಿದನು – 'ಮಹಾತ್ಮರೇ! ಭಗವಾನ್ ಆದಿತ್ಯನು ಮೇರುಗಿರಿಯನ್ನು ಮತ್ತು ಧ್ರುವಲೋಕವನ್ನು ಪ್ರದಕ್ಷಿಣಾಕಾರವಾಗಿ ಸುತ್ತುತ್ತಿದ್ದರೂ ರಾಶಿಗಳಿಗೆ ಎದುರಾಗಿ ಅಪ್ರದಕ್ಷಿಣವಾಗಿಯೇ ಚಲಿಸುತ್ತಾನೆ ಎಂದು ತಾವು ಹೇಳಿದಿರಿ. ಇದನ್ನು ನಾವು ಹೇಗೆ ಅರ್ಥೈಸಿಕೊಳ್ಳಬಹುದು ತಿಳಿಸೋಣವಾಗಲಿ.' ॥ ೧ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಮಹಾರಾಜನೇ! ಕುಂಬಾರನ ತಿರುಗುತ್ತಿರುವ ಚಕ್ರದಮೇಲೆ ಕುಳಿತ ಅದರೊಂದಿಗೆ ತಿರುಗುತ್ತಿರುವ ಇರುವೆಯೇ ಮುಂತಾದವುಗಳ ಗತಿಯು ಅದರಿಂದ ಭಿನ್ನವೇ ಆಗಿದೆ. ಏಕೆಂದರೆ, ಅದು ಬೇರೆ-ಬೇರೆ ಸಮಯದಲ್ಲಿ ಆ ಚಕ್ರದ ಬೇರೆ-ಬೇರೆ ಸ್ಥಾನಗಳಲ್ಲಿ ನೋಡಲ್ಪಡುತ್ತದೆ. ಹಾಗೆಯೇ ನಕ್ಷತ್ರ ಮತ್ತು ರಾಶಿಗಳಿಂದ ಕಂಡುಬರುವ ಕಾಲಚಕ್ರದಲ್ಲಿ ಬಿದ್ದು ಧ್ರುವ ಮತ್ತು ಮೇರುವನ್ನು ಬಲಕ್ಕಿಟ್ಟು ತಿರುಗುವ ಸೂರ್ಯನೇ ಮುಂತಾದ ಗ್ರಹಗಳ ಗತಿಯು ವಾಸ್ತವವಾಗಿ ಅದರಿಂದ ಭಿನ್ನವೇ ಆಗಿದೆ. ಏಕೆಂದರೆ ಅವನು ಕಾಲಭೇದದಿಂದ ಬೇರೆ-ಬೇರೆ ರಾಶಿ ಮತ್ತು ನಕ್ಷತ್ರಗಳಲ್ಲಿ ಕಂಡುಬರುತ್ತಿರುವನು. ॥ ೨ ॥ ಜಗತ್ತಿಗೆ ಕಾರಣನೂ, ಸಾಕ್ಷಾತ್ ನಾರಾಯಣ ಸ್ವರೂಪನೂ ಆಗಿರುವ ಆದಿಪುರುಷನಾದ ಭಗವಾನ್ ಸೂರ್ಯದೇವನು – ವೇದಮಂತ್ರದರ್ಶಿಗಳಾದ ಜ್ಞಾನಿಗಳೂ ಮತ್ತು ವೇದಗಳೂ ತಿಳಿಯಲು ಬಯಸುವ ಸ್ವರೂಪವುಳ್ಳವನು. ಆದರೂ ಆತನು ಲೋಕಗಳ ಕ್ಷೇಮಕ್ಕಾಗಿ ವೇದರೂಪಿಯಾದ ತನ್ನನ್ನು ಹನ್ನೆರಡು ಬಗೆಗಳನ್ನಾಗಿ ವಿಭಾಗಿಸಿಕೊಂಡು ಚೈತ್ರವೇ ಮುಂತಾದ ಹನ್ನೆರಡು ಮಾಸಗಳಲ್ಲಿ ಪ್ರತಿಯೊಂದರಲ್ಲಿಯೂ ಒಂದೊಂದು ಹೆಸರಿನಿಂದ ಕೂಡಿ ಜೀವಿಗಳು ಆಯಾ ಕರ್ಮಫಲವನ್ನು ಭೋಗಿಸುವುದಕ್ಕಾಗಿ ವಸಂತವೇ ಮುಂತಾದ ಆರು ಋತುಗಳಲ್ಲಿಯೂ ಅವುಗಳ ಯಥಾಯೋಗ್ಯ ಗುಣಧರ್ಮಗಳನ್ನು ಉಂಟುಮಾಡುತ್ತಾನೆ. ॥ ೩ ॥ ಈ ಲೋಕದಲ್ಲಿ ವರ್ಣಾಶ್ರಮಧರ್ಮವನ್ನು ಅನುಸರಿಸುವವರು ವೇದತ್ರಯದ ಮೂಲಕ ಪ್ರತಿಪಾದಿತ ಸಣ್ಣ-ದೊಡ್ಡ ಕರ್ಮಗಳಿಂದ ಇಂದ್ರಾದಿ ದೇವತೆಗಳ ರೂಪದಲ್ಲಿ ಮತ್ತು ಯೋಗಸಾಧನೆಯಿಂದ ಅಂತರ್ಯಾಮಿರೂಪದಲ್ಲಿ ಸೂರ್ಯನಾರಾಯಣನನ್ನು ಶ್ರದ್ಧೆಯಿಂದ ಆರಾಧಿಸಿ ಸುಲಭವಾಗಿ ಪರಮಪದವನ್ನು ಪಡೆದುಕೊಳ್ಳುವರು. ॥ ೪ ॥ ಭಗವಾನ್ ಸೂರ್ಯನು ಸಮಸ್ತ ಲೋಕಗಳ ಆತ್ಮನು. ಅವನು ಪೃಥಿವಿ ಮತ್ತು ದ್ಯುಲೋಕದ ಮಧ್ಯದಲ್ಲಿ ನೆಲೆಸಿರುವ ಆಕಾಶಮಂಡಲದೊಳಗೆ ಕಾಲಚಕ್ರದಲ್ಲಿ ಸ್ಥಿತನಾಗಿ ಸಂವತ್ಸರದ ಅವಯವಗಳಾದ ಮೇಷವೇ ಮುಂತಾದ ರಾಶಿಗಳಿಂದ ಪ್ರಸಿದ್ಧವಾದ ಹನ್ನೆರಡು ತಿಂಗಳುಗಳನ್ನು ಭೋಗಿಸುತ್ತಾನೆ. ಇದರಲ್ಲಿನ ಪ್ರತಿಯೊಂದು ತಿಂಗಳು ಚಂದ್ರನಿಂದ ಶುಕ್ಲ ಮತ್ತು ಕೃಷ್ಣ ಎಂಬ ಎರಡು ಪಕ್ಷಗಳನ್ನು ಪಿತೃಗಳ ಮಾನದಿಂದ ಒಂದು ರಾತ್ರಿ ಹಾಗೂ ಒಂದು ಹಗಲು ಎಂದೂ ಸೌರಮಾನದಿಂದ ಎರಡೂಕಾಲು ನಕ್ಷತ್ರಗಳಿಂದ ತಿಳಿಸಲಾಗುತ್ತದೆ. ಸೂರ್ಯನು ಈ ಸಂವತ್ಸರದ

ಯಾವತಾ ಷಷ್ಠಮಂಶಂ ಭುಂಜೀತ ಸ ವೈ ಋತುರಿತ್ಯುಪದಿಶ್ಯತೇ ಸಂವತ್ಸರಾವಯವಃ ॥ ೫ ॥ ಅಥ ಚ ಯಾವತಾರ್ಧೇನ ನಭೋವೀಥ್ಯಾಂ ಪ್ರಚರತಿ ತಂ ಕಾಲಮಯನಮಾಚಕ್ಷತೇ ॥ ೬ ॥ ಅಥ ಚ ಯಾವನ್ನಭೋಮಂಡಲಂ ಸಹ ದ್ಯಾವಾಪೃಥಿವ್ಯೋರ್ಮಂಡಲಾಭ್ಯಾಂ ಕಾರ್ತ್ಸ್ನ್ಯೇನ ಸ ಹ ಭುಂಜೀತ ತಂ ಕಾಲಂ ಸಂವತ್ಸರಂ ಪರಿವತ್ಸರಮಿಡಾವತ್ಸರಮನುವತ್ಸರಂ ವತ್ಸರಮಿತಿ ಭಾನೋರ್ಮಾಂದ್ಯಶೈಘ್ರ್ಯಸಮಗತಿಭಿಃ ಸಮಾಮನಂತಿ ॥ ೭ ॥

ಏವಂ ಚಂದ್ರಮಾ ಅರ್ಕಗಭಸ್ತಿಭ್ಯ ಉಪರಿಷ್ಟಾಲ್ಲಕ್ಷಯೋಜನತ ಉಪಲಭ್ಯಮಾನೋಽರ್ಕಸ್ಯ ಸಂವತ್ಸರಭುಕ್ತಿಂ ಪಕ್ಷಾಭ್ಯಾಂ ಮಾಸಭುಕ್ತಿಂ ಸಪಾದರ್ಕ್ಷಾಭ್ಯಾಂ ದಿನೇನೈವ ಪಕ್ಷಭುಕ್ತಿಮಗ್ರಚಾರೀ ದ್ರುತತರಗಮನೋ ಭುಂಕ್ತೇ ॥ ೮ ॥ ಅಥ ಚಾಪೂರ್ಯಮಾಣಾಭಿಶ್ಚ ಕಲಾಭಿರಮರಾಣಾಂ ಕ್ಷೀಯಮಾಣಾಭಿಶ್ಚ ಕಲಾಭಿಃ ಪಿತೄಣಾಮಹೋರಾತ್ರಾಣಿ ಪೂರ್ವಪಕ್ಷಾಪರಪಕ್ಷಾಭ್ಯಾಂ ವಿತನ್ವಾನಃ ಸರ್ವಜೀವನಿವಹಪ್ರಾಣೋ ಜೀವಶ್ಚೈಕಮೇಕಂ ನಕ್ಷತ್ರಂ ತ್ರಿಂಶತಾ ಮುಹೂರ್ತೈರ್ಭುಂಕ್ತೇ ॥ ೯ ॥ ಯ ಏಷ ಷೋಡಶಕಲಃ ಪುರುಷೋ ಭಗವಾನ್ಮನೋಮಯೋಽನ್ನಮಯೋಽಮೃತಮಯೋ ದೇವಪಿತೃಮನುಷ್ಯಭೂತಪಶುಪಕ್ಷಿಸರೀಸೃಪವೀರುಧಾಂ ಪ್ರಾಣಾಪ್ಯಾಯನಶೀಲತ್ವಾತ್ಸರ್ವಮಯ ಇತಿ ವರ್ಣಯಂತಿ ॥ ೧೦ ॥

ತತ ಉಪರಿಷ್ಟಾತ್ತ್ರಿಲಕ್ಷಯೋಜನತೋ ನಕ್ಷತ್ರಾಣಿ ಮೇರುಂ ದಕ್ಷಿಣೇನೈವ ಕಾಲಾಯನ ಈಶ್ವರಯೋಜಿತಾನಿ ಸಹಾಭಿಜಿತಾಷ್ಟಾವಿಂಶತಿಃ ॥ ೧೧ ॥ ತತ ಉಪರಿಷ್ಟಾದುಶನಾ ದ್ವಿಲಕ್ಷಯೋಜನತ ಉಪಲಭ್ಯತೇ ಪುರತಃ ಪಶ್ಚಾತ್ಸಹೈವ ವಾರ್ಕಸ್ಯ ಶೈಘ್ರ್ಯಮಾಂದ್ಯಸಾಮ್ಯಾಭಿರ್ಗತಿಭಿರರ್ಕವಚ್ಚರತಿ ಲೋಕಾನಾಂ ನಿತ್ಯದಾನುಕೂಲ ಏವ ಪ್ರಾಯೇಣ ವರ್ಷಯಂಶ್ಚಾರೇಣಾನುಮೀಯತೇ ಸ ವೃಷ್ಟಿವಿಷ್ಟಂಭಗ್ರಹೋಪಶಮನಃ ॥ ೧೨ ॥

ಆರನೆಯ ಒಂದು ಭಾಗವನ್ನು ಭೋಗಿಸುವ ಅವಯವದ ಹೆಸರು 'ಋತು' ಎಂದು ಹೇಳಲಾಗುತ್ತದೆ. ॥ ೫ ॥ ಭಗವಾನ್ ಸೂರ್ಯನು ವಿಗೋಳದ ಅರ್ಧಭಾಗವಾಗಿರುವ ಆರು ರಾಶಿಗಳನ್ನು ದಾಟುವ ಕಾಲವನ್ನು 'ಅಯನ'ವೆಂದು ಕರೆಯುತ್ತಾರೆ. ॥ ೬ ॥ ಹಾಗೆಯೇ ಸೂರ್ಯನು ತನ್ನ ಮಂದಗತಿ, ಶೀಘ್ರಗತಿ ಮತ್ತು ಸಮಾನಗತಿಗಳಿಂದ ಸ್ವರ್ಗ ಮತ್ತು ಭೂಮಂಡಲದ ಸಹಿತ ಇಡೀ ಆಕಾಶವನ್ನು ಸುತ್ತುಬರುವ ಕಾಲವನ್ನು ಗತಿಭೇದದಿಂದ ಸಂವತ್ಸರ, ಪರಿವತ್ಸರ, ಇಡಾವತ್ಸರ, ಅನುವತ್ಸರ ಅಥವಾ ವತ್ಸರವೆಂದು ಕರೆಯುತ್ತಾರೆ. ॥ ೭ ॥

ಹೀಗೆಯೇ ಸೂರ್ಯನ ಕಿರಣಗಳಿಂದ ಒಂದು ಲಕ್ಷಯೋಜನ ಮೇಲ್ಗಡೆ ಚಂದ್ರನಿದ್ದಾನೆ. ಅವನ ಗತಿಯು ಅತಿಶೀಘ್ರವಾಗಿರುವುದರಿಂದ ಎಲ್ಲ ನಕ್ಷತ್ರಗಳಿಂದಲೂ ಮುಂದೆ ಇರುತ್ತಾನೆ. ಇವನು ಸೂರ್ಯನ ಒಂದು ವರ್ಷದ ಮಾರ್ಗವನ್ನು ಒಂದು ತಿಂಗಳಿನಲ್ಲಿ, ಒಂದು ತಿಂಗಳ ಮಾರ್ಗವನ್ನು ಎರಡೂಕಾಲು ದಿನಗಳಲ್ಲಿಯೂ ಮತ್ತು ಒಂದು ಪಕ್ಷದ ಮಾರ್ಗವನ್ನು ಒಂದೇ ದಿನದಲ್ಲಿ ದಾಟಿಬಿಡುತ್ತಾನೆ. ॥ ೮ ॥ ಚಂದ್ರನು ಕೃಷ್ಣಪಕ್ಷದಲ್ಲಿ ಕ್ಷೀಣವಾಗುವ ಕಲೆಗಳಿಂದ ಪಿತೃಗಳ ಮತ್ತು ಶುಕ್ಲಪಕ್ಷದಲ್ಲಿ ಬೆಳೆಯುತ್ತಿರುವ ಕಲೆಗಳಿಂದ ದೇವತೆಗಳ ಹಗಲು-ರಾತ್ರಿಯ ವಿಭಾಗವನ್ನು ಮಾಡುತ್ತಾನೆ ಹಾಗೂ ಮೂವತ್ತು ಮುಹೂರ್ತಗಳಲ್ಲಿ ಒಂದೊಂದು ನಕ್ಷತ್ರವನ್ನು ದಾಟುತ್ತಾನೆ. ಅವನು ಅನ್ನಮಯ ಮತ್ತು ಅಮೃತಮಯವಾದ್ದರಿಂದ ಸಮಸ್ತ ಜೀವರ ಪ್ರಾಣ ಹಾಗೂ ಜೀವನನಾಗಿದ್ದಾನೆ. ॥ ೯ ॥ ಇವನು ಹದಿನಾರು ಕಲೆಗಳಿಂದ ಕೂಡಿ ಮನೋಮಯ, ಅನ್ನಮಯ, ಅಮೃತಮಯ, ಪುರುಷಸ್ವರೂಪ ಭಗವಾನ್ ಚಂದ್ರನು – ದೇವತೆಗಳು, ಪಿತೃಗಳು, ಮನುಷ್ಯರು, ಭೂತ, ಪಶು, ಪಕ್ಷಿ, ಸರೀಸೃಪ ಮತ್ತು ವೃಕ್ಷವೇ ಮುಂತಾದ ಸಮಸ್ತ ಪ್ರಾಣಿಗಳ ಪ್ರಾಣಗಳನ್ನು ಪೋಷಿಸುತ್ತಾನೆ; ಅದಕ್ಕಾಗಿ ಇವನಿಗೆ ಸರ್ವಮಯ ಎಂದು ಹೇಳುತ್ತಾರೆ. ॥ ೧೦ ॥

ಚಂದ್ರನಿಂದ ಮೂರು ಲಕ್ಷಯೋಜನಗಳಷ್ಟು ಮೇಲೆ ಅಭಿಜಿತ್ ನಕ್ಷತ್ರವೂ ಸೇರಿ ಇಪ್ಪತ್ತೆಂಟು ನಕ್ಷತ್ರಗಳಿವೆ. ಭಗವಂತನು ಇವುಗಳನ್ನು ಕಾಲಚಕ್ರದಲ್ಲಿ ನೇಮಿಸಿರುವುದರಿಂದ ಮೇರುವನ್ನು ಬಲಕ್ಕೆ ಇಟ್ಟುಕೊಂಡು ಪ್ರದಕ್ಷಿಣೆ ಮಾಡುತ್ತಿವೆ. ॥ ೧೧ ॥ ಇವುಗಳಿಂದ ಎರಡು ಲಕ್ಷಯೋಜನಗಳಷ್ಟು ಮೇಲೆ ಶುಕ್ರಗ್ರಹವು ಗೋಚರಿಸುತ್ತದೆ. ಇವನು ಸೂರ್ಯನ ಶೀಘ್ರ, ಮಂದ ಮತ್ತು ಸಮಾನ ಗತಿಗಳನುಸಾರ ಅವನಂತೆಯೇ ಕೆಲವೊಮ್ಮೆ ಮುಂದೆ, ಕೆಲವೊಮ್ಮೆ ಹಿಂದೆ, ಕೆಲವೊಮ್ಮೆ ಜೊತೆ-ಜೊತೆಗೆ ಇದ್ದು ಸಂಚರಿಸುತ್ತಾನೆ. ಇವನು ಮಳೆಗರೆಯುವ ಗ್ರಹನಾಗಿದ್ದಾನೆ. ಅದಕ್ಕಾಗಿ ಜನರಿಗೆ ಪ್ರಾಯಶಃ ಸದಾಕಾಲ ಅನುಕೂಲನಾಗಿಯೇ ಇರುತ್ತಾನೆ. ಇವನ ಗತಿಯಿಂದ ಮಳೆಯನ್ನು ತಡೆಯುವ ಗ್ರಹರನ್ನು ಶಾಂತಗೊಳಿಸುತ್ತಾನೆ ಎಂಬ ಅನುಮಾನ ಉಂಟಾಗುತ್ತದೆ. ॥ ೧೨ ॥

ಶುಕ್ರನ ಗತಿಯ ಜೊತೆ-ಜೊತೆಗೆ ಬುಧನ ವ್ಯಾಖ್ಯೆಯು ಆದಂತಾಯಿತು. ಶುಕ್ರನಂತೆಯೇ ಬುಧನ ಗತಿಯನ್ನು ತಿಳಿದುಕೊಳ್ಳಬೇಕು. ಚಂದ್ರಪುತ್ರನಾದ ಈ ಬುಧನು ಶುಕ್ರನಿಂದ ಎರಡುಲಕ್ಷ ಯೋಜನಗಳಷ್ಟು ಮೇಲೆ ಇದ್ದಾನೆ. ಇವನು ಪ್ರಾಯಶಃ ಮಂಗಲಕಾರಿಯೇ

ಉಶನಸಾ ಬುಧೋ ವ್ಯಾಖ್ಯಾತಸ್ತತ ಉಪರಿಷ್ಟಾದ್ದ್ವಿಲಕ್ಷಯೋಜನತೋ ಬುಧಃ ಸೋಮಸುತ ಉಪಲಭ್ಯಮಾನಃ ಪ್ರಾಯೇಣ ಶುಭಕೃದ್ಯದಾರ್ಕಾದ್ವ್ಯತಿರಿಚ್ಯೇತ ತದಾತಿವಾತಾಭ್ರಪ್ರಾಯಾನಾವೃಷ್ಟ್ಯಾದಿಭಯಮಾಶಂಸತೇ ॥ ೧೩ ॥ ಅತ ಊರ್ಧ್ವಮಂಗಾರಕೋಽಪಿ ಯೋಜನಲಕ್ಷದ್ವಿತಯ ಉಪಲಭ್ಯಮಾನಸ್ತ್ರಿಭಿಸ್ತ್ರಿಭಿಃ ಪಕ್ಷೈರೇಕೈಕಶೋ ರಾಶೀನ್‍ದ್ವಾದಶಾನುಭುಂಕ್ತೇ ಯದಿ ನ ವಕ್ರೇಣಾಭಿವರ್ತತೇ ಪ್ರಾಯೇಣಾಶುಭಗ್ರಹೋಽಘಶಂಸಃ ॥ ೧೪ ॥ ತತ ಉಪರಿಷ್ಟಾದ್ದ್ವಿಲಕ್ಷಯೋಜನಾಂತರಗತೋ ಭಗವಾನ್ ಬೃಹಸ್ಪತಿರೇಕೈಕಸ್ಮಿನ್ರಾಶೌ ಪರಿವತ್ಸರಂ ಪರಿವತ್ಸರಂ ಚರತಿ ಯದಿ ನ ವಕ್ರಃ ಸ್ಯಾತ್ಪ್ರಾಯೇಣಾನುಕೂಲೋ ಬ್ರಾಹ್ಮಣಕುಲಸ್ಯ ॥ ೧೫ ॥

ತತ ಉಪರಿಷ್ಟಾದ್ಯೋಜನಲಕ್ಷದ್ವಯಾತ್ಪ್ರತೀಯಮಾನಃ ಶನೈಶ್ಚರ ಏಕೈಕಸ್ಮಿನ್ರಾಶೌ ತ್ರಿಂಶನ್ಮಾಸಾನ್ವಿಲಂಬಮಾನಃ ಸರ್ವಾನೇವಾನುಪರ್ಯೇತಿ ತಾವದ್ಭಿರನುವತ್ಸರೈಃ ಪ್ರಾಯೇಣ ಸರ್ವೇಷಾಮಶಾಂತಿಕರಃ ॥ ೧೬ ॥ ತತ ಉತ್ತರಸ್ಮಾದೃಷಯ ಏಕಾದಶಲಕ್ಷಯೋಜನಾಂತರ ಉಪಲಭ್ಯಂತೇ ಯ ಏವ ಲೋಕಾನಾಂ ಶಮನುಭಾವಯಂತೋ ಭಗವತೋ ವಿಷ್ಣೋರ್ಯತ್ಪರಮಂ ಪದಂ ಪ್ರದಕ್ಷಿಣಂ ಪ್ರಕ್ರಮಂತಿ ॥ ೧೭ ॥

ಆಗಿದ್ದಾನೆ. ಆದರೆ ಸೂರ್ಯನ ಗತಿಯನ್ನು ಬಿಟ್ಟು ಮುಂದಕ್ಕೆ ಹೋದರೆ ಬಿರುಗಾಳಿ, ಮೋಡಗಳು ಮತ್ತು ಅನಾವೃಷ್ಟಿಗಳನ್ನು ಸೂಚಿಸುತ್ತಾನೆ. ॥ ೧೩ ॥ ಬುಧಗ್ರಹನಿಂದ ಎರಡುಲಕ್ಷ ಯೋಜನಗಳಷ್ಟು ಮೇಲೆ ಮಂಗಳಗ್ರಹವಿದೆ. ಇವನು ವಕ್ರಗತಿಯಿಂದ ನಡೆಯದಿದ್ದರೆ ಒಂದೊಂದು ರಾಶಿಯನ್ನು ಮೂರು-ಮೂರು ಪಕ್ಷಗಳಲ್ಲಿ ಭೋಗಿಸುತ್ತಾ ಹನ್ನೆರಡೂ ರಾಶಿಯನ್ನು ದಾಟುತ್ತಾನೆ. ಇವನು ಅಶುಭಗ್ರಹವಾಗಿದ್ದು ಪ್ರಾಯಶಃ ಅಮಂಗಳ ಸೂಚಕನೇ ಆಗಿದ್ದಾನೆ. ॥ ೧೪ ॥ ಮಂಗಳನಿಗಿಂತ ಎರಡುಲಕ್ಷ ಯೋಜನಗಳಷ್ಟು ದೂರದಲ್ಲಿ ಭಗವಾನ್ ಬೃಹಸ್ಪತಿಯಿದ್ದಾನೆ. ಇವನು ವಕ್ರಗತಿಯಿಂದ ನಡೆಯದಿದ್ದರೆ ಒಂದೊಂದು ರಾಶಿಯನ್ನು ಒಂದು ವರ್ಷದಲ್ಲಿ ಭೋಗಿಸುತ್ತಾನೆ. ಇವನು ಸಾಮಾನ್ಯವಾಗಿ ಬ್ರಾಹ್ಮಣಕುಲಕ್ಕೆ ಅನುಕೂಲವಾಗಿ ಇರುತ್ತಾನೆ. ॥ ೧೫ ॥

ಬೃಹಸ್ಪತಿಗಿಂತ ಎರಡುಲಕ್ಷ ಯೋಜನಗಳಷ್ಟು ಮೇಲೆ ಶನೈಶ್ಚರನು ಕಂಡುಬರುತ್ತಾನೆ. ಇವನು ಮೂವತ್ತು ತಿಂಗಳುತನಕ ಒಂದೊಂದು ರಾಶಿಯಲ್ಲಿ ಇರುತ್ತಾನೆ. ಆದ್ದರಿಂದ ಇವನಿಗೆ ಎಲ್ಲ ರಾಶಿಗಳನ್ನು ದಾಟಲು ಮೂವತ್ತು ವರ್ಷಗಳು ಬೇಕಾಗುತ್ತವೆ. ಇವನು ಸಾಮಾನ್ಯವಾಗಿ ಎಲ್ಲರಿಗೆ ಅಶಾಂತಿಕಾರಕನಾಗಿದ್ದಾನೆ. ॥ ೧೬ ॥ ಶನಿಗ್ರಹದ ಮೇಲೆ ಹನ್ನೆರಡು ಲಕ್ಷಯೋಜನ ದೂರದಲ್ಲಿ ಕಶ್ಯಪಾದಿ ಸಪ್ತರ್ಷಿಗಳು ಕಂಡುಬರುವರು. ಇವರು ಎಲ್ಲ ಲೋಕಗಳಿಗೂ ಮಂಗಳವನ್ನು ಬಯಸುತ್ತಾ ಭಗವಾನ್ ವಿಷ್ಣುವಿನ ಪರಮಪದವಾದ ಧ್ರುವಲೋಕವನ್ನು ಪ್ರದಕ್ಷಿಣೆ ಮಾಡುತ್ತಾರೆ. ॥ ೧೭ ॥

ಇಪ್ಪತ್ತೆರಡನೆಯ ಅಧ್ಯಾಯವು ಮುಗಿಯಿತು. ॥ ೨೨ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಪಂಚಮಸ್ಕಂಧೇ ಜ್ಯೋತಿಶ್ಚಕ್ರವರ್ಣನೇ ದ್ವಾವಿಂಶೋಽಧ್ಯಾಯಃ ॥ ೨೨ ॥

ಇಪ್ಪತ್ತಮೂರನೆಯ ಅಧ್ಯಾಯ

ಶಿಶುಮಾರ ಚಕ್ರದ ವರ್ಣನೆ

ಶ್ರೀಶುಕ ಉವಾಚ

ಅಥ ತಸ್ಮಾತ್ಪರತಸ್ತ್ರಯೋದಶಲಕ್ಷಯೋಜನಾಂತರತೋ ಯತ್ತದ್ವಿಷ್ಣೋಃ ಪರಮಂ ಪದಮಭಿವದಂತಿ ಯತ್ರ ಹ ಮಹಾಭಾಗವತೋ ಧ್ರುವ ಔತ್ತಾನಪಾದಿರಗ್ನಿನೇಂದ್ರೇಣ ಪ್ರಜಾಪತಿನಾ ಕಶ್ಯಪೇನ ಧರ್ಮೇಣ ಚ ಸಮಕಾಲಯುಗ್ಭಿಃ ಸಬಹುಮಾನಂ ದಕ್ಷಿಣತಃ ಕ್ರಿಯಮಾಣ ಇದಾನೀಮಪಿ ಕಲ್ಪಜೀವಿನಾಮಾಜೀವ್ಯ ಉಪಾಸ್ತೇ ತಸ್ಯೇಹಾನುಭಾವ ಉಪವರ್ಣಿತಃ ॥ ೧ ॥ ಸ ಹಿ ಸರ್ವೇಷಾಂ ಜ್ಯೋತಿರ್ಗ-

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಎಲೈ ರಾಜೇಂದ್ರನೇ! ಸಪ್ತರ್ಷಿಮಂಡಲಕ್ಕಿಂತ ಹದಿಮೂರುಲಕ್ಷ ಯೋಜನಗಳಷ್ಟು ಎತ್ತರದಲ್ಲಿ ಧ್ರುವಲೋಕವಿದೆ. ಇದನ್ನು ಭಗವಾನ್ ವಿಷ್ಣುವಿನ ಪರಮಪದವೆಂದು ಹೇಳುತ್ತಾರೆ. ಇಲ್ಲಿ ಉತ್ತಾನಪಾದನ ಪುತ್ರನಾದ ಪರಮಭಾಗವತೋತ್ತಮ ಧ್ರುವನು ಬೆಳಗುತ್ತಿದ್ದಾನೆ. ಅಗ್ನಿ, ಇಂದ್ರ, ಪ್ರಜಾಪತಿ, ಕಶ್ಯಪ ಮತ್ತು ಧರ್ಮ – ಇವರೆಲ್ಲರೂ ಒಟ್ಟಿಗೆ ಅತ್ಯಾದರಪೂರ್ವಕವಾಗಿ ಆ ಧ್ರುವನನ್ನು ಪ್ರದಕ್ಷಿಣೆ ಮಾಡುತ್ತಿದ್ದಾರೆ. ಈಗಲೂ ಕೂಡ ಕಲ್ಪಾಂತ್ಯದವರೆಗೆ ಜೀವಿಸಿರುವ ಚಿರಂಜೀವಿಗಳಿಗೆ ಈ ಧ್ರುವನೇ ಆಧಾರ. ಈ ಲೋಕದ ಪ್ರಭಾವವನ್ನು ನಾನು ಹಿಂದೆಯೇ (ನಾಲ್ಕನೆಯ ಸ್ಕಂಧದಲ್ಲಿ) ವರ್ಣಿಸಿರುವೆನು. ॥ ೧ ॥ ಸದಾಕಾಲ ಎಚ್ಚರವಾಗಿರುವ ಅವ್ಯಕ್ತಗತಿಯುಳ್ಳ ಭಗವಾನ್‍ಕಾಲನ ಮೂಲಕ

ಣಾನಾಂ ಗ್ರಹನಕ್ಷತ್ರಾದೀನಾಮನಿಮಿಷೇಣಾವ್ಯಕ್ತರಂಹಸಾ ಭಗವತಾ ಕಾಲೇನ ಭ್ರಾಮ್ಯಮಾಣಾನಾಂ ಸ್ಥಾಣುರಿವಾವಷ್ಟಂಭ ಈಶ್ವರೇಣ ವಿಹಿತಃ ಶಶ್ವದವಭಾಸತೇ ॥ ೨ ॥

ಯಥಾ ಮೇಢೀಸ್ತಂಭ ಆಕ್ರಮಣಪಶವಃ ಸಂಯೋಜಿತಾಸ್ತ್ರಿಭಿಸ್ತ್ರಿಭಿಃ ಸವನೈರ್ಯಥಾಸ್ಥಾನಂ ಮಂಡಲಾನಿ ಚರಂತ್ಯೇವಂ ಭಗಣಾ ಗ್ರಹಾದಯ ಏತಸ್ಮಿನ್ನಂತರ್ಬಹಿರ್ಯೋಗೇನ ಕಾಲಚಕ್ರ ಆಯೋಜಿತಾ ಧ್ರುವಮೇವಾವಲಂಬ್ಯ ವಾಯುನೋದೀರ್ಯಮಾಣಾ ಆಕಲ್ಪಾಂತಂ ಪರಿಚಂಕ್ರಮಂತಿ ನಭಸಿ ಯಥಾ ಮೇಘಾಃ ಶ್ಯೇನಾದಯೋ ವಾಯುವಶಾಃ ಕರ್ಮಸಾರಥಯಃ ಪರಿವರ್ತಂತೇ ಏವಂ ಜ್ಯೋತಿರ್ಗಣಾಃ ಪ್ರಕೃತಿಪುರುಷಸಂಯೋಗಾನುಗೃಹೀತಾಃ ಕರ್ಮನಿರ್ಮಿತಗತಯೋ ಭುವಿ ನ ಪತಂತಿ ॥ ೩ ॥

ಕೇಚನೈತಜ್ಜ್ಯೋತಿರನೀಕಂ ಶಿಶುಮಾರಸಂಸ್ಥಾನೇನ ಭಗವತೋ ವಾಸುದೇವಸ್ಯ ಯೋಗಧಾರಣಾಯಾಮನುವರ್ಣಯಂತಿ ॥ ೪ ॥ ಯಸ್ಯ ಪುಚ್ಛಾಗ್ರೇಽವಾಕ್ಶಿರಸಃ ಕುಂಡಲೀಭೂತದೇಹಸ್ಯ ಧ್ರುವ ಉಪಕಲ್ಪಿತಸ್ತಸ್ಯ ಲಾಂಗೂಲೇ ಪ್ರಜಾಪತಿರಗ್ನಿರಿಂದ್ರೋ ಧರ್ಮ ಇತಿ ಪುಚ್ಛಮೂಲೇ ಧಾತಾ ವಿಧಾತಾ ಚ ಕಟ್ಯಾಂ ಸಪ್ತರ್ಷಯಃ । ತಸ್ಯ ದಕ್ಷಿಣಾವರ್ತಕುಂಡಲೀಭೂತಶರೀರಸ್ಯ ಯಾನ್ಯುದಗಯನಾನಿ ದಕ್ಷಿಣಪಾರ್ಶ್ವೇ ತು ನಕ್ಷತ್ರಾಣ್ಯುಪಕಲ್ಪಯಂತಿ ದಕ್ಷಿಣಾಯನಾನಿ ತು ಸವ್ಯೇ । ಯಥಾ ಶಿಶುಮಾರಸ್ಯ ಕುಂಡಲಾಭೋಗಸನ್ನಿವೇಶಸ್ಯ ಪಾರ್ಶ್ವಯೋರುಭಯೋರಪ್ಯವಯವಾಃ ಸಮಸಂಖ್ಯಾ ಭವಂತಿ । ಪೃಷ್ಠೇ ತ್ವಜವೀಥೀ ಆಕಾಶಗಂಗಾ ಚೋದರತಃ ॥ ೫ ॥ ಪುನರ್ವಸುಪುಷ್ಯೌ ದಕ್ಷಿಣವಾಮಯೋಃ ಶ್ರೋಣ್ಯೋರಾರ್ದ್ರಾಶ್ಲೇಷೇ ಚ ದಕ್ಷಿಣವಾಮಯೋಃ ಪಶ್ಚಿಮಯೋಃ ಪಾದಯೋರಭಿಜಿದುತ್ತರಾಷಾಢೇ ದಕ್ಷಿಣವಾಮಯೋರ್ನಾಸಿಕಯೋರ್ಯಥಾಸಂಖ್ಯಂ ಶ್ರವಣಪೂರ್ವಾಷಾಢೇ ದಕ್ಷಿಣವಾಮಯೋರ್ಲೋಚನಯೋರ್ಧನಿಷ್ಠಾ ಮೂಲಂ ಚ ದಕ್ಷಿಣ-

ಗ್ರಹ-ನಕ್ಷತ್ರಾದಿ ಜ್ಯೋತಿರ್ಗಣಗಳೆಲ್ಲರೂ ನಿರಂತರ ತಿರುಗುತ್ತಾ ಇರುತ್ತಾರೆ. ಭಗವಂತನು ಧ್ರುವಲೋಕವನ್ನೇ ಅವರೆಲ್ಲರ ಆಧಾರಸ್ತಂಭವಾಗಿ ನಿಯಮಿಸಿರುವನು. ಆದ್ದರಿಂದ ಈ ಧ್ರುವಲೋಕವು ಒಂದೇ ಜಾಗದಲ್ಲಿ ಇದ್ದು ಸದಾ ಪ್ರಕಾಶಿಸುತ್ತಾ ಇರುತ್ತದೆ. ॥ ೨ ॥

ಧಾನ್ಯವನ್ನು ತುಳಿಸುವುದಕ್ಕಾಗಿ ಮೇಟಿಯ ಕಂಬಕ್ಕೆ ಹಗ್ಗಗಳಿಂದ ಬಿಗಿಯಲ್ಪಟ್ಟ ಎತ್ತುಗಳು ಎಂದಿಗೂ ಆ ನೆಲೆಯನ್ನು ಬಿಡದೆ ಮಂಡಲಾಕಾರವಾಗಿ ಆ ಕಂಬವನ್ನೇ ಸುತ್ತುತ್ತಿರುವಂತೆಯೇ, ಸೂರ್ಯನೇ ಮುಂತಾದ ಗ್ರಹರೂ, ನಕ್ಷತ್ರಗಳೂ ■ ಕಾಲಚಕ್ರದ ಒಳಗೂ-ಹೊರಗೂ ಅದರಲ್ಲಿ ನೇಮಗೊಂಡು ಧ್ರುವಲೋಕವನ್ನೇ ಆಶ್ರಯಿಸಿ, ವಾಯುವಿನ ಪ್ರೇರಣೆಯಿಂದ ಕಲ್ಪದ ಕೊನೆಯವರೆಗೆ ತಿರುಗುತ್ತಾ ಇರುತ್ತವೆ. ಮೋಡಗಳೂ, ಹದ್ದು ಮೊದಲಾದ ಪಕ್ಷಿಗಳು ಕರ್ಮಗಳಿಗೆ ಅಧೀನರಾಗಿ ವಾಯುವಿಗೆ ಅಧೀನರಾಗಿ ಆಕಾಶದಲ್ಲಿ ಹಾರುತ್ತಾ ಇರುವಂತೆಯೇ, ಗ್ರಹ-ನಕ್ಷತ್ರಾದಿಗಳು ತಮ್ಮ-ತಮ್ಮ ಕರ್ಮಗಳಿಗನುಸಾರವಾಗಿ ಭೂಮಿಗೆ ಬೀಳದೆ ■ ಕಾಲಚಕ್ರದಲ್ಲೇ ಸುತ್ತುತ್ತಿರುವರು. ॥ ೩ ॥

ಕೆಲವರು ಭಗವಂತನ ಯೋಗಮಾಯೆಯ ಆಧಾರದಲ್ಲಿ ನೆಲೆಸಿರುವ ಈ ಜ್ಯೋತಿಶ್ಚಕ್ರವನ್ನು ಶಿಶುಮಾರಚಕ್ರದ ರೂಪದಲ್ಲಿ ವರ್ಣಿಸುತ್ತಾರೆ. ॥ ೪ ॥ ಈ ಶಿಶುಮಾರವು ಕುಂಡಲದ ಆಕಾರದಲ್ಲಿ ಸುತ್ತಿಕೊಂಡಿರುವ ಸರ್ಪದಂತಿದೆ. ಇದು ತಲೆಕೆಳಗಾಗಿ ಬಾಲವನ್ನು ಮೇಲೆತ್ತಿಕೊಂಡಿದೆ. ಇದರ ಬಾಲದ ತುದಿಯಲ್ಲಿ ಧ್ರುವನು ನೆಲೆಗೊಂಡಿದ್ದಾನೆ. ಬಾಲದ ಮಧ್ಯಭಾಗದಲ್ಲಿ ಪ್ರಜಾಪತಿ, ಅಗ್ನಿ, ಇಂದ್ರ ಮತ್ತು ಧರ್ಮ ಇವರು ಪ್ರಕಾಶಿಸುತ್ತಿದ್ದಾರೆ. ಬಾಲದ ಬುಡದಲ್ಲಿ ಧಾತಾ ಮತ್ತು ವಿಧಾತಾ ಎಂಬುವರಿದ್ದಾರೆ. ಇದರ ಕಟಿಪ್ರದೇಶದಲ್ಲಿ ಸಪ್ತರ್ಷಿಗಳಿದ್ದಾರೆ. ಈ ಶಿಶುಮಾರವು ಪ್ರದಕ್ಷಿಣಾಕಾರವಾಗಿ ಮಂಡಲದ ಆಕಾರದಲ್ಲಿ ದೇಹವನ್ನು ಸುತ್ತಿಕೊಂಡಿದೆ. ಇದರ ಬಲಗಡೆಯಲ್ಲಿ ಅಭಿಜಿತ್ ಎಂಬ ನಕ್ಷತ್ರದಿಂದ ಪ್ರಾರಂಭವಾಗಿ ಪುನರ್ವಸು ನಕ್ಷತ್ರದವರೆಗಿನ ಉತ್ತರಾಯಣದ ಹದಿನಾಲ್ಕು ನಕ್ಷತ್ರಗಳಿವೆ. ಪುಷ್ಯದಿಂದ ಹಿಡಿದು ಉತ್ತರಾಷಾಢಾವರೆಗಿನ ದಕ್ಷಿಣಾಯನದ ಹದಿನಾಲ್ಕು ನಕ್ಷತ್ರಗಳು ಎಡಭಾಗದಲ್ಲಿವೆ. ಹೀಗೆ ಆ ಶಿಶುಮಾರ ಚಕ್ರದ ಎರಡೂ ಪಕ್ಕದಲ್ಲಿಯೂ ಅಶ್ವಿನಿಯೇ ಮುಂತಾದ ಇಪ್ಪತ್ತೆಂಟು ನಕ್ಷತ್ರಗಳು ಸಮಸಂಖ್ಯೆಯ ಅವಯವಗಳಾಗಿವೆ. ಕುಂಡಲಾಕಾರದ ರಚನೆಯಲ್ಲಿ ಎರಡೂ ಕಡೆಯ ಅಂಗಗಳು ಸಮನಾಗಿರುವಂತೆ ಇಲ್ಲಿ ನಕ್ಷತ್ರಗಳ ಸಂಖ್ಯೆಯೂ ಸಮವಾಗಿದೆ. ಇದರ ಬೆನ್ನಿನಲ್ಲಿ ಅಜವೀಥಿಯೂ (ಮೂಲಾ, ಪೂರ್ವಾಷಾಢಾ, ಉತ್ತರಾಷಾಢಾ ಎಂಬ ಮೂರು ನಕ್ಷತ್ರಗಳ ಗುಂಪು) ಇದೆ. ಉದರದಲ್ಲಿ ಆಕಾಶಗಂಗೆಯು ಪ್ರಕಾಶಿಸುತ್ತಿದೆ. ॥ ೫ ॥ ಎಲೈ ರಾಜನೇ! ಇದರ ಬಲ-ಎಡಭಾಗಗಳ ಕಟಿಗಳಲ್ಲಿ ಪುನರ್ವಸು ಮತ್ತು ಪುಷ್ಯ ನಕ್ಷತ್ರಗಳಿವೆ. ಹಿಂದುಗಡೆಯ ಬಲ ಮತ್ತು ಎಡ ಪಾದಗಳಲ್ಲಿ ಆರ್ದ್ರಾ ಮತ್ತು ಆಶ್ಲೇಷಾ ನಕ್ಷತ್ರಗಳಿವೆ. ಬಲ-ಎಡಭಾಗದ ಮೂಗಿನ ಹೊಳ್ಳೆಗಳಲ್ಲಿ ಕ್ರಮವಾಗಿ ಅಭಿಜಿತ್ ಮತ್ತು ಉತ್ತರಾಷಾಢಾ ನಕ್ಷತ್ರಗಳಿವೆ. ಹೀಗೆಯೇ ಬಲ-ಎಡ ನೇತ್ರಗಳಲ್ಲಿ ಶ್ರವಣ ಹಾಗೂ ಪೂರ್ವಾಷಾಢಾ ನಕ್ಷತ್ರಗಳೂ, ಹಾಗೆಯೇ ಬಲ-ಎಡ ಕಿವಿಗಳಲ್ಲಿ

ವಾಮಯೋಃ ಕರ್ಣಯೋರ್ಮೂಲಾದೀನ್ಯಷ್ಟ ನಕ್ಷತ್ರಾಣಿ ದಕ್ಷಿಣಾಯನಾನಿವಾಮಪಾರ್ಶ್ವವಂಕ್ರಿಷು ಯುಂಜೀತ ತಥೈವ ಮೃಗಶೀರ್ಷಾದೀನ್ಯುದಗಯನಾನಿ ದಕ್ಷಿಣಪಾರ್ಶ್ವ-ವಂಕ್ರಿಷು ಪ್ರಾತಿಲೋಮ್ಯೇನ ಪ್ರಯುಂಜೀತ ಶತಭಿಷಾ-ಜ್ಯೇಷ್ಠೇಸ್ಕಂದಯೋರ್ದಕ್ಷಿಣವಾಮಯೋರ್ನ್ಯಸೇತ್ ॥ ೬ ॥

ಉತ್ತರಾಹನಾವಗಸ್ತಿರಧರಾಹನೌ ಯಮೋ ಮುಖೇಷು ಚಾಂಗಾರಕಃ ಶನೈಶ್ಚರ ಉಪಸ್ಥೇ ಬೃಹಸ್ಪತಿಃ ಕಕುದಿ ವಕ್ಷಸ್ಯಾದಿತ್ಯೋ ಹೃದಯೇ ನಾರಾಯಣೋ ಮನಸಿ ಚಂದ್ರೋ ನಾಭ್ಯಾಮುಶನಾ ಸ್ತನಯೋರಶ್ವಿನೌ ಬುಧಃ ಪ್ರಾಣಾಪಾನಯೋ ರಾಹುರ್ಗಲೇ ಕೇತವಃ ಸರ್ವಾಂಗೇಷು ರೋಮಸು ಸರ್ವೇ ತಾರಾಗಣಾಃ ॥ ೭ ॥

ಏತದು ಹೈವ ಭಗವತೋ ವಿಷ್ಣೋಃ ಸರ್ವದೇವತಾಮಯಂ ರೂಪಮಹರಹಃ ಸಂಧ್ಯಾಯಾಂ ಪ್ರಯತೋ ವಾಗ್ಯತೋ ನಿರೀಕ್ಷಮಾಣ ಉಪತಿಷ್ಠೇತ ನಮೋ ಜ್ಯೋತಿರ್ಲೋಕಾಯ ಕಾಲಾಯನಾಯಾನಿಮಿಷಾಂ ಪತಯೇ ಮಹಾಪುರುಷಾಯಾಭಿಧೀ- ಮಹೀತಿ ॥ ೮ ॥

ಗ್ರಹರ್ಕ್ಷತಾರಾಮಯಮಾಧಿದೈವಿಕಂ
ಪಾಪಾಪಹಂ ಮಂತ್ರಕೃತಾಂ ತ್ರಿಕಾಲಮ್ ।
ನಮಸ್ಯತಃ ಸ್ಮರತೋ ವಾ ತ್ರಿಕಾಲಂ
ನಶ್ಯೇತ ತತ್ಕಾಲಜಮಾಶು ಪಾಪಮ್ ॥ ೯ ॥

ಧನಿಷ್ಠಾ ಮತ್ತು ಮೂಲಾ ನಕ್ಷತ್ರಗಳಿವೆ. ಮಘಾ ಮುಂತಾದ ದಕ್ಷಿಣಾಯನದ ಎಂಟು ನಕ್ಷತ್ರಗಳು ಎಡ ಪಕ್ಕೆಲುಬುಗಳಲ್ಲಿ ಮತ್ತು ವಿಪರೀತ ಕ್ರಮದಿಂದ ಮೃಗಶಿರಾ ಮುಂತಾದ ಉತ್ತರಾಯಣದ ಎಂಟು ನಕ್ಷತ್ರಗಳು ಬಲದ ಪಕ್ಕೆಲುಬುಗಳಲ್ಲಿವೆ. ಶತಭಿಷಾ ಮತ್ತು ಜ್ಯೇಷ್ಠಾ ಈ ಎರಡು ನಕ್ಷತ್ರಗಳು ಕ್ರಮವಾಗಿ ಬಲ ಮತ್ತು ಎಡ ಹೆಗಲುಗಳಲ್ಲಿ ಇವೆ. ॥ ೬ ॥ ಅದರ ಮೇಲಿನ ದವಡೆಯಲ್ಲಿ ನಕ್ಷತ್ರರೂಪವಾದ ಅಗಸ್ತ್ಯನೂ, ಕೆಳಗಿನ ದವಡೆಯಲ್ಲಿ ನಕ್ಷತ್ರರೂಪನಾದ ಯಮನೂ, ಮುಖಗಳಲ್ಲಿ ಮಂಗಳನೂ, ಲಿಂಗಪ್ರದೇಶದಲ್ಲಿ ಶನಿಯೂ, ಕತ್ತಿನ ಹೆರೆನಲ್ಲಿ ಬೃಹಸ್ಪತಿಯೂ, ಎದೆಯಲ್ಲಿ ಸೂರ್ಯನೂ, ಹೃದಯದಲ್ಲಿ ನಾರಾಯಣನೂ, ಮನಸ್ಸಿನಲ್ಲಿ ಚಂದ್ರನೂ, ಹೊಕ್ಕುಳಲ್ಲಿ ಶುಕ್ರನೂ, ಸ್ತನಗಳಲ್ಲಿ ಅಶ್ವಿನೀದೇವತೆಗಳೂ, ಪ್ರಾಣಾಪಾನಗಳಲ್ಲಿ ಬುಧನೂ, ಕತ್ತಿನಲ್ಲಿ ರಾಹುವೂ, ಸಮಸ್ತ ಅಂಗಗಳಲ್ಲಿ ಕೇತುವೂ, ರೋಮಗಳಲ್ಲಿ ಸಮಸ್ತ ತಾರೆಗಳೂ ನೆಲೆಸಿವೆ. ॥ ೭ ॥

ಎಲೈ ರಾಜನೇ! ಇದು ಭಗವಂತನಾದ ವಿಷ್ಣುವಿನ ಸರ್ವದೇವಮಯ ಸ್ವರೂಪವಾಗಿದೆ. ಪ್ರತಿದಿನವು ಸಾಯಂಕಾಲದಲ್ಲಿ ಪವಿತ್ರ ಮತ್ತು ಮೌನವಾಗಿ ಇದನ್ನು ದರ್ಶನಮಾಡುತ್ತಾ ಶ್ರೀಭಗವಂತನನ್ನು ಚಿಂತಿಸಬೇಕು ಹಾಗೂ ಈ ಮಂತ್ರವನ್ನು ಜಪಿಸುತ್ತಾ ಭಗವಂತನನ್ನು ಸ್ತುತಿಸಬೇಕು – 'ಸಮಸ್ತ ಜ್ಯೋತಿರ್ಗಣಗಳಿಗೆಲ್ಲ ಆಶ್ರಯನೂ, ಕಾಲಚಕ್ರ ಸ್ವರೂಪಿಯೂ, ಸರ್ವದೇವತಾಧಿಪತಿಯೂ ಆದ ಪರಮಪುರುಷ ಪರಮಾತ್ಮನನ್ನು ನಾವು ನಮಸ್ಕಾರಪೂರ್ವಕ ಧ್ಯಾನಿಸುತ್ತೇವೆ. ॥ ೮ ॥ ಗ್ರಹ, ನಕ್ಷತ್ರ ಮತ್ತು ತಾರೆಗಳ ರೂಪದಲ್ಲಿ ಭಗವಂತನ ಆಧಿದೈವಿಕರೂಪವೇ ಪ್ರಕಾಶಿಸುತ್ತಿದೆ. ಅದು ತ್ರಿಕಾಲಗಳಲ್ಲಿಯೂ ಮೇಲೆ ಹೇಳಿದ ಮಂತ್ರವನ್ನು ಜಪಿಸುವವನ ಎಲ್ಲ ಪಾಪಗಳನ್ನು ನಾಶಪಡಿಸುತ್ತದೆ. ಪ್ರಾತಃಕಾಲ, ಮಧ್ಯಾಹ್ನಕಾಲ, ಸಾಯಂಕಾಲಗಳೆಂಬ ಮೂರೂ ಕಾಲಗಳಲ್ಲಿ ಶ್ರೀಭಗವಂತನ ಈ ಆಧಿದೈವಿಕಸ್ವರೂಪವನ್ನು ಪ್ರತಿದಿನವೂ ಚಿಂತಿಸುವವನ ಮತ್ತು ವಂದನೆಮಾಡುವವನ ಪಾಪಗಳು ಒಡನೆಯೇ ನಾಶವಾಗಿ ಹೋಗುತ್ತವೆ. ॥ ೯ ॥

ಇಪ್ಪತ್ತಮೂರನೆಯ ಅಧ್ಯಾಯವು ಮುಗಿಯಿತು. ॥ ೨೩ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಪಂಚಮಸ್ಕಂಧೇ
ಶಿಶುಮಾರಸಂಸ್ಥಾವರ್ಣನಂ ನಾಮ ತ್ರಯೋವಿಂಶೋಽಧ್ಯಾಯಃ ॥ ೨೩ ॥

ಇಪ್ಪತ್ತನಾಲ್ಕನೆಯ ಅಧ್ಯಾಯ

ರಾಹುವೇ ಮುಂತಾದವರ ಸ್ಥಿತಿ – ಅತಲವೇ ಮುಂತಾದ ಅಧೋಲೋಕಗಳ ವರ್ಣನೆ

ಶ್ರೀಶುಕ ಉವಾಚ

ಅಧಸ್ತಾತ್ಸವಿತುರ್ಯೋಜನಾಯುತೇ ಸ್ವರ್ಭಾನು-ರ್ನಕ್ಷತ್ರವಚ್ಚರತೀತ್ಯೇಕೇ ಯೋಽಸಾವಮರತ್ವಂ ಗ್ರಹತ್ವಂ ಚಾಲಭತ ಭಗವದನುಕಂಪಯಾ ಸ್ವಯಮಸುರಾಪಸದಃ

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಮಹಾರಾಜನೇ! ಸೂರ್ಯನಿಗಿಂತಲೂ ಹತ್ತುಸಾವಿರ ಯೋಜನಗಳಷ್ಟು ಕೆಳಗೆ ರಾಹುವು ನಕ್ಷತ್ರಗಳಂತೆ ಸಂಚರಿಸುತ್ತಿದ್ದಾನೆ ಎಂದು ಕೆಲವರು ಹೇಳುತ್ತಾರೆ. ಸಿಂಹಿಕೆಯ ಪುತ್ರನಾದ ಈ ರಾಹುವು ರಾಕ್ಷಸಾಧಮನಾಗಿ ದೇವತ್ವಕ್ಕೆ ಅಯೋಗ್ಯನಾಗಿದ್ದರೂ ಶ್ರೀಭಗವಂತನ ಕೃಪೆಯಿಂದ ದೇವತ್ವವನ್ನೂ, ಗ್ರಹತ್ವವನ್ನೂ ಪಡೆದುಕೊಂಡನು. ಇವನ ಹುಟ್ಟು ಮತ್ತು

ಸೈಂಹಿಕೇಯೋ ಹ್ಯಸುರಾಧಮಸ್ತಸ್ಯ ತಾತ ಜನ್ಮ ಕರ್ಮಾಣಿ ಚೋಪರಿಷ್ಟಾದ್ವಕ್ಷ್ಯಾಮಃ ॥ ೧ ॥ ಯದದಸ್ತರಣೇರ್ಮಂಡಲಂ ಪ್ರತಪತಸ್ತದ್ವಿಸ್ತರತೋ ಯೋಜನಾಯುತಮಾಚಕ್ಷತೇ ದ್ವಾದಶಸಹಸ್ರಂ ಸೋಮಸ್ಯ ತ್ರಯೋದಶಸಹಸ್ರಂ ರಾಹೋರ್ಯಃ ಪರ್ವಣಿ ತದ್ವ್ಯವಧಾನಕೃದ್ವೈರಾನುಬಂಧಃ ಸೂರ್ಯಾಚಂದ್ರಮಸಾವಭಿಧಾವತಿ ॥ ೨ ॥ ನಿಶಮ್ಯೋಭಯತ್ರಾಪಿ ಭಗವತಾ ರಕ್ಷಣಾಯ ಪ್ರಯುಕ್ತಂ ಸುದರ್ಶನಂ ನಾಮ ಭಾಗವತಂ ದಯಿತಮಸ್ತ್ರಂ ತತ್ತೇಜಸಾ ದುರ್ವಿಷಹಂ ಮುಹುಃ ಪರಿವರ್ತಮಾನಮಭ್ಯವಸ್ಥಿತೋ ಮುಹೂರ್ತಮುದ್ವಿಜಮಾನಶ್ಚಕಿತಹೃದಯ ಆರಾದೇವ ನಿವರ್ತತೇ ತದುಪರಾಗಮಿತಿ ವದಂತಿ ಲೋಕಾಃ ॥ ೩ ॥

ತತೋಽಧಸ್ತಾತ್ಸಿದ್ಧಚಾರಣವಿದ್ಯಾಧರಾಣಾಂ ಸದನಾನಿ ತಾವನ್ಮಾತ್ರ ಏವ ॥ ೪ ॥ ತತೋಽಧಸ್ತಾದ್ಯಕ್ಷರಕ್ಷಃಪಿಶಾಚಪ್ರೇತಭೂತಗಣಾನಾಂ ವಿಹಾರಾಜಿರಮಂತರಿಕ್ಷಂ ಯಾವದ್ವಾಯುಃ ಪ್ರವಾತಿ ಯಾವನ್ಮೇಘಾ ಉಪಲಭ್ಯಂತೇ ॥ ೫ ॥ ತತೋಽಧಸ್ತಾಚ್ಛತಯೋಜನಾಂತರ ಇಯಂ ಪೃಥಿವೀ ಯಾವದ್ಧಂಸಭಾಸಶ್ಯೇನಸುಪರ್ಣಾದಯಃ ಪತತ್ರಿಪ್ರವರಾ ಉತ್ಪತಂತೀತಿ ॥ ೬ ॥ ಉಪವರ್ಣಿತಂ ಭೂಮೇರ್ಯಥಾಸಂನಿವೇಶಾವಸ್ಥಾನಮವನೇರಪ್ಯಧಸ್ತಾತ್ಸಪ್ತ ಭೂವಿವರಾ ಏಕೈಕಶೋ ಯೋಜನಾಯುತಾಂತರೇಣಾಯಾಮವಿಸ್ತಾರೇಣೋಪಕ್ಲೃಪ್ತಾ ಅತಲಂ ವಿತಲಂ ಸುತಲಂ ತಲಾತಲಂ ಮಹಾತಲಂ ರಸಾತಲಂ ಪಾತಾಲಮಿತಿ ॥ ೭ ॥ ಏತೇಷು ಹಿ ಬಿಲಸ್ವರ್ಗೇಷು ಸ್ವರ್ಗಾದಪ್ಯಧಿಕಕಾಮಭೋಗೈಶ್ವರ್ಯಾನಂದಭೂತಿವಿಭೂತಿಭಿಃ ಸುಸಮೃದ್ಧಭವನೋದ್ಯಾನಾಕ್ರೀಡವಿಹಾರೇಷು ದೈತ್ಯದಾನವಕಾದ್ರವೇಯಾ ನಿತ್ಯ-

ಕರ್ಮಗಳನ್ನು ನಾವು ಮುಂದೆ ವರ್ಣಿಸುವೆವು. ॥ ೧ ॥ ಅತ್ಯಂತ ಪ್ರಜ್ವಲವಾಗಿ ಬೆಳಗುತ್ತಿರುವ ಸೂರ್ಯಮಂಡಲವು ಹತ್ತುಸಾವಿರ ಯೋಜನಗಳಷ್ಟು ವಿಸ್ತಾರವಾಗಿದೆಯೆಂದು ಹೇಳುತ್ತಾರೆ. ಹೀಗೆಯೇ ಚಂದ್ರಮಂಡಲದ ವಿಸ್ತಾರವು ಹನ್ನೆರಡುಸಾವಿರ ಯೋಜನಗಳಿವೆ ಮತ್ತು ರಾಹುವಿನ ಮಂಡಲವು ಹದಿಮೂರುಸಾವಿರ ಯೋಜನ ವಿಸ್ತಾರವಾಗಿದೆ. ಅಮೃತಪಾನದ ಸಮಯ ರಾಹುವು ದೇವತೆಯ ವೇಷದಲ್ಲಿ ಸೂರ್ಯ ಮತ್ತು ಚಂದ್ರರ ನಡುವೆ ಬಂದು ಕುಳಿತಿದ್ದನು. ಆಗ ಸೂರ್ಯ-ಚಂದ್ರರು ಇದರ ರಹಸ್ಯವನ್ನು ಬಯಲಾಗಿಸಿದರು. ಆ ವೈರವನ್ನು ಸಾಧಿಸಲಿಕ್ಕಾಗಿ ಅಮಾವಾಸ್ಯೆ ಮತ್ತು ಪೌರ್ಣಿಮೆಯ ದಿನಗಳಲ್ಲಿ ಅವರ ಮೇಲೆ ಆಕ್ರಮಿಸುತ್ತಾನೆ. ॥ ೨ ॥ ಇದನ್ನು ನೋಡಿ ಭಗವಂತನು ಸೂರ್ಯ-ಚಂದ್ರರನ್ನು ರಕ್ಷಿಸಲಿಕ್ಕಾಗಿ ಅವರ ಬಳಿಯಲ್ಲಿ ತನ್ನ ಸುದರ್ಶನಚಕ್ರವನ್ನು ನೇಮಿಸಿರುವನು. ಅದು ನಿರಂತರ ಸುತ್ತುತ್ತಾ ಇರುವುದರಿಂದ ರಾಹುವು ತಡೆಯಲಾರದ ಅದರ ತೇಜದಿಂದ ಉದ್ವಿಗ್ನನಾಗಿ, ಚಕಿತನಾಗಿ ಮುಹೂರ್ತಕಾಲ ಮಾತ್ರ ಅವರ ಎದುರಿಗೆ ಇದ್ದು ಮತ್ತೆ ಮರಳಿ ಹೊರಟುಹೋಗುತ್ತಾನೆ. ಅವನು ಅವರ ಮುಂದೆ ಇದ್ದು ಅವರನ್ನು ಮರೆಮಾಡುವ ಕಾಲವನ್ನು 'ಗ್ರಹಣ'ವೆಂದು ಹೇಳುತ್ತಾರೆ. ॥ ೩ ॥

ರಾಹುವಿನಿಂದ ಹತ್ತುಸಾವಿರ ಯೋಜನಗಳಷ್ಟು ಕೆಳಗಿದ್ದರೂ, ಚಾರಣರೂ ಮತ್ತು ವಿದ್ಯಾಧರರೂ ಮುಂತಾದವರ ಸ್ಥಾನವಿದೆ. ॥ ೪ ॥ ಅವರಿಂದ ಕೆಳಗೆ ವಾಯುವಿನ ಗತಿ ಇರುವವರೆಗೆ ಮತ್ತು ಮೋಡಗಳು ಕಾಣಿಸುವವರೆಗೆ ಅಂತರಿಕ್ಷಲೋಕವಿದೆ. ಇದು ಯಕ್ಷರು, ರಾಕ್ಷಸರು, ಪಿಶಾಚಿಗಳು, ಪ್ರೇತಗಳು ಮತ್ತು ಭೂತಗಳು ಇವರ ವಿಹಾರಸ್ಥಳವಾಗಿದೆ. ॥ ೫ ॥ ಅಲ್ಲಿಂದ ಕೆಳಗೆ ನೂರು ಯೋಜನಗಳಷ್ಟು ದೂರದಲ್ಲಿ ಈ ಭೂಮಿಯು ಇದೆ. ಹಂಸಗಳು, ಗಿಡುಗಗಳು, ಹದ್ದುಗಳು ಮತ್ತು ಗರುಡನೇ ಮುಂತಾದ ಮುಖ್ಯ-ಮುಖ್ಯ ಪಕ್ಷಿಗಳು ಹಾರಬಲ್ಲವೋ ಅಲ್ಲಿಯವರೆಗೆ ಭೂಮಿಯ ಸೀಮೆಯಾಗಿದೆ. ॥ ೬ ॥ ಭೂಮಿಯ ವಿಸ್ತಾರ ಮತ್ತು ಸ್ಥಿತಿ ಮುಂತಾದವುಗಳ ವರ್ಣನೆಯಾದರೋ ಆಗಿಹೋಗಿದೆ. ಇದರ ಕೆಳಗೆ ಅತಲ, ವಿತಲ, ಸುತಲ, ತಲಾತಲ, ಮಹಾತಲ, ರಸಾತಲ ಮತ್ತು ಪಾತಾಲ ಎಂಬ ಏಳು ಲೋಕಗಳಿವೆ. ಇವುಗಳು ಭೂಮಿಯ ಮಹಾಬಿಲಗಳ ರೂಪದಲ್ಲಿರುವ ಲೋಕಗಳು. ಇವು ಒಂದರ ಕೆಳಗೆ ಒಂದರಂತೆ ಹತ್ತತ್ತುಸಾವಿರ ಯೋಜನಗಳಷ್ಟು ದೂರದಲ್ಲಿ ನಿಂತಿವೆ. ಇವುಗಳಲ್ಲಿ ಪ್ರತಿಯೊಂದರ ಉದ್ದ-ಅಗಲವು ಹತ್ತತ್ತುಸಾವಿರ ಯೋಜನಗಳಷ್ಟೇ ಇದೆ. ॥ ೭ ॥ ಈ ಭೂಮಿಯ ಬಿಲಗಳೂ ಕೂಡ ಒಂದು ರೀತಿಯ ಸ್ವರ್ಗವೇ ಆಗಿವೆ. ಇವುಗಳಲ್ಲಿ ಸ್ವರ್ಗಕ್ಕಿಂತಲೂ ಮಿಗಿಲಾದ ವಿಷಯಭೋಗ, ಐಶ್ವರ್ಯ, ಆನಂದ, ಸಂತಾನಸುಖ ಮತ್ತು ಧನ-ಸಂಪತ್ತುಗಳಿವೆ. ಇಲ್ಲಿಯ ವೈಭವೋಪೇತ ಭವನಗಳಲ್ಲಿ, ಉದ್ಯಾನಗಳಲ್ಲಿ, ಕ್ರೀಡಾಸ್ಥಳಗಳಲ್ಲಿ ದೈತ್ಯರು, ದಾನವರು, ನಾಗಗಳು ಬಗೆ-ಬಗೆಯ ಮಾಯಾಮಯ ಕ್ರೀಡೆಗಳನ್ನು ಆಡುತ್ತಾ ವಾಸಿಸುತ್ತಾರೆ. ಅವರೆಲ್ಲರೂ ಗೃಹಸ್ಥ ಧರ್ಮವನ್ನು ಪಾಲಿಸುವವರಾಗಿದ್ದಾರೆ. ಅವರ ಪತ್ನೀ, ಪುತ್ರರು, ಬಂಧು-ಬಾಂಧವರು, ಸೇವಕರು ಇವರಲ್ಲಿ ಬಹಳಷ್ಟು ಪ್ರೀತಿಯುಳ್ಳವರಾಗಿದ್ದು ಸದಾಕಾಲ ಸಂತೋಷ

ಪ್ರಮುದಿತಾನುರಕ್ತಕಲತ್ರಾಪತ್ಯಬಂಧುಸುಹೃದನುಚರಾ ಗೃಹಪತಯ ಈಶ್ವರಾದಪ್ಯಪ್ರತಿಹತಕಾಮಾ ಮಾಯಾ-ವಿನೋದಾ ನಿವಸಂತಿ ॥ ೮ ॥ ಯೇಷು ಮಹಾರಾಜ ಮಯೇನ ಮಾಯಾವಿನಾ ವಿನಿರ್ಮಿತಾಃ ಪುರೋ ನಾನಾಮಣಿಪ್ರವರಪ್ರವೇಕವಿರಚಿತವಿಚಿತ್ರಭವನಪ್ರಾಕಾರ-ಗೋಪುರಸಭಾಚೈತ್ಯಚತ್ವರಾಯತನಾದಿಭಿರ್ನಾಗಾಸುರ-ಮಿಥುನಪಾರಾವತಶುಕಸಾರಿಕಾಕೀರ್ಣಕೃತ್ರಿಮಭೂಮಿಭಿ-ರ್ವಿವರೇಶ್ವರಗೃಹೋತ್ತಮೈಃ ಸಮಲಂಕೃತಾಶ್ಚಕಾಸತಿ ॥ ೯ ॥ ಉದ್ಯಾನಾನಿ ಚಾತಿತರಾಂ ಮನಇಂದ್ರಿಯಾನಂದಿಭಿಃ ಕುಸುಮ ಫಲಸ್ತಬಕಸುಭಗಕಿಸಲಯಾವನತರುಚಿರವಿಟಪ-ವಿಟಪಿನಾಂ ಲತಾಂಗಾಲಿಂಗಿತಾನಾಂ ಶ್ರೀಭಿಃ ಸಮಿಥುನ-ವಿವಿಧವಿಹಂಗಮಜಲಾಶಯಾನಾಮಮಲಜಲಪೂರ್ಣಾನಾಂ ಝಷಕುಲೋಲ್ಲಂಘನಕ್ಷುಭಿತನೀರನೀರಜಕುಮುದ-ಕುವಲಯಕಹ್ಲಾರನೀಲೋತ್ಪಲಲೋಹಿತಶತಪತ್ರಾದಿ-ವನೇಷು ಕೃತನಿಕೇತನಾನಾಮೇಕವಿಹಾರಾಕುಲಮಧುರ-ವಿವಿಧಸ್ವನಾದಿಭಿರಿಂದ್ರಿಯೋತ್ಸವೈರಮರಲೋಕಶ್ರಿಯಮತಿ-ಶಯಿತಾನಿ ॥ ೧೦ ॥ ಯತ್ರ ಹ ವಾವ ನ ಭಯಮ-ಹೋರಾತ್ರಾದಿಭಿಃ ಕಾಲವಿಭಾಗೈರುಪಲಕ್ಷ್ಯತೇ ॥ ೧೧ ॥ ಯತ್ರ ಹಿ ಮಹಾಹಿಪ್ರವರಶಿರೋಮಣಯಃ ಸರ್ವಂ ತಮಃ ಪ್ರಬಾಧಂತೇ ॥ ೧೨ ॥ ನ ವಾ ಏತೇಷು ವಸತಾಂ ದಿವ್ಯೌ-ಷಧಿರಸರಸಾಯನಾನ್ನಪಾನಸ್ನಾನಾದಿಭಿರಾಧಯೋ ವ್ಯಾಧಯೋ ವಲೀಪಲಿತಜರಾದಯಶ್ಚ ದೇಹವೈವರ್ಣ್ಯದೌ-ರ್ಗಂಧ್ಯಸ್ವೇದಕ್ಲಮಗ್ಲಾನಿರಿತಿ ವಯೋಽವಸ್ಥಾಶ್ಚ ಭವಂತಿ ॥ ೧೩ ॥ ನ ಹಿ ತೇಷಾಂ ಕಲ್ಯಾಣಾನಾಂ ಪ್ರಭವತಿ ಕುತಶ್ಚನ

ಚಿತ್ತರಾಗಿರುತ್ತಾರೆ. ಅವರ ಭೋಗಗಳಲ್ಲಿ ತೊಂದರೆಯನ್ನುಂಟು ಮಾಡಲು ಇಂದ್ರಾದಿಗಳಲ್ಲಿಯೂ ಸಾಮರ್ಥ್ಯವಿಲ್ಲ. ॥ ೮ ॥ ಮಹಾರಾಜಾ! ಈ ಬಿಲರೂಪೀ ಲೋಕಗಳಲ್ಲಿ ಮಾಯಾವಿ ಮಯದಾನವನಿಂದ ರಚಿಸಲ್ಪಟ್ಟ ಅನೇಕ ಪುರಗಳು ಶೋಭಿಸುತ್ತಾ ಬೆಳಗುತ್ತಿವೆ. ಅವುಗಳು ಅನೇಕ ಜಾತಿಯ ಸುಂದರ, ಶ್ರೇಷ್ಠ ಮಣಿ-ರತ್ನಗಳಿಂದ ರಚಿತವಾದ, ಚಿತ್ರ-ವಿಚಿತ್ರವಾದ ಭವನಗಳು, ಕೋಟೆಗಳು, ನಗರದ್ವಾರಗಳು, ಸಭಾಭವನಗಳು, ಮಂದಿರಗಳು, ದೊಡ್ಡ-ದೊಡ್ಡ ಅಂಗಳಗಳು, ಅರಮನೆಗಳು ಇವುಗಳಿಂದ ಶೋಭಿಸುತ್ತಿವೆ. ಅವುಗಳ ಕೃತ್ರಿಮವಾದ ಭೂಪ್ರದೇಶಗಳಲ್ಲಿ ನಾಗ ದಂಪತಿಗಳೂ, ಅಸುರ ದಂಪತಿಗಳೂ, ಪಾರಿವಾಳ, ಗಿಳಿ, ಸಾರಿಕೆಗಳೇ ಮುಂತಾದ ಪಕ್ಷಿಗಳ ಜೋಡಿಗಳು ನಲಿಯುತ್ತಿರುವುವು. ಪಾತಾಳದ ಅಧಿಪತಿಗಳ ಇಂತಹ ಭವ್ಯ ಭವನಗಳು ಆ ಪುರಿಗಳ ಶೋಭೆಯನ್ನು ಹೆಚ್ಚಿಸುತ್ತಿವೆ. ॥ ೯ ॥ ಅಲ್ಲಿಯ ಉದ್ಯಾನವನಗಳು ತನ್ನ ಶೋಭೆಯಿಂದ ದೇವಲೋಕದ ಉದ್ಯಾನಗಳ ಶೋಭೆಯನ್ನು ನಾಚಿಸುತ್ತವೆ. ಹೂವು-ಹಣ್ಣುಗಳ ಗೊಂಚಲುಗಳ ಮತ್ತು ಚಿಗುರೆಲೆಗಳ ಭಾರದಿಂದ ಬಾಗಿ-ಬಳುಕುತ್ತಾ ಸುಂದರವಾದ ಕೊಂಬೆಗಳಿಂದ ಕೂಡಿ ಬಗೆ-ಬಗೆಯ ಬಳ್ಳಿಗಳಿಂದ ಆಲಿಂಗಿತವಾಗಿರುವ ಅಲ್ಲಿಯ ವೃಕ್ಷಗಳು ಕಣ್ಮನಗಳನ್ನು ಸೂರೆಗೊಳ್ಳುತ್ತಿವೆ. ಅಲ್ಲಿನ ನಿರ್ಮಲ ಜಲದಿಂದ ತುಂಬಿದ ಅನೇಕ ಜಲಾಶಯಗಳ ಸೌಂದರ್ಯದಿಂದ ಆ ಉದ್ಯಾನಗಳು ತುಂಬಾ ಶೋಭಿಸುತ್ತಿವೆ. ಆ ಜಲಾಶಯಗಳಲ್ಲಿ ವಾಸಿಸುವ ಮೀನುಗಳು ಆಟವಾಡುತ್ತಾ ಮೇಲಕ್ಕೆ ನೆಗೆದಾಗ ಅವುಗಳ ನೀರು ಅಲ್ಲಾಡತೊಡಗುತ್ತದೆ. ಜೊತೆಗೆ ನೀರಿನಲ್ಲಿ ಅರಳಿನಿಂತ ಕನ್ನೈದಿಲೆ, ಕೆಂದಾವರೆ, ಬಿಳಿತಾವರೆ, ಕುವಲಯ, ಕಲ್ಹಾರ, ನೀಲಕಮಲ, ನೂರುದಳಗಳ ತಾವರೆ ಮುಂತಾದ ಹೂವುಗಳು ಅಲ್ಲಾಡುತ್ತವೆ. ಈ ಕಮಲವನದಲ್ಲಿ ವಾಸಿಸುವ ಪಕ್ಷಿಗಳು ಎಡೆಬಿಡದೆ ಕ್ರೀಡಿಸುತ್ತಾ ಇಂಪಾಗಿ ಬಗೆ-ಬಗೆಯಾಗಿ ಕಲ-ಕಲ ನಿನಾದ ಮಾಡುತ್ತಾ ಇರುತ್ತವೆ. ಇದನ್ನು ಕೇಳಿದ ಮನಸ್ಸು-ಇಂದ್ರಿಯಗಳಿಗೆ ತುಷ್ಟಿಯ ರಸದೌತಣ ದೊರೆಯುತ್ತದೆ. ॥ ೧೦ ॥ ಅಲ್ಲಿ ಸೂರ್ಯ ಪ್ರಕಾಶವು ತಲುಪುವುದಿಲ್ಲ. ಅದರಿಂದ ಹಗಲು-ರಾತ್ರಿಗಳ ಅಡಚಣೆಯಿಲ್ಲ. ॥ ೧೧ ॥ ಅಲ್ಲಿಯ ಎಲ್ಲ ಅಂಧಕಾರವನ್ನು ದೊಡ್ಡ-ದೊಡ್ಡ ನಾಗಗಳ ಹೆಡೆಗಳಲ್ಲಿರುವ ಮಣಿಗಳೇ ದೂರ ಮಾಡುತ್ತವೆ. ॥ ೧೨ ॥ ಅಲ್ಲಿ ವಾಸಿಸುವ ನಿವಾಸಿಗಳು ದಿವ್ಯವಾದ ಔಷಧಿಗಳನ್ನು, ರಸಾಯನಗಳನ್ನು, ರಸವನ್ನು ಸೇವಿಸುತ್ತಾ ಅವುಗಳಿಂದಲೇ ಅನ್ನ-ಪಾನ-ಸ್ನಾನಾದಿಗಳನ್ನು ಮಾಡುವರು. ಅವೆಲ್ಲ ಪದಾರ್ಥಗಳು ದಿವ್ಯವಾಗಿರುತ್ತವೆ. ಈ ದಿವ್ಯ ವಸ್ತುಗಳ ಸೇವನೆಯಿಂದ ಅವರಿಗೆ ಮಾನಸಿಕ, ಶಾರೀರಿಕ ರೋಗಗಳು ಉಂಟಾಗುವುದಿಲ್ಲ. ಚರ್ಮ ಸುಕ್ಕಾಗುವುದು, ಕೂದಲು ಹಣ್ಣಾಗುವುದು, ಮುದುಕರಾಗುವುದು, ಶರೀರವು ಕಾಂತಿಹೀನವಾಗುವುದು, ಶರೀರದಲ್ಲಿ ದುರ್ಗಂಧ ಉಂಟಾಗುವುದು, ಬೆವರುವುದು ಬಳಲಿಕೆ, ಅಶಕ್ತತೆ ಉಂಟಾಗುವುದು. ವಯಸ್ಸಿಗೆ ತಕ್ಕಂತೆ ಶರೀರದಲ್ಲಿ ಬದಲಾವಣೆ ಮುಂತಾದ ಯಾವ ವಿಕಾರಗಳೂ ಉಂಟಾಗುವುದಿಲ್ಲ. ಅವರು ಸದಾಕಾಲ ಸುಂದರ, ಆರೋಗ್ಯವಂತ, ತಾರುಣ್ಯದಿಂದಿದ್ದು ಶಕ್ತಿಸಂಪನ್ನರಾಗಿರುತ್ತಾರೆ. ॥ ೧೩ ॥

ಮೃತ್ಯುರ್ವಿನಾ ಭಗವತ್ತೇಜಸಶ್ಚಕ್ರಾಪದೇಶಾತ್ ॥ ೧೪ ॥ ಯಸ್ಮಿನ್ ಪ್ರವಿಷ್ಟೇಽಸುರವಧೂನಾಂ ಪ್ರಾಯಃ ಪುಂಸವನಾನಿ ಭಯಾದೇವ ಸ್ರವಂತಿ ಪತಂತಿ ಚ ॥ ೧೫ ॥

■ ಪುಣ್ಯ ಪುರುಷರಿಗೆ ಭಗವಂತನ ತೇಜಸ್ಸಿನ ರೂಪವಾದ ಸುದರ್ಶನಾಸ್ತ್ರವಲ್ಲದೆ ಬೇರೆ ಯಾವ ಸಾಧನೆಯಿಂದಲೂ ಮೃತ್ಯುವು ಉಂಟಾಗುವುದಿಲ್ಲ. ॥ ೧೪ ॥ ಸುದರ್ಶನ ಚಕ್ರವು ಬಂದೊಡನೆಯೇ ಅಸುರ ರಮಣಿಯರಿಗೆ ಗರ್ಭಸ್ರಾವ ಮತ್ತು ಗರ್ಭಪಾತಗಳು * ಉಂಟಾಗುವುವು. ॥ ೧೫ ॥

ಅಥಾತಲೇ ಮಯಪುತ್ರೋಽಸುರೋ ಬಲೋ ನಿವಸತಿ ಯೇನ ಹ ವಾ ಇಹ ಸೃಷ್ಟಾಃ ಷಣ್ಣವತಿರ್ಮಾಯಾಃ ಕಾಶ್ಚನಾದ್ಯಾಪಿ ಮಾಯಾವಿನೋ ಧಾರಯಂತಿ ಯಸ್ಯ ಚ ಜೃಂಭಮಾಣಸ್ಯ ಮುಖತಸ್ತ್ರಯಃ ಸ್ತ್ರೀಗಣಾ ಉದಪದ್ಯಂತ ಸ್ವೈರಿಣ್ಯಃ ಕಾಮಿನ್ಯಃ ಪುಂಶ್ಚಲ್ಯ ಇತಿ ಯಾ ವೈ ಬಿಲಾಯನಂ ಪ್ರವಿಷ್ಟಂ ಪುರುಷಂ ರಸೇನ ಹಾಟಕಾಖ್ಯೇನ ಸಾಧಯಿತ್ವಾ ಸ್ವವಿಲಾಸಾವಲೋಕನಾನುರಾಗಸ್ಮಿತಸಂಲಾಪೋಪಗೂಹನಾದಿಭಿಃ ಸ್ವೈರಂ ಕಿಲ ರಮಯಂತಿ ಯಸ್ಮಿನ್ನುಪಯುಕ್ತೇ ಪುರುಷ ಈಶ್ವರೋಽಹಂ ಸಿದ್ಧೋಽಹಮಿತ್ಯಯುತಮಹಾಗಜಬಲಮಾತ್ಮಾನಮಭಿಮನ್ಯಮಾನಃ ಕತ್ಥತೇ ಮದಾಂಧ ಇವ ॥ ೧೬ ॥

ಅತಲ ಲೋಕದಲ್ಲಿ ಮಯದಾನವನ ಪುತ್ರ ಅಸುರ ಬಲನು ಇರುತ್ತಾನೆ. ಅವನು ತೊಂಭತ್ತಾರು ರೀತಿಯ ಮಾಯೆಗಳನ್ನು ಸೃಷ್ಟಿಸಿರುವನು. ಅವುಗಳಲ್ಲಿ ಕೆಲ-ಕೆಲವು ಇಂದೂ ಕೂಡ ಮಾಯಾವೀ ಜನರಲ್ಲಿ ಕಂಡುಬರುತ್ತವೆ. ಆ ಬಲಾಸುರನು ಒಮ್ಮೆ ಆಕಳಿಸಿದಾಗ ಅವನ ಬಾಯಿಂದ ಸ್ವೈರಿಣೀ, ಕಾಮಿನೀ ಮತ್ತು ಪುಂಶ್ಚಲೀ ಎಂಬ ಮೂರು ರೀತಿಯ ಸ್ತ್ರೀಯರು ಜನಿಸಿದರು. (ಇವರಲ್ಲಿ ತನ್ನ ವರ್ಣಕ್ಕೆ ಸೇರಿದ ಪುರುಷನಲ್ಲಿ ಮಾತ್ರ ರಮಿಸುವವಳು ಸ್ವೈರಿಣಿಯೆಂದೂ, ಇತರ ವರ್ಣದವರೊಡನೆ ರಮಿಸುವವಳು ಕಾಮಿನಿಯೆಂದೂ, ಅತ್ಯಂತ ಚಂಚಲೆಯಾದ ಸ್ವಭಾವ ಉಳ್ಳವಳು ಪುಂಶ್ಚಲೀ ಎಂದೂ ಹೇಳುತ್ತಾರೆ.) ಆ ಸ್ತ್ರೀಯರು ಆ ಲೋಕದಲ್ಲಿ ವಾಸಿಸುವ ಪುರುಷರಿಗೆ ಹಾಟಕ ಎಂಬ ರಸವನ್ನು ಕುಡಿಸಿ ಅವರನ್ನು ಸಂಭೋಗ ಸಮರ್ಥರನ್ನಾಗಿ ಮಾಡಿಕೊಂಡು, ತಮ್ಮ ಹಾವ-ಭಾವಗಳಿಂದಲೂ, ತುಂಬಿದ ನೋಟಗಳಿಂದಲೂ, ಕಿರುನಗೆಯಿಂದಲೂ, ಸವಿಮಾತು ಮತ್ತು ಆಲಿಂಗನೆಗಳಿಂದಲೂ ಯಥೇಷ್ಟವಾಗಿ ಅವರೊಂದಿಗೆ ರಮಿಸುವರು. ಆ ಹಾಟಕ ರಸವನ್ನು ಕುಡಿದ ಮನುಷ್ಯನು ಮತ್ತಿನಿಂದ ಕುರುಡನಂತಾಗಿ ತಾನು ಹತ್ತುಸಾವಿರ ಆನೆಗಳಷ್ಟು ಬಲವುಳ್ಳವನು ಎಂದು ಭಾವಿಸಿಕೊಂಡು 'ನಾನೇ ಈಶ್ವರನು, ನಾನೇ ಸಿದ್ಧನು!' ಎಂದು ಬಡಬಡಿಸತೊಡಗುವನು. ॥ ೧೬ ॥

ತತೋಽಧಸ್ತಾದ್ವಿತಲೇ ಹರೋ ಭಗವಾನ್ಹಾಟಕೇಶ್ವರಃ ಸ್ವಪಾರ್ಷದಭೂತಗಣಾವೃತಃ ಪ್ರಜಾಪತಿಸರ್ಗೋಪಬೃಂಹಣಾಯ ಭವೋ ಭವಾನ್ಯಾ ಸಹ ಮಿಥುನೀಭೂತ ಆಸ್ತೇ ಯತಃ ಪ್ರವೃತ್ತಾ ಸರಿತ್ಪ್ರವರಾ ಹಾಟಕೀ ನಾಮ ಭವಯೋರ್ವೀರ್ಯೇಣ ಯತ್ರ ಚಿತ್ರಭಾನುರ್ಮಾತರಿಶ್ವನಾ ಸಮಿಧ್ಯಮಾನ ಓಜಸಾ ಪಿಬತಿ ತನ್ನಿಷ್ಠ್ಯೂತಂ ಹಾಟಕಾಖ್ಯಂ ಸುವರ್ಣಂ ಭೂಷಣೇನಾಸುರೇಂದ್ರಾವರೋಧೇಷು ಪುರುಷಾಃ ಸಹ ಪುರುಷೀಭಿರ್ಧಾರಯಂತಿ ॥ ೧೭ ॥

ಅದರ ಕೆಳಗಿನ ವಿತಲ ಲೋಕದಲ್ಲಿ ಭಗವಾನ್ ಹಾಟಕೇಶ್ವರನೆಂಬ ಹೆಸರಿನಿಂದ ಮಹಾದೇವನು ತನ್ನ ಪಾರ್ಷದರಾದ ಭೂತಗಣಗಳೊಂದಿಗೆ ವಾಸಮಾಡುತ್ತಾನೆ. ಅವನು ಪ್ರಜಾಪತಿಯ ಸೃಷ್ಟಿಯನ್ನು ವೃದ್ಧಿಪಡಿಸಲಿಕ್ಕಾಗಿ ಭವಾನಿಯೊಂದಿಗೆ ವಿಹರಿಸುತ್ತಾ ಇರುತ್ತಾನೆ. ಅವರಿಬ್ಬರ ತೇಜದಿಂದ ಅಲ್ಲಿ ಹಾಟಕೀ ಎಂಬ ಶ್ರೇಷ್ಠ ನದಿಯೊಂದು ಹರಿಯುತ್ತಿರುವುದು. ಅದರ ನೀರನ್ನು ವಾಯುವಿನಿಂದ ಪ್ರಜ್ವಲಿತವಾದ ಅಗ್ನಿಯು ತುಂಬಾ ಉತ್ಸಾಹದಿಂದ ಕುಡಿಯುತ್ತಾನೆ. ಅವನು ಕುಡಿದು ಉಗುಳುವ ಆ ರುದ್ರವೀರ್ಯಕ್ಕೆ ಹಾಟಕ ಸುವರ್ಣವೆಂದು ಹೆಸರು. ಆ ಸುವರ್ಣದಿಂದ ಮಾಡಿದ ಆಭರಣಗಳನ್ನು ದೈತ್ಯರಾಜರ ಅಂತಃಪುರದ ಸ್ತ್ರೀ-ಪುರುಷರೆಲ್ಲರೂ ಧರಿಸುತ್ತಾರೆ. ॥ ೧೭ ॥

ವಿತಲದ ಕೆಳಗೆ ಸುತಲಲೋಕದಲ್ಲಿ ಮಹಾಯಶಸ್ವಿಯೂ, ಪವಿತ್ರಕೀರ್ತಿಯೂ ಆದ ವಿರೋಚನಪುತ್ರ ಬಲಿಯು ವಾಸವಾಗಿದ್ದಾನೆ. ಶ್ರೀಭಗವಂತನು ಇಂದ್ರನಿಗೆ ಪ್ರಿಯವನ್ನುಂಟು ಮಾಡಲು

* "ಆ ಚತುರ್ಥಾದ್ಭವೇತ್ ಸ್ರಾವಃ ಪಾತಃ ಪಂಚಮ ಷಷ್ಠಯೋಃ" ಅರ್ಥಾತ್ – ನಾಲ್ಕನೇ ತಿಂಗಳವರೆಗೆ ಗರ್ಭವು ಬಿದ್ದುಹೋದರೆ ಅದನ್ನು 'ಗರ್ಭಸ್ರಾವ' ಎಂದು ಹೇಳುತ್ತಾರೆ. ಐದನೇ, ಆರನೇ ತಿಂಗಳಲ್ಲಿ ಬಿದ್ದರೆ ಅದು 'ಗರ್ಭಪಾತ' ಎಂದು ಹೇಳುತ್ತಾರೆ.

ತತೋಽಧಸ್ತಾತ್ಸುತಲೇ ಉದಾರಶ್ರವಾಃ ಪುಣ್ಯಶ್ಲೋಕೋ ವಿರೋಚನಾತ್ಮಜೋ ಬಲಿರ್ಭಗವತಾ ಮಹೇಂದ್ರಸ್ಯ ಪ್ರಿಯಂ ಚಿಕೀರ್ಷಮಾಣೇನಾದಿತೇರ್ಲಬ್ಧಕಾಯೋ ಭೂತ್ವಾ ವಟುವಾಮನರೂಪೇಣ ಪರಾಕ್ಷಿಪ್ತಲೋಕತ್ರಯೋ ಭಗವದನುಕಂಪಯೈವ ಪುನಃ ಪ್ರವೇಶಿತ ಇಂದ್ರಾದಿಷ್ವವಿದ್ಯಮಾನಯಾ ಸುಸಮೃದ್ಧಯಾ ಶ್ರಿಯಾಭಿಜುಷ್ಟಃ ಸ್ವಧರ್ಮೇಣಾರಾಧಯಂಸ್ತಮೇವ ಭಗವಂತಮಾರಾಧನೀಯಮಪಗತಸಾಧ್ವಸ ಆಸ್ತೇಽಧುನಾಪಿ ॥ ೧೮ ॥ ನೋ ಏವೈತತ್ಸಾಕ್ಷಾತ್ಕಾರೋ ಭೂಮಿದಾನಸ್ಯ ಯತ್ತದ್ಭಗವತ್ಯಶೇಷಜೀವನಿಕಾಯಾನಾಂ ಜೀವಭೂತಾತ್ಮಭೂತೇ ಪರಮಾತ್ಮನಿ ವಾಸುದೇವೇ ತೀರ್ಥತಮೇ ಪಾತ್ರ ಉಪಪನ್ನೇ ಪರಯಾ ಶ್ರದ್ಧಯಾ ಪರಮಾದರಸಮಾಹಿತಮನಸಾ ಸಂಪ್ರತಿಪಾದಿತಸ್ಯ ಸಾಕ್ಷಾದಪವರ್ಗದ್ವಾರಸ್ಯ ಯದ್ಬಿಲನಿಲಯೈಶ್ವರ್ಯಮ್ ॥ ೧೯ ॥ ಯಸ್ಯ ಹ ವಾವ ಕ್ಷುತಪತನಪ್ರಸ್ಖಲನಾದಿಷು ವಿವಶಃ ಸಕೃನ್ನಾಮಾಭಿಗೃಣನ್ ಪುರುಷಃ ಕರ್ಮಬಂಧನಮಂಜಸಾ ವಿಧುನೋತಿ ಯಸ್ಯ ಹೈವ ಪ್ರತಿಬಾಧನಂ ಮುಮುಕ್ಷವೋಽನ್ಯಥೈವೋಪಲಭಂತೇ ॥ ೨೦ ॥ ತದ್ಭಕ್ತಾನಾಮಾತ್ಮವತಾಂ ಸರ್ವೇಷಾಮಾತ್ಮನ್ಯಾತ್ಮದ ಆತ್ಮತಯೈವ ॥ ೨೧ ॥ ನ ವೈ ಭಗವಾನ್ನೂನಮಮುಷ್ಯಾನುಜಗ್ರಾಹ ಯದುತ ಪುನರಾತ್ಮಾನುಸ್ಮೃತಿಮೋಷಣಂ ಮಾಯಾಮಯಭೋಗೈಶ್ವರ್ಯಮೇವಾತನುತೇತಿ ॥ ೨೨ ॥ ಯತ್ತದ್ ಭಗವತಾನಧಿಗತಾನ್ಯೋಪಾಯೇನ ಯಾಚ್ಞಾಚ್ಛಲೇನಾಪಹೃತಸ್ವಶರೀರಾವಶೇಷಿತಲೋಕತ್ರಯೋ ವರುಣಪಾಶೈಶ್ಚ ಸಂಪ್ರತಿಮುಕ್ತೋ ಗಿರಿದರ್ಯಾಂ ಚಾಪವಿದ್ಧ ಇತಿ ಹೋವಾಚ ॥ ೨೩ ॥

ನೂನಂ ಬತಾಯಂ ಭಗವಾನರ್ಥೇಷು ನ ನಿಷ್ಣಾತೋ ಯೋಽಸಾವಿಂದ್ರೋ ಯಸ್ಯ ಸಚಿವೋ ಮಂತ್ರಾಯ ವೃತ ಏಕಾಂತತೋ ಬೃಹಸ್ಪತಿಸ್ತಮತಿಹಾಯ ಸ್ವಯಮುಪೇಂದ್ರೇಣಾತ್ಮಾನಮಯಾಚತಾತ್ಮನಶ್ಚಾಶಿಷೋ ನೋ ಏವ

ಅದಿತಿಯ ಗರ್ಭದಿಂದ ವಾಮನವಟುವಿನ ರೂಪದಲ್ಲಿ ಅವತರಿಸಿ ಬಲಿಚಕ್ರವರ್ತಿಯಿಂದ ತ್ರಿಲೋಕಗಳನ್ನು ಕಿತ್ತುಕೊಂಡಿದ್ದನು. ಮತ್ತೆ ಭಗವಂತನ ಕೃಪೆಯಿಂದಲೇ ಅವನಿಗೆ ಈ ಲೋಕದಲ್ಲಿ ಪ್ರವೇಶವು ದೊರೆಯಿತು. ಇಂದ್ರನೇ ಮುಂತಾದವರಲ್ಲಿಯೂ ಇಲ್ಲದ ಇರುವ ಉತ್ಕೃಷ್ಟವಾದ ಸಂಪತ್ತನ್ನು ಭಗವದನುಗ್ರಹದಿಂದ ಅಲ್ಲಿ ಪಡೆದುಕೊಂಡು ಮಹಾತ್ಮನಾದ ಬಲಿಯು ತನ್ನ ಪೂಜ್ಯತಮನಾದ ಪ್ರಭುವನ್ನು ಧರ್ಮಾಚರಣೆಯ ಮೂಲಕ ಆರಾಧಿಸುತ್ತಾ ಇಂದಿಗೂ ಯಾವ ಭಯವೂ ಇಲ್ಲದೆ ವಾಸವಾಗಿದ್ದಾನೆ. ॥ ೧೮ ॥ ಎಲೈ ರಾಜೇಂದ್ರನೇ! ಸಮಸ್ತ ಜೀವಿಗಳ ನಿಯಾಮಕನೂ, ಆತ್ಮಸ್ವರೂಪನೂ ಆದ ಪರಮಾತ್ಮನಾದ ಭಗವಾನ್ ಶ್ರೀವಾಸುದೇವನಂತಹ ಪೂಜ್ಯತಮ, ಪವಿತ್ರತಮ ಸತ್ಪಾತ್ರವು ಬಂದಾಗ ಅವನಿಗೆ ಅತ್ಯಂತ ಶ್ರದ್ಧೆ-ಆದರಗಳಿಂದ ಸ್ಥಿರವಾದ ಚಿತ್ತದಿಂದ ಮಾಡಿದ ಭೂಮಿದಾನಕ್ಕಾಗಿ ಬಲೀಂದ್ರನಿಗೆ ದೊರೆತ ಸುತಲಲೋಕದ ಐಶ್ವರ್ಯವು ಮುಖ್ಯಫಲವಲ್ಲ. ಈ ಐಶ್ವರ್ಯವಾದರೋ ಅನಿತ್ಯವಾಗಿದೆ. ಆದರೆ ಆ ಭೂಮಿದಾನವಾದರೋ ಸಾಕ್ಷಾತ್ ಮೋಕ್ಷದ ದ್ವಾರವೇ ಆಗಿದೆ. ॥ ೧೯ ॥ ಮುಮುಕ್ಷುಗಳು ಯೋಗಸಾಧನೆ ಮುಂತಾದ ಬೇರೆ ಉಪಾಯಗಳನ್ನು ಆಶ್ರಯಿಸಿ ಕರ್ಮಬಂಧನವನ್ನು ಬಹಳ ಕಷ್ಟದಿಂದ ಕಡಿದುಕೊಳ್ಳಲಾರರೋ, ಅಂತಹ ಕರ್ಮಬಂಧನವನ್ನು ಭಗವಂತನ ದಿವ್ಯನಾಮವನ್ನು ಸೀನುವಾಗ, ಬೀಳುವಾಗ, ಕೆಮ್ಮುವಾಗ, ವಿವಶವಾದಾಗ ಒಮ್ಮೆ ಕೊಂಡಾಡಿದರೆ ಮನುಷ್ಯನು ಸುಲಭವಾಗಿ ಕಳೆದುಕೊಳ್ಳುವನು. ॥ ೨೦ ॥ ಆದುದರಿಂದ ಸಂಯಮೀ ಭಕ್ತರಿಗೆ ಮತ್ತು ಜ್ಞಾನಿಗಳಿಗೆ ತನ್ನ ಸ್ವರೂಪವನ್ನೇ ಪ್ರದಾನಮಾಡುವ ಸಮಸ್ತ ಪ್ರಾಣಿಗಳ ಆತ್ಮನಾದ ಶ್ರೀಭಗವಂತನಿಗೆ ಆತ್ಮಭಾವದಿಂದ ಮಾಡಿದ ಭೂಮಿದಾನಕ್ಕೆ ಈ ಸುತಲಲೋಕದ ಪ್ರಾಪ್ತಿಯು ಮುಖ್ಯಫಲವಾಗಲಾರದು. ॥ ೨೧ ॥ ತನ್ನ ಸರ್ವಸ್ವವನ್ನು ಸಮರ್ಪಣೆಮಾಡಿದ ಭಕ್ತಶ್ರೇಷ್ಠನಾದ ಬಲೀಂದ್ರನಿಗೆ ಶ್ರೀಭಗವಂತನು ಆ ಸಮರ್ಪಣೆಯ ಬದಲಿಗೆ ತನ್ನನ್ನು ಮರೆಸುವಂತಹ ಮಾಯಾಮಯವಾದ ಐಶ್ವರ್ಯವನ್ನೇ ಕೊಟ್ಟಿದ್ದರೆ ಅದು ದೊಡ್ಡ ಅನುಗ್ರಹವೇನೂ ಆಗುತ್ತಿರಲಿಲ್ಲ. ॥ ೨೨ ॥ ಬೇರಾವ ಉಪಾಯವನ್ನೂ ಕಾಣದ ಶ್ರೀಭಗವಂತನು ಯಾಚನೆಮಾಡುವ ಕಪಟವ್ಯಾಜದಿಂದ ಆತನ ತ್ರೈಲೋಕ್ಯರಾಜ್ಯವನ್ನು ಕಿತ್ತುಕೊಂಡು ಶರೀರ ಮಾತ್ರವೇ ಉಳಿಯುವಂತೆ ಮಾಡಿ, ವರುಣಪಾಶದಿಂದ ಕಟ್ಟಿ ಪರ್ವತದ ಗುಹೆಯಲ್ಲಿ ಹಾಕಿ ಭಗವಂತನು ಮೊದಲಿಗೆ ಎರಡು ಪಾದಗಳಿಂದ ಭೂಮ್ಯಾಕಾಶವನ್ನು ಅಳೆದುಕೊಂಡಿದ್ದು ಮೂರನೇ ಪಾದವನ್ನು ಎಲ್ಲಿಡಲೀ ಎಂದು ಕೇಳಿದಾಗ ಬಲಿಚಕ್ರವರ್ತಿಯು ಆತ್ಮಸಮರ್ಪಣ ಮಾಡಿಕೊಂಡು ನನ್ನ ತಲೆಯ ಮೇಲೆ ಇರಿಸೆಂದು ಹೇಳಿದನು. ಇಂತಹ ಭಾಗವತೋತ್ತಮನಾದ ಬಲಿಯು ಹೀಗೆ ಅಂದುಕೊಂಡನು. ॥ ೨೩ ॥ ಈ ಐಶ್ವರ್ಯಶಾಲಿ ಯಾದ ಇಂದ್ರನು ವಿದ್ವಾಂಸನಾಗಿದ್ದರೂ ತನ್ನ ಸ್ವಾರ್ಥವನ್ನು ಸಾಧಿಸಿಕೊಳ್ಳುವ ವಿಷಯದಲ್ಲಿ ಕುಶಲನಲ್ಲ. ಈತನು ತನ್ನ ಸಮ್ಮತಿಯನ್ನು ಪಡೆಯಲಿಕ್ಕಾಗಿ ಇತರರನ್ನು ಬಿಟ್ಟು ಮಹಾಬುದ್ಧಿಶಾಲಿಯಾದ ಬೃಹಸ್ಪತಿಯನ್ನೇ ತನ್ನ ಮಂತ್ರಿಯನ್ನಾಗಿಸಿಕೊಂಡನು.

ತದ್ದರ್ಶಿತಮತಿಗಂಭೀರವಯಸಃ ಕಾಲಸ್ಯ ಮನ್ವಂತರಪರಿವೃತ್ತಂ ಕಿಯಲ್ಲೋಕತ್ರಯಮಿದಮ್ ॥ ೨೪ ॥ ಯಸ್ಯಾನುದಾಸ್ಯಮೇವಾಸ್ಮತ್ಪಿತಾಮಹಃ ಕಿಲ ವವ್ರೇ ನ ತು ಸ್ವಪಿತ್ರ್ಯಂ ಯದುತಾಕುತೋಭಯಂ ಪದಂ ದೀಯಮಾನಂ ಭಗವತಃ ಪರಮಿತಿ ಭಗವತೋಪರತೇ ಖಲು ಸ್ವಪಿತರಿ ॥ ೨೫ ॥ ತಸ್ಯ ಮಹಾನುಭಾವಸ್ಯಾನುಪಥಮಮೃಜಿತಕಷಾಯಃ ಕೋ ವಾಸ್ಮದ್ವಿಧಃ ಪರಿಹೀಣಭಗವದನುಗ್ರಹ ಉಪಜಿಗಮಿಷತೀತಿ ॥ ೨೬ ॥ ತಸ್ಯಾನುಚರಿತಮುಪರಿಷ್ಟಾದ್ವಿಸ್ತರಿಷ್ಯತೇ ಯಸ್ಯ ಭಗವಾನ್ ಸ್ವಯಮಖಿಲಜಗದ್ಗುರುರ್ನಾರಾಯಣೋ ದ್ವಾರಿ ಗದಾಪಾಣಿರವತಿಷ್ಠತೇ ನಿಜಜನಾನುಕಂಪಿತಹೃದಯೋ ಯೇನಾಂಗುಷ್ಠೇನ ಪದಾ ದಶಕಂಧರೋ ಯೋಜನಾಯುತಾಯುತಂ ದಿಗ್ವಿಜಯ ಉಚ್ಚಾಟಿತಃ ॥ ೨೭ ॥

ಅದನ್ನೂ ಅವಿವೇಕದಿಂದ ಆತನನ್ನು ಅನಾದರಿಸಿ ಶ್ರೀಭಗವಂತನಿಂದ ಆತನ ದಾಸ್ಯವನ್ನು ಕೇಳಿಕೊಳ್ಳದೆ ಆತನ ಮೂಲಕ ತನಗಾಗಿ ಸ್ವರ್ಗದ ಭೋಗಗಳನ್ನೇ ಬೇಡಿದನು. ಈ ತ್ರೈಲೋಕ್ಯರಾಜ್ಯವೇನೂ ಸ್ಥಿರವಲ್ಲ. ಅನಂತಕಾಲದ ಒಂದು ಅವಯವವಾಗಿರುವ ಒಂದು ಮನ್ವಂತರಕಾಲ ಮಾತ್ರ ಇರುವುದು. ಶ್ರೀಭಗವಂತನ ಕೈಂಕರ್ಯದ ಮುಂದೆ ಈ ತುಚ್ಛವಾದ ಭೋಗಗಳಿಗೆ ಯಾವ ಬೆಲೆ ಇದೆ? ॥ ೨೪ ॥ ನಮ್ಮ ತಾತನಾದ ಪ್ರಹ್ಲಾದನಾದರೋ ಶ್ರೀಭಗವಂತನಿಂದ ತನ್ನ ತಂದೆಯಾದ ಹಿರಣ್ಯಕಶಿಪುವು ಸಂಹರಿಸಲ್ಪಟ್ಟಾಗ ಆ ಭಗವಂತನಿಂದ ಭಗವತ್ಸೇವೆಯ ವರವನ್ನು ಮಾತ್ರ ಬೇಡಿಕೊಂಡನು. ಭಗವಂತನು ತನಗೆ ನಿಷ್ಕಂಟಕವಾದ ತಂದೆಯ ರಾಜ್ಯವನ್ನು ಕೊಡುವವನಾಗಿದ್ದರೂ, ಅದು ಭಗವಂತನಿಂದ ದೂರ ಮಾಡುವುದು ಎಂದರಿತು ಅದನ್ನು ಸ್ವೀಕರಿಸಲಿಲ್ಲ. ॥ ೨೫ ॥ ಅವರು ದೊಡ್ಡ ಮಹಾನುಭಾವರಾಗಿದ್ದರು. ನನ್ನ ಮೇಲಾದರೋ ಭಗವಂತನ ಕೃಪೆಯೂ ಇಲ್ಲ, ನನ್ನ ವಾಸನೆಗಳೂ ಶಾಂತವಾಗಲಿಲ್ಲ. ಮತ್ತೆ ನನ್ನಂತಹ ಯಾವನು ಅವರ ಬಳಿಗೆ ತಲುಪುವ ಸಾಹಸ ಮಾಡಿಯಾನು? ॥ ೨೬ ॥ ರಾಜೇಂದ್ರನೇ! ಈ ಬಲಿಯ ಚರಿತ್ರವನ್ನು ಮುಂದೆ (ಎಂಟನೆಯ ಸ್ಕಂಧದಲ್ಲಿ) ನಾವು ವಿಸ್ತಾರವಾಗಿ ಹೇಳುವೆವು. ತನ್ನ ಭಕ್ತರ ಕುರಿತು ಭಗವಂತನ ಹೃದಯವು ದಯೆಯಿಂದ ತುಂಬಿರುತ್ತದೆ. ಅದರಿಂದಲೇ ಅಖಿಲ ಜಗತ್ತಿನ ಪೂಜನೀಯ ಗುರುವಾಗಿರುವ ಭಗವಾನ್ ನಾರಾಯಣನು ಕೈಯಲ್ಲಿ ಗದೆಯನ್ನು ಧರಿಸಿಕೊಂಡು ಸುತಲಲೋಕದಲ್ಲಿ ಬಲಿಚಕ್ರವರ್ತಿಯ ಮನೆಯ ಬಾಗಿಲಲ್ಲಿ ಸದಾಕಾಲ ಉಪಸ್ಥಿತನಾಗಿದ್ದಾನೆ. ದುರಹಂಕಾರಿ ರಾವಣನು ಒಮ್ಮೆ ದಿಗ್ವಿಜಯ ಮಾಡುತ್ತಾ ಸುತಲ ಲೋಕಕ್ಕೆ ಬಂದಾಗ ಭಗವಂತನು ಅವನನ್ನು ತನ್ನ ಕಾಲಿನ ಅಂಗುಷ್ಠದಿಂದಲೇ ಲಕ್ಷಾಂತರ ಯೋಜನ ದೂರಕ್ಕೆ ಎಸೆದುಬಿಟ್ಟಿದ್ದನು. ॥ ೨೭ ॥

ತತೋಽಧಸ್ತಾತ್ತಲಾತಲೇ ಮಯೋ ನಾಮ ದಾನವೇಂದ್ರಸ್ತ್ರಿಪುರಾಧಿಪತಿರ್ಭಗವತಾ ಪುರಾರಿಣಾ ತ್ರಿಲೋಕೀಶಂ ಚಿಕೀರ್ಷುಣಾ ನಿರ್ದಗ್ಧಸ್ವಪುರತ್ರಯಸ್ತತ್ಪ್ರಸಾದಾಲ್ಲಬ್ಧಪದೋ ಮಾಯಾವಿನಾಮಾಚಾರ್ಯೋ ಮಹಾದೇವೇನ ಪರಿರಕ್ಷಿತೋ ವಿಗತಸುದರ್ಶನಭಯೋ ಮಹೀಯತೇ ॥ ೨೮ ॥

ಸುತಲ ಲೋಕದ ಕೆಳಗೆ ತಲಾತಲಲೋಕವಿದೆ. ಅಲ್ಲಿ ತ್ರಿಪುರಾಧಿಪತಿ ದಾನವರಾಜ ಮಯನು ಇರುತ್ತಾನೆ. ಹಿಂದೆ ತ್ರಿಲೋಕಕ್ಕೆ ಮಂಗಳವನ್ನುಂಟು ಮಾಡುವುದಕ್ಕಾಗಿ ಭಗವಾನ್ ಶಂಕರನು ಅವನ ಮೂರೂ ಪುರವನ್ನು ಸುಟ್ಟುಬೂದಿ ಮಾಡಿದ್ದನು. ಮತ್ತೆ ಅವನ ಕೃಪೆಯಿಂದಲೇ ಮಯನಿಗೆ ಈ ಸ್ಥಾನವು ದೊರೆಯಿತು. ಮಯನು ಮಾಯಾವಿಗಳ ಪರಮಗುರುವಾಗಿದ್ದಾನೆ ಮತ್ತು ದೇವದೇವ ಮಹಾದೇವನಿಂದ ಸುರಕ್ಷಿತನಾಗಿದ್ದಾನೆ. ಅದರಿಂದ ಅವನಿಗೆ ಸುದರ್ಶನಚಕ್ರದಿಂದಲೂ ಯಾವುದೇ ಭಯವಿಲ್ಲ. ಅಲ್ಲಿಯ ನಿವಾಸಿಗಳು ಅವನನ್ನು ತುಂಬಾ ಆದರಿಸುತ್ತಾರೆ. ॥ ೨೮ ॥

ತತೋಽಧಸ್ತಾನ್ಮಹಾತಲೇ ಕಾದ್ರವೇಯಾಣಾಂ ಸರ್ಪಾಣಾಂ ನೈಕಶಿರಸಾಂ ಕ್ರೋಧವಶೋ ನಾಮ ಗಣಃ ಕುಹಕತಕ್ಷಕಕಾಲೀಯಸುಷೇಣಾದಿಪ್ರಧಾನಾ ಮಹಾಭೋಗವಂತಃ ಪತತ್ತ್ರಿರಾಜಾಧಿಪತೇಃ ಪುರುಷವಾಹಾದನವರತಮುದ್ವಿಜಮಾನಾಃ ಸ್ವಕಲತ್ರಾಪತ್ಯಸುಹೃತ್ಕುಟುಂಬಸಂಗೇನ ಕ್ವಚಿತ್ಪ್ರಮತ್ತಾ ವಿಹರಂತಿ ॥ ೨೯ ॥

ಅದರ ಕೆಳಗೆ ಮಹಾತಲದಲ್ಲಿ ಕದ್ರುವಿನಿಂದ ಉತ್ಪನ್ನರಾದ ಅನೇಕ ತಲೆಗಳುಳ್ಳ 'ಕ್ರೋಧವಶ'ರೆಂಬ ಸರ್ಪಗಳ ಒಂದು ಸಮುದಾಯವು ವಾಸಿಸುತ್ತದೆ. ಅವರಲ್ಲಿ ಕುಹಕ, ತಕ್ಷಕ, ಕಾಲಿಯ ಮತ್ತು ಸುಷೇಣ ಮುಂತಾದವರು ಮುಖ್ಯರಾಗಿದ್ದಾರೆ. ಅವರಿಗೆ ದೊಡ್ಡ-ದೊಡ್ಡ ಹೆಡೆಗಳಿವೆ. ಅವರು ಸದಾಕಾಲ ಭಗವಂತನ ವಾಹನನಾದ ಪಕ್ಷಿರಾಜ ಗರುಡನಿಗೆ ಹೆದರುತ್ತಾ ಇರುತ್ತಾರೆ. ಹೀಗಿದ್ದರೂ ಕೆಲವೊಮ್ಮೆ ತಮ್ಮ ಪತ್ನೀ, ಪುತ್ರರು, ಮಿತ್ರರು, ಬಂಧು-ಬಾಂಧವರ ಸಂಗದಲ್ಲಿ ಮತ್ತರಾಗಿ ವಿಹರಿಸುತ್ತಾ ಇರುವರು. ॥ ೨೯ ॥

ತತೋಽಧಸ್ತಾದ್ರಸಾತಲೇ ದೈತೇಯಾ ದಾನವಾಃ ಪಣಯೋ ನಾಮ ನಿವಾತಕವಚಾಃ ಕಾಲೇಯಾ ಹಿರಣ್ಯಪುರವಾಸಿನ ಇತಿ ವಿಬುಧಪ್ರತ್ಯನೀಕಾ ಉತ್ಪತ್ತ್ಯಾ ಮಹೌಜಸೋ ಮಹಾಸಾಹಸಿನೋ ಭಗವತಃ ಸಕಲಲೋಕಾನುಭಾವಸ್ಯ ಹರೇರೇವ ತೇಜಸಾ ಪ್ರತಿಹತಬಲಾವಲೇಪಾ ಬಿಲೇಶಯಾ ಇವ ವಸಂತಿ ಯೇ ವೈ ಸರಮಯೇಂದ್ರದೂತ್ಯಾ ವಾಗ್ಭಿರ್ಮಂತ್ರವರ್ಣಾಭಿರಿಂದ್ರಾದ್ಬಿಭ್ಯತಿ ॥ ೩೦ ॥

ಅದರ ಕೆಳಗೆ ರಸಾತಲದಲ್ಲಿ 'ಪಣಿ' ಎಂಬ ದೈತ್ಯರು–ದಾನವರು ಇರುತ್ತಾರೆ. ಇವರು ನಿವಾತಕವಚ, ಕಾಲೇಯ ಮತ್ತು ಹಿರಣ್ಯಪುರವಾಸಿಗಳು ಎಂದೂ ಕರೆಸಲ್ಪಡುವರು. ಇವರಿಗೆ ದೇವತೆಗಳೊಂದಿಗೆ ವೈರವಿದೆ. ಇವರು ಹುಟ್ಟಿನಿಂದಲೇ ಅತಿಬಲಾಢ್ಯರೂ, ಮಹಾನ್ ಸಾಹಸಿಗಳೂ ಆಗಿರುತ್ತಾರೆ. ಆದರೆ ಸಮಸ್ತ ಲೋಕಗಳಲ್ಲಿ ಹರಡಿರುವ ಪ್ರಭಾವವುಳ್ಳ ಶ್ರೀಹರಿಯ ತೇಜದಿಂದ ಬಲ-ಅಭಿಮಾನಗಳು ಚೂರು-ಚೂರಾಗಿ ಹೋದಕಾರಣ ಇವರು ಸರ್ಪಗಳಂತೆ ಅಡಗಿಕೊಂಡೇ ಇರುವರು ಹಾಗೂ ಇಂದ್ರನ ದೂತಿಯಾದ ಸರಮಾ ಎಂಬ ದೇವಶುನಿಯು ನುಡಿದ ಮಂತ್ರರೂಪವಾದ * ಶಾಪಕ್ಕೆ ಹೆದರಿ ಇಂದ್ರನಿಗೆ ಭಯಪಡುತ್ತಾರೆ. ॥ ೩೦ ॥

ತತೋಽಧಸ್ತಾತ್ಪಾತಾಲೇ ನಾಗಲೋಕಪತಯೋ ವಾಸುಕಿಪ್ರಮುಖಾಃ ಶಂಖಕುಲಿಕಮಹಾಶಂಖಶ್ವೇತಧನಂಜಯಧೃತರಾಷ್ಟ್ರಶಂಖಚೂಡಕಂಬಲಾಶ್ವತರದೇವದತ್ತಾದಯೋ ಮಹಾ ಭೋಗಿನೋ ಮಹಾಮರ್ಷಾ ನಿವಸಂತಿ ಯೇಷಾಮು ಹ ವೈ ಪಂಚಸಪ್ತದಶಶತಸಹಸ್ರಶೀರ್ಷಾಣಾಂ ಫಣಾಸು ವಿರಚಿತಾ ಮಹಾಮಣಯೋ ರೋಚಿಷ್ಣವಃ ಪಾತಾಲವಿವರತಿಮಿರನಿಕರಂ ಸ್ವರೋಚಿಷಾ ವಿಧಮಂತಿ ॥ ೩೧ ॥

ರಸಾತಳದ ಕೆಳಗೆ ಪಾತಾಳವಿದೆ. ಅಲ್ಲಿ ಶಂಖ, ಕುಲಿಕ, ಮಹಾಶಂಖ, ಶ್ವೇತ, ಧನಂಜಯ, ಧೃತರಾಷ್ಟ್ರ, ಶಂಖಚೂಡ, ಕಂಬಲ, ಅಶ್ವತರ ಮತ್ತು ದೇವದತ್ತ ಮುಂತಾದ ಭಾರೀ ಕ್ರೋಧವುಳ್ಳ ದೊಡ್ಡ-ದೊಡ್ಡ ಹೆಡೆಯುಳ್ಳ ನಾಗಗಳು ವಾಸಿಸುತ್ತಾರೆ. ಇವರಲ್ಲಿ ವಾಸುಕಿಯು ಮುಖ್ಯನಾಗಿದ್ದಾನೆ. ಅವರಲ್ಲಿ ಕೆಲವರಿಗೆ ಐದು, ಕೆಲವರಿಗೆ ಏಳು, ಕೆಲವರಿಗೆ ಹತ್ತು, ಕೆಲವರಿಗೆ ನೂರು ಮತ್ತು ಕೆಲವರಿಗೆ ಸಾವಿರ ಹೆಡೆಗಳಿವೆ. ಅವರ ಹೆಡೆಗಳಲ್ಲಿ ಹೊಳೆಯುತ್ತಿರುವ ಮಣಿಗಳು ತಮ್ಮ ಪ್ರಕಾಶದಿಂದ ಪಾತಾಳಲೋಕದ ಎಲ್ಲ ಕತ್ತಲೆಯನ್ನು ದೂರಗೊಳಿಸುತ್ತಾರೆ. ॥ ೩೧ ॥

ಇಪ್ಪತ್ತನಾಲ್ಕನೆಯ ಅಧ್ಯಾಯವು ಮುಗಿಯಿತು. ॥ ೨೪ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಪಂಚಮಸ್ಕಂಧೇ
ರಾಹ್ವಾದಿಸ್ಥಿತಿಬಿಲಸ್ವರ್ಗಮರ್ಯಾದಾನಿರೂಪಣಂ ನಾಮ ಚತುರ್ವಿಂಶೋಽಧ್ಯಾಯಃ ॥ ೨೪ ॥

ಇಪ್ಪತ್ತೈದನೆಯ ಅಧ್ಯಾಯ

ಶ್ರೀಸಂಕರ್ಷಣದೇವರ ವರ್ಣನೆ ಮತ್ತು ಸ್ತುತಿ

ಶ್ರೀಶುಕ ಉವಾಚ

ತಸ್ಯ ಮೂಲದೇಶೇ ತ್ರಿಂಶದ್ಯೋಜನಸಹಸ್ರಾಂತರ ಆಸ್ತೇ ಯಾ ವೈ ಕಲಾ ಭಗವತಸ್ತಾಮಸೀ ಸಮಾಖ್ಯಾತಾನಂತ ಇತಿ ಸಾತ್ವತೀಯಾ ದ್ರಷ್ಟೃದೃಶ್ಯಯೋಃ ಸಂಕರ್ಷಣಮಹಮಿತ್ಯಭಿಮಾನಲಕ್ಷಣಂ ಯಂ ಸಂಕರ್ಷಣಮಿತ್ಯಾ-

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಮಹಾರಾಜ! ಪಾತಾಳಲೋಕದ ಕೆಳಗೆ ಮೂವತ್ತುಸಾವಿರ ಯೋಜನಗಳ ದೂರದಲ್ಲಿ ಭಗವಾನ್ ಶ್ರೀನಾರಾಯಣನ ಕಲಾಮೂರ್ತಿಯಾಗಿ ತಾಮಸಾಹಂಕಾರಕ್ಕೆ ಅಭಿಮಾನಿಯಾಗಿರುವ 'ಅನಂತ' ಎಂದು ಪ್ರಸಿದ್ಧನಾದ ಆದಿಶೇಷನು ವಾಸವಾಗಿದ್ದಾನೆ. ಆತನು ಅಹಂಕಾರಕ್ಕೆ ಅಭಿಮಾನಿಯಾಗಿ ದೃಶ್ಯವಾದ ದೇಹೇಂದ್ರಿಯ ಮತ್ತು ಜಗತ್ತು ಇವುಗಳನ್ನು ನೋಡುವ ದ್ರಷ್ಟಾ ಜೀವನು ಅವುಗಳೊಂದಿಗೆ ತಾದಾತ್ಮ್ಯಹೊಂದುವುದು ಈ ಅಹಂಕಾರದಿಂದ. ಆದ್ದರಿಂದ

* ಪಣಿಗಳೆಂಬ ದೈತ್ಯರು ಪೃಥ್ವಿಯನ್ನು ಅಪಹರಿಸಿ ರಸಾತಳದಲ್ಲಿ ಬಚ್ಚಿಟ್ಟರು. ಆಗ ಇಂದ್ರನು ಅದನ್ನು ಹುಡುಕುವುದಕ್ಕಾಗಿ ಸರಮಾ ಎಂಬ ಒಂದು ದೂತಿಯನ್ನು ಕಳಿಸಿದ್ದನು. ಸರಮೆಯು ದೈತ್ಯರಲ್ಲಿ ಸಂಧಿಮಾಡಲು ಬಯಸಿದಾಗ, ಆದರೆ ಸರಮೆಯು ಸಂಧಿಮಾಡದೆ ಇಂದ್ರನನ್ನು ಸ್ತುತಿಸುತ್ತಾ – **'ಹತಾ ಇಂದ್ರೇಣ ಪಣಯಃ ಶಯಧ್ವಮ್'** (ಎಲೈ ಪಣಿಗಳೇ! ನೀವು ಇಂದ್ರನ ಕೈಯಿಂದ ಹತರಾಗಿ ಭೂಮಿಯಲ್ಲಿ ಮಲಗಿಬಿಡಿರಿ) ಎಂದು ಶಪಿಸಿದಳು. ಈ ಶಾಪದಿಂದಾಗಿ ಅವರಿಗೆ ಇಂದ್ರನ ಭಯವು ಪೀಡಿಸುತ್ತಿರುತ್ತದೆ; ಎಂಬ ಒಂದು ಕಥೆಯಿದೆ.

ಚಕ್ಷತೇ ॥ ೧ ॥ ಯಸ್ಯೇದಂ ಕ್ಷಿತಿಮಂಡಲಂ ಭಗವತೋಽನಂತಮೂರ್ತೇಃ ಸಹಸ್ರಶಿರಸ ಏಕಸ್ಮಿನ್ನೇವ ಶೀರ್ಷಣಿ ಧ್ರಿಯಮಾಣಂ ಸಿದ್ಧಾರ್ಥ ಇವ ಲಕ್ಷ್ಯತೇ ॥ ೨ ॥ ಯಸ್ಯ ಹ ವಾ ಇದಂ ಕಾಲೇನೋಪಸಂಜಿಹೀರ್ಷತೋಽಮರ್ಷವಿರಚಿತರುಚಿರಭ್ರಮದ್ಭ್ರುವೋರಂತರೇಣ ಸಾಂಕರ್ಷಣೋ ನಾಮ ರುದ್ರ ಏಕಾದಶವ್ಯೂಹಸ್ತ್ರ್ಯಕ್ಷಸ್ತ್ರಿಶಿಖಂ ಶೂಲಮುತ್ತಂಭಯನ್ನುದತಿಷ್ಠತ್ ॥ ೩ ॥ ಯಸ್ಯಾಂಘ್ರಿಕಮಲಯುಗಲಾರುಣವಿಶದನಖಮಣಿಷಂಡಮಂಡಲೇಷ್ವಹಿಪತಯಃ ಸಹ ಸಾತ್ವತರ್ಷಭೈರೇಕಾಂತಭಕ್ತಿಯೋಗೇನಾವನಮಂತಃ ಸ್ವವದನಾನಿ ಪರಿಸ್ಫುರತ್ಕುಂಡಲಪ್ರಭಾಮಂಡಿತಗಂಡಸ್ಥಲಾನ್ಯತಿಮನೋಹರಾಣಿ ಪ್ರಮುದಿತಮನಸಃ ಖಲು ವಿಲೋಕಯಂತಿ ॥ ೪ ॥ ಯಸ್ಯೈವ ಹಿ ನಾಗರಾಜಕುಮಾರ್ಯ ಆಶಿಷ ಆಶಾಸಾನಾಶ್ಚಾರ್ವಂಗವಲಯವಿಲಸಿತವಿಶದವಿಪುಲಧವಲಸುಭಗರುಚಿರಭುಜರಜತಸ್ತಂಭೇಷ್ವಗುರುಚಂದನಕುಂಕುಮಪಂಕಾನುಲೇಪೇನಾವಲಿಂಪಮಾನಾಸ್ತದಭಿಮರ್ಶನೋನ್ಮಥಿತಹೃದಯಮಕರಧ್ವಜಾವೇಶರುಚಿರಲಲಿತಸ್ಮಿತಾಸ್ತದನುರಾಗಮದಮುದಿತಮದವಿಘೂರ್ಣಿತಾರುಣಕರುಣಾವಲೋಕನಯನವದನಾರವಿಂದಂ ಸವ್ರೀಡಂ ಕಿಲ ವಿಲೋಕಯಂತಿ ॥ ೫ ॥

ಸ ಏವ ಭಗವಾನನಂತೋಽನಂತಗುಣಾರ್ಣವ ಆದಿದೇವ ಉಪಸಂಹೃತಾಮರ್ಷರೋಷವೇಗೋ ಲೋಕಾನಾಂ ಸ್ವಸ್ತಯ ಆಸ್ತೇ ॥ ೬ ॥

ಧ್ಯಾಯಮಾನಃ ಸುರಾಸುರೋರಗಸಿದ್ಧಗಂಧರ್ವವಿದ್ಯಾಧರಮುನಿಗಣೈರನವರತಮದಮುದಿತವಿಕೃತವಿಹ್ವಲಲೋಚನಃ ಸುಲಲಿತಮುಖರಿಕಾಮೃತೇನಾಪ್ಯಾಯಮಾನಃ ಸ್ವಪಾರ್ಷದವಿಬುಧಯೂಥಪಾನಪರಿಮ್ಲಾನರಾಗನವತುಲಸಿಕಾಮೋದಮಧ್ವಾಸವೇನ ಮಾದ್ಯನ್ಮಧುಕರವ್ರಾತಮಧುರಗೀತಶ್ರಿಯಂ ವೈಜಯಂತೀಂ ಸ್ವಾಂ ವನಮಾಲಾಂ ನೀಲವಾಸಾ ಏಕಕುಂಡಲೋ ಹಲಕಕುದಿ ಕೃತಸುಭಗ-

ಪಾಂಚರಾತ್ರ ಆಗಮದ ಅನುಯಾಯಿ ಭಕ್ತರು ಇವನನ್ನು ಸಂಕರ್ಷಣನೆಂದು ಹೇಳುತ್ತಾರೆ. ॥ ೧ ॥ ಭಗವಾನ್ ಅನಂತನಿಗೆ ಒಂದು ಸಾವಿರ ತಲೆಗಳಿವೆ. ಆ ಮಹಾಫಣಾಮಂಡಲದಲ್ಲಿ ಈ ಇಡೀ ಭೂಮಂಡಲವು ಒಂದೇ ಹೆಡೆಯಮೇಲೆ ಧರಿಸಲ್ಪಟ್ಟು ಒಂದು ಸಾಸಿವೆ ಕಾಳಿನಂತೆ ಕಾಣುತ್ತದೆ. ॥ ೨ ॥ ಪ್ರಳಯಕಾಲವು ಬಂದಾಗ ಇವನಿಗೆ ಈ ವಿಶ್ವದ ಉಪಸಂಹಾರ ಮಾಡುವ ಇಚ್ಛೆ ಉಂಟಾದಾಗ ಕ್ರೋಧದಿಂದ ಹುಬ್ಬುಗಂಟಿಕ್ಕಿ ತಿರುಗುತ್ತಿರುವ ಆತನ ಮನೋಹರ ಭ್ರುಕುಟಿಯ ಮಧ್ಯದಿಂದ ಸಂಕರ್ಷಣ ಎಂಬ ರುದ್ರರು ಪ್ರಕಟರಾಗುತ್ತಾರೆ. ಅವರ ವ್ಯೂಹ ಸಂಖ್ಯೆಯು ಹನ್ನೊಂದು ಇರುತ್ತದೆ. ಅವರೆಲ್ಲರೂ ಮುಕ್ಕಣ್ಣರಾಗಿ ಕೈಯಲ್ಲಿ ತ್ರಿಶೂಲವನ್ನು ಹಿಡಿದಿರುತ್ತಾರೆ. ॥ ೩ ॥ ಭಗವಾನ್ ಸಂಕರ್ಷಣನ ಚರಣಕಮಲಗಳ ದುಂಡಾಗಿರುವ ಸ್ವಚ್ಛ ಮತ್ತು ಅರುಣವರ್ಣ ನಖಮಣಿಗಳ ಸಾಲುಗಳು ಹೊಳೆಯುತ್ತಾ ಇವೆ. ಬೇರೆ ಮುಖ್ಯ-ಮುಖ್ಯರಾದ ನಾಗರಾಜರು ಭಕ್ತರೊಡಗೂಡಿ ಅನನ್ಯ ಭಕ್ತಿಭಾವದಿಂದ ಅವನನ್ನು ವಂದಿಸುತ್ತಿರುವಾಗ ಆ ನಖಮಣಿಗಳಲ್ಲಿ ತಮ್ಮ ಕುಂಡಲಮಂಡಿತ ಕಾಂತಿಯುಕ್ತ ಕಮನೀಯ ಕಪೋಲಗಳುಳ್ಳ ಮುಖಾರವಿಂದದ ಮನಮೋಹಕವಾದ ಪ್ರತಿಬಿಂಬವನ್ನು ಕಂಡು ಅವರ ಮನಸ್ಸು ಆನಂದದಿಂದ ತುಂಬಿಹೋಗುತ್ತದೆ. ॥ ೪ ॥ ಅನೇಕ ನಾಗರಾಜರ ಕನ್ಯೆಯರು ವಿವಿಧ ಕಾಮನೆಗಳಿಂದ ಅವನ ಚೆಲುವಾದ ಅಂಗಮಂಡಲದಲ್ಲಿ ಬೆಳ್ಳಿಯ ಕಂಬಗಳಂತೆ ಬೆಳ್ಳಗೆ ಹೊಳೆಯುತ್ತಾ, ತೋಳುಗಳಿಂದ ಮಿರುಗುತ್ತಾ ದುಂಡು-ದುಂಡಾಗಿ ನೀಳವಾದ ತೋಳುಗಳಿಗೆ ಅಗರು, ಚಂದನ ಮತ್ತು ಕುಂಕುಮ ಕೇಸರಗಳ ಲೇಪವನ್ನು ಹಚ್ಚುತ್ತಿರುವರು. ಆತನ ಅಂಗಸ್ಪರ್ಶದಿಂದ ಅವರಲ್ಲಿ ಪ್ರೇಮಭಾವವು ಹರಿಯತೊಡಗುತ್ತದೆ. ಆಗ ಅವರು ಕರುಣಾಪೂರ್ಣವಾಗಿ ಕೆಂದಾವರೆಯಂತೆ ಕಂಗೊಳಿಸುವ ಕಣ್ಣುಗಳಿಂದ ಕೂಡಿ ಪ್ರೇಮೋನ್ಮಾದದಿಂದ ಆನಂದಗೊಂಡಿರುವ ಆತನ ಮುಖಕಮಲವನ್ನು ಮಧುರವೂ, ಮನೋಹರವೂ ಆದ ಕಿರುನಗೆಯಿಂದ ಲಜ್ಜಾಭಾವ ಸಹಿತವಾದ ಅನುರಾಗದಿಂದ ನೋಡುತ್ತಿರುವರು. ॥ ೫ ॥ ಅನಂತಗುಣಗಳ ಸಾಗರನಾದ ಆ ಆದಿದೇವ ಭಗವಾನ್ ಅನಂತನು ತನ್ನ ಅಸಹನ-ಕ್ರೋಧಗಳನ್ನು ಉಪಸಂಹಾರಮಾಡಿಕೊಂಡು ಸಮಸ್ತಲೋಕಗಳ ಕಲ್ಯಾಣಕ್ಕಾಗಿ ಅಲ್ಲಿ ವಿರಾಜಮಾನನಾಗಿದ್ದಾನೆ. ॥ ೬ ॥

ದೇವತೆಗಳು, ಅಸುರರು, ನಾಗರು, ಸಿದ್ಧರು, ಗಂಧರ್ವರು, ವಿದ್ಯಾಧರರು, ಮುನಿಗಣಗಳು ಆ ಭಗವಾನ್ ಅನಂತನನ್ನು ಧ್ಯಾನಿಸುತ್ತಾ ಇರುವರು. ಅವನ ನೇತ್ರಗಳು ನಿರಂತರವಾಗಿ ಆನಂದಾನುಭಾವದಿಂದ ಚಂಚಲವಾಗಿ ತಿರುಗುತ್ತಿರುವಂತೆ ಕಾಣುತ್ತಿವೆ. ಅವನು ಮಧುರವಾದ ವಚನಾಮೃತಗಳಿಂದ ತನ್ನ ಪಾರ್ಷದರನ್ನು ಮತ್ತು ದೇವತಾಗಣಗಳ ನಾಯಕರನ್ನು ಸಂತೋಷಗೊಳಿಸುತ್ತಿದ್ದಾನೆ. ಸ್ವಾಮಿಯ ಮೈಯಲ್ಲಿ ನೀಲಾಂಬರ ಹಾಗೂ ಕಿವಿಗಳಲ್ಲಿ ಕೇವಲ ಒಂದೇ ಕುಂಡಲವು ಹೊಳೆಯುತ್ತಿದೆ. ಎಂದೆಂದಿಗೂ ಬಾಡದೇ ಇರುವ ಹೊಸ ತುಲಸಿಯ ಸುವಾಸನೆ ಮತ್ತು ರಸಗಳ ಸೇವನೆಯಿಂದ ಮತ್ತೇರಿ ಝೇಂಕರಿಸುತ್ತಿರುವ ದುಂಬಿಗಳ ಸಂಗೀತದಿಂದ ಶೋಭಿಸುತ್ತಿರುವ ವೈಜಯಂತಿ ಎಂಬ ಸಾಟಿಯಿಲ್ಲದ

ಸುಂದರಭುಜೋ ಭಗವಾನ್ಮಾಹೇಂದ್ರೋ ವಾರಣೇಂದ್ರ ಇವ ಕಾಂಚನೀಂ ಕಕ್ಷಾಮುದಾರಲೀಲೋ ಬಿಭರ್ತಿ ॥ ೭ ॥

ಯ ಏಷ ಏವಮನುಶ್ರುತೋ ಧ್ಯಾಯಮಾನೋ ಮುಮುಕ್ಷೂಣಾಮನಾದಿಕಾಲಕರ್ಮವಾಸನಾಗ್ರಥಿತಮವಿದ್ಯಾಮಯಂ ಹೃದಯಗ್ರಂಥಿಂ ಸತ್ತ್ವರಜಸ್ತಮೋಮಯಮಂತರ್ಹೃದಯಂ ಗತ ಆಶು ನಿರ್ಭಿನತ್ತಿ ತಸ್ಯಾನುಭಾವಾನ್ ಭಗವಾನ್ ಸ್ವಾಯಂಭುವೋ ನಾರದಃ ಸಹ ತುಂಬುರುಣಾ ಸಭಾಯಾಂ ಬ್ರಹ್ಮಣಃ ಸಂಶ್ಲೋಕಯಾಮಾಸ ॥ ೮ ॥

ಉತ್ಪತ್ತಿಸ್ಥಿತಿಲಯಹೇತವೋಽಸ್ಯ ಕಲ್ಪಾಃ
ಸತ್ತ್ವಾದ್ಯಾಃ ಪ್ರಕೃತಿಗುಣಾ ಯದೀಕ್ಷಯಾಽಽಸನ್ ।
ಯದ್ರೂಪಂ ಧ್ರುವಮಕೃತಂ ಯದೇಕಮಾತ್ಮ-
ನ್ನಾನಾಧಾತ್ಕಥಮು ಹ ವೇದ ತಸ್ಯ ವರ್ತ್ಮ ॥ ೯ ॥

ಮೂರ್ತಿಂ ನಃ ಪುರುಕೃಪಯಾ ಬಭಾರ ಸತ್ತ್ವಂ
ಸಂಶುದ್ಧಂ ಸದಸದಿದಂ ವಿಭಾತಿ ಯತ್ರ ।
ಯಲ್ಲೀಲಾಂ ಮೃಗಪತಿರಾದದೇಽನವದ್ಯಾ-
ಮಾದಾತುಂ ಸ್ವಜನಮನಾಂಸ್ಯುದಾರವೀರ್ಯಃ ॥ ೧೦ ॥

ಯನ್ನಾಮ ಶ್ರುತಮನುಕೀರ್ತಯೇದಕಸ್ಮಾ-
ದಾರ್ತೋ ವಾ ಯದಿ ಪತಿತಃ ಪ್ರಲಂಭನಾದ್ವಾ ।
ಹನ್ತ್ಯಂಹಃ ಸಪದಿ ನೃಣಾಮಶೇಷಮನ್ಯಂ
ಕಂ ಶೇಷಾದ್ಭಗವತ ಆಶ್ರಯೇನ್ಮುಮುಕ್ಷುಃ ॥ ೧೧ ॥

ಮೂರ್ಧನ್ಯರ್ಪಿತಮಣುವತ್ಸಹಸ್ರಮೂರ್ಧ್ನೋ
ಭೂಗೋಲಂ ಸಗಿರಿಸರಿತ್ಸಮುದ್ರಸತ್ತ್ವಮ್ ।
ಆನಂತ್ಯಾದನಿಮಿತವಿಕ್ರಮಸ್ಯ ಭೂಮ್ನಃ
ಕೋ ವೀರ್ಯಾಣ್ಯಧಿಗಣಯೇತ್ಸಹಸ್ರಜಿಹ್ವಃ ॥ ೧೨ ॥

ಏವಂಪ್ರಭಾವೋ ಭಗವಾನನಂತೋ
ದುರಂತವೀರ್ಯೋರುಗುಣಾನುಭಾವಃ ।
ಮೂಲೇ ರಸಾಯಾಃ ಸ್ಥಿತ ಆತ್ಮತಂತ್ರೋ
ಯೋ ಲೀಲಯಾ ಕ್ಷ್ಮಾಂ ಸ್ಥಿತಯೇ ಬಿಭರ್ತಿ ॥ ೧೩ ॥

ವನಮಾಲೆಯಿಂದ ಅಲಂಕೃತನಾಗಿರುವ ಸ್ವಾಮಿಯು ಸುವರ್ಣ ಮಾಲೆಯಿಂದ ಅಲಂಕೃತವಾದ ಐರಾವತದಂತೆ ರಾರಾಜಿಸುತ್ತಿದ್ದಾನೆ. ತನ್ನ ಸುಭಗವೂ, ಸುಂದರವೂ ಆದ ಭುಜವನ್ನು ನೇಗಿಲಿನ ಹಿಡಿಯಮೇಲೆ ಇರಿಸಿಕೊಂಡು ಮೆರೆಯುತ್ತಿದ್ದಾನೆ. ॥ ೭ ॥

ಪರೀಕ್ಷಿದ್ರಾಜನೇ! ಹೀಗೆ ಭಗವಾನ್ ಅನಂತನ ಮಾಹಾತ್ಮ್ಯವನ್ನು ಶ್ರವಣಿಸುತ್ತಾ, ಧ್ಯಾನಮಾಡುವುದರಿಂದ ಮುಮುಕ್ಷುಗಳ ಹೃದಯದಲ್ಲಿ ಪ್ರಕಟಗೊಂಡು ಅವರ ಅನಾದಿಕಾಲದ ಕರ್ಮ ವಾಸನೆಗಳಿಂದ ಕಗ್ಗಂಟಾದ ಸತ್ತ್ವ, ರಜ, ತಮೋಗುಣರೂಪ ಅವಿದ್ಯಾಮಯವಾದ ಹೃದಯದ ಗಂಟನ್ನು ಒಡನೆಯೇ ಕತ್ತರಿಸಿ ಬಿಡುವನು. ಬ್ರಹ್ಮಪುತ್ರರಾದ ಭಗವಾನ್ ನಾರದರು ತುಂಬುರರು ಗಂಧರ್ವರೊಡನೆ ಒಮ್ಮೆ ಬ್ರಹ್ಮದೇವರ ಸಭೆಯಲ್ಲಿ ಆ ಸಂಕರ್ಷಣ ದೇವರ ಗುಣಗಳನ್ನು ಹೀಗೆ ಗಾನ ಮಾಡಿದರು. ॥ ೮ ॥

ಜಗತ್ತಿನ ಉತ್ಪತ್ತಿ-ಸ್ಥಿತಿ-ಲಯಗಳಿಗೆ ಕಾರಣವಾಗಿರುವ ಸತ್ತ್ವವೇ ಮುಂತಾದ ಪ್ರಾಕೃತಗುಣಗಳು ಯಾರ ದೃಷ್ಟಿ (ಸಂಕಲ್ಪ) ಮಾತ್ರದಿಂದಲೇ ತಮ್ಮ-ತಮ್ಮ ಕಾರ್ಯವನ್ನು ಮಾಡಲು ಸಮರ್ಥವಾಗುವವೋ, ಯಾರ ಸ್ವರೂಪವು ಧ್ರುವ (ಅನಂತ) ಮತ್ತು ಅಕೃತ (ಅನಾದಿ)ಯಾಗಿದೆಯೋ, ಕೇವಲ ಒಬ್ಬನೇ ಆಗಿದ್ದರೂ ಈ ನಾನಾತ್ಮಕವಾದ ಪ್ರಪಂಚವನ್ನು ಯಾರು ತನ್ನಲ್ಲಿ ಧರಿಸಿಕೊಂಡಿರುವನೋ ಆ ಭಗವಾನ್ ಸಂಕರ್ಷಣನ ತತ್ತ್ವವನ್ನು ಯಾರಾದರೂ ಹೇಗೆ ತಾನೇ ತಿಳಿಯಬಲ್ಲರು? ॥ ೯ ॥ ಯಾರಲ್ಲಿ ಈ ಕಾರ್ಯ- ಕಾರಣರೂಪವಾದ ಇಡೀ ಪ್ರಪಂಚವು ತೋರುವುದೋ ಹಾಗೂ ತನ್ನ ನಿಜಜನರ ಚಿತ್ತವನ್ನು ಆಕರ್ಷಿಸಲಿಕ್ಕಾಗಿಯೇ ಮಾಡಿರುವ ಪರಾಕ್ರಮವುಳ್ಳ ಲೀಲೆಯನ್ನು ಪರಮ ಪರಾಕ್ರಮಿಸಿಂಹವು ಆದರ್ಶವೆಂದು ತಿಳಿದು ತನ್ನದಾಗಿಸಿಕೊಂಡಿದೆಯೋ, ಆ ಉದಾರ ವೀರ್ಯನಾದ ಭಗವಾನ್ ಸಂಕರ್ಷಣನು ನಮ್ಮ ಮೇಲೆ ಕೃಪೆಗೈದು ಈ ವಿಶುದ್ಧ ಸತ್ತ್ವಮಯ ಸ್ವರೂಪವನ್ನು ಧರಿಸುವನು. ॥ ೧೦ ॥ ಆತನ ನಾಮಮಹಿಮೆಯೂ ಅಪಾರವಾದುದು. ಪೀಡಿತನಾಗಿರಲೀ, ಪಾಪಿಯೇ ಆಗಿರಲೀ, ಆಕಸ್ಮಿಕವಾಗಿಯಾದರೂ, ವಿನೋದಕ್ಕಾದರೂ, ಮತ್ತೊಬ್ಬರು ಹೇಳಿದ್ದನ್ನು ಕೇಳಿ ಅಣಕಿಸುವುದಕ್ಕಾಗಲೀ, ಆತನ ದಿವ್ಯನಾಮವನ್ನು ಉಚ್ಚರಿಸಿದರೆ ತಾನು ಪಾಪಗಳಿಂದ ಬಿಡುಗಡೆ ಹೊಂದುವನು. ಅಷ್ಟೇ ಅಲ್ಲದೆ ಇತರ ಎಲ್ಲ ಪಾಪಗಳನ್ನೂ ಒಡನೆಯೇ ಧ್ವಂಸಮಾಡುವನು. ಮೋಕ್ಷವನ್ನು ಬಯಸುವವನು ಇಂತಹ ಶ್ರೀಶೇಷಭಗವಂತನನ್ನು ಬಿಟ್ಟು ಬೇರೆ ಯಾರನ್ನು ಆಶ್ರಯಿಸ ಬಲ್ಲನು? ॥ ೧೧ ॥ ಬೆಟ್ಟ ನದಿಗಳು, ಸಮುದ್ರ ಮುಂತಾದವುಗಳಿಂದ ಕೂಡಿದ ಈ ಇಡೀ ಭೂಮಂಡಲವು ಆ ಸಹಸ್ರಶೀರ್ಷ ಭಗವಂತನ ಒಂದು ತಲೆಯಲ್ಲಿ ಒಂದು ಧೂಳಿನ ಕಣದಂತೆ ನೆಲೆಸಿದೆ. ಅಂತಹ ಅನಂತಸ್ವಾಮಿಯ ಅನಂತವಾದ ಮಹಿಮೆಯನ್ನು ಯಾರೂ ತಿಳಿಯರು. ಸಾವಿರ ನಾಲಿಗೆಗಳಿದ್ದರೂ ಆ ಸರ್ವವ್ಯಾಪಕ ಭಗವಂತನ ಪರಾಕ್ರಮಗಳನ್ನು ಹೇಗೆ ಬಣ್ಣಿಸಬಲ್ಲನು? ॥ ೧೨ ॥ ನಿಜವಾಗಿಯೂ ಅವನ ಅನಂತವಾದ ವೀರ್ಯ, ಅತಿಶಯವಾದ ಗುಣ ಮತ್ತು ಪ್ರಭಾವವು ಅಸೀಮವಾದುದು. ಇಂತಹ ಪ್ರಭಾವಶಾಲಿ ಭಗವಾನ್ ಅನಂತನು ರಸಾತಳದ ಮೂಲದಲ್ಲಿ ತನ್ನದೇ ಮಹಿಮೆಯಲ್ಲಿ ಸ್ಥಿತನಾಗಿ ಸ್ವತಂತ್ರ

ಏತಾ ಹ್ಯೇವೇಹ ನೃಭಿರುಪಗಂತವ್ಯಾ ಗತಯೋ ಯಥಾಕರ್ಮವಿನಿರ್ಮಿತಾ ಯಥೋಪದೇಶಮನುವರ್ಣಿತಾಃ ಕಾಮಾನ್ ಕಾಮಯಮಾನೈಃ ॥ ೧೪ ॥

ಏತಾವತೀರ್ಹಿ ರಾಜನ್ ಪುಂಸಃ ಪ್ರವೃತ್ತಿಲಕ್ಷಣಸ್ಯ ಧರ್ಮಸ್ಯ ವಿಪಾಕಗತಯ ಉಚ್ಚಾವಚಾ ವಿಸದೃಶಾ ಯಥಾಪ್ರಶ್ನಂ ವ್ಯಾಚಖ್ಯೇ ಕಿಮನ್ಯತ್ಕಥಯಾಮ ಇತಿ ॥ ೧೫ ॥

ನಾಗಿದ್ದಾನೆ ಮತ್ತು ಸಮಸ್ತ ಲೋಕಗಳ ಸ್ಥಿತಿಗಾಗಿ ಲೀಲೆಯಿಂದಲೇ ಈ ಪೃಥಿವಿಯನ್ನು ಧರಿಸಿರುವನು. ॥ ೧೩ ॥

ಎಲೈ ರಾಜನೇ! ಭೋಗಗಳನ್ನು ಬಯಸುವ ಮನುಷ್ಯರು ಹೊಂದಲು ಸಾಧ್ಯವಾಗುವಂತೆ ಶ್ರೀಭಗವಂತನು ಅವರ ಕರ್ಮಗಳಿಗೆ ಅನುಗುಣವಾಗಿ ನಿರ್ಮಿಸಿರುವ ಗತಿಗಳು ಇಷ್ಟೆ. ನಾನು ಗುರುಮುಖದಿಂದ ಕೇಳಿರುವ ರೀತಿಯಲ್ಲೇ ಇವನ್ನು ನಿನಗೆ ತಿಳಿಸಿದ್ದೇನೆ. ॥ ೧೪ ॥ ಮನುಷ್ಯನಿಗೆ ಪ್ರವೃತ್ತಿರೂಪವಾದ ಧರ್ಮದ ಪರಿಣಾಮದಲ್ಲಿ ದೊರಕುವ ಪರಸ್ಪರ ವಿಲಕ್ಷಣವಾದ ಉಚ್ಚ-ನೀಚ ಗತಿಗಳು ನಾನಾಪ್ರಕಾರದ್ದಾಗಿದೆ. ಇದನ್ನು ನಿನ್ನ ಪ್ರಶ್ನೆಗನುಸಾರವಾಗಿ ನಾನು ಹೇಳಿಯಾಯಿತು. ಈಗ ಹೇಳು. ಇನ್ನೇನು ಹೇಳಲಿ? ॥ ೧೫ ॥

ಇಪ್ಪತ್ತೈದನೆಯ ಅಧ್ಯಾಯವು ಮುಗಿಯಿತು. ॥ ೨೫ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಪಂಚಮಸ್ಕಂಧೇ ಭೂವಿವರವಿಧ್ಯುಪವರ್ಣನಂ ನಾಮ ಪಂಚವಿಂಶೋಽಧ್ಯಾಯಃ ॥ ೨೫ ॥

ಇಪ್ಪತ್ತಾರನೆಯ ಅಧ್ಯಾಯ

ನರಕಗಳ ಬೇರೆ-ಬೇರೆ ಗತಿಗಳ ವರ್ಣನೆ

ರಾಜೋವಾಚ

ಮಹರ್ಷ ಏತದ್ವೈಚಿತ್ರ್ಯಂ ಲೋಕಸ್ಯ ಕಥಮಿತಿ ॥ ೧ ॥

ಋಷಿರುವಾಚ

ತ್ರಿಗುಣತ್ವಾತ್ಕರ್ತುಃ ಶ್ರದ್ಧಯಾ ಕರ್ಮಗತಯಃ ಪೃಥಗ್ವಿಧಾಃ ಸರ್ವಾ ಏವ ಸರ್ವಸ್ಯ ತಾರತಮ್ಯೇನ ಭವಂತಿ ॥ ೨ ॥ ಅಥೇದಾನೀಂ ಪ್ರತಿಷಿದ್ಧಲಕ್ಷಣಸ್ಯಾಧರ್ಮಸ್ಯ ತಥೈವ ಕರ್ತುಃ ಶ್ರದ್ಧಾಯಾ ವೈಸಾದೃಶ್ಯಾತ್ಕರ್ಮಫಲಂ ವಿಸದೃಶಂ ಭವತಿ ಯಾ ಹ್ಯನಾದ್ಯವಿದ್ಯಯಾ ಕೃತಕಾಮಾನಾಂ ತತ್ಪರಿಣಾಮಲಕ್ಷಣಾಃ ಸೃತಯಃ ಸಹಸ್ರಶಃ ಪ್ರವೃತ್ತಾಸ್ತಾಸಾಂ ಪ್ರಾಚುರ್ಯೇಣಾನುವರ್ಣಯಿಷ್ಯಾಮಃ ॥ ೩ ॥

ರಾಜೋವಾಚ

ನರಕಾ ನಾಮ ಭಗವನ್ಕಿಂ ದೇಶವಿಶೇಷಾ ಅಥವಾ ಬಹಿಸ್ತ್ರಿಲೋಕ್ಯಾ ಆಹೋಸ್ವಿದಂತರಾಲ ಇತಿ ॥ ೪ ॥

ಪರೀಕ್ಷಿದ್ರಾಜನು ಕೇಳಿದನು – ಮಹರ್ಷಿಗಳೇ! ಲೋಕದ ಜೀವಿಗಳಿಗೆ ಉಂಟಾಗುವ ಉಚ್ಚ-ನೀಚ ಗತಿಗಳಲ್ಲಿ ಇಷ್ಟೊಂದು ಭಿನ್ನತೆಗಳು ಏಕೆ? ॥ ೧ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಎಲೈ ರಾಜನೇ! ಕರ್ಮ ಮಾಡುವವರಲ್ಲಿ ಸಾತ್ತ್ವಿಕರು, ರಾಜಸರು ಮತ್ತು ತಾಮಸರು ಎಂಬ ಮೂರು ಸ್ವಭಾವದ ಜನರಿರುತ್ತಾರೆ. ಅವರ ಶ್ರದ್ಧೆಗಳಲ್ಲಿಯೂ ಭೇದಗಳಿರುತ್ತವೆ. ಈ ರೀತಿ ಸ್ವಭಾವ ಮತ್ತು ಶ್ರದ್ಧೆಯ ಭೇದದಿಂದ ಅವರ ಗತಿಗಳಲ್ಲಿಯೂ ಭಿನ್ನತೆ ಉಂಟಾಗುತ್ತವೆ. ಇವೆಲ್ಲ ಗತಿಗಳು ಹೆಚ್ಚು-ಕಡಿಮೆ ಎಲ್ಲ ಕರ್ತೃಗಳಾದ ಜೀವರಿಗೆ ದೊರೆಯುತ್ತವೆ. ॥ ೨ ॥ ಹೀಗೆಯೇ ನಿಷಿದ್ಧ ಕರ್ಮವಾದ ಪಾಪಗಳನ್ನು ಮಾಡುವವರಿಗೂ ಅವರ ಶ್ರದ್ಧೆಗಳು ಬೇರೆ-ಬೇರೆಯಾಗಿರುವುದರಿಂದ ಅವರಿಗೆ ದೊರೆಯುವ ಫಲಗಳೂ ಬೇರೆ-ಬೇರೆಯಾಗುವುವು. ಆದುದರಿಂದ ಅನಾದಿಯಾದ ಅವಿದ್ಯೆಗೆ ವಶರಾಗಿ ಜೀವರು ಕಾಮನಾಪೂರ್ವಕವಾಗಿ ಆಚರಿಸುವ ನಿಷಿದ್ಧಕರ್ಮಗಳಿಂದ ಸಾವಿರಾರು ಬಗೆಯ ನರಕಗತಿಗಳು ಉಂಟಾಗುವುವು. ಅವುಗಳನ್ನು ವಿಸ್ತಾರವಾಗಿ ವರ್ಣಿಸುವೆನು ಕೇಳು. ॥ ೩ ॥

ಪರೀಕ್ಷಿದ್ರಾಜನು ಕೇಳಿದನು – ಭಗವಂತರೇ! ತಾವು ವರ್ಣಿಸುವುದಾಗಿ ಹೇಳಿದ ಈ ನರಕಗಳು ಇದೇ ಭೂಮಿಯಲ್ಲಿರುವ ಯಾವುದಾದರೂ ದೇಶವಿಶೇಷಗಳೇ? ಅಥವಾ ತ್ರಿಲೋಕದಿಂದ ಹೊರಗೆ ಇವೆಯೇ? ಅಥವಾ ಇದರೊಳಗೆ ಯಾವುದಾದರೂ ಜಾಗದಲ್ಲಿವೆಯೇ? ॥ ೪ ॥

ಋಷಿರುವಾಚ

ಅಂತರಾಲ ಏವ ತ್ರಿಜಗತ್ಯಾಸ್ತು ದಿಶಿ ದಕ್ಷಿಣಸ್ಯಾಮಧಸ್ತಾದ್ಭೂಮೇರುಪರಿಷ್ಟಾಚ್ಚ ಜಲಾದ್ಯಸ್ಯಾಮಗ್ನಿಷ್ವಾತ್ತಾದಯಃ ಪಿತೃಗಣಾ ದಿಶಿ ಸ್ವಾನಾಂ ಗೋತ್ರಾಣಾಂ ಪರಮೇಣ ಸಮಾಧಿನಾ ಸತ್ಯಾ ಏವಾಶಿಷ ಆಶಾಸಾನಾ ನಿವಸಂತಿ ॥ ೫ ॥ ಯತ್ರ ಹ ವಾವ ಭಗವಾನ್ಪಿತೃರಾಜೋ ವೈವಸ್ವತಃ ಸ್ವವಿಷಯಂ ಪ್ರಾಪಿತೇಷು ಸ್ವಪುರುಷೈರ್ಜಂತುಷು ಸಂಪರೇತೇಷು ಯಥಾಕರ್ಮಾವದ್ಯಂ ದೋಷಮೇವಾನುಲ್ಲಂಘಿತಭಗವಚ್ಛಾಸನಃ ಸಗಣೋ ದಮಂ ಧಾರಯತಿ ॥ ೬ ॥ ತತ್ರ ಹೈಕೇ ನರಕಾನೇಕವಿಂಶತಿಂ ಗಣಯಂತಿ ಅಥ ತಾಂಸ್ತೇ ರಾಜನ್ನಾಮರೂಪಲಕ್ಷಣತೋಽನುಕ್ರಮಿಷ್ಯಾಮಸ್ತಾಮಿಸ್ರೋಽಂಧತಾಮಿಸ್ರೋ ರೌರವೋ ಮಹಾರೌರವಃ ಕುಂಭೀಪಾಕಃ ಕಾಲಸೂತ್ರಮಸಿಪತ್ರವನಂ ಸೂಕರಮುಖಮಂಧಕೂಪಃ ಕೃಮಿಭೋಜನಃ ಸಂದಂಶಸ್ತಪ್ತಸೂರ್ಮಿರ್ವಜ್ರಕಂಟಕಶಾಲ್ಮಲೀ ವೈತರಣೀ ಪೂಯೋದಃ ಪ್ರಾಣರೋಧೋ ವಿಶಸನಂ ಲಾಲಾಭಕ್ಷಃ ಸಾರಮೇಯಾದನಮವೀಚಿರಯಃಪಾನಮಿತಿ । ಕಿಂಚ ಕ್ಷಾರಕರ್ದಮೋ ರಕ್ಷೋಗಣಭೋಜನಃ ಶೂಲಪ್ರೋತೋ ದಂದಶೂಕೋಽವಟನಿರೋಧನಃ ಪರ್ಯಾವರ್ತನಃ ಸೂಚೀಮುಖಮಿತ್ಯಷ್ಟಾವಿಂಶತಿರ್ನರಕಾ ವಿವಿಧಯಾತನಾಭೂಮಯಃ ॥ ೭ ॥

ತತ್ರ ಯಸ್ತು ಪರವಿತ್ತಾಪತ್ಯಕಲತ್ರಾಣ್ಯಪಹರತಿ ಸ ಹಿ ಕಾಲಪಾಶಬದ್ಧೋ ಯಮಪುರುಷೈರತಿಭಯಾನಕೈಸ್ತಾಮಿಸ್ರೇ ನರಕೇ ಬಲಾನ್ನಿಪಾತ್ಯತೇ ಅನಶನಾನುದಪಾನದಂಡತಾಡನಸಂತರ್ಜನಾದಿಭಿರ್ಯಾತನಾಭಿರ್ಯಾತ್ಯಮಾನೋ ಜಂತುರ್ಯತ್ರ ಕಶ್ಮಲಮಾಸಾದಿತ ಏಕದೈವ ಮೂರ್ಚ್ಛಾಮುಪಯಾತಿ ತಾಮಿಸ್ರಪ್ರಾಯೇ ॥ ೮ ॥ ಏವಮೇವಾಂಧತಾಮಿಸ್ರೇ ಯಸ್ತು ವಂಚಯಿತ್ವಾ ಪುರುಷಂ ದಾರಾದೀನುಪಯುಂಕ್ತೇ ಯತ್ರ ಶರೀರೀ ನಿಪಾತ್ಯಮಾನೋ ಯಾತನಾಸ್ಥೋ ವೇದನಯಾ ನಷ್ಟಮತಿರ್ನಷ್ಟದೃಷ್ಟಿಶ್ಚ ಭವತಿ ಯಥಾ ವನಸ್ಪತಿರ್ವೃಶ್ಚ್ಯಮಾನಮೂಲಸ್ತಸ್ಮಾದಂಧತಾಮಿಸ್ರಂ ತಮುಪದಿಶಂತಿ ॥ ೯ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಎಲೈ ರಾಜನೇ! ಇವು ತ್ರಿಲೋಕಗಳ ಒಳಗೆಯೇ ಇವೆ ಹಾಗೂ ದಕ್ಷಿಣದಿಕ್ಕಿನತ್ತ ಪೃಥಿವಿಯಿಂದ ಕೆಳಗೆ ನೀರಿನಮೇಲೆ ನಿಂತಿವೆ. ಇದೇ ದಿಕ್ಕಿನಲ್ಲಿ ಅಗ್ನಿಷ್ವಾತ್ತರೇ ಮುಂತಾದ ಪಿತೃಗಣಗಳೂ ಇರುತ್ತಾರೆ. ಇವರು ಅತ್ಯಂತ ಏಕಾಗ್ರತೆಯಿಂದ ತಮ್ಮ ವಂಶದಲ್ಲಿ ಜನಿಸಿದವರಿಗೆ ಮಂಗಳ ಉಂಟಾಗಲೆಂದು ಬಯಸುತ್ತಾ ಇರುತ್ತಾರೆ. ॥ ೫ ॥ ಆ ನರಕಲೋಕದಲ್ಲಿ ಸೂರ್ಯನ ಪುತ್ರ ಪಿತೃರಾಜನಾದ ಭಗವಾನ್ ಯಮನು ತನ್ನ ಸೇವಕರೊಂದಿಗೆ ಇರುತ್ತಾನೆ. ಭಗವಂತನ ಆಜ್ಞೆಯನ್ನು ಮೀರದೆ ತನ್ನ ದೂತರ ಮೂಲಕ ಅಲ್ಲಿಗೆ ತರಲ್ಪಟ್ಟ ಮೃತಪ್ರಾಣಿಗಳಿಗೆ ಅವರ ದುಷ್ಕರ್ಮಗಳನುಸಾರ ಪಾಪದ ಫಲಕ್ಕೆ ಶಿಕ್ಷೆಯನ್ನು ಕೊಡುತ್ತಾನೆ. ॥ ೬ ॥ ಪರೀಕ್ಷಿತನೇ! ಕೆಲವರು ನರಕಗಳ ಸಂಖ್ಯೆ ಇಪ್ಪತ್ತೊಂದು ಎಂದು ತಿಳಿಸುತ್ತಾರೆ. ಈಗ ಅವುಗಳ ಹೆಸರು, ರೂಪ, ಲಕ್ಷಣ ಇವುಗಳನ್ನು ಕ್ರಮವಾಗಿ ವರ್ಣಿಸುವೆವು, ಕೇಳು. ತಾಮಿಸ್ರ, ಅಂಧತಾಮಿಸ್ರ, ರೌರವ, ಮಹಾರೌರವ, ಕುಂಭೀಪಾಕ, ಕಾಲಸೂತ್ರ, ಅಸಿಪತ್ರವನ, ಸೂಕರಮುಖ, ಅಂಧಕೂಪ, ಕೃಮಿಭೋಜನ, ಸಂದಂಶ, ತಪ್ತಸೂರ್ಮಿ, ವಜ್ರಕಂಟಕ ಶಾಲ್ಮಲೀ, ವೈತರಣೀ, ಪೂಯೋದ, ಪ್ರಾಣರೋಧ, ವಿಶಸನ, ಲಾಲಾಭಕ್ಷ, ಸಾರಮೇಯಾದನ, ಅವೀಚಿ ಮತ್ತು ಅಯಃಪಾನ ಎಂಬುವೇ ಆ ಇಪ್ಪತ್ತೊಂದು ನರಕಗಳು. ಇವುಗಳಲ್ಲದೆ ಕ್ಷಾರಕರ್ದಮ, ರಕ್ಷೋಗಣಭೋಜನ, ಶೂಲಪ್ರೋತ, ದಂದಶೂಕ, ಅವಟನಿರೋಧನ, ಪರ್ಯಾವರ್ತನ, ಸೂಚೀಮುಖ ಎಂಬ ಏಳು ಸೇರಿ ಒಟ್ಟು ಇಪ್ಪತ್ತೆಂಟು ನರಕಗಳು ಬಗೆ-ಬಗೆಯ ಯಾತನೆಗಳನ್ನು ಜೀವಿಗಳು ಅನುಭವಿಸುವ ಜಾಗಗಳು. ॥ ೭ ॥ ಮತ್ತೊಬ್ಬರ ಹಣ, ಹೆಂಡತಿ, ಅಥವಾ ಸಂತಾನವನ್ನು ಅಪಹರಿಸುವಂತಹ ಪಾಪಿಯನ್ನು ಭಯಂಕರರಾದ ಯಮದೂತರು ಕಾಲಪಾಶದಿಂದ ಕಟ್ಟಿ ಬಲಾತ್ಕಾರವಾಗಿ ತಾಮಿಸ್ರ ನರಕದಲ್ಲಿ ಕೆಡಹುವರು. ಆ ಅಂಧಕಾರಮಯ ನರಕದಲ್ಲಿ ಅವನಿಗೆ ಅನ್ನ-ನೀರು ಕೊಡದಿರುವುದು, ದೊಣ್ಣೆಗಳಿಂದ ಬಡಿಯುವುದು, ಭಯಪಡಿಸುವುದು ಮುಂತಾದ ಅನೇಕ ಉಪಾಯಗಳಿಂದ ಪೀಡಿಸಲಾಗುತ್ತದೆ. ಇದರಿಂದ ಅವನು ಅತ್ಯಂತ ದುಃಖಿತನಾಗಿ ಒಮ್ಮಿಂದೊಮ್ಮೆಗೆ ಮೂರ್ಛೆಹೋಗುವನು. ॥ ೮ ॥ ಹೀಗೆಯೇ ಮತ್ತೊಬ್ಬನಿಗೆ ಮೋಸಮಾಡಿ ಅವನ ಹೆಂಡತಿಯನ್ನು ಭೋಗಿಸುವವನು ಅಂಧತಾಮಿಸ್ರ ನರಕದಲ್ಲಿ ಬೀಳುವನು. ಅಲ್ಲಿಯ ಯಾತನೆಗಳಲ್ಲಿ ಬಿದ್ದು ಅವನು ಬೇರು ಕತ್ತರಿಸಿದ ಮರದಂತೆ ತತ್ತರಿಸುತ್ತಾ ಮತಿಗೆಟ್ಟು ಕುರುಡನಾಗುವನು. ಇದರಿಂದ ಈ ನರಕಕ್ಕೆ ಅಂಧತಾಮಿಸ್ರವೆಂದು ಹೇಳುತ್ತಾರೆ. ॥ ೯ ॥

ಈ ಲೋಕದಲ್ಲಿ "ಈ ಶರೀರವೇ ನಾನಾಗಿದ್ದೇನೆ ಮತ್ತು ಈ ಪತ್ನೀ, ಧನ ಇತ್ಯಾದಿಗಳೆಲ್ಲ ನನ್ನವು" ಎಂಬ ಬುದ್ಧಿಯಿಂದ ಕೂಡಿ ಬೇರೆ ಪ್ರಾಣಿಗಳಿಗೆ ದ್ರೋಹವನ್ನೆಸಗುತ್ತಾ ನಿರಂತರ ತನ್ನ ಕುಟುಂಬವನ್ನು ಸಾಕುವುದರಲ್ಲೇ ತೊಡಗಿರುವವನು ತನ್ನ ಶರೀರವನ್ನು ಬಿಟ್ಟ

ಯಸ್ತ್ವಿಹ ವಾ ಏತದಹಮಿತಿ ಮಮೇದಮಿತಿ ಭೂತದ್ರೋಹೇಣ ಕೇವಲಂ ಸ್ವಕುಟುಂಬಮೇವಾನುದಿನಂ ಪ್ರಪುಷ್ಣಾತಿ ಸ ತದಿಹ ವಿಹಾಯ ಸ್ವಯಮೇವ ತದಶುಭೇನ ರೌರವೇ ನಿಪತತಿ ॥ ೧೦ ॥ ಯೇ ತ್ವಿಹ ಯಥೈವಾಮುನಾ ವಿಹಿಂಸಿತಾ ಜಂತವಃ ಪರತ್ರ ಯಮಯಾತನಾಮುಪಗತಂ ತ ಏವ ರುರವೋ ಭೂತ್ವಾ ತಥಾ ತಮೇವ ವಿಹಿಂಸಂತಿ ತಸ್ಮಾದ್ರೌರವಮಿತ್ಯಾಹೂ ರುರುರಿತಿ ಸರ್ಪಾದತಿಕ್ರೂರಸತ್ತ್ವಸ್ಯಾಪದೇಶಃ ॥ ೧೧ ॥ ಏವಮೇವ ಮಹಾರೌರವೋ ಯತ್ರ ನಿಪತಿತಂ ಪುರುಷಂ ಕ್ರವ್ಯಾದಾ ನಾಮ ರುರವಸ್ತಂ ಕ್ರವ್ಯೇಣ ಘಾತಯಂತಿ ಯಃ ಕೇವಲಂ ದೇಹಂಭರಃ ॥ ೧೨ ॥

ಯಸ್ತ್ವಿಹ ವಾ ಉಗ್ರಃ ಪಶೂನ್ ಪಕ್ಷಿಣೋ ವಾ ಪ್ರಾಣತ ಉಪರಂಧಯತಿ ತಮಪಕರುಣಂ ಪುರುಷಾದೈರಪಿ ವಿಗರ್ಹಿತಮಮುತ್ರ ಯಮಾನುಚರಾಃ ಕುಂಭೀಪಾಕೇ ತಪ್ತತೈಲೇ ಉಪರಂಧಯಂತಿ ॥ ೧೩ ॥ ಯಸ್ತ್ವಿಹ ಪಿತೃವಿಪ್ರಬ್ರಹ್ಮಧ್ರುಕ್ ಸ ಕಾಲಸೂತ್ರಸಂಜ್ಞಕೇ ನರಕೇ ಅಯುತಯೋಜನಪರಿಮಂಡಲೇ ತಾಮ್ರಮಯೇ ತಪ್ತಖಲೇ ಉಪರ್ಯಧಸ್ತಾದಗ್ನ್ಯರ್ಕಾಭ್ಯಾಮತಿತಪ್ಯಮಾನೇಽಭಿನಿವೇಶಿತಃ ಕ್ಷುತ್ಪಿಪಾಸಾಭ್ಯಾಂ ಚ ದಹ್ಯಮಾನಾಂತರ್ಬಹಿಃಶರೀರ ಆಸ್ತೇ ಶೇತೇ ಚೇಷ್ಟತೇಽವತಿಷ್ಠತಿ ಪರಿಧಾವತಿ ಚ ಯಾವಂತಿ ಪಶುರೋಮಾಣಿ ತಾವದ್ವರ್ಷಸಹಸ್ರಾಣಿ ॥ ೧೪ ॥

ಯಸ್ತ್ವಿಹ ವೈ ನಿಜವೇದಪಥಾದನಾಪದ್ಯಪಗತಃ ಪಾಖಂಡಂ ಚೋಪಗತಸ್ತಮಸಿಪತ್ರವನಂ ಪ್ರವೇಶ್ಯ ಕಶಯಾ ಪ್ರಹರಂತಿ ತತ್ರ ಹಾಸಾವಿತಸ್ತತೋ ಧಾವಮಾನ ಉಭಯತೋಧಾರೈಸ್ತಾಲವನಾಸಿಪತ್ರೈಶ್ಛಿದ್ಯಮಾನಸರ್ವಾಂಗೋ ಹಾ ಹತೋಽಸ್ಮೀತಿ ಪರಮಯಾ ವೇದನಯಾ ಮೂರ್ಛಿತಃ ಪದೇ ಪದೇ ನಿಪತತಿ ಸ್ವಧರ್ಮಹಾ ಪಾಖಂಡಾನುಗತಂ ಫಲಂ ಭುಂಕ್ತೇ ॥ ೧೫ ॥

ಬಳಿಕ ತನ್ನ ಪಾಪಗಳಿಂದಾಗಿ ರೌರವವೆಂಬ ನರಕದಲ್ಲಿ ತಾನೇ ಬೀಳುವನು. ॥ ೧೦ ॥ ಅವನು ಈ ಲೋಕದಲ್ಲಿದ್ದಾಗ ಯಾವ ಜೀವಿಗಳಿಗೆ ಯಾವ ರೀತಿಯ ಕಷ್ಟವನ್ನು ಕೊಟ್ಟಿರುವನೋ, ಪರಲೋಕದಲ್ಲಿ ಯಮಯಾತನೆಯ ಸಮಯಬಂದಾಗ ಅದೇ ಜೀವರು 'ರುರು' ಎಂಬ ಕ್ರಿಮಿಯಾಗಿ ಅವನಿಗೆ ಅದೇ ರೀತಿಯಲ್ಲಿ ಕಷ್ಟಕೊಡುವರು. ಅದಕ್ಕಾಗಿ ಈ ನರಕದ ಹೆಸರು 'ರೌರವ' ಎಂದಿದೆ. 'ರುರು' ಎಂಬುದು ಸರ್ಪಕ್ಕಿಂತಲೂ ಹೆಚ್ಚು ಕ್ರೂರವಾದ ಒಂದು ಜೀವಿಯ ಹೆಸರು. ॥ ೧೧ ॥ ಹೀಗೆಯೇ ಮಹಾರೌರವ ನರಕವಿದೆ. ಯಾರನ್ನೂ ಗಮನಿಸದೆ ಕೇವಲ ತನ್ನ ಶರೀರದ ಪೋಷಣೆಯಲ್ಲೇ ತೊಡಗಿದ ಪಾಪಿಯು ಈ ನರಕಕ್ಕೆ ಹೋಗುವನು. ಅಲ್ಲಿ ಹಸಿಮಾಂಸವನ್ನು ತಿನ್ನುವ ರುರುಗಳು ಇವನನ್ನು ಮಾಂಸಕ್ಕಾಗಿ ಕಡಿಯುತ್ತಾ ಇರುತ್ತಾರೆ. ॥ ೧೨ ॥ ಯಾವ ಕ್ರೂರಿಯು ಈ ಲೋಕದಲ್ಲಿ ತನ್ನ ಹೊಟ್ಟೆಯನ್ನು ಹೊರೆದುಕೊಳ್ಳಲು ಬದುಕಿರುವ ಪಶು-ಪಕ್ಷಿಗಳನ್ನು ಬೇಯಿಸುತ್ತಾನೋ ಆ ಹೃದಯಶೂನ್ಯ, ರಾಕ್ಷಸರಿಂದಲೂ ನಿಂದಿಸಲ್ಪಟ್ಟ ನರಾಧಮನನ್ನು ಯಮದೂತರು ಕುಂಭೀಪಾಕ ನರಕಕ್ಕೆ ಕೊಂಡುಹೋಗಿ ಅವನನ್ನು ಕುದಿಯುತ್ತಿರುವ ಎಣ್ಣೆಯ ಕಡಾಯಿಯಲ್ಲಿ ಬೇಯಿಸುವರು. ॥ ೧೩ ॥ ಈ ಲೋಕದಲ್ಲಿ ತಂದೆ-ತಾಯಿ, ಬ್ರಾಹ್ಮಣರು ಮತ್ತು ವೇದ ಇವುಗಳನ್ನು ವಿರೋಧಿಸುವವನನ್ನು ಯಮದೂತರು ಕಾಲಸೂತ್ರವೆಂಬ ನರಕಕ್ಕೆ ಕೊಂಡು ಹೋಗುತ್ತಾರೆ. ಇದರ ಸುತ್ತಳತೆ ಹತ್ತುಸಾವಿರ ಯೋಜನವಿದೆ. ಇದರ ಭೂಮಿಯು ತಾಮ್ರದ್ದಾಗಿರುತ್ತದೆ. ಇದರಲ್ಲಿ ಕಾದ ಬಯಲು ಇದ್ದು ಮೇಲಿನಿಂದ ಸೂರ್ಯನ ಮತ್ತು ಕೆಳಗಿನಿಂದ ಅಗ್ನಿಯ ಉರಿಯಿಂದ ಸುಡುತ್ತಾ ಇರುತ್ತದೆ. ಅಲ್ಲಿಗೆ ಕೊಂಡುಹೋದ ಪಾಪೀಜೀವನು ಹಸಿವು-ಬಾಯಾರಿಕೆಯಿಂದ ವ್ಯಾಕುಲನಾಗುತ್ತಾನೆ ಮತ್ತು ಅವನ ಶರೀರವು ಒಳಗಿಂದ ಹೊರಗಿನಿಂದ ಸುಡಲು ತೊಡಗುತ್ತದೆ. ಇದರಿಂದ ಶಾಂತಿಯನ್ನು ಕಳಕೊಂಡ ಜೀವಿಯು ಕೆಲವೊಮ್ಮೆ ಕುಳಿತುಕೊಳ್ಳುವನು, ಕೆಲವೊಮ್ಮೆ ಮಲಗುವನು, ಕೆಲವೊಮ್ಮೆ ಒದ್ದಾಡುವನು, ಕೆಲವೊಮ್ಮೆ ನಿಲ್ಲುವನು, ಕೆಲವೊಮ್ಮೆ ಅತ್ತ-ಇತ್ತ ಓಡುವನು. ಹೀಗೆ ಆ ನರಪಶುವಿನ ಶರೀರದಲ್ಲಿ ರೋಮಗಳಿರುವಷ್ಟು ಸಾವಿರ ವರ್ಷಗಳವರೆಗೆ ಅವನಿಗೆ ಇಂತಹ ದುರ್ಗತಿ ಆಗುತ್ತಾ ಇರುತ್ತದೆ. ॥ ೧೪ ॥

ಯಾವುದೇ ಆಪತ್ತು ಬಾರದಿದ್ದರೂ ತನ್ನ ವೈದಿಕ ಮಾರ್ಗವನ್ನು ಬಿಟ್ಟು ಬೇರೆ ಪಾಷಂಡಮತವನ್ನು ಅನುಸರಿಸುವವನನ್ನು ಯಮದೂತರು ಅಸಿಪತ್ರವನವೆಂಬ ನರಕಕ್ಕೆ ಕೊಂಡುಹೋಗಿ ಚಾವಟಿಗೆಯಿಂದ ಹೊಡೆಯುತ್ತಾರೆ. ಏಟುಗಳಿಂದ ತಪ್ಪಿಸಿಕೊಳ್ಳಲು ಅವನು ಅಲ್ಲಲ್ಲಿ ಓಡತೊಡಗಿದಾಗ ಅವನ ಎಲ್ಲ ಅಂಗಗಳೂ ಎರಡೂ ಕಡೆಗಳಲ್ಲೂ ಅಲಗುಗಳಿಂದ ಕೂಡಿದ ಕತ್ತಿಯಂತೆ ತೀಕ್ಷ್ಣವಾದ ತಾಳೆಯ ಮರಗಳ ಎಲೆಗಳಿಂದ ಕತ್ತರಿಸಲ್ಪಡುವುವು. ಆ ವೇದನೆಯಿಂದ ಅಯ್ಯೋ ಸತ್ತೆನು! ಎಂದು ಕಿರಿಚಿಕೊಳ್ಳುತ್ತಾ ಹೆಜ್ಜೆ-ಹೆಜ್ಜೆಗೂ ಮೂರ್ಛಿತನಾಗಿ ಬೀಳತೊಡಗುವನು. ತನ್ನ ಧರ್ಮಕ್ಕೆ ದ್ರೋಹ ಮಾಡಿ ಪಾಷಂಡಧರ್ಮವನ್ನು ಅನುಸರಿಸುವುದರಿಂದ ಅವನಿಗೆ ಇಂತಹ ಕುಕರ್ಮದ ಫಲವನ್ನು ಅನುಭವಿಸಬೇಕಾಗುವುದು. ॥ ೧೫ ॥

ಯಸ್ತ್ವಿಹ ವೈ ರಾಜಾ ರಾಜಪುರುಷೋ ವಾ ಅದಂಡ್ಯೇ ದಂಡಂ ಪ್ರಣಯತಿ ಬ್ರಾಹ್ಮಣೇ ವಾ ಶರೀರದಂಡಂ ಸ ಪಾಪೀಯಾನ್ನರಕೇಽಮುತ್ರ ಸೂಕರಮುಖೇ ನಿಪತತಿ ತತ್ರಾತಿಬಲೈರ್ವಿನಿಷ್ಪಿಷ್ಯಮಾಣಾವಯವೋ ಯಥೈವೇಹೇಕ್ಷುಖಂಡ ಆರ್ತಸ್ವರೇಣ ಸ್ವನಯನ್ ಕ್ವಚಿನ್ಮೂರ್ಛಿತಃ ಕಶ್ಮಲಮುಪಗತೋ ಯಥೈವೇಹಾದೃಷ್ಟದೋಷಾ ಉಪರುದ್ಧಾಃ ॥ ೧೬ ॥

ಯಸ್ತ್ವಿಹ ವೈ ಭೂತಾನಾಮೀಶ್ವರೋಪಕಲ್ಪಿತವೃತ್ತೀನಾಮವಿವಿಕ್ತಪರವ್ಯಥಾನಾಂ ಸ್ವಯಂ ಪುರುಷೋಪಕಲ್ಪಿತವೃತ್ತಿರ್ವಿವಿಕ್ತಪರವ್ಯಥೋ ವ್ಯಥಾಮಾಚರತಿ ಸ ಪರತ್ರಾಂಧಕೂಪೇ ತದಭಿದ್ರೋಹೇಣ ನಿಪತತಿ ತತ್ರ ಹಾಸೌ ತೈರ್ಜಂತುಭಿಃ ಪಶುಮೃಗಪಕ್ಷಿಸರೀಸೃಪೈರ್ಮಶಕಯೂಕಾಮತ್ಕುಣಮಕ್ಷಿಕಾದಿಭಿರ್ಯೇ ಕೇ ಚಾಭಿದ್ರುಗ್ಧಾಸ್ತೈಃ ಸರ್ವತೋಽಭಿದ್ರುಹ್ಯಮಾಣಸ್ತಮಸಿ ವಿಹತನಿದ್ರಾನಿರ್ವೃತಿರಲಬ್ಧಾವಸ್ಥಾನಃ ಪರಿಕ್ರಾಮತಿ ಯಥಾ ಕುಶರೀರೇ ಜೀವಃ ॥ ೧೭ ॥

ಯಸ್ತ್ವಿಹ ವಾ ಅಸಂವಿಭಜ್ಯಾಶ್ನಾತಿ ಯತ್ಕಿಂಚನೋಪನತಮನಿರ್ಮಿತಪಂಚಯಜ್ಞೋ ವಾಯಸಸಂಸ್ತುತಃ ಸ ಪರತ್ರ ಕೃಮಿಭೋಜನೇ ನರಕಾಧಮೇ ನಿಪತತಿ ತತ್ರ ಶತಸಹಸ್ರಯೋಜನೇ ಕೃಮಿಕುಂಡೇ ಕೃಮಿಭೂತಃ ಸ್ವಯಂ ಕೃಮಿಭಿರೇವ ಭಕ್ಷ್ಯಮಾಣಃ ಕೃಮಿಭೋಜನೋ ಯಾವತ್ತದಪ್ರತ್ತಾಪ್ರಹುತಾದೋಽನಿರ್ವೇಶಮಾತ್ಮಾನಂ ಯಾತಯತೇ ॥ ೧೮ ॥ ಯಸ್ತ್ವಿಹ ವೈ ಸ್ತೇಯೇನ ಬಲಾದ್ವಾ ಹಿರಣ್ಯರತ್ನಾದೀನಿ ಬ್ರಾಹ್ಮಣಸ್ಯ ವಾಪಹರತ್ಯನ್ಯಸ್ಯ ವಾನಾಪದಿ ಪುರುಷಸ್ತಮಮುತ್ರ ರಾಜನ್ಯಮಪುರುಷಾ ಅಯಸ್ಮಯೈರಗ್ನಿಪಿಂಡೈಃ ಸಂದಂಶೈಸ್ತ್ವಚಿ ನಿಷ್ಕುಷಂತಿ ॥ ೧೯ ॥ ಯಸ್ತ್ವಿಹ ವಾ ಅಗಮ್ಯಾಂ ಸ್ತ್ರಿಯಮಗಮ್ಯಂ ವಾ ಪುರುಷಂ

ಈ ಲೋಕದಲ್ಲಿ ಯಾರಾದರೂ ರಾಜನಾಗಲೀ, ಅವನ ಅಧಿಕಾರಿಯಾಗಲೀ ನಿರಪರಾಧಿಯಾದ ಮನುಷ್ಯನಿಗೆ ದಂಡನೆಯನ್ನು ವಿಧಿಸಿದರೆ ಅಥವಾ ಬ್ರಾಹ್ಮಣನಿಗೆ ಶರೀರದಂಡನೆಯನ್ನು ವಿಧಿಸಿದರೆ, ಆ ಮಹಾಪಾಪಿಯು ಸತ್ತು ಸೂಕರಮುಖವೆಂಬ ನರಕದಲ್ಲಿ ಬೀಳುವನು. ಅಲ್ಲಿ ಮಹಾಬಲಶಾಲಿಗಳಾದ ಯಮದೂತರು ಆತನನ್ನು ತುಳಿದು ಹಾಕುವರು. ಆಗ ಅಂಗಾಂಗಗಳು ಜಜ್ಜಿಹೋಗಿ ಗಾಣದಲ್ಲಿ ಸಿಕ್ಕಿದ ಕಬ್ಬಿನಂತೆ ಅರೆಯಲ್ಪಟ್ಟು ನೋವಿನಿಂದ ನರಳುತ್ತಾ ಆತನು ಹಿಂದೆ ಪೀಡಿಸಿದ್ದ ನಿರಪರಾಧಿಗಳು ಹೇಗೆ ಕೂಗಿಕೊಳ್ಳುತ್ತಿದ್ದರೋ ಹಾಗೆಯೇ ತಾನೂ ಅರಚುತ್ತಾ ಕೆಲವೊಮ್ಮೆ ಮೂರ್ಛಿತನಾಗುವನು ॥ ೧೬ ॥

ಶ್ರೀಭಗವಂತನು ಮನುಷ್ಯನಿಗೆ 'ಇದು ಹಿತವಾದುದು, ಇದು ನಿಷಿದ್ಧವಾದುದು' ಎಂಬ ವಿವೇಕದಿಂದ ಜೀವನದ ವೃತ್ತಿಯನ್ನು ಅರಿತುಕೊಂಡು ಅವಲಂಬಿಸಲು ನಿಯಮಿಸಿದ್ದಾನೆ. ಇತರರಿಗೆ ಉಂಟಾಗುವ ಕಷ್ಟಗಳ ಅರಿವೂ ಅವನಿಗೆ ಆಗುತ್ತದೆ. ಆದರೆ ತಿಗಣೆಯೇ ಮುಂತಾದ ಜೀವಿಗಳಿಗೆ ಈ ಅರಿವು ಇರುವುದಿಲ್ಲ. ತಮ್ಮಿಂದ ಇತರ ಜೀವಿಗಳಿಗೆ ಸಂಕಟವುಂಟಾಗುತ್ತದೆ ಎಂಬುದನ್ನರಿಯದೆ ತಮ್ಮ ಜೀವನಕ್ಕಾಗಿ ಅವು ಇತರರ ರಕ್ತವನ್ನು ಹೀರುತ್ತವೆ. ಆದುದರಿಂದ ತಿಳಿವಳಿಕೆಯುಳ್ಳ ಮನುಷ್ಯನು ಅವುಗಳಿಗೆ ಹಿಂಸೆ ಮಾಡಬಾರದು. ಹಾಗೆ ಹಿಂಸೆಮಾಡುವವನು ಅಂಧಕೂಪವೆಂಬ ನರಕದಲ್ಲಿ ಬೀಳುವನು. ಅಲ್ಲಿ ಅವನಿಂದ ಹಿಂದೆ ದ್ರೋಹಕ್ಕೆ ಬಲಿಯಾಗಿದ್ದ ಆ ಪಶು-ಪಕ್ಷಿ-ಮೃಗಗಳೂ, ಸರ್ಪವೇ ಮುಂತಾದ ಜಂತುಗಳೂ, ಸೊಳ್ಳೆ, ಹೇನು, ತಿಗಣೆ, ನೊಣಗಳೇ ಮುಂತಾದ ಕ್ರಿಮಿ-ಕೀಟಗಳು ಆತನನ್ನು ಎಲ್ಲ ಕಡೆಯಿಂದ ಕಚ್ಚಿ ನೋಯಿಸುವುವು. ಅದರಿಂದ ಅವನಿಗೆ ನಿದ್ರಾಭಂಗವಾಗಿ, ನೆಲೆಗಾಣದೆ ನೆಮ್ಮದಿಯನ್ನು ಕಳೆದುಕೊಂಡು ಅವನು ನರಕದ ಕತ್ತಲೆಯಲ್ಲಿ ಕೆಡುರೋಗವುಳ್ಳ ದೇಹದಲ್ಲಿ ಹೇಗೋ ಹಾಗೇ ವಿಲ-ವಿಲನೆ ಒದ್ದಾಡುತ್ತಾನೆ ॥ ೧೭ ॥

ಈ ಲೋಕದಲ್ಲಿ ಪಂಚಮಹಾಯಜ್ಞಗಳನ್ನು ಆಚರಿಸದೆ ತನಗೆ ದೊರೆತ ಪದಾರ್ಥಗಳನ್ನು ಇತರರಿಗೆ ಕೊಡದೆ ತಿನ್ನುವ ಮನುಷ್ಯನು ಕಾಗೆಗೆ ಸಮಾನನಾದವನು. ಅವನು ಪರಲೋಕದಲ್ಲಿ ಕ್ರಿಮಿಭೋಜನ ಎಂಬ ಕೀಳಾದ ನರಕದಲ್ಲಿ ಬೀಳುವನು. ಅಲ್ಲಿ ಒಂದು ಲಕ್ಷ ಯೋಜನ ಉದ್ದ-ಅಗಲದ ಒಂದು ಕ್ರಿಮಿಗಳ ಕುಂಡವಿದೆ. ಅದರಲ್ಲೇ ಅವನೂ ಕ್ರಿಮಿಯಾಗಿ ಇರಬೇಕಾಗುತ್ತದೆ. ಯಾರಿಗೂ ಕೊಡದೆ, ಹವನಮಾಡದೆ ತಿಂದ ದೋಷಗಳು, ಪಾಪಗಳ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳದ ಆ ಪಾಪಿಯ ದೋಷಗಳು ಶುದ್ಧವಾಗುವವರೆಗೆ ಅವನು ಅಲ್ಲೇ ಬಿದ್ದುಕೊಂಡು ಕಷ್ಟ ಅನುಭವಿಸಬೇಕಾಗುತ್ತದೆ. ಅಲ್ಲಿ ಕ್ರಿಮಿಗಳು ಅವನನ್ನು ಕಿತ್ತು ತಿನ್ನುತ್ತಿರುತ್ತವೆ ॥ ೧೮ ॥
ಈ ಲೋಕದಲ್ಲಿ ಆಪತ್ಕಾಲವಿದ್ದರೂ ಬ್ರಾಹ್ಮಣನಿಗೆ ಸೇರಿದ ಅಥವಾ ಇತರರಿಗೆ ಸೇರಿದ ಚಿನ್ನ-ರತ್ನಾದಿಗಳನ್ನು ಕಳ್ಳತನದಿಂದಾಗಲೀ, ಬಲಾತ್ಕಾರದಿಂದಾಗಲೀ ಕಿತ್ತುಕೊಳ್ಳುವವನನ್ನು ಸತ್ತಮೇಲೆ ಯಮದೂತರು ಸಂದಂಶವೆಂಬ ನರಕಕ್ಕೆ ಕೊಂಡುಹೋಗಿ ಕಾದಕಬ್ಬಿಣದ ಗುಂಡುಗಳಿಂದ ಸುಡುತ್ತಾ ಸಂದಂಶವೆಂಬ ಮುಳ್ಳುಗಳಿಂದ ಅವನ

ಯೋಷಿದಭಿಗಚ್ಛತಿ ತಾವಮುತ್ರ ಕಶಯಾ ತಾಡಯಂತಸ್ತಿಗ್ಮಯಾ ಸೂರ್ಮ್ಯಾ ಲೋಹಮಯ್ಯಾ ಪುರುಷಮಾಲಿಂಗಯಂತಿ ಸ್ತ್ರಿಯಂ ಚ ಪುರುಷರೂಪಯಾ ಸೂರ್ಮ್ಯಾ ॥ ೨೦ ॥ ಯಸ್ತ್ವಿಹ ವೈ ಸರ್ವಾಭಿಗ- ಮಸ್ತಮಮುತ್ರ ನಿರಯೇ ವರ್ತಮಾನಂ ವಜ್ರಕಂಟಕಶಾಲ್ಮಲೀಮಾರೋಪ್ಯ ನಿಷ್ಕರ್ಷಂತಿ ॥ ೨೧ ॥

ಯೇ ತ್ವಿಹ ವೈ ರಾಜನ್ಯಾ ರಾಜಪುರುಷಾ ವಾ ಅಪಾಖಂಡಾ ಧರ್ಮಸೇತೂನ್ ಭಿಂದಂತಿ ತೇ ಸಂಪರೇತ್ಯ ವೈತರಣ್ಯಾಂ ನಿಪತಂತಿ ಭಿನ್ನಮರ್ಯಾದಾಸ್ತಸ್ಯಾಂ ನಿರಯಪರಿಖಾಭೂತಾಯಾಂ ನದ್ಯಾಂ ಯಾದೋಗಣೈರಿತಸ್ತತೋ ಭಕ್ಷ್ಯಮಾಣಾ ಆತ್ಮನಾ ನ ವಿಯುಜ್ಯಮಾನಾಶ್ಚಾಸುಭಿರುಹ್ಯಮಾನಾಃ ಸ್ವಾಘೇನ ಕರ್ಮಪಾಕಮನುಸ್ಮರಂತೋ ವಿಣ್ಮೂತ್ರಪೂಯಶೋಣಿತಕೇಶನಖಾಸ್ಥಿಮೇದೋಮಾಂಸವಸಾವಾಹಿನ್ಯಾಮುಪತಪ್ಯಂತೇ ॥ ೨೨ ॥

ಯೇ ತ್ವಿಹ ವೈ ವೃಷಲೀಪತಯೋ ನಷ್ಟಶೌಚಾಚಾರನಿಯಮಾಸ್ತ್ಯಕ್ತಲಜ್ಜಾಃ ಪಶುಚರ್ಯಾಂ ಚರಂತಿ ತೇ ಚಾಪಿ ಪ್ರೇತ್ಯ ಪೂಯವಿಣ್ಮೂತ್ರಶ್ಲೇಷ್ಮಮಲಾಪೂರ್ಣಾರ್ಣವೇ ನಿಪತಂತಿ ತದೇವಾತಿಬೀಭತ್ಸಿತಮಶ್ನಂತಿ ॥ ೨೩ ॥ ಯೇ ತ್ವಿಹ ವೈ ಶ್ವಗರ್ದಭಪತಯೋ ಬ್ರಾಹ್ಮಣಾದಯೋ ಮೃಗಯಾವಿಹಾರಾ ಅತೀರ್ಥೇ ಚ ಮೃಗಾನ್ನಿಘ್ನಂತಿ ತಾನಪಿ ಸಂಪರೇತಾಂಲ್ಲಕ್ಷ್ಯಭೂತಾನ್ಯಮಪುರುಷಾ ಇಷುಭಿರ್ವಿಧ್ಯಂತಿ ॥ ೨೪ ॥

ಯೇ ತ್ವಿಹ ವೈ ದಾಂಭಿಕಾ ದಂಭಯಜ್ಞೇಷು ಪಶೂನ್ವಿಶಸಂತಿ ತಾನಮುಷ್ಮಿಂಲ್ಲೋಕೇ ವೈಶಸೇ ನರಕೇ ಪತಿತಾನ್ನಿರಯಪತಯೋ ಯಾತಯಿತ್ವಾ ವಿಶಸಂತಿ ॥ ೨೫ ॥ ಯಸ್ತ್ವಿಹ ವೈ ಸವರ್ಣಾಂ ಭಾರ್ಯಾಂ ದ್ವಿಜೋ ರೇತಃ ಪಾಯಯತಿ ಕಾಮಮೋಹಿತಸ್ತಂ ಪಾಪಕೃತಮಮುತ್ರ

ಚರ್ಮವನ್ನು ಚುಚ್ಚುವರು. ॥ ೧೯ ॥ ಈ ಲೋಕದಲ್ಲಿ ಸೇರಬಾರದ ಹೆಂಗಸಿನೊಡನೆ ಪುರುಷನು ರಮಿಸಿದರೆ ಅಥವಾ ಸೇರಬಾರದ ಗಂಡಸಿನೊಡನೆ ಹೆಂಗಸು ರಮಿಸಿದರೆ ಯಮದೂತರು ಆ ವ್ಯಭಿಚಾರಿಗಳನ್ನು ತಪ್ತಸೂರ್ಮಿ ಎಂಬ ನರಕಕ್ಕೆ ಕೊಂಡುಹೋಗಿ ಅಲ್ಲಿ ಅವರನ್ನು ಚಾವಟಿಯಿಂದ ಹೊಡೆಯುತ್ತಾರೆ. ಪುರುಷನಿಗೆ ಕಾದ ಕಬ್ಬಿಣದ ಸ್ತ್ರೀಬೊಂಬೆಯನ್ನು, ಸ್ತ್ರೀಗೆ ಕಾದ ಕಬ್ಬಿಣದ ಪುರುಷ ಬೊಂಬೆಯನ್ನು ಅಪ್ಪಿಕೊಳ್ಳಬೇಕಾಗುತ್ತದೆ. ॥ ೨೦ ॥ ಈ ಲೋಕದಲ್ಲಿ ಪಶುಗಳೇ ಮುಂತಾದ ಎಲ್ಲರೊಂದಿಗೆ ವ್ಯಭಿಚಾರಮಾಡುವವನನ್ನು ಸತ್ತಬಳಿಕ ಯಮದೂತರು 'ವಜ್ರಕಂಟಕಶಾಲ್ಮಲೀ' ಎಂಬ ನರಕದಲ್ಲಿ ಕೆಡಹುವರು. ಅಲ್ಲಿ ಆತನನ್ನು ವಜ್ರದಂತೆ ಕಠೋರವಾದ ಮುಳ್ಳುಗಳುಳ್ಳ ಬೂರುಗದ ಮೇಲಕ್ಕೆ ಏರಿಸಿ ಅಲ್ಲಿಂದ ಸೆಳೆದಾಡುವರು. ॥ ೨೧ ॥

ಈ ಲೋಕದಲ್ಲಿ ಶ್ರೇಷ್ಠಕುಲದಲ್ಲಿ ಹುಟ್ಟಿದ ರಾಜನಾಗಲೀ, ರಾಜನ ಅಧಿಕಾರಿಯಾಗಲೀ ನಾಸ್ತಿಕನಾಗಿ ಧರ್ಮಮರ್ಯಾದೆಯನ್ನು ಮೀರಿ ನಡೆಯುವವರು ಸತ್ತಮೇಲೆ ವೈತರಣೀ ನದಿಯಲ್ಲಿ ಎಸೆಯಲ್ಪಡುತ್ತಾರೆ. ಮಲ, ಮೂತ್ರ, ಕೀವು, ರಕ್ತ, ಕೂದಲು, ಉಗುರು, ಮೂಳೆ, ಕೊಬ್ಬು, ಮಾಂಸ, ಮಜ್ಜೆಗಳೇ ಮುಂತಾದ ಕೊಳಕು ಪದಾರ್ಥಗಳಿಂದ ತುಂಬಿ ನರಕಗಳ ಕೂಪದಂತೆ ಇರುವ ಆ ನದಿಯಲ್ಲಿ ಮುಳುಗಿದ ಅವನನ್ನು ಅಲ್ಲಿರುವ ಜಲಚರಪ್ರಾಣಿಗಳು ಕಚ್ಚಿ ತಿನ್ನುತ್ತವೆ. ಅದರಿಂದ ಎಷ್ಟೇ ಹಿಂಸೆಯುಂಟಾಗುತ್ತಿದ್ದರೂ ಅವನಿಗೆ ದೇಹವು ಬಿಟ್ಟುಹೋಗುವುದಿಲ್ಲ. ಪಾಪದ ಕಾರಣದಿಂದ ಪ್ರಾಣಗಳು ಅವನನ್ನು ಹಿಡಿದುಕೊಂಡಿರುತ್ತವೆ. ಅವನು ಆ ದುರ್ಗತಿಯನ್ನು ತನ್ನ ಪಾಪದ ಫಲವೆಂದು ತಿಳಿದುಕೊಂಡು ಮನಸ್ಸಿನಲ್ಲೇ ಕೊರಗುತ್ತಿರುತ್ತಾನೆ. ॥ ೨೨ ॥ ಯಾರು ಶೌಚ-ಆಚಾರಗಳ ನಿಯಮಗಳನ್ನು ತೊರೆದು, ನಾಚಿಕೆಯನ್ನು ಬಿಟ್ಟು ಈ ಲೋಕದಲ್ಲಿ ಅಧಮವರ್ಣದ ಸ್ತ್ರೀಯನ್ನು ಮದುವೆಯಾಗಿ ಪಶುಗಳಂತೆ ಆಚರಿಸುತ್ತಾರೋ ಅವರೂ ಕೂಡ ಸತ್ತನಂತರ ಕೀವು, ಮಲ-ಮೂತ್ರ ಮತ್ತು ಶ್ಲೇಷ್ಮಗಳಿಂದ ತುಂಬಿದ ಪೂಯೋದವೆಂಬ ಸಮುದ್ರದಲ್ಲಿ ಬಿದ್ದು ಆ ಅತ್ಯಂತ ಹೇಯವಾದ ಪದಾರ್ಥಗಳನ್ನೇ ತಿನ್ನುತ್ತಾರೆ. ॥ ೨೩ ॥ ಈ ಲೋಕದಲ್ಲಿ ಬ್ರಾಹ್ಮಣಾದಿ ಉಚ್ಚವರ್ಣದ ಜನರು ನಾಯಿ ಅಥವಾ ಕತ್ತೆಯನ್ನು ಸಾಕುವವರನ್ನು ಮತ್ತು ಬೇಟೆಯಾಡುವುದರಲ್ಲೇ ತೊಡಗಿರುವವರನ್ನು, ಶಾಸ್ತ್ರಕ್ಕೆ ವಿರುದ್ಧವಾಗಿ ಪಶುಗಳನ್ನು ವಧಿಸುವವರನ್ನು ಸತ್ತಬಳಿಕ 'ಪ್ರಾಣರೋಧ' ಎಂಬ ನರಕದಲ್ಲಿ ಹಾಕುತ್ತಾರೆ. ಅಲ್ಲಿ ಯಮದೂತರು ಅವನನ್ನು ಗುರಿಯಾಗಿಸಿ ಬಾಣಗಳಿಂದ ಹೊಡೆಯುವರು. ॥ ೨೪ ॥

ಈ ಲೋಕದಲ್ಲಿ ದಾಂಭಿಕರಾಗಿ ಪಾಖಂಡಯಜ್ಞಗಳಲ್ಲಿ ಪಶುಗಳನ್ನು ವಧಿಸುವವರನ್ನು ಪರಲೋಕದಲ್ಲಿ ವೈಶಸ (ವಿಶಸನ) ಎಂಬ ನರಕಕ್ಕೆ ಹಾಕಿ, ಅಲ್ಲಿಯ ಅಧಿಕಾರಿಗಳು ಬಗೆ-ಬಗೆಯಾಗಿ ಹಿಂಸೆಪಡಿಸುವರು. ॥ ೨೫ ॥ ಕಾಮಾತುರನಾದ ದ್ವಿಜನು ತನ್ನ ಸವರ್ಣಳಾದ ಹೆಂಡತಿಗೆ ತನ್ನ ರೇತಸ್ಸನ್ನು ಕುಡಿಸುವನೋ ಆ ಪಾಪಿಯನ್ನು ಮೃತನಾದ ಬಳಿಕ ಯಮದೂತರು ರೇತಸ್ಸಿನಿಂದ ತುಂಬಿದ ಲಾಲಾಭಕ್ಷವೆಂಬ ನದಿಯಲ್ಲಿ ಕೆಡಹಿ ಅವನಿಗೆ ರೇತಸ್ಸನ್ನೇ ಕುಡಿಸು

ರೇತಃ ಕುಲ್ಯಾಯಾಂ ಪಾತಯಿತ್ವಾ ರೇತಃ ಸಂಪಾಯಯಂತಿ ॥ ೨೬ ॥ ಯೇ ತ್ವಿಹ ವೈ ದಸ್ಯವೋಽಗ್ನಿದಾ ಗರದಾ ಗ್ರಾಮಾನ್ಸಾರ್ಥಾನ್ವಾ ವಿಲುಂಪಂತಿ ರಾಜಾನೋ ರಾಜಭಟಾ ವಾ ತಾಂಶ್ಚಾಪಿ ಹಿ ಪರೇತ್ಯ ಯಮದೂತಾ ವಜ್ರದಂಷ್ಟ್ರಾಃ ಶ್ವಾನಃ ಸಪ್ತಶತಾನಿ ವಿಂಶತಿಶ್ಚ ಸರಭಸಂ ಖಾದಂತಿ ॥ ೨೭ ॥ ಯಸ್ತ್ವಿಹ ವಾ ಅನೃತಂ ವದತಿ ಸಾಕ್ಷ್ಯೇ ದ್ರವ್ಯವಿನಿಮಯೇ ದಾನೇ ವಾ ಕಥಂಚಿತ್ಸ ವೈ ಪ್ರೇತ್ಯ ನರಕೇಽವೀಚಿಮತ್ಯಧಃಶಿರಾ ನಿರವಕಾಶೇ ಯೋಜನಶತೋಚ್ಛ್ರಾಯಾದ್ಗಿರಿಮೂರ್ಧ್ನಃ ಸಂಪಾತ್ಯತೇ ಯತ್ರ ಜಲಮಿವ ಸ್ಥಲಮಶ್ಮಪೃಷ್ಠಮವಭಾಸತೇ ತದವೀಚಿಮತ್ತಿಲಶೋ ವಿಶೀರ್ಯಮಾಣಶರೀರೋ ನ ಮ್ರಿಯಮಾಣಃ ಪುನರಾರೋಪಿತೋ ನಿಪತತಿ ॥ ೨೮ ॥

ಯಸ್ತ್ವಿಹ ವೈ ವಿಪ್ರೋ ರಾಜನ್ಯೋ ವೈಶ್ಯೋ ವಾ ಸೋಮಪೀಥಸ್ತತ್ಕಲತ್ರಂ ವಾ ಸುರಾಂ ವ್ರತಸ್ಥೋಽಪಿ ವಾ ಪಿಬತಿ ಪ್ರಮಾದತಸ್ತೇಷಾಂ ನಿರಯಂ ನೀತಾನಾಮುರಸಿ ಪದಾಽಽಕ್ರಮ್ಯಾಸ್ಯೇ ವಹ್ನಿನಾ ದ್ರವಮಾಣಂ ಕಾರ್ಷ್ಣಾಯಸಂ ನಿಷಿಂಚಂತಿ ॥ ೨೯ ॥

ಅಥ ಚ ಯಸ್ತ್ವಿಹ ವಾ ಆತ್ಮಸಂಭಾವನೇನ ಸ್ವಯಮಧಮೋ ಜನ್ಮತಪೋವಿದ್ಯಾಚಾರವರ್ಣಾಶ್ರಮವತೋ ವರೀಯಸೋ ನ ಬಹು ಮನ್ಯೇತ ಸ ಮೃತಕ ಏವ ಮೃತ್ವಾ ಕ್ಷಾರಕರ್ದಮೇ ನಿರಯೇಽವಾಕ್ಶಿರಾ ನಿಪಾತಿತೋ ದುರಂತಾ ಯಾತನಾ ಹ್ಯಶ್ನುತೇ ॥ ೩೦ ॥

ಯೇ ತ್ವಿಹ ವೈ ಪುರುಷಾಃ ಪುರುಷಮೇಧೇನ ಯಜಂತೇ ಯಾಶ್ಚ ಸ್ತ್ರಿಯೋ ನೃಪಶೂನ್ ಖಾದಂತಿ ತಾಂಶ್ಚ ತೇ ಪಶವ ಇವ ನಿಹತಾ ಯಮಸದನೇ ಯಾತಯಂತೋ ರಕ್ಷೋಗಣಾಃ ಸೌನಿಕಾ ಇವ ಸ್ವಧಿತಿನಾವದಾಯಾಸೃಕ್ಪಿಬಂತಿ ನೃತ್ಯಂತಿ ಚ ಗಾಯಂತಿ ಚ ಹೃಷ್ಯಮಾಣಾ ಯಥೇಹ ಪುರುಷಾದಾಃ ॥ ೩೧ ॥ ಯೇ ತ್ವಿಹ ವಾ ಅನಾಗಸೋಽರಣ್ಯೇ ಗ್ರಾಮೇ ವಾ ವೈಶ್ರಂಭಕೈರುಪಸೃತಾನುಪವಿಶ್ರಂಭಯ್ಯ

ವರು. ॥ ೨೬ ॥ ಯಾವನಾದರೂ ರಾಜನಾಗಲೀ, ಅವನ ಅಧಿಕಾರಿಯಾಗಲೀ, ಅಥವಾ ಕಳ್ಳನಾಗಲೀ ಈ ಲೋಕದಲ್ಲಿ ಮನೆಗೆ ಬೆಂಕಿಹಚ್ಚುವುದು, ಮತ್ತೊಬ್ಬರಿಗೆ ವಿಷವುಣಿಸುವುದು, ಊರನ್ನು ಅಥವಾ ವ್ಯಾಪಾರಿಗಳನ್ನು ಲೂಟಿಮಾಡುವುದು ಮುಂತಾದ ಪಾತಕಗಳನ್ನು ಮಾಡಿದವರನ್ನು ಮರಣಾನಂತರ ಸಾರಮೇಯಾದನವೆಂಬ ನರಕದಲ್ಲಿ ಯಮದೂತರು, ವಜ್ರದಂತ ಕೋರೆದಾಡೆಗಳುಳ್ಳ ಏಳುನೂರ ಇಪ್ಪತ್ತು ನಾಯಿಗಳಾಗಿ ಬಹಳ ಕ್ರೋಧದಿಂದ ಕಿತ್ತು ತಿನ್ನುವರು. ॥ ೨೭ ॥ ಈ ಲೋಕದಲ್ಲಿ ಸಾಕ್ಷಿ ಹೇಳುವಾಗ, ವ್ಯಾಪಾರದಲ್ಲಿ ಅಥವಾ ದಾನಕೊಡುವಾಗ ಸುಳ್ಳು ಹೇಳುವವನು ಸತ್ತಮೇಲೆ ಆಧಾರರಹಿತವಾದ ಅವೀಚಿಮಾನ್ ಎಂಬ ನರಕದಲ್ಲಿ ಬೀಳುತ್ತಾನೆ. ಅಲ್ಲಿ ಅವನನ್ನು ನೂರುಯೋಜನ ಎತ್ತರವಾದ ಪರ್ವತದ ತುದಿಯಿಂದ ತಲೆಕೆಳಗಾಗಿ ಬೀಳಿಸುವರು. ಆ ನರಕದ ಭೂಮಿಯು ನೀರಿನಂತೆ ಕಂಡುಬರುತ್ತದೆ. ಅದರಿಂದ ಇದನ್ನು ಅವೀಚಿಮಾನ್ ಎಂದು ಹೇಳುತ್ತಾರೆ. ಅಲ್ಲಿ ಬೀಳಿಸಿದಾಗ ಅವನ ಶರೀರವು ಚೂರು-ಚೂರಾದರೂ ಪ್ರಾಣಗಳು ಹೋಗುವುದಿಲ್ಲ. ಅದರಿಂದ ಅವನನ್ನು ಪದೇ-ಪದೇ ಮೇಲಕ್ಕೆ ಕೊಂಡುಹೋಗಿ ಬೀಳಿಸುವರು. ॥ ೨೮ ॥ ಬ್ರಾಹ್ಮಣನಾಗಲೀ, ಬ್ರಾಹ್ಮಣಿಯಾಗಲೀ ಅಥವಾ ವ್ರತದಲ್ಲಿರುವವನಾಗಲೀ, ಬೇರೆ ಯಾವನೇ ಪ್ರಮಾದವಶನಾಗಿ ಮದ್ಯಪಾನ ಮಾಡಿದರೆ, ಕ್ಷತ್ರಿಯನು ಅಥವಾ ವೈಶ್ಯನು ಸೋಮಪಾನ ಮಾಡಿದರೆ ಇವರನ್ನು ಯಮದೂತರು ಅಯಃಪಾನವೆಂಬ ನರಕಕ್ಕೆ ಕೊಂಡುಹೋಗಿ, ಅವನ ಎದೆಯಮೇಲೆ ಕಾಲನ್ನಿಟ್ಟು ಅವನ ಬಾಯಲ್ಲಿ ಬೆಂಕಿಯಲ್ಲಿ ಕರಗಿದ ಕಬ್ಬಿಣದ ರಸವನ್ನು ಹುಯ್ಯುವರು. ॥ ೨೯ ॥ ತಾನು ಅಧಮನಾಗಿದ್ದರೂ ತನ್ನನ್ನು ಉತ್ತಮನೆಂದು ಭಾವಿಸಿಕೊಂಡು ಜನ್ಮ, ತಪಸ್ಸು, ವಿದ್ಯೆ, ಆಚರಣೆ, ವರ್ಣ, ಆಶ್ರಮ ಇವುಗಳಲ್ಲಿ ತನಗಿಂತ ಉತ್ತಮರಾದವರನ್ನು ವಿಶೇಷವಾಗಿ ಗೌರವಿಸದಿರುವವನು ಬದುಕಿದ್ದರೂ ಸತ್ತವನಂತೆ ತಿಳಿಯಬೇಕು. ಸತ್ತಮೇಲೆ ಅವನನ್ನು ಕ್ಷಾರಕರ್ದಮವೆಂಬ ನರಕದಲ್ಲಿ ತಲೆಕೆಳಗಾಗಿ ಬೀಳಿಸುತ್ತಾರೆ. ಅವನಿಗೆ ಅಲ್ಲಿ ಅನಂತ ಪೀಡೆಗಳನ್ನು ಭೋಗಿಸಬೇಕಾಗುತ್ತದೆ. ॥ ೩೦ ॥

ಈ ಲೋಕದಲ್ಲಿ ನರಮೇಧವೇ ಮುಂತಾದವುಗಳ ಮೂಲಕ ಭೈರವ, ಯಕ್ಷ, ರಾಕ್ಷಸ ಮುಂತಾದವರನ್ನು ಪೂಜಿಸುವವರಿಗೆ, ಸ್ತ್ರೀಯು ಪಶುವಿನಂತೆ ಪುರುಷನನ್ನು ತಿನ್ನುವವಳಿಗೆ - ಪಶುಗಳಂತೆ ಸತ್ತುಹೋದ ಆ ಪುರುಷರು ಯಮಲೋಕದಲ್ಲಿ ರಾಕ್ಷಸರಾಗಿ ಬಗೆ-ಬಗೆಯ ಕಷ್ಟಗಳನ್ನು ಕೊಡುತ್ತಾರೆ ಮತ್ತು ರಕ್ಷೋಗಣಭೋಜನವೆಂಬ ನರಕದಲ್ಲಿ ಕಟುಕರಂತೆ ಅವರನ್ನು ಕೊಡಲಿಯಿಂದ ಕತ್ತರಿಸಿ, ಅವನ ರಕ್ತವನ್ನು ಕುಡಿಯುತ್ತಾರೆ. ■ ಮಾಂಸವನ್ನು ತಿನ್ನುವವನು ಈ ಲೋಕದಲ್ಲಿ ಮಾಂಸಭಕ್ಷಣದಿಂದ ಆನಂದಿತರಾದಂತೆ, ಆ ರಾಕ್ಷಸರು ಅವನ ರಕ್ತವನ್ನು ಕುಡಿದು ಆನಂದಿತರಾಗಿ ಹಾಡುತ್ತಾ-ಕುಣಿಯುತ್ತಾ ಇರುತ್ತಾರೆ. ॥ ೩೧ ॥ ಈ ಲೋಕದಲ್ಲಿ ಬದುಕಬೇಕೆಂದಿರುವ ಅರಣ್ಯದ ಅಥವಾ ಊರಿನ ನಿರಪರಾಧಿಗಳಾದ ಪ್ರಾಣಿಗಳನ್ನು ಬಗೆ-ಬಗೆಯ ಉಪಾಯಗಳಿಂದ ತಮ್ಮ ಬಳಿಗೆ ಬರಮಾಡಿಕೊಂಡು ಆ ಪ್ರಾಣಿಗಳನ್ನು ಶೂಲಕ್ಕೇರಿಸಿ ಅಥವಾ

ಬಿಭೇವಿಷೂನ್ ಶೂಲಸೂತ್ರಾದಿಷೂಪಪ್ರೋತಾನ್ ಕ್ರೀಡನಕತಯಾ ಯಾತಯಂತಿ ತೇಽಪಿ ಚ ಪ್ರೇತ್ಯ ಯಮಯಾತನಾಸು ಶೂಲಾದಿಷು ಪ್ರೋತಾತ್ಮಾನಃ ಕ್ಷುತ್ತೃಡ್ಭ್ಯಾಂ ಚಾಭಿಹತಾಃ ಕಂಕವಟಾದಿಭಿಶ್ಚೇತಸ್ತತಸ್ತಿಗ್ಮತುಂಡೈರಾಹನ್ಯಮಾನಾ ಆತ್ಮಶಮಲಂ ಸ್ಮರಂತಿ ॥ ೩೨ ॥

ಯೇ ತ್ವಿಹ ವೈ ಭೂತಾನ್ಯುದ್ವೇಜಯಂತಿ ನರಾ ಉಲ್ಬಣಸ್ವಭಾವಾ ಯಥಾ ದಂದಶೂಕಾಸ್ತೇಽಪಿ ಪ್ರೇತ್ಯ ನರಕೇ ದಂದಶೂಕಾಖ್ಯೇ ನಿಪತಂತಿ ಯತ್ರ ನೃಪ ದಂದಶೂಕಾಃ ಪಂಚಮುಖಾಃ ಸಪ್ತಮುಖಾ ಉಪಸೃತ್ಯ ಗ್ರಸಂತಿ ಯಥಾ ಬಿಲೇಶಯಾನ್ ॥ ೩೩ ॥ ಯೇ ತ್ವಿಹ ವಾ ಅಂಧಾವಟಕುಸೂಲಗುಹಾದಿಷು ಭೂತಾನಿ ನಿರುಂಧಂತಿ ತಥಾಮುತ್ರ ತೇಷ್ವೇವೋಪವೇಶ್ಯ ಸಗರೇಣ ವಹ್ನಿನಾ ಧೂಮೇನ ನಿರುಂಧಂತಿ ॥ ೩೪ ॥

ಯಸ್ತ್ವಿಹ ವಾ ಅತಿಥೀನಭ್ಯಾಗತಾನ್ವಾ ಗೃಹಪತಿರಸಕೃದುಪಗತಮನ್ಯುರ್ದಿಧಕ್ಷುರಿವ ಪಾಪೇನ ಚಕ್ಷುಷಾ ನಿರೀಕ್ಷತೇ ತಸ್ಯ ಚಾಪಿ ನಿರಯೇ ಪಾಪದೃಷ್ಟೇರಕ್ಷಿಣೀ ವಜ್ರತುಂಡಾ ಗೃಧ್ರಾಃ ಕಂಕಕಾಕವಟಾದಯಃ ಪ್ರಸಹ್ಯೋರುಬಲಾದುತ್ಪಾಟಯಂತಿ ॥ ೩೫ ॥

ಯಸ್ತ್ವಿಹ ವಾ ಆಢ್ಯಾಭಿಮತಿರಹಂಕೃತಿಸ್ತಿರ್ಯಕ್ಪ್ರೇಕ್ಷಣಃ ಸರ್ವತೋಽಭಿವಿಶಂಕೀ ಅರ್ಥವ್ಯಯನಾಶಚಿಂತಯಾ ಪರಿಶುಷ್ಯಮಾಣಹೃದಯವದನೋ ನಿರ್ವೃತಿಮನವಗತೋ ಗ್ರಹ ಇವಾರ್ಥಮಭಿರಕ್ಷತಿ ಸ ಚಾಪಿ ಪ್ರೇತ್ಯ ತದುತ್ಪಾದನೋತ್ಕರ್ಷಣಸಂರಕ್ಷಣಶಮಲಗ್ರಹಃ ಸೂಚೀಮುಖೇ ನರಕೇ ನಿಪತತಿ ಯತ್ರ ಹ ವಿತ್ತಗ್ರಹಂ ಪಾಪಪುರುಷಂ ಧರ್ಮರಾಜಪುರುಷಾ ವಾಯಕಾ ಇವ ಸರ್ವತೋಽಂಗೇಷು ಸೂತ್ರೈಃ ಪರಿವಯಂತಿ ॥ ೩೬ ॥

ಏವಂವಿಧಾ ನರಕಾ ಯಮಾಲಯೇ ಸಂತಿ ಶತಶಃ ಸಹಸ್ರಶಸ್ತೇಷು ಸರ್ವೇಷು ಚ ಸರ್ವ ಏವಾಧರ್ಮವರ್ತಿನೋ ಯೇ ಕೇಚಿದಿಹೋದಿತಾ ಅನುದಿತಾಶ್ಚಾವನಿಪತೇ ಪರ್ಯಾಯೇಣ ವಿಶಂತಿ ತಥೈವ ಧರ್ಮಾನು-

ಪಗ್ಗದಿಂದ ಬಿಗಿದು ಆಟವಾಡುತ್ತಾ ಅವುಗಳಿಗೆ ನಾನಾರೀತಿಯ ಪೀಡೆಗಳನ್ನು ಕೊಡುವವರನ್ನೂ ಕೂಡ ಮರಣಾನಂತರ ಯಮಯಾತನೆಯನ್ನು ಕೊಡುವ 'ಶೂಲಪ್ರೋತ'ವೆಂಬ ನರಕದಲ್ಲಿ ಶೂಲವೇ ಮುಂತಾದವುಗಳಿಗೆ ಪೋಣಿಸಿ ಅವರಿಗೆ ಚಿತ್ರಹಿಂಸೆಗಳನ್ನು ಕೊಡುವರು. ಹಸಿವು-ಬಾಯಾರಿಕೆಗಳಿಂದ ಸಂಕಟಪಡುವಾಗ ಮತ್ತು ಹದ್ದು, ಗಿಡುಗಗಳೇ ಮುಂತಾದ ಹರಿತವಾದ ಕೊಕ್ಕುಗಳುಳ್ಳ ಭೀಕರವಾದ ನರಕದ ಹಕ್ಕಿಗಳಿಂದ ಕಚ್ಚಿ ತಿನ್ನುತ್ತಿರುವಾಗ ತಾನು ಮಾಡಿದ ಎಲ್ಲ ಪಾಪಗಳು ನೆನಪಾಗುತ್ತವೆ. ॥ ೩೨ ॥

ಎಲೈ ರಾಜನೇ! ಈ ಲೋಕದಲ್ಲಿ ಯಾರು ಸರ್ಪಗಳಂತೆ ಉಗ್ರಸ್ವಭಾವವುಳ್ಳವರು ಬೇರೆ ಜೀವಿಗಳಿಗೆ ಪೀಡೆಯನ್ನುಂಟು ಮಾಡುತ್ತಾರೋ ಅವರು ಸತ್ತಮೇಲೆ ದಂದಶೂಕವೆಂಬ ನರಕದಲ್ಲಿ ಬೀಳುವರು. ಅಲ್ಲಿ ಐದೈದು, ಏಳೇಳು ಹೆಡೆಗಳುಳ್ಳ ಸರ್ಪಗಳು ಅವನ ಬಳಿಗೆ ಬಂದು ಅವನನ್ನು ಇಲಿಯಂತೆ ನುಂಗಿಬಿಡುವುವು. ॥ ೩೩ ॥ ಯಾರು ಇಲ್ಲಿ ಇತರ ಪ್ರಾಣಿಗಳನ್ನು ಕತ್ತಲೆಯ ಹಳ್ಳ-ಹಗೇವು-ಗುಹೆಗಳಲ್ಲಿ ಕೂಡಿಹಾಕುತ್ತಾರೋ ಅವರನ್ನು ಪರಲೋಕದಲ್ಲಿ ಯಮದೂತರು ಅಂತಹುದೇ ಕಗ್ಗತ್ತಲೆಯ ಸ್ಥಳದಲ್ಲಿ ಇರಿಸಿ ವಿಷಯುಕ್ತ ಹೊಗೆಯಿಂದ ಉಸಿರುಕಟ್ಟುವಂತೆ ಮಾಡುತ್ತಾರೆ. ಇದರಿಂದ ಈ ನರಕವನ್ನು ಅವಟನಿರೋಧ ಎಂದು ಹೇಳುತ್ತಾರೆ. ॥ ೩೪ ॥ ಯಾವ ಗೃಹಸ್ಥನು ಮನೆಗೆ ಬಂದ ಅತಿಥಿ-ಅಭ್ಯಾಗತರನ್ನು ಪದೇ-ಪದೇ ಸುಟ್ಟುಬಿಡುವಂತೆ ಕುಟಿಲತೆಯಿಂದ ಅವರತ್ತ ಸಿಟ್ಟಿನಿಂದ ನೋಡುತ್ತಾನೋ ಅವನು ನರಕಕ್ಕೆ ಹೋದಾಗ ಆ ಪಾಪದೃಷ್ಟಿಯುಳ್ಳ ಕಣ್ಣುಗಳನ್ನು ಗಿಡುಗ, ಹದ್ದು, ಕಾಗೆ ಮುಂತಾದ ವಜ್ರದಂತೆ ಕೊಕ್ಕುಳ್ಳ ಪಕ್ಷಿಗಳು ಬಲಾತ್ಕಾರವಾಗಿ ಕಿತ್ತುಬಿಡುವರು. ಈ ನರಕವನ್ನು ಪರ್ಯಾವರ್ತನವೆಂದು ಹೇಳುತ್ತಾರೆ. ॥ ೩೫ ॥ ಈ ಲೋಕದಲ್ಲಿ ಕೆಲವು ವ್ಯಕ್ತಿಗಳು ತಮ್ಮನ್ನು ದೊಡ್ಡ ಶ್ರೀಮಂತರೆಂದು ತಿಳಿದುಕೊಂಡು ದುರಭಿಮಾನದಿಂದ ಎಲ್ಲರನ್ನು ವಕ್ರದೃಷ್ಟಿಯಿಂದ ನೋಡುತ್ತಾರೆ ಮತ್ತು ಎಲ್ಲರ ಮೇಲೂ ಸಂಶಯಪಡುತ್ತಾರೆ. ಹಣವು ವೆಚ್ಚವಾಯಿತಲ್ಲ! ನಾಶವಾಗಿ ಹೋಯಿತಲ್ಲ! ಎಂಬ ಚಿಂತೆಯಿಂದ ಮನಸ್ಸು ಮುಖಗಳು ಒಣಗಿ ಹೋದವರಾಗಿ ಸ್ವಲ್ಪವೂ ನೆಮ್ಮದಿಯಿಲ್ಲದೆ ಯಕ್ಷನಂತೆ ಹಣದ ರಕ್ಷಣೆಯಲ್ಲೇ ಆಸಕ್ತರಾಗಿರುತ್ತಾರೆ. ಹಣದ ಸಂಪಾದನೆ, ಹಣವನ್ನು ಹೆಚ್ಚಿಸುವಿಕೆ, ಉಳಿಸುವಿಕೆ ಮುಂತಾದವುಗಳಿಗಾಗಿ ಬಗೆ-ಬಗೆಯ ಪಾಪಗಳನ್ನು ಮಾಡುತ್ತಾ ಇರುತ್ತಾರೆ. ಅಂತಹ ನರಾಧಮರು ಸತ್ತನಂತರ ಸೂಚೀಮುಖವೆಂಬ ನರಕದಲ್ಲಿ ಬೀಳುತ್ತಾರೆ. ಅಲ್ಲಿ ಆ ಅರ್ಥಪಿಶಾಚಿಯಾದ ಪಾಪಿಯ ಸರ್ವಾಂಗಗಳನ್ನು ಯಮದೂತರು ದರ್ಜಿಗಳಂತೆ ಸೂಜಿಯಿಂದ ಚುಚ್ಚಿ ದಾರಗಳಿಂದ ಹೊಲಿಯುವರು. ॥ ೩೬ ॥

ರಾಜೇಂದ್ರನೇ! ಯಮಲೋಕದಲ್ಲಿ ಇದೇ ಪ್ರಕಾರದ ನೂರಾರು, ಸಾವಿರಾರು ನರಕಗಳಿವೆ. ಅವುಗಳಲ್ಲಿ ಯಾವುದನ್ನು ಇಲ್ಲಿ ಉಲ್ಲೇಖಿಸಲ್ಪಟ್ಟಿದೆಯೋ, ಯಾವುದರ ಕುರಿತು ಏನೂ ಹೇಳಿಲ್ಲವೋ ಅವೆಲ್ಲವುಗಳಲ್ಲಿ ಎಲ್ಲ ಅಧರ್ಮಪರಾಯಣ ಜೀವರು ತಮ್ಮ ಕರ್ಮಗಳನುಸಾರವಾಗಿ ಮತ್ತೆ-ಮತ್ತೆ ಹೋಗುತ್ತಿರುತ್ತಾರೆ. ಹೀಗೆಯೇ ಧರ್ಮಾತ್ಮರಾದ ಜನರು ಸ್ವರ್ಗಾದಿಗಳಿಗೆ ಹೋಗುತ್ತಾರೆ. ಹೀಗೆ

ವರ್ಗೇಣ ಅಮುತ್ರ ಇಹ ತು ಪುನರ್ಭವೇ ತ ಉಭಯ-ಶೇಷಾಭ್ಯಾಂ ನಿವಿಶಂತಿ ॥ ೩೭ ॥

ನರಕ ಮತ್ತು ಸ್ವರ್ಗದ ಭೋಗದಿಂದ ಇವರ ಹೆಚ್ಚಿನಂಶದ ಪಾಪ ಮತ್ತು ಪುಣ್ಯಗಳು ಕ್ಷೀಣವಾಗಿ ಹೋದಾಗ ಬಾಕಿ ಉಳಿದಿರುವ ಪುಣ್ಯಪಾಪರೂಪವಾದ ಕರ್ಮಗಳಂತೆ ಇವರು ಪುನಃ ಇದೇ ಲೋಕದಲ್ಲಿ ಹುಟ್ಟಲು ಮರಳುತ್ತಾರೆ. ॥ ೩೭ ॥

ನಿವೃತ್ತಿಲಕ್ಷಣಮಾರ್ಗ ಆದಾವೇವ ವ್ಯಾಖ್ಯಾತಃ । ಏತಾವಾನೇವಾಂಡಕೋಶೋ ಯಶ್ಚತುರ್ದಶಧಾ ಪುರಾಣೇಷು ವಿಕಲ್ಪಿತ ಉಪಗೀಯತೇ ಯತ್ತದ್ಭಗವತೋ ನಾರಾಯಣಸ್ಯ ಸಾಕ್ಷಾನ್ಮಹಾಪುರುಷಸ್ಯ ಸ್ಥವಿಷ್ಠಂ ರೂಪಮಾತ್ಮಮಾಯಾಗುಣಮಯಮನುವರ್ಣಿತಮಾದೃತಃ ಪಠತಿ ಶೃಣೋತಿ ಶ್ರಾವಯತಿ ಸ ಉಪಗೇಯಂ ಭಗವತಃ ಪರಮಾತ್ಮನೋಽಗ್ರಾಹ್ಯಮಪಿ ಶ್ರದ್ಧಾಭಕ್ತಿವಿಶುದ್ಧಬುದ್ಧಿರ್ವೇದ ॥ ೩೮ ॥

ಈ ಧರ್ಮ ಮತ್ತು ಅಧರ್ಮ ಎರಡರಿಂದಲೂ ವಿಲಕ್ಷಣವಾದ ನಿವೃತ್ತಿಮಾರ್ಗವನ್ನಾದರೋ ಮೊದಲಿಗೆ (ದ್ವಿತೀಯ ಸ್ಕಂಧದಲ್ಲಿ) ವರ್ಣಿಸಿ ಆಗಿದೆ. ಪುರಾಣಗಳಲ್ಲಿ ಹದಿನಾಲ್ಕು ಭುವನಗಳ ರೂಪದಲ್ಲಿ ವರ್ಣಿತವಾದ ಬ್ರಹ್ಮಾಂಡಕೋಶವು ಇಷ್ಟೇ ಇದೆ. ಇದು ಸಾಕ್ಷಾತ್ ಪರಮಪುರುಷ ಶ್ರೀಮನ್ನಾರಾಯಣನ ಮಾಯೆಯ ಗುಣಗಳಿಂದ ಕೂಡಿದ ಅತ್ಯಂತ ಸ್ಥೂಲ ಸ್ವರೂಪವಾಗಿದೆ. ಇದರ ವರ್ಣನೆಯನ್ನು ನಾನು ಮಾಡಿರುವೆನು. ಪರಮಾತ್ಮಾ ಭಗವಂತನ ನಿರ್ಗುಣ ಸ್ವರೂಪವನ್ನು ಉಪನಿಷತ್ತುಗಳಲ್ಲಿ ವರ್ಣಿತವಾಗಿದ್ದರೂ ಮನ-ಬುದ್ಧಿಗಳು ತಲುಪಲಾರದಷ್ಟು ಹೊರಗಿದೆ; ದೂರವಿದೆ. ಆದರೂ ಈ ಸ್ಥೂಲರೂಪದ ವರ್ಣನೆಯನ್ನು ಆದರದಿಂದ ಓದುವವನ, ಕೇಳುವವನ, ಹೇಳುವವನ ಬುದ್ಧಿಯು ಶ್ರದ್ಧೆ ಮತ್ತು ಭಕ್ತಿಯ ಕಾರಣದಿಂದ ಶುದ್ಧವಾಗುತ್ತದೆ ಮತ್ತು ಅವನು ಆ ಸೂಕ್ಷ್ಮರೂಪವನ್ನು ಕೂಡ ಅನುಭವಿಸಬಲ್ಲನು. ॥ ೩೮ ॥

ಶ್ರುತ್ವಾ ಸ್ಥೂಲಂ ತಥಾ ಸೂಕ್ಷ್ಮಂ
ರೂಪಂ ಭಗವತೋ ಯತಿಃ ।
ಸ್ಥೂಲೇ ನಿರ್ಜಿತಮಾತ್ಮಾನಂ ಶನೈಃ
ಸೂಕ್ಷ್ಮಂ ಧಿಯಾ ನಯೇದಿತಿ ॥ ೩೯ ॥

ಯತಿಯಾದವನು ಭಗವಂತನ ಸ್ಥೂಲ ಮತ್ತು ಸೂಕ್ಷ್ಮ ಎರಡೂ ರೂಪಗಳನ್ನು ಶ್ರವಣಿಸಿ ಮೊದಲಿಗೆ ಸ್ಥೂಲರೂಪದಲ್ಲಿ ಚಿತ್ತವನ್ನು ಸ್ಥಿರಗೊಳಿಸಬೇಕು. ಮತ್ತೆ ನಿಧಾನವಾಗಿ ಅಲ್ಲಿಂದ ತೊಡೆದು ಅದನ್ನು ಸೂಕ್ಷ್ಮದಲ್ಲಿ ತೊಡಗಿಸಬೇಕು. ॥ ೩೯ ॥ ಪರೀಕ್ಷಿತನೇ! ನಾನು ನಿನಗೆ ಪೃಥಿವಿ, ಅದರ ಅಂತರ್ಗತ ದ್ವೀಪ, ವರ್ಷ, ನದಿ, ಪರ್ವತ, ಆಕಾಶ, ಸಮುದ್ರ, ಪಾತಾಳ, ದಿಕ್ಕುಗಳು, ನರಕ, ಜ್ಯೋತಿರ್ಗಣ ಮತ್ತು ಲೋಕಗಳ ಸ್ಥಿತಿಯನ್ನು ವರ್ಣಿಸಿರುವೆನು. ಇದೇ ಭಗವಂತನ ಅತಿ ಅದ್ಭುತ ಸ್ಥೂಲರೂಪವಾಗಿದೆ. ಅದು ಸಮಸ್ತ ಜೀವಿಗಳಿಗೆ ಆಶ್ರಯವಾಗಿದೆ. ॥ ೪೦ ॥

ಭೂದ್ವೀಪವರ್ಷಸರಿದದ್ರಿನಭಃಸಮುದ್ರ-
ಪಾತಾಲದಿಙ್ನರಕಭಾಗಣಲೋಕಸಂಸ್ಥಾ ।
ಗೀತಾ ಮಯಾ ತವ ನೃಪಾದ್ಭುತಮೀಶ್ವರಸ್ಯ
ಸ್ಥೂಲಂ ವಪುಃ ಸಕಲಜೀವನಿಕಾಯಧಾಮ ॥ ೪೦ ॥

ಇಪ್ಪತ್ತಾರನೆಯ ಅಧ್ಯಾಯವು ಮುಗಿಯಿತು. ॥ ೨೬ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಪಂಚಮಸ್ಕಂಧೇ
ನರಕಾನುವರ್ಣನಂ ನಾಮ ಷಡ್ವಿಂಶೋಽಧ್ಯಾಯಃ ॥ ೨೬ ॥

ಐದನೆಯ ಸ್ಕಂಧವು ಸಂಪೂರ್ಣವಾಯಿತು.

॥ ಓಂ ನಮೋ ಭಗವತೇ ವಾಸುದೇವಾಯ ॥

ಶ್ರೀಮದ್ಭಾಗವತಮಹಾಪುರಾಣಮ್

ಷಷ್ಠಃ ಸ್ಕಂಧಃ

ಮೊದಲನೆಯ ಅಧ್ಯಾಯ

ಅಜಾಮಿಳೋಪಾಖ್ಯಾನ ಪ್ರಾರಂಭ

ರಾಜೋವಾಚ

ನಿವೃತ್ತಿಮಾರ್ಗಃ ಕಥಿತಃ ಆದೌ ಭಗವತಾ ಯಥಾ ।
ಕ್ರಮಯೋಗೋಪಲಬ್ಧೇನ ಬ್ರಹ್ಮಣಾ ಯದಸಂಸೃತಿಃ ॥ ೧ ॥

ಪ್ರವೃತ್ತಿಲಕ್ಷಣಶ್ಚೈವ ತ್ರೈಗುಣ್ಯವಿಷಯೋ ಮುನೇ ।
ಯೋಽಸಾವಲೀನಪ್ರಕೃತೇರ್ಗುಣಸರ್ಗಃ ಪುನಃ ಪುನಃ ॥ ೨ ॥

ಅಧರ್ಮಲಕ್ಷಣಾ ನಾನಾ ನರಕಾಶ್ಚಾನುವರ್ಣಿತಾಃ ।
ಮನ್ವಂತರಶ್ಚ ವ್ಯಾಖ್ಯಾತ ಆದ್ಯಃ ಸ್ವಾಯಂಭುವೋ ಯತಃ ॥ ೩ ॥

ಪ್ರಿಯವ್ರತೋತ್ತಾನಪದೋರ್ವಂಶಸ್ತಚ್ಚರಿತಾನಿ ಚ ।
ದ್ವೀಪವರ್ಷಸಮುದ್ರಾದ್ರಿನದ್ಯುದ್ಯಾನವನಸ್ಪತೀನ್ ॥ ೪ ॥

ಧರಾಮಂಡಲಸಂಸ್ಥಾನಂ ಭಾಗಲಕ್ಷಣಮಾನತಃ ।
ಜ್ಯೋತಿಷಾಂ ವಿವರಾಣಾಂ ಚ ಯಥೇದಮಸೃಜದ್ವಿಭುಃ ॥ ೫ ॥

ಅಧುನೇಹ ಮಹಾಭಾಗ ಯಥೈವ ನರಕಾನ್ನರಃ ।
ನಾನೋಗ್ರಯಾತನಾನ್ನೇಯಾತ್ತನ್ಮೇ ವ್ಯಾಖ್ಯಾತುಮರ್ಹಸಿ ॥ ೬ ॥

ಶ್ರೀಶುಕ ಉವಾಚ

ನ ಚೇದಿಹೈವಾಪಚಿತಿಂ ಯಥಾಂಹಸಃ
ಕೃತಸ್ಯ ಕುರ್ಯಾನ್ಮನಉಕ್ತಿಪಾಣಿಭಿಃ ।
ಧ್ರುವಂ ಸ ವೈ ಪ್ರೇತ್ಯ ನರಕಾನುಪೈತಿ
ಯೇ ಕೀರ್ತಿತಾ ಮೇ ಭವತಸ್ತಿಗ್ಮಯಾತನಾಃ ॥ ೭ ॥

ಪರೀಕ್ಷಿತ ಮಹಾರಾಜನು ಕೇಳಿದನು – ಭಗವಾನ್ ಶುಕಮಹಾಮುನಿಗಳೇ! ನೀವು ಹಿಂದೆ (ದ್ವಿತೀಯ ಸ್ಕಂಧದಲ್ಲಿ) ನನಗೆ ನಿವೃತ್ತಿಮಾರ್ಗವನ್ನು ವರ್ಣಿಸಿದಿರಿ. ಆ ಮಾರ್ಗದ ಮೂಲಕ ಅರ್ಚಿರಾದಿ ಗತಿಯಿಂದ ಕ್ರಮವಾಗಿ ಜೀವನು ಬ್ರಹ್ಮಲೋಕಕ್ಕೆ ಹೋಗುತ್ತಾನೆ ಹಾಗೂ ಕಲ್ಪಾಂತ್ಯದಲ್ಲಿ ಬ್ರಹ್ಮದೇವರೊಡನೆ ಮುಕ್ತನಾಗುತ್ತಾನೆ ಎಂಬುದನ್ನು ತಿಳಿಸಿರುವಿರಿ. ॥ ೧ ॥ ಮುನಿವರ್ಯರೇ! ಇದಲ್ಲದೆ ಪ್ರವೃತ್ತಿಮಾರ್ಗವನ್ನೂ (ತೃತೀಯ ಸ್ಕಂಧದಲ್ಲಿ) ಚೆನ್ನಾಗಿ ವರ್ಣಿಸಿದ್ದೀರಿ. ಅದರಿಂದ ತ್ರಿಗುಣಮಯ ಸ್ವರ್ಗಾದಿ ಲೋಕಗಳು ಪ್ರಾಪ್ತವಾಗುತ್ತವೆ. ಹಾಗೂ ಪ್ರಕೃತಿಯ ಸಂಬಂಧವು ಕಳಚಿಹೋಗದಿರುವುದರಿಂದ ಜೀವನು ಪದೇ-ಪದೇ ಜನ್ಮ-ಮರಣದ ಚಕ್ರದಲ್ಲಿ ಸಿಲುಕಿಕೊಳ್ಳುವನು. ॥ ೨ ॥ ಅಧರ್ಮವನ್ನು ಆಚರಿಸುವುದರಿಂದ ಅನೇಕ ನರಕಗಳು ದೊರೆಯುತ್ತವೆ ಮತ್ತು ಐದನೆಯ ಸ್ಕಂಧದಲ್ಲಿ ಅವನ್ನು ವಿಸ್ತಾರವಾಗಿ ವರ್ಣಿಸಿದಿರಿ. ನಾಲ್ಕನೆಯ ಸ್ಕಂಧದಲ್ಲಿ ಆ ಮೊದಲನೆಯ ಮನ್ವಂತರವನ್ನು ವರ್ಣಿಸಿ ಅದರ ಅಧಿಪತಿಯು ಸ್ವಾಯಂಭುವ ಮನುವಾಗಿದ್ದನು ಎಂಬುದನ್ನು ತಿಳಿಸಿದಿರಿ. ॥ ೩ ॥ ಜೊತೆಗೆ ನಾಲ್ಕನೆಯ ಮತ್ತು ಐದನೆಯ ಸ್ಕಂಧದಲ್ಲಿ ಪ್ರಿಯವ್ರತ ಹಾಗೂ ಉತ್ತಾನಪಾದ ಇವರ ವಂಶವನ್ನು, ಚರಿತ್ರೆಯನ್ನು, ಹಾಗೆಯೇ ದ್ವೀಪ, ವರ್ಷ, ಸಮುದ್ರ, ಪರ್ವತ, ನದಿ, ಉದ್ಯಾನ ಹಾಗೂ ಬೇರೆ-ಬೇರೆ ದ್ವೀಪಗಳು, ವೃಕ್ಷಗಳು ಇವನ್ನೂ ನಿರೂಪಿಸಿದಿರಿ. ॥ ೪ ॥ ಭೂಮಂಡಲದ ಸ್ಥಿತಿ, ಅದರ ದ್ವೀಪ-ವರ್ಷಾದಿಗಳ ವಿಭಾಗ, ಅವುಗಳ ಲಕ್ಷಣ ಹಾಗೂ ವಿಸ್ತಾರ, ನಕ್ಷತ್ರಗಳ ಸ್ಥಿತಿ, ಅತಲ-ವಿತಲ ಮುಂತಾದ ಏಳು ಪಾತಾಳಗಳನ್ನೂ ಭಗವಂತನು ಹೇಗೆ ಸೃಷ್ಟಿಸಿದನು? ಎಂಬುದನ್ನು ವರ್ಣಿಸಿದಿರಿ. ॥ ೫ ॥ ಮಹಾತ್ಮರೇ! ಯಾವುದರ ಅನುಷ್ಠಾನದಿಂದ ಮನುಷ್ಯನಿಗೆ ಅನೇಕಾನೇಕ ಭಯಂಕರ ಯಾತನೆಗಳಿಂದ ತುಂಬಿದ ನರಕಕ್ಕೆ ಹೋಗಬೇಕಾಗುವುದಿಲ್ಲವೋ ಅಂತಹ ಉಪಾಯವನ್ನು ತಿಳಿಯಲು ನಾನು ಬಯಸುತ್ತಿರುವೆನು. ದಯಮಾಡಿ ಅದನ್ನು ನನಗೆ ಉಪದೇಶಿಸಿರಿ. ॥ ೬ ॥

ಶ್ರೀಶುಕಮಹಾಮುನಿಗಳು ಹೇಳಿದರು – ಎಲೈ ರಾಜನೇ! ಮನಸ್ಸು, ಮಾತು ಮತ್ತು ಶರೀರದಿಂದ ಮನುಷ್ಯನು ಪಾಪಗಳನ್ನು ಮಾಡುತ್ತಾನೆ. ಅವನು ಆ ಪಾಪಗಳಿಗೆ ಇದೇ ಜನ್ಮದಲ್ಲಿ ಪ್ರಾಯಶ್ಚಿತ್ತ

ತಸ್ಮಾತ್ಪುರೈವಾಶ್ವಿಹ ಪಾಪನಿಷ್ಕೃತೌ
ಯತೇತ ಮೃತ್ಯೋರವಿಪದ್ಯತಾಽಽತ್ಮನಾ ।
ದೋಷಸ್ಯ ದೃಷ್ಟ್ವಾ ಗುರುಲಾಘವಂ ಯಥಾ
ಭಿಷಕ್ ಚಿಕಿತ್ಸೇತ ರುಜಾಂ ನಿದಾನವಿತ್ ॥ ೮ ॥

ರಾಜೋವಾಚ

ದೃಷ್ಟಶ್ರುತಾಭ್ಯಾಂ ಯತ್ಪಾಪಂ ಜಾನನ್ನಪ್ಯಾತ್ಮನೋಽಹಿತಮ್ ।
ಕರೋತಿ ಭೂಯೋ ವಿವಶಃ ಪ್ರಾಯಶ್ಚಿತ್ತಮಥೋ ಕಥಮ್ ॥ ೯ ॥

ಕ್ವಚಿನ್ನಿವರ್ತತೇಽಭದ್ರಾತ್ಕ್ವಚಿಚ್ಚರತಿ ತತ್ಪುನಃ ।
ಪ್ರಾಯಶ್ಚಿತ್ತಮಥೋಽಪಾರ್ಥಂ ಮನ್ಯೇ ಕುಂಜರಶೌಚವತ್ ॥ ೧೦ ॥

ಶ್ರೀಶುಕ ಉವಾಚ

ಕರ್ಮಣಾ ಕರ್ಮನಿರ್ಹಾರೋ ನ ಹ್ಯಾತ್ಯಂತಿಕ ಇಷ್ಯತೇ ।
ಅವಿದ್ವದಧಿಕಾರಿತ್ವಾತ್ ಪ್ರಾಯಶ್ಚಿತ್ತಂ ವಿಮರ್ಶನಮ್ ॥ ೧೧ ॥

ನಾಶ್ನತಃ ಪಥ್ಯಮೇವಾನ್ನಂ ವ್ಯಾಧಯೋಽಭಿಭವಂತಿ ಹಿ ।
ಏವಂ ನಿಯಮಕೃದ್ರಾಜನ್ ಶನೈಃ ಕ್ಷೇಮಾಯ ಕಲ್ಪತೇ ॥ ೧೨ ॥

ತಪಸಾ ಬ್ರಹ್ಮಚರ್ಯೇಣ ಶಮೇನ ಚ ದಮೇನ ಚ ।
ತ್ಯಾಗೇನ ಸತ್ಯಶೌಚಾಭ್ಯಾಂ ಯಮೇನ ನಿಯಮೇನ ಚ ॥ ೧೩ ॥

ದೇಹವಾಗ್ಬುದ್ಧಿಜಂ ಧೀರಾ ಧರ್ಮಜ್ಞಾಃ ಶ್ರದ್ಧಯಾನ್ವಿತಾಃ ।
ಕ್ಷಿಪಂತ್ಯಘಂ ಮಹದಪಿ ವೇಣುಗುಲ್ಮಮಿವಾನಲಃ ॥ ೧೪ ॥

ಕೇಚಿತ್ಕೇವಲಯಾ ಭಕ್ತ್ಯಾ ವಾಸುದೇವಪರಾಯಣಾಃ ।
ಅಘಂ ಧುನ್ವಂತಿ ಕಾರ್ತ್ಸ್ನ್ಯೇನ ನೀಹಾರಮಿವ ಭಾಸ್ಕರಃ ॥ ೧೫ ॥

ವನ್ನು ಮಾಡಿಕೊಳ್ಳದಿದ್ದರೆ ಸತ್ತಮೇಲೆ ಅವನು ನಿಂದಿತನಾಗಿ ಭಯಂಕರ ಯಾತನೆಗಳಿಂದ ತುಂಬಿದ ನರಕಗಳಿಗೆ ಹೋಗಬೇಕಾಗುತ್ತದೆ. ಇದನ್ನು ನಾನು ಹಿಂದೆಯೇ (ಐದನೆಯ ಸ್ಕಂಧದಲ್ಲಿ) ನಿನಗೆ ತಿಳಿಸಿರುವೆನು. ॥ ೭ ॥ ಇದರಿಂದ ತುಂಬಾ ಸಾವಧಾನತೆಯಿಂದ, ಎಚ್ಚರವಾಗಿದ್ದು ರೋಗ ಮತ್ತು ಮೃತ್ಯುವಿನ ಮೊದಲೇ ಅತಿಶೀಘ್ರವಾಗಿ ಪಾಪಗಳಲ್ಲಿ ಯಾವುದು ದೊಡ್ಡದು - ಯಾವುದು ಚಿಕ್ಕದು ಎಂದು ವಿಚಾರಮಾಡಿ ಮರ್ಮಜ್ಞನಾದ ವೈದ್ಯನು ರೋಗದ ಕಾರಣ ಮತ್ತು ಗುರು-ಲಾಘವಗಳನ್ನು ಮನಗಂಡು ಒಡನೆಯೇ ಚಿಕಿತ್ಸೆ ಮಾಡುವಂತೆ – ಅವುಗಳಿಗೆ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳಬೇಕು. ॥ ೮ ॥

ಪರೀಕ್ಷಿದ್ರಾಜನು ಕೇಳಿದನು – ಮಹಾತ್ಮರೇ! ಮನುಷ್ಯನು ರಾಜದಂಡ, ಸಮಾಜದಂಡ ಮುಂತಾದ ಲೌಕಿಕ ಮತ್ತು ಶಾಸ್ತ್ರೋಕ್ತ ನರಕಗಮನವೇ ಮುಂತಾದ ಪಾರಲೌಕಿಕ ಕಷ್ಟಗಳು ತನ್ನ ಶತ್ರುಗಳಾಗಿವೆ ಎಂದು ತಿಳಿದರೂ ಪಾಪವಾಸನೆಗಳಿಗೆ ವಿವಶನಾಗಿ ಮತ್ತೆ-ಮತ್ತೆ ಅಂತಹುದೇ ಪಾಪಕರ್ಮಗಳಲ್ಲಿ ಪ್ರವೃತ್ತನಾಗುತ್ತಾನೆ. ಇಂತಹ ಸ್ಥಿತಿಯಲ್ಲಿ ಅವನ ಪಾಪಗಳ ಪ್ರಾಯಶ್ಚಿತ್ತವು ಹೇಗಾಗಬಲ್ಲದು? ॥ ೯ ॥ ಮನುಷ್ಯನು ಕೆಲವೊಮ್ಮೆ ಪ್ರಾಯಶ್ಚಿತ್ತಾದಿಗಳ ಮೂಲಕ ಪಾಪಗಳಿಂದ ಬಿಡುಗಡೆ ಹೊಂದುತ್ತಾನೆ. ಕೆಲವೊಮ್ಮೆ ಪುನಃ ಅದನ್ನು ಮಾಡತೊಡಗುತ್ತಾನೆ. ಇಂತಹ ಸ್ಥಿತಿಯಲ್ಲಿ ಮನುಷ್ಯನು ಪ್ರಾಯಶ್ಚಿತ್ತ ಮಾಡಿಕೊಳ್ಳುವುದು ಆನೆಯ ಸ್ನಾನದಂತೆ ವ್ಯರ್ಥವೆಂದೇ ನಾನು ತಿಳಿಯುತ್ತೇನೆ. ॥ ೧೦ ॥

ಶ್ರೀಶುಕಮಹಾಮುನಿಗಳು ಹೇಳಿದರು – ಎಲೈ ರಾಜನೇ! ವಾಸ್ತವವಾಗಿ ಕರ್ಮದಿಂದ ಕರ್ಮವು ನಿಶ್ಶೇಷವಾಗಿ ನಾಶವಾಗುವುದಿಲ್ಲ. ಏಕೆಂದರೆ, ಅಜ್ಞಾನಿಗಳೇ ಕರ್ಮಕ್ಕೆ ಅಧಿಕಾರಿಗಳಾಗಿದ್ದಾರೆ. ಅಜ್ಞಾನವು ಇರುವಾಗ ಪಾಪವಾಸನೆಗಳು ಪೂರ್ಣವಾಗಿ ಅಳಿದುಹೋಗುವುದಿಲ್ಲ. ಆದ್ದರಿಂದ ನಿಜವಾದ ಪ್ರಾಯಶ್ಚಿತ್ತವಾದರೋ ತತ್ತ್ವಜ್ಞಾನವೇ ಆಗಿದೆ. ॥ ೧೧ ॥ ಒಳ್ಳೆಯ ಪಥ್ಯವಾದ ಆಹಾರವನ್ನೇ ಸೇವಿಸುವವನಿಗೆ ರೋಗಗಳು ಬಾಧಿಸುವುದಿಲ್ಲ. ಒಂದೊಮ್ಮೆ ರೋಗಗ್ರಸ್ತನಾದರೂ ಬೇಗನೇ ಗುಣಮುಖನಾಗುವನು. ಪರೀಕ್ಷಿತನೇ! ಹಾಗೆಯೇ ನಿಯಮಗಳನ್ನು ಪಾಲಿಸುವವನು ಸ್ವಲ್ಪ-ಸ್ವಲ್ಪವಾಗಿ ಪಾಪವಾಸನೆಗಳಿಂದ ಮುಕ್ತನಾಗಿ ಶ್ರೇಯಸ್ಕರವಾದ ತತ್ತ್ವಜ್ಞಾನವನ್ನು ಪಡೆಯುವುದರಲ್ಲಿ ಸಮರ್ಥನಾಗುವನು. ॥ ೧೨ ॥ ಬಿದಿರುಮೆಳೆಗೆ ತಗುಲಿದ ಬೆಂಕಿಯು ಇಡೀ ಬಿದುರುಪೊದೆಯನ್ನೇ ಸುಟ್ಟುಹಾಕುವಂತೆಯೇ ಧರ್ಮಜ್ಞರೂ, ಶ್ರದ್ಧಾವಂತರೂ ಆದ ಧೀರರು – ತಪಸ್ಸು, ಬ್ರಹ್ಮಚರ್ಯ, ಇಂದ್ರಿಯದಮನ, ಮನಸ್ಸಿನ ಸ್ಥೈರ್ಯ, ದಾನ, ಸತ್ಯ, ಒಳ-ಹೊರಗಿನ ಪವಿತ್ರತೆ ಮತ್ತು ಯಮ-ನಿಯಮಗಳು ಎಂಬ ಒಂಭತ್ತು ಸಾಧನೆಗಳಿಂದ ಮನಸ್ಸು, ಮಾತು, ಶರೀರಗಳಿಂದ ಮಾಡಲಾದ ಅತಿದೊಡ್ಡ ಪಾಪಗಳನ್ನೂ ಕೂಡ ನಾಶಮಾಡಿಬಿಡುವರು. ॥ ೧೩-೧೪ ॥ ಭಗವಂತನಲ್ಲಿ ಶರಣಾದ ವಿರಳವಾಗಿರುವ ಭಕ್ತರು ಕೇವಲ ಭಕ್ತಿಯಿಂದಲೇ ಸೂರ್ಯನು ಇಬ್ಬನಿಯನ್ನು ಕಳೆಯುವಂತೆ ತಮ್ಮ ಸಮಸ್ತ ಪಾಪಗಳನ್ನು ಕಳೆದುಕೊಳ್ಳುವರು. ॥ ೧೫ ॥

ನ ತಥಾ ಹ್ಯಘವಾನ್ರಾಜನ್ಪೂಯೇತ ತಪಆದಿಭಿಃ ।
ಯಥಾ ಕೃಷ್ಣಾರ್ಪಿತಪ್ರಾಣಸ್ತತ್ಪೂರುಷನಿಷೇವಯಾ ॥ ೧೬ ॥

ಸಧ್ರೀಚೀನೋ ಹ್ಯಯಂ ಲೋಕೇ
ಪಂಥಾಃ ಕ್ಷೇಮೋಽಕುತೋಭಯಃ ।
ಸುಶೀಲಾಃ . ಸಾಧವೋ ಯತ್ರ
ನಾರಾಯಣಪರಾಯಣಾಃ ॥ ೧೭ ॥

ಪ್ರಾಯಶ್ಚಿತ್ತಾನಿ ಚೀರ್ಣಾನಿ ನಾರಾಯಣಪರಾಙ್ಮುಖಮ್ ।
ನ ನಿಷ್ಪುನಂತಿ ರಾಜೇಂದ್ರ ಸುರಾಕುಂಭಮಿವಾಪಗಾಃ ॥ ೧೮ ॥

ಸಕೃನ್ಮನಃ ಕೃಷ್ಣಪದಾರವಿಂದಯೋ-
ರ್ನಿವೇಶಿತಂ ತದ್ಗುಣರಾಗಿ ಯೈರಿಹ ।
ನ ತೇ ಯಮಂ ಪಾಶಭೃತಶ್ಚ ತದ್ಭಟಾನ್
ಸ್ವಪ್ನೇಽಪಿ ಪಶ್ಯಂತಿ ಹಿ ಚೀರ್ಣನಿಷ್ಕೃತಾಃ ॥ ೧೯ ॥

ಅತ್ರ ಚೋದಾಹರಂತೀಮಮಿತಿಹಾಸಂ ಪುರಾತನಮ್ ।
ದೂತಾನಾಂ ವಿಷ್ಣುಯಮಯೋಃ ಸಂವಾದಸ್ತಂ ನಿಬೋಧ ಮೇ ॥ ೨೦ ॥

ಕಾನ್ಯಕುಬ್ಜೇ ದ್ವಿಜಃ ಕಶ್ಚಿದ್ದಾಸೀಪತಿರಜಾಮಿಲಃ ।
ನಾಮ್ನಾ ನಷ್ಟಸದಾಚಾರೋ ದಾಸ್ಯಾಃ ಸಂಸರ್ಗದೂಷಿತಃ ॥ ೨೧ ॥

ವಂದ್ಯಕ್ಷಕೈತವೈಶ್ಚೌರ್ಯೈರ್ಗರ್ಹಿತಾಂ ವೃತ್ತಿಮಾಸ್ಥಿತಃ ।
ಬಿಭ್ರತ್ಕುಟುಂಬಮಶುಚಿರ್ಯಾತಯಾಮಾಸ ದೇಹಿನಃ ॥ ೨೨ ॥

ಏವಂ ನಿವಸತಸ್ತಸ್ಯ ಲಾಲಯಾನಸ್ಯ ತತ್ಸುತಾನ್ ।
ಕಾಲೋಽತ್ಯಗಾನ್ಮಹಾನ್ರಾಜನ್ನಷ್ಟಾಶೀತ್ಯಾಯುಷಃ ಸಮಾಃ ॥ ೨೩ ॥

ತಸ್ಯ ಪ್ರವಯಸಃ ಪುತ್ರಾ
ದಶ ತೇಷಾಂ ತು ಯೋಽವಮಃ ।
ಬಾಲೋ ನಾರಾಯಣೋ ನಾಮ್ನಾ
ಪಿತ್ರೋಶ್ಚ ದಯಿತೋ ಭೃಶಮ್ ॥ ೨೪ ॥

ಸ ಬದ್ಧಹೃದಯಸ್ತಸ್ಮಿನ್ನರ್ಭಕೇ ಕಲಭಾಷಿಣಿ ।
ನಿರೀಕ್ಷಮಾಣಸ್ತಲ್ಲೀಲಾಂ ಮುಮುದೇ ಜರಠೋ ಭೃಶಮ್ ॥ ೨೫ ॥

ಭುಂಜಾನಃ ಪ್ರಪಿಬನ್ಖಾದನ್ ಬಾಲಕಸ್ನೇಹಯಂತ್ರಿತಃ ।
ಭೋಜಯನ್ಪಾಯಯನ್ಮೂಢೋ ನ ವೇದಾಗತಮಂತಕಮ್ ॥ ೨೬ ॥

ಎಲೈ ಮಹಾರಾಜನೇ! ಪಾಪಿಯಾದ ಮನುಷ್ಯನಿಗೆ ತನ್ನನ್ನು ಭಗವಾನ್ ಶ್ರೀಕೃಷ್ಣನಿಗೆ ಸಮರ್ಪಣೆ ಮಾಡಿಕೊಂಡು ಆತನನ್ನೂ ಅವನ ಭಕ್ತರನ್ನೂ ಸೇವಿಸುವುದರಿಂದ ಉಂಟಾಗುವಷ್ಟು ಶುದ್ಧಿಯು ತಪಸ್ಸು ಮುಂತಾದವುಗಳಿಂದ ಉಂಟಾಗುವುದಿಲ್ಲ. ॥ ೧೬ ॥ ಜಗತ್ತಿನಲ್ಲಿ ಈ ಭಕ್ತಿಪಂಥವೇ ಸರ್ವಶ್ರೇಷ್ಠವೂ, ಭಯರಹಿತವೂ, ಕಲ್ಯಾಣಪ್ರದವೂ ಆಗಿದೆ. ಏಕೆಂದರೆ, ಈ ಮಾರ್ಗದಲ್ಲಿ ಭಗವತ್ಪರಾಯಣರೂ, ಶೀಲವಂತರೂ ಆದ ಸಾಧುಗಳು ನಡೆಯುತ್ತಾರೆ. ॥ ೧೭ ॥ ಪರೀಕ್ಷಿತನೇ! ಮದ್ಯ ತುಂಬಿದ ಗಡಿಗೆಯನ್ನು ನದಿಗಳು ಶುದ್ಧವಾಗಿಸಲಾರವೋ, ಹಾಗೆಯೇ ಶ್ರೀಭಗವಂತನಿಗೆ ವಿಮುಖರಾದ ಮನುಷ್ಯರು ದೊಡ್ಡ-ದೊಡ್ಡ ಪ್ರಾಯಶ್ಚಿತ್ತಗಳನ್ನು ಮತ್ತೆ-ಮತ್ತೆ ಮಾಡಿಕೊಂಡರೂ ಅವರು ಪವಿತ್ರರಾಗಲಾರರು. ॥ ೧೮ ॥ ಶ್ರೀಭಗವಂತನ ಗುಣಗಳ ಸೇವನೆಯಲ್ಲಿ ಅನುರಾಗವುಳ್ಳ ತಮ್ಮ ಮನಸ್ಸೆಂಬ ದುಂಬಿಗೆ ಶ್ರೀಕೃಷ್ಣನ ಅಡಿದಾವರೆಗಳ ಮಕರಂದ ರಸವನ್ನು ಒಂದು ಬಾರಿ ಪಾನಮಾಡಿಸುವವನು ಎಲ್ಲ ಪ್ರಾಯಶ್ಚಿತ್ತಗಳನ್ನು ಮಾಡಿಕೊಂಡಂತೆಯೇ ಸರಿ. ಅಂಥವರು ಕನಸಿನಲ್ಲಿಯೂ ಯಮರಾಜನನ್ನು, ಅವನ ಪಾಶಧರಿಸಿದ ದೂತರನ್ನೂ ನೋಡಲಾರನು. ಮತ್ತೆ ನರಕದ ಮಾತೆಲ್ಲಿದೆ? ॥ ೧೯ ॥

ಪರೀಕ್ಷಿದ್ರಾಜನೇ! ಈ ವಿಷಯದಲ್ಲಿ ಮಹಾತ್ಮರು ಒಂದು ಪ್ರಾಚೀನ ಇತಿಹಾಸವನ್ನು ಹೇಳುತ್ತಾರೆ. ಅದರಲ್ಲಿ ಭಗವಾನ್ ವಿಷ್ಣು ದೂತರಿಗೂ, ಯಮದೂತರಿಗೂ ನಡೆದ ಸಂವಾದವಿದೆ. ಅದನ್ನು ನಿನಗೆ ಹೇಳುತ್ತೇನೆ, ಕೇಳು. ॥ ೨೦॥ ಕಾನ್ಯಕುಬ್ಜದೇಶದಲ್ಲಿ ಅಜಾಮಿಳನೆಂಬ ಓರ್ವ ಬ್ರಾಹ್ಮಣನಿದ್ದನು. ಅವನು ಒಬ್ಬ ದಾಸಿಯನ್ನು ಹೆಂಡತಿಯನ್ನಾಗಿಸಿಕೊಂಡು ಆಕೆಯ ಸಹವಾಸದಿಂದ ದೂಷಿತನಾಗಿ ಸದಾಚಾರವನ್ನು ತೊರೆದು ಪೂರ್ಣಭ್ರಷ್ಟನಾಗಿದ್ದನು. ॥ ೨೧ ॥ ಆ ಪತಿತನು ಕೆಲವೊಮ್ಮೆ ಲೂಟಿ ಮಾಡುವುದು, ಕೆಲವೊಮ್ಮೆ ಕಳ್ಳತನ ಮಾಡುವುದು ಮುಂತಾದ ನೀಚವೃತ್ತಿಗಳಿಂದ ತನ್ನ ಕುಟುಂಬವನ್ನು ಸಾಕುತ್ತಿದ್ದನು. ಹಾಗೂ ಪ್ರಾಣಿಗಳಿಗೆ ತುಂಬಾ ಪೀಡೆಯನ್ನುಂಟುಮಾಡುತ್ತಿದ್ದನು. ॥ ೨೨ ॥ ಮಹಾರಾಜನೇ! ಹೀಗೆ ಆ ಪಾಪಿಯು ಸಹವಾಸದಲ್ಲಿರುತ್ತಾ ಆಕೆಯ ಮಕ್ಕಳನ್ನು ಲಾಲಿಸಿ-ಪಾಲಿಸುತ್ತಾ ಆತನ ಆಯುಷ್ಯದ ಬಹುಭಾಗವು ಅಂದರೆ ಎಂಭತ್ತೆಂಟು ವರ್ಷಗಳು ಕಳೆದು ಹೋದವು. ॥ ೨೩ ॥ ಮುದುಕನಾದ ಅಜಾಮಿಳನಿಗೆ ಹತ್ತು ಪುತ್ರರಿದ್ದರು. ಅವರಲ್ಲಿ ಎಲ್ಲರಿಗಿಂತಲೂ ಕಿರಿಯವನ ಹೆಸರು 'ನಾರಾಯಣ' ಎಂದಿತ್ತು. ತಂದೆ-ತಾಯಿಯರು ಅವನನ್ನು ತುಂಬಾ ಪ್ರೀತಿಸುತ್ತಿದ್ದರು. ॥ ೨೪ ॥ ಮುದುಕ ಅಜಾಮಿಳನು ಕಡುಮೋಹದಿಂದ ತನ್ನ ಪೂರ್ಣವಾದ ಮನಸ್ಸನ್ನು ಆ ಪುತ್ರನಲ್ಲಿಟ್ಟಿದ್ದನು. ಆತನ ತೊದಲುನುಡಿಗಳನ್ನು ಕೇಳುತ್ತಾ ಅವನ ಆಟ-ಪಾಟಗಳನ್ನು ನೋಡುತ್ತಾ ಆನಂದಪಡುತ್ತಿದ್ದನು. ॥ ೨೫ ॥ ಹುಡುಗನ ಸ್ನೇಹಪಾಶದಲ್ಲಿ ಬಂಧಿತನಾದ ಅವನು ತಾನು ತಿನ್ನುವಾಗ, ಕುಡಿಯುವಾಗ ಅವನಿಗೂ ತಿನ್ನಿಸುತ್ತಾ ಕಾಲಕಳೆಯುತ್ತಿದ್ದ ಆ ಮೂಢನಿಗೆ ಮೃತ್ಯುವು ತಲೆಯ ಮೇಲೆ ಬಂದು ಕುಳಿತಿರುವುದು ತಿಳಿಯದೇ ಹೋಯಿತು. ॥ ೨೬ ॥

ಸ ಏವಂ ವರ್ತಮಾನೋಽಜ್ಞೋ ಮೃತ್ಯುಕಾಲ ಉಪಸ್ಥಿತೇ ।
ಮತಿಂ ಚಕಾರ ತನಯೇ ಬಾಲೇ ನಾರಾಯಣಾಹ್ವಯೇ ॥ ೨೭ ॥

ಸ ಪಾಶಹಸ್ತಾಂಸ್ತ್ರೀನ್ ದೃಷ್ಟ್ವಾ ಪುರುಷಾನ್ ಭೃಶದಾರುಣಾನ್ ।
ವಕ್ರತುಂಡಾನೂರ್ಧ್ವರೋಮ್ಣ ಆತ್ಮಾನಂ ನೇತುಮಾಗತಾನ್ ॥ ೨೮ ॥

ದೂರೇ ಕ್ರೀಡನಕಾಸಕ್ತಂ ಪುತ್ರಂ ನಾರಾಯಣಾಹ್ವಯಮ್ ।
ಪ್ಲಾವಿತೇನ ಸ್ವರೇಣೋಚ್ಚೈರಾಜುಹಾವಾಕುಲೇಂದ್ರಿಯಃ ॥ ೨೯ ॥

ನಿಶಮ್ಯ ಮ್ರಿಯಮಾಣಸ್ಯ ಬ್ರುವತೋ ಹರಿಕೀರ್ತನಮ್ ।
ಭರ್ತುರ್ನಾಮ ಮಹಾರಾಜ ಪಾರ್ಷದಾಃ ಸಹಸಾಽಪತನ್ ॥ ೩೦ ॥

ವಿಕರ್ಷತೋಽಂತರ್ಹೃದಯಾದ್ದಾಸೀಪತಿಮಜಾಮಿಲಮ್ ।
ಯಮಪ್ರೇಷ್ಯಾನ್ವಿಷ್ಣುದೂತಾ ವಾರಯಾಮಾಸುರೋಜಸಾ ॥ ೩೧ ॥

ಊಚುರ್ನಿಷೇಧಿತಾಸ್ತಾಂಸ್ತೇ ವೈವಸ್ವತಪುರಃಸರಾಃ ।
ಕೇ ಯೂಯಂ ಪ್ರತಿಷೇದ್ಧಾರೋ ಧರ್ಮರಾಜಸ್ಯ ಶಾಸನಮ್ ॥ ೩೨ ॥

ಕಸ್ಯ ವಾ ಕುತ ಆಯಾತಾಃ ಕಸ್ಮಾದಸ್ಯ ನಿಷೇಧಥ ।
ಕಿಂ ದೇವಾ ಉಪದೇವಾ ವಾ ಯೂಯಂ ಕಿಂ ಸಿದ್ಧಸತ್ತಮಾಃ ॥ ೩೩ ॥

ಸರ್ವೇ ಪದ್ಮಪಲಾಶಾಕ್ಷಾಃ ಪೀತಕೌಶೇಯವಾಸಸಃ ।
ಕಿರೀಟಿನಃ ಕುಂಡಲಿನೋ ಲಸತ್ಪುಷ್ಕರಮಾಲಿನಃ ॥ ೩೪ ॥

ಸರ್ವೇ ಚ ನೂತ್ನವಯಸಃ ಸರ್ವೇ ಚಾರುಚತುರ್ಭುಜಾಃ ।
ಧನುರ್ನಿಷಂಗಾಸಿಗದಾಶಂಖಚಕ್ರಾಂಬುಜಶ್ರಿಯಃ ॥ ೩೫ ॥

ದಿಶೋ ವಿತಿಮಿರಾಲೋಕಾಃ ಕುರ್ವಂತಃ ಸ್ವೇನ ರೋಚಿಷಾ ।
ಕಿಮರ್ಥಂ ಧರ್ಮಪಾಲಸ್ಯ ಕಿಂಕರಾನ್ನೋ ನಿಷೇಧಥ ॥ ೩೬ ॥

ಶ್ರೀಶುಕ ಉವಾಚ

ಇತ್ಯುಕ್ತೇ ಯಮದೂತೈಸ್ತೈರ್ವಾಸುದೇವೋಕ್ತಕಾರಿಣಃ ।
ತಾನ್ ಪ್ರತ್ಯೂಚುಃ ಪ್ರಹಸ್ಯೇದಂ ಮೇಘನಿರ್ಹ್ರಾದಯಾ ಗಿರಾ ॥ ೩೭ ॥

ವಿಷ್ಣುದೂತಾ ಊಚುಃ

ಯೂಯಂ ವೈ ಧರ್ಮರಾಜಸ್ಯ ಯದಿ ನಿರ್ದೇಶಕಾರಿಣಃ ।
ಬ್ರೂತ ಧರ್ಮಸ್ಯ ನಸ್ತತ್ತ್ವಂ ಯಚ್ಚ ಧರ್ಮಸ್ಯ ಲಕ್ಷಣಮ್ ॥ ೩೮ ॥

ಆ ಮೂರ್ಖನು ಹೀಗೆ ತನ್ನ ಜೀವನವನ್ನು ಸಾಗಿಸುತ್ತಿರುವಾಗ ಕೊನೆಗಾಲವು ಬಂದೇಬಿಟ್ಟಿತು. ಆಗಲೂ ಅವನು ತನ್ನ ಪುತ್ರ ನಾರಾಯಣನ ಕುರಿತೇ ಚಿಂತಿಸುತ್ತಿದ್ದನು. ॥ ೨೭ ॥ ಇಷ್ಟರಲ್ಲಿ ತನ್ನನ್ನು ಸೆಳೆದೊಯ್ಯಲು ಅತ್ಯಂತ ಭಯಂಕರರಾದ ಮೂವರು ಯಮದೂತರು ಬಂದಿರುವುದನ್ನು ಅವನು ನೋಡಿದನು. ಅವರು ಕೈಯಲ್ಲಿ ಪಾಶಗಳನ್ನು ಹಿಡಿದಿದ್ದು, ಅವರ ಮುಖಗಳು ಸೊಟ್ಟಗಿದ್ದವು. ಶರೀರದ ಮೇಲೆ ರೋಮಗಳು ನಿಮಿರಿ ನಿಂತಿದ್ದವು. ॥ ೨೮ ॥ ಆಗ ಬಾಲಕನಾದ ನಾರಾಯಣನು ಸ್ವಲ್ಪ ದೂರದಲ್ಲಿ ಆಡುತ್ತಿದ್ದನು. ಯಮದೂತರನ್ನು ಕಂಡು ಅಜಾಮಿಳನು ಅತ್ಯಂತ ವ್ಯಾಕುಲನಾಗಿ, ಭಯಗೊಂಡು ಗಟ್ಟಿಯಾಗಿ 'ನಾರಾಯಣಾ' ಎಂದು ಕೂಗಿದನು. ॥ ೨೯ ॥ ಭಗವಂತನ ಪಾರ್ಷದರು ನೋಡಿದರು – ಇವನು ಸಾಯುವಾಗ ನಮ್ಮ ಸ್ವಾಮಿಯಾದ ಭಗವಾನ್ ನಾರಾಯಣನ ಹೆಸರನ್ನು ಹೇಳುತ್ತಿದ್ದಾನೆ. ಅವನ ನಾಮದ ಕೀರ್ತನೆ ಮಾಡುತ್ತಿದ್ದಾನೆ. ಆದ್ದರಿಂದ ಅವರು ಅತ್ಯಧಿಕ ವೇಗದಿಂದ ತಟ್ಟನೇ ಅಲ್ಲಿಗೆ ಬಂದು ತಲುಪಿದರು. ॥ ೩೦ ॥ ಆ ಸಮಯದಲ್ಲಿ ಯಮನ ದೂತರು ದಾಸೀಪತಿಯಾದ ಅಜಾಮಿಳನ ಶರೀರದಿಂದ ಅವನ ಸೂಕ್ಷ್ಮಶರೀರವನ್ನು ಸೆಳೆಯುತ್ತಿದ್ದರು. ವಿಷ್ಣುದೂತರು ಅವರನ್ನು ಬಲವಂತವಾಗಿ ತಡೆದರು. ॥ ೩೧ ॥ ಅವರು ಹೀಗೆ ತಡೆದಾಗ ಯಮನ ದೂತರು ವಿಷ್ಣುದೂತರಲ್ಲಿ ಹೇಳಿದರು – ಅರೇ! ಯಮಧರ್ಮನ ಶಾಸನವನ್ನು ತಡೆಯುವವರು ನೀವು ಯಾರು? ॥ ೩೨ ॥ ನೀವು ಯಾರ ದೂತರು? ಎಲ್ಲಿಂದ ಬಂದಿರುವಿರಿ? ಇವನನ್ನು ಕೊಂಡುಹೋಗುವುದನ್ನು ಏಕೆ ತಡೆಯುತ್ತಿರುವಿರಿ? ನೀವು ಯಾರಾದರೂ ದೇವತೆಗಳೋ, ಉಪದೇವತೆಗಳೋ, ಅಥವಾ ಸಿದ್ಧಶ್ರೇಷ್ಠರಾಗಿದ್ದೀರೋ? ॥ ೩೩ ॥ ನಿಮ್ಮೆಲ್ಲರ ಕಣ್ಣುಗಳು ಕಮಲದ ದಳಗಳಂತೆ ಸುಂದರ ಸುಕುಮಾರವಾಗಿವೆ. ನೀವು ಹಳದಿಬಣ್ಣದ ರೇಷ್ಮೆಯ ವಸ್ತ್ರವನ್ನು ಧರಿಸಿರುವಿರಿ. ನಿಮ್ಮ ತಲೆಯ ಮೇಲೆ ಕಿರೀಟವೂ, ಕಿವಿಗಳಲ್ಲಿ ಕುಂಡಲಗಳೂ, ಕತ್ತಿನಲ್ಲಿ ಕಮಲಗಳ ಮಾಲೆಗಳು ಬೆಳಗುತ್ತಿವೆ. ॥ ೩೪ ॥ ನೀವೆಲ್ಲರೂ ತರುಣರಾಗಿದ್ದೀರಿ. ಸುಂದರವಾದ ನಾಲ್ಕು-ನಾಲ್ಕು ನೀಳತೋಳುಗಳಿದ್ದು, ಎಲ್ಲರ ಕರಕಮಲಗಳಲ್ಲಿ ಧನುಸ್ಸ, ಬಾಣ, ಖಡ್ಗ, ಗದೆ, ಶಂಖ, ಚಕ್ರ, ಕಮಲ ಮುಂತಾದವುಗಳು ಶೋಭಿಸುತ್ತಿವೆ. ॥ ೩೫ ॥ ನಿಮ್ಮುಗಳ ದೇಹಕಾಂತಿಯಿಂದ ಎಲ್ಲ ದಿಕ್ಕುಗಳ ಅಂಧಕಾರ ಮತ್ತು ಪ್ರಾಕೃತ ಪ್ರಕಾಶವೂ ದೂರವಾಗುತ್ತಿದೆ. ನಾವು ಯಮಧರ್ಮನ ಸೇವಕರು. ನಮ್ಮನ್ನು ನೀವುಗಳು ಏಕೆ ತಡೆಯುತ್ತಿದ್ದೀರಿ? ॥ ೩೬ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿದ್ರಾಜನೇ! ಯಮದೂತರು ಹೀಗೆ ಕೇಳಿದಾಗ ಭಗವಾನ್ ನಾರಾಯಣನ ಆಜ್ಞಾಕಾರಿ ಪಾರ್ಷದರು ನಗುತ್ತಾ ಮೇಘಗಂಭೀರವಾದ ಮಾತುಗಳಿಂದ ಅವರಲ್ಲಿ ಹೀಗೆ ಹೇಳಿದರು. ॥ ೩೭ ॥

ಭಗವಂತನ ಪಾರ್ಷದರು ಹೇಳಿದರು – ಎಲೈ ಯಮದೂತರಿರಾ! ನೀವುಗಳು ನಿಜವಾಗಿ ಯಮಧರ್ಮನ ಆಜ್ಞಾಕಾರಿಗಳಾಗಿದ್ದರೆ ಧರ್ಮದ ಲಕ್ಷಣ ಮತ್ತು ಧರ್ಮದ ತತ್ತ್ವವನ್ನು ತಿಳಿಸೋಣವಾಗಲಿ. ॥ ೩೮ ॥

ಕಥಂಸ್ವಿದ್ ಧ್ರಿಯತೇ ದಂಡಃ ಕಿಂ ವಾಸ್ಯ ಸ್ಥಾನಮೀಪ್ಸಿತಮ್ ।
ದಂಡ್ಯಾಃ ಕಿಂ ಕಾರಿಣಃ ಸರ್ವೇ ಆಹೋಸ್ವಿತ್ಕತಿಚಿನ್ನೃಣಾಮ್ ॥ ೩೯ ॥

ಯಮದೂತಾ ಊಚುಃ

ವೇದಪ್ರಣಿಹಿತೋ ಧರ್ಮೋ ಹ್ಯಧರ್ಮಸ್ತದ್ವಿಪರ್ಯಯಃ ।
ವೇದೋ ನಾರಾಯಣಃ ಸಾಕ್ಷಾತ್ಸ್ವಯಂಭೂರಿತಿ ಶುಶ್ರುಮ ॥ ೪೦ ॥

ಯೇನ ಸ್ವಧಾಮ್ನ್ಯಮೀ ಭಾವಾ ರಜಃಸತ್ತ್ವತಮೋಮಯಾಃ ।
ಗುಣನಾಮಕ್ರಿಯಾರೂಪೈರ್ವಿಭಾವ್ಯಂತೇ ಯಥಾತಥಮ್ ॥ ೪೧ ॥

ಸೂರ್ಯೋಽಗ್ನಿಃ ಖಂ ಮರುದ್ಗಾವಃ ಸೋಮಃ ಸಂಧ್ಯಾಹನೀ ದಿಶಃ ।
ಕಂ ಕುಃ ಕಾಲೋ ಧರ್ಮ ಇತಿ ಹ್ಯೇತೇ ದೈಹ್ಯಸ್ಯ ಸಾಕ್ಷಿಣಃ ॥ ೪೨ ॥

ಏತೈರಧರ್ಮೋ ವಿಜ್ಞಾತಃ ಸ್ಥಾನಂ ದಂಡಸ್ಯ ಯುಜ್ಯತೇ ।
ಸರ್ವೇ ಕರ್ಮಾನುರೋಧೇನ ದಂಡಮರ್ಹಂತಿ ಕಾರಿಣಃ ॥ ೪೩ ॥

ಸಂಭವಂತಿ ಹಿ ಭದ್ರಾಣಿ ವಿಪರೀತಾನಿ ಚಾನಘಾಃ ।
ಕಾರಿಣಾಂ ಗುಣಸಂಗೋಽಸ್ತಿ ದೇಹವಾನ್ನ ಹ್ಯಕರ್ಮಕೃತ್ ॥ ೪೪ ॥

ಯೇನ ಯಾವಾನ್ಯಥಾಧರ್ಮೋ ಧರ್ಮೋ ವೇಹ ಸಮೀಹಿತಃ ।
ಸ ಏವ ತತ್ಫಲಂ ಭುಂಕ್ತೇ ತಥಾ ತಾವದಮುತ್ರ ವೈ ॥ ೪೫ ॥

ಯಥೇಹ ದೇವಪ್ರವರಾಸ್ತ್ರೈವಿಧ್ಯಮುಪಲಭ್ಯತೇ ।
ಭೂತೇಷು ಗುಣವೈಚಿತ್ರ್ಯಾತ್ತಥಾನ್ಯತ್ರಾನುಮೀಯತೇ ॥ ೪೬ ॥

ವರ್ತಮಾನೋಽನ್ಯಯೋಃ ಕಾಲೋ ಗುಣಾಭಿಜ್ಞಾಪಕೋ ಯಥಾ ।
ಏವಂ ಜನ್ಮಾನ್ಯಯೋರೇತದ್ ಧರ್ಮಾಧರ್ಮನಿದರ್ಶನಮ್ ॥ ೪೭ ॥

ಮನಸೈವ ಪುರೇ ದೇವಃ ಪೂರ್ವರೂಪಂ ವಿಪಶ್ಯತಿ ।
ಅನುಮೀಮಾಂಸತೇಽಪೂರ್ವಂ ಮನಸಾ ಭಗವಾನಜಃ ॥ ೪೮ ॥

ದಂಡನೆಯನ್ನು ಹೇಗೆ ಕೊಡಲಾಗುತ್ತದೆ? ದಂಡನೆಗೆ ಯಾವನು ಪಾತ್ರನು? ಮನುಷ್ಯರಲ್ಲಿ ಪಾಪವನ್ನು ಆಚರಿಸಿದವರೆಲ್ಲರೂ ದಂಡನೆಗೆ ಅರ್ಹರೋ, ಅಥವಾ ಅವರಲ್ಲಿ ಕೆಲವರೋ? ಎಂಬುದನ್ನು ತಿಳಿಸಿರಿ. ॥ ೩೯ ॥

ಯಮದೂತರು ಹೇಳಿದರು – ವೇದಗಳು ವಿಧಿಸಿದ ಕರ್ಮಗಳೇ ಧರ್ಮವು. ನಿಷೇಧ ಮಾಡಿರುವುದೆಲ್ಲವೂ ಅಧರ್ಮವಾಗಿದೆ. ವೇದಗಳು ಸ್ವಯಂ ಭಗವಂತನ ಸ್ವರೂಪಗಳಾಗಿವೆ. ಅವು ಅವನ ಸ್ವಾಭಾವಿಕ ಶ್ವಾಸ-ಉಚ್ಛ್ವಾಸಗಳು ಹಾಗೂ ಸ್ವಯಂಪ್ರಕಾಶ ಜ್ಞಾನವಾಗಿದೆ ಎಂದು ನಾವು ಕೇಳಿದ್ದೇವೆ. ॥ ೪೦ ॥ ಜಗತ್ತಿನ ರಜೋಮಯ, ಸತ್ತ್ವಮಯ, ತಮೋಮಯ ಎಲ್ಲ ಪದಾರ್ಥಗಳು, ಎಲ್ಲ ಪ್ರಾಣಿಗಳು ತಮ್ಮ ಪರಮಾಶ್ರಯ ಭಗವಂತನಲ್ಲೇ ನೆಲೆಸಿವೆ. ವೇದವೇ ಅವುಗಳ ಗುಣ, ನಾಮ, ಕರ್ಮ, ರೂಪ ಮುಂತಾದವುಗಳಿಗೆ ಅನುಸಾರವಾಗಿ ಅವುಗಳನ್ನು ಯಥಾಯೋಗ್ಯವಾಗಿ ವಿಭಾಜಿಸುತ್ತವೆ. ॥ ೪೧ ॥ ಜೀವಿಯು ಶರೀರ ಅಥವಾ ಮನೋವೃತ್ತಿಯಿಂದ ಮಾಡುವ ಕರ್ಮಗಳಿಗೆ – ಸೂರ್ಯ, ಅಗ್ನಿ, ಆಕಾಶ, ವಾಯು, ಇಂದ್ರಿಯಗಳು, ಚಂದ್ರ, ಸಂಧ್ಯೆಗಳು, ರಾತ್ರಿ, ಹಗಲು, ದಿಕ್ಕುಗಳು, ನೀರು, ಪೃಥಿವಿ, ಕಾಲ ಮತ್ತು ಧರ್ಮ ಇವುಗಳು ಸಾಕ್ಷಿಯಾಗಿರುತ್ತವೆ. ॥ ೪೨ ॥ ಇವುಗಳ ಮೂಲಕ ಅಧರ್ಮವು ಯಾವುದು ಎಂಬುದು ಪತ್ತೆ ಮಾಡಿ ದಂಡನೆಯು ನಿರ್ಣಯವಾಗುತ್ತದೆ. ಪಾಪಕರ್ಮ ಮಾಡುವ ಎಲ್ಲ ಮನುಷ್ಯರು ತಮ್ಮ-ತಮ್ಮ ಕರ್ಮಗಳಿಗೆ ಅನುಸಾರ ದಂಡನೆಗೆ ಯೋಗ್ಯರಾಗುವರು. ॥ ೪೩ ॥ ಎಲೈ ಪುಣ್ಯಾತ್ಮರೇ! ಕರ್ಮ ಮಾಡುವ ಪ್ರಾಣಿಗಳಿಗೆ ಗುಣಗಳೊಂದಿಗೆ ಸಂಬಂಧ ಇದ್ದೇ ಇರುತ್ತದೆ. ಆದ್ದರಿಂದ ಎಲ್ಲರಿಂದಲೂ ಕೆಲವು ಪಾಪಗಳು, ಕೆಲವು ಪುಣ್ಯಗಳು ಆಗುತ್ತಿರುತ್ತವೆ. ದೇಹವನ್ನು ಹೊತ್ತ ಯಾವ ಪುರುಷನೂ ಕೂಡ ಕರ್ಮಗಳನ್ನು ಮಾಡದೆ ಇರಲಾರದು. ॥ ೪೪ ॥ ಈ ಲೋಕದಲ್ಲಿ ಯಾವ ಮನುಷ್ಯನು ಎಷ್ಟು ರೀತಿಯ ಧರ್ಮ ಮತ್ತು ಅಧರ್ಮವನ್ನು ಮಾಡುವನೋ ಅವನು ಪರಲೋಕದಲ್ಲಿ ಅಷ್ಟೇ ಫಲವನ್ನು ಭೋಗಿಸುತ್ತಾನೆ. ॥ ೪೫ ॥ ಎಲೈ ದೇವಶಿರೋಮಣಿಗಳೇ! ಸತ್ತ್ವ, ರಜ, ತಮ – ಈ ತ್ರಿಗುಣಗಳ ಭೇದದಿಂದ ಈ ಲೋಕದಲ್ಲಿ ಪುಣ್ಯಾತ್ಮರು, ಪಾಪಾತ್ಮರು ಮತ್ತು ಪಾಪ-ಪುಣ್ಯ ಎರಡರಿಂದ ಕೂಡಿದವರು ಅಥವಾ ಸುಖಿಗಳು, ದುಃಖಿಗಳು ಮತ್ತು ಸುಖ-ದುಃಖಿಗಳೆರಡರಿಂದಲೂ ಕೂಡಿದ ಮೂರು ರೀತಿಯ ಪ್ರಾಣಿಗಳು ಕಂಡುಬರುತ್ತವೆ. ಹಾಗೆಯೇ ಪರಲೋಕದಲ್ಲಿಯೂ ಅವರ ತ್ರಿವಿಧತೆಯನ್ನು ಊಹಿಸಬಹುದು. ॥ ೪೬ ॥ ವರ್ತಮಾನ ಕಾಲದಿಂದ ಭೂತ ಮತ್ತು ಭವಿಷ್ಯತ್ತನ್ನು ಊಹಿಸಬಹುದೋ, ಹಾಗೆಯೇ ವರ್ತಮಾನ ಜನ್ಮದ ಪಾಪ-ಪುಣ್ಯಗಳನ್ನೂ ಕೂಡಾ ಭೂತ ಹಾಗೂ ಭವಿಷ್ಯತ್ತಿನಿಂದ ಊಹಿಸಬಹುದು. ॥ ೪೭ ॥ ನಮ್ಮ ಸ್ವಾಮಿಯಾದ ಅಜನ್ಮಾ ಭಗವಾನ್ ಸರ್ವಜ್ಞ ಯಮರಾಜರು ಎಲ್ಲರ ಅಂತಃಕರಣದಲ್ಲಿ ವಿರಾಜಮಾನರಾಗಿದ್ದಾರೆ. ಆದರಿಂದ ಅವರು ತಮ್ಮ ಮನಸ್ಸಿನಿಂದಲೇ ಎಲ್ಲರ ಹಿಂದಿನ ರೂಪಗಳನ್ನು ನೋಡಿಕೊಳ್ಳುವರು. ಜೊತೆಗೆ ಅವರ ಮುಂದಿನ ಸ್ವರೂಪವನ್ನೂ ವಿಚಾರಮಾಡಿಕೊಳ್ಳುವರು. ॥ ೪೮ ॥

ಯಥಾಜ್ಞಸ್ತಮಸಾ ಯುಕ್ತ ಉಪಾಸ್ತೇ ವ್ಯಕ್ತಮೇವ ಹಿ ।
ನ ವೇದ ಪೂರ್ವಮಪರಂ ನಷ್ಟಜನ್ಮಸ್ಮೃತಿಸ್ತಥಾ ॥ ೪೯ ॥

ಪಂಚಭಿಃ ಕುರುತೇ ಸ್ವಾರ್ಥಾನ್ ಪಂಚ ವೇದಾಥ ಪಂಚಭಿಃ ।
ಏಕಸ್ತು ಷೋಡಶೇನ ತ್ರೀನ್ ಸ್ವಯಂ ಸಪ್ತದಶೋಽಶ್ನುತೇ ॥ ೫೦ ॥

ತದೇತತ್ ಷೋಡಶಕಲಂ ಲಿಂಗಂ ಶಕ್ತಿತ್ರಯಂ ಮಹತ್ ।
ಧತ್ತೇಽನು ಸಂಸೃತಿಂ ಪುಂಸಿ ಹರ್ಷಶೋಕಭಯಾರ್ತಿದಾಮ್ ॥ ೫೧ ॥

ದೇಹ್ಯಜ್ಞೋಽಜಿತಷಡ್ವರ್ಗೋ ನೇಚ್ಛನ್ ಕರ್ಮಾಣಿ ಕಾರ್ಯತೇ ।
ಕೋಶಕಾರ ಇವಾತ್ಮಾನಂ ಕರ್ಮಣಾಽಽಚ್ಛಾದ್ಯ ಮುಹ್ಯತಿ ॥ ೫೨ ॥

ನ ಹಿ ಕಶ್ಚಿತ್ ಕ್ಷಣಮಪಿ ಜಾತು ತಿಷ್ಠತ್ಯಕರ್ಮಕೃತ್ ।
ಕಾರ್ಯತೇ ಹ್ಯವಶಃ ಕರ್ಮ ಗುಣೈಃ ಸ್ವಾಭಾವಿಕೈರ್ಬಲಾತ್ ॥ ೫೩ ॥

ಲಬ್ಧ್ವಾ ನಿಮಿತ್ತಮವ್ಯಕ್ತಂ ವ್ಯಕ್ತಾವ್ಯಕ್ತಂ ಭವತ್ಯುತ ।
ಯಥಾಯೋನಿ ಯಥಾಬೀಜಂ ಸ್ವಭಾವೇನ ಬಲೀಯಸಾ ॥ ೫೪ ॥

ಏಷ ಪ್ರಕೃತಿಸಂಗೇನ ಪುರುಷಸ್ಯ ವಿಪರ್ಯಯಃ ।
ಆಸೀತ್ ಸ ಏವ ನಚಿರಾದೀಶಸಂಗಾದ್ವಿಲೀಯತೇ ॥ ೫೫ ॥

ಅಯಂ ಹಿ ಶ್ರುತಸಂಪನ್ನಃ ಶೀಲವೃತ್ತಗುಣಾಲಯಃ ।
ಧೃತವ್ರತೋ ಮೃದುರ್ದಾಂತಃ ಸತ್ಯವಾನ್ಮಂತ್ರವಿಚ್ಛುಚಿಃ ॥ ೫೬ ॥

ಮಲಗಿರುವ ಅಜ್ಞಾನಿಯು ಸ್ವಪ್ನದ ಸಮಯದಲ್ಲಿ ಕಂಡು ಬರುವ ಕಲ್ಪಿತ ಶರೀರವನ್ನೇ ತನ್ನ ನಿಜವಾದ ಶರೀರವೆಂದು ತಿಳಿಯುತ್ತಾನೆ. ಮಲಗಿರುವ ಅಥವಾ ಎಚ್ಚರಗೊಳ್ಳುವ ಶರೀರವನ್ನು ಮರೆತುಬಿಡುತ್ತಾನೆ. ಹೀಗೆಯೇ ಜೀವಿಯೂ ಕೂಡ ತನ್ನ ಹಿಂದಿನ ಜನ್ಮಗಳ ನೆನಪನ್ನು ಮರೆತು ಬಿಡುತ್ತಾನೆ ಮತ್ತು ವರ್ತಮಾನದ ಶರೀರವನ್ನು ಬಿಟ್ಟು ಹಿಂದಿನ-ಮುಂದಿನ ಶರೀರಗಳ ಸಂಬಂಧದಲ್ಲಿ ಏನನ್ನು ತಿಳಿಯುವುದಿಲ್ಲ. ॥ ೪೯ ॥ ಸಿದ್ಧಪುರುಷರೇ! ಜೀವಿಯು ಈ ಶರೀರದಲ್ಲಿ ಕರ್ಮೇಂದ್ರಿಯಗಳಿಂದ ಕೊಟ್ಟು-ಕೊಳ್ಳುವುದು, ನಡೆದಾಡುವುದು ಮುಂತಾದ ಕೆಲಸವನ್ನು ಮಾಡುತ್ತಾನೆ. ಐದು ಜ್ಞಾನೇಂದ್ರಿಯಗಳಿಂದ ರೂಪ, ರಸ ಮುಂತಾದ ಐದು ವಿಷಯಗಳನ್ನು ಅನುಭವಿಸುತ್ತಾನೆ. ಹದಿನಾರನೆಯ ಮನಸ್ಸಿನೊಂದಿಗೆ ಸ್ವಯಂ ಹದಿನೇಳನೆಯವನಾಗಿ ಕೂಡಿಕೊಂಡು ಒಬ್ಬಂಟಿಗನಾಗಿಯೇ ಮನಸ್ಸು, ಜ್ಞಾನೇಂದ್ರಿಯ ಮತ್ತು ಕರ್ಮೇಂದ್ರಿಯ ಈ ಮೂರರ ವಿಷಯಗಳನ್ನು ಭೋಗಿಸುತ್ತಾನೆ. ॥ ೫೦ ॥ ಜೀವಿಯ ಈ ಹದಿನಾರು ಕಲೆ ಮತ್ತು ಸತ್ತ್ವಾದಿ ಮೂರು ಗುಣಗಳುಳ್ಳ ಲಿಂಗಶರೀರವು ಅನಾದಿಯಾಗಿದೆ. ಇದೇ ಜೀವಿಯನ್ನು ಪದೇ-ಪದೇ ಹರ್ಷ, ಶೋಕ, ಭಯ ಮತ್ತು ಪೀಡೆಗಳನ್ನು ಕೊಡುವ ಜನ್ಮ-ಮರಣದ ಚಕ್ರದಲ್ಲಿ ಕೆಡಹುತ್ತದೆ. ॥ ೫೧ ॥ ಅಜ್ಞಾನಕ್ಕೆ ವಶನಾಗಿ ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರ ಎಂಬ ಆರು ಶತ್ರುಗಳ ಮೇಲೆ ವಿಜಯವನ್ನು ಪಡೆಯದಿರುವ ಜೀವನಿಗೆ ಇಚ್ಛೆ ಇಲ್ಲದಿದ್ದರೂ ಬೇರೆ-ಬೇರೆ ವಾಸನೆಗಳ ಅನುಸಾರ ಅನೇಕ ಕರ್ಮಗಳನ್ನು ಮಾಡಬೇಕಾಗುತ್ತದೆ. ಅಂತಹ ಸ್ಥಿತಿಯಲ್ಲಿ ಅವನು ರೇಷ್ಮೆಹುಳದಂತೆ ತಾನು ಕರ್ಮದ ಬಲೆಯಲ್ಲಿ ಸಿಕ್ಕಿಕೊಳ್ಳುವನು ಮತ್ತು ಹಾಗೆ ತನ್ನ ಕೈಯಾರೆ ಮೋಹಕ್ಕೆ ಬಲಿಯಾಗುತ್ತಾನೆ. ॥ ೫೨ ॥ ಯಾವುದೇ ಶರೀರಧಾರೀ ಜೀವನು ಕರ್ಮಮಾಡದೆ ಒಂದು ಕ್ಷಣವೂ ಇರಲಾರನು. ಪ್ರತಿ ಯೊಬ್ಬ ಪ್ರಾಣಿಯ ಸ್ವಾಭಾವಿಕ ಗುಣಗಳೇ ಬಲವಂತವಾಗಿ ವಿವಶಗೊಳಿಸಿ ಅವನಿಂದ ಕರ್ಮಗಳನ್ನು ಮಾಡಿಸುತ್ತವೆ. ॥ ೫೩ ॥ ಜೀವಿಯು ತನ್ನ ಹಿಂದಿನ ಜನ್ಮಗಳ ಪಾಪ-ಪುಣ್ಯಮಯ ಸಂಸ್ಕಾರಗಳನುಸಾರವಾಗಿ ಸ್ಥೂಲ ಮತ್ತು ಸೂಕ್ಷ್ಮ ಶರೀರಗಳನ್ನು ಹೊಂದುತ್ತಾನೆ. ಅದರ ಸ್ವಾಭಾವಿಕ ಹಾಗೂ ಪ್ರಬಲ ವಾಸನೆಗಳು ಕೆಲವೊಮ್ಮೆ ಅವನಿಗೆ ತಾಯಿಯಂತೆ (ಸ್ತ್ರೀರೂಪವನ್ನು) ಮಾಡುತ್ತವೆ. ಕೆಲವೊಮ್ಮೆ ತಂದೆಯಂತೆ (ಪುರುಷರೂಪವನ್ನು) ಮಾಡುತ್ತವೆ. ॥ ೫೪ ॥ ಪ್ರಕೃತಿಯ ಸಂಸರ್ಗ ಉಂಟಾದ್ದರಿಂದಲೇ ಪುರುಷನು ತನ್ನ ವಾಸ್ತವಿಕ ಸ್ವರೂಪಕ್ಕಿಂತ ವಿಪರೀತವಾದ ಲಿಂಗಶರೀರವೇ ತಾನೆಂದು ತಿಳಿದುಕೊಳ್ಳುವನು. ಈ ವಿರುದ್ಧವಾದ ಬುದ್ಧಿಯು ಭಗವಂತನ ಭಜನೆಯಿಂದ ಬೇಗನೇ ಹೊರಟುಹೋಗುವುದು. ॥ ೫೫ ॥

ಎಲೈ ದೇವದೂತರಿರಾ! ನಿಮಗೆ ತಿಳಿದೇ ಇರುವಂತೆ ಈ ಅಜಾಮಿಳನು ದೊಡ್ಡ ಶಾಸ್ತ್ರಜ್ಞನಾಗಿದ್ದನು. ಶೀಲ, ಸದ್ಗುಣ, ಸದಾಚಾರಗಳ ನಿಧಿಯಾಗಿದ್ದನು. ಬ್ರಹ್ಮಚಾರಿಯೂ, ವಿನಯಿಯೂ, ಜಿತೇಂದ್ರಿಯನೂ, ಸತ್ಯನಿಷ್ಠನೂ, ಮಂತ್ರಜ್ಞನೂ, ಪವಿತ್ರಾತ್ಮನೂ ಆಗಿದ್ದನು. ॥ ೫೬ ॥ ಇವನು ಗುರುಗಳ, ಅಗ್ನಿಯ, ಅತಿಥಿಗಳ, ಹಿರಿಯರ ಸೇವೆ ಮಾಡಿದ್ದನು. ಅಹಂಕಾರವಾದರೋ ಇವನಲ್ಲಿ ಇರಲೇ ಇಲ್ಲ.

ಗುರ್ವಗ್ನ್ಯತಿಥಿವೃದ್ಧಾನಾಂ ಶುಶ್ರೂಷುರನಹಂಕೃತಃ ।
ಸರ್ವಭೂತಸುಹೃತ್ಸಾಧುರ್ಮಿತವಾಗನಸೂಯಕಃ ॥ ೫೭ ॥

ಏಕದಾಸೌ ವನಂ ಯಾತಃ ಪಿತೃಸಂದೇಶಕೃದ್ದ್ವಿಜಃ ।
ಆದಾಯ ತತ ಆವೃತ್ತಃ ಫಲಪುಷ್ಪಸಮಿತ್ಕುಶಾನ್ ॥ ೫೮ ॥

ದದರ್ಶ ಕಾಮಿನಂ ಕಂಚಿಚ್ಛೂದ್ರಂ ಸಹ ಭುಜಿಷ್ಯಯಾ ।
ಪೀತ್ವಾ ಚ ಮಧು ಮೈರೇಯಂ ಮದಾಘೂರ್ಣಿತನೇತ್ರಯಾ ॥ ೫೯ ॥

ಮತ್ತಯಾ ವಿಶ್ಲಥನ್ನೀವ್ಯಾ ವ್ಯಪೇತಂ ನಿರಪತ್ರಪಮ್ ।
ಕ್ರೀಡಂತಮನುಗಾಯಂತಂ ಹಸಂತಮನಯಾಂತಿಕೇ ॥ ೬೦ ॥

ದೃಷ್ಟ್ವಾ ತಾಂ ಕಾಮಲಿಪ್ತೇನ ಬಾಹುನಾ ಪರಿರಂಭಿತಾಮ್ ।
ಜಗಾಮ ಹೃಚ್ಛಯವಶಂ ಸಹಸೈವ ವಿಮೋಹಿತಃ ॥ ೬೧ ॥

ಸ್ತಂಭಯನ್ನಾತ್ಮನಾಽಽತ್ಮಾನಂ ಯಾವತ್ಸತ್ತ್ವಂ ಯಥಾಶ್ರುತಮ್ ।
ನ ಶಶಾಕ ಸಮಾಧಾತುಂ ಮನೋ ಮದನವೇಪಿತಮ್ ॥ ೬೨ ॥

ತನ್ನಿಮಿತ್ತಸ್ಮರವ್ಯಾಜಗ್ರಹಗ್ರಸ್ತೋ ವಿಚೇತನಃ ।
ತಾಮೇವ ಮನಸಾ ಧ್ಯಾಯನ್ ಸ್ವಧರ್ಮಾದ್ವಿರರಾಮ ಹ ॥ ೬೩ ॥

ತಾಮೇವ ತೋಷಯಾಮಾಸ ಪಿತ್ರ್ಯೇಣಾರ್ಥೇನ ಯಾವತಾ ।
ಗ್ರಾಮ್ಯೈರ್ಮನೋರಮೈಃ ಕಾಮೈಃ ಪ್ರಸೀದೇತ ಯಥಾ ತಥಾ ॥ ೬೪ ॥

ವಿಪ್ರಾಂ ಸ್ವಭಾರ್ಯಾಮಪ್ರೌಢಾಂ ಕುಲೇ ಮಹತಿ ಲಂಭಿತಾಮ್ ।
ವಿಸಸರ್ಜಾಚಿರಾತ್ಪಾಪಃ ಸ್ವೈರಿಣ್ಯಾಪಾಂಗವಿದ್ಧಧೀಃ ॥ ೬೫ ॥

ಯತಸ್ತತಶ್ಚೋಪನಿನ್ಯೇ ನ್ಯಾಯತೋಽನ್ಯಾಯತೋ ಧನಮ್ ।
ಬಭಾರಾಸ್ಯಾಃ ಕುಟುಂಬಿನ್ಯಾಃ ಕುಟುಂಬಂ ಮಂದಧೀರಯಮ್ ॥ ೬೬ ॥

ಯದಸೌ ಶಾಸ್ತ್ರಮುಲ್ಲಂಘ್ಯ ಸ್ವೈರಚಾರ್ಯತಿಗರ್ಹಿತಃ ।
ಅವರ್ತತ ಚಿರಂ ಕಾಲಮಘಾಯುರಶುಚಿರ್ಮಲಾತ್ ॥ ೬೭ ॥

ಎಲ್ಲ ಪ್ರಾಣಿಗಳಿಗೂ ಹಿತವನ್ನೇ ಬಯಸುತ್ತಾ, ಉಪಕಾರ ಮಾಡುತ್ತಾ, ಅವಶ್ಯಕತೆ ಇದ್ದಷ್ಟೇ ಮಾತಾಡುತ್ತಿದ್ದನು. ಯಾರು ದೋಷಗಳನ್ನು ಎತ್ತಿ ಆಡುತ್ತಿರಲಿಲ್ಲ. ॥ ೫೭ ॥ ಒಂದು ದಿನ ಈ ಬ್ರಾಹ್ಮಣನು ತನ್ನ ತಂದೆಯ ಅಪ್ಪಣೆಯಂತೆ ಕಾಡಿಗೆ ಹೋಗಿ ಫಲ-ಪುಷ್ಪ, ಸಮಿಧೆ, ದರ್ಭೆಗಳನ್ನು ಎತ್ತಿಕೊಂಡು ಮನೆಗೆ ಹಿಂದಿರುಗುತ್ತಿದ್ದನು. ॥ ೫೮ ॥ ಮರಳಿ ಬರುತ್ತಿರುವಾಗ ದಾರಿಯಲ್ಲಿ ಓರ್ವ ಭ್ರಷ್ಟನಾದ ವೃಷಲನು ಅತಿಕಾಮಿಯೂ, ನಿರ್ಲಜ್ಜನೂ ಆಗಿ ಹೆಂಡವನ್ನು ಕುಡಿದು ವೇಶ್ಯೆಯೊಂದಿಗೆ ವಿಹರಿಸುತ್ತಿದ್ದನು. ವೇಶ್ಯೆಯೂ ಮದ್ಯ ಕುಡಿದು ಉನ್ಮತ್ತಳಾಗಿ, ಕಣ್ಣುಗಳನ್ನು ತಿರುಗಿಸುತ್ತಾ, ಅರ್ಧನಗ್ನಸ್ಥಿತಿಯಲ್ಲಿದ್ದಳು. ಆ ಶೂದ್ರನು ಆ ವೇಶ್ಯೆಯೊಂದಿಗೆ ಕೆಲವೊಮ್ಮೆ ನಗುತ್ತಾ, ಹಾಡುತ್ತಾ, ನಾನಾ ಬಗೆಯ ಕುಚೇಷ್ಟೆಗಳನ್ನು ಮಾಡುತ್ತಾ ಅವಳನ್ನು ಸಂತೋಷಪಡಿಸುತ್ತಿದ್ದನು. ॥ ೫೯-೬೦ ॥ ಓ ಪುಣ್ಯಾತ್ಮರಿರಾ! ಆ ಶೂದ್ರನು ಭುಜಗಳಿಗೆ ಕಾಮೋದ್ದೀಪಕವಾದ ಅಂಗರಾಗವನ್ನು ಬಳಿದುಕೊಂಡು ಅವುಗಳಿಂದ ಆ ಕುಲಟೆಯನ್ನು ಆಲಿಂಗಿಸಿಕೊಂಡಿದ್ದನು. ಅಜಾಮಿಳನು ಅವರನ್ನು ನೋಡಿ ಇದ್ದಕ್ಕಿದ್ದಂತೆ ಅವನ ಮನಸ್ಸು ಮೋಹಗೊಂಡು ಕಾಮಪರವಶನಾಗಿಬಿಟ್ಟನು. ॥ ೬೧ ॥ ಅಜಾಮಿಳನು ತನ್ನ ಧೈರ್ಯ, ಜ್ಞಾನಕ್ಕನುಸಾರ ತನ್ನ ಕಾಮಪರವಶವಾದ ಮನಸ್ಸನ್ನು ತಡೆಯಲು ಬಹಳ ಮಟ್ಟಿಗೆ ಪ್ರಯತ್ನಿಸಿದನು. ಆದರೆ ಸರ್ವತ್ರ ಸರ್ವಪ್ರಯತ್ನಮಾಡಿದರೂ ಅವನು ಮನಸ್ಸನ್ನು ಹತೋಟಿಗೆ ತಂದುಕೊಳ್ಳಲು ಅಸಮರ್ಥನಾದನು. ॥ ೬೨ ॥ ಆ ವೇಶ್ಯೆಯನ್ನು ನಿಮಿತ್ತವಾಗಿಸಿ ಕಾಮಪಿಶಾಚಿಯು ಅಜಾಮಿಳನ ಮನಸ್ಸನ್ನು ಆಕ್ರಮಿಸಿಬಿಟ್ಟಿತು. ಇವನ ಸದಾಚಾರ ಮತ್ತು ಶಾಸ್ತ್ರಜ್ಞಾನವು ಕರಗಿಹೋಯಿತು. ಈಗ ಇವನು ಮನಸ್ಸಿನಲ್ಲೇ ಆ ವೇಶ್ಯೆಯನ್ನು ಚಿಂತಿಸುತ್ತಾ ತನ್ನ ಧರ್ಮದಿಂದ ವಿಮುಖನಾಗಿ ಬಿಟ್ಟನು. ॥ ೬೩ ॥ ಅಜಾಮಿಳನು ಆಕೆಯನ್ನು ಸಂತೋಷಪಡಿಸಲಿಕ್ಕಾಗಿ ಅತಿ ಸುಂದರವಾದ ವಸ್ತ್ರ-ಒಡವೆಗಳನ್ನು ತಂದು ಕೊಡತೊಡಗಿದನು. ತನ್ನ ತಂದೆಯ ಎಲ್ಲ ಸಂಪತ್ತನ್ನೂ ವೆಚ್ಚಮಾಡಿ ಆ ಕುಲಟೆಯನ್ನು ಮೆಚ್ಚಿಸಿದನು. ಅವಳು ಯಾವುದರಿಂದ ಪ್ರಸನ್ನಳಾಗಿರುವಳೋ ಅದೇ ರೀತಿಯ ಚೇಷ್ಟೆಗಳನ್ನು ಮಾಡುತ್ತಿದ್ದನು. ॥ ೬೪ ॥ ಆ ಸ್ವೇಚ್ಛಾಚಾರಿಣಿಯ ಕಡೆಗಣ್ಣ ನೋಟದಿಂದ ಇವನು ಸೆರೆಗೊಂಡಿದ್ದನು. ಅದರಿಂದ ಕುಲೀನಳೂ, ತರುಣಿಯೂ ಆದ ತನ್ನ ವಿವಾಹಿತ ಬ್ರಾಹ್ಮಣೀ ಪತ್ನಿಯನ್ನು ತೊರೆದುಬಿಟ್ಟನು. ಇನ್ನು ಈತನ ಪಾಪಕ್ಕೆ ಎಲ್ಲೆ ಏನು ಬಂತು? ॥ ೬೫ ॥ ದುಷ್ಟಬುದ್ಧಿಯಾದ ಇವನು ನ್ಯಾಯದಿಂದಲೋ, ಅನ್ಯಾಯದಿಂದಲೋ, ಹೇಗಾದರೂ ಸಿಕ್ಕಿದಲ್ಲಿಂದ ಹಣವನ್ನು ಸಂಪಾದಿಸುತ್ತಾ ಆ ವೇಶ್ಯೆಯ ದೊಡ್ಡ ಕುಟುಂಬವನ್ನು ಸಾಕುವುದರಲ್ಲೇ ಆಸಕ್ತನಾದನು. ॥ ೬೬ ॥ ಈ ಪಾಪಿಯು ಶಾಸ್ತ್ರಜ್ಞಾನವನ್ನು ಮೀರಿ ಸ್ವೇಚ್ಛಾಚಾರಿಯಾಗಿ ನಡೆದುಕೊಳ್ಳುವುದರಿಂದ ಇವನು ಸತ್ಪುರುಷರಿಂದ ನಿಂದಿತನಾಗಿದ್ದಾನೆ. ಇವನು ಅನೇಕ ದಿನಗಳವರೆಗೆ ವೇಶ್ಯೆಯ ಮಲಕ್ಕೆ ಸಮಾನವಾದ, ಅಪವಿತ್ರವಾದ ಅನ್ನದಿಂದ ತನ್ನ ಜೀವನವನ್ನು ಕಳೆದನು. ಹೀಗೆ ಇವನ ಇಡೀ ಜೀವನವೇ ಪಾಪಮಯವಾಗಿದೆ. ॥ ೬೭ ॥

ತತ ಏನಂ ದಂಡಪಾಣೇಃ ಸಕಾಶಂ ಕೃತಕಿಲ್ಬಿಷಮ್ ।
ನೇಷ್ಯಾಮೋಽಕೃತನಿರ್ವೇಶಂ ಯತ್ರ ದಂಡೇನ ಶುದ್ಧ್ಯತಿ ॥ ೬೮ ॥

ಇವನು ಇಂದಿನವರೆಗೆ ತನ್ನ ಪಾಪಗಳಿಗೆ ಯಾವ ಪ್ರಾಯಶ್ಚಿತ್ತವನ್ನು ಮಾಡಿಕೊಂಡಿಲ್ಲ. ಅದಕ್ಕಾಗಿ ಈಗ ನಾವು ಈ ಪಾಪಿಯನ್ನು ದಂಡಪಾಣಿಯಾದ ಭಗವಾನ್ ಯಮರಾಜನ ಬಳಿಗೆ ಕೊಂಡು ಹೋಗುವೆವು. ಅಲ್ಲಿ ಇವನು ತನ್ನ ಪಾಪಗಳನ್ನು ಭೋಗಿಸಿ ಶುದ್ಧನಾಗಿ ಹೋಗುವನು. ॥ ೬೮ ॥

ಮೊದಲನೆಯ ಅಧ್ಯಾಯವು ಮುಗಿಯಿತು. ॥ ೧ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಷಷ್ಠಸ್ಕಂಧೇ
ಅಜಾಮಿಲೋಪಾಖ್ಯಾನೇ ಪ್ರಥಮೋಽಧ್ಯಾಯಃ ॥ ೧ ॥

ಎರಡನೆಯ ಅಧ್ಯಾಯ

ವಿಷ್ಣುದೂತರಿಂದ ಭಾಗವತ ಧರ್ಮದ ನಿರೂಪಣೆ ಮತ್ತು ಅಜಾಮಿಳನು ಪರಂಧಾಮವನ್ನು ಹೊಂದಿದುದು

ಶ್ರೀಶುಕ ಉವಾಚ

ಏವಂ ತೇ ಭಗವದ್ದೂತಾ ಯಮದೂತಾಭಿಭಾಷಿತಮ್ ।
ಉಪಧಾರ್ಯಾಥ ತಾನ್ರಾಜನ್ಪ್ರತ್ಯಾಹುರ್ನಯಕೋವಿದಾಃ ॥ ೧ ॥

ವಿಷ್ಣುದೂತಾ ಊಚುಃ

ಅಹೋ ಕಷ್ಟಂ ಧರ್ಮದೃಶಾಮಧರ್ಮಃ ಸ್ಪೃಶತೇ ಸಭಾಮ್ ।
ಯತ್ರಾ ದಂಡ್ಯೇಷ್ವಪಾಪೇಷು ದಂಡೋ ಯೈರ್ಧ್ರಿಯತೇ ವೃಥಾ ॥ ೨ ॥

ಪ್ರಜಾನಾಂ ಪಿತರೋ ಯೇ ಚ ಶಾಸ್ತಾರಃ ಸಾಧವಃ ಸಮಾಃ ।
ಯದಿ ಸ್ಯಾತ್ತೇಷು ವೈಷಮ್ಯಂ ಕಂ ಯಾಂತಿ ಶರಣಂ ಪ್ರಜಾಃ ॥ ೩ ॥

ಯದ್ಯದಾಚರತಿ ಶ್ರೇಯಾನಿತರಸ್ತತ್ತದೀಹತೇ ।
ಸ ಯತ್ಪ್ರಮಾಣಮ್ ಕುರುತೇ ಲೋಕಸ್ತದನುವರ್ತತೇ ॥ ೪ ॥

ಯಸ್ಯಾಂಕೇ ಶಿರ ಆಧಾಯ ಲೋಕಃ ಸ್ವಪಿತಿ ನಿರ್ವೃತಃ ।
ಸ್ವಯಂ ಧರ್ಮಮಧರ್ಮಂ ವಾ ನ ಹಿ ವೇದ ಯಥಾ ಪಶುಃ ॥ ೫ ॥

ಸ ಕಥಂ ನ್ಯರ್ಪಿತಾತ್ಮಾನಂ ಕೃತಮೈತ್ರಮಚೇತನಮ್ ।
ವಿಶ್ರಂಭಣೀಯೋ ಭೂತಾನಾಂ ಸಘೃಣೋ ದ್ರೋಗ್ಧುಮರ್ಹತಿ ॥ ೬ ॥

ಶ್ರೀಶುಕಮುನಿಗಳು ಹೇಳುತ್ತಾರೆ – ಪರೀಕ್ಷಿತ ರಾಜೇಂದ್ರನೇ! ನೀತಿನಿಪುಣರೂ, ಧರ್ಮದ ಮರ್ಮವನ್ನು ಬಲ್ಲವರೂ ಆದ ಭಗವಂತನ ಪಾರ್ಷದರು ಯಮದೂತರ ಈ ಮಾತುಗಳನ್ನು ಕೇಳಿ ಅವರಲ್ಲಿ ಇಂತೆಂದರು – ॥ ೧ ॥

ಭಗವಂತನ ಪಾರ್ಷದರು ಹೇಳುತ್ತಾರೆ – ಎಲೈ ಯಮದೂತರಿರಾ! ಅಹಾ! ಎಂತಹ ಆಶ್ಚರ್ಯದ ಮತ್ತು ಖೇದದ ಮಾತಾಗಿದೆ. ಧರ್ಮಜ್ಞರ ಸಭೆಯಲ್ಲಿ ಅಧರ್ಮವು ಪ್ರವೇಶಿಸುತ್ತಿದೆಯಲ್ಲ! ಏಕೆಂದರೆ, ಅಲ್ಲಿ ನಿರಪರಾಧಿಗಳಾದ, ದಂಡನೆಗೆ ಯೋಗ್ಯರಲ್ಲದ ವ್ಯಕ್ತಿಗಳಿಗೂ ವ್ಯರ್ಥವಾಗಿ ದಂಡನೆ ಕೊಡಲಾಗುತ್ತದಲ್ಲ! ॥ ೨ ॥ ಪ್ರಜಾರಕ್ಷಕನೂ, ಶಾಸಕನೂ, ಸಮದರ್ಶಿಯೂ, ಪರೋಪಕಾರಿಯೂ ಆದವರೇ ಪ್ರಜೆಗಳ ವಿಷಯದಲ್ಲಿ ವಿಷಮತೆಯ ವ್ಯವಹಾರ ಮಾಡತೊಡಗಿದರೆ ಮತ್ತೆ ಪ್ರಜೆಯು ಯಾರ ಮೊರೆ ಹೋಗಬೇಕು? ॥ ೩ ॥ ಸತ್ಪುರುಷರು ಆಚರಿಸಿದಂತೆಯೇ ಸಾಧಾರಣ ಜನರು ಅನುಸರಿಸುತ್ತಾರೆ. ಸಜ್ಜನರು ತಮ್ಮ ಆಚರಣೆಯ ಮೂಲಕ ಯಾವುದನ್ನು ಪ್ರಮಾಣೀಕರಿಸುತ್ತಾರೋ, ಉಳಿದ ಜನರು ಅದನ್ನೇ ಅನುಕರಣಮಾಡತೊಡಗುವರು. ॥ ೪ ॥ ಸಾಮಾನ್ಯ ಜನರು ಪಶುಗಳಂತೆ ಧರ್ಮ-ಅಧರ್ಮಗಳ ಸ್ವರೂಪವನ್ನು ಅರಿಯದೆ ಯಾರೋ ಸತ್ಪುರುಷರ ಮೇಲೆ ವಿಶ್ವಾಸವಿಟ್ಟು, ಅವರ ತೊಡೆಯಲ್ಲಿ ತಲೆಯನ್ನಿಟ್ಟು ನಿರ್ಭಯರಾಗಿ ನಿಶ್ಚಿಂತರಾಗಿ ಮಲಗಿರುತ್ತಾರೆ. ॥ ೫ ॥ ಅಂತಹ ದಯಾಳುಗಳಾದ ಸತ್ಪುರುಷರೇ ಪ್ರಾಣಿಗಳಿಗೆ ಅತ್ಯಂತ ವಿಶ್ವಾಸಪಾತ್ರರಾಗಿದ್ದಾರೆ. ಮೈತ್ರೀ ಭಾವದಿಂದ ತಮ್ಮ ಹಿತೈಷಿಗಳೆಂದು ತಿಳಿದು ಆತ್ಮಸಮರ್ಪಣ ಮಾಡಿರುವ ಆ ಅಜ್ಞಾನೀ ಜೀವರೊಂದಿಗೆ ಸಜ್ಜನರು ಹೇಗೆ ವಿಶ್ವಾಸಘಾತ ಮಾಡಬಲ್ಲರು? ॥ ೬ ॥

ಅಯಂ ಹಿ ಕೃತನಿರ್ವೇಶೋ ಜನ್ಮ ಕೋಟ್ಯಂಹಸಾಮಪಿ ।
ಯದ್ವ್ಯಾಜಹಾರ ವಿವಶೋ ನಾಮ ಸ್ವಸ್ತ್ಯಯನಂ ಹರೇಃ ॥ ೭ ॥

ಏತೇನೈವ ಹ್ಯಘೋನೋಽಸ್ಯ ಕೃತಂ ಸ್ಯಾದಘನಿಷ್ಕೃತಮ್ ।
ಯದಾ ನಾರಾಯಣಾಯೇತಿ ಜಗಾದ ಚತುರಕ್ಷರಮ್ ॥ ೮ ॥

ಸ್ತೇನಃ ಸುರಾಪೋ ಮಿತ್ರಧ್ರುಗ್ ಬ್ರಹ್ಮಹಾ ಗುರುತಲ್ಪಗಃ ।
ಸ್ತ್ರೀರಾಜಪಿತೃಗೋಹಂತಾ ಯೇ ಚ ಪಾತಕಿನೋಽಪರೇ ॥ ೯ ॥

ಸರ್ವೇಷಾಮಪ್ಯಘವತಾಮಿದಮೇವ ಸುನಿಷ್ಕೃತಮ್ ।
ನಾಮವ್ಯಾಹರಣಂ ವಿಷ್ಣೋರ್ಯತಸ್ತದ್ವಿಷಯಾ ಮತಿಃ ॥ ೧೦ ॥

ನ ನಿಷ್ಕೃತೈರುದಿತೈರ್ಬ್ರಹ್ಮವಾದಿಭಿ-
ಸ್ತಥಾ ವಿಶುದ್ಧ್ಯತ್ಯಘವಾನ್ ವ್ರತಾದಿಭಿಃ ।
ಯಥಾ ಹರೇರ್ನಾಮಪದೈರುದಾಹೃತೈ-
ಸ್ತದುತ್ತಮಶ್ಲೋಕಗುಣೋಪಲಂಭಕಮ್ ॥ ೧೧ ॥

ನೈಕಾಂತಿಕಂ ತದ್ಧಿ ಕೃತೇಽಪಿ ನಿಷ್ಕೃತೇ
ಮನಃ ಪುನರ್ಧಾವತಿ ಚೇದಸತ್ಪಥೇ ।
ತತ್ಕರ್ಮನಿರ್ಹಾರಮಭೀಪ್ಸತಾಂ ಹರೇ-
ರ್ಗುಣಾನುವಾದಃ ಖಲು ಸತ್ತ್ವಭಾವನಃ ॥ ೧೨ ॥

ಎಲೈ ಯಮದೂತರೇ! ಈ ಅಜಾಮಿಳನು ಕೋಟಿ-ಕೋಟಿ ಜನ್ಮಗಳಲ್ಲಿ ಮಾಡಿದ್ದ ಪಾಪಗಳಿಗೂ ಪೂರ್ಣವಾಗಿ ಪ್ರಾಯಶ್ಚಿತ್ತವನ್ನು ಮಾಡಿಕೊಂಡಿರುವನು. ಏಕೆಂದರೆ, ಬೇರಾವುದೋ ವ್ಯಾಮೋಹದಿಂದಲೇ ಆದರೂ ಇವನು ಶ್ರೀಹರಿಯ ಪರಮ ಕಲ್ಯಾಣಮಯವಾದ ಮೋಕ್ಷಪ್ರದವಾದ ನಾಮವನ್ನು ಉಚ್ಚರಿಸಿರುವನು. ॥ ೭ ॥ ಇವನು 'ನಾರಾಯಣ' ಎಂಬ ಈ ನಾಲ್ಕು ಅಕ್ಷರಗಳನ್ನು ಉಚ್ಚರಿಸುವುದರಿಂದಲೇ ಈ ಪಾಪಿಯ ಎಲ್ಲ ಪಾಪಗಳ ಪ್ರಾಯಶ್ಚಿತ್ತವು ಆಗಿಹೋಯಿತು. ॥ ೮ ॥ ಕಳ್ಳನಿರಲೀ, ಹೆಂಡ ಕುಡುಕನಿರಲೀ, ಮಿತ್ರದ್ರೋಹಿಯಾಗಿರಲೀ, ಬ್ರಹ್ಮಹತ್ಯಾ ಪಾತಕಿಯಾಗಿರಲೀ, ಗುರುಪತ್ನೀಗಾಮಿಯಾಗಿರಲೀ, ಸ್ತ್ರೀಹತ್ಯೆ, ರಾಜಹತ್ಯೆ, ಪಿತೃಹತ್ಯೆ, ಗೋಹತ್ಯೆಗಳನ್ನು ಮಾಡಿದವನಾಗಿರಲೀ, ಬೇರಾದರೆ ಎಷ್ಟೇ ದೊಡ್ಡ ಪಾಪಿಯಾಗಿರಲೀ, ಎಲ್ಲ ಪಾತಕಗಳಿಗೂ ಭಗವಂತನ ನಾರಾಯಣನ ನಾಮವನ್ನು ಉಚ್ಚರಿಸುವುದೇ ದೊಡ್ಡ ಪ್ರಾಯಶ್ಚಿತ್ತವು.* ಏಕೆಂದರೆ, ಭಗವನ್ನಾಮಗಳನ್ನು ಉಚ್ಚರಿಸುವುದರಿಂದ ಮನುಷ್ಯನ ಬುದ್ಧಿಯು ಭಗವಂತನ ಗುಣ, ಲೀಲೆ, ಸ್ವರೂಪಗಳಲ್ಲಿ ರಮಿಸಿಹೋಗುತ್ತದೆ ಹಾಗೂ ಸ್ವಯಂ ಭಗವಂತನ ಕುರಿತು ಆತ್ಮೀಯತೆ ಉಂಟಾಗುತ್ತದೆ. ॥ ೯-೧೦ ॥ ದೊಡ್ಡ-ದೊಡ್ಡ ಬ್ರಹ್ಮವಾದಿ ಋಷಿಗಳು ಪಾತಕಗಳ ಪರಿಹಾರಕ್ಕಾಗಿ ಕೃಚ್ಛ್ರ, ಚಾಂದ್ರಾಯಣ ಮುಂತಾದ ಅನೇಕ ವ್ರತಗಳನ್ನು ವಿಧಿಸಿದ್ದಾರೆ. ಆದರೆ ಭಗವಂತನ ನಾಮಗಳನ್ನು, ಭಗವಂತನ ನಾಮಗಳಿಂದ ಕೂಡಿದ ಪದಗಳನ್ನು** ಉಚ್ಚರಿಸುವುದರಿಂದ ಆ ಪಾಪಗಳು ಎಷ್ಟರ ಮಟ್ಟಿಗೆ ನಿರ್ಮೂಲವಾಗುವವೋ, ಅಷ್ಟರಮಟ್ಟಿಗೆ ಆ ಪ್ರಾಯಶ್ಚಿತ್ತಗಳಿಂದ ಅವು ನಿರ್ಮೂಲವಾಗುವುದಿಲ್ಲ. ಏಕೆಂದರೆ, ಭಗವಂತನ ನಾಮಗಳು ಪವಿತ್ರಕೀರ್ತಿ ಶ್ರೀಹರಿಯ ಗುಣಗಳ ಜ್ಞಾನವನ್ನು ಮಾಡಿಸುತ್ತವೆ. ॥ ೧೧ ॥ ಪ್ರಾಯಶ್ಚಿತ್ತವನ್ನು ಮಾಡಿ ಕೊಂಡ ಬಳಿಕವೂ ಮನಸ್ಸು ಮತ್ತೆ ದುರ್ಮಾರ್ಗದ ಕಡೆಗೆ ಓಡುವುದಾದರೆ ಅದು ಹೇಗೆ ಪೂರ್ಣ ಪ್ರಾಯಶ್ಚಿತ್ತವಾಗ ಬಲ್ಲದು? ಆದುದರಿಂದ ಪಾಪಗಳು ಬುಡಸಹಿತ ನಾಶಹೊಂದುವಂತಹ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳಬೇಕೆಂಬ ಬಯಕೆ ಇರುವವರು ಶ್ರೀಭಗವಂತನ ಗುಣಗಳನ್ನು ಗಾನ ಮಾಡಬೇಕು. ಆದರಿಂದ ಚಿತ್ತವು ಪೂರ್ಣವಾಗಿ ಶುದ್ಧವಾಗಿ ಹೋಗುತ್ತದೆ. ॥ ೧೨ ॥

* ಈ ಪ್ರಸಂಗದಲ್ಲಿ 'ನಾಮ-ವ್ಯಾಹರಣ' ಇದರ ಅರ್ಥ ನಾಮೋಚ್ಚಾರಣೆ ಮಾತ್ರವಾಗಿದೆ. ಭಗವಾನ್ ಶ್ರೀಕೃಷ್ಣನು ಹೇಳುತ್ತಾನೆ – "**ಋಣಮೇತತ್ ಪ್ರವೃದ್ಧಂ ಮೇ ಹೃದಯಾನ್ನಾಪಸರ್ಪತಿ । ಯದ್ ಗೋವಿಂದೇತಿ ಚುಕ್ರೋಶ ಕೃಷ್ಣಾ ಮಾಂ ದೂರವಾಸಿನಮ್ ॥**" ನಾನು ದೂರ ಇರುವುದರಿಂದ ದ್ರೌಪದಿಯು ಜೋರಾಗಿ 'ಗೋವಿಂದ-ಗೋವಿಂದ' ಹೀಗೆ ಕರುಣಾಕ್ರಂದನ ಮಾಡಿ ನನ್ನನ್ನು ಕರೆದಳು. ಆ ಋಣವು ನನ್ನ ಮೇಲೆ ಬೆಳೆಯಿತು ಮತ್ತು ನನ್ನ ಹೃದಯದಿಂದ ಅದರ ಭಾರವು ಒಂದು ಕ್ಷಣವಾದರೂ ಕಳೆಯುವುದಿಲ್ಲ.

** 'ನಾಮಪದೈಃ' ಎಂದು ಹೇಳುವ ಅಭಿಪ್ರಾಯ – ಭಗವಂತನ ಕೇವಲ ನಾಮ 'ರಾಮ-ರಾಮ', 'ಕೃಷ್ಣ-ಕೃಷ್ಣ', 'ನಾರಾಯಣ-ನಾರಾಯಣ' ಇವು ಅಂತಃಕರಣದ ಶುದ್ಧಿಗಾಗಿ – ಪಾಪಗಳ ನಿವೃತ್ತಿಗಾಗಿ ಸಾಕು. 'ನಮಃ-ನಮಾಮಿ' ಮುಂತಾದ ಕ್ರಿಯಾಪದಗಳನ್ನು ಜೋಡಿಸುವ ಅವಶ್ಯಕತೆಯೂ ಇಲ್ಲ. ಭಗವಂತನಿಗೆ ಅನೇಕ ನಾಮಗಳಿವೆ. ಅವುಗಳಲ್ಲಿ ಯಾವುದನ್ನು ಬೇಕಾದರೂ ಸಂಕೀರ್ತನ ಮಾಡಬಹುದು, ಒಂದನ್ನು ಕೀರ್ತಿಸಿದರೆ ಎಲ್ಲವನ್ನೂ ಕೀರ್ತಿಸಿದಂತೆ – ಎಂಬ ಅಭಿಪ್ರಾಯದಿಂದ ನಾಮದ ಜೊತೆಗೆ ಬಹುವಚನ ಪ್ರಯೋಗವಾಗಿದೆ. ಒಬ್ಬ ವ್ಯಕ್ತಿಯು ಎಲ್ಲ ನಾಮಗಳನ್ನು ಉಚ್ಚರಿಸಬೇಕೆಂಬ ಅಭಿಪ್ರಾಯದಿಂದ ಅಲ್ಲ, ಏಕೆಂದರೆ, ಭಗವಂತನ ನಾಮಗಳು ಅನಂತವಾಗಿವೆ. ಎಲ್ಲ ನಾಮಗಳನ್ನು ಉಚ್ಚರಿಸಲೂ ಸಾಧ್ಯವೂ ಇಲ್ಲ. ತಾತ್ಪರ್ಯ – ಭಗವಂತನ ಒಂದು ನಾಮವನ್ನು ಉಚ್ಚರಿಸುವುದರಿಂದ ಎಲ್ಲ ಪಾಪಗಳ ನಿವೃತ್ತಿಯಾಗುತ್ತದೆ. ಪೂರ್ಣವಿಶ್ವಾಸವಿಲ್ಲದಿರುವುದು ಮತ್ತು ನಾಮೋಚ್ಚಾರದ ನಂತರವೂ ಪಾಪಗಳನ್ನು ಮಾಡುವುದರಿಂದ ಅದರ ಅನುಭವ ಉಂಟಾಗುವುದಿಲ್ಲ.

ಅಥೈನಂ ಮಾಪನಯತ ಕೃತಾಶೇಷಾಘನಿಷ್ಕೃತಮ್ ।
ಯದಸೌ ಭಗವನ್ನಾಮ ಮ್ರಿಯಮಾಣಃ ಸಮಗ್ರಹೀತ್ ॥ ೧೩ ॥

ಸಾಂಕೇತ್ಯಂ ಪಾರಿಹಾಸ್ಯಂ ವಾ ಸ್ತೋಭಂ ಹೇಲನಮೇವ ವಾ ।
ವೈಕುಂಠನಾಮಗ್ರಹಣಮಶೇಷಾಘಹರಂ ವಿದುಃ ॥ ೧೪ ॥

ಪತಿತಃ ಸ್ಖಲಿತೋ ಭಗ್ನಃ ಸಂದಷ್ಟಸ್ತಪ್ತ ಆಹತಃ ।
ಹರಿರಿತ್ಯವಶೇನಾಹ ಪುಮಾನ್ನಾರ್ಹತಿ ಯಾತನಾಮ್ ॥ ೧೫ ॥

ಗುರೂಣಾಂ ಚ ಲಘೂನಾಂ ಚ ಗುರೂಣಿ ಚ ಲಘೂನಿ ಚ ।
ಪ್ರಾಯಶ್ಚಿತ್ತಾನಿ ಪಾಪಾನಾಂ ಜ್ಞಾತ್ವೋಕ್ತಾನಿ ಮಹರ್ಷಿಭಿಃ ॥ ೧೬ ॥

ತೈಸ್ತಾನ್ಯಘಾನಿ ಪೂಯಂತೇ ತಪೋದಾನಜಪಾದಿಭಿಃ ।
ನಾಧರ್ಮಜಂ ತದ್ಧೃದಯಂ ತದಪೀಶಾಂಘ್ರಿಸೇವಯಾ ॥ ೧೭ ॥

ಅಜ್ಞಾನಾದಥವಾ ಜ್ಞಾನಾದುತ್ತಮಶ್ಲೋಕನಾಮ ಯತ್ ।
ಸಂಕೀರ್ತಿತಮಘಂ ಪುಂಸೋ ದಹೇದೇಧೋ ಯಥಾನಲಃ ॥ ೧೮ ॥

ಯಥಾಗದಂ ವೀರ್ಯತಮಮುಪಯುಕ್ತಂ ಯದೃಚ್ಛಯಾ ।
ಅಜಾನತೋಽಪ್ಯಾತ್ಮಗುಣಂ ಕುರ್ಯಾನ್ಮಂತ್ರೋಽಪ್ಯುದಾಹೃತಃ ॥ ೧೯ ॥

ಶ್ರೀಶುಕ ಉವಾಚ

ತ ಏವಂ ಸುವಿನಿರ್ಣೀಯ ಧರ್ಮಂ ಭಾಗವತಂ ನೃಪ ।
ತಂ ಯಾಮ್ಯಪಾಶಾನ್ನಿರ್ಮುಚ್ಯ ವಿಪ್ರಂ ಮೃತ್ಯೋರಮೂಮುಚನ್ ॥ ೨೦ ॥

ಇತಿ ಪ್ರತ್ಯುದಿತಾ ಯಾಮ್ಯಾ ದೂತಾ ಯಾತ್ವಾ ಯಮಾಂತಿಕೇ ।
ಯಮರಾಜ್ಞೇ ಯಥಾ ಸರ್ವಮಾಚಚಕ್ಷುರರಿಂದಮ ॥ ೨೧ ॥

ಆದ್ದರಿಂದ ಯಮದೂತರೇ! ನೀವು ಅಜಾಮಿಳನನ್ನು ಒಯ್ಯಬೇಡಿರಿ. ಇವನು ಎಲ್ಲ ಪಾಪಗಳ ಪ್ರಾಯಶ್ಚಿತ್ತವನ್ನು ಮಾಡಿಕೊಂಡಿರುವನು. ಏಕೆಂದರೆ, ಇವನು ಸಾಯುವಾಗ* ಭಗವಂತನ ನಾಮವನ್ನು ಉಚ್ಚರಿಸಿರುವನು. ॥ ೧೩ ॥

ಸಂಕೇತಕ್ಕಾಗಲೀ (ಯಾವುದೇ ಬೇರೆ ಅಭಿಪ್ರಾಯದಿಂದ), ಪರಿಹಾಸ್ಯಕ್ಕಾಗಲೀ, ರಾಗದ ಆಲಾಪನೆಯಲ್ಲಾಗಲೀ, ಯಾರನ್ನಾದರೂ ಅಣಕಿಸುವುದಕ್ಕಾಗಲೀ, ಯಾರಾದರೂ ಭಗವಂತನ ನಾಮವನ್ನು ಉಚ್ಚರಿಸಿದರೆ ಅವನ ಎಲ್ಲ ಪಾಪಗಳು ನಾಶವಾಗುತ್ತವೆ ಎಂದು ದೊಡ್ಡ-ದೊಡ್ಡ ಮಹಾತ್ಮರು ಇದನ್ನು ತಿಳಿದಿರುತ್ತಾರೆ. ॥ ೧೪ ॥ ಬೀಳುವಾಗ, ಕಾಲುಜಾರಿ ಮುಗ್ಗರಿಸಿದಾಗ, ಅಂಗಗಳು ಮುರಿದುಹೋದಾಗ, ಹಾವು ಕಡಿದಾಗ, ಬೆಂಕಿಯಿಂದ ಸುಟ್ಟಾಗ, ಏಟು ಬಿದ್ದಾಗ, ಪರವಶತೆಯಿಂದ ಮನುಷ್ಯನು 'ಹರಿ-ಹರಿ' ಎಂದು ಹೇಳಿ ಭಗವಂತನ ನಾಮವನ್ನು ಉಚ್ಚರಿಸುವವನು ಯಮಯಾತನೆಗೆ ಪಾತ್ರನಾಗುವುದಿಲ್ಲ. ॥ ೧೫ ॥ ಮಹರ್ಷಿಗಳು ಪಾಪದ ಸ್ವರೂಪವನ್ನು ಪರಿಶೀಲನೆಮಾಡಿ ದೊಡ್ಡ ಪಾಪಗಳಿಗೆ ದೊಡ್ಡ ಪ್ರಾಯಶ್ಚಿತ್ತವನ್ನು ಚಿಕ್ಕ ಪಾಪಗಳಿಗೆ ಚಿಕ್ಕ ಪ್ರಾಯಶ್ಚಿತ್ತವನ್ನೂ ವಿಧಿಸಿದ್ದಾರೆ. ॥ ೧೬ ॥ ತಪಸ್ಸು, ದಾನ, ಜಪ ಮುಂತಾದ ಪ್ರಾಯಶ್ಚಿತ್ತಗಳ ಮೂಲಕ ಆ ಪಾಪಗಳು ನಾಶವಾಗಿ ಹೋಗುತ್ತವೆ ಎಂಬುದರಲ್ಲಿ ಸಂದೇಹವೇ ಇಲ್ಲ. ಆದರೆ [illegible] ಪಾಪಗಳಿಂದ ಮಲಿನವಾದ ಹೃದಯವು ಶುದ್ಧವಾಗುವುದಿಲ್ಲ. ಭಗವಂತನ ಚರಣಗಳ ಸೇವೆಯಿಂದ ಅದೂ ಕೂಡ ಶುದ್ಧವಾಗಿ ಹೋಗುತ್ತದೆ. ॥ ೧೭ ॥ ಯಮದೂತರೇ! ತಿಳಿದೋ, ತಿಳಿಯದೆಯೋ ಕಟ್ಟಿಗೆಗೆ ಬೆಂಕಿ ತಗುಲಿದರೆ ಅದನ್ನು ಸುಟ್ಟು ಬೂದಿಮಾಡುವಂತೆಯೇ, ತಿಳಿದೋ, ತಿಳಿಯದೆಯೋ ಭಗವಂತನ ನಾಮಸಂಕೀರ್ತನ ಮಾಡುವುದರಿಂದ ಮನುಷ್ಯನ ಎಲ್ಲ ಪಾಪಗಳು ಭಸ್ಮವಾಗಿ ಹೋಗುವುವು. ॥ ೧೮ ॥ ಮಹಾಶಕ್ತಿಶಾಲಿಯಾದ ಅಮೃತವನ್ನು ಅದರ ಗುಣ-ವೀರ್ಯ ತಿಳಿಯದೆಯೇ ಯಾರಾದರೂ ಕುಡಿದರೆ ಅವನನ್ನು ಅಮರನನ್ನಾಗಿಸುವಂತೆಯೇ, ನಾಮದ ಗುಣ-ಶಕ್ತಿ ತಿಳಿಯದೆಯೇ ಉಚ್ಚರಿಸಿದರೂ ಆ ಭಗವಂತನ ನಾಮವು *ತನ್ನ ಫಲವನ್ನು ಕೊಟ್ಟೇ ಕೊಡುವುದು. ವಸ್ತುವಿನ ಶಕ್ತಿಯು ಶ್ರದ್ಧೆಯನ್ನು ಅಪೇಕ್ಷಿಸುವುದಿಲ್ಲ. ॥ ೧೯ ॥

ಶ್ರೀಶುಕ ಮಹಾಮುನಿಗಳು ಹೇಳುತ್ತಾರೆ – ಎಲೈ ರಾಜನೇ! ಹೀಗೆ ಭಗವಂತನ ಪಾರ್ಷದರು ಭಾಗವತಧರ್ಮದ ಸಮಗ್ರವಾದ ನಿರ್ಣಯವನ್ನು ತಿಳಿಸಿ, ಅಜಾಮಿಳನನ್ನು ಯಮನ ದೂತರಿಂದ ಬಿಡಿಸಿ ಮೃತ್ಯುಮುಖದಿಂದ ಪಾರು ಮಾಡಿದರು. ॥ ೨೦ ॥ ಪ್ರಿಯ ಪರೀಕ್ಷಿತನೇ! ಪಾರ್ಷದರ ಈ ಮಾತನ್ನು ಕೇಳಿ ಯಮದೂತರು ಯಮಧರ್ಮನ ಬಳಿಗೆ ಹೋಗಿ, ಅವರಿಗೆ ಇವೆಲ್ಲ ವೃತ್ತಾಂತವನ್ನು ಇದ್ದಂತೆಯೇ ತಿಳಿಸಿದರು. ॥ ೨೧ ॥

* ಪಾಪದ ನಿವೃತ್ತಿಗಾಗಿ ಭಗವನ್ನಾಮದ ಒಂದು ಅಂಶವು 'ರಾಮ' 'ಮರಾ' ಎಂಬುದೇ ಸಾಕಾಗುವಷ್ಟಿದೆ. ಇವನಾದರೋ ನಾಮವನ್ನು ಪೂರ್ಣವಾಗಿ ಉಚ್ಚರಿಸಿರುವನು. ಸಾಯುವ ಸಮಯವೆಂದರೆ ಪೂರ್ಣವಾಗಿ ಸಾಯುವ ಕ್ಷಣವಲ್ಲ. ಏಕೆಂದರೆ, ಸಾಯುವ ಕ್ಷಣವು ಕೃಚ್ಛ್ರ-ಚಾಂದ್ರಾಯಣ ಮುಂತಾದವುಗಳನ್ನು ಮಾಡುವ ವಿಧಿ ಇದೆಯಾದರೋ ಹಾಗೆಯೇ ನಾಮೋಚ್ಚಾರ ವಿಧಿಯಿಲ್ಲ. ಅದಕ್ಕಾಗಿ 'ಮ್ರಿಯಮಾಣಃ' ಶಬ್ದದ ಅಭಿಪ್ರಾಯ – ಇನ್ನು ಮುಂದೆ ಇವನಿಂದ ಯಾವುದೇ ಪಾಪಗಳಾಗುವ ಸಂಭವವಿಲ್ಲ. (ಮುಂದಿನ ಪುಟದಲ್ಲಿ ಎರಡನೇ ಅಡಿ ಟಿಪ್ಪಣಿ* ಇದೆ.)

ದ್ವಿಜಃ ಪಾಶಾದ್ವಿನಿರ್ಮುಕ್ತೋ ಗತಭೀಃ ಪ್ರಕೃತಿಂ ಗತಃ ।
ವವಂದೇ ಶಿರಸಾ ವಿಷ್ಣೋಃ ಕಿಂಕರಾನ್ ದರ್ಶನೋತ್ಸವಃ ॥ ೨೨ ॥

ಅಜಾಮಿಳನು ಯಮದೂತರ ಪಾಶಗಳಿಂದ ಬಿಡುಗಡೆಹೊಂದಿ ನಿರ್ಭಯನಾಗಿ, ಸ್ವಸ್ಥನಾದನು. ಅವನು ವಿಷ್ಣುಕಿಂಕರರ ದರ್ಶನದಿಂದ ಆನಂದಮಗ್ನನಾಗಿ ಅವರಿಗೆ ತಲೆಬಾಗಿ ವಂದಿಸಿದನು. ॥ ೨೨ ॥

* ವಸ್ತುವಿನ ಸ್ವಾಭಾವಿಕ ಶಕ್ತಿಯು – ತನ್ನ ಮೇಲೆ ಶ್ರದ್ಧೆ ಇದೆಯೋ, ಇಲ್ಲವೋ ಎಂಬುದನ್ನು – ಬೇರೆ – ಅನ್ಯವನ್ನು ಗಮನಿಸುವುದಿಲ್ಲ.

ಹರಿರ್ಹರತಿ ಪಾಪಾನಿ ದುಷ್ಟಚಿತ್ತೈರಪಿ ಸ್ಮೃತಃ । ಅನಿಚ್ಛಯಾಪಿ ಸಂಸ್ಪೃಷ್ಟೋ ದಹತ್ಯೇವ ಹಿ ಪಾವಕಃ ॥

ದುಷ್ಟಚಿತ್ತನಾದವನ ಮೂಲಕ ಸ್ಮರಿಸಲ್ಪಟ್ಟರೂ ಭಗವಾನ್ ಶ್ರೀಹರಿಯು ಪಾಪಗಳನ್ನು ಕಳೆಯುತ್ತಾನೆ. ತಿಳಿದೋ, ತಿಳಿಯದೆಯೋ ಬೆಂಕಿಯನ್ನು ಮುಟ್ಟಿದರೆ ಸುಡದೆ ಇರುತ್ತದೆಯೇ ?

ಭಗವಂತನ ನಾಮವನ್ನು ಉಚ್ಚರಿಸುವುದು ಕೇವಲ ಪಾಪಗಳನ್ನು ಕಳೆಯುತ್ತದೆ. ಇದಕ್ಕೆ ಬೇರೆ ಯಾವುದೇ ಫಲವಿಲ್ಲ ಎಂಬ ಧೋರಣೆ ಭ್ರಮೆಯಿಂದ ಕೂಡಿದೆ. ಏಕೆಂದರೆ, ಶಾಸ್ತ್ರದಲ್ಲಿ ಹೇಳಿದೆ –

'ಸಕೃದುಚ್ಚರಿತಂ ಯೇನ ಹರಿರಿತ್ಯಕ್ಷರದ್ವಯಮ್ । ಬದ್ಧಃ ಪರಿಕರಸ್ತೇನ ಮೋಕ್ಷಾಯ ಗಮನಂ ಪ್ರತಿ ॥'

ಯಾರು 'ಹರಿ' ಎಂಬ ಎರಡು ಅಕ್ಷರಗಳನ್ನು ಒಮ್ಮೆಯಾದರೂ ಉಚ್ಚರಿಸುತ್ತಾನೋ, ಅವನು ಮೋಕ್ಷಪ್ರಾಪ್ತಿಗಾಗಿ ಸೊಂಟಕಟ್ಟಿ ಸಿದ್ಧನಾದಂತೆಯೇ. ಈ ವಚನದಿಂದ – ಭಗವನ್ನಾಮವು ಮೋಕ್ಷದ ಸಾಧನೆಯೂ ಆಗಿದೆ ಎಂಬುದು ಸಿದ್ಧವಾಗುತ್ತದೆ. ಮೋಕ್ಷದೊಂದಿಗೆ ಇದು ಧರ್ಮ, ಅರ್ಥ, ಕಾಮದ ಸಾಧನೆಯೂ ಆಗಿದೆ. ಏಕೆಂದರೆ, ಇದರಲ್ಲಿ ತ್ರಿವರ್ಗ ಸಿದ್ಧಿಗೂ ಕೂಡ ನಾಮವೇ ಕಾರಣವಾಗಿದೆ – ಎಂಬ ಅನೇಕ ಪ್ರಮಾಣಗಳು ದೊರೆಯುತ್ತವೆ.

ನ ಗಂಗಾ ನ ಗಯಾ ಸೇತುರ್ನ ಕಾಶೀ ನ ಚ ಪುಷ್ಕರಮ್ । ಜಿಹ್ವಾಗ್ರೇ ವರ್ತತೇ ಯಸ್ಯ ಹರಿರಿತ್ಯಕ್ಷರದ್ವಯಮ್ ॥
ಋಗ್ವೇದೋಽಥ ಯಜುರ್ವೇದಃ ಸಾಮವೇದೋಽಪ್ಯಥರ್ವಣಃ । ಅಧೀತಾಸ್ತೇನ ಯೇನೋಕ್ತಂ ಹರಿರಿತ್ಯಕ್ಷರದ್ವಯಮ್ ॥
ಅಶ್ವಮೇಧಾದಿಭಿರ್ಯಜ್ಞೈರ್ನರಮೇಧೈಃ ಸದಕ್ಷಿಣೈಃ । ಯಜಿತಂ ತೇನ ಯೇನೋಕ್ತಂ ಹರಿರಿತ್ಯಕ್ಷರದ್ವಯಮ್ ॥
ಪ್ರಾಣಪ್ರಯಾಣಪಾಥೇಯಂ ಸಂಸಾರವ್ಯಾಧಿಭೇಷಜಮ್ । ದುಃಖಕ್ಲೇಶಪರಿತ್ರಾಣಂ ಹರಿರಿತ್ಯಕ್ಷರದ್ವಯಮ್ ॥

ಯಾರ ನಾಲಿಗೆಯ ತುದಿಯಲ್ಲಿ 'ಹರಿ' ಎಂಬ ಎರಡು ಅಕ್ಷರಗಳು ನೆಲೆಸಿವೆಯೋ, ಅವನಿಗೆ ಗಂಗೆ, ಗಯಾ, ಸೇತುಬಂಧ ಕಾಶೀ ಮತ್ತು ಪುಷ್ಕರ ಮುಂತಾದ ತೀರ್ಥಕ್ಷೇತ್ರಗಳ ಅವಶ್ಯಕತೆ ಇಲ್ಲ. ಅರ್ಥಾತ್ – ಅವುಗಳ ಯಾತ್ರೆಯ, ಸ್ನಾನಾದಿಗಳ ಫಲವು ಭಗವನ್ನಾಮದಿಂದಲೇ ದೊರೆಯುತ್ತದೆ. 'ಹರಿ' ಎಂಬ ಎರಡು ಅಕ್ಷರಗಳನ್ನು ಉಚ್ಚರಿಸುವವನು ಋಗ್ವೇದ, ಯಜುರ್ವೇದ, ಸಾಮವೇದ, ಅಥರ್ವವೇದ ಇವುಗಳ ಅಧ್ಯಯನ ಮಾಡಿದಂತೆಯೇ. 'ಹರಿ' ಎಂಬ ಎರಡು ಅಕ್ಷರಗಳನ್ನು ಉಚ್ಚರಿಸುವವನು ದಕ್ಷಿಣೆಸಹಿತ ಅಶ್ವಮೇಧವೇ ಮುಂತಾದ ಯಜ್ಞಗಳಿಂದ ಯಜ್ಞಪುರುಷನನ್ನು ಪೂಜಿಸಿದಂತೆಯೇ. 'ಹರಿ' ಎಂಬ ಈ ಎರಡು ಅಕ್ಷರಗಳು ಮೃತ್ಯುವಿನ ಬಳಿಕ ಪರಲೋಕದ ಮಾರ್ಗದಲ್ಲಿ ಪ್ರಯಾಣಿಸುವ ಪ್ರಾಣಿಗೆ ದಾರಿಬುತ್ತಿಯೇ ಆಗಿದೆ. ಸಂಸಾರವೆಂಬ ರೋಗಕ್ಕೆ ಸಿದ್ಧ ಔಷಧವಾಗಿದೆ. ಜೀವನದ ದುಃಖ ಮತ್ತು ಕ್ಲೇಶಗಳು ಪೂರ್ಣವಾಗಿ ಹೊರಟುಹೋಗುವುವು.

ಈ ವಚನಗಳಿಂದ ಭಗವನ್ನಾಮವು ಧರ್ಮ, ಅರ್ಥ, ಕಾಮ – ಎಂಬ ಮೂರು ವರ್ಗಗಳಿಗೂ ಸಾಧನೆಯಾಗಿದೆ ಎಂಬುದು ಸಿದ್ಧವಾಗುತ್ತದೆ. ಈ ಮಾತು 'ಹರಿ' 'ನಾರಾಯಣ' ಮುಂತಾದ ಕೆಲವು ವಿಶೇಷ ನಾಮಗಳ ಕುರಿತೇ ಆಗಿರದೆ ಎಲ್ಲ ನಾಮಗಳ ಸಂಬಂಧವಾಗಿಯೂ ಇದೆ. ಏಕೆಂದರೆ ಅನಂತನ ನಾಮ, ವಿಷ್ಣುವಿನ ನಾಮ, ಹರಿಯ ನಾಮ ಮುಂತಾದ ಮಾತು ಇಲ್ಲಿ ಸಾಮಾನ್ಯವಾಗಿ ಹೇಳಲ್ಪಟ್ಟಿದೆ. ಭಗವಂತನ ಎಲ್ಲ ನಾಮಗಳಲ್ಲಿ ಶಕ್ತಿಯು ಒಂದೇ ರೀತಿಯಾಗಿದೆ.

ನಾಮ ಸಂಕೀರ್ತನಾದಿಗಳಲ್ಲಿ ವರ್ಣ-ಆಶ್ರಮದ ಯಾವ ನಿಯಮವೂ ಇಲ್ಲ.

ಬ್ರಾಹ್ಮಣಾಃ ಕ್ಷತ್ರಿಯಾ ವೈಶ್ಯಾಃ ಸ್ತ್ರಿಯಃ ಶೂದ್ರಾಂತ್ಯಜಾತಯಃ ।
ಯತ್ರ ತತ್ರಾನುಕುರ್ವಂತಿ ವಿಷ್ಣೋರ್ನಾಮಾನುಕೀರ್ತನಮ್ । ಸರ್ವಪಾಪವಿನಿರ್ಮುಕ್ತಾಸ್ತೇಽಪಿ ಯಾಂತಿ ಸನಾತನಮ್ ॥

ಬ್ರಾಹ್ಮಣರು, ಕ್ಷತ್ರಿಯರು, ವೈಶ್ಯರು, ಸ್ತ್ರೀಯರು, ಶೂದ್ರರು, ಅಂತ್ಯಜರು ಮುಂತಾದವರೆಲ್ಲರೂ ಇಲ್ಲಿ ಭಗವಾನ್ ವಿಷ್ಣುವಿನ ನಾಮವನ್ನು ಕೀರ್ತಿಸುತ್ತಾ ಇರುತ್ತಾರೆ. ಅವರೂ ಕೂಡ ಸಮಸ್ತ ಪಾಪಗಳಿಂದ ಮುಕ್ತರಾಗಿ ಸನಾತನ ಪರಮಾತ್ಮನನ್ನು ಪಡೆದುಕೊಳ್ಳುವರು.

ನಾಮ ಸಂಕೀರ್ತನೆಯಲ್ಲಿ ದೇಶಕಾಲ ಮುಂತಾದವುಗಳ ನಿಯಮಗಳು ಇಲ್ಲ.

ನ ದೇಶಕಾಲನಿಯಮಃ ಶೌಚಾಶೌಚವಿನಿರ್ಣಯಃ । ಪರಂ ಸಂಕೀರ್ತನಾದೇವ ರಾಮ ರಾಮೇತಿ ಮುಚ್ಯತೇ ॥

* * *

ನ ದೇಶ ನಿಯಮೋ ರಾಜನ್ ನ ಕಾಲನಿಯಮಸ್ತಥಾ । ವಿದ್ಯತೇ ನಾತ್ರ ಸಂದೇಹೋ ವಿಷ್ಣೋರ್ನಾಮಾನುಕೀರ್ತನೇ ॥
ಕಾಲೋಽಸ್ತಿ ಯಜ್ಞೇ ದಾನೇ ವಾ ಸ್ನಾನೇ ಕಾಲೋಽಸ್ತಿ ಸಜ್ಜಪೇ । ವಿಷ್ಣುಸಂಕೀರ್ತನೇ ಕಾಲೋ ನಾಸ್ತ್ಯತ್ರ ಪೃಥಿವೀತಲೇ ॥
ಗಚ್ಛನ್ ತಿಷ್ಠನ್ ಸ್ವಪನ್ವಾಪಿ ಪಿಬನ್ ಭುಂಜನ್‌ಜಪನ್‌ಸ್ತಥಾ । ಕೃಷ್ಣ ಕೃಷ್ಣೇತಿ ಸಂಕೀರ್ತ್ಯ ಮುಚ್ಯತೇ ಪಾಪಕಂಚುಕಾತ್ ॥

* * *

ಅಪವಿತ್ರಃ ಪವಿತ್ರೋ ವಾ ಸರ್ವಾವಸ್ಥಾಂ ಗತೋಽಪಿ ವಾ । ಯಃ ಸ್ಮರೇತ್ಪುಂಡರೀಕಾಕ್ಷಂ ಸಬಾಹ್ಯಾಭ್ಯಂತರಃ ಶುಚಿಃ ॥

ನಾಮಸ್ಮರಣೆಯಲ್ಲಿ ದೇಶ-ಕಾಲದ ನಿಯಮವಿಲ್ಲ. ಶೌಚ-ಅಶೌಚ ಮುಂತಾದವುಗಳನ್ನೂ ನಿರ್ಣಯಿಸುವ ಅವಶ್ಯಕತೆಯಿಲ್ಲ. ಕೇವಲ ರಾಮ-ರಾಮ ಈ ಸಂಕೀರ್ತನ ಮಾತ್ರದಿಂದಲೇ ಜೀವನು ಮುಕ್ತನಾಗಿ ಹೋಗುತ್ತಾನೆ.

(ಮುಂದಿನ ಪುಟಕ್ಕೆ)

ತಂ ವಿವಕ್ಷುಮಭಿಪ್ರೇತ್ಯ ಮಹಾಪುರುಷಕಿಂಕರಾಃ । ಸಹಸಾ ಪಶ್ಯತಸ್ತಸ್ಯ ತತ್ರಾಂತರ್ದಧಿರೇಽನಘ ॥ ೨೩ ॥	ಪುಣ್ಯಾತ್ಮನಾದ ರಾಜನೇ! ಅಜಾಮಿಳನು ಏನೋ ಹೇಳಲು ಬಯಸುತ್ತಿರುವನೆಂದು ನೋಡಿ ಭಗವಂತನ ಪಾರ್ಷದರು ಅವನು ನೋಡುತ್ತಿರುವಂತೆ ಅಲ್ಲೇ ಅಂತರ್ಧಾನ ಹೊಂದಿದರು. ॥ ೨೩ ॥

ಭಗವಂತನ ನಾಮವನ್ನು ಸಂಕೀರ್ತನೆ ಮಾಡುವುದರಲ್ಲಿ ದೇಶದ ಹಾಗೂ ಕಾಲದ ನಿಯಮವಿರುವುದಿಲ್ಲ. ಇದರಲ್ಲಿ ಸಂದೇಹವೇ ಇಲ್ಲ. ಎಲೈ ರಾಜನೇ! ಯಜ್ಞ, ದಾನ, ತೀರ್ಥಸ್ನಾನ ಅಥವಾ ವಿಧಿಪೂರ್ವಕ ಜಪಕ್ಕಾಗಿ ಶುದ್ಧ ಕಾಲದ ಅವಶ್ಯಕತೆ ಇದೆ. ಆದರೆ ಭಗವಂತನ ನಾಮ ಸಂಕೀರ್ತನೆಯಲ್ಲಿ ಕಾಲ-ಶುದ್ಧಿಯ ಯಾವ ಆವಶ್ಯಕತೆಯೂ ಇಲ್ಲ. ನಡೆವಾಗ, ಓಡಾಡುವಾಗ, ನಿಂತಾಗ, ಮಲಗಿದಾಗ, ಉಂಟಾಗ, ತಿಂದಾಗ ಮತ್ತು ಜಪ ಮಾಡುವಾಗಲೂ 'ಕೃಷ್ಣ-ಕೃಷ್ಣ' ಎಂಬ ಸಂಕೀರ್ತನೆಗೈದು ಮನುಷ್ಯನು ಪಾಪದ ಕೆಸರಿನಿಂದ ಬಿಡುಗಡೆ ಹೊಂದುವನು.
ಅಪವಿತ್ರನಾಗಿರಲೀ, ಪವಿತ್ರನಾಗಿರಲೀ, ಎಲ್ಲ ಅವಸ್ಥೆಗಳಲ್ಲಿಯೂ ಕಮಲನಯನ ಭಗವಂತನ ಸ್ಮರಣೆ ಮಾಡುವವನು ಒಳ-ಹೊರಗೆ ಪವಿತ್ರನಾಗಿ ಹೋಗುವನು.

ಕೃಷ್ಣೇತಿ ಮಂಗಲಂ ನಾಮ ಯಸ್ಯವಾಚಿ ಪ್ರವರ್ತತೇ । ಭಸ್ಮೀಭವಂತಿ ಸದ್ಯಸ್ತು ಮಹಾಪಾತಕಕೋಟಯಃ ॥
ಸರ್ವೇಷಾಮಪಿ ಯಜ್ಞಾನಾಂ ಲಕ್ಷಾಣಿ ವ್ರತಾನಿ ಚ । ತೀರ್ಥಸ್ನಾನಾನಿ ಸರ್ವಾಣಿ ತಪಾಂಸ್ಯನಶನಾನಿ ಚ ॥
ವೇದಪಾಠಸಹಸ್ರಾಣಿ ಪ್ರಾದಕ್ಷಿಣ್ಯಂ ಭುವಃ ಶತಮ್ । ಕೃಷ್ಣನಾಮ ಜಪಸ್ಯಾಸ್ಯ ಕಲಾಂ ನಾರ್ಹಂತಿ ಷೋಡಶೀಮ್ ॥

ಯಾರ ನಾಲಿಗೆಯಲ್ಲಿ ಕೃಷ್ಣ-ಕೃಷ್ಣ-ಕೃಷ್ಣ ಎಂಬ ಮಂಗಲನಾಮವು ಕುಣಿಯುತ್ತಿರುತ್ತದೋ ಅವನ ಕೋಟಿ-ಕೋಟಿ ಮಹಾಪಾತಕಗಳ ರಾಶಿಯು ಆಗಲೇ ಭಸ್ಮವಾಗಿ ಹೋಗುತ್ತವೆ. ಎಲ್ಲ ಯಜ್ಞಗಳು, ಲಕ್ಷಾಂತರ ವ್ರತಗಳು, ಎಲ್ಲ ತೀರ್ಥಸ್ನಾನ, ತಪಸ್ಸು, ಅನೇಕ ಉಪವಾಸ, ಸಾವಿರಾರು ವೇದಪಾರಾಯಣಗಳು, ನೂರಾರು ಭೂಪ್ರದಕ್ಷಿಣೆಗಳು, ಶ್ರೀಕೃಷ್ಣನ ನಾಮ-ಜಪದ ಹದಿನಾರನೆಯ ಒಂದು ಭಾಗಕ್ಕೂ ಸಾಟಿಯಾಗಲಾರದು.
ಭಗವನ್ನಾಮದ ಕೀರ್ತನೆಯಲ್ಲೇ ಇಂತಹ ಫಲವಿದೆ ಎಂಬ ಮಾತಿಲ್ಲ. ಅದರ ಶ್ರವಣ, ಸ್ಮರಣೆಯಲ್ಲಿಯೂ ಅದೇ ಫಲವಿದೆ. ದಶಮಸ್ಕಂಧದ ಕೊನೆಯಲ್ಲಿ– 'ಕೃಷ್ಣನ ನಾಮದ ಸ್ಮರಣೆ ಮತ್ತು ಉಚ್ಚಾರಣೆ ಅಮಂಗಳಗಳನ್ನು ನಾಶಮಾಡುವಂತಹುದು' ಎಂದು ಹೇಳಿದೆ. ಶಿವಗೀತಾ ಮತ್ತು ಪದ್ಮಪುರಾಣದಲ್ಲಿಯೂ ಹೇಳಿದೆ –

ಆರ್ತ್ಯಾರ್ಥಾ ವಾ ಭಯೇ ಶೋಕೇ ಕ್ಷುತೇ ವಾ ಮಮನಾಮ ಯಃ । ವ್ಯಾಜೇನ ವಾ ಸ್ಮರೇದ್ಯಸ್ತು ಸ ಯಾತಿ ಪರಮಾಂ ಗತಿಮ್ ॥
ಪ್ರಯಾಣೇ ಚಾಪ್ರಯಾಣೇ ಚ ಯನ್ನಾಮ ಸ್ಮರತಾಂ ನೃಣಾಮ್ । ಸದ್ಯೋ ನಶ್ಯತಿ ಪಾಪೌಘೋ ನಮಸ್ತಸ್ಮೈ ಚಿದಾತ್ಮನೇ ॥

ಭಗವಂತನು ಹೇಳುತ್ತಾನೆ – ಆರ್ತ್ಯರ್ಥ, ಭಯ, ಶೋಕ, ಸೀನು ಬೀಳುವುದು ಮುಂತಾದ ಅವಸ್ಥೆಯಲ್ಲಿ ನನ್ನ ನಾಮವನ್ನು ಉಚ್ಚರಿಸುವವನು, ಅಥವಾ ಯಾವುದೋ ನೆಪದಿಂದ ಸ್ಮರಿಸಿದರೂ ಅವನು ಪರಮಗತಿಯನ್ನು ಪಡೆಯುತ್ತಾನೆ. ಬದುಕಿರುವಾಗ, ಸಾಯುವಾಗ, ಬೇಕಾದಾಗ ಭಗವಂತನ ನಾಮವನ್ನು ಸ್ಮರಿಸುವ ಮನುಷ್ಯನ ಪಾಪರಾಶಿಯು ಆಗಲೇ ನಾಶವಾಗಿ ಹೋಗುತ್ತವೆ. ಅಂತಹ ಚಿದಾತ್ಮನಾದ ಭಗವಂತನಿಗೆ ನಮಸ್ಕಾರವು.

ಉತ್ತಮವಾದ ಇತಿಹಾಸದಲ್ಲಿಯೂ ಹೇಳಲಾಗಿದೆ –

ಶ್ರುತ್ವಾ ನಾಮಾನಿ ತತ್ರಸ್ಥಾಸ್ತೇನೋಕ್ತಾನಿ ಹರೇರ್ದ್ವಿಜ । ನಾರಕಾ ನರಕಾನ್ಮುಕ್ತಾಃ ಸದ್ಯ ಏವ ಮಹಾಮುನೇ ॥

ಮಹಾಮುನಿಗಳಾದ ವಿಪ್ರೋತ್ತಮರೇ! ನರಕದಲ್ಲಿ ವಾಸಿಸುವ ಪ್ರಾಣಿಗಳು ಧರ್ಮರಾಜನ ಮುಖದಿಂದ ಶ್ರೀಹರಿಯ ನಾಮವನ್ನು ಶ್ರವಣಿಸಿ, ಅವರು ಒಡನೆಯೇ ನರಕದಿಂದ ಮುಕ್ತರಾಗಿ ಹೋದರು.

ಯಜ್ಞಯಾಗಾದಿರೂಪವಾದ ಧರ್ಮದ ಅನುಷ್ಠಾನದಲ್ಲಿ ಪವಿತ್ರದೇಶ,ಕಾಲ, ಪಾತ್ರ, ಶಕ್ತಿ, ಸಾಮಗ್ರಿ, ಶ್ರದ್ಧೆ, ಮಂತ್ರ, ದಕ್ಷಿಣೆ ಮುಂತಾದವುಗಳ ಆವಶ್ಯಕತೆ ಇರುತ್ತದೆ. ಈ ಕಲಿಯುಗದಲ್ಲಿ ಅದು ಸಾಂಗವಾಗಿ ನೆರವೇರುವುದು ಅತ್ಯಂತ ಕಷ್ಟವಾಗಿದೆ. ಭಗವನ್ನಾಮ ಸಂಕೀರ್ತನೆಯಿಂದ ಅದರ ಫಲವನ್ನು ಆಯಾಸವಿಲ್ಲದೆ ಪಡೆಯಲಾಗುತ್ತದೆ. ಭಗವಾನ್ ಶಂಕರನು ಪಾರ್ವತಿಗೆ ಹೇಳುತ್ತಾನೆ –

ಈಶೋಽಹಂ ಸರ್ವಜಗತಾಂ ನಾಮ್ನಾಂ ವಿಷ್ಣೋರ್ಹಿ ಜಾಪಕಃ । ಸತ್ಯಂ ಸತ್ಯಂ ವದಾಮ್ಯೇವ ಹರೇರ್ನಾನ್ಯಾ ಗತಿರ್ನೃಣಾಮ್ ॥

ನಾನು ಸಮಸ್ತ ಜಗತ್ತಿಗೆ ಒಡೆಯನಾಗಿದ್ದರೂ ಭಗವಾನ್ ವಿಷ್ಣುವಿನ ನಾಮವನ್ನೇ ಜಪಿಸುತ್ತಾ ಇರುತ್ತೇನೆ. ಭಗವಂತನನ್ನು ಬಿಟ್ಟು ಜೀವಿಗಳಿಗೆ ಈಗ ಕರ್ಮಕಾಂಡವೇ ಮುಂತಾದ ಯಾವ ಗತಿಯೂ ಇಲ್ಲ ಎಂಬುದನ್ನು ನಾನು ನಿನಗೆ ಸತ್ಯವಾಗಿ ಹೇಳುತ್ತೇನೆ. ಶ್ರೀಮದ್ಭಾಗವತದಲ್ಲಿಯೂ ಇದೇ ಮಾತು ಮುಂದೆ ಬರುವುದಿದೆ. ಕೃತಯುಗದಲ್ಲಿ ಧ್ಯಾನದಿಂದಲೂ, ತ್ರೇತಾಯುಗದಲ್ಲಿ ಯಜ್ಞದಿಂದಲೂ, ದ್ವಾಪರದಲ್ಲಿ ಅರ್ಚನೆಯಿಂದಲೂ ಸಿಗುವ ಫಲವೇ ಕಲಿಯುಗದಲ್ಲಿ ಕೇವಲ ಭಗವನ್ನಾಮ ಕೀರ್ತನೆಯಿಂದ ದೊರೆಯುತ್ತದೆ. ಇಷ್ಟೇ ಅಲ್ಲದೆ – ಕಲಿಯುಗವು ದೋಷಗಳ ಭಂಡಾರವಾಗಿದೆ. ಆದರೂ ಇದರಲ್ಲಿ ಮಹತ್ತಮವಾದ ಒಂದು ಗುಣವಿದೆ – ಶ್ರೀಕೃಷ್ಣನ ಸಂಕೀರ್ತನ ಮಾತ್ರದಿಂದಲೇ ಜೀವಿಗಳು ಬಂಧನದಿಂದ ಮುಕ್ತರಾಗಿ ಪರಮಾತ್ಮನನ್ನು ಪಡೆದುಕೊಳ್ಳುವರು.

ಹೀಗೆ ಒಂದೇ ಬಾರಿ ನಾಮೋಚ್ಚಾರದ ಅನಂತ ಮಹಿಮೆಯನ್ನು ಶಾಸ್ತ್ರಗಳಲ್ಲಿ ಹೇಳಲಾಗಿದೆ. ಇಲ್ಲಿ ಮೂಲ ಪ್ರಸಂಗದಲ್ಲಿ – 'ಸಕೃದುಚ್ಚರಿತಂ' ಎಂಬುದರ ಉಲ್ಲೇಖವಾಗಿದೆ. ಪದೇ-ಪದೇ ನಾಮೋಚ್ಚಾರಣೆಯ ವಿಧಾನವು, ಮುಂದೆ ಇನ್ನೂ ಪಾಪಗಳು ಉಂಟಾಗದಿರಲೆಂದೇ ಇದೆ. ಭಗವಂತನ ನಾಮವನ್ನು ಕೊಂಡಾಡುವುದರಿಂದ ಭೂತ, ವರ್ತಮಾನ, ಭವಿಷ್ಯದ ಎಲ್ಲ ಪಾಪಗಳು ಭಸ್ಮವಾಗಿ ಹೋಗುವುವು.

ವರ್ತಮಾನಂ ಚ ಯತ್ ಪಾಪಂ ಯದ್ ಭೂತಂ ಯದ್ ಭವಿಷ್ಯತಿ । ತತ್ಸರ್ವಂ ನಿರ್ದಹತ್ಯಾಶು ಗೋವಿಂದಾನಲಕೀರ್ತನಮ್ ॥

ಹೀಗಿದ್ದರೂ ಭಗವತ್ಪ್ರೇಮಿಯಾದ ಜೀವಿಯು ಪಾಪಗಳ ನಾಶದ ಬಗ್ಗೆ ಹೆಚ್ಚು ದೃಷ್ಟಿ ಇರಿಸಬಾರದು. ಅವನಿಗಾದರೋ ಭಕ್ತಿ-ಭಾವದ ದೃಢತೆಗಾಗಿಯೇ ಭಗವಂತನ ಚರಣಗಳಲ್ಲಿ ಹೆಚ್ಚೆಚ್ಚು ಪ್ರೇಮ-ಭಕ್ತಿಯು ಬೆಳೆಯಲಿ ಈ ದೃಷ್ಟಿಯಿಂದ ಹಗಲು-ರಾತ್ರಿ, ನಿತ್ಯ-ನಿರಂತರ ಭಗವಂತನ ಮಧುರವಾದ ನಾಮಗಳ ಜಪವನ್ನು ಮಾಡಬೇಕು. ನಿಷ್ಕಾಮತೆ ಹೆಚ್ಚಿದಷ್ಟು ನಾಮದ ಪೂರ್ಣತೆ ಪ್ರಕಟಗೊಳ್ಳುವುದು, ಅನುಭವಕ್ಕೆ ಬರುವುದು.

(ಮುಂದಿನ ಪುಟಕ್ಕೆ)

ಅಜಾಮಿಲೋಽಪ್ಯಥಾಕರ್ಣ್ಯ ದೂತಾನಾಂ ಯಮಕೃಷ್ಣಯೋಃ ।
ಧರ್ಮಂ ಭಾಗವತಂ ಶುದ್ಧಂ ತ್ರೈವಿದ್ಯಂ ಚ ಗುಣಾಶ್ರಯಮ್ ॥ ೨೪ ॥

ಭಕ್ತಿಮಾನ್ ಭಗವತ್ಯಾಶು ಮಾಹಾತ್ಮ್ಯಶ್ರವಣಾದ್ಧರೇಃ ।
ಅನುತಾಪೋ ಮಹಾನಾಸೀತ್ಸ್ಮರತೋಽಶುಭಮಾತ್ಮನಃ ॥ ೨೫ ॥

ಅಹೋ ಮೇ ಪರಮಂ ಕಷ್ಟಮಭೂದವಿಜಿತಾತ್ಮನಃ ।
ಯೇನ ವಿಪ್ಲಾವಿತಂ ಬ್ರಹ್ಮ ವೃಷಲ್ಯಾಂ ಜಾಯತಾಽಽತ್ಮನಾ ॥ ೨೬ ॥

ಧಿಙ್ಮಾಂ ವಿಗರ್ಹಿತಂ ಸದ್ಭಿರ್ದುಷ್ಕೃತಂ ಕುಲಕಜ್ಜಲಮ್ ।
ಹಿತ್ವಾ ಬಾಲಾಂ ಸತೀಂ ಯೋಽಹಂ ಸುರಾಪೀಮಸತೀಮಗಾಮ್ ॥ ೨೭ ॥

ವೃದ್ಧಾವನಾಥೌ ಪಿತರೌ ನಾನ್ಯಬಂಧೂ ತಪಸ್ವಿನೌ ।
ಅಹೋ ಮಯಾಧುನಾ ತ್ಯಕ್ತಾವಕೃತಜ್ಞೇನ ನೀಚವತ್ ॥ ೨೮ ॥

ಸೋಽಹಂ ವ್ಯಕ್ತಂ ಪತಿಷ್ಯಾಮಿ ನರಕೇ ಭೃಶದಾರುಣೇ ।
ಧರ್ಮಘ್ನಾಃ ಕಾಮಿನೋ ಯತ್ರ ವಿಂದಂತಿ ಯಮಯಾತನಾಃ ॥ ೨೯ ॥

ಕಿಮಿದಂ ಸ್ವಪ್ನ ಆಹೋಸ್ವಿತ್ ಸಾಕ್ಷಾದ್ದೃಷ್ಟಮಿಹಾದ್ಭುತಮ್ ।
ಕ್ವ ಯಾತಾ ಅದ್ಯ ತೇ ಯೇ ಮಾಂ ವ್ಯಕರ್ಷನ್ ಪಾಶಪಾಣಯಃ ॥ ೩೦ ॥

ಅಥ ತೇ ಕ್ವ ಗತಾಃ ಸಿದ್ಧಾಶ್ಚತ್ವಾರಶ್ಚಾರುದರ್ಶನಾಃ ।
ವ್ಯಮೋಚಯನ್ನೀಯಮಾನಂ ಬದ್ಧ್ವಾ ಪಾಶೈರಧೋ ಭುವಃ ॥ ೩೧ ॥

ಈ ಸಂದರ್ಭದಲ್ಲಿ ಅಜಾಮಿಳನು ಭಗವಂತನ ಪಾರ್ಷದರಿಂದ ವಿಶುದ್ಧವಾದ ಭಾಗವತ ಧರ್ಮವನ್ನು ಮತ್ತು ಯಮದೂತರಿಂದ ವೇದೋಕ್ತವಾದ ಪ್ರವೃತ್ತಿ ಧರ್ಮವನ್ನು ಕೇಳಿದ್ದನು. ॥ ೨೪ ॥ ಸರ್ವ ಪಾಪಹಾರಿಯಾದ ಭಗವಂತನ ಮಹಿಮೆಯನ್ನೂ ಕೇಳಿದ್ದರಿಂದ ಅಜಾಮಿಳನ ಹೃದಯದಲ್ಲಿ ಬೇಗನೇ ಭಕ್ತಿಯು ಉದಯವಾಯಿತು. ಈಗ ಅವನಿಗೆ ತನ್ನ ಪಾಪಗಳು ನೆನಪಾಗಿ ಭಾರೀ ಪಶ್ಚಾತ್ತಾಪ ಉಂಟಾಯಿತು. ॥ ೨೫ ॥ ಅವನು ಮನಸ್ಸಿನಲ್ಲೇ ಅಂದು ಕೊಂಡನು – ಅಯ್ಯೋ! ನಾನು ಇಂದ್ರಿಯಗಳಿಗೆ ಎಂತಹ ಗುಲಾಮನಾಗಿಬಿಟ್ಟೆ! ಈ ದಾಸಿಯ ಗರ್ಭದಿಂದ ಪುತ್ರರನ್ನು ಪಡೆದು ನಾನು ಬ್ರಾಹ್ಮಣ್ಯವನ್ನು ಹಾಳು ಮಾಡಿಕೊಂಡೆನಲ್ಲ! ಇದೆಂತಹ ದುಃಖದ ಸಂಗತಿಯಾಗಿದೆ! ॥ ೨೬ ॥ ಇಂತಹ ಕಡುಪಾಪಿಯಾದ ನನಗೆ ಧಿಕ್ಕಾರವಿರಲಿ! ಸತ್ಪುರುಷರ ನಿಂದೆಗೆ ಪಾತ್ರನಾದ ಪಾಪಾತ್ಮನು ನಾನು. ನನ್ನ ಕುಲಕ್ಕೆ ಕಳಂಕವನ್ನು ತಂದ ಪಾಪಿಯು ನಾನು. ಅಯ್ಯೋ! ಶಿವನೇ! ಕಿರು ವಯಸ್ಸಿನಲ್ಲಿದ್ದ ಸಾಧ್ವಿಯಾದ ಪತ್ನಿಯನ್ನು ತೊರೆದು, ಹೆಂಡಕುಡಿಯುವ ಕುಲಟೆಯ ಸಹವಾಸ ಮಾಡಿದೆನಲ್ಲ! ॥ ೨೭ ॥ ಎಂತಹ ನೀಚನು ನಾನು! ನನ್ನ ತಂದೆ-ತಾಯಂದಿರು ವೃದ್ಧರೂ, ತಪಸ್ವಿಗಳೂ ಆಗಿದ್ದರು. ಸರ್ವಥಾ ಅಸಹಾಯಕರಾದ ಅವರ ಸೇವೆ-ಶುಶ್ರೂಷೆ ಮಾಡುವವರು ಬೇರೆ ಯಾರೂ ಇಲ್ಲದಿದ್ದರೂ ನಾನೂ ಅವರನ್ನು ತೊರೆದುಬಿಟ್ಟೆನಲ್ಲ! ಅಯ್ಯೋ! ನಾನು ಎಷ್ಟು ಕೃತಘ್ನನಾಗಿದ್ದೇನೆ! ॥ ೨೮ ॥ ಈಗ ನಾನು – ಧರ್ಮಘಾತಕರಾದ ಪಾಪಾತ್ಮರೂ, ಕಾಮುಕರೂ ಅನೇಕ ರೀತಿಯ ಯಮ ಯಾತನೆಗಳನ್ನೂ ಅನುಭವಿಸುವ ಅತ್ಯಂತ ಭಯಂಕರವಾದ ನರಕದಲ್ಲಿ ಬೀಳಬೇಕಾಗುವುದು. ॥ ೨೯ ॥

ಈಗ ನಾನು ಕಂಡಿರುವ ಅದ್ಭುತವಾದ ದೃಶ್ಯವು ಸ್ವಪ್ನವೋ? ಅಥವಾ ಜಾಗ್ರತ ಸ್ಥಿತಿಯ ಪ್ರತ್ಯಕ್ಷ ಅನುಭವವೋ? ಈಗ ತಾನೇ ಕೈಯಲ್ಲಿ ಪಾಶಗಳನ್ನು ಹಿಡಿದುಕೊಂಡು ನನ್ನನ್ನು ಸೆಳೆಯುತ್ತಿದ್ದವರು ಎಲ್ಲಿಗೆ ಹೋದರು? ॥ ೩೦ ॥ ಅವರು ನನ್ನನ್ನು ಪಾಶಗಳಿಂದ ಬಂಧಿಸಿ ಭೂಮಿಯ ಕೆಳಗಡೆಗೆ ಸೆಳೆದೊಯ್ಯುತ್ತಿದ್ದರು. ಆದರೆ ಅತ್ಯಂತ ಸುಂದರರಾದ ನಾಲ್ಕುಮಂದಿ ಸಿದ್ಧರು ಬಂದು ನನ್ನನ್ನು ಬಿಡಿಸಿದರಲ್ಲ! ಈಗ ಅವರೆಲ್ಲಿಗೆ ಹೋದರು? ॥ ೩೧ ॥

ನಾಮದ ಮಹಿಮೆ ವಾಸ್ತವಿಕವಲ್ಲ, ಅರ್ಥವಾದ ಮಾತ್ರವಾಗಿದೆ ಎಂಬ ಕಲ್ಪನೆ ಅನೇಕ ತಾರ್ಕಿಕರ ಮನಸ್ಸಿನಲ್ಲಿ ಏಳುತ್ತದೆ. ಅವರ ಮನಸ್ಸಿನಲ್ಲಿ – ಮದ್ಯದ ಒಂದು ತೊಟ್ಟು ಕೂಡ ಪತಿತನನ್ನಾಗಿಸಲು ಸಾಕಷ್ಟಿದೆ ಎಂಬ ಯೋಚನೆ ಬರುತ್ತದೆ. ಆದರೆ ಭಗವಂತನ ಒಂದೇ ನಾಮವೂ ಕೂಡ ಪರಮ ಶ್ರೇಯಸ್ಕರವಾಗಿದೆ ಎಂಬ ವಿಶ್ವಾಸ ಉಂಟಾಗುವುದಿಲ್ಲ. ಭಗವನ್ನಾಮದ ಮಹಿಮೆಯನ್ನು ಅರ್ಥವಾದವೆಂದು ತಿಳಿಯುವುದು ಮಹಾಪಾಪವೆಂದು ಶಾಸ್ತ್ರಗಳಲ್ಲಿ ತಿಳಿಸಲಾಗಿದೆ – **ಪುರಾಣೇಷ್ವರ್ಥವಾದತ್ವಂ ಯೇ ವದಂತಿ ನರಾಧಮಾಃ । ತೈರರ್ಜಿತಾನಿ ಪುಣ್ಯಾನಿ ತದ್ವದೇವ ಭವಂತಿ ಹಿ ॥**

* * *

ಮನ್ನಾಮಕೀರ್ತನಫಲಂ ವಿವಿಧಂ ನಿಶಮ್ಯ ನ ಶ್ರದ್ದಧಾತಿ ಮನುತೇ ಯದುತಾರ್ಥವಾದಮ್ ।
ಯೋ ಮಾನುಷಸ್ತಮಿಹ ದುಃಖಚಯೇ ಕ್ಷಿಪಾಮಿ ಸಂಸಾರಘೋರವಿವಿಧಾರ್ತಿನಿಪೀಡಿತಾಂಗಮ್ ॥

* * *

ಅರ್ಥವಾದಂ ಹರೇರ್ನಾಮ್ನಿ ಸಂಭಾವಯತಿ ಯೋ ನರಃ । ಸ ಪಾಪಿಷ್ಠೋ ಮನುಷ್ಯಾಣಾಂ ನರಕೇ ಪತತಿ ಸ್ಫುಟಮ್ ॥

ಪುರಾಣಗಳಲ್ಲಿ ಅರ್ಥವಾದದ ಕಲ್ಪನೆ ಮಾಡುವ ನರಾಧಮರು ಗಳಿಸಿದ ಪುಣ್ಯಗಳು ಅರ್ಥವಾದದಂತೆ ವ್ಯರ್ಥವಾಗಿ ಹೋಗುತ್ತವೆ.

* * *

ನನ್ನ ನಾಮ-ಕೀರ್ತನೆಯ ವಿವಿಧ ಫಲಗಳನ್ನು ಕೇಳಿ ಅದರಲ್ಲಿ ಶ್ರದ್ಧೆ ಇಡುವುದಿಲ್ಲವೋ ಮತ್ತು ಅದನ್ನು ಅರ್ಥವಾದವೆಂದು ತಿಳಿಯುವ ಮನುಷ್ಯನಿಗೆ ಸಂಸಾರದ ನಾನಾ ಘೋರ ಕಷ್ಟಗಳಿಂದ ಪೀಡಿತನಾಗಬೇಕಾಗುತ್ತದೆ. ಅವನನ್ನು ನಾನು ಅನೇಕ ದುಃಖಗಳಲ್ಲಿ ಕೆಡಹುತ್ತೇನೆ.

* * *

ಭಗವಂತನ ನಾಮದಲ್ಲಿ ಅರ್ಥವಾದವನ್ನು ಎಣಿಸುವ ಮನುಷ್ಯನು ಅತ್ಯಂತ ಪಾಪಿಯಾಗಿದ್ದಾನೆ ಮತ್ತು ಅವನಿಗೆ ನರಕದಲ್ಲಿ ಬೀಳಬೇಕಾಗುತ್ತದೆ.

ಅಥಾಪಿ ಮೇ ದುರ್ಭಗಸ್ಯ ವಿಬುಧೋತ್ತಮದರ್ಶನೇ ।
ಭವಿತವ್ಯಂ ಮಂಗಲೇನ ಯೇನಾತ್ಮಾ ಮೇ ಪ್ರಸೀದತಿ
॥ ೩೨ ॥

ಅನ್ಯಥಾ ಮ್ರಿಯಮಾಣಸ್ಯ ನಾಶುಚೇರ್ವೃಷಲೀಪತೇಃ ।
ವೈಕುಂಠನಾಮ ಗ್ರಹಣಂ ಜಿಹ್ವಾ ವಕ್ತುಮಿಹಾರ್ಹತಿ
॥ ೩೩ ॥

ಕ್ವ ಚಾಹಂ ಕಿತವಃ ಪಾಪೋ ಬ್ರಹ್ಮಘ್ನೋ ನಿರಪತ್ರಪಃ ।
ಕ್ವ ಚ ನಾರಾಯಣೇತ್ಯೇತದ್ಭಗವನ್ನಾಮ ಮಂಗಲಮ್
॥ ೩೪ ॥

ಸೋಽಹಂ ತಥಾ ಯತಿಷ್ಯಾಮಿ ಯತಚಿತ್ತೇಂದ್ರಿಯಾನಿಲಃ ।
ಯಥಾ ನ ಭೂಯ ಆತ್ಮಾನಮಂಧೇ ತಮಸಿ ಮಜ್ಜಯೇ
॥ ೩೫ ॥

ವಿಮುಚ್ಯ ತಮಿಮಂ ಬಂಧಮವಿದ್ಯಾಕಾಮಕರ್ಮಜಮ್ ।
ಸರ್ವಭೂತಸುಹೃಚ್ಛಾಂತೋ ಮೈತ್ರಃ ಕರುಣ ಆತ್ಮವಾನ್
॥ ೩೬ ॥

ಮೋಚಯೇ ಗ್ರಸ್ತಮಾತ್ಮಾನಂ ಯೋಷಿನ್ಮಯ್ಯಾಽಽತ್ಮಮಾಯಯಾ ।
ವಿಕ್ರೀಡಿತೋ ಯಯೈವಾಹಂ ಕ್ರೀಡಾಮೃಗ ಇವಾಧಮಃ
॥ ೩೭ ॥

ಮಮಾಹಮಿತಿ ದೇಹಾದೌ ಹಿತ್ವಾ ಮಿಥ್ಯಾರ್ಥಧೀರ್ಮತಿಮ್ ।
ಧಾಸ್ಯೇ ಮನೋ ಭಗವತಿ ಶುದ್ಧಂ ತತ್ಕೀರ್ತನಾದಿಭಿಃ
॥ ೩೮ ॥

ಶ್ರೀಶುಕ ಉವಾಚ

ಇತಿ ಜಾತಸುನಿರ್ವೇದಃ ಕ್ಷಣಸಂಗೇನ ಸಾಧುಷು ।
ಗಂಗಾದ್ವಾರಮುಪೇಯಾಯ ಮುಕ್ತಸರ್ವಾನುಬಂಧನಃ
॥ ೩೯ ॥

ಸ ತಸ್ಮಿಂದೇವಸದನ ಆಸೀನೋ ಯೋಗಮಾಶ್ರಿತಃ ।
ಪ್ರತ್ಯಾಹೃತೇಂದ್ರಿಯಗ್ರಾಮೋ ಯುಯೋಜ ಮನ ಆತ್ಮನಿ
॥ ೪೦ ॥

ತತೋ ಗುಣೇಭ್ಯ ಆತ್ಮಾನಂ ವಿಯುಜ್ಯಾತ್ಮಸಮಾಧಿನಾ ।
ಯುಯುಜೇ ಭಗವದ್ಧಾಮ್ನಿ ಬ್ರಹ್ಮಣ್ಯನುಭವಾತ್ಮನಿ
॥ ೪೧ ॥

ನಾನು ಈ ಜನ್ಮದಲ್ಲಿ ಮಹಾಪಾಪಿ ಆಗಿದ್ದರೂ, ಹಿಂದಿನ ಜನ್ಮದಲ್ಲಿ ಖಂಡಿತವಾಗಿಯೂ ಶುಭಕರ್ಮಗಳನ್ನು ಮಾಡಿರಲೇ ಬೇಕು. ಅದರಿಂದಲೇ ನನಗೆ ಈ ಶ್ರೇಷ್ಠ ದೇವತೆಗಳ ದರ್ಶನವಾದುದು. ಅವರನ್ನು ನೆನೆದು ನನ್ನ ಮನಸ್ಸು ಈಗಲೂ ಆನಂದದಿಂದ ತುಂಬಿಹೋಗುತ್ತದೆ. ॥ ೩೨ ॥ ನಾನು ಕುಲಟೆಯ ಸಂಗ ಮಾಡಿದವನೂ, ಅತ್ಯಂತ ಅಪವಿತ್ರನೂ ಆಗಿರುವೆ. ಹಿಂದಿನ ಜನ್ಮದಲ್ಲಿ ನಾನು ಪುಣ್ಯವನ್ನು ಮಾಡದಿದ್ದರೆ ಸಾಯುವ ಸಮಯದಲ್ಲಿ ನನ್ನ ನಾಲಿಗೆಯು ಭಗವಂತನ ಮಧುರವಾದ ನಾಮವನ್ನು ಹೇಗೆ ಉಚ್ಚರಿಸುತ್ತಿತ್ತು ? ॥ ೩೩ ॥ ಮಹಾಕಪಟಿಯೂ, ಪಾಪಿಯೂ, ನಿರ್ಲಜ್ಜನೂ, ಬ್ರಹ್ಮತೇಜವನ್ನು ನಾಶಮಾಡಿದವನೂ ಆದ ನಾನೆಲ್ಲಿ? ಭಗವಂತನ ಆ ಪರಮಮಂಗಲಮಯ 'ನಾರಾಯಣ' ನಾಮವೆಲ್ಲಿ? (ನಿಜವಾಗಿ ನಾನು ಕೃತಾರ್ಥನೇ ಆಗಿರುವೆನು.) ॥ ೩೪ ॥ ಈಗ ನಾನು ನನ್ನ ಮನಸ್ಸು, ಇಂದ್ರಿಯಗಳು ಮತ್ತು ಪ್ರಾಣಗಳನ್ನು ವಶಪಡಿಸಿಕೊಂಡು ಮತ್ತೆ ಘೋರವಾದ, ಅಂಧಕಾರಮಯವಾದ ನರಕದಲ್ಲಿ ಬೀಳದಂತೆ ಪ್ರಯತ್ನಿಸುವೆನು. ॥ ೩೫ ॥ ಅಜ್ಞಾನಕ್ಕೆ ವಶನಾದ ನಾನು ಶರೀರವನ್ನೇ ನಾನೆಂದು ತಿಳಿದು ಅದಕ್ಕಾಗಿ ದೊಡ್ಡ-ದೊಡ್ಡ ಕಾಮನೆಗಳನ್ನು ಮಾಡಿದೆ. ಅದನ್ನು ಪೂರ್ಣಗೊಳಿಸಲಿಕ್ಕಾಗಿ ಅನೇಕ ಕರ್ಮಗಳನ್ನು ಮಾಡಿದೆ. ಅದರ ಫಲವೇ ಈ ಬಂಧನವಾಗಿದೆ. ಈಗ ನಾನು ಇದನ್ನು ಹರಿದೊಗೆದು ಸಮಸ್ತ ಪ್ರಾಣಿಗಳ ಹಿತವನ್ನೇ ಮಾಡುವೆನು. ವಾಸನೆಗಳನ್ನು ಶಾಂತಗೊಳಿಸಿ, ಎಲ್ಲರೊಂದಿಗೆ ಮಿತ್ರರಂತೆ ವ್ಯವಹರಿಸುವೆನು. ದುಃಖಿತರ ಮೇಲೆ ದಯೆಗೈದು, ಪೂರ್ಣಸಂಯಮದೊಂದಿಗೆ ಇರುವೆನು. ॥ ೩೬॥ ಭಗವಂತನ ಮಾಯೆಯೇ ಸ್ತ್ರೀಯಾಗಿ ಅಧಮನಾದ ನನ್ನನ್ನು ಮೋಹಗೊಳಿಸಿತು ಹಾಗೂ ಕ್ರೀಡಾಮೃಗ (ಆಟದ ಪ್ರಾಣಿ) ದಂತೆ ನನ್ನನ್ನು ಕುಣಿಸಿತು. ಈಗ ನಾನು ಆ ಮಾಯೆಯಿಂದ ಬಿಡುಗಡೆ ಹೊಂದುವೆ. ॥ ೩೭ ॥ ಈಗ ನಾನು ಸದ್ವಸ್ತುವಾದ ಪರಮಾತ್ಮನನ್ನು ಗುರುತಿಸಿರುವೆನು. ಆದ್ದರಿಂದ ಇನ್ನು ನಾನು ಶರೀರಾದಿಗಳಲ್ಲಿ 'ನಾನು-ನನ್ನದು' ಎಂಬ ಭಾವವನ್ನು ತೊರೆದು, ಭಗವಂತನ ಕೀರ್ತನಾದಿಗಳಿಂದ ನನ್ನ ಮನಸ್ಸನ್ನು ಶುದ್ಧಗೊಳಿಸಿ ಅದನ್ನು ಭಗವಂತನಲ್ಲಿ ತೊಡಗಿಸುವೆನು ಎಂದು ಅವನು ಅಂದುಕೊಂಡನು. ॥ ೩೮ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ! ಭಗವಂತನ ಪಾರ್ಷದರಾದ ಆ ಮಹಾತ್ಮರ ಕ್ಷಣಕಾಲದ ಸತ್ಸಂಗದಿಂದಲೇ ಅಜಾಮಿಳನ ಚಿತ್ತದಲ್ಲಿ ತೀವ್ರವಾದ ವೈರಾಗ್ಯ ಉಂಟಾಗಿ, ಸಂಸಾರದ ಎಲ್ಲ ಸಂಬಂಧಗಳನ್ನೂ, ಮೋಹವನ್ನೂ ತೊರೆದು ಹರಿದ್ವಾರಕ್ಕೆ ಹೊರಟುಹೋದನು. ॥ ೩೯ ॥ ಆ ದೇವಭೂಮಿಯಾದ ಪವಿತ್ರಕ್ಷೇತ್ರಕ್ಕೆ ಹೋಗಿ ಅವನು ಒಂದು ಭಗವಂತನ ಮಂದಿರದಲ್ಲಿ ಯೋಗಾಸನದಲ್ಲಿ ಕುಳಿತು, ಯೋಗವನ್ನು ಆಚರಿಸುತ್ತಾ ತನ್ನ ಎಲ್ಲ ಇಂದ್ರಿಯಗಳನ್ನು ವಿಷಯಗಳಿಂದ ತೊಡೆದು, ಮನಸ್ಸನ್ನು ಬುದ್ಧಿಯಲ್ಲಿ ಸೇರಿಸಿ ಬಿಟ್ಟನು. ॥ ೪೦ ॥ ಅನಂತರ ಆತ್ಮಚಿಂತನೆಯಿಂದ ಬುದ್ಧಿಯನ್ನು ವಿಷಯಗಳಿಂದ ಬೇರ್ಪಡಿಸಿ, ಭಗವಂತನ ಧಾಮವಾದ ಅನುಭವಸ್ವರೂಪವಾದ ಪರಬ್ರಹ್ಮನಲ್ಲಿ ಸೇರಿಸಿಬಿಟ್ಟನು. ॥ ೪೧ ॥

ಯರ್ಹ್ಯುಪಾರತಧೀಸ್ತಸ್ಮಿನ್ನದ್ರಾಕ್ಷೀತ್ಪುರುಷಾನ್ ಪುರಃ ।
ಉಪಲಭ್ಯೋಪಲಬ್ಧಾನ್ ಪ್ರಾಗ್ವವಂದೇ ಶಿರಸಾ ದ್ವಿಜಃ ॥ ೪೨ ॥

ಹಿತ್ವಾ ಕಲೇವರಂ ತೀರ್ಥೇ ಗಂಗಾಯಾಂ ದರ್ಶನಾದನು ।
ಸದ್ಯಃ ಸ್ವರೂಪಂ ಜಗೃಹೇ ಭಗವತ್ಪಾರ್ಶ್ವವರ್ತಿನಾಮ್ ॥ ೪೩ ॥

ಸಾಕಂ ವಿಹಾಯಸಾ ವಿಪ್ರೋ ಮಹಾಪುರುಷಕಿಂಕರೈಃ ।
ಹೈಮಂ ವಿಮಾನಮಾರುಹ್ಯ ಯಯೌ ಯತ್ರ ಶ್ರಿಯಃ ಪತಿಃ ॥ ೪೪ ॥

ಏವಂ ಸ ವಿಪ್ಲಾವಿತಸರ್ವಧರ್ಮಾ
ದಾಸ್ಯಾಃ ಪತಿಃ ಪತಿತೋ ಗರ್ಹ್ಯಕರ್ಮಣಾ ।
ನಿಪಾತ್ಯಮಾನೋ ನಿರಯೇ ಹತವ್ರತಃ
ಸದ್ಯೋ ವಿಮುಕ್ತೋ ಭಗವನ್ನಾಮ ಗೃಹ್ಣನ್ ॥ ೪೫ ॥

ನಾತಃ ಪರಂ ಕರ್ಮನಿಬಂಧಕೃಂತನಂ
ಮುಮುಕ್ಷತಾಂ ತೀರ್ಥಪದಾನುಕೀರ್ತನಾತ್ ।
ನ ಯತ್ಪುನಃ ಕರ್ಮಸು ಸಜ್ಜತೇ ಮನೋ
ರಜಸ್ತಮೋಭ್ಯಾಂ ಕಲಿಲಂ ತತೋಽನ್ಯಥಾ ॥ ೪೬ ॥

ಯ ಏತಂ ಪರಮಂ ಗುಹ್ಯಮಿತಿಹಾಸಮಘಾಪಹಮ್ ।
ಶೃಣುಯಾಚ್ಛ್ರದ್ಧಯಾ ಯುಕ್ತೋ ಯಶ್ಚ ಭಕ್ತ್ಯಾನುಕೀರ್ತಯೇತ್ ॥ ೪೭ ॥

ನ ವೈ ಸ ನರಕಂ ಯಾತಿ ನೇಕ್ಷಿತೋ ಯಮಕಿಂಕರೈಃ ।
ಯದ್ಯಪ್ಯಮಂಗಲೋ ಮರ್ತ್ಯೋ ವಿಷ್ಣುಲೋಕೇ ಮಹೀಯತೇ ॥ ೪೮ ॥

ಮ್ರಿಯಮಾಣೋ ಹರೇರ್ನಾಮ ಗೃಣನ್ಪುತ್ರೋಪಚಾರಿತಮ್ ।
ಅಜಾಮಿಲೋಽಪ್ಯಗಾದ್ಧಾಮ ಕಿಂ ಪುನಃ ಶ್ರದ್ಧಯಾ ಗೃಣನ್ ॥ ೪೯ ॥

ಹೀಗೆ ಅಜಾಮಿಳನ ಬುದ್ಧಿಯು ತ್ರಿಗುಣಮಯ ಪ್ರಕೃತಿಯಿಂದ ಮೀರಿ ಭಗವಂತನ ಸ್ವರೂಪದಲ್ಲಿ ನೆಲೆಸಿದಾಗ, ಅವನು ಹಿಂದೆ ನೋಡಿದ ನಾಲ್ಕು ಪಾರ್ಷದರು ತನ್ನ ಇದಿರಿಗೆ ನಿಂತಿರುವುದನ್ನು ಕಂಡು ಅಜಾಮಿಳನು ತಲೆಬಾಗಿ ನಮಸ್ಕರಿಸಿದನು. ॥ ೪೨ ॥ ಅವರನ್ನು ದರ್ಶಿಸಿದ ಬಳಿಕ ಅವನು ಆ ತೀರ್ಥಕ್ಷೇತ್ರದ ಗಂಗಾತೀರದಲ್ಲಿ ತನ್ನ ಶರೀರವನ್ನು ತ್ಯಜಿಸಿದನು ಹಾಗೂ ಒಡನೆಯೇ ಭಗವಂತನ ಪಾರ್ಷದರ ಸ್ವರೂಪವನ್ನು ಪಡೆದುಕೊಂಡನು. ॥ ೪೩ ॥ ಅಜಾಮಿಳನು ಭಗವಂತನ ಪಾರ್ಷದರೊಂದಿಗೆ ಸ್ವರ್ಣಮಯ ವಿಮಾನದಲ್ಲಿ ಹತ್ತಿ ಆಕಾಶಮಾರ್ಗದಿಂದ ಭಗವಾನ್ ಲಕ್ಷ್ಮೀಪತಿಯ ನಿವಾಸಸ್ಥಾನವಾದ ವೈಕುಂಠವನ್ನು ಸೇರಿದನು. ॥ ೪೪ ॥

ಪರೀಕ್ಷಿದ್ರಾಜನೇ! ಅಜಾಮಿಳನು ದಾಸಿಯ ಸಹವಾಸ ಮಾಡಿ ಎಲ್ಲ ಧರ್ಮ-ಕರ್ಮಗಳನ್ನು ಹಾಳುಗೆಡವಿದ್ದನು. ಅವನು ತನ್ನ ನಿಂದ್ಯ ಕರ್ಮಗಳಿಂದ ಪತಿತನಾಗಿದ್ದನು. ನಿಯಮಗಳಿಂದ ಚ್ಯುತನಾದ ಕಾರಣ ಅವನೂ ನರಕಕ್ಕೆ ಬೀಳುವವನಿದ್ದನು. ಆದರೆ ಭಗವಂತನ ನಾಮವನ್ನು ಒಂದೇ ಬಾರಿ ಉಚ್ಚರಿಸಿ ಅವನು ಅದರಿಂದ ತತ್ ಕಾಲದಲ್ಲೇ ಮುಕ್ತನಾಗಿ ಹೋದನು. ॥ ೪೫ ॥ ಈ ಸಂಸಾರ ಬಂಧನದಿಂದ ಮುಕ್ತನಾಗಲು ಬಯಸುವವನಿಗೆ – ತನ್ನ ಚರಣ ಸ್ಪರ್ಶದಿಂದ ತೀರ್ಥಗಳಿಗೂ ತೀರ್ಥತ್ವವನ್ನು ಉಂಟು ಮಾಡುವ ಭಗವಂತನ ನಾಮಕ್ಕಿಂತ ಮಿಗಿಲಾದ ಯಾವ ಸಾಧನೆಯೂ ಇಲ್ಲ. ಏಕೆಂದರೆ, ನಾಮವನ್ನು ಆಶ್ರಯಿಸಿದ ಮನುಷ್ಯನ ಮನಸ್ಸು ಪುನಃ ಕರ್ಮಗಳ ಬಂಧನದಲ್ಲಿ ಬೀಳಲಾರದು. ಭಗವನ್ನಾಮವಲ್ಲದೆ ಬೇರೆ ಯಾವುದೇ ಪ್ರಾಯಶ್ಚಿತ್ತವನ್ನು ಆಶ್ರಯಿಸಿದ ಮೇಲೆಯೂ ಮನಸ್ಸು ರಜೋಗುಣ ಮತ್ತು ತಮೋಗುಣಗಳಿಂದ ಗ್ರಸ್ತವಾಗಿರುತ್ತದೆ ಹಾಗೂ ಸಮೂಲವಾಗಿ ಪಾಪಗಳೂ ನಾಶವಾಗುವುದಿಲ್ಲ. ॥ ೪೬ ॥

ಪರೀಕ್ಷಿತನೇ! ಈ ಇತಿಹಾಸವು ಅತ್ಯಂತ ಗೋಪ್ಯವೂ, ಸಮಸ್ತ ಪಾಪಗಳನ್ನು ನಾಶಮಾಡುವಂತಹುದೂ ಆಗಿದೆ. ಇದನ್ನು ಶ್ರದ್ಧಾ-ಭಕ್ತಿಗಳಿಂದ ಶ್ರವಣಿಸುವವನು, ಕೀರ್ತಿಸುವವನು ಎಂದಿಗೂ ನರಕಕ್ಕೆ ಹೋಗುವುದಿಲ್ಲ. ಯಮದೂತರು ಕಣ್ಣೆತ್ತಿಯೂ ಅವನನ್ನು ನೋಡಲಾರರು. ಅವನ ಜೀವನವು ಪಾಪಮಯವಾಗಿದ್ದರೂ ವೈಕುಂಠಲೋಕದಲ್ಲಿ ಅವನು ಪೂಜಿಸಲ್ಪಡುತ್ತಾನೆ. ॥ ೪೭-೪೮ ॥ ಎಲೈ ರಾಜನೇ! ನೋಡು! ಅಜಾಮಿಳನಂತಹ ಪಾಪಿಯು ಸಾಯುವಾಗ ತನ್ನ ಪುತ್ರನನ್ನು ಕೂಗುವ ನೆಪದಿಂದ ಭಗವಂತನ ನಾಮವನ್ನು ಉಚ್ಚರಿಸಿದನು. ಅವನಿಗೂ ವೈಕುಂಠದ ಪ್ರಾಪ್ತಿಯಾಗಿಹೋಯಿತು. ಹಾಗಿರುವಾಗ ಶ್ರದ್ಧೆಯಿಂದ ಭಗವನ್ನಾಮವನ್ನು ಉಚ್ಚರಿಸುವವರ ಕುರಿತು ಹೇಳುವುದೇನಿದೆ? ॥ ೪೯ ॥

ಎರಡನೆಯ ಅಧ್ಯಾಯವು ಮುಗಿಯಿತು. ॥ ೨ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಷಷ್ಠಸ್ಕಂಧೇ
ಅಜಾಮಿಲೋಪಾಖ್ಯಾನೇ ದ್ವಿತೀಯೋಽಧ್ಯಾಯಃ ॥ ೨ ॥

ಮೂರನೆಯ ಅಧ್ಯಾಯ

ಯಮ ಮತ್ತು ಯಮದೂತರ ಸಂವಾದ

ರಾಜೋವಾಚ

ನಿಶಮ್ಯ ದೇವಃ ಸ್ವಭಟೋಪವರ್ಣಿತಂ
ಪ್ರತ್ಯಾಹ ಕಿಂ ತಾನಪಿ ಧರ್ಮರಾಜಃ ।
ಏವಂ ಹತಾಜ್ಞೋ ವಿಹತಾನ್ಮುರಾರೇ-
ರ್ನೈದೇಶಿಕೈರ್ಯಸ್ಯ ವಶೇ ಜನೋಽಯಮ್ ॥ ೧ ॥

ಯಮಸ್ಯ ದೇವಸ್ಯ ನ ದಂಡಭಂಗಃ
ಕುತಶ್ಚನರ್ಷೇ ಶ್ರುತಪೂರ್ವ ಆಸೀತ್ ।
ಏತನ್ಮುನೇ ವೃಶ್ಚತಿ ಲೋಕಸಂಶಯಂ
ನ ಹಿ ತ್ವದನ್ಯ ಇತಿ ಮೇ ವಿನಿಶ್ಚಿತಮ್ ॥ ೨ ॥

ಶ್ರೀಶುಕ ಉವಾಚ

ಭಗವತ್ಪುರುಷೈ ರಾಜನ್ ಯಾಮ್ಯಾಃ ಪ್ರತಿಹತೋದ್ಯಮಾಃ ।
ಪತಿಂ ವಿಜ್ಞಾಪಯಾಮಾಸುರ್ಯಮಂ ಸಂಯಮನೀಪತಿಮ್ ॥ ೩ ॥

ಯಮದೂತಾ ಊಚುಃ

ಕತಿ ಸಂತೀಹ ಶಾಸ್ತಾರೋ ಜೀವಲೋಕಸ್ಯ ವೈ ಪ್ರಭೋ ।
ತ್ರೈವಿಧ್ಯಂ ಕುರ್ವತಃ ಕರ್ಮ ಫಲಾಭಿವ್ಯಕ್ತಿಹೇತವಃ ॥ ೪ ॥

ಯದಿ ಸ್ಯುರ್ಬಹವೋ ಲೋಕೇ ಶಾಸ್ತಾರೋ ದಂಡಧಾರಿಣಃ ।
ಕಸ್ಯ ಸ್ಯಾತಾಂ ನ ವಾ ಕಸ್ಯ ಮೃತ್ಯುಶ್ಚಾಮೃತಮೇವ ವಾ ॥ ೫ ॥

ಕಿಂತು ಶಾಸ್ತೃಬಹುತ್ವೇ ಸ್ಯಾದ್ಬಹೂನಾಮಿಹ ಕರ್ಮಿಣಾಮ್ ।
ಶಾಸ್ತೃತ್ವಮುಪಚಾರೋ ಹಿ ಯಥಾ ಮಂಡಲವರ್ತಿನಾಮ್ ॥ ೬ ॥

ಅತಸ್ತ್ವಮೇಕೋ ಭೂತಾನಾಂ ಸೇಶ್ವರಾಣಾಮಧೀಶ್ವರಃ ।
ಶಾಸ್ತಾ ದಂಡಧರೋ ನೃಣಾಂ ಶುಭಾಶುಭವಿವೇಚನಃ ॥ ೭ ॥

ತಸ್ಯ ತೇ ವಿಹಿತೋ ದಂಡೋ ನ ಲೋಕೇ ವರ್ತತೇಽಧುನಾ ।
ಚತುರ್ಭಿರದ್ಭುತೈಃ ಸಿದ್ಧೈರಾಜ್ಞಾ ತೇ ವಿಪ್ರಲಂಭಿತಾ ॥ ೮ ॥

ನೀಯಮಾನಂ ತವಾದೇಶಾದಸ್ಮಾಭಿರ್ಯಾತನಾಗೃಹಾನ್ ।
ವ್ಯಮೋಚಯನ್ಪಾತಕಿನಂ ಛಿತ್ತ್ವಾ ಪಾಶಾನ್ ಪ್ರಸಹ್ಯ ತೇ ॥ ೯ ॥

ಪರೀಕ್ಷಿದ್ರಾಜನು ಕೇಳಿದನು – ಮಹರ್ಷಿಗಳೇ! ದೇವದೇವನಾದ ಯಮಧರ್ಮರಾಜನ ವಶದಲ್ಲಿ ಎಲ್ಲ ಜೀವರು ಇರುವರು ಮತ್ತು ಭಗವಂತನ ಪಾರ್ಷದರು ಅವನ ಆಜ್ಞೆಯನ್ನು ಭಂಗಗೊಳಿಸಿದರು. ಅವನ ದೂತರನ್ನು ಅಪಮಾನ ಮಾಡಿದರು. ಯಮದೂತರು ಯಮಪುರಕ್ಕೆ ಹೋಗಿ ಅವನಲ್ಲಿ ಅಜಾಮಿಳನ ವೃತ್ತಾಂತವನ್ನು ಅರುಹಿದಾಗ ಎಲ್ಲವನ್ನು ಕೇಳಿ ಅವನು ತನ್ನ ದೂತರಿಗೆ ಏನು ಹೇಳಿದನು. ॥ ೧ ॥ ಋಷಿವರ್ಯರೇ! ಯಾರು ಎಂದಿಗೂ ಯಾವುದೇ ಕಾರಣದಿಂದ ಧರ್ಮರಾಜನ ಶಾಸನವನ್ನು ಉಲ್ಲಂಘಿಸಿದ ಮಾತನ್ನು ನಾನು ಮೊದಲು ಎಂದೂ ಕೇಳಿರಲಿಲ್ಲ. ಪೂಜ್ಯರೇ! ಈ ವಿಷಯದಲ್ಲಿ ಜನರು ತುಂಬಾ ಸಂದೇಹಪಡುವರು. ಅದನ್ನು ನಿವಾರಿಸುವವರು ನೀವಲ್ಲದೆ ಬೇರೆ ಯಾರೂ ಇರಲಾರರೆಂದೇ ನನ್ನ ನಿಶ್ಚಯವು. ॥ ೨ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ –ಪರೀಕ್ಷಿದ್ರಾಜನೇ! ಭಗವಂತನ ಪಾರ್ಷದರು ಯಮದೂತರ ಪ್ರಯತ್ನವನ್ನು ವಿಫಲಗೊಳಿಸಿದಾಗ ಅವರು ಸಂಯಮನಿಪುರದೊಡೆಯನೂ, ತಮ್ಮ ಶಾಸಕನೂ ಆದ ಯಮರಾಜನ ಬಳಿಗೆ ಹೋಗಿ ಹೀಗೆ ನಿವೇದಿಸಿಕೊಂಡರು. ॥ ೩ ॥

ಯಮದೂತರು ಹೇಳಿದರು – ಸ್ವಾಮಿ! ಪ್ರಪಂಚದ ಜೀವರು – ಪಾಪ, ಪುಣ್ಯ ಅಥವಾ ಎರಡರಿಂದಲೂ ಮಿಶ್ರವಾದ ಮೂರು ರೀತಿಯ ಕರ್ಮಗಳನ್ನು ಮಾಡುತ್ತಿದ್ದಾರೆ. ಈ ಜೀವಿಗಳಿಗೆ ಆ ಕರ್ಮಗಳ ಫಲವನ್ನು ಕೊಡುವ ಶಾಸಕರು ಪ್ರಪಂಚದಲ್ಲಿ ಎಷ್ಟು ಜನರಿದ್ದಾರೆ? ॥ ೪ ॥ ಜಗತ್ತಿನಲ್ಲಿ ದಂಡನೆ ಕೊಡುವವರು ಬಹಳಷ್ಟು ಶಾಸಕರು ಇರುವುದಾದರೆ ಯಾರಿಗೆ ಸುಖ ಸಿಗುವುದು, ಯಾರಿಗೆ ದುಃಖ – ಇದರ ವ್ಯವಸ್ಥೆ ಒಂದೇ ರೀತಿಯಾಗಿರಲಾರದು. ॥ ೫ ॥ ಪ್ರಪಂಚದಲ್ಲಿ ಕರ್ಮಮಾಡುವವರು ಅನೇಕರಿರುವ ಕಾರಣ, ಅವರ ಶಾಸಕರೂ ಅನೇಕರಾದರೆ ಆ ಶಾಸಕರ ಶಾಸನವು ಹೆಸರಿಗಷ್ಟೇ ಆಗುವುದು. ಒಬ್ಬ ಸಾಮ್ರಾಟನ ಅಧೀನದಲ್ಲಿ ಬಹಳಷ್ಟು ಜನರು ಹೆಸರಿಗಷ್ಟೇ ಸಾಮಂತರಿರುವಂತೆಯೇ ಆಗಿದೆ. ॥ ೬ ॥ ಆದರೆ ನೀವೊಬ್ಬರೇ ಸಮಸ್ತ ಪ್ರಾಣಿಗಳಿಗೆ ಮತ್ತು ಅವರ ಒಡೆಯರಿಗೆ ಅಧೀಶ್ವರರಾಗಿರುವಿರಿ ಎಂದು ನಾವು ತಿಳಿಯುತ್ತೇವೆ. ನೀವೇ ಮನುಷ್ಯರ ಪಾಪ ಮತ್ತು ಪುಣ್ಯಗಳ ನಿರ್ಣಾಯಕ ದಂಡವನ್ನು ಕೊಡುವವರು ಹಾಗೂ ಶಾಸಕರೂ ಆಗಿರುವಿರಿ. ॥ ೭ ॥ ಪ್ರಭುಗಳೇ! ಪ್ರಪಂಚದಲ್ಲಿ ಇಂದಿನವರೆಗೆ ಎಲ್ಲಿಯೂ ತಾವು ನಿಯಮಿಸಿದ ದಂಡನೆಯನ್ನು ಯಾರೂ ಅವಹೇಳನ ಮಾಡಿರಲಿಲ್ಲ. ಆದರೆ ಈಗ ನಾಲ್ವರು ಅದ್ಭುತ ಸಿದ್ಧರು ನಿಮ್ಮ ಆಜ್ಞೆಯನ್ನು ಉಲ್ಲಂಘಿಸಿರುವರು. ॥ ೮ ॥ ಸ್ವಾಮಿ! ನಿಮ್ಮ ಆಜ್ಞೆಯಂತೆ ನಾವು ಒಬ್ಬ ಪಾಪಿಯನ್ನು ಯಾತನಾಗೃಹವಾದ ನರಕಕ್ಕೆ ಕೊಂಡುಹೋಗುತ್ತಿದ್ದೆವು. ಆದರೆ ಅವರು ಬಲವಂತವಾಗಿ ನಿಮ್ಮ ಪಾಶವನ್ನು ತುಂಡರಿಸಿ ಅವನನ್ನು ಬಿಡಿಸಿದರು. ॥ ೯ ॥

ತಾಂಸ್ತೇ ವೇದಿತುಮಿಚ್ಛಾಮೋ
  ಯದಿ ನೋ ಮನ್ಯಸೇ ಕ್ಷಮಮ್ ।
ನಾರಾಯಣೇತ್ಯಭಿಹಿತೇ
  ಮಾ ಭೈರಿತ್ಯಾಯಯುರ್ದ್ರುತಮ್ ॥ ೧೦ ॥

ಇದರ ರಹಸ್ಯವನ್ನು ನಾವು ನಿಮ್ಮಿಂದ ತಿಳಿಯಲು ಇಚ್ಛಿಸುವೆವು. ನೀವು ನಮ್ಮನ್ನು ಕೇಳುವ ಅಧಿಕಾರಿಗಳೆಂದು ತಿಳಿದರೆ ಹೇಳಿರಿ. ಪ್ರಭೋ! ಅಜಾಮಿಳನ ಬಾಯಿಂದ 'ನಾರಾಯಣ' ಎಂಬ ಶಬ್ದ ಹೊರಡುತ್ತಲೇ ಅತ್ತಕಡೆಯಿಂದ ಅವರು 'ಹೆದರಬೇಡ! ಹೆದರಬೇಡ!' ಎಂದು ಹೇಳುತ್ತಾ ಅಲ್ಲಿಗೆ ಬಂದುಬಿಟ್ಟರು. ಎಂತಹ ಆಶ್ಚರ್ಯವಿದು! ॥ ೧೦ ॥

ಶ್ರೀಶುಕ ಉವಾಚ

ಇತಿ ದೇವಃ ಸ ಆಪೃಷ್ಟಃ ಪ್ರಜಾಸಂಯಮನೋ ಯಮಃ ।
ಪ್ರೀತಃ ಸ್ವದೂತಾನ್ ಪ್ರತ್ಯಾಹ ಸ್ಮರನ್ಪಾದಾಂಬುಜಂ ಹರೇಃ ॥ ೧೧ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಎಲೈ ರಾಜನೇ! ದೂತರು ಹೀಗೆ ಪ್ರಶ್ನಿಸಿದಾಗ ದೇವಶಿರೋಮಣಿ ಪ್ರಜಾಶಾಸಕನಾದ ಭಗವಾನ್ ಯಮಧರ್ಮನು ಪ್ರಸನ್ನನಾಗಿ ಶ್ರೀಹರಿಯ ಚರಣಕಮಲಗಳನ್ನು ಸ್ಮರಿಸುತ್ತಾ ಅವರಿಗೆ ಹೀಗೆಂದನು – ॥ ೧೧ ॥

ಯಮ ಉವಾಚ

ಪರೋ ಮದನ್ಯೋ ಜಗತಸ್ತಸ್ಥುಷಶ್ಚ
  ಓತಂ ಪ್ರೋತಂ ಪಟವದ್ಯತ್ರ ವಿಶ್ವಮ್ ।
ಯದಂಶತೋಽಸ್ಯ ಸ್ಥಿತಿಜನ್ಮನಾಶಾ
  ನಸ್ಯೋತವದ್ಯಸ್ಯ ವಶೇ ಚ ಲೋಕಃ ॥ ೧೨ ॥

ಯೋ ನಾಮಭಿರ್ವಾಚಿ ಜನಾನ್ನಿಜಾಯಾಂ
  ಬಧ್ನಾತಿ ತಂತ್ರ್ಯಾಮಿವ ದಾಮಭಿರ್ಗಾಃ ।
ಯಸ್ಮೈ ಬಲಿಂ ತ ಇಮೇ ನಾಮಕರ್ಮ-
  ನಿಬಂಧಬದ್ಧಾಶ್ಚಕಿತಾ ವಹಂತಿ ॥ ೧೩ ॥

ಅಹಂ ಮಹೇಂದ್ರೋ ನಿರ್ಋತಿಃ ಪ್ರಚೇತಾಃ
  ಸೋಮೋಽಗ್ನಿರೀಶಃ ಪವನೋಽರ್ಕೋ ವಿರಿಂಚಿಃ ।
ಆದಿತ್ಯವಿಶ್ವೇ ವಸವೋಽಥ ಸಾಧ್ಯಾ
  ಮರುದ್ಗಣಾ ರುದ್ರಗಣಾಃ ಸಸಿದ್ಧಾಃ ॥ ೧೪ ॥

ಅನ್ಯೇ ಚ ಯೇ ವಿಶ್ವಸೃಜೋಽಮರೇಶಾ
  ಭೃಗ್ವಾದಯೋಽಸ್ಪೃಷ್ಟರಜಸ್ತಮಸ್ಕಾಃ ।
ಯಸ್ಯೇಹಿತಂ ನ ವಿದುಃ ಸ್ಪೃಷ್ಟಮಾಯಾಃ
  ಸತ್ತ್ವಪ್ರಧಾನಾ ಅಪಿ ಕಿಂ ತತೋಽನ್ಯೇ ॥ ೧೫ ॥

ಯಂ ವೈ ನ ಗೋಭಿರ್ಮನಸಾಸುಭಿರ್ವಾ
  ಹೃದಾ ಗಿರಾ ವಾಸುಭೃತೋ ವಿಚಕ್ಷತೇ ।
ಆತ್ಮಾನಮಂತರ್ಹೃದಿ ಸಂತಮಾತ್ಮನಾಂ
  ಚಕ್ಷುರ್ಯಥೈವಾಕೃತಯಸ್ತತಃ ಪರಮ್ ॥ ೧೬ ॥

ಯಮಧರ್ಮರಾಜನು ಹೇಳುತ್ತಾನೆ – ಎಲೈ ದೂತರೇ! ಈ ಚರಾಚರ ಜಗತ್ತಿಗೆಲ್ಲಾ ಮಹಾಪ್ರಭುವಾದವನು ನನಗಿಂತಲೂ ಬೇರೊಬ್ಬನಿದ್ದಾನೆ. ಅವನಲ್ಲಿಯೇ ಈ ಇಡೀ ಜಗತ್ತು – ವಸ್ತ್ರದಲ್ಲಿ ನೂಲು ಹಾಸು-ಹೊಕ್ಕಾಗಿರುವಂತೆ ಪೋಣಿಸಲ್ಪಟ್ಟಿದೆ. ಅವನ ಅಂಶರೇ ಆದ ಬ್ರಹ್ಮಾ ವಿಷ್ಣು ಮಹೇಶ್ವರ ಇವರು ಈ ಜಗತ್ತಿನ ಉತ್ಪತ್ತಿ, ಸ್ಥಿತಿ, ಪ್ರಳಯವನ್ನು ಮಾಡುತ್ತಾರೆ. ಅವನೇ ಈ ಇಡೀ ಜಗತ್ತನ್ನು ಮೂಗುದಾರ ಹಾಕಿದ ಎತ್ತಿನಂತೆ ತನ್ನ ಅಧೀನದಲ್ಲಿರಿಸಿಕೊಂಡಿರುವನು. ॥ ೧೨ ॥ ನನ್ನ ಪ್ರೀತಿಯ ದೂತರೇ! ರೈತನು ತನ್ನ ಎತ್ತುಗಳನ್ನು ಮೊದಲು ಸಣ್ಣ-ಸಣ್ಣ ಹಗ್ಗಗಳಲ್ಲಿ ಕಟ್ಟಿ, ಆ ಹಗ್ಗಗಳನ್ನು ಒಂದು ದೊಡ್ಡ ಹಗ್ಗಕ್ಕೆ ಕಟ್ಟುವಂತೆಯೇ ಜಗದೀಶನಾದ ಭಗವಂತನೂ ಕೂಡ ಬ್ರಾಹ್ಮಣಾದಿ ವರ್ಣಗಳು, ಬ್ರಹ್ಮಚರ್ಯಾದಿ ಆಶ್ರಮಗಳೆಂಬ ಸಣ್ಣ-ಸಣ್ಣ ನಾಮಗಳೆಂಬ ಹಗ್ಗಗಳಿಂದ ಕಟ್ಟಿ ಮತ್ತೆ ಎಲ್ಲ ನಾಮಗಳನ್ನು ವೇದರೂಪವಾದ ದೊಡ್ಡ ಹಗ್ಗದಲ್ಲಿ ಕಟ್ಟಿ ಇಟ್ಟಿರುವನು. ಹೀಗೆ ಎಲ್ಲ ಜೀವರು ನಾಮ ಮತ್ತು ಕರ್ಮರೂಪವಾದ ಬಂಧನದಲ್ಲಿ ಬಿಗಿಯಲ್ಪಟ್ಟು ಭಯಗೊಂಡು, ಅವನಿಗೆ ತಮ್ಮ ಸರ್ವಸ್ವವನ್ನು ಕಾಣಿಕೆಯಾಗಿ ಅರ್ಪಿಸುತ್ತಾರೆ. ॥ ೧೩ ॥ ದೂತರೇ! ನಾನು, ಇಂದ್ರ, ನಿರ್ಋತಿ, ವರುಣ, ಚಂದ್ರ, ಅಗ್ನಿ, ಶಂಕರ, ವಾಯು, ಸೂರ್ಯ, ಬ್ರಹ್ಮಾ, ಹನ್ನೆರಡು ಆದಿತ್ಯರು, ವಿಶ್ವೇದೇವತೆಗಳು, ಎಂಟು ವಸುಗಳು, ಸಾಧ್ಯರು, ನಲವತ್ತೊಂಭತ್ತು ಮರುದ್ದೇವತೆಗಳು, ಸಿದ್ಧರು, ಹನ್ನೊಂದು ರುದ್ರರು, ರಜೋಗುಣ ಹಾಗೂ ತಮೋಗುಣಗಳಿಂದ ರಹಿತರಾದ ಭೃಗುವೇ ಮುಂತಾದ ಪ್ರಜಾಪತಿಗಳು, ದೊಡ್ಡ- ದೊಡ್ಡ ದೇವತೆಗಳು – ಹೀಗೆ ಎಲ್ಲರೂ ಸತ್ತ್ವಪ್ರಧಾನರಾಗಿದ್ದರೂ ಅವನ ಮಾಯೆಗೆ ಅಧೀನರಾಗಿದ್ದಾರೆ. ಭಗವಂತನು ಎಂದು ಏನು ಮಾಡಲು ಬಯಸುವನೋ ಇದನ್ನು ತಿಳಿಯಲಾರರು. ಹಾಗಿರುವಾಗ ಬೇರೆಯವರ ಮಾತಾದರೂ ಏನಿದೆ? ॥ ೧೪-೧೫ ॥ ದೂತರೇ! ಮಡಿಕೆ, ಕುಡಿಕೆ, ಬಟ್ಟೆಗಳೇ ಮುಂತಾದ ರೂಪವುಳ್ಳ ಪದಾರ್ಥಗಳು ತನ್ನ ಪ್ರಕಾಶಕವಾದ ಕಣ್ಣನ್ನು ನೋಡಲಾರವೋ ಹಾಗೆಯೇ ಅಂತಃಕರಣದಲ್ಲಿ ತನಗೆ ಸಾಕ್ಷಿರೂಪವಾಗಿರುವ ಪರಮಾತ್ಮನನ್ನು ಯಾವುದೇ ಪ್ರಾಣಿಯು ಇಂದ್ರಿಯ, ಮನ, ಪ್ರಾಣ, ಹೃದಯ ಅಥವಾ ವಾಣಿ ಮುಂತಾದ ಯಾವುದೇ ಸಾಧನೆಯಿಂದ ತಿಳಿಯಲಾರರು. ॥ ೧೬ ॥

ಸ್ವಾಯತ್ತತಂತ್ರಸ್ಯ ಹರೇರಧೀಶಿತುಃ
ಪರಸ್ಯ ಮಾಯಾಧಿಪತೇರ್ಮಹಾತ್ಮನಃ ।
ಪ್ರಾಯೇಣ ದೂತಾ ಇಹ ವೈ ಮನೋಹರಾ-
ಶ್ಚರಂತಿ ತದ್ರೂಪಗುಣಸ್ವಭಾವಾಃ ॥ ೧೭ ॥

ಆ ಪ್ರಭುವು ಎಲ್ಲರ ಸ್ವಾಮಿ ಹಾಗೂ ಸ್ವತಃ ಪರಮ ಸ್ವತಂತ್ರನಾಗಿದ್ದಾನೆ. ಅದೇ ಮಾಯಾಪತಿ ಪುರುಷೋತ್ತಮನ ದೂತರು ಆತನಂತೆಯೇ ಪರಮ ಮನೋಹರ ರೂಪ, ಗುಣ, ಮತ್ತು ಸ್ವಭಾವದಿಂದ ಸಂಪನ್ನರಾಗಿ ಈ ಲೋಕದಲ್ಲಿ ಸಾಮಾನ್ಯವಾಗಿ ವಿಚರಿಸುತ್ತಿರುವರು. ॥ ೧೭ ॥

ಭೂತಾನಿ ವಿಷ್ಣೋಃ ಸುರಪೂಜಿತಾನಿ
ದುರ್ದರ್ಶಲಿಂಗಾನಿ ಮಹಾದ್ಭುತಾನಿ ।
ರಕ್ಷಂತಿ ತದ್ಭಕ್ತಿಮತಃ ಪರೇಭ್ಯೋ
ಮತ್ತಶ್ಚ ಮರ್ತ್ಯಾನಥ ಸರ್ವತಶ್ಚ ॥ ೧೮ ॥

ಭಗವಾನ್ ವಿಷ್ಣುವಿನ ಸುರಪೂಜಿತ ಹಾಗೂ ಪರಮ ಅಲೌಕಿಕ ಪಾರ್ಷದರ ದರ್ಶನವೂ ತುಂಬಾ ದುರ್ಲಭವಾಗಿದೆ. ಅವರು ಭಗವಂತನ ಭಕ್ತರನ್ನು ಅವರ ಶತ್ರುಗಳಿಂದ, ನನ್ನಿಂದ ಮತ್ತು ಅಗ್ನಿಯೇ ಮುಂತಾದ ಎಲ್ಲ ಆಪತ್ತುಗಳಿಂದ ಸದಾಕಾಲ ಸುರಕ್ಷಿತವಾಗಿಡುತ್ತಾರೆ. ॥ ೧೮ ॥

ಧರ್ಮಂ ತು ಸಾಕ್ಷಾದ್ಭಗವತ್ಪ್ರಣೀತಂ
ನ ವೈ ವಿದುರ್ಋಷಯೋ ನಾಪಿ ದೇವಾಃ ।
ನ ಸಿದ್ಧಮುಖ್ಯಾ ಅಸುರಾ ಮನುಷ್ಯಾಃ
ಕುತಶ್ಚ ವಿದ್ಯಾಧರಚಾರಣಾದಯಃ ॥ ೧೯ ॥

ಸಾಕ್ಷಾತ್ ಭಗವಂತನೇ ನಿರ್ಮಾಣಮಾಡಿದ ಧರ್ಮದ ಮರ್ಯಾದೆಯನ್ನು ಋಷಿಗಳಾಗಲೀ, ದೇವತೆಗಳಾಗಲೀ, ಸಿದ್ಧರಾಗಲೀ ಯಾರೂ ಅರಿಯಲಾರರು. ಹೀಗಿರುವಾಗ ಮನುಷ್ಯರು, ವಿದ್ಯಾಧರರು, ಚಾರಣರು ಮತ್ತು ಅಸುರರೇ ಮುಂತಾದವರು ಹೇಗೆ ಅರಿಯಬಲ್ಲರು? ॥ ೧೯ ॥

ಸ್ವಯಂಭೂರ್ನಾರದಃ ಶಂಭುಃ ಕುಮಾರಃ ಕಪಿಲೋ ಮನುಃ ।
ಪ್ರಹ್ಲಾದೋ ಜನಕೋ ಭೀಷ್ಮೋ ಬಲಿರ್ವೈಯಾಸಕಿರ್ವಯಮ್ ॥ ೨೦ ॥

ದ್ವಾದಶೈತೇ ವಿಜಾನೀಮೋ ಧರ್ಮಂ ಭಾಗವತಂ ಭಟಾಃ ।
ಗುಹ್ಯಂ ವಿಶುದ್ಧಂ ದುರ್ಬೋಧಂ ಯಂ ಜ್ಞಾತ್ವಾಮೃತಮಶ್ನುತೇ ॥ ೨೧ ॥

ಭಗವಂತನಿಂದ ನಿರ್ಮಿತವಾದ ಭಾಗವತಧರ್ಮವು ಪರಮಶುದ್ಧವೂ, ಅತ್ಯಂತ ಗೋಪ್ಯವೂ ಆಗಿದೆ. ಅದನ್ನು ತಿಳಿಯುವುದು ಅತಿಕಷ್ಟವಾಗಿದೆ. ಅದನ್ನು ತಿಳಿದವನು ಭಗವದ್ರೂಪವನ್ನು ಹೊಂದುವನು. ದೂತರೇ! ಭಾಗವತಧರ್ಮದ ರಹಸ್ಯವನ್ನು – ಬ್ರಹ್ಮದೇವರು, ದೇವರ್ಷಿ ನಾರದರು, ಭಗವಾನ್ ಶಂಕರನು, ಸನತ್ಕುಮಾರನು, ಕಪಿಲದೇವರು, ಸ್ವಾಯಂಭುವ ಮನುವು, ಪ್ರಹ್ಲಾದನು, ಜನಕ ಮಹಾರಾಜನು, ಭೀಷ್ಮಪಿತಾಮಹನು, ಬಲಿಚಕ್ರವರ್ತಿಯೂ, ಶುಕಮಹರ್ಷಿಗಳು ಮತ್ತು ಯಮಧರ್ಮನಾದ ನಾನು – ಹೀಗೆ ಈ ಹನ್ನೆರಡು ಮಂದಿ ಮಾತ್ರವೇ ತಿಳಿದಿರುವೆವು. ॥ ೨೦-೨೧ ॥

ಏತಾವಾನೇವ ಲೋಕೇಽಸ್ಮಿನ್ ಪುಂಸಾಂ ಧರ್ಮಃ ಪರಃ ಸ್ಮೃತಃ ।
ಭಕ್ತಿಯೋಗೋ ಭಗವತಿ ತನ್ನಾಮಗ್ರಹಣಾದಿಭಿಃ ॥ ೨೨ ॥

ಈ ಜಗತ್ತಿನಲ್ಲಿ ಜೀವರಿಗಾಗಿ ನಾಮ-ಕೀರ್ತನಾದಿ ಉಪಾಯಗಳಿಂದ ಭಗವಂತನ ಚರಣಗಳಲ್ಲಿ ಭಕ್ತಿಭಾವವನ್ನು ಪಡೆದುಕೊಳ್ಳುವುದೇ ಎಲ್ಲಕ್ಕಿಂತ ದೊಡ್ಡ ಕರ್ತವ್ಯವೂ, ಪರಮಧರ್ಮವೂ ಆಗಿದೆ. ॥ ೨೨ ॥

ನಾಮೋಚ್ಚಾರಣಮಾಹಾತ್ಮ್ಯಂ ಹರೇಃ ಪಶ್ಯತ ಪುತ್ರಕಾಃ ।
ಅಜಾಮಿಲೋಽಪಿ ಯೇನೈವ ಮೃತ್ಯುಪಾಶಾದಮುಚ್ಯತ ॥ ೨೩ ॥

ಪ್ರಿಯ ದೂತರೇ! ಭಗವಂತನ ನಾಮೋಚ್ಚಾರಣೆಯ ಮಹಿಮೆಯನ್ನಾದರೋ ನೋಡಿರಿ! ಅಜಾಮಿಳನಂತಹ ಪಾಪಿಯು ಒಂದು ಬಾರಿ ನಾಮೋಚ್ಚಾರಣೆ ಮಾಡಿದ್ದರಿಂದಲೇ ಮೃತ್ಯುಪಾಶದಿಂದ ಬಿಡುಗಡೆ ಹೊಂದಿದನು. ॥ ೨೩ ॥

ಏತಾವತಾಲಮಘನಿರ್ಹರಣಾಯ ಪುಂಸಾಂ
ಸಂಕೀರ್ತನಂ ಭಗವತೋ ಗುಣಕರ್ಮನಾಮ್ನಾಮ್ ।
ವಿಕ್ರುಶ್ಯ ಪುತ್ರಮಘವಾನ್ಯದಜಾಮಿಲೋಽಪಿ
ನಾರಾಯಣೇತಿ ಮ್ರಿಯಮಾಣ ಇಯಾಯ ಮುಕ್ತಿಮ್ ॥ ೨೪ ॥

ಭಗವಂತನ ಗುಣ, ಲೀಲೆ ಮತ್ತು ನಾಮಗಳ ಚೆನ್ನಾದ ಕೀರ್ತನೆಯು ಮನುಷ್ಯರ ಪಾಪಗಳನ್ನು ಪೂರ್ಣವಾಗಿ ನಾಶಮಾಡುವುದು ಇದೇನೋ ಅದರ ಬಹುದೊಡ್ಡ ಫಲವಲ್ಲ. ಏಕೆಂದರೆ, ಅತ್ಯಂತ ಪಾಪಿಯಾದ ಅಜಾಮಿಳನು ಮರಣಕಾಲದಲ್ಲಿ ಚಂಚಲಚಿತ್ತದಿಂದ ತನ್ನ ಮಗನ ಹೆಸರು 'ನಾರಾಯಣ' ಎಂದು ಉಚ್ಚರಿಸಿದನು. ಈ ನಾಮಾಭಾಸಮಾತ್ರದಿಂದಲೇ ಅವನ ಎಲ್ಲ ಪಾಪಗಳು ಕ್ಷೀಣಿಸಿ, ಅವನು ಮೋಕ್ಷವನ್ನೇ ಪಡೆದುಕೊಂಡನು. ॥ ೨೪ ॥

ಪ್ರಾಯೇಣ ವೇದ ತದಿದಂ ನ ಮಹಾಜನೋಽಯಂ
ದೇವ್ಯಾ ವಿಮೋಹಿತಮತಿರ್ಬತ ಮಾಯಯಾಲಮ್ ।
ತ್ರಯ್ಯಾಂ ಜಡೀಕೃತಮತಿರ್ಮಧುಪುಷ್ಪಿತಾಯಾಂ
ವೈತಾನಿಕೇ ಮಹತಿ ಕರ್ಮಣಿ ಯುಜ್ಯಮಾನಃ ॥ ೨೫ ॥

ದೊಡ್ಡ-ದೊಡ್ಡ ವಿದ್ವಾಂಸರ ಬುದ್ಧಿಯೂ ಕೆಲವೊಮ್ಮೆ ಭಗವಂತನ ಮಾಯೆಯಿಂದ ಮೋಹಿತವಾಗುತ್ತದೆ. ಅವರು ಕರ್ಮಗಳ ಸಿಹಿ ಯಾದ ಫಲಗಳನ್ನು ವರ್ಣಿಸುವ ಅರ್ಥರೂಪವಾದ ವೇದವಾಣಿಯಲ್ಲೇ ಮೋಹಿತರಾಗುತ್ತಾರೆ ಮತ್ತು ಯಜ್ಞ-ಯಾಗಾದಿ ದೊಡ್ಡ-ದೊಡ್ಡ ಕರ್ಮಗಳಲ್ಲೇ ಮುಳುಗಿರುತ್ತಾರೆ. ಈ ಅತಿಸುಗಮವಾದ ಭಗವನ್ನಾಮದ ಮಹಿಮೆಯನ್ನು ತಿಳಿಯುವುದೇ ಇಲ್ಲ. ಇದು ಎಂತಹ ಖೇದದ ವಿಷಯ? ॥ ೨೫ ॥

ಏವಂ ವಿಮೃಶ್ಯ ಸುಧಿಯೋ ಭಗವತ್ಯನಂತೇ
ಸರ್ವಾತ್ಮನಾ ವಿದಧತೇ ಖಲು ಭಾವಯೋಗಮ್ ।
ತೇ ಮೇ ನ ದಂಡಮರ್ಹಂತ್ಯಥ ಯದ್ಯಮೀಷಾಂ
ಸ್ಯಾತ್ಪಾತಕಂ ತದಪಿ ಹಂತ್ಯುರುಗಾಯವಾದಃ ॥ ೨೬ ॥

ತೇ ದೇವಸಿದ್ಧಪರಿಗೀತಪವಿತ್ರಗಾಥಾ
ಯೇ ಸಾಧವಃ ಸಮದೃಶೋ ಭಗವತ್ಪ್ರಪನ್ನಾಃ ।
ತಾನ್ ನೋಪಸೀದತ ಹರೇರ್ಗದಯಾಭಿಗುಪ್ತಾನ್
ನೈಷಾಂ ವಯಂ ನ ಚ ವಯಃ ಪ್ರಭವಾಮ ದಂಡೇ ॥ ೨೭ ॥

ತಾನಾನಯಧ್ವಮಸತೋ ವಿಮುಖಾನ್ಮುಕುಂದ-
ಪಾದಾರವಿಂದಮಕರಂದರಸಾದಜಸ್ರಮ್ ।
ನಿಷ್ಕಿಂಚನೈಃ ಪರಮಹಂಸಕುಲೈ ರಸಜ್ಞೈ-
ರ್ಜುಷ್ಟಾದ್ಗೃಹೇ ನಿರಯವರ್ತ್ಮನಿ ಬದ್ಧತೃಷ್ಣಾನ್ ॥ ೨೮ ॥

ಜಿಹ್ವಾ ನ ವಕ್ತಿ ಭಗವದ್ಗುಣನಾಮಧೇಯಂ
ಚೇತಶ್ಚ ನ ಸ್ಮರತಿ ತಚ್ಚರಣಾರವಿಂದಮ್ ।
ಕೃಷ್ಣಾಯ ನೋ ನಮತಿ ಯಚ್ಛಿರ ಏಕದಾಪಿ
ತಾನಾನಯಧ್ವಮಸತೋಽಕೃತವಿಷ್ಣುಕೃತ್ಯಾನ್ ॥ ೨೯ ॥

ತತ್ಕ್ಷಮ್ಯತಾಂ ಸ ಭಗವಾನ್ಪುರುಷಃ ಪುರಾಣೋ
ನಾರಾಯಣಃ ಸ್ವಪುರುಷೈರ್ಯದಸತ್ಕೃತಂ ನಃ ।
ಸ್ವಾನಾಮಹೋ ನ ವಿದುಷಾಂ ರಚಿತಾಂಜಲೀನಾಂ
ಕ್ಷಾಂತಿರ್ಗರೀಯಸಿ ನಮಃ ಪುರುಷಾಯ ಭೂಮ್ನೇ ॥ ೩೦ ॥

ತಸ್ಮಾತ್ ಸಂಕೀರ್ತನಂ ವಿಷ್ಣೋರ್ಜಗನ್ಮಂಗಲಮಂಹಸಾಮ್ ।
ಮಹತಾಮಪಿ ಕೌರವ್ಯ ವಿದ್ಧ್ಯೈಕಾಂತಿಕನಿಷ್ಕೃತಿಮ್ ॥ ೩೦ ॥

ಪ್ರಿಯದೂತರೇ! ಬುದ್ಧಿವಂತರಾದ ಮನುಷ್ಯರು ಹೀಗೆ ವಿಚಾರಮಾಡಿ ಭಗವಾನ್ ಅನಂತನಲ್ಲೇ ಪೂರ್ಣ ಅಂತಃಕರಣದಿಂದ ತಮ್ಮ ಭಕ್ತಿಭಾವವನ್ನು ನೆಲೆಗೊಳಿಸುವರು. ಅವರು ನನ್ನ ದಂಡನೆಗೆ ಪಾತ್ರರಾಗುವುದಿಲ್ಲ. ಅಂತಹವರು ಪಾಪವನ್ನು ಮಾಡುವುದೇ ಇಲ್ಲ. ಆದರೂ ಕೆಲವು ವೇಳೆ ಆಕಸ್ಮಾತ್ತಾಗಿ ಯಾವುದಾದರೂ ಪಾಪವು ನಡೆದರೂ, ಅದನ್ನು ಭಗವಂತನ ಗುಣಗಾನದಿಂದ ಒಡನೆಯೇ ನಾಶಮಾಡಿ ಬಿಡುವರು. ॥ ೨೬ ॥ ಸಮದರ್ಶಿ ಸಾಧುಗಳು ಭಗವಂತನನ್ನೇ ತಮ್ಮ ಸಾಧ್ಯ ಮತ್ತು ಸಾಧನೆ ಎಂದು ತಿಳಿದುಕೊಂಡು ಅವನನ್ನೇ ಅವಲಂಬಿಸಿ ಇರುತ್ತಾರೆ. ದೊಡ್ಡ-ದೊಡ್ಡ ದೇವತೆಗಳೂ, ಸಿದ್ಧರೂ ಕೂಡ ಅವರ ಪವಿತ್ರ ಚರಿತ್ರೆಯನ್ನು ಪ್ರೇಮದಿಂದ ಹಾಡುತ್ತಾ ಇರುತ್ತಾರೆ. ನನ್ನ ದೂತರಿರಾ! ಭಗವಂತನ ಗದೆಯು ಅವರನ್ನು ಸದಾಕಾಲ ರಕ್ಷಿಸುತ್ತಾ ಇರುತ್ತದೆ. ಇಂತಹವರ ಬಳಿಗೆ ನೀವು ಎಂದಿಗೂ ಸುಳಿಯಬೇಡಿರಿ. ಇಂತಹವರನ್ನು ದಂಡಿಸುವ ಶಕ್ತಿಯು ನನ್ನಲ್ಲಾಗಲೀ, ಸಾಕ್ಷಾತ್ ಕಾಲನಲ್ಲಾಗಲೀ ಇಲ್ಲವೇ ಇಲ್ಲ. ॥ ೨೭ ॥ ಮಹಾ ಪರಮಹಂಸರು ಇಡೀ ಜಗತ್ತಿನ ಮತ್ತು ತಮ್ಮ ಶರೀರದ ವಿಷಯದಲ್ಲಿ ಅಹಂಕಾರ-ಮಮಕಾರಗಳನ್ನು ತೊರೆದು, ಅಕಿಂಚನರಾಗಿ ದಿವ್ಯರಸವನ್ನು ಸವಿಯುವ ಲೋಭದಿಂದ ನಿರಂತರವಾಗಿ ಮುಕುಂದನ ಅಡಿದಾವರೆಗಳ ಮಕರಂದರಸವನ್ನು ಪಾನ ಮಾಡುತ್ತಾ ಇರುತ್ತಾರೆ. ಆ ದಿವ್ಯರಸಕ್ಕೆ ವಿಮುಖರಾದ ದುಷ್ಟರು ನರಕದ ದ್ವಾರವಾದ ಮನೆವಾರ್ತೆಯ ತೃಷ್ಣೆಯ ಹೊರೆಯನ್ನು ಹೊತ್ತಿರುತ್ತಾರೆ. ಅವರನ್ನು ನನ್ನ ಬಳಿಗೆ ಪದೇ-ಪದೇ ಕರೆದುಕೊಂಡು ಬನ್ನಿರಿ. ॥ ೨೮ ॥ ಯಾರ ನಾಲಿಗೆ ಭಗವಂತನ ನಾಮಗಳನ್ನು ಗುಣಗಳನ್ನು ಕೊಂಡಾಡುವುದಿಲ್ಲವೋ, ಯಾರ ಚಿತ್ತವು ಅವನ ಚರಣಾರವಿಂದಗಳನ್ನು ಚಿಂತಿಸುವುದಿಲ್ಲವೋ, ಯಾರ ತಲೆಯು ಒಮ್ಮೆಯೂ ಭಗವಾನ್ ಶ್ರೀಕೃಷ್ಣನ ಚರಣಗಳಲ್ಲಿ ಬಾಗುವುದಿಲ್ಲವೋ, ಅಂತಹ ಭಗವತ್ಸೇವಾ ವಿಮುಖರಾದ ಪಾಪಿಗಳನ್ನೇ ನನ್ನ ಬಳಿಗೆ ಕರೆತನ್ನಿರಿ. ॥ ೨೯ ॥ ಇಂದು ನನ್ನ ದೂತರು ಭಗವಂತನ ಪಾರ್ಷದರ ಅಪರಾಧವನ್ನು ಮಾಡಿ, ಸಾಕ್ಷಾತ್ ಭಗವಂತನನ್ನು ತಿರಸ್ಕಾರ ಮಾಡಿರುವರು. ಈ ಅಪರಾಧವು ನನ್ನದೂ ಆಗಿದೆ. ಪುರಾಣಪುರುಷ ಭಗವಾನ್ ಶ್ರೀಮನ್ನಾರಾಯಣನು ನಮ್ಮಗಳ ಅಪರಾಧವನ್ನು ಕ್ಷಮಿಸಲಿ. ನಾವು ಅಜ್ಞಾನಿಗಳಾಗಿದ್ದರೂ ಅವನ ಸೇವಕರೇ ಆಗಿದ್ದೇವಲ್ಲ! ಅವನ ಅಪ್ಪಣೆಯನ್ನು ಪಡೆಯಲಿಕ್ಕಾಗಿ ಕೈಜೋಡಿಸಿಕೊಂಡು ಸದಾ ಉತ್ಸುಕರಾಗಿರುತ್ತೇವೆ. ಆದ್ದರಿಂದ ಅಪಾರ ಮಹಿಮೆಯುಳ್ಳ ಭಗವಂತನಿಗೆ ನಮ್ಮನ್ನು ಕ್ಷಮಿಸುವುದೇ ಯೋಗ್ಯವಾಗಿದೆ. ಆ ಸರ್ವಾಂತರ್ಯಾಮಿ ಏಕರಸ ಅನಂತನಾದ ಪ್ರಭುವನ್ನು ನಾವು ನಮಸ್ಕರಿಸುತ್ತೇವೆ. ॥ ೩೦ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿದ್ರಾಜನೇ! ಶ್ರೀಭಗವಂತನ ಗುಣಗಳನ್ನೂ, ಲೀಲೆಗಳನ್ನೂ, ನಾಮಗಳನ್ನೂ ಕೀರ್ತನೆ ಮಾಡುತ್ತಿರುವುದೇ ಸಮಸ್ತ ಮಹಾಪಾತಕಗಳಿಗೂ ಸರ್ವೋತ್ತಮವಾದ ಪ್ರಾಯಶ್ಚಿತ್ತವು. ಸಮಸ್ತ ಪಾಪವಾಸನೆಗಳನ್ನು ನಿರ್ಮೂಲಗೊಳಿಸುವ ಕಟ್ಟಕಡೆಯ ಪ್ರಾಯಶ್ಚಿತ್ತವು. ಅದರಿಂದಲೇ ಸಮಸ್ತ ಜಗತ್ತಿಗೆ ಕಲ್ಯಾಣವುಂಟಾಗುವುದು. ॥ ೩೦ ॥

ಶೃಣ್ವತಾಂ ಗೃಣತಾಂ ವೀರ್ಯಾಣ್ಯುದ್ದಾಮಾನಿ ಹರೇರ್ಮುಹುಃ ।
ಯಥಾ ಸುಜಾತಯಾ ಭಕ್ತ್ಯಾ ಶುದ್ಧ್ಯೇನ್ನಾತ್ಮಾ ವ್ರತಾದಿಭಿಃ ॥ ೩೨ ॥

ಶ್ರೀಭಗವಂತನ ಉದಾರವೂ, ಕೃಪಾಪೂರ್ಣವೂ ಆದ ಚರಿತ್ರೆಗಳ ಶ್ರವಣ-ಕೀರ್ತನೆಗಳನ್ನು ಮತ್ತೆ-ಮತ್ತೆ ಮಾಡುತ್ತಿರುವ ಮಹಾತ್ಮರ ಹೃದಯದಲ್ಲಿ ಪ್ರೇಮಮಯ ಭಕ್ತಿಯು ಉದಯಿಸುವುದು. ಆ ಭಕ್ತಿಯಿಂದ ಉಂಟಾಗುವಷ್ಟು ಆತ್ಮಶುದ್ಧಿಯು ಕೃಚ್ಛ್ರ-ಚಾಂದ್ರಾಯಣಗಳೇ ಮುಂತಾದ ವ್ರತಗಳಿಂದಲೂ ಉಂಟಾಗುವುದಿಲ್ಲ. ॥ ೩೨ ॥

ಕೃಷ್ಣಾಂಘ್ರಿಪದ್ಮಮಧುಲಿಣ್ ನ ಪುನರ್ವಿಸೃಷ್ಟ-
ಮಾಯಾಗುಣೇಷು ರಮತೇ ವೃಜಿನಾವಹೇಷು ।
ಅನ್ಯಸ್ತು ಕಾಮಹತ ಆತ್ಮರಜಃ ಪ್ರಮಾರ್ಷ್ಟು-
ಮೀಹೇತ ಕರ್ಮ ಯತ ಏವ ರಜಃ ಪುನಃ ಸ್ಯಾತ್ ॥ ೩೩ ॥

ಭಗವಾನ್ ಶ್ರೀಕೃಷ್ಣಚಂದ್ರನ ಚರಣಾರವಿಂದ-ಮಕರಂದ ರಸದ ಲೋಭಿಯಾದ ಭ್ರಮರದಂತೆ ಇರುವ ಜನರು ಆರಂಭದಲ್ಲಿ ಮಾತ್ರ ರಮಣೀಯವಾಗಿ, ಅನಂತರ ದುಃಖವನ್ನೇ ಉಂಟು ಮಾಡುವ ವಿಷಯಗಳಲ್ಲಿ ರಮಿಸಲು ಮರಳಿ ಬರುವುದಿಲ್ಲ. ಆದರೆ ಆ ರಸದಿಂದ ವಿಮುಖರಾಗಿ ಕಾಮನೆಗಳಿಂದ ವಿವೇಕಬುದ್ಧಿಯನ್ನು ಕಳೆದುಕೊಂಡಿರುವ ಜನರು ತಮ್ಮ ಪಾಪಗಳನ್ನು ತೊಳೆದುಕೊಳ್ಳಲು ಪುನಃ ಪ್ರಾಯಶ್ಚಿತ್ತರೂಪವಾದ ಕರ್ಮಗಳನ್ನೇ ಆಚರಿಸುತ್ತಾರೆ. ಇದರಿಂದ ಅವರ ಕರ್ಮ ವಾಸನೆಯು ಅಳಿಯುವುದಿಲ್ಲ. ಹಾಗೂ ಅವರು ಪುನಃ ಅಂತಹ ದೋಷಗಳನ್ನೇ ಮಾಡುತ್ತಿರುತ್ತಾರೆ. ॥ ೩೩ ॥

ಇತ್ಥಂ ಸ್ವಭರ್ತೃಗದಿತಂ ಭಗವನ್ಮಹಿತ್ವಂ
ಸಂಸ್ಮೃತ್ಯ ವಿಸ್ಮಿತಧಿಯೋ ಯಮಕಿಂಕರಾಸ್ತೇ ।
ನೈವಾಚ್ಯುತಾಶ್ರಯಜನಂ ಪ್ರತಿಶಂಕಮಾನಾ
ದ್ರಷ್ಟುಂ ಚ ಬಿಭ್ಯತಿ ತತಃ ಪ್ರಭೃತಿ ಸ್ಮ ರಾಜನ್ ॥ ೩೪ ॥

ಪರೀಕ್ಷಿತನೇ! ಯಮದೂತರು ತಮ್ಮ ಒಡೆಯನಾದ ಯಮಧರ್ಮನ ಮುಖದಿಂದ ಹೀಗೆ ಭಗವಂತನ ಮಹಿಮೆಯನ್ನು ಕೇಳಿ, ಅದನ್ನು ಸ್ಮರಿಸುತ್ತಿರುವಾಗ ಅವರಿಗೆ ಎಣೆಯಿಲ್ಲದ ಆಶ್ಚರ್ಯವುಂಟಾಯಿತು. ಅಂದಿನಿಂದ ಅವರು ಯಮಧರ್ಮನ ಮಾತಿನಲ್ಲಿ ವಿಶ್ವಾಸವಿರಿಸಿ ತಮ್ಮ ನಾಶದ ಅಂಜಿಕೆಯಿಂದ ಭಗವಂತನ ಆಶ್ರಿತರಾದ ಭಕ್ತರ ಬಳಿಗೆ ಸುಳಿಯುವುದಿಲ್ಲ. ಹೆಚ್ಚೇನು ಅವರು ಭಕ್ತರ ಕಡೆಗೆ ಕಣ್ಣೆತ್ತಿನೋಡಲೂ ಭಯಪಡುವರು. ॥ ೩೪ ॥

ಇತಿಹಾಸಮಿಮಂ ಗುಹ್ಯಂ ಭಗವಾನ್ ಕುಂಭಸಂಭವಃ ।
ಕಥಯಾಮಾಸ ಮಲಯ ಆಸೀನೋ ಹರಿಮರ್ಚಯನ್ ॥ ೩೫ ॥

ಪ್ರಿಯ ಪರೀಕ್ಷಿತನೇ! ಈ ಇತಿಹಾಸವು ಪರಮ ಗೋಪ್ಯವೂ, ಅತ್ಯಂತ ರಹಸ್ಯವೂ ಆಗಿದೆ. ಮಲಯಪರ್ವತದಲ್ಲಿ ವಿರಾಜಮಾನರಾದ ಪೂಜ್ಯರಾದ ಅಗಸ್ತ್ಯರು ಶ್ರೀಹರಿಯನ್ನು ಪೂಜಿಸುವಾಗ ನನಗೆ ಇದನ್ನು ಹೇಳಿದ್ದರು. ॥ ೩೫ ॥

ಮೂರನೆಯ ಅಧ್ಯಾಯವು ಮುಗಿಯಿತು. ॥ ೩ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಷಷ್ಠಸ್ಕಂಧೇ
ಯಮಪುರುಷಸಂವಾದೇ ತೃತೀಯೋಽಧ್ಯಾಯಃ ॥ ೩ ॥

ನಾಲ್ಕನೆಯ ಅಧ್ಯಾಯ

ದಕ್ಷನಿಂದ ಭಗವಂತನ ಸ್ತುತಿ ಮತ್ತು ಭಗವಂತನ ಪ್ರಾದುರ್ಭಾವ

ರಾಜೋವಾಚ

ದೇವಾಸುರನೃಣಾಂ ಸರ್ಗೋ ನಾಗಾನಾಂ ಮೃಗಪಕ್ಷಿಣಾಮ್ ।
ಸಾಮಾಸಿಕಸ್ತ್ವಯಾ ಪ್ರೋಕ್ತೋ ಯಸ್ತು ಸ್ವಾಯಂಭುವೇಽನ್ತರೇ ॥ ೧ ॥

ಪರೀಕ್ಷಿದ್ರಾಜನು ಕೇಳಿದನು – ಮಹಾತ್ಮರೇ! ಸ್ವಾಯಂಭುವ ಮನ್ವಂತರದಲ್ಲಿ ದೇವತೆಗಳು, ಅಸುರರು, ಮನುಷ್ಯರು, ಸರ್ಪಗಳು, ಪಶು-ಪಕ್ಷಿ ಮುಂತಾದವುಗಳ ಸೃಷ್ಟಿ ಹೇಗಾಯಿತೆಂಬುದನ್ನು ನೀವು (ಮೂರನೇ ಸ್ಕಂಧದಲ್ಲಿ) ಹಿಂದೆ ಸಂಕ್ಷೇಪವಾಗಿ ವರ್ಣಿಸಿದಿರಿ. ॥ ೧ ॥

ತಸ್ಯೈವ ವ್ಯಾಸಮಿಚ್ಛಾಮಿ ಜ್ಞಾತುಂ ತೇ ಭಗವನ್ಯಥಾ ।
ಅನುಸರ್ಗಂ ಯಯಾ ಶಕ್ತ್ಯಾ ಸಸರ್ಜ ಭಗವಾನ್ ಪರಃ ॥ ೨ ॥

ಈಗ ನಾನು ಅದನ್ನು ವಿಸ್ತಾರವಾಗಿ ತಿಳಿಯಲು ಬಯಸುತ್ತಿದ್ದೇನೆ. ಪ್ರಕೃತಿಯೇ ಮುಂತಾದ ಕಾರಣಗಳಿಗೆ ಪರಮ ಕಾರಣನಾದ ಭಗವಂತನು ತನ್ನ ಯಾವ ಶಕ್ತಿಯಿಂದ, ಯಾವ ರೀತಿಯಲ್ಲಿ ಅನಂತರದ ಸೃಷ್ಟಿಯನ್ನು ಮಾಡಿದನು? ಎಂಬುದನ್ನು ತಿಳಿಯಲು ಇಚ್ಛಿಸುತ್ತೇನೆ. ॥ ೨ ॥

ಸೂತ ಉವಾಚ

ಇತಿ ಸಂಪ್ರಶ್ನಮಾಕರ್ಣ್ಯ ರಾಜರ್ಷೇರ್ಬಾದರಾಯಣಿಃ ।
ಪ್ರತಿನಂದ್ಯ ಮಹಾಯೋಗೀ ಜಗಾದ ಮುನಿಸತ್ತಮಾಃ ॥ ೩ ॥

ಶ್ರೀಶುಕ ಉವಾಚ

ಯದಾ ಪ್ರಚೇತಸಃ ಪುತ್ರಾ ದಶ ಪ್ರಾಚೀನಬರ್ಹಿಷಃ ।
ಅಂತಃಸಮುದ್ರಾದುನ್ಮಗ್ನಾ ದದೃಶುರ್ಗಾಂ ದ್ರುಮೈರ್ವೃತಾಮ್ ॥ ೪ ॥

ದ್ರುಮೇಭ್ಯಃ ಕ್ರುಧ್ಯಮಾನಾಸ್ತೇ ತಪೋದೀಪಿತಮನ್ಯವಃ ।
ಮುಖತೋ ವಾಯುಮಗ್ನಿಂ ಚ ಸಸೃಜುಸ್ತದ್ದಿಧಕ್ಷಯಾ ॥ ೫ ॥

ತಾಭ್ಯಾಂ ನಿರ್ದಹ್ಯಮಾನಾಂಸ್ತಾನುಪಲಭ್ಯ ಕುರೂದ್ವಹ ।
ರಾಜೋವಾಚ ಮಹಾನ್ ಸೋಮೋ ಮನ್ಯುಂ ಪ್ರಶಮಯನ್ನಿವ ॥ ೬ ॥

ಮಾ ದ್ರುಮೇಭ್ಯೋ ಮಹಾಭಾಗಾ ದೀನೇಭ್ಯೋ ದ್ರೋಗ್ಧುಮರ್ಹಥ ।
ವಿವರ್ಧಯಿಷವೋ ಯೂಯಂ ಪ್ರಜಾನಾಂ ಪತಯಃ ಸ್ಮೃತಾಃ ॥ ೭ ॥

ಅಹೋ ಪ್ರಜಾಪತಿಪತಿರ್ಭಗವಾನ್ ಹರಿರವ್ಯಯಃ ।
ವನಸ್ಪತೀನೋಷಧೀಶ್ಚ ಸಸರ್ಜೋರ್ಜಮಿಷಂ ವಿಭುಃ ॥ ೮ ॥

ಅನ್ನಂ ಚರಾಣಾಮಚರಾ ಹ್ಯಪದಃ ಪಾದಚಾರಿಣಾಮ್ ।
ಅಹಸ್ತಾ ಹಸ್ತಯುಕ್ತಾನಾಂ ದ್ವಿಪದಾಂ ಚ ಚತುಷ್ಪದಃ ॥ ೯ ॥

ಯೂಯಂ ಚ ಪಿತ್ರಾನ್ವಾದಿಷ್ಟಾ ದೇವದೇವೇನ ಚಾನಘಾಃ ।
ಪ್ರಜಾಸರ್ಗಾಯ ಹಿ ಕಥಂ ವೃಕ್ಷಾನ್ನಿರ್ದಗ್ಧುಮರ್ಹಥ ॥ ೧೦ ॥

ಆತಿಷ್ಠತ ಸತಾಂ ಮಾರ್ಗಂ ಕೋಪಂ ಯಚ್ಛತ ದೀಪಿತಮ್ ।
ಪಿತ್ರಾ ಪಿತಾಮಹೇನಾಪಿ ಜುಷ್ಟಂ ವಃ ಪ್ರಪಿತಾಮಹೈಃ ॥ ೧೧ ॥

ತೋಕಾನಾಂ ಪಿತರೌ ಬಂಧೂ ದೃಶಃ ಪಕ್ಷ್ಮ ಸ್ತ್ರಿಯಾಃ ಪತಿಃ ।
ಪತಿಃ ಪ್ರಜಾನಾಂ ಭಿಕ್ಷೂಣಾಂ ಗೃಹ್ಯಜ್ಞಾನಾಂ ಬುಧಃ ಸುಹೃತ್ ॥ ೧೨ ॥

ಸೂತಪುರಾಣಿಕರು ಹೇಳುತ್ತಾರೆ – ಶೌನಕಾದಿ ಋಷಿಗಳಿರಾ! ಪರಮಯೋಗಿಗಳಾದ ವ್ಯಾಸಪುತ್ರ ಶ್ರೀಶುಕಮಹಾಮುನಿಗಳು ರಾಜರ್ಷಿ ಪರೀಕ್ಷಿತನ ಈ ಪ್ರಶ್ನೆಯನ್ನು ಅಭಿನಂದಿಸುತ್ತಾ ಉತ್ತರವಾಗಿ ಹೀಗೆ ಹೇಳಲುಪಕ್ರಮಿಸಿದರು. ॥ ೩ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಎಲೈ ರಾಜೇಂದ್ರನೇ! ಪ್ರಾಚೀನಬರ್ಹಿ ಮಹಾರಾಜನ ಹತ್ತು ಮಂದಿ ಪುತ್ರರಾದ ಪ್ರಚೇತಸರು ಸಮುದ್ರದಿಂದ ಹೊರಕ್ಕೆ ಬಂದಾಗ – ಇಡೀ ಪೃಥ್ವಿಯನ್ನು ವೃಕ್ಷಗಳು ಆವರಿಸಿಕೊಂಡಿರುವುದನ್ನು ಕಂಡರು. ॥ ೪ ॥ ಅವರಿಗೆ ಆ ವೃಕ್ಷಗಳ ಮೇಲೆ ವಿಪರೀತವಾದ ಕೋಪ ಬಂತು. ಅವರ ತಪೋಬಲವು ಆ ಕ್ರೋಧಾಗ್ನಿಯಲ್ಲಿ ತುಪ್ಪ ಎರೆದಂತೆ ಅದನ್ನು ಭುಗಿಲೆಬ್ಬಿಸಿತು. ಒಡನೆಯೇ ಅವರು ಆ ವೃಕ್ಷಗಳನ್ನು ಸುಟ್ಟುಹಾಕುವುದಕ್ಕಾಗಿ ತಮ್ಮ ಬಾಯಿಂದ ಬೆಂಕಿಯನ್ನೂ, ಗಾಳಿಯನ್ನೂ ಸೃಷ್ಟಿಸಿದರು. ॥ ೫ ॥ ಪರೀಕ್ಷಿತನೇ! ಪ್ರಚೇತಸರು ಬಿಟ್ಟ ಗಾಳಿ ಮತ್ತು ಬೆಂಕಿಯಿಂದ ಆ ವೃಕ್ಷಗಳು ಸುಡತೊಡಗಿದವು. ಆಗ ವೃಕ್ಷಗಳ ರಾಜನಾದ ಚಂದ್ರನು ಅವರ ಕ್ರೋಧವನ್ನು ಶಾಂತಗೊಳಿಸಲಿಕ್ಕಾಗಿ ಇಂತೆಂದನು – ॥ ೬ ॥ ಎಲೈ ಭಾಗ್ಯಶಾಲಿಗಳಾದ ಪ್ರಚೇತಸರೇ! ಈ ವೃಕ್ಷಗಳು ಅತ್ಯಂತ ಶೋಚನೀಯ ಸ್ಥಿತಿಯಲ್ಲಿರುವವು. ನೀವುಗಳು ಇವುಗಳೊಂದಿಗೆ ದ್ರೋಹ ಮಾಡಬೇಡಿರಿ. ಏಕೆಂದರೆ, ನೀವಾದರೋ ಪ್ರಜೆಯ ವೃದ್ಧಿಯನ್ನು ಮಾಡಲು ಬಯಸುತ್ತಿರುವಿರಿ. ನೀವು ಪ್ರಜಾಪತಿಗಳಿರುವುದನ್ನು ಎಲ್ಲರೂ ಬಲ್ಲರು. ॥ ೭ ॥ ಮಹಾತ್ಮರಾದ ಪ್ರಚೇತಸರೇ! ಪ್ರಜಾಪತಿಗಳ ಅಧಿಪತಿಯಾದ ಭಗವಾನ್ ಶ್ರೀಹರಿಯು ಸಮಸ್ತ ವನಸ್ಪತಿಗಳನ್ನು ಮತ್ತು ಓಷಧಿಗಳನ್ನು ಪ್ರಜೆಗಳ ಹಿತಕ್ಕಾಗಿ, ಅವರ ಆಹಾರಕ್ಕಾಗಿ ಸೃಷ್ಟಿಸಿರುವನು. ॥ ೮ ॥ ಪ್ರಪಂಚದಲ್ಲಿ ರೆಕ್ಕೆಗಳಿಂದ ಹಾರುವ ಚರಪ್ರಾಣಿಗಳಿಗೆ ಫಲ-ಪುಷ್ಪಾದಿ ಅಚರ ಪದಾರ್ಥಗಳೇ ಆಹಾರವು. ಕಾಲುಗಳಿಂದ ನಡೆದಾಡುವ ಜೀವಿಗಳಿಗೆ ಕಾಲಿಲ್ಲದ ಹುಲ್ಲು-ಸೊಪ್ಪು ಮುಂತಾದವುಗಳು ಆಹಾರವು. ಕೈಗಳುಳ್ಳವರಿಗೆ ಕೈಗಳಿಲ್ಲದ ಲತಾ-ವೃಕ್ಷಗಳೇ ಆಹಾರವು ಮತ್ತು ಎರಡು ಕಾಲುಗಳುಳ್ಳ ಮನುಷ್ಯರಿಗಾಗಿ ಅಕ್ಕಿ-ಗೋಧಿ ಮುಂತಾದ ಅನ್ನ ಪದಾರ್ಥಗಳೇ ಆಹಾರವು. ನಾಲ್ಕು ಕಾಲುಗಳುಳ್ಳ ಎತ್ತು, ಒಂಟೆ ಮುಂತಾದವುಗಳು ಕೃಷಿಯ ಮೂಲಕ ಅನ್ನವನ್ನು ಉತ್ಪಾದಿಸಲು ಸಹಾಯಕವಾಗಿವೆ. ॥ ೯ ॥ ಪುಣ್ಯಾತ್ಮರಾದ ಪ್ರಚೇತಸರೇ! ನಿಮ್ಮ ತಂದೆ ಮತ್ತು ದೇವಾಧಿದೇವನಾದ ಭಗವಂತನು ನಿಮಗೆ ಪ್ರಜೆಗಳನ್ನು ಸೃಷ್ಟಿಸಿರಿ ಎಂದು ಆಜ್ಞೆ ಕೊಟ್ಟಿದ್ದರು. ಇಂತಹ ಸ್ಥಿತಿಯಲ್ಲಿ ನೀವು ವೃಕ್ಷಗಳನ್ನು ಸುಟ್ಟುಹಾಕುವರೆ ಉಚಿತವಾದೀತೇ? ॥ ೧೦ ॥ ನೀವುಗಳು ನಿಮ್ಮ ಕ್ರೋಧವನ್ನು ಶಾಂತಗೊಳಿಸಿಕೊಂಡು ತಂದೆ-ತಾತ-ಮುತ್ತಾತರು ಮುಂತಾದವರು ಸೇವಿಸಿದ ಸತ್ಪುರುಷರ ಮಾರ್ಗವನ್ನು ಅನುಸರಿಸಿರಿ. ॥ ೧೧ ॥

ತಂದೆ-ತಾಯಂದಿರು ಬಾಲಕರನ್ನು, ಕಣ್ಣಿನ ರೆಪ್ಪೆಗಳು ಕಣ್ಣುಗಳನ್ನು, ಪತಿಯು ಪತ್ನಿಯನ್ನು, ಗೃಹಸ್ಥರು ಭಿಕ್ಷುಕರನ್ನು, ಜ್ಞಾನಿಗಳು ಅಜ್ಞಾನಿಗಳನ್ನು ರಕ್ಷಿಸುತ್ತಾ, ಅವರ ಹಿತವನ್ನು ಬಯಸುವಂತೆ, ಪ್ರಜೆಯ ರಕ್ಷಣೆ ಮತ್ತು ಹಿತದ ಉತ್ತರದಾಯಿತ್ವ ರಾಜನ ಮೇಲಿರುತ್ತದೆ. ॥ ೧೨ ॥

ಅಂತರ್ದೇಹೇಷು ಭೂತಾನಾಮಾತ್ಮಾಽಽಸ್ತೇ ಹರಿರೀಶ್ವರಃ ।
ಸರ್ವಂ ತದ್ಧಿಷ್ಣ್ಯಮೀಕ್ಷಧ್ವಮೇವಂ ವಸ್ತೋಷಿತೋ ಹ್ಯಸೌ ॥ ೧೩ ॥

ಯಃ ಸಮುತ್ಪತಿತಂ ದೇಹ ಆಕಾಶಾನ್ಮನ್ಯುಮುಲ್ಬಣಮ್ ।
ಆತ್ಮಜಿಜ್ಞಾಸಯಾ ಯಚ್ಛೇತ್ ಸ ಗುಣಾನತಿವರ್ತತೇ ॥ ೧೪ ॥

ಅಲಂ ದಗ್ಧೈರ್ದ್ರುಮೈರ್ದೀನೈಃ ಖಿಲಾನಾಂ ಶಿವಮಸ್ತು ವಃ ।
ವಾರ್ಕ್ಷೀ ಹ್ಯೇಷಾ ವರಾ ಕನ್ಯಾ ಪತ್ನೀತ್ವೇ ಪ್ರತಿಗೃಹ್ಯತಾಮ್ ॥ ೧೫ ॥

ಇತ್ಯಾಮಂತ್ರ್ಯ ವರಾರೋಹಾಂ ಕನ್ಯಾಮಾಪ್ಸರಸೀಂ ನೃಪ ।
ಸೋಮೋ ರಾಜಾ ಯಯೌ ದತ್ತ್ವಾ ತೇ ಧರ್ಮೇಣೋಪಯೇಮಿರೇ ॥ ೧೬ ॥

ತೇಭ್ಯಸ್ತಸ್ಯಾಂ ಸಮಭವದ್ದಕ್ಷಃ ಪ್ರಾಚೇತಸಃ ಕಿಲ ।
ಯಸ್ಯ ಪ್ರಜಾವಿಸರ್ಗೇಣ ಲೋಕಾ ಆಪೂರಿತಾಸ್ತ್ರಯಃ ॥ ೧೭ ॥

ಯಥಾ ಸಸರ್ಜ ಭೂತಾನಿ ದಕ್ಷೋ ದುಹಿತೃವತ್ಸಲಃ ।
ರೇತಸಾ ಮನಸಾ ಚೈವ ತನ್ಮಮಾವಹಿತಃ ಶೃಣು ॥ ೧೮ ॥

ಮನಸೈವಾಸೃಜತ್ಪೂರ್ವಂ ಪ್ರಜಾಪತಿರಿಮಾಃ ಪ್ರಜಾಃ ।
ದೇವಾಸುರಮನುಷ್ಯಾದೀನ್ನಭಃಸ್ಥಲಜಲೌಕಸಃ ॥ ೧೯ ॥

ತಮಬೃಂಹಿತಮಾಲೋಕ್ಯ ಪ್ರಜಾಸರ್ಗಂ ಪ್ರಜಾಪತಿಃ ।
ವಿಂಧ್ಯಪಾದಾನುಪವ್ರಜ್ಯ ಸೋಽಚರದ್ದುಷ್ಕರಂ ತಪಃ ॥ ೨೦ ॥

ತತ್ರಾಘಮರ್ಷಣಂ ನಾಮ ತೀರ್ಥಂ ಪಾಪಹರಂ ಪರಮ್ ।
ಉಪಸ್ಪೃಶ್ಯಾನುಸವನಂ ತಪಸಾತೋಷಯದ್ಧರಿಮ್ ॥ ೨೧ ॥

ಅಸ್ತೌಷೀದ್ಧಂಸಗುಹ್ಯೇನ ಭಗವಂತಮಧೋಕ್ಷಜಮ್ ।
ತುಭ್ಯಂ ತದಭಿಧಾಸ್ಯಾಮಿ ಕಸ್ಯಾತುಷ್ಯದ್ಯತೋ ಹರಿಃ ॥ ೨೨ ॥

ಪ್ರಜಾಪತಿರುವಾಚ

ನಮಃ ಪರಾಯಾವಿತಥಾನುಭೂತಯೇ
ಗುಣತ್ರಯಾಭಾಸನಿಮಿತ್ತಬಂಧವೇ ।
ಅದೃಷ್ಟಧಾಮ್ನೇ ಗುಣತತ್ತ್ವಬುದ್ಧಿಭಿ-
ರ್ನಿವೃತ್ತಮಾನಾಯ ದಧೇ ಸ್ವಯಂಭುವೇ ॥ ೨೩ ॥

ಪ್ರಚೇತಸರೇ ! ಸಮಸ್ತ ಪ್ರಾಣಿಗಳ ಹೃದಯದಲ್ಲಿ ಸರ್ವಶಕ್ತನಾದ ಭಗವಂತನು ಆತ್ಮರೂಪದಿಂದ ವಿರಾಜಮಾನನಾಗಿದ್ದಾನೆ. ಅದಕ್ಕಾಗಿ ನೀವುಗಳು ಎಲ್ಲರನ್ನು ಭಗವಂತನ ನಿವಾಸಸ್ಥಾನವೆಂದು ತಿಳಿಯಿರಿ. ನೀವು ಹೀಗೆ ಮಾಡಿದರೆ ಭಗವಂತನನ್ನು ಒಲಿಸಿಕೊಳ್ಳಬಹುದು. ॥ ೧೩ ॥ ಹೃದಯದಲ್ಲಿ ಉಕ್ಕುತ್ತಿರುವ ಭಯಂಕರ ಕ್ರೋಧವನ್ನು ಆತ್ಮ ವಿಚಾರದ ಮೂಲಕ ಶರೀರದಲ್ಲೇ ಶಾಂತಗೊಳಿಸಿ, ಹೊರ ಹೋಗಲು ಬಿಡದಿರುವವನು ತ್ರಿಗುಣಗಳನ್ನು ದಾಟಿ ಹೋಗಲು ಸಮರ್ಥನಾಗುತ್ತಾನೆ ॥ ೧೪ ॥ ಪ್ರಚೇತಸರೇ ! ಈ ದೀನ-ಹೀನರಾದ ವೃಕ್ಷಗಳನ್ನು ಇನ್ನು ಸುಡಬೇಡಿರಿ. ಉಳಿದಿರುವ ವೃಕ್ಷ ಸಂಪತ್ತನ್ನು ಕಾಪಾಡಿರಿ. ಇದರಿಂದ ನಿಮಗೂ ಶ್ರೇಯಸ್ಸುಂಟಾದೀತು. ಈ ವೃಕ್ಷಗಳು 'ವಾರ್ಕ್ಷೀ' ಎಂಬ ಕನ್ಯಾಮಣಿಯನ್ನು ಸಂರಕ್ಷಣೆ ಮಾಡಿವೆ. ನೀವು ಆಕೆಯನ್ನು ಪತ್ನಿಯಾಗಿ ಸ್ವೀಕರಿಸಿರಿ. ॥ ೧೫ ॥

ಪರೀಕ್ಷಿದ್ರಾಜನೇ ! ವನಸ್ಪತಿಗಳ ರಾಜನಾದ ಚಂದ್ರನು ಪ್ರಚೇತಸರನ್ನು ಈ ರೀತಿಯಾಗಿ ಸಮಾಧಾನಪಡಿಸಿ, ಅವರಿಗೆ ಪ್ರಮ್ಲೋಚಾ ಎಂಬ ಅಪ್ಸರೆಯ ಸುಂದರಿಯಾದ ಕನ್ಯೆಯನ್ನು ಒಪ್ಪಿಸಿ ಅಲ್ಲಿಂದ ಹೊರಟುಹೋದನು. ಪ್ರಚೇತಸರು ಬಳಿಕ ಧರ್ಮಾನುಸಾರ ಆಕೆಯನ್ನು ಪಾಣಿಗ್ರಹಣ ಮಾಡಿಕೊಂಡರು. ॥ ೧೬ ॥ ಆ ಪ್ರಚೇತಸರಿಂದ ಆಕೆಯ ಗರ್ಭದಿಂದ ಪ್ರಾಚೇತಸನಾದ ದಕ್ಷನು ಜನಿಸಿದನು. ಮತ್ತೆ ಆ ದಕ್ಷ ಪ್ರಜಾಪತಿಯ ಪ್ರಜಾಸೃಷ್ಟಿಯಿಂದ ಮೂರು ಲೋಕಗಳೂ ತುಂಬಿ ಹೋದುವು. ॥ ೧೭ ॥ ದಕ್ಷನಿಗೆ ತನ್ನ ಹೆಣ್ಣು ಮಕ್ಕಳ ಮೇಲೆ ಅಪಾರವಾದ ಪ್ರೇಮವಿತ್ತು. ಅವನು ತನ್ನ ಸಂಕಲ್ಪದಿಂದ ಹಾಗೂ ವೀರ್ಯದಿಂದ ವಿವಿಧ ಪ್ರಾಣಿಗಳನ್ನು ಸೃಷ್ಟಿಮಾಡಿದುದನ್ನು ನಾನು ನಿನಗೆ ಹೇಳುವೆನು. ಸಾವಧಾನವಾಗಿ ಕೇಳು. ॥ ೧೮ ॥

ಪರೀಕ್ಷಿತನೇ ! ಮೊದಲಿಗೆ ದಕ್ಷಪ್ರಜಾಪತಿಯು ನೆಲ, ಜಲ, ಆಕಾಶಗಳಲ್ಲಿ ವಾಸಿಸುವ ದೇವತೆಗಳು, ಅಸುರರು ಮತ್ತು ಮನುಷ್ಯರು ಮುಂತಾದವರನ್ನು ಸಂಕಲ್ಪಮಾತ್ರದಿಂದಲೇ ಸೃಷ್ಟಿಸಿದನು. ॥ ೧೯ ॥ ಆ ಸೃಷ್ಟಿಯು ವೃದ್ಧಿಹೊಂದದೇ ಇರುವುದನ್ನು ನೋಡಿ ಅವನು ವಿಂಧ್ಯಾಚಲದ ಬಳಿಯಿರುವ ಪರ್ವತಕ್ಕೆ ಹೋಗಿ ತೀವ್ರವಾದ ತಪಸ್ಸನ್ನು ಆಚರಿಸಿದನು. ॥ ೨೦ ॥ ಅಲ್ಲಿ ಅತ್ಯಂತ ಶ್ರೇಷ್ಠವಾದ ಒಂದು 'ಅಘಮರ್ಷಣ' ಎಂಬ ತೀರ್ಥವಿದೆ. ಅದು ಎಲ್ಲ ಪಾಪಗಳನ್ನು ತೊಳೆದುಬಿಡುತ್ತದೆ. ದಕ್ಷಪ್ರಜಾಪತಿಯು ಆ ತೀರ್ಥದಲ್ಲಿ ತ್ರಿಕಾಲಗಳಲ್ಲಿಯೂ ಸ್ನಾನವನ್ನು ಮಾಡಿ, ತಪಸ್ಸಿನ ಮೂಲಕ ಭಗವಂತನನ್ನು ಆರಾಧಿಸತೊಡಗಿದನು. ॥ ೨೧ ॥ ದಕ್ಷಪ್ರಜಾಪತಿಯು ಇಂದ್ರಿಯಾತೀತನಾದ ಭಗವಂತನನ್ನು 'ಹಂಸ ಗುಹ್ಯ' ಎಂಬ ಸ್ತೋತ್ರದಿಂದ ಸ್ತುತಿಸಿದನು. ಅದರಿಂದಲೇ ಭಗವಂತನು ಅವನ ಮೇಲೆ ಪ್ರಸನ್ನನಾಗಿದ್ದನು. ಆ ಸ್ತುತಿಯನ್ನು ನಿನಗೆ ಹೇಳುವೆನು, ಕೇಳು. ॥ ೨೨ ॥

ದಕ್ಷಪ್ರಜಾಪತಿಯು ಹೀಗೆ ಸ್ತುತಿಸತೊಡಗಿದನು – ಭಗವಂತಾ ! ನೀನು ಸತ್ಯವಾದ ಅನುಭವಜ್ಯೋತಿ ಸ್ವರೂಪನಾಗಿ ಸರ್ವೋತ್ತಮನಾಗಿರುವೆ. ಜೀವನನ್ನೂ ಪ್ರಕೃತಿಯನ್ನೂ ಮೀರಿದವನಾಗಿ ಅವುಗಳಿಗೆ ಸತ್ತಾ-ಸ್ಫೂರ್ತಿಯನ್ನು ನೀಡುತ್ತಿರುವೆ. ನೀನು ಪ್ರಮಾಣಾತೀತನಾಗಿರುವುದರಿಂದ ತ್ರಿಗುಣಾತ್ಮಕವಾದ ಸೃಷ್ಟಿಯಲ್ಲೇ

ನ ಯಸ್ಯ ಸಖ್ಯಂ ಪುರುಷೋಽವೈತಿ ಸಖ್ಯುಃ
ಸಖಾ ವಸನ್ ಸಂವಸತಃ ಪುರೇಽಸ್ಮಿನ್ ।
ಗುಣೋ ಯಥಾ ಗುಣಿನೋ ವ್ಯಕ್ತದೃಷ್ಟೇ-
ಸ್ತಸ್ಮೈ ಮಹೇಶಾಯ ನಮಸ್ಕರೋಮಿ ॥ ೨೪ ॥

ದೇಹೋಽಸವೋಽಕ್ಷಾ ಮನವೋ ಭೂತಮಾತ್ರಾ
ನಾತ್ಮಾನಮನ್ಯಂ ಚ ವಿದುಃ ಪರಂ ಯತ್ ।
ಸರ್ವಂ ಪುಮಾನ್ವೇದ ಗುಣಾಂಶ್ಚ ತಜ್ಜ್ಞೋ
ನ ವೇದ ಸರ್ವಜ್ಞಮನಂತಮೀಡೇ ॥ ೨೫ ॥

ಯದೋಪರಾಮೋ ಮನಸೋ ನಾಮರೂಪ-
ರೂಪಸ್ಯ ದೃಷ್ಟಸ್ಮೃತಿಸಂಪ್ರಮೋಷಾತ್ ।
ಯ ಈಯತೇ ಕೇವಲಯಾ ಸ್ವಸಂಸ್ಥಯಾ
ಹಂಸಾಯ ತಸ್ಮೈ ಶುಚಿಸದ್ಮನೇ ನಮಃ ॥ ೨೬ ॥

ಮನೀಷಿಣೋಽಂತರ್ಹೃದಿ ಸಂನಿವೇಶಿತಂ
ಸ್ವಶಕ್ತಿಭಿರ್ನವಭಿಶ್ಚ ತ್ರಿವೃದ್ಭಿಃ ।
ವಹ್ನಿಂ ಯಥಾ ದಾರುಣಿ ಪಾಂಚದಶ್ಯಂ
ಮನೀಷಯಾ ನಿಷ್ಕರ್ಷಂತಿ ಗೂಢಮ್ ॥ ೨೭ ॥

ಸ ವೈ ಮಮಾಶೇಷವಿಶೇಷಮಾಯಾ-
ನಿಷೇಧನಿರ್ವಾಣಸುಖಾನುಭೂತಿಃ ।
ಸ ಸರ್ವನಾಮಾ ಸ ಚ ವಿಶ್ವರೂಪಃ
ಪ್ರಸೀದತಾಮನಿರುಕ್ತಾತ್ಮಶಕ್ತಿಃ ॥ ೨೮ ॥

ಯದ್ಯನ್ನಿರುಕ್ತಂ ವಚಸಾ ನಿರೂಪಿತಂ
ಧಿಯಾಕ್ಷಭಿರ್ವಾ ಮನಸೋತ ಯಸ್ಯ ।
ಮಾ ಭೂತ್ಸ್ವರೂಪಂ ಗುಣರೂಪಂ ಹಿ ತತ್ತತ್
ಸ ವೈ ಗುಣಾಪಾಯವಿಸರ್ಗಲಕ್ಷಣಃ ॥ ೨೯ ॥

ತತ್ತ್ವಬುದ್ಧಿಯಿಲ್ಲದಿರುವ ಜೀವಿಗಳು ನಿನ್ನ ನಿಜ ಸ್ವರೂಪವನ್ನು ಅರಿಯಲಾರರು. ಇಂತಹ ಸ್ವಯಂಪ್ರಕಾಶನೂ, ಪರಾತ್ಪರನೂ ಆದ ನಿನಗೆ ನಮಸ್ಕರಿಸುತ್ತಿದ್ದೇನೆ. ॥ ೨೩ ॥ ನೀನಾದರೋ ಜೀವಿಗಳಿಗೆ ಗೆಳೆಯನಾಗಿ ಇದೇ ಶರೀರದಲ್ಲಿ ಒಟ್ಟಿಗೆ ಇರುತ್ತಿದ್ದರೂ, ಸರ್ವಶಕ್ತಿಯುಳ್ಳ ನಿನ್ನ ಸಖ್ಯಭಾವವನ್ನು ಜೀವಿಗಳು ತಿಳಿಯಲಾರರು. ರೂಪ, ರಸ, ಗಂಧಗಳೇ ಮುಂತಾದ ವಿಷಯಗಳು ಕಣ್ಣು, ನಾಲಿಗೆ, ಮೂಗು ಮುಂತಾದ ಇಂದ್ರಿಯ ವೃತ್ತಿಗಳು ತಮ್ಮನ್ನು ಪ್ರಕಾಶಪಡಿಸುತ್ತಿದ್ದರೂ ಅವುಗಳನ್ನು ತಿಳಿಯಲಾರವೋ, ಅಂತೆಯೇ ಜೀವಿಗಳು ತಮ್ಮನ್ನು ಪ್ರಕಾಶಪಡಿಸುತ್ತಿರುವ ಮತ್ತು ಸಾಕ್ಷಿಯಾಗಿರುವ ನಿನ್ನನ್ನು ಕಾಣಲಾರರು. ಅಂತಹ ಮಹೇಶ್ವರನಾದ ನಿನಗೆ ನಮಸ್ಕರಿಸುತ್ತೇನೆ. ॥ ೨೪ ॥ ದೇಹ, ಪ್ರಾಣ, ಇಂದ್ರಿಯಗಳು, ಅಂತಃಕರಣದ ವೃತ್ತಿಗಳು, ಪಂಚಮಹಾಭೂತಗಳು ಮತ್ತು ಅವುಗಳ ತನ್ಮಾತ್ರೆಗಳು - ಹೀಗೆ ಇವೆಲ್ಲವೂ ಜಡವಾಗಿದ್ದ ಕಾರಣ ತಮ್ಮನ್ನು ಮತ್ತು ತಮ್ಮಿಂದ ಬೇರೆಯಾದುದನ್ನೂ ತಿಳಿಯಲಾರವು. ಆದರೆ ಜೀವನು ಇವೆಲ್ಲವನ್ನು ಮತ್ತು ಇವುಗಳ ಕಾರಣವಾದ ಸತ್ತ್ವ, ರಜ, ತಮ ಈ ಮೂರು ಗುಣಗಳನ್ನೂ ತಿಳಿಯುತ್ತಾನೆ. ಆದರೂ ಕೂಡ ಸರ್ವಜ್ಞನೂ, ಅನಂತನೂ ಆಗಿರುವ ನಿನ್ನನ್ನು ತಿಳಿಯಲಾರನು. ಅಂತಹ ನಿನ್ನನ್ನು ಸ್ತುತಿಸುತ್ತೇನೆ. ॥ ೨೫ ॥ ಸಮಾಧಿಕಾಲದಲ್ಲಿ ಪ್ರಮಾಣ, ವಿಕಲ್ಪ, ವಿಪರ್ಯಯಗಳೆಂಬ ವಿವಿಧ ಜ್ಞಾನಗಳೂ, ಮತ್ತು ಸ್ಮರಣಶಕ್ತಿಯೂ ಲೋಪವಾಗುವುದರಿಂದ ಈ ನಾಮ-ರೂಪಾತ್ಮಕವಾದ ಜಗತ್ತನ್ನು ನಿರೂಪಿಸುವ ಮನಸ್ಸೂ ಶಾಂತವಾಗಿಬಿಡುವುದು. ಹಾಗೆ ಮನಸ್ಸು ಲಯಗೊಂಡರೂ ನೀನು ಕೇವಲ ಸ್ವಸ್ವರೂಪದಿಂದ ಪ್ರಕಾಶಿಸುತ್ತಿರುವೆ. ಅಂತಹ ಶುದ್ಧನೂ, ಶುದ್ಧ ಹೃದಯಮಂದಿರನಿವಾಸಿಯೂ ಆದ ನಿನಗೆ ನಮೋ ನಮಃ ॥ ೨೬ ॥ ಯಾಜ್ಞಿಕರು ಅರಣಿ ಎಂಬ ಕಟ್ಟಿಗೆಯಲ್ಲಿ ಅಡಗಿರುವ ಅಗ್ನಿಯನ್ನು 'ಸಾಮಿಧೇನೀ' ಎಂಬ ಹದಿನೈದು ಮಂತ್ರಗಳಿಂದ ಪ್ರಕಟಪಡಿಸುವಂತೆ ಜ್ಞಾನಿ ಪುರುಷರು ತಮ್ಮ ಇಪ್ಪತ್ತೇಳು ಶಕ್ತಿಗಳ ಒಳಗೆ ಗೂಢವಾಗಿ ಅಡಗಿರುವ ನಿನ್ನನ್ನು ತಮ್ಮ ಶುದ್ಧಬುದ್ಧಿಯಿಂದ ಹೃದಯದಲ್ಲೇ ಹುಡುಕಿ ಸಾಕ್ಷಾತ್ಕರಿಸಿಕೊಳ್ಳುತ್ತಾರೆ. ॥ ೨೭ ॥ ಜಗತ್ತಿನಲ್ಲಿ ಕಂಡುಬರುವ ಭಿನ್ನತೆಗಳೆಲ್ಲವೂ ಮಾಯೆಯಿಂದಲೇ ಆಗಿವೆ. ಮಾಯೆಯನ್ನು ನಿಷೇಧಮಾಡಿದಾಗ ಕೇವಲ ಪರಮ ಸುಖದ ಸಾಕ್ಷಾತ್ಕಾರರೂಪವಾದ ನೀನೇ ಶೇಷವಾಗಿ ಉಳಿಯುವೆ. ಆದರೆ ವಿಚಾರಮಾಡಿದಾಗ ನಿನ್ನ ಸ್ವರೂಪದಲ್ಲಿ ಮಾಯೆಯು ನಿರ್ವಚನವಾಗಲಾರದು. ಅರ್ಥಾತ್ ಮಾಯೆಯೂ ನೀನೇ ಆಗಿರುವೆ. ಆದ್ದರಿಂದ ಎಲ್ಲ ನಾಮ ಮತ್ತು ಎಲ್ಲ ರೂಪಗಳೂ ನಿನ್ನವೇ ಆಗಿವೆ. ಪ್ರಭುವೇ! ನೀನು ನನ್ನ ಮೇಲೆ ಪ್ರಸನ್ನನಾಗು. ನನ್ನನ್ನು ಆತ್ಮಪ್ರಸಾದದಿಂದ ಪೂರ್ಣಗೊಳಿಸಿಬಿಡು. ॥ ೨೮ ॥

ಸ್ವಾಮಿ! ವಾಣಿಯಿಂದ ಹೇಳುವುದೆಲ್ಲವೂ ಅಥವಾ ಮನಸ್ಸು, ಬುದ್ಧಿ, ಇಂದ್ರಿಯಗಳಿಂದ ಗ್ರಹಿಸಲಾಗುವುದೆಲ್ಲವೂ ನಿನ್ನ ಸ್ವರೂಪವಲ್ಲ. ಏಕೆಂದರೆ, ಅವೆಲ್ಲವೂ ಗುಣರೂಪವಾಗಿದೆ, ನೀನು ಗುಣಗಳ ಉತ್ಪತ್ತಿ ಮತ್ತು ಪ್ರಳಯದ ಅಧಿಷ್ಠಾನನಾಗಿರುವೆ. ನಿನ್ನಲ್ಲಿ ಅವುಗಳ ಕೇವಲ ಪ್ರತೀತಿ ಮಾತ್ರವಿದೆ. ॥ ೨೯ ॥ ಭಗವಂತನೇ! ಈ ಇಡೀ ಜಗತ್ತು

ಯಸ್ಮಿನ್ ಯತೋ ಯೇನ ಚ ಯಸ್ಯ ಯಸ್ಮೈ
ಯದ್ ಯೋ ಯಥಾ ಕುರುತೇ ಕಾರ್ಯತೇ ಚ ।
ಪರಾವರೇಷಾಂ ಪರಮಂ ಪ್ರಾಕ್ ಪ್ರಸಿದ್ಧಂ
ತದ್ ಬ್ರಹ್ಮ ತದ್ಧೇತುರನನ್ಯದೇಕಮ್ ॥ ೩೦ ॥

ಯಚ್ಛಕ್ತಯೋ ವದತಾಂ ವಾದಿನಾಂ ವೈ
ವಿವಾದಸಂವಾದಭುವೋ ಭವಂತಿ ।
ಕುರ್ವಂತಿ ಚೈಷಾಂ ಮುಹುರಾತ್ಮಮೋಹಂ
ತಸ್ಮೈ ನಮೋಽನಂತಗುಣಾಯ ಭೂಮ್ನೇ ॥ ೩೧ ॥

ಅಸ್ತೀತಿ ನಾಸ್ತೀತಿ ಚ ವಸ್ತುನಿಷ್ಠಯೋ-
ರೇಕಸ್ಥಯೋರ್ಭಿನ್ನವಿರುದ್ಧಧರ್ಮಣೋಃ ।
ಅವೇಕ್ಷಿತಂ ಕಿಂಚನ ಯೋಗಸಾಂಖ್ಯಯೋಃ
ಸಮಂ ಪರಂ ಹ್ಯನುಕೂಲಂ ಬೃಹತ್ತತ್ ॥ ೩೨ ॥

ಯೋಽನುಗ್ರಹಾರ್ಥಂ ಭಜತಾಂ ಪಾದಮೂಲ-
ಮನಾಮರೂಪೋ ಭಗವಾನನಂತಃ ।
ನಾಮಾನಿ ರೂಪಾಣಿ ಚ ಜನ್ಮಕರ್ಮಭಿ-
ರ್ಭೇಜೇ ಸ ಮಹ್ಯಂ ಪರಮಃ ಪ್ರಸೀದತು ॥ ೩೩ ॥

ಯಃ ಪ್ರಾಕೃತೈರ್ಜ್ಞಾನಪಥೈರ್ಜನಾನಾಂ
ಯಥಾಶಯಂ ದೇಹಗತೋ ವಿಭಾತಿ ।
ಯಥಾನಿಲಃ ಪಾರ್ಥಿವಮಾಶ್ರಿತೋ ಗುಣಂ
ಸ ಈಶ್ವರೋ ಮೇ ಕುರುತಾನ್ಮನೋರಥಮ್ ॥ ೩೪ ॥

ನಿನ್ನಲ್ಲಿ ನೆಲೆಸಿದೆ. ನಿನ್ನಿಂದಲೇ ಉಂಟಾಗಿದೆ. ನೀನು ಬೇರೆ ಯಾವುದರ ಆಸರೆಯಿಲ್ಲದೆ ತನ್ನಿಂದಲೇ ಇದನ್ನು ನಿರ್ಮಿಸಿರುವೆ. ಇದು ನಿನ್ನದೇ ಆಗಿದ್ದು ನಿನಗಾಗಿಯೇ ಇದೆ. ಈ ರೂಪದಲ್ಲಿ ಉಂಟಾಗುವವನೂ ನೀನೇ ಆಗಿರುವೆ ಮತ್ತು ಉಂಟು ಮಾಡುವವನೂ ನೀನೇ ಆಗಿರುವೆ. ಉಂಟಾಗುವ-ಉಂಟು ಮಾಡುವ ವಿಧಿಯೂ ನೀನೇ ಆಗಿರುವೆ. ಎಲ್ಲರಿಂದ ಕಾರ್ಯ ಮಾಡಿಸುವವನೂ ನೀನೇ. ಕಾರ್ಯ-ಕಾರಣ ಭೇದ ಇಲ್ಲದಿರುವಾಗಲೂ ನೀನೇ ಸ್ವಯಂ ಸಿದ್ಧ ಸ್ವರೂಪದಿಂದ ನೆಲೆಗೊಂಡಿದ್ದೆ. ಇದರಿಂದ ಎಲ್ಲದರ ಕಾರಣನು ನೀನೇ ಆಗಿರುವೆ. ನೀನು ಜೀವ-ಜಗತ್ತೆಂಬ ಭೇದದಿಂದ ಮತ್ತು ಸ್ವಗತಭೇದದಿಂದ ಸರ್ವಥಾ ರಹಿತವಾದ ಅದ್ವಿತೀಯನಾಗಿರುವೆ. ನೀನು ಸ್ವಯಂ ಬ್ರಹ್ಮನೇ ಆಗಿರುವೆ. ನನ್ನ ಮೇಲೆ ಪ್ರಸನ್ನನಾಗು. ॥ ೩೦ ॥ ಪ್ರಭೋ! ವಾದೀ-ಪ್ರತಿವಾದಿಗಳ ವಿವಾದ ಮತ್ತು ಸಂವಾದ(ಐಕ್ಯಮತ್ಯ)ದ ವಿಷಯವೂ ನಿನ್ನ ಶಕ್ತಿಯೇ ಆಗಿದೆ ಹಾಗೂ ಅವರನ್ನು ಪದೇ-ಪದೇ ಮೋಹದಲ್ಲಿ ಅದು ಕೆಡವುತ್ತ ಇರುತ್ತದೆ. ನೀನು ಅಪ್ರಾಕೃತ ಅನಂತ ಕಲ್ಯಾಣಗುಣಗಳಿಂದ ಕೂಡಿದ್ದು ಸ್ವತಃ ಅನಂತನೇ ಆಗಿರುವೆ. ಅಂತಹ ನಿನಗೆ ನಾನು ನಮಸ್ಕರಿಸುತ್ತೇನೆ. ॥ ೩೧ ॥ ಭಗವಂತಾ! ನಮ್ಮ ಪ್ರಭುವು ಹಸ್ತ- ಪಾದಾದಿಗಳಿಂದ ಕೂಡಿದ ಸಾಕಾರ-ವಿಗ್ರಹನಾಗಿದ್ದಾನೆ ಎಂದು ಉಪಾಸಕರು ಹೇಳುತ್ತಾರೆ. ಭಗವಂತನು ಹಸ್ತ-ಪಾದಾದಿ ವಿಗ್ರಹದಿಂದ ರಹಿತ-ನಿರಾಕಾರನಾಗಿದ್ದಾನೆಂದು ಸಾಂಖ್ಯರು ಹೇಳುತ್ತಾರೆ. ಹೀಗೆ ಅವರು ಒಂದೇ ವಸ್ತುವನ್ನು ಎರಡು ಪರಸ್ಪರ ವಿರೋಧೀ ಧರ್ಮಗಳನ್ನು ವರ್ಣಿಸುತ್ತಿದ್ದರೂ ಅದರಲ್ಲಿ ವಿರೋಧವಿಲ್ಲ. ಏಕೆಂದರೆ, ಎರಡೂ ಒಂದೇ ಪರಮ ವಸ್ತುವಿನಲ್ಲಿ ಸ್ಥಿತವಾಗಿವೆ. ಆಧಾರವಿಲ್ಲದೆ ಕೈ-ಕಾಲು ಮುಂತಾದವುಗಳು ಇರುವುದು ಸಂಭವವೇ ಇಲ್ಲ. ಹಾಗೂ ನಿಷೇಧಕ್ಕೆ ಯಾವುದಾದರೂ ಅವಧಿಯು ಇರಲೇ ಬೇಕಲ್ಲವೇ. ಆ ಆಧಾರ ಮತ್ತು ನಿಷೇಧದ ಅವಧಿಯೂ ನೀನೇ ಆಗಿರುವೆ. ಅದಕ್ಕಾಗಿ ಸಾಕಾರ-ನಿರಾಕಾರ ಎರಡರಿಂದಲೂ ಅವಿರುದ್ಧವಾದ ಸಮಬ್ರಹ್ಮನು ನೀನೇ ಆಗಿರುವೆ. ॥ ೩೨ ॥ ಪ್ರಭೋ! ನೀನು ಅನಂತನಾಗಿರುವೆ. ನಿನಗೆ ಪ್ರಾಕೃತವಾದ ನಾಮವಾಗಲೀ, ರೂಪವಾಗಲೀ ಇಲ್ಲ. ಆದರೂ ನಿನ್ನ ಚರಣಕಮಲಗಳನ್ನು ಭಜಿಸುವವರ ಮೇಲೆ ಅನುಗ್ರಹವನ್ನು ತೋರಲಿಕ್ಕಾಗಿ ನೀನೇ ಅನೇಕ ರೂಪಗಳಲ್ಲಿ ಪ್ರಕಟನಾಗಿ, ಅನೇಕ ಲೀಲೆಗಳನ್ನು ನಡೆಸುವೆ ಹಾಗೂ ಆಯಾಯ ರೂಪಗಳಿಗೆ, ಲೀಲೆಗಳಿಗೆ ಅನುಗುಣವಾಗಿ ಅನೇಕ ನಾಮಗಳನ್ನು ಧರಿಸಿಕೊಳ್ಳುವೆ. ಓ ಪರಮಾತ್ಮಾ! ನನಗೆ ಕೃಪಾಪ್ರಸಾದವನ್ನಿತ್ತು ಪ್ರಸನ್ನನಾಗು. ॥ ೩೩ ॥ ಜನರ ಉಪಾಸನೆಗಳು ಸಾಧಾರಣ ಮಟ್ಟದ್ದಾಗಿರುತ್ತವೆ. ಆದ್ದರಿಂದ ನೀನು ಎಲ್ಲರ ಹೃದಯದಲ್ಲಿ ನೆಲೆಸಿ ಅವರ ಭಾವನೆಗೆ ಅನುಸಾರವಾಗಿ ಬೇರೆ-ಬೇರೆ ದೇವತೆಗಳ ರೂಪದಲ್ಲಿ ಕಾಣಿಸಿಕೊಳ್ಳುತ್ತಿರುವೆ. ಹಾಗೆಯೇ ಗಂಧವನ್ನು ಆಶ್ರಯಿಸಿದ ಗಾಳಿಯು ಸುಗಂಧಿತವಾಗಿ ಕಂಡುಬರುತ್ತದೆ. ಆದರೆ ಗಾಳಿಯು ನಿಜವಾಗಿ ಸುಗಂಧಿತವಾಗಿರುವುದಿಲ್ಲ. ಹೀಗೆಯೇ ಎಲ್ಲರ ಭಾವನೆಗಳನ್ನು ಅನುಸರಿಸುವ ಪ್ರಭುವು ನನ್ನ ಅಭಿಲಾಷೆಯನ್ನು ಪೂರ್ಣಗೊಳಿಸಲಿ. ॥ ೩೪ ॥

ಶ್ರೀಶುಕ ಉವಾಚ

**ಇತಿ ಸ್ತುತಃ ಸಂಸ್ತುವತಃ ಸ ತಸ್ಮಿನ್ನಘಮರ್ಷಣೇ ।
ಆವಿರಾಸೀತ್ಕುರುಶ್ರೇಷ್ಠ ಭಗವಾನ್ ಭಕ್ತವತ್ಸಲಃ ॥ ೩೫ ॥**

**ಕೃತಪಾದಃ ಸುಪರ್ಣಾಂಸೇ ಪ್ರಲಂಬಾಷ್ಟಮಹಾಭುಜಃ ।
ಚಕ್ರಶಂಖಾಸಿಚರ್ಮೇಷುಧನುಃಪಾಶಗದಾಧರಃ ॥ ೩೬ ॥**

**ಪೀತವಾಸಾ ಘನಶ್ಯಾಮಃ ಪ್ರಸನ್ನವದನೇಕ್ಷಣಃ ।
ವನಮಾಲಾನಿವೀತಾಂಗೋ ಲಸಚ್ಛ್ರೀವತ್ಸಕೌಸ್ತುಭಃ ॥ ೩೭ ॥**

**ಮಹಾಕಿರೀಟಕಟಕಃ ಸ್ಫುರನ್ಮಕರಕುಂಡಲಃ ।
ಕಾಂಚ್ಯಂಗುಲೀಯವಲಯನೂಪುರಾಂಗದಭೂಷಿತಃ ॥ ೩೮ ॥**

**ತ್ರೈಲೋಕ್ಯಮೋಹನಂ ರೂಪಂ ಬಿಭ್ರತ್ ತ್ರಿಭುವನೇಶ್ವರಃ ।
ವೃತೋ ನಾರದನಂದಾದ್ಯೈಃ ಪಾರ್ಷದೈಃ ಸುರಯೂಥಪೈಃ ॥ ೩೯ ॥**

**ಸ್ತೂಯಮಾನೋಽನುಗಾಯದ್ಭಿಃ ಸಿದ್ಧಗಂಧರ್ವಚಾರಣೈಃ ।
ರೂಪಂ ತನ್ಮಹದಾಶ್ಚರ್ಯಂ ವಿಚಕ್ಷ್ಯಾಗತಸಾಧ್ವಸಃ ॥ ೪೦ ॥**

**ನನಾಮ ದಂಡವದ್ಭೂಮೌ ಪ್ರಹೃಷ್ಟಾತ್ಮಾ ಪ್ರಜಾಪತಿಃ ।
ನ ಕಿಂಚನೋದೀರಯಿತುಮಶಕತ್ತೀವ್ರಯಾ ಮುದಾ ।
ಆಪೂರಿತಮನೋದ್ವಾರೈರ್ಹ್ರದಿನ್ಯ ಇವ ನಿರ್ಝರೈಃ ॥ ೪೧ ॥**

**ತಂ ತಥಾವನತಂ ಭಕ್ತಂ ಪ್ರಜಾಕಾಮಂ ಪ್ರಜಾಪತಿಮ್ ।
ಚಿತ್ತಜ್ಞಃ ಸರ್ವಭೂತಾನಾಮಿದಮಾಹ ಜನಾರ್ದನಃ ॥ ೪೨ ॥**

ಶ್ರೀಭಗವಾನುವಾಚ

**ಪ್ರಾಚೇತಸ ಮಹಾಭಾಗ ಸಂಸಿದ್ಧಸ್ತಪಸಾ ಭವಾನ್ ।
ಯಚ್ಛ್ರದ್ಧಯಾ ಮತ್ಪರಯಾ ಮಯಿ ಭಾವಂ ಪರಂ ಗತಃ ॥ ೪೩ ॥**

**ಪ್ರೀತೋಽಹಂ ತೇ ಪ್ರಜಾನಾಥ ಯತ್ತೇಽಸ್ಯೋದ್ಬೃಂಹಣಂ ತಪಃ ।
ಮಮೈಷ ಕಾಮೋ ಭೂತಾನಾಂ ಯದ್ ಭೂಯಾಸುರ್ವಿಭೂತಯಃ ॥ ೪೪ ॥**

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಮಹಾರಾಜನೇ! ವಿಂಧ್ಯಪರ್ವತದ ಅಘಮರ್ಷಣ ತೀರ್ಥದಲ್ಲಿ ದಕ್ಷಪ್ರಜಾಪತಿಯು ಹೀಗೆ ಸ್ತುತಿಸಿದಾಗ ಭಕ್ತವತ್ಸಲ ಭಗವಂತನು ಅವನ ಮುಂದೆ ಪ್ರಕಟಗೊಂಡನು. ॥ ೩೫ ॥ ಆಗ ಭಗವಂತನು ಗರುಡನ ಹೆಗಲುಗಳ ಮೇಲೆ ಚರಣಗಳನ್ನಿಟ್ಟಿದ್ದನು. ಹೃಷ್ಟ-ಪುಷ್ಟವಾದ ವಿಶಾಲವಾದ ಎಂಟು ಭುಜಗಳಿಂದ ಶೋಭಿಸುತ್ತಾ ಅವುಗಳಲ್ಲಿ ಚಕ್ರ, ಶಂಖ, ಖಡ್ಗ, ಗುರಾಣಿ, ಬಾಣ, ಧನುಸ್ಸು, ಪಾಶ ಮತ್ತು ಗದೆ ಮುಂತಾದ ದಿವ್ಯಾಯುಧಗಳನ್ನು ಧರಿಸಿದ್ದನು. ॥ ೩೬ ॥ ಮಳೆಗಾಲದ ಮೇಘದಂತೆ ಶ್ಯಾಮಲ ಶರೀರದ ಮೇಲೆ ಪೀತಾಂಬರವು ಪ್ರಕಾಶಿಸುತ್ತಿದೆ. ಮುಖಮಂಡಲವು ಪ್ರಫುಲ್ಲಿತವಾಗಿದ್ದು ಕಣ್ಣುಗಳಿಂದ ಪ್ರಸಾದದ ಮಳೆಯೇ ಗರೆಯುತ್ತಿತ್ತು. ಮೊಣಕಾಲಿನವರೆಗೆ ವನಮಾಲೆಯು ಜೋತು ಬೀಳುತ್ತಿತ್ತು. ವಕ್ಷಸ್ಥಳದಲ್ಲಿ ಶ್ರೀದೇವಿ ಮತ್ತು ಶ್ರೀವತ್ಸ ಲಾಂಛನ ಹಾಗೂ ಕೊರಳಲ್ಲಿ ಕೌಸ್ತುಭಮಣಿಯು ಹೊಳೆಯುತ್ತಿತ್ತು. ॥ ೩೭ ॥ ಬಹುಮೂಲ್ಯವಾದ ಕಿರೀಟ, ಕಂಕಣ, ಮಕರಾಕೃತಿಯ ಕುಂಡಲಗಳು, ಒಡ್ಯಾಣ, ಉಂಗುರ, ತೋಳ್ಬಳೆಗಳು, ಕಾಲಂದುಗೆ, ಭುಜಕೀರ್ತಿಗಳು ತಮ್ಮ-ತಮ್ಮ ಸ್ಥಾನಗಳಲ್ಲಿ ಶೋಭಿಸುತ್ತಿದ್ದುವು. ॥ ೩೮ ॥ ಮೂರು ಲೋಕದೊಡೆಯ ಭಗವಂತನು ತ್ರಿಲೋಕಗಳನ್ನು ಮರುಳು-ಮಾಡುವಂತಹ ರೂಪವನ್ನು ಧರಿಸಿದ್ದನು. ನಾರದ, ನಂದ, ಸುನಂದ ಮುಂತಾದ ಪಾರ್ಷದರು ಅವನ ಸುತ್ತಲೂ ನಿಂತಿದ್ದರು. ಇಂದ್ರಾದಿ ದೇವೇಶ್ವರರು ಸ್ತುತಿ ಮಾಡುತ್ತಿದ್ದರು. ಸಿದ್ಧರು, ಗಂಧರ್ವರು, ಚಾರಣರು ಭಗವಂತನ ಗುಣಗಳನ್ನು ಕೊಂಡಾಡುತ್ತಿದ್ದರು. ಇಂತಹ ಅತ್ಯಂತ ಆಶ್ಚರ್ಯಮಯವೂ, ಅಲೌಕಿಕವೂ ಆದ ರೂಪವನ್ನು ನೋಡಿ ದಕ್ಷಪ್ರಜಾಪತಿಯು ಸ್ವಲ್ಪ ಭಯಚಕಿತನಾದನು. ॥ ೩೯-೪೦ ॥ ದಕ್ಷಪ್ರಜಾಪತಿಯು ಆನಂದ ತುಂದಿಲನಾಗಿ ಭಗವಂತನ ಚರಣಗಳಲ್ಲಿ ಸಾಷ್ಟಾಂಗ ನಮಸ್ಕಾರ ಮಾಡಿದನು. ಝರಿಗಳ ನೀರಿನಿಂದ ನದಿಗಳು ತುಂಬಿ ಹೋಗುವಂತೆ, ಉತ್ಕಂಠೆಯಿಂದ ಆನಂದೋದ್ರೇಕದಿಂದ ಅವನ ಪ್ರತಿಯೊಂದು ಇಂದ್ರಿಯವೂ ತುಂಬಿಹೋಯಿತು. ಆನಂದ ಪರವಶತೆಯಿಂದ ಅವನು ಏನನ್ನೂ ಮಾತಾಡದಾದನು. ॥ ೪೧ ॥ ಪರೀಕ್ಷಿತನೇ! ದಕ್ಷಪ್ರಜಾಪತಿಯು ಅತ್ಯಂತ ನಮ್ರತೆಯಿಂದ ಬಾಗಿ ಭಗವಂತನ ಇದಿರು ನಿಂತಿದ್ದನು. ಭಗವಂತನು ಎಲ್ಲರ ಹೃದಯದ ಮಾತು ಬಲ್ಲವನಾಗಿದ್ದಾನೆ. ಅವನು ದಕ್ಷಪ್ರಜಾಪತಿಯ ಭಕ್ತಿ ಮತ್ತು ಪ್ರಜಾವೃದ್ಧಿಯ ಕಾಮನೆಯನ್ನು ಅರಿತುಕೊಂಡು ಅವನಲ್ಲಿ ಇಂತೆಂದನು. ॥ ೪೨ ॥

ಶ್ರೀಭಗವಂತನು ಹೇಳಿದನು – ಪರಮ ಭಾಗ್ಯಶಾಲಿಯಾದ ದಕ್ಷಪ್ರಜಾಪತಿಯೇ! ಈಗ ನಿನ್ನ ತಪಸ್ಸು ಸಿದ್ಧವಾಯಿತು. ಏಕೆಂದರೆ, ನನ್ನಲ್ಲಿ ದೃಢ ಶ್ರದ್ಧೆಯಿಂದ ನಿನ್ನ ಹೃದಯದಲ್ಲಿ ನನ್ನ ಕುರಿತು ಪರಮ ಪ್ರೇಮದ ಉದಯವಾಗಿದೆ. ॥ ೪೩ ॥ ಪ್ರಜಾಪತಿಯೇ! ನೀನು ಈ ವಿಶ್ವದ ವೃದ್ಧಿಗಾಗಿ ತಪಸ್ಸನ್ನು ಆಚರಿಸಿದೆ. ಅದಕ್ಕಾಗಿ ನಾನು ನಿನ್ನ ಮೇಲೆ ಪ್ರಸನ್ನನಾಗಿರುವೆನು. ಏಕೆಂದರೆ, ಜಗತ್ತಿನ ಸಮಸ್ತ ಪ್ರಾಣಿಗಳ ಅಭಿವೃದ್ಧಿ ಹಾಗೂ ಸಮೃದ್ಧಿ ಉಂಟಾಗಲೆಂದೇ ನನ್ನ ಬಯಕೆಯೂ ಆಗಿದೆ. ॥ ೪೪ ॥

ಬ್ರಹ್ಮಾ ಭವೋಽಭವಂತಶ್ಚ ಮನವೋ ವಿಬುಧೇಶ್ವರಾಃ ।
ವಿಭೂತಯೋ ಮಮ ಹ್ಯೇತಾ ಭೂತಾನಾಂ ಭೂತಿಹೇತವಃ
॥ ೪೫ ॥

ತಪೋ ಮೇ ಹೃದಯಂ ಬ್ರಹ್ಮಂಸ್ತನುರ್ವಿದ್ಯಾ ಕ್ರಿಯಾಽಽಕೃತಿಃ ।
ಅಂಗಾನಿ ಕ್ರತವೋ ಜಾತಾ ಧರ್ಮ ಆತ್ಮಾಸವಃ ಸುರಾಃ
॥ ೪೬ ॥

ಅಹಮೇವಾಸಮೇವಾಗ್ರೇ ನಾನ್ಯತ್ಕಿಂಚಾಂತರಂ ಬಹಿಃ ।
ಸಂಜ್ಞಾನಮಾತ್ರಮವ್ಯಕ್ತಂ ಪ್ರಸುಪ್ತಮಿವ ವಿಶ್ವತಃ
॥ ೪೭ ॥

ಮಯ್ಯನಂತಗುಣೇಽನಂತೇ ಗುಣತೋ ಗುಣವಿಗ್ರಹಃ ।
ಯದಾಽಽಸೀತ್ತತ ಏವಾದ್ಯಃ ಸ್ವಯಂಭೂಃ ಸಮಭೂದಜಃ
॥ ೪೮ ॥

ಸ ವೈ ಯದಾ ಮಹಾದೇವೋ ಮಮ ವೀರ್ಯೋಪಬೃಂಹಿತಃ ।
ಮೇನೇ ಖಿಲಮಿವಾತ್ಮಾನಮುದ್ಯತಃ ಸರ್ಗಕರ್ಮಣಿ
॥ ೪೯ ॥

ಅಥ ಮೇಽಭಿಹಿತೋ ದೇವಸ್ತಪೋಽತಪ್ಯತ ದಾರುಣಮ್ ।
ನವ ವಿಶ್ವಸೃಜೋ ಯುಷ್ಮಾನ್ ಯೇನಾದಾವಸೃಜದ್ವಿಭುಃ
॥ ೫೦ ॥

ಏಷಾ ಪಂಚಜನಸ್ಯಾಂಗ ದುಹಿತಾ ವೈ ಪ್ರಜಾಪತೇಃ ।
ಅಸಿಕ್ನೀ ನಾಮ ಪತ್ನೀತ್ವೇ ಪ್ರಜೇಶ ಪ್ರತಿಗೃಹ್ಯತಾಮ್
॥ ೫೧ ॥

ಮಿಥುನವ್ಯವಾಯಧರ್ಮಸ್ತ್ವಂ ಪ್ರಜಾಸರ್ಗಮಿಮಂ ಪುನಃ ।
ಮಿಥುನವ್ಯವಾಯಧರ್ಮಿಣ್ಯಾಂ ಭೂರಿಶೋ ಭಾವಯಿಷ್ಯಸಿ
॥ ೫೨ ॥

ತ್ವತ್ತೋಽಧಸ್ತಾತ್ಪ್ರಜಾಃ ಸರ್ವಾ ಮಿಥುನೀಭೂಯ ಮಾಯಯಾ ।
ಮದೀಯಯಾ ಭವಿಷ್ಯಂತಿ ಹರಿಷ್ಯಂತಿ ಚ ಮೇ ಬಲಿಮ್
॥ ೫೩ ॥

ಶ್ರೀಶುಕ ಉವಾಚ

ಇತ್ಯುಕ್ತ್ವಾ ಮಿಷತಸ್ತಸ್ಯ ಭಗವಾನ್ವಿಶ್ವಭಾವನಃ ।
ಸ್ವಪ್ನೋಪಲಬ್ಧಾರ್ಥ ಇವ ತತ್ರೈವಾಂತರ್ದಧೇ ಹರಿಃ
॥ ೫೪ ॥

ಬ್ರಹ್ಮದೇವರು, ಶಂಕರರು, ನಿಮ್ಮಂತಹ ಪ್ರಜಾಪತಿಗಳು, ಸ್ವಾಯಂಭುವ ಮುಂತಾದ ಮನುಗಳು, ಇಂದ್ರಾದಿ ದೇವೇಶ್ವರರು – ಇವರೆಲ್ಲರೂ ನನ್ನ ವಿಭೂತಿಗಳೇ ಆಗಿವೆ ಮತ್ತು ಎಲ್ಲರೂ ಪ್ರಾಣಿಗಳ ಅಭಿವೃದ್ಧಿ ಮಾಡುವವರಾಗಿದ್ದಾರೆ. ॥ ೪೫ ॥ ಬ್ರಾಹ್ಮಣೋತ್ತಮನೇ! ತಪಸ್ಸು ನನ್ನ ಹೃದಯವಾಗಿದೆ. ವಿದ್ಯೆಯು ಶರೀರವಾಗಿದೆ. ಕರ್ಮವು ಆಕೃತಿಯಾಗಿದೆ. ಯಜ್ಞವೇ ಅಂಗಾಂಗಗಳು. ಧರ್ಮ ಮನಸ್ಸು ಮತ್ತು ದೇವತೆಗಳು ಪ್ರಾಣವಾಗಿದ್ದಾರೆ. ॥ ೪೬ ॥ ಈ ಸೃಷ್ಟಿಯು ಇಲ್ಲದಿದ್ದಾಗ ನಿಷ್ಕ್ರಿಯ ರೂಪದಿಂದ ಕೇವಲ ನಾನೇ ಇದ್ದೆ. ಒಳಗೆ-ಹೊರಗೆ ಎಲ್ಲಿಯೂ ಏನೂ ಇರಲಿಲ್ಲ. ದ್ರಷ್ಟಾ ಇರಲೀ, ದೃಶ್ಯವಾಗಲೀ ಇರಲಿಲ್ಲ. ಕೇವಲ ಜ್ಞಾನಸ್ವರೂಪನು ಮತ್ತು ಅವ್ಯಕ್ತನು ನಾನೊಬ್ಬನೇ ಇದ್ದೆ. ಎಲ್ಲ ಕಡೆಗಳಲ್ಲಿಯೂ ಸುಷುಪ್ತಿಯೇ-ಸುಷುಪ್ತಿ ಆವರಿಸಿತ್ತು ಎಂದೇ ತಿಳಿದುಕೋ. ॥ ೪೭ ॥ ಪ್ರಿಯ ದಕ್ಷನೇ! ನಾನು ಅನಂತಗುಣಗಳ ಆಧಾರನು ಹಾಗೂ ಸ್ವಯಂ ಅನಂತನಾಗಿದ್ದೇನೆ. ಗುಣಮಯ ಮಾಯೆಯ ಕ್ಷೋಭದಿಂದ ಈ ಬ್ರಹ್ಮಾಂಡ-ಶರೀರವು ಪ್ರಕಟವಾದಾಗ ಇದರಲ್ಲಿ ಅಯೋನಿಜ ಆದಿಪುರುಷ ಬ್ರಹ್ಮನು ಉತ್ಪನ್ನನಾದನು. ॥ ೪೮ ॥ ನಾನು ಅವನಲ್ಲಿ ಶಕ್ತಿ ಮತ್ತು ಚೇತನೆಯ ಸಂಚಾರ ಮಾಡಿಸಿದಾಗ ದೇವಶಿರೋಮಣಿ ಬ್ರಹ್ಮದೇವರು ಸೃಷ್ಟಿ ಮಾಡಲು ತೊಡಗಿದನು. ಆದರೆ ಅವನು ತನ್ನನ್ನು ಸೃಷ್ಟಿಕಾರ್ಯದಲ್ಲಿ ಅಸಮರ್ಥನೆಂದೇ ತಿಳಿದನು. ॥ ೪೯ ॥ ಆಗ ನಾನು ಅವನಿಗೆ ತಪಸ್ಸುಮಾಡುವಂತೆ ಆಜ್ಞಾಪಿಸಿದೆ. ಅದರಂತೆ ಅವನು ಘೋರ ತಪಸ್ಸು ಮಾಡಿದನು ಮತ್ತು ಆ ತಪಸ್ಸಿನ ಪ್ರಭಾವದಿಂದ ಮೊಟ್ಟ ಮೊದಲಿಗೆ ಒಂಭತ್ತು ಮಂದಿ ಪ್ರಜಾಪತಿಗಳಾದ ನಿಮ್ಮನ್ನು ಸೃಷ್ಟಿಸಿದನು. ॥ ೫೦ ॥

ಪ್ರಿಯ ದಕ್ಷನೇ! ನೋಡು! ಇವಳು ಪಂಚಜನ ಪ್ರಜಾಪತಿಯ ಕನ್ಯೆಯಾದ ಅಸಿಕ್ನಿಯು. ಇವಳನ್ನು ನೀನು ಧರ್ಮಪತ್ನಿಯಾಗಿ ಸ್ವೀಕರಿಸು. ॥ ೫೧ ॥ ಇನ್ನು ನೀನು ಗೃಹಸ್ಥರಿಗೆ ಯೋಗ್ಯವಾದ ಸ್ತ್ರೀಸಹವಾಸ ಧರ್ಮವನ್ನು ಸ್ವೀಕರಿಸು. ಈ ಅಸಿಕ್ನಿಯೂ ಅದೇ ಧರ್ಮವನ್ನು ಸ್ವೀಕರಿಸುವಳು. ಆಗ ನೀನು ಇವಳಿಂದ ಅನೇಕ ಪ್ರಜೆಗಳನ್ನು ಉತ್ಪನ್ನ ಮಾಡಬಲ್ಲೆ. ॥ ೫೨ ॥ ಪ್ರಜಾಪತಿಯೇ! ಇಂದಿನ ತನಕವಾದರೋ ಮಾನಸೀ ಸೃಷ್ಟಿಯಾಗುತ್ತಿತ್ತು. ಆದರೆ ಇನ್ನು ನಿನ್ನ ಬಳಿಕ ಎಲ್ಲ ಪ್ರಜೆಯು ನನ್ನ ಮಾಯೆಯಿಂದ ಸ್ತ್ರೀ-ಪುರುಷ ಸಂಯೋಗದಿಂದಲೇ ಉತ್ಪನ್ನರಾಗಿ, ನನ್ನ ಸೇವೆಯಲ್ಲಿ ತತ್ಪರರಾಗಿರುವರು. ॥ ೫೩ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಎಲೈ ರಾಜನೇ! ವಿಶ್ವಕ್ಕೆಲ್ಲಾ ಜೀವನಪ್ರದನಾದ ಭಗವಾನ್ ಶ್ರೀಹರಿಯು ಹೀಗೆ ಹೇಳಿ ದಕ್ಷನ ಮುಂದೆಯೇ – ಸ್ವಪ್ನದಲ್ಲಿ ನೋಡಿದ ವಸ್ತು ಸ್ವಪ್ನವು ಮುರಿದಾಗ ಕಣ್ಮರೆಯಾಗುವಂತೆ ಅಂತರ್ಧಾನ ಹೊಂದಿದನು. ॥ ೫೪ ॥

ನಾಲ್ಕನೆಯ ಅಧ್ಯಾಯವು ಮುಗಿಯಿತು. ॥ ೪ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಷಷ್ಠಸ್ಕಂಧೇ ಚತುರ್ಥೋಽಧ್ಯಾಯಃ ॥ ೪ ॥

ಐದನೆಯ ಅಧ್ಯಾಯ

ಶ್ರೀನಾರದರ ಉಪದೇಶದಂತೆ ದಕ್ಷಪುತ್ರರ ವಿರಕ್ತಿ ಹಾಗೂ ದಕ್ಷನಿಂದ ನಾರದರಿಗೆ ಶಾಪ

ಶ್ರೀಶುಕ ಉವಾಚ

ತಸ್ಯಾಂ ಸ ಪಾಂಚಜನ್ಯಾಂ ವೈ ವಿಷ್ಣುಮಾಯೋಪಬೃಂಹಿತಃ ।
ಹರ್ಯಶ್ವಸಂಜ್ಞಾನಯುತಂ ಪುತ್ರಾನಜನಯದ್ ವಿಭುಃ ॥ ೧ ॥

ಅಪೃಥಗ್ಧರ್ಮಶೀಲಾಸ್ತೇ ಸರ್ವೇ ದಾಕ್ಷಾಯಣಾ ನೃಪ ।
ಪಿತ್ರಾ ಪ್ರೋಕ್ತಾಃ ಪ್ರಜಾಸರ್ಗೇ ಪ್ರತೀಚೀಂ ಪ್ರಯಯುರ್ದಿಶಮ್ ॥ ೨ ॥

ತತ್ರ ನಾರಾಯಣಸರಸ್ತೀರ್ಥಂ ಸಿಂಧು ಸಮುದ್ರಯೋಃ ।
ಸಂಗಮೋ ಯತ್ರ ಸುಮಹನ್ಮುನಿಸಿದ್ಧ ನಿಷೇವಿತಮ್ ॥ ೩ ॥

ತದುಪಸ್ಪರ್ಶನಾದೇವ ವಿನಿರ್ಧೂತಮಲಾಶಯಾಃ ।
ಧರ್ಮೇ ಪಾರಮಹಂಸ್ಯೇ ಚ ಪ್ರೋತ್ಪನ್ನಮತಯೋಽಪ್ಯುತ ॥ ೪ ॥

ತೇಪಿರೇ ತಪ ಏವೋಗ್ರಂ ಪಿತ್ರಾದೇಶೇನ ಯಂತ್ರಿತಾಃ ।
ಪ್ರಜಾವಿವೃದ್ಧಯೇ ಯತ್ತಾನ್ ದೇವರ್ಷಿಸ್ತಾನ್ ದದರ್ಶ ಹ ॥ ೫ ॥

ಉವಾಚ ಚಾಥ ಹರ್ಯಶ್ವಾಃ ಕಥಂ ಸ್ರಕ್ಷ್ಯಥ ವೈ ಪ್ರಜಾಃ ।
ಅದೃಷ್ಟ್ವಾಂತಂ ಭುವೋ ಯೂಯಂ ಬಾಲಿಶಾ ಬತ ಪಾಲಕಾಃ ॥ ೬ ॥

ತಥೈಕಪುರುಷಂ ರಾಷ್ಟ್ರಂ ಬಿಲಂ ಚಾದೃಷ್ಟನಿರ್ಗಮಮ್ ।
ಬಹುರೂಪಾಂ ಸ್ತ್ರಿಯಂ ಚಾಪಿ ಪುಮಾಂಸಂ ಪುಂಶ್ಚಲೀಪತಿಮ್ ॥ ೭ ॥

ನದೀಮುಭಯತೋವಾಹಾಂ ಪಂಚಪಂಚಾದ್ಭುತಂ ಗೃಹಮ್ ।
ಕ್ವಚಿದ್ಧಂಸಂ ಚಿತ್ರಕಥಂ ಕ್ಷೌರಪವ್ಯಂ ಸ್ವಯಂ ಭ್ರಮಿಮ್ ॥ ೮ ॥

ಕಥಂ ಸ್ವಪಿತುರಾದೇಶಮವಿದ್ವಾಂಸೋ ವಿಪಶ್ಚಿತಃ ।
ಅನುರೂಪಮವಿಜ್ಞಾಯ ಅಹೋ ಸರ್ಗಂ ಕರಿಷ್ಯಥ ॥ ೯ ॥

ಶ್ರೀಶುಕ ಉವಾಚ

ತನ್ನಿಶಮ್ಯಾಥ ಹರ್ಯಶ್ವಾ ಔತ್ಪತ್ತಿಕಮನೀಷಯಾ ।
ವಾಚಃ ಕೂಟಂ ತು ದೇವರ್ಷೇಃ ಸ್ವಯಂ ವಿಮಮೃಶುರ್ಧಿಯಾ ॥ ೧೦ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿದ್ರಾಜನೇ! ಭಗವಂತನ ಅದ್ಭುತ ಶಕ್ತಿಸಂಚಾರದಿಂದ ದಕ್ಷಪ್ರಜಾಪತಿಯು ಪರಮ ಸಮರ್ಥನಾದನು. ಅವನು ಪಂಚಜನಿಯ ಪುತ್ರಿಯಾದ ಅಸಿಕ್ನೀದೇವಿಯಲ್ಲಿ ಹರ್ಯಶ್ವರೆಂಬ ಹತ್ತುಸಾವಿರ ಪುತ್ರರನ್ನು ಪಡೆದನು. ॥ ೧ ॥ ರಾಜನೇ! ದಕ್ಷನಂದನರೆಲ್ಲರೂ ಒಂದೇ ಸ್ವಭಾವ, ಧರ್ಮ, ಆಚರಣೆಗಳುಳ್ಳವರಾಗಿದ್ದರು. ದಕ್ಷನು ಅವರಿಗೆ 'ಸಂತಾನವನ್ನು ಉಂಟುಮಾಡಿರಿ' ಎಂಬ ಅಪ್ಪಣೆಯನ್ನು ಕೊಟ್ಟಾಗ ಅವರೆಲ್ಲರೂ ತಪಸ್ಸಿಗಾಗಿ ಪಶ್ಚಿಮದಿಕ್ಕಿನತ್ತ ನಡೆದರು. ॥ ೨ ॥ ಪಶ್ಚಿಮದಿಕ್ಕಿನಲ್ಲಿ ಸಿಂಧುನದಿ ಮತ್ತು ಸಮುದ್ರಗಳ ಸಂಗಮ ಸ್ಥಾನದಲ್ಲಿ ನಾರಾಯಣಸರೋವರವೆಂಬ ದೊಡ್ಡ ತೀರ್ಥವಿದೆ. ದೊಡ್ಡ-ದೊಡ್ಡ ಮುನಿಗಳೂ, ಸಿದ್ಧರೂ ಅಲ್ಲಿ ವಾಸಿಸುತ್ತಾರೆ. ॥ ೩ ॥ ಹರ್ಯಶ್ವರು ಆ ನಾರಾಯಣ ಸರೋವರದಲ್ಲಿ ಸ್ನಾನ ಮಾಡುತ್ತಲೇ ಅವರ ಅಂತಃಕರಣಗಳು ಶುದ್ಧವಾದುವು. ಅವರ ಬುದ್ಧಿಯು ಭಾಗವತ ಧರ್ಮದಲ್ಲಿ ತೊಡಗಿತು. ಆದರೂ ತಂದೆಯ ಆಜ್ಞೆಗೆ ಒಳಪಟ್ಟದ್ದರಿಂದ ಅವರು ಉಗ್ರವಾದ ತಪಸ್ಸು ಮಾಡುತ್ತಿದ್ದರು. ಹೀಗೆ ಭಾಗವತಧರ್ಮದಲ್ಲಿ ಅಭಿರುಚಿ ಹೊಂದಿದ್ದರೂ ಇವರು ಪ್ರಜಾವೃದ್ಧಿಗಾಗಿಯೇ ತತ್ಪರರಾಗಿರುವುದು ಕಂಡು ದೇವಮುನಿಗಳಾದ ಶ್ರೀನಾರದರು ಅವರ ಬಳಿಗೆ ಬಂದು ಹೀಗೆ ಉಪದೇಶಿಸಿದರು – ಎಲೈ ಹರ್ಯಶ್ವರೇ! ನೀವು ಪ್ರಜಾಪತಿಗಳಾಗಿದ್ದರೂ ನಿಜವಾಗಿ ಮೂರ್ಖರೇ ಆಗಿದ್ದೀರಲ್ಲ! ಭೂಮಿಯ ಕೊನೆಯನ್ನೇ ಕಾಣದಿರುವ ನೀವು ಸೃಷ್ಟಿಯನ್ನು ಹೇಗೆ ಮಾಡುವಿರಿ? ಹೇಳಿ. ತುಂಬಾ ಆಶ್ಚರ್ಯವಾಗಿದೆ. ॥ ೪-೬ ॥ ಒಬ್ಬನೇ ಇರುವ ದೇಶವೊಂದುಂಟು. ಅದರಿಂದ ಹೊರಕ್ಕೆ ಬರಲು ಮಾರ್ಗವೇ ಇಲ್ಲದಿರುವ ಬಿಲವೊಂದುಂಟು. ಅಲ್ಲಿ ಬಹುರೂಪಗಳುಳ್ಳ ಒಬ್ಬ ಸ್ತ್ರೀಯೂ ಇದ್ದಾಳೆ. ಆ ವ್ಯಭಿಚಾರಿಣಿಯಾದ ಹೆಂಗಸಿಗೆ ಪತಿಯಾಗಿರುವ ಪುರುಷನೊಬ್ಬನಿದ್ದಾನೆ. ಹಿಂದೆ-ಮುಂದೆ ಎರಡೂ ಕಡೆ ಹರಿಯುವಂತಹ ಒಂದು ನದಿಯಿದೆ. ಇಪ್ಪತ್ತೈದು ಪದಾರ್ಥಗಳಿಂದ ನಿರ್ಮಿತವಾದ ಒಂದು ವಿಚಿತ್ರವಾದ ಮನೆಯುಂಟು. ಅತಿ ವಿಚಿತ್ರವಾದ ಕಥೆಯುಳ್ಳ ಒಂದು ಹಂಸವೂ ಇದೆ. ಕತ್ತಿ ಮತ್ತು ವಜ್ರ ಇವುಗಳಿಂದ ಮಾಡಲ್ಪಟ್ಟ ತನ್ನಿಂತಾನೇ ತಿರುಗುತ್ತಿರುವ ಒಂದು ಚಕ್ರವಿದೆ. ಮೂರ್ಖರಾದ ಹರ್ಯಶ್ವರರೇ! ಸರ್ವಜ್ಞನಾದ ನಿಮ್ಮ ತಂದೆಯ ಉಚಿತವಾದ ಆದೇಶವನ್ನು ತಿಳಿದು ಕೊಳ್ಳುವತನಕ, ಮೇಲೆ ಹೇಳಿದ ವಸ್ತುಗಳನ್ನು ನೋಡುವವರೆಗೂ ಅವನ ಆಜ್ಞೆಯಂತೆ ಸೃಷ್ಟಿಯನ್ನು ಹೇಗೆ ಮಾಡುವಿರಿ? ॥ ೭-೯ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ! ಹರ್ಯಶ್ವರು ಹುಟ್ಟಿನಿಂದಲೇ ಬುದ್ಧಿವಂತರಾಗಿದ್ದರು. ಅವರು ದೇವಋಷಿ ನಾರದರ ಈ ಒಗಟಿನಂತಿರುವ ಮಾತನ್ನು ಕೇಳಿ, ತಾವು ತಮ್ಮ ಬುದ್ಧಿಯಿಂದ ವಿಚಾರಮಾಡತೊಡಗಿದರು – ॥ ೧೦ ॥

ಭೂಃ ಕ್ಷೇತ್ರಂ ಜೀವಸಂಜ್ಞಂ ಯದನಾದಿ ನಿಜಬಂಧನಮ್ ।
ಅದೃಷ್ಟ್ವಾ ತಸ್ಯ ನಿರ್ವಾಣಂ ಕಿಮಸತ್ಕರ್ಮಭಿರ್ಭವೇತ್ ॥ ೧೧ ॥

ಏಕ ಏವೇಶ್ವರಸ್ತುರ್ಯೋ ಭಗವಾನ್ ಸ್ವಾಶ್ರಯಃ ಪರಃ ।
ತಮದೃಷ್ಟ್ವಾಭವಂ ಪುಂಸಃ ಕಿಮಸತ್ಕರ್ಮಭಿರ್ಭವೇತ್ ॥ ೧೨ ॥

ಪುಮಾನ್ನೈವೈತಿ ಯದ್ಗತ್ವಾ ಬಿಲಸ್ವರ್ಗಂ ಗತೋ ಯಥಾ ।
ಪ್ರತ್ಯಗ್ಧಾಮಾವಿದ ಇಹ ಕಿಮಸತ್ಕರ್ಮಭಿರ್ಭವೇತ್ ॥ ೧೩ ॥

ನಾನಾರೂಪಾಽಽತ್ಮನೋ ಬುದ್ಧಿಃ ಸ್ವೈರಿಣೀವ ಗುಣಾನ್ವಿತಾ ।
ತನ್ನಿಷ್ಠಾಮಗತಸ್ಯೇಹ ಕಿಮಸತ್ಕರ್ಮಭಿರ್ಭವೇತ್ ॥ ೧೪ ॥

ತತ್ಸಂಗಭ್ರಂಶಿತೈಶ್ವರ್ಯಂ ಸಂಸರಂತಂ ಕುಭಾರ್ಯವತ್ ।
ತದ್ಗತೀರಬುಧಸ್ಯೇಹ ಕಿಮಸತ್ಕರ್ಮಭಿರ್ಭವೇತ್ ॥ ೧೫ ॥

ಸೃಷ್ಟ್ಯಪ್ಯಯಕರೀಂ ಮಾಯಾಂ ವೇಲಾಕೂಲಾಂತವೇಗಿತಾಮ್ ।
ಮತ್ತಸ್ಯ ತಾಮವಿಜ್ಞಸ್ಯ ಕಿಮಸತ್ಕರ್ಮಭಿರ್ಭವೇತ್ ॥ ೧೬ ॥

ಪಂಚವಿಂಶತಿತತ್ತ್ವಾನಾಂ ಪುರುಷೋಽದ್ಭುತದರ್ಪಣಮ್ ।
ಅಧ್ಯಾತ್ಮಮಬುಧಸ್ಯೇಹ ಕಿಮಸತ್ಕರ್ಮಭಿರ್ಭವೇತ್ ॥ ೧೭ ॥

'ದೇವರ್ಷಿಗಳಾದ ನಾರದರ ಮಾತು ನಿಜವೇ ಆಗಿದೆ. ಇವರು ಹೇಳಿರುವ ಭೂಮಿಯೆಂಬುದು ಆತ್ಮನಿಗೆ ಅನಾದಿಕಾಲದಿಂದ ಬಂಧನವಾಗಿರುವ ಲಿಂಗಶರೀರವಾಗಿದೆ. ಇದು ನಾಶಹೊಂದುವುದನ್ನು ನೋಡದೆ ಮೋಕ್ಷಕ್ಕೆ ಉಪಯೋಗವಲ್ಲದ ಕರ್ಮಗಳಿಂದ ಏನು ಲಾಭವಿದೆ? ॥ ೧೧ ॥ ನಿಜವಾಗಿ ಈಶ್ವರನು ಒಬ್ಬನೇ ಆಗಿದ್ದು, ಅವನು ಜಾಗ್ರತ್, ಸ್ವಪ್ನ-ಸುಷುಪ್ತಿಗಳೆಂಬ ಮೂರು ಅವಸ್ಥೆಗಳಿಂದ ಮತ್ತು ಅವುಗಳ ಅಭಿಮಾನೀ ದೇವತೆಗಳಿಂದ ಬೇರೆಯಾಗಿ ಅವುಗಳಿಗೆ ಸಾಕ್ಷಿ ತುರೀಯನಾಗಿದ್ದಾನೆ. ಎಲ್ಲದರ ಆಶ್ರಯನು ಅವನೇ ಆಗಿದ್ದು ಅವನಿಗೆ ಯಾವ ಆಶ್ರಯವೂ ಇಲ್ಲ, ಅವನೇ ಭಗವಂತನಾಗಿದ್ದಾನೆ. ಪ್ರಕೃತಿಯೇ ಮುಂತಾದವುಗಳಿಂದ ಅತೀತನಾದ ಆ ನಿತ್ಯಮುಕ್ತ ಪರಮಾತ್ಮನನ್ನು ನೋಡದೆ, ಆ ಭಗವಂತನಿಗೆ ಕರ್ಮಗಳನ್ನು ಅರ್ಪಿಸದೇ ಜೀವನಿಗೆ ಯಾವ ಲಾಭವಿದೆ? ॥ ೧೨ ॥ ಬಿಲರೂಪವಾದ ಪಾತಾಳದಲ್ಲಿ ಹೊಕ್ಕ ಮನುಷ್ಯನು ಅಲ್ಲಿಂದ ಮರಳಲಾರನೋ, ಹಾಗೆಯೇ ಜೀವನು ಸ್ವಯಂ ಅಂತರ್ಜ್ಯೋತಿ ಸ್ವರೂಪವನ್ನು ಪಡೆದುಕೊಂಡು ಮತ್ತೆ ಸಂಸಾರಕ್ಕೆ ಮರಳಲಾರನೋ, ಅಂತಹ ಪರಮಾತ್ಮನನ್ನು ತಿಳಿಯದೆ ನಾಶವುಳ್ಳ ಸ್ವರ್ಗಾದಿ ಫಲಗಳನ್ನೀಯುವ ಕರ್ಮಗಳನ್ನು ಮಾಡುವುದರಿಂದ ಏನು ಲಾಭವಿದೆ? ॥ ೧೩ ॥ ಬಹು ರೂಪವುಳ್ಳ, ಸತ್ತ್ವ ರಜ ಮೊದಲಾದ ಗುಣಗಳನ್ನು ಧರಿಸಿದ ಬುದ್ಧಿಯೇ ವ್ಯಭಿಚಾರಿಣಿ ಸ್ತ್ರೀಯಂತೇ ಇದೆ. ಈ ಜೀವನದಲ್ಲಿ ಇದರ ಅಂತ್ಯವನ್ನು ತಿಳಿಯದೆ, ವಿವೇಕವನ್ನು ಪಡೆಯದೆ, ಅಶಾಂತಿಯನ್ನು ಹೆಚ್ಚಿಸ್ಸು ಬೆಳೆಸುವ ಕರ್ಮಗಳನ್ನು ಮಾಡುವುದರಿಂದ ಪ್ರಯೋಜನವೇನಿದೆ? ॥ ೧೪ ॥ ಈ ಬುದ್ಧಿಯೇ ಕುಲಟೆಯಾದ ಹೆಂಗಸಿನಂತೆ ಇದೆ. ಇವಳ ಸಂಗದಿಂದ ಜೀವರೂಪವಾದ ಪುರುಷನ ಐಶ್ವರ್ಯನಾಶವಾಗಿ ಹೋಗಿದೆ ಅಂದರೆ ತನ್ನ ಸ್ವರೂಪದಿಂದ ವಿಮುಖನಾದನು. ಇವಳ ಹಿಂದೆ-ಹಿಂದೆಯೇ ಕುಲಟೆಯ ಪತಿಯಂತೆ ಎಲ್ಲೆಲ್ಲಿ ಅಲೆಯುತ್ತಿರುವನೋ ತಿಳಿಯದು. ಇವಳ ಬೇರೆ-ಬೇರೆ ಗತಿಗಳನ್ನು, ತಂತ್ರಗಳನ್ನು ತಿಳಿಯದೆಯೇ ವಿವೇಕರಹಿತವಾದ ಕರ್ಮಗಳಿಂದ ಯಾವ ಸಿದ್ಧಿ ದೊರೆಯಬಲ್ಲದು? ॥ ೧೫ ॥ ಹಿಂದೆ-ಮುಂದೆ ಹರಿಯುತ್ತಿರುವ ನದಿಯೇ ಮಾಯೆಯಾಗಿದೆ. ಇದು ಸೃಷ್ಟಿ ಮತ್ತು ಪ್ರಳಯ ಎರಡನ್ನೂ ಮಾಡುತ್ತದೆ. ಇದರಿಂದ ಪಾರಾಗಲು ಜನರು ತಪಸ್ಸು ವಿದ್ಯೆ ಮುಂತಾದ ದಡಗಳನ್ನು ಆಶ್ರಯಿಸತೊಡಗಿದಾಗ, ಅವರನ್ನು ತಡೆಯಲು ಕ್ರೋಧ, ಅಹಂಕಾರ ಮುಂತಾದ ರೂಪಗಳಿಂದ ಅದು ಇನ್ನೂ ವೇಗವಾಗಿ ಹರಿಯತೊಡಗುತ್ತದೆ. ಆ ಮಾಯೆಯ ವೇಗದಿಂದ ವಿವಶನಾದ ಅಜ್ಞಾನಿಯಾದ ಜೀವಿಯು ಮಾಯಿಕ ಕರ್ಮಗಳಿಂದ ಏನು ಲಾಭ ಗಳಿಸಬಲ್ಲನು? ॥ ೧೬ ॥ ಈ ಶರೀರವು ಇಪ್ಪತ್ತೈದು ತತ್ತ್ವಗಳ ಒಂದು ಅದ್ಭುತಮನೆಯಾಗಿದೆ. ಪುರುಷನೇ ಇದರ ಆಶ್ಚರ್ಯಮಯ ಆಶ್ರಯನಾಗಿದ್ದಾನೆ. ಅವನೇ ಕಾರ್ಯ-ಕಾರಣಾತ್ಮಕ ಸಮಸ್ತ ಜಗತ್ತಿನ ಅಧಿಷ್ಠಾನನಾಗಿದ್ದಾನೆ. ಇದನ್ನು ಅರಿಯದೆ ನಿಜವಾದ ಸ್ವಾತಂತ್ರ್ಯವನ್ನು ಪಡೆಯದೆ ಮಿಥ್ಯಾ ಸ್ವತಂತ್ರತೆಯಿಂದ ಮಾಡಲಾಗುವ ಕರ್ಮಗಳು ವ್ಯರ್ಥವೇ ಆಗಿದೆ. ॥ ೧೭ ॥

ಐಶ್ವರಂ ಶಾಸ್ತ್ರಮುತ್ಸೃಜ್ಯ ಬಂಧಮೋಕ್ಷಾನುದರ್ಶನಮ್ ।
ವಿವಿಕ್ತಪದಮಜ್ಞಾಯ ಕಿಮಸತ್ಕರ್ಮಭಿರ್ಭವೇತ್ ॥ ೧೮ ॥

ಕಾಲಚಕ್ರಂ ಭ್ರಮಿಸ್ತೀಕ್ಷ್ಣಂ ಸರ್ವಂ ನಿಷ್ಕರ್ಷಯಜ್ಜಗತ್ ।
ಸ್ವತಂತ್ರಮಬುಧಸ್ಯೇಹ ಕಿಮಸತ್ಕರ್ಮಭಿರ್ಭವೇತ್ ॥ ೧೯ ॥

ಶಾಸ್ತ್ರಸ್ಯ ಪಿತುರಾದೇಶಂ ಯೋ ನ ವೇದ ನಿವರ್ತಕಮ್ ।
ಕಥಂ ತದನುರೂಪಾಯ ಗುಣವಿಶ್ರಂಭ್ಯುಪಕ್ರಮೇತ್ ॥ ೨೦ ॥

ಇತಿ ವ್ಯವಸಿತಾ ರಾಜನ್ ಹರ್ಯಶ್ವಾ ಏಕಚೇತಸಃ ।
ಪ್ರಯಯುಸ್ತಂ ಪರಿಕ್ರಮ್ಯ ಪಂಥಾನಮನಿವರ್ತನಮ್ ॥ ೨೧ ॥

ಸ್ವರಬ್ರಹ್ಮಣಿ ನಿರ್ಭಾತಹೃಷೀಕೇಶಪದಾಂಬುಜೇ ।
ಅಖಂಡಂ ಚಿತ್ತಮಾವೇಶ್ಯ ಲೋಕಾನನುಚರನ್ಮುನಿಃ ॥ ೨೨ ॥

ನಾಶಂ ನಿಶಮ್ಯ ಪುತ್ರಾಣಾಂ ನಾರದಾಚ್ಛೀಲಶಾಲಿನಾಮ್ ।
ಅನ್ವತಪ್ಯತ ಕಃ ಶೋಚನ್ ಸುಪ್ರಜಸ್ತ್ವಂ ಶುಚಾಂ ಪದಮ್ ॥ ೨೩ ॥

ಸ ಭೂಯಃ ಪಾಂಚಜನ್ಯಾಯಾಮಜೇನ ಪರಿಸಾಂತ್ವಿತಃ ।
ಪುತ್ರಾನಜನಯದ್ದಕ್ಷಃ ಶಬಲಾಶ್ವಾನ್ಸಹಸ್ರಶಃ ॥ ೨೪ ॥

ತೇಽಪಿ ಪಿತ್ರಾ ಸಮಾದಿಷ್ಟಾಃ ಪ್ರಜಾಸರ್ಗೇ ಧೃತವ್ರತಾಃ ।
ನಾರಾಯಣಸರೋ ಜಗ್ಮುರ್ಯತ್ರ ಸಿದ್ಧಾಃ ಸ್ವಪೂರ್ವಜಾಃ ॥ ೨೫ ॥

ತದುಪಸ್ಪರ್ಶನಾದೇವ ವಿನಿರ್ಧೂತಮಲಾಶಯಾಃ ।
ಜಪಂತೋ ಬ್ರಹ್ಮ ಪರಮಂ ತೇಪುಸ್ತೇಽತ್ರ ಮಹತ್ತಪಃ ॥ ೨೬ ॥

ಭಗವಂತನ ಸ್ವರೂಪವನ್ನು ಬೋಧಿಸುವ ಶಾಸ್ತ್ರವೇ ಹಂಸದಂತೆ ನೀರ-ಕ್ಷೀರ ವಿವೇಕವಾಗಿದೆ. ಅದು ಬಂಧ-ಮೋಕ್ಷ, ಚೇತನ-ಜಡ ತತ್ವಗಳನ್ನು ಬೇರೆ-ಬೇರೆಯಾಗಿ ತೋರಿಸುತ್ತದೆ. ಇಂತಹ ಅಧ್ಯಾತ್ಮಶಾಸ್ತ್ರರೂಪವಾದ ಹಂಸನ ಆಶ್ರಯವನ್ನು ಬಿಟ್ಟು, ಅದನ್ನು ಅರಿಯದೆ ಬಹಿರ್ಮುಖಿಗೊಳಿಸುವ ಕರ್ಮಗಳಿಂದ ಏನು ಲಾಭವಿದೆ? ॥ ೧೮ ॥ ಈ ಕಾಲವೇ ಒಂದು ಚಕ್ರವಾಗಿದೆ. ಇದು ನಿರಂತರ ತಿರುಗುತ್ತಾ ಇರುತ್ತದೆ. ಚೂರಿ ಮತ್ತು ವಜ್ರದಂತೆ ತೀಕ್ಷ್ಣವಾದ ಅಲಗುಗಳುಳ್ಳ ಈ ಚಕ್ರವು ಇಡೀ ಜಗತ್ತನ್ನು ತನ್ನ ಕಡೆಗೆ ಸೆಳೆಯುತ್ತಿದೆ. ಯಾರಿಂದಲೂ ತಡೆಯಲಾಗದ ಸ್ವತಂತ್ರವಾಗಿ ಸುತ್ತುತ್ತಿರುವ ಚಕ್ರವಿದು. ಇದನ್ನರಿಯದೆ ಕರ್ಮಗಳ ಫಲವನ್ನು ನಿತ್ಯವೆಂದು ತಿಳಿದ ಜನರು ಸಕಾಮಭಾವದಿಂದ ಅವನ್ನು ಅನುಷ್ಠಾನ ಮಾಡುತ್ತಾರೆ. ಅವರಿಗೆ ಆ ಅನಿತ್ಯ ಕರ್ಮಗಳಿಂದ ಏನು ಲಾಭವಾದೀತು? ॥ ೧೯ ॥ ಶಾಸ್ತ್ರವೇ ತಂದೆಯಾಗಿದೆ. ಏಕೆಂದರೆ ಎರಡನೆಯ ಜನ್ಮವು ಶಾಸ್ತ್ರದ ಮೂಲಕವೇ ಆಗುತ್ತದೆ ಮತ್ತು ಅದರ ಉಪದೇಶವು ಕರ್ಮಗಳಲ್ಲಿ ತೊಡಗಿಸುವುದಲ್ಲ, ಬದಲಿಗೆ ಅದರಿಂದ ನಿವೃತ್ತವಾಗಿಸುವುದಾಗಿದೆ. ಇದನ್ನು ತಿಳಿಯದವನು ಗುಣಮಯ ಶಬ್ದಾದಿ ವಿಷಯಗಳಲ್ಲಿ ವಿಶ್ವಾಸವಿರಿಸುತ್ತಾನೆ. ಇಂತಹವನು ಕರ್ಮಗಳಿಂದ ನಿವೃತ್ತಿ ಹೊಂದಬೇಕೆಂಬ ಆಜ್ಞೆಯನ್ನು ಹೇಗೆ ತಾನೇ ಪಾಲಿಸಬಲ್ಲನು? ॥ ೨೦ ॥ ಪರೀಕ್ಷಿದ್ರಾಜನೇ! ಹರ್ಯಶ್ವರು ಒಮ್ಮತದಿಂದ ಹೀಗೆ ನಿಶ್ಚಯಿಸಿಕೊಂಡು, ನಾರದರಿಗೆ ಪ್ರದಕ್ಷಿಣೆ ಬಂದು, ಎಲ್ಲಿಗೆ ಪ್ರಯಾಣಮಾಡಿದರೆ ಮರಳಿ ಸಂಸಾರಕ್ಕೆ ಬರಬೇಕಾಗಿಲ್ಲವೋ, ಆ ಮೋಕ್ಷಮಾರ್ಗದ ಪಥಿಕರಾಗಿಬಿಟ್ಟರು. ॥ ೨೧ ॥ ಅನಂತರ ದೇವರ್ಷಿ ನಾರದರು ಸಂಗೀತಲಹರಿಯ ಸ್ವರಬ್ರಹ್ಮದಲ್ಲಿ ಅಭಿವ್ಯಕ್ತವಾಗುವ ಭಗವಾನ್ ಶ್ರೀಕೃಷ್ಣನ ಚರಣಕಮಲಗಳಲ್ಲಿ ತಮ್ಮ ಚಿತ್ತವನ್ನು ಅಖಂಡರೂಪದಿಂದ ನೆಲೆಗೊಳಿಸಿ ಲೋಕ-ಲೋಕಾಂತರಗಳಲ್ಲಿ ಸಂಚರಿಸತೊಡಗಿದರು. ॥ ೨೨ ॥

ಮಹಾರಾಜನೇ! ತನ್ನ ಶೀಲಸಂಪನ್ನರಾದ ಪುತ್ರರು ನಾರದರ ಉಪದೇಶದಿಂದ ಕರ್ತವ್ಯಚ್ಯುತರಾಗಿದ್ದಾರೆ ಎಂಬುದನ್ನು ದಕ್ಷಪ್ರಜಾಪತಿಯು ತಿಳಿದಾಗ, ಅವನಿಗೆ ಶೋಕದಿಂದ ವ್ಯಾಕುಲನಾಗಿ ಭಾರೀ ಪಶ್ಚಾತ್ತಾಪವುಂಟಾಯಿತು. ಒಳ್ಳೆಯ ಸಂತಾನವನ್ನು ಪಡೆಯುವುದೂ ಒಂದು ದೃಷ್ಟಿಯಿಂದ ದುಃಖಕ್ಕೆ ಕಾರಣವಾಗಿದೆ. ॥ ೨೩ ॥ ಆಗ ಬ್ರಹ್ಮದೇವರು ದಕ್ಷನನ್ನು ಸಮಾಧಾನ ಪಡಿಸಿದಾಗ ಅವನು ಪಂಚಜನನ ಪುತ್ರಿಯಾದ ಅಸಿಕ್ನಿಯಿಂದ ಮತ್ತೆ ಸಾವಿರಾರು ಪುತ್ರರನ್ನು ಪಡೆದನು. ಅವರ ಹೆಸರು ಶಬಲಾಶ್ವರೆಂದಿತ್ತು. ॥ ೨೪ ॥ ಅವರೂ ಕೂಡ ತಮ್ಮ ತಂದೆಯಾದ ದಕ್ಷಪ್ರಜಾಪತಿಯ ಆಜ್ಞೆಯನ್ನು ಪಡೆದು ಪ್ರಜಾಸೃಷ್ಟಿಯ ಉದ್ದೇಶದಿಂದ ತಪಸ್ಸಿಗಾಗಿ ಹಿರಿಯಣ್ಣಂದಿರು ಸಿದ್ಧಿಯನ್ನು ಪಡೆದ ಅದೇ ನಾರಾಯಣ ಸರೋವರಕ್ಕೆ ಹೋದರು. ॥ ೨೫ ॥ ಶಬಲಾಶ್ವರೂ ಅಲ್ಲಿಗೆ ಹೋಗಿ ಆ ಸರೋವರದಲ್ಲಿ ಸ್ನಾನ ಮಾಡಿದರು. ಸ್ನಾನಮಾತ್ರದಿಂದಲೇ ಅವರ ಅಂತಃಕರಣದ ಎಲ್ಲ ದೋಷಗಳು ತೊಳೆದುಹೋದುವು. ಈಗ ಅವರು ಪರಬ್ರಹ್ಮಸ್ವರೂಪವಾದ ಪ್ರಣವವನ್ನು ಜಪಿಸುತ್ತಾ ಮಹಾ ತಪಸ್ಸಿಗೆ ತೊಡಗಿದರು. ॥ ೨೬ ॥

ಅಬ್ಭಕ್ಷಾಃ ಕತಿಚಿನ್ಮಾಸಾನ್ಕತಿಚಿದ್ವಾಯುಭೋಜನಾಃ ।
ಆರಾಧಯನ್ಮಂತ್ರಮಿಮಮಭ್ಯಸ್ಯಂತ ಇಡಸ್ಪತಿಮ್ ॥ ೨೭ ॥

ಓಂ ನಮೋ ನಾರಾಯಣಾಯ ಪುರುಷಾಯ ಮಹಾತ್ಮನೇ ।
ವಿಶುದ್ಧಸತ್ತ್ವಧಿಷ್ಣ್ಯಾಯ ಮಹಾಹಂಸಾಯ ಧೀಮಹಿ ॥ ೨೮ ॥

ಇತಿ ತಾನಪಿ ರಾಜೇಂದ್ರ ಪ್ರತಿಸರ್ಗಧಿಯೋ ಮುನಿಃ ।
ಉಪೇತ್ಯ ನಾರದಃ ಪ್ರಾಹ ವಾಚಃಕೂಟಾನಿ ಪೂರ್ವವತ್ ॥ ೨೯ ॥

ದಾಕ್ಷಾಯಣಾಃ ಸಂಶೃಣುತ ಗದತೋ ನಿಗಮಂ ಮಮ ।
ಅನ್ವಿಚ್ಛತಾನುಪದವೀಂ ಭ್ರಾತೄಣಾಂ ಭ್ರಾತೃವತ್ಸಲಾಃ ॥ ೩೦ ॥

ಭ್ರಾತೄಣಾಂ ಪ್ರಾಯಣಂ ಭ್ರಾತಾ ಯೋಽನುತಿಷ್ಠತಿ ಧರ್ಮವಿತ್ ।
ಸ ಪುಣ್ಯಬಂಧುಃ ಪುರುಷೋ ಮರುದ್ಭಿಃ ಸಹ ಮೋದತೇ ॥ ೩೧ ॥

ಏತಾವದುಕ್ತ್ವಾ ಪ್ರಯಯೌ ನಾರದೋಽಮೋಘದರ್ಶನಃ ।
ತೇಽಪಿ ಚಾನ್ವಗಮನ್ಮಾರ್ಗಂ ಭ್ರಾತೄಣಾಮೇವ ಮಾರಿಷ ॥ ೩೨ ॥

ಸಧ್ರೀಚೀನಂ ಪ್ರತೀಚೀನಂ ಪರಸ್ಯಾನುಪಥಂ ಗತಾಃ ।
ನಾದ್ಯಾಪಿ ತೇ ನಿವರ್ತಂತೇ ಪಶ್ಚಿಮಾ ಯಾಮಿನೀರಿವ ॥ ೩೩ ॥

ಏತಸ್ಮಿನ್ಕಾಲ ಉತ್ಪಾತಾನ್ ಬಹೂನ್ಪಶ್ಯನ್ ಪ್ರಜಾಪತಿಃ ।
ಪೂರ್ವವನ್ನಾರದಕೃತಂ ಪುತ್ರನಾಶಮುಪಾಶೃಣೋತ್ ॥ ೩೪ ॥

ಚುಕ್ರೋಧ ನಾರದಾಯಾಸೌ ಪುತ್ರಶೋಕವಿಮೂರ್ಛಿತಃ ।
ದೇವರ್ಷಿಮುಪಲಭ್ಯಾಹ ರೋಷಾದ್ವಿಸ್ಫುರಿತಾಧರಃ ॥ ೩೫ ॥

ದಕ್ಷ ಉವಾಚ

ಅಹೋ ಅಸಾಧೋ ಸಾಧೂನಾಂ ಸಾಧುಲಿಂಗೇನ ನಸ್ತ್ವಯಾ ।
ಅಸಾಧ್ವಕಾರ್ಯರ್ಭಕಾಣಾಂ ಭಿಕ್ಷೋರ್ಮಾರ್ಗಃ ಪ್ರದರ್ಶಿತಃ ॥ ೩೬ ॥

ಕೆಲವು ತಿಂಗಳವರೆಗೆ ಕೇವಲ ನೀರನ್ನು ಕುಡಿಯುತ್ತಾ, ಮತ್ತೆ ಕೆಲವು ತಿಂಗಳವರೆಗೆ ಕೇವಲ ಗಾಳಿಯನ್ನೇ ಸೇವಿಸುತ್ತಾ ಅವರು – "ವಿಶುದ್ಧವಾದ ಚಿತ್ತದಲ್ಲಿ ನಿವಾಸ ಮಾಡುವವನೂ, ಸರ್ವಾಂತರ್ಯಾಮಿಯೂ, ಸರ್ವವ್ಯಾಪಕನೂ, ಪರಮ ಹಂಸಸ್ವರೂಪಿಯೂ, ಓಂಕಾರಸ್ವರೂಪನೂ ಆಗಿರುವ ಪರಮ ಪುರುಷನಾದ ನಾರಾಯಣನನ್ನು ನಾವು ನಮಸ್ಕಾರ ಸಹಿತವಾಗಿ ಧ್ಯಾನಮಾಡುವೆವು" ಎಂಬ ಮಂತ್ರವನ್ನು ಜಪಿಸುತ್ತಾ ಮಂತ್ರಾಧಿಪತಿ ಭಗವಂತನನ್ನು ಆರಾಧಿಸಿದರು. ॥ ೨೭-೨೮ ॥ ಪರೀಕ್ಷಿತನೇ! ಹೀಗೆ ದಕ್ಷಪುತ್ರರಾದ ಶಬಲಾಶ್ವರು ತಪಸ್ಸಿನಲ್ಲಿ ಮಗ್ನರಾಗಿದ್ದಾಗ ದೇವರ್ಷಿ ನಾರದರು ಅವರ ಬಳಿಗೂ ಬಂದು ಹಿಂದಿನಂತೆಯೇ ಒಗಟಿನಂತಿರುವ ಮಾತುಗಳನ್ನು ಹೇಳಿದರು. ॥ ೨೯ ॥ ಎಲೈ ದಕ್ಷಪ್ರಜಾಪತಿಯ ಪುತ್ರರೇ! ನನ್ನ ಉಪದೇಶವನ್ನು ಕೇಳಿರಿ. ನಿಮಗೆ ನಿಮ್ಮ ಅಣ್ಣಂದಿರ ಮೇಲೆ ತುಂಬಾ ಪ್ರೀತಿ ಇದೆ. ಆದುದರಿಂದ ಅವರ ಮಾರ್ಗವನ್ನೇ ಅನುಸರಿಸಿರಿ. ॥ ೩೦ ॥ ತಮ್ಮ ಅಣ್ಣಂದಿರ ಶ್ರೇಷ್ಠಮಾರ್ಗವನ್ನು ಅನುಸರಿಸುವವರೇ ನಿಜವಾದ ಒಡಹುಟ್ಟಿದವರು. ಅಂತಹ ಪುಣ್ಯಶಾಲಿಗಳು ಪರಲೋಕದಲ್ಲಿ ಮರುದ್ಗಣರೊಂದಿಗೆ ಆನಂದವನ್ನು ಅನುಭವಿಸುವರು. ॥ ೩೧ ॥ ಮಹಾರಾಜನೇ! ಶಬಲಾಶ್ವರಿಗೆ ಹೀಗೆ ಉಪದೇಶಮಾಡಿ ನಾರದ ಮಹರ್ಷಿಗಳು ಅಲ್ಲಿಂದ ಹೊರಟು ಹೋದರು. ಅವರೂ ಕೂಡ ತಮ್ಮ ಅಣ್ಣಂದಿರ ದಾರಿಯನ್ನೇ ಹಿಡಿದರು. ಏಕೆಂದರೆ, ನಾರದರ ದರ್ಶನವು ಎಂದಿಗೂ ವ್ಯರ್ಥವಾಗುವುದಿಲ್ಲ. ॥ ೩೨ ॥ ಅವರು ಅಂತರ್ಮುಖೀ ವೃತ್ತಿಯಿಂದ ದೊರೆಯಬಹುದಾದ ಅತ್ಯಂತ ಸುಂದರ ಹಾಗೂ ಭಗವತ್ಪ್ರಾಪ್ತಿಗೆ ಅನುಕೂಲವಾದ ಆ ಮಾರ್ಗದ ಪಥಿಕರಾದರು. ಅಂತಹ ಪಥದಲ್ಲಿ ಸಾಗಿದವರು ಕಳೆದುಹೋದ ರಾತ್ರಿಯಂತೆ ಆ ಮಾರ್ಗದಿಂದ ಇಂದಿನವರೆಗೆ ಹಿಂದಿರುಗಲಿಲ್ಲ, ಮುಂದೆಯೂ ಮರಳಲಾರರು. ॥ ೩೩ ॥

ಅದೇ ಸಮಯದಲ್ಲಿ ಅನೇಕ ಅಪಶಕುನಗಳಾಗುತ್ತಿರುವುದನ್ನು ದಕ್ಷಪ್ರಜಾಪತಿಯು ನೋಡಿದನು. ಪುತ್ರರ ಕುರಿತು ಅವನ ಚಿತ್ತದಲ್ಲಿ ಅನಿಷ್ಟದ ಆಶಂಕೆ ಮೂಡಿತು. ಅಷ್ಟರಲ್ಲೇ ಅವನಿಗೆ – ಮೊದಲಿನಂತೆ ಈಗಲೂ ನಾರದರು ಬಂದು ತನ್ನ ಮಕ್ಕಳನ್ನು ನಿವೃತ್ತಿಮಾರ್ಗಕ್ಕೆ ಹಚ್ಚಿದ ಸಂಗತಿ ತಿಳಿಯಿತು. ॥ ೩೪ ॥ ತನ್ನ ಪುತ್ರರು ಕರ್ತವ್ಯಚ್ಯುತರಾದುದನ್ನು ಕಂಡು ಅವನಿಗೆ ಅತ್ಯಂತ ದುಃಖವಾಯಿತು ಹಾಗೂ ನಾರದರ ಕುರಿತು ವಿಪರೀತವಾದ ಸಿಟ್ಟುಬಂತು. ಒಮ್ಮೆ ನಾರದರು ಭೇಟಿಯಾದಾಗ ಕೋಪದಿಂದ ತುಟಿಗಳು ಅದುರುತ್ತಿರಲು ದಕ್ಷನು ಆವೇಶಭರಿತನಾಗಿ ಅವರಿಗೆ ಹೀಗೆಂದನು – ॥ ೩೫ ॥

ದಕ್ಷಪ್ರಜಾಪತಿಯು ಹೇಳಿದನು – ಎಲವೋ ದುಷ್ಟನೇ! ನೀನು ಸುಳ್ಳು-ಸುಳ್ಳೇ ಸಾಧುಗಳ ವೇಷವನ್ನು ಧರಿಸಿರುವೆ. ಸರಳ ಹೃದಯಿಗಳಾದ ನನ್ನ ಮಕ್ಕಳಿಗೆ ಭಿಕ್ಷುಕರ ದಾರಿಯನ್ನು ತೋರಿ ನನಗೆ ಭಾರೀ ಅಪಕಾರವನ್ನೇ ಮಾಡಿರುವೆ. ॥ ೩೬ ॥

ಋಣೈಸ್ತ್ರಿಭಿರಮುಕ್ತಾನಾಮಮೀಮಾಂಸಿತಕರ್ಮಣಾಮ್ ।
ವಿಘಾತಃ ಶ್ರೇಯಸಃ ಪಾಪ ಲೋಕಯೋರುಭಯೋಃ ಕೃತಃ
॥ ೩೭ ॥

ಏವಂ ತ್ವಂ ನಿರನುಕ್ರೋಶೋ ಬಾಲಾನಾಂ ಮತಿಭಿದ್ಧರೇಃ ।
ಪಾರ್ಷದಮಧ್ಯೇ ಚರಸಿ ಯಶೋಹಾ ನಿರಪತ್ರಪಃ
॥ ೩೮ ॥

ನನು ಭಾಗವತಾ ನಿತ್ಯಂ ಭೂತಾನುಗ್ರಹಕಾತರಾಃ ।
ಋತೇ ತ್ವಾಂ ಸೌಹೃದಘ್ನಂ ವೈ ವೈರಂಕರಮವೈರಿಣಾಮ್
॥ ೩೯ ॥

ನೇತ್ಥಂ ಪುಂಸಾಂ ವಿರಾಗಃ ಸ್ಯಾತ್ ತ್ವಯಾ ಕೇವಲಿನಾ ಮೃಷಾ ।
ಮನ್ಯಸೇ ಯದ್ಯುಪಶಮಂ ಸ್ನೇಹಪಾಶನಿಕೃಂತನಮ್
॥ ೪೦ ॥

ನಾನುಭೂಯ ನ ಜಾನಾತಿ ಪುಮಾನ್ ವಿಷಯತೀಕ್ಷ್ಣತಾಮ್ ।
ನಿರ್ವಿದ್ಯೇತ ಸ್ವಯಂ ತಸ್ಮಾನ್ನ ತಥಾ ಭಿನ್ನಧೀಃ ಪರೈಃ
॥ ೪೧ ॥

ಯನ್ನಸ್ತ್ವಂ ಕರ್ಮಸಂಧಾನಾಂ ಸಾಧೂನಾಂ ಗೃಹಮೇಧಿನಾಮ್ ।
ಕೃತವಾನಸಿ ದುರ್ಮರ್ಷಂ ವಿಪ್ರಿಯಂ ತವ ಮರ್ಷಿತಮ್
॥ ೪೨ ॥

ತಂತುಕೃಂತನ ಯನ್ನಸ್ತ್ವಮಭದ್ರಮಚರಃ ಪುನಃ ।
ತಸ್ಮಾಲ್ಲೋಕೇಷು ತೇ ಮೂಢ ನ ಭವೇದ್ಭ್ರಮತಃ ಪದಮ್
॥ ೪೩ ॥

ಶ್ರೀಶುಕ ಉವಾಚ

ಪ್ರತಿಜಗ್ರಾಹ ತದ್ಬಾಢಂ ನಾರದಃ ಸಾಧುಸಮ್ಮತಃ ।
ಏತಾವಾನ್ ಸಾಧುವಾದೋ ಹಿ ತಿತಿಕ್ಷೇತೇಶ್ವರಃ ಸ್ವಯಮ್
॥ ೪೪ ॥

ಅವರು ಇನ್ನೂ ಬ್ರಹ್ಮಚರ್ಯದಿಂದ ಋಷಿಋಣವನ್ನೂ, ಯಜ್ಞಗಳಿಂದ ದೇವಋಣವನ್ನೂ, ಪುತ್ರೋತ್ಪತ್ತಿಯಿಂದ ಪಿತೃ ಋಣವನ್ನೂ ತೀರಿಸ ಬೇಕಾಗಿತ್ತು. ಅವರಿಗೆ ಇನ್ನೂ ಕರ್ಮಫಲದ ನಶ್ವರತೆಯ ಸಂಬಂಧದಲ್ಲಿ ಯಾವ ವಿಚಾರವೂ ಇರಲಿಲ್ಲ. ಆದರೆ ಪಾಪಿಯಾದ ನೀನು ಅವರ ಎರಡೂ ಲೋಕಗಳ ಸುಖವನ್ನು ನಾಶಪಡಿಸಿ ಬಿಟ್ಟೆ. ॥ ೩೭ ॥ ನಿಜವಾಗಿ ನಿನ್ನ ಹೃದಯದಲ್ಲಿ ದಯೆ ಎಂಬುದೇ ಇಲ್ಲ. ನೀನು ಹೀಗೆ ಮಕ್ಕಳ ಬುದ್ಧಿಯನ್ನು ಕೆಡಿಸುತ್ತಾ ಅಲೆಯುತ್ತಿರುವೆ. ನೀನು ಭಗವಂತನ ಪಾರ್ಷದರೊಂದಿಗೆ ಇದ್ದು ಅವರ ಕೀರ್ತಿಗೆ ಕಲಂಕವನ್ನು ಹಚ್ಚಿದೆ. ನೀನು ನಿರ್ಲಜ್ಜನೇ ಆಗಿರುವೆ. ॥ ೩೮ ॥ ಭಗವಂತನ ಪಾರ್ಷದರು ಸದಾ-ಕಾಲ ದುಃಖಿತರಾದ ಪ್ರಾಣಿಗಳ ಮೇಲೆ ದಯೆ ಮಾಡುವುದರಲ್ಲೇ ಆಸಕ್ತರಾಗಿರುತ್ತಾರೆ. ಆದರೆ ನೀನು ಪ್ರೇಮಭಾವವನ್ನು ನಾಶಮಾಡುವವನಾಗಿರುವೆ. ಯಾರೊಂದಿಗೂ ವೈರವನ್ನೇ ಮಾಡದಿರುವವರಲ್ಲಿಯೂ ನೀನು ವೈರವನ್ನು ಸಾಧಿಸುತ್ತಿರುವೆ. ॥ ೩೯ ॥ ವೈರಾಗ್ಯದಿಂದಲೇ ಸ್ನೇಹಪಾಶ-ವಿಷಯಾಸಕ್ತಿಯ ಬಂಧನ ಕಡಿದುಹೋಗುತ್ತದೆ ಎಂದು ನೀನು ತಿಳಿದಿದ್ದರೆ ನಿನ್ನ ಈ ವಿಚಾರ ಸರಿಯಾದುದಲ್ಲ. ಏಕೆಂದರೆ ಸುಳ್ಳು-ಸುಳ್ಳೇ ವೈರಾಗ್ಯವಿರುವ ನಿನ್ನಂತಹವರಿಂದ ಯಾರಿಗೂ ವೈರಾಗ್ಯ ಉಂಟಾಗಲಾರದು. ॥ ೪೦ ॥ ನಾರದಾ! ವಿಷಯಗಳನ್ನು ಭೋಗಿಸದೇ ಮನುಷ್ಯನು ಅವುಗಳ ತೀಕ್ಷ್ಣತೆಯು ಏನೆಂಬುದು ತಿಳಿಯಲಾರನು. ಆದ್ದರಿಂದ ಅವುಗಳ ದುಃಖ ಸ್ವರೂಪದ ಅನುಭವ ಉಂಟಾದಮೇಲೆ ಸ್ವತಃ ಉಂಟಾಗುವಂತಹ ವೈರಾಗ್ಯವು ಬೇರೆಯವರ ಪ್ರಚೋದನೆಯಿಂದ ಉಂಟಾಗುವುದಿಲ್ಲ. ॥ ೪೧ ॥ ನಾವು ಧರ್ಮದ ಮರ್ಯಾದೆಯನ್ನು ಪಾಲಿಸುತ್ತಿರುವ ಸದ್ಗೃಹಸ್ಥರು. ಹಿಂದೊಮ್ಮೆಯೂ ನೀನು ನಮಗೆ ಭಯಂಕರ ಅಪಕಾರವನ್ನು ಮಾಡಿದ್ದೆ. ಆಗ ನಾವು ಅದನ್ನು ಸಹಿಸಿಕೊಂಡೆವು. ॥ ೪೨ ॥ ನೀನಾದರೋ ನಮ್ಮ ವಂಶಪರಂಪರೆಯನ್ನೇ ಕಡಿದುಹಾಕಲೆಂದೇ ದೀಕ್ಷೆಯನ್ನು ತೊಟ್ಟಂತಿದೆ. ನೀನು ಪುನಃ ನಮ್ಮೊಡನೆ ಅದೇ ದುಷ್ಟತೆಯ ವ್ಯವಹಾರ ಮಾಡಿರುವೆ. ಆದುದರಿಂದ 'ಎಲೈ ಮೂಢನೇ! ತೊಲಗು ಇಲ್ಲಿಂದ. ಲೋಕ-ಲೋಕಾಂತರಗಳಲ್ಲಿ ಅಲೆಯುತ್ತಾ ಇರು. ಎಲ್ಲಿಯೂ ನಿನಗೆ ನೆಲೆಯಾಗಿ ನಿಲ್ಲಲು ಠಾವೇ ಇಲ್ಲದಂತಾಗಲೀ.' ॥ ೪೩ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ! ಸಾಧುಶಿರೋಮಣಿಗಳಾದ ದೇವಋಷಿ ನಾರದರು 'ಹಾಗೆಯೇ ಆಗಲಿ' ಎಂದು ಹೇಳಿ ದಕ್ಷನ ಶಾಪವನ್ನು ಸ್ವೀಕರಿಸಿದರು. ಪ್ರತೀಕಾರ ಸಾಮರ್ಥ್ಯವಿದ್ದರೂ ಬೇರೆಯವರು ಮಾಡಿದ ಅಪಕಾರವನ್ನು ಸಹಿಸುವುದೇ ಪ್ರಪಂಚದಲ್ಲಿ ನಿಜವಾದ ಸಾಧುತನವಾಗಿದೆ. ಅವರೇ ನಿಜವಾದ ಸಂತರು. ॥ ೪೪ ॥

ಐದನೆಯ ಅಧ್ಯಾಯವು ಮುಗಿಯಿತು. ॥ ೫ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಷಷ್ಠಸ್ಕಂಧೇ
ನಾರದಶಾಪೋ ನಾಮ ಪಂಚಮೋಽಧ್ಯಾಯಃ ॥ ೫ ॥

ಆರನೆಯ ಅಧ್ಯಾಯ

ದಕ್ಷಪ್ರಜಾಪತಿಯ ಅರವತ್ತು ಕನ್ಯೆಯರ ವಂಶದ ವಿಸ್ತಾರ

ಶ್ರೀಶುಕ ಉವಾಚ

ತತಃ ಪ್ರಾಚೇತಸೋಽಸಿಕ್ನ್ಯಾಮನುನೀತಃ ಸ್ವಯಂಭುವಾ ।
ಷಷ್ಟಿಂ ಸಂಜನಯಾಮಾಸ ದುಹಿತೄಃ ಪಿತೃವತ್ಸಲಾಃ ॥ ೧ ॥

ದಶಧರ್ಮಾಯ ಕಾಯೇಂದೋರ್ದ್ವಿಷಟ್ ತ್ರಿಣವ ದತ್ತವಾನ್ ।
ಭೂತಾಂಗಿರಃ ಕೃಶಾಶ್ವೇಭ್ಯೋ ದ್ವೇ ದ್ವೇ ತಾರ್ಕ್ಷ್ಯಾಯ ಚಾಪರಾಃ ॥ ೨ ॥

ನಾಮಧೇಯಾನ್ಯಮೂಷಾಂತ್ವಂ ಸಾಪತ್ಯಾನಾಂ ಚ ಮೇ ಶೃಣು ।
ಯಾಸಾಂ ಪ್ರಸೂತಿಪ್ರಸವೈರ್ಲೋಕಾ ಆಪೂರಿತಾಸ್ತ್ರಯಃ ॥ ೩ ॥

ಭಾನುರ್ಲಂಬಾ ಕಕುಬ್ಜಾಮಿರ್ವಿಶ್ವಾ ಸಾಧ್ಯಾ ಮರುತ್ವತೀ ।
ವಸುರ್ಮುಹೂರ್ತಾ ಸಂಕಲ್ಪಾ ಧರ್ಮಪತ್ನ್ಯಃ ಸುತಾನ್ ಶೃಣು ॥ ೪ ॥

ಭಾನೋಸ್ತು ದೇವಋಷಭ ಇಂದ್ರಸೇನಸ್ತತೋ ನೃಪ ।
ವಿದ್ಯೋತ ಆಸೀಲ್ಲಂಬಾಯಾಸ್ತತಶ್ಚ ಸ್ತನಯಿತ್ನವಃ ॥ ೫ ॥

ಕಕುಭಃ ಸಂಕಟಸ್ತಸ್ಯ ಕೀಕಟಸ್ತನಯೋ ಯತಃ ।
ಭುವೋ ದುರ್ಗಾಣಿ ಜಾಮೇಯಃ ಸ್ವರ್ಗೋ ನಂದಿಸ್ತತೋಽಭವತ್ ॥ ೬ ॥

ವಿಶ್ವೇದೇವಾಸ್ತು ವಿಶ್ವಾಯಾ ಅಪ್ರಜಾಂಸ್ತಾನ್ಪ್ರಚಕ್ಷತೇ ।
ಸಾಧ್ಯೋ ಗಣಸ್ತು ಸಾಧ್ಯಾಯಾ ಅರ್ಥಸಿದ್ಧಿಸ್ತು ತತ್ಸುತಃ ॥ ೭ ॥

ಮರುತ್ವಾಂಶ್ಚ ಜಯಂತಶ್ಚ ಮರುತ್ವತ್ಯಾಂ ಬಭೂವತುಃ ।
ಜಯಂತೋ ವಾಸುದೇವಾಂಶ ಉಪೇಂದ್ರ ಇತಿ ಯಂ ವಿದುಃ ॥ ೮ ॥

ಮೌಹೂರ್ತಿಕಾ ದೇವಗಣಾ ಮುಹೂರ್ತಾಯಾಶ್ಚ ಜಜ್ಞಿರೇ ।
ಯೇ ವೈ ಫಲಂ ಪ್ರಯಚ್ಛಂತಿ ಭೂತಾನಾಂ ಸ್ವಸ್ವಕಾಲಜಮ್ ॥ ೯ ॥

ಸಂಕಲ್ಪಾಯಾಸ್ತು ಸಂಕಲ್ಪಃ ಕಾಮಃ ಸಂಕಲ್ಪಜಃ ಸ್ಮೃತಃ ।
ವಸವೋಽಷ್ಟೌ ವಸೋಃ ಪುತ್ರಾಸ್ತೇಷಾಂ ನಾಮಾನಿ ಮೇ ಶೃಣು ॥ ೧೦ ॥

ದ್ರೋಣಃ ಪ್ರಾಣೋ ಧ್ರುವೋಽರ್ಕೋಽಗ್ನಿ-
ರ್ದೋಷೋ ವಸುರ್ವಿಭಾವಸುಃ ।
ದ್ರೋಣಸ್ಯಾಭಿಮತೇಃ ಪತ್ನ್ಯಾ
ಹರ್ಷಶೋಕಭಯಾದಯಃ ॥ ೧೧ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿದ್ರಾಜನೇ! ಪುತ್ರಶೋಕದಿಂದ ನೊಂದಿದ್ದ ದಕ್ಷಪ್ರಜಾಪತಿಯನ್ನು ಬ್ರಹ್ಮದೇವರು ಸಂತೈಸಿದರು. ಬಳಿಕ ದಕ್ಷನು ಅಸಿಕ್ನಿಯಲ್ಲಿ ಅರವತ್ತು ಮಂದಿ ಕನ್ಯೆಯರನ್ನು ಪಡೆದನು. ಆ ಕನ್ಯೆಯರಿಗೆ ತಂದೆಯಲ್ಲಿ ಎಣೆಯಿಲ್ಲದ ಪ್ರೀತಿಯಿತ್ತು. ॥ ೧ ॥ ದಕ್ಷಪ್ರಜಾಪತಿಯು ಅವರಲ್ಲಿ ಹತ್ತುಮಂದಿಯನ್ನು ಧರ್ಮನಿಗೂ, ಹದಿಮೂರು ಕಶ್ಯಪನಿಗೂ, ಇಪ್ಪತ್ತೇಳು ಚಂದ್ರನಿಗೂ, ಇಬ್ಬರನ್ನು ಭೂತನಿಗೂ, ಇಬ್ಬರನ್ನು ಅಂಗೀರಸನಿಗೂ, ಇಬ್ಬರನ್ನು ಕೃಶಾಶ್ವನಿಗೂ ಹಾಗೂ ಉಳಿದ ನಾಲ್ವರನ್ನು ತಾರ್ಕ್ಷ್ಯನೆಂಬ ಹೆಸರುಳ್ಳ ಕಶ್ಯಪರಿಗೂ ವಿವಾಹ ಮಾಡಿಕೊಟ್ಟನು. ॥ ೨ ॥ ಪರೀಕ್ಷಿತನೇ! ಈಗ ಆ ಕನ್ಯೆಯರ ಹೆಸರುಗಳನ್ನು ಮತ್ತು ಅವರ ಸಂತಾನಗಳನ್ನೂ ತಿಳಿಸುವೆನು, ಕೇಳು. ಇವರ ವಂಶಪರಂಪರೆಯೇ ಮೂರೂ ಲೋಕಗಳಲ್ಲಿಯೂ ಹರಡಿಕೊಂಡಿದೆ. ॥ ೩ ॥

ಧರ್ಮನು – ಭಾನು, ಲಂಬಾ, ಕಕುಭ್, ಜಾಮಿ, ವಿಶ್ವಾ, ಸಾಧ್ಯಾ, ಮರುತ್ವತೀ, ವಸು, ಮುಹೂರ್ತಾ, ಸಂಕಲ್ಪಾ ಎಂಬ ಹತ್ತು ಕನ್ಯೆಯರನ್ನು ವಿವಾಹವಾಗಿದ್ದನು. ಅವರ ಪುತ್ರರ ಹೆಸರುಗಳನ್ನು ಹೇಳುವೆನು, ಕೇಳು – ॥ ೪ ॥ ರಾಜನೇ! ಇವರಲ್ಲಿ – ಭಾನುವಿನ ಪುತ್ರನು ದೇವಋಷಭನು ಮತ್ತು ಅವನ ಪುತ್ರನು ಇಂದ್ರಸೇನನು. ಲಂಬೆಯ ಪುತ್ರ ವಿದ್ಯೋತ ಹಾಗೂ ಅವನ ಪುತ್ರ ಮೇಘಗಣನು. ॥ ೫ ॥ ಕಕುಭೆಯ ಪುತ್ರನು ಸಂಕಟನು. ಅವನ ಪುತ್ರ ಕೀಕಟನು. ಅವನ ಪುತ್ರನು – ಪೃಥಿವಿಯ ಸಮಸ್ತ ದುರ್ಗಗಳಿಗೂ ಅಭಿಮಾನಿ ದೇವತೆಯು. ಜಾಮಿಯ ಪುತ್ರನಿಗೆ ಸ್ವರ್ಗನೆಂಬ ಹೆಸರು. ಅವನಿಗೆ ನಂದಿ ಎಂಬ ಪುತ್ರನು ಹುಟ್ಟಿದನು. ॥ ೬ ॥ ವಿಶ್ವಾ ಎಂಬುವಳ ಪುತ್ರರೇ ವಿಶ್ವೇದೇವತೆಗಳು. ಆ ವಿಶ್ವೇದೇವತೆಗಳಿಗೆ ಸಂತಾನವೇ ಆಗಲಿಲ್ಲ. ಸಾಧ್ಯೆಯ ಪುತ್ರರು ಸಾಧ್ಯರೆಂಬ ದೇವಗಣಗಳು. ಅವರ ಪುತ್ರ ಅರ್ಥಸಿದ್ಧನು. ॥ ೭ ॥ ಮರುತ್ವತಿಗೆ ಮರುತ್ವಂತ ಮತ್ತು ಜಯಂತ ಎಂಬ ಇಬ್ಬರು ಪುತ್ರರು ಹುಟ್ಟಿದರು. ಜಯಂತನು ಭಗವಾನ್ ಶ್ರೀವಾಸುದೇವನ ಅಂಶನು. ಅವನನ್ನು ಉಪೇಂದ್ರನೆಂದೂ ಹೇಳುವರು. ॥ ೮ ॥ ಮುಹೂರ್ತಾಳಿಗೆ ಮುಹೂರ್ತಕ್ಕೆ ಅಭಿಮಾನಿದೇವತೆಗಳು ಪುತ್ರರಾಗಿ ಜನಿಸಿದರು. ಇವರು ತಮ್ಮ-ತಮ್ಮ ಮುಹೂರ್ತಗಳಲ್ಲಿ ಜೀವರಿಗೆ ಅವರವರ ಕರ್ಮಗಳಿಗನುಗುಣವಾಗಿ ಫಲವನ್ನು ಕೊಡುವರು. ॥ ೯ ॥ ಸಂಕಲ್ಪೆಯ ಪುತ್ರನು ಸಂಕಲ್ಪನು. ಅವನ ಪುತ್ರನು ಕಾಮನು. ವಸುವಿನ ಪುತ್ರರೇ ಅಷ್ಟವಸುಗಳು. ಅವರ ಹೆಸರನ್ನು ಕೇಳು – ॥ ೧೦ ॥ ದ್ರೋಣ, ಪ್ರಾಣ, ಧ್ರುವ, ಅರ್ಕ, ಅಗ್ನಿ, ದೋಷ, ವಸು ಮತ್ತು ವಿಭಾವಸು. ಅವರಲ್ಲಿ ದ್ರೋಣನ ಪತ್ನಿಯಾದ ಅಭಿಮತಿಯಲ್ಲಿ ಹರ್ಷ, ಶೋಕ, ಭಯ ಮುಂತಾದವುಗಳ ಅಭಿಮಾನಿ ದೇವತೆಗಳು ಉತ್ಪನ್ನರಾದರು. ॥ ೧೧ ॥ ಪ್ರಾಣನ ಪತ್ನಿಯಾದ ಊರ್ಜಸ್ವತಿಯ ಗರ್ಭದಲ್ಲಿ ಸಹ, ಆಯು ಮತ್ತು ಪುರೋಜವ ಎಂಬ ಮೂವರು ಪುತ್ರರು ಹುಟ್ಟಿದರು. ಧ್ರುವನ ಪತ್ನಿಯಾದ ಧರಣಿಯು ಅನೇಕ

ಪ್ರಾಣಸ್ಯೋರ್ಜಸ್ವತೀ ಭಾರ್ಯಾ ಸಹ ಆಯುಃ ಪುರೋಜವಮ್ ।
ಧ್ರುವಸ್ಯ ಭಾರ್ಯಾ ಧರಣಿರಸೂತ ವಿವಿಧಾಃ ಪುರಃ ॥ ೧೨ ॥

ಅರ್ಕಸ್ಯ ವಾಸನಾ ಭಾರ್ಯಾ ಪುತ್ರಾಸ್ತರ್ಷಾದಯಃ ಸ್ಮೃತಾಃ ।
ಅಗ್ನೇರ್ಭಾರ್ಯಾ ವಸೋರ್ಧಾರಾ ಪುತ್ರಾ ದ್ರವಿಣಕಾದಯಃ ॥ ೧೩ ॥

ಸ್ಕಂದಶ್ಚ ಕೃತ್ತಿಕಾಪುತ್ರೋ ಯೇ ವಿಶಾಖಾದಯಸ್ತತಃ ।
ದೋಷಸ್ಯ ಶರ್ವರೀಪುತ್ರಃ ಶಿಶುಮಾರೋ ಹರೇಃ ಕಲಾ ॥ ೧೪ ॥

ವಾಸ್ತೋರಾಂಗಿರಸೀಪುತ್ರೋ ವಿಶ್ವಕರ್ಮಾ ಕೃತೀಪತಿಃ ।
ತತೋ ಮನುಶ್ಚಾಕ್ಷುಷೋಽಭೂದ್ವಿಶ್ವೇ ಸಾಧ್ಯಾ ಮನೋಃ ಸುತಾಃ ॥ ೧೫ ॥

ವಿಭಾವಸೋರಸೂತೋಷಾ ವ್ಯುಷ್ಟಂ ರೋಚಿಷಮಾತಪಮ್ ।
ಪಂಚಯಾಮೋಽಥ ಭೂತಾನಿ ಯೇನ ಜಾಗ್ರತಿ ಕರ್ಮಸು ॥ ೧೬ ॥

ಸರೂಪಾಸೂತ ಭೂತಸ್ಯ ಭಾರ್ಯಾ ರುದ್ರಾಂಶ್ಚ ಕೋಟಿಶಃ ।
ರೈವತೋಽಜೋ ಭವೋ ಭೀಮೋ ವಾಮ ಉಗ್ರೋ ವೃಷಾಕಪಿಃ ॥ ೧೭ ॥

ಅಜೈಕಪಾದಹಿರ್ಬುಧ್ನ್ಯೋ ಬಹುರೂಪೋ ಮಹಾನಿತಿ ।
ರುದ್ರಸ್ಯ ಪಾರ್ಷದಾಶ್ಚಾನ್ಯೇ ಘೋರಾ ಭೂತವಿನಾಯಕಾಃ ॥ ೧೮ ॥

ಪ್ರಜಾಪತೇರಂಗಿರಸಃ ಸ್ವಧಾ ಪತ್ನೀ ಪಿತೄನಥ ।
ಅಥರ್ವಾಂಗಿರಸಂ ವೇದಂ ಪುತ್ರತ್ವೇ ಚಾಕರೋತ್ಸತೀ ॥ ೧೯ ॥

ಕೃಶಾಶ್ವೋಽರ್ಚಿಷಿ ಭಾರ್ಯಾಯಾಂ
ಧೂಮ್ರಕೇಶಮಜೀಜನತ್ ।
ಧಿಷಣಾಯಾಂ ವೇದಶಿರೋ
ದೇವಲಂ ವಯುನಂ ಮನುಮ್ ॥ ೨೦ ॥

ತಾರ್ಕ್ಷ್ಯಸ್ಯ ವಿನತಾ ಕದ್ರೂಃ ಪತಂಗೀ ಯಾಮಿನೀತಿ ಚ ।
ಪತಂಗ್ಯಸೂತ ಪತಗಾನ್ಯಾಮಿನೀ ಶಲಭಾನಥ ॥ ೨೦ ॥

ಸುಪರ್ಣಾಸೂತ ಗರುಡಂ ಸಾಕ್ಷಾದ್ಯಜ್ಞೇಶವಾಹನಮ್ ।
ಸೂರ್ಯಸೂತಮನೂರುಂ ಚ ಕದ್ರೂರ್ನಾಗಾನನೇಕಶಃ ॥ ೨೨ ॥

ಕೃತ್ತಿಕಾದೀನಿ ನಕ್ಷತ್ರಾಣೀಂದೋಃ ಪತ್ನ್ಯಸ್ತು ಭಾರತ ।
ದಕ್ಷಶಾಪಾತ್ಸೋಽನಪತ್ಯಸ್ತಾಸು ಯಕ್ಷ್ಮಗ್ರಹಾರ್ದಿತಃ ॥ ೨೩ ॥

ನಗರಗಳ ಅಭಿಮಾನಿ ದೇವತೆಗಳನ್ನು ಪುತ್ರರನ್ನಾಗಿ ಪಡೆದಳು. ॥ ೧೨ ॥ ಅರ್ಕನು ತನ್ನ ಪತ್ನಿಯಾದ ವಾಸನಾ ಎಂಬುವಳಲ್ಲಿ ತರ್ಷ (ತೃಷ್ಣಾ) ಮುಂತಾದ ಪುತ್ರರನ್ನು ಪಡೆದನು. ಅಗ್ನಿಯೆಂಬ ವಸುವಿನ ಪತ್ನಿಯಾದ ಧಾರಾದೇವಿಯಲ್ಲಿ ದ್ರವಿಣಕ ಮುಂತಾದ ಅನೇಕ ಪುತ್ರರು ಜನಿಸಿದರು. ॥ ೧೩ ॥ ಕೃತ್ತಿಕಾಪುತ್ರ ಸ್ಕಂದನೂ ಅಗ್ನಿಯಿಂದಲೇ ಹುಟ್ಟಿದನು. ಅವನಿಂದ ವಿಶಾಖ ಮುಂತಾದವರ ಜನ್ಮವಾಯಿತು. ದೋಷನ ಪತ್ನೀ ಶರ್ವರಿಯ ಗರ್ಭದಲ್ಲಿ ಶಿಶುಮಾರನ ಜನ್ಮವಾಯಿತು. ಅದು ಭಗವಂತನ ಕಲಾವತಾರವಾಗಿದೆ. ॥ ೧೪ ॥ ವಸುವಿನ ಪತ್ನಿಯಾದ ಆಂಗೀರಸೀಯಿಂದ ಶಿಲ್ಪಕಲೆಯ ಅಧಿಪತಿ ವಿಶ್ವಕರ್ಮನು ಉದಿಸಿದನು. ವಿಶ್ವಕರ್ಮನ ಭಾರ್ಯೆ ಕೃತಿಕೆಯಲ್ಲಿ ಚಾಕ್ಷುಷ ಮನುವು ಹುಟ್ಟಿದನು ಮತ್ತು ಅವನಿಗೆ ವಿಶ್ವೇದೇವ ಹಾಗೂ ಸಾಧ್ಯಗಣರು ಪುತ್ರರಾದರು. ॥ ೧೫ ॥ ವಿಭಾವಸುವಿನ ಪತ್ನಿಯಾದ ಉಷಾಳಿಂದ ವ್ಯುಷ್ಟ, ರೋಚಿಷ್, ಆತಪ ಎಂಬ ಮೂರು ಪುತ್ರರು ಉತ್ಪನ್ನರಾದರು. ಅವರಲ್ಲಿ ಆತಪನಿಗೆ ಪಂಚಯಾಮ (ದಿವಸ) ಎಂಬ ಪುತ್ರನು ಜನಿಸಿದನು. ಈ ಪಂಚಯಾಮನಿಂದಲೇ ಲೋಕದಲ್ಲಿ ಎಲ್ಲ ಜನರೂ ತಮ್ಮ-ತಮ್ಮ ಕಾರ್ಯಗಳಲ್ಲಿ ತೊಡಗಿರುತ್ತಾರೆ. ॥ ೧೬ ॥

ಭೂತನ ಪತ್ನಿಯಾದ ದಕ್ಷನಂದಿನೀ ಸರೂಪಳು ಕೋಟಿ ಕೋಟಿ ರುದ್ರಗಣಗಳನ್ನು ಪಡೆದಳು. ಇವರಲ್ಲಿ ರೈವತ, ಅಜ, ಭವ, ಭೀಮ, ವಾಮ, ಉಗ್ರ, ವೃಷಾಕಪಿ, ಅಜೈಕಪಾದ, ಅಹಿರ್ಬುಧ್ನ್ಯ, ಬಹುರೂಪ ಮತ್ತು ಮಹಾನ್ – ಎಂಬ ಹನ್ನೊಂದು ಮಂದಿ ಮುಖ್ಯರಾದರು. ಭೂತನ ಇನ್ನೊಬ್ಬ ಪತ್ನಿಯಾದ ಭೂತಾಳಿಂದ ಭಯಂಕರ ಭೂತಗಳು ಮತ್ತು ವಿನಾಯಕರೇ ಮುಂತಾದವರು ಹುಟ್ಟಿದರು. ಇವರೆಲ್ಲರೂ ಹನ್ನೊಂದನೆಯ ಪ್ರಧಾನರುದ್ರನಾದ ಮಹಾನ್ ಇವನ ಪಾರ್ಷದರಾದರು. ॥ ೧೭-೧೮ ॥ ಅಂಗಿರಾ ಪ್ರಜಾಪತಿಯ ಮೊದಲನೆಯ ಪತ್ನಿಯಾದ ಸ್ವಧಾಳಿಂದ ಪಿತೃಗಣಗಳು ಉತ್ಪನ್ನರಾದರು. ಎರಡನೆಯ ಪತ್ನಿ ಸತಿಯು ಅಥರ್ವಾಂಗಿರಸ ಎಂಬ ವೇದವನ್ನೇ ಪುತ್ರರೂಪದಿಂದ ಸ್ವೀಕರಿಸಿದಳು. ॥ ೧೯ ॥ ಕೃಶಾಶ್ವನ ಪತ್ನಿಯಾದ ಅರ್ಚಿಯಲ್ಲಿ ಧೂಮ್ರಕೇಶನ ಜನ್ಮವಾಯಿತು ಮತ್ತು ಧಿಷಣಾಳಿಂದ ವೇದಶಿರಾ, ದೇವಲ, ವಯುನ ಹಾಗೂ ಮನು ಎಂಬ ನಾಲ್ಕು ಪುತ್ರರು ಜನಿಸಿದರು. ॥ ೨೦ ॥ ತಾರ್ಕ್ಷ್ಯನೆಂಬ ಹೆಸರಿನ ಕಶ್ಯಪರಿಗೆ ವಿನತಾ, ಕದ್ರೂ, ಪತಂಗೀ, ಯಾಮಿನೀ ಎಂಬ ನಾಲ್ವರು ಪತ್ನಿಯರಿದ್ದರು. ಪತಂಗಿಯಿಂದ ಪಕ್ಷಿಗಳು ಮತ್ತು ಯಾಮಿನಿಯಿಂದ ಶಲಭ (ಮಿಡತೆ)ಗಳೂ ಉತ್ಪನ್ನವಾದುವು. ॥ ೨೧ ॥ ವಿನತಾದೇವಿಯು ಭಗವಾನ್ ವಿಷ್ಣುವಿನ ವಾಹನವಾದ ಗರುಡನನ್ನು ಪುತ್ರನಾಗಿ ಪಡೆದಳು. ವಿನತಾಳ ಇನ್ನೊಬ್ಬ ಪುತ್ರನು ಭಗವಾನ್ ಸೂರ್ಯನ ಸಾರಥಿಯಾದ ಅರುಣನು. ಕದ್ರುವಿನಿಂದ ಅನೇಕ ನಾಗಗಳೂ ಉತ್ಪನ್ನವಾದುವು. ॥ ೨೨ ॥

ಪರೀಕ್ಷಿತನೇ! ಕೃತ್ತಿಕಾದಿ ಇಪ್ಪತ್ತೇಳು ನಕ್ಷತ್ರಗಳ ಅಭಿಮಾನೀ ದೇವಿಯರು ಚಂದ್ರನ ಪತ್ನಿಯರು. ರೋಹಿಣಿಯಲ್ಲಿ ಚಂದ್ರನಿಗೆ ವಿಶೇಷ ಪ್ರೇಮವಿರುವ ಕಾರಣ ಅವನು ದಕ್ಷನ ಶಾಪಕ್ಕೆ

ಪುನಃ ಪ್ರಸಾದ್ಯ ತಂ ಸೋಮಃ ಕಲಾ ಲೇಭೇ ಕ್ಷಯೇ ದಿತಾಃ ।
ಶೃಣು ನಾಮಾನಿ ಲೋಕಾನಾಂ ಮಾತೃಣಾಂ ಶಂಕರಾಣಿ ಚ ॥ ೨೪ ॥

ಅಥ ಕಶ್ಯಪಪತ್ನೀನಾಂ ಯತ್ಪ್ರಸೂತಮಿದಂ ಜಗತ್ ।
ಅದಿತಿರ್ದಿತಿರ್ದನುಃ ಕಾಷ್ಠಾ ಅರಿಷ್ಟಾ ಸುರಸಾ ಇಲಾ ॥ ೨೫ ॥

ಮುನಿಃ ಕ್ರೋಧವಶಾ ತಾಮ್ರಾ ಸುರಭಿಃ ಸರಮಾ ತಿಮಿಃ ।
ತಿಮೇರ್ಯಾದೋಗಣಾ ಆಸನ್ ಶ್ವಾಪದಾಃ ಸರಮಾಸುತಾಃ ॥ ೨೬ ॥

ಸುರಭೇರ್ಮಹಿಷಾ ಗಾವೋ ಯೇ ಚಾನ್ಯೇ ದ್ವಿಶಫಾ ನೃಪ ।
ತಾಮ್ರಾಯಾಃ ಶ್ಯೇನಗೃಧ್ರಾದ್ಯಾ ಮುನೇರಪ್ಸರಸಾಂ ಗಣಾಃ ॥ ೨೭ ॥

ದಂದಶೂಕಾದಯಃ ಸರ್ಪಾ ರಾಜನ್ ಕ್ರೋಧವಶಾತ್ಮಜಾಃ ।
ಇಲಾಯಾ ಭೂರುಹಾಃ ಸರ್ವೇ ಯಾತುಧಾನಾಶ್ಚ ಸೌರಸಾಃ ॥ ೨೮ ॥

ಅರಿಷ್ಟಾಯಾಸ್ತು ಗಂಧರ್ವಾಃ ಕಾಷ್ಠಾಯಾ ದ್ವಿಶಫೇತರಾಃ ।
ಸುತಾ ದನೋರೇಕಷಷ್ಟಿಸ್ತೇಷಾಂ ಪ್ರಾಧಾನಿಕಾನ್ ಶೃಣು ॥ ೨೯ ॥

ದ್ವಿಮೂರ್ಧಾ ಶಂಬರೋಽರಿಷ್ಟೋ ಹಯಗ್ರೀವೋ ವಿಭಾವಸುಃ ।
ಅಯೋಮುಖಃ ಶಂಕುಶಿರಾಃ ಸ್ವರ್ಭಾನುಃ ಕಪಿಲೋಽರುಣಃ ॥ ೩೦ ॥

ಪುಲೋಮಾ ವೃಷಪರ್ವಾ ಚ ಏಕಚಕ್ರೋಽನುತಾಪನಃ ।
ಧೂಮ್ರಕೇಶೋ ವಿರೂಪಾಕ್ಷೋ ವಿಪ್ರಚಿತ್ತಿಶ್ಚ ದುರ್ಜಯಃ ॥ ೩೧ ॥

ಸ್ವರ್ಭಾನೋಃ ಸುಪ್ರಭಾಂ ಕನ್ಯಾಮುವಾಹ ನಮುಚಿಃ ಕಿಲ ।
ವೃಷಪರ್ವಣಸ್ತು ಶರ್ಮಿಷ್ಠಾಂ ಯಯಾತಿರ್ನಾಹುಷೋ ಬಲೀ ॥ ೩೨ ॥

ವೈಶ್ವಾನರಸುತಾ ಯಾಶ್ಚ ಚತಸ್ರಶ್ಚಾರುದರ್ಶನಾಃ ।
ಉಪದಾನವೀ ಹಯಶಿರಾ ಪುಲೋಮಾ ಕಾಲಕಾ ತಥಾ ॥ ೩೩ ॥

ಉಪದಾನವೀಂ ಹಿರಣ್ಯಾಕ್ಷಃ ಕ್ರತುರ್ಹಯಶಿರಾಂ ನೃಪ ।
ಪುಲೋಮಾಂ ಕಾಲಕಾಂ ಚ ದ್ವೇ ವೈಶ್ವಾನರಸುತೇ ತು ಕಃ ॥ ೩೪ ॥

ಉಪಯೇಮೇಽಥ ಭಗವಾನ್ಕಶ್ಯಪೋ ಬ್ರಹ್ಮಚೋದಿತಃ ।
ಪೌಲೋಮಾಃ ಕಾಲಕೇಯಾಶ್ಚ ದಾನವಾ ಯುದ್ಧಶಾಲಿನಃ ॥ ೩೫ ॥

ಹುತ್ತಾಗಿ ಕ್ಷಯರೋಗಕ್ಕೆ ಗುರಿಯಾದನು. ಅದರಿಂದ ಅವನಿಗೆ ಯಾವ ಸಂತಾನವೂ ಜನಿಸಲಿಲ್ಲ. ॥ ೨೩ ॥ ಚಂದ್ರನು ದಕ್ಷನನ್ನು ಪ್ರಸನ್ನಗೊಳಿಸಿ ಕೃಷ್ಣಪಕ್ಷದಲ್ಲಿ ಕ್ಷೀಣಹೊಂದಿದ ಕಲೆಗಳು ಶುಕ್ಲಪಕ್ಷದಲ್ಲಿ ಪೂರ್ಣಹೊಂದುವ ವರವನ್ನೇನೋ ಪಡೆದನು. ಆದರೂ ನಕ್ಷತ್ರಾಭಿಮಾನಿದೇವಿಯರಿಂದ ಅವನಿಗೆ ಯಾವುದೇ ಸಂತತಿಯು ಉಂಟಾಗಲಿಲ್ಲ. ರಾಜನೇ! ಈಗ ನಿನಗೆ ಕಶ್ಯಪರ ಪತ್ನಿಯರ ಮಂಗಲಮಯ ಹೆಸರುಗಳನ್ನು ಹೇಳುವೆನು, ಕೇಳು. ಅವರು ಲೋಕಮಾತೆಯರು. ಅವರಿಂದಲೇ ಇವೆಲ್ಲ ಸೃಷ್ಟಿಯು ಉತ್ಪನ್ನವಾಗಿದೆ. ಅದಿತಿ, ದಿತಿ, ದನು, ಕಾಷ್ಠಾ, ಅರಿಷ್ಟಾ, ಸುರಸಾ, ಇಲಾ, ಮುನಿ, ಕ್ರೋಧವಶಾ, ತಾಮ್ರಾ, ಸುರಭಿ, ಸರಮಾ ಮತ್ತು ತಿಮಿ – ಇವು ಅವರ ಹೆಸರುಗಳು. ಇವರಲ್ಲಿ ತಿಮಿಯ ಪುತ್ರರು ಎಲ್ಲ ಜಲಚರಪ್ರಾಣಿಗಳು, ಹುಲಿಯೇ ಮುಂತಾದ ಹಿಂಸಕ ಪ್ರಾಣಿಗಳು ಸರಮೆಯ ಸಂತಾನಗಳು. ॥ ೨೪ ॥ ಎಮ್ಮೆ, ಹಸುವೇ ಮುಂತಾದ ಎರಡು ಗೊರಸುಗಳುಳ್ಳ ಬೇರೆ ಪಶುಗಳೆಲ್ಲವೂ ಸುರಭಿಯ ಸಂತಾನಗಳು. ತಾಮ್ರೆಯ ಸಂತಾನಗಳು ಗಿಡುಗ, ಹದ್ದು ಮುಂತಾದ ಬೇಟೆಯಾಡುವ ಪಕ್ಷಿಗಳು. ಮುನಿ ಇವಳಿಂದ ಅಪ್ಸರೆಯರು ಜನಿಸಿದರು. ॥ ೨೭ ॥ ಸರ್ಪ, ಚೇಳು ಮುಂತಾದ ವಿಷವುಳ್ಳ ಜಂತುಗಳು ಕ್ರೋಧವಶೆಯ ಸಂತಾನಗಳು. ಇಲಾದೇವಿಯಿಂದ ವೃಕ್ಷಗಳು, ಲತೆಗಳು ಮುಂತಾದ ಭೂಮಿಯಲ್ಲಿ ಉತ್ಪನ್ನವಾಗುವ ವನಸ್ಪತಿಗಳು ಹುಟ್ಟಿದುವು. ಸುರಸೆಯಿಂದ ಯಾತುಧಾನ(ರಾಕ್ಷಸ)ರು ಹುಟ್ಟಿದರು. ॥ ೨೮ ॥ ಅರಿಷ್ಟಾಳಿಂದ ಗಂಧರ್ವರೂ ಹಾಗೂ ಕಾಷ್ಠಾಳಿಂದ ಕುದುರೆಯೇ ಮುಂತಾದ ಒಂದು ಗೊರಸಿನ ಪಶುಗಳು ಉತ್ಪನ್ನವಾದುವು. ದನುವಿಗೆ ಅರುವತ್ತೊಂದು ಮಂದಿ ಪುತ್ರರಾದರು. ಅವರಲ್ಲಿ ಮುಖ್ಯ-ಮುಖ್ಯರಾದವರ ಹೆಸರುಗಳನ್ನು ಕೇಳು. ॥ ೨೯ ॥ ದ್ವಿಮೂರ್ಧಾ, ಶಂಬರ, ಅರಿಷ್ಟ, ಹಯಗ್ರೀವ, ವಿಭಾವಸು, ಅಯೋಮುಖ, ಶಂಕುಶಿರಾ, ಸ್ವರ್ಭಾನು, ಕಪಿಲ, ಅರುಣ, ಪುಲೋಮಾ, ವೃಷಪರ್ವಾ, ಏಕಚಕ್ರ, ಅನುತಾಪನ, ಧೂಮ್ರಕೇಶ, ವಿರೂಪಾಕ್ಷ, ವಿಪ್ರಚಿತ್ತಿ ಮತ್ತು ದುರ್ಜಯ. ॥ ೩೦-೩೧ ॥ ಸ್ವರ್ಭಾನುವಿನ ಕನ್ಯೆಯಾದ ಸುಪ್ರಭೆಯೊಂದಿಗೆ ನಮೂಚಿಯು ಮತ್ತು ವೃಷಪರ್ವನ ಮಗಳು ಶರ್ಮಿಷ್ಠೆಯೊಂದಿಗೆ ಮಹಾಬಲಶಾಲಿಯಾದ ಯಯಾತಿಯು ವಿವಾಹ ಮಾಡಿದರು. ॥ ೩೨ ॥ ದನುವಿನ ಪುತ್ರ ವೈಶ್ವಾನರನಿಗೆ ಉಪದಾನವೀ, ಹಯಶಿರಾ, ಪುಲೋಮಾ ಮತ್ತು ಕಾಲಕಾ ಎಂಬ ನಾಲ್ವರು ಸುಂದರ ಕನ್ಯೆಯರಿದ್ದರು. ॥ ೩೩ ॥ ಇವರಲ್ಲಿ ಉಪದಾನವಿಯೊಂದಿಗೆ ಹಿರಣ್ಯಾಕ್ಷನ ಮತ್ತು ಹಯಶಿರಳೊಂದಿಗೆ ಕ್ರತುವಿನ ವಿವಾಹ ವಾಯಿತು. ಬ್ರಹ್ಮದೇವರ ಅಪ್ಪಣೆಯಂತೆ ಪ್ರಜಾಪತಿ ಭಗವಾನ್ ಕಶ್ಯಪರು ವೈಶ್ವಾನರನ ಉಳಿದೆರಡು ಕನ್ಯೆಯರಾದ ಪುಲೋಮಾ ಮತ್ತು ಕಾಲಕಾ ಇವರೊಂದಿಗೆ ವಿವಾಹವಾದರು. ಅವರಲ್ಲಿ ಪೌಲೋಮ ಮತ್ತು ಕಾಲಕೇಯರೆಂಬ ಅರವತ್ತುಸಾವಿರ ರಣವೀರರಾದ ದಾನವರು ಜನಿಸಿದರು. ಇವರಿಗೇ ಇನ್ನೊಂದು ಹೆಸರು ನಿವಾತಕವಚರೆಂದಿತ್ತು. ಇವರು ಯಜ್ಞಕರ್ಮದಲ್ಲಿ ವಿಘ್ನವನ್ನೊಡ್ಡುತ್ತಿದ್ದರು. ಅದಕ್ಕಾಗಿ ಪರೀಕ್ಷಿದ್ರಾಜನೇ! ಇಂದ್ರನನ್ನು ಪ್ರಸನ್ನಗೊಳಿಸಲು ನಿನ್ನ ತಾತನಾದ ಅರ್ಜುನನು ಒಬ್ಬಂಟಿಗನಾಗಿಯೇ

ತಯೋಃ ಷಷ್ಟಿಸಹಸ್ರಾಣಿ ಯಜ್ಞಘ್ನಾಂಸ್ತೇ ಪಿತುಃ ಪಿತಾ ।
ಜಘಾನ ಸ್ವರ್ಗತೋ ರಾಜನ್ನೇಕ ಇಂದ್ರಪ್ರಿಯಂಕರಃ ॥ ೩೬ ॥

ವಿಪ್ರಚಿತ್ತಿಃ ಸಿಂಹಿಕಾಯಾಂ ಶತಂ ಚೈಕಮಜೀಜನತ್ ।
ರಾಹುಜ್ಯೇಷ್ಠಂ ಕೇತುಶತಂ ಗ್ರಹತ್ವಂ ಯ ಉಪಾಗತಾಃ ॥ ೩೭ ॥

ಅಥಾತಃ ಶ್ರೂಯತಾಂ ವಂಶೋ ಯೋಽದಿತೇರನುಪೂರ್ವಶಃ ।
ಯತ್ರ ನಾರಾಯಣೋ ದೇವಃ ಸ್ವಾಂಶೇನಾವತರದ್ವಿಭುಃ ॥ ೩೮ ॥

ವಿವಸ್ವಾನರ್ಯಮಾ ಪೂಷಾ ತ್ವಷ್ಟಾಥ ಸವಿತಾ ಭಗಃ ।
ಧಾತಾ ವಿಧಾತಾ ವರುಣೋ ಮಿತ್ರಃ ಶಕ್ರ ಉರುಕ್ರಮಃ ॥ ೩೯ ॥

ವಿವಸ್ವತಃ ಶ್ರಾದ್ಧದೇವಂ ಸಂಜ್ಞಾಸೂಯತ ವೈ ಮನುಮ್ ।
ಮಿಥುನಂ ಚ ಮಹಾಭಾಗಾ ಯಮಂ ದೇವಂ ಯಮೀಂ ತಥಾ ।
ಸೈವ ಭೂತ್ವಾಥ ವಡವಾ ನಾಸತ್ಯೌ ಸುಷುವೇ ಭುವಿ ॥ ೪೦ ॥

ಛಾಯಾ ಶನೈಶ್ಚರಂ ಲೇಭೇ ಸಾವರ್ಣಿಂ ಚ ಮನುಂ ತತಃ ।
ಕನ್ಯಾಂ ಚ ತಪತೀಂ ಯಾ ವೈ ವವ್ರೇ ಸಂವರಣಂ ಪತಿಮ್ ॥ ೪೧ ॥

ಅರ್ಯಮ್ಣೋ ಮಾತೃಕಾ ಪತ್ನೀ ತಯೋಶ್ಚರ್ಷಣಯಃ ಸುತಾಃ ।
ಯತ್ರ ವೈ ಮಾನುಷೀ ಜಾತಿರ್ಬ್ರಹ್ಮಣಾ ಚೋಪಕಲ್ಪಿತಾ ॥ ೪೨ ॥

ಪೂಷಾನಪತ್ಯಃ ಪಿಷ್ಟಾದೋ ಭಗ್ನದಂತೋಽಭವತ್ಪುರಾ ।
ಯೋಽಸೌ ದಕ್ಷಾಯ ಕುಪಿತಂ ಜಹಾಸ ವಿವೃತದ್ವಿಜಃ ॥ ೪೩ ॥

ತ್ವಷ್ಟುರ್ದೈತ್ಯಾತ್ಮಜಾ ಭಾರ್ಯಾ ರಚನಾ ನಾಮ ಕನ್ಯಕಾ ।
ಸನ್ನಿವೇಶಸ್ತಯೋರ್ಜಜ್ಞೇ ವಿಶ್ವರೂಪಶ್ಚ ವೀರ್ಯವಾನ್ ॥ ೪೪ ॥

ತಂ ವವ್ರಿರೇ ಸುರಗಣಾಃ ಸ್ವಸ್ರೀಯಂ ದ್ವಿಷತಾಮಪಿ ।
ವಿಮತೇನ ಪರಿತ್ಯಕ್ತಾ ಗುರುಣಾಽಽಂಗಿರಸೇನ ಯತ್ ॥ ೪೫ ॥

ಅವರೆಲ್ಲರನ್ನೂ ಸಂಹರಿಸಿಬಿಟ್ಟನು. ಅರ್ಜುನನು ಸ್ವರ್ಗಕ್ಕೆ ಹೋಗಿದ್ದಾಗ ನಡೆದ ಘಟನೆಯಿದು. ॥ ೩೪-೩೬ ॥ ವಿಪ್ರಚಿತ್ತಿಯ ಪತ್ನಿಯಾದ ಸಿಂಹಿಕೆಯ ಗರ್ಭದಿಂದ ಒಂದು ನೂರ ಒಂದು ಪುತ್ರರು ಹುಟ್ಟಿದರು. ಅವರಲ್ಲಿ ಎಲ್ಲರಿಗಿಂತ ಹಿರಿಯವನಾದವನ ಹೆಸರು ರಾಹು. ಇವನು ನವಗ್ರಹದಲ್ಲಿ ಲೆಕ್ಕಿಸಲ್ಪಡುತ್ತಾನೆ. ಉಳಿದ ನೂರು ಪುತ್ರರಿಗೂ ಕೇತುಗಳೆಂದು ಹೆಸರು. ॥ ೩೭ ॥

ಪರೀಕ್ಷಿತನೇ! ಈಗ ಕ್ರಮವಾಗಿ ಅದಿತಿಯ ವಂಶ ಪರಂಪರೆಯನ್ನು ಹೇಳುವೆನು, ಕೇಳು. ಈ ವಂಶದಲ್ಲೇ ಸರ್ವವ್ಯಾಪಕನಾದ ದೇವಾಧಿದೇವನಾದ ಶ್ರೀಮನ್ನಾರಾಯಣನೇ ತನ್ನ ಅಂಶದಿಂದ ವಾಮನನಾಗಿ ಅವತರಿಸಿದ್ದನು. ॥ ೩೮ ॥ ವಿವಸ್ವಂತ, ಅರ್ಯಮಾ, ಪೂಷಾ, ತ್ವಷ್ಟಾ, ಸವಿತಾ, ಭಗ, ಧಾತಾ, ವಿಧಾತಾ, ವರುಣ, ಮಿತ್ರ, ಇಂದ್ರ ಮತ್ತು ತ್ರಿವಿಕ್ರಮ (ವಾಮನ) ಇವರು ಅದಿತಿದೇವಿಯ ಪುತ್ರರು. ಈ ಹನ್ನೆರಡು ಮಂದಿಯೂ ದ್ವಾದಶಾದಿತ್ಯರೆಂದು ಕರೆಯಲ್ಪಟ್ಟರು. ॥ ೩೯ ॥ ವಿವಸ್ವಂತನ ಪತ್ನಿಯಾದ ಮಹಾ ಭಾಗ್ಯವತಿ ಸಂಜ್ಞೆಯ ಗರ್ಭದಿಂದ ಶ್ರಾದ್ಧದೇವ (ವೈವಸ್ವತ) ಮನು ಹಾಗೂ ಯಮ-ಯಮುನಾದೇವಿ ಅವಳಿಮಕ್ಕಳು ಹುಟ್ಟಿದರು. ಸಂಜ್ಞೆಯೇ ಹೆಣ್ಣುಕುದುರೆಯ ರೂಪವನ್ನು ಧರಿಸಿ ಭಗವಾನ್ ಸೂರ್ಯನಿಂದ ಭೂಲೋಕದಲ್ಲಿ ಅಶ್ವಿನೀಕುಮಾರರಿಗೆ ಜನ್ಮನೀಡಿದಳು. ॥ ೪೦ ॥ ವಿವಸ್ವಂತನು ಇನ್ನೊಬ್ಬ ಪತ್ನಿಯಾದ ಛಾಯಾದೇವಿಯಿಂದ ಶನೈಶ್ಚರ ಮತ್ತು ಸಾವರ್ಣಿಮನು ಎಂಬ ಇಬ್ಬರು ಪುತ್ರರನ್ನು ತಪತೀ ಎಂಬ ಓರ್ವ ಕನ್ಯೆಯನ್ನು ಪಡೆದುಕೊಂಡನು. ತಪತಿಯು ಸಂವರಣನನ್ನು ಪತಿಯನ್ನಾಗಿ ವರಿಸಿದಳು. ॥ ೪೧ ॥ ಅರ್ಯಮನ ಪತ್ನಿಯಾದ ಮಾತೃಕಾ ಎಂಬುವಳ ಗರ್ಭದಿಂದ ಚರ್ಷಣೀ ಎಂಬ ಪುತ್ರರು ಹುಟ್ಟಿದರು. ಅವರು ಕರ್ತವ್ಯ-ಅಕರ್ತವ್ಯಗಳ ಜ್ಞಾನದಿಂದ ಕೂಡಿದ್ದರು. ಅದಕ್ಕಾಗಿ ಬ್ರಹ್ಮದೇವರು ಅವರನ್ನು ಆಧರಿಸಿಯೇ ಮನುಷ್ಯಜಾತಿ (ಬ್ರಾಹ್ಮಣಾದಿ ವರ್ಣ)ಯನ್ನು ಕಲ್ಪಿಸಿದರು. ॥ ೪೨ ॥ ಪೂಷಾನಿಗೆ ಯಾವುದೇ ಸಂತಾನವಾಗಲಿಲ್ಲ. ಹಿಂದೆ ಶಿವನು ದಕ್ಷನ ಮೇಲೆ ಸಿಟ್ಟುಗೊಂಡಾಗ ಈ ಪೂಷಾನು ಹಲ್ಲುಕಿರಿದು ನಕ್ಕಿದ್ದನು. ಅದಕ್ಕಾಗಿ ವೀರಭದ್ರನು ಇವನ ಹಲ್ಲನ್ನು ಉದುರಿಸಿಬಿಟ್ಟಿದ್ದನು. ಅಂದಿನಿಂದ ಪೂಷಾನು ಹಿಟ್ಟಿನ ರೂಪದಲ್ಲಿರುವ ಅನ್ನವನ್ನೇ ಸೇವಿಸತೊಡಗಿದನು. ॥ ೪೩ ॥ ದೈತ್ಯರ ಕಿರಿಯ ತಂಗಿ ರಚನಾ ತ್ವಷ್ಟನ ಪತ್ನಿಯಾಗಿದ್ದಳು. ರಚನೆಯ ಗರ್ಭದಿಂದ ಸನ್ನಿವೇಶ ಮತ್ತು ಪರಾಕ್ರಮಿಯಾದ ವಿಶ್ವರೂಪರೆಂಬ ಇಬ್ಬರು ಪುತ್ರರು ಜನಿಸಿದರು. ॥ ೪೪ ॥ ಹೀಗೆ ವಿಶ್ವರೂಪನು ಶತ್ರುಗಳ ಅಳಿಯನಾಗಿದ್ದರೂ ದೇವಗುರು ಬೃಹಸ್ಪತಿಯು ಇಂದ್ರನಿಂದ ಅಪಮಾನಿತನಾಗಿ ದೇವತೆಗಳನ್ನು ತೊರೆದು ಹೋದಾಗ ದೇವತೆಗಳು ಈ ವಿಶ್ವರೂಪನನ್ನೇ ತಮ್ಮ ಪುರೋಹಿತರನ್ನಾಗಿ ಕೊಂಡರು. ॥ ೪೫ ॥

ಆರನೆಯ ಅಧ್ಯಾಯವು ಮುಗಿಯಿತು. ॥ ೬ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಷಷ್ಠಸ್ಕಂಧೇ ಷಷ್ಠೋಽಧ್ಯಾಯಃ ॥ ೬ ॥

ಏಳನೆಯ ಅಧ್ಯಾಯ

ಬೃಹಸ್ಪತಿಯು ದೇವತೆಗಳನ್ನು ತೊರೆದುದು ಮತ್ತು ವಿಶ್ವರೂಪನನ್ನು ದೇವಗುರುವಾಗಿ ವರಣಮಾಡಿದುದು

ರಾಜೋವಾಚ

ಕಸ್ಯ ಹೇತೋಃ ಪರಿತ್ಯಕ್ತಾ ಆಚಾರ್ಯೇಣಾತ್ಮನಃ ಸುರಾಃ ।
ಏತದಾಚಕ್ಷ್ವ ಭಗವನ್ ಶಿಷ್ಯಾಣಾಮಕ್ರಮಂ ಗುರೌ ॥ ೧ ॥

ಶ್ರೀಶುಕ ಉವಾಚ

ಇಂದ್ರಸ್ತ್ರಿಭುವನೈಶ್ವರ್ಯಮದೋಲ್ಲಂಘಿತಸತ್ಪಥಃ ।
ಮರುದ್ಭಿರ್ವಸುಭೀ ರುದ್ರೈರಾದಿತ್ಯೈರೃಭುಭಿರ್ನೃಪ ॥ ೨ ॥

ವಿಶ್ವೇದೇವೈಶ್ಚ ಸಾಧ್ಯೈಶ್ಚ ನಾಸತ್ಯಾಭ್ಯಾಂ ಪರಿಶ್ರಿತಃ ।
ಸಿದ್ಧಚಾರಣಗಂಧರ್ವೈರ್ಮುನಿಭಿರ್ಬ್ರಹ್ಮವಾದಿಭಿಃ ॥ ೩ ॥

ವಿದ್ಯಾಧರಾಪ್ಸರೋಭಿಶ್ಚ ಕಿನ್ನರೈಃ ಪತಗೋರಗೈಃ ।
ನಿಷೇವ್ಯಮಾಣೋ ಮಘವಾನ್ ಸ್ತೂಯಮಾನಶ್ಚ ಭಾರತ ॥ ೪ ॥

ಉಪಗೀಯಮಾನೋ ಲಲಿತಮಾಸ್ಥಾನಾಧ್ಯಾಸನಾಶ್ರಿತಃ ।
ಪಾಂಡುರೇಣಾತಪತ್ರೇಣ ಚಂದ್ರಮಂಡಲಚಾರುಣಾ ॥ ೫ ॥

ಯುಕ್ತಶ್ಚಾನ್ಯೈಃ ಪಾರಮೇಷ್ಠ್ಯೈಶ್ಚಾಮರವ್ಯಜನಾದಿಭಿಃ ।
ವಿರಾಜಮಾನಃ ಪೌಲೋಮ್ಯಾ ಸಹಾರ್ಧಾಸನಯಾ ಭೃಶಮ್ ॥ ೬ ॥

ಸ ಯದಾ ಪರಮಾಚಾರ್ಯಂ ದೇವಾನಾಮಾತ್ಮನಶ್ಚ ಹ ।
ನಾಭ್ಯನಂದತ ಸಂಪ್ರಾಪ್ತಂ ಪ್ರತ್ಯುತ್ಥಾನಾಸನಾದಿಭಿಃ ॥ ೭ ॥

ವಾಚಸ್ಪತಿಂ ಮುನಿವರಂ ಸುರಾಸುರನಮಸ್ಕೃತಮ್ ।
ನೋಚ್ಚಚಾಲಾಸನಾದಿಂದ್ರಃ ಪಶ್ಯನ್ನಪಿ ಸಭಾಗತಮ್ ॥ ೮ ॥

ತತೋ ನಿರ್ಗತ್ಯ ಸಹಸಾ ಕವಿರಾಂಗಿರಸಃ ಪ್ರಭುಃ ।
ಆಯಯೌ ಸ್ವಗೃಹಂ ತೂಷ್ಣೀಂ ವಿದ್ವಾನ್ ಶ್ರೀಮದವಿಕ್ರಿಯಾಮ್ ॥ ೯ ॥

ತರ್ಹ್ಯೇವ ಪ್ರತಿಬುಧ್ಯೇಂದ್ರೋ ಗುರುಹೇಲನಮಾತ್ಮನಃ ।
ಗರ್ಹಯಾಮಾಸ ಸದಸಿ ಸ್ವಯಮಾತ್ಮಾನಮಾತ್ಮನಾ ॥ ೧೦ ॥

ಪರೀಕ್ಷಿತಮಹಾರಾಜನು ಕೇಳಿದನು – ಮಹಾತ್ಮರೇ! ದೇವತೆಗಳ ಆಚಾರ್ಯರಾದ ಬೃಹಸ್ಪತಿಯವರು ತಮ್ಮ ಪ್ರಿಯಶಿಷ್ಯರಾದ ದೇವತೆಗಳನ್ನು ಏಕೆ ತೊರೆದರು? ದೇವತೆಗಳು ತಮ್ಮ ಆಚಾರ್ಯರಿಗೆ ಇಂತಹ ಯಾವ ಅಪರಾಧ ಮಾಡಿದ್ದರು? ಕೃಪೆಯಿಟ್ಟು ತಿಳಿಸಿರಿ. ॥ ೧ ॥

ಶ್ರೀಶುಕ ಮುನಿಗಳು ಹೇಳುತ್ತಾರೆ – ಎಲೈ ರಾಜೇಂದ್ರಾ! ಮೂರುಲೋಕಗಳ ಐಶ್ವರ್ಯವನ್ನು ಪಡೆದು ಇಂದ್ರನು ಗರ್ವಾಂಧನಾಗಿದ್ದನು. ಈ ಅಹಂಕಾರದಿಂದ ಅವನು ಧರ್ಮಮರ್ಯಾದೆ ಸದಾಚಾರಗಳನ್ನು ಮೀರಿ ನಡೆಯತೊಡಗಿದ್ದನು. ಒಂದು ದಿನ ಈ ಘಟನೆ ನಡೆಯಿತು – ಮಹೇಂದ್ರನು ತುಂಬಿದ ಸಭೆಯಲ್ಲಿ ಪತ್ನಿಯಾದ ಶಚೀದೇವಿಯೊಂದಿಗೆ ಉನ್ನತವಾದ ಸಿಂಹಾಸನದಲ್ಲಿ ಕುಳಿತಿದ್ದನು. ಆಗ ನಲವತ್ತೊಂಭತ್ತು ಮಂದಿ ಮರುದ್ದೇವತೆಗಳು, ಅಷ್ಟವಸುಗಳು, ಏಕಾದಶರುದ್ರರು, ದ್ವಾದಶಾದಿತ್ಯರು, ಋಭುಗಣಗಳು, ವಿಶ್ವೇದೇವತೆಗಳು, ಸಾಧ್ಯಗಣಗಳು, ಇಬ್ಬರು ಅಶ್ವಿನೀದೇವತೆಗಳು ಒಡ್ಡೋಲಗದಲ್ಲಿ ಉಪಸ್ಥಿತರಿದ್ದು ಆತನ ಸೇವೆ ಮಾಡುತ್ತಿದ್ದರು. ಸಿದ್ಧರೂ, ಚಾರಣರೂ, ಗಂಧರ್ವರೂ, ಬ್ರಹ್ಮವಾದಿಗಳಾದ ಮುನಿಗಳು, ವಿದ್ಯಾಧರರು, ಅಪ್ಸರೆಯರೂ, ಕಿನ್ನರರೂ, ಪಕ್ಷಿಗಳೂ, ನಾಗಗಳೂ, ಅವನನ್ನು ಸ್ತುತಿಸುತ್ತಾ ಸೇವಿಸುತ್ತಿದ್ದರು. ಎಲ್ಲೆಡೆಗಳಲ್ಲಿ ಲಲಿತಸ್ವರದಿಂದ ದೇವೇಂದ್ರನ ಕೀರ್ತಿಯ ಗುಣಗಾನ ನಡೆಯುತ್ತಿತ್ತು. ಸಿಂಹಾಸನದ ಮೇಲ್ಗಡೆ ಚಂದ್ರಮಂಡಲದಂತೆ ಶುಭ್ರವೂ, ಸುಂದರವೂ ಆದ ಬೆಳ್ಗೊಡೆಯು ಶೋಭಿಸುತ್ತಿತ್ತು. ಚಾಮರ, ಬೀಸಣಿಗೆ ಮುಂತಾದ ಮಹಾರಾಜೋಚಿತವಾದ ಪದಾರ್ಥಗಳು ಆಯಾಯಾ ಜಾಗಗಳಲ್ಲಿ ಸುಸಜ್ಜಿತವಾಗಿದ್ದುವು. ಈ ದಿವ್ಯವಾದ ಸಭೆಯಲ್ಲಿ ದೇವರಾಜನಾದ ಮಹೇಂದ್ರನು ಮಂಡಿಸಿ ರಾರಾಜಿಸುತ್ತಿದ್ದನು. ॥ ೨-೬ ॥ ಅದೇ ಸಮಯಕ್ಕೆ ಸರಿಯಾಗಿ ದೇವೇಂದ್ರನಿಗೂ, ಸಮಸ್ತ ದೇವತೆಗಳಿಗೂ ಪರಮಾಚಾರ್ಯರಾದ ಬೃಹಸ್ಪತಿಯವರು ಅಲ್ಲಿಗೆ ಬಿಜಯಂಗೈದರು. ಸುರರು, ಅಸುರರು ಎಲ್ಲರಿಂದ ನಮಸ್ಕರಿಸಲ್ಪಡುವ ಪೂಜ್ಯರಾದ ಆಚಾರ್ಯರು ಅವರು. ಅವರು ಸಭೆಗೆ ಬಂದಿರುವುದನ್ನು ಇಂದ್ರನು ನೋಡಿದರೂ, ಅವನು ಎದ್ದು ನಿಲ್ಲಲಿಲ್ಲ. ಅವರಿಗೆ ನಮಸ್ಕಾರವೇ ಮುಂತಾದ ಸತ್ಕಾರಗಳನ್ನು ಮಾಡಲಿಲ್ಲ. ಆಸನದಿಂದ ಕೂಡ ಅಲ್ಲಾಡಲಿಲ್ಲ. ॥ ೭-೮ ॥ ತ್ರಿಕಾಲದರ್ಶಿಗಳಾದ ಬೃಹಸ್ಪತ್ಯಾಚಾರ್ಯರು – 'ಐಶ್ವರ್ಯಮದವೇ ಈ ಅಸಭ್ಯತೆಗೆ ಕಾರಣವಾಗಿದೆ' ಎಂದು ನೋಡಿ ಅವರು ಅಲ್ಲಿಂದ ಕೂಡಲೇ ಸುಮ್ಮನೆ ತಮ್ಮ ಮನೆಗೆ ಹೊರಟುಹೋದರು. ॥ ೯ ॥

ಪರೀಕ್ಷಿದ್ರಾಜನೇ! ಆಗಲೇ ದೇವೇಂದ್ರನಿಗೆ 'ನಾನು ನನ್ನ ಗುರುಗಳಿಗೆ ಎಂತಹ ಅವಹೇಳನ ಮಾಡಿದೆ?' ಎಂಬುದು ಅರಿವಾಯಿತು. ಅವನು ತುಂಬಿದ ಸಭೆಯಲ್ಲಿ ತನ್ನನ್ನು ಹೀಗೆ ನಿಂದಿಸಿಕೊಂಡನು. ॥ ೧೦ ॥

ಅಹೋ ಬತ ಮಯಾಸಾಧು ಕೃತಂ ವೈ ದಭ್ರಬುದ್ಧಿನಾ ।
ಯನ್ಮಯೈಶ್ವರ್ಯಮತ್ತೇನ ಗುರುಃ ಸದಸಿ ಕಾತ್ಕೃತಃ ॥ ೧೧ ॥

ಕೋ ಗೃಧ್ಯೇತ್ಪಂಡಿತೋ ಲಕ್ಷ್ಮೀಂ ತ್ರಿವಿಷ್ಟಪಪತೇರಪಿ ।
ಯಯಾಹಮಾಸುರಂ ಭಾವಂ ನೀತೋಽದ್ಯ ವಿಬುಧೇಶ್ವರಃ ॥ ೧೨ ॥

ಯೇ ಪಾರಮೇಷ್ಠ್ಯಂ ಧಿಷಣಮಧಿತಿಷ್ಠನ್ನ ಕಂಚನ ।
ಪ್ರತ್ಯುತ್ತಿಷ್ಠೇದಿತಿ ಬ್ರೂಯುರ್ಧರ್ಮಂ ತೇ ನ ಪರಂ ವಿದುಃ ॥ ೧೩ ॥

ತೇಷಾಂ ಕುಪಥದೇಷ್ಟೄಣಾಂ ಪತತಾಂ ತಮಸಿ ಹ್ಯಧಃ ।
ಯೇ ಶ್ರದ್ದಧ್ಯುರ್ವಚಸ್ತೇ ವೈ ಮಜ್ಜಂತ್ಯಶ್ಮಪ್ಲವಾ ಇವ ॥ ೧೪ ॥

ಅಥಾಹಮಮರಾಚಾರ್ಯಮಗಾಧಧಿಷಣಂ ದ್ವಿಜಮ್ ।
ಪ್ರಸಾದಯಿಷ್ಯೇ ನಿಶಠಃ ಶೀರ್ಷ್ಣಾ ತಚ್ಚರಣಂ ಸ್ಪೃಶನ್ ॥ ೧೫ ॥

ಏವಂ ಚಿಂತಯತಸ್ತಸ್ಯ ಮಘೋನೋ ಭಗವಾನ್ಗೃಹಾತ್ ।
ಬೃಹಸ್ಪತಿರ್ಗತೋಽದೃಷ್ಟಾಂ ಗತಿಮಧ್ಯಾತ್ಮಮಾಯಯಾ ॥ ೧೬ ॥

ಗುರೋರ್ನಾಧಿಗತಃ ಸಂಜ್ಞಾಂ ಪರೀಕ್ಷನ್ ಭಗವಾನ್ ಸ್ವರಾಟ್ ।
ಧ್ಯಾಯನ್ ಧಿಯಾ ಸುರೈರ್ಯುಕ್ತಃ ಶರ್ಮ ನಾಲಭತಾತ್ಮನಃ ॥ ೧೭ ॥

ತಚ್ಛ್ರುತ್ವೈವಾಸುರಾಃ ಸರ್ವ ಆಶ್ರಿತ್ಯೌಶನಸಂ ಮತಮ್ ।
ದೇವಾನ್ ಪ್ರತ್ಯುದ್ಯಮಂ ಚಕ್ರುರ್ದುರ್ಮದಾ ಆತತಾಯಿನಃ ॥ ೧೮ ॥

ತೈರ್ವಿಸೃಷ್ಟೇಷುಭಿಸ್ತೀಕ್ಷ್ಣೈರ್ನಿರ್ಭಿನ್ನಾಂಗೋರುಬಾಹವಃ ।
ಬ್ರಹ್ಮಾಣಂ ಶರಣಂ ಜಗ್ಮುಃ ಸಹೇಂದ್ರಾ ನತಕಂಧರಾಃ ॥ ೧೯ ॥

ತಾಂಸ್ತಥಾಭ್ಯರ್ದಿತಾನ್ವೀಕ್ಷ್ಯ ಭಗವಾನಾತ್ಮಭೂರಜಃ ।
ಕೃಪಯಾ ಪರಯಾ ದೇವ ಉವಾಚ ಪರಿಸಾಂತ್ವಯನ್ ॥ ೨೦ ॥

ಅಯ್ಯೋ! ನಾನು ಎಂತಹ ಅನ್ಯಾಯ ಮಾಡಿದೆನು? ಮೂರ್ಖತನದಿಂದ ಐಶ್ವರ್ಯದ ಮತ್ತೇರಿದವನಾಗಿ ತುಂಬಿದ ಸಭೆಯಲ್ಲಿ ಗುರುದೇವರಿಗೆ ತಿರಸ್ಕಾರ ಮಾಡಿದೆನಲ್ಲ? ನಿಜವಾಗಿಯೂ ಇದು ಅತ್ಯಂತ ನಿಂದನೀಯ ಕಾರ್ಯವಾಗಿದೆ. ॥ ೧೧ ॥ ಈ ಸ್ವರ್ಗದ ರಾಜ್ಯಲಕ್ಷ್ಮಿಯನ್ನು ಯಾವ ವಿವೇಕಿಯು ಪಡೆಯಲು ಬಯಸುವನು? ಇಂದು ಇದರಿಂದಲೇ ದೇವರಾಜನಾದ ನನ್ನಲ್ಲಿಯೂ ಅಸುರರ ರಜೋಗುಣಭಾವವು ತುಂಬಿಹೋಯಿತಲ್ಲ! ॥ ೧೨ ॥ 'ಸಾರ್ವಭೌಮ ಸಿಂಹಾಸನದಲ್ಲಿ ಕುಳಿತಿರುವ ಸಾಮ್ರಾಟನು ಯಾರು ಬಂದರೂ ಸಿಂಹಾಸನದಿಂದ ಏಳಬಾರದು' ಎಂದು ಹೇಳುವವರು ಧರ್ಮದ ನಿಜವಾದ ಸ್ವರೂಪವನ್ನು ಅರಿಯರು. ॥ ೧೩ ॥ ಇಂತಹ ಉಪದೇಶ ಮಾಡುವವರು ಕೆಟ್ಟದಾರಿಗೆ ಕೊಂಡೊಯ್ಯುವವರಾಗಿದ್ದಾರೆ. ಅವರು ಸ್ವತಃ ನರಕಕ್ಕೆ ಸಲ್ಲುವವರು. ಅವರ ಮಾತಿನಲ್ಲಿ ವಿಶ್ವಾಸವಿಡುವವರು ಕಲ್ಲಿನ ದೋಣಿಯಿಂದ ನದಿದಾಟುವವರಂತೆ ಮುಳುಗಿಹೋಗುತ್ತಾರೆ. ॥ ೧೪ ॥ ನನ್ನ ಗುರುಗಳಾದ ಬೃಹಸ್ಪತ್ಯಾಚಾರ್ಯರಾದರೋ ಆಳವಾದ ಜ್ಞಾನದ ಸಮುದ್ರರಾಗಿದ್ದಾರೆ. ಅವರಲ್ಲಿ ಕಪಟವನ್ನೂ ಅವಿನಯವನ್ನೂ ತೋರಿದ ನಾನು ಈಗ ಅವರ ಚರಣಗಳಲ್ಲಿ ತಲೆಯನ್ನಿಟ್ಟು ಅವರನ್ನು ಪ್ರಸನ್ನಗೊಳಿಸುವೆನು. ॥ ೧೫ ॥

ಪರೀಕ್ಷಿತನೇ! ದೇವರಾಜ ಇಂದ್ರನು ಹೀಗೆ ಯೋಚಿಸುತ್ತಿರುವಾಗಲೇ ಭಗವಂತರಾದ ಬೃಹಸ್ಪತ್ಯಾಚಾರ್ಯರು ತಮ್ಮ ಮನೆಯಿಂದ ಹೊರಟಿದ್ದು, ಯೋಗಬಲದಿಂದ ಅಂತರ್ಧಾನ ಹೊಂದಿದರು. ॥ ೧೬ ॥ ದೇವೇಂದ್ರನು ತಮ್ಮ ಗುರುಗಳನ್ನು ಬಹಳವಾಗಿ ಹುಡುಕಿದನು, ಹುಡುಕಿಸಿದನು. ಆದರೆ ಎಲ್ಲಿಯೂ ಅವರ ಸುಳಿವು ಸಿಗಲಿಲ್ಲ. ಆಗ ಅವನು ಗುರುವಿಲ್ಲದೆ ತಾನು ಸುರಕ್ಷಿತನಲ್ಲವೆಂದು ತಿಳಿದು, ದೇವತೆಗಳೊಂದಿಗೆ ತನ್ನ ಬುದ್ಧಿಗನುಸಾರ ಸ್ವರ್ಗದ ರಕ್ಷಣೆಯ ಉಪಾಯವನ್ನು ಯೋಚಿಸತೊಡಗಿದನು. ಆದರೂ ಅವನು ಏನನ್ನೂ ನಿಶ್ಚಯಿಸದಾದನು. ಅವನ ಚಿತ್ತವು ಅಶಾಂತವೇ ಆಗಿ ಉಳಿಯಿತು. ॥ ೧೭ ॥ ರಾಜೇಂದ್ರಾ! ದೇವಗುರು ಬೃಹಸ್ಪತಿಯವರ ಮೇಲೆ ದೇವೇಂದ್ರನಿಗೆ ಉಂಟಾಗಿದ್ದ ಮನೋಮಾಲಿನ್ಯದ ಸುಳಿವು ದೈತ್ಯರಿಗೆ ಸಿಕ್ಕಿತು. ಆಗ ಆ ಮದೋನ್ಮತ್ತ, ಆತತಾಯಿಗಳಾದ ಅಸುರರು ತಮ್ಮ ಗುರುಗಳಾದ ಶುಕ್ರಾಚಾರ್ಯರ ಆದೇಶದಂತೆ ದೇವತೆಗಳ ಮೇಲೆ ವಿಜಯವನ್ನು ಸಾಧಿಸಲು ಯುದ್ಧವನ್ನು ಸಾರಿದರು. ॥ ೧೮ ॥ ಅವರು ದೇವತೆಗಳ ಮೇಲೆ ಹರಿತವಾದ ಬಾಣಗಳನ್ನು ಮಳೆಗರೆದರು. ಅದರಿಂದ ಅವರ ಅಂಗಾಂಗಗಳು ಛಿದ್ರ-ಛಿದ್ರವಾಗಿ ಕಳಚಿ ಬೀಳತೊಡಗಿದುವು. ಆಗ ದೇವೇಂದ್ರನೊಂದಿಗೆ ಎಲ್ಲ ದೇವತೆಗಳೂ ಸೇರಿ ಬ್ರಹ್ಮದೇವರ ಬಳಿಗೆ ಸಾರಿ ನತಮಸ್ತಕರಾಗಿ ಅವರಿಗೆ ಶರಣಾದರು. ॥ ೧೯ ॥ ಸ್ವಯಂಭುವೂ, ಸರ್ವಸಮರ್ಥರೂ ಆದ ಬ್ರಹ್ಮದೇವರಿಗೆ 'ದೇವತೆಗಳಿಗೆ ನಿಜವಾದ ದುರ್ದಶೆ ಉಂಟಾಗಿದೆ' ಎಂದು ಅರಿವಾಗಿ ಅವರ ಹೃದಯ ಅತ್ಯಂತ ಕರುಣೆಯಿಂದ ತುಂಬಿಹೋಯಿತು. ಅವರು ದೇವತೆಗಳಿಗೆ ಧೈರ್ಯವನ್ನು ತುಂಬುತ್ತಾ ಹೀಗೆ ನುಡಿದರು. ॥ ೨೦ ॥

ಬ್ರಹ್ಮೋವಾಚ

ಅಹೋ ಬತ ಸುರಶ್ರೇಷ್ಠಾ ಹ್ಯಭದ್ರಂ ವಃ ಕೃತಂ ಮಹತ್ ।
ಬ್ರಹ್ಮಿಷ್ಠಂ ಬ್ರಾಹ್ಮಣಂ ದಾಂತಮೈಶ್ವರ್ಯಾನ್ನಾಭ್ಯನಂದತ ॥ ೨೧ ॥

ತಸ್ಯಾಯಮನಯಸ್ಯಾಸೀತ್ಪರೇಭ್ಯೋ ವಃ ಪರಾಭವಃ ।
ಪ್ರಕ್ಷೀಣೇಭ್ಯಃ ಸ್ವವೈರಿಭ್ಯಃ ಸಮೃದ್ಧಾನಾಂ ಚ ಯತ್ಸುರಾಃ ॥ ೨೨ ॥

ಮಘವಂದ್ವಿಷತಃ ಪಶ್ಯ ಪ್ರಕ್ಷೀಣಾನ್ ಗುರ್ವತಿಕ್ರಮಾತ್ ।
ಸಂಪ್ರತ್ಯುಪಚಿತಾನ್ಭೂಯಃ ಕಾವ್ಯಮಾರಾಧ್ಯ ಭಕ್ತಿತಃ ।
ಆದದೀರನ್ನಿಲಯನಂ ಮಮಾಪಿ ಭೃಗುದೇವತಾಃ ॥ ೨೩ ॥

ತ್ರಿವಿಷ್ಟಪಂ ಕಿಂ ಗಣಯಂತ್ಯಭೇದ್ಯ-
ಮಂತ್ರಾ ಭೃಗೂಣಾಮನುಶಿಕ್ಷಿತಾರ್ಥಾಃ ।
ನ ವಿಪ್ರಗೋವಿಂದಗವೀಶ್ವರಾಣಾಂ
ಭವಂತ್ಯಭದ್ರಾಣಿ ನರೇಶ್ವರಾಣಾಮ್ ॥ ೨೪ ॥

ತದ್ ವಿಶ್ವರೂಪಂ ಭಜತಾಶು ವಿಪ್ರಂ
ತಪಸ್ವಿನಂ ತ್ವಾಷ್ಟ್ರಮಥಾತ್ಮವಂತಮ್ ।
ಸಭಾಜಿತೋಽರ್ಥಾನ್ ಸ ವಿಧಾಸ್ಯತೇ ವೋ
ಯದಿ ಕ್ಷಮಿಷ್ಯಧ್ವಮುತಾಸ್ಯ ಕರ್ಮ ॥ ೨೫ ॥

ಶ್ರೀಶುಕ ಉವಾಚ

ತ ಏವಮುದಿತಾ ರಾಜನ್ ಬ್ರಹ್ಮಣಾ ವಿಗತಜ್ವರಾಃ ।
ಋಷಿಂ ತ್ವಾಷ್ಟ್ರಮುಪವ್ರಜ್ಯ ಪರಿಷ್ವಜ್ಯೇದಮಬ್ರುವನ್ ॥ ೨೬ ॥

ದೇವಾ ಊಚುಃ

ವಯಂ ತೇಽತಿಥಯಃ ಪ್ರಾಪ್ತಾ ಆಶ್ರಮಂ ಭದ್ರಮಸ್ತು ತೇ ।
ಕಾಮಃ ಸಂಪಾದ್ಯತಾಂ ತಾತ ಪಿತೄಣಾಂ ಸಮಯೋಚಿತಃ ॥ ೨೭ ॥

ಪುತ್ರಾಣಾಂ ಹಿ ಪರೋ ಧರ್ಮಃ ಪಿತೃಶುಶ್ರೂಷಣಂ ಸತಾಮ್ ।
ಅಪಿ ಪುತ್ರವತಾಂ ಬ್ರಹ್ಮನ್ ಕಿಮುತ ಬ್ರಹ್ಮಚಾರಿಣಾಮ್ ॥ ೨೮ ॥

ಆಚಾರ್ಯೋ ಬ್ರಹ್ಮಣೋ ಮೂರ್ತಿಃ ಪಿತಾ ಮೂರ್ತಿಃ ಪ್ರಜಾಪತೇಃ ।
ಭ್ರಾತಾ ಮರುತ್ಪತೇರ್ಮೂರ್ತಿರ್ಮಾತಾ ಸಾಕ್ಷಾತ್ ಕ್ಷಿತೇಸ್ತನುಃ ॥ ೨೯ ॥

ಬ್ರಹ್ಮದೇವರು ಹೇಳುತ್ತಾರೆ – ಎಲೈ ದೇವಶ್ರೇಷ್ಠರಿರಾ! ನೀವು ಎಂತಹ ಕೆಲಸವನ್ನು ಮಾಡಿಬಿಟ್ಟಿರಿ? ಅಯ್ಯೋ! ಶಿವ-ಶಿವಾ! ನೀವು ಐಶ್ವರ್ಯಮದದಿಂದ ಕುರುಡರಾಗಿ ಬ್ರಹ್ಮಜ್ಞಾನಿಗಳೂ, ವೇದಜ್ಞರೂ, ಸಂಯಮಿಯೂ ಆದ ಬ್ರಾಹ್ಮಣನನ್ನು ಸತ್ಕರಿಸಲಿಲ್ಲವಲ್ಲ! ॥ ೨೧ ॥ ದೇವತೆಗಳಿರಾ! ಇಂದು ನೀವು ಸಮೃದ್ಧಶಾಲಿಗಳಾಗಿದ್ದರೂ ನಿಮ್ಮ ನಿರ್ಬಲರಾದ ಶತ್ರುಗಳ ಮುಂದೆ ತಲೆತಗ್ಗಿಸಬೇಕಾಯಿತಲ್ಲ! ಇದು ನೀವು ಗೈದ ಅನೀತಿಯ ಫಲವೇ ಆಗಿದೆ. ॥ ೨೨ ॥ ದೇವೇಂದ್ರಾ! ನೋಡು! ನಿಮ್ಮ ಶತ್ರುಗಳೂ ಕೂಡ ಹಿಂದೆ ತಮ್ಮ ಗುರುಗಳಾದ ಶುಕ್ರಾಚಾರ್ಯರನ್ನು ತಿರಸ್ಕರಿಸಿದ್ದರಿಂದ ಅತ್ಯಂತ ನಿರ್ಬಲರಾಗಿದ್ದರು. ಆದರೆ ಈಗ ಭಕ್ತಿಭಾವದಿಂದ ಅವರನ್ನು ಆರಾಧಿಸಿ ದೈತ್ಯರು ಪುನಃ ಧನ, ಜನ, ಬಲದಿಂದ ಸಂಪನ್ನರಾಗಿರುವರು. ಶುಕ್ರಾಚಾರ್ಯರನ್ನು ತಮ್ಮ ಆರಾಧ್ಯದೇವರೆಂದು ತಿಳಿದ ಈ ದೈತ್ಯರು ಕೆಲವೇ ದಿನಗಳಲ್ಲಿ ನನ್ನ ಈ ಬ್ರಹ್ಮಲೋಕವನ್ನೂ ಕಸಿದುಕೊಳ್ಳುವರೋ ಎಂದು ನನಗೆ ಅನಿಸುತ್ತದೆ. ॥ ೨೩ ॥ ಭೃಗುವಂಶೀಯರು ಇವರಿಗೆ ಅರ್ಥಶಾಸ್ತ್ರದ ಸಮಗ್ರ ಶಿಕ್ಷಣ ಕೊಟ್ಟಿರುವರು. ಇವರು ಏನು ಮಾಡಬೇಕೆಂದು ಬಯಸುವರೋ ಅದರ ಸುಳಿವು ನಿಮಗೆ ತಿಳಿಯದು. ಅವರ ಸಲಹೆ ಅತಿಗುಪ್ತವಾಗಿರುತ್ತದೆ. ಇಂತಹ ಸ್ಥಿತಿಯಲ್ಲಿ ಬರೇ ಈ ಸ್ವರ್ಗವೇನು, ಅವರು ಬಯಸಿದರೆ ಯಾವ ಲೋಕವನ್ನಾದರೂ ಗೆಲ್ಲಬಲ್ಲರು. ಯಾವ ರಾಜರು ಬ್ರಾಹ್ಮಣರು, ಗೋವಿಂದ ಮತ್ತು ಗೋವು ಇವರನ್ನು ತಮ್ಮ ಸರ್ವಸ್ವವೆಂದು ಭಾವಿಸುತ್ತಾ ಅವರ ಕೃಪೆಗೆ ಪಾತ್ರರಾಗಿದ್ದಾರೋ ಅವರಿಗೆ ಎಂದೂ ಅಮಂಗಲ ಉಂಟಾಗುವುದಿಲ್ಲ ಎಂಬುದು ನಿಜವಾಗಿದೆ. ॥ ೨೪ ॥ ಅದಕ್ಕಾಗಿ ಈಗ ನೀವು ಬೇಗನೇ ತ್ವಷ್ಟ್ರನ ಪುತ್ರನಾದ ವಿಶ್ವರೂಪರ ಬಳಿಗೆ ಹೋಗಿ, ಅವರ ಸೇವೆ ಮಾಡಿರಿ. ಅವರು ನಿಜವಾದ ಬ್ರಾಹ್ಮಣರಾಗಿದ್ದು ತಪಸ್ವಿಗಳೂ, ಸಂಯಮಿಗಳೂ ಆಗಿದ್ದಾರೆ. ಅವರಲ್ಲಿರುವ ಅಸುರರ ಕುರಿತು ಪ್ರೀತಿಯನ್ನು ಕ್ಷಮಿಸಿ, ಅವರನ್ನು ಸಮ್ಮಾನಿಸಿದರೆ ಅವರು ನಿಮ್ಮ ಕೆಲಸವನ್ನು ನೆರವೇರಿಸಿಕೊಡುವರು. ॥ ೨೫ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ! ಬ್ರಹ್ಮದೇವರು ಹೀಗೆ ಹೇಳಲು ದೇವತೆಗಳ ಚಿಂತಾಜ್ವರವು ದೂರವಾಗಿ, ಅವರು ತ್ವಷ್ಟ್ರನ ಪುತ್ರನಾದ ವಿಶ್ವರೂಪನ ಬಳಿಗೆ ಹೋಗಿ ಅವನನ್ನು ಆಲಿಂಗಿಸಿಕೊಂಡು ಹೀಗೆ ಪ್ರಾರ್ಥಿಸಿದರು – ॥ ೨೬ ॥

ದೇವತೆಗಳೆಂದರು – ಮಗು ವಿಶ್ವರೂಪ! ನಿನಗೆ ಮಂಗಳವಾಗಲಿ. ನಾವು ಅತಿಥಿಗಳಾಗಿ ನಿನ್ನ ಆಶ್ರಮಕ್ಕೆ ಬಂದಿರುವೆವು. ನಾವು ಒಂದು ರೀತಿಯಲ್ಲಿ ನಿನ್ನ ತಂದೆಯ ಸ್ಥಾನದಲ್ಲಿರುವೆವು. ಅದಕ್ಕಾಗಿ ನೀನು ನಮ್ಮಗಳ ಸಮಯೋಚಿತವಾದ ಅಭಿಲಾಷೆಯನ್ನು ಈಡೇರಿಸಬೇಕು. ॥ ೨೭ ॥ ಎಲೈ ಬ್ರಾಹ್ಮಣೋತ್ತಮಾ! ತಂದೆಯ ಮತ್ತು ಗುರುಹಿರಿಯರ ಸೇವೆಮಾಡುವುದು ಸತ್ಪುತ್ರರಿಗೆ ಪರಮಧರ್ಮವೇ ಆಗಿದೆ. ಹೀಗಿರುವಾಗ ಬ್ರಹ್ಮಚಾರಿಗಳಿಗೆ ಹೇಳುವುದೇನಿದೆ? ॥ ೨೮ ॥ ವತ್ಸ! ಆಚಾರ್ಯನು ವೇದದ, ತಂದೆಯು ಬ್ರಹ್ಮದೇವರ, ಅಣ್ಣನು ಇಂದ್ರನ ಮತ್ತು ತಾಯಿಯು ಸಾಕ್ಷಾತ್ ಪೃಥಿವಿಯ ಮೂರ್ತಿಯೇ ಆಗಿದ್ದಾರೆ. ॥ ೨೯ ॥

ದಯಾಯಾ ಭಗಿನೀ ಮೂರ್ತಿರ್ಧರ್ಮಸ್ಯಾತ್ಮಾತಿಥಿಃ ಸ್ವಯಮ್ ।
ಅಗ್ನೇರಭ್ಯಾಗತೋ ಮೂರ್ತಿಃ ಸರ್ವಭೂತಾನಿ ಚಾತ್ಮನಃ ॥ ೩೦ ॥

ತಸ್ಮಾತ್ ಪಿತೄಣಾಮಾರ್ತಾನಾಮಾರ್ತಿಂ ಪರಪರಾಭವಮ್ ।
ತಪಸಾಪನಯಂಸ್ತಾತ ಸಂದೇಶಂ ಕರ್ತುಮರ್ಹಸಿ ॥ ೩೧ ॥

ವೃಣೀಮಹೇ ತ್ವೋಪಾಧ್ಯಾಯಂ ಬ್ರಹ್ಮಿಷ್ಠಂ ಬ್ರಾಹ್ಮಣಂ ಗುರುಮ್ ।
ಯಥಾಂಜಸಾ ವಿಜೇಷ್ಯಾಮಃ ಸಪತ್ನಾಂಸ್ತವ ತೇಜಸಾ ॥ ೩೨ ॥

ನ ಗರ್ಹಯಂತಿ ಹ್ಯರ್ಥೇಷು ಯವಿಷ್ಠಾಂಘ್ರ್ಯಭಿವಾದನಮ್ ।
ಛಂದೋಭ್ಯೋಽನ್ಯತ್ರ ನ ಬ್ರಹ್ಮನ್ವಯೋ ಜ್ಯೈಷ್ಠ್ಯಸ್ಯ ಕಾರಣಮ್ ॥ ೩೩ ॥

ಋಷಿರುವಾಚ

ಅಭ್ಯರ್ಥಿತಃ ಸುರಗಣೈಃ ಪೌರೋಹಿತ್ಯೇ ಮಹಾತಪಾಃ ।
ಸ ವಿಶ್ವರೂಪಸ್ತಾನಾಹ ಪ್ರಸನ್ನಃ ಶ್ಲಕ್ಷ್ಣಯಾ ಗಿರಾ ॥ ೩೪ ॥

ವಿಶ್ವರೂಪ ಉವಾಚ

ವಿಗರ್ಹಿತಂ ಧರ್ಮಶೀಲೈರ್ಬ್ರಹ್ಮವರ್ಚಉಪವ್ಯಯಮ್ ।
ಕಥಂ ನು ಮದ್ವಿಧೋ ನಾಥಾ ಲೋಕೇಶೈರಭಿಯಾಚಿತಮ್ ।
ಪ್ರತ್ಯಾಖ್ಯಾಸ್ಯತಿ ತಚ್ಛಿಷ್ಯಃ ಸ ಏವ ಸ್ವಾರ್ಥ ಉಚ್ಯತೇ ॥ ೩೫ ॥

ಅಕಿಂಚನಾನಾಂ ಹಿ ಧನಂ ಶಿಲೋಂಛನಂ
ತೇನೇಹ ನಿರ್ವರ್ತಿತಸಾಧುಸತ್ಕ್ರಿಯಃ ।
ಕಥಂ ವಿಗರ್ಹ್ಯಂ ನು ಕರೋಮ್ಯಧೀಶ್ವರಾಃ
ಪೌರೋಧಸಂ ಹೃಷ್ಯತಿ ಯೇನ ದುರ್ಮತಿಃ ॥ ೩೬ ॥

ತಥಾಪಿ ನ ಪ್ರತಿಬ್ರೂಯಾಂ ಗುರುಭಿಃ ಪ್ರಾರ್ಥಿತಂ ಕಿಯತ್ ।
ಭವತಾಂ ಪ್ರಾರ್ಥಿತಂ ಸರ್ವಂ ಪ್ರಾಣೈರರ್ಥೈಶ್ಚ ಸಾಧಯೇ ॥ ೩೭ ॥

ಶ್ರೀಶುಕ ಉವಾಚ

ತೇಭ್ಯ ಏವಂ ಪ್ರತಿಶ್ರುತ್ಯ ವಿಶ್ವರೂಪೋ ಮಹಾತಪಾಃ ।
ಪೌರೋಹಿತ್ಯಂ ವೃತಶ್ಚಕ್ರೇ ಪರಮೇಣ ಸಮಾಧಿನಾ ॥ ೩೮ ॥

ಹಾಗೆಯೇ ಸಹೋದರಿಯು ದಯೆಯು, ಅತಿಥಿ ಧರ್ಮದ, ಅಭ್ಯಾಗತರು ಅಗ್ನಿಯ ಮತ್ತು ಜಗತ್ತಿನ ಎಲ್ಲ ಪ್ರಾಣಿಗಳು ತನ್ನ ಆತ್ಮನ ಮೂರ್ತಿ-ಆತ್ಮಸ್ವರೂಪರಾಗಿದ್ದಾರೆ. ॥ ೩೦ ॥ ಎಲೈ ಪುತ್ರನೇ! ನಾವು ನಿನ್ನ ತಂದೆಯ ಸ್ಥಾನದಲ್ಲಿದ್ದೇವೆ. ಇಂತಹ ಪೂಜ್ಯಸ್ಥಾನದಲ್ಲಿರುವ ನಾವು ಶತ್ರುಗಳಿಂದ ಪರಾಜಿತರಾಗಿ ಬಹಳ ದುಃಖದಲ್ಲಿದ್ದೇವೆ. ನೀನು ನಿನ್ನ ತಪೋಬಲದಿಂದ ನಮ್ಮ ಈ ದುಃಖ, ದಾರಿದ್ರ್ಯ, ಪರಾಜಯಗಳನ್ನು ಹೋಗಲಾಡಿಸು. ನಮ್ಮ ಈ ಆಜ್ಞೆಯನ್ನು ನೀನು ನಡೆಸಿ ಕೊಡಬೇಕು. ॥ ೩೧ ॥ ನೀನು ಬ್ರಹ್ಮನಿಷ್ಠ ಬ್ರಾಹ್ಮಣನಾಗಿರುವುದರಿಂದ ಹುಟ್ಟಿನಿಂದಲೇ ನಮಗೆ ಗುರುವಾಗಿರುವೆ. ನಾವು ನಿನ್ನನ್ನು ಆಚಾರ್ಯನನ್ನಾಗಿ ವರಣಮಾಡಿ ನಿನ್ನ ಶಕ್ತಿಯಿಂದ ಅನಾಯಾಸವಾಗಿಯೇ ಶತ್ರುಗಳ ಮೇಲೆ ಜಯಗಳಿಸುವೆವು. ॥ ೩೨ ॥ ಬ್ರಾಹ್ಮಣೋತ್ತಮಾ! ಆವಶ್ಯಕತೆ ಒದಗಿದಾಗ ವಯಸ್ಸಿನಲ್ಲಿ ಚಿಕ್ಕವರಾದವರಿಗೆ ನಮಸ್ಕರಿಸುವುದು ನಿಂದ್ಯವಾಗುವುದಿಲ್ಲ. ಹಿರಿತನಕ್ಕೆ ವೇದಗಳ ಜ್ಞಾನವೇ ಹೊರತು ವಯಸ್ಸು ಕಾರಣವಲ್ಲ. ॥ ೩೩ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿದ್ರಾಜನೇ! ದೇವತೆಗಳು ಹೀಗೆ ವಿಶ್ವರೂಪನನ್ನು ತಮ್ಮ ಪೌರೋಹಿತ್ಯವನ್ನು ವಹಿಸಿಕೊಳ್ಳಲು ಪ್ರಾರ್ಥಿಸಿದಾಗ ಪರಮತಪಸ್ವೀ ವಿಶ್ವರೂಪನು ಪ್ರಸನ್ನನಾಗಿ ಅತ್ಯಂತ ಪ್ರಿಯವೂ, ಮಧುರವೂ ಆದ ಮಾತುಗಳಿಂದ ಹೀಗೆಂದನು – ॥ ೩೪ ॥

ವಿಶ್ವರೂಪನು ಹೇಳಿದನು – ಧರ್ಮಶೀಲರಾದ ಮಹಾತ್ಮರು ಪೌರೋಹಿತ್ಯವೃತ್ತಿಯನ್ನು ನಿಂದಿಸುತ್ತಾರೆ. ಏಕೆಂದರೆ ಅದರಿಂದ ಬ್ರಹ್ಮವರ್ಚಸ್ಸು ಕ್ಷಯಹೊಂದುತ್ತದೆ. ಆದರೆ ನೀವು ನನಗೆ ಒಡೆಯರಾಗಿ ಲೋಕೇಶ್ವರರಾಗಿ ಅದನ್ನು ವಹಿಸಿಕೊಳ್ಳಬೇಕೆಂದು ಪ್ರಾರ್ಥಿಸುತ್ತಿದ್ದೀರಿ. ಇಂತಹ ಸ್ಥಿತಿಯಲ್ಲಿ ನನ್ನಂತಹವನು ನಿಮ್ಮಗಳ ಮಾತನ್ನು ಹೇಗೆ ಮೀರಬಲ್ಲನು? ನಾನಾದರೋ ನಿಮ್ಮ ಸೇವಕನಾಗಿರುವೆನು. ನಿಮ್ಮ ಆಜ್ಞೆಯನ್ನು ಪಾಲಿಸುವುದೇ ನನ್ನ ಧರ್ಮವೂ ಆಗಿದೆ. ॥ ೩೫ ॥ ದೇವತೆಗಳಿರಾ! ವಿರಕ್ತರಾದ ದರಿದ್ರರಿಗೆ ಶಿಲೋಂಛ ವೃತ್ತಿಗಳೇ ಜೀವನಧನವು. ಆ ವೃತ್ತಿಗಳಿಂದ ದೇವಕಾರ್ಯ-ಪಿತೃಕಾರ್ಯ ಮುಂತಾದ ಧರ್ಮಕಾರ್ಯಗಳನ್ನು ನೆರವೇರಿಸುತ್ತಿರುವ ನಾನು ನಿಂದೆಗೆ ಯೋಗ್ಯವಾದ ಪುರೋಹಿತ ವೃತ್ತಿಯನ್ನು ಏಕೆ ಮಾಡಲಿ? ಬುದ್ಧಿ ಕೆಟ್ಟುಹೋದವರು ತಾನೇ ಈ ವೃತ್ತಿಯಿಂದ ಪ್ರಸನ್ನರಾಗುವರು. ॥ ೩೬ ॥ ನೀವು ನನ್ನಿಂದ ಏನನ್ನು ಬಯಸುವಿರೋ ಅದಕ್ಕೆ ಎದುರಾಡುವುದಿಲ್ಲ ಮತ್ತು ಗುರು-ಹಿರಿಯರಾದ ನಿಮ್ಮ ಪ್ರಾರ್ಥನೆಯನ್ನು ತಳ್ಳಿ ಹಾಕುವುದಿಲ್ಲ, ಅದಕ್ಕೆ ಎದುರಾಡುವುದಿಲ್ಲ. ನನ್ನ ತನು-ಮನ-ಧನಗಳಿಂದಲೂ ನೀವು ಹೇಳಿದುದನ್ನು ನಡೆಸಿ ಕೊಡುವೆನು. ॥ ೩೭ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ರಾಜೇಂದ್ರನೇ! ಮಹಾತಪಸ್ವಿಯಾದ ಆ ವಿಶ್ವರೂಪನು ದೇವತೆಗಳ ಮುಂದೆ ಹೀಗೆ ಪ್ರತಿಜ್ಞೆಮಾಡಿ ಅವರಿಂದ ಪೌರೋಹಿತ್ಯಕ್ಕಾಗಿ ವರಿಸಲ್ಪಟ್ಟು ಆ ಕಾರ್ಯವನ್ನು ಅತ್ಯಂತ ಶ್ರದ್ಧಾಸಕ್ತಿಗಳಿಂದ ನಡೆಸತೊಡಗಿದನು. ॥ ೩೮ ॥ ಶುಕ್ರಾಚಾರ್ಯರು ತಮ್ಮ ವಿದ್ಯಾಬಲದಿಂದ ಅಸುರರ ಸಂಪತ್ತನ್ನು ಸುರಕ್ಷಿತಗೊಳಿಸಿದ್ದರು. ಸಮರ್ಥನಾದ ವಿಶ್ವರೂಪನು

ಸುರದ್ವಿಷಾಂ ಶ್ರಿಯಂ ಗುಪ್ತಾಮೌಶನಸ್ಯಾಪಿ ವಿದ್ಯಯಾ ।
ಆಚ್ಛಿದ್ಯಾದಾನ್ಮಹೇಂದ್ರಾಯ ವೈಷ್ಣವ್ಯಾ ವಿದ್ಯಯಾ ವಿಭುಃ ॥ ೩೯ ॥

ಯಯಾ ಗುಪ್ತಃ ಸಹಸ್ರಾಕ್ಷೋ ಜಿಗ್ಯೇಽಸುರಚಮೂರ್ವಿಭುಃ ।
ತಾಂ ಪ್ರಾಹ ಸ ಮಹೇಂದ್ರಾಯ ವಿಶ್ವರೂಪ ಉದಾರಧೀಃ ॥ ೪೦ ॥

ವೈಷ್ಣವೀ ವಿದ್ಯೆಯ ಬಲದಿಂದ ಆ ಸಂಪತ್ತನ್ನು ಕಿತ್ತುಕೊಂಡು ದೇವೇಂದ್ರನಿಗೆ ಕೊಡಿಸಿದನು. ॥ ೩೯ ॥ ರಾಜನೇ! ಯಾವ ವಿದ್ಯೆಯ ಬಲದಿಂದ ಇಂದ್ರನು ಸಂರಕ್ಷಿತನಾಗಿ ಅಸುರರ ಸಮೂಹವನ್ನು ಗೆದ್ದು ವಿಜಯವನ್ನು ಗಳಿಸಿದನೋ ಆ ವೈಷ್ಣವೀವಿದ್ಯೆಯನ್ನು ಉದಾರ ಬುದ್ಧಿಯುಳ್ಳ ವಿಶ್ವರೂಪನೇ ಇಂದ್ರನಿಗೆ ಉಪದೇಶ ಮಾಡಿದ್ದನು. ॥ ೪೦ ॥

ಏಳನೆಯ ಅಧ್ಯಾಯವು ಮುಗಿಯಿತು. ॥ ೭ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಷಷ್ಠಸ್ಕಂಧೇ ಸಪ್ತಮೋಽಧ್ಯಾಯಃ ॥ ೭ ॥

ಎಂಟನೆಯ ಅಧ್ಯಾಯ

ವಿಶ್ವರೂಪನು ಇಂದ್ರನಿಗೆ ನಾರಾಯಣಕವಚವನ್ನು ಉಪದೇಶಿಸಿದುದು

ರಾಜೋವಾಚ

ಯಯಾ ಗುಪ್ತಃ ಸಹಸ್ರಾಕ್ಷಃ ಸವಾಹಾನ್ ರಿಪುಸೈನಿಕಾನ್ ।
ಕ್ರೀಡನ್ನಿವ ವಿನಿರ್ಜಿತ್ಯ ತ್ರಿಲೋಕ್ಯಾ ಬುಭುಜೇ ಶ್ರಿಯಮ್ ॥ ೧ ॥

ಭಗವಂಸ್ತನ್ಮಮಾಖ್ಯಾಹಿ ವರ್ಮ ನಾರಾಯಣಾತ್ಮಕಮ್ ।
ಯಥಾಽಽತತಾಯಿನಃ ಶತ್ರೂನ್ಯೇನ ಗುಪ್ತೋಽಜಯನ್ಮೃಧೇ ॥ ೨ ॥

ಶ್ರೀಶುಕ ಉವಾಚ

ವೃತಃ ಪುರೋಹಿತಸ್ತ್ವಾಷ್ಟ್ರೋ ಮಹೇಂದ್ರಾಯಾನುಪೃಚ್ಛತೇ ।
ನಾರಾಯಣಾಖ್ಯಂ ವರ್ಮಾಹ ತದಿಹೈಕಮನಾಃ ಶೃಣು ॥ ೩ ॥

ವಿಶ್ವರೂಪ ಉವಾಚ

ಧೌತಾಂಘ್ರಿಪಾಣಿರಾಚಮ್ಯ ಸಪವಿತ್ರ ಉದಙ್ಮುಖಃ ।
ಕೃತಸ್ವಾಂಗಕರನ್ಯಾಸೋ ಮಂತ್ರಾಭ್ಯಾಂ ವಾಗ್ಯತಃ ಶುಚಿಃ ॥ ೪ ॥

ನಾರಾಯಣಮಯಂ ವರ್ಮ ಸನ್ನಹ್ಯೇದ್ ಭಯ ಆಗತೇ ।
ಪಾದಯೋರ್ಜಾನುನೋರೂರ್ವೋರುದರೇ ಹೃದ್ಯಥೋರಸಿ ॥ ೫ ॥

ಪರೀಕ್ಷಿತರಾಜನು ಕೇಳಿದನು – ಮಹಾತ್ಮರೇ! ದೇವೇಂದ್ರನು ಯಾವ ವಿದ್ಯೆಯಿಂದ ಸಂರಕ್ಷಿತನಾಗಿ ಶತ್ರುಗಳ ಚತುರಂಗ ಸೈನ್ಯವನ್ನು ಆಟಗಾರನಂತೆಯೋ ಎಂಬಂತೆ ಅನಾಯಾಸವಾಗಿ ಸೋಲಿಸಿ ಮೂರುಲೋಕಗಳ ಐಶ್ವರ್ಯವನ್ನು ಅನುಭವಿಸಿದನೋ, ಆ ನಾರಾಯಣಕವಚವೆಂಬ ಮಹಾಮಂತ್ರವನ್ನು ನನಗೆ ತಿಳಿಸಿರಿ. ಅದರಿಂದ ಸುರಕ್ಷಿತನಾಗಿ ಅವನು ರಣಭೂಮಿಯಲ್ಲಿ ಆಕ್ರಮಣಕಾರಿಗಳಾದ ಶತ್ರುಗಳನ್ನು ಸೋಲಿಸಿ ವಿಜಯವನ್ನು ಹೇಗೆ ಪಡೆದನು? ಎಂಬುದನ್ನೂ ನಿರೂಪಿಸಿರಿ. ॥ ೧-೨ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ! ದೇವತೆಗಳು ವಿಶ್ವರೂಪನನ್ನು ಪುರೋಹಿತನನ್ನಾಗಿ ಮಾಡಿಕೊಂಡಾಗ ದೇವೇಂದ್ರನು ಪ್ರಶ್ನಿಸಿದಾಗ ವಿಶ್ವರೂಪನು ಅವನಿಗೆ ನಾರಾಯಣಕವಚವನ್ನು ಉಪದೇಶಿಸಿದನು. ಅದನ್ನು ನಾನು ನಿನಗೆ ಹೇಳುವೆನು. ನೀನೂ ಏಕಾಗ್ರತೆಯಿಂದ ಶ್ರವಣಿಸು. ॥ ೩ ॥

ವಿಶ್ವರೂಪನು ಹೇಳಿದನು – ದೇವರಾಜ ಇಂದ್ರನೇ! ಭಯವು ಏನಾದರೂ ಒದಗಿದರೆ ನಾರಾಯಣಕವಚವನ್ನು ಧರಿಸಿಕೊಂಡು ತನ್ನ ಶರೀರವನ್ನು ರಕ್ಷಿಸಿಕೊಳ್ಳಬೇಕು. ಅದರ ವಿಧಾನ ಇಂತಿದೆ-ಮೊದಲು ಕೈ-ಕಾಲುಗಳನ್ನು ತೊಳೆದುಕೊಂಡು ಆಚಮನ ಮಾಡಬೇಕು. ದರ್ಭೆಯ ಪವಿತ್ರಕವನ್ನು ಧರಿಸಿಕೊಂಡು ಉತ್ತರಾಭಿಮುಖವಾಗಿ ಕುಳಿತುಕೊಳ್ಳಬೇಕು. ಅನಂತರ ಮಂತ್ರಾನುಷ್ಠಾನವು ಮುಗಿಯುವವರೆಗೆ ಮೌನವಾಗಿರಲು ನಿಶ್ಚಯಿಸಿ, ಶುಚಿಯಾಗಿ '**ಓಂ ನಮೋ ನಾರಾಯಣಾಯ**' ಮತ್ತು '**ಓಂ ನಮೋ ಭಗವತೇ ವಾಸುದೇವಾಯ**' ಎಂಬ ಮಹಾಮಂತ್ರಗಳಿಂದ ಹೃದಯಾದಿ ಅಂಗನ್ಯಾಸವನ್ನು ಅಂಗುಷ್ಠಾದಿ ಕರನ್ಯಾಸವನ್ನು ಮಾಡಬೇಕು. ಮೊದಲು **ಓಂ ನಮೋ ನಾರಾಯಣಾಯ** ಎಂಬ ಅಷ್ಟಾಕ್ಷರ ಮಂತ್ರದ ಓಂ ಇತ್ಯಾದಿ ಎಂಟು ಅಕ್ಷರಗಳನ್ನು ಕ್ರಮವಾಗಿ ಪಾದಗಳು, ಮೊಣಕಾಲುಗಳು, ತೊಡೆಗಳು, ಹೊಟ್ಟೆ, ಹೃದಯ, ವಕ್ಷಸ್ಥಳ, ಮುಖ ಮತ್ತು ತಲೆಯಲ್ಲಿ ನ್ಯಾಸಮಾಡಬೇಕು

ಮುಖೇ ಶಿರಸ್ಯಾನುಪೂರ್ವ್ಯಾದೋಂಕಾರಾದೀನಿ ವಿನ್ಯಸೇತ್ ।
ಓಂ ನಮೋ ನಾರಾಯಣಾಯೇತಿ ವಿಪರ್ಯಯಮಥಾಪಿ ವಾ ॥ ೬ ॥

ಕರನ್ಯಾಸಂ ತತಃ ಕುರ್ಯಾದ್ದ್ವಾದಶಾಕ್ಷರವಿದ್ಯಯಾ ।
ಪ್ರಣವಾದಿಯಕಾರಾಂತಮಂಗುಲ್ಯಂಗುಷ್ಠಪರ್ವಸು ॥ ೭ ॥

ನ್ಯಸೇದ್ಧೃದಯ ಓಂಕಾರಂ ವಿಕಾರಮನು ಮೂರ್ಧನಿ ।
ಷಕಾರಂ ತು ಭ್ರುವೋರ್ಮಧ್ಯೇ ಣಕಾರಂ ಶಿಖಯಾ ದಿಶೇತ್ ॥ ೮ ॥

ವೇಕಾರಂ ನೇತ್ರಯೋರ್ಯುಂಜ್ಯಾನ್ನಕಾರಂ ಸರ್ವಸಂಧಿಷು ।
ಮಕಾರಮಸ್ತ್ರಮುದ್ದಿಶ್ಯ ಮಂತ್ರ ಮೂರ್ತಿರ್ಭವೇದ್ಬುಧಃ ॥ ೯ ॥

ಸವಿಸರ್ಗಂ ಫಡಂತಂ ತತ್ ಸರ್ವದಿಕ್ಷು ವಿನಿರ್ದಿಶೇತ್ ।
ಓಂ ವಿಷ್ಣವೇ ನಮ ಇತಿ ॥ ೧೦ ॥

ಆತ್ಮಾನಂ ಪರಮಂ ಧ್ಯಾಯೇದ್ಧ್ಯೇಯಂ ಷಟ್‌ಶಕ್ತಿಭಿರ್ಯುತಮ್ ।
ವಿದ್ಯಾತೇಜಸ್ತಪೋಮೂರ್ತಿಮಿಮಂ ಮಂತ್ರಮುದಾಹರೇತ್ ॥ ೧೧ ॥

ಓಂ ಹರಿರ್ವಿದಧ್ಯಾನ್ಮಮ ಸರ್ವರಕ್ಷಾಂ
ನ್ಯಸ್ತಾಂಘ್ರಿಪದ್ಮಃ ಪತಗೇಂದ್ರಪೃಷ್ಠೇ ।
ದರಾರಿಚರ್ಮಾಸಿಗದೇಷುಚಾಪ-
ಪಾಶಾಂದಧಾನೋಽಷ್ಟಗುಣೋಽಷ್ಟಬಾಹುಃ ॥ ೧೨ ॥

ಜಲೇಷು ಮಾಂ ರಕ್ಷತು ಮತ್ಸ್ಯಮೂರ್ತಿ-
ರ್ಯಾದೋಗಣೇಭ್ಯೋ ವರುಣಸ್ಯ ಪಾಶಾತ್ ।
ಸ್ಥಲೇಷು ಮಾಯಾವಟುವಾಮನೋಽವ್ಯಾತ್-
ತ್ರಿವಿಕ್ರಮಃ ಖೇಽವತು ವಿಶ್ವರೂಪಃ ॥ ೧೩ ॥

ದುರ್ಗೇಷ್ವಟವ್ಯಾಜಿಮುಖಾದಿಷು ಪ್ರಭುಃ
ಪಾಯಾನ್ನೃಸಿಂಹೋಽಸುರಯೂಥಪಾರಿಃ ।
ವಿಮುಂಚತೋ ಯಸ್ಯ ಮಹಾಟ್ಟಹಾಸಂ
ದಿಶೋ ವಿನೇದುರ್ನ್ಯಪತಂಶ್ಚ ಗರ್ಭಾಃ ॥ ೧೪ ॥

(ಅರ್ಥಾತ್ – ಇರಿಸುವುದು) ಅಥವಾ ಇದಕ್ಕೆ ತಲೆಕೆಳಗಾಗಿ – ಆ ಮಂತ್ರದ ಮಕಾರದಿಂದ ಪ್ರಾರಂಭಿಸಿ ಓಂಕಾರದವರೆಗಿನ ಎಂಟು ಅಕ್ಷರಗಳನ್ನು ತಲೆಯಿಂದ ಪ್ರಾರಂಭಿಸಿ ಪಾದಗಳವರೆಗಿನ ಎಂಟು ಅಂಗಗಳಲ್ಲಿ ನ್ಯಾಸಮಾಡಬೇಕು. ॥ ೪-೬ ॥ ಅನಂತರ **'ಓಂ ನಮೋ ಭಗವತೇ ವಾಸುದೇವಾಯ'** ಎಂಬ ದ್ವಾದಶಾಕ್ಷರ ಮಂತ್ರದ ಓಂಕಾರದಿಂದ ಆರಂಭಿಸಿ ಪ್ರತಿಯೊಂದು ಅಕ್ಷರವನ್ನು ಬಲಗಡೆಯ ತರ್ಜನಿಯಿಂದ ಎಡಗಡೆಯ ತರ್ಜನಿಯ ವರೆಗೆ ಎರಡೂ ಕೈಗಳ ಬೆರಳುಗಳಲ್ಲಿಯೂ ಮತ್ತು ಎರಡು ಅಂಗುಷ್ಠಗಳ ಎರಡೆರಡು ಗಂಟುಗಳಲ್ಲಿ ನ್ಯಾಸಮಾಡಬೇಕು. ॥ ೭ ॥ ಬಳಿಕ – **'ಓಂ ವಿಷ್ಣವೇ ನಮಃ'** ಎಂಬ ಮಂತ್ರದ ಮೊದಲನೆಯ ಅಕ್ಷರವಾದ 'ಓಂ' ಕಾರವನ್ನು ಹೃದಯದಲ್ಲಿಯೂ, 'ವಿ' ಯನ್ನು ಬ್ರಹ್ಮರಂಧ್ರದಲ್ಲಿಯೂ, 'ಷ' ಕಾರವನ್ನು ಹುಬ್ಬುಗಳ ಮಧ್ಯದಲ್ಲಿ, 'ಣ' ಕಾರವನ್ನು ಶಿಖೆಯಲ್ಲಿಯೂ, 'ವೇ' ಕಾರವನ್ನು ಎರಡೂ ಕಣ್ಣುಗಳಲ್ಲಿಯೂ ಮತ್ತು 'ನ' ಕಾರವನ್ನು ಶರೀರದ ಎಲ್ಲ ಗಂಟುಗಳಲ್ಲಿಯೂ ನ್ಯಾಸಮಾಡಬೇಕು. ಇದಾದ ನಂತರ 'ಓಂ ಮಃ ಅಸ್ತ್ರಾಯಫಟ್' ಎಂದು ಹೇಳಿ ದಿಗ್ಬಂಧನವನ್ನು ಮಾಡಬೇಕು. ಈ ಪ್ರಕಾರ ನ್ಯಾಸ ಮಾಡುವುದರಿಂದ ಈ ವಿಧಿಯನ್ನು ತಿಳಿದ ಮನುಷ್ಯನು ಮಂತ್ರಸ್ವರೂಪನೇ ಆಗುತ್ತಾನೆ. ॥ ೮-೧೦ ॥ ಅನಂತರ ಸಮಗ್ರ ಐಶ್ವರ್ಯ, ಧರ್ಮ, ಯಶ, ಲಕ್ಷ್ಮೀ, ಜ್ಞಾನ ಮತ್ತು ವೈರಾಗ್ಯದಿಂದ ಪರಿಪೂರ್ಣನಾದ ಇಷ್ಟದೇವನಾದ ಭಗವಂತನನ್ನು ಧ್ಯಾನಿಸಬೇಕು ಮತ್ತು ತನ್ನನ್ನೂ ತದ್ರೂಪನಾಗಿಯೇ ಚಿಂತಿಸಬೇಕು. ಬಳಿಕ ವಿದ್ಯೆ, ತೇಜಸ್ಸು ಮತ್ತು ತಪಸ್ಸ್ವರೂಪವಾದ ಈ ಕವಚವನ್ನು ಪಾರಾಯಣ ಮಾಡಬೇಕು. ॥ ೧೧ ॥

"ಭಗವಾನ್ ಶ್ರೀಹರಿಯು ಗರುಡನ ಹೆಗಲಮೇಲೆ ತನ್ನ ಚರಣಕಮಲಗಳನ್ನು ಇರಿಸಿಕೊಂಡಿರುವನು. ಅಣಿಮಾದಿ ಎಂಟೂ ಸಿದ್ಧಿಗಳು ಅವನ ಸೇವೆ ಮಾಡುತ್ತಿದ್ದಾರೆ. ಅವನು ತನ್ನ ಎಂಟು ಕೈಗಳಲ್ಲಿ ಶಂಖ, ಚಕ್ರ, ಗುರಾಣಿ, ಖಡ್ಗ, ಗದೆ, ಬಾಣ, ಧನುಸ್ಸು ಮತ್ತು ಪಾಶಗಳೆಂಬ ದಿವ್ಯ ಆಯುಧಗಳನ್ನು ಧರಿಸಿರುವನು. ಆ ಓಂಕಾರಸ್ವರೂಪನಾದ ಸ್ವಾಮಿಯು ಎಲ್ಲ ರೀತಿಯಿಂದ ಎಲ್ಲ ಕಡೆಗಳಿಂದಲೂ ನನ್ನನ್ನು ರಕ್ಷಿಸಲಿ. ॥ ೧೨ ॥ ಮತ್ಸ್ಯರೂಪನಾದ ಭಗವಂತನು ಜಲದಲ್ಲಿ ಜಲಜಂತುಗಳಿಂದಲೂ ಹಾಗೂ ವರುಣಪಾಶದಿಂದಲೂ ನನ್ನನ್ನು ರಕ್ಷಿಸಲಿ. ಮಾಯೆಯಿಂದ ಬ್ರಹ್ಮಚಾರಿಯ ರೂಪವನ್ನು ಧರಿಸಿದ ಭಗವಾನ್ ವಾಮನನು ನೆಲದ ಮೇಲೂ, ವಿಶ್ವರೂಪಿಯಾದ ಭಗವಾನ್ ತ್ರಿವಿಕ್ರಮನು ಆಕಾಶದಲ್ಲಿಯೂ ನನ್ನನ್ನು ರಕ್ಷಿಸಲಿ. ॥ ೧೩ ॥ ಯಾವನು ಘೋರವಾಗಿ ಅಟ್ಟಹಾಸವನ್ನು ಮಾಡಿದಾಗ ದಿಗ್‌ದಿಗಂತಗಳೆಲ್ಲ ಪ್ರತಿಧ್ವನಿಸಿ ದೈತ್ಯಸ್ತ್ರೀಯರಿಗೆ ಗರ್ಭಪಾತ ಉಂಟಾಯಿತೋ, ಅಂತಹ ದೈತ್ಯರ ಹಿಂಡಿಗೆ ಶತ್ರುವಾದ ಶ್ರೀಭಗವಂತನಾದ ನರಸಿಂಹನು ಕೋಟೆ, ಅರಣ್ಯ, ರಣಭೂಮಿ ಮುಂತಾದ ವಿಕಟವಾದ ಸ್ಥಾನಗಳಲ್ಲಿ ನನ್ನನ್ನು ಕಾಪಾಡಲಿ. ॥ ೧೪ ॥ ತನ್ನ ಕೋರೆದಾಡೆಗಳ ಮೇಲೆ ಭೂದೇವಿಯನ್ನು ಧರಿಸಿಕೊಂಡು ಯಜ್ಞಮೂರ್ತಿಯಾದ ಭಗವಾನ್ ವರಾಹನು ಮಾರ್ಗದಲ್ಲಿಯೂ, ಪರಶುರಾಮದೇವರು

ರಕ್ಷತ್ವಸೌ ಮಾಧ್ವನಿ ಯಜ್ಞಕಲ್ಪಃ
ಸ್ವದಂಷ್ಟ್ರಯೋನ್ನೀತಧರೋ ವರಾಹಃ ।
ರಾಮೋಽದ್ರಿಕೂಟೇಷ್ವಥ ವಿಪ್ರವಾಸೇ
ಸಲಕ್ಷ್ಮಣೋಽವ್ಯಾದ್ಭರತಾಗ್ರಜೋಽಸ್ಮಾನ್ ॥ ೧೫ ॥

ಮಾಮುಗ್ರಧರ್ಮಾದಖಿಲಾತ್ಪ್ರಮಾದಾ-
ನ್ನಾರಾಯಣಃ ಪಾತು ನರಶ್ಚ ಹಾಸಾತ್ ।
ದತ್ತಸ್ತ್ವಯೋಗಾದಥ ಯೋಗನಾಥಃ
ಪಾಯಾದ್ಗುಣೇಶಃ ಕಪಿಲಃ ಕರ್ಮಬಂಧಾತ್ ॥ ೧೬ ॥

ಸನತ್ಕುಮಾರೋಽವತು ಕಾಮದೇವಾ -
ದ್ಧಯಶೀರ್ಷಾ ಮಾಂ ಪಥಿ ದೇವಹೇಲನಾತ್ ।
ದೇವರ್ಷಿವರ್ಯಃ ಪುರುಷಾರ್ಚನಾಂತರಾತ್
ಕೂರ್ಮೋ ಹರಿರ್ಮಾಂ ನಿರಯಾದಶೇಷಾತ್ ॥ ೧೭ ॥

ಧನ್ವಂತರಿರ್ಭಗವಾನ್ಪಾತ್ವಪಥ್ಯಾದ್
ದ್ವಂದ್ವಾದ್ ಭಯಾದೃಷಭೋ ನಿರ್ಜಿತಾತ್ಮಾ ।
ಯಜ್ಞಶ್ಚ ಲೋಕಾದವತಾಜ್ಜನಾಂತಾದ್
ಬಲೋ ಗಣಾತ್ಕ್ರೋಧವಶಾದಹೀಂದ್ರಃ ॥ ೧೮ ॥

ದ್ವೈಪಾಯನೋ ಭಗವಾನಪ್ರಬೋಧಾದ್
ಬುದ್ಧಸ್ತು ಪಾಖಂಡಗಣಾತ್ಪ್ರಮಾದಾತ್ ।
ಕಲ್ಕಿಃ ಕಲೇಃ ಕಾಲಮಲಾತ್ಪ್ರಪಾತು
ಧರ್ಮಾವನಾಯೋರುಕೃತಾವತಾರಃ ॥ ೧೯ ॥

ಮಾಂ ಕೇಶವೋ ಗದಯಾ ಪ್ರಾತರವ್ಯಾದ್
ಗೋವಿಂದ ಆಸಂಗವಮಾತ್ತವೇಣುಃ ।
ನಾರಾಯಣಃ ಪ್ರಾಹ್ಣ ಉದಾತ್ತಶಕ್ತಿ-
ರ್ಮಧ್ಯಂದಿನೇ ವಿಷ್ಣುರರೀಂದ್ರಪಾಣಿಃ ॥ ೨೦ ॥

ಪರ್ವತಗಳ ಶಿಖರಗಳಲ್ಲಿಯೂ ಮತ್ತು ಲಕ್ಷ್ಮಣನಸಹಿತ ಭರತಾಗ್ರಜನಾದ ಭಗವಾನ್ ಶ್ರೀರಾಮಚಂದ್ರನು ಪ್ರವಾಸದಲ್ಲಿಯೂ ನನ್ನನ್ನು ರಕ್ಷಿಸಲಿ. ॥ ೧೫ ॥ ಭಗವಾನ್ ನಾರಾಯಣನು ಮಾರಣ-ಮೋಹನ ಮುಂತಾದ ಭಯಂಕರ ಅಭಿಚಾರಗಳಿಂದಲೂ ಮತ್ತು ಎಲ್ಲ ಪ್ರಕಾರದ ಪ್ರಮಾದಗಳಿಂದಲೂ ನನ್ನನ್ನು ರಕ್ಷಿಸಲಿ. ಋಷಿಶ್ರೇಷ್ಠನಾದ ನರನು ಗರ್ವದಿಂದಲೂ, ಯೋಗೇಶ್ವರ ಭಗವಾನ್ ದತ್ತಾತ್ರೇಯನು ಯೋಗದ ವಿಘ್ನಗಳಿಂದಲೂ ಹಾಗೂ ತ್ರಿಗುಣಾಧಿಪತಿಯಾದ ಕಪಿಲ ಭಗವಂತನು ಕರ್ಮಬಂಧನಗಳಿಂದಲೂ ನನ್ನನ್ನು ಕಾಪಾಡಲಿ. ॥ ೧೬ ॥ ಪರಮಋಷಿ ಸನತ್ಕುಮಾರನು ಕಾಮದೇವನಿಂದಲೂ, ಭಗವಾನ್ ಹಯಗ್ರೀವನು ಮಾರ್ಗದಲ್ಲಿ ನಡೆಯುವಾಗ ದೇವತಾಮೂರ್ತಿಗಳಿಗೆ ನಮಸ್ಕಾರಮಾಡದ ಅಪರಾಧದಿಂದಲೂ, ದೇವಋಷಿ ನಾರದರು ಸೇವಾಪರಾಧಗಳಿಂದಲೂ* ಮತ್ತು ಕೂರ್ಮಾವತಾರೀ ಶ್ರೀಹರಿಯು ಎಲ್ಲ ಪ್ರಕಾರದ ನರಕಗಳಿಂದಲೂ ನನ್ನನ್ನು ರಕ್ಷಿಸಲಿ. ॥ ೧೭ ॥ ಭಗವಂತನಾದ ಧನ್ವಂತರಿಯು ಕುಪಥ್ಯದಿಂದ, ಜಿತೇಂದ್ರಿಯ ಭಗವಾನ್ ಋಷಭದೇವನು ಸುಖ-ದುಃಖಾದಿ ಭಯದಾಯಕ ದ್ವಂದ್ವಗಳಿಂದ, ಯಜ್ಞಭಗವಂತನು ಲೋಕಾಪವಾದದಿಂದ, ಬಲರಾಮದೇವರು ಜನರು ಕೊಡುವ ಕಷ್ಟದಿಂದ ಮತ್ತು ಶ್ರೀಆದಿಶೇಷನು ಕ್ರೋಧವಶವೆಂಬ ಗಣಕ್ಕೆ ಸೇರಿದ ಸರ್ಪಗಳಿಂದಲೂ ನನ್ನನ್ನು ರಕ್ಷಿಸಲಿ. ॥ ೧೮ ॥ ಭಗವಾನ್ ಶ್ರೀಕೃಷ್ಣದ್ವೈಪಾಯನ ವ್ಯಾಸರು ಅಜ್ಞಾನದಿಂದ ಮತ್ತು ಬುದ್ಧದೇವನು ಪಾಷಂಡಿಗಳಿಂದ ಹಾಗೂ ಪ್ರಮಾದದಿಂದ ನನ್ನನ್ನು ಕಾಪಾಡಲಿ. ಧರ್ಮರಕ್ಷಣೆಗಾಗಿ ಅವತರಿಸುವ ಭಗವಾನ್ ಕಲ್ಕಿಯು ಪಾಪಬಾಹುಳ್ಯವುಳ್ಳ ಕಲಿಕಾಲದ ದೋಷಗಳಿಂದ ನನ್ನನ್ನು ರಕ್ಷಿಸಲಿ. ॥ ೧೯ ॥ ಪ್ರಾತಃಕಾಲದಲ್ಲಿ ಭಗವಾನ್ ಶ್ರೀಕೇಶವನು ಗದಾಹಸ್ತನಾಗಿಯೂ, ಹಗಲು ಸ್ವಲ್ಪ ಏರಿದಾಗ ಭಗವಾನ್ ಶ್ರೀಗೋವಿಂದನು ತನ್ನ ಕೊಳಲನ್ನು ಹಿಡಿದುಕೊಂಡು, ಮಧ್ಯಾಹ್ನದ ಮೊದಲು ಭಗವಾನ್ ಶ್ರೀನಾರಾಯಣನು ತನ್ನ ತೀಕ್ಷ್ಣವಾದ ಶಕ್ತ್ಯಾಯುಧಧಾರಿಯಾಗಿ, ಮಧ್ಯಾಹ್ನದಲ್ಲಿ ಭಗವಾನ್ ಶ್ರೀವಿಷ್ಣುವು ಚಕ್ರರಾಜ ಸುದರ್ಶನವನ್ನು ಹಿಡಿದು ನನ್ನನ್ನು ಕಾಪಾಡಲಿ. ॥ ೨೦ ॥

* ಶ್ರೀಭಗವಂತನ ಸೇವೆಯಲ್ಲಿ ಒದಗಬಹುದಾದ ೩೨ ಅಪಚಾರಗಳನ್ನು ಹೀಗೆ ಪರಿಗಣಿಸಲಾಗಿದೆ – ೧) ವಾಹನಾರೂಢನಾಗಿ ಅಥವಾ ಪಾದರಕ್ಷೆಗಳನ್ನು ಹಾಕಿಕೊಂಡು ಭಗವಂತನ ಮಂದಿರಕ್ಕೆ ಹೋಗುವುದು. ೨) ರಥೋತ್ಸವ ಮತ್ತು ಜನ್ಮಾಷ್ಟಮಿ ಮುಂತಾದ ಉತ್ಸವಗಳನ್ನು ಆಚರಿಸದೇ ಇರುವುದು ಅಥವಾ ಅವುಗಳನ್ನು ದರ್ಶಿಸದೇ ಇರುವುದು. ೩) ಶ್ರೀಭಗವನ್ಮೂರ್ತಿಗಳನ್ನು ದರ್ಶನಮಾಡಿ ನಮಸ್ಕರಿಸದಿರುವುದು. ೪) ಅಶುಚಿಯಾಗಿ ದೇವರ ದರ್ಶನ ಮಾಡುವುದು. ೫) ಒಂದೇ ಕೈಯಿಂದ ನಮಸ್ಕರಿಸುವುದು. ೬) ಪ್ರದಕ್ಷಿಣೆ ಮಾಡುವಾಗ ಭಗವಂತನ ಮುಂದೆ ಬಂದಾಗ ಸ್ವಲ್ಪ ನಿಲ್ಲದೆ ಮತ್ತೆ ಪ್ರದಕ್ಷಿಣೆ ಮಾಡುವುದು ಅಥವಾ ಕೇವಲ ಮುಂದುಗಡೆಯೇ ಪ್ರದಕ್ಷಿಣೆ ಮಾಡುವುದು. ೭) ಭಗವಂತನ ವಿಗ್ರಹದ ಮುಂದೆ ಕಾಲುಚಾಚಿ ಕುಳಿತುಕೊಳ್ಳುವುದು. ೮) ಭಗವಂತನ ಶ್ರೀವಿಗ್ರಹದ ಮುಂದೆ ಎರಡೂ ಮಂಡಿಗಳನ್ನು ಮೇಲಕ್ಕೆತ್ತಿ ಅವುಗಳನ್ನು ಕೈಗಳಿಂದ ಬಳಸಿಕೊಂಡು ಕುಳಿತುಕೊಳ್ಳುವುದು. ೯) ಭಗವಂತನ ಶ್ರೀವಿಗ್ರಹದ ಮುಂದೆ ಮಲಗುವುದು. ೧೦) ಭಗವಂತನ ಶ್ರೀಮೂರ್ತಿಯ ಮುಂದೆ ಊಟಮಾಡುವುದು. ೧೧) ಭಗವಂತನ ಶ್ರೀಮೂರ್ತಿಯ ಮುಂದೆ ಸುಳ್ಳು ಹೇಳುವುದು. ೧೨) ಭಗವಂತನ ಶ್ರೀವಿಗ್ರಹದ ಮುಂದೆ ಗಟ್ಟಿಯಾಗಿ ಮಾತಾಡುವುದು. ೧೩) ಶ್ರೀಭಗವದ್ವಿಗ್ರಹದ ಮುಂದೆ ಪರಸ್ಪರ ಮಾತಾಡಿಕೊಳ್ಳುವುದು. ೧೪) ಭಗವಂತನ ಶ್ರೀವಿಗ್ರಹದ ಮುಂದೆ ಬೊಬ್ಬೆಹಾಕುವುದು. ೧೫) ಭಗವಂತನ ಶ್ರೀಮೂರ್ತಿಯ ಮುಂದೆ ಜಗಳಾಡುವುದು. ೧೬) ಭಗವಂತನ ಶ್ರೀಮೂರ್ತಿಯ ಮುಂದೆ ಯಾರಿಗಾದರೂ ಪೀಡಿಸುವುದು. ೧೭) ಭಗವಂತನ ಶ್ರೀವಿಗ್ರಹದ ಮುಂದೆ ಯಾರಿಗಾದರೂ ಅನುಗ್ರಹಮಾಡುವುದು. ೧೮) ಭಗವಂತನ ಶ್ರೀವಿಗ್ರಹದ ಮುಂದೆ ಯಾರನ್ನಾದರೂ ಕುರಿತು ನಿಷ್ಠುರವಾದ ಮಾತುಗಳನ್ನಾಡುವುದು. ೧೯) ಭಗವಂತನ ಶ್ರೀವಿಗ್ರಹದ ಮುಂದೆ ಕಂಬಳಿಯಿಂದ ಇಡೀ ದೇಹವನ್ನು ಮುಚ್ಚಿಕೊಳ್ಳುವುದು. ೨೦) ಭಗವಂತನ ಶ್ರೀವಿಗ್ರಹದ ಮುಂದೆ ಇತರರನ್ನು ನಿಂದಿಸುವುದು. ೨೧) ಭಗವಂತನ ಶ್ರೀವಿಗ್ರಹದ ಮುಂದೆ ಬೇರೆಯವರನ್ನು ಸ್ತುತಿಸುವುದು.

ದೇವೋಽಪರಾಹ್ಣೇ ಮಧುಹೋಗ್ರಧನ್ವಾ
ಸಾಯಂ ತ್ರಿಧಾಮಾವತು ಮಾಧವೋ ಮಾಮ್ ।
ದೋಷೇ ಹೃಷೀಕೇಶ ಉತಾರ್ಧರಾತ್ರೇ
ನಿಶೀಥ ಏಕೋಽವತು ಪದ್ಮನಾಭಃ ॥ ೨೦ ॥

ಶ್ರೀವತ್ಸಧಾಮಾಪರರಾತ್ರ ಈಶಃ
ಪ್ರತ್ಯೂಷ ಈಶೋಽಸಿಧರೋ ಜನಾರ್ದನಃ ।
ದಾಮೋದರೋಽವ್ಯಾದನುಸಂಧ್ಯಂ ಪ್ರಭಾತೇ
ವಿಶ್ವೇಶ್ವರೋ ಭಗವಾನ್ ಕಾಲಮೂರ್ತಿಃ ॥ ೨೧ ॥

ಚಕ್ರಂ ಯುಗಾಂತಾನಲತಿಗ್ಮನೇಮಿ
ಭ್ರಮತ್ಸಮಂತಾದ್ಭಗವತ್ಪ್ರಯುಕ್ತಮ್ ।
ದಂದಗ್ಧಿ ದಂದಗ್ಧ್ಯರಿಸೈನ್ಯಮಾಶು
ಕಕ್ಷಂ ಯಥಾ ವಾತಸಖೋ ಹುತಾಶಃ ॥ ೨೨ ॥

ಗದೇಽಶನಿಸ್ಪರ್ಶನವಿಸ್ಫುಲಿಂಗೇ
ನಿಷ್ಪಿಂಢಿ ನಿಷ್ಪಿಂಢ್ಯಜಿತಪ್ರಿಯಾಸಿ ।
ಕೂಷ್ಮಾಂಡವೈನಾಯಕಯಕ್ಷರಕ್ಷೋ-
ಭೂತಗ್ರಹಾಂಶ್ಚೂರ್ಣಯ ಚೂರ್ಣಯಾರೀನ್ ॥ ೨೩ ॥

ತ್ವಂ ಯಾತುಧಾನಪ್ರಮಥಪ್ರೇತಮಾತೃ-
ಪಿಶಾಚವಿಪ್ರಗ್ರಹಘೋರದೃಷ್ಟೀನ್ ।
ದರೇಂದ್ರ ವಿದ್ರಾವಯ ಕೃಷ್ಣಪೂರಿತೋ
ಭೀಮಸ್ವನೋಽರೇರ್ಹೃದಯಾನಿ ಕಂಪಯನ್ ॥ ೨೪ ॥

ತ್ವಂ ತಿಗ್ಮಧಾರಾಸಿವರಾರಿಸೈನ್ಯ-
ಮೀಶಪ್ರಯುಕ್ತೋ ಮಮ ಛಿಂದಿ ಛಿಂಧಿ ।
ಚಕ್ಷೂಂಷಿ ಚರ್ಮಂಛತಚಂದ್ರ ಛಾದಯ
ದ್ವಿಷಾಮಘೋನಾಂ ಹರ ಪಾಪಚಕ್ಷುಷಾಮ್ ॥ ೨೫ ॥

ಅಪರಾಹ್ಣಕಾಲದಲ್ಲಿ ಭಗವಾನ್ ಮಧುಸೂದನನು ತನ್ನ ಪ್ರಚಂಡವಾದ ಧನುಸ್ಸನ್ನು ಹಿಡಿದುಕೊಂಡು ನನ್ನನ್ನು ರಕ್ಷಿಸಲಿ. ಸಾಯಂಕಾಲದಲ್ಲಿ ತ್ರಿಮೂರ್ತಿಸ್ವರೂಪನಾದ ಮಾಧವನೂ, ಪ್ರದೋಷದಲ್ಲಿ ಹೃಷೀಕೇಶನೂ, ಅರ್ಧ ರಾತ್ರಿಯ ಮೊದಲು ಹಾಗೂ ಅರ್ಧರಾತ್ರಿಯಲ್ಲಿ ಭಗವಾನ್ ಪದ್ಮನಾಭನೊಬ್ಬನೇ ನನ್ನನ್ನು ಸಲಹಲಿ. ॥ ೨೦ ॥ ಶ್ರೀವತ್ಸಲಾಂಛನವನ್ನು ಧರಿಸಿದ ಶ್ರೀಹರಿಯು ಅಪರರಾತ್ರಿಯಲ್ಲೂ, ಖಡ್ಗಹಸ್ತನಾದ ಭಗವಾನ್ ಜನಾರ್ದನನು ಉಷಃಕಾಲದಲ್ಲಿಯೂ, ಶ್ರೀದಾಮೋದರ ಸ್ವಾಮಿಯು ಸೂರ್ಯೋದಯಕ್ಕೆ ಮೊದಲೂ ಮತ್ತು ಎಲ್ಲ ಸಂಧ್ಯೆಗಳಲ್ಲಿ ಕಾಲಮೂರ್ತಿ ಭಗವಾನ್ ವಿಶ್ವೇಶ್ವರನು ನನ್ನನ್ನು ರಕ್ಷಿಸಲಿ. ॥ ೨೧ ॥

ಪ್ರಳಯಕಾಲದ ಅಗ್ನಿಯಂತೆ ತೀಕ್ಷ್ಣವಾದ ಅಲಗುಗಳಿಂದ ಕೂಡಿ, ಶ್ರೀಭಗವಂತನ ಪ್ರೇರಣೆಯಂತೆ ಸದಾಕಾಲ ಸುತ್ತುತ್ತಿರುವ ಚಕ್ರರಾಜನಾದ ಸುದರ್ಶನನೇ! ಗಾಳಿಯೊಂದೊಡಗೂಡಿದ ಬೆಂಕಿಯು ಹುಲ್ಲಿನಮೆದೆಯನ್ನು ಸುಟ್ಟುರುಹುವಂತೆ ನಮ್ಮ ಶತ್ರುಸೈನ್ಯವನ್ನು ಶೀಘ್ರಾತಿಶೀಘ್ರವಾಗಿ ಸುಟ್ಟುಹಾಕು, ಸುಟ್ಟುಹಾಕು. ॥ ೨೨ ॥ ಎಲೈ ಕೌಮೋದಕೀ ಗದೆಯೇ! ನೀನು ವಜ್ರಾಯುಧಕ್ಕೆ ಎಣೆಯಾಗಿ ಮುಟ್ಟಲು ಅಸಾಧ್ಯವಾದ ಕಿಡಿಗಳನ್ನು ಉದುರಿಸುತ್ತಿರುವೆ. ನೀನು ಭಗವಾನ್ ಅಜಿತನಿಗೆ ಪ್ರಿಯವಾಗಿರುವೆ ಹಾಗೂ ನಾನು ಅವನ ಸೇವಕನಾಗಿರುವೆನು. ಆದಕ್ಕಾಗಿ ನೀನು ಕುಷ್ಮಾಂಡ, ವಿನಾಯಕ, ಯಕ್ಷ, ರಾಕ್ಷಸ, ಭೂತ-ಪ್ರೇತಾದಿ ಗ್ರಹರನ್ನು ಈಗಲೇ ಹೊಸಕಿಹಾಕಿಬಿಡು ಹಾಗೂ ನನ್ನ ಶತ್ರುಗಳನ್ನು ನುಚ್ಚುನೂರಾಗಿಸಿಬಿಡು. ॥ ೨೩ ॥ ಎಲೈ ಶಂಖಶ್ರೇಷ್ಠನಾದ ಪಾಂಚಜನ್ಯನೇ! ನಿನ್ನನ್ನು ಭಗವಾನ್ ಶ್ರೀಕೃಷ್ಣನು ಊದಿದಾಗ ಭಯಂಕರವಾದ ಶಬ್ದವನ್ನು ಮಾಡಿ ನನ್ನ ಶತ್ರುಗಳ ಹೃದಯಗಳನ್ನು ನಡುಗಿಸಿಬಿಡು ಹಾಗೂ ಯಾತುಧಾನ, ಪ್ರಮಥ, ಪ್ರೇತ, ಮಾತೃಕಾ, ಪಿಶಾಚ, ಬ್ರಹ್ಮರಾಕ್ಷಸಾದಿ ಭಯಂಕರರಾದ ಪ್ರಾಣಿಗಳನ್ನು ಇಲ್ಲಿಂದ ಒಡನೆಯೇ ಓಡಿಸಿಬಿಡು. ॥ ೨೪ ॥ ಭಗವಂತನಿಗೆ ಪ್ರಿಯವಾದ ಎಲೈ ಖಡ್ಗವೇ! ನಿನ್ನ ಅಲಗು ತುಂಬಾ ತೀಕ್ಷ್ಣವಾಗಿದೆ. ನೀನು ಭಗವಂತನ ಪ್ರೇರಣೆಯಿಂದ ನನ್ನ ಶತ್ರುಗಳನ್ನು ಛಿನ್ನ-ಭಿನ್ನವಾಗಿಸು. ಹಾಗೆಯೇ ನೂರಾರು ಚಂದ್ರಮಂಡಲಗಳ ಆಕಾರದಿಂದ ಬೆಳಗುತ್ತಿರುವ ಭಗವಂತನಿಗೆ ಪ್ರಿಯವಾದ ಗುರಾಣಿಯೇ! ನೀನು ಪಾಪದೃಷ್ಟಿಯುಳ್ಳ ಪಾಪಾತ್ಮ ಶತ್ರುಗಳ ಪಾಪಿಕಣ್ಣುಗಳನ್ನು ಮುಚ್ಚಿಬಿಡು. ॥ ೨೫ ॥

೨೨) ಭಗವಂತನ ಶ್ರೀವಿಗ್ರಹದ ಮುಂದೆ ಅಶ್ಲೀಲವಾಗಿ ಮಾತನಾಡುವುದು. ೨೩) ಭಗವಂತನ ಶ್ರೀಮೂರ್ತಿಯ ಮುಂದೆ ಅಧೋವಾಯುವನ್ನು ಬಿಡುವುದು. ೨೪) ಮುಖ್ಯವಾದ ಉಪಚಾರಗಳನ್ನು ಮಾಡುವ ಶಕ್ತಿಯಿದ್ದರೂ ಗೌಣವಾದ ಉಪಚಾರಗಳಿಂದ ಭಗವಂತನ ಸೇವೆ-ಪೂಜೆ ಮಾಡುವುದು. ೨೫) ಶ್ರೀಭಗವಂತನಿಗೆ ನಿವೇದನೆ ಮಾಡದೆ ಇರುವ ಯಾವುದೇ ವಸ್ತುವನ್ನು ತಿನ್ನುವುದು-ಕುಡಿಯುವುದು. ೨೬) ಯಾವುದೇ ಋತುವಿನಲ್ಲಿ ಯಾವ ಹಣ್ಣು ಸಿಗುವುದೋ ಅದನ್ನು ಮೊಟ್ಟಮೊದಲಿಗೆ ಭಗವಂತನಿಗೆ ಅರ್ಪಿಸದಿರುವುದು. ೨೭) ಯಾವುದಾದರೂ ಕಾಯಿಪಲ್ಲೆ ಅಥವಾ ಹಣ್ಣು ಮುಂತಾದವುಗಳ ಮುಂಭಾಗವನ್ನು ಮುರಿದು ದೇವರ ವ್ಯಂಜನಾದಿಗಳಿಗಾಗಿ ಸಮರ್ಪಿಸುವುದು. ೨೮) ಭಗವಂತನ ಶ್ರೀವಿಗ್ರಹಕ್ಕೆ ಬೆನ್ನುಹಾಕಿ ಕುಳಿತುಕೊಳ್ಳುವುದು. ೨೯) ಭಗವಂತನ ಶ್ರೀವಿಗ್ರಹದ ಮುಂದೆ ಬೇರೆ ಯಾರನ್ನಾದರೂ ನಮಸ್ಕರಿಸುವುದು. ೩೦) ಶ್ರೀಗುರುದೇವರ ಪ್ರಾರ್ಥನೆ, ಕುಶಲಪ್ರಶ್ನೆ, ಸ್ತೋತ್ರ ಮುಂತಾದವುಗಳನ್ನು ಮಾಡದೇ ಇರುವುದು. ೩೧) ದೇವರ ಮುಂದೆ ತನ್ನನ್ನು ಪ್ರಶಂಸಿಸಿಕೊಳ್ಳುವುದು. ೩೨) ಯಾವುದೇ ದೇವತೆಯನ್ನು ನಿಂದಿಸುವುದು.

ಯನ್ನೋ ಭಯಂ ಗ್ರಹೇಭ್ಯೋಽ-
ಭೂತ್ ಕೇತುಭ್ಯೋ ನೃಭ್ಯ ಏವ ಚ ।
ಸರೀಸೃಪೇಭ್ಯೋ ದಂಷ್ಟ್ರಿಭ್ಯೋ
ಭೂತೇಭ್ಯೋಂಽಹೋಭ್ಯ ಏವ ವಾ ॥ ೨೭ ॥

ಸರ್ವಾಣ್ಯೇತಾನಿ ಭಗವನ್ನಾಮರೂಪಾಸ್ತ್ರಕೀರ್ತನಾತ್ ।
ಪ್ರಯಾಂತು ಸಂಕ್ಷಯಂ ಸದ್ಯೋ ಯೇ ನಃ ಶ್ರೇಯಃಪ್ರತೀಪಕಾಃ
॥ ೨೮ ॥

ಗರುಡೋ ಭಗವಾನ್ ಸ್ತೋತ್ರಸ್ತೋಭಶ್ಛಂದೋಮಯಃ ಪ್ರಭುಃ ।
ರಕ್ಷತ್ವಶೇಷಕೃಚ್ಛ್ರೇಭ್ಯೋ ವಿಷ್ವಕ್ಸೇನಃ ಸ್ವನಾಮಭಿಃ
॥ ೨೯ ॥

ಸರ್ವಾಪದ್ಭ್ಯೋ ಹರೇರ್ನಾಮರೂಪಯಾನಾಯುಧಾನಿ ನಃ ।
ಬುದ್ಧೀಂದ್ರಿಯಮನಃಪ್ರಾಣಾನ್ ಪಾಂತು ಪಾರ್ಷದಭೂಷಣಾಃ
॥ ೩೦ ॥

ಯಥಾ ಹಿ ಭಗವಾನೇವ ವಸ್ತುತಃ ಸದಸಚ್ಚ ಯತ್ ।
ಸತ್ಯೇನಾನೇನ ನಃ ಸರ್ವೇ ಯಾಂತು ನಾಶಮುಪದ್ರವಾಃ
॥ ೩೧ ॥

ಯಥೈಕಾತ್ಮ್ಯಾನುಭಾವಾನಾಂ ವಿಕಲ್ಪರಹಿತಃ ಸ್ವಯಮ್ ।
ಭೂಷಣಾಯುಧಲಿಂಗಾಖ್ಯಾ ಧತ್ತೇ ಶಕ್ತೀಃ ಸ್ವಮಾಯಯಾ
॥ ೩೨ ॥

ತೇನೈವ ಸತ್ಯಮಾನೇನ ಸರ್ವಜ್ಞೋ ಭಗವಾನ್ ಹರಿಃ ।
ಪಾತು ಸರ್ವೈಃ ಸ್ವರೂಪೈರ್ನಃ ಸದಾ ಸರ್ವತ್ರ ಸರ್ವಗಃ
॥ ೩೩ ॥

ವಿದಿಕ್ಷು ದಿಕ್ಷೂರ್ಧ್ವಮಧಃ ಸಮಂತಾ-
ದಂತರ್ಬಹಿರ್ಭಗವಾನ್ ನಾರಸಿಂಹಃ ।
ಪ್ರಹಾಪಯಲ್ಲೋಕಭಯಂ ಸ್ವನೇನ
ಸ್ವತೇಜಸಾ ಗ್ರಸ್ತಸಮಸ್ತತೇಜಾಃ ॥ ೩೪ ॥

ಮಘವನ್ನಿದಮಾಖ್ಯಾತಂ ವರ್ಮ ನಾರಾಯಣಾತ್ಮಕಮ್ ।
ವಿಜೇಷ್ಯಸ್ಯಂಜಸಾ ಯೇನ ದಂಶಿತೋಽಸುರಯೂಥಪಾನ್
॥ ೩೫ ॥

ಏತದ್ಧಾರಯಮಾಣಸ್ತು ಯಂ ಯಂ ಪಶ್ಯತಿ ಚಕ್ಷುಷಾ ।
ಪದಾ ವಾ ಸಂಸ್ಪೃಶೇತ್ಸದ್ಯಃ ಸಾಧ್ವಸಾತ್ಸ ವಿಮುಚ್ಯತೇ
॥ ೩೬ ॥

ನ ಕುತಶ್ಚಿದ್ಭಯಂ ತಸ್ಯ ವಿದ್ಯಾಂ ಧಾರಯತೋ ಭವೇತ್ ।
ರಾಜದಸ್ಯುಗ್ರಹಾದಿಭ್ಯೋ ವ್ಯಾಘ್ರಾದಿಭ್ಯಶ್ಚ ಕರ್ಹಿಚಿತ್
॥ ೩೭ ॥

ಸೂರ್ಯಾದಿ ಗ್ರಹಗಳ ವಿರೋಧಿ ಧೂಮಕೇತು, ದುಷ್ಟ ಮನುಷ್ಯರು, ಸರ್ಪವೇ ಮುಂತಾದ ಹರಿದಾಡುವ ಪ್ರಾಣಿಗಳು, ಕೋರೆದಾಡೆಗಳುಳ್ಳ ಹಿಂಸ್ರಕ ಪಶುಗಳು, ಭೂತ-ಪ್ರೇತಗಳು ಮತ್ತು ಪಾಪಿಗಳಾದ ಪ್ರಾಣಿಗಳು ಇವುಗಳಿಂದ ನಮಗೆ ಉಂಟಾದ ಹಾಗೂ ಉಂಟಾಗುವ ಭಯಗಳೂ, ನಮ್ಮ ಶ್ರೇಯಸ್ಸಿಗೆ ಉಂಟಾದ ವಿರೋಧಗಳೆಲ್ಲವೂ ಭಗವಂತನ ನಾಮ, ರೂಪ, ಆಯುಧಗಳ ಕೀರ್ತನೆ ಮಾಡುವುದರಿಂದ ಒಡನೆಯೇ ನಾಶವಾಗಲೀ. ॥ ೨೭-೨೮ ॥ ಬೃಹದ್ರಥಂತರವೇ ಮೊದಲಾದ ಸಾಮವೇದದ ಸ್ತೋತ್ರಗಳಿಂದ ಸ್ತುತಿಸಲ್ಪಡುವ ವೇದಮೂರ್ತಿಯಾದ ಭಗವಾನ್ ಗರುಡದೇವರೂ ಮತ್ತು (ಭಗವಂತನ ಪಾರ್ಷದರಿಗೆ ಗಣನಾಯಕರಾದ) ವಿಷ್ವಕ್ಸೇನದೇವರೂ ತಮ್ಮ ನಾಮೋಚ್ಚಾರಣೆಯ ಪ್ರಭಾವದಿಂದ ನಮ್ಮನ್ನು ಎಲ್ಲ ವಿಧದ ವಿಪತ್ತುಗಳಿಂದ ಕಾಪಾಡಲಿ. ॥ ೨೯ ॥ ಶ್ರೀಹರಿಯ ನಾಮ, ರೂಪ, ವಾಹನ, ಆಯುಧಗಳು ಮತ್ತು ಶ್ರೇಷ್ಠ ಪಾರ್ಷದರು ನಮ್ಮ ಬುದ್ಧಿ, ಇಂದ್ರಿಯಗಳು, ಮನಸ್ಸು ಹಾಗೂ ಪ್ರಾಣಗಳನ್ನು ಎಲ್ಲ ಬಗೆಯ ಆಪತ್ತುಗಳಿಂದ ಕಾಪಾಡಲಿ. ॥ ೩೦ ॥

ಕಾರ್ಯ-ಕಾರಣರೂಪವಾದ ಈ ಜಗತ್ತೆಲ್ಲವೂ ವಾಸ್ತವವಾಗಿ ಭಗವಂತನೇ ಆಗಿರುವನು. ಭಗವಂತನಿಗೆ ಅಧೀನವಾಗಿದೆ ಎಂಬ ಸತ್ಯದಿಂದ ನಮ್ಮ ಎಲ್ಲ ಉಪದ್ರವಗಳು ನಾಶಹೊಂದಲಿ. ॥ ೩೧ ॥ ಬ್ರಹ್ಮ ಮತ್ತು ಆತ್ಮನ ಏಕತೆಯನ್ನು ಅನುಭವಿಸಿರುವ ಜನರ ದೃಷ್ಟಿಯಲ್ಲಿ ಭಗವಂತನ ಸ್ವರೂಪವು ಸಮಸ್ತ ವಿಕಲ್ಪ-ಭೇದಗಳಿಂದ ರಹಿತವಾಗಿದೆ. ಹೀಗಿದ್ದರೂ ಅವನು ತನ್ನ ಮಾಯಾಶಕ್ತಿಯ ಮೂಲಕ ಭೂಷಣ, ಆಯುಧ ಮತ್ತು ರೂಪ – ನಾಮವೆಂಬ ಶಕ್ತಿಗಳನ್ನು ಧರಿಸುತ್ತಾನೆ. ಇದು ನಿಶ್ಚಿತವಾಗಿ ಸತ್ಯವಾಗಿದೆ. ಇದರಿಂದ ಸರ್ವಜ್ಞನೂ, ಸರ್ವವ್ಯಾಪಕನೂ ಆದ ಭಗವಾನ್ ಶ್ರೀಹರಿಯು ಸದಾಕಾಲ, ಎಲ್ಲೆಡೆ, ಎಲ್ಲ ಸ್ವರೂಪಗಳಿಂದ ನಮ್ಮನ್ನು ರಕ್ಷಿಸಲಿ. ॥ ೩೨-೩೩ ॥ ಯಾರು ತನ್ನ ಭಯಂಕರ ಅಟ್ಟಹಾಸದಿಂದಲೇ ಎಲ್ಲ ಜನರ ಭಯವನ್ನು ಓಡಿಸಿಬಿಡುವನೋ ಮತ್ತು ತನ್ನ ತೇಜದಿಂದ ಎಲ್ಲರ ತೇಜವನ್ನು ನುಂಗಿಬಿಡುವನೋ ಅಂತಹ ಭಗವಾನ್ ನರಸಿಂಹದೇವರು ದಿಕ್ಕುಗಳಲ್ಲಿಯೂ ವಿದಿಕ್ಕುಗಳಲ್ಲಿಯೂ, ಮೇಲೂ, ಕೆಳಗೂ, ಒಳಗೂ, ಹೊರಗೂ ಎಲ್ಲ ಕಡೆಗಳಿಂದ ನಮ್ಮನ್ನು ರಕ್ಷಿಸಲಿ.
॥ ೩೪ ॥

ಎಲೈ ದೇವೇಂದ್ರನೇ! ನಾನು ನಿನಗೆ ಈ ನಾರಾಯಣಕವಚವನ್ನು ಉಪದೇಶಿಸಿರುವೆನು. ಈ ಕವಚದಿಂದ ನೀನು ನಿನ್ನನ್ನು ಸುರಕ್ಷಿತನನ್ನಾಗಿಸಿಕೋ. ಬಳಿಕ, ಮತ್ತೆ ನೀನು ಅನಾಯಾಸವಾಗಿಯೇ ಎಲ್ಲ ದೈತ್ಯರ ಗುಂಪನ್ನು ಗೆಲ್ಲಬಲ್ಲೆ. ॥ ೩೫ ॥ ಈ ನಾರಾಯಣ ಕವಚವನ್ನು ಧರಿಸಿರುವ ಮನುಷ್ಯನು ಯಾರನ್ನಾದರೂ ತನ್ನ ಕಣ್ಣುಗಳಿಂದ ನೋಡಿದರೆ ಅಥವಾ ಕಾಲು ಮುಟ್ಟಿಸಿಕೊಂಡರೆ ಅವನು ಒಡನೆಯೇ ಸಮಸ್ತ ಭಯಗಳಿಂದಲೂ ಬಿಡುಗಡೆ ಹೊಂದುವನು. ॥ ೩೬ ॥ ಈ ವೈಷ್ಣವೀ ವಿದ್ಯೆಯನ್ನು ಧರಿಸಿಕೊಂಡಿರುವವನಿಗೆ ರಾಜನಿಂದ, ಕಳ್ಳರಿಂದ, ಭೂತ-ಪ್ರೇತಾದಿಗಳಿಂದ, ಹುಲಿಯೇ ಮುಂತಾದ ಹಿಂಸಕ ಪ್ರಾಣಿಗಳಿಂದ ಎಂದಿಗೂ ಯಾವುದೇ ವಿಧದ ಭಯವು ಉಂಟಾಗಲಾರದು. ॥ ೩೭ ॥

ಇಮಾಂ ವಿದ್ಯಾಂ ಪುರಾ ಕಶ್ಚಿತ್ಕೌಶಿಕೋ ಧಾರಯನ್ದ್ವಿಜಃ ।
ಯೋಗಧಾರಣಯಾ ಸ್ವಾಂಗಂ ಜಹೌ ಸ ಮರುಧನ್ವನಿ ॥ ೩೮ ॥

ತಸ್ಯೋಪರಿ ವಿಮಾನೇನ ಗಂಧರ್ವಪತಿರೇಕದಾ ।
ಯಯೌ ಚಿತ್ರರಥಃ ಸ್ತ್ರೀಭಿರ್ವೃತೋ ಯತ್ರ ದ್ವಿಜಕ್ಷಯಃ ॥ ೩೯ ॥

ಗಗನಾನ್ನ್ಯಪತತ್ಸದ್ಯಃ ಸವಿಮಾನೋ ಹ್ಯವಾಕ್ಶಿರಾಃ ।
ಸ ವಾಲಖಿಲ್ಯವಚನಾದಸ್ಥೀನ್ಯಾದಾಯ ವಿಸ್ಮಿತಃ ।
ಪ್ರಾಸ್ಯ ಪ್ರಾಚೀಸರಸ್ವತ್ಯಾಂ ಸ್ನಾತ್ವಾ ಧಾಮ ಸ್ವಮನ್ವಗಾತ್ ॥ ೪೦ ॥

ಶ್ರೀಶುಕ ಉವಾಚ

ಯ ಇದಂ ಶೃಣುಯಾತ್ಕಾಲೇ ಯೋ ಧಾರಯತಿ ಚಾದೃತಃ ।
ತಂ ನಮಸ್ಯಂತಿ ಭೂತಾನಿ ಮುಚ್ಯತೇ ಸರ್ವತೋ ಭಯಾತ್ ॥ ೪೧ ॥

ಏತಾಂ ವಿದ್ಯಾಮಧಿಗತೋ ವಿಶ್ವರೂಪಾಚ್ಛತಕ್ರತುಃ ।
ತ್ರೈಲೋಕ್ಯಲಕ್ಷ್ಮೀಂ ಬುಭುಜೇ ವಿನಿರ್ಜಿತ್ಯ ಮೃಧೇಽಸುರಾನ್ ॥ ೪೨ ॥

ದೇವರಾಜನೇ! ಹಿಂದೆ ಕೌಶಿಕಗೋತ್ರದ ಬ್ರಾಹ್ಮಣನೊಬ್ಬನು ಈ ವಿದ್ಯೆಯನ್ನು ಧರಿಸಿಕೊಂಡು ಯೋಗಧಾರಣೆಯಿಂದ ತನ್ನ ಶರೀರವನ್ನು ಮರಳು ಗಾಡಿನಲ್ಲಿ ತ್ಯಜಿಸಿದನು. ॥ ೩೮ ॥ ಆ ಬ್ರಾಹ್ಮಣನ ಶರೀರವು ಬಿದ್ದ ಜಾಗದ ಮೇಲಿನಿಂದ ಒಂದುದಿನ ಗಂಧರ್ವರಾಜನಾದ ಚಿತ್ರ ರಥನು ತನ್ನ ಪತ್ನಿಯರೊಂದಿಗೆ ವಿಮಾನದಲ್ಲಿ ಕುಳಿತು ಹೋಗುತ್ತಿದ್ದನು. ॥ ೩೯ ॥ ಅಲ್ಲಿಗೆ ಬರುತ್ತಲೇ ತಲೆಕೆಳಗಾಗಿ ವಿಮಾನಸಹಿತ ಅವನು ಆಕಾಶದಿಂದ ಭೂಮಿಗೆ ಬಿದ್ದುಬಿಟ್ಟನು. ಈ ಘಟನೆಯಿಂದ ಅವನ ಆಶ್ಚರ್ಯಕ್ಕೆ ಪಾರವೇ ಇರಲಿಲ್ಲ. ವಾಲಖಿಲ್ಯ ಮುನಿಗಳು ಅವನಿಗೆ ಇದು ನಾರಾಯಣಕವಚ ಧರಿಸಿದ ಪ್ರಭಾವವೆಂದು ತಿಳಿಸಿದಾಗ, ಅವನು ಆ ಭೂಸುರನ ಮೂಳೆಗಳನ್ನು ತೆಗೆದು ಪೂರ್ವವಾಹಿನಿಯಾದ ಸರಸ್ವತೀನದಿಯಲ್ಲಿ ವಿಸರ್ಜನೆಮಾಡಿ, ಸ್ನಾನಮಾಡಿ ತನ್ನ ಲೋಕಕ್ಕೆ ಹೊರಟು ಹೋದನು. ॥ ೪೦ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ! ಈ ನಾರಾಯಣಕವಚವನ್ನು ಸಕಾಲದಲ್ಲಿ ಕೇಳುವವನು, ಆದರದಿಂದ ಧರಿಸುವವನು, ಅವನ ಮುಂದೆ ಎಲ್ಲ ಪ್ರಾಣಿಗಳು ಆದರದಿಂದ ತಲೆತಗ್ಗಿಸುವವು ಹಾಗೂ ಎಲ್ಲ ರೀತಿಯ ಭಯದಿಂದ ಬಿಡುಗಡೆ ಹೊಂದುವನು. ॥ ೪೧ ॥ ಮಹಾರಾಜಾ! ಇಂದ್ರನು ಆಚಾರ್ಯ ವಿಶ್ವರೂಪನಿಂದ ಈ ವೈಷ್ಣವೀ ವಿದ್ಯೆಯನ್ನು ಪಡೆದು ಕೊಂಡು ರಣರಂಗದಲ್ಲಿ ಅಸುರರನ್ನು ಗೆದ್ದುಕೊಂಡು, ಮೂರು ಲೋಕಗಳ ಸಾಮ್ರಾಜ್ಯಲಕ್ಷ್ಮಿಯನ್ನು ಅನುಭವಿಸ ತೊಡಗಿದನು. ॥ ೪೨ ॥

ಎಂಟನೆಯ ಅಧ್ಯಾಯವು ಮುಗಿಯಿತು. ॥ ೮ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಷಷ್ಠಸ್ಕಂಧೇ
ನಾರಾಯಣವರ್ಮಕಥನಂ ನಾಮಾಷ್ಟಮೋಽಧ್ಯಾಯಃ ॥ ೮ ॥

ಒಂಭತ್ತನೆಯ ಅಧ್ಯಾಯ

ವಿಶ್ವರೂಪನ ವಧೆ, ವೃತ್ರಾಸುರನು ದೇವತೆಗಳನ್ನು ಸೋಲಿಸಿದುದು ಮತ್ತು ಭಗವಂತನ ಪ್ರೇರಣೆಯಂತೆ ದೇವತೆಗಳು ದಧೀಚಿಋಷಿಗಳ ಬಳಿಗೆ ಹೋದುದು

ಶ್ರೀಶುಕ ಉವಾಚ

ತಸ್ಯಾಸನ್ ವಿಶ್ವರೂಪಸ್ಯ ಶಿರಾಂಸಿ ತ್ರೀಣಿ ಭಾರತ ।
ಸೋಮಪೀಥಂ ಸುರಾಪೀಥಮನ್ನಾದಮಿತಿ ಶುಶ್ರುಮ ॥ ೧ ॥

ಸ ವೈ ಬರ್ಹಿಷಿ ದೇವೇಭ್ಯೋ ಭಾಗಂ ಪ್ರತ್ಯಕ್ಷಮುಚ್ಚಕೈಃ ।
ಅವದದ್ಯಸ್ಯ ಪಿತರೋ ದೇವಾಃ ಸಪ್ರಶ್ರಯಂ ನೃಪ ॥ ೨ ॥

ಸ ಏವ ಹಿ ದದೌ ಭಾಗಂ ಪರೋಕ್ಷಮಸುರಾನ್ ಪ್ರತಿ ।
ಯಜಮಾನೋಽವಹದ್ಭಾಗಂ ಮಾತೃಸ್ನೇಹವಶಾನುಗಃ ॥ ೩ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಎಲೈ ಭರತ ಕುಲಮಣಿಯೇ! ವಿಶ್ವರೂಪನಿಗೆ ಮೂರು ತಲೆಗಳಿದ್ದುವು. ಅವನು ಒಂದು ಮುಖದಿಂದ ಸೋಮರಸವನ್ನು, ಮತ್ತೊಂದರಿಂದ ಸುರೆಯನ್ನು ಕುಡಿಯುತ್ತಿದ್ದನು. ಮೂರನೆಯ ಮುಖದಿಂದ ಅನ್ನ ತಿನ್ನುತ್ತಿದ್ದನು ಎಂದು ನಾವು ಕೇಳಿದ್ದೇವೆ. ॥ ೧ ॥ ಅವನ ತಂದೆಯಾದ ತ್ವಷ್ಟ್ರನು ದ್ವಾದಶಾದಿತ್ಯರಲ್ಲಿ ಒಬ್ಬನಾದ್ದರಿಂದ ವಿಶ್ವರೂಪನು ಯಜ್ಞವನ್ನು ಮಾಡುವಾಗ ಪ್ರತ್ಯಕ್ಷವಾಗಿ ಉಚ್ಚ-ಸ್ವರದಲ್ಲಿ ಮಂತ್ರಗಳನ್ನು ಹೇಳಿ ದೇವತೆಗಳಿಗೆ ಅತ್ಯಂತ ವಿನಯದಿಂದ ಆಹುತಿಗಳನ್ನು ಅರ್ಪಿಸುತ್ತಿದ್ದನು. ॥ ೨ ॥ ಜೊತೆ-ಜೊತೆಗೆ ಯಾರಿಗೂ ತಿಳಿಯದಂತೆ ಅಸುರರಿಗೂ ಆಹುತಿಗಳನ್ನು ಕೊಡುತ್ತಿದ್ದನು. ಅವನ ತಾಯಿ ಅಸುರಕುಲದವಳಾದ್ದರಿಂದ ಅವನು ಮಾತೃಸ್ನೇಹಕ್ಕೆ ವಶನಾಗಿ ಯಜ್ಞಮಾಡುವಾಗ ಹೀಗೆ ಅಸುರರಿಗೂ ಯಜ್ಞಭಾಗವನ್ನು ಕೊಡುತ್ತಿದ್ದನು. ॥ ೩ ॥

ತದ್ದೇವಹೇಲನಂ ತಸ್ಯ ಧರ್ಮಾಲೀಕಂ ಸುರೇಶ್ವರಃ ।
ಆಲಕ್ಷ್ಯ ತರಸಾ ಭೀತಸ್ತಚ್ಛೀರ್ಷಾಣ್ಯಚ್ಛಿನದ್ರುಷಾ ॥ ೪ ॥

ಸೋಮಪೀಥಂ ತು ಯತ್ತಸ್ಯ ಶಿರ ಆಸೀತ್ಕಪಿಂಜಲಃ ।
ಕಲವಿಂಕಃ ಸುರಾಪೀಥಮನ್ನಾದಂ ಯತ್ಸ ತಿತ್ತಿರಿಃ ॥ ೫ ॥

ಬ್ರಹ್ಮಹತ್ಯಾಮಂಜಲಿನಾ ಜಗ್ರಾಹ ಯದಪೀಶ್ವರಃ ।
ಸಂವತ್ಸರಾಂತೇ ತದಘಂ ಭೂತಾನಾಂ ಸ ವಿಶುದ್ಧಯೇ ।
ಭೂಮ್ಯಂಬುದ್ರುಮಯೋಷಿದ್ಭ್ಯಶ್ಚತುರ್ಧಾ ವ್ಯಭಜದ್ಧರಿಃ ॥ ೬ ॥

ಭೂಮಿಸ್ತುರೀಯಂ ಜಗ್ರಾಹ ಖಾತಪೂರವರೇಣ ವೈ ।
ಈರಿಣಂ ಬ್ರಹ್ಮಹತ್ಯಾಯಾ ರೂಪಂ ಭೂಮೌ ಪ್ರದೃಶ್ಯತೇ ॥ ೭ ॥

ತುರ್ಯಂ ಛೇದವಿರೋಹೇಣ ವರೇಣ ಜಗೃಹುರ್ದ್ರುಮಾಃ ।
ತೇಷಾಂ ನಿರ್ಯಾಸರೂಪೇಣ ಬ್ರಹ್ಮಹತ್ಯಾ ಪ್ರದೃಶ್ಯತೇ ॥ ೮ ॥

ಶಶ್ವತ್ಕಾಮವರೇಣಾಂಹಸ್ತುರೀಯಂ ಜಗೃಹುಃ ಸ್ತ್ರಿಯಃ ।
ರಜೋರೂಪೇಣ ತಾಸ್ವಂಹೋ ಮಾಸಿ ಮಾಸಿ ಪ್ರದೃಶ್ಯತೇ ॥ ೯ ॥

ದ್ರವ್ಯಭೂಯೋವರೇಣಾಪಸ್ತುರೀಯಂ ಜಗೃಹುರ್ಮಲಮ್ ।
ತಾಸು ಬುದ್ಬುದಫೇನಾಭ್ಯಾಂ ದೃಷ್ಟಂ ತದ್ಧರತಿ ಕ್ಷಿಪನ್ ॥ ೧೦ ॥

ಹತಪುತ್ರಸ್ತತಸ್ತ್ವಷ್ಟಾ ಜುಹಾವೇಂದ್ರಾಯ ಶತ್ರವೇ ।
ಇಂದ್ರಶತ್ರೋ ವಿವರ್ಧಸ್ವ ಮಾಚಿರಂ ಜಹಿ ವಿದ್ವಿಷಮ್ ॥ ೧೧ ॥

ಹೀಗೆ ಅವನು ದೇವತೆಗಳಿಗೆ ಅಪರಾಧವನ್ನೂ ಹಾಗೂ ಧರ್ಮದ ಮರೆಯಲ್ಲಿ ಕಪಟವನ್ನು ಮಾಡುತ್ತಿರುವುದನ್ನು ನೋಡಿದ ದೇವೇಂದ್ರನು ಅದಕ್ಕೆ ಹೆದರಿ, ಕೋಪಗೊಂಡು ಅತಿವೇಗದಿಂದ ಅವನ ಮೂರೂ ತಲೆಗಳನ್ನು ಕತ್ತರಿಸಿಹಾಕಿದನು. ॥ ೪ ॥ ವಿಶ್ವರೂಪನ ಕತ್ತರಿಸಲ್ಪಟ್ಟ ತಲೆಗಳಲ್ಲಿ ಸೋಮರಸವನ್ನು ಪಾನಮಾಡುತ್ತಿದ್ದ ತಲೆಯು ಕಪಿಂಜಲ ಪಕ್ಷಿಯಾಗಿ, ಸುರಾಪಾನ ಮಾಡುತ್ತಿದ್ದ ತಲೆಯು ಕಲವಿಂಕ (ಗುಬ್ಬಚ್ಚಿ)ಯಾಗಿಯೂ, ಅನ್ನವನ್ನು ಉಣ್ಣುತ್ತಿದ್ದ ತಲೆಯು ತಿತ್ತಿರಿ ಪಕ್ಷಿಯಾಗಿ ರೂಪತಾಳಿದವು. ॥ ೫ ॥ ವಿಶ್ವರೂಪನ ವಧೆಯಿಂದ ತಗುಲಿದ್ದ ಬ್ರಹ್ಮಹತ್ಯೆಯ ದೋಷವನ್ನು ದೇವೇಂದ್ರನು ಬಯಸಿದ್ದರೆ ದೂರಮಾಡಿಕೊಳ್ಳಬಲ್ಲವನಾಗಿದ್ದನು. ಆದರೆ ಹೀಗೆ ಮಾಡುವುದು ಅನುಚಿತವೆಂದು ತಿಳಿದು, ಕೈ ಜೋಡಿಸಿಕೊಂಡು ಅದನ್ನು ಸ್ವೀಕರಿಸಿದನು. ಒಂದು ವರ್ಷದವರೆಗೆ ಅದರಿಂದ ಬಿಡುಗಡೆ ಹೊಂದುವ ಯಾವ ಉಪಾಯವನ್ನೂ ಮಾಡಲಿಲ್ಲ. ಅನಂತರ ಎಲ್ಲ ಜನರ ಮುಂದೆ ಪರಿಶುದ್ಧಿಯನ್ನು ಪಡೆಯಲಿಕ್ಕಾಗಿ ಆತನು ತನಗೆ ತಗುಲಿದ್ದ ಬ್ರಹ್ಮಹತ್ಯೆಯನ್ನು ನಾಲ್ಕು ಪಾಲಾಗಿ ವಿಂಗಡಿಸಿ ಅದನ್ನು ಭೂಮಿಗೆ, ಜಲಕ್ಕೆ, ವೃಕ್ಷ ಮತ್ತು ಸ್ತ್ರೀಯರಿಗೆ ಹಂಚಿಬಿಟ್ಟನು. ॥ ೬ ॥ ಪರೀಕ್ಷಿತನೇ! ಭೂಮಿಯು-ಎಲ್ಲಾದರೂ ನನ್ನಲ್ಲಿ ಹಳ್ಳ-ಕೊಳ್ಳಗಳಾದರೆ ಅದು ಕಾಲ-ಕಾಲದಲ್ಲಿ ಭರ್ತಿಯಾಗಲಿ ಎಂಬ ವರವನ್ನು ಪಡೆದು ಭೂಮಿಯು ಬ್ರಹ್ಮಹತ್ಯೆಯ ನಾಲ್ಕನೆಯ ಒಂದಂಶವನ್ನು ಸ್ವೀಕರಿಸಿತು. ಅದೇ ಬ್ರಹ್ಮಹತ್ಯೆಯು ಭೂಮಿಯಲ್ಲಿ ಕೆಲವೆಡೆ ಮರುಭೂಮಿಯ ರೂಪದಲ್ಲಿ ಕಾಣಿಸಿಕೊಳ್ಳುತ್ತದೆ. ॥ ೭ ॥ ಮತ್ತೊಂದು ಚತುರ್ಥಾಂಶವನ್ನು ವೃಕ್ಷಗಳು ಸ್ವೀಕರಿಸಿದುವು. 'ನಮ್ಮಲ್ಲಿ ಕಡಿದುಹೋದ ಭಾಗಗಳು ತಾವಾಗಿಯೇ ಮತ್ತೆ ಬೆಳೆದು ಕೊಳ್ಳಲಿ' ಎಂಬ ವರವನ್ನು ಇಂದ್ರನಿಂದ ಪಡೆದು ಕೊಂಡವು. ವೃಕ್ಷಗಳಲ್ಲಿ ಈಗಲೂ ಅಂಟಿನ ರೂಪದಲ್ಲಿ ಆ ಬ್ರಹ್ಮ ಹತ್ಯೆಯು ಕಾಣಸಿಗುತ್ತದೆ. ॥ ೮ ॥ ಹಾಗೆಯೇ ಸ್ತ್ರೀಯರು – 'ನಮಗೆ ಸದಾಕಾಲ ಪುರುಷರ ಸಹವಾಸ ದೊರೆಯುತ್ತಿರಲಿ' ಎಂಬ ವರವನ್ನು ಪಡೆದು ಮೂರನೇ ಚತುರ್ಥಾಂಶವನ್ನು ಸ್ವೀಕರಿಸಿದರು. ಅವರಲ್ಲಿರುವ ಬ್ರಹ್ಮಹತ್ಯೆಯು ಪ್ರತಿತಿಂಗಳಲ್ಲಿ ರಜೋದರ್ಶನದ ರೂಪದಲ್ಲಿ ಕಾಣಿಸಿಕೊಳ್ಳುತ್ತದೆ. ॥ ೯ ॥ ಹಾಗೆಯೇ ಜಲವು – 'ನಾನು ವ್ಯಯವಾಗುತ್ತಿದ್ದರೂ ಪ್ರವಾಹಾದಿರೂಪಗಳಲ್ಲಿ ನನ್ನ ವೃದ್ಧಿಯು ಆಗುತ್ತಾ ಇರಲಿ' ಎಂಬ ವರವನ್ನು ಪಡೆದು ಬ್ರಹ್ಮಹತ್ಯೆಯ ಉಳಿದ ನಾಲ್ಕನೆಯ ಒಂದಂಶವನ್ನು ಸ್ವೀಕರಿಸಿತು. ಈಗಲೂ ನೀರಿನಲ್ಲಿ ನೊರೆ, ಗುಳ್ಳೆ ಮುಂತಾದ ರೂಪಗಳಲ್ಲಿ ಆ ಬ್ರಹ್ಮಹತ್ಯೆಯು ಕಾಣಿಸಿಕೊಳ್ಳುತ್ತದೆ. ಆದ್ದರಿಂದ ಮನುಷ್ಯರು ಅದನ್ನು ದೂರತಳ್ಳಿ ನೀರನ್ನು ಸೇವಿಸುತ್ತಾರೆ. ॥ ೧೦ ॥

ವಿಶ್ವರೂಪನ ತಂದೆಯಾದ ತ್ವಷ್ಟಾನಿಗೆ ಪುತ್ರನ ಮರಣದಿಂದಾಗಿ ಮಿತಿಮೀರಿದ ಕ್ರೋಧವು ಉಂಟಾಯಿತು. ಆಗ ಅವನು ಇಂದ್ರನ ಶತ್ರುವಾಗಿ ಇಂದ್ರನನ್ನು ಸಂಹರಿಸುವಂತಹ ಪುತ್ರನು ಉಂಟಾಗಲಿ ಎಂಬ ಆಶಯದಿಂದ – 'ಎಲೈ ಇಂದ್ರ ಶತ್ರುವೇ! ನಿನ್ನ ಅಭಿವೃದ್ಧಿ ಉಂಟಾಗಲೀ. ಶೀಘ್ರಾತಿಶೀಘ್ರವಾಗಿ ಶತ್ರುವನ್ನು ಸಂಹರಿಸು' ಎಂಬ ಮಂತ್ರದಿಂದ ಅಗ್ನಿಯಲ್ಲಿ ಹೋಮ ಮಾಡಿದನು. ॥ ೧೧ ॥

ಅಥಾನ್ವಾಹಾರ್ಯಪಚನಾದುತ್ಥಿತೋ ಘೋರದರ್ಶನಃ ।
ಕೃತಾಂತ ಇವ ಲೋಕಾನಾಂ ಯುಗಾಂತಸಮಯೇ ಯಥಾ ॥ ೧೨ ॥

ವಿಷ್ವಗ್ವಿವರ್ಧಮಾನಂ ತಮಿಷುಮಾತ್ರಂ ದಿನೇ ದಿನೇ ।
ದಗ್ಧ ಶೈಲಪ್ರತೀಕಾಶಂ ಸಂಧ್ಯಾಭ್ರಾನೀಕವರ್ಚಸಮ್ ॥ ೧೩ ॥

ತಪ್ತತಾಮ್ರಶಿಖಾಶ್ಮಶ್ರುಂ ಮಧ್ಯಾಹ್ನಾರ್ಕೋಗ್ರಲೋಚನಮ್ ॥ ೧೪ ॥

ದೇದೀಪ್ಯಮಾನೇ ತ್ರಿಶಿಖೇ ಶೂಲ ಆರೋಪ್ಯ ರೋದಸೀ ।
ನೃತ್ಯಂತಮುನ್ನದಂತಂ ಚ ಚಾಲಯಂತಂ ಪದಾ ಮಹೀಮ್ ॥ ೧೫ ॥

ದರೀಗಂಭೀರವಕ್ತ್ರೇಣ ಪಿಬತಾ ಚ ನಭಸ್ತಲಮ್ ।
ಲಿಹತಾ ಜಿಹ್ವಯರ್ಕ್ಷಾಣಿ ಗ್ರಸತಾ ಭುವನತ್ರಯಮ್ ॥ ೧೬ ॥

ಮಹತಾ ರೌದ್ರದಂಷ್ಟ್ರೇಣ ಜೃಂಭಮಾಣಂ ಮುಹುರ್ಮುಹುಃ ।
ವಿತ್ರಸ್ತಾ ದುದ್ರುವುರ್ಲೋಕಾ ವೀಕ್ಷ್ಯ ಸರ್ವೇ ದಿಶೋ ದಶ ॥ ೧೭ ॥

ಯೇನಾವೃತಾ ಇಮೇ ಲೋಕಾಸ್ತಮಸಾ ತ್ವಾಷ್ಟ್ರಮೂರ್ತಿನಾ ।
ಸ ವೈ ವೃತ್ರ ಇತಿ ಪ್ರೋಕ್ತಃ ಪಾಪಃ ಪರಮದಾರುಣಃ ॥ ೧೮ ॥

ತಂ ನಿಜಘ್ನುರಭಿದ್ರುತ್ಯ ಸಗಣಾ ವಿಬುಧರ್ಷಭಾಃ ।
ಸ್ವೈಃ ಸ್ವೈರ್ದಿವ್ಯಾಸ್ತ್ರಶಸ್ತ್ರೌಘೈಃ ಸೋಽಗ್ರಸತ್ತಾನಿ ಕೃತ್ಸ್ನಶಃ ॥ ೧೯ ॥

ತತಸ್ತೇ ವಿಸ್ಮಿತಾಃ ಸರ್ವೇ ವಿಷಣ್ಣಾ ಗ್ರಸ್ತತೇಜಸಃ ।
ಪ್ರತ್ಯಂಚಮಾದಿಪುರುಷಮುಪತಸ್ಥುಃ ಸಮಾಹಿತಾಃ ॥ ೨೦ ॥

ದೇವಾ ಊಚುಃ

ವಾಯ್ವಂಬರಾಗ್ನ್ಯಪ್ಕ್ಷಿತಯಸ್ತ್ರಿಲೋಕಾ
ಬ್ರಹ್ಮಾದಯೋ ಯೇ ವಯಮುದ್ವಿಜಂತಃ ।
ಹರಾಮ ಯಸ್ಮೈ ಬಲಿಮಂತಕೋಽಸೌ
ಬಿಭೇತಿ ಯಸ್ಮಾದರಣಂ ತತೋ ನಃ ॥ ೨೧ ॥

ಯಜ್ಞವು ಸಮಾಪ್ತವಾಗುತ್ತಿದ್ದಂತೆ ಅನ್ವಾಹಾರ್ಯಪಚನವೆಂಬ ಅಗ್ನಿ (ದಕ್ಷಿಣಾಗ್ನಿ)ಯಿಂದ ಅತಿಭಯಂಕರ ರೂಪದ ಒಬ್ಬ ದೈತ್ಯನು ಮೇಲೆದ್ದು ಬಂದನು. ಲೋಕಗಳನ್ನು ನಾಶಪಡಿಸಲಿಕ್ಕಾಗಿ ಪ್ರಕಟಗೊಂಡಿರುವ ಕಾಲ ಮೃತ್ಯುವಿನಂತೆಯೇ ಅವನು ಕಾಣುತ್ತಿದ್ದನು. ॥ ೧೨ ॥ ಪರೀಕ್ಷಿತನೇ! ಅವನು ಪ್ರತಿ ದಿನವೂ ತನ್ನ ದೇಹದ ಎಲ್ಲೆಡೆ ಬಾಣದಂತೆ ಬೆಳೆಯುತ್ತಾ, ಉರಿಯುತ್ತಿರುವ ಅಗ್ನಿಪರ್ವತದಂತೆ ಭೀಕರಾಕಾರ ವಿಕ್ರಮನಾಗಿ ಮೆರೆದನು. ಸಂಜೆಗಾಲದ ಮೋಡಗಳ ತಂಡದಂತೆ ಬೆಳಗತೊಡಗಿದನು. ॥ ೧೩ ॥ ಕೆಂಪಗೆ ಕಾದಿರುವ ತಾಮ್ರದಂತೆ ಹೋಲುವ ತಲೆಗೂದಲು, ಗಡ್ಡ-ಮೀಸೆಗಳಿಂದಲೂ, ನಡುಹಗಲಿನ ಸೂರ್ಯನಂತಹ ಕಣ್ಣುಗಳಿಂದ ಅವನು ಪ್ರಚಂಡನಾಗಿದ್ದನು. ॥ ೧೪ ॥ ಆ ಉಗ್ರಮೂರ್ತಿಯು ಥಳ-ಥಳಿಸುತ್ತಿದ್ದ ಮೂರು ಅಲಗುಗಳುಳ್ಳ ತ್ರಿಶೂಲವನ್ನು ಎತ್ತಿಕೊಂಡು, ಕುಣಿಯುತ್ತಾ, ಕುಪ್ಪಳಿಸುತ್ತಾ, ವಿಕಟಾಟ್ಟಹಾಸ ದೊಡನೆ ಅಬ್ಬರಿಸುತ್ತಾ ಭೂಮಿಯನ್ನು ಮೆಟ್ಟಿ ನಡುಗಿಸುತ್ತಿದ್ದನು. ಆ ತ್ರಿಶೂಲದ ಮೇಲೆ ಅವನು ಅಂತರಿಕ್ಷವನ್ನೇ ಎತ್ತಿ ಹಿಡಿದಿರುವನೋ ಎಂಬಂತೆ ಕಾಣುತ್ತಿತ್ತು. ॥ ೧೫ ॥ ಗುಹೆಯಂತೆ ಆಳವಾಗಿ ತೆರೆದ ಬಾಯಿಂದ ಇಡೀ ಅಂತರಿಕ್ಷವನ್ನೇ ಕುಡಿಯುವಂತೆಯೂ, ಅತಿವಿಶಾಲವಾಗಿದ್ದ ನಾಲಿಗೆಯಿಂದ ನಕ್ಷತ್ರ ಮಂಡಲವನ್ನೇ ನೆಕ್ಕುತ್ತಿರುವಂತೆಯೂ, ಮೂರುಲೋಕಗಳನ್ನು ನುಂಗಿಹಾಕುತ್ತಿರುವಂತೆಯೂ, ತನ್ನ ಭಯಂಕರ ಕೋರೆದಾಡೆಗಳನ್ನು ಪ್ರಕಟಿಸುತ್ತಾ ಅಡಿಗಡಿಗೆ ಆಕಳಿಸುತ್ತಿದ್ದನು. ಅವನ ಭೀಷಣರೂಪವನ್ನು ಕಂಡು ಎಲ್ಲ ಜನರು ಭಯದಿಂದ ಎಲ್ಲೆಡೆ ಓಡತೊಡಗಿದರು. ॥ ೧೬-೧೭ ॥

ಪರೀಕ್ಷಿದ್ರಾಜನೇ! ತ್ವಷ್ಟನ ತಮೋಗುಣೀ ಆ ಪುತ್ರನು ಎಲ್ಲ ಲೋಕಗಳನ್ನು ಆವರಿಸಿಕೊಂಡಿದ್ದನು. ಇದರಿಂದ ಆ ಪಾಪಿಯೂ, ಅತ್ಯಂತ ಕ್ರೂರನೂ ಆದ ಆ ಪುರುಷನ ಹೆಸರು 'ವೃತ್ರಾಸುರ' ಎಂದಾಯಿತು. ॥ ೧೮ ॥ ದೊಡ್ಡ-ದೊಡ್ಡ ದೇವತೆಗಳು ತಮ್ಮ-ತಮ್ಮ ಅನುಯಾಯಿಗಳೊಂದಿಗೆ ಒಟ್ಟಿಗೆ ಅವನ ಮೇಲೆ ಮುಗಿಬಿದ್ದರು ಮತ್ತು ತಮ್ಮ-ತಮ್ಮ ದಿವ್ಯ ಅಸ್ತ್ರಗಳಿಂದ ಹೊಡೆಯತೊಡಗಿದರು. ಆದರೆ ವೃತ್ರಾಸುರನು ಅವರ ಎಲ್ಲ ಶಸ್ತ್ರಾಸ್ತ್ರಗಳನ್ನು ನುಂಗಿಹಾಕಿದನು. ॥ ೧೯ ॥ ಆಗ ದೇವತೆಗಳಿಗೆ ಮಹದಾಶ್ಚರ್ಯವಾಯಿತು. ಅವರ ತೇಜಸ್ಸೆಲ್ಲವೂ ಉಡುಗಿ ಹೋಯಿತು. ಅವರೆಲ್ಲರೂ ದೀನ, ಹೀನರಾಗಿ ಕಳವಳಗೊಂಡು ಏಕಾಗ್ರಚಿತ್ತದಿಂದ ತಮ್ಮ ಹೃದಯದಲ್ಲಿ ವಿರಾಜಿಸುತ್ತಿರುವ ಆದಿಪುರುಷ ಶ್ರೀನಾರಾಯಣನಲ್ಲಿ ಶರಣಾಗಿ ಹೀಗೆ ಪ್ರಾರ್ಥಿಸಿದರು – ॥ ೨೦ ॥

ದೇವತೆಗಳು ಭಗವಂತನಲ್ಲಿ ಪ್ರಾರ್ಥಿಸುತ್ತಾರೆ – ವಾಯು, ಆಕಾಶ, ಅಗ್ನಿ, ಜಲ, ಪೃಥಿವಿಗಳೆಂಬ ಪಂಚಭೂತಗಳೂ ಅವುಗಳಿಂದ ನಿರ್ಮಿತವಾದ ಮೂರು ಲೋಕಗಳೂ, ಅವುಗಳಿಗೆ ಅಧಿಪತಿಗಳಾದ ಬ್ರಹ್ಮಾದಿಗಳೂ ಮತ್ತು ನಾವು ಯಾವನಿಗೆ ಹೆದರಿ ಕಾಣಿಕೆಗಳನ್ನು ಸಮರ್ಪಿಸುತ್ತಿದ್ದೇವೆಯೋ ಅಂತಹ ಕಾಲಪುರುಷನೂ ಕೂಡ ಭಗವಂತನಿಗೆ ಭಯಪಟ್ಟು ನಡೆಯುವನು. ಅದಕ್ಕಾಗಿ ಭಗವಂತನೇ ಈಗ ನಮ್ಮ ರಕ್ಷಕನಾಗಿದ್ದಾನೆ. ॥ ೨೧ ॥

ಅವಿಸ್ಮಿತಂ ತಂ ಪರಿಪೂರ್ಣಕಾಮಂ
ಸ್ವೇನೈವ ಲಾಭೇನ ಸಮಂ ಪ್ರಶಾಂತಮ್ ।
ವಿನೋಪಸರ್ಪತ್ಯಪರಂ ಹಿ ಬಾಲಿಶಃ
ಶ್ವಲಾಂಗುಲೇನಾತಿತಿತರ್ತಿ ಸಿಂಧುಮ್ ॥ ೨೨ ॥

ಯಸ್ಯೋರುಶೃಂಗೇ ಜಗತೀಂ ಸ್ವನಾವಂ
ಮನುರ್ಯಥಾಽಽಬಧ್ಯ ತತಾರ ದುರ್ಗಮ್ ।
ಸ ಏವ ನಸ್ತ್ವಾಷ್ಟ್ರಭಯಾದ್ ದುರಂತಾತ್
ತ್ರಾತಾಽಽಶ್ರಿತಾನ್ವಾರಿಚರೋಽಪಿ ನೂನಮ್ ॥ ೨೩ ॥

ಪುರಾ ಸ್ವಯಂಭೂರಪಿ ಸಂಯಮಾಂಭ-
ಸ್ಯುದೀರ್ಣವಾತೋರ್ಮಿರವೈಃ ಕರಾಲೇ ।
ಏಕೋಽರವಿಂದಾತ್ಪತಿತಸ್ತತಾರ
ತಸ್ಮಾದ್ಭಯಾದ್ಯೇನ ಸ ನೋಽಸ್ತು ಪಾರಃ ॥ ೨೪ ॥

ಯ ಏಕ ಈಶೋ ನಿಜಮಾಯಯಾ ನಃ
ಸಸರ್ಜ ಯೇನಾನು ಸೃಜಾಮ ವಿಶ್ವಮ್ ।
ವಯಂ ನ ಯಸ್ಯಾಪಿ ಪುರಃ ಸಮೀಹತಃ
ಪಶ್ಯಾಮ ಲಿಂಗಂ ಪೃಥಗೀಶಮಾನಿನಃ ॥ ೨೫ ॥

ಯೋ ನಃ ಸಪತ್ನೈರ್ಭೃಶಮರ್ದ್ಯಮಾನಾನ್-
ದೇವರ್ಷಿತಿರ್ಯಙ್ನೃಷು ನಿತ್ಯ ಏವ ।
ಕೃತಾವತಾರಸ್ತನುಭಿಃ ಸ್ವಮಾಯಯಾ
ಕೃತ್ವಾಽಽತ್ಮಸಾತ್ಪಾತಿ ಯುಗೇ ಯುಗೇ ಚ ॥ ೨೬ ॥

ತಮೇವ ದೇವಂ ವಯಮಾತ್ಮದೈವತಂ
ಪರಂ ಪ್ರಧಾನಂ ಪುರುಷಂ ವಿಶ್ವಮನ್ಯಮ್ ।
ವ್ರಜಾಮ ಸರ್ವೇ ಶರಣಂ ಶರಣ್ಯಂ
ಸ್ವಾನಾಂ ಸ ನೋ ಧಾಸ್ಯತಿ ಶಂ ಮಹಾತ್ಮಾ ॥ ೨೭ ॥

ಶ್ರೀಶುಕ ಉವಾಚ

ಇತಿ ತೇಷಾಂ ಮಹಾರಾಜ ಸುರಾಣಾಮುಪತಿಷ್ಠತಾಮ್ ।
ಪ್ರತೀಚ್ಯಾಂ ದಿಶ್ಯಭೂದಾವಿಃ ಶಂಖಚಕ್ರಗದಾಧರಃ ॥ ೨೮ ॥

ಪ್ರಭೋ! ನಿನಗಾಗಿ ಯಾವುದೇ ಹೊಸ ಮಾತಲ್ಲ, ಆದರಿಂದ ಏನನ್ನು ನೋಡಿದರೂ ನೀನು ವಿಸ್ಮಿತನಾಗುವುದಿಲ್ಲ. ನೀನು ನಿನ್ನ ಸ್ವರೂಪದ ಸಾಕ್ಷಾತ್ಕಾರದಿಂದಲೇ ಪೂರ್ಣಕಾಮನೂ, ಸಮನೂ, ಶಾಂತನೂ ಆಗಿರುವೆ. ಅಂತಹ ನಿನ್ನನ್ನು ಬಿಟ್ಟು ಬೇರೆಯವರಿಗೆ ಶರಣಾಗುವವನು ಮೂರ್ಖನೇ ಸರಿ. ಅವನು ನಾಯಿಯ ಬಾಲವನ್ನು ಹಿಡಿದುಕೊಂಡು ಸಮುದ್ರವನ್ನು ದಾಟಲು ಬಯಸುವಂತಹ ಗಾಂಪನೇ ಆಗಿದ್ದಾನೆ. ॥ ೨೨ ॥ ನೀರಿನಲ್ಲಿ ಸಂಚರಿಸುತ್ತಿರುವ ಮೀನಿನ ಆಕಾರದಲ್ಲಿದ್ದರೂ ನೀನು ಆಶ್ರಿತರಕ್ಷಕನು. ವೈವಸ್ವತ ಮನುವು ಆನ ವಿಶಾಲವಾದ ಶೃಂಗಕ್ಕೆ ಭೂಮಿಯೆಂಬ ನಾವೆಯನ್ನು ಕಟ್ಟಿ ಅನಾಯಾಸವಾಗಿಯೇ ಪ್ರಳಯಕಾಲದ ಪರಮ ಸಂಕಟವನ್ನು ದಾಟಿಬಿಟ್ಟನು. ಆ ಮಹಾಪುರುಷನೇ ಶರಣಾಗತರಾಗಿರುವ ನಮ್ಮನ್ನು ವೃತ್ರಾಸುರನ ದೆಸೆಯಿಂದ ಉಂಟಾಗಿರುವ ಭಯದಿಂದ ಖಂಡಿತವಾಗಿ ದಾಟಿಸುವನು. ॥ ೨೩ ॥ ಹಿಂದೆ ಬ್ರಹ್ಮದೇವರು ತಾವು ಕುಳಿತಿದ್ದ ಪದ್ಮಪೀಠದಿಂದ – ಭೀಕರವಾದ ಬಿರುಗಾಳಿಯ ಹೊಡೆತದಿಂದ ಮೇಲೆದ್ದ ಮಹಾತರಂಗಗಳಿಂದ ಘೋರ್ಗರೆಯುತ್ತಿದ್ದ ಪ್ರಳಯಸಾಗರದ ಜಲದಲ್ಲಿ ಬಿದ್ದುಬಿಟ್ಟರು. ಆಗ ಏಕಾಕಿಯಾಗಿ ಅಸಹಾಯಕರಾಗಿದ್ದ ಅವರನ್ನು ಆ ಮಹಾಭಯದಿಂದ ಯಾರು ಪಾರುಮಾಡಿದನೋ, ಅವನೇ ಈಗ ನಮ್ಮನ್ನು ಪಾರು ಮಾಡಿಸಲಿ. ॥ ೨೪ ॥ ಆ ಅದ್ವಿತೀಯ ಪರಮ ಪ್ರಭುವೇ ತನ್ನ ಮಾಯಾಶಕ್ತಿಯಿಂದ ನಮ್ಮನ್ನು ಸೃಷ್ಟಿಮಾಡಿದ್ದಾನೆ. ಅವನ ಅನುಗ್ರಹದಿಂದಲೇ ನಾವು ಸೃಷ್ಟಿಕಾರ್ಯವನ್ನು ನಡೆಸುತ್ತಿದ್ದೇವೆ. ನಾವು ಅವನ ಮುಂದೆಯೇ ಇದ್ದು ಅವನ ದಿವ್ಯ ವ್ಯಾಪಾರಗಳನ್ನು ನೋಡುತ್ತಿದ್ದೇವೆ. ಆದರೆ 'ನಾವೇ ಸ್ವತಂತ್ರರಾದ ಈಶ್ವರರು' ಎಂಬ ಅಹಂಕಾರದಿಂದ ನಾವು ಅವನ ಸ್ವರೂಪವನ್ನು ಕಾಣಲಾರದೇ ಇದ್ದೇವೆ. ॥ ೨೫ ॥ ದೇವತೆಗಳು ತಮ್ಮ ಶತ್ರುಗಳಿಂದ ಬಹಳ ಪೀಡಿತರಾಗಿದ್ದಾರೆ ಎಂದು ಆ ಪ್ರಭುವು ನೋಡಿದಾಗ ಅವನು ನಿಜವಾಗಿ ನಿರ್ವಿಕಾರನಾಗಿದ್ದರೂ ತನ್ನ ಮಾಯೆಯನ್ನು ಆಶ್ರಯಿಸಿ ದೇವತೆ, ಋಷಿ, ಪಶು-ಪಕ್ಷಿ ಮತ್ತು ಮನುಷ್ಯಾದಿ ರೂಪದಲ್ಲಿ ಅವತರಿಸುವನು ಹಾಗೂ ಯುಗ-ಯುಗಗಳಲ್ಲಿ ನಮ್ಮನ್ನು ತಮ್ಮವರೆಂದು ತಿಳಿದು ರಕ್ಷಿಸುತ್ತಿರುವನು. ॥ ೨೬ ॥ ಅವನೇ ಎಲ್ಲರ ಆತ್ಮನೂ, ಪರಮಾರಾಧ್ಯದೇವನೂ ಆಗಿರುವನು. ಅವನೇ ಪ್ರಕೃತಿ ಮತ್ತು ಪುರುಷ ರೂಪದಿಂದ ವಿಶ್ವದ ಕಾರಣನಾಗಿದ್ದಾನೆ. ಅವನು ವಿಶ್ವದಿಂದ ಬೇರೆಯಾಗಿಯೂ ಇದ್ದಾನೆ ಹಾಗೂ ವಿಶ್ವರೂಪನೂ ಆಗಿದ್ದಾನೆ. ನಾವೆಲ್ಲರೂ ಶರಣಾಗತವತ್ಸಲ ಭಗವಾನ್ ಶ್ರೀಹರಿಯಲ್ಲಿ ಶರಣಾಗತರಾಗಿದ್ದೇವೆ. ಉದಾರ ಶಿರೋಮಣಿಯಾದ ಪ್ರಭುವು ಖಂಡಿತವಾಗಿ ತನ್ನವರೇ ಆಗಿರುವ ನಮಗೆ ಮಂಗಳವನ್ನುಂಟು ಮಾಡುವನು. ॥ ೨೭ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿದ್ರಾಜನೇ! ದೇವತೆಗಳು ಹೀಗೆ ಭಗವಂತನನ್ನು ಪ್ರಾರ್ಥಿಸಿದಾಗ ಸ್ವಯಂ ಶಂಖ, ಚಕ್ರ, ಗದಾ, ಪದ್ಮಧಾರಿಯಾಗಿ ಭಗವಂತನು ಅವರ ಮುಂದೆ ಪ್ರಕಟನಾದನು. ॥ ೨೮ ॥

ಆತ್ಮತುಲ್ಯೈಃ ಷೋಡಶಭಿರ್ವಿನಾ ಶ್ರೀವತ್ಸಕೌಸ್ತುಭೌ ।
ಪರ್ಯುಪಾಸಿತಮುನ್ನಿದ್ರಶರದಂಬುರುಹೇಕ್ಷಣಮ್ ॥ ೨೯ ॥

ದೃಷ್ಟ್ವಾ ತಮವನೌ ಸರ್ವ ಈಕ್ಷಣಾಹ್ಲಾದವಿಕ್ಲವಾಃ ।
ದಂಡವತ್ಪತಿತಾ ರಾಜನ್ ಶನೈರುತ್ಥಾಯ ತುಷ್ಟುವುಃ ॥ ೩೦ ॥

ದೇವಾ ಊಚುಃ

ನಮಸ್ತೇ ಯಜ್ಞವೀರ್ಯಾಯ ವಯಸೇ ಉತ ತೇ ನಮಃ ।
ನಮಸ್ತೇ ಹ್ಯಸ್ತಚಕ್ರಾಯ ನಮಃ ಸುಪುರುಹೂತಯೇ ॥ ೩೧ ॥

ಯತ್ತೇ ಗತೀನಾಂ ತಿಸೃಣಾಮೀಶಿತುಃ ಪರಮಂ ಪದಮ್ ।
ನಾರ್ವಾಚೀನೋ ವಿಸರ್ಗಸ್ಯ ಧಾತರ್ವೇದಿತುಮರ್ಹತಿ ॥ ೩೨ ॥

ಓಂ ನಮಸ್ತೇಽಸ್ತು ಭಗವನ್ನಾರಾಯಣ ವಾಸುದೇವಾದಿಪುರುಷ ಮಹಾಪುರುಷ ಮಹಾನುಭಾವ ಪರಮಮಂಗಲ ಪರಮಕಲ್ಯಾಣ ಪರಮಕಾರುಣಿಕ ಕೇವಲ ಜಗದಾಧಾರ ಲೋಕೈಕನಾಥ ಸರ್ವೇಶ್ವರ ಲಕ್ಷ್ಮೀನಾಥ ಪರಮಹಂಸಪರಿವ್ರಾಜಕೈಃ ಪರಮೇಣಾತ್ಮ ಯೋಗ ಸಮಾಧಿನಾ ಪರಿಭಾವಿತಪರಿಸ್ಫುಟಪಾರಮಹಂಸ್ಯಧರ್ಮೇಣೋದ್ಘಾಟಿತತಮಃಕಪಾಟದ್ವಾರೇ ಚಿತ್ತೇಽಪಾವೃತ ಆತ್ಮಲೋಕೇ ಸ್ವಯಮುಪಲಬ್ಧ ನಿಜಸುಖಾನುಭವೋ ಭವಾನ್ ॥ ೩೩ ॥ ದುರವಬೋಧ ಇವ ತವಾಯಂ ವಿಹಾರಯೋಗೋ ಯದಶರಣೋಽಶರೀರ ಇದಮನವೇಕ್ಷಿತಾಸ್ಮತ್ಸಮವಾಯ ಆತ್ಮನೈವಾವಿಕ್ರಿಯಮಾಣೇನ ಸಗುಣಮಗುಣಃ ಸೃಜಸಿ ಪಾಸಿ ಹರಸಿ ॥ ೩೪ ॥ ಅಥ ತತ್ರ ಭವಾನ್ ಕಿಂ ದೇವದತ್ತವದಿಹ ಗುಣವಿಸರ್ಗಪತಿತಃ ಪಾರತಂತ್ರ್ಯೇಣ ಸ್ವಕೃತಕುಶಲಾಕುಶಲಂ ಫಲಮುಪಾದದಾತ್ಯಾಹೋಸ್ವಿದಾತ್ಮಾರಾಮ ಉಪಶಮ-

ಭಗವಂತನ ನೇತ್ರಗಳು ಶರತ್ಕಾಲದ ಕಮಲದಂತೆ ಅರಳಿದ್ದವು. ಅವನೊಡನೆ ಹದಿನಾರು ಪಾರ್ಷದರು ಅವನ ಸೇವೆಯಲ್ಲಿ ತೊಡಗಿದ್ದರು. ಅವರು ಎಲ್ಲ ವಿಧದಿಂದ ಭಗವಂತನಂತೆಯೇ ಕಾಣುತ್ತಿದ್ದರು. ಕೇವಲ ಅವರ ವಕ್ಷಸ್ಥಳದಲ್ಲಿ ಶ್ರೀವತ್ಸಲಾಂಛನ ಮತ್ತು ಕೊರಳಲ್ಲಿ ಕೌಸ್ತುಭ ಮಣಿಯು ಇರಲಿಲ್ಲ. ॥ ೨೯ ॥ ಮಹಾರಾಜನೇ! ಭಗವಂತನ ದರ್ಶನ ಪಡೆದು ಎಲ್ಲ ದೇವತೆಗಳು ಆನಂದಮಗ್ನರಾದರು. ಅವರು ಭೂಮಿಯಲ್ಲಿ ಹೊರಳಾಡುತ್ತಾ ಸಾಷ್ಟಾಂಗ ನಮಸ್ಕಾರ ಮಾಡಿ, ಮತ್ತೆ ನಿಧಾನವಾಗಿ ಮೇಲೆದ್ದು ಆ ಭಗವಂತನನ್ನು ಸ್ತುತಿಸ ತೊಡಗಿದರು. ॥ ೩೦ ॥

ದೇವತೆಗಳೆಂದರು – ಓ ಭಗವಂತಾ! ಯಜ್ಞಗಳ ಫಲವನ್ನು ಕೊಡುವ ಯಜ್ಞಶಕ್ತಿಯುಳ್ಳವನೂ, ಆದರ ಫಲದ ಎಲ್ಲೆಯನ್ನು ನಿರ್ಧರಿಸುವ ಕಾಲಸ್ವರೂಪನೂ ಆಗಿರುವ ನಿನಗೆ ನಮೋ ನಮಃ. ಅಸುರರ ಮೇಲೆ ಸುದರ್ಶನ ಚಕ್ರವನ್ನು ಪ್ರಯೋಗಿಸುವವನೂ, ಅನಂತ ನಾಮಗಳುಳ್ಳವನೂ ಆದ ನಿನಗೆ ನಮೋ ನಮಃ. ॥ ೩೧ ॥ ಓ ವಿಧಾತನೇ! ಸತ್ತ್ವ, ರಜ, ತಮ – ಎಂಬ ಈ ತ್ರಿಗುಣಗಳನ್ನು ಸಾರವಾಗಿ ಉಂಟಾಗುವ ಉತ್ತಮ, ಮಧ್ಯಮ, ಅಧಮವೆಂಬ ಗತಿಗಳ ನಿಯಾಮಕನು ನೀನೇ ಆಗಿರುವೆ. ನಿನ್ನ ಪರಮಪದದ ವಾಸ್ತವಿಕ ಸ್ವರೂಪವನ್ನು ಈ ಕಾರ್ಯ-ಕಾರಣ ರೂಪವಾದ ಜಗತ್ತಿನ ಯಾವುದೇ ಪ್ರಾಣಿಗಳು ತಿಳಿಯಲಾರವು. ॥ ೩೨ ॥

ಓಂ ನಿನಗೆ ನಮಸ್ಕಾರವಿರಲಿ. ಶ್ರೀಭಗವಂತನಾದ ನಾರಾಯಣನೇ! ವಾಸುದೇವನೇ! ಆದಿಪುರುಷನೇ! ಮಹಾಪುರುಷನೇ! ಮಹಾನುಭಾವನೇ! ಪರಮಮಂಗಳನೇ! ಪರಮ ಕಲ್ಯಾಣನೇ! ಪರಮಕಾರುಣಿಕನೇ! ಕೇವಲನೇ! ಜಗದಾಧಾರನೇ! ಲೋಕೈಕನಾಥನೇ! ಸರ್ವೇಶ್ವರನೇ! ಲಕ್ಷ್ಮೀಪತಿಯೇ! ಪರಮಹಂಸ ಪರಿವ್ರಾಜಕರು ಪರಮಹಂಸ ಧರ್ಮವನ್ನು ಚೆನ್ನಾಗಿ ಸ್ಪಷ್ಟವಾಗಿ ಭಾವಿಸಿಕೊಳ್ಳುವಂತಹ ಪರಮ ಶ್ರೇಷ್ಠವಾದ ಆತ್ಮಯೋಗ ಸಮಾಧಿಯಿಂದ ಹೃದಯದ ಅಜ್ಞಾನವೆಂಬ ಬಾಗಿಲನ್ನು ತೆರೆದುಕೊಂಡಾಗ ಅವರ ಆತ್ಮಲೋಕದಲ್ಲಿ, ಆತ್ಮಾನಂದರೂಪದಲ್ಲಿ ಯಾವ ಆವರಣವೂ ಇಲ್ಲದೆ ಪ್ರಕಟಗೊಳ್ಳುವವನೂ, ಆತ್ಮಸುಖಾನುಭವವನ್ನು ಸಹಜವಾಗಿಯೇ ಪಡೆದಿರುವವನೂ ಆದ ನಿನಗೆ ನಮೋ ನಮಃ. ॥ ೩೩ ॥ ಓ ಭಗವಂತಾ! ನಿನ್ನ ಲೀಲೆಯ ರಹಸ್ಯವನ್ನು ತಿಳಿಯುವುದು ಅತಿಕಷ್ಟ. ಏಕೆಂದರೆ, ನೀನು ಯಾವ ಆಶ್ರಯವೂ ಇಲ್ಲದೆ, ಪ್ರಾಕೃತ ಶರೀರವೂ ಇಲ್ಲದೆ, ಬೇರೆ ಯಾವ ಸಹಯೋಗವನ್ನೂ ಅಪೇಕ್ಷಿಸದೆ, ನಿರ್ಗುಣನೂ ನಿರ್ವಿಕಾರನೂ ಆಗಿದ್ದರೂ ತಾನಾಗಿಯೇ ಈ ಸಗುಣವಾದ ಜಗತ್ತಿನ ಸೃಷ್ಟಿ, ಸ್ಥಿತಿ, ಸಂಹಾರಗಳನ್ನು ಮಾಡುತ್ತಿರುವೆ. ॥ ೩೪ ॥ ಓ ಭಗವಂತನೇ! ಸೃಷ್ಟಿಯೆಂಬ ಕಾರ್ಯದಲ್ಲಿ ನೀನು ದೇವದತ್ತನೇ ಮುಂತಾದ ಪ್ರಾಕೃತ ಜೀವರಂತೆ ಗುಣಗಳ ಕಾರ್ಯರೂಪವಾದ ಈ ಜಗತ್ತಿನಲ್ಲಿ ಪ್ರಕಟಗೊಂಡು ಕರ್ಮಾಧೀನನಾಗಿ ಪಾಪ-ಪುಣ್ಯಗಳ ಫಲವನ್ನು ಭೋಗಿಸುವವನೋ ಅಥವಾ ಆತ್ಮಾರಾಮನಾಗಿ, ಶಾಂತಸ್ವಭಾವವುಳ್ಳವನಾಗಿ, ವಿಷಯಗಳಲ್ಲಿ ಉದಾಸೀನನಾಗಿ ಸಾಕ್ಷಿಯಾಗಿ

ಶೀಲಾಃ ಸಮಂಜಸ ದರ್ಶನ ಉದಾಸ್ತ ಇತಿ ಹ ವಾವ ನ ವಿದಾಮಃ ॥ ೩೬ ॥ ನ ಹಿ ವಿರೋಧ ಉಭಯಂ ಭಗವತ್ಯಪರಿಗಣಿತಗುಣಗಣ ಈಶ್ವರೇಽನವಗಾಹ್ಯ-ಮಾಹಾತ್ಮ್ಯೇಽರ್ವಾಚೀನವಿಕಲ್ಪವಿತರ್ಕವಿಚಾರಪ್ರಮಾಣಾ-ಭಾಸಕುತರ್ಕಶಾಸ್ತ್ರಕಲಿಲಾಂತಃಕರಣಾಶ್ರಯದುರವಗ್ರಹ-ವಾದಿನಾಂ ವಿವಾದಾನವಸರ ಉಪರತಸಮಸ್ತ ಮಾಯಾಮಯೇ ಕೇವಲ ಏವಾತ್ಮಮಾಯಾಮಂತ-ರ್ಧಾಯ ಕೋನ್ವರ್ಥೋ ದುರ್ಘಟ ಇವ ಭವತಿ ಸ್ವರೂಪ-ದ್ವಯಾಭಾವಾತ್ ॥ ೩೭ ॥ ಸಮವಿಷಮಮತೀನಾಂ ಮತಮನುಸರಸಿ ಯಥಾ ರಜ್ಜುಖಂಡಃ ಸರ್ಪಾದಿಧಿಯಾಮ್ ॥ ೩೮ ॥ ಸ ಏವ ಹಿ ಪುನಃ ಸರ್ವವಸ್ತುನಿ ವಸ್ತುಸ್ವರೂಪಃ ಸರ್ವೇಶ್ವರಃ ಸಕಲಜಗತ್ಕಾರಣ-ಕಾರಣಭೂತಃ ಸರ್ವಪ್ರತ್ಯಗಾತ್ಮತ್ವಾತ್ಸರ್ವ ಗುಣಾಭಾಸೋ-ಪಲಕ್ಷಿತ ಏಕ ಏವ ಪರ್ಯವ ಶೇಷಿತಃ ॥ ೩೯ ॥ ಅಥ ಹ ವಾವ ತವ ಮಹಿಮಾಮೃತರಸ-ಸಮುದ್ರವಿಪ್ರುಷಾ ಸಕೃದವಲೀಢಯಾ ಸ್ವಮನಸಿ ನಿಷ್ಯಂದ-ಮಾನಾನವರತಸುಖೇನ ವಿಸ್ಮಾರಿತದೃಷ್ಟಶ್ರುತವಿಷಯ-ಸುಖಲೇಶಾಭಾಸಾಃ ಪರಮಭಾಗವತಾ ಏಕಾಂತಿನೋ ಭಗವತಿ ಸರ್ವಭೂತಪ್ರಿಯಸುಹೃದಿ ಸರ್ವಾತ್ಮನಿ ನಿತರಾಂ ನಿರಂತರಂ ನಿರ್ವೃತಮನಸಃ ಕಥಮು ಹ ವಾ ಏತೇ ಮಧುಮಥನ ಪುನಃ ಸ್ವಾರ್ಥಕುಶಲಾ ಹ್ಯಾತ್ಮಪ್ರಿಯಸುಹೃದಃ

ಮಾತ್ರ ಇರುವವನೋ ಎಂಬುದೂ ಕೂಡ ನಮಗೆ ತಿಳಿಯದು. ॥ ೩೬ ॥ ಇವೆರಡೂ ನಿನ್ನಲ್ಲಿದ್ದರೂ ಅದರಲ್ಲಿ ವಿರೋಧವೇನಿಲ್ಲ. ಏಕೆಂದರೆ, ನೀನು ಸ್ವಯಂ ಭಗವಂತನೇ ಆಗಿರುವೆ. ನಿನ್ನ ಗುಣಗಳು ಅಗಣಿತವಾಗಿವೆ ಮತ್ತು ಮಹಿಮೆಯು ಅಗಾಧವಾಗಿದೆ. ನೀನು ಸರ್ವಶಕ್ತಿಸಂಪನ್ನನು. ಆಧುನಿಕರು ಅನೇಕ ಪ್ರಕಾರವಾದ ವಿಕಲ್ಪ, ವಿತರ್ಕ, ವಿಚಾರ, ಸುಳ್ಳುಪ್ರಮಾಣಗಳು ಹಾಗೂ ಕುತರ್ಕ ಪೂರ್ಣವಾದ ಶಾಸ್ತ್ರಗಳನ್ನು ಅಧ್ಯಯನಮಾಡಿ ತಮ್ಮ ಹೃದಯವನ್ನು ಮಲಿನವಾಗಿಸಿಕೊಳ್ಳುವರು. ಅವರು ದುರಾಗ್ರಹಿಗಳಾಗಿರುವುದಕ್ಕೂ ಇದೇ ಕಾರಣವು. ನಿನ್ನಲ್ಲಿ ಅವರ ಈ ವಾದ ವಿವಾದಗಳಿಗೆ ಸಂದರ್ಭವೇ ಇಲ್ಲ. ನಿನ್ನ ವಾಸ್ತವಿಕ ಸ್ವರೂಪವಾದರೋ ಸಮಸ್ತ ಮಾಯಾ ಪದಾರ್ಥಗಳನ್ನೂ ಮೀರಿ ಕೇವಲನಾಗಿರುವುದು. ಅದರಲ್ಲೇ ನೀನು ನಿನ್ನ ಮಾಯಾಶಕ್ತಿ ಯನ್ನು ಅಡಗಿಸಿಕೊಂಡೆಯಾದರೆ ನಿನ್ನಲ್ಲಿ ಯಾವುದು ತಾನೇ ಇರಲಾರದು ? ಆದ್ದರಿಂದ ನೀನು ಸಾಮಾನ್ಯಮನುಷ್ಯರಂತೆ ಕರ್ತೃತ್ವ-ಭೋಕ್ತೃತ್ವಗಳು ಉಳ್ಳವನೂ ಆಗಿರಬಹುದು ಮತ್ತು ಮಹಾಪುರುಷರಂತೆ ಉದಾಸೀನನೂ ಆಗಿರಬಹುದು. ನೀನಾದರೋ ಇವೆರಡರಿಂದಲೂ ವಿಲಕ್ಷಣ, ಅನಿರ್ವಚನೀಯನಾಗಿರುವೆ. ॥ ೩೭ ॥ ಒಂದು ಹಗ್ಗದ ತುಂಡು ಭ್ರಾಂತಿಯುಳ್ಳವರಿಗೆ ಹಾವಾಗಿ ಕಂಡುಬಂದೀತು. ಆದರೆ ಭ್ರಾಂತಿಯಲ್ಲಿ ತಿಳುವಳಿಕೆ ಯುಳ್ಳವರಿಗೆ ಹಗ್ಗವಾಗಿಯೇ ಕಾಣುತ್ತದೆ. ಹಾಗೆಯೇ ನೀನೂ ಕೂಡ ಭ್ರಾಂತಬುದ್ಧಿಯುಳ್ಳವರಿಗೆ ಕರ್ತಾ, ಭೋಕ್ತಾ ಮುಂತಾದ ಅನೇಕ ರೂಪಗಳಲ್ಲಿ ಕಾಣುತ್ತೀಯೆ ಹಾಗೂ ಜ್ಞಾನಿಗಳಿಗೆ ಶುದ್ಧ ಸಚ್ಚಿದಾನಂದ ರೂಪದಲ್ಲಿ ಕಾಣುವೆ. ನೀನು ಎಲ್ಲರ ಬುದ್ಧಿಯನ್ನು ಅನುಸರಿಸುತ್ತಿರುವೆ. ॥ ೩೮ ॥ ವಿಚಾರಪೂರ್ವಕವಾಗಿ ನೋಡಿದರೆ ನೀನೇ ಸಮಸ್ತ ವಸ್ತುಗಳಲ್ಲಿ ವಸ್ತುತ್ವದ ರೂಪದಲ್ಲಿ ವಿರಾಜಮಾನನಾಗಿರುವೆ. ಎಲ್ಲರ ಸ್ವಾಮಿಯಾಗಿದ್ದು ಸಮಸ್ತ ಜಗತ್ತಿಗೆ ಕಾರಣರಾದ ಬ್ರಹ್ಮಾ ಪ್ರಕೃತಿ ಮುಂತಾದವರಿಗೂ ಕಾರಣನಾಗಿರುವೆ. ನೀನೇ ಎಲ್ಲರ ಅಂತರ್ಯಾಮಿ, ಅಂತರಾತ್ಮನಾಗಿರುವೆ. ಅದಕ್ಕಾಗಿ ಜಗತ್ತಿನಲ್ಲಿ ಕಂಡುಬರುವ ಗುಣ-ದೋಷಗಳೆಲ್ಲದರ ಪ್ರತೀತಿಗಳು ತನ್ನ ಅಧಿಷ್ಠಾನಸ್ವರೂಪನಾದ ನಿನ್ನನ್ನೇ ಸಂಕೇತಮಾಡುತ್ತಿವೆ. ಶ್ರುತಿಗಳು ಸಮಸ್ತ ಪದಾರ್ಥಗಳನ್ನು ನಿಷೇಧಗೈದು ಕೊನೆಗೆ ನಿಷೇಧದ ಅವಧಿಯ ರೂಪದಲ್ಲಿ ಕೇವಲ ನಿನ್ನನ್ನೇ ಶೇಷವಾಗಿ ಇರಿಸಿವೆ. ॥ ೩೯ ॥ ಓ ಮಧುಸೂದನಾ ! ನಿನ್ನ ಮಹಿಮೆ ಯೆಂಬುದು ಅಮೃತರಸದ ಅನಂತಸಾಗರವಾಗಿದೆ. ಅದರ ಒಂದು ತೊಟ್ಟನ್ನಾದರೂ ಒಮ್ಮೆ ಸವಿದರೆ ಹೃದಯದಲ್ಲಿ ನಿತ್ಯನಿರಂತರ ಪರಮಾನಂದದ ಪ್ರವಾಹವೇ ಹರಿಯತೊಡಗುತ್ತದೆ. ಅದುದರಿಂದ ನಿನ್ನ ಆ ಅನನ್ಯ ಪ್ರೇಮಿಗಳಾದ ಭಕ್ತಶ್ರೇಷ್ಠರು ಜಗತ್ತಿನ ವಿಷಯೋಪಭೋಗಗಳ ಸುಖವು ಲೇಶಮಾತ್ರ ಅನುಭವಕ್ಕೆ ಬಂದಿದ್ದರೂ ಅಥವಾ ಆ ಸುಖವು ತೋರಿಕೆಯ ಸುಖವೆಂದು ಅನುಭವಕ್ಕೆ ಬಂದಿದ್ದರೂ – ಅವುಗಳನ್ನು ಮತ್ತು ಪರಲೋಕವೇ ಮುಂತಾದವುಗಳಲ್ಲಿ ಇರುವುದಾಗಿ ಕೇಳಬಂದಿರುವ ಸುಖವೆಲ್ಲವನ್ನೂ ಮರೆತು ಬಿಡುವರು. ಅವರು ಸಮಸ್ತ ಪ್ರಾಣಿಗಳಿಗೂ ಪರಮ ಪ್ರಿಯತಮನೂ, ಹಿತೈಷಿಯೂ, ಸ್ನೇಹಿತನೂ, ಸರ್ವ

ಸಾಧವಸ್ತ್ವಚ್ಚರಣಾಂಬುಜಾನುಸೇವಾಂ ವಿಸೃಜಂತಿ ನ ಯತ್ರ ಪುನರಯಂ ಸಂಸಾರ ಪರ್ಯಾವರ್ತಃ ॥ ೩೯ ॥ ತ್ರಿಭುವನಾತ್ಮಭವನ ತ್ರಿವಿಕ್ರಮ ತ್ರಿನಯನ ತ್ರಿಲೋಕಮನೋಹರಾನುಭಾವ ತವೈವ ವಿಭೂತಯೋ ದಿತಿಜದನುಜಾದಯಶ್ಚಾಪಿ ತೇಷಾಮನುಪಕ್ರಮಸಮಯೋಽಯಮಿತಿ ಸ್ವಾತ್ಮಮಾಯಯಾ ಸುರನರ ಮೃಗಮಿಶ್ರಿತಜಲಚರಾಕೃತಿಭಿರ್ಯಥಾಪರಾಧಂ ದಂಡಂ ದಂಡಧರ ದಧರ್ಥ ಏವಮೇನಮಪಿ ಭಗವನ್ ಜಹಿ ತ್ವಾಷ್ಟ್ರಮುತ ಯದಿ ಮನ್ಯಸೇ ॥ ೪೦ ॥ ಅಸ್ಮಾಕಂ ತಾವಕಾನಾಂ ತವ ನತಾನಾಂ ತತ ತತಾಮಹ ತವ ಚರಣನಲಿನಯುಗಲಧ್ಯಾನಾನುಬದ್ಧಹೃದಯನಿಗಡಾನಾಂ ಸ್ವಲಿಂಗವಿವರಣೇನಾತ್ಮಸಾತ್ಕೃತಾನಾಮನುಕಂಪಾನುರಂಜಿತವಿಶದರುಚಿರಶಿಶಿರಸ್ಮಿತಾವಲೋಕೇನ ವಿಗಲಿತ ಮಧುರ ಮುಖರಸಾಮೃತ ಕಲಯಾ ಚಾಂತಸ್ತಾಪ ಮನಘಾರ್ಹಸಿ ಶಮಯಿತುಮ್ ॥ ೪೧ ॥ ಅಥ ಭಗವಂಸ್ತವಾಸ್ಮಾಭಿರಖಿಲ ಜಗದುತ್ಪತ್ತಿಸ್ಥಿತಿಲಯ ನಿಮಿತ್ತಾಯಮಾನ ದಿವ್ಯಮಾಯಾವಿನೋದಸ್ಯ ಸಕಲ ಜೀವನಿಕಾಯಾನಾಮಂತರ್ಹೃದಯೇಷು ಬಹಿರಪಿ ಚ ಬ್ರಹ್ಮಪ್ರತ್ಯಗಾತ್ಮಸ್ವರೂಪೇಣ ಪ್ರಧಾನರೂಪೇಣ ಚ ಯಥಾದೇಶಕಾಲದೇಹಾವಸ್ಥಾನವಿಶೇಷಂ ತದುಪಾದಾನೋಪಲಂಭಕತಯಾ-

ತ್ಮನೂ, ಐಶ್ವರ್ಯಗಳ ನಿಧಿಯೂ ಆದ ಪರಮಾತ್ಮನಲ್ಲಿ ತಮ್ಮ ಮನಸ್ಸನ್ನು ನಿರಂತರವಾಗಿ ನೆಲೆಗೊಳಿಸಿ ಆತನ ಚಿಂತನೆಯ ಸುಖವನ್ನೇ ಸೂರೆಗೊಳ್ಳುವರು. ಅಂತಹ ಮನುಷ್ಯರೇ ಸ್ವಾರ್ಥಸಾಧನೆ ಮತ್ತು ಪರಮಾರ್ಥ ಸಾಧನೆ ಎರಡರಲ್ಲೂ ನಿಪುಣರೆಂದು ತಿಳಿಯಬೇಕು. ಓ ಮಧುಸೂದನಾ! ಜನನ-ಮರಣರೂಪವಾದ ಸಂಸಾರ ಚಕ್ರದಿಂದ ಬಿಡುಗಡೆಹೊಂದುವಂತಹ ನಿನ್ನ ಅಡಿದಾವರೆಗಳ ಸೇವೆಯನ್ನು ನಿನಗೆ ಅತ್ಯಂತ ಪ್ರಿಯರೂ, ಮಿತ್ರರೂ, ಆಗಿರುವ ಭಕ್ತಜನರು ಹೇಗೆ ತಾನೇ ಬಿಡಬಲ್ಲರು? ॥ ೩೯ ॥ ಪ್ರಭುವೇ! ನೀನು ಮೂರು ಲೋಕಗಳಿಗೂ ಆತ್ಮನೂ, ಆಶ್ರಯನೂ ಆಗಿರುವೆ. ಮೂರು ಲೋಕಗಳನ್ನು ನಿನ್ನ ಮೂರು ಹೆಜ್ಜೆಗಳಿಂದ ಅಳೆದವನೂ ನೀನೇ. ಮೂರು ಲೋಕಗಳ ಸಂಚಾಲಕನೂ ನೀನೇ ಆಗಿರುವೆ. ನಿನ್ನ ಮಹಿಮೆಯು ಮೂರುಲೋಕಗಳ ಮನಸ್ಸನ್ನೂ ಸೂರೆಗೊಳ್ಳುವುದಾಗಿದೆ. ದೈತ್ಯರು, ದಾನವರು ಮುಂತಾದ ಅಸುರರೂ ಕೂಡ ನಿನ್ನದೇ ವಿಭೂತಿಗಳಾಗಿವೆ. ಇದರಲ್ಲಿ ಸಂದೇಹವೇ ಇಲ್ಲ. ಆದರೂ ಇದು ಅವರ ಉನ್ನತಿಯ ಕಾಲವಲ್ಲ ಎಂದು ಯೋಚಿಸಿ ನೀನು ನಿನ್ನ ಯೋಗಮಾಯೆಯಿಂದ ಸುರ, ನರ, ಪಶು, ನರ-ಮೃಗ ಮಿಶ್ರಣವಾದ ನಾರಸಿಂಹ, ಜಲಚರ ಮತ್ಸ್ಯಾದಿ ರೂಪಗಳಲ್ಲಿ ಅವತರಿಸಿ ದೈತ್ಯ-ದಾನವಾದಿಗಳಿಗೆ ಅವರ ಅಪರಾಧಕ್ಕೆ ತಕ್ಕ ದಂಡನೆಯನ್ನು ಕೊಡುತ್ತೀಯೆ. ದಂಡಧಾರಿಯಾದ ಪ್ರಭುವೇ! ನಿನಗೆ ಸರಿಯೆನಿಸಿದರೆ ಆ ಅಸುರರನ್ನು ಸಂಹರಿಸಿದಂತೆ ಈ ವೃತ್ರಾಸುರನನ್ನೂ ಸಂಹರಿಸುವವನಾಗು. ॥ ೪೦ ॥ ಓ ಭಗವಂತನೇ! ನೀನು ನಮಗೆ ತಂದೆ-ತಾತ ಎಲ್ಲವೂ ಆಗಿರುವೆ. ನಾವು ನಿನ್ನ ಸ್ವಜನರು. ನಿರಂತರವಾಗಿ ನಿನ್ನ ಮುಂದೆ ವಿನಯದಿಂದ ತಲೆತಗ್ಗಿಸಿಕೊಂಡಿರುವವರು. ನಿನ್ನ ಚರಣಕಮಲಗಳನ್ನು ಧ್ಯಾನ ಮಾಡುತ್ತಾ-ಮಾಡುತ್ತಾ ನಮ್ಮ ಹೃದಯವು ಅವುಗಳೊಡನೆ ಪ್ರೇಮಬಂಧನದಲ್ಲಿ ಬಿಗಿಯಲ್ಪಟ್ಟಿದೆ. ನೀನು ನಮ್ಮ ಮುಂದೆ ನಿನ್ನ ದಿವ್ಯಗುಣಗಳಿಂದ ಕೂಡಿದ ಸಾಕಾರ ವಿಗ್ರಹವನ್ನು ಪ್ರಕಟಪಡಿಸಿ ನಮ್ಮನ್ನು ನಿನ್ನವರಾಗಿಸಿಕೊಂಡಿರುವೆ. ಅದಕ್ಕಾಗಿ ಪ್ರಭೋ! ನಿನ್ನ ದಯಾಪೂರ್ಣವೂ, ಪರಿಶುದ್ಧವೂ, ಸುಂದರವೂ, ಶೀತಲವೂ ಆದ ಕಿರುನಗೆಯಿಂದ ಕೂಡಿದ ಚೆನ್ನೋಟದಿಂದಲೂ ಮತ್ತು ಮುಖಕಮಲದಿಂದ ತೊಟ್ಟಿಕ್ಕುತ್ತಿರುವ ವಾಣಿಯೆಂಬ ಸುಮಧುರವಾದ ಅಮೃತ ಬಿಂದುಗಳಿಂದ ನಮ್ಮ ಹೃದಯದ ತಾಪವನ್ನು ಶಮನಗೊಳಿಸು. ॥ ೪೧ ॥ ಪ್ರಭೋ! ಅಗ್ನಿಯ ಅಂಶಭೂತ ಕಿಡಿಗಳೇ ಮುಂತಾದವುಗಳು ಅಗ್ನಿಯನ್ನು ಪ್ರಕಾಶಪಡಿಸಲು ಅಸಮರ್ಥವಾಗಿರುವಂತೆಯೇ ನಾವೂ ಕೂಡ ನಿನ್ನಲ್ಲಿ ನಮ್ಮದಾದ ಯಾವುದೇ ಸ್ವಾರ್ಥ-ಪರಮಾರ್ಥಗಳನ್ನು ನಿವೇದಿಸಿಕೊಳ್ಳಲು ಅಸಮರ್ಥರಾಗಿದ್ದೇವೆ. ನಿನ್ನಲ್ಲಿ ಅರಿಕೆ ಮಾಡುವುದಾದರೂ ಏನಿದೆ? ಏಕೆಂದರೆ, ನೀನೇ ಸಮಸ್ತ ಜಗತ್ತಿನ ಉತ್ಪತ್ತಿ, ಸ್ಥಿತಿ, ಲಯ ಮಾಡುವಂತಹ ದಿವ್ಯಮಾಯೆಯೊಡನೆ ವಿನೋದವಾಡುತ್ತಿರುವೆ ಹಾಗೂ ಎಲ್ಲ ಜೀವರ ಅಂತಃಕರಣದಲ್ಲಿ ಬ್ರಹ್ಮ ಮತ್ತು ಅಂತರ್ಯಾಮಿಯ ರೂಪದಲ್ಲಿ ವಿರಾಜಮಾನನಾಗಿರುವೆ. ಇಷ್ಟೇ ಅಲ್ಲದೆ ಅವುಗಳ ಹೊರಗಡೆಯಲ್ಲಿಯೂ ಪ್ರಕೃತಿಯ ರೂಪದಲ್ಲಿ ನೀನೇ ವಿರಾಜ

ಭಗವತಃ ಸರ್ವಪ್ರತ್ಯಯಸಾಕ್ಷಿಣ ಆಕಾಶಶರೀರಸ್ಯ ಸಾಕ್ಷಾತ್ಪರಬ್ರಹ್ಮಣಃ ಪರಮಾತ್ಮನಃ ಕಿಯಾನಿಹ ವಾ ಅರ್ಥವಿಶೇಷೋ ವಿಜ್ಞಾಪನೀಯಃ ಸ್ಯಾದ್ ವಿಸ್ಫುಲಿಂಗಾದಿಭಿರಿವ ಹಿರಣ್ಯರೇತಸಃ ॥ ೪೨ ॥

ಅತ ಏವ ಸ್ವಯಂ ತದುಪಕಲ್ಪಯಾಸ್ಮಾಕಂ ಭಗವತಃ ಪರಮ ಗುರೋಸ್ತವ ಚರಣಶತಪಲಾಶಚ್ಛಾಯಾಂ ವಿವಿಧ ವೃಜಿನಸಂಸಾರಪರಿಶ್ರಮೋಪಶಮನೀಮುಪಸೃತಾನಾಂ ವಯಂ ಯತ್ಕಾಮೇನೋಪಸಾದಿತಾಃ ॥ ೪೩ ॥

ಅಥೋ ಈಶ ಜಹಿ ತ್ವಾಷ್ಟ್ರಂ ಗ್ರಸಂತಂ ಭುವನತ್ರಯಮ್ ।
ಗ್ರಸ್ತಾನಿ ಯೇನ ನಃ ಕೃಷ್ಣ ತೇಜಾಂಸ್ಯಸ್ತ್ರಾಯುಧಾನಿ ಚ ॥ ೪೪ ॥

ಹಂಸಾಯ ದಹ್ರನಿಲಯಾಯ ನಿರೀಕ್ಷಕಾಯ
ಕೃಷ್ಣಾಯ ಮೃಷ್ಟಯಶಸೇ ನಿರುಪಕ್ರಮಾಯ ।
ಸತ್ಸಂಗ್ರಹಾಯ ಭವಪಾಂಥನಿಜಾಶ್ರಮಾಪ್ತಾ-
ವಂತೇ ಪರೀಷ್ಟಗತಯೇ ಹರಯೇ ನಮಸ್ತೇ ॥ ೪೫ ॥

ಶ್ರೀಶುಕ ಉವಾಚ

ಅಥೈವಮೀಡಿತೋ ರಾಜನ್ಸಾದರಂ ತ್ರಿದಶೈರ್ಹರಿಃ ।
ಸ್ವಮುಪಸ್ಥಾನಮಾಕರ್ಣ್ಯ ಪ್ರಾಹ ತಾನಭಿನಂದಿತಃ ॥ ೪೬ ॥

ಶ್ರೀಭಗವಾನುವಾಚ

ಪ್ರೀತೋಽಹಂ ವಃ ಸುರಶ್ರೇಷ್ಠಾ ಮದುಪಸ್ಥಾನವಿದ್ಯಯಾ ।
ಆತ್ಮೈಶ್ವರ್ಯಸ್ಮೃತಿಃ ಪುಂಸಾಂ ಭಕ್ತಿಶ್ಚೈವ ಯಯಾ ಮಯಿ ॥ ೪೭ ॥

ಕಿಂ ದುರಾಪಂ ಮಯಿ ಪ್ರೀತೇ ತಥಾಪಿ ವಿಬುಧರ್ಷಭಾಃ ।
ಮಯ್ಯೇಕಾಂತಮತಿರ್ನಾನ್ಯನ್ಮತ್ತೋ ವಾಂಛತಿ ತತ್ತ್ವವಿತ್ ॥ ೪೮ ॥

ಮಾನನಾಗಿರುವೆ. ಜಗತ್ತಿನಲ್ಲಿ ಎಷ್ಟೆಲ್ಲ ದೇಶ, ಕಾಲ, ಶರೀರ ಮುಂತಾದವುಗಳು ಇವೆಯೋ ಅವುಗಳಿಗೆ ಉಪಾದಾನವೂ ಮತ್ತು ಅವುಗಳನ್ನು ಪ್ರಕಾಶಪಡಿಸುವವನೂ ಆಗಿ ಆ ರೂಪದಲ್ಲಿ ಅವುಗಳನ್ನು ನೀನು ಅನುಭವಿಸುತ್ತಿರುವೆ. ನೀನೇ ಎಲ್ಲ ವೃತ್ತಿಗಳಿಗೂ ಸಾಕ್ಷಿಯಾಗಿರುವೆ. ನೀನು ಆಕಾಶದಂತೆ ಸರ್ವಗತನೂ, ನಿರ್ಲಿಪ್ತನೂ ಆಗಿರುವೆ. ನೀನು ಸ್ವತಃ ಪರಬ್ರಹ್ಮ ಪರಮಾತ್ಮನಾಗಿರುವೆ. ॥ ೪೨ ॥ ಆದುದರಿಂದ – 'ಇವರು ತಮ್ಮ ಅಭಿಪ್ರಾಯಗಳನ್ನು ಅರಿಕೆಮಾಡಿಕೊಳ್ಳಲಿ' ಎಂಬುದನ್ನು ನಿರೀಕ್ಷಿಸದೆ ಯಾವ ಅಭಿಲಾಷೆಯಿಂದ ನಾವು ಇಲ್ಲಿಗೆ ಬಂದಿರುವೆವೋ, ಅದನ್ನು ಪೂರ್ಣಗೊಳಿಸು. ನೀನು ಅಚಿಂತ್ಯನೂ, ಐಶ್ವರ್ಯಸಂಪನ್ನನೂ, ಜಗತ್ತಿಗೆ ಪರಮಗುರುವೂ ಆಗಿರುವೆ. ವಿವಿಧ ಪಾಪಗಳ ಫಲಸ್ವರೂಪ ಜನ್ಮ-ಮೃತ್ಯು ರೂಪವಾದ ಸಂಸಾರದಲ್ಲಿ ಅಲೆಯುವ ಬಳಲಿಕೆಯನ್ನು ಅಳಿಸುವಂತಹ ನಿನ್ನ ಚರಣಕಮಲಗಳ ಛತ್ರಛಾಯೆಯಲ್ಲಿ ನಾವು ಆಸರೆ ಪಡೆದಿದ್ದೇವೆ. ॥ ೪೩ ॥ ಸರ್ವಶಕ್ತನಾದ ಶ್ರೀಕೃಷ್ಣನೇ! ವೃತ್ರಾಸುರನು ನಮ್ಮ ಪ್ರಭಾವವನ್ನೂ, ಶಸ್ತ್ರಾಸ್ತ್ರಗಳನ್ನೂ ನುಂಗಿ ಹಾಕಿರುವನು. ಈಗ ಅವನು ಮೂರು ಲೋಕಗಳನ್ನೂ ನುಂಗುತ್ತಿದ್ದಾನೆ. ನೀನು ಅವನನ್ನು ಸಂಹರಿಸಿಬಿಡು. ॥ ೪೪ ॥ ಪ್ರಭುವೇ! ನೀನು ಶುದ್ಧ ಹಂಸಸ್ವರೂಪನೂ, ಹೃದಯದಲ್ಲಿ ಶುದ್ಧವಾಗಿ ಬೆಳಗುತ್ತಿರುವ ಆಕಾಶಸ್ವರೂಪನೂ, ಎಲ್ಲರ ಸಾಕ್ಷಿಯೂ, ಅನಾದಿಯೂ, ಅನಂತನೂ, ಉಜ್ವಲಕೀರ್ತಿ ಸಂಪನ್ನನೂ ಆಗಿರುವೆ. ಸತ್ಪುರುಷರು ನಿನ್ನನ್ನೇ ಸಂಗ್ರಹಿಸುತ್ತಾರೆ. ಈ ಸಂಸಾರದ ಯಾತ್ರಿಕರು ಅಲೆಯುತ್ತಾ-ಅಲೆಯುತ್ತಾ ನಿನಗೆ ಶರಣಾದಾಗ ಕೊನೆಗೆ ನೀನೇ ಅವರಿಗೆ ಪರಮಾನಂದ ಸ್ವರೂಪವಾದ ಅಭೀಷ್ಟಫಲವನ್ನು ಕೊಡುವೆ ಮತ್ತು ಈ ವಿಧದಿಂದ ಅವರ ಜನ್ಮ-ಜನ್ಮಾಂತರದ ಕಷ್ಟಗಳನ್ನು ಪರಿಹರಿಸುವೆ. ಸ್ವಾಮಿ! ನಿನಗೆ ನಾವು ನಮಸ್ಕರಿಸುತ್ತಿದ್ದೇವೆ. ॥ ೪೫ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಎಲೈ ರಾಜನೇ! ದೇವತೆಗಳು ಅತ್ಯಂತ ಆದರದಿಂದ ಹೀಗೆ ಭಗವಂತನನ್ನು ಸ್ತುತಿಸಿದಾಗ ಅವನು ಅದರಿಂದ ಬಹಳ ಪ್ರಸನ್ನನಾಗಿ ಅವರಿಗೆ ಇಂತೆಂದನು – ॥ ೪೬ ॥

ಶ್ರೀಭಗವಂತನು ಹೇಳಿದನು – ಎಲೈ ದೇವಶ್ರೇಷ್ಠರೇ! ನೀವೆಲ್ಲರೂ ಸ್ತುತಿಯಿಂದ ಕೂಡಿದ ಭಕ್ತಿ-ಜ್ಞಾನದಿಂದ ನನ್ನನ್ನು ಉಪಾಸನೆ ಮಾಡಿದ್ದೀರಿ. ಇದರಿಂದ ನಾನು ನಿಮ್ಮಮೇಲೆ ಪ್ರಸನ್ನನಾಗಿರುವೆನು. ಈ ಸ್ತುತಿಯ ಮೂಲಕ ಜೀವರಿಗೆ ತಮ್ಮ ವಾಸ್ತವಿಕ ಸ್ವರೂಪದ ಸ್ಮೃತಿ ಉಂಟಾಗಿ, ನನ್ನ ಭಕ್ತಿಯೂ ದೊರೆಯುವುದು. ॥ ೪೭ ॥ ದೇವಶಿರೋಮಣಿಗಳೇ! ನಾನು ಪ್ರಸನ್ನನಾದ ಮೇಲೆ ಯಾವುದೇ ವಸ್ತುವು ದುರ್ಲಭವಾಗಿ ಇರುವುದಿಲ್ಲ. ಆದರೂ ನನ್ನ ಅನನ್ಯ ಪ್ರೇಮಿ, ತತ್ತ್ವವೇತ್ತರಾದ ಭಕ್ತರು ನನ್ನನ್ನಲ್ಲದೆ ಬೇರೆ ಏನನ್ನೂ ನನ್ನಿಂದ ಬಯಸುವುದಿಲ್ಲ. ॥ ೪೮ ॥ ಜಗತ್ತಿನ ವಿಷಯಗಳನ್ನು ಸತ್ಯವೆಂದು ತಿಳಿದವನು ಮೂರ್ಖನಾಗಿದ್ದು ತನ್ನ ನಿಜವಾದ ಶ್ರೇಯಸ್ಸನ್ನು ಅರಿಯಲಾರನು. ಏಕೆಂದರೆ, ಅವನು ವಿಷಯಗಳನ್ನು ಬಯಸುತ್ತಿರುವನು. ಆದರೆ ಯಾರಾದರೂ ತಿಳಿವಳಿಕೆಯುಳ್ಳವನು ಅವನಿಗೆ ಅವನು ಇಚ್ಛಿಸಿದ ವಸ್ತುಗಳನ್ನು ಕೊಟ್ಟರೆ ಅವನೂ

ನ ವೇದ ಕೃಪಣಃ ಶ್ರೇಯ ಆತ್ಮನೋ ಗುಣವಸ್ತುದೃಕ್ ।
ತಸ್ಯ ತಾನಿಚ್ಛತೋ ಯಚ್ಛೇದ್ಯದಿ ಸೋಽಪಿ ತಥಾವಿಧಃ ॥ ೪೯ ॥

ಸ್ವಯಂ ನಿಃಶ್ರೇಯಸಂ ವಿದ್ವಾನ್ನ ವಕ್ತ್ಯಜ್ಞಾಯ ಕರ್ಮ ಹಿ ।
ನ ರಾತಿ ರೋಗಿಣೋಽಪಥ್ಯಂ ವಾಂಛತೋ ಹಿ ಭಿಷಕ್ತಮಃ ॥ ೫೦ ॥

ಮಘವನ್ಯಾತ ಭದ್ರಂ ವೋ ದಧ್ಯಂಚಮೃಷಿಸತ್ತಮಮ್ ।
ವಿದ್ಯಾವ್ರತತಪಃಸಾರಂ ಗಾತ್ರಂ ಯಾಚತ ಮಾ ಚಿರಮ್ ॥ ೫೧ ॥

ಸ ವಾ ಅಧಿಗತೋ ದಧ್ಯಙ್ಅಶ್ವಿಭ್ಯಾಂ ಬ್ರಹ್ಮ ನಿಷ್ಕಲಮ್ ।
ಯದ್ವಾ ಅಶ್ವಶಿರೋ ನಾಮ ತಯೋರಮರತಾಂ ವ್ಯಧಾತ್ ॥ ೫೨ ॥

ದಧ್ಯಙ್ ಆಥರ್ವಣಸ್ತ್ವಷ್ಟ್ರೇ ವರ್ಮಾಭೇದ್ಯಂ ಮದಾತ್ಮಕಮ್ ।
ವಿಶ್ವರೂಪಾಯ ಯತ್ಪ್ರಾದಾತ್ತ್ವಷ್ಟಾ ಯತ್ತ್ವಮಧಾಸ್ತತಃ ॥ ೫೩ ॥

ಯುಷ್ಮಭ್ಯಂ ಯಾಚಿತೋಽಶ್ವಿಭ್ಯಾಂ ಧರ್ಮಜ್ಞೋಽಙ್ಗಾನಿ ದಾಸ್ಯತಿ ।
ತತಸ್ತೈರಾಯುಧಶ್ರೇಷ್ಠೋ ವಿಶ್ವಕರ್ಮವಿನಿರ್ಮಿತಃ ।
ಯೇನ ವೃತ್ರಶಿರೋ ಹರ್ತಾ ಮತ್ತೇಜ ಉಪಬೃಂಹಿತಃ ॥ ೫೪ ॥

ತಸ್ಮಿನ್ವಿನಿಹತೇ ಯೂಯಂ ತೇಜೋಽಸ್ತ್ರಾಯುಧಸಂಪದಃ ।
ಭೂಯಃ ಪ್ರಾಪ್ಸ್ಯಥ ಭದ್ರಂ ವೋ ನ ಹಿಂಸಂತಿ ಚ ಮತ್ಪರಾನ್ ॥ ೫೫ ॥

ಅವನಂತೆಯೇ ಮೂರ್ಖನಾಗಿದ್ದಾನೆ. ॥ ೪೯ ॥ ಮುಕ್ತಿಯ ಸ್ವರೂಪವನ್ನು ತಿಳಿದ ಜ್ಞಾನಿಯು – ರೋಗಿಯು ಬಯಸಿದರೂ ಸದ್ವೈದ್ಯನು ಅವನಿಗೆ ಅಪಥ್ಯವಾದುದನ್ನು ಕೊಡದಿರುವಂತೆಯೇ ಅಜ್ಞಾನಿಗಳಿಗೆ ಕರ್ಮಗಳಲ್ಲಿ ಸಿಕ್ಕಿಕೊಳ್ಳುವಂತಹ ಉಪದೇಶಗಳನ್ನು ಮಾಡುವುದಿಲ್ಲ. ॥ ೫೦ ॥ ದೇವೇಂದ್ರನೇ! ನಿಮಗೆ ಮಂಗಳವಾಗಲಿ. ಈಗ ತಡಮಾಡದೆ ಋಷಿಶಿರೋಮಣಿ ದಧೀಚಿಯ ಬಳಿಗೆ ಹೋಗಿರಿ. ಉಪಾಸನೆ, ವ್ರತ ಮತ್ತು ತಪಸ್ಸಿನಿಂದಾಗಿ ಅವರ ಶರೀರವು ಅತ್ಯಂತ ಸದೃಢಗೊಂಡಿದೆ. ಅದನ್ನೇ ಕೇಳಿಕೊಳ್ಳಿ. ॥ ೫೧ ॥ ದಧೀಚಿ ಋಷಿಗಳಿಗೆ ಶುದ್ಧಬ್ರಹ್ಮನ ಜ್ಞಾನವಿದೆ. ಅಶ್ವಿನೀ ಕುಮಾರರಿಗೆ ಕುದುರೆಯ ತಲೆಯಿಂದ ಉಪದೇಶಮಾಡಿದ ಕಾರಣ ಇವರಿಗೆ 'ಅಶ್ವಶಿರ'* ಎಂದೂ ಹೆಸರಿದೆ. ಅವರು ಉಪದೇಶಿಸಿದ ಆತ್ಮವಿದ್ಯೆಯ ಪ್ರಭಾವದಿಂದಲೇ ಅಶ್ವಿನಿಕುಮಾರರಿಬ್ಬರೂ ಜೀವನ್ಮುಕ್ತರಾದರು. ॥ ೫೨ ॥ ಅಥರ್ವವೇದೀ ದಧೀಚಿ ಋಷಿಯೇ ಮೊಟ್ಟಮೊದಲು ನನ್ನ ಸ್ವರೂಪಭೂತವಾದ ಅಭೇದ್ಯ ನಾರಾಯಣಕವಚವನ್ನು ತ್ವಷ್ಟೃವಿಗೆ ಉಪದೇಶಿಸಿದನು. ತ್ವಷ್ಟೃವು ವಿಶ್ವರೂಪನಿಗೆ ಉಪದೇಶಿಸಿದನು. ಅವರು ನಿಮಗೆ ಕರುಣಿಸಿದರು. ॥ ೫೩ ॥ ದಧೀಚಿಋಷಿಯು ಧರ್ಮದ ಪರಮ ಮರ್ಮಜ್ಞರಾಗಿದ್ದಾರೆ. ಅಶ್ವಿನೀದೇವತೆಗಳು ಪ್ರಾರ್ಥನೆ ಮಾಡಿದರೆ ನಿಮಗೆ ಅವರು ತಮ್ಮ ಶರೀರದ ಅಂಗಾಂಗಗಳನ್ನು ಖಂಡಿತವಾಗಿ ಕೊಡುವರು. ಅನಂತರ ವಿಶ್ವಕರ್ಮನಿಂದ ಆ ಅಂಗಾಂಗಗಳ ಮೂಳೆಗಳಿಂದ ಒಂದು ಶ್ರೇಷ್ಠವಾದ ಆಯುಧವನ್ನು ರಚಿಸಿಕೊಳ್ಳಿರಿ. ದೇವೇಂದ್ರಾ! ನನ್ನ ಶಕ್ತಿಯಿಂದ ಒಡಗೂಡಿ ನೀವು ಅದೇ ಶಸ್ತ್ರದಿಂದ ವೃತ್ರಾಸುರನ ತಲೆಯನ್ನು ಕತ್ತರಿಸಬಲ್ಲಿರಿ. ॥ ೫೪ ॥ ದೇವತೆಗಳಿರಾ! ವೃತ್ರಾಸುರನ ವಧೆಯಾದ ಬಳಿಕ ನಿಮಗೆ ಪುನಃ ತೇಜಸ್ಸು, ಅಸ್ತ್ರ-ಶಸ್ತ್ರಗಳು, ಎಲ್ಲ ಸಂಪತ್ತೂ ದೊರೆಯುವುದು. ನಿಮಗೆ ಅವಶ್ಯವಾಗಿ ಮಂಗಳ ಉಂಟಾಗುವುದು. ಏಕೆಂದರೆ, ನನ್ನಲ್ಲಿ ಶರಣಾಗತರಾದವರನ್ನು ಯಾರೂ ಹಿಂಸೆಪಡಿಸಲಾರರು. ॥ ೫೫ ॥

ಒಂಭತ್ತನೆಯ ಅಧ್ಯಾಯವು ಮುಗಿಯಿತು. ॥ ೯ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಷಷ್ಠಸ್ಕಂಧೇ ನವಮೋಽಧ್ಯಾಯಃ ॥ ೯ ॥

---

* ದಧೀಚಿಮಹರ್ಷಿಗಳು ಪ್ರವರ್ಗ್ಯವೆಂಬ ಯಜ್ಞಕರ್ಮದಲ್ಲಿಯೂ ಮತ್ತು ಬ್ರಹ್ಮವಿದ್ಯೆಯಲ್ಲಿ ಪಾರಂಗತರಾಗಿದ್ದರು. ಅದನ್ನು ತಿಳಿದ ಅಶ್ವಿನೀಕುಮಾರರು ಒಮ್ಮೆ ಅವರ ಬಳಿಗೆ ಬಂದು ತಮಗೆ ಆ ವಿದ್ಯೆಯನ್ನು ದಯಪಾಲಿಸಬೇಕೆಂದು ಪ್ರಾರ್ಥಿಸಿದರು. ದಧೀಚಿಮುನಿಗಳು 'ಈಗ ನನಗೆ ಬೇರೆ ಕೆಲಸವಿದೆ. ಮತ್ತೊಮ್ಮೆ ಬನ್ನಿರಿ' ಎಂದು ಹೇಳಿ ಅವರನ್ನು ಕಳಿಸಿದರು. ಆಗ ಇಂದ್ರನು ಅವರ ಬಳಿಗೆ ಬಂದು 'ಅಶ್ವಿನೀಕುಮಾರರು ವೈದ್ಯರಾಗಿದ್ದಾರೆ. ಅವರಿಗೆ ನೀವು ಆ ವಿದ್ಯೆಯನ್ನು ಉಪದೇಶಮಾಡಕೂಡದು. ನನ್ನ ಮಾತಿನ ವಿರುದ್ಧವಾಗಿ ನಡೆದರೆ ನಿಮ್ಮ ತಲೆಯನ್ನು ಕತ್ತರಿಸಿಹಾಕುವೆನು' ಎಂದು ಎಚ್ಚರಿಕೆ ನೀಡಿ ಇಂದ್ರನು ಹೊರಟುಹೋದನು. ಅಶ್ವಿನೀಕುಮಾರರು ಮತ್ತೆ ಮಹರ್ಷಿಗಳ ಬಳಿಗೆ ಬಂದು ವಿದ್ಯೆಯನ್ನು ಬೇಡಿದಾಗ – ಅವರು ಇಂದ್ರನು ಬಂದು ಹೇಳಿದ್ದ ವೃತ್ತಾಂತವನ್ನು ಅವರಿಗೆ ತಿಳಿಸಿದರು. ಅವರು ಮಹರ್ಷಿಗಳೇ! ನಾವು ನಿಮ್ಮ ತಲೆಯನ್ನು ಕತ್ತರಿಸಿ ಅದರ ಜಾಗದಲ್ಲಿ ಕುದುರೆಯ ತಲೆಯನ್ನು ಜೋಡಿಸುವೆವು ಎಂಬ ಸಲಹೆ ನೀಡಿದರು. ಮುನಿಯು ಮಿಥ್ಯಾಭಾಷಣದ ದೋಷಕ್ಕೆ ಹೆದರಿ ಅವರ ಮಾತನ್ನು ಒಪ್ಪಿಕೊಂಡರು. ಹೀಗೆ ಕುದುರೆಯ ಮುಖದಿಂದ ಅಶ್ವಿನೀದೇವತೆಗಳಿಗೆ ಬ್ರಹ್ಮವಿದ್ಯೆಯನ್ನು ಉಪದೇಶಿಸಿದರು. ಹೀಗೆ ಅಶ್ವಮುಖದಿಂದ ಉಪದೇಶಿಸಲಾದ ಬ್ರಹ್ಮವಿದ್ಯೆಯ ಹೆಸರು 'ಅಶ್ವಶಿರ' ಎಂದಾಯಿತು. ಅವರು ಅದೇ ಹೆಸರಿನಿಂದ ಖ್ಯಾತರಾದರು.

ಹತ್ತನೆಯ ಅಧ್ಯಾಯ

ದೇವತೆಗಳು ದಧೀಚಿ ಮಹರ್ಷಿಗಳ ಅಸ್ಥಿಗಳಿಂದ ವಜ್ರಾಯುಧವನ್ನು ನಿರ್ಮಿಸಿಕೊಂಡು ವೃತ್ರನ ಸೇನೆಯನ್ನು ಆಕ್ರಮಿಸಿದುದು

ಶ್ರೀಶುಕ ಉವಾಚ

ಇಂದ್ರಮೇವಂ ಸಮಾದಿಶ್ಯ ಭಗವಾನ್ ವಿಶ್ವಭಾವನಃ ।
ಪಶ್ಯತಾಮನಿಮೇಷಾಣಾಂ ತತ್ರೈವಾಂತರ್ದಧೇ ಹರಿಃ ॥ ೧ ॥

ತಥಾಭಿಯಾಚಿತೋ ದೇವೈರ್ಋಷಿರಾಥರ್ವಣೋ ಮಹಾನ್ ।
ಮೋದಮಾನ ಉವಾಚೇದಂ ಪ್ರಹಸನ್ನಿವ ಭಾರತ ॥ ೨ ॥

ಅಪಿ ವೃಂದಾರಕಾ ಯೂಯಂ ನ ಜಾನೀಥ ಶರೀರಿಣಾಮ್ ।
ಸಂಸ್ಥಾಯಾಂ ಯಸ್ತ್ವಭಿದ್ರೋಹೋ ದುಃಸಹಶ್ಚೇತನಾಪಹಃ ॥ ೩ ॥

ಜಿಜೀವಿಷೂಣಾಂ ಜೀವಾನಾಮಾತ್ಮಾ ಪ್ರೇಷ್ಠ ಇಹೇಪ್ಸಿತಃ ।
ಕ ಉತ್ಸಹೇತ ತಂ ದಾತುಂ ಭಿಕ್ಷಮಾಣಾಯ ವಿಷ್ಣವೇ ॥ ೪ ॥

ದೇವಾ ಊಚುಃ

ಕಿಂ ನು ತದ್ದುಸ್ತ್ಯಜಂ ಬ್ರಹ್ಮನ್ ಪುಂಸಾಂ ಭೂತಾನುಕಂಪಿನಾಮ್ ।
ಭವದ್ವಿಧಾನಾಂ ಮಹತಾಂ ಪುಣ್ಯಶ್ಲೋಕೇಡ್ಯಕರ್ಮಣಾಮ್ ॥ ೫ ॥

ನನು ಸ್ವಾರ್ಥಪರೋ ಲೋಕೋ ನ ವೇದ ಪರಸಂಕಟಮ್ ।
ಯದಿ ವೇದ ನ ಯಾಚೇತ ನೇತಿ ನಾಹ ಯದೀಶ್ವರಃ ॥ ೬ ॥

ಋಷಿರುವಾಚ

ಧರ್ಮಂ ವಃ ಶ್ರೋತುಕಾಮೇನ ಯೂಯಂ ಮೇ ಪ್ರತ್ಯುದಾಹೃತಾಃ ।
ಏಷ ವಃ ಪ್ರಿಯಮಾತ್ಮಾನಂ ತ್ಯಜಂತಂ ಸಂತ್ಯಜಾಮ್ಯಹಮ್ ॥ ೭ ॥

ಯೋಽಧ್ರುವೇಣಾತ್ಮನಾ ನಾಥಾ ನ ಧರ್ಮಂ ನ ಯಶಃ ಪುಮಾನ್ ।
ಈಹೇತ ಭೂತದಯಯಾ ಸ ಶೋಚ್ಯಃ ಸ್ಥಾವರೈರಪಿ ॥ ೮ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿದ್ರಾಜನೇ! ವಿಶ್ವದ ಜೀವನದಾತನಾದ ಶ್ರೀಹರಿಯು ಇಂದ್ರನಿಗೆ ಹೀಗೆ ಆದೇಶವನ್ನು ಕೊಟ್ಟು, ದೇವತೆಗಳ ಎದುರಿನಲ್ಲೇ ಅಂತರ್ಧಾನ ಹೊಂದಿದನು. ॥ ೧ ॥ ಅನಂತರ ದೇವತೆಗಳು ಉದಾರಶಿರೋಮಣಿ ಅಥರ್ವವೇದಿಯಾದ ದಧೀಚಿಯ ಬಳಿಗೆಹೋಗಿ ಭಗವಂತನ ಆಜ್ಞಾನುಸಾರವಾಗಿ ಬೇಡಿಕೊಂಡರು. ದೇವತೆಗಳ ಬೇಡಿಕೆಯನ್ನು ಕೇಳಿ ದಧೀಚಿಗಳಿಗೆ ಬಹಳ ಆನಂದವಾಯಿತು. ಅವರು ನಗುತ್ತಾ ದೇವತೆಗಳಲ್ಲಿ ಹೇಳಿದರು. ॥ ೨ ॥ ದೇವತೆಗಳಿರಾ! ಪ್ರಾಣಿಗಳಿಗೆ ಸಾಯುವಾಗ ಎಷ್ಟು ಕಷ್ಟವಾಗುತ್ತದೆ? ಎಂಬುದು ಬಹುಶಃ ನಿಮಗೆ ಗೊತ್ತಿಲ್ಲವೆಂದು ಕಾಣುತ್ತದೆ. ಪ್ರಜ್ಞೆ ಇರುವವರೆಗೆ ಅವರಿಗೆ ಅಸಹ್ಯ ಪೀಡೆಯನ್ನು ಸಹಿಸಬೇಕಾಗುತ್ತದೆ ಮತ್ತು ಕೊನೆಗೆ ಅವು ಮೂರ್ಛಿತರಾಗುತ್ತಾರೆ. ॥ ೩ ॥ ಜಗತ್ತಿನಲ್ಲಿ ಬದುಕಿರಬೇಕೆಂದು ಬಯಸುವ ಜೀವಿಗೆ ಶರೀರವು ತುಂಬಾ ಅಮೂಲ್ಯವೂ, ಪ್ರಿಯವೂ, ಇಷ್ಟವಾದ ವಸ್ತು ಆಗಿದೆ. ಇಂತಹ ಸ್ಥಿತಿಯಲ್ಲಿ ಸ್ವತಃ ಭಗವಾನ್ ವಿಷ್ಣುವೇ ಜೀವಿಯಲ್ಲಿ ಅವರ ಶರೀರವನ್ನು ಕೇಳಿದರೂ ಕೊಡುವ ಸಾಹಸವನ್ನು ಯಾರು ತಾನೇ ಮಾಡಿಯಾರು? ॥ ೪ ॥

ದೇವತೆಗಳೆಂದರು – ಬ್ರಾಹ್ಮಣೋತ್ತಮರೇ! ನಿಮ್ಮಂತಹ ಉದಾರರೂ ಮತ್ತು ಪ್ರಾಣಿಗಳ ಮೇಲೆ ದಯೆತೋರುವ ಮಹಾಪುರುಷರಾದ ನಿಮ್ಮನ್ನು ದೊಡ್ಡ-ದೊಡ್ಡ ಮಹಾನುಭಾವರೂ ಪ್ರಶಂಸೆ ಮಾಡುತ್ತಾರೆ. ನಿಮ್ಮಂತಹವರಲ್ಲಿ ಪ್ರಾಣಿಗಳ ಒಳಿತಿಗಾಗಿ ಕೊಡದಿರುವ ಯಾವ ವಸ್ತುವಿದೆ? ॥ ೫ ॥ ಪೂಜ್ಯರೇ! ಬೇಡುವವರು ಸ್ವಾರ್ಥಿಗಳಾಗಿರುತ್ತಾರೆ. ಇದರಲ್ಲಿ ಸಂದೇಹವೇ ಇಲ್ಲ. ಅವರಲ್ಲಿ ಕೊಡುವವನ ಕಷ್ಟವನ್ನು ತಿಳಿಯುವ ಬುದ್ಧಿಯೇ ಇರುವುದಿಲ್ಲ. ಅವರಲ್ಲಿ ಅಷ್ಟು ತಿಳುವಳಿಕೆ ಇದ್ದರೆ ಅವರೇಕೆ ಬೇಡುತ್ತಿದ್ದರು? ಹೀಗೆಯೇ ದಾತೃವಾದವನೂ ಬೇಡುವವರ ವಿಪತ್ತನ್ನು ಅರಿಯನು. ಇಲ್ಲದಿದ್ದರೆ 'ಇಲ್ಲ' ಎಂಬುದು ಅವನ ಬಾಯಿಂದ ಎಂದಿಗೂ ಬರುತ್ತಿರಲೇ ಇಲ್ಲ. (ಆದ್ದರಿಂದ ತಾವು ನಮ್ಮ ವಿಪತ್ತನ್ನು ಮನಗಂಡು ನಮ್ಮ ಬೇಡಿಕೆಯನ್ನು ಪೂರ್ಣಗೊಳಿಸಿರಿ.) ॥ ೬ ॥

ದಧೀಚಿಮುನಿಗಳು ಹೇಳಿದರು – ದೇವತೆಗಳಿರಾ! ನಿಮ್ಮ ಬಾಯಿಂದ ಧರ್ಮದ ಮಾತುಗಳನ್ನು ಕೇಳಲಿಕ್ಕಾಗಿಯೇ ನಾನು ನಿಮ್ಮ ಬೇಡಿಕೆಯನ್ನು ಉಪೇಕ್ಷಮಾಡಿದ್ದು. ಇದೋ ತೆಗೆದುಕೊಳ್ಳಿರಿ. ನಾನು ನನ್ನ ಪ್ರಿಯವಾದ ಶರೀರವನ್ನು ನಿಮಗಾಗಿ ಈಗಲೇ ಬಿಟ್ಟುಬಿಡುತ್ತೇನೆ. ಏಕೆಂದರೆ, ಒಂದಲ್ಲ ಒಂದು ದಿನ ಇದು ತಾನಾಗಿ ನನ್ನನ್ನು ಬಿಟ್ಟುಹೋಗುವಂತಹುದು. ॥ ೭ ॥ ದೇವಶಿರೋಮಣಿಗಳೇ! ಈ ವಿನಾಶಿಯಾದ ಶರೀರದಿಂದ ದುಃಖಿತರಾದ ಪ್ರಾಣಿಗಳ ಮೇಲೆ ದಯೆಗೈದು ಮುಖ್ಯವಾಗಿ ಧರ್ಮವನ್ನು ಹಾಗೂ

ಏತಾವಾನವ್ಯಯೋ ಧರ್ಮಃ ಪುಣ್ಯಶ್ಲೋಕೈರುಪಾಸಿತಃ ।
ಯೋ ಭೂತಶೋಕಹರ್ಷಾಭ್ಯಾಮಾತ್ಮಾ ಶೋಚತಿ ಹೃಷ್ಯತಿ ॥ ೯ ॥

ಅಹೋ ದೈನ್ಯಮಹೋ ಕಷ್ಟಂ ಪಾರಕ್ಯೈಃ ಕ್ಷಣಭಂಗುರೈಃ ।
ಯನ್ನೋಪಕುರ್ಯಾದಸ್ವಾರ್ಥೈರ್ಮರ್ತ್ಯಃ ಸ್ವಜ್ಞಾತಿವಿಗ್ರಹೈಃ ॥ ೧೦ ॥

ಶ್ರೀಶುಕ ಉವಾಚ

ಏವಂ ಕೃತವ್ಯವಸಿತೋ ದಧ್ಯಙ್ ಆಥರ್ವಣಸ್ತನುಮ್ ।
ಪರೇ ಭಗವತಿ ಬ್ರಹ್ಮಣ್ಯಾತ್ಮಾನಂ ಸನ್ನಯಂಜಹೌ ॥ ೧೧ ॥

ಯತಾಕ್ಷಾಸುಮನೋಬುದ್ಧಿಸ್ತತ್ತ್ವದೃಗ್ ಧ್ವಸ್ತಬಂಧನಃ ।
ಆಸ್ಥಿತಃ ಪರಮಂ ಯೋಗಂ ನ ದೇಹಂ ಬುಬುಧೇ ಗತಮ್ ॥ ೧೨ ॥

ಅಥೇಂದ್ರೋ ವಜ್ರಮುದ್ಯಮ್ಯ ನಿರ್ಮಿತಂ ವಿಶ್ವಕರ್ಮಣಾ ।
ಮುನೇಃ ಶಕ್ತಿಭಿರುತ್ಸಿಕ್ತೋ ಭಗವತ್ತೇಜಸಾನ್ವಿತಃ ॥ ೧೩ ॥

ವೃತೋ ದೇವಗಣೈಃ ಸರ್ವೈರ್ಗಜೇಂದ್ರೋಪರ್ಯಶೋಭತ ।
ಸ್ತೂಯಮಾನೋ ಮುನಿಗಣೈಸ್ತ್ರೈಲೋಕ್ಯಂ ಹರ್ಷಯನ್ನಿವ ॥ ೧೪ ॥

ವೃತ್ರಮಭ್ಯದ್ರವಚ್ಛೇತ್ತುಮಸುರಾನೀಕಯೂಥಪೈಃ ।
ಪರ್ಯಸ್ತಮೋಜಸಾ ರಾಜನ್ಕ್ರುದ್ಧೋ ರುದ್ರ ಇವಾಂತಕಮ್ ॥ ೧೫ ॥

ತತಃ ಸುರಾಣಾಮಸುರೈ ರಣಃ ಪರಮದಾರುಣಃ ।
ತ್ರೇತಾಮುಖೇ ನರ್ಮದಾಯಾಮಭವತ್ಪ್ರಥಮೇ ಯುಗೇ ॥ ೧೬ ॥

ರುದ್ರೈರ್ವಸುಭಿರಾದಿತ್ಯೈರಶ್ವಿಭ್ಯಾಂ ಪಿತೃವಹ್ನಿಭಿಃ ।
ಮರುದ್ಭಿರೃಭುಭಿಃ ಸಾಧ್ಯೈರ್ವಿಶ್ವೇದೇವೈರ್ಮರುತ್ಪತಿಮ್ ॥ ೧೭ ॥

ಗೌಣವಾಗಿ ಕೀರ್ತಿಯನ್ನು ಸಂಪಾದಿಸದಿರುವವನು ಜಡವಾದ ಗಿಡ-ಮರಗಳಿಗಿಂದಲೂ ಕೀಳುಮಟ್ಟದವನು. ॥ ೮ ॥ ದೊಡ್ಡ-ದೊಡ್ಡ ಮಹಾತ್ಮರು ಈ ಅವಿನಾಶಿಯಾದ ಧರ್ಮವನ್ನು ಉಪಾಸನೆ ಮಾಡಿರುವರು. ಅದರ ಸ್ವರೂಪವು – ಮನುಷ್ಯನು ಯಾವುದೇ ಪ್ರಾಣಿಯ ದುಃಖದಲ್ಲಿ ದುಃಖವನ್ನೂ, ಸುಖದಲ್ಲಿ ಸುಖವನ್ನು ಅನುಭವಿಸುವುದಿಷ್ಟೇ ಆಗಿದೆ. ॥ ೯ ॥ ಜಗತ್ತಿನಲ್ಲಿರುವ ಹಣ, ಜನ, ಶರೀರ ಮುಂತಾದ ಪದಾರ್ಥಗಳು ಕ್ಷಣಭಂಗುರವಾಗಿವೆ. ಇವು ನಮಗೆ ಯಾವ ಉಪಯೋಗಕ್ಕೂ ಬರುವುದಿಲ್ಲ, ಕೊನೆಗೆ ಬೇರೆಯವರಿಗೇ ಉಪಯೋಗಿಯಾಗಿವೆ. ಆದರೂ ಅಯ್ಯೋ! ಈ ಮರಣಧರ್ಮವುಳ್ಳ ಮನುಷ್ಯನು ಇವುಗಳ ಮೂಲಕ ಬೇರೆಯವರಿಗೆ ಉಪಕಾರ ಮಾಡುವುದಿಲ್ಲವಲ್ಲ! ಇದೆಂತಹ ಕಾರ್ಪಣ್ಯ! ಎಷ್ಟು ಮರುಕದ ಮಾತಾಗಿದೆ! ॥ ೧೦ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ! ಅಥರ್ವವೇದಿಯಾದ ಮಹರ್ಷಿ ದಧೀಚಿಯು ಹೀಗೆ ನಿಶ್ಚಯಿಸಿಕೊಂಡು ತನ್ನನ್ನು ಪರಬ್ರಹ್ಮ ಪರಮಾತ್ಮನಾದ ಭಗವಂತನಲ್ಲಿ ಲೀನಗೊಳಿಸಿ ತನ್ನ ಸ್ಥೂಲಶರೀರವನ್ನು, ತ್ಯಜಿಸಿಬಿಟ್ಟರು. ॥ ೧೧ ॥ ಅವರ ಇಂದ್ರಿಯಗಳು, ಪ್ರಾಣಗಳು, ಮನಸ್ಸು, ಬುದ್ಧಿ ಸಂಯಮಿತವಾಗಿತ್ತು. ದೃಷ್ಟಿ ತತ್ತ್ವಮಯವಾಗಿತ್ತು. ಅವರ ಎಲ್ಲ ಬಂಧನಗಳು ಕಡಿದುಹೋಗಿದ್ದವು. ಆದ್ದರಿಂದ ಅವರು ಭಗವಂತನ ಚಿಂತನೆ ಮಾಡುತ್ತಾ ಸಮಾಧಿಸ್ಥರಾಗಿ ಶರೀರವನ್ನು ತ್ಯಜಿಸಿದರು. ಅದು ಬಿಟ್ಟು ಹೋದುದು ಅವರಿಗೆ ಅರಿವಾಗಲೇ ಇಲ್ಲ. ॥ ೧೨ ॥

ಭಗವಂತನ ಶಕ್ತಿಯನ್ನು ಪಡೆದ ಇಂದ್ರನು ಬಲ-ಪೌರುಷಗಳ ಪರಮಾವಧಿಯನ್ನು ಏರಿದನು. ಆಗ ವಿಶ್ವಕರ್ಮನು ದಧೀಚಿ ಋಷಿಯ ಅಸ್ಥಿಗಳಿಂದ ವಜ್ರಾಯುಧವನ್ನು ನಿರ್ಮಿಸಿ ಇಂದ್ರನಿಗೆ ಕೊಟ್ಟನು. ಅದನ್ನು ಕೈಯಲ್ಲಿ ಹಿಡಿದುಕೊಂಡು ಮಹೇಂದ್ರನು ಐರಾವತವನ್ನು ಏರಿದನು. ಅವನೊಡನೆ ಇತರ ದೇವತೆಗಳೂ ಯುದ್ಧಕ್ಕೆ ಸನ್ನದ್ಧರಾದರು. ದೊಡ್ಡ-ದೊಡ್ಡ ಋಷಿ-ಮುನಿಗಳು ಇಂದ್ರನನ್ನು ಸ್ತುತಿಸತೊಡಗಿದರು. ಆಗ ಅವನು ಮೂರು ಲೋಕವನ್ನು ಸಂತೋಷಪಡಿಸುತ್ತಾ ವೃತ್ರಾಸುರನನ್ನು ಸಂಹಾರಮಾಡುವುದಕ್ಕಾಗಿ ತನ್ನ ಸರ್ವಶಕ್ತಿಯನ್ನು ತೊಡಗಿಸಿ – ಕ್ರುದ್ಧನಾದ ಭಗವಾನ್ ರುದ್ರನು ಅಂತಕನ ಮೇಲೆ ಎರಗುವಂತೆ ವೃತ್ರಾಸುರನ ಮೇಲೆ ಮುತ್ತಿಗೆ ಹಾಕಿದನು. ಪರೀಕ್ಷಿತನೇ! ವೃತ್ರಾಸುರನೂ ಕೂಡ ದೈತ್ಯ ಸೇನಾಪತಿಗಳ ದೊಡ್ಡ ಸೈನ್ಯದೊಡನೆ ಯುದ್ಧಕ್ಕಾಗಿ ಶತ್ರುವನ್ನು ಎದುರಿಸಿ ನಿಂತನು. ॥ ೧೩-೧೫ ॥ ಆ ಸಮಯದಲ್ಲಿ ನಡೆಯುತ್ತಿದ್ದ ವೈವಸ್ವತ ಮನ್ವಂತರದ ಮೊದಲನೇ ಚತುರ್ಯುಗದ ತ್ರೇತಾಯುಗವು ಆಗಲೇ ಪ್ರಾರಂಭಗೊಂಡಿತ್ತು. ಅದೇ ಸಮಯದಲ್ಲಿ ನರ್ಮದಾ ನದಿಯ ದಡದಲ್ಲಿ ದೇವಾಸುರರ ಈ ಭಯಂಕರ ಸಂಗ್ರಾಮವು ನಡೆಯಿತು. ॥ ೧೬ ॥ ಆಗ ದೇವೇಂದ್ರನು ಕೈಯಲ್ಲಿ ವಜ್ರಾಯುಧವನ್ನು ಧರಿಸಿಕೊಂಡು – ರುದ್ರ, ವಸುಗಳು, ಆದಿತ್ಯರು, ಅಶ್ವಿನೀಕುಮಾರರಿಬ್ಬರು, ಪಿತೃಗಣರು, ಅಗ್ನಿ, ಮರುದ್ಗಣರು, ಋಭುಗಣರು, ಸಾಧ್ಯಗಣರು, ವಿಶ್ವೇದೇವ ಮುಂತಾದವರೊಡನೆ ತನ್ನ ಕಾಂತಿಯಿಂದ ಶೋಭಾಯಮಾನನಾಗಿದ್ದನು.

ದೃಷ್ಟ್ವಾ ವಜ್ರಧರಂ ಶಕ್ರಂ ರೋಚಮಾನಂ ಸ್ವಯಾ ಶ್ರಿಯಾ ।
ನಾಮೃಷ್ಯಂಸ್ತೇಽಸುರಾ ರಾಜನ್ಮೃಧೇ ವೃತ್ರಪುರಸ್ಸರಾಃ ॥ ೧೮ ॥

ನಮುಚಿಃ ಶಂಬರೋಽನರ್ವಾ ದ್ವಿಮೂರ್ಧಾ ಋಷಭೋಽಂಬರಃ ।
ಹಯಗ್ರೀವಃ ಶಂಕುಶಿರಾ ವಿಪ್ರಚಿತ್ತಿರಯೋಮುಖಃ ॥ ೧೯ ॥

ಪುಲೋಮಾ ವೃಷಪರ್ವಾ ಚ ಪ್ರಹೇತಿರ್ಹೇತಿರುತ್ಕಲಃ ।
ದೈತೇಯಾ ದಾನವಾ ಯಕ್ಷಾ ರಕ್ಷಾಂಸಿ ಚ ಸಹಸ್ರಶಃ ॥ ೨೦ ॥

ಸುಮಾಲಿಮಾಲಿಪ್ರಮುಖಾಃ ಕಾರ್ತಸ್ವರಪರಿಚ್ಛದಾಃ ।
ಪ್ರತಿಷಿಧ್ಯೇಂದ್ರಸೇನಾಗ್ರಂ ಮೃತ್ಯೋರಪಿ ದುರಾಸದಮ್ ॥ ೨೧ ॥

ಅಭ್ಯರ್ದಯನ್ನಸಂಭ್ರಾಂತಾಃ ಸಿಂಹನಾದೇನ ದುರ್ಮದಾಃ ।
ಗದಾಭಿಃ ಪರಿಘೈರ್ಬಾಣೈಃ ಪ್ರಾಸಮುದ್ಗರತೋಮರೈಃ ॥ ೨೨ ॥

ಶೂಲೈಃ ಪರಶ್ವಧೈಃ ಖಡ್ಗೈಃ ಶತಘ್ನೀಭಿರ್ಭುಶುಂಡಿಭಿಃ ।
ಸರ್ವತೋಽವಾಕಿರನ್ ಶಸ್ತ್ರೈರಸ್ತ್ರೈಶ್ಚ ವಿಬುಧರ್ಷಭಾನ್ ॥ ೨೩ ॥

ನ ತೇಽದೃಶ್ಯಂತ ಸಂಛನ್ನಾಃ ಶರಜಾಲೈಃ ಸಮಂತತಃ ।
ಪುಂಖಾನುಪುಂಖಪತಿತೈರ್ಜ್ಯೋತೀಂಷೀವ ನಭೋಘನೈಃ ॥ ೨೪ ॥

ನ ತೇ ಶಸ್ತ್ರಾಸ್ತ್ರವರ್ಷೌಘಾ ಹ್ಯಾಸೇದುಃ ಸುರಸೈನಿಕಾನ್ ।
ಛಿನ್ನಾಃ ಸಿದ್ಧಪಥೇ ದೇವೈರ್ಲಘುಹಸ್ತೈಃ ಸಹಸ್ರಧಾ ॥ ೨೫ ॥

ಅಥ ಕ್ಷೀಣಾಸ್ತ್ರಶಸ್ತ್ರೌಘಾ ಗಿರಿಶೃಂಗದ್ರುಮೋಪಲೈಃ ।
ಅಭ್ಯವರ್ಷನ್ಸುರಬಲಂ ಚಿಚ್ಛಿದುಸ್ತಾಂಶ್ಚ ಪೂರ್ವವತ್ ॥ ೨೬ ॥

ತಾನಕ್ಷತಾನ್ ಸ್ವಸ್ತಿಮತೋ ನಿಶಾಮ್ಯ
ಶಸ್ತ್ರಾಸ್ತ್ರಪೂಗೈರಥ ವೃತ್ರನಾಥಾಃ ।
ದ್ರುಮೈರ್ದೃಷದ್ಭಿರ್ವಿವಿಧಾದ್ರಿಶೃಂಗೈ-
ರವಿಕ್ಷತಾಂಸ್ತತ್ರಸುರಿಂದ್ರಸೈನಿಕಾನ್ ॥ ೨೭ ॥

ಸರ್ವೇ ಪ್ರಯಾಸಾ ಅಭವನ್ವಿಮೋಘಾಃ
ಕೃತಾಃ ಕೃತಾ ದೇವಗಣೇಷು ದೈತ್ಯೈಃ ।
ಕೃಷ್ಣಾನುಕೂಲೇಷು ಯಥಾ ಮಹತ್ಸು
ಕ್ಷುದ್ರೈಃ ಪ್ರಯುಕ್ತಾ ಉಶತೀ ರೂಕ್ಷವಾಚಃ ॥ ೨೮ ॥

ತೇ ಸ್ವಪ್ರಯಾಸಂ ವಿತಥಂ ನಿರೀಕ್ಷ್ಯ
ಹರಾವಭಕ್ತಾ ಹತಯುದ್ಧದರ್ಪಾಃ ।
ಪಲಾಯನಾಯಾಜಿಮುಖೇ ವಿಸೃಜ್ಯ
ಪತಿಂ ಮನಸ್ತೇ ದಧುರಾತ್ತಸಾರಾಃ ॥ ೨೯ ॥

ವೃತ್ರಾಸುರನೇ ಮೊದಲಾದ ದೈತ್ಯರು ಅವರು ಮುಂದೆ ಬಂದಿರುವುದನ್ನು ನೋಡಿ ಉರಿದುಬಿದ್ದನು. ॥ ೧೭-೧೮ ॥ ಆ ನಮೂಚಿ, ಶಂಬರ, ಅನರ್ವಾ, ದ್ವಿಮೂರ್ಧಾ, ಋಷಭ, ಅಂಬರ, ಹಯಗ್ರೀವ, ಶಂಕುಶಿರ, ವಿಪ್ರಚಿತ್ತಿ, ಅಯೋಮುಖ, ಪುಲೋಮಾ, ವೃಷಪರ್ವಾ, ಪ್ರಹೇತಿ, ಹೇತಿ, ಉತ್ಕಲ, ಸುಮಾಲಿ, ಮಾಲಿ ಮುಂತಾದ ಸಾವಿರಾರು ದೈತ್ಯ-ದಾನವರು ಹಾಗೂ ಯಕ್ಷ-ರಾಕ್ಷಸರು ಸ್ವರ್ಣಾಭರಣ – ಉಪಕರಣಗಳಿಂದ ಸುಸಜ್ಜಿತರಾಗಿ ದೇವರಾಜ ಇಂದ್ರನ ಸೇನೆಯನ್ನು ಮುಂದೆ ಬರದಂತೆ ತಡೆದರು. ಪರೀಕ್ಷಿತನೇ! ಆಗ ದೇವತೆಗಳ ಸೇನೆಯು ಸ್ವತಃ ಮೃತ್ಯುವಿಗೂ ಕೂಡ ಅಜೇಯವಾಗಿತ್ತು. ॥ ೧೯-೨೧ ॥ ಆ ದುರಹಂಕಾರಿಗಳಾದ ಅಸುರರು ಸಿಂಹನಾದವನ್ನು ಮಾಡುತ್ತಾ ಬಹು ಎಚ್ಚರಿಕೆಯಿಂದ ದೇವಸೇನೆಯನ್ನು ಪ್ರಹರಿಸ ತೊಡಗಿದರು. ಅವರೆಲ್ಲರು ಗದೆ, ಪರಿಘ, ಬಾಣ, ಪ್ರಾಸ, ಮುದ್ಗರ, ತೋಮರ, ಶೂಲ, ಪರಶು, ಖಡ್ಗ, ಶತಘ್ನಿ (ತೋಪು), ಭುಶುಂಡೀ ಮುಂತಾದ ಅಸ್ತ್ರ-ಶಸ್ತ್ರಗಳ ಮಳೆಯಿಂದ ದೇವತೆಗಳನ್ನು ಎಲ್ಲ ಕಡೆಗಳಿಂದ ಮುಚ್ಚಿಬಿಟ್ಟರು. ॥ ೨೨-೨೩ ॥ ಮೋಡಗಳು ಮುಚ್ಚಿದಾಗ ಆಕಾಶದ ನಕ್ಷತ್ರಗಳು ಕಾಣದೇ ಇರುವಂತೆಯೇ ನಾಲ್ಕೂ ಕಡೆಗಳಿಂದಲೂ ಒಂದರ ಮೇಲೊಂದರಂತೆ ಪ್ರಯೋಗಿಸಿದ ಬಾಣಗಳ ಸುರಿಮಳೆಯಿಂದ ಮುಚ್ಚಿಹೋದ ದೇವತೆಗಳು ಕಾಣದೇ ಹೋದರು. ॥ ೨೪ ॥ ಪರೀಕ್ಷಿತನೇ! ಆದರೆ ಅಸ್ತ್ರ-ಶಸ್ತ್ರಗಳ ಮಳೆಯು ದೇವತೆಗಳನ್ನು ಮುಟ್ಟಲು ಸಾಧ್ಯವೇ ಆಗಲಿಲ್ಲ. ಏಕೆಂದರೆ, ಅವರು ತಮ್ಮ ಕೈಚಳಕದಿಂದ ಅವುಗಳನ್ನು ಆಕಾಶದಲ್ಲಿಯೇ ಸಾವಿರಾರು ತುಂಡುಗಳಾಗುವಂತೆ ಕತ್ತರಿಸಿಬಿಟ್ಟರು. ॥ ೨೫ ॥ ಅಸುರರ ಶಸ್ತ್ರಾಸ್ತ್ರಗಳು ಮುಗಿದುಹೋದಾಗ ಅವರು ದೇವತೆಗಳ ಸೈನ್ಯದ ಮೇಲೆ ಪರ್ವತ ಶಿಖರಗಳನ್ನು, ವೃಕ್ಷಗಳನ್ನು, ಕಲ್ಲುಬಂಡೆಗಳನ್ನು ಮಳೆಗರೆದರು. ಆದರೆ ದೇವತೆಗಳು ಅವನ್ನು ಮೊದಲಿನಂತೆ ತುಂಡರಿಸಿ ಹಾಕಿದರು. ॥ ೨೬ ॥

ಪರೀಕ್ಷಿದ್ರಾಜನೇ! ತಮ್ಮ ಅಸಂಖ್ಯ ಶಸ್ತ್ರಾಸ್ತ್ರಗಳೂ ಕೂಡ ದೇವತೆಗಳ ಸೈನ್ಯಕ್ಕೆ ಏನೂ ತೊಂದರೆಯನ್ನು ಮಾಡಲಾಗದೇ ಇರುವುದನ್ನೂ, ಮರ ಬಂಡೆಗಳು, ಪರ್ವತಗಳ ದೊಡ್ಡ-ದೊಡ್ಡ ಶಿಖರಗಳಿಂದಲೂ ದೇವತೆಗಳ ಶರೀರದ ಮೇಲೆ ಗಾಯದ ಗೆರೆಯೂ ಆಗದೇ ಕುಶಲರೇ ಆಗಿ ಇರುವುದನ್ನು ಕಂಡು ಅವರೆಲ್ಲರಿಗೂ ತುಂಬಾ ಭಯವಾಯಿತು. ಕ್ಷುದ್ರಮನುಷ್ಯರು ಪ್ರಯೋಗಿಸುವ ಕಠೋರವೂ, ಅಮಂಗಳಕರವೂ ಆದ ಕೆಟ್ಟ ಮಾತುಗಳು ಶ್ರೀಕೃಷ್ಣಪರಮಾತ್ಮನಿಂದ ಸಂರಕ್ಷಿತರಾದ ಭಕ್ತರ ಮೇಲೆ ಏನೂ ಪ್ರಭಾವ ಬೀರದಂತೆಯೇ ದೈತ್ಯರು ದೇವತೆಗಳನ್ನು ಸೋಲಿಸಲಿಕ್ಕಾಗಿ ಮಾಡಿದ ಪ್ರಯತ್ನಗಳೆಲ್ಲವೂ ನಿಷ್ಫಲವಾದುವು. ॥ ೨೭-೨೮ ॥ ಭಗವದ್ವಿಮುಖರಾದ ಅಸುರರು ತಮ್ಮ ಪ್ರಯತ್ನವು ವ್ಯರ್ಥವಾದುದನ್ನು ಕಂಡು ಉತ್ಸಾಹಗುಂದಿದರು. ಅವರ ಪರಾಕ್ರಮದ ಗರ್ವವು ನುಚ್ಚುನೂರಾಯಿತು. ಆಗ ಅವರು ತಮ್ಮ ಅಧಿಪತಿಯಾದ ವೃತ್ರಾಸುರನನ್ನು ಯುದ್ಧಭೂಮಿಯಲ್ಲೇ ಬಿಟ್ಟು ಪಲಾಯನ ಮಾಡಿದರು. ಏಕೆಂದರೆ ದೇವತೆಗಳು ಅವರ ಬಲ-ಪೌರುಷಗಳೆಲ್ಲವನ್ನು ಸೆಳೆದುಕೊಂಡಿದ್ದರು. ॥ ೨೯ ॥

ವೃತ್ರೋಽಸುರಾಂಸ್ತಾನನುಗಾನ್ಮನಸ್ವೀ
ಪ್ರಧಾವತಃ ಪ್ರೇಕ್ಷ್ಯ ಬಭಾಷ ಏತತ್ ।
ಪಲಾಯಿತಂ ಪ್ರೇಕ್ಷ್ಯ ಬಲಂ ಚ ಭಗ್ನಂ
ಭಯೇನ ತೀವ್ರೇಣ ವಿಹಸ್ಯ ವೀರಃ ॥ ೩೦ ॥

ಕಾಲೋಪಪನ್ನಾಂ ರುಚಿರಾಂ ಮನಸ್ವಿನಾ-
ಮುವಾಚ ವಾಚಂ ಪುರುಷಪ್ರವೀರಃ ।
ಹೇ ವಿಪ್ರಚಿತ್ತೇ ನಮುಚೇ ಪುಲೋಮನ್
ಮಯಾನರ್ವಂಛಂಬರ ಮೇ ಶೃಣುಧ್ವಮ್ ॥ ೩೧ ॥

ಜಾತಸ್ಯ ಮೃತ್ಯುರ್ಧ್ರುವ ಏಷ ಸರ್ವತಃ
ಪ್ರತಿಕ್ರಿಯಾ ಯಸ್ಯ ನ ಚೇಹ ಕ್ಲೃಪ್ತಾ ।
ಲೋಕೋ ಯಶಶ್ಚಾಥ ತತೋ ಯದಿ ಹ್ಯಮುಂ
ಕೋ ನಾಮ ಮೃತ್ಯುಂ ನ ವೃಣೀತ ಯುಕ್ತಮ್ ॥ ೩೨ ॥

ದ್ವೌ ಸಂಮತಾವಿಹ ಮೃತ್ಯೂ ದುರಾಪೌ
ಯದ್ಬ್ರಹ್ಮಸಂಧಾರಣಯಾ ಜಿತಾಸುಃ ।
ಕಲೇವರಂ ಯೋಗರತೋ ವಿಜಹ್ಯಾದ್
ಯದಗ್ರಣೀರ್ವೀರಶಯೇಽನಿವೃತ್ತಃ ॥ ೩೩ ॥

ತನ್ನ ಅನುಯಾಯಿಗಳಾದ ದೈತ್ಯವೀರರು ಭಯಗೊಂಡು ಓಡಿಹೋಗುತ್ತಿರುವುದನ್ನೂ, ತನ್ನ ಸೈನ್ಯವು ಚೆಲ್ಲಾಪಿಲ್ಲಿಯಾಗುತ್ತಿರುವುದನ್ನು ಕಂಡು ಧೀರ-ವೀರನಾದ ವೃತ್ರಾಸುರನಿಗೆ ನಗುಬಂತು. ॥ ೩೦ ॥ ವೀರಶಿರೋಮಣಿ ವೃತ್ರಾಸುರನು ಸಮಯಕ್ಕೆ ಸರಿಯಾಗಿ ವಿಚಾರೋಚಿತ ವಾಣಿಯಿಂದ ವಿಪ್ರಚಿತ್ತಿ, ನಮುಚಿ, ಪುಲೋಮಾ, ಮಯ, ಅನರ್ವಾ, ಶಂಬರ ಮುಂತಾದ ದೈತ್ಯರನ್ನು ಸಂಬೋಧಿಸುತ್ತಾ ಅಸುರರೇ! ಓಡಬೇಡಿರಿ. ನನ್ನ ಒಂದು ಮಾತನ್ನು ಕೇಳಿಕೊಳ್ಳಿರಿ – ॥ ೩೧ ॥ ಹುಟ್ಟಿದವನು ಒಂದಲ್ಲ ಒಂದುದಿನ ಅವಶ್ಯವಾಗಿ ಸಾಯಲೇಬೇಕು. ಇದರಲ್ಲಿ ಸಂದೇಹವೇ ಇಲ್ಲ. ಈ ಜಗತ್ತಿನಲ್ಲಿ ವಿಧಾತನು ಮೃತ್ಯುವಿನಿಂದ ತಪ್ಪಿಸಿಕೊಳ್ಳುವ ಯಾವ ಉಪಾಯವನ್ನೂ ತಿಳಿಸಿಲ್ಲ. ಇಂತಹ ಸ್ಥಿತಿಯಲ್ಲಿ ಮೃತ್ಯುವಿನ ಮೂಲಕ ಸ್ವರ್ಗಾದಿ ಲೋಕಗಳು, ಕೀರ್ತಿಯು ಸಿಗುವುದಾದರೆ ಅಂತಹ ಮೃತ್ಯುವನ್ನು ಯಾವ ಬುದ್ಧಿವಂತನು ತಾನೇ ಸ್ವಾಗತಿಸುವುದಿಲ್ಲ? ॥ ೩೨ ॥ ಪ್ರಪಂಚದಲ್ಲಿ ಎರಡು ವಿಧದಿಂದ ಮೃತ್ಯುವನ್ನು ಪಡೆಯುವುದು ಪರಮ ದುರ್ಲಭ ಮತ್ತು ಶ್ರೇಷ್ಠವೆಂದು ತಿಳಿಯಲಾಗಿದೆ. ಒಂದು ಯೋಗಿಗಳು ತಮ್ಮ ಪ್ರಾಣಗಳನ್ನು ವಶಪಡಿಸಿಕೊಂಡು ಬ್ರಹ್ಮಚಿಂತನೆಯಿಂದ ಶರೀರವನ್ನು ತ್ಯಜಿಸುವುದು. ಮತ್ತೊಂದು ಯುದ್ಧಭೂಮಿಯಲ್ಲಿ ಬೆನ್ನುತೋರಿಸದೆ ಶತ್ರುವಿನ ಮುಂದೆ ನಿಂತು ಹೋರಾಡುತ್ತಾ ಮಡಿಯುವುದು. ಇಂತಹ ಒಳ್ಳೆಯ ಅವಕಾಶವನ್ನು ನೀವು ಏಕೆ ಕಳೆದುಕೊಳ್ಳುತ್ತಿರುವಿರಿ? ॥ ೩೩ ॥

ಹತ್ತನೆಯ ಅಧ್ಯಾಯವು ಮುಗಿಯಿತು. ॥ ೧೦ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಷಷ್ಠಸ್ಕಂಧೇ
ಇಂದ್ರ-ವೃತ್ರಾಸುರಯುದ್ಧವರ್ಣನಂ ನಾಮ ದಶಮೋಽಧ್ಯಾಯಃ ॥ ೧೦ ॥

ಹನ್ನೊಂದನೆಯ ಅಧ್ಯಾಯ

ವೃತ್ರಾಸುರನ ವೀರವಾಣಿ ಮತ್ತು ಅವನು ಮಾಡಿದ ಭಗವತ್ ಸ್ತುತಿ

ಶ್ರೀಶುಕ ಉವಾಚ

ತ ಏವಂ ಶಂಸತೋ ಧರ್ಮಂ ವಚಃ ಪತ್ಯುರಚೇತಸಃ ।
ನೈವಾಗೃಹ್ಣನ್ಭಯತ್ರಸ್ತಾಃ ಪಲಾಯನಪರಾ ನೃಪ ॥ ೧ ॥

ವಿಶೀರ್ಯಮಾಣಾಂ ಪೃತನಾಮಾಸುರೀಮಸುರರ್ಷಭಃ ।
ಕಾಲಾನುಕೂಲೈಸ್ತ್ರಿದಶೈಃ ಕಾಲ್ಯಮಾನಾಮನಾಥವತ್ ॥ ೨ ॥

ದೃಷ್ಟ್ವಾತಪ್ಯತ ಸಂಕ್ರುದ್ಧ ಇಂದ್ರಶತ್ರುರಮರ್ಷಿತಃ ।
ತಾನ್ನಿವಾರ್ಯೌಜಸಾ ರಾಜನ್ನಿರ್ಭರ್ತ್ಸ್ಯೇದಮುವಾಚ ಹ ॥ ೩ ॥

ಶ್ರೀಶುಕಮುನಿಗಳು ಹೇಳುತ್ತಾರೆ – ಎಲೈ ರಾಜೇಂದ್ರನೇ! ಅಸುರರ ಸೈನ್ಯವು ಭಯಗೊಂಡು ಪಲಾಯನ ಮಾಡುತ್ತಿತ್ತು. ತನ್ನ ಒಡೆಯನ ಧರ್ಮಾನುಕೂಲ ವಚನಗಳ ಕಡೆಗೆ ಗಮನ ಕೊಡದಷ್ಟು ಅವರು ವಿವೇಕಪ್ರಜ್ಞೆ ಕಳೆದುಕೊಂಡಿದ್ದರು. ॥ ೧ ॥ ದೇವತೆಗಳಿಗೆ ಕಾಲವು ಅನುಕೂಲವಾದ್ದರಿಂದ ಅವರು ಅಸುರರ ಸೇನೆಯನ್ನು ಧ್ವಂಸಮಾಡುತ್ತಿದ್ದಾರೆ ಮತ್ತು ಅಸುರ ಸೈನ್ಯವು ಅನಾಯಕವಾದಂತೆ ಚೆಲ್ಲಾ-ಪಿಲ್ಲಿಯಾಗುತ್ತಿದೆ ಎಂಬುದನ್ನು ಕಂಡು ವೃತ್ರಾಸುರನಿಗೆ ಮಿತಿಮೀರಿದ ಕ್ರೋಧವು ಉಂಟಾಯಿತು. ರಾಜನೇ! ಆತನಿಗೆ ದೇವತೆಗಳ ಉತ್ಸಾಹವನ್ನೂ, ತನ್ನ ಸೈನ್ಯದ ದೈನ್ಯವನ್ನೂ ಸಹಿಸಿಕೊಳ್ಳಲಾಗಲಿಲ್ಲ. ಆಗ ಅವನು ಬಲಾತ್ಕಾರದಿಂದ ದೇವಸೇನೆಯನ್ನು ಮುನ್ನುಗ್ಗದಂತೆ ತಡೆದು, ಗದರಿಸುತ್ತಾ ಹೀಗೆಂದನು. ॥ ೨-೩ ॥ ಕ್ಷುದ್ರರಾದ ದೇವತೆಗಳಿರಾ! ರಣಭೂಮಿಯಲ್ಲಿ ಬೆನ್ನುತೋರಿಸಿ ಓಡಿಹೋಗುತ್ತಿರುವ ಹೇಡಿಗಳ

ಕಿಂ ವ ಉಚ್ಚರಿತೈರ್ಮಾತುರ್ಧಾವದ್ಭಿಃ ಪೃಷ್ಠತೋ ಹತೈಃ ।
ನ ಹಿ ಭೀತವಧಃ ಶ್ಲಾಘ್ಯೋ ನ ಸ್ವರ್ಗ್ಯಃ ಶೂರಮಾನಿನಾಮ್
॥ ೪ ॥

ಯದಿ ವಃ ಪ್ರಧನೇ ಶ್ರದ್ಧಾ ಸಾರಂ ವಾ ಕ್ಷುಲ್ಲಕಾ ಹೃದಿ ।
ಅಗ್ರೇ ತಿಷ್ಠತ ಮಾತ್ರಂ ಮೇ ನ ಚೇದ್ಗ್ರಾಮ್ಯಸುಖೇ ಸ್ಪೃಹಾ
॥ ೫ ॥

ಏವಂ ಸುರಗಣಾನ್ಕ್ರುದ್ಧೋ ಭೀಷಯನ್ವಪುಷಾ ರಿಪೂನ್ ।
ವ್ಯನದತ್ಸುಮಹಾಪ್ರಾಣೋ ಯೇನ ಲೋಕಾ ವಿಚೇತಸಃ
॥ ೬ ॥

ತೇನ ದೇವಗಣಾಃ ಸರ್ವೇ ವೃತ್ರವಿಸ್ಫೋಟನೇನ ವೈ ।
ನಿಪೇತುರ್ಮೂರ್ಚ್ಛಿತಾ ಭೂಮೌ ಯಥೈವಾಶನಿನಾ ಹತಾಃ
॥ ೭ ॥

ಮಮರ್ದ ಪದ್ಭ್ಯಾಂ ಸುರಸೈನ್ಯಮಾತುರಂ
ನಿಮೀಲಿತಾಕ್ಷಂ ರಣರಂಗದುರ್ಮದಃ ।
ಗಾಂ ಕಂಪಯನ್ನುದ್ಯತಶೂಲ ಓಜಸಾ
ನಾಲಂ ವನಂ ಯೂಥಪತಿರ್ಯಥೋನ್ಮದಃ ॥ ೮ ॥

ವಿಲೋಕ್ಯ ತಂ ವಜ್ರಧರೋಽತ್ಯಮರ್ಷಿತಃ
ಸ್ವಶತ್ರವೇಽಭಿದ್ರವತೇ ಮಹಾಗದಾಮ್ ।
ಚಿಕ್ಷೇಪ ತಾಮಾಪತತೀಂ ಸುದುಃಸಹಾಂ
ಜಗ್ರಾಹ ವಾಮೇನ ಕರೇಣ ಲೀಲಯಾ ॥ ೯ ॥

ಸ ಇಂದ್ರಶತ್ರುಃ ಕುಪಿತೋ ಭೃಶಂ ತಯಾ
ಮಹೇಂದ್ರವಾಹಂ ಗದಯೋಗ್ರವಿಕ್ರಮಃ ।
ಜಘಾನ ಕುಂಭಸ್ಥಲ ಉನ್ನದನ್ಮೃಧೇ
ತತ್ಕರ್ಮ ಸರ್ವೇ ಸಮಪೂಜಯನ್ನೃಪ ॥ ೧೦ ॥

ಐರಾವತೋ ವೃತ್ರಗದಾಭಿಮೃಷ್ಟೋ
ವಿಘೂರ್ಣಿತೋಽದ್ರಿಃ ಕುಲಿಶಾಹತೋ ಯಥಾ ।
ಅಪಾಸರದ್ಭಿನ್ನಮುಖಃ ಸಹೇಂದ್ರೋ
ಮುಂಚನ್ನಸೃಕ್ಸಪ್ತಧನುರ್ಭೃಶಾರ್ತಃ ॥ ೧೧ ॥

ನ ಸನ್ನವಾಹಾಯ ವಿಷಣ್ಣಚೇತಸೇ
ಪ್ರಾಯುಂಕ್ತ ಭೂಯಃ ಸ ಗದಾಂ ಮಹಾತ್ಮಾ ।
ಇಂದ್ರೋಽಮೃತಸ್ಯಂದಿಕರಾಭಿಮರ್ಶ-
ವೀತವ್ಯಥಕ್ಷತವಾಹೋಽವತಸ್ಥೇ ॥ ೧೨ ॥

ಮೇಲೆ ಹಿಂದುಗಡೆಯಿಂದ ಪ್ರಹಾರಮಾಡುವುದರಿಂದ ಏನು ಲಾಭ? ಅಂಜುಬುರುಕರು ಒಳ್ಳೆಯ ತಂದೆ-ತಾಯಿಗಳ ಮಕ್ಕಳೇ ಅಲ್ಲ. ಅವರ ದೇಹದಿಂದ ಹೊರಹಾಕಲ್ಪಟ್ಟ ಮಲ-ಮೂತ್ರಗಳಿಗೆ ಸಮಾನರು. ಆದರೆ ತಮ್ಮನ್ನು ಶೂರ ವೀರರೆಂದು ತಿಳಿದಿರುವ ನಿಮ್ಮಂತಹವರಿಗೂ ಹೇಡಿಗಳನ್ನು ಹೊಡೆಯುವುದು ಪ್ರಶಂಸಾರ್ಹ ಮಾತಲ್ಲ. ಇದರಿಂದ ನಿಮಗೆ ಸ್ವರ್ಗವೂ ದೊರೆಯಲಾರದು. ॥ ೪ ॥ ನಿಮ್ಮ ಮನಸ್ಸಿನಲ್ಲಿ ಯುದ್ಧಮಾಡಬೇಕೆಂಬ ಶಕ್ತಿ, ಉತ್ಸಾಹವಿದ್ದರೆ, ಇನ್ನು ಬದುಕುಳಿದು ವಿಷಯಸುಖವನ್ನು ಭೋಗಿಸುವ ಆಸೆ ಇಲ್ಲದಿದ್ದರೆ ಸ್ವಲ್ಪಹೊತ್ತು ನನ್ನ ಮುಂದೆ ನಿಲ್ಲಿರಿ. ಯುದ್ಧದ ರುಚಿಯನ್ನು ಸವಿಯುವಿರಂತೆ. ॥ ೫ ॥

ಪರೀಕ್ಷಿತನೇ! ಮಹಾವೀರಾಗ್ರಣಿಯಾದ ವೃತ್ರಾಸುರನು ಕ್ರೋಧದಿಂದ ಬೆಂಕಿಯ ಕಿಡಿಯನ್ನು ಕಾರುತ್ತಾ ತನ್ನ ಭೀಕರ ರೂಪದಿಂದಲೂ, ವೀರವಾಣಿಯಿಂದಲೂ ದೇವತೆಗಳನ್ನು ಹೆದರಿಸುತ್ತಾ ಗಟ್ಟಿಯಾಗಿ ಸಿಂಹನಾದವನ್ನು ಮಾಡಿದನು. ಅದನ್ನು ಕೇಳಿದ ಅನೇಕ ಜನರು ಮೂರ್ಛಿತರಾದರು. ॥ ೬ ॥ ವೃತ್ರಾಸುರನ ಆ ಭಯಂಕರ ಗರ್ಜನೆಯಿಂದ ಎಲ್ಲ ದೇವತೆಗಳು ಸಿಡಿಲುಹೊಡೆದಂತೆ ಮೂರ್ಛಿತರಾಗಿ ನೆಲಕ್ಕುರುಳಿದರು. ॥ ೭ ॥ ಮತ್ತೇರಿದ ಗಜರಾಜನು ಜೊಂಡುಹುಲ್ಲಿನ ಕಾಡನ್ನು ತುಳಿದು ಹಾಕುವಂತೆ – ಯುದ್ಧೋತ್ಸಾಹದಿಂದ ಕೊಬ್ಬಿದ ಆ ವೃತ್ರಾಸುರನು ಕೈಯಲ್ಲಿ ತ್ರಿಶೂಲವನ್ನು ಎತ್ತಿಕೊಂಡು, ಕಣ್ಣುಮುಚ್ಚಿ ಮೂರ್ಛಿತರಾಗಿ ಬಿದ್ದಿದ್ದ ದೇವತೆಗಳ ಸೈನ್ಯವನ್ನು ಕಾಲಿನಿಂದ ಮೆಟ್ಟಿ ಮಡುಹಿದನು. ಆತನ ವೇಗಕ್ಕೆ ಭೂಮಿಯು ನಡುಗ ತೊಡಗಿತು. ॥ ೮ ॥ ವಜ್ರಪಾಣಿಯಾದ ದೇವೇಂದ್ರನಿಗೆ ಅದನ್ನು ಸಹಿಸಲಾಗಲಿಲ್ಲ. ಅವನು ತನ್ನತ್ತ ನುಗ್ಗಿ ಬಂದಾಗ ಇಂದ್ರನು ಇನ್ನೂ ಕ್ರುದ್ಧನಾಗಿ ಶತ್ರುವಿನ ಮೇಲೆ ದೊಡ್ಡದೊಂದು ಗದೆಯನ್ನು ಬೀಸಿ ಒಗೆದನು. ಆದರೆ ಆ ವೃತ್ರಾಸುರನು ಅದು ತನ್ನ ಬಳಿಗೆ ಬರುವ ಮೊದಲೇ ಅದನ್ನು ಲೀಲಾಜಾಲವಾಗಿ ಎಡಗೈಯಿಂದ ಹಿಡಿದುಬಿಟ್ಟನು. ॥ ೯ ॥ ರಾಜನೇ! ಪರಮ ಪರಾಕ್ರಮಿ ವೃತ್ರಾಸುರನು ಕೋಪದಿಂದ ಕಿಡಿ-ಕಿಡಿಯಾಗಿ ಘೋರವಾಗಿ ಗರ್ಜಿಸುತ್ತಾ ಅದೇ ಗದೆಯಿಂದ ಇಂದ್ರನ ವಾಹನ ಐರಾವತದ ಮಸ್ತಕದ ಮೇಲೆ ಬಿರುಸಿನಿಂದ ಬಡಿದನು. ಆತನ ಆ ಶೌರ್ಯವನ್ನು ಎಲ್ಲರೂ 'ಭಲೇ!' ಎಂದು ಹೊಗಳತೊಡಗಿದರು. ॥ ೧೦ ॥ ವೃತ್ರಾಸುರನು ಬೀಸಿದ ಗದೆಯ ಏಟಿನಿಂದ ಐರಾವತವು ವಜ್ರದಿಂದ ಹೊಡೆಯಲ್ಪಟ್ಟ ಪರ್ವತದಂತೆ ಘಾಸಿಗೊಂಡು ಒದ್ದಾಡ ತೊಡಗಿತು. ತಲೆಯು ಒಡೆದು ಹೋದುದರಿಂದ ರಕ್ತವನ್ನು ಕಾರುತ್ತಾ, ನೋವಿನಿಂದ ನರಳುತ್ತಾ ಆ ಇಂದ್ರವಾಹನವು ತನ್ನ ಮೇಲೆ ಕುಳಿತಿದ್ದ ಪ್ರಭುವಿನೊಡನೆ ಇಪ್ಪತ್ತೆಂಟು ಕೈಗಳಷ್ಟು ಹಿಂದೆ ಸರಿಯಿತು. ॥ ೧೧ ॥ ತನ್ನ ದಿವ್ಯವಾಹನವು ಮೂರ್ಛೆಗೊಂಡಿದ್ದನ್ನು ಕಂಡು ಇಂದ್ರನಿಗೆ ಮತ್ತಷ್ಟು ಕಳವಳವಾಯಿತು. ಯುದ್ಧಧರ್ಮವನ್ನು ಅರಿತಿದ್ದ ಅಸುರೇಂದ್ರನು ಇದನ್ನು ಕಂಡು ಅವನ ಮೇಲೆ ಮತ್ತೆ ಗದೆಯನ್ನು ಪ್ರಯೋಗಿಸಲಿಲ್ಲ. ಆ ವೇಳೆಗೆ ಇಂದ್ರನು ಅಮೃತವು ಸೂಸುತ್ತಿದ್ದ ತನ್ನ ಹಸ್ತದ ಸ್ಪರ್ಶದಿಂದ ಗಾಯಗೊಂಡ ಐರಾವತದ ನೋವನ್ನು ಗುಣಪಡಿಸಿ, ಮತ್ತೆ ಯುದ್ಧಭೂಮಿಗೆ ಬಂದು ಶತ್ರುವನ್ನೆದುರಿಸಿದನು. ॥ ೧೨ ॥

ಸ ತಂ ನೃಪೇಂದ್ರಾಹವಕಾಮ್ಯಯಾ ರಿಪುಂ
ವಜ್ರಾಯುಧಂ ಭ್ರಾತೃಹಣಂ ವಿಲೋಕ್ಯ ।
ಸ್ಮರಂಶ್ಚ ತತ್ಕರ್ಮ ನೃಶಂಸಮಂಹಃ
ಶೋಕೇನ ಮೋಹೇನ ಹಸಂಜಗಾದ ॥ ೧೩ ॥

ಪರೀಕ್ಷಿತನೇ! ತನ್ನ ಅಣ್ಣನಾದ ವಿಶ್ವರೂಪನನ್ನು ವಧಿಸಿದ ಶತ್ರುವಾದ ಇಂದ್ರನು ಯುದ್ಧಕ್ಕಾಗಿ ಕೈಯಲ್ಲಿ ವಜ್ರವನ್ನು ಧರಿಸಿಕೊಂಡು ಪುನಃ ಮುಂದೆ ಬಂದಿರುವುದನ್ನು ವೃತ್ರಾಸುರನು ನೋಡಿದಾಗ ಅವನಿಗೆ ಅವನ ಕ್ರೂರ ಪಾಪಕರ್ಮವು ನೆನಪಾಗಿ, ಶೋಕ-ಮೋಹದಿಂದ ಕೂಡಿದವನಾಗಿ ನಗುತ್ತಾ ಅವನಲ್ಲಿ ಇಂತೆಂದನು. ॥ ೧೩ ॥

ವೃತ್ರ ಉವಾಚ

ದಿಷ್ಟ್ಯಾ ಭವಾನ್ಮೇ ಸಮವಸ್ಥಿತೋ ರಿಪು-
ರ್ಯೋ ಬ್ರಹ್ಮಹಾ ಗುರುಹಾ ಭ್ರಾತೃಹಾ ಚ ।
ದಿಷ್ಟ್ಯಾನೃಣೋಽದ್ಯಾಹಮಸತ್ತಮ ತ್ವಯಾ
ಮಚ್ಛೂಲನಿರ್ಭಿನ್ನದೃಷದ್ಧೃದಾಚಿರಾತ್ ॥ ೧೪ ॥

ಯೋ ನೋಽಗ್ರಜಸ್ಯಾತ್ಮವಿದೋ ದ್ವಿಜಾತೇ-
ರ್ಗುರೋರಪಾಪಸ್ಯ ಚ ದೀಕ್ಷಿತಸ್ಯ ।
ವಿಶ್ರಭ್ಯ ಖಡ್ಗೇನ ಶಿರಾಂಸ್ಯವೃಶ್ಚತ್
ಪಶೋರಿವಾಕರುಣಃ ಸ್ವರ್ಗಕಾಮಃ ॥ ೧೫ ॥

ಶ್ರೀಹ್ರೀದಯಾಕೀರ್ತಿಭಿರುಜ್ಝಿತಂ ತ್ವಾಂ
ಸ್ವಕರ್ಮಣಾ ಪುರುಷಾದೈಶ್ಚ ಗರ್ಹ್ಯಮ್ ।
ಕೃಚ್ಛ್ರೇಣ ಮಚ್ಛೂಲವಿಭಿನ್ನದೇಹ-
ಮಸ್ಪೃಷ್ಟವಹ್ನಿಂ ಸಮದಂತಿ ಗೃಧ್ರಾಃ ॥ ೧೬ ॥

ಅನ್ಯೇಽನು ಯೇ ತ್ವೇಹ ನೃಶಂಸಮಜ್ಞಾ
ಯೇ ಹ್ಯುದ್ಯತಾಸ್ತ್ರಾಃ ಪ್ರಹರಂತಿ ಮಹ್ಯಮ್ ।
ತೈರ್ಭೂತನಾಥಾನ್ಸಗಣಾನ್ನಿಶಾತ-
ತ್ರಿಶೂಲನಿರ್ಭಿನ್ನಗಲೈರ್ಯಜಾಮಿ ॥ ೧೭ ॥

ಅಥೋ ಹರೇ ಮೇ ಕುಲಿಶೇನ ವೀರ
ಹರ್ತಾ ಪ್ರಮಥ್ಯೈವ ಶಿರೋ ಯದೀಹ ।
ತತ್ರಾನೃಣೋ ಭೂತಬಲಿಂ ವಿಧಾಯ
ಮನಸ್ವಿನಾಂ ಪಾದರಜಃ ಪ್ರಪತ್ಸ್ಯೇ ॥ ೧೮ ॥

ಸುರೇಶ ಕಸ್ಮಾನ್ನ ಹಿನೋಷಿ ವಜ್ರಂ
ಪುರಃ ಸ್ಥಿತೇ ವೈರಿಣಿ ಮಯ್ಯಮೋಘಮ್ ।
ಮಾ ಸಂಶಯಿಷ್ಠಾ ನ ಗದೇವ ವಜ್ರಂ
ಸ್ಯಾನ್ನಿಷ್ಫಲಂ ಕೃಪಣಾರ್ಥೇವ ಯಾಚ್ಞಾ ॥ ೧೯ ॥

ವೃತ್ರಾಸುರನು ಹೇಳಿದನು – ಎಲೈ ದುರಾತ್ಮನೇ! ಬ್ರಾಹ್ಮಣನೂ, ನಿನಗೆ ಗುರುವೂ, ನನಗೆ ಅಣ್ಣನೂ ಆದ ವಿಶ್ವರೂಪನನ್ನು ಹತ್ಯೆಮಾಡಿದ ಕೊಲೆಪಾತಕಿಯೂ, ಶತ್ರುವೂ ಆದ ನೀನು ನನ್ನ ಎದುರಿಗೆ ಸಿಕ್ಕಿರುವುದು ನನ್ನ ಭಾಗ್ಯೋದಯವೇ ಸರಿ. ಎಲವೋ ದುಷ್ಟನೇ! ಈಗ ಶೀಘ್ರಾತಿಶೀಘ್ರವಾಗಿ ನಾನು ಕಲ್ಲಿನಂತಿರುವ ನಿನ್ನ ಕಠೋರಹೃದಯವನ್ನು ಈ ಶೂಲದಿಂದ ಸೀಳಿಹಾಕಿ ಅಣ್ಣನ ಋಣದಿಂದ ಮುಕ್ತನಾಗುವೆ. ಆಹಾ! ಇದು ನನಗೆ ಎಂತಹ ಆನಂದದ ಮಾತಾಗಿದೆ! ॥ ೧೪ ॥ ಎಲವೋ ಇಂದ್ರನೇ! ಬ್ರಾಹ್ಮಣನಾಗಿರುವುದರ ಜೊತೆಗೆ ಯಜ್ಞದಲ್ಲಿ ದೀಕ್ಷಿತನೂ ಆಗಿದ್ದು, ನಿನಗೆ ಗುರುವಾಗಿದ್ದ; ಆತ್ಮಜ್ಞಾನಿಯೂ, ಪಾಪರಹಿತನೂ ಆಗಿದ್ದ ನನ್ನಣ್ಣನಿಗೆ ನಂಬಿಕೆಹುಟ್ಟಿಸಿ – ಸ್ವರ್ಗವನ್ನು ಬಯಸುವವನು ಯಜ್ಞದಲ್ಲಿ ಪಶುವಿನ ತಲೆಯನ್ನು ಕತ್ತರಿಸುವಂತೆ ನೀನು ಖಡ್ಗದಿಂದ ಆತನ ಮೂರೂ ತಲೆಗಳನ್ನು ಕತ್ತರಿಸಿಬಿಟ್ಟಿರುವೆ. ॥ ೧೫ ॥ ದಯೆ, ಲಜ್ಜೆ ಲಕ್ಷ್ಮೀ ಮತ್ತು ಕೀರ್ತಿ ಇವುಗಳು ನಿನ್ನಿಂದ ಬಿಟ್ಟುಹೋಗಿವೆ. ನೀನು ಮಾಡಿದ ಅತಿನೀಚ ಕಾರ್ಯವನ್ನು ಮನುಷ್ಯರೇನು, ರಾಕ್ಷಸರೂ ಕೂಡ ನಿಂದಿಸುತ್ತಿದ್ದಾರೆ. ಇಂದು ನಿನ್ನ ಶರೀರವು ನನ್ನ ತ್ರಿಶೂಲದಿಂದ ಹೋಳು-ಹೋಳಾಗಿ ಹೋಗುವುದು. ಅತಿ ಕಷ್ಟವಾದ ಮೃತ್ಯುವು ನಿನಗೆ ಒದಗೀತು. ನಿನ್ನಂತಹ ಪಾಪಿಯನ್ನು ಬೆಂಕಿಯೂ ಮುಟ್ಟದು. ನಿನ್ನನ್ನಾದರೋ ರಣಹದ್ದುಗಳು ಚುಚ್ಚಿ-ಚುಚ್ಚಿ ತಿಂದುಬಿಡುವುವು. ॥ ೧೬ ॥ ಈ ಅಜ್ಞಾನಿಗಳಾದ ದೇವತೆಗಳು ನಿನ್ನಂತಹ ನೀಚನೂ, ಕ್ರೂರಿಯೂ ಆದವನಿಗೆ ಅನುಯಾಯಿಗಳಾಗಿ ನನ್ನ ಮೇಲೆ ಶಸ್ತ್ರಾಸ್ತ್ರಗಳನ್ನು ಪ್ರಯೋಗಿಸುತ್ತಿದ್ದಾರೆ. ನಾನು ನನ್ನ ಹರಿತವಾದ ತ್ರಿಶೂಲದಿಂದ ಅವರ ಕತ್ತನ್ನು ಕತ್ತರಿಸಿಬಿಡುವೆನು. ಅದರ ಮೂಲಕ ಗಣಗಳ ಸಹಿತ ಭೈರವಾದಿ ಭೂತನಾಥರಿಗೆ ಬಲಿಯನ್ನು ಅರ್ಪಿಸುವೆನು. ॥ ೧೭ ॥ ವೀರನೇ! ಇದರ ಬದಲಿಗೆ ನೀನೇ ನನ್ನ ಸೈನ್ಯವನ್ನು ಕತ್ತರಿಸಿಹಾಕಿ ನಿನ್ನ ವಜ್ರಾಯುಧದಿಂದ ನನ್ನ ತಲೆಯನ್ನು ಕತ್ತರಿಸಿಹಾಕುವ ಸಂಭವವೂ ಇದೆ. ಆಗಲಾದರೋ ನಾನು ನನ್ನ ಶರೀರವನ್ನು ಪಶು-ಪಕ್ಷಿಗಳಿಗೆ ಬಲಿಕೊಟ್ಟು, ಕರ್ಮಗಳ ಬಂಧನದಿಂದ ಬಿಡುಗಡೆ ಹೊಂದಿ, ಮಹಾಪುರುಷರ ಪಾದಧೂಳಿಯನ್ನು ಆಶ್ರಯಿಸುವೆನು. ಮಹಾಪುರುಷರು ಹೋಗುವ ಉತ್ತಮೋತ್ತಮವಾದ ಲೋಕಕ್ಕೆ ಹೋಗುವೆನು. ॥ ೧೮ ॥ ದೇವರಾಜನೇ! ಶತ್ರುವಾದ ನಾನು ನಿನ್ನ ಮುಂದೆಯೇ ನಿಂತಿರುವೆನು. ಈಗ ನೀನು ನನ್ನ ಮೇಲೆ ಅಮೋಘವಾದ ವಜ್ರಾಯುಧವನ್ನು ಏಕೆ ಪ್ರಯೋಗಿಸುತ್ತಿಲ್ಲ? ನಿನ್ನ ಗದೆಯು ನಿಷ್ಫಲವಾಯಿತು. ಕೃಪಣನಲ್ಲಿ ಗೈದ ಯಾಚನೆಯು ನಿಷ್ಫಲವಾಗುವಂತೆಯೇ ಈ ವಜ್ರವು ನಿಷ್ಫಲವಾದೀತು ಎಂದು ಸಂದೇಹಪಡಬೇಡ. ॥ ೧೯ ॥

ನನ್ವೇಷ ವಜ್ರಸ್ತವ ಶಕ್ರ ತೇಜಸಾ
ಹರೇರ್ದಧೀಚೇಸ್ತಪಸಾ ಚ ತೇಜಿತಃ ।
ತೇನೈವ ಶತ್ರುಂ ಜಹಿ ವಿಷ್ಣುಯಂತ್ರಿತೋ
ಯತೋ ಹರಿರ್ವಿಜಯಃ ಶ್ರೀರ್ಗುಣಾಸ್ತತಃ ॥ ೨೦ ॥

ಅಹಂ ಸಮಾಧಾಯ ಮನೋ ಯಥಾಽಽಹ
ಸಂಕರ್ಷಣಸ್ತಚ್ಚರಣಾರವಿಂದೇ ।
ತ್ವದ್ವಜ್ರರಂಹೋಲುಲಿತಗ್ರಾಮ್ಯಪಾಶೋ
ಗತಿಂ ಮುನೇರ್ಯಾಮ್ಯಪವಿದ್ಧಲೋಕಃ ॥ ೨೧ ॥

ಪುಂಸಾಂ ಕಿಲೈಕಾಂತಧಿಯಾಂ ಸ್ವಕಾನಾಂ
ಯಾಃ ಸಂಪದೋ ದಿವಿ ಭೂಮೌ ರಸಾಯಾಮ್ ।
ನ ರಾತಿ ಯದ್ದ್ವೇಷ ಉದ್ವೇಗ ಆಧಿ-
ರ್ಮದಃ ಕಲಿರ್ವ್ಯಸನಂ ಸಂಪ್ರಯಾಸಃ ॥ ೨೨ ॥

ತ್ರೈವರ್ಗಿಕಾಯಾಸವಿಘಾತಮಸ್ಮತ್
ಪತಿರ್ವಿಧತ್ತೇ ಪುರುಷಸ್ಯ ಶಕ್ರ ।
ತತೋಽನುಮೇಯೋ ಭಗವತ್ಪ್ರಸಾದೋ
ಯೋ ದುರ್ಲಭೋಽಕಿಂಚನಗೋಚರೋಽನ್ಯೈಃ ॥ ೨೩ ॥

ಅಹಂ ಹರೇ ತವ ಪಾದೈಕಮೂಲ-
ದಾಸಾನುದಾಸೋ ಭವಿತಾಸ್ಮಿ ಭೂಯಃ ।
ಮನಃ ಸ್ಮರೇತಾಸುಪತೇರ್ಗುಣಾಂಸ್ತೇ
ಗೃಣೀತ ವಾಕ್ಕರ್ಮ ಕರೋತು ಕಾಯಃ ॥ ೨೪ ॥

ನ ನಾಕಪೃಷ್ಠಂ ನ ಚ ಪಾರಮೇಷ್ಠ್ಯಂ
ನ ಸಾರ್ವಭೌಮಂ ನ ರಸಾಧಿಪತ್ಯಮ್ ।
ನ ಯೋಗಸಿದ್ಧೀರಪುನರ್ಭವಂ ವಾ
ಸಮಂಜಸ ತ್ವಾ ವಿರಹಯ್ಯ ಕಾಂಕ್ಷೇ ॥ ೨೫ ॥

ಅಜಾತಪಕ್ಷಾ ಇವ ಮಾತರಂ ಖಗಾಃ
ಸ್ತನ್ಯಂ ಯಥಾ ವತ್ಸತರಾಃ ಕ್ಷುಧಾರ್ತಾಃ ।
ಪ್ರಿಯಂ ಪ್ರಿಯೇವ ವ್ಯುಷಿತಂ ವಿಷಣ್ಣಾ
ಮನೋಽರವಿಂದಾಕ್ಷ ದಿದೃಕ್ಷತೇ ತ್ವಾಮ್ ॥ ೨೬ ॥

ಇಂದ್ರನೇ! ನಿನ್ನ ಈ ವಜ್ರವು ಶ್ರೀಹರಿಯ ತೇಜ ಮತ್ತು ದಧೀಚಿ ಋಷಿಯ ತಪಸ್ಸಿನಿಂದ ಶಕ್ತಿಶಾಲಿಯಾಗಿದೆ. ಭಗವಾನ್ ವಿಷ್ಣುವು ನನ್ನನ್ನು ಕೊಲ್ಲಲಿಕ್ಕಾಗಿ ನಿನಗೆ ಆಜ್ಞೆಯನ್ನು ಕೊಟ್ಟಿರುವನು. ಅದಕ್ಕಾಗಿ ಈಗ ನೀನು ಅದೇ ವಜ್ರದಿಂದ ನನ್ನನ್ನು ಕೊಂದುಬಿಡು. ಏಕೆಂದರೆ, ಭಗವಾನ್ ಶ್ರೀಹರಿಯು ಇರುವ ಪಕ್ಷದಲ್ಲೇ ವಿಜಯ, ಲಕ್ಷ್ಮೀ ಹಾಗೂ ಎಲ್ಲ ಗುಣಗಳು ವಾಸಿಸುತ್ತವೆ. ॥ ೨೦ ॥ ಎಲೈ ದೇವರಾಜನೇ! ಭಗವಾನ್ ಶ್ರೀಸಂಕರ್ಷಣನ ಆಜ್ಞೆಯಂತೆ ನಾನು ನನ್ನ ಮನಸ್ಸನ್ನು ಆತನ ಅಡಿದಾವರೆಗಳಲ್ಲಿ ಲಯಗೊಳಿಸುವೆನು. ನಿನ್ನ ವಜ್ರವು ನನ್ನ ದೇಹವನ್ನು ಮಾತ್ರವಲ್ಲದೆ ವಿಷಯಭೋಗರೂಪವಾದ ನನ್ನ ಬಲೆಯನ್ನೂ ಕತ್ತರಿಸಿಬಿಡುವುದು. ಆಗ ನಾನು ಈ ಶರೀರವನ್ನು ತ್ಯಜಿಸಿ ಮುನಿಗಳಿಗೆ ಉಚಿತವಾದ ಗತಿಯನ್ನು ಪಡೆಯುವೆನು. ॥ ೨೧ ॥ ಶ್ರೀಭಗವಂತನನ್ನು ಅನನ್ಯಭಾವದಿಂದ ಪ್ರೀತಿಸುತ್ತಿರುವ ಅವನ ಸ್ವಜನರಾದ ಭಕ್ತರಿಗೆ ಅವನು ಸ್ವರ್ಗ, ಭೂಮಿ ಅಥವಾ ಪಾತಾಳಲೋಕದ ಸಂಪತ್ತನ್ನು ಕೊಡುವುದಿಲ್ಲ. ಏಕೆಂದರೆ, ಅವುಗಳಿಂದ ಪರಮಾನಂದವು ದೊರೆಯುವುದೇ ಇಲ್ಲ. ಬದಲಾಗಿ ದ್ವೇಷ, ಉದ್ವೇಗ, ಅಹಂಕಾರ, ಮಾನಸಿಕಪೀಡೆಗಳು, ಕಲಹ, ದುಃಖ ಮತ್ತು ಆಯಾಸಗಳೇ ಬಂದು ಸೇರುವುವು. ॥ ೨೨ ॥ ಎಲೈ ಇಂದ್ರನೇ! ನಮ್ಮ ಪ್ರಭುವು ತನ್ನ ಭಕ್ತರ ಧರ್ಮ, ಅರ್ಥ, ಕಾಮ ಸಂಬಂಧವಾದ ಪ್ರಯಾಸಗಳನ್ನು ವ್ಯರ್ಥಗೊಳಿಸಿಬಿಡುತ್ತಾನೆ. ನಿಜವಾಗಿ ವಿಚಾರಮಾಡಿನೋಡಿದರೆ ಇದರಿಂದ ಶ್ರೀಭಗವಂತನ ಕೃಪೆಯೇ ಸೂಚಿತವಾಗುತ್ತದೆ. ಏಕೆಂದರೆ, ಆತನ ಇಂತಹ ಕೃಪಾ ಪ್ರಸಾದವು ಭೌತಿಕವಾಗಿ ದೀನ-ದರಿದ್ರರಾದ ಆತನ ಭಕ್ತರ ಅನುಭವಕ್ಕೆ ಮಾತ್ರ ಗೋಚರವಾಗುವುದು. ಇತರರಿಗೆ ಅದು ಅತ್ಯಂತ ದುರ್ಲಭವೇ ಆಗಿದೆ. ॥ ೨೩ ॥

ಭಗವಂತನನ್ನು ಪ್ರತ್ಯಕ್ಷವಾಗಿ ಅನುಭವಿಸುತ್ತಾ ವೃತ್ರಾಸುರನು ಅವನಲ್ಲಿ ಹೀಗೆ ಪ್ರಾರ್ಥಿಸಿದನು – ಪ್ರಭೋ! ಹರಿಯೇ! ಅನನ್ಯಭಾವದಿಂದ ನಿನ್ನ ಚರಣಕಮಲಗಳ ಆಶ್ರಿತ ಸೇವಕರ ಸೇವೆಯನ್ನು ಮಾಡುವ ಅವಕಾಶವನ್ನು ನನಗೆ ಮುಂದಿನ ಜನ್ಮದಲ್ಲಿಯೂ ದೊರೆಯುವಂತೆ ನನ್ನ ಮೇಲೆ ಕೃಪೆಮಾಡು. ಪ್ರಾಣವಲ್ಲಭನೇ! ನನ್ನ ಮನಸ್ಸು ನಿನ್ನ ಮಂಗಲಮಯ ಗುಣಗಳನ್ನು ಸ್ಮರಿಸುತ್ತಾ ಇರಲಿ. ನನ್ನ ವಾಣಿಯು ಅದನ್ನೇ ಗುಣಗಾನಮಾಡುತ್ತಾ, ಶರೀರವು ನಿನ್ನ ಸೇವೆಯಲ್ಲೇ ಆಸಕ್ತವಾಗಿರಲಿ. ॥ ೨೪ ॥ ಎಲೈ ಸಕಲ ಸೌಭಾಗ್ಯನಿಧಿಯೇ! ನಾನು ನಿನ್ನನ್ನು ಬಿಟ್ಟು ಸ್ವರ್ಗವನ್ನಾಗಲೀ, ಬ್ರಹ್ಮಲೋಕದ ಆಧಿಪತ್ಯವನ್ನಾಗಲೀ, ಭೂಮಂಡಲದ ಸಾಮ್ರಾಜ್ಯವನ್ನಾಗಲೀ, ರಸಾತಲದ ಏಕಚ್ಛತ್ರಾಧಿಪತ್ಯವನ್ನಾಗಲೀ, ಯೋಗಸಿದ್ಧಿಗಳನ್ನಾಗಲೀ – ಯಾವುದನ್ನೂ ಬಯಸೆನು; ಹೆಚ್ಚೇನು ಮೋಕ್ಷವನ್ನೂ ಕೂಡ ಬಯಸುವುದಿಲ್ಲ. ॥ ೨೫ ॥ ಓ ಪುಂಡರೀಕಾಕ್ಷನೇ! ರೆಕ್ಕೆ ಹುಟ್ಟದೇ ಇರುವ ಪಕ್ಷಿಯ ಮರಿಗಳು ತಮ್ಮ ತಾಯಿಯನ್ನೇ ಎದುರು ನೋಡುತ್ತಿರುವಂತೆಯೇ, ಹಸಿದ ಕರುಗಳು ತಮ್ಮ ತಾಯಿಯ ಸ್ತನ್ಯವನ್ನು ಕುಡಿಯಲು ಆತುರಪಡುತ್ತಿರುವಂತೆಯೇ, ಮತ್ತು ಪತಿಯನ್ನು ಅಗಲಿದ ರಮಣಿಯರು ತಮ್ಮ ಪ್ರಿಯತಮನ ಸಮಾಗಮಕ್ಕಾಗಿ ಹಾತೊರೆಯುತ್ತಿರುವಂತೆಯೇ, ನನ್ನ ಮನಸ್ಸು ನಿನ್ನ

ದರ್ಶನಕ್ಕಾಗಿ ಹಂಬಲಿಸುತ್ತಾ ಇದೆ. ॥ ೨೬ ॥

ಮಮೋತ್ತಮಶ್ಲೋಕಜನೇಷು ಸಖ್ಯಂ
ಸಂಸಾರಚಕ್ರೇ ಭ್ರಮತಃ ಸ್ವಕರ್ಮಭಿಃ ।
ತ್ವನ್ಮಾಯಯಾಽಽತ್ಮಾತ್ಮಜದಾರಗೇಹೇ-
ಷ್ವಾಸಕ್ತಚಿತ್ತಸ್ಯ ನ ನಾಥ ಭೂಯಾತ್ ॥ ೨೭ ॥

ಮಹಾಪ್ರಭೋ! ನಾನು ಮುಕ್ತಿಯನ್ನು ಬಯಸುತ್ತಿಲ್ಲ. ಕರ್ಮಗಳ ಫಲವಾಗಿ ಸಂ ಸಾರದ ಚಕ್ರದಲ್ಲಿ ಅಲೆದಾಡುತ್ತಿರುವ ನನಗೆ ಉತ್ತಮ ಕೀರ್ತಿಯುಳ್ಳ ನಿನ್ನ ಪ್ರಿಯರಾದ ಭಕ್ತರೊಡನೆ ಸದಾ ಗೆಳೆತನವಿರಲಿ. ನಿನ್ನ ಮಾಯೆಯಿಂದ ದೇಹ, ಮನೆ, ಪತ್ನೀ-ಪುತ್ರರು ಮುಂತಾದವರಲ್ಲೇ ಆಸಕ್ತರಾದವರೊಡನೆ ನನಗೆ ಯಾವ ರೀತಿಯ ಸಂಬಂಧವೂ ಉಂಟಾಗದಿರಲಿ ಎಂಬಷ್ಟೇ ನಾನು ಬಯಸುತ್ತಿರುವುದು. ॥ ೨೭ ॥

ಹನ್ನೊಂದನೆಯ ಅಧ್ಯಾಯವು ಮುಗಿಯಿತು. ॥ ೧೧ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಷಷ್ಠಸ್ಕಂಧೇ
ವೃತ್ರಸ್ಯೇಂದ್ರೋಪದೇಶೋ ನಾಮೈಕಾದಶೋಽಧ್ಯಾಯಃ ॥ ೧೧ ॥

ಹನ್ನೆರಡನೆಯ ಅಧ್ಯಾಯ

ವೃತ್ರಾಸುರನ ವಧೆ

ಋಷಿರುವಾಚ

ಏವಂ ಜಿಹಾಸುರ್ನೃಪ ದೇಹಮಾಜೌ
ಮೃತ್ಯುಂ ವರಂ ವಿಜಯಾನ್ಮನ್ಯಮಾನಃ ।
ಶೂಲಂ ಪ್ರಗೃಹ್ಯಾಭ್ಯಪತತ್ಸುರೇಂದ್ರಂ
ಯಥಾ ಮಹಾಪುರುಷಂ ಕೈಟಭೋಽಪ್ಸು ॥ ೧ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಎಲೈ ಪರೀಕ್ಷಿದ್ರಾಜನೇ! ವೃತ್ರಾಸುರನು ರಣಭೂಮಿಯಲ್ಲಿ ತನ್ನ ಶರೀರವನ್ನು ಬಿಡಲು ಬಯಸುತ್ತಿದ್ದನು. ಏಕೆಂದರೆ, ಅವನ ದೃಷ್ಟಿಯಲ್ಲಿ ಇಂದ್ರನ ಮೇಲೆ ವಿಜಯವನ್ನು ಗಳಿಸಿ ಸ್ವರ್ಗವನ್ನು ಪಡೆಯುವುದಕ್ಕಿಂತಲೂ ದೇಹತ್ಯಾಗಮಾಡಿ ಶ್ರೀಭಗವಂತನನ್ನು ಪಡೆಯುವುದೇ ಶ್ರೇಷ್ಠವಾಗಿತ್ತು. ಅದಕ್ಕಾಗಿ ಅವನು – ಕೈಟಭಾಸುರನು ಹಿಂದೆ ಪ್ರಳಯಜಲದಲ್ಲಿ ಭಗವಾನ್ ವಿಷ್ಣುವನ್ನು ಎದುರಿಸಲು ಹೋದಂತೆ– ತ್ರಿಶೂಲವನ್ನೆತ್ತಿಕೊಂಡು ಇಂದ್ರನ ಮೇಲೆ ಎರಗಿದನು. ॥ ೧ ॥

ತತೋ ಯುಗಾಂತಾಗ್ನಿಕಠೋರಜಿಹ್ವ-
ಮಾವಿಧ್ಯ ಶೂಲಂ ತರಸಾಸುರೇಂದ್ರಃ ।
ಕ್ಷಿಪ್ತ್ವಾ ಮಹೇಂದ್ರಾಯ ವಿನದ್ಯ ವೀರೋ
ಹತೋಽಸಿ ಪಾಪೇತಿ ರುಷಾ ಜಗಾದ ॥ ೨ ॥

ವೀರನಾದ ವೃತ್ರಾಸುರನು ಪ್ರಳಯಕಾಲದ ಅಗ್ನಿಯ ಜ್ವಾಲೆಗಳಂತೆ ತೀಕ್ಷ್ಣವಾಗಿದ್ದ ತುದಿಗಳುಳ್ಳ ತ್ರಿಶೂಲವನ್ನು ತಿರುಗಿಸುತ್ತಾ ಅತಿರಭಸದಿಂದ ಇಂದ್ರನ ಮೇಲೆ ಬೀಸಿ ಹೊಡೆದನು ಮತ್ತು ಕಡುಸಿಟ್ಟಿನಿಂದ ಸಿಂಹನಾದವನ್ನು ಮಾಡಿ – 'ಎಲವೋ ಪಾಪಿಯೇ! ಈಗ ನೀನು ಬದುಕಲಾರೆ' ಎಂದು ಅಬ್ಬರಿಸಿದನು. ॥ ೨ ॥

ಖ ಆಪತತ್ತದ್ವಿಚಲದ್ಗ್ರಹೋಲ್ಕವತ್
ನಿರೀಕ್ಷ್ಯ ದುಷ್ಪ್ರೇಕ್ಷ್ಯಮಜಾತವಿಕ್ಲವಃ ।
ವಜ್ರೇಣ ವಜ್ರೀ ಶತಪರ್ವಣಾಚ್ಛಿನದ್
ಭುಜಂ ಚ ತಸ್ಯೋರಗರಾಜಭೋಗಮ್ ॥ ೩ ॥

ಆ ಭಯಂಕರ ತ್ರಿಶೂಲವು ಗ್ರಹ ಮತ್ತು ಉಲ್ಕೆಗಳಂತೆ ತಿರುಗುತ್ತಾ ಆಕಾಶದಲ್ಲಿ ಬರುತ್ತಿರುವುದನ್ನು ನೋಡಿಯೂ ಇಂದ್ರನು ಸ್ವಲ್ಪವೂ ಅಳ್ಳೆದೆಯನ್ನು ತೋರಿಸಲಿಲ್ಲ. ಅಷ್ಟೇ ಅಲ್ಲದೆ ಆ ತ್ರಿಶೂಲದೊಂದಿಗೆ ವಾಸುಕಿ ನಾಗದಂತೆ ವಿಶಾಲವಾಗಿದ್ದ ವೃತ್ರಾಸುರನ ಭುಜವನ್ನು ನೂರು ಗಿಣ್ಣುಗಳಿಂದ ಬೆಳಗುತ್ತಿದ್ದ ತನ್ನ ವಜ್ರಾಯುಧದಿಂದ ಕತ್ತರಿಸಿ ಹಾಕಿದನು. ॥ ೩ ॥

ಛಿನ್ನೈಕಬಾಹುಃ ಪರಿಘೇಣ ವೃತ್ರಃ
ಸಂರಬ್ಧ ಆಸಾದ್ಯ ಗೃಹೀತವಜ್ರಮ್ ।
ಹನೌ ತತಾಡೇಂದ್ರಮಥಾಮರೇಭಂ
ವಜ್ರಂ ಚ ಹಸ್ತಾನ್ನ್ಯಪತನ್ಮಘೋನಃ ॥ ೪ ॥

ಒಂದು ತೋಳು ಕತ್ತರಿಸಿ ಹೋದುದರಿಂದ ವೃತ್ರಾಸುರನಿಗೆ ತಡೆಯಲಾರದಷ್ಟು ಕೋಪವುಂಟಾಯಿತು. ಆಗ ಅವನು ವಜ್ರಧಾರಿಯಾಗಿದ್ದ ಇಂದ್ರನ ಬಳಿಗೆ ಹೋಗಿ ಆತನ ಗದ್ದದ ಮೇಲೂ ಮತ್ತು ಐರಾವತದ ಮೇಲೂ ಪರಿಘಾಯುಧದಿಂದ ಬಲವಾಗಿ ಹೊಡೆದನು. ಅದರಿಂದ ಇಂದ್ರನ ಕೈಯಿಂದ ವಜ್ರಾ ಯುಧವು ಜಾರಿ ಬಿದ್ದು ಹೋಯಿತು. ॥ ೪ ॥

ವೃತ್ರಸ್ಯ ಕರ್ಮಾತಿಮಹಾದ್ಭುತಂ ತತ್
ಸುರಾಸುರಾಶ್ಚಾರಣಸಿದ್ಧಸಂಘಾಃ ।
ಅಪೂಜಯಂಸ್ತತ್ಪುರುಹೂತಸಂಕಟಂ
ನಿರೀಕ್ಷ್ಯ ಹಾ ಹೇತಿ ವಿಚುಕ್ರುಶುರ್ಭೃಶಮ್ ॥ ೫ ॥

ಇಂದ್ರೋ ನ ವಜ್ರಂ ಜಗೃಹೇ ವಿಲಜ್ಜಿತ-
ಶ್ಚ್ಯುತಂ ಸ್ವಹಸ್ತಾದರಿಸನ್ನಿಧೌ ಪುನಃ ।
ತಮಾಹ ವೃತ್ರೋ ಹರ ಆತ್ತವಜ್ರೋ
ಜಹಿ ಸ್ವಶತ್ರುಂ ನ ವಿಷಾದಕಾಲಃ ॥ ೬ ॥

ಯುಯುತ್ಸತಾಂ ಕುತ್ರಚಿದಾತತಾಯಿನಾಂ
ಜಯಃ ಸದೈಕತ್ರ ನ ವೈ ಪರಾತ್ಮನಾಮ್ ।
ವಿನೈಕಮುತ್ಪತ್ತಿಲಯಸ್ಥಿತೀಶ್ವರಂ
ಸರ್ವಜ್ಞಮಾದ್ಯಂ ಪುರುಷಂ ಸನಾತನಮ್ ॥ ೭ ॥

ಲೋಕಾಃ ಸಪಾಲಾ ಯಸ್ಯೇಮೇ ಶ್ವಸಂತಿ ವಿವಶಾ ವಶೇ ।
ದ್ವಿಜಾ ಇವ ಶಿಚಾ ಬದ್ಧಾಃ ಸ ಕಾಲ ಇಹ ಕಾರಣಮ್ ॥ ೮ ॥

ಓಜಃ ಸಹೋ ಬಲಂ ಪ್ರಾಣಮಮೃತಂ ಮೃತ್ಯುಮೇವ ಚ ।
ತಮಜ್ಞಾಯ ಜನೋ ಹೇತುಮಾತ್ಮಾನಂ ಮನ್ಯತೇ ಜಡಮ್ ॥ ೯ ॥

ಯಥಾ ದಾರುಮಯೀ ನಾರೀ ಯಥಾ ಯಂತ್ರಮಯೋ ಮೃಗಃ ।
ಏವಂ ಭೂತಾನಿ ಮಘವನ್ನೀಶತಂತ್ರಾಣಿ ವಿದ್ಧಿ ಭೋಃ ॥ ೧೦ ॥

ಪುರುಷಃ ಪ್ರಕೃತಿರ್ವ್ಯಕ್ತಮಾತ್ಮಾ ಭೂತೇಂದ್ರಿಯಾಶಯಾಃ ।
ಶಕ್ನುವಂತ್ಯಸ್ಯ ಸರ್ಗಾದೌ ನ ವಿನಾ ಯದನುಗ್ರಹಾತ್ ॥ ೧೧ ॥

ಅವಿದ್ವಾನೇವಮಾತ್ಮಾನಂ ಮನ್ಯತೇಽನೀಶಮೀಶ್ವರಮ್ ।
ಭೂತೈಃ ಸೃಜತಿ ಭೂತಾನಿ ಗ್ರಸತೇ ತಾನಿ ತೈಃ ಸ್ವಯಮ್ ॥ ೧೨ ॥

ಆಯುಃ ಶ್ರೀಃ ಕೀರ್ತಿರೈಶ್ವರ್ಯಮಾಶಿಷಃ ಪುರುಷಸ್ಯ ಯಾಃ ।
ಭವಂತ್ಯೇವ ಹಿ ತತ್ಕಾಲೇ ಯಥಾನಿಚ್ಛೋರ್ವಿಪರ್ಯಯಾಃ ॥ ೧೩ ॥

ತಸ್ಮಾದಕೀರ್ತಿಯಶಸೋರ್ಜಯಾಪಜಯಯೋರಪಿ ।
ಸಮಃ ಸ್ಯಾತ್ಸುಖದುಃಖಾಭ್ಯಾಂ ಮೃತ್ಯುಜೀವಿತಯೋಸ್ತಥಾ ॥ ೧೪ ॥

ವೃತ್ರಾಸುರನ ಆ ಅದ್ಭುತವಾದ ಕರ್ಮವನ್ನು ಕಂಡು ದೇವತೆಗಳೂ, ಅಸುರರೂ, ಚಾರಣರೂ, ಸಿದ್ಧಗಣರೂ ಮುಂತಾದವರೆಲ್ಲರೂ ಅವನನ್ನು ಪ್ರಶಂಸೆಮಾಡಿದರು. ಆದರೆ ಅವರೇ ಇಂದ್ರನ ಸಂಕಟವನ್ನು ನೋಡಿ ಪದೇ-ಪದೇ ಅಯ್ಯೋ! ಅಯ್ಯೋ! ಎಂದು ಕೂಗಿಕೊಳ್ಳತೊಡಗಿದರು. ॥ ೫ ॥ ಪರೀಕ್ಷಿತನೇ! ಆ ವಜ್ರಾಯುಧವು ಇಂದ್ರನ ಕೈಯಿಂದ ಜಾರಿ ವೃತ್ರಾಸುರನ ಬಳಿಯಲ್ಲೇ ಬಿದ್ದಿತ್ತು. ಆದರಿಂದ ಮಹೇಂದ್ರನಿಗೆ ಬಹಳ ನಾಚಿಕೆಯಾಗಿ ಅವನು ಅದನ್ನು ಮತ್ತೆ ಎತ್ತಿಕೊಳ್ಳಲಿಲ್ಲ. ಆಗ ವೃತ್ರಾಸುರನು ಹೇಳಿದನು – ಇಂದ್ರನೇ! ವಜ್ರವನ್ನು ಎತ್ತಿಕೊಂಡು ನಿನ್ನ ಶತ್ರುವನ್ನು ಸಂಹರಿಸುವವನಾಗು. ಇದು ವಿಷಾದಪಡುವ ಕಾಲವಲ್ಲ. ॥ ೬ ॥ ಸರ್ವಜ್ಞನೂ, ಸನಾತನನೂ, ಜಗತ್ತಿನ ಉತ್ಪತ್ತಿ-ಸ್ಥಿತಿ-ಲಯಗಳಿಗೆ ಕಾರಣನಾಗಿರುವವನೂ ಆದ ಆದಿಪುರುಷನಾದ ಭಗವಂತನೊಬ್ಬನಿಗೇ ಎಂದೆಂದಿಗೂ ಜಯವು. ದೇಹಾಭಿಮಾನಿಗಳೂ, ಯುದ್ಧಕ್ಕಾಗಿ ಉತ್ಸುಕರಾದ ಆತತಾಯಿಗಳಿಗೆ ಯಾವಾಗಲೂ ಜಯವೇ ಸಿಗುತ್ತದೆ ಎಂಬುದಿಲ್ಲ. ಅವರು ಕೆಲವೊಮ್ಮೆ ಗೆದ್ದರೆ, ಕೆಲವೊಮ್ಮೆ ಸೋಲುತ್ತಾರೆ. ॥ ೭ ॥ ಈ ಎಲ್ಲ ಲೋಕಗಳೂ ಮತ್ತು ಲೋಕಪಾಲಕರೂ ಬಲೆಯಲ್ಲಿ ಸಿಕ್ಕಿಹಾಕಿಕೊಂಡಿರುವ ಪಕ್ಷಿಗಳಂತೆ ಯಾವುದರ ವಶಕ್ಕೆ ಒಳಪಟ್ಟು ಚೇಷ್ಟೆ ಮಾಡುತ್ತಿರುವರೋ ಆ ಕಾಲವೇ ಎಲ್ಲರ ಜಯ-ಪರಾಜಯಗಳಿಗೂ ಕಾರಣವು. ॥ ೮ ॥ ಆ ಕಾಲವೇ ಮನುಷ್ಯರ ಮನೋಬಲ, ಇಂದ್ರಿಯಬಲ, ದೇಹಬಲ, ಪ್ರಾಣಗಳು, ಜೀವನ ಮತ್ತು ಮೃತ್ಯುರೂಪವಾಗಿದೆ. ಮನುಷ್ಯನು ಇದನ್ನು ತಿಳಿಯದೆ ಈ ಜಡವಾದ ಶರೀರವೇ ಜಯಾಪಜಯಗಳ ಕಾರಣವೆಂದು ಭಾವಿಸುತ್ತಾನೆ. ॥ ೯ ॥ ಇಂದ್ರನೇ! ಮರದ ಬೊಂಬೆ ಮತ್ತು ಯಂತ್ರದ ಜಿಂಕೆಯು ಅವನ್ನು ಕುಣಿಸುವವನ ಕೈಯಲ್ಲಿರುವಂತೆಯೇ ನೀನು ಸಮಸ್ತ ಪ್ರಾಣಿಗಳು ಭಗವಂತನಿಗೆ ಅಧೀನವೆಂದು ತಿಳಿ. ॥ ೧೦ ॥ ಶ್ರೀಭಗವಂತನ ಅನುಗ್ರಹವಿಲ್ಲದೇ ಪುರುಷ, ಪ್ರಕೃತಿ, ಮಹತ್ತತ್ತ್ವ, ಅಹಂಕಾರ, ಪಂಚ-ಭೂತಗಳು, ಇಂದ್ರಿಯಗಳು ಮತ್ತು ಅಂತಃಕರಣ ಚತುಷ್ಟಯ – ಇವು ಯಾವುವೂ ಈ ವಿಶ್ವದ ಉತ್ಪತ್ತಿಯೇ ಮುಂತಾದವುಗಳನ್ನು ಮಾಡಲು ಸಮರ್ಥವಾಗುವುದಿಲ್ಲ. ॥ ೧೧ ॥ ಭಗವಂತನೇ ಎಲ್ಲವನ್ನೂ ನಿಯಂತ್ರಣಮಾಡುತ್ತಾನೆ – ನಿಯಾಮಕನಾಗಿದ್ದಾನೆ ಎಂಬುದನ್ನು ಅರಿಯದವನೇ ಈ ಪರತಂತ್ರಜೀವನನ್ನು ಸ್ವತಂತ್ರಕರ್ತಾ – ಭೋಕ್ತಾ ಎಂದು ತಿಳಿಯುತ್ತಾನೆ. ವಾಸ್ತವವಾಗಿ ಭಗವಂತನೇ ಪ್ರಾಣಿಗಳ ಮೂಲಕ ಪ್ರಾಣಿಗಳ ಉತ್ಪತ್ತಿಯನ್ನು, ಪ್ರಾಣಿಗಳ ಮೂಲಕವೇ ಪ್ರಾಣಿಗಳ ಸಂಹಾರ ಮಾಡಿಸುತ್ತಾನೆ. ॥ ೧೨ ॥ ಸಮಯವು ವಿರುದ್ಧವಾಗಿದ್ದರೆ ಮನುಷ್ಯನು ಬಯಸದೇ ಇದ್ದರೂ ಮೃತ್ಯು ಅಪಕೀರ್ತಿ ಮುಂತಾದವುಗಳು ಅವನಿಗೆ ಒದಗುತ್ತವೆ. ಹಾಗೆಯೇ ಸಮಯವು ಅನುಕೂಲವಾಗಿದ್ದಾಗ ಅವನು ಬಯಸದೇ ಇದ್ದರೂ ಆಯುಸ್ಸೂ, ಸಂಪತ್ತೂ, ಕೀರ್ತಿ, ಅಧಿಕಾರ ಮುಂತಾದ ಭೋಗಗಳು ಅವನಲ್ಲಿ ಬಂದು ಸೇರುವುವು. ॥ ೧೩ ॥ ಆದುದರಿಂದ ಕೀರ್ತಿ-ಅಪಕೀರ್ತಿ, ಜಯ-ಪರಾಜಯ, ಸುಖ-ದುಃಖ, ಜೀವನ-ಮರಣ ಇವುಗಳಲ್ಲಿ ಯಾವುದೇ ಒಂದರ ಇಚ್ಛೆ-ಅನಿಚ್ಛೆ ಇರಿಸದೆ ಎಲ್ಲ ಪರಿಸ್ಥಿತಿಯಲ್ಲಿ ಸಮಭಾವದಿಂದ ಇರಬೇಕು. ಹರ್ಷ-ಶೋಕಗಳಿಗೆ ವಶೀಭೂತನಾಗಬಾರದು. ॥ ೧೪ ॥

ಸತ್ತ್ವಂ ರಜಸ್ತಮ ಇತಿ ಪ್ರಕೃತೇರ್ನಾತ್ಮನೋ ಗುಣಾಃ ।
ತತ್ರ ಸಾಕ್ಷಿಣಮಾತ್ಮಾನಂ ಯೋ ವೇದ ನ ಸ ಬಧ್ಯತೇ ॥ ೧೫ ॥

ಪಶ್ಯ ಮಾಂ ನಿರ್ಜಿತಂ ಶಕ್ರ ವೃಕ್ಣಾಯುಧಭುಜಂ ಮೃಧೇ ।
ಘಟಮಾನಂ ಯಥಾಶಕ್ತಿ ತವ ಪ್ರಾಣಜಿಹೀರ್ಷಯಾ ॥ ೧೬ ॥

ಪ್ರಾಣಗ್ಲಹೋಽಯಂ ಸಮರ ಇಷ್ವಕ್ಷೋ ವಾಹನಾಸನಃ ।
ಅತ್ರ ಜ್ಞಾಯತೇಽಮುಷ್ಯ ಜಯೋಽಮುಷ್ಯ ಪರಾಜಯಃ ॥ ೧೭ ॥

ಶ್ರೀಶುಕ ಉವಾಚ

ಇಂದ್ರೋ ವೃತ್ರವಚಃ ಶ್ರುತ್ವಾ ಗತಾಲೀಕಮಪೂಜಯತ್ ।
ಗೃಹೀತವಜ್ರಃ ಪ್ರಹಸಂಸ್ತಮಾಹ ಗತವಿಸ್ಮಯಃ ॥ ೧೮ ॥

ಇಂದ್ರ ಉವಾಚ

ಅಹೋ ದಾನವ ಸಿದ್ಧೋಽಸಿ ಯಸ್ಯ ತೇ ಮತಿರೀದೃಶೀ ।
ಭಕ್ತಃ ಸರ್ವಾತ್ಮನಾಽಽತ್ಮಾನಂ ಸುಹೃದಂ ಜಗದೀಶ್ವರಮ್ ॥ ೧೯ ॥

ಭವಾನತಾರ್ಷೀನ್ಮಾಯಾಂ ವೈ ವೈಷ್ಣವೀಂ ಜನಮೋಹಿನೀಮ್ ।
ಯದ್ವಿಹಾಯಾಸುರಂ ಭಾವಂ ಮಹಾಪುರುಷತಾಂ ಗತಃ ॥ ೨೦ ॥

ಖಲ್ವಿದಂ ಮಹದಾಶ್ಚರ್ಯಂ ಯದ್ರಜಃಪ್ರಕೃತೇಸ್ತವ ।
ವಾಸುದೇವೇ ಭಗವತಿ ಸತ್ತ್ವಾತ್ಮನಿ ದೃಢಾಮತಿಃ ॥ ೨೧ ॥

ಯಸ್ಯ ಭಕ್ತಿರ್ಭಗವತಿ ಹರೌ ನಿಃಶ್ರೇಯಸೇಶ್ವರೇ ।
ವಿಕ್ರೀಡತೋಽಮೃತಾಂಭೋಧೌ ಕಿಂ ಕ್ಷುದ್ರೈಃ ಖಾತಕೋದಕೈಃ ॥ ೨೨ ॥

ಶ್ರೀಶುಕ ಉವಾಚ

ಇತಿ ಬ್ರುವಾಣಾವನ್ಯೋನ್ಯಂ ಧರ್ಮಜಿಜ್ಞಾಸಯಾ ನೃಪ ।
ಯುಯುಧಾತೇ ಮಹಾವೀರ್ಯಾವಿಂದ್ರವೃತ್ರೌ ಯುಧಾಂಪತೀ ॥ ೨೩ ॥

ಆವಿಧ್ಯ ಪರಿಘಂ ವೃತ್ರಃ ಕಾರ್ಷ್ಣಾಯಸಮರಿಂದಮಃ ।
ಇಂದ್ರಾಯ ಪ್ರಾಹಿಣೋದ್ಘೋರಂ ವಾಮಹಸ್ತೇನ ಮಾರಿಷ ॥ ೨೪ ॥

ಸ ತು ವೃತ್ರಸ್ಯ ಪರಿಘಂ ಕರಂ ಚ ಕರಭೋಪಮಮ್ ।
ಚಿಚ್ಛೇದ ಯುಗಪದ್ದೇವೋ ವಜ್ರೇಣ ಶತಪರ್ವಣಾ ॥ ೨೫ ॥

ಸತ್ತ್ವ, ರಜ, ತಮ – ಈ ತ್ರಿಗುಣಗಳು ಪ್ರಕೃತಿಯದಾಗಿವೆ. ಆತ್ಮನವಲ್ಲ. ಆದ್ದರಿಂದ ಆತ್ಮವನ್ನು ಅದರ ಸಾಕ್ಷಿಮಾತ್ರವೆಂದು ತಿಳಿಯುವ ಮನುಷ್ಯನಿಗೆ ಅವುಗಳ ಗುಣ-ದೋಷಗಳು ಅಂಟಿಕೊಳ್ಳುವುದಿಲ್ಲ. ॥ ೧೫ ॥ ದೇವೇಂದ್ರನೇ! ನನ್ನನ್ನಾದರೋ ನೋಡು! ನೀನು ನನ್ನ ಕೈಯನ್ನು ಮತ್ತು ಶಸ್ತ್ರವನ್ನು ಕತ್ತರಿಸಿ ಒಂದು ರೀತಿಯಲ್ಲಿ ಸೋಲಿಸಿರುವೆ. ಹೀಗಿದ್ದರೂ ನಾನು ನಿನ್ನ ಪ್ರಾಣಗಳನ್ನು ಅಪಹರಿಸಲು ಯಥಾಶಕ್ತಿ ಪ್ರಯತ್ನವನ್ನು ಮಾಡುತ್ತಲೇ ಇದ್ದೇನೆ. ॥ ೧೬ ॥ ಈ ಯುದ್ಧವು ಒಂದು ಜೂಜಿನ ಆಟವಾಗಿದೆ. ಇದರಲ್ಲಿ ಪ್ರಾಣವನ್ನೇ ಪಣಕ್ಕೆ ಒಡ್ಡಲಾಗುತ್ತದೆ. ಬಾಣಗಳ ದಾಳಗಳು ಎಸೆಯಲ್ಪಡುತ್ತವೆ. ವಾಹನವೇ ಹಾಸು-ಹಲಗೆಯಾಗಿದೆ. ಇದರಲ್ಲಿ ಯಾರು ಗೆಲ್ಲುವರು, ಯಾರು ಸೋಲುವರು ಎಂಬುದು ಮೊದಲಿಗೆ ಗೊತ್ತಾಗುವುದಿಲ್ಲ. ॥ ೧೭ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ! ವೃತ್ರಾಸುರನ ಈ ಸತ್ಯವಾದ ಹಾಗೂ ನಿಷ್ಕಪಟವಾದ ವಚನಗಳನ್ನು ಕೇಳಿ ಇಂದ್ರನು ಅವನನ್ನು ಆದರಿಸಿದನು ಮತ್ತು ತನ್ನ ವಜ್ರವನ್ನು ಎತ್ತಿಕೊಂಡನು. ಅನಂತರ ಯಾವುದೇ ಆಶ್ಚರ್ಯವಿಲ್ಲದೆ ನಸುನಗುತ್ತಾ ಅವನು ಹೇಳತೊಡಗಿದನು. ॥ ೧೮ ॥

ದೇವೇಂದ್ರನು ಹೇಳಿದನು – ಭಲೇ ದಾನವರಾಜ! ನೀನು ನಿಜವಾಗಿ ಸಿದ್ಧನೇ ಆಗಿರುವೆ. ಅದಕ್ಕೇ ನಿನ್ನಲ್ಲಿ ಧೈರ್ಯ, ನಿಶ್ಚಯ, ಭಗವದ್ಭಾವ ವಿಲಕ್ಷಣವಾಗಿದೆ. ನೀನು ಸಮಸ್ತ ಪ್ರಾಣಿಗಳ ಸುಹೃದನಾದ ಆತ್ಮಸ್ವರೂಪನಾದ ಜಗದೀಶ್ವರನ ಭಕ್ತಿಯನ್ನು ಅನನ್ಯಭಾವದಿಂದ ಮಾಡಿರುವೆ. ॥ ೧೯ ॥ ಖಂಡಿತವಾಗಿಯೂ ನೀನು ಜನರನ್ನು ಮೋಹಿಸುವಂತಹ ಭಗವಂತನ ಮಾಯೆಯನ್ನು ದಾಟಿಬಿಟ್ಟಿರುವೆ. ಈಗಲಾದರೋ ನೀನು ಆಸುರೀ ಸ್ವಭಾವವನ್ನು ಬಿಟ್ಟು ಮಹಾಪುರುಷನಾಗಿರುವೆ. ॥ ೨೦ ॥ ನೀನು ರಜೋ ಗುಣ ಪ್ರಕೃತಿಯವನಾಗಿದ್ದರೂ ವಿಶುದ್ಧ ಸತ್ತ್ವಸ್ವರೂಪನಾದ ಭಗವಾನ್ ವಾಸುದೇವನಲ್ಲಿ ನಿನ್ನ ಬುದ್ಧಿಯು ದೃಢವಾಗಿ ತೊಡಗಿದೆ, ಇದು ಖಂಡಿತವಾಗಿ ದೊಡ್ಡ ಆಶ್ಚರ್ಯದ ಮಾತಾಗಿದೆ. ॥ ೨೧ ॥ ಪರಮ ಕಲ್ಯಾಣದ ಸ್ವಾಮಿಯಾದ ಭಗವಾನ್ ಶ್ರೀಹರಿಯ ಚರಣಗಳಲ್ಲಿ ಪ್ರೇಮಮಯ ಭಕ್ತಿಭಾವವನ್ನು ಇರಿಸುವವನಿಗೆ ಜಗತ್ತಿನ ಭೋಗಗಳ ಆವಶ್ಯಕತೆ ಏನಿದೆ? ಅಮೃತ ಸಮುದ್ರದಲ್ಲಿ ವಿಹರಿಸುವವನಿಗೆ ಕ್ಷುದ್ರವಾದ ಹಳ್ಳ-ಕೊಳ್ಳಗಳ ನೀರಿನಿಂದ ಏನು ಪ್ರಯೋಜನವಿದೆ? ॥ ೨೨ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ರಾಜೇಂದ್ರ! ಹೀಗೆ ಮಹಾಪರಾಕ್ರಮಿಗಳಾದ, ಯೋಧಶ್ರೇಷ್ಠರಾದ ಇಂದ್ರನು ಮತ್ತು ವೃತ್ರಾಸುರನು ಧರ್ಮವನ್ನು ತಿಳಿಯುವ ಇಚ್ಛೆಯಿಂದ ಪರಸ್ಪರ ಮಾತಾಡುತ್ತಾ ಯುದ್ಧವನ್ನು ಮಾಡತೊಡಗಿದರು. ॥ ೨೩ ॥ ರಾಜನೇ! ಶತ್ರುಸಂಹಾರಕನಾದ ವೃತ್ರಾಸುರನು ಉಕ್ಕಿನಿಂದ ಮಾಡಿದ ಭಯಂಕರವಾದ ಒಂದು ಪರಿಘಾಯುಧವನ್ನು ಎಡಗೈಯಲ್ಲಿ ಎತ್ತಿಕೊಂಡು ಆಕಾಶದಲ್ಲಿ ಗಿರ-ಗಿರನೆ ತಿರುಗಿಸುತ್ತಾ ಇಂದ್ರನ ಮೇಲೆ ಎಸೆದನು. ॥ ೨೪ ॥ ಆದರೆ ದೇವೇಂದ್ರನು ವೃತ್ರಾಸುರನ ಪರಿಘ ಹಾಗೂ ಆನೆಯ ಸೊಂಡಿಲಿನಂತಿರುವ ಅವನ ಭುಜವನ್ನು ತನ್ನ ನೂರುಗಿಣ್ಣುಗಳಿಂದ ಕೂಡಿದ ವಜ್ರಾಯುಧದಿಂದ ಎರಡನ್ನೂ ಒಟ್ಟಿಗೆ ಕತ್ತರಿಸಿಬಿಟ್ಟನು. ॥ ೨೫ ॥

ದೋರ್ಭ್ಯಾಮುತ್ಕೃತ್ತಮೂಲಾಭ್ಯಾಂ ಬಭೌ ರಕ್ತಸ್ರವೋಽಸುರಃ ।
ಛಿನ್ನಪಕ್ಷೋ ಯಥಾ ಗೋತ್ರಃ ಖಾದ್ಭ್ರಷ್ಟೋ ವಜ್ರಿಣಾ ಹತಃ ॥ ೨೬ ॥

ಕೃತ್ವಾಧರಾಂ ಹನುಂ ಭೂಮೌ ದೈತ್ಯೋ ದಿವ್ಯುತ್ತರಾಂ ಹನುಮ್ ।
ನಭೋಗಂಭೀರವಕ್ತ್ರೇಣ ಲೇಲಿಹೋಲ್ಬಣಜಿಹ್ವಯಾ ॥ ೨೭ ॥

ದಂಷ್ಟ್ರಾಭಿಃ ಕಾಲಕಲ್ಪಾಭಿರ್ಗ್ರಸನ್ನಿವ ಜಗತ್ತ್ರಯಮ್ ।
ಅತಿಮಾತ್ರಮಹಾಕಾಯ ಆಕ್ಷಿಪಂಸ್ತರಸಾ ಗಿರೀನ್ ॥ ೨೮ ॥

ಗಿರಿರಾಟ್ಪಾದಚಾರೀವ ಪದ್ಭ್ಯಾಂ ನಿರ್ಜರಯನ್ಮಹೀಮ್ ।
ಜಗ್ರಾಸ ಸ ಸಮಾಸಾದ್ಯ ವಜ್ರಿಣಂ ಸಹವಾಹನಮ್ ॥ ೨೯ ॥

ಮಹಾಪ್ರಾಣೋ ಮಹಾವೀರ್ಯೋ ಮಹಾಸರ್ಪ ಇವ ದ್ವಿಪಮ್ ।
ವೃತ್ರಗ್ರಸ್ತಂ ತಮಾಲಕ್ಷ್ಯ ಸಪ್ರಜಾಪತಯಃ ಸುರಾಃ ।
ಹಾ ಕಷ್ಟಮಿತಿ ನಿರ್ವಿಣ್ಣಾಶ್ಚುಕ್ರುಶುಃ ಸಮಹರ್ಷಯಃ ॥ ೩೦ ॥

ನಿಗೀರ್ಣೋಽಪ್ಯಸುರೇಂದ್ರೇಣ ನ ಮಮಾರೋದರಂ ಗತಃ ।
ಮಹಾಪುರುಷಸನ್ನದ್ಧೋ ಯೋಗಮಾಯಾಬಲೇನ ಚ ॥ ೩೧ ॥

ಭಿತ್ತ್ವಾ ವಜ್ರೇಣ ತತ್ಕುಕ್ಷಿಂ ನಿಷ್ಕ್ರಮ್ಯ ಬಲಭಿದ್ವಿಭುಃ ।
ಉಚ್ಚಕರ್ತ ಶಿರಃ ಶತ್ರೋರ್ಗಿರಿಶೃಂಗಮಿವೌಜಸಾ ॥ ೩೨ ॥

ವಜ್ರಸ್ತು ತತ್ಕಂಧರಮಾಶುವೇಗಃ
ಕೃಂತನ್ಸಮಂತಾತ್ಪರಿವರ್ತಮಾನಃ ।
ನ್ಯಪಾತಯತ್ತಾವದಹರ್ಗಣೇನ
ಯೋ ಜ್ಯೋತಿಷಾಮಯನೇ ವಾರ್ತ್ರಹತ್ಯೇ ॥ ೩೩ ॥

ತದಾ ಚ ಖೇ ದುಂದುಭಯೋ ವಿನೇದು-
ರ್ಗಂಧರ್ವಸಿದ್ಧಾಃ ಸಮಹರ್ಷಿಸಂಘಾಃ ।
ವಾರ್ತ್ರಘ್ನಲಿಂಗೈಸ್ತಮಭಿಷ್ಟುವಾನಾ
ಮಂತ್ರೈರ್ಮುದಾ ಕುಸುಮೈರಭ್ಯವರ್ಷನ್ ॥ ೩೪ ॥

ವೃತ್ರಸ್ಯ ದೇಹಾನ್ನಿಷ್ಕ್ರಾಂತಮಾತ್ಮಜ್ಯೋತಿರರಿಂದಮ ।
ಪಶ್ಯತಾಂ ಸರ್ವಲೋಕಾನಾಮಲೋಕಂ ಸಮಪದ್ಯತ ॥ ೩೫ ॥

ಹೀಗೆ ಎರಡೂ ತೋಳುಗಳೂ ಬುಡಸಹಿತ ಕತ್ತರಿಸಲ್ಪಡಲು ವೃತ್ರಾಸುರನ ಎಡ-ಬಲ ಹೆಗಲುಗಳಿಂದ ರಕ್ತದ ಧಾರೆ ಹರಿಯ ತೊಡಗಿತು. ಆಗ ಅವನು – ಇಂದ್ರನ ವಜ್ರಾಯುಧದ ಏಟಿನಿಂದ ರೆಕ್ಕೆಗಳು ಕತ್ತರಿಸಿ ಹೋಗಿ ಆಕಾಶದಿಂದ ನೆಲಕ್ಕುರುಳಿದ ಮಹಾ ಪರ್ವತವೋ ಎಂಬಂತೆ ಕಾಣುತ್ತಿದ್ದನು. ॥ ೨೬ ॥ ಆಗ ಕಾಲುಗಳಿಂದ ನಡೆದಾಡುವ ಪರ್ವತರಾಜನಂತೆ ಅತಿ ದೀರ್ಘಕಾಯನಾಗಿದ್ದ ವೃತ್ರಾಸುರನು ತನ್ನ ಕೆಳದವಡೆಯನ್ನು ಭೂಮಿಯಲ್ಲಿಯೂ, ಮೇಲಿನ ದವಡೆಯನ್ನು ಸ್ವರ್ಗಕ್ಕೂ ಚಾಚಿ, ಆಕಾಶದಂತೆ ಆಳವಾಗಿದ್ದ ಬಾಯಿಯು ಸರ್ಪದಂತೆ ಭೀಕರವಾಗಿದ್ದ ನಾಲಿಗೆ ಮತ್ತು ಮೃತ್ಯುವಿಗೆ ಸಮನಾದ ಕೋರೆದಾಡೆಗಳು ಇವುಗಳಿಂದ ಮೂರು ಲೋಕಗಳನ್ನೇ ನುಂಗಿ ಹಾಕುವನೋ ಎಂಬಂತೆ ತನ್ನ ಕಾಲುಗಳಿಂದ ಭೂಮಿಯನ್ನು ಅಪ್ಪಳಿಸುತ್ತಾ, ಮಹಾವೇಗದಿಂದ ಪರ್ವತಗಳನ್ನು ತಲೆ ಕೆಳಗಾಗಿಸುತ್ತಾ ಇಂದ್ರನ ಬಳಿಗೆ ನುಗ್ಗಿ ಬಂದು ಅತಿಪರಾಕ್ರಮಿಯೂ, ಬಲಶಾಲಿಯೂ ಆದ ರಾಕ್ಷಸ ಕಾಯದ ಹೆಬ್ಬಾವೊಂದು ಆನೆಯನ್ನು ನುಂಗಿಹಾಕುತ್ತಿದೆಯೋ ಎಂಬಂತೆ ಇಂದ್ರನನ್ನು ಅವನ ವಾಹನ ಐರಾವತದೊಂದಿಗೆ ನುಂಗಿಬಿಟ್ಟನು. ಹೀಗೆ ವೃತ್ರಾಸುರನು ಇಂದ್ರನನ್ನು ನುಂಗಿದ್ದನ್ನು ಕಂಡು ಪ್ರಜಾಪತಿಗಳೂ, ಮಹರ್ಷಿಗಳೂ, ದೇವತೆಗಳೂ ಕಡುದುಃಖದಿಂದ ಅಯ್ಯೋ! ಅಯ್ಯೋ! ಎಂತಹ ಅನರ್ಥವಾಯಿತು? ಎಂದು ದುಃಖಿಸತೊಡಗಿದ್ದರು. ॥ ೨೭-೩೦ ॥ ಆದರೆ ದೇವರಾಜನಿಗೆ ಯಾವ ಅಪಾಯವೂ ಆಗಲಿಲ್ಲ, ನಾರಾಯಣಕವಚವೆಂಬ ಮಹಾಪುರುಷ ವಿದ್ಯೆಯು ಆತನನ್ನು ಸಂರಕ್ಷಿಸಿತು. ಯೋಗಬಲವೂ ಆತನನ್ನು ಕಾಪಾಡಿತು. ಆದುದರಿಂದ ವೃತ್ರಾಸುರನು ಇಂದ್ರನನ್ನು ನುಂಗಿದ್ದರೂ, ಅವನು ಹೊಟ್ಟೆಯೊಳಗೆ ಸೇರಿದ್ದರೂ ಸಾಯಲಿಲ್ಲ. ॥ ೩೧ ॥ ಅವನು ತನ್ನ ವಜ್ರದಿಂದ ಆತನ ಹೊಟ್ಟೆಯನ್ನು ಸೀಳಿಹಾಕಿ ಹೊರಕ್ಕೆ ಬಂದು ಕಡುರಭಸದಿಂದ ಪರ್ವತ ಶಿಖರದಂತೆ ಉನ್ನತವಾಗಿದ್ದ ಆತನ ತಲೆಯನ್ನು ಕಡಿದುಹಾಕಿದನು. ॥ ೩೨ ॥ ಗ್ರಹಗಳಿಗೆ ಉತ್ತರಾಯಣ-ದಕ್ಷಿಣಾಯನ ಗತಿಗಳಿಗೆ ತಗಲುವಷ್ಟು ಕಾಲದಲ್ಲಿ, ಅಂದರೆ ಒಂದು ವರ್ಷದ ಅವಧಿಯಲ್ಲಿ ವೃತ್ರಸಂಹಾರಯೋಗವು ಒದಗಿದಾಗ ತೀವ್ರವೇಗದಿಂದ ಸುತ್ತುತ್ತಿದ್ದ ವಜ್ರಾಯುಧವು ಆತನ ಕುತ್ತಿಗೆಯನ್ನು ಎಲ್ಲ ಕಡೆಗಳಿಂದಲೂ ಕತ್ತರಿಸಿ ಭೂಮಿಯಲ್ಲಿ ಬೀಳಿಸಿತು. ॥ ೩೩ ॥ ಆಗ ಆಕಾಶದಲ್ಲಿ ದೇವದುಂದುಭಿಗಳು ಮೊಳಗಿದವು. ಮಹರ್ಷಿಗಳೊಡನೆ ಗಂಧರ್ವರು, ಸಿದ್ಧರು ಮುಂತಾದವರು ಪರಮಾನಂದಭರಿತರಾಗಿ ವೃತ್ರಸಂಹಾರವನ್ನು ಕೊಂಡಾಡುವ ದಿವ್ಯ ಮಂತ್ರಗಳಿಂದ ದೇವರಾಜನನ್ನು ಸ್ತುತಿಸುತ್ತಾ ಹೂಮಳೆಯನ್ನು ಕರೆಯತೊಡಗಿದರು. ॥ ೩೪ ॥ ಶತ್ರುದಮನ ಪರೀಕ್ಷಿತನೇ! ಆಗ ವೃತ್ರಾಸುರನ ದೇಹದಿಂದ ಆತ್ಮಜ್ಯೋತಿಯು ಹೊರಬಂದು ಇಂದ್ರಾದಿ ದೇವತೆಗಳು ನೋಡು-ನೋಡುತ್ತಿರುವಂತೆಯೇ ಸರ್ವಲೋಕಾತೀತ ಭಗವಂತನ ಸ್ವರೂಪದಲ್ಲಿ ಲೀನವಾಗಿ ಹೋಯಿತು. ॥ ೩೫ ॥

ಹನ್ನೆರಡನೆಯ ಅಧ್ಯಾಯವು ಮುಗಿಯಿತು. ॥ ೧೨ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಷಷ್ಠಸ್ಕಂಧೇ ವೃತ್ರವಧೋ ನಾಮ ದ್ವಾದಶೋಽಧ್ಯಾಯಃ ॥ ೧೨ ॥

ಹದಿಮೂರನೆಯ ಅಧ್ಯಾಯ

ಇಂದ್ರನನ್ನು ಬ್ರಹ್ಮಹತ್ಯೆಯು ಆವರಿಸಿದುದು

ಶ್ರೀಶುಕ ಉವಾಚ

ವೃತ್ರೇ ಹತೇ ತ್ರಯೋ ಲೋಕಾ ವಿನಾ ಶಕ್ರೇಣ ಭೂರಿದ ।
ಸಪಾಲಾ ಹ್ಯಭವನ್ಸದ್ಯೋ ವಿಜ್ವರಾ ನಿರ್ವೃತೇಂದ್ರಿಯಾಃ ॥ ೧ ॥

ದೇವರ್ಷಿಪಿತೃಭೂತಾನಿ ದೈತ್ಯಾ ದೇವಾನುಗಾಃ ಸ್ವಯಮ್ ।
ಪ್ರತಿಜಗ್ಮುಃ ಸ್ವಧಿಷ್ಣ್ಯಾನಿ ಬ್ರಹ್ಮೇಶೇಂದ್ರಾದಯಸ್ತತಃ ॥ ೨ ॥

ರಾಜೋವಾಚ

ಇಂದ್ರಸ್ಯಾನಿರ್ವೃತೇರ್ಹೇತುಂ ಶ್ರೋತುಮಿಚ್ಛಾಮಿ ಭೋ ಮುನೇ ।
ಯೇನಾಸನ್ಸುಖಿನೋ ದೇವಾ ಹರೇರ್ದುಃಖಂ ಕುತೋಽಭವತ್ ॥ ೩ ॥

ಶ್ರೀಶುಕ ಉವಾಚ

ವೃತ್ರವಿಕ್ರಮಸಂವಿಗ್ನಾಃ ಸರ್ವೇ ದೇವಾಃ ಸಹರ್ಷಿಭಿಃ ।
ತದ್ವಧಾಯಾರ್ಥಯನ್ನಿಂದ್ರಂ ನೈಚ್ಛದ್ಭೀತೋ ಬೃಹದ್ವಧಾತ್ ॥ ೪ ॥

ಇಂದ್ರ ಉವಾಚ

ಸ್ತ್ರೀಭೂಜಲದ್ರುಮೈರೇನೋ ವಿಶ್ವರೂಪವಧೋದ್ಭವಮ್ ।
ವಿಭಕ್ತಮನುಗೃಹ್ಣದ್ಭಿರ್ವೃತ್ರಹತ್ಯಾಂ ಕ್ವ ಮಾರ್ಜ್ಮ್ಯಹಮ್ ॥ ೫ ॥

ಶ್ರೀಶುಕ ಉವಾಚ

ಋಷಯಸ್ತದುಪಾಕರ್ಣ್ಯ ಮಹೇಂದ್ರಮಿದಮಬ್ರುವನ್ ।
ಯಾಜಯಿಷ್ಯಾಮ ಭದ್ರಂ ತೇ ಹಯಮೇಧೇನ ಮಾ ಸ್ಮ ಭೈಃ ॥ ೬ ॥

ಹಯಮೇಧೇನ ಪುರುಷಂ ಪರಮಾತ್ಮಾನಮೀಶ್ವರಮ್ ।
ಇಷ್ಟ್ವಾ ನಾರಾಯಣಂ ದೇವಂ ಮೋಕ್ಷ್ಯಸೇಽಪಿ ಜಗದ್ವಧಾತ್ ॥ ೭ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಮಹಾದಾನಿಯಾದ ಪರೀಕ್ಷಿತನೇ! ವೃತ್ರಾಸುರನ ಮೃತ್ಯುವಿನಿಂದ ಇಂದ್ರನನ್ನು ಬಿಟ್ಟು ಮೂರುಲೋಕಗಳೂ, ಲೋಕಪಾಲರೂ ಒಡನೆಯೇ ಪರಮಸಂತೋಷಭರಿತರಾದರು. ಅವರ ಭಯ, ಚಿಂತೆ ಎಲ್ಲವೂ ಹೊರಟುಹೋಯಿತು. ॥ ೧ ॥ ಆ ಯುದ್ಧವು ಮುಗಿಯಲು ದೇವತೆಗಳೂ, ಋಷಿಗಳೂ, ಪಿತೃಗಳೂ, ಭೂತರೂ, ದೈತ್ಯರೂ, ದೇವತೆಗಳ ಅನುಚರರಾದ ಗಂಧರ್ವರೂ ಮುಂತಾದವರೆಲ್ಲರೂ ತಮ್ಮ-ತಮ್ಮ ಲೋಕಗಳಿಗೆ ಹೊರಟುಹೋದರು. ಅನಂತರ ಬ್ರಹ್ಮದೇವರು, ರುದ್ರದೇವರು, ಇಂದ್ರನು ಎಲ್ಲರೂ ಹೊರಟುಹೋದರು. ॥ ೨ ॥

ಪರೀಕ್ಷಿತನು ಕೇಳಿದನು – ಮುನಿವರ್ಯರೇ! ಇಂದ್ರನೊಬ್ಬನಿಗೆ ಮಾತ್ರ ಆಗ ಅಪ್ರಸನ್ನತೆಯುಂಟಾಗಲು ಕಾರಣವೇನು? ವೃತ್ರಾಸುರನ ವಧೆಯಿಂದ ಎಲ್ಲ ದೇವತೆಗಳು ಸುಖಪಟ್ಟಿರುವಾಗ ಇಂದ್ರನೊಬ್ಬನಿಗೆ ಏಕೆ ದುಃಖವುಂಟಾಯಿತು? ಇದನ್ನು ಕೇಳಲು ನಾನು ಬಯಸುವೆನು. ದಯವಿಟ್ಟು ತಿಳಿಸಬೇಕು. ॥ ೩ ॥

ಶ್ರೀಶುಕಮಹಾಮುನಿಗಳು ಹೇಳಿದರು – ಎಲೈ ರಾಜೇಂದ್ರನೇ! ವೃತ್ರಾಸುರನ ಪರಾಕ್ರಮದಿಂದ ಎಲ್ಲ ದೇವತೆಗಳೂ ಮತ್ತು ಋಷಿ-ಮಹರ್ಷಿಗಳೂ ಅತ್ಯಂತ ಭಯಗೊಂಡಾಗ, ಅವರೆಲ್ಲರೂ ಅಸುರನ ವಧೆಗಾಗಿ ಇಂದ್ರನಲ್ಲಿ ಪ್ರಾರ್ಥಿಸಿದ್ದರು. ಆದರೂ ಅವನು ಬ್ರಹ್ಮಹತ್ಯೆಯ ಭಯದಿಂದ ಅವನನ್ನು ಕೊಲ್ಲಲು ಬಯಸುತ್ತಿರಲಿಲ್ಲ. ॥ ೪ ॥

ದೇವೇಂದ್ರನು ಅವರಲ್ಲಿ ಹೇಳಿದನು – ಎಲೈ ದೇವತೆಗಳಿರಾ! ಋಷಿಗಳಿರಾ! ಹಿಂದೆ ವಿಶ್ವರೂಪನ ವಧೆಯಿಂದ ನನಗೆ ಹತ್ತಿಕೊಂಡಿದ್ದ ಬ್ರಹ್ಮಹತ್ಯೆಯನ್ನೇನೋ ಸ್ತ್ರೀಯರು, ಪೃಥಿವಿ, ಜಲ, ವೃಕ್ಷಗಳು ತಮ್ಮಲ್ಲಿ ಹಂಚಿಕೊಂಡು ಸ್ವೀಕರಿಸಿದ್ದರು. ಈಗ ನಾನು ವೃತ್ರನನ್ನು ವಧಿಸಿ ಆವನ ಬ್ರಹ್ಮಹತ್ಯೆಯಿಂದ ನನ್ನ ಬಿಡುಗಡೆ ಹೇಗಾದೀತು? ॥ ೫ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಮಹೇಂದ್ರನ ಮಾತನ್ನು ಕೇಳಿದ ಋಷಿಗಳು ಅವನಲ್ಲಿ ಹೇಳಿದರು – ಎಲೈ ದೇವೇಂದ್ರನೇ! ನಿನಗೆ ಮಂಗಳವುಂಟಾಗಲೀ. ನೀನು ಸ್ವಲ್ಪವಾದರೂ ಭಯಪಡಬೇಡ. ಏಕೆಂದರೆ, ನಾವು ನಿನ್ನಿಂದ ಅಶ್ವಮೇಧ ಯಜ್ಞವನ್ನು ಮಾಡಿಸಿ ಎಲ್ಲ ಪಾಪಗಳಿಂದ ಬಿಡುಗಡೆಗೊಳಿಸುವೆವು. ॥ ೬ ॥ ಅಶ್ವಮೇಧಯಜ್ಞದ ಮೂಲಕ ಸರ್ವಾಂತರ್ಯಾಮಿ, ಸರ್ವಶಕ್ತಿಸಂಪನ್ನ ಪರಮಾತ್ಮನಾದ ಶ್ರೀಮನ್ನಾರಾಯಣನ ಆರಾಧನೆಯನ್ನು ಮಾಡಿ ನೀನು ಸಮಸ್ತ ಜಗತ್ತನ್ನು ವಧಿಸುವುದರಿಂದ ಉಂಟಾದ ಪಾಪದಿಂದಲೂ ಮುಕ್ತನಾಗುವೆ. ಹಾಗಿರುವಾಗ ವೃತ್ರಾಸುರನ ವಧೆಯ ಮಾತಾದರೂ ಏನಿದೆ? ॥ ೭ ॥ ದೇವರಾಜಾ! ಭಗವಂತನ ನಾಮ-ಸಂಕೀರ್ತನ ಮಾತ್ರದಿಂದಲೇ ಬ್ರಾಹ್ಮಣ, ತಂದೆ, ಗೋವು, ತಾಯಿ, ಆಚಾರ್ಯ ಮುಂತಾದವರ

ಬ್ರಹ್ಮಹಾ ಪಿತೃಹಾ ಗೋಘ್ನೋ
ಮಾತೃಹಾಽಽಚಾರ್ಯಹಾಘವಾನ್ ।
ಶ್ವಾದಃ ಪುಲ್ಕಸಕೋ ವಾಪಿ
ಶುದ್ಧ್ಯೇರನ್ಯಸ್ಯ ಕೀರ್ತನಾತ್ ॥ ೮ ॥

ತಮಶ್ವಮೇಧೇನ ಮಹಾಮಖೇನ
ಶ್ರದ್ಧಾನ್ವಿತೋಽಸ್ಮಾಭಿರನುಷ್ಠಿತೇನ ।
ಹತ್ವಾಪಿ ಸಬ್ರಹ್ಮಚರಾಚರಂ ತ್ವಂ
ನ ಲಿಪ್ಯಸೇ ಕಿಂ ಖಲನಿಗ್ರಹೇಣ ॥ ೯ ॥

ಶ್ರೀಶುಕ ಉವಾಚ

ಏವಂ ಸಂಚೋದಿತೋ ವಿಪ್ರೈರ್ಮರುತ್ವಾನಹನದ್ರಿಪುಮ್ ।
ಬ್ರಹ್ಮಹತ್ಯಾ ಹತೇ ತಸ್ಮಿನ್ನಾಸಸಾದ ವೃಷಾಕಪಿಮ್ ॥ ೧೦ ॥

ತಯೇಂದ್ರಃ ಸ್ಮಾಸಹತ್ತಾಪಂ
ನಿರ್ವೃತಿರ್ನಾಮುಮಾವಿಶತ್ ।
ಹ್ರೀಮಂತಂ ವಾಚ್ಯತಾಂ ಪ್ರಾಪ್ತಂ
ಸುಖಯಂತ್ಯಪಿ ನೋ ಗುಣಾಃ ॥ ೧೧ ॥

ತಾಂ ದದರ್ಶಾನುಧಾವಂತೀಂ
ಚಾಂಡಾಲೀಮಿವ ರೂಪಿಣೀಮ್ ।
ಜರಯಾ ವೇಪಮಾನಾಂಗೀಂ
ಯಕ್ಷ್ಮಗ್ರಸ್ತಾಮಸೃಕ್ಪಟಾಮ್ ॥ ೧೨ ॥

ವಿಕೀರ್ಯ ಪಲಿತಾನ್ಕೇಶಾಂಸ್ತಿಷ್ಠ
ತಿಷ್ಠೇತಿ ಭಾಷಿಣೀಮ್ ।
ಮೀನಗಂಧ್ಯಸುಗಂಧೇನ ಕುರ್ವತೀಂ
ಮಾರ್ಗದೂಷಣಮ್ ॥ ೧೩ ॥

ನಭೋ ಗತೋ ದಿಶಃ ಸರ್ವಾಃ
ಸಹಸ್ರಾಕ್ಷೋ ವಿಶಾಂಪತೇ ।
ಪ್ರಾಗುದೀಚೀಂ ದಿಶಂ ತೂರ್ಣಂ ಪ್ರವಿಷ್ಟೋ
ನೃಪ ಮಾನಸಮ್ ॥ ೧೪ ॥

ಸ ಆವಸತ್ಪುಷ್ಕರನಾಲತಂತೂ-
ನಲಬ್ಧಭೋಗೋ ಯದಿಹಾಗ್ನಿದೂತಃ ।
ವರ್ಷಾಣಿ ಸಾಹಸ್ರಮಲಕ್ಷಿತೋಽಂತಃ
ಸ ಚಿಂತಯನ್ ಬ್ರಹ್ಮವಧಾದ್ವಿಮೋಕ್ಷಮ್ ॥ ೧೫ ॥

ಹತ್ಯೆಯನ್ನು ಮಾಡುವ ಮಹಾಪಾಪಿಯೂ, ಚಾಂಡಾಲನೂ, ಕುಬುಕನೂ ಇಂತಹವರೂ ಕೂಡ ಶುದ್ಧರಾಗಿ ಬಿಡುತ್ತಾರೆ. ॥ ೮ ॥ ನಾವುಗಳು ನಿನಗಾಗಿ 'ಅಶ್ವಮೇಧ' ಎಂಬ ಮಹಾಯಜ್ಞದ ಅನುಷ್ಠಾನ ಮಾಡುವೆವು. ಇದರ ಮೂಲಕ ಶ್ರದ್ಧೆಯಿಂದ ಭಗವಂತನನ್ನು ಆರಾಧಿಸಿ ನೀನು ಬ್ರಹ್ಮನವರೆಗಿನ ಇಡೀ ಚರಾಚರ ಜಗತ್ತನ್ನು ಹತ್ಯೆಮಾಡಿದರೆ ಬರುವ ಪಾಪವೂ ನಿನಗೆ ಅಂಟಲಾರದು. ಹಾಗಿರುವಾಗ ಈ ದುಷ್ಟನಿಗೆ ದಂಡವನ್ನು ವಿಧಿಸಿದ ಪಾಪದಿಂದ ಬಿಡುಗಡೆಹೊಂದುವ ಮಾತಾದರೂ ಏನಿದೆ? ॥ ೯ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿದ್ರಾಜನೇ! ಹೀಗೆ ಬ್ರಾಹ್ಮಣರಿಂದ ಪ್ರೇರಿತನಾಗಿ ದೇವೇಂದ್ರನು ವೃತ್ರಾಸುರನನ್ನು ವಧಿಸಿದ್ದನು. ಈಗ ಅವನನ್ನು ಸಂಹರಿಸಿದ್ದರಿಂದ ಬ್ರಹ್ಮಹತ್ಯೆಯು ಇಂದ್ರನ ಬಳಿಗೆ ಬಂದಿತು. ॥ ೧೦ ॥ ಅದರ ಕಾರಣದಿಂದ ಇಂದ್ರನಿಗೆ ತುಂಬಾ ಕ್ಲೇಶವಾಯಿತು. ಮಹಾ ಸಂತಾಪವನ್ನು ಸಹಿಸಬೇಕಾಯಿತು. ಅವನಿಗೆ ಒಂದು ಕ್ಷಣವೂ ನೆಮ್ಮದಿ ಇಲ್ಲವಾಯಿತು. ನಾಚಿಕೆ-ಸಂಕೋಚವುಳ್ಳ ಸತ್ಪುರುಷನಿಗೆ ಕಳಂಕವು ತಗುಲಿದರೆ ಆಗ ಅವನ ಧೈರ್ಯವೇ ಮುಂತಾದ ಗುಣಗಳೂ ಅವನಿಗೆ ಸುಖವನ್ನುಂಟುಮಾಡಲಾರವು. ॥ ೧೧ ॥ ಆ ಬ್ರಹ್ಮಹತ್ಯೆಯು ಸಾಕ್ಷಾತ್ ಚಾಂಡಾಲಿನಿಯಂತೆ ತನ್ನ ಹಿಂದೆಯೇ ಬೆನ್ನಟ್ಟಿ ಬರುತ್ತಿರುವುದು ಇಂದ್ರನಿಗೆ ಕಾಣಿಸಿತು. ಅವಳು ಮುದುಕಿಯಾದ್ದರಿಂದ ಅಂಗಾಂಗಗಳು ನಡುಗುತ್ತಾ ಇವೆ. ಜೊತೆಗೆ ಕ್ಷಯ ರೋಗವೂ ಅದನ್ನು ಪೀಡಿಸುತ್ತಿದೆ. ಅದರ ಬಟ್ಟೆಗಳೆಲ್ಲ ರಕ್ತದಿಂದ ತೊಯ್ದುಹೋಗಿವೆ. ॥ ೧೨ ॥ ಅದು ತನ್ನ ಬಿಳಿಯ ಕೂದಲುಗಳನ್ನು ಕೆದರಿಕೊಂಡು ನಿಲ್ಲು! ನಿಲ್ಲು! ಎಂದು ಕಿರುಚುತ್ತಾ ಬರುತ್ತಿದೆ. ಅದರ ಉಸಿರಿನಿಂದ ಮೀನಿನಂತಹ ದುರ್ಗಂಧವು ಹೊರ ಹೊಮ್ಮುತ್ತಿದೆ. ಅದರಿಂದ ದಾರಿಯೆಲ್ಲವೂ ದೂಷಿತವಾಗುತ್ತಿದೆ. ॥ ೧೩ ॥ ರಾಜನೇ! ದೇವೇಂದ್ರನು ಅದರ ಭಯದಿಂದ ದಿಕ್ಕು-ವಿದಿಕ್ಕುಗಳಿಗೂ, ಆಕಾಶಕ್ಕೂ ಓಡುತ್ತಾ ಅಲೆದಾಡಿದನು. ಕೊನೆಗೆ ಎಲ್ಲಿಯೂ ಆಸರೆ ಸಿಕ್ಕದೆ ಅವನು ಈಶಾನ್ಯದಿಕ್ಕಿನಲ್ಲಿರುವ ಮಾನಸ ಸರೋವರದೊಳಗೆ ಬೇಗನೇ ಪ್ರವೇಶಿಸಿಬಿಟ್ಟನು. ॥ ೧೪ ॥ ಮಹೇಂದ್ರನು ಮಾನಸಸರೋವರದ ಕಮಲದ ದಂಟಿನ ನೂಲು ಗಳೊಳಗೆ ಒಂದು ಸಾವಿರವರ್ಷ ಕಾಲ ಅವಿತಿದ್ದು – 'ಬ್ರಹ್ಮಹತ್ಯೆ ಯಿಂದ ತನಗೆ ಹೇಗೆ ಬಿಡುಗಡೆ ಯಾದೀತು?' ಎಂಬುದನ್ನು ಯೋಚಿಸುತ್ತಿದ್ದನು. ಅಷ್ಟುಕಾಲದವರೆಗೂ ಅವನಿಗೆ ತಿನ್ನುವುದಕ್ಕೂ ಏನೂ ದೊರೆಯಲಿಲ್ಲ, ಏಕೆಂದರೆ, ಅವನು ಅಗ್ನಿದೇವನ ಮುಖದಿಂದಲೇ ಊಟಮಾಡುವುದು. ಆದರೆ ಅಗ್ನಿದೇವನಿಗೆ ನೀರಿನೊಳಗಿನ ತಾವರೆಯ ದಂಟಿನ ದಾರದೊಳಗೆ ಹೋಗಲು ಸಾಧ್ಯವಾಗುತ್ತಿರಲಿಲ್ಲ. ॥ ೧೫ ॥ ಹೀಗೆ ದೇವೇಂದ್ರನು ಕಮಲದ ದಂಟಿನ ದಾರದೊಳಗೆ ಅಡಗಿರುವಷ್ಟು ಕಾಲವು ರಾಜಾ ನಹುಷನು ತನ್ನ ವಿದ್ಯೆ, ತಪಸ್ಸು ಮತ್ತು ಯೋಗಬಲಗಳಿಂದ ಸ್ವರ್ಗವನ್ನು ಆಳುತ್ತಿದ್ದನು. ಆದರೆ ಆತನು ಸಂಪತ್ತು-ಅಧಿಕಾರಗಳ ಮದದಿಂದ ಕುರುಡನಾಗಿ ಇಂದ್ರಪತ್ನೀ ಶಚೀದೇವಿಯೊಂದಿಗೆ ಅಪಚಾರವನ್ನು ಮಾಡಲು ಬಯಸಿದನು. ಆಗ ಆಕೆಯು ಆತನು ಮಹರ್ಷಿಗಳಲ್ಲಿ

ತಾವತ್ತ್ರಿಣಾಕಂ ನಹುಷಃ ಶಶಾಸ
ವಿದ್ಯಾತಪೋಯೋಗಬಲಾನುಭಾವಃ ।
ಸ ಸಂಪದೈಶ್ವರ್ಯಮದಾಂಧಬುದ್ಧಿ-
ರ್ನೀತಸ್ತಿರಶ್ಚಾಂ ಗತಿಮಿಂದ್ರಪತ್ನ್ಯಾ ॥ ೧೬ ॥

ತತೋ ಗತೋ ಬ್ರಹ್ಮಗಿರೋಪಹೂತ
ಋತಂಭರಧ್ಯಾನನಿವಾರಿತಾಘಃ ।
ಪಾಪಸ್ತು ದಿಗ್ದೇವತಯಾ ಹತೌಜಾ-
ಸ್ತಂ ನಾಭ್ಯಭೂದವಿತಂ ವಿಷ್ಣುಪತ್ನ್ಯಾ ॥ ೧೭ ॥

ತಂ ಚ ಬ್ರಹ್ಮರ್ಷಯೋಽಭ್ಯೇತ್ಯ ಹಯಮೇಧೇನ ಭಾರತ ।
ಯಥಾವದ್ದೀಕ್ಷಯಾಂಚಕ್ರುಃ ಪುರುಷಾರಾಧನೇನ ಹ ॥ ೧೮ ॥

ಅಥೇಜ್ಯಮಾನೇ ಪುರುಷೇ ಸರ್ವದೇವಮಯಾತ್ಮನಿ ।
ಅಶ್ವಮೇಧೇ ಮಹೇಂದ್ರೇಣ ವಿತತೇ ಬ್ರಹ್ಮವಾದಿಭಿಃ ॥ ೧೯ ॥

ಸ ವೈ ತ್ವಾಷ್ಟ್ರವಧೋ ಭೂಯಾನಪಿ ಪಾಪಚಯೋ ನೃಪ ।
ನೀತಸ್ತೇನೈವ ಶೂನ್ಯಾಯ ನೀಹಾರ ಇವ ಭಾನುನಾ ॥ ೨೦ ॥

ಸ ವಾಜಿಮೇಧೇನ ಯಥೋದಿತೇನ
ವಿತಾಯಮಾನೇನ ಮರೀಚಿಮಿಶ್ರೈಃ ।
ಇಷ್ಟ್ವಾಧಿಯಜ್ಞಂ ಪುರುಷಂ ಪುರಾಣ-
ಮಿಂದ್ರೋ ಮಹಾನಾಸ ವಿಧೂತಪಾಪಃ ॥ ೨೦ ॥

ಇದಂ ಮಹಾಖ್ಯಾನಮಶೇಷಪಾಪ್ಮನಾಂ
ಪ್ರಕ್ಷಾಲನಂ ತೀರ್ಥಪದಾನುಕೀರ್ತನಮ್ ।
ಭಕ್ತ್ಯುಚ್ಛ್ರಯಂ ಭಕ್ತಜನಾನುವರ್ಣನಂ
ಮಹೇಂದ್ರಮೋಕ್ಷಂ ವಿಜಯಂ ಮರುತ್ವತಃ ॥ ೨೨ ॥

ಪಠೇಯುರಾಖ್ಯಾನಮಿದಂ ಸದಾ ಬುಧಾಃ
ಶೃಣ್ವಂತ್ಯಥೋ ಪರ್ವಣಿ ಪರ್ವಣೀಂದ್ರಿಯಮ್ ।
ಧನ್ಯಂ ಯಶಸ್ಯಂ ನಿಖಿಲಾಘಮೋಚನಂ
ರಿಪುಂಜಯಂ ಸ್ವಸ್ತ್ಯಯನಂ ತಥಾಽಽಯುಷಮ್ ॥ ೨೩ ॥

ಅಪರಾಧವನ್ನು ಆಚರಿಸುವಂತೆ ಮಾಡಿದಳು. ಅದರಿಂದ ಅವನು ಶಾಪಗ್ರಸ್ತನಾಗಿ ಹೆಬ್ಬಾವಿನ ರೂಪವನ್ನು ತಳೆದನು. ॥ ೧೬ ॥ ಅನಂತರ ಸತ್ಯಕ್ಕೆ ಪರಮಪೋಷಕನಾಗಿರುವ ಶ್ರೀಭಗವಂತನನ್ನು ಚೆನ್ನಾಗಿ ಧ್ಯಾನ ಮಾಡಿದ್ದರಿಂದ ಇಂದ್ರನ ಪಾಪವು ನಾಶವಾಗಿ ಹೋಯಿತು. ಬ್ರಾಹ್ಮಣರ ಕರೆಯಂತೆ ಅನಂತರ ಅವನು ಸ್ವರ್ಗಕ್ಕೆ ಹಿಂದಿರುಗಿದನು. ಕಮಲವನದಲ್ಲಿ ವಿಹರಿಸುವ ವಿಷ್ಣುಪತ್ನಿಯಾದ ಶ್ರೀಲಕ್ಷ್ಮೀದೇವಿಯು ಇಂದ್ರನನ್ನು ರಕ್ಷಿಸುತ್ತಿದ್ದಳು ಮತ್ತು ಈಶಾನ್ಯ ದಿಕ್ಕಿಗೆ ಅಧಿಪತಿಯಾದ ರುದ್ರದೇವರು ಪಾಪದ ತೇಜಸ್ಸನ್ನು ನಿಗ್ರಹಿಸಿದ್ದರಿಂದ ಬ್ರಹ್ಮಹತ್ಯೆಯು ಇಂದ್ರನನ್ನು ಆಕ್ರಮಿಸಲಾರದೆ ಹೋಯಿತು. ॥ ೧೭ ॥

ಪರೀಕ್ಷಿತನೇ! ಇಂದ್ರನು ಸ್ವರ್ಗಕ್ಕೆ ಹಿಂದಿರುಗಿದಾಗ ಬ್ರಹ್ಮರ್ಷಿಗಳು ಅಲ್ಲಿಗೆ ಬಂದು ಭಗವಂತನ ಆರಾಧನೆಗಾಗಿ ಇಂದ್ರನಿಗೆ ಅಶ್ವಮೇಧಯಜ್ಞದ ದೀಕ್ಷೆಕೊಟ್ಟು, ಅವನಿಂದ ಅಶ್ವಮೇಧ ಯಜ್ಞವನ್ನು ಮಾಡಿಸಿದರು. ॥ ೧೮ ॥ ವೇದವಾದಿಗಳಾದ ಬ್ರಾಹ್ಮಣರು ಅವನಿಂದ ಅಶ್ವಮೇಧ ಯಜ್ಞವನ್ನು ಮಾಡಿಸಿ, ದೇವೇಂದ್ರನು ಆ ಯಜ್ಞದ ಮೂಲಕ ಸರ್ವದೇವಸ್ವರೂಪನಾದ ಭಗವಾನ್ ಪುರುಷೋತ್ತಮನ ಆರಾಧನೆಯನ್ನು ಮಾಡಿದಾಗ ಭಗವಂತನ ಆರಾಧನೆಯ ಪ್ರಭಾವದಿಂದ ವೃತ್ರಾಸುರನ ವಧೆಯ ಆ ದೊಡ್ಡ ಪಾಪರಾಶಿಯು ಸೂರ್ಯೋದಯವಾಗುತ್ತಲೇ ಮಂಜು ಕರಗಿಹೋಗುವಂತೆ ಭಸ್ಮವಾಗಿ ಹೋಯಿತು. ॥ ೧೯-೨೦ ॥ ಮರೀಚಿಯೇ ಮುಂತಾದ ಮುನೀಶ್ವರರು ಅವನಿಂದ ವಿಧಿವತ್ತಾಗಿ ಅಶ್ವಮೇಧ ಯಜ್ಞವನ್ನು ಮಾಡಿಸಿದಾಗ ಅದರ ಮೂಲಕ ಸನಾತನ ಪುರುಷನೂ, ಯಜ್ಞಪತಿಯೂ ಆದ ಭಗವಂತನನ್ನು ಆರಾಧಿಸಿ ಇಂದ್ರನು ಎಲ್ಲ ಪಾಪಗಳಿಂದ ಬಿಡುಗಡೆಹೊಂದಿ, ಹಿಂದಿನಂತೆಯೇ ಲೋಕಪೂಜ್ಯನಾದನು. ॥ ೨೧ ॥

ಪರೀಕ್ಷಿತನೇ! ಈ ಶ್ರೇಷ್ಠವಾದ ಆಖ್ಯಾನದಲ್ಲಿ ಇಂದ್ರನ ವಿಜಯ, ಪಾಪಗಳಿಂದ ಅವನ ಮುಕ್ತಿ ಮತ್ತು ಭಗವಂತನ ಪ್ರಿಯಭಕ್ತ ವೃತ್ರಾಸುರನ ವರ್ಣನ ನಡೆದಿದೆ. ಇದರಲ್ಲಿ ತೀರ್ಥಗಳಿಗೂ ತೀರ್ಥಸ್ವರೂಪವಾದ ಭಗವಂತನ ಅನುಗ್ರಹವೇ ಮುಂತಾದ ಗುಣಗಳ ಸಂಕೀರ್ತನೆ ಇದೆ. ಇದು ಎಲ್ಲ ಪಾಪಗಳನ್ನು ತೊಳೆದು ಹಾಕಿ, ಭಕ್ತಿಯನ್ನು ವೃದ್ಧಿಪಡಿಸುತ್ತದೆ. ॥ ೨೨ ॥ ಬುದ್ಧಿವಂತನಾದ ಮನುಷ್ಯನು ಈ ಇಂದ್ರಸಂಬಂಧೀ ಆಖ್ಯಾನವನ್ನು ಸದಾಕಾಲ ಪಠಿಸುತ್ತಾ, ಶ್ರವಣಿಸುತ್ತಾ ಇರಬೇಕು. ವಿಶೇಷವಾಗಿ ಪರ್ವದಿನಗಳಲ್ಲಿ ಅವಶ್ಯವಾಗಿ ಸೇವಿಸಬೇಕು. ಇದು ಧನವನ್ನೂ, ಕೀರ್ತಿಯನ್ನೂ ವೃದ್ಧಿಪಡಿಸಿ, ಎಲ್ಲ ಪಾಪಗಳಿಂದ ಬಿಡುಗಡೆ ಗೊಳಿಸುತ್ತದೆ. ಶತ್ರುಗಳ ಮೇಲೆ ವಿಜಯವನ್ನು ತಂದುಕೊಟ್ಟು ಆಯುಸ್ಸನ್ನೂ, ಮಂಗಳವನ್ನೂ ವೃದ್ಧಿಪಡಿಸುವುದು. ॥ ೨೩ ॥

ಹದಿಮೂರನೆಯ ಅಧ್ಯಾಯವು ಮುಗಿಯಿತು. ॥ ೧೩ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಷಷ್ಠಸ್ಕಂಧೇ
ಇಂದ್ರವಿಜಯೋ ನಾಮ ತ್ರಯೋದಶೋಽಧ್ಯಾಯಃ ॥ ೧೩ ॥

ಹದಿನಾಲ್ಕನೆಯ ಅಧ್ಯಾಯ

ವೃತ್ರಾಸುರನ ಪೂರ್ವಚರಿತ್ರೆ

ಪರೀಕ್ಷಿದುವಾಚ

ರಜಸ್ತಮಸ್ಸ್ವಭಾವಸ್ಯ ಬ್ರಹ್ಮನ್ವೃತ್ರಸ್ಯ ಪಾಪ್ಮನಃ ।
ನಾರಾಯಣೇ ಭಗವತಿ ಕಥಮಾಸೀದ್ದೃಢಾ ಮತಿಃ ॥ ೧ ॥

ದೇವಾನಾಂ ಶುದ್ಧಸತ್ತ್ವಾನಾಮೃಷೀಣಾಂ ಚಾಮಲಾತ್ಮನಾಮ್ ।
ಭಕ್ತಿರ್ಮುಕುಂದಚರಣೇ ನ ಪ್ರಾಯೇಣೋಪಜಾಯತೇ ॥ ೨ ॥

ರಜೋಭಿಃ ಸಮಸಂಖ್ಯಾತಾಃ ಪಾರ್ಥಿವೈರಿಹ ಜಂತವಃ ।
ತೇಷಾಂ ಯೇ ಕೇಚನೇಹಂತೇ ಶ್ರೇಯೋ ವೈ ಮನುಜಾದಯಃ ॥ ೩ ॥

ಪ್ರಾಯೋ ಮುಮುಕ್ಷವಸ್ತೇಷಾಂ ಕೇಚನೈವ ದ್ವಿಜೋತ್ತಮ ।
ಮುಮುಕ್ಷೂಣಾಂ ಸಹಸ್ರೇಷು ಕಶ್ಚಿನ್ಮುಚ್ಯೇತ ಸಿಧ್ಯತಿ ॥ ೪ ॥

ಮುಕ್ತಾನಾಮಪಿ ಸಿದ್ಧಾನಾಂ ನಾರಾಯಣಪರಾಯಣಃ ।
ಸುದುರ್ಲಭಃ ಪ್ರಶಾಂತಾತ್ಮಾ ಕೋಟಿಷ್ವಪಿ ಮಹಾಮುನೇ ॥ ೫ ॥

ವೃತ್ರಸ್ತು ಸ ಕಥಂ ಪಾಪಃ ಸರ್ವಲೋಕೋಪತಾಪನಃ ।
ಇತ್ಥಂ ದೃಢಮತಿಃ ಕೃಷ್ಣ ಆಸೀತ್ಸಂಗ್ರಾಮ ಉಲ್ಬಣೇ ॥ ೬ ॥

ಅತ್ರ ನಃ ಸಂಶಯೋ ಭೂಯಾಞ್ಛ್ರೋತುಂ ಕೌತೂಹಲಂ ಪ್ರಭೋ ।
ಯಃ ಪೌರುಷೇಣ ಸಮರೇ ಸಹಸ್ರಾಕ್ಷಮತೋಷಯತ್ ॥ ೭ ॥

ಸೂತ ಉವಾಚ

ಪರೀಕ್ಷಿತೋಽಥ ಸಂಪ್ರಶ್ನಂ ಭಗವಾನ್ ಬಾದರಾಯಣಿಃ ।
ನಿಶಮ್ಯ ಶ್ರದ್ದಧಾನಸ್ಯ ಪ್ರತಿನಂದ್ಯ ವಚೋಽಬ್ರವೀತ್ ॥ ೮ ॥

ಶ್ರೀಶುಕ ಉವಾಚ

ಶೃಣುಷ್ವಾವಹಿತೋ ರಾಜನ್ನಿತಿಹಾಸಮಿಮಂ ಯಥಾ ।
ಶ್ರುತಂ ದ್ವೈಪಾಯನಮುಖಾನ್ನಾರದಾದ್ದೇವಲಾದಪಿ ॥ ೯ ॥

ಆಸೀದ್ರಾಜಾ ಸಾರ್ವಭೌಮಃ ಶೂರಸೇನೇಷು ವೈ ನೃಪ ।
ಚಿತ್ರಕೇತುರಿತಿ ಖ್ಯಾತೋ ಯಸ್ಯಾಸೀತ್ಕಾಮಧುಙ್ಮಹೀ ॥ ೧೦ ॥

ಪರೀಕ್ಷಿತನು ಕೇಳಿದನು – ಮಹಾತ್ಮರೇ! ವೃತ್ರಾಸುರನಾದರೋ ರಜೋಗುಣ-ತಮೋಗುಣ ಪ್ರಕೃತಿಯುಳ್ಳ ಅಸುರನು, ಪಾಪ ಕರ್ಮಿಯು. ಅಂತಹವನಿಗೆ ಭಗವಾನ್ ಶ್ರೀನಾರಾಯಣನ ಚರಣಗಳಲ್ಲಿ ದೃಢವಾದ ಭಕ್ತಿಯು ಹೇಗೆ ಉಂಟಾಯಿತು? ॥ ೧ ॥ ಸಾಮಾನ್ಯವಾಗಿ ಶುದ್ಧಸತ್ತ್ವಮಯರಾದ ದೇವತೆಗಳೂ, ಪವಿತ್ರ ಹೃದಯವುಳ್ಳ ಮಹರ್ಷಿಗಳೂ, ಭಗವಾನ್ ಮುಕುಂದನ ಪರಮ ಪ್ರೇಮಮಯ ಅನನ್ಯ ಭಕ್ತಿಯಿಂದ ವಂಚಿತರೇ ಆಗಿರುತ್ತಾರೆ ಎಂಬುದನ್ನು ನಾವು ನೋಡುತ್ತೇವೆ. ನಿಜವಾಗಿಯೂ ಭಗವಂತನ ಭಕ್ತಿಯು ಅತಿ ದುರ್ಲಭವಾಗಿದೆ. ॥ ೨ ॥ ಪೂಜ್ಯರೇ! ಈ ಜಗತ್ತಿನಲ್ಲಿ ಭೂಮಿಯಲ್ಲಿರುವ ಧೂಳಿನ ಕಣಗಳಂತೆ ಜೀವಿಗಳು ಅಸಂಖ್ಯಾತರಾಗಿದ್ದಾರೆ. ಅವರಲ್ಲಿಯೂ ಮನುಷ್ಯರೇ ಮುಂತಾದ ಶ್ರೇಷ್ಠ ಜೀವರೇ ತಮ್ಮ ಶ್ರೇಯಸ್ಸಿಗಾಗಿ ಪ್ರಯತ್ನಿಸುತ್ತಾರೆ. ॥ ೩ ॥ ಬ್ರಾಹ್ಮಣೋತ್ತಮರೇ! ಅವರಲ್ಲಿಯೂ ಸಂಸಾರದಿಂದ ಮುಕ್ತಿಯನ್ನು ಬಯಸುವವರು ವಿರಳರೇ ಆಗಿದ್ದಾರೆ. ಅವರಲ್ಲಿ ಮೋಕ್ಷವನ್ನು ಬಯಸುವವರಲ್ಲಿಯೂ ಯಾರೋ ಸಾವಿರಕ್ಕೆ ಒಬ್ಬನು ಮುಕ್ತಿಯ ಸಿದ್ಧಿಲಾಭವನ್ನು ಪಡೆಯುತ್ತಾನೆ. ॥ ೪ ॥ ಮಹಾಮುನಿಗಳೇ! ಕೋಟ್ಯಾವಧಿ ಸಿದ್ಧರಲ್ಲಿ ಹಾಗೂ ಮುಕ್ತರಲ್ಲಿಯೂ ಏಕಮಾತ್ರ ಭಗವಂತನಲ್ಲೇ ಪರಾಯಣರಾದ ಶಾಂತಚಿತ್ತರಾದ ಮಹಾಪುರುಷರು ದೊರೆಯುವುದು ತುಂಬಾ ಕಠಿಣವಾಗಿದೆ. ॥ ೫ ॥ ಇಂತಹ ಸ್ಥಿತಿಯಲ್ಲಿ ಎಲ್ಲರಿಗೂ ಸತಾಯಿಸುತ್ತಿದ್ದ ದೊಡ್ಡ ಪಾಪಿಯಾದ ಆ ವೃತ್ರಾಸುರನು ಭಯಂಕರ ಯುದ್ಧದ ಸಮಯದಲ್ಲಿಯೂ ಭಗವಾನ್ ಶ್ರೀಕೃಷ್ಣನಲ್ಲಿ ತನ್ನ ವೃತ್ತಿಗಳನ್ನು ದೃಢವಾಗಿ ಹೇಗೆ ತೊಡಗಿಸಿದನು? ಇದರ ಕಾರಣವೇನು? ॥ ೬ ॥ ಪ್ರಭೋ! ಈ ವಿಷಯದಲ್ಲಿ ನಮಗೆ ಸಂದೇಹ ಉಂಟಾಗಿದೆ ಮತ್ತು ಕೇಳಲು ಬಹಳ ಕುತೂಹಲವೂ ಇದೆ. ಆಹಾ! ವೃತ್ರಾಸುರನು ರಣಭೂಮಿಯಲ್ಲಿ ದೇವರಾಜ ಇಂದ್ರನನ್ನೂ ಸಂತೋಷಗೊಳಿಸಿದ ಅವನ ಬಲ-ಪರಾಕ್ರಮಗಳು ಎಷ್ಟು ಮಹತ್ತರವಾಗಿದ್ದವು. ॥ ೭ ॥

ಸೂತಪುರಾಣಿಕರು ಹೇಳುತ್ತಾರೆ – ಶೌನಕಾದಿ ಋಷಿಗಳಿರಾ! ಭಗವಂತರಾದ ಶ್ರೀಶುಕಮಹಾಮುನಿಗಳು ಶ್ರದ್ಧಾವಂತನಾದ ಪರೀಕ್ಷಿದ್ರಾಜನ ಆ ಶ್ರೇಷ್ಠವಾದ ಪ್ರಶ್ನೆಯನ್ನು ಕೇಳಿ, ಅವನನ್ನು ಅಭಿನಂದಿಸುತ್ತಾ ಹೀಗೆ ಉತ್ತರಿಸಿದರು. ॥ ೮ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಎಲೈ ನೃಪಶ್ರೇಷ್ಠನೇ! ನೀನು ಸಾವಧಾನವಾಗಿ ಈ ಇತಿಹಾಸವನ್ನು ಕೇಳು. ನಾನು ಇದನ್ನು ನನ್ನ ತೀರ್ಥರೂಪರಾದ ವೇದವ್ಯಾಸರು, ದೇವರ್ಷಿ ನಾರದರು ಮತ್ತು ಮಹರ್ಷಿದೇವಲ ಇವರ ಬಾಯಿಂದ ವಿಧಿಪೂರ್ವಕವಾಗಿ ಕೇಳಿದ್ದೇನೆ. ॥ ೯ ॥ ಬಹಳ ಹಿಂದಿನ ಕಾಲದ ಚರಿತ್ರೆ. ಶೂರಸೇನ ದೇಶದಲ್ಲಿ ಚಿತ್ರಕೇತು ಎಂಬ ಪ್ರಸಿದ್ಧನಾದ ಒಬ್ಬ ಸಾರ್ವಭೌಮನಿದ್ದನು. ಅವನ ರಾಜ್ಯದಲ್ಲಿ ಭೂಮಿಯು

ತಸ್ಯ ಭಾರ್ಯಾಸಹಸ್ರಾಣಾಂ ಸಹಸ್ರಾಣಿ ದಶಾಭವನ್ ।
ಸಾಂತಾನಿಕಶ್ಚಾಪಿ ನೃಪೋ ನ ಲೇಭೇ ತಾಸು ಸಂತತಿಮ್
॥ ೧೧ ॥

ರೂಪೌದಾರ್ಯವಯೋಜನ್ಮವಿದ್ಯೈಶ್ವರ್ಯಶ್ರಿಯಾದಿಭಿಃ ।
ಸಂಪನ್ನಸ್ಯ ಗುಣೈಃ ಸರ್ವೈಶ್ಚಿಂತಾ ವಂಧ್ಯಾಪತೇರಭೂತ್
॥ ೧೨ ॥

ನ ತಸ್ಯ ಸಂಪದಃ ಸರ್ವಾ ಮಹಿಷ್ಯೋ ವಾಮಲೋಚನಾಃ ।
ಸಾರ್ವಭೌಮಸ್ಯ ಭೂಶ್ಚೇಯಮಭವನ್ ಪ್ರೀತಿಹೇತವಃ
॥ ೧೩ ॥

ತಸ್ಯೈಕದಾ ತು ಭವನಮಂಗಿರಾ ಭಗವಾನೃಷಿಃ ।
ಲೋಕಾನನುಚರನ್ನೇತಾನುಪಾಗಚ್ಛದ್ಯದೃಚ್ಛಯಾ
॥ ೧೪ ॥

ತಂ ಪೂಜಯಿತ್ವಾ ವಿಧಿವತ್ ಪ್ರತ್ಯುತ್ಥಾನಾರ್ಹಣಾದಿಭಿಃ ।
ಕೃತಾತಿಥ್ಯಮುಪಾಸೀದತ್ಸುಖಾಸೀನಂ ಸಮಾಹಿತಃ
॥ ೧೫ ॥

ಮಹರ್ಷಿಸ್ತಮುಪಾಸೀನಂ ಪ್ರಶ್ರಯಾವನತಂ ಕ್ಷಿತೌ ।
ಪ್ರತಿಪೂಜ್ಯ ಮಹಾರಾಜ ಸಮಾಭಾಷ್ಯೇದಮಬ್ರವೀತ್
॥ ೧೬ ॥

ಅಂಗಿರಾ ಉವಾಚ

ಅಪಿ ತೇಽನಾಮಯಂ ಸ್ವಸ್ತಿ ಪ್ರಕೃತೀನಾಂ ತಥಾಽಽತ್ಮನಃ ।
ಯಥಾ ಪ್ರಕೃತಿಭಿರ್ಗುಪ್ತಃ ಪುಮಾನ್ರಾಜಾಪಿ ಸಪ್ತಭಿಃ
॥ ೧೭ ॥

ಆತ್ಮಾನಂ ಪ್ರಕೃತಿಷ್ವದ್ಧಾ ನಿಧಾಯ ಶ್ರೇಯ ಆಪ್ನುಯಾತ್ ।
ರಾಜ್ಞಾ ತಥಾ ಪ್ರಕೃತಯೋ ನರದೇವಾಹಿತಾಧಯಃ
॥ ೧೮ ॥

ಅಪಿ ದಾರಾಃ ಪ್ರಜಾಮಾತ್ಯಾ ಭೃತ್ಯಾಃ ಶ್ರೇಣ್ಯೋಽಥ ಮಂತ್ರಿಣಃ ।
ಪೌರಾ ಜಾನಪದಾ ಭೂಪಾ ಆತ್ಮಜಾ ವಶವರ್ತಿನಃ
॥ ೧೯ ॥

ಯಸ್ಯಾತ್ಮಾನುವಶಶ್ಚೇತ್ಸ್ಯಾತ್ಸರ್ವೇ ತದ್ವಶಗಾ ಇಮೇ ।
ಲೋಕಾಃ ಸಪಾಲಾ ಯಚ್ಛಂತಿ ಸರ್ವೇ ಬಲಿಮತಂದ್ರಿತಾಃ
॥ ೨೦ ॥

ಕಾಮಧೇನುವಿನಂತೆ ಪ್ರಜೆಗಳ ಇಚ್ಛೆಗನುಸಾರವಾಗಿ ಅನ್ನ-ರಸಾದಿಗಳನ್ನು ಕೊಡುತ್ತಿದ್ದಳು. ॥ ೧೦ ॥ ಅವನಿಗೆ ಒಂದುಕೋಟಿ ರಾಣಿಯರಿದ್ದು, ಅವನು ಸ್ವತಃ ಸಂತಾನವನ್ನು ಉತ್ಪನ್ನಗೊಳಿಸಲು ಸಮರ್ಥನೂ ಆಗಿದ್ದನು. ಆದರೆ ಅವರಲ್ಲಿ ಯಾರಲ್ಲಿಯೂ ಸಂತಾನವಿರಲಿಲ್ಲ. ॥ ೧೧ ॥ ಈ ಮಹಾರಾಜಾ ಚಿತ್ರಕೇತುವಿನಲ್ಲಿ ಯಾವುದೇ ಕೊರತೆ ಇರಲಿಲ್ಲ. ಸುಂದರತೆ, ಔದಾರ್ಯ, ಯೌವನ, ಕುಲೀನತೆ, ವಿದ್ಯೆ, ಐಶ್ವರ್ಯ, ಸಂಪತ್ತು ಮುಂತಾದ ಎಲ್ಲ ಗುಣಗಳಿಂದ ಸಂಪನ್ನನಾಗಿದ್ದನು. ಹೀಗಿದ್ದರೂ ಅವನ ಪತ್ನಿಯರು ಬಂಜೆಯರಾಗಿಯೇ ಇದ್ದರು. ಇದರಿಂದ ಅವನಿಗೆ ದೊಡ್ಡ ಚಿಂತೆಯೇ ಇಟ್ಟುಕೊಂಡಿತ್ತು. ॥ ೧೨ ॥ ಅವನು ಇಡೀ ಪೃಥಿವಿಯ ಏಕಛತ್ರ ಸಾಮ್ರಾಟನಾಗಿದ್ದನು. ಅನೇಕ ಸುಂದರ ರಾಣಿಯರಿದ್ದರು. ಸಮಸ್ತ ಪೃಥಿವಿಯು ಅವನ ವಶದಲ್ಲಿತ್ತು. ಎಲ್ಲ ರೀತಿಯ ಸಂಪತ್ತುಗಳು ಅವನ ಸೇವೆಗೆ ಸಿದ್ಧವಿದ್ದರೂ ಇವೆಲ್ಲ ವಸ್ತುಗಳು ಅವನನ್ನು ಸುಖಿಯಾಗಿಸಲು ಅಸಮರ್ಥವಾದುವು. ॥ ೧೩ ॥ ಒಂದು ದಿನ ಶಾಪಾನುಗ್ರಹಸಮರ್ಥರಾದ ಅಂಗಿರಾ ಎಂಬ ಋಷಿಗಳು ಯಥೇಚ್ಛವಾಗಿ ವಿವಿಧ ಲೋಕಗಳಲ್ಲಿ ಸಂಚರಿಸುತ್ತಾ ಚಿತ್ರಕೇತು ಮಹಾರಾಜನ ಅರಮನೆಗೆ ದಯಮಾಡಿಸಿದರು. ॥ ೧೪ ॥ ರಾಜನು ಎದ್ದುನಿಂತು ಅವರನ್ನು ಅರ್ಘ್ಯ-ಪಾದ್ಯಾದಿಗಳಿಂದ ವಿಧಿವತ್ತಾಗಿ ಪೂಜಿಸಿದನು. ಆತಿಥ್ಯವನ್ನು ಸ್ವೀಕರಿಸಿ ಅಂಗಿರಾ ಋಷಿಗಳು ಸುಖಾಸೀನರಾಗಿ ಮಂಡಿಸಿದಾಗ, ಚಿತ್ರಕೇತುರಾಜನೂ ಕೂಡ ಶಾಂತಭಾವದಿಂದ ಅವರ ಬಳಿ ಕುಳಿತುಕೊಂಡನು. ॥ ೧೫ ॥ ಮಹಾರಾಜನೇ! ರಾಜನು ಅತ್ಯಂತ ವಿನಯಶಾಲಿಯಾಗಿದ್ದು ತಮ್ಮ ಬಳಿಯಲ್ಲಿ ನೆಲದ ಮೇಲೆಯೇ ಕುಳಿತು ಭಕ್ತ್ಯಾದರಗಳನ್ನು ತೋರಿಸಿದ್ದನ್ನು ಗಮನಿಸಿದ ಅಂಗಿರಾ ಮಹರ್ಷಿಗಳು ಆತನನ್ನು ಆದರಿಸಿ ಕುಶಲ ಪ್ರಶ್ನೆಮಾಡುತ್ತಾ ಹೀಗೆಂದನು – ॥ ೧೬ ॥

ಅಂಗಿರಾ ಋಷಿಯು ಹೇಳಿದನು – ರಾಜಾ ಚಿತ್ರಕೇತುವೇ! ನೀನು ನಿನ್ನ ಗುರು, ಮಂತ್ರಿ, ರಾಷ್ಟ್ರ, ದುರ್ಗ, ಸೈನ್ಯ, ಮಿತ್ರರೇ ಮುಂತಾದ ಪ್ರಕೃತಿಗಳೊಡನೆ ಸುಖಿಯಾಗಿರುವೆಯಾ? ಜೀವನು ಮಹತ್ತತ್ತ್ವಾದಿ ಏಳು ಆವರಣಗಳಿಂದ ಸುತ್ತುವರಿಯಲ್ಪಟ್ಟಿರುವಂತೆಯೇ ರಾಜನೂ ಕೂಡ ಈ ಏಳು ಪ್ರಕೃತಿಗಳಿಂದ ಸುತ್ತುವರಿಯಲ್ಪಡುತ್ತಾನೆ. ಅವುಗಳು ಕುಶಲವಾಗಿದ್ದರೆ ರಾಜನು ಕುಶಲನಾಗಿರುತ್ತಾನೆ. ॥ ೧೭ ॥ ನರೇಂದ್ರ! ಮೇಲೆ ಹೇಳಿದ ಪ್ರಕೃತಿಗಳು ಅನುಕೂಲವಾಗಿದ್ದರೇನೇ ರಾಜನು ರಾಜ್ಯಸುಖವನ್ನು ಅನುಭವಿಸಬಲ್ಲನು. ಹಾಗೆಯೇ ಪ್ರಕೃತಿಗಳೂ ಕೂಡ ತಮ್ಮ ರಕ್ಷಣೆಯ ಹೊಣೆಯನ್ನು ರಾಜನ ಮೇಲೆ ಬಿಟ್ಟು ಸುಖ-ಸಮೃದ್ಧಿಗಳನ್ನು ಅನುಭವಿಸಬಲ್ಲರು. ॥ ೧೮ ॥ ರಾಜನೇ! ನಿನ್ನ ರಾಣಿಯರು, ಪ್ರಜೆ, ಮಂತ್ರಿಗಳು, ಸೇವಕರು, ವ್ಯಾಪಾರಿಗಳು, ಅಮಾತ್ಯರು, ನಾಗರಿಕರು, ದೇಶವಾಸಿಗಳು, ಸಾಮಂತರಾಜರು ಮತ್ತು ಮಕ್ಕಳು ನಿನ್ನ ವಶದಲ್ಲೇ ಇರುವರಲ್ಲ? ॥ ೧೯ ॥ ಯಾರ ಮನಸ್ಸು ತನ್ನ ವಶದಲ್ಲಿ ಇರುತ್ತದೋ, ಅವನಿಗೇ ಇವರೆಲ್ಲರೂ ವಶವಾಗಿರುತ್ತಾರೆ; ಇದು ನಿಜವಾದ ಮಾತಾಗಿದೆ. ಇಷ್ಟೇ ಅಲ್ಲ, ಎಲ್ಲ ಲೋಕಗಳು ಮತ್ತು ಲೋಕಪಾಲರೂ ಕೂಡ ತುಂಬಾ ಸಾವಧಾನದಿಂದ ಅವನಿಗೆ

ಆತ್ಮನಃ ಪ್ರೀಯತೇ ನಾತ್ಮಾ ಪರತಃ ಸ್ವತ ಏವ ವಾ ।
ಲಕ್ಷಯೇಽಲಬ್ಧಕಾಮಂ ತ್ವಾಂ ಚಿಂತಯಾ ಶಬಲಂ ಮುಖಮ್ ॥ ೨೧ ॥

ಏವಂ ವಿಕಲ್ಪಿತೋ ರಾಜನ್ವಿದುಷಾ ಮುನಿನಾಪಿ ಸಃ ।
ಪ್ರಶ್ರಯಾವನತೋಽಭ್ಯಾಹ ಪ್ರಜಾಕಾಮಸ್ತತೋ ಮುನಿಮ್ ॥ ೨೨ ॥

ಚಿತ್ರಕೇತುರುವಾಚ

ಭಗವನ್ಕಿಂ ನ ವಿದಿತಂ ತಪೋಜ್ಞಾನಸಮಾಧಿಭಿಃ ।
ಯೋಗಿನಾಂ ಧ್ವಸ್ತಪಾಪಾನಾಂ ಬಹಿರಂತಃ ಶರೀರಿಷು ॥ ೨೩ ॥

ತಥಾಪಿ ಪೃಚ್ಛತೋ ಬ್ರೂಯಾಂ ಬ್ರಹ್ಮನ್ನಾತ್ಮನಿ ಚಿಂತಿತಮ್ ।
ಭವತೋ ವಿದುಷಶ್ಚಾಪಿ ಚೋದಿತಸ್ತ್ವದನುಜ್ಞಯಾ ॥ ೨೪ ॥

ಲೋಕಪಾಲೈರಪಿ ಪ್ರಾರ್ಥ್ಯಾಃ ಸಾಮ್ರಾಜ್ಯೈಶ್ವರ್ಯಸಂಪದಃ ।
ನ ನಂದಯಂತ್ಯಪ್ರಜಂ ಮಾಂ ಕ್ಷುತ್ತೃಟ್ಕಾಮಮಿವಾಪರೇ ॥ ೨೫ ॥

ತತಃ ಪಾಹಿ ಮಹಾಭಾಗ ಪೂರ್ವೈಃ ಸಹ ಗತಂ ತಮಃ ।
ಯಥಾ ತರೇಮ ದುಸ್ತಾರಂ ಪ್ರಜಯಾ ತದ್ವಿಧೇಹಿ ನಃ ॥ ೨೬ ॥

ಶ್ರೀಶುಕ ಉವಾಚ

ಇತ್ಯರ್ಥಿತಃ ಸ ಭಗವಾನ್ಕೃಪಾಲುರ್ಬ್ರಹ್ಮಣಃ ಸುತಃ ।
ಶ್ರಪಯಿತ್ವಾ ಚರುಂ ತ್ವಾಷ್ಟ್ರಂ ತ್ವಷ್ಟಾರಮಯಜದ್ವಿಭುಃ ॥ ೨೭ ॥

ಜ್ಯೇಷ್ಠಾ ಶ್ರೇಷ್ಠಾ ಚ ಯಾ ರಾಜ್ಞೋ ಮಹಿಷೀಣಾಂ ಚ ಭಾರತ ।
ನಾಮ್ನಾ ಕೃತದ್ಯುತಿಸ್ತಸ್ಯೈ ಯಜ್ಞೋಚ್ಛಿಷ್ಟಮದಾದ್ದ್ವಿಜಃ ॥ ೨೮ ॥

ಅಥಾಹ ನೃಪತಿಂ ರಾಜನ್ಭವಿತೈಕಸ್ತವಾತ್ಮಜಃ ।
ಹರ್ಷಶೋಕಪ್ರದಸ್ತುಭ್ಯಮಿತಿ ಬ್ರಹ್ಮಸುತೋ ಯಯೌ ॥ ೨೯ ॥

ಕಷ್ಟ-ಕಾಣಿಕೆಗಳನ್ನು ಅರ್ಪಿಸುತ್ತಾ ಅವನ ಪ್ರಸನ್ನತೆಯನ್ನು ಬಯಸುತ್ತಾರೆ. ॥ ೨೦ ॥ ಆದರೆ ನೀನು ಸ್ವತಃ ಸಂತುಷ್ಟನಾಗಿಲ್ಲ, ನಿನ್ನ ಯಾವುದೋ ಕಾಮನೆ ಅಪೂರ್ಣವಾಗಿದೆ ಎಂದು ನನಗೆ ಅನಿಸುತ್ತದೆ. ನಿನ್ನ ಮುಖದಲ್ಲಿ ಯಾವುದೋ ಆಂತರಿಕ ಚಿಂತೆಯ ಚಿಹ್ನೆ ಗೋಚರಿಸುತ್ತಿದೆ. ನಿನ್ನ ಈ ಅಸಂತೋಷದ ಕಾರಣ ಸ್ವತಃ ನೀನೇ ಆಗಿರುವೆಯಾ ಅಥವಾ ಬೇರೆ ಏನಾದರೂ ಕಾರಣ ಇದೆಯೇ? ॥ ೨೧ ॥ ಪರೀಕ್ಷಿದ್ರಾಜನೇ! ರಾಜನು ಮನಸ್ಸಿನಲ್ಲಿ ಯಾವುದನ್ನು ಚಿಂತಿಸುತ್ತಿದ್ದಾನೆ ಎಂಬುದನ್ನು ಅಂಗಿರಾ ಮಹರ್ಷಿಗಳು ಅರಿತಿದ್ದರೂ, ಅವರು ಅವನ ಚಿಂತೆಯ ವಿಷಯದಲ್ಲಿ ಅನೇಕ ಪ್ರಶ್ನೆಗಳನ್ನು ಮಾಡಿದ್ದರು. ಚಿತ್ರಕೇತುವಿಗೆ ಸಂತಾನದ ಕಾಮನೆಯಿತ್ತು. ಆದ್ದರಿಂದ ಮಹರ್ಷಿಗಳು ಕೇಳಿದಾಗ ಅವನು ವಿನಯದಿಂದ ತಲೆತಗ್ಗಿಸಿ ನಿವೇದಿಸಿಕೊಂಡನು. ॥ ೨೨ ॥

ಸಾಮ್ರಾಟ ಚಿತ್ರಕೇತುವು ಹೇಳಿದನು – ಪೂಜ್ಯರೇ! ತಪೋಜ್ಞಾನ ಸಮಾಧಿಗಳಿಂದ ಪಾಪಗಳನ್ನು ಕಳೆದುಕೊಂಡಿರುವ ಯೋಗಿಗಳಿಗೆ ಪ್ರಾಣಿಗಳ ಹೊರಗಾಗಲೀ, ಒಳಗಾಗಲೀ ಯಾವುದೂ ತಿಳಿಯದ ವಿಷಯವಿಲ್ಲ. ॥ ೨೩ ॥ ಹೀಗೆ ಎಲ್ಲವನ್ನೂ ತಿಳಿದು ಕೊಂಡಿದ್ದರೂ ನೀವು ನನ್ನ ಚಿಂತೆಗೆ ಕಾರಣವೇನೆಂಬುದನ್ನು ನನ್ನಲ್ಲಿ ಕೇಳುತ್ತಿದ್ದೀರಿ. ಆದ್ದರಿಂದ ತಮ್ಮ ಆಜ್ಞೆ ಮತ್ತು ಪ್ರೇರಣೆಯಂತೆ ನನ್ನ ಚಿಂತೆಯನ್ನು ತಮ್ಮಲ್ಲಿ ನಿವೇದಿಸಿಕೊಳ್ಳುವೆನು. ॥ ೨೪॥ ಲೋಕಪಾಲರೂ ಕೂಡ ಆಸೆಪಡುತ್ತಿರುವ ಪೃಥಿವಿಯ ಸಾಮ್ರಾಜ್ಯ, ಐಶ್ವರ್ಯ ಮತ್ತು ಸಂಪತ್ತುಗಳು ನನಗೆ ದೊರೆತಿವೆ. ಆದರೆ ಸಂತಾನವಿಲ್ಲದ ಕಾರಣ ನನಗೆ ಈ ಸುಖ-ಭೋಗಗಳಿಂದ-ಹಸಿದಿರುವ ಪ್ರಾಣಿಗಳಿಗೆ ಅನ್ನ-ನೀರಿಲ್ಲದೆ ಬೇರೆ ಭೋಗಗಳಿಂದ ತೃಪ್ತಿಯು ಉಂಟಾಗದಿರುವಂತೆಯೇ ನನಗೆ ಸ್ವಲ್ಪವಾದರೂ ಶಾಂತಿಯು ಸಿಗುತ್ತಿಲ್ಲ. ॥ ೨೫ ॥ ಮಹಾತ್ಮರೇ! ನಾನು ದುಃಖಿತನಾಗಿರುವುದು ಮಾತ್ರವಲ್ಲದೆ 'ಪಿಂಡದಾನವು ಮುಂದೆ ಸಿಗುವುದಿಲ್ಲವಲ್ಲ' ಎಂದು ನನ್ನ ಪಿತೃಗಳೂ ದುಃಖಪಡುತ್ತಿದ್ದಾರೆ. ಈಗ ತಾವು ನನಗೆ ಸಂತಾನಭಾಗ್ಯವನ್ನು ದಯಪಾಲಿಸಿ, ಪರಲೋಕದಲ್ಲಿ ದೊರೆಯುವ ಘೋರ ನರಕದಿಂದಲೂ ಉದ್ಧರಿಸಿರಿ ಮತ್ತು ನಾನು ಇಹ-ಪರಲೋಕಗಳಲ್ಲಿ ಎಲ್ಲ ದುಃಖಗಳಿಂದ ಬಿಡುಗಡೆಹೊಂದುವಂತಹ ವ್ಯವಸ್ಥೆಯನ್ನು ಮಾಡಿರಿ. ॥ ೨೬ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ! ಚಿತ್ರಕೇತುರಾಜನು ಹೀಗೆ ಪ್ರಾರ್ಥಿಸಿದಾಗ ಸರ್ವಸಮರ್ಥರೂ, ಪರಮ ಕೃಪಾಳುಗಳೂ, ಬ್ರಹ್ಮಪುತ್ರರೂ ಆದ ಭಗವಾನ್ ಅಂಗಿರಾ ರವರು ತ್ವಷ್ಟಾದೇವತೆಗೆ ಯೋಗ್ಯವಾದ ಚರುವನ್ನು ನಿರ್ಮಿಸಿ ಅದರಿಂದ ಆ ದೇವತೆಯನ್ನು ಪೂಜಿಸಿದರು. ॥ ೨೭॥ ಪರೀಕ್ಷಿದ್ರಾಜಾ! ಚಿತ್ರಕೇತು ಮಹಾರಾಜನ ರಾಣಿಯರಲ್ಲಿ ಹಿರಿಯಳೂ, ಗುಣಸಂಪನ್ನೆಯೂ ಆದ 'ಕೃತದ್ಯುತಿ' ಎಂಬಾಕೆಗೆ ಅಂಗಿರಾ ಮಹರ್ಷಿಗಳು ಯಜ್ಞದ ಅವಶೇಷ ಪ್ರಸಾದವನ್ನು ಕರುಣಿಸಿದರು. ॥ ೨೮ ॥ ಚಿತ್ರಕೇತುವನ್ನು ಕುರಿತು – 'ರಾಜನೇ! ನಿನ್ನ ಪತ್ನಿಯ ಗರ್ಭದಲ್ಲಿ ಓರ್ವ ಪುತ್ರನು ಹುಟ್ಟುವನು. ಅವನು ನಿನಗೆ ಹರ್ಷವನ್ನೂ-ಶೋಕವನ್ನೂ ಎರಡನ್ನೂ ಕೊಡುವನು' ಎಂದು ಹೇಳಿ ಅಂಗಿರಾಋಷಿಗಳು ಹೊರಟುಹೋದರು. ॥ ೨೯ ॥

ಸಾಪಿ ತತ್ಪ್ರಾಶನಾದೇವ ಚಿತ್ರಕೇತೋರಧಾರಯತ್ ।
ಗರ್ಭಂ ಕೃತದ್ಯುತಿರ್ದೇವೀ ಕೃತ್ತಿಕಾಗ್ನೇರಿವಾತ್ಮಜಮ್ ॥ ೩೦ ॥

ತಸ್ಯಾ ಅನುದಿನಂ ಗರ್ಭಃ ಶುಕ್ಲಪಕ್ಷ ಇವೋಡುಪಃ ।
ವವೃಧೇ ಶೂರಸೇನೇಶತೇಜಸಾ ಶನಕೈರ್ನೃಪ ॥ ೩೧ ॥

ಅಥ ಕಾಲ ಉಪಾವೃತ್ತೇ ಕುಮಾರಃ ಸಮಜಾಯತ ।
ಜನಯನ್ ಶೂರಸೇನಾನಾಂ ಶೃಣ್ವತಾಂ ಪರಮಾಂ ಮುದಮ್ ॥ ೩೨ ॥

ಹೃಷ್ಟೋ ರಾಜಾ ಕುಮಾರಸ್ಯ ಸ್ನಾತಃ ಶುಚಿರಲಂಕೃತಃ ।
ವಾಚಯಿತ್ವಾಽಽಶಿಷೋ ವಿಪ್ರೈಃ ಕಾರಯಾಮಾಸ ಜಾತಕಮ್ ॥ ೩೩ ॥

ತೇಭ್ಯೋ ಹಿರಣ್ಯಂ ರಜತಂ ವಾಸಾಂಸ್ಯಾಭರಣಾನಿ ಚ ।
ಗ್ರಾಮಾನ್ಹಯಾನ್ ಗಜಾನ್ಪ್ರಾದಾದ್ಧೇನೂನಾಮರ್ಬುದಾನಿ ಷಟ್ ॥ ೩೪ ॥

ವವರ್ಷ ಕಾಮಾನನ್ಯೇಷಾಂ ಪರ್ಜನ್ಯ ಇವ ದೇಹಿನಾಮ್ ।
ಧನ್ಯಂ ಯಶಸ್ಯಮಾಯುಷ್ಯಂ ಕುಮಾರಸ್ಯ ಮಹಾಮನಾಃ ॥ ೩೫ ॥

ಕೃಚ್ಛ್ರಲಬ್ಧೇಽಥ ರಾಜರ್ಷೇಸ್ತನಯೇಽನುದಿನಂ ಪಿತುಃ ।
ಯಥಾ ನಿಃಸ್ವಸ್ಯ ಕೃಚ್ಛ್ರಾಪ್ತೇ ಧನೇ ಸ್ನೇಹೋಽನ್ವವರ್ಧತ ॥ ೩೬ ॥

ಮಾತುಸ್ತ್ವತಿತರಾಂ ಪುತ್ರೇ ಸ್ನೇಹೋ ಮೋಹಸಮುದ್ಭವಃ ।
ಕೃತದ್ಯುತೇಃ ಸಪತ್ನೀನಾಂ ಪ್ರಜಾಕಾಮಜ್ವರೋಽಭವತ್ ॥ ೩೭ ॥

ಚಿತ್ರಕೇತೋರತಿಪ್ರೀತಿರ್ಯಥಾ ದಾರೇ ಪ್ರಜಾವತಿ ।
ನ ತಥಾನ್ಯೇಷು ಸಞ್ಜಜ್ಞೇ ಬಾಲಂ ಲಾಲಯತೋಽನ್ವಹಮ್ ॥ ೩೮ ॥

ತಾಃ ಪರ್ಯತಪ್ಯನ್ನಾತ್ಮಾನಂ ಗರ್ಹಯನ್ತ್ಯೋಽಭ್ಯಸೂಯಯಾ ।
ಆನಪತ್ಯೇನ ದುಃಖೇನ ರಾಜ್ಞಶ್ಚಾನಾದರೇಣ ಚ ॥ ೩೯ ॥

ಧಿಗಪ್ರಜಾಂ ಸ್ತ್ರಿಯಂ ಪಾಪಾಂ ಪತ್ಯುಶ್ಚಾಗೃಹಸಮ್ಮತಾಮ್ ।
ಸುಪ್ರಜಾಭಿಃ ಸಪತ್ನೀಭಿರ್ದಾಸೀಮಿವ ತಿರಸ್ಕೃತಾಮ್ ॥ ೪೦ ॥

ಅದರಂತೆಯೇ ಯಜ್ಞಪ್ರಸಾದವನ್ನು ಸೇವಿಸಿದ ಕೃತದ್ಯುತಿಯು– ಕೃತ್ತಿಕೆಯು ತನ್ನ ಗರ್ಭದಲ್ಲಿ ಅಗ್ನಿಕುಮಾರನನ್ನು ಧರಿಸಿದಂತೆ– ಮಹಾರಾಜಾ ಚಿತ್ರಕೇತುವಿನಿಂದ ಗರ್ಭವನ್ನು ಧರಿಸಿದಳು. ॥ ೩೦ ॥ ರಾಜನೇ! ಶೂರಸೇನದೇಶದ ರಾಜಾ ಚಿತ್ರಕೇತುವಿನ ನೋಟದಿಂದ ಕೃತದ್ಯುತಿಯ ಗರ್ಭವು ಶುಕ್ಲಪಕ್ಷದ ಚಂದ್ರನಂತೆ ದಿನೇ-ದಿನೇ ಕ್ರಮವಾಗಿ ವೃದ್ಧಿಹೊಂದತೊಡಗಿತು. ॥ ೩೧ ॥

ಅನಂತರ ಸಕಾಲದಲ್ಲಿ ಆಕೆಯ ಗರ್ಭದಿಂದ ಒಬ್ಬ ಪರಮ ಸುಂದರ ಪುತ್ರನು ಜನಿಸಿದನು. ಅವನು ಹುಟ್ಟಿದ ಸಮಾಚಾರ ತಿಳಿದ ಶೂರಸೇನ ದೇಶದ ಪ್ರಜಾಜನರಿಗೆ ಬಹಳ ಆನಂದವಾಯಿತು. ॥ ೩೨ ॥ ಚಕ್ರವರ್ತಿ ಚಿತ್ರಕೇತುವಿನ ಆನಂದಕ್ಕೆ ಪಾರವೇ ಇರಲಿಲ್ಲ. ಅವನು ಸ್ನಾನಮಾಡಿ ಪವಿತ್ರನಾಗಿ, ವಸ್ತ್ರಾಭೂಷಣಗಳಿಂದ ಅಲಂಕೃತನಾಗಿ ಬ್ರಾಹ್ಮಣರಿಂದ ಸ್ವಸ್ತಿವಾಚನವನ್ನು ಮಾಡಿಸಿ, ಆಶೀರ್ವಾದವನ್ನು ಪಡೆದು ಮಗುವಿಗೆ ಜಾತಕರ್ಮಸಂಸ್ಕಾರವನ್ನು ಮಾಡಿದನು. ॥ ೩೩ ॥ ಅವನು ಆ ಬ್ರಾಹ್ಮಣರಿಗೆ ಚಿನ್ನ, ಬೆಳ್ಳಿ, ವಸ್ತ್ರ, ಒಡವೆ, ಗ್ರಾಮಗಳು, ಕುದುರೆಗಳು, ಆನೆಗಳು ಮತ್ತು ಆರು ಅರ್ಬುದಗಳಷ್ಟು ಗೋವುಗಳನ್ನು ದಾನಮಾಡಿದನು. ॥ ೩೪ ॥ ಉದಾರಶಿರೋಮಣಿಯಾದ ಚಿತ್ರಕೇತು ಸಾರ್ವಭೌಮನು ಪುತ್ರನಿಗೆ ಧನ, ಕೀರ್ತಿ, ಆಯುಸ್ಸುಗಳು ಅಭಿವೃದ್ಧಿಯಾಗಲೆಂದು– ಮೋಡವು ಎಲ್ಲ ಜೀವಿಗಳ ಮನೋರಥವನ್ನು ಈಡೇರಿಸುವಂತೆ– ಇತರರಿಗೂ ಅವರು ಬೇಡಿದ ವಸ್ತುಗಳೆಲ್ಲವನ್ನು ಕೊಡುಗೈಯಿಂದ ನೀಡಿದನು. ॥ ೩೫ ॥ ಪರೀಕ್ಷಿತನೇ! ಕಾಸಿನ ಮುಖವನ್ನೇ ಕಾಣದ ಬಡವನಿಗೆ ಬಹಳ ಕಷ್ಟದಿಂದ ಸ್ವಲ್ಪ ಹಣವು ದೊರೆತರೆ ಅವನಿಗೆ ಅದರಲ್ಲಿ ಆಸೆ-ಆಸಕ್ತಿಗಳು ಉಂಟಾಗುವಂತೆಯೇ – ಬಹಳ ಕಷ್ಟದಿಂದ ಜನಿಸಿದ ಆ ಪುತ್ರನಲ್ಲಿ ರಾಜರ್ಷಿ ಚಿತ್ರಕೇತುವಿನ ಸ್ನೇಹಸಂಬಂಧವು ದಿನೇ-ದಿನೇ ಬಿಗಿಯಾಗತೊಡಗಿತು. ॥ ೩೬ ॥ ತಾಯಿಯಾದ ಕೃತದ್ಯುತಿಗೂ ಮಗುವಿನ ವಿಷಯದಲ್ಲಿ ಮೋಹದಿಂದ ಸ್ನೇಹ-ಮಮತೆಗಳು ಹೆಚ್ಚಿದವು. ಆದರೆ ಅವಳ ಸವತಿಯರಾಗಿದ್ದ ರಾಣಿಯರ ಮನಸ್ಸಿನಲ್ಲಿ ಪುತ್ರಕಾಮನೆಯಿಂದ ಮತ್ತಷ್ಟು ಹೊಟ್ಟೆಯುರಿ ಉಂಟಾಯಿತು. ॥ ೩೭ ॥ ಪ್ರತಿದಿನವು ಮಗುವನ್ನು ಮುದ್ದಿಸಿ, ಪ್ರೀತಿಸುತ್ತಿದ್ದ ಚಿತ್ರಕೇತುವಿಗೆ ಮಗುವಿನ ತಾಯಿಯಾದ ಕೃತದ್ಯುತಿಯಲ್ಲಿ ಇದ್ದಷ್ಟು ಪ್ರೇಮವು ಇತರ ರಾಣಿಯರಲ್ಲಿ ಇಲ್ಲವಾಯಿತು. ॥ ೩೮ ॥ ಹೀಗೆ ಆ ರಾಣಿಯರಿಗೆ ಸಂತಾನವಿಲ್ಲದ ದುಃಖವೊಂದು, ಜೊತೆಗೆ ಚಿತ್ರಕೇತುವು ತಮ್ಮನ್ನು ಉಪೇಕ್ಷಿಸುತ್ತಿದ್ದಾನೆ ಎಂಬ ವಿಷಾದ ಮತ್ತೊಂದು. ಎರಡೂ ಸೇರಿ ಅವರು ಮಾತ್ಸರ್ಯದಿಂದ ತಮ್ಮನ್ನೇ ಧಿಕ್ಕರಿಸಿಕೊಳ್ಳುತ್ತಾ ಮನಸ್ಸಿನಲ್ಲಿಯೇ ಕುದಿಯತೊಡಗಿದರು. ॥ ೩೯ ॥ ಅವರು ಪರಸ್ಪರ ಮಾತಾಡಿಕೊಳ್ಳುತ್ತಿದ್ದರು – 'ಅಕಟಾ! ತಂಗೀ! ಪುತ್ರಹೀನೆಯಾದ ಸ್ತ್ರೀಯು ತುಂಬಾ ಭಾಗ್ಯಹೀನಳಾಗಿರುವಳು. ಪುತ್ರವತಿಯಾದ ಸವತಿಯರು ಅವರನ್ನು ತಮ್ಮ ದಾಸಿಯರಂತೆ ಕಂಡು ತಿರಸ್ಕರಿಸುವರು. ಇತರ ವಿಷಯ ಹಾಗಿರಲಿ. ಆಕೆಯ ಪತಿಯೇ ಆಕೆಯನ್ನು ಪತ್ನಿ ಎಂದು ಸಂಭಾವಿಸುವುದಿಲ್ಲ. ನಿಜವಾಗಿಯೂ ಪುತ್ರಹೀನೆಯಾದ ಸ್ತ್ರೀಯರ ಸ್ಥಿತಿಯು ಅತ್ಯಂತ ಶೋಚನೀಯವಾದುದು. ॥ ೪೦ ॥

ದಾಸೀನಾಂ ಕೋ ನು ಸಂತಾಪಃ ಸ್ವಾಮಿನಃ ಪರಿಚರ್ಯಯಾ ।
ಅಭೀಕ್ಷ್ಣಂ ಲಬ್ಧಮಾನಾನಾಂ ದಾಸ್ಯಾ ದಾಸೀವ ದುರ್ಭಗಾಃ
॥ ೪೦ ॥

ಏವಂ ಸಂದಹ್ಯಮಾನಾನಾಂ ಸಪತ್ನ್ಯಾಃ ಪುತ್ರಸಂಪದಾ ।
ರಾಜ್ಞೋಽಸಮ್ಮತವೃತ್ತೀನಾಂ ವಿದ್ವೇಷೋ ಬಲವಾನಭೂತ್
॥ ೪೧ ॥

ವಿದ್ವೇಷನಷ್ಟಮತಯಃ ಸ್ತ್ರಿಯೋ ದಾರುಣಚೇತಸಃ ।
ಗರಂ ದದುಃ ಕುಮಾರಾಯ ದುರ್ಮರ್ಷಾ ನೃಪತಿಂ ಪ್ರತಿ
॥ ೪೨ ॥

ಕೃತದ್ಯುತಿರಜಾನಂತೀ ಸಪತ್ನೀನಾಮಘಂ ಮಹತ್ ।
ಸುಪ್ತ ಏವೇತಿ ಸಂಚಿಂತ್ಯ ನಿರೀಕ್ಷ್ಯ ವ್ಯಚರದ್ಗೃಹೇ
॥ ೪೩ ॥

ಶಯಾನಂ ಸುಚಿರಂ ಬಾಲಮುಪಧಾರ್ಯ ಮನೀಷಿಣೀ ।
ಪುತ್ರಮಾನಯ ಮೇ ಭದ್ರೇ ಇತಿ ಧಾತ್ರೀಮಚೋದಯತ್
॥ ೪೪ ॥

ಸಾ ಶಯಾನಮುಪವ್ರಜ್ಯ ದೃಷ್ಟ್ವಾ ಚೋತ್ತಾರಲೋಚನಮ್ ।
ಪ್ರಾಣೇಂದ್ರಿಯಾತ್ಮಭಿಸ್ತ್ಯಕ್ತಂ ಹತಾಸ್ಮೀತ್ಯಪತದ್ಭುವಿ
॥ ೪೫ ॥

ತಸ್ಯಾಸ್ತದಾಽಽಕರ್ಣ್ಯ ಭೃಶಾತುರಂ ಸ್ವರಂ
ಘ್ನಂತ್ಯಾಃ ಕರಾಭ್ಯಾಮುರ ಉಚ್ಚಕೈರಪಿ ।
ಪ್ರವಿಶ್ಯ ರಾಜ್ಞೀ ತ್ವರಯಾಽಽತ್ಮಜಾಂತಿಕಂ
ದದರ್ಶ ಬಾಲಂ ಸಹಸಾ ಮೃತಂ ಸುತಮ್ ॥ ೪೬ ॥

ಪಪಾತ ಭೂಮೌ ಪರಿವೃದ್ಧಯಾ ಶುಚಾ
ಮುಮೋಹ ವಿಭ್ರಷ್ಟಶಿರೋರುಹಾಂಬರಾ ॥ ೪೭ ॥

ತತೋ ನೃಪಾಂತಃಪುರವರ್ತಿನೋ ಜನಾ
ನರಾಶ್ಚ ನಾರ್ಯಶ್ಚ ನಿಶಮ್ಯ ರೋದನಮ್ ।
ಆಗತ್ಯ ತುಲ್ಯವ್ಯಸನಾಃ ಸುದುಃಖಿತಾ–
ಸ್ತಾಶ್ಚ ವ್ಯಲೀಕಂ ರುರುದುಃ ಕೃತಾಗಸಃ ॥ ೪೮ ॥

ದಾಸಿಯರ ಸ್ಥಿತಿಗಿಂತಲೂ ಹೀನಾಯವಾದ ಸ್ಥಿತಿ ಅವರದು. ಏಕೆಂದರೆ, ದಾಸಿಯರು ತಮ್ಮ ಪ್ರಭುವಿನ ಸೇವೆಮಾಡಿ ಅವನಿಂದ ನಿರಂತರವಾಗಿ ಸಮ್ಮಾನವನ್ನೇ ಪಡೆಯುತ್ತಿರುವವರು. ಆದರೆ ದುರದೃಷ್ಟಶಾಲಿಗಳಾದ ನಾವು ಅವರಿಗಿಂತಲೂ ಕಡೆಯವರಾಗಿ ದಾಸಿಯರ ದಾಸಿಯರಂತೆ ಪುನಃ ಪುನಃ ತಿರಸ್ಕಾರಕ್ಕೆ ಪಾತ್ರರಾಗುತ್ತೇವೆ. ॥ ೪೦ ॥ ಪರೀಕ್ಷಿತನೇ! ಆ ರಾಣಿಯರು ತಮ್ಮ ಸವತಿಯ ಪುತ್ರಸಂಪತ್ತಿನಿಂದ ಹೊಟ್ಟೆಯುರಿಪಟ್ಟುಕೊಳ್ಳುತ್ತಾ ಇರಲು, ರಾಜನೂ ಅವರ ವಿಷಯದಲ್ಲಿ ಉದಾಸೀನನಾದನು. ಅದರ ಫಲವಾಗಿ ಅವರೆಲ್ಲರಿಗೂ ಕೃತದ್ಯುತಿಯ ಕುರಿತು ತಡೆಯಲಾರದ ದ್ವೇಷವುಂಟಾಯಿತು. ॥ ೪೧ ॥ ಆ ದ್ವೇಷದಿಂದ ಅವರ ಬುದ್ಧಿ ಕೆಟ್ಟುಹೋಯಿತು. ಕ್ರೌರ್ಯವು ಅವರ ಚಿತ್ತವನ್ನು ತುಂಬಿಕೊಂಡಿತು. ಪತಿಯಾದ ಚಿತ್ರಕೇತುವಿನ ಪುತ್ರಸ್ನೇಹವು ಅವರಿಂದ ಸಹಿಸಲಾಗಲಿಲ್ಲ. ಇದರಿಂದ ಅವರು ಅಸಹನೆಯಿಂದ ಆ ಎಳೆವಯಸ್ಸಿನ ರಾಜಕುಮಾರನಿಗೆ ವಿಷವನ್ನು ಉಣಿಸಿದರು. ॥ ೪೨ ॥ ಮಹಾರಾಣಿ ಕೃತದ್ಯುತಿಗೆ ತನ್ನ ಸವತಿಯರ ಪಾಪದ ಪಿತೂರಿಯು ಸ್ವಲ್ಪವೂ ತಿಳಿಯಲಿಲ್ಲ. ಆಕೆಯು ದೂರದಿಂದ ನೋಡಿ ಮಗುವು ನಿದ್ದೆ ಮಾಡುತ್ತಿದೆ ಎಂದೇ ಭಾವಿಸಿ, ಅರಮನೆಯಲ್ಲಿ ನಿಶ್ಚಿಂತವಾಗಿ ಅಡ್ಡಾಡುತ್ತಿದ್ದಳು. ॥ ೪೩ ॥ ಬುದ್ಧಿಮತಿ ರಾಣಿಯು ಮಗುವು ಬಹಳ ಹೊತ್ತಾದರೂ ಇನ್ನೂ ಏಳದೇ ಇರುವುದನ್ನು ಗಮನಿಸಿ ದಾಸಿಯನ್ನು ಕರೆದು – 'ಕಲ್ಯಾಣೀ! ನನ್ನ ಕಂದನನ್ನು ಕರೆದುಕೊಂಡು ಬಾ' ಎಂದು ಆಜ್ಞೆ ಮಾಡಿದಳು. ॥ ೪೪ ॥ ದಾದಿಯು ಮಲಗಿದ್ದ ಮಗುವಿನ ಬಳಿಗೆ ಹೋಗಿ ನೋಡಿದಾಗ ಆಕೆಗೆ ಗಾಬರಿಯುಂಟಾಯಿತು. 'ಮಗುವಿನ ಕಣ್ಣುಗುಡ್ಡೆಗಳು ತಿರುಗು ಮುರುಗಾಗಿವೆ. ಉಸಿರು ನಿಂತುಹೋಗಿದೆ. ಪ್ರಾಣ, ಇಂದ್ರಿಯಗಳು, ಜೀವಾತ್ಮ ಎಲ್ಲವೂ ಆ ಸುಕುಮಾರನ ದೇಹವನ್ನು ಬಿಟ್ಟು ಹೊರಟುಹೋಗಿವೆ. ಇದನ್ನು ನೋಡಿದೊಡನೆಯೇ 'ಅಯ್ಯೋ! ಸತ್ತೆನು! ಕೆಟ್ಟೆನು!' ಎಂದು ಕಿರುಚುತ್ತಾ ನೆಲಕ್ಕೆ ಕುಸಿದಳು. ॥ ೪೫ ॥

ಆ ದಾಸಿಯು ತನ್ನ ಎರಡು ಕೈಗಳಿಂದಲೂ ಎದೆಯನ್ನು ಬಡಿದುಕೊಳ್ಳುತ್ತಾ ಗಟ್ಟಿಯಾಗಿ ಗೋಳಾಡತೊಡಗಿದಳು. ಅವಳ ಅಳುವನ್ನು ಕೇಳಿ ಮಹಾರಾಣಿ ಕೃತದ್ಯುತಿಯು ಲಗುಬಗೆಯಿಂದ ಮಗುವಿನ ಬಳಿಗೆ ಓಡಿದಳು. ತನ್ನ ಕಂದನು ಅಕಸ್ಮಾತ್ತಾಗಿ ಸತ್ತುಹೋಗಿರುವುದನ್ನು ನೋಡಿದಳು. ॥ ೪೬ ॥ ಆಗ ಅವಳು ಅತ್ಯಂತ ಶೋಕದಿಂದ ಮೂರ್ಛಿತಳಾಗಿ ನೆಲಕ್ಕೆ ಕುಸಿದುಬಿದ್ದಳು. ಅವಳ ತಲೆಯ ಕೂದಲು ಬಿಚ್ಚಿಹೋಗಿ, ಉಟ್ಟಸೀರೆಯು ಅಸ್ತವ್ಯಸ್ತವಾಗಿದ್ದುದನ್ನು ಗಮನಿಸದೆ ಪ್ರಜ್ಞೆತಪ್ಪಿಬಿದ್ದಳು. ॥ ೪೭ ॥ ಅನಂತರ ಮಹಾರಾಣಿಯ ಕರುಣಾಕ್ರಂದನವನ್ನು ಕೇಳಿ ಅಂತಃಪುರದ ಎಲ್ಲ ಸ್ತ್ರೀಯರೂ, ಪುರುಷರೂ ಅಲ್ಲಿಗೆ ಓಡಿ ಬಂದರು. ಸಹಾನುಭೂತಿಯಿಂದ ಅವರೂ ದುಃಖಿತರಾಗಿ ಅಳತೊಡಗಿದರು. ಮಗುವನ್ನು ಕೊಂದ ಆ ರಾಣಿಯರೂ ಅಲ್ಲಿಗೆ ಬಂದು ಕಪಟದ ಅಳುವಿನ ನಟನೆಮಾಡಿದರು. ॥ ೪೮ ॥ ತನ್ನ ಪುತ್ರನು ಅಕಾಲಮೃತ್ಯುವಿಗೆ ತುತ್ತಾಗಿದ್ದಾನೆ ಎಂದು ತಿಳಿದು ರಾಜಾ ಚಿತ್ರಕೇತುವಿಗೆ ಅತ್ಯಂತ ಸ್ನೇಹದಿಂದಾಗಿ ಶೋಕದ ಆವೇಗದಿಂದ ಕಣ್ಣುಕತ್ತಲೆ ಬಂತು.

ಶ್ರುತ್ವಾ ಮೃತಂ ಪುತ್ರಮಲಕ್ಷಿತಾಂತಕಂ
ವಿನಷ್ಟ ದೃಷ್ಟಿಃ ಪ್ರಪತನ್ ಸ್ಖಲನ್ ಪಥಿ ।
ಸ್ನೇಹಾನುಬಂಧೈಧಿತಯಾ ಶುಚಾ ಭೃಶಂ
ವಿಮೂರ್ಚ್ಛಿತೋಽನುಪ್ರಕೃತಿರ್ದ್ವಿಜೈರ್ವೃತಃ ॥ ೫೦ ॥

ಪಪಾತ ಬಾಲಸ್ಯ ಸ ಪಾದಮೂಲೇ
ಮೃತಸ್ಯ ವಿಸ್ರಸ್ತಶಿರೋರುಹಾಂಬರಃ ।
ದೀರ್ಘಂ ಶ್ವಸನ್ಬಾಷ್ಪಕಲೋಪರೋಧತೋ
ನಿರುದ್ಧಕಂಠೋ ನ ಶಶಾಕ ಭಾಷಿತುಮ್ ॥ ೫೧ ॥

ಪತಿಂ ನಿರೀಕ್ಷ್ಯೋರುಶುಚಾರ್ಪಿತಂ ತದಾ
ಮೃತಂ ಚ ಬಾಲಂ ಸುತಮೇಕಸಂತತಿಮ್ ।
ಜನಸ್ಯ ರಾಜ್ಞೀ ಪ್ರಕೃತೇಶ್ಚ ಹೃದ್ರುಜಂ
ಸತೀ ದಧಾನಾ ವಿಲಲಾಪ ಚಿತ್ರಧಾ ॥ ೫೨ ॥

ಸ್ತನದ್ವಯಂ ಕುಂಕುಮಗಂಧಮಂಡಿತಂ
ನಿಷಿಂಚತೀ ಸಾಂಜನಬಾಷ್ಪಬಿಂದುಭಿಃ ।
ವಿಕೀರ್ಯ ಕೇಶಾನ್ವಿಗಲತ್ಸ್ರಜಃ ಸುತಂ
ಶುಶೋಚ ಚಿತ್ರಂ ಕುರರೀವ ಸುಸ್ವರಮ್ ॥ ೫೩ ॥

ಅಹೋ ವಿಧಾತಸ್ತ್ವಮತೀವ ಬಾಲಿಶೋ
ಯಸ್ತ್ವಾತ್ಮಸೃಷ್ಟ್ಯಪ್ರತಿರೂಪಮೀಹಸೇ ।
ಪರೇಽನುಜೀವತ್ಯಪರಸ್ಯ ಯಾ ಮೃತಿ-
ರ್ವಿಪರ್ಯಯಶ್ಚೇತ್ತ್ವಮಸಿ ಧ್ರುವಃ ಪರಃ ॥ ೫೪ ॥

ನ ಹಿ ಕ್ರಮಶ್ಚೇದಿಹ ಮೃತ್ಯುಜನ್ಮನೋಃ
ಶರೀರಿಣಾಮಸ್ತು ತದಾಽಽತ್ಮ ಕರ್ಮಭಿಃ ।
ಯಃ ಸ್ನೇಹಪಾಶೋ ನಿಜಸರ್ಗವೃದ್ಧಯೇ
ಸ್ವಯಂ ಕೃತಸ್ತೇ ತಮಿಮಂ ವಿವೃಶ್ಚಸಿ ॥ ೫೫ ॥

ತ್ವಂ ತಾತ ನಾರ್ಹಸಿ ಚ ಮಾಂ ಕೃಪಣಾಮನಾಥಾಂ
ತ್ಯಕ್ತುಂ ವಿಚಕ್ಷ್ವ ಪಿತರಂ ತವ ಶೋಕತಪ್ತಮ್ ।
ಅಂಜಸ್ತರೇಮ ಭವತಾಪ್ರಜದುಸ್ತರಂ ಯದ್
ಧ್ವಾಂತಂ ನ ಯಾಹ್ಯಕರುಣೇನ ಯಮೇನ ದೂರಮ್ ॥ ೫೬ ॥

ರಾಜನು ಶೋಕಭಾರದಿಂದ ಎಡವುತ್ತಾ, ಮುಗ್ಗರಿಸುತ್ತಾ ಮೆಲ್ಲ-ಮೆಲ್ಲನೆ ಮಂತ್ರಿ-ಬ್ರಾಹ್ಮಣಾದಿ ಪರಿವಾರ ಸಹಿತನಾಗಿ ಸತ್ತ ಮಗು ಬಿದ್ದ ಸ್ಥಳಕ್ಕೆ ಬಂದು ದುಃಖವನ್ನು ತಡೆಯಲಾರದೆ ಪ್ರಜ್ಞೆತಪ್ಪಿ ನೆಲಕ್ಕೆ ಉರುಳಿದನು. ಅವನ ತಲೆಕೂದಲು ಕೆದರಿಕೊಂಡು, ವಸ್ತ್ರಗಳು ಅಸ್ತವ್ಯಸ್ತವಾದುವು. ಬಿಸಿ-ಬಿಸಿ ನಿಟ್ಟುಸಿರಿನಿಂದ ಮುಖವು ಒಣಗಿತು. ಉಮ್ಮಳಿಸುವ ಕಣ್ಣೀರಿನ ಧಾರೆಯಿಂದ ಗಂಟಲು ಕಟ್ಟಿಹೋಯಿತು. ಅವನ ಬಾಯಿಂದ ಮಾತೇ ಹೊರಡದಾಯಿತು. ॥ ೫೦-೫೧ ॥ ಸಾಧ್ವಿಮಣಿಯಾದ ಕೃತದ್ಯುತಿಗೆ ತನ್ನ ಪತಿಯು ಹಾಗೆ ದುಃಖದಲ್ಲಿ ಮುಳುಗಿದ್ದುದನ್ನೂ – ಇದ್ದ ಒಂದೇ ಮಗುವು ಸಾವಿಗೀಡಾದುದನ್ನೂ ಕಂಡು ಅತಿದೈನ್ಯದಿಂದ ಬಗೆ-ಬಗೆಯಾಗಿ ಗೋಳಾಡತೊಡಗಿದಳು. ಅದನ್ನು ಕಂಡು ಅಲ್ಲಿದ್ದ ಮಂತ್ರಿಯೇ ಮುಂತಾದವರೆಲ್ಲರೂ ಶೋಕಗ್ರಸ್ತರಾದರು. ॥ ೫೨ ॥ ಮಹಾರಾಣಿಯ ಕಣ್ಣುಗಳಿಂದ ಕಣ್ಣೀರಿನ ಕೋಡಿಯೇ ಹರಿದು ಕಣ್ಣುಗಳಿಗೆ ಹಾಕಿಕೊಂಡಿದ್ದ ಕಾಡಿಗೆಯು ಕರಗಿ ಕುಂಕುಮಕೇಸರಿ – ಗಂಧಗಳು ಪೂಸಿದ್ದ ವಕ್ಷಸ್ಥಳವೂ ನೆನೆಯತೊಡಗಿತು. ಆಕೆಯ ತಲೆಗೂದಲು ಚೆದುರಿಹೋಗಿ ಮುಡಿದ ಹೂವುಗಳು ಕೆಳಕ್ಕೆ ಬೀಳುತ್ತಿದ್ದವು. ಹೀಗೆ ಆಕೆಯು ಸಹಿಸಲಾರದ ಪುತ್ರಶೋಕದಿಂದ ಕುರರೀಹಕ್ಕಿಯಂತೆ ಅತ್ಯಂತ ಕರುಣಾಜನಕವಾಗಿ ಗಟ್ಟಿಯಾದ ದನಿಯಲ್ಲಿ ವಿವಿಧ ಪ್ರಕಾರದಿಂದ ವಿಲಪಿಸುತ್ತಿದ್ದಳು. ॥ ೫೩ ॥

ಅವಳ ಗೋಳಾಟವು ವರ್ಣನಾತೀತವು.. 'ಅಯ್ಯೋ! ವಿಧಿಯೇ! ನಿಜವಾಗಿಯೂ ನೀನು ಮೂರ್ಖನೇ ಸರಿ! ತನ್ನ ಸೃಷ್ಟಿಗೆ ಪ್ರತಿಕೂಲವಾಗಿ ಕೆಲಸವನ್ನು ಮಾಡುತ್ತಿರುವೆಯಲ್ಲ! ಮುದುಕರು ಬದುಕಿರುವಾಗಲೇ ಬಾಲಕರು ಸಾಯುವುದು ಎಂತಹ ಆಶ್ಚರ್ಯದ ವಿಷಯ! ನಿಜವಾಗಿಯೂ ನಿನ್ನ ಸ್ವಭಾವದಲ್ಲಿ ಇಂತಹ ವಿಪರೀತತೆ ಇದ್ದರೆ ನೀನು ಜೀವಿಗಳ ಶತ್ರುವೇ ಆಗಿರುವೆ! ॥ ೫೪ ॥ ಪ್ರಪಂಚದಲ್ಲಿ ಪ್ರಾಣಿಗಳ ಜೀವನ-ಮರಣದ ಯಾವುದೇ ಕ್ರಮವೇ ಇಲ್ಲದಿದ್ದರೆ, ಅವರು ಪ್ರಾರಬ್ಧಾನುಸಾರ ಹುಟ್ಟುತ್ತಾ-ಸಾಯುತ್ತಾ ಇರುವರು. ಮತ್ತೆ ನಿನ್ನ ಆವಶ್ಯಕತೆ ಯಾದರೂ ಏನಿದೆ? ಆದರೆ ನೀನು ಹೀಗೆ ಮಕ್ಕಳನ್ನು ಸಾವಿಗೀಡುಮಾಡಿ ನಿನ್ನ ಸಂಕಲ್ಪವೃಕ್ಷವನ್ನು ನೀನೇ ಕಡಿದು ಹಾಕುವೆಯಲ್ಲಾ!' ॥ ೫೫ ॥ ಮತ್ತೆ ಅವಳು ತನ್ನ ಮಗುವಿನ ಕಡೆಗೆ ನೋಡುತ್ತಾ ಹೇಳತೊಡಗಿದಳು – ಅಪ್ಪಾ ಮಗು! ನೀನಿಲ್ಲದೆ ನಾನು ಅನಾಥಳೂ, ದೀನಳೂ ಆಗಿರುವೆನು. ನನ್ನನ್ನು ಬಿಟ್ಟು ಹೀಗೆ ಹೊರಟುಹೋಗುವುದು ನಿನಗೆ ಉಚಿತವೆ? ಸ್ವಲ್ಪ ಕಣ್ಣುತೆರೆದು ನೋಡಬಾರದೆ! ನಿನ್ನ ತಂದೆಯವರು ನಿನ್ನ ವಿಯೋಗದಲ್ಲಿ ಎಷ್ಟು ಶೋಕಪಡುತ್ತಿದ್ದಾರೆ. ಸಂತಾನಹೀನರಾದ ಪುರುಷರು ಯಾವ ಘೋರನರಕವನ್ನು ಕಷ್ಟದಿಂದ ದಾಟಬೇಕಾಗುತ್ತದೋ, ಆ ನರಕವನ್ನು ನಿನ್ನ ಸಹಾಯದಿಂದ ನಾವು ಆಯಾಸವಿಲ್ಲದೆಯೇ ದಾಟಬೇಕಾಗಿದೆ. ಕಂದಾ! ನೀನು ಈ ಯಮರಾಜನ ಜೊತೆಯಲ್ಲಿ ದೂರ ಹೋಗಬೇಡ. ಅವನು ದಯೆ-ದಾಕ್ಷಿಣ್ಯವಿಲ್ಲದವನು. ॥ ೫೬ ॥ ಎನ್ನ ಮುದ್ದಿನ ಮಗನೇ! ಓ ರಾಜಕುಮಾರಾ! ಎದ್ದೇಳು ಮಗು! ಇದೋ ನೋಡು. ನಿನ್ನ ಜೊತೆಯ ಬಾಲಕರು ನಿನ್ನನ್ನು ಆಟಕ್ಕೆ ಕರೆಯುತ್ತಿದ್ದಾರೆ. ನೀನು

ಉತ್ತಿಷ್ಠ ತಾತ ತ ಇಮೇ ಶಿಶವೋ ವಯಸ್ಯಾ-
ಸ್ತ್ವಾಮಾಹ್ವಯಂತಿ ನೃಪನಂದನ ಸಂವಿಹರ್ತುಮ್ ।
ಸುಪ್ತಶ್ಚಿರಂ ಹ್ಯಶನಯಾ ಚ ಭವಾನ್ಪರೀತೋ
ಭುಂಕ್ಷ್ವ ಸ್ತನಂ ಪಿಬ ಶುಚೋ ಹರ ನಃ ಸ್ವಕಾನಾಮ್ ॥ ೫೭ ॥

ನಾಹಂ ತನೂಜ ದದೃಶೇ ಹತಮಂಗಲಾ ತೇ
ಮುಗ್ಧಸ್ಮಿತಂ ಮುದಿತವೀಕ್ಷಣಮಾನನಾಬ್ಜಮ್ ।
ಕಿಂ ವಾ ಗತೋಽಸ್ಯಪುನರನ್ವಯಮನ್ಯಲೋಕಂ
ನೀತೋಽಘೃಣೇನ ನ ಶೃಣೋಮಿ ಕಲಾ ಗಿರಸ್ತೇ ॥ ೫೮ ॥

ಶ್ರೀಶುಕ ಉವಾಚ

ವಿಲಪಂತ್ಯಾ ಮೃತಂ ಪುತ್ರಮಿತಿ ಚಿತ್ರವಿಲಾಪನೈಃ ।
ಚಿತ್ರಕೇತುರ್ಭೃಶಂ ತಪ್ತೋ ಮುಕ್ತಕಂಠೋ ರುರೋದ ಹ ॥ ೫೯ ॥

ತಯೋರ್ವಿಲಪತೋಃ ಸರ್ವೇ ದಂಪತ್ಯೋಸ್ತದನುವ್ರತಾಃ ।
ರುರುದುಃ ಸ್ಮ ನರಾ ನಾರ್ಯಃ ಸರ್ವಮಾಸೀದಚೇತನಮ್ ॥ ೬೦ ॥

ಏವಂ ಕಶ್ಮಲಮಾಪನ್ನಂ ನಷ್ಟಸಂಜ್ಞಮನಾಯಕಮ್ ।
ಜ್ಞಾತ್ವಾಂಗಿರಾ ನಾಮ ಮುನಿರಾಜಗಾಮ ಸನಾರದಃ ॥ ೬೧ ॥

ಮಲಗಿ ತುಂಬಾ ಹೊತ್ತಾಯಿತು. ಈಗ ನಿನಗೆ ಹಸಿವಾಗಿರಬಹುದು. ಏಳು ಏನನ್ನಾದರೂ ಸ್ವಲ್ಪ ತಿನ್ನುವೆಯಂತೆ. ಬೇರೇನೂ ಇಲ್ಲದಿದ್ದರೆ ನನ್ನ ಹಾಲನ್ನಾದರೂ ಕುಡಿದು, ನೆಂಟರಿಷ್ಟರಾದ ನಮ್ಮ ದುಃಖವನ್ನು ಹೋಗಲಾಡಿಸು. ॥ ೫೭ ॥ ಪ್ರೀತಿಯ ಕಂದಮ್ಮನೇ! ಇದೇನು ಇಂದು ನಿನ್ನ ಮುಖಾರವಿಂದದಲ್ಲಿ ಎಂದಿನಂತೆ ಮುದ್ದಾದ ಎಳೆ ನಗೆಯೂ, ಆನಂದದಿಂದ ತುಂಬಿದ ಚೆನ್ನೋಟವೂ ಕಾಣುತ್ತಿಲ್ಲವಲ್ಲ! ಎಂತಹ ದುರ್ಭಾಗ್ಯಳು ನಾನು! ನಿನ್ನ ತೊದಲು ನುಡಿಗಳೂ, ಮುದ್ದು ಮಾತುಗಳೂ ನನಗೆ ಕೇಳಿಸುತ್ತಿಲ್ಲವಲ್ಲ! ನಿಜವಾಗಿಯೂ ನಿಷ್ಠುರವಾದ ಯಮರಾಜನು ಹಿಂದಕ್ಕೆ ಮರಳಿ ಬರಲಾಗದ ಪರಲೋಕಕ್ಕೆ ನಿನ್ನನ್ನು ಕರೆದುಕೊಂಡು ಹೋಗಿಬಿಟ್ಟನೋ? ಎಂದು ರೋದಿಸಿದಳು. ॥ ೫೮ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ! ತನ್ನ ರಾಣಿಯು ಮೃತನಾದ ಪುತ್ರನಿಗಾಗಿ ಹೀಗೆ ಬಗೆ-ಬಗೆಯಾಗಿ ವಿಲಪಿಸುತ್ತಿರುವುದನ್ನು ಕಂಡು ಚಿತ್ರಕೇತುವೂ ಅತ್ಯಂತ ಶೋಕಸಂತಪ್ತನಾಗಿ ಬಿಕ್ಕಿ-ಬಿಕ್ಕಿ ಅಳತೊಡಗಿದನು. ॥ ೫೯ ॥ ರಾಜ-ರಾಣಿಯರು ವಿಲಪಿಸುತ್ತಿರುವುದನ್ನು ಕಂಡು ಅವರ ಅನುಯಾಯಿಗಳಾದ ಗಂಡಸರೂ, ಹೆಂಗಸರೂ ಕೂಡ ದುಃಖಿತರಾಗಿ ಅಳತೊಡಗಿದರು. ಹೀಗೆ ಇಡೀ ನಗರವೇ ಶೋಕದಿಂದ ಜಡವಸ್ತುವಿನಂತಾಯಿತು. ॥ ೬೦ ॥ ರಾಜನೇ! ಚಿತ್ರಕೇತು ಮಹಾರಾಜನು ಹೀಗೆ ಪುತ್ರಶೋಕದಿಂದ ಚೇತನಾರಹಿತನಾಗಿಬಿಟ್ಟಿದ್ದಾನೆ. ಆಗ ಅವನಿಗೆ ತಿಳುವಳಿಕೆ ಕೊಡುವವರೂ ಯಾರೂ ಇಲ್ಲದಿರುವುದನ್ನು ಕಂಡುಕೊಂಡ ಅಂಗೀರಸ ಮಹರ್ಷಿಗಳೂ ಮತ್ತು ನಾರದಮಹರ್ಷಿಗಳೂ ಅವನಿದ್ದೆಡೆಗೆ ದಯಮಾಡಿಸಿದರು. ॥ ೬೧ ॥

ಹದಿನಾಲ್ಕನೆಯ ಅಧ್ಯಾಯವು ಮುಗಿಯಿತು. ॥ ೧೪ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಷಷ್ಠಸ್ಕಂಧೇ
ಚಿತ್ರಕೇತುವಿಲಾಪೋ ನಾಮ ಚತುರ್ದಶೋಽಧ್ಯಾಯಃ ॥ ೧೪ ॥

ಹದಿನೈದನೆಯ ಅಧ್ಯಾಯ

ಚಿತ್ರಕೇತುವಿಗೆ ಅಂಗೀರಸರಿಂದ ಮತ್ತು ನಾರದಮಹರ್ಷಿಗಳಿಂದ ಉಪದೇಶ

ಶ್ರೀಶುಕ ಉವಾಚ

ಊಚತುರ್ಮೃತಕೋಪಾಂತೇ ಪತಿತಂ ಮೃತಕೋಪಮಮ್ ।
ಶೋಕಾಭಿಭೂತಂ ರಾಜಾನಂ ಬೋಧಯಂತೌ ಸದುಕ್ತಿಭಿಃ ॥ ೧ ॥

ಕೋಽಯಂ ಸ್ಯಾತ್ತವ ರಾಜೇಂದ್ರ ಭವಾನ್ಯಮನುಶೋಚತಿ ।
ತ್ವಂ ಚಾಸ್ಯ ಕತಮಃ ಸೃಷ್ಟೌ ಪುರೇದಾನೀಮತಃ ಪರಮ್ ॥ ೨ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿದ್ರಾಜನೇ! ಚಿತ್ರಕೇತು ಮಹಾರಾಜನು ಶೋಕಗ್ರಸ್ತನಾಗಿ ಹೆಣದಂತೆ ತನ್ನ ಸತ್ತಿರುವ ಪುತ್ರನ ಬಳಿಯಲ್ಲೇ ಬಿದ್ದಿದ್ದನು. ಆಗ ಅಂಗಿರಾ ಮಹರ್ಷಿಗಳೂ ಹಾಗೂ ನಾರದಮಹರ್ಷಿಗಳೂ ಅವನಿಗೆ ಒಳ್ಳೆಯ ಮಾತುಗಳಿಂದ ತಿಳುವಳಿಕೆ ನೀಡುತ್ತಾ ಹೀಗೆಂದರು. ॥ ೧ ॥ ಎಲೈ ರಾಜೇಂದ್ರಾ! ಯಾರಿಗಾಗಿ ನೀನು ಇಷ್ಟು ಶೋಕಿಸುತ್ತಿರುವೆಯೋ ಆ ಬಾಲಕನು ಈ ಜನ್ಮದಲ್ಲಿ ಮತ್ತು ಹಿಂದಿನ ಜನ್ಮದಲ್ಲಿ ನಿನಗೇನಾಗಬೇಕು? ಅವನಿಗೆ ನೀನು ಏನಾಗಬೇಕು? ಮುಂದಿನ ಜನ್ಮದಲ್ಲಿಯೂ ಅವನೊಂದಿಗೆ ಯಾವ ಸಂಬಂಧ ಉಳಿದೀತು? ॥ ೨ ॥

ಯಥಾ ಪ್ರಯಾಂತಿ ಸಂಯಾಂತಿ ಸ್ರೋತೋವೇಗೇನ ವಾಲುಕಾಃ ।
ಸಂಯುಜ್ಯಂತೇ ವಿಯುಜ್ಯಂತೇ ತಥಾ ಕಾಲೇನ ದೇಹಿನಃ
॥ ೩ ॥

ಯಥಾ ಧಾನಾಸು ವೈ ಧಾನಾ ಭವಂತಿ ನ ಭವಂತಿ ಚ ।
ಏವಂ ಭೂತೇಷು ಭೂತಾನಿ ಚೋದಿತಾನೀಶಮಾಯಯಾ
॥ ೪ ॥

ವಯಂ ಚ ತ್ವಂ ಚ ಯೇ ಚೇಮೇ ತುಲ್ಯಕಾಲಾಶ್ಚರಾಚರಾಃ ।
ಜನ್ಮಮೃತ್ಯೋರ್ಯಥಾ ಪಶ್ಚಾತ್ಪ್ರಾಙ್ನೈವಮಧುನಾಪಿ ಭೋಃ
॥ ೫ ॥

ಭೂತೈರ್ಭೂತಾನಿ ಭೂತೇಶಃ ಸೃಜತ್ಯವತಿ ಹಂತ್ಯಜಃ ।
ಆತ್ಮಸೃಷ್ಟೈರಸ್ವತಂತ್ರೈರನಪೇಕ್ಷೋಽಪಿ ಬಾಲವತ್
॥ ೬ ॥

ದೇಹೇನ ದೇಹಿನೋ ರಾಜನ್ ದೇಹಾದ್ದೇಹೋಽಭಿಜಾಯತೇ ।
ಬೀಜಾದೇವ ಯಥಾ ಬೀಜಂ ದೇಹ್ಯರ್ಥ ಇವ ಶಾಶ್ವತಃ
॥ ೭ ॥

ದೇಹದೇಹಿವಿಭಾಗೋಽಯಮವಿವೇಕಕೃತಃ ಪುರಾ ।
ಜಾತಿವ್ಯಕ್ತಿ ವಿಭಾಗೋಽಯಂ ಯಥಾ ವಸ್ತುನಿ ಕಲ್ಪಿತಃ
॥ ೮ ॥

ಶ್ರೀಶುಕ ಉವಾಚ

ಏವಮಾಶ್ವಾಸಿತೋ ರಾಜಾ ಚಿತ್ರಕೇತುರ್ದ್ವಿಜೋಕ್ತಿಭಿಃ ।
ಪ್ರಮೃಜ್ಯ ಪಾಣಿನಾ ವಕ್ತ್ರಮಾಧಿಮ್ಲಾನಮಭಾಷತ
॥ ೯ ॥

ರಾಜೋವಾಚ

ಕೌ ಯುವಾಂ ಜ್ಞಾನಸಂಪನ್ನೌ
ಮಹಿಷ್ಠೌ ಚ ಮಹೀಯಸಾಮ್ ।
ಅವಧೂತೇನ ವೇಷೇಣ
ಗೂಢಾವಿಹ ಸಮಾಗತೌ ॥ ೧೦ ॥

ನೀರಿನ ಪ್ರವಾಹದಿಂದ ಮರಳ ಕಣಗಳು ಒಂದು ಮತ್ತೊಂದರ ಜೊತೆಗೂಡುತ್ತವೆ ಹಾಗೂ ಅಗಲುತ್ತವೆ. ಹಾಗೆಯೇ ಸಮಯದ ಪ್ರವಾಹದಲ್ಲಿ ಪ್ರಾಣಿಗಳೂ ಕೂಡ ಒಂದಾಗುತ್ತಾರೆ ಮತ್ತು ಅಗಲುತ್ತಾ ಇರುತ್ತಾರೆ. ॥ ೩॥ ರಾಜನೇ! ಕೆಲವು ಬೀಜಗಳಿಂದ ಬೇರೆ ಬೀಜಗಳು ಉತ್ಪನ್ನವಾಗುತ್ತವೆ ಮತ್ತು ನಾಶವಾಗಿಹೋಗುತ್ತವೆ. ಹಾಗೆಯೇ ಭಗವಂತನ ಮಾಯೆಯಿಂದ ಪ್ರೇರಿತರಾಗಿ ಪ್ರಾಣಿಗಳಿಂದ ಬೇರೆ ಪ್ರಾಣಿಗಳು ಹುಟ್ಟುತ್ತವೆ ಹಾಗೂ ಸಾಯುತ್ತವೆ. ॥ ೪ ॥ ಎಲೈ ರಾಜಾ! ನಾವು, ನೀನು ಮತ್ತು ನಮ್ಮೊಂದಿಗೆ ಈ ಜಗತ್ತಿನಲ್ಲಿ ಎಷ್ಟು ಚರಾಚರ ಪ್ರಾಣಿಗಳು ವರ್ತಮಾನದಲ್ಲಿವೆಯೋ, ಅವೆಲ್ಲವೂ ತಮ್ಮ ಜನ್ಮದ ಮೊದಲು ಇರಲಿಲ್ಲ ಮತ್ತು ಮೃತ್ಯುವಿನ ನಂತರ ಇರಲಾರರು. ಇದರಿಂದ ಅವರ ಅಸ್ತಿತ್ವ ಇಲ್ಲವೆಂಬುದು ಸಿದ್ಧವಾಗುತ್ತದೆ. ಏಕೆಂದರೆ, ಸತ್ಯವಸ್ತುವಾದರೋ ಎಲ್ಲ ಸಮಯದಲ್ಲಿ ಒಂದೇ ರೀತಿಯಾಗಿ ಇರುತ್ತದೆ. ॥ ೫ ॥ ಭಗವಂತನೇ ಸಮಸ್ತ ಪ್ರಾಣಿಗಳ ಅಧಿಪತಿಯಾಗಿದ್ದಾನೆ. ಅವನಲ್ಲಿ ಜನ್ಮ-ಮೃತ್ಯು ಮುಂತಾದ ವಿಕಾರಗಳು ಖಂಡಿತವಾಗಿಯೂ ಇಲ್ಲ. ಅವನಿಗೆ ಯಾವುದೇ ಇಚ್ಛೆಯಾಗಲೀ, ಅಪೇಕ್ಷೆಯಾಗಲೀ ಇಲ್ಲ. ಮಕ್ಕಳು ವಿನೋದಕ್ಕಾಗಿ ಆಟದ ವಸ್ತುಗಳಿಂದ ಮನೆ-ಮಠ ಮುಂತಾದವುಗಳನ್ನು ರಚಿಸುತ್ತಾ - ಕೆಡಿಸುತ್ತಾ ಇರುವಂತೆಯೇ ಅವನು ತಾನೇ ತಾನಾಗಿ ಪರತಂತ್ರ ಪ್ರಾಣಿಗಳನ್ನು ಸೃಷ್ಟಿಸುತ್ತಾನೆ ಮತ್ತು ಅವರ ಮೂಲಕ ಬೇರೆ ಪ್ರಾಣಿಗಳನ್ನು ರಚಿಸುತ್ತಾನೆ, ಪಾಲಿಸುತ್ತಾನೆ, ಸಂಹರಿಸುತ್ತಾನೆ. ॥ ೬ ॥ ಒಂದು ಬೀಜದಿಂದ ಇನ್ನೊಂದು ಬೀಜವು ಹುಟ್ಟುವಂತೆಯೇ ತಂದೆಯ ದೇಹದ ಮೂಲಕ ತಾಯಿಯ ದೇಹದಿಂದ ಮಗನದೇಹ ಹುಟ್ಟುತ್ತದೆ. ತಂದೆ-ತಾಯಿ-ಮಗ ಜೀವರೂಪದಲ್ಲಿ ದೇಹಿಯಾಗಿದ್ದಾರೆ ಹಾಗೂ ಬಾಹ್ಯದೃಷ್ಟಿಯಿಂದ ಕೇವಲ ಶರೀರವಾಗಿದ್ದಾರೆ. ಅವರಲ್ಲಿ ದೇಹಿಯಾದ ಜೀವನು ಘಟವೇ ಮುಂತಾದ ಕಾರ್ಯಗಳಲ್ಲಿ ಪೃಥಿವಿಯಂತೆ ನಿತ್ಯನಾಗಿದ್ದಾನೆ.* ॥ ೭ ॥ ರಾಜನೇ! ಒಂದೇ ಮಣ್ಣಿನ ರೂಪವಾದ ಗಡಿಗೆಯೇ ಮುಂತಾದ ಜಾತಿ ಮತ್ತು ಘಟಾದಿ ವ್ಯಕ್ತಿಗಳ ವಿಭಾಗವು ಕೇವಲ ಕಲ್ಪನೆಯೇ ಆಗಿದೆ. ಹಾಗೆಯೇ ಈ ದೇಹಿ ಮತ್ತು ದೇಹದ ವಿಭಾಗವೂ ಅನಾದಿ ಹಾಗೂ ಅವಿದ್ಯಾ ಕಲ್ಪಿತವಾಗಿದೆ. ॥ ೮ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ - ಪರೀಕ್ಷಿತನೇ! ಅಂಗಿರಾಮಹರ್ಷಿಗಳು ಮತ್ತು ಮಹರ್ಷಿ ನಾರದರು ಹೀಗೆ ಚಿತ್ರಕೇತು ರಾಜನನ್ನು ಸಮಾಧಾನಪಡಿಸಿದಾಗ ಅವನು ಸ್ವಲ್ಪ ಧೈರ್ಯ ತಂದುಕೊಂಡು, ಶೋಕದಿಂದ ಬಾಡಿದ ಮುಖವನ್ನು ಕೈಯಿಂದ ಒರೆಸಿಕೊಂಡು, ಅವರಲ್ಲಿ ಇಂತೆಂದನು - ॥ ೯ ॥

ಚಿತ್ರಕೇತುರಾಜನು ಹೇಳಿದನು - ಎಲೈ ಮಹಾತ್ಮರೇ! ಪರಮ ಜ್ಞಾನ ಸಂಪನ್ನರಾಗಿ, ಉತ್ತಮರಲ್ಲಿಯೂ ಮಹೋತ್ತಮರಾಗಿ ಅವಧೂತವೇಷದಿಂದ ಮಹಿಮೆಯನ್ನು ಮರೆಸಿಕೊಂಡು ಇಲ್ಲಿಗೆ ಬಂದಿರುವ ನೀವಿಬ್ಬರೂ ಯಾರು? ಕೃಪೆಯಿಟ್ಟು ತಿಳಿಸಿರಿ. ॥ ೧೦ ॥

* ಅನಿತ್ಯವಾದ್ದರಿಂದ ಶರೀರವು ಅಸತ್ಯವಾಗಿದೆ. ಶರೀರವು ಅಸತ್ಯವಾದ ಕಾರಣದಿಂದ ಅದರ ಬೇರೆ-ಬೇರೆ ಅಭಿಮಾನಿಗಳೂ ಕೂಡ ಅಸತ್ಯವೇ ಆಗಿವೆ. ತ್ರಿಕಾಲಾಬಾಧಿತ ಸತ್ಯವಾದರೋ ಏಕಮಾತ್ರ ಪರಮಾತ್ಮನೇ ಆಗಿದ್ದಾನೆ. ಆದ್ದರಿಂದ ಶೋಕಿಸುವುದು ಯಾವ ವಿಧದಿಂದಲೂ ಉಚಿತವಲ್ಲ.

ಚರಂತಿ ಹ್ಯವನೌ ಕಾಮಂ
ಬ್ರಾಹ್ಮಣಾ ಭಗವತ್ಪ್ರಿಯಾಃ ।
ಮಾದೃಶಾಂ ಗ್ರಾಮ್ಯಬುದ್ಧೀನಾಂ
ಬೋಧಾಯೋನ್ಮತ್ತಲಿಂಗಿನಃ ॥ ೧೧ ॥

ಕುಮಾರೋ ನಾರದ
ಋಭುರಂಗಿರಾ ದೇವಲೋಽಸಿತಃ ।
ಅಪಾಂತರತಮೋ ವ್ಯಾಸೋ
ಮಾರ್ಕಂಡೇಯೋಽಥಗೌತಮಃ ॥ ೧೨ ॥

ವಸಿಷ್ಠೋ ಭಗವಾನ್ ರಾಮಃ ಕಪಿಲೋ ಬಾದರಾಯಣಿಃ ।
ದುರ್ವಾಸಾ ಯಾಜ್ಞವಲ್ಕ್ಯಶ್ಚ ಜಾತೂಕರ್ಣ್ಯಸ್ತಥಾರುಣಿಃ
॥ ೧೩ ॥

ರೋಮಶಶ್ಚ್ಯವನೋ ದತ್ತ ಆಸುರಿಃ ಸಪತಂಜಲಿಃ ।
ಋಷಿರ್ವೇದಶಿರಾ ಬೋಧ್ಯೋ ಮುನಿಃ ಪಂಚಶಿರಾಸ್ತಥಾ
॥ ೧೪ ॥

ಹಿರಣ್ಯನಾಭಃ ಕೌಸಲ್ಯಃ ಶ್ರುತದೇವ ಋತಧ್ವಜಃ ।
ಏತೇ ಪರೇ ಚ ಸಿದ್ಧೇಶಾಶ್ಚರಂತಿ ಜ್ಞಾನಹೇತವಃ
॥ ೧೫ ॥

ತಸ್ಮಾದ್ಯುವಾಂ ಗ್ರಾಮ್ಯಪಶೋರ್ಮಮ ಮೂಢಧಿಯಃ ಪ್ರಭೂ ।
ಅಂಧೇ ತಮಸಿ ಮಗ್ನಸ್ಯ ಜ್ಞಾನದೀಪ ಉದೀರ್ಯತಾಮ್
॥ ೧೬ ॥

ಅಂಗಿರಾ ಉವಾಚ

ಅಹಂ ತೇ ಪುತ್ರಕಾಮಸ್ಯ ಪುತ್ರದೋಽಸ್ಮ್ಯಂಗಿರಾ ನೃಪ ।
ಏಷ ಬ್ರಹ್ಮಸುತಃ ಸಾಕ್ಷಾನ್ನಾರದೋ ಭಗವಾನೃಷಿಃ
॥ ೧೭ ॥

ಇತ್ಥಂ ತ್ವಾಂ ಪುತ್ರಶೋಕೇನ ಮಗ್ನಂ ತಮಸಿ ದುಸ್ತರೇ ।
ಅತದರ್ಹಮನುಸ್ಮೃತ್ಯ ಮಹಾಪುರುಷಗೋಚರಮ್
॥ ೧೮ ॥

ಅನುಗ್ರಹಾಯ ಭವತಃ ಪ್ರಾಪ್ತಾವಾವಾಮಿಹ ಪ್ರಭೋ ।
ಬ್ರಹ್ಮಣ್ಯೋ ಭಗವದ್ಭಕ್ತೋ ನಾವಸೀದಿತುಮರ್ಹತಿ
॥ ೧೯ ॥

ತದೈವ ತೇ ಪರಂ ಜ್ಞಾನಂ ದದಾಮಿ ಗೃಹಮಾಗತಃ ।
ಜ್ಞಾತ್ವಾನ್ಯಾಭಿನಿವೇಶಂ ತೇ ಪುತ್ರಮೇವ ದದಾವಹಮ್
॥ ೨೦ ॥

ಅಧುನಾ ಪುತ್ರಿಣಾಂ ತಾಪೋ ಭವತೈವಾನುಭೂಯತೇ ।
ಏವಂ ದಾರಾ ಗೃಹಾ ರಾಯೋ ವಿವಿಧೈಶ್ವರ್ಯಸಂಪದಃ
॥ ೨೧ ॥

ಶಬ್ದಾದಯಶ್ಚ ವಿಷಯಾಶ್ಚಲಾ ರಾಜ್ಯ ವಿಭೂತಯಃ ।
ಮಹೀ ರಾಜ್ಯಂ ಬಲಂ ಕೋಶೋ ಭೃತ್ಯಾಮಾತ್ಯಾಃ ಸುಹೃಜ್ಜನಾಃ
॥ ೨೨ ॥

ಬ್ರಹ್ಮಜ್ಞಾನಿಗಳಾಗಿ ಶ್ರೀಭಗವಂತನಿಗೆ ಪ್ರಿಯರಾಗಿರುವ ಹಲವಾರು ಮಂದಿ ಭಾಗವತೋತ್ತಮರು ನನ್ನಂತಹ ಪಶುಬುದ್ಧಿಯುಳ್ಳ ಪ್ರಾಣಿಗಳಿಗೆ ಉಪದೇಶ ಮಾಡಲಿಕ್ಕಾಗಿ ಹುಚ್ಚರಂತೆ ವೇಷವನ್ನು ಧರಿಸಿಕೊಂಡು ಭೂಮಿಯ ಮೇಲೆ ಸಂಚರಿಸುತ್ತಿರುವುದುಂಟು. ಅಂತಹವರಲ್ಲಿ ನೀವು ಯಾರು? ॥ ೧೧ ॥ ಸನತ್ಕುಮಾರರು, ನಾರದರು, ಋಭುಗಳು, ಅಂಗಿರಸರು, ದೇವಲರು, ಅಸಿತರು, ಅಪಾಂತರತಮರು, ವ್ಯಾಸರು, ಮಾರ್ಕಂಡೇಯರು, ಗೌತಮರು, ವಸಿಷ್ಠರು, ಭಗವಾನ್ ಪರಶುರಾಮರು, ಕಪಿಲಮಹಾಮುನಿಗಳು, ಶುಕಮುನಿಗಳು, ದುರ್ವಾಸರು, ಯಾಜ್ಞವಲ್ಕ್ಯರು, ಜಾತುಕರ್ಣರು, ಆರುಣಿಗಳೂ, ರೋಮಶರು, ಚ್ಯವನರು, ದತ್ತಾತ್ರೇಯರು, ಆಸುರಿ ಮಹರ್ಷಿಗಳು, ಪತಂಜಲಿಯವರು, ವೇದಶಿರಾರವರು, ಬೋಧಾಯನಮುನಿಗಳು, ಪಂಚಶಿರಸರು, ಹಿರಣ್ಯನಾಭರು, ಕೌಸಲ್ಯರು, ಶ್ರುತದೇವರು ಮತ್ತು ಋತಧ್ವಜರು – ಇವರೇ ಅಲ್ಲದೆ ಬೇರೆ ಸಿದ್ಧೇಶ್ವರರಾದ ಋಷಿ-ಮುನಿಗಳು ಜ್ಞಾನದಾನ ಮಾಡುವುದಕ್ಕಾಗಿ, ಭೂಮಿಯ ಮೇಲೆ ಸಂಚರಿಸುತ್ತಾ ಇರುತ್ತಾರೆ. ॥ ೧೨-೧೫ ॥ ಓ ಸ್ವಾಮಿಗಳೇ! ವಿಷಯ ಭೋಗಗಳಲ್ಲಿ ಸಿಕ್ಕಿಕೊಂಡಿರುವ ಮೂಢಬುದ್ಧಿಯುಳ್ಳ ನಾನು ಗ್ರಾಮ್ಯ ಪಶುವಿನಂತೆ ಅಜ್ಞಾನದ ಘೋರವಾದ ಅಂಧಕಾರದಲ್ಲಿ ಮುಳುಗಿರುವವನು. ತಾವು ನನಗೆ ಜ್ಞಾನಜ್ಯೋತಿಯನ್ನು ತೋರಿ ಪ್ರಕಾಶದ ಕೇಂದ್ರಕ್ಕೆ ಕೊಂಡೊಯ್ಯಿರಿ. ॥ ೧೬ ॥

ಅಂಗಿರಸ ಮಹರ್ಷಿಗಳು ಹೇಳಿದರು – ರಾಜನೇ! ನೀನು ಪುತ್ರಕಾಮನಾಗಿದ್ದಾಗ ನಿನಗೆ ಪುತ್ರನನ್ನು ಕರುಣಿಸಿದ ಅಂಗಿರಸ ಮಹರ್ಷಿಯೇ ನಾನು. ಕಣ್ಣೆದುರಿಗೆ ಕಾಣುತ್ತಿರುವ ಇವರು ಬ್ರಹ್ಮದೇವರ ಪುತ್ರರಾದ ಭಗವಾನ್ ನಾರದ ಮಹರ್ಷಿಗಳು. ॥ ೧೭ ॥ ನೀನು ಪುತ್ರಶೋಕದಿಂದ ಗಾಢವಾದ ಅಜ್ಞಾನಾಂಧಕಾರದಲ್ಲಿ ಮುಳುಗಿದ್ದುದನ್ನು ನಾವು ನೋಡಿ – ನೀನು ಭಗವಂತನ ಭಕ್ತನಾಗಿದ್ದು, ಶೋಕಿಸುವುದು ಉಚಿತವಲ್ಲ ಎಂದು ಯೋಚಿಸಿ ನಿನಗೆ ಅನುಗ್ರಹವನ್ನು ತೋರಲೆಂದೇ ನಾವಿಬ್ಬರೂ ಇಲ್ಲಿಗೆ ಬಂದಿರುವೆವು. ರಾಜನೇ! ಶ್ರೀಭಗವಂತನಲ್ಲಿಯೂ, ಬ್ರಾಹ್ಮಣರಲ್ಲಿಯೂ ಭಕ್ತಿಯುಳ್ಳವನು ನಿಜವಾಗಿಯೂ ಯಾವುದೇ ಸ್ಥಿತಿಯಲ್ಲಿಯೂ ಶೋಕಪಡಬಾರದು. ॥ ೧೮-೧೯ ॥ ನಿನ್ನ ಮನೆಗೆ ನಾನು ಮೊದಲು ಬಂದಿದ್ದಾಗಲೇ ನಿನಗೆ ಪರಮಜ್ಞಾನವನ್ನು ಉಪದೇಶಮಾಡಬಹುದಾಗಿತ್ತು. ಆದರೆ ಇನ್ನೂ ನಿನ್ನ ಹೃದಯದಲ್ಲಿ ಪುತ್ರನ ಕುರಿತು ಉತ್ಕಟವಾದ ಅಭಿಲಾಷೆಯು ತುಂಬಿದೆ ಎಂಬುದನ್ನು ಗಮನಿಸಿ, ನಾನು ನಿನಗೆ ಆಗ ಜ್ಞಾನವನ್ನು ಕೊಡದೆ ಪುತ್ರನನ್ನೇ ಕೊಟ್ಟೆನು. ॥ ೨೦ ॥ ಪುತ್ರವಂತರಿಗೆ ಎಷ್ಟು ದುಃಖವುಂಟಾಗುತ್ತದೆ? ಎಂಬುದು ಈಗ ನಿನಗೆ ಸ್ವತಃ ಅನುಭವಕ್ಕೆ ಬಂದಿದೆ. ಹೆಂಡತಿ, ಮನೆ, ಮಠ, ಹಣ, ಬಗೆ-ಬಗೆಯ ಅಧಿಕಾರ, ಐಶ್ವರ್ಯಗಳು, ಸಂಪತ್ತುಗಳು, ಶಬ್ದ-ರೂಪ-ರಸ ಮುಂತಾದ ವಿಷಯಗಳು, ರಾಜ್ಯವೈಭವ, ಭೂಮಿ, ರಾಜ್ಯ, ಸೈನ್ಯ, ಭಂಡಾರ, ಸೇವಕರು, ಅಮಾತ್ಯರು, ನೆಂಟರು, ಇಷ್ಟರು – ಇವೆಲ್ಲಕ್ಕೂ ಇದೇ ಮಾತು ಅನ್ವಯಿಸುತ್ತದೆ. ಏಕೆಂದರೆ ಇವೆಲ್ಲವೂ ಅನಿತ್ಯವೇ ಆಗಿವೆ. ॥ ೨೧-೨೨ ॥

ಸರ್ವೇಽಪಿ ಶೂರಸೇನೇಮೇ ಶೋಕಮೋಹಭಯಾರ್ತಿದಾಃ ।
ಗಂಧರ್ವನಗರಪ್ರಖ್ಯಾಃ ಸ್ವಪ್ನಮಾಯಾಮನೋರಥಾಃ ॥ ೨೩ ॥

ದೃಶ್ಯಮಾನಾ ವಿನಾರ್ಥೇನ ನ ದೃಶ್ಯಂತೇ ಮನೋಭವಾಃ ।
ಕರ್ಮಭಿರ್ಧ್ಯಾಯತೋ ನಾನಾಕರ್ಮಾಣಿ ಮನಸೋಽಭವನ್ ॥ ೨೪ ॥

ಅಯಂ ಹಿ ದೇಹಿನೋ ದೇಹೋ ದ್ರವ್ಯಜ್ಞಾನಕ್ರಿಯಾತ್ಮಕಃ ।
ದೇಹಿನೋ ವಿವಿಧಕ್ಲೇಶಸಂತಾಪಕೃದುದಾಹೃತಃ ॥ ೨೫ ॥

ತಸ್ಮಾತ್ಸ್ವಸ್ಥೇನ ಮನಸಾ ವಿಮೃಶ್ಯ ಗತಿಮಾತ್ಮನಃ ।
ದ್ವೈತೇ ಧ್ರುವಾರ್ಥವಿಶ್ರಂಭಂ ತ್ಯಜೋಪಶಮಮಾವಿಶ ॥ ೨೬ ॥

ನಾರದ ಉವಾಚ

ಏತಾಂ ಮಂತ್ರೋಪನಿಷದಂ ಪ್ರತೀಚ್ಛ ಪ್ರಯತೋ ಮಮ ।
ಯಾಂ ಧಾರಯನ್ಸಪ್ತರಾತ್ರಾದ್ದ್ರಷ್ಟಾ ಸಂಕರ್ಷಣಂ ಪ್ರಭುಮ್ ॥ ೨೭ ॥

ಯತ್ಪಾದಮೂಲಮುಪಸೃತ್ಯ ನರೇಂದ್ರ ಪೂರ್ವೇ
ಶರ್ವಾದಯೋ ಭ್ರಮಮಿಮಂ ದ್ವಿತಯಂ ವಿಸೃಜ್ಯ ।
ಸದ್ಯಸ್ತದೀಯಮತುಲಾನಧಿಕಂ ಮಹಿತ್ವಂ
ಪ್ರಾಪುರ್ಭವಾನಪಿ ಪರಂ ನಚಿರಾದುಪೈತಿ ॥ ೨೮ ॥

ಶೂರಸೇನನೇ! ಆದ್ದರಿಂದ ಇವೆಲ್ಲವೂ ಶೋಕ, ಮೋಹ, ಭಯ, ದುಃಖ ಇವುಗಳಿಗೆ ಕಾರಣವಾಗಿವೆ, ಮನೋವಿನೋದವಾಗಿವೆ, ಪೂರ್ಣವಾಗಿ ಕಲ್ಪಿತ ಮತ್ತು ಮಿಥ್ಯೆಗಳಾಗಿವೆ, ಏಕೆಂದರೆ, ಇವೆಲ್ಲವೂ ಇಲ್ಲದೆಯೇ ಕಂಡುಬರುತ್ತವೆ. ಇದರಿಂದಲೇ ಇವು ಒಂದು ಕ್ಷಣದಲ್ಲಿ ಕಾಣಿಸಿದರೂ ಮರುಕ್ಷಣದಲ್ಲೇ ಕಣ್ಮರೆಯಾಗುತ್ತವೆ. ಇವು ಗಂಧರ್ವನಗರದಂತೆ, ಸ್ವಪ್ನದಂತೆ, ಇಂದ್ರಜಾಲದಂತೆ, ಮನೋರಥದ ವಸ್ತುಗಳಂತೆ ಸರ್ವಥಾ ಅಸತ್ಯವಾಗಿವೆ. ಕರ್ಮವಾಸನೆಗಳಿಂದ ಪ್ರೇರಿತರಾಗಿ ವಿಷಯಗಳನ್ನು ಚಿಂತಿಸುತ್ತಲೇ ಇರುವ ಜನರ ಮನಸ್ಸು ಅನೇಕ ಪ್ರಕಾರದ ಕರ್ಮಗಳನ್ನು ಸೃಷ್ಟಿಸುತ್ತಾ ಇರುತ್ತದೆ. ॥ ೨೩-೨೪ ॥ ಪಂಚಭೂತ, ಜ್ಞಾನೇಂದ್ರಿಯ ಮತ್ತು ಕರ್ಮೇಂದ್ರಿಯಗಳ ಸಂಘಾತವಾದ ಜೀವಾತ್ಮನ ಈ ದೇಹವು ಜೀವಿಗೆ ಅನೇಕ ವಿಧದ ಕ್ಲೇಶಗಳನ್ನೂ, ಸಂತಾಪಗಳನ್ನೂ ಕೊಡುವಂತಹುದು ಎಂದು ಹೇಳಲಾಗಿದೆ. ॥ ೨೫ ॥ ಆದ್ದರಿಂದ ನೀನು ವಿಷಯಗಳಲ್ಲಿ ಅಲೆಯುತ್ತಿರುವ ಮನಸ್ಸನ್ನು ತಡೆದು ಶಾಂತಗೊಳಿಸು, ಸ್ವಸ್ಥಗೊಳಿಸು. ಮತ್ತೆ ಆ ಮನಸ್ಸಿನಿಂದ ನಿನ್ನ ನಿಜವಾದ ಸ್ವರೂಪದ ಕುರಿತು ವಿಚಾರಮಾಡು. ಈ ದ್ವೈತ ಭ್ರಮೆಯಲ್ಲಿರುವ ನಿತ್ಯತ್ವದ ಬುದ್ಧಿಯನ್ನು ಬಿಟ್ಟು, ಪರಮ ಶಾಂತಿಸ್ವರೂಪನಾದ ಪರಮಾತ್ಮನಲ್ಲಿ ನೆಲೆಯಾಗಿ ನಿಲ್ಲು. ॥ ೨೬ ॥

ದೇವರ್ಷಿನಾರದರು ಹೇಳಿದರು – ರಾಜೇಂದ್ರಾ! ನೀನು ಏಕಾಗ್ರಚಿತ್ತದಿಂದ ನಾನು ಉಪದೇಶಿಸುವ ಈ ಮಂತ್ರೋಪನಿಷತ್ತನ್ನು ಗ್ರಹಿಸುವವನಾಗು. ಇದನ್ನು ಜಪಿಸುವುದರಿಂದ ಏಳು ರಾತ್ರಿಗಳಲ್ಲಿ ಭಗವಾನ್ ಸಂಕರ್ಷಣನ ದರ್ಶನವಾಗುವುದು. ॥ ೨೭ ॥ ನರೇಂದ್ರನೇ! ಹಿಂದಿನ ಕಾಲದಲ್ಲಿ ಭಗವಾನ್ ಶಂಕರನೇ ಮುಂತಾದವರು ಶ್ರೀಸಂಕರ್ಷಣ ದೇವರ ಚರಣಕಮಲಗಳನ್ನೇ ಆಶ್ರಯಿಸಿದ್ದರು. ಇದರಿಂದ ಅವರು ದ್ವೈತಭ್ರಮೆಯನ್ನು ತ್ಯಾಗಗೈದು, ಅವನ ಆ ಮಹಿಮೆಯನ್ನು ಪಡೆದುಕೊಂಡರು. ಅದರಿಂದ ಮಿಗಿಲಾದುದು ಯಾವುದೂ ಇಲ್ಲ, ಅದಕ್ಕೆ ಸಮಾನವಾದುದೂ ಇಲ್ಲ. ನೀನೂ ಕೂಡ ಬಹು ಬೇಗನೇ ಭಗವಂತನ ಅದೇ ಪರಮಪದವನ್ನು ಪಡೆದುಕೊಳ್ಳುವೆ. ॥ ೨೮ ॥

ಹದಿನೈದನೆಯ ಅಧ್ಯಾಯವು ಮುಗಿಯಿತು. ॥ ೧೫ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಷಷ್ಠಸ್ಕಂಧೇ
ಚಿತ್ರಕೇತುಸಾಂತ್ವನಂ ನಾಮ ಪಂಚದಶೋಽಧ್ಯಾಯಃ ॥ ೧೫ ॥

ಹದಿನಾರನೆಯ ಅಧ್ಯಾಯ

ಚಿತ್ರಕೇತುವಿನ ವೈರಾಗ್ಯ ಮತ್ತು ಸಂಕರ್ಷಣಸ್ವಾಮಿಯ ದರ್ಶನ

ಶ್ರೀಶುಕ ಉವಾಚ

ಅಥ ದೇವಋಷೀ ರಾಜನ್ಸಂಪರೇತಂ ನೃಪಾತ್ಮಜಮ್ ।
ದರ್ಶಯಿತ್ವೇತಿ ಹೋವಾಚ ಜ್ಞಾತೀನಾಮನುಶೋಚತಾಮ್ ॥ ೧ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿದ್ರಾಜನೇ! ಅನಂತರ ದೇವರ್ಷಿ ನಾರದರು ತಮ್ಮ ಯೋಗಬಲದಿಂದ ಮೃತನಾದ ರಾಜಕುಮಾರನ ಜೀವಾತ್ಮನನ್ನು ಶೋಕಪಡುತ್ತಿದ್ದ ನೆಂಟರಿಷ್ಟರ ಮುಂದೆ ಪ್ರತ್ಯಕ್ಷನಾಗುವಂತೆ ಮಾಡಿ ಅವನಲ್ಲಿ ಕೇಳಿದರು – ॥ ೧ ॥

ನಾರದ ಉವಾಚ

ಜೀವಾತ್ಮನ್ಪಶ್ಯ ಭದ್ರಂ ತೇ ಮಾತರಂ ಪಿತರಂ ಚ ತೇ ।
ಸುಹೃದೋ ಬಾಂಧವಾಸ್ತಪ್ತಾಃ ಶುಚಾ ತ್ವತ್ಕೃತಯಾ ಭೃಶಮ್ ॥ ೨ ॥

ಕಲೇವರಂ ಸ್ವಮಾವಿಶ್ಯ ಶೇಷಮಾಯುಃ ಸುಹೃದ್ವೃತಃ ।
ಭುಂಕ್ಷ್ವ ಭೋಗಾನ್ ಪಿತೃಪ್ರತ್ತಾನಧಿತಿಷ್ಠ ನೃಪಾಸನಮ್ ॥ ೩ ॥

ಜೀವ ಉವಾಚ

ಕಸ್ಮಿನ್ಜನ್ಮನ್ಯಮೀ ಮಹ್ಯಂ ಪಿತರೋ ಮಾತರೋಽಭವನ್ ।
ಕರ್ಮಭಿರ್ಭ್ರಾಮ್ಯಮಾಣಸ್ಯ ದೇವತಿರ್ಯಙ್ನೃಯೋನಿಷು ॥ ೪ ॥

ಬಂಧುಜ್ಞಾತ್ಯರಿಮಧ್ಯಸ್ಥಮಿತ್ರೋದಾಸೀನವಿದ್ವಿಷಃ ।
ಸರ್ವ ಏವ ಹಿ ಸರ್ವೇಷಾಂ ಭವಂತಿ ಕ್ರಮಶೋ ಮಿಥಃ ॥ ೫ ॥

ಯಥಾ ವಸ್ತೂನಿ ಪಣ್ಯಾನಿ ಹೇಮಾದೀನಿ ತತಸ್ತತಃ ।
ಪರ್ಯಟಂತಿ ನರೇಷ್ವೇವಂ ಜೀವೋ ಯೋನಿಷು ಕರ್ತೃಷು ॥ ೬ ॥

ನಿತ್ಯಸ್ಯಾರ್ಥಸ್ಯ ಸಂಬಂಧೋ ಹ್ಯನಿತ್ಯೋ ದೃಶ್ಯತೇ ನೃಷು ।
ಯಾವದ್ಯಸ್ಯ ಹಿ ಸಂಬಂಧೋ ಮಮತ್ವಂ ತಾವದೇವ ಹಿ ॥ ೭ ॥

ಏವಂ ಯೋನಿಗತೋ ಜೀವಃ ಸ ನಿತ್ಯೋ ನಿರಹಂಕೃತಃ ।
ಯಾವದ್ಯತ್ರೋಪಲಭ್ಯೇತ ತಾವತ್ಸ್ವತ್ವಂ ಹಿ ತಸ್ಯ ತತ್ ॥ ೮ ॥

ಏಷ ನಿತ್ಯೋಽವ್ಯಯಃ ಸೂಕ್ಷ್ಮ ಏಷ ಸರ್ವಾಶ್ರಯಃ ಸ್ವದೃಕ್ ।
ಆತ್ಮಮಾಯಾಗುಣೈರ್ವಿಶ್ವಮಾತ್ಮಾನಂ ಸೃಜತಿ ಪ್ರಭುಃ ॥ ೯ ॥

ನ ಹ್ಯಸ್ಯಾತಿಪ್ರಿಯಃ ಕಶ್ಚಿನ್ನಾಪ್ರಿಯಃ ಸ್ವಃ ಪರೋಽಪಿ ವಾ ।
ಏಕಃ ಸರ್ವಧಿಯಾಂ ದ್ರಷ್ಟಾ ಕರ್ತೄಣಾಂ ಗುಣದೋಷಯೋಃ ॥ ೧೦ ॥

ನಾದತ್ತ ಆತ್ಮಾ ಹಿ ಗುಣಂ ನ ದೋಷಂ ನ ಕ್ರಿಯಾಫಲಮ್ ।
ಉದಾಸೀನವದಾಸೀನಃ ಪರಾವರದೃಗೀಶ್ವರಃ ॥ ೧೧ ॥

ಶ್ರೀಶುಕ ಉವಾಚ

ಇತ್ಯುದೀರ್ಯ ಗತೋ ಜೀವೋ ಜ್ಞಾತಯಸ್ತಸ್ಯ ತೇ ತದಾ ।
ವಿಸ್ಮಿತಾ ಮುಮುಚುಃ ಶೋಕಂ ಛಿತ್ತ್ವಾಽಽತ್ಮಸ್ನೇಹಶೃಂಖಲಾಮ್ ॥ ೧೨ ॥

ದೇವಋಷಿ ನಾರದರು ಹೇಳಿದರು – ಎಲೈ ಜೀವಾತ್ಮನೇ! ನಿನಗೆ ಮಂಗಳವಾಗಲಿ. ಇಲ್ಲಿ ನೋಡು. ನಿನ್ನ ತಂದೆ-ತಾಯಿ, ಬಂಧು-ಮಿತ್ರರು ನಿನ್ನ ಅಗಲಿಕೆಯಿಂದ ಅತ್ಯಂತ ಶೋಕತಪ್ತರಾಗಿದ್ದಾರೆ. ॥ ೨ ॥ ಆದ್ದರಿಂದ ನೀನು ನಿನ್ನ ಶರೀರದೊಳಗೆ ಪ್ರವೇಶಿಸಿ ಉಳಿದ ಆಯುಸ್ಸನ್ನು ನಿನ್ನ ನೆಂಟರಿಷ್ಟರ ಜೊತೆಯಲ್ಲಿ ಇದ್ದು ಕಳೆಯುವವನಾಗು. ನಿನ್ನ ತಂದೆಯು ಕೊಡುವ ಭೋಗಗಳನ್ನು ಅನುಭವಿಸುತ್ತಾ, ರಾಜ್ಯಸಿಂಹಾಸನದ ಮೇಲೆ ಕುಳಿತುಕೋ. ॥ ೩ ॥

ಜೀವಾತ್ಮನು ಹೇಳಿದನು – ದೇವರ್ಷಿಗಳೇ! ನಾನು ನನ್ನ ಕರ್ಮಾನುಸಾರವಾಗಿ ದೇವತೆಗಳು, ಮನುಷ್ಯರು, ಪಶು-ಪಕ್ಷಿ ಮುಂತಾದ ಯೋನಿಗಳಲ್ಲಿ ಎಷ್ಟು ಜನ್ಮಗಳಿಂದ ಅಲೆಯುತ್ತಿರುವೆನೋ ತಿಳಿಯದು. ಅವುಗಳಲ್ಲಿ ಯಾವ-ಯಾವ ಜನ್ಮಗಳಲ್ಲಿ ಇವರು ತಂದೆ-ತಾಯಿಗಳಾಗಿದ್ದರು? ॥ ೪ ॥ ಬೇರೆ-ಬೇರೆ ಜನ್ಮಗಳಲ್ಲಿ ಎಲ್ಲರೂ ಒಬ್ಬರಿಗೊಬ್ಬರು ನೆಂಟರಿಷ್ಟರೋ, ಶತ್ರು-ಮಿತ್ರರೋ, ಮಧ್ಯಸ್ಥರೋ, ಉದಾಸೀನರೋ, ದ್ವೇಷಿಗಳೋ, ಆಗುತ್ತಾ ಇರುತ್ತಾರೆ. ॥ ೫ ॥ ಚಿನ್ನವೇ ಮುಂತಾದ ಕ್ರಯ-ವಿಕ್ರಯದ ವಸ್ತುಗಳು ಒಬ್ಬ ವ್ಯಾಪಾರಿಯಿಂದ ಮತ್ತೊಬ್ಬನ ಬಳಿಗೆ ಹೋಗುತ್ತಾ-ಬರುತ್ತಾ ಇರುವಂತೆಯೇ ಜೀವಿಯೂ ಬೇರೆ-ಬೇರೆ ಯೋನಿಗಳಲ್ಲಿ ಹೋಗುತ್ತಾ-ಬರುತ್ತಾ ಇರುತ್ತಾನೆ. ॥ ೬ ॥ ಹೀಗೆ ವಿಚಾರ ಮಾಡಿದರೆ ಮನುಷ್ಯರಿಂದ ಹೆಚ್ಚುದಿನ ಬಾಳುವಂತಹ ಚಿನ್ನವೇ ಮುಂತಾದ ಪದಾರ್ಥಗಳ ಸಂಬಂಧವೂ ಕೂಡ ಮನುಷ್ಯರೊಂದಿಗೆ ಸ್ಥಾಯಿಯಾಗಿಲ್ಲ, ಕ್ಷಣಿಕವೇ ಇರುತ್ತದೆ. ವಸ್ತುವಿನ ಸಂಬಂಧ ಇರುವತನಕ ಮನುಷ್ಯನಿಗೆ ಆ ವಸ್ತುವಿನಲ್ಲಿ ಮಮತೆಯೇ ಇರುತ್ತದೆ. ॥ ೭ ॥ ಜೀವನು ನಿತ್ಯನೂ, ಅಹಂಕಾರರಹಿತನೂ ಆಗಿರುವನು. ಅವನು ಗರ್ಭವನ್ನು ಪ್ರವೇಶಿಸಿ ಆ ಶರೀರದಲ್ಲಿ ಇರುವ ತನಕ ಆ ಶರೀರವನ್ನು ತನ್ನದೆಂದು ತಿಳಿಯುತ್ತಾನೆ. ॥ ೮ ॥ ಈ ಜೀವನು ನಿತ್ಯನೂ ಅವಿನಾಶಿಯೂ, ಸೂಕ್ಷ್ಮನೂ, ಜನ್ಮಾದಿರಹಿತನೂ, ಎಲ್ಲರ ಆಶ್ರಯನೂ, ಸ್ವಯಂ ಪ್ರಕಾಶನೂ ಆಗಿರುವನು. ಅವನಿಗೆ ಸ್ವರೂಪದಿಂದ ಹುಟ್ಟು-ಸಾವುಗಳಾವುವೂ ಇಲ್ಲ. ಹೀಗಿದ್ದರೂ ಇವನು ಈಶ್ವರರೂಪನೇ ಇರುವುದರಿಂದ ತನ್ನ ಮಾಯೆಯ ಗುಣಗಳಿಂದಲೇ ತಾನೇ-ತನ್ನನ್ನು ವಿಶ್ವದರೂಪದಲ್ಲಿ ಪ್ರಕಟಿಸಿಕೊಳ್ಳುವನು. ॥ ೯ ॥ ಇವನಿಗೆ ಅತ್ಯಂತ ಪ್ರಿಯರಾಗಲೀ, ಅಪ್ರಿಯರಾಗಲೀ ಯಾರೂ ಇಲ್ಲ. ತನ್ನವರು-ಇತರರು ಎಂಬುದೂ ಇಲ್ಲ. ಏಕೆಂದರೆ, ಗುಣ-ದೋಷ (ಹಿತ-ಅಹಿತ)ಗಳನ್ನುಂಟು ಮಾಡುವ ಶತ್ರುತ್ವ-ಮಿತ್ರತ್ವ ಮುಂತಾದ ಬೇರೆ-ಬೇರೆ ಬುದ್ಧಿಗಳ ವೃತ್ತಿಗಳಿಗೆ ಇವನೊಬ್ಬನೇ ಸಾಕ್ಷಿಯಾಗಿದ್ದು ನಿಜವಾಗಿ ಇವನು ಅದ್ವಿತೀಯನಾಗಿದ್ದಾನೆ. ॥ ೧೦ ॥ ಈ ಆತ್ಮನು ಕಾರ್ಯ-ಕಾರಣಗಳ ಸಾಕ್ಷಿ ಮತ್ತು ಸ್ವತಂತ್ರನಾಗಿದ್ದಾನೆ. ಆದ್ದರಿಂದ ಇವನು ಶರೀರಾದಿಗಳ ಗುಣ-ದೋಷಗಳನ್ನು ಅಥವಾ ಕರ್ಮಫಲವನ್ನು ಸ್ವೀಕರಿಸುವುದಿಲ್ಲ, ಸದಾ ಉದಾಸೀನ ಭಾವದಿಂದಲೇ ಇರುತ್ತಾನೆ. ॥ ೧೧ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಹೀಗೆ ಹೇಳಿ ಆ ಜೀವಾತ್ಮನು ಹೊರಟುಹೋದನು. ಅವನ ಮಾತನ್ನು ಕೇಳಿ ನೆಂಟರಿಷ್ಟರು ಅತ್ಯಂತ ವಿಸ್ಮಿತರಾದರು. ಅವರ ಸ್ನೇಹ-ಬಂಧನ

ನಿರ್ಹೃತ್ಯ ಜ್ಞಾತಯೋ ಜ್ಞಾತೇರ್ದೇಹಂ ಕೃತ್ವೋಚಿತಾಃ ಕ್ರಿಯಾಃ ।
ತತ್ಯಜುರ್ದುಸ್ತ್ಯಜಂ ಸ್ನೇಹಂ ಶೋಕಮೋಹಭಯಾರ್ತಿದಮ್ ॥ ೧೩ ॥

ಬಾಲಘ್ನ್ಯೋ ವ್ರೀಡಿತಾಸ್ತತ್ರ ಬಾಲಹತ್ಯಾಹತಪ್ರಭಾಃ ।
ಬಾಲಹತ್ಯಾವ್ರತಂ ಚೇರುರ್ಬ್ರಾಹ್ಮಣೈರ್ಯನ್ನಿರೂಪಿತಮ್ ।
ಯಮುನಾಯಾಂ ಮಹಾರಾಜ ಸ್ಮರಂತ್ಯೋ ದ್ವಿಜಭಾಷಿತಮ್ ॥ ೧೪ ॥

ಸ ಇತ್ಥಂ ಪ್ರತಿಬುದ್ಧಾತ್ಮಾ ಚಿತ್ರಕೇತುರ್ದ್ವಿಜೋಕ್ತಿಭಿಃ ।
ಗೃಹಾಂಧ ಕೂಪಾನ್ನಿಷ್ಕ್ರಾಂತಃ ಸರಃಪಂಕಾದಿವ ದ್ವಿಪಃ ॥ ೧೫ ॥

ಕಾಲಿಂದ್ಯಾಂ ವಿಧಿವತ್ಸ್ನಾತ್ವಾ ಕೃತಪುಣ್ಯಜಲಕ್ರಿಯಃ ।
ಮೌನೇನ ಸಂಯತಪ್ರಾಣೋ ಬ್ರಹ್ಮಪುತ್ರಾವವಂದತ ॥ ೧೬ ॥

ಅಥ ತಸ್ಮೈ ಪ್ರಪನ್ನಾಯ ಭಕ್ತಾಯ ಪ್ರಯತಾತ್ಮನೇ ।
ಭಗವಾನ್ನಾರದಃ ಪ್ರೀತೋ ವಿದ್ಯಾಮೇತಾಮುವಾಚ ಹ ॥ ೧೭ ॥

ಓಂ ನಮಸ್ತುಭ್ಯಂ ಭಗವತೇ ವಾಸುದೇವಾಯ ಧೀಮಹಿ ।
ಪ್ರದ್ಯುಮ್ನಾಯಾನಿರುದ್ಧಾಯ ನಮಃ ಸಂಕರ್ಷಣಾಯ ಚ ॥ ೧೮ ॥

ನಮೋ ವಿಜ್ಞಾನಮಾತ್ರಾಯ ಪರಮಾನಂದಮೂರ್ತಯೇ ।
ಆತ್ಮಾರಾಮಾಯ ಶಾಂತಾಯ ನಿವೃತ್ತದ್ವೈತದೃಷ್ಟಯೇ ॥ ೧೯ ॥

ಆತ್ಮಾನಂದಾನುಭೂತ್ಯೈವ ನ್ಯಸ್ತಶಕ್ತ್ಯೂರ್ಮಯೇ ನಮಃ ।
ಹೃಷೀಕೇಶಾಯ ಮಹತೇ ನಮಸ್ತೇ ವಿಶ್ವಮೂರ್ತಯೇ ॥ ೨೦ ॥

ವಚಸ್ಯುಪರತೇಽಪ್ರಾಪ್ಯ ಯ ಏಕೋ ಮನಸಾ ಸಹ ।
ಅನಾಮರೂಪಶ್ಚಿನ್ಮಾತ್ರಃ ಸೋಽವ್ಯಾನ್ನಃ ಸದಸತ್ಪರಃ ॥ ೨೧ ॥

ಕಳೆದುಹೋಯಿತು ಮತ್ತು ಅವನು ಸತ್ತಿರುವ ದುಃಖವೂ ದೂರವಾಯಿತು. ॥ ೧೨ ॥ ಇದಾದ ಬಳಿಕ ಜ್ಞಾತಿ ಬಂಧುಗಳು ಬಾಲಕನ ಶವವನ್ನು ಎತ್ತಿಕೊಂಡು ಹೋಗಿ ಅದಕ್ಕೆ ಕಾಲೋಚಿತ ಸಂಸ್ಕಾರಗಳನ್ನೂ ಮರಣಾನಂತರದ ಕ್ರಿಯೆಗಳನ್ನು ಮಾಡಿ ಮುಗಿಸಿದರು. ಶೋಕ, ಮೋಹ, ಭಯ, ದುಃಖಗಳಿಗೆ ಕಾರಣವಾಗುವ ಸ್ನೇಹ-ಮಮತೆಗಳನ್ನೂ ತೊರೆದರು. ॥ ೧೩ ॥ ಪರೀಕ್ಷಿತನೇ! ಮಗುವಿಗೆ ವಿಷವನ್ನಿಟ್ಟು ಸಾವಿಗೆ ಕಾರಣರಾದ ರಾಣಿಯರ ಮುಖವು ಬಾಲಹತ್ಯೆಯಿಂದ ಕಾಂತಿಹೀನವಾಗಿತ್ತು ಮತ್ತು ನಾಚಿಕೆಯಿಂದ ಕಣ್ಣೆತ್ತಿಯೂ ನೋಡದಾದರು. ಅವರು ಅಂಗಿರಾ ಋಷಿಯ ಉಪದೇಶವನ್ನು ನೆನೆದು ಮಾತ್ಸರ್ಯರಹಿತರಾಗಿ ಯಮುನಾತೀರದಲ್ಲಿ ಬ್ರಾಹ್ಮಣರ ಆದೇಶದಂತೆ ಪ್ರಾಯಶ್ಚಿತ್ತವನ್ನು ಮಾಡಿಕೊಂಡರು. ॥ ೧೪ ॥ ಹೀಗೆ ಅಂಗಿರಸ ಮತ್ತು ನಾರದ ಮಹರ್ಷಿಗಳ ಉಪದೇಶಗಳಿಂದ ಚಿತ್ರಕೇತುವಿನ ವಿವೇಕ ಬುದ್ಧಿಯು ಎಚ್ಚರಗೊಂಡಿತು. ಇದರಿಂದ ಅವನು – ಸಲಗವು ಕೆರೆಯ ಕೆಸರಿನಿಂದ ಮೇಲೆದ್ದು ಬರುವಂತೆ – ಮನೆ- ವಾರ್ತೆಗಳ ಕಗ್ಗತ್ತಲೆಯ ಕೂಪದಿಂದ ಹೊರಬಂದನು. ॥ ೧೫ ॥ ಅವನು ಯಮುನಾನದಿಯಲ್ಲಿ ವಿಧಿವತ್ತಾಗಿ ಸ್ನಾನಮಾಡಿ, ತರ್ಪಣಾದಿ ಧಾರ್ಮಿಕ ಕ್ರಿಯೆಗಳನ್ನು ಪೂರೈಸಿದನು. ಅನಂತರ ಇಂದ್ರಿಯ ಸಂಯಮದಿಂದ ಕೂಡಿ, ಮೌನವಾಗಿ ಅವನು ದೇವರ್ಷಿನಾರದರ ಹಾಗೂ ಮಹರ್ಷಿ ಅಂಗಿರಸರ ಚರಣಗಳಲ್ಲಿ ವಂದಿಸಿಕೊಂಡನು. ॥ ೧೬ ॥ ಚಿತ್ರಕೇತುವು ಜಿತೇಂದ್ರಿಯನೂ, ಭಗವದ್ಭಕ್ತನೂ, ಶರಣಾಗತನೂ ಆಗಿದ್ದಾನೆಂದು ನಾರದರು ನೋಡಿ, ಅವರು ತುಂಬಾ ಪ್ರಸನ್ನರಾಗಿ ಅವನಿಗೆ ಈ ಸಂಕರ್ಷಣ ವಿದ್ಯೆಯನ್ನು ಉಪದೇಶಮಾಡಿದರು. ॥ ೧೭ ॥

ಓಂಕಾರಸ್ವರೂಪನಾದ ಭಗವಂತಾ! ನೀನು ವಾಸುದೇವ, ಪ್ರದ್ಯುಮ್ನ, ಅನಿರುದ್ಧ, ಸಂಕರ್ಷಣ – ಈ ರೂಪಗಳಿಂದ ಕ್ರಮವಾಗಿ ಚಿತ್ತ, ಬುದ್ಧಿ, ಮನಸ್ಸು ಮತ್ತು ಅಹಂಕಾರಗಳಿಗೆ ಅಧಿಷ್ಠಾನನಾಗಿರುವೆ. ನಾನು ನಿನ್ನ ಈ ಚತುರ್ವ್ಯೂಹರೂಪವನ್ನು ಮತ್ತೆ-ಮತ್ತೆ ನಮಸ್ಕಾರಪೂರ್ವಕವಾಗಿ ಧ್ಯಾನಿಸುತ್ತೇನೆ. ॥ ೧೮ ॥ ನೀನು ವಿಶುದ್ಧ ವಿಜ್ಞಾನಸ್ವರೂಪನಾಗಿರುವೆ. ನಿನ್ನ ಮೂರ್ತಿಯು ಪರಮಾನಂದಮಯವಾಗಿದೆ. ನೀನು ನಿನ್ನ ಸ್ವರೂಪಭೂತ ಆನಂದದಲ್ಲೇ ಮಗ್ನನಾಗಿದ್ದು ಪರಮಶಾಂತನಾಗಿರುವೆ. ದ್ವೈತದೃಷ್ಟಿಯು ನಿನ್ನನ್ನು ಸ್ಪರ್ಶಿಸಲಾರದು. ಅಂತಹ ನಿನಗೆ ನಾನು ನಮಸ್ಕರಿಸುತ್ತೇನೆ. ॥ ೧೯ ॥ ಸ್ವರೂಪಭೂತವಾದ ಆನಂದದ ಅನುಭವದಿಂದಲೇ ಮಾಯೆಯಿಂದುಂಟಾದ ರಾಗ-ದ್ವೇಷಾದಿ ದೋಷಗಳನ್ನು ತಿರಸ್ಕರಿಸಿದವನಿಗೆ ನಮಸ್ಕಾರವು. ಇಂದ್ರಿಯಗಳಿಗೆ ಅಧಿಪತಿಯೂ, ಮಹತ್ಸ್ವರೂಪನೂ, ವಿಶ್ವಮೂರ್ತಿಯೂ ಆಗಿರುವ ನಿನಗೆ ನಮಸ್ಕಾರವು. ॥ ೨೦ ॥ ಮನಸ್ಸಹಿತ ವಾಣಿಯು ನಿನ್ನವರೆಗೆ ತಲುಪದೆ ಅದು ಮರಳುತ್ತದೆ. ಅದು ಉಪರತವಾದಾಗ ಉಳಿಯುವ ಅದ್ವಿತೀಯವೂ, ನಾಮ-ರೂಪರಹಿತವೂ, ಚೇತನಮಾತ್ರವೂ, ಕಾರ್ಯಕಾರಣಗಳಿಂದ ಅತೀತವೂ ಆದ ಪರತತ್ತ್ವವಾದ ಪರಮಾತ್ಮನು ನಮ್ಮನ್ನು ರಕ್ಷಿಸಲಿ. ॥ ೨೧ ॥

ಯಸ್ಮಿನ್ನಿದಂ ಯತಶ್ಚೇದಂ ತಿಷ್ಠತ್ಯಪ್ಯೇತಿ ಜಾಯತೇ ।
ಮೃಣ್ಮಯೇಷ್ವಿವ ಮೃಜ್ಜಾತಿಸ್ತಸ್ಮೈ ತೇ ಬ್ರಹ್ಮಣೇ ನಮಃ ॥ ೨೨ ॥

ಯನ್ನ ಸ್ಪೃಶಂತಿ ನ ವಿದುರ್ಮನೋಬುದ್ಧೀಂದ್ರಿಯಾಸವಃ ।
ಅಂತರ್ಬಹಿಶ್ಚ ವಿತತಂ ವ್ಯೋಮವತ್ತನ್ನತೋಽಸ್ಮ್ಯಹಮ್ ॥ ೨೩ ॥

ದೇಹೇಂದ್ರಿಯಪ್ರಾಣಮನೋಧಿಯೋಽಮೀ
ಯದಂಶವಿದ್ಧಾಃ ಪ್ರಚರಂತಿ ಕರ್ಮಸು ।
ನೈವಾನ್ಯದಾ ಲೌಹಮಿವಾಪ್ರತಪ್ತಂ
ಸ್ಥಾನೇಷು ತದ್ದ್ರಷ್ಟ್ರಪದೇಶಮೇತಿ ॥ ೨೪ ॥

ಓಂ ನಮೋ ಭಗವತೇ ಮಹಾಪುರುಷಾಯ ಮಹಾನುಭಾವಾಯ ಮಹಾವಿಭೂತಿಪತಯೇ ಸಕಲಸಾತ್ವತಪರಿವೃಢನಿಕರಕರಕಮಲಕುಡ್ಮಲೋಪಲಾಲಿತಚರಣಾರವಿಂದಯುಗಲ ಪರಮಪರಮೇಷ್ಠಿನ್ನಮಸ್ತೇ ॥ ೨೫ ॥

ಶ್ರೀಶುಕ ಉವಾಚ

ಭಕ್ತಾಯೈತಾಂ ಪ್ರಪನ್ನಾಯ ವಿದ್ಯಾಮಾದಿಶ್ಯ ನಾರದಃ ।
ಯಯಾವಂಗಿರಸಾ ಸಾಕಂ ಧಾಮ ಸ್ವಾಯಂಭುವಂ ಪ್ರಭೋ ॥ ೨೬ ॥

ಚಿತ್ರಕೇತುಸ್ತು ವಿದ್ಯಾಂ ತಾಂ ಯಥಾ ನಾರದಭಾಷಿತಾಮ್ ।
ಧಾರಯಾಮಾಸ ಸಪ್ತಾಹಮಬ್ಭಕ್ಷಃ ಸುಸಮಾಹಿತಃ ॥ ೨೭ ॥

ತತಶ್ಚ ಸಪ್ತರಾತ್ರಾಂತೇ ವಿದ್ಯಯಾ ಧಾರ್ಯಮಾಣಯಾ ।
ವಿದ್ಯಾಧರಾಧಿಪತ್ಯಂ ಸ ಲೇಭೇಽಪ್ರತಿಹತಂ ನೃಪಃ ॥ ೨೮ ॥

ತತಃ ಕತಿಪಯಾಹೋಭಿರ್ವಿದ್ಯಯೇದ್ಧಮನೋಗತಿಃ ।
ಜಗಾಮ ದೇವದೇವಸ್ಯ ಶೇಷಸ್ಯ ಚರಣಾಂತಿಕಮ್ ॥ ೨೯ ॥

ಮೃಣಾಲಗೌರಂ ಶಿತಿವಾಸಸಂ ಸ್ಫುರತ್
ಕಿರೀಟಕೇಯೂರಕಟಿತ್ರಕಂಕಣಮ್ ।
ಪ್ರಸನ್ನವಕ್ತ್ರಾರುಣಲೋಚನಂ ವೃತಂ
ದದರ್ಶ ಸಿದ್ಧೇಶ್ವರಮಂಡಲೈಃ ಪ್ರಭುಮ್ ॥ ೩೦ ॥

ಈ ಕಾರ್ಯಕಾರಣರೂಪವಾದ ಜಗತ್ತು ಯಾವನಿಂದ ಉತ್ಪನ್ನವಾಗುತ್ತದೋ, ಯಾವನಲ್ಲಿ ನೆಲೆಸುತ್ತದೋ, ಯಾವನಲ್ಲಿ ಲೀನವಾಗುತ್ತದೋ ಹಾಗೂ ಮಣ್ಣಿನ ವಸ್ತುಗಳಲ್ಲಿ ವ್ಯಾಪ್ತವಾದ ಮಣ್ಣಿನಂತೆ ಎಲ್ಲದರಲ್ಲಿ ಹಾಸು-ಹೊಕ್ಕಾಗಿ ವ್ಯಾಪಿಸಲ್ಪಟ್ಟಿರುವೆಯೋ ಆ ಪರಬ್ರಹ್ಮಸ್ವರೂಪವಾದ ನಿನಗೆ ನಾನು ನಮಸ್ಕರಿಸುತ್ತಿದ್ದೇನೆ. ॥ ೨೨ ॥ ನೀನು ಆಕಾಶದಂತೆ ಒಳ-ಹೊರಗೆ ಏಕರಸವಾಗಿ ವ್ಯಾಪಿಸಿಕೊಂಡಿದ್ದರೂ, ನಿನ್ನನ್ನು ಮನಸ್ಸು, ಬುದ್ಧಿ ಮತ್ತು ಜ್ಞಾನೇಂದ್ರಿಯಗಳು ತಮ್ಮ ಜ್ಞಾನಶಕ್ತಿಯಿಂದ ಅರಿಯಲಾರವು. ಪ್ರಾಣ ಹಾಗೂ ಕರ್ಮೇಂದ್ರಿಯಗಳು ತಮ್ಮ ಕ್ರಿಯಾರೂಪವಾದ ಶಕ್ತಿಯಿಂದ ನಿನ್ನನ್ನು ಸ್ಪರ್ಶಿಸಲಾರವು. ಅಂತಹ ನಿನಗೆ ನಾನು ನಮಸ್ಕರಿಸುತ್ತೇನೆ. ॥ ೨೩ ॥ ಶರೀರ, ಇಂದ್ರಿಯಗಳು, ಪ್ರಾಣಗಳು, ಮನಸ್ಸು, ಬುದ್ಧಿ ಇವುಗಳು ಜಾಗ್ರತ್ ಹಾಗೂ ಸ್ವಪ್ನಾವಸ್ಥೆಗಳಲ್ಲಿ ನಿನ್ನ ಚೈತನ್ಯಾಂಶವನ್ನು ಕೂಡಿಕೊಂಡೇ ತಮ್ಮ-ತಮ್ಮ ಕೆಲಸಗಳನ್ನು ಮಾಡುತ್ತವೆ. ಸುಷುಪ್ತಿ ಮತ್ತು ಮೂರ್ಛೆಯ ಅವಸ್ಥೆಗಳಲ್ಲಿ ನಿನ್ನ ಚೈತನ್ಯಾಂಶದಿಂದ ಕೂಡದೇ ಇರುವುದರಿಂದ ತಮ್ಮ-ತಮ್ಮ ಕೆಲಸಗಳನ್ನು ಮಾಡಲು ಅಸಮರ್ಥವಾಗುತ್ತವೆ. ಹಾಗೆಯೇ ಕಬ್ಬಿಣವು ಬೆಂಕಿಯಲ್ಲಿ ಕಾದಾಗ ಸುಡಬಲ್ಲದು, ಇಲ್ಲದಿದ್ದರೆ ಇಲ್ಲ. ಯಾವುದನ್ನು ದ್ರಷ್ಟಾ ಎಂದು ಹೇಳುವರೋ ಅದೂ ನೀನೇ ಆಗಿರುವೆ. ಜಾಗ್ರತ್ ಮುಂತಾದ ಅವಸ್ಥೆಗಳಲ್ಲಿ ನೀನು ಅದನ್ನು ಸ್ವೀಕರಿಸುತ್ತೀಯೆ. ನಿಜವಾಗಿ ನಿನ್ನಿಂದ ಹೊರತು ಅವುಗಳಿಗೆ ಯಾವುದೇ ಅಸ್ತಿತ್ವವೂ ಇಲ್ಲ. ॥ ೨೪ ॥ ಓಂಕಾರಸ್ವರೂಪಿಯೂ, ಮಹಾಪುರುಷನೂ, ಮಹಾನುಭಾವನೂ, ಮಹಾವಿಭೂತಿಯುಳ್ಳವನೂ ಆದ ಭಗವಾನ್ ಸಂಕರ್ಷಣದೇವನಿಗೆ ನಮಸ್ಕಾರವು. ಶ್ರೇಷ್ಠತಮರಾದ ಎಲ್ಲ ಭಕ್ತರ ಸಮೂಹಗಳೂ ಮೊಗ್ಗಿನಂತೆ ಜೋಡಿಸಿದ ತಮ್ಮ ಕರಕಮಲಗಳಿಂದ ನಿನ್ನ ಸೇವೆ ಮಾಡುವುದರಲ್ಲಿ ಆಸಕ್ತವಾಗಿವೆ. ನೀನೇ ಸರ್ವಶ್ರೇಷ್ಠನು. ಓ ಮಹಾಪ್ರಭುವೇ ನಿನಗೆ ಮತ್ತೆ-ಮತ್ತೆ ನಮಸ್ಕಾರಗಳು. ॥ ೨೫ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ! ದೇವರ್ಷಿ ನಾರದರು ತಮ್ಮಲ್ಲಿ ಶರಣಾಗತನಾಗಿದ್ದ ಭಕ್ತನಾದ ಚಿತ್ರಕೇತುವಿಗೆ ಈ ವಿದ್ಯೆಯನ್ನು ಉಪದೇಶಿಸಿ, ಅಂಗಿರಮಹರ್ಷಿಗಳೊಡನೆ ಬ್ರಹ್ಮಲೋಕಕ್ಕೆ ತೆರಳಿದರು. ॥ ೨೬ ॥ ಚಿತ್ರಕೇತುರಾಜನು ದೇವರ್ಷಿನಾರದರು ಉಪದೇಶಮಾಡಿದ್ದ ವಿದ್ಯೆಯನ್ನು ಅವರ ಆದೇಶದಂತೆ ಏಳು ದಿವಸಗಳ ಕಾಲ ಕೇವಲ ಜಲಾಹಾರದಿಂದಿದ್ದು ಏಕಾಗ್ರತೆಯಿಂದ ಅನುಷ್ಠಾನಮಾಡಿದನು. ॥ ೨೭ ॥ ಅನಂತರ ಆ ವಿದ್ಯೆಯ ಅನುಷ್ಠಾನದಿಂದ ಏಳು ರಾತ್ರಿಯ ಬಳಿಕ ರಾಜಾಚಿತ್ರಕೇತುವಿಗೆ ವಿದ್ಯಾಧರರ ಅಖಂಡ ಆಧಿಪತ್ಯವು ಪ್ರಾಪ್ತವಾಯಿತು. ॥ ೨೮ ॥ ಮತ್ತೆ ಕೆಲವೇ ದಿನಗಳಲ್ಲಿ ಆ ವಿದ್ಯೆಯ ಪ್ರಭಾವದಿಂದ ಅವನ ಮನಸ್ಸು ಮತ್ತೂ ಶುದ್ಧವಾಯಿತು. ಈಗ ಅವನು ದೇವಾಧಿದೇವ ಭಗವಾನ್ ಆದಿಶೇಷನ ಬಳಿಗೆ ತಲುಪಿದನು. ॥ ೨೯ ॥ ಅಲ್ಲಿ ಭಗವಾನ್ ಆದಿಶೇಷನು ಸಿದ್ಧೇಶ್ವರರ ಮಧ್ಯದಲ್ಲಿ ವಿರಾಜಮಾನನಾಗಿರುವುದನ್ನು ಅವನು ನೋಡಿದನು. ಅವನ ದಿವ್ಯಮಂಗಳ ದೇಹವು ಕಮಲದ ದಂಟಿನಂತೆ ಬೆಳ್ಳಗೆ ಹೊಳೆಯುತ್ತಿತ್ತು. ಅದರ

ತದ್ದರ್ಶನಧ್ವಸ್ತಸಮಸ್ತಕಿಲ್ಬಿಷಃ
ಸ್ವಸ್ಥಾಮಲಾಂತಃಕರಣೋಽಭ್ಯಯಾನ್ಮುನಿಃ ।
ಪ್ರವೃದ್ಧಭಕ್ತ್ಯಾ ಪ್ರಣಯಾಶ್ರುಲೋಚನಃ
ಪ್ರಹೃಷ್ಟ ರೋಮಾನಮದಾದಿಪೂರುಷಮ್ ॥ ೩೧ ॥

ಸ ಉತ್ತಮಶ್ಲೋಕಪದಾಬ್ಜವಿಷ್ಟರಂ
ಪ್ರೇಮಾಶ್ರುಲೇಶೈರುಪಮೇಹಯನ್ಮುಹುಃ ।
ಪ್ರೇಮೋಪರುದ್ಧಾಖಿಲವರ್ಣನಿರ್ಗಮೋ
ನೈವಾಶಕತ್ತಂ ಪ್ರಸಮೀಡಿತುಂ ಚಿರಮ್ ॥ ೩೨ ॥

ತತಃ ಸಮಾಧಾಯ ಮನೋ ಮನೀಷಯಾ
ಬಭಾಷ ಏತತ್ಪ್ರ ತಿಲಬ್ಧವಾಗಸೌ ।
ನಿಯಮ್ಯ ಸರ್ವೇಂದ್ರಿಯಬಾಹ್ಯವರ್ತನಂ
ಜಗದ್ಗುರುಂ ಸಾತ್ವತಶಾಸ್ತ್ರ ವಿಗ್ರಹಮ್ ॥ ೩೩ ॥

ಚಿತ್ರಕೇತುರುವಾಚ

ಅಜಿತ ಜಿತಃ ಸಮಮತಿಭಿಃ
ಸಾಧುಭಿರ್ಭವಾನ್ ಜಿತಾತ್ಮಭಿರ್ಭವತಾ ।
ವಿಜಿತಾಸ್ತೇಽಪಿ ಚ ಭಜತಾ-
ಮಕಾಮಾತ್ಮನಾಂ ಯ ಆತ್ಮದೋಽತಿಕರುಣಃ ॥ ೩೪ ॥

ತವ ವಿಭವಃ ಖಲು ಭಗವನ್
ಜಗದುದಯಸ್ಥಿತಿಲಯಾದೀನಿ ।
ವಿಶ್ವಸೃಜಸ್ತೇಽಂಶಾಂಶಾ-
ಸ್ತತ್ರ ಮೃಷಾ ಸ್ಪರ್ಧಂತೇ ಪೃಥಗಭಿಮತ್ಯಾ ॥ ೩೫ ॥

ಪರಮಾಣುಪರಮಮಹತೋ-
ಸ್ತ್ವಮಾದ್ಯಂತಾಂತರವರ್ತೀ ತ್ರಯವಿಧುರಃ ।
ಆದಾವಂತೇಽಪಿ ಚ ಸತ್ತ್ವಾನಾಂ
ಯದ್ಧ್ರುವಂ ತದೇವಾಂತರಾಲೇಽಪಿ ॥ ೩೬ ॥

ಮೇಲೆ ನೀಲಿಬಣ್ಣದ ವಸ್ತ್ರಗಳು ರಾರಾಜಿಸುತ್ತಿದ್ದುವು. ತಲೆಯ ಮೇಲೆ ಕಿರೀಟ, ಬಾಹುಗಳಲ್ಲಿ ತೋಳ್ಬಂದಿಗಳೂ, ಕಟಿಯಲ್ಲಿ ಉಡಿದಾರವೂ, ಕೈಯಲ್ಲಿ ಕಂಕಣಗಳೂ ಥಳಥಳಿಸುತ್ತಿದ್ದವು. ನಸುಗೆಂಪಾದ ಕಣ್ಣುಗಳಿಂದಲೂ ಮುಖದಲ್ಲಿ ಪ್ರಸನ್ನತೆ ಶೋಭಿಸುತ್ತಿತ್ತು. ॥ ೩೦ ॥ ಭಗವಾನ್ ಆದಿಶೇಷನ ದರ್ಶನಮಾಡುತ್ತಲೇ ರಾಜರ್ಷಿ ಚಿತ್ರಕೇತುವಿನ ಎಲ್ಲ ಪಾಪಗಳೂ ನಾಶವಾದವು. ಅವನ ಅಂತಃಕರಣ ಸ್ವಚ್ಛವೂ, ನಿರ್ಮಲವೂ ಆಯಿತು. ಹೃದಯದಲ್ಲಿ ಭಕ್ತಿ ಪ್ರವಾಹವು ಉಕ್ಕಿ ಹರಿಯಿತು. ಕಣ್ಣುಗಳಲ್ಲಿ ಪ್ರೇಮಾಶ್ರುಗಳು ಉಮ್ಮಳಿಸಿದವು. ಮೈಪುಳಕದಿಂದ ಅರಳಿತು. ಅವನು ಅಂತಹ ಸ್ಥಿತಿಯಲ್ಲೇ ಆದಿಪುರುಷ ಭಗವಾನ್ ಶೇಷದೇವರಿಗೆ ನಮಸ್ಕರಿಸಿದನು. ॥ ೩೧ ॥ ಅವನ ಕಣ್ಣುಗಳಿಂದ ತೊಟ್ಟಿಕ್ಕುತ್ತಿದ್ದ ಆನಂದಬಾಷ್ಪಗಳಿಂದ ಭಗವಾನ್ ಶೇಷನ ಪಾದಪೀಠವು ನೆನೆಯಿತು. ಪ್ರೇಮೋದ್ರೇಕದಿಂದ ಅವನ ಬಾಯಿಂದ ಒಂದಕ್ಷರವೂ ಹೊರಡಲಿಲ್ಲ, ಅವನು ಬಹಳ ಹೊತ್ತಿನವರೆಗೆ ಶೇಷದೇವರನ್ನು ಸ್ತುತಿಸಲಿಕ್ಕೆ ಆಗಲಿಲ್ಲ. ॥ ೩೨ ॥ ಸ್ವಲ್ಪ ಹೊತ್ತಿನ ಬಳಿಕ ಅವನಿಗೆ ಮಾತಾಡುವ ಅಲ್ಪ-ಸ್ವಲ್ಪ ಶಕ್ತಿಯುಂಟಾಯಿತು. ಅವನು ವಿವೇಕದಿಂದ ಬುದ್ಧಿಯನ್ನು ಸ್ಥಿಮಿತಕ್ಕೆ ತಂದುಕೊಂಡು, ಇಂದ್ರಿಯಗಳ ಬಾಹ್ಯವೃತ್ತಿಗಳನ್ನು ತಡೆಗಟ್ಟಿದನು. ಅನಂತರ ಪಾಂಚರಾತ್ರವೇ ಮುಂತಾದ ಭಕ್ತಿಶಾಸ್ತ್ರಗಳಲ್ಲಿ ವರ್ಣಿತವಾಗಿರುವ ದಿವ್ಯಸ್ವರೂಪವುಳ್ಳ ಆ ಜಗದ್ಗುರುವನ್ನು ಹೀಗೆ ಸ್ತೋತ್ರ ಮಾಡಿದನು. ॥ ೩೩ ॥

ಚಿತ್ರಕೇತುವು ಹೇಳಿದನು – ಓ ಅಜಿತನೇ ! ನೀನು ಅಜಿತನಾಗಿ ಯಾರಿಂದಲೂ ಗೆಲ್ಲಲ್ಪಡದವನಾಗಿದ್ದರೂ – ಸಮದರ್ಶಿಗಳೂ, ಜಿತೇಂದ್ರಿಯರೂ ಆದ ಸಾಧುಗಳು ನಿನ್ನನ್ನು ಭಕ್ತಿಯಿಂದ ಗೆದ್ದುಕೊಂಡಿರುವರು. ನೀನು ನಿನ್ನ ಸೌಂದರ್ಯ, ಮಾಧುರ್ಯ, ಕಾರುಣ್ಯಗಳೇ ಮುಂತಾದ ಗುಣಗಳಿಂದ ಅವರನ್ನು ಗೆದ್ದು ವಶಪಡಿಸಿಕೊಳ್ಳುವೆ. ಆಹಾ ! ನೀನು ಧನ್ಯನಾಗಿರುವೆ. ಏಕೆಂದರೆ, ನಿಷ್ಕಾಮಭಾವದಿಂದ ನಿನ್ನನ್ನು ಭಜಿಸುವವರಿಗೆ ನೀನು ಕರುಣಾವಶನಾಗಿ ನಿನ್ನನ್ನೇ ಕೊಟ್ಟುಕೊಳ್ಳುವೆ. ॥ ೩೪ ॥ ಓ ಭಗವಂತಾ ! ಜಗತ್ತಿನ ಉತ್ಪತ್ತಿ , ಸ್ಥಿತಿ ಮತ್ತು ಪ್ರಳಯಗಳು ನಿನ್ನ ಲೀಲಾವಿಲಾಸವಾಗಿದೆ. ಜಗತ್ತಿನ ಸೃಷ್ಟಿಕರ್ತರಾದ ಬ್ರಹ್ಮದೇವರೇ ಮುಂತಾದವರು ನಿನ್ನ ಅಂಶದ ಅಂಶಭೂತರಾದವರು. ಹೀಗಿದ್ದರೂ ಅವರು ಬೇರೆ-ಬೇರೆಯಾಗಿ ತಮ್ಮನ್ನು ಜಗತ್ಕರ್ತರು ಎಂದು ತಿಳಿದು ಕೊಂಡು ವ್ಯರ್ಥವಾದ ಅಭಿಮಾನದಿಂದ ಸ್ಪರ್ಧಿಸುತ್ತಾರೆ. ॥ ೩೫ ॥ ಪರಮಾಣುಗಳಿಂದ ಹಿಡಿದು ಪರಮ ಮಹತ್ತಿನವರೆಗಿನ ಸಮಸ್ತ ವಸ್ತುಗಳ ಆದಿ, ಮಧ್ಯ ಮತ್ತು ಅಂತ್ಯಗಳಲ್ಲಿಯೂ ನೀನೇ ಬೆಳಗುತ್ತಿರುವೆ. ಆದರೆ ನಿನಗೆ ಆದಿ-ಮಧ್ಯ-ಅಂತ್ಯಗಳು ಇಲ್ಲ. ಏಕೆಂದರೆ, ಯಾವುದೇ ಪದಾರ್ಥದ ಆದಿ ಮತ್ತು ಅಂತ್ಯದಲ್ಲಿ ಯಾವ ವಸ್ತು ಇರುತ್ತದೋ ಅದೇ ಮಧ್ಯದಲ್ಲಿಯೂ ಇರುತ್ತದೆ. ॥ ೩೬ ॥ ಈ ಬ್ರಹ್ಮಾಂಡಕೋಶವು ಪೃಥಿವಿಯೇ ಮುಂತಾಗಿ ಒಂದಕ್ಕಿಂತಲೂ ಒಂದು ಹತ್ತರಷ್ಟಿರುವ ಏಳು ಆವರಣಗಳಿಂದ ಸುತ್ತುವರಿದಿದೆ. ತನ್ನಂತೆಯೇ ಇರುವ ಬೇರೆ ಕೋಟಿ-ಕೋಟಿ ಬ್ರಹ್ಮಾಂಡಗಳೊಂದಿಗೆ ನಿನ್ನಲ್ಲಿ ಒಂದು ಪರಮಾಣುವಿನಂತೆ ಸುತ್ತುತ್ತಾ

ಕ್ಷಿತ್ಯಾದಿಭಿರೇಷ ಕಿಲಾವೃತಃ
ಸಪ್ತಭಿರ್ದಶಗುಣೋತ್ತರೈರಾಂಡಕೋಶಃ ।
ಯತ್ರ ಪತತ್ಯಣುಕಲ್ಪಃ
ಸಹಾಂಡಕೋಟಿಕೋಟಿಭಿಸ್ತದನಂತಃ ॥ ೩೭ ॥

ವಿಷಯತೃಷೋ ನರಪಶವೋ
ಯ ಉಪಾಸತೇ ವಿಭೂತೀರ್ನ ಪರಂ ತ್ವಾಮ್ ।
ತೇಷಾಮಾಶಿಷ ಈಶ
ತದನು ವಿನಶ್ಯಂತಿ ಯಥಾ ರಾಜಕುಲಮ್ ॥ ೩೮ ॥

ಕಾಮಧಿಯಸ್ತ್ವಯಿ ರಚಿತಾ
ನ ಪರಮ ರೋಹಂತಿ ಯಥಾ ಕರಂಭಬೀಜಾನಿ ।
ಜ್ಞಾನಾತ್ಮನ್ಯಗುಣಮಯೇ
ಗುಣಗಣತೋಽಸ್ಯ ದ್ವಂದ್ವಜಾಲಾನಿ ॥ ೩೯ ॥

ಜಿತಮಜಿತ ತದಾ ಭವತಾ
ಯದಾಽಽಹ ಭಾಗವತಂ ಧರ್ಮಮನವದ್ಯಮ್ ।
ನಿಷ್ಕಿಂಚನಾ ಯೇ ಮುನಯ
ಆತ್ಮಾರಾಮಾ ಯಮುಪಾಸತೇಽಪವರ್ಗಾಯ ॥ ೪೦ ॥

ವಿಷಮಮತಿರ್ನ ಯತ್ರ ನೃಣಾಂ
ತ್ವಮಹಮಿತಿ ಮಮ ತವೇತಿ ಚ ಯದನ್ಯತ್ರ ।
ವಿಷಮಧಿಯಾ ರಚಿತೋ ಯಃ
ಸ ಹ್ಯವಿಶುದ್ಧಃ ಕ್ಷಯಿಷ್ಣುರಧರ್ಮಬಹುಲಃ ॥ ೪೧ ॥

ಕಃ ಕ್ಷೇಮೋ ನಿಜಪರಯೋಃ
ಕಿಯಾನರ್ಥಃ ಸ್ವಪರದ್ರುಹಾ ಧರ್ಮೇಣ ।
ಸ್ವದ್ರೋಹಾತ್ತವ ಕೋಪಃ
ಪರಸಂಪೀಡನಯಾ ಚ ತಥಾಽಧರ್ಮಃ ॥ ೪೨ ॥

ನ ವ್ಯಭಿಚರತಿ ತವೇಕ್ಷಾ
ಯಯಾ ಹ್ಯಭಿಹಿತೋ ಭಾಗವತೋ ಧರ್ಮಃ ।
ಸ್ಥಿರಚರಸತ್ತ್ವಕದಂಬೇ-
ಷ್ವಪೃಥಗ್ಧಿಯೋ ಯಮುಪಾಸತೇ ತ್ವಾರ್ಯಾಃ ॥ ೪೩ ॥

ನ ಹಿ ಭಗವನ್ನಘಟಿತಮಿದಂ
ತ್ವದ್ದರ್ಶನಾನ್ನೃಣಾಮಖಿಲಪಾಪಕ್ಷಯಃ ।
ಯನ್ನಾಮಸಕೃಚ್ಛ್ರವಣಾತ್
ಪುಲ್ಕಸೋಽಪಿ ವಿಮುಚ್ಯತೇ ಸಂಸಾರಾತ್ ॥ ೪೪ ॥

ಇರುತ್ತದೆ. ಹೀಗಿದ್ದರೂ ಅದಕ್ಕೆ ನಿನ್ನ ಎಲ್ಲೆಯು ತಿಳಿಯದು. ಅದಕ್ಕಾಗಿ ನೀನು ಅನಂತ ನಾಗಿರುವೆ. ॥ ೩೭ ॥ ವಿಷಯಭೋಗ ಗಳನ್ನೇ ಬಯಸುವ ನರಪಶುಗಳು ನಿನ್ನನ್ನು ಭಜಿಸದೆ ನಿನ್ನ ವಿಭೂತಿ ಸ್ವರೂಪರಾದ ಇಂದ್ರಾದಿ ದೇವತೆಗಳನ್ನು ಉಪಾಸಿಸುತ್ತಾರೆ. ಪ್ರಭೋ! ರಾಜಕುಲವು ನಾಶವಾದ ಬಳಿಕ ಅದರ ಅನುಯಾಯಿ ಗಳ ಬದುಕೂ ಕೂಡ ನಾಶವಾಗುವಂತೆಯೇ ಕ್ಷುದ್ರ ಉಪಾಸ್ಯ ದೇವತೆಗಳು ಹ್ರಾಸವಾದಾಗ ಅವರು ದಯಪಾಲಿಸಿದ ಭೋಗ ಗಳೂ ನಷ್ಟವಾಗಿ ಹೋಗುತ್ತವೆ. ॥ ೩೮ ॥ ಓ ಪರಮಾತ್ಮನೇ! ನೀನು ಜ್ಞಾನಸ್ವರೂಪಿಯೂ, ನಿರ್ಗುಣನೂ ಆಗಿರುವೆ. ಅದಕ್ಕಾಗಿ ನಿನ್ನ ಕುರಿತಾಗಿ ಮಾಡಿದ ಸಕಾಮ ಭಾವನೆಯೂ ಕೂಡ ಬೇರೆ-ಬೇರೆ ಕರ್ಮಗಳಂತೆ – ಹುರಿದ ಬೀಜಗಳು ಮೊಳೆಯದಂತೆ – ಜನನ-ಮರಣರೂಪೀ ಫಲವನ್ನು ಕೊಡಲಾರದು. ಏಕೆಂದರೆ, ಜೀವಿಗೆ ಉಂಟಾಗುವ ಸುಖ-ದುಃಖ ಮುಂತಾದ ದ್ವಂದ್ವಗಳು ಸತ್ತ್ವಾದಿ ಗುಣಗಳಿಂದಲೇ ಉಂಟಾಗುತ್ತವೆ. ನಿರ್ಗುಣದಿಂದಲ್ಲ. ॥ ೩೯ ॥ ಓ ಅಜಿತನೇ! ನೀನು ಪರಿಶುದ್ಧವಾದ ಭಾಗವತಧರ್ಮವನ್ನು ಉಪದೇಶಿಸಿದಾಗಲೇ ಎಲ್ಲರನ್ನು ಗೆದ್ದುಕೊಂಡಿರುವೆ. ಏಕೆಂದರೆ, ತಮ್ಮಲ್ಲಿ ಯಾವುದೇ ಸಂಗ್ರಹ-ಪರಿಗ್ರಹವನ್ನು ಇಟ್ಟುಕೊಳ್ಳದಿರುವ, ಯಾವುದೇ ವಸ್ತುವಿನಲ್ಲಿ ಅಹಂತೆ-ಮಮತೆಗಳಿಲ್ಲದಿರುವ, ಆತ್ಮಾ ರಾಮರಾದ ಸನಕಾದಿ ಪರಮ ಮಹರ್ಷಿಗಳೂ ಕೂಡ ಮೋಕ್ಷ ವನ್ನು ಪಡೆಯುವುದಕ್ಕಾಗಿ ಇದೇ ಭಾಗವತಧರ್ಮವನ್ನು ಆಶ್ರಯಿ ಸುತ್ತಾರೆ. ॥ ೪೦ ॥ ಈ ಭಾಗವತಧರ್ಮದಲ್ಲಿ ಸಕಾಮಧರ್ಮ ಗಳಂತೆ ಮನುಷ್ಯರಲ್ಲಿ 'ಇದು ನಾನು, ಇದು ನನ್ನದು; ಇದು ನೀನು, ಇದು ನಿನ್ನದು; ಎಂಬ ವಿಷಮ ಬುದ್ಧಿಯು ಉಂಟಾಗು ವುದಿಲ್ಲ. ಹೀಗೆ ನಿಷ್ಕಾಮವಾಗಿ ಅಹಂಕಾರ- ಮಮಕಾರಾದಿ ರಹಿತವಾಗಿರುವ ಭಾಗವತಧರ್ಮವೇ ಶುದ್ಧವಾದ ಧರ್ಮವು. ಇದಕ್ಕೆ ವಿಪರೀತವಾಗಿ ಯಾವ ಧರ್ಮದ ಮೂಲದಲ್ಲೇ ವಿಷ ಮತೆಯ ಬೀಜವು ಬಿತ್ತಲ್ಪಟ್ಟಿದೆಯೋ ಅದು ಅಶುದ್ಧವೂ, ವಿನಾಶಿಯೂ ಮತ್ತು ಅಧರ್ಮದಿಂದ ತುಂಬಿರುವುದು. ॥ ೪೧ ॥ ಸಕಾಮಧರ್ಮವು ತನ್ನದೂ, ಇತರರದೂ ಅಹಿತವನ್ನೇ ಮಾಡು ವುದು. ಅದರಿಂದ ತನ್ನ ಅಥವಾ ಪರರ ಯಾವುದೇ ಪ್ರಯೋಜನ ಹಾಗೂ ಹಿತವು ಸಿದ್ಧಿಸುವುದಿಲ್ಲ. ಆ ಧರ್ಮವನ್ನು ಅನುಷ್ಠಾನ ಮಾಡುವವನ ಚಿತ್ತವು ದುಃಖಿತವಾದಾಗ ನಿನಗೆ ರೋಷವುಂಟಾಗು ವುದು. ಇತರ ಚಿತ್ತಕ್ಕೆ ದುಃಖವುಂಟಾದಾಗ ಅದು ಧರ್ಮವೇ ಆಗಿರದೆ ಅಧರ್ಮವೇ ಆಗುವುದು. ॥ ೪೨ ॥ ಓ ಭಗವಂತಾ! ನೀನು ಯಾವ ದೃಷ್ಟಿಯಿಂದ ಭಾಗವತ ಧರ್ಮವನ್ನು ನಿರೂಪಣೆ ಮಾಡಿರುವೆಯೋ ಅದು ಎಂದಿಗೂ ಪರಮಾರ್ಥದಿಂದ ಕದಲು ವುದಿಲ್ಲ. ಅದಕ್ಕಾಗಿ ಚರಾಚರ ಸಮಸ್ತ ಪ್ರಾಣಿಗಳಲ್ಲಿ ಸಮದೃಷ್ಟಿ ಯುಳ್ಳ ಸಾಧು-ಸಂತರೇ ಅದನ್ನು ಸೇವಿಸುತ್ತಾರೆ. ॥ ೪೩ ॥ ಭಗವಂತನೇ! ನಿನ್ನ ದರ್ಶನಮಾತ್ರದಿಂದಲೇ ಮನುಷ್ಯನ ಎಲ್ಲ ಪಾಪಗಳು ಕ್ಷಯಹೊಂದುವುದರಲ್ಲಿ ಅಸಂಭವವೇನೂ ಇಲ್ಲ. ಏಕೆಂದರೆ, ಒಂದುಬಾರಿ ನಿನ್ನ ನಾಮವನ್ನು ಕೇಳುವುದರಿಂದಲೇ ನೀಚನಾದ ಚಾಂಡಾಲನೂ ಸಂಸಾರದಿಂದ ಮುಕ್ತನಾಗಿ ಹೋಗು ವನು. ॥ ೪೪ ॥

ಅಥ ಭಗವನ್ವಯಮಧುನಾ
ತ್ವದವಲೋಕಪರಿಮೃಷ್ಟಾಶಯಮಲಾಃ ।
ಸುರಋಷಿಣಾ ಯದುದಿತಂ
ತಾವಕೇನ ಕಥಮನ್ಯಥಾ ಭವತಿ ॥ ೪೫ ॥

ವಿದಿತಮನಂತ ಸಮಸ್ತಂ
ತವ ಜಗದಾತ್ಮನೋ ಜನೈರಿಹಾಚರಿತಮ್ ।
ವಿಜ್ಞಾಪ್ಯಂ ಪರಮಗುರೋಃ
ಕಿಯದಿವ ಸವಿತುರಿವ ಖದ್ಯೋತೈಃ ॥ ೪೬ ॥

ನಮಸ್ತುಭ್ಯಂ ಭಗವತೇ
ಸಕಲಜಗತ್ಸ್ಥಿತಿಲಯೋದಯೇಶಾಯ ।
ದುರವಸಿತಾತ್ಮಗತಯೇ
ಕುಯೋಗಿನಾಂ ಭಿದಾ ಪರಮಹಂಸಾಯ ॥ ೪೭ ॥

ಯಂ ವೈ ಶ್ವಸಂತಮನು ವಿಶ್ವಸೃಜಃ ಶ್ವಸಂತಿ
ಯಂ ಚೇಕಿತಾನಮನು ಚಿತ್ತಯ ಉಚ್ಚಕಂತಿ ।
ಭೂಮಂಡಲಂ ಸರ್ಷಪಾಯತಿ ಯಸ್ಯ ಮೂರ್ಧ್ನಿ
ತಸ್ಮೈ ನಮೋ ಭಗವತೇಽಸ್ತು ಸಹಸ್ರಮೂರ್ಧ್ನೇ ॥ ೪೮ ॥

ಶ್ರೀಶುಕ ಉವಾಚ

ಸಂಸ್ತುತೋ ಭಗವಾನೇವಮನಂತಸ್ತಮಭಾಷತ ।
ವಿದ್ಯಾಧರಪತಿಂ ಪ್ರೀತಶ್ಚಿತ್ರಕೇತುಂ ಕುರೂದ್ವಹ ॥ ೪೯ ॥

ಶ್ರೀಭಗವಾನುವಾಚ

ಯನ್ನಾರದಾಂಗಿರೋಭ್ಯಾಂ ತೇ ವ್ಯಾಹೃತಂ ಮೇಽನುಶಾಸನಮ್ ।
ಸಂಸಿದ್ಧೋಽಸಿ ತಯಾ ರಾಜನ್ವಿದ್ಯಯಾ ದರ್ಶನಾಚ್ಚ ಮೇ ॥ ೫೦ ॥

ಅಹಂ ವೈ ಸರ್ವಭೂತಾನಿ ಭೂತಾತ್ಮಾ ಭೂತಭಾವನಃ ।
ಶಬ್ದಬ್ರಹ್ಮ ಪರಂ ಬ್ರಹ್ಮ ಮಮೋಭೇ ಶಾಶ್ವತೀ ತನೂ ॥ ೫೧ ॥

ಲೋಕೇ ವಿತತಮಾತ್ಮಾನಂ ಲೋಕಂ ಚಾತ್ಮನಿ ಸಂತತಮ್ ।
ಉಭಯಂ ಚ ಮಯಾ ವ್ಯಾಪ್ತಂ ಮಯಿ ಚೈವೋಭಯಂ ಕೃತಮ್ ॥ ೫೨ ॥

ಯಥಾ ಸುಷುಪ್ತಃ ಪುರುಷೋ ವಿಶ್ವಂ ಪಶ್ಯತಿ ಚಾತ್ಮನಿ ।
ಆತ್ಮಾನಮೇಕದೇಶಸ್ಥಂ ಮನ್ಯತೇ ಸ್ವಪ್ನ ಉತ್ಥಿತಃ ॥ ೫೩ ॥

ಓ ಭಗವಂತಾ! ಈಗ ನಿನ್ನ ದರ್ಶನ ಮಾತ್ರದಿಂದಲೇ ನನ್ನ ಅಂತಃಕರಣದ ಎಲ್ಲ ಮಲವೂ ತೊಳೆದುಹೋಯಿತು. ನಿನ್ನ ಅನನ್ಯ ಭಕ್ತರಾದ ದೇವರ್ಷಿ ನಾರದರು ಹೇಳಿರುವ ಮಾತು ಹೇಗೆ ಸುಳ್ಳಾದೀತು? ॥ ೪೫ ॥ ಓ ಅನಂತಾ! ನೀನು ಸಮಸ್ತ ಜಗತ್ತಿನ ಆತ್ಮನಾಗಿರುವೆ. ಆದುದರಿಂದ ಜಗತ್ತಿನ ಪ್ರಾಣಿಗಳು ಮಾಡುವುದೆಲ್ಲವನ್ನೂ ನೀನು ತಿಳಿದೇ ಇರುವೆ. ಹೇಗೆ ಮಿಣುಕುಹುಳುವು ಸೂರ್ಯನನ್ನು ಪ್ರಕಾಶಿತವಾಗಿಸಲಾರದೋ ಹಾಗೆಯೇ ಪರಮಗುರುವಾದ ನಿನ್ನಲ್ಲಿ ಏನೆಂದು ನಿವೇದಿಸಿಕೊಳ್ಳಲಿ? ॥ ೪೬ ॥ ಸಕಲ ಜಗತ್ತಿನ ಉತ್ಪತ್ತಿ, ಸ್ಥಿತಿ, ಲಯಗಳಿಗೆ ಅಧಿಪತಿಯಾಗಿರುವ ಭಗವಂತನಾದ ನಿನಗೆ ನಮಸ್ಕಾರವು. ಅತ್ಯಂತ ಶುದ್ಧನಾದ ಪರಮಹಂಸನು ನೀನು. ಕುಯೋಗಿಗಳಿಗೆ ಭೇದದೃಷ್ಟಿಯು ಇರುವುದರಿಂದ ಅವರು ನಿನ್ನ ವಾಸ್ತವಿಕ ಸ್ವರೂಪವನ್ನು ತಿಳಿಯಲಾರರು. ॥ ೪೭ ॥ ನಿನ್ನಿಂದಲೇ ಶಕ್ತಿಯನ್ನು ಪಡೆದುಕೊಂಡೇ ಆ ಬ್ರಹ್ಮಾದಿ ಲೋಕಪಾಲರು ತಮ್ಮ-ತಮ್ಮ ವ್ಯಾಪಾರಗಳನ್ನು ಮಾಡಲು ಸಮರ್ಥ ರಾಗುತ್ತಾರೆ. ನಿನ್ನದೃಷ್ಟಿಯಿಂದ ಚೈತನ್ಯವನ್ನು ಪಡೆದೇ ಜ್ಞಾನೇಂದ್ರಿಯಗಳು ತಮ್ಮ-ತಮ್ಮ ವಿಷಯಗಳನ್ನು ಗ್ರಹಿಸಲು ಸಮರ್ಥವಾಗುತ್ತವೆ. ಈ ಭೂಮಂಡಲವು ನಿನ್ನ ತಲೆಯಮೇಲೆ ಒಂದು ಸಾಸಿವೆ ಕಾಳಿನಂತೆ ಕಂಡುಬರುತ್ತದೆ. ಅಂತಹ ಸಾವಿರ ತಲೆಗಳುಳ್ಳ ಪರಮ ಪುರುಷನಾದ ಭಗವಂತನಿಗೆ ಮತ್ತೆ-ಮತ್ತೆ ನಮಸ್ಕಾರಗಳು. ॥ ೪೮ ॥

ಶ್ರೀಶುಕ ಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ! ವಿದ್ಯಾಧರರ ಅಧಿಪತಿಯಾದ ಚಿತ್ರಕೇತುವು ಹೀಗೆ ಭಗವಾನ್ ಅನಂತನನ್ನು ಸ್ತುತಿಸಿದಾಗ ಶ್ರೀಭಗವಂತನು ಪ್ರಸನ್ನನಾಗಿ ಅವನಲ್ಲಿ ಹೀಗೆಂದನು. ॥ ೪೯ ॥

ಶ್ರೀಭಗವಂತನು ಹೇಳಿದನು – ಎಲೈ ರಾಜನೇ! ದೇವರ್ಷಿ ನಾರದರು ಮತ್ತು ಅಂಗಿರಸ ಮಹರ್ಷಿಗಳು ನಿನಗೆ ನನ್ನ ಕುರಿತಾದ ವಿದ್ಯೆಯನ್ನು ಉಪದೇಶಿಸಿರುವರೋ, ಅದರಿಂದ ಹಾಗೂ ನನ್ನ ದರ್ಶನದಿಂದ ನೀನು ಸಂಸಿದ್ಧಿಯನ್ನು ಪಡೆದಿರುವೆ. ॥ ೫೦ ॥ ನಾನೇ ಸಮಸ್ತ ಪ್ರಾಣಿಗಳ ರೂಪದಲ್ಲಿದ್ದೇನೆ. ನಾನೇ ಅವರ ಆತ್ಮನಾಗಿರುವೆನು. ಅವರನ್ನು ಪಾಲಿಸುವವನೂ ನಾನೇ. ಶಬ್ದಬ್ರಹ್ಮ (ವೇದ) ಮತ್ತು ಪರಬ್ರಹ್ಮ ಎರಡೂ ನನ್ನ ಸನಾತನ ರೂಪವಾಗಿವೆ. ॥ ೫೧ ॥ ಆತ್ಮನು ಕಾರ್ಯಕಾರಣಾತ್ಮಕ ಜಗತ್ತಿನಲ್ಲಿ ವ್ಯಾಪ್ತನಾಗಿದ್ದಾನೆ. ಕಾರ್ಯ-ಕಾರಣಾತ್ಮಕವಾದ ಜಗತ್ತು ಆತ್ಮನಲ್ಲಿ ನೆಲೆಸಿದೆ ಹಾಗೂ ಇವೆರಡರಲ್ಲಿಯೂ ನಾನು ಅಧಿಷ್ಠಾನರೂಪದಿಂದ ವ್ಯಾಪ್ತನಾಗಿದ್ದೇನೆ ಮತ್ತು ಇವೆರಡೂ ನನ್ನಲ್ಲಿ ಕಲ್ಪಿತವಾಗಿವೆ. ॥ ೫೨ ॥ ಸ್ವಪ್ನದಲ್ಲಿ ಮಲಗಿರುವ ಮನುಷ್ಯನು ಸ್ವಪ್ನಾಂತರ (ಮತ್ತೊಂದು ಕನಸುಕಾಣುವಾಗ)ವಾದಾಗ ಸಮಸ್ತ ಜಗತ್ತನ್ನು ತನ್ನಲ್ಲಿಯೇ ನೋಡುತ್ತಾನೆ ಮತ್ತು ಸ್ವಪ್ನಾಂತರ ಮುಗಿದುಹೋದಾಗ ಸ್ವಪ್ನದಲ್ಲೇ ಎಚ್ಚರಗೊಳ್ಳುವನು. ತನ್ನನ್ನು ಜಗತ್ತಿನ ಒಂದು ಮೂಲೆಯಲ್ಲಿ ಇರುವಂತೆ ಕಾಣುವನು. ಆದರೆ ವಾಸ್ತವವಾಗಿ ಅದೂ ಸ್ವಪ್ನವೇ ಆಗಿದೆ. ಹಾಗೆಯೇ ಜೀವಿಯು ಜಾಗ್ರತ್ ಮುಂತಾದ ಅವಸ್ಥೆಗಳೂ ಕೂಡ ಪರಮೇಶ್ವರನ ಮಾಯೆಯೇ ಆಗಿದೆ. ಹೀಗೆ ತಿಳಿದು

ಏವಂ ಜಾಗರಣಾದೀನಿ ಜೀವಸ್ಥಾನಾನಿ ಚಾತ್ಮನಃ ।
ಮಾಯಾಮಾತ್ರಾಣಿ ವಿಜ್ಞಾಯ ತದ್ದ್ರಷ್ಟಾರಂ ಪರಂ ಸ್ಮರೇತ್ ॥ ೫೪ ॥

ಯೇನ ಪ್ರಸುಪ್ತಃ ಪುರುಷಃ ಸ್ವಾಪಂ ವೇದಾತ್ಮನಸ್ತದಾ ।
ಸುಖಂ ಚ ನಿರ್ಗುಣಂ ಬ್ರಹ್ಮ ತಮಾತ್ಮಾನಮವೇಹಿ ಮಾಮ್ ॥ ೫೫ ॥

ಉಭಯಂ ಸ್ಮರತಃ ಪುಂಸಃ ಪ್ರಸ್ವಾಪಪ್ರತಿಬೋಧಯೋಃ ।
ಅನ್ವೇತಿ ವ್ಯತಿರಿಚ್ಯೇತ ತಜ್ಜ್ಞಾನಂ ಬ್ರಹ್ಮ ತತ್ಪರಮ್ ॥ ೫೬ ॥

ಯದೇತದ್ವಿಸ್ಮೃತಂ ಪುಂಸೋ ಮದ್ಭಾವಂ ಭಿನ್ನಮಾತ್ಮನಃ ।
ತತಃ ಸಂಸಾರ ಏತಸ್ಯ ದೇಹಾದ್ದೇಹೋ ಮೃತೇರ್ಮೃತಿಃ ॥ ೫೭ ॥

ಲಬ್ಧ್ವೇಹ ಮಾನುಷೀಂ ಯೋನಿಂ ಜ್ಞಾನವಿಜ್ಞಾನಸಂಭವಾಮ್ ।
ಆತ್ಮಾನಂ ಯೋ ನ ಬುದ್ಧ್ಯೇತ ನ ಕ್ವಚಿತ್ಕ್ಷೇಮಮಾಪ್ನುಯಾತ್ ॥ ೫೮ ॥

ಸ್ಮೃತ್ವೇಹಾಯಾಂ ಪರಿಕ್ಲೇಶಂ ತತಃ ಫಲವಿಪರ್ಯಯಮ್ ।
ಅಭಯಂ ಚಾಪ್ಯನೀಹಾಯಾಂ ಸಂಕಲ್ಪಾದ್ವಿರಮೇತ್ಕವಿಃ ॥ ೫೯ ॥

ಸುಖಾಯ ದುಃಖಮೋಕ್ಷಾಯ ಕುರ್ವಾತೇ ದಂಪತೀ ಕ್ರಿಯಾಃ ।
ತತೋಽನಿವೃತ್ತಿರಪ್ರಾಪ್ತಿರ್ದುಃಖಸ್ಯ ಚ ಸುಖಸ್ಯ ಚ ॥ ೬೦ ॥

ಏವಂ ವಿಪರ್ಯಯಂ ಬುದ್ಧ್ವಾ ನೃಣಾಂ ವಿಜ್ಞಾಭಿಮಾನಿನಾಮ್ ।
ಆತ್ಮನಶ್ಚ ಗತಿಂ ಸೂಕ್ಷ್ಮಾಂ ಸ್ಥಾನತ್ರಯವಿಲಕ್ಷಣಾಮ್ ॥ ೬೧ ॥

ದೃಷ್ಟಶ್ರುತಾಭಿರ್ಮಾತ್ರಾಭಿರ್ನಿರ್ಮುಕ್ತಃ ಸ್ವೇನ ತೇಜಸಾ ।
ಜ್ಞಾನವಿಜ್ಞಾನಸಂತೃಪ್ತೋ ಮದ್ಭಕ್ತಃ ಪುರುಷೋ ಭವೇತ್ ॥ ೬೨ ॥

ಏತಾವಾನೇವ ಮನುಜೈರ್ಯೋಗನೈಪುಣಬುದ್ಧಿಭಿಃ ।
ಸ್ವಾರ್ಥಃ ಸರ್ವಾತ್ಮನಾ ಜ್ಞೇಯೋ ಯತ್ಪರಾತ್ಮೈಕದರ್ಶನಮ್ ॥ ೬೩ ॥

ಕೊಂಡು ಎಲ್ಲರ ಸಾಕ್ಷಿ, ಮಾಯಾತೀತ, ಪರಮಾತ್ಮನನ್ನೇ ಸ್ಮರಿಸಬೇಕು. ॥ ೫೨-೫೪ ॥ ಮಲಗಿರುವ ಮನುಷ್ಯನು ಯಾವುದರ ಸಹಾಯದಿಂದ ತನ್ನ ನಿದ್ರೆಯನ್ನು ಮತ್ತು ಅದರ ಅತೀಂದ್ರಿಯ ಸುಖವನ್ನು ಅನುಭವಿಸುವನೋ ಆ ಬ್ರಹ್ಮವೂ ನಾನೇ ಆಗಿದ್ದೇನೆ. ಅದನ್ನು ನೀನು ನಿನ್ನ ಆತ್ಮವೆಂದು ತಿಳಿ. ॥ ೫೫ ॥ ಪುರುಷನು ನಿದ್ರೆ ಮತ್ತು ಎಚ್ಚರ ಇವೆರಡು ಅವಸ್ಥೆಗಳನ್ನೂ ಅನುಭವಿಸುತ್ತಾನೆ. ಅವನು ಆ ಅವಸ್ಥೆಗಳಲ್ಲಿ ಅನುಗತನಾಗಿದ್ದರೂ ವಾಸ್ತವವಾಗಿ ಅವುಗಳಿಂದ ಬೇರೆಯೇ ಆಗಿದ್ದಾನೆ. ಅವನ ಎಲ್ಲ ಅವಸ್ಥೆಗಳಲ್ಲಿ ಇರುವ ಅಖಂಡ ಏಕರಸ ಜ್ಞಾನವೇ ಬ್ರಹ್ಮವಾಗಿದೆ. ಅದೇ ಪರಬ್ರಹ್ಮವಾಗಿದೆ. ॥ ೫೬ ॥ ಜೀವನು ನನ್ನ ಸ್ವರೂಪವನ್ನು ಮರೆತು ಹೋದಾಗ ಅವನು ತನ್ನನ್ನು ಬೇರೆ ಎಂದು ತಿಳಿದುಕೊಳ್ಳುವನು. ಅದರಿಂದಲೇ ಅವನಿಗೆ ಸಂಸಾರಚಕ್ರದಲ್ಲಿ ಬೀಳಬೇಕಾಗುತ್ತದೆ ಮತ್ತು ಹುಟ್ಟಿನ ನಂತರ ಸಾವು, ಸಾವಿನನಂತರ ಹುಟ್ಟು ಅವನಿಗೆ ಉಂಟಾಗುವುದು. ॥ ೫೭ ॥ ಈ ಮನುಷ್ಯಯೋನಿಯು ಜ್ಞಾನ ಮತ್ತು ವಿಜ್ಞಾನದ ಮೂಲ ಸ್ರೋತಸ್ಸಾಗಿದೆ. ಇದನ್ನು ಪಡೆದುಕೊಂಡರೂ ತನ್ನ ಆತ್ಮಸ್ವರೂಪನಾದ ಪರಮಾತ್ಮನನ್ನು ತಿಳಿದುಕೊಳ್ಳದಿರುವವನಿಗೆ ಎಲ್ಲಿಯೂ, ಯಾವುದೇ ಯೋನಿಯಲ್ಲಿ ಶಾಂತಿಯು ಸಿಗಲಾರದು. ॥ ೫೮ ॥ ರಾಜನೇ! ಸಾಂಸಾರಿಕ ಸುಖಕ್ಕಾಗಿ ಮಾಡಲಾದ ಪ್ರಯತ್ನಗಳಲ್ಲಿ ಶ್ರಮವಿದೆ, ಕ್ಲೇಶವಿದೆ, ಪರಮ ಸುಖದ ಉದ್ದೇಶದಿಂದ ಮಾಡಲಾಗುವ ಕರ್ಮದಲ್ಲಿ ಅದಕ್ಕೆ ವಿರುದ್ಧವಾಗಿ ಪರಮ ದುಃಖವನ್ನೇ ಅವು ಕೊಡುವುವು. ಅದರೆ ಕರ್ಮಗಳಿಂದ ನಿವೃತ್ತನಾಗಿ ಹೋಗುವುದರಲ್ಲಿ ಯಾವುದೇ ಭಯವಿಲ್ಲ – ಹೀಗೆ ಯೋಚಿಸಿ ಬುದ್ಧಿವಂತನು ಯಾವುದೇ ಪ್ರಕಾರದ ಕರ್ಮ ಅಥವಾ ಅವುಗಳ ಫಲಗಳ ಸಂಕಲ್ಪವನ್ನು ಮಾಡಬಾರದು. ॥ ೫೯ ॥ ಜಗತ್ತಿನ ಎಲ್ಲ ಸ್ತ್ರೀ-ಪುರುಷರು ತಮಗೆ ಸುಖ ಸಿಗಲಿ ಮತ್ತು ದುಃಖದಿಂದ ಬಿಡುಗಡೆ ಆಗಲಿ ಎಂದೇ ಕರ್ಮಗಳನ್ನು ಮಾಡುತ್ತಾರೆ. ಆದರೆ ಆ ಕರ್ಮಗಳಿಂದ ಅವರ ದುಃಖವು ದೂರವಾಗುವುದಿಲ್ಲ ಮತ್ತು ಅವರಿಗೆ ಸುಖವೂ ದೊರೆಯುವುದಿಲ್ಲ. ॥ ೬೦ ॥ ತನ್ನನ್ನು ಬಹಳ ಬುದ್ಧಿವಂತನೆಂದು ತಿಳಿದು ಕರ್ಮದ ಹಿಡಿತದಲ್ಲಿ ಸಿಕ್ಕಿರುವವರಿಗೆ ವಿಪರೀತ ಫಲವೇ ಸಿಗುತ್ತದೆ ಎಂಬುದನ್ನು ಅರಿತುಕೊಳ್ಳಬೇಕು. ಜೊತೆಗೆ ಆತ್ಮನ ಸ್ವರೂಪವು ಅತ್ಯಂತ ಸೂಕ್ಷ್ಮವಾಗಿದೆ. ಜಾಗ್ರತ್, ಸ್ವಪ್ನ, ಸುಷುಪ್ತಿಗಳೆಂಬ ಮೂರು ಅವಸ್ಥೆಗಳಿಂದ ಹಾಗೂ ಅವುಗಳ ಅಭಿಮಾನಿಗಳಿಂದಲೂ ವಿಲಕ್ಷಣವಾಗಿದೆ ಎಂಬುದನ್ನು ತಿಳಿದುಕೊಳ್ಳಬೇಕು. ॥ ೬೧ ॥ ಇದನ್ನು ಅರಿತುಕೊಂಡು ಈ ಲೋಕದಲ್ಲಿ ನೋಡಿದ ಮತ್ತು ಪರಲೋಕದ ಕೇಳಿರುವ ವಿಷಯ ಭೋಗಗಳಿಂದ ವಿವೇಕ ಬುದ್ಧಿಯಿಂದ ಬಿಡಿಸಿಕೊಂಡು ಜ್ಞಾನ ಮತ್ತು ವಿಜ್ಞಾನದಲ್ಲೇ ಸಂತುಷ್ಟನಾಗಿ ನನ್ನ ಭಕ್ತನಾಗಬೇಕು. ॥ ೬೨ ॥ ಯೋಗಮಾರ್ಗದ ತತ್ತ್ವವನ್ನು ತಿಳಿಯುವುದರಲ್ಲಿ ನಿಪುಣನಿಗೆ – ಜೀವಿಗೆ ಎಲ್ಲಕ್ಕಿಂತ ದೊಡ್ಡ ಸ್ವಾರ್ಥ ಮತ್ತು ಪರಮಾರ್ಥ ಕೇವಲ ಬ್ರಹ್ಮ ಮತ್ತು ಆತ್ಮನ ಏಕತೆಯನ್ನು ಅನುಭವಿಸುವುದೇ ಆಗಿದೆ ಎಂಬುದನ್ನು ಚೆನ್ನಾಗಿ ತಿಳಿದುಕೊಳ್ಳಬೇಕು. ॥ ೬೩ ॥

ತ್ವಮೇತಚ್ಛ್ರದ್ಧಯಾ ರಾಜನ್ನಪ್ರಮತ್ತೋ ವಚೋ ಮಮ ।
ಜ್ಞಾನವಿಜ್ಞಾನಸಂಪನ್ನೋ ಧಾರಯನ್ನಾಶು ಸಿಧ್ಯಸಿ ॥ ೬೪ ॥

ಶ್ರೀಶುಕ ಉವಾಚ

ಆಶ್ವಾಸ್ಯ ಭಗವಾನಿತ್ಥಂ ಚಿತ್ರಕೇತುಂ ಜಗದ್ಗುರುಃ ।
ಪಶ್ಯತಸ್ತಸ್ಯ ವಿಶ್ವಾತ್ಮಾ ತತಶ್ಚಾಂತರ್ದಧೇ ಹರಿಃ ॥ ೬೫ ॥

ರಾಜನೇ! ನೀನು ನನ್ನ ಈ ಉಪದೇಶವನ್ನು ಸಾವಧಾನವಾಗಿ ಶ್ರದ್ಧಾಭಾವದಿಂದ ಧರಿಸಿ ಕೊಂಡರೆ ಜ್ಞಾನ ಹಾಗೂ ವಿಜ್ಞಾನಗಳಿಂದ ಸಂಪನ್ನನಾಗಿ ಬೇಗನೇ ಸಿದ್ಧನಾಗಿ ಹೋಗುವೆ. ॥ ೬೪ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿದ್ರಾಜನೇ! ಜಗದ್ಗುರು ವಿಶ್ವಾತ್ಮಾ ಭಗವಾನ್ ಶ್ರೀಹರಿಯು ಚಿತ್ರ ಕೇತುವಿಗೆ ಹೀಗೆ ತಿಳಿಹೇಳಿ ಅವನ ಮುಂದೆಯೇ ಅಲ್ಲಿಂದ ಅಂತರ್ಧಾನನಾದನು. ॥ ೬೫ ॥

ಹದಿನಾರನೆಯ ಅಧ್ಯಾಯವು ಮುಗಿಯಿತು. ॥ ೧೬ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಷಷ್ಠಸ್ಕಂಧೇ
ಚಿತ್ರಕೇತೋಃ ಪರಮಪುರುಷದರ್ಶನಂ ನಾಮ ಷೋಡಶೋಽಧ್ಯಾಯಃ ॥ ೧೬ ॥

ಹದಿನೇಳನೆಯ ಅಧ್ಯಾಯ

ಚಿತ್ರಕೇತುವಿಗೆ ಪಾರ್ವತೀದೇವಿಯ ಶಾಪ

ಶ್ರೀಶುಕ ಉವಾಚ

ಯತಶ್ಚಾಂತರ್ಹಿತೋಽನಂತಸ್ತಸ್ಯೈ ಕೃತ್ವಾ ದಿಶೇ ನಮಃ ।
ವಿದ್ಯಾಧರಶ್ಚಿತ್ರಕೇತುಶ್ಚಚಾರ ಗಗನೇಚರಃ ॥ ೧ ॥

ಸ ಲಕ್ಷಂ ವರ್ಷಲಕ್ಷಾಣಾಮವ್ಯಾಹತಬಲೇಂದ್ರಿಯಃ ।
ಸ್ತೂಯಮಾನೋ ಮಹಾಯೋಗೀ ಮುನಿಭಿಃ ಸಿದ್ಧಚಾರಣೈಃ ॥ ೨ ॥

ಕುಲಾಚಲೇಂದ್ರದ್ರೋಣೀಷು ನಾನಾಸಂಕಲ್ಪಸಿದ್ಧಿಷು ।
ರೇಮೇ ವಿದ್ಯಾಧರಸ್ತ್ರೀಭಿರ್ಗಾಪಯನ್ಹರಿಮೀಶ್ವರಮ್ ॥ ೩ ॥

ಏಕದಾ ಸ ವಿಮಾನೇನ ವಿಷ್ಣುದತ್ತೇನ ಭಾಸ್ವತಾ ।
ಗಿರಿಶಂ ದದೃಶೇ ಗಚ್ಛನ್ಪರೀತಂ ಸಿದ್ಧಚಾರಣೈಃ ॥ ೪ ॥

ಆಲಿಂಗ್ಯಾಂಕೀಕೃತಾಂ ದೇವೀಂ ಬಾಹುನಾ ಮುನಿಸಂಸದಿ ।
ಉವಾಚ ದೇವ್ಯಾಃ ಶೃಣ್ವಂತ್ಯಾ ಜಹಾಸೋಚ್ಚೈಸ್ತದಂತಿಕೇ ॥ ೫ ॥

ಚಿತ್ರಕೇತುರುವಾಚ

ಏಷ ಲೋಕಗುರುಃ ಸಾಕ್ಷಾದ್ಧರ್ಮಂ ವಕ್ತಾ ಶರೀರಿಣಾಮ್ ।
ಆಸ್ತೇ ಮುಖ್ಯಃ ಸಭಾಯಾಂ ವೈ ಮಿಥುನೀಭೂಯ ಭಾರ್ಯಯಾ ॥ ೬ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ! ವಿದ್ಯಾಧರ ಚಿತ್ರಕೇತುವು ಸಂಕರ್ಷಣ ಭಗವಂತನು ಅಂತರ್ಧಾನ ಹೊಂದಿದ ದಿಕ್ಕಿನ ಕಡೆಗೆ ನಮಸ್ಕಾರಮಾಡಿ ಆಕಾಶಮಾರ್ಗದಲ್ಲಿ ಯಥೇಚ್ಛವಾಗಿ ಸಂಚರಿಸತೊಡಗಿದನು. ॥ ೧ ॥ ಮಹಾಯೋಗಿಯಾದ ಚಿತ್ರಕೇತುವು ಕೋಟ್ಯಂತರ ವರ್ಷಗಳವರೆಗೆ ಎಲ್ಲ ವಿಧದ ಸಂಕಲ್ಪಗಳನ್ನು ಪೂರ್ಣಗೊಳಿಸುವ ಸುಮೇರು ಪರ್ವತದ ತಪ್ಪಲುಗಳಲ್ಲಿ ವಿಹರಿಸುತ್ತಿದ್ದನು. ಅವನ ದೇಹಬಲ ಮತ್ತು ಇಂದ್ರಿಯ ಬಲಗಳು ಎಂದೂ ಕುಂದದೆ ಹಾಗೆಯೇ ಇತ್ತು. ದೊಡ್ಡ-ದೊಡ್ಡ ಮುನಿಗಳೂ, ಸಿದ್ಧರೂ, ಚಾರಣರೂ ಆತನನ್ನು ಸ್ತುತಿಸುತ್ತಿದ್ದರು. ಅವನ ಪ್ರೇರಣೆಯಂತೆ ವಿದ್ಯಾಧರರ ಸ್ತ್ರೀಯರು ಅವನ ಮುಂದೆ ಸರ್ವಶಕ್ತನಾದ ಭಗವಂತನ ಗುಣಗಳನ್ನೂ ಹಾಗೂ ಲೀಲೆಗಳನ್ನೂ ಗಾನ ಮಾಡುತ್ತಿದ್ದರು. ॥ ೨-೩ ॥ ಒಂದುದಿನ ಚಿತ್ರಕೇತುವು ಭಗವಂತನು ಕೊಟ್ಟಿರುವ ತೇಜೋಮಯ ವಿಮಾನದಲ್ಲಿ ಕುಳಿತು ಸಂಚರಿಸುತ್ತಿದ್ದಾಗ ಭಗವಾನ್ ಶಂಕರನನ್ನು ನೋಡಿದನು. ಆ ಪರಮೇಶ್ವರನನ್ನು ಸಿದ್ಧ-ಚಾರಣರು ಸುತ್ತುವರಿದು ಸೇವಿಸುತ್ತಿದ್ದರು. ಪರಶಿವನು ದೊಡ್ಡ-ದೊಡ್ಡ ಋಷಿಗಳ ದಿವ್ಯಸಭೆಯಲ್ಲಿ ಕುಳಿತಿದ್ದು, ಭಗವತಿ ಪಾರ್ವತಿಯನ್ನು ತನ್ನ ತೊಡೆಯಲ್ಲಿ ಕುಳ್ಳಿರಿಸಿಕೊಂಡು ಒಂದು ಕೈಯಿಂದ ಆಕೆಯನ್ನು ಆಲಿಂಗಿಸಿದ್ದನು. ಚಿತ್ರಕೇತುವು ಇದನ್ನು ನೋಡಿ ವಿಮಾನದಲ್ಲಿ ಕುಳಿತುಕೊಂಡೇ ಅವನ ಬಳಿಗೆ ಹೋಗಿ ಪಾರ್ವತಿದೇವಿಯು ಕೇಳುವ ಹಾಗೇ ಗಟ್ಟಿಯಾಗಿ ನಗುತ್ತಾ ಇಂತೆಂದನು. ॥ ೪-೫ ॥

ಚಿತ್ರಕೇತುವು ಹೇಳುತ್ತಾನೆ – ಆಹಾ! ಈತನು ಜಗತ್ತಿನ ಎಲ್ಲ ಜೀವಿಗಳಿಗೂ ಧರ್ಮವನ್ನು ಬೋಧಿಸುವ ಜಗದ್ಗುರುವು. ಸರ್ವ ಪ್ರಾಣಿಗಳಲ್ಲಿಯೂ ಶ್ರೇಷ್ಠನಾದವನು. ಆದರೂ ತುಂಬಿದ ಸಭೆಯಲ್ಲಿ ಪತ್ನಿಯನ್ನು ಜೊತೆಗೂಡಿ ಕುಳಿತಿರುವನು. ॥ ೬ ॥

ಜಟಾಧರಸ್ತೀವ್ರತಪಾ ಬ್ರಹ್ಮವಾದಿಸಭಾಪತಿಃ ।
ಅಂಕೀಕೃತ್ಯ ಸ್ತ್ರಿಯಂ ಚಾಸ್ತೇ ಗತಹ್ರೀಃ ಪ್ರಾಕೃತೋ ಯಥಾ ॥ ೭ ॥

ಪ್ರಾಯಶಃ ಪ್ರಾಕೃತಾಶ್ಚಾಪಿ ಸ್ತ್ರಿಯಂ ರಹಸಿ ಬಿಭ್ರತಿ ।
ಅಯಂ ಮಹಾವ್ರತಧರೋ ಬಿಭರ್ತಿ ಸದಸಿ ಸ್ತ್ರಿಯಮ್ ॥ ೮ ॥

ಶ್ರೀಶುಕ ಉವಾಚ

ಭಗವಾನಪಿ ತಚ್ಛ್ರುತ್ವಾ ಪ್ರಹಸ್ಯಾಗಾಧಧೀರ್ನೃಪ ।
ತೂಷ್ಣೀಂ ಬಭೂವ ಸದಸಿ ಸಭ್ಯಾಶ್ಚ ತದನುವ್ರತಾಃ ॥ ೯ ॥

ಇತ್ಯತದ್ವೀರ್ಯವಿದುಷಿ ಬ್ರುವಾಣೇ ಬಹ್ವಶೋಭನಮ್ ।
ರುಷಾಽಽಹ ದೇವೀ ಧೃಷ್ಟಾಯ ನಿರ್ಜಿತಾತ್ಮಾಭಿಮಾನಿನೇ ॥ ೧೦ ॥

ಪಾರ್ವತ್ಯುವಾಚ

ಅಯಂ ಕಿಮಧುನಾ ಲೋಕೇ ಶಾಸ್ತಾ ದಂಡಧರಃ ಪ್ರಭುಃ ।
ಅಸ್ಮದ್ವಿಧಾನಾಂ ದುಷ್ಟಾನಾಂ ನಿರ್ಲಜ್ಜಾನಾಂ ಚ ವಿಪ್ರಕೃತ್ ॥ ೧೧ ॥

ನ ವೇದ ಧರ್ಮಂ ಕಿಲ ಪದ್ಮಯೋನಿ-
ರ್ನ ಬ್ರಹ್ಮಪುತ್ರಾ ಭೃಗುನಾರದಾದ್ಯಾಃ ।
ನ ವೈ ಕುಮಾರಃ ಕಪಿಲೋ ಮನುಶ್ಚ
ಯೇ ನೋ ನಿಷೇಧಂತ್ಯತಿವರ್ತಿನಂ ಹರಮ್ ॥ ೧೨ ॥

ಏಷಾಮನುಧ್ಯೇಯಪದಾಬ್ಜಯುಗ್ಮಂ
ಜಗದ್ಗುರುಂ ಮಂಗಲಮಂಗಲಂ ಸ್ವಯಮ್ ।
ಯಃ ಕ್ಷತ್ರಬಂಧುಃ ಪರಿಭೂಯ ಸೂರೀನ್
ಪ್ರಶಾಸ್ತಿ ಧೃಷ್ಟಸ್ತದಯಂ ಹಿ ದಂಡ್ಯಃ ॥ ೧೩ ॥

ನಾಯಮರ್ಹತಿ ವೈಕುಂಠಪಾದಮೂಲೋಪಸರ್ಪಣಮ್ ।
ಸಂಭಾವಿತಮತಿಃ ಸ್ತಬ್ಧಃ ಸಾಧುಭಿಃ ಪರ್ಯುಪಾಸಿತಮ್ ॥ ೧೪ ॥

ಅತಃ ಪಾಪೀಯಸೀಂ
ಯೋನಿಮಾಸುರೀಂ ಯಾಹಿ ದುರ್ಮತೇ ।
ಯಥೇಹ ಭೂಯೋ ಮಹತಾಂ
ನ ಕರ್ತಾ ಪುತ್ರ ಕಿಲ್ಬಿಷಮ್ ॥ ೧೫ ॥

ಶ್ರೀಶುಕ ಉವಾಚ

ಏವಂ ಶಪ್ತಶ್ಚಿತ್ರಕೇತುರ್ವಿಮಾನಾದವರುಹ್ಯ ಸಃ ।
ಪ್ರಸಾದಯಾಮಾಸ ಸತೀಂ ಮೂರ್ಧ್ನಾ ನಮ್ರೇಣ ಭಾರತ ॥ ೧೬ ॥

ಜಟೆಯನ್ನು ಧರಿಸಿದ್ದಾನೆ. ಬಹಳ ದೊಡ್ಡ ತಪಸ್ವಿಯಾಗಿದ್ದಾನೆ. ಬ್ರಹ್ಮವಾದಿಗಳ ಸಭೆಗೆ ಅಧಿಪತಿಯಾಗಿಯೂ ಸಾಧಾರಣ ಮನುಷ್ಯನಂತೆ ನಿರ್ಲಜ್ಜನಾಗಿ ತೊಡೆಯಲ್ಲಿ ಹೆಂಡತಿಯನ್ನು ಕುಳ್ಳಿರಿಸಿಕೊಂಡಿರುವನು. ॥ ೭ ॥ ಸಾಮಾನ್ಯವಾಗಿ ಸಾಧಾರಣ ಮನುಷ್ಯರು ಏಕಾಂತದಲ್ಲೇ ಸ್ತ್ರೀಯರೊಂದಿಗೆ ಎದ್ದು-ಕುಳಿತಿರುತ್ತಾರೆ. ಆದರೆ ಇವನು ಇಷ್ಟು ದೊಡ್ಡ ವ್ರತಧಾರಿಯಾಗಿದ್ದರೂ ತುಂಬಿದ ಸಭೆಯಲ್ಲಿ ಆಕೆಯನ್ನು ಧರಿಸಿ ಕುಳಿತಿರುವನಲ್ಲ! ॥ ೮ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿದ್ರಾಜನೇ! ಭಗವಾನ್ ಶಂಕರನ ಬುದ್ಧಿಯು ಅಗಾಧವಾದುದು. ಚಿತ್ರಕೇತುವಿನ ಈ ಕುಚೋದ್ಯದ ಮಾತನ್ನು ಕೇಳಿಯೂ ಅವನು ನಕ್ಕು ಸುಮ್ಮನಾದನು. ಆ ಸಭೆಯಲ್ಲಿ ಕುಳಿತಿರುವ ಅವನ ಅನುಯಾಯಿ ಸದಸ್ಯರೂ ಮೌನವಾಗಿದ್ದರು. ಚಿತ್ರಕೇತುವಿಗೆ ಭಗವಾನ್ ಶಂಕರನ ಮಹಿಮೆ ತಿಳಿದಿರಲಿಲ್ಲ. ಅದರಿಂದ ಅವನು ಶಿವನಕುರಿತು ತೋಚಿದಂತೆ ಗಳಹುತ್ತಿದ್ದನು. ಅವನಲ್ಲಿ 'ನಾನು ಜಿತೇಂದ್ರಿಯನಾಗಿದ್ದೇನೆ' ಎಂಬುದರ ದುರಹಂಕಾರವುಂಟಾಗಿತ್ತು. ಪಾರ್ವತೀದೇವಿಯು ಅವನ ಉದ್ಧಟತನವನ್ನು ಕಂಡು ಕ್ರೋಧಗೊಂಡು ಹೀಗೆಂದಳು. ॥ ೯–೧೦ ॥

ಪಾರ್ವತೀದೇವಿಯು ಹೇಳಿದಳು – ಆಹಾ! ನಮ್ಮಂತಹ ದುಷ್ಟರೂ, ನಾಚಿಕೆಗೆಟ್ಟವರೂ ಆದ ಜನರ ಮೇಲೆ ದಂಡಾಧಿಕಾರಿಗಳಾಗಿ ಶಾಸನ ಮತ್ತು ತಿರಸ್ಕಾರವನ್ನು ಮಾಡುವ ಮಹಾಪ್ರಭುಗಳು ಈ ಜಗತ್ತಿನಲ್ಲಿ ಇವರೊಬ್ಬರೇ ಎಂದು ಕಾಣುತ್ತದೆ. ॥ ೧೧ ॥ ಅಯ್ಯೋ ಪಾಪ! ಬ್ರಹ್ಮದೇವರಿಗೆ, ಭೃಗು-ನಾರದರು, ಸನಕರೇ ಮುಂತಾದ ಬ್ರಹ್ಮಪುತ್ರರಿಗೆ, ಪರಮಋಷಿಗಳಿಗೆ, ಕಪಿಲರು ಮತ್ತು ಮನು ಮುಂತಾದ ಮಹಾಪುರುಷರಿಗೆ ಧರ್ಮರಹಸ್ಯವು ಗೊತ್ತೇ ಇಲ್ಲ. ಅದಕ್ಕೆ ಅವರು ಧರ್ಮಮರ್ಯಾದೆಯನ್ನು ಮೀರಿ ನಡೆದಿರುವ ಭಗವಾನ್ ಶಿವನನ್ನು ಈ ಕಾರ್ಯದಿಂದ ತಡೆಯುತ್ತಿಲ್ಲ. ॥ ೧೨ ॥ ಈ ಮಹಾತ್ಮರೆಲ್ಲರೂ ಧ್ಯಾನಮಾಡಲು ಯೋಗ್ಯವಾದ ಅಡಿದಾವರೆಗಳುಳ್ಳವನಾಗಿ, ಮಂಗಳಗಳಿಗೂ ಮಂಗಳವನ್ನುಂಟುಮಾಡುವ ಜಗದ್ಗುರುವಾದ ಭಗವಾನ್ ಶಂಕರನನ್ನೂ ಹಾಗೂ ಅವನ ಅನುಯಾಯಿಗಳಾದ ಮಹಾತ್ಮರನ್ನೂ ಈ ಕ್ಷತ್ರಿಯಾಧಮನು ತಿರಸ್ಕರಿಸಿ ಅವರ ಮೇಲೆ ಶಾಸನವನ್ನು ಮಾಡಲು ಪ್ರಯತ್ನಿಸಿದ್ದಾನೆ. ಆದರಿಂದ ಈ ದುರುಳನು ದಂಡನೆಗೆ ಯೋಗ್ಯನು. ॥ ೧೩ ॥ ತಾನು ಬಹಳ ದೊಡ್ಡವನೆಂದು ತಿಳಿದಿರುವ ಈ ದುರಹಂಕಾರಿಯಾದ ಮೂರ್ಖನು ಸಾಧುಶ್ರೇಷ್ಠರೆಲ್ಲರೂ ಉಪಾಸಿಸುತ್ತಿರುವ ಭಗವಾನ್ ಶ್ರೀಹರಿಯ ಪಾದಾರವಿಂದಗಳಲ್ಲಿ ಇರಲು ಯೋಗ್ಯನಲ್ಲ. ॥ ೧೪ ॥ ಎಲವೋ ದುರ್ಬುದ್ಧಿಯವನೇ! ನೀನು ಪಾಪಮಯ ಅಸುರಯೋನಿಯಲ್ಲಿ ಹೋಗಿ ಬೀಳು. ಹೀಗಾದರೆ ನೀನು ಮತ್ತೆ ಹೀಗೆ ಮಹಾಪುರುಷರಲ್ಲಿ ಅಪರಾಧವನ್ನು ಮಾಡಲಾರೆ. ॥ ೧೫ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ರಾಜನೇ! ಪಾರ್ವತೀದೇವಿಯು ಹೀಗೆ ಶಾಪವನ್ನು ಕೊಟ್ಟಾಗ ಚಿತ್ರಕೇತುವು ಒಡನೆಯೇ ವಿಮಾನದಿಂದಿಳಿದು ತಲೆತಗ್ಗಿಸಿ ನಮಸ್ಕರಿಸುತ್ತಾ ಆಕೆಯನ್ನು ಪ್ರಸನ್ನಗೊಳಿಸಲು ತೊಡಗಿದನು. ॥ ೧೬ ॥

ಚಿತ್ರಕೇತುರುವಾಚ

ಪ್ರತಿಗೃಹ್ಣಾಮಿ ತೇ ಶಾಪಮಾತ್ಮನೋಽಂಜಲಿನಾಂಬಿಕೇ ।
ದೇವೈರ್ಮರ್ತ್ಯಾಯ ಯತ್ಪ್ರೋಕ್ತಂ ಪೂರ್ವದಿಷ್ಟಂ ಹಿ ತಸ್ಯ ತತ್ ॥ ೧೭ ॥

ಸಂಸಾರಚಕ್ರ ಏತಸ್ಮಿನ್ ಜಂತುರಜ್ಞಾನಮೋಹಿತಃ ।
ಭ್ರಾಮ್ಯನ್ಸುಖಂ ಚ ದುಃಖಂ ಚ ಭುಂಕ್ತೇ ಸರ್ವತ್ರ ಸರ್ವದಾ ॥ ೧೮ ॥

ನೈವಾತ್ಮಾ ನ ಪರಶ್ಚಾಪಿ ಕರ್ತಾ ಸ್ಯಾತ್ಸುಖದುಃಖಯೋಃ ।
ಕರ್ತಾರಂ ಮನ್ಯತೇಽತ್ರಾಜ್ಞ ಆತ್ಮಾನಂ ಪರಮೇವ ಚ ॥ ೧೯ ॥

ಗುಣಪ್ರವಾಹ ಏತಸ್ಮಿನ್ಕಃ ಶಾಪಃ ಕೋ ನ್ವನುಗ್ರಹಃ ।
ಕಃ ಸ್ವರ್ಗೋ ನರಕಃ ಕೋ ವಾ ಕಿಂ ಸುಖಂ ದುಃಖಮೇವ ವಾ ॥ ೨೦ ॥

ಏಕಃ ಸೃಜತಿ ಭೂತಾನಿ ಭಗವಾನಾತ್ಮಮಾಯಯಾ ।
ಏಷಾಂ ಬಂಧಂ ಚ ಮೋಕ್ಷಂ ಚ ಸುಖಂ ದುಃಖಂ ಚ ನಿಷ್ಕಲಃ ॥ ೨೧ ॥

ನ ತಸ್ಯ ಕಶ್ಚಿದ್ದಯಿತಃ ಪ್ರತೀಪೋ
ನ ಜ್ಞಾತಿಬಂಧುರ್ನ ಪರೋ ನ ಚ ಸ್ವಃ ।
ಸಮಸ್ಯ ಸರ್ವತ್ರ ನಿರಂಜನಸ್ಯ
ಸುಖೇ ನ ರಾಗಃ ಕುತ ಏವ ರೋಷಃ ॥ ೨೨ ॥

ತಥಾಪಿ ತಚ್ಛಕ್ತಿವಿಸರ್ಗ ಏಷಾಂ
ಸುಖಾಯ ದುಃಖಾಯ ಹಿತಾಹಿತಾಯ ।
ಬಂಧಾಯ ಮೋಕ್ಷಾಯ ಚ ಮೃತ್ಯುಜನ್ಮನೋಃ
ಶರೀರಿಣಾಂ ಸಂಸೃತಯೇಽವಕಲ್ಪತೇ ॥ ೨೩ ॥

ಅಥ ಪ್ರಸಾದಯೇ ನ ತ್ವಾಂ ಶಾಪಮೋಕ್ಷಾಯ ಭಾಮಿನಿ ।
ಯನ್ಮನ್ಯಸೇ ಹ್ಯಸಾಧೂಕ್ತಂ ಮಮ ತತ್ಕ್ಷಮ್ಯತಾಂ ಸತಿ ॥ ೨೪ ॥

ಶ್ರೀಶುಕ ಉವಾಚ

ಇತಿ ಪ್ರಸಾದ್ಯ ಗಿರಿಶೌ ಚಿತ್ರಕೇತುರರಿಂದಮ ।
ಜಗಾಮ ಸ್ವವಿಮಾನೇನ ಪಶ್ಯತೋಃ ಸ್ಮಯತೋಸ್ತಯೋಃ ॥ ೨೫ ॥

ತತಸ್ತು ಭಗವಾನ್ರುದ್ರೋ ರುದ್ರಾಣೀಮಿದಮಬ್ರವೀತ್ ।
ದೇವರ್ಷಿದೈತ್ಯಸಿದ್ಧಾನಾಂ ಪಾರ್ಷದಾನಾಂ ಚ ಶೃಣ್ವತಾಮ್ ॥ ೨೬ ॥

ಶ್ರೀರುದ್ರ ಉವಾಚ

ದೃಷ್ಟವತ್ಯಸಿ ಸುಶ್ರೋಣಿ ಹರೇರದ್ಭುತಕರ್ಮಣಃ ।
ಮಾಹಾತ್ಮ್ಯಂ ಭೃತ್ಯಭೃತ್ಯಾನಾಂ ನಿಃಸ್ಪೃಹಾಣಾಂ ಮಹಾತ್ಮನಾಮ್ ॥ ೨೭ ॥

ಚಿತ್ರಕೇತುವು ಹೇಳಿದನು – ಓ ಜಗನ್ಮಾತೆಯೇ! ನಿನ್ನ ಈ ಶಾಪವನ್ನು ನಾನು ಕೈಜೋಡಿಸಿಕೊಂಡು ವಿನಯದಿಂದ ಸ್ವೀಕರಿಸುತ್ತೇನೆ. ಏಕೆಂದರೆ, ದೇವತೆಗಳು ಮನುಷ್ಯರಿಗೆ ಏನಾದರೂ ನುಡಿದರೆ ಅದು ಅವರ ಪ್ರಾರಬ್ಧಕ್ಕನುಗುಣವಾಗಿ ಸಿಕ್ಕುವ ಫಲದ ಪೂರ್ವಸೂಚನೆ ಮಾತ್ರವಾಗಿರುತ್ತದೆ. ॥ ೧೭ ॥ ದೇವಿ! ಈ ಜೀವನು ಅಜ್ಞಾನದಿಂದ ಮೋಹಿತನಾದ್ದರಿಂದಲೇ ಈ ಸಂಸಾರಚಕ್ರದಲ್ಲಿ ಅಲೆದಾಡುತ್ತಾ ಸುಖ ಮತ್ತು ದುಃಖಗಳನ್ನು ಭೋಗಿಸುತ್ತಾ ಇರುತ್ತಾನೆ. ॥ ೧೮ ॥ ತಾಯೇ! ಸುಖವನ್ನು ಮತ್ತು ದುಃಖವನ್ನು ಕೊಡುವವನು ತಾನೂ ಅಲ್ಲ, ಇತರರೂ ಅಲ್ಲ, ಅಜ್ಞಾನಿಗಳಾದವರೇ ತನ್ನನ್ನು ಅಥವಾ ಇತರರನ್ನು ಸುಖ-ದುಃಖದ ಕರ್ತೃಗಳೆಂದು ತಿಳಿಯುತ್ತಾರೆ. ॥ ೧೯ ॥ ಈ ಜಗತ್ತು ಸತ್ತ್ವ, ರಜ, ತಮಗಳೆಂಬ ತ್ರಿಗುಣಗಳ ಸ್ವಾಭಾವಿಕ ಪ್ರವಾಹವೇ ಆಗಿದೆ. ಇದರಲ್ಲಿ ಶಾಪವೇನು? ಅನುಗ್ರಹವೇನು? ಸ್ವರ್ಗವೇನು? ನರಕವೇನು? ಸುಖವೇನು? ದುಃಖವೇನು? ॥ ೨೦ ॥ ಪರಿಪೂರ್ಣನಾದ ಪರಮಾತ್ಮನೇ ಬೇರೆ ಯಾರ ಸಹಾಯವೂ ಇಲ್ಲದೆ ತನ್ನ ಆತ್ಮಸ್ವರೂಪಿಣಿಯಾದ ಮಾಯಾಶಕ್ತಿಯಿಂದ ಸಮಸ್ತ ಪ್ರಾಣಿಗಳನ್ನು ಹಾಗೂ ಅವರ ಬಂಧನ, ಮೋಕ್ಷ, ಸುಖ, ದುಃಖ ಇವುಗಳನ್ನು ರಚಿಸುತ್ತಾನೆ. ॥ ೨೧ ॥ ಅಮ್ಮಾ! ಭಗವಾನ್ ಶ್ರೀಹರಿಯು ಎಲ್ಲದರಲ್ಲಿ ಸಮನೂ ಮತ್ತು ಮಾಯೆಯ ಮಲದ ಸೋಂಕು ಇಲ್ಲದವನು. ಅವನಿಗೆ ಯಾರೂ ಪ್ರಿಯನೂ ಇಲ್ಲ, ಅಪ್ರಿಯನೂ ಇಲ್ಲ. ಜ್ಞಾತಿ-ಬಂಧು, ತನ್ನವರು-ಪರರೂ ಎಂಬುದೂ ಇಲ್ಲ. ಸುಖದಲ್ಲಿ ಪ್ರೀತಿಯಿಲ್ಲ. ರೋಷವಾದರೂ ಎಲ್ಲಿಂದ ಬಂದೀತು? ॥ ೨೨ ॥ ಆದರೂ ಅವನ ಮಾಯಾಶಕ್ತಿಯ ಕಾರ್ಯಗಳಿಂದ ಪಾಪ-ಪುಣ್ಯಗಳೇ ಪ್ರಾಣಿಗಳ ಸುಖ-ದುಃಖ, ಹಿತ-ಅಹಿತ, ಬಂಧ-ಮೋಕ್ಷ, ಜನ್ಮ-ಮೃತ್ಯು ಮತ್ತು ಸಂಸಾರದಲ್ಲಿ ಬಂದುಹೋಗಲು ಕಾರಣವಾಗುತ್ತವೆ. ॥ ೨೩ ॥ ಓ ಪತಿಪ್ರಾಣೆಯಾದ ದೇವಿಯೇ! ನನ್ನನ್ನು ಶಾಪದಿಂದ ಬಿಡುಗಡೆ ಮಾಡು' ಎಂದು ನಿನ್ನನ್ನು ಬೇಡುತ್ತಿಲ್ಲ. ಕೆಟ್ಟದ್ದೆಂದು ನಿನಗೆ ಅನಿಸಿರುವ ನನ್ನ ಮಾತುಗಳನ್ನು ಕೃಪೆಯಿಟ್ಟು ಕ್ಷಮಿಸಬೇಕೆಂದೇ ನಾನು ಬಯಸುತ್ತೇನೆ. ॥ ೨೪ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಎಲೈ ಶತ್ರು ಹಂತಕನೇ! ಚಿತ್ರಕೇತುವು ಹೀಗೆ ಪಾರ್ವತೀ-ಪರಮೇಶ್ವರರನ್ನು ಪ್ರಸನ್ನಗೊಳಿಸಿ ಅವರು ನಸುನಗುತ್ತಾ ನೋಡುತ್ತಿರುವಂತೆಯೇ ತನ್ನ ವಿಮಾನವನ್ನೇರಿ ಹೊರಟುಹೋದನು. ॥ ೨೫ ॥ ಆಗ ಭಗವಾನ್ ರುದ್ರದೇವರು – ದೇವತೆಗಳು, ಋಷಿಗಳು, ದೈತ್ಯರು, ಸಿದ್ಧರು ಮತ್ತು ಪಾರ್ಷದರ ಮುಂದೆಯೇ ಭಗವತೀ ಪಾರ್ವತಿಗೆ ಹೀಗೆಂದರು – ॥ ೨೬ ॥

ಭಗವಾನ್ ಶಂಕರನು ಹೇಳಿದನು – ಎಲೈ ಸುಂದರಿಯೇ! ದಿವ್ಯಲೀಲಾವಿಹಾರೀ ಭಗವಂತನ ನಿಸ್ಪೃಹರೂ, ಉದಾರ ಹೃದಯರೂ ಆದ ದಾಸಾನುದಾಸರ ಮಹಿಮೆಯನ್ನು ನೀನು ಕಣ್ಣಾರೆ ನೋಡಿದೆಯಲ್ಲ. ॥ ೨೭ ॥ ಭಗವಂತನಿಗೆ ಶರಣಾದ ಜನರು ಯಾರಿಗೂ ಹೆದರುವುದಿಲ್ಲ. ಏಕೆಂದರೆ, ಅವರಿಗೆ ಸ್ವರ್ಗ, ಮೋಕ್ಷ ನರಕದಲ್ಲಿಯೂ ಕೂಡ ಕೇವಲ ಶ್ರೀಭಗವಂತನೊಬ್ಬನದೇ ಸಮಾನ

ನಾರಾಯಣಪರಾಃ ಸರ್ವೇ ನ ಕುತಶ್ಚನ ಬಿಭ್ಯತಿ ।
ಸ್ವರ್ಗಾಪವರ್ಗನರಕೇಷ್ವಪಿ ತುಲ್ಯಾರ್ಥದರ್ಶಿನಃ ॥ ೨೮ ॥

ದೇಹಿನಾಂ ದೇಹಸಂಯೋಗಾದ್ದ್ವಂದ್ವಾನೀಶ್ವರಲೀಲಯಾ ।
ಸುಖಂ ದುಃಖಂ ಮೃತಿರ್ಜನ್ಮ ಶಾಪೋಽನುಗ್ರಹ ಏವ ಚ ॥ ೨೯ ॥

ಅವಿವೇಕಕೃತಃ ಪುಂಸೋ ಹ್ಯರ್ಥಭೇದ ಇವಾತ್ಮನಿ ।
ಗುಣದೋಷವಿಕಲ್ಪಶ್ಚ ಭಿದೇವ ಸ್ರಜಿವತ್ಕೃತಃ ॥ ೩೦ ॥

ವಾಸುದೇವೇ ಭಗವತಿ ಭಕ್ತಿಮುದ್ವಹತಾಂ ನೃಣಾಮ್ ।
ಜ್ಞಾನವೈರಾಗ್ಯವೀರ್ಯಾಣಾಂ ನೇಹ ಕಶ್ಚಿದ್ವ್ಯಪಾಶ್ರಯಃ ॥ ೩೧ ॥

ನಾಹಂ ವಿರಿಂಚೋ ನ ಕುಮಾರನಾರದೌ
ನ ಬ್ರಹ್ಮಪುತ್ರಾ ಮುನಯಃ ಸುರೇಶಾಃ ।
ವಿದಾಮ ಯಸ್ಯೇಹಿತಮಂಶಕಾಂಶಕಾ
ನ ತತ್ಸ್ವರೂಪಂ ಪೃಥಗೀಶಮಾನಿನಃ ॥ ೩೨ ॥

ನ ಹ್ಯಸ್ಯಾಸ್ತಿ ಪ್ರಿಯಃ ಕಶ್ಚಿನ್ನಾಪ್ರಿಯಃ ಸ್ವಃ ಪರೋಽಪಿ ವಾ ।
ಆತ್ಮತ್ವಾತ್ಸರ್ವಭೂತಾನಾಂ ಸರ್ವಭೂತಪ್ರಿಯೋ ಹರಿಃ ॥ ೩೩ ॥

ತಸ್ಯ ಚಾಯಂ ಮಹಾಭಾಗಶ್ಚಿತ್ರಕೇತುಃ ಪ್ರಿಯೋಽನುಗಃ ।
ಸರ್ವತ್ರ ಸಮದೃಕ್ ಶಾಂತೋ ಹ್ಯಹಂ ಚೈವಾಚ್ಯುತಪ್ರಿಯಃ ॥ ೩೪ ॥

ತಸ್ಮಾನ್ನ ವಿಸ್ಮಯಃ ಕಾರ್ಯಃ ಪುರುಷೇಷು ಮಹಾತ್ಮಸು ।
ಮಹಾಪುರುಷಭಕ್ತೇಷು ಶಾಂತೇಷು ಸಮದರ್ಶಿಷು ॥ ೩೫ ॥

ಶ್ರೀಶುಕ ಉವಾಚ

ಇತಿ ಶ್ರುತ್ವಾ ಭಗವತಃ ಶಿವಸ್ಯೋಮಾಭಿಭಾಷಿತಮ್ ।
ಬಭೂವ ಶಾಂತಧೀ ರಾಜನ್ ದೇವೀ ವಿಗತವಿಸ್ಮಯಾ ॥ ೩೬ ॥

ಇತಿ ಭಾಗವತೋ ದೇವ್ಯಾಃ ಪ್ರತಿಶಪ್ತುಮಲಂತಮಃ ।
ಮೂರ್ಧ್ನಾ ಸ ಜಗೃಹೇ ಶಾಪಮೇತಾವತ್ಸಾಧುಲಕ್ಷಣಮ್ ॥ ೩೭ ॥

ಜಜ್ಞೇ ತ್ವಷ್ಟುರ್ದಕ್ಷಿಣಾಗ್ನೌ ದಾನವೀಂ ಯೋನಿಮಾಶ್ರಿತಃ ।
ವೃತ್ರ ಇತ್ಯಭಿವಿಖ್ಯಾತೋ ಜ್ಞಾನವಿಜ್ಞಾನಸಂಯುತಃ ॥ ೩೮ ॥

ಭಾವದಿಂದ ದರ್ಶನವಾಗುತ್ತಾ ಇರುತ್ತದೆ. ॥ ೨೮ ॥ ಜೀವಿಗಳಿಗೆ ಭಗವಂತನ ಲೀಲೆಯಿಂದಲೇ ದೇಹದ ಸಂಯೋಗ ಉಂಟಾದ ಕಾರಣದಿಂದಲೇ ಸುಖ-ದುಃಖ, ಜನ್ಮ-ಮರಣ, ಶಾಪ-ಅನುಗ್ರಹ ಮುಂತಾದ ದ್ವಂದ್ವಗಳು ದೊರೆಯುತ್ತವೆ. ॥ ೨೯ ॥ ಸ್ವಪ್ನದಲ್ಲಿ ಭೇದ-ಭ್ರಮೆಯಿಂದ ಸುಖ-ದುಃಖಾದಿಗಳು ಕಂಡುಬರುತ್ತವೆ ಮತ್ತು ಜಾಗ್ರತ್ ಅವಸ್ಥೆಯಲ್ಲಿ ಭ್ರಮೆಯಿಂದ ಮಾಲೆಯಲ್ಲಿಯೂ ಸರ್ಪಬುದ್ಧಿ ಉಂಟಾಗುತ್ತದೆ. ಹಾಗೆಯೇ ಮನುಷ್ಯನು ಅಜ್ಞಾನದಿಂದಲೇ ಆತ್ಮನಲ್ಲಿ ದೇವತೆಗಳು, ಮನುಷ್ಯರು ಮುಂತಾದ ಭೇದ ಹಾಗೂ ಗುಣ-ದೋಷಾದಿ ಕಲ್ಪನೆ ಮಾಡುತ್ತಾನೆ. ॥ ೩೦ ॥ ಜ್ಞಾನ ಮತ್ತು ವೈರಾಗ್ಯದ ಬಲವಿರುವವರಿಗೆ ಮತ್ತು ಭಗವಾನ್ ಶ್ರೀವಾಸುದೇವನ ಚರಣಗಳಲ್ಲಿ ಭಕ್ತಿಭಾವವಿರಿಸಿದವರಿಗೆ ಈ ಜಗತ್ತಿನಲ್ಲಿ ಇದು ಹೇಯ, ಇದು ಉಪಾದೇಯ ಎಂಬ ರಾಗ-ದ್ವೇಷ ಮಾಡುವಂತಹ ಯಾವುದೇ ವಸ್ತು ಇರುವುದಿಲ್ಲ. ॥ ೩೧ ॥ ನಾನು, ಬ್ರಹ್ಮದೇವರು, ಸನಕಾದಿಗಳು, ನಾರದರು, ಬ್ರಹ್ಮಪುತ್ರರಾದ ಭೃಗು ಮುಂತಾದ ಮುನಿಗಳು ಮತ್ತು ದೊಡ್ಡ-ದೊಡ್ಡ ದೇವತೆಗಳು – ಯಾರೂ ಭಗವಂತನ ಲೀಲೆಯ ರಹಸ್ಯವನ್ನು ತಿಳಿಯಲಾರೆವು. ಇಂತಹ ಸ್ಥಿತಿಯಲ್ಲಿ ಅವನ ಅಂಶಾಂಶರು ಮತ್ತು ತನ್ನನ್ನು ಅವನಿಂದ ಬೇರೆ ಈಶ್ವರನೆಂದು ತಿಳಿದವರು ಅವನ ಸ್ವರೂಪವನ್ನು ಹೇಗೆ ತಿಳಿಯಬಲ್ಲರು? ॥ ೩೨ ॥ ಭಗವಂತನಿಗೆ ಪ್ರಿಯರಾಗಲೀ, ಅಪ್ರಿಯರಾಗಲೀ ಯಾರೂ ಇಲ್ಲ. ಅವನಿಗೆ ಸ್ವಕೀಯನೂ, ಪರಕೀಯನೂ ಯಾರೂ ಇಲ್ಲ. ಅವನು ಎಲ್ಲ ಪ್ರಾಣಿಗಳ ಆತ್ಮನಾಗಿರುವನು. ಆದ್ದರಿಂದ ಎಲ್ಲ ಪ್ರಾಣಿಗಳ ಪ್ರಿಯತಮನಾಗಿರುವನು. ॥ ೩೩ ॥ ಪ್ರಿಯೇ! ಈ ಪರಮಭಾಗ್ಯವಂತನಾದ ಚಿತ್ರಕೇತುವು ಆ ಭಗವಂತನಿಗೆ ಪ್ರಿಯನಾದ ಅನುಚರನೂ, ಶಾಂತನೂ, ಸಮದರ್ಶಿಯೂ ಆಗಿದ್ದಾನೆ. ನಾನೂ ಕೂಡ ಭಗವಾನ್ ಶ್ರೀಹರಿಗೆ ಪ್ರಿಯನಾಗಿದ್ದೇನೆ. ॥ ೩೪ ॥ ಅದಕ್ಕಾಗಿ ಭಗವಂತನ ಪ್ರಿಯಭಕ್ತರೂ, ಶಾಂತರೂ, ಸಮದರ್ಶಿಗಳೂ, ಮಹಾತ್ಮರೂ ಆದವರ ವಿಷಯದಲ್ಲಿ ನೀನು ಯಾವ ರೀತಿಯಿಂದಲೂ ಆಶ್ಚರ್ಯಪಡಬಾರದು. ॥ ೩೫ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ! ಭಗವಾನ್ ಶಂಕರನ ಈ ಭಾಷಣವನ್ನು ಕೇಳಿ ಭಗವತಿ ಪಾರ್ವತಿಯ ಚಿತ್ತವೃತ್ತಿಯು ಶಾಂತವಾಯಿತು ಹಾಗೂ ಆಕೆಯು ಆಶ್ಚರ್ಯರಹಿತಳಾದಳು. ॥ ೩೬ ॥ ಭಾಗವತೋತ್ತಮನಾದ ಚಿತ್ರಕೇತುವು ಕೂಡ ಭಗವತೀ ಪಾರ್ವತಿಗೆ ಪ್ರತಿಶಾಪವನ್ನು ಕೊಡಲು ಸಮರ್ಥನಾಗಿದ್ದರೂ ಅವನು ಆಕೆಗೆ ಶಾಪವನ್ನು ಕೊಡದೆ ಅವಳ ಶಾಪವನ್ನು ಶಿರಸಾವಹಿಸಿಕೊಂಡನು. ಇದೇ ತಾನೇ ಸಾಧು-ಸಜ್ಜನರ ಲಕ್ಷಣವು! ॥ ೩೭ ॥ ಇದೇ ವಿದ್ಯಾಧರ ಚಿತ್ರಕೇತುವು ದಾನವ ಯೋನಿಯನ್ನು ಆಶ್ರಯಿಸಿ ತ್ವಷ್ಟನ ದಕ್ಷಿಣಾಗ್ನಿಯಿಂದ ಹುಟ್ಟಿ ವೃತ್ರಾಸುರನೆಂಬ ಹೆಸರಿನಿಂದ ಪ್ರಖ್ಯಾತನಾದನು. ಅಲ್ಲಿಯೂ ಅವನು ಭಗವತ್ ಸ್ವರೂಪದ ಜ್ಞಾನದಿಂದಲೂ, ಭಕ್ತಿಯಿಂದಲೂ ಪರಿಪೂರ್ಣನಾಗಿದ್ದನು. ॥ ೩೮ ॥ ವೃತ್ರಾಸುರನು ದೈತ್ಯಯೋನಿಯಲ್ಲಿ ಏಕೆ ಜನಿಸಿದನು? ಆ ಯೋನಿಯಲ್ಲಿಯೂ ಅವನಿಗೆ ಭಗವಂತನ ಅಂತಹ

ಏತತ್ತೇ ಸರ್ವಮಾಖ್ಯಾತಂ ಯನ್ಮಾಂ ತ್ವಂ ಪರಿಪೃಚ್ಛಸಿ ।
ವೃತ್ರಸ್ಯಾಸುರಜಾತೇಶ್ಚ ಕಾರಣಂ ಭಗವನ್ಮತೇಃ ॥ ೩೯ ॥

ಇತಿಹಾಸಮಿಮಂ ಪುಣ್ಯಂ ಚಿತ್ರಕೇತೋರ್ಮಹಾತ್ಮನಃ ।
ಮಾಹಾತ್ಮ್ಯಂ ವಿಷ್ಣುಭಕ್ತಾನಾಂ ಶ್ರುತ್ವಾ ಬಂಧಾದ್ವಿಮುಚ್ಯತೇ ॥ ೪೦ ॥

ಯ ಏತತ್ಪ್ರಾತರುತ್ಥಾಯ ಶ್ರದ್ಧಯಾ ವಾಗ್ಯತಃ ಪಠೇತ್ ।
ಇತಿಹಾಸಂ ಹರಿಂ ಸ್ಮೃತ್ವಾ ಸ ಯಾತಿ ಪರಮಾಂ ಗತಿಮ್ ॥ ೪೧ ॥

ಭಕ್ತಿಯು ಹೇಗೆ ದೊರೆಯಿತು ? ಎಂದು ನೀನು ಪ್ರಶ್ನೆ ಮಾಡಿದ್ದೆ. ಅದಕ್ಕೆ ವಿವರವಾದ ಉತ್ತರವನ್ನು ನಾನು ಕೊಟ್ಟಾಯಿತು. ॥ ೩೯ ॥ ಮಹಾತ್ಮಾ ಚಿತ್ರಕೇತುವಿನ ಈ ಪವಿತ್ರ ಇತಿಹಾಸವು ಕೇವಲ ಅವನಷ್ಟೇ ಅಲ್ಲ, ಸಮಸ್ತ ವಿಷ್ಣುಭಕ್ತರ ಮಹಾತ್ಮ್ಯವಾಗಿದೆ. ಇದನ್ನು ಕೇಳುವವನು ಎಲ್ಲ ಬಂಧನಗಳಿಂದ ಮುಕ್ತನಾಗಿ ಹೋಗುತ್ತಾನೆ. ॥ ೪೦ ॥ ಪ್ರಾತಃಕಾಲದಲ್ಲಿ ಎದ್ದು ಮೌನದಿಂದಿದ್ದು, ಶ್ರದ್ಧೆಯಿಂದ ಭಗವಂತನ ಸ್ಮರಣೆ ಮಾಡುತ್ತಾ ಈ ಇತಿಹಾಸವನ್ನು ಓದುವವನು ಪರಮಗತಿಯನ್ನು ಹೊಂದುವನು. ॥ ೪೧ ॥

ಹದಿನೇಳನೆಯ ಅಧ್ಯಾಯವು ಮುಗಿಯಿತು. ॥ ೧೭ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಷಷ್ಠಸ್ಕಂಧೇ
ಚಿತ್ರಕೇತುಶಾಪೋ ನಾಮ ಸಪ್ತದಶೋಽಧ್ಯಾಯಃ ॥ ೧೭ ॥

ಹದಿನೆಂಟನೆಯ ಅಧ್ಯಾಯ

ಅದಿತಿ ಮತ್ತು ದಿತಿ ಇವರ ಸಂತಾನಗಳು ಮತ್ತು ಮರುದ್ಗಣಗಳ ಉತ್ಪತ್ತಿಯ ವರ್ಣನೆ

ಶ್ರೀಶುಕ ಉವಾಚ

ಪೃಶ್ನಿಸ್ತು ಪತ್ನೀ ಸವಿತುಃ
ಸಾವಿತ್ರೀಂ ವ್ಯಾಹೃತಿಂ ತ್ರಯೀಮ್ ।
ಅಗ್ನಿಹೋತ್ರಂ ಪಶುಂ ಸೋಮಂ
ಚಾತುರ್ಮಾಸ್ಯಂ ಮಹಾಮಖಾನ್ ॥ ೧ ॥

ಸಿದ್ಧಿರ್ಭಗಸ್ಯ ಭಾರ್ಯಾಂಗ ಮಹಿಮಾನಂ ವಿಭುಂ ಪ್ರಭುಮ್ ।
ಆಶಿಷಂ ಚ ವರಾರೋಹಾಂ ಕನ್ಯಾಂ ಪ್ರಾಸೂತ ಸುವ್ರತಾಮ್ ॥ ೨ ॥

ಧಾತುಃ ಕುಹೂಃ ಸಿನೀವಾಲೀ ರಾಕಾ ಚಾನುಮತಿಸ್ತಥಾ ।
ಸಾಯಂ ದರ್ಶಮಥ ಪ್ರಾತಃ ಪೂರ್ಣಮಾಸಮನುಕ್ರಮಾತ್ ॥ ೩ ॥

ಅಗ್ನೀನ್ಪುರೀಷ್ಯಾನಾಧತ್ತ ಕ್ರಿಯಾಯಾಂ ಸಮನಂತರಃ ।
ಚರ್ಷಣೀ ವರುಣಸ್ಯಾಸೀದ್ಯಸ್ಯಾಂ ಜಾತೋ ಭೃಗುಃ ಪುನಃ ॥ ೪ ॥

ವಾಲ್ಮೀಕಿಶ್ಚ ಮಹಾಯೋಗೀ ವಲ್ಮೀಕಾದಭವತ್ಕಿಲ ।
ಅಗಸ್ತ್ಯಶ್ಚ ವಸಿಷ್ಠಶ್ಚ ಮಿತ್ರಾವರುಣಯೋರ್ಋಷೀ ॥ ೫ ॥

ರೇತಃ ಸಿಷಿಚತುಃ ಕುಂಭೇ ಉರ್ವಶ್ಯಾಃ ಸನ್ನಿಧೌ ದ್ರುತಮ್ ।
ರೇವತ್ಯಾಂ ಮಿತ್ರ ಉತ್ಸರ್ಗಮರಿಷ್ಟಂ ಪಿಪ್ಪಲಂ ವ್ಯಧಾತ್ ॥ ೬ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಎಲೈ ಪರೀಕ್ಷಿದ್ರಾಜನೇ! ಸವಿತೃದೇವತೆಯ ಪತ್ನಿಯಾದ ಪ್ರಶ್ನಿದೇವಿಯು – ಸಾವಿತ್ರೀ, ವ್ಯಾಹೃತಿ, ತ್ರಯೀ, ಅಗ್ನಿಹೋತ್ರ, ಪಶು, ಸೋಮ, ಚಾತುರ್ಮಾಸ್ಯ ಮತ್ತು ಪಂಚಮಹಾಯಜ್ಞ ಎಂಬ ಎಂಟು ಮಂದಿ ಮಕ್ಕಳನ್ನು ಪಡೆದಳು. ॥ ೧ ॥ ಭಗದೇವತೆಯ ಪತ್ನಿಯಾದ ಸಿದ್ಧಿಯಲ್ಲಿ– ಮಹಿಮಾ, ವಿಭು, ಪ್ರಭು ಎಂಬ ಮೂವರು ಪುತ್ರರೂ 'ಆಶಿಷ್' ಎಂಬ ಸುಂದರಿಯೂ ಸದಾಚಾರಿಣಿಯೂ ಆದ ಒಬ್ಬಳು ಪುತ್ರಿಯೂ ಜನಿಸಿದರು. ॥ ೨ ॥ ಧಾತೃದೇವತೆಗೆ – ಕುಹೂ, ಸಿನೀವಾಲೀ, ರಾಕಾ, ಅನುಮತಿ ಎಂಬ ನಾಲ್ವರು ಪತ್ನಿಯರಿದ್ದರು. ಅವರಲ್ಲಿ ಕ್ರಮವಾಗಿ ಸಾಯಂಕಾಲ, ದರ್ಶ, ಪ್ರಾತಃಕಾಲ, ಪೂರ್ಣಮಾಸರೆಂಬ ನಾಲ್ವರು ಪುತ್ರರು ಹುಟ್ಟಿದರು. ॥ ೩ ॥ ಧಾತೃವಿನ ತಮ್ಮನಿಗೆ ವಿಧಾತಾ ಎಂದು ಹೆಸರು. ಅವನ ಪತ್ನಿಯು ಕ್ರಿಯೆ. ಅವಳಿಂದ ಪುರೀಷ್ಯ ಎಂಬ ಐದು ಅಗ್ನಿಗಳ ಉತ್ಪತ್ತಿಯಾಯಿತು. ವರುಣದೇವರ ಪತ್ನಿಯ ಹೆಸರು ಚರ್ಷಣೀ. ಆಕೆಯಲ್ಲಿ ಭೃಗುಮಹರ್ಷಿಗಳು ಪುನಃ ಜನ್ಮವನ್ನು ಪಡೆದರು. ಅದಕ್ಕೆ ಮೊದಲು ಅವರು ಬ್ರಹ್ಮದೇವರ ಪುತ್ರರಾಗಿದ್ದರು. ॥ ೪ ॥ ಮಹಾಯೋಗಿಗಳಾದ ವಾಲ್ಮೀಕಿಗಳೂ ಕೂಡ ವರುಣನ ಪುತ್ರರೇ ಆಗಿದ್ದರು. ಹುತ್ತ (ವಲ್ಮೀಕ)ದಿಂದ ಹುಟ್ಟಿದ್ದರಿಂದ ಅವರ ಹೆಸರು ವಾಲ್ಮೀಕಿ ಎಂದಾಯಿತು. ಊರ್ವಶಿಯನ್ನು ಕಂಡು ಮಿತ್ರ ಮತ್ತು ವರುಣ ದೇವತೆಗಳಿಬ್ಬರಿಗೂ ವೀರ್ಯಸ್ಖಲನವಾಯಿತು. ಆ ವೀರ್ಯವನ್ನು ಅವರು ಒಂದು ಗಡಿಗೆಯಲ್ಲಿರಿಸಿದರು. ಅದರಿಂದಲೇ ಮುನಿಶ್ರೇಷ್ಠರಾದ ಅಗಸ್ತ್ಯರ ಮತ್ತು ವಸಿಷ್ಠರ ಜನನವಾಯಿತು. ಮಿತ್ರದೇವತೆಯ ಪತ್ನಿಯು ರೇವತೀ. ಆಕೆಯಲ್ಲಿ ಉತ್ಸರ್ಗ, ಅರಿಷ್ಟ, ಪಿಪ್ಪಲ ಎಂಬ ಮೂವರು ಪುತ್ರರು ಉದಿಸಿದರು. ॥ ೫-೬ ॥

ಪೌಲೋಮ್ಯಾಮಿಂದ್ರ ಆಧತ್ತ ತ್ರೀನ್ಪುತ್ರಾನಿತಿ ನಃ ಶ್ರುತಮ್ ।
ಜಯಂತಮೃಷಭಂ ತಾತ ತೃತೀಯಂ ಮೀಢುಷಂ ಪ್ರಭುಃ ॥ ೭ ॥

ಉರುಕ್ರಮಸ್ಯ ದೇವಸ್ಯ ಮಾಯಾವಾಮನರೂಪಿಣಃ ।
ಕೀರ್ತೌ ಪತ್ನ್ಯಾಂ ಬೃಹಚ್ಛ್ಲೋಕಸ್ತಸ್ಯಾಸನ್ಸೌಭಗಾದಯಃ ॥ ೮ ॥

ತತ್ಕರ್ಮಗುಣವೀರ್ಯಾಣಿ ಕಾಶ್ಯಪಸ್ಯ ಮಹಾತ್ಮನಃ ।
ಪಶ್ಚಾದ್ವಕ್ಷ್ಯಾಮಹೇಽದಿತ್ಯಾಂ ಯಥಾ ವಾವತತಾರ ಹ ॥ ೯ ॥

ಅಥ ಕಶ್ಯಪದಾಯಾದಾನ್ದೈತೇಯಾನ್ಕೀರ್ತಯಾಮಿ ತೇ ।
ಯತ್ರ ಭಾಗವತಃ ಶ್ರೀಮಾನ್ ಪ್ರಹ್ಲಾದೋ ಬಲಿರೇವ ಚ ॥ ೧೦ ॥

ದಿತೇರ್ದ್ವಾವೇವ ದಾಯಾದೌ ದೈತ್ಯದಾನವವಂದಿತೌ ।
ಹಿರಣ್ಯಕಶಿಪುರ್ನಾಮ ಹಿರಣ್ಯಾಕ್ಷಶ್ಚ ಕೀರ್ತಿತೌ ॥ ೧೧ ॥

ಹಿರಣ್ಯಕಶಿಪೋರ್ಭಾರ್ಯಾ ಕಯಾಧುರ್ನಾಮ ದಾನವೀ ।
ಜಂಭಸ್ಯ ತನಯಾ ದತ್ತಾ ಸುಷುವೇ ಚತುರಃ ಸುತಾನ್ ॥ ೧೨ ॥

ಸಂಹ್ಲಾದಂ ಪ್ರಾಗನುಹ್ಲಾದಂ ಹ್ಲಾದಂ ಪ್ರಹ್ಲಾದಮೇವ ಚ ।
ತತ್ಸ್ವಸಾ ಸಿಂಹಿಕಾ ನಾಮ ರಾಹುಂ ವಿಪ್ರಚಿತೋಽಗ್ರಹೀತ್ ॥ ೧೩ ॥

ಶಿರೋಽಹರದ್ಯಸ್ಯ ಹರಿಶ್ಚಕ್ರೇಣ ಪಿಬತೋಽಮೃತಮ್ ।
ಸಂಹ್ಲಾದಸ್ಯ ಕೃತಿರ್ಭಾರ್ಯಾಸೂತ ಪಂಚಜನಂ ತತಃ ॥ ೧೪ ॥

ಹ್ಲಾದಸ್ಯ ಧಮನಿರ್ಭಾರ್ಯಾಸೂತ ವಾತಾಪಿಮಿಲ್ವಲಮ್ ।
ಯೋಽಗಸ್ತ್ಯಾಯ ತ್ವತಿಥಯೇ ಪೇಚೇ ವಾತಾಪಿಮಿಲ್ವಲಃ ॥ ೧೫ ॥

ಅನುಹ್ಲಾದಸ್ಯ ಸೂರ್ಮ್ಯಾಯಾಂ ಬಾಷ್ಕಲೋ ಮಹಿಷಸ್ತಥಾ ।
ವಿರೋಚನಸ್ತು ಪ್ರಾಹ್ಲಾದಿರ್ದೇವ್ಯಾಸ್ತಸ್ಯಾಭವದ್ಬಲಿಃ ॥ ೧೬ ॥

ಪ್ರಿಯ ಪರೀಕ್ಷಿತನೇ! ಇಂದ್ರದೇವರ ಪತ್ನಿಯು ಪುಲೋಮನ ಪುತ್ರಿಯಾದ ಶಚೀದೇವಿಯು. ಅವಳಲ್ಲಿ ಜಯಂತ, ಋಷಭ, ಮೀಢ್ವಾನ್ ಎಂಬ ಮೂವರು ಪುತ್ರರು ಹುಟ್ಟಿದರೆಂದು ನಾವು ಕೇಳಿದ್ದೇವೆ. ॥ ೭ ॥ ಸ್ವಯಂ ಭಗವಾನ್ ವಿಷ್ಣುವೇ (ಬಲಿಯ ಮೇಲೆ ಅನುಗ್ರಹವನ್ನು ತೋರಲು ಮತ್ತು ಇಂದ್ರನ ರಾಜ್ಯವನ್ನು ಮರಳಿ ಪಡೆಯಲಿಕ್ಕಾಗಿ) ಮಾಯೆಯಿಂದ ವಾಮನ (ಉಪೇಂದ್ರ) ರೂಪದಿಂದ ಅವತರಿಸಿದ್ದನು. ಅವನು ಮೂರು ಹೆಜ್ಜೆ ಭೂಮಿಯನ್ನು ಬೇಡಿ, ಮೂರು ಲೋಕಗಳನ್ನೂ ಅಳೆದು ಬಿಟ್ಟಿದ್ದನು. ಅವನಿಗೆ 'ಕೀರ್ತಿ' ಎಂಬ ಪತ್ನಿಯಿದ್ದಳು. ಅವಳಲ್ಲಿ ಬೃಹಚ್ಛ್ಲೋಕ ಎಂಬ ಪುತ್ರನು ಜನಿಸಿದನು. ಆ ಬೃಹಚ್ಛ್ಲೋಕನಿಗೆ ಸೌಭಗನೇ ಮುಂತಾದ ಅನೇಕ ಮಂದಿ ಪುತ್ರರು ಹುಟ್ಟಿದರು. ॥ ೮ ॥ ಕಶ್ಯಪನಂದನ ಭಗವಾನ್ ವಾಮನನು ತಾಯಿಯಾದ ಅದಿತಿಯ ಗರ್ಭದಿಂದ ಏಕೆ ಅವತರಿಸಿದನು, ಮತ್ತು ಈ ಅವತಾರದಲ್ಲಿ ಅವನು ಯಾವ-ಯಾವ ಗುಣಗಳನ್ನು ಲೀಲೆಗಳನ್ನು ಪರಾಕ್ರಮವನ್ನು ಪ್ರಕಟಿಸಿದನು. ಇದನ್ನು ನಾನು ಮುಂದೆ (ಎಂಟನೆಯ ಸ್ಕಂಧದಲ್ಲಿ) ವರ್ಣಿಸುವೆನು. ॥ ೯ ॥

ಪ್ರಿಯ ಪರೀಕ್ಷಿತನೇ! ಈಗ ನಾನು ಕಶ್ಯಪರ ಇನ್ನೊಬ್ಬ ಪತ್ನಿಯಾದ ದಿತಿದೇವಿಯಲ್ಲಿ ಉತ್ಪನ್ನವಾದ ಸಂತಾನ ಪರಂಪರೆಯನ್ನು ವರ್ಣಿಸುವೆನು ಕೇಳು. ಆ ವಂಶದಲ್ಲೇ ಭಗವಂತನ ಪ್ರಿಯಭಕ್ತ ಪ್ರಹ್ಲಾದನೂ ಮತ್ತು ಬಲಿಚಕ್ರವರ್ತಿಯೂ ಜನಿಸಿದ್ದರು. ॥ ೧೦ ॥ ದಿತಿಗೆ ದೈತ್ಯ-ದಾನವರೆಲ್ಲರಿಂದಲೂ ವಂದನೀಯರಾದ ಹಿರಣ್ಯಕಶಿಪು ಮತ್ತು ಹಿರಣ್ಯಾಕ್ಷ ಎಂಬ ಇಬ್ಬರು ಪುತ್ರರು ಹುಟ್ಟಿದರು. ಇವರ ಸಂಕ್ಷಿಪ್ತ ಕಥೆಯನ್ನು ನಾನು ನಿನಗೆ (ಮೂರನೆಯ ಸ್ಕಂಧದಲ್ಲಿ) ಹೇಳಿಬಿಟ್ಟಿರುವೆನು. ॥ ೧೧ ॥ ಜಂಭ ದಾನವನು ತನ್ನ ಸುಪುತ್ರಿಯಾದ ಕಯಾಧುವನ್ನು ಹಿರಣ್ಯಕಶಿಪುವಿಗೆ ಕೊಟ್ಟು ವಿವಾಹ ಮಾಡಿದನು. ಕಯಾಧುವಿನಲ್ಲಿ ಸಂಹ್ಲಾದ, ಅನುಹ್ಲಾದ, ಹ್ಲಾದ ಮತ್ತು ಪ್ರಹ್ಲಾದ ಎಂಬ ನಾಲ್ವರು ಪುತ್ರರು ಜನಿಸಿದರು. ಅವರ ಸೋದರಿಯಾದ ಸಿಂಹಿಕೆ ಎಂಬುವಳನ್ನು ವಿಪ್ರಚಿತ್ತಿ ಎಂಬ ದಾನವನು ಮದುವೆಯಾಗಿ, ಅವಳಲ್ಲಿ ರಾಹು ಎಂಬ ಪುತ್ರನನ್ನು ಪಡೆದನು. ॥ ೧೨-೧೩ ॥ ಅಮೃತಪಾನದ ಸಮಯದಲ್ಲಿ ಮೋಹಿನೀರೂಪಧಾರಿಯಾದ ಶ್ರೀಮಹಾವಿಷ್ಣುವು ಸುದರ್ಶನಚಕ್ರದಿಂದ ಕತ್ತರಿಸಿ ಹಾಕಿದ್ದು ಇದೇ ರಾಹುವಿನ ಶಿರಸ್ಸನ್ನು. ಸಂಹ್ಲಾದನ ಪತ್ನಿಯಾದ ಕೃತಿಯಲ್ಲಿ ಪಂಚಜನನೆಂಬ ಪುತ್ರನು ಹುಟ್ಟಿದನು. ॥ ೧೪ ॥ ಹ್ಲಾದನ ಪತ್ನಿಯು ಧಮನಿ. ಆಕೆಯು ಇಲ್ವಲ ಮತ್ತು ವಾತಾಪಿ ಎಂಬ ಇಬ್ಬರು ಪುತ್ರರನ್ನು ಪಡೆದಳು. ಈ ಇಲ್ವಲನೇ ಮಹರ್ಷಿ ಅಗಸ್ತ್ಯರ ಆತಿಥ್ಯದಲ್ಲಿ ವಾತಾಪಿಯನ್ನು ಬೇಯಿಸಿ ತಿನ್ನಿಸಿದನೆಂಬುದು ಪ್ರಸಿದ್ಧವಾಗಿದೆ. ॥ ೧೫ ॥ ಅನುಹ್ಲಾದನ ಪತ್ನಿಯು ಸೂರ್ಮ್ಯಾ. ಆಕೆಯಲ್ಲಿ ಬಾಷ್ಕಲ ಮತ್ತು ಮಹಿಷಾಸುರ ಎಂಬ ಇಬ್ಬರು ಪುತ್ರರು ಹುಟ್ಟಿದರು. ಪ್ರಹ್ಲಾದನ ಪುತ್ರನು ವಿರೋಚನ. ಅವನ ಪತ್ನಿಯಾದ ದೇವಿ ಎಂಬುವಳಲ್ಲಿ ದೈತ್ಯರಾಜನಾದ ಬಲಿಚಕ್ರವರ್ತಿಯು ಜನಿಸಿದನು. ॥ ೧೬ ॥

ಬಾಣಜ್ಯೇಷ್ಠಂ ಪುತ್ರಶತಮಶನಾಯಾಂ ತತೋಽಭವತ್ ।
ತಸ್ಯಾನುಭಾವಃ ಸುಶ್ಲೋಕ್ಯಃ ಪಶ್ಚಾದೇವಾಭಿಧಾಸ್ಯತೇ
॥ ೧೭ ॥

ಬಾಣ ಆರಾಧ್ಯ ಗಿರಿಶಂ ಲೇಭೇ ತದ್ಗಣಮುಖ್ಯತಾಮ್ ।
ಯತ್ಪಾರ್ಶ್ವೇ ಭಗವಾನಾಸ್ತೇ ಹ್ಯದ್ಯಾಪಿ ಪುರಪಾಲಕಃ
॥ ೧೮ ॥

ಮರುತಶ್ಚ ದಿತೇಃ ಪುತ್ರಾಶ್ಚತ್ವಾರಿಂಶನ್ನವಾಧಿಕಾಃ ।
ತ ಆಸನ್ನಪ್ರಜಾಃ ಸರ್ವೇ ನೀತಾ ಇಂದ್ರೇಣ ಸಾತ್ಮತಾಮ್
॥ ೧೯ ॥

ರಾಜೋವಾಚ

ಕಥಂ ತ ಆಸುರಂ ಭಾವಮಪೋಹ್ಯೌತ್ಪತ್ತಿಕಂ ಗುರೋ ।
ಇಂದ್ರೇಣ ಪ್ರಾಪಿತಾಃ ಸಾತ್ಮ್ಯಂ ಕಿಂ ತತ್ಸಾಧು ಕೃತಂ ಹಿ ತೈಃ
॥ ೨೦ ॥

ಇಮೇ ಶ್ರದ್ದಧತೇ ಬ್ರಹ್ಮನ್ನೃಷಯೋ ಹಿ ಮಯಾ ಸಹ ।
ಪರಿಜ್ಞಾನಾಯ ಭಗವಂಸ್ತನ್ನೋ ವ್ಯಾಖ್ಯಾತುಮರ್ಹಸಿ
॥ ೨೧ ॥

ಸೂತ ಉವಾಚ

ತದ್ವಿಷ್ಣುರಾತಸ್ಯ ಸ ಬಾದರಾಯಣಿ-
ರ್ವಚೋ ನಿಶಮ್ಯಾದೃತಮಲ್ಪಮರ್ಥವತ್ ।
ಸಭಾಜಯನ್ಸನ್ನಿಭೃತೇನ ಚೇತಸಾ
ಜಗಾದ ಸತ್ರಾಯಣ ಸರ್ವದರ್ಶನಃ ॥ ೨೨ ॥

ಶ್ರೀಶುಕ ಉವಾಚ

ಹತಪುತ್ರಾ ದಿತಿಃ ಶಕ್ರಪಾರ್ಷ್ಣಿಗ್ರಾಹೇಣ ವಿಷ್ಣುನಾ ।
ಮನ್ಯುನಾ ಶೋಕದೀಪ್ತೇನ ಜ್ವಲಂತೀ ಪರ್ಯಚಿಂತಯತ್
॥ ೨೩ ॥

ಕದಾ ನು ಭ್ರಾತೃಹಂತಾರಮಿಂದ್ರಿಯಾರಾಮಮುಲ್ಬಣಮ್ ।
ಅಕ್ಲಿನ್ನಹೃದಯಂ ಪಾಪಂ ಘಾತಯಿತ್ವಾ ಶಯೇ ಸುಖಮ್
॥ ೨೪ ॥

ಕೃಮಿವಿಡ್ಭಸ್ಮಸಂಜ್ಞಾಽಽಸೀದ್ಯಸ್ಯೇಶಾಭಿಹಿತಸ್ಯ ಚ ।
ಭೂತಧ್ರುಕ್ತತ್ಕೃತೇ ಸ್ವಾರ್ಥಂ ಕಿಂ ವೇದ ನಿರಯೋ ಯತಃ
॥ ೨೫ ॥

ಆಶಾಸಾನಸ್ಯ ತಸ್ಯೇದಂ ಧ್ರುವಮುನ್ನದ್ಧಚೇತಸಃ ।
ಮದಶೋಷಕ ಇಂದ್ರಸ್ಯ ಭೂಯಾದ್ಯೇನ ಸುತೋ ಹಿ ಮೇ
॥ ೨೬ ॥

ಬಲಿಯ ಪತ್ನಿಯ ಹೆಸರು ಅಶನಾ ಎಂದಿತ್ತು. ಅವಳಲ್ಲಿ ಬಾಣನೇ ಮುಂತಾದ ನೂರು ಪುತ್ರರಾದರು. ದೈತ್ಯರಾಜ ಬಲಿಯ ಮಹಿಮೆಯು ಗಾನಮಾಡಲು ಯೋಗ್ಯವಾಗಿದೆ. ಅದನ್ನು ನಾನು ಮುಂದೆ (ಎಂಟನೆಯ ಸ್ಕಂಧದಲ್ಲಿ) ಹೇಳುವೆನು. ॥ ೧೭ ॥ ಬಲಿಪುತ್ರ ಬಾಣಾಸುರನು ಭಗವಾನ್ ಶಂಕರನನ್ನು ಆರಾಧಿಸಿ ಆತನ ಗಣಗಳಲ್ಲಿ ಮುಖ್ಯನಾದನು. ಇಂದೂ ಕೂಡ ಭಗವಾನ್ ಶಿವನು ಆತನ ನಗರವನ್ನು ರಕ್ಷಿಸಲಿಕ್ಕಾಗಿ ಆತನ ಬಳಿಯಲ್ಲೇ ಇರುತ್ತಾನೆ. ॥ ೧೮ ॥ ದಿತಿಗೆ ಹಿರಣ್ಯಕಶಿಪು ಮತ್ತು ಹಿರಣ್ಯಾಕ್ಷರಲ್ಲದೆ ಇನ್ನೂ ನಲವತ್ತೊಂಭತ್ತು ಮಂದಿ ಪುತ್ರರಿದ್ದರು. ಅವರನ್ನು ಮರುದ್ಗಣರೆಂದು ಕರೆಯುತ್ತಾರೆ. ಅವರೆಲ್ಲರೂ ಸಂತಾನಹೀನರಾಗಿದ್ದರು. ದೇವೇಂದ್ರನು ಅವರನ್ನು ತನ್ನಂತೆಯೇ ದೇವತೆಗಳನ್ನಾಗಿ ಮಾಡಿಕೊಂಡನು. ॥ ೧೯ ॥

ಪರೀಕ್ಷಿದ್ರಾಜನು ಕೇಳಿದನು – ಮಹಾತ್ಮರೇ ! ಮರುದ್ಗಣರು ತಮಗೆ ಹುಟ್ಟಿನಿಂದಲೇ ಬಂದಿದ್ದ ಅಸುರೋಚಿತವಾದ ಭಾವವನ್ನು ಬಿಟ್ಟು ದೇವೇಂದ್ರನಿಂದ ದೇವತೆಗಳು ಹೇಗಾದರು ? ಅವರು ಅದಕ್ಕಾಗಿ ಯಾವ ಪುಣ್ಯವನ್ನು ಆಚರಿಸಿದರು ? ॥ ೨೦ ॥ ಬ್ರಾಹ್ಮಣೋತ್ತಮರೇ ! ಈ ವಿಷಯವನ್ನು ತಿಳಿದುಕೊಳ್ಳಬೇಕೆಂದು ನಾನಲ್ಲದೆ ಇಲ್ಲಿರುವ ಇತರ ಋಷಿಗಳ ಮಂಡಲಿಯೇ ಕುತೂಹಲಗೊಂಡಿದೆ. ದಯವಿಟ್ಟು ಆ ವೃತ್ತಾಂತವನ್ನು ವಿಸ್ತಾರವಾಗಿ ತಿಳಿಸಿರಿ. ॥ ೨೧ ॥

ಸೂತಪುರಾಣಿಕರು ಹೇಳುತ್ತಾರೆ – ಶೌನಕಾದಿಗಳೇ ! ಪರೀಕ್ಷಿದ್ರಾಜನು ಆಸ್ಥಾದರದಿಂದ ಕೇಳಿದ ಈ ಸಾರಗರ್ಭಿತವಾದ ಪ್ರಶ್ನೆಯನ್ನು ಕೇಳಿ ಸರ್ವಜ್ಞರಾದ ಶ್ರೀಶುಕಮಹರ್ಷಿಗಳು ಪ್ರಸನ್ನವಾದ ಚಿತ್ತದಿಂದ ಅವನನ್ನು ಅಭಿನಂದಿಸಿ ಹೀಗೆಂದರು. ॥ ೨೨ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ ! ಭಗವಾನ್ ಮಹಾವಿಷ್ಣುವು ಇಂದ್ರನ ಪಕ್ಷವನ್ನುವಹಿಸಿ ದಿತಿಯ ಪುತ್ರರಾದ ಹಿರಣ್ಯಕಶಿಪು ಮತ್ತು ಹಿರಣ್ಯಾಕ್ಷರಿಬ್ಬರನ್ನೂ ಸಂಹರಿಸಿದನು. ಇದರಿಂದ ದಿತಿಯು ಶೋಕಾಗ್ನಿಯಿಂದ ಉರಿದೆದ್ದು ಕ್ರೋಧದಿಂದ ಹೀಗೆ ಯೋಚಿಸತೊಡಗಿದಳು. ॥ ೨೩ ॥ ಈ ಇಂದ್ರನು ನಿಜವಾಗಿ ಭಾರೀ ವಿಷಯಿಯೂ, ಕ್ರೂರಿಯೂ, ನಿರ್ದಯಿಯೂ ಆಗಿದ್ದಾನೆ. ರಾಮ ! ರಾಮಾ ! ಅವನು ತನ್ನ ಸೋದರರನ್ನೇ ಕೊಲ್ಲಿಸಿಬಿಟ್ಟನು. ನಾನೂ ಆ ಪಾಪಿಯನ್ನು ಕೊಲ್ಲಿಸಿಯೇ ಸುಖವಾಗಿ ನಿದ್ರೆಮಾಡುವ ಕಾಲ ಎಂದು ಬರುವುದೋ ? ॥ ೨೪ ॥ ಜನರು ರಾಜರ ಮತ್ತು ದೇವತೆಗಳ ಶರೀರವನ್ನು ಪ್ರಭು ಎಂದು ಹೇಳಿ ಕರೆಯುತ್ತಾರೆ. ಆದರೆ ಒಂದುದಿನ ಅದು ಹುಳು, ಮಲ ಅಥವಾ ಬೂದಿಯ ರಾಶಿಯಾಗಿಬಿಡುವುದು. ಆದುದರಿಂದ ಇತರ ಪ್ರಾಣಿಗಳನ್ನು ಗೋಳುಹೊಯ್ದುಕೊಳ್ಳುವವನಿಗೆ ತನ್ನ ನಿಜವಾದ ಸ್ವಾರ್ಥ ಅಥವಾ ಪರಮಾರ್ಥ ಯಾವುದೆಂಬುದು ಅರಿವಿರುವುದಿಲ್ಲ. ಆತನು ನರಕಕ್ಕೆ ಹೋಗಿಬೀಳುವನು. ॥ ೨೫ ॥ ಇಂದ್ರನು ತನ್ನ ಶರೀರವನ್ನು ನಿತ್ಯವೆಂದು ತಿಳಿದು ಉನ್ಮತ್ತನಾಗಿರುವಂತೆ ನನಗೆ ಅನಿಸುತ್ತದೆ. ತನ್ನ ವಿನಾಶದ ಅರಿವೇ ಆತನಿಗೆ ಇಲ್ಲವಾಗಿದೆ. ಈಗ ನಾನು ಅವನ ಅಹಂಕಾರವನ್ನು ಮುರಿದು ಹಾಕುವಂತಹ ಪುತ್ರನನ್ನು ಪಡೆಯುವ ಉಪಾಯವನ್ನು ಮಾಡುವೆನು. ॥ ೨೬ ॥

ಇತಿ ಭಾವೇನ ಸಾ ಭರ್ತುರಾಚಚಾರಾಸಕೃತ್ಪ್ರಿಯಮ್ ।
ಶುಶ್ರೂಷಯಾನುರಾಗೇಣ ಪ್ರಶ್ರಯೇಣ ದಮೇನ ಚ ॥ ೨೭ ॥

ಭಕ್ತ್ಯಾ ಪರಮಯಾ ರಾಜನ್ಮನೋಜ್ಞೈರ್ವಲ್ಗುಭಾಷಿತೈಃ ।
ಮನೋ ಜಗ್ರಾಹ ಭಾವಜ್ಞಾ ಸುಸ್ಮಿತಾಪಾಂಗವೀಕ್ಷಣೈಃ ॥ ೨೮ ॥

ಏವಂ ಸ್ತ್ರಿಯಾ ಜಡೀಭೂತೋ ವಿದ್ವಾನಪಿ ವಿದಗ್ಧಯಾ ।
ಬಾಢಮಿತ್ಯಾಹ ವಿವಶೋ ನ ತಚ್ಚಿತ್ರಂ ಹಿ ಯೋಷಿತಿ ॥ ೨೯ ॥

ವಿಲೋಕ್ಯೈಕಾಂತಭೂತಾನಿ ಭೂತಾನ್ಯಾದೌ ಪ್ರಜಾಪತಿಃ ।
ಸ್ತ್ರಿಯಂ ಚಕ್ರೇ ಸ್ವದೇಹಾರ್ಧಂ ಯಯಾ ಪುಂಸಾಂ ಮತಿರ್ಹೃತಾ ॥ ೩೦ ॥

ಏವಂ ಶುಶ್ರೂಷಿತಸ್ತಾತ ಭಗವಾನ್ಕಶ್ಯಪಃ ಸ್ತ್ರಿಯಾ ।
ಪ್ರಹಸ್ಯ ಪರಮಪ್ರೀತೋ ದಿತಿಮಾಹಾಭಿನಂದ್ಯ ಚ ॥ ೩೧ ॥

ಕಶ್ಯಪ ಉವಾಚ

ವರಂ ವರಯ ವಾಮೋರು ಪ್ರೀತಸ್ತೇಽಹಮನಿಂದಿತೇ ।
ಸ್ತ್ರಿಯಾ ಭರ್ತರಿ ಸುಪ್ರೀತೇ ಕಃ ಕಾಮ ಇಹ ಚಾಗಮಃ ॥ ೩೨ ॥

ಪತಿರೇವ ಹಿ ನಾರೀಣಾಂ ದೈವತಂ ಪರಮಂ ಸ್ಮೃತಮ್ ।
ಮಾನಸಃ ಸರ್ವಭೂತಾನಾಂ ವಾಸುದೇವಃ ಶ್ರಿಯಃ ಪತಿಃ ॥ ೩೩ ॥

ಸ ಏವ ದೇವತಾಲಿಂಗೈರ್ನಾಮರೂಪವಿಕಲ್ಪಿತೈಃ ।
ಇಜ್ಯತೇ ಭಗವಾನ್ಪುಂಭಿಃ ಸ್ತ್ರೀಭಿಶ್ಚ ಪತಿರೂಪಧೃಕ್ ॥ ೩೪ ॥

ತಸ್ಮಾತ್ಪತಿವ್ರತಾ ನಾರ್ಯಃ ಶ್ರೇಯಸ್ಕಾಮಾಃ ಸುಮಧ್ಯಮೇ ।
ಯಜಂತೇಽನನ್ಯಭಾವೇನ ಪತಿಮಾತ್ಮಾನಮೀಶ್ವರಮ್ ॥ ೩೫ ॥

ಸೋಽಹಂ ತ್ವಯಾರ್ಚಿತೋ ಭದ್ರೇ ಈದೃಗ್ಭಾವೇನ ಭಕ್ತಿತಃ ।
ತತ್ತೇ ಸಂಪಾದಯೇ ಕಾಮಮಸತೀನಾಂ ಸುದುರ್ಲಭಮ್ ॥ ೩೬ ॥

ದಿತಿಯು ಮನಸ್ಸಿನಲ್ಲಿ ಹೀಗೆ ಯೋಚಿಸಿ, ಸೇವೆ, ಶುಶ್ರೂಷೆ, ನಯ, ವಿನಯ, ಪ್ರೇಮ ಮತ್ತು ಜಿತೇಂದ್ರಿಯತ್ವ ಮುಂತಾದವುಗಳ ಮೂಲಕ ನಿರಂತರ ತನ್ನ ಪತಿದೇವರಾದ ಕಶ್ಯಪರನ್ನು ಪ್ರಸನ್ನಗೊಳಿಸತೊಡಗಿದಳು. ॥ ೨೭ ॥ ಆಕೆಯು ಪತಿಯ ಹೃದಯದ ಒಂದೊಂದು ಭಾವವನ್ನೂ ಅರ್ಥಮಾಡಿಕೊಂಡು ಪರಮ ಪ್ರೇಮಭಾವದಿಂದಲೂ, ಸವಿಮಾತುಗಳಿಂದಲೂ, ಕಿರುನಗೆಯಿಂದ ಕೂಡಿದ ಕಡೆಗಣ್ಣ ನೋಟಗಳಿಂದಲೂ ಅವನ ಮನಸ್ಸನ್ನು ತನ್ನೆಡೆಗೆ ಸೆಳೆದುಕೊಳ್ಳುತ್ತಿದ್ದಳು. ॥ ೨೮ ॥ ಕಶ್ಯಪ ಮಹರ್ಷಿಗಳು ಮಹಾ ವಿದ್ವಾಂಸರೂ, ವಿಚಾರವಂತರೂ ಆಗಿದ್ದರೂ ಚತುರೆಯಾದ ದಿತಿಯ ಸೇವೆ-ಶುಶ್ರೂಷೆಯಿಂದ ಮೋಹಿತರಾಗಿ – 'ನಿನ್ನ ಇಚ್ಛೆಯನ್ನು ನಾನು ಈಡೇರಿಸುವೆನು' ಎಂದು ಮಾತುಕೊಟ್ಟರು. ಹೆಂಗಸರು ಹೀಗೆಲ್ಲ ಪತಿಯನ್ನು ಮೋಹಗೊಳಿಸಿ ವಶಪಡಿಸಿಕೊಳ್ಳುವುದು ಆಶ್ಚರ್ಯವೇನೂ ಅಲ್ಲ. ॥ ೨೯ ॥ ಸೃಷ್ಟಿಯ ಪ್ರಾರಂಭದಲ್ಲಿ ಬ್ರಹ್ಮದೇವರು ಎಲ್ಲ ಜೀವರು ಅಸಂಗರಾಗುತ್ತಿದ್ದಾರಲ್ಲ ಎಂದು ನೋಡಿದಾಗ, ಅವರು ತಮ್ಮ ಅರ್ಧ ಶರೀರದಿಂದ ಸ್ತ್ರೀಯರನ್ನು ಸೃಷ್ಟಿಸಿದನು. ಆ ಸ್ತ್ರೀಯರು ಪುರುಷರ ಮತಿಯನ್ನು ತಮ್ಮ ಕಡೆಗೆ ಆಕರ್ಷಿಸಿ ಕೊಂಡರು. ॥ ೩೦ ॥ ಇರಲಿ, ಅಯ್ಯಾ! ದಿತಿಯು ಭಗವಾನ್ ಕಶ್ಯಪರ ಸೇವೆಯನ್ನು ಚೆನ್ನಾಗಿ ಮಾಡಿದಳು ಎಂದು ಹೇಳುತ್ತಿದ್ದೆನಲ್ಲ! ಇದರಿಂದ ಅವರು ತುಂಬಾ ಪ್ರಸನ್ನರಾದರು. ಅವರು ದಿತಿಯನ್ನು ಅಭಿನಂದಿಸುತ್ತಾ ಮುಗುಳ್ನಗುತ್ತಾ ಇಂತೆಂದರು – ॥ ೩೧ ॥

ಕಶ್ಯಪರು ಹೇಳಿದರು – ಎಲೈ ಸುಂದರಿಯೇ! ಅನಿಂದ್ಯ ರೂಪಗುಣಸಂಪನ್ನೆಯೇ! ನಾನು ನಿನ್ನಲ್ಲಿ ಅತ್ಯಂತ ಸಂತುಷ್ಟನಾಗಿದ್ದೇನೆ. ನಿನಗೆ ಇಷ್ಟಬಂದ ವರವನ್ನು ಕೇಳಿಕೋ. ಪತಿಯು ಪ್ರಸನ್ನನಾದಾಗ ಪತ್ನಿಗೆ ಈ ಲೋಕ ಮತ್ತು ಪರಲೋಕದಲ್ಲಿ ಯಾವುದೇ ಅಭೀಷ್ಟ ವಸ್ತುವು ದುರ್ಲಭವಾಗುವುದಿಲ್ಲ. ॥ ೩೨ ॥ 'ಪತಿಯೇ ಸ್ತ್ರೀಯರಿಗೆ ಪರಮಾರಾಧ್ಯ ಇಷ್ಟದೇವರಾಗಿದ್ದಾನೆ' ಎಂಬುದು ಶಾಸ್ತ್ರಗಳಲ್ಲಿ ಸ್ಪಷ್ಟವಾಗಿ ಹೇಳಿದೆ. ಪ್ರಿಯೇ! ಲಕ್ಷ್ಮೀಪತಿಯಾದ ಭಗವಾನ್ ಶ್ರೀವಾಸುದೇವನೇ ಸಮಸ್ತ ಪ್ರಾಣಿಗಳ ಹೃದಯಗಳಲ್ಲಿ ಬೆಳಗುತ್ತಿರುವವನು. ॥ ೩೩ ॥ ಆತನೇ ಬೇರೆ-ಬೇರೆ ದೇವತೆಗಳ ನಾಮಗಳಿಂದಲೂ, ರೂಪಗಳಿಂದಲೂ ಉಪಾಸಿಸಲ್ಪಡುತ್ತಾನೆ. ಎಲ್ಲ ಪುರುಷರೂ ಯಾವುದೇ ದೇವತೆಯನ್ನು ಉಪಾಸನೆ ಮಾಡಿದರೂ ಅದು ಭಗವಂತನದೇ ಉಪಾಸನೆಯಾಗಿದೆ. ಹಾಗೆಯೇ ಸ್ತ್ರೀಯರಿಗಾಗಿ ಭಗವಂತನು ಪತಿಯ ರೂಪವನ್ನು ಧರಿಸಿರುವನು. ಅವರು ಅವನನ್ನು ಅದೇ ರೂಪದಲ್ಲಿ ಪೂಜೆ ಮಾಡುತ್ತಾರೆ. ॥ ೩೪ ॥ ಅದಕ್ಕಾಗಿ ಪ್ರಿಯೇ! ತಮ್ಮ ಕಲ್ಯಾಣವನ್ನು ಬಯಸುವ ಪತಿವ್ರತಾ ಸ್ತ್ರೀಯರು ಅನನ್ಯ ಪ್ರೇಮಭಾವದಿಂದ ತಮ್ಮ ಪತಿದೇವನನ್ನೇ ಪೂಜಿಸುತ್ತಾರೆ. ಏಕೆಂದರೆ, ಪತಿದೇವನೇ ಅವರಿಗೆ ಪರಮ ಪ್ರಿಯತಮ ಆತ್ಮಾ ಮತ್ತು ಈಶ್ವರನಾಗಿರುವನು. ॥ ೩೫ ॥ ಎಲೈ ಮಂಗಳಾಂಗಿಯೇ! ನೀನು ಅತ್ಯಂತ ಪ್ರೇಮಭಾವದಿಂದ, ಭಕ್ತಿಯಿಂದ ನನ್ನನ್ನು ಹಾಗೆಯೇ ಆರಾಧಿಸಿದ್ದೀಯೆ. ಈಗ ನಾನು ನಿನ್ನ ಎಲ್ಲ ಅಭಿಲಾಷೆಗಳನ್ನು ಪೂರ್ಣಗೊಳಿಸುವೆನು. ಗರತಿಯರಲ್ಲದವರಿಗೆ ಇಂತಹ ಭಾಗ್ಯವು ಸಿಗುವುದು ದುರ್ಲಭವೇ. ॥ ೩೬ ॥

ದಿತಿರುವಾಚ

ವರದೋ ಯದಿ ಮೇ ಬ್ರಹ್ಮನ್ಪುತ್ರಮಿಂದ್ರಹಣಂ ವೃಣೇ ।
ಅಮೃತ್ಯುಂ ಮೃತಪುತ್ರಾಹಂ ಯೇನ ಮೇ ಘಾತಿತೌ ಸುತೌ ॥ ೩೭ ॥

ನಿಶಮ್ಯ ತದ್ವಚೋ ವಿಪ್ರೋ ವಿಮನಾಃ ಪರ್ಯತಪ್ಯತ ।
ಅಹೋ ಅಧರ್ಮಃ ಸುಮಹಾನದ್ಯ ಮೇ ಸಮುಪಸ್ಥಿತಃ ॥ ೩೮ ॥

ಅಹೋ ಅರ್ಥೇಂದ್ರಿಯಾರಾಮೋ ಯೋಷಿನ್ಮಯ್ಯೇಹ ಮಾಯಯಾ ।
ಗೃಹೀತಚೇತಾಃ ಕೃಪಣಃ ಪತಿಷ್ಯೇ ನರಕೇ ಧ್ರುವಮ್ ॥ ೩೯ ॥

ಕೋಽತಿಕ್ರಮೋಽನುವರ್ತಂತ್ಯಾಃ ಸ್ವಭಾವಮಿಹ ಯೋಷಿತಃ ।
ಧಿಙ್ಮಾಂ ಬತಾಬುಧಂ ಸ್ವಾರ್ಥೇ ಯದಹಂ ತ್ವಜಿತೇಂದ್ರಿಯಃ ॥ ೪೦ ॥

ಶರತ್ಪದ್ಮೋತ್ಸವಂ ವಕ್ತ್ರಂ ವಚಶ್ಚ ಶ್ರವಣಾಮೃತಮ್ ।
ಹೃದಯಂ ಕ್ಷುರಧಾರಾಭಂ ಸ್ತ್ರೀಣಾಂ ಕೋ ವೇದ ಚೇಷ್ಟಿತಮ್ ॥ ೪೧ ॥

ನ ಹಿ ಕಶ್ಚಿತ್ಪ್ರಿಯಃ ಸ್ತ್ರೀಣಾಮಂಜಸಾ ಸ್ವಾಶಿಷಾತ್ಮನಾಮ್ ।
ಪತಿಂ ಪುತ್ರಂ ಭ್ರಾತರಂ ವಾ ಘ್ನಂತ್ಯರ್ಥೇ ಘಾತಯಂತಿ ಚ ॥ ೪೨ ॥

ಪ್ರತಿಶ್ರುತಂ ದದಾಮೀತಿ ವಚಸ್ತನ್ನ ಮೃಷಾ ಭವೇತ್ ।
ವಧಂ ನಾರ್ಹತಿ ಚೇಂದ್ರೋಽಪಿ ತತ್ರೇದಮುಪಕಲ್ಪತೇ ॥ ೪೩ ॥

ಇತಿ ಸಂಚಿಂತ್ಯ ಭಗವಾನ್ಮಾರೀಚಃ ಕುರುನಂದನ ।
ಉವಾಚ ಕಿಂಚಿತ್ಕುಪಿತ ಆತ್ಮಾನಂ ಚ ವಿಗರ್ಹಯನ್ ॥ ೪೪ ॥

ಕಶ್ಯಪ ಉವಾಚ

ಪುತ್ರಸ್ತೇ ಭವಿತಾ ಭದ್ರೇ ಇಂದ್ರಹಾ ದೇವಬಾಂಧವಃ ।
ಸಂವತ್ಸರಂ ವ್ರತಮಿದಂ ಯದ್ಯಂಜೋ ಧಾರಯಿಷ್ಯಸಿ ॥ ೪೫ ॥

ದಿತಿರುವಾಚ

ಧಾರಯಿಷ್ಯೇ ವ್ರತಂ ಬ್ರಹ್ಮನ್ ಬ್ರೂಹಿ ಕಾರ್ಯಾಣಿ ಯಾನಿ ಮೇ ।
ಯಾನಿ ಚೇಹ ನಿಷಿದ್ಧಾನಿ ನ ವ್ರತಂ ಘ್ನಂತಿ ಯಾನಿ ತು ॥ ೪೬ ॥

ದಿತಿಯು ಹೇಳಿದಳು – ಬ್ರಾಹ್ಮಣೋತ್ತಮರೇ! ಇಂದ್ರನು ವಿಷ್ಣುವಿನ ಕೈಯಿಂದ ನನ್ನ ಇಬ್ಬರೂ ಪುತ್ರರನ್ನು ಕೊಲ್ಲಿಸಿ ನನ್ನನ್ನು ಪುತ್ರಹೀನೆಯನ್ನಾಗಿ ಮಾಡಿದ್ದಾನೆ. ಅದಕ್ಕಾಗಿ ನೀವು ನನಗೆ ಅಭೀಷ್ಟವಾದ ವರವನ್ನು ಕೊಡುವುದಾದರೆ – ಇಂದ್ರನನ್ನು ಸಂಹರಿಸುವಂತಹ ಅಮರ ಪುತ್ರನನ್ನು ನನಗೆ ಅನುಗ್ರಹಿಸಿರಿ. ॥ ೩೭ ॥

ಪರೀಕ್ಷಿತನೇ! ದಿತಿಯ ಮಾತನ್ನು ಕೇಳಿ ಕಶ್ಯಪರು ಖಿನ್ನರಾಗಿ ಮನಸ್ಸಿನಲ್ಲೇ ಪಶ್ಚಾತ್ತಾಪಪಡತೊಡಗಿದರು. ಅಯ್ಯೋ! ಶಿವನೇ! ಇಂದು ನನ್ನ ಜೀವನದಲ್ಲಿ ಅತಿದೊಡ್ಡ ಅಧರ್ಮದ ಪ್ರಸಂಗವು ಒದಗಿತಲ್ಲ! ॥ ೩೮ ॥ ಇಂದ್ರಿಯ ವಿಷಯಗಳಲ್ಲಿಯೇ ರಮಿಸ ತೊಡಗಿದ ನನ್ನ ಮನಸ್ಸನ್ನು ಈ ಸ್ತ್ರೀರೂಪಿಣಿಯಾದ ಮಾಯೆಯು ತನ್ನ ವಶಪಡಿಸಿಕೊಂಡಿತಲ್ಲ! ಅಯ್ಯೋ! ಇಂದು ನಾನು ಎಂತಹ ದೀನ-ಹೀನ ಅವಸ್ಥೆಯಲ್ಲಿದ್ದೇನೆ. ಈಗ ನನಗೆ ಖಂಡಿತವಾಗಿ ನರಕಕ್ಕೆ ಬೀಳಬೇಕಾದೀತು. ॥ ೩೯ ॥ ಆದರೆ ಈ ಹೆಂಗಸಿನಲ್ಲಿ ಯಾವ ದೋಷವೂ ಇಲ್ಲ. ಈಕೆಯು ತನ್ನ ಹುಟ್ಟಿನ ಸ್ವಭಾವವನ್ನೇ ಅನುಸರಿಸಿದ್ದಾಳೆ. ದೋಷವಾದರೋ ನನ್ನದೇ ಆಗಿದೆ. ನಾನು ನನ್ನ ಇಂದ್ರಿಯಗಳನ್ನು ವಶದಲ್ಲಿ ಇಟ್ಟುಕೊಳ್ಳಲಾರದೇ ಹೋದೆನು. ನನ್ನ ನಿಜವಾದ ಸ್ವಾರ್ಥ ಮತ್ತು ಪರಮಾರ್ಥವನ್ನು ಅರಿಯದೇ ಹೋದೆ. ಇಂತಹ ಮೂಢನಾದ ನನಗೆ ಧಿಕ್ಕಾರವಿರಲಿ. ॥ ೪೦ ॥ ಸ್ತ್ರೀಯರ ನಡವಳಿಕೆಯು ಯಾರಿಗೆ ತಾನೇ ಅರ್ಥವಾದೀತು? ಇವರ ಮುಖವು ಶರತ್ಕಾಲದ ಕಮಲದಂತೆ ಅರಳಿರುವುದು. ಮಾತು ಅಮೃತದಂತೆ ಸವಿಯಾಗಿರುವುದು. ಆದರೆ ಹೃದಯವು ಮಾತ್ರ ಕತ್ತಿಯ ಅಲಗಿನಂತೆ ಕಡು ಹರಿತವಾದುದು. ॥ ೪೧ ॥ ಸ್ತ್ರೀಯರು ತಮ್ಮ ಅಭಿಲಾಷೆಗಳ ಕೈಗೊಂಬೆಯಾಗಿರುತ್ತಾರೆ. ನಿಜ ಹೇಳುವುದಾದರೆ ಇವರಿಗೆ ಯಾರಲ್ಲಿಯೂ ಪ್ರೀತಿ ಇರುವುದಿಲ್ಲ. ತಮ್ಮ ಸ್ವಾರ್ಥಕ್ಕಾಗಿ ಇವರು ತನ್ನ ಪತಿ, ಪುತ್ರ, ಸಹೋದರ ಇವರನ್ನು ಕೊಲ್ಲಬಲ್ಲಳು, ಕೊಲ್ಲಿಸಬಲ್ಲಳು; ಇದರಲ್ಲಿ ಸಂದೇಹವೇ ಇಲ್ಲ. ॥ ೪೨ ॥ ಆದರೆ ನಾನು ಈಕೆಗೆ 'ನಿನ್ನ ಇಷ್ಟಾರ್ಥವನ್ನು ಈಡೇರಿಸುತ್ತೇನೆ' ಎಂದು ಮಾತು ಕೊಟ್ಟಾಗಿದೆ. ಕೊಟ್ಟ ಮಾತು ಸುಳ್ಳಾಗಿಸಬಾರದು. ಆದರೆ ಇಂದ್ರನೂ ವಧಿಸಲ್ಪಡಬಾರದು. ಇರಲಿ; ಈಗ ಈ ವಿಷಯದಲ್ಲಿ ನಾನೊಂದು ಯುಕ್ತಿಯನ್ನು ಮಾಡುವೆ. ॥ ೪೩ ॥ ಪ್ರಿಯ ಪರೀಕ್ಷಿತನೇ! ಸರ್ವಸಮರ್ಥರಾದ ಕಶ್ಯಪರು ಹೀಗೆ ಮನಸ್ಸಿನಲ್ಲೇ ತನ್ನನ್ನು ಹಳಿದುಕೊಂಡು, ಎರಡೂ ಮಾತುಗಳು ನೆರವೇರುವಂತಹ ಉಪಾಯವನ್ನು ಯೋಚಿಸಿ, ಮತ್ತೆ ಸ್ವಲ್ಪ ಕೋಪಗೊಂಡವರಾಗಿ ದಿತಿಯಲ್ಲಿ ಹೀಗೆ ಹೇಳಿದರು – ॥ ೪೪ ॥

ಕಶ್ಯಪರು ಹೇಳಿದರು – ಭದ್ರೇ! ನಾನು ಹೇಳುವ ಒಂದು ವ್ರತವನ್ನು ಒಂದು ವರ್ಷದವರೆಗೆ ವಿಧಿಪೂರ್ವಕವಾಗಿ ಪಾಲಿಸಿದರೆ, ನಿನಗೆ ಇಂದ್ರನನ್ನು ಕೊಲ್ಲುವಂತಹ ಪುತ್ರನು ಜನಿಸುವನು. ಆದರೆ ಯಾವುದೇ ವಿಧದಿಂದ ವ್ರತನಿಯಮಗಳಲ್ಲಿ ಕುಂದು-ಕೊರತೆಗಳುಂಟಾದರೆ ಅವನು ದೇವತೆಗಳ ಮಿತ್ರನಾಗುವನು. ॥ ೪೫ ॥

ದಿತಿಯು ಹೇಳಿದಳು – ಬ್ರಾಹ್ಮಣೋತ್ತಮರೇ! ನಾನು ಆ ವ್ರತವನ್ನು ನಿಷ್ಠೆಯಿಂದ ಪಾಲಿಸುವೆನು. ವ್ರತದಲ್ಲಿ ನಾನೇನು ಮಾಡ

ಕಶ್ಯಪ ಉವಾಚ

ನ ಹಿಂಸ್ಯಾದ್ಭೂತಜಾತಾನಿ ನ ಶಪೇನ್ನಾನೃತಂ ವದೇತ್ ।
ನ ಛಿಂದ್ಯಾನ್ನಖರೋಮಾಣಿ ನ ಸ್ಪೃಶೇದ್ಯದಮಂಗಲಮ್ ॥ ೪೭ ॥

ನಾಪ್ಸು ಸ್ನಾಯಾನ್ನ ಕುಪ್ಯೇತ ನ ಸಂಭಾಷೇತ ದುರ್ಜನೈಃ ।
ನ ವಸೀತಾಧೌತವಾಸಃ ಸ್ರಜಂ ಚ ವಿಧೃತಾಂ ಕ್ವಚಿತ್ ॥ ೪೮ ॥

ನೋಚ್ಛಿಷ್ಟಂ ಚಂಡಿಕಾನ್ನಂ ಚ ಸಾಮಿಷಂ ವೃಷಲಾಹೃತಮ್ ।
ಭುಂಜೀತೋದಕ್ಯಯಾ ದೃಷ್ಟಂ ಪಿಬೇದಂಜಲಿನಾ ತ್ವಪಃ ॥ ೪೯ ॥

ನೋಚ್ಛಿಷ್ಟಾಸ್ಪೃಷ್ಟಸಲಿಲಾ ಸಂಧ್ಯಾಯಾಂ ಮುಕ್ತಮೂರ್ಧಜಾ ।
ಅನರ್ಚಿತಾಸಂಯತವಾಙ್ನಾ ಸಂವೀತಾ ಬಹಿಶ್ಚರೇತ್ ॥ ೫೦ ॥

ನಾಧೌತಪಾದಾಪ್ರಯತಾ ನಾರ್ದ್ರಪಾನ್ನೋ ಉದಕ್ಶಿರಾಃ ।
ಶಯೀತ ನಾಪರಾಙ್ನಾನ್ಯೈರ್ನ ನಗ್ನಾ ನ ಚ ಸಂಧ್ಯಯೋಃ ॥ ೫೧ ॥

ಧೌತವಾಸಾಃ ಶುಚಿರ್ನಿತ್ಯಂ ಸರ್ವಮಂಗಲಸಂಯುತಾ ।
ಪೂಜಯೇತ್ಪ್ರಾತರಾಶಾತ್ಪ್ರಾಗ್ಗೋವಿಪ್ರಾಂಛ್ರಿಯಮಚ್ಯುತಮ್ ॥ ೫೨ ॥

ಸ್ತ್ರಿಯೋ ವೀರವತೀಶ್ಚಾರ್ಚೇತ್ಸ್ರಗ್ಗಂಧಬಲಿಮಂಡನೈಃ ।
ಪತಿಂ ಚಾರ್ಚ್ಯೋಪತಿಷ್ಠೇತ ಧ್ಯಾಯೇತ್ಕೋಷ್ಠಗತಂ ಚ ತಮ್ ॥ ೫೩ ॥

ಸಾಂವತ್ಸರಂ ಪುಂಸವನಂ ವ್ರತಮೇತದವಿಪ್ಲುತಮ್ ।
ಧಾರಯಿಷ್ಯಸಿ ಚೇತ್ತುಭ್ಯಂ ಶಕ್ರಹಾ ಭವಿತಾ ಸುತಃ ॥ ೫೪ ॥

ಬಾಢಮಿತ್ಯಭಿಪ್ರೇತ್ಯಾಥ ದಿತೀ ರಾಜನ್ಮಹಾಮನಾಃ ।
ಕಾಶ್ಯಪಂ ಗರ್ಭಮಾಧತ್ತ ವ್ರತಂ ಚಾಂಜೋ ದಧಾರ ಸಾ ॥ ೫೫ ॥

ಬೇಕು ? ವ್ರತದಲ್ಲಿ ಏನೇನನ್ನು ಮಾಡಬಾರದು ? ಎಂಬುದನ್ನು ತಿಳಿಸಿರಿ : ಎಂದು ಪ್ರಾರ್ಥಿಸಿಕೊಂಡಳು. ॥ ೪೬ ॥

ಕಶ್ಯಪರು ಹೇಳಿದರು – ಪ್ರಿಯೇ! ಈ ವ್ರತದಲ್ಲಿ ಯಾವುದೇ ಪ್ರಾಣಿಯನ್ನು ಮನಸ್ಸು, ಮಾತು ಅಥವಾ ಕ್ರಿಯೆಯಿಂದ ಹಿಂಸಿಸಬಾರದು. ಯಾರನ್ನೂ ಶಪಿಸಬಾರದು, ಬಯ್ಯಬಾರದು, ಸುಳ್ಳು ಹೇಳಬಾರದು. ಶರೀರದ ಉಗುರುಗಳನ್ನಾಗಲೀ, ಕೂದಲುಗಳನ್ನಾಗಲೀ ಕತ್ತರಿಸಬಾರದು. ಯಾವುದೇ ಅಮಂಗಳ ವಸ್ತುವನ್ನು ಸ್ಪರ್ಶಿಸಬಾರದು. ॥ ೪೭ ॥ ನೀರಿನೊಳಗೆ ಮುಳುಗಿ ಸ್ನಾನಮಾಡಬಾರದು. ಸಿಟ್ಟಾಗಬಾರದು. ದುರ್ಜನರಲ್ಲಿ ಮಾತಾಡಬಾರದು. ತೊಳೆಯದಿರುವ ಬಟ್ಟೆಯನ್ನು ಧರಿಸಬಾರದು, ಬೇರೊಬ್ಬರು ಧರಿಸಿದ ಮಾಲೆಯನ್ನು ಧರಿಸಬಾರದು. ॥ ೪೮ ॥ ಎಂಜಲನ್ನು ತಿನ್ನಬಾರದು, ಭದ್ರಕಾಳಿಯ ಪ್ರಸಾದ ಅಥವಾ ಮಾಂಸಸೇರಿದ ಅನ್ನವನ್ನು ತಿನ್ನಬಾರದು. ಶೂದ್ರನು ತಂದಿರುವ ಅಥವಾ ರಜಸ್ವಲೆಯು ನೋಡಿದ ಅನ್ನವನ್ನು ಉಣ್ಣಬಾರದು. ಬೊಗಸೆಯಿಂದ ನೀರನ್ನು ಕುಡಿಯಬಾರದು. ॥ ೪೯ ॥ ಎಂಜಲುಬಾಯಿಂದ, ಆಚಮನ ಮಾಡದೆ, ಸಂಧ್ಯಾಸಮಯದಲ್ಲಿ, ಕೆದರಿದ ಕೂದಲಿನಿಂದ, ಶೃಂಗಾರವಿಲ್ಲದೆ, ಮಾತಿನ ಸಂಯಮವಿಲ್ಲದೆ, ಉತ್ತರೀಯವನ್ನು ಹೊದೆಯದೆ ಮನೆಯಿಂದ ಹೊರಗೆ ಹೋಗಬಾರದು. ॥ ೫೦ ॥ ಕಾಲು ತೊಳೆಯದೆ, ಅಪವಿತ್ರ ಸ್ಥಿತಿಯಲ್ಲಿ, ಒದ್ದೆಕಾಲುಗಳಿಂದ, ಉತ್ತರ ಅಥವಾ ಪಶ್ಚಿಮದ ಕಡೆ ತಲೆಹಾಕಿ, ಬೇರೊಬ್ಬರ ಜೊತೆಗೆ, ಬೆತ್ತಲೆಯಾಗಿ ಹಾಗೂ ಬೆಳಗ್ಗೆ-ಸಂಜೆ ಮಲಗಬಾರದು. ॥ ೫೧ ॥ ಹೀಗೆ ಈ ನಿಷಿದ್ಧ ಕರ್ಮಗಳನ್ನು ತ್ಯಜಿಸಿ, ಸದಾಕಾಲ ಪವಿತ್ರವಾಗಿರಬೇಕು. ಮಡಿಮಾಡಿದ ಬಟ್ಟೆಯನ್ನೇ ಧರಿಸಬೇಕು ಮತ್ತು ಎಲ್ಲ ಮಂಗಳಚಿಹ್ನೆಗಳಿಂದ ಸುಸಜ್ಜಿತವಾಗಿರಬೇಕು. ಪ್ರಾತಃಕಾಲದಲ್ಲಿ ಉಪಹಾರವನ್ನು ಸೇವಿಸುವ ಮೊದಲೇ ಗೋವು, ಬ್ರಾಹ್ಮಣ, ಲಕ್ಷ್ಮೀದೇವಿ, ಭಗವಾನ್ ಶ್ರೀನಾರಾಯಣ ಇವರನ್ನು ಪೂಜಿಸಬೇಕು. ॥ ೫೨ ॥ ಅನಂತರ ಹೂವಿನಮಾಲೆ, ಶ್ರೀಗಂಧವೇ ಮುಂತಾದ ಸುಗಂಧದ್ರವ್ಯಗಳೂ, ನೈವೇದ್ಯ ಮತ್ತು ಆಭರಣ ಮುಂತಾದವುಗಳಿಂದ ಸುವಾಸಿನೀ-ಸುಮಂಗಲಿಯರನ್ನು ಪೂಜಿಸಬೇಕು ಮತ್ತು ಪತಿಯ ಪೂಜೆಮಾಡಿ ಅವನ ಸೇವೆಯಲ್ಲೇ ಆಸಕ್ತಳಾಗಿರಬೇಕು. ಪತಿಯ ತೇಜಸ್ಸು ತನ್ನ ಗರ್ಭದಲ್ಲಿದೆ ಎಂಬುದನ್ನು ಭಾವಿಸುತ್ತಾ ಇರಬೇಕು. ॥ ೫೩ ॥ ಪ್ರಿಯೇ! ಈ ವ್ರತದ ಹೆಸರು 'ಪುಂಸವನ' ಎಂದಾಗಿದೆ. ಒಂದು ವರ್ಷದವರೆಗೆ ನೀನು ಯಾವುದೇ ಕುಂದುಕೊರತೆಯಿಲ್ಲದೆ ಇದನ್ನು ಪಾಲಿಸಿದರೆ ನಿನ್ನ ಗರ್ಭದಿಂದ ಇಂದ್ರನನ್ನು ಸಂಹರಿಸುವಂತಹ ಪುತ್ರನು ಜನಿಸುವನು. ॥ ೫೪ ॥

ಪರೀಕ್ಷಿತನೇ! ದೃಢನಿಶ್ಚಯವನ್ನು ಹೊಂದಿದ್ದ ದಿತಿದೇವಿಯು 'ಹಾಗೆಯೇ ಆಗಲಿ' ಎಂದು ಪತಿಯ ಆಜ್ಞೆಯನ್ನು ಶಿರಸಾವಹಿಸಿದಳು. ಆಕೆಯ ಮನೋಬಲವು ಅದ್ಭುತವಾಗಿತ್ತು. ಆಕೆಯು ತನ್ನ ಗರ್ಭದಲ್ಲಿ ಕಶ್ಯಪರ ವೀರ್ಯವನ್ನೂ, ಜೀವನದಲ್ಲಿ ಅವರು ಉಪದೇಶಿಸಿದ ವ್ರತವನ್ನೂ ಧರಿಸಿಕೊಂಡು ಅನಾಯಾಸವಾಗಿಯೇ ನಿಯಮಗಳನ್ನು ಪಾಲಿಸತೊಡಗಿದಳು. ॥ ೫೫ ॥ ಪ್ರಿಯ ಪರೀಕ್ಷಿತನೇ! ದೇವರಾಜ ಇಂದ್ರನಿಗೆ ತನ್ನ ದೊಡ್ಡಮ್ಮಳಾದ ದಿತಿಯ ಆಶಯವು ತಿಳಿಯಿತು. ಅವನು ಬಹಳ ಬುದ್ಧಿವಂತಿಕೆಯಿಂದ ವೇಷ

ಮಾತೃಷ್ವಸುರಭಿಪ್ರಾಯಮಿಂದ್ರ ಆಜ್ಞಾಯ ಮಾನದ ।
ಶುಶ್ರೂಷಣೇನಾಶ್ರಮಸ್ಥಾಂ ದಿತಿಂ ಪರ್ಯಚರತ್ಕವಿಃ
॥ ೫೬ ॥

ನಿತ್ಯಂ ವನಾತ್ಸುಮನಸಃ ಫಲಮೂಲಸಮಿತ್ಕುಶಾನ್ ।
ಪತ್ರಾಂಕುರಮೃದೋಽಪಶ್ಚ ಕಾಲೇ ಕಾಲ ಉಪಾಹರತ್
॥ ೫೭ ॥

ಏವಂ ತಸ್ಯಾ ವ್ರತಸ್ಥಾಯಾ ವ್ರತಚ್ಛಿದ್ರಂ ಹರಿರ್ನೃಪ ।
ಪ್ರೇಪ್ಸುಃ ಪರ್ಯಚರಜ್ಜಿಹ್ಮೋ ಮೃಗಹೇವ ಮೃಗಾಕೃತಿಃ
॥ ೫೮ ॥

ನಾಧ್ಯಗಚ್ಛದ್ವ್ರತಚ್ಛಿದ್ರಂ ತತ್ಪರೋಽಥ ಮಹೀಪತೇ ।
ಚಿಂತಾಂ ತೀವ್ರಾಂ ಗತಃ ಶಕ್ರಃ ಕೇನ ಮೇ ಸ್ಯಾಚ್ಛಿವಂ ತ್ವಿಹ
॥ ೫೯ ॥

ಏಕದಾ ಸಾ ತು ಸಂಧ್ಯಾಯಾಮುಚ್ಛಿಷ್ಟಾ ವ್ರತಕರ್ಶಿತಾ ।
ಅಸ್ಪೃಷ್ಟವಾರ್ಯಧೌತಾಂಘ್ರಿಃ ಸುಷ್ವಾಪ ವಿಧಿಮೋಹಿತಾ
॥ ೬೦ ॥

ಲಬ್ಧ್ವಾ ತದಂತರಂ ಶಕ್ರೋ ನಿದ್ರಾಪಹೃತಚೇತಸಃ ।
ದಿತೇಃ ಪ್ರವಿಷ್ಟ ಉದರಂ ಯೋಗೇಶೋ ಯೋಗಮಾಯಯಾ
॥ ೬೧ ॥

ಚಕರ್ತ ಸಪ್ತಧಾ ಗರ್ಭಂ ವಜ್ರೇಣ ಕನಕಪ್ರಭಮ್ ।
ರುದಂತಂ ಸಪ್ತಧೈಕೈಕಂ ಮಾ ರೋದೀರಿತಿ ತಾನ್ಪುನಃ
॥ ೬೨ ॥

ತೇ ತಮೂಚುಃ ಪಾಟ್ಯಮಾನಾಃ ಸರ್ವೇ ಪ್ರಾಂಜಲಯೋ ನೃಪ ।
ನೋ ಜಿಘಾಂಸಸಿ ಕಿಮಿಂದ್ರ ಭ್ರಾತರೋ ಮರುತಸ್ತವ
॥ ೬೩ ॥

ಮಾ ಭೈಷ್ಟ ಭ್ರಾತರೋ ಮಹ್ಯಂ ಯೂಯಮಿತ್ಯಾಹ ಕೌಶಿಕಃ ।
ಅನನ್ಯಭಾವಾನ್ಪಾರ್ಷದಾನಾತ್ಮನೋ ಮರುತಾಂ ಗಣಾನ್
॥ ೬೪ ॥

ನ ಮಮಾರ ದಿತೇರ್ಗರ್ಭಃ ಶ್ರೀನಿವಾಸಾನುಕಂಪಯಾ ।
ಬಹುಧಾ ಕುಲಿಶಕ್ಷುಣ್ಣೋ ದ್ರೌಣ್ಯಸ್ತ್ರೇಣ ಯಥಾ ಭವಾನ್
॥ ೬೫ ॥

ಸಕೃದಿಷ್ಟ್ವಾಽಽದಿಪುರುಷಂ ಪುರುಷೋ ಯಾತಿ ಸಾಮ್ಯತಾಮ್ ।
ಸಂವತ್ಸರಂ ಕಿಂಚಿದೂನಂ ದಿತ್ಯಾ ಯದ್ಧರಿರರ್ಚಿತಃ
॥ ೬೬ ॥

ವನ್ನು ಮರೆಸಿಕೊಂಡು ಆಶ್ರಮಕ್ಕೆ ಬಂದು ಅವಳ ಸೇವೆಯನ್ನು ಮಾಡತೊಡಗಿದನು. ॥ ೫೬ ॥ ಅವನು ಅತಿಗೋಸ್ಕರ ಪ್ರತಿ ದಿನವೂ ಕಾಲಕಾಲಗಳಲ್ಲಿ ಕಾಡಿನಿಂದ ಹೂವು, ಹಣ್ಣು, ಗೆಡ್ಡೆ-ಗೆಣಸು, ಸಮಿತ್ತು, ದರ್ಭೆ, ಪತ್ರೆ, ಗರಿಕೆ, ಮಣ್ಣು ಮತ್ತು ನೀರನ್ನು ತಂದು ಒದಗಿಸುತ್ತಾ ಸೇವೆಮಾಡುತ್ತಿದ್ದನು. ॥ ೫೭ ॥ ರಾಜನೇ! ಕಪಟಿಗಳಾದ ಬೇಟೆಗಾರರು ಜಿಂಕೆಯನ್ನು ಕೊಲ್ಲುವುದಕ್ಕಾಗಿ ಜಿಂಕೆ ಯಂತೆ ರೂಪವನ್ನು ಧರಿಸಿ ಅದರ ಬಳಿಗೆ ಹೋಗುವಂತೆ – ದೇವ ರಾಜನು ಕಪಟವೇಷವನ್ನು ಧರಿಸಿ ದಿತಿಯ ಬಳಿಗೆ ಹೋಗಿ ವ್ರತ ಪರಾಯಣೆಯಾಗಿದ್ದ ಆಕೆಯ ವ್ರತದಲ್ಲಿ ಛಿದ್ರವನ್ನು ಹುಡುಕುವು ದಕ್ಕಾಗಿ ಸೇವೆ ಮಾಡುತ್ತಿದ್ದನು. ॥ ೫೮ ॥ ಸದಾ ಸೂಕ್ಷ್ಮವಾಗಿ ಗಮನಿಸುತ್ತಿದ್ದರೂ ಆಕೆಯಲ್ಲಿ ಯಾವ ಛಿದ್ರವೂ ಅವನಿಗೆ ಕಂಡು ಬರಲಿಲ್ಲ. ಆದರಿಂದ ಇಂದ್ರನಿಗೆ ತುಂಬಾ ಚಿಂತೆಯುಂಟಾಯಿತು. 'ಯಾವ ಉಪಾಯಮಾಡಿದರೆ ತನಗೆ ಒಳ್ಳೆಯದಾಗುವುದು?' ಎಂಬುದನ್ನು ಅವನು ಯೋಚಿಸುತ್ತಿದ್ದನು. ॥ ೫೯ ॥

ದಿತಿಯು ವ್ರತನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸುತ್ತಾ ಬಹಳ ದುರ್ಬಲಳಾಗಿದ್ದಳು. ವಿಧಿಯ ಮೋಹಕ್ಕೆ ಒಳಗಾಗಿ ಆಕೆಯು ಒಂದುದಿನ ಸಂಧ್ಯಾಸಮಯದಲ್ಲಿ ಬಾಯಿಮುಕ್ಕಳಿಸದೆ ಎಂಜಲು ಬಾಯಿಂದ, ಆಚಮನಮಾಡದೆ, ಕಾಲು ತೊಳೆಯದೆ ಹಾಗೆಯೇ ಮಲಗಿಬಿಟ್ಟಳು. ॥ ೬೦ ॥ ತನ್ನ ಕಾರ್ಯವನ್ನು ಸಾಧಿಸಲು ಇದೇ ಒಳ್ಳೆಯ ಸಮಯವೆಂದು ಯೋಗೇಶ್ವರ ಇಂದ್ರನು ನೋಡಿದನು. ಕೂಡಲೇ ಅವನು ಯೋಗಬಲದಿಂದ ಮಲಗಿದ್ದ ದಿತಿಯ ಗರ್ಭವನ್ನು ಪ್ರವೇಶಿಸಿದನು. ॥ ೬೧ ॥ ಅವನು ಅಲ್ಲಿಗೆ ಹೋಗಿ ಭಂಗಾರದಂತೆ ಹೊಳೆಯುತ್ತಿರುವ ಗರ್ಭವನ್ನು ಏಳು ತುಂಡು ಗಳಾಗಿ ಕತ್ತರಿಸಿದನು. ಆಗ ಆ ಗರ್ಭವು ಅಳತೊಡಗಿದಾಗ 'ಅಳ ಬೇಡ-ಅಳಬೇಡ' ಎಂದು ಹೇಳುತ್ತಾ ಏಳೂ ತುಂಡುಗಳಲ್ಲಿ ಮತ್ತೆ ಒಂದೊಂದನ್ನು ಏಳು-ಏಳಾಗಿ ತುಂಡರಿಸಿದನು. ॥ ೬೨ ॥ ಇಂದ್ರನು ತುಂಡರಿಸತೊಡಗಿದಾಗ ಅವೆಲ್ಲವೂ ಕೈಜೋಡಿಸಿ ಕೊಂಡು ಇಂದ್ರನಲ್ಲಿ ಹೇಳಿದವು – ದೇವರಾಜಾ! ನೀನು ನಮ್ಮನ್ನು ಏಕೆ ಕೊಲ್ಲುತ್ತಿರುವೆ? ನಾವಾದರೋ ನಿನ್ನ ತಮ್ಮಂದಿರಾದ ಮರುದ್ಗಣ ರಾಗಿದ್ದೇವಲ್ಲ. ॥ ೬೩ ॥ ಆಗ ಇಂದ್ರನು ಮುಂದೆ ತನ್ನಲ್ಲಿ ಅನನ್ಯ ಪ್ರೇಮದಿಂದ ಕೂಡಿದ ಪಾರ್ಷದರಾದ ಆ ಮರುದ್ಗಣಗಳಿಗೆ – ಒಳ್ಳೆಯದು! ನೀವು ನನಗೆ ತಮ್ಮಂದಿರಾದಿರಿ. ಇನ್ನು ಹೆದರಬೇಡಿರಿ ಎಂದು ಅಭಯವಿತ್ತನು. ॥ ೬೪ ॥ ಪರೀಕ್ಷಿತನೇ! ಅಶ್ವತ್ಥಾಮನ ಬ್ರಹ್ಮಾಸ್ತ್ರದಿಂದ ನಿನಗೆ ಯಾವುದೇ ಅನಿಷ್ಟವಾಗಲಿಲ್ಲ. ಹಾಗೆಯೇ ಭಗವಾನ್ ಶ್ರೀಹರಿಯ ಕೃಪೆಯಿಂದ ದಿತಿಯ ಆ ಗರ್ಭವು ವಜ್ರಾಯುಧದಿಂದ ತುಂಡು-ತುಂಡಾದರೂ ಸತ್ತಿಲ್ಲ. ॥ ೬೫ ॥ ಇದರಲ್ಲಿ ಸ್ವಲ್ಪವೂ ಆಶ್ಚರ್ಯವಿಲ್ಲ. ಏಕೆಂದರೆ, ಒಂದೇ ಬಾರಿ ಯಾದರೂ ಆದಿಪುರುಷನಾದ ಶ್ರೀಮನ್ನಾರಾಯಣನ ಆರಾಧನೆ ಯನ್ನು ಮಾಡುವವನು ಆತನ ಸಾಮ್ಯವನ್ನೇ ಪಡೆಯುವನು. ಹೀಗಿರುವಾಗ ದಿತಿಯು ಕೆಲವೇ ದಿನಗಳು ಕಡಿಮೆ ಒಂದು ವರ್ಷ ದವರೆಗೆ ಭಗವಂತನನ್ನು ಆರಾಧಿಸಿದ್ದಳು. ॥ ೬೬ ॥

ಸಹೇಂದ್ರೇಣ ಪಂಚಾಶದ್ದೇವಾಸ್ತೇ ಮರುತೋಽಭವನ್ ।
ವ್ಯಪೋಹ್ಯ ಮಾತೃದೋಷಂ ತೇ ಹರಿಣಾ ಸೋಮಪಾಃ ಕೃತಾಃ ॥ ೬೭ ॥

ದಿತಿರುತ್ಥಾಯ ದದೃಶೇ ಕುಮಾರಾನನಲಪ್ರಭಾನ್ ।
ಇಂದ್ರೇಣ ಸಹಿತಾನ್ ದೇವೀ ಪರ್ಯತುಷ್ಯದನಿಂದಿತಾ ॥ ೬೮ ॥

ಅಥೇಂದ್ರಮಾಹ ತಾತಾಹಮಾದಿತ್ಯಾನಾಂ ಭಯಾವಹಮ್ ।
ಅಪತ್ಯಮಿಚ್ಛಂತ್ಯಚರಂ ವ್ರತಮೇತತ್ಸುದುಷ್ಕರಮ್ ॥ ೬೯ ॥

ಏಕಃ ಸಂಕಲ್ಪಿತಃ ಪುತ್ರಃ ಸಪ್ತ ಸಪ್ತಾಭವನ್ಕಥಮ್ ।
ಯದಿ ತೇ ವಿದಿತಂ ಪುತ್ರ ಸತ್ಯಂ ಕಥಯ ಮಾ ಮೃಷಾ ॥ ೭೦ ॥

ಇಂದ್ರ ಉವಾಚ

ಅಂಬ ತೇಽಹಂ ವ್ಯವಸಿತಮುಪಧಾರ್ಯಾಗತೋಽಂತಿಕಮ್ ।
ಲಬ್ಧಾಂತರೋಽಚ್ಛಿದಂ ಗರ್ಭಮರ್ಥಬುದ್ಧಿರ್ನ ಧರ್ಮವಿತ್ ॥ ೭೧ ॥

ಕೃತ್ತೋ ಮೇ ಸಪ್ತಧಾ ಗರ್ಭ ಆಸನ್ಸಪ್ತ ಕುಮಾರಕಾಃ ।
ತೇಽಪಿ ಚೈಕೈಕಶೋ ವೃಕ್ಣಾಃ ಸಪ್ತಧಾ ನಾಪಿ ಮಮ್ರಿರೇ ॥ ೭೨ ॥

ತತಸ್ತತ್ಪರಮಾಶ್ಚರ್ಯಂ ವೀಕ್ಷ್ಯಾಧ್ಯವಸಿತಂ ಮಯಾ ।
ಮಹಾಪುರುಷಪೂಜಾಯಾಃ ಸಿದ್ಧಿಃ ಕಾಪ್ಯನುಷಂಗಿಣೀ ॥ ೭೩ ॥

ಆರಾಧನಂ ಭಗವತ ಈಹಮಾನಾ ನಿರಾಶಿಷಃ ।
ಯೇ ತು ನೇಚ್ಛಂತ್ಯಪಿ ಪರಂ ತೇ ಸ್ವಾರ್ಥಕುಶಲಾಃ ಸ್ಮೃತಾಃ ॥ ೭೪ ॥

ಆರಾಧ್ಯಾತ್ಮಪ್ರದಂ ದೇವಂ ಸ್ವಾತ್ಮಾನಂ ಜಗದೀಶ್ವರಮ್ ।
ಕೋ ವೃಣೀತೇ ಗುಣಸ್ಪರ್ಶಂ ಬುಧಃ ಸ್ಯಾನ್ನರಕೇಽಪಿ ಯತ್ ॥ ೭೫ ॥

ತದಿದಂ ಮಮ ದೌರ್ಜನ್ಯಂ ಬಾಲಿಶಸ್ಯ ಮಹೀಯಸಿ ।
ಕ್ಷಂತುಮರ್ಹಸಿ ಮಾತಸ್ತ್ವಂ ದಿಷ್ಟ್ಯಾ ಗರ್ಭೋ ಮೃತೋತ್ಥಿತಃ ॥ ೭೬ ॥

ಈಗ ಆ ನಲವತ್ತೊಂಭತ್ತು ಮರುದ್ಗಣರು ಇಂದ್ರನೊಡನೆ ಸೇರಿ ಐವತ್ತಾದರು. ಇಂದ್ರನೂ ಕೂಡ ಬಲತಾಯಿ ಪುತ್ರರೊಂದಿಗೆ ಶತ್ರುಭಾವವನ್ನಿರಿಸದೆ ಅವರನ್ನೂ ಸೋಮಪಾನ ಮಾಡುವ ದೇವತೆಗಳನ್ನಾಗಿಸಿದನು. ॥ ೬೭ ॥ ದಿತಿಯು ಕಣ್ಣು ತೆರೆದು ನೋಡಿದಾಗ ಅಗ್ನಿಯಂತೆ ಹೊಳೆಯುತ್ತಿರುವ ತನ್ನ ನಲವತ್ತೊಂಭತ್ತು ಮಂದಿ ಬಾಲಕರು ಇಂದ್ರನೊಡನಿರುವುದನ್ನು ಕಂಡಳು. ಇದರಿಂದ ಅನಿಂದ್ಯವಾದ ಸ್ವಭಾವವುಳ್ಳ ದಿತಿಗೆ ತುಂಬಾ ಸಂತೋಷವಾಯಿತು. ॥ ೬೮ ॥ ಆಕೆಯು ಇಂದ್ರನನ್ನು ಸಂಬೋಧಿಸುತ್ತಾ – ಮಗನೇ! ನಾನು 'ಅದಿತಿಯ ಪುತ್ರರಾದ ನಿಮಗೆ ಭಯವನ್ನುಂಟುಮಾಡುವ ಒಬ್ಬ ಪುತ್ರನು ಹುಟ್ಟಲಿ' ಎಂದು ಈ ಅತ್ಯಂತ ಕಠಿಣವಾದ ವ್ರತವನ್ನು ಪಾಲಿಸುತ್ತಿದ್ದೆ ॥ ೬೯ ॥ ನಾನು ಕೇವಲ ಒಬ್ಬನೇ ಪುತ್ರನಿಗಾಗಿ ಸಂಕಲ್ಪ ಮಾಡಿದ್ದೆ. ಹೀಗಿದ್ದರೂ ಈ ನಲವತ್ತೊಂಭತ್ತು ಪುತ್ರರು ಹೇಗಾದರು? ಮಗು ಇಂದ್ರನೇ! ನಿನಗೆ ಇದರ ರಹಸ್ಯ ತಿಳಿದಿದ್ದರೆ ನಿಜವನ್ನೇ ಹೇಳು. ಸುಳ್ಳನ್ನಾಡಬೇಡ' ಎಂದು ಕೇಳಿದಳು. ॥ ೭೦ ॥

ಇಂದ್ರನು ಹೇಳಿದನು – ಅಮ್ಮಾ! ನೀನು ಯಾವ ಉದ್ದೇಶದಿಂದ ವ್ರತವನ್ನು ಆಚರಿಸುತ್ತಿದ್ದೆ ಎಂಬುದು ನನಗೆ ತಿಳಿದುಹೋಯಿತು. ಅದಕ್ಕಾಗಿ ಸ್ವಾರ್ಥಸಾಧನೆಗಾಗಿ ನಾನು ಸ್ವರ್ಗವನ್ನು ಬಿಟ್ಟು ನಿನ್ನ ಬಳಿಗೆ ಬಂದಿರುವೆನು. ನನ್ನ ಮನಸ್ಸಿನಲ್ಲಿ ಸ್ವಲ್ಪವೂ ಧರ್ಮಭಾವನೆ ಇರಲಿಲ್ಲ. ಇದರಿಂದ ನಿನ್ನ ವ್ರತದಲ್ಲಿ ಉಂಟಾದ ಕೊರತೆಯನ್ನು ಕಂಡು ನಾನು ಆ ಗರ್ಭವನ್ನು ತುಂಡು-ತುಂಡಾಗಿಸಿದೆನು. ॥ ೭೧ ॥ ಮೊದಲಿಗೆ ನಾನು ಅದನ್ನು ಏಳು ತುಂಡುಗಳಾಗಿಸಿದೆ. ಇದಾದ ಬಳಿಕ ನಾನು ಪುನಃ ಒಂದೊಂದನ್ನು ಏಳು-ಏಳಾಗಿ ತುಂಡುಮಾಡಿದೆ. ಆಗಲೂ ಅದು ಸಾಯದೆ ನಲವತ್ತೊಂಭತ್ತಾಯಿತು. ॥ ೭೨ ॥ ಇಂತಹ ಪರಮಾಶ್ಚರ್ಯಮಯ ಘಟನೆಯನ್ನು ಕಂಡು 'ಇದು ಪರಮಪುರುಷ ಭಗವಂತನ ಉಪಾಸನೆಯ ಯಾವುದೋ ಸಿದ್ಧಿಯಾಗಿದೆ' ಎಂದು ನಾನು ನಿಶ್ಚಯಿಸಿದೆನು. ॥ ೭೩ ॥ ನಿಷ್ಕಾಮಭಾವದಿಂದ ಭಗವಂತನನ್ನು ಆರಾಧಿಸುವವರು, ಬೇರೆ ವಸ್ತುವೇನು, ಮೋಕ್ಷವನ್ನೂ ಕೂಡ ಬಯಸದಿರುವವರೇ ತಮ್ಮ ಸ್ವಾರ್ಥ ಮತ್ತು ಪರಮಾರ್ಥದಲ್ಲಿ ನಿಪುಣರಾಗಿರುತ್ತಾರೆ. ॥ ೭೪ ॥ ಭಗವಾನ್ ಜಗದೀಶ್ವರನು ಎಲ್ಲರಿಗೂ ಆರಾಧ್ಯದೇವನಾಗಿದ್ದು, ಎಲ್ಲರ ಆತ್ಮನಾಗಿರುವನು. ಅವನು ಪ್ರಸನ್ನನಾದರೆ ಭಕ್ತರಿಗೆ ತನ್ನನ್ನೇ ಕೊಟ್ಟುಕೊಳ್ಳುವನು. ಹೀಗಿರುವಾಗ ಯಾವ ವಿವೇಕಿಯು ತಾನೇ ಆತನನ್ನು ಆರಾಧಿಸಿ ವಿಷಯಭೋಗಗಳನ್ನು ವರವನ್ನಾಗಿ ಬೇಡಿಕೊಳ್ಳುವನು? ಅಮ್ಮಾ! ಈ ವಿಷಯಭೋಗಗಳಾದರೋ ನರಕದಲ್ಲಿಯೂ ದೊರೆಯಬಲ್ಲವು. ॥ ೭೫ ॥ ವಾತ್ಸಲ್ಯಪೂರ್ಣೆಯಾದ ತಾಯೇ! ನೀನು ಎಲ್ಲ ವಿಧದಿಂದಲೂ ನನಗೆ ಪೂಜ್ಯಳಾಗಿರುವೆ. ನಾನು ಮೂರ್ಖತೆಯಿಂದ ಭಾರೀ ದುಷ್ಟತೆಯ ಕೆಲಸವನ್ನು ಮಾಡಿದೆನು. ನೀನು ನನ್ನ ಅಪರಾಧವನ್ನು ಕ್ಷಮಿಸಿಬಿಡು. ನಿನ್ನ ಗರ್ಭವು ಖಂಡ-ಖಂಡವಾಗಿ ಒಂದು ವಿಧದಿಂದ ಸತ್ತುಹೋದರೂ ಪುನಃ ಜೀವಿತವಾಯಿತು. ಇದು ದೊಡ್ಡ ಸೌಭಾಗ್ಯದ ಮಾತೇ ಆಗಿದೆ. ॥ ೭೬ ॥

ಶ್ರೀಶುಕ ಉವಾಚ

ಇಂದ್ರಸ್ತಯಾಭ್ಯನುಜ್ಞಾತಃ ಶುದ್ಧಭಾವೇನ ತುಷ್ಟಯಾ ।
ಮರುದ್ಭಿಃ ಸಹ ತಾಂ ನತ್ವಾ ಜಗಾಮ ತ್ರಿದಿವಂ ಪ್ರಭುಃ ॥ ೭೭ ॥

ಏವಂ ತೇ ಸರ್ವಮಾಖ್ಯಾತಂ ಯನ್ಮಾಂ ತ್ವಂ ಪರಿಪೃಚ್ಛಸಿ ।
ಮಂಗಲಂ ಮರುತಾಂ ಜನ್ಮ ಕಿಂ ಭೂಯಃ ಕಥಯಾಮಿ ತೇ ॥ ೭೮ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ! ದೇವರಾಜ ಇಂದ್ರನ ಈ ಶುದ್ಧಭಾವದಿಂದ ದಿತಿಯು ಸಂತೋಷಗೊಂಡಳು. ಆಕೆಯಿಂದ ಅಪ್ಪಣೆಪಡೆದು, ಇಂದ್ರನು ಮರುದ್ಗಣರೊಂದಿಗೆ ಆಕೆಗೆ ವಂದಿಸಿಕೊಂಡು ಸ್ವರ್ಗಕ್ಕೆ ಹೊರಟು ಹೋದನು. ॥ ೭೭ ॥ ರಾಜೇಂದ್ರನೇ! ನೀನು ಕೇಳಿದಂತೆ ಮರುದ್ಗಣಗಳ ಮಂಗಳಮಯ ಜನ್ಮವೃತ್ತಾಂತವನ್ನು ನಿನಗೆ ಸಮಗ್ರವಾಗಿ ತಿಳಿಸಿರುವೆನು. ಇನ್ನೇನು ಕೇಳಲು ನೀನು ಬಯಸುತ್ತಿರುವೆ? ॥ ೭೮ ॥

ಹದಿನೆಂಟನೆಯ ಅಧ್ಯಾಯವು ಮುಗಿಯಿತು. ॥ ೧೮ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಷಷ್ಠಸ್ಕಂಧೇ ಮರುದುತ್ಪತ್ತಿಕಥನಂ ನಾಮಾಷ್ಟಾದಶೋಽಧ್ಯಾಯಃ ॥ ೧೮ ॥

ಹತ್ತೊಂಭತ್ತನೆಯ ಅಧ್ಯಾಯ

ಪುಂಸವನ ವ್ರತದ ವಿಧಿ

ರಾಜೋವಾಚ

ವ್ರತಂ ಪುಂಸವನಂ ಬ್ರಹ್ಮನ್ ಭವತಾ ಯದುದೀರಿತಮ್ ।
ತಸ್ಯ ವೇದಿತುಮಿಚ್ಛಾಮಿ ಯೇನ ವಿಷ್ಣುಃ ಪ್ರಸೀದತಿ ॥ ೧ ॥

ಪರೀಕ್ಷಿತರಾಜನು ಕೇಳಿದನು – ಭಗವಂತರೇ! ತಾವು ಈಗ ಪುಂಸವನವ್ರತವನ್ನು ವರ್ಣಿಸಿದಿರಿ. ಇದರಿಂದ ಭಗವಾನ್ ವಿಷ್ಣುವು ಪ್ರಸನ್ನನಾಗುವನು ಎಂದೂ ಹೇಳಿದಿರಿ. ಈಗ ನಾನು ಅದರ ವಿಧಿಯನ್ನು ತಿಳಿಯಲು ಬಯಸುತ್ತಿದ್ದೇನೆ. ದಯಮಾಡಿ ತಿಳಿಸಿರಿ. ॥ ೧ ॥

ಶ್ರೀಶುಕ ಉವಾಚ

ಶುಕ್ಲೇ ಮಾರ್ಗಶಿರೇ ಪಕ್ಷೇ ಯೋಷಿದ್ಭರ್ತುರನುಜ್ಞಯಾ ।
ಆರಭೇತ ವ್ರತಮಿದಂ ಸಾರ್ವಕಾಮಿಕಮಾದಿತಃ ॥ ೨ ॥

ನಿಶಮ್ಯ ಮರುತಾಂ ಜನ್ಮ ಬ್ರಾಹ್ಮಣಾನನುಮಂತ್ರ್ಯ ಚ ।
ಸ್ನಾತ್ವಾ ಶುಕ್ಲದತೀ ಶುಕ್ಲೇ ವಸೀತಾಲಂಕೃತಾಂಬರೇ ।
ಪೂಜಯೇತ್ಪ್ರಾತರಾಶಾತ್ಪ್ರಾಗ್ಭಗವಂತಂ ಶ್ರಿಯಾ ಸಹ ॥ ೩ ॥

ಅಲಂ ತೇ ನಿರಪೇಕ್ಷಾಯ ಪೂರ್ಣಕಾಮ ನಮೋಽಸ್ತು ತೇ ।
ಮಹಾವಿಭೂತಿಪತಯೇ ನಮಃ ಸಕಲಸಿದ್ಧಯೇ ॥ ೪ ॥

ಯಥಾ ತ್ವಂ ಕೃಪಯಾ ಭೂತ್ಯಾ ತೇಜಸಾ ಮಹಿಮೌಜಸಾ ।
ಜುಷ್ಟ ಈಶ ಗುಣೈಃ ಸರ್ವೈಸ್ತತೋಽಸಿ ಭಗವಾನ್ಪ್ರಭುಃ ॥ ೫ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿದ್ರಾಜನೇ! ಈ ಪುಂಸವನವ್ರತವು ಸಮಸ್ತ ಕಾಮನೆಗಳನ್ನು ಈಡೇರಿಸುವಂತಹುದು. ಇದನ್ನು ಸ್ತ್ರೀಯರು ತಮ್ಮ-ತಮ್ಮ ಪತಿಗಳ ಅನುಮತಿಯನ್ನು ಪಡೆದು ಮಾರ್ಗಶಿರಮಾಸದ ಶುಕ್ಲಪಕ್ಷದ ಪ್ರತಿಪದೆಯಿಂದ ಪ್ರಾರಂಭಿಸಬೇಕು. ॥ ೨ ॥ ಮೊದಲಿಗೆ ಮಂಗಳಕರವಾದ ಮರುದ್ಗಣರ ಕಥೆಯನ್ನು ಕೇಳಿ, ಬ್ರಾಹ್ಮಣರಿಂದ ಅಪ್ಪಣೆ ಪಡೆದು ವ್ರತವನ್ನು ಪ್ರಾರಂಭಿಸಬೇಕು. ಪ್ರತಿದಿನವೂ ಬೆಳಿಗ್ಗೆ ಹಲ್ಲುಗಳನ್ನು ಉಜ್ಜಿ ತೊಳೆದು, ಸ್ನಾನಮಾಡಿ ಶುಭ್ರವಾದ ವಸ್ತ್ರಾಲಂಕಾರಗಳನ್ನು ಧರಿಸಬೇಕು. ಪ್ರಾತಃಕಾಲದಲ್ಲಿ ಏನನ್ನೂ ತಿನ್ನದೆಯೇ ಭಗವಾನ್ ಲಕ್ಷ್ಮೀ-ನಾರಾಯಣರನ್ನು ಪೂಜೆ ಮಾಡಬೇಕು. ॥ ೩ ॥ ಬಳಿಕ ಭಗವಂತನನ್ನು ಹೀಗೆ ಪ್ರಾರ್ಥಿಸಬೇಕು – ಪ್ರಭೋ! ನೀನು ಪೂರ್ಣಕಾಮನು. ಆದ್ದರಿಂದ ನಿನಗೆ ಯಾರಿಂದಲೂ ಏನನ್ನೂ ಕೊಟ್ಟು-ಕೊಳ್ಳುವುದಿರುವುದಿಲ್ಲ. ನೀನು ಸಮಸ್ತ ವಿಭೂತಿಗಳಿಗೆ ಸ್ವಾಮಿಯೂ, ಸಕಲಸಿದ್ಧಿ ಸ್ವರೂಪನೂ ಆಗಿರುವೆ. ನಾನು ನಿನಗೆ ಮತ್ತೆ-ಮತ್ತೆ ನಮಸ್ಕರಿಸುತ್ತೇನೆ. ॥ ೪ ॥ ಓ ನನ್ನ ಆರಾಧ್ಯದೇವನೇ! ನೀನು ಕೃಪೆ, ವಿಭೂತಿ, ತೇಜ, ಮಹಿಮೆ ಮತ್ತು ವೀರ್ಯ ಮುಂತಾದ ಸಕಲಗುಣಗಳಿಂದ ನಿತ್ಯಯುಕ್ತನಾಗಿರುವೆ. ಇವುಗಳಿಗೆ ಭಗವೆಂದು ಹೆಸರು. ಈ ಭಗಗಳಿಂದ ಕೂಡಿರುವುದರಿಂದ ನಿನ್ನನ್ನು ಭಗವಂತನೆಂದು ಹೇಳುತ್ತಾರೆ. ನೀನು ಸರ್ವಶಕ್ತನು. ॥ ೫ ॥

ವಿಷ್ಣುಪತ್ನಿ ಮಹಾಮಾಯೇ
ಮಹಾಪುರುಷಲಕ್ಷಣೇ ।
ಪ್ರೀಯೇಥಾ ಮೇ ಮಹಾಭಾಗೇ
ಲೋಕಮಾತರ್ನಮೋಽಸ್ತು ತೇ ॥ ೬ ॥

ಓಂ ನಮೋ ಭಗವತೇ ಮಹಾಪುರುಷಾಯ ಮಹಾನುಭಾವಾಯ ಮಹಾವಿಭೂತಿಪತಯೇ ಸಹ ಮಹಾವಿಭೂತಿಭಿರ್ಬಲಿಮುಪಹರಾಣೀತಿ । ಅನೇನಾಹರಹರ್ಮಂತ್ರೇಣ ವಿಷ್ಣೋರಾವಾಹನಾರ್ಘ್ಯಪಾದ್ಯೋಪಸ್ಪರ್ಶನಸ್ನಾನವಾಸಉಪವೀತವಿಭೂಷಣಗಂಧಪುಷ್ಪಧೂಪದೀಪೋಪಹಾರಾದ್ಯುಪಚಾರಾನ್ ಸುಸಮಾಹಿತ ಉಪಾಹರೇತ್ ॥ ೭ ॥

ಹವಿಃಶೇಷಂ ತು ಜುಹುಯಾ-
ದನಲೇ ದ್ವಾದಶಾಹುತೀಃ ।
ಓಂ ನಮೋ ಭಗವತೇ ಮಹಾಪುರುಷಾಯ
ಮಹಾವಿಭೂತಿಪತಯೇ ಸ್ವಾಹೇತಿ ॥ ೮ ॥

ಶ್ರಿಯಂ ವಿಷ್ಣುಂ ಚ ವರದಾವಾಶಿಷಾಂ ಪ್ರಭವಾವುಭೌ ।
ಭಕ್ತ್ಯಾ ಸಂಪೂಜಯೇನ್ನಿತ್ಯಂ ಯದೀಚ್ಛೇತ್ಸರ್ವಸಂಪದಃ
॥ ೯ ॥

ಪ್ರಣಮೇದ್ದಂಡವದ್ಭೂಮೌ ಭಕ್ತಿಪ್ರಹ್ವೇಣ ಚೇತಸಾ ।
ದಶವಾರಂ ಜಪೇನ್ಮಂತ್ರಂ ತತಃ ಸ್ತೋತ್ರಮುದೀರಯೇತ್
॥ ೧೦ ॥

ಯುವಾಂ ತು ವಿಶ್ವಸ್ಯ ವಿಭೂ ಜಗತಃ ಕಾರಣಂ ಪರಮ್ ।
ಇಯಂ ಹಿ ಪ್ರಕೃತಿಃ ಸೂಕ್ಷ್ಮಾ ಮಾಯಾಶಕ್ತಿರ್ದುರತ್ಯಯಾ
॥ ೧೧ ॥

ತಸ್ಯಾ ಅಧೀಶ್ವರಃ ಸಾಕ್ಷಾತ್ತ್ವಮೇವ ಪುರುಷಃ ಪರಃ ।
ತ್ವಂ ಸರ್ವಯಜ್ಞ ಇಜ್ಯೇಯಂ ಕ್ರಿಯೇಯಂ ಫಲಭುಗ್ಭವಾನ್
॥ ೧೨ ॥

ಗುಣವ್ಯಕ್ತಿರಿಯಂ ದೇವೀ ವ್ಯಂಜಕೋ ಗುಣಭುಗ್ಭವಾನ್ ।
ತ್ವಂ ಹಿ ಸರ್ವಶರೀರ್ಯಾತ್ಮಾ ಶ್ರೀಃ ಶರೀರೇಂದ್ರಿಯಾಶಯಾ ।
ನಾಮರೂಪೇ ಭಗವತೀ ಪ್ರತ್ಯಯಸ್ತ್ವಮಪಾಶ್ರಯಃ
॥ ೧೩ ॥

ಮಾತೆ ಮಹಾಲಕ್ಷ್ಮಿಯೇ! ನೀನು ಭಗವಂತನ ಅರ್ಧಾಂಗಿನಿಯಾಗಿದ್ದು ಮಹಾಮಾಯಾ ಸ್ವರೂಪಳಾಗಿದ್ದೀಯೆ. ಭಗವಂತನ ಸರ್ವಗುಣಗಳೂ ನಿನ್ನಲ್ಲಿವೆ. ಮಹಾಭಾಗ್ಯವತಿಯಾದ ಭಗವತಿಯೆ! ಜಗನ್ಮಾತೆಯೇ! ನನ್ನಲ್ಲಿ ಪ್ರಸನ್ನಳಾಗು. ನಿನಗೆ ಬಾರಿ-ಬಾರಿಗೂ ನಮಸ್ಕಾರಗಳು. ॥ ೬ ॥

ಪರೀಕ್ಷಿತನೇ! ಹೀಗೆ ಸ್ತುತಿಮಾಡಿ ಏಕಾಗ್ರಚಿತ್ತದಿಂದ – 'ಓಂಕಾರ ಸ್ವರೂಪನೂ, ಮಹಾಪುರುಷನೂ, ಮಹಾನುಭಾವನೂ, ಮಹಾ ವಿಭೂತಿಗಳಿಂದ ಕೂಡಿರುವ ಸ್ವಾಮಿಯೂ, ಆದ ಶ್ರೀಭಗವಂತನಿಗೆ ಹಾಗೂ ಆತನ ಮಹಾವಿಭೂತಿಗಳಿಗೆ ನಮಸ್ಕಾರ ಮಾಡಿ ಅವರಿಗೆ ಪೂಜೋಪಹಾರ ಸಾಮಗ್ರಿಗಳನ್ನು ಸಮರ್ಪಿಸುತ್ತೇನೆ' ಎಂಬ ಮಂತ್ರದ ಮೂಲಕ ಪ್ರತಿದಿನವೂ ಸ್ಥಿರವಾದ ಚಿತ್ತದಿಂದ ಭಗವಾನ್ ಶ್ರೀವಿಷ್ಣುವನ್ನು ಆವಾಹನ, ಅರ್ಘ್ಯ, ಪಾದ್ಯ, ಆಚಮನ, ಸ್ನಾನ, ವಸ್ತ್ರ, ಯಜ್ಞೋಪವೀತ, ಆಭೂಷಣ, ಗಂಧ, ಪುಷ್ಪ ಧೂಪ, ದೀಪ, ನೈವೇದ್ಯಗಳೇ ಮುಂತಾದ ಉಪಚಾರಗಳಿಂದ ಪೂಜಿಸಬೇಕು. ॥ ೭ ॥ ಉಳಿದಿರುವ ನೈವೇದ್ಯದಿಂದ – 'ಓಂ ನಮೋ ಭಗವತೇ ಮಹಾಪುರುಷಾಯ ಮಹಾವಿಭೂತಿ ಪತಯೇ ಸ್ವಾಹಾ' (ಮಹಾವಿಭೂತಿಗಳಿಗೆ ಅಧಿಪತಿಯಾದ ಭಗವಾನ್ ಪುರುಷೋತ್ತಮನಿಗೆ ನಮಸ್ಕರಿಸುತ್ತೇನೆ) ಎಂಬ ಮಂತ್ರವನ್ನು ಹೇಳಿ ಅಗ್ನಿಯಲ್ಲಿ ಹನ್ನೆರಡು ಆಹುತಿಗಳನ್ನು ಅರ್ಪಿಸಬೇಕು. ॥ ೮ ॥ ಪರೀಕ್ಷಿದ್ರಾಜನೇ! ಎಲ್ಲ ಬಗೆಯ ಸಂಪತ್ತುಗಳನ್ನು ಬಯಸುವವನು ಪ್ರತಿದಿನವೂ ಭಕ್ತಿಭಾವದಿಂದ ಭಗವಾನ್ ಲಕ್ಷ್ಮೀನಾರಾಯಣರನ್ನು ಪೂಜೆ ಮಾಡಬೇಕು. ಏಕೆಂದರೆ, ಅವರಿಬ್ಬರೂ ಸಮಸ್ತ ಅಭಿಲಾಷೆಗಳನ್ನು ಈಡೇರಿಸುವವರು ಹಾಗೂ ಶ್ರೇಷ್ಠರಾದ ವರದಾಯಕರು. ॥ ೯ ॥ ಅನಂತರ ಭಕ್ತಿಭಾವದಿಂದ ನಮ್ರವಾಗಿ ಶ್ರೀಭಗವಂತನಿಗೆ ಸಾಷ್ಟಾಂಗ ನಮಸ್ಕಾರ ಮಾಡಬೇಕು. ಹಿಂದೆ ಹೇಳಿದ ಮಂತ್ರವನ್ನು ಹತ್ತುಬಾರಿ ಜಪಿಸಬೇಕು. ಮತ್ತೆ ಈ ಕೆಳಗಿನ ಸ್ತೋತ್ರವನ್ನು ಪಾರಾಯಣ ಮಾಡಬೇಕು. ॥ ೧೦ ॥

ಓ ಲಕ್ಷ್ಮೀನಾರಾಯಣರೇ! ನೀವಿಬ್ಬರೂ ಸರ್ವವ್ಯಾಪಕರೂ ಹಾಗೂ ಇಡೀ ಜಗತ್ತಿಗೆ ಮೂಲಕಾರಣರೂ ಆಗಿದ್ದೀರಿ. ಆದರೆ ನಿಮಗೆ ಬೇರೊಂದು ಕಾರಣವಿಲ್ಲ. ಭಗವಂತಾ! ಮಾತೆ ಲಕ್ಷ್ಮಿಯು ನಿನ್ನ ಮಾಯಾಶಕ್ತಿಯೇ ಆಗಿರುವಳು. ಅವಳು ಸ್ವಯಂ ಅವ್ಯಕ್ತ ಪ್ರಕೃತಿಯೂ ಆಗಿರುವಳು. ಅವಳನ್ನು ದಾಟುವುದು ಅತಿಕಷ್ಟವು. ॥ ೧೧ ॥ ಪ್ರಭೋ! ನೀನು ಆ ಮಹಾಮಾಯೆಯ ಅಧೀಶ್ವರನಾಗಿರುವೆ ಮತ್ತು ನೀನು ಸ್ವಯಂ ಪರಮಪುರುಷನೂ ಆಗಿರುವೆ. ನೀನು ಸಮಸ್ತ ಯಜ್ಞಗಳೇ ಆಗಿದ್ದು ಅವಳು ಯಜ್ಞ ಕ್ರಿಯೆಯಾಗಿರುವಳು. ನೀನು ಫಲದ ಭೋಕ್ತಾ ಆಗಿದ್ದು ಅವಳು ಅದನ್ನು ಉತ್ಪನ್ನಗೊಳಿಸುವ ಕ್ರಿಯೆಯಾಗಿದ್ದಾಳೆ. ॥ ೧೨ ॥ ತಾಯಿ ಲಕ್ಷ್ಮಿಯು ಮೂರುಗುಣಗಳ ಅಭಿವ್ಯಕ್ತಿಯಾದರೆ, ನೀನು ಅವುಗಳನ್ನು ವ್ಯಕ್ತಗೊಳಿಸುವವನೂ, ಅವುಗಳ ಭೋಕ್ತೃವೂ ಆಗಿರುವೆ. ನೀನು ಸಮಸ್ತ ಪ್ರಾಣಿಗಳ ಆತ್ಮನಾಗಿರುವೆ ಮತ್ತು ಲಕ್ಷ್ಮೀದೇವಿಯು ಶರೀರ, ಇಂದ್ರಿಯಗಳು ಹಾಗೂ ಅಂತಃಕರಣವಾಗಿದ್ದಾಳೆ. ಮಾತೆಯಾದ ಲಕ್ಷ್ಮೀದೇವಿಯು ನಾಮ ಮತ್ತು ರೂಪವಾಗಿದ್ದರೆ, ನೀನು ನಾಮ-ರೂಪ ಎರಡರ ಪ್ರಕಾಶಕ ಹಾಗೂ ಆಧಾರನಾಗಿರುವೆ. ॥ ೧೩ ॥

ಯಥಾ ಯುವಾಂ ತ್ರಿಲೋಕಸ್ಯ ವರದೌ ಪರಮೇಷ್ಠಿನೌ ।
ತಥಾ ಮ ಉತ್ತಮಶ್ಲೋಕ ಸಂತು ಸತ್ಯಾ ಮಹಾಶಿಷಃ ॥ ೧೪ ॥

ಇತ್ಯಭಿಷ್ಟೂಯ ವರದಂ ಶ್ರೀನಿವಾಸಂ ಶ್ರಿಯಾ ಸಹ ।
ತನ್ನಿಃಸಾರ್ಯೋಪಹರಣಂ ದತ್ತ್ವಾಽಽಚಮನಮರ್ಚಯೇತ್ ॥ ೧೫ ॥

ತತಃ ಸ್ತುವೀತ ಸ್ತೋತ್ರೇಣ ಭಕ್ತಿಪ್ರಹ್ವೇಣ ಚೇತಸಾ ।
ಯಜ್ಞೋಚ್ಛಿಷ್ಟಮವಘ್ರಾಯ ಪುನರಭ್ಯರ್ಚಯೇದ್ಧರಿಮ್ ॥ ೧೬ ॥

ಪತಿಂ ಚ ಪರಯಾ ಭಕ್ತ್ಯಾ ಮಹಾಪುರುಷಚೇತಸಾ ।
ಪ್ರಿಯೈಸ್ತೈಸ್ತೈರುಪನಮೇತ್ ಪ್ರೇಮಶೀಲಃ ಸ್ವಯಂ ಪತಿಃ ।
ಬಿಭೃಯಾತ್ಸರ್ವಕರ್ಮಾಣಿ ಪತ್ನ್ಯಾ ಉಚ್ಚಾವಚಾನಿ ಚ ॥ ೧೭ ॥

ಕೃತಮೇಕತರೇಣಾಪಿ ದಂಪತ್ಯೋರುಭಯೋರಪಿ ।
ಪತ್ನ್ಯಾಂ ಕುರ್ಯಾದನರ್ಹಾಯಾಂ ಪತಿರೇತತ್ಸಮಾಹಿತಃ ॥ ೧೮ ॥

ವಿಷ್ಣೋರ್ವ್ರತಮಿದಂ ಬಿಭ್ರನ್ ನ ವಿಹನ್ಯಾತ್ಕಥಂಚನ ।
ವಿಪ್ರಾನ್ ಸ್ತ್ರಿಯೋ ವೀರವತೀಃ ಸ್ರಗ್ಗಂಧಬಲಿಮಂಡನೈಃ ।
ಅರ್ಚೇದಹರಹರ್ಭಕ್ತ್ಯಾ ದೇವಂ ನಿಯಮಮಾಸ್ಥಿತಃ ॥ ೧೯ ॥

ಉದ್ವಾಸ್ಯ ದೇವಂ ಸ್ವೇ ಧಾಮ್ನಿ ತನ್ನಿವೇದಿತಮಗ್ರತಃ ।
ಅದ್ಯಾದಾತ್ಮವಿಶುದ್ಧ್ಯರ್ಥಂ ಸರ್ವಕಾಮರ್ಧಯೇ ತಥಾ ॥ ೨೦ ॥

ಏತೇನ ಪೂಜಾವಿಧಿನಾ ಮಾಸಾನ್ ದ್ವಾದಶ ಹಾಯನಮ್ ।
ನೀತ್ವಾಥೋಪಚರೇತ್ಸಾಧ್ವೀ ಕಾರ್ತಿಕೇ ಚರಮೇಽಹನಿ ॥ ೨೧ ॥

ಶ್ವೋಭೂತೇಽಪ ಉಪಸ್ಪೃಶ್ಯ ಕೃಷ್ಣಮಭ್ಯರ್ಚ್ಯ ಪೂರ್ವವತ್ ।
ಪಯಃಶೃತೇನ ಜುಹುಯಾಚ್ಚರುಣಾ ಸಹ ಸರ್ಪಿಷಾ ।
ಪಾಕಯಜ್ಞವಿಧಾನೇನ ದ್ವಾದಶೈವಾಹುತೀಃ ಪತಿಃ ॥ ೨೨ ॥

ಆಶಿಷಃ ಶಿರಸಾಽಽದಾಯ ದ್ವಿಜೈಃ ಪ್ರೀತೈಃ ಸಮೀರಿತಾಃ ।
ಪ್ರಣಮ್ಯ ಶಿರಸಾ ಭಕ್ತ್ಯಾ ಭುಂಜೀತ ತದನುಜ್ಞಯಾ ॥ ೨೩ ॥

ಪ್ರಭೋ! ನಿನ್ನ ಕೀರ್ತಿಯು ಪವಿತ್ರವಾದುದು. ನೀವಿಬ್ಬರೂ ಮೂರುಲೋಕಗಳಿಗೂ ವರದಾಯಕರಾದ ಪರಮೇಶ್ವರರಾಗಿರುವಿರಿ. ಆದ್ದರಿಂದ ನನ್ನ ದೊಡ್ಡ-ದೊಡ್ಡ ಆಸೆ-ಆಕಾಂಕ್ಷೆಗಳೆಲ್ಲವೂ ನಿಮ್ಮ ಕೃಪೆಯಿಂದ ಈಡೇರಲಿ. ॥ ೧೪ ॥

ಮಹಾರಾಜ ಪರೀಕ್ಷಿತನೇ! ಹೀಗೆ ಪರಮ ವರಪ್ರದರಾದ ಲಕ್ಷ್ಮೀನಾರಾಯಣರನ್ನು ಸ್ತೋತ್ರಮಾಡಿ, ನೈವೇದ್ಯವನ್ನು ತೆಗೆದಿಟ್ಟು ಆಚಮನ ಮಾಡಿ ದೇವದೇವಿಯರನ್ನು ಪೂಜಿಸಬೇಕು. ॥ ೧೫ ॥ ಅನಂತರ ಭಕ್ತಿಭರಿತವಾದ ಹೃದಯದಿಂದ ಭಗವಂತನನ್ನು ಸ್ತುತಿಸುತ್ತಾ, ಯಜ್ಞಾವಶೇಷವನ್ನು ಮೂಸಿನೋಡಿ ಪುನಃ ಭಗವಂತನನ್ನು ಪೂಜಿಸಬೇಕು. ॥ ೧೬ ॥ ಭಗವಂತನ ಪೂಜೆಯ ಬಳಿಕ ತನ್ನ ಪತಿಯನ್ನೇ ಸಾಕ್ಷಾತ್ ಭಗವಂತನೆಂದು ತಿಳಿದು ಪರಮಪ್ರೇಮದಿಂದ ಅವನ ಪ್ರಿಯವಾದ ವಸ್ತುಗಳನ್ನು ಸೇವಾರೂಪದಲ್ಲಿ ಸಮರ್ಪಿಸಬೇಕು. ಹಾಗೆಯೇ ತನ್ನ ಪತ್ನಿಗೆ ಪ್ರಿಯವಾದ ಪದಾರ್ಥಗಳನ್ನು ತಂದು ಆಕೆಗೆ ಕೊಡುವುದು ಮತ್ತು ಆಕೆಯ ಸಣ್ಣ-ಪುಟ್ಟ ಎಲ್ಲರೀತಿಯ ಕೆಲಸಗಳನ್ನು ಮಾಡಿ ಕೊಡುವುದು ಪತಿಯ ಕರ್ತವ್ಯವಾಗಿದೆ. ॥ ೧೭ ॥ ಪರೀಕ್ಷಿತನೇ! ಪತಿ-ಪತ್ನಿಯರಲ್ಲಿ ಯಾರಾದರೊಬ್ಬರು ಯಾವುದೇ ಕೆಲಸ ಮಾಡಿದರೆ ಅದರ ಫಲವು ಇಬ್ಬರಿಗೂ ಉಂಟಾಗುವುದು. ಅದಕ್ಕಾಗಿ ಪತ್ನಿಯು ಅನಿವಾರ್ಯ ಕಾರಣದಿಂದ ಈ ವ್ರತವನ್ನು ಮಾಡಲು ಅಯೋಗ್ಯಳಾದಾಗ ಪತಿಯೇ ಏಕಾಗ್ರಚಿತ್ತದಿಂದ ಇದನ್ನು ಅನುಷ್ಠಾನಮಾಡಬೇಕು. ॥ ೧೮ ॥ ಇದು ಭಗವಾನ್ ವಿಷ್ಣುವಿನ ವ್ರತವಾಗಿದೆ. ಇದನ್ನು ಮಾಡಲು ನಿಯಮವನ್ನು ಸ್ವೀಕರಿಸಿದ ಬಳಿಕ ನಡುವಿನಲ್ಲಿ ಎಂದೂ ಬಿಡಬಾರದು. ಈ ನಿಯಮವನ್ನು ಸ್ವೀಕರಿಸಿದವನು ಪ್ರತಿದಿನವೂ ಮಾಲೆ, ಗಂಧ, ನೈವೇದ್ಯ, ಆಭೂಷಣ ಮುಂತಾದವುಗಳಿಂದ ಭಕ್ತಿಪೂರ್ವಕವಾಗಿ ಬ್ರಾಹ್ಮಣ-ಸುವಾಸಿನಿಯರನ್ನು ಪೂಜಿಸಿ, ಭಗವಾನ್ ವಿಷ್ಣುವನ್ನೂ ಪೂಜಿಸಬೇಕು. ॥ ೧೯ ॥ ಅದಾದನಂತರ ಶ್ರೀಭಗವಂತನನ್ನು ಅವನ ಧಾಮಕ್ಕೆ ಬಿಜಯಮಾಡಿಸಿ ಉದ್ವಾಸನೆ ಮಾಡಬೇಕು. ಬಳಿಕ ಆತ್ಮಶುದ್ಧಿಗಾಗಿ ಮತ್ತು ಸಮಸ್ತ ಅಭಿಲಾಷೆಗಳ ಪೂರ್ತಿಗಾಗಿ ಮೊದಲೇ ಅವನಿಗೆ ನೈವೇದ್ಯಮಾಡಿದ ಪ್ರಸಾದವನ್ನು ಸೇವಿಸಬೇಕು. ॥ ೨೦ ॥ ಸಾಧ್ವಿಯಾದ ಪತ್ನಿಯು ಈ ವಿಧಿಯಂತೆ ಹನ್ನೆರಡು ತಿಂಗಳಕಾಲ (ಒಂದುವರ್ಷ) ಈ ವ್ರತವನ್ನು ಆಚರಣೆ ಮಾಡಿ ಕಾರ್ತಿಕ ಮಾಸದ ಅಮಾವಾಸ್ಯೆಗೆ ಉದ್ಯಾಪನ ಸಂಬಂಧೀ ಉಪವಾಸ ಮತ್ತು ಪೂಜನಾದಿಗಳನ್ನು ಮಾಡಬೇಕು. ॥ ೨೧ ॥ ಅಂದು ಪ್ರಾತಃಕಾಲವೇ ಸ್ನಾನಮಾಡಿ ಹಿಂದಿನಂತೆ ಭಗವಾನ್ ವಿಷ್ಣುವನ್ನು ಪೂಜಿಸಬೇಕು. ಅವಳ ಪತಿಯು ಪಾಕಯಜ್ಞದ ವಿಧಿಯಂತೆ ತುಪ್ಪಬೆರೆಸಿದ ಪಾಯಸಾನ್ನದಿಂದ ಅಗ್ನಿಯಲ್ಲಿ ಹನ್ನೆರಡು ಆಹುತಿಗಳನ್ನು ಕೊಡಬೇಕು. ॥ ೨೨ ॥ ಇದಾದ ಬಳಿಕ ಬ್ರಾಹ್ಮಣರು ಪ್ರಸನ್ನರಾಗಿ ಆಶೀರ್ವಾದಗಳನ್ನೂ ಕೊಟ್ಟರೆ, ಬಹಳ ಆದರದಿಂದ ತಲೆತಗ್ಗಿಸಿ ಅವನ್ನು ಸ್ವೀಕರಿಸ ಬೇಕು. ಭಕ್ತಿಭಾವದಿಂದ ಅವರ ಚರಣಗಳಲ್ಲಿ ತಲೆಯನ್ನಿಟ್ಟು ಅವರ ಅನುಜ್ಞೆಯನ್ನು ಪಡೆದು ಭೋಜನಮಾಡಬೇಕು. ॥ ೨೩ ॥

ಆಚಾರ್ಯಮಗ್ರತಃ ಕೃತ್ವಾ ವಾಗ್ಯತಃ ಸಹ ಬಂಧುಭಿಃ ।
ದದ್ಯಾತ್ಪತ್ನ್ಯೈ ಚರೋಃ ಶೇಷಂ ಸುಪ್ರಜಸ್ತ್ವಂ ಸುಸೌಭಗಮ್ ॥ ೨೪ ॥

ಮೊದಲಿಗೆ ಆಚಾರ್ಯನಿಗೆ ಭೋಜನ ಮಾಡಿಸಬೇಕು. ಬಳಿಕ ಮೌನದಿಂದ ಬಂಧು-ಬಾಂಧವರೊಂದಿಗೆ ತಾನು ಭೋಜನ ಮಾಡಬೇಕು. ಇದಾದಬಳಿಕ ಹವನಮಾಡಿ ಮಿಕ್ಕಿದ ತುಪ್ಪವನ್ನು ಬೆರೆಸಿದ ಪಾಯಸಾನ್ನವನ್ನು ಪತ್ನಿಗೆ ಕೊಡಬೇಕು. ಆ ಪ್ರಸಾದವು ಸ್ತ್ರೀಯಳಿಗೆ ಸತ್ಪುತ್ರನನ್ನೂ, ಸೌಭಾಗ್ಯವನ್ನೂ ಅನುಗ್ರಹಿಸುವುದು. ॥ ೨೪ ॥

ಏತಚ್ಚರಿತ್ವಾ ವಿಧಿವದ್ವ್ರತಂ ವಿಭೋ-
ರಭೀಪ್ಸಿತಾರ್ಥಂ ಲಭತೇ ಪುಮಾನಿಹ ।
ಸ್ತ್ರೀ ಚೈತದಾಸ್ಥಾಯ ಲಭೇತ ಸೌಭಗಂ
ಶ್ರಿಯಂ ಪ್ರಜಾಂ ಜೀವಪತಿಂ ಯಶೋ ಗೃಹಮ್ ॥ ೨೫ ॥

ಕನ್ಯಾ ಚ ವಿಂದೇತ ಸಮಗ್ರಲಕ್ಷಣಂ
ವರಂ ತ್ವವೀರಾ ಹತಕಿಲ್ಬಿಷಾ ಗತಿಮ್ ।
ಮೃತಪ್ರಜಾ ಜೀವಸುತಾ ಧನೇಶ್ವರೀ
ಸುದುರ್ಭಗಾ ಸುಭಗಾ ರೂಪಮಗ್ರ್ಯಮ್ ॥ ೨೬ ॥

ವಿಂದೇದ್ವಿರೂಪಾ ವಿರುಜಾ ವಿಮುಚ್ಯತೇ
ಯ ಆಮಯಾವೀಂದ್ರಿಯಕಲ್ಪದೇಹಮ್ ।
ಏತತ್ಪಠನ್ನಭ್ಯುದಯೇ ಚ ಕರ್ಮಣ್ಯ-
ನಂತತೃಪ್ತಿಃ ಪಿತೃದೇವತಾನಾಮ್ ॥ ೨೭ ॥

ಪರೀಕ್ಷಿತನೇ! ಭಗವಂತನ ಈ ಪುಂಸವನ ವ್ರತವನ್ನು ವಿಧಿವತ್ತಾಗಿ ಅನುಷ್ಠಾನ ಮಾಡುವ ಪುರುಷನಿಗೆ ಇಲ್ಲೇ ಅವನ ಅಭೀಷ್ಟ ವಸ್ತುವು ದೊರೆಯುತ್ತದೆ. ಸ್ತ್ರೀಯು ಈ ವ್ರತವನ್ನು ಪಾಲಿಸುವುದರಿಂದ ಸೌಭಾಗ್ಯ, ಸಂಪತ್ತು, ಸಂತಾನ, ಕೀರ್ತಿ, ಮನೆ ಎಲ್ಲವೂ ದೊರೆಯುತ್ತದೆ ಹಾಗೂ ಅವಳ ಪತಿಯು ದೀರ್ಘಾಯುವಾಗುತ್ತಾನೆ. ॥ ೨೫ ॥ ಈ ವ್ರತವನ್ನು ಅನುಷ್ಠಾನ ಮಾಡುವ ಕನ್ಯೆಯು ಸಮಸ್ತ ಶುಭ ಲಕ್ಷಣಗಳಿಂದ ಯುಕ್ತನಾದ ಪತಿಯನ್ನು ಪಡೆಯುತ್ತಾಳೆ. ವಿಧವೆಯು ಈ ವ್ರತದಿಂದ ಪಾಪರಹಿತಳಾಗಿ ವೈಕುಂಠಕ್ಕೆ ಹೋಗುತ್ತಾಳೆ. ಯಾರ ಮಕ್ಕಳು ಸಾಯುತ್ತಾ ಇರುತ್ತವೋ ಆ ಸ್ತ್ರೀಯು ಇದರ ಪ್ರಭಾವದಿಂದ ದೀರ್ಘಾಯುಷ್ಯುಳ್ಳ ಪುತ್ರರನ್ನು ಪಡೆಯುತ್ತಾಳೆ. ಐಶ್ವರ್ಯವಂತಳಾಗಿದ್ದರೂ ದುರದೃಷ್ಟಳಾದ ಹೆಂಗುಸಿಗೆ ಸೌಭಾಗ್ಯವು ಉಂಟಾಗುತ್ತದ ಮತ್ತು ಕುರೂಪಿಯಾದವಳಿಗೆ ಶ್ರೇಷ್ಠವಾದ ರೂಪವು ಉಂಟಾಗುತ್ತದೆ. ರೋಗಿಯು ಈ ವ್ರತದ ಪ್ರಭಾವದಿಂದ ರೋಗದಿಂದ ಮುಕ್ತನಾಗುತ್ತಾನೆ, ಹಾಗೂ ಬಲಿಷ್ಠವಾದ ಶರೀರ ಮತ್ತು ಶ್ರೇಷ್ಠ ಇಂದ್ರಿಯಗಳ ಶಕ್ತಿ ಪಡೆಯುತ್ತಾನೆ. ಯಾರು ಮಾಂಗಲಿಕ ಶ್ರಾದ್ಧದಲ್ಲಿ ಇದನ್ನು ಪಾರಾಯಣ ಮಾಡುತ್ತಾನೋ ಅವನ ಪಿತೃಗಳು ಮತ್ತು ದೇವತೆಗಳು ಅನಂತವಾದ ತೃಪ್ತಿಯನ್ನು ಪಡೆಯುತ್ತಾರೆ. ॥ ೨೬-೨೭ ॥

ತುಷ್ಟಾಃ ಪ್ರಯಚ್ಛಂತಿ ಸಮಸ್ತಕಾಮಾನ್
ಹೋಮಾವಸಾನೇ ಹುತಭುಕ್ ಶ್ರೀರ್ಹರಿಶ್ಚ ।
ರಾಜನ್ಮಹನ್ಮರುತಾಂ ಜನ್ಮ ಪುಣ್ಯಂ
ದಿತೇರ್ವ್ರತಂ ಚಾಭಿಹಿತಂ ಮಹತ್ತೇ ॥ ೨೮ ॥

ಅವರು ಸಂತುಷ್ಟರಾಗಿ ಹವನವು ಸಾಂಗವಾಗಿ ಮುಗಿದ ಬಳಿಕ ವ್ರತಿಯ ಸಮಸ್ತ ಇಚ್ಛೆಗಳನ್ನು ಪೂರ್ಣಗೊಳಿಸುತ್ತಾರೆ. ಇವರೆಲ್ಲರೂ ಸಂತುಷ್ಟರಾಗಿಯೇ ಆಗುತ್ತಾರೆ ಜೊತೆಗೆ ಸಮಸ್ತ ಯಜ್ಞಗಳ ಏಕಮಾತ್ರ ಭೋಕ್ತೃವಾಗಿರುವ ಭಗವಾನ್ ಲಕ್ಷ್ಮೀ- ನಾರಾಯಣರೂ ಸಂತುಷ್ಟರಾಗಿ ವ್ರತಿಯ ಎಲ್ಲ ಅಭಿಲಾಷೆಗಳನ್ನು ಪೂರ್ಣಗೊಳಿಸುತ್ತಾರೆ. ಪರೀಕ್ಷಿತನೇ! ನಾನು ನಿನಗೆ ಮರುದ್ಗಣರ ಆದರಣೀಯವೂ, ಪುಣ್ಯಪ್ರದವೂ ಆದ ಜನ್ಮ-ಕಥೆಯನ್ನು ಹೇಳಿದ ಹಾಗೂ ಜೊತೆಗೆ ದಿತಿಯ ಶ್ರೇಷ್ಠವಾದ ಪುಂಸವನ ವ್ರತವನ್ನೂ ವರ್ಣಿಸಿರುವೆನು. ॥ ೨೮ ॥

ಹತ್ತೊಂಭತ್ತನೆಯ ಅಧ್ಯಾಯವು ಮುಗಿಯಿತು. ॥ ೧೯ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಷಷ್ಠಸ್ಕಂಧೇ
ಪುಂಸವನವ್ರತಕಥನಂ ನಾಮೈಕೋನವಿಂಶೋಽಧ್ಯಾಯಃ ॥ ೧೯ ॥

ಆರನೆಯ ಸ್ಕಂಧವು ಸಂಪೂರ್ಣವಾಯಿತು.

॥ ಓಂ ನಮೋ ಭಗವತೇ ವಾಸುದೇವಾಯ ॥

ಶ್ರೀಮದ್ಭಾಗವತಮಹಾಪುರಾಣಮ್

ಸಪ್ತಮಃ ಸ್ಕಂಧಃ

ಮೊದಲನೆಯ ಅಧ್ಯಾಯ

ನಾರದ–ಯುಧಿಷ್ಠಿರ ಸಂವಾದ ಮತ್ತು ಜಯ–ವಿಜಯರ ಕಥೆ

ರಾಜೋವಾಚ

ಸಮಃ ಪ್ರಿಯಃ ಸುಹೃದ್ಬ್ರಹ್ಮನ್ಭೂತಾನಾಂ ಭಗವಾನ್ಸ್ವಯಮ್ ।
ಇಂದ್ರಸ್ಯಾರ್ಥೇ ಕಥಂ ದೈತ್ಯಾನವಧೀದ್ವಿಷಮೋ ಯಥಾ ॥ ೧ ॥

ನ ಹ್ಯಸ್ಯಾರ್ಥಃ ಸುರಗಣೈಃ ಸಾಕ್ಷಾನ್ನಿಃಶ್ರೇಯಸಾತ್ಮನಃ ।
ನೈವಾಸುರೇಭ್ಯೋ ವಿದ್ವೇಷೋ ನೋದ್ವೇಗಶ್ಚಾಗುಣಸ್ಯ ಹಿ ॥ ೨ ॥

ಇತಿ ನಃ ಸುಮಹಾಭಾಗ ನಾರಾಯಣಗುಣಾನ್ ಪ್ರತಿ ।
ಸಂಶಯಃ ಸುಮಹಾಂಜಾತಸ್ತದ್ಭವಾಂಶ್ಛೇತ್ತುಮರ್ಹತಿ ॥ ೩ ॥

ಶ್ರೀಶುಕ ಉವಾಚ

ಸಾಧು ಪೃಷ್ಟಂ ಮಹಾರಾಜ ಹರೇಶ್ಚರಿತಮದ್ಭುತಮ್ ।
ಯದ್ಭಾಗವತಮಾಹಾತ್ಮ್ಯಂ ಭಗವದ್ಭಕ್ತಿವರ್ಧನಮ್ ॥ ೪ ॥

ಗೀಯತೇ ಪರಮಂ ಪುಣ್ಯಮೃಷಿಭಿರ್ನಾರದಾದಿಭಿಃ ।
ನತ್ವಾ ಕೃಷ್ಣಾಯ ಮುನಯೇ ಕಥಯಿಷ್ಯೇ ಹರೇಃ ಕಥಾಮ್ ॥ ೫ ॥

ನಿರ್ಗುಣೋಽಪಿ ಹ್ಯಜೋಽವ್ಯಕ್ತೋ ಭಗವಾನ್ಪ್ರಕೃತೇಃ ಪರಃ ।
ಸ್ವಮಾಯಾಗುಣಮಾವಿಶ್ಯ ಬಾಧ್ಯಬಾಧಕತಾಂ ಗತಃ ॥ ೬ ॥

ಪರೀಕ್ಷಿತ ಮಹಾರಾಜನು ಕೇಳಿದನು – ಪೂಜ್ಯರಾದ ಮಹರ್ಷಿಗಳೇ! ಭಗವಂತನಾದವನೋ ಸ್ವಭಾವದಿಂದಲೇ ಭೇದ ಭಾವ ರಹಿತನಾಗಿದ್ದು, ಸಮನಾಗಿದ್ದಾನೆ. ಸಮಸ್ತ ಪ್ರಾಣಿಗಳ ಪ್ರಿಯನೂ, ಸುಹೃದನೂ ಆಗಿದ್ದಾನೆ. ಆದರೂ ಅವನು ಸಾಧಾರಣ ಮನುಷ್ಯರು ಭೇದ-ಭಾವದಿಂದ ತನ್ನ ಮಿತ್ರನ ಪಕ್ಷವನ್ನು ವಹಿಸಿಕೊಂಡು, ಶತ್ರುಗಳಿಗೆ ಅನಿಷ್ಟವಾಗುವಂತೆ ಇಂದ್ರನಿಗಾಗಿ ದೈತ್ಯರನ್ನು ಏಕೆ ವಧಿಸಿದನು? ॥ ೧ ॥ ಅವನು ಸ್ವಯಂ ಪರಿಪೂರ್ಣನಾಗಿ ಕಲ್ಯಾಣ ಸ್ವರೂಪನಾಗಿರುವುದರಿಂದ ಅವನಿಗೆ ದೇವತೆಗಳಿಂದ ಯಾವ ಪ್ರಯೋಜನವೂ ಇಲ್ಲ ಮತ್ತು ತ್ರಿಗುಣಾತೀತನಾಗಿರುವುದರಿಂದ ಅವನಿಗೆ ದೈತ್ಯರೊಂದಿಗೆ ಯಾವುದೇ ವೈರ-ವಿರೋಧಗಳೂ ಇರಲಾರದು. ಯಾವ ಉದ್ವೇಗವೂ ಇಲ್ಲ ॥ ೨ ॥ ಭಗವತ್ಪ್ರೇಮದ ಸೌಭಾಗ್ಯದಿಂದ ಸಂಪನ್ನರಾದ ಮಹಾತ್ಮರೇ! ಭಗವಂತನ ಸಮತ್ವವೇ ಮುಂತಾದ ಗುಣಗಳ ಸಂಬಂಧದಲ್ಲಿ ಮನಸ್ಸಿನಲ್ಲಿ ತುಂಬಾ ಸಂದೇಹ ಉಂಟಾಗಿದೆ. ತಾವು ದಯಮಾಡಿ ಅದನ್ನು ಪರಿಹರಿಸಬೇಕು. ॥ ೩ ॥

ಶ್ರೀಶುಕಮಹಾಮುನಿಗಳು ಹೇಳಿದರು – ಮಹಾರಾಜಾ! ಭಗವಂತನ ಅದ್ಭುತ ಚರಿತ್ರೆಯ ಸಂಬಂಧವಾಗಿ ನೀನು ಬಹಳ ಒಳ್ಳೆಯ ಪ್ರಶ್ನೆಯನ್ನೇ ಕೇಳಿರುವೆ. ಏಕೆಂದರೆ, ಇಂತಹ ಪ್ರಸಂಗಗಳು ಪ್ರಹ್ಲಾದಾದಿ ಭಕ್ತರ ಮಹಿಮೆಯಿಂದಲೇ ಪರಿಪೂರ್ಣವಾಗುತ್ತವೆ. ಅವುಗಳ ಶ್ರವಣದಿಂದ ಭಗವಂತನಲ್ಲಿ ಭಕ್ತಿಯು ವೃದ್ಧಿಸುತ್ತದೆ. ॥ ೪ ॥ ಇಂತಹ ಪರಮ ಪುಣ್ಯಪ್ರದವಾದ ಪ್ರಸಂಗಗಳನ್ನು ನಾರದಾದಿ ಮಹಾತ್ಮರು ತುಂಬಾ ಪ್ರೇಮದಿಂದ ಹಾಡುತ್ತಾ ಇರುತ್ತಾರೆ. ಈಗ ನಾನು ನನ್ನ ತಂದೆಯಾದ ಶ್ರೀಕೃಷ್ಣದ್ವೈಪಾಯನ ಮುನಿಗಳಿಗೆ ನಮಸ್ಕರಿಸಿ ಭಗವಂತನ ಲೀಲಾ-ಕಥೆಯನ್ನು ವರ್ಣಿಸುವೆನು. ॥ ೫ ॥ ವಾಸ್ತವವಾಗಿ ಭಗವಂತನು ನಿರ್ಗುಣನೂ, ಜನ್ಮರಹಿತನೂ, ಅವ್ಯಕ್ತನೂ, ಪ್ರಕೃತಿಯಿಂದ ಮೀರಿದವನಾಗಿದ್ದಾನೆ. ಹೀಗಿದ್ದರೂ ಅವನು ತನ್ನ ಮಾಯೆಯ ಗುಣಗಳನ್ನು ಸ್ವೀಕರಿಸಿಕೊಂಡು ಬಾಧ್ಯ-ಬಾಧಕ ಭಾವವನ್ನು ಅಂದರೆ ಸಾಯುವ ಮತ್ತು ಸಾಯಿಸುವ ಎರಡರ ಪರಸ್ಪರ ವಿರೋಧೀ ರೂಪಗಳನ್ನು ಸ್ವೀಕರಿಸುವನು. ॥ ೬ ॥ ಸತ್ತ್ವಗುಣ, ರಜೋಗುಣ, ತಮೋಗುಣ ಇವು ಪ್ರಕೃತಿಯ ಗುಣಗಳು, ಪರಮಾತ್ಮನವುಗಳಲ್ಲ. ಪರೀಕ್ಷಿತನೇ! ಈ ಗುಣಗಳು

ಸತ್ತ್ವಂ ರಜಸ್ತಮ ಇತಿ ಪ್ರಕೃತೇರ್ನಾತ್ಮನೋ ಗುಣಾಃ ।
ನ ತೇಷಾಂ ಯುಗಪದ್ರಾಜನ್ ಹ್ರಾಸ ಉಲ್ಲಾಸ ಏವ ವಾ ॥ ೭ ॥

ಜಯಕಾಲೇ ತು ಸತ್ತ್ವಸ್ಯ ದೇವರ್ಷೀನ್ರಜಸೋಽಸುರಾನ್ ।
ತಮಸೋ ಯಕ್ಷರಕ್ಷಾಂಸಿ ತತ್ಕಾಲಾನುಗುಣೋಽಭಜತ್ ॥ ೮ ॥

ಜ್ಯೋತಿರಾದಿರಿವಾಭಾತಿ ಸಂಘಾತಾನ್ನ ವಿವಿಚ್ಯತೇ ।
ವಿದಂತ್ಯಾತ್ಮಾನಮಾತ್ಮಸ್ಥಂ ಮಥಿತ್ವಾ ಕವಯೋಽಂತತಃ ॥ ೯ ॥

ಯದಾ ಸಿಸೃಕ್ಷುಃ ಪುರ ಆತ್ಮನಃ ಪರೋ
ರಜಃ ಸೃಜತ್ಯೇಷ ಪೃಥಕ್ಸ್ವಮಾಯಯಾ ।
ಸತ್ತ್ವಂ ವಿಚಿತ್ರಾಸು ರಿರಂಸುರೀಶ್ವರಃ
ಶಯಿಷ್ಯಮಾಣಸ್ತಮ ಈರಯತ್ಯಸೌ ॥ ೧೦ ॥

ಕಾಲಂ ಚರಂತಂ ಸೃಜತೀಶ ಆಶ್ರಯಂ
ಪ್ರಧಾನಪುಂಭ್ಯಾಂ ನರದೇವ ಸತ್ಯಕೃತ್ ।
ಯ ಏಷ ರಾಜನ್ನಪಿ ಕಾಲ ಈಶಿತಾ
ಸತ್ತ್ವಂ ಸುರಾನೀಕಮಿವೈಧಯತ್ಯತಃ ।
ತತ್ಪ್ರತ್ಯನೀಕಾನಸುರಾನ್ಸುರಪ್ರಿಯೋ
ರಜಸ್ತಮಸ್ಕಾನ್ಪ್ರಮಿಣೋತ್ಯುರುಶ್ರವಾಃ ॥ ೧೧ ॥

ಅತ್ರೈವೋದಾಹೃತಃ ಪೂರ್ವಮಿತಿಹಾಸಃ ಸುರರ್ಷಿಣಾ ।
ಪ್ರೀತ್ಯಾ ಮಹಾಕ್ರತೌ ರಾಜನ್ಪೃಚ್ಛತೇಽಜಾತಶತ್ರವೇ ॥ ೧೨ ॥

ದೃಷ್ಟ್ವಾ ಮಹಾದ್ಭುತಂ ರಾಜಾ ರಾಜಸೂಯೇ ಮಹಾಕ್ರತೌ ।
ವಾಸುದೇವೇ ಭಗವತಿ ಸಾಯುಜ್ಯಂ ಚೇದಿಭೂಭುಜಃ ॥ ೧೩ ॥

ತತ್ರಾಸೀನಂ ಸುರಋಷಿಂ ರಾಜಾ ಪಾಂಡುಸುತಃ ಕ್ರತೌ ।
ಪಪ್ರಚ್ಛ ವಿಸ್ಮಿತಮನಾ ಮುನೀನಾಂ ಶೃಣ್ವತಾಮಿದಮ್ ॥ ೧೪ ॥

ಯುಧಿಷ್ಠಿರ ಉವಾಚ

ಅಹೋ ಅತ್ಯದ್ಭುತಂ ಹ್ಯೇತದ್ದುರ್ಲಭೈಕಾಂತಿನಾಮಪಿ ।
ವಾಸುದೇವೇ ಪರೇ ತತ್ತ್ವೇ ಪ್ರಾಪ್ತಿಶ್ಚೈದ್ಯಸ್ಯ ವಿದ್ವಿಷಃ ॥ ೧೫ ॥

ಒಟ್ಟಿಗೆ ವೃದ್ಧಿಯನ್ನಾಗಲೀ, ಕ್ಷಯವನ್ನಾಗಲೀ ಹೊಂದುವುದಿಲ್ಲ. ॥ ೭ ॥ ಭಗವಂತನು ಆಯಾ ಕಾಲಕ್ಕೆ ಅನುಗುಣವಾಗಿ ಗುಣಗಳನ್ನು ಸ್ವೀಕರಿಸುತ್ತಾನೆ. ಅವನಲ್ಲಿ ಸತ್ತ್ವಗುಣವು ವೃದ್ಧಿಹೊಂದಿದಾಗ ದೇವತೆಗಳನ್ನೂ ಮತ್ತು ಋಷಿಗಳನ್ನೂ; ರಜೋಗುಣವು ವೃದ್ಧಿ ಹೊಂದಿದಾಗ ದೈತ್ಯರನ್ನು ಹಾಗೂ ತಮೋಗುಣವು ವೃದ್ಧಿ ಹೊಂದಿದಾಗ ಯಕ್ಷರನ್ನೂ, ರಾಕ್ಷಸರನ್ನೂ ತನ್ನವರಾಗಿಸಿಕೊಂಡು ಅವರ ಅಭ್ಯುದಯವನ್ನು ಮಾಡುತ್ತಾನೆ. ॥ ೮ ॥ ವ್ಯಾಪಕವಾದ ಅಗ್ನಿಯು ಕಟ್ಟಿಗೆಯೇ ಮುಂತಾದ ಬೇರೆ-ಬೇರೆ ಆಶ್ರಯಗಳಲ್ಲಿದ್ದರೂ ಅವುಗಳಿಂದ ಪ್ರತ್ಯೇಕವಾಗಿ ಕಾಣುವುದಿಲ್ಲ. ಆದರೆ ಆಶ್ರಯವನ್ನು ಪಡೆದಾಗ ಅದು ಪ್ರಕಟಗೊಳ್ಳುವುದು. ಹಾಗೆಯೇ ಪರಮಾತ್ಮನು ಎಲ್ಲ ಶರೀರಗಳಲ್ಲಿ ಇದ್ದರೂ ಪ್ರತ್ಯೇಕವಾಗಿ ತಿಳಿದು ಬರುವುದಿಲ್ಲ. ಆದರೆ ವಿಚಾರಶೀಲರು ಹೃದಯವನ್ನು ಮಂಥನ ಮಾಡಿ, ಎಲ್ಲವೂ ಕಳೆದ ಬಳಿಕ ಕೊನೆಗೆ ತಮ್ಮ ಹೃದಯದಲ್ಲೇ ಅಂತರ್ಯಾಮಿ ರೂಪದಿಂದ ಆತನನ್ನು ಪಡೆದುಕೊಳ್ಳುವರು. ॥ ೯ ॥ ಪರಮೇಶ್ವರನು ತನಗಾಗಿ ಶರೀರಗಳನ್ನು ನಿರ್ಮಿಸಲು ಬಯಸಿದಾಗ ತನ್ನ ಮಾಯೆಯಿಂದ ರಜೋಗುಣವನ್ನು ಬೇರೆಯಾಗಿ ಸೃಷ್ಟಿಸುತ್ತಾನೆ. ಅವನು ವಿಚಿತ್ರಯೋನಿಗಳಲ್ಲಿ ರಮಿಸಲು ಬಯಸಿದಾಗ ಸತ್ತ್ವಗುಣ ಸೃಷ್ಟಿಸುತ್ತಾನೆ. ಅವನು ಶಯನ ಮಾಡಲು ಬಯಸಿದಾಗ ತಮೋಗುಣವನ್ನು ಬೆಳೆಸುತ್ತಾನೆ. ॥ ೧೦ ॥ ಪರೀಕ್ಷಿತನೇ! ಭಗವಂತನು ಸತ್ಯಸಂಕಲ್ಪನು. ಅವನೇ ಜಗತ್ತಿನ ಉತ್ಪತ್ತಿಗಾಗಿ ನಿಮಿತ್ತಭೂತನಾದ ಪ್ರಕೃತಿ ಮತ್ತು ಪುರುಷರ ಸಹಕಾರಿಯಾದ ಆಶ್ರಯವೂ ಆಗಿರುವ ಕಾಲವನ್ನು ಸೃಷ್ಟಿಸುತ್ತಾನೆ. ಅದಕ್ಕಾಗಿ ಅವನು ಕಾಲಕ್ಕೆ ಅಧೀನನಲ್ಲ, ಕಾಲವೇ ಅವನ ಅಧೀನ. ಈ ಕಾಲಸ್ವರೂಪನಾದ ಈಶ್ವರನು ಸತ್ತ್ವಗುಣವನ್ನು ವೃದ್ಧಿಪಡಿಸಿದಾಗ ಸತ್ತ್ವಮಯ ದೇವತೆಗಳ ಬಲವು ಹೆಚ್ಚುತ್ತದೆ. ಆಗಲೇ ಆ ಪರಮಯಶಸ್ವೀ ದೇವಪ್ರಿಯ ಪರಮಾತ್ಮನು ದೇವತೆಗಳ ವಿರೋಧಿಗಳಾದ ರಜೋಗುಣೀ ಹಾಗೂ ತಮೋಗುಣೀ ದೈತ್ಯರನ್ನು ಸಂಹರಿಸುತ್ತಾನೆ. ವಾಸ್ತವವಾಗಿ ಅವನು ಸರ್ವಸಮನೇ ಆಗಿರುವನು. ॥ ೧೧ ॥

ರಾಜನೇ! ಹಿಂದೆ ರಾಜಸೂಯ ಯಜ್ಞದಲ್ಲಿ ಯುಧಿಷ್ಠಿರನು ದೇವರ್ಷಿ ನಾರದರಲ್ಲಿ ಒಂದು ಪ್ರಶ್ನೆಯನ್ನು ಕೇಳಿದ್ದನು. ಆಗ ಉತ್ತರವಾಗಿ ಅವರು ಈ ಇತಿಹಾಸವನ್ನು ಹೇಳಿದ್ದರು. ॥ ೧೨ ॥ ಆ ರಾಜಸೂಯ ಯಜ್ಞದಲ್ಲಿ ರಾಜಾ ಯುಧಿಷ್ಠಿರನು ತನ್ನ ಕಣ್ಣು ಮುಂದೆಯೇ ಶ್ರೀಕೃಷ್ಣನಿಂದ ಸಂಹರಿಸಲ್ಪಟ್ಟ ಚೇದಿರಾಜನಾದ ಶಿಶುಪಾಲನು ಎಲ್ಲರೂ ನೋಡು-ನೋಡುತ್ತಿರುವಂತೆ ಭಗವಾನ್ ಶ್ರೀಕೃಷ್ಣನಲ್ಲಿ ಸೇರಿಹೋದ ಈ ಆಶ್ಚರ್ಯಜನಕ ಘಟನೆಯು ನಡೆಯಿತು. ॥ ೧೩ ॥ ಈ ಘಟನೆಯಿಂದ ಆಶ್ಚರ್ಯಚಕಿತನಾಗಿ ಆ ಯಜ್ಞಮಂಟಪದಲ್ಲಿ ಯುಧಿಷ್ಠಿರನು ದೊಡ್ಡ-ದೊಡ್ಡ ಮುನಿಗಳಿಂದ ತುಂಬಿದ ಸಭೆಯಲ್ಲೇ ಕುಳಿತಿದ್ದ ನಾರದರನ್ನು ಹೀಗೆ ಪ್ರಶ್ನಿಸಿದನು. ॥ ೧೪ ॥

ಯುಧಿಷ್ಠಿರನು ಕೇಳಿದನು – ಆಹಾ! ಇದಾದರೋ ಪರಮಾದ್ಭುತವಾದುದು. ಪರಮತತ್ತ್ವ ಭಗವಾನ್ ಶ್ರೀಕೃಷ್ಣನಲ್ಲಿ ಸೇರಿಹೋಗುವುದು ದೊಡ್ಡ-ದೊಡ್ಡ ಅನನ್ಯ ಭಕ್ತರಿಗೂ ದುರ್ಲಭವಾಗಿದೆ. ಹಾಗಿರುವಾಗ ಭಗವಂತನಲ್ಲಿ ಅತಿದ್ವೇಷ ಮಾಡುತ್ತಿದ್ದ

ಏತದ್ವೇದಿತುಮಿಚ್ಛಾಮಃ ಸರ್ವ ಏವ ವಯಂ ಮುನೇ ।
ಭಗವನ್ನಿಂದಯಾ ವೇನೋ ದ್ವಿಜೈಸ್ತಮಸಿ ಪಾತಿತಃ ॥ ೧೬ ॥

ದಮಘೋಷಸುತಃ ಪಾಪ ಆರಭ್ಯ ಕಲಭಾಷಣಾತ್ ।
ಸಂಪ್ರತ್ಯಮರ್ಷೀ ಗೋವಿಂದೇ ದಂತವಕ್ತ್ರಶ್ಚ ದುರ್ಮತಿಃ ॥ ೧೭ ॥

ಶಪತೋರಸಕೃದ್ವಿಷ್ಣುಂ ಯದ್ಬ್ರಹ್ಮ ಪರಮವ್ಯಯಮ್ ।
ಶ್ವಿತ್ರೋ ನ ಜಾತೋ ಜಿಹ್ವಾಯಾಂ ನಾಂಧಂ ವಿವಿಶತುಸ್ತಮಃ ॥ ೧೮ ॥

ಕಥಂ ತಸ್ಮಿನ್ಭಗವತಿ ದುರವಗ್ರಾಹಧಾಮನಿ ।
ಪಶ್ಯತಾಂ ಸರ್ವಲೋಕಾನಾಂ ಲಯಮೀಯತುರಂಜಸಾ ॥ ೧೯ ॥

ಏತದ್ಭ್ರಾಮ್ಯತಿ ಮೇ ಬುದ್ಧಿರ್ದೀಪಾರ್ಚಿರಿವ ವಾಯುನಾ ।
ಬ್ರೂಹ್ಯೇತದದ್ಭುತತಮಂ ಭಗವಾಂಸ್ತತ್ರ ಕಾರಣಮ್ ॥ ೨೦ ॥

ಶ್ರೀಶುಕ ಉವಾಚ

ರಾಜ್ಞಸ್ತದ್ವಚ ಆಕರ್ಣ್ಯ ನಾರದೋ ಭಗವಾನೃಷಿಃ ।
ತುಷ್ಟಃ ಪ್ರಾಹ ತಮಾಭಾಷ್ಯ ಶೃಣ್ವತ್ಯಾಸ್ತತ್ಸದಃ ಕಥಾಃ ॥ ೨೧ ॥

ನಾರದ ಉವಾಚ

ನಿಂದನಸ್ತವಸತ್ಕಾರನ್ಯಕ್ಕಾರಾರ್ಥಂ ಕಲೇವರಮ್ ।
ಪ್ರಧಾನಪರಯೋ ರಾಜನ್ನವಿವೇಕೇನ ಕಲ್ಪಿತಮ್ ॥ ೨೨ ॥

ಹಿಂಸಾ ತದಭಿಮಾನೇನ ದಂಡಪಾರುಷ್ಯಯೋರ್ಯಥಾ ।
ವೈಷಮ್ಯಮಿಹ ಭೂತಾನಾಂ ಮಮಾಹಮಿತಿ ಪಾರ್ಥಿವ ॥ ೨೩ ॥

ಯನ್ನಿಬದ್ಧೋಽಭಿಮಾನೋಽಯಂ ತದ್ವಧಾತ್ಪ್ರಾಣಿನಾಂ ವಧಃ ।
ತಥಾ ನ ಯಸ್ಯ ಕೈವಲ್ಯಾದಭಿಮಾನೋಽಖಿಲಾತ್ಮನಃ ।
ಪರಸ್ಯ ದಮಕರ್ತುರ್ಹಿ ಹಿಂಸಾ ಕೇನಾಸ್ಯ ಕಲ್ಪ್ಯತೇ ॥ ೨೪ ॥

ಶಿಶುಪಾಲನಿಗೆ ಈ ಸದ್ಗತಿಯು ಹೇಗೆ ದೊರೆಯಿತು ? ॥ ೧೫ ॥ ನಾರದಮುನಿಗಳೇ ! ಇದರ ರಹಸ್ಯವನ್ನು ನಾವೆಲ್ಲರೂ ಕೇಳಲು ಬಯಸುತ್ತಿದ್ದೇವೆ. ಹಿಂದೆ ಶ್ರೀಭಗವಂತನನ್ನು ನಿಂದಿಸಿದ ಕಾರಣ ವೇನರಾಜನನ್ನು ಋಷಿಗಳು ನರಕಕ್ಕೆ ತಳ್ಳಿಬಿಟ್ಟಿದ್ದರು. ॥ ೧೬ ॥ ಈ ದಮಘೋಷನ ಪುತ್ರ ಪಾಪಿಷ್ಠನಾದ ಶಿಶುಪಾಲನೂ ಮತ್ತು ದುರ್ಬುದ್ಧಿಯಾದ ದಂತವಕ್ತ್ರನೂ ತೊದಲು ಮಾತನ್ನಾಡುತ್ತಿದ್ದ ಕಾಲದಿಂದ ಈಗಿನವರೆಗೆ ಶ್ರೀಭಗವಂತನಲ್ಲಿ ದ್ವೇಷವನ್ನೇ ಸಾಧಿಸುತ್ತಿದ್ದರು. ॥ ೧೭ ॥ ಅವಿನಾಶಿಯಾದ ಪರಬ್ರಹ್ಮ ಭಗವಾನ್ ಶ್ರೀಕೃಷ್ಣನನ್ನು ಇವರು ಬಾರಿ-ಬಾರಿಗೂ ಬೈಯ್ಯುತ್ತಿದ್ದರು. ಇಂತಹ ಇವರ ನಾಲಿಗೆಗೆ ಕುಷ್ಠರೋಗವು ಬಂದಿಲ್ಲ, ಇವರಿಗೆ ಘೋರವಾದ ಅಂಧಕಾರಮಯ ನರಕವೂ ಸಿಗಲಿಲ್ಲ. ॥ ೧೮ ॥ ಆದರೆ, ಇದಕ್ಕೆ ವಿರುದ್ಧವಾಗಿ ಅವರಿಬ್ಬರೂ ಎಲ್ಲರೂ ನೋಡು-ನೋಡುತ್ತಿರುವಂತೆ ಅತಿದುರ್ಲಭವಾದ ಶ್ರೀಕೃಷ್ಣನ ಸಾಯುಜ್ಯವನ್ನೇ ಅನಾಯಾಸವಾಗಿ ಹೊಂದಿಬಿಟ್ಟರು. ಇದರ ಕಾರಣವೇನು ? ॥ ೧೯ ॥ ಮಹರ್ಷಿಗಳೇ ! ಗಾಳಿಯ ಹೊಡೆತದಿಂದ ಅಲ್ಲಾಡುತ್ತಿರುವ ದೀಪಜ್ವಾಲೆಯಂತೆ – ನನ್ನ ಮನಸ್ಸು ಈ ವಿಷಯದಲ್ಲಿ ತೂಗಾಡುತ್ತಿದೆ. ಸರ್ವಜ್ಞರಾದ ತಾವು ಈ ಅದ್ಭುತ ಘಟನೆಯ ರಹಸ್ಯವನ್ನು ತಿಳಿಸುವ ಕೃಪೆ ಮಾಡಬೇಕು. ॥ ೨೦ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಸರ್ವಸಮರ್ಥರಾದ ದೇವರ್ಷಿ ನಾರದರು ಯುಧಿಷ್ಠಿರನ ಈ ಪ್ರಶ್ನೆಯನ್ನು ಕೇಳಿ ಬಹಳ ಪ್ರಸನ್ನರಾದರು. ಅವರು ಧರ್ಮರಾಜನಿಗೆ ಸಂಬೋಧಿಸುತ್ತಾ ತುಂಬಿದ ಸಭೆಯಲ್ಲಿ ಎಲ್ಲರೂ ಕೇಳುತ್ತಿರುವಂತೆ ಈ ಕಥೆಯನ್ನು ನಿರೂಪಿಸಿದರು. ॥ ೨೧ ॥

ನಾರದರು ಹೇಳಿದರು – ಎಲೈ ಯುಧಿಷ್ಠಿರಾ ! ನಿಂದೆ, ಸ್ತುತಿ, ಸತ್ಕಾರ-ತಿರಸ್ಕಾರ ಇವೆಲ್ಲವೂ ಉಂಟಾಗುವುದು ಶರೀರಕ್ಕೆ ತಾನೇ. ಈ ಶರೀರದ ಕಲ್ಪನೆ ಪ್ರಕೃತಿ ಮತ್ತು ಪುರುಷರ ಸರಿಯಾದ ವಿವೇಕವಿಲ್ಲದಿರುವುದರಿಂದಲೇ ಉಂಟಾಗಿದೆ. ॥ ೨೨ ॥ ಈ ಶರೀರವನ್ನೇ ತನ್ನ ಆತ್ಮವೆಂದು ತಿಳಿದಾಗ – 'ಇದು ನಾನು, ಇದು ನನ್ನದು' ಎಂಬ ಭಾವವು ಉಂಟಾಗುವುದು. ಇದೇ ಎಲ್ಲ ಭೇದಭಾವದ ಮೂಲವಾಗಿದೆ. ಇದರಿಂದಲೇ ಏಟುಬಿದ್ದಾಗ ಹಾಗೂ ದುರ್ವಚನಗಳನ್ನು ಕೇಳಿದಾಗ ಪೀಡೆಯುಂಟಾಗುವುದು. ॥ ೨೩ ॥ ಯಾವ ಶರೀರದಲ್ಲಿ 'ಇದು ನಾನೇ' ಎಂಬ ಅಭಿಮಾನ ಉಂಟಾಗು ವುದೋ ಆ ಶರೀರವನ್ನು ವಧಿಸಿದಾಗ ತನ್ನ ವಧೆಯೇ ಆಯಿತೆಂದು ಪ್ರಾಣಿಗಳಿಗೆ ಅನಿಸುತ್ತದೆ. ಆದರೆ ಭಗವಂತನಲ್ಲಿ ಜೀವಿಗಳಂತೆ ಇಂತಹ ಅಭಿಮಾನ ಇರುವುದಿಲ್ಲ. ಏಕೆಂದರೆ, ಅವನು ಸರ್ವಾತ್ಮನಾಗಿದ್ದಾನೆ, ಅದ್ವಿತೀಯನಾಗಿದ್ದಾನೆ. ಅವನು ಬೇರೆಯವರಿಗೆ ಕೊಡುವ ದಂಡನೆಯೂ ಅವರ ಶ್ರೇಯಸ್ಸಿಗಾಗಿಯೇ ಇರುತ್ತದೆ, ಕ್ರೋಧದಿಂದಾಗಲೀ, ದ್ವೇಷದಿಂದಾಗಲೀ ಅಲ್ಲ. ಹೀಗಿರುವಾಗ ಭಗವಂತನ ಸಂಬಂಧದಲ್ಲಿ ಹಿಂಸಾದಿ ಕಲ್ಪನೆಯನ್ನು ಹೇಗೆ ಮಾಡಲಾಗುವುದು ? ॥ ೨೪ ॥ ಆದುದರಿಂದ ಸುದೃಢವಾದ ವೈರಭಾವದಿಂದಾಗಲೀ, ವೈರರಹಿತ ಭಕ್ತಿಭಾವದಿಂದಾಗಲೀ, ಭಯದಿಂದಾಗಲೀ, ಸ್ನೇಹದಿಂದಾಗಲೀ, ಅಥವಾ

ತಸ್ಮಾದ್ವೈರಾನುಬಂಧೇನ ನಿರ್ವೈರೇಣ ಭಯೇನ ವಾ ।
ಸ್ನೇಹಾತ್ಕಾಮೇನ ವಾ ಯುಂಜ್ಯಾತ್ಕಥಂಚಿನ್ನೇಕ್ಷತೇ ಪೃಥಕ್ ॥ ೨೫ ॥

ಯಥಾ ವೈರಾನುಬಂಧೇನ ಮರ್ತ್ಯಸ್ತನ್ಮಯತಾಮಿಯಾತ್ ।
ನ ತಥಾ ಭಕ್ತಿಯೋಗೇನ ಇತಿ ಮೇ ನಿಶ್ಚಿತಾ ಮತಿಃ ॥ ೨೬ ॥

ಕೀಟಃ ಪೇಶಸ್ಕೃತಾ ರುದ್ಧಃ ಕುಡ್ಯಾಯಾಂ ತಮನುಸ್ಮರನ್ ।
ಸಂರಂಭ ಭಯಯೋಗೇನ ವಿಂದತೇ ತತ್ಸ್ವರೂಪತಾಮ್ ॥ ೨೭ ॥

ಏವಂ ಕೃಷ್ಣೇ ಭಗವತಿ ಮಾಯಾಮನುಜ ಈಶ್ವರೇ ।
ವೈರೇಣ ಪೂತಪಾಪ್ಮಾನಸ್ತಮಾಪುರನುಚಿಂತಯಾ ॥ ೨೮ ॥

ಕಾಮಾದ್ದ್ವೇಷಾದ್ಭಯಾತ್ ಸ್ನೇಹಾದ್ಯಥಾ ಭಕ್ತ್ಯೇಶ್ವರೇ ಮನಃ ।
ಆವೇಶ್ಯ ತದಘಂ ಹಿತ್ವಾ ಬಹವಸ್ತದ್ಗತಿಂ ಗತಾಃ ॥ ೨೯ ॥

ಗೋಪ್ಯಃ ಕಾಮಾದ್ಭಯಾತ್ಕಂಸೋ
ದ್ವೇಷಾಚ್ಚೈದ್ಯಾದಯೋ ನೃಪಾಃ ।
ಸಂಬಂಧಾದ್ ವೃಷ್ಣಯಃ ಸ್ನೇಹಾದ್
ಯೂಯಂ ಭಕ್ತ್ಯಾ ವಯಂ ವಿಭೋ ॥ ೩೦ ॥

ಕತಮೋಽಪಿ ನ ವೇನಃ ಸ್ಯಾತ್ಪಂಚಾನಾಂ ಪುರುಷಂ ಪ್ರತಿ ।
ತಸ್ಮಾತ್ಕೇನಾಪ್ಯುಪಾಯೇನ ಮನಃ ಕೃಷ್ಣೇ ನಿವೇಶಯೇತ್ ॥ ೩೧ ॥

ಮಾತೃಷ್ವಸೇಯೋ ವಶ್ಚೈದ್ಯೋ ದಂತವಕ್ತ್ರಶ್ಚ ಪಾಂಡವ ।
ಪಾರ್ಷದಪ್ರವರೌ ವಿಷ್ಣೋರ್ವಿಪ್ರಶಾಪಾತ್ಪದಾಚ್ಚ್ಯುತೌ ॥ ೩೨ ॥

ಯುಧಿಷ್ಠಿರ ಉವಾಚ

ಕೀದೃಶಃ ಕಸ್ಯ ವಾ ಶಾಪೋ ಹರಿದಾಸಾಭಿಮರ್ಶನಃ ।
ಅಶ್ರದ್ಧೇಯ ಇವಾಭಾತಿ ಹರೇರೇಕಾಂತಿನಾಂ ಭವಃ ॥ ೩೩ ॥

ದೇಹೇಂದ್ರಿಯಾಸುಹೀನಾನಾಂ ವೈಕುಂಠಪುರವಾಸಿನಾಮ್ ।
ದೇಹಸಂಬಂಧಸಂಬದ್ಧಮೇತದಾಖ್ಯಾತುಮರ್ಹಸಿ ॥ ೩೪ ॥

ಕಾಮದಿಂದಾಗಲೀ – ಹೇಗಾದರೂ ಶ್ರೀಭಗವಂತನಲ್ಲಿ ತನ್ನ ಮನಸ್ಸನ್ನು ಪೂರ್ಣರೂಪದಿಂದ ತೊಡಗಿಸಬೇಕು. ಭಗವಂತನ ದೃಷ್ಟಿಯಲ್ಲಿ ಈ ಭಾವಗಳಲ್ಲಿ ಯಾವುದೇ ಭೇದವೂ ಇಲ್ಲ. ॥ ೨೫ ॥ ಯುಧಿಷ್ಠಿರನೇ! ಮನುಷ್ಯನು ವೈರಭಾವದಿಂದ ಭಗವಂತನಲ್ಲಿ ತನ್ಮಯನಾಗುವಷ್ಟು ಭಕ್ತಿಯೋಗದಿಂದ ಆಗುವುದಿಲ್ಲ – ಎಂಬುದು ನನ್ನ ದೃಢವಾದ ನಿಶ್ಚಯವಾಗಿದೆ. ॥ ೨೬ ॥ ಕಣಜವು ಒಂದು ಹುಳುವನ್ನು ತಂದು ಗೋಡೆಯ ತನ್ನ ಗೂಡಿನಲ್ಲಿ ಕೂಡಿ ಹಾಕುತ್ತದೆ. ಆಗ ■ ಹುಳುವು ಭಯದಿಂದಲೂ, ಉದ್ವೇಗದಿಂದಲೂ ಕಣಜವನ್ನೇ ಚಿಂತಿಸುತ್ತಾ-ಚಿಂತಿಸುತ್ತಾ ಅದರಂತೆಯೇ ಆಗಿಬಿಡುವುದು. ॥ ೨೭ ॥ ಹೀಗೆಯೇ ಮಾಯೆಯಿಂದ ಮನುಷ್ಯನಂತೆ ಕಂಡುಬರುವ ಸರ್ವಶಕ್ತನಾದ ಭಗವಾನ್ ಶ್ರೀಕೃಷ್ಣನಲ್ಲಿ ವೈರಭಾವದಿಂದ ನಿರಂತರ ಆತನನ್ನೇ ಚಿಂತಿಸುತ್ತಾ-ಚಿಂತಿಸುತ್ತಾ ಪಾಪರಹಿತನಾಗಿ ಆತನನ್ನೇ ಪಡೆದುಕೊಳ್ಳುವರು. ॥ ೨೮ ॥ ಒಬ್ಬರಲ್ಲ, ಅನೇಕ ಮನುಷ್ಯರು ಕಾಮದಿಂದ, ದ್ವೇಷದಿಂದ, ಭಯದಿಂದ, ಸ್ನೇಹದಿಂದ ತಮ್ಮ ಮನಸ್ಸನ್ನು ಭಗವಂತನಲ್ಲಿ ತೊಡಗಿಸಿ, ತಮ್ಮ ಎಲ್ಲ ಪಾಪಗಳನ್ನು ತೊಳೆದುಕೊಂಡು – ಭಕ್ತರು ಭಕ್ತಿಯಿಂದ ಭಗವಂತನನ್ನು ಪಡೆಯುವಂತೆ – ಆತನನ್ನು ಪಡೆದು ಕೊಂಡಿರುವರು. ॥ ೨೯ ॥ ಮಹಾರಾಜಾ! ಗೋಪಿಯರು ಭಗವಂತನನ್ನು ಸೇರುವ ತೀವ್ರ ಕಾಮದಿಂದ ಅರ್ಥಾತ್ ಪ್ರೇಮದಿಂದ, ಕಂಸನು ಭಯದಿಂದ, ಶಿಶುಪಾಲ-ದಂತವಕ್ತ್ರ ಮೊದಲಾದ ರಾಜರು ದ್ವೇಷದಿಂದ, ಯದುವಂಶೀಯರು ಕೌಟುಂಬಿಕ ಸಂಬಂಧದಿಂದ, ನೀವುಗಳು ಸ್ನೇಹದಿಂದ ಮತ್ತು ನಾವುಗಳು ಭಕ್ತಿಯಿಂದ ಮನಸ್ಸುಗಳನ್ನು ಭಗವಂತನಲ್ಲಿ ತೊಡಗಿಸಿರುವೆವು. ॥ ೩೦ ॥ ಭಕ್ತರಲ್ಲದೆ ಇತರ ಐದು ವಿಧದಿಂದ ಭಗವಂತನನ್ನು ಚಿಂತಿಸುವವನಲ್ಲಿ ಯಾರೊಂದಿಗೂ ವೇನನ ಗಣನೆಯಾಗುವುದಿಲ್ಲ. ಏಕೆಂದರೆ, ಅವನು ಯಾವುದೇ ರೀತಿಯಿಂದ ಭಗವಂತನಲ್ಲಿ ಮನಸ್ಸನ್ನು ತೊಡಗಿಸಲಿಲ್ಲ. ಸಾರಾಂಶ – ಹೇಗೆ ಬೇಕಾದರೂ ಆಗಲೀ ನಮ್ಮ ಮನಸ್ಸನ್ನು ಭಗವಾನ್ ಶ್ರೀಕೃಷ್ಣನಲ್ಲಿ ತನ್ಮಯಗೊಳಿಸಬೇಕು. ॥ ೩೧ ॥ ಮಹಾರಾಜಾ! ಮತ್ತೆ ನಿಮ್ಮಗಳ ಚಿಕ್ಕಮ್ಮನ ಪುತ್ರನಾದ ಶಿಶುಪಾಲ ಮತ್ತು ದಂತವಕ್ತ್ರರು ಇಬ್ಬರೂ ಭಗವಂತನಾದ ಮಹಾವಿಷ್ಣುವಿನ ಮುಖ್ಯರಾದ ಪಾರ್ಷದರಾಗಿದ್ದರು. ಬ್ರಾಹ್ಮಣರ ಶಾಪದಿಂದ ಇವರಿಬ್ಬರೂ ತಮ್ಮ ಪದದಿಂದ ಚ್ಯುತರಾಗಬೇಕಾಯಿತು. ॥ ೩೨ ॥

ಯುಧಿಷ್ಠಿರ ಮಹಾರಾಜನು ಕೇಳಿದನು – ನಾರದ ಮಹರ್ಷಿಗಳೇ! ಶ್ರೀಭಗವಂತನ ಪಾರ್ಷದರನ್ನೂ ಕೂಡ ಪ್ರಭಾವಿತರಾಗುವಂತಹ ಶಾಪವನ್ನು ಯಾರು ಕೊಟ್ಟರು? ಆ ಶಾಪ ಏನಾಗಿತ್ತು? ಭಗವಂತನ ಅನನ್ಯ ಪ್ರೇಮೀ ಭಕ್ತರು ಪುನಃ ಜನ್ಮ-ಮೃತ್ಯುರೂಪವಾದ ಸಂಸಾರಕ್ಕೆ ಮರಳಿ ಬರುವುದೆಂದರೆ ನಂಬುವುದೇ ಕಷ್ಟ. ॥ ೩೩ ॥ ವೈಕುಂಠದಲ್ಲಿ ಇರುವವರು ಪ್ರಾಕೃತ ಶರೀರ, ಇಂದ್ರಿಯಗಳು, ಪ್ರಾಣಗಳು ಇವುಗಳಿಂದ ರಹಿತರಾಗಿರುತ್ತಾರೆ. ಅವರಿಗೆ ಪ್ರಾಕೃತಶರೀರದ ಸಂಬಂಧ ಹೇಗೆ ಉಂಟಾಯಿತು? ಇದನ್ನು ತಾವು ಅವಶ್ಯವಾಗಿ ತಿಳಿಸೋಣವಾಗಲಿ. ॥ ೩೪ ॥

ನಾರದ ಉವಾಚ

ಏಕದಾ ಬ್ರಹ್ಮಣಃ ಪುತ್ರಾ ವಿಷ್ಣೋರ್ಲೋಕಂ ಯದೃಚ್ಛಯಾ ।
ಸನಂದನಾದಯೋ ಜಗ್ಮುಶ್ಚರಂತೋ ಭುವನತ್ರಯಮ್ ॥ ೩೫ ॥

ಪಂಚಷಡ್ಢಾಯನಾರ್ಭಾಭಾಃ ಪೂರ್ವೇಷಾಮಪಿ ಪೂರ್ವಜಾಃ ।
ದಿಗ್ವಾಸಸಃ ಶಿಶೂನ್ಮತ್ವಾ ದ್ವಾಃಸ್ಥೌ ತಾನ್ಪ್ರತ್ಯಷೇಧತಾಮ್ ॥ ೩೬ ॥

ಅಶಪನ್ಕುಪಿತಾ ಏವಂ ಯುವಾಂ ವಾಸಂ ನ ಚಾರ್ಹಥಃ ।
ರಜಸ್ತಮೋಭ್ಯಾಂ ರಹಿತೇ ಪಾದಮೂಲೇ ಮಧುದ್ವಿಷಃ ।
ಪಾಪಿಷ್ಠಾಮಾಸುರೀಂ ಯೋನಿಂ ಬಾಲಿಶೌ ಯಾತಮಾಶ್ವತಃ ॥ ೩೭ ॥

ಏವಂ ಶಪ್ತೌ ಸ್ವಭವನಾತ್ಪತಂತೌ ತೌ ಕೃಪಾಲುಭಿಃ ।
ಪ್ರೋಕ್ತೌ ಪುನರ್ಜನ್ಮಭಿರ್ವಾಂ ತ್ರಿಭಿರ್ಲೋಕಾಯ ಕಲ್ಪತಾಮ್ ॥ ೩೮ ॥

ಜಜ್ಞಾತೇ ತೌ ದಿತೇಃ ಪುತ್ರೌ ದೈತ್ಯದಾನವವಂದಿತೌ ।
ಹಿರಣ್ಯಕಶಿಪುರ್ಜ್ಯೇಷ್ಠೋ ಹಿರಣ್ಯಾಕ್ಷೋಽನುಜಸ್ತತಃ ॥ ೩೯ ॥

ಹತೋ ಹಿರಣ್ಯಕಶಿಪುರ್ಹರಿಣಾ ಸಿಂಹರೂಪಿಣಾ ।
ಹಿರಣ್ಯಾಕ್ಷೋ ಧರೋದ್ಧಾರೇ ಬಿಭ್ರತಾ ಶೌಕರಂ ವಪುಃ ॥ ೪೦ ॥

ಹಿರಣ್ಯಕಶಿಪುಃ ಪುತ್ರಂ ಪ್ರಹ್ಲಾದಂ ಕೇಶವಪ್ರಿಯಮ್ ।
ಜಿಘಾಂಸುರಕರೋನ್ನಾನಾ ಯಾತನಾ ಮೃತ್ಯುಹೇತವೇ ॥ ೪೧ ॥

ಸರ್ವಭೂತಾತ್ಮಭೂತಂ ತಂ ಪ್ರಶಾಂತಂ ಸಮದರ್ಶನಮ್ ।
ಭಗವತ್ತೇಜಸಾ ಸ್ಪೃಷ್ಟಂ ನಾಶಕ್ನೋದ್ಧಂತುಮುದ್ಯಮೈಃ ॥ ೪೨ ॥

ತತಸ್ತೌ ರಾಕ್ಷಸೌ ಜಾತೌ ಕೇಶಿನ್ಯಾಂ ವಿಶ್ರವಸುತೌ ।
ರಾವಣಃ ಕುಂಭಕರ್ಣಶ್ಚ ಸರ್ವಲೋಕೋಪತಾಪನೌ ॥ ೪೩ ॥

ತತ್ರಾಪಿ ರಾಘವೋ ಭೂತ್ವಾ ನ್ಯಹನಚ್ಛಾಪಮುಕ್ತಯೇ ।
ರಾಮವೀರ್ಯಂ ಶ್ರೋಷ್ಯಸಿ ತ್ವಂ ಮಾರ್ಕಂಡೇಯಮುಖಾತ್ಪ್ರಭೋ ॥ ೪೪ ॥

ನಾರದ ಮಹರ್ಷಿಗಳು ಹೇಳಿದರು – ಒಂದು ದಿನ ಬ್ರಹ್ಮದೇವರ ಮಾನಸಪುತ್ರರಾದ ಸನಕಾದಿ ಋಷಿಗಳು ಮೂರೂ ಲೋಕಗಳಲ್ಲಿ ಯಥೇಷ್ಟವಾಗಿ ಸಂಚರಿಸುತ್ತಾ ವೈಕುಂಠಕ್ಕೆ ಹೋದರು. ॥ ೩೫ ॥ ಇವರಾದರೋ ಎಲ್ಲರಿಗಿಂತಲೂ ಹಳಬರಾಗಿದ್ದರೂ ಐದು-ಆರು ವರ್ಷದ ಬಾಲಕರಂತೆ ಕಂಡುಬರುತ್ತಿದ್ದರು. ವಸ್ತ್ರವನ್ನೂ ಧರಿಸುತ್ತಿರಲಿಲ್ಲ. ಅವರನ್ನು ಸಾಮಾನ್ಯ ಶಿಶುಗಳೆಂದು ತಿಳಿದುಕೊಂಡು ದ್ವಾರಪಾಲಕರು ಅವರನ್ನು ಒಳಗೆ ಹೋಗದಂತೆ ತಡೆದರು. ॥ ೩೬ ॥ ಇದರಿಂದ ಅವರು ಕೋಪಗೊಂಡವರಂತೆ ಆಗಿ ದ್ವಾರಪಾಲಕರಿಗೆ – ಎಲೈ ಮೂರ್ಖರೇ! ಭಗವಾನ್ ಶ್ರೀವಿಷ್ಣುವಿನ ಪಾದಮೂಲವು ರಜೋಗುಣ-ತಮೋಗುಣದಿಂದ ರಹಿತವಾದುದು. ನೀವು ಇಲ್ಲಿ ವಾಸಮಾಡಲು ಯೋಗ್ಯರಲ್ಲ. ಅದಕ್ಕಾಗಿ ಬೇಗನೇ ನೀವು ಇಲ್ಲಿಂದ ಹೋಗಿ ಪಾಪಮಯ ಅಸುರ ಯೋನಿಯನ್ನು ಹೊಂದಿರಿ' ಎಂದು ಶಾಪವನ್ನು ಕೊಟ್ಟರು. ॥ ೩೭ ॥ ಹೀಗೆ ಶಪಿಸಲ್ಪಟ್ಟ ಆ ದ್ವಾರಪಾಲಕರು ವೈಕುಂಠದಿಂದ ಕೆಳಗೆ ಬೀಳುತ್ತಿರುವುದನ್ನು ಕಂಡು ಕೃಪಾಳುಗಳಾದ ಆ ಮಹಾತ್ಮರು – 'ನೀವು ಮೂರು ಜನ್ಮಗಳಲ್ಲಿ ಈ ಶಾಪವನ್ನು ಅನುಭವಿಸಿ ಮತ್ತೆ ಇಲ್ಲಿಗೆ ಹಿಂದಿರುಗಿರಿ' ಎಂದು ಶಾಪವಿಮೋಚನೆಯನ್ನು ಅನುಗ್ರಹಿಸಿದರು. ॥ ೩೮ ॥

ಯುಧಿಷ್ಠಿರಾ! ಅವರೇ ದ್ವಾರಪಾಲಕರಿಬ್ಬರು ದಿತಿಯ ಪುತ್ರರಾದರು. ಅವರಲ್ಲಿ ಹಿರಿಯವನ ಹೆಸರು ಹಿರಣ್ಯಕಶಿಪು ಮತ್ತು ಕಿರಿಯವನ ಹೆಸರು ಹಿರಣ್ಯಾಕ್ಷ ಎಂದಿತ್ತು. ದೈತ್ಯ-ದಾನವರಲ್ಲಿ ಇವರಿಬ್ಬರೇ ಸರ್ವಶ್ರೇಷ್ಠರಾಗಿದ್ದರು. ॥ ೩೯ ॥ ಭಗವಾನ್ ಮಹಾವಿಷ್ಣುವು ನರಸಿಂಹರೂಪವನ್ನು ಧರಿಸಿ ಹಿರಣ್ಯಕಶಿಪುವನ್ನೂ ಮತ್ತು ಪೃಥಿವಿಯನ್ನು ಉದ್ಧರಿಸುವ ಸಮಯದಲ್ಲಿ ವರಾಹ ಅವತಾರದಿಂದ ಹಿರಣ್ಯಾಕ್ಷನನ್ನೂ ಸಂಹರಿಸಿದನು. ॥ ೪೦ ॥ ಹಿರಣ್ಯಕಶಿಪುವು ಭಗವತ್ಪ್ರೇಮಿಯಾಗಿದ್ದ ತನ್ನ ಪುತ್ರನಾದ ಪ್ರಹ್ಲಾದನನ್ನು ಕೊಲ್ಲಲು ಬಯಸಿದನು ಹಾಗೂ ಅದಕ್ಕಾಗಿ ಅವನಿಗೆ ಅನೇಕ ಕಷ್ಟಗಳನ್ನು ಕೊಟ್ಟನು. ॥ ೪೧ ॥ ಆದರೆ ಪ್ರಹ್ಲಾದನು ಸರ್ವಾತ್ಮನಾದ ಭಗವಂತನಿಗೆ ಪರಮ ಪ್ರಿಯನಾಗಿದ್ದನು, ಸಮದರ್ಶಿಯಾಗಿದ್ದನು. ಅವನ ಹೃದಯದಲ್ಲಿ ಕದಲಲಾರದ ಶಾಂತಿಯು ನೆಲೆಸಿತ್ತು. ಭಗವಂತನ ಪ್ರಭಾವದಿಂದ ಅವನು ಸುರಕ್ಷಿತನಾಗಿದ್ದನು. ಅದಕ್ಕಾಗಿ ಅನೇಕ ವಿಧದಿಂದ ಪ್ರಯತ್ನಿಸಿದರೂ ಹಿರಣ್ಯಕಶಿಪುವಿನಿಂದ ಆತನನ್ನು ಕೊಲ್ಲಲಾಗಲಿಲ್ಲ. ॥ ೪೨ ॥

ಧರ್ಮನಂದನಾ! ಅವರಿಬ್ಬರೇ ಪುನಃ ವಿಶ್ರವಸ್ಸು ಮುನಿಯ ಮೂಲಕ ಕೇಶಿನೀ (ಕೈಕಸೆ)ಯ ಗರ್ಭದಿಂದ ರಾವಣ- ಕುಂಭಕರ್ಣರೆಂಬ ಹೆಸರುಗಳಿಂದ ರಾಕ್ಷಸರಾಗಿ ಹುಟ್ಟಿದರು. ಅವರು ತಮ್ಮ ಉತ್ಪಾತಗಳಿಂದ ಎಲ್ಲ ಲೋಕಗಳಿಗೂ ಕಂಟಕರಾಗಿ ಸಂತಾಪವನ್ನು ಹರಡಿದರು. ॥ ೪೩ ॥ ಆಗಲೂ ಭಗವಂತನು ಅವರನ್ನು ಶಾಪಮುಕ್ತಗೊಳಿಸಲು ರಾಮಾವತಾರವನ್ನು ಎತ್ತಿ ಅವರನ್ನು ವಧಿಸಿದನು. ನೀನು ಮುಂದೆ ಮಾರ್ಕಂಡೇಯ ಮಹರ್ಷಿಗಳ ಬಾಯಿಯಿಂದ ಭಗವಾನ್ ಶ್ರೀರಾಮನ ಚರಿತ್ರೆಯನ್ನು ಕೇಳುವೆ. ॥ ೪೪ ॥ ಆ ಜಯ-ವಿಜಯರಿಬ್ಬರೇ ಪುನಃ ಈ ಜನ್ಮದಲ್ಲಿ ನಿನ್ನ ಚಿಕ್ಕಮ್ಮನ ಪುತ್ರರಾಗಿ ಶಿಶುಪಾಲ ಮತ್ತು ದಂತವಕ್ತ್ರರಾಗಿ ಕ್ಷತ್ರಿಯಕುಲದಲ್ಲಿ

ತಾವೇವ ಕ್ಷತ್ರಿಯೌ ಜಾತೌ ಮಾತೃಷ್ವಸ್ರಾತ್ಮಜೌ ತವ ।
ಅಧುನಾ ಶಾಪನಿರ್ಮುಕ್ತೌ ಕೃಷ್ಣಚಕ್ರಹತಾಂಹಸೌ ॥ ೪೫ ॥

ವೈರಾನುಬಂಧತೀವ್ರೇಣ ಧ್ಯಾನೇನಾಚ್ಯುತಸಾತ್ಮತಾಮ್ ।
ನೀತೌ ಪುನರ್ಹರೇಃ ಪಾರ್ಶ್ವಂ ಜಗ್ಮತುರ್ವಿಷ್ಣುಪಾರ್ಷದೌ ॥ ೪೬ ॥

ಯುಧಿಷ್ಠಿರ ಉವಾಚ

ವಿದ್ವೇಷೋ ದಯಿತೇ ಪುತ್ರೇ ಕಥಮಾಸೀನ್ಮಹಾತ್ಮನಿ ।
ಬ್ರೂಹಿ ಮೇ ಭಗವನ್ಯೇನ ಪ್ರಹ್ಲಾದಸ್ಯಾಚ್ಯುತಾತ್ಮತಾ ॥ ೪೭ ॥

ಜನಿಸಿದ್ದರು. ಭಗವಾನ್ ಶ್ರೀಕೃಷ್ಣನ ಚಕ್ರದ ಸ್ಪರ್ಶವಾಗುತ್ತಲೇ ಅವರ ಎಲ್ಲ ಪಾಪಗಳೂ ನಾಶವಾಗಿ, ಸನಕಾದಿಗಳ ಶಾಪದಿಂದ ಮುಕ್ತರಾದರು. ॥ ೪೫ ॥ ವೈರಭಾವದ ಕಾರಣ ನಿರಂತರವಾಗಿ ಅವರು ಭಗವಾನ್ ಶ್ರೀಕೃಷ್ಣನನ್ನು ಚಿಂತಿಸುತ್ತಾ ಇದ್ದರು. ಆ ತೀವ್ರವಾದ ತನ್ಮಯತೆಯಿಂದ ಅವರು ಭಗವಂತನನ್ನು ಸೇರಿದರು ಮತ್ತು ಪುನಃ ಅವನ ಪಾರ್ಷದರಾಗಿ ಅವನ ಬಳಿಗೇ ತಲುಪಿದರು. ॥ ೪೬ ॥

ಯುಧಿಷ್ಠಿರನು ಕೇಳಿದನು – ಮಹಾತ್ಮರೇ! ಹಿರಣ್ಯಕಶಿಪುವು ತನ್ನ ಪ್ರಿಯಪುತ್ರನಾದ ಪ್ರಹ್ಲಾದನಲ್ಲಿ ಇಷ್ಟೊಂದು ದ್ವೇಷ ಏಕೆ ಮಾಡಿದನು? ಪ್ರಹ್ಲಾದನಾದರೋ ಮಹಾತ್ಮನಾಗಿದ್ದನು. ಜೊತೆಗೆ ಯಾವ ಸಾಧನೆಯಿಂದ ಪ್ರಹ್ಲಾದನು ಭಗವನ್ಮಯನಾದನು? ಇದನ್ನೂ ತಿಳಿಸಿರಿ. ॥ ೪೭ ॥

ಮೊದಲನೆಯ ಅಧ್ಯಾಯವು ಮುಗಿಯಿತು. ॥ ೧ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಸಪ್ತಮ ಸ್ಕಂಧೇ
ಪ್ರಹ್ಲಾದಚರಿತೋಪಕ್ರಮೇ ಪ್ರಥಮೋಽಧ್ಯಾಯಃ ॥ ೧ ॥

ಎರಡನೆಯ ಅಧ್ಯಾಯ

ಹಿರಣ್ಯಾಕ್ಷನ ವಧೆಯಿಂದ ದುಃಖಿತರಾದ ತಾಯಿಯನ್ನೂ ಮತ್ತು ಕುಟುಂಬದವರನ್ನೂ ಹಿರಣ್ಯಕಶಿಪುವು ಸಂತೈಸಿದುದು

ನಾರದ ಉವಾಚ

ಭ್ರಾತರ್ಯೇವಂ ವಿನಿಹತೇ ಹರಿಣಾ ಕ್ರೋಡಮೂರ್ತಿನಾ ।
ಹಿರಣ್ಯಕಶಿಪೂ ರಾಜನ್ಪರ್ಯತಪ್ಯದ್ರುಷಾ ಶುಚಾ ॥ ೧ ॥

ಆಹ ಚೇದಂ ರುಷಾ ಘೂರ್ಣಃ
ಸಂದಷ್ಟದಶನಚ್ಛದಃ ।
ಕೋಪೋಜ್ಜ್ವಲದ್ಭ್ಯಾಂ ಚಕ್ಷುರ್ಭ್ಯಾಂ
ನಿರೀಕ್ಷನ್ ಧೂಮ್ರಮಂಬರಮ್ ॥ ೨ ॥

ಕರಾಲದಂಷ್ಟ್ರೋಗ್ರದೃಷ್ಟ್ಯಾ ದುಷ್ಪ್ರೇಕ್ಷ್ಯಭ್ರುಕುಟೀಮುಖಃ ।
ಶೂಲಮುದ್ಯಮ್ಯ ಸದಸಿ ದಾನವಾನಿದಮಬ್ರವೀತ್ ॥ ೩ ॥

ಭೋ ಭೋ ದಾನವದೈತೇಯಾ ದ್ವಿಮೂರ್ಧಂಸ್ತ್ರ್ಯಕ್ಷ ಶಂಬರ ।
ಶತಬಾಹೋ ಹಯಗ್ರೀವ ನಮುಚೇ ಪಾಕ ಇಲ್ವಲ ॥ ೪ ॥

ವಿಪ್ರಚಿತ್ತೇ ಮಮ ವಚಃ ಪುಲೋಮನ್ ಶಕುನಾದಯಃ ।
ಶೃಣುತಾನಂತರಂ ಸರ್ವೇ ಕ್ರಿಯತಾಮಾಶು ಮಾ ಚಿರಮ್ ॥ ೫ ॥

ನಾರದರು ಹೇಳಿದರು – ಯುಧಿಷ್ಠಿರನೇ! ಭಗವಂತನು ವರಾಹಾವತಾರವನ್ನು ತಾಳಿ ಹಿರಣ್ಯಾಕ್ಷನನ್ನು ವಧಿಸಿದನು. ತಮ್ಮನು ಈ ವಿಧವಾಗಿ ಕೊಲ್ಲಲ್ಪಟ್ಟಾಗ ಹಿರಣ್ಯಕಶಿಪುವು ಕ್ರೋಧದಿಂದ ಉರಿದೆದ್ದು ಶೋಕದಿಂದ ಸಂತಪ್ತನಾದನು. ॥ ೧ ॥ ಸಿಟ್ಟಿನಿಂದ ನಡುಗುತ್ತಾ ಪದೇ-ಪದೇ ಅವುಡುಗಳನ್ನು ಕಚ್ಚಿಕೊಳ್ಳತೊಡಗಿದನು. ಕೋಪದಿಂದ ಉರಿಯುತ್ತಿದ್ದ ಕಣ್ಣುಗಳ ಉರಿಯ ಹೊಗೆಯಿಂದ ಬೂದುಬಣ್ಣವನ್ನು ಹೊಂದಿದ ಆಕಾಶದ ಕಡೆಗೆ ನೋಡುತ್ತಾ ಹೇಳತೊಡಗಿದನು. ॥ ೨ ॥ ಆಗ ವಿಕರಾಳವಾದ ಕೋರೆದಾಡೆಗಳಿಂದ, ಬೆಂಕಿಯನ್ನು ಉಗುಳುತ್ತಿದ್ದ ಉಗ್ರವಾದ ದೃಷ್ಟಿಯಿಂದ ಹಾಗೂ ಗಂಟುಗಟ್ಟಿದ ಹುಬ್ಬುಗಳಿಂದ ಭೀಕರವಾಗಿ ಕಾಣುತ್ತಿದ್ದ ಅವನ ಮುಖವನ್ನು ನೋಡಲಾಗುತ್ತಿರಲಿಲ್ಲ. ತುಂಬಿದ ಸಭೆಯಲ್ಲಿ ತ್ರಿಶೂಲವನ್ನೆತ್ತಿ ಅವನು – ದ್ವಿಮೂರ್ಧಾ, ತ್ರ್ಯಕ್ಷ, ಶಂಬರ, ಶತಬಾಹು, ಹಯಗ್ರೀವ, ನಮುಚಿ, ಪಾಕ, ಇಲ್ವಲ, ವಿಪ್ರಚಿತ್ತಿ, ಪುಲೋಮಾ ಮತ್ತು ಶಕುನ ಮುಂತಾದವರನ್ನು ಸಂಬೋಧಿಸುತ್ತಾ – ಎಲೈ ದೈತ್ಯ-ದಾನವರೇ! ನೀವೆಲ್ಲರೂ ಈ ನನ್ನ ಮಾತನ್ನು ಕೇಳಿರಿ. ಅನಂತರ ನಾನು ಹೇಳಿದಂತೆಯೇ ಮಾಡಿರಿ. ॥ ೩-೫ ॥ ಕ್ಷುದ್ರರಾದ ನನ್ನ ಶತ್ರುಗಳು ನನ್ನ ಪರಮ ಪ್ರಿಯನೂ, ಹಿತೈಷಿಯೂ ಆದ ತಮ್ಮನನ್ನು ವಿಷ್ಣುವಿನಿಂದ ಕೊಲ್ಲಿಸಿರುವುದು ನಿಮಗೆಲ್ಲ ತಿಳಿದೇ ಇದೆ. ವಿಷ್ಣುವು ದೇವತೆಗಳಿಗೆ, ದೈತ್ಯರಿಗೆ ಸಮಾನನಾಗಿದ್ದರೂ ದೇವತೆಗಳು ಮಹಾಪ್ರಯತ್ನಮಾಡಿ ಆತನನ್ನು ಒಲಿಸಿಕೊಂಡು ತಮ್ಮ ಪಕ್ಷದವನ

ಸಪತ್ನೈರ್ಘಾತಿತಃ ಕ್ಷುದ್ರೈರ್ಭ್ರಾತಾ ಮೇ ದಯಿತಃ ಸುಹೃತ್ ।
ಪಾರ್ಷ್ಣಿಗ್ರಾಹೇಣ ಹರಿಣಾ ಸಮೇನಾಪ್ಯುಪಧಾವನೈಃ ॥ ೬ ॥

ತಸ್ಯ ತ್ಯಕ್ತಸ್ವಭಾವಸ್ಯ ಘೃಣೇರ್ಮಾಯಾವನೌಕಸಃ ।
ಭಜಂತಂ ಭಜಮಾನಸ್ಯ ಬಾಲಸ್ಯೇವಾಸ್ಥಿರಾತ್ಮನಃ ॥ ೭ ॥

ಮಚ್ಛೂಲಭಿನ್ನಗ್ರೀವಸ್ಯ ಭೂರಿಣಾ ರುಧಿರೇಣ ವೈ ।
ರುಧಿರಪ್ರಿಯಂ ತರ್ಪಯಿಷ್ಯೇ ಭ್ರಾತರಂ ಮೇ ಗತವ್ಯಥಃ ॥ ೮ ॥

ತಸ್ಮಿನ್ಕೂಟೇಽಹಿತೇ ನಷ್ಟೇ ಕೃತ್ತಮೂಲೇ ವನಸ್ಪತೌ ।
ವಿಟಪಾ ಇವ ಶುಷ್ಯಂತಿ ವಿಷ್ಣುಪ್ರಾಣಾ ದಿವೌಕಸಃ ॥ ೯ ॥

ತಾವದ್ಯಾತ ಭುವಂ ಯೂಯಂ ವಿಪ್ರಕ್ಷತ್ರಸಮೇಧಿತಾಮ್ ।
ಸೂದಯಧ್ವಂ ತಪೋಯಜ್ಞಸ್ವಾಧ್ಯಾಯವ್ರತದಾನಿನಃ ॥ ೧೦ ॥

ವಿಷ್ಣುರ್ದ್ವಿಜಕ್ರಿಯಾಮೂಲೋ
ಯಜ್ಞೋ ಧರ್ಮಮಯಃ ಪುಮಾನ್ ।
ದೇವರ್ಷಿಪಿತೃಭೂತಾನಾಂ
ಧರ್ಮಸ್ಯ ಚ ಪರಾಯಣಮ್ ॥ ೧೧ ॥

ಯತ್ರ ಯತ್ರ ದ್ವಿಜಾ ಗಾವೋ ವೇದಾ ವರ್ಣಾಶ್ರಮಾಃ ಕ್ರಿಯಾಃ ।
ತಂ ತಂ ಜನಪದಂ ಯಾತ ಸಂದೀಪಯತ ವೃಶ್ಚತ ॥ ೧೨ ॥

ಇತಿ ತೇ ಭರ್ತೃನಿರ್ದೇಶಮಾದಾಯ ಶಿರಸಾಽಽದೃತಾಃ ।
ತಥಾ ಪ್ರಜಾನಾಂ ಕದನಂ ವಿದಧುಃ ಕದನಪ್ರಿಯಾಃ ॥ ೧೩ ॥

ಪುರಗ್ರಾಮವ್ರಜೋದ್ಯಾನಕ್ಷೇತ್ರಾರಾಮಾಶ್ರಮಾಕರಾನ್ ।
ಖೇಟಖರ್ವಟಘೋಷಾಂಶ್ಚ ದದಹುಃ ಪತ್ತನಾನಿ ಚ ॥ ೧೪ ॥

ಕೇಚಿತ್ಖನಿತ್ರೈರ್ಬಿಭಿದುಃ ಸೇತುಪ್ರಾಕಾರಗೋಪುರಾನ್ ।
ಆಜೀವ್ಯಾಂಶ್ಚಿಚ್ಛಿದುರ್ವೃಕ್ಷಾನ್ಕೇಚಿತ್ಪರಶುಪಾಣಯಃ ।
ಪ್ರಾದಹಞ್ಛರಣಾನ್ಯನ್ಯೇ ಪ್ರಜಾನಾಂ ಜ್ವಲಿತೋಲ್ಮುಕೈಃ ॥ ೧೫ ॥

ಏವಂ ವಿಪ್ರಕೃತೇ ಲೋಕೇ ದೈತ್ಯೇಂದ್ರಾನುಚರೈರ್ಮುಹುಃ ।
ದಿವಂ ದೇವಾಃ ಪರಿತ್ಯಜ್ಯ ಭುವಿ ಚೇರುರಲಕ್ಷಿತಾಃ ॥ ೧೬ ॥

ನ್ನಾಗಿಸಿಕೊಂಡರು. ॥ ೬ ॥ ಈ ವಿಷ್ಣುವು ಮೊದಲು ತುಂಬಾ ಶುದ್ಧನೂ, ಪಕ್ಷಪಾತರಹಿತನೂ ಆಗಿದ್ದನು. ಆದರೆ ಈಗ ಮಾಯೆಯಿಂದ ವರಾಹವೇ ಮುಂತಾದ ರೂಪಗಳನ್ನು ಧರಿಸ ತೊಡಗಿರುವನು ಮತ್ತು ತನ್ನ ಸ್ವಭಾವದಿಂದ ಚ್ಯುತನಾಗಿರುವನು. ಮಕ್ಕಳಂತೆ – ಅವನ ಸೇವೆ ಮಾಡಿದವರ ಕಡೆಗೆ ಹೋಗುತ್ತಾನೆ. ಅವನ ಚಿತ್ತವು ಸ್ಥಿರವಾಗಿಲ್ಲ. ॥ ೭ ॥ ಈಗ ನಾನು ನನ್ನ ಈ ಶೂಲದಿಂದ ಅವನ ಕತ್ತನ್ನು ಕತ್ತರಿಸಿ ಹಾಕುವೆನು. ಅವನ ರಕ್ತದ ಧಾರೆಯಿಂದ ರುಧಿರಪ್ರೇಮಿಯಾದ ನನ್ನ ತಮ್ಮನಿಗೆ ತರ್ಪಣವನ್ನು ಕೊಡುವೆನು. ಆಗಲೇ ನನ್ನ ಹೃದಯದ ವ್ಯಥೆಯು ಶಾಂತವಾದೀತು. ॥ ೮ ॥ ಮಾಯಾವಿ ಶತ್ರುವು ನಾಶವಾದಾಗ – ಬೇರು ಕಡಿದಾಗ ಮರದ ಟೊಂಗೆಗಳು ಒಣಗಿ ಹೋಗುವಂತೆ – ಎಲ್ಲ ದೇವತೆಗಳು ತಾವಾಗಿಯೇ ಒಣಗಿಹೋಗುವರು. ಏಕೆಂದರೆ, ಅವರ ಜೀವನವು ವಿಷ್ಣುವೇ ಆಗಿರುವನು. ॥ ೯ ॥ ಅದಕ್ಕಾಗಿ ನೀವೆಲ್ಲ ಈಗಲೇ ಭೂಮಿಗೆ ಹೋಗಿರಿ. ಅಲ್ಲಿ ಬ್ರಾಹ್ಮಣರ ಮತ್ತು ಕ್ಷತ್ರಿಯರ ಸಂಖ್ಯೆಯು ತುಂಬಾ ಬೆಳೆದಿದೆ. ಅಲ್ಲಿ ತಪಸ್ಸು, ಯಜ್ಞ, ಸ್ವಾಧ್ಯಾಯ, ವ್ರತ, ದಾನಾದಿ ಶುಭಕರ್ಮಗಳನ್ನು ಮಾಡುತ್ತಿರುವ ಜನರೆಲ್ಲರನ್ನು ಕೊಂದುಹಾಕಿಬಿಡಿರಿ. ॥ ೧೦ ॥ ದ್ವಿಜರ ಧರ್ಮ-ಕರ್ಮಗಳೇ ವಿಷ್ಣುವಿನ ಮೂಲವಾಗಿದೆ. ಏಕೆಂದರೆ, ಯಜ್ಞ ಮತ್ತು ಧರ್ಮವೇ ಅವನ ಸ್ವರೂಪವಾಗಿದೆ. ದೇವತೆಗಳು, ಋಷಿಗಳು, ಪಿತೃಗಳು, ಸಮಸ್ತ ಪ್ರಾಣಿಗಳು ಮತ್ತು ಧರ್ಮ – ಇವುಗಳಿಗೆಲ್ಲ ಆತನೇ ಪರಮಾಶ್ರಯನಾಗಿದ್ದಾನೆ. ॥ ೧೧ ॥ ಬ್ರಾಹ್ಮಣರು, ಗೋವುಗಳು, ವೇದಗಳು, ವರ್ಣಾಶ್ರಮ ಮತ್ತು ಧರ್ಮ-ಕರ್ಮಗಳು ಎಲ್ಲೆಲ್ಲಿರುವವೋ, ಅಲ್ಲಿಗೆ ಹೋಗಿ ಅವೆಲ್ಲವನ್ನು ಹಾಳುಗೆಡವಿರಿ, ಸುಟ್ಟು ಹಾಕಿರಿ. ॥ ೧೨ ॥ ದೈತ್ಯರಾದರೋ ಸ್ವಭಾವದಿಂದಲೇ ಬೇರೆ ಜನರಿಗೆ ಕಷ್ಟಕೊಟ್ಟು ಅದರಿಂದ ಸುಖಪಡುವರು. ದೈತ್ಯರಾಜ ಹಿರಣ್ಯಕಶಿಪುವಿನ ಆಜ್ಞೆಯನ್ನು ಅವರು ಬಹಳ ಆದರದಿಂದ ತಲೆತಗ್ಗಿಸಿಕೊಂಡು ಸ್ವೀಕರಿಸಿ, ಅದರಂತೆ ಜನತೆಯನ್ನು ನಾಶಪಡಿಸ ತೊಡಗಿದರು. ॥ ೧೩ ॥ ಅವರು ನಗರಗಳನ್ನು, ಹಳ್ಳಿಗಳನ್ನು ಹಸುಗಳ ಹಟ್ಟಿಗಳನ್ನು, ತೋಟಗಳನ್ನು, ಹೊಲ-ಗದ್ದೆಗಳನ್ನು, ವಿಹಾರ ಸ್ಥಳಗಳನ್ನು, ಋಷಿಗಳ ಆಶ್ರಮಗಳನ್ನು, ರತ್ನಾದಿಗಳ ಗಣಿಗಳನ್ನು, ರೈತರ ವಾಸಸ್ಥಾನಗಳನ್ನು, ತಪ್ಪಲುಗಳಲ್ಲಿದ್ದ ಹಳ್ಳಿಗಳನ್ನು, ಶ್ರೀಮಂತರ ಬಡಾವಣೆಗಳನ್ನು, ವ್ಯಾಪಾರಿಗಳ ಕೇಂದ್ರಗಳನ್ನು, ದೊಡ್ಡ-ದೊಡ್ಡ ಊರುಗಳನ್ನು ಸುಟ್ಟುಹಾಕಿದರು. ॥ ೧೪ ॥ ಕೆಲವು ದೈತ್ಯರು ಅಗೆಯುವ ಶಸ್ತ್ರಗಳಿಂದ ದೊಡ್ಡ-ದೊಡ್ಡ ಸೇತುವೆಗಳನ್ನು, ಕೋಟೆಗೋಡೆಗಳನ್ನು, ನಗರದ್ವಾರಗಳನ್ನು ಒಡೆದು ಹಾಕಿದರು. ಮತ್ತೆ ಕೆಲವರು ಕೊಡಲಿಗಳಿಂದ ಹೂವು-ಹಣ್ಣು ಬಿಟ್ಟಿದ್ದ, ಸೊಂಪಾಗಿ ಬೆಳೆದ ಮರಗಳನ್ನು ಕಡಿದುಹಾಕಿದರು. ಕೆಲವರು ಉರಿಯುವ ಕೊಳ್ಳಿಗಳಿಂದ ಜನರ ಮನೆಗಳಿಗೆ ಬೆಂಕಿಯಿಟ್ಟರು. ॥ ೧೫ ॥ ಹೀಗೆ ದೈತ್ಯರು ನಿರಪರಾಧಿಗಳಾದ ಜನರಿಗೆ ತುಂಬಾ ಪೀಡೆಯನ್ನು ಕೊಡತೊಡಗಿದರು. ಆಗ ದೇವತೆಗಳು ಸ್ವರ್ಗವನ್ನು ಬಿಟ್ಟು ಮಾರುವೇಷ ಧರಿಸಿ ಅಡಗಿಕೊಂಡು ಪೃಥ್ವಿಯಲ್ಲಿ ಸಂಚರಿಸುತ್ತಿದ್ದರು. ॥ ೧೬ ॥

ಹಿರಣ್ಯಕಶಿಪುರ್ಭ್ರಾತುಃ ಸಂಪರೇತಸ್ಯ ದುಃಖಿತಃ ।
ಕೃತ್ವಾ ಕಟೋದಕಾದೀನಿ ಭ್ರಾತೃಪುತ್ರಾನಸಾಂತ್ವಯತ್
॥ ೧೭ ॥

ಶಕುನಿಂ ಶಂಬರಂ ಧೃಷ್ಟಂ ಭೂತಸಂತಾಪನಂ ವೃಕಮ್ ।
ಕಾಲನಾಭಂ ಮಹಾನಾಭಂ ಹರಿಶ್ಮಶ್ರುಮಥೋತ್ಕಚಮ್
॥ ೧೮ ॥

ತನ್ಮಾತರಂ ರುಷಾಭಾನುಂ ದಿತಿಂ ಚ ಜನನೀಂ ಗಿರಾ ।
ಶ್ಲಕ್ಷ್ಣಯಾ ದೇಶಕಾಲಜ್ಞ ಇದಮಾಹ ಜನೇಶ್ವರ
॥ ೧೯ ॥

ಹಿರಣ್ಯಕಶಿಪುರುವಾಚ

ಅಂಬಾಂಬ ಹೇ ವಧೂಃ ಪುತ್ರಾ ವೀರಂ ಮಾರ್ಹಥ ಶೋಚಿತುಮ್ ।
ರಿಪೋರಭಿಮುಖೇ ಶ್ಲಾಘ್ಯಃ ಶೂರಾಣಾಂ ವಧ ಈಪ್ಸಿತಃ
॥ ೨೦ ॥

ಭೂತಾನಾಮಿಹ ಸಂವಾಸಃ ಪ್ರಪಾಯಾಮಿವ ಸುವ್ರತೇ ।
ದೈವೇನೈಕತ್ರ ನೀತಾನಾಮುನ್ನೀತಾನಾಂ ಸ್ವಕರ್ಮಭಿಃ
॥ ೨೦ ॥

ನಿತ್ಯ ಆತ್ಮಾವ್ಯಯಃ ಶುದ್ಧಃ ಸರ್ವಗಃ ಸರ್ವವಿತ್ಪರಃ ।
ಧತ್ತೇಽಸಾವಾತ್ಮನೋ ಲಿಂಗಂ ಮಾಯಯಾ ವಿಸೃಜನ್ಗುಣಾನ್
॥ ೨೨ ॥

ಯಥಾಂಭಸಾ ಪ್ರಚಲತಾ ತರವೋಽಪಿ ಚಲಾ ಇವ ।
ಚಕ್ಷುಷಾ ಭ್ರಾಮ್ಯಮಾಣೇನ ದೃಶ್ಯತೇ ಚಲತೀವ ಭೂಃ
॥ ೨೩ ॥

ಏವಂ ಗುಣೈರ್ಭ್ರಾಮ್ಯಮಾಣೇ ಮನಸ್ಯವಿಕಲಃ ಪುಮಾನ್ ।
ಯಾತಿ ತತ್ಸಾಮ್ಯತಾಂ ಭದ್ರೇ ಹ್ಯಲಿಂಗೋ ಲಿಂಗವಾನಿವ
॥ ೨೪ ॥

ಏಷ ಆತ್ಮವಿಪರ್ಯಾಸೋ ಹ್ಯಲಿಂಗೇ ಲಿಂಗಭಾವನಾ ।
ಏಷ ಪ್ರಿಯಾಪ್ರಿಯೈರ್ಯೋಗೋ ವಿಯೋಗಃ ಕರ್ಮಸಂಸೃತಿಃ
॥ ೨೫ ॥

ಸಂಭವಶ್ಚ ವಿನಾಶಶ್ಚ ಶೋಕಶ್ಚ ವಿವಿಧಃ ಸ್ಮೃತಃ ।
ಅವಿವೇಕಶ್ಚ ಚಿಂತಾ ಚ ವಿವೇಕಾಸ್ಮೃತಿರೇವ ಚ
॥ ೨೬ ॥

ಅತ್ರಾಪ್ಯುದಾಹರಂತೀಮಮಿತಿಹಾಸಂ ಪುರಾತನಮ್ ।
ಯಮಸ್ಯ ಪ್ರೇತಬಂಧೂನಾಂ ಸಂವಾದಂ ತಂ ನಿಬೋಧತ
॥ ೨೭ ॥

ಯುಧಿಷ್ಠಿರನೇ! ತಮ್ಮನ ಮರಣದಿಂದ ಹಿರಣ್ಯಕಶಿಪುವಿಗೆ ಭಾರೀ ದುಃಖವಾಗಿತ್ತು. ಹಿರಣ್ಯಾಕ್ಷನ ಅಂತ್ಯೇಷ್ಟಿ ಕ್ರಿಯೆಗಳಾದ ಬಳಿಕ, ಅವನ ಮಕ್ಕಳಾದ ಶಕುನಿ, ಶಂಬರ, ಧೃಷ್ಟ, ಭೂತ ಸಂತಾಪನ, ವೃಕ, ಕಾಲನಾಭ, ಮಹಾನಾಭ, ಹರಿಶ್ಮಶ್ರು ಮತ್ತು ಉತ್ಕಚ ಎಂಬುವರಿಗೆ ಸಾಂತ್ವನ ಹೇಳಿದನು. ॥ ೧೭-೧೮ ॥ ಅವರ ತಾಯಿಯಾದ ರುಷಾಭಾನುವನ್ನೂ ಮತ್ತು ತನ್ನ ತಾಯಿಯಾದ ದಿತಿದೇವಿಯನ್ನು ದೇಶಕಾಲಕ್ಕನುಸಾರವಾಗಿ ಮಧುರವಾಣಿಯಿಂದ ಸಂತೈಸುತ್ತಾ ಹೀಗೆಂದನು – ॥ ೧೯ ॥

ಹಿರಣ್ಯಕಶಿಪು ಹೇಳಿದನು – ನನ್ನ ಪ್ರೀತಿಯ ತಾಯೇ! ಸೊಸೆಯೇ! ಪುತ್ರರೇ! ನೀವೆಲ್ಲರೂ ಮಹಾವೀರನಾದ ಹಿರಣ್ಯಾಕ್ಷನ ಕುರಿತು ಸ್ವಲ್ಪವೂ ಶೋಕಪಡಬಾರದು. ಏಕೆಂದರೆ, ರಣರಂಗದಲ್ಲಿ ಶತ್ರುವಿನೊಡನೆ ಹೋರಾಡುತ್ತಾ ಪ್ರಾಣತ್ಯಾಗ ಮಾಡುವುದೇ ವೀರಪುರುಷನು ಬಯಸುವ ಶ್ಲಾಘ್ಯವಾದ ಮರಣವು. ॥ ೨೦ ॥ ದೇವಿಯೇ! ಅರವಟ್ಟಿಗೆಯಲ್ಲಿ ಅನೇಕ ಜನರು ಬಂದಾಗುತ್ತಾರೆ. ಆದರೆ ಕೊಂಚಕಾಲ ಮಾತ್ರ ಜೊತೆಯಲ್ಲಿದ್ದು ಅಗಲಿಹೋಗುತ್ತಾರೆ. ಹಾಗೆಯೇ ತಮ್ಮ ಕರ್ಮಗಳನುಸಾರ ದೈವಸಂಕಲ್ಪದಿಂದ ಈ ಜಗತ್ತಿನಲ್ಲಿ ಒಂದಾಗುತ್ತಾರೆ – ಅಗಲುತ್ತಾ ಇರುತ್ತಾರೆ. ॥ ೨೧ ॥ ವಾಸ್ತವವಾಗಿ ಆತ್ಮನು ನಿತ್ಯನೂ, ಅವಿನಾಶಿಯೂ, ಶುದ್ಧನೂ, ಸರ್ವಗನೂ, ಸರ್ವಜ್ಞನೂ, ದೇಹ-ಇಂದ್ರಿಯಗಳಿಂದ ಬೇರೆಯೇ ಆಗಿರುವನು. ಅವನು ತನ್ನ ಅವಿದ್ಯೆಯಿಂದಲೇ ದೇಹಾದಿಗಳ ಸೃಷ್ಟಿಗೈದು ಭೋಗಗಳಿಗೆ ಸಾಧನವಾದ ಸೂಕ್ಷ್ಮಶರೀರವನ್ನು ಸ್ವೀಕರಿಸುತ್ತಾನೆ. ॥ ೨೨ ॥ ಅಲ್ಲಾಡುತ್ತಿರುವ ನೀರಿನಲ್ಲಿ ಪ್ರತಿಬಿಂಬಿಸುವ ಮರಗಳೂ ಅಲ್ಲಾಡುತ್ತಿರುವಂತೆ ಕಾಣುತ್ತವೆ. ತಿರುಗುತ್ತಿರುವ ಕಣ್ಣುಗಳೊಂದಿಗೆ ಇದೇ ಪೃಥ್ವಿಯು ತಿರುಗಿದಂತೆ ಕಂಡುಬರುತ್ತದೆ. ಕಲ್ಯಾಣಿಯೇ! ಹಾಗೆಯೇ ವಿಷಯಗಳ ಕಾರಣದಿಂದ ಮನಸ್ಸು ಅಲೆಯತೊಡಗುತ್ತದೆ ಮತ್ತು ನಿಜವಾಗಿ ನಿರ್ವಿಕಾರನಾಗಿದ್ದರೂ ಮನಸ್ಸಿನಂತೆ ಆತ್ಮನೂ ಅಲೆಯುತ್ತಿರುವಂತೆ ತಿಳಿಯುತ್ತದೆ. ಅವನಿಗೆ ಸ್ಥೂಲ ಹಾಗೂ ಸೂಕ್ಷ್ಮ ಶರೀರಗಳೊಂದಿಗೆ ಯಾವುದೇ ಸಂಬಂಧವಿಲ್ಲದಿದ್ದರೂ ಅವನು ಸಂಬಂಧಪಟ್ಟವನಂತೆ ತಿಳಿದು ಬರುತ್ತಾನೆ. ॥ ೨೩-೨೪ ॥ ಎಲ್ಲ ವಿಧದಿಂದ ಶರೀರರಹಿತ ಆತ್ಮನನ್ನು ಶರೀರವೆಂದು ತಿಳಿಯುವುದೇ ಅಜ್ಞಾನವಾಗಿದೆ. ಇದರಿಂದಲೇ ಪ್ರಿಯ ಅಥವಾ ಅಪ್ರಿಯ ವಸ್ತುಗಳು ಒಂದಾಗುವುದು ಮತ್ತು ಅಗಲುವುದು ಉಂಟಾಗುತ್ತದೆ. ಇದರಿಂದಲೇ ಕರ್ಮಗಳೊಂದಿಗೆ ಸಂಬಂಧ ಉಂಟಾದ ಕಾರಣ ಸಂಸಾರದಲ್ಲಿ ಅಲೆದಾಡಬೇಕಾಗುತ್ತದೆ. ॥ ೨೫ ॥ ಜನ್ಮ, ಮೃತ್ಯು, ಅನೇಕ ಪ್ರಕಾರದ ಶೋಕಗಳು, ಅವಿವೇಕ, ಚಿಂತೆ, ವಿವೇಕದ ವಿಸ್ಮೃತಿ – ಇವೆಲ್ಲವುಗಳ ಕಾರಣ ಅಜ್ಞಾನವೇ ಆಗಿದೆ. ॥ ೨೬ ॥ ಈ ವಿಷಯದಲ್ಲಿ ಮಹಾತ್ಮರು ಒಂದು ಪ್ರಾಚೀನವಾದ ಇತಿಹಾಸವನ್ನು ಹೇಳುತ್ತಿರುತ್ತಾರೆ. ಆ ಇತಿಹಾಸವು ಸತ್ತಿರುವ ಮನುಷ್ಯನ ಸಂಬಂಧಿಗಳೊಂದಿಗೆ ಯಮರಾಜನ ಮಾತುಕತೆಯಾಗಿದೆ. ನೀವೆಲ್ಲರೂ ಗಮನಕೊಟ್ಟು ಕೇಳಿರಿ. ॥ ೨೭ ॥

ಉಶೀನರೇಷ್ವಭೂದ್ರಾಜಾ ಸುಯಜ್ಞ ಇತಿ ವಿಶ್ರುತಃ ।
ಸಪತ್ನೈರ್ನಿಹತೋ ಯುದ್ಧೇ ಜ್ಞಾತಯಸ್ತಮುಪಾಸತ ॥ ೨೮ ॥

ವಿಶೀರ್ಣರತ್ನಕವಚಂ ವಿಭ್ರಷ್ಟಾಭರಣಸ್ರಜಮ್ ।
ಶರನಿರ್ಭಿನ್ನಹೃದಯಂ ಶಯಾನಮಸೃಗಾವಿಲಮ್ ॥ ೨೯ ॥

ಪ್ರಕೀರ್ಣಕೇಶಂ ಧ್ವಸ್ತಾಕ್ಷಂ ರಭಸಾ ದಷ್ಟದಚ್ಛದಮ್ ।
ರಜಃಕುಂಠಮುಖಾಂಭೋಜಂ ಛಿನ್ನಾಯುಧಭುಜಂ ಮೃಧೇ ॥ ೩೦ ॥

ಉಶೀನರೇಂದ್ರಂ ವಿಧಿನಾ ತಥಾ ಕೃತಂ
ಪತಿಂ ಮಹಿಷ್ಯಃ ಪ್ರಸಮೀಕ್ಷ್ಯ ದುಃಖಿತಾಃ ।
ಹತಾಃ ಸ್ಮ ನಾಥೇತಿ ಕರೈರುರೋ ಭೃಶಂ
ಘ್ನಂತ್ಯೋ ಮುಹುಸ್ತತ್ಪದಯೋರುಪಾಪತನ್ ॥ ೩೧ ॥

ರುದತ್ಯ ಉಚ್ಚೈರ್ದಯಿತಾಂಘ್ರಿಪಂಕಜಂ
ಸಿಂಚಂತ್ಯ ಅಸ್ರೈಃ ಕುಚಕುಂಕುಮಾರುಣೈಃ ।
ವಿಸ್ರಸ್ತಕೇಶಾಭರಣಾಃ ಶುಚಂ ನೃಣಾಂ
ಸೃಜಂತ್ಯ ಆಕ್ರಂದನಯಾ ವಿಲೇಪಿರೇ ॥ ೩೨ ॥

ಅಹೋ ವಿಧಾತ್ರಾಕರುಣೇನ ನಃ ಪ್ರಭೋ
ಭವಾನ್ಪ್ರಣೀತೋ ದೃಗಗೋಚರಾಂ ದಶಾಮ್ ।
ಉಶೀನರಾಣಾಮಸಿ ವೃತ್ತಿದಃ ಪುರಾ
ಕೃತೋಽಧುನಾ ಯೇನ ಶುಚಾಂ ವಿವರ್ಧನಃ ॥ ೩೩ ॥

ತ್ವಯಾ ಕೃತಜ್ಞೇನ ವಯಂ ಮಹೀಪತೇ
ಕಥಂ ವಿನಾ ಸ್ಯಾಮ ಸುಹೃತ್ತಮೇನ ತೇ ।
ತತ್ರಾನುಯಾನಂ ತವ ವೀರ ಪಾದಯೋಃ
ಶುಶ್ರೂಷತೀನಾಂ ದಿಶ ಯತ್ರ ಯಾಸ್ಯಸಿ ॥ ೩೪ ॥

ಏವಂ ವಿಲಪತೀನಾಂ ವೈ ಪರಿಗೃಹ್ಯ ಮೃತಂ ಪತಿಮ್ ।
ಅನಿಚ್ಛತೀನಾಂ ನಿರ್ಹಾರಮರ್ಕೋಽಸ್ತಂ ಸಂನ್ಯವರ್ತತ ॥ ೩೫ ॥

ತತ್ರ ಹ ಪ್ರೇತಬಂಧೂನಾಮಾಶ್ರುತ್ಯ ಪರಿದೇವಿತಮ್ ।
ಆಹ ತಾನ್ಬಾಲಕೋ ಭೂತ್ವಾ ಯಮಃ ಸ್ವಯಮುಪಾಗತಃ ॥ ೩೬ ॥

ಯಮ ಉವಾಚ

ಅಹೋ ಅಮೀಷಾಂ ವಯಸಾಧಿಕಾನಾಂ
ವಿಪಶ್ಯತಾಂ ಲೋಕವಿಧಿಂ ವಿಮೋಹಃ ।
ಯತ್ರಾಗತಸ್ತತ್ರ ಗತಂ ಮನುಷ್ಯಂ
ಸ್ವಯಂ ಸಧರ್ಮಾ ಅಪಿ ಶೋಚಂತ್ಯಪಾರ್ಥಮ್ ॥ ೩೭ ■

ಉಶೀನರ ದೇಶದಲ್ಲಿ ಒಬ್ಬ ಕೀರ್ತಿಶಾಲಿಯಾಗಿದ್ದ ರಾಜನಿದ್ದನು. ಅವನ ಹೆಸರು ಸುಯಜ್ಞ. ಕಾಳಗದಲ್ಲಿ ಅವನನ್ನು ಶತ್ರುಗಳು ಕೊಂದುಹಾಕಿದರು. ಆಗ ಅವನ ಬಂಧು-ಬಾಂಧವರು ಅವನನ್ನು ಸುತ್ತುವರೆದು ಕುಳಿತು ಗೋಳಾಡುತ್ತಿದ್ದರು. ॥ ೨೮ ॥ ರಾಜನ ರತ್ನಖಚಿತವಾದ ಕವಚವು ಹರಿದು ಚಿಂದಿಯಾಗಿತ್ತು. ಭೂಷಣಗಳೂ, ಮಾಲೆಗಳೂ ಚೆಲ್ಲಾಪಿಲ್ಲಿಯಾಗಿದ್ದವು. ಬಾಣಗಳಿಂದ ಅವನ ಎದೆಯು ಸೀಳಿಹೋಗಿತ್ತು. ರಕ್ತದಿಂದ ಶರೀರವು ತೊಯ್ದು ಹೋಗಿತ್ತು. ಕೂದಲು ಕೆದರಿತ್ತು. ಕಣ್ಣುಗಳು ಕುಸಿದುಹೋಗಿದ್ದವು. ಕೋಪದಿಂದ ಹಲ್ಲುಗಳು ತುಟಿಗಳನ್ನು ಕಚ್ಚಿಕೊಂಡಿದ್ದವು. ಕಮಲದಂತಿದ್ದ ಮುಖವು ಧೂಳಿನಿಂದ ಮುಚ್ಚಿಹೋಗಿತ್ತು. ಯುದ್ಧದಲ್ಲಿ ಅವನ ಶಸ್ತ್ರಗಳು, ಬಾಹುಗಳು ತುಂಡಾಗಿದ್ದವು. ॥ ೨೯-೩೦ ॥ ವಿಧಿವಶದಿಂದ ತಮ್ಮ ಪತಿಗೆ ಒದಗಿದ ಈ ಅವಸ್ಥೆಯನ್ನು ಕಂಡು ಉಶೀನರ ನರೇಶನ ರಾಣಿಯರಿಗೆ ಭಾರೀ ದುಃಖವಾಯಿತು. ಅವರು - ಹಾ ನಾಥಾ! ನಿರ್ಭಾಗ್ಯರಾದ ನಾವು ಸತ್ತೆವು, ಕೆಟ್ಟೆವು! ಎಂದು ಮತ್ತೆ-ಮತ್ತೆ ಗೋಳಾಡುತ್ತಾ, ಎದೆಯನ್ನು ಬಡಿದುಕೊಂಡು ತಮ್ಮ ಪತಿಯ ಪಾದಗಳ ಬಳಿ ಕುಸಿದುಬಿದ್ದರು. ॥ ೩೧ ॥ ಹಾಗೆ ಗಟ್ಟಿಯಾಗಿ ಅಳುತ್ತಿರುವಾಗ ಸ್ತನಗಳಿಗೆ ಲೇಪಿಸಿಕೊಂಡ ಕುಂಕುಮ-ಕೇಸರಿಯೊಂದಿಗೆ ಬೆರೆತ ಅವರ ಕಣ್ಣೀರಧಾರೆಗಳು ಕೆಂಪಾಗಿ ಪ್ರಿಯಕರನ ಪಾದಪದ್ಮಗಳನ್ನು ನೆನೆಸಿದವು. ಅವರ ತಲೆಗೂದಲು, ಆಭರಣಗಳೆಲ್ಲ ಅಸ್ತವ್ಯಸ್ತವಾಗಿದ್ದವು. ಅವರ ■ ಕರುಣಾಜನಕವಾದ ವಿಲಾಪವನ್ನು ಕೇಳಿದವರೆಲ್ಲ ದುಃಖಪರವಶರಾಗುತ್ತಿದ್ದರು. ॥ ೩೨ ॥ ಅಯ್ಯೋ! ವಿಧಿಯು ಎಂತಹ ನಿಷ್ಕರುಣಿಯು! ಆತನೇ ಈಗ ನಿನ್ನನ್ನು ನಮ್ಮ ಕಣ್ಣುಗಳಿಂದ ಮರೆಮಾಡಿದ್ದಾನೆ. ಪ್ರಿಯನೇ! ಪ್ರಭೋ! ಹಿಂದೆ ನೀನು ಉಶೀನರ ದೇಶವಾಸಿಗಳಿಗೆಲ್ಲರಿಗೂ ಜೀವನದಾತನಾಗಿದ್ದೆ. ಆದರೆ ಈಗ ನಿನ್ನ ಜೀವನವನ್ನೇ ಕಳೆದುಕೊಂಡು ನಮ್ಮ ದುಃಖವನ್ನೇ ಹೆಚ್ಚಿಸುತ್ತಿರುವೆ. ॥ ೩೩ ॥ ಪತಿದೇವಾ! ನೀನು ನಮ್ಮನ್ನು ತುಂಬಾ ಪ್ರೀತಿಸುತ್ತಿದ್ದೆ. ನಮ್ಮ ಅಲ್ಪವಾದ ಸೇವೆಯನ್ನೇ ಬಹುದೊಡ್ಡದೆಂದು ತಿಳಿಯುತ್ತಿದ್ದೆ. ಅಯ್ಯೋ! ಈಗ ನೀನಿಲ್ಲದೆ ನಾವು ಬದುಕುವುದೆಂತು? ನಾವು ನಿನ್ನ ಪಾದಗಳ ಸೇವಕಿಯರಲ್ಲವೇ! ವೀರವರನೇ! ನೀನು ಹೋದಲ್ಲಿಗೆ ಬರಲು ನಮಗೂ ಅಪ್ಪಣೆಯನ್ನು ಕೊಡು. ॥ ೩೪ ॥ ಅವರೆಲ್ಲರೂ ತಮ್ಮ ಪತಿಯ ಶವವನ್ನು ಅಪ್ಪಿಕೊಂಡು ಹೀಗೆ ವಿಲಾಪಿಸುತ್ತಿದ್ದರು. ಆ ಶವವನ್ನು ದಹನಸಂಸ್ಕಾರಕ್ಕಾಗಿ ಅಲ್ಲಿಂದ ಎತ್ತಿಕೊಂಡು ಹೋಗಲು ಅವರು ಇಚ್ಛಿಸುತ್ತಿರಲಿಲ್ಲ. ಅಷ್ಟರಲ್ಲಿ ಸೂರ್ಯಾಸ್ತವಾಯಿತು. ॥ ೩೫ ॥ ಆಗ ಉಶೀನರ ರಾಜನ ಸಂಬಂಧಿಗಳು ಮಾಡಿದ ವಿಲಾಪವನ್ನು ಕೇಳಿದ ಯಮರಾಜನು ಸ್ವಯಂ ಬಾಲಕನ ವೇಷದಿಂದ ಅಲ್ಲಿಗೆ ಬಂದು ಆ ಜನರನ್ನು ಕುರಿತು ಹೀಗೆಂದನು - ॥ ೩೬ ॥

ಯಮರಾಜನು ಹೇಳಿದನು - ಆಹಾ! ಇದೇನಿದು! ವಯಸ್ಸಿನಲ್ಲಿ ಇಷ್ಟು ದೊಡ್ಡವರಾಗಿ ಲೋಕದಲ್ಲಿ ಜನರ ಬದುಕು-ಸಾವುಗಳನ್ನು ದಿನನಿತ್ಯವೂ ನೋಡುತ್ತಿದ್ದರೂ ಇವರು ಹೀಗೆ ಮೋಹಕ್ಕೆ ಒಳಗಾಗಿದ್ದಾರಲ್ಲ! ಅರೇ! ಈ ಮನುಷ್ಯನು ಎಲ್ಲಿಂದ

ಅಹೋ ವಯಂ ಧನ್ಯತಮಾ ಯದತ್ರ
ತ್ಯಕ್ತಾಃ ಪಿತೃಭ್ಯಾಂ ನ ವಿಚಿಂತಯಾಮಃ ।
ಅಭಕ್ಷ್ಯಮಾಣಾ ಅಬಲಾ ವೃಕಾದಿಭಿಃ
ಸ ರಕ್ಷಿತಾ ರಕ್ಷತಿ ಯೋ ಹಿ ಗರ್ಭೇ ॥ ೩೮ ॥

ಯ ಇಚ್ಛಯೇಶಃ ಸೃಜತೀದಮವ್ಯಯೋ
ಯ ಏವ ರಕ್ಷತ್ಯವಲುಂಪತೇ ಚ ಯಃ ।
ತಸ್ಯಾಬಲಾಃ ಕ್ರೀಡನಮಾಹುರೀಶಿತು-
ಶ್ಚರಾಚರಂ ನಿಗ್ರಹಸಂಗ್ರಹೇ ಪ್ರಭುಃ ॥ ೩೯ ॥

ಪಥಿ ಚ್ಯುತಂ ತಿಷ್ಠತಿ ದಿಷ್ಟರಕ್ಷಿತಂ
ಗೃಹೇ ಸ್ಥಿತಂ ತದ್ವಿಹತಂ ವಿನಶ್ಯತಿ ।
ಜೀವತ್ಯನಾಥೋಽಪಿ ತದೀಕ್ಷಿತೋ ವನೇ
ಗೃಹೇಽಪಿ ಗುಪ್ತೋಽಸ್ಯ ಹತೋ ನ ಜೀವತಿ ॥ ೪೦ ॥

ಭೂತಾನಿ ತೈಸ್ತೈರ್ನಿಜಯೋನಿಕರ್ಮಭಿ-
ರ್ಭವಂತಿ ಕಾಲೇ ನ ಭವಂತಿ ಸರ್ವಶಃ ।
ನ ತತ್ರ ಹಾತ್ಮಾ ಪ್ರಕೃತಾವಪಿ ಸ್ಥಿತ-
ಸ್ತಸ್ಯಾ ಗುಣೈರನ್ಯತಮೋ ನಿಬಧ್ಯತೇ ॥ ೪೧ ॥

ಇದಂ ಶರೀರಂ ಪುರುಷಸ್ಯ ಮೋಹಜಂ
ಯಥಾ ಪೃಥಗ್ಭೌತಿಕಮೀಯತೇ ಗೃಹಮ್ ।
ಯಥೌದಕೈಃ ಪಾರ್ಥಿವತೈಜಸೈರ್ಜನಃ
ಕಾಲೇನ ಜಾತೋ ವಿಕೃತೋ ವಿನಶ್ಯತಿ ॥ ೪೨ ॥

ಯಥಾನಲೋ ದಾರುಷು ಭಿನ್ನ ಈಯತೇ
ಯಥಾನಿಲೋ ದೇಹಗತಃ ಪೃಥಕ್ ಸ್ಥಿತಃ ।
ಯಥಾ ನಭಃ ಸರ್ವಗತಂ ನ ಸಜ್ಜತೇ
ತಥಾ ಪುಮಾನ್ಸರ್ವಗುಣಾಶ್ರಯಃ ಪರಃ ॥ ೪೩ ॥

ಬಂದಿದ್ದನೋ ಅಲ್ಲಿಗೆ ಹೊರಟುಹೋದನು. ಈ ಜನರೂ ಕೂಡ ಒಂದಲ್ಲ ಒಂದು ದಿನ ಅಲ್ಲಿಗೇ ಹೋಗಲೇಬೇಕು. ಆದರೂ ಹೀಗೇಕೆ ವ್ಯರ್ಥವಾಗಿ ಇಷ್ಟು ಶೋಕಪಡುತ್ತಿದ್ದಾರೆ? ॥ ೩೭ ॥ ನಿಮಗಿಂತಲೂ ನಾನೇ ಎಷ್ಟೋ ಪಾಲು ಶ್ರೇಷ್ಠನು. ಏಕೆಂದರೆ, ತಂದೆ-ತಾಯಿಗಳು ತೊರೆದುಬಿಟ್ಟಿದ್ದರೂ, ದೇಹದಿಂದ ದುರ್ಬಲನಾಗಿದ್ದರೂ ನಾನು ಎಳ್ಳಷ್ಟೂ ಚಿಂತೆ ಪಡುತ್ತಿಲ್ಲ. ತೋಳವೇ ಮುಂತಾದ ಕ್ರೂರಮೃಗಗಳು ನನ್ನನ್ನು ಏನೂ ಮಾಡಲಾರವು. ತಾಯಿಯ ಗರ್ಭದಲ್ಲಿದ್ದಾಗ ಯಾರು ರಕ್ಷಿಸಿದ್ದನೋ ಅವನೇ ಈ ಜೀವನದಲ್ಲಿಯೂ ನನ್ನನ್ನು ರಕ್ಷಿಸುತ್ತಾ ಇರುತ್ತಾನೆ. ॥ ೩೮ ॥ ದೇವಿಯರೇ! ತನ್ನ ಇಚ್ಛಾಮಾತ್ರದಿಂದ ಈ ಜಗತ್ತನ್ನು ರಚಿಸಿ, ರಕ್ಷಿಸಿ, ಲಯಗೊಳಿಸುವ ಪರಮೇಶ್ವರನಿಗೆ ಈ ಜಗತ್ತು ಒಂದು ಆಟದ ಬೊಂಬೆಯಂತೆ ಇದೆ. ಈ ಚರಾಚರ ಜಗತ್ತನ್ನು ನಿಗ್ರಹಿಸಲಿಕ್ಕೂ, ಅನುಗ್ರಹಿಸಲಿಕ್ಕೂ ಅವನೊಬ್ಬನೇ ಸಮರ್ಥನು. ॥ ೩೯ ॥ ಅದೃಷ್ಟವು ಅನುಕೂಲವಾಗಿದ್ದರೆ ರಸ್ತೆಯಲ್ಲಿ ಕಳೆದುಹೋದ ವಸ್ತುವೂ ಹಾಗೆಯೇ ಬಿದ್ದಿರುತ್ತದೆ. ಆದರೆ ಅದೇ ಅದೃಷ್ಟವು ಪ್ರತಿ ಕೂಲವಾದರೆ ಮನೆಯೊಳಗೆ ಪೆಟ್ಟಿಗೆಯೊಳಗೆ ಜೋಪಾನವಾಗಿ ಇಟ್ಟಿರುವ ವಸ್ತುವೂ ಕಳೆದುಹೋಗುವುದು. ಜೀವಿಯು ಯಾರ ಆಸರೆಯಿಲ್ಲದೆಯೇ ದೈವದ ದಯಾದೃಷ್ಟಿಯಿಂದ ಕಾಡಿನಲ್ಲಿಯೂ ಅನೇಕ ದಿನಗಳವರೆಗೆ ಬದುಕಿರಬಲ್ಲನು. ಆದರೆ ದೈವವು ವಿಪರೀತವಾದಾಗ ಮನೆಯಲ್ಲಿ ಸುರಕ್ಷಿತನಾಗಿದ್ದರೂ ಸತ್ತು ಹೋಗುತ್ತಾನೆ. ॥ ೪೦ ॥

ರಾಣಿಯರೇ! ಎಲ್ಲ ಪ್ರಾಣಿಗಳ ಮೃತ್ಯುವು ತಮ್ಮ ಪೂರ್ವಜನ್ಮಗಳ ಕರ್ಮವಾಸನೆಗನುಸಾರವಾಗಿ ಸಮಯಕ್ಕೆ ಸರಿಯಾಗಿ ಆಗುತ್ತದೆ ಮತ್ತು ಅದಕ್ಕನುಸಾರವೇ ಅವನ ಜನ್ಮವೂ ಉಂಟಾಗುತ್ತದೆ. ಆದರೆ ಆತ್ಮನು ಶರೀರದಿಂದ ಅತ್ಯಂತ ಭಿನ್ನನಾಗಿದ್ದಾನೆ. ಅದಕ್ಕಾಗಿ ಅವನು ಶರೀರದಲ್ಲಿದ್ದರೂ ಅದರ ಜನ್ಮ-ಮೃತ್ಯು ಮುಂತಾದ ಧರ್ಮಗಳು ಆತನನ್ನು ಮುಟ್ಟಲಾರವು. ॥ ೪೧ ॥ ಮನುಷ್ಯನು ತನ್ನ ಮನೆಯನ್ನು ತನ್ನಿಂದ ಬೇರೆ ವಸ್ತುವೆಂದೂ, ಒಂದು ಮಣ್ಣಿನ ಪದಾರ್ಥವೆಂದೂ ತಿಳಿಯುವಂತೆಯೇ ಈ ಶರೀರವು ಬೇರೆಯಾಗಿದ್ದು ಮಣ್ಣಿನದೇ ಆಗಿದೆ. ಮೋಹವಶದಿಂದ ಅವನು ಇದನ್ನು ತನ್ನದೆಂದು ತಿಳಿದಿರುತ್ತಾನೆ. ಗುಳ್ಳೆಗಳೇ ಮುಂತಾದವುಗಳು ನೀರಿನ ವಿಕಾರವು. ಮಡಕೆಯೇ ಮುಂತಾದವು ಮಣ್ಣಿನ ವಿಕಾರವು. ಒಡವೆ ಮುಂತಾದವುಗಳು ಚಿನ್ನದ ವಿಕಾರವು – ಇವು ಆಗಾಗ ಉಂಟಾಗುತ್ತವೆ, ರೂಪಾಂತರವಾಗುತ್ತವೆ ಹಾಗೂ ನಾಶವಾಗುತ್ತವೆ. ಹಾಗೆಯೇ ಈ ಮೂರರ ವಿಕಾರದಿಂದಲೇ ಉಂಟಾದ ಈ ಶರೀರವೂ ಕೂಡ ಆಗಾಗ ಉಂಟಾಗುತ್ತಾ-ಕೆಡುತ್ತಾ ಇರುತ್ತದೆ. ॥ ೪೨ ॥ ಕಟ್ಟಿಗೆಯಲ್ಲಿ ಅಡಗಿರುವ ವ್ಯಾಪಕ ಅಗ್ನಿಯು ಸ್ಪಷ್ಟವಾಗಿ ಅದರಿಂದ ಬೇರೆಯೇ ಆಗಿದೆ. ಶರೀರದಲ್ಲಿದ್ದರೂ ವಾಯುವಿಗೆ ಅದರೊಂದಿಗೆ ಯಾವ ಸಂಬಂಧವೂ ಇಲ್ಲ. ಆಕಾಶವು ಎಲ್ಲಕಡೆ ಒಂದೇ ರೀತಿಯಿಂದ ಇದ್ದರೂ ಯಾರ ಗುಣ-ದೋಷಗಳಿಂದಲೂ ಲಿಪ್ತವಾಗುವುದಿಲ್ಲ. ಹಾಗೆಯೇ ಸಮಸ್ತ ದೇಹೇಂದ್ರಿಯಗಳಲ್ಲಿ ಇರುತ್ತಿರುವ ಮತ್ತು ಅವುಗಳ ಆಶ್ರಯನಾದ ಆತ್ಮನೂ ಕೂಡ ಅವುಗಳಿಂದ ಬೇರೆಯಾಗಿ ನಿರ್ಲಿಪ್ತನೇ ಆಗಿದ್ದಾನೆ. ॥ ೪೩ ॥

ಸುಯಜ್ಞೋ ನನ್ವಯಂ ಶೇತೇ ಮೂಢಾ ಯಮನುಶೋಚಥ ।
ಯಃ ಶ್ರೋತಾ ಯೋಽನುವಕ್ತೇಹ ಸ ನ ದೃಶ್ಯೇತ ಕರ್ಹಿಚಿತ್ ॥ ೪೪ ॥

ನ ಶ್ರೋತಾ ನಾನುವಕ್ತಾಯಂ ಮುಖ್ಯೋಽಪ್ಯತ್ರ ಮಹಾನಸುಃ ।
ಯಸ್ತ್ವಿಹೇಂದ್ರಿಯವಾನಾತ್ಮಾ ಸ ಚಾನ್ಯಃ ಪ್ರಾಣದೇಹಯೋಃ ॥ ೪೫ ॥

ಭೂತೇಂದ್ರಿಯಮನೋಲಿಂಗಾನ್ ದೇಹಾನುಚ್ಚಾವಚಾನ್ವಿಭುಃ ।
ಭಜತ್ಯುತ್ಸೃಜತಿ ಹ್ಯನ್ಯಸ್ತಚ್ಚಾಪಿ ಸ್ವೇನ ತೇಜಸಾ ॥ ೪೬ ॥

ಯಾವಲ್ಲಿಂಗಾನ್ವಿತೋ ಹ್ಯಾತ್ಮಾ ತಾವತ್ಕರ್ಮನಿಬಂಧನಮ್ ।
ತತೋ ವಿಪರ್ಯಯಃ ಕ್ಲೇಶೋ ಮಾಯಾಯೋಗೋಽನುವರ್ತತೇ ॥ ೪೭ ॥

ವಿತಥಾಭಿನಿವೇಶೋಽಯಂ ಯದ್ಗುಣೇಷ್ವರ್ಥದೃಗ್ವಚಃ ।
ಯಥಾ ಮನೋರಥಃ ಸ್ವಪ್ನಃ ಸರ್ವಮೈಂದ್ರಿಯಕಂ ಮೃಷಾ ॥ ೪೮ ॥

ಅಥ ನಿತ್ಯಮನಿತ್ಯಂ ವಾ ನೇಹ ಶೋಚಂತಿ ತದ್ವಿದಃ ।
ನಾನ್ಯಥಾ ಶಕ್ಯತೇ ಕರ್ತುಂ ಸ್ವಭಾವಃ ಶೋಚತಾಮಿತಿ ॥ ೪೯ ॥

ಲುಬ್ಧಕೋ ವಿಪಿನೇ ಕಶ್ಚಿತ್ಪಕ್ಷಿಣಾಂ ನಿರ್ಮಿತೋಽಂತಕಃ ।
ವಿತತ್ಯ ಜಾಲಂ ವಿದಧೇ ತತ್ರ ತತ್ರ ಪ್ರಲೋಭಯನ್ ॥ ೫೦ ॥

ಕುಲಿಂಗಮಿಥುನಂ ತತ್ರ ವಿಚರತ್ಸಮದೃಶ್ಯತ ।
ತಯೋಃ ಕುಲಿಂಗೀ ಸಹಸಾ ಲುಬ್ಧಕೇನ ಪ್ರಲೋಭಿತಾ ॥ ೫೧ ॥

ಮೂರ್ಖರೇ! ಯಾರಿಗಾಗಿ ನೀವೆಲ್ಲರೂ ಶೋಕ ಮಾಡುತ್ತಿರುವಿರೋ ಆ ಸುಯಜ್ಞನೆಂಬ ಶರೀರವಾದರೋ ನಿಮ್ಮ ಮುಂದೆಯೇ ಬಿದ್ದಿದೆ. ನೀವೆಲ್ಲರೂ ನೋಡುತ್ತಾ ಇದ್ದೀರಿ. ಇದರಲ್ಲಿ ಯಾವ ಕೇಳುವವನು ಮತ್ತು ಮಾತಾಡುವವನು ಇದ್ದನೋ ಅವನಾದರೋ ಎಂದಿಗೂ ಯಾರಿಗೂ ಕಾಣುತ್ತಿರಲಿಲ್ಲ ಮತ್ತೆ ಇಂದೂ ಕೂಡ ಕಾಣಿಸಿಕೊಳ್ಳುವುದಿಲ್ಲ. ಹಾಗಾದರೆ ಶೋಕವೇಕೆ? ॥ ೪೪ ॥ ('ಇದರೊಳಗೆ ಮಾತನಾಡುತ್ತಿದ್ದವನು ಮತ್ತು ಕೇಳುತ್ತಿದ್ದವನು ಪ್ರಾಣನು. ಅವನು ಇದನ್ನು ಬಿಟ್ಟು ಹೋದನು' ಎಂದು ಹೇಳುವಿರೋ? ಅದು ಸರಿಯಲ್ಲ. ಏಕೆಂದರೆ, ಗಾಢನಿದ್ರೆಯ ಸಮಯದಲ್ಲಿ ಪ್ರಾಣನು ಇದ್ದರೂ ಅವನು ಮಾತನಾಡುವುದಿಲ್ಲ, ಕೇಳುವುದೂ ಇಲ್ಲ.) ಶರೀರದಲ್ಲಿ ಎಲ್ಲ ಇಂದ್ರಿಯಗಳ ಚೇಷ್ಟೆಗಳಿಗೂ ಕಾರಣವಾಗಿರುವ ಯಾವ ಮಹಾಪ್ರಾಣವುಂಟೋ, ಅದು ಮುಖ್ಯವಾಗಿದ್ದರೂ ಕೇಳುವುದು ಮತ್ತು ಮಾತನಾಡುವುದು ಆ ಪ್ರಾಣವಲ್ಲ. ಏಕೆಂದರೆ ಅದು ಜಡವಾಗಿದೆ. ದೇಹ ಮತ್ತು ಇಂದ್ರಿಯಗಳ ಮೂಲಕ ಎಲ್ಲ ಪದಾರ್ಥಗಳನ್ನೂ ದರ್ಶಿಸುತ್ತಿರುವ, ಎಲ್ಲದಕ್ಕೂ ಸಾಕ್ಷಿಯಾಗಿರುವ ಯಾವ ಆತ್ಮವುಂಟೋ ಅದು ಶರೀರ ಮತ್ತು ಪ್ರಾಣ ಇವೆರಡಕ್ಕಿಂತಲೂ ಬೇರೆಯಾದುದು. ॥ ೪೫ ॥ ಈ ಆತ್ಮನು ವ್ಯಾಪಕನಾಗಿದ್ದಾನೆ, ಆದರೆ ಪರಿಚ್ಛಿನ್ನನಲ್ಲ. ಆದರೂ ಪಂಚಭೂತ, ಇಂದ್ರಿಯ ಮತ್ತು ಮನಸ್ಸುಗಳಿಂದ ಕೂಡಿದ ದೇವ, ಮನುಷ್ಯ, ಪಶು, ಪಕ್ಷಿ ಇತ್ಯಾದಿ ಉಚ್ಚ-ನೀಚ ಶರೀರಗಳನ್ನು ಧರಿಸುತ್ತಾನೆ ಮತ್ತು ತನ್ನ ವಿವೇಕದಿಂದ ಮುಕ್ತನೂ ಆಗುವನು. ವಾಸ್ತವವಾಗಿ ಅವನು ಇವೆಲ್ಲವುಗಳಿಂದ ಬೇರೆಯೇ ಆಗಿದ್ದಾನೆ. ॥ ೪೬ ॥ ಅವನು ಪಂಚಪ್ರಾಣ, ಪಂಚಕರ್ಮೇಂದ್ರಿಯ, ಪಂಚಜ್ಞಾನೇಂದ್ರಿಯ, ಬುದ್ಧಿ ಮತ್ತು ಮನಸ್ಸು – ಈ ಹದಿನೇಳು ತತ್ತ್ವಗಳಿಂದ ಉಂಟಾದ ಲಿಂಗಶರೀರದೊಂದಿಗೆ ಕೂಡಿಕೊಂಡಿರುವ ತನಕ ಕರ್ಮಗಳಿಂದ ಬಂಧಿತನಾಗಿರುತ್ತಾನೆ. ಈ ಬಂಧನದಿಂದಲೇ ಮಾಯೆಯಿಂದ ಉಂಟಾಗುವ ಮೋಹ ಮತ್ತು ಕ್ಲೇಶಗಳು ಯಾವಾಗಲೂ ಅವನ ಬೆನ್ನುಹತ್ತಿರುತ್ತವೆ. ॥ ೪೭ ॥ ಪ್ರಕೃತಿಯ ಗುಣಗಳು ಮತ್ತು ಅವುಗಳಿಂದ ಉಂಟಾದ ವಸ್ತುಗಳನ್ನು ಪರಮಾರ್ಥವೆಂದು ತಿಳಿಯುವುದು ಅಥವಾ ಹೇಳುವುದು ವ್ಯರ್ಥವಾದ ದುರಾಗ್ರಹವಾಗಿದೆ. ಮನೋರಥ, ಸಮಯದ ಕಲ್ಪನೆ ಮತ್ತು ಸ್ವಪ್ನದಲ್ಲಿ ಕಂಡುಬರುವ ವಸ್ತುಗಳಂತೆ ಇಂದ್ರಿಯಗಳಿಂದ ಗ್ರಹಿಸಲಾಗುವುದೆಲ್ಲವೂ ಮಿಥ್ಯೆಯೇ ಆಗಿದೆ. ॥ ೪೮ ॥ ಅದಕ್ಕಾಗಿ ಶರೀರ ಮತ್ತು ಆತ್ಮನ ತತ್ತ್ವವನ್ನರಿತ ಮನುಷ್ಯನು ಅನಿತ್ಯಶರೀರಕ್ಕಾಗಲಿ, ಆತ್ಮನಿಗಾಗಲೀ ಶೋಕಿಸುವುದಿಲ್ಲ. ಆದರೆ ಜ್ಞಾನವು ದೃಢವಾಗದಿರುವ ಕಾರಣ ಶೋಕಿಸುತ್ತಿರುವವರ ಸ್ವಭಾವವನ್ನು ಬದಲಿಸುವುದು ಅತಿಕಷ್ಟ. ॥ ೪೯ ॥

ಒಂದು ಅರಣ್ಯದಲ್ಲಿ ಓರ್ವ ಬೇಟೆಗಾರನಿದ್ದನು. ಅವನು ಅರಣ್ಯದ ಪಕ್ಷಿಗಳ ಪಾಲಿಗೆ ವಿಧಿಯು ಸೃಷ್ಟಿಸಿ ಕಳಿಸಿದ ಯಮನೇ ಆಗಿದ್ದನು. ಅಲ್ಲಲ್ಲಿ ಬಲೆಯನ್ನು ಬೀಸಿ ಹಕ್ಕಿಗಳಿಗೆ ಆಹಾರದ ಆಸೆತೋರಿಸಿ ಬಲೆಯಲ್ಲಿ ಸಿಕ್ಕಿಸಿಕೊಳ್ಳುತ್ತಿದ್ದನು. ॥ ೫೦ ॥ ಒಂದು ದಿನ ಅವನು ಒಂದು ಕುಲಿಂಗಪಕ್ಷಿಯ ಜೋಡಿಯು ಕಾಳು ತಿನ್ನುತ್ತಿರುವುದನ್ನು ನೋಡಿದನು. ಅವುಗಳಲ್ಲಿ ಅವನು

ಸಾಸಜ್ಜತ ಸಿಚಸ್ತಂತ್ರ್ಯಾಂ ಮಹಿಷೀ ಕಾಲಯಂತ್ರಿತಾ ।
ಕುಲಿಂಗಸ್ತಾಂ ತಥಾಽಽಪನ್ನಾಂ ನಿರೀಕ್ಷ್ಯ ಭೃಶದುಃಖಿತಃ ।
ಸ್ನೇಹಾದಕಲ್ಪಃ ಕೃಪಣಃ ಕೃಪಣಾಂ ಪರ್ಯದೇವಯತ್ ॥ ೫೨ ॥

ಅಹೋ ಅಕರುಣೋ ದೇವಃ ಸ್ತ್ರಿಯಾಽಽಕರುಣಯಾ ವಿಭುಃ ।
ಕೃಪಣಂ ಮಾನುಶೋಚಂತ್ಯಾ ದೀನಯಾ ಕಿಂ ಕರಿಷ್ಯತಿ ॥ ೫೩ ॥

ಕಾಮಂ ನಯತು ಮಾಂ ದೇವಃ ಕಿಮರ್ಧೇನಾತ್ಮನೋ ಹಿ ಮೇ ।
ದೀನೇನ ಜೀವತಾ ದುಃಖಮನೇನ ವಿಧುರಾಯುಷಾ ॥ ೫೪ ॥

ಕಥಂ ತ್ವಜಾತಪಕ್ಷಾಂಸ್ತಾನ್ಮಾತೃಹೀನಾನ್ಬಿಭರ್ಮ್ಯಹಮ್ ।
ಮಂದಭಾಗ್ಯಾಃ ಪ್ರತೀಕ್ಷಂತೇ ನೀಡೇ ಮೇ ಮಾತರಂ ಪ್ರಜಾಃ ॥ ೫೫ ॥

ಏವಂ ಕುಲಿಂಗಂ ವಿಲಪಂತಮಾರಾತ್
ಪ್ರಿಯಾವಿಯೋಗಾತುರಮಶ್ರುಕಂಠಮ್ ।
ಸ ಏವ ತಂ ಶಾಕುನಿಕಃ ಶರೇಣ
ವಿವ್ಯಾಧ ಕಾಲಪ್ರಹಿತೋ ವಿಲೀನಃ ॥ ೫೬ ॥

ಏವಂ ಯೂಯಮಪಶ್ಯಂತ್ಯ ಆತ್ಮಾಪಾಯಮಬುದ್ಧಯಃ ।
ನೈನಂ ಪ್ರಾಪ್ಸ್ಯಥ ಶೋಚಂತ್ಯಃ ಪತಿಂ ವರ್ಷಶತೈರಪಿ ॥ ೫೭ ॥

ಹಿರಣ್ಯಕಶಿಪುರುವಾಚ

ಬಾಲ ಏವಂ ಪ್ರವದತಿ ಸರ್ವೇ ವಿಸ್ಮಿತಚೇತಸಃ ।
ಜ್ಞಾತಯೋ ಮೇನಿರೇ ಸರ್ವಮನಿತ್ಯಮಯಥೋತ್ಥಿತಮ್ ॥ ೫೮ ॥

ಯಮ ಏತದುಪಾಖ್ಯಾಯ ತತ್ರೈವಾಂತರಧೀಯತ ।
ಜ್ಞಾತಯೋಽಪಿ ಸುಯಜ್ಞಸ್ಯ ಚಕ್ರುರ್ಯತ್ಸಾಂಪರಾಯಿಕಮ್ ॥ ೫೯ ॥

ಅತಃ ಶೋಚತ ಮಾ ಯೂಯಂ ಪರಂ ಚಾತ್ಮಾನಮೇವ ಚ ।
ಕ ಆತ್ಮಾ ಕಃ ಪರೋ ವಾತ್ರ ಸ್ವೀಯಃ ಪಾರಕ್ಯ ಏವ ವಾ ।
ಸ್ವಪರಾಭಿನಿವೇಶೇನ ವಿನಾಜ್ಞಾನೇನ ದೇಹಿನಾಮ್ ॥ ೬೦ ॥

ಹೆಣ್ಣುಹಕ್ಕಿಯನ್ನು ಶೀಘ್ರವಾಗಿ ಬಲೆಯಲ್ಲಿ ಹಿಡಿದು ಬಿಟ್ಟನು. ॥ ೫೧ ॥ ಅದು ಕಾಲವಶದಿಂದ ಬಲೆಯಲ್ಲಿ ಸಿಕ್ಕಿಹಾಕಿಕೊಂಡು ಒದ್ದಾಡತೊಡಗಿತು. ತನ್ನ ಮಡದಿಯ ಆ ವಿಪತ್ತನ್ನು ಕಂಡು ಗಂಡು ಹಕ್ಕಿಗೆ ಅಪಾರವಾದ ಶೋಕವುಂಟಾಯಿತು. ಆ ಬಡಪಾಯಿಗೆ ಅದನ್ನು ಬಿಡಿಸಲಾಗದಿದ್ದರೂ, ಸ್ನೇಹವಶದಿಂದ ಆ ಹೆಣ್ಣುಹಕ್ಕಿಗಾಗಿ ವಿಲಾಪಿಸತೊಡಗಿತು. ॥ ೫೨ ॥ ಈ ವಿಧಾತನು ಎಲ್ಲವನ್ನೂ ಮಾಡಬಲ್ಲನು, ಆದರೆ ಇವನು ಅತ್ಯಂತ ನಿರ್ದಯಿಯು! ನನ್ನ ಸಹಚರಿಯು ಮೊದಲನೆಯದಾಗಿ ಹೆಂಗಸು, ಎರಡನೆಯದಾಗಿ ಭಾಗ್ಯಹೀನನಾದ ನನ್ನ ಕುರಿತು ಶೋಕಿಸುತ್ತಾ ತುಂಬಾ ದೀನತೆಯಿಂದ ಒದ್ದಾಡುತ್ತಿರುವಳು. ಈ ಬಡಪಾಯಿಯನ್ನು ಹೀಗೆ ವಿಪತ್ತಿಗೆ ತಳ್ಳಿ, ಆ ವಿಧಿಗೆ ಏನು ಪ್ರಯೋಜನ? ॥ ೫೩ ॥ ಹಾಗೆ ಕಾರಣವಿಲ್ಲದೆ ಕಷ್ಟಕೊಡುವುದೇ ಈತನ ಇಚ್ಛೆ ಇದ್ದರೆ ನನ್ನನ್ನೇ ಎತ್ತಿಕೊಂಡು ಹೋಗಲಿ. ಇವಳಿಲ್ಲದೆ ನನ್ನ ಈ ದೀನತೆ, ದುಃಖದಿಂದ ತುಂಬಿರುವ ವಿಧುರ ಜೀವನದಿಂದ ಏನು ಮಾಡಲಿ? ॥ ೫೪ ॥ ಇನ್ನೂ ನನ್ನ ಮರಿಗಳ ರೆಕ್ಕೆಗಳೇ ಬಲಿತಿಲ್ಲ, ಈ ಮಡದಿಯು ಸತ್ತುಹೋದರೆ ತಬ್ಬಲಿಗಳಾದ ಆ ಮಕ್ಕಳನ್ನು ನಾನು ಹೇಗೆ ಸಾಕಲಿ? ಅಯ್ಯೋ ಪಾಪ! ಗೂಡಿನಲ್ಲಿ ಆ ನನ್ನ ಮರಿಗಳು ತಾಯಿಯ ದಾರಿಯನ್ನೇ ಎದುರು ನೋಡುತ್ತಿರಬಹುದು. ॥ ೫೫ ॥ ಹೀಗೆ ಆ ಪಕ್ಷಿಯು ಬಹಳ ವಿಧದಿಂದ ವಿಲಾಪಿಸತೊಡಗಿತು. ತನ್ನ ಸಂಗಾತಿಯ ವಿಯೋಗದಿಂದ ಅದು ಶೋಕದಲ್ಲಿ ಮುಳುಗಿಹೋಗಿತ್ತು. ಕಣ್ಣೀರಿನಿಂದ ಅದರ ಕಂಠ ಬಿಗಿದುಹೋಗಿತ್ತು. ಅಷ್ಟರಲ್ಲಿ ಕಾಲನಿಂದ ಪ್ರೇರಿತನಾದ ಅಲ್ಲೇ ಅಡಗಿಕೊಂಡಿದ್ದ ಆ ಬೇಟೆಗಾರನು ಅದರ ಮೇಲೆ ಬಲವಾದ ಬಾಣವನ್ನು ಬಿಟ್ಟು ಅದು ಅಲ್ಲೇ ಸತ್ತು ಉರುಳುವಂತೆ ಮಾಡಿದನು. ॥ ೫೬ ॥ ಮೂರ್ಖರಾದ ರಾಣಿಯರೇ! ನಿಮ್ಮದೂ ಇದೇ ಸ್ಥಿತಿಯಾಗುವುದು. ನಿಮ್ಮ ಮೃತ್ಯುವು ನಿಮಗೆ ಕಂಡುಬರುತ್ತಿಲ್ಲ, ಅದಕ್ಕಾಗಿ ಗೋಳಾಡುತ್ತಿರುವಿರಿ! ನೀವುಗಳು ಹೀಗೆ ನೂರು ವರ್ಷಗಳವರೆಗೆ ಶೋಕದಿಂದ ಎದೆಬಡಿದುಕೊಂಡರೂ ಇವನನ್ನು ಪಡೆಯಲಾರಿರಿ. ॥ ೫೭ ॥

ಹಿರಣ್ಯಕಶಿಪು ಹೇಳಿದನು – ಆ ಚಿಕ್ಕ ಹುಡುಗನ ಇಂತಹ ಜ್ಞಾನಪೂರ್ಣ ಮಾತುಗಳನ್ನು ಕೇಳಿ ಎಲ್ಲರೂ ಆಶ್ಚರ್ಯಚಕಿತರಾದರು. ಉಶೀನರ ನರೇಶನ ಬಂಧು-ಬಾಂಧವರೂ ಹಾಗೂ ಹೆಂಡಿರುಗಳೂ – ಸಮಸ್ತ ಸಂಸಾರವೂ ಮತ್ತು ಸುಖ-ದುಃಖಗಳು ಅನಿತ್ಯವಾಗಿ ಮಿಥ್ಯೆಯಾಗಿವೆ ಎಂಬ ಮಾತನ್ನು ಅರಿತುಕೊಂಡರು. ॥ ೫೮ ॥ ಯಮರಾಜನು ಈ ಆಖ್ಯಾನವನ್ನು ಹೇಳಿ ಅಲ್ಲೇ ಅಂತರ್ಧಾನನಾದನು. ಬಂಧು-ಬಾಂಧವರೂ ಕೂಡ ಸುಯಜ್ಞನ ಅಂತ್ಯೇಷ್ಟಿಕ್ರಿಯೆಗಳನ್ನು ನಡೆಸಿದರು. ॥ ೫೯ ॥ ಅದಕ್ಕಾಗಿ ನೀವುಗಳೂ ತನಗಾಗಿ ಅಥವಾ ಇತರರಿಗಾಗಿ ಶೋಕ ಮಾಡಬೇಡಿರಿ. ಈ ಪ್ರಪಂಚದಲ್ಲಿ ಆತ್ಮನು ಯಾರು ಮತ್ತು ಅದರಿಂದ ಭಿನ್ನವಾದವನು ಯಾರು? ಸ್ವಕೀಯನು ಯಾರು – ಪರಕೀಯನು ಯಾರು? ಪ್ರಾಣಿಗಳಿಗೆ ಅಜ್ಞಾನದಿಂದಲೇ ಈ ತನ್ನವರು –ಪರಕೀಯರು ಎಂಬ ದುರಾಗ್ರಹವು ಉಂಟಾಗಿದೆ. ಅಜ್ಞಾನವಲ್ಲದೆ ಈ ಭೇದ-ಬುದ್ಧಿಗೆ ಬೇರೆ ಯಾವುದೇ ಕಾರಣವಿಲ್ಲ. ॥ ೬೦ ॥

ನಾರದ ಉವಾಚ

ಇತಿ ದೈತ್ಯಪತೇರ್ವಾಕ್ಯಂ ದಿತಿರಾಕರ್ಣ್ಯ ಸಸ್ನುಷಾ ।
ಪುತ್ರಶೋಕಂ ಕ್ಷಣಾತ್ತ್ಯಕ್ತ್ವಾ ತತ್ತ್ವೇ ಚಿತ್ತಮಧಾರಯತ್ ॥ ೬೧ ॥

ನಾರದರು ಹೇಳಿದರು – ಯುಧಿಷ್ಠಿರನೇ! ತನ್ನ ಸೊಸೆಯೊಂದಿಗೆ ದಿತಿಯು ಹಿರಣ್ಯಕಶಿಪುವಿನ ಈ ಮಾತುಗಳನ್ನು ಕೇಳಿ ಒಡನೆಯೇ ಪುತ್ರಶೋಕವನ್ನು ತ್ಯಜಿಸಿಬಿಟ್ಟಳು ಹಾಗೂ ತನ್ನ ಚಿತ್ತವನ್ನು ಪರಮ ತತ್ತ್ವಸ್ವರೂಪನಾದ ಪರಮಾತ್ಮನಲ್ಲಿ ತೊಡಗಿಸಿದಳು. ॥ ೬೧ ॥

ಎರಡನೆಯ ಅಧ್ಯಾಯವು ಮುಗಿಯಿತು. ॥ ೨ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಸಪ್ತಮ ಸ್ಕಂಧೇ
ದಿತಿಶೋಕಾಪನಯನಂ ನಾಮ ದ್ವಿತೀಯೋಽಧ್ಯಾಯಃ ॥ ೨ ॥

ಮೂರನೆಯ ಅಧ್ಯಾಯ

ಹಿರಣ್ಯಕಶಿಪುವಿನ ತಪಸ್ಸು ಮತ್ತು ವರಪ್ರಾಪ್ತಿಯು

ನಾರದ ಉವಾಚ

ಹಿರಣ್ಯಕಶಿಪೂ ರಾಜನ್ ಅಜೇಯಮಜರಾಮರಮ್ ।
ಆತ್ಮಾನಮಪ್ರತಿದ್ವಂದ್ವಮೇಕರಾಜಂ ವ್ಯಧಿತ್ಸತ ॥ ೧ ॥

ಸ ತೇಪೇ ಮಂದರದ್ರೋಣ್ಯಾಂ ತಪಃ ಪರಮದಾರುಣಮ್ ।
ಊರ್ಧ್ವಬಾಹುರ್ನಭೋದೃಷ್ಟಿಃ ಪಾದಾಂಗುಷ್ಠಾಶ್ರಿತಾವನಿಃ ॥ ೨ ॥

ಜಟಾದೀಧಿತಿಭೀ ರೇಜೇ ಸಂವರ್ತಾರ್ಕ ಇವಾಂಶುಭಿಃ ।
ತಸ್ಮಿಂಸ್ತಪಸ್ತಪ್ಯಮಾನೇ ದೇವಾಃ ಸ್ಥಾನಾನಿ ಭೇಜಿರೇ ॥ ೩ ॥

ತಸ್ಯ ಮೂರ್ಧ್ನಃ ಸಮುದ್ಭೂತಃ ಸಧೂಮೋಽಗ್ನಿಸ್ತಪೋಮಯಃ ।
ತಿರ್ಯಗೂರ್ಧ್ವಮಧೋಲೋಕಾನತಪದ್ವಿಷ್ವಗೀರಿತಃ ॥ ೪ ॥

ಚುಕ್ಷುಭುರ್ನದ್ಯುದನ್ವಂತಃ ಸದ್ವೀಪಾದ್ರಿಶ್ಚಚಾಲ ಭೂಃ ।
ನಿಪೇತುಃ ಸಗ್ರಹಾಸ್ತಾರಾ ಜಜ್ವಲುಶ್ಚ ದಿಶೋ ದಶ ॥ ೫ ॥

ತೇನ ತಪ್ತಾ ದಿವಂ ತ್ಯಕ್ತ್ವಾ ಬ್ರಹ್ಮಲೋಕಂ ಯಯುಃ ಸುರಾಃ ।
ಧಾತ್ರೇ ವಿಜ್ಞಾಪಯಾಮಾಸುರ್ದೇವದೇವ ಜಗತ್ಪತೇ ॥ ೬ ॥

ದೈತ್ಯೇಂದ್ರತಪಸಾ ತಪ್ತಾ ದಿವಿ ಸ್ಥಾತುಂ ನ ಶಕ್ನುಮಃ ।
ತಸ್ಯ ಚೋಪಶಮಂ ಭೂಮನ್ವಿಧೇಹಿ ಯದಿ ಮನ್ಯಸೇ ।
ಲೋಕಾ ನ ಯಾವನ್ನಂಕ್ಷ್ಯಂತಿ ಬಲಿಹಾರಾಸ್ತವಾಭಿಭೂಃ ॥ ೮ ॥

ನಾರದರು ಹೇಳುತ್ತಾರೆ – ಎಲೈ ಯುಧಿಷ್ಠಿರನೇ! ಆ ಹಿರಣ್ಯಕಶಿಪುವು ತಾನು ಅಜೇಯನಾಗಬೇಕು, ಮುಪ್ಪು-ಸಾವುಗಳಿಲ್ಲದವನಾಗಬೇಕು. ಇಡೀ ಜಗತ್ತಿಗೆ ಏಕಚ್ಛತ್ರಾಧಿಪತಿಯಾಗಬೇಕು. ತನಗೆ ಯಾರೂ ಎದುರಾಳಿಗಳು ಇರದಂತೆ ಮಾಡಿಕೊಳ್ಳಬೇಕು – ಎಂದು ಸಂಕಲ್ಪಮಾಡಿದನು. ॥ ೧ ॥ ಅದಕ್ಕಾಗಿ ಅವನು ಮಂದರ ಪರ್ವತದ ತಪ್ಪಲಿಗೆ ಹೋಗಿ ಅಲ್ಲಿ ಅತ್ಯಂತ ದಾರುಣವಾದ ತಪಸ್ಸನ್ನು ಆಚರಿಸತೊಡಗಿದನು. ಕೈಗಳನ್ನು ಮೇಲಕ್ಕೆ ಎತ್ತಿಕೊಂಡು ಆಕಾಶದ ಕಡೆಗೆ ನೋಡುತ್ತಾ ಕಾಲಿನ ಹೆಬ್ಬೆರಳಿನ ಬಲದಿಂದ ಭೂಮಿಯ ಮೇಲೆ ನಿಂತುಕೊಂಡನು. ॥ ೨ ॥ ಆಗ ಅವನ ಜಟೆಗಳು ಪ್ರಳಯಕಾಲದ ಸೂರ್ಯಕಿರಣಗಳಂತೆ ಹೊಳೆಯುತ್ತಿದ್ದುವು. ಅವನು ಹೀಗೆ ತಪಸ್ಸಿನಲ್ಲಿ ನಿರತನಾದಾಗ ದೇವತೆಗಳು ಹಿಂದಿನಂತೆ ತಮ್ಮ-ತಮ್ಮ ಸ್ಥಾನಗಳಲ್ಲಿ ನೆಲೆಗೊಂಡರು. ॥ ೩ ॥ ಬಹಳ ಕಾಲದವರೆಗೆ ತಪಸ್ಸು ಮಾಡಿದಾಗ ಅವನ ತಲೆಯಿಂದ ಹೊಗೆಯೊಂದಿಗೆ ತಪೋಜ್ವಾಲೆಯು ಹೊರಟು ಎಲ್ಲ ಕಡೆಗಳಲ್ಲಿಯೂ ಹರಡಿಕೊಂಡಿತು ಮತ್ತು ಮೇಲೂ, ಕೆಳಗೂ, ಅಕ್ಕಪಕ್ಕಗಳಲ್ಲಿಯೂ ಇದ್ದ ಲೋಕಗಳನ್ನು ಸುಡಲು ತೊಡಗಿತು. ॥ ೪ ॥ ಅದರ ಜ್ವಾಲೆಯಿಂದ ನದಿಗಳೂ, ಸಮುದ್ರಗಳೂ ಕುದಿಯತೊಡಗಿದವು. ದ್ವೀಪ ಮತ್ತು ಪರ್ವತಗಳಿಂದೊಡಗೂಡಿದ ಭೂಮಿಯು ನಡುಗತೊಡಗಿತು. ಗ್ರಹ-ನಕ್ಷತ್ರಗಳು ಉದುರಿಬಿದ್ದುವು. ದಶದಿಕ್ಕುಗಳೂ ಉರಿಯತೊಡಗಿದವು. ॥ ೫ ॥

ಹಿರಣ್ಯಕಶಿಪುವಿನ ಆ ತಪೋಮಯ ಅಗ್ನಿಜ್ವಾಲೆಗಳಿಂದ ಸ್ವರ್ಗದ ದೇವತೆಗಳೂ ಉರಿಯತೊಡಗಿದರು. ಅವರೆಲ್ಲರೂ ಗಾಬರಿಗೊಂಡು ಸ್ವರ್ಗದಿಂದ ಬ್ರಹ್ಮಲೋಕಕ್ಕೆ ಹೋಗಿ ಬ್ರಹ್ಮದೇವರಲ್ಲಿ ಪ್ರಾರ್ಥಿಸತೊಡಗಿದರು. ಓ ದೇವತೆಗಳಿಗೂ ಆರಾಧ್ಯದೇವನಾದ ಜಗತ್ಪತಿಯಾದ ಬ್ರಹ್ಮದೇವರೇ! ನಾವುಗಳು ಹಿರಣ್ಯಕಶಿಪುವಿನ ತಪೋಜ್ವಾಲೆಗಳಿಂದ ಬೆಂದುಹೋಗುತ್ತಿದ್ದೇವೆ. ಈಗ ನಾವು ಸ್ವರ್ಗದಲ್ಲಿ ಇರಲಾರೆವು. ಓ ಅನಂತನೇ ಸರ್ವಾಧ್ಯಕ್ಷನೇ! ನಿನಗೆ ಉಚಿತವೆನಿಸಿದರೆ ನಿನ್ನ ಸೇವೆ ಮಾಡುವ ಜನತೆಯು ನಾಶವಾಗುವ ಮೊದಲೇ ಆ ಜ್ವಾಲೆಯನ್ನು ಶಾಂತಗೊಳಿಸು. ॥ ೬-೮ ॥

ತಸ್ಯಾಯಂ ಕಿಲ ಸಂಕಲ್ಪಶ್ಚರತೋ ದುಶ್ಚರಂ ತಪಃ ।
ಶ್ರೂಯತಾಂ ಕಿಂ ನ ವಿದಿತಸ್ತವಾಥಾಪಿ ನಿವೇದಿತಃ ॥ ೮ ॥

ಸೃಷ್ಟ್ವಾ ಚರಾಚರಮಿದಂ ತಪೋಯೋಗಸಮಾಧಿನಾ ।
ಅಧ್ಯಾಸ್ತೇ ಸರ್ವಧಿಷ್ಣ್ಯೇಭ್ಯಃ ಪರಮೇಷ್ಠೀ ನಿಜಾಸನಮ್ ॥ ೯ ॥

ತದಹಂ ವರ್ಧಮಾನೇನ ತಪೋಯೋಗಸಮಾಧಿನಾ ।
ಕಾಲಾತ್ಮನೋಶ್ಚ ನಿತ್ಯತ್ವಾತ್ಸಾಧಯಿಷ್ಯೇ ತಥಾಽಽತ್ಮನಃ ॥ ೧೦ ॥

ಅನ್ಯಥೇದಂ ವಿಧಾಸ್ಯೇಽಹಮಯಥಾಪೂರ್ವಮೋಜಸಾ ।
ಕಿಮನ್ಯೈಃ ಕಾಲನಿರ್ಧೂತೈಃ ಕಲ್ಪಾಂತೇ ವೈಷ್ಣವಾದಿಭಿಃ ॥ ೧೧ ॥

ಇತಿ ಶುಶ್ರುಮ ನಿರ್ಬಂಧಂ ತಪಃ ಪರಮಮಾಸ್ಥಿತಃ ।
ವಿಧತ್ಸ್ವಾನಂತರಂ ಯುಕ್ತಂ ಸ್ವಯಂ ತ್ರಿಭುವನೇಶ್ವರ ॥ ೧೨ ॥

ತವಾಸನಂ ದ್ವಿಜಗವಾಂ ಪಾರಮೇಷ್ಠ್ಯಂ ಜಗತ್ಪತೇ ।
ಭವಾಯ ಶ್ರೇಯಸೇ ಭೂತ್ಯೈ ಕ್ಷೇಮಾಯ ವಿಜಯಾಯ ಚ ॥ ೧೩ ॥

ಇತಿ ವಿಜ್ಞಾಪಿತೋ ದೇವೈರ್ಭಗವಾನಾತ್ಮಭೂರ್ನೃಪ ।
ಪರಿತೋ ಭೃಗುದಕ್ಷಾದ್ಯೈರ್ಯಯೌ ದೈತ್ಯೇಶ್ವರಾಶ್ರಮಮ್ ॥ ೧೪ ॥

ನ ದದರ್ಶ ಪ್ರತಿಚ್ಛನ್ನಂ ವಲ್ಮೀಕತೃಣಕೀಚಕೈಃ ।
ಪಿಪೀಲಿಕಾಭಿರಾಚೀರ್ಣಂ ಮೇದಸ್ತ್ವಙ್ಮಾಂಸಶೋಣಿತಮ್ ॥ ೧೫ ॥

ತಪಂತಂ ತಪಸಾ ಲೋಕಾನ್ಯಥಾಭ್ರಾಪಿಹಿತಂ ರವಿಮ್ ।
ವಿಲಕ್ಷ್ಯ ವಿಸ್ಮಿತಃ ಪ್ರಾಹ ಪ್ರಹಸನ್ ಹಂಸವಾಹನಃ ॥ ೧೬ ॥

ಬ್ರಹ್ಮೋವಾಚ

ಉತ್ತಿಷ್ಠೋತ್ತಿಷ್ಠ ಭದ್ರಂ ತೇ ತಪಃಸಿದ್ಧೋಽಸಿ ಕಾಶ್ಯಪ ।
ವರದೋಽಹಮನುಪ್ರಾಪ್ತೋ ವ್ರಿಯತಾಮೀಪ್ಸಿತೋ ವರಃ ॥ ೧೭ ॥

ಎಲೈ ಭಗವಂತನೇ! ನೀನು ಎಲ್ಲವನ್ನೂ ಬಲ್ಲವನು. ಹೀಗಿದ್ದರೂ ನಾವು ನಮ್ಮ ಕಡೆಯಿಂದ – ಅವನು ಯಾವ ಅಭಿಪ್ರಾಯದಿಂದ ತಪಸ್ಸನ್ನು ಮಾಡುತ್ತಿದ್ದಾನೆಂಬುದನ್ನು ನಿವೇದಿಸಿಕೊಳ್ಳುವೆವು, ಕೇಳೋಣವಾಗಲಿ. 'ಬ್ರಹ್ಮದೇವರು ತಮ್ಮ ತಪಸ್ಸು ಮತ್ತು ಯೋಗದ ಪ್ರಭಾವದಿಂದ ಈ ಚರಾಚರ ಜಗತ್ತನ್ನು ಸೃಷ್ಟಿಸಿ ಎಲ್ಲ ಲೋಕಗಳಿಗೂ ಮೇಲಿನ ಸತ್ಯಲೋಕದಲ್ಲಿ ವಿರಾಜಿಸುತ್ತಿರುವಂತೆ ನಾನೂ ಕೂಡ ನನ್ನ ಉಗ್ರವಾದ ತಪಸ್ಸು ಮತ್ತು ಯೋಗದ ಪ್ರಭಾವದಿಂದ ಅದೇ ಪದವಿಯನ್ನು ಹಾಗೂ ಸ್ಥಾನವನ್ನು ಪಡೆದುಕೊಳ್ಳುವೆನು. ಒಂದು ಜನ್ಮದಲ್ಲಿ ಆಗದಿದ್ದರೆ ಅನೇಕ ಜನ್ಮಗಳಲ್ಲಿ, ಒಂದು ಯುಗದಲ್ಲಾಗದಿದ್ದರೆ ಅನೇಕ ಯುಗಗಳಲ್ಲಿ ಅದನ್ನು ಗಳಿಸಿಯೇ ಕೊಳ್ಳುವೆನು. ಏಕೆಂದರೆ ಸಮಯವು ಅಸೀಮವಾಗಿದೆ ಹಾಗೂ ಆತ್ಮನು ನಿತ್ಯನಾಗಿದ್ದಾನೆ ॥ ೮-೧೦ ॥ ನನ್ನ ತಪಸ್ಸಿನ ಶಕ್ತಿಯಿಂದ ನಾನು ಪಾಪ-ಪುಣ್ಯಗಳ ನಿಯಮಗಳನ್ನು ತಲೆಕೆಳಗಾಗಿಸುವೆನು. ಈ ಜಗತ್ತಿನಲ್ಲಿ ಹಿಂದೆ ಎಂದೂ ಇಲ್ಲದ ಬದಲಾವಣೆಯನ್ನು ಮಾಡಿ ಬಿಡುವೆನು. ವೈಷ್ಣವಾದಿ ಲೋಕಗಳಲ್ಲಾದರೋ ಏನು ಮಹಿಮೆಯಿದ್ದೀತು? ಕಲ್ಪದ ಕೊನೆಯಲ್ಲಿ ಅವೂ ಕೂಡ ಕಾಲದ ದವಡೆಯಲ್ಲಿ ಸೇರಿ ಹೋಗುವುವು.* ॥ ೧೧ ॥ ಇಂತಹ ಹಟವನ್ನು ತೊಟ್ಟುಕೊಂಡೇ ಅವನು ತಪಸ್ಸು ಮಾಡುತ್ತಿದ್ದಾನೆ ಎಂದು ನಾವು ಕೇಳಿದ್ದೇವೆ. ನೀವು ಮೂರುಲೋಕಗಳಿಗೂ ಒಡೆಯರಾಗಿದ್ದೀರಿ. ಈಗ ತಮಗೆ ಉಚಿತವಾಗಿ ಕಂಡಂತೆ ಮಾಡಿರಿ. ॥ ೧೨ ॥ ಬ್ರಹ್ಮದೇವರೇ! ತಮ್ಮ ಈ ಸರ್ವಶ್ರೇಷ್ಠವಾದ ಪರಮೇಷ್ಠಿಪದವು ಬ್ರಾಹ್ಮಣರು ಹಾಗೂ ಗೋವುಗಳ ವೃದ್ಧಿ, ಕಲ್ಯಾಣ, ವಿಭೂತಿ, ಕುಶಲ ಮತ್ತು ವಿಜಯಕ್ಕಾಗಿಯೇ ಇದೆ. ಇದು ಎಲ್ಲಾದರೂ ಹಿರಣ್ಯಕಶಿಪುವಿನ ಕೈಗೆ ಸಿಕ್ಕಿದರೆ ಸಜ್ಜನರ ಮೇಲೆ ಸಂಕಟದ ಪರ್ವತವೇ ಬಿದ್ದಂತಾಗುವುದು. ॥ ೧೩ ॥

ಯುಧಿಷ್ಠಿರನೇ! ದೇವತೆಗಳು ಭಗವಾನ್ ಬ್ರಹ್ಮದೇವರಲ್ಲಿ ಹೀಗೆ ನಿವೇದಿಸಿಕೊಂಡಾಗ ಅವರು ಭೃಗು, ದಕ್ಷರೇ ಮುಂತಾದ ಪ್ರಜಾಪತಿಗಳೊಡನೆ ಹಿರಣ್ಯಕಶಿಪುವಿನ ಆಶ್ರಮಕ್ಕೆ ಹೋದರು. ॥ ೧೪ ॥ ಅಲ್ಲಿಗೆ ಹೋದಾಗ ಅವರಿಗೆ ಮೊದಲು ಅವನು ಕಾಣಸಲೇ ಇಲ್ಲ, ಏಕೆಂದರೆ, ಹುತ್ತದಿಂದ ಮತ್ತು ಹುಲ್ಲು-ಬಿದಿರು ಮೆಳೆಯಿಂದ ಅವನ ದೇಹವು ಮುಚ್ಚಿಹೋಗಿತ್ತು. ಇರುವೆಗಳು ಅವನ ದೇಹದ ಮೇದಸ್ಸು, ಚರ್ಮ, ಮಾಂಸ, ರಕ್ತ ಇವೆಲ್ಲವನ್ನು ತಿಂದು ಬಿಟ್ಟಿದ್ದುವು. ॥ ೧೫ ॥ ಮೋಡಗಳಿಂದ ಮುಚ್ಚಲ್ಪಟ್ಟ ಸೂರ್ಯನಂತೆ ಅವನು ತನ್ನ ತಪಸ್ಸಿನ ತೇಜದಿಂದ ಲೋಕಗಳನ್ನು ಸುಡುತ್ತಿದ್ದನು. ಅವನನ್ನು ನೋಡಿ, ಬ್ರಹ್ಮದೇವರೂ ಕೂಡ ವಿಸ್ಮಿತರಾಗಿ, ನಗುತ್ತಾ ಇಂತೆಂದರು. ॥ ೧೬ ॥

ಬ್ರಹ್ಮದೇವರು ಹೇಳಿದರು – ವತ್ಸ! ಹಿರಣ್ಯಕಶಿಪುವೇ! ಏಳು; ಮೇಲೇಳು! ನಿನಗೆ ಮಂಗಳವಾಗಲಿ. ಕಶ್ಯಪಪುತ್ರನೇ! ಈಗ ನಿನ್ನ ತಪಸ್ಸು ಸಿದ್ಧಿಸಿತು. ನಾನು ನಿನಗೆ ವರವನ್ನು ಕೊಡಲು ಬಂದಿರುವೆನು. ನಿನಗೆ ಇಷ್ಟವಾದ ವರವನ್ನು ಕೇಳಿಕೋ. ॥ ೧೭ ॥

* ವೈಕುಂಠಾದಿ ವೈಷ್ಣವ ನಿತ್ಯಧಾಮಗಳು ಅವಿನಾಶಿಯಾಗಿದ್ದರೂ, ಹಿರಣ್ಯಕಶಿಪುವು ತನ್ನ ಆಸುರೀ ಬುದ್ಧಿಯಿಂದ ಅವನ್ನು ಕಲ್ಪದ ಕೊನೆಯಲ್ಲಿ ನಾಶವಾಗುವುವು ಎಂದೇ ತಿಳಿಯುತ್ತಿದ್ದನು. ತಾಮಸೀ ಬುದ್ಧಿಗೆ ಹೀಗೆ ಎಲ್ಲವೂ ವಿಪರೀತವೇ ಕಂಡುಬರುತ್ತದೆ.

ಅದ್ರಾಕ್ಷಮಹಮೇತತ್ತೇ ಹೃತ್ಸಾರಂ ಮಹದದ್ಭುತಮ್ ।
ದಂಶಭಕ್ಷಿತದೇಹಸ್ಯ ಪ್ರಾಣಾ ಹ್ಯಸ್ಥಿಷು ಶೇರತೇ ॥ ೧೮ ॥

ನೈತತ್ಪೂರ್ವರ್ಷಯಶ್ಚಕ್ರುರ್ನ ಕರಿಷ್ಯಂತಿ ಚಾಪರೇ ।
ನಿರಂಬುರ್ಧಾರಯೇತ್ಪ್ರಾಣಾನ್ಕೋ ವೈ ದಿವ್ಯಸಮಾಃ ಶತಮ್ ॥ ೧೯ ॥

ವ್ಯವಸಾಯೇನ ತೇಽನೇನ ದುಷ್ಕರೇಣ ಮನಸ್ವಿನಾಮ್ ।
ತಪೋನಿಷ್ಠೇನ ಭವತಾ ಜಿತೋಽಹಂ ದಿತಿನಂದನ ॥ ೨೦ ॥

ತತಸ್ತ ಆಶಿಷಃ ಸರ್ವಾ ದದಾಮ್ಯ ಸುರಪುಂಗವ ।
ಮರ್ತ್ಯಸ್ಯ ತೇ ಅಮರ್ತ್ಯಸ್ಯ ದರ್ಶನಂ ನಾಫಲಂ ಮಮ ॥ ೨೧ ॥

ನಾರದ ಉವಾಚ

ಇತ್ಯುಕ್ತ್ವಾಽಽದಿಭವೋ ದೇವೋ ಭಕ್ಷಿತಾಂಗಂ ಪಿಪೀಲಿಕೈಃ ।
ಕಮಂಡಲುಜಲೇನೌಕ್ಷದ್ದಿವ್ಯೇನಾಮೋಘರಾಧಸಾ ॥ ೨೨ ॥

ಸ ತತ್ಕೀಚಕವಲ್ಮೀಕಾತ್ಸಹ ಓಜೋಬಲಾನ್ವಿತಃ ।
ಸರ್ವಾವಯವಸಂಪನ್ನೋ ವಜ್ರಸಂಹನನೋ ಯುವಾ ।
ಉತ್ಥಿತಸ್ತಪ್ತಹೇಮಾಭೋ ವಿಭಾವಸುರಿವೈಧಸಃ ॥ ೨೩ ॥

ಸ ನಿರೀಕ್ಷ್ಯಾಂಬರೇ ದೇವಂ ಹಂಸವಾಹಮುಪಸ್ಥಿತಮ್ ।
ನನಾಮ ಶಿರಸಾ ಭೂಮೌ ತದ್ದರ್ಶನಮಹೋತ್ಸವಃ ॥ ೨೪ ॥

ಉತ್ಥಾಯ ಪ್ರಾಂಜಲಿಃ ಪ್ರಹ್ವ ಈಕ್ಷಮಾಣೋ ದೃಶಾ ವಿಭುಮ್ ।
ಹರ್ಷಾಶ್ರುಪುಲಕೋದ್ಭೇದೋ ಗಿರಾ ಗದ್ಗದಯಾಗೃಣಾತ್ ॥ ೨೫ ॥

ಹಿರಣ್ಯಕಶಿಪುರುವಾಚ

ಕಲ್ಪಾಂತೇ ಕಾಲಸೃಷ್ಟೇನ ಯೋಽಂಧೇನ ತಮಸಾಽಽವೃತಮ್ ।
ಅಭಿವ್ಯನಗ್ಜಗದಿದಂ ಸ್ವಯಂಜ್ಯೋತಿಃ ಸ್ವರೋಚಿಷಾ ॥ ೨೬ ॥

ಆತ್ಮನಾ ತ್ರಿವೃತಾ ಚೇದಂ ಸೃಜತ್ಯವತಿ ಲುಂಪತಿ ।
ರಜಃಸತ್ತ್ವತಮೋಧಾಮ್ನೇ ಪರಾಯ ಮಹತೇ ನಮಃ ॥ ೨೭ ॥

ನಾನು ನಿನ್ನ ಹೃದಯದ ಅದ್ಭುತವಾದ ಬಲವನ್ನು ನೋಡಿದೆ. ಅಯ್ಯೋ! ಇರುವೆ-ಸೊಳ್ಳೆಗಳು ನಿನ್ನ ದೇಹವನ್ನು ತಿಂದುಬಿಟ್ಟಿವೆ. ಆದರೂ ನಿನ್ನ ಪ್ರಾಣಗಳು ಅಸ್ಥಿಗತವಾಗಿ ಉಳಿದಿವೆ. ॥ ೧೮ ॥ ಇಂತಹ ಕಠಿಣವಾದ ತಪಸ್ಸನ್ನು ಹಿಂದೆ ಯಾವ ಋಷಿಯೂ ಮಾಡಿಲ್ಲ, ಮುಂದೆ ಯಾರೂ ಮಾಡಲಾರರು. ದೇವತೆಗಳ ದಿವ್ಯವಾದ ನೂರು ವರ್ಷಗಳವರೆಗೆ ನೀರೂ ಕುಡಿಯದೆ ಜೀವಿಸಿ ಯಾರು ತಾನೇ ಇರಬಲ್ಲರು? ॥ ೧೯ ॥ ವತ್ಸ, ಹಿರಣ್ಯಕಶಿಪು! ನಿನ್ನ ಇಂತಹ ಕಾರ್ಯವನ್ನು ದೊಡ್ಡ-ದೊಡ್ಡ ಧೀರರು ಮಾತ್ರ ಕಷ್ಟದಿಂದ ಮಾಡಬಲ್ಲರು. ನೀನು ಈ ತಪೋನಿಷ್ಠೆಯಿಂದ ನನ್ನನ್ನು ನಿನ್ನ ವಶವಾಗಿಸಿಕೊಂಡು ಬಿಟ್ಟಿರುವೆ. ॥ ೨೦ ॥ ದೈತ್ಯಶಿರೋಮಣಿಯೇ! ಇದರಿಂದ ಪ್ರಸನ್ನನಾದ ನಾನು ನೀನು ಬೇಡಿದ ವರವನ್ನು ಕೊಟ್ಟೇಬಿಡುವೆನು. ಸಾಯುವವನು ನೀನು, ಸಾಯದೇ ಇರುವ ಅಮರನು ನಾನು. ಆದ್ದರಿಂದ ನಿನಗಾದ ನನ್ನ ದರ್ಶನವು ನಿಷ್ಫಲವಾಗಲಾರದು. ॥ ೨೧ ॥

ನಾರದರು ಹೇಳುತ್ತಾರೆ – ಧರ್ಮನಂದನಾ! ಇಷ್ಟು ಹೇಳಿ ಬ್ರಹ್ಮದೇವರು – ಇರುವೆಗಳಿಂದ ತಿಂದಿರುವ ಅವನ ಶರೀರದ ಮೇಲೆ ತನ್ನ ಕಮಂಡಲುವಿನ ದಿವ್ಯವೂ, ಅಮೋಘವೂ ಆದ ಪ್ರಭಾವಶಾಲಿ ನೀರನ್ನು ಚಿಮುಕಿಸಿದರು. ॥ ೨೨ ॥ ■ ಜಲವನ್ನು ಪ್ರೋಕ್ಷಿಸುತ್ತಲೇ ಕಟ್ಟಿಗೆಯ ರಾಶಿಯಿಂದ ಬೆಂಕಿಯು ಉರಿದೆಳುವಂತೆ ಅವನು ಬಿದಿರುಮೆಳೆ ಮತ್ತು ಹುತ್ತದ ಮಣ್ಣಿನಿಂದ ಎದ್ದು ನಿಂತನು. ಆಗ ಅವನ ದೇಹವು ಎಲ್ಲ ಅವಯವಗಳಿಂದ ಪರಿಪೂರ್ಣವಾಗಿ ಬಲಿಷ್ಠವಾಗಿತ್ತು. ಇಂದ್ರಿಯಗಳಿಗೆ ಶಕ್ತಿಯು ಬಂದು, ಮನಸ್ಸು ಎಚ್ಚರಗೊಂಡಿತ್ತು. ಎಲ್ಲ ಅಂಗಾಂಗಗಳು ವಜ್ರದಂತೆ ಕಠೋರ ಹಾಗೂ ಕಾದ ಚಿನ್ನದಂತೆ ಥಳ-ಥಳಿಸುತ್ತಿದ್ದವು. ॥ ೨೩ ॥ ತನ್ನ ಮುಂದೆ ಅಂತರಿಕ್ಷದಲ್ಲಿ ಹಂಸವಾಹನರಾಗಿ ಬ್ರಹ್ಮದೇವರು ನಿಂತಿರುವುದನ್ನು ಅವನು ನೋಡಿ, ಅವನಿಗೆ ಬಹಳ ಆನಂದವಾಯಿತು. ತನ್ನ ಶಿರಸ್ಸನ್ನು ಭೂಮಿಯ ಮೇಲಿರಿಸಿ ಅವನು ಬ್ರಹ್ಮದೇವರಿಗೆ ನಮಸ್ಕಾರ ಮಾಡಿದನು. ॥ ೨೪ ॥ ಮತ್ತೆ ಅಂಜಲಿಬದ್ಧನಾಗಿ ವಿನಮ್ರಭಾವದಿಂದ ನಿಂತುಕೊಂಡು, ತುಂಬುಪ್ರೇಮದಿಂದ ತನ್ನ ಕಣ್ಣುಗಳನ್ನು ಮಿಟುಕಿಸದೆ ಅವನನ್ನು ನೋಡುತ್ತಾ, ಗದ್ಗದ ವಾಣಿಯಿಂದ ಸ್ತುತಿಸತೊಡಗಿದನು. ಆಗ ಅವನ ಕಣ್ಣುಗಳಿಂದ ಆನಂದಾಶ್ರುಗಳು ಹರಿಯುತ್ತಿದ್ದು, ಶರೀರವು ಪುಳಕಿತವಾಗಿತ್ತು. ॥ ೨೫ ॥

ಹಿರಣ್ಯಕಶಿಪು ಹೇಳಿದನು – ಕಲ್ಪಾಂತ್ಯದಲ್ಲಿ ಈ ಎಲ್ಲ ಸೃಷ್ಟಿಯು ಕಾಲನಿಂದ ಪ್ರೇರಿತವಾದ ತಮೋಗುಣದಿಂದ, ಘೋರ ಅಂಧಕಾರದಿಂದ ಮುಚ್ಚಿಹೋಗಿತ್ತು. ಆ ಸಮಯದಲ್ಲಿ ಸ್ವಯಂಪ್ರಕಾಶಸ್ವರೂಪನಾದ ನೀನೇ ನಿನ್ನ ತೇಜದಿಂದ ಪುನಃ ಇದನ್ನು ಪ್ರಕಟಿಸಿದೆ. ॥ ೨೬ ॥

ನೀನೇ ನಿನ್ನ ತ್ರಿಗುಣಮಯ ರೂಪದಿಂದ ಇದನ್ನು ರಚಿಸಿ, ರಕ್ಷಿಸಿ, ಸಂಹರಿಸುತ್ತಿರುವೆ. ನೀನೇ ಗುಣತ್ರಯಗಳಿಗೆ ಆಶ್ರಯನಾಗಿರುವೆ. ಎಲ್ಲರಿಗಿಂತಲೂ ಶ್ರೇಷ್ಠನೂ ದೊಡ್ಡವನೂ ನೀನೇ ಆಗಿರುವೆ. ಅಂತಹ ನಿನಗೆ ನಮಸ್ಕರಿಸುತ್ತೇನೆ. ॥ ೨೭ ॥

ನಮ ಆದ್ಯಾಯ ಬೀಜಾಯ ಜ್ಞಾನವಿಜ್ಞಾನಮೂರ್ತಯೇ ।
ಪ್ರಾಣೇಂದ್ರಿಯಮನೋಬುದ್ಧಿವಿಕಾರೈರ್ವ್ಯಕ್ತಿಮೀಯುಷೇ
॥ ೨೮ ॥

ತ್ವಮೀಶಿಷೇ ಜಗತಸ್ತಸ್ಥುಷಶ್ಚ
ಪ್ರಾಣೇನ ಮುಖ್ಯೇನ ಪತಿಃ ಪ್ರಜಾನಾಮ್ ।
ಚಿತ್ತಸ್ಯ ಚಿತ್ತೇರ್ಮನಇಂದ್ರಿಯಾಣಾಂ
ಪತಿರ್ಮಹಾನ್ಭೂತಗುಣಾಶಯೇಶಃ ॥ ೨೯ ॥

ತ್ವಂ ಸಪ್ತತಂತೂನ್ವಿತನೋಷಿ ತನ್ವಾ
ತ್ರಯ್ಯಾ ಚಾತುರ್ಹೋತ್ರಕವಿದ್ಯಯಾ ಚ ।
ತ್ವಮೇಕ ಆತ್ಮಾಽಽತ್ಮವತಾಮನಾದಿ-
ರನಂತಪಾರಃ ಕವಿರಂತರಾತ್ಮಾ ॥ ೩೦ ॥

ತ್ವಮೇವ ಕಾಲೋಽನಿಮಿಷೋ ಜನಾನಾ-
ಮಾಯುರ್ಲವಾದ್ಯಾವಯವೈಃ ಕ್ಷಿಣೋಷಿ ।
ಕೂಟಸ್ಥ ಆತ್ಮಾ ಪರಮೇಷ್ಠ್ಯಜೋ ಮಹಾಂ-
ಸ್ತ್ವಂ ಜೀವಲೋಕಸ್ಯ ಚ ಜೀವ ಆತ್ಮಾ ॥ ೩೧ ॥

ತ್ವತ್ತಃ ಪರಂ ನಾಪರಮಪ್ಯನೇಜ-
ದೇಜಚ್ಚ ಕಿಂಚಿದ್ವ್ಯತಿರಿಕ್ತಮಸ್ತಿ ।
ವಿದ್ಯಾಃ ಕಲಾಸ್ತೇ ತನವಶ್ಚ ಸರ್ವಾ
ಹಿರಣ್ಯಗರ್ಭೋಽಸಿ ಬೃಹತ್ತ್ರಿಪೃಷ್ಠಃ ॥ ೩೨ ॥

ವ್ಯಕ್ತಂ ವಿಭೋ ಸ್ಥೂಲಮಿದಂ ಶರೀರಂ
ಯೇನೇಂದ್ರಿಯಪ್ರಾಣಮನೋಗುಣಾಂಸ್ತ್ವಮ್ ।
ಭುಂಕ್ಷೇ ಸ್ಥಿತೋ ಧಾಮನಿ ಪಾರಮೇಷ್ಠ್ಯೇ
ಅವ್ಯಕ್ತ ಆತ್ಮಾ ಪುರುಷಃ ಪುರಾಣಃ ॥ ೩೩ ॥

ಅನಂತಾವ್ಯಕ್ತರೂಪೇಣ ಯೇನೇದಮಖಿಲಂ ತತಮ್ ।
ಚಿದಚಿಚ್ಛಕ್ತಿಯುಕ್ತಾಯ ತಸ್ಮೈ ಭಗವತೇ ನಮಃ
॥ ೩೪ ॥

ಯದಿ ದಾಸ್ಯಸ್ಯಭಿಮತಾನ್ ವರಾನ್ಮೇ ವರದೋತ್ತಮ ।
ಭೂತೇಭ್ಯಸ್ತ್ವದ್ವಿಸೃಷ್ಟೇಭ್ಯೋ ಮೃತ್ಯುರ್ಮಾ ಭೂನ್ಮಮ ಪ್ರಭೋ
॥ ೩೫ ॥

ನೀನೇ ಜಗತ್ತಿನ ಮೂಲಕಾರಣನು. ಜ್ಞಾನ-ವಿಜ್ಞಾನಗಳು ನಿನ್ನ ಮೂರ್ತಿಯೇ ಆಗಿದೆ. ಪ್ರಾಣ, ಇಂದ್ರಿಯಗಳು, ಮನಸ್ಸು ಬುದ್ಧಿ ಮುಂತಾದ ವಿಕಾರಗಳಿಂದ ಪ್ರಕಟಗೊಳ್ಳುವ ನಿನಗೆ ನಮಸ್ಕಾರವು. ॥ ೨೮ ॥ ನೀನೇ ಮುಖ್ಯಪ್ರಾಣ ಸೂತ್ರಾತ್ಮನ ರೂಪದಲ್ಲಿ ಚರಾಚರ ಜಗತ್ತನ್ನು ನಿನ್ನ ನಿಯಂತ್ರಣದಲ್ಲಿ ಇರಿಸಿಕೊಳ್ಳುವೆ. ನೀನೇ ಪ್ರಜೆಯ ರಕ್ಷಕನಾಗಿರುವೆ. ಭಗವಂತಾ ! ಚಿತ್ತ , ಚೈತನ್ಯ, ಮನಸ್ಸು ಇಂದ್ರಿಯಗಳ ಸ್ವಾಮಿಯೂ ನೀನೇ ಆಗಿರುವೆ. ಪಂಚಭೂತಗಳು, ಶಬ್ದಾದಿ ವಿಷಯಗಳು ಮತ್ತು ಅವುಗಳ ಸಂಸ್ಕಾರಗಳನ್ನು ರಚಿಸುವವನೂ, ಮಹತ್ತತ್ತ್ವದ ರೂಪದಲ್ಲಿಯೂ ನೀನೇ ಇರುವೆ. ॥ ೨೯ ॥ ಹೋತಾ, ಅಧ್ವರ್ಯು, ಬ್ರಹ್ಮಾ, ಉದ್ಗಾತಾ – ಈ ನಾಲ್ಕು ಋತ್ವಿಜರಿಂದ ನೆರವೇರುವ ಯಜ್ಞದ ಪ್ರತಿಪಾದನೆ ಮಾಡುವ ವೇದವೇ ನಿನ್ನ ಶರೀರವಾಗಿದೆ. ಅವುಗಳ ಮೂಲಕ ಅಗ್ನಿಷ್ಟೋಮ ಮುಂತಾದ ಏಳು ಯಜ್ಞಗಳನ್ನು ನೀನೇ ವಿಸ್ತಾರಮಾಡುವೆ. ನೀನೇ ಸಮಸ್ತ ಪ್ರಾಣಿಗಳ ಆತ್ಮನಾಗಿರುವೆ. ಏಕೆಂದರೆ, ನೀನು ಅನಾದಿಯೂ, ಅನಂತನೂ, ಅಪಾರನೂ, ಸರ್ವಜ್ಞನೂ, ಸರ್ವಾಂತರ್ಯಾಮಿಯೂ ಆಗಿರುವೆ. ॥ ೩೦ ॥ ನೀನೇ ಕಾಲನಾಗಿರುವೆ. ನೀನು ಪ್ರತಿಕ್ಷಣವೂ ಎಚ್ಚರವಾಗಿದ್ದು ತನ್ನ ಕ್ಷಣ, ಲವ ಮುಂತಾದ ವಿಭಾಗಗಳಿಂದ ಜನರ ಆಯುಷ್ಯವನ್ನು ಕ್ಷೀಣಗೊಳಿಸುತ್ತಿರುವೆ. ಹೀಗಿದ್ದರೂ ನೀನು ನಿರ್ವಿಕಾರನಾಗಿರುವೆ. ಏಕೆಂದರೆ, ಜ್ಞಾನಸ್ವರೂಪನೂ, ಪರಮೇಶ್ವರನೂ, ಜನ್ಮರಹಿತನೂ, ಮಹಾನ್ ಆಗಿರುವ ನೀನು ಸಮಸ್ತ ಜೀವಿಗಳಿಗೂ ಜೀವನವನ್ನು ಕೊಡುವ ಅಂತರಾತ್ಮನಾಗಿರುವೆ. ॥ ೩೧ ॥ ಪ್ರಭೋ ! ನಿನ್ನಿಂದ ಬೇರೆಯಾದ ಕಾರ್ಯ, ಕಾರಣ, ಚಲ ಮತ್ತು ಅಚಲವಾದ ಯಾವ ವಸ್ತುವೂ ಇಲ್ಲ, ಸಮಸ್ತ ವಿದ್ಯೆಗಳೂ ಕಲೆಗಳೂ ನಿನ್ನ ಶರೀರಗಳೇ ಆಗಿವೆ. ತ್ರಿಗುಣಮಯವಾದ ಮಾಯೆಯನ್ನು ಮೀರಿರುವ ಸ್ವಯಂ ಬ್ರಹ್ಮನು ನೀನೇ ಆಗಿರುವೆ. ಈ ಸ್ವರ್ಣಮಯ ಬ್ರಹ್ಮಾಂಡವು ನಿನ್ನ ಗರ್ಭದಲ್ಲೇ ಅಡಗಿದೆ. ನೀನು ಇದನ್ನು ನಿನ್ನಿಂದಲೇ ಪ್ರಕಟಗೊಳಿಸಿರುವೆ. ॥ ೩೨ ॥ ಪ್ರಭೋ ! ಈ ವ್ಯಕ್ತವಾದ ಬ್ರಹ್ಮಾಂಡವು ನಿನ್ನ ಸ್ಥೂಲಶರೀರವಾಗಿದೆ. ಇದರಿಂದ ನೀನು ಇಂದ್ರಿಯಗಳು, ಪ್ರಾಣ ಮತ್ತು ಮನಸ್ಸಿನ ವಿಷಯಗಳನ್ನು ಉಪಭೋಗಿಸುತ್ತಿರುವೆ. ಆದರೆ ಆಗಲೂ ನೀನೇ ನಿನ್ನ ಪರಮ ಐಶ್ವರ್ಯಮಯ ಸ್ವರೂಪದಲ್ಲೇ ಸ್ಥಿತನಾಗಿರುವೆ. ವಾಸ್ತವವಾಗಿ ನೀನೇ ಪುರಾಣ ಪುರುಷನು. ಸ್ಥೂಲ–ಸೂಕ್ಷ್ಮಗಳನ್ನು ಮೀರಿರುವ ಬ್ರಹ್ಮಸ್ವರೂಪನೇ ಆಗಿದ್ದೀಯೆ. ॥ ೩೩ ॥ ನೀನು ಅನಂತನಾಗಿದ್ದು ಅವ್ಯಕ್ತಸ್ವರೂಪದಿಂದ ಇಡೀ ಜಗತ್ತನ್ನು ವ್ಯಾಪಿಸಿಕೊಂಡಿರುವೆ. ಚೇತನ ಮತ್ತು ಅಚೇತನ ಎರಡೂ ನಿನ್ನ ಶಕ್ತಿಗಳೇ ಆಗಿವೆ. ಇಂತಹ ಭಗವಂತಾ ! ನಾನು ನಿನಗೆ ನಮಸ್ಕರಿಸುತ್ತೇನೆ. ॥ ೩೪ ॥

ಪ್ರಭುವೇ ! ನೀನೇ ವರ ಕೊಡುವವರಲ್ಲಿ ಸರ್ವಶ್ರೇಷ್ಠನಾಗಿರುವೆ. ನೀನು ನನಗೆ ಅಭೀಷ್ಟವಾದ ವರವನ್ನು ಕೊಡುವುದಾದರೆ – ನೀನು ಸೃಷ್ಟಿಸಿರುವ ಯಾವುದೇ ಪ್ರಾಣಿಯಿಂದಲೂ, ಬೇಕಾದರೆ ಮನುಷ್ಯನಿರಲಿ, ಪಶು, ಪ್ರಾಣಿಯಾಗಿರಲಿ, ಅಪ್ರಾಣಿಯಾಗಿರಲಿ, ದೇವತೆ, ದೈತ್ಯ, ನಾಗಗಳು ಮುಂತಾದ ಯಾರಿಂದಲೂ ನನ್ನ ಮೃತ್ಯುವು ಆಗದಿರಲಿ. ಒಳಗೆ–ಹೊರಗೆ, ಹಗಲಲ್ಲಿ-ರಾತ್ರಿಯಲ್ಲಿ,

ನಾಂತರ್ಬಹಿರ್ದಿವಾ ನಕ್ತಮನ್ಯಸ್ಮಾದಪಿ ಚಾಯುಧೈಃ ।
ನ ಭೂಮೌ ನಾಂಬರೇ ಮೃತ್ಯುರ್ನ ನರೈರ್ನ ಮೃಗೈರಪಿ
॥ ೩೬ ॥

ವ್ಯಸುಭಿರ್ವಾಸುಮದ್ಭಿರ್ವಾ ಸುರಾಸುರಮಹೋರಗೈಃ ।
ಅಪ್ರತಿದ್ವಂದ್ವತಾಂ ಯುದ್ಧೇ ಐಕಪತ್ಯಂ ಚ ದೇಹಿನಾಮ್
॥ ೩೭ ॥

ಸರ್ವೇಷಾಂ ಲೋಕಪಾಲಾನಾಂ ಮಹಿಮಾನಂ ಯಥಾಽಽತ್ಮನಃ ।
ತಪೋಯೋಗಪ್ರಭಾವಾಣಾಂ ಯನ್ನ ರಿಷ್ಯತಿ ಕರ್ಹಿಚಿತ್
॥ ೩೮ ॥

ಯಾವುದೇ ಅಸ್ತ್ರ-ಶಸ್ತ್ರಗಳಿಂದಾಗಲೀ, ಭೂಮಿಯಲ್ಲಾಗಲೀ, ಆಕಾಶದಲ್ಲಾಗಲೀ, ಯಾವುದರಿಂದಲೂ, ಎಲ್ಲೆಯಾಗಲೀ, ಯಾವಾಗಲೀ ಆಗಲೀ ನನಗೆ ಮರಣವುಂಟಾಗದಿರಲಿ. ಯುದ್ಧದಲ್ಲಿ ನನಗೆ ಎದುರಾಳಿಗಳು ಯಾರೂ ಇಲ್ಲದಿರಲಿ. ನಾನು ಎಲ್ಲ ಪ್ರಾಣಿಗಳಿಗೂ ಏಕಚ್ಛತ್ರಾಧಿಪತಿಯಾಗುವಂತೆ ವರವನ್ನು ಕರುಣಿಸು. ॥ ೩೫-೩೭ ॥ ಇಂದ್ರಾದಿ ಸಮಸ್ತ ಲೋಕಪಾಲಕರಲ್ಲಿ ಯಾವ ಮಹಿಮೆಯುಂಟೋ ಅಂತಹ ಮಹಿಮೆಯು ನನಗೂ ಇರಲಿ. ತಪಸ್ವಿಗಳಲ್ಲಿ ಯೋಗಿಗಳಲ್ಲಿ ಇರುವ ಅಕ್ಷಯವಾದ ಐಶ್ವರ್ಯವನ್ನು ನನಗೂ ಅನುಗ್ರಹಿಸು. ॥ ೩೮ ॥

ಮೂರನೆಯ ಅಧ್ಯಾಯವು ಮುಗಿಯಿತು. ॥ ೩ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಸಪ್ತಮ ಸ್ಕಂಧೇ
ಹಿರಣ್ಯಕಶಿಪೋರ್ವರಯಾಚನಂ ನಾಮ ತೃತೀಯೋಽಧ್ಯಾಯಃ ॥ ೩ ॥

ನಾಲ್ಕನೆಯ ಅಧ್ಯಾಯ

ಹಿರಣ್ಯಕಶಿಪುವಿನ ಅತ್ಯಾಚಾರಗಳು ಮತ್ತು ಪ್ರಹ್ಲಾದನ ಗುಣಗಳ ವರ್ಣನೆ

ನಾರದ ಉವಾಚ

ಏವಂ ವೃತಃ ಶತಧೃತಿರ್ಹಿರಣ್ಯಕಶಿಪೋರಥ ।
ಪ್ರಾದಾತ್ತತ್ತಪಸಾ ಪ್ರೀತೋ ವರಾಂಸ್ತಸ್ಯ ಸುದುರ್ಲಭಾನ್
॥ ೧ ॥

ಬ್ರಹ್ಮೋವಾಚ

ತಾತೇಮೇ ದುರ್ಲಭಾಃ ಪುಂಸಾಂ ಯಾನ್ ವೃಣೀಷೇ ವರಾನ್ಮಮ ।
ತಥಾಪಿ ವಿತರಾಮ್ಯಂಗ ವರಾನ್ಯದಪಿ ದುರ್ಲಭಾನ್
॥ ೨ ॥

ತತೋ ಜಗಾಮ ಭಗವಾನಮೋಘಾನುಗ್ರಹೋ ವಿಭುಃ ।
ಪೂಜಿತೋಽಸುರವರ್ಯೇಣ ಸ್ತೂಯಮಾನಃ ಪ್ರಜೇಶ್ವರೈಃ
॥ ೩ ॥

ಏವಂ ಲಬ್ಧವರೋ ದೈತ್ಯೋ ಬಿಭ್ರದ್ಧೇಮಮಯಂ ವಪುಃ ।
ಭಗವತ್ಯಕರೋದ್ದ್ವೇಷಂ ಭ್ರಾತುರ್ವಧಮನುಸ್ಮರನ್
॥ ೪ ॥

ಸ ವಿಜಿತ್ಯ ದಿಶಃ ಸರ್ವಾ ಲೋಕಾಂಶ್ಚ ತ್ರೀನ್ಮಹಾಸುರಃ ।
ದೇವಾಸುರಮನುಷ್ಯೇಂದ್ರಾನ್ಗಂಧರ್ವಗರುಡೋರಗಾನ್
॥ ೫ ॥

ಸಿದ್ಧಚಾರಣವಿದ್ಯಾಧ್ರಾನೃಷೀನ್ಪಿತೃಪತೀನ್ಮನೂನ್ ।
ಯಕ್ಷರಕ್ಷಃಪಿಶಾಚೇಶಾನ್ಪ್ರೇತಭೂತಪತೀನಥ
॥ ೬ ॥

ಸರ್ವಸತ್ತ್ವಪತೀನ್‌ಜಿತ್ವಾ ವಶಮಾನೀಯ ವಿಶ್ವಜಿತ್ ।
ಜಹಾರ ಲೋಕಪಾಲಾನಾಂ ಸ್ಥಾನಾನಿ ಸಹ ತೇಜಸಾ
॥ ೭ ॥

ನಾರದರು ಹೇಳುತ್ತಾರೆ – ಯುಧಿಷ್ಠಿರನೇ! ಹಿರಣ್ಯಕಶಿಪು ಬ್ರಹ್ಮದೇವರಲ್ಲಿ ಹೀಗೆ ದುರ್ಲಭವಾದ ವರಗಳನ್ನು ಬೇಡಲು, ಅವರು ಅವನ ತಪಸ್ಸಿನಿಂದ ಪ್ರಸನ್ನರಾಗಿ ಅವನಿಗೆ ಆ ವರಗಳನ್ನು ಕರುಣಿಸಿದರು. ॥ ೧ ॥

ಬ್ರಹ್ಮದೇವರು ಹೇಳಿದರು – ಅಯ್ಯಾ ವತ್ಸ! ನೀನು ನನ್ನಲ್ಲಿ ಕೇಳಿರುವ ವರಗಳು ಮನುಷ್ಯರಿಗೆ ತುಂಬಾ ದುರ್ಲಭವಾದವುಗಳು. ಆದರೂ ಅವು ಅತಿದುರ್ಲಭವಾಗಿದ್ದರೂ ನಾನು ನಿನಗೆ ಅವೆಲ್ಲವನ್ನು ಕೊಡುತ್ತಿದ್ದೇನೆ. ॥ ೨ ॥ (ನಾರದರು ಹೇಳಿದರು) ಬ್ರಹ್ಮದೇವರ ವರದಾನವು ಎಂದೂ ಸುಳ್ಳಾಗುವುದಿಲ್ಲ. ಅವರು ಸಮರ್ಥರು ಮತ್ತು ಭಗವದ್ರೂಪರೇ ಆಗಿದ್ದಾರೆ. ವರಗಳು ದೊರೆತ ಬಳಿಕ ಹಿರಣ್ಯಕಶಿಪು ಅವರನ್ನು ಪೂಜಿಸಿದನು. ಅನಂತರ ಪ್ರಜಾಪತಿಗಳಿಂದ ತನ್ನ ಸ್ತುತಿಯನ್ನು ಕೇಳುತ್ತಾ ಅವರು ತಮ್ಮ ಲೋಕಕ್ಕೆ ಹೊರಟುಹೋದರು. ॥ ೩ ॥ ಬ್ರಹ್ಮದೇವರಿಂದ ವರಗಳನ್ನು ಪಡೆದುಕೊಂಡ ಅನಂತರ ಹಿರಣ್ಯಕಶಿಪುವಿನ ಶರೀರವು ಸುವರ್ಣದಂತೆ ಕಾಂತಿಯುಕ್ತವೂ, ಹೃಷ್ಟ-ಪುಷ್ಟವೂ ಆಯಿತು. ಅವನು ತನ್ನ ತಮ್ಮನ ಮೃತ್ಯುವನ್ನು ನೆನೆದು ಭಗವಂತನನ್ನು ದ್ವೇಷಿಸತೊಡಗಿದನು. ॥ ೪ ॥ ಆ ಮಹಾ ದೈತ್ಯನು ಎಲ್ಲ ದಿಕ್ಕುಗಳನ್ನು, ಮೂರುಲೋಕಗಳನ್ನು, ದೇವತೆಗಳನ್ನೂ, ಅಸುರರನ್ನೂ, ರಾಜರನ್ನೂ, ಗಂಧರ್ವರನ್ನೂ, ಗರುಡನನ್ನೂ, ಸರ್ಪರನ್ನೂ ಸಿದ್ಧ-ಚಾರಣರನ್ನೂ, ವಿದ್ಯಾಧರರನ್ನೂ, ಋಷಿಗಳನ್ನೂ, ಪಿತೃಗಳ ಅಧಿಪತಿಗಳನ್ನೂ, ಮನುಗಳನ್ನೂ, ಯಕ್ಷರನ್ನೂ, ರಾಕ್ಷಸರನ್ನೂ, ಪಿಶಾಚರಾಜರನ್ನು, ಪ್ರೇತಗಳನ್ನೂ, ಭೂತಪತಿಗಳನ್ನೂ ಮತ್ತು ಸಮಸ್ತ ಪ್ರಾಣಿಗಳ ರಾಜರನ್ನೂ ಸೋಲಿಸಿ ವಶಪಡಿಸಿಕೊಂಡನು. ಇಷ್ಟೇ ಅಲ್ಲ, ವಿಶ್ವವಿಜಯಿಯಾದ ಆ ದೈತ್ಯನು ಲೋಕಪಾಲಕರ ಸ್ಥಾನ-ತೇಜಸ್ಸನ್ನು ಸೆಳೆದುಕೊಂಡನು. ॥ ೫-೭ ॥

ದೇವೋದ್ಯಾನಶ್ರಿಯಾ ಜುಷ್ಟಮಧ್ಯಾಸ್ತೇ ಸ್ಮ ತ್ರಿವಿಷ್ಟಪಮ್ ।
ಮಹೇಂದ್ರಭವನಂ ಸಾಕ್ಷಾನ್ನಿರ್ಮಿತಂ ವಿಶ್ವಕರ್ಮಣಾ ।
ತ್ರೈಲೋಕ್ಯಲಕ್ಷ್ಮ್ಯಾಯತನಮಧ್ಯುವಾಸಾಖಿಲರ್ದ್ಧಿಮತ್ ॥ ೮ ॥

ಯತ್ರ ವಿದ್ರುಮಸೋಪಾನಾ ಮಹಾಮಾರಕತಾ ಭುವಃ ।
ಯತ್ರ ಸ್ಫಾಟಿಕಕುಡ್ಯಾನಿ ವೈದೂರ್ಯಸ್ತಂಭಪಂಕ್ತಯಃ ॥ ೯ ॥

ಯತ್ರ ಚಿತ್ರವಿತಾನಾನಿ ಪದ್ಮರಾಗಾಸನಾನಿ ಚ ।
ಪಯಃಫೇನನಿಭಾಃ ಶಯ್ಯಾ ಮುಕ್ತಾದಾಮಪರಿಚ್ಛದಾಃ ॥ ೧೦ ॥

ಕೂಜದ್ಭಿರ್ನೂಪುರೈರ್ದೇವ್ಯಃ ಶಬ್ದಯಂತ್ಯ ಇತಸ್ತತಃ ।
ರತ್ನಸ್ಥಲೀಷು ಪಶ್ಯಂತಿ ಸುದತೀಃ ಸುಂದರಂ ಮುಖಮ್ ॥ ೧೧ ॥

ತಸ್ಮಿನ್ಮಹೇಂದ್ರಭವನೇ ಮಹಾಬಲೋ
ಮಹಾಮನಾ ನಿರ್ಜಿತಲೋಕ ಏಕರಾಟ್ ।
ರೇಮೇಽಭಿವಂದ್ಯಾಂಘ್ರಿಯುಗಃ ಸುರಾದಿಭಿಃ
ಪ್ರತಾಪಿತೈರೂರ್ಜಿತಚಂಡಶಾಸನಃ ॥ ೧೨ ॥

ತಮಂಗ ಮತ್ತಂ ಮಧುನೋರುಗಂಧಿನಾ
ವಿವೃತ್ತತಾಮ್ರಾಕ್ಷಮಶೇಷಧಿಷ್ಣ್ಯಪಾಃ ।
ಉಪಾಸತೋಪಾಯನಪಾಣಿಭಿರ್ವಿನಾ
ತ್ರಿಭಿಸ್ತಪೋಯೋಗಬಲೌಜಸಾಂ ಪದಮ್ ॥ ೧೩ ॥

ಜಗುರ್ಮಹೇಂದ್ರಾಸನಮೋಜಸಾ ಸ್ಥಿತಂ
ವಿಶ್ವಾವಸುಸ್ತುಂಬುರುರಸ್ಮದಾದಯಃ ।
ಗಂಧರ್ವಸಿದ್ಧಾ ಋಷಯೋಽಸ್ತುವನ್ಮುಹು-
ರ್ವಿದ್ಯಾಧರಾ ಅಪ್ಸರಸಶ್ಚ ಪಾಂಡವ ॥ ೧೪ ॥

ಸ ಏವ ವರ್ಣಾಶ್ರಮಿಭಿಃ ಕ್ರತುಭಿರ್ಭೂರಿದಕ್ಷಿಣೈಃ ।
ಇಜ್ಯಮಾನೋ ಹವಿರ್ಭಾಗಾನಗ್ರಹೀತ್ಸ್ವೇನ ತೇಜಸಾ ॥ ೧೫ ॥

ಅಕೃಷ್ಟಪಚ್ಯಾ ತಸ್ಯಾಸೀತ್ಸಪ್ತದ್ವೀಪವತೀ ಮಹೀ ।
ತಥಾ ಕಾಮದುಘಾ ದ್ಯೌಸ್ತು ನಾನಾಶ್ಚರ್ಯಪದಂ ನಭಃ ॥ ೧೬ ॥

ರತ್ನಾಕರಾಶ್ಚ ರತ್ನೌಘಾಂಸ್ತತ್ಪತ್ನ್ಯಶ್ಚೋಹುರೂರ್ಮಿಭಿಃ ।
ಕ್ಷಾರಸೀಧುಘೃತಕ್ಷೌದ್ರದಧಿಕ್ಷೀರಾಮೃತೋದಕಾಃ ॥ ೧೭ ॥

ಈಗ ಅವನು ನಂದನವನವೇ ಮುಂತಾದ ಉದ್ಯಾನವನಗಳ ಸೌಂದರ್ಯದಿಂದ ಕೂಡಿದ ಸ್ವರ್ಗದಲ್ಲೇ ಇರತೊಡಗಿದನು. ಸ್ವಯಂ ವಿಶ್ವಕರ್ಮನೇ ರಚಿಸಿದ ಇಂದ್ರನ ಭವನವೇ ಅವನ ವಾಸಸ್ಥಾನವಾಯಿತು. ಆ ಅರಮನೆಯಲ್ಲಿ ಮೂರು ಲೋಕಗಳ ಸೌಂದರ್ಯದ ಮೂರ್ತಾಕಾರವಾಗಿ ವಾಸ ಮಾಡುತ್ತಿದ್ದನು. ಆತನು ಎಲ್ಲ ವಿಧದ ಸಂಪತ್ತುಗಳಿಂದ ಸಂಪನ್ನನಾಗಿದ್ದನು. ॥ ೮ ॥ ಆ ಅರಮನೆಯಲ್ಲಿ ಮೆಟ್ಟಿಲುಗಳು ಹವಳ ಮಣಿಗಳಿಂದಲೂ, ನೆಲಗಳು ಮರಕತ ಮಣಿಗಳಿಂದಲೂ, ಗೋಡೆಗಳು ಸ್ಫಟಿಕಮಣಿಗಳಿಂದಲೂ, ವೈಢೂರ್ಯ ಕಂಭಗಳಿಂದಲೂ, ಪದ್ಮರಾಗ ಮಣಿಗಳಿಂದ ನಿರ್ಮಿತ ಆಸನಗಳು ಇದ್ದವು. ಬಣ್ಣ-ಬಣ್ಣದ ತೋರಣಗಳೂ, ಹಾಲಿನ ನೊರೆಯಂತೆ ಶಯ್ಯೆಗಳು, ಅವುಗಳಿಗೆ ಮುತ್ತುಗಳ ಕುಚ್ಚುಗಳಿದ್ದು ಶೋಭಾಯಮಾನವಾಗಿತ್ತು. ॥ ೯-೧೦ ॥ ಸರ್ವಾಂಗಸುಂದರಿಯರಾದ ಅಪ್ಸರೆಯರು ತಮ್ಮ ಕಾಲಂದುಗೆಗಳ ಝಣ-ಝಣ ಧ್ವನಿಗೈಯುತ್ತಾ ರತ್ನಮಯ ಭೂಮಿಯಲ್ಲಿ ಅತ್ತ-ಇತ್ತ ಓಡಾಡುತ್ತಿದ್ದರು. ಕೆಲವೆಡೆ ಅದರಲ್ಲೇ ತಮ್ಮ ಸುಂದರ ಮುಖಗಳನ್ನು ನೋಡಿಕೊಳ್ಳುತ್ತಿದ್ದರು. ॥ ೧೧ ॥ ಮಹಾಬಲಶಾಲಿಯಾದ ಹಿರಣ್ಯಕಶಿಪು ಎಲ್ಲರನ್ನೂ ಜಯಿಸಿ ಏಕಚ್ಛತ್ರಾಧಿಪತಿಯಾಗಿ ಆ ಮಹೇಂದ್ರಭವನದಲ್ಲಿ ಯಥೇಷ್ಟವಾಗಿ ಸ್ವತಂತ್ರನಾಗಿ ವಿಹರಿಸುತ್ತಿದ್ದನು. ಅವನ ಶಾಸನವು ಎಷ್ಟು ಕಠೋರವಾಗಿತ್ತೆಂದರೆ – ದೇವ-ದಾನವರೆಲ್ಲರೂ ಭಯಭೀತರಾಗಿ ಅವನ ಅಡಿಗಳಿಗೆ ಅಡಿಗಡಿಗೆ ವಂದಿಸುತ್ತಿದ್ದರು. ॥ ೧೨ ॥ ಯುಧಿಷ್ಠಿರನೇ! ಅವನು ಉತ್ಕಟವಾದ ಗಂಧವುಳ್ಳ ಮದ್ಯವನ್ನು ಕುಡಿದು ಉನ್ಮತ್ತನಾಗಿರುತ್ತ ಅವನ ಅಮಲೇರಿದ್ದ ಕಣ್ಣುಗಳು ಕೆಂಪಾಗಿದ್ದುವು. ತಪಸ್ಸು, ಯೋಗ, ಶಾರೀರಿಕ, ಮಾನಸಿಕ ಬಲಗಳಿಗೆ ಆಗರನಾಗಿದ್ದ ಅವನನ್ನು ಬ್ರಹ್ಮಾ, ವಿಷ್ಣು, ಮಹೇಶ್ವರರನ್ನು ಬಿಟ್ಟು ಉಳಿದ ಎಲ್ಲ ದೇವತೆಗಳು ತಮ್ಮ ಕೈಗಳಲ್ಲಿ ಕಪ್ಪ-ಕಾಣಿಕೆಗಳನ್ನು ಹಿಡಿದುಕೊಂಡು ಸೇವಿಸುತ್ತಿದ್ದರು. ॥ ೧೩ ॥ ಪಾಂಡುಪುತ್ರನೇ! ಪೌರುಷದಿಂದ ಇಂದ್ರನ ಆಸನದಲ್ಲಿ ಕುಳಿತಿರುವಾಗ ವಿಶ್ವಾವಸು, ತುಂಬುರು ಮತ್ತು ನಾವೆಲ್ಲರೂ ಅವನ ಎದುರಿಗೆ ಗಾಯನ ಮಾಡುತ್ತಿದ್ದೆವು. ಹಾಗೆಯೇ ಗಂಧರ್ವರು, ಸಿದ್ಧರು, ಋಷಿಗಣ, ವಿದ್ಯಾಧರರೂ, ಅಪ್ಸರೆಯರೂ ಮತ್ತೆ-ಮತ್ತೆ ಅವನನ್ನು ಸ್ತುತಿ ಮಾಡುತ್ತಿದ್ದರು. ॥ ೧೪ ॥

ಯುಧಿಷ್ಠಿರನೇ! ವರ್ಣಾಶ್ರಮ ಧರ್ಮಗಳನ್ನು ಪಾಲಿಸುತ್ತಿದ್ದ ಪುಣ್ಯಾತ್ಮರು ಮಾಡುತ್ತಿದ್ದ ದೊಡ್ಡ-ದೊಡ್ಡ ದಕ್ಷಿಣೆಯುಳ್ಳ ಯಜ್ಞಗಳ ಆಹುತಿಗಳನ್ನು ಆತನು ತನ್ನ ತೇಜಸ್ಸಿನಿಂದ ಕಸಿದು ಕೊಳ್ಳುತ್ತಿದ್ದನು. ॥ ೧೫ ॥ ಪೃಥ್ವಿಯ ಸಪ್ತದ್ವೀಪಗಳಲ್ಲಿಯೂ ಅವನ ಅಖಂಡ ರಾಜ್ಯವಿತ್ತು. ಎಲ್ಲ ಕಡೆಗಳಲ್ಲಿಯೂ ಉಳುಮೆಯಿಲ್ಲದೆಯೇ ಭೂಮಿಯು ಆಹಾರ ಬೆಳೆಗಳನ್ನು ನೀಡುತ್ತಿತ್ತು. ಅವನು ಬಯಸಿದ್ದೆಲ್ಲವೂ ಅಂತರಿಕ್ಷದಿಂದ ಅವನಿಗೆ ಸಿಗುತ್ತಿತ್ತು. ಆಕಾಶವು ಅವನಿಗೆ ಬಗೆ-ಬಗೆಯ ಆಶ್ಚರ್ಯಜನಕ ವಸ್ತುಗಳನ್ನು ತೋರಿಸಿ ಮನೋರಂಜನೆಯನ್ನು ಮಾಡುತ್ತಿತ್ತು. ॥ ೧೬ ॥ ಅದೇ ರೀತಿಯಲ್ಲಿ ಉಪ್ಪು, ಹೆಂಡ, ತುಪ್ಪ, ಮೊಸರು, ಹಾಲು ಮತ್ತು ಸಿಹಿನೀರಿನ ಸಮುದ್ರಗಳೂ ಕೂಡ ತಮ್ಮ ಪತ್ನಿಯರಾದ ನದಿಗಳೊಂದಿಗೆ ಅಲೆಗಳ ಮೂಲಕ – ರತ್ನರಾಶಿಗಳನ್ನು ಅರ್ಪಿಸುತ್ತಿದ್ದುವು. ॥ ೧೭ ॥

ಶೈಲಾ ದ್ರೋಣೀಭಿರಾಕ್ರೀಡಂ ಸರ್ವರ್ತುಷು ಗುಣಾನ್ ದ್ರುಮಾಃ ।
ದಧಾರ ಲೋಕಪಾಲಾನಾಮೇಕ ಏವ ಪೃಥಗ್ಗುಣಾನ್ ॥ ೧೮ ॥

ಸ ಇತ್ಥಂ ನಿರ್ಜಿತಕಕುಬೇಕರಾಡ್ವಿಷಯಾನ್ಪ್ರಿಯಾನ್ ।
ಯಥೋಪಜೋಷಂ ಭುಂಜಾನೋ ನಾತೃಪ್ಯದಜಿತೇಂದ್ರಿಯಃ ॥ ೧೯ ॥

ಏವಮೈಶ್ವರ್ಯಮತ್ತಸ್ಯ ದೃಪ್ತಸ್ಯೋಚ್ಛಾಸ್ತ್ರವರ್ತಿನಃ ।
ಕಾಲೋ ಮಹಾನ್ವ್ಯತೀಯಾಯ ಬ್ರಹ್ಮಶಾಪಮುಪೇಯುಷಃ ॥ ೨೦ ॥

ತಸ್ಯೋಗ್ರದಂಡಸಂವಿಗ್ನಾಃ ಸರ್ವೇ ಲೋಕಾಃ ಸಪಾಲಕಾಃ ।
ಅನ್ಯತ್ರಾಲಬ್ಧಶರಣಾಃ ಶರಣಂ ಯಯುರಚ್ಯುತಮ್ ॥ ೨೧ ॥

ತಸ್ಯೈ ನಮೋಽಸ್ತು ಕಾಷ್ಠಾಯೈ ಯತ್ರಾತ್ಮಾ ಹರಿರೀಶ್ವರಃ ।
ಯದ್ಗತ್ವಾ ನ ನಿವರ್ತಂತೇ ಶಾಂತಾಃ ಸಂನ್ಯಾಸಿನೋಽಮಲಾಃ ॥ ೨೨ ॥

ಇತಿ ತೇ ಸಂಯತಾತ್ಮಾನಃ ಸಮಾಹಿತಧಿಯೋಽಮಲಾಃ ।
ಉಪತಸ್ಥುರ್ಹೃಷೀಕೇಶಂ ವಿನಿದ್ರಾ ವಾಯುಭೋಜನಾಃ ॥ ೨೩ ॥

ತೇಷಾಮಾವಿರಭೂದ್ವಾಣೀ ಅರೂಪಾ ಮೇಘನಿಸ್ವನಾ ।
ಸನ್ನಾದಯಂತೀ ಕಕುಭಃ ಸಾಧೂನಾಮಭಯಂಕರೀ ॥ ೨೪ ॥

ಮಾ ಭೈಷ್ಟ ವಿಬುಧಶ್ರೇಷ್ಠಾಃ ಸರ್ವೇಷಾಂ ಭದ್ರಮಸ್ತು ವಃ ।
ಮದ್ದರ್ಶನಂ ಹಿ ಭೂತಾನಾಂ ಸರ್ವಶ್ರೇಯೋಪಪತ್ತಯೇ ॥ ೨೫ ॥

ಜ್ಞಾತಮೇತಸ್ಯ ದೌರಾತ್ಮ್ಯಂ ದೈತೇಯಾಪಸದಸ್ಯ ಚ ।
ತಸ್ಯ ಶಾಂತಿಂ ಕರಿಷ್ಯಾಮಿ ಕಾಲಂ ತಾವತ್ಪ್ರತೀಕ್ಷತ ॥ ೨೬ ॥

ಯದಾ ದೇವೇಷು ವೇದೇಷು ಗೋಷು ವಿಪ್ರೇಷು ಸಾಧುಷು ।
ಧರ್ಮೇ ಮಯಿ ಚ ವಿದ್ವೇಷಃ ಸ ವಾ ಆಶು ವಿನಶ್ಯತಿ ॥ ೨೭ ॥

ನಿರ್ವೈರಾಯ ಪ್ರಶಾಂತಾಯ ಸ್ವಸುತಾಯ ಮಹಾತ್ಮನೇ ।
ಪ್ರಹ್ಲಾದಾಯ ಯದಾ ದ್ರುಹ್ಯೇದ್ಧನಿಷ್ಯೇಽಪಿ ವರೋರ್ಜಿತಮ್ ॥ ೨೮ ॥

ನಾರದ ಉವಾಚ

ಇತ್ಯುಕ್ತಾ ಲೋಕಗುರುಣಾ ತಂ ಪ್ರಣಮ್ಯ ದಿವೌಕಸಃ ।
ನ್ಯವರ್ತಂತ ಗತೋದ್ವೇಗಾ ಮೇನಿರೇ ಚಾಸುರಂ ಹತಮ್ ॥ ೨೯ ॥

ಪರ್ವತಗಳು ತಮ್ಮ ತಪ್ಪಲುಗಳಲ್ಲಿ ಅವನಿಗಾಗಿ ವಿಹಾರೋದ್ಯಾನಗಳನ್ನು ಒದಗಿಸುತ್ತಿದ್ದವು ಹಾಗೂ ವೃಕ್ಷಗಳು ಎಲ್ಲ ಋತುಗಳಲ್ಲಿಯೂ ಹೂವು-ಹಣ್ಣುಗಳನ್ನು ಬಿಡುತ್ತಿದ್ದವು. ಅವನೊಬ್ಬನೇ ಎಲ್ಲ ಲೋಕಪಾಲರ ಬೇರೆ-ಬೇರೆ ಗುಣ-ಮಹಿಮೆಗಳನ್ನು ಧರಿಸಿದ್ದನು. ॥ ೧೮ ॥ ಹೀಗೆ ದಿಗ್ವಿಜಯಿಯಾದ ಅವನು ಏಕಚ್ಛತ್ರಾಧಿಪತಿಯಾಗಿ ತನಗೆ ಪ್ರಿಯವಾದ ವಿಷಯಗಳನ್ನು ಸ್ವಚ್ಛಂದವಾಗಿ ಉಪಭೋಗಿಸತೊಡಗಿದನು. ಆದರೆ ಇಷ್ಟು ವಿಷಯಭೋಗಗಳಿಂದಲೂ ಅವನಿಗೆ ತೃಪ್ತಿಯುಂಟಾಗಲಿಲ್ಲ. ಏಕೆಂದರೆ, ಕೊನೆಗೂ ಅವನು ಇಂದ್ರಿಯಗಳ ಗುಲಾಮನೇ ಆಗಿದ್ದನಲ್ಲ! ॥ ೧೯ ॥

ಧರ್ಮನಂದನಾ! ಈ ರೂಪದಲ್ಲಿಯೂ ಅವನು ಸನಕಾದಿಗಳಿಂದ ಶಪಿಸಲ್ಪಟ್ಟ ಭಗವಂತನ ಆ ಪಾರ್ಷದನೇ ಆಗಿದ್ದನಲ್ಲ. ಆದರೆ ಅವನು ಐಶ್ವರ್ಯಮದದಿಂದ ಉನ್ಮತ್ತನಾಗಿದ್ದನು ಹಾಗೂ ದುರಹಂಕಾರಿಯಾಗಿ ಶಾಸ್ತ್ರಗಳ ಮರ್ಯಾದೆಗಳನ್ನು ಮೀರಿ ನಡೆಯುತ್ತಿರಲು ನೋಡು-ನೋಡುತ್ತಾ ಅವನ ಜೀವನದ ಹೆಚ್ಚಿನ ಸಮಯ ಕಳೆದುಹೋಯಿತು. ॥ ೨೦ ॥ ಅವನ ಕಠೋರವಾದ ಶಾಸನದಿಂದ ಎಲ್ಲ ಲೋಕಗಳು ಮತ್ತು ಲೋಕಪಾಲರು ಗಾಬರಿಗೊಂಡರು. ಅವರಿಗೆ ಬೇರೆಲ್ಲಿಯೂ ಆಶ್ರಯ ದೊರೆಯದಿರಲು ಅವರೆಲ್ಲರೂ ಭಗವಂತನಿಗೆ ಶರಣಾದರು. ॥ ೨೧ ॥ ಸರ್ವಾತ್ಮಾ ಜಗದೀಶ್ವರನಾದ ಶ್ರೀಹರಿಯು ವಾಸವಾಗಿರುವಂತಹ, ಯಾವುದನ್ನು ಪಡೆದ ಬಳಿಕ ಶಾಂತರೂ, ನಿರ್ಮಲರೂ ಆದ ಸಂನ್ಯಾಸಿ ಮಹಾತ್ಮರು ಪ್ರಪಂಚಕ್ಕೆ ಮರಳುವುದಿಲ್ಲವೋ ಅಂತಹ ಭಗವಂತನ ಪರಮಧಾಮಕ್ಕೆ ನಾವು ನಮಸ್ಕರಿಸುತ್ತಿದ್ದೇವೆ. ॥ ೨೨ ॥ ಆ ದೇವತೆಗಳು ತಮ್ಮ ಇಂದ್ರಿಯಗಳನ್ನು ಸಂಯಮನಮಾಡಿ, ಮನಸ್ಸನ್ನು ಏಕಾಗ್ರಗೊಳಿಸಿ, ನಿದ್ರಾಹಾರಗಳನ್ನು ತೊರೆದು, ನಿರ್ಮಲವಾದ ಹೃದಯದಿಂದ ಭಗವಂತನನ್ನು ಆರಾಧಿಸಿದರು. ॥ ೨೩ ॥ ಒಂದು ದಿನ ಅವರಿಗೆ ಮೇಘಗಂಭೀರವಾದ ಆಕಾಶವಾಣಿಯು ಕೇಳಿಸಿತು. ಆ ಧ್ವನಿಯಿಂದ ಎಲ್ಲ ದಿಕ್ಕುಗಳು ಪ್ರತಿಧ್ವನಿಸಿದವು. ಸಾಧುಗಳಿಗೆ ಅಭಯವನ್ನೀಯುವ ಆ ಆಕಾಶವಾಣಿಯು ಹೀಗಿತ್ತು – ॥ ೨೪ ॥ ಶ್ರೇಷ್ಠ ದೇವತೆಗಳಿರಾ! ಹೆದರಬೇಡಿರಿ. ನಿಮಗೆಲ್ಲರಿಗೂ ಮಂಗಳವುಂಟಾಗಲಿ. ನನ್ನ ದರ್ಶನದಿಂದ ಪ್ರಾಣಿಗಳಿಗೆ ಪರಮ ಕಲ್ಯಾಣವು ದೊರೆಯುತ್ತದೆ. ॥ ೨೫ ॥ ಈ ದೈತ್ಯಾಧಮನ ದುಷ್ಟತನವು ನನಗೆ ಮೊದಲಿನಿಂದಲೂ ತಿಳಿದಿದೆ. ನಾನು ಇವನನ್ನು ಸಂಹಾರ ಮಾಡುವೆನು. ಇನ್ನೂ ಕೆಲವು ದಿನಗಳವರೆಗೆ ಕಾಯುತ್ತಿರಿ. ॥ ೨೬ ॥ ಯಾವುದೇ ಪುರುಷನು ದೇವತೆ, ವೇದ, ಗೋವು, ಬ್ರಾಹ್ಮಣ, ಸಾಧುಗಳು, ಧರ್ಮ ಇವುಗಳನ್ನು ಮತ್ತು ನನ್ನನ್ನು ದ್ವೇಷಿಸತೊಡಗಿದಾಗ ಬೇಗನೇ ಅವನ ವಿನಾಶವಾಗುತ್ತದೆ. ॥ ೨೭ ॥ ವೈರಹೀನನೂ, ಶಾಂತಸ್ವಭಾವದವನೂ, ಮಹಾತ್ಮನೂ ಆದ ತನ್ನ ಪುತ್ರನಾದ ಪ್ರಹ್ಲಾದನಲ್ಲಿ ಈ ದೈತ್ಯನು ದ್ವೇಷಮಾಡಿದಾಗ, ಅವನಿಗೆ ಅನಿಷ್ಟವನ್ನು ಉಂಟು ಮಾಡಲು ಬಯಸಿದಾಗ, ಅವನು ಎಷ್ಟೇ ವರಬಲ ಸಂಪನ್ನನಾಗಿದ್ದರೂ ಅವನನ್ನು ಖಂಡಿತವಾಗಿ ಸಂಹರಿಸಿಬಿಡುವೆನು. ॥ ೨೮ ॥

ನಾರದರು ಹೇಳುತ್ತಾರೆ – ಲೋಕಗುರುವಾದ ಶ್ರೀಭಗವಂತನು ದೇವತೆಗಳಿಗೆ ಹೀಗೆ ಆದೇಶವನ್ನು ನೀಡಿದಾಗ ಅವರೆಲ್ಲರೂ ಆತನಿಗೆ ನಮಸ್ಕರಿಸಿ ಮರಳಿಹೋದರು. ಅವರ ಉದ್ವೇಗವೆಲ್ಲ ಶಾಂತವಾಗಿತ್ತು. ಇನ್ನು ಹಿರಣ್ಯಕಶಿಪುವು ಸತ್ತೇಹೋದನೆಂದು ಅವರು ತಿಳಿದರು. ॥ ೨೯ ॥

ತಸ್ಯ ದೈತ್ಯಪತೇಃ ಪುತ್ರಾಶ್ಚತ್ವಾರಃ ಪರಮಾದ್ಭುತಾಃ ।
ಪ್ರಹ್ಲಾದೋಽಭೂನ್ಮಹಾಂಸ್ತೇಷಾಂ ಗುಣೈರ್ಮಹದುಪಾಸಕಃ
॥ ೩೦ ॥

ಬ್ರಹ್ಮಣ್ಯಃ ಶೀಲಸಂಪನ್ನಃ ಸತ್ಯಸಂಧೋ ಜಿತೇಂದ್ರಿಯಃ ।
ಆತ್ಮವತ್ಸರ್ವಭೂತಾನಾಮೇಕಃ ಪ್ರಿಯಸುಹೃತ್ತಮಃ
॥ ೩೧ ॥

ದಾಸವತ್ಸನ್ನತಾರ್ಯಾಂಘ್ರಿಃ ಪಿತೃವದ್ದೀನವತ್ಸಲಃ ।
ಭ್ರಾತೃವತ್ಸದೃಶೇ ಸ್ನಿಗ್ಧೋ ಗುರುಷ್ವೀಶ್ವರಭಾವನಃ ।
ವಿದ್ಯಾರ್ಥರೂಪಜನ್ಮಾಢ್ಯೋ ಮಾನಸ್ತಂಭವಿವರ್ಜಿತಃ
॥ ೩೨ ॥

ನೋದ್ವಿಗ್ನಚಿತ್ತೋ ವ್ಯಸನೇಷು ನಿಃಸ್ಪೃಹಃ
ಶ್ರುತೇಷು ದೃಷ್ಟೇಷು ಗುಣೇಷ್ವವಸ್ತುದೃಕ್ ।
ದಾಂತೇಂದ್ರಿಯಪ್ರಾಣಶರೀರಧೀಃ ಸದಾ
ಪ್ರಶಾಂತಕಾಮೋ ರಹಿತಾಸುರೋಽಸುರಃ ॥ ೩೩ ॥

ಯಸ್ಮಿನ್ಮಹದ್ಗುಣಾ ರಾಜನ್ಗೃಹ್ಯಂತೇ ಕವಿಭಿರ್ಮುಹುಃ ।
ನ ತೇಽಧುನಾಪಿಧೀಯಂತೇ ಯಥಾ ಭಗವತೀಶ್ವರೇ
॥ ೩೪ ॥

ಯಂ ಸಾಧುಗಾಥಾಸದಸಿ ರಿಪವೋಽಪಿ ಸುರಾ ನೃಪ ।
ಪ್ರತಿಮಾನಂ ಪ್ರಕುರ್ವಂತಿ ಕಿಮುತಾನ್ಯೇ ಭವಾದೃಶಾಃ
॥ ೩೫ ॥

ಗುಣೈರಲಮಸಂಖ್ಯೇಯೈರ್ಮಾಹಾತ್ಮ್ಯಂ ತಸ್ಯ ಸೂಚ್ಯತೇ ।
ವಾಸುದೇವೇ ಭಗವತಿ ಯಸ್ಯ ನೈಸರ್ಗಿಕೀ ರತಿಃ
॥ ೩೬ ॥

ನ್ಯಸ್ತಕ್ರೀಡನಕೋ ಬಾಲೋ ಜಡವತ್ತನ್ಮನಸ್ತಯಾ ।
ಕೃಷ್ಣಗ್ರಹಗೃಹೀತಾತ್ಮಾ ನ ವೇದ ಜಗದೀದೃಶಮ್
॥ ೩೭ ॥

ಆಸೀನಃ ಪರ್ಯಟನ್ನಶ್ನನ್ ಶಯಾನಃ ಪ್ರಪಿಬನ್ ಬ್ರುವನ್ ।
ನಾನುಸಂಧತ್ತ ಏತಾನಿ ಗೋವಿಂದಪರಿರಂಭಿತಃ
॥ ೩೮ ॥

ಯುಧಿಷ್ಠಿರನೇ! ದೈತ್ಯರಾಜ ಹಿರಣ್ಯಕಶಿಪುವಿಗೆ ಪರಮಾದ್ಭುತರಾದ ನಾಲ್ವರು ಪುತ್ರರಿದ್ದರು. ಅವರಲ್ಲಿ ಪ್ರಹ್ಲಾದನು ವಯಸ್ಸಿನಲ್ಲಿ ಕಿರಿಯವನಾಗಿದ್ದರೂ ಗುಣಗಳಲ್ಲಿ ಎಲ್ಲರಿಗಿಂತ ಹಿರಿಯವನಾಗಿದ್ದನು. ಅವನು ಸಂತರನ್ನು ಸೇವಿಸುವವನಾಗಿದ್ದನು. ॥ ೩೦ ॥ ಬ್ರಾಹ್ಮಣರಲ್ಲಿ ಭಕ್ತಿಯುಳ್ಳವನೂ, ಸೌಮ್ಯಸ್ವಭಾವದವನೂ, ಸತ್ಯಪ್ರತಿಜ್ಞನೂ, ಜಿತೇಂದ್ರಿಯನೂ ಆಗಿದ್ದನು. ಎಲ್ಲ ಪ್ರಾಣಿಗಳೊಂದಿಗೆ ತನ್ನಂತೆಯೇ ಸಮತೆಯಿಂದ ವರ್ತಿಸುತ್ತಿದ್ದನು ಮತ್ತು ಎಲ್ಲರ ಏಕಮಾತ್ರ ಪ್ರಿಯನೂ, ನಿಜವಾದ ಹಿತೈಷಿಯೂ ಆಗಿದ್ದನು. ॥ ೩೧ ॥ ಹಿರಿಯರ ಚರಣಗಳಲ್ಲಿ ಸೇವಕನಂತೆ ತಲೆ ಬಾಗಿಕೊಂಡೇ ಇರುತಿದ್ದನು. ಬಡವರ ಮೇಲೆ ತಂದೆಯಂತೆ ಸ್ನೇಹವಿರಿಸಿದ್ದನು. ಸಮವಯಸ್ಕರಲ್ಲಿ ಸೋದರನಂತೆ ಪ್ರೇಮವಿರಿಸಿದ್ದನು ಮತ್ತು ಗುರುಗಳಲ್ಲಿ ಭಗವದ್ಭಾವವನ್ನೇ ಇಟ್ಟಿದ್ದನು. ವಿದ್ಯೆ, ಧನ, ಸೌಂದರ್ಯ ಮತ್ತು ಕುಲೀನತೆಗಳಿಂದ ಸಂಪನ್ನನಾಗಿದ್ದರೂ ಅವನಲ್ಲಿ ಅಹಂಕಾರ, ಮತ್ಸರ, ಎಳ್ಳಷ್ಟೂ ಇರಲಿಲ್ಲ. ॥ ೩೨ ॥ ದೊಡ್ಡ-ದೊಡ್ಡ ದುಃಖಗಳಲ್ಲಿಯೂ ಅವನು ಸ್ವಲ್ಪವೂ ಅಂಜುತ್ತಿರಲಿಲ್ಲ. ಲೋಕ-ಪರಲೋಕಗಳ ವಿಷಯಗಳ ಬಗ್ಗೆ ಅವನು ಬೇಕಾದಷ್ಟು ಕಂಡು-ಕೇಳಿದ್ದರೂ ಅವನ್ನು ನಿಸ್ಸಾರವೆಂದೂ, ತುಚ್ಛವೆಂದೂ, ಮಿಥ್ಯೆಯೆಂದೇ ತಿಳಿಯುತ್ತಿದ್ದನು. ಆದ್ದರಿಂದ ಅವನ ಮನಸ್ಸಿನಲ್ಲಿ ಭಗವಂತನಲ್ಲದೇ ಬೇರೆ ಯಾವುದರ ಅಭಿಲಾಷೆಯೂ ಇರಲಿಲ್ಲ. ಇಂದ್ರಿಯಗಳು, ಪ್ರಾಣ, ಶರೀರ, ಮನಸ್ಸು ಅವನ ವಶದಲ್ಲಿತ್ತು. ಅವನ ಚಿತ್ತದಲ್ಲಿ ಎಂದೂ ಯಾವುದೇ ಕಾಮನೆ ಉಂಟಾಗುತ್ತಿರಲಿಲ್ಲ. ಅವನು ಹುಟ್ಟಿನಿಂದ ಅಸುರನಾಗಿದ್ದರೂ ಆಸುರೀ ಸ್ವಭಾವವು ಅವನಲ್ಲಿ ಕಿಂಚಿತ್ತಾದರೂ ಇರಲಿಲ್ಲ. ॥ ೩೩ ॥ ಶ್ರೀಭಗವಂತನ ಗುಣಗಳು ಅನಂತವಾಗಿರುವಂತೆಯೇ ಪ್ರಹ್ಲಾದನ ಶ್ರೇಷ್ಠಗುಣಗಳು ಎಲ್ಲೆಯನ್ನು ಮೀರಿದ್ದವು. ಮಹಾತ್ಮರು ಅವನನ್ನು ಸದಾಕಾಲ ವರ್ಣಿಸುತ್ತಾ, ತನ್ಮಯರಾಗಿಕೊಳ್ಳುತ್ತಾ ಬಂದಿದ್ದಾರೆ. ಆದರೂ ಅತನು ಇಂದಿಗೂ ಹಾಗೆಯೇ ಇದ್ದಾನೆ. ॥ ೩೪ ॥ ಯುಧಿಷ್ಠಿರನೇ! ದೇವತೆಗಳು ಅವನ ಶತ್ರುಗಳಾಗಿದ್ದರೂ ಭಕ್ತರ ಚರಿತ್ರ ಗಳನ್ನು ಕೇಳಲು ಸಭೆ ಸೇರಿದಾಗ ಅವರು ಇತರ ಭಕ್ತರನ್ನು ಭಾಗವ ತೋತ್ತಮ ಪ್ರಹ್ಲಾದನಿಗೆ ಹೋಲಿಸಿ ಅವರಿಗೆ ಸಮ್ಮಾನಗಳನ್ನು ಸಲ್ಲಿಸುತ್ತಾರೆ. ಹೀಗಿರುವಾಗ ಅಜಾತಶತ್ರುವಾದ ನಿನ್ನಂತಹ ಭಾಗವತ್ಭಕ್ತರು ಅವನನ್ನು ಆದರಿಸುವುದರಲ್ಲಿ ಸಂದೇಹವೇನಿದೆ? ॥ [illegible] ॥ ಅವನ ಮಹಿಮೆಯನ್ನು ವರ್ಣಿಸಲಿಕ್ಕಾಗಿ ಎಣಿಸಲಾರದ ಸದ್ಗುಣಸಂಪತ್ತನ್ನು ಹೇಳುವ-ಕೇಳುವ ಆವಶ್ಯಕತೆ ಇಲ್ಲ. ಒಂದೇ ಒಂದು ಗುಣವನ್ನು ಹೇಳಿದರೆ ಸಾಕು. ಅದೇನೆಂದರೆ - ಅವನಿಗೆ ಭಗವಾನ್ ಶ್ರೀವಾಸುದೇವನಲ್ಲಿ ಸ್ವಾಭಾವಿಕ ಜನ್ಮಜಾತ ಪ್ರೇಮವಿತ್ತು. ॥ ೩೬ ॥

ಯುಧಿಷ್ಠಿರಾ! ಪ್ರಹ್ಲಾದನು ಬಾಲ್ಯದಲ್ಲಿಯೇ ಆಟ-ಪಾಟಗಳನ್ನು ಬಿಟ್ಟು ಭಗವಂತನ ಧ್ಯಾನದಲ್ಲಿ ಮಗ್ನನಾಗಿ ಜಡನಂತೆ ತನ್ಮಯನಾಗುತ್ತಿದ್ದನು. ಭಗವಾನ್ ಶ್ರೀಕೃಷ್ಣನ ಅನುಗ್ರಹವೆಂಬ ಗ್ರಹವು ಅವನ ಹೃದಯವನ್ನು ಸೆಳೆದುಕೊಂಡು ಅವನಿಗೆ ಜಗತ್ತಿನ ಪರಿವೆಯೇ ಇಲ್ಲದಂತೆ ಮಾಡಿಬಿಟ್ಟಿತ್ತು. ॥ ೩೭ ॥

ಭಗವಂತನೇ ತನ್ನನ್ನು ಆಲಿಂಗಿಸಿಕೊಂಡಿರುವನು ಎಂದು ಅವನು ಸದಾ ಭಾವಿಸುತ್ತಿದ್ದನು. ತಾನು ಕುಳಿತಿದ್ದರೂ, ಓಡಾಡುತ್ತಿದ್ದರೂ,

ಕ್ವಚಿದ್ರುದತಿ ವೈಕುಂಠಚಿಂತಾಶಬಲಚೇತನಃ ।
ಕ್ವಚಿದ್ಧಸತಿ ತಚ್ಚಿಂತಾಹ್ಲಾದ ಉದ್ಗಾಯತಿ ಕ್ವಚಿತ್
॥ ೩೯ ॥

ನದತಿ ಕ್ವಚಿದುತ್ಕಂಠೋ ವಿಲಜ್ಜೋ ನೃತ್ಯತಿ ಕ್ವಚಿತ್ ।
ಕ್ವಚಿತ್ತದ್ಭಾವನಾಯುಕ್ತಸ್ತನ್ಮಯೋಽನುಚಕಾರ ಹ
॥ ೪೦ ॥

ಕ್ವಚಿದುತ್ಪುಲಕಸ್ತೂಷ್ಣೀಮಾಸ್ತೇ ಸಂಸ್ಪರ್ಶನಿರ್ವೃತಃ ।
ಅಸ್ಪಂದಪ್ರಣಯಾನಂದಸಲಿಲಾಮೀಲಿತೇಕ್ಷಣಃ
॥ ೪೧ ॥

ಸ ಉತ್ತಮಶ್ಲೋಕಪದಾರವಿಂದಯೋ-
ರ್ನಿಷೇವಯಾಕಿಂಚನಸಂಗಲಬ್ಧಯಾ ।
ತನ್ವನ್ಪರಾಂ ನಿರ್ವೃತಿಮಾತ್ಮನೋ ಮುಹು-
ರ್ದುಃಸಂಗದೀನಸ್ಯ ಮನಃಶಮಂ ವ್ಯಧಾತ್ ॥ ೪೨ ॥

ತಸ್ಮಿನ್ಮಹಾಭಾಗವತೇ ಮಹಾಭಾಗೇ ಮಹಾತ್ಮನಿ ।
ಹಿರಣ್ಯಕಶಿಪೂ ರಾಜನ್ನಕರೋದಘಮಾತ್ಮಜೇ
॥ ೪೩ ॥

ಯುಧಿಷ್ಠಿರ ಉವಾಚ

ದೇವರ್ಷ ಏತದಿಚ್ಛಾಮೋ ವೇದಿತುಂ ತವ ಸುವ್ರತ ।
ಯದಾತ್ಮಜಾಯ ಶುದ್ಧಾಯ ಪಿತಾದಾತ್ಸಾಧವೇ ಹ್ಯಘಮ್
॥ ೪೪ ॥

ಪುತ್ರಾನ್ವಿಪ್ರತಿಕೂಲಾನ್ಸ್ವಾನ್ ಪಿತರಃ ಪುತ್ರವತ್ಸಲಾಃ ।
ಉಪಾಲಭಂತೇ ಶಿಕ್ಷಾರ್ಥಂ ನೈವಾಘಮಪರೋ ಯಥಾ
॥ ೪೫ ॥

ಕಿಮುತಾನುವಶಾನ್ಸಾಧೂಂಸ್ತಾದೃಶಾನ್ಗುರುದೇವತಾನ್ ।
ಏತತ್ಕೌತೂಹಲಂ ಬ್ರಹ್ಮನ್ನಸ್ಮಾಕಂ ವಿಧಮ ಪ್ರಭೋ ।
ಪಿತುಃ ಪುತ್ರಾಯ ಯದ್ದ್ವೇಷೋ ಮರಣಾಯ ಪ್ರಯೋಜಿತಃ
॥ ೪೬ ॥

ತಿನ್ನುತ್ತಿದ್ದರೂ, ಕುಡಿಯುತ್ತಿದ್ದರೂ, ನಿದ್ರಿಸುತ್ತಿದ್ದರೂ, ಮಾತಾಡುತ್ತಿದ್ದರೂ ಇದಾವುದೂ ಅವನಿಗೆ ತಿಳಿಯುತ್ತಿರಲಿಲ್ಲ. ॥ ೩೮ ॥ ಕೆಲವೊಮ್ಮೆ ಅವನು ವೈಕುಂಠಪತಿಯು ತನ್ನನ್ನಗಲಿ ಹೋದನೆಂದು ಅಳುತ್ತಿದ್ದನು. ಕೆಲವೊಮ್ಮೆ ಆತನನ್ನು ಚಿಂತಿಸುತ್ತಾ ಆನಂದದಿಂದ ನಗುತ್ತಿದ್ದನು. ಕೆಲವೊಮ್ಮೆ ಅವನು ಧ್ಯಾನದ ಮಧುರ ಆನಂದವನ್ನು ಅನುಭವಿಸುತ್ತಾ ಗಟ್ಟಿಯಾಗಿ ಹಾಡುತ್ತಿದ್ದನು. ॥ ೩೯ ॥ ಕೆಲವೊಮ್ಮೆ ಅವನು ಉತ್ಸುಕತೆಯಿಂದ ಕೂಗಿಕೊಳ್ಳುತ್ತಿದ್ದನು. ಕೆಲವೊಮ್ಮೆ ನಿರ್ಲಜ್ಜನಾಗಿ ಹಾರಿ-ಹಾರಿ ಕುಣಿಯುತ್ತಿದ್ದನು. ಕೆಲವೊಮ್ಮೆ ಆತನ ಲೀಲೆಗಳನ್ನು ಚಿಂತಿಸುತ್ತಾ ತನ್ಮಯನಾಗಿ ತಿಳಿಯದೆಯೇ ಅವನನ್ನೇ ಅನುಕರಿಸುತ್ತಿದ್ದನು. ॥ ೪೦ ॥ ಕೆಲವೊಮ್ಮೆ ಒಳ-ಒಳಗೆ ಭಗವಂತನ ಕೋಮಲ ಸ್ಪರ್ಶವನ್ನು ಅನುಭವಿಸುತ್ತಾ ಆನಂದಮಗ್ನನಾಗಿ, ರೋಮಾಂಚಿತಗೊಂಡು ಸುಮ್ಮನೆ ಕುಳಿತುಬಿಡುತ್ತಿದ್ದನು. ಆತನ ಅರೆತೆರೆದ ಕಣ್ಣುಗಳು ಪ್ರೇಮದ ಮತ್ತು ಆನಂದದ ಕಂಬನಿಗಳಿಂದ ತುಂಬಿರುತ್ತಿದ್ದವು. ॥ ೪೧ ॥ ಭಗವಾನ್ ಶ್ರೀಕೃಷ್ಣನ ಚರಣಾರವಿಂದಗಳಲ್ಲಿ ಇಂತಹ ಭಕ್ತಿಯು ಅಕಿಂಚನರಾದ ಭಗವತ್ಪ್ರೇಮಿ ಮಹಾತ್ಮರ ಸಂಗದಿಂದ ಆತನಿಗೆ ಉಂಟಾಯಿತು. ಅದರಿಂದ ಆತನ ಮನಸ್ಸು ಪರಮಾನಂದದಲ್ಲಿ ಮುಳುಗಿರುತ್ತಿತ್ತು. ಇಷ್ಟೇ ಅಲ್ಲ, ಅವನ ಸಂಗದಿಂದ ದುಸ್ಸಹವಾಸದಿಂದ ದೀನರಾಗಿದ್ದ ಜನರಿಗೂ ಕೂಡ ಶಾಂತಿಯು ದೊರೆಯುತ್ತಿತ್ತು. ॥ ೪೨ ॥ ಯುಧಿಷ್ಠಿರನೇ! ಪ್ರಹ್ಲಾದನು ಭಗವಂತನ ಪರಮಪ್ರೇಮಿ ಭಕ್ತನೂ, ಪರಮಭಾಗ್ಯಶಾಲಿಯೂ, ಶ್ರೇಷ್ಠಮಟ್ಟದ ಮಹಾತ್ಮನೂ ಆಗಿದ್ದನು. ಹಿರಣ್ಯಕಶಿಪು ಇಂತಹ ಸಾಧು ಸ್ವಭಾವದ ಪುತ್ರನನ್ನೂ ಕೂಡ ಅಪರಾಧಿಯೆಂದು ತಿಳಿದು ಅವನಿಗೆ ಅನಿಷ್ಟವನ್ನುಂಟುಮಾಡಲು ಪ್ರಯತ್ನಿಸತೊಡಗಿದನು.॥ ೪೩॥

ಯುಧಿಷ್ಠಿರನು ಕೇಳಿದನು – ದೇವರ್ಷಿಗಳೇ! ನಿಮ್ಮ ವ್ರತವು ಅಖಂಡವಾಗಿದೆ. ಹಿರಣ್ಯಕಶಿಪುವು ತಂದೆಯಾಗಿದ್ದರೂ ಇಂತಹ ಶುದ್ಧಹೃದಯವುಳ್ಳ ಮಹಾತ್ಮನಾದ ಪುತ್ರನೊಡನೆ ಏಕೆ ದ್ರೋಹ ಮಾಡಿದನು? ಇದನ್ನು ನಾವು ತಮ್ಮಿಂದ ಕೇಳಲಿಚ್ಛಿಸುತ್ತೇವೆ. ॥ ೪೪ ॥ ತಂದೆಯಾದರೋ ಸ್ವಭಾವಿಕವಾಗಿಯೇ ತನ್ನ ಪುತ್ರನನ್ನು ಪ್ರೀತಿಸುತ್ತಾನೆ. ಅವನು ಏನಾದರೂ ವಿರುದ್ಧವಾದ ಕಾರ್ಯ ಮಾಡಿದರೂ ಅವನಿಗೆ ತಿಳಿವಳಿಕೆ ನೀಡುವುದಕ್ಕಾಗಿ ಗದರಿಸುತ್ತಾರೆಯೇ ಹೊರತು ಶತ್ರುವಿನಂತೆ ಅವನಲ್ಲಿ ವೈರ-ವಿರೋಧವನ್ನು ಮಾಡುವುದಿಲ್ಲ. ॥ ೪೫ ॥ ಹಾಗಿರುವಾಗ ಪ್ರಹ್ಲಾದನಂತಹ ವಿಧೇಯನೂ, ಶುದ್ಧಹೃದಯನೂ, ಗುರುಹಿರಿಯರಲ್ಲಿ ಭಗವದ್ಭಾವವನ್ನು ಇರಿಸುವವನೂ ಆದ ಪುತ್ರನಲ್ಲಿ ಯಾರು ತಾನೇ ದ್ವೇಷ ಮಾಡಬಲ್ಲನು? ನಾರದರೇ! ಎಲ್ಲವನ್ನು ಬಲ್ಲವರು ನೀವು. ತಂದೆಯು ದ್ವೇಷದಿಂದ ಪುತ್ರನನ್ನು ಕೊಂದುಹಾಕಲು ಬಯಸಿದನು. ಇದನ್ನು ತಿಳಿದು ನಮಗೆ ತುಂಬಾ ಕುತೂಹಲ ಉಂಟಾಗಿದೆ. ಅದನ್ನು ತಾವು ಶಾಂತಗೊಳಿಸಿರಿ. ॥ ೪೬॥

ನಾಲ್ಕನೆಯ ಅಧ್ಯಾಯವು ಮುಗಿಯಿತು. ॥ ೪ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಸಪ್ತಮ ಸ್ಕಂಧೇ
ಪ್ರಹ್ಲಾದಚರಿತೇ ಚತುರ್ಥೋಽಧ್ಯಾಯಃ ॥ ೪ ॥

ಐದನೆಯ ಅಧ್ಯಾಯ

ಹಿರಣ್ಯಕಶಿಪುವು ಪ್ರಹ್ಲಾದನನ್ನು ವಧಿಸಲು ಪ್ರಯತ್ನಿಸಿದುದು

ನಾರದ ಉವಾಚ

ಪೌರೋಹಿತ್ಯಾಯ ಭಗವಾನ್ವೃತಃ ಕಾವ್ಯಃ ಕಿಲಾಸುರೈಃ ।
ಶಂಡಾಮರ್ಕೌ ಸುತೌ ತಸ್ಯ ದೈತ್ಯರಾಜಗೃಹಾಂತಿಕೇ ॥ ೧ ॥

ತೌ ರಾಜ್ಞಾ ಪ್ರಾಪಿತಂ ಬಾಲಂ ಪ್ರಹ್ಲಾದಂ ನಯಕೋವಿದಮ್ ।
ಪಾಠಯಾಮಾಸತುಃ ಪಾಠ್ಯಾನನ್ಯಾಂಶ್ಚಾಸುರಬಾಲಕಾನ್ ॥ ೨ ॥

ಯತ್ತತ್ರ ಗುರುಣಾ ಪ್ರೋಕ್ತಂ ಶುಶ್ರುವೇಽನು ಪಪಾಠ ಚ ।
ನ ಸಾಧು ಮನಸಾ ಮೇನೇ ಸ್ವಪರಾಸದ್ಗ್ರಹಾಶ್ರಯಮ್ ॥ ೩ ॥

ಏಕದಾಸುರರಾಟ್ಪುತ್ರಮಂಕಮಾರೋಪ್ಯ ಪಾಂಡವ ।
ಪಪ್ರಚ್ಛ ಕಥ್ಯತಾಂ ವತ್ಸ ಮನ್ಯತೇ ಸಾಧು ಯದ್ಭವಾನ್ ॥ ೪ ॥

ಪ್ರಹ್ಲಾದ ಉವಾಚ

ತತ್ಸಾಧು ಮನ್ಯೇಽಸುರವರ್ಯ ದೇಹಿನಾಂ
ಸದಾ ಸಮುದ್ವಿಗ್ನಧಿಯಾಮಸದ್ಗ್ರಹಾತ್ ।
ಹಿತ್ವಾಽಽತ್ಮಪಾತಂ ಗೃಹಮಂಧಕೂಪಂ
ವನಂ ಗತೋ ಯದ್ಧರಿಮಾಶ್ರಯೇತ ॥ ೫ ॥

ನಾರದ ಉವಾಚ

ಶ್ರುತ್ವಾ ಪುತ್ರಗಿರೋ ದೈತ್ಯಃ ಪರಪಕ್ಷಸಮಾಹಿತಾಃ ।
ಜಹಾಸ ಬುದ್ಧಿರ್ಬಾಲಾನಾಂ ಭಿದ್ಯತೇ ಪರಬುದ್ಧಿಭಿಃ ॥ ೬ ॥

ಸಮ್ಯಗ್ವಿಧಾರ್ಯತಾಂ ಬಾಲೋ ಗುರುಗೇಹೇ ದ್ವಿಜಾತಿಭಿಃ ।
ವಿಷ್ಣುಪಕ್ಷೈಃ ಪ್ರತಿಚ್ಛನ್ನೈರ್ನ ಭಿದ್ಯೇತಾಸ್ಯ ಧೀರ್ಯಥಾ ॥ ೭ ॥

ಗೃಹಮಾನೀತಮಾಹೂಯ ಪ್ರಹ್ರಾದಂ ದೈತ್ಯಯಾಜಕಾಃ ।
ಪ್ರಶಸ್ಯ ಶ್ಲಕ್ಷ್ಣಯಾ ವಾಚಾ ಸಮಪೃಚ್ಛಂತ ಸಾಮಭಿಃ ॥ ೮ ॥

ವತ್ಸ ಪ್ರಹ್ರಾದ ಭದ್ರಂ ತೇ ಸತ್ಯಂ ಕಥಯ ಮಾ ಮೃಷಾ ।
ಬಾಲಾನತಿ ಕುತಸ್ತುಭ್ಯಮೇಷ ಬುದ್ಧಿವಿಪರ್ಯಯಃ ॥ ೯ ॥

ಬುದ್ಧಿಭೇದಃ ಪರಕೃತ ಉತಾಹೋ ತೇ ಸ್ವತೋಽಭವತ್ ।
ಭಣ್ಯತಾಂ ಶ್ರೋತುಕಾಮಾನಾಂ ಗುರೂಣಾಂ ಕುಲನಂದನ ॥ ೧೦ ॥

ನಾರದರು ಹೇಳುತ್ತಾರೆ – ಯುಧಿಷ್ಠಿರನೇ! ದೈತ್ಯರು ಪರಮ ಪೂಜ್ಯರಾದ ಶುಕ್ರಾಚಾರ್ಯರನ್ನು ತಮ್ಮ ಪುರೋಹಿತನನ್ನಾಗಿ ಕೊಂಡಿದ್ದರು. ಅವರಿಗೆ ಶಂಡ-ಅಮರ್ಕ ಎಂಬ ಇಬ್ಬರು ಪುತ್ರರಿದ್ದರು. ಅವರಿಬ್ಬರೂ ದೈತ್ಯರಾಜನ ಅರಮನೆಯ ಬಳಿಯೇ ಇದ್ದು ಹಿರಣ್ಯಕಶಿಪು ಕಳಿಸಿಕೊಟ್ಟ ನೀತಿನಿಪುಣನಾದ ಬಾಲಕ ಪ್ರಹ್ಲಾದನಿಗೆ ಮತ್ತು ಬೇರೆ ಓದಲು ಯೋಗ್ಯರಾದ ದೈತ್ಯಬಾಲಕರಿಗೆ ರಾಜ ನೀತಿ, ಅರ್ಥಶಾಸ್ತ್ರಗಳನ್ನು ಕಲಿಸುತ್ತಿದ್ದರು. ॥ ೧-೨ ॥ ಪ್ರಹ್ಲಾದನು ಗುರುಗಳು ಹೇಳಿದ ಪಾಠಗಳನ್ನು ಕೇಳುತ್ತಿದ್ದನು ಮತ್ತು ಹಾಗೆಯೇ ಗುರುಗಳಿಗೆ ಒಪ್ಪಿಸುತ್ತಿದ್ದನು. ಆದರೆ ಅವನು ಮನಸ್ಸಿನಲ್ಲಿ ಆ ಪಾಠಗಳು ಸರಿಯೆಂದು ಒಪ್ಪುತ್ತಿರಲಿಲ್ಲ. ಏಕೆಂದರೆ, ಆ ಪಾಠಗಳ ಮೂಲ ಆಧಾರ ತಾನು ಮತ್ತು ಪರರು ಎಂಬ ಮಿಥ್ಯಾ ಆಗ್ರಹವೇ ಆಗಿತ್ತು. ॥ ೩ ॥ ಧರ್ಮನಂದನಾ! ಒಂದುದಿನ ಹಿರಣ್ಯಕಶಿಪು ತನ್ನ ಪುತ್ರನಾದ ಪ್ರಹ್ಲಾದನನ್ನು ಕರೆದು ಪ್ರೇಮದಿಂದ ತೊಡೆಯಲ್ಲಿ ಕುಳ್ಳಿರಿಸಿಕೊಂಡು ಕೇಳಿದನು – ಮಗು! ನೀನು ಓದಿದರಲ್ಲಿ ಯಾವುದು ನಿನಗೆ ಒಳ್ಳೆಯದೆಂದು ಅನಿಸುತ್ತದೋ ಅದನ್ನು ಹೇಳು ನೋಡೋಣ! ॥ ೪ ॥

ಪ್ರಹ್ಲಾದನು ಹೇಳಿದನು – 'ಅಪ್ಪಾ! ಪ್ರಪಂಚದಲ್ಲಿರುವ ಪ್ರಾಣಿಗಳು 'ನಾನು–ನನ್ನದು' ಎಂಬ ಮಿಥ್ಯಾ ಆಗ್ರಹದಲ್ಲಿ ಬಿದ್ದು ಸದಾಕಾಲ ಅತ್ಯಂತ ಉದ್ವಿಗ್ನರಾಗಿರುತ್ತಾರೆ. ಅವರು ತಮ್ಮ ಅಧಃಪತನಕ್ಕೆ ಮೂಲಕಾರಣವಾದ ಹುಲ್ಲು ಮುಚ್ಚಿರುವ ಕತ್ತಲೆಯ ಬಾವಿಯಂತಿರುವ ಈ ಮನೆ–ಮಠಗಳನ್ನು ತೊರೆದು ಅರಣ್ಯಕ್ಕೆ ಹೋಗಿ ಭಗವಾನ್ ಶ್ರೀಹರಿಯಲ್ಲಿ ಶರಣುಹೊಂದುವುದೇ ಸರಿ ಎಂದು ನಾನು ತಿಳಿಯುತ್ತೇನೆ.' ॥ ೫ ॥

ನಾರದರು ಹೇಳುತ್ತಾರೆ – ಪ್ರಹ್ಲಾದನು ಹೀಗೆ ಶತ್ರುಪಕ್ಷವನ್ನು ಪ್ರಶಂಸೆಮಾಡುತ್ತಾ ಆಡಿದ ಮಾತುಗಳನ್ನು ಕೇಳಿ ಹಿರಣ್ಯಕಶಿಪು ಗಹಗಹಿಸಿ ನಕ್ಕುಬಿಟ್ಟನು. ಇತರರು ಆಡುವ ಒಡಕು ಮಾತುಗಳಿಂದ ಹುಡುಗರ ಬುದ್ಧಿಯು ಕೆಟ್ಟುಹೋಗುವುದು. ॥ ೬ ॥ ಗುರುಗಳ ಮನೆಯಲ್ಲಿ ವಿಷ್ಣುವಿನ ಪಕ್ಷಪಾತಿಗಳಾದ ಯಾರೋ ಬ್ರಾಹ್ಮಣರು ವೇಷಬದಲಿಸಿ ವಾಸಮಾಡುತ್ತಾರೆಂದು ಕಾಣುತ್ತದೆ. ಆದರಿಂದ ನಮ್ಮ ಮಗುವಿನ ಬುದ್ಧಿಯು ಕೆಡದಂತೆ ಸರಿಯಾಗಿ ನೋಡಿಕೊಳ್ಳಿ ಎಂದು ಅಧ್ಯಾಪಕರಿಗೆ ಆದೇಶ ನೀಡಿದನು. ॥ ೭ ॥

ದೈತ್ಯರು ಪ್ರಹ್ಲಾದನನ್ನು ಗುರುಗಳ ಮನೆಗೆ ಕರೆತಂದು ಬಂದಾಗ ದೈತ್ಯಪುರೋಹಿತರು ಅವನನ್ನು ಹತ್ತಿರಕ್ಕೆ ಕರೆದು ಸವಿಮಾತುಗಳಿಂದ ಪುಸಲಾಯಿಸುತ್ತಾ ಕೇಳಿದರು– ॥ ೮ ॥ ಮಗು ಪ್ರಹ್ಲಾದ! ನಿನಗೆ ಮಂಗಳವಾಗಲಿ. ನಿಜವಾಗಿ ಹೇಳು. ಸುಳ್ಳು ಹೇಳಬೇಡ. ನಿನ್ನ ಬುದ್ಧಿಯು ಏಕೆ ಹೀಗೆ ತಲೆಕೆಳಗಾಯಿತು? ಬೇರೆ ಯಾವ ಹುಡುಗರಿಗೂ ಹೀಗಾಗಿಲ್ಲವಲ್ಲ! ॥ ೯ ॥ ಕುಲಮಣಿಯೇ! ಮಗು! ನಿನ್ನ ಗುರುಗಳಾದ ನಾವು ಇದನ್ನು ತಿಳಿಯಬಯಸುತ್ತೇವೆ. ನಿನ್ನ ಬುದ್ಧಿಯು ತಾನಾಗಿಯೇ ಹೀಗಾಯಿತೋ ಅಥವಾ ಯಾರಾದರೂ ನಿಜವಾಗಿ ನಿನ್ನನ್ನು ಪ್ರಚೋದಿಸಿರುವರೇ? ಹೇಳು, ಮಗು! ಎಂದಾಗ ಪ್ರಹ್ಲಾದನು ಉತ್ತರಿಸಿದನು ॥ ೧೦ ॥

ಪ್ರಹ್ಲಾದ ಉವಾಚ

ಸ್ವಃ ಪರಶ್ಚೇತ್ಯಸದ್ಗ್ರಾಹಃ ಪುಂಸಾಂ ಯನ್ಮಾಯಯಾ ಕೃತಃ ।
ವಿಮೋಹಿತಧಿಯಾಂ ದೃಷ್ಟಸ್ತಸ್ಮೈ ಭಗವತೇ ನಮಃ ॥ ೧೧ ॥

ಸ ಯದಾನುವ್ರತಃ ಪುಂಸಾಂ ಪಶುಬುದ್ಧಿರ್ವಿಭಿದ್ಯತೇ ।
ಅನ್ಯ ಏಷ ತಥಾನ್ಯೋಽಹಮಿತಿ ಭೇದಗತಾಸತೀ ॥ ೧೨ ॥

ಸ ಏಷ ಆತ್ಮಾ ಸ್ವಪರೇತ್ಯಬುದ್ಧಿಭಿ-
ರ್ದುರತ್ಯಯಾನುಕ್ರಮಣೋ ನಿರೂಪ್ಯತೇ ।
ಮುಹ್ಯಂತಿ ಯದ್ವರ್ತ್ಮನಿ ವೇದವಾದಿನೋ
ಬ್ರಹ್ಮಾದಯೋ ಹ್ಯೇಷ ಭಿನತ್ತಿ ಮೇ ಮತಿಮ್ ॥ ೧೩ ॥

ಯಥಾ ಭ್ರಾಮ್ಯತ್ಯಯೋ ಬ್ರಹ್ಮನ್ ಸ್ವಯಮಾಕರ್ಷಸನ್ನಿಧೌ ।
ತಥಾ ಮೇ ಭಿದ್ಯತೇ ಚೇತಶ್ಚಕ್ರಪಾಣೇರ್ಯದೃಚ್ಛಯಾ ॥ ೧೪ ॥

ನಾರದ ಉವಾಚ

ಏತಾವದ್ಬ್ರಾಹ್ಮಣಾಯೋಕ್ತ್ವಾ ವಿರರಾಮ ಮಹಾಮತಿಃ ।
ತಂ ನಿರ್ಭರ್ತ್ಸ್ಯಾಥ ಕುಪಿತಃ ಸ ದೀನೋ ರಾಜಸೇವಕಃ ॥ ೧೫ ॥

ಆನೀಯತಾಮರೇ ವೇತ್ರಮಸ್ಮಾಕಮಯಶಸ್ಕರಃ ।
ಕುಲಾಂಗಾರಸ್ಯ ದುರ್ಬುದ್ಧೇಶ್ಚತುರ್ಥೋಽಸ್ಯೋದಿತೋ ದಮಃ ॥ ೧೬ ॥

ದೈತೇಯಚಂದನವನೇ ಜಾತೋಽಯಂ ಕಂಟಕದ್ರುಮಃ ।
ಯನ್ಮೂಲೋನ್ಮೂಲಪರಶೋರ್ವಿಷ್ಣೋರ್ನಾಲಾಯಿತೋಽರ್ಭಕಃ ॥ ೧೭ ॥

ಇತಿ ತಂ ವಿವಿಧೋಪಾಯೈರ್ಭೀಷಯಂಸ್ತರ್ಜನಾದಿಭಿಃ ।
ಪ್ರಹ್ಲಾದಂ ಗ್ರಾಹಯಾಮಾಸ ತ್ರಿವರ್ಗಸ್ಯೋಪಪಾದನಮ್ ॥ ೧೮ ॥

ತತ ಏನಂ ಗುರುರ್ಜ್ಞಾತ್ವಾ ಜ್ಞಾತಜ್ಞೇಯಚತುಷ್ಟಯಮ್ ।
ದೈತ್ಯೇಂದ್ರಂ ದರ್ಶಯಾಮಾಸ ಮಾತೃಮೃಷ್ಟಮಲಂಕೃತಮ್ ॥ ೧೯ ॥

ಪಾದಯೋಃ ಪತಿತಂ ಬಾಲಂ ಪ್ರತಿನಂದ್ಯಾಶಿಷಾಸುರಃ ।
ಪರಿಷ್ವಜ್ಯ ಚಿರಂ ದೋರ್ಭ್ಯಾಂ ಪರಮಾಮಾಪ ನಿರ್ವೃತಿಮ್ ॥ ೨೦ ॥

ಪ್ರಹ್ಲಾದನು ಹೇಳಿದನು – ಯಾರ ಬುದ್ಧಿಯು ಮೋಹದಿಂದ ಗ್ರಸ್ತವಾಗಿದೆಯೋ ಅವನಿಗೆ ಭಗವಂತನ ಮಾಯೆಯಿಂದ – 'ಇವನು ನನ್ನವನು – ಇವನು ಬೇರೆಯವನು ಎಂಬ ಈ ಅಸತ್ ದುರಾಗ್ರಹವು ಉಂಟಾಗುತ್ತದೆ. ಆ ಮಾಯೆಗೆ ಅಧಿಪತಿಯಾದ ಭಗವಂತನಿಗೆ ನಮಸ್ಕರಿಸುತ್ತೇನೆ. ॥ ೧೧ ॥ ಆ ಭಗವಂತನು ಕೃಪೆ ದೋರಿದಾಗಲೇ ಮನುಷ್ಯರ ಪಾಶವಿಕ ಬುದ್ಧಿಯು ನಾಶವಾಗುತ್ತದೆ. ಈ ಪಶುಬುದ್ಧಿಯಿಂದಲೇ 'ಇದು ನಾನು – ಇವನು ನನ್ನಿಂದ ಬೇರೆಯವನು' ಎಂಬ ಸುಳ್ಳಾದ ಭೇದ-ಭಾವವು ಉಂಟಾಗುತ್ತದೆ. ॥ ೧೨ ॥ ಅದೇ ಪರಮಾತ್ಮನು ಈ ಆತ್ಮನಾಗಿರುವನು. ಅಜ್ಞಾನೀ ಜನರು ತನ್ನದು ಮತ್ತು ಬೇರೆಯವರದು ಎಂಬ ಭೇದವನ್ನು ಮಾಡಿ ಅವನನ್ನು ವರ್ಣಿಸುತ್ತಾರೆ. ಅವರ ತಿಳುವಳಿಕೆಯು ಸರಿಯಾದುದಲ್ಲ. ಏಕೆಂದರೆ, ಅದರ ತತ್ತ್ವವನ್ನು ತಿಳಿಯುವುದು ತುಂಬಾ ಕಷ್ಟ, ಬ್ರಹ್ಮಾದಿ ದೊಡ್ಡ-ದೊಡ್ಡ ವೇದಜ್ಞರೂ ಕೂಡ ಅದರ ವಿಷಯದಲ್ಲಿ ಮೋಹಿತರಾಗುತ್ತಾರೆ. ನಿಮ್ಮ ಭಾಷೆಯಲ್ಲಿ ಹೇಳುವುದಾದರೆ – ಆ ಪರಮಾತ್ಮನೇ ನನ್ನ ಬುದ್ಧಿಯನ್ನು ಕೆಡಿಸಿರುವನು. ॥ ೧೩ ॥ ಗುರುಗಳೇ! ಸೂಜಿಗಲ್ಲಿನ ಕಡೆಗೆ ಕಬ್ಬಿಣವು ತಾನಾಗಿ ಸೆಳೆಯಲ್ಪಡುವಂತೆ ಚಕ್ರಪಾಣಿಯಾದ ಭಗವಂತನ ಸ್ವತಂತ್ರ ಇಚ್ಛೆಯಿಂದಲೇ ನನ್ನ ಚಿತ್ತವೂ ಕೂಡ ಪ್ರಪಂಚದಿಂದ ಬೇರೆಯಾಗಿ ಆತನ ಕಡೆಗೆ ಬಲವಂತವಾಗಿ ಸೆಳೆಯಲ್ಪಟ್ಟಿದೆ. ॥ ೧೪ ॥

ನಾರದರು ಹೇಳುತ್ತಾರೆ – ಮಹಾಜ್ಞಾನಿಯಾದ ಪ್ರಹ್ಲಾದನು ಇಷ್ಟು ಹೇಳಿ ಸುಮ್ಮನಾದನು. ಬಡಪಾಯಿಗಳಾದ ಪುರೋಹಿತರಾದರೋ ರಾಜಸೇವಕರು, ಪರಾಧೀನರಾಗಿದ್ದರು. ರಾಜನಿಗೆ ಹೆದರಿ ಅವರು ಪ್ರಹ್ಲಾದನ ಮೇಲೆ ಕೋಪಗೊಂಡು ಆತನನ್ನು ಗದರಿಸುತ್ತಾ ಹೀಗೆಂದರು – ॥ ೧೫ ॥ 'ಅರೇ! ಯಾರಲ್ಲಿ? ನನ್ನ ಬೆತ್ತ ತೆಗೆದುಕೊಂಡು ಬನ್ನಿ. ಇವನು ನಮ್ಮ ಕೀರ್ತಿಗೆ ಕಳಂಕವನ್ನು ತರುತ್ತಿದ್ದಾನೆ. ಕುಲಾಂಗಾರನಾದ ಈ ದುರ್ಬುದ್ಧಿಗೆ ನಾಲ್ಕನೆಯ ಉಪಾಯವಾದ ದಂಡವನ್ನು ಪ್ರಯೋಗಿಸುವುದೇ ಉಚಿತವಾಗಿದೆ. ॥ ೧೬ ॥ ದೈತ್ಯವಂಶವೆಂಬ ಶ್ರೀಗಂಧದ ಕಾಡಿನಲ್ಲಿ ಈ ಮುಳ್ಳಿನ ಜಾಲಿಮರ ಹೇಗೆ ಹುಟ್ಟಿಕೊಂಡಿತು? ಈ ವನದ ಬೇರನ್ನೇ ಕತ್ತರಿಸಲು ಕೊಡಲಿಯಂತೆ ಕೆಲಸಮಾಡುವ ವಿಷ್ಣುವಿಗೆ ಈ ಬಾಲಕನು ಅದರ ಕಾವಿನಂತಿದ್ದಾನೆ, ಸಹಾಯಕನಾಗುತ್ತಿದ್ದಾನೆ. ॥ ೧೭ ॥ ಹೀಗೆ ಪ್ರಹ್ಲಾದನನ್ನು ಗುರುಗಳು ಬಗೆ-ಬಗೆಯಾಗಿ ಗದರಿಸಿ, ಹೆದರಿಸಿ ಆತನಿಗೆ ಧರ್ಮ, ಅರ್ಥ ಮತ್ತು ಕಾಮ ಸಂಬಂಧವಾದ ಶಿಕ್ಷಣವನ್ನು ಕೊಟ್ಟರು. ॥ ೧೮ ॥ ಕೆಲ ಸಮಯದ ನಂತರ ಪ್ರಹ್ಲಾದನು ಸಾಮ, ದಾನ, ಭೇದ ಮತ್ತು ದಂಡಗಳೆಂಬ ನಾಲ್ಕು ಉಪಾಯಗಳ ಸಂಬಂಧವಾಗಿ ಎಲ್ಲ ವಿಷಯಗಳನ್ನು ಗ್ರಹಿಸಿರುವನು ಎಂದು ತಿಳಿದು ಗುರುಗಳು ಅವನನ್ನು ಅವನ ತಾಯಿಯ ಬಳಿಗೆ ಕರೆತಂದರು. ತಾಯಿಯು ಪ್ರೀತಿಯಿಂದ ಅವನಿಗೆ ಸ್ನಾನಮಾಡಿಸಿ, ಉಡಿಗೆ-ತೊಡಿಗೆಗಳಿಂದ ಅಲಂಕಾರ ಮಾಡಿದಳು. ಅನಂತರ ಗುರುಜನರು ಆತನನ್ನು ಹಿರಣ್ಯಕಶಿಪುವಿನ ಬಳಿಗೆ ಕೊಂಡೊಯ್ದರು. ॥ ೧೯ ॥ ಪ್ರಹ್ಲಾದನು ತನ್ನ ಪಾದಗಳಿಗೆ ಬೀಳಲು ದೈತ್ಯೇಂದ್ರನು ಅವನಿಗೆ ಆಶೀರ್ವದಿಸಿ, ಎರಡೂ ಕೈಗಳಿಂದ ಎತ್ತಿಕೊಂಡು ಬಹಳ ಹೊತ್ತಿನವರೆಗೆ ಆಲಿಂಗಿಸಿಕೊಂಡು ಪರಮಾನಂದಭರಿತನಾದನು. ॥ ೨೦ ॥

ಆರೋಪ್ಯಾಂಕಮವಘ್ರಾಯ ಮೂರ್ಧನ್ಯಶ್ರುಕಲಾಂಬುಭಿಃ ।
ಆಸಿಂಚನ್ವಿಕಸದ್ವಕ್ತ್ರಮಿದಮಾಹ ಯುಧಿಷ್ಠಿರ ॥ ೨೧ ॥

ಹಿರಣ್ಯಕಶಿಪುರುವಾಚ

ಪ್ರಹ್ಲಾದಾನೂಚ್ಯತಾಂ ತಾತ ಸ್ವಧೀತಂ ಕಿಂಚಿದುತ್ತಮಮ್ ।
ಕಾಲೇನೈತಾವತಾಽಽಯುಷ್ಮನ್ಯದಶಿಕ್ಷದ್ಗುರೋರ್ಭವಾನ್ ॥ ೨೨ ॥

ಪ್ರಹ್ಲಾದ ಉವಾಚ

ಶ್ರವಣಂ ಕೀರ್ತನಂ ವಿಷ್ಣೋಃ ಸ್ಮರಣಂ ಪಾದಸೇವನಮ್ ।
ಅರ್ಚನಂ ವಂದನಂ ದಾಸ್ಯಂ ಸಖ್ಯಮಾತ್ಮನಿವೇದನಮ್ ॥ ೨೩ ॥

ಇತಿ ಪುಂಸಾರ್ಪಿತಾ ವಿಷ್ಣೌ ಭಕ್ತಿಶ್ಚೇನ್ನವಲಕ್ಷಣಾ ।
ಕ್ರಿಯೇತ ಭಗವತ್ಯದ್ಧಾ ತನ್ಮನ್ಯೇಽಧೀತಮುತ್ತಮಮ್ ॥ ೨೪ ॥

ನಿಶಮ್ಯೈತತ್ಸುತವಚೋ ಹಿರಣ್ಯಕಶಿಪುಸ್ತದಾ ।
ಗುರುಪುತ್ರಮುವಾಚೇದಂ ರುಷಾ ಪ್ರಸ್ಫುರಿತಾಧರಃ ॥ ೨೫ ॥

ಬ್ರಹ್ಮಬಂಧೋ ಕಿಮೇತತ್ತೇ ವಿಪಕ್ಷಂ ಶ್ರಯತಾಸತಾ ।
ಅಸಾರಂ ಗ್ರಾಹಿತೋ ಬಾಲೋ ಮಾಮನಾದೃತ್ಯ ದುರ್ಮತೇ ॥ ೨೬ ॥

ಸಂತಿ ಹ್ಯಸಾಧವೋ ಲೋಕೇ ದುರ್ಮೈತ್ರಾಶ್ಛದ್ಮವೇಷಿಣಃ ।
ತೇಷಾಮುದೇತ್ಯಘಂ ಕಾಲೇ ರೋಗಃ ಪಾತಕಿನಾಮಿವ ॥ ೨೭ ॥

ಗುರುಪುತ್ರ ಉವಾಚ

ನ ಮತ್ಪ್ರಣೀತಂ ನ ಪರಪ್ರಣೀತಂ
ಸುತೋ ವದತ್ಯೇಷ ತವೇಂದ್ರಶತ್ರೋ ।
ನೈಸರ್ಗಿಕೀಯಂ ಮತಿರಸ್ಯ ರಾಜ-
ನ್ನಿಯಚ್ಛ ಮನ್ಯುಂ ಕದದಾಃ ಸ್ಮ ಮಾ ನಃ ॥ ೨೮ ॥

ನಾರದ ಉವಾಚ

ಗುರುಣೈವಂ ಪ್ರತಿಪ್ರೋಕ್ತೋ ಭೂಯ ಆಹಾಸುರಃ ಸುತಮ್ ।
ನ ಚೇದ್ಗುರುಮುಖೀಯಂ ತೇ ಕುತೋಽಭದ್ರಾಸತೀ ಮತಿಃ ॥ ೨೯ ॥

ಯುಧಿಷ್ಠಿರನೇ! ಹಿರಣ್ಯಕಶಿಪು ಪ್ರಸನ್ನಮುಖದಿಂದ ಪ್ರಹ್ಲಾದನನ್ನು ತನ್ನ ತೊಡೆಯಮೇಲೆ ಕುಳ್ಳಿರಿಸಿಕೊಂಡು ಅವನ ಶಿರವನ್ನು ಆಘ್ರಾಣಿಸಿದನು. ಅವನ ಕಣ್ಣುಗಳಿಂದ ಪ್ರೇಮಾಶ್ರುಗಳು ಸುರಿ-ಸುರಿದು ಪ್ರಹ್ಲಾದನ ಶರೀರವನ್ನು ನೆನೆಸಿದವು. ಅವನು ತನ್ನ ಪುತ್ರನಲ್ಲಿ ಕೇಳಿದನು – ॥ ೨೧ ॥

ಹಿರಣ್ಯಕಶಿಪು ಹೇಳಿದನು – 'ಮಗು ಪ್ರಹ್ಲಾದ! ಚಿರಂಜೀವಿಯಾಗು! ಇಷ್ಟು ದಿನಗಳಲ್ಲಿ ನೀನು ಗುರುಗಳಿಂದ ಕಲಿತಿರುವುದರಲ್ಲಿ ಯಾವುದಾದರೂ ಒಳ್ಳೆಯ ಒಂದು ಮಾತನ್ನು ಹೇಳು, ನೋಡೋಣ.' ॥ ೨೨ ॥

ಪ್ರಹ್ಲಾದನು ಹೇಳಿದನು – ತೀರ್ಥರೂಪರೇ! ಭಗವಾನ್ ವಿಷ್ಣುವಿನ ಭಕ್ತಿಯಲ್ಲಿ ಒಂಭತ್ತು ಭೇದಗಳಿವೆ. ಭಗವಂತನ ಗುಣ-ಲೀಲೆ-ನಾಮ ಇವುಗಳನ್ನು ಕೇಳುವುದು, ಅವನನ್ನೇ ಕೀರ್ತಿಸುವುದು, ಅವನ ನಾಮ-ರೂಪಾದಿಗಳನ್ನು ಸ್ಮರಿಸುವುದು, ಅವನ ಚರಣಗಳ ಸೇವೆ ಮಾಡುವುದು, ಪೂಜೆ-ಅರ್ಚನೆ ಮಾಡುವುದು, ವಂದಿಸುವುದು, ದಾಸನಾಗುವುದು, ಸಖ್ಯವಿರಿಸುವುದು, ಆತ್ಮನಿವೇದನ ಮಾಡುವುದು. ಭಗವಂತನ ಕುರಿತು ಸಮರ್ಪಣ ಭಾವದಿಂದ ಈ ಒಂಭತ್ತು ಪ್ರಕಾರದ ಭಕ್ತಿಯನ್ನು ಮಾಡಿದರೆ, ನಾನು ಅದನ್ನೇ ಉತ್ತಮ ಅಧ್ಯಯನವೆಂದು ತಿಳಿಯುತ್ತೇನೆ. ॥ ೨೩-೨೪ ॥ ಪ್ರಹ್ಲಾದನ ಈ ಮಾತನ್ನು ಕೇಳುತ್ತಲೇ ಕ್ರೋಧದಿಂದ ಹಿರಣ್ಯಕಶಿಪುವಿನ ತುಟಿಗಳು ಅದುರ ತೊಡಗಿದವು. ಅವನು ಗುರುಪುತ್ರರಲ್ಲಿ ಹೇಳಿದನು– ॥ ೨೫ ॥ ಎಲೈ ಬ್ರಾಹ್ಮಣಾಧಮನೇ! ನೀನು ಎಂತಹ ಪಿತೂರಿಯನ್ನು ಮಾಡಿದ್ದೀಯೆ. ದುರ್ಬುದ್ಧಿಯವನೇ! ನೀನು ನನ್ನನ್ನು ಸ್ವಲ್ಪವೂ ಲಕ್ಷಿಸದೆ ಈ ಹುಡುಗನಿಗೆ ಎಂತಹ ನಿಸ್ಸಾರವಾದ ಶಿಕ್ಷಣವನ್ನು ಕೊಟ್ಟಿರುವೆ. ಖಂಡಿತವಾಗಿಯೂ ನೀನು ನಮ್ಮ ಶತ್ರುಗಳ ಆಶ್ರಿತನಾಗಿರುವೆ. ॥ ೨೬ ॥ ಜಗತ್ತಿನಲ್ಲಿ ಸ್ನೇಹಿತರಂತೆ ಮುಂದೆ ನಟಿಸಿ ಹಿಂದಿನಿಂದ ಶತ್ರುಗಳಂತೆ ಕಾರ್ಯ ಮಾಡುವಂತಹ ದುಷ್ಟರ ಕೊರತೆಯಿಲ್ಲ. ಆದರೆ ಮರೆಯಲ್ಲಿ ಮಾಡಿದ ಪಾಪವು ಸಮಯ ಬಂದಾಗ ರೋಗದ ರೂಪದಲ್ಲಿ ಪ್ರಕಟಗೊಂಡು ಬಯಲಾಗುವಂತೆ – ಅವರ ಕಪಟವು ಬಹಿರಂಗಕ್ಕೆ ಬಂದೇ ಬರುವುದು. ॥ ೨೭ ॥

ಗುರುಪುತ್ರರು ಹೇಳಿದರು – ಎಲೈ ಇಂದ್ರಶತ್ರುವೇ! ನಿನ್ನ ಪುತ್ರನು ಹೇಳುತ್ತಿರುವುದು ನಾನು ಹೇಳಿಕೊಟ್ಟದ್ದಲ್ಲ ಅಥವಾ ಬೇರೆ ಯಾರಿಂದಲೂ ಕಲಿತದ್ದಲ್ಲ. ರಾಜನೇ! ಇದಾದರೋ ಇವನ ಜನ್ಮಜಾತ ಸ್ವಾಭಾವಿಕ ಬುದ್ಧಿಯಾಗಿದೆ. ಕೋಪವನ್ನು ಶಾಂತಪಡಿಸಿಕೊಳ್ಳಿ, ವ್ಯರ್ಥವಾಗಿ ನಮ್ಮ ಮೇಲೆ ದೋಷವನ್ನು ಹೊರಿಸಬೇಡಿ. ॥ ೨೮ ॥

ನಾರದರು ಹೇಳಿದರು – ಯುಧಿಷ್ಠಿರನೇ! ಗುರುಗಳು ಹೀಗೆ ಉತ್ತರಿಸಿದಾಗ ಹಿರಣ್ಯಕಶಿಪು ಪುನಃ ಪ್ರಹ್ಲಾದನಲ್ಲಿ – 'ಎಲವೋ! ಅಹಿತವನ್ನುಂಟುಮಾಡುವ ಮೋಸದ ಬುದ್ಧಿಯು ನಿನಗೆ ಗುರುಮುಖದಿಂದ ಬಂದಿಲ್ಲವಾದರೆ ಎಲ್ಲಿಂದ ಬಂತು? ಎಂದು ಕೇಳಿದನು. ॥ ೨೯ ॥

ಪ್ರಹ್ಲಾದ ಉವಾಚ

ಮತಿರ್ನ ಕೃಷ್ಣೇ ಪರತಃ ಸ್ವತೋ ವಾ
ಮಿಥೋಽಭಿಪದ್ಯೇತ ಗೃಹವ್ರತಾನಾಮ್ ।
ಅದಾಂತಗೋಭಿರ್ವಿಶತಾಂ ತಮಿಸ್ರಂ
ಪುನಃ ಪುನಶ್ಚರ್ವಿತಚರ್ವಣಾನಾಮ್ ॥ ೩೦ ॥

ನ ತೇ ವಿದುಃ ಸ್ವಾರ್ಥಗತಿಂ ಹಿ ವಿಷ್ಣುಂ
ದುರಾಶಯಾ ಯೇ ಬಹಿರರ್ಥಮಾನಿನಃ ।
ಅಂಧಾ ಯಥಾಂಧೈರುಪನೀಯಮಾನಾ
ವಾಚೀಶತಂತ್ಯಾಮುರುದಾಮ್ನಿ ಬದ್ಧಾಃ ॥ ೩೧ ॥

ನೈಷಾಂ ಮತಿಸ್ತಾವದುರುಕ್ರಮಾಂಘ್ರಿಂ
ಸ್ಪೃಶತ್ಯನರ್ಥಾಪಗಮೋ ಯದರ್ಥಃ ।
ಮಹೀಯಸಾಂ ಪಾದರಜೋಽಭಿಷೇಕಂ
ನಿಷ್ಕಿಂಚನಾನಾಂ ನ ವೃಣೀತ ಯಾವತ್ ॥ ೩೨ ॥

ಇತ್ಯುಕ್ತ್ವೋಪರತಂ ಪುತ್ರಂ ಹಿರಣ್ಯಕಶಿಪೂ ರುಷಾ ।
ಅಂಧೀಕೃತಾತ್ಮಾ ಸ್ವೋತ್ಸಂಗಾನ್ನಿರಸ್ಯತ ಮಹೀತಲೇ ॥ ೩೩ ॥

ಆಹಾಮರ್ಷರುಷಾವಿಷ್ಟಃ ಕಷಾಯೀಭೂತಲೋಚನಃ ।
ವಧ್ಯತಾಮಾಶ್ವಯಂ ವಧ್ಯೋ ನಿಃಸಾರಯತ ನೈರ್ಋತಾಃ ॥ ೩೪ ॥

ಅಯಂ ಮೇ ಭ್ರಾತೃಹಾ ಸೋಽಯಂ
ಹಿತ್ವಾ ಸ್ವಾನ್ಸುಹೃದೋಽಧಮಃ ।
ಪಿತೃವ್ಯಹಂತುರ್ಯಃ ಪಾದೌ
ವಿಷ್ಣೋರ್ದಾಸವದರ್ಚತಿ ॥ ೩೫ ॥

ವಿಷ್ಣೋರ್ವಾ ಸಾಧ್ವಸೌ ಕಿಂ ನು ಕರಿಷ್ಯತ್ಯಸಮಂಜಸಃ ।
ಸೌಹೃದಂ ದುಸ್ತ್ಯಜಂ ಪಿತ್ರೋರಹಾದ್ಯಃ ಪಂಚಹಾಯನಃ ॥ ೩೬ ॥

ಪರೋಽಪ್ಯಪತ್ಯಂ ಹಿತಕೃದ್ಯಥೌಷಧಂ
ಸ್ವದೇಹಜೋಽಪ್ಯಾಮಯವತ್ಸುತೋಽಹಿತಃ ।
ಛಿಂದ್ಯಾತ್ತದಂಗಂ ಯದುತಾತ್ಮನೋಽಹಿತಂ
ಶೇಷಂ ಸುಖಂ ಜೀವತಿ ಯದ್ವಿವರ್ಜನಾತ್ ॥ ೩೭ ॥

ಪ್ರಹ್ಲಾದನು ಹೇಳಿದನು – ಅಪ್ಪಾ! ಸಂಸಾರಿಗಳಾದ ಜನರು ಇಂದ್ರಿಯಗಳ ಮೇಲೆ ಹತೋಟಿಯಿಲ್ಲದಿರುವುದರಿಂದ ಅನುಭವಿಸಿದ ವಿಷಯಗಳನ್ನೇ ಮತ್ತೆ-ಮತ್ತೆ ಭೋಗಿಸಲಿಕ್ಕಾಗಿ, ಸಂಸಾರವೆಂಬ ಘೋರವಾದ ನರಕದ ಕಡೆಗೆ ಹೋಗುತ್ತಿದ್ದಾರೆ. ಚಪ್ಪರಿಸಿದುದನ್ನೇ ಮತ್ತೆ-ಮತ್ತೆ ಚಪ್ಪರಿಸುತ್ತಿರುವ ಮೂರ್ಖರು ಅವರು. ಇಂತಹ ಮನೆಯಲ್ಲೇ ಆಸಕ್ತರಾಗಿರುವವರ ಬುದ್ಧಿಯು ತಾನಾಗಿಯೇ ಯಾರದೋ ಉಪದೇಶದಿಂದ ಅಥವಾ ನಿಮ್ಮಂತಹವರ ಸಂಗದಿಂದ ಭಗವಾನ್ ಶ್ರೀಕೃಷ್ಣನಲ್ಲಿ ತೊಡಗುವುದಿಲ್ಲ. ॥ ೩೦ ॥ ಇಂದ್ರಿಯಗಳಿಂದ ಕಂಡುಬರುವ ಬಾಹ್ಯವಿಷಯಗಳನ್ನೇ ಪರಮ ಇಷ್ಟವೆಂದು ತಿಳಿದವರು ಮೂರ್ಖತೆಯಿಂದ ಕುರುಡನ ಬೆನ್ನುಹತ್ತಿದ ಕುರುಡನಂತೆ ಹಳ್ಳಕ್ಕೆ ಬೀಳಲು ಸಾಗುತ್ತಿದ್ದಾರೆ. ವೇದವಾಣೀರೂಪವಾದ ಹಗ್ಗದಿಂದ-ಕಾಮ್ಯಕರ್ಮಗಳ ದೃಢವಾದ ಬಂಧನದಿಂದ ಬಂಧಿಸಲ್ಪಟ್ಟಿರುವರು. ಅವರಿಗೆ ತಮ್ಮ ಸ್ವಾರ್ಥ ಮತ್ತು ಪರಮಾರ್ಥ ಭಗವಾನ್ ವಿಷ್ಣುವೇ ಆಗಿದ್ದಾನೆಂಬುದೂ, ಅವನ ಪ್ರಾಪ್ತಿಯಿಂದ ತಮಗೆ ಎಲ್ಲ ಪುರುಷಾರ್ಥಗಳು ದೊರೆಯಬಹುದೆಂಬುದೂ ತಿಳಿಯದು. ॥ ೩೧ ॥ ಭಗವಂತನ ಚರಣಕಮಲಗಳನ್ನು ಸ್ಪರ್ಶಿಸುವ ಬುದ್ಧಿಯುಳ್ಳವರ ಜನ್ಮ-ಮರಣರೂಪವಾದ ಅನರ್ಥಗಳು ಪೂರ್ಣವಾಗಿ ನಾಶವಾಗಿ ಹೋಗುತ್ತವೆ. ಆದರೆ ವೈರಾಗ್ಯಶೀಲರಾದ ಭಗವತ್ಪ್ರೇಮೀ ಮಹಾತ್ಮರ ಪಾದಧೂಳಿಯಲ್ಲಿ ಸ್ನಾನವನ್ನು ಮಾಡದವರ ಬುದ್ಧಿಯು ಕಾಮ್ಯಕರ್ಮಗಳನ್ನೇ ಪೂರ್ಣವಾಗಿ ಸೇವಿಸಿದರೂ ಭಗವಚ್ಚರಣಗಳ ಸ್ಪರ್ಶವನ್ನು ಮಾಡಲಾರರು. ॥ ೩೨ ॥

ಪ್ರಹ್ಲಾದನು ಇಷ್ಟು ಹೇಳಿ ಸುಮ್ಮನಾದನು. ಹಿರಣ್ಯಕಶಿಪು ಕ್ರೋಧಾಂಧನಾಗಿ ಅವನನ್ನು ತನ್ನ ತೊಡೆಯಿಂದ ಎತ್ತಿ ಭೂಮಿಗೆ ಅಪ್ಪಳಿಸಿದನು. ॥ ೩೩ ॥ ಪ್ರಹ್ಲಾದನ ಮಾತುಗಳು ಆತನಿಗೆ ಸಹಿಸಲಾಗಲಿಲ್ಲ. ಅವನ ಕಣ್ಣುಗಳು ರೋಷದಿಂದ ಕೆಂಪಾದವು. ಅವನು ತನ್ನ ಸೇವಕರಿಗೆ ಆದೇಶಿಸಿದನು. ಎಲೈ ದೈತ್ಯರೇ! ಈತನನ್ನು ಇಲ್ಲಿಂದ ಹೊರಕ್ಕೆ ಕೊಂಡುಹೋಗಿ ಕೂಡಲೇ ಕೊಂದುಹಾಕಿರಿ, ಈತನು ಕೊಲ್ಲಲು ಯೋಗ್ಯನಾಗಿದ್ದಾನೆ. ॥ ೩೪ ॥ ನೋಡಿರಲ್ಲ! ನೀಚನಾದ ಇವನು ತನ್ನ ನೆಂಟರಿಷ್ಟರನ್ನೂ, ಸ್ನೇಹಿತರನ್ನೂ ತೊರೆದು ತನ್ನ ಚಿಕ್ಕಪ್ಪನನ್ನು ಕೊಂದುಹಾಕಿದ ವಿಷ್ಣುವಿನ ಚರಣಗಳನ್ನು ದಾಸನಂತೆ ಪೂಜಿಸುತ್ತಿದ್ದಾನಲ್ಲ! ನನ್ನ ಸೋದರನನ್ನು ವಧಿಸಿದ ವಿಷ್ಣುವೇ ಇವನ ರೂಪದಲ್ಲಿ ಬಂದಿರಲಿಕ್ಕಿಲ್ಲವಲ್ಲ! ॥ ೩೫ ॥ ಈಗ ಈತನು ವಿಶ್ವಾಸಕ್ಕೆ ಯೋಗ್ಯನಲ್ಲ. ಐದು ವರ್ಷ ವಯಸ್ಸಿನವನಾಗಿರುವಾಗಲೇ ಬಿಡುವುದಕ್ಕೆ ಕಷ್ಟವಾದ ತನ್ನ ತಂದೆ-ತಾಯಿಯ ಸ್ನೇಹವನ್ನೇ ಮರೆತುಬಿಟ್ಟಿದ್ದಾನಲ್ಲ! ಇಂತಹ ಕೃತಘ್ನನು ಆ ವಿಷ್ಣುವಿಗಾದರೂ ಏನು ಒಳ್ಳೆಯದನ್ನು ಮಾಡಿಯಾನು? ॥ ೩೬ ॥ ಪರಕೀಯನೇ ಆದರೂ ಔಷಧದಂತೆ ಹಿತವನ್ನು ಮಾಡಿದರೆ ಒಂದು ವಿಧದಿಂದ ಅವನು ಪುತ್ರನೇ ಆಗಿದ್ದಾನೆ. ಆದರೆ ತನ್ನ ಪುತ್ರನೇ ಅಹಿತವನ್ನು ಮಾಡತೊಡಗಿದರೆ ರೋಗದಂತೆ ಅವನು ಶತ್ರುವೇ ಆಗಿದ್ದಾನೆ. ತನ್ನ ಶರೀರದ ಯಾವುದಾದರೂ ಅವಯವದಿಂದ ಇಡೀ ಶರೀರಕ್ಕೆ ಹಾನಿಯಾಗುವುದಿದ್ದರೆ ಅದನ್ನು ತುಂಡರಿಸಿಬಿಡ

ಸರ್ವೈರುಪಾಯೈರ್ಹಂತವ್ಯಃ ಸಂಭೋಜಶಯನಾಸನೈಃ ।
ಸುಹೃಲ್ಲಿಂಗಧರಃ ಶತ್ರುರ್ಮುನೇರ್ದುಷ್ಟಮಿವೇಂದ್ರಿಯಮ್ ॥ ೩೮ ॥

ನೈರ್ಋತಾಸ್ತೇ ಸಮಾದಿಷ್ಟಾ ಭರ್ತ್ರಾ ವೈ ಶೂಲಪಾಣಯಃ ।
ತಿಗ್ಮದಂಷ್ಟ್ರಕರಾಲಾಸ್ಯಾಸ್ತಾಮ್ರಶ್ಮಶ್ರುಶಿರೋರುಹಾಃ ॥ ೩೯ ॥

ನದಂತೋ ಭೈರವಾನ್ನಾದಾಂಶ್ಛಿಂಧಿ ಭಿಂಧೀತಿ ವಾದಿನಃ ।
ಆಸೀನಂ ಚಾಹನಞ್ ಶೂಲೈಃ ಪ್ರಹ್ಲಾದಂ ಸರ್ವಮರ್ಮಸು ॥ ೪೦ ॥

ಪರೇ ಬ್ರಹ್ಮಣ್ಯನಿರ್ದೇಶ್ಯೇ ಭಗವತ್ಯಖಿಲಾತ್ಮನಿ ।
ಯುಕ್ತಾತ್ಮನ್ಯಫಲಾ ಆಸನ್ನಪುಣ್ಯಸ್ಯೇವ ಸತ್ಕ್ರಿಯಾಃ ॥ ೪೧ ॥

ಪ್ರಯಾಸೇಽಪಹತೇ ತಸ್ಮಿಂದೈತ್ಯೇಂದ್ರಃ ಪರಿಶಂಕಿತಃ ।
ಚಕಾರ ತದ್ವಧೋಪಾಯಾನ್ನಿರ್ಬಂಧೇನ ಯುಧಿಷ್ಠಿರ ॥ ೪೨ ॥

ದಿಗ್ಗಜೈರ್ದಂದಶೂಕೈಶ್ಚ ಅಭಿಚಾರಾವಪಾತನೈಃ ।
ಮಾಯಾಭಿಃ ಸಂನಿರೋಧೈಶ್ಚ ಗರದಾನೈರಭೋಜನೈಃ ॥ ೪೩ ॥

ಹಿಮವಾಯ್ವಗ್ನಿಸಲಿಲೈಃ ಪರ್ವತಾಕ್ರಮಣೈರಪಿ ।
ನ ಶಶಾಕ ಯದಾ ಹಂತುಮಪಾಪಮಸುರಃ ಸುತಮ್ ।
ಚಿಂತಾಂ ದೀರ್ಘತಮಾಂ ಪ್ರಾಪ್ತಸ್ತತ್ಕರ್ತುಂ ನಾಭ್ಯಪದ್ಯತ ॥ ೪೪ ॥

ಏಷ ಮೇ ಬಹ್ವಸಾಧೂಕ್ತೋ ವಧೋಪಾಯಾಶ್ಚ ನಿರ್ಮಿತಾಃ ।
ತೈಸ್ತೈರ್ದ್ರೋಹೈರಸದ್ಧರ್ಮೈರ್ಮುಕ್ತಃ ಸ್ವೇನೈವ ತೇಜಸಾ ॥ ೪೫ ॥

ಬೇಕು. ಏಕೆಂದರೆ, ಅದನ್ನು ತುಂಡರಿಸುವುದರಿಂದ ಉಳಿದ ಶರೀರವು ಸುಖವಾಗಿ ಬದುಕಬಲ್ಲದು. ॥ ೩೭ ॥ ಇವನು ಸ್ವಜನರ ವೇಷವನ್ನು ಧರಿಸಿ ಬಂದಿರುವ ಶತ್ರುವೇ ಆಗಿದ್ದಾನೆ. ಯೋಗಿಯ ಭೋಗಾಸಕ್ತವಾದ ಇಂದ್ರಿಯಗಳು ಅವನಿಗೆ ಅನಿಷ್ಟವನ್ನೇ ಮಾಡು ವಂತೆಯೇ ಇವನು ನನ್ನ ಅಹಿತವನ್ನೇ ಮಾಡುವವನಾಗಿದ್ದಾನೆ. ಅದಕ್ಕಾಗಿ ಉಂಡಾಗ, ಮಲಗಿದಾಗ, ಕುಳಿತಿರುವಾಗ, ಯಾವುದೇ ಸಮಯದಲ್ಲಾದರೂ ಯಾವುದೇ ಉಪಾಯದಿಂದ ಇವನನ್ನು ಕೊಂದುಹಾಕಿರಿ. ॥ ೩೮ ॥

ಹಿರಣ್ಯಕಶಿಪು ದೈತ್ಯರಿಗೆ ಹೀಗೆ ಅಪ್ಪಣೆಮಾಡಿದಾಗ ತೀಕ್ಷ್ಣ ವಾದ ಕೋರೆದಾಡೆಗಳಿಂದಲೂ, ವಿಕರಾಳ ಮುಖದಿಂದಲೂ, ಕೆಂಪು-ಕೆಂಪಾದ ಗಡ್ಡ-ಮೀಸೆ-ಕೂದಲುಗಳುಳ್ಳ ದೈತ್ಯರು ಕೈಯಲ್ಲಿ ತ್ರಿಶೂಲವನ್ನು ಎತ್ತಿಕೊಂಡು 'ಕೊಲ್ಲಿರಿ, ಕಡಿಯಿರಿ' ಎಂದು ಜೋರಾಗಿ ಕೂಗಿಕೊಳ್ಳತೊಡಗಿದರು. ಪ್ರಹ್ಲಾದನು ಸುಮ್ಮನೇ ಕುಳಿತಿದ್ದನು. ದೈತ್ಯರು ಅವನ ಎಲ್ಲ ಮರ್ಮಸ್ಥಾನಗಳಲ್ಲಿ ಶೂಲದಿಂದ ತಿವಿಯು ತ್ತಿದ್ದರು. ॥ ೩೯-೪೦ ॥ ಆಗ ಭಕ್ತ ಪ್ರಹ್ಲಾದನ ಚಿತ್ತವು – ಮನಸ್ಸು-ಮಾತುಗಳಿಗೆ ಅಗೋಚರನಾಗಿ, ಸರ್ವಾತ್ಮನಾಗಿ, ಸಮಸ್ತ ಶಕ್ತಿಗಳಿಗೆ ಆಧಾರನಾಗಿರುವ, ಪರಬ್ರಹ್ಮ ಪರಮಾತ್ಮನಲ್ಲಿ ನೆಟ್ಟುಹೋಗಿತ್ತು. ಆದುದರಿಂದ ಭಾಗ್ಯಹೀನರು ಮಾಡುವ ಮಹತ್ಕಾರ್ಯಗಳು ನಿಷ್ಫಲವಾಗುವಂತೆ ಅವರ ಎಲ್ಲ ಪ್ರಯಾಸಗಳು ವ್ಯರ್ಥವಾದುವು. ॥ ೪೧ ॥ ಯುಧಿಷ್ಠಿರನೇ! ಶೂಲಗಳ ಹೊಡೆತದಿಂದ ಪ್ರಹ್ಲಾದನ ಶರೀರದ ಮೇಲೆ ಯಾವುದೇ ಪರಿಣಾಮ ಆಗದಿದ್ದಾಗ ಹಿರಣ್ಯ ಕಶಿಪುವಿಗೆ ಭಾರೀ ಚಿಂತೆ-ಶಂಕೆಗಳು ಉಂಟಾದುವು. ಈಗ ಅವನು ಪ್ರಹ್ಲಾದನನ್ನು ಕೊಂದುಹಾಕಲು ಹಟತೊಟ್ಟು ಬಗೆ-ಬಗೆಯ ಉಪಾಯಗಳನ್ನು ಮಾಡತೊಡಗಿದನು. ॥ ೪೨ ॥ ಆತನು ಆ ಬಾಲಕನನ್ನು ದಿಗ್ಗಜಗಳಿಂದ ತುಳಿಸಿದನು. ವಿಷಸರ್ಪಗಳಿಂದ ಕಚ್ಚಿಸಿ ದನು. ಪುರೋಹಿತರಿಂದ ಅಭಿಚಾರಿಕ ಕೃತ್ಯಗಳನ್ನು ಮಾಡಿಸಿದನು. ಪರ್ವತದ ಶಿಖರದಿಂದ ತಳ್ಳಿಸಿದನು. ಶಂಬರಾಸುರನಿಂದ ಅನೇಕ ವಿಧದ ಮಾಯೆಗಳನ್ನು ಮಾಡಿಸಿದನು. ಕತ್ತಲೆಯ ಕೋಣೆಯಲ್ಲಿ ಕೂಡಿಹಾಕಿದನು. ವಿಷವುಣಿಸಿದನು. ಆಹಾರ-ನೀರನ್ನು ನಿಲ್ಲಿಸಿ ಬಿಟ್ಟನು. ॥ ೪೩ ॥ ಕೊರೆಯುವ ಮಂಜಿನಮೇಲೆ, ಧಗ-ಧಗನೆ ಉರಿಯುವ ಬೆಂಕಿಯಲ್ಲೂ, ಹಾಗೂ ಸಮುದ್ರದಲ್ಲಿಯೂ ಮತ್ತೆ-ಮತ್ತೆ ಹಾಕಿಸಿದನು. ಬಿರುಗಾಳಿಗೆ ಒಡ್ಡಿದನು. ಪರ್ವತಗಳ ಕೆಳಗೆ ಅದುಮಿಸಿದನು. ಆದರೆ ಇವುಗಳಲ್ಲಿ ಯಾವುದೇ ಉಪಾಯ ಗಳಿಂದಲೂ ಅವನಿಂದ ನಿಷ್ಪಾಪನಾದ ತನ್ನ ಪುತ್ರನ ಕೂದಲನ್ನೂ ಕೊಂಕಿಸಲಾಗಲಿಲ್ಲ. ತನ್ನ ವಿವಶತೆಯನ್ನು ಕಂಡು ಹಿರಣ್ಯಕಶಿಪುವಿಗೆ ಭಾರೀ ಚಿಂತೆ ಉಂಟಾಯಿತು. ಆ ಬಾಲಕನನ್ನು ವಧಿಸಲು ಆತನಿಗೆ ಬೇರಾವ ಉಪಾಯವೂ ತೋಚಲಿಲ್ಲ. ॥ ೪೪ ॥ ಅವನು ಯೋಚಿಸತೊಡಗಿದನು – 'ಇವನನ್ನು ನಾನು ಸಿಕ್ಕಾಬಟ್ಟೆಯಾಗಿ ಕೆಟ್ಟ ಮಾತುಗಳಿಂದ ಥಳಿಸಿದೆನು. ಕೊಂದುಹಾಕಲು ಅನೇಕ ಉಪಾಯ ಗಳನ್ನು ಮಾಡಿದೆ. ಆದರೆ ಇವನು ನನ್ನ ದ್ರೋಹ ಮತ್ತು ದುರ್ವ್ಯವ ಹಾರಗಳಿಂದ ಯಾರ ಉಪಾಯವೂ ಇಲ್ಲದೆ ತನ್ನ ಪ್ರಭಾವದಿಂದಲೇ ಬದುಕುಳಿದನಲ್ಲ! ॥ ೪೫ ॥

ವರ್ತಮಾನೋಽವಿದೂರೇ ವೈ ಬಾಲೋಽಪ್ಯಜಡಧೀರಯಮ್ ।
ನ ವಿಸ್ಮರತಿ ಮೇಽನಾರ್ಯಂ ಶುನಃಶೇಪ ಇವ ಪ್ರಭುಃ ॥ ೪೬ ॥

ಅಪ್ರಮೇಯಾನುಭಾವೋಽಯಮಕುತಶ್ಚಿದ್ಭಯೋಽಮರಃ ।
ನೂನಮೇತದ್ವಿರೋಧೇನ ಮೃತ್ಯುರ್ಮೇ ಭವಿತಾ ನ ವಾ ॥ ೪೭ ॥

ಇತಿ ತಂ ಚಿಂತಯಾ ಕಿಂಚಿನ್ಮ್ಲಾನಶ್ರಿಯಮಧೋಮುಖಮ್ ।
ಶಂಡಾಮರ್ಕಾವೌಶನಸೌ ವಿವಿಕ್ತ ಇತಿ ಹೋಚತುಃ ॥ ೪೮ ॥

ಜಿತಂ ತ್ವಯೈಕೇನ ಜಗತ್ತ್ರಯಂ ಭ್ರುವೋ-
ರ್ವಿಜೃಂಭಣತ್ರಸ್ತಸಮಸ್ತಧಿಷ್ಣ್ಯಪಮ್ ।
ನ ತಸ್ಯ ಚಿಂತ್ಯಂ ತವ ನಾಥ ಚಕ್ಷ್ಮಹೇ
ನ ವೈ ಶಿಶೂನಾಂ ಗುಣದೋಷಯೋಃ ಪದಮ್ ॥ ೪೯ ॥

ಇಮಂ ತು ಪಾಶೈರ್ವರುಣಸ್ಯ ಬದ್ಧ್ವಾ
ನಿಧೇಹಿ ಭೀತೋ ನ ಪಲಾಯತೇ ಯಥಾ ।
ಬುದ್ಧಿಶ್ಚ ಪುಂಸೋ ವಯಸಾಽಽರ್ಯಸೇವಯಾ
ಯಾವದ್ಗುರುರ್ಭಾರ್ಗವ ಆಗಮಿಷ್ಯತಿ ॥ ೫೦ ॥

ತಥೇತಿ ಗುರುಪುತ್ರೋಕ್ತಮನುಜ್ಞಾಯೇದಮಬ್ರವೀತ್ ।
ಧರ್ಮೋ ಹ್ಯಸ್ಯೋಪದೇಷ್ಟವ್ಯೋ ರಾಜ್ಞಾಂ ಯೋ ಗೃಹಮೇಧಿನಾಮ್ ॥ ೫೦ ॥

ಧರ್ಮಮರ್ಥಂ ಚ ಕಾಮಂ ಚ ನಿತರಾಂ ಚಾನುಪೂರ್ವಶಃ ।
ಪ್ರಹ್ರಾದಾಯೋಚತೂ ರಾಜನ್ ಪ್ರಶ್ರಿತಾವನತಾಯ ಚ ॥ ೫೨ ॥

ಯಥಾ ತ್ರಿವರ್ಗಂ ಗುರುಭಿರಾತ್ಮನೇ ಉಪಶಿಕ್ಷಿತಮ್ ।
ನ ಸಾಧು ಮೇನೇ ತಚ್ಛಿಕ್ಷಾಂ ದ್ವಂದ್ವಾರಾಮೋಪವರ್ಣಿತಾಮ್ ॥ ೫೩ ॥

ಇವನು ಬಾಲಕನಾಗಿದ್ದರೂ ತೀವ್ರಬುದ್ಧಿಶಾಲಿಯಾಗಿದ್ದು, ನನ್ನ ಬಳಿಯಲ್ಲೇ ನಿಃಶಂಕಭಾವದಿಂದ ಇರುತ್ತಾನೆ. ಏನೇ ಇರಲಿ, ಇವನಲ್ಲಿ ಖಂಡಿತವಾಗಿ ಏನೋ ಅದ್ಭುತವಾದ ಸಾಮರ್ಥ್ಯವಿದೆ. ಶುನಃಶೇಪನು* ತನ್ನ ತಂದೆಯ ನೀಚತನದ ದೌರ್ಜನ್ಯಗಳಿಂದ ಅವನ ವಿರೋಧಿಯಾದಂತೆಯೇ ಇವನೂ ಕೂಡ ನಾನು ಮಾಡಿದ ಅಪಕಾರಗಳನ್ನು ಮರೆಯಲಾರನು. ॥ ೪೬ ॥ ಇವನು ಯಾರಿಗೂ ಹೆದರುವುದಿಲ್ಲ, ಇವನ ಮೃತ್ಯುವು ಆಗುವುದಿಲ್ಲ. ಇವನ ಶಕ್ತಿಯನ್ನು ಅಳೆಯಲು ಸಾಧ್ಯವಾಗುವುದಿಲ್ಲ. ಇವನ ವಿರೋಧದಿಂದ ಅವಶ್ಯವಾಗಿ ನನ್ನ ಮೃತ್ಯುವು ಆಗಬಹುದು ಅಥವಾ ಆಗದೆಯೂ ಇರಬಹುದು. ॥ ೪೭ ॥ ಹೀಗೆಲ್ಲಾ ಯೋಚಿಸುತ್ತಾ-ಯೋಚಿಸುತ್ತಾ ಅವನ ಮುಖವು ಸ್ವಲ್ಪ ಬಾಡಿತು. ಶುಕ್ರಾಚಾರ್ಯರ ಪುತ್ರರಾದ ಶಂಡ-ಅಮರ್ಕರು ಹಿರಣ್ಯಕಶಿಪು ತಲೆತಗ್ಗಿಸಿ ಕುಳಿತಿರುವುದನ್ನು ಕಂಡಾಗ ಅವರು ಏಕಾಂತದಲ್ಲಿ ಹೋಗಿ ಅವನಲ್ಲಿ ಹೀಗೆ ಹೇಳಿದರು – ॥ ೪೮ ॥ 'ಮಹಾರಾಜಾ ! ನೀವೊಬ್ಬರೇ ಮೂರು ಲೋಕಗಳ ಮೇಲೆ ವಿಜಯವನ್ನು ಸಂಪಾದಿಸಿರುವಿರಿ. ನೀವು ಹುಬ್ಬು ಓರೆಮಾಡಿದರೆ ಸಾಕು, ಎಲ್ಲ ಲೋಕಪಾಲರು ನಡುಗಿ ಹೋಗುತ್ತಾರೆ. ಹೀಗೆ ಚಿಂತೆಪಡಲು ಯಾವ ಕಾರಣವೂ ನಮಗೆ ಕಾಣುವುದಿಲ್ಲ. ಮಕ್ಕಳು ಆಟಗಾರಿಕೆಯಲ್ಲಿ ಮಾಡುವ ಸರಿ-ತಪ್ಪುಗಳನ್ನು ಕುರಿತು ಯಾರಾದರೂ ಚಿಂತೆ ಪಡುವರೇ ? ॥ ೪೯ ॥ ನಮ್ಮ ತಂದೆಯಾದ ಶುಕ್ರಾಚಾರ್ಯರು ಬರುವುದರೊಳಗೆ ಇವನು ಹೆದರಿ ಎಲ್ಲಾದರೂ ಹೋಗದಿರುವಂತೆ ಇವನನ್ನು ವರುಣಪಾಶಗಳಿಂದ ಬಂಧಿಸಿಡಿರಿ. ವಯಸ್ಸು ಆಗುತ್ತಾ-ಆಗುತ್ತಾ ಮತ್ತು ಗುರುಹಿರಿಯರ ಸೇವೆ ಮಾಡುತ್ತಾ- ಮಾಡುತ್ತಾ ಮನುಷ್ಯರಿಗೆ ಬುದ್ಧಿ ಬರುವುದು. ॥ ೫೦ ॥

ಹಿರಣ್ಯಕಶಿಪು 'ಹಾಗೆಯೇ ಆಗಲಿ' ಎಂದು ಹೇಳಿ ಗುರುಪುತ್ರರ ಸಲಹೆಯನ್ನು ಒಪ್ಪಿಕೊಂಡು – 'ಇವನಿಗೆ ಗೃಹಸ್ಥರಾದ ರಾಜರು ಆಚರಿಸಬೇಕಾದ ಧರ್ಮಗಳನ್ನೇ ಉಪದೇಶ ಮಾಡಿರಿ' ಎಂದು ಗುರುಪುತ್ರರಿಗೆ ಆದೇಶಮಾಡಿದನು. ॥ ೫೧ ॥ ಯುಧಿಷ್ಠಿರನೇ ! ಅದಾದ ಬಳಿಕ ಪುರೋಹಿತರು ಅವನನ್ನು ಕರಕೊಂಡು ಪಾಠಶಾಲೆಗೆ ಹೋದರು ಮತ್ತು ಕ್ರಮವಾಗಿ ಧರ್ಮ, ಅರ್ಥ ಮತ್ತು ಕಾಮ – ಈ ಮೂರು ಪುರುಷಾರ್ಥಗಳ ಶಿಕ್ಷಣವನ್ನು ಕೊಡಲು ತೊಡಗಿದರು. ಪ್ರಹ್ಲಾದನು ಅಲ್ಲಿ ಅತ್ಯಂತ ನಮ್ರ ಸೇವಕನಂತೆ ಇರತೊಡಗಿದನು. ॥ ೫೨ ॥ ಆದರೆ ಗುರುಗಳ ಆ ಶಿಕ್ಷಣವು ಪ್ರಹ್ಲಾದನಿಗೆ ಮೆಚ್ಚಿಕೆಯಾಗಲಿಲ್ಲ. ಏಕೆಂದರೆ ಗುರುಗಳು ಅವನಿಗೆ ಕೇವಲ ಅರ್ಥ, ಧರ್ಮ ಮತ್ತು ಕಾಮದ್ದೇ ಶಿಕ್ಷಣ ಕೊಡುತ್ತಿದ್ದರು. ಈ ಶಿಕ್ಷಣವು – ರಾಗ-ದ್ವೇಷಾದಿ ದ್ವಂದ್ವಗಳು ಮತ್ತು ವಿಷಯ ಭೋಗಗಳಲ್ಲಿ ರಸವನ್ನನುಭವಿಸುವಂತಹ ಜನರಿಗೆ ಮಾತ್ರವೇ ಇದೆ. ॥ ೫೩ ॥

* ಶುನಶ್ಶೇಪನು ಅಜೀಗರ್ತನ ನಡುವಣ ಪುತ್ರನಾಗಿದ್ದನು. ಅವನನ್ನು ತಂದೆಯು ವರುಣನ ಯಜ್ಞದಲ್ಲಿ ಬಲಿಕೊಡಲಿಕ್ಕಾಗಿ ಹರಿಶ್ಚಂದ್ರನ ಪುತ್ರ ರೋಹಿತಾಶ್ವನಿಗೆ ಬದಲಿಗೆ ಮಾರಿಬಿಟ್ಟಿದ್ದನು. ಆಗ ಅವನ ಮಾವ ವಿಶ್ವಾಮಿತ್ರರು ಅವನನ್ನು ರಕ್ಷಿಸಿದ್ದರು ಮತ್ತು ಅವನು ತನ್ನ ತಂದೆಗೆ ವಿರುದ್ಧವಾಗಿ ಅವನ ವಿಪಕ್ಷಿಯಾದ ವಿಶ್ವಾಮಿತ್ರರ ಗೋತ್ರವನ್ನು ಸೇರಿಕೊಂಡನು. ಈ ಕಥೆ ಮುಂದೆ ಒಂಭತ್ತನೇ ಸ್ಕಂಧದ ಏಳನೆಯ ಅಧ್ಯಾಯದಲ್ಲಿ ಬರುವುದು.

ಯದಾಽಽಚಾರ್ಯಃ ಪರಾವೃತ್ತೋ ಗೃಹಮೇಧೀಯಕರ್ಮಸು ।
ವಯಸ್ಯೈರ್ಬಾಲಕೈಸ್ತತ್ರ ಸೋಪಹೂತಃ ಕೃತಕ್ಷಣೈಃ ॥ ೫೪ ॥

ಅಥ ತಾನ್ ಶ್ಲಕ್ಷ್ಣಯಾ ವಾಚಾ ಪ್ರತ್ಯಾಹೂಯ ಮಹಾಬುಧಃ ।
ಉವಾಚ ವಿದ್ವಾಂಸ್ತನ್ನಿಷ್ಠಾಂ ಕೃಪಯಾ ಪ್ರಹಸನ್ನಿವ ॥ ೫೫ ॥

ತೇ ತು ತದ್ಗೌರವಾತ್ಸರ್ವೇ ತ್ಯಕ್ತಕ್ರೀಡಾಪರಿಚ್ಛದಾಃ ।
ಬಾಲಾ ದೂಷಿತಧಿಯೋ ದ್ವಂದ್ವಾರಾಮೇರಿತೇಹಿತೈಃ ॥ ೫೬ ॥

ಪರ್ಯುಪಾಸತ ರಾಜೇಂದ್ರ ತನ್ನ್ಯಸ್ತಹೃದಯೇಕ್ಷಣಾಃ ।
ತಾನಾಹ ಕರುಣೋ ಮೈತ್ರೋ ಮಹಾಭಾಗವತೋಽಸುರಃ ॥ ೫೭ ॥

ಒಂದು ದಿನ ಗುರುಗಳು ಮನೆಯ ಕೆಲಸಕ್ಕಾಗಿ ಎಲ್ಲೋ ಹೊರಗೆ ಹೋಗಿದ್ದರು. ಪಾಠಕ್ಕೆ ವಿರಾಮ ಸಿಕ್ಕಿದ್ದರಿಂದ ಸಮವಯಸ್ಸಿನ ಬಾಲಕರು ಪ್ರಹ್ಲಾದನನ್ನು ಆಟಕ್ಕಾಗಿ ಕರೆದರು. ॥ ೫೪ ॥ ಪರಮ ಜ್ಞಾನಿಯಾಗಿದ್ದ ಪ್ರಹ್ಲಾದನು ಆ ಹುಡುಗರ ಪ್ರೇಮವನ್ನು ಕಂಡು ಸಂತೋಷಗೊಂಡು ಸವಿಮಾತುಗಳಿಂದ ಅವರನ್ನೇ ತನ್ನ ಬಳಿಗೆ ಬರಮಾಡಿಕೊಂಡನು. ಅವರ ಮತಿಯನ್ನೂ, ಗತಿಯನ್ನೂ ಬಲ್ಲವನಾದ್ದರಿಂದ ಅವರ ಮೇಲೆ ಕರುಣೆದೋರಿ ಮುಗುಳ್ನಗುತ್ತಾ ಅವರಿಗೆ ಉಪದೇಶ ಮಾಡತೊಡಗಿದನು. ॥ ೫೫ ॥ ಯುಧಿಷ್ಠಿರ! ಅವರೆಲ್ಲರೂ ಇನ್ನೂ ಬಾಲಕರಾಗಿದ್ದರು. ಅದರಿಂದ ರಾಗ-ದ್ವೇಷ ಪರಾಯಣ ವಿಷಯಭೋಗೀ ಪುರುಷರ ಉಪದೇಶದಿಂದ, ಕೃತಿಗಳಿಂದ ಅವರ ಬುದ್ಧಿಯು ಇನ್ನೂ ದೂಷಿತವಾಗಿರಲಿಲ್ಲ. ಇದರಿಂದ ಹಾಗೂ ಪ್ರಹ್ಲಾದನ ಕುರಿತು ಆದರ ಬುದ್ಧಿ ಇರುವುದರಿಂದ ಅವರೆಲ್ಲರೂ ಆಟದ ವಸ್ತುಗಳನ್ನು ಬಿಟ್ಟು ಪ್ರಹ್ಲಾದನ ಹತ್ತಿರ ಹೋಗಿ ಸುತ್ತಲೂ ಕುಳಿತುಕೊಂಡರು. ಪ್ರಹ್ಲಾದನ ಉಪದೇಶವನ್ನು ಮನಸ್ಸಿಟ್ಟು ಕೇಳಲು ತುಂಬಾ ಪ್ರೇಮದಿಂದ ನೆಟ್ಟನೋಟದಿಂದ ಅವನನ್ನೇ ನೋಡತೊಡಗಿದರು. ಭಗವಂತನ ಪರಮ ಪ್ರೇಮಿಭಕ್ತನಾದ ಪ್ರಹ್ಲಾದನ ಹೃದಯವು ಅವರ ಕುರಿತು ಕರುಣೆ ಮತ್ತು ಮೈತ್ರೀಭಾವದಿಂದ ತುಂಬಿಹೋಗಿತ್ತು. ಅವನು ಹೇಳತೊಡಗಿದನು - ॥ ೫೬-೫೭ ॥

ಐದನೆಯ ಅಧ್ಯಾಯವು ಮುಗಿಯಿತು. ॥ ೫ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಸಪ್ತಮಸ್ಕಂಧೇ ಪ್ರಹ್ಲಾದಾನುಚರಿತೇ ಪಂಚಮೋಽಧ್ಯಾಯಃ ॥ ೫ ॥

ಆರನೆಯ ಅಧ್ಯಾಯ

ಪ್ರಹ್ಲಾದನು ಅಸುರಬಾಲಕರಿಗೆ ಮಾಡಿದ ಉಪದೇಶ

ಪ್ರಹ್ಲಾದ ಉವಾಚ

ಕೌಮಾರ ಆಚರೇತ್ಪ್ರಾಜ್ಞೋ ಧರ್ಮಾನ್ಭಾಗವತಾನಿಹ ।
ದುರ್ಲಭಂ ಮಾನುಷಂ ಜನ್ಮ ತದಪ್ಯಧ್ರುವಮರ್ಥದಮ್ ॥ ೧ ॥

ಪ್ರಹ್ಲಾದನು ಹೇಳಿದನು - ಮಿತ್ರರೇ! ಈ ಪ್ರಪಂಚದಲ್ಲಿ ಮನುಷ್ಯಜನ್ಮವು ಅತ್ಯಂತ ದುರ್ಲಭವಾದುದು. ಇದರ ಮೂಲಕ ಅವಿನಾಶಿಯಾದ ಪರಮಾತ್ಮನ ಪ್ರಾಪ್ತಿಯಾಗಬಲ್ಲದು. ಆದರೆ ಇದು ಯಾವಾಗ ನಾಶವಾಗಿಬಿಡುವುದೋ ತಿಳಿಯದು. ಆದುದರಿಂದ ವಿವೇಕಿಯಾದವನು ಮುಪ್ಪಿನವರೆಗೂ, ಯೌವನಕ್ಕೂ ಕಾಯದೇ ಬಾಲ್ಯದಲ್ಲೇ ಭಗವಂತನನ್ನು ದೊರಕಿಸಿಕೊಡುವ ಭಾಗವತ ಧರ್ಮವನ್ನು ಅನುಷ್ಠಾನಮಾಡಬೇಕು.* ॥ ೧ ॥

* ಇದಕ್ಕೆ ಹಿಂದೆ ಈ ಕೆಳಗಿನ ಐದು ಶ್ಲೋಕಗಳು ಶ್ರೀಮದ್ಭಾಗವತದ ಪ್ರಾಚೀನ ಪ್ರತಿಗಳಲ್ಲಿ ಕಂಡುಬರುತ್ತವೆ. ವಿಜಯಧ್ವಜೀಯದಲ್ಲಿ ಇವುಗಳನ್ನು ಮಾನ್ಯಮಾಡಿದೆ.

ಹಂಹಾರ್ಭಕಾ ಮೇ ಶೃಣುತ ವಚೋ ವಃ ಸುಮಹಾಃ ಶಿವಮ್ । ವಯಸ್ಯಾದ್ಯುಕ್ತ ಮೃತಾಸ್ನೇಹಾಂಧಾ ಮಾ ಪ್ರಮಾದ್ಯತ ॥ ೧ ॥
ನ ಭೂರಾ ವಿವಶಂ ಬಾಲಾ ಅಶ್ನೋಽರ್ಥೇ ಪ್ರಿಯೈಷಿಣಃ । ಗುರೂಕ್ತಮಪಿ ನ ಗ್ರಾಹ್ಯಂ ಯದನರ್ಥೇಽರ್ಥಕಲ್ಪನಮ್ ॥ ೨ ॥
ಯದುಕ್ತ್ಯಾ ನ ಪ್ರಬುಧ್ಯೇತ ಸುಪ್ತ್ವಾ ಜ್ಞಾನನಿದ್ರಯಾ । ನ ಶ್ರದ್ಧಾತವ್ಯಂ ತಸ್ಯ ಯಥಾಂಧೋ ಹ್ಯಂಧನಾಯಕಃ ॥ ೩ ॥
ಈಶ ಶತ್ರುರ್ನ ಉದಾಸೀನಃ ಕಿಂ ಮಿತ್ರಂ ಬೋಧ ಆತ್ಮನಃ । ಧರ್ಮಸ್ತು ನಯ್ಯೈಃ ಕಿಂ ಸ್ಯಾದ್ಯ್ವೇವಂ ಸಂಪದ್ವಿಪತ್ಪದಮ್ ॥ ೪ ॥
ಯೋ ನ ಹಿಂಸ್ಯಾದ್ಧರ್ಮಾಣಾಮಮಹಾತ್ಮಾನಂ ಸ್ವತೋ ಮತಃ । ಪುಂಸಃ ತ್ರೀಲೋಕಯೋರ್ಹೇಯಃ ಸ ಮುಕ್ತಾಂಧ್ಯೋಽಪಿ ದುರ್ಲಭಃ ॥ ೫ ॥

(ಮುಂದಿನ ಪುಟದಲ್ಲಿ ಮುಂದುವರೆಯುತ್ತದೆ)

ಯಥಾ ಹಿ ಪುರುಷಸ್ಯೇಹ ವಿಷ್ಣೋಃ ಪಾದೋಪಸರ್ಪಣಮ್ ।
ಯದೇಷ ಸರ್ವಭೂತಾನಾಂ ಪ್ರಿಯ ಆತ್ಮೇಶ್ವರಃ ಸುಹೃತ್ ॥ ೨ ॥

ಸುಖಮೈಂದ್ರಿಯಕಂ ದೈತ್ಯಾ ದೇಹಯೋಗೇನ ದೇಹಿನಾಮ್ ।
ಸರ್ವತ್ರ ಲಭ್ಯತೇ ದೈವಾದ್ಯಥಾ ದುಃಖಮಯತ್ನತಃ ॥ ೩ ॥

ತತ್ಪ್ರಯಾಸೋ ನ ಕರ್ತವ್ಯೋ ಯತ ಆಯುರ್ವ್ಯಯಃ ಪರಮ್ ।
ನ ತಥಾ ವಿಂದತೇ ಕ್ಷೇಮಂ ಮುಕುಂದಚರಣಾಂಬುಜಮ್ ॥ ೪ ॥

ತತೋ ಯತೇತ ಕುಶಲಃ ಕ್ಷೇಮಾಯ ಭಯಮಾಶ್ರಿತಃ ।
ಶರೀರಂ ಪೌರುಷಂ ಯಾವನ್ನ ವಿಪದ್ಯೇತ ಪುಷ್ಕಲಮ್ ॥ ೫ ॥

ಪುಂಸೋ ವರ್ಷಶತಂ ಹ್ಯಾಯುಸ್ತದರ್ಧಂ ಚಾಜಿತಾತ್ಮನಃ ।
ನಿಷ್ಫಲಂ ಯದಸೌ ರಾತ್ರ್ಯಾಂ ಶೇತೇಽಂಧಂ ಪ್ರಾಪಿತಸ್ತಮಃ ॥ ೬ ॥

ಈ ಮನುಷ್ಯಜನ್ಮದಲ್ಲಿ ಭಗವಾನ್ ವಿಷ್ಣುವಿನ ಚರಣಗಳಲ್ಲಿ ಶರಣಾಗುವುದೇ ಜೀವನದ ಸಫಲತೆಯಾಗಿದೆ. ಏಕೆಂದರೆ ಭಗವಂತನೇ ಸಮಸ್ತ ಪ್ರಾಣಿಗಳಿಗೂ ಸ್ವಾಮಿಯೂ, ಸ್ನೇಹಿತನೂ, ಪ್ರಿಯತಮನೂ, ಆತ್ಮನೂ ಆಗಿದ್ದಾನೆ. ॥ ೨ ॥ ಗೆಳೆಯರೇ! ಜೀವಿಯು ಯಾವುದೇ ಯೋನಿಯಲ್ಲಿದ್ದರೂ ಯಾವುದೇ ಪ್ರಯತ್ನವಿಲ್ಲದೆ, ನಿವಾರಿಸಿದರೂ ತಾನಾಗಿಯೇ ದುಃಖವು ಸಿಗುವಂತೆಯೇ – ಪ್ರಾರಬ್ಧಾನುಸಾರವಾಗಿ ಎಲ್ಲೆಡೆಗಳಲ್ಲಿ ಇಂದ್ರಿಯಗಳಿಂದ ಭೋಗಿಸಲಾಗುವ ಸುಖವು ದೊರೆಯುತ್ತಾ ಇರುತ್ತದೆ. ॥ ೩ ॥ ಅದಕ್ಕಾಗಿ ಸಾಂಸಾರಿಕ ಸುಖದ ಉದ್ದೇಶದಿಂದ ಯಾವುದೇ ಪ್ರಯತ್ನ ಮಾಡುವ ಆವಶ್ಯಕತೆ ಇರುವುದಿಲ್ಲ. ಏಕೆಂದರೆ, ತಾನಾಗಿಯೇ ಸಿಗುವಂತಹ ವಸ್ತುವಿಗಾಗಿ ಪರಿಶ್ರಮ ಪಡುವುದು ಆಯುಸ್ಸನ್ನೂ, ಶಕ್ತಿಯನ್ನೂ ವ್ಯರ್ಥವಾಗಿ ಕಳಕೊಳ್ಳುವುದೇ ಆಗಿದೆ. ಇದರಲ್ಲೇ ಆಸಕ್ತರಾದವರಿಗೆ ಭಗವಂತನ ಪರಮ ಕಲ್ಯಾಣಪ್ರದವಾದ ಚರಣಕಮಲಗಳ ಪ್ರಾಪ್ತಿಯಾಗುವುದಿಲ್ಲ. ॥ ೪ ॥ ನಮ್ಮ ತಲೆಯ ಮೇಲೆ ಅನೇಕ ಪ್ರಕಾರದ ಭಯಗಳು ಅಡರಿವೆ. ಅದಕ್ಕಾಗಿ ಭಗವತ್ಪ್ರಾಪ್ತಿಗಾಗಿಯೇ ಮೀಸಲಾದ ಈ ಶರೀರವು ರೋಗ-ಶೋಕಗಳಿಂದ ಗ್ರಸ್ತವಾಗಿ ಮೃತ್ಯುವಿನ ದವಡೆಯಲ್ಲಿ ಬೀಳುವ ಮೊದಲೇ ಬುದ್ಧಿವಂತರಾದವರು ತಮ್ಮ ಶ್ರೇಯಸ್ಸಿಗಾಗಿ ಪ್ರಯತ್ನಮಾಡಬೇಕು. ॥ ೫ ॥ ಮನುಷ್ಯನ ಪೂರ್ಣ ಆಯುಸ್ಸು ನೂರುವರ್ಷ. ಇಂದ್ರಿಯಗಳನ್ನು ವಶಪಡಿಸಿ ಕೊಳ್ಳದಿರುವವರ ಆಯುಸ್ಸಿನ ಅರ್ಧಭಾಗವು ಹೀಗೆಯೇ ವ್ಯರ್ಥವಾಗಿ ಕಳೆದುಹೋಗುತ್ತದೆ. ಏಕೆಂದರೆ, ಅವರು ರಾತ್ರಿಯಲ್ಲಿ ಘೋರವಾದ ತಮೋಗುಣ-ಅಜ್ಞಾನದಿಂದ ಕಬಳಿಸಲ್ಪಟ್ಟು ನಿದ್ದೆ ಮಾಡುತ್ತಿರುತ್ತಾರೆ. ॥ ೬ ॥ ಬಾಲ್ಯದಲ್ಲಿ ಅವರಿಗೆ ತನ್ನ ಹಿತ-ಅಹಿತ ಜ್ಞಾನವಿರುವುದಿಲ್ಲ. ಸ್ವಲ್ಪ ದೊಡ್ಡವರಾಗಿ ಕೌಮಾರ ಅವಸ್ಥೆಯಲ್ಲಿ ಆಟೋಟಗಳಲ್ಲೇ ತೊಡಗಿರುತ್ತಾರೆ. ಹೀಗೆ ಇಪ್ಪತ್ತು ವರ್ಷಗಳಾದರೋ ಅರಿಯದೆಯೇ ಕಳೆದುಹೋಗುತ್ತವೆ. ಮುದಿತನವು ಶರೀರವನ್ನು

ಎಲೈ ಬಾಲಕರೇ! ನನ್ನ ಮಾತನ್ನು ಕೇಳಿರಿ. ಇದರಿಂದ ನಿಮಗೆ ಎಲ್ಲ ಕಡೆಗಳಲ್ಲಿಯೂ ಮಂಗಳವುಂಟಾಗುವುದು. ಪರಮಪುರುಷಾರ್ಥವು ದೊರೆಯುವುದು. ಪರಮ ಶ್ರೇಯಸ್ಸು ಉಂಟಾಗುವುದು. 'ಈಗ ಬಾಲ್ಯ; ಮುಂದೆ ನೋಡೋಣ' – ಎಂದು ಶ್ರೇಯಸ್ಸಿನ ಸಾಧನೆಯನ್ನು ಮುಂದೂಡಬಾರದು. ನಿಮ್ಮ ಜೊತೆಗಾರರು ಎಷ್ಟೋ ಮಂದಿ ಸತ್ತುಹೋಗಿರುವುದನ್ನು ನೋಡಿರಿ. ಆಟ-ಪಾಟಗಳಲ್ಲೇ ಆಸಕ್ತರಾಗಿ ಶ್ರೇಯಸ್ಸಿನ ಬಗೆಗೆ ಕುರುಡರಾಗಿ ಎಚ್ಚರತಪ್ಪದಿರಿ. ಪುರಾತನರಾದ ಬಾಲಕರು ತಮ್ಮ ಮನಸ್ಸನ್ನು ಆಟ-ಪಾಟಗಳಲ್ಲಿ ತೊಡಗಿಸುತ್ತಿರಲಿಲ್ಲ. ಬಾಲ್ಯದಿಂದಲೂ ತಮ್ಮ ಪರಮ ಪ್ರಯೋಜನದ ಸಿದ್ಧಿಯನ್ನೇ ಅವರು ಬಯಸುತ್ತಿದ್ದರು. ಪರಮಾತ್ಮಜ್ಞಾನವನ್ನೇ ಕೋರುತ್ತಿದ್ದರು. 'ನಾವೂ ಕೂಡ ಗುರುಗಳಾಗದ ಶಂಡಾಮರ್ಕರ ಉಪದೇಶದಲ್ಲಿ ಆಸಕ್ತರಾಗಿ ಅವರು ಬರುವ ಕಾಲದವರೆಗೆ ಮಾತ್ರ ಆಟವಾಡುತ್ತಿದ್ದೇವೆ' – ಎನ್ನುವಿರೋ? ಅದೂ ಸರಿಯಲ್ಲ. ಅವರು ಮೋಕ್ಷವನ್ನು ಬಿಟ್ಟು ಧರ್ಮ, ಅರ್ಥ, ಕಾಮಗಳೆಂಬ ತ್ರಿವರ್ಗವನ್ನು ಮಾತ್ರ ಬೋಧಿಸುತ್ತಿದ್ದಾರೆ. ಅದು ಸಂಸಾರಕ್ಕೇ ಕಾರಣವಾಗುವುದು. ಆದುದರಿಂದ ಗುರುಗಳು ಹೇಳಿದರೂ ಅದನ್ನು ಗ್ರಹಿಸಬಾರದು. ಅದರಲ್ಲಿ ನಂಬಿಕೆಯನ್ನಿಟ್ಟರೆ ಅನರ್ಥದಲ್ಲಿ ಅರ್ಥವೆಂಬ ವಿರುದ್ಧವಾದ ಭಾವನೆಯನ್ನು ಇಟ್ಟಂತಾಗುವುದು. ಯಾವನ ಮಾತುಗಳನ್ನು ಕೇಳಿದರೆ ಅಜ್ಞಾನವೆಂಬ ನಿದ್ರೆಯಿಂದ ಎಚ್ಚರಿಕೆ ಉಂಟಾಗುವುದಿಲ್ಲವೋ – ಅಂತಹವನ ಮಾತನ್ನು ಸರಿಯೆಂದು ನಂಬಬಾರದು. ಹಾಗೆ ನಂಬಿದರೆ ಕುರುಡನು ಕುರುಡನನ್ನು ಒಯ್ಯುವಂತೆ ಅನರ್ಥವೇ ಉಂಟಾಗುವುದು. ಇಲ್ಲಿ ಆತ್ಮನಿಗೆ ಶತ್ರುವು ಯಾರು? ಉದಾಸೀನನು ಯಾರು? ಮಿತ್ರನಾದರೂ ಯಾರು? ನಿಮ್ಮಲ್ಲಿಯೂ ಈ ಶತ್ರು ಮುಂತಾದವರು ಯಾರುಂಟು? ಈ ಶತ್ರು-ಮಿತ್ರಾದಿಗಳನ್ನು ಬೋಧಿಸುವ ನೀತಿಶಾಸ್ತ್ರದಿಂದ ಏನು ತಾನೇ ಪ್ರಯೋಜನ? – 'ನೀತಿಗಳಿಂದ ಆಪತ್ತಿನ ಪರಿಹಾರವೂ, ಸಂಪತ್ತಿನ ಪ್ರಾಪ್ತಿಯೂ ಆಗುವುದಲ್ಲವೇ?' ಎಂದರೆ: ಹಾಗಲ್ಲ. ದೈವವೇ; ದೇವದೇವನಾದ ಶ್ರೀಮನ್ನಾರಾಯಣನೇ ಸಂಪತ್ತು ಮತ್ತು ವಿಪತ್ತುಗಳಿಗೆ ಆಶ್ರಯನು. ಆತನ ಅನುಗ್ರಹದಿಂದಲೇ ಅಜ್ಞಾನವೆಂಬ ವಿಪತ್ತಿನ ಪರಿಹಾರ ಮತ್ತು ಜ್ಞಾನವೆಂಬ ಸಂಪತ್ತಿನ ಲಾಭವುಂಟಾಗುವುದು. ತನ್ನ ಜನರಿಗೆ ಅಥವಾ ಇಂದ್ರಿಯಾದಿಗಳಿಗೆ ವಶನಾಗದೇ ಧರ್ಮಕಾಮನಾಗಿರುವ, ತನಗೆ ಅಧರ್ಮದಿಂದ ಅಥವಾ ಪ್ರವೃತ್ತಿಧರ್ಮದಿಂದ ಹಿಂಸೆಯನ್ನುಂಟುಮಾಡಿಕೊಳ್ಳದೇ ಇಹಲೋಕದ ಸಂಪತ್ತು ಮತ್ತು ಪರಲೋಕದ ಸುಖ-ಇವೆರಡಕ್ಕೂ ಕಾರಣವಾಗುವ, ಕುರುಡುತನವನ್ನು ಬಿಟ್ಟಿರುವ ವಿವೇಕಿಯು ಲೋಕದಲ್ಲಿ ದುರ್ಲಭನು.

ಮುಗ್ಧಸ್ಯ ಬಾಲ್ಯೇ ಕೌಮಾರೇ ಕ್ರೀಡತೋ ಯಾತಿ ವಿಂಶತಿಃ ।
ಜರಯಾ ಗ್ರಸ್ತದೇಹಸ್ಯ ಯಾತ್ಯಕಲ್ಪಸ್ಯ ವಿಂಶತಿಃ ॥ ೭ ॥

ದುರಾಪೂರೇಣ ಕಾಮೇನ ಮೋಹೇನ ಚ ಬಲೀಯಸಾ ।
ಶೇಷಂ ಗೃಹೇಷು ಸಕ್ತಸ್ಯ ಪ್ರಮತ್ತಸ್ಯಾಪಯಾತಿ ಹಿ ॥ ೮ ॥

ಕೋ ಗೃಹೇಷು ಪುಮಾನ್ಸಕ್ತಮಾತ್ಮಾನಮಜಿತೇಂದ್ರಿಯಃ ।
ಸ್ನೇಹಪಾಶೈರ್ದೃಢೈರ್ಬದ್ಧಮುತ್ಸಹೇತ ವಿಮೋಚಿತುಮ್ ॥ ೯ ॥

ಕೋ ನ್ವರ್ಥತೃಷ್ಣಾಂ ವಿಸೃಜೇತ್ಪ್ರಾಣೇಭ್ಯೋಽಪಿ ಯ ಈಪ್ಸಿತಃ ।
ಯಂ ಕ್ರೀಣಾತ್ಯಸುಭಿಃ ಪ್ರೇಷ್ಠೈಸ್ತಸ್ಕರಃ ಸೇವಕೋ ವಣಿಕ್ ॥ ೧೦ ॥

ಕಥಂ ಪ್ರಿಯಾಯಾ ಅನುಕಂಪಿತಾಯಾಃ
ಸಂಗಂ ರಹಸ್ಯಂ ರುಚಿರಾಂಶ್ಚ ಮಂತ್ರಾನ್ ।
ಸುಹೃತ್ಸು ಚ ಸ್ನೇಹಸಿತಃ ಶಿಶೂನಾಂ
ಕಲಾಕ್ಷರಾಣಾಮನುರಕ್ತಚಿತ್ತಃ ॥ ೧೧ ॥

ಪುತ್ರಾನ್ಸ್ಮರಂಸ್ತಾ ದುಹಿತೄರ್ಹೃದಯ್ಯಾ
ಭ್ರಾತೄನ್ಸ್ವಸೄರ್ವಾ ಪಿತರೌ ಚ ದೀನೌ ।
ಗೃಹಾನ್ಮನೋಜ್ಞೋರುಪರಿಚ್ಛದಾಂಶ್ಚ
ವೃತ್ತೀಶ್ಚ ಕುಲ್ಯಾಃ ಪಶುಭೃತ್ಯವರ್ಗಾನ್ ॥ ೧೨ ॥

ತ್ಯಜೇತ ಕೋಶಸ್ಕೃದಿವೇಹಮಾನಃ
ಕರ್ಮಾಣಿ ಲೋಭಾದವಿತೃಪ್ತಕಾಮಃ ।
ಔಪಸ್ಥ್ಯಜೈಹ್ವ್ಯಂ ಬಹು ಮನ್ಯಮಾನಃ
ಕಥಂ ವಿರಜ್ಯೇತ ದುರಂತಮೋಹಃ ॥ ೧೩ ॥

ಕುಟುಂಬಪೋಷಾಯ ವಿಯನ್ನಿಜಾಯು-
ರ್ನ ಬುಧ್ಯತೇಽರ್ಥಂ ವಿಹತಂ ಪ್ರಮತ್ತಃ ।
ಸರ್ವತ್ರ ತಾಪತ್ರಯದುಃಖಿತಾತ್ಮಾ
ನಿರ್ವಿದ್ಯತೇ ನ ಸ್ವಕುಟುಂಬರಾಮಃ ॥ ೧೪ ॥

ಆಮೇಲೆ ಮುದುಕನಾದಾಗ ಕೊನೆಯ ಇಪ್ಪತ್ತು ವರ್ಷಗಳಲ್ಲಿ ಏನನ್ನೂ ಮಾಡುವ ಶಕ್ತಿ ಉಳಿಯುವುದಿಲ್ಲ. ॥ ೭ ॥ ನಡುವಿನಲ್ಲಿ ಇನ್ನು ಉಳಿದಿರುವ ಸ್ವಲ್ಪ ಆಯುಸ್ಸಿನಲ್ಲಿ ಎಂದೂ ಪೂರ್ಣವಾಗದ ದೊಡ್ಡ-ದೊಡ್ಡ ಕಾಮನೆಗಳಿವೆ. ಬಲವಂತವಾಗಿ ಹಿಡಿದಿಡುವ ಮೋಹವಿದೆ. ಮನೆ-ಮಠದ ಆಸಕ್ತಿ ಇದೆ. ಇವುಗಳಿಂದ ಜೀವಿಗೆ ಕರ್ತವ್ಯ ಯಾವುದು? ಅಕರ್ತವ್ಯ ಯಾವುದು ? ಎಂಬ ಜ್ಞಾನವೇ ಇರುವುದಿಲ್ಲ. ಹೀಗೆ ಉಳಿದುಳಿದ ಆಯುಸ್ಸೂ ಕೂಡ ಕೈಬಿಟ್ಟು ಹೋಗುತ್ತದೆ. ॥ ೮ ॥

ದೈತ್ಯಬಾಲಕರೇ! ಜಿತೇಂದ್ರಿಯನಲ್ಲದೇ ಇರುವವನು ಮನೆ ಮಾರ್ಗಗಳಲ್ಲಿ ಆಸಕ್ತನಾಗಿ ಮಾಯಾ ಮಮತೆಯ ದೃಢವಾದ ಪಾಶದಲ್ಲಿ ಸಿಕ್ಕಿಕೊಂಡು ತನ್ನನ್ನು ಅದರಿಂದ ಬಿಡಿಸಿಕೊಳ್ಳುವ ಸಾಹಸವನ್ನು ಯಾರು ತಾನೇ ಮಾಡಿಯಾನು? ॥ ೯ ॥ ಕಳ್ಳರು, ಸೇವಕರು, ವ್ಯಾಪಾರಿಗಳು ತಮಗೆ ಅತ್ಯಂತ ಪ್ರಿಯವಾಗಿರುವ ಪ್ರಾಣಗಳನ್ನೇ ಪಣವಾಗಿಟ್ಟು ಹಣವನ್ನು ಕೂಡಿಹಾಕುತ್ತಾರೆ. ಅವರಿಗೆ ಅದು ಪ್ರಾಣಕ್ಕಿಂತಲೂ ಹೆಚ್ಚು ಪ್ರಿಯವಾಗಿರುವುದು. ಇಂತಹ ಹಣದ ದುರಾಸೆಯನ್ನು ಯಾರು ತಾನೇ ಬಿಡಬಲ್ಲರು? ॥ ೧೦ ॥ ತನ್ನ ಪ್ರಿಯಳಾದ ಪತ್ನಿಯ ಏಕಾಂತ ಸಹವಾಸ, ಆಕೆಯ ಪ್ರೇಮ ತುಂಬಿದ ಮಾತುಗಳು, ಸವಿಯಾದ ಸಲಹೆಗಳು – ಇವುಗಳಿಗೆ ತನ್ನನ್ನು ಕೊಟ್ಟುಕೊಂಡು, ಬಂಧು-ಮಿತ್ರರ ಸ್ನೇಹಪಾಶದಲ್ಲಿ ಕಟ್ಟುಬಿದ್ದಿರುವವನು ಮತ್ತು ಎಳೆಮಕ್ಕಳ ತೊದಲು ಮಾತುಗಳಲ್ಲಿ ಲೋಭ ಹೊಂದಿರುವವನು ಅವುಗಳನ್ನು ಹೇಗೆ ತಾನೇ ಬಿಡಬಲ್ಲನು? ॥ ೧೧ ॥ ಅತ್ತೆಯ ಮನೆಗೆ ಹೋಗಿರುವ ತನ್ನ ಪ್ರಿಯ ಪುತ್ರಿಯರನ್ನೂ, ಪುತ್ರರನ್ನೂ, ಸೋದರ-ಸೋದರಿಯರನ್ನೂ, ದೈನ್ಯಸ್ಥಿತಿಯಲ್ಲಿರುವ ತಂದೆ-ತಾಯಿಯರನ್ನೂ, ಬಹಳ ಸುಂದರವಾದ ಬಹುಮೂಲ್ಯವಾದ ಸಾಮಗ್ರಿಗಳಿಂದ ಸುಸಜ್ಜಿತವಾದ ಮನೆಯನ್ನೂ, ಕುಲಪರಂಪರೆಯಿಂದ ಬಂದಿರುವ ಜೀವಿಕೆಯ ಸಾಧನೆಗಳನ್ನೂ, ಪಶುಗಳನ್ನೂ ಮತ್ತು ಸೇವಕರನ್ನೂ ನಿರಂತರವಾಗಿ ಸ್ಮರಿಸುತ್ತಿರುವವನು ಹೇಗೆ ತಾನೇ ಇವುಗಳನ್ನು ಬಿಡಬಲ್ಲನು? ॥ ೧೨ ॥ ಜನನೇಂದ್ರಿಯ ಮತ್ತು ರಸನೇಂದ್ರಿಯಗಳ ಸುಖವನ್ನೇ ಸರ್ವಸ್ವವೆಂದು ತಿಳಿದಿರುವವನು, ಭೋಗವಾಸನೆಗಳು ಪೂರ್ಣವಾಗಿ ತೃಪ್ತಿ ಹೊಂದದವನು, ಲೋಭಕ್ಕೆ ಒಳಗಾಗಿ ಕರ್ಮದ ಮೇಲೆ ಕರ್ಮಗಳನ್ನು ಆಚರಿಸುತ್ತಾ ರೇಶ್ಮೆಯ ಹುಳುವಿನಂತೆ ತನ್ನನ್ನು ಇನ್ನೂ ಬಿಗಿಯಾದ ಬಂಧನದಲ್ಲಿ ಕಟ್ಟಿಹಾಕಿಕೊಂಡಿರುವವನು ಮತ್ತು ಎಲ್ಲೆಯಿಲ್ಲದ ಮೋಹವನ್ನು ಹೊಂದಿರುವವನು ಹೇಗೆ ತಾನೇ ವಿರಕ್ತನಾಗಿ ಅವುಗಳನ್ನು ತ್ಯಜಿಸಬಲ್ಲನು? ॥ ೧೩ ॥ 'ಈ ಕುಟುಂಬ ನನ್ನದಾಗಿದೆ' ಎಂಬ ಭಾವದಿಂದ ಅದರ ಪಾಲನೆ-ಪೋಷಣೆಗಳಿಗಾಗಿಯೇ ತನ್ನ ಅಮೂಲ್ಯವಾದ ಆಯುಸ್ಸನ್ನು ಪೋಲುಮಾಡುತ್ತಾನೆ. ಜೀವನದ ವಾಸ್ತವಿಕ ಉದ್ದೇಶವೇ ಇದರಿಂದ ನಷ್ಟವಾಗುತ್ತಿದೆ ಎಂಬುದನ್ನೂ ಅವನು ಗಮನಿಸುವುದಿಲ್ಲ. ಈ ಕುಟುಂಬದ ಪೋಷಣೆಯಿಂದ ಅವನಿಗೆ ಅಲ್ಪ-ಸ್ವಲ್ಪ ಸುಖವು ದೊರೆಯಬಹುದಾದರೂ ಅವನು ಹೋದೆಡೆಯಲ್ಲೆಲ್ಲಾ ತ್ರಿವಿಧತಾಪಗಳು ಅವನ ಹೃದಯವನ್ನು ಸುಡುತ್ತಾ ಇರುತ್ತವೆ. ಆದರೂ

ವಿತ್ತೇಷು ನಿತ್ಯಾಭಿನಿವಿಷ್ಟಚೇತಾ
ವಿದ್ವಾಂಶ್ಚ ದೋಷಂ ಪರವಿತ್ತಹರ್ತುಃ ।
ಪ್ರೇತ್ಯೇಹ ಚಾಥಾಪ್ಯಜಿತೇಂದ್ರಿಯಸ್ತ-
ದಶಾಂತಕಾಮೋ ಹರತೇ ಕುಟುಂಬೀ ॥ ೧೫ ॥

ವಿದ್ವಾನಪೀತ್ಥಂ ದನುಜಾಃ ಕುಟುಂಬಂ
ಪುಷ್ಣನ್ ಸ್ವಲೋಕಾಯ ನ ಕಲ್ಪತೇ ವೈ ।
ಯಃ ಸ್ವೀಯಪಾರಕ್ಯವಿಭಿನ್ನಭಾವ-
ಸ್ತಮಃ ಪ್ರಪದ್ಯೇತ ಯಥಾ ವಿಮೂಢಃ ॥ ೧೬ ॥

ಯತೋ ನ ಕಶ್ಚಿತ್ಕ್ವ ಚ ಕುತ್ರಚಿದ್ವಾ
ದೀನಃ ಸ್ವಮಾತ್ಮಾನಮಲಂ ಸಮರ್ಥಃ ।
ವಿಮೋಚಿತುಂ ಕಾಮದೃಶಾಂ ವಿಹಾರ-
ಕ್ರೀಡಾಮೃಗೋ ಯನ್ನಿಗಡೋ ವಿಸರ್ಗಃ ॥ ೧೭ ॥

ತತೋ ವಿದೂರಾತ್ಪರಿಹೃತ್ಯ ದೈತ್ಯಾ
ದೈತ್ಯೇಷು ಸಂಗಂ ವಿಷಯಾತ್ಮಕೇಷು ।
ಉಪೇತ ನಾರಾಯಣಮಾದಿದೇವಂ
ಸ ಮುಕ್ತಸಂಗೈರಿಷಿತೋಽಪವರ್ಗಃ ॥ ೧೮ ॥

ನ ಹ್ಯಚ್ಯುತಂ ಪ್ರೀಣಯತೋ ಬಹ್ವಾಯಾಸೋಽಸುರಾತ್ಮಜಾಃ ।
ಆತ್ಮತ್ವಾತ್ಸರ್ವಭೂತಾನಾಂ ಸಿದ್ಧತ್ವಾದಿಹ ಸರ್ವತಃ ॥ ೧೯ ॥

ಪರಾವರೇಷು ಭೂತೇಷು ಬ್ರಹ್ಮಾಂತಸ್ಥಾವರಾದಿಷು ।
ಭೌತಿಕೇಷು ವಿಕಾರೇಷು ಭೂತೇಷ್ವಥ ಮಹತ್ಸು ಚ ॥ ೨೦ ॥

ಗುಣೇಷು ಗುಣಸಾಮ್ಯೇ ಚ ಗುಣವ್ಯತಿಕರೇ ತಥಾ ।
ಏಕ ಏವ ಪರೋ ಹ್ಯಾತ್ಮಾ ಭಗವಾನೀಶ್ವರೋಽವ್ಯಯಃ ॥ ೨೧ ॥

ಪ್ರತ್ಯಗಾತ್ಮಸ್ವರೂಪೇಣ ದೃಶ್ಯರೂಪೇಣ ಚ ಸ್ವಯಮ್ ।
ವ್ಯಾಪ್ಯವ್ಯಾಪಕನಿರ್ದೇಶ್ಯೋ ಹ್ಯನಿರ್ದೇಶ್ಯೋಽವಿಕಲ್ಪಿತಃ ॥ ೨೨ ॥

ಕೇವಲಾನುಭವಾನಂದಸ್ವರೂಪಃ ಪರಮೇಶ್ವರಃ ।
ಮಾಯಯಾಂತರ್ಹಿತೈಶ್ವರ್ಯ ಈಯತೇ ಗುಣಸರ್ಗಯಾ ॥ ೨೩ ॥

ತಸ್ಮಾತ್ಸರ್ವೇಷು ಭೂತೇಷು ದಯಾಂ ಕುರುತ ಸೌಹೃದಮ್ ।
ಆಸುರಂ ಭಾವಮುನ್ಮುಚ್ಯ ಯಯಾ ತುಷ್ಯತ್ಯಧೋಕ್ಷಜಃ ॥ ೨೪ ॥

ವೈರಾಗ್ಯವು ಉಂಟಾಗುವುದಿಲ್ಲವಲ್ಲ! ಎಂತಹ ವಿಡಂಬನೆ! ಈ ಕುಟುಂಬದ ಮಮತೆಯಲ್ಲಿ ಮುಳುಗಿದ ಮನುಷ್ಯನ ಮನಸ್ಸು ಸದಾ ಹಣದ ಚಿಂತೆಯಲ್ಲೇ ಆಸಕ್ತವಾಗಿರುತ್ತದೆ. ಮತ್ತೊಬ್ಬನ ಹಣವನ್ನು ಕದ್ದರೆ ಇಹ-ಪರಲೋಕಗಳಲ್ಲಿಯೂ ಅಪಾಯವೇ ಎಂಬುದನ್ನು ತಿಳಿದಿದ್ದರೂ ಇಂದ್ರಿಯ ಭೋಗಗಳ ಆಸೆಯಿಂದ ಆತನು ಕಳ್ಳತನವನ್ನು ಮಾಡುತ್ತಾನೆ. ಏಕೆಂದರೆ, ಆತನಿಗೆ ಕಾಮನೆಗಳನ್ನು ವಶದಲ್ಲಿಟ್ಟುಕೊಳ್ಳಲು ಸಾಧ್ಯವಾಗುವುದಿಲ್ಲ. ॥ ೧೪-೧೫ ॥ ಎಲೈ ದೈತ್ಯಬಾಲಕರೇ! ಹೀಗೆ ತನ್ನ ಕುಟುಂಬದ ಪಾಲನೆ-ಪೋಷಣೆಯಲ್ಲೇ ಆಸಕ್ತನಾಗಿ ಭಗವಂತನ ಭಜನೆಯನ್ನು ಎಂದಿಗೂ ಮಾಡದೇ ಇರುವ ಮನುಷ್ಯನು ವಿದ್ವಾಂಸನಾಗಿದ್ದರೂ ಅವನಿಗೆ ಪರಮಾತ್ಮನ ಪ್ರಾಪ್ತಿಯು ಉಂಟಾಗುವುದಿಲ್ಲ. ಏಕೆಂದರೆ, ಅವನಲ್ಲಿ ಸ್ವಕೀಯ-ಪರಕೀಯ ಎಂಬ ಭೇದ-ಭಾವನೆ ಇರುವುದರಿಂದ ಅವನಿಗೂ ಅಜ್ಞಾನಿಗಳಂತೆ ತಮಃಪ್ರಧಾನವಾದ ಗತಿಯೇ ದೊರಕುತ್ತದೆ. ॥ ೧೬ ॥ ಕಾಮಿನಿಯರ ಆಟದ ಮೃಗವಾಗಿ ಅವರ ಮನೋರಂಜನೆಗೆ ಸಾಧನವಾಗಿ, ಸಂತಾನದ ಸಂಕೋಲೆಯಲ್ಲಿ ಸಿಕ್ಕಿಹಾಕಿಕೊಳ್ಳುವ ಬಡಪಾಯಿಯಾದ ಮನುಷ್ಯನು ಯಾರೇ ಆದರೂ, ಎಲ್ಲೇ ಇದ್ದರೂ, ಯಾವುದೇ ರೀತಿಯಲ್ಲೂ ಅವನ ಉದ್ಧಾರವಾಗುವುದಿಲ್ಲ. ॥ ೧೭ ॥ ಅದಕ್ಕಾಗಿ ದೈತ್ಯಬಂಧುಗಳೇ! ನೀವೆಲ್ಲರೂ ವಿಷಯಾಸಕ್ತ ದೈತ್ಯರ ಸಂಗವನ್ನು ದೂರದಲ್ಲೇ ತೊರೆದು, ಆದಿದೇವನಾದ ಭಗವಾನ್ ನಾರಾಯಣನನ್ನು ಶರಣುಹೊಂದಿರಿ. ಏಕೆಂದರೆ, ಸಂಸಾರದ ಆಸಕ್ತಿಯನ್ನು ಬಿಟ್ಟಿರುವ ಮಹಾತ್ಮರಿಗೆ ಪರಮಾತ್ಮನೇ ಪರಮಪ್ರಿಯನು ಮತ್ತು ಪರಮಗತಿಯು. ॥ ೧೮ ॥

ಗೆಳೆಯರೇ! ಭಗವಂತನನ್ನು ಒಲಿಸಿಕೊಳ್ಳಲು ಯಾವುದೇ ಪರಿಶ್ರಮ ಮತ್ತು ಪ್ರಯತ್ನಗಳನ್ನು ಮಾಡಬೇಕಾಗಿಲ್ಲ. ಏಕೆಂದರೆ, ಅವನು ಸಮಸ್ತ ಪ್ರಾಣಿಗಳ ಆತ್ಮನೇ ಆಗಿದ್ದಾನೆ. ಎಲ್ಲೆಡೆಗಳಲ್ಲಿ ಎಲ್ಲರ ಅಸ್ತಿತ್ವದ ರೂಪದಲ್ಲಿ ಸ್ವಯಂಸಿದ್ಧನಾಗಿದ್ದಾನೆ. ॥ ೧೯ ॥ ಬ್ರಹ್ಮದೇವರಿಂದ ಹಿಡಿದು ಹುಲ್ಲುಕಡ್ಡಿಯವರೆಗಿನ ಎಲ್ಲ ಪ್ರಾಣಿಗಳಲ್ಲಿ, ಪಂಚಭೂತಗಳಿಂದ ಉಂಟಾದ ವಸ್ತುಗಳಲ್ಲಿ, ಪಂಚಭೂತಗಳಲ್ಲಿ, ಸೂಕ್ಷ್ಮತನ್ಮಾತ್ರೆಗಳಲ್ಲಿ, ಮಹತ್ತತ್ತ್ವದಲ್ಲಿ, ತ್ರಿಗುಣಗಳಲ್ಲಿ ಮತ್ತು ಗುಣಗಳ ಸಾಮ್ಯಾವಸ್ಥೆಯಾದ ಪ್ರಕೃತಿಯಲ್ಲಿ ಒರ್ವನೇ ಅವಿನಾಶಿಯಾದ ಪರಮಾತ್ಮನು ಬೆಳಗುತ್ತಿದ್ದಾನೆ. ॥ ೨೦-೨೧ ॥ ಅಂತರ್ಯಾಮಿ ದೃಷ್ಟಾರೂಪದಿಂದ ಮತ್ತು ದೃಶ್ಯ ಜಗತ್ತಿನ ರೂಪದಲ್ಲಿಯೂ ಅವನೇ ಇದ್ದಾನೆ. ಸರ್ವಥಾ ಅನಿರ್ವಚನೀಯ ಹಾಗೂ ವಿಕಲ್ಪರಹಿತನಾಗಿದ್ದರೂ ದೃಷ್ಟಾ ಮತ್ತು ದೃಶ್ಯ, ವ್ಯಾಪ್ತ ಮತ್ತು ವ್ಯಾಪಕ ರೂಪದಲ್ಲಿ ಆತನನ್ನೇ ನಿರ್ದೇಶಿಸುತ್ತಾರೆ. ವಾಸ್ತವವಾಗಿ ಅವನಲ್ಲಿ ಒಂದೂ ವಿಕಲ್ಪವಿಲ್ಲ. ॥ ೨೨ ॥ ಅವನು ಕೇವಲ ಅನುಭವಸ್ವರೂಪನೂ, ಆನಂದಸ್ವರೂಪನೂ ಆದ ಏಕಮಾತ್ರ ಪರಮೇಶ್ವರನೇ ಆಗಿದ್ದಾನೆ. ಗುಣಮಯ ಸೃಷ್ಟಿಯನ್ನು ಮಾಡುವ ಮಾಯೆಯಿಂದಲೇ ಅವನ ಐಶ್ವರ್ಯವು ಮುಚ್ಚಲ್ಪಟ್ಟಿದೆ. ಅದು ಹೋದೊಡನೆಯೇ ಅವನ ದರ್ಶನವಾಗುತ್ತದೆ. ॥ ೨೩ ॥ ಆದುದರಿಂದ ನೀವೆಲ್ಲರೂ ಅಸುರಭಾವವನ್ನು ಬಿಟ್ಟು ಎಲ್ಲ ಪ್ರಾಣಿಗಳಲ್ಲಿಯೂ ದಯೆಯನ್ನಿಡಿರಿ, ಸ್ನೇಹವನ್ನು ತೋರಿಸಿರಿ. ಇದರಿಂದಲೇ ಭಗವಂತನು ಪ್ರಸನ್ನನಾಗುವನು. ॥ ೨೪ ॥ ಅನಂತನಾದ ಆದಿನಾರಾಯಣನು ಸಂತುಷ್ಟನಾಗಿಬಿಟ್ಟರೆ ದೊರಕದೆ ಇರುವ ವಸ್ತುವು

ತುಷ್ಟೇ ಚ ತತ್ರ ಕಿಮಲಭ್ಯಮನಂತ ಆದ್ಯೇ
ಕಿಂ ತೈರ್ಗುಣವ್ಯತಿಕರಾದಿಹ ಯೇ ಸ್ವಸಿದ್ಧಾಃ ।
ಧರ್ಮಾದಯಃ ಕಿಮಗುಣೇನ ಚ ಕಾಂಕ್ಷಿತೇನ
ಸಾರಂ ಜುಷಾಂ ಚರಣಯೋರುಪಗಾಯತಾಂ ನಃ ॥ ೨೫ ॥

ಧರ್ಮಾರ್ಥಕಾಮ ಇತಿ ಯೋಽಭಿಹಿತಸ್ತ್ರಿವರ್ಗ
ಈಕ್ಷಾ ತ್ರಯೀ ನಯದಮೌ ವಿವಿಧಾ ಚ ವಾರ್ತಾ ।
ಮನ್ಯೇ ತದೇತದಖಿಲಂ ನಿಗಮಸ್ಯ ಸತ್ಯಂ
ಸ್ವಾತ್ಮಾರ್ಪಣಂ ಸ್ವಸುಹೃದಃ ಪರಮಸ್ಯ ಪುಂಸಃ ॥ ೨೬ ॥

ಜ್ಞಾನಂ ತದೇತದಮಲಂ ದುರವಾಪಮಾಹ
ನಾರಾಯಣೋ ನರಸಖಃ ಕಿಲ ನಾರದಾಯ ।
ಏಕಾಂತಿನಾಂ ಭಗವತಸ್ತದಕಿಂಚನಾನಾಂ
ಪಾದಾರವಿಂದರಜಸಾಽಽಪ್ಲುತದೇಹಿನಾಂ ಸ್ಯಾತ್ ॥ ೨೭ ॥

ಶ್ರುತಮೇತನ್ಮಯಾ ಪೂರ್ವಂ ಜ್ಞಾನಂ ವಿಜ್ಞಾನಸಂಯುತಮ್ ।
ಧರ್ಮಂ ಭಾಗವತಂ ಶುದ್ಧಂ ನಾರದಾದ್ದೇವದರ್ಶನಾತ್
॥ ೨೮ ॥

ದೈತ್ಯಪುತ್ರಾ ಊಚುಃ

ಪ್ರಹ್ಲಾದ ತ್ವಂ ವಯಂ ಚಾಪಿ ನರ್ತೇಽನ್ಯಂ ವಿದ್ಮಹೇ ಗುರುಮ್ ।
ಏತಾಭ್ಯಾಂ ಗುರುಪುತ್ರಾಭ್ಯಾಂ ಬಾಲಾನಾಮಪಿ ಹೀಶ್ವರೌ
॥ ೨೯ ॥

ಬಾಲಸ್ಯಾಂತಃಪುರಸ್ಥಸ್ಯ ಮಹತ್ಸಂಗೋ ದುರನ್ವಯಃ ।
ಛಿಂಧಿ ನಃ ಸಂಶಯಂ ಸೌಮ್ಯ ಸ್ಯಾಚ್ಚೇದ್ವಿಸ್ರಂಭಕಾರಣಮ್
॥ ೩೦ ॥

ಯಾವುದು ತಾನೇ ಇದ್ದೀತು? ಧರ್ಮ, ಅರ್ಥ, ಕಾಮಗಳೆಂಬ ಪುರುಷಾರ್ಥಗಳಾದರೋ ತ್ರಿಗುಣಗಳ ಪರಿಣಾಮಗಳು. ಅವು ಪ್ರಯಾಸವಿಲ್ಲದೆ ತಾವಾಗಿಯೇ ದೊರಕುತ್ತವೆ. ನಾವು ಶ್ರೀಭಗವಂತನ ಚರಣಾಮೃತವನ್ನು ಸೇವಿಸುತ್ತಾ, ಆತನ ದಿವ್ಯನಾಮಗಳನ್ನೂ, ಗುಣಗಳನ್ನೂ ಕೀರ್ತನೆ ಮಾಡುತ್ತಿದ್ದರೆ ನಮಗೆ ಮೋಕ್ಷದ ಆವಶ್ಯಕತೆಯೂ ಇರುವುದಿಲ್ಲ. ॥ ೨೫ ॥ ಶಾಸ್ತ್ರಗಳಲ್ಲಿ ಧರ್ಮ, ಅರ್ಥ, ಕಾಮಗಳೆಂಬ ಮೂರು ಪುರುಷಾರ್ಥಗಳು ವರ್ಣಿಸಲ್ಪಟ್ಟಿವೆ. ಹಾಗೆಯೇ ಆತ್ಮವಿದ್ಯೆ, ಕರ್ಮಕಾಂಡ, ನ್ಯಾಯ (ತರ್ಕಶಾಸ್ತ್ರ), ದಂಡನೀತಿ ಮತ್ತು ಜೀವನದ ವಿವಿಧ ಸಾಧನೆಗಳು – ಇವೆಲ್ಲವೂ ವೇದದ ಪ್ರತಿಪಾದ್ಯ ವಿಷಯಗಳೇ ಆಗಿವೆ. ಆದರೆ ಇವುಗಳು ತನ್ನ ಪರಮಹಿತೈಷಿ, ಪರಮಪುರುಷ ಭಗವಾನ್ ಶ್ರೀಹರಿಯಲ್ಲಿ ಆತ್ಮಸಮರ್ಪಣ ಮಾಡುವುದರಲ್ಲಿ ಸಹಾಯಕವಾದರೆ ಮಾತ್ರ ನಾನು ಇವುಗಳನ್ನು ಸತ್ಯ (ಸಾರ್ಥಕ)ವೆಂದು ತಿಳಿಯುತ್ತೇನೆ. ಇಲ್ಲದಿದ್ದರೆ ಇವೆಲ್ಲವೂ ನಿರರ್ಥಕವೇ ಸರಿ. ॥ ೨೬ ॥ ನಾನು ನಿಮಗೆ ಹೇಳಿರುವ ಈ ಭಾಗವತಧರ್ಮವು ಅತ್ಯಂತ ದುರ್ಲಭವಾದುದು. ಇದನ್ನು ಮೊದಲು ನರ-ನಾರಾಯಣರು ನಾರದರಿಗೆ ಉಪದೇಶಿಸಿದ್ದರು. ಯಾರು ಭಗವಂತನ ಅನನ್ಯ ಪ್ರೇಮಿ ಹಾಗೂ ಅಕಿಂಚನ ಭಕ್ತರ ಚರಣಕಮಲಗಳ ಧೂಳಿನಿಂದ ತಮ್ಮ ದೇಹಕ್ಕೆ ಅಭಿಷೇಕ ಮಾಡಿ ಕೊಳ್ಳುವರೋ ಅವರೆಲ್ಲರಿಗೂ ಈ ಜ್ಞಾನವು ದೊರೆಯುವುದು. ॥ ೨೭ ॥ ಈ ವಿಜ್ಞಾನಸಹಿತ ಜ್ಞಾನವೇ ವಿಶುದ್ಧವಾದ ಭಾಗವತ ಧರ್ಮವಾಗಿದೆ. ಇದನ್ನು ನಾನು ಭಗವಂತನ ದರ್ಶನ ಮಾಡಿದಂತಹ ದೇವರ್ಷಿ ನಾರದರ ಮುಖದಿಂದ ಕೇಳಿರುವೆನು. ॥ ೨೮ ॥

ಪ್ರಹ್ಲಾದನ ಸಹಪಾಠಿಗಳು ಕೇಳಿದರು – ಮಿತ್ರ ಪ್ರಹ್ಲಾದನೇ! ಈ ಇಬ್ಬರು ಗುರುಪುತ್ರರನ್ನು ಬಿಟ್ಟು ಬೇರೆ ಯಾರೇ ಗುರುವನ್ನು ನಾವಾಗಲೀ, ನೀನಾಗಲೀ ಅರಿಯೆವು. ಇವರೇ ನಮ್ಮೆಲ್ಲ ಬಾಲಕರಿಗೆ ಶಾಸಕರಾಗಿದ್ದಾರೆ. ॥ ೨೯ ॥ ನೀನಾದರೋ ಇನ್ನೂ ಸಣ್ಣ ವಯಸ್ಸಿನವನು. ಅಲ್ಲದೆ ಹುಟ್ಟಿನಿಂದಲೇ ಅರಮನೆಯಲ್ಲಿ ತಾಯಿಯ ಬಳಿಯಲ್ಲೇ ಇದ್ದವನು. ಹೀಗಿರುವಾಗ ನಿನಗೂ-ನಾರದರಿಗೂ ಭೇಟಿಯಾಯಿತು ಎಂಬುದು ಸ್ವಲ್ಪ ಅಸಂಗತದಂತೆ ತೋರುತ್ತದಲ್ಲ. ಪ್ರಿಯನೇ! ಈ ವಿಷಯದಲ್ಲಿ ವಿಶ್ವಾಸ ಉಂಟಾಗುವಂತಹ ಯಾವುದಾದರೂ ಮಾತಿದ್ದರೆ ನೀನು ನಮಗೆ ಹೇಳಿ ನಮ್ಮ ಸಂಶಯವನ್ನು ಹೋಗಲಾಡಿಸು. ॥ ೩೦ ॥

ಆರನೆಯ ಅಧ್ಯಾಯವು ಮುಗಿಯಿತು. ॥ ೬ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಸಪ್ತಮಸ್ಕಂಧೇ ಪ್ರಹ್ಲಾದಾನುಚರಿತೇ ಷಷ್ಠೋಽಧ್ಯಾಯಃ ॥ ೬ ॥

ಏಳನೆಯ ಅಧ್ಯಾಯ

ತಾಯಿಯ ಗರ್ಭದಲ್ಲಿದ್ದಾಗ ನಾರದರಿಂದ ಪಡೆದ ಉಪದೇಶವನ್ನು ಪ್ರಹ್ಲಾದನು ವರ್ಣಿಸಿದುದು

ನಾರದ ಉವಾಚ

ಏವಂ ದೈತ್ಯಸುತೈಃ ಪೃಷ್ಟೋ ಮಹಾಭಾಗವತೋಽಸುರಃ ।
ಉವಾಚ ಸ್ಮಯಮಾನಸ್ತಾನ್ ಸ್ಮರನ್ಮದನುಭಾಷಿತಮ್
॥ ೧ ॥

ನಾರದರು ಹೇಳುತ್ತಾರೆ – ಯುಧಿಷ್ಠಿರನೇ! ದೈತ್ಯಬಾಲಕರು ಹೀಗೆ ಪ್ರಶ್ನಿಸಿದಾಗ ಭಗವಂತನ ಪರಮಪ್ರೇಮೀ ಪ್ರಹ್ಲಾದನಿಗೆ ನನ್ನ ಮಾತು ನೆನಪಾಯಿತು. ಸ್ವಲ್ಪ ಮುಗುಳ್ನಕ್ಕು ಅವನು ಅವರಿಗೆ ಹೀಗೆಂದನು – ॥ ೧ ॥

ಪ್ರಹ್ಲಾದ ಉವಾಚ

ಪಿತರಿ ಪ್ರಸ್ಥಿತೇಽಸ್ಮಾಕಂ ತಪಸೇ ಮಂದರಾಚಲಮ್ ।
ಯುದ್ಧೋದ್ಯಮಂ ಪರಂ ಚಕ್ರುರ್ವಿಬುಧಾ ದಾನವಾನ್ಪ್ರತಿ ॥ ೨ ॥

ಪಿಪೀಲಿಕೈರಹಿರಿವ ದಿಷ್ಟ್ಯಾ ಲೋಕೋಪತಾಪನಃ ।
ಪಾಪೇನ ಪಾಪೋಽಭಕ್ಷೀತಿ ವಾದಿನೋ ವಾಸವಾದಯಃ ॥ ೩ ॥

ತೇಷಾಮತಿಬಲೋದ್ಯೋಗಂ ನಿಶಮ್ಯಾಸುರಯೂಥಪಾಃ ।
ವಧ್ಯಮಾನಾಃ ಸುರೈರ್ಭೀತಾ ದುದ್ರುವುಃ ಸರ್ವತೋದಿಶಮ್ ॥ ೪ ॥

ಕಲತ್ರಪುತ್ರಮಿತ್ರಾಪ್ತಾನ್ಗೃಹಾನ್ಪಶುಪರಿಚ್ಛದಾನ್ ।
ನಾವೇಕ್ಷಮಾಣಾಸ್ತ್ವರಿತಾಃ ಸರ್ವೇ ಪ್ರಾಣಪರೀಪ್ಸವಃ ॥ ೫ ॥

ವ್ಯಲುಂಪನ್ ರಾಜಶಿಬಿರಮಮರಾ ಜಯಕಾಂಕ್ಷಿಣಃ ।
ಇಂದ್ರಸ್ತು ರಾಜಮಹಿಷೀಂ ಮಾತರಂ ಮಮ ಚಾಗ್ರಹೀತ್ ॥ ೬ ॥

ನೀಯಮಾನಾಂ ಭಯೋದ್ವಿಗ್ನಾಂ ರುದತೀಂ ಕುರರೀಮಿವ ।
ಯದೃಚ್ಛಯಾಽಽಗತಸ್ತತ್ರ ದೇವರ್ಷಿರ್ದದೃಶೇ ಪಥಿ ॥ ೭ ॥

ಪ್ರಾಹ ಚೈನಾಂ ಸುರಪತೇ ನೇತುಮರ್ಹಸ್ಯನಾಗಸಮ್ ।
ಮುಂಚ ಮುಂಚ ಮಹಾಭಾಗ ಸತೀಂ ಪರಪರಿಗ್ರಹಮ್ ॥ ೮ ॥

ಇಂದ್ರ ಉವಾಚ

ಆಸ್ತೇಽಸ್ಯಾ ಜಠರೇ ವೀರ್ಯಮವಿಷಹ್ಯಂ ಸುರದ್ವಿಷಃ ।
ಆಸ್ಯತಾಂ ಯಾವತ್ಪ್ರಸವಂ ಮೋಕ್ಷ್ಯೇಽರ್ಥಪದವೀಂಗತಃ ॥ ೯ ॥

ನಾರದ ಉವಾಚ

ಅಯಂ ನಿಷ್ಕಿಲ್ಬಿಷಃ ಸಾಕ್ಷಾನ್ಮಹಾಭಾಗವತೋಮಹಾನ್ ।
ತ್ವಯಾ ನ ಪ್ರಾಪ್ಸ್ಯತೇ ಸಂಸ್ಥಾಮನಂತಾನುಚರೋ ಬಲೀ ॥ ೧೦ ॥

ಇತ್ಯುಕ್ತಸ್ತಾಂ ವಿಹಾಯೇಂದ್ರೋ ದೇವರ್ಷೇರ್ಮಾನಯನ್ವಚಃ ।
ಅನಂತಪ್ರಿಯಭಕ್ತ್ಯೈನಾಂ ಪರಿಕ್ರಮ್ಯ ದಿವಂ ಯಯೌ ॥ ೧೧ ॥

ತತೋ ನೋ ಮಾತರಮೃಷಿಃ ಸಮಾನೀಯ ನಿಜಾಶ್ರಮಮ್ ।
ಆಶ್ವಾಸ್ಯೇಹೋಷ್ಯತಾಂ ವತ್ಸೇ ಯಾವತ್ತೇ ಭರ್ತುರಾಗಮಃ ॥ ೧೨ ॥

ಪ್ರಹ್ಲಾದನು ಹೇಳಿದನು – ನಮ್ಮ ತಂದೆಯವರು ತಪಸ್ಸಿಗೆ ಮಂದರಾಚಲಕ್ಕೆ ಹೋಗಿದ್ದಾಗ ಇಂದ್ರಾದಿ ದೇವತೆಗಳು ದಾನವರೊಂದಿಗೆ ಯುದ್ಧಮಾಡಲು ಸಿದ್ಧರಾದರು. ॥ ೨ ॥ 'ಇರುವೆಗಳು ಸರ್ಪವನ್ನು ತಿಂದುಹಾಕುವಂತೆ ಜನರಿಗೆ ಸಂತಾಪವನ್ನುಂಟು ಮಾಡುತ್ತಿದ್ದ ಪಾಪೀ ಹಿರಣ್ಯಕಶಿಪುವನ್ನು ಅವನ ಪಾಪಗಳೇ ತಿಂದುಹಾಕಿದವು. ಇದು ನಮ್ಮ ಭಾಗ್ಯ' ಎಂದು ದೇವತೆಗಳು ಹೇಳತೊಡಗಿದರು. ॥ ೩ ॥ ದೈತ್ಯಸೇನಾಪತಿಗಳಿಗೆ ದೇವತೆಗಳ ಭಾರೀ ತಯಾರಿಯ ಸಮಾಚಾರ ತಿಳಿದಾಗ ಅವರ ಸಾಹಸವು ಕರಗಿಹೋಯಿತು. ಅವರು ದೇವತೆಗಳನ್ನು ಇದಿರಿಸಲಾರದೇ ಹೋದರು. ದೇವತೆಗಳಿಂದ ಏಟುತಿಂದು ಪತ್ನಿಯರು, ಪುತ್ರರು, ಮಿತ್ರರು, ಗುರುಗಳು, ಅರಮನೆಗಳು, ಪಶುಗಳು ಮತ್ತು ಸಾಮಗ್ರಿಗಳು ಇವುಗಳ ಯಾವುದೇ ಪರಿವೆಯಿಲ್ಲದೆ, ಅವರೆಲ್ಲರೂ ತಮ್ಮ ಪ್ರಾಣಗಳನ್ನು ಉಳಿಸಿಕೊಳ್ಳಲಿಕ್ಕಾಗಿ ಬೇಗ ಬೇಗನೇ ಅತ್ತ-ಇತ್ತ ಓಡಿಹೋದರು. ॥ ೪-೫ ॥ ತಮ್ಮ ಗೆಲುವನ್ನು ಬಯಸುತ್ತಿದ್ದ ದೇವತೆಗಳು ದೈತ್ಯರಾಜನ ಅರಮನೆಯನ್ನು ಕೊಳ್ಳೆ ಹೊಡೆದರು. ಇಂದ್ರನಾದರೋ ರಾಜನ ಪಟ್ಟಮಹಿಷಿಯಾದ ನನ್ನ ತಾಯಿ ಕಯಾಧುವನ್ನು ಸೆರೆ ಹಿಡಿದನು. ॥ ೬ ॥ ನನ್ನ ತಾಯಿಯು ಭಯದಿಂದ ನಡುಗಿಕೊಂಡು ಕುರರೀಪಕ್ಷಿಯಂತೆ ಅಳುತ್ತಿದ್ದಳು. ಇಂದ್ರನು ಆಕೆಯನ್ನು ಬಲಾತ್ಕಾರವಾಗಿ ಕೊಂಡೊಯ್ಯುತ್ತಿದ್ದನು. ದೈವವಶದಿಂದ ದೇವರ್ಷಿಯಾದ ನಾರದರು ದಾರಿಯಲ್ಲಿ ಕಾಣಿಸಿಕೊಂಡು, ನನ್ನ ತಾಯಿಯನ್ನು ನೋಡಿದರು. ॥ ೭ ॥ ಅವರೆಂದರು – ದೇವೇಂದ್ರಾ! ಇವಳು ನಿರಪರಾಧಿಯಾಗಿದ್ದಾಳೆ. ಇವಳನ್ನು ಕೊಂಡುಹೋಗುವುದು ಉಚಿತವಲ್ಲ. ಮಹಾಭಾಗನೇ! ಪತಿವ್ರತಾ ಶಿರೋಮಣಿಯೂ, ಪರನಾರಿಯೂ ಆದ ಇವಳನ್ನು ತಿರಸ್ಕರಿಸಬೇಡ. ಇವಳನ್ನು ಬಿಟ್ಟುಬಿಡು! ಬೇಗನೇ ಬಿಟ್ಟುಬಿಡು! ॥ ೮ ॥

ದೇವೇಂದ್ರನು ಹೇಳಿದನು – ಇವಳ ಹೊಟ್ಟೆಯಲ್ಲಿ ದೇವತೆಗಳ ದ್ರೋಹಿಯಾದ ಹಿರಣ್ಯಕಶಿಪುವಿನ ಅತ್ಯಂತ ಪ್ರಭಾವಶಾಲಿಯಾದ ವೀರ್ಯವಿದೆ. ಇವಳು ಪ್ರಸವದವರೆಗೆ ನನ್ನ ಬಳಿಯಲ್ಲಿ ಇರಲಿ. ಮಗು ಹುಟ್ಟಿದಾಕ್ಷಣ ಅದನ್ನು ಕೊಂದು ಇವಳನ್ನು ಬಿಟ್ಟುಬಿಡುವೆ. ॥ ೯ ॥

ನಾರದರು ಹೇಳಿದರು – ಇವಳ ಗರ್ಭದಲ್ಲಿ ಭಗವಂತನ ಸಾಕ್ಷಾತ್ ಪರಮಪ್ರೇಮೀ ಭಕ್ತನೂ, ಸೇವಕನೂ, ಅತ್ಯಂತ ಬಲಶಾಲಿಯೂ, ಪುಣ್ಯಾತ್ಮನೂ ಆದ ಮಹಾತ್ಮನಿದ್ದಾನೆ. ಇವನನ್ನು ಕೊಲ್ಲುವ ಶಕ್ತಿಯು ನಿನ್ನಬಳಿ ಇಲ್ಲ. ॥ ೧೦ ॥

ದೇವರ್ಷಿ ನಾರದರ ಈ ಮಾತನ್ನು ಕೇಳಿ ಅವರ ಮಾತನ್ನು ಗೌರವಿಸಿ ಇಂದ್ರನು ನನ್ನ ತಾಯಿಯನ್ನು ಬಿಟ್ಟುಬಿಟ್ಟನು. ಇಷ್ಟಲ್ಲದೆ ಆಕೆಯ ಗರ್ಭದಲ್ಲಿ ಭಗವದ್ಭಕ್ತನಿದ್ದಾನೆ ಎಂಬ ಭಾವನೆಯಿಂದ ಆಕೆಯನ್ನು ಪ್ರದಕ್ಷಿಣೆ ಬಂದು ತನ್ನ ಲೋಕಕ್ಕೆ ಹೊರಟು ಹೋದನು. ॥ ೧೧ ॥

ಅನಂತರ ದೇವಋಷಿ ನಾರದರು ನನ್ನ ತಾಯಿಯನ್ನು ತಮ್ಮ ಆಶ್ರಮಕ್ಕೆ ಕರೆದುಕೊಂಡುಹೋಗಿ ಸಮಾಧಾನಪಡಿಸಿ –'ಮಗಳೇ! ನಿನ್ನ ಪತಿಯು ತಪಸ್ಸನ್ನು ಮುಗಿಸಿ ಹಿಂದಿರುಗಿ ಬರುವವರೆಗೆ ನೀನು ಇಲ್ಲೇ ಇರು.' ॥ ೧೨ ॥ 'ಹಾಗೆಯೇ ಆಗಲಿ' ಎಂದು ಹೇಳಿ ನನ್ನ ತಂದೆಯು ತಪಸ್ಸನ್ನು ಮುಗಿಸಿ ಬರುವವರೆವಿಗೂ ಆಕೆಯು

ತಥೇತ್ಯವಾತ್ಸೀದ್ದೇವರ್ಷೇರಂತಿ ಸಾಪ್ಯಕುತೋಭಯಾ ।
ಯಾವದ್ದೈತ್ಯಪತಿರ್ಘೋರಾತ್ತಪಸೋ ನ ನ್ಯವರ್ತತ ॥ ೧೩ ॥

ಋಷಿಂ ಪರ್ಯಚರತ್ತತ್ರ ಭಕ್ತ್ಯಾ ಪರಮಯಾ ಸತೀ ।
ಅಂತರ್ವತ್ನೀ ಸ್ವಗರ್ಭಸ್ಯ ಕ್ಷೇಮಾಯೇಚ್ಛಾಪ್ರಸೂತಯೇ ॥ ೧೪ ॥

ಋಷಿಃ ಕಾರುಣಿಕಸ್ತಸ್ಯಾಃ ಪ್ರಾದಾದುಭಯಮೀಶ್ವರಃ ।
ಧರ್ಮಸ್ಯ ತತ್ತ್ವಂ ಜ್ಞಾನಂ ಚ ಮಾಮಪ್ಯುದ್ದಿಶ್ಯ ನಿರ್ಮಲಮ್ ॥ ೧೫ ॥

ತತ್ತು ಕಾಲಸ್ಯ ದೀರ್ಘತ್ವಾತ್ ಸ್ತ್ರೀತ್ವಾನ್ಮಾತುಸ್ತಿರೋದಧೇ ।
ಋಷಿಣಾನುಗೃಹೀತಂ ಮಾಂ ನಾಧುನಾಪ್ಯಜಹಾತ್ಸ್ಮೃತಿಃ ॥ ೧೬ ॥

ಭವತಾಮಪಿ ಭೂಯಾನ್ಮೇ ಯದಿ ಶ್ರದ್ದಧತೇ ವಚಃ ।
ವೈಶಾರದೀ ಧೀಃ ಶ್ರದ್ಧಾತಃ ಸ್ತ್ರೀಬಾಲಾನಾಂ ಚ ಮೇ ಯಥಾ ॥ ೧೭ ॥

ಜನ್ಮಾದ್ಯಾಃ ಷಡಿಮೇ ಭಾವಾ ದೃಷ್ಟಾ ದೇಹಸ್ಯ ನಾತ್ಮನಃ ।
ಫಲಾನಾಮಿವ ವೃಕ್ಷಸ್ಯ ಕಾಲೇನೇಶ್ವರಮೂರ್ತಿನಾ ॥ ೧೮ ॥

ಆತ್ಮಾ ನಿತ್ಯೋಽವ್ಯಯಃ ಶುದ್ಧ ಏಕಃ ಕ್ಷೇತ್ರಜ್ಞ ಆಶ್ರಯಃ ।
ಅವಿಕ್ರಿಯಃ ಸ್ವದೃಗ್ಘೇತುರ್ವ್ಯಾಪಕೋಽಸಂಗ್ಯನಾವೃತಃ ॥ ೧೯ ॥

ಏತೈರ್ದ್ವಾದಶಭಿರ್ವಿದ್ವಾನಾತ್ಮನೋ ಲಕ್ಷಣೈಃ ಪರೈಃ ।
ಅಹಂ ಮಮೇತ್ಯಸದ್ಭಾವಂ ದೇಹಾದೌ ಮೋಹಜಂ ತ್ಯಜೇತ್ ॥ ೨೦ ॥

ಸ್ವರ್ಣಂ ಯಥಾ ಗ್ರಾವಸು ಹೇಮಕಾರಃ
ಕ್ಷೇತ್ರೇಷು ಯೋಗೈಸ್ತದಭಿಜ್ಞ ಆಪ್ನುಯಾತ್ ।
ಕ್ಷೇತ್ರೇಷು ದೇಹೇಷು ತಥಾಽಽತ್ಮಯೋಗೈ-
ರಧ್ಯಾತ್ಮವಿದ್ಬ್ರಹ್ಮಗತಿಂ ಲಭೇತ ॥ ೨೦ ॥

ಅಷ್ಟೌ ಪ್ರಕೃತಯಃ ಪ್ರೋಕ್ತಾಸ್ತ್ರಯ ಏವ ಹಿ ತದ್ಗುಣಾಃ ।
ವಿಕಾರಾಃ ಷೋಡಶಾಚಾರ್ಯೈಃ ಪುಮಾನೇಕಃ ಸಮನ್ವಯಾತ್ ॥ ೨೨ ॥

ದೇಹಸ್ತು ಸರ್ವಸಂಘಾತೋ ಜಗತ್ತಸ್ಥುರಿತಿ ದ್ವಿಧಾ ।
ಅತ್ರೈವ ಮೃಗ್ಯಃ ಪುರುಷೋ ನೇತಿ ನೇತೀತ್ಯತತ್ತ್ಯಜನ್ ॥ ೨೩ ॥

ನಿರ್ಭಯಳಾಗಿ ದೇವರ್ಷಿ ನಾರದರ ಆಶ್ರಮದಲ್ಲಿ ಇರ ತೊಡಗಿದಳು. ॥ ೧೩ ॥ ಗರ್ಭಿಣಿಯಾದ ನನ್ನ ತಾಯಿಯು ಗರ್ಭದಲ್ಲಿದ್ದ ಶಿಶುವಾದ ನನಗೆ ಮಂಗಳ ಉಂಟಾಗಲಿ ಮತ್ತು ಇಷ್ಟ ಬಂದ ಸಮಯದಲ್ಲಿ (ಅಂದರೆ ನನ್ನ ತಂದೆಯು ಹಿಂದಿರುಗಿದ ಬಳಿಕ) ಶಿಶುವು ಹುಟ್ಟಲಿ ಎಂಬ ಕಾಮನೆಯಿಂದ ನಾರದ ಮಹರ್ಷಿಗಳನ್ನು ಅತ್ಯಂತ ಭಕ್ತಿಯಿಂದ ಸೇವಿಸುತ್ತಿದ್ದಳು. ॥ ೧೪ ॥

ಪರಮ ಕಾರುಣಿಕರೂ, ಸರ್ವಸಮರ್ಥರೂ ಆದ ದೇವಮುನಿ ನಾರದರು ನನ್ನ ತಾಯಿಗೆ ಭಾಗವತ ಧರ್ಮದ ರಹಸ್ಯವನ್ನು ಹಾಗೂ ವಿಶುದ್ಧವಾದ ಜ್ಞಾನವನ್ನೂ ಉಪದೇಶಿಸಿದರು. ಉಪದೇಶಿಸುವಾಗ ನನ್ನನ್ನು ಉದ್ಧರಿಸಲೋಸುಗ ಅವರ ದೃಷ್ಟಿಯು ನನ್ನ ಮೇಲೆಯೇ ಇತ್ತು. ॥ ೧೫ ॥ ಬಹಳ ಸಮಯ ಕಳೆದುಹೋದದ್ದರಿಂದಲೂ, ಸ್ತ್ರೀಯಾಗಿದ್ದರಿಂದಲೂ ನನ್ನ ತಾಯಿಗೆ ಈಗ ▪ ಜ್ಞಾನದ ನೆನಪು ಉಳಿಯಲಿಲ್ಲ. ಆದರೆ ದೇವರ್ಷಿಗಳ ವಿಶೇಷ ಕೃಪೆಗೆ ಪಾತ್ರನಾದ ನನಗೆ ಅದರ ವಿಸ್ಮೃತಿಯಾಗಲಿಲ್ಲ. ॥ ೧೬ ॥ ನೀವುಗಳು ನನ್ನ ಮಾತಿನ ಮೇಲೆ ಶ್ರದ್ಧೆ ಇರಿಸುವವರಾದರೆ ನಿಮಗೂ ಆ ಜ್ಞಾನವು ಉಂಟಾಗಬಲ್ಲದು. ಏಕೆಂದರೆ ಶ್ರದ್ಧೆಯಿಂದಲೇ ಸ್ತ್ರೀಯರ ಮತ್ತು ಬಾಲಕರ ಬುದ್ಧಿಯೂ ಕೂಡ ನನ್ನಂತೆಯೇ ಶುದ್ಧವಾಗ ಬಲ್ಲದು. ॥ ೧೭ ॥ ಈಶ್ವರಮೂರ್ತಿಯಾದ ಕಾಲನ ಪ್ರೇರಣೆಯಿಂದಲೇ ವೃಕ್ಷಗಳಲ್ಲಿ ಹಣ್ಣುಬಿಟ್ಟು, ಅಲ್ಲೇ ಇದ್ದು ಬೆಳೆದು, ಹಣ್ಣಾಗಿ ಕ್ಷೀಣವಾಗಿ ನಾಶಹೊಂದುವಂತೆಯೇ ದೇಹಕ್ಕೆ ಹುಟ್ಟು ಇರುವಿಕೆ, ಬೆಳವಣಿಗೆ, ಪರಿಣಾಮ, ಕ್ಷಯ ಮತ್ತು ನಾಶ ಎಂಬ ಆರು ಭಾವವಿಕಾರಗಳು ಕಂಡು ಬರುತ್ತವೆ. ಆದರೆ ಈ ವಿಕಾರಗಳೊಂದಿಗೆ ಆತ್ಮನಿಗೆ ಯಾವ ಸಂಬಂಧವೂ ಇಲ್ಲ. ॥ ೧೮ ॥ ಆತ್ಮನು ನಿತ್ಯನೂ, ಅವಿನಾಶಿಯೂ, ಶುದ್ಧನೂ, ಅದ್ವಿತೀಯನೂ, ಕ್ಷೇತ್ರಜ್ಞನೂ, ಆಶ್ರಯನೂ, ನಿರ್ವಿಕಾರನೂ, ಸ್ವಯಂ ಪ್ರಕಾಶನೂ, ಎಲ್ಲರ ಕಾರಣನೂ, ವ್ಯಾಪಕನೂ, ಅಸಂಗನೂ ಮತ್ತು ಆವರಣ ರಹಿತನೂ ಆಗಿದ್ದಾನೆ. ॥ ೧೯ ॥ ಈ ಹನ್ನೆರಡು ಆತ್ಮನ ಶ್ರೇಷ್ಠ ಲಕ್ಷಣಗಳಾಗಿವೆ. ಇವುಗಳ ಮೂಲಕ ಆತ್ಮತತ್ತ್ವವನ್ನು ಅರಿತ ಮನುಷ್ಯನು ಶರೀರಾದಿಗಳಲ್ಲಿ ಅಜ್ಞಾನದಿಂದಾಗಿ ಉಂಟಾಗಿರುವ 'ನಾನು-ನನ್ನದು' ಎಂಬ ಮಿಥ್ಯೆಯಾದ ಭಾವನೆಯನ್ನು ಬಿಟ್ಟುಬಿಡಬೇಕು. ॥ ೨೦ ॥ ಚಿನ್ನದ ಗಣಿಯ ಕ್ಷೇತ್ರದಲ್ಲಿ ಕಲ್ಲುಗಳೊಂದಿಗೆ ಬೆರೆತಿರುವ ಚಿನ್ನವನ್ನು ತಜ್ಞನಾದ ಅಕ್ಕಸಾಲಿಗನು ಬಗೆ-ಬಗೆಯ ವಿಧಿಗಳಿಂದ ಪಡೆಯುವಂತೆಯೇ, ಅಧ್ಯಾತ್ಮತತ್ತ್ವವನ್ನು ತಿಳಿದಿರುವ ಮನುಷ್ಯನು ಆತ್ಮಪ್ರಾಪ್ತಿಯ ಉಪಾಯಗಳಿಂದ ತನ್ನ ಶರೀರರೂಪವಾದ ಕ್ಷೇತ್ರದಲ್ಲೇ ಪರಬ್ರಹ್ಮ ಪದವನ್ನು ಸಾಕ್ಷಾತ್ಕರಿಸಿಕೊಳ್ಳುವನು. ॥ ೨೧ ॥

ಆಚಾರ್ಯರು ಮೂಲಪ್ರಕೃತಿ, ಮಹತ್ತತ್ತ್ವ, ಅಹಂಕಾರ ಮತ್ತು ಪಂಚತನ್ಮಾತ್ರೆಗಳು ಈ ಎಂಟು ತತ್ತ್ವಗಳನ್ನು ಪ್ರಕೃತಿಯೆಂದು ತಿಳಿಸಿರುವರು. ಅದರ ಸತ್ತ್ವ, ರಜ, ತಮಗಳೆಂಬ ಮೂರು ಗುಣಗಳಿದ್ದು, ಹತ್ತು ಇಂದ್ರಿಯಗಳು, ಒಂದು ಮನಸ್ಸು ಮತ್ತು ಪಂಚ ಮಹಾಭೂತಗಳೆಂಬ ಹದಿನಾರು ವಿಕಾರಗಳಾಗಿವೆ. ಇವೆಲ್ಲವುಗಳಲ್ಲಿ ಒಂದೇ ಪುರುಷತತ್ತ್ವವು ಸೇರಿಕೊಂಡಿದೆ. ॥ ೨೨ ॥ ಇವೆಲ್ಲದರ ಸಮುದಾಯವೇ ದೇಹವು. ದೇಹದಲ್ಲಿ ಸ್ಥಾವರದೇಹ, ಜಂಗಮದೇಹ ಎಂಬ ಎರಡು ಪ್ರಕಾರಗಳಿವೆ. ಇದರಲ್ಲೇ ಅಂತಃಕರಣ, ಇಂದ್ರಿಯಗಳು ಮುಂತಾದ ಅನಾತ್ಮವಸ್ತುಗಳನ್ನು 'ಇದು ಆತ್ಮನಲ್ಲ' ಹೀಗೆ ತೊರೆಯುತ್ತಾ ಆತ್ಮನನ್ನು ಹುಡುಕಬೇಕು. ॥ ೨೩ ॥

ಅನ್ವಯವ್ಯತಿರೇಕೇಣ ವಿವೇಕೇನೋಶತಾಽಽತ್ಮನಾ ।
ಸರ್ಗಸ್ಥಾನಸಮಾಮ್ನಾಯೈರ್ವಿಮೃಶದ್ಭಿರಸತ್ವರೈಃ
॥ ೨೪ ॥

ಬುದ್ಧೇರ್ಜಾಗರಣಂ ಸ್ವಪ್ನಃ ಸುಷುಪ್ತಿರಿತಿ ವೃತ್ತಯಃ ।
ತಾ ಯೇನೈವಾನುಭೂಯಂತೇ ಸೋಽಧ್ಯಕ್ಷಃ ಪುರುಷಃ ಪರಃ
॥ ೨೫ ॥

ಏಭಿಸ್ತ್ರಿವರ್ಣೈಃ ಪರ್ಯಸ್ತೈರ್ಬುದ್ಧಿಭೇದೈಃ ಕ್ರಿಯೋದ್ಭವೈಃ ।
ಸ್ವರೂಪಮಾತ್ಮನೋ ಬುಧ್ಯೇದ್ಗಂಧೈರ್ವಾಯುಮಿವಾನ್ವಯಾತ್
॥ ೨೬ ॥

ಏತದ್ದ್ವಾರೋ ಹಿ ಸಂಸಾರೋ ಗುಣಕರ್ಮನಿಬಂಧನಃ ।
ಅಜ್ಞಾನಮೂಲೋಽಪಾರ್ಥೋಽಪಿ ಪುಂಸಃ ಸ್ವಪ್ನ ಇವೇಷ್ಯತೇ
॥ ೨೭ ॥

ತಸ್ಮಾದ್ಭವದ್ಭಿಃ ಕರ್ತವ್ಯಂ ಕರ್ಮಣಾಂ ತ್ರಿಗುಣಾತ್ಮನಾಮ್ ।
ಬೀಜನಿರ್ಹರಣಂ ಯೋಗಃ ಪ್ರವಾಹೋಪರಮೋ ಧಿಯಃ
॥ ೨೮ ॥

ತತ್ರೋಪಾಯಸಹಸ್ರಾಣಾಮಯಂ ಭಗವತೋದಿತಃ ।
ಯದೀಶ್ವರೇ ಭಗವತಿ ಯಥಾ ಯೈರಂಜಸಾ ರತಿಃ
॥ ೨೯ ॥

ಗುರುಶುಶ್ರೂಷಯಾ ಭಕ್ತ್ಯಾ ಸರ್ವಲಬ್ಧಾರ್ಪಣೇನ ಚ ।
ಸಂಗೇನ ಸಾಧುಭಕ್ತಾನಾಮೀಶ್ವರಾರಾಧನೇನ ಚ
॥ ೩೦ ॥

ಶ್ರದ್ಧಯಾ ತತ್ಕಥಾಯಾಂ ಚ ಕೀರ್ತನೈರ್ಗುಣಕರ್ಮಣಾಮ್ ।
ತತ್ಪಾದಾಂಬುರುಹಧ್ಯಾನಾತ್ತಲ್ಲಿಂಗೇಕ್ಷಾರ್ಹಣಾದಿಭಿಃ
॥ ೩೦ ॥

ಹರಿಃ ಸರ್ವೇಷು ಭೂತೇಷು ಭಗವಾನಾಸ್ತ ಈಶ್ವರಃ ।
ಇತಿ ಭೂತಾನಿ ಮನಸಾ ಕಾಮೈಸ್ತೈಃ ಸಾಧು ಮಾನಯೇತ್
॥ ೩೨ ॥

ಏವಂ ನಿರ್ಜಿತಷಡ್ವರ್ಗೈಃ ಕ್ರಿಯತೇ ಭಕ್ತಿರೀಶ್ವರೇ ।
ವಾಸುದೇವೇ ಭಗವತಿ ಯಯಾ ಸಂಲಭತೇ ರತಿಮ್
॥ ೩೩ ॥

ಆತ್ಮನು ಇವೆಲ್ಲದರಲ್ಲಿ ಸೇರಿಕೊಂಡಿದ್ದಾನೆ, ಆದರೆ ಅವನು ಎಲ್ಲಕ್ಕಿಂತ ಬೇರೆಯೇ ಆಗಿದ್ದಾನೆ. ಹೀಗೆ ಶುದ್ಧಬುದ್ಧಿಯಿಂದ ನಿಧಾನವಾಗಿ ಜಗತ್ತಿನ ಉತ್ಪತ್ತಿ, ಸ್ಥಿತಿ, ಪ್ರಳಯದ ಕುರಿತು ವಿಚಾರ ಮಾಡಬೇಕು. ಆತುರಪಡಬಾರದು. ॥ ೨೪ ॥ ಜಾಗ್ರತ್, ಸ್ವಪ್ನ ಸುಷುಪ್ತಿ – ಇವು ಮೂರು ಬುದ್ಧಿಯ ವೃತ್ತಿಗಳು. ಯಾವುದರ ಮೂಲಕ ಈ ವೃತ್ತಿಗಳ ಅನುಭವವಾಗುತ್ತದೋ ಅದೇ ಎಲ್ಲಕ್ಕಿಂತ ಅತೀತನೂ, ಎಲ್ಲರ ಸಾಕ್ಷಿಯೂ ಆದ ಪರಮಾತ್ಮನು. ॥ ೨೫ ॥ ಸುವಾಸನೆಯಿಂದ ಅದರ ಆಶ್ರಯವಾದ ವಾಯುವಿನ ಅರಿವಾಗುವಂತೆಯೇ, ಬುದ್ಧಿಯ ಈ ಕರ್ಮಜನ್ಯ ಹಾಗೂ ಬದಲಾಗುತ್ತಿರುವ ಮೂರೂ ಅವಸ್ಥೆಗಳಿಂದ ಇವುಗಳಲ್ಲಿರುವ ಸಾಕ್ಷಿರೂಪದಿಂದ ಸೇರಿಕೊಂಡಿರುವ ಆತ್ಮನನ್ನು ತಿಳಿಯಬೇಕು. ॥ ೨೬ ॥ ಆತ್ಮನನ್ನು ಶರೀರದಿಂದಲೂ ಪ್ರಕೃತಿಯಿಂದಲೂ ಬೇರ್ಪಡಿಸದೆ ಇರುವುದರಿಂದಲೇ ಈ ಗುಣ-ಕರ್ಮಗಳಿಂದ ಉಂಟಾಗುವ ಹುಟ್ಟು-ಸಾವುಗಳ ಚಕ್ರವು ಉಂಟಾಗುವುದು. ಇದು ಅಜ್ಞಾನಮೂಲವೂ, ಮಿಥ್ಯೆಯೂ ಆಗಿದೆ. ಆದರೂ ಕನಸಿನಂತೆ ಜೀವನಿಗೆ ಇದರ ಪ್ರತೀತಿ ಉಂಟಾಗುತ್ತದೆ. ॥ ೨೭ ॥

ಆದಕ್ಕಾಗಿ ನೀವೆಲ್ಲರೂ ಮೊಟ್ಟಮೊದಲು ಈ ಗುಣಗಳನುಸಾರ ಉಂಟಾಗುವ ಕರ್ಮಗಳ ಬೀಜವನ್ನೇ ನಾಶಮಾಡಿ ಬಿಡಬೇಕು. ಇದರಿಂದ ಬುದ್ಧಿ-ವೃತ್ತಿಗಳ ಪ್ರವಾಹವೇ ನಿಂತುಹೋಗುತ್ತದೆ. ಇದನ್ನೇ ಬೇರೆ ಶಬ್ದಗಳಲ್ಲಿ ಯೋಗ ಅಥವಾ ಪರಮಾತ್ಮನೊಂದಿಗೆ ಮಿಲನವೆಂದು ಹೇಳುತ್ತಾರೆ. ॥ ೨೮ ॥ ಈ ತ್ರಿಗುಣಾತ್ಮಕವಾದ ಕರ್ಮಗಳ ಬೇರುಗಳನ್ನು ಕಿತ್ತು ಎಸೆಯಲು ಅಥವಾ ಬುದ್ಧಿಯ ವೃತ್ತಿಗಳ ಪ್ರವಾಹವನ್ನು ತಡೆಗಟ್ಟುವುದಕ್ಕೆ ಸಾವಿರಾರು ಸಾಧನೆಗಳು ಇವೆ; ಆದರೂ ಸರ್ವಶಕ್ತಿವಂತ ಭಗವಂತನಲ್ಲಿ ಸ್ವಾಭಾವಿಕ ನಿಷ್ಕಾಮಪ್ರೇಮ ಉಂಟಾಗುವಂತಹ ಉಪಾಯವೇ ಸರ್ವಶ್ರೇಷ್ಠವಾಗಿದೆ. ಇದನ್ನು ಸ್ವಯಂ ಭಗವಂತನೇ ಅಪ್ಪಣೆ ಕೊಡಿಸಿರುವನು. ॥ ೨೯ ॥ ಗುರುಗಳಿಗೆ ಮಾಡಿದ ಪ್ರೇಮಪೂರ್ವಕ ಸೇವೆ, ತನಗೆ ಸಿಕ್ಕಿರುವುದೆಲ್ಲವನ್ನೂ ಭಗವಂತನಿಗೆ ಅರ್ಪಿಸುವುದು, ಭಾಗವತೋತ್ತಮ ಮಹಾತ್ಮರ ಸತ್ಸಂಗ, ಭಗವಂತನ ಆರಾಧನೆ, ಅವನ ಕಥೆಯಲ್ಲಿ ಶ್ರದ್ಧೆ ಅವನ ಗುಣ-ಲೀಲೆಗಳ ಕೀರ್ತನೆ, ಅವನ ಚರಣಕಮಲಗಳ ಧ್ಯಾನ ಮತ್ತು ಅವನ ಮಂದಿರಮೂರ್ತಿಗಳ ಅರ್ಚನೆ-ದರ್ಶನ ಮುಂತಾದ ಸಾಧನೆಗಳಿಂದ ಭಗವಂತನಲ್ಲಿ ಸ್ವಾಭಾವಿಕ ಪ್ರೇಮವು ಉಂಟಾಗುತ್ತದೆ. ॥ ೩೦-೩೧ ॥

ಸರ್ವೇಶ್ವರನಾದ ಭಗವಾನ್ ಶ್ರೀಹರಿಯೇ ಎಲ್ಲ ಪ್ರಾಣಿಗಳಲ್ಲಿ ಬೆಳಗುತ್ತಿದ್ದಾನೆ ಎಂಬ ಭಾವನೆಯಿಂದ ಶಕ್ತ್ಯಾನುಸಾರ ಎಲ್ಲ ಪ್ರಾಣಿಗಳ ಇಚ್ಛೆಯನ್ನು ಪೂರ್ಣಗೊಳಿಸಿ, ಅವರನ್ನು ಹೃತ್ಪೂರ್ವಕವಾಗಿ ಸಮ್ಮಾನಿಸಬೇಕು. ॥ ೩೨ ॥ ಕಾಮ, ಕ್ರೋಧ, ಲೋಭ, ಮೋಹ, ಮದ ಮತ್ತು ಮತ್ಸರ ಈ ಆರು ಶತ್ರುಗಳನ್ನು ಗೆದ್ದುಕೊಂಡು ಹೀಗೆ ಭಗವಂತನ ಸಾಧನ ಭಕ್ತಿಯ ಅನುಷ್ಠಾನ ಮಾಡುವವರಿಗೆ ಆ ಭಕ್ತಿಯಿಂದ ಭಗವಾನ್ ಶ್ರೀಕೃಷ್ಣನ ಚರಣಗಳಲ್ಲಿ ಅನನ್ಯ ಪ್ರೇಮದ ಪ್ರಾಪ್ತಿಯಾಗುತ್ತದೆ. ॥ ೩೩ ॥

ನಿಶಮ್ಯ ಕರ್ಮಾಣಿ ಗುಣಾನತುಲ್ಯಾನ್
ವೀರ್ಯಾಣಿ ಲೀಲಾತನುಭಿಃ ಕೃತಾನಿ ।
ಯದಾತಿಹರ್ಷೋತ್ಪುಲಕಾಶ್ರುಗದ್ಗದಂ
ಪ್ರೋತ್ಕಂಠ ಉದ್ಗಾಯತಿ ರೌತಿ ನೃತ್ಯತಿ ॥ ೩೪ ॥

ಯದಾ ಗ್ರಹಗ್ರಸ್ತ ಇವ ಕ್ವಚಿದ್ಧಸ-
ತ್ಯಾಕ್ರಂದತೇ ಧ್ಯಾಯತಿ ವಂದತೇ ಜನಮ್ ।
ಮುಹುಃ ಶ್ವಸನ್ವಕ್ತಿ ಹರೇ ಜಗತ್ಪತೇ
ನಾರಾಯಣೇತ್ಯಾತ್ಮಮತಿರ್ಗತತ್ರಪಃ ॥ ೩೫ ॥

ತದಾ ಪುಮಾನ್ಮುಕ್ತಸಮಸ್ತಬಂಧನ-
ಸ್ತದ್ಭಾವಭಾವಾನುಕೃತಾಶಯಾಕೃತಿಃ ।
ನಿರ್ದಗ್ಧಬೀಜಾನುಶಯೋ ಮಹೀಯಸಾ
ಭಕ್ತಿಪ್ರಯೋಗೇಣ ಸಮೇತ್ಯಧೋಕ್ಷಜಮ್ ॥ ೩೬ ॥

ಅಧೋಕ್ಷಜಾಲಂಭಮಿಹಾಶುಭಾತ್ಮನಃ
ಶರೀರಿಣಃ ಸಂಸೃತಿಚಕ್ರಶಾತನಮ್ ।
ತದ್ಬ್ರಹ್ಮ ನಿರ್ವಾಣಸುಖಂ ವಿದುರ್ಬುಧಾ-
ಸ್ತತೋ ಭಜಧ್ವಂ ಹೃದಯೇ ಹೃದೀಶ್ವರಮ್ ॥ ೩೭ ॥

ಕೋಽತಿಪ್ರಯಾಸೋಽಸುರಬಾಲಕಾ ಹರೇ-
ರುಪಾಸನೇ ಸ್ವೇ ಹೃದಿ ಛಿದ್ರವತ್ಸತಃ ।
ಸ್ವಸ್ಯಾತ್ಮನಃ ಸಖ್ಯುರಶೇಷದೇಹಿನಾಂ
ಸಾಮಾನ್ಯತಃ ಕಿಂ ವಿಷಯೋಪಪಾದನೈಃ ॥ ೩೮ ॥

ರಾಯಃ ಕಲತ್ರಂ ಪಶವಃ ಸುತಾದಯೋ
ಗೃಹಾ ಮಹೀ ಕುಂಜರಕೋಶಭೂತಯಃ ।
ಸರ್ವೇಽರ್ಥಕಾಮಾಃ ಕ್ಷಣಭಂಗುರಾಯುಷಃ
ಕುರ್ವಂತಿ ಮರ್ತ್ಯಸ್ಯ ಕಿಯತ್ಪ್ರಿಯಂ ಚಲಾಃ ॥ ೩೯ ॥

ಏವಂ ಹಿ ಲೋಕಾಃ ಕ್ರತುಭಿಃ ಕೃತಾ ಅಮೀ
ಕ್ಷಯಿಷ್ಣವಃ ಸಾತಿಶಯಾ ನ ನಿರ್ಮಲಾಃ ।
ತಸ್ಮಾದದೃಷ್ಟಶ್ರುತದೂಷಣಂ ಪರಂ
ಭಕ್ತ್ಯೈಕಯೇಶಂ ಭಜತಾತ್ಮಲಬ್ಧಯೇ ॥ ೪೦ ॥

ಭಗವಂತನ ಲೀಲಾಶರೀರಗಳಿಂದ ತೋರಿದ ಅದ್ಭುತ ಪರಾಕ್ರಮ, ಅವನ ಅನುಪಮಗುಣ ಮತ್ತು ಚರಿತ್ರೆಗಳ ಶ್ರವಣಗೈದು ಅತ್ಯಂತ ಆನಂದೋದ್ರೇಕದಿಂದ ಮನುಷ್ಯನು ಯಾವಾಗ ರೋಮಾಂಚಿತನಾಗಿ ಆನಂದದ ಕಣ್ಣೀರಿನಿಂದ ಕಂಠವು ಗದ್ಗದವಾಗಿ ಅವನು ಸಂಕೋಚವನ್ನು ಬಿಟ್ಟು ಗಟ್ಟಿಯಾಗಿ ಹಾಡುತ್ತಾ ಕೂಗಿಕೊಳ್ಳತೊಡಗುವನೋ; ಯಾವಾಗ ಅವನು ಗ್ರಹಹಿಡಿದು ಹುಚ್ಚನಂತೆ ಕೆಲವೊಮ್ಮೆ ನಗುತ್ತಾ, ಕೆಲವೊಮ್ಮೆ ಅಳುತ್ತಾ, ಕೆಲವೊಮ್ಮೆ ಧ್ಯಾನಮಾಡಿದರೆ, ಕೆಲವೊಮ್ಮೆ ಭಗವದ್ಭಾವದಿಂದ ಜನರನ್ನು ವಂದಿಸುತ್ತಾನೆಯೋ; ಅವನು ಭಗವಂತನಲ್ಲೇ ತನ್ಮಯನಾದಾಗ ಬಾರಿ-ಬಾರಿಗೂ ನಿಟ್ಟುಸಿರುಬಿಡುತ್ತಾ ಸಂಕೋಚವನ್ನು ಬಿಟ್ಟು 'ಹರೇ! ಜಗತ್ಪತೇ! ನಾರಾಯಣಾ!! ಎಂದು ಕೂಗಿಕೊಳ್ಳುತ್ತಾನೋ, ಆಗ ಭಕ್ತಿಯೋಗದ ಮಹಾನ್ ಪ್ರಭಾವದಿಂದ ಅವನ ಎಲ್ಲ ಬಂಧನಗಳು ಹರಿದುಹೋಗುತ್ತವೆ ಮತ್ತು ಭಗವದ್ಭಾವವನ್ನೇ ಭಾವಿಸುತ್ತಾ ಅವನ ಹೃದಯವೂ ತದಾಕಾರ-ಭಗವನ್ಮಯವಾಗಿ ಹೋಗುತ್ತದೆ. ಆಗ ಅವನ ಜನ್ಮ-ಮೃತ್ಯುಗಳ ಬೀಜಗಳ ಭಂಡಾರವೇ ಸುಟ್ಟು ಹೋಗುತ್ತದೆ ಹಾಗೂ ಅವನು ಭಗವಂತನನ್ನು ಪಡೆದುಕೊಳ್ಳುವನು. ॥ ೩೪-೩೬ ॥ ಈ ಅಶುಭವಾದ ಸಂಸಾರದ ಕೆಸರಿನಲ್ಲಿ ಸಿಕ್ಕಿಕೊಂಡು ಅಶುಭಮಯನಾದ ಜೀವಿಗಾಗಿ ಭಗವಂತನ ಈ ಪ್ರಾಪ್ತಿಯು ಸಂಸಾರಚಕ್ರದಿಂದ ಬಿಡುಗಡೆ ಮಾಡುವಂತಹುದು. ಈ ಪರಮಾತ್ಮ ವಸ್ತುವನ್ನು ಕೆಲವು ವಿದ್ವಾಂಸರು ಬ್ರಹ್ಮವೆಂದೂ, ಕೆಲವರು ನಿರ್ವಾಣವೆಂದೂ, ಪರಮಸುಖವೆಂದೂ ಹೇಳುತ್ತಾರೆ. ಅದಕ್ಕಾಗಿ ಮಿತ್ರರೇ! ನೀವೆಲ್ಲರೂ ನಿಮ್ಮ-ನಿಮ್ಮ ಹೃದಯಗಳಲ್ಲಿ ಹೃದಯೇಶ್ವರ ಭಗವಂತನನ್ನು ಭಜಿಸಿರಿ. ॥ ೩೭ ॥ ಅಸುರ ಬಾಲಕರೇ! ನಮ್ಮ ಹೃದಯದಲ್ಲೇ ಆಕಾಶದಂತೆ ಬೆಳಗುತ್ತಿರುವ ಭಗವಂತನ ಭಜನೆ ಮಾಡುವುದರಲ್ಲಿ ಯಾವ ವಿಶೇಷ ಪರಿಶ್ರಮವಿದೆ? ಅವನು ಸಮಾನವಾಗಿ ಸಮಸ್ತ ಪ್ರಾಣಿಗಳ ಅತ್ಯಂತ ಪ್ರೇಮಿಯಾಗಿದ್ದಾನೆ. ಹೆಚ್ಚೇನು ನಮ್ಮ ಆತ್ಮನೇ ಆಗಿರುವನು. ಅವನನ್ನು ಬಿಟ್ಟು ಭೋಗಸಾಮಗ್ರಿಗಳನ್ನು ಸಂಗ್ರಹಿಸಲಿಕ್ಕಾಗಿ ಅಲೆಯುವುದು ಅಯ್ಯೋ! ಅರರೇ!! ಎಷ್ಟು ಮೂರ್ಖತೆಯಾಗಿದೆ! ॥ ೩೮ ॥ ಅಯ್ಯಾ ಸೋದರರೇ! ಧನ, ಸ್ತ್ರೀ, ಪಶು, ಪುತ್ರರು, ಪುತ್ರಿಯರು, ಮನೆ, ಭೂಮಿ, ಆನೆ, ಭಂಡಾರ ಮತ್ತು ಬಗೆ-ಬಗೆಯ ವಿಭೂತಿಗಳು – ಹೆಚ್ಚೇನು, ಪ್ರಪಂಚದ ಸಮಸ್ತ ಧನ-ಭೋಗ- ಸಾಮಗ್ರಿಗಳು ಈ ಕ್ಷಣಭಂಗುರ ಮನುಷ್ಯನಿಗೆ ಏನು ಸುಖವನ್ನು ಕೊಡಬಲ್ಲವು? ಅವು ಸ್ವತಃ ನಾಶವುಳ್ಳವುಗಳೇ ಆಗಿವೆ. ॥ ೩೯ ॥

ಈ ಲೋಕದ ಸಂಪತ್ತಿಯು ಪ್ರತ್ಯಕ್ಷವಾಗಿ ನಾಶವುಳ್ಳದ್ದಾಗಿರುವಂತೆಯೇ ಯಜ್ಞಗಳಿಂದ ದೊರೆಯುವ ಸ್ವರ್ಗಾದಿ ಲೋಕಗಳೂ ನಾಶವುಳ್ಳವುಗಳೇ ಆಗಿವೆ. ಅವುಗಳಲ್ಲಿಯೂ ಮೇಲು-ಕೀಳು, ಚಿಕ್ಕದು-ದೊಡ್ಡದು ಎಂಬುದಿದೆ. ಅದಕ್ಕಾಗಿ ಅವೂ ಕೂಡ ನಿರ್ದೋಷವಲ್ಲ. ನಿರ್ದೋಷವಾದರೋ ಕೇವಲ ಪರಮಾತ್ಮನೇ. ಯಾರೂ ಅವನಲ್ಲಿ ದೋಷವನ್ನು ನೋಡಿಲ್ಲ, ಕೇಳಿಲ್ಲ. ಆದ್ದರಿಂದ ಪರಮಾತ್ಮನ ಪ್ರಾಪ್ತಿಗಾಗಿ ಅನನ್ಯ ಭಕ್ತಿಯಿಂದ ಆ ಪರಮೇಶ್ವರ ಭಜನೆ ಮಾಡಬೇಕು. ॥ ೪೦ ॥

ಯದರ್ಥ ಇಹ ಕರ್ಮಾಣಿ ವಿದ್ವನ್ಮಾನ್ಯಸಕೃನ್ನರಃ ।
ಕರೋತ್ಯತೋ ವಿಪರ್ಯಾಸಮಮೋಘಂ ವಿಂದತೇ ಫಲಮ್ ॥ ೪೧ ॥

ಸುಖಾಯ ದುಃಖಮೋಕ್ಷಾಯ ಸಂಕಲ್ಪ ಇಹ ಕರ್ಮಿಣಃ ।
ಸದಾಽಽಪ್ನೋತೀಹಯಾ ದುಃಖಮನೀಹಾಯಾಃ ಸುಖಾವೃತಃ ॥ ೪೨ ॥

ಕಾಮಾನ್ಕಾಮಯತೇ ಕಾಮ್ಯೈರ್ಯದರ್ಥಮಿಹ ಪೂರುಷಃ ।
ಸ ವೈ ದೇಹಸ್ತು ಪಾರಕ್ಯೋ ಭಂಗುರೋ ಯಾತ್ಯುಪೈತಿ ಚ ॥ ೪೩ ॥

ಕಿಮು ವ್ಯವಹಿತಾಪತ್ಯದಾರಾಗಾರಧನಾದಯಃ ।
ರಾಜ್ಯಂ ಕೋಶಗಜಾಮಾತ್ಯಭೃತ್ಯಾಪ್ತಾ ಮಮತಾಸ್ಪದಾಃ ॥ ೪೪ ॥

ಕಿಮೇತೈರಾತ್ಮನಸ್ತುಚ್ಛೈಃ ಸಹ ದೇಹೇನ ನಶ್ವರೈಃ ।
ಅನರ್ಥೈರರ್ಥಸಂಕಾಶೈರ್ನಿತ್ಯಾನಂದಮಹೋದಧೇಃ ॥ ೪೫ ॥

ನಿರೂಪ್ಯತಾಮಿಹ ಸ್ವಾರ್ಥಃ ಕಿಯಾನ್‌ದೇಹಭೃತೋಽಸುರಾಃ ।
ನಿಷೇಕಾದಿಷ್ವವಸ್ಥಾಸು ಕ್ಲಿಶ್ಯಮಾನಸ್ಯ ಕರ್ಮಭಿಃ ॥ ೪೬ ॥

ಕರ್ಮಾಣ್ಯಾರಭತೇ ದೇಹೀ ದೇಹೇನಾತ್ಮಾನುವರ್ತಿನಾ ।
ಕರ್ಮಭಿಸ್ತನುತೇ ದೇಹಮುಭಯಂ ತ್ವವಿವೇಕತಃ ॥ ೪೭ ॥

ತಸ್ಮಾದರ್ಥಾಶ್ಚ ಕಾಮಾಶ್ಚ ಧರ್ಮಾಶ್ಚ ಯದಪಾಶ್ರಯಾಃ ।
ಭಜತಾನೀಹಯಾಽಽತ್ಮಾನಮನೀಹಂ ಹರಿಮೀಶ್ವರಮ್ ॥ ೪೮ ॥

ಸರ್ವೇಷಾಮಪಿ ಭೂತಾನಾಂ ಹರಿರಾತ್ಮೇಶ್ವರಃ ಪ್ರಿಯಃ ।
ಭೂತೈರ್ಮಹದ್ಭಿಃ ಸ್ವಕೃತೈಃ ಕೃತಾನಾಂ ಜೀವಸಂಜ್ಞಿತಃ ॥ ೪೯ ॥

ಇದಲ್ಲದೆ ತನ್ನನ್ನು ದೊಡ್ಡ ವಿದ್ವಾಂಸನೆಂದು ತಿಳಿದಿರುವ ಮನುಷ್ಯನು ಈ ಲೋಕದಲ್ಲಿ ಯಾವ ಉದ್ದೇಶದಿಂದ ಮತ್ತೆ-ಮತ್ತೆ ಅನೇಕ ಕರ್ಮಗಳನ್ನು ಮಾಡುತ್ತಾನೋ ಆ ಉದ್ದೇಶ ಪ್ರಾಪ್ತಿಯಾದರೋ ದೂರವುಳಿಯಿತು. ಬದಲಿಗೆ ಅವನಿಗೆ ವಿಪರೀತ ಫಲವೇ ದೊರೆಯುತ್ತದೆ. ಇದರಲ್ಲಿ ಸಂದೇಹವೇ ಇಲ್ಲ. ॥ ೪೧ ॥ ಕರ್ಮದಲ್ಲಿ ಪ್ರವೃತ್ತರಾಗಲು ಸುಖಪಡೆಯುವುದು – ದುಃಖದಿಂದ ಬಿಡುಗಡೆ ಹೊಂದುವುದು – ಇವೆರಡೇ ಉದ್ದೇಶಗಳಿರುತ್ತವೆ. ಆದರೆ ಮೊದಲು ಕಾಮನೆ ಇಲ್ಲದ ಕಾರಣ ಸುಖದಲ್ಲಿ ನಿಮಗ್ನನಾಗಿ ಇರುತ್ತಿದ್ದವನೂ ಈಗ ಕಾಮನೆಯ ಕಾರಣದಿಂದ ಇಲ್ಲಿ ಸದಾ-ಸರ್ವದಾ ದುಃಖವನ್ನೇ ಭೋಗಿಸಬೇಕಾಗುತ್ತದೆ. ॥ ೪೨ ॥ ಮನುಷ್ಯನು ಈ ಲೋಕದಲ್ಲಿ ಸಕಾಮಕರ್ಮಗಳ ಮೂಲಕ ಯಾವ ಶರೀರಕ್ಕಾಗಿ ಭೋಗಗಳನ್ನು ಒದಗಿಸಲು ಬಯಸುವನೋ, ಆ ದೇಹವೂ ತನ್ನದಲ್ಲ, ಬೇರೆಯವರದೇ ಆಗಿದೆ. ನರಿ-ನಾಯಿಗಳ ಭೋಜನವಾಗಿದ್ದು, ನಾಶವುಳ್ಳದ್ದಾಗಿದೆ. ಯಾವಾಗಲೋ ದೊರೆಯುತ್ತದೆ, ಯಾವಾಗಲೋ ಅಗಲಿ ಹೋಗುತ್ತದೆ. ॥ ೪೩ ॥ ಶರೀರದ್ದೇ ಈ ಅವಸ್ಥೆಯಾದರೆ, ಇದರಿಂದ ಬೇರೆಯಾಗಿರುವ ಪತ್ನೀ, ಪುತ್ರ, ಮನೆ, ಧನ-ಸಂಪತ್ತು, ರಾಜ್ಯ, ಭಂಡಾರ, ಆನೆ-ಕುದುರೆ, ಮಂತ್ರಿಗಳು, ಸೇವಕರು, ಗುರುಗಳು ಮತ್ತು ತನ್ನವರು ಎಂದು ಹೇಳಿಕೊಳ್ಳುವ ಇತರರು – ಹೀಗೆಲ್ಲದರ ಕುರಿತು ಹೇಳುವುದೇನಿದೆ? ॥ ೪೪ ॥ ಈ ತುಚ್ಛ ವಿಷಯಗಳು ಶರೀರದೊಂದಿಗೇ ನಾಶವಾಗಿ ಹೋಗುತ್ತವೆ. ಇವು ಪುರುಷಾರ್ಥದಂತೆ ಕಂಡು ಬಂದರೂ ವಾಸ್ತವವಾಗಿ ಅನರ್ಥರೂಪವೇ ಆಗಿದೆ. ಆತ್ಮನು ಸ್ವಯಂ ಅನಂತ ಆನಂದದ ಮಹಾನ್ ಸಮುದ್ರನಾಗಿದ್ದಾನೆ. ಅವನಿಗೆ ಈ ವಸ್ತುಗಳ ಆವಶ್ಯಕತೆಯಾದರೂ ಏನಿದೆ? ॥ ೪೫ ॥ ನೋಡಿರಲ್ಲ! ಜೀವನು ಗರ್ಭಾಧಾನದಿಂದ ಹಿಡಿದು ಮೃತ್ಯುವಿನವರೆಗೆ ಎಲ್ಲ ಅವಸ್ಥೆಗಳಲ್ಲಿ ತನ್ನ ಕರ್ಮಗಳ ಅಧೀನನಾಗಿ ಕ್ಲೇಶಗಳನ್ನೇ ಅನುಭವಿಸುತ್ತಾನೆ. ಅವನಿಗೆ ಈ ಪ್ರಪಂಚದಲ್ಲಿ ಸ್ವಾರ್ಥವಾದರೂ ಏನಿದೆ? ಎಂಬುದನ್ನು ಸ್ವಲ್ಪ ವಿಚಾರಮಾಡಿರಿ. ॥ ೪೬ ॥ ಜೀವಿಯು ಸೂಕ್ಷ್ಮಶರೀರವನ್ನೇ ತನ್ನ ಆತ್ಮನೆಂದು ತಿಳಿದುಕೊಂಡು, ಅದರ ಮೂಲಕ ಅನೇಕ ಪ್ರಕಾರದ ಕರ್ಮಗಳನ್ನು ಮಾಡುತ್ತಾನೆ ಮತ್ತು ಕರ್ಮಗಳ ಕಾರಣದಿಂದಲೇ ಪುನಃ ಶರೀರವನ್ನೇ ಪಡೆಯುತ್ತಾನೆ. ಹೀಗೆ ಕರ್ಮದಿಂದ ಶರೀರ, ಶರೀರದಿಂದ ಕರ್ಮ ಈ ಪರಂಪರೆ ನಡೆಯುತ್ತಾ ಇರುತ್ತದೆ. ಅವಿವೇಕದಿಂದಲೇ ಹೀಗಾಗುತ್ತದೆ. ॥ ೪೭ ॥

ಅದಕ್ಕಾಗಿ ನಿಷ್ಕಾಮ ಭಾವದಿಂದ ನಿಷ್ಕ್ರಿಯನಾದ ಆತ್ಮಸ್ವರೂಪೀ ಭಗವಾನ್ ಶ್ರೀಹರಿಯ ಭಜನೆಯನ್ನು ಮಾಡಬೇಕು. ಅರ್ಥ, ಧರ್ಮ ಮತ್ತು ಕಾಮ – ಎಲ್ಲವೂ ಅವನಲ್ಲೇ ಆಶ್ರಿತವಾಗಿರುತ್ತವೆ. ಅವನ ಇಚ್ಛೆಯಿಲ್ಲದೆ ಅವು ಸಿಗಲಾರವು. ॥ ೪೮ ॥ ಭಗವಾನ್ ಶ್ರೀಹರಿಯು ಸಮಸ್ತ ಪ್ರಾಣಿಗಳ ಈಶ್ವರನೂ, ಆತ್ಮನೂ ಮತ್ತು ಪರಮ ಪ್ರಿಯತಮನೂ ಆಗಿರುವನು. ಅವನೇ ತಾನೇ ನಿರ್ಮಿಸಿದ ಪಂಚಭೂತಗಳು ಮತ್ತು ಸೂಕ್ಷ್ಮಭೂತ ಇವುಗಳ ಮೂಲಕ ಉಂಟಾದ ಶರೀರದಲ್ಲಿ ಜೀವನೆಂಬ ಹೆಸರಿನಿಂದ ಕರೆಯಲ್ಪಡುವನು. ॥ ೪೯ ॥

ದೇವೋಽಸುರೋ ಮನುಷ್ಯೋ ವಾ ಯಕ್ಷೋ ಗಂಧರ್ವ ಏವ ಚ ।
ಭಜನ್ಮುಕುಂದಚರಣಂ ಸ್ವಸ್ತಿಮಾನ್ಸ್ಯಾದ್ಯಥಾ ವಯಮ್ ॥ ೫೦ ॥

ದೇವತೆಗಳಾಗಲೀ, ದೈತ್ಯರಿರಲೀ, ಮನುಷ್ಯನಾಗಲೀ, ಯಕ್ಷ ಅಥವಾ ಗಂಧರ್ವರಾಗಿರಲೀ ಯಾವನೇ ಆದರೂ ಭಗವಂತನ ಚರಣಗಳನ್ನು ಸೇವಿಸುವವನು ನಮ್ಮಂತೆಯೇ ಕಲ್ಯಾಣಕ್ಕೆ ಪಾತ್ರನಾಗುವನು. ॥ ೫೦ ॥

ನಾಲಂ ದ್ವಿಜತ್ವಂ ದೇವತ್ವಮೃಷಿತ್ವಂ ವಾಸುರಾತ್ಮಜಾಃ ।
ಪ್ರೀಣನಾಯ ಮುಕುಂದಸ್ಯ ನ ವೃತ್ತಂ ನ ಬಹುಜ್ಞತಾ ॥ ೫೦ ॥

ನ ದಾನಂ ನ ತಪೋ ನೇಜ್ಯಾ ನ ಶೌಚಂ ನ ವ್ರತಾನಿ ಚ ।
ಪ್ರೀಯತೇಽಮಲಯಾ ಭಕ್ತ್ಯಾ ಹರಿರನ್ಯದ್ವಿಡಂಬನಮ್ ॥ ೫೨ ॥

ದೈತ್ಯಬಾಲಕರೇ! ಭಗವಂತನನ್ನು ಪ್ರಸನ್ನಗೊಳಿಸಲು ಬ್ರಾಹ್ಮಣತ್ವವಾಗಲೀ, ದೇವತ್ವವಾಗಲೀ, ಋಷಿತ್ವವಾಗಲೀ, ಸದಾಚಾರವಾಗಲೀ, ವಿವಿಧ ಜ್ಞಾನಗಳಿಂದ ಸಂಪನ್ನನಾಗುವುದಾಗಲೀ ಹಾಗೂ ದಾನ, ತಪಸ್ಸು, ಯಜ್ಞ, ಶಾರೀರಿಕ-ಮಾನಸಿಕ ಶೌಚ, ದೊಡ್ಡ-ದೊಡ್ಡ ಯಜ್ಞಗಳ ಅನುಷ್ಠಾನವಾಗಲೀ ಇವುಗಳು ಯಾವುದೂ ಸಮರ್ಥವಾಗುವುದಿಲ್ಲ. ಭಗವಂತನು ಕೇವಲ ನಿಷ್ಕಾಮ ಪ್ರೇಮಾಭಕ್ತಿಯಿಂದಲೇ ಪ್ರಸನ್ನನಾಗುವನು. ಉಳಿದೆಲ್ಲವೂ ವಿಡಂಬನೆಯೇ ಆಗಿದೆ. ॥ ೫೧-೫೨ ॥

ತತೋ ಹರೌ ಭಗವತಿ ಭಕ್ತಿಂ ಕುರುತ ದಾನವಾಃ ।
ಆತ್ಮೌಪಮ್ಯೇನ ಸರ್ವತ್ರ ಸರ್ವಭೂತಾತ್ಮನೀಶ್ವರೇ ॥ ೫೩ ॥

ಅದಕ್ಕಾಗಿ ದಾನವ ಬಂಧುಗಳೇ! ಸಮಸ್ತ ಪ್ರಾಣಿಗಳನ್ನು ತನ್ನಂತೆಯೇ ತಿಳಿದು ಸರ್ವತ್ರ ವಿರಾಜಮಾನನಾದ ಸರ್ವಾತ್ಮಾ ಸರ್ವಶಕ್ತಿಸಂಪನ್ನ ಭಗವಂತನಲ್ಲಿ ಭಕ್ತಿಯನ್ನಿಡಿರಿ. ॥ ೫೩ ॥

ದೈತೇಯಾ ಯಕ್ಷರಕ್ಷಾಂಸಿ ಸ್ತ್ರಿಯಃ ಶೂದ್ರಾ ವ್ರಜೌಕಸಃ ।
ಖಗಾ ಮೃಗಾಃ ಪಾಪಜೀವಾಃ ಸಂತಿ ಹ್ಯಚ್ಯುತತಾಂ ಗತಾಃ ॥ ೫೪ ॥

ಭಗವಂತನ ಭಕ್ತಿಯ ಪ್ರಭಾವದಿಂದ ದೈತ್ಯರು, ಯಕ್ಷರು, ರಾಕ್ಷಸರು, ಸ್ತ್ರೀಯರು, ಶೂದ್ರರು, ಗೋಪಾಲಕರು, ಪಕ್ಷಿಗಳು, ಮೃಗಗಳು ಹಾಗೂ ಇನ್ನೂ ಅನೇಕ ಪಾಪಿ ಜೀವಿಗಳೂ ಕೂಡ ಭಗವದ್ಭಾವವನ್ನು ಪಡೆದು ಕೊಂಡಿರುವರು. ॥ ೫೪ ॥

ಏತಾವಾನೇವ ಲೋಕೇಽಸ್ಮಿನ್ಪುಂಸಃ ಸ್ವಾರ್ಥಃ ಪರಃ ಸ್ಮೃತಃ ।
ಏಕಾಂತಭಕ್ತಿರ್ಗೋವಿಂದೇ ಯತ್ಸರ್ವತ್ರ ತದೀಕ್ಷಣಮ್ ॥ ೫೫ ॥

ಈ ಪ್ರಪಂಚದಲ್ಲಿ ಅಥವಾ ಮನುಷ್ಯಶರೀರದಲ್ಲಿ ಜೀವಿಗೆ ಎಲ್ಲಕ್ಕಿಂತ ದೊಡ್ಡ ಸ್ವಾರ್ಥ, ಅಂದರೆ – ಏಕಮಾತ್ರ ಪರಮಾರ್ಥವು ಭಗವಾನ್ ಶ್ರೀಕೃಷ್ಣನಲ್ಲಿ ಅನನ್ಯ ಭಕ್ತಿಯನ್ನು ಪ್ರಾಪ್ತಿ ಮಾಡಿಕೊಳ್ಳುವುದೇ ಆಗಿದೆ. ಆ ಭಕ್ತಿಯ ಸ್ವರೂಪವು ಸರ್ವದಾ, ಸರ್ವತ್ರ, ಎಲ್ಲ ವಸ್ತುಗಳಲ್ಲಿ ಭಗವಂತನನ್ನು ದರ್ಶಿಸುವುದಾಗಿದೆ. ॥ ೫೫ ॥

ಏಳನೆಯ ಅಧ್ಯಾಯವು ಮುಗಿಯಿತು. ॥ ೭ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಸಪ್ತಮ ಸ್ಕಂಧೇ
ಪ್ರಹ್ಲಾದಾನುಚರಿತೇ ದೈತ್ಯಪುತ್ರಾನುಶಾಸನಂ ನಾಮ ಸಪ್ತಮೋಽಧ್ಯಾಯಃ ॥ ೭ ॥

ಎಂಟನೆಯ ಅಧ್ಯಾಯ

ಶ್ರೀನರಸಿಂಹದೇವರ ಪ್ರಾದುರ್ಭಾವ, ಹಿರಣ್ಯಕಶಿಪುವಿನ ವಧೆ, ಬ್ರಹ್ಮಾದಿಗಳಿಂದ ಭಗವಂತನ ಸ್ತುತಿ

ನಾರದ ಉವಾಚ

ಅಥ ದೈತ್ಯಸುತಾಃ ಸರ್ವೇ ಶ್ರುತ್ವಾ ತದನುವರ್ಣಿತಮ್ ।
ಜಗೃಹುರ್ನಿರವದ್ಯತ್ವಾನ್ನೈವ ಗುರ್ವನುಶಿಕ್ಷಿತಮ್ ॥ ೧ ॥

ನಾರದರು ಹೇಳುತ್ತಾರೆ – ಪ್ರಹ್ಲಾದನ ಪ್ರವಚನವನ್ನು ಕೇಳಿ ದೈತ್ಯಬಾಲಕರು ಆಗಿನಿಂದಲೇ, ನಿರ್ದೋಷವಿದ್ದ ಕಾರಣ ಅವನ ಮಾತನ್ನು ಸರಿ ಎಂದು ಒಪ್ಪಿಕೊಂಡರು. ಗುರುಗಳ ದೂಷಿತವಾದ ಶಿಕ್ಷಣದ ಕಡೆಗೆ ಅವರು ಲಕ್ಷ್ಯವೇ ಕೊಡಲಿಲ್ಲ. ॥ ೧ ॥

ಅಥಾಚಾರ್ಯಸುತಸ್ತೇಷಾಂ ಬುದ್ಧಿಮೇಕಾಂತಸಂಸ್ಥಿತಾಮ್ ।
ಆಲಕ್ಷ್ಯ ಭೀತಸ್ತ್ವರಿತೋ ರಾಜ್ಞ ಆವೇದಯದ್ಯಥಾ ॥ ೨ ॥

ಎಲ್ಲ ವಿದ್ಯಾರ್ಥಿಗಳ ಬುದ್ಧಿಯು ಭಗವಂತನಲ್ಲಿ ಸ್ಥಿರವಾಗಿರುವುದನ್ನು ಕಂಡು ಗುರುಗಳು ತುಂಬಾ ಗಾಬರಿಗೊಂಡು, ಕೂಡಲೇ ಹಿರಣ್ಯಕಶಿಪುವಿನ ಬಳಿಗೆ ಹೋಗಿ ಅದನ್ನು ನಿವೇದಿಸಿಕೊಂಡರು. ॥ ೨ ॥ ತನ್ನ ಪುತ್ರನ ಆ ಅಸಹ್ಯವೂ, ಅಪ್ರಿಯವೂ ಆಗಿದ್ದ ಅನೀತಿಯನ್ನು ಕಂಡು ದೈತ್ಯರಾಜನ ಶರೀರವು ಕ್ರೋಧದಿಂದ ಥರ-ಥರನೆ

ಶ್ರುತ್ವಾ ತದಪ್ರಿಯಂ ದೈತ್ಯೋ ದುಃಸಹಂ ತನಯಾನಯಮ್ ।
ಕೋಪಾವೇಶಚಲದ್ಗಾತ್ರಃ ಪುತ್ರಂ ಹಂತುಂ ಮನೋ ದಧೇ ॥ ೩ ॥

ಕ್ಷಿಪ್ತ್ವಾ ಪರುಷಯಾ ವಾಚಾ ಪ್ರಹ್ಲಾದಮತದರ್ಹಣಮ್ ।
ಆಹೇಕ್ಷಮಾಣಃ ಪಾಪೇನ ತಿರಶ್ಚೀನೇನ ಚಕ್ಷುಷಾ ॥ ೪ ॥

ಪ್ರಶ್ರಯಾವನತಂ ದಾಂತಂ ಬದ್ಧಾಂಜಲಿಮವಸ್ಥಿತಮ್ ।
ಸರ್ಪಃ ಪದಾಹತ ಇವ ಶ್ವಸನ್ಪ್ರಕೃತಿದಾರುಣಃ ॥ ೫ ॥

ಹೇ ದುರ್ವಿನೀತ ಮಂದಾತ್ಮನ್ಕುಲಭೇದಕರಾಧಮ ।
ಸ್ತಬ್ಧಂ ಮಚ್ಛಾಸನೋದ್ವೃತ್ತಂ ನೇಷ್ಯೇ ತ್ವಾದ್ಯ ಯಮಕ್ಷಯಮ್ ॥ ೬ ॥

ಕ್ರುದ್ಧಸ್ಯ ಯಸ್ಯ ಕಂಪಂತೇ ತ್ರಯೋ ಲೋಕಾಃ ಸಹೇಶ್ವರಾಃ ।
ತಸ್ಯ ಮೇಽಭೀತವನ್ಮೂಢ ಶಾಸನಂ ಕಿಂಬಲೋಽತ್ಯಗಾಃ ॥ ೭ ॥

ಪ್ರಹ್ಲಾದ ಉವಾಚ

ನ ಕೇವಲಂ ಮೇ ಭವತಶ್ಚ ರಾಜನ್
ಸ ವೈ ಬಲಂ ಬಲಿನಾಂ ಚಾಪರೇಷಾಮ್ ।
ಪರೇಽವರೇಽಮೀ ಸ್ಥಿರಜಂಗಮಾ ಯೇ
ಬ್ರಹ್ಮಾದಯೋ ಯೇನ ವಶಂ ಪ್ರಣೀತಾಃ ॥ ೮ ॥

ಸ ಈಶ್ವರಃ ಕಾಲ ಉರುಕ್ರಮೋಽಸಾ-
ವೋಜಃ ಸಹಃಸತ್ತ್ವಬಲೇಂದ್ರಿಯಾತ್ಮಾ ।
ಸ ಏವ ವಿಶ್ವಂ ಪರಮಃ ಸ್ವಶಕ್ತಿಭಿಃ
ಸೃಜತ್ಯವತ್ಯತ್ತಿ ಗುಣತ್ರಯೇಶಃ ॥ ೯ ॥

ಜಹ್ಯಾಸುರಂ ಭಾವಮಿಮಂ ತ್ವಮಾತ್ಮನಃ
ಸಮಂ ಮನೋ ಧತ್ಸ್ವ ನ ಸಂತಿ ವಿದ್ವಿಷಃ ।
ಋತೇಽಜಿತಾದಾತ್ಮನ ಉತ್ಪಥಸ್ಥಿತಾತ್
ತದ್ಧಿ ಹ್ಯನಂತಸ್ಯ ಮಹತ್ಸಮರ್ಹಣಮ್ ॥ ೧೦ ॥

ದಸ್ಯೂನ್ಪುರಾ ಷಣ್ಣ ವಿಜಿತ್ಯ ಲುಂಪತೋ
ಮನ್ಯಂತ ಏಕೇ ಸ್ವಜಿತಾ ದಿಶೋ ದಶ ।
ಜಿತಾತ್ಮನೋ ಜ್ಞಸ್ಯ ಸಮಸ್ಯ ದೇಹಿನಾಂ
ಸಾಧೋಃ ಸ್ವಮೋಹಪ್ರಭವಾಃ ಕುತಃ ಪರೇ ॥ ೧೧ ॥

ಹಿರಣ್ಯಕಶಿಪುರುವಾಚ

ವ್ಯಕ್ತಂ ತ್ವಂ ಮರ್ತುಕಾಮೋಽಸಿ ಯೋಽತಿಮಾತ್ರಂ ವಿಕತ್ಥಸೇ ।
ಮುಮೂರ್ಷೂಣಾಂ ಹಿ ಮಂದಾತ್ಮನ್ನನು ಸ್ಯುರ್ವಿಕ್ಲವಾ ಗಿರಃ ॥ ೧೨ ॥

ನಡುಗತೊಡಗಿತು. ಕೊನೆಗೆ ಈ ಪ್ರಹ್ಲಾದನನ್ನು ಈಗ ನನ್ನ ಕೈಯಾರೆ ಕೊಂದುಹಾಕಬೇಕೆಂದು ಅವನು ನಿಶ್ಚಯಿಸಿದನು. ॥ ೩ ॥ ಜಿತೇಂದ್ರಿಯನಾಗಿದ್ದ ಪ್ರಹ್ಲಾದ ಕುಮಾರನು ವಿನಯದಿಂದ ಕೈಜೋಡಿಸಿಕೊಂಡು ತಂದೆಯ ಮುಂದೆ ಸುಮ್ಮನೆ ನಿಂತಿದ್ದನು. ಸ್ವಭಾವದಿಂದಲೇ ಕ್ರೂರನಾಗಿದ್ದ ಹಿರಣ್ಯಕಶಿಪು – ನಿಂದೆ – ತಿರಸ್ಕಾರಗಳಿಗೆ ಯೋಗ್ಯನಲ್ಲದ ಸಾಧುಶಿರೋಮಣಿಯನ್ನು ಕಠೋರವಾಣಿಯಿಂದ ಗದರಿಸುತ್ತಾ ಏಟುತಿಂದ ಸರ್ಪದಂತೆ ಬುಸುಗುಟ್ಟತೊಡಗಿದನು. ಪಾಪಿಷ್ಠವಾದ ಓರೆನೋಟದಿಂದ ಅವನನ್ನೇ ನೋಡುತ್ತಾ ಹೀಗೆಂದನು – ॥ ೪-೫ ॥ ಎಲವೋ ದುಷ್ಟ! ದುರಹಂಕಾರಿ ! ಮೂರ್ಖ ! ಕುಲಗೆಡುಕನೇ ! ತಾನು ಕೆಟ್ಟಿರುವುದಲ್ಲದೆ, ನಮ್ಮ ಕುಲದ ಬಾಲಕರನ್ನೂ ಕೆಡಿಸಲು ಬಯಸುತ್ತಿದ್ದೀಯೆ. ನನ್ನ ಆಜ್ಞೆಯನ್ನು ಉಲ್ಲಂಘಿಸುವ ದಿಟ್ಟತನವನ್ನು ತೋರಿದ್ದೀಯೆ. ಇದರ ಫಲವಾಗಿ ಇದೋ ನಿನ್ನನ್ನು ಈಗಲೇ ಯಮ ಸದನಕ್ಕೆ ಅಟ್ಟುತ್ತೇನೆ. ॥ ೬ ॥ ನಾನು ಸ್ವಲ್ಪ ಕೋಪಗೊಂಡರೂ ಮೂರು ಲೋಕಗಳೂ ಮತ್ತು ಲೋಕಪಾಲಕರೂ ಥರ-ಥರನೆ ನಡುಗುವರು. ಹೀಗಿರುವಾಗ ಎಲೈ ಮೂರ್ಖನೇ ! ನೀನು ಯಾರ ಬಲದ ಮೇಲೆ ನಿರ್ಭಯನಂತೆ ನನ್ನ ಶಾಸನವನ್ನು ಮುರಿದಿದ್ದೀಯೇ ? ಹೇಳು. ॥ ೭ ॥

ಪ್ರಹ್ಲಾದನು ಹೇಳಿದನು – ದೈತ್ಯರಾಜನೇ ! ಬ್ರಹ್ಮದೇವರಿಂದ ಹಿಡಿದು ಹುಲ್ಲುಕಡ್ಡಿಯವರೆಗಿನ ಚರಾಚರ ಜೀವಿಗಳೆಲ್ಲವೂ ಶ್ರೀಭಗವಂತನಿಗೆ ಅಧೀನವಾಗಿವೆ. ಆತನೇ ಎಲ್ಲರಿಗೂ ಬಲವು. ನನ್ನ ಮತ್ತು ನಿನ್ನ ಬಲಗಳಿಗೆ ಮಾತ್ರವಲ್ಲದೇ ಇಡೀ ಜಗತ್ತಿನಲ್ಲಿರುವ ಎಲ್ಲ ಬಲಶಾಲಿಗಳ ಬಲಗಳಿಗೂ ಆತನದೇ ಬಲವು. ॥ ೮ ॥ ■ ಮಹಾಪರಾಕ್ರಮಿ ಸರ್ವಶಕ್ತಿಯುಳ್ಳ ಪ್ರಭುವೇ ಕಾಲನಾಗಿದ್ದಾನೆ. ಸಮಸ್ತ ಪ್ರಾಣಿಗಳ ಇಂದ್ರಿಯಬಲ, ಮನೋಬಲ, ದೇಹಬಲ, ಧೈರ್ಯ ಹಾಗೂ ಇಂದ್ರಿಯಗಳೂ ಕೂಡ ಅವನೇ ಆಗಿದ್ದಾನೆ. ಆ ಪರಮೇಶ್ವರನೇ ತನ್ನ ಶಕ್ತಿಗಳ ಮೂಲಕ ಈ ವಿಶ್ವವನ್ನು ರಚಿಸಿ, ರಕ್ಷಿಸಿ, ಸಂಹರಿಸುತ್ತಾನೆ. ಅವನೇ ತ್ರಿಗುಣಗಳ ಒಡೆಯನಾಗಿದ್ದಾನೆ. ॥ ೯ ॥ ನೀನು ನಿನ್ನ ಅಸುರಭಾವವನ್ನು ಬಿಟ್ಟುಬಿಡು. ಎಲ್ಲರ ವಿಷಯದಲ್ಲಿ ಸಮಾನತೆಯನ್ನು ತೋರಿಸು. ಈ ಪ್ರಪಂಚದಲ್ಲಿ ತನ್ನ ವಶದಲ್ಲಿ ಇರದಿರುವ, ಕುಮಾರ್ಗದಲ್ಲೇ ಸಂಚರಿಸುವ ಮನಸ್ಸಿಗಿಂತಲೂ ಬೇರೆ ಶತ್ರುವಿಲ್ಲ. ಮನಸ್ಸಿನಲ್ಲಿ ಎಲ್ಲರ ಕುರಿತು ಸಮತೆಯ ಭಾವವನ್ನಿರಿಸುವುದೇ ಭಗವಂತನ ಅತಿದೊಡ್ಡ ಪೂಜೆಯಾಗಿದೆ. ॥ ೧೦ ॥ ತಮ್ಮ ಸರ್ವಸ್ವವನ್ನು ಕೊಳ್ಳೆಹೊಡೆಯುವ ಈ ಆರು ಇಂದ್ರಿಯಗಳೆಂಬ ಕಳ್ಳರನ್ನು ಮೊದಲು ಗೆಲ್ಲದೆ 'ನಾವು ಹತ್ತು ದಿಕ್ಕುಗಳನ್ನೂ ಗೆದ್ದಿದ್ದೇವೆ' ಎಂದು ಜಂಭಕೊಚ್ಚಿಕೊಳ್ಳುವವರು ಕಡು ಮೂರ್ಖರು. ಜ್ಞಾನಿಯೂ, ಜಿತೇಂದ್ರಿಯನೂ ಆಗಿರುವ ಮಹಾತ್ಮನು – ಸಮಸ್ತ ಪ್ರಾಣಿಗಳಲ್ಲಿಯೂ ಸಮತೆಯ ಭಾವವನ್ನು ಹೊಂದಿದವರಿಗೆ ಅಜ್ಞಾನದಿಂದ ಉಂಟಾಗುವ ಕಾಮ-ಕ್ರೋಧಾದಿ ಶತ್ರುಗಳೂ ಹುಟ್ಟಿಕೊಂಡರೂ ಸತ್ತುಹೋಗುವರು. ಇನ್ನು ಹೊರಗಿನ ಶತ್ರುಗಳಾದರೋ ಹೇಗೆ ಉಳಿಯಬಲ್ಲರು ? ॥ ೧೧ ॥

ಹಿರಣ್ಯಕಶಿಪು ಹೇಳಿದನು – ಎಲವೋ ಮಂದಬುದ್ಧಿಯೇ ! ನಿನ್ನ ಬೊಗಳುವಿಕೆಯು ಅತಿಯಾಯಿತು. ಈಗ ನೀನು ಸಾಯಲು

ಯಸ್ತ್ವಯಾ ಮಂದಭಾಗ್ಯೋಕ್ತೋ ಮದನ್ಯೋ ಜಗದೀಶ್ವರಃ ।
ಕ್ವಾಸೌ ಯದಿ ಸ ಸರ್ವತ್ರ ಕಸ್ಮಾತ್ಸ್ತಂಭೇ ನ ದೃಶ್ಯತೇ ॥ ೧೩ ॥

ಸೋಽಹಂ ವಿಕತ್ಥಮಾನಸ್ಯ ಶಿರಃ ಕಾಯಾದ್ಧರಾಮಿ ತೇ ।
ಗೋಪಾಯೇತ ಹರಿಸ್ತ್ವಾದ್ಯ ಯಸ್ತೇ ಶರಣಮೀಪ್ಸಿತಮ್ ॥ ೧೪ ॥

ಏವಂ ದುರುಕ್ತೈರ್ಮುಹುರರ್ದಯನ್ರುಷಾ
ಸುತಂ ಮಹಾಭಾಗವತಂ ಮಹಾಸುರಃ ।
ಖಡ್ಗಂ ಪ್ರಗೃಹ್ಯೋತ್ಪತಿತೋ ವರಾಸನಾತ್
ಸ್ತಂಭಂ ತತಾಡಾತಿಬಲಃ ಸ್ವಮುಷ್ಟಿನಾ ॥ ೧೫ ॥

ತದೈವ ತಸ್ಮಿನ್ನಿನದೋಽತಿಭೀಷಣೋ
ಬಭೂವ ಯೇನಾಂಡಕಟಾಹಮಸ್ಫುಟತ್ ।
ಯಂ ವೈ ಸ್ವಧಿಷ್ಣ್ಯೋಪಗತಂ ತ್ವಜಾದಯಃ
ಶ್ರುತ್ವಾ ಸ್ವಧಾಮಾತ್ಯಯಮಂಗ ಮೇನಿರೇ ॥ ೧೬ ॥

ಸ ವಿಕ್ರಮನ್ಪುತ್ರವಧೇಪ್ಸುರೋಜಸಾ
ನಿಶಮ್ಯ ನಿರ್ಹ್ರಾದಮಪೂರ್ವಮದ್ಭುತಮ್ ।
ಅಂತಃ ಸಭಾಯಾಂ ನ ದದರ್ಶ ತತ್ಪದಂ
ವಿತತ್ರಸುರ್ಯೇನ ಸುರಾರಿಯೂಥಪಾಃ ॥ ೧೭ ॥

ಸತ್ಯಂ ವಿಧಾತುಂ ನಿಜಭೃತ್ಯಭಾಷಿತಂ
ವ್ಯಾಪ್ತಿಂ ಚ ಭೂತೇಷ್ವಖಿಲೇಷು ಚಾತ್ಮನಃ ।
ಅದೃಶ್ಯತಾತ್ಯದ್ಭುತರೂಪಮುದ್ವಹನ್
ಸ್ತಂಭೇ ಸಭಾಯಾಂ ನ ಮೃಗಂ ನ ಮಾನುಷಮ್ ॥ ೧೮ ॥

ಸ ಸತ್ತ್ವಮೇನಂ ಪರಿತೋಽಪಿ ಪಶ್ಯನ್
ಸ್ತಂಭಸ್ಯ ಮಧ್ಯಾದನು ನಿರ್ಜಿಹಾನಮ್ ।
ನಾಯಂ ಮೃಗೋ ನಾಪಿ ನರೋ ವಿಚಿತ್ರ-
ಮಹೋ ಕಿಮೇತನ್ನೃಮೃಗೇಂದ್ರರೂಪಮ್ ॥ ೧೯ ॥

ಮೀಮಾಂಸಮಾನಸ್ಯ ಸಮುತ್ಥಿತೋಽಗ್ರತೋ
ನೃಸಿಂಹರೂಪಸ್ತದಲಂ ಭಯಾನಕಮ್ ।
ಪ್ರತಪ್ತಚಾಮೀಕರಚಂಡಲೋಚನಂ
ಸ್ಫುರತ್ಸಟಾಕೇಸರಜೃಂಭಿತಾನನಮ್ ॥ ೨೦ ॥

ಬಯಸುತ್ತಿರುವುದು ಸ್ಪಷ್ಟವಾಯಿತು. ಏಕೆಂದರೆ ಸಾಯಲು ಬಯಸುವವನೇ ಇಂತಹ ತಲೆ-ಬುಡವಿಲ್ಲದ ಮಾತುಗಳನ್ನು ಗಳಹುತ್ತಿರುತ್ತಾರೆ. ॥ ೧೨ ॥ ಎಲೈ ಮಂದಭಾಗ್ಯನೇ! ನನಗಿಂತಲೂ ಬೇರೆ ಇನ್ನಾವನೋ ಒಬ್ಬ ಜಗದೀಶ್ವರನಿರುವನೆಂದು ನೀನು ಹೇಳಿದೆಯಲ್ಲ! ಆ ಜಗದೀಶ್ವರನು ಎಲ್ಲಿದ್ದಾನೆ? ಅವನು ಎಲ್ಲೆಲ್ಲಿಯೂ ಇರುವನೇ? ಹಾಗಾದರೆ ಈ ಕಂಬದಲ್ಲಿ ಏಕೆ ಕಾಣಿಸುತ್ತಿಲ್ಲ? ॥ ೧೩ ॥ ಸರಿ, ನಿನಗೆ ಈ ಕಂಬದಲ್ಲಿ ಕಾಣಿಸುತ್ತಿರುವನೇ? ಎಲವೋ! ನೀನು ಏಕೆ ಹೀಗೆ ಜಂಬ ಕೊಚ್ಚಿಕೊಳ್ಳುವೆ. ನಾನು ಈಗಿಂದೀಗಲೇ ನಿನ್ನ ತಲೆಯನ್ನು ದೇಹದಿಂದ ಬೇರ್ಪಡಿಸುವೆನು. ನಿನಗೆ ಸರ್ವಸ್ವನಾದ ನಿನ್ನ ಅದ್ಭುತ ಭರವಸೆಗೆ ಪಾತ್ರನಾದ ಆ ಹರಿಯು ಹೇಗೆ ನಿನ್ನನ್ನು ಕಾಪಾಡುತ್ತಾನೋ ನೋಡೋಣ. ॥ ೧೪ ॥ ಹೀಗೆ ಆ ಮಹಾಬಲಶಾಲಿಯಾದ ದೈತ್ಯನು ಭಾಗವತೋತ್ತಮನಾದ ಪ್ರಹ್ಲಾದನನ್ನು ಕೋಪಾವೇಶದಿಂದ ಪದೇ-ಪದೇ ಜರೆಯುತ್ತಾ ಖಡ್ಗವನ್ನು ಎತ್ತಿಕೊಂಡು ಸಿಂಹಾಸನದಿಂದ ಮೇಲಕ್ಕೆ ನೆಗೆದು ಕಂಬವನ್ನು ಮುಷ್ಟಿಯಿಂದ ಜೋರಾಗಿ ಗುದ್ದಿದನು. ॥ ೧೫ ॥ ಒಡನೆಯೇ ಅಲ್ಲಿ ಇಡೀ ಬ್ರಹ್ಮಾಂಡವೇ ಒಡೆದುಹೋಗುತ್ತಿದೆಯೋ ಎಂಬಂತೆ ಭಯಂಕರವಾದ ಒಂದು ಶಬ್ದವು ಕೇಳಿಬಂತು. ಆ ಧ್ವನಿಯು ಲೋಕಪಾಲಕರ ಲೋಕಗಳಿಗೆ ತಲುಪಿದಾಗ ಅದನ್ನು ಕೇಳಿ ಬ್ರಹ್ಮಾದಿಗಳು ತಮ್ಮ ಲೋಕಗಳ ಪ್ರಳಯವೇ ಆಗುತ್ತಿದೆಯೋ ಎಂದು ಭಾವಿಸಿದರು. ॥ ೧೬ ॥ ಹಿರಣ್ಯಕಶಿಪು ಪ್ರಹ್ಲಾದನನ್ನು ಕೊಂದುಹಾಕಲೆಂದೇ ಭರ್ರನೇ ಚಿಮ್ಮಿದನು. ಆದರೂ ದೈತ್ಯಸೇನಾಪತಿಗಳನ್ನೂ ಭಯದಿಂದ ನಡುಗಿಸುತ್ತಿದ್ದ ಆ ಅಪೂರ್ವ, ಅದ್ಭುತ ಶಬ್ದವನ್ನು ಕೇಳಿ ಆತನು ಚಕಿತನಾಗಿ 'ಯಾರು ಹೀಗೆ ಗರ್ಜಿಸುತ್ತಿದ್ದಾರೆ?' ಎಂಬುದನ್ನು ನೋಡ ತೊಡಗಿದನು. ಆದರೆ ಅವನಿಗೆ ಸಭೆಯಲ್ಲಿ ಯಾರೂ ಕಾಣಿಸಲಿಲ್ಲ. ॥ ೧೭ ॥

ಆಗಲೇ ತನ್ನ ಭೃತ್ಯನಾದ ಪ್ರಹ್ಲಾದನ ಮತ್ತು ಬ್ರಹ್ಮದೇವರ ಮಾತುಗಳನ್ನು ಸತ್ಯಗೊಳಿಸಲಿಕ್ಕಾಗಿ ಹಾಗೂ ಸಮಸ್ತ ಭೂತಗಳಲ್ಲಿ ವ್ಯಾಪಿಸಿರುವೆನೆಂಬುದನ್ನು ತೋರಿಸಲಿಕ್ಕಾಗಿ ಸಭೆಯಲ್ಲಿದ್ದ ಆ ಕಂಬದಲ್ಲಿ ಅತ್ಯದ್ಭುತವಾದ ರೂಪದಿಂದ ಭಗವಂತನು ಪ್ರಕಟಗೊಂಡನು. ಆ ರೂಪವು ಕೇವಲ ಮೃಗದಂತಿಲ್ಲ, ಕೇವಲ ಮನುಷ್ಯನೆಂದೂ ಹೇಳುವಂತಿಲ್ಲ. ॥ ೧೮ ॥ ಹಿರಣ್ಯಕಶಿಪು ಶಬ್ದಮಾಡುವವನು ಯಾರು ಎಂದು ಸುತ್ತಲೂ ನೋಡುತ್ತಿರುವಾಗಲೇ ಕಂಬದಿಂದ ಹೊರಬಂದ ಆ ಅದ್ಭುತ ಪ್ರಾಣಿಯನ್ನು ನೋಡಿದನು. ಓಹೋ! ಇದೆಂತಹ ವಿಚಿತ್ರಪ್ರಾಣಿ? ಇದು ಮನುಷ್ಯನೂ ಅಲ್ಲ, ಮೃಗವೂ ಅಲ್ಲ. ಮತ್ತೆ ಈ ನರ-ಸಿಂಹ ರೂಪದಲ್ಲಿರುವ ಅಲೌಕಿಕ ಜೀವವು ಯಾವುದು? ಎಂದು ಯೋಚಿಸತೊಡಗಿದನು. ॥ ೧೯ ॥ ಹೀಗೆ ಚಿಂತೆಯಲ್ಲಿ ಮುಳುಗಿದ್ದಾಗಲೇ ಹಿರಣ್ಯಕಶಿಪುವಿನ ಎದುರಿಗೇ ನರಸಿಂಹ ಭಗವಂತನು ಬಂದುನಿಂತನು. ಭಗವಂತನ ರೂಪವು ಭಯಂಕರವಾಗಿತ್ತು. ಅದರಲ್ಲಿ ಕಾದ ಚಿನ್ನದಂತೆ ಕೆಂಪು-ಹಳದಿ ಮಿಶ್ರವಾದ ಭೀಕರವಾದ ಕಣ್ಣುಗಳು, ಅಲುಗಿಸುತ್ತಿದ್ದುದರಿಂದ ಕೇಸರಗಳು ಕೆದರಿ ಅತ್ತ-ಇತ್ತ ಅಲೆಗಳಂತೆ ಆಡುತ್ತಿದ್ದವು. ॥ ೨೦ ॥ ಕರಾಳವಾದ ಕೋರೆದಾಡೆಗಳು, ಕತ್ತಿಯಂತೆ ಝಳ

ಕರಾಲದಂಷ್ಟ್ರಂ ಕರವಾಲಚಂಚಲ-
ಕ್ಷುರಾಂತಜಿಹ್ವಂ ಭ್ರುಕುಟೀಮುಖೋಲ್ಬಣಮ್ ।
ಸ್ತಬ್ಧೋರ್ಧ್ವಕರ್ಣಂ ಗಿರಿಕಂದರಾದ್ಭುತ-
ವ್ಯಾತ್ತಾಸ್ಯನಾಸಂ ಹನುಭೇದಭೀಷಣಮ್ ॥ ೨೦ ॥

ದಿವಿಸ್ಪೃಶತ್ಕಾಯಮದೀರ್ಘಪೀವರ-
ಗ್ರೀವೋರುವಕ್ಷಃಸ್ಥಲಮಲ್ಪಮಧ್ಯಮಮ್ ।
ಚಂದ್ರಾಂಶುಗೌರೈಶ್ಛುರಿತಂ ತನೂರುಹೈ-
ರ್ವಿಷ್ವಗ್ಭುಜಾನೀಕಶತಂ ನಖಾಯುಧಮ್ ॥ ೨೧ ॥

ದುರಾಸದಂ ಸರ್ವನಿಜೇತರಾಯುಧ-
ಪ್ರವೇಕವಿದ್ರಾವಿತದೈತ್ಯದಾನವಮ್ ।
ಪ್ರಾಯೇಣ ಮೇಽಯಂ ಹರಿಣೋರುಮಾಯಿನಾ
ವಧಃ ಸ್ಮೃತೋಽನೇನ ಸಮುದ್ಯತೇನ ಕಿಮ್ ॥ ೨೨ ॥

ಏವಂ ಬ್ರುವಂಸ್ತ್ವಭ್ಯಪತದ್ಗದಾಯುಧೋ
ನದನ್ನೃಸಿಂಹಂ ಪ್ರತಿ ದೈತ್ಯಕುಂಜರಃ ।
ಅಲಕ್ಷಿತೋಽಗ್ನೌ ಪತಿತಃ ಪತಂಗಮೋ
ಯಥಾ ನೃಸಿಂಹೌಜಸಿ ಸೋಽಸುರಸ್ತದಾ ॥ ೨೩ ॥

ನ ತದ್ವಿಚಿತ್ರಂ ಖಲು ಸತ್ತ್ವಧಾಮನಿ
ಸ್ವತೇಜಸಾ ಯೋ ನು ಪುರಾಪಿಬತ್ತಮಃ ।
ತತೋಽಭಿಪದ್ಯಾಭ್ಯಹನನ್ಮಹಾಸುರೋ
ರುಷಾ ನೃಸಿಂಹಂ ಗದಯೋರುವೇಗಯಾ ॥ ೨೪ ॥

ತಂ ವಿಕ್ರಮಂತಂ ಸಗದಂ ಗದಾಧರೋ
ಮಹೋರಗಂ ತಾರ್ಕ್ಷ್ಯಸುತೋ ಯಥಾಗ್ರಹೀತ್ ।
ಸ ತಸ್ಯ ಹಸ್ತೋತ್ಕಲಿತಸ್ತದಾಸುರೋ
ವಿಕ್ರೀಡತೋ ಯದ್ವದಹಿರ್ಗರುತ್ಮತಃ ॥ ೨೫ ॥

ಅಸಾಧ್ವಮನ್ಯಂತ ಹೃತೌಕಸೋಽಮರಾ
ಘನಚ್ಛದಾ ಭಾರತ ಸರ್ವಧಿಷ್ಣ್ಯಪಾಃ ।
ತಂ ಮನ್ಯಮಾನೋ ನಿಜವೀರ್ಯಶಂಕಿತಂ
ಯದ್ಧಸ್ತಮುಕ್ತೋ ನೃಹರಿಂ ಮಹಾಸುರಃ ।
ಪುನಸ್ತಮಾಸಜ್ಜತ ಖಡ್ಗಚರ್ಮಣೀ
ಪ್ರಗೃಹ್ಯ ವೇಗೇನ ಜಿತಶ್ರಮೋ ಮೃಧೇ ॥ ೨೬ ॥

ಚಿಸುತ್ತಾ ಚೂರಿಯ ಅಲಗಿನಂತೆ ತೀಕ್ಷ್ಣವಾದ ನಾಲಿಗೆಯಿತ್ತು. ಓರೆಯಾದ ಹುಬ್ಬುಗಳಿಂದ ಅವನ ಮುಖವು ಇನ್ನೂ ಭಯಾನಕವಾಗಿತ್ತು. ನಿಶ್ಚಲವಾಗಿ ಮೇಲಕ್ಕೆ ನಿಮಿರಿನಿಂತ ಕಿವಿಗಳು, ಅರಳಿದ ಮೂಗಿನ ಹೊಳ್ಳೆಗಳು, ತೆರೆದಿರುವ ಬಾಯಿಯು ಪರ್ವತ ಗುಹೆಯಂತೆ ಅದ್ಭುತವಾಗಿ ಕಾಣುತ್ತಿತ್ತು. ಸೀಳಿದ ಕೆನ್ನೆಗಳಿಂದ ಅವನ ರೂಪವು ರೌದ್ರತಮವಾಗಿತ್ತು. ॥ ೨೦ ॥ ಸ್ವರ್ಗವನ್ನು ಮುಟ್ಟುತ್ತಿದ್ದ ವಿಶಾಲವಾದ ದೇಹ, ಉದ್ದವಾಗಿ ಪುಷ್ಟವಾದ ಕತ್ತು, ಅಗಲವಾದ ಎದೆ, ತೆಳುವಾದ ನಡು, ಚಂದ್ರಕಿರಣಗಳಂತೆ ಶರೀರದ ಮೇಲೆ ಥಳಥಳಿಸುತ್ತಿದ್ದ ಬಿಳಿಯ ಕೂದಲು, ಎಲ್ಲ ಕಡೆಗಳಲ್ಲಿಯೂ ಹರಡಿಕೊಂಡಿದ್ದ ನೂರಾರು ಭುಜಗಳು ಮತ್ತು ಅವುಗಳಲ್ಲಿ ಆಯುಧಗಳಂತೆ ಕಂಗೊಳಿಸುತ್ತಿದ್ದ ಉಗುರುಗಳು ಇದ್ದವು. ॥ ೨೧ ॥ ಆತನ ಬಳಿಯಲ್ಲಿ ಸುಳಿಯುವುದಕ್ಕೂ ಯಾರಿಗೂ ಧೈರ್ಯವು ಬರುತ್ತಿರಲಿಲ್ಲ. ಸುದರ್ಶನ ಚಕ್ರದಿಂದ ಮತ್ತು ವಜ್ರವೇ ಮುಂತಾದ ಇತರ ಶ್ರೇಷ್ಠ ಆಯುಧಗಳಿಂದ ಅವನು ಎಲ್ಲ ದೈತ್ಯ-ದಾನವರನ್ನು ಓಡಿಸಿಬಿಟ್ಟನು. ಹಿರಣ್ಯಕಶಿಪು ಯೋಚಿಸತೊಡಗಿದನು – ಮಹಾಮಾಯಾವಿಯಾದ ವಿಷ್ಣುವೇ ನನ್ನನ್ನು ಕೊಂದುಹಾಕಲು ಈ ರೂಪ-ವೇಷದಿಂದ ಬಂದಿರಲಿಕ್ಕಿಲ್ಲವಲ್ಲ! ಏನಾದರೇನಂತೆ, ಈತನ ಯಾವ ಆಟವೂ ನನ್ನ ಬಳಿಯಲ್ಲಿ ನಡೆಯಲಿಕ್ಕಿಲ್ಲ. ॥ ೨೨ ॥

ಹೀಗೆ ಅಂದುಕೊಂಡು ಸಿಂಹಗರ್ಜನೆಯನ್ನು ಮಾಡುತ್ತಾ ದೈತ್ಯರಾಜನಾದ ಹಿರಣ್ಯಕಶಿಪು ಕೈಯಲ್ಲಿ ಗದೆಯನ್ನೆತ್ತಿಕೊಂಡು ಶ್ರೀನರಸಿಂಹದೇವರ ಮೇಲೆ ಎಗರಿಬಿದ್ದನು. ಆದರೆ ಬೆಂಕಿಯನ್ನು ಆಕ್ರಮಿಸಲು ಹೋದ ಮಿಡತೆಯು ಅದರಲ್ಲಿ ಬಿದ್ದು ಅದೃಶ್ಯವಾಗುವಂತೆಯೇ ಭಗವಂತನಾದ ನರಸಿಂಹನನ್ನು ಮುತ್ತಲು ಹೋದ ಅಸುರನು ಸ್ವಾಮಿಯ ತೇಜಸ್ಸಿನಲ್ಲಿ ಮುಚ್ಚಿಹೋದನು. ॥ ೨೩ ॥ ಸಮಸ್ತ ಶಕ್ತಿಗಳಿಗೂ, ತೇಜಸ್ಸುಗಳಿಗೂ ಆಶ್ರಯನಾಗಿರುವ ಭಗವಂತನ ಸಂಬಂಧದಲ್ಲಿ ಇದು ಆಶ್ಚರ್ಯದ ವಿಷಯವಲ್ಲ, ಏಕೆಂದರೆ, ಸೃಷ್ಟಿಯ ಪ್ರಾರಂಭದಲ್ಲಿ ಅವನು ತನ್ನ ತೇಜಸ್ಸಿನಿಂದ ಪ್ರಳಯಕ್ಕೆ ಕಾರಣವಾದ ತಮೋಗುಣ ರೂಪವಾದ ಘೋರ ಅಂಧಕಾರವನ್ನು ನುಂಗಿಹಾಕಿದ್ದನು. ಅನಂತರ ಆ ದೈತ್ಯನು ಅತಿಕ್ರೋಧದಿಂದ ದೇವನ ಬಳಿಗೆ ನೆಗೆದು, ಗದೆಯನ್ನು ಜೋರಾಗಿ ತಿರುಗಿಸುತ್ತಾ ಬರುಸಿಂದ ನರಸಿಂಹ ಭಗವಂತನನ್ನು ಹೊಡೆದನು. ॥ ೨೪ ॥ ಆದರೆ ಭಗವಂತನು – ದೈತ್ಯನು ಹೊಡೆಯುತ್ತಿರುವಂತೆಯೇ ಗರುಡನು ಸರ್ಪವನ್ನು ಹಿಡಿದುಕೊಳ್ಳುವಂತೆ ಭಗವಂತನು ಗದೆಯ ಸಹಿತ ಆತನನ್ನು ಹಿಡಿದುಕೊಂಡನು. ದೇವನು ದೈತ್ಯನೊಡನೆ ಆಟವಾಡ ತೊಡಗಿದಾಗ ಅವನು – ಆಟವಾಡುತ್ತಿರುವ ಗರುಡನ ಹಿಡಿತದಿಂದ ಹಾವು ತಪ್ಪಿಸಿಕೊಳ್ಳುವಂತೆ ಭಗವಂತನ ಕೈಯಿಂದ ತನ್ನನ್ನು ಬಿಡಿಸಿಕೊಂಡುಬಿಟ್ಟನು. ॥ ೨೫ ॥ ಯುಧಿಷ್ಠಿರನೇ! ಆ ಸಮಯದಲ್ಲಿ ಲೋಕಪಾಲಕರೆಲ್ಲರೂ ಮೋಡಗಳಲ್ಲಿ ಅವಿತುಕೊಂಡು ಈ ಯುದ್ಧವನ್ನು ನೋಡುತ್ತಿದ್ದರು. ಅವರ ಸ್ವರ್ಗವನ್ನಾದರೋ ಹಿರಣ್ಯಕಶಿಪು ಮೊದಲೇ ಕಸಿದುಕೊಂಡಿದ್ದನು. ದೈತ್ಯನು ಭಗವಂತನ ಕೈಯಿಂದ ಜಾರಿಹೋದುದನ್ನು ನೋಡಿದಾಗ ಅವರು ಇನ್ನೂ ಹೆದರಿದರು. ಹಿರಣ್ಯಕಶಿಪುವೂ ನರಸಿಂಹನು

ತಂ ಶ್ಯೇನವೇಗಂ ಶತಚಂದ್ರವರ್ತ್ಮಭಿ-
ಶ್ಚರಂತಮಚ್ಛಿದ್ರಮುಪರ್ಯಧೋ ಹರಿಃ ।
ಕೃತ್ವಾಟ್ಟಹಾಸಂ ಖರಮುತ್ಸ್ವನೋಲ್ಬಣಂ
ನಿಮೀಲಿತಾಕ್ಷಂ ಜಗೃಹೇ ಮಹಾಜವಃ ॥ ೨೮ ॥

ವಿಷ್ವಕ್ಸ್ಫುರಂತಂ ಗ್ರಹಣಾತುರಂ ಹರಿ-
ರ್ವ್ಯಾಲೋ ಯಥಾಽಽಖುಂ ಕುಲಿಶಾಕ್ಷತತ್ವಚಮ್ ।
ದ್ವಾರ್ಯೂರ ಆಪಾತ್ಯ ದದಾರ ಲೀಲಯಾ
ನಖೈರ್ಯಥಾಹಿಂ ಗರುಡೋ ಮಹಾವಿಷಮ್ ॥ ೨೯ ॥

ಸಂರಂಭದುಷ್ಪ್ರೇಕ್ಷ್ಯಕರಾಲಲೋಚನೋ
ವ್ಯಾತ್ತಾನನಾಂತಂ ವಿಲಿಹನ್ಸ್ವಜಿಹ್ವಯಾ ।
ಅಸೃಗ್ಲವಾಕ್ತಾರುಣಕೇಸರಾನನೋ
ಯಥಾಂತ್ರಮಾಲೀ ದ್ವಿಪಹತ್ಯಯಾ ಹರಿಃ ॥ ೩೦ ॥

ನಖಾಂಕುರೋತ್ಪಾಟಿತಹೃತ್ಸರೋರುಹಂ
ವಿಸೃಜ್ಯ ತಸ್ಯಾನುಚರಾನುದಾಯುಧಾನ್ ।
ಅಹನ್ಸಮಸ್ತಾನ್ನಖಶಸ್ತ್ರಪಾರ್ಷ್ಣಿಭಿ-
ರ್ದೋರ್ದಂಡಯೂಥೋಽನುಪಥಾನ್ಸಹಸ್ರಶಃ ॥ ೩೧ ॥

ಸಟಾವಧೂತಾ ಜಲದಾಃ ಪರಾಪತನ್-
ಗ್ರಹಾಶ್ಚ ತದ್ದೃಷ್ಟಿವಿಮುಷ್ಟರೋಚಿಷಃ ।
ಅಂಭೋಧಯಃ ಶ್ವಾಸಹತಾ ವಿಚುಕ್ಷುಭು-
ರ್ನಿರ್ಹ್ರಾದಭೀತಾ ದಿಗಿಭಾ ವಿಚುಕ್ರುಶುಃ ॥ ೩೨ ॥

ದ್ಯೌಸ್ತತ್ಸಟೋತ್ಕ್ಷಿಪ್ತವಿಮಾನಸಂಕುಲಾ
ಪ್ರೋತ್ಸರ್ಪತ ಕ್ಷ್ಮಾ ಚ ಪದಾಭಿಪೀಡಿತಾ ।
ಶೈಲಾಃ ಸಮುತ್ಪೇತುರಮುಷ್ಯ ರಂಹಸಾ
ತತ್ತೇಜಸಾ ಖಂ ಕಕುಭೋ ನ ರೇಜಿರೇ ॥ ೩೩ ॥

ನನ್ನ ಬಲವೀರ್ಯದಿಂದ ಹೆದರಿಯೇ ನನ್ನನ್ನು ತನ್ನ ಕೈಯಿಂದ ಬಿಟ್ಟುಬಿಟ್ಟನು ಎಂದೇ ತಿಳಿದನು. ಹೀಗೆ ವಿಚಾರಮಾಡಿದ್ದರಿಂದ ಅವನ ಬಳಲಿಕೆ ದೂರವಾಯಿತು. ಮತ್ತೆ ಅವನು ಯುದ್ಧಕ್ಕಾಗಿ ಕತ್ತಿ-ಗುರಾಣಿಗಳನ್ನು ಹಿಡಿದುಕೊಂಡು ನರಸಿಂಹದೇವರ ಕಡೆಗೆ ನುಗ್ಗಿದನು. ॥ ೨೭ ॥ ಆಗ ಅವನು ಗಿಡುಗನಂತೆ ಅತಿವೇಗದಿಂದ ಮೇಲೆ-ಕೆಳಗೆ ಕತ್ತಿ-ಗುರಾಣಿಗಳನ್ನು ತಿರುಗಿಸುವ ವರಸೆಗಳಿಂದ ಶತ್ರುವು ತನ್ನ ಮೇಲೆ ಆಕ್ರಮಣ ಮಾಡುವುದಕ್ಕೆ ಅವಕಾಶವೇ ಸಿಕ್ಕದಂತೆ ಮಾಡುತ್ತಿದ್ದನು. ಆಗ ಭಗವಂತನು ಗಟ್ಟಿಯಾಗಿ ಪ್ರಚಂಡ ಮತ್ತು ಭಯಂಕರ ಅಟ್ಟಹಾಸ ಮಾಡಿದನು. ಇದರಿಂದ ಹಿರಣ್ಯಕಶಿಪುವಿನ ಕಣ್ಣುಗಳು ಮುಚ್ಚಿಹೋದುವು. ಮತ್ತೆ ಅತಿರಭಸದಿಂದ ಜಿಗಿದು ಸರ್ಪವು ಇಲಿಯನ್ನು ಹಿಡಿಯುವಂತೆ ಭಗವಂತನು ಆತನನ್ನು ಹಿಡಿದು ಕೊಂಡನು. ವಜ್ರಾಯುಧದ ಏಟಿನಿಂದಲೂ ಯಾವಾತನ ಚರ್ಮವು ತರಚಲಿಲ್ಲವೋ ಅಂತಹ ಹಿರಣ್ಯಕಶಿಪು ಈಗ ಶ್ರೀನರಸಿಂಹನ ಪಂಜದಿಂದ ತನ್ನನ್ನು ಬಿಡಿಸಿಕೊಳ್ಳಲು ಚಡಪಡಿಸತೊಡಗಿದನು. ಭಗವಂತನು ಆತನನ್ನು ಸಭೆಯ ದ್ವಾರದ ಬಳಿಗೆ ಎಳೆದುಕೊಂಡು ಹೋಗಿ ಹೊಸ್ತಿಲಮೇಲೆ ಕುಳಿತು ತನ್ನ ತೊಡೆಯ ಮೇಲೆ ಕೆಡವಿಕೊಂಡು ಗರುಡನು ಮಹಾವಿಷಧಾರಿಯಾದ ಸರ್ಪವನ್ನು ಸೀಳಿಹಾಕುವಂತೆ – ಶ್ರೀನರಸಿಂಹನು ಲೀಲಾಜಾಲವಾಗಿ ತನ್ನ ಉಗುರುಗಳಿಂದಲೇ ಅವನ ಉದರವನ್ನು ಬಗೆದು ಸೀಳಿ ಹಾಕಿದನು. ॥ ೨೮-೨೯ ॥ ಆ ಸಮಯದಲ್ಲಿ ಅವನ ಕ್ರೋಧ ತುಂಬಿದ ವಿಕರಾಳ ಕಣ್ಣುಗಳ ಕಡೆಗೆ ನೋಡಲಾಗುತ್ತಿರಲಿಲ್ಲ. ಅವನು ಚಾಚಿದ ನಾಲಿಗೆಯಿಂದ ತನ್ನ ತೆರೆದ ಬಾಯಿಯ ಎರಡೂ ಮೂಲೆಗಳನ್ನೂ ನೆಕ್ಕುತ್ತಿದ್ದನು. ರಕ್ತದ ಕಣಗಳಿಂದ ಅವನ ಬಾಯಿಯು ಮತ್ತು ಕತ್ತಿನ ಕೇಸರಗಳು ಕೆಂಪಾಗಿದ್ದುವು. ಆನೆಯನ್ನು ಕೊಂದು ಅದರ ಕರುಳಬಳ್ಳಿಯನ್ನು ಕುತ್ತಿಗೆಗೆ ಹಾಕಿಕೊಂಡ ಸಿಂಹದಂತೆ – ಆ ನರಸಿಂಹನು ರುದ್ರ ಸೌಂದರ್ಯದಿಂದ ಕಂಗೊಳಿಸುತ್ತಿದ್ದನು. ॥ ೩೦ ॥ ಅವನು ತನ್ನ ತೀಕ್ಷ್ಣವಾದ ಉಗುರುಗಳಿಂದ ಹಿರಣ್ಯಕಶಿಪುವಿನ ಹೃದಯವನ್ನು ಕಿತ್ತು ನೆಲಕ್ಕೆ ಒಗೆದುಬಿಟ್ಟನು. ಆಗ ಸಾವಿರಾರು ದೈತ್ಯ-ದಾನವರು ಕೈಗಳಲ್ಲಿ ಶಸ್ತ್ರಗಳನ್ನು ಹಿಡಿದುಕೊಂಡು ಭಗವಂತನ ಮೇಲೆ ಪ್ರಹಾರ ಮಾಡತೊಡಗಿದರು. ಆದರೆ ಭಗವಂತನು ತನ್ನ ಭುಜಗಳೆಂಬ ಸೈನ್ಯದಿಂದಲೂ, ಒದೆತಗಳಿಂದಲೂ, ಉಗುರುಗಳೆಂಬ ಶಸ್ತ್ರಗಳಿಂದಲೂ ನಾಲ್ಕೂ ಕಡೆಗಳಲ್ಲಿಯೂ ಅವರನ್ನು ಕೊಂದು ಹಾಕಿದನು. ॥ ೩೧ ॥

ಯುಧಿಷ್ಠಿರನೇ! ಆಗ ಭಗವಾನ್ ನರಸಿಂಹನ ಕತ್ತಿನ ಕೇಸರಗಳ ಅಪ್ಪಳಿಕೆಯಿಂದ ಮೋಡಗಳು ಚೆದುರಿಹೋದುವು. ಅವನ ಕಣ್ಣುಗಳ ಜ್ವಾಲೆಗಳಿಂದ ಸೂರ್ಯಾದಿ ಗ್ರಹರ ತೇಜಸ್ಸು ಮಂಕಾಯಿತು. ಅವನ ಉಸಿರಾಟದ ಹೊಡೆತದಿಂದ ಸಮುದ್ರಗಳು ಕ್ಷೋಭೆಗೊಂಡವು. ಅವನ ಸಿಂಹನಾದಕ್ಕೆ ಹೆದರಿ ದಿಗ್ಗಜಗಳು ಘೀಳಿಟ್ಟವು. ॥ ೩೨ ॥ ಅವನ ಕೇಸರಗಳಿಗೆ ಢಿಕ್ಕಿ ಹೊಡೆದು ದೇವತೆಗಳ ವಿಮಾನಗಳು ಅಸ್ತ-ವ್ಯಸ್ತವಾದುವು. ಸ್ವರ್ಗವು ನಡುಗಿಹೋಯಿತು. ಅವನ ಪಾದಾಘಾತದಿಂದ ಭೂಕಂಪ ಉಂಟಾಯಿತು. ವೇಗದಿಂದ ಪರ್ವತಗಳು ಹಾರತೊಡಗಿದವು.

ತತಃ ಸಭಾಯಾಮುಪವಿಷ್ಟಮುತ್ತಮೇ
ನೃಪಾಸನೇ ಸಂಭೃತತೇಜಸಂ ವಿಭುಮ್ ।
ಅಲಕ್ಷಿತದ್ವೈರಥಮತ್ಯಮರ್ಷಣಂ
ಪ್ರಚಂಡ ವಕ್ತ್ರಂ ನ ಬಭಾಜ ಕಶ್ಚನ ॥ ೩೪ ॥

ನಿಶಮ್ಯ ಲೋಕತ್ರಯಮಸ್ತಕಜ್ವರಂ
ತಮಾದಿದೈತ್ಯಂ ಹರಿಣಾ ಹತಂ ಮೃಧೇ ।
ಪ್ರಹರ್ಷವೇಗೋತ್ಕಲಿತಾನನಾ ಮುಹುಃ
ಪ್ರಸೂನವರ್ಷೈರ್ವವೃಷುಃ ಸುರಸ್ತ್ರಿಯಃ ॥ ೩೫ ॥

ತದಾ ವಿಮಾನಾವಲಿಭಿರ್ನಭಸ್ತಲಂ
ದಿದೃಕ್ಷತಾಂ ಸಂಕುಲಮಾಸ ನಾಕಿನಾಮ್ ।
ಸುರಾನಕಾ ದುಂದುಭಯೋಽಥ ಜಘ್ನಿರೇ
ಗಂಧರ್ವಮುಖ್ಯಾ ನನೃತುರ್ಜಗುಃ ಸ್ತ್ರಿಯಃ ॥ ೩೬ ॥

ತತ್ರೋಪವ್ರಜ್ಯ ವಿಬುಧಾ ಬ್ರಹ್ಮೇಂದ್ರಗಿರಿಶಾದಯಃ ।
ಋಷಯಃ ಪಿತರಃ ಸಿದ್ಧಾ ವಿದ್ಯಾಧರಮಹೋರಗಾಃ ॥ ೩೭ ॥

ಮನವಃ ಪ್ರಜಾನಾಂ ಪತಯೋ ಗಂಧರ್ವಾಪ್ಸರಚಾರಣಾಃ ।
ಯಕ್ಷಾಃ ಕಿಂಪುರುಷಾಸ್ತಾತ ವೇತಾಲಾಃ ಸಿದ್ಧಕಿನ್ನರಾಃ ॥ ೩೮ ॥

ತೇ ವಿಷ್ಣುಪಾರ್ಷದಾಃ ಸರ್ವೇ ಸುನಂದಕುಮುದಾದಯಃ ।
ಮೂರ್ಧ್ನಿ ಬದ್ಧಾಂಜಲಿಪುಟಾ ಆಸೀನಂ ತೀವ್ರತೇಜಸಮ್ ।
ಈಡಿರೇ ನರಶಾರ್ದೂಲಂ ನಾತಿದೂರಚರಾಃ ಪೃಥಕ್ ॥ ೩೯ ॥

ಬ್ರಹ್ಮೋವಾಚ

ನತೋಽಸ್ಮ್ಯನಂತಾಯ ದುರಂತಶಕ್ತಯೇ
ವಿಚಿತ್ರವೀರ್ಯಾಯ ಪವಿತ್ರಕರ್ಮಣೇ ।
ವಿಶ್ವಸ್ಯ ಸರ್ಗಸ್ಥಿತಿಸಂಯಮಾನ್ಗುಣೈಃ
ಸ್ವಲೀಲಯಾ ಸಂದಧತೇಽವ್ಯಯಾತ್ಮನೇ ॥ ೪೦ ॥

ಶ್ರೀರುದ್ರ ಉವಾಚ

ಕೋಪಕಾಲೋ ಯುಗಾಂತಸ್ತೇ
ಹತೋಽಯಮಸುರೋಽಲ್ಪಕಃ ।
ತತ್ಸುತಂ ಪಾಹ್ಯುಪಸೃತಂ
ಭಕ್ತಂ ತೇ ಭಕ್ತವತ್ಸಲ ॥ ೪೧ ॥

ಅವನ ತೇಜಸ್ಸಿನ ಮಿಂಚಿನಿಂದ ಆಕಾಶವೂ, ದಿಕ್ಕುಗಳೂ ಕಳೆಗುಂದಿ ಕತ್ತಲಾವರಿಸಿ ಕಾಣಿಸದೇ ಹೋದುವು. ॥ ೩೩ ॥ ಆ ಸಮಯದಲ್ಲಿ ನರಸಿಂಹ ಭಗವಂತನನ್ನು ಇದಿರಿಸುವವರು ಯಾರೂ ಕಂಡು ಬಂದಿಲ್ಲ. ಆದರೂ ಅವನ ಕ್ರೋಧವು ಇನ್ನೂ ಹೆಚ್ಚುತ್ತಲೇ ಇತ್ತು. ಅವನು ಹಿರಣ್ಯಕಶಿಪುವಿನ ರಾಜಸಭೆಯ ಎತ್ತರವಾದ ಸಿಂಹಾಸನದ ಮೇಲೆ ಹೋಗಿ ಕುಳಿತನು. ಆಗ ಅವನ ಅತ್ಯಂತ ತೇಜಃಪುಂಜ ಮತ್ತು ಕ್ರೋಧದಿಂದ ತುಂಬಿದ ಭಯಂಕರ ವದನವನ್ನು ಕಂಡು ಅವನ ಬಳಿಗೆ ಹೋಗಿ ಸೇವೆ ಮಾಡಲೂ ಯಾರಿಗೂ ಧೈರ್ಯಬರಲಿಲ್ಲ. ॥ ೩೪ ॥

ಯುಧಿಷ್ಠಿರನೇ ! ಮೂರು ಲೋಕಗಳಿಗೂ ತಲೆನೋವಾಗಿದ್ದ ಆ ಆದಿದೈತ್ಯ ಹಿರಣ್ಯಕಶಿಪು ಯುದ್ಧದಲ್ಲಿ ಭಗವಂತನ ಕೈಯಿಂದ ಹತನಾದನೆಂಬ ಶುಭಸಮಾಚಾರವು ಸ್ವರ್ಗದ ದೇವಿಯರಿಗೆ ತಿಳಿದಾಗ ಆನಂದದಿಂದ ಅವರ ಮುಖಗಳು ಅರಳಿದವು. ಅವರು ಮತ್ತೆ-ಮತ್ತೆ ಭಗವಂತನ ಮೇಲೆ ಹೂವಿನ ಮಳೆಗರೆಯ ತೊಡಗಿದರು. ॥ [illegible] ॥ ಭಗವಂತನ ದರ್ಶನಕ್ಕಾಗಿ ಬಂದ ದೇವತೆಗಳ ವಿಮಾನಗಳಿಂದ ಆಕಾಶವು ತುಂಬಿಹೋಯಿತು. ದೇವದುಂದುಭಿಗಳು ಮೊಳಗಿದವು. ಗಂಧರ್ವರು ಗಾನ ಮಾಡತೊಡಗಿದರು. ಅಪ್ಸರೆಯರು ನರ್ತನ ಮಾಡ ತೊಡಗಿದರು. ॥ ೩೬ ॥ ಅದೇ ಸಮಯಕ್ಕೆ ಬ್ರಹ್ಮದೇವರು, ಸ್ವಾಮಿ ಶಂಕರನು, ಇಂದ್ರಾದಿದೇವತೆಗಳೂ, ಋಷಿಗಳೂ, ಪಿತೃಗಳೂ, ಸಿದ್ಧರೂ, ವಿದ್ಯಾಧರರೂ, ಮಹಾನಾಗರೂ, ಮನುಗಳೂ, ಪ್ರಜಾಪತಿಗಳೂ, ಗಂಧರ್ವರೂ, ಅಪ್ಸರೆಯರೂ, ಚಾರಣರೂ, ಯಕ್ಷರೂ, ಕಿಂಪುರುಷರೂ, ಬೇತಾಳರೂ, ಸಿದ್ಧರೂ, ಕಿನ್ನರರೂ ಹಾಗೂ ಸುನಂದ-ಕುಮುದ ಮೊದಲಾದ ಭಗವಂತನ ಪಾರ್ಷದರೂ, ನರಸಿಂಹ ಭಗವಂತನ ಬಳಿಗೆ ಬಂದರು. ಅವರೆಲ್ಲರೂ ತಲೆಯಮೇಲೆ ಕೈಜೋಡಿಸಿಕೊಂಡು ಸಿಂಹಾಸನದ ಮೇಲೆ ಬೆಳಗುತ್ತಿದ್ದ ಅತ್ಯಂತ ತೇಜಸ್ವೀ ನರಸಿಂಹನನ್ನು ಸ್ವಲ್ಪ ದೂರದಿಂದಲೇ ಬೇರೆ-ಬೇರೆಯಾಗಿ ಸ್ತುತಿಸ ತೊಡಗಿದರು. ॥ ೩೭-೩೯ ॥

ಬ್ರಹ್ಮದೇವರು ಹೇಳಿದರು – ಪ್ರಭೋ ! ನಿನ್ನ ಶಕ್ತಿಯ ಪಾರವನ್ನು ಕಾಣಲು ಸಾಧ್ಯವಿಲ್ಲದ ಅನಂತನಾದ ದೇವನಿಗೆ ನಮಸ್ಕಾರವು. ನಿನ್ನ ಪರಾಕ್ರಮವು ವಿಚಿತ್ರವಾಗಿದ್ದು ಕರ್ಮಗಳು ಪವಿತ್ರವಾಗಿವೆ. ಗುಣಗಳ ಮೂಲಕ ನೀನು ಲೀಲೆಯಿಂದಲೇ ಸಮಸ್ತ ವಿಶ್ವದ ಉತ್ಪತ್ತಿ, ಪಾಲನೆ, ಪ್ರಳಯಗಳನ್ನು ಯಥೋಚಿತವಾಗಿ ಮಾಡುತ್ತಿದ್ದರೂ, ನೀನು ಅವುಗಳೊಂದಿಗೆ ಯಾವ ಸಂಬಂಧವನ್ನೂ ಇರಿಸಿಕೊಳ್ಳುವುದಿಲ್ಲ. ಸ್ವಯಂ ನಿರ್ವಿಕಾರನಾಗಿರುವೆ. ಅಂತಹ ನಿನಗೆ ನಾನು ನಮಸ್ಕರಿಸುತ್ತೇನೆ. ॥ ೪೦ ॥

ಶ್ರೀರುದ್ರದೇವರು ಹೇಳಿದರು – ನಿನ್ನ ಕೋಪವನ್ನು ಉಪಸಂಹಾರ ಮಾಡಿಕೋ. ನೀನು ಕ್ರೋಧವನ್ನು ಪ್ರಕಟಿಸುವ ಕಾಲ ಮಹಾಪ್ರಳಯವಲ್ಲವೇ ? ಆದರೂ ಈ ತುಚ್ಛನಾದ ದೈತ್ಯನ ಮೇಲೆ ಕ್ರೋಧವನ್ನು ತೋರಿದೆ. ಆತನನ್ನು ಸಂಹಾರ ಮಾಡಿಯೂ ಆಯಿತು. ಅವನ ಪುತ್ರನು ನಿನಗೆ ಶರಣು ಬಂದಿರುವನು. ಭಕ್ತವತ್ಸಲ ಪ್ರಭೋ ! ನೀನು ನಿನ್ನ ಈ ಭಕ್ತನನ್ನು ರಕ್ಷಿಸು. ॥ ೪೧ ॥

ಇಂದ್ರ ಉವಾಚ

ಪ್ರತ್ಯಾನೀತಾಃ ಪರಮ ಭವತಾ ತ್ರಾಯತಾ ನಃ ಸ್ವಭಾಗಾ
ದೈತ್ಯಾಕ್ರಾಂತಂ ಹೃದಯಕಮಲಂ ತ್ವದ್ಗೃಹಂ ಪ್ರತ್ಯಬೋಧಿ ।
ಕಾಲಗ್ರಸ್ತಂ ಕಿಯದಿದಮಹೋ ನಾಥ ಶುಶ್ರೂಷತಾಂ ತೇ
ಮುಕ್ತಿಸ್ತೇಷಾಂ ನ ಹಿ ಬಹುಮತಾ ನಾರಸಿಂಹಾಪರೈಃ ಕಿಮ್
॥ ೪೨ ॥

ಋಷಯ ಊಚುಃ

ತ್ವಂ ನಸ್ತಪಃ ಪರಮಮಾತ್ಥ ಯದಾತ್ಮತೇಜೋ
ಯೇನೇದಮಾದಿಪುರುಷಾತ್ಮಗತಂ ಸಸರ್ಜ ।
ತದ್ವಿಪ್ರಲುಪ್ತಮಮುನಾದ್ಯ ಶರಣ್ಯಪಾಲ
ರಕ್ಷಾಗೃಹೀತವಪುಷಾ ಪುನರನ್ವಮಂಸ್ಥಾಃ ॥ ೪೩ ॥

ಪಿತರ ಊಚುಃ

ಶ್ರಾದ್ಧಾನಿ ನೋಽಧಿಬುಭುಜೇ ಪ್ರಸಭಂ ತನೂಜೈ-
ರ್ದತ್ತಾನಿ ತೀರ್ಥಸಮಯೇಽಪ್ಯಪಿಬತ್ತಿಲಾಂಬು ।
ತಸ್ಯೋದರಾನ್ನಖವಿದೀರ್ಣವಪಾದ್ಯ ಆರ್ಚ್ಛತ್
ತಸ್ಮೈ ನಮೋ ನೃಹರಯೇಽಖಿಲಧರ್ಮಗೋಪ್ತ್ರೇ ॥ ೪೪ ॥

ಸಿದ್ಧಾ ಊಚುಃ

ಯೋ ನೋ ಗತಿಂ ಯೋಗಸಿದ್ಧಾಮಸಾಧು-
ರಹಾರಷೀದ್ ಯೋಗತಪೋಬಲೇನ ।
ನಾನಾದರ್ಪಂ ತಂ ನಖೈರ್ನಿರ್ದದಾರ
ತಸ್ಮೈ ತುಭ್ಯಂ ಪ್ರಣತಾಃ ಸ್ಮೋ ನೃಸಿಂಹ ॥ ೪೫ ॥

ವಿದ್ಯಾಧರಾ ಊಚುಃ

ವಿದ್ಯಾಂ ಪೃಥಗ್ಧಾರಣಯಾನುರಾದ್ಧಾಂ
ನ್ಯಷೇಧದಜ್ಞೋ ಬಲವೀರ್ಯದೃಪ್ತಃ ।
ಸ ಯೇನ ಸಂಖ್ಯೇ ಪಶುವದ್ಧತಸ್ತಂ
ಮಾಯಾನೃಸಿಂಹಂ ಪ್ರಣತಾಃ ಸ್ಮ ನಿತ್ಯಮ್ ॥ ೪೬ ॥

ನಾಗಾ ಊಚುಃ

ಯೇನ ಪಾಪೇನ ರತ್ನಾನಿ ಸ್ತ್ರೀರತ್ನಾನಿ ಹೃತಾನಿ ನಃ ।
ತದ್ವಕ್ಷಃಪಾಟನೇನಾಸಾಂ ದತ್ತಾನಂದ ನಮೋಽಸ್ತು ತೇ
॥ ೪೭ ॥

ಇಂದ್ರನು ಹೇಳಿದನು – ಓ ಪುರುಷೋತ್ತಮಾ! ನೀನು ನಮ್ಮನ್ನು ರಕ್ಷಿಸಿದ್ದೀಯೆ. ನೀನು ನಮ್ಮ ಯಜ್ಞಭಾಗಗಳನ್ನು ಹಿಂದಿರುಗಿಸಿ ಕೊಟ್ಟಿರುವೆ, ಅವು ವಾಸ್ತವವಾಗಿ ಅಂತರ್ಯಾಮಿಯಾದ ನಿನ್ನದೇ ಆಗಿವೆ. ದೈತ್ಯರ ಆತಂಕದಿಂದ ಮುಚ್ಚಿಹೋಗಿದ್ದ ನಮ್ಮ ಹೃದಯಕಮಲಗಳನ್ನು ನೀನು ಅರಳುವಂತೆ ಮಾಡಿರುವೆ. ಅವೂ ಕೂಡ ನಿನ್ನ ವಾಸಸ್ಥಾನಗಳೇ ಆಗಿವೆ. ನಮ್ಮಗಳಿಗೆ ಪುನಃ ದೊರೆತ ಈ ಸ್ವರ್ಗಾದಿ ರಾಜ್ಯವೆಲ್ಲವೂ ಕಾಲಕ್ಕೆ ತುತ್ತಾಗಿದೆ. ನಿನ್ನ ಸೇವಕರಾದವರಿಗೆ ಇದೇನು ಮಹಾ! ಸ್ವಾಮಿಯೇ! ನಿನ್ನ ಸೇವೆಯನ್ನು ಬಯಸುವವರು ಮುಕ್ತಿಯನ್ನು ಆದರಿಸುವುದಿಲ್ಲ. ಮತ್ತೆ ಬೇರೆ ಭೋಗಗಳಾದರೋ ಅವರಿಗೆ ಆವಶ್ಯಕತೆ ಏನಿದೆ? ॥ ೪೨ ॥

ಋಷಿಗಳು ಹೇಳಿದರು – ಓ ಶರಣಾಗತವತ್ಸಲನೇ! ಪುರುಷೋತ್ತಮನೇ! ನಿನ್ನಲ್ಲಿ ಲೀನವಾಗಿದ್ದ ಜಗತ್ತನ್ನು ನೀನು ತಪಸ್ಸಿನ ಮೂಲಕವೇ ಮತ್ತೆ ಸೃಷ್ಟಿಮಾಡಿ, ಕರುಣೆಯಿಂದ ಅದೇ ಆತ್ಮತೇಜೋರೂಪವಾದ ಶ್ರೇಷ್ಠ ತಪಸ್ಸಿನ ಉಪದೇಶವನ್ನು ನಮಗೆಲ್ಲರಿಗೂ ಕರುಣಿಸಿದ್ದೆ. ಈ ದೈತ್ಯನು ಆ ತಪಸ್ಸನ್ನೇ ಲುಪ್ತಗೊಳಿಸಿಬಿಟ್ಟಿದ್ದನು. ■ ತಪಸ್ಸಿನ ರಕ್ಷಣೆಗಾಗಿಯೇ ಅವತಾರತಾಳಿ ನೀನು ಮತ್ತೆ ಆ ತಪಸ್ಸಿನ ಉಪದೇಶವನ್ನೇ ಅನುಮೋದಿಸಿರುವೆ ॥ ೪೩ ॥

ಪಿತೃಗಳು ಹೇಳಿದರು – ಪ್ರಭೋ! ನಮ್ಮ ಪುತ್ರರು ನಮಗಾಗಿ ಪಿಂಡಪ್ರದಾನ ಮಾಡಿದಾಗ ಈ ದುಷ್ಟದೈತ್ಯನು ಅವನ್ನು ಬಲವಂತವಾಗಿ ಕಿತ್ತುಕೊಂಡು ತಿಂದುಬಿಡುತ್ತಿದ್ದನು. ಅವರು ಪವಿತ್ರವಾದ ಪುಣ್ಯತೀರ್ಥಗಳಲ್ಲಿ ತರ್ಪಣವನ್ನೂ, ತಿಲಾಂಜಲಿಯನ್ನೂ ಕೊಡುತ್ತಿದ್ದರೆ ಅದನ್ನೂ ಈತನು ಕುಡಿದುಬಿಡುತ್ತಿದ್ದನು. ಇಂದು ನೀನು ನಿನ್ನ ಉಗುರುಗಳಿಂದ ಅವನ ಹೊಟ್ಟೆಯನ್ನು ಬಗೆದು ಅವೆಲ್ಲವನ್ನೂ ನಮಗೆ ಹಿಂದಿರುಗಿಸಿದ್ದೀಯೆ. ಸಮಸ್ತ ಧರ್ಮಗಳ ಏಕಮಾತ್ರ ರಕ್ಷಕನಾದ ನರಸಿಂಹದೇವನೇ! ನಿನಗೆ ನಾವು ನಮಸ್ಕರಿಸುತ್ತೇವೆ. ॥ ೪೪ ॥

ಸಿದ್ಧರು ಹೇಳಿದರು – ಓ ನರಸಿಂಹಸ್ವಾಮಿಯೇ! ಈ ದುಷ್ಟನು ತನ್ನ ಯೋಗ ಮತ್ತು ತಪಸ್ಸಿನ ಬಲದಿಂದ ನಮ್ಮ ಯೋಗಸಿದ್ಧ ಗತಿಗಳನ್ನು ಕಸಿದುಕೊಂಡಿದ್ದನು. ನೀನು ನಿನ್ನ ನಖಗಳಿಂದ ಆ ದುರಹಂಕಾರಿಯನ್ನು ಸೀಳಿಹಾಕಿದೆ. ನಾವೆಲ್ಲರೂ ನಿನ್ನ ಚರಣಾರವಿಂದಗಳಲ್ಲಿ ವಿನಮ್ರರಾಗಿ ನಮಸ್ಕರಿಸುತ್ತಿದ್ದೇವೆ. ॥ ೪೫ ॥

ವಿದ್ಯಾಧರರು ಹೇಳಿದರು – ಈ ಮೂರ್ಖ ಹಿರಣ್ಯಕಶಿಪು ತನ್ನ ಬಲ ಪರಾಕ್ರಮಗಳ ದುರಹಂಕಾರದಿಂದ ಮತ್ತನಾಗಿದ್ದನು. ನಾವುಗಳು ವಿವಿಧ ಧಾರಣೆಗಳಿಂದ ಪಡೆದುಕೊಂಡಿದ್ದ ವಿದ್ಯೆಗಳನ್ನು ಇವನು ವ್ಯರ್ಥಗೊಳಿಸಿದ್ದನು. ನೀನು ಯುದ್ಧದಲ್ಲಿ ಯಜ್ಞಪಶುವಿನಂತೆ ಇವನನ್ನು ನಾಶಗೊಳಿಸಿದೆ. ತನ್ನ ಲೀಲೆಯಿಂದ ನರಸಿಂಹನಾದ ನಿನಗೆ ನಾವು, ನಿತ್ಯ ನಿರಂತರ ವಂದನೆಗಳನ್ನು ಸಲ್ಲಿಸುತ್ತೇವೆ. ॥ ೪೬ ॥

ನಾಗಗಳು ಹೇಳಿದರು – ಈ ಪಾಪಿಯು ನಮ್ಮ ಮಣಿಗಳನ್ನು ಮತ್ತು ನಮ್ಮ ಶ್ರೇಷ್ಠ ಸುಂದರಸ್ತ್ರೀಯರನ್ನು ಕಸಿದುಕೊಂಡಿದ್ದನು. ಇಂದು ಅವನ ಎದೆಯನ್ನು ಸೀಳಿ ನೀನು ನಮ್ಮ ಪತ್ನಿಯರಿಗೆ ಬಹಳ ಆನಂದವನ್ನು ಕೊಟ್ಟಿರುವೆ. ಪ್ರಭೋ! ನಾವು ನಿನಗೆ ನಮಸ್ಕರಿಸುತ್ತೇವೆ. ॥ ೪೭ ॥

ಮನವ ಊಚುಃ

ಮನವೋ ವಯಂ ತವ ನಿದೇಶಕಾರಿಣೋ
ದಿತಿಜೇನ ದೇವ ಪರಿಭೂತಸೇತವಃ ।
ಭವತಾ ಖಲಃ ಸ ಉಪಸಂಹೃತಃ ಪ್ರಭೋ
ಕರವಾಮ ತೇ ಕಿಮನುಶಾಧಿ ಕಿಂಕರಾನ್ ॥ ೪೮ ॥

ಮನುಗಳು ಹೇಳಿದರು – ಓ ದೇವಾಧಿದೇವನೇ ! ನಾವು ನಿನ್ನ ಆಜ್ಞಾಕಾರಿ ಮನುಗಳು. ಈ ದೈತ್ಯನು ನಮ್ಮಗಳ ಧರ್ಮ ಮರ್ಯಾದೆಗಳನ್ನು ಭಂಗಗೊಳಿಸಿಬಿಟ್ಟಿದ್ದನು. ನೀನು ಈ ದುಷ್ಟನನ್ನು ಸಂಹರಿಸಿ ದೊಡ್ಡ ಉಪಕಾರವನ್ನು ಮಾಡಿರುವೆ. ಪ್ರಭೋ ! ನಾವು ನಿನ್ನ ಸೇವಕರಾಗಿದ್ದೇವೆ. ನಿನಗೆ ಏನು ಸೇವೆ ಮಾಡೋಣ ? ಅಪ್ಪಣೆ ಕೊಡಿಸು. ॥ ೪೮ ॥

ಪ್ರಜಾಪತಯ ಊಚುಃ

ಪ್ರಜೇಶಾ ವಯಂ ತೇ ಪರೇಶಾಭಿಸೃಷ್ಟಾ
ನ ಯೇನ ಪ್ರಜಾ ವೈ ಸೃಜಾಮೋ ನಿಷಿದ್ಧಾಃ ।
ಸ ಏಷ ತ್ವಯಾ ಭಿನ್ನವಕ್ಷಾ ನು ಶೇತೇ
ಜಗನ್ಮಂಗಲಂ ಸತ್ತ್ವಮೂರ್ತೇಽವತಾರಃ ॥ ೪೯ ॥

ಪ್ರಜಾಪತಿಗಳು ಹೇಳಿದರು – ಓ ಪರಮೇಶ್ವರಾ ! ನೀನೇ ನಮ್ಮನ್ನು ಪ್ರಜಾಪತಿಗಳನ್ನಾಗಿ ನೇಮಿಸಿದ್ದೆ. ಆದರೆ ಇವನು ತಡೆದುದರಿಂದ ನಾವು ಪ್ರಜೆಗಳನ್ನು ಸೃಷ್ಟಿಮಾಡಲಾಗುತ್ತಿರಲಿಲ್ಲ. ನೀನು ಇವನ ಎದೆಯನ್ನು ಸೀಳಿದಾಗ ಇವನು ಎಂದೆಂದಿಗೂ ನೆಲಕ್ಕೊರಗಿದನು. ಸತ್ತ್ವಮಯ ಮೂರ್ತಿಯನ್ನು ಧರಿಸುವ ಪ್ರಭುವೇ ! ನಿನ್ನ ಈ ಅವತಾರವು ಜಗತ್ತಿನ ಮಂಗಳಕ್ಕಾಗಿಯೇ ಆಗಿದೆ. ॥ ೪೯ ॥

ಗಂಧರ್ವಾ ಊಚುಃ

ವಯಂ ವಿಭೋ ತೇ ನಟನಾಟ್ಯಗಾಯಕಾ
ಯೇನಾತ್ಮಸಾದ್ವೀರ್ಯಬಲೌಜಸಾ ಕೃತಾಃ ।
ಸ ಏಷ ನೀತೋ ಭವತಾ ದಶಾಮಿಮಾಂ
ಕಿಮುತ್ಪಥಸ್ಥಃ ಕುಶಲಾಯ ಕಲ್ಪತೇ ॥ ೫೦ ॥

ಗಂಧರ್ವರು ಹೇಳಿದರು – ಪ್ರಭೋ ! ನಾವು ನಿನಗೆ ಸೇರಿದ ಸಂಗೀತಗಾರರು, ನಿನಗಾಗಿ ನಾಟ್ಯ-ಗೀತ-ವಾದ್ಯಗಳನ್ನು ನುಡಿಸಿ, ಅಭಿನಯಿಸುವ ಸೇವಕರು. ಈ ದೈತ್ಯನು ತನ್ನ ಬಲ-ವೀರ್ಯ-ಪರಾಕ್ರಮಗಳಿಂದ ನಮ್ಮನ್ನು ತನ್ನ ಗುಲಾಮರನ್ನಾಗಿಸಿಕೊಂಡಿದ್ದನು. ಆ ದುಷ್ಟನಿಗೆ ತಕ್ಕ ದುಸ್ಥಿತಿಯನ್ನೇ ಮಾಡಿದೆ. ಕುಮಾರ್ಗದಲ್ಲಿ ನಡೆಯುವವರಿಗೆ ಎಂದಾದರೂ ಕಲ್ಯಾಣ ಉಂಟಾದೀತೇ ! ॥ ೫೦ ॥

ಚಾರಣಾ ಊಚುಃ

ಹರೇ ತವಾಂಘ್ರಿಪಂಕಜಂ ಭವಾಪವರ್ಗಮಾಶ್ರಿತಾಃ ।
ಯದೇಷ ಸಾಧುಹೃಚ್ಛಯಸ್ತ್ವಯಾಸುರಃ ಸಮಾಪಿತಃ
॥ ೫೧ ॥

ಚಾರಣರು ಹೇಳಿದರು – ಪ್ರಭುವೇ ! ಸಜ್ಜನರಿಗೆ ಹೃದಯಶೂಲೆಯಾಗಿದ್ದ ಈ ದುಷ್ಟನನ್ನು ನೀನು ಮುಗಿಸಿಬಿಟ್ಟೆ. ಅದಕ್ಕಾಗಿ ನಾವು ಹುಟ್ಟು-ಸಾವುಗಳ ರೂಪವಾದ ಸಂಸಾರಚಕ್ರದಿಂದ ಬಿಡುಗಡೆಗೊಳಿಸುವಂತಹ ನಿನ್ನ ಈ ಚರಣಾರವಿಂದಗಳಲ್ಲಿ ಶರಣಾಗಿದ್ದೇವೆ. ॥ ೫೧ ॥

ಯಕ್ಷಾ ಊಚುಃ

ವಯಮನುಚರಮುಖ್ಯಾಃ ಕರ್ಮಭಿಸ್ತೇ ಮನೋಜ್ಞೈ-
ಸ್ತ ಇಹ ದಿತಿಸುತೇನ ಪ್ರಾಪಿತಾ ವಾಹಕತ್ವಮ್ ।
ಸ ತು ಜನಪರಿತಾಪಂ ತತ್ಕೃತಂ ಜಾನತಾ ತೇ
ನರಹರ ಉಪನೀತಃ ಪಂಚತಾಂ ಪಂಚವಿಂಶ ॥ ೫೨ ॥

ಯಕ್ಷರು ಹೇಳಿದರು – ಓ ಭಗವಂತನೇ ! ನಾವು ನಮ್ಮ ಶ್ರೇಷ್ಠ ಕರ್ಮಗಳಿಂದ ನಿನ್ನ ಸೇವಕರಲ್ಲಿ ಮುಖ್ಯರೆಂದು ಪರಿಗಣಿಸಲ್ಪಟ್ಟಿದ್ದೆವು. ಆದರೆ ಹಿರಣ್ಯಕಶಿಪು ನಮ್ಮನ್ನು ತನ್ನ ಪಲ್ಲಕ್ಕಿಯನ್ನು ಹೊರುವ ಬೋವಿಗಳಾಗಿಸಿಕೊಂಡಿದ್ದನು. ಪ್ರಕೃತಿಯ ನಿಯಾಮಕ ಪರಮಾತ್ಮನೇ ! ಇದರಿಂದ ನಿನ್ನವರಾದ ನಮಗೆ ಉಂಟಾಗಿದ್ದ ಕಷ್ಟಗಳನ್ನು ತಿಳಿದೇ ನೀನು ಈ ದುಷ್ಟನನ್ನು ಸಂಹಾರಮಾಡಿದೆ. ॥ ೫೨ ॥

ಕಿಂಪುರುಷಾ ಊಚುಃ

ವಯಂ ಕಿಂಪುರುಷಾಸ್ತ್ವಂ ತು ಮಹಾಪುರುಷ ಈಶ್ವರಃ ।
ಅಯಂ ಕುಪುರುಷೋ ನಷ್ಟೋ ಧಿಕ್ಕೃತಃ ಸಾಧುಭಿರ್ಯದಾ
॥ ೫೩ ॥

ಕಿಂಪುರುಷರು ಹೇಳಿದರು – ಪ್ರಭೋ ! ನಾವು ಅತ್ಯಂತ ತುಚ್ಛರಾದ ಕಿಂಪುರುಷರಾಗಿದ್ದೇವೆ. ನೀನು ಸರ್ವಶಕ್ತಿವಂತನಾದ ಮಹಾಪುರುಷನು. ಈ ಕಿಂಪುರುಷನು ಸಾಧುಗಳ ಧಿಕ್ಕಾರಕ್ಕೆ- ತಿರಸ್ಕಾರಕ್ಕೆ ಪಾತ್ರನಾದಾಗ ಆ ಅಸುರಾಧಮನನ್ನು ನೀನು ನಾಶಮಾಡಿಬಿಟ್ಟಿರುವೆ. ॥ ೫೩ ॥

ವೈತಾಲಿಕಾ ಊಚುಃ

ಸಭಾಸು ಸತ್ರೇಷು ತವಾಮಲಂ ಯಶೋ
ಗೀತ್ವಾ ಸಪರ್ಯಾಂ ಮಹತೀಂ ಲಭಾಮಹೇ ।
ಯಸ್ತಾಂ ವ್ಯನೈಷೀದ್ಭೃಶಮೇಷ ದುರ್ಜನೋ
ದಿಷ್ಟ್ಯಾ ಹತಸ್ತೇ ಭಗವನ್ಯಥಾಽಽಮಯಃ ॥ ೫೪ ॥

ವೈತಾಲಿಕರು ಹೇಳಿದರು – ಓ ಭಗವಂತಾ ! ದೊಡ್ಡ-ದೊಡ್ಡ ಸಭೆಗಳಲ್ಲಿ ಮತ್ತು ಜ್ಞಾನಯಜ್ಞಗಳಲ್ಲಿ ನಿನ್ನ ನಿರ್ಮಲ ಕೀರ್ತಿಯನ್ನು ಹಾಡಿ-ಹೊಗಳಿ ನಾವು ಪ್ರತಿಷ್ಠೆ-ಸಂಭಾವನೆಗಳನ್ನು ಪಡೆಯುತ್ತಿದ್ದೆವು. ಈ ದುಷ್ಟನು ನಮ್ಮ ಜೀವನೋಪಾಯವನ್ನೇ ನಾಶಮಾಡಿಬಿಟ್ಟಿದ್ದನು. ಮಹಾರೋಗದಂತೆ ಈ ದುಷ್ಟನನ್ನು ನೀನು ಬೇರುಸಹಿತ ಕಿತ್ತು ಬಿಸಾಡಿದೆ, ಇದು ಎಂತಹ ಸೌಭಾಗ್ಯದ ಮಾತಾಗಿದೆ. ॥ ೫೪ ॥

ಕಿನ್ನರಾ ಊಚುಃ

ವಯಮೀಶ ಕಿನ್ನರಗಣಾಸ್ತವಾನುಗಾ
ದಿತಿಜೇನ ವಿಷ್ಟಿಮಮುನಾನುಕಾರಿತಾಃ ।
ಭವತಾ ಹರೇ ಸ ವೃಜಿನೋಽವಸಾದಿತೋ
ನರಸಿಂಹ ನಾಥ ವಿಭವಾಯ ನೋ ಭವ ॥ ೫೫ ॥

ಕಿನ್ನರರು ಹೇಳಿದರು – ಕಿನ್ನರರಾದ ನಾವು ನಿನ್ನ ಸೇವಕರು. ಈ ದೈತ್ಯನು ನಮ್ಮಿಂದ ಬಿಟ್ಟಿಕೆಲಸವನ್ನು ಮಾಡಿಸುತ್ತಿದ್ದನು. ಭಗವಂತಾ! ನೀನು ಕೃಪೆದೋರಿ ಇಂದು ಈ ಪಾಪಿಯನ್ನು ನಾಶಪಡಿಸಿದೆ. ಪ್ರಭೋ! ನೀನು ಹೀಗೆಯೇ ನಮ್ಮ ಅಭ್ಯುದಯವನ್ನು ಮಾಡುತ್ತಾ ಇರು. ॥ ೫೫ ॥

ವಿಷ್ಣುಪಾರ್ಷದಾ ಊಚುಃ

ಅದ್ಯೈತದ್ಧರಿನರರೂಪಮದ್ಭುತಂ ತೇ
ದೃಷ್ಟಂ ನಃ ಶರಣದ ಸರ್ವಲೋಕಶರ್ಮ ।
ಸೋಽಯಂ ತೇ ವಿಧಿಕರ ಈಶ ವಿಪ್ರಶಪ್ತ-
ಸ್ತಸ್ಯೇದಂ ನಿಧನಮನುಗ್ರಹಾಯ ವಿದ್ಮಃ ॥ ೫೬ ॥

ಭಗವಂತನ ಪಾರ್ಷದರು ಹೇಳಿದರು – ಓ ಶರಣಾಗತ ವತ್ಸಲಾ! ಸಮಸ್ತ ಲೋಕಗಳಿಗೆ ಶಾಂತಿಯನ್ನು ಪ್ರದಾನ ಮಾಡುವಂತಹ ನಿನ್ನ ಈ ಅಲೌಕಿಕ ನರಸಿಂಹರೂಪವನ್ನು ನಾವು ಇಂದೇ ನೋಡಿದೆವು. ಭಗವಂತಾ! ಈ ದೈತ್ಯನು ನಿನ್ನ ಆ ಆಜ್ಞಾಕಾರಿ ಸೇವಕನೇ ಆಗಿದ್ದನು. ಇವನಿಗೆ ಸನಕಾದಿಗಳು ಶಾಪವನ್ನು ಕೊಟ್ಟಿದ್ದರು. ನೀನು ಕೃಪೆಮಾಡಿ ಇವನ ಉದ್ಧಾರಕ್ಕಾಗಿಯೇ ಇವನನ್ನು ವಧಿಸಿದ್ದೀಯೆ ಎಂದೇ ನಾವು ತಿಳಿಯುತ್ತೇವೆ. ॥ ೫೬ ॥

ಎಂಟನೆಯ ಅಧ್ಯಾಯವು ಮುಗಿಯಿತು. ॥ ೮ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಸಪ್ತಮ ಸ್ಕಂಧೇ
ಪ್ರಹ್ಲಾದಾನುಚರಿತೇ ದೈತ್ಯರಾಜವಧೇ ನೃಸಿಂಹಸ್ತವೋ ನಾಮಾಷ್ಟಮೋಽಧ್ಯಾಯಃ ॥ ೮ ॥

ಒಂಭತ್ತನೆಯ ಅಧ್ಯಾಯ

ಪ್ರಹ್ಲಾದನು ಮಾಡಿದ ಶ್ರೀನರಸಿಂಹದೇವರ ಸ್ತುತಿ

ನಾರದ ಉವಾಚ

ಏವಂ ಸುರಾದಯಃ ಸರ್ವೇ ಬ್ರಹ್ಮರುದ್ರಪುರಃಸರಾಃ ।
ನೋಪೈತುಮಶಕನ್ಮನ್ಯುಸಂರಂಭಂ ಸುದುರಾಸದಮ್ ॥ ೧ ॥

ಸಾಕ್ಷಾಚ್ಛ್ರೀಃ ಪ್ರೇಷಿತಾ ದೇವೈರ್ದೃಷ್ಟ್ವಾ ತನ್ಮಹದದ್ಭುತಮ್ ।
ಅದೃಷ್ಟಾಶ್ರುತಪೂರ್ವತ್ವಾತ್ಸಾ ನೋಪೇಯಾಯ ಶಂಕಿತಾ ॥ ೨ ॥

ಪ್ರಹ್ಲಾದಂ ಪ್ರೇಷಯಾಮಾಸ ಬ್ರಹ್ಮಾವಸ್ಥಿತಮಂತಿಕೇ ।
ತಾತ ಪ್ರಶಮಯೋಪೇಹಿ ಸ್ವಪಿತ್ರೇ ಕುಪಿತಂ ಪ್ರಭುಮ್ ॥ ೩ ॥

ತಥೇತಿ ಶನಕೈ ರಾಜನ್ಮಹಾಭಾಗವತೋಽರ್ಭಕಃ ।
ಉಪೇತ್ಯ ಭುವಿ ಕಾಯೇನ ನನಾಮ ವಿಧೃತಾಂಜಲಿಃ ॥ ೪ ॥

ನಾರದರು ಹೇಳಿದರು – ಯುಧಿಷ್ಠಿರನೇ! ಹೀಗೆ ಬ್ರಹ್ಮದೇವರೂ, ರುದ್ರದೇವರೂ ಮೊದಲಾದ ಎಲ್ಲ ದೇವತೆಗಳೂ ಭಗವಾನ್ ನರಸಿಂಹನನ್ನು ಸ್ತೋತ್ರಮಾಡಿದರೂ ಅವನ ಕ್ರೋಧಾವೇಶವನ್ನು ಶಾಂತಗೊಳಿಸಲು ಸಾಧ್ಯವಾಗಲಿಲ್ಲ. ಅವನ ಬಳಿಗೆ ಹೋಗಲೂ ಅವರಿಂದ ಶಕ್ಯವಾಗಲಿಲ್ಲ. ಅತನನ್ನು ಹೊಂದುವುದಂತೂ ಅತಿಕಷ್ಟವಾಗಿತ್ತು. ॥ ೧ ॥ ದೇವತೆಗಳು ಅವನನ್ನು ಶಾಂತಗೊಳಿಸಲು ಸ್ವಯಂ ಲಕ್ಷ್ಮೀದೇವಿಯನ್ನು ಕಳಿಸಿದರು. ಆಕೆಯು ಹೋಗಿ ನರಸಿಂಹಭಗವಂತನ ಆ ಅದ್ಭುತ ಮಹಾನ್‌ರೂಪವನ್ನು ನೋಡಿದಾಗ ಭಯದಿಂದ ಅವಳಿಗೂ ಕೂಡ ಬಳಿಗೆ ಹೋಗಲಾಗಲಿಲ್ಲ. ಅವಳು ತನ್ನ ಸ್ವಾಮಿಯ ಇಂತಹ ಭಯಂಕರ ರೂಪವನ್ನು ಎಂದೂ ನೋಡಿರಲಿಲ್ಲ, ಕೇಳಿರಲಿಲ್ಲ. ॥ ೨ ॥ ಆಗ ಬ್ರಹ್ಮದೇವರು ತನ್ನ ಬಳಿಯಲ್ಲೇ ನಿಂತಿದ್ದ ಪ್ರಹ್ಲಾದನನ್ನು ಕುರಿತು – 'ಮಗು! ನಿನ್ನ ತಂದೆಯ ಮೇಲಲ್ಲವೇ ಭಗವಂತನು ಕುಪಿತನಾಗಿದ್ದನು. ಈಗ ನೀನೇ ಅವನ ಬಳಿಗೆ ಹೋಗಿ ಅವನನ್ನು ಶಾಂತಗೊಳಿಸು' ಎಂದು ಹೇಳಿ ಅವನನ್ನು ಭಗವಂತನ ಬಳಿಗೆ ಕಳಿಸಿದರು. ॥ ೩ ॥ ಪರಮಭಾಗವತ ಶ್ರೇಷ್ಠನಾದ ಪ್ರಹ್ಲಾದನು 'ಅಪ್ಪಣೆ' ಎಂದು ಹೇಳಿ ಮೆಲ್ಲಗೆ ಭಗವಂತನ ಬಳಿಗೆ ಹೋಗಿ ಕೈಜೋಡಿಸಿಕೊಂಡು ಭೂಮಿಯ ಮೇಲೆ ಸಾಷ್ಟಾಂಗ ನಮಸ್ಕಾರಮಾಡಿದನು. ॥ ೪ ॥

ಸ್ವಪಾದಮೂಲೇ ಪತಿತಂ ತಮರ್ಭಕಂ
ವಿಲೋಕ್ಯ ದೇವಃ ಕೃಪಯಾ ಪರಿಪ್ಲುತಃ ।
ಉತ್ಥಾಪ್ಯ ತಚ್ಛೀರ್ಷ್ಣ್ಯದಧಾತ್ಕರಾಂಬುಜಂ
ಕಾಲಾಹಿವಿತ್ರಸ್ತಧಿಯಾಂ ಕೃತಾಭಯಮ್ ॥ ೫ ॥

ಹೀಗೆ ಆ ಬಾಲಕನು ತನ್ನ ಪಾದಮೂಲದಲ್ಲಿ ಅಡ್ಡಬಿದ್ದಿರುವುದನ್ನು ಕಂಡು ದೇವದೇವನ ಹೃದಯವು ಕರುಣೆಯಿಂದ ತುಂಬಿಬಂತು. ಆತನು ಬಾಲಕನನ್ನು ಎಬ್ಬಿಸಿ ಕಾಲಸರ್ಪಕ್ಕೆ ಹೆದರಿದವರಿಗೆ ಅಭಯಪ್ರದಾನವನ್ನು ಮಾಡುವ ತನ್ನ ಕರಕಮಲವನ್ನು ಅವನ ಶಿರದಲ್ಲಿರಿಸಿದನು. ॥ ೫ ॥

ಸ ತತ್ಕರಸ್ಪರ್ಶಧುತಾಖಿಲಾಶುಭಃ
ಸಪದ್ಯಭಿವ್ಯಕ್ತಪರಾತ್ಮದರ್ಶನಃ ।
ತತ್ಪಾದಪದ್ಮಂ ಹೃದಿ ನಿರ್ವೃತೋ ದಧೌ
ಹೃಷ್ಯತ್ತನುಃ ಕ್ಲಿನ್ನಹೃದಶ್ರುಲೋಚನಃ ॥ ೬ ॥

ಭಗವಂತನ ಕರಕಮಲಗಳ ಸ್ಪರ್ಶವಾಗುತ್ತಲೇ ಪ್ರಹ್ಲಾದನಲ್ಲಿ ಉಳಿದಿದ್ದ ಅಲ್ಪ-ಸ್ವಲ್ಪ ಅಶುಭ ಸಂಸ್ಕಾರಗಳು ತೊಳೆದುಹೋದುವು. ಒಡನೆಯೇ ಆತನಿಗೆ ಪರಮಾತ್ಮನ ತತ್ತ್ವದ ಸಾಕ್ಷಾತ್ಕಾರವಾಯಿತು. ಅವನು ಪರಮಪ್ರೇಮದ ಆನಂದದಲ್ಲಿ ಮುಳುಗಿ ಭಗವಂತನ ಚರಣಕಮಲಗಳನ್ನು ತನ್ನ ಹೃದಯದಲ್ಲಿ ಧರಿಸಿಕೊಂಡನು. ಆಗ ಅವನ ಶರೀರವೆಲ್ಲ ಪುಳಕಿತವಾಗಿ, ಹೃದಯದಲ್ಲಿ ಪ್ರೇಮದ ಪ್ರವಾಹ ಹರಿಯತೊಡಗಿತು ಮತ್ತು ಕಣ್ಣುಗಳಿಂದ ಆನಂದಾಶ್ರುಗಳು ಹರಿಯ ತೊಡಗಿತು. ॥ ೬ ॥

ಅಸ್ತೌಷೀದ್ಧರಿಮೇಕಾಗ್ರಮನಸಾ ಸುಸಮಾಹಿತಃ ।
ಪ್ರೇಮಗದ್ಗದಯಾ ವಾಚಾ ತನ್ನ್ಯಸ್ತಹೃದಯೇಕ್ಷಣಃ ॥ ೭ ॥

ಪ್ರಹ್ಲಾದನು ಭಾವತುಂಬಿದ ಹೃದಯ ಮತ್ತು ರೆಪ್ಪೆಮಿಟುಕಿಸದ ಕಣ್ಣುಗಳಿಂದ ಭಗವಂತನನ್ನು ನೋಡುತ್ತಲೇ ಇದ್ದನು. ಭಾವಸಮಾಧಿಯಿಂದ ಸ್ವಯಂ ಏಕಾಗ್ರವಾದ ಮನಸ್ಸಿನಿಂದ ಅವನು ಭಗವಂತನ ಗುಣಗಳನ್ನು ಚಿಂತಿಸುತ್ತಾ ಪ್ರೇಮಗದ್ಗದ ವಾಣಿಯಿಂದ ಹೀಗೆ ಸ್ತುತಿಸಿದನು. ॥ ೭ ॥

ಪ್ರಹ್ಲಾದ ಉವಾಚ

ಬ್ರಹ್ಮಾದಯಃ ಸುರಗಣಾ ಮುನಯೋಽಥ ಸಿದ್ಧಾಃ
ಸತ್ತ್ವೈಕತಾನಮತಯೋ ವಚಸಾಂ ಪ್ರವಾಹೈಃ ।
ನಾರಾಧಿತುಂ ಪುರುಗುಣೈರಧುನಾಪಿ ಪಿಪ್ರುಃ
ಕಿಂ ತೋಷ್ಟುಮರ್ಹತಿ ಸ ಮೇ ಹರಿರುಗ್ರಜಾತೇಃ ॥ ೮ ॥

ಪ್ರಹ್ಲಾದನು ಹೇಳಿದನು – ಬ್ರಹ್ಮಾದಿದೇವತೆಗಳು, ಋಷಿ-ಮುನಿಗಳು, ಸಿದ್ಧಪುರುಷರ ಬುದ್ಧಿಯು ನಿರಂತರ ಸತ್ತ್ವಗುಣದಲ್ಲೇ ನೆಲೆಸಿರುತ್ತದೆ. ಹೀಗಿದ್ದರೂ ಅವರಿಂದ ತಮ್ಮ ಧಾರಾಪ್ರವಾಹ ಸ್ತುತಿಗಳಿಂದ ಮತ್ತು ತಮ್ಮ ನಾನಾ ಗುಣಾತಿಶಯಗಳಿಂದ ನಿನ್ನನ್ನು ಇಲ್ಲಿಯವರೆಗೆ ಸಂತುಷ್ಟಗೊಳಿಸಲಾಗಲಿಲ್ಲ. ಮತ್ತೆ ನಾನಾದರೋ ಘೋರ ಅಸುರ ಜಾತಿಯಲ್ಲಿ ಹುಟ್ಟಿರುವೆನು. ನಾನು ಶ್ರೀಹರಿಯನ್ನು ಸಂತುಷ್ಟಗೊಳಿಸಲು ಸಾಧ್ಯವೇ ? ॥ ೮ ॥

ಮನ್ಯೇ ಧನಾಭಿಜನರೂಪತಪಃಶ್ರುತೌಜ-
ಸ್ತೇಜಃಪ್ರಭಾವಬಲಪೌರುಷಬುದ್ಧಿಯೋಗಾಃ ।
ನಾರಾಧನಾಯ ಹಿ ಭವಂತಿ ಪರಸ್ಯ ಪುಂಸೋ
ಭಕ್ತ್ಯಾ ತುತೋಷ ಭಗವಾನ್ಗಜಯೂಥಪಾಯ ॥ ೯ ॥

ಧನ, ಶ್ರೇಷ್ಠಕುಲ, ರೂಪ, ತಪಸ್ಸು, ವಿದ್ಯೆ, ಓಜಸ್ಸು, ತೇಜಸ್ಸು, ಪ್ರಭಾವ, ಬಲ, ಪೌರುಷ, ಬುದ್ಧಿ ಮತ್ತು ಯೋಗ – ಇವೆಲ್ಲ ಗುಣಗಳು ಪರಮಪುರುಷ ಭಗವಂತನನ್ನು ಸಂತುಷ್ಟಗೊಳಿಸಲು ಸಮರ್ಥವಾಗಲಾರವು ಎಂದೇ ನಾನು ತಿಳಿಯುತ್ತೇನೆ. ಆದರೆ ಭಕ್ತಿಯಿಂದಲೇ ಭಗವಂತನು ಗಜೇಂದ್ರನ ಮೇಲೆಯೂ ಸಂತುಷ್ಟನಾಗಿದ್ದನು. ॥ ೯ ॥

ವಿಪ್ರಾದ್ದ್ವಿಷಡ್ಗುಣಯುತಾದರವಿಂದನಾಭ-
ಪಾದಾರವಿಂದವಿಮುಖಾಚ್ಛ್ವಪಚಂ ವರಿಷ್ಠಮ್ ।
ಮನ್ಯೇ ತದರ್ಪಿತಮನೋವಚನೇಹಿತಾರ್ಥ-
ಪ್ರಾಣಂ ಪುನಾತಿ ಸ ಕುಲಂ ನ ತು ಭೂರಿಮಾನಃ ॥ ೧೦ ॥

ಈ ಹನ್ನೆರಡು ಗುಣಗಳಿಂದ ಕೂಡಿದ ಬ್ರಾಹ್ಮಣನು ಭಗವಂತನಾದ ಕಮಲನಾಭನ ಚರಣಕಮಲಗಳಿಂದ ವಿಮುಖನಾಗಿದ್ದರೆ, ಅವನಿಗಿಂತ ತನ್ನ ಮನ, ವಚನ, ಕರ್ಮ, ಧನ ಮತ್ತು ಪ್ರಾಣಗಳನ್ನು ಭಗವಂತನ ಚರಣಗಳಲ್ಲಿ ಅರ್ಪಿಸಿದ ಚಾಂಡಾಲನೇ ಶ್ರೇಷ್ಠನೆಂದು ನಾನು ತಿಳಿಯುತ್ತೇನೆ. ಏಕೆಂದರೆ, ಆ ಚಾಂಡಾಲನಾದರೋ ತಾನು ಪವಿತ್ರನಾಗುವುದೊಂದಿಗೆ ತನ್ನ ಕುಲವನ್ನೂ ಪವಿತ್ರಗೊಳಿಸುತ್ತಾನೆ. ಆದರೆ ದುರಭಿಮಾನಿಯಾದ ಬ್ರಾಹ್ಮಣನಾದರೋ ತನ್ನನ್ನೂ ಕೂಡ ಪವಿತ್ರವಾಗಿಸಿಕೊಳ್ಳಲಾರನು. ॥ ೧೦ ॥

ನೈವಾತ್ಮನಃ ಪ್ರಭುರಯಂ ನಿಜಲಾಭಪೂರ್ಣೋ
ಮಾನಂ ಜನಾದವಿದುಷಃ ಕರುಣೋ ವೃಣೀತೇ ।
ಯದ್ಯಜ್ಜನೋ ಭಗವತೇ ವಿದಧೀತ ಮಾನಂ
ತಚ್ಚಾತ್ಮನೇ ಪ್ರತಿಮುಖಸ್ಯ ಯಥಾ ಮುಖಶ್ರೀಃ ॥ ೧೧ ॥

ಸ್ವಸ್ವರೂಪದಲ್ಲಿದ್ದು ಅದರ ಅನುಭವದಲ್ಲೇ ಪರಿಪೂರ್ಣನಾಗಿರುವ ಆ ಮಹಾಪ್ರಭುವಿಗೆ ಕ್ಷುದ್ರ ಪುರುಷರು ಮಾಡುವ ಆರಾಧನೆಯ ಅಪೇಕ್ಷೆಯೇನೂ ಇಲ್ಲ. ಆದರೂ ಕರುಣಾಪೂರ್ಣನಾಗಿರುವ ಈತನು ಭಕ್ತರ ಹಿತಕ್ಕಾಗಿ ಅವರು ಮಾಡುವ ಪೂಜೆಯನ್ನು ಸರಳಹೃದಯದಿಂದ

ತಸ್ಮಾದಹಂ ವಿಗತವಿಕ್ಲವ ಈಶ್ವರಸ್ಯ
ಸರ್ವಾತ್ಮನಾ ಮಹಿ ಗೃಣಾಮಿ ಯಥಾಮನೀಷಮ್ ।
ನೀಚೋಽಜಯಾ ಗುಣವಿಸರ್ಗಮನುಪ್ರವಿಷ್ಟಃ
ಪೂಯೇತ ಯೇನ ಹಿ ಪುಮಾನನುವರ್ಣಿತೇನ ॥ ೧೨ ॥

ಸರ್ವೇ ಹ್ಯಮೀ ವಿಧಿಕರಾಸ್ತವ ಸತ್ತ್ವಧಾಮ್ನೋ
ಬ್ರಹ್ಮಾದಯೋ ವಯಮಿವೇಶ ನ ಚೋದ್ವಿಜಂತಃ ।
ಕ್ಷೇಮಾಯ ಭೂತಯ ಉತಾತ್ಮಸುಖಾಯ ಚಾಸ್ಯ
ವಿಕ್ರೀಡಿತಂ ಭಗವತೋ ರುಚಿರಾವತಾರೈಃ ॥ ೧೩ ॥

ತದ್ಯಚ್ಛ ಮನ್ಯುಮಸುರಶ್ಚ ಹತಸ್ತ್ವಯಾದ್ಯ
ಮೋದೇತ ಸಾಧುರಪಿ ವೃಶ್ಚಿಕಸರ್ಪಹತ್ಯಾ ।
ಲೋಕಾಶ್ಚ ನಿರ್ವೃತಿಮಿತಾಃ ಪ್ರತಿಯಂತಿ ಸರ್ವೇ
ರೂಪಂ ನೃಸಿಂಹ ವಿಭಯಾಯ ಜನಾಃ ಸ್ಮರಂತಿ ॥ ೧೪ ॥

ನಾಹಂ ಬಿಭೇಮ್ಯಜಿತ ತೇಽತಿಭಯಾನಕಾಸ್ಯ-
ಜಿಹ್ವಾರ್ಕನೇತ್ರಭ್ರುಕುಟೀರಭಸೋಗ್ರದಂಷ್ಟ್ರಾತ್ ।
ಆಂತ್ರಸ್ರಜಃ ಕ್ಷತಜಕೇಸರಶಂಕುಕರ್ಣಾ-
ನ್ನಿರ್ಹ್ರಾದಭೀತದಿಗಿಭಾದರಿಭಿನ್ನಖಾಗ್ರಾತ್ ॥ ೧೫ ॥

ತ್ರಸ್ತೋಽಸ್ಮ್ಯಹಂ ಕೃಪಣವತ್ಸಲ ದುಃಸಹೋಗ್ರ-
ಸಂಸಾರಚಕ್ರಕದನಾದ್ಗ್ರಸತಾಂ ಪ್ರಣೀತಃ ।
ಬದ್ಧಃ ಸ್ವಕರ್ಮಭಿರುಶತ್ತಮ ತೇಽಂಘ್ರಿಮೂಲಂ
ಪ್ರೀತೋಽಪವರ್ಗಶರಣಂ ಹ್ವಯಸೇ ಕದಾ ನು ॥ ೧೬ ॥

ಸ್ವೀಕರಿಸುತ್ತಾನೆ. ಮುಖವು ಸುಂದರವಾಗಿದ್ದರೆ ಅದು ಕನ್ನಡಿಯಲ್ಲಿ ಕಾಣುವ ತನ್ನ ಪ್ರತಿಬಿಂಬವನ್ನೂ ಸುಂದರವಾಗಿಸುತ್ತದೆ. ಹಾಗೆಯೇ ಶ್ರೀಭಗವಂತನನ್ನು ಸತ್ಯ-ಶಿವ-ಸುಂದರನಾಗಿ ಪೂಜಿಸಿದರೆ ಆ ಸತ್ಯ-ಶಿವ-ಸೌಂದರ್ಯಗಳು ಭಕ್ತನಿಗೂ ಬಂದುಸೇರುತ್ತವೆ. ॥ ೧೧ ॥ ಆದಕ್ಕಾಗಿ ನಾನು ಶ್ರೀಭಗವಂತನನ್ನು ಸ್ತುತಿಸುವುದಕ್ಕೆ ಸರ್ವಥಾ ಅಯೋಗ್ಯನೂ, ಅನಧಿಕಾರಿಯೂ ಆಗಿದ್ದರೂ – ನನ್ನ ಬುದ್ಧಿಶಕ್ತಿಗೆ ಅನುಗುಣವಾಗಿ ಯಾವ ಶಂಕೆಯೂ ಇಲ್ಲದೇ ಈತನ ಮಹಿಮೆಯನ್ನು ಕೊಂಡಾಡುತ್ತಿದ್ದೇನೆ. ಈ ಮಹಿಮೆಯ ಗಾನಕ್ಕೆ ಎಷ್ಟು ಪ್ರಭಾವವಿದೆಯೆಂದರೆ – ಅವಿದ್ಯೆಯಿಂದ ಸಂಸಾರಚಕ್ರದಲ್ಲಿ ಸಿಕ್ಕಿಕೊಂಡಿರುವ ಜೀವನು ತತ್ಕಾಲದಲ್ಲೇ ಪವಿತ್ರವಾಗಿ ಹೋಗುತ್ತಾನೆ. ॥ ೧೨ ॥

ಓ ಭಗವಂತಾ! ನೀನು ಸತ್ತ್ವಗುಣಕ್ಕೆ ಆಶ್ರಯನಾಗಿರುವೆ. ಈ ಬ್ರಹ್ಮಾದಿ ದೇವತೆಗಳೆಲ್ಲರೂ ನಿನ್ನ ಆಜ್ಞಾಕಾರೀ ಭಕ್ತರಾಗಿದ್ದಾರೆ. ಇವರು ನಮ್ಮಂತೆ ಉದ್ವೇಗವಿಲ್ಲದೆ, ದ್ವೇಷವಿಲ್ಲದೆ ನಿನ್ನ ಸೇವೆಯನ್ನು ಮಾಡುತ್ತಾರೆ. ನೀನು ಅತಿಸುಂದರವಾದ ದೊಡ್ಡ-ದೊಡ್ಡ ಅವತಾರಗಳನ್ನು ಮಾಡಿ ಈ ಜಗತ್ತಿಗೆ ಕಲ್ಯಾಣವನ್ನೂ, ಏಳಿಗೆಯನ್ನೂ ಆತ್ಮಾನಂದವನ್ನೂ ಅನುಗ್ರಹಿಸುವುದಕ್ಕಾಗಿಯೇ ಬಗೆ-ಬಗೆಯ ಲೀಲೆಗಳನ್ನು ಮಾಡುತ್ತಿರುವೆ. ಈ ನರಸಿಂಹಾವತಾರವೂ ಅತ್ಯಂತ ದಿವ್ಯವಾದ ಲೀಲೆಯೇ. ॥ ೧೩ ॥ ಯಾವ ಅಸುರನನ್ನು ಕೊಲ್ಲುವುದಕ್ಕಾಗಿ ನೀನು ಕ್ರೋಧ ಗೊಂಡೆಯೋ ಅವನು ವಧಿಸಲ್ಪಟ್ಟನು. ಈಗ ನೀನು ನಿನ್ನ ಕ್ರೋಧವನ್ನು ಶಾಂತಗೊಳಿಸು. ಹಾವು-ಚೇಳುಗಳ ಸಾವಿನಿಂದ ಸಜ್ಜನರೂ ಕೂಡ ಸುಖಿಗಳಾಗುವಂತೆಯೇ ಈ ದೈತ್ಯನ ಸಂಹಾರದಿಂದ ಎಲ್ಲ ಜನರಿಗೂ ತುಂಬಾ ಸುಖವು ಉಂಟಾಗಿದೆ. ಈಗ ಎಲ್ಲರೂ ನಿನ್ನ ಶಾಂತಸ್ವರೂಪವನ್ನು ದರ್ಶಿಸಲು ದಾರಿ ನೋಡುತ್ತಿದ್ದಾರೆ. ಓ ನರಸಿಂಹ! ಭಯದಿಂದ ಮುಕ್ತರಾಗಲು ಭಕ್ತರು ನಿನ್ನ ಈ ರೂಪವನ್ನು ಸ್ಮರಿಸುವರು. ॥ ೧೪ ॥ ಪರಮಾತ್ಮನೇ! ನಿನ್ನ ಮುಖವು ಅತಿಭಯಂಕರವಾಗಿದೆ. ನಾಲಿಗೆಯು ಭೀಕರವಾಗಿ ಹೊರಕ್ಕೆ ಚಾಚಿದೆ. ಕಣ್ಣುಗಳು ಸೂರ್ಯನಂತೆ ಹೊಳೆಯುತ್ತಿವೆ. ಹುಬ್ಬುಗಳು ಮೇಲಕ್ಕೇರಿವೆ. ಕೋರೆದಾಡೆಗಳು ಕೂರಾಗಿವೆ (ತೀಕ್ಷ್ಣವಾಗಿವೆ). ನೀನು ಧರಿಸಿರುವ ಕರುಳಮಾಲೆಗಳು, ರಕ್ತದಿಂದ ತೋಯ್ದಿರುವ ಕೇಸರಗಳು, ಮೇಲಕ್ಕೆ ನಿಮಿರಿನಿಂತಿರುವ ಕಿವಿಗಳು, ದಿಗ್ಗಜಗಳನ್ನು ಭಯಪಡಿಸುವ ಸಿಂಹ ಗರ್ಜನೆ ಮತ್ತು ಶತ್ರುಗಳನ್ನು ಸೀಳಿಹಾಕುವಂತಹ ಉಗುರುಗಳು – ಇವೆಲ್ಲ ಅತಿಭಯಂಕರವಾಗಿದ್ದರೂ ನಾನು ಇವುಗಳನ್ನು ಕಂಡು ಸ್ವಲ್ಪವೂ ಭಯಪಡುವುದಿಲ್ಲ. ॥ ೧೫ ॥ ದೀನಬಂಧುವೇ! ಆದರೆ ನಾನು ಈ ಅಸಹ್ಯವೂ, ಉಗ್ರವೂ ಆದ ಸಂಸಾರಚಕ್ರದಲ್ಲಿ ಬಿದ್ದು ಕಬ್ಬಿನಂತೆ ಅಗಿಯಲ್ಪಡುತ್ತಿರುವುದರಿಂದ ಕರ್ಮಪಾಶಗಳಿಗೆ ಸಿಲುಕಿ ಈ ಭಯಂಕರವಾದ ಜಂತುಗಳ ಮಧ್ಯದಲ್ಲಿ ಬಿದ್ದಿದ್ದೇನೆ. ನನ್ನ ಸ್ವಾಮಿಯೇ! ನೀನು ಪ್ರಸನ್ನನಾಗಿ ಸಮಸ್ತ ಜೀವಿಗಳಿಗೂ ಏಕೈಕ ರಕ್ಷಕವಾದ ಮೋಕ್ಷಸ್ವರೂಪವೇ ಆಗಿರುವ ನಿನ್ನ ಪಾದಾರವಿಂದಗಳಲ್ಲಿ ನನ್ನನ್ನು ಎಂದು ಕರೆಸಿ ಕೊಳ್ಳುವೆ? ॥ ೧೬ ॥ ಪ್ರಭೋ! ಅನಂತ! ನಾನು ಇಷ್ಟರವರೆಗೆ ಹುಟ್ಟಿದ ಎಲ್ಲ ಯೋನಿಗಳಲ್ಲಿಯೂ ಇಷ್ಟಪದಾರ್ಥ

ಯಸ್ಮಾತ್ಪ್ರಿಯಾಪ್ರಿಯವಿಯೋಗಸಂಯೋಗಜನ್ಮ-
ಶೋಕಾಗ್ನಿನಾ ಸಕಲಯೋನಿಷು ದಹ್ಯಮಾನಃ ।
ದುಃಖೌಷಧಂ ತದಪಿ ದುಃಖಮತದ್ಧಿಯಾಹಂ
ಭೂಮನ್ ಭ್ರಮಾಮಿ ವದ ಮೇ ತವ ದಾಸ್ಯಯೋಗಮ್ ॥ ೧೭ ॥

ಸೋಽಹಂ ಪ್ರಿಯಸ್ಯ ಸುಹೃದಃ ಪರದೇವತಾಯಾ
ಲೀಲಾಕಥಾಸ್ತವ ನೃಸಿಂಹ ವಿರಿಂಚಗೀತಾಃ ।
ಅಂಜಸ್ತಿತರ್ಮ್ಯನುಗೃಣನ್ಗುಣವಿಪ್ರಮುಕ್ತೋ
ದುರ್ಗಾಣಿ ತೇ ಪದಯುಗಾಲಯಹಂಸಸಂಗಃ ॥ ೧೮ ॥

ಬಾಲಸ್ಯ ನೇಹ ಶರಣಂ ಪಿತರೌ ನೃಸಿಂಹ
ನಾರ್ತಸ್ಯ ಚಾಗದಮುದನ್ವತಿ ಮಜ್ಜತೋ ನೌಃ ।
ತಪ್ತಸ್ಯ ತತ್ಪ್ರತಿವಿಧಿರ್ಯ ಇಹಾಂಜಸೇಷ್ಟ-
ಸ್ತಾವದ್ವಿಭೋ ತನುಭೃತಾಂ ತ್ವದುಪೇಕ್ಷಿತಾನಾಮ್ ॥ ೧೯ ॥

ಯಸ್ಮಿನ್ಯತೋ ಯರ್ಹಿ ಯೇನ ಚ ಯಸ್ಯ ಯಸ್ಮಾದ್
ಯಸ್ಮೈ ಯಥಾ ಯದುತ ಯಸ್ತ್ವಪರಃ ಪರೋ ವಾ ।
ಭಾವಃ ಕರೋತಿ ವಿಕರೋತಿ ಪೃಥಕ್ಸ್ವಭಾವಃ
ಸಂಚೋದಿತಸ್ತದಖಿಲಂ ಭವತಃ ಸ್ವರೂಪಮ್ ॥ ೨೦ ॥

ಮಾಯಾ ಮನಃ ಸೃಜತಿ ಕರ್ಮಮಯಂ ಬಲೀಯಃ
ಕಾಲೇನ ಚೋದಿತಗುಣಾನುಮತೇನ ಪುಂಸಃ ।
ಛಂದೋಮಯಂ ಯದಜಯಾರ್ಪಿತಷೋಡಶಾರಂ
ಸಂಸಾರಚಕ್ರಮಜ ಕೋಽತಿತರೇತ್ತ್ವದನ್ಯಃ ॥ ೨೧ ॥

ಗಳ ಅಗಲಿಕೆ, ಅನಿಷ್ಟ ಪದಾರ್ಥಗಳ ಸಂಯೋಗದಿಂದ ಉಂಟಾದ ಶೋಕದ ಬೆಂಕಿಯಲ್ಲಿ ಬೇಯುತ್ತಾ ಬಂದಿದ್ದೇನೆ. ಈ ದುಃಖಗಳನ್ನು ಹೋಗಲಾಡಿಸಲು ಬಳಸಿದ ಔಷಧಗಳೂ ದುಃಖರೂಪವೇ ಆಗಿವೆ. ಇದರ ಪರಿಹಾರಕ್ಕಾಗಿ ನಿನ್ನ ಅತ್ಯಂತಿಕ ದಾಸರಾದ ನಾರದಾದಿ ಮಹಾತ್ಮರ ಸಂಗವು ಸದಾಕಾಲ ನನಗೆ ದೊರೆಯುತ್ತಿರಲಿ. ಆದರಿಂದ ನಿನ್ನ ದಿವ್ಯಲೀಲೆಗಳ ಚರ್ಚೆ ನಡೆಯುತ್ತಾ, ಆತ್ಮಸ್ವರೂಪದ ಅರಿವು ಉಂಟಾದೀತು. ॥ ೧೭ ॥ ಪ್ರಭೋ ! ನೀನು ನಮಗೆ ಅತ್ಯಂತ ಪ್ರಿಯನಾದವನು. ಅಹೈತುಕ ಹಿತೈಷಿಯೂ, ಪರಮಮಿತ್ರನೂ ಆಗಿರುವೆ. ನೀನೇ ನಿಜವಾಗಿ ಎಲ್ಲರ ಪರಮಾರಾಧ್ಯನಾಗಿರುವ ಪರದೇವತೆಯು. ಬ್ರಹ್ಮದೇವರಿಂದ ಗಾನಮಾಡಲ್ಪಟ್ಟ ನಿನ್ನ ಲೀಲಾ-ಕಥೆಗಳನ್ನು ಹಾಡುತ್ತಾ ನಾನು ತುಂಬಾ ಸುಲಭವಾಗಿ ರಾಗವೇ ಮುಂತಾದ ಪ್ರಾಕೃತಗುಣಗಳಿಂದ ಮುಕ್ತನಾಗಿ ಈ ಸಂಸಾರದ ಸಂಕಷ್ಟಗಳಿಂದ ದಾಟಿ ಬಿಡುವೆನು. ಏಕೆಂದರೆ, ನಿನ್ನ ಚರಣಯುಗಳಗಳಲ್ಲಿ ವಾಸ ಮಾಡುವ ಭಕ್ತರಾದ ಪರಮಹಂಸ ಮಹಾತ್ಮರ ಸಂಗವಾದರೋ ನನಗೆ ದೊರೆಯುತ್ತಲೇ ಇರುವುದು. ॥ ೧೮ ॥ ಭಗವಾನ್ ನರಹರಿಯೇ ! ಈ ಲೋಕದಲ್ಲಿ ಜೀವಿಗಳ ದುಃಖಗಳನ್ನು ಹೋಗಲಾಡಿಸಲು ಮಾಡಲಾಗುವ ಉಪಾಯಗಳೆಲ್ಲವನ್ನು ನೀನು ಉಪೇಕ್ಷೆ ಮಾಡಿದರೆ ಕ್ಷಣಕಾಲವೂ ಉಳಿಯಲಾರವು. ನೀನು ಉಪೇಕ್ಷೆ ಮಾಡಿದರೆ ತಂದೆ-ತಾಯಿಗಳು ಬಾಲಕನನ್ನು ರಕ್ಷಿಸಲಾರರು, ಔಷಧಿಯು ರೋಗವನ್ನು ಗುಣಪಡಿಸಲಾರದು. ಕಡಲಿನಲ್ಲಿ ಮುಳುಗುತ್ತಿರುವವನನ್ನು ಹಡಗು ಕಾಪಾಡಲಾರದು. ॥ ೧೯ ॥ ಸತ್ತ್ವಾದಿ ಗುಣಗಳಿಂದ ಬೇರೆ-ಬೇರೆ ಸ್ವಭಾವವುಳ್ಳ ಶ್ರೇಷ್ಠ ಬ್ರಹ್ಮಾದಿಗಳು ಮತ್ತು ಕಾಲವೇ ಮುಂತಾದ ಕನಿಷ್ಠ ಕರ್ತೃಗಳಿದ್ದಾರೋ, ಅವರೆಲ್ಲರನ್ನೂ ಪ್ರೇರಿಸುವವನು ನೀನೇ ಆಗಿದ್ದೀಯೆ. ನಿನ್ನ ಪ್ರೇರಣೆಯಿಂದ ಅವರು ಯಾವುದನ್ನು ಆಧರಿಸಿ, ಯಾವ ಕಾರಣದಿಂದ, ಯಾವ ಉಪಕರಣಗಳಿಂದ, ಯಾವ ಸಮಯದಲ್ಲಿ, ಯಾವ ಸಾಧನಗಳಿಂದ, ಯಾವ ಸಹಾಯದಿಂದ, ಯಾವ ಪ್ರಯೋಜನಕ್ಕಾಗಿ, ಯಾವ ವಿಧಿಯಿಂದ, ಏನೇನನ್ನು ಸೃಷ್ಟಿಸುತ್ತಾರೋ ಅಥವಾ ವಿಕಾರಗೊಳಿಸುತ್ತಾರೋ ಅದೆಲ್ಲವೂ ನಿನ್ನ ಸ್ವರೂಪವೇ ಆಗಿದೆ. ॥ ೨೦ ॥

ಓ ಜನ್ಮರಹಿತನಾದ ಪ್ರಭುವೇ ! ಪುರುಷನ ಅನುಮತಿಯಂತೆ ಕಾಲನ ಮೂಲಕ ಗುಣಗಳಲ್ಲಿ ಕ್ಷೋಭೆಯು ಉಂಟಾದಾಗ ಮಾಯೆಯು ಮನಃಪ್ರಧಾನವಾದ ಲಿಂಗಶರೀರವನ್ನು ನಿರ್ಮಾಣ ಮಾಡುತ್ತಾಳೆ. ಈ ಲಿಂಗಶರೀರವು ಬಲಶಾಲಿಯೂ, ಕರ್ಮಮಯವೂ, ಅನೇಕ ನಾಮ-ರೂಪಗಳಲ್ಲಿ ಆಸಕ್ತವೂ, ಛಂದೋಮಯವೂ ಆಗಿದೆ. ಇದೇ ಅವಿದ್ಯೆಯಿಂದ ಕಲ್ಪಿತ ಮನಸ್ಸು, ಹತ್ತು ಇಂದ್ರಿಯಗಳು, ಐದು ತನ್ಮಾತ್ರೆಗಳು – ಈ ಹದಿನಾರು ವಿಕಾರರೂಪವಾದ ಅರಪಟ್ಟಿಗಳಿಂದ ಕೂಡಿದ ಸಂಸಾರಚಕ್ರವಾಗಿದೆ. ನಿನ್ನಿಂದ ಬೇರೆಯಾಗಿದ್ದು ಈ ಮನರೂಪ ಸಂಸಾರಚಕ್ರವನ್ನು ಯಾರುತಾನೇ ದಾಟಿಹೋದಾನು ? ॥ ೨೧ ॥ ಸರ್ವಶಕ್ತಿಯುಳ್ಳ ಪ್ರಭೋ ! ಮಾಯೆಯು ಈ ಹದಿನಾರು ಅರೆಗಳುಳ್ಳ ಸಂಸಾರಚಕ್ರದಲ್ಲಿ ನನ್ನನ್ನು ಕಡಿವ ಕಬ್ಬಿನಂತೆ ಹಿಂಡುತ್ತಿದೆ. ನೀನು ನಿನ್ನ

ಸ ತ್ವಂ ಹಿ ನಿತ್ಯವಿಜಿತಾತ್ಮಗುಣಃ ಸ್ವಧಾಮ್ನಾ
ಕಾಲೋ ವಶೀಕೃತವಿಸೃಜ್ಯ ವಿಸರ್ಗಶಕ್ತಿಃ ।
ಚಕ್ರೇ ವಿಸೃಷ್ಟಮಜಯೇಶ್ವರ ಷೋಡಶಾರೇ
ನಿಷ್ಪೀಡ್ಯಮಾನಮುಪಕರ್ಷ ವಿಭೋ ಪ್ರಪನ್ನಮ್ ॥ ೨೨ ॥

ದೃಷ್ಟಾ ಮಯಾ ದಿವಿ ವಿಭೋಽಖಿಲಧಿಷ್ಣ್ಯಪಾನಾ-
ಮಾಯುಃ ಶ್ರಿಯೋ ವಿಭವ ಇಚ್ಛತಿ ಯಾನ್ ಜನೋಽಯಮ್ ।
ಯೇಽಸ್ಮತ್ಪಿತುಃ ಕುಪಿತಹಾಸವಿಜೃಂಭಿತಭ್ರೂ-
ವಿಸ್ಫೂರ್ಜಿತೇನ ಲುಲಿತಾಃ ಸ ತು ತೇ ನಿರಸ್ತಃ ॥ ೨೩ ॥

ತಸ್ಮಾದಮೂಸ್ತನುಭೃತಾಮಹಮಾಶಿಷೋಽಜ್ಞ
ಆಯುಃ ಶ್ರಿಯಂ ವಿಭವಮೈಂದ್ರಿಯಮಾವಿರಿಂಚಾತ್ ।
ನೇಚ್ಛಾಮಿ ತೇ ವಿಲುಲಿತಾನುರುವಿಕ್ರಮೇಣ
ಕಾಲಾತ್ಮನೋಪನಯ ಮಾಂ ನಿಜಭೃತ್ಯಪಾರ್ಶ್ವಮ್ ॥ ೨೪ ॥

ಕುತ್ರಾಶಿಷಃ ಶ್ರುತಿಸುಖಾ ಮೃಗತೃಷ್ಣಿರೂಪಾಃ
ಕ್ವೇದಂ ಕಲೇವರಮಶೇಷರುಜಾಂ ವಿರೋಹಃ ।
ನಿರ್ವಿದ್ಯತೇ ನ ತು ಜನೋ ಯದಪೀತಿ ವಿದ್ವಾನ್
ಕಾಮಾನಲಂ ಮಧುಲವೈಃ ಶಮಯನ್ ದುರಾಪೈಃ ॥ ೨೫ ॥

ಕ್ವಾಹಂ ರಜಃಪ್ರಭವ ಈಶ ತಮೋಽಧಿಕೇಽಸ್ಮಿನ್
ಜಾತಃ ಸುರೇತರಕುಲೇ ಕ್ವ ತವಾನುಕಂಪಾ ।
ನ ಬ್ರಹ್ಮಣೋ ನ ತು ಭವಸ್ಯ ನ ವೈ ರಮಾಯಾ
ಯನ್ಮೇಽರ್ಪಿತಃ ಶಿರಸಿ ಪದ್ಮಕರಃ ಪ್ರಸಾದಃ ॥ ೨೬ ॥

ನೈಷಾ ಪರಾವರಮತಿರ್ಭವತೋ ನನು ಸ್ಯಾ-
ಜ್ಜಂತೋರ್ಯಥಾಽಽತ್ಮಸುಹೃದೋ ಜಗತಸ್ತಥಾಪಿ ।
ಸಂಸೇವಯಾ ಸುರತರೋರಿವ ತೇ ಪ್ರಸಾದಃ
ಸೇವಾನುರೂಪಮುದಯೋ ನ ಪರಾವರತ್ವಮ್ ॥ ೨೭ ॥

ಚೈತನ್ಯಶಕ್ತಿಯಾದ ಬುದ್ಧಿಯು ಸಮಸ್ತ ಗುಣಗಳನ್ನು ಸದಾ ಗೆದ್ದವನಾಗಿ, ಕಾಲರೂಪದಿಂದ ಸಾಧ್ಯ-ಸಾಧನಗಳೆಲ್ಲವನ್ನೂ ಸ್ವಾಧೀನದಲ್ಲಿಟ್ಟುಕೊಂಡಿರುವವನು. ಇಂತಹ ನಿನ್ನನ್ನು ನಾನು ಶರಣು ಹೊಂದಿರುವೆನು. ನನ್ನನ್ನು ಈ ಮಾಯಾಚಕ್ರದಿಂದ ದಾಟಿಸಿ ನಿನ್ನ ಸನ್ನಿಧಿಗೆ ಸೆಳೆದುಕೋ ಸ್ವಾಮಿ! ॥ ೨೨ ॥ ಓ ಭಗವಂತಾ! ಸಂಸಾರದ ಜನರು ಯಾವುದನ್ನು ಪಡೆಯಲು ಹಾತೊರೆಯುತ್ತಿರುತ್ತಾರೋ ಆ ಸ್ವರ್ಗದಲ್ಲಿ ಸಿಗಬಹುದಾದ ಸಮಸ್ತ ಲೋಕಪಾಲರ ಆಯುಸ್ಸು, ಸಂಪತ್ತು, ಐಶ್ವರ್ಯ ಎಲ್ಲವನ್ನೂ ನಾನು ನೋಡಿಯಾಯಿತು. ನನ್ನ ತಂದೆಯು ಸ್ವಲ್ಪ ಕೋಪಗೊಂಡು ನಕ್ಕಾಗ, ಆತನು ಹುಬ್ಬುಗಳನ್ನು ಸ್ವಲ್ಪ ಓರೆಯಾಗಿಸಿದರೆ – ಅವರೆಲ್ಲರೂ ಚೆಲ್ಲಾಪಿಲ್ಲಿಯಾಗಿ ಚದುರಿಹೋಗುತ್ತಿದ್ದರು. ಅಂತಹ ಮಹಾ ಪರಾಕ್ರಮಶಾಲಿಯಾದ ನನ್ನ ತಂದೆಯನ್ನೇ ನೀನು ಸಂಹಾರ ಮಾಡಿಬಿಟ್ಟೆ. ॥ ೨೩ ॥ ಪ್ರಪಂಚದ ಜನರು ಬಯಸುವಂತಹ ಬ್ರಹ್ಮಲೋಕದವರೆಗಿನ ಆಯುಸ್ಸು, ಸಂಪತ್ತು, ಐಶ್ವರ್ಯ, ಇಂದ್ರಿಯಗಳ ಭೋಗ – ಇವು ಯಾವುದನ್ನೂ ನಾನು ಬಯಸುವುದಿಲ್ಲ. ಏಕೆಂದರೆ, ನೀನು ಮಹಾಬಲಶಾಲಿಯಾದ ಕಾಲನ ರೂಪವನ್ನು ಧರಿಸಿ ಅವೆಲ್ಲವನ್ನೂ ಕಬಳಿಸುವೆ ಎಂಬುದು ನನಗೆ ಗೊತ್ತು. ಅದಕ್ಕಾಗಿ ನಿನ್ನ ಸೇವಕರ ಸನ್ನಿಧಿಗೆ ನನ್ನನ್ನು ಕರೆದುಕೊಂಡು ಹೋಗು. ॥ ೨೪ ॥ ವಿಷಯ ಸುಖಭೋಗಗಳ ಮಾತುಗಳು ಕೇಳುವುದಕ್ಕೇನೋ ಚೆನ್ನಾಗಿರುತ್ತವೆ. ಆದರೆ ವಾಸ್ತವವಾಗಿ ಅವು ಬಿಸಿಲ್ಗುದುರೆಯ ನೀರಿನಂತೆ ಆಗಿವೆ. ಅವುಗಳನ್ನು ಭೋಗಿಸಲು ಸಾಧನವಾದ ಶರೀರವಾದರೋ ಎಲ್ಲ ರೋಗಗಳಿಗೆ ನೆಲೆವೀಡಾಗಿದೆ. ಇವೆರಡೂ ಕ್ಷಣಭಂಗುರವೂ ಅಸಾರವೂ ಎಂದು ತಿಳಿದಿದ್ದರೂ ಕೂಡ ಮನುಷ್ಯನಿಗೆ ಇವುಗಳಲ್ಲಿ ವೈರಾಗ್ಯ ಉಂಟಾಗುವುದಿಲ್ಲ. ಆತನು ಅತಿಕಷ್ಟದಿಂದ ದೊರೆಯುವ ವಿಷಯಭೋಗಗಳ ಸಣ್ಣ-ಪುಟ್ಟ ಸಿಹಿಜೇನಿನ ತೊಟ್ಟುಗಳಿಂದ ತನ್ನ ಕಾಮವೆಂಬ ಅಗ್ನಿಯನ್ನು ಆರಿಸಲು ಪ್ರಯತ್ನಿಸುತ್ತಿದ್ದಾನೆ. ॥ ೨೫ ॥ ಪ್ರಭೋ! ತಮೋಗುಣೀ ಅಸುರ ವಂಶದಲ್ಲಿ ರಜೋಗುಣದಿಂದ ಕೂಡಿ ಜನಿಸಿದ ನಾನೆಲ್ಲಿ? ನಿನ್ನ ಪರಮಶ್ರೇಷ್ಠವಾದ ಕೃಪೆಯೆಲ್ಲಿ? ಎಂತಹ ಧನ್ಯನು ನಾನು! ಬ್ರಹ್ಮದೇವರು, ಶಂಕರಪ್ರಭು, ಲಕ್ಷ್ಮೀದೇವಿ – ಇವರ ಶಿರಸ್ಸಿನ ಮೇಲೆ ಇರಿಸದೇ ಇದ್ದ ಸಕಲ ಸಂತಾಪಹರವಾದ ನಿನ್ನ ಅನುಗ್ರಹ ಹಸ್ತಪದ್ಮವನ್ನು ನನ್ನ ತಲೆಯ ಮೇಲೆ ಇರಿಸಿದೆಯಲ್ಲಾ! ॥ ೨೬ ॥ ನೀನು ಎಲ್ಲರಿಗೂ ಆತ್ಮನಾಗಿ ಎಲ್ಲರಿಗೂ ನಿಷ್ಕಾರಣ ಪ್ರೇಮಿಯಾಗಿದ್ದೀಯೆ. ಆದುದರಿಂದ ಸಂಸಾರಿ ಜೀವಿಗಳಲ್ಲಿರುವಂತೆ ನಿನ್ನಲ್ಲಿ ಮೇಲು-ಕೀಳು ಎಂಬ ಭೇದಭಾವನೆಯಿಲ್ಲ. ಆದರೂ ನೀನು ಕಲ್ಪವೃಕ್ಷದಂತೆ ಸೇವೆ ಮಾಡುವುದರಲ್ಲಿ ತಾನೇ ಕರುಣೆ-ಅನುಗ್ರಹವನ್ನು ಹರಿಸುವೆ. ತಮ್ಮ-ತಮ್ಮ ಸೇವೆಗೆ ಅನುಗುಣವಾಗಿ ಜನರು ನಿನ್ನ ಅನುಗ್ರಹವನ್ನು ಸಂಪಾದಿಸಿರುವರು. ಆ ಅನುಗ್ರಹಕ್ಕೆ ಜಾತಿ, ಕುಲ, ವಿದ್ಯೆ ಮುಂತಾದವುಗಳಿಂದ ಬರುವ ಮೇಲು-ಕೀಳು ಭಾವನೆಗಳು ಕಾರಣವಾಗುವುದಿಲ್ಲ. ॥ ೨೭ ॥

ಏವಂ ಜನಂ ನಿಪತಿತಂ ಪ್ರಭವಾಹಿಕೂಪೇ
ಕಾಮಾಭಿಕಾಮಮನು ಯಃ ಪ್ರಪತನ್ಪ್ರಸಂಗಾತ್ ।
ಕೃತ್ವಾಽಽತ್ಮಸಾತ್ಸುರರ್ಷಿಣಾ ಭಗವನ್ಗೃಹೀತಃ
ಸೋಽಹಂ ಕಥಂ ನು ವಿಸೃಜೇ ತವ ಭೃತ್ಯಸೇವಾಮ್ ॥ ೨೮ ॥

ಮತ್ಪ್ರಾಣರಕ್ಷಣಮನಂತ ಪಿತುರ್ವಧಶ್ಚ
ಮನ್ಯೇ ಸ್ವಭೃತ್ಯಋಷಿವಾಕ್ಯಮೃತಂ ವಿಧಾತುಮ್ ।
ಖಡ್ಗಂ ಪ್ರಗೃಹ್ಯ ಯದವೋಚದಸದ್ವಿಧಿತ್ಸು-
ಸ್ತ್ವಾಮೀಶ್ವರೋ ಮದಪರೋಽವತು ಕಂ ಹರಾಮಿ ॥ ೨೯ ॥

ಏಕಸ್ತ್ವಮೇವ ಜಗದೇತದಮುಷ್ಯ ಯತ್ತ್ವ-
ಮಾದ್ಯಂತಯೋಃ ಪೃಥಗವಸ್ಯಸಿ ಮಧ್ಯತಶ್ಚ ।
ಸೃಷ್ಟ್ವಾ ಗುಣವ್ಯತಿಕರಂ ನಿಜಮಾಯಯೇದಂ
ನಾನೇವ ತೈರವಸಿತಸ್ತದನುಪ್ರವಿಷ್ಟಃ ॥ ೩೦ ॥

ತ್ವಂ ವಾ ಇದಂ ಸದಸದೀಶ ಭವಾಂಸ್ತತೋಽನ್ಯೋ
ಮಾಯಾ ಯದಾತ್ಮಪರಬುದ್ಧಿರಿಯಂ ಹ್ಯಪಾರ್ಥಾ ।
ಯದ್ಯಸ್ಯ ಜನ್ಮ ನಿಧನಂ ಸ್ಥಿತಿರೀಕ್ಷಣಂ ಚ
ತದ್ವೈ ತದೇವ ವಸುಕಾಲವದಷ್ಟಿತರ್ವೋಃ ॥ ೩೧ ॥

ನ್ಯಸ್ಯೇದಮಾತ್ಮನಿ ಜಗದ್ವಿಲಯಾಂಬುಮಧ್ಯೇ
ಶೇಷೇಽತ್ಮನಾ ನಿಜಸುಖಾನುಭವೋ ನಿರೀಹಃ ।
ಯೋಗೇನ ಮೀಲಿತದೃಗಾತ್ಮನಿಪೀತನಿದ್ರ-
ಸ್ತುರ್ಯೇ ಸ್ಥಿತೋ ನ ತು ತಮೋ ನ ಗುಣಾಂಶ್ಚ ಯುಂಕ್ಷೇ ॥ ೩೨ ॥

ತಸ್ಯೈವ ತೇ ವಪುರಿದಂ ನಿಜಕಾಲಶಕ್ತ್ಯಾ
ಸಂಚೋದಿತಪ್ರಕೃತಿಧರ್ಮಣ ಆತ್ಮಗೂಢಮ್ ।
ಅಂಭಸ್ಯನಂತಶಯನಾದ್ವಿರಮತ್ಸಮಾಧೇ-
ರ್ನಾಭೇರಭೂತ್ಸ್ವಕಣಿಕಾವಟವನ್ಮಹಾಬ್ಜಮ್ ॥ ೩೩ ॥

ಓ ಭಗವಂತನೇ! ಈ ಸಂಸಾರವೆಂಬುದು ಒಂದು ಕತ್ತಲೆ ತುಂಬಿದ ಬಾವಿಯಾಗಿದೆ. ಇದರಲ್ಲಿ ಕಾಲರೂಪೀ ಸರ್ಪವು ಕಚ್ಚಲು ಸದಾ ಸಿದ್ಧವಾಗಿರುವುದು. ವಿಷಯಭೋಗಗಳನ್ನು ಬಯಸುವ ಜನರು ಇದರಲ್ಲೇ ಬಿದ್ದಿರುವರು. ನಾನೂ ಕೂಡ ಪ್ರಸಂಗವಶಾತ್ ಅವರ ಹಿಂದೆ ಅದರಲ್ಲೇ ಬೀಳುವವನಾಗಿದ್ದೆ. ಆದರೆ ಭಗವಂತಾ! ದೇವಋಷಿ ನಾರದರು ನನ್ನನ್ನು ತನ್ನವನಾಗಿಸಿಕೊಂಡು ಅದರಿಂದ ರಕ್ಷಿಸಿದರು. ಹೀಗಿರುವಾಗ ನಾನು ನಿನ್ನ ಭಕ್ತಜನರ ಸೇವೆಯನ್ನು ಹೇಗೆ ತಾನೇ ಬಿಟ್ಟೇನು? ॥ ೨೮ ॥ ಓ ಅನಂತಪ್ರಭುವೇ! ನನ್ನ ತಂದೆಯು ಅಸತ್ಕಾರ್ಯವನ್ನು ಮಾಡುವುದಕ್ಕಾಗಿ ನಡುಕಟ್ಟಿಕೈಯಲ್ಲಿ ಖಡ್ಗವನ್ನು ಧರಿಸಿಕೊಂಡು – 'ಎಲವೋ! ನನ್ನನ್ನು ಬಿಟ್ಟು ಬೇರೆ ದೇವರು ಇದ್ದರೆ ನಿನ್ನನ್ನು ಅವನು ಕಾಪಾಡಲೀ. ನಾನು ನಿನ್ನ ತಲೆಯನ್ನು ಕೊಚ್ಚಿಹಾಕುತ್ತೇನೆ' ಎಂದು ಹೇಳಿದಾಗ, ನೀನು ನನ್ನ ಪ್ರಾಣಗಳನ್ನು ರಕ್ಷಿಸಿ, ನನ್ನ ತಂದೆಯನ್ನು ವಧಿಸಿದೆ. ನೀನು ನಿನ್ನ ಭೃತ್ಯರಾದ ಸನಕಾದಿ ಮಹರ್ಷಿಗಳ ಮಾತನ್ನು ಈಡೇರಿಸಿ ಸತ್ಯಗೊಳಿಸುವುದಕ್ಕಾಗಿಯೇ ಹಾಗೆ ಮಾಡಿದೆ ಎಂದು ಭಾವಿಸುತ್ತೇನೆ. ॥ ೨೯ ॥

ಓ ಭಗವಂತನೇ! ಈ ಸಂಪೂರ್ಣ ಜಗತ್ತೆಲ್ಲವೂ ನೀನೊಬ್ಬನೇ ಆಗಿದ್ದೀಯೆ. ಎಲ್ಲವೂ ನಿನ್ನ ವಿಸ್ತಾರವೇ ಆಗಿದೆ. ಇದರ ಆದಿಯಲ್ಲಿಯೂ, ಅಂತ್ಯದಲ್ಲಿಯೂ, ಮಧ್ಯದಲ್ಲಿಯೂ ನೀನೇ ಇರುತ್ತಿದ್ದೀಯೆ. ನಿನ್ನ ಮಾಯಾಶಕ್ತಿಯಿಂದ ಈ ತ್ರಿಗುಣಾತ್ಮಕವಾದ ಜಗತ್ತನ್ನು ಸೃಷ್ಟಿಮಾಡಿ ಅದರ ಒಳಹೊಕ್ಕು ಒಬ್ಬನೇ ಆಗಿದ್ದರೂ ನಾನಾ ರೂಪಗಳಲ್ಲಿರುವಂತೇ ತೋರುತ್ತಿರುವೆ. ॥ ೩೦ ॥ ಭಗವಂತಾ! ಕಾರ್ಯ-ಕಾರಣರೂಪದಿಂದ ಕಂಡುಬರುವುದೆಲ್ಲವೂ ನೀನೇ ಆಗಿರುವೆ ಮತ್ತು ಇದಕ್ಕಿಂತ ಬೇರೆಯಾಗಿರುವ ಪರತತ್ತ್ವವೂ ನೀನೇ ಆಗಿರುವೆ. ತಾನು – ಬೇರೆಯವನು ಎಂಬ ಭೇದಭಾವವೂ ಅರ್ಥಹೀನ ಶಬ್ದಗಳ ಮಾಯೆಯೇ ಆಗಿದೆ. ಏಕೆಂದರೆ, ಯಾರಿಂದ, ಯಾವುದಕ್ಕೆ ಜನ್ಮ, ಸ್ಥಿತಿ, ಲಯ ಮತ್ತು ಪ್ರಕಾಶಗಳು ಉಂಟಾಗುತ್ತವೋ, ಅದು ಅದರ ಸ್ವರೂಪವೇ ಆಗಿರುತ್ತದೆ. ಬೀಜ ಮತ್ತು ವೃಕ್ಷ ಕಾರ್ಯ ಹಾಗೂ ಕಾರಣ ದೃಷ್ಟಿಯಿಂದ ಭಿನ್ನವಾಗಿದ್ದರೂ ಗಂಧ, ತನ್ಮಾತ್ರೆಯ ದೃಷ್ಟಿಯಿಂದ ಎರಡೂ ಒಂದೇ ಆಗಿದೆ. ॥ ೩೧ ॥

ಓ ಭಗವಂತನೇ! ನೀನು ಈ ಇಡೀ ವಿಶ್ವವನ್ನು ತನ್ನಲ್ಲಿಯೇ ಸೇರಿಸಿಕೊಂಡು ಆತ್ಮಸುಖವನ್ನು ಅನುಭವಿಸುತ್ತಾ ನಿಷ್ಕ್ರಿಯನಾಗಿ ಪ್ರಳಯಜಲದಲ್ಲಿ ಪವಡಿಸುವೆ. ಆಗ ತನ್ನ ಸ್ವಯಂಸಿದ್ಧ ಯೋಗದಿಂದ ಬಾಹ್ಯದೃಷ್ಟಿಯನ್ನು ಮುಚ್ಚಿ ನೀನು ನಿನ್ನ ಸ್ವರೂಪಪ್ರಕಾಶದಲ್ಲಿ ನಿದ್ರೆಯನ್ನು ಲಯಗೊಳಿಸಿ, ತುರೀಯವಾದ ಪರಬ್ರಹ್ಮಪದದಲ್ಲಿ ನೆಲೆಸಿರುವೆ. ಆ ಸಮಯದಲ್ಲಿ ನೀನು ತಮೋಗುಣದಿಂದ ಕೂಡಿರುವುದಿಲ್ಲ ಹಾಗೂ ವಿಷಯಗಳನ್ನು ಸ್ವೀಕರಿಸುವುದಿಲ್ಲ. ॥ ೩೨ ॥ ನೀನು ನಿನ್ನ ಕಾಲ ಶಕ್ತಿಯಿಂದ ಪ್ರಕೃತಿಯ ಗುಣಗಳನ್ನು ಪ್ರೇರಿಸುವುದರಿಂದ ಈ ಬ್ರಹ್ಮಾಂಡವೂ ನಿನ್ನ ಶರೀರವೇ ಆಗಿದೆ. ಸೃಷ್ಟಿಗೆ ಮೊದಲು ಇದು ನಿನ್ನಲ್ಲಿಯೇ ಲೀನವಾಗಿತ್ತು. ಪ್ರಳಯ ಕಾಲದ ಜಲದಲ್ಲಿ ಶೇಷಶಯ್ಯೆಯಲ್ಲಿ ಪವಡಿಸಿದ ನೀನು ಯೋಗನಿದ್ರೆಯ ಸಮಾಧಿಯನ್ನು ತ್ಯಜಿಸಿದಾಗ ಆಲದ ಬೀಜದಿಂದ ವಿಶಾಲವಾದ ಆಲದ ಮರವು ಹೊರಬರುವಂತೆ ನಿನ್ನ ನಾಭಿಯಿಂದ ಬ್ರಹ್ಮಾಂಡ ಕಮಲವು ಉತ್ಪನ್ನವಾಯಿತು. ॥ ೩೩ ॥

ತತ್ಸಂಭವಃ ಕವಿರತೋಽನ್ಯದಪಶ್ಯಮಾನ-
ಸ್ತ್ವಾಂ ಬೀಜಮಾತ್ಮನಿ ತತಂ ಸ್ವಬಹಿರ್ವಿಚಿಂತ್ಯ ।
ನಾವಿಂದದಬ್ದಶತಮಪ್ಸು ನಿಮಜ್ಜಮಾನೋ
ಜಾತೇಽಂಕುರೇ ಕಥಮು ಹೋಪಲಭೇತ ಬೀಜಮ್ ॥ ೩೪ ॥

ಸ ತ್ವಾತ್ಮಯೋನಿರತಿವಿಸ್ಮಿತ ಆಶ್ರಿತೋಽಬ್ಜಂ
ಕಾಲೇನ ತೀವ್ರತಪಸಾ ಪರಿಶುದ್ಧಭಾವಃ ।
ತ್ವಾಮಾತ್ಮನೀಶ ಭುವಿ ಗಂಧಮಿವಾತಿಸೂಕ್ಷ್ಮಂ
ಭೂತೇಂದ್ರಿಯಾಶಯಮಯೇ ವಿತತಂ ದದರ್ಶ ॥ ೩೫ ॥

ಏವಂ ಸಹಸ್ರವದನಾಂಘ್ರಿಶಿರಃಕರೋರು-
ನಾಸಾಸ್ಯಕರ್ಣನಯನಾಭರಣಾಯುಧಾಢ್ಯಮ್ ।
ಮಾಯಾಮಯಂ ಸದುಪಲಕ್ಷಿತಸನ್ನಿವೇಶಂ
ದೃಷ್ಟ್ವಾ ಮಹಾಪುರುಷಮಾಪ ಮುದಂ ವಿರಿಂಚಃ ॥ ೩೬ ॥

ತಸ್ಮೈ ಭವಾನ್ಹಯಶಿರಸ್ತನುವಂ ಚ ಬಿಭ್ರ-
ದ್ವೇದದ್ರುಹಾವತಿಬಲೌ ಮಧುಕೈಟಭಾಖ್ಯೌ ।
ಹತ್ವಾಽನಯಚ್ಛ್ರುತಿಗಣಾಂಸ್ತು ರಜಸ್ತಮಶ್ಚ
ಸತ್ತ್ವಂ ತವ ಪ್ರಿಯತಮಾಂ ತನುಮಾಮನಂತಿ ॥ ೩೭ ॥

ಇತ್ಥಂ ನೃತಿರ್ಯಗೃಷಿದೇವಝಷಾವತಾರೈ-
ರ್ಲೋಕಾನ್ವಿಭಾವಯಸಿ ಹಂಸಿ ಜಗತ್ಪ್ರತೀಪಾನ್ ।
ಧರ್ಮಂ ಮಹಾಪುರುಷ ಪಾಸಿ ಯುಗಾನುವೃತ್ತಂ
ಛನ್ನಃ ಕಲೌ ಯದಭವಸ್ತ್ರಿಯುಗೋಽಥ ಸ ತ್ವಮ್ ॥ ೩೮ ॥

ನೈತನ್ಮನಸ್ತವ ಕಥಾಸು ವಿಕುಂಠನಾಥ
ಸಂಪ್ರೀಯತೇ ದುರಿತದುಷ್ಟಮಸಾಧು ತೀವ್ರಮ್ ।
ಕಾಮಾತುರಂ ಹರ್ಷಶೋಕಭಯೈಷಣಾರ್ತಂ
ತಸ್ಮಿನ್ಕಥಂ ತವ ಗತಿಂ ವಿಮೃಶಾಮಿ ದೀನಃ ॥ ೩೯ ॥

ಅದರಲ್ಲಿ ಸೂಕ್ಷ್ಮದರ್ಶಿಯಾದ ಬ್ರಹ್ಮದೇವರು ಪ್ರಕಟಗೊಂಡರು. ಅವರಿಗೆ ಕಮಲವಲ್ಲದೆ ಬೇರೆ ಏನೂ ಕಾಣಿಸದಿದ್ದಾಗ ತನ್ನಲ್ಲೇ ಬೀಜರೂಪದಿಂದ ವ್ಯಾಪ್ತನಾದ ನಿನ್ನನ್ನು ತಿಳಿಯದೇ ಹೋದರು. ನಿನ್ನನ್ನು ತಮ್ಮಿಂದ ಹೊರಗಿನವನು ಎಂದು ಭಾವಿಸಿ ನೀರಿನೊಳಗೆ ಮುಳುಗಿ ನೂರು ವರ್ಷಗಳವರೆಗೆ ಹುಡುಕುತ್ತಲೇ ಇದ್ದರು. ಆದರೆ ಅಲ್ಲಿ ಅವರಿಗೆ ಏನೂ ಸಿಗಲಿಲ್ಲ. ಹೇಗೆ ತಾನೇ ಸಿಕ್ಕೀತು ? ಬೀಜವು ಮೊಳೆತು ಬೆಳೆದ ಬಳಿಕ ಅದರಲ್ಲಿ ವ್ಯಾಪಿಸಿಕೊಂಡಿರುವ ಬೀಜವನ್ನು ಯಾರಾದರೂ ಹೊರಗೆ ಬೇರೆಯಾಗಿ ಹೇಗೆ ನೋಡಬಲ್ಲರು ? ॥ ೩೪ ॥ ಬ್ರಹ್ಮದೇವರಿಗೆ ತುಂಬಾ ಆಶ್ಚರ್ಯವಾಯಿತು. ಅವರು ಸೋತು ಹೋಗಿ ಕಮಲದ ಮೇಲೆ ಬಂದು ಕುಳಿತರು. ಬಹಳ ಕಾಲ ಕಳೆದ ಬಳಿಕ ತೀವ್ರವಾದ ತಪಸ್ಸನ್ನು ಮಾಡಿದ್ದರಿಂದ ಅವರ ಹೃದಯವು ಪರಿಶುದ್ಧವಾದಾಗ ಅವರಿಗೆ ಭೂತ, ಇಂದ್ರಿಯಗಳು ಮತ್ತು ಅಂತಃಕರಣರೂಪವಾದ ತನ್ನ ಶರೀರದಲ್ಲಿಯೇ ಹಾಸುಹೊಕ್ಕಾಗಿ ತುಂಬಿಕೊಂಡಿರುವ ನಿನ್ನ ಸೂಕ್ಷ್ಮರೂಪದ ಸಾಕ್ಷಾತ್ಕಾರವಾಯಿತು. ಪೃಥಿವಿಯಲ್ಲಿ ವ್ಯಾಪಿಸಿಕೊಂಡಿರುವ ಅದರ ಅತಿಸೂಕ್ಷ್ಮ ತನ್ಮಾತ್ರೆಯಾದ ಗಂಧವನ್ನು ಅರಿಯುವಂತೆ ನಿನ್ನನ್ನು ಅರಿತುಕೊಂಡರು. ॥ ೩೫ ॥

ನಿನ್ನ ಲೀಲಾಮಯಮೂರ್ತಿಯಾದ ವಿರಾಟ್‌ಪುರುಷರೂಪದ ಸಾಕ್ಷಾತ್ಕಾರ ಅವರಿಗಾಯಿತು. ಸಾವಿರಾರು ಮುಖಗಳು, ಸಾವಿರಾರು ತಲೆಗಳು, ಸಾವಿರಾರು ಕಿವಿ-ಕಣ್ಣು-ಮೂಗು-ಬಾಯಿಗಳು, ಸಾವಿರಾರು ಕೈ-ಕಾಲುಗಳು ಮತ್ತು ಸಾವಿರಾರು ಭೂಷಣಾಯುಧಗಳಿಂದ ಕೂಡಿ ಹದಿನಾಲ್ಕು ಲೋಕಗಳನ್ನು ತನ್ನ ಅಂಗಾಂಗಗಳ ರೂಪದಲ್ಲಿ ಹೊಂದಿದ್ದ ಅದ್ಭುತರೂಪವದು. ಮಹಾಪುರುಷನಾದ ನಿನ್ನ ಆ ರೂಪವನ್ನು ನೋಡಿ ಬ್ರಹ್ಮದೇವರಿಗೆ ತುಂಬಾ ಆನಂದವುಂಟಾಯಿತು. ॥ ೩೬ ॥ ರಜೋಗುಣ ಮತ್ತು ತಮೋಗುಣರೂಪಿಗಳಾದ ಮಧು, ಕೈಟಭರೆಂಬ ಇಬ್ಬರು ದೈತ್ಯರು ಭಾರೀ ಬಲಶಾಲಿಗಳಾಗಿದ್ದರು. ಅವರು ವೇದಗಳನ್ನು ಕದ್ದುಕೊಂಡು ಹೋದಾಗ ನೀನು ಹಯಗ್ರೀವ ಅವತಾರವನ್ನು ತಾಳಿ, ಅವರಿಬ್ಬರನ್ನೂ ಕೊಂದು ಸತ್ತ್ವಗುಣರೂಪವಾದ ಶ್ರುತಿಗಳನ್ನು (ವೇದಗಳನ್ನು) ಬ್ರಹ್ಮದೇವರಿಗೆ ಹಿಂದಿರುಗಿಸಿಕೊಟ್ಟೆ. ಆ ಸತ್ತ್ವಗುಣವೇ ನಿನ್ನ ಅತ್ಯಂತ ಪ್ರಿಯಶರೀರವೆಂದು ಮಹಾತ್ಮರು ಹೀಗೆ ವರ್ಣಿಸುತ್ತಾರೆ. ॥ ೩೭ ॥ ಎಲೈ ಮಹಾಪುರುಷನೇ ! ಹೀಗೆ ನೀನು ಮನುಷ್ಯ, ಪಶು-ಪಕ್ಷಿ, ಋಷಿ, ದೇವತೆ ಮತ್ತು ಮತ್ಸ್ಯ ಮುಂತಾದ ಅನೇಕ ಅವತಾರಗಳನ್ನು ಎತ್ತಿ ಲೋಕಗಳನ್ನು ಪಾಲಿಸಿ, ವಿಶ್ವದ ದ್ರೋಹಿಗಳನ್ನು ಸಂಹಾರಮಾಡುತ್ತೀಯೆ. ಈ ಅವತಾರಗಳ ಮೂಲಕ ನೀನು ಪ್ರತಿಯೊಂದು ಯುಗದಲ್ಲಿಯೂ ಆದರ ಧರ್ಮಗಳನ್ನು ರಕ್ಷಿಸುತ್ತೀಯೆ. ಕಲಿಯುಗದಲ್ಲಿ ನೀನು ಮರೆಯಾಗಿ ಗುಪ್ತರೂಪದಿಂದಲೇ ಇರುತ್ತೀಯೆ. ಅದಕ್ಕಾಗಿ ನಿನಗೆ 'ತ್ರಿಯುಗ' ಎಂಬ ಒಂದು ಹೆಸರೂ ಇದೆ. ॥ ೩೮ ॥

ಓ ವೈಕುಂಠಪತಿಯೇ ! ನನ್ನ ಈ ಮನಸ್ಸು ನಿನ್ನ ಕಥೆಗಳನ್ನು ಕೇಳಿ ರಸಾನುಭವವನ್ನು ಪಡುತ್ತಿಲ್ಲ. ಪಾಪವಾಸನೆಗಳಿಂದ ಕಲುಷಿತಗೊಂಡಿದೆ. ದುಷ್ಟತನದಿಂದ ತುಂಬಿದೆ. ಸಾಮಾನ್ಯವಾಗಿ

ಜಿಹ್ವೈಕತೋಽಚ್ಯುತ ವಿಕರ್ಷತಿ ಮಾವಿತೃಪ್ತಾ
ಶಿಶ್ನೋಽನ್ಯತಸ್ತ್ವಗುದರಂ ಶ್ರವಣಂ ಕುತಶ್ಚಿತ್ ।
ಘ್ರಾಣೋಽನ್ಯತಶ್ಚಪಲದೃಕ್ಕ್ವ ಚ ಕರ್ಮಶಕ್ತಿ-
ರ್ಬಹ್ವ್ಯಃ ಸಪತ್ನ್ಯ ಇವ ಗೇಹಪತಿಂ ಲುನಂತಿ ॥ ೪೦ ॥

ಏವಂ ಸ್ವಕರ್ಮಪತಿತಂ ಭವವೈತರಣ್ಯಾ-
ಮನ್ಯೋನ್ಯಜನ್ಮಮರಣಾಶನಭೀತಭೀತಮ್ ।
ಪಶ್ಯನ್‌ಜನಂ ಸ್ವಪರವಿಗ್ರಹವೈರಮೈತ್ರಂ
ಹಂತೇತಿ ಪಾರಚರ ಪೀಪೃಹಿ ಮೂಢಮದ್ಯ ॥ ೪೧ ॥

ಕೋ ನ್ವತ್ರ ತೇಽಖಿಲಗುರೋ ಭಗವನ್ಪ್ರಯಾಸ
ಉತ್ತಾರಣೇಽಸ್ಯ ಭವಸಂಭವಲೋಪಹೇತೋಃ ।
ಮೂಢೇಷು ವೈ ಮಹದನುಗ್ರಹ ಆರ್ತಬಂಧೋ
ಕಿಂ ತೇನ ತೇ ಪ್ರಿಯಜನಾನನುಸೇವತಾಂ ನಃ ॥ ೪೨ ॥

ನೈವೋದ್ವಿಜೇ ಪರ ದುರತ್ಯಯವೈತರಣ್ಯಾ-
ಸ್ತ್ವದ್ವೀರ್ಯಗಾಯನಮಹಾಮೃತಮಗ್ನಚಿತ್ತಃ ।
ಶೋಚೇ ತತೋ ವಿಮುಖಚೇತಸ ಇಂದ್ರಿಯಾರ್ಥ-
ಮಾಯಾಸುಖಾಯ ಭರಮುದ್ವಹತೋ ವಿಮೂಢಾನ್ ॥ ೪೩ ॥

ಕಾಮಾತುರವೇ ಆಗಿದ್ದು ಸುಖ, ದುಃಖ, ಭಯ, ಇಹ ಲೋಕ-ಪರಲೋಕ, ಹಣ, ಹೆಂಡತಿ, ಮಕ್ಕಳು ಮುಂತಾದ ಚಿಂತೆಗಳಿಂದ ಕಳವಳಪಡುತ್ತಿದೆ. ಇದರಿಂದಾಗಿ ನಾನು ದೀನನಾಗಿದ್ದೇನೆ. ಇಂತಹ ಮನಸ್ಸಿನಿಂದ ನಿನ್ನ ಸ್ವರೂಪವನ್ನು ಹೇಗೆ ಚಿಂತಿಸಲಿ? ॥ ೩೯ ॥ ಓ ಅಚ್ಯುತಾ! ಎಂದೆಂದಿಗೂ ತೃಪ್ತಿಹೊಂದದ ಈ ನಾಲಿಗೆ ನನ್ನನ್ನು ರುಚಿಕರ ರಸಗಳ ಕಡೆಗೆ ಸೆಳೆಯುತ್ತಿದೆ. ಜನನೇಂದ್ರಿಯವು ಸುಂದರ ಸ್ತ್ರೀಯರ ಕಡೆಗೆ, ಚರ್ಮವು ಸುಕೋಮಲ ಸ್ಪರ್ಶಕ್ಕಾಗಿ, ಹೊಟ್ಟೆ ಊಟದ ಕಡೆಗೆ, ಕಿವಿಗಳು ಮಧುರ ಸಂಗೀತಕ್ಕಾಗಿ, ಮೂಗು ಸುವಾಸನೆಗಳ ಕಡೆಗೆ, ಈ ಚಪಲನೇತ್ರಗಳು ಸೌಂದರ್ಯದ ಕಡೆಗೆ ನನ್ನನ್ನು ಸೆಳೆಯುತ್ತಾ ಇವೆ. ಇಷ್ಟೇ ಅಲ್ಲದೆ ಕರ್ಮೇಂದ್ರಿಯಗಳೂ ತಮ್ಮ-ತಮ್ಮ ವಿಷಯಗಳ ಕಡೆಗೆ ಕೊಂಡು ಹೋಗಲು ಆತುರ ಪಡುತ್ತಿವೆ. ಗೃಹಸ್ಥನಾದ ಪತಿಯನ್ನು ಆತನ ಬಹುಮಂದಿ ಪತ್ನಿಯರು ತಮ್ಮ-ತಮ್ಮ ಕಡೆಗೆ ಸೆಳೆದುಕೊಳ್ಳುತ್ತಿರುವಂತೆ ನನ್ನ ಸ್ಥಿತಿಯಾಗಿದೆ. ॥ ೪೦ ॥ ಹೀಗೆ ಈ ಜೀವನು ತನ್ನ ಕರ್ಮಗಳ ಬಂಧನದಲ್ಲಿ ಸಿಕ್ಕಿಬಿದ್ದು ಸಂಸಾರವೆಂಬ ವೈತರಣೀ ನದಿಯಲ್ಲಿ ಬಿದ್ದಿರುವನು. ಹುಟ್ಟಿನ ನಂತರ ಸಾವು, ಸಾವಿನನಂತರ ಹುಟ್ಟು ಎಂಬ ಇವೆರಡರ ಮೂಲಕ ಕರ್ಮಗಳನ್ನು ಭೋಗಿಸುತ್ತಾ ಭಯಗೊಂಡಿರುವನು. ಇದು ನನ್ನದು – ಇದು ಪರರದು ಎಂಬ ಭೇದ-ಭಾವನೆಯಿಂದ ಕೂಡಿಕೊಂಡು ಕೆಲವರೊಂದಿಗೆ ಮಿತ್ರತ್ವವಿಟ್ಟರೆ, ಕೆಲವರೊಡನೆ ಶತ್ರುತ್ವವನ್ನು ಹೊಂದಿದ್ದಾನೆ. ನೀನು ಈ ಮೂಢಜೀವಿಯ ದುರ್ದಶೆಯನ್ನು ನೋಡಿ ಕರುಣೆಯಿಂದ ಕರಗಬೇಕು. ಈ ಭವನದಿಯಿಂದ ಆಚೆಗೆ ಇರುವ ಭಗವಂತನೇ! ಈ ಪ್ರಾಣಿಗಳನ್ನೂ ಅಲ್ಲಿಗೆ ದಾಟಿಸು. ॥ ೪೧ ॥ ಜಗದ್ಗುರುವೇ! ನೀನು ಈ ಸೃಷ್ಟಿಯ ಉತ್ಪತ್ತಿ, ಸ್ಥಿತಿ ಮತ್ತು ರಕ್ಷಣೆಗಳನ್ನು ಮಾಡುತ್ತಿರುವವನು. ಇಂತಹ ಸ್ಥಿತಿಯಲ್ಲಿ ಈ ಜೀವಿಗಳನ್ನು ಈ ಭವನದಿಯಿಂದ ದಾಟಿಸಿಬಿಡಲು ನಿನಗೆ ಪ್ರಯಾಸವೇನು? ದೀನಜನರ ಪರಮಹಿತೈಷಿ ಪ್ರಭೋ! ದಾರಿಗಾಣದೆ ಅಲೆಯುತ್ತಿರುವ ಮೂಢಜನರು ತಾನೇ ಮಹಾಪುರುಷರ ಅನುಗ್ರಹಕ್ಕೆ ವಿಶೇಷವಾಗಿ ಪಾತ್ರರಾಗಬೇಕು! ನಮಗೆ ಅದರ ಅವಶ್ಯಕತೆಯಿಲ್ಲ, ಏಕೆಂದರೆ, ನಾವು ನಿನಗೆ ಪ್ರಿಯರಾದ ಭಕ್ತರ ಸೇವೆಯಲ್ಲಿ ತೊಡಗಿದ್ದೇವೆ. ಆದರಿಂದ ದಾಟಿ ಹೋಗಲು ನಮಗೆ ಎಂದಿಗೂ ಚಿಂತೆಗೆ ಅವಕಾಶವಿಲ್ಲ. ॥ ೪೨ ॥ ಎಲೈ ಪರಮಾತ್ಮನೇ! ಈ ಸಂಸಾರವೆಂಬ ವೈತರಣೀ ನದಿಯನ್ನು ದಾಟುವುದು ಇತರರಿಗೆ ಖಂಡಿತವಾಗಿ ಕಷ್ಟವೇ. ಆದರೆ ನಾನು ಇದಕ್ಕೆ ಸ್ವಲ್ಪವೂ ಭಯ ಪಡುವುದಿಲ್ಲ, ಏಕೆಂದರೆ, ನನ್ನ ಚಿತ್ತವು ಈ ವೈತರಣಿಯಲ್ಲಿ ಇಲ್ಲ, ಅದು – ಸ್ವರ್ಗದ ಅಮೃತವನ್ನೂ ಕೂಡ ತಿರಸ್ಕರಿಸುವಂತಹ ಪರಮಾಮೃತರೂಪವಾದ ನಿನ್ನ ಲೀಲೆಗಳ ಗಾನದಲ್ಲೇ ಮುಳುಗಿದೆ. ನಿನ್ನ ಗುಣಗಾನದಿಂದ ವಿಮುಖರಾಗಿದ್ದು ಇಂದ್ರಿಯಗಳ ವಿಷಯಗಳ ಮಿಥ್ಯಾಸುಖವನ್ನು ಪಡೆದುಕೊಳ್ಳಲಿಕ್ಕಾಗಿ ತಮ್ಮ ತಲೆಯ ಮೇಲೆ ಇಡೀ ಸಂಸಾರದ ಭಾರವನ್ನು ಹೊರುತ್ತಿರುವ ಆ ಮೂಢ ಪ್ರಾಣಿಗಳಿಗಾಗಿ ನಾನು ಶೋಕಿಸುತ್ತಾ ಇದ್ದೇನೆ. ॥ ೪೩ ॥

ಪ್ರಾಯೇಣ ದೇವ ಮುನಯಃ ಸ್ವವಿಮುಕ್ತಿಕಾಮಾ
ಮೌನಂ ಚರಂತಿ ವಿಜನೇ ನ ಪರಾರ್ಥನಿಷ್ಠಾಃ ।
ನೈತಾನ್ವಿಹಾಯ ಕೃಪಣಾನ್ವಿಮುಮುಕ್ಷ ಏಕೋ
ನಾನ್ಯಂ ತ್ವದಸ್ಯ ಶರಣಂ ಭ್ರಮತೋಽನುಪಶ್ಯೇ ॥ ೪೪ ॥

ಪ್ರಭುವೇ ! ದೊಡ್ಡ-ದೊಡ್ಡ ಋಷಿ , ಮುನಿಗಳು ಸಾಮಾನ್ಯವಾಗಿ ತಮ್ಮ ಮುಕ್ತಿಗಾಗಿ ನಿರ್ಜನವಾದ ಅರಣ್ಯಕ್ಕೆ ಹೋಗಿ ಮೌನವ್ರತವನ್ನು ಅವಲಂಬಿಸುತ್ತಾರೆ. ಇತರರ ಒಳಿತಿಗಾಗಿ ಯಾವುದೇ ವಿಶೇಷ ಪ್ರಯತ್ನವನ್ನು ಮಾಡುವುದಿಲ್ಲ. ಆದರೆ ನನ್ನ ಸ್ಥಿತಿಯೇ ಬೇರೆಯಾಗಿದೆ. ದಾರಿ ತಪ್ಪಿರುವ ಈ ಬಡಪಾಯಿಗಳನ್ನು ಬಿಟ್ಟು ಒಬ್ಬಂಟಿಗನಾಗಿಯೇ ಮುಕ್ತಿಹೊಂದುವಂತಹ ಲೋಭಿಯು ನಾನಲ್ಲ. ಹೀಗೆ ಅಲೆದಾಡುತ್ತಿರುವ ಈ ಪ್ರಾಣಿಗಳಿಗೆ ನಿನ್ನ ಹೊರತಾಗಿ ಬೇರೆ ಯಾವ ರಕ್ಷಕನೂ ನನಗೆ ಕಂಡುಬರುವುದಿಲ್ಲ. ॥ ೪೪ ॥

ಯನ್ಮೈಥುನಾದಿ ಗೃಹಮೇಧಿಸುಖಂ ಹಿ ತುಚ್ಛಂ
ಕಂಡೂಯನೇನ ಕರಯೋರಿವ ದುಃಖದುಃಖಮ್ ।
ತೃಪ್ಯಂತಿ ನೇಹ ಕೃಪಣಾ ಬಹುದುಃಖಭಾಜಃ
ಕಂಡೂತಿವನ್ಮನಸಿಜಂ ವಿಷಹೇತ ಧೀರಃ ॥ ೪೫ ॥

ಗೃಹಸ್ಥರಿಗೆ ಸಿಗುವ ಮೈಥುನವೇ ಮುಂತಾದ ಸುಖಗಳು ಅತ್ಯಂತ ತುಚ್ಛವೂ, ದುಃಖರೂಪವೂ ಆಗಿವೆ. ತುರಿಕೆಯನ್ನು ಹೋಗಲಾಡಿಸಲು ಎರಡೂ ಕೈಗಳಿಂದ ತುರಿಸಿಕೊಳ್ಳುವವನಿಗೆ ಮೊದಲು ಸ್ವಲ್ಪ ಸುಖದಂತೆ ಅನಿಸಿದರೂ ಅನಂತರ ಉರಿಯ ದುಃಖವೇ ಉಂಟಾಗುತ್ತದೆ. ಆದರೆ ತಪ್ಪುದಾರಿಗೆ ಬಿದ್ದಿರುವ ಈ ಅಜ್ಞಾನೀ ಜನರು ಅನೇಕ ದುಃಖಗಳನ್ನು ಭೋಗಿಸಿಯೂ ಈ ವಿಷಯಗಳಿಂದ ಬೇಸರಪಡುವುದಿಲ್ಲ. ಧೀರಪುರುಷರಾದರೋ ತುರಿಕೆಯನ್ನು ಸಹಿಸಿಕೊಳ್ಳುವಂತೆ ಕಾಮಾದಿ ವೇಗಗಳನ್ನು ಸಹಿಸಿಕೊಳ್ಳುತ್ತಾರೆ. ಸಹಿಸಿಕೊಳ್ಳುವುದರಿಂದಲೇ ಅವುಗಳ ನಾಶವಾಗುತ್ತದೆ. ॥ ೪೫ ॥

ಮೌನವ್ರತಶ್ರುತತಪೋಽಧ್ಯಯನಸ್ವಧರ್ಮ-
ವ್ಯಾಖ್ಯಾರಹೋಜಪಸಮಾಧಯ ಆಪವರ್ಗ್ಯಾಃ ।
ಪ್ರಾಯಃ ಪರಂ ಪುರುಷ ತೇ ತ್ವಜಿತೇಂದ್ರಿಯಾಣಾಂ
ವಾರ್ತಾ ಭವಂತ್ಯುತ ನ ವಾತ್ರ ತು ದಾಂಭಿಕಾನಾಮ್ ॥ ೪೬ ॥

ಓ ಪುರುಷೋತ್ತಮಾ ! ಮೌನ, ಬ್ರಹ್ಮಚರ್ಯ, ಶಾಸ್ತ್ರ ಶ್ರವಣ, ತಪಸ್ಸು, ಸ್ವಾಧ್ಯಾಯ, ಸ್ವಧರ್ಮಪಾಲನೆ, ಯುಕ್ತಿಗಳಿಂದ ಶಾಸ್ತ್ರಗಳ ವ್ಯಾಖ್ಯೆ, ಏಕಾಂತಸೇವನೆ, ಜಪ ಮತ್ತು ಸಮಾಧಿ – ಈ ಹತ್ತೂ ಮೋಕ್ಷಕ್ಕೆ ಸಾಧನೆಗಳೆಂದು ಪ್ರಸಿದ್ಧವಾಗಿದೆ. ಆದರೆ ಇಂದ್ರಿಯಗಳು ವಶದಲ್ಲಿ ಇಲ್ಲದಿರುವವರಿಗೆ ಇವೆಲ್ಲವೂ ಜೀವನಕ್ಕೆ ಸಾಧನೆಗಳು – ವ್ಯಾಪಾರ ಮಾತ್ರವೇ ಆಗಿಬಿಡುವುವು. ದಾಂಭಿಕರಿಗಾದರೋ ಅವರ ಮೋಸವು ಬಯಲಾಗುವವರೆಗೂ ಜೀವನೋಪಾಯಗಳಾಗಿದ್ದು ಅನಂತರ ಯಾವ ಪ್ರಯೋಜನಕ್ಕೂ ಬಾರದೇ ಹೋಗುವುವು. ॥ ೪೬ ॥

ರೂಪೇ ಇಮೇ ಸದಸತೀ ತವ ವೇದಸೃಷ್ಟೇ
ಬೀಜಾಂಕುರಾವಿವ ನ ಚಾನ್ಯದರೂಪಕಸ್ಯ ।
ಯುಕ್ತಾಃ ಸಮಕ್ಷಮುಭಯತ್ರ ವಿಚಿನ್ವತೇ ತ್ವಾಂ
ಯೋಗೇನ ವಹ್ನಿಮಿವ ದಾರುಷು ನಾನ್ಯತಃ ಸ್ಯಾತ್ ॥ ೪೭ ॥

ಬೀಜ ಮತ್ತು ಮೊಳಕೆಗಳಂತೆ ಕಾರ್ಯ ಮತ್ತು ಕಾರಣ ಇವೆರಡು ನಿನ್ನ ರೂಪಗಳೆಂದು ವೇದಗಳು ಹೇಳುತ್ತವೆ. ವಾಸ್ತವವಾಗಿ ನೀನು ಪ್ರಾಕೃತರೂಪಗಳಿಂದ ರಹಿತನಾಗಿರುವೆ. ಆದರೆ ಈ ಕಾರ್ಯ-ಕಾರಣ ರೂಪಗಳನ್ನು ಬಿಟ್ಟು ನಿನ್ನ ಜ್ಞಾನವನ್ನು ಪಡೆಯುವುದಕ್ಕೆ ಬೇರಾವ ಸಾಧನೆಯೂ ಇಲ್ಲ. ಅರಣಿಮಂಥನದಿಂದ ಅಗ್ನಿಯನ್ನು ಪ್ರಕಟಪಡಿಸುವಂತೆಯೇ ಯೋಗಿಗಳು ಭಕ್ತಿ ಯೋಗದ ಸಾಧನೆಯಿಂದ ಕಾರ್ಯ ಮತ್ತು ಕಾರಣ ಇವೆರಡರಲ್ಲೇ ನಿನ್ನನ್ನು ಹುಡುಕಿ ತೆಗೆಯುತ್ತಾರೆ. ಏಕೆಂದರೆ, ವಾಸ್ತವವಾಗಿ ಇವೆರಡೂ ನಿನ್ನಿಂದ ಬೇರೆಯಲ್ಲ, ನಿನ್ನ ಸ್ವರೂಪವೇ ಆಗಿದೆ. ॥ ೪೭ ॥

ತ್ವಂ ವಾಯುರಗ್ನಿರವನಿರ್ವಿಯದಂಬುಮಾತ್ರಾಃ
ಪ್ರಾಣೇಂದ್ರಿಯಾಣಿ ಹೃದಯಂ ಚಿದನುಗ್ರಹಶ್ಚ ।
ಸರ್ವಂ ತ್ವಮೇವ ಸಗುಣೋ ವಿಗುಣಶ್ಚ ಭೂಮನ್
ನಾನ್ಯತ್ತ್ವದಸ್ತ್ಯಪಿ ಮನೋವಚಸಾ ನಿರುಕ್ತಮ್ ॥ ೪೮ ॥

ಪ್ರಭೋ ! ಅನಂತ ! ವಾಯು, ಅಗ್ನಿ, ಪೃಥಿವಿ, ಆಕಾಶ, ಜಲ, ಪಂಚತನ್ಮಾತ್ರೆಗಳು, ಪ್ರಾಣ, ಇಂದ್ರಿಯಗಳು, ಮನಸ್ಸು, ಚಿತ್ತ, ಅಹಂಕಾರ, ಸಮಸ್ತ ಜಗತ್ತು ಹಾಗೂ ಸಗುಣ-ನಿರ್ಗುಣ – ಹೀಗೆ ಎಲ್ಲವೂ ಕೇವಲ ನೀನೇ ಆಗಿರುವೆ. ಹೆಚ್ಚೇನು ಮನಸ್ಸು ಮತ್ತು ಮಾತಿನ ಮೂಲಕ ಏನೆಲ್ಲ ನಿರೂಪಿಸಲಾಗುವುದೋ ಅದೆಲ್ಲವೂ ನಿನ್ನಿಂದ ಹೊರತಾಗಿಲ್ಲ. ॥ ೪೮ ॥ ವಿಶಾಲವಾದ ಕೀರ್ತಿಯುಳ್ಳ ಮಹಾವಿಷ್ಣುವೇ ! ಈ ಸತ್ತ್ವಾದಿ ಗುಣಗಳು ಮತ್ತು ಈ ಗುಣಗಳ ಪರಿಣಾಮವಾದ ಮಹತ್ತತ್ತ್ವಾದಿಗಳು, ದೇವತೆಗಳು, ಮನುಷ್ಯರು ಹಾಗೂ ಮನಸ್ಸೇ

ನೈತೇ ಗುಣಾ ನ ಗುಣಿನೋ ಮಹದಾದಯೋ ಯೇ
ಸರ್ವೇ ಮನಃಪ್ರಭೃತಯಃ ಸಹದೇವಮರ್ತ್ಯಾಃ ।
ಆದ್ಯಂತವಂತ ಉರುಗಾಯ ವಿದಂತಿ ಹಿ ತ್ವಾ-
ಮೇವಂ ವಿಮೃಶ್ಯ ಸುಧಿಯೋ ವಿರಮಂತಿ ಶಬ್ದಾತ್ ॥ ೪೯ ॥

ತತ್ತೇಽರ್ಹತ್ತಮ ನಮಃಸ್ತುತಿಕರ್ಮಪೂಜಾಃ
ಕರ್ಮ ಸ್ಮೃತಿಶ್ಚರಣಯೋಃ ಶ್ರವಣಂ ಕಥಾಯಾಮ್ ।
ಸಂಸೇವಯಾ ತ್ವಯಿ ವಿನೇತಿ ಷಡಂಗಯಾ ಕಿಂ
ಭಕ್ತಿಂ ಜನಃ ಪರಮಹಂಸಗತೌ ಲಭೇತ ॥ ೫೦ ॥

ನಾರದ ಉವಾಚ

ಏತಾವದ್ವರ್ಣಿತಗುಣೋ ಭಕ್ತ್ಯಾ ಭಕ್ತೇನ ನಿರ್ಗುಣಃ ।
ಪ್ರಹ್ಲಾದಂ ಪ್ರಣತಂ ಪ್ರೀತೋ ಯತಮನ್ಯುರಭಾಷತ ॥ ೫೧ ॥

ಶ್ರೀಭಗವಾನುವಾಚ

ಪ್ರಹ್ಲಾದ ಭದ್ರ ಭದ್ರಂ ತೇ ಪ್ರೀತೋಽಹಂ ತೇಽಸುರೋತ್ತಮ ।
ವರಂ ವೃಣೀಷ್ವಾಭಿಮತಂ ಕಾಮಪೂರೋಽಸ್ಮ್ಯಹಂ ನೃಣಾಮ್ ॥ ೫೨ ॥

ಮಾಮಪ್ರೀಣತ ಆಯುಷ್ಮನ್ ದರ್ಶನಂ ದುರ್ಲಭಂ ಹಿ ಮೇ ।
ದೃಷ್ಟ್ವಾ ಮಾಂ ನ ಪುನರ್ಜಂತುರಾತ್ಮಾನಂ ತಪ್ತುಮರ್ಹತಿ ॥ ೫೩ ॥

ಪ್ರೀಣಂತಿ ಹ್ಯಥ ಮಾಂ ಧೀರಾಃ ಸರ್ವಭಾವೇನ ಸಾಧವಃ ।
ಶ್ರೇಯಸ್ಕಾಮಾ ಮಹಾಭಾಗಾಃ ಸರ್ವಾಸಾಮಾಶಿಷಾಂ ಪತಿಮ್ ॥ ೫೪ ॥

ನಾರದ ಉವಾಚ

ಏವಂ ಪ್ರಲೋಭ್ಯಮಾನೋಽಪಿ ವರೈರ್ಲೋಕಪ್ರಲೋಭನೈಃ ।
ಏಕಾಂತಿತ್ವಾದ್ಭಗವತಿ ನೈಚ್ಛತ್ತಾನಸುರೋತ್ತಮಃ ॥ ೫೫ ॥

ಮುಂತಾದ ಯಾವುದೂ ನಿನ್ನ ಸ್ವರೂಪವನ್ನು ಅರಿಯುವುದಕ್ಕೆ ಸಮರ್ಥವಲ್ಲ. ಏಕೆಂದರೆ, ಇವೆಲ್ಲವೂ ಆದಿ-ಅಂತ್ಯಗಳಿರುವುವು ಮತ್ತು ನೀನು ಅನಾದಿಯೂ, ಅನಂತನೂ ಆಗಿರುವೆ. ಹೀಗೆ ವಿಚಾರಮಾಡಿ ಜ್ಞಾನಿಗಳು ಶಬ್ದಜಾಲವನ್ನು ನಿಲ್ಲಿಸಿ ಮೌನವಾಗುವರು. ॥ ೪೯ ॥ ಪರಮಪೂಜ್ಯವಾದ ಪರಮಾತ್ಮನೇ! ನಮಸ್ಕಾರ, ಸ್ತುತಿ, ಸಮಸ್ತ ಕರ್ಮಗಳ ಸಮರ್ಪಣ, ಸೇವೆ-ಪೂಜೆ, ಚರಣಕಮಲಗಳ ಚಿಂತನೆ ಮತ್ತು ಲೀಲಾ-ಕಥೆಗಳ ಶ್ರವಣ – ಇವು ಆರು ನಿನ್ನ ಸೇವೆಯ ಅಂಗಗಳಾಗಿವೆ. ಈ ಷಡಂಗ ಸೇವೆಯಲ್ಲದೆ ನಿನ್ನ ಚರಣಕಮಲಗಳ ಭಕ್ತಿಯು ಹೇಗೆ ದೊರೆಯ ಬಲ್ಲದು! ಪ್ರಭೋ! ನೀನಾದರೋ ನಿನ್ನ ಪರಮಪ್ರಿಯ ಭಕ್ತರ, ಪರಮಹಂಸರ ಸರ್ವಸ್ವವೇ ಆಗಿರುವೆ. ॥ ೫೦ ॥

ನಾರದರು ಹೇಳುತ್ತಾರೆ – ಹೀಗೆ ಭಕ್ತಪ್ರಹ್ಲಾದನು ಪ್ರಕೃತಿ ಮತ್ತು ಪ್ರಾಕೃತಗುಣಗಳಿಂದ ರಹಿತನಾದ ಪರಮಾತ್ಮನ ಸ್ವರೂಪ ಗುಣಗಳನ್ನು ಪರಮಪ್ರೇಮದಿಂದ ಸ್ತೋತ್ರಮಾಡಿ, ಬಳಿಕ ಅವನು ಭಗವಂತನ ಚರಣಗಳಲ್ಲಿ ತಲೆಬಾಗಿ ಸುಮ್ಮನಾದನು. ನರಸಿಂಹ ಭಗವಂತನ ಕ್ರೋಧವು ಶಾಂತವಾಗಿ ಅವನು ತುಂಬಾ ಪ್ರಸನ್ನತೆಯಿಂದ, ಪ್ರೇಮದಿಂದ ಹೀಗೆಂದನು. ॥ ೫೧ ॥

ಶ್ರೀನರಸಿಂಹ ಭಗವಂತನು ಹೇಳಿದನು – ಭದ್ರ ಪ್ರಹ್ಲಾದನೇ! ನಿನಗೆ ಮಂಗಳವಾಗಲಿ. ಅಸುರೋತ್ತಮನೇ! ನಾನು ನಿನ್ನ ಮೇಲೆ ಅತ್ಯಂತ ಪ್ರಸನ್ನನಾಗಿರುವೆನು. ನಿನಗೆ ಅಭೀಷ್ಟವಾದ ವರವನ್ನು ಕೇಳಿಕೋ. ನಾನು ಜೀವಿಗಳ ಇಚ್ಛೆಯನ್ನು ಪೂರ್ಣಗೊಳಿಸುವವನು. ॥ ೫೨ ॥ ಆಯುಷ್ಮಂತನೇ! ನನ್ನನ್ನು ಪ್ರಸನ್ನಗೊಳಿಸದಿರುವವನಿಗೆ ನನ್ನ ದರ್ಶನವು ಬಹಳ ಕಷ್ಟ. ಆದರೆ ನನ್ನ ದರ್ಶನವಾಗುತ್ತಲೇ ಮತ್ತೆ ಪ್ರಾಣಿಗಳ ಹೃದಯದಲ್ಲಿ ಯಾವುದೇ ತಾಪವೂ ಇರುವುದಿಲ್ಲ. ॥ ೫೩ ॥ ನಾನು ಸಮಸ್ತ ಮನೋರಥಗಳನ್ನು ಪೂರ್ಣಗೊಳಿಸುವವನು. ಅದಕ್ಕಾಗಿ ಶ್ರೇಯಸ್ಸನ್ನು ಬಯಸುವ ಭಾಗ್ಯವಂತರಾದ ಸಾಧುಗಳು ಜಿತೇಂದ್ರಿಯರಾಗಿ, ತಮ್ಮ ಎಲ್ಲ ವೃತ್ತಿಗಳಿಂದ ನನ್ನನ್ನು ಪ್ರಸನ್ನಗೊಳಿಸಲಿಕ್ಕಾಗಿಯೇ ಪ್ರಯತ್ನಿಸುತ್ತಾರೆ. ॥ ೫೪ ॥

ಶ್ರೀನಾರದರು ಹೇಳಿದರು – ಯುಧಿಷ್ಠಿರನೇ! ಅಸುರಕುಲಭೂಷಣನಾದ ಪ್ರಹ್ಲಾದನು ಭಗವಂತನ ಅನನ್ಯ ಭಕ್ತನಾಗಿದ್ದನು. ಅದಕ್ಕಾಗಿ ದೊಡ್ಡ-ದೊಡ್ಡ ಜನರನ್ನು ಪ್ರಲೋಭನಗೊಳಿಸುವಂತಹ ವರಗಳ ಮೂಲಕ ಪ್ರಲೋಭನಗೊಳಿಸಿದರೂ ಅವನು ಅದನ್ನು ಬಯಸಲಿಲ್ಲ. ॥ ೫೫ ॥

ಒಂಭತ್ತನೆಯ ಅಧ್ಯಾಯವು ಮುಗಿಯಿತು. ॥ ೯ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಸಪ್ತಮ ಸ್ಕಂಧೇ
ಪ್ರಹ್ಲಾದಚರಿತೇ ಭಗವತ್ಸ್ತವೋ ನಾಮ ನವಮೋಽಧ್ಯಾಯಃ ॥ ೯ ॥

ಹತ್ತನೆಯ ಅಧ್ಯಾಯ

ಪ್ರಹ್ಲಾದನ ರಾಜ್ಯಾಭಿಷೇಕ ಮತ್ತು ತ್ರಿಪುರ ದಹನದ ಕಥೆ

ನಾರದ ಉವಾಚ

**ಭಕ್ತಿಯೋಗಸ್ಯ ತತ್ಸರ್ವಮಂತರಾಯತಯಾರ್ಭಕಃ ।
ಮನ್ಯಮಾನೋ ಹೃಷೀಕೇಶಂ ಸ್ಮಯಮಾನ ಉವಾಚ ಹ ॥ ೧ ॥**

ಪ್ರಹ್ಲಾದ ಉವಾಚ

**ಮಾ ಮಾಂ ಪ್ರಲೋಭಯೋತ್ಪತ್ತ್ಯಾಽಽಸಕ್ತಂ ಕಾಮೇಷು ತೈರ್ವರೈಃ ।
ತತ್ಸಂಗಭೀತೋ ನಿರ್ವಿಣ್ಣೋ ಮುಮುಕ್ಷುಸ್ತ್ವಾಮುಪಾಶ್ರಿತಃ ॥ ೨ ॥**

**ಭೃತ್ಯಲಕ್ಷಣಜಿಜ್ಞಾಸುರ್ಭಕ್ತಂ ಕಾಮೇಷ್ವಚೋದಯತ್ ।
ಭವಾನ್ ಸಂಸಾರಬೀಜೇಷು ಹೃದಯಗ್ರಂಥಿಷು ಪ್ರಭೋ ॥ ೩ ॥**

**ನಾನ್ಯಥಾ ತೇಽಖಿಲಗುರೋ ಘಟೇತ ಕರುಣಾತ್ಮನಃ ।
ಯಸ್ತ ಆಶಿಷ ಆಶಾಸ್ತೇ ನ ಸ ಭೃತ್ಯಃ ಸ ವೈ ವಣಿಕ್ ॥ ೪ ॥**

**ಆಶಾಸಾನೋ ನ ವೈ ಭೃತ್ಯಃ ಸ್ವಾಮಿನ್ಯಾಶಿಷ ಆತ್ಮನಃ ।
ನ ಸ್ವಾಮೀ ಭೃತ್ಯತಃ ಸ್ವಾಮ್ಯಮಿಚ್ಛನ್ಯೋ ರಾತಿ ಚಾಶಿಷಃ ॥ ೫ ॥**

**ಅಹಂ ತ್ವಕಾಮಸ್ತ್ವದ್ಭಕ್ತಸ್ತ್ವಂ ಚ ಸ್ವಾಮ್ಯನಪಾಶ್ರಯಃ ।
ನಾನ್ಯಥೇಹಾವಯೋರರ್ಥೋ ರಾಜಸೇವಕಯೋರಿವ ॥ ೬ ॥**

**ಯದಿ ರಾಸೀಶ ಮೇ ಕಾಮಾನ್ವರಾಂಸ್ತ್ವಂ ವರದರ್ಷಭ ।
ಕಾಮಾನಾಂ ಹೃದ್ಯಸಂರೋಹಂ ಭವತಸ್ತು ವೃಣೇ ವರಮ್ ॥ ೭ ॥**

**ಇಂದ್ರಿಯಾಣಿ ಮನಃ ಪ್ರಾಣ ಆತ್ಮಾ ಧರ್ಮೋ ಧೃತಿರ್ಮತಿಃ ।
ಹ್ರೀಃ ಶ್ರೀಸ್ತೇಜಃ ಸ್ಮೃತಿಃ ಸತ್ಯಂ ಯಸ್ಯ ನಶ್ಯಂತಿ ಜನ್ಮನಾ ॥ ೮ ॥**

**ವಿಮುಂಚತಿ ಯದಾ ಕಾಮಾನ್ಮಾನವೋ ಮನಸಿ ಸ್ಥಿತಾನ್ ।
ತರ್ಹ್ಯೇವ ಪುಂಡರೀಕಾಕ್ಷ ಭಗವತ್ತ್ವಾಯ ಕಲ್ಪತೇ ॥ ೯ ॥**

ನಾರದರು ಹೇಳುತ್ತಾರೆ – ಯುಧಿಷ್ಠಿರನೇ! ಪ್ರಹ್ಲಾದನು ಬಾಲಕನಾಗಿದ್ದರೂ ವರವನ್ನು ಬೇಡುವುದು ಪ್ರೇಮಾ-ಭಕ್ತಿಯಲ್ಲಿ ವಿಘ್ನವಾಗಿದೆ ಎಂದು ತಿಳಿದಿದ್ದನು. ಅದಕ್ಕಾಗಿ ಅವನು ನಸು ನಗುತ್ತಾ ಶ್ರೀಭಗವಂತನಲ್ಲಿ ಹೀಗೆ ವಿಜ್ಞಾಪಿಸಿಕೊಂಡನು. ॥ ೧ ॥

ಪ್ರಹ್ಲಾದನು ಹೇಳಿದನು – ಪ್ರಭೋ! ಈಗಾಗಲೇ ಕಾಮ ಭೋಗಗಳಲ್ಲಿ ಆಸಕ್ತನಾಗಿರುವ ನನಗೆ ಈ ವರಗಳ ಮೂಲಕ ಇನ್ನೂ ಆಸೆ ಹುಟ್ಟಿಸಬೇಡ. ನಾನು ■ ಸಂಗಕ್ಕೆ ಹೆದರಿ, ಅವುಗಳಿಂದಾಗುವ ತೀವ್ರವೇದನೆಯನ್ನು ಅನುಭವಿಸಿ, ಅವುಗಳಿಂದ ಬಿಡುಗಡೆ ಹೊಂದುವ ಆಸೆಯಿಂದ ನಿನ್ನಲ್ಲಿ ಶರಣಾಗಿದ್ದೇನೆ. ॥ ೨ ॥ ಭಗವಂತಾ! ನನ್ನಲ್ಲಿ ಭಕ್ತಿಯ ಲಕ್ಷಣಗಳು ಇವೆಯೋ, ಇಲ್ಲವೋ ಎಂದು ತಿಳಿಯಲಿಕ್ಕಾಗಿ ನೀನು ನಿನ್ನ ಭಕ್ತನಿಗೆ ವರವನ್ನು ಕೇಳಲು ಪ್ರೇರೇಪಿಸಿದೆ. ಈ ವಿಷಯ ಭೋಗಗಳು ಹೃದಯದ ಗಂಟನ್ನು ಇನ್ನೂ ಬಲಪಡಿಸುವುವು ಹಾಗೂ ಮತ್ತೆ-ಮತ್ತೆ ಜನ್ಮ-ಮೃತ್ಯುವಿನ ಚಕ್ರದಲ್ಲಿ ಬೀಳಿಸುವಂತಹುದು. ॥ ೩ ॥ ಜಗದ್ಗುರುವೇ! ನೀನು ವರವನ್ನು ಬೇಡಿಕೋ ಎಂದು ಹೇಳಿರುವುದು ನನ್ನನ್ನು ಪರೀಕ್ಷಿಸುವುದಲ್ಲದೆ ಬೇರೆ ಯಾವ ಕಾರಣವೂ ಇರಲಾರದು. ಏಕೆಂದರೆ ನೀನು ಪರಮ ದಯಾಳುವಾಗಿರುವೆ. (ತನ್ನ ಭಕ್ತರನ್ನು ಭೋಗಗಳಲ್ಲಿ ಸಿಕ್ಕಿಸುವಂತಹ ವರವನ್ನು ನೀನು ಹೇಗೆ ಕೊಡಬಲ್ಲೆ?) ತನ್ನ ಕಾಮನೆಗಳನ್ನು ನಿನ್ನಿಂದ ಪೂರ್ಣಗೊಳಿಸಿ ಕೊಳ್ಳುವವನು ಸೇವಕನೇ ಅಲ್ಲ, ಅವನಾದರೋ ಕೊಟ್ಟು-ಕೊಳ್ಳುವ ವ್ಯಾಪಾರಿಯೇ ಸರಿ. ॥ ೪ ॥ ಒಡೆಯನಿಂದ ತನ್ನ ಕಾಮನೆಗಳನ್ನು ನೆರವೇರುವಂತೆ ಬಯಸುವವನು ಸೇವಕನೇ ಅಲ್ಲ ಮತ್ತು ಸೇವಕನಿಂದ ಸೇವೆ ಮಾಡಿಸಿಕೊಳ್ಳಲು ಒಡೆಯನಾದವನು ಅವನ ಕಾಮನೆಗಳನ್ನು ಪೂರ್ಣಗೊಳಿಸುವವನು ಸ್ವಾಮಿಯೂ ಅಲ್ಲ. ॥ ೫ ॥ ನಾನು ನಿನ್ನ ನಿಷ್ಕಾಮ ಸೇವಕನಾಗಿದ್ದೇನೆ. ನೀನು ನನ್ನ ನಿರಪೇಕ್ಷ ಸ್ವಾಮಿಯಾಗಿರುವೆ. ರಾಜ ಮತ್ತು ಅವನ ಸೇವಕರ ಪ್ರಯೋಜನಕ್ಕಾಗಿ ಸ್ವಾಮಿ. ಸೇವಕ ಸಂಬಂಧವಿರುವಂತೆ ನನ್ನ ಮತ್ತು ನಿನ್ನ ಸಂಬಂಧ ಅಲ್ಲವೇ ಅಲ್ಲ. ॥ ೬ ॥ ವರದಾನಿಗಳಲ್ಲಿ ಶಿರೋಮಣಿಯಾದ ಸ್ವಾಮಿಯೇ! ನೀನು ನನಗೆ ಇಚ್ಛಿತ ವರವನ್ನು ಕೊಡಲು ಬಯಸುವೆಯಾದರೆ – 'ನನ್ನ ಹೃದಯದಲ್ಲಿ ಯಾವುದೇ ಕಾಮನೆಯ ಬೀಜವೂ ಮೊಳೆಯದೆ ಹೋಗಲಿ' ಎಂಬ ವರವನ್ನು ಕರುಣಿಸು. ॥ ೭ ॥ ಹೃದಯದಲ್ಲಿ ಯಾವುದೇ ಕಾಮನೆಯ ಉದಯವಾಗುತ್ತಲೇ ಇಂದ್ರಿಯಗಳು, ಮನಸ್ಸು ಪ್ರಾಣ, ದೇಹ, ಧರ್ಮ, ಧೈರ್ಯ, ಬುದ್ಧಿ, ಲಜ್ಜೆ, ಶ್ರೀ, ತೇಜ, ಸ್ಮೃತಿ ಮತ್ತು ಸತ್ಯ – ಇವೆಲ್ಲವೂ ನಾಶವಾಗಿ ಹೋಗುತ್ತವೆ. ॥ ೮ ॥ ಪುಂಡರೀಕಾಕ್ಷನೇ! ಮನುಷ್ಯನು ತನ್ನ ಮನಸ್ಸಿನಲ್ಲಿರುವ ಕಾಮನೆಗಳನ್ನು ಪರಿತ್ಯಾಗಮಾಡಿದಾಗಲೇ ಅವನು ಭಗವತ್ಸ್ವರೂಪವನ್ನು ಪಡೆದುಕೊಳ್ಳುವನು. ॥ ೯ ॥

ನಮೋ ಭಗವತೇ ತುಭ್ಯಂ ಪುರುಷಾಯ ಮಹಾತ್ಮನೇ ।
ಹರಯೇಽದ್ಭುತಸಿಂಹಾಯ ಬ್ರಹ್ಮಣೇ ಪರಮಾತ್ಮನೇ ॥ ೧೦ ॥

ನೃಸಿಂಹ ಉವಾಚ

ನೈಕಾಂತಿನೋ ಮೇ ಮಯಿ ಜಾತ್ವಿಹಾಶಿಷ
ಆಶಾಸತೇಽಮುತ್ರ ಚ ಯೇ ಭವದ್ವಿಧಾಃ ।
ಅಥಾಪಿ ಮನ್ವಂತರಮೇತದತ್ರ
ದೈತ್ಯೇಶ್ವರಾಣಾಮನುಭುಂಕ್ಷ್ವ ಭೋಗಾನ್ ॥ ೧೧ ॥

ಕಥಾ ಮದೀಯಾ ಜುಷಮಾಣಃ ಪ್ರಿಯಾಸ್ತ್ವ-
ಮಾವೇಶ್ಯ ಮಾಮಾತ್ಮನಿ ಸಂತಮೇಕಮ್ ।
ಸರ್ವೇಷು ಭೂತೇಷ್ವಧಿಯಜ್ಞಮೀಶಂ
ಯಜಸ್ವ ಯೋಗೇನ ಚ ಕರ್ಮ ಹಿನ್ವನ್ ॥ ೧೨ ॥

ಭೋಗೇನ ಪುಣ್ಯಂ ಕುಶಲೇನ ಪಾಪಂ
ಕಲೇವರಂ ಕಾಲಜವೇನ ಹಿತ್ವಾ ।
ಕೀರ್ತಿಂ ವಿಶುದ್ಧಾಂ ಸುರಲೋಕಗೀತಾಂ
ವಿತಾಯ ಮಾಮೇಷ್ಯಸಿ ಮುಕ್ತಬಂಧಃ ॥ ೧೩ ॥

ಯ ಏತತ್ಕೀರ್ತಯೇನ್ಮಹ್ಯಂ ತ್ವಯಾ ಗೀತಮಿದಂ ನರಃ ।
ತ್ವಾಂ ಚ ಮಾಂ ಚ ಸ್ಮರನ್ಕಾಲೇ ಕರ್ಮಬಂಧಾತ್ಪ್ರಮುಚ್ಯತೇ ॥ ೧೪ ॥

ಪ್ರಹ್ಲಾದ ಉವಾಚ

ವರಂ ವರಯ ಏತತ್ತೇ ವರದೇಶಾನ್ಮಹೇಶ್ವರ ।
ಯದನಿಂದತ್ಪಿತಾ ಮೇ ತ್ವಾಮವಿದ್ವಾಂಸ್ತೇಜ ಐಶ್ವರಮ್ ॥ ೧೫ ॥

ವಿದ್ಧಾಮರ್ಷಾಶಯಃ ಸಾಕ್ಷಾತ್ಸರ್ವಲೋಕಗುರುಂ ಪ್ರಭುಮ್ ।
ಭ್ರಾತೃಹೇತಿ ಮೃಷಾದೃಷ್ಟಿಸ್ತ್ವದ್ಭಕ್ತೇ ಮಯಿ ಚಾಘವಾನ್ ॥ ೧೬ ॥

ತಸ್ಮಾತ್ಪಿತಾ ಮೇ ಪೂಯೇತ ದುರಂತಾದ್ದುಸ್ತರಾದಘಾತ್ ।
ಪೂತಸ್ತೇಽಪಾಂಗಸಂದೃಷ್ಟಸ್ತದಾ ಕೃಪಣವತ್ಸಲ ॥ ೧೭ ॥

ಶ್ರೀಭಗವಾನುವಾಚ

ತ್ರಿಃಸಪ್ತಭಿಃ ಪಿತಾ ಪೂತಃ ಪಿತೃಭಿಃ ಸಹ ತೇಽನಘ ।
ಯತ್ಸಾಧೋಽಸ್ಯ ಗೃಹೇ ಜಾತೋ ಭವಾನ್ವೈ ಕುಲಪಾವನಃ ॥ ೧೮ ॥

ಭಗವಂತಾ! ನಿನಗೆ ನಮಸ್ಕಾರವು. ನೀನು ಎಲ್ಲರ ಹೃದಯದಲ್ಲಿ ಬೆಳಗುವವನೂ, ಉದಾರ ಶಿರೋಮಣಿಯೂ, ಸ್ವಯಂ ಪರಬ್ರಹ್ಮ ಪರಮಾತ್ಮನೂ ಆಗಿರುವೆ. ಅದ್ಭುತ ನರಸಿಂಹ ರೂಪವನ್ನು ಧರಿಸಿರುವ ಶ್ರೀಹರಿಯ ಚರಣಗಳಲ್ಲಿ ನಾನು ಮತ್ತೆ-ಮತ್ತೆ ನಮಸ್ಕರಿಸುತ್ತಿದ್ದೇನೆ. ॥ ೧೦ ॥

ಭಗವಾನ್ ನರಸಿಂಹನು ಹೇಳಿದನು – ನಿನ್ನಂತಹ ನನ್ನ ಏಕಾಂತಭಕ್ತರು ಈ ಲೋಕ ಅಥವಾ ಪರಲೋಕದ ಯಾವುದೇ ವಸ್ತುವಿಗಾಗಿ ಎಂದಿಗೂ ಯಾವುದೇ ಕಾಮನೆ ಮಾಡುವುದಿಲ್ಲ. ಹೀಗಿದ್ದರೂ ಹೆಚ್ಚಲ್ಲ, ಕೇವಲ ಒಂದು ಮನ್ವಂತರದವರೆಗೆ ನನ್ನ ಸಂತೋಷಕ್ಕಾಗಿ ನೀನು ಈ ಲೋಕದಲ್ಲಿ ದೈತ್ಯಾಧಿಪತಿಗಳ ಸಮಸ್ತ ಭೋಗಗಳನ್ನು ಸ್ವೀಕರಿಸು. ॥ ೧೧ ॥ ಸಮಸ್ತ ಪ್ರಾಣಿಗಳ ಹೃದಯದಲ್ಲಿ ಯಜ್ಞಗಳ ಭೋಕ್ತಾ ಈಶ್ವರರೂಪದಲ್ಲಿ ನಾನೇ ವಿರಾಜಮಾನನಾಗಿದ್ದೇನೆ. ನೀನು ನಿನ್ನ ಹೃದಯದಲ್ಲಿ ನನ್ನನ್ನು ನೋಡುತ್ತಾ, ನಿನಗೆ ಪ್ರಿಯವಾದ ನನ್ನ ಲೀಲಾ-ಕಥೆಗಳನ್ನು ಕೇಳುತ್ತಾ ಇರು. ಸಮಸ್ತ ಕರ್ಮಗಳ ಮೂಲಕ ನನ್ನನ್ನೇ ಆರಾಧಿಸುತ್ತಾ, ಹೀಗೆ ನಿನ್ನ ಪ್ರಾರಬ್ಧ ಕರ್ಮವನ್ನು ಕಳೆದುಕೋ. ॥ ೧೨ ॥ ಭೋಗದ ಮೂಲಕ ಪುಣ್ಯ ಕರ್ಮಗಳ ಫಲವನ್ನೂ, ನಿಷ್ಕಾಮಕರ್ಮಗಳ ಮೂಲಕ ಪಾಪವನ್ನೂ ನಾಶಮಾಡುತ್ತಾ, ಸಮಯಬಂದಾಗ ಶರೀರವನ್ನು ತ್ಯಜಿಸಿ ಸಮಸ್ತ ಬಂಧನಗಳಿಂದ ಮುಕ್ತನಾಗಿ ನೀನು ನನ್ನ ಬಳಿಗೆ ಬರುವಿಯಂತೆ. ವತ್ಸ! ಭಾಗವತೋತ್ತಮನಾದ ನಿನ್ನ ಪರಿಶುದ್ಧ ಕೀರ್ತಿಯನ್ನು ದೇವಲೋಕದಲ್ಲಿಯೂ ಗಾನಮಾಡುವರು. ॥ ೧೩ ॥ ನೀನು ಮಾಡಿದ ನನ್ನ ಈ ಸ್ತುತಿಯನ್ನು ಯಾವ ಮನುಷ್ಯನು ಕೀರ್ತಿಸುವನೋ, ಜೊತೆಗೆ ನನ್ನನ್ನು ಮತ್ತು ನಿನ್ನನ್ನು ಸ್ಮರಿಸುವನೋ ಅವನು ಸಮಯಬಂದಾಗ ಕರ್ಮಗಳ ಬಂಧನದಿಂದ ಮುಕ್ತನಾಗಿ ಹೋಗುವನು. ॥ ೧೪ ॥

ಪ್ರಹ್ಲಾದನು ಹೇಳಿದನು – ಮಹೇಶ್ವರನೇ! ನೀನು ವರ ಕೊಡುವವರ ಸ್ವಾಮಿಯಾಗಿರುವೆ. ನಿನ್ನಲ್ಲಿ ನಾನು ಇನ್ನೊಂದು ವರವನ್ನು ಬೇಡುವೆನು. ನನ್ನ ತಂದೆಯು ನಿನ್ನ ಈಶ್ವರೀಯ ತೇಜವನ್ನು ಮತ್ತು ಸರ್ವಶಕ್ತಿವಂತನಾದ ಚರಾಚರಗುರುವಾದ ಸ್ವಯಂ ನಿನ್ನನ್ನು ತಿಳಿಯದೆ ತುಂಬಾ ನಿಂದಿಸಿದನು. 'ಈ ವಿಷ್ಣುವು ನನ್ನ ತಮ್ಮನನ್ನು ಕೊಂದು ಹಾಕಿದನು' ಎಂಬ ಮಿಥ್ಯಾದೃಷ್ಟಿಯು ಇದ್ದ ಕಾರಣ ತಂದೆಯು ಕ್ರೋಧದ ವೇಗವನ್ನು ಸಹಿಸುವುದರಲ್ಲಿ ಅಸಮರ್ಥನಾಗಿದ್ದನು. ಇದರಿಂದ ಅವನು ನಿನ್ನ ಭಕ್ತನಾದ ಕಾರಣ ನನ್ನಲ್ಲಿ ದ್ರೋಹಮಾಡಿದನು. ॥ ೧೫-೧೬ ॥ ದೀನಬಂಧುವೇ! ನಿನ್ನ ದೃಷ್ಟಿಯು ಬೀಳುತ್ತಲೇ ಅವನು ಪವಿತ್ರನಾಗಿದ್ದರೂ ಬೇಗನೇ ನಾಶವಾಗದಿರುವ ಆ ದುಸ್ತರ ದೋಷದಿಂದ ನನ್ನ ತಂದೆಯು ಶುದ್ಧನಾಗಲೀ ಎಂದು ನಾನು ನಿನ್ನಲ್ಲಿ ಪ್ರಾರ್ಥಿಸುತ್ತೇನೆ. ॥ ೧೭ ॥

ನರಸಿಂಹ ಭಗವಂತನು ಹೇಳಿದನು – ಪುಣ್ಯಾತ್ಮನಾದ ಪ್ರಹ್ಲಾದನೇ! ನಿನ್ನ ತಂದೆಯು ಸ್ವಯಂ ಪವಿತ್ರನಾಗಿ ಉದ್ಧಾರವಾದನು, ಇದರಲ್ಲಿ ಹೇಳುವುದೇನಿದೆ? ಅವನ ಇಪ್ಪತ್ತೊಂದು ತಲೆಮಾರಿನ ಪಿತೃಗಳೂ ಇರುತ್ತಿದ್ದರೆ ಇವನೊಂದಿಗೆ ಅವರೂ ಉದ್ಧಾರವಾಗುತ್ತಿದ್ದರು. ಏಕೆಂದರೆ, ಕುಲವನ್ನು ಪವಿತ್ರಗೊಳಿಸುವ ನಿನ್ನಂತಹ ಪುತ್ರನನ್ನು ಅವನು ಪಡೆದಿದ್ದನು. ॥ ೧೮ ॥

ಯತ್ರ ಯತ್ರ ಚ ಮದ್ಭಕ್ತಾಃ ಪ್ರಶಾಂತಾಃ ಸಮದರ್ಶಿನಃ ।
ಸಾಧವಃ ಸಮುದಾಚಾರಾಸ್ತೇ ಪೂಯಂತ್ಯಪಿ ಕೀಕಟಾಃ ॥ ೧೯ ॥

ಸರ್ವಾತ್ಮನಾ ನ ಹಿಂಸಂತಿ ಭೂತಗ್ರಾಮೇಷು ಕಿಂಚನ ।
ಉಚ್ಚಾವಚೇಷು ದೈತ್ಯೇಂದ್ರ ಮದ್ಭಾವೇನ ಗತಸ್ಪೃಹಾಃ ॥ ೨೦ ॥

ಭವಂತಿ ಪುರುಷಾ ಲೋಕೇ ಮದ್ಭಕ್ತಾಸ್ತ್ವಾಮನುವ್ರತಾಃ ।
ಭವಾನ್ಮೇ ಖಲು ಭಕ್ತಾನಾಂ ಸರ್ವೇಷಾಂ ಪ್ರತಿರೂಪಧೃಕ್ ॥ ೨೧ ॥

ಕುರು ತ್ವಂ ಪ್ರೇತಕಾರ್ಯಾಣಿ ಪಿತುಃ ಪೂತಸ್ಯ ಸರ್ವಶಃ ।
ಮದಂಗಸ್ಪರ್ಶನೇನಾಂಗ ಲೋಕಾನ್ಯಾಸ್ಯತಿ ಸುಪ್ರಜಾಃ ॥ ೨೨ ॥

ಪಿತ್ರ್ಯಂ ಚ ಸ್ಥಾನಮಾತಿಷ್ಠ ಯಥೋಕ್ತಂ ಬ್ರಹ್ಮವಾದಿಭಿಃ ।
ಮಯ್ಯಾವೇಶ್ಯ ಮನಸ್ತಾತ ಕುರು ಕರ್ಮಾಣಿ ಮತ್ಪರಃ ॥ ೨೩ ॥

ನಾರದ ಉವಾಚ

ಪ್ರಹ್ಲಾದೋಽಪಿ ತಥಾ ಚಕ್ರೇ ಪಿತುರ್ಯತ್ಸಾಂಪರಾಯಿಕಮ್ ।
ಯಥಾಽಽಹ ಭಗವಾನ್ರಾಜನ್ನಭಿಷಿಕ್ತೋ ದ್ವಿಜೋತ್ತಮೈಃ ॥ ೨೪ ॥

ಪ್ರಸಾದಸುಮುಖಂ ದೃಷ್ಟ್ವಾ ಬ್ರಹ್ಮಾ ನರಹರಿಂ ಹರಿಮ್ ।
ಸ್ತುತ್ವಾ ವಾಗ್ಭಿಃ ಪವಿತ್ರಾಭಿಃ ಪ್ರಾಹ ದೇವಾದಿಭಿರ್ವೃತಃ ॥ ೨೫ ॥

ಬ್ರಹ್ಮೋವಾಚ

ದೇವ ದೇವಾಖಿಲಾಧ್ಯಕ್ಷ ಭೂತಭಾವನ ಪೂರ್ವಜ ।
ದಿಷ್ಟ್ಯಾ ತೇ ನಿಹತಃ ಪಾಪೋ ಲೋಕಸಂತಾಪನೋಽಸುರಃ ॥ ೨೬ ॥

ಯೋಽಸೌ ಲಬ್ಧವರೋ ಮತ್ತೋ ನ ವಧ್ಯೋ ಮಮ ಸೃಷ್ಟಿಭಿಃ ।
ತಪೋಯೋಗಬಲೋನ್ನದ್ಧಃ ಸಮಸ್ತನಿಗಮಾನಹನ್ ॥ ೨೭ ॥

ದಿಷ್ಟ್ಯಾಸ್ಯ ತನಯಃ ಸಾಧುರ್ಮಹಾಭಾಗವತೋಽರ್ಭಕಃ ।
ತ್ವಯಾ ವಿಮೋಚಿತೋ ಮೃತ್ಯೋರ್ದಿಷ್ಟ್ಯಾ ತ್ವಾಂ ಸಮಿತೋಽಧುನಾ ॥ ೨೮ ॥

ಏತದ್ವಪುಸ್ತೇ ಭಗವನ್ ಧ್ಯಾಯತಃ ಪ್ರಯತಾತ್ಮನಃ ।
ಸರ್ವತೋ ಗೋಪ್ತೃ ಸಂತ್ರಾಸಾನ್ಮೃತ್ಯೋರಪಿ ಜಿಘಾಂಸತಃ ॥ ೨೯ ॥

ಪ್ರಶಾಂತರೂ, ಸಮದರ್ಶಿಗಳೂ, ಸುಖವಾಗಿ ಸದಾಚಾರವನ್ನು ಪಾಲಿಸುವವರೂ ನನ್ನ ಪ್ರೇಮೀ ಭಕ್ತರು ಎಲ್ಲೆಲ್ಲಿ ವಾಸಿಸುತ್ತಾರೋ, ಆ ಸ್ಥಾನವು ಕೀಕಟವೇ ಆಗಿದ್ದರೂ ಪವಿತ್ರವಾಗಿ ಹೋಗುತ್ತದೆ. ॥ ೧೯ ॥ ದೈತ್ಯರಾಜನೇ! ನನ್ನ ಭಕ್ತಿಭಾವದಿಂದ ಕಾಮನೆಗಳು ನಾಶವಾದವರು ಸರ್ವತ್ರ ಆತ್ಮಭಾವ ಉಂಟಾದ ಕಾರಣ ಸಣ್ಣ-ದೊಡ್ಡ ಯಾವುದೇ ಪ್ರಾಣಿಗೆ ಯಾವ ವಿಧದಿಂದಲೂ ಕಷ್ಟಕೊಡುವುದಿಲ್ಲ. ॥ ೨೦ ॥ ಪ್ರಪಂಚದಲ್ಲಿ ನಿನ್ನ ಅನುಯಾಯಿ ಆಗುವವರೂ ಕೂಡ ನನ್ನ ಭಕ್ತರಾಗಿ ಹೋಗುವರು. ಮಗು! ನೀನು ನನ್ನ ಎಲ್ಲ ಭಕ್ತರಲ್ಲಿ ಆದರ್ಶನಾಗಿರುವೆ. ॥ ೨೧ ॥ ನನ್ನ ಅಂಗಸ್ಪರ್ಶದಿಂದ ನಿನ್ನ ತಂದೆಯು ಪೂರ್ಣವಾಗಿ ಪವಿತ್ರವಾಗಿ ಹೋಗಿದ್ದರೂ ನೀನು ಅವನ ಅಂತ್ಯೇಷ್ಟಿ ಕರ್ಮಗಳನ್ನು ಮಾಡು. ನಿನ್ನಂತಹ ಸಂತಾನದಿಂದಾಗಿ ಅವನಿಗೆ ಉತ್ತಮ ಲೋಕಗಳೇ ದೊರೆಯುವುವು. ॥ ೨೨ ॥ ವತ್ಸ! ನೀನು ನಿನ್ನ ತಂದೆಯ ಸ್ಥಾನದಲ್ಲಿ ಪಟ್ಟಾಭಿಷಿಕ್ತನಾಗು. ವೇದವಾದಿಗಳಾದ ಮುನಿಗಳ ಆಜ್ಞೆಯಂತೆ ನನ್ನಲ್ಲಿ ನಿನ್ನ ಮನಸ್ಸನ್ನಿರಿಸಿ, ನನ್ನಲ್ಲಿ ಶರಣಾಗಿ, ನನ್ನ ಸೇವೆಗಾಗಿಯೇ ನಿನ್ನ ಎಲ್ಲ ಕಾರ್ಯವನ್ನು ಮಾಡುತ್ತಿರು. ॥ ೨೩ ॥

ನಾರದರು ಹೇಳಿದರು – ಯುಧಿಷ್ಠಿರನೇ! ಭಗವಂತನ ಆಜ್ಞೆಯಂತೆ ಪ್ರಹ್ಲಾದನು ತನ್ನ ತಂದೆಯ ಅಂತ್ಯೇಷ್ಟಿ ಕ್ರಿಯೆಗಳನ್ನು ಮಾಡಿದನು. ಇದಾದ ಬಳಿಕ ಶ್ರೇಷ್ಠಬ್ರಾಹ್ಮಣರು ಅವನಿಗೆ ರಾಜ್ಯಾಭಿಷೇಕವನ್ನು ಮಾಡಿದರು. ॥ ೨೪ ॥ ಇದೇ ಸಮಯದಲ್ಲಿ ದೇವತೆಗಳು, ಋಷಿಗಳು ಮುಂತಾದವರೊಂದಿಗೆ ಬ್ರಹ್ಮದೇವರು ನರಸಿಂಹ ಭಗವಂತನ ಪ್ರಸನ್ನವದನವನ್ನು ಕಂಡು ಪವಿತ್ರವಚನಗಳಿಂದ ಅವನನ್ನು ಸ್ತುತಿಸಿ, ಅವನಲ್ಲಿ ಇಂತೆಂದರು. ॥ ೨೫ ॥

ಬ್ರಹ್ಮದೇವರು ಹೇಳಿದರು – ದೇವತೆಗಳಿಗೂ ಆರಾಧ್ಯನಾದ ಭಗವಂತನೇ! ನೀನು ಸರ್ವಾಂತರ್ಯಾಮಿಯೂ, ಜೀವರಿಗೆ ಜೀವನದಾತೃವೂ, ನನಗೆ ಪಿತನೂ ಆಗಿರುವೆ. ಈ ಪಾಪೀ ದೈತ್ಯನು ಜನರನ್ನು ತುಂಬಾ ಸತಾಯಿಸುತ್ತಿದ್ದನು. ನೀನು ಇವನನ್ನು ಸಂಹಾರ ಮಾಡಿದುದು ದೊಡ್ಡ ಸೌಭಾಗ್ಯದ ಮಾತಾಗಿದೆ. ॥ ೨೬ ॥ 'ನನ್ನ ಸೃಷ್ಟಿಯ ಯಾವುದೇ ಪ್ರಾಣಿಯು ನಿನ್ನನ್ನು ವಧಿಸಲಾರದು' ಎಂಬ ವರವನ್ನು ನಾನು ಇವನಿಗೆ ಕೊಟ್ಟಿದ್ದೆ. ಇದರಿಂದ ಇವನು ಉನ್ಮತ್ತನಾಗಿದ್ದನು. ತಪಸ್ಸು, ಯೋಗ ಮತ್ತು ಬಲದಿಂದಾಗಿ ಉಚ್ಛೃಂಖಲನಾಗಿ ಇವನು ವೇದವಿಧಿಗಳನ್ನು ನಿರ್ಮೂಲನಗೊಳಿಸಿದ್ದನು. ॥ ೨೭ ॥ ಇವನ ಪುತ್ರನೂ ಪರಮಭಾಗವತನೂ, ಶುದ್ಧ ಹೃದಯನೂ ಆದ ಮಗು ಪ್ರಹ್ಲಾದನನ್ನು ನೀನು ಸಾವಿನ ದವಡೆಯಿಂದ ಬಿಡಿಸಿದುದು ದೊಡ್ಡ ಸೌಭಾಗ್ಯದ ಮಾತಾಗಿದೆ ಹಾಗೂ ಅವನು ಈಗ ನಿನ್ನಲ್ಲಿ ಶರಣುಹೊಂದಿರುವುದು ಕೂಡ ಅತ್ಯಂತ ಆನಂದದ ಮತ್ತು ಮಂಗಳಕರ ವಿಷಯವೇ ಆಗಿದೆ. ॥ ೨೮ ॥ ಭಗವಂತಾ! ನಿನ್ನ ಈ ನರಸಿಂಹರೂಪವನ್ನು ಏಕಾಗ್ರ ಮನಸ್ಸಿನಿಂದ ಧ್ಯಾನಿಸುವವನು ಎಲ್ಲ ಬಗೆಯ ಭಯದಿಂದ ರಕ್ಷಿತನಾಗುವನು. ಕೊಲ್ಲಲು ಬಂದಿರುವ ಮೃತ್ಯುವೂ ಕೂಡ ಅವನಿಗೆ ಯಾವ ಕೇಡನ್ನು ಮಾಡಲಾರದು. ॥ ೨೯ ॥

ನೃಸಿಂಹ ಉವಾಚ

ಮೈವಂ ವರೋಽಸುರಾಣಾಂ ತೇ ಪ್ರದೇಯಃ ಪದ್ಮಸಂಭವ ।
ವರಃ ಕ್ರೂರನಿಸರ್ಗಾಣಾಮಹೀನಾಮಮೃತಂ ಯಥಾ ॥ ೩೦ ॥

ನಾರದ ಉವಾಚ

ಇತ್ಯುಕ್ತ್ವಾ ಭಗವಾನ್ರಾಜಂಸ್ತತ್ರೈವಾಂತರ್ದಧೇ ಹರಿಃ ।
ಅದೃಶ್ಯಃ ಸರ್ವಭೂತಾನಾಂ ಪೂಜಿತಃ ಪರಮೇಷ್ಠಿನಾ ॥ ೩೧ ॥

ತತಃ ಸಂಪೂಜ್ಯ ಶಿರಸಾ ವವಂದೇ ಪರಮೇಷ್ಠಿನಮ್ ।
ಭವಂ ಪ್ರಜಾಪತೀನ್ದೇವಾನ್ಪ್ರಹ್ಲಾದೋ ಭಗವತ್ಕಲಾಃ ॥ ೩೨ ॥

ತತಃ ಕಾವ್ಯಾದಿಭಿಃ ಸಾರ್ಧಂ ಮುನಿಭಿಃ ಕಮಲಾಸನಃ ।
ದೈತ್ಯಾನಾಂ ದಾನವಾನಾಂ ಚ ಪ್ರಹ್ಲಾದಮಕರೋತ್ಪತಿಮ್ ॥ ೩೩ ॥

ಪ್ರತಿನಂದ್ಯ ತತೋ ದೇವಾಃ ಪ್ರಯುಜ್ಯ ಪರಮಾಶಿಷಃ ।
ಸ್ವಧಾಮಾನಿ ಯಯೂ ರಾಜನ್ಬ್ರಹ್ಮಾದ್ಯಾಃ ಪ್ರತಿಪೂಜಿತಾಃ ॥ ೩೪ ॥

ಏವಂ ತೌ ಪಾರ್ಷದೌ ವಿಷ್ಣೋಃ ಪುತ್ರತ್ವಂ ಪ್ರಾಪಿತೌ ದಿತೇಃ ।
ಹೃದಿ ಸ್ಥಿತೇನ ಹರಿಣಾ ವೈರಭಾವೇನ ತೌ ಹತೌ ॥ ೩೫ ॥

ಪುನಶ್ಚ ವಿಪ್ರಶಾಪೇನ ರಾಕ್ಷಸೌ ತೌ ಬಭೂವತುಃ ।
ಕುಂಭಕರ್ಣದಶಗ್ರೀವೌ ಹತೌ ತೌ ರಾಮವಿಕ್ರಮೈಃ ॥ ೩೬ ॥

ಶಯಾನೌ ಯುಧಿ ನಿರ್ಭಿನ್ನಹೃದಯೌ ರಾಮಸಾಯಕೈಃ ।
ತಚ್ಚಿತ್ತೌ ಜಹತುರ್ದೇಹಂ ಯಥಾ ಪ್ರಾಕ್ತನಜನ್ಮನಿ ॥ ೩೭ ॥

ತಾವಿಹಾಥ ಪುನರ್ಜಾತೌ ಶಿಶುಪಾಲಕರೂಷಜೌ ।
ಹರೌ ವೈರಾನುಬಂಧೇನ ಪಶ್ಯತಸ್ತೇ ಸಮೀಯತುಃ ॥ ೩೮ ॥

ಏನಃ ಪೂರ್ವಕೃತಂ ಯತ್ತದ್ರಾಜಾನಃ ಕೃಷ್ಣವೈರಿಣಃ ।
ಜಹುಸ್ತ್ವಂತೇ ತದಾತ್ಮಾನಃ ಕೀಟಃ ಪೇಶಸ್ಕೃತೋ ಯಥಾ ॥ ೩೯ ॥

ಯಥಾ ಯಥಾ ಭಗವತೋ ಭಕ್ತ್ಯಾ ಪರಮಯಾಭಿದಾ ।
ನೃಪಾಶ್ಚೈದ್ಯಾದಯಃ ಸಾತ್ಮ್ಯಂ ಹರೇಸ್ತಚ್ಚಿಂತಯಾ ಯಯುಃ ॥ ೪೦ ॥

ಶ್ರೀನರಸಿಂಹದೇವರು ಹೇಳಿದರು – ಚತುರ್ಮುಖ ಬ್ರಹ್ಮನೇ! ನೀನು ದೈತ್ಯರಿಗೆ ಇಂತಹ ವರವನ್ನು ಕೊಡಬೇಡ. ಸ್ವಭಾವದಿಂದಲೇ ಕ್ರೂರರಾದವರಿಗೆ ಕೊಟ್ಟ ವರವು ಹಾವಿಗೆ ಹಾಲೆರೆದಂತೆ ಆಗುವುದು. ॥ ೩೦ ॥

ನಾರದರು ಹೇಳಿದರು – ಯುಧಿಷ್ಠಿರನೇ! ನರಸಿಂಹ ಭಗವಂತನು ಇಷ್ಟು ಹೇಳಿ, ಬ್ರಹ್ಮದೇವರಿಂದ ಪೂಜೆಗೊಂಡು ಯಾವ ಪ್ರಾಣಿಗಳಿಗೂ ಕಾಣಿಸದಿರುವಂತೆ ಅಲ್ಲಿಯೇ ಅಂತರ್ಧಾನ ಹೊಂದಿದನು. ॥ ೩೧ ॥ ಇದಾದ ನಂತರ ಪ್ರಹ್ಲಾದನು ಭಗವತ್ಸ್ವರೂಪರಾದ ಬ್ರಹ್ಮಾ-ಶಂಕರ, ಪ್ರಜಾಪತಿಗಳು ಮತ್ತು ದೇವತೆಗಳು ಹೀಗೆ ಎಲ್ಲರ ಪೂಜೆಮಾಡಿ ಅವರಿಗೆ ಶಿರಸಾಷ್ಟಾಂಗ ನಮಸ್ಕಾರ ಮಾಡಿದನು. ॥ ೩೨ ॥ ಆಗ ಶುಕ್ರಾಚಾರ್ಯರೇ ಮುಂತಾದ ಮುನಿಗಳೊಂದಿಗೆ ಬ್ರಹ್ಮದೇವರು ಪ್ರಹ್ಲಾದನನ್ನು ಸಮಸ್ತ ದಾನವರ ಮತ್ತು ದೈತ್ಯರ ಅಧಿಪತಿಯಾಗಿಸಿದರು. ॥ ೩೩ ॥ ಅನಂತರ ಬ್ರಹ್ಮಾದಿ ದೇವತೆಗಳು ಪ್ರಹ್ಲಾದನನ್ನು ಅಭಿನಂದಿಸುತ್ತಾ, ಅವನಿಗೆ ಶುಭಾಶೀರ್ವಾದಗಳನ್ನು ಕೊಟ್ಟರು. ಪ್ರಹ್ಲಾದನಿಂದ ಎಲ್ಲರೂ ಯಥಾಯೋಗ್ಯ ಸತ್ಕಾರವನ್ನು ಸ್ವೀಕರಿಸಿ ತಮ್ಮ-ತಮ್ಮ ಲೋಕಗಳಿಗೆ ಹೊರಟು ಹೋದರು. ॥ ೩೪ ॥

ಯುಧಿಷ್ಠಿರನೇ! ಹೀಗೆ ಭಗವಂತನ ಪಾರ್ಷದರಾದ ಜಯ-ವಿಜಯರಿಬ್ಬರೂ ದಿತಿಯಪುತ್ರರಾಗಿ ದೈತ್ಯರಾಗಿದ್ದರು. ಅವರು ಭಗವಂತನಲ್ಲಿ ವೈರಭಾವವನ್ನಿರಿಸಿದ್ದರು. ಅವರ ಹೃದಯದಲ್ಲಿ ನೆಲೆಸಿರುವ ಭಗವಂತನು ಅವರ ಉದ್ಧಾರ ಮಾಡಲಿಕ್ಕಾಗಿಯೇ ಅವರನ್ನು ಸಂಹರಿಸಿದ್ದನು. ॥ ೩೫ ॥ ಮುನಿಗಳ ಶಾಪದಿಂದ ಅವರ ಮುಕ್ತಿಯು ಆಗದೆ ಅವರು ಮತ್ತೆ ಕುಂಭಕರ್ಣ ಮತ್ತು ರಾವಣರ ರೂಪದಲ್ಲಿ ರಾಕ್ಷಸರಾದರು. ಆ ಸಮಯದಲ್ಲಿ ಭಗವಾನ್ ಶ್ರೀರಾಮನು ಪರಾಕ್ರಮದಿಂದ ಅವರನ್ನು ಮುಗಿಸಿಬಿಟ್ಟನು. ॥ ೩೬ ॥ ಯುದ್ಧದಲ್ಲಿ ಭಗವಾನ್ ರಾಮನ ಬಾಣಗಳಿಂದ ಅವರ ಹೃದಯವು ಒಡೆದುಹೋಯಿತು. ಅವರು ಹಿಂದಿನ ಜನ್ಮದಂತೆ ಭಗವಂತನನ್ನು ಸ್ಮರಿಸುತ್ತಾ ತಮ್ಮ ಶರೀರವನ್ನು ತ್ಯಜಿಸಿದರು. ॥ ೩೭ ॥ ಅವರೇ ಈಗ ಈ ಯುಗದಲ್ಲಿ ಶಿಶುಪಾಲ ಮತ್ತು ದಂತವಕ್ತ್ರರ ರೂಪದಲ್ಲಿ ಹುಟ್ಟಿದ್ದರು. ಭಗವಂತನ ಕುರಿತು ವೈರಭಾವ ಉಂಟಾದ ಕಾರಣ ನಿನ್ನ ಎದುರಿನಲ್ಲೇ ಅವರು ಅವನಲ್ಲಿ ಒಂದಾಗಿಹೋದರು. ॥ ೩೮ ॥ ಯುಧಿಷ್ಠಿರ! ಶ್ರೀಕೃಷ್ಣನಲ್ಲಿ ಶತ್ರುತ್ವ ವಹಿಸಿಕೊಂಡ ರಾಜರೆಲ್ಲರೂ ಅಂತ್ಯಸಮಯದಲ್ಲಿ ಶ್ರೀಕೃಷ್ಣನ ಸ್ಮರಣೆಯಿಂದ ತದ್ರೂಪರಾಗಿ ತಮ್ಮ ಪೂರ್ವಕೃತ ಪಾಪಗಳಿಂದ ಎಂದೆಂದಿಗೂ ಮುಕ್ತರಾಗಿ ಹೋದರು. ದುಂಬಿಯು ಹಿಡಿದು ತಂದು ಗೂಡಿನಲ್ಲಿ ಕೂಡಿಹಾಕಿದ ಹುಳುವು ಭಯದಿಂದ ದುಂಬಿಯನ್ನೇ ಚಿಂತಿಸುತ್ತಾ ದುಂಬಿಯೇ ಆಗುವಂತೆ ಅವನಂತೆ ಆದರು. ॥ ೩೯ ॥ ಭಗವಂತನ ಪ್ರಿಯಭಕ್ತರು ತಮ್ಮ ಭೇದ-ಭಾವರಹಿತ ಅನನ್ಯ ಭಕ್ತಿಯ ಮೂಲಕ ಭಗವತ್ಸ್ವರೂಪವನ್ನು ಪಡೆದುಕೊಂಡಂತೆ ಶಿಶುಪಾಲರೇ ಮುಂತಾದ ರಾಜರೂ ಕೂಡ ಭಗವಂತನ ವೈರದಿಂದ ಉಂಟಾದ ಅನನ್ಯ ಚಿಂತನದಿಂದ ಭಗವಂತನ ಸಾರೂಪ್ಯವನ್ನೇ ಪಡೆದುಕೊಂಡರು. ॥ ೪೦ ॥

ಆಖ್ಯಾತಂ ಸರ್ವಮೇತತ್ತೇ ಯನ್ಮಾಂ ತ್ವಂ ಪರಿಪೃಷ್ಟವಾನ್ ।
ದಮಘೋಷಸುತಾದೀನಾಂ ಹರೇಃ ಸಾತ್ಮ್ಯಮಪಿ ದ್ವಿಷಾಮ್ ॥ ೪೧ ॥

ಏಷಾ ಬ್ರಹ್ಮಣ್ಯದೇವಸ್ಯ ಕೃಷ್ಣಸ್ಯ ಚ ಮಹಾತ್ಮನಃ ।
ಅವತಾರಕಥಾ ಪುಣ್ಯಾ ವಧೋ ಯತ್ರಾದಿದೈತ್ಯಯೋಃ ॥ ೪೨ ॥

ಪ್ರಹ್ಲಾದಸ್ಯಾನುಚರಿತಂ ಮಹಾಭಾಗವತಸ್ಯ ಚ ।
ಭಕ್ತಿರ್ಜ್ಞಾನಂ ವಿರಕ್ತಿಶ್ಚ ಯಾಥಾತ್ಮ್ಯಂ ಚಾಸ್ಯ ವೈ ಹರೇಃ ॥ ೪೩ ॥

ಸರ್ಗಸ್ಥಿತ್ಯಪ್ಯಯೇಶಸ್ಯ ಗುಣಕರ್ಮಾನುವರ್ಣನಮ್ ।
ಪರಾವರೇಷಾಂ ಸ್ಥಾನಾನಾಂ ಕಾಲೇನ ವ್ಯತ್ಯಯೋ ಮಹಾನ್ ॥ ೪೪ ॥

ಧರ್ಮೋ ಭಾಗವತಾನಾಂ ಚ ಭಗವಾನ್ಯೇನ ಗಮ್ಯತೇ ।
ಆಖ್ಯಾನೇಽಸ್ಮಿನ್ಸಮಾಮ್ನಾತಮಾಧ್ಯಾತ್ಮಿಕಮಶೇಷತಃ ॥ ೪೫ ॥

ಯ ಏತತ್ಪುಣ್ಯಮಾಖ್ಯಾನಂ ವಿಷ್ಣೋರ್ವೀರ್ಯೋಪಬೃಂಹಿತಮ್ ।
ಕೀರ್ತಯೇಚ್ಛ್ರದ್ಧಯಾ ಶ್ರುತ್ವಾ ಕರ್ಮಪಾಶೈರ್ವಿಮುಚ್ಯತೇ ॥ ೪೬ ॥

ಏತದ್ಯ ಆದಿಪುರುಷಸ್ಯ ಮೃಗೇಂದ್ರಲೀಲಾಂ
ದೈತ್ಯೇಂದ್ರಯೂಥಪವಧಂ ಪ್ರಯತಃ ಪಠೇತ ।
ದೈತ್ಯಾತ್ಮಜಸ್ಯ ಚ ಸತಾಂ ಪ್ರವರಸ್ಯ ಪುಣ್ಯಂ
ಶ್ರುತ್ವಾನುಭಾವಮಕುತೋಭಯಮೇತಿ ಲೋಕಮ್ ॥ ೪೭ ॥

ಯೂಯಂ ನೃಲೋಕೇ ಬತ ಭೂರಿಭಾಗಾ
ಲೋಕಂ ಪುನಾನಾ ಮುನಯೋಽಭಿಯಂತಿ ।
ಯೇಷಾಂ ಗೃಹಾನಾವಸತೀತಿ ಸಾಕ್ಷಾ-
ದ್ಗೂಢಂ ಪರಂ ಬ್ರಹ್ಮ ಮನುಷ್ಯಲಿಂಗಮ್ ॥ ೪೮ ॥

ಸ ವಾ ಅಯಂ ಬ್ರಹ್ಮ ಮಹದ್ವಿಮೃಗ್ಯ-
ಕೈವಲ್ಯನಿರ್ವಾಣಸುಖಾನುಭೂತಿಃ ।
ಪ್ರಿಯಃ ಸುಹೃದ್ವಃ ಖಲು ಮಾತುಲೇಯ
ಆತ್ಮಾರ್ಹಣೀಯೋ ವಿಧಿಕೃದ್ಗುರುಶ್ಚ ॥ ೪೯ ॥

ನ ಯಸ್ಯ ಸಾಕ್ಷಾದ್ಭವಪದ್ಮಜಾದಿಭೀ
ರೂಪಂ ಧಿಯಾ ವಸ್ತುತಯೋಪವರ್ಣಿತಮ್ ।
ಮೌನೇನ ಭಕ್ತ್ಯೋಪಶಮೇನ ಪೂಜಿತಃ
ಪ್ರಸೀದತಾಮೇಷ ಸ ಸಾತ್ವತಾಂ ಪತಿಃ ॥ ೫೦ ॥

ಯುಧಿಷ್ಠಿರನೇ! ಭಗವಂತನಲ್ಲಿ ದ್ವೇಷಮಾಡುತ್ತಿದ್ದ ಶಿಶುಪಾಲರೇ ಮುಂತಾದವರಿಗೆ ಶ್ರೀಭಗವಂತನ ಸಾರೂಪ್ಯ ಮುಕ್ತಿಯು ಹೇಗೆ ಉಂಟಾಯಿತು? ಎಂದು ನೀನು ಕೇಳಿದ್ದೆ. ಅದಕ್ಕೆ ನಾನು ಉತ್ತರ ನೀಡಿಯಾಯಿತು. ॥ ೪೧ ॥ ಆದಿದೈತ್ಯರಾದ ಹಿರಣ್ಯಾಕ್ಷ-ಹಿರಣ್ಯಕಶಿಪುಗಳ ವಧೆಯನ್ನು ವರ್ಣಿಸುವ ಈ ಕಥೆಯು ಬ್ರಹ್ಮಣ್ಯದೇವನಾದ ಶ್ರೀಕೃಷ್ಣಪರಮಾತ್ಮನ ಪರಮಪವಿತ್ರ ಅವತಾರಚರಿತ್ರವೇ ಆಗಿದೆ. ॥ ೪೨ ॥ ಈ ಪ್ರಸಂಗದಲ್ಲಿ ಮಹಾಭಾಗವತೋತ್ತಮನಾದ ಪ್ರಹ್ಲಾದನ ಚರಿತ್ರೆಯನ್ನು, ಭಕ್ತಿ, ಜ್ಞಾನ, ವೈರಾಗ್ಯ ಹಾಗೂ ಪ್ರಪಂಚದ ಸೃಷ್ಟಿ, ಸ್ಥಿತಿ, ಪ್ರಳಯಗಳ ಸ್ವಾಮಿಯಾದ ಶ್ರೀಹರಿಯ ಯಥಾರ್ಥ ಸ್ವರೂಪವನ್ನೂ, ದಿವ್ಯಗುಣಗಳನ್ನೂ, ಲೀಲೆಗಳನ್ನೂ ವರ್ಣನೆ ಮಾಡಿದೆ. ಈ ಆಖ್ಯಾನದಲ್ಲಿ ದೇವತೆಗಳ, ದೈತ್ಯರ ಪದವಿಯಲ್ಲಿ ಕಾಲಕ್ರಮದಲ್ಲಿ ಉಂಟಾಗುವ ಪರಿವರ್ತನೆಯನ್ನು ನಿರೂಪಿಸಲಾಯಿತು. ॥ ೪೩-೪೪ ॥ ಭಗವಂತನನ್ನು ದೊರಕಿಸುವ ಭಾಗವತಧರ್ಮವನ್ನೂ ವರ್ಣಿಸಿದ್ದೇನೆ. ಅಧ್ಯಾತ್ಮಕ್ಕೆ ಸಂಬಂಧಪಟ್ಟಂತೆ ತಿಳಿಯಬೇಕಾದ ವಿಷಯಗಳನ್ನು ಇಲ್ಲಿ ಹೇಳಲಾಗಿದೆ. ॥ ೪೫ ॥ ಭಗವಂತನ ಪರಾಕ್ರಮದಿಂದ ಪೂರ್ಣವಾದ ಈ ಪವಿತ್ರವಾದ ಆಖ್ಯಾನವನ್ನು ಶ್ರದ್ಧೆಯಿಂದ ಕೀರ್ತಿಸುವವನು, ಶ್ರವಣಿಸುವವನು ಕರ್ಮಬಂಧನದಿಂದ ಬಿಡುಗಡೆಹೊಂದುವನು. ॥ ೪೬ ॥ ಪರಮಪುರುಷ ಪರಮಾತ್ಮನ ನರಸಿಂಹ ಲೀಲೆಯನ್ನೂ, ಸೇನಾಪತಿಗಳ ಸಹಿತ ಹಿರಣ್ಯಕಶಿಪುವಿನ ವಧೆಯನ್ನೂ, ಸಂತಶಿರೋಮಣಿ ಪ್ರಹ್ಲಾದನ ಪಾವನವಾದ ಪ್ರಭಾವವನ್ನೂ ಏಕಾಗ್ರವಾದ ಮನಸ್ಸಿನಿಂದ ಓದುವವನಿಗೆ, ಕೇಳುವವನಿಗೆ ಭಗವಂತನ ಅಭಯಪ್ರದವಾದ ಶ್ರೀವೈಕುಂಠ ಧಾಮವು ದೊರೆಯುವುದು. ॥ ೪೭ ॥

ಯುಧಿಷ್ಠಿರನೇ! ಈ ಮನುಷ್ಯಲೋಕದಲ್ಲಿ ನಿಮ್ಮಗಳ ಭಾಗ್ಯವು ಅತ್ಯಂತ ಪ್ರಶಂಸನೀಯವಾಗಿದೆ. ಏಕೆಂದರೆ, ನಿಮ್ಮ ಮನೆಯಲ್ಲಿ ಸಾಕ್ಷಾತ್ ಪರಬ್ರಹ್ಮ ಪರಮಾತ್ಮನು ಮನುಷ್ಯರೂಪವನ್ನು ಧರಿಸಿ ಗುಪ್ತವಾಗಿ ವಾಸಿಸುತ್ತಾನೆ. ಇದರಿಂದ ಇಡೀ ಪ್ರಪಂಚವನ್ನು ಪವಿತ್ರಗೊಳಿಸುವಂತಹ ಋಷಿ-ಮುನಿಗಳು ಮೇಲಿಂದ-ಮೇಲೆ ಆತನ ದರ್ಶನ ಪಡೆಯಲು ಎಲ್ಲೆಡೆಗಳಿಂದ ನಿಮ್ಮ ಬಳಿಗೆ ಬರುತ್ತಾ ಇರುತ್ತಾರೆ. ॥ ೪೮ ॥ ದೊಡ್ಡ-ದೊಡ್ಡ ಮಹಾಪುರುಷರು ಯಾವನನ್ನು ನಿರಂತರವಾಗಿ ಹುಡುಕುತ್ತಿರುವರೋ, ಯಾರು ಮಾಯೆಯ ಲೇಶವೂ ಇಲ್ಲದ ಪರಮ ಶಾಂತ, ಪರಮಾನಂದಾನುಭವಸ್ವರೂಪ, ಪರಬ್ರಹ್ಮ ಪರಮಾತ್ಮನೇ ಆಗಿರುವನೋ, ಆತನು ನಿಮಗೆ ಪ್ರಿಯನೂ, ಹಿತೈಷಿಯೂ, ಸೋದರತ್ತೆಯ ಮಗನೂ, ಪೂಜ್ಯನೂ, ಆಜ್ಞಾಕಾರಿಯೂ, ಗುರುವೂ ಮತ್ತು ಸ್ವಯಂ ಆತ್ಮನೂ ಆದ ಶ್ರೀಕೃಷ್ಣನೇ ಆಗಿದ್ದಾನೆ. ॥ ೪೯ ॥ 'ಇವನು ಹೀಗೆಯೇ ಇದ್ದಾನೆ' ಎಂಬ ಇವನ ಸ್ವರೂಪವನ್ನು ಬ್ರಹ್ಮರುದ್ರಾದಿಗಳೂ ತಮ್ಮ ಬುದ್ಧಿಶಕ್ತಿಯಿಂದ ಹೇಗೆ ವರ್ಣಿಸಬಲ್ಲರು? ಹೀಗಿರುವಾಗ ನಾವಾದರೋ ಹೇಗೆ ವರ್ಣಿಸಬಲ್ಲೆವು? ನಾವುಗಳು ಮೌನ, ಭಕ್ತಿ ಮತ್ತು ಸಂಯಮದಿಂದ ಆತನಿಗೆ ನಮಸ್ಕರಿಸುತ್ತೇವೆ. ಅದನ್ನೇ ಪೂಜೆಯೆಂದು ಕರುಣೆಯಿಂದ ಸ್ವೀಕರಿಸಿ ಭಕ್ತವತ್ಸಲನಾದ ಭಗವಂತನು ನಮ್ಮ ಮೇಲೆ ಪ್ರಸನ್ನನಾಗಲಿ. ॥ ೫೦ ॥

ಸ ಏಷ ಭಗವಾನ್ರಾಜನ್ವ್ಯತನೋದ್ವಿಹತಂ ಯಶಃ ।
ಪುರಾ ರುದ್ರಸ್ಯ ದೇವಸ್ಯ ಮಯೇನಾನಂತಮಾಯಿನಾ ॥ ೫೧ ॥

ರಾಜೋವಾಚ

ಕಸ್ಮಿನ್ಕರ್ಮಣಿ ದೇವಸ್ಯ ಮಯೋಽಹನ್ಜಗದೀಶಿತುಃ ।
ಯಥಾ ಚೋಪಚಿತಾ ಕೀರ್ತಿಃ ಕೃಷ್ಣೇನಾನೇನ ಕಥ್ಯತಾಮ್ ॥ ೫೨ ॥

ನಾರದ ಉವಾಚ

ನಿರ್ಜಿತಾ ಅಸುರಾ ದೇವೈರ್ಯುಧ್ಯನೇನೋಪಬೃಂಹಿತೈಃ ।
ಮಾಯಿನಾಂ ಪರಮಾಚಾರ್ಯಂ ಮಯಂ ಶರಣಮಾಯಯುಃ ॥ ೫೩ ॥

ಸ ನಿರ್ಮಾಯ ಪುರಸ್ತಿಸ್ರೋ ಹೈಮೀರೌಪ್ಯಾಯಸೀರ್ವಿಭುಃ ।
ದುರ್ಲಕ್ಷ್ಯಾಪಾಯಸಂಯೋಗಾ ದುರ್ವಿತರ್ಕ್ಯಪರಿಚ್ಛದಾಃ ॥ ೫೪ ॥

ತಾಭಿಸ್ತೇಽಸುರಸೇನಾನ್ಯೋ ಲೋಕಾಂಸ್ತ್ರೀನ್ಸೇಶ್ವರಾನ್ನೃಪ ।
ಸ್ಮರಂತೋ ನಾಶಯಾಂಚಕ್ರುಃ ಪೂರ್ವವೈರಮಲಕ್ಷಿತಾಃ ॥ ೫೫ ॥

ತತಸ್ತೇ ಸೇಶ್ವರಾ ಲೋಕಾ ಉಪಾಸಾದ್ಯೇಶ್ವರಂ ವಿಭೋ ।
ತ್ರಾಹಿ ನಸ್ತಾವಕಾನ್ದೇವ ವಿನಷ್ಟಾಂಸ್ತ್ರಿಪುರಾಲಯೈಃ ॥ ೫೬ ॥

ಅಥಾನುಗೃಹ್ಯ ಭಗವಾನ್ಮಾ ಭೈಷ್ಟೇತಿ ಸುರಾನ್ವಿಭುಃ ।
ಶರಂ ಧನುಷಿ ಸಂಧಾಯ ಪುರೇಷ್ವಸ್ತ್ರಂ ವ್ಯಮುಂಚತ ॥ ೫೭ ॥

ತತೋಽಗ್ನಿವರ್ಣಾ ಇಷವ ಉತ್ಪೇತುಃ ಸೂರ್ಯಮಂಡಲಾತ್ ।
ಯಥಾ ಮಯೂಖಸಂದೋಹಾ ನಾದೃಶ್ಯಂತ ಪುರೋ ಯತಃ ॥ ೫೮ ॥

ತೈಃ ಸ್ಪೃಷ್ಟಾ ವ್ಯಸವಃ ಸರ್ವೇ ನಿಪೇತುಃ ಸ್ಮ ಪುರೌಕಸಃ ।
ತಾನಾನೀಯ ಮಹಾಯೋಗೀ ಮಯಃ ಕೂಪರಸೇಽಕ್ಷಿಪತ್ ॥ ೫೯ ॥

ಸಿದ್ಧಾಮೃತರಸಸ್ಪೃಷ್ಟಾ ವಜ್ರಸಾರಾ ಮಹೌಜಸಃ ।
ಉತ್ತಸ್ಥುರ್ಮೇಘದಲನಾ ವೈದ್ಯುತಾ ಇವ ವಹ್ನಯಃ ॥ ೬೦ ॥

ಯುಧಿಷ್ಠಿರನೇ! ಹಿಂದೆ ಮಹಾಮಾಯಾವಿಯಾದ ಮಯಾಸುರನು ಶ್ರೀರುದ್ರದೇವರ ಕೀರ್ತಿಗೆ ಕಲಂಕವನ್ನು ತರಲು ಬಯಸಿದಾಗ ಈ ಭಗವಂತನೇ ಅವರ ಕೀರ್ತಿಯನ್ನು ಮತ್ತೆ ರಕ್ಷಿಸಿ ವಿಸ್ತಾರಪಡಿಸಿದನು. ॥ ೫೧ ॥

ಯುಧಿಷ್ಠಿರ ಮಹಾರಾಜನು ಕೇಳಿದನು – ನಾರದರೇ! ಮಯದಾನವನು ಯಾವ ಕಾರ್ಯದಲ್ಲಿ ವಿಶ್ವೇಶ್ವರನಾದ ರುದ್ರದೇವರ ಕೀರ್ತಿಯನ್ನು ಕೆಡಿಸಲು ಬಯಸಿದ್ದನು? ಮತ್ತು ಭಗವಾನ್ ಶ್ರೀಕೃಷ್ಣನು ಯಾವ ವಿಧದಿಂದ ಅವರ ಕೀರ್ತಿಯನ್ನು ರಕ್ಷಿಸಿದನು? ಎಂಬುದನ್ನು ಕೃಪೆಯಿಟ್ಟು ತಿಳಿಸಿರಿ. ॥ ೫೨ ॥

ನಾರದರು ಹೇಳಿದರು – ಹಿಂದೊಮ್ಮೆ ಭಗವಾನ್ ಶ್ರೀಕೃಷ್ಣನ ಶಕ್ತಿಯನ್ನು ಪಡೆದುಕೊಂಡು ದೇವತೆಗಳು ಯುದ್ಧದಲ್ಲಿ ಅಸುರರನ್ನು ಗೆದ್ದುಕೊಂಡಿದ್ದರು. ಆಗ ಅಸುರರೆಲ್ಲರೂ ಮಾಯಾವಿಗಳ ಪರಮಗುರು ಮಯ ದಾನವನಿಗೆ ಶರಣಾದರು. ॥ ೫೩ ॥ ಮಹಾಶಕ್ತಿಶಾಲಿ ಮಯಾಸುರನು ಚಿನ್ನ, ಬೆಳ್ಳಿ ಮತ್ತು ಕಬ್ಬಿಣಗಳಿಂದ ಮೂರು ವಿಚಿತ್ರವಾದ ವಿಮಾನಗಳನ್ನು ರಚಿಸಿದನು. ಆ ವಿಮಾನಗಳೆಂದರೆ ಮೂರು ಪುರಗಳೇ ಆಗಿದ್ದವು. ಅವುಗಳು ಬಂದು-ಹೋಗುವುದು ಯಾರಿಗೂ ತಿಳಿಯದಷ್ಟು ವಿಲಕ್ಷಣವಾಗಿದ್ದವು. ಅವುಗಳಲ್ಲಿ ಅಪರಿಮಿತವಾದ ಯುದ್ಧದ ಸಾಮಗ್ರಿಗಳು ತುಂಬಿದ್ದವು. ॥ ೫೪ ॥ ಯುಧಿಷ್ಠಿರನೇ! ದೈತ್ಯಸೇನಾಪತಿಗಳ ಮನಸ್ಸಿನಲ್ಲಿ ಮೂರೂ ಲೋಕಗಳ ಬಗ್ಗೆ ಹಾಗೂ ಲೋಕಪಾಲರ ಬಗ್ಗೆ ವೈರಭಾವವು ಇದ್ದೇ ಇತ್ತು. ಈಗ ಅದನ್ನು ನೆನೆದು ಆ ಮೂರು ವಿಮಾನಗಳಿಂದ ಅವರು ಅವುಗಳಲ್ಲಿ ಅಡಗಿದ್ದುಕೊಂಡು ಎಲ್ಲರನ್ನೂ ನಾಶಪಡಿಸತೊಡಗಿದರು. ॥ ೫೫ ॥ ಆಗ ಲೋಕಪಾಲರೊಂದಿಗೆ ಎಲ್ಲ ಪ್ರಜೆಯೂ ಭಗವಾನ್ ಶಂಕರನಲ್ಲಿ ಶರಣು ಹೊಕ್ಕರು ಮತ್ತು ಅವನಲ್ಲಿ ಪ್ರಾರ್ಥಿಸಿದರು – 'ಪ್ರಭೋ! ತ್ರಿಪುರಗಳಲ್ಲಿ ಇರುವ ಅಸುರರು ನಮ್ಮನ್ನು ನಾಶಪಡಿಸುತ್ತಿದ್ದಾರೆ. ನಾವು ನಿನ್ನವರೇ ಆಗಿದ್ದೇವೆ. ಆದ್ದರಿಂದ ಮಹಾದೇವಾ! ನಮ್ಮನ್ನು ರಕ್ಷಿಸು.' ॥ ೫೬ ॥

ಅವರ ಪ್ರಾರ್ಥನೆಯನ್ನು ಕೇಳಿ ಭಗವಾನ್ ಶಂಕರನು – 'ಹೆದರಬೇಡಿರಿ' ಎಂದು ಕೃಪಾಪೂರ್ಣವಾಗಿ ಅವರಿಗೆ ಅಭಯವನ್ನೂ ಇತ್ತು, ಮತ್ತೆ ಅವನು ಧನುಸ್ಸಿಗೆ ಬಾಣವನ್ನು ತೊಟ್ಟು ಮೂರೂ ಪುರಗಳ ಮೇಲೆ ಪ್ರಯೋಗಿಸಿದನು. ॥ ೫೭ ॥ ಅವನ ಬಾಣದಿಂದ ಸೂರ್ಯಮಂಡಲದಲ್ಲಿ ಹೊರ ಸೂಸುವ ಕಿರಣಗಳಂತೆ ಬೇರೆ ಅನೇಕ ಬಾಣಗಳು ಹೊರಟವು. ಬೆಂಕಿಯ ಜ್ವಾಲೆಗಳನ್ನೇ ಉಗುಳುತ್ತಿದ್ದ ಆ ಬಾಣಗಳಿಂದಾಗಿ ಆ ಪುರಗಳು ಕಾಣಿಸದಾದವು. ॥ ೫೮ ॥ ಆ ಬಾಣಗಳ ಸ್ಪರ್ಶದಿಂದ ವಿಮಾನದಲ್ಲಿ ವಾಸಿಸುವವರೆಲ್ಲರೂ ಗತಪ್ರಾಣರಾಗಿ ಬಿದ್ದುಬಿಟ್ಟರು. ಅನೇಕ ಉಪಾಯಗಳನ್ನು ಬಲ್ಲಂತಹ ಮಾಯಾವಿಯು ತಾನೇ ನಿರ್ಮಿಸಿದ ಅಮೃತದ ಕುಂಡಕ್ಕೆ ಆ ದೈತ್ಯರನ್ನು ಎತ್ತಿ ಹಾಕಿದನು. ॥ ೫೯ ॥ ಆ ಸಿದ್ಧ ಅಮೃತರಸದ ಸ್ಪರ್ಶವಾಗುತ್ತಲೇ ಅಸುರರ ಶರೀರಗಳು ಅತ್ಯಂತ ತೇಜಸ್ವಿಯೂ, ವಜ್ರದಂತೆ ಸುದೃಢವೂ ಆಯಿತು. ಮೋಡಗಳನ್ನು ಚದುರಿಸುವ ಮಿಂಚಿನಂತೆ ಅವರು ಎದ್ದು ನಿಂತರು. ॥ ೬೦ ॥

ವಿಲೋಕ್ಯ ಭಗ್ನಸಂಕಲ್ಪಂ ವಿಮನಸ್ಕಂ ವೃಷಧ್ವಜಮ್ ।
ತದಾಯಂ ಭಗವಾನ್ವಿಷ್ಣುಸ್ತತ್ರೋಪಾಯಮಕಲ್ಪಯತ್
॥ ೬೧ ॥

ವತ್ಸ ಆಸೀತ್ತದಾ ಬ್ರಹ್ಮಾ ಸ್ವಯಂ ವಿಷ್ಣುರಯಂ ಹಿ ಗೌಃ ।
ಪ್ರವಿಶ್ಯ ತ್ರಿಪುರಂ ಕಾಲೇ ರಸಕೂಪಾಮೃತಂ ಪಪೌ
॥ ೬೨ ॥

ತೇಽಸುರಾ ಹ್ಯಪಿ ಪಶ್ಯಂತೋ ನ ನ್ಯಷೇಧನ್ವಿಮೋಹಿತಾಃ ।
ತದ್ವಿಜ್ಞಾಯ ಮಹಾಯೋಗೀ ರಸಪಾಲಾನಿದಂ ಜಗೌ
॥ ೬೩ ॥

ಸ್ವಯಂ ವಿಶೋಕಃ ಶೋಕಾರ್ತಾನ್
ಸ್ಮರನ್ದೈವಗತಿಂ ಚ ತಾಮ್ ।
ದೇವೋಽಸುರೋ ನರೋಽನ್ಯೋ ವಾ
ನೇಶ್ವರೋಽಸ್ತೀಹ ಕಶ್ಚನ ॥ ೬೪ ॥

ಆತ್ಮನೋಽನ್ಯಸ್ಯ ವಾ ದಿಷ್ಟಂ ದೈವೇನಾಪೋಹಿತುಂ ದ್ವಯೋಃ ।
ಅಥಾಸೌ ಶಕ್ತಿಭಿಃ ಸ್ವಾಭಿಃ ಶಂಭೋಃ ಪ್ರಾಧಾನಿಕಂ ವ್ಯಧಾತ್
॥ ೬೫ ॥

ಧರ್ಮಜ್ಞಾನವಿರಕ್ತ್ಯೃದ್ಧಿತಪೋವಿದ್ಯಾಕ್ರಿಯಾದಿಭಿಃ ।
ರಥಂ ಸೂತಂ ಧ್ವಜಂ ವಾಹಾನ್ ಧನುರ್ವರ್ಮ ಶರಾದಿ ಯತ್
॥ ೬೬ ॥

ಸನ್ನದ್ಧೋ ರಥಮಾಸ್ಥಾಯ ಶರಂ ಧನುರುಪಾದದೇ ।
ಶರಂ ಧನುಷಿ ಸಂಧಾಯ ಮುಹೂರ್ತೇಽಭಿಜಿತೀಶ್ವರಃ
॥ ೬೭ ॥

ದದಾಹ ತೇನ ದುರ್ಭೇದ್ಯಾ ಹರೋಽಥ ತ್ರಿಪುರೋ ನೃಪ ।
ದಿವಿ ದುಂದುಭಯೋ ನೇದುರ್ವಿಮಾನಶತಸಂಕುಲಾಃ
॥ ೬೮ ॥

ದೇವರ್ಷಿಪಿತೃಸಿದ್ಧೇಶಾ ಜಯೇತಿ ಕುಸುಮೋತ್ಕರೈಃ ।
ಅವಾಕಿರನ್ಜಗುರ್ಹೃಷ್ಟಾ ನನೃತುಶ್ಚಾಪ್ಸರೋಗಣಾಃ
॥ ೬೯ ॥

ಏವಂ ದಗ್ಧ್ವಾ ಪುರಸ್ತಿಸ್ರೋ ಭಗವಾನ್ಪುರಹಾ ನೃಪ ।
ಬ್ರಹ್ಮಾದಿಭಿಃ ಸ್ತೂಯಮಾನಃ ಸ್ವಂ ಧಾಮ ಪ್ರತ್ಯಪದ್ಯತ
॥ ೭೦ ॥

ಏವಂ ವಿಧಾನ್ಯಸ್ಯ ಹರೇಃ ಸ್ವಮಾಯಯಾ
ವಿಡಂಬಮಾನಸ್ಯ ನೃಲೋಕಮಾತ್ಮನಃ ।
ವೀರ್ಯಾಣಿ ಗೀತಾನ್ಯೃಷಿಭಿರ್ಜಗದ್ಗುರೋ-
ರ್ಲೋಕಾನ್ಪುನಾನಾನ್ಯಪರಂ ವದಾಮಿ ಕಿಮ್ ॥ ೭೧ ॥

ಭಗವಾನ್ ಶ್ರೀಕೃಷ್ಣನು – ಮಹಾದೇವನಾದರೋ ತನ್ನ ಸಂಕಲ್ಪವು ಪೂರ್ಣಗೊಳ್ಳದಿರುವ ಕಾರಣ ಚಿಂತಾಮಗ್ನನಾಗಿರುವುದನ್ನು ಕಂಡಾಗ ಆ ಅಸುರರನ್ನು ಗೆಲ್ಲಲಿಕ್ಕಾಗಿ ಅವನು ಒಂದು ಯುಕ್ತಿಯನ್ನು ಹೂಡಿದನು. ॥ ೬೧ ॥ ಇದೇ ಭಗವಾನ್ ವಿಷ್ಣುವು ಒಂದು ಹಸುವಿನ ರೂಪವನ್ನು ತಾಳಿದನು ಮತ್ತು ಬ್ರಹ್ಮದೇವರು ಕರುವಿನ ರೂಪವನ್ನು ಧರಿಸಿದರು. ಅವರಿಬ್ಬರೂ ಮಧ್ಯಾಹ್ನದ ಸಮಯದಲ್ಲಿ ತ್ರಿಪುರಗಳನ್ನು ಪ್ರವೇಶಿಸಿ ಆ ಸಿದ್ಧರಸದ ಕುಂಡದ ಎಲ್ಲ ಅಮೃತವನ್ನು ಕುಡಿದು ಬಿಟ್ಟರು. ॥ ೬೨ ॥ ಅದನ್ನು ಕಾಯುತ್ತಿದ್ದ ದೈತ್ಯರು ಇವರಿಬ್ಬರನ್ನು ನೋಡುತ್ತಿದ್ದರೂ ಭಗವಂತನ ಮಾಯೆಯಿಂದ ಮೋಹಿತರಾಗಿ ಇವರನ್ನು ತಡೆಯದಾದರು. ಸರ್ವ ಉಪಾಯಗಳನ್ನು ತಿಳಿಯುವವರಲ್ಲಿ ಶ್ರೇಷ್ಠನಾದ ಮಯಾಸುರನಿಗೆ ಈ ಸಂಗತಿ ಅರಿವಾದಾಗ ಭಗವಂತನ ಈ ಲೀಲೆಯನ್ನು ಸ್ಮರಿಸುತ್ತಾ ಅವನಿಗೆ ಶೋಕವು ಉಂಟಾಗಲಿಲ್ಲ, ಶೋಕಿಸುತ್ತಿರುವ ಅಮೃತ ರಕ್ಷಕರಲ್ಲಿ ಹೇಳಿದನು – ಅಯ್ಯಾ! ದೇವತೆಗಳು, ಅಸುರರು, ಮನುಷ್ಯರು ಅಥವಾ ಯಾವುದೇ ಪ್ರಾಣಿಯೂ ಕೂಡ ತನಗಾಗಲೀ – ಪರರಿಗಾಗಲೀ ಇಬ್ಬರಿಗೂ ವಿಧಿಯು ವಿಧಿಸಿದ ಪ್ರಾರಬ್ಧವನ್ನು ಅಳಿಸಲಾರರು. ಏನಾಗಬೇಕಿತ್ತೋ ಅದು ಆಗಿಹೋಯಿತು. ಶೋಕಿಸಿ ಏನು ಮಾಡುವುದಿದೆ? ಇದಾದ ಬಳಿಕ ಭಗವಾನ್ ಶ್ರೀಕೃಷ್ಣನು ತನ್ನ ಶಕ್ತಿಗಳ ಮೂಲಕ ಭಗವಾನ್ ಶಂಕರನ ಯುದ್ಧದ ಸಾಮಗ್ರಿಗಳನ್ನು ಸಿದ್ಧಪಡಿಸಿದನು. ॥ ೬೩-೬೫ ॥ ಅವನು ಧರ್ಮದಿಂದ ರಥವನ್ನೂ, ಜ್ಞಾನದಿಂದ ಸಾರಥಿಯನ್ನೂ, ವೈರಾಗ್ಯದಿಂದ ಧ್ವಜವನ್ನೂ, ಐಶ್ವರ್ಯದಿಂದ ಕುದುರೆಗಳನ್ನೂ, ತಪಸ್ಸಿನಿಂದ ಧನುಸ್ಸನ್ನೂ, ವಿದ್ಯೆಯಿಂದ ಕವಚವನ್ನೂ, ಕ್ರಿಯೆಯಿಂದ ಬಾಣಗಳನ್ನು ಮತ್ತು ಬೇರೆ-ಬೇರೆ ಶಕ್ತಿಗಳಿಂದ ಬೇರೆ-ಬೇರೆ ವಸ್ತುಗಳನ್ನು ನಿರ್ಮಾಣ ಮಾಡಿದನು. ॥ ೬೬ ॥ ಈ ಸಾಮಗ್ರಿಗಳಿಂದ ಸುಸಜ್ಜಿತನಾಗಿ ಭಗವಾನ್ ಶಂಕರನು ಅಭಿಜಿತ್ ಮುಹೂರ್ತದಲ್ಲಿ ಧನುಸ್ಸಿಗೆ ಬಾಣವನ್ನು ಹೂಡಿ ಆ ದುರ್ಭೇದ್ಯವಾದ ಮೂರೂ ವಿಮಾನಗಳನ್ನು ಭಸ್ಮಮಾಡಿಬಿಟ್ಟನು. ಯುಧಿಷ್ಠಿರನೇ! ಆಗಲೇ ಸ್ವರ್ಗದಲ್ಲಿ ದೇವದುಂದುಭಿಗಳು ಮೊಳಗಿದವು. ನೂರಾರು ವಿಮಾನಗಳು ಮಹಾದೇವರನ್ನು ಅಭಿನಂದಿಸಲು ನೆರೆದವು. ॥ ೬೭-೬೮ ॥ ದೇವತೆಗಳು, ಋಷಿಗಳು, ಪಿತೃಗಳು, ಸಿದ್ಧೇಶ್ವರರು, ಆನಂದದಿಂದ ಜಯ-ಜಯಕಾರವನ್ನು ಮಾಡುತ್ತಾ ಹೂವಿನ ಮಳೆಯನ್ನು ಸುರಿಸಿದರು. ಅಪ್ಸರೆಯರು ಹಾಡುತ್ತಾ ಕುಣಿಯತೊಡಗಿದರು. ॥ ೬೯ ॥ ಯುಧಿಷ್ಠಿರನೇ! ಹೀಗೆ ಆ ಮೂರು ಪುರಗಳನ್ನೂ ಸುಟ್ಟು ಭಗವಾನ್ ಶಂಕರನು 'ಪುರಾರಿ' ಎಂಬ ಹೆಸರನ್ನು ಗಳಿಸಿದನು ಮತ್ತು ಬ್ರಹ್ಮಾದಿದೇವತೆಗಳ ಸ್ತುತಿಯನ್ನು ಕೇಳುತ್ತಾ ತನ್ನ ಧಾಮಕ್ಕೆ ಬಿಜಯಂಗೈದನು. ॥ ೭೦ ॥ ಆತ್ಮಸ್ವರೂಪನಾದ ಜಗದ್ಗುರು ಭಗವಾನ್ ಶ್ರೀಕೃಷ್ಣನು ಹೀಗೆ ತನ್ನ ಮಾಯೆಯಿಂದ ಮನುಷ್ಯರಂತೆ ಲೀಲೆಗಳನ್ನು ಮಾಡುತ್ತಾನೆ. ಋಷಿಗಳು ಆ ಅನೇಕ ಲೋಕಪಾವನ ಲೀಲೆಗಳನ್ನು ಹಾಡುತ್ತಾ ಇರುತ್ತಾರೆ. ಈಗ ನಾನು ನಿನಗೆ ಮತ್ತೇನು ಹೇಳಲಿ? ಹೇಳು. ॥ ೭೧ ॥

ಹತ್ತನೆಯ ಅಧ್ಯಾಯವು ಮುಗಿಯಿತು. ॥ ೧೦ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಸಪ್ತಮಸ್ಕಂಧೇ
ಯುಧಿಷ್ಠಿರ-ನಾರದಸಂವಾದೇ ತ್ರಿಪುರವಿಜಯೋ ನಾಮ ದಶಮೋಽಧ್ಯಾಯಃ ॥ ೧೦ ॥

ಹನ್ನೊಂದನೆಯ ಅಧ್ಯಾಯ

ಮಾನವಧರ್ಮ, ವರ್ಣಧರ್ಮ, ಸ್ತ್ರೀಧರ್ಮ ಇವುಗಳ ನಿರೂಪಣೆ

ಶ್ರೀಶುಕ ಉವಾಚ

ಶ್ರುತ್ವೇಹಿತಂ ಸಾಧುಸಭಾಸಭಾಜಿತಂ
ಮಹತ್ತಮಾಗ್ರಣ್ಯ ಉರುಕ್ರಮಾತ್ಮನಃ ।
ಯುಧಿಷ್ಠಿರೋ ದೈತ್ಯಪತೇರ್ಮುದಾ ಯುತಃ
ಪಪ್ರಚ್ಛ ಭೂಯಸ್ತನಯಂ ಸ್ವಯಂಭುವಃ ॥ ೧ ॥

ಯುಧಿಷ್ಠಿರ ಉವಾಚ

ಭಗವನ್ ಶ್ರೋತುಮಿಚ್ಛಾಮಿ ನೃಣಾಂ ಧರ್ಮಂ ಸನಾತನಮ್ ।
ವರ್ಣಾಶ್ರಮಾಚಾರಯುತಂ ಯತ್ಪುಮಾನ್ವಿಂದತೇ ಪರಮ್ ॥ ೨ ॥

ಭವಾನ್ಪ್ರಜಾಪತೇಃ ಸಾಕ್ಷಾದಾತ್ಮಜಃ ಪರಮೇಷ್ಠಿನಃ ।
ಸುತಾನಾಂ ಸಮ್ಮತೋ ಬ್ರಹ್ಮನ್‌ಸ್ತಪೋಯೋಗಸಮಾಧಿಭಿಃ ॥ ೩ ॥

ನಾರಾಯಣಪರಾ ವಿಪ್ರಾ ಧರ್ಮಂ ಗುಹ್ಯಂ ಪರಂ ವಿದುಃ ।
ಕರುಣಾಃ ಸಾಧವಃ ಶಾಂತಾಸ್ತ್ವದ್ವಿಧಾ ನ ತಥಾಪರೇ ॥ ೪ ॥

ನಾರದ ಉವಾಚ

ನತ್ವಾ ಭಗವತೇಽಜಾಯ ಲೋಕಾನಾಂ ಧರ್ಮಸೇತವೇ ।
ವಕ್ಷ್ಯೇ ಸನಾತನಂ ಧರ್ಮಂ ನಾರಾಯಣಮುಖಾಚ್ಛ್ರುತಮ್ ॥ ೫ ॥

ಯೋಽವತೀರ್ಯಾತ್ಮನೋಂಽಶೇನ
ದಾಕ್ಷಾಯಣ್ಯಾಂ ತು ಧರ್ಮತಃ ।
ಲೋಕಾನಾಂ ಸ್ವಸ್ತಯೇಽಧ್ಯಾಸ್ತೇ
ತಪೋ ಬದರಿಕಾಶ್ರಮೇ ॥ ೬ ॥

ಧರ್ಮಮೂಲಂ ಹಿ ಭಗವಾನ್ಸರ್ವವೇದಮಯೋ ಹರಿಃ ।
ಸ್ಮೃತಂ ಚ ತದ್ವಿದಾಂ ರಾಜನ್ಯೇನ ಚಾತ್ಮಾ ಪ್ರಸೀದತಿ ॥ ೭ ॥

ಸತ್ಯಂ ದಯಾ ತಪಃ ಶೌಚಂ ತಿತಿಕ್ಷೇಕ್ಷಾ ಶಮೋ ದಮಃ ।
ಅಹಿಂಸಾ ಬ್ರಹ್ಮಚರ್ಯಂ ಚ ತ್ಯಾಗಃ ಸ್ವಾಧ್ಯಾಯ ಆರ್ಜವಮ್ ॥ ೮ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಭಗವನ್ಮಯನಾದ ಪ್ರಹ್ಲಾದನ ಕುರಿತಾದ ಸಾಧುಸಭೆಯಲ್ಲಿ ಸಮ್ಮಾನಿತವಾದ ಪವಿತ್ರ ಚರಿತ್ರೆಯನ್ನು ಕೇಳಿ, ಸಂತಶಿರೋಮಣಿ ಯುಧಿಷ್ಠಿರನಿಗೆ ತುಂಬಾ ಆನಂದವಾಯಿತು. ಅವನು ನಾರದರಲ್ಲಿ ಮತ್ತೆ ಕೇಳಿದನು – ॥ ೧ ॥

ಯುಧಿಷ್ಠಿರನು ಕೇಳಿದನು – ಪೂಜ್ಯರೇ! ಈಗ ನಾನು ವರ್ಣ ಮತ್ತು ಆಶ್ರಮಗಳ ಸದಾಚಾರದೊಂದಿಗೆ ಮನುಷ್ಯರ ಸನಾತನ ಧರ್ಮವನ್ನು ಕೇಳಬಯಸುತ್ತೇನೆ. ಏಕೆಂದರೆ, ಧರ್ಮದಿಂದಲೇ ಮನುಷ್ಯನಿಗೆ ಜ್ಞಾನ, ಭಗವತ್ಪ್ರೇಮ, ಸಾಕ್ಷಾತ್ ಪರಮಪುರುಷ ಭಗವಂತನ ಪ್ರಾಪ್ತಿಯು ಉಂಟಾಗುತ್ತದೆ. ॥ ೨ ॥ ನೀವು ಸ್ವಯಂ ಪ್ರಜಾಪತಿ ಬ್ರಹ್ಮದೇವರ ಪುತ್ರರಾಗಿರುವಿರಿ. ನಾರದರೇ! ನಿಮ್ಮ ತಪಸ್ಸು, ಯೋಗ, ಸಮಾಧಿಯ ಕಾರಣದಿಂದಾಗಿ ಅವರು ತಮ್ಮ ಇತರ ಪುತ್ರರಿಗಿಂತ ನಿಮ್ಮನ್ನು ಹೆಚ್ಚು ಸಮ್ಮಾನಿಸುವರು. ॥ ೩ ॥ ನಿಮ್ಮಂತಹ ಪರಾಯಣರೂ, ದಯಾಳುಗಳೂ, ಸದಾಚಾರ ಸಂಪನ್ನರೂ, ಶಾಂತರೂ ಆಗಿರುವ ನೀವು ಬ್ರಾಹ್ಮಣ ಧರ್ಮದ ಅತಿಗೋಪ್ಯವಾದ ರಹಸ್ಯವನ್ನು ಯಥಾರ್ಥವಾಗಿ ತಿಳಿದಿರುವಂತೆ ಬೇರೆ ಯಾರೂ ತಿಳಿಯಲಾರರು. ॥ ೪ ॥

ನಾರದರು ಹೇಳಿದರು – ಯುಧಿಷ್ಠಿರನೇ! ಜನ್ಮರಹಿತನಾದ ಭಗವಂತನೇ ಸಮಸ್ತ ಧರ್ಮಗಳ ಮೂಲಕಾರಣನಾಗಿದ್ದಾನೆ. ಪ್ರಥಮವೇ ಚರಾಚರ ಜಗತ್ತಿನ ಕಲ್ಯಾಣಕ್ಕಾಗಿ ಧರ್ಮ ಮತ್ತು ದಕ್ಷಪುತ್ರಿಯಾದ ಮೂರ್ತಿ ದೇವಿಯಲ್ಲಿ ತನ್ನ ಅಂಶದಿಂದ ಅವತರಿಸಿ ಬದರಿಕಾಶ್ರಮದಲ್ಲಿ ತಪಸ್ಸುಮಾಡುತ್ತಾ ಇರುವನು. ನಾರಾಯಣಮುನಿಯನ್ನು ನಮಸ್ಕರಿಸಿ, ಅವರ ಬಾಯಿಂದಲೇ ಕೇಳಿರುವ ಸನಾತನಧರ್ಮವನ್ನು ನಾನು ವರ್ಣಿಸುತ್ತೇನೆ. ॥ ೫-೬ ॥ ಯುಧಿಷ್ಠಿರನೇ! ಸರ್ವವೇದಸ್ವರೂಪನಾದ ಭಗವಾನ್ ಶ್ರೀಹರಿಯೂ, ಅವನ ತತ್ತ್ವವನ್ನರಿತ ಮಹರ್ಷಿಗಳು ರಚಿಸಿದ ಸ್ಮೃತಿಗಳೂ ಮತ್ತು ಯಾವುದರಿಂದ ಮನಸ್ಸಿಗೆ ಪ್ರಸನ್ನತೆ ಉಂಟಾಗುತ್ತದೋ ಆ ಕರ್ಮವೂ ಧರ್ಮಕ್ಕೆ ಮೂಲವಾದುದು. ॥ ೭ ॥

ಎಲೈ ರಾಜನೇ! ಧರ್ಮಕ್ಕೆ ಮೂವತ್ತು ಲಕ್ಷಣಗಳನ್ನು ಶಾಸ್ತ್ರಗಳಲ್ಲಿ ಹೇಳಲಾಗಿದೆ – ಸತ್ಯ, ದಯೆ, ತಪಸ್ಸು, ಶೌಚ, ತಿತಿಕ್ಷೆ, ಉಚಿತ-ಅನುಚಿತಗಳ ವಿಚಾರ, ಮನಸ್ಸಿನ ಮತ್ತು ಇಂದ್ರಿಯಗಳ ಸಂಯಮ, ಅಹಿಂಸಾ, ಬ್ರಹ್ಮಚರ್ಯ, ತ್ಯಾಗ, ಸ್ವಾಧ್ಯಾಯ, ಸರಳತೆ, ಸಂತೋಷ, ಸಮದರ್ಶಿತ್ವ, ಮಹಾತ್ಮರ ಸೇವೆ, ನಿಧಾನವಾಗಿ ಸಾಂಸಾರಿಕ ಭೋಗಗಳ ಚೇಷ್ಟೆಗಳಿಂದ ನಿವೃತ್ತಿ, ಮನುಷ್ಯರ ಅಭಿಮಾನಪೂರ್ಣ ಪ್ರಯತ್ನಗಳ ಫಲವು ವಿರುದ್ಧವಾಗಿಯೇ ಉಂಟಾಗುವುದು ಎಂಬ ವಿಚಾರ, ಮೌನ, ಆತ್ಮಚಿಂತನೆ, ಪ್ರಾಣಿಗಳಿಗೆ ಅನ್ನವೇ ಮುಂತಾದವುಗಳನ್ನು ಯಥಾಯೋಗ್ಯವಾಗಿ ಹಂಚಿಕೊಡುವುದು, ಪ್ರಾಣಿಗಳಲ್ಲಿ ಮತ್ತು ವಿಶೇಷವಾಗಿ ಮನುಷ್ಯರಲ್ಲಿ ತನ್ನ ಆತ್ಮನ ಹಾಗೂ ಇಷ್ಟದೇವರ ಭಾವ, ಸಂತರ ಪರಮಾಶ್ರಯ ಭಗವಾನ್ ಶ್ರೀಕೃಷ್ಣನ ನಾಮ-ಗುಣ-ಲೀಲೆ ಮುಂತಾದವುಗಳ

ಸಂತೋಷಃ ಸಮದೃಕ್ಸೇವಾ ಗ್ರಾಮ್ಯೇಹೋಪರಮಃ ಶನೈಃ ।
ನೃಣಾಂ ವಿಪರ್ಯಯೇಹೇಕ್ಷಾ ಮೌನಮಾತ್ಮವಿಮರ್ಶನಮ್ ॥ ೯ ॥

ಅನ್ನಾದ್ಯಾದೇಃ ಸಂವಿಭಾಗೋ ಭೂತೇಭ್ಯಶ್ಚ ಯಥಾರ್ಹತಃ ।
ತೇಷ್ವಾತ್ಮದೇವತಾಬುದ್ಧಿಃ ಸುತರಾಂ ನೃಷು ಪಾಂಡವ ॥ ೧೦ ॥

ಶ್ರವಣಂ ಕೀರ್ತನಂ ಚಾಸ್ಯ ಸ್ಮರಣಂ ಮಹತಾಂ ಗತೇಃ ।
ಸೇವೇಜ್ಯಾವನತಿರ್ದಾಸ್ಯಂ ಸಖ್ಯಮಾತ್ಮಸಮರ್ಪಣಮ್ ॥ ೧೧ ॥

ನೃಣಾಮಯಂ ಪರೋ ಧರ್ಮಃ ಸರ್ವೇಷಾಂ ಸಮುದಾಹೃತಃ ।
ತ್ರಿಂಶಲ್ಲಕ್ಷಣವಾನ್ರಾಜನ್ಸರ್ವಾತ್ಮಾ ಯೇನ ತುಷ್ಯತಿ ॥ ೧೨ ॥

ಸಂಸ್ಕಾರಾ ಯದವಿಚ್ಛಿನ್ನಾಃ ಸ ದ್ವಿಜೋಽಜೋ ಜಗಾದ ಯಮ್ ।
ಇಜ್ಯಾಧ್ಯಯನದಾನಾನಿ ವಿಹಿತಾನಿ ದ್ವಿಜನ್ಮನಾಮ್ ।
ಜನ್ಮಕರ್ಮಾವದಾತಾನಾಂ ಕ್ರಿಯಾಶ್ಚಾಶ್ರಮಚೋದಿತಾಃ ॥ ೧೩ ॥

ವಿಪ್ರಸ್ಯಾಧ್ಯಯನಾದೀನಿ ಷಡನ್ಯಸ್ಯಾಪ್ರತಿಗ್ರಹಃ ।
ರಾಜ್ಞೋ ವೃತ್ತಿಃ ಪ್ರಜಾಗೋಪ್ತುರವಿಪ್ರಾದ್ವಾ ಕರಾದಿಭಿಃ ॥ ೧೪ ॥

ವೈಶ್ಯಸ್ತು ವಾರ್ತಾವೃತ್ತಿಃ ಸ್ಯಾನ್ನಿತ್ಯಂ ಬ್ರಹ್ಮಕುಲಾನುಗಃ ।
ಶೂದ್ರಸ್ಯ ದ್ವಿಜಶುಶ್ರೂಷಾ ವೃತ್ತಿಶ್ಚ ಸ್ವಾಮಿನೋ ಭವೇತ್ ॥ ೧೫ ॥

ವಾರ್ತಾ ವಿಚಿತ್ರಾ ಶಾಲೀನಯಾಯಾವರಶಿಲೋಂಛನಮ್ ।
ವಿಪ್ರವೃತ್ತಿಶ್ಚತುರ್ಧೇಯಂ ಶ್ರೇಯಸೀ ಚೋತ್ತರೋತ್ತರಾ ॥ ೧೬ ॥

ಜಘನ್ಯೋ ನೋತ್ತಮಾಂ ವೃತ್ತಿಮನಾಪದಿ ಭಜೇನ್ನರಃ ।
ಋತೇ ರಾಜನ್ಯಮಾಪತ್ಸು ಸರ್ವೇಷಾಮಪಿ ಸರ್ವಶಃ ॥ ೧೭ ॥

ಋತಾಮೃತಾಭ್ಯಾಂ ಜೀವೇತ ಮೃತೇನ ಪ್ರಮೃತೇನ ವಾ ।
ಸತ್ಯಾನೃತಾಭ್ಯಾಂ ಜೀವೇತ ನ ಶ್ವವೃತ್ತ್ಯಾ ಕಥಂಚನ ॥ ೧೮ ॥

ಶ್ರವಣ, ಕೀರ್ತನೆ, ಸ್ಮರಣೆ, ಅವನ ಸೇವೆ, ಪೂಜೆ ಮತ್ತು ನಮಸ್ಕಾರ, ಅವನ ಕುರಿತು ದಾಸ್ಯ, ಸಖ್ಯ, ಆತ್ಮಸಮರ್ಪಣ – ಈ ಮೂವತ್ತು ಬಗೆಯ ಆಚರಣೆಯು ಮನುಷ್ಯರೆಲ್ಲರ ಪರಮಧರ್ಮವಾಗಿದೆ. ಇವುಗಳ ಪಾಲನೆಯಿಂದ ಸರ್ವಾತ್ಮನಾದ ಭಗವಂತನು ಪ್ರಸನ್ನನಾಗುತ್ತಾನೆ. ॥ ೮-೧೨ ॥

ಧರ್ಮರಾಜನೇ! ಯಾರ ವಂಶದಲ್ಲಿ ಅಖಂಡವಾಗಿ ಸಂಸ್ಕಾರಗಳು ಆಗುತ್ತಾ ಬಂದಿವೆಯೋ, ಯಾರನ್ನು ಬ್ರಹ್ಮದೇವರು ಸಂಸ್ಕಾರಕ್ಕೆ ಯೋಗ್ಯರೆಂದು ಸ್ವೀಕರಿಸಿರುವರೋ, ಅವರನ್ನು 'ದ್ವಿಜ'ರೆಂದು ಹೇಳುತ್ತಾರೆ. ಜನ್ಮ ಮತ್ತು ಕರ್ಮಗಳಿಂದ ಶುದ್ಧರಾದ ದ್ವಿಜರಿಗಾಗಿ ಯಜ್ಞ, ಅಧ್ಯಯನ, ದಾನ ಮತ್ತು ಬ್ರಹ್ಮಚರ್ಯವೇ ಮುಂತಾದ ಎಲ್ಲ ಆಶ್ರಮಗಳ ವಿಶೇಷ ಧರ್ಮ-ಕರ್ಮಗಳೂ ವಿಹಿತವಾಗಿವೆ. ॥ ೧೩ ॥ ಅಧ್ಯಯನ, ಅಧ್ಯಾಪನ, ದಾನ ಪಡೆಯುವುದು, ದಾನ ಮಾಡುವುದು, ಯಜ್ಞ ಮಾಡುವುದು, ಯಜ್ಞ ಮಾಡಿಸುವುದು – ಈ ಆರು ಕರ್ಮಗಳು ಬ್ರಾಹ್ಮಣನದ್ದಾಗಿವೆ. ಕ್ಷತ್ರಿಯನು ದಾನವನ್ನು ತೆಗೆದುಕೊಳ್ಳಬಾರದು. ಪ್ರಜೆಗಳನ್ನು ರಕ್ಷಿಸುವ ಕ್ಷತ್ರಿಯನ ಜೀವನ ನಿರ್ವಾಹವು ಬ್ರಾಹ್ಮಣನನ್ನು ಬಿಟ್ಟು ಉಳಿದವರಿಂದ ಯಥಾಯೋಗ್ಯ ತೆರಿಗೆ, ದಂಡ (ಜುಲ್ಮಾನೆ) ಮುಂತಾದವುಗಳ ಮೂಲಕ ನಡೆಯುತ್ತದೆ. ॥ ೧೪ ॥ ವೈಶ್ಯರು ಸದಾಕಾಲ ಬ್ರಾಹ್ಮಣವಂಶೀಯರ ಅನುಯಾಯಿಗಳಾಗಿದ್ದು ಗೋರಕ್ಷಣೆ, ಕೃಷಿ ಮತ್ತು ವ್ಯಾಪಾರದ ಮೂಲಕ ತಮ್ಮ ಜೀವನವನ್ನು ನಡೆಸಬೇಕು. ಶೂದ್ರರ ಧರ್ಮವು ದ್ವಿಜಾತಿಯರ ಸೇವೆ. ಅವನ ಜೀವನ ನಿರ್ವಹಣೆಯನ್ನು ಅವನ ಒಡೆಯನು ಮಾಡುತ್ತಾನೆ. ॥ ೧೫ ॥ ಬ್ರಾಹ್ಮಣನಿಗೆ – ವಾರ್ತಾ,[1] ಶಾಲೀನ,[2] ಯಾಯಾವರ[3] ಮತ್ತು ಶಿಲೋಂಛನ[4]* ಎಂಬ ನಾಲ್ಕು ಬಗೆಯ ವೃತ್ತಿಗಳನ್ನು ಜೀವನ ನಿರ್ವಾಹಕ್ಕೆ ಹೇಳಲಾಗಿದೆ. ಇವುಗಳಲ್ಲಿ ಮುಂದು-ಮುಂದಿನ ವೃತ್ತಿಗಳು ಹಿಂದು-ಹಿಂದಿನವುಗಳಿಂದ ಶ್ರೇಷ್ಠವಾಗಿವೆ. ॥ ೧೬ ॥ ಕೀಳ್ವರ್ಣದ ಮನುಷ್ಯನು ಆಪತ್ಕಾಲವಿಲ್ಲದೆ ಉತ್ತಮ ವರ್ಣದವರ ವೃತ್ತಿಗಳನ್ನೂ ಅವಲಂಬಿಸಬಾರದು. ಕ್ಷತ್ರಿಯನು ದಾನ ಪಡೆಯುವುದನ್ನು ಬಿಟ್ಟು ಬ್ರಾಹ್ಮಣರ ಉಳಿದ ಐದೂ ವೃತ್ತಿಗಳನ್ನು ಅವಲಂಬಿಸಬಹುದು. ಆಪತ್ಕಾಲದಲ್ಲಿ ಎಲ್ಲರೂ ಎಲ್ಲರ ವೃತ್ತಿಗಳನ್ನೂ ಸ್ವೀಕರಿಸಬಹುದು. ॥ ೧೭ ॥ ಋತ, ಅಮೃತ, ಮೃತ, ಪ್ರಮೃತ ಮತ್ತು ಸತ್ಯಾನೃತ – ಇವುಗಳಲ್ಲಿ ಯಾವುದೇ ವೃತ್ತಿಯನ್ನು ಅವಲಂಬಿಸಿದರೂ ಶ್ವಾನವೃತ್ತಿಯನ್ನು ಎಂದೂ ಅವಲಂಬಿಸಬಾರದು. ॥ ೧೮ ॥ ಮಂಡಿಯಲ್ಲಿ ಚೆಲ್ಲಿಹೋದ ಧಾನ್ಯವನ್ನು (ಉಂಛ) ಹಾಗೂ ಹೊಲದಲ್ಲಿ ಬಿದ್ದಿರುವ ಧಾನ್ಯವನ್ನು (ಶಿಲ) ಹೆಕ್ಕಿತಂದು ಶಿಲೋಂಛ ವೃತ್ತಿಯಿಂದ ಜೀವನ ನಿರ್ವಾಹ ಮಾಡುವುದು 'ಋತ'ವಾಗಿದೆ. ಬೇಡದೆಯೇ ಏನಾದರೂ ಸಿಕ್ಕಿದರೆ ಅದನ್ನು ಅಯಾಚಿತ (ಶಾಲೀನ) ವೃತ್ತಿಯಿಂದ ಜೀವನನಿರ್ವಾಹ ಮಾಡುವುದು 'ಅಮೃತ'ವಾಗಿದೆ. ನಿತ್ಯವೂ

• [1] – ಯಜ್ಞ-ಅಧ್ಯಯನಾದಿಗಳನ್ನೂ ಮಾಡಿಸಿ ಹಣ ಪಡೆಯುವುದು. [2] – ಯಾಚಿಸದೇ ಏನಾದರೂ ಸಿಕ್ಕಿದರೆ ಅದರಲ್ಲೇ ನಿರ್ವಾಹ ಮಾಡುವುದು. [3] – ಪ್ರತಿದಿನವೂ ಧಾನ್ಯಾದಿಗಳನ್ನು ಬೇಡಿತರುವುದು. [4] – ರೈತನು ಹೊಲದಲ್ಲಿ ಕಟಾವುಮಾಡಿ ಧಾನ್ಯವನ್ನು ಮನೆಗೆ ಕೊಂಡುಹೋದ ಬಳಿಕ ಭೂಮಿಯಲ್ಲಿ ಬಿದ್ದಿರುವ ಕಾಳುಗಳನ್ನು 'ಶಿಲ' ಹಾಗೂ ಮಂಡಿಯಲ್ಲಿ ಬಿದ್ದಿರುವ ಧಾನ್ಯವನ್ನು 'ಉಂಛ' ಎಂದು ಹೇಳುತ್ತಾರೆ. ಆ ಶಿಲ ಮತ್ತು ಉಂಛಗಳನ್ನು ಹೆಕ್ಕಿ ತಂದು ತನ್ನ ಜೀವನ ನಿರ್ವಾಹ ಮಾಡುವುದು 'ಶಿಲೋಂಛನ' ವೃತ್ತಿ ಎಂದು ಹೇಳುತ್ತಾರೆ.

ಋತಮುಂಛಶಿಲಂ ಪ್ರೋಕ್ತಮಮೃತಂ ಯದಯಾಚಿತಮ್ ।
ಮೃತಂ ತು ನಿತ್ಯಯಾಚ್ಞಾ ಸ್ಯಾತ್ಪ್ರಮೃತಂ ಕರ್ಷಣಂ ಸ್ಮೃತಮ್ ॥ ೧೯ ॥

ಸತ್ಯಾನೃತಂ ತು ವಾಣಿಜ್ಯಂ ಶ್ವವೃತ್ತಿರ್ನೀಚಸೇವನಮ್ ।
ವರ್ಜಯೇತ್ತಾಂ ಸದಾ ವಿಪ್ರೋ ರಾಜನ್ಯಶ್ಚ ಜುಗುಪ್ಸಿತಾಮ್ ।
ಸರ್ವವೇದಮಯೋ ವಿಪ್ರಃ ಸರ್ವದೇವಮಯೋ ನೃಪಃ ॥ ೨೦ ॥

ಶಮೋ ದಮಸ್ತಪಃ ಶೌಚಂ ಸಂತೋಷಃ ಕ್ಷಾಂತಿರಾರ್ಜವಮ್ ।
ಜ್ಞಾನಂ ದಯಾಚ್ಯುತಾತ್ಮತ್ವಂ ಸತ್ಯಂ ಚ ಬ್ರಹ್ಮಲಕ್ಷಣಮ್ ॥ ೨೧ ॥

ಶೌರ್ಯಂ ವೀರ್ಯಂ ಧೃತಿಸ್ತೇಜಸ್ತ್ಯಾಗ ಆತ್ಮಜಯಃ ಕ್ಷಮಾ ।
ಬ್ರಹ್ಮಣ್ಯತಾ ಪ್ರಸಾದಶ್ಚ ರಕ್ಷಾ ಚ ಕ್ಷತ್ರಲಕ್ಷಣಮ್ ॥ ೨೨ ॥

ದೇವಗುರ್ವಚ್ಯುತೇ ಭಕ್ತಿಸ್ತ್ರಿವರ್ಗಪರಿಪೋಷಣಮ್ ।
ಆಸ್ತಿಕ್ಯಮುದ್ಯಮೋ ನಿತ್ಯಂ ನೈಪುಣ್ಯಂ ವೈಶ್ಯಲಕ್ಷಣಮ್ ॥ ೨೩ ॥

ಶೂದ್ರಸ್ಯ ಸನ್ನತಿಃ ಶೌಚಂ ಸೇವಾ ಸ್ವಾಮಿನ್ಯಮಾಯಯಾ ।
ಅಮಂತ್ರಯಜ್ಞೋ ಹ್ಯಸ್ತೇಯಂ ಸತ್ಯಂ ಗೋವಿಪ್ರರಕ್ಷಣಮ್ ॥ ೨೪ ॥

ಸ್ತ್ರೀಣಾಂ ಚ ಪತಿದೇವಾನಾಂ ತಚ್ಛುಶ್ರೂಷಾನುಕೂಲತಾ ।
ತದ್ಬಂಧುಷ್ವನುವೃತ್ತಿಶ್ಚ ನಿತ್ಯಂ ತದ್ವ್ರತಧಾರಣಮ್ ॥ ೨೫ ॥

ಸಂಮಾರ್ಜನೋಪಲೇಪಾಭ್ಯಾಂ ಗೃಹಮಂಡಲವರ್ತನೈಃ ।
ಸ್ವಯಂ ಚ ಮಂಡಿತಾ ನಿತ್ಯಂ ಪರಿಮೃಷ್ಟಪರಿಚ್ಛದಾ ॥ ೨೬ ॥

ಕಾಮೈರುಚ್ಚಾವಚೈಃ ಸಾಧ್ವೀ ಪ್ರಶ್ರಯೇಣ ದಮೇನ ಚ ।
ವಾಕ್ಯೈಃ ಸತ್ಯೈಃ ಪ್ರಿಯೈಃ ಪ್ರೇಮ್ಣಾ ಕಾಲೇ ಕಾಲೇ ಭಜೇತ್ಪತಿಮ್ ॥ ೨೭ ॥

ಸಂತುಷ್ಟಾಲೋಲುಪಾ ದಕ್ಷಾ ಧರ್ಮಜ್ಞಾ ಪ್ರಿಯಸತ್ಯವಾಕ್ ।
ಅಪ್ರಮತ್ತಾ ಶುಚಿಃ ಸ್ನಿಗ್ಧಾ ಪತಿಂ ತ್ವಪತಿತಂ ಭಜೇತ್ ॥ ೨೮ ॥

ಯಾ ಪತಿಂ ಹರಿಭಾವೇನ ಭಜೇಚ್ಛ್ರೀರಿವ ತತ್ಪರಾ ।
ಹರ್ಯಾತ್ಮನಾ ಹರೇರ್ಲೋಕೇ ಪತ್ಯಾ ಶ್ರೀರಿವ ಮೋದತೇ ॥ ೨೯ ॥

ಬೇಡಿಪಡೆಯುವುದು ಅರ್ಥಾತ್ 'ಯಾಯಾವರ' ವೃತ್ತಿಯಿಂದ ಜೀವನ ನಡೆಸುವುದು 'ಮೃತ'ವಾಗಿದೆ. ಕೃಷಿಯೇ ಮುಂತಾದವುಗಳಿಂದ 'ವಾರ್ತಾ' ವೃತ್ತಿಯಿಂದ ಜೀವನ ನಡೆಸುವುದು 'ಪ್ರಮೃತ'ವಾಗಿದೆ. ॥ ೧೯ ॥ ವಾಣಿಜ್ಯವು 'ಸತ್ಯಾನೃತ'ವಾಗಿದೆ. ಕೀಳ್ವರ್ಣದವರ ಸೇವೆಮಾಡುವುದು 'ಶ್ವಾನವೃತ್ತಿ'ಯಾಗಿದೆ. ಬ್ರಾಹ್ಮಣರು ಮತ್ತು ಕ್ಷತ್ರಿಯರು ಈ ಕೊನೆಯ ನಿಂದಿತವೃತ್ತಿಯನ್ನು ಎಂದಿಗೂ ಆಶ್ರಯಿಸಬಾರದು. ಏಕೆಂದರೆ, ಬ್ರಾಹ್ಮಣನು ಸರ್ವವೇದಮಯನಾಗಿದ್ದರೆ, ಕ್ಷತ್ರಿಯನು ಸರ್ವದೇವಮಯನಾಗಿದ್ದಾನೆ. ॥ ೨೦ ॥

ಶಮ, ದಮ, ತಪಸ್ಸು, ಶೌಚ, ಸಂತೋಷ, ಕ್ಷಮೆ, ಸರಳತೆ, ಜ್ಞಾನ, ದಯೆ, ಭಗವತ್ಪರಾಯಣತೆ, ಮತ್ತು ಸತ್ಯ – ಇವು ಬ್ರಾಹ್ಮಣನ ಲಕ್ಷಣಗಳಾಗಿವೆ. ॥ ೨೧ ॥ ಯುದ್ಧದಲ್ಲಿ ಉತ್ಸಾಹ, ವೀರತೆ, ಧೀರತೆ, ತೇಜಸ್ವಿತೆ, ತ್ಯಾಗ, ಮನಸ್ಸಿನ ಜಯ, ಕ್ಷಮೆ, ಬ್ರಾಹ್ಮಣರ ಕುರಿತು ಭಕ್ತಿ, ಅನುಗ್ರಹ, ಮತ್ತು ಪ್ರಜಾರಕ್ಷಣೆ – ಇವು ಕ್ಷತ್ರಿಯರ ಲಕ್ಷಣಗಳು. ॥ ೨೨ ॥ ದೇವತೆ, ಗುರು ಮತ್ತು ಭಗವಂತನ ಕುರಿತು ಭಕ್ತಿ, ಅರ್ಥ, ಧರ್ಮ ಮತ್ತು ಕಾಮ – ಮೂರೂ ಪುರುಷಾರ್ಥಗಳನ್ನು ರಕ್ಷಿಸುವುದು, ಆಸ್ತಿಕತೆ, ಉದ್ಯೋಗಶೀಲತೆ, ವ್ಯಾವಹಾರಿಕ ನಿಪುಣತೆ – ಇವು ವೈಶ್ಯರ ಲಕ್ಷಣಗಳಾಗಿವೆ. ॥ ೨೩ ॥ ಮೇಲಿನ ವರ್ಣದವರ ಮುಂದೆ ನಮ್ರನಾಗಿರುವುದು. ಪವಿತ್ರತೆ, ಒಡೆಯನ ನಿಷ್ಕಪಟ ಸೇವೆ, ವೈದಿಕ ಮಂತ್ರಗಳಿಲ್ಲದೆ ಯಜ್ಞಮಾಡುವುದು. ಕಳ್ಳತನ ಮಾಡದಿರುವುದು, ಸತ್ಯ ಹಾಗೂ ಗೋ-ಬ್ರಾಹ್ಮಣರ ರಕ್ಷಣೆ – ಇವು ಶೂದ್ರನ ಲಕ್ಷಣಗಳು. ॥ ೨೪ ॥

ಪತಿಯ ಸೇವೆ ಮಾಡುವುದು, ಅವನಿಗೆ ಅನುಕೂಲಳಾಗಿರುವುದು ಪತಿಯ ಸಂಬಂಧಿಗಳನ್ನು ಸಂತೋಷಪಡಿಸುವುದು, ಸದಾಕಾಲ ಪತಿಯ ನಿಯಮಗಳನ್ನು ರಕ್ಷಿಸುವುದು – ಇವು ಪತಿಯನ್ನೇ ಈಶ್ವರನೆಂದು ತಿಳಿದಿರುವ ಪತಿವ್ರತಾ ಸ್ತ್ರೀಯರ ಧರ್ಮವಾಗಿದೆ. ॥ ೨೫ ॥ ಸಾಧ್ವಿಯಾದ ಹೆಂಗಸು ಮನೆಯನ್ನು ಗುಡಿಸಿ, ಸಾರಿಸಿ, ಒರಸಿ ಮಂಡಲ ರಂಗವಲ್ಲಿಗಳಿಂದ ಓರಣವಾಗಿಟ್ಟುಕೊಳ್ಳುವಿಕೆ, ಮನೋಹರವಾದ ಉಡಿಗೆ, ತೊಡಿಗೆಗಳಿಂದ ಶರೀರವನ್ನು ಅಲಂಕರಿಸಿಕೊಳ್ಳುವಿಕೆ, ವಸ್ತುಗಳನ್ನು ಅಚ್ಚುಕಟ್ಟಾಗಿ ಇಡುವುದು ಮುಂತಾದವುಗಳನ್ನು ಮಾಡಬೇಕು. ॥ ೨೬ ॥ ತನ್ನ ಪತಿದೇವರ ಸಣ್ಣ-ದೊಡ್ಡ ಇಚ್ಛೆಗಳನ್ನು ಸಮಯಾನುಸಾರ ಪೂರೈಸುವುದು, ವಿನಯ, ಇಂದ್ರಿಯ ಸಂಯಮ, ಸತ್ಯ ಹಾಗೂ ಪ್ರಿಯವಾದ ಮಾತುಗಳಿಂದ ಪ್ರೇಮಪೂರ್ವಕವಾಗಿ ಪತಿಯ ಸೇವೆಮಾಡಬೇಕು. ॥ ೨೭ ॥ ದೊರೆತುದರಲ್ಲಿ ಸಂತುಷ್ಟಳಾಗಿದ್ದು, ಯಾವುದೇ ವಸ್ತುವಿಗಾಗಿ ಆಸೆ ಪಡಬಾರದು. ಎಲ್ಲ ಕಾರ್ಯಗಳಲ್ಲಿಯೂ ದಕ್ಷಳಾಗಿದ್ದು, ಧರ್ಮಜ್ಞಳಾಗಿರಬೇಕು. ಸತ್ಯ ಹಾಗೂ ಪ್ರಿಯವನ್ನೇ ನುಡಿಯಬೇಕು. ತನ್ನ ಕರ್ತವ್ಯಗಳಲ್ಲಿ ಎಚ್ಚರಿಕೆಯಿಂದಿರಬೇಕು. ಪವಿತ್ರಳಾಗಿದ್ದು, ಪ್ರೇಮದಿಂದ ಕೂಡಿದವಳಾಗಿ ಪತಿಯು ಧರ್ಮಭ್ರಷ್ಟನಾಗದೇ ಇದ್ದರೆ ಅವನ ಸಹವಾಸ ಮಾಡಬೇಕು. ॥ ೨೮ ॥ ಹೆಂಡತಿಯು ಲಕ್ಷ್ಮೀದೇವಿಯಂತೆ ಪತಿಪರಾಯಣೆಯಾಗಿ ತನ್ನ ಪತಿಯನ್ನು ಸಾಕ್ಷಾತ್ ಭಗವಂತನ ಸ್ವರೂಪವೆಂದು ತಿಳಿದು ಸೇವೆ ಮಾಡುವವಳ ಪತಿಯು ವೈಕುಂಠ ಲೋಕದಲ್ಲಿ ಭಗವತ್ಸ್ವರೂಪವನ್ನು ಪಡೆದುಕೊಳ್ಳುವನು. ಆವಳು ಲಕ್ಷ್ಮಿಯಂತೆ ಅವನೊಂದಿಗೆ ಆನಂದವಾಗಿರುವಳು. ॥ ೨೯ ॥

ವೃತ್ತಿಃ ಸಂಕರಜಾತೀನಾಂ ತತ್ತತ್ಕುಲಕೃತಾ ಭವೇತ್ ।
ಅಚೌರಾಣಾಮಪಾಪಾನಾಮಂತ್ಯಜಾಂತೇಽವಸಾಯಿನಾಮ್ ॥ ೩೦ ॥

ಪ್ರಾಯಃ ಸ್ವಭಾವವಿಹಿತೋ ನೃಣಾಂ ಧರ್ಮೋ ಯುಗೇ ಯುಗೇ ।
ವೇದದೃಗ್ಭಿಃ ಸ್ಮೃತೋ ರಾಜನ್ಪ್ರೇತ್ಯ ಚೇಹ ಚ ಶರ್ಮಕೃತ್ ॥ ೩೧ ॥

ವೃತ್ತ್ಯಾ ಸ್ವಭಾವಕೃತಯಾ ವರ್ತಮಾನಃ ಸ್ವಕರ್ಮಕೃತ್ ।
ಹಿತ್ವಾ ಸ್ವಭಾವಜಂ ಕರ್ಮ ಶನೈರ್ನಿರ್ಗುಣತಾಮಿಯಾತ್ ॥ ೩೨ ॥

ಉಪ್ಯಮಾನಂ ಮುಹುಃ ಕ್ಷೇತ್ರಂ ಸ್ವಯಂ ನಿರ್ವೀರ್ಯತಾಮಿಯಾತ್ ।
ನ ಕಲ್ಪತೇ ಪುನಃ ಸೂತ್ಯೈ ಉಪ್ತಂ ಬೀಜಂ ಚ ನಶ್ಯತಿ ॥ ೩೩ ॥

ಏವಂ ಕಾಮಾಶಯಂ ಚಿತ್ತಂ ಕಾಮಾನಾಮತಿಸೇವಯಾ ।
ವಿರಜ್ಯೇತ ಯಥಾ ರಾಜನ್ನಗ್ನಿವತ್ಕಾಮಬಿಂದುಭಿಃ ॥ ೩೪ ॥

ಯಸ್ಯ ಯಲ್ಲಕ್ಷಣಂ ಪ್ರೋಕ್ತಂ ಪುಂಸೋ ವರ್ಣಾಭಿವ್ಯಂಜಕಮ್ ।
ಯದನ್ಯತ್ರಾಪಿ ದೃಶ್ಯೇತ ತತ್ತೇನೈವ ವಿನಿರ್ದಿಶೇತ್ ॥ ೩೫ ॥

ಯುಧಿಷ್ಠಿರನೇ! ಕಳ್ಳತನವೇ ಮುಂತಾದ ಪಾಪಗಳನ್ನು ಆಚರಿಸದೇ ಇರುವ ಅಂತ್ಯಜ, ಚಾಂಡಾಲರೇ ಮುಂತಾದ ವರ್ಣಸಂಕರ ಜಾತಿಗಳಿಗೂ ಅವರವರ ವಂಶಪರಂಪರೆಯಿಂದ ಬಂದಿರುವ ವೃತ್ತಿಗಳೇ ಅವರ ಜೀವನೋಪಾಯಗಳು. ॥ ೩೦ ॥ ವೇದದರ್ಶಿ ಋಷಿ-ಮುನಿಗಳು ಸಾಮಾನ್ಯವಾಗಿ ಯುಗ-ಯುಗಗಳಲ್ಲಿ ಮನುಷ್ಯರ ಸ್ವಭಾವಕ್ಕನುಸಾರ ಧರ್ಮದ ವ್ಯವಸ್ಥೆ ಮಾಡಿರುವರು. ಆ ಧರ್ಮವೇ ಅವರಿಗೆ ಇಹ-ಪರಲೋಕಗಳಲ್ಲಿ ಕಲ್ಯಾಣಕಾರಿಯಾಗಿದೆ ॥ ೩೧ ॥ ಸ್ವಾಭಾವಿಕ ವೃತ್ತಿಯನ್ನು ಆಶ್ರಯಿಸಿ ತಮ್ಮ ಸ್ವಧರ್ಮವನ್ನು ಪಾಲಿಸುವವರು – ನಿಧಾನವಾಗಿ ಆ ಸ್ವಾಭಾವಿಕ ಕರ್ಮಗಳಿಂದಲೂ ಮೀರಿದವರಾಗಿ ತ್ರಿಗುಣಾತೀತರೇ ಆಗುವರು. ॥ ೩೨ ॥ ಮಹಾರಾಜಾ! ಮತ್ತೆ-ಮತ್ತೆ ಉಳುವುದರಿಂದ ಹೊಲವು ಶಕ್ತಿಹೀನವಾಗಿ, ಅದರಲ್ಲಿ ಬಿತ್ತಿದ ಬೀಜವು ಮೊಳೆಯುವುದೂ ನಿಂತುಹೋಗುತ್ತದೆ. ಹಾಗೆಯೇ ವಾಸನೆಗಳ ಭಂಡಾರವಾದ ಈ ಚಿತ್ತವು ವಿಷಯಗಳನ್ನು ಮಿತಿಮೀರಿ ಸೇವಿಸುವುದರಿಂದ ಬಗೆಗೆ ಬೇಸರಹೊಂದುವುದು. ಆದರೆ ಸ್ವಲ್ಪ ಭೋಗಗಳಿಂದ ಹೀಗಾಗುವುದಿಲ್ಲ. ಒಂದೇ-ಒಂದು ಬೊಟ್ಟು ತುಪ್ಪ ಹಾಕುವುದರಿಂದ ಬೆಂಕಿಯು ನಂದಿಹೋಗುವುದಿಲ್ಲ. ಆದರೆ ಒಮ್ಮೆಲೇ ಹೆಚ್ಚು ತುಪ್ಪ ಸುರಿದರೆ ಅದು ನಂದಿ ಹೋದೀತು. ॥ ೩೩-೩೪ ॥ ಮೇಲೆ ಹೇಳಲಾದ ಲಕ್ಷಣಗಳು ಎಲ್ಲಿ ಕಂಡು ಬಂದರೂ ಅವನನ್ನು ಆ ವರ್ಣದವನೆಂದು ತಿಳಿಯಬೇಕು. ॥ ೩೫ ॥

ಹನ್ನೊಂದನೆಯ ಅಧ್ಯಾಯವು ಮುಗಿಯಿತು. ॥ ೧೧ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಸಪ್ತಮಸ್ಕಂಧೇ
ಯುಧಿಷ್ಠಿರ-ನಾರದಸಂವಾದೇ ಸದಾಚಾರನಿರ್ಣಯೋ ನಾಮೈಕಾದಶೋಽಧ್ಯಾಯಃ ॥ ೧೧ ॥

ಹನ್ನೆರಡನೆಯ ಅಧ್ಯಾಯ

ಬ್ರಹ್ಮಚರ್ಯ ಮತ್ತು ವಾನಪ್ರಸ್ಥ ಆಶ್ರಮಗಳ ವರ್ಣನೆ

ನಾರದ ಉವಾಚ

ಬ್ರಹ್ಮಚಾರೀ ಗುರುಕುಲೇ ವಸನ್ದಾಂತೋ ಗುರೋರ್ಹಿತಮ್ ।
ಆಚರನ್ದಾಸವನ್ನೀಚೋ ಗುರೌ ಸುದೃಢಸೌಹೃದಃ ॥ ೧ ॥

ಸಾಯಂ ಪ್ರಾತರುಪಾಸೀತ ಗುರ್ವಗ್ನ್ಯರ್ಕಸುರೋತ್ತಮಾನ್ ।
ಉಭೇ ಸಂಧ್ಯೇ ಚ ಯತವಾಗ್ಜಪನ್ ಬ್ರಹ್ಮ ಸಮಾಹಿತಃ ॥ ೨ ॥

ಛಂದಾಂಸ್ಯಧೀಯೀತ ಗುರೋರಾಹೂತಶ್ಚೇತ್ಸುಯಂತ್ರಿತಃ ।
ಉಪಕ್ರಮೇಽವಸಾನೇ ಚ ಚರಣೌ ಶಿರಸಾ ನಮೇತ್ ॥ ೩ ॥

ನಾರದ ಮಹರ್ಷಿಗಳು ಹೇಳುತ್ತಾರೆ – ಧರ್ಮರಾಜನೇ! ಗುರುಕುಲದಲ್ಲಿ ವಾಸಿಸುವ ಬ್ರಹ್ಮಚಾರಿಯು ತನ್ನ ಇಂದ್ರಿಯಗಳನ್ನು ವಶದಲ್ಲಿರಿಸಿಕೊಂಡು, ದಾಸನಂತೆ ತನ್ನನ್ನು ಚಿಕ್ಕವನೆಂದು ತಿಳಿದು, ಗುರುಗಳ ಚರಣಗಳಲ್ಲಿ ದೃಢವಾದ ಭಕ್ತಿಯನ್ನಿರಿಸಿ, ಅವರ ಹಿತದ ಕಾರ್ಯವನ್ನೇ ಮಾಡುತ್ತಾ ಇರಬೇಕು. ॥ ೧ ॥ ಸಾಯಂಕಾಲ ಮತ್ತು ಪ್ರಾತಃಕಾಲಗಳಲ್ಲಿ ಗುರು, ಅಗ್ನಿ, ಸೂರ್ಯ ಮತ್ತು ಶ್ರೇಷ್ಠ ದೇವತೆಗಳ ಉಪಾಸನೆ ಮಾಡಬೇಕು. ಮೌನವಾಗಿದ್ದು ಏಕಾಗ್ರತೆಯಿಂದ ಗಾಯತ್ರಿಯ ಜಪವನ್ನು ಮಾಡುತ್ತಾ ಎರಡೂ ಹೊತ್ತಿನಲ್ಲಿ ಸಂಧ್ಯಾವಂದನೆ ಮಾಡಬೇಕು. ॥ ೨ ॥ ಗುರುಗಳು ಕರೆದಾಗಲೇ ಪೂರ್ಣವಾಗಿ ಅನುಶಾಸನದಲ್ಲಿದ್ದುಕೊಂಡು ಅವರಿಂದ ವೇದವನ್ನು ಕಲಿಯಬೇಕು. ವೇದಪಾಠದ ಮೊದಲಿಗೆ ಮತ್ತು ಕೊನೆಯಲ್ಲಿ ಗುರುಗಳ ಚರಣಗಳಲ್ಲಿ ತಲೆಯನ್ನಿಟ್ಟು ನಮಸ್ಕರಿಸಬೇಕು. ॥ ೩ ॥

ಮೇಖಲಾಜಿನವಾಸಾಂಸಿ ಜಟಾದಂಡ ಕಮಂಡಲೂನ್ ।
ಬಿಭೃಯಾದುಪವೀತಂ ಚ ದರ್ಭಪಾಣಿರ್ಯಥೋದಿತಮ್ ॥ ೪ ॥

ಸಾಯಂ ಪ್ರಾತಶ್ಚರೇದ್ಭೈಕ್ಷ್ಯಂ ಗುರವೇ ತನ್ನಿವೇದಯೇತ್ ।
ಭುಂಜೀತ ಯದ್ಯನುಜ್ಞಾತೋ ನೋ ಚೇದುಪವಸೇತ್ಕ್ವಚಿತ್ ॥ ೫ ॥

ಸುಶೀಲೋ ಮಿತಭುಗ್ದಕ್ಷಃ ಶ್ರದ್ದಧಾನೋ ಜಿತೇಂದ್ರಿಯಃ ।
ಯಾವದರ್ಥಂ ವ್ಯವಹರೇತ್ ಸ್ತ್ರೀಷು ಸ್ತ್ರೀನಿರ್ಜಿತೇಷು ಚ ॥ ೬ ॥

ವರ್ಜಯೇತ್ಪ್ರಮದಾಗಾಥಾಮಗೃಹಸ್ಥೋ ಬೃಹದ್ವ್ರತಃ ।
ಇಂದ್ರಿಯಾಣಿ ಪ್ರಮಾಥೀನಿ ಹರಂತ್ಯಪಿ ಯತೇರ್ಮನಃ ॥ ೭ ॥

ಕೇಶಪ್ರಸಾಧನೋನ್ಮರ್ದಸ್ನಪನಾಭ್ಯಂಜನಾದಿಕಮ್ ।
ಗುರುಸ್ತ್ರೀಭಿರ್ಯುವತಿಭಿಃ ಕಾರಯೇನ್ನಾತ್ಮನೋ ಯುವಾ ॥ ೮ ॥

ನನ್ವಗ್ನಿಃ ಪ್ರಮದಾ ನಾಮ ಘೃತಕುಂಭಸಮಃ ಪುಮಾನ್ ।
ಸುತಾಮಪಿ ರಹೋ ಜಹ್ಯಾದನ್ಯದಾ ಯಾವದರ್ಥಕೃತ್ ॥ ೯ ॥

ಕಲ್ಪಯಿತ್ವಾಽಽತ್ಮನಾ ಯಾವದಾಭಾಸಮಿದಮೀಶ್ವರಃ ।
ದ್ವೈತಂ ತಾವನ್ನ ವಿರಮೇತ್ತತೋ ಹ್ಯಸ್ಯ ವಿಪರ್ಯಯಃ ॥ ೧೦ ॥

ಏತತ್ಸರ್ವಂ ಗೃಹಸ್ಥಸ್ಯ ಸಮಾಮ್ನಾತಂ ಯತೇರಪಿ ।
ಗುರುವೃತ್ತಿರ್ವಿಕಲ್ಪೇನ ಗೃಹಸ್ಥಸ್ಯರ್ತುಗಾಮಿನಃ ॥ ೧೧ ॥

ಅಂಜನಾಭ್ಯಂಜನೋನ್ಮರ್ದಸ್ತ್ರ್ಯವಲೇಖಾಮಿಷಂ ಮಧು ।
ಸ್ರಗ್ಗಂಧಲೇಪಾಲಂಕಾರಾನ್ಸ್ತ್ಯಜೇಯುರ್ಯೇ ಧೃತವ್ರತಾಃ ॥ ೧೨ ॥

ಉಷಿತ್ವೈವಂ ಗುರುಕುಲೇ ದ್ವಿಜೋಽಧೀತ್ಯಾವಬುಧ್ಯ ಚ ।
ತ್ರಯೀಂ ಸಾಂಗೋಪನಿಷದಂ ಯಾವದರ್ಥಂ ಯಥಾಬಲಮ್ ॥ ೧೩ ॥

ಶಾಸ್ತ್ರದ ಆಜ್ಞೆಯಂತೆ ಮೇಖಲೆ, ಮೃಗಚರ್ಮ, ವಸ್ತ್ರ, ಜಟೆ, ದಂಡ, ಕಮಂಡಲು, ಯಜ್ಞೋಪವೀತ ಹಾಗೂ ಕೈಯಲ್ಲಿ ದರ್ಭೆಗಳ ಪವಿತ್ರಕವನ್ನು ಧರಿಸಬೇಕು. ॥ ೪ ॥ ಸಾಯಂಕಾಲ ಮತ್ತು ಪ್ರಾತಃಕಾಲಗಳಲ್ಲಿ ಭಿಕ್ಷೆಯನ್ನು ಎತ್ತಿತಂದು ಅದನ್ನು ಗುರುಗಳಿಗೆ ಅರ್ಪಿಸಬೇಕು. ಅವರು ಅಪ್ಪಣೆ ಮಾಡಿದಾಗ ಭೋಜನ ಮಾಡಬೇಕು. ಇಲ್ಲದಿದ್ದರೆ ಉಪವಾಸವಿರಬೇಕು. ॥ ೫ ॥ ತನ್ನ ಶೀಲವನ್ನು ಕಾಪಾಡಿಕೊಳ್ಳಬೇಕು. ಮಿತವಾಗಿ ಭೋಜನ ಮಾಡಬೇಕು. ತನ್ನ ಕೆಲಸಗಳನ್ನು ನಿಷ್ಠೆಯಿಂದ ಮಾಡಬೇಕು. ಶ್ರದ್ಧೆ ಇರಿಸಬೇಕು. ಇಂದ್ರಿಯಗಳನ್ನು ತನ್ನ ವಶದಲ್ಲಿರಿಸಿಕೊಳ್ಳಬೇಕು. ಸ್ತ್ರೀಯರೊಂದಿಗೆ ಮತ್ತು ಸ್ತ್ರೀಯರ ವಶದಲ್ಲಿರುವವರೊಂದಿಗೆ ಆವಶ್ಯಕತೆ ಇದ್ದಷ್ಟೇ ವ್ಯವಹಾರವಿಟ್ಟುಕೊಳ್ಳಬೇಕು. ॥ ೬ ॥ ಗೃಹಸ್ಥನಾಗದೆ ಬ್ರಹ್ಮಚರ್ಯ ವ್ರತದಲ್ಲೇ ಇರುವವನು ಸ್ತ್ರೀಯರ ಚರ್ಚೆಗಳಿಂದ ದೂರವಿರಬೇಕು. ಇಂದ್ರಿಯಗಳು ಅತ್ಯಂತ ಬಲಿಷ್ಠವಾಗಿರುವುವು. ಇವು ಪ್ರಯತ್ನ ಪೂರ್ವಕ ಸಾಧನೆ ಮಾಡುವವರ ಮನಸ್ಸನ್ನೂ ಕೂಡ ಸೆಳೆದು ಕೊಳ್ಳುವುವು. ॥ ೭ ॥ ಯುವಕನಾದ ಬ್ರಹ್ಮಚಾರಿಯು ಯುವತಿಯರಾದ ಗುರುಪತ್ನಿಯರಿಂದ ಕೂದಲು ಬಾಚಿಸಿ ಕೊಳ್ಳುವುದು, ಶರೀರ ತಿಕ್ಕಿಸಿಕೊಳ್ಳುವುದು, ಸ್ನಾನ ಮಾಡಿಸಿಕೊಳ್ಳುವುದು, ಎಣ್ಣೆ ಹಚ್ಚಿಸಿಕೊಳ್ಳುವುದು ಮುಂತಾದ ಕಾರ್ಯಗಳನ್ನು ಮಾಡಿಸಿಕೊಳ್ಳಬಾರದು. ॥ ೮ ॥ ಸ್ತ್ರೀಯರು ಬೆಂಕಿಯಂತಿದ್ದು, ಪುರುಷರು ತುಪ್ಪದ ಗಡಿಗೆಯಂತಿದ್ದಾರೆ. ಏಕಾಂತದಲ್ಲಿ ತನ್ನ ಮಗಳೊಂದಿಗೂ ಇರಬಾರದು. ಆಕೆಯು ಏಕಾಂತದಲ್ಲಿರದಿದ್ದರೂ ಆವಳೊಂದಿಗೆ ಆವಶ್ಯಕವಷ್ಟೇ ಇರಬೇಕು. ॥ ೯ ॥ ಜೀವನು ಆತ್ಮ ಸಾಕ್ಷಾತ್ಕಾರದ ಮೂಲಕ ಈ ದೇಹ-ಇಂದ್ರಿಯಗಳನ್ನು ಪ್ರತೀತಿ ಮಾತ್ರವೆಂದು ನಿಶ್ಚಯಿಸಿ ಸ್ವತಂತ್ರನಾಗುವವರೆಗೆ 'ನಾನು ಪುರುಷ ನಾಗಿದ್ದೇನೆ, ಈಕೆಯು ಸ್ತ್ರೀಯಾಗಿದ್ದಾಳೆ' ಎಂಬ ದ್ವೈತವು ಅಳಿಯುವುದಿಲ್ಲ, ಅಲ್ಲಿಯವರೆಗೆ ಇಂತಹ ಪುರುಷರು ಸ್ತ್ರೀಯ ಸಂಸರ್ಗದಲ್ಲಿ ಇದ್ದರೆ ಅವನಿಗೆ ಅವಳಲ್ಲಿ ಭೋಗ್ಯಬುದ್ಧಿಯು ಉಂಟಾಗುವುದೂ ನಿಶ್ಚಿತವಾಗಿದೆ. ॥ ೧೦ ॥

ಈ ಶೀಲರಕ್ಷಣೆಯೇ ಮುಂತಾದ ಗುಣಗಳು ಗೃಹಸ್ಥನಿಗೂ ಮತ್ತು ಸಂನ್ಯಾಸಿಗೂ ಕೂಡ ನಿಯತವಾಗಿವೆ. ಗುರುಕುಲದಲ್ಲಿದ್ದು ಗುರುವಿನ ಸೇವೆ, ಶುಶ್ರೂಷೆಗಳಲ್ಲೇ ನಿರತನಾಗಿರುವುದು ಗೃಹಸ್ಥನಿಗೆ ವೈಕಲ್ಪಿಕ, ಅನಿವಾರ್ಯವಲ್ಲ, ಏಕೆಂದರೆ, ಋತುಗಮನದಿಂದಾಗಿ ಅವನಿಗೆ ಅಲ್ಲಿಂದ ಬೇರೆಯಾಗಬೇಕಾಗುತ್ತದೆ. ॥ ೧೧ ॥ ಬ್ರಹ್ಮಚರ್ಯವ್ರತವನ್ನು ಕೈಗೊಂಡಿರುವವನು ಕಣ್ಣಿಗೆ ಕಾಡಿಗೆ ಹಚ್ಚಿಕೊಳ್ಳಬಾರದು. ಮೈಗೆ ಎಣ್ಣೆ ಹಚ್ಚಿಕೊಳ್ಳಬಾರದು. ಸ್ತ್ರೀಯರ ಚಿತ್ರಗಳನ್ನು ಬರೆಯಬಾರದು. ಮದ್ಯ-ಮಾಂಸವನ್ನು ಸೇವಿಸಲೇಬಾರದು. ಹೂಮಾಲೆ, ಅತ್ತರು, ಗಂಧ ಮತ್ತು ಆಭೂಷಣಗಳನ್ನು ತೊರೆಯಬೇಕು. ॥ ೧೨ ॥ ಹೀಗೆ ಗುರುಕುಲದಲ್ಲಿ ವಾಸಮಾಡಿ ದ್ವಿಜಾತಿಯಾದವನು ತನ್ನ ಶಕ್ತಿ ಮತ್ತು ಆವಶ್ಯಕತೆಗನುಸಾರ ವೇದವನ್ನು, ವೇದಾಂಗಗಳಾದ – ಶಿಕ್ಷಾ, ವ್ಯಾಕರಣ, ಛಂದಸ್ಸು ನಿರುಕ್ತ, ಜ್ಯೋತಿಷ್ಯ, ಕಲ್ಪ – ಇವುಗಳನ್ನೂ, ಉಪನಿಷತ್ತುಗಳನ್ನೂ ಅಧ್ಯಯನ ಮಾಡಿ ಜ್ಞಾನವನ್ನು ಗಳಿಸಬೇಕು. ॥ ೧೩ ॥

ದತ್ತ್ವಾ ವರಮನುಜ್ಞಾತೋ ಗುರೋಃ ಕಾಮಂ ಯದೀಶ್ವರಃ ।
ಗೃಹಂ ವನಂ ವಾ ಪ್ರವಿಶೇತ್ಪ್ರವ್ರಜೇತ್ತತ್ರ ವಾ ವಸೇತ್ ॥ ೧೪ ॥

ಅಗ್ನೌ ಗುರಾವಾತ್ಮನಿ ಚ ಸರ್ವಭೂತೇಷ್ವಧೋಕ್ಷಜಮ್ ।
ಭೂತೈಃ ಸ್ವಧಾಮಭಿಃ ಪಶ್ಯೇದಪ್ರವಿಷ್ಟಂ ಪ್ರವಿಷ್ಟವತ್ ॥ ೧೫ ॥

ಏವಂವಿಧೋ ಬ್ರಹ್ಮಚಾರೀ ವಾನಪ್ರಸ್ಥೋ ಯತಿರ್ಗೃಹೀ ।
ಚರನ್ವಿದಿತವಿಜ್ಞಾನಃ ಪರಂ ಬ್ರಹ್ಮಾಧಿಗಚ್ಛತಿ ॥ ೧೬ ॥

ವಾನಪ್ರಸ್ಥಸ್ಯ ವಕ್ಷ್ಯಾಮಿ ನಿಯಮಾನ್ಮುನಿಸಮ್ಮತಾನ್ ।
ಯಾನಾಸ್ಥಾಯ ಮುನಿರ್ಗಚ್ಛೇದೃಷಿಲೋಕಮುಹಾಂಜಸಾ ॥ ೧೭ ॥

ನ ಕೃಷ್ಟಪಚ್ಯಮಶ್ನೀಯಾದಕೃಷ್ಟಂ ಚಾಪ್ಯಕಾಲತಃ ।
ಅಗ್ನಿಪಕ್ವಮಥಾಮಂ ವಾ ಅರ್ಕಪಕ್ವಮುತಾಹರೇತ್ ॥ ೧೮ ॥

ವನ್ಯೈಶ್ಚರುಪುರೋಡಾಶಾನ್ನಿರ್ವಪೇತ್ಕಾಲಚೋದಿತಾನ್ ।
ಲಬ್ಧೇ ನವೇ ನವೇಽನ್ನಾದ್ಯೇ ಪುರಾಣಂ ಚ ಪರಿತ್ಯಜೇತ್ ॥ ೧೯ ॥

ಅಗ್ನ್ಯರ್ಥಮೇವ ಶರಣಮುಟಜಂ ವಾದ್ರಿಕಂದರಾಮ್ ।
ಶ್ರಯೇತ ಹಿಮವಾಯ್ವಗ್ನಿವರ್ಷಾರ್ಕಾತಪಷಾಟ್ಸ್ವಯಮ್ ॥ ೨೦ ॥

ಕೇಶರೋಮನಖಶ್ಮಶ್ರುಮಲಾನಿ ಜಟಿಲೋ ದಧತ್ ।
ಕಮಂಡಲ್ವಜಿನೇ ದಂಡವಲ್ಕಲಾಗ್ನಿಪರಿಚ್ಛದಾನ್ ॥ ೨೧ ॥

ಚರೇದ್ವನೇ ದ್ವಾದಶಾಬ್ದಾನಷ್ಟೌ ವಾ ಚತುರೋ ಮುನಿಃ ।
ದ್ವಾವೇಕಂ ವಾ ಯಥಾ ಬುದ್ಧಿರ್ನ ವಿಪದ್ಯೇತ ಕೃಚ್ಛ್ರತಃ ॥ ೨೨ ॥

ಯದಾಕಲ್ಪಃ ಸ್ವಕ್ರಿಯಾಯಾಂ ವ್ಯಾಧಿಭಿರ್ಜರಯಾಥವಾ ।
ಆನ್ವೀಕ್ಷಿಕ್ಯಾಂ ವಾ ವಿದ್ಯಾಯಾಂ ಕುರ್ಯಾದನಶನಾದಿಕಮ್ ॥ ೨೩ ॥

ಅನಂತರ ಸಾಮರ್ಥ್ಯವಿದ್ದರೆ ಗುರುಗಳು ಕೇಳಿದಷ್ಟು ಗುರುದಕ್ಷಿಣೆಯನ್ನು ಕೊಡಬೇಕು. ಮತ್ತೆ ಅವರ ಅನುಮತಿಯನ್ನು ಪಡೆದು ಗೃಹಸ್ಥಾಶ್ರಮ, ವಾನಪ್ರಸ್ಥ ಅಥವಾ ಸಂನ್ಯಾಸ ಆಶ್ರಮಗಳಲ್ಲಿ ಪ್ರವೇಶಿಸಲಿ. ಅಥವಾ ಆಜೀವನ ಬ್ರಹ್ಮಚರ್ಯವನ್ನು ಪಾಲಿಸುತ್ತಾ ಅದೇ ಆಶ್ರಮದಲ್ಲಿ ಇರಬಹುದು. ॥ ೧೪ ॥ ಭಗವಂತನು ಸ್ವರೂಪತಃ ಸರ್ವತ್ರ ಏಕರಸನಾಗಿ ನೆಲೆಸಿದ್ದಾನೆ. ಆದ್ದರಿಂದ ಅವನು ಎಲ್ಲಿಗೂ ಪ್ರವೇಶಿಸುವುದು ಅಥವಾ ಹೊರಟುಹೋಗುವುದು ಆಗಲಾರದು. ಹೀಗಿದ್ದರೂ ಅಗ್ನಿ, ಗುರು, ಆತ್ಮಾ ಮತ್ತು ಸಮಸ್ತ ಪ್ರಾಣಿಗಳಲ್ಲಿ ತನ್ನ ಆಶ್ರಿತ ಜೀವರೊಂದಿಗೆ ಅವನು ವಿಶೇಷರೂಪದಿಂದ ವಿರಾಜಿಸುತ್ತಿದ್ದಾನೆ. ಅದಕ್ಕಾಗಿ ಇವುಗಳನ್ನು ಪರಮಾತ್ಮಭಾವದಿಂದ ನೋಡಬೇಕು. ॥ ೧೫ ॥ ಹೀಗೆ ಆಚರಿಸುವುದರಿಂದ ಬ್ರಹ್ಮಚಾರಿಯಾಗಲೀ, ವಾನಪ್ರಸ್ಥನಾಗಲೀ, ಸಂನ್ಯಾಸಿಯಾಗಲೀ ಅಥವಾ ಗೃಹಸ್ಥನಾಗಲೀ ವಿಜ್ಞಾನಸಂಪನ್ನನಾಗಿ ಪರಬ್ರಹ್ಮತತ್ತ್ವದ ಅನುಭವವನ್ನು ಪಡೆದುಕೊಳ್ಳುತ್ತಾನೆ. ॥ ೧೬ ॥

ಈಗ ನಾನು ಋಷಿಗಳ ಮತಾನುಸಾರವಾಗಿ ವಾನಪ್ರಸ್ಥ ಆಶ್ರಮದ ನಿಯಮಗಳನ್ನು ಹೇಳುತ್ತೇನೆ. ಇವುಗಳ ಆಚರಣೆಯಿಂದ ವಾನಪ್ರಸ್ಥ ಆಶ್ರಮಿಯು ಅನಾಯಾಸವಾಗಿ ಋಷಿಗಳ ಲೋಕವಾದ ಮಹರ್ಲೋಕವನ್ನು ಹೊಂದುವನು. ॥ ೧೭ ॥ ವಾನಪ್ರಸ್ಥಾಶ್ರಮಿಯು ಉತ್ತಿರುವ ನೆಲದಲ್ಲಿ ಬೆಳೆದ ಅಕ್ಕಿ, ಗೋಧಿ ಮುಂತಾದ ಧಾನ್ಯಗಳನ್ನು ತಿನ್ನಕೂಡದು. ಉಳದೇ ಉತ್ಪನ್ನವಾದ ಧಾನ್ಯವೂ ಕೂಡ ಅಕಾಲದಲ್ಲಿ ಬೆಳೆದಿದ್ದರೆ ಅದನ್ನು ಕೂಡ ತಿನ್ನಬಾರದು. ಬೆಂಕಿಯಲ್ಲಿ ಬೇಯಿಸಿದ ಅಥವಾ ಹಸಿಯಾದ ಧಾನ್ಯವನ್ನೂ ತಿನ್ನಬಾರದು. ಕೇವಲ ಸೂರ್ಯನ ತಾಪದಿಂದ ಪಕ್ವವಾದ ಕಂದ, ಮೂಲ, ಫಲ ಮುಂತಾದವುಗಳನ್ನೇ ಸೇವಿಸಬೇಕು. ॥ ೧೮ ॥ ಕಾಡಿನಲ್ಲಿ ತಾನಾಗಿಯೇ ಬೆಳೆದ ಧಾನ್ಯಗಳಿಂದ ನಿತ್ಯ-ನೈಮಿತ್ತಿಕ ಚರು ಮತ್ತು ಪುರೋಡಾಶವನ್ನು ಸಿದ್ಧಗೊಳಿಸಿ ಹವನ ಮಾಡಬೇಕು. ಹೊಸದಾಗಿ ಅನ್ನ, ಫಲ, ಪುಷ್ಪ ಮುಂತಾದವುಗಳು ಸಿಗಲು ಪ್ರಾರಂಭವಾದಾಗ ಸಂಗ್ರಹಿಸಿಟ್ಟ ಹಳೆಯ ಆಹಾರವನ್ನು ತ್ಯಜಿಸಿಬಿಡಬೇಕು. ॥ ೧೯ ॥ ಅಗ್ನಿಹೋತ್ರದ ಅಗ್ನಿಯ ರಕ್ಷಣೆಗಾಗಿಯೇ ಮನೆಯನ್ನು, ಪರ್ಣಕುಟಿಯನ್ನು ಅಥವಾ ಪರ್ವತದ ಗುಹೆಯನ್ನು ಆಶ್ರಯಿಸಬೇಕು. ಸ್ವತಃ ಚಳಿ, ಗಾಳಿ, ಮಳೆ ಬಿಸಿಲುಗಳನ್ನು ಸಹಿಸಿಕೊಳ್ಳಬೇಕು. ॥ ೨೦ ॥ ತಲೆಯಲ್ಲಿ ಜಟೆಯನ್ನು ಧರಿಸಬೇಕು ಮತ್ತು ಕೂದಲು, ರೋಮ, ಉಗುರು ಹಾಗೂ ಗಡ್ಡ-ಮೀಸೆಗಳನ್ನು ಕತ್ತರಿಸಬಾರದು. ಮೈಕೊಳೆಯನ್ನೂ ಕೂಡ ತೆಗೆಯಬಾರದು. ಕಮಂಡಲು, ಮೃಗಚರ್ಮ, ದಂಡ, ವಲ್ಕಲ-ವಸ್ತ್ರ ಮತ್ತು ಅಗ್ನಿಹೋತ್ರದ ಸಾಮಗ್ರಿಗಳನ್ನು ಮಾತ್ರವೇ ತನ್ನ ಬಳಿ ಇರಿಸಿಕೊಳ್ಳಬೇಕು. ॥ ೨೧ ॥ ವಿಚಾರಶೀಲನಾದ ಮನುಷ್ಯನು ಹನ್ನೆರಡು, ಎಂಟು, ನಾಲ್ಕು, ಎರಡು ಅಥವಾ ಒಂದು ವರ್ಷದವರೆಗೆ ವಾನಪ್ರಸ್ಥಾಶ್ರಮದ ನಿಯಮಗಳನ್ನು ಪಾಲಿಸಬೇಕು. ಎಲ್ಲಾದರೂ ಹೆಚ್ಚು ತಪಸ್ಸಿನ ಕ್ಲೇಶಗಳನ್ನು ಸಹಿಸುವುದರಿಂದ ಬುದ್ಧಿಯು ಕೆಟ್ಟುಹೋಗದಂತೆ ಗಮನವಿರಿಸಬೇಕು. ॥ ೨೨ ॥

ವಾನಪ್ರಸ್ಥಾಶ್ರಮವನ್ನು ಕೈಗೊಂಡ ಮನುಷ್ಯನಿಗೆ ರೋಗ ಅಥವಾ ಮುಪ್ಪಿನ ಕಾರಣದಿಂದ ತನ್ನ ಕರ್ಮಗಳನ್ನು ಪೂರ್ಣಗೊಳಿಸಲು ಮತ್ತು ವೇದಾಂತವಿಚಾರ ಮಾಡುವ ಸಾಮರ್ಥ್ಯ

ಆತ್ಮನ್ಯಗ್ನೀನ್ಸಮಾರೋಪ್ಯ ಸಂನ್ಯಸ್ಯಾಹಂಮಮಾತ್ಮತಾಮ್ ।
ಕಾರಣೇಷು ನ್ಯಸೇತ್ಸಮ್ಯಕ್ಸಂಘಾತಂ ತು ಯಥಾರ್ಹತಃ ॥ ೨೪ ॥

ಖೇ ಖಾನಿ ವಾಯೌ ನಿಶ್ವಾಸಾಂಸ್ತೇಜಃಸೂಷ್ಮಾಣಮಾತ್ಮವಾನ್ ।
ಅಪ್ಸ್ವಸೃಕ್ಶ್ಲೇಷ್ಮಪೂಯಾನಿ ಕ್ಷಿತೌ ಶೇಷಂ ಯಥೋದ್ಭವಮ್ ॥ ೨೫ ॥

ವಾಚಮಗ್ನೌ ಸವಕ್ತವ್ಯಾಮಿಂದ್ರೇ ಶಿಲ್ಪಂ ಕರಾವಪಿ ।
ಪದಾನಿ ಗತ್ಯಾ ವಯಸಿ ರತ್ಯೋಪಸ್ಥಂ ಪ್ರಜಾಪತೌ ॥ ೨೬ ॥

ಮೃತ್ಯೌ ಪಾಯುಂ ವಿಸರ್ಗಂ ಚ ಯಥಾಸ್ಥಾನಂ ವಿನಿರ್ದಿಶೇತ್ ।
ದಿಕ್ಷು ಶ್ರೋತ್ರಂ ಸನಾದೇನ ಸ್ಪರ್ಶಮಧ್ಯಾತ್ಮನಿ ತ್ವಚಮ್ ॥ ೨೭ ॥

ರೂಪಾಣಿ ಚಕ್ಷುಷಾ ರಾಜನ್ ಜ್ಯೋತಿಷ್ಯಭಿನಿವೇಶಯೇತ್ ।
ಅಪ್ಸು ಪ್ರಚೇತಸಾ ಜಿಹ್ವಾಂ ಘ್ರೇಯೈರ್ಘ್ರಾಣಂ ಕ್ಷಿತೌ ನ್ಯಸೇತ್ ॥ ೨೮ ॥

ಮನೋ ಮನೋರಥೈಶ್ಚಂದ್ರೇ ಬುದ್ಧಿಂ ಬೋಧ್ಯೈಃ ಕವೌ ಪರೇ ।
ಕರ್ಮಾಣ್ಯಧ್ಯಾತ್ಮನಾ ರುದ್ರೇ ಯದಹಂಮಮತಾಕ್ರಿಯಾ ।
ಸತ್ತ್ವೇನ ಚಿತ್ತಂ ಕ್ಷೇತ್ರಜ್ಞೇ ಗುಣೈರ್ವೈಕಾರಿಕಂ ಪರೇ ॥ ೨೯ ॥

ಅಪ್ಸು ಕ್ಷಿತಿಮಪೋ ಜ್ಯೋತಿಷ್ಯದೋ ವಾಯೌ ನಭಸ್ಯಮುಮ್ ।
ಕೂಟಸ್ಥೇ ತಚ್ಚ ಮಹತಿ ತದವ್ಯಕ್ತೇಽಕ್ಷರೇ ಚ ತತ್ ॥ ೩೦ ॥

ಉಳಿಯದಿದ್ದಾಗ ಅವನು ಉಪವಾಸವೇ ಮುಂತಾದ ವ್ರತವನ್ನು ಆಚರಿಸಬೇಕು. ॥ ೨೩ ॥ ಉಪವಾಸದ ಮೊದಲಿಗೆ ಅವನು ತನ್ನ ಆಹವನೀಯ ಮುಂತಾದ ಅಗ್ನಿಗಳನ್ನು ತನ್ನ ಆತ್ಮನಲ್ಲಿ ಲೀನಗೊಳಿಸಿಕೊಳ್ಳಬೇಕು. 'ನಾನು ಮತ್ತು ನನ್ನದು' ಇವನ್ನು ತ್ಯಾಗಮಾಡಿ ಶರೀರವನ್ನು ಅದರ ಕಾರಣಭೂತ ತತ್ತ್ವಗಳಲ್ಲಿ ಯಥೋಚಿತವಾಗಿ ಚೆನ್ನಾಗಿ ಲೀನಗೊಳಿಸಬೇಕು. ॥ ೨೪ ॥ ಜಿತೇಂದ್ರಿಯನಾದವನು ತನ್ನ ಶರೀರದ ಛಿದ್ರಾಕಾಶಗಳನ್ನು ಮಹಾಕಾಶದಲ್ಲಿ, ಪ್ರಾಣಗಳನ್ನು ವಾಯುವಿನಲ್ಲಿ, ಉಷ್ಣತೆಯನ್ನು ಅಗ್ನಿಯಲ್ಲಿ, ರಕ್ತ, ಕಫ, ಕೀವು ಮುಂತಾದ ಜಲಕ್ಕೆ ಸೇರಿದ ತತ್ತ್ವಗಳನ್ನು ಜಲದಲ್ಲಿ ಮತ್ತು ಮೂಳೆಯೇ ಮುಂತಾದ ಘನಪದಾರ್ಥಗಳನ್ನು ಪೃಥಿವಿಯಲ್ಲಿ ಲೀನಗೊಳಿಸಬೇಕು. ॥ ೨೫ ॥ ಹೀಗೆಯೇ ವಾಣಿ ಮತ್ತು ಅದರ ಕರ್ಮ ಭಾಷಣವನ್ನು ಅದರ ಅಧಿಷ್ಠಾತೃ ದೇವತೆ ಅಗ್ನಿಯಲ್ಲಿಯೂ, ಕೈ ಮತ್ತು ಅದರಿಂದಾಗುವ ಕಲಾ-ಕೌಶಲ್ಯವನ್ನು ಇಂದ್ರನಲ್ಲಿಯೂ, ಕಾಲು ಮತ್ತು ಅದರ ಗತಿ (ನಡೆ)ಯನ್ನು ಕಾಲಸ್ವರೂಪನಾದ ವಿಷ್ಣುವಿನಲ್ಲಿಯೂ, ರತಿ ಮತ್ತು ಉಪಸ್ಥವನ್ನು ಪ್ರಜಾಪತಿಯಲ್ಲಿಯೂ, ಪಾಯು ಮತ್ತು ಮಲೋತ್ಸರ್ಗವನ್ನು ಅದರ ಆಶ್ರಯಕ್ಕನುಸಾರ ಮೃತ್ಯುವಿನಲ್ಲಿಯೂ ಲೀನಗೊಳಿಸಬೇಕು. ಶ್ರೋತ್ರ ಮತ್ತು ಅದರಿಂದ ಕೇಳುವ ಶಬ್ದವನ್ನು ದಿಕ್ಕುಗಳಲ್ಲಿಯೂ, ಸ್ಪರ್ಶ ಮತ್ತು ತ್ವಚೆಯನ್ನು ವಾಯುವಿನಲ್ಲಿಯೂ, ನೇತ್ರಸಹಿತ ರೂಪವನ್ನು ಜ್ಯೋತಿಯಲ್ಲಿಯೂ, ಮಧುರವೇ ಮುಂತಾದ ರಸಗಳ ಸಹಿತ * ರಸನೇಂದ್ರಿಯವನ್ನು ಜಲದಲ್ಲಿ ಹಾಗೂ ಯುಧಿಷ್ಠಿರನೇ! ಘ್ರಾಣೇಂದ್ರಿಯ ಹಾಗೂ ಅದರಿಂದ ಮೂಸಲಾಗು ಗಂಧವನ್ನು ಪೃಥಿವಿಯಲ್ಲಿ ಲೀನಗೊಳಿಸಬೇಕು. ॥ ೨೬-೨೮ ॥ ಮನೋರಥಗಳೊಂದಿಗೆ ಮನಸ್ಸನ್ನು ಚಂದ್ರನಲ್ಲಿಯೂ, ಅರಿವಿಗೆ ಬರುವ ಪದಾರ್ಥಗಳ ಸಹಿತ ಬುದ್ಧಿಯನ್ನು ಬ್ರಹ್ಮನಲ್ಲಿಯೂ ಹಾಗೂ ಅಹಂತೆ ಮತ್ತು ಮಮತಾರೂಪ ಕ್ರಿಯೆಗಳನ್ನು ಮಾಡುವ ಅಹಂಕಾರವನ್ನು ಅದರ ಕರ್ಮಗಳೊಂದಿಗೆ ರುದ್ರನಲ್ಲಿಯೂ ಲೀನಗೊಳಿಸಬೇಕು. ಹೀಗೆಯೇ ಚೈತನ್ಯಸಹಿತ ಚಿತ್ತವನ್ನು ಕ್ಷೇತ್ರಜ್ಞ (ಜೀವ)ನಲ್ಲಿ ಮತ್ತು ಗುಣಗಳ ಕಾರಣ ವಿಕಾರಿಯಂತೆ ಕಂಡುಬರುವ ಜೀವವನ್ನು ಪರಬ್ರಹ್ಮನಲ್ಲಿ ಲೀನಗೊಳಿಸಿ ಬಿಡಬೇಕು. ॥ ೨೯ ॥ ಜೊತೆಗೆ ಪೃಥಿವಿಯನ್ನು ಜಲದಲ್ಲಿ, ಜಲವನ್ನು ಅಗ್ನಿಯಲ್ಲಿ, ಅಗ್ನಿಯನ್ನು ವಾಯುವಿನಲ್ಲಿ, ವಾಯುವನ್ನು ಆಕಾಶದಲ್ಲಿ, ಆಕಾಶವನ್ನು ಅಹಂಕಾರದಲ್ಲಿ, ಅಹಂಕಾರವನ್ನು ಮಹತ್ತತ್ತ್ವದಲ್ಲಿ, ಮಹತ್ತತ್ತ್ವವನ್ನು ಅವ್ಯಕ್ತದಲ್ಲಿ ಮತ್ತು ಅವ್ಯಕ್ತವನ್ನು ಅವಿನಾಶಿಯಾದ ಪರಮಾತ್ಮನಲ್ಲಿ ಲಯಗೊಳಿಸಬೇಕು. ॥ ೩೦ ॥ ಈ ವಿಧವಾಗಿ ಅವಿನಾಶಿಯಾದ ಪರಮಾತ್ಮನ ರೂಪದಲ್ಲಿ ಉಳಿದಿರುವ ಚಿದ್ವಸ್ತುವೇ

* ಇಲ್ಲಿ ಮೂಲದಲ್ಲಿ 'ಪ್ರಚೇತಸಾ' ಪದವಿದೆ. ಅದರ ಅರ್ಥ 'ವರುಣನ ಸಹಿತ' ಎಂದಾಗುತ್ತದೆ. ವರುಣನು ರಸನೇಂದ್ರಿಯದ ಅಧಿಷ್ಠಾತೃವಾಗಿದ್ದಾನೆ. ಶ್ರೀಧರಸ್ವಾಮಿಯೂ ಇದೇ ಮತವನ್ನು ಸ್ವೀಕರಿಸಿರುವರು. ಆದರೆ ಈ ಪ್ರಸಂಗದಲ್ಲಿ ಸರ್ವತ್ರ ಇಂದ್ರಿಯ ಮತ್ತು ಅದರ ವಿಷಯದ ಅಧಿಷ್ಠಾತೃದೇವತೆಯಲ್ಲಿ ಲಯಗೊಳಿಸಲು ಹೇಳಲಾಗಿದೆ. ಮತ್ತೆ ರಸನೇಂದ್ರಿಯಕ್ಕಾಗಿಯೇ ಹೊಸ ಕ್ರಮ ಯುಕ್ತಿಯುಕ್ತವೆಂದು ತಿಳಿಯುವುದಿಲ್ಲ. ಅದಕ್ಕಾಗಿ ಇಲ್ಲಿ ಶ್ರೀವಿಶ್ವನಾಥ ಚಕ್ರವರ್ತಿಯ ಮತಾನುಸಾರ 'ಪ್ರಚೇತಸಾ' ಪದದ ('ಪ್ರಕೃಷ್ಟಂ ಚೇತೋ ಯತ್ರ ಸ ಪ್ರಚೇತಾಃ ಮಧುರಾದಿರಸಸ್ತೇನ' -ಯಾವುದರ ಕಡೆಗೆ ಚಿತ್ತವು ಹೆಚ್ಚಾಗಿ ಆಕೃಷ್ಟವಾಗುವ ಆ ಮಧುರಾದಿ ರಸ 'ಪ್ರಚೇತಸ್' ಆಗಿದೆ. ಅದರ ಸಹಿತ) ಈ ವಿಗ್ರಹಕ್ಕನುಸಾರ ಪ್ರಸ್ತುತ ಅರ್ಥವನ್ನು ಮಾಡಲಾಗಿದೆ ಮತ್ತು ಇದೇ ಯುಕ್ತಿಯುಕ್ತವೆಂದೂ ತಿಳಿಯುತ್ತದೆ.

ಇತ್ಯಕ್ಷರತಯಾಽಽತ್ಮಾನಂ ಚಿನ್ಮಾತ್ರಮವಶೇಷಿತಮ್ ।
ಜ್ಞಾತ್ವಾದ್ವಯೋಽಥ ವಿರಮೇದ್ದಗ್ಧಯೋನಿರಿವಾನಲಃ
॥ ೩೧ ॥

ಆತ್ಮಾ ಆಗಿದೆ. ಅದು ನಾನೇ ಆಗಿದ್ದೇನೆ – ಹೀಗೆ ತಿಳಿದುಕೊಂಡು ಅದ್ವಿತೀಯ ಭಾವದಲ್ಲಿ ನೆಲೆಗೊಳ್ಳಬೇಕು. ತನ್ನ ಆಶ್ರಯವಾದ ಕಾಷ್ಠಾದಿಗಳು ಭಸ್ಮವಾಗಿ ಹೋದಮೇಲೆ ಅಗ್ನಿಯು ಶಾಂತವಾಗಿ ತನ್ನ ಸ್ವರೂಪದಲ್ಲಿ ಸ್ಥಿತವಾಗುವಂತೆ ಅವನೂ ಸ್ವ-ಸ್ವರೂಪದಲ್ಲಿ ನೆಲೆಗೊಂಡು ಮುಕ್ತನಾಗಬೇಕು. ॥ ೩೧ ॥

ಹನ್ನೆರಡನೆಯ ಅಧ್ಯಾಯವು ಮುಗಿಯಿತು. ॥ ೧೨ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಸಪ್ತಮ ಸ್ಕಂಧೇ
ಯುಧಿಷ್ಠಿರ-ನಾರದಸಂವಾದೇ ಸದಾಚಾರನಿರ್ಣಯೋ ನಾಮ ದ್ವಾದಶೋಽಧ್ಯಾಯಃ ॥ ೧೨ ॥

ಹದಿಮೂರನೆಯ ಅಧ್ಯಾಯ

ಯತಿಧರ್ಮದ ನಿರೂಪಣೆ ಮತ್ತು ಅವಧೂತ-ಪ್ರಹ್ಲಾದ ಸಂವಾದ

ನಾರದ ಉವಾಚ

ಕಲ್ಪಸ್ತ್ವೇವಂ ಪರಿವ್ರಜ್ಯ ದೇಹಮಾತ್ರಾವಶೇಷಿತಃ ।
ಗ್ರಾಮೈಕರಾತ್ರವಿಧಿನಾ ನಿರಪೇಕ್ಷಶ್ಚರೇನ್ಮಹೀಮ್
॥ ೧ ॥

ಬಿಭೃಯಾದ್ಯದ್ಯಸೌ ವಾಸಃ ಕೌಪೀನಾಚ್ಛಾದನಂ ಪರಮ್ ।
ತ್ಯಕ್ತಂ ನ ದಂಡ ಲಿಂಗಾದೇರನ್ಯತ್ಕಿಂಚಿದನಾಪದಿ
॥ ೨ ॥

ಏಕ ಏವ ಚರೇದ್ಭಿಕ್ಷುರಾತ್ಮಾರಾಮೋಽನಪಾಶ್ರಯಃ ।
ಸರ್ವಭೂತಸುಹೃಚ್ಛಾಂತೋ ನಾರಾಯಣಪರಾಯಣಃ
॥ ೩ ॥

ಪಶ್ಯೇದಾತ್ಮನ್ಯದೋ ವಿಶ್ವಂ ಪರೇ ಸದಸತೋಽವ್ಯಯೇ ।
ಆತ್ಮಾನಂ ಚ ಪರಂ ಬ್ರಹ್ಮ ಸರ್ವತ್ರ ಸದಸನ್ಮಯೇ
॥ ೪ ॥

ಸುಪ್ತಿಪ್ರಬೋಧಯೋಃ ಸಂಧಾವಾತ್ಮನೋ ಗತಿಮಾತ್ಮದೃಕ್ ।
ಪಶ್ಯನ್ ಬಂಧಂ ಚ ಮೋಕ್ಷಂ ಚ ಮಾಯಾಮಾತ್ರಂ ನ ವಸ್ತುತಃ
॥ ೫ ॥

ನಾಭಿನಂದೇದ್ಧ್ರುವಂ ಮೃತ್ಯುಮಧ್ರುವಂ ವಾಸ್ಯ ಜೀವಿತಮ್ ।
ಕಾಲಂ ಪರಂ ಪ್ರತೀಕ್ಷೇತ ಭೂತಾನಾಂ ಪ್ರಭವಾಪ್ಯಯಮ್
॥ ೬ ॥

ನಾಸಚ್ಛಾಸ್ತ್ರೇಷು ಸಜ್ಜೇತ ನೋಪಜೀವೇತ ಜೀವಿಕಾಮ್ ।
ವಾದವಾದಾಂಸ್ತ್ಯಜೇತ್ತರ್ಕಾನ್ಪಕ್ಷಂ ಕಂ ಚ ನ ಸಂಶ್ರಯೇತ್
॥ ೭ ॥

ನಾರದರು ಹೇಳುತ್ತಾರೆ – ಧರ್ಮರಾಜನೇ! ವಾನಪ್ರಸ್ಥ ಮುನಿಗೆ ಬ್ರಹ್ಮವಿಚಾರದ ಸಾಮರ್ಥ್ಯವಿದ್ದರೆ ಶರೀರಬಿಟ್ಟು ಉಳಿದೆಲ್ಲವನ್ನು ತ್ಯಾಗಮಾಡಿ ಸಂನ್ಯಾಸಾಶ್ರಮವನ್ನು ಸ್ವೀಕರಿಸಬೇಕು. ಯಾವುದೇ ವಸ್ತು, ವ್ಯಕ್ತಿ, ಸ್ಥಾನ, ಸಮಯದ ಅಪೇಕ್ಷೆಯಿಲ್ಲದೆ ಒಂದು ಹಳ್ಳಿಯಲ್ಲಿ ಒಂದು ರಾತ್ರಿ ಮಾತ್ರ ತಂಗುವ ನಿಯಮವನ್ನು ಕೈಗೊಂಡು ಭೂಮಿಯಲ್ಲಿ ಸಂಚರಿಸಬೇಕು. ॥ ೧ ॥ ಅವನು ವಸ್ತ್ರವನ್ನು ಧರಿಸುವುದಿದ್ದರೆ ಗುಹ್ಯಾಂಗಗಳನ್ನು ಮುಚ್ಚುವಂತಹ ಕೌಪೀನವನ್ನು ಮಾತ್ರ ಧರಿಸಬೇಕು. ಯಾವುದೇ ಆಪತ್ತು ಇಲ್ಲದಿದ್ದರೆ ದಂಡ-ಕಮಂಡಲುಗಳೇ ಮುಂತಾದ ಆಶ್ರಮದ ಚಿಹ್ನೆಗಳನ್ನು ಬಿಟ್ಟು ತಾನು ತ್ಯಜಿಸಿದ ಯಾವ ವಸ್ತುವನ್ನು ಪರಿಗ್ರಹಿಸಬಾರದು. ॥ ೨ ॥ ಸಂನ್ಯಾಸಿಯು ಎಲ್ಲ ಪ್ರಾಣಿಗಳಿಗೂ ಹಿತೈಷಿಯಾಗಿದ್ದು ಶಾಂತನಾಗಿರಬೇಕು. ಭಗವತ್ಪರಾಯಣನಾಗಿ, ಯಾರ ಆಶ್ರಯವನ್ನು ಪಡೆಯದೆ ತನ್ನ ಆತ್ಮಸ್ವರೂಪದಲ್ಲೇ ರಮಿಸುತ್ತಾ ಒಬ್ಬಂಟಿಗನಾಗಿ ಸಂಚರಿಸಬೇಕು. ॥ ೩ ॥ ಈ ಸಮಸ್ತ ವಿಶ್ವವು ಕಾರ್ಯ-ಕಾರಣಗಳಿಂದ ಅತೀತನಾದ ಪರಮಾತ್ಮನಲ್ಲಿ ನೆಲೆಸಿದೆ ಎಂದು ತಿಳಿಯಬೇಕು. ಕಾರ್ಯ-ಕಾರಣಸ್ವರೂಪವಾದ ಈ ಜಗತ್ತಿನಲ್ಲಿ ಬ್ರಹ್ಮಸ್ವರೂಪನಾದ ತನ್ನ ಆತ್ಮನು ತುಂಬಿರುವನೆಂದು ನೋಡಬೇಕು. ॥ ೪ ॥ ಆತ್ಮದರ್ಶಿಯಾದ ಸಂನ್ಯಾಸಿಯು ಸುಷುಪ್ತಿ ಮತ್ತು ಎಚ್ಚರದ ಸಂಧಿಯಲ್ಲಿ ತನ್ನ ಸ್ವಸ್ವರೂಪವನ್ನು ಅನುಭವಿಸಬೇಕು. ಬಂಧ ಮತ್ತು ಮೋಕ್ಷ ಇವೆರಡೂ ಕೇವಲ ಮಾಯೆಯಾಗಿದೆ. ವಸ್ತುತಃ ಏನೂ ಇಲ್ಲ ಎಂದು ತಿಳಿಯಬೇಕು. ॥ ೫ ॥ ಶರೀರಕ್ಕೆ ಅವಶ್ಯವಾಗಿ ಬರುವ ಮೃತ್ಯುವಿನ ಕುರಿತು ಮತ್ತು ಅನಿಶ್ಚಿತ ಜೀವನದ ಕುರಿತು ಚಿಂತಿಸಬಾರದು. ಕೇವಲ ಸಮಸ್ತ ಪ್ರಾಣಿಗಳ ಉತ್ಪತ್ತಿ ಹಾಗೂ ನಾಶದ ಕಾರಣನಾದ ಕಾಲನನ್ನು ಪ್ರತೀಕ್ಷೆ ಮಾಡುತ್ತಾ ಇರಬೇಕು. ॥ ೬ ॥ ಅಸತ್-ಅನಾತ್ಮ ವಸ್ತುಗಳನ್ನು ಪ್ರತಿಪಾದನೆ ಮಾಡುವ ಶಾಸ್ತ್ರಗಳನ್ನು ಪ್ರೀತಿಸಬಾರದು. ತನ್ನ ಜೀವನ ನಿರ್ವಾಹಕ್ಕಾಗಿ ಯಾವುದೇ ವೃತ್ತಿಯನ್ನು ಅವಲಂಬಿಸಬಾರದು. ಕೇವಲ ವಾದ-ವಿವಾದಕ್ಕಾಗಿಯೇ ಯಾವುದೇ ತರ್ಕಮಾಡಬಾರದು. ಪ್ರಪಂಚದಲ್ಲಿ ಯಾರ ಪಕ್ಷವನ್ನೂ ವಹಿಸಬಾರದು. ॥ ೭ ॥

ನ ಶಿಷ್ಯಾನನುಬಧ್ನೀತ ಗ್ರಂಥಾನ್ನೈವಾಭ್ಯಸೇದ್ಬಹೂನ್ ।
ನ ವ್ಯಾಖ್ಯಾಮುಪಯುಂಜೀತ ನಾರಂಭಾನಾರಭೇತ್ಕ್ವಚಿತ್ ॥ ೮ ॥

ನ ಯತೇರಾಶ್ರಮಃ ಪ್ರಾಯೋ ಧರ್ಮಹೇತುರ್ಮಹಾತ್ಮನಃ ।
ಶಾಂತಸ್ಯ ಸಮಚಿತ್ತಸ್ಯ ಬಿಭೃಯಾದುತ ವಾ ತ್ಯಜೇತ್ ॥ ೯ ॥

ಅವ್ಯಕ್ತಲಿಂಗೋ ವ್ಯಕ್ತಾರ್ಥೋ ಮನೀಷ್ಯುನ್ಮತ್ತಬಾಲವತ್ ।
ಕವಿರ್ಮೂಕವದಾತ್ಮಾನಂ ಸ ದೃಷ್ಟ್ಯಾ ದರ್ಶಯೇನ್ನೃಣಾಮ್ ॥ ೧೦ ॥

ಅತ್ರಾಪ್ಯುದಾಹರಂತೀಮಮಿತಿಹಾಸಂ ಪುರಾತನಮ್ ।
ಪ್ರಹ್ಲಾದಸ್ಯ ಚ ಸಂವಾದಂ ಮುನೇರಾಜಗರಸ್ಯ ಚ ॥ ೧೦ ॥

ತಂ ಶಯಾನಂ ಧರೋಪಸ್ಥೇ ಕಾವೇರ್ಯಾಂ ಸಹ್ಯಸಾನುನಿ ।
ರಜಸ್ವಲೈಸ್ತನೂದೇಶೈರ್ನಿಗೂಢಾಮಲತೇಜಸಮ್ ॥ ೧೨ ॥

ದದರ್ಶ ಲೋಕಾನ್ವಿಚರಲ್ಲೋಕತತ್ತ್ವವಿವಿತ್ಸಯಾ ।
ವೃತೋಽಮಾತ್ಯೈಃ ಕತಿಪಯೈಃ ಪ್ರಹ್ಲಾದೋ ಭಗವತ್ಪ್ರಿಯಃ ॥ ೧೩ ॥

ಕರ್ಮಣಾಽಽಕೃತಿಭಿರ್ವಾಚಾ ಲಿಂಗೈರ್ವರ್ಣಾಶ್ರಮಾದಿಭಿಃ ।
ನ ವಿದಂತಿ ಜನಾ ಯಂ ವೈ ಸೋಽಸಾವಿತಿ ನ ವೇತಿ ಚ ॥ ೧೪ ॥

ತಂ ನತ್ವಾಭ್ಯರ್ಚ್ಯ ವಿಧಿವತ್ಪಾದಯೋಃ ಶಿರಸಾ ಸ್ಪೃಶನ್ ।
ವಿವಿತ್ಸುರಿದಮಪ್ರಾಕ್ಷೀನ್ಮಹಾಭಾಗವತೋಽಸುರಃ ॥ ೧೫ ॥

ಬಿಭರ್ಷಿ ಕಾಯಂ ಪೀವಾನಂ ಸೋದ್ಯಮೋ ಭೋಗವಾನ್ಯಥಾ ।
ವಿತ್ತಂ ಚೈವೋದ್ಯಮವತಾಂ ಭೋಗೋ ವಿತ್ತವತಾಮಿಹ ।
ಭೋಗಿನಾಂ ಖಲು ದೇಹೋಽಯಂ ಪೀವಾ ಭವತಿ ನಾನ್ಯಥಾ ॥ ೧೬ ॥

ನ ತೇ ಶಯಾನಸ್ಯ ನಿರುದ್ಯಮಸ್ಯ
ಬ್ರಹ್ಮನ್ನು ಹಾರ್ಥೋ ಯತ ಏವ ಭೋಗಃ ।
ಅಭೋಗಿನೋಽಯಂ ತವ ವಿಪ್ರ ದೇಹಃ
ಪೀವಾ ಯತಸ್ತದ್ವದ ನಃ ಕ್ಷಮಂ ಚೇತ್ ॥ ೧೭ ॥

ಕವಿಃ ಕಲ್ಪೋ ನಿಪುಣದೃಕ್ಚಿತ್ರಪ್ರಿಯಕಥಃ ಸಮಃ ।
ಲೋಕಸ್ಯ ಕುರ್ವತಃ ಕರ್ಮ ಶೇಷೇ ತದ್ವೀಕ್ಷಿತಾಪಿ ವಾ ॥ ೧೮ ॥

ಶಿಷ್ಯ ಮಂಡಳಿಯನ್ನು ಕೂಡಿಸಬಾರದು. ಬಹಳ ಗ್ರಂಥಗಳನ್ನು ಅಭ್ಯಾಸ ಮಾಡಕೂಡದು. ವ್ಯಾಖ್ಯಾನ-ಉಪನ್ಯಾಸವನ್ನು ಮಾಡಬಾರದು. ದೊಡ್ಡ-ದೊಡ್ಡ ಕೆಲಸಗಳನ್ನು-ಯೋಜನೆಗಳನ್ನು ಕೈಗೊಳ್ಳಬಾರದು. ॥ ೮ ॥ ಶಾಂತನೂ, ಸಮದರ್ಶಿಯೂ, ಮಹಾತ್ಮನೂ ಆದ ಸಂನ್ಯಾಸಿಗೆ ಯಾವುದೇ ಆಶ್ರಮದ ಬಂಧನವು ಧರ್ಮದ ಕಾರಣವಾಗುವುದಿಲ್ಲ. ಅವನು ತನ್ನ ಆಶ್ರಮದ ಚಿಹ್ನೆಗಳನ್ನು ಬೇಕಾದರೆ ಧರಿಸಬಹುದು, ಬೇಡವಾದರೆ ಬಿಟ್ಟುಬಿಡಬಹುದು. ॥ ೯ ॥ ಅವನ ಬಳಿಯಲ್ಲಿ ಯಾವುದೇ ಆಶ್ರಮದ ಚಿಹ್ನೆಗಳು ಇಲ್ಲದಿದ್ದರೂ ಅವನು ಆತ್ಮಾನುಸಂಧಾನದಲ್ಲಿ ಮುಳುಗಿರಬೇಕು. ಅತ್ಯಂತ ವಿಚಾರಶೀಲನಾಗಿದ್ದರೂ ಹುಚ್ಚನಂತೆ, ಬಾಲಕನಂತೆ ಕಾಣಿಸಿಕೊಳ್ಳಬೇಕು. ಕವಿ (ಜ್ಞಾನಿ)ಯಾಗಿ ಸುಂದರವಾಗಿ ಮಾತಾಡಬಲ್ಲವನಾಗಿದ್ದರೂ ಇತರರಿಗೆ ಮೂಕನಂತೆ ತೋರಿಸಿಕೊಳ್ಳಬೇಕು. ॥ ೧೦ ॥

ಯುಧಿಷ್ಠಿರನೇ! ಈ ವಿಷಯದಲ್ಲಿ ಮಹಾತ್ಮರು ಒಂದು ಪ್ರಾಚೀನ ಇತಿಹಾಸವನ್ನು ಹೇಳುತ್ತಾರೆ. ಅದು ಅವಧೂತ ಶಿರೋಮಣಿ ದತ್ತಾತ್ರೇಯಮುನಿಗಳಿಗೂ, ಭಕ್ತರಾಜ ಪ್ರಹ್ಲಾದನಿಗೂ ನಡೆದ ಸಂವಾದವಾಗಿದೆ. ॥ ೧೧ ॥ ಒಮ್ಮೆ ಭಗವಂತನ ಪರಮ ಪ್ರೇಮಿ ಪ್ರಹ್ಲಾದನು ತನ್ನ ಕೆಲವು ಮಂತ್ರಿಗಳೊಂದಿಗೆ ಜನರ ಹೃದಯದ ಮಾತನ್ನು ತಿಳಿಯಲಿಕ್ಕಾಗಿ ಲೋಕಸಂಚಾರ ಮಾಡುತ್ತಿದ್ದನು. ಆಗ ಅವನಿಗೆ ಸಹ್ಯಪರ್ವತದ ತಪ್ಪಲಿನಲ್ಲಿ ಕಾವೇರಿನದಿಯ ದಡದಲ್ಲಿ ನೆಲದಮೇಲೆ ಮಲಗಿದ್ದ ಓರ್ವ ಮುನಿಯು ದೃಷ್ಟಿಗೆ ಬಿದ್ದನು. ಅವರ ಶರೀರದ ನಿರ್ಮಲ ತೇಜಸ್ಸು - ಮೈಯಲ್ಲ ಧೂಳುತುಂಬಿದ್ದರಿಂದ ಮರೆಯಾಗಿತ್ತು. ॥ ೧೨-೧೩ ॥ ಅವರ ಕರ್ಮ, ಆಕಾರ, ಮಾತು, ವರ್ಣಾಶ್ರಮಾದಿಗಳ ಚಿಹ್ನೆಗಳಿಂದ ಇವರು ಯಾರೋ ಸಿದ್ಧಪುರುಷರಾಗಿದ್ದಾರೋ, ಅಲ್ಲವೋ ಎಂದು ಸಾಮಾನ್ಯಜನರು ತಿಳಿಯುತ್ತಿರಲಿಲ್ಲ. ॥ ೧೪ ॥ ಪರಮ ಭಾಗವತೋತ್ತಮನಾದ ಅಸುರರಾಜ ಪ್ರಹ್ಲಾದನು ಅವರ ಚರಣಗಳಲ್ಲಿ ಶಿರವನ್ನಿಟ್ಟು ನಮಸ್ಕಾರಮಾಡಿ, ವಿಧಿಪೂರ್ವಕವಾಗಿ ಅವರನ್ನು ಪೂಜಿಸಿ ತತ್ತ್ವವನ್ನು ತಿಳಿಯುವ ಇಚ್ಛೆಯಿಂದ ಹೀಗೆ ಪ್ರಶ್ನಿಸಿದನು. ॥ ೧೫ ॥ ಓ ಭಗವಂತರೇ! ತಮ್ಮ ಶರೀರವು ಉದ್ಯಮೀ ಮತ್ತು ಭೋಗೀ ಪುರುಷರಂತೆ ಹೃಷ್ಟ-ಪುಷ್ಟವಾಗಿದೆ. ಉದ್ಯೋಗ ಮಾಡುವವರಿಗೆ ಧನ ಸಿಗುತ್ತದೆ, ಧನಿಕರಿಗೆ ಭೋಗಗಳು ದೊರೆಯುತ್ತವೆ ಮತ್ತು ಭೋಗಿಗಳ ಶರೀರವೇ ಹೃಷ್ಟ-ಪುಷ್ಟವಾಗಿರುತ್ತದೆ. ಇದು ಪ್ರಪಂಚದ ನಿಯಮವಾಗಿದೆ. ಬೇರೆ ಯಾವ ಕಾರಣದಿಂದಲೂ ಹೀಗಾಗಲು ಸಾಧ್ಯವಿಲ್ಲ. ॥ ೧೬ ॥ ಪೂಜ್ಯರೇ! ನೀವು ಯಾವ ಉದ್ಯೋಗವನ್ನೂ ಮಾಡದೆ ಹೆಬ್ಬಾವಿನಂತೆ ಬಿದ್ದುಕೊಂಡಿರುವಿರಿ. ಇದರಿಂದ ನಿಮ್ಮ ಬಳಿಯಲ್ಲಿ ಧನವೂ ಇಲ್ಲ, ಮತ್ತೆ ಭೋಗಗಳು ನಿಮಗೆ ಎಲ್ಲಿಂದ ಬರಬೇಕು? ಭೂಸುರರೇ! ಭೋಗವಿಲ್ಲದೆಯೇ ನಿಮ್ಮ ಶರೀರವು ಇಷ್ಟು ಹೃಷ್ಟ-ಪುಷ್ಟ ಹೇಗಿದೆ? ನಾವು ಕೇಳಲು ಯೋಗ್ಯರಾಗಿದ್ದರೆ ಅವಶ್ಯವಾಗಿ ಹೇಳುವ ಕೃಪೆಮಾಡಬೇಕು. ॥ ೧೭ ॥ ತಾವು ಕವಿಗಳೂ, ವಿದ್ವಾಂಸರೂ, ಸಮರ್ಥರೂ, ಚತುರರೂ ಆಗಿದ್ದೀರಿ. ನಿಮ್ಮ ಮಾತುಗಳು ಅದ್ಭುತವೂ, ಪ್ರಿಯವೂ ಆಗಿರುತ್ತದೆ. ಇಂತಹ ಸ್ಥಿತಿಯಲ್ಲಿ ನೀವು ಇಡೀ ಜಗತ್ತು ಕರ್ಮ ಮಾಡುತ್ತಾ ಇರುವುದನ್ನು ನೋಡಿಯೂ ಸಮಭಾವದಿಂದ ಮಲಗಿಕೊಂಡೇ ಇರುವಿರಲ್ಲ! ಇದರ ಕಾರಣವೇನು? ॥ ೧೮ ॥

ನಾರದ ಉವಾಚ

ಸ ಇತ್ಥಂ ದೈತ್ಯಪತಿನಾ ಪರಿಪೃಷ್ಟೋ ಮಹಾಮುನಿಃ ।
ಸ್ಮಯಮಾನಸ್ತಮಭ್ಯಾಹ ತದ್ವಾಗಮೃತಯಂತ್ರಿತಃ ॥ ೧೯ ॥

ಬ್ರಾಹ್ಮಣ ಉವಾಚ

ವೇದೇದಮಸುರಶ್ರೇಷ್ಠ ಭವಾನ್ನನ್ವಾರ್ಯಸಮ್ಮತಃ ।
ಈಹೋಪರಮಯೋರ್ನೃಣಾಂ ಪದಾನ್ಯಧ್ಯಾತ್ಮಚಕ್ಷುಷಾ ॥ ೨೦ ॥

ಯಸ್ಯ ನಾರಾಯಣೋ ದೇವೋ ಭಗವಾನ್ಹೃದ್ಗತಃ ಸದಾ ।
ಭಕ್ತ್ಯಾ ಕೇವಲಯಾಜ್ಞಾನಂ ಧುನೋತಿ ಧ್ವಾಂತಮರ್ಕವತ್ ॥ ೨೧ ॥

ಅಥಾಪಿ ಬ್ರೂಮಹೇ ಪ್ರಶ್ನಾಂಸ್ತವ ರಾಜನ್ಯಥಾಶ್ರುತಮ್ ।
ಸಂಭಾವನೀಯೋ ಹಿ ಭವಾನಾತ್ಮನಃ ಶುದ್ಧಿಮಿಚ್ಛತಾಮ್ ॥ ೨೨ ॥

ತೃಷ್ಣಯಾ ಭವವಾಹಿನ್ಯಾ
ಯೋಗ್ಯೈಃ ಕಾಮೈರಪೂರಯಾ ।
ಕರ್ಮಾಣಿ ಕಾರ್ಯಮಾಣೋಽಹಂ
ನಾನಾಯೋನಿಷು ಯೋಜಿತಃ ॥ ೨೩ ॥

ಯದೃಚ್ಛಯಾ ಲೋಕಮಿಮಂ ಪ್ರಾಪಿತಃ ಕರ್ಮಭಿರ್ಭ್ರಮನ್ ।
ಸ್ವರ್ಗಾಪವರ್ಗಯೋರ್ದ್ವಾರಂ ತಿರಶ್ಚಾಂ ಪುನರಸ್ಯ ಚ ॥ ೨೪ ॥

ತತ್ರಾಪಿ ದಂಪತೀನಾಂ ಚ ಸುಖಾಯಾನ್ಯಾಪನುತ್ತಯೇ ।
ಕರ್ಮಾಣಿ ಕುರ್ವತಾಂ ದೃಷ್ಟ್ವಾ ನಿವೃತ್ತೋಽಸ್ಮಿ ವಿಪರ್ಯಯಮ್ ॥ ೨೫ ॥

ಸುಖಮಸ್ಯಾತ್ಮನೋ ರೂಪಂ ಸರ್ವೇಹೋಪರತಿಸ್ತನುಃ ।
ಮನಃಸಂಸ್ಪರ್ಶಜಾನ್ ದೃಷ್ಟ್ವಾ ಭೋಗಾನ್ಸ್ವಪ್ಸ್ಯಾಮಿ ಸಂವಿಶನ್ ॥ ೨೬ ॥

ಇತ್ಯೇತದಾತ್ಮನಃ ಸ್ವಾರ್ಥಂ ಸಂತಂ ವಿಸ್ಮೃತ್ಯ ವೈ ಪುಮಾನ್ ।
ವಿಚಿತ್ರಾಮಸತಿ ದ್ವೈತೇ ಘೋರಾಮಾಪ್ನೋತಿ ಸಂಸೃತಿಮ್ ॥ ೨೭ ॥

ನಾರದರು ಹೇಳಿದರು – ಧರ್ಮನಂದನಾ! ಪ್ರಹ್ಲಾದನು ಮಹಾಮುನಿ ದತ್ತಾತ್ರೇಯರಲ್ಲಿ ಹೀಗೆ ಪ್ರಶ್ನೆಮಾಡಿದಾಗ ಅವರು ಇವನ ಅಮೃತಮಯ ವಾಣಿಗೆ ವಶರಾಗಿ ಮುಗುಳ್ನಗುತ್ತಾ ಹೀಗೆಂದರು – ॥ ೧೯ ॥

ದತ್ತಾತ್ರೇಯರು ಹೇಳಿದರು – ಎಲೈ ಅಸುರೋತ್ತಮನೇ! ಎಲ್ಲ ಶ್ರೇಷ್ಠ ಪುರುಷರೂ ನಿನ್ನನ್ನು ಸಮ್ಮಾನಿಸುವರು. ಕರ್ಮಗಳ ಪ್ರವೃತ್ತಿ ಮತ್ತು ನಿವೃತ್ತಿ ಇವುಗಳ ಯಾವ ಫಲ ಮನುಷ್ಯನಿಗೆ ಸಿಗುತ್ತದೆ ಎಂಬುದು ನೀನು ನಿನ್ನ ಜ್ಞಾನದೃಷ್ಟಿಯಿಂದ ತಿಳಿದೇ ಇರುವೆ. ॥ ೨೦ ॥ ನಿನ್ನ ಅನನ್ಯ ಭಕ್ತಿಯಿಂದ ದೇವಾಧಿದೇವ ಭಗವಾನ್ ನಾರಾಯಣನು ಸದಾ ನಿನ್ನ ಹೃದಯದಲ್ಲಿ ಬೆಳಗುತ್ತಾ, ಸೂರ್ಯನು ಅಂಧಕಾರವನ್ನು ನಾಶಮಾಡಿಬಿಡುವಂತೆ ನಿನ್ನ ಅಜ್ಞಾನವನ್ನು ನಾಶಪಡಿಸುತ್ತಿದ್ದಾನೆ. ॥ ೨೧ ॥ ಆದರೂ ಪ್ರಹ್ಲಾದ! ನಾನು ತಿಳಿದಿರುವಂತೆ ನಿನ್ನ ಪ್ರಶ್ನೆಗಳ ಉತ್ತರಗಳನ್ನು ಕೊಡುವೆ. ಏಕೆಂದರೆ, ಆತ್ಮಶುದ್ಧಿಯ ಅಭಿಲಾಷಿಗಳು ನಿನ್ನನ್ನು ಅವಶ್ಯವಾಗಿ ಸಮ್ಮಾನಿಸಬೇಕು. ॥ ೨೨ ॥

ಪ್ರಹ್ಲಾದನೇ! ತೃಷ್ಣೆಯು ಇಚ್ಛಾನುಸಾರ ಭೋಗಗಳು ಪ್ರಾಪ್ತವಾದರೂ ಪೂರ್ಣವಾಗದಿರುವಂತಹ ಒಂದು ವಸ್ತು ಆಗಿದೆ. ಅದರಿಂದಲೇ ಹುಟ್ಟು-ಸಾವುಗಳ ಚಕ್ರದಲ್ಲಿ ಅಲೆಯಬೇಕಾಗುತ್ತದೆ. ತೃಷ್ಣೆಯು ನನ್ನಿಂದ ಎಷ್ಟು ಕರ್ಮಗಳನ್ನು ಮಾಡಿಸಿತೋ ತಿಳಿಯದು. ಅವುಗಳಿಂದಾಗಿಯೇ ಎಷ್ಟು ಯೋನಿಗಳಲ್ಲಿ ನನ್ನನ್ನು ಬೀಳಿಸಿದೆಯೋ? ತಿಳಿಯದು. ॥ ೨೩ ॥ ಕರ್ಮಗಳ ಕಾರಣದಿಂದ ಅನೇಕ ಯೋನಿಗಳಲ್ಲಿ ಅಲೆಯುತ್ತಾ ಕೊನೆಗೆ ದೈವವಶದಿಂದ ನನಗೆ – ಸ್ವರ್ಗ, ಮೋಕ್ಷ, ತಿರ್ಯಕ್ ಯೋನಿ ಹಾಗೂ ಈ ಮಾನವದೇಹದ ಪ್ರಾಪ್ತಿಯ ದ್ವಾರವಾದ ಈ ಮನುಷ್ಯಯೋನಿ ದೊರೆತಿದೆ. ಇದರಲ್ಲಿ ಪುಣ್ಯಮಾಡಿದರೆ ಸ್ವರ್ಗ, ಪಾಪಮಾಡಿದರೆ ಪಶು-ಪಕ್ಷಿ ಮುಂತಾದ ಯೋನಿಗಳು, ನಿವೃತ್ತನಾದರೆ ಮೋಕ್ಷ ಮತ್ತು ಎರಡು ರೀತಿಯ ಕರ್ಮಗಳನ್ನು ಮಾಡಿದರೆ ಪುನಃ ಮನುಷ್ಯಯೋನಿಯೇ ದೊರೆಯಬಲ್ಲದು. ॥ ೨೪ ॥ ಆದರೆ ಪ್ರಪಂಚದ ಸ್ತ್ರೀ-ಪುರುಷರೆಲ್ಲರೂ ಸುಖದ ಪ್ರಾಪ್ತಿಗಾಗಿ ಮತ್ತು ದುಃಖದ ನಿವೃತ್ತಿಗಾಗಿಯೇ ಕರ್ಮಗಳನ್ನು ಮಾಡುತ್ತಾರೆ. ಆದರೂ ಫಲವು ಅದಕ್ಕೆ ವಿಪರೀತವೇ ಆಗಿಹೋಗುತ್ತದೆ. ಅವರು ಇನ್ನೂ ದುಃಖದಲ್ಲೇ ಬಿದ್ದುಹೋಗುವರು. ಅದಕ್ಕಾಗಿ ನಾನು ಕರ್ಮಗಳಿಂದ ನಿವೃತ್ತನಾಗಿಬಿಟ್ಟಿದ್ದೇನೆ. ॥ ೨೫ ॥

ಸುಖವೇ ಆತ್ಮನ ಸ್ವರೂಪವಾಗಿದೆ. ಸಮಸ್ತ ವ್ಯಾಪಾರಗಳಿಂದ ನಿವೃತ್ತಿಯೇ ಆತ್ಮನ ಶರೀರ – ಅದು ಆತ್ಮನಾಗುವ ಸ್ಥಾನವಾಗಿದೆ. ಅದಕ್ಕಾಗಿ ಎಲ್ಲ ಭೋಗಗಳನ್ನು ಮನೋರಾಜ್ಯಮಾತ್ರವೆಂದು ತಿಳಿದು ನಾನು ನನ್ನ ಪ್ರಾರಬ್ಧವನ್ನು ಅನುಭವಿಸುತ್ತಾ ಬಿದ್ದುಕೊಂಡಿರುವೆನು. ॥ ೨೬ ॥ ಮನುಷ್ಯನು ತನ್ನ ನಿಜವಾದ ಸ್ವಾರ್ಥ ಅರ್ಥಾತ್ ತನ್ನ ಸ್ವರೂಪವೇ ಆದ ಸುಖವನ್ನು ಮರೆತು ಈ ಮಿಥ್ಯೆಯಾದ ದ್ವೈತವನ್ನೇ ಸತ್ಯವೆಂದು ತಿಳಿಯುತ್ತಾ ಅತ್ಯಂತ ಭಯಂಕರವೂ, ವಿಚಿತ್ರವೂ ಆದ ಜನ್ಮ-ಮೃತ್ಯುಗಳಲ್ಲಿ ಅಲೆಯುತ್ತಾ ಇರುತ್ತಾನೆ. ॥ ೨೭ ॥

ಜಲಂ ತದುದ್ಭವೈಶ್ಛನ್ನಂ ಹಿತ್ವಾಜ್ಞೋ ಜಲಕಾಮ್ಯಯಾ ।
ಮೃಗತೃಷ್ಣಾಮುಪಾಧಾವೇದ್ಯಥಾನ್ಯತ್ರಾರ್ಥದೃಕ್ಸ್ವತಃ
॥ ೨೮ ॥

ದೇಹಾದಿಭಿರ್ದೈವತಂತ್ರೈರಾತ್ಮನಃ ಸುಖಮೀಹತಃ ।
ದುಃಖಾತ್ಯಯಂ ಚಾನೀಶಸ್ಯ ಕ್ರಿಯಾ ಮೋಘಾಃ ಕೃತಾಃ ಕೃತಾಃ
॥ ೨೯ ॥

ಆಧ್ಯಾತ್ಮಿಕಾದಿಭಿರ್ದುಃಖೈರವಿಮುಕ್ತಸ್ಯ ಕರ್ಹಿಚಿತ್ ।
ಮರ್ತ್ಯಸ್ಯ ಕೃಚ್ಛ್ರೋಪನತೈರರ್ಥೈಃ ಕಾಮ್ಯೈಃ ಕ್ರಿಯೇತ ಕಿಮ್
॥ ೩೦ ॥

ಪಶ್ಯಾಮಿ ಧನಿನಾಂ ಕ್ಲೇಶಂ ಲುಬ್ಧಾನಾಮಜಿತಾತ್ಮನಾಮ್ ।
ಭಯಾದಲಬ್ಧನಿದ್ರಾಣಾಂ ಸರ್ವತೋಽಭಿವಿಶಂಕಿನಾಮ್
॥ ೩೧ ॥

ರಾಜತಸ್ಕರಶತ್ರುಭ್ಯಃ ಸ್ವಜನಾತ್ಪಶುಪಕ್ಷಿತಃ ।
ಅರ್ಥಿಭ್ಯಃ ಕಾಲತಃ ಸ್ವಸ್ಮಾನ್ನಿತ್ಯಂ ಪ್ರಾಣಾರ್ಥವದ್ಭಯಮ್
॥ ೩೨ ॥

ಶೋಕಮೋಹಭಯಕ್ರೋಧ-
ರಾಗಕ್ಲೈಬ್ಯಶ್ರಮಾದಯಃ ।
ಯನ್ಮೂಲಾಃ ಸ್ಯುರ್ನೃಣಾಂ ಜಹ್ಯಾತ್
ಸ್ಪೃಹಾಂ ಪ್ರಾಣಾರ್ಥಯೋರ್ಬುಧಃ ॥ ೩೩ ॥

ಮಧುಕಾರಮಹಾಸರ್ಪೌ
ಲೋಕೇಽಸ್ಮಿನ್ನೋ ಗುರೂತ್ತಮೌ ।
ವೈರಾಗ್ಯಂ ಪರಿತೋಷಂ ಚ
ಪ್ರಾಪ್ತಾ ಯಚ್ಛಿಕ್ಷಯಾ ವಯಮ್ ॥ ೩೪ ॥

ವಿರಾಗಃ ಸರ್ವಕಾಮೇಭ್ಯಃ ಶಿಕ್ಷಿತೋ ಮೇ ಮಧುವ್ರತಾತ್ ।
ಕೃಚ್ಛ್ರಾಪ್ತಂ ಮಧುವದ್ವಿತ್ತಂ ಹತ್ವಾಪ್ಯನ್ಯೋ ಹರೇತ್ಪತಿಮ್
॥ ೩೫ ॥

ಅನೀಹಃ ಪರಿತುಷ್ಟಾತ್ಮಾ ಯದೃಚ್ಛೋಪನತಾದಹಮ್ ।
ನೋ ಚೇಚ್ಛಯೇ ಬಹ್ವಹಾನಿ ಮಹಾಹಿರಿವ ಸತ್ತ್ವವಾನ್
॥ ೩೬ ॥

ಕ್ವಚಿದಲ್ಪಂ ಕ್ವಚಿದ್ಭೂರಿ ಭುಂಜೇಽನ್ನಂ ಸ್ವಾದ್ವಸ್ವಾದು ವಾ ।
ಕ್ವಚಿದ್ಭೂರಿಗುಣೋಪೇತಂ ಗುಣಹೀನಮುತ ಕ್ವಚಿತ್
॥ ೩೭ ॥

ಅಜ್ಞಾನೀ ಮನುಷ್ಯನು ನೀರಿನಲ್ಲಿರುವ ಜೊಂಡು, ಪಾಚಿಗಳಿಂದ ಮುಚ್ಚಿಹೋದ ನೀರನ್ನು ನೀರೆಂದು ತಿಳಿಯದೆ, ಬಿಸಿಲ್ಗುದುರೆಯ ಕಡೆಯ ಓಡುವಂತೆಯೇ ತನ್ನ ಆತ್ಮನಿಗಿಂತ ಭಿನ್ನವಾದ ವಸ್ತುಗಳಲ್ಲಿ ಸುಖವನ್ನು ತಿಳಿಯುವವನು ಆತ್ಮನನ್ನು ಬಿಟ್ಟು ವಿಷಯಗಳ ಕಡೆಗೆ ಓಡುತ್ತಾ ಇದ್ದಾನೆ. ॥ ೨೮ ॥ ಭಕ್ತ ಪ್ರಹ್ಲಾದನೇ! ಶರೀರಾದಿಗಳಾದರೋ ಪ್ರಾರಬ್ಧಕ್ಕೆ ಅಧೀನವಾಗಿವೆ. ಅವುಗಳ ಮೂಲಕ ತನಗಾಗಿ ಸುಖವನ್ನು ಪಡೆಯಲು ಮತ್ತು ದುಃಖವನ್ನು ಹೋಗಲಾಡಿಸಲು ಬಯಸುವವನು ಎಂದಿಗೂ ತನ್ನ ಕಾರ್ಯದಲ್ಲಿ ಸಫಲನಾಗುವುದಿಲ್ಲ. ಅವನು ಬಾರಿ-ಬಾರಿಗೂ ಮಾಡಿದ ಕರ್ಮಗಳೆಲ್ಲ ವ್ಯರ್ಥವಾಗಿ ಹೋಗುತ್ತವೆ. ॥ ೨೯ ॥ ಮನುಷ್ಯನನ್ನು ಸದಾಕಾಲ ಶಾರೀರಿಕ, ಮಾನಸಿಕ ಮುಂತಾದ ದುಃಖಗಳು ಆಕ್ರಮಿಸಿಕೊಂಡಿರುತ್ತವೆ. ಅವನು ಸಾವನ್ನಂತೂ ಅಪ್ಪಲೇಬೇಕು. ಹೀಗಿರುವಾಗ ಆತನು ಅತಿಕಷ್ಟಪಟ್ಟು ಪರಿಶ್ರಮದಿಂದ ಸ್ವಲ್ಪ ಧನ-ಭೋಗಗಳನ್ನು ಗಳಿಸಿಕೊಂಡರೂ ಏನು ಲಾಭವಿದೆ? ॥ ೩೦ ॥ ಲೋಭಿಗಳು ಮತ್ತು ಇಂದ್ರಿಯಗಳಿಗೆ ವಶರಾದ ಶ್ರೀಮಂತರ ದುಃಖವನ್ನಂತೂ ನಾನು ನೋಡುತ್ತಾ ಇರುತ್ತೇನೆ. ಭಯದಿಂದಾಗಿ ಅವರಿಗೆ ನಿದ್ದೆಯೇ ಬರುವುದಿಲ್ಲ. ಅವರಿಗೆ ಎಲ್ಲರ ಮೇಲೂ ಸಂದೇಹವೇ ಇರುತ್ತದೆ. ॥ ೩೧ ॥ ಜೀವನ ಮತ್ತು ಧನದ ಲೋಭಿಯಾದವನು – ರಾಜ, ಕಳ್ಳ, ಶತ್ರು, ಸ್ವಜನರು, ಪಶು-ಪಕ್ಷಿ, ಯಾಚಕ ಮತ್ತು ಕಾಲ – ಇವುಗಳಿಗೆ ಹೆದರುತ್ತಾ ಇರುತ್ತಾನೆ. ಅಷ್ಟೇ ಅಲ್ಲ – 'ನಾನೆಲ್ಲಿಯಾದರೂ ತಪ್ಪುಮಾಡಿ, ಹೆಚ್ಚು ಖರ್ಚುಮಾಡಿಬಿಟ್ಟೇನೋ' ಎಂಬ ಆಶಂಕೆಯಿಂದ ತನ್ನ ಕುರಿತೂ ಕೂಡ ಭಯಪಡುತ್ತಾ ಇರುತ್ತಾನೆ. ॥ ೩೨ ॥ ಆದ್ದರಿಂದ ಶೋಕ, ಮೋಹ, ಭಯ, ಕ್ರೋಧ, ರಾಗ, ಹೇಡಿತನ, ಶ್ರಮ – ಇವುಗಳಿಗೆ ತುತ್ತಾಗಬೇಕಾಗುವುದು. ಬುದ್ಧಿವಂತನಾದ ಮನುಷ್ಯನು – ಆ ಧನ ಮತ್ತು ಜೀವನದ ಆಸೆಯನ್ನು ತ್ಯಜಿಸಿಬಿಡಬೇಕು. ॥ ೩೩ ॥

ಈ ಲೋಕದಲ್ಲಿ ಅಜಗರ (ಹೆಬ್ಬಾವು) ಮತ್ತು ಜೇನುನೊಣ ಇವೆರಡೂ ಎಲ್ಲರಿಗಿಂತ ದೊಡ್ಡ ಗುರುಗಳು ನನಗೆ. ಅವುಗಳ ಶಿಕ್ಷಣದಿಂದ ನಮಗೆ ವೈರಾಗ್ಯ ಮತ್ತು ಸಂತೋಷಗಳು ಉಂಟಾಗಿವೆ. ॥ ೩೪ ॥ ಜೇನುನೊಣವು ಜೇನುತುಪ್ಪವನ್ನು ಸಂಗ್ರಹಿಸುವಂತೆಯೇ ಜನರು ಅತಿಕಷ್ಟದಿಂದ ಹಣವನ್ನು ಸಂಗ್ರಹಿಸುತ್ತಾರೆ. ಆದರೆ ಬೇರೆ ಯಾರೋ ಆ ಧನರಾಶಿಯ ಒಡೆಯನನ್ನು ಕೊಂದು ಅದನ್ನು ಕಿತ್ತುಕೊಳ್ಳುವನು. ಇದರಿಂದ ನಾನು – 'ವಿಷಯ ಭೋಗಗಳಿಂದ ವಿರಕ್ತನೇ ಆಗಿರಬೇಕು' ಎಂಬ ಪಾಠವನ್ನು ಕಲಿತೆ. ॥ ೩೫ ॥

ನಾನು ಅಜಗರದಂತೆ ನಿಶ್ಚೇಷ್ಟನಾಗಿ ಬಿದ್ದುಕೊಂಡಿರುತ್ತೇನೆ. ದೈವವಶದಿಂದ ಏನಾದರೂ ಸಿಕ್ಕಿದರೆ ಅದರಲ್ಲೇ ಸಂತುಷ್ಟನಾಗಿರುತ್ತೇನೆ. ಏನೂ ಸಿಗದಿದ್ದರೆ ಅನೇಕ ದಿನಗಳವರೆಗೆ ಧೈರ್ಯವಹಿಸಿ ಹೀಗೆಯೇ ಬಿದ್ದುಕೊಂಡಿರುತ್ತೇನೆ. ॥ ೩೬ ॥ ಕೆಲವೊಮ್ಮೆ ಕಡಿಮೆ ಅನ್ನ ತಿಂದರೆ, ಕೆಲವೊಮ್ಮೆ ಹೆಚ್ಚು. ಅದೂ ಕೂಡ ಎಂದಾದರೂ ರುಚಿಕರವಾಗಿದ್ದರೆ, ಎಂದಾದರೂ ನೀರಸ, ಸಪ್ಪೆ, ಕೆಲವೊಮ್ಮೆ ಅನೇಕ ಗುಣಗಳಿಂದ ಕೂಡಿದ್ದರೆ, ಕೆಲವೊಮ್ಮೆ ಸರ್ವಥಾ ಗುಣಹೀನ. ॥ ೩೭ ॥

ಶ್ರದ್ಧಯೋಪಾಹೃತಂ ಕ್ವಾಪಿ ಕದಾಚಿನ್ಮಾನವರ್ಜಿತಮ್ ।
ಭುಂಜೇ ಭುಕ್ತ್ವಾಥ ಕಸ್ಮಿಂಶ್ಚಿದ್ದಿವಾ ನಕ್ತಂ ಯದೃಚ್ಛಯಾ ॥ ೩೮ ॥

ಕ್ಷೌಮಂ ದುಕೂಲಮಜಿನಂ ಚೀರಂ ವಲ್ಕಲಮೇವ ವಾ ।
ವಸೇಽನ್ಯದಪಿ ಸಂಪ್ರಾಪ್ತಂ ದಿಷ್ಟಭುಕ್ತುಷ್ಟಧೀರಹಮ್ ॥ ೩೯ ॥

ಕ್ವಚಿಚ್ಛಯೇ ಧರೋಪಸ್ಥೇ ತೃಣಪರ್ಣಾಶ್ಮಭಸ್ಮಸು ।
ಕ್ವಚಿತ್ಪ್ರಾಸಾದಪರ್ಯಂಕೇ ಕಶಿಪೌ ವಾ ಪರೇಚ್ಛಯಾ ॥ ೪೦ ॥

ಕ್ವಚಿತ್ಸ್ನಾತೋಽನುಲಿಪ್ತಾಂಗಃ ಸುವಾಸಾಃ ಸ್ರಗ್ವ್ಯಲಂಕೃತಃ ।
ರಥೇಭಾಶ್ವೈಶ್ಚರೇ ಕ್ವಾಪಿ ದಿಗ್ವಾಸಾ ಗ್ರಹವದ್ವಿಭೋ ॥ ೪೧ ॥

ನಾಹಂ ನಿಂದೇ ನ ಚ ಸ್ತೌಮಿ ಸ್ವಭಾವವಿಷಮಂ ಜನಮ್ ।
ಏತೇಷಾಂ ಶ್ರೇಯ ಆಶಾಸೇ ಉತೈಕಾತ್ಮ್ಯಂ ಮಹಾತ್ಮನಿ ॥ ೪೨ ॥

ವಿಕಲ್ಪಂ ಜುಹುಯಾಚ್ಚಿತ್ತೌ ತಾಂ ಮನಸ್ಯರ್ಥವಿಭ್ರಮೇ ।
ಮನೋ ವೈಕಾರಿಕೇ ಹುತ್ವಾ ತಂ ಮಾಯಾಯಾಂ ಜುಹೋತ್ಯನು ॥ ೪೩ ॥

ಆತ್ಮಾನುಭೂತೌ ತಾಂ ಮಾಯಾಂ ಜುಹುಯಾತ್ಸತ್ಯದೃಙ್ಮುನಿಃ ।
ತತೋ ನಿರೀಹೋ ವಿರಮೇತ್ಸ್ವಾನುಭೂತ್ಯಾಽಽತ್ಮನಿ ಸ್ಥಿತಃ ॥ ೪೪ ॥

ಸ್ವಾತ್ಮವೃತ್ತಂ ಮಯೇತ್ಥಂ ತೇ ಸುಗುಪ್ತಮಪಿ ವರ್ಣಿತಮ್ ।
ವ್ಯಪೇತಂ ಲೋಕಶಾಸ್ತ್ರಾಭ್ಯಾಂ ಭವಾನ್ಹಿ ಭಗವತ್ಪರಃ ॥ ೪೫ ॥

ಕೆಲವೊಮ್ಮೆ ತುಂಬಾ ಶ್ರದ್ಧೆಯಿಂದ ದೊರೆತ ಅನ್ನವನ್ನು ತಿಂದರೆ, ಕೆಲವೊಮ್ಮೆ ಅಪಮಾನದಿಂದ ದೊರೆತ ಅನ್ನವನ್ನು ತಿನ್ನುತ್ತೇನೆ. ಕೆಲವೊಮ್ಮೆ ತಾನಾಗಿಯೇ ದೊರೆತಾಗ, ಕೆಲವೊಮ್ಮೆ ಹಗಲಿನಲ್ಲಿ, ಕೆಲವೊಮ್ಮೆ ರಾತ್ರೆಯಲ್ಲಿ ಭೋಜನ ಮಾಡುತ್ತೇನೆ. ಕೆಲವೊಮ್ಮೆ ಒಂದು ಊಟಮಾಡಿದರೆ ಕೆಲವೊಮ್ಮೆ ಎರಡುಬಾರಿ ಭುಂಜಿಸುತ್ತೇನೆ. ॥ ೩೮ ॥ ನಾನು ನನ್ನ ಪ್ರಾರಬ್ಧದ ಭೋಗದಲ್ಲೇ ಸಂತೋಷವಾಗಿರುತ್ತೇನೆ. ಅದರಿಂದ ನನಗೆ ರೇಷ್ಮೆ ಅಥವಾ ಹತ್ತಿಯ, ಮೃಗಚರ್ಮ ಅಥವಾ ನಾರುಬಟ್ಟೆ ಅಥವಾ ಬೇರೇನಾದರೂ ವಸ್ತ್ರವು ಒದಗಿಬರುತ್ತದೋ ಅದನ್ನೇ ಉಟ್ಟುಕೊಳ್ಳುತ್ತೇನೆ. ॥ ೩೯ ॥ ಕೆಲವೊಮ್ಮೆ ನಾನು ಭೂಮಿಯಲ್ಲಿ, ಹುಲ್ಲಿನಮೇಲೆ, ಎಲೆಗಳಮೇಲೆ, ಕಲ್ಲಿನಮೇಲೆ, ಬೂದಿಯರಾಶಿಯಲ್ಲೇ ಬಿದ್ದುಕೊಂಡಿರುತ್ತೇನೆ. ಕೆಲವೊಮ್ಮೆ ಇತರರ ಇಚ್ಛೆಯಂತೆ ಅರಮನೆಯಲ್ಲಿ ಮಂಚದಲ್ಲಿ, ಹಾಸಿಗೆಗಳಲ್ಲಿ ಮಲಗಿರುತ್ತೇನೆ. ॥ ೪೦ ॥ ದೈತ್ಯರಾಜನೇ! ಕೆಲವೊಮ್ಮೆ ಸ್ನಾನಮಾಡಿ ಶುಚಿಯಾಗಿ, ಗಂಧವನ್ನು ಹಚ್ಚಿಕೊಂಡು, ಸುಂದರ ವಸ್ತ್ರಗಳನ್ನು ಉಟ್ಟು, ಹೂವಿನ ಹಾರವನ್ನು ಧರಿಸಿಕೊಂಡು, ಒಡವೆಗಳನ್ನು ತೊಟ್ಟು ರಥ, ಆನೆ, ಕುದುರೆಗಳನ್ನು ಏರಿಕೊಂಡು ಹೋಗುತ್ತಿರುತ್ತೇನೆ. ಆದರೆ ಕೆಲವೊಮ್ಮೆ ದಿಗಂಬರನಾಗಿ ಪಿಶಾಚಿಯಂತೆ ಓಡಾಡುತ್ತೇನೆ. ॥ ೪೧ ॥ ಮನುಷ್ಯರ ಸ್ವಭಾವಗಳು ಬೇರೆ-ಬೇರೆಯಾಗಿರುತ್ತವೆ. ಆದ್ದರಿಂದ ನಾನು ಯಾರನ್ನೂ ನಿಂದಿಸುವುದಿಲ್ಲ ಸ್ತುತಿಸುವುದೂ ಇಲ್ಲ. ನಾನು ಕೇವಲ ಇವರ ಪರಮಕಲ್ಯಾಣ ಮತ್ತು ಪರಮಾತ್ಮನಲ್ಲಿ ಏಕತೆಯನ್ನು ಬಯಸುತ್ತೇನೆ. ॥ ೪೨ ॥

ಸತ್ಯವನ್ನು ಅನುಸಂಧಾನ ಮಾಡುವ ಮನುಷ್ಯನಿಗೆ ಕಂಡುಬರುವ ನಾನಾ ಪದಾರ್ಥಗಳು ಮತ್ತು ಅವುಗಳ ಭೇದ-ವಿಭೇದಗಳನ್ನು ಚಿತ್ತವೃತ್ತಿಯಲ್ಲಿ ಹೋಮಮಾಡಬೇಕು. ಚಿತ್ತವೃತ್ತಿಯನ್ನು ಈ ಪದಾರ್ಥಗಳ ಸಂಬಂಧವಾಗಿ ವಿವಿಧ ಭ್ರಮೆಗಳನ್ನು ಉಂಟುಮಾಡುವ ಮನಸ್ಸಿನಲ್ಲಿ, ಮನಸ್ಸನ್ನು ಸಾತ್ತ್ವಿಕ ಅಹಂಕಾರದಲ್ಲಿ, ಸಾತ್ತ್ವಿಕ ಅಹಂಕಾರವನ್ನು ಮಹತ್ತತ್ತ್ವದ ಮೂಲಕ ಮಾಯೆಯಲ್ಲಿ ಹವನ ಮಾಡಬೇಕು. ಹೀಗೆ ಇವೆಲ್ಲ ಭೇದ-ವಿಭೇದಗಳು ಮತ್ತು ಅವುಗಳ ಕಾರಣ ಮಾಯೆಯೇ ಆಗಿದೆ ಹೀಗೆ ನಿಶ್ಚಯಮಾಡಿ ಮತ್ತೆ ಆ ಮಾಯೆಯನ್ನು ಆತ್ಮಾನುಭೂತಿಯಲ್ಲಿ ಸ್ವಾಹಾಮಾಡಬೇಕು. ಈ ವಿಧವಾಗಿ ಆತ್ಮಸಾಕ್ಷಾತ್ಕಾರದ ಮೂಲಕ ಆತ್ಮಸ್ವರೂಪದಲ್ಲಿ ನೆಲೆಸಿ ಕರ್ಮರಹಿತನಾಗಿ ವಿಶ್ರಾಂತಿಯನ್ನು ಹೊಂದಬೇಕು. ॥ ೪೩-೪೪ ॥ ಎಲೈ ಪ್ರಹ್ಲಾದ! ನನ್ನ ಈ ಆತ್ಮವೃತ್ತಾಂತವು ಅತ್ಯಂತ ಗೋಪ್ಯವೂ, ಲೋಕ ಮತ್ತು ಶಾಸ್ತ್ರಗಳ ಮರ್ಯಾದೆಯನ್ನು ಮೀರಿದ್ದರೂ, ನೀನು ಭಗವತ್ಪರಾಯಣನಾದ ಸಾಧುಶ್ರೇಷ್ಠನಾಗಿರುವುದರಿಂದ ನಿನಗೆ ಇದನ್ನು ವರ್ಣಿಸಿರುವೆನು. ॥ ೪೫ ॥

ನಾರದ ಉವಾಚ

ಧರ್ಮಂ ಪಾರಮಹಂಸ್ಯಂ ವೈ ಮುನೇಃ ಶ್ರುತ್ವಾಸುರೇಶ್ವರಃ ।
ಪೂಜಯಿತ್ವಾ ತತಃ ಪ್ರೀತ ಆಮಂತ್ರ್ಯ ಪ್ರಯಯೌ ಗೃಹಮ್ ॥ ೪೬ ॥

ನಾರದರು ಹೇಳಿದರು – ಯುಧಿಷ್ಠಿರನೇ! ಪ್ರಹ್ಲಾದನು ದತ್ತಾತ್ರೇಯಮುನಿಗಳಿಂದ ಪರಮಹಂಸರ ಈ ಧರ್ಮವನ್ನು ಶ್ರವಣಿಸಿ, ಅವರನ್ನು ಪೂಜಿಸಿ, ಅವರಿಂದ ಬೀಳ್ಕೊಂಡು, ಪರಮಸಂತೋಷದಿಂದ ತನ್ನ ರಾಜಧಾನಿಗೆ ಮರಳಿದನು. ॥ ೪೬ ॥

ಹದಿಮೂರನೆಯ ಅಧ್ಯಾಯವು ಮುಗಿಯಿತು. ॥ ೧೩ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಸಪ್ತಮ ಸ್ಕಂಧೇ
ಯುಧಿಷ್ಠಿರ-ನಾರದಸಂವಾದೇ ಯತಿಧರ್ಮೇ ತ್ರಯೋದಶೋಽಧ್ಯಾಯಃ ॥ ೧೩ ॥

ಹದಿನಾಲ್ಕನೆಯ ಅಧ್ಯಾಯ

ಗೃಹಸ್ಥಾಶ್ರಮದ ಸದಾಚಾರ

ಯುಧಿಷ್ಠಿರ ಉವಾಚ

ಗೃಹಸ್ಥ ಏತಾಂ ಪದವೀಂ ವಿಧಿನಾ ಯೇನ ಚಾಂಜಸಾ ।
ಯಾತಿ ದೇವಋಷೇ ಬ್ರೂಹಿ ಮಾದೃಶೋ ಗೃಹಮೂಢಧೀಃ ॥ ೧ ॥

ನಾರದ ಉವಾಚ

ಗೃಹೇಷ್ವವಸ್ಥಿತೋ ರಾಜನ್ ಕ್ರಿಯಾಃ ಕುರ್ವನ್ ಗೃಹೋಚಿತಾಃ ।
ವಾಸುದೇವಾರ್ಪಣಂ ಸಾಕ್ಷಾದುಪಾಸೀತ ಮಹಾಮುನೀನ್ ॥ ೨ ॥

ಶೃಣ್ವನ್ ಭಗವತೋಽಭೀಕ್ಷ್ಣಮವತಾರಕಥಾಮೃತಮ್ ।
ಶ್ರದ್ದಧಾನೋ ಯಥಾಕಾಲಮುಪಶಾಂತಜನಾವೃತಃ ॥ ೩ ॥

ಸತ್ಸಂಗಾಚ್ಛನಕೈಃ ಸಂಗಮಾತ್ಮಜಾಯಾತ್ಮಜಾದಿಷು ।
ವಿಮುಚ್ಯೇನ್ಮುಚ್ಯಮಾನೇಷು ಸ್ವಯಂ ಸ್ವಪ್ನವದುತ್ಥಿತಃ ॥ ೪ ॥

ಯಾವದರ್ಥಮುಪಾಸೀನೋ ದೇಹೇ ಗೇಹೇ ಚ ಪಂಡಿತಃ ।
ವಿರಕ್ತೋ ರಕ್ತವತ್ತತ್ರ ನೃಲೋಕೇ ನರತಾಂ ನ್ಯಸೇತ್ ॥ ೫ ॥

ಜ್ಞಾತಯಃ ಪಿತರೌ ಪುತ್ರಾ ಭ್ರಾತರಃ ಸುಹೃದೋಽಪರೇ ।
ಯದ್ವದಂತಿ ಯದಿಚ್ಛಂತಿ ಚಾನುಮೋದೇತ ನಿರ್ಮಮಃ ॥ ೬ ॥

ಯುಧಿಷ್ಠಿರರಾಜನು ಕೇಳಿದನು – ದೇವಋಷಿಗಳಾದ ನಾರದರೇ! ನನ್ನಂತಹ ಗೃಹಾಸಕ್ತ ಗೃಹಸ್ಥನು ವಿಶೇಷ ಪರಿಶ್ರಮವಿಲ್ಲದೆ ಈ ಶ್ರೇಷ್ಠತಮವಾದ ಪದವನ್ನು ಹೇಗೆ ಪಡೆಯಬಲ್ಲನು? ಎಂಬುದನ್ನು ಕೃಪೆಯಿಟ್ಟು ತಿಳಿಸಬೇಕು. ॥ ೧ ॥

ನಾರದರು ಹೇಳಿದರು – ಯುಧಿಷ್ಠಿರನೇ! ಮನುಷ್ಯನು ಗೃಹಸ್ಥಾಶ್ರಮದಲ್ಲಿ ಇದ್ದು, ಗೃಹಸ್ಥ ಧರ್ಮಕ್ಕೆ ಅನುಗುಣವಾಗಿ ಎಲ್ಲ ಕೆಲಸವನ್ನು ಮಾಡಲಿ. ಆದರೆ ಆ ಎಲ್ಲ ಕರ್ಮಗಳನ್ನು ಭಗವಂತನಿಗೆ ಸಮರ್ಪಿಸಿ, ದೊಡ್ಡ-ದೊಡ್ಡ ಸಂತ-ಮಹಾತ್ಮರ ಸೇವೆಯನ್ನು ಮಾಡುತ್ತಿರಬೇಕು. ॥ ೨ ॥ ಅವಕಾಶವು ದೊರೆತಾಗ ಪ್ರಶಾಂತ ಚಿತ್ತರಾದ ಸಾಧು-ಸಜ್ಜನರ ಸಹವಾಸದಲ್ಲಿರುತ್ತಾ ಅವರಿಂದ ಶ್ರೀಭಗವಂತನ ಲೀಲಾ-ಕಥಾಮೃತವನ್ನು ಶ್ರದ್ಧೆಯಿಂದ ಮತ್ತೆ-ಮತ್ತೆ ಕೇಳುತ್ತಾ ಇರಬೇಕು. ॥ ೩ ॥ ಕನಸಿನಿಂದ ಎಚ್ಚರಗೊಂಡ ಮನುಷ್ಯನು ಕನಸಿನ ಸಂಬಂಧಿಗಳೊಂದಿಗೆ ಆಸಕ್ತನಾಗಿರುವುದಿಲ್ಲ. ಹಾಗೆಯೇ ಸತ್ಸಂಗದಿಂದ ಬುದ್ಧಿಯು ಶುದ್ಧವಾಗುತ್ತಾ ಹೋದಂತೆ ಶರೀರ, ಪತ್ನೀ, ಪುತ್ರ, ಧನ ಮುಂತಾದ ಆಸಕ್ತಿಯನ್ನು ಬಿಟ್ಟು ಬಿಡಬೇಕು. ಏಕೆಂದರೆ ಒಂದಲ್ಲ-ಒಂದುದಿನ ಇವುಗಳು ಬಿಟ್ಟು ಹೋಗುವಂತಹವುಗಳೇ ಆಗಿವೆ. ॥ ೪ ॥ ಬುದ್ಧಿವಂತನಾದ ಮನುಷ್ಯನು ಆವಶ್ಯಕತೆ ಇದ್ದಷ್ಟೇ ಮನೆಯ ಮತ್ತು ಶರೀರದ ಸೇವೆಮಾಡಬೇಕು. ಹೆಚ್ಚಾಗಬಾರದು. ಒಳಗಿನಿಂದ ವಿರಕ್ತನಾಗಿದ್ದು, ಹೊರಗಿನಿಂದ ಆಸಕ್ತನಾಗಿರುವಂತೆ ಇತರ ಜನರೊಂದಿಗೆ ಸಾಮಾನ್ಯ ಮನುಷ್ಯರಂತೆ ವ್ಯವಹರಿಸುತ್ತಾ ಇರಬೇಕು. ॥ ೫ ॥ ತಂದೆ-ತಾಯಿ, ಅಣ್ಣ-ತಮ್ಮಂದಿರು, ಪುತ್ರ- ಮಿತ್ರರು, ಸ್ವಜನರು ಮತ್ತು ಇತರರು ಏನೇ ಹೇಳಿದರೂ ಅಥವಾ ಬಯಸಿದರೂ ಒಳಗಿನಿಂದ ಮಮತೆಯನ್ನು ಇಟ್ಟುಕೊಳ್ಳದೆ ಅದನ್ನು ಅನುಮೋದಿಸುತ್ತಿರಬೇಕು. ॥ ೬ ॥

ಬುದ್ಧಿವಂತನಾದ ಮನುಷ್ಯನು ದೇವತೆಗಳಿಂದಲೂ, ಭೂಮಿಯಿಂದಲೂ, ಅಂತರಿಕ್ಷದಿಂದಲೂ ತನಗೆ ದೊರಕುವ ಅನ್ನ-ಚಿನ್ನಗಳೇ ಮುಂತಾದ ಎಲ್ಲ ದ್ರವ್ಯಸಂಪತ್ತುಗಳನ್ನು ಶ್ರೀಭಗವಂತನ

ದಿವ್ಯಂ ಭೌಮಂ ಚಾಂತರಿಕ್ಷಂ ವಿತ್ತಮಚ್ಯುತನಿರ್ಮಿತಮ್ ।
ತತ್ಸರ್ವಮುಪಭುಂಜಾನ ಏತತ್ಕುರ್ಯಾತ್ಸ್ವತೋ ಬುಧಃ ॥ ೭ ॥

ಯಾವದ್ಭ್ರಿಯೇತ ಜಠರಂ ತಾವತ್ಸ್ವತ್ವಂ ಹಿ ದೇಹಿನಾಮ್ ।
ಅಧಿಕಂ ಯೋಽಭಿಮನ್ಯೇತ ಸ ಸ್ತೇನೋ ದಂಡಮರ್ಹತಿ ॥ ೮ ॥

ಮೃಗೋಷ್ಟ್ರಖರಮರ್ಕಾಖುಸರೀಸೃಪ್ಖಗಮಕ್ಷಿಕಾಃ ।
ಆತ್ಮನಃ ಪುತ್ರವತ್ಪಶ್ಯೇತ್ತೈರೇಷಾಮಂತರಂ ಕಿಯತ್ ॥ ೯ ॥

ತ್ರಿವರ್ಗಂ ನಾತಿಕೃಚ್ಛ್ರೇಣ ಭಜೇತ ಗೃಹಮೇಧ್ಯಪಿ ।
ಯಥಾದೇಶಂ ಯಥಾಕಾಲಂ ಯಾವದ್ದೈವೋಪಪಾದಿತಮ್ ॥ ೧೦ ॥

ಆಶ್ವಾಘಾಂತೇಽವಸಾಯಿಭ್ಯಃ ಕಾಮಾನ್ಸಂವಿಭಜೇದ್ಯಥಾ ।
ಅಪ್ಯೇಕಾಮಾತ್ಮನೋ ದಾರಾಂ ನೃಣಾಂ ಸ್ವತ್ವಗ್ರಹೋ ಯತಃ ॥ ೧೧ ॥

ಜಹ್ಯಾದ್ಯದರ್ಥೇ ಸ್ವಾನ್ಪ್ರಾಣಾನ್ಹನ್ಯಾದ್ವಾ ಪಿತರಂ ಗುರುಮ್ ।
ತಸ್ಯಾಂ ಸ್ವತ್ವಂ ಸ್ತ್ರಿಯಾಂ ಜಹ್ಯಾದ್ಯಸ್ತೇನ ಹ್ಯಜಿತೋ ಜಿತಃ ॥ ೧೨ ॥

ಕೃಮಿವಿಡ್ಭಸ್ಮನಿಷ್ಠಾಂತಂ ಕ್ವೇದಂ ತುಚ್ಛಂ ಕಲೇವರಮ್ ।
ಕ್ವ ತದೀಯರತಿರ್ಭಾರ್ಯಾ ಕ್ವಾಯಮಾತ್ಮಾ ನಭಶ್ಛದಿಃ ॥ ೧೩ ॥

ಸಿದ್ಧೈರ್ಯಜ್ಞಾವಶಿಷ್ಟಾರ್ಥೈಃ ಕಲ್ಪಯೇದ್ವೃತ್ತಿಮಾತ್ಮನಃ ।
ಶೇಷೇ ಸ್ವತ್ವಂ ತ್ಯಜನ್ಪ್ರಾಜ್ಞಃ ಪದವೀಂ ಮಹತಾಮಿಯಾತ್ ॥ ೧೪ ॥

ದೇವಾನೃಷೀನ್ನೃಭೂತಾನಿ ಪಿತೄನಾತ್ಮಾನಮನ್ವಹಮ್ ।
ಸ್ವವೃತ್ತ್ಯಾಗತವಿತ್ತೇನ ಯಜೇತ ಪುರುಷಂ ಪೃಥಕ್ ॥ ೧೫ ॥

ಯರ್ಹ್ಯಾತ್ಮನೋಽಧಿಕಾರಾದ್ಯಾಃ ಸರ್ವಾಃ ಸ್ಯುರ್ಯಜ್ಞಸಂಪದಃ ।
ವೈತಾನಿಕೇನ ವಿಧಿನಾ ಅಗ್ನಿಹೋತ್ರಾದಿನಾ ಯಜೇತ್ ॥ ೧೬ ॥

ನ ಹ್ಯಗ್ನಿಮುಖತೋಽಯಂ ವೈ ಭಗವಾನ್ಸರ್ವಯಜ್ಞಭುಕ್ ।
ಇಜ್ಯೇತ ಹವಿಷಾ ರಾಜನ್ಯಥಾ ವಿಪ್ರಮುಖೇ ಹುತೈಃ ॥ ೧೭ ॥

ವರಪ್ರದಾನವೆಂದು ಸ್ವೀಕರಿಸಿ ಪ್ರಾರಬ್ಧಾನುಸಾರವಾಗಿ ಅವನ್ನು ಉಪಭೋಗಿಸುತ್ತಾ, ಸಂಗ್ರಹಿಸದೆ, ಹಿಂದೆ ಹೇಳಿದ ಸಾಧುಸೇವೆ ಮುಂತಾದ ಕಾರ್ಯಗಳಲ್ಲಿ ತೊಡಗಿಸಬೇಕು. ॥ ೭ ॥ ಮನುಷ್ಯರಿಗೆ ಎಷ್ಟರಿಂದ ಅವರ ಹಸಿವು ಇಂಗಬಹುದೋ ಅಷ್ಟೇ ಧನದ ಮೇಲೆ ಅವನಿಗೆ ಅಧಿಕಾರವಿರುವುದು. ಇದಕ್ಕಿಂತ ಹೆಚ್ಚಿನ ಸಂಪತ್ತನ್ನು ತನ್ನದೆಂದು ತಿಳಿಯುವವನು ಕಳ್ಳನೇ ಸರಿ. ಅವನು ದಂಡಾರ್ಹನು. ॥ ೮ ॥ ಜಿಂಕೆ, ಒಂಟೆ, ಕತ್ತೆ, ಕಪಿ, ಇಲಿ, ಸರ್ಪವೇ ಮುಂತಾದ ಹರಿದಾಡುವ ಪ್ರಾಣಿ, ಪಕ್ಷಿ ಮತ್ತು ನೊಣ ಮುಂತಾದವುಗಳನ್ನು ತನ್ನ ಪುತ್ರರಂತೇ ಭಾವಿಸಬೇಕು. ಅವುಗಳಿಗೂ ಮತ್ತು ತನ್ನ ಪುತ್ರರಿಗೂ ಏನು ಮಹಾ ವ್ಯತ್ಯಾಸ? ॥ ೯ ॥ ಗೃಹಸ್ಥನಾದ ಮನುಷ್ಯನೂ ಕೂಡ ಧರ್ಮ, ಅರ್ಥ ಮತ್ತು ಕಾಮ ಇವುಗಳಿಗಾಗಿ ಮಿತಿಮೀರಿ ಕಷ್ಟಪಡಬಾರದು. ದೇಶ, ಕಾಲ, ಅದೃಷ್ಟಕ್ಕೆ ತಕ್ಕಂತೆ ದೊರೆತುದರಲ್ಲೇ ಸಂತೋಷಪಟ್ಟುಕೊಳ್ಳಬೇಕು. ॥ ೧೦ ॥ ತನ್ನ ಸಮಸ್ತ ಭೋಗ-ಸಾಮಗ್ರಿಗಳನ್ನು ನಾಯಿ, ಪತಿತ ಮತ್ತು ಚಾಂಡಾಲರವರೆಗೆ ಎಲ್ಲ ಪ್ರಾಣಿಗಳಿಗೆ ಯಥಾಯೋಗ್ಯವಾಗಿ ಹಂಚಿಯೇ ತಾನು ಉಪಯೋಗಿಸಬೇಕು. ಹೆಚ್ಚೇನು ತನ್ನವಳೇ ಎಂದು ತಿಳಿದುಕೊಂಡಿರುವ ಪತ್ನಿಯನ್ನೂ ಕೂಡ ದೋಷವಿಲ್ಲದೇ ಇರುವ ರೀತಿಯಲ್ಲಿ ಅತಿಥಿಗಳ ಸೇವೆಯಲ್ಲಿ ನಿಯೋಜಿಸಬೇಕು. ॥ ೧೧ ॥ ಜನರು ಹೆಂಡತಿಗಾಗಿ ತನ್ನ ಪ್ರಾಣಗಳನ್ನಾದರೂ ಕೊಟ್ಟಾರು. ಅವಳಿಗಾಗಿ ತಂದೆ-ತಾಯಿಗಳನ್ನು ಮತ್ತು ಗುರುಗಳನ್ನು ಕೊಂದುಹಾಕುವರು. ಅಂತಹ ಪತ್ನಿಯಲ್ಲಿರುವ ಮಮತೆಯನ್ನು ಗೆದ್ದವನು ಸರ್ವವಿಜಯಿಯಾದ ಭಗವಂತನನ್ನೂ ಕೂಡ ಗೆದ್ದುಕೊಂಡಂತೆ. ॥ ೧೨ ॥ ಈ ಶರೀರವು ಕೊನೆಗೆ ಕ್ರಿಮಿ, ಕೀಟ, ಮಲ ಅಥವಾ ಬೂದಿಯ ರಾಶಿಯಾಗಿಬಿಡುವುದು. ಇಂತಹ ತುಚ್ಛವಾದ ಶರೀರ ಮತ್ತು ಅದರ ರತಿಗೆ ಕಾರಣವಾದ ಆ ಸ್ತ್ರೀಯೆಲ್ಲಿ? ಮತ್ತು ತನ್ನ ಮಹಿಮೆಯಿಂದ ಆಕಾಶವನ್ನೂ ಆವರಿಸಿಕೊಂಡಿರುವ ಅನಂತನಾದ ಆತ್ಮನೆಲ್ಲಿ? ॥ ೧೩ ॥

ಗೃಹಸ್ಥನು ಪ್ರಾರಬ್ಧದಿಂದ ದೊರೆತ ಮತ್ತು ಪಂಚ ಮಹಾಯಜ್ಞಗಳಿಂದ ಮಿಗಿಲ ಅನ್ನದಿಂದಲೇ ತನ್ನ ಜೀವನ ನಿರ್ವಹಿಸಬೇಕು. ಇದಲ್ಲದೆ ಬೇರೆ ಯಾವುದೇ ವಸ್ತುವನ್ನು ತನ್ನ ಸ್ವತ್ತನ್ನಾಗಿ ಭಾವಿಸದಿರುವ ಬುದ್ಧಿವಂತರಾದ ಮನುಷ್ಯರು ಸಂತರಿಗೆ ದೊರೆಯುವ ಉತ್ತಮಗತಿಯನ್ನು ಪಡೆಯುವರು. ॥ ೧೪ ॥ ತನ್ನ ವರ್ಣಾಶ್ರಮವಿಹಿತ ವೃತ್ತಿಯಿಂದ ದೊರೆತ ಸಾಮಗ್ರಿಗಳಿಂದ ಪ್ರತಿದಿನವೂ ದೇವತೆಗಳಿಗೂ, ಋಷಿಗಳಿಗೂ, ಮನುಷ್ಯರಿಗೂ, ಭೂತಗಣಗಳಿಗೂ, ಪಿತೃಗಳಿಗೂ ಮತ್ತು ತನ್ನ ಆತ್ಮಕ್ಕೂ ಪೂಜೆಯನ್ನು ಸಲ್ಲಿಸಬೇಕು. ಇದು ಪರಮೇಶ್ವರನೊಬ್ಬನದೇ ಬೇರೆ-ಬೇರೆ ರೂಪಗಳಲ್ಲಿ ಮಾಡುವ ಆರಾಧನೆಯಾಗಿದೆ. ॥ ೧೫ ॥ ತನಗೆ ಅಧಿಕಾರವಿದ್ದರೆ ಯಜ್ಞಕ್ಕಾಗಿ ಆವಶ್ಯಕವಾದ ಎಲ್ಲ ವಸ್ತುಗಳು ದೊರಕಿದ್ದರೆ ದೊಡ್ಡ-ದೊಡ್ಡ ಯಜ್ಞಗಳು ಅಥವಾ ಅಗ್ನಿಹೋತ್ರ ಮುಂತಾದವುಗಳ ಮೂಲಕ ಭಗವಂತನನ್ನು ಆರಾಧಿಸಬೇಕು. ॥ ೧೬ ॥

ಯುಧಿಷ್ಠಿರನೇ! ಸಮಸ್ತ ಯಜ್ಞಗಳ ಭೋಕ್ತಾ ಭಗವಂತನೇ ಆಗಿದ್ದಾನೆ. ಆದರೂ ಬ್ರಾಹ್ಮಣನ ಮುಖದಲ್ಲಿ ಅರ್ಪಿಸಲ್ಪಟ್ಟ ಹವಿಷ್ಯಾನ್ನದಿಂದ ಅವನಿಗೆ ತೃಪ್ತಿಯುಂಟಾಗುವಷ್ಟು ಅಗ್ನಿಮುಖದಲ್ಲಿ ಹವನ ಮಾಡುವುದರಿಂದ ಉಂಟಾಗುವುದಿಲ್ಲ. ॥ ೧೭ ॥

ತಸ್ಮಾದ್ಬ್ರಾಹ್ಮಣದೇವೇಷು ಮರ್ತ್ಯಾದಿಷು ಯಥಾರ್ಹತಃ ।
ತೈಸ್ತೈಃ ಕಾಮೈರ್ಯಜಸ್ವೈನಂ ಕ್ಷೇತ್ರಜ್ಞಂ ಬ್ರಾಹ್ಮಣಾನನು ॥ ೧೮ ॥

ಕುರ್ಯಾದಾಪರಪಕ್ಷೀಯಂ ಮಾಸಿ ಪ್ರೌಷ್ಠಪದೇ ದ್ವಿಜಃ ।
ಶ್ರಾದ್ಧಂ ಪಿತ್ರೋರ್ಯಥಾವಿತ್ತಂ ತದ್ಬಂಧೂನಾಂ ಚ ವಿತ್ತವಾನ್ ॥ ೧೯ ॥

ಅಯನೇ ವಿಷುವೇ ಕುರ್ಯಾದ್ವ್ಯತೀಪಾತೇ ದಿನಕ್ಷಯೇ ।
ಚಂದ್ರಾದಿತ್ಯೋಪರಾಗೇ ಚ ದ್ವಾದಶೀಶ್ರವಣೇಷು ಚ ॥ ೨೦ ॥

ತೃತೀಯಾಯಾಂ ಶುಕ್ಲಪಕ್ಷೇ ನವಮ್ಯಾಮಥ ಕಾರ್ತಿಕೇ ।
ಚತಸೃಷ್ವಪ್ಯಷ್ಟಕಾಸು ಹೇಮಂತೇ ಶಿಶಿರೇ ತಥಾ ॥ ೨೧ ॥

ಮಾಘೇ ಚ ಸಿತಸಪ್ತಮ್ಯಾಂ ಮಘಾರಾಕಾಸಮಾಗಮೇ ।
ರಾಕಯಾ ಚಾನುಮತ್ಯಾ ವಾ ಮಾಸರ್ಕ್ಷಾಣಿ ಯುತಾನ್ಯಪಿ ॥ ೨೨ ॥

ದ್ವಾದಶ್ಯಾಮನುರಾಧಾ ಸ್ಯಾಚ್ಛ್ರವಣಸ್ತಿಸ್ರ ಉತ್ತರಾಃ ।
ತಿಸೃಷ್ವೇಕಾದಶೀ ವಾऽऽಸು ಜನ್ಮರ್ಕ್ಷಶ್ರೋಣಯೋಗಯುಕ್ ॥ ೨೩ ॥

ತ ಏತೇ ಶ್ರೇಯಸಃ ಕಾಲಾ ನೃಣಾಂ ಶ್ರೇಯೋವಿವರ್ಧನಾಃ ।
ಕುರ್ಯಾತ್ಸರ್ವಾತ್ಮನೈತೇಷು ಶ್ರೇಯೋಽಮೋಘಂ ತದಾಯುಷಃ ॥ ೨೪ ॥

ಏಷು ಸ್ನಾನಂ ಜಪೋ ಹೋಮೋ ವ್ರತಂ ದೇವದ್ವಿಜಾರ್ಚನಮ್ ।
ಪಿತೃದೇವನೃಭೂತೇಭ್ಯೋ ಯದ್ದತ್ತಂ ತದ್ಧ್ಯನಶ್ವರಮ್ ॥ ೨೫ ॥

ಸಂಸ್ಕಾರಕಾಲೋ ಜಾಯಾಯಾ ಅಪತ್ಯಸ್ಯಾತ್ಮನಸ್ತಥಾ ।
ಪ್ರೇತಸಂಸ್ಥಾ ಮೃತಾಹಶ್ಚ ಕರ್ಮಣ್ಯಭ್ಯುದಯೇ ನೃಪ ॥ ೨೬ ॥

ಅಥ ದೇಶಾನ್ಪ್ರವಕ್ಷ್ಯಾಮಿ ಧರ್ಮಾದಿಶ್ರೇಯಆವಹಾನ್ ।
ಸ ವೈ ಪುಣ್ಯತಮೋ ದೇಶಃ ಸತ್ಪಾತ್ರಂ ಯತ್ರ ಲಭ್ಯತೇ ॥ ೨೭ ॥

ಆದ್ದರಿಂದ ಬ್ರಾಹ್ಮಣ, ದೇವತೆ, ಮನುಷ್ಯ ಮುಂತಾದ ಎಲ್ಲ ಪ್ರಾಣಿಗಳಿಗೆ ಯಥಾಯೋಗ್ಯ ಅವರಿಗೆ ಉಪಯುಕ್ತ ಸಾಮಗ್ರಿಗಳಿಂದ ಅವರೆಲ್ಲರ ಹೃದಯದಲ್ಲಿ ಅಂತರ್ಯಾಮಿರೂಪದಿಂದ ವಿರಾಜಮಾನನಾದ ಭಗವಂತನನ್ನು ಪೂಜಿಸಬೇಕು. ಇವುಗಳಲ್ಲಿ ಪ್ರಧಾನತೆ ಬ್ರಾಹ್ಮಣನದೇ ಆಗಿರಬೇಕು. ॥ ೧೮ ॥

ಶ್ರೀಮಂತನಾದ ದ್ವಿಜನು ತನ್ನ ಧನಕ್ಕೆ ಅನುಸಾರವಾಗಿ ಭಾದ್ರಪದಮಾಸದ ಕೃಷ್ಣಪಕ್ಷದಲ್ಲಿ ತನ್ನ ಮಾತಾ-ಪಿತಾ ಹಾಗೂ ಅವರ ಬಂಧುಗಳನ್ನು ಉದ್ದೇಶಿಸಿ ಮಹಾಲಯ ಶ್ರಾದ್ಧವನ್ನು ಮಾಡಬೇಕು. ॥ ೧೯ ॥ ಇದಲ್ಲದೆ ಅಯನ (ಮಕರಸಂಕ್ರಾಂತಿ ಮತ್ತು ಕರ್ಕಾಟಕ ಸಂಕ್ರಾಂತಿ)ಗಳಲ್ಲಿ, ವಿಷುವ (ತುಲಾ ಮತ್ತು ಮೇಷ ಸಂಕ್ರಾಂತಿ)ಗಳಲ್ಲಿ, ವ್ಯತೀಪಾತ, ದಿನಕ್ಷಯ, ಚಂದ್ರಗ್ರಹಣ, ಸೂರ್ಯಗ್ರಹಣಗಳ ಸಮಯದಲ್ಲಿ, ದ್ವಾದಶಿ, ಶ್ರವಣ, ಧನಿಷ್ಠಾ ಅನುರಾಧಾ ನಕ್ಷತ್ರಗಳಲ್ಲಿ ವೈಶಾಖ ಶುಕ್ಲ ತೃತೀಯ (ಅಕ್ಷಯತದಿಗೆ)ಯಲ್ಲಿ, ಕಾರ್ತಿಕ ಶುಕ್ಲ ನವಮೀ (ಅಕ್ಷಯನವಮಿ)ಯಲ್ಲಿ, ಮಾರ್ಗಶಿರ, ಪುಷ್ಯ, ಮಾಘ, ಫಾಲ್ಗುಣ ಈ ನಾಲ್ಕು ಮಾಸಗಳ ಕೃಷ್ಣ ಅಷ್ಟಮಿಗಳಲ್ಲಿ, ಮಾಘ ಶುಕ್ಲ ಸಪ್ತಮಿ, ಮಾಘಮಾಸದ ಮಘಾನಕ್ಷತ್ರಯುಕ್ತ ಪೌರ್ಣಮಿಯಲ್ಲಿ ಮತ್ತು ಮಾಸ ನಕ್ಷತ್ರ ಚಿತ್ರಾ, ವಿಶಾಖಾ, ಜ್ಯೇಷ್ಠ ಮುಂತಾದ ನಕ್ಷತ್ರಗಳಿಂದ ಕೂಡಿದ ಪೌರ್ಣಮಿಗಳಲ್ಲಿ, ದ್ವಾದಶೀ ತಿಥಿಗೆ ಅನುರಾಧಾ, ಶ್ರವಣ, ಉತ್ತರಾಫಲ್ಗುಣೀ, ಉತ್ತರಾಷಾಢಾ, ಉತ್ತರಾಭಾದ್ರಪದಾ ನಕ್ಷತ್ರಗಳ ಯೋಗವು ಇರುವ ಸಮಯದಲ್ಲಿ, ಏಕಾದಶೀ ತಿಥಿಗೆ ಮೂರು ಉತ್ತರಾ ನಕ್ಷತ್ರಗಳೊಡನೆಯೂ ಅಥವಾ ಜನ್ಮನಕ್ಷತ್ರ, ಇಲ್ಲದೇ ಶ್ರವಣಾನಕ್ಷತ್ರದೊಡನೆ ಯೋಗವಿರುವ ಸಮಯದಲ್ಲಿ, ಪಿತೃಗಣಗಳನ್ನು ಉದ್ದೇಶಿಸಿ ಶ್ರಾದ್ಧಮಾಡುವುದು ಯೋಗ್ಯವೂ ಶ್ರೇಷ್ಠವೂ ಆಗಿದೆ. ಈ ಯೋಗಗಳು ಕೇವಲ ಶ್ರಾದ್ಧಕ್ಕೆ ಮಾತ್ರ ಯೋಗ್ಯವಲ್ಲದೆ ಎಲ್ಲ ಪುಣ್ಯಕರ್ಮಗಳ ಆಚರಣೆಗೂ ಉಪಯೋಗಿಯಾಗಿವೆ. ಇವು ಶ್ರೇಯಸ್ಸಿನ ಸಾಧನೆಗೆ ಉಪಯುಕ್ತವು ಮತ್ತು ಶುಭವನ್ನು ವೃದ್ಧಿಪಡಿಸುವುವು. ಈ ಸಮಯಗಳಲ್ಲಿ ತನ್ನ ಸಂಪೂರ್ಣಶಕ್ತಿಯನ್ನು ತೊಡಗಿಸಿ ಶುಭಕರ್ಮಗಳನ್ನು ಮಾಡಬೇಕು. ಇದರಲ್ಲೇ ಜೀವನದ ಸಫಲತೆ ಇದೆ. ॥ ೨೦-೨೪ ॥ ಈ ಪರ್ವಕಾಲಗಳಲ್ಲಿ ಮಾಡಲಾಗುವ ಸ್ನಾನ, ಜಪ, ಹೋಮ, ವ್ರತ ಹಾಗೂ ದೇವ-ಬ್ರಾಹ್ಮಣರ ಪೂಜೆ ಇವುಗಳಿಂದ ಮತ್ತು ದೇವತೆಗಳಿಗೆ, ಪಿತೃಗಳಿಗೆ, ಮನುಷ್ಯರಿಗೆ ಮತ್ತು ಪ್ರಾಣಿಗಳಿಗೆ ಅರ್ಪಿಸಲ್ಪಡುವ ಪದಾರ್ಥಗಳಿಂದ ಅಕ್ಷಯವಾದ ಫಲವು ದೊರೆಯುತ್ತದೆ. ॥ ೨೫ ॥ ಯುಧಿಷ್ಠಿರನೇ! ಇದೇ ಪ್ರಕಾರ ಪತ್ನಿಯ ಪುಂಸವನ ಮುಂತಾದ, ಸಂತಾನದ ಜಾತಕರ್ಮ ಮುಂತಾದ, ತನ್ನ ಯಜ್ಞದೀಕ್ಷೆ ಮುಂತಾದ ಸಂಸ್ಕಾರಗಳ ಸಮಯದಲ್ಲಿ, ಪ್ರೇತಕರ್ಮಗಳಲ್ಲಿ, ವಾರ್ಷಿಕ ಪಿತೃಶ್ರಾದ್ಧದ ದಿನ, ಅಥವಾ ಇತರ ಮಾಂಗಲಿಕ ಕರ್ಮಗಳಲ್ಲಿ ದಾನ-ಧರ್ಮಗಳನ್ನು ವಿಶೇಷವಾಗಿ ಮಾಡಬೇಕು. ॥ ೨೬ ॥

ಧರ್ಮರಾಯಾ! ಈಗ ನಾನು ಧರ್ಮವೇ ಮುಂತಾದ ಶ್ರೇಯಸ್ಸನ್ನುಂಟುಮಾಡುವಂತಹ ಸ್ಥಾನಗಳನ್ನು ವರ್ಣಿಸುತ್ತೇನೆ. ಸತ್ಪಾತ್ರರು ಎಲ್ಲಿ ಸಿಗುತ್ತಾರೋ ಅದು ಎಲ್ಲಕ್ಕಿಂತ ಪವಿತ್ರವಾದ ದೇಶವು. ॥ ೨೭ ॥

ಬಿಂಬಂ ಭಗವತೋ ಯತ್ರ ಸರ್ವಮೇತಚ್ಚರಾಚರಮ್ ।
ಯತ್ರ ಹ ಬ್ರಾಹ್ಮಣಕುಲಂ ತಪೋವಿದ್ಯಾದಯಾನ್ವಿತಮ್
॥ ೨೮ ॥

ಯತ್ರ ಯತ್ರ ಹರೇರರ್ಚಾ ಸ ದೇಶಃ ಶ್ರೇಯಸಾಂ ಪದಮ್ ।
ಯತ್ರ ಗಂಗಾದಯೋ ನದ್ಯಃ ಪುರಾಣೇಷು ಚ ವಿಶ್ರುತಾಃ
॥ ೨೯ ॥

ಸರಾಂಸಿ ಪುಷ್ಕರಾದೀನಿ ಕ್ಷೇತ್ರಾಣ್ಯರ್ಹಾಶ್ರಿತಾನ್ಯುತ ।
ಕುರುಕ್ಷೇತ್ರಂ ಗಯಶಿರಃ ಪ್ರಯಾಗಃ ಪುಲಹಾಶ್ರಮಃ
॥ ೩೦ ॥

ನೈಮಿಷಂ ಫಾಲ್ಗುನಂ ಸೇತುಃ ಪ್ರಭಾಸೋಽಥ ಕುಶಸ್ಥಲೀ ।
ವಾರಾಣಸೀ ಮಧುಪುರೀ ಪಂಪಾ ಬಿಂದುಸರಸ್ತಥಾ
॥ ೩೧ ॥

ನಾರಾಯಣಾಶ್ರಮೋ ನಂದಾ ಸೀತಾರಾಮಾಶ್ರಮಾದಯಃ ।
ಸರ್ವೇ ಕುಲಾಚಲಾ ರಾಜನ್ಮಹೇಂದ್ರಮಲಯಾದಯಃ
॥ ೩೨ ॥

ಏತೇ ಪುಣ್ಯತಮಾ ದೇಶಾ ಹರೇರರ್ಚಾಶ್ರಿತಾಶ್ಚ ಯೇ ।
ಏತಾನ್ ದೇಶಾನ್ನಿಷೇವೇತ ಶ್ರೇಯಸ್ಕಾಮೋ ಹ್ಯಭೀಕ್ಷ್ಣಶಃ ।
ಧರ್ಮೋ ಹ್ಯತ್ರೇಹಿತಃ ಪುಂಸಾಂ ಸಹಸ್ರಾಧಿಫಲೋದಯಃ
॥ ೩೩ ॥

ಪಾತ್ರಂ ತ್ವತ್ರ ನಿರುಕ್ತಂ ವೈ ಕವಿಭಿಃ ಪಾತ್ರವಿತ್ತಮೈಃ ।
ಹರಿರೇವೈಕ ಉರ್ವೀಶ ಯನ್ಮಯಂ ವೈ ಚರಾಚರಮ್
॥ ೩೪ ॥

ದೇವರ್ಷ್ಯರ್ಹತ್ಸು ವೈ ಸತ್ಸು ತತ್ರ ಬ್ರಹ್ಮಾತ್ಮಜಾದಿಷು ।
ರಾಜನ್ಯದಗ್ರಪೂಜಾಯಾಂ ಮತಃ ಪಾತ್ರತಯಾಚ್ಯುತಃ
॥ ೩೫ ॥

ಜೀವರಾಶಿಭಿರಾಕೀರ್ಣ ಅಂಡಕೋಶಾಂಘ್ರಿಪೋ ಮಹಾನ್ ।
ತನ್ಮೂಲತ್ವಾದಚ್ಯುತೇಜ್ಯಾ ಸರ್ವಜೀವಾತ್ಮತರ್ಪಣಮ್
॥ ೩೬ ॥

ಪುರಾಣ್ಯನೇನ ಸೃಷ್ಟಾನಿ ನೃತಿರ್ಯಗೃಷಿದೇವತಾಃ ।
ಶೇತೇ ಜೀವೇನ ರೂಪೇಣ ಪುರೇಷು ಪುರುಷೋ ಹ್ಯಸೌ
॥ ೩೭ ॥

ತೇಷ್ವೇವ ಭಗವಾನ್ರಾಜನ್ ತಾರತಮ್ಯೇನ ವರ್ತತೇ ।
ತಸ್ಮಾತ್ಪಾತ್ರಂ ಹಿ ಪುರುಷೋ ಯಾವಾನಾತ್ಮಾ ಯಥೇಯತೇ
॥ ೩೮ ॥

ದೃಷ್ಟ್ವಾ ತೇಷಾಂ ಮಿಥೋ ನೃಣಾಮವಜ್ಞಾನಾತ್ಮತಾಂ ನೃಪ ।
ತ್ರೇತಾದಿಷು ಹರೇರರ್ಚಾ ಕ್ರಿಯಾಯೈ ಕವಿಭಿಃ ಕೃತಾ
॥ ೩೯ ॥

ಈ ಚರಾಚರ ಜಗತ್ತಿಗೆ ಆಶ್ರಯನಾಗಿರುವ ಭಗವಂತನ ಅರ್ಚಾಮೂರ್ತಿ ಇರುವ ದೇಶವು, ತಪಸ್ಸು, ವಿದ್ಯೆ, ದಯೆ ಮುಂತಾದ ಗುಣಗಳಿಂದ ಕೂಡಿದ ಬ್ರಾಹ್ಮಣರ ಪರಿವಾರಗಳು ನೆಲೆಸಿರುವ ಸ್ಥಳಗಳು, ಪುರಾಣಗಳಲ್ಲಿ ಪ್ರಸಿದ್ಧವಾದ ಗಂಗಾದಿ ನದಿಗಳಿರುವ ಜಾಗಗಳು – ಇವೆಲ್ಲವುಗಳೂ ಪರಮ ಶ್ರೇಯಸ್ಕರವಾದುವುಗಳು. ॥ ೨೮-೨೯ ॥ ಪುಷ್ಕರವೇ ಮುಂತಾದ ಸರೋವರಗಳು, ಸಿದ್ಧಪುರುಷರಿಂದ ಸೇವಿತವಾದ ಕ್ಷೇತ್ರಗಳು, ಕುರುಕ್ಷೇತ್ರ, ಗಯಾ, ಪ್ರಯಾಗ, ಪುಲಹಾಶ್ರಮ (ಸಾಲಿಗ್ರಾಮ ಕ್ಷೇತ್ರ), ನೈಮಿಷಾರಣ್ಯ, ಫಾಲ್ಗುಣಕ್ಷೇತ್ರ, ಸೇತುಬಂಧ ರಾಮೇಶ್ವರ, ಪ್ರಭಾಸ, ದ್ವಾರಕೆ, ಕಾಶೀ, ಮಥುರೆ, ಪಂಪಾಸರೋವರ, ಬಿಂದುಸರೋವರ, ಬದರಿಕಾಶ್ರಮ, ಅಲಕನಂದಾ – ಇವೇ ಪುಣ್ಯಕ್ಷೇತ್ರಗಳು ; ಅಯೋಧ್ಯೆ, ಚಿತ್ರಕೂಟ, ಮುಂತಾದ ಸೀತಾರಾಮಾಶ್ರಮ ಕ್ಷೇತ್ರಗಳು, ಮಹೇಂದ್ರ, ಮಲಯವೇ ಮುಂತಾದ ಸಮಸ್ತ ಕುಲಪರ್ವತಗಳು, ಭಗವಂತನ ಅರ್ಚಾವತಾರಗಳಿರುವ ಜಾಗಗಳು – ಇವೆಲ್ಲವುಗಳೂ ಅತ್ಯಂತ ಪವಿತ್ರವಾದ ದೇಶಗಳು. ॥ ೩೦-೩೩ ॥

ಯುಧಿಷ್ಠಿರನೇ! ಸತ್ಪಾತ್ರರು ಯಾರು ? ಎಂದು ನಿರ್ಣಯಿಸುವ ಸಂದರ್ಭದಲ್ಲಿ ಶ್ರೇಷ್ಠರಾದ ತಜ್ಞರು 'ಶ್ರೀಹರಿಯೊಬ್ಬನೇ ಸತ್ಪಾತ್ರನು' ಎಂದು ಸಾರುತ್ತಾರೆ. ಈ ಚರಾಚರ ಜಗತ್ತೆಲ್ಲವೂ ಆ ಹರಿಮಯವೇ ಆಗಿದೆ. ॥ ೩೪ ॥ ಈಗ ನಿನ್ನ ಯಜ್ಞದ ವಿಷಯವನ್ನೇ ನೋಡು. ಆ ಯಜ್ಞದಲ್ಲಿ ದೇವತೆಗಳು, ಋಷಿಗಳು, ಸಿದ್ಧರು, ಸನಕಾದಿಗಳು ಉಪಸ್ಥಿತರಾಗಿದ್ದರೂ ಅಗ್ರಪೂಜೆಗಾಗಿ ಭಗವಾನ್ ಶ್ರೀಕೃಷ್ಣನನ್ನೇ ಸತ್ಪಾತ್ರನೆಂದು ತಿಳಿಯಲಾಯಿತು. ॥ ೩೫ ॥ ಅಸಂಖ್ಯ ಜೀವಿಗಳಿಂದ ತುಂಬಿರುವ ಈ ಬ್ರಹ್ಮಾಂಡವೆಂಬ ಮಹಾವೃಕ್ಷಕ್ಕೆ ಭಗವಾನ್ ಶ್ರೀಕೃಷ್ಣನೊಬ್ಬನೇ ಮೂಲ (ಬೇರು) ವಾಗಿದ್ದಾನೆ. ಅದರಿಂದ ಅವನ ಪೂಜೆಯಿಂದ ಸಮಸ್ತ ಜೀವಿಗಳ ಆತ್ಮನು ತೃಪ್ತನಾಗುತ್ತಾನೆ. ॥ ೩೬ ॥ ಈತನೇ ಮನುಷ್ಯ, ಪಶು-ಪಕ್ಷಿ ಋಷಿ, ದೇವತೆಗಳು ಮುಂತಾದವುಗಳ ಶರೀರವೆಂಬ ಪುರಗಳನ್ನು ರಚಿಸಿ, ಅವನೇ ಈ ಪುರಗಳಲ್ಲಿ ಜೀವರೂಪದಿಂದ ಶಯನ ಮಾಡಿರುವನು. ಆದರಿಂದಲೇ ಅವನಿಗೆ 'ಪುರುಷ' ಎಂಬ ಒಂದು ಹೆಸರೂ ಇದೆ. ॥ ೩೭ ॥ ಯುಧಿಷ್ಠಿರನೇ! ಭಗವಂತನು ಏಕರಸನಾಗಿದ್ದರೂ ಈ ಮನುಷ್ಯಾದಿ ಶರೀರಗಳಲ್ಲಿ ಅವುಗಳ ಭಿನ್ನತೆಯಿಂದಾಗಿ ತಾರತಮ್ಯದಿಂದ ಕೂಡಿರುವವನಂತೆ ಕಾಣುತ್ತಾನೆ. ಅದಕ್ಕಾಗಿ ಪಶು-ಪಕ್ಷಿ ಮುಂತಾದ ಶರೀರಗಳಿಗಿಂತ ಮನುಷ್ಯನೇ ಶ್ರೇಷ್ಠ ಪಾತ್ರನಾಗಿದ್ದಾನೆ. ಮನುಷ್ಯರಲ್ಲಿಯೂ ಯಾರಲ್ಲಿ ಭಗವಂತನ ಅಂಶವು ತಪಸ್ಸು-ಯೋಗಾದಿ ಎಷ್ಟು ಹೆಚ್ಚು ಕಂಡುಬರುತ್ತದೋ ಅವನು ಅಷ್ಟೇ ಶ್ರೇಷ್ಠನಾಗಿದ್ದಾನೆ. ॥ ೩೮ ॥

ಧರ್ಮರಾಯಾ! ತ್ರೇತಾಯುಗವೇ ಮುಂತಾದ ಯುಗಗಳಲ್ಲಿ ಮನುಷ್ಯರು ಪರಸ್ಪರ ಒಬ್ಬರನ್ನೊಬ್ಬರು ಅಪಮಾನ ಮಾಡುವುದನ್ನು ನೋಡಿ ವಿದ್ವಾಂಸರು ಆ ಜನರಿಗೆ ಉಪಾಸನೆಯ ಸಿದ್ಧಿಗಾಗಿ ಭಗವಂತನ ಪ್ರತಿಮೆಗಳನ್ನು ಪ್ರತಿಷ್ಠಾಪಿಸಿದರು. ॥ ೩೯ ॥

ತತೋಽರ್ಚಾಯಾಂ ಹರಿಂ ಕೇಚಿತ್ಸಂಶ್ರದ್ಧಾಯ ಸಪರ್ಯಯಾ ।
ಉಪಾಸತ ಉಪಾಸ್ತಾಪಿ ನಾರ್ಥದಾ ಪುರುಷದ್ವಿಷಾಮ್ ॥ ೪೦ ॥

ಅಂದಿನಿಂದ ಎಷ್ಟೋ ಜನರು ಅತ್ಯಂತ ಶ್ರದ್ಧೆ ಮತ್ತು ಸಾಮಗ್ರಿಗಳಿಂದ ಪ್ರತಿಮೆಯಲ್ಲೇ ಭಗವಂತನನ್ನು ಪೂಜಿಸುತ್ತಾರೆ. ಆದರೆ ಮನುಷ್ಯರೊಂದಿಗೆ ದ್ವೇಷಮಾಡುವವನಿಗೆ ಪ್ರತಿಮೆಯ ಉಪಾಸನೆ ಮಾಡಿದರೂ ಸಿದ್ಧಿ ಸಿಗಲಾರದು. ॥ ೪೦ ॥

ಪುರುಷೇಷ್ವಪಿ ರಾಜೇಂದ್ರ ಸುಪಾತ್ರಂ ಬ್ರಾಹ್ಮಣಂ ವಿದುಃ ।
ತಪಸಾ ವಿದ್ಯಯಾ ತುಷ್ಟ್ಯಾ ಧತ್ತೇ ವೇದಂ ಹರೇಸ್ತನುಮ್ ॥ ೪೧ ॥

ನನ್ವಸ್ಯ ಬ್ರಾಹ್ಮಣಾ ರಾಜನ್ಕೃಷ್ಣಸ್ಯ ಜಗದಾತ್ಮನಃ ।
ಪುನಂತಃ ಪಾದರಜಸಾ ತ್ರಿಲೋಕೀಂ ದೈವತಂ ಮಹತ್ ॥ ೪೨ ॥

ಯುಧಿಷ್ಠಿರನೇ! ಮನುಷ್ಯರಲ್ಲಿಯೂ ಬ್ರಾಹ್ಮಣನೇ ವಿಶೇಷ ಸುಪಾತ್ರನೆಂದು ತಿಳಿಯಲಾಗಿದೆ. ಏಕೆಂದರೆ, ಅವನು ತನ್ನ ತಪಸ್ಸು ವಿದ್ಯೆ, ಸಂತೋಷವೇ ಮುಂತಾದ ಗುಣಗಳಿಂದ ಭಗವಂತನ ವೇದರೂಪೀ ಶರೀರವನ್ನು ಧರಿಸಿರುತ್ತಾನೆ. ॥ ೪೧ ॥ ಮಹಾರಾಜ! ನಮ್ಮ-ನಿಮ್ಮ ಮಾತಿರಲಿ, ಈ ಸರ್ವಾತ್ಮನಾದ ಭಗವಾನ್ ಶ್ರೀಕೃಷ್ಣನಿಗೂ ಕೂಡ ಬ್ರಾಹ್ಮಣರೇ ಇಷ್ಟದೇವರಾಗಿದ್ದಾರೆ. ಏಕೆಂದರೆ, ಅವರ ಚರಣಧೂಳಿಯಿಂದ ಮೂರುಲೋಕಗಳೂ ಪವಿತ್ರವಾಗುತ್ತವೆ. ॥ ೪೨ ॥

ಹದಿನಾಲ್ಕನೆಯ ಅಧ್ಯಾಯವು ಮುಗಿಯಿತು. ॥ ೧೪ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಸಪ್ತಮ ಸ್ಕಂಧೇ
ಸದಾಚಾರನಿರ್ಣಯೋ ನಾಮ ಚತುರ್ದಶೋಽಧ್ಯಾಯಃ ॥ ೧೪ ॥

ಹದಿನೈದನೆಯ ಅಧ್ಯಾಯ

ಗೃಹಸ್ಥರಿಗಾಗಿ ಮೋಕ್ಷಧರ್ಮದ ವರ್ಣನೆ

ನಾರದ ಉವಾಚ

ಕರ್ಮನಿಷ್ಠಾ ದ್ವಿಜಾಃ ಕೇಚಿತ್ತಪೋನಿಷ್ಠಾ ನೃಪಾಪರೇ ।
ಸ್ವಾಧ್ಯಾಯೇಽನ್ಯೇ ಪ್ರವಚನೇ ಯೇ ಕೇಚಿಜ್ಜ್ಞಾನಯೋಗಯೋಃ ॥ ೧ ॥

ಜ್ಞಾನನಿಷ್ಠಾಯ ದೇಯಾನಿ ಕವ್ಯಾನ್ಯಾನಂತ್ಯಮಿಚ್ಛತಾ ।
ದೈವೇ ಚ ತದಭಾವೇ ಸ್ಯಾದಿತರೇಭ್ಯೋ ಯಥಾರ್ಹತಃ ॥ ೨ ॥

ದ್ವೌ ದೈವೇ ಪಿತೃಕಾರ್ಯೇ ತ್ರೀನೇಕೈಕಮುಭಯತ್ರ ವಾ ।
ಭೋಜಯೇತ್ಸುಸಮೃದ್ಧೋಽಪಿ ಶ್ರಾದ್ಧೇ ಕುರ್ಯಾನ್ನ ವಿಸ್ತರಮ್ ॥ ೩ ॥

ದೇಶಕಾಲೋಚಿತಶ್ರದ್ಧಾದ್ರವ್ಯಪಾತ್ರಾರ್ಹಣಾನಿ ಚ ।
ಸಮ್ಯಗ್ಭವಂತಿ ನೈತಾನಿ ವಿಸ್ತರಾತ್ಸ್ವಜನಾರ್ಪಣಾತ್ ॥ ೪ ॥

ದೇಶೇ ಕಾಲೇ ಚ ಸಂಪ್ರಾಪ್ತೇ ಮುನ್ಯನ್ನಂ ಹರಿದೈವತಮ್ ।
ಶ್ರದ್ಧಯಾ ವಿಧಿವತ್ಪಾತ್ರೇ ನ್ಯಸ್ತಂ ಕಾಮಧುಗಕ್ಷಯಮ್ ॥ ೫ ॥

ನಾರದರು ಹೇಳುತ್ತಾರೆ – ಯುಧಿಷ್ಠಿರನೇ! ಕೆಲವು ದ್ವಿಜರ ನಿಷ್ಠೆ ಕರ್ಮದಲ್ಲಾದರೆ, ಕೆಲವರಲ್ಲಿ ತಪಸ್ಸಿನಲ್ಲಿ, ಕೆಲವರಲ್ಲಿ ವೇದಗಳ ಅಧ್ಯಯನ-ಪ್ರವಚನಗಳಲ್ಲಿ, ಕೆಲವರಲ್ಲಿ ಆತ್ಮಜ್ಞಾನ ಸಂಪಾದನೆಯಲ್ಲಿ, ಕೆಲವರಲ್ಲಿ ಯೋಗದಲ್ಲಿ ನಿಷ್ಠೆ ಇರುತ್ತದೆ. ॥ ೧ ॥ ಶ್ರಾದ್ಧ ಅಥವಾ ದೇವರ ಪೂಜೆಗಳೇ ಮುಂತಾದ ಕರ್ಮಗಳ ಅಕ್ಷಯ ಫಲವನ್ನು ಬಯಸುವ ಗೃಹಸ್ಥನಾದವನು ಜ್ಞಾನನಿಷ್ಠ ದ್ವಿಜನಿಗೆ ಹವ್ಯ-ಕವ್ಯಗಳನ್ನು ಸಮರ್ಪಿಸಬೇಕು. ಅವರು ಸಿಗದಿದ್ದಾಗ ಯೋಗೀ, ಪ್ರವಚನಕಾರ ಮುಂತಾದವರಿಗೆ ಯಥಾಯೋಗ್ಯ, ಯಥಾಕ್ರಮದಲ್ಲಿ ದಾನಮಾಡಬೇಕು. ॥ ೨ ॥ ದೇವಕಾರ್ಯದಲ್ಲಿ ಇಬ್ಬರು ಮತ್ತು ಪಿತೃಕಾರ್ಯದಲ್ಲಿ ಮೂರು ಅಥವಾ ಎರಡರಲ್ಲಿಯೂ ಒಂದೊಂದು ಬ್ರಾಹ್ಮಣರಿಗೆ ಭೋಜನ ಮಾಡಿಸಬೇಕು. ತುಂಬಾ ಶ್ರೀಮಂತನಾಗಿದ್ದರೂ ಶ್ರಾದ್ಧಕರ್ಮದಲ್ಲಿ ಹೆಚ್ಚು ವಿಸ್ತಾರವನ್ನು ಮಾಡಬಾರದು. ॥ ೩ ॥ ಏಕೆಂದರೆ, ನೆಂಟರಿಗೆ, ಸ್ವಜನರಿಗೆ ಕೊಡುವುದರಿಂದ, ಶ್ರಾದ್ಧವಿಸ್ತಾರ ಮಾಡುವುದರಿಂದ ದೇಶ-ಕಾಲೋಚಿತ ಶ್ರದ್ಧೆ, ಪದಾರ್ಥ, ಪಾತ್ರ ಮತ್ತು ಪೂಜೆ ಸರಿಯಾಗಿ ನಡೆಯುವುದಿಲ್ಲ. ॥ ೪ ॥ ಸರಿಯಾದ ದೇಶ-ಕಾಲಗಳು ಕೂಡಿಬಂದಾಗ ಋಷಿ-ಮುನಿಗಳಿಗೆ ಭೋಜನಯೋಗ್ಯವಾದ ಹವಿಷ್ಯಾನ್ನವನ್ನು ಭಗವಂತನಿಗೆ ನಿವೇದನೆಮಾಡಿ, ಶ್ರದ್ಧೆಯಿಂದ ವಿಧಿವತ್ತಾಗಿ ಸುಪಾತ್ರರಿಗೆ ಕೊಡಬೇಕು. ಅದು ಸಮಸ್ತ ಕಾಮನೆಗಳನ್ನು ಪೂರ್ಣಗೊಳಿಸುವಂತಹುದು ಮತ್ತು ಅಕ್ಷಯವಾಗುತ್ತದೆ. ॥ ೫ ॥ ದೇವತೆಗಳಿಗೆ, ಋಷಿಗಳಿಗೆ, ಪಿತೃಗಳಿಗೆ, ಬೇರೆ ಪ್ರಾಣಿಗಳಿಗೆ, ಸ್ವಜನರಿಗೆ ಅನ್ನವನ್ನು ನೀಡುವಾಗ ಮತ್ತು ತನಗಾಗಿ

ದೇವರ್ಷಿಪಿತೃಭೂತೇಭ್ಯ ಆತ್ಮನೇ ಸ್ವಜನಾಯ ಚ ।
ಅನ್ನಂ ಸಂವಿಭಜನ್ಪಶ್ಯೇತ್ಸರ್ವಂ ತತ್ಪುರುಷಾತ್ಮಕಮ್ ॥ ೬ ॥

ನ ದದ್ಯಾದಾಮಿಷಂ ಶ್ರಾದ್ಧೇ ನ ಚಾದ್ಯಾದ್ಧರ್ಮತತ್ತ್ವವಿತ್ ।
ಮುನ್ಯನ್ನೈಃ ಸ್ಯಾತ್ಪರಾ ಪ್ರೀತಿರ್ಯಥಾ ನ ಪಶುಹಿಂಸಯಾ ॥ ೭ ॥

ನೈತಾದೃಶಃ ಪರೋ ಧರ್ಮೋ ನೃಣಾಂ ಸದ್ಧರ್ಮಮಿಚ್ಛತಾಮ್ ।
ನ್ಯಾಸೋ ದಂಡಸ್ಯ ಭೂತೇಷು ಮನೋವಾಕ್ಕಾಯಜಸ್ಯ ಯಃ ॥ ೮ ॥

ಏಕೇ ಕರ್ಮಮಯಾನ್ ಯಜ್ಞಾನ್ ಜ್ಞಾನಿನೋ ಯಜ್ಞವಿತ್ತಮಾಃ ।
ಆತ್ಮಸಂಯಮನೇಽನೀಹಾ ಜುಹ್ವತಿ ಜ್ಞಾನದೀಪಿತೇ ॥ ೯ ॥

ದ್ರವ್ಯಯಜ್ಞೈರ್ಯಕ್ಷ್ಯಮಾಣಂ ದೃಷ್ಟ್ವಾ ಭೂತಾನಿ ಬಿಭ್ಯತಿ ।
ಏಷ ಮಾಕರುಣೋ ಹನ್ಯಾದತಜ್ಜ್ಞೋ ಹ್ಯಸುತೃಬ್ಧ್ರುವಮ್ ॥ ೧೦ ॥

ತಸ್ಮಾದ್ದೈವೋಪಪನ್ನೇನ ಮುನ್ಯನ್ನೇನಾಪಿ ಧರ್ಮವಿತ್ ।
ಸಂತುಷ್ಟೋಽಹರಹಃ ಕುರ್ಯಾನ್ನಿತ್ಯನೈಮಿತ್ತಿಕೀಃ ಕ್ರಿಯಾಃ ॥ ೧೧ ॥

ವಿಧರ್ಮಃ ಪರಧರ್ಮಶ್ಚ
ಆಭಾಸ ಉಪಮಾ ಛಲಃ ।
ಅಧರ್ಮಶಾಖಾಃ ಪಂಚೇಮಾ
ಧರ್ಮಜ್ಞೋಽಧರ್ಮವತ್ತ್ಯಜೇತ್ ॥ ೧೨ ॥

ಧರ್ಮಬಾಧೋ ವಿಧರ್ಮಃ ಸ್ಯಾತ್ಪರಧರ್ಮೋಽನ್ಯಚೋದಿತಃ ।
ಉಪಧರ್ಮಸ್ತು ಪಾಖಂಡೋ ದಂಭೋ ವಾ ಶಬ್ದಭಿಚ್ಛಲಃ ॥ ೧೩ ॥

ಯಸ್ತ್ವಿಚ್ಛಯಾ ಕೃತಃ ಪುಂಭಿರಾಭಾಸೋ ಹ್ಯಾಶ್ರಮಾತ್ಪೃಥಕ್ ।
ಸ್ವಭಾವವಿಹಿತೋ ಧರ್ಮಃ ಕಸ್ಯ ನೇಷ್ಟಃ ಪ್ರಶಾಂತಯೇ ॥ ೧೪ ॥

ಧರ್ಮಾರ್ಥಮಪಿ ನೇಹೇತ ಯಾತ್ರಾರ್ಥಂ ವಾಧನೋ ಧನಮ್ ।
ಅನೀಹಾನೀಹಮಾನಸ್ಯ ಮಹಾಹೇರಿವ ವೃತ್ತಿದಾ ॥ ೧೫ ॥

ತೆಗೆದಿರಿಸಿದಾಗಲೂ ಅವರೆಲ್ಲರನ್ನೂ ಪರಮಾತ್ಮಸ್ವರೂಪರೆಂದೇ ನೋಡಬೇಕು. ॥ ೬॥

ಧರ್ಮದ ಮರ್ಮವನ್ನು ಅರಿತಿರುವವರು ಶ್ರಾದ್ಧದಲ್ಲಿ ಮಾಂಸವನ್ನು ಅರ್ಪಿಸಬಾರದು ಮತ್ತು ಸ್ವತಃ ತಾನು ಕೂಡ ತಿನ್ನಬಾರದು. ಏಕೆಂದರೆ ಪಿತೃಗಳಿಗೆ, ಋಷಿ-ಮುನಿಗಳಿಗೆ ಯೋಗ್ಯವಾದ ಹವಿಷ್ಯಾನ್ನದಿಂದ ಪ್ರಸನ್ನತೆ ಉಂಟಾಗುವಂತೆ ಪಶು-ಹಿಂಸೆಯಿಂದ ಆಗುವುದಿಲ್ಲ. ॥ ೭ ॥ ಸದ್ಧರ್ಮವನ್ನು ಪಾಲಿಸಬೇಕೆಂದು ಬಯಸುವ ಜನರಿಗೆ ಯಾವುದೇ ಪ್ರಾಣಿಗೂ ಮನಸ್ಸಿನಿಂದ, ಮಾತಿನಿಂದ, ಶರೀರದಿಂದ ಯಾವ ವಿಧದಿಂದಲೂ ಕಷ್ಟ ಕೊಡಬಾರದು. ಇದರಿಂದ ಮಿಗಿಲಾದ ಬೇರೆ ಯಾವ ಧರ್ಮವು ಇಲ್ಲ. ॥ ೮ ॥ ಇದರಿಂದಲೇ ಕೆಲ-ಕೆಲವರು ಯಜ್ಞತತ್ತ್ವವನ್ನು ಬಲ್ಲಜ್ಞಾನಿಗಳು ಜ್ಞಾನದ ಮೂಲಕ ಪ್ರಜ್ವಲಿತ ಆತ್ಮಸಂಯಮವೆಂಬ ಅಗ್ನಿಯಲ್ಲಿ ಈ ಕರ್ಮಮಯ ಯಜ್ಞಗಳನ್ನು ಹೋಮಮಾಡಿಬಿಡುತ್ತಾರೆ ಮತ್ತು ಬಾಹ್ಯ ಕರ್ಮಕಲಾಪಗಳಿಂದ ಉಪರತರಾಗುತ್ತಾರೆ. ॥ ೯ ॥ ಯಾರಾದರೂ ಪಶುಬಲಿ ಇತ್ಯಾದಿ ಸಾಮಗ್ರಿಗಳಿಂದ ಯಜ್ಞ ಮಾಡಲು ಬಯಸಿದಾಗ ಎಲ್ಲ ಪ್ರಾಣಿಗಳು ಹೆದರಿಹೋಗುತ್ತವೆ. ಅವುಗಳು ಯೋಚಿಸುತ್ತವೆ – ಇವನು ತನ್ನ ಪ್ರಾಣಗಳನ್ನು ಪೋಷಿಸುವ ನಿರ್ದಯೀ ಮೂರ್ಖನು ನಮ್ಮನ್ನು ಖಂಡಿತವಾಗಿ ಕೊಂದುಬಿಡುವನು ಎಂದುಕೊಳ್ಳುವವು. ॥ ೧೦ ॥ ಅದಕ್ಕಾಗಿ ಧರ್ಮಜ್ಞನಾದವನು – ಪ್ರತಿದಿನವು ಪ್ರಾರಬ್ಧದ ಮೂಲಕ ದೊರೆತ ಮುನಿಜನೋಚಿತವಾದ ಹವಿಷ್ಯಾನ್ನದಿಂದಲೇ ತನ್ನ ನಿತ್ಯ-ನೈಮಿತ್ತಿಕ ಕರ್ಮಗಳನ್ನು ಮಾಡಿ, ಅದರಿಂದಲೇ ಸಂತುಷ್ಟನಾಗಿರುವುದೇ ಉಚಿತವಾಗಿದೆ. ॥ ೧೧ ॥

ವಿಧರ್ಮ, ಪರಧರ್ಮ, ಆಭಾಸ, ಉಪಮ ಮತ್ತು ಛಲ – ಎಂಬ ಈ ಐದು ಅಧರ್ಮದ ಶಾಖೆಗಳು. ಧರ್ಮಜ್ಞನಾದ ಮನುಷ್ಯನು ಅಧರ್ಮದಂತೆ ಇವುಗಳನ್ನು ತ್ಯಜಿಸಿಬಿಡಬೇಕು. ॥ ೧೨ ॥ ಯಾವ ಕಾರ್ಯವನ್ನು ಧರ್ಮಬುದ್ಧಿಯಿಂದ ಮಾಡಿದರೂ ತನ್ನ ಧರ್ಮದಲ್ಲಿ ಬಾಧೆ ಉಂಟಾದರೆ ಅದು 'ವಿಧರ್ಮ'ವಾಗಿದೆ. ಯಾರೋ ಬೇರೆಯವರಿಂದ ಇತರರಿಗೆ ಉಪದೇಶಿಸಲ್ಪಟ್ಟ ಧರ್ಮವು 'ಪರಧರ್ಮ'ವಾಗಿದೆ. ಪಾಷಂಡ ಮತ್ತು ದಾಂಭಿಕತೆಯನ್ನು 'ಉಪಧರ್ಮ' ಅಥವಾ 'ಉಪಮಾ' ಎಂದು ಹೇಳುತ್ತಾರೆ. ಶಾಸ್ತ್ರವಚನಗಳನ್ನು ಬೇರೆ ಪ್ರಕಾರದಿಂದ ಅರ್ಥೈಸುವುದು 'ಛಲ'ವಾಗಿದೆ. ॥ ೧೩ ॥ ಮನುಷ್ಯನು ತನ್ನ ಆಶ್ರಮಕ್ಕೆ ವಿಪರೀತವಾಗಿ ಸ್ವೇಚ್ಛೆಯಿಂದ ಯಾವುದನ್ನು ಧರ್ಮವೆಂದು ತಿಳಿಯುತ್ತಾನೋ ಅದು 'ಆಭಾಸ'ವಾಗಿದೆ. ತಮ್ಮ-ತಮ್ಮ ಸ್ವಭಾವಕ್ಕನುಕೂಲವಾದ ವರ್ಣಾಶ್ರಮೋಚಿತ ಧರ್ಮಗಳು ಯಾರಿಗೆ ತಾನೇ ಶಾಂತಿಯನ್ನು ಉಂಟುಮಾಡುವುದಿಲ್ಲ? ॥ ೧೪ ॥

ಧರ್ಮಾತ್ಮ ಮನುಷ್ಯನು ನಿರ್ಧನನಾಗಿದ್ದರೂ ಧರ್ಮಕ್ಕಾಗಿ ಅಥವಾ ಶರೀರನಿರ್ವಾಹಕ್ಕಾಗಿ, ಹಣವನ್ನು ಗಳಿಸುವ ಪ್ರಯತ್ನ ಮಾಡಬಾರದು. ಏಕೆಂದರೆ, ಯಾವುದೇ ರೀತಿಯ ಪ್ರಯತ್ನ ಮಾಡದೆಯೇ ಹೆಬ್ಬಾವಿನ ಜೀವನ ನಡೆಯುವಂತೆಯೇ ನಿವೃತ್ತಿಪರಾಯಣ ಮನುಷ್ಯನ ನಿವೃತ್ತಿಯೇ ಅವನ ಜೀವನ ನಿರ್ವಹಣೆ ಮಾಡುತ್ತದೆ. ॥ ೧೫ ॥

ಸಂತುಷ್ಟಸ್ಯ ನಿರೀಹಸ್ಯ ಸ್ವಾತ್ಮಾರಾಮಸ್ಯ ಯತ್ಸುಖಮ್ ।
ಕುತಸ್ತತ್ಕಾಮಲೋಭೇನ ಧಾವತೋಽರ್ಥೇಹಯಾ ದಿಶಃ ॥ ೧೬ ॥

ಸದಾ ಸಂತುಷ್ಟಮನಸಃ ಸರ್ವಾಃ ಸುಖಮಯಾ ದಿಶಃ ।
ಶರ್ಕರಾಕಂಟಕಾದಿಭ್ಯೋ ಯಥೋಪಾನತ್ಪದಃ ಶಿವಮ್ ॥ ೧೭ ॥

ಸಂತುಷ್ಟಃ ಕೇನ ವಾ ರಾಜನ್ನ ವರ್ತೇತಾಪಿ ವಾರಿಣಾ ।
ಔಪಸ್ಥ್ಯಜೈಹ್ವ್ಯಕಾರ್ಪಣ್ಯಾದ್ಗೃಹಪಾಲಾಯತೇ ಜನಃ ॥ ೧೮ ॥

ಅಸಂತುಷ್ಟಸ್ಯ ವಿಪ್ರಸ್ಯ ತೇಜೋ ವಿದ್ಯಾ ತಪೋ ಯಶಃ ।
ಸ್ರವಂತೀಂದ್ರಿಯಲೌಲ್ಯೇನ ಜ್ಞಾನಂ ಚೈವಾವಕೀರ್ಯತೇ ॥ ೧೯ ॥

ಕಾಮಸ್ಯಾಂತಂ ಚ ಕ್ಷುತ್ತೃಡ್ಭ್ಯಾಂ ಕ್ರೋಧಸ್ಯೈತತ್ಫಲೋದಯಾತ್ ।
ಜನೋ ಯಾತಿ ನ ಲೋಭಸ್ಯ ಜಿತ್ವಾ ಭುಕ್ತ್ವಾ ದಿಶೋ ಭುವಃ ॥ ೨೦ ॥

ಪಂಡಿತಾ ಬಹವೋ ರಾಜನ್ಬಹುಜ್ಞಾಃ ಸಂಶಯಚ್ಛಿದಃ ।
ಸದಸಸ್ಪತಯೋಽಪ್ಯೇಕೇ ಅಸಂತೋಷಾತ್ಪತಂತ್ಯಧಃ ॥ ೨೧ ॥

ಅಸಂಕಲ್ಪಾಜ್ಜಯೇತ್ಕಾಮಂ ಕ್ರೋಧಂ ಕಾಮವಿವರ್ಜನಾತ್ ।
ಅರ್ಥಾನರ್ಥೇಕ್ಷಯಾ ಲೋಭಂ ಭಯಂ ತತ್ತ್ವಾವಮರ್ಶನಾತ್ ॥ ೨೨ ॥

ಆನ್ವೀಕ್ಷಿಕ್ಯಾ ಶೋಕಮೋಹೌ ದಂಭಂ ಮಹದುಪಾಸಯಾ ।
ಯೋಗಾಂತರಾಯಾನ್ಮೌನೇನ ಹಿಂಸಾಂ ಕಾಯಾದ್ಯನೀಹಯಾ ॥ ೨೩ ॥

ಕೃಪಯಾ ಭೂತಜಂ ದುಃಖಂ ದೈವಂ ಜಹ್ಯಾತ್ಸಮಾಧಿನಾ ।
ಆತ್ಮಜಂ ಯೋಗವೀರ್ಯೇಣ ನಿದ್ರಾಂ ಸತ್ತ್ವನಿಷೇವಯಾ ॥ ೨೪ ॥

ರಜಸ್ತಮಶ್ಚ ಸತ್ತ್ವೇನ ಸತ್ತ್ವಂ ಚೋಪಶಮೇನ ಚ ।
ಏತತ್ಸರ್ವಂ ಗುರೌ ಭಕ್ತ್ಯಾ ಪುರುಷೋ ಹ್ಯಂಜಸಾ ಜಯೇತ್ ॥ ೨೫ ॥

ತನ್ನ ಆತ್ಮನಲ್ಲೇ ರಮಿಸುತ್ತಾ ಕರ್ಮರಹಿತನಾಗಿ ಸಂತುಷ್ಟನಾಗಿರುವ ಮನುಷ್ಯನಿಗೆ ಸಿಗುವ ಸುಖವು, ಕಾಮನೆಗಳಿಂದಲೂ, ಲೋಭದಿಂದಲೂ ಹಣಕ್ಕಾಗಿ ಹಂಬಲಿಸುತ್ತಾ ಅಲ್ಲಿ-ಇಲ್ಲಿ ಎಲ್ಲೆಡೆ ಅಲೆಯುತ್ತಿರುವ ಮನುಷ್ಯನಿಗೆ ಹೇಗೆ ತಾನೇ ಸಿಗಬಲ್ಲದು? ॥ ೧೬ ॥ ಕಾಲಿಗೆ ಎಕ್ಕಡಗಳನ್ನು ಧರಿಸಿಕೊಂಡು ನಡೆಯುವವನಿಗೆ ಕಲ್ಲು-ಮುಳ್ಳುಗಳ ಯಾವುದೇ ಭಯವು ಇರುವುದಿಲ್ಲ. ಅಂತೆಯೇ ಮನಸ್ಸಿನಲ್ಲಿ ಸಂತೋಷವಿರುವವನಿಗೆ ಎಂದೆಂದಿಗೂ ಮತ್ತು ಎಲ್ಲೆಡೆಗಳಲ್ಲಿಯೂ ಸುಖವೇ ಸುಖವಿದೆ; ದುಃಖವು ಇಲ್ಲವೇ ಇಲ್ಲ. ॥ ೧೭ ॥ ಯುಧಿಷ್ಠಿರನೇ! ಮನುಷ್ಯನು ಕೇವಲ ನೀರಿನಿಂದಲೇ ಸಂತುಷ್ಟನಾಗಿದ್ದು ತನ್ನ ಜೀವನ ನಿರ್ವಾಹ ಏಕೆ ಮಾಡಿಕೊಳ್ಳುವುದಿಲ್ಲವೋ ತಿಳಿಯದು. ಆದರೆ ರಸನೇಂದ್ರಿಯ ಮತ್ತು ಜನನೇಂದ್ರಿಯಗಳ ಆಸೆಗಳನ್ನು ತೀರಿಸುವ ಅಲ್ಪ ಸುಖಕ್ಕೆ ಒಳಗಾಗಿ ಮನೆಕಾಯುವ ನಾಯಿಯಂತೆ ಆಗುವನು. ॥ ೧೮ ॥ ಸಂತೋಷಿಯಲ್ಲದ ಬ್ರಾಹ್ಮಣನು ಇಂದ್ರಿಯಗಳ ಲೋಲುಪತೆಯಿಂದ ಅವನ ತೇಜ, ವಿದ್ಯೆ, ತಪಸ್ಸು, ಕೀರ್ತಿ ಇವುಗಳು ಕ್ಷೀಣಿಸಿಬಿಡುವುವು ಮತ್ತು ವಿವೇಕವನ್ನು ಕಳೆದುಕೊಳ್ಳುವನು. ॥ ೧೯ ॥ ಹಸಿವು, ಬಾಯಾರಿಕೆ ಇಂಗಿಹೋದ ಬಳಿಕ ತಿನ್ನುವ-ಕುಡಿಯುವ ಕಾಮನೆ ಮುಗಿದುಹೋಗುತ್ತದೆ. ಕ್ರೋಧವೂ ತನ್ನ ಕೆಲಸವನ್ನು ಪೂರ್ಣಗೊಳಿಸಿ ಶಾಂತವಾಗುವುದು. ಆದರೆ ಮನುಷ್ಯನು ಪೃಥಿವಿಯ ಎಲ್ಲ ದಿಕ್ಕುಗಳನ್ನು ಗೆದ್ದುಕೊಂಡು, ಭೋಗಿಸಿದರೂ ಅವನ ಲೋಭವು ಕೊನೆಗೊಳ್ಳುವುದಿಲ್ಲ. ॥ ೨೦ ॥ ಅನೇಕ ವಿಷಯಗಳನ್ನು ಬಲ್ಲವನಾಗಿ, ಸಂಶಯಗಳನ್ನು ಸಮಾಧಾನಪಡಿಸಿಕೊಂಡು ಮನಸ್ಸಿನಲ್ಲಿ ಶಾಸ್ತ್ರೋಕ್ತವಾದ ಅರ್ಥವನ್ನು ನಿಶ್ಚಯಿಸಿಕೊಂಡಿರುವವರು, ವಿದ್ವತ್ಸಭೆಗಳ ಅಧ್ಯಕ್ಷರಾದ ದೊಡ್ಡ-ದೊಡ್ಡ ವಿದ್ವಾಂಸರೂ ಕೂಡ ಅಸಂತೋಷದ ಕಾರಣ ಪತನಹೊಂದುವರು. ॥ ೨೧ ॥

ಧರ್ಮನಂದನಾ! ಸಂಕಲ್ಪಗಳ ಪರಿತ್ಯಾಗದಿಂದ ಕಾಮವನ್ನೂ, ಕಾಮನೆಗಳ ತ್ಯಾಗದಿಂದ ಕ್ರೋಧವನ್ನೂ, ಸಂಸಾರಿಗಳು ಹೇಳುವ 'ಅರ್ಥ'ವನ್ನು ಅನರ್ಥವೆಂದು ತಿಳಿದುಕೊಂಡು ಲೋಭವನ್ನೂ ಮತ್ತು ತತ್ತ್ವದ ವಿಚಾರದಿಂದ ಭಯವನ್ನೂ ಗೆದ್ದುಕೊಳ್ಳಬೇಕು. ॥ ೨೨ ॥ ಅಧ್ಯಾತ್ಮವಿದ್ಯೆಯಿಂದ ಶೋಕ-ಮೋಹಗಳನ್ನೂ, ಸಂತರ ಉಪಾಸನೆಯಿಂದ ದಂಭವನ್ನೂ, ಮೌನದಿಂದ ಯೋಗದ ವಿಘ್ನಗಳನ್ನೂ ಮತ್ತು ಶರೀರ-ಪ್ರಾಣ ಮುಂತಾದವುಗಳನ್ನು ನಿಶ್ಚೇಷ್ಟಗೊಳಿಸಿ ಹಿಂಸೆಯನ್ನು ಜಯಿಸಿಕೊಳ್ಳಬೇಕು. ॥ ೨೩ ॥ ಅಧಿಭೌತಿಕ ದುಃಖವನ್ನು ದಯೆಯ ಮೂಲಕ, ಅಧಿದೈವಿಕ ವೇದನೆಯನ್ನು ಸಮಾಧಿಯಿಂದ, ಆಧ್ಯಾತ್ಮಿಕ ದುಃಖವನ್ನು ಯೋಗಬಲದಿಂದ ಹಾಗೂ ನಿದ್ರೆಯನ್ನು ಸಾತ್ತ್ವಿಕ ಭೋಜನ, ಸ್ಥಾನ, ಸಂಗ ಮುಂತಾದವುಗಳ ಸೇವನೆಯಿಂದ ಗೆದ್ದುಕೊಳ್ಳಬೇಕು. ॥ ೨೪ ॥ ಸತ್ತ್ವಗುಣದಿಂದ ರಜೋಗುಣ-ತಮೋಗುಣಗಳನ್ನು ಮತ್ತು ಉಪಶಾಂತಿಯ ಮೂಲಕ ಸತ್ತ್ವಗುಣದ ಮೇಲೆ ವಿಜಯವನ್ನು ಪಡೆಯಬೇಕು. ಶ್ರೀಗುರುಗಳಲ್ಲಿರುವ ಭಕ್ತಿಯಿಂದ ಸಾಧಕನು ಇವೆಲ್ಲ ದೋಷಗಳ ಮೇಲೆ ಸುಲಭವಾಗಿ ವಿಜಯವನ್ನು ಪಡೆಯಬಲ್ಲನು. ॥ ೨೫ ॥

ಯಸ್ಯ ಸಾಕ್ಷಾದ್ಭಗವತಿ ಜ್ಞಾನದೀಪಪ್ರದೇ ಗುರೌ ।
ಮರ್ತ್ಯಾಸದ್ಧೀಃ ಶ್ರುತಂ ತಸ್ಯ ಸರ್ವಂ ಕುಂಜರಶೌಚವತ್
॥ ೨೬ ॥

ಏಷ ವೈ ಭಗವಾನ್ಸಾಕ್ಷಾತ್
ಪ್ರಧಾನಪುರುಷೇಶ್ವರಃ ।
ಯೋಗೇಶ್ವರೈರ್ವಿಮೃಗ್ಯಾಂಘ್ರಿ-
ರ್ಲೋಕೋ ಯಂ ಮನ್ಯತೇ ನರಮ್ ॥ ೨೭ ॥

ಷಡ್ವರ್ಗಸಂಯಮೈಕಾಂತಾಃ ಸರ್ವಾ ನಿಯಮಚೋದನಾಃ ।
ತದಂತಾ ಯದಿ ನೋ ಯೋಗಾನಾವಹೇಯುಃ ಶ್ರಮಾವಹಾಃ
॥ ೨೮ ॥

ಯಥಾ ವಾರ್ತಾದಯೋ ಹ್ಯರ್ಥಾ ಯೋಗಸ್ಯಾರ್ಥಂ ನ ಬಿಭ್ರತಿ ।
ಅನರ್ಥಾಯ ಭವೇಯುಸ್ತೇ ಪೂರ್ತಮಿಷ್ಟಂ ತಥಾಸತಃ
॥ ೨೯ ॥

ಯಶ್ಚಿತ್ತವಿಜಯೇ ಯತ್ತಃ ಸ್ಯಾನ್ನಿಃಸಂಗೋಽಪರಿಗ್ರಹಃ ।
ಏಕೋ ವಿವಿಕ್ತಶರಣೋ ಭಿಕ್ಷುರ್ಭೈಕ್ಷ್ಯಮಿತಾಶನಃ
॥ ೩೦ ॥

ದೇಶೇ ಶುಚೌ ಸಮೇ ರಾಜನ್ಸಂಸ್ಥಾಪ್ಯಾಸನಮಾತ್ಮನಃ ।
ಸ್ಥಿರಂ ಸಮಂ ಸುಖಂ ತಸ್ಮಿನ್ನಾಸೀತರ್ಜ್ವಂಗ ಓಮಿತಿ
॥ ೩೧ ॥

ಪ್ರಾಣಾಪಾನೌ ಸನ್ನಿರುಂಧ್ಯಾತ್ಪೂರಕುಂಭಕರೇಚಕೈಃ ।
ಯಾವನ್ಮನಸ್ತ್ಯಜೇತ್ಕಾಮಾನ್ಸ್ವನಾಸಾಗ್ರನಿರೀಕ್ಷಣಃ
॥ ೩೨ ॥

ಯತೋ ಯತೋ ನಿಃಸರತಿ ಮನಃ ಕಾಮಹತಂ ಭ್ರಮತ್ ।
ತತಸ್ತತ ಉಪಾಹೃತ್ಯ ಹೃದಿ ರುಂಧ್ಯಾಚ್ಛನೈರ್ಬುಧಃ
॥ ೩೩ ॥

ಏವಮಭ್ಯಸತಶ್ಚಿತ್ತಂ ಕಾಲೇನಾಲ್ಪೀಯಸಾ ಯತೇಃ ।
ಅನಿಶಂ ತಸ್ಯ ನಿರ್ವಾಣಂ ಯಾತ್ಯನಿಂಧನವಹ್ನಿವತ್
॥ ೩೪ ॥

ಕಾಮಾದಿಭಿರನಾವಿದ್ಧಂ ಪ್ರಶಾಂತಾಖಿಲವೃತ್ತಿ ಯತ್ ।
ಚಿತ್ತಂ ಬ್ರಹ್ಮಸುಖಸ್ಪೃಷ್ಟಂ ನೈವೋತ್ತಿಷ್ಠೇತ ಕರ್ಹಿಚಿತ್
॥ ೩೫ ॥

ಹೃದಯದಲ್ಲಿ ಜ್ಞಾನದ ದೀಪವನ್ನು ಹಚ್ಚುವ ಗುರುದೇವನು ಸಾಕ್ಷಾತ್ ಭಗವಂತನೇ ಆಗಿರುವನು. ಅವರನ್ನು ಮನುಷ್ಯನೆಂದು ತಿಳಿಯುವ ದುರ್ಬುದ್ಧಿಯುಳ್ಳ ಮನುಷ್ಯನ ಸಮಸ್ತ ಶಾಸ್ತ್ರಶ್ರವಣವು ಗಜಸ್ನಾನದಂತೆ ವ್ಯರ್ಥವೇ ಆಗುವುದು. ॥ ೨೬ ॥ ದೊಡ್ಡ-ದೊಡ್ಡ ಯೋಗೇಶ್ವರರು ಯಾರ ಚರಣಕಮಲಗಳನ್ನು ಅನುಸಂಧಾನ ಮಾಡುವರೋ, ಪ್ರಕೃತಿ-ಪುರುಷರ ಅಧೀಶ್ವರನೋ ಅಂತಹ ಭಗವಂತನೇ ಗುರುದೇವರ ರೂಪದಲ್ಲಿ ಪ್ರಕಟವಾಗಿರುವನು. ಇವನನ್ನು ಜನರು ಭ್ರಮೆಯಿಂದ ಮನುಷ್ಯನೆಂದು ಭಾವಿಸುವರು. ॥ ೨೭ ॥

ಶಾಸ್ತ್ರಗಳಲ್ಲಿ ಎಷ್ಟು ನಿಯಮಸಂಬಂಧೀ ಆದೇಶಗಳಿವೆಯೋ ಅವುಗಳ ಏಕಮಾತ್ರ ತಾತ್ಪರ್ಯವು – ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರ – ಈ ಆರು ಶತ್ರುಗಳನ್ನು ಗೆದ್ದುಕೊಳ್ಳುವುದು ಅಥವಾ ಐದು ಇಂದ್ರಿಯಗಳು, ಒಂದು ಮನಸ್ಸು – ಹೀಗೆ ಆರನ್ನು ವಶಪಡಿಸಿಕೊಳ್ಳುವುದೇ ಆಗಿದೆ. ಹೀಗಾದ ಬಳಿಕವೂ ಆ ನಿಯಮಗಳ ಮೂಲಕ ಭಗವಂತನ ಧ್ಯಾನ-ಚಿಂತನೆಗಳು ಪ್ರಾಪ್ತವಾಗದಿದ್ದರೆ, ಅವುಗಳನ್ನು ಕೇವಲ ಶ್ರಮವೆಂದೇ ತಿಳಿಯಬೇಕು. ॥ ೨೮ ॥ ಕೃಷಿ, ವ್ಯಾಪಾರ ಮುಂತಾದವುಗಳು ಮತ್ತು ಅದರ ಫಲಗಳೂ ಕೂಡ ಯೋಗಸಾಧನೆಯ ಫಲವಾದ ಭಗವತ್ಪ್ರಾಪ್ತಿ ಅಥವಾ ಮುಕ್ತಿಯನ್ನು ಕೊಡಲಾರವೋ, ಅಂತೆಯೇ ದುಷ್ಟ ಮನುಷ್ಯನ ಶ್ರೌತ-ಸ್ಮಾರ್ತ ಕರ್ಮಗಳೂ ಕೂಡ ಶ್ರೇಯಸ್ಕರವಾಗುವುದಿಲ್ಲ. ಬದಲಿಗೆ ವಿರುದ್ಧ ಫಲವನ್ನೇ ಕೊಡುವುವು. ॥ ೨೯ ॥

ತನ್ನ ಮನಸ್ಸಿನ ಮೇಲೆ ವಿಜಯವನ್ನು ಪಡೆದುಕೊಳ್ಳಲಿಕ್ಕಾಗಿ ಹೊರಟಿರುವ ಮನುಷ್ಯನು ಆಸಕ್ತಿ ಮತ್ತು ಪರಿಗ್ರಹವನ್ನು ತ್ಯಜಿಸಿ ಸಂನ್ಯಾಸವನ್ನು ಸ್ವೀಕರಿಸಬೇಕು. ಏಕಾಂತದಲ್ಲಿ ಒಬ್ಬಂಟಿಗನಾಗಿ ಇದ್ದು, ಭಿಕ್ಷೆ ಎತ್ತಿ ಶರೀರನಿರ್ವಾಹ ಮಾತ್ರಕ್ಕೆ ಸ್ವಲ್ಪ ಮತ್ತು ಪರಿಮಿತ ಭೋಜನವನ್ನು ಸೇವಿಸಬೇಕು. ॥ ೩೦ ॥ ಯುಧಿಷ್ಠಿರನೇ! ಶುಚಿಯಾಗಿ ಸಮತಟ್ಟಾಗಿರುವ ಭೂಮಿಯಲ್ಲಿ ತನ್ನ ಆಸನವನ್ನು ಹಾಸಿಕೊಂಡು, ಅದರ ಮೇಲೆ ನೇರವಾಗಿ, ಸ್ಥಿರವಾಗಿ, ಸಮವಾಗಿ, ಸುಖಕರವಾದ ಯೋಗಾಸನದಲ್ಲಿ ಕುಳಿತುಕೊಂಡು ಓಂಕಾರವನ್ನು ಜಪಿಸಬೇಕು. ॥ ೩೧ ॥ ಮನಸ್ಸು ಸಂಕಲ್ಪ-ವಿಕಲ್ಪಗಳನ್ನು ಬಿಟ್ಟುಬಿಡುವ ತನಕ ದೃಷ್ಟಿಯನ್ನು ನಾಸಿಕಾಗ್ರದಲ್ಲಿ ನೆಟ್ಟು ಪೂರಕ, ಕುಂಭಕ ಮತ್ತು ರೇಚಕದ ಮೂಲಕ ಪ್ರಾಣ ಹಾಗೂ ಅಪಾನದ ಗತಿಯನ್ನು ತಡೆಗಟ್ಟಬೇಕು. ॥ ೩೨ ॥ ಕಾಮದ ಆಘಾತದಿಂದ ಗಾಯಗೊಂಡ ಮನಸ್ಸು ಎಲ್ಲೆಲ್ಲಿ ಸುತ್ತಾಡುತ್ತಾ ಅಲೆಯುವುದೋ, ಅಲ್ಲಲ್ಲಿಂದ ಅದನ್ನು ಹಿಂದಿರುಗಿಸಿ ಮೆಲ್ಲ-ಮೆಲ್ಲನೆ ಹೃದಯದಲ್ಲಿ ನೆಲೆಗೊಳಿಸಬೇಕು. ॥ ೩೩ ॥ ಸಾಧಕನು ನಿರಂತರವಾಗಿ ಹೀಗೆ ಅಭ್ಯಾಸ ಮಾಡುವಾಗ ಕಟ್ಟಿಗೆ ಇಲ್ಲದೆ ಬೆಂಕಿಯು ಆರಿಹೋಗುವಂತೆಯೇ ಸ್ವಲ್ಪ ಸಮಯದಲ್ಲೇ ಅವನ ಚಿತ್ತವು ಶಾಂತವಾಗಿ ಹೋಗುತ್ತದೆ. ॥ ೩೪ ॥ ಹೀಗೆ ಕಾಮವಾಸನೆಗಳು ಏಟುಕೊಡುವುದನ್ನು ನಿಲ್ಲಿಸಿದಾಗ ಮತ್ತು ಸಮಸ್ತ ವೃತ್ತಿಗಳು ಅತ್ಯಂತ ಶಾಂತವಾಗಿ ಹೋದಾಗ ಚಿತ್ತವು ಬ್ರಹ್ಮಾನಂದದ ಸ್ಪರ್ಶದಲ್ಲಿ ಮುಳುಗಿಹೋಗುವುದು, ಮತ್ತೆ ಅದು ಎಂದಿಗೂ ಅಲ್ಲಿಂದ ಎದ್ದು ಬರುವುದಿಲ್ಲ. ॥ ೩೫ ॥

ಯಃ ಪ್ರವ್ರಜ್ಯ ಗೃಹಾತ್ಪೂರ್ವಂ ತ್ರಿವರ್ಗಾವಪನಾತ್ಪುನಃ ।
ಯದಿ ಸೇವೇತ ತಾನ್ಭಿಕ್ಷುಃ ಸ ವೈ ವಾಂತಾಶ್ಯಪತ್ರಪಃ
॥ ೩೬ ॥

ಯೈಃ ಸ್ವದೇಹಃ ಸ್ಮೃತೋಽನಾತ್ಮಾ ಮರ್ತ್ಯೋ ವಿಟ್ ಕೃಮಿಭಸ್ಮವತ್ ।
ತ ಏನಮಾತ್ಮಸಾತ್ಕೃತ್ವಾ ಶ್ಲಾಘಯಂತಿ ಹ್ಯಸತ್ತಮಾಃ
॥ ೩೭ ॥

ಗೃಹಸ್ಥಸ್ಯ ಕ್ರಿಯಾತ್ಯಾಗೋ ವ್ರತತ್ಯಾಗೋ ವಟೋರಪಿ ।
ತಪಸ್ವಿನೋ ಗ್ರಾಮಸೇವಾ ಭಿಕ್ಷೋರಿಂದ್ರಿಯಲೋಲತಾ
॥ ೩೮ ॥

ಆಶ್ರಮಾಪಸದಾ ಹ್ಯೇತೇ ಖಲ್ವಾಶ್ರಮವಿಡಂಬಕಾಃ ।
ದೇವಮಾಯಾವಿಮೂಢಾಂಸ್ತಾನುಪೇಕ್ಷೇತಾನುಕಂಪಯಾ
॥ ೩೯ ॥

ಆತ್ಮಾನಂ ಚೇದ್ವಿಜಾನೀಯಾತ್ಪರಂ ಜ್ಞಾನಧುತಾಶಯಃ ।
ಕಿಮಿಚ್ಛನ್ಕಸ್ಯ ವಾ ಹೇತೋರ್ದೇಹಂ ಪುಷ್ಣಾತಿ ಲಂಪಟಃ
॥ ೪೦ ॥

ಆಹುಃ ಶರೀರಂ ರಥಮಿಂದ್ರಿಯಾಣಿ
ಹಯಾನಭೀಷೂನ್ಮನ ಇಂದ್ರಿಯೇಶಮ್ ।
ವರ್ತ್ಮಾನಿ ಮಾತ್ರಾ ಧಿಷಣಾಂ ಚ ಸೂತಂ
ಸತ್ತ್ವಂ ಬೃಹದ್ಬಂಧುರಮೀಶಸೃಷ್ಟಮ್ ॥ ೪೧ ॥

ಅಕ್ಷಂ ದಶಪ್ರಾಣಮಧರ್ಮಧರ್ಮೌ
ಚಕ್ರೇಽಭಿಮಾನಂ ರಥಿನಂ ಚ ಜೀವಮ್ ।
ಧನುರ್ಹಿ ತಸ್ಯ ಪ್ರಣವಂ ಪಠಂತಿ
ಶರಂ ತು ಜೀವಂ ಪರಮೇವ ಲಕ್ಷ್ಯಮ್ ॥ ೪೨ ॥

ರಾಗೋ ದ್ವೇಷಶ್ಚ ಲೋಭಶ್ಚ
ಶೋಕಮೋಹೌ ಭಯಂ ಮದಃ ।
ಮಾನೋಽವಮಾನೋಽಸೂಯಾ ಚ
ಮಾಯಾ ಹಿಂಸಾ ಚ ಮತ್ಸರಃ ॥ ೪೩ ॥

ರಜಃ ಪ್ರಮಾದಃ ಕ್ಷುನ್ನಿದ್ರಾ ಶತ್ರವಸ್ತ್ವೇವಮಾದಯಃ ।
ರಜಸ್ತಮಃ ಪ್ರಕೃತಯಃ ಸತ್ತ್ವಪ್ರಕೃತಯಃ ಕ್ವಚಿತ್
॥ ೪೪ ॥

ಯಾವ ಸಂನ್ಯಾಸಿಯು ಮೊದಲಿಗೆ ಧರ್ಮ, ಅರ್ಥ ಮತ್ತು ಕಾಮ ಇವುಗಳ ಮೂಲ ಕಾರಣವಾದ ಗೃಹಸ್ಥಾಶ್ರಮವನ್ನು ತ್ಯಜಿಸಿ, ಪುನಃ ಅದನ್ನೇ ಸೇವಿಸತೊಡಗಿದರೆ, ನಿರ್ಲಜ್ಜನಾದ ಅವನು ತಾನು ಉಗುಳಿದುದನ್ನೇ ತಿನ್ನುವ ನಾಯಿಯೇ ಆಗಿದ್ದಾನೆ. ॥ ೩೬ ॥ ಯಾರು ತನ್ನ ಶರೀರವನ್ನು ಅನಾತ್ಮಾ, ಮೃತ್ಯುಗ್ರಸ್ತ ಮತ್ತು ಮಲ, ಕ್ರಿಮಿಗಳು, ಬೂದಿ ಎಂದು ತಿಳಿದಿದ್ದನೋ, ಅದನ್ನು ಮತ್ತೆ ಆತ್ಮಾ ಎಂದು ತಿಳಿದು ಪ್ರಶಂಸೆ ಮಾಡತೊಡಗಿದರೆ ಅವನು ಮೂಢನೇ ಸರಿ. ॥ ೩೭ ॥ ಕರ್ಮತ್ಯಾಗಿಯಾದ ಗೃಹಸ್ಥನು, ವ್ರತತ್ಯಾಗಿಯಾದ ಬ್ರಹ್ಮಚಾರಿ, ಊರಿನಲ್ಲಿ ವಾಸಿಸುವ ತಪಸ್ವೀ (ವಾನಪ್ರಸ್ಥ) ಮತ್ತು ಇಂದ್ರಿಯಲೋಲುಪನಾದ ಸಂನ್ಯಾಸಿ ಇವರು ನಾಲ್ವರೂ ಆಶ್ರಮಗಳಿಗೆ ಕಲಂಕಪ್ರಾಯರಾಗಿದ್ದಾರೆ. ವ್ಯರ್ಥವಾಗಿಯೇ ಆಶ್ರಮಗಳ ವೇಷವನ್ನು ಧರಿಸಿದವರು. ಭಗವಂತನ ಮಾಯೆಯಿಂದ ಮೋಹಿತರಾದ ಆ ಮೂಢರಲ್ಲಿ ಕನಿಕರಗೊಂಡು ಅವರ ವಿಷಯದಲ್ಲಿ ಉದಾಸೀನನಾಗಿರಬೇಕು. ॥ ೩೮-೩೯ ॥ ಆತ್ಮಜ್ಞಾನದಿಂದ ಎಲ್ಲ ವಾಸನೆಗಳನ್ನು ನಿರ್ಮೂಲನಗೊಳಿಸಿಕೊಂಡು ಪರಮಾತ್ಮ ಸಾಕ್ಷಾತ್ಕಾರಸುಖದ ಅನುಭವವನ್ನು ಪಡೆದ ಯಾವನೂ ಇಂದ್ರಿಯ ಲಂಪಟನಾಗುವುದಿಲ್ಲ. ಆತನು ಯಾವ ವಿಷಯದ ಬಯಕೆಯಿಂದ ಮತ್ತು ಯಾವ ಭೋಕ್ತೃವಿನ ತೃಪ್ತಿಗಾಗಿ ಇಂದ್ರಿಯ ಲಂಪಟನಾಗಿ ತನ್ನ ಶರೀರವನ್ನು ಪೋಷಿಸಿಯಾನು ? ॥ ೪೦ ॥

ಪರಮಾತ್ಮನ ಸಿದ್ಧಿಗಾಗಿ ಮಾಡುವ ಸಾಧನೆಯಲ್ಲಿ ಈ ಶರೀರವೇ ರಥವು-ಇಂದ್ರಿಯಗಳೇ ಕುದುರೆಗಳು, ಇಂದ್ರಿಯಗಳ ಒಡೆಯ ಮನಸ್ಸು ಲಗಾಮು. ಶಬ್ದಾದಿ ವಿಷಯಗಳೇ ಮಾರ್ಗವು. ಬುದ್ಧಿಯೇ ಸಾರಥಿ, ಚಿತ್ತವೇ ಭಗವಂತನಿಂದ ನಿರ್ಮಿತವಾದ ಕಟ್ಟುವ ವಿಶಾಲ ವಾದ ಹಗ್ಗ, ಹತ್ತು ಪ್ರಾಣಗಳೇ ಅಚ್ಚುಮರ, ಧರ್ಮ-ಅಧರ್ಮ ಗಳೇ ಚಕ್ರಗಳು. ಇದರ ಅಭಿಮಾನೀ ಜೀವನೇ ರಥಿಯೆಂದು ಹೇಳಲಾಗಿದೆ. ಓಂಕಾರವೇ ಆ ರಥಿಯ ಧನುಸ್ಸು, ಶುದ್ಧ ಜೀವಾತ್ಮನೇ ಬಾಣ ಮತ್ತು ಪರಮಾತ್ಮನೇ ಗುರಿಯಾಗಿದೆ ಎಂದು ಉಪನಿಷತ್ತು ಗಳು ಹೇಳುತ್ತವೆ. (ಈ ಓಂಕಾರದ ಮೂಲಕ ಅಂತರಾತ್ಮನನ್ನು ಪರ ಮಾತ್ಮನಲ್ಲಿ ಲೀನಗೊಳಿಸಬೇಕು.) ॥ ೪೧-೪೨ ॥ ರಾಗ, ದ್ವೇಷ, ಲೋಭ, ಶೋಕ, ಮೋಹ, ಭಯ, ಮದ, ಮಾನ, ಅಪಮಾನ, ಬೇರೆಯವರ ಗುಣಗಳಲ್ಲಿ ದೋಷ ನೋಡುವುದು ಛಲ, ಹಿಂಸೆ, ಇತರರ ಉನ್ನತಿಯನ್ನು ಕಂಡು ಹೊಟ್ಟೆಯುರಿ, ತೃಷ್ಣೆ ಪ್ರಮಾದ, ಹಸಿವು, ನಿದ್ದೆ – ಇವೆಲ್ಲವೂ ಜೀವಿಯ ಶತ್ರುಗಳು. ಇವುಗಳಲ್ಲದೆ ಇನ್ನೂ ಅನೇಕ ಶತ್ರುಗಳು ಇವೆಯಾಗಿವೆ. ಅವುಗಳಲ್ಲಿ ರಜೋಗುಣ, ತಮೋಗುಣವೃತ್ತಿಗಳೇ ಹೆಚ್ಚಾಗಿವೆ. ಕೆಲ-ಕೆಲವು ಸತ್ತ್ವಗುಣ ಪ್ರಧಾನವೂ ಆಗಿರುತ್ತವೆ. ॥ ೪೩-೪೪ ॥ ಈ ಮನುಷ್ಯಶರೀರವೆಂಬ ರಥವು ತನ್ನ ವಶದಲ್ಲಿದ್ದು ಇಂದ್ರಿಯ, ಮನಸ್ಸು – ಮುಂತಾದ ಎಲ್ಲ ಸಾಧನೆಗಳು ಚೆನ್ನಾಗಿರುವಷ್ಟರೊಳಗೆ ಶ್ರೀಗುರುದೇವರ ಚರಣ ಕಮಲಗಳ ಸೇವೆ-ಪೂಜೆಗಳಿಂದ ಹರಿತವಾಗಿ ಮಾಡಲ್ಪಟ್ಟ ಜ್ಞಾನ ವೆಂಬ ತೀಕ್ಷ್ಣವಾದ ಖಡ್ಗವನ್ನು ಎತ್ತಿಕೊಂಡು ಶ್ರೀಭಗವಂತನ ಬಲ ದಿಂದ ಈ ಎಲ್ಲ ಶತ್ರುಗಳನ್ನು ನಾಶಪಡಿಸಿ, ತನ್ನ ಸ್ವಾರಾಜ್ಯವೆಂಬ ಸಿಂಹಾಸನದಲ್ಲಿ

ಯಾವನ್ನೃಕಾಯರಥಮಾತ್ಮವಶೋಪಕಲ್ಪಂ
ಧತ್ತೇ ಗರಿಷ್ಠಚರಣಾರ್ಚನಯಾ ನಿಶಾತಮ್ ।
ಜ್ಞಾನಾಸಿಮಚ್ಯುತಬಲೋ ದಧದಸ್ತಶತ್ರುಃ
ಸ್ವಾನಂದತುಷ್ಟ ಉಪಶಾಂತ ಇದಂ ವಿಜಹ್ಯಾತ್ ॥ ೪೫ ॥

ನೋ ಚೇತ್ಪ್ರಮತ್ತಮಸದಿಂದ್ರಿಯವಾಜಿಸೂತಾ
ನೀತ್ವೋತ್ಪಥಂ ವಿಷಯದಸ್ಯುಷು ನಿಕ್ಷಿಪಂತಿ ।
ತೇ ದಸ್ಯವಃ ಸಹಯಸೂತಮಮುಂ ತಮೋಽಂಧೇ
ಸಂಸಾರಕೂಪ ಉರುಮೃತ್ಯುಭಯೇ ಕ್ಷಿಪಂತಿ ॥ ೪೬ ॥

ಪ್ರವೃತ್ತಂ ಚ ನಿವೃತ್ತಂ ಚ ದ್ವಿವಿಧಂ ಕರ್ಮ ವೈದಿಕಮ್ ।
ಆವರ್ತೇತ ಪ್ರವೃತ್ತೇನ ನಿವೃತ್ತೇನಾಶ್ನುತೇಽಮೃತಮ್ ॥ ೪೭ ॥

ಹಿಂಸ್ರಂ ದ್ರವ್ಯಮಯಂ ಕಾಮ್ಯಮಗ್ನಿಹೋತ್ರಾದ್ಯಶಾಂತಿದಮ್ ।
ದರ್ಶಶ್ಚ ಪೂರ್ಣಮಾಸಶ್ಚ ಚಾತುರ್ಮಾಸ್ಯಂ ಪಶುಃ ಸುತಃ ॥ ೪೮ ॥

ಏತದಿಷ್ಟಂ ಪ್ರವೃತ್ತಾಖ್ಯಂ ಹುತಂ ಪ್ರಹುತಮೇವ ಚ ।
ಪೂರ್ತಂ ಸುರಾಲಯಾರಾಮಕೂಪಾಜೀವ್ಯಾದಿಲಕ್ಷಣಮ್ ॥ ೪೯ ॥

ದ್ರವ್ಯಸೂಕ್ಷ್ಮವಿಪಾಕಶ್ಚ ಧೂಮೋ ರಾತ್ರಿರಪಕ್ಷಯಃ ।
ಅಯನಂ ದಕ್ಷಿಣಂ ಸೋಮೋ ದರ್ಶ ಓಷಧಿವೀರುಧಃ ॥ ೫೦ ॥

ಅನ್ನಂ ರೇತ ಇತಿ ಕ್ಷ್ಮೇಶ ಪಿತೃಯಾನಂ ಪುನರ್ಭವಃ ।
ಏಕೈಕಶ್ಯೇನಾನುಪೂರ್ವಂ ಭೂತ್ವಾ ಭೂತ್ವೇಹ ಜಾಯತೇ ॥ ೫೧ ॥

ನಿಷೇಕಾದಿಶ್ಮಶಾನಾಂತೈಃ ಸಂಸ್ಕಾರೈಃ ಸಂಸ್ಕೃತೋ ದ್ವಿಜಃ ।
ಇಂದ್ರಿಯೇಷು ಕ್ರಿಯಾಯಜ್ಞಾನ್ ಜ್ಞಾನದೀಪೇಷು ಜುಹ್ವತಿ ॥ ೫೨ ॥

ವಿರಾಜಮಾನನಾಗಬೇಕು. ಮತ್ತೆ ಪುನಃ ಅತ್ಯಂತ ಶಾಂತಭಾವದಿಂದ ಈ ಶರೀರವನ್ನು ಪರಿತ್ಯಾಗಮಾಡ ಬೇಕು. ॥ ೪೫ ॥ ಇಲ್ಲದಿದ್ದರೆ ಸ್ವಲ್ಪವೇ ಪ್ರಮಾದ ಉಂಟಾದರೂ ಈ ಇಂದ್ರಿಯಗಳೆಂಬ ದುಷ್ಟ ಕುದುರೆಗಳು ಮತ್ತು ಅವುಗಳೊಂದಿಗೆ ಮಿತ್ರತೆಯುಳ್ಳ ಬುದ್ಧಿ ರೂಪೀ ಸಾರಥಿಯು ರಥದ ಒಡೆಯ ಜೀವನನ್ನು ವಿರುದ್ಧವಾದ ದಾರಿಯಲ್ಲಿ ಕೊಂಡೊಯ್ದು ವಿಷಯ ರೂಪೀ ದರೋಡೆಗಾರರ ಕೈಗೊಪ್ಪಿಸುವರು. ಆ ಕಳ್ಳರು ಸಾರಥಿ ಮತ್ತು ಕುದುರೆಗಳೊಂದಿಗೆ ಈ ಜೀವನನ್ನು ಮೃತ್ಯುವಿಗಿಂತಲೂ ಅತ್ಯಂತ ಭಯಂಕರವಾದ ಸಂಸಾರವೆಂಬ ಕತ್ತಲೆಯ ಬಾವಿಯೊಳಗೆ ತಳ್ಳಿಬಿಡುವರು. ॥ ೪೬ ॥

ವೈದಿಕ ಕರ್ಮಗಳಲ್ಲಿ ಎರಡು ವಿಧಗಳಿವೆ. ಒಂದು ಪ್ರವೃತ್ತಿಪರವಾದುದು. ಇದು ವೃತ್ತಿಗಳನ್ನು ಅವುಗಳ ವಿಷಯಗಳ ಕಡೆಗೆ ಕೊಂಡೊಯ್ಯುವುದು. ಇನ್ನೊಂದು ನಿವೃತ್ತಿಪರವಾದುದು. ಇದು ವೃತ್ತಿಗಳನ್ನು ಅವುಗಳ ವಿಷಯಗಳಿಂದ ಹಿಂದಿರುಗಿಸಿ ಶಾಂತ ಹಾಗೂ ಆತ್ಮಸಾಕ್ಷಾತ್ಕಾರಕ್ಕೆ ಯೋಗ್ಯವಾಗಿಸುತ್ತದೆ. ಪ್ರವೃತ್ತಿಪರ ಕರ್ಮಮಾರ್ಗದಿಂದ ಮತ್ತೆ-ಮತ್ತೆ ಹುಟ್ಟು-ಸಾವುಗಳು ಒದಗುತ್ತವೆ ಮತ್ತು ನಿವೃತ್ತಿಪರ ಭಕ್ತಿಮಾರ್ಗ ಅಥವಾ ಜ್ಞಾನಮಾರ್ಗದಿಂದ ಪರಮಾತ್ಮನ ಪ್ರಾಪ್ತಿಯುಂಟಾಗುತ್ತದೆ. ॥ ೪೭ ॥ ಶ್ಯೇನಯಾಗಾದಿ ಹಿಂಸಾಮಯ ಕರ್ಮ, ಅಗ್ನಿಹೋತ್ರ, ದರ್ಶ, ಪೂರ್ಣಮಾಸ, ಚಾತುರ್ಮಾಸ್ಯ, ಪಶುಯಾಗ, ಸೋಮಯಾಗ, ವೈಶ್ವದೇವ, ಬಲಿಹರಣ ಮುಂತಾದ ದ್ರವ್ಯಮಯ ಕರ್ಮಗಳನ್ನು 'ಇಷ್ಟ'ವೆಂದು ಹೇಳುತ್ತಾರೆ. ದೇವಾಲಯ, ಹೂದೋಟ, ಕೆರೆ-ಕಟ್ಟೆ ಮುಂತಾದವುಗಳನ್ನು ನಿರ್ಮಿಸುವುದು, ಅರವಟ್ಟಿಗೆ ಇರಿಸುವುದು ಮುಂತಾದವುಗಳು 'ಪೂರ್ತ' ಕರ್ಮಗಳಾಗಿವೆ. ಇವೆಲ್ಲವೂ ಪ್ರವೃತ್ತಿಪರವಾದ ಕರ್ಮಗಳಾಗಿವೆ. ಸಕಾಮಭಾವದಿಂದ ಇವುಗಳನ್ನು ಆಚರಿಸಿದರೆ ಇವು ಅಶಾಂತಿಗೆ ಕಾರಣವಾಗುತ್ತವೆ. ॥ ೪೮-೪೯ ॥ ಪ್ರವೃತ್ತಿಪರಾಯಣನಾದ ಮನುಷ್ಯನು ಸತ್ತಮೇಲೆ ಚರು-ಪುರೋಡಾಶ ಮುಂತಾದ ಯಜ್ಞಸಂಬಂಧೀ ದ್ರವ್ಯಗಳ ಸೂಕ್ಷ್ಮವಾದ ಭಾಗದಿಂದ ಉಂಟಾದ ಶರೀರವನ್ನು ಧರಿಸಿ ಧೂಮಾಭಿಮಾನಿದೇವತೆಗಳ ಬಳಿಗೆ ಹೋಗುತ್ತಾನೆ. ಮತ್ತೆ ಕ್ರಮವಾಗಿ ರಾತ್ರಿ, ಕೃಷ್ಣಪಕ್ಷ, ದಕ್ಷಿಣಾಯನ – ಇವುಗಳ ಅಭಿಮಾನಿದೇವತೆಗಳ ಬಳಿಗೆ ಹೋಗಿ ಚಂದ್ರಲೋಕಕ್ಕೆ ತಲುಪುತ್ತಾನೆ. ಅಲ್ಲಿಯ ಭೋಗಗಳು ಮುಗಿದಾಗ ಅಮಾವಾಸ್ಯೆಯ ಚಂದ್ರನಂತೆ ಕ್ಷೀಣನಾಗಿ ಮಳೆಯ ಮೂಲಕ ಕ್ರಮವಾಗಿ ಓಷಧಿ, ಲತೆಗಳು,. ಅನ್ನ ಮತ್ತು ವೀರ್ಯರೂಪದಲ್ಲಿ ಪರಿಣಾಮ ಹೊಂದಿ ಪಿತೃಯಾನದಿಂದ ಪುನಃ ಸಂಸಾರದಲ್ಲಿ ಹುಟ್ಟುವನು. ॥ ೫೦-೫೧ ॥ ಯುಧಿಷ್ಠಿರನೇ! ಗರ್ಭಾಧಾನದಿಂದ ಹಿಡಿದು ಅಂತ್ಯೇಷ್ಟಿವರೆಗೆ ಎಲ್ಲ ಸಂಸ್ಕಾರಗಳು ಯಾರಿಗೆ ಆಗುತ್ತವೋ ಅವನಿಗೆ 'ದ್ವಿಜ' ಎಂದು ಹೇಳುತ್ತಾರೆ. ಅವರಲ್ಲಿ ಕೆಲವರು ಹಿಂದೆ ಹೇಳಿದ ಪ್ರವೃತ್ತಿಮಾರ್ಗವನ್ನು ಅನುಷ್ಠಾನಮಾಡಿದರೆ, ಕೆಲವರು ಮುಂದೆ ಹೇಳಲಿರುವ ನಿವೃತ್ತಿಮಾರ್ಗವನ್ನು ಅನುಸರಿಸುತ್ತಾರೆ. ನಿವೃತ್ತಿ ಪರಾಯಣ ಮನುಷ್ಯನು ಇಷ್ಟ-ಪೂರ್ತ ಮುಂತಾದ ಕರ್ಮಗಳಿಂದ ಉಂಟಾಗುವ ಸಮಸ್ತ ಯಜ್ಞಗಳನ್ನು ವಿಷಯಗಳ ಜ್ಞಾನ ಮಾಡಿಸುವ ಇಂದ್ರಿಯಗಳಲ್ಲಿ ಹವನ ಮಾಡುತ್ತಾನೆ. ॥ ೫೨ ॥

ಇಂದ್ರಿಯಾಣಿ ಮನಸ್ಯೂರ್ಮೌ ವಾಚಿ ವೈಕಾರಿಕಂ ಮನಃ ।
ವಾಚಂ ವರ್ಣಸಮಾಮ್ನಾಯೇ ತಮೋಂಕಾರೇ ಸ್ವರೇ ನ್ಯಸೇತ್ ।
ಓಂಕಾರಂ ಬಿಂದೌ ನಾದೇ ತಂ ತಂ ತು ಪ್ರಾಣೇ ಮಹತ್ಯಮುಮ್
॥ ೫೩ ॥

ಅಗ್ನಿಃ ಸೂರ್ಯೋ ದಿವಾ ಪ್ರಾಹ್ಣಃ
ಶುಕ್ಲೋ ರಾಕೋತ್ತರಂ ಸ್ವರಾಟ್ ।
ವಿಶ್ವಸ್ತೈಜಸಃ ಪ್ರಾಜ್ಞ-
ಸ್ತುರ್ಯ ಆತ್ಮಾ ಸಮನ್ವಯಾತ್ ॥ ೫೪ ॥

ದೇವಯಾನಮಿದಂ ಪ್ರಾಹುರ್ಭೂತ್ವಾ ಭೂತ್ವಾನುಪೂರ್ವಶಃ ।
ಆತ್ಮಯಾಜ್ಯುಪಶಾಂತಾತ್ಮಾ ಹ್ಯಾತ್ಮಸ್ಥೋ ನ ನಿವರ್ತತೇ
॥ ೫೫ ॥

ಯ ಏತೇ ಪಿತೃದೇವಾನಾಮಯನೇ ವೇದನಿರ್ಮಿತೇ ।
ಶಾಸ್ತ್ರೇಣ ಚಕ್ಷುಷಾ ವೇದ ಜನಸ್ಥೋಽಪಿ ನ ಮುಹ್ಯತಿ
॥ ೫೬ ॥

ಆದಾವಂತೇ ಜನಾನಾಂ ಸದ್-
ಬಹಿರಂತಃ ಪರಾವರಮ್ ।
ಜ್ಞಾನಂ ಜ್ಞೇಯಂ ವಚೋ ವಾಚ್ಯಂ
ತಮೋ ಜ್ಯೋತಿಸ್ತ್ವಯಂ ಸ್ವಯಮ್ ॥ ೫೭ ॥

ಆಬಾಧಿತೋಽಪಿ ಹ್ಯಾಭಾಸೋ ಯಥಾ ವಸ್ತುತಯಾ ಸ್ಮೃತಃ ।
ದುರ್ಘಟತ್ವಾದೈಂದ್ರಿಯಕಂ ತದ್ವದರ್ಥವಿಕಲ್ಪಿತಮ್
॥ ೫೮ ॥

ಇಂದ್ರಿಯಗಳನ್ನು ದರ್ಶನಾದಿ ಸಂಕಲ್ಪರೂಪೀ ಮನಸ್ಸಿನಲ್ಲಿ, ವೈಕಾರಿಕ ಮನಸ್ಸನ್ನು ಪರಾವಾಣಿಯಲ್ಲೂ ಮತ್ತು ಪರಾವಾಣಿಯನ್ನು ವರ್ಣಸಮುದಾಯದಲ್ಲಿ, ವರ್ಣಸಮುದಾಯವನ್ನು 'ಅ-ಉ-ಮ್' ಈ ಮೂರು ಸ್ವರಗಳ ರೂಪದಲ್ಲಿರುವ ಓಂಕಾರದಲ್ಲಿ, ಓಂಕಾರವನ್ನು ಬಿಂದುವಿನಲ್ಲಿ, ಬಿಂದುವನ್ನು ನಾದದಲ್ಲಿ, ನಾದವನ್ನು ಸೂತ್ರಾತ್ಮ ಪ್ರಾಣದಲ್ಲಿ ಹಾಗೂ ಪ್ರಾಣವನ್ನು ಬ್ರಹ್ಮನಲ್ಲಿ ಲೀನಗೊಳಿಸುತ್ತಾನೆ. ॥ ೫೩ ॥ ಆ ನಿವೃತ್ತಿನಿಷ್ಠ ಜ್ಞಾನಿಯು ಕ್ರಮವಾಗಿ ಅಗ್ನಿ, ಸೂರ್ಯ, ಹಗಲು, ಸಾಯಂಕಾಲ, ಶುಕ್ಲಪಕ್ಷ, ಪೌರ್ಣಮಿ ಮತ್ತು ಉತ್ತರಾಯಣದ ಅಭಿಮಾನಿದೇವತೆಗಳ ಬಳಿಗೆ ಹೋಗಿ ಬ್ರಹ್ಮಲೋಕಕ್ಕೆ ತಲುಪುತ್ತಾನೆ. ಅಲ್ಲಿಯ ಭೋಗಗಳು ಮುಗಿದಾಗ ಅವನು ಸ್ಥೂಲೋಪಾಧಿಕ 'ವಿಶ್ವ' ವೆಂಬ ತನ್ನ ಸ್ಥೂಲ ಉಪಾಧಿಯನ್ನು ಸೂಕ್ಷ್ಮದಲ್ಲಿ ಲೀನಗೊಳಿಸಿ, ಸೂಕ್ಷ್ಮೋಪಾಧಿಕ 'ತೈಜಸ'ನಾಗುತ್ತಾನೆ. ಮತ್ತೆ ಸೂಕ್ಷ್ಮ ಉಪಾಧಿಯನ್ನು ಕಾರಣದಲ್ಲಿ ಲಯಗೊಳಿಸಿ, ಕಾರಣೋಪಾಧಿಕ 'ಪ್ರಾಜ್ಞ' ರೂಪದಿಂದ ಸ್ಥಿತನಾಗುತ್ತಾನೆ. ಮತ್ತೆ ಎಲ್ಲರ ಸಾಕ್ಷಿರೂಪದಿಂದ ಸರ್ವತ್ರ ತುಂಬಿಹೋದ ಕಾರಣ ಸಾಕ್ಷಿಯ ಸ್ವರೂಪದಲ್ಲೇ ಕಾರಣೋಪಾಧಿಯನ್ನು ಲಯಗೊಳಿಸಿ ತುರೀಯ ರೂಪದಲ್ಲಿ ಸ್ಥಿತನಾಗುತ್ತಾನೆ. ಹೀಗೆ ದೃಶ್ಯಗಳು ಲಯವಾಗಿ ಹೋದಮೇಲೆ ಅವನು ಶುದ್ಧ ಆತ್ಮನಾಗಿ ಉಳಿಯುವನು. ಇದೇ ಮೋಕ್ಷಪದವಾಗಿದೆ ॥ ೫೪ ॥ ಇದನ್ನು 'ದೇವಯಾನ' ಮಾರ್ಗವೆಂದು ಹೇಳುತ್ತಾರೆ. ಈ ಮಾರ್ಗದಿಂದ ಹೋಗುವವರು ಆತ್ಮೋಪಾಸಕ ಸಂಸಾರದಿಂದ ನಿವೃತ್ತರಾಗಿ ಕ್ರಮವಾಗಿ ಒಬ್ಬರಿಂದ ಮತ್ತೊಬ್ಬ ದೇವತೆಯ ಬಳಿಗೆ ಹೋಗುತ್ತಾ, ಬ್ರಹ್ಮಲೋಕಕ್ಕೆ ಹೋಗಿ ನೆಲೆಗೊಳ್ಳುವನು. ಅವನು ಪ್ರವೃತ್ತಿಮಾರ್ಗಿಯಂತೆ ಮತ್ತೆ ಹುಟ್ಟು-ಸಾವುಗಳ ಚಕ್ರದಲ್ಲಿ ಬೀಳುವುದಿಲ್ಲ. ॥ ೫೫ ॥

ಈ ಪಿತೃಯಾನ ಮತ್ತು ದೇವಯಾನ ಮಾರ್ಗಗಳೆರಡೂ ವೇದೋಕ್ತವೇ ಆಗಿವೆ. ಶಾಸ್ತ್ರೀಯ ದೃಷ್ಟಿಯಿಂದ ಇವನ್ನು ತತ್ತ್ವತಃ ಅರಿತುಕೊಳ್ಳುವವನು ಶರೀರದಲ್ಲೇ ಸ್ಥಿತನಾಗಿದ್ದರೂ ಮೋಹಿತನಾಗುವುದಿಲ್ಲ. ॥ ೫೬ ॥ ಶರೀರಗಳು ಹುಟ್ಟುವ ಮೊದಲೂ ಕೂಡ ಕಾರಣರೂಪದಿಂದ ಮತ್ತು ಅವುಗಳ ಅಂತ್ಯವಾದ ಬಳಿಕವೂ ಅವುಗಳ ಅವಧಿರೂಪದಿಂದ ಯಾವುದು ಸ್ವಯಂ ಇರುತ್ತದೋ, ಯಾವುದು ಭೋಗರೂಪದಿಂದ ಹೊರಗೆ ಮತ್ತು ಭೋಕ್ತಾರೂಪದಿಂದ ಒಳಗಡೆ ಹಾಗೂ ಉಚ್ಚ-ನೀಚ, ತಿಳಿಯುವುದು-ತಿಳಿಯುವ ವಿಷಯ, ವಾಣಿ-ವಾಣಿಯ ವಿಷಯ, ಅಂಧಕಾರ-ಪ್ರಕಾಶ ಮುಂತಾದ ವಸ್ತುಗಳ ರೂಪದಲ್ಲಿ ಏನೆಲ್ಲ ದೊರೆಯುತ್ತದೋ ಅವೆಲ್ಲ ಸ್ವಯಂ ಪರಮಾತ್ಮನೇ ಆಗಿದ್ದಾನೆ. ॥ ೫೭ ॥ ಕನ್ನಡಿಯೇ ಮುಂತಾದವುಗಳಲ್ಲಿ ಕಾಣುವ ಪ್ರತಿಬಿಂಬವು ವಿಚಾರ ಮತ್ತು ಯುಕ್ತಿಯಿಂದ ಬಾಧಿತವಾಗುತ್ತದೆ. ಅದರಲ್ಲಿ ಅದರ ಅಸ್ತಿತ್ವವೇ ಇಲ್ಲ, ಆದರೂ ಅದು ವಸ್ತುವಿನ ರೂಪದಲ್ಲಿ ಕಂಡುಬರುತ್ತದೆ. ಹಾಗೆಯೇ ಇಂದ್ರಿಯಗಳ ಮೂಲಕ ಕಂಡುಬರುವ ವಸ್ತುಗಳ ಭೇದ-ಭಾವಗಳೂ ವಿಚಾರ, ಯುಕ್ತಿ ಮತ್ತು ಆತ್ಮಾನುಭವದಿಂದ ಅಸಂಭವವಾಗಿರುವ ಕಾರಣ ವಾಸ್ತವವಾಗಿ ಇಲ್ಲದಿದ್ದರೂ ಸತ್ಯದಂತೆ ಕಂಡುಬರುತ್ತದೆ. ॥ ೫೮ ॥

ಕ್ಷಿತ್ಯಾದೀನಾಮಿಹಾರ್ಥಾನಾಂ ಛಾಯಾ ನ ಕತಮಾಪಿ ಹಿ ।
ನ ಸಂಘಾತೋ ವಿಕಾರೋಽಪಿ ನ ಪೃಥಙ್ನಾನ್ವಿತೋ ಮೃಷಾ ॥ ೫೯ ॥

ಧಾತವೋಽವಯವಿತ್ವಾಚ್ಚ ತನ್ಮಾತ್ರಾವಯವೈರ್ವಿನಾ ।
ನ ಸ್ಯುರ್ಹ್ಯಸತ್ಯವಯವಿನ್ಯಸನ್ನವಯವೋಽಂತತಃ ॥ ೬೦ ॥

ಸ್ಯಾತ್ಸಾದೃಶ್ಯಭ್ರಮಸ್ತಾವದ್ ವಿಕಲ್ಪೇ ಸತಿ ವಸ್ತುನಃ ।
ಜಾಗ್ರತ್ಸ್ವಾಪೌ ಯಥಾ ಸ್ವಪ್ನೇ ತಥಾ ವಿಧಿನಿಷೇಧತಾ ॥ ೬೧ ॥

ಭಾವಾದ್ವೈತಂ ಕ್ರಿಯಾದ್ವೈತಂ ದ್ರವ್ಯಾದ್ವೈತಂ ತಥಾಽಽತ್ಮನಃ ।
ವರ್ತಯನ್ಸ್ವಾನುಭೂತ್ಯೇಹ ತ್ರೀನ್ಸ್ವಪ್ನಾನ್ಧುನುತೇ ಮುನಿಃ ॥ ೬೨ ॥

ಕಾರ್ಯಕಾರಣವಸ್ತ್ವೈಕ್ಯಮರ್ಶನಂ ಪಟತಂತುವತ್ ।
ಅವಸ್ತುತ್ವಾದ್ವಿಕಲ್ಪಸ್ಯ ಭಾವಾದ್ವೈತಂ ತದುಚ್ಯತೇ ॥ ೬೩ ॥

ಯದ್ಬ್ರಹ್ಮಣಿ ಪರೇ ಸಾಕ್ಷಾತ್ಸರ್ವಕರ್ಮಸಮರ್ಪಣಮ್ ।
ಮನೋವಾಕ್ತನುಭಿಃ ಪಾರ್ಥ ಕ್ರಿಯಾದ್ವೈತಂ ತದುಚ್ಯತೇ ॥ ೬೪ ॥

ಆತ್ಮಜಾಯಾಸುತಾದೀನಾಮನ್ಯೇಷಾಂ ಸರ್ವದೇಹಿನಾಮ್ ।
ಯತ್ಸ್ವಾರ್ಥಕಾಮಯೋರೈಕ್ಯಂ ದ್ರವ್ಯಾದ್ವೈತಂ ತದುಚ್ಯತೇ ॥ ೬೫ ॥

ಯದ್ಯಸ್ಯ ವಾನಿಷಿದ್ಧಂ ಸ್ಯಾದ್ಯೇನ ಯತ್ರ ಯತೋ ನೃಪ ।
ಸ ತೇನೇಹೇತ ಕರ್ಮಾಣಿ ನರೋ ನಾನ್ಯೈರನಾಪದಿ ॥ ೬೬ ॥

ಪೃಥಿವಿಯೇ ಮುಂತಾದ ಪಂಚಭೂತಗಳಿಂದ ಈ ಶರೀರದ ನಿರ್ಮಾಣವಾಗಲಿಲ್ಲ. ವಾಸ್ತವಿಕ ದೃಷ್ಟಿಯಿಂದ ನೋಡಿದರೆ ಅದು ಈ ಪಂಚಭೂತಗಳ ಸಮುದಾಯವೂ ಅಲ್ಲ ಮತ್ತು ವಿಕಾರ ಅಥವಾ ಪರಿಣಾಮವೂ ಅಲ್ಲ. ಏಕೆಂದರೆ, ಇದು ತನ್ನ ಅವಯವಗಳಿಂದ ಬೇರೆಯಾಗಿಲ್ಲ ಮತ್ತು ಅವುಗಳಲ್ಲಿ ಸೇರಿಕೊಂಡೂ ಇಲ್ಲ. ಅದ್ದರಿಂದ ಮಿಥ್ಯೆಯಾಗಿದೆ. ॥ ೫೯ ॥ ಹೀಗೆಯೇ ಶರೀರದ ಕಾರಣ ರೂಪೀ ಪಂಚಭೂತಗಳೂ ಕೂಡ ಅವಯವಿಯಾದ್ದರಿಂದ ತನ್ನ ಅವಯವಗಳಿಂದ – ಸೂಕ್ಷ್ಮ ಭೂತಗಳಿಂದ ಭಿನ್ನವಾಗಿಲ್ಲ, ಅವಯವರೂಪವೇ ಆಗಿವೆ. ಎಷ್ಟೇ ಹುಡುಕಿದರೂ ಅವಯವಗಳಲ್ಲದೆ ಅವಯವಿಯ ಅಸ್ತಿತ್ವವು ದೊರೆಯುವುದಿಲ್ಲ, ಅದು ಅಸತ್ತೆಂದೇ ಸಿದ್ಧವಾಗುತ್ತದೆ. ಆಗ ಈ ಅವಯವಗಳೂ ಅಸತ್ಯವೆಂದು ತಾನಾಗಿಯೇ ಸಿದ್ಧವಾಗುತ್ತದೆ. ॥ ೬೦ ॥ ಅಜ್ಞಾನದ ಕಾರಣ ಒಂದೇ ಪರಮತತ್ತ್ವದಲ್ಲಿ ಅನೇಕ ವಸ್ತುಗಳ ಭೇದಗಳು ಕಂಡುಬರುತ್ತಾ ಇರುವ ತನಕ ಯಾವ ವಸ್ತುವು ಮೊದಲಿಗೆ ಇತ್ತೋ ಅದು ಈಗಲೂ ಇದೆ ಎಂಬ ಭ್ರಮೆಯೂ ಇರಬಲ್ಲದು ಮತ್ತು ಸ್ವಪ್ನದಲ್ಲಿಯೂ ಹೇಗೆ ಜಾಗ್ರತ್, ಸ್ವಪ್ನ ಮುಂತಾದ ಅವಸ್ಥೆಗಳ ಬೇರೆ-ಬೇರೆ ಅನುಭವಗಳು ಆಗಿಯೇ ಆಗುತ್ತದೆ ಹಾಗೂ ಅವುಗಳಲ್ಲಿಯೂ ವಿಧಿನಿಷೇಧದ ಶಾಸ್ತ್ರ ಇರುತ್ತದೆ – ಹಾಗೆಯೇ ಈ ಭಿನ್ನತೆಗಳ ಅಸ್ತಿತ್ವದ ಮೋಹ ಇರುವ ತನಕ ಇಲ್ಲಿಯೂ ವಿಧಿನಿಷೇಧದ ಶಾಸ್ತ್ರವು ಇದ್ದೇ ಇರುತ್ತವೆ. ॥ ೬೧ ॥

ಯಾರು ವಿಚಾರಶೀಲನಾದ ಮನುಷ್ಯನು ಸ್ವಾನುಭೂತಿಯಿಂದ ಆತ್ಮನ ತ್ರಿವಿಧ ಅದ್ವೈತಗಳ ಸಾಕ್ಷಾತ್ಕಾರ ಮಾಡಿಕೊಳ್ಳುತ್ತಾನೋ – ಅದು ಜಾಗ್ರತ್, ಸ್ವಪ್ನ, ಸುಷುಪ್ತಿ ಮತ್ತು ದ್ರಷ್ಟಾ, ದರ್ಶನ ಮತ್ತು ದೃಶ್ಯದ ಭೇದರೂಪೀ ಸ್ವಪ್ನವನ್ನು ಕೊಡೆದುಹಾಕುತ್ತದೆ. ಭಾವಾದ್ವೈತ, ಕ್ರಿಯಾದ್ವೈತ ಮತ್ತು ದ್ರವ್ಯಾದ್ವೈತ – ಎಂಬ ಮೂರು ಪ್ರಕಾರದ ಅದ್ವೈತಗಳಿವೆ. ॥ ೬೨ ॥ ವಸ್ತ್ರವು ಸೂತ್ರರೂಪವೇ ಆಗಿರುವಂತೆಯೇ ಕಾರ್ಯವು ಕಾರಣಮಾತ್ರವೇ ಆಗಿದೆ. ಏಕೆಂದರೆ, ಭೇದವಾದರೋ ವಾಸ್ತವವಾಗಿ ಇಲ್ಲವೇ ಇಲ್ಲ. ಹೀಗೆ ಎಲ್ಲದರ ಏಕತೆಯ ವಿಚಾರವೇ 'ಭಾವಾದ್ವೈತ'ವಾಗಿದೆ. ॥ ೬೩ ॥ ಯುಧಿಷ್ಠಿರನೇ! ಮನಸ್ಸು, ಮಾತು ಮತ್ತು ಶರೀರಗಳಿಂದಾಗುವ ಎಲ್ಲ ಕರ್ಮಗಳು ಸ್ವಯಂ ಪರಬ್ರಹ್ಮ ಪರಮಾತ್ಮನಲ್ಲೇ ಆಗುತ್ತಾ ಇವೆ, ಅದರಲ್ಲೇ ಅಧ್ಯಸ್ತವಾಗಿದೆ – ಈ ಭಾವದಿಂದ ಸಮಸ್ತ ಕರ್ಮಗಳನ್ನು ಸಮರ್ಪಿಸುವುದು 'ಕ್ರಿಯಾದ್ವೈತ'ವಾಗಿದೆ. ॥ ೬೪ ॥ ಪತ್ನೀ-ಪುತ್ರಾದಿ ನೆಂಟರಿಷ್ಟರು ಹಾಗೂ ಪ್ರಪಂಚದ ಬೇರೆ ಸಮಸ್ತ ಪ್ರಾಣಿಗಳ ಹಾಗೂ ತನ್ನ ಸ್ವಾರ್ಥ ಮತ್ತು ಭೋಗಗಳು ಒಂದೇ ಆಗಿವೆ. ಅವುಗಳಲ್ಲಿ ತನ್ನದು ಹಾಗೂ ಪರರದು ಎಂಬ ಭೇದವೇ ಇಲ್ಲ – ಈ ವಿಧದ ವಿಚಾರ 'ದ್ರವ್ಯಾದ್ವೈತ'ವಾಗಿದೆ. ॥ ೬೫ ॥

ಯುಧಿಷ್ಠಿರನೇ! ಯಾವ ಮನುಷ್ಯನಿಗೆ ಯಾವ ದ್ರವ್ಯವನ್ನು ಯಾವ ಸಮಯದಲ್ಲಿ ಯಾವ ಉಪಾಯದಿಂದ ಯಾರಿಂದ ಸ್ವೀಕರಿಸುವುದು ಶಾಸ್ತ್ರದ ಆಜ್ಞೆಗೆ ವಿರುದ್ಧವಲ್ಲವೋ ಅವನು ಅದರಿಂದಲೇ ಎಲ್ಲ ಕಾರ್ಯಗಳನ್ನು ನೆರವೇರಿಸಿಕೊಳ್ಳಬೇಕು. ಆಪತ್ಕಾಲವನ್ನು ಬಿಟ್ಟು ಇದರಿಂದ ಬೇರೆಯದನ್ನು ಮಾಡಬಾರದು. ॥ ೬೬ ॥

ಏತೈರನ್ಯೈಶ್ಚ ವೇದೋಕ್ತೈರ್ವರ್ತಮಾನಃ ಸ್ವಕರ್ಮಭಿಃ ।
ಗೃಹೇಽಪ್ಯಸ್ಯ ಗತಿಂ ಯಾಯಾದ್ರಾಜನ್‌ಸ್ತದ್ಭಕ್ತಿಭಾಙ್ನರಃ
॥ ೬೭ ॥

ಯಥಾ ಹಿ ಯೂಯಂ ನೃಪದೇವ ದುಸ್ತ್ಯಜಾ-
ದಾಪದ್ಗಣಾದುತ್ತರತಾತ್ಮನಃ ಪ್ರಭೋಃ ।
ಯತ್ಪಾದಪಂಕೇರುಹಸೇವಯಾ ಭವಾ-
ನಹಾರ್ಷೀನ್ನಿರ್ಜಿತದಿಗ್ಗಜಃ ಕ್ರತೂನ್ ॥ ೬೮ ॥

ಅಹಂ ಪುರಾಭವಂ ಕಶ್ಚಿದ್ಗಂಧರ್ವ ಉಪಬರ್ಹಣಃ ।
ನಾಮ್ನಾತೀತೇ ಮಹಾಕಲ್ಪೇ ಗಂಧರ್ವಾಣಾಂ ಸುಸಮ್ಮತಃ
॥ ೬೯ ॥

ರೂಪಪೇಶಲಮಾಧುರ್ಯಸೌಗಂಧ್ಯಪ್ರಿಯದರ್ಶನಃ ।
ಸ್ತ್ರೀಣಾಂ ಪ್ರಿಯತಮೋ ನಿತ್ಯಂ ಮತ್ತಸ್ತು ಪುರಲಂಪಟಃ
॥ ೭೦ ॥

ಏಕದಾ ದೇವಸತ್ರೇ ತು ಗಂಧರ್ವಾಪ್ಸರಸಾಂ ಗಣಾಃ ।
ಉಪಹೂತಾ ವಿಶ್ವಸೃಗ್ಭಿರ್ಹರಿಗಾಥೋಪಗಾಯನೇ
॥ ೭೦ ॥

ಅಹಂ ಚ ಗಾಯಂಸ್ತದ್ವಿದ್ವಾನ್ ಸ್ತ್ರೀಭಿಃ ಪರಿವೃತೋ ಗತಃ ।
ಜ್ಞಾತ್ವಾ ವಿಶ್ವಸೃಜಸ್ತನ್ಮೇ ಹೇಲನಂ ಶೇಪುರೋಜಸಾ ।
ಯಾಹಿ ತ್ವಂ ಶೂದ್ರತಾಮಾಶು ನಷ್ಟಶ್ರೀಃ ಕೃತಹೇಲನಃ
॥ ೭೨ ॥

ತಾವದ್ದಾಸ್ಯಾಮಹಂ ಜಜ್ಞೇ ತತ್ರಾಪಿ ಬ್ರಹ್ಮವಾದಿನಾಮ್ ।
ಶುಶ್ರೂಷಯಾನುಷಂಗೇಣ ಪ್ರಾಪ್ತೋಽಹಂ ಬ್ರಹ್ಮಪುತ್ರತಾಮ್
॥ ೭೩ ॥

ಧರ್ಮಸ್ತೇ ಗೃಹಮೇಧೀಯೋ ವರ್ಣಿತಃ ಪಾಪನಾಶನಃ ।
ಗೃಹಸ್ಥೋ ಯೇನ ಪದವೀಮಂಜಸಾ ನ್ಯಾಸಿನಾಮಿಯಾತ್
॥ ೭೪ ॥

ಮಹಾರಾಜಾ! ಭಗವದ್ಭಕ್ತ ಮನುಷ್ಯನು ವೇದದಲ್ಲಿ ಹೇಳಲ್ಪಟ್ಟ ಈ ಕರ್ಮಗಳನ್ನು ಹಾಗೂ ಬೇರೆ-ಬೇರೆ ಸ್ವಕರ್ಮಗಳನ್ನು ಅನುಷ್ಠಾನ ಮಾಡುತ್ತಾ ಮನೆಯಲ್ಲಿ ಇದ್ದರೂ ಕೂಡ ಶ್ರೀಕೃಷ್ಣನ ಗತಿಯನ್ನು ಪಡೆದುಕೊಳ್ಳುವನು. ॥ ೬೭ ॥ ಯುಧಿಷ್ಠಿರನೇ! ನೀನು ನಿನ್ನ ಸ್ವಾಮಿಯಾದ ಭಗವಾನ್ ಶ್ರೀಕೃಷ್ಣನ ಕೃಪೆ ಮತ್ತು ಸಹಾಯದಿಂದ ದೊಡ್ಡ-ದೊಡ್ಡ ಕಠಿಣ ವಿಪತ್ತುಗಳನ್ನೂ ದಾಟಿಹೋಗಿರುವೆ ಮತ್ತು ಅವನ ಚರಣಕಮಲಗಳ ಸೇವೆಯಿಂದ ಸಮಸ್ತ ಭೂಮಂಡಲವನ್ನು ಗೆದ್ದು ನೀನು ದೊಡ್ಡ-ದೊಡ್ಡ ರಾಜಸೂಯವೇ ಮುಂತಾದ ಯಜ್ಞಗಳನ್ನು ಮಾಡಿರುವೆ. ॥ ೬೮ ॥

ಹಿಂದಿನ ಜನ್ಮದಲ್ಲಿ ಇದಕ್ಕೆ ಮೊದಲಿನ ಕಲ್ಪದಲ್ಲಿ ನಾನು ಓರ್ವ ಗಂಧರ್ವನಾಗಿದ್ದ. ನನ್ನ ಹೆಸರು 'ಉಪಬರ್ಹಣ' ಎಂದಿತ್ತು ಮತ್ತು ಗಂಧರ್ವರಲ್ಲಿ ನನಗೆ ತುಂಬಾ ಸಮ್ಮಾನವಿತ್ತು. ॥ ೬೯ ॥ ನಾನು ಅಪೂರ್ವವಾದ ಸೌಂದರ್ಯ, ಸೌಕುಮಾರ್ಯ ಮತ್ತು ಮಾಧುರ್ಯಗಳಿಂದ ಸಂಪನ್ನನಾಗಿದ್ದೆನು. ನನ್ನ ಶರೀರದಿಂದ ಸುಗಂಧವು ಸೂಸುತ್ತಿತ್ತು ಮತ್ತು ನೋಡಲು ನಾನು ತುಂಬಾ ಸುಂದರನಾಗಿದ್ದೆ. ಸ್ತ್ರೀಯರು ನನ್ನಲ್ಲಿ ಬಹಳ ಪ್ರೇಮವಿಟ್ಟಿದ್ದರು ಮತ್ತು ನಾನೂ ಸದಾಕಾಲ ಪ್ರಮಾದದಲ್ಲೇ ಇರುತ್ತಿದ್ದು ಅತ್ಯಂತ ವಿಲಾಸಿಯಾಗಿದ್ದೆ. ॥ ೭೦ ॥ ಒಮ್ಮೆ ದೇವತೆಗಳು ಒಂದು ಜ್ಞಾನ ಸತ್ರವನ್ನು ಆಚರಿಸಿದರು. ದೊಡ್ಡ-ದೊಡ್ಡ ಪ್ರಜಾಪತಿಗಳು ಅಲ್ಲಿಗೆ ಬಂದಿದ್ದರು. ಭಗವಂತನ ಲೀಲೆಯನ್ನು ಹಾಡುವುದಕ್ಕಾಗಿ ಗಂಧರ್ವರನ್ನೂ ಅಪ್ಸರೆಯನ್ನೂ ಕರೆಸಿದರು. ॥ ೭೧ ॥ ಅದು ಸಂತರ ಸಭೆ ಮತ್ತು ಅಲ್ಲಿ ಭಗವಂತನ ಲೀಲೆಗಳೇ ಹಾಡಲ್ಪಡುತ್ತವೆ ಎಂದು ನಾನು ತಿಳಿದಿದ್ದೆ. ಆದರೂ ನಾನು ಸ್ತ್ರೀಯರೊಂದಿಗೆ ಲೌಕಿಕ ಗೀತೆಗಳನ್ನು ಹಾಡುತ್ತಾ ಉನ್ಮತ್ತನಂತೆ ಅಲ್ಲಿಗೆ ತಲುಪಿದೆ. ಇವನಾದರೋ ನಮ್ಮುಗಳ ಅನಾದರವನ್ನು ಮಾಡುತ್ತಿದ್ದಾನೆ ಎಂದು ದೇವತೆಗಳು ನೋಡಿದರು. ಅವರು ತಮ್ಮ ಶಕ್ತಿಯಿಂದ – ನೀನು ನಮ್ಮನ್ನು ಅವಹೇಳನ ಮಾಡಿರುವಿ. ಆದರಿಂದ ನಿನ್ನ ಎಲ್ಲ ಸೌಂದರ್ಯ ಸಂಪತ್ತು ನಾಶವಾಗಿ, ನೀನು ಬೇಗನೇ ಶೂದ್ರನಾಗು ಎಂದು ಶಾಪವನ್ನು ಕೊಟ್ಟರು. ॥ ೭೨ ॥ ಅವರ ಶಾಪದಿಂದ ನಾನು ದಾಸೀಪುತ್ರನಾಗಿ ಹುಟ್ಟಿದೆ. ಆದರೆ ■ ಶೂದ್ರಜೀವನದಲ್ಲಿ ಮಾಡಿದ ಮಹಾತ್ಮರ ಸತ್ಸಂಗ ಮತ್ತು ಸೇವೆ-ಶುಶ್ರೂಷೆಯು ಪ್ರಭಾವದಿಂದ ನಾನು ಮರುಜನ್ಮದಲ್ಲಿ ಬ್ರಹ್ಮದೇವರ ಪುತ್ರನಾದೆ. ॥ ೭೩. ॥ ಸಂತರ ಅವಹೇಳನೆ ಮತ್ತು ಸೇವೆಯ ಪ್ರತ್ಯಕ್ಷವಾದ ನನ್ನ ಅನುಭವವಾಗಿದೆ ಇದು. ಸಂತರ ಸೇವೆಯಿಂದಲೇ ಭಗವಂತನು ಪ್ರಸನ್ನನಾಗುತ್ತಾನೆ. ನಾನು ನಿನಗೆ ಗೃಹಸ್ಥರ ಪಾಪನಾಶಕ ಧರ್ಮವನ್ನು ಹೇಳಿದೆ. ಈ ಧರ್ಮದ ಆಚರಣೆಯಿಂದ ಗೃಹಸ್ಥರೂ ಕೂಡ ಆಯಾಸವಿಲ್ಲದೆ ಸಂನ್ಯಾಸಿಗಳಿಗೆ ಸಿಗುವಂತಹ ಪರಮಪದವನ್ನು ಪಡೆದುಕೊಳ್ಳುವರು. ॥ ೭೪ ॥

ಯುಧಿಷ್ಠಿರನೇ! ಈ ಮನುಷ್ಯಲೋಕದಲ್ಲಿ ನೀವೇ ಅತ್ಯಂತ ಭಾಗ್ಯಶಾಲಿಗಳು. ಏಕೆಂದರೆ, ನಿಮ್ಮ ಮನೆಯಲ್ಲಿ ಸಾಕ್ಷಾತ್ ಪರಬ್ರಹ್ಮ ಪರಮಾತ್ಮನು ಮನುಷ್ಯರೂಪವನ್ನು ಧರಿಸಿ ಗುಪ್ತರೂಪದಿಂದ ವಾಸಿಸುತ್ತಿರುವನು. ಇದರಿಂದ ಇಡೀ ಜಗತ್ತನ್ನು ಪವಿತ್ರ

ಯೂಯಂ ನೃಲೋಕೇ ಬತ ಭೂರಿಭಾಗಾ
ಲೋಕಂ ಪುನಾನಾ ಮುನಯೋಽಭಿಯಂತಿ ।
ಯೇಷಾಂ ಗೃಹಾನಾವಸತೀತಿ ಸಾಕ್ಷಾ-
ದ್ಗೂಢಂ ಪರಂ ಬ್ರಹ್ಮ ಮನುಷ್ಯಲಿಂಗಮ್ ॥ ೭೫ ॥

ಸ ವಾ ಅಯಂ ಬ್ರಹ್ಮ ಮಹದ್ವಿಮೃಗ್ಯಂ
ಕೈವಲ್ಯ ನಿರ್ವಾಣಸುಖಾನುಭೂತಿಃ ।
ಪ್ರಿಯಃ ಸುಹೃದ್ವಃ ಖಲು ಮಾತುಲೇಯ
ಆತ್ಮಾರ್ಹಣೀಯೋ ವಿಧಿಕೃದ್ಗುರುಶ್ಚ ॥ ೭೬ ॥

ನ ಯಸ್ಯ ಸಾಕ್ಷಾದ್ಭವಪದ್ಮಜಾದಿಭೀ
ರೂಪಂ ಧಿಯಾ ವಸ್ತುತಯೋಪವರ್ಣಿತಮ್ ।
ಮೌನೇನ ಭಕ್ತ್ಯೋಪಶಮೇನ ಪೂಜಿತಃ
ಪ್ರಸೀದತಾಮೇಷ ಸ ಸಾತ್ವತಾಂ ಪತಿಃ ॥ ೭೭ ॥

ಶ್ರೀಶುಕ ಉವಾಚ

ಇತಿ ದೇವರ್ಷಿಣಾ ಪ್ರೋಕ್ತಂ ನಿಶಮ್ಯ ಭರತರ್ಷಭಃ ।
ಪೂಜಯಾಮಾಸ ಸುಪ್ರೀತಃ ಕೃಷ್ಣಂ ಚ ಪ್ರೇಮವಿಹ್ವಲಃ ॥ ೭೮ ॥

ಕೃಷ್ಣಪಾರ್ಥಾವುಪಾಮಂತ್ರ್ಯ ಪೂಜಿತಃ ಪ್ರಯಯೌ ಮುನಿಃ ।
ಶ್ರುತ್ವಾ ಕೃಷ್ಣಂ ಪರಂ ಬ್ರಹ್ಮ ಪಾರ್ಥಃ ಪರಮವಿಸ್ಮಿತಃ ॥ ೭೯ ॥

ಇತಿ ದಾಕ್ಷಾಯಣೀನಾಂ ತೇ ಪೃಥಗ್ವಂಶಾಃ ಪ್ರಕೀರ್ತಿತಾಃ ।
ದೇವಾಸುರಮನುಷ್ಯಾದ್ಯಾ ಲೋಕಾ ಯತ್ರ ಚರಾಚರಾಃ ॥ ೮೦ ॥

ವಾಗಿರುವ ಋಷಿ-ಮುನಿಗಳು ಮತ್ತೆ-ಮತ್ತೆ ಅವನ ದರ್ಶನ ಪಡೆಯಲು ನಾಲ್ಕೂ ಕಡೆಗಳಿಂದ ನಿಮ್ಮ ಬಳಿಗೆ ಬರುತ್ತಾ ಇರುತ್ತಾರೆ. ॥ ೭೫ ॥ ದೊಡ್ಡ-ದೊಡ್ಡ ಮಹಾಪುರುಷರು ನಿರಂತರವಾಗಿ ಯಾರನ್ನು ಹುಡುಕುತ್ತಾ ಇರುತ್ತಾರೋ, ಯಾರು ಮಾಯಾಲೇಶದಿಂದ ರಹಿತನಾಗಿ ಪರಮಶಾಂತ ಪರಮಾನಂದಾನುಭವಸ್ವರೂಪ ಪರಬ್ರಹ್ಮ ಪರಮಾತ್ಮನಾಗಿದ್ದಾನೋ ಅವನೇ ನಿಮ್ಮ ಹಿತೈಷಿಯೂ, ಪ್ರಿಯನೂ, ಸೋದರತ್ತೆಯ ಮಗನೂ, ಪೂಜ್ಯನೂ, ಆಜ್ಞಾಕಾರಿಯೂ, ಗುರುವೂ ಮತ್ತು ಸ್ವಯಂ ಆತ್ಮಾ ಶ್ರೀಕೃಷ್ಣನಾಗಿದ್ದಾನೆ. ॥ ೭೬ ॥ ರುದ್ರದೇವರು, ಬ್ರಹ್ಮದೇವರು ಮುಂತಾದ ವರೂ ಕೂಡ ತಮ್ಮ ಬುದ್ಧಿಯಿಂದ 'ಅವನು ಹೀಗೆಯೇ ಇದ್ದಾನೆ' ಈ ರೂಪದಿಂದ ಅವನನ್ನು ವರ್ಣಿಸಲಾರದೆ ಹೋದರು. ಹಾಗಿರುವಾಗ ನಾವು ಹೇಗೆ ವರ್ಣಿಸಬಲ್ಲೆವು? ನಾವಾದರೋ ಮೌನ, ಭಕ್ತಿ ಮತ್ತು ಸಂಯಮದ ಮೂಲಕವೇ ಅವನ ಪೂಜೆಯನ್ನು ಮಾಡುತ್ತೇವೆ. ಕೃಪೆಗೈದು ನಮ್ಮ ಈ ಪೂಜೆಯನ್ನು ಸ್ವೀಕರಿಸಿ ಭಕ್ತವತ್ಸಲ ಭಗವಂತನು ನಮ್ಮ ಮೇಲೆ ಕೃಪೆದೋರಲಿ. ॥ ೭೭ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ! ದೇವರ್ಷಿ ನಾರದರ ಈ ಪ್ರವಚನವನ್ನು ಕೇಳಿ ರಾಜಾ ಯುಧಿಷ್ಠಿರನಿಗೆ ಅತ್ಯಂತ ಆನಂದವಾಯಿತು. ಅವನು ಪ್ರೇಮವಿಹ್ವಲನಾಗಿ ದೇವರ್ಷಿ ನಾರದರನ್ನು ಮತ್ತು ಭಗವಾನ್ ಶ್ರೀಕೃಷ್ಣನನ್ನು ಪೂಜಿಸಿದನು. ॥ ೭೮ ॥ ದೇವರ್ಷಿ ನಾರದರು ಭಗವಾನ್ ಕೃಷ್ಣನಿಂದ ಮತ್ತು ಯುಧಿಷ್ಠಿರನಿಂದ ಬೀಳ್ಕೊಂಡು, ಅವನಿಂದ ಸತ್ಕಾರಪಡೆದು ಹೊರಟುಹೋದರು. ಭಗವಾನ್ ಶ್ರೀಕೃಷ್ಣನೇ ಪರಬ್ರಹ್ಮನಾಗಿದ್ದಾನೆ ಎಂದು ಕೇಳಿ ಯುಧಿಷ್ಠಿರನಿಗೆ ಪರಮಾಶ್ಚರ್ಯವಾಯಿತು. ॥ ೭೯ ॥ ಪರೀಕ್ಷಿತನೇ! ಹೀಗೆ ನಾನು ನಿನಗೆ ದಕ್ಷಪುತ್ರಿಯರ ವಂಶಗಳ ಬೇರೆ- ಬೇರೆಯಾಗಿ ವರ್ಣನೆ ಮಾಡಿದೆನು. ಅವರ ವಂಶದಲ್ಲೇ ದೇವತೆಗಳು ಅಸುರರು, ಮನುಷ್ಯರೇ ಮುಂತಾದವರು ಮತ್ತು ಸಮಸ್ತ ಚರಾಚರದ ಸೃಷ್ಟಿಯಾಯಿತು. ॥ ೮೦ ॥

ಹದಿನೈದನೆಯ ಅಧ್ಯಾಯವು ಮುಗಿಯಿತು. ॥ ೧೫ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಸಪ್ತಮಸ್ಕಂಧೇ
ಪ್ರಹ್ಲಾದಾನುಚರಿತೇ ಯುಧಿಷ್ಠಿರ-ನಾರದಸಂವಾದೇ ಸದಾಚಾರನಿರ್ಣಯೋ ನಾಮ ಪಂಚದಶೋಽಧ್ಯಾಯಃ ॥ ೧೫ ॥

ಏಳನೆಯ ಸ್ಕಂಧವು ಸಂಪೂರ್ಣವಾಯಿತು.

॥ ಓಂನಮೋಭಗವತೇ ವಾಸುದೇವಾಯ ॥

ಶ್ರೀಮದ್ಭಾಗವತಮಹಾಪುರಾಣಮ್

ಅಷ್ಟಮಃ ಸ್ಕಂಧಃ

ಮೊದಲನೆಯ ಅಧ್ಯಾಯ

ಮನ್ವಂತರಗಳ ವರ್ಣನೆ

ರಾಜೋವಾಚ

ಸ್ವಾಯಂಭುವಸ್ಯೇಹ ಗುರೋ ವಂಶೋಽಯಂ ವಿಸ್ತರಾಚ್ಛ್ರುತಃ ।
ಯತ್ರ ವಿಶ್ವಸೃಜಾಂ ಸರ್ಗೋ ಮನೂನನ್ಯಾನ್ವದಸ್ವ ನಃ ॥ ೧ ॥

ಯತ್ರ ಯತ್ರ ಹರೇರ್ಜನ್ಮ ಕರ್ಮಾಣಿ ಚ ಮಹೀಯಸಃ ।
ಗೃಣಂತಿ ಕವಯೋ ಬ್ರಹ್ಮಂಸ್ತಾನಿ ನೋ ವದ ಶೃಣ್ವತಾಮ್ ॥ ೨ ॥

ಯದ್ಯಸ್ಮಿನ್ನಂತರೇ ಬ್ರಹ್ಮನ್ಭಗವಾನ್ವಿಶ್ವಭಾವನಃ ।
ಕೃತವಾನ್ಕುರುತೇ ಕರ್ತಾ ಹ್ಯತೀತೇಽನಾಗತೇಽದ್ಯ ವಾ ॥ ೩ ॥

ಶ್ರೀಶುಕ ಉವಾಚ

ಮನವೋಽಸ್ಮಿನ್ವ್ಯತೀತಾಃ ಷಟ್ಕಲ್ಪೇ ಸ್ವಾಯಂಭುವಾದಯಃ ।
ಆದ್ಯಸ್ತೇ ಕಥಿತೋ ಯತ್ರ ದೇವಾದೀನಾಂ ಚ ಸಂಭವಃ ॥ ೪ ॥

ಆಕೂತ್ಯಾಂ ದೇವಹೂತ್ಯಾಂ ಚ ದುಹಿತ್ರೋಸ್ತಸ್ಯ ವೈ ಮನೋಃ ।
ಧರ್ಮಜ್ಞಾನೋಪದೇಶಾರ್ಥಂ ಭಗವಾನ್ಪುತ್ರತಾಂ ಗತಃ ॥ ೫ ॥

ಕೃತಂ ಪುರಾ ಭಗವತಃ ಕಪಿಲಸ್ಯಾನುವರ್ಣಿತಮ್ ।
ಆಖ್ಯಾಸ್ಯೇ ಭಗವಾನ್ಯಜ್ಞೋ ಯಚ್ಚಕಾರ ಕುರೂದ್ವಹ ॥ ೬ ॥

ವಿರಕ್ತಃ ಕಾಮಭೋಗೇಷು ಶತರೂಪಾಪತಿಃ ಪ್ರಭುಃ ।
ವಿಸೃಜ್ಯ ರಾಜ್ಯಂ ತಪಸೇ ಸಭಾರ್ಯೋ ವನಮಾವಿಶತ್ ॥ ೭ ॥

ಪರೀಕ್ಷಿದ್ರಾಜನು ಕೇಳಿದನು – ಗುರುದೇವರೇ! ತಮ್ಮ ಈ ಕಥಾ-ಕೀರ್ತನೆಯಲ್ಲಿ ಸ್ವಾಯಂಭುವ ಮನುವಿನ ವಂಶವಿಸ್ತಾರವನ್ನು ನಾನು ಕೇಳಿದೆ. ಇದೇ ವಂಶದಲ್ಲಿ ಅವನ ಪುತ್ರಿಯರಿಂದ ಮರೀಚಿಯೇ ಮುಂತಾದ ಪ್ರಜಾಪತಿಗಳು ತಮ್ಮ ವಂಶವನ್ನು ನಡೆಸಿದರು. ಈಗ ನೀವು ಇತರ ಮನುಗಳ ವಿಷಯವನ್ನು ವರ್ಣಿಸುವ ಕೃಪೆಮಾಡಿರಿ. ॥ ೧ ॥ ಬ್ರಾಹ್ಮಣೋತ್ತಮರೇ! ಮಹಾತ್ಮರಾದ ಜ್ಞಾನಿಗಳು ಯಾವ-ಯಾವ ಮನ್ವಂತರದಲ್ಲಿ ಮಹಾಮಹಿಮನಾದ ಶ್ರೀಹರಿಯ ಅವತಾರಗಳನ್ನೂ, ಲೀಲೆಗಳನ್ನೂ ವರ್ಣನೆ ಮಾಡಿದ್ದಾರೆ ಅವೆಲ್ಲವನ್ನು ಶ್ರವಣಮಾಡಲು ಬಯಸುವ ನಮಗೆ ತಿಳಿಸಿರಿ. ॥ ೨ ॥ ಪೂಜ್ಯರೇ! ವಿಶ್ವಭಾವನನಾದ ಭಗವಂತನು ಕಳೆದ ಮನ್ವಂತರಗಳಲ್ಲಿ ಯಾವ-ಯಾವ ಲೀಲೆಗಳನ್ನು ನಡೆಸಿದನು? ಈ ಮನ್ವಂತರದಲ್ಲಿ ಮಾಡುತ್ತಿರುವ ಲೀಲೆಗಳನ್ನೂ, ಮುಂದಿನ ಮನ್ವಂತರಗಳಲ್ಲಿ ಎಸಗಲಿರುವ ಲೀಲೆಗಳನ್ನೂ ಎಲ್ಲವನ್ನೂ ನಮಗೆ ಹೇಳಿರಿ. ॥ ೩ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ರಾಜನೇ! ಈ ಕಲ್ಪದಲ್ಲಿ ಸ್ವಾಯಂಭುವ ಮುಂತಾದ ಆರು ಮನ್ವಂತರಗಳು ಕಳೆದುಹೋಗಿವೆ. ಅವುಗಳಲ್ಲಿ ದೇವತೆಗಳೇ ಮುಂತಾದವರ ಉತ್ಪತ್ತಿಯು ಆಗಿರುವ ಮೊದಲನೆಯ ಮನ್ವಂತರವನ್ನು ನಿನಗೆ ವರ್ಣಿಸಿಯಾಗಿದೆ. ॥ ೪ ॥ ಸ್ವಾಯಂಭುವ ಮನುವಿನ ಪುತ್ರಿಯಾದ ಆಕೂತಿಯಲ್ಲಿ ಯಜ್ಞಪುರುಷನಾಗಿ ಧರ್ಮವನ್ನು ಉಪದೇಶ ಮಾಡಲಿಕ್ಕಾಗಿ ಹಾಗೂ ದೇವಹೂತಿಯಲ್ಲಿ ಕಪಿಲಾವತಾರವನ್ನು ಎತ್ತಿ ಜ್ಞಾನವನ್ನು ಉಪದೇಶಿಸಲಿಕ್ಕಾಗಿ ಭಗವಂತನು ಆವಿರ್ಭವಿಸಿದ್ದನು. ॥ ೫ ॥ ಪರೀಕ್ಷಿತನೇ! ಭಗವಾನ್ ಕಪಿಲಾವತಾರದ ವರ್ಣನೆಯನ್ನು ನಾನು ಮೊದಲೇ (ಮೂರನೆಯ ಸ್ಕಂಧದಲ್ಲಿ) ಮಾಡಿಯಾಗಿದೆ. ಈಗ ಭಗವಾನ್ ಯಜ್ಞಪುರುಷನು ಆಕೂತಿಯ ಗರ್ಭದಲ್ಲಿ ಅವತರಿಸಿ ಮಾಡಿದ ಲೀಲೆಗಳನ್ನು ವರ್ಣಿಸುತ್ತೇನೆ; ಕೇಳು. ॥ ೬ ॥

ಪರೀಕ್ಷಿದ್ರಾಜನೇ! ಪ್ರಭುವಾದ ಸ್ವಾಯಂಭುವ ಮನುವು ಸಮಸ್ತ ಕಾಮನೆಗಳಿಂದ ಮತ್ತು ಭೋಗಗಳಿಂದ ವಿರಕ್ತನಾಗಿ ರಾಜ್ಯವನ್ನು ತ್ಯಜಿಸಿ ಪತ್ನಿಯಾದ ಶತರೂಪಾಳೊಂದಿಗೆ ತಪಸ್ಸಿಗಾಗಿ ವನಕ್ಕೆ ತೆರಳಿದನು. ॥ ೭ ॥ ಅಲ್ಲಿ ಅವನು ಸುನಂದಾನದಿಯ ತೀರದಲ್ಲಿ

ಸುನಂದಾಯಾಂ ವರ್ಷಶತಂ ಪದೈಕೇನ ಭುವಂ ಸ್ಪೃಶನ್ ।
ತಪ್ಯಮಾನಸ್ತಪೋ ಘೋರಮಿದಮನ್ವಾಹ ಭಾರತ ॥ ೮ ॥

ಮನುರುವಾಚ

ಯೇನ ಚೇತಯತೇ ವಿಶ್ವಂ ವಿಶ್ವಂ ಚೇತಯತೇ ನ ಯಮ್ ।
ಯೋ ಜಾಗರ್ತಿ ಶಯಾನೇಽಸ್ಮಿನ್ನಾಯಂ ತಂ ವೇದ ವೇದ ಸಃ ॥ ೯ ॥

ಆತ್ಮಾವಾಸ್ಯಮಿದಂ ವಿಶ್ವಂ ಯತ್ಕಿಂಚಿಜ್ಜಗತ್ಯಾಂ ಜಗತ್ ।
ತೇನ ತ್ಯಕ್ತೇನ ಭುಂಜೀಥಾ ಮಾ ಗೃಧಃ ಕಸ್ಯಸ್ವಿದ್ಧನಮ್ ॥ ೧೦ ॥

ಯಂ ನ ಪಶ್ಯತಿ ಪಶ್ಯಂತಂ ಚಕ್ಷುರ್ಯಸ್ಯ ನ ರಿಷ್ಯತಿ ।
ತಂ ಭೂತನಿಲಯಂ ದೇವಂ ಸುಪರ್ಣಮುಪಧಾವತ ॥ ೧೧ ॥

ನ ಯಸ್ಯಾದ್ಯಂತೌ ಮಧ್ಯಂ ಚ ಸ್ವಃ ಪರೋ ನಾಂತರಂ ಬಹಿಃ ।
ವಿಶ್ವಸ್ಯಾಮೂನಿ ಯದ್ಯಸ್ಮಾದ್ವಿಶ್ವಂ ಚ ತದೃತಂ ಮಹತ್ ॥ ೧೨ ॥

ಸ ವಿಶ್ವಕಾಯಃ ಪುರುಹೂತ ಈಶಃ
ಸತ್ಯಃ ಸ್ವಯಂಜ್ಯೋತಿರಜಃ ಪುರಾಣಃ ।
ಧತ್ತೇಽಸ್ಯ ಜನ್ಮಾದ್ಯಜಯಾಽಽತ್ಮಶಕ್ತ್ಯಾ
ತಾಂ ವಿದ್ಯಯೋದಸ್ಯ ನಿರೀಹ ಆಸ್ತೇ ॥ ೧೩ ॥

ಅಥಾಗ್ರೇ ಋಷಯಃ ಕರ್ಮಾಣೀಹಂತೇಽಕರ್ಮಹೇತವೇ ।
ಈಹಮಾನೋ ಹಿ ಪುರುಷಃ ಪ್ರಾಯೋಽನೀಹಾಂ ಪ್ರಪದ್ಯತೇ ॥ ೧೪ ॥

ಈಹತೇ ಭಗವಾನೀಶೋ ನ ಹಿ ತತ್ರ ವಿಸಜ್ಜತೇ ।
ಆತ್ಮಲಾಭೇನ ಪೂರ್ಣಾರ್ಥೋ ನಾವಸೀದಂತಿ ಯೇಽನು ತಮ್ ॥ ೧೫ ॥

ಭೂಮಿಯಲ್ಲಿ ಒಂಟಿಕಾಲಿನಲ್ಲಿ ನಿಂತು ನೂರುವರ್ಷಗಳವರೆಗೆ ತೀವ್ರವಾದ ತಪಸ್ಸನ್ನು ಮಾಡಿದನು. ತಪಸ್ಸು ಮಾಡುವಾಗ ಅವನು ಪರಮಾತ್ಮನನ್ನು ಹೀಗೆ ಸ್ತುತಿಸಿದನು. ॥ ೮ ॥

ಸ್ವಾಯಂಭುವ ಮನುವು ಹೇಳುತ್ತಿದ್ದ – ವಿಶ್ವಕ್ಕೆಲ್ಲ ಚೈತನ್ಯವನ್ನು ತುಂಬಿದ ಪರಮ ಚೇತನನಿವನು. ಆದರೆ ವಿಶ್ವವು ಇವನಿಗೆ ಚೈತನ್ಯವನ್ನು ನೀಡಲಾರದು. ವಿಶ್ವವೆಲ್ಲವೂ ನಿದ್ರಿಸುತ್ತಿರುವ ಪ್ರಳಯಕಾಲದಲ್ಲಿಯೂ ಇವನು ಎಚ್ಚರವಾಗಿರುತ್ತಾನೆ. ವಿಶ್ವವು ಈತನನ್ನು ತಿಳಿಯಲಾರದು. ಆದರೆ ಇವನು ಅದನ್ನು ಪೂರ್ಣವಾಗಿ ತಿಳಿದಿರುವನು. ॥ ೯ ॥ ಈ ಇಡೀ ವಿಶ್ವದಲ್ಲಿ ಮತ್ತು ಈ ವಿಶ್ವದಲ್ಲಿ ಇರುವ ಎಲ್ಲ ಚರಾಚರ ಪ್ರಾಣಿಗಳಲ್ಲಿ ಆ ಪರಮಾತ್ಮನೇ ಹಾಸುಹೊಕ್ಕಾಗಿ ತುಂಬಿದ್ದಾನೆ. ಆದರಿಂದ ಈ ಪ್ರಪಂಚದ ಯಾವ ವಸ್ತುವಿನಲ್ಲಿಯೂ ಮೋಹವನ್ನಿಡದೆ, ಅದನ್ನು ತ್ಯಾಗಬುದ್ಧಿಯಿಂದ ಜೀವನ-ನಿರ್ವಾಹಕ್ಕಷ್ಟೇ ಅದನ್ನು ಭೋಗಿಸಬೇಕು. ಆಸೆಯನ್ನು ತೊರೆಯಬೇಕು. ಯಾರ ಸಂಪತ್ತಿಗೂ ಆಸೆಪಡಬಾರದು. ॥ ೧೦ ॥ ಭಗವಂತನು ಎಲ್ಲರ ಸಾಕ್ಷಿಯಾಗಿದ್ದಾನೆ. ಅವನನ್ನು ಬುದ್ಧಿಯ ವೃತ್ತಿಗಳಾಗಲೀ, ಕಣ್ಣು ಮುಂತಾದ ಇಂದ್ರಿಯಗಳಾಗಲೀ ನೋಡಲಾರವು. ಆದರೂ ಅವನ ಜ್ಞಾನಶಕ್ತಿಯು ಅಖಂಡವಾಗಿದೆ. ಸಮಸ್ತ ಪ್ರಾಣಿಗಳ ಹೃದಯದಲ್ಲಿ ನೆಲೆಸಿರುವ ಆ ಸ್ವಯಂಪ್ರಕಾಶನಾದ, ಅಸಂಗನಾದ ಪರಮಾತ್ಮನಲ್ಲಿ ಶರಣಾಗಬೇಕು. ॥ ೧೧ ॥ ಆದಿ-ಅಂತ್ಯಗಳೇ ಇಲ್ಲದವನು ಮಧ್ಯದಲ್ಲಿ ಹೇಗೆ ಇರಬಲ್ಲನು ? ಸ್ವಕೀಯನಾಗಲೀ, ಪರಕೀಯನಾಗಲೀ ಯಾರೂ ಇಲ್ಲ. ಹೊರಗಿನದಾಗಲೀ, ಒಳಗಿನದಾಗಲೀ ಯಾವುದೂ ಇಲ್ಲ. ಆದರೆ ವಿಶ್ವದಲ್ಲಿ ಎಲ್ಲಕ್ಕೂ ಆದಿ, ಅಂತ್ಯ, ಮಧ್ಯವೂ ಆಗಿ, ಸ್ವಕೀಯ, ಪರಕೀಯ, ಹೊರಗಿನ, ಒಳಗಿನ ಎಲ್ಲವೂ ಅವನೇ ಆಗಿದ್ದಾನೆ. ಎಲ್ಲಕ್ಕೂ ಕಾರಣವಾಗಿರುವ ಮಹಾಸತ್ಯಸ್ವರೂಪನು ಇವನೇ. ॥ ೧೨ ॥ ಆ ಪರಮಾತ್ಮನೇ ವಿಶ್ವರೂಪನು. ಅವನಿಗೆ ಅನಂತನಾಮಗಳಿವೆ. ಅವನು ಸರ್ವೇಶ್ವರನೂ, ಸತ್ಯಸ್ವರೂಪಿಯೂ, ಸ್ವಯಂಪ್ರಕಾಶನೂ, ಅಜನೂ, ಪುರಾಣಪುರುಷನೂ ಆಗಿರುವನು. ಅವನೇ ತನ್ನ ಮಾಯಾಶಕ್ತಿಯಿಂದಲೇ ವಿಶ್ವಸೃಷ್ಟಿಯ ಜನ್ಮಾದಿಗಳನ್ನು ಸ್ವೀಕರಿಸುತ್ತಾನೆ ಮತ್ತು ತನ್ನ ವಿದ್ಯಾಶಕ್ತಿಯಿಂದ ಅದನ್ನು ತ್ಯಾಗಮಾಡಿ ನಿಷ್ಕ್ರಿಯನಾಗಿ ಸ್ವಸ್ವರೂಪಮಾತ್ರನಾಗಿ ಇರುತ್ತಾನೆ. ॥ ೧೩ ॥ ಇದರಿಂದಲೇ ಋಷಿ-ಮುನಿಗಳು ನೈಷ್ಕರ್ಮ್ಯಸ್ಥಿತಿಯನ್ನು ಅಂದರೆ ಬ್ರಹ್ಮನಲ್ಲಿ ಏಕತ್ವವನ್ನೇ ಹೊಂದಲು ಮೊದಲಿಗೆ ಕರ್ಮಯೋಗವನ್ನು ಅನುಷ್ಠಾನ ಮಾಡುತ್ತಾರೆ. ಸಾಮಾನ್ಯವಾಗಿ ಕರ್ಮಮಾಡುವವನೇ ಕೊನೆಗೆ ನಿಷ್ಕ್ರಿಯರಾಗಿ ಕರ್ಮಗಳಿಂದ ಬಿಡುಗಡೆಹೊಂದುವನು. ॥ ೧೪ ॥ ಸರ್ವಶಕ್ತನಾದ ಭಗವಂತನೂ ಕೂಡ ಕರ್ಮಗಳನ್ನು ಮಾಡುತ್ತಾನೆ. ಆದರೆ ಅವನು ಆತ್ಮಲಾಭದಿಂದ ಪೂರ್ಣಕಾಮನಾದ್ದರಿಂದ ಕರ್ಮಗಳಲ್ಲಿ ಆಸಕ್ತನಾಗಿರುವುದಿಲ್ಲ. ಆದ್ದರಿಂದ ಅವನನ್ನೇ ಅನುಸರಿಸುತ್ತಾ ಅನಾಸಕ್ತರಾಗಿ ಕರ್ಮಮಾಡುವವರೇ ಕರ್ಮಬಂಧನದಿಂದ ಮುಕ್ತರಾಗಿಯೇ ಇರುತ್ತಾರೆ. ॥ ೧೫ ॥ ಭಗವಂತನು ಜ್ಞಾನಸ್ವರೂಪನಾದ್ದರಿಂದ ಅವನಲ್ಲಿ ಅಹಂಕಾರ ಲವಲೇಶವೂ ಇಲ್ಲ. ಅವನು ಪರಿಪೂರ್ಣನಾದ್ದರಿಂದ ಅವನಿಗೆ

ತಮೀಹಮಾನಂ ನಿರಹಂಕೃತಂ ಬುಧಂ
ನಿರಾಶಿಷಂ ಪೂರ್ಣಮನನ್ಯಚೋದಿತಮ್ ।
ನೄನ್ ಶಿಕ್ಷಯಂತಂ ನಿಜವರ್ತ್ಮಸಂಸ್ಥಿತಂ
ಪ್ರಭುಂ ಪ್ರಪದ್ಯೇಽಖಿಲಧರ್ಮಭಾವನಮ್ ॥ ೧೬ ॥

ಶ್ರೀಶುಕ ಉವಾಚ

ಇತಿ ಮಂತ್ರೋಪನಿಷದಂ ವ್ಯಾಹರಂತಂ ಸಮಾಹಿತಮ್ ।
ದೃಷ್ಟ್ವಾಸುರಾ ಯಾತುಧಾನಾ ಜಗ್ಧುಮಭ್ಯದ್ರವನ್ ಕ್ಷುಧಾ ॥ ೧೭ ॥

ತಾಂಸ್ತಥಾವಸಿತಾನ್ವೀಕ್ಷ್ಯ ಯಜ್ಞಃ ಸರ್ವಗತೋ ಹರಿಃ ।
ಯಾಮೈಃ ಪರಿವೃತೋ ದೇವೈರ್ಹತ್ವಾಶಾಸತ್ತ್ರಿವಿಷ್ಟಪಮ್ ॥ ೧೮ ॥

ಸ್ವಾರೋಚಿಷೋ ದ್ವಿತೀಯಸ್ತು ಮನುರಗ್ನೇಃ ಸುತೋಽಭವತ್ ।
ದ್ಯುಮತ್ಸುಷೇಣರೋಚಿಷ್ಮತ್ಪ್ರಮುಖಾಸ್ತಸ್ಯ ಚಾತ್ಮಜಾಃ ॥ ೧೯ ॥

ತತ್ರೇಂದ್ರೋ ರೋಚನಸ್ತ್ವಾಸೀದ್ದೇವಾಶ್ಚ ತುಷಿತಾದಯಃ ।
ಊರ್ಜಸ್ತಂಭಾದಯಃ ಸಪ್ತ ಋಷಯೋ ಬ್ರಹ್ಮವಾದಿನಃ ॥ ೨೦ ॥

ಋಷೇಸ್ತು ವೇದಶಿರಸಸ್ತುಷಿತಾ ನಾಮ ಪತ್ನ್ಯಭೂತ್ ।
ತಸ್ಯಾಂ ಜಜ್ಞೇ ತತೋ ದೇವೋ ವಿಭುರಿತ್ಯಭಿವಿಶ್ರುತಃ ॥ ೨೧ ॥

ಅಷ್ಟಾಶೀತಿಸಹಸ್ರಾಣಿ ಮುನಯೋ ಯೇ ಧೃತವ್ರತಾಃ ।
ಅನ್ವಶಿಕ್ಷನ್ವ್ರತಂ ತಸ್ಯ ಕೌಮಾರಬ್ರಹ್ಮಚಾರಿಣಃ ॥ ೨೨ ॥

ತೃತೀಯ ಉತ್ತಮೋ ನಾಮ ಪ್ರಿಯವ್ರತಸುತೋ ಮನುಃ ।
ಪವನಃ ಸೃಂಜಯೋ ಯಜ್ಞಹೋತ್ರಾದ್ಯಾಸ್ತತ್ಸುತಾ ನೃಪ ॥ ೨೩ ॥

ವಸಿಷ್ಠ ತನಯಾಃ ಸಪ್ತ ಋಷಯಃ ಪ್ರಮದಾದಯಃ ।
ಸತ್ಯಾ ವೇದಶ್ರುತಾ ಭದ್ರಾ ದೇವಾ ಇಂದ್ರಸ್ತು ಸತ್ಯಜಿತ್ ॥ ೨೪ ॥

ಧರ್ಮಸ್ಯ ಸೂನೃತಾಯಾಂ ತು ಭಗವಾನ್ಪುರುಷೋತ್ತಮಃ ।
ಸತ್ಯಸೇನ ಇತಿ ಖ್ಯಾತೋ ಜಾತಃ ಸತ್ಯವ್ರತೈಃ ಸಹ ॥ ೨೫ ॥

ಸೋಽನೃತವ್ರತದುಃಶೀಲಾನಸತೋ ಯಕ್ಷರಾಕ್ಷಸಾನ್ ।
ಭೂತದ್ರುಹೋ ಭೂತಗಣಾಂಸ್ತ್ವವಧೀತ್ಸತ್ಯಜಿತ್ಸಖಃ ॥ ೨೬ ॥

ಯಾವುದೇ ವಸ್ತುವಿನ ಕಾಮನೆಯಿಲ್ಲ, ಅವನು ಯಾರ ಪ್ರೇರಣೆಯೂ ಇಲ್ಲದೆ ಸ್ವೇಚ್ಛೆಯಿಂದ ಕರ್ಮಮಾಡುತ್ತಾನೆ. ಅವನು ತಾನೇ ನಿರ್ಮಿಸಿದ ಮರ್ಯಾದೆಯಲ್ಲಿ ನೆಲೆಸಿ ತನ್ನ ಕರ್ಮಗಳ ಮೂಲಕ ಮನುಷ್ಯರಿಗೆ ಶಿಕ್ಷಣವನ್ನು ನೀಡುತ್ತಿರುವನು. ಅವನೇ ಸಮಸ್ತ ಧರ್ಮಗಳ ಪ್ರವರ್ತಕನೂ, ಅವುಗಳಿಗೆ ಜೀವನದಾತೃವೂ ಆಗಿದ್ದಾನೆ. ಅಂತಹ ಪ್ರಭುವಿಗೆ ನಾನು ಶರಣು ಹೊಂದುತ್ತೇನೆ.॥ ೧೬ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿದ್ರಾಜನೇ! ಒಮ್ಮೆ ಸ್ವಾಯಂಭುವಮನುವು ಏಕಾಗ್ರತೆಯಿಂದ ಈ ಮಂತ್ರಮಯ ಉಪನಿಷತ್ ಸ್ವರೂಪವಾದ ಶ್ರುತಿಯನ್ನು ಪಾರಾಯಣೆ ಮಾಡುತ್ತಾ ಸಮಾಧಿಯಲ್ಲಿ ಇದ್ದುದನ್ನು ಕಂಡು ಅಸುರರೂ ಮತ್ತು ರಾಕ್ಷಸರು ಅವನನ್ನು ತಿಂದುಹಾಕುವುದಕ್ಕಾಗಿ ಆಕ್ರಮಿಸಿದರು. ॥ ೧೭ ॥ ಇದನ್ನು ನೋಡಿದ ಅಂತರ್ಯಾಮಿ ಭಗವಾನ್ ಯಜ್ಞಪುರುಷನು ತನ್ನ ಪುತ್ರರಾದ ಯಾಮನೆಂಬ ದೇವತೆಗಳೊಂದಿಗೆ ಅಲ್ಲಿಗೆ ಆಗಮಿಸಿದನು. ಅವನು ತಿಂದುಹಾಕಲು ಹವಣಿಸುತ್ತಿರುವ ಅಸುರರನ್ನು ಸಂಹರಿಸಿದನು. ಮತ್ತೆ ಅವನು ಇಂದ್ರಪದದಲ್ಲಿ ನೆಲೆಗೊಂಡು ಸ್ವರ್ಗವನ್ನು ಆಳತೊಡಗಿದನು. ॥ ೧೮ ॥

ಪರೀಕ್ಷಿತನೇ! ಸ್ವಾರೋಚಿಷನೆಂಬುವನು ಎರಡನೆಯ ಮನುವು. ಅವನು ಅಗ್ನಿಯ ಪುತ್ರನಾಗಿದ್ದನು. ಅವನಿಗೆ ದ್ಯುಮಾನ್, ಸುಷೇಣ ಮತ್ತು ರೋಚಿಷ್ಮಾನ್ ಮುಂತಾದ ಪುತ್ರರಿದ್ದರು. ॥ ೧೯ ॥ ■ ಮನ್ವಂತರದಲ್ಲಿ ರೋಚನನೆಂಬ ಇಂದ್ರನು ಇದ್ದನು. ತುಷಿತ ಮುಂತಾದ ದೇವತಾಗಣವು ಪ್ರಧಾನರಾಗಿದ್ದರು. ಊರ್ಜಸ್ತಂಭ ಮುಂತಾದವರು ವೇದವಾದಿಗಳಾದ ಸಪ್ತರ್ಷಿಗಳಾಗಿದ್ದರು. ॥ ೨೦ ॥ ■ ಮನ್ವಂತರದಲ್ಲಿ ವೇದಶಿರಾ ಎಂಬ ಋಷಿಯ ಪತ್ನಿ ತುಷಿತೆ ಎಂಬುವಳಾಗಿದ್ದಳು. ಅವಳ ಗರ್ಭದಲ್ಲಿ ಭಗವಂತನು ಅವತರಿಸಿ ವಿಭು ಎಂಬ ನಾಮದಿಂದ ಪ್ರಸಿದ್ಧನಾದನು. ॥ ೨೧ ॥ ಅವನು ನೈಷ್ಠಿಕ ಬ್ರಹ್ಮಚಾರಿಯಾಗಿದ್ದನು. ಅವನ ಆಚರಣೆಯಿಂದಲೇ ಶಿಕ್ಷಣಪಡೆದು ಎಂಭತ್ತೆಂಟುಸಾವಿರ ಮಂದಿ ವ್ರತನಿಷ್ಠ ಋಷಿಗಳೂ ಬ್ರಹ್ಮಚರ್ಯವನ್ನು ಪಾಲಿಸಿದರು. ॥ ೨೨ ॥

ಉತ್ತಮನೆಂಬುವನು ಮೂರನೆಯ ಮನುವಾಗಿದ್ದಾನೆ. ಅವನು ಪ್ರಿಯವ್ರತನ ಪುತ್ರನಾಗಿದ್ದನು. ಅವನಿಗೆ ಪವನ, ಸೃಂಜಯ, ಯಜ್ಞಹೋತ್ರ ಮುಂತಾದ ಪುತ್ರರಿದ್ದರು. ॥ ೨೩ ॥ ಆ ಮನ್ವಂತರದಲ್ಲಿ ವಸಿಷ್ಠನ ಪುತ್ರರಾದ ಪ್ರಮದರೇ ಮುಂತಾದ ಏಳುಮಂದಿ ಸಪ್ತರ್ಷಿಗಳಾಗಿದ್ದರು. ಸತ್ಯ, ವೇದಶ್ರುತ ಮತ್ತು ಭದ್ರ ಎಂಬ ದೇವತೆಗಳ ಗಣಗಳು ಮುಖ್ಯರಾಗಿದ್ದರು ಹಾಗೂ ಸತ್ಯಜಿತ್‌ನೆಂಬ ಇಂದ್ರನಿದ್ದನು. ॥ ೨೪ ॥ ಆಗ ಧರ್ಮನ ಪತ್ನಿಯಾದ ಸೂನೃತಾದೇವಿಯಲ್ಲಿ ಭಗವಾನ್ ಪುರುಷೋತ್ತಮನು ಸತ್ಯಸೇನ ಎಂಬ ಹೆಸರಿನಿಂದ ಅವತರಿಸಿದ್ದನು. ಅವನೊಂದಿಗೆ ಸತ್ಯವ್ರತರೆಂಬ ದೇವಗಣಗಳೂ ಇದ್ದವು. ॥ ೨೫ ॥ ಆ ಸಮಯದ ಸತ್ಯಜಿತ ಇಂದ್ರನ ಸಖನಾಗಿ ಭಗವಂತನು ಅಸತ್ಯಪರಾಯಣರೂ, ದುಃಶೀಲರೂ, ದುಷ್ಟರೂ ಆದ ಯಕ್ಷ-ರಾಕ್ಷಸರನ್ನು ಮತ್ತು ಜೀವಿಗಳ ದ್ರೋಹಿಗಳಾದ ಭೂತಗಣಗಳನ್ನು ಸಂಹಾರಮಾಡಿದನು. ॥ ೨೬ ॥

ತಾಮಸ ಮನುವೇ ನಾಲ್ಕನೆಯವನು. ಈತನು ಮೂರನೆಯ ಮನು ಉತ್ತಮನ ಸ್ವಂತ ಸೋದರನು. ಇವನಿಗೆ ಪೃಥು, ಖ್ಯಾತಿ,

ಚತುರ್ಥ ಉತ್ತಮಭ್ರಾತಾ ಮನುರ್ನಾಮ್ನಾ ಚ ತಾಮಸಃ ।
ಪೃಥುಃ ಖ್ಯಾತಿರ್ನರಃ ಕೇತುರಿತ್ಯಾದ್ಯಾ ದಶ ತತ್ಸುತಾಃ ॥ ೨೭ ॥

ಸತ್ಯಕಾ ಹರಯೋ ವೀರಾ ದೇವಾಸ್ತ್ರಿಶಿಖ ಈಶ್ವರಃ ।
ಜ್ಯೋತಿರ್ಧಾಮಾದಯಃ ಸಪ್ತ ಋಷಯಸ್ತಾಮಸೇಽಂತರೇ ॥ ೨೮ ॥

ದೇವಾ ವೈಧೃತಯೋ ನಾಮ ವಿಧೃತೇಸ್ತನಯಾ ನೃಪ ।
ನಷ್ಟಾಃ ಕಾಲೇನ ಯೈರ್ವೇದಾ ವಿಧೃತಾಃ ಸ್ವೇನ ತೇಜಸಾ ॥ ೨೯ ॥

ತತ್ರಾಪಿ ಜಜ್ಞೇ ಭಗವಾನ್ಹರಿಣ್ಯಾಂ ಹರಿಮೇಧಸಃ ।
ಹರಿರಿತ್ಯಾಹೃತೋ ಯೇನ ಗಜೇಂದ್ರೋ ಮೋಚಿತೋ ಗ್ರಹಾತ್ ॥ ೩೦ ॥

ರಾಜೋವಾಚ

ಬಾದರಾಯಣ ಏತತ್ತೇ ಶ್ರೋತುಮಿಚ್ಛಾಮಹೇ ವಯಮ್ ।
ಹರಿರ್ಯಥಾ ಗಜಪತಿಂ ಗ್ರಾಹಗ್ರಸ್ತಮಮೂಮುಚತ್ ॥ ೩೧ ॥

ತತ್ಕಥಾಸು ಮಹತ್ಪುಣ್ಯಂ ಧನ್ಯಂ ಸ್ವಸ್ತ್ಯಯನಂ ಶುಭಮ್ ।
ಯತ್ರ ಯತ್ರೋತ್ತಮಶ್ಲೋಕೋ ಭಗವಾನ್ಗೀಯತೇ ಹರಿಃ ॥ ೩೨ ॥

ಸೂತ ಉವಾಚ

ಪರೀಕ್ಷಿತೈವಂ ಸ ತು ಬಾದರಾಯಣಿಃ
ಪ್ರಾಯೋಪವಿಷ್ಟೇನ ಕಥಾಸು ಚೋದಿತಃ ।
ಉವಾಚ ವಿಪ್ರಾಃ ಪ್ರತಿನಂದ್ಯ ಪಾರ್ಥಿವಂ
ಮುದಾ ಮುನೀನಾಂ ಸದಸಿ ಸ್ಮ ಶೃಣ್ವತಾಮ್ ॥ ೩೩ ॥

ನರ, ಕೇತು ಮುಂತಾದ ಹತ್ತು ಪುತ್ರರಿದ್ದರು. ॥ ೨೭ ॥ ಸತ್ಯಕ, ಹರಿ ಮತ್ತು ವೀರರೆಂಬ ದೇವತೆಗಳ ಪ್ರಧಾನಗಣಗಳಿದ್ದವು. ಇಂದ್ರನ ಹೆಸರು ತ್ರಿಶಿಖ ಎಂದಿತ್ತು. ಆ ಮನ್ವಂತರದಲ್ಲಿ ಜ್ಯೋತಿರ್ಧಾಮರೆಂಬ ಸಪ್ತರ್ಷಿಗಳಿದ್ದರು. ॥ ೨೮ ॥ ಪರೀಕ್ಷಿತನೇ! ಆ ತಾಮಸವೆಂಬ ಮನ್ವಂತರದಲ್ಲಿ ವಿಧೃತಿಯ ಪುತ್ರ, ವೈಧೃತಿ ಎಂಬ ಇತರ ಇನ್ನೂ ಕೆಲವರು ದೇವತೆಗಳಾದರು. ಇವರು ಕಾಲಗತಿಯಿಂದ ನಷ್ಟಪ್ರಾಯವಾದ ವೇದಗಳನ್ನು ತಮ್ಮ ಶಕ್ತಿಯಿಂದ ಕಾಪಾಡಿದ್ದರು. ಅದಕ್ಕಾಗಿ ಇವರು ವೈಧೃತಿ ಎನಿಸಿದರು. ॥ ೨೯ ॥ ಈ ಮನ್ವಂತರದಲ್ಲಿ ಹರಿಮೇಧಾ ಋಷಿಯ ಹರಿಣಿ ಎಂಬ ಹೆಸರಿನ ಪತ್ನಿಯಲ್ಲಿ ಹರಿಯಾಗಿ ಭಗವಂತನು ಅವತರಿಸಿದನು. ಇದೇ ಮನ್ವಂತರದಲ್ಲಿ ಅವನು ಗಜೇಂದ್ರನನ್ನು ಮೊಸಳೆಯಿಂದ ರಕ್ಷಿಸಿದ್ದನು. ॥ ೩೦ ॥

ಪರೀಕ್ಷಿದ್ರಾಜನು ಕೇಳಿದನು – ಮುನಿವರ್ಯರೇ! ಭಗವಂತನು ಮೊಸಳೆಯ ಹಿಡಿತದಿಂದ ಗಜೇಂದ್ರನನ್ನು ಹೇಗೆ ಕಾಪಾಡಿದನು? ಇದನ್ನು ನಿಮ್ಮಿಂದ ಕೇಳಲು ನಾವು ಬಯಸುತ್ತೇವೆ. ॥ ೩೧ ॥ ಎಲ್ಲ ಕಥೆಗಳಲ್ಲಿ ಮಹಾತ್ಮರ ಮೂಲಕ ಹಾಡಲ್ಪಟ್ಟ ಭಗವಾನ್ ಶ್ರೀಹರಿಯ ಪವಿತ್ರಕೀರ್ತಿಯ ವರ್ಣನೆಗಳೇ ಪರಮ ಪುಣ್ಯಮಯವೂ, ಪ್ರಶಂಸನೀಯವೂ, ಮಂಗಳಕರವೂ, ಶುಭವೂ ಆಗಿವೆ. ॥ ೩೨ ॥

ಸೂತಪುರಾಣಿಕರು ಹೇಳುತ್ತಾರೆ – ಶೌನಕಾದಿ ಋಷಿಗಳೇ! ಪರೀಕ್ಷಿದ್ರಾಜನು ಆಮರಣ ಉಪವಾಸಕ್ಕಾಗಿ ಕುಳಿತಿದ್ದನಲ್ಲ, ಅವನು ಶ್ರೀಶುಕಮಹಾಮುನಿಗಳನ್ನು ಹೀಗೆ ಕಥೆಹೇಳಲು ಪ್ರೇರೇಪಿಸಿದಾಗ ಅವರು ತುಂಬಾ ಆನಂದಿತರಾಗಿ, ಪ್ರೇಮದಿಂದ ರಾಜನನ್ನು ಅಭಿನಂದಿಸಿ ಮುನಿಗಳ ಆ ತುಂಬಿದ ಸಭೆಯಲ್ಲಿ ಹೀಗೆ ಹೇಳತೊಡಗಿದರು. ॥ ೩೩ ॥

ಮೊದಲನೆಯ ಅಧ್ಯಾಯವು ಮುಗಿಯಿತು. ॥ ೧ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಅಷ್ಟಮ ಸ್ಕಂಧೇ ಮನ್ವಂತರಾನುವರ್ಣನೇ ಪ್ರಥಮೋಽಧ್ಯಾಯಃ ॥ ೧ ॥

ಎರಡನೆಯ ಅಧ್ಯಾಯ

ಗಜೇಂದ್ರನು ಮೊಸಳೆಯ ಹಿಡಿತಕ್ಕೆ ಸಿಕ್ಕಿಹಾಕಿಕೊಳ್ಳುವುದು

ಶ್ರೀಶುಕ ಉವಾಚ

ಆಸೀದ್ಗಿರಿವರೋ ರಾಜನ್‌ಸ್ತ್ರಿಕೂಟ ಇತಿ ವಿಶ್ರುತಃ ।
ಕ್ಷೀರೋದೇನಾವೃತಃ ಶ್ರೀಮಾನ್ಯೋಜನಾಯುತಮುಚ್ಛ್ರಿತಃ ॥ ೧ ॥

ತಾವತಾ ವಿಸ್ತೃತಃ ಪರ್ಯಕ್ತ್ರಿಭಿಃ ಶೃಂಗೈಃ ಪಯೋನಿಧಿಮ್ ।
ದಿಶಃ ಖಂ ರೋಚಯನ್ನಾಸ್ತೇ ರೌಪ್ಯಾಯಸಹಿರಣ್ಮಯೈಃ ॥ ೨ ॥

ಶ್ರೀಶುಕಮಹಾಮುನಿಗಳು ಹೇಳಿದರು – ಪರೀಕ್ಷಿದ್ರಾಜನೇ! ಕ್ಷೀರಸಾಗರದಿಂದ ಆವೃತವಾದ ತ್ರಿಕೂಟವೆಂಬ ಪ್ರಸಿದ್ಧವಾದ ಸುಂದರವಾದ ಹಾಗೂ ಶ್ರೇಷ್ಠವಾದ ಒಂದು ಪರ್ವತವಿತ್ತು. ಅದು ಹತ್ತುಸಾವಿರ ಯೋಜನ ಎತ್ತರವಾಗಿತ್ತು. ॥ ೧ ॥ ಅದರ ಉದ್ದ-ಅಗಲವೂ ಸುತ್ತಲೂ ಅಷ್ಟೇ ಇತ್ತು. ಅದರ ಬೆಳ್ಳಿ, ಕಬ್ಬಿಣ ಮತ್ತು ಚಿನ್ನದ ಮೂರು ಶಿಖರಗಳ ಕಾಂತಿಯಿಂದ ಸಮುದ್ರ, ದಿಕ್ಕುಗಳು ಮತ್ತು ಆಕಾಶವು ಝಗ-ಝಗಿಸುತ್ತಿದ್ದವು. ॥ ೨ ॥

ಅನ್ಯೈಶ್ಚ ಕಕುಭಃ ಸರ್ವಾ
ರತ್ನಧಾತುವಿಚಿತ್ರಿತೈಃ ।
ನಾನಾದ್ರುಮಲತಾಗುಲ್ಮೈರ್ನಿರ್ಘೋಷೈ-
ರ್ನಿರ್ಝರಾಂಭಸಾಮ್ ॥ ೩ ॥

ಸ ಚಾವನಿಜ್ಯಮಾನಾಂಘ್ರಿಃ ಸಮಂತಾತ್ಪಯಊರ್ಮಿಭಿಃ ।
ಕರೋತಿ ಶ್ಯಾಮಲಾಂ ಭೂಮಿಂ ಹರಿನ್ಮರಕತಾಶ್ಮಭಿಃ ॥ ೪ ॥

ಸಿದ್ಧಚಾರಣಗಂಧರ್ವವಿದ್ಯಾಧರಮಹೋರಗೈಃ ।
ಕಿನ್ನರೈರಪ್ಸರೋಭಿಶ್ಚ ಕ್ರೀಡದ್ಭಿರ್ಜುಷ್ಟಕಂದರಃ ॥ ೫ ॥

ಯತ್ರ ಸಂಗೀತಸನ್ನಾದೈರ್ನದದ್ಗುಹಮಮರ್ಷಯಾ ।
ಅಭಿಗರ್ಜಂತಿ ಹರಯಃ ಶ್ಲಾಘಿನಃ ಪರಶಂಕಯಾ ॥ ೬ ॥

ನಾನಾರಣ್ಯಪಶುವ್ರಾತಸಂಕುಲದ್ರೋಣ್ಯಲಂಕೃತಃ ।
ಚಿತ್ರದ್ರುಮಸುರೋದ್ಯಾನಕಲಕಂಠವಿಹಂಗಮಃ ॥ ೭ ॥

ಸರಿತ್ಸರೋಭಿರಚ್ಛೋದೈಃ ಪುಲಿನೈರ್ಮಣಿವಾಲುಕೈಃ ।
ದೇವಸ್ತ್ರೀಮಜ್ಜನಾಮೋದಸೌರಭಾಂಬ್ವನಿಲೈರ್ಯುತಃ ॥ ೮ ॥

ತಸ್ಯ ದ್ರೋಣ್ಯಾಂ ಭಗವತೋ ವರುಣಸ್ಯ ಮಹಾತ್ಮನಃ ।
ಉದ್ಯಾನಮೃತುಮನ್ನಾಮ ಆಕ್ರೀಡಂ ಸುರಯೋಷಿತಾಮ್ ॥ ೯ ॥

ಸರ್ವತೋಽಲಂಕೃತಂ ದಿವ್ಯೈರ್ನಿತ್ಯಂ ಪುಷ್ಪಫಲದ್ರುಮೈಃ ।
ಮಂದಾರೈಃ ಪಾರಿಜಾತೈಶ್ಚ ಪಾಟಲಾಶೋಕಚಂಪಕೈಃ ॥ ೧೦ ॥

ಚೂತೈಃ ಪ್ರಿಯಾಲೈಃ ಪನಸೈರಾಮ್ರೈರಾಮ್ರಾತಕೈರಪಿ ।
ಕ್ರಮುಕೈರ್ನಾರಿಕೇಲೈಶ್ಚ ಖರ್ಜೂರೈರ್ಬೀಜಪೂರಕೈಃ ॥ ೧೧ ॥

ಮಧೂಕೈಃ ಶಾಲತಾಲೈಶ್ಚ ತಮಾಲೈರಸನಾರ್ಜುನೈಃ ।
ಅರಿಷ್ಟೋದುಂಬರಪ್ಲಕ್ಷೈರ್ವಟೈಃ ಕಿಂಶುಕಚಂದನೈಃ ॥ ೧೨ ॥

ಪಿಚುಮಂದೈಃ ಕೋವಿದಾರೈಃ ಸರಲೈಃ ಸುರದಾರುಭಿಃ ।
ದ್ರಾಕ್ಷೇಕ್ಷುರಂಭಾಜಂಬೂಭಿರ್ಬದರ್ಯಕ್ಷಾಭಯಾಮಲೈಃ ॥ ೧೩ ॥

ಬಿಲ್ವೈಃ ಕಪಿತ್ಥೈರ್ಜಂಬೀರೈರ್ವೃತೋ ಭಲ್ಲಾತಕಾದಿಭಿಃ ।
ತಸ್ಮಿನ್ಸರಃ ಸುವಿಪುಲಂ ಲಸತ್ಕಾಂಚನಪಂಕಜಮ್ ॥ ೧೪ ॥

ಇವಲ್ಲದೆ ಇನ್ನೂ ಅನೇಕ ಶಿಖರಗಳು ರತ್ನಗಳ ಮತ್ತು ಧಾತುಗಳ ಬಣ್ಣ-ಬಣ್ಣದ ಪ್ರಭೆಯನ್ನು ಪಸರಿಸುತ್ತಾ ಎಲ್ಲ ದಿಕ್ಕುಗಳನ್ನು ಬೆಳಗುತ್ತಿದ್ದವು. ಅವುಗಳಲ್ಲಿ ವಿವಿಧ ಜಾತಿಯ ಲತಾ-ವೃಕ್ಷಗಳು ಮತ್ತು ಪೊದೆಗಳಿದ್ದವು. ಜಳ-ಜಳನೆ ಹರಿಯುತ್ತಿದ್ದ ನದಿಗಳು, ಜಲಪಾತದ ಗಂಭೀರಧ್ವನಿಯು ಎಲ್ಲೆಡೆ ಕೇಳಿಬರುತ್ತಿದ್ದವು. ॥ ೩ ॥ ಸುತ್ತಲಿಂದಲೂ ಕ್ಷೀರಸಾಗರದ ಅಲೆಗಳು ಬಂದು ಅಪ್ಪಳಿಸುವಾಗ ಅವು ಪರ್ವತರಾಜನ ಕಾಲುಗಳನ್ನು ತೊಳೆಯುತ್ತಿವೆಯೋ ಎಂದು ಅನಿಸುತ್ತಿತ್ತು. ಆ ಪರ್ವತದ ಇಂದ್ರನೀಲಮಣಿಗಳಿಂದಲೂ, ಪಚ್ಚೆಯ ಕಲ್ಲುಗಳಿಂದ ಎಲ್ಲೆಡೆ ಹಸಿರಾದ ಗರಿಕೆಯೇ ತುಂಬಿರುವಂತೆ ಶ್ಯಾಮಲ ಭೂಮಿಯು ಕಂಗೊಳಿಸುತ್ತಿತ್ತು. ॥ ೪ ॥ ಅದರ ಗುಹೆಗಳಲ್ಲಿ ಸಿದ್ಧರೂ, ಚಾರಣರೂ, ಗಂಧರ್ವರೂ, ವಿದ್ಯಾಧರರೂ, ನಾಗರೂ, ಕಿನ್ನರರೂ, ಅಪ್ಸರೆಯರು ಮುಂತಾದವರೆಲ್ಲರೂ ವಿಹರಿಸಲು ಸಾಮಾನ್ಯವಾಗಿ ನೆರೆಯುತ್ತಿದ್ದರು. ॥ ೫ ॥ ಅಲ್ಲಿನ ಸಂಗೀತ ಧ್ವನಿಯು ಗುಹೆಯೊಳಗೆ ಪ್ರತಿಧ್ವನಿಸುತ್ತಿದ್ದಾಗ ಅದನ್ನು ಕೇಳಿದ ಸಿಂಹಗಳು ಅದು ಬೇರೆ ಸಿಂಹದ ಗರ್ಜನೆಯೆಂದು ಭ್ರಮಿಸಿ ಅದನ್ನು ಸಹಿಸಲಾರದೆ ಪ್ರತಿಗರ್ಜನೆ ಮಾಡುತ್ತಿದ್ದವು. ॥ ೬ ॥

ಆ ಪರ್ವತದ ತಪ್ಪಲು ಪ್ರದೇಶಗಳು ಬಗೆ-ಬಗೆಯ ಕಾಡುಮೃಗಗಳ ಹಿಂಡುಗಳಿಂದ ಅಲಂಕೃತವಾಗಿತ್ತು. ಅನೇಕ ಪ್ರಕಾರದ ವೃಕ್ಷಗಳಿಂದ ತುಂಬಿದ ದೇವತೋದ್ಯಾನಗಳಲ್ಲಿ ಸುಂದರವಾದ ಪಕ್ಷಿಗಳು ಮಧುರವಾಗಿ ಧ್ವನಿಮಾಡುತ್ತಿದ್ದವು. ॥ ೭ ॥ ಅದರಲ್ಲಿ ಅನೇಕ ನದಿಗಳೂ, ಸರೋವರಗಳೂ ನಿರ್ಮಲವಾದ ನೀರಿನಲ್ಲಿ ತುಂಬಿ ಹರಿಯುತ್ತಿದ್ದವು. ಅವುಗಳ ದಡಗಳಲ್ಲಿ ಮಣಿಮಯ ಮಳಲು ಹೊಳೆಯುತ್ತಿತ್ತು. ದೇವಾಂಗನೆಯರು ನದಿ-ಸರೋವರಗಳಲ್ಲಿ ಸ್ನಾನಮಾಡುತ್ತಿದ್ದುದರಿಂದ ಅವುಗಳ ನೀರು ಅತ್ಯಂತ ಸುಗಂಧಿತವಾಗಿತ್ತು. ಅದರ ಸುವಾಸನೆಯನ್ನು ಹೊತ್ತ ತಂಗಾಳಿಯು ಅಲ್ಲಿ ಬೀಸುತ್ತಿತ್ತು. ॥ ೮ ॥

ಪರ್ವತರಾಜ ತ್ರಿಕೂಟದ ತಪ್ಪಲಿನಲ್ಲಿ ಭಗವತ್ಪ್ರೇಮಿ ಮಹಾತ್ಮಾ ಭಗವಾನ್ ವರುಣನ ಒಂದು ಉದ್ಯಾನವನವಿತ್ತು. ಋತುಮಾನ್ ಎಂದು ಪ್ರಸಿದ್ಧವಾದ ಆ ಉದ್ಯಾನವನದಲ್ಲಿ ದೇವಾಂಗನೆಯರು ಕ್ರೀಡಿಸುತ್ತಿದ್ದರು. ॥ ೯ ॥ ಅದರ ಎಲ್ಲ ಕಡೆಗಳಲ್ಲಿಯೂ ಸದಾ ಹೂವು-ಹಣ್ಣುಗಳಿಂದ ತುಂಬಿ ಕಳಕಳಿಸುತ್ತಿದ್ದ ದಿವ್ಯ ವೃಕ್ಷಗಳು ಶೋಭಿಸುತ್ತಿದ್ದವು. ಮಂದಾರ, ಪಾರಿಜಾತ, ಪಾಟಲ, ಅಶೋಕ, ಸಂಪಿಗೆ, ಬಗೆ-ಬಗೆಯ ಹೂವುಗಳು, ಅಮಟೆ, ಮೊರಟೆ, ಮಾವು, ಹಲಸು, ಅಡಿಕೆ, ತೆಂಗು, ಖರ್ಜೂರ, ಮಾದಳ, ಹಿಪ್ಪೆ, ಸಾಲ, ತಾಳೆ, ಹೊಂಗೆ, ಹೊನ್ನೆಮರ, ಕೆಂಪುಮತ್ತಿಮರ, ಅತ್ತಿಮರ, ಬಸರಿಮರ, ಆಲದಮರ, ಮುಳ್ಳುಮುತ್ತುಗ, ಶ್ರೀಗಂಧದ ಮರ, ಬೇವಿನಮರ, ಕೆಂಗಾಂಚಾಲ, ಸರಳ, ದೇವದಾರು, ದ್ರಾಕ್ಷಿ, ಕಬ್ಬು, ಬಾಳೆ, ನೇರಳೆ, ಎಲಚೀಮರ, ತಾಳೆಯಮರ, ರುದ್ರಾಕ್ಷಿಮರ, ಅಳಲೇಮರ, ನೆಲ್ಲಿ, ಬಿಲ್ವಪತ್ರೆ, ಬೇಲ, ನಿಂಬೆ, ಗೇರು ಮುಂತಾದ ಮರಗಳು ಸುತ್ತಲೂ ಕಳಕಳಿಸುತ್ತಿದ್ದವು. ■ ಉದ್ಯಾನವನದಲ್ಲಿ ಒಂದು ಸುಂದರವಾದ ಮತ್ತು ವಿಸ್ತಾರವಾದ ಸರೋವರವು ಕಂಗೊಳಿಸುತ್ತಿತ್ತು. ಅದರಲ್ಲಿ ಚಿನ್ನದ ಬಣ್ಣದ ಕಮಲಗಳು ಅರಳಿ ಶೋಭಿಸುತ್ತಿದ್ದವು. ॥ ೧೦-೧೪ ॥ ಹಾಗೆಯೇ

ಕುಮುದೋತ್ಪಲಕಲ್ಹಾರಶತಪತ್ರಶ್ರಿಯೋರ್ಜಿತಮ್ ।
ಮತ್ತಷಟ್ಪದನಿರ್ಘುಷ್ಟಂ ಶಕುಂತೈಶ್ಚ ಕಲಸ್ವನೈಃ ॥ ೧೫ ॥

ಹಂಸಕಾರಂಡವಾಕೀರ್ಣಂ ಚಕ್ರಾಹ್ವೈಃ ಸಾರಸೈರಪಿ ।
ಜಲಕುಕ್ಕುಟಕೋಯಷ್ಟಿದಾತ್ಯೂಹಕುಲಕೂಜಿತಮ್ ॥ ೧೬ ॥

ಮತ್ಸ್ಯಕಚ್ಛಪಸಂಚಾರಚಲತ್ಪದ್ಮರಜಃಪಯಃ ।
ಕದಂಬವೇತಸನಲನೀಪವಂಜುಲಕೈರ್ವೃತಮ್ ॥ ೧೭ ॥

ಕುಂದೈಃ ಕುರಬಕಾಶೋಕೈಃ ಶಿರೀಷೈಃ ಕುಟಜೇಂಗುದೈಃ ।
ಕುಬ್ಜಕೈಃ ಸ್ವರ್ಣಯೂಥೀಭಿರ್ನಾಗಪುನ್ನಾಗಜಾತಿಭಿಃ ॥ ೧೮ ॥

ಮಲ್ಲಿಕಾಶತಪತ್ರೈಶ್ಚ ಮಾಧವೀಜಾಲಕಾದಿಭಿಃ ।
ಶೋಭಿತಂ ತೀರಜೈಶ್ಚಾನ್ಯೈರ್ನಿತ್ಯರ್ತುಫಲೈರಲಂ ದ್ರುಮೈಃ ॥ ೧೯ ॥

ತತ್ರೈಕದಾ ತದ್ಗಿರಿಕಾನನಾಶ್ರಯಃ
ಕರೇಣುಭಿರ್ವಾರಣಯೂಥಪಶ್ಚರನ್ ।
ಸಕಂಟಕಾನ್ಕೀಚಕವೇಣುವೇತ್ರವದ್
ವಿಶಾಲಗುಲ್ಮಂ ಪ್ರರುಜನ್ವನಸ್ಪತೀನ್ ॥ ೨೦ ॥

ಯದ್ಗಂಧಮಾತ್ರಾದ್ಧರಯೋ ಗಜೇಂದ್ರಾ
ವ್ಯಾಘ್ರಾದಯೋ ವ್ಯಾಲಮೃಗಾಃ ಸಖಡ್ಗಾಃ ।
ಮಹೋರಗಾಶ್ಚಾಪಿ ಭಯಾದ್ದ್ರವಂತಿ
ಸಗೌರಕೃಷ್ಣಾಃ ಶರಭಾಶ್ಚಮರ್ಯಃ ॥ ೨೧ ॥

ವೃಕಾ ವರಾಹಾ ಮಹಿಷರ್ಕ್ಷಶಲ್ಯಾ
ಗೋಪುಚ್ಛಸಾಲಾವೃಕಮರ್ಕಟಾಶ್ಚ ।
ಅನ್ಯತ್ರ ಕ್ಷುದ್ರಾ ಹರಿಣಾಃ ಶಶಾದಯ-
ಶ್ಚರಂತ್ಯಭೀತಾ ಯದನುಗ್ರಹೇಣ ॥ ೨೨ ॥

ಸ ಘರ್ಮತಪ್ತಃ ಕರಿಭಿಃ ಕರೇಣುಭಿ-
ರ್ವೃತೋ ಮದಚ್ಯುತ್ಕಲಭೈರನುದ್ರುತಃ ।
ಗಿರಿಂ ಗರಿಮ್ಣಾ ಪರಿತಃ ಪ್ರಕಂಪಯನ್
ನಿಷೇವ್ಯಮಾಣೋಽಲಿಕುಲೈರ್ಮದಾಶನೈಃ ॥ ೨೩ ॥

ಸರೋಽನಿಲಂ ಪಂಕಜರೇಣುರೂಷಿತಂ
ಜಿಘ್ರನ್ವಿದೂರಾನ್ಮದವಿಹ್ವಲೇಕ್ಷಣಃ ।
ವೃತಃ ಸ್ವಯೂಥೇನ ತೃಷಾರ್ದಿತೇನ ತತ್
ಸರೋವರಾಭ್ಯಾಶಮಥಾಗಮದ್ದ್ರುತಮ್ ॥ ೨೪ ॥

ಬೇರೆ-ಬೇರೆ ಜಾತಿಯ ಕುಮುದ, ಉತ್ಪಲ, ಕಲ್ಹಾರ, ಶತದಲ ಮುಂತಾದ ಕಮಲಗಳ ಕಾಂತಿಯು ಹರಡಿತ್ತು. ಮತ್ತೇರಿದ ದುಂಬಿಗಳು ಝೇಂಕರಿಸುತ್ತಿದ್ದವು. ಮನೋಹರ ಪಕ್ಷಿಗಳ ಕೂಜನವು ಎಲ್ಲೆಡೆ ಕೇಳಬರುತ್ತಿತ್ತು. ಹಂಸ, ನೀರುಹಕ್ಕಿ, ಚಕ್ರವಾಕ, ತಾವರೆಹಕ್ಕಿ, ನೀರುಕೋಳಿ, ಕೋಯಷ್ಟಿ, ನೀರುಕಾಗೆ ಮುಂತಾದವುಗಳು ಇಂಪಾಗಿ ಕಲ-ಕಲ ಧ್ವನಿಮಾಡುತ್ತಿದ್ದವು. ಮೀನು, ಆಮೆ ಮುಂತಾದ ಜಲಚರಪ್ರಾಣಿಗಳು ಓಡಾಡುವಾಗ ತಾವರೆಹೂಗಳು ಅಲುಗಾಡುತ್ತಾ ನೀರಿನಲ್ಲಿ ಪರಾಗವನ್ನು ಚೆಲ್ಲುತ್ತಿದ್ದವು. ಈಚಲ, ಬೆತ್ತ, ಜೊಂಡುಗಳು, ನೀರುಹಾರಂಜೀಮರ, ಹಬ್ಬೊಡ ಮುಂತಾದವು ಅದರ ಸುತ್ತಲೂ ಕಂಗೊಳಿಸುತ್ತಿದ್ದವು. ॥ ೧೫-೧೭॥ ಮಾಘದ ಮೊಲ್ಲೆ, ಮುಳ್ಳುಗೋರಂಟೆ, ಅಶೋಕವೃಕ್ಷ, ಬಾಗೆ, ಬೆಟ್ಟದಮಲ್ಲಿಗೆ ಹಿಪ್ಪೆ, ಕುಬ್ಜಕ, ಸ್ವರ್ಣಯೂಥಿ, ನಾಗ, ಪುನ್ನಾಗ, ಜಾಜಿ, ಮಲ್ಲಿಗೆ, ಮಾಧವೀ ಮುಂತಾದ ಹೂವುಗಳು ಎಲ್ಲ ಋತುಗಳಲ್ಲಿ ಅರಳಿ ತುಂಬಿದ ಸೊಂಪಾಗಿ ಹೂಮರಗಳಿಂದ ಆ ಸರೋವರವು ಶೋಭಾಯಮಾನವಾಗಿತ್ತು. ॥ ೧೮-೧೯ ॥

■ ಪರ್ವತದ ಘೋರಾರಣ್ಯದಲ್ಲಿ ಹಲವಾರು ಹೆಣ್ಣಾನೆಗಳೊಡನೆ ಒಂದು ಗಜೇಂದ್ರವು ವಾಸವಾಗಿತ್ತು. ಅದು ದೊಡ್ಡ-ದೊಡ್ಡ ಶಕ್ತಿಶಾಲಿ ಆನೆಗಳಿಗೆಲ್ಲ ನಾಯಕವಾಗಿತ್ತು. ಒಂದುದಿನ ಅದೇ ಪರ್ವತದಲ್ಲಿ ತನ್ನ ಸಂಗಾತಿಗಳಾದ ಹೆಣ್ಣಾನೆಗಳಿಂದ ಕೂಡಿಕೊಂಡು ಅರಣ್ಯದಲ್ಲಿದ್ದ ಮುಳ್ಳುಗಳಿಂದ ಕೂಡಿದ್ದ ಹೆಬ್ಬಿದಿರುಗಳನ್ನೂ, ಕಿರುಬಿದಿರುಗಳನ್ನೂ, ಬೆತ್ತಗಳನ್ನೂ, ದೊಡ್ಡ-ದೊಡ್ಡ ಪೊದರುಗಳನ್ನು ಧ್ವಂಸಮಾಡುತ್ತಾ ಸಂಚರಿಸುತ್ತಿತ್ತು. ॥ ೨೦ ॥ ಅದರ ವಾಸನೆಯಿಂದಲೇ ಸಿಂಹ-ಆನೆ-ಹುಲಿ-ಚಿರತೆ ಮುಂತಾದ ಹಿಂಸ್ರಪ್ರಾಣಿಗಳು, ಸರ್ಪಗಳು, ಖಡ್ಗಮೃಗಗಳು, ಗೌರಮೃಗಗಳು, ಕೃಷ್ಣಸಾರ, ಶರಭಗಳು, ಚಮರೀಮೃಗಗಳು ಇನ್ನೂ ಅನೇಕ ದುಷ್ಟಮೃಗಗಳು ಓಡಿಹೋಗುತ್ತಿದ್ದವು. ॥ ೨೧ ॥ ತೋಳಗಳು, ಕಾಡುಹಂದಿ, ಕಾಡುಕೋಣಗಳು, ಕರಡಿಗಳು, ಮುಳ್ಳುಹಂದಿಗಳು, ಗೋಪುಚ್ಛಗಳು, ನಾಯಿಗಳು, ಕೋತಿಗಳು, ಹುಲ್ಲೆಗಳು, ಮೊಲಗಳು, ಇವೇ ಮುಂತಾದ ದುರ್ಬಲ ಪ್ರಾಣಿಗಳು ಗಜರಾಜನ ಕೃಪೆಯಿಂದ ನಿರ್ಭಯವಾಗಿ ಸಂಚರಿಸುತ್ತಿದ್ದವು. ॥ ೨೨ ॥ ಗಜರಾಜನ ಹಿಂದೆ-ಹಿಂದೆ ಸಣ್ಣ-ಸಣ್ಣ ಆನೆಮರಿಗಳು ಓಡುತ್ತಿದ್ದವು. ದೊಡ್ಡ-ದೊಡ್ಡ ಗಂಡಾನೆಗಳೂ, ಹೆಣ್ಣಾನೆಗಳೂ, ಅವನನ್ನು ಸುತ್ತುವರಿದು ನಡೆಯುತ್ತಿದ್ದವು. ಅದರ ಭಾರವಾದ ಹೆಜ್ಜೆಗಳಿಂದ ಆ ಪರ್ವತವೇ ನಡುಗುತ್ತಿತ್ತು. ಅದರ ಗಂಡಸ್ಥಲದಿಂದ ಒಸರುತ್ತಿದ್ದ ಮದೋದಕವನ್ನು ಪಾನಮಾಡಲು ದುಂಬಿಗಳು ಜೊತೆ-ಜೊತೆಯಾಗಿಯೇ ಹಾರಾಡುತ್ತಿದ್ದವು. ಮದದಿಂದ ಅದರ ಕಣ್ಣುಗಳು ವಿಹ್ವಲವಾಗಿದ್ದುವು. ಬಿಸಿಲು ಭಾರೀ ಸುಡುತ್ತಿತ್ತು. ಆದರಿಂದ ಗಜರಾಜನು ವ್ಯಾಕುಲನಾಗಿದ್ದನು. ಅವನಿಗೆ ಮತ್ತು ಸಂಗಡಿಗರಿಗೆ ಬಾಯಾರಿಕೆ ಪೀಡಿಸುತ್ತಿತ್ತು. ಆಗ ದೂರದಿಂದಲೇ ಕಮಲ ಪರಾಗದಿಂದ ಸುವಾಸಿತವಾದ ವಾಯುವನ್ನು ಮೂಸುತ್ತಾ, ಶೀತಲವಾದ ಸುಗಂಧವನ್ನು ಹೊತ್ತುತರುತ್ತಿದ್ದ ವಾಯುವಿನ ಜಾಡನ್ನು ಹಿಡಿದು ಆ ಸರೋವರದ ಕಡೆಗೆ ಹೊರಟು, ವೇಗವಾಗಿ ನಡೆಯುತ್ತಾ ಸ್ವಲ್ಪದರಲ್ಲೇ ಆ ಸರೋವರದ ಬಳಿಗೆ ಬಂದನು.॥೨೩-೨೪॥

ವಿಗಾಹ್ಯ ತಸ್ಮಿನ್ನಮೃತಾಂಬು ನಿರ್ಮಲಂ
ಹೇಮಾರವಿಂದೋತ್ಪಲರೇಣುವಾಸಿತಮ್ ।
ಪಪೌ ನಿಕಾಮಂ ನಿಜಪುಷ್ಕರೋದ್ಧೃತ-
ಮಾತ್ಮಾನಮದ್ಭಿಃ ಸ್ನಪಯನ್ಗತಕ್ಲಮಃ ॥ ೨೫ ॥

ಸ್ವಪುಷ್ಕರೇಣೋದ್ಧೃತಶೀಕರಾಂಬುಭಿ-
ರ್ನಿಪಾಯಯನ್ಸಂಸ್ನಪಯನ್ಯಥಾ ಗೃಹೀ ।
ಘೃಣೀ ಕರೇಣೂಃ ಕಲಭಾಂಶ್ಚ ದುರ್ಮದೋ
ನಾಚಷ್ಟ ಕೃಚ್ಛ್ರಂ ಕೃಪಣೋಽಜಮಾಯಯಾ ॥ ೨೬ ॥

ತಂ ತತ್ರ ಕಶ್ಚಿನ್ನೃಪ ದೈವಚೋದಿತೋ-
ಗ್ರಾಹೋ ಬಲೀಯಾಂಶ್ಚರಣೇ ರುಷಾಗ್ರಹೀತ್ ।
ಯದೃಚ್ಛಯೈವಂ ವ್ಯಸನಂ ಗತೋ ಗಜೋ
ಯಥಾಬಲಂ ಸೋಽತಿಬಲೋ ವಿಚಕ್ರಮೇ ॥ ೨೭ ॥

ತಥಾಽಽತುರಂ ಯೂಥಪತಿಂ ಕರೇಣವೋ
ವಿಕೃಷ್ಯಮಾಣಂ ತರಸಾ ಬಲೀಯಸಾ ।
ವಿಚುಕ್ರುಶುರ್ದೀನಧಿಯೋಽಪರೇ ಗಜಾಃ
ಪಾರ್ಷ್ಣಿಗ್ರಹಾಸ್ತಾರಯಿತುಂ ನ ಚಾಶಕನ್ ॥ ೨೮ ॥

ನಿಯುಧ್ಯತೋರೇವಮಿಭೇಂದ್ರನಕ್ರಯೋ-
ರ್ವಿಕರ್ಷತೋರಂತರತೋ ಬಹಿರ್ಮಿಥಃ ।
ಸಮಾಃ ಸಹಸ್ರಂ ವ್ಯಗಮನ್ಮಹೀಪತೇ
ಸಪ್ರಾಣಯೋಶ್ಚಿತ್ರಮಮಂಸತಾಮರಾಃ ॥ ೨೯ ॥

ತತೋ ಗಜೇಂದ್ರಸ್ಯ ಮನೋಬಲೌಜಸಾಂ
ಕಾಲೇನ ದೀರ್ಘೇಣ ಮಹಾನಭೂದ್ವ್ಯಯಃ ।
ವಿಕೃಷ್ಯಮಾಣಸ್ಯ ಜಲೇಽವಸೀದತೋ
ವಿಪರ್ಯಯೋಽಭೂತ್ಸಕಲಂ ಜಲೌಕಸಃ ॥ ೩೦ ॥

ಆ ಸರೋವರದ ನೀರು ಅತ್ಯಂತ ನಿರ್ಮಲವೂ, ಅಮೃತದಂತೆಯೂ ಮಧುರವಾಗಿತ್ತು. ಚಿನ್ನದ ಕಮಲದ ಮತ್ತು ಕನ್ನೈದಿಲೆಯ ಪರಾಗದಿಂದ ಸುಗಂಧಿತವಾಗಿತ್ತು. ಗಜೇಂದ್ರನು ಮೊದಲಿಗೆ ಆ ಸರೋವರದಲ್ಲಿ ಇಳಿದು ತನ್ನ ಸೊಂಡಿಲಿನಿಂದ ನೀರನ್ನು ಎತ್ತಿ-ಎತ್ತಿ ಯಥೇಚ್ಛವಾಗಿ ಕುಡಿದನು. ಮತ್ತೆ ಆ ನೀರಿನಲ್ಲಿ ಸ್ನಾನಮಾಡಿ ತನ್ನ ದಣಿವನ್ನು ಇಂಗಿಸಿಕೊಂಡನು. ॥ ೨೫ ॥ ಗಜೇಂದ್ರನು ಗೃಹಸ್ಥ ಮನುಷ್ಯನಂತೆ ಮೋಹಗ್ರಸ್ತನಾಗಿ ತನ್ನ ಸೊಂಡಿಲಿನಿಂದ ನೀರನ್ನೆತ್ತಿ ಚೆಲ್ಲುತ್ತಾ ಸಂಗಡಿಗರಾದ ಹೆಣ್ಣಾನೆಗಳನ್ನು, ಮರಿಗಳನ್ನು ಸ್ನಾನಮಾಡಿಸತೊಡಗಿದನು. ಹಾಗೂ ಅವರ ಸೊಂಡಿಲಿನೊಳಗೆ ತನ್ನ ಸೊಂಡಿಲನ್ನು ಹಾಕಿ ನೀರು ಕುಡಿಸಿದನು. ಭಗವಂತನ ಮಾಯೆಯಿಂದ ಮೋಹಿತನಾದ ಗಜೇಂದ್ರನು ಉನ್ಮತ್ತನಾಗಿದ್ದನು. ನನ್ನ ತಲೆಯಮೇಲೆ ದೊಡ್ಡ ಆಪತ್ತು ತೂಂಗು ಹಾಕುತ್ತಿದೆ ಎಂಬುದೂ ಆ ಬಡಪಾಯಿಗೆ ತಿಳಿದಿರಲಿಲ್ಲ. ॥ ೨೬ ॥

ಪರೀಕ್ಷಿತನೇ! ಗಜೇಂದ್ರನು ಇಷ್ಟೊಂದು ಉನ್ಮತ್ತನಾಗಿದ್ದಾಗ ಪ್ರಾರಬ್ಧದ ಪ್ರೇರಣೆಯಿಂದ ಒಂದು ಬಲಿಷ್ಠವಾದ ಮೊಸಳೆಯು, ಆನೆಗಳ ತುಳಿತದಿಂದ ಕ್ರೋಧಗೊಂಡು ಗಜೇಂದ್ರನ ಕಾಲನ್ನು ಬಲವಾಗಿ ಹಿಡಿದುಬಿಟ್ಟಿತು. ಈ ವಿಧವಾಗಿ ಅಕಸ್ಮಾತ್ತಾಗಿ ವಿಪತ್ತಿಗೆ ಸಿಲುಕಿದ ಆ ಬಲಶಾಲಿಯಾದ ಗಜೇಂದ್ರನು ತನ್ನನ್ನು ಬಿಡಿಸಿಕೊಳ್ಳಲು ಬಹಳವಾಗಿ ಪ್ರಯತ್ನಿಸಿದನು. ಆದರೆ ಬಿಡಿಸಿಕೊಳ್ಳದಾದನು. ॥ ೨೭ ॥ ಬೇರೆ ಗಂಡಾನೆಗಳು, ಹೆಣ್ಣಾನೆಗಳು, ಮರಿಗಳು – ತಮ್ಮ ಒಡೆಯನನ್ನು ಬಲಿಷ್ಠವಾದ ಒಂದು ಮೊಸಳೆಯು ಹಿಡಿದು ವೇಗವಾಗಿ ಸೆಳೆಯುತ್ತಿದೆ ಮತ್ತು ಅವನು ಬಹಳ ಸಂಕಟಕ್ಕೊಳಗಾಗಿದ್ದಾನೆಂದು ನೋಡಿ ಅವುಗಳಿಗೆ ತುಂಬಾ ದುಃಖವಾಯಿತು. ಅವುಗಳೆಲ್ಲವೂ ಆರ್ತರಾಗಿ ಘೀಳಿಟ್ಟವು. ಅನೇಕರು ಅವನಿಗೆ ಸಹಾಯಮಾಡಿ ನೀರಿನಿಂದ ಹೊರಗೆ ತೆಗೆಯಲು ಬಯಸಿದರು, ಆದರೆ ಅವರೆಲ್ಲರೂ ಅಸಮರ್ಥರೇ ಆದರು. ॥ ೨೮ ॥ ಗಜೇಂದ್ರ ಮತ್ತು ಮೊಸಳೆಯು ತಮ್ಮ-ತಮ್ಮ ಪೂರ್ಣ ಶಕ್ತಿಯಿಂದ ಸೆಣಸಾಡುತ್ತಿದ್ದರು. ಕೆಲವೊಮ್ಮೆ ಗಜೇಂದ್ರನು ಮೊಸಳೆಯನ್ನು ಹೊರಗೆ ಎಳೆದರೆ, ಕೆಲವೊಮ್ಮೆ ಮೊಸಳೆಯು ನೀರಿನೊಳಗೆ ಸೆಳೆದುಬಿಡುತ್ತಿತ್ತು. ಪರೀಕ್ಷಿತನೇ! ಹೀಗೆ ಕಾದಾಡುತ್ತಾ-ಕಾದಾಡುತ್ತಾ ಒಂದು ಸಾವಿರ ವರ್ಷಗಳು ಕಳೆದವು ಮತ್ತು ಇಬ್ಬರು ಸೋಲುತ್ತಾ-ಗೆಲ್ಲುತ್ತಾ ಇದ್ದರು. ಈ ಘಟನೆಯನ್ನು ನೋಡಿದ ದೇವತೆಗಳೂ ಆಶ್ಚರ್ಯಚಕಿತರಾದರು. ॥ ೨೯ ॥

ಕೊನೆಗೆ ಬಹಳ ದಿನಗಳವರೆಗೆ ಮತ್ತೆ-ಮತ್ತೆ ನೀರಿಗೆ ಸೆಳೆಯಲ್ಪಟ್ಟುದರಿಂದ ಗಜೇಂದ್ರನ ಶರೀರವು ಶಿಥಿಲವಾಗ ತೊಡಗಿತು. ಅವನ ಮನಸ್ಸಿನಲ್ಲಿ ಉತ್ಸಾಹವೂ, ದೇಹದಲ್ಲಿ ಬಲವು ಉಳಿಯಲಿಲ್ಲ. ಶಕ್ತಿಯೂ ಕ್ಷೀಣವಾಯಿತು. ಇತ್ತ ಮೊಸಳೆಯಾದರೋ ಹೇಳಿ-ಕೇಳಿ ಜಲಚರಪ್ರಾಣಿ. ಅದರ ಶಕ್ತಿಯು ಕುಗ್ಗುವ ಬದಲು ಹೆಚ್ಚುತ್ತಾಹೋಯಿತು. ಅದು ಅತೀವ ಉತ್ಸಾಹದಿಂದ ಇನ್ನೂ ಬಲವನ್ನು ಹಾಕಿ ಗಜೇಂದ್ರನನ್ನು ಸೆಳೆಯತೊಡಗಿತು. ॥ ೩೦ ॥ ಹೀಗೆ ದೇಹಾಭಿಮಾನಿಯಾದ ಗಜೇಂದ್ರನು ಅಕಸ್ಮಾತ್ತಾಗಿ ಸಂಕಟದಲ್ಲಿ ಬಿದ್ದು ತನ್ನನ್ನು ಬಿಡಿಸಿಕೊಳ್ಳುವುದರಲ್ಲಿ ಪೂರ್ಣವಾಗಿ ಅಸಮರ್ಥನಾದನು. ಬಹಳ ಹೊತ್ತಿನವರೆಗೆ ತನ್ನ ಬಿಡುಗಡೆಯ

ಇತ್ಥಂ ಗಜೇಂದ್ರಃ ಸ ಯದಾಽಽಪ ಸಂಕಟಂ
ಪ್ರಾಣಸ್ಯ ದೇಹೀ ವಿವಶೋ ಯದೃಚ್ಛಯಾ ।
ಅಪಾರಯನ್ನಾತ್ಮವಿಮೋಕ್ಷಣೇ ಚಿರಂ
ದಧ್ಯಾವಿಮಾಂ ಬುದ್ಧಿಮಥಾಭ್ಯಪದ್ಯತ ॥ ೩೦ ॥

ನ ಮಾಮಿಮೇ ಜ್ಞಾತಯ ಆತುರಂ ಗಜಾಃ
ಕುತಃ ಕರಿಣ್ಯಃ ಪ್ರಭವಂತಿ ಮೋಚಿತುಮ್ ।
ಗ್ರಾಹೇಣ ಪಾಶೇನ ವಿಧಾತುರಾವೃತೋಽ-
ಪ್ಯಹಂ ಚ ತಂ ಯಾಮಿ ಪರಂ ಪರಾಯಣಮ್ ॥ ೩೨ ॥

ಯಃ ಕಶ್ಚನೇಶೋ ಬಲಿನೋಽಂತಕೋರಗಾತ್
ಪ್ರಚಂಡವೇಗಾದಭಿಧಾವತೋ ಭೃಶಮ್ ।
ಭೀತಂ ಪ್ರಪನ್ನಂ ಪರಿಪಾತಿ ಯದ್ಭಯಾ-
ನ್ಮೃತ್ಯುಃ ಪ್ರಧಾವತ್ಯರಣಂ ತಮೀಮಹಿ ॥ ೩೩ ॥

ಬಗ್ಗೆ ಯೋಚಿಸಿ, ಕೊನೆಗೆ ಅವನು ಈ ನಿಶ್ಚಯಕ್ಕೆ ತಲುಪಿದನು. ॥ ೩೦॥ ಈ ನಕ್ರ (ಮೊಸಳೆ)ವು ವಿಧಾತನ ಉರುಳೇ ಆಗಿದೆ. ಇದರಲ್ಲಿ ಸಿಕ್ಕಿಕೊಂಡು ಸಂಕಟಕ್ಕೊಳಗಾದ ನನ್ನನ್ನು ನನ್ನ ಜೊತೆಯವರಾದ ಆನೆಗಳೇ ಈ ವಿಪತ್ತಿನಿಂದ ಎತ್ತಲಾರದೆ ಹೋದಾಗ ಬಡಪಾಯಿಗಳಾದ ಹೆಣ್ಣಾನೆಗಳೂ ಹೇಗೆ ತಾನೇ ಬಿಡಿಸಬಲ್ಲರು ? ಅದಕ್ಕಾಗಿ ನಾನು ಈಗ ಸಮಸ್ತ ವಿಶ್ವದ ಏಕೈಕ ಆಶ್ರಯನಾದ ಭಗವಂತನನ್ನೇ ಶರಣು ಹೊಂದುವೆನು. ॥ ೩೨ ॥ ಕಾಲವು ಭಾರೀ ಬಲಿಷ್ಠವಾಗಿದೆ. ಇದು ಸರ್ಪದಂತೆ ಅತ್ಯಂತ ಪ್ರಚಂಡ ವೇಗದಿಂದ ಎಲ್ಲರನ್ನೂ ನುಂಗಲು ಓಡುತ್ತಾ ಇರುತ್ತದೆ. ಇದಕ್ಕೆ ಭಯಗೊಂಡು ಯಾರಾದರೂ ಭಗವಂತನಲ್ಲಿ ಶರಣಾದರೆ ಅವನನ್ನು ಆ ಪ್ರಭುವು ಖಂಡಿತವಾಗಿ ಮೃತ್ಯುವಿನಿಂದ ಕಾಪಾಡುತ್ತಾನೆ. ಅವನ ಭಯದಿಂದಲೇ ಹೆದರಿ ಕಾಲವೂ ಕೂಡ ಓಡಿಹೋಗುತ್ತದೆ. ಆ ಪ್ರಭುವೇ ಎಲ್ಲರ ಆಶ್ರಯನಾಗಿದ್ದಾನೆ. ನಾನು ಅವನನ್ನೇ ಶರಣು ಹೊಂದುತ್ತೇನೆ. ॥ ೩೩ ॥

ಎರಡನೆಯ ಅಧ್ಯಾಯವು ಮುಗಿಯಿತು. ॥ ೨ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಅಷ್ಟಮ ಸ್ಕಂಧೇ ಮನ್ವಂತರಾನುವರ್ಣನೇ ಗಜೇಂದ್ರೋಪಾಖ್ಯಾನೇ ದ್ವಿತೀಯೋಽಧ್ಯಾಯಃ ॥ ೨ ॥

ಮೂರನೆಯ ಅಧ್ಯಾಯ

ಗಜೇಂದ್ರನು ಮಾಡಿದ ಪರಮಾತ್ಮನ ಸ್ತೋತ್ರ – ಗಜೇಂದ್ರಮೋಕ್ಷ

ಶ್ರೀಶುಕ ಉವಾಚ

ಏವಂ ವ್ಯವಸಿತೋ ಬುದ್ಧ್ಯಾ ಸಮಾಧಾಯ ಮನೋ ಹೃದಿ ।
ಜಜಾಪ ಪರಮಂ ಜಾಪ್ಯಂ ಪ್ರಾಗ್ಜನ್ಮನ್ಯನುಶಿಕ್ಷಿತಮ್ ॥ ೧ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಎಲೈ ಪರೀಕ್ಷಿತನೇ ! ಗಜೇಂದ್ರನು ಹೀಗೆ ದಯಾಮಯನಾದ ಭಗವಂತನನ್ನೇ ಶರಣುಹೊಂದಲು ನಿಶ್ಚಯಿಸಿ ತನ್ನ ಮನಸ್ಸನ್ನು ಹೃದಯದಲ್ಲಿ ಏಕಾಗ್ರಗೊಳಿಸಿ, ಹಿಂದಿನ ಜನ್ಮದಲ್ಲಿ ಉಪದಿಷ್ಟವಾಗಿದ್ದ ಶ್ರೇಷ್ಠವಾದ ಸ್ತೋತ್ರದ ಮೂಲಕ ಭಗವಂತನನ್ನು ಸ್ತುತಿಸತೊಡಗಿದನು. ॥ ೧ ॥

ಗಜೇಂದ್ರ ಉವಾಚ

ಓಂ ನಮೋ ಭಗವತೇ ತಸ್ಮೈ ಯತ ಏತಚ್ಚಿದಾತ್ಮಕಮ್ ।
ಪುರುಷಾಯಾದಿಬೀಜಾಯ ಪರೇಶಾಯಾಭಿಧೀಮಹಿ ॥ ೨ ॥

ಗಜೇಂದ್ರನು ಹೇಳುತ್ತಾನೆ – ಯಾರು ಜಗತ್ತಿಗೆ ಮೂಲಕಾರಣನೋ, ಎಲ್ಲರ ಹೃದಯದಲ್ಲಿ ಪರಮಪುರುಷನ ರೂಪದಲ್ಲಿ ವಿರಾಜಮಾನನಾಗಿರುವನೋ, ಯಾರು ಸಮಸ್ತ ಜಗತ್ತಿನ ಏಕಮಾತ್ರ ಸ್ವಾಮಿಯಾಗಿರುವನೋ, ಯಾರ ಕಾರಣದಿಂದ ಈ ಪ್ರಪಂಚದಲ್ಲಿ ಚೈತನ್ಯದ ವಿಸ್ತಾರವಾಗುತ್ತದೋ, ಅಂತಹ ಸಚ್ಚಿದಾನಂದಸ್ವರೂಪೀ ಪರಮಾತ್ಮನಿಗೆ ನಾನು ನಮಸ್ಕರಿಸುತ್ತೇನೆ ; ಪ್ರೇಮದಿಂದ ಅವನನ್ನು ಧ್ಯಾನಿಸುತ್ತೇನೆ. ॥ ೨ ॥ ಈ ಸಮಸ್ತ ಜಗತ್ತು ಅವನಲ್ಲೇ ನೆಲೆಸಿದೆ. ಅವನ ಅಸ್ತಿತ್ವದಿಂದಲೇ ಗೋಚರಿಸುತ್ತಾ ಇದೆ. ಅವನೇ ಇದರಲ್ಲಿ ವ್ಯಾಪಿಸಿಕೊಂಡಿರುವವನು ಮತ್ತು ಸ್ವತಃ ಅವನೇ ಇದರ ರೂಪದಲ್ಲಿ ಪ್ರಕಟನಾಗಿರುವನು. ಹೀಗಿದ್ದರೂ ಅವನು ಈ ಜಗತ್ತಿನಿಂದಲೂ, ಇದರ ಕಾರಣ – ಪ್ರಕೃತಿಯಿಂದ ಬೇರೆಯೇ ಆಗಿರುವನು. ಅಂತಹ ಸ್ವಯಂಪ್ರಕಾಶನೂ, ಸ್ವಯಂಸಿದ್ಧನೂ, ಸರ್ವಾತ್ಮಕನೂ ಆದ ಪರಮಾತ್ಮನಲ್ಲಿ ನಾನು ಶರಣಾಗುತ್ತೇನೆ. ಮೊರೆಹೋಗುತ್ತೇನೆ. ॥ ೩ ॥

ಯಸ್ಮಿನ್ನಿದಂ ಯತಶ್ಚೇದಂ ಯೇನೇದಂ ಯ ಇದಂ ಸ್ವಯಮ್ ।
ಯೋಽಸ್ಮಾತ್ಪರಸ್ಮಾಚ್ಚ ಪರಸ್ತಂ ಪ್ರಪದ್ಯೇ ಸ್ವಯಂಭುವಮ್ ॥ ೩ ॥

ಯಃ ಸ್ವಾತ್ಮನೀದಂ ನಿಜಮಾಯಯಾರ್ಪಿತಂ
ಕ್ವಚಿದ್ವಿಭಾತಂ ಕ್ವ ಚ ತತ್ತಿರೋಹಿತಮ್ ।
ಅವಿದ್ಧದೃಕ್ಸಾಕ್ಷ್ಯುಭಯಂ ತದೀಕ್ಷತೇ
ಸ ಆತ್ಮಮೂಲೋಽವತು ಮಾಂ ಪರಾತ್ಪರಃ ॥ ೪ ॥

ಕಾಲೇನ ಪಂಚತ್ವಮಿತೇಷು ಕೃತ್ಸ್ನಶೋ
ಲೋಕೇಷು ಪಾಲೇಷು ಚ ಸರ್ವಹೇತುಷು ।
ತಮಸ್ತದಾಽಽಸೀದ್ಗಹನಂ ಗಭೀರಂ
ಯಸ್ತಸ್ಯ ಪಾರೇಽಭಿವಿರಾಜತೇ ವಿಭುಃ ॥ ೫ ॥

ನ ಯಸ್ಯ ದೇವಾ ಋಷಯಃ ಪದಂ ವಿದು-
ರ್ಜಂತುಃ ಪುನಃ ಕೋಽರ್ಹತಿ ಗಂತುಮೀರಿತುಮ್ ।
ಯಥಾ ನಟಸ್ಯಾಕೃತಿಭಿರ್ವಿಚೇಷ್ಟತೋ
ದುರತ್ಯಯಾನುಕ್ರಮಣಃ ಸ ಮಾವತು ॥ ೬ ॥

ದಿದೃಕ್ಷವೋ ಯಸ್ಯ ಪದಂ ಸುಮಂಗಲಂ
ವಿಮುಕ್ತಸಂಗಾ ಮುನಯಃ ಸುಸಾಧವಃ ।
ಚರಂತ್ಯಲೋಕವ್ರತಮವ್ರಣಂ ವನೇ
ಭೂತಾತ್ಮಭೂತಾಃ ಸುಹೃದಃ ಸ ಮೇ ಗತಿಃ ॥ ೭ ॥

ನ ವಿದ್ಯತೇ ಯಸ್ಯ ಚ ಜನ್ಮ ಕರ್ಮ ವಾ
ನ ನಾಮರೂಪೇ ಗುಣದೋಷ ಏವ ವಾ ।
ತಥಾಪಿ ಲೋಕಾಪ್ಯಯಸಂಭವಾಯ ಯಃ
ಸ್ವಮಾಯಯಾ ತಾನ್ಯನುಕಾಲಮೃಚ್ಛತಿ ॥ ೮ ॥

ತಸ್ಮೈ ನಮಃ ಪರೇಶಾಯ ಬ್ರಹ್ಮಣೇಽನಂತಶಕ್ತಯೇ ।
ಅರೂಪಾಯೋರುರೂಪಾಯ ನಮ ಆಶ್ಚರ್ಯಕರ್ಮಣೇ ॥ ೯ ॥

ನಮ ಆತ್ಮಪ್ರದೀಪಾಯ ಸಾಕ್ಷಿಣೇ ಪರಮಾತ್ಮನೇ ।
ನಮೋ ಗಿರಾಂ ವಿದೂರಾಯ ಮನಸಶ್ಚೇತಸಾಮಪಿ ॥ ೧೦ ॥

ಈ ಪ್ರಪಂಚವು ತನ್ನ ಮಾಯೆಯಿಂದ ಅವನಲ್ಲಿಯೇ ಇಡಲ್ಪಟ್ಟಿದೆ. ಆದರೆ ಕೆಲವು ವೇಳೆ (ಸೃಷ್ಟಿಯ ಕಾಲದಲ್ಲಿ) ಕಾಣಿಸಿಕೊಳ್ಳುತ್ತದೆ. ಕೆಲವು ವೇಳೆ (ಪ್ರಳಯಕಾಲದಲ್ಲಿ) ಅದೃಶ್ಯವಾಗಿರುತ್ತದೆ. ಆದರೆ ಅವನ ದೃಷ್ಟಿಯು ಲೋಪವಾಗುವುದಿಲ್ಲ. ಸಾಕ್ಷಿಭೂತನಾಗಿ ಪ್ರಪಂಚದ ಸೃಷ್ಟಿಯನ್ನೂ, ಲಯವನ್ನೂ ನೋಡುತ್ತಲೇ ಇರುತ್ತಾನೆ. ಅಂತಹ ಆತ್ಮನೇ ಮೂಲವಾಗಿ ಉಳ್ಳ, ಎಲ್ಲದರಲ್ಲಿಯೂ ಆತ್ಮಸ್ವರೂಪದಿಂದ ಇರುವ ಸ್ವಯಂಪ್ರಕಾಶನಾದ ಪರಾತ್ಪರನಾದ ಪರಮಾತ್ಮನು ನನ್ನನ್ನು ರಕ್ಷಿಸಲಿ. ॥ ೪ ॥ ಎರಡು ಪರಾರ್ಧಗಳು ಕಳೆದೊಡನೆಯೇ ಎಲ್ಲ ಲೋಕಗಳು – ಲೋಕಪಾಲರು ಮತ್ತು ಇವೆಲ್ಲದರ ಕಾರಣವು ಸಂಪೂರ್ಣವಾಗಿ ಲಯ ಹೊಂದುವುದು. ಆಗ ಕೇವಲ ಅತ್ಯಂತ ಗಾಢವಾದ ಗಹನವಾದ ಅಂಧಕಾರವೇ ಎಲ್ಲೆಡೆ ಹರಡಿಕೊಂಡಿರುತ್ತದೆ. ಆದರೆ ಅನಂತವಾದ ಪರಮಾತ್ಮನು ಅದರಿಂದ ತೀರಾ ಬೇರೆಯೇ ಆಗಿದ್ದು ಪ್ರಕಾಶಿಸುತ್ತಿರುವನು. ಅಂತಹ ಆದಿತ್ಯವರ್ಣನಾದ ಪ್ರಭುವು ನನ್ನನ್ನು ರಕ್ಷಿಸಲಿ. ॥ ೫ ॥ ಅವನ ಸ್ಥಾನವನ್ನು ದೇವತೆಗಳಾಗಲೀ, ಋಷಿಗಳಾಗಲೀ ತಿಳಿಯಲಾರರು. ಅಂತಹವರ ಪದವನ್ನು ಸಾಮಾನ್ಯರಾದವರು ಹೊಂದಲು ಮತ್ತು ಅದು ಹೀಗೆಯೇ ಇದೆ ಎಂದು ಹೇಳಲು ಹೇಗೆ ಸಮರ್ಥರಾಗುವರು ? ನಿಜರೂಪವನ್ನು ಮರೆಸಿ ನಾನಾ ವೇಷಗಳನ್ನು ಹಾಕಿಕೊಂಡು ಕುಣಿಯುವ ನಟನಂತೆ ತಿಳಿಯಲು ಅಸಾಧ್ಯವಾದ ಲೀಲೆಗಳಿಂದ ಕೂಡಿದವನಾಗಿ, ನಾನಾ ಅವತಾರಗಳನ್ನು ಹೊಂದುವ ಪರಮಾತ್ಮನು ನನ್ನನ್ನು ರಕ್ಷಿಸಲಿ. ॥ ೬ ॥ ಯಾವನ ಪರಮ ಮಂಗಲಮಯ ಸ್ವರೂಪವನ್ನು ಸಂದರ್ಶಿಸಲು ಮಹಾಮುನಿಗಳು ಸಂಸಾರದ ಸಮಸ್ತ ಆಸಕ್ತಿಗಳನ್ನು ಪರಿತ್ಯಜಿಸಿ ಅರಣ್ಯಕ್ಕೆ ಹೋಗಿ ನಿರಂತರವಾಗಿ ಬ್ರಹ್ಮಚರ್ಯವೇ ಮುಂತಾದ ಅಲೌಕಿಕ ವ್ರತಗಳನ್ನು ಪಾಲಿಸುವರೋ, ತಮ್ಮ ಆತ್ಮನನ್ನು ಎಲ್ಲರ ಹೃದಯದಲ್ಲಿ ವಿರಾಜಿಸುತ್ತಿರುವುದನ್ನು ನೋಡಿ ಸ್ವಾಭಾವಿಕವಾಗಿಯೇ ಎಲ್ಲರಿಗೂ ಒಳ್ಳೆಯದನ್ನು ಮಾಡುವರೋ, ಆ ಮುನಿಗಳ ಸರ್ವಸ್ವನಾದ ಭಗವಂತನು ನನಗೆ ಸಹಾಯಕನಾಗಿರುವನು. ಅವನೇ ನನಗೆ ಪರಮ ಗತಿಯು. ॥ ೭ ॥ ಯಾವನಿಗೆ ಜನ್ಮ-ಕರ್ಮಗಳಾಗಲೀ, ನಾಮ-ರೂಪಗಳಾಗಲೀ, ಇಲ್ಲವೋ, ಅವನ ಸಂಬಂಧವಾಗಿ ಗುಣ-ದೋಷಗಳನ್ನು ಹೇಗೆ ತಾನೇ ಕಲ್ಪಿಸಬಹುದು ? ಹೀಗಿದ್ದರೂ ವಿಶ್ವದ ಸೃಷ್ಟಿ ಮತ್ತು ಸಂಹಾರಮಾಡಲಿಕ್ಕಾಗಿ ಆಯಾ-ಕಾಲಕ್ಕೆ ಅವನು ತನ್ನ ಮಾಯೆಯನ್ನು ಸ್ವೀಕರಿಸಿ ಅವತರಿಸುವನು. ಅಂತಹ ಸಚ್ಚಿದಾನಂದ ಪರಮಾತ್ಮನು ನನ್ನನ್ನು ರಕ್ಷಿಸಲಿ. ॥ ೮ ॥ ಬ್ರಹ್ಮನೇ ಮೊದಲಾದವರಿಗೆ ಈಶನಾದ, ಅನಂತಶಕ್ತಿಯಾದ, ಸರ್ವೈಶ್ವರ್ಯ ಸಂಪನ್ನನಾದ ಪರಬ್ರಹ್ಮಪರಮಾತ್ಮನಿಗೆ ನಾನು ನಮಸ್ಕರಿಸುತ್ತೇನೆ. ಅವನು ಅರೂಪನಾಗಿದ್ದರೂ ಬಹುರೂಪಿಯಾಗಿದ್ದಾನೆ. ಅವನ ಕರ್ಮಗಳು ಅತ್ಯಂತ ಆಶ್ಚರ್ಯಮಯವಾಗಿವೆ. ಅಂತಹವನ ಚರಣಗಳಿಗೆ ನಾನು ನಮಸ್ಕರಿಸುತ್ತೇನೆ. ॥ ೯ ॥ ಸ್ವಯಂ ಪ್ರಕಾಶನೂ, ಎಲ್ಲರ ಸಾಕ್ಷಿಯೂ ಆದ ಪರಮಾತ್ಮನಿಗೆ ನಾನು ನಮಸ್ಕರಿಸುತ್ತೇನೆ. ಮಾತು, ಮನಸ್ಸು ಮತ್ತು ಬುದ್ಧಿಗಳಿಗಿಂತ ಅತ್ಯಂತ ದೂರನಾದ ಆ ಪರಮಾತ್ಮನಿಗೆ ನಾನು ನಮಸ್ಕರಿಸುತ್ತೇನೆ. ॥ ೧೦ ॥

ಸತ್ತ್ವೇನ ಪ್ರತಿಲಭ್ಯಾಯ ನೈಷ್ಕರ್ಮ್ಯೇಣ ವಿಪಶ್ಚಿತಾ ।
ನಮಃ ಕೈವಲ್ಯನಾಥಾಯ ನಿರ್ವಾಣಸುಖಸಂವಿದೇ ॥ ೧೧ ॥

ನಮಃ ಶಾಂತಾಯ ಘೋರಾಯ ಮೂಢಾಯ ಗುಣಧರ್ಮಿಣೇ ।
ನಿರ್ವಿಶೇಷಾಯ ಸಾಮ್ಯಾಯ ನಮೋ ಜ್ಞಾನಘನಾಯ ಚ ॥ ೧೨ ॥

ಕ್ಷೇತ್ರಜ್ಞಾಯ ನಮಸ್ತುಭ್ಯಂ ಸರ್ವಾಧ್ಯಕ್ಷಾಯ ಸಾಕ್ಷಿಣೇ ।
ಪುರುಷಾಯಾತ್ಮಮೂಲಾಯ ಮೂಲಪ್ರಕೃತಯೇ ನಮಃ ॥ ೧೩ ॥

ಸರ್ವೇಂದ್ರಿಯಗುಣದ್ರಷ್ಟ್ರೇ ಸರ್ವಪ್ರತ್ಯಯಹೇತವೇ ।
ಅಸತಾ ಚ್ಛಾಯಯೋಕ್ತಾಯ ಸದಾಭಾಸಾಯ ತೇ ನಮಃ ॥ ೧೪ ॥

ನಮೋ ನಮಸ್ತೇಽಖಿಲಕಾರಣಾಯ
ನಿಷ್ಕಾರಣಾಯಾದ್ಭುತಕಾರಣಾಯ ।
ಸರ್ವಾಗಮಾಮ್ನಾಯಮಹಾರ್ಣವಾಯ
ನಮೋಽಪವರ್ಗಾಯ ಪರಾಯಣಾಯ ॥ ೧೫ ॥

ಗುಣಾರಣಿಚ್ಛನ್ನಚಿದೂಷ್ಮಪಾಯ
ತತ್ಕ್ಷೋಭವಿಸ್ಫೂರ್ಜಿತಮಾನಸಾಯ ।
ನೈಷ್ಕರ್ಮ್ಯಭಾವೇನ ವಿವರ್ಜಿತಾಗಮ-
ಸ್ವಯಂಪ್ರಕಾಶಾಯ ನಮಸ್ಕರೋಮಿ ॥ ೧೬ ॥

ಮಾದೃಕ್ಪ್ರಪನ್ನಪಶುಪಾಶವಿಮೋಕ್ಷಣಾಯ
ಮುಕ್ತಾಯ ಭೂರಿಕರುಣಾಯ ನಮೋಽಲಯಾಯ ।
ಸ್ವಾಂಶೇನ ಸರ್ವತನುಭೃನ್ಮನಸಿ ಪ್ರತೀತ-
ಪ್ರತ್ಯಗ್ದೃಶೇ ಭಗವತೇ ಬೃಹತೇ ನಮಸ್ತೇ ॥ ೧೭ ॥

ವಿವೇಕಿಗಳಾದವರು ಕರ್ಮಸಂನ್ಯಾಸದಿಂದ ಅಥವಾ ಕರ್ಮ-ಸಮರ್ಪಣೆಯ ಮೂಲಕ ತಮ್ಮ ಅಂತಃಕರಣವನ್ನು ಶುದ್ಧಗೊಳಿಸಿಕೊಂಡು ಯಾರನ್ನು ಪಡೆದುಕೊಳ್ಳುವರೋ ಹಾಗೂ ಸ್ವಯಂ ನಿತ್ಯಮುಕ್ತನೂ ಪರಮಾನಂದಮಯನೂ, ಜ್ಞಾನಸ್ವರೂಪನೂ ಆಗಿದ್ದು ಬೇರೆಯವರಿಗೆ ಕೈವಲ್ಯಮುಕ್ತಿಯನ್ನು ಕೊಡುವ ಸಾಮರ್ಥ್ಯವು ಕೇವಲ ಅವನೊಬ್ಬನಲ್ಲೇ ಇರುವುದೋ ಅಂತಹ ಸ್ವಾಮಿಗೆ ನಾನು ನಮಸ್ಕರಿಸುತ್ತೇನೆ. ॥ ೧೧ ॥ ಯಾರು ಸತ್ತ್ವ-ರಜ-ತಮ ಈ ತ್ರಿಗುಣಗಳನ್ನು ಸ್ವೀಕರಿಸಿ, ಕ್ರಮವಾಗಿ ಶಾಂತ, ಘೋರ ಮತ್ತು ಮೂಢ ಅವಸ್ಥೆಗಳನ್ನು ಹೊಂದುವನೋ ಆ ಭೇದರಹಿತವೂ, ಸಮಭಾವದಿಂದ ಇರುವವನೂ, ಆದ ಜ್ಞಾನಘನಸ್ವರೂಪನಾದ ಪರಮಾತ್ಮನಿಗೆ ನಾನು ಮತ್ತೆ-ಮತ್ತೆ ನಮಸ್ಕರಿಸುತ್ತೇನೆ. ॥ ೧೨ ॥ ನೀನು ಎಲ್ಲರ ಸ್ವಾಮಿಯೂ, ಕ್ಷೇತ್ರಜ್ಞನೂ, ಸಮಸ್ತ ಕ್ಷೇತ್ರಗಳಲ್ಲಿ ಏಕಮಾತ್ರ ಸರ್ವಸಾಕ್ಷಿಯೂ ಆಗಿರುವೆ. ಅಂತಹ ನಿನಗೆ ವಂದಿಸುತ್ತೇನೆ. ನೀನೇ ಸ್ವಯಂ ಮೂಲಕಾರಣನಾಗಿರುವೆ. ಪುರುಷ ಮತ್ತು ಮೂಲಪ್ರಕೃತಿಯ ರೂಪದಲ್ಲಿಯೂ ನೀನೇ ಇರುವೆ. ಅಂತಹ ನಿನಗೆ ಪದೇ-ಪದೇ ನಮಸ್ಕಾರಗಳು. ॥ ೧೩ ॥ ನೀನು ಸಮಸ್ತ ಇಂದ್ರಿಯಗಳು ಮತ್ತು ಅವುಗಳ ವಿಷಯಗಳ ದ್ರಷ್ಟಾ ಆಗಿದ್ದು, ಸಮಸ್ತ ಪ್ರತೀತಿಗಳಿಗೆ ಆಧಾರನಾಗಿರುವೆ. ಅಹಂಕಾರಾದಿ ಛಾಯಾರೂಪವಾದ ಅಸತ್ ವಸ್ತುಗಳ ಮೂಲಕ ನಿನ್ನ ಅಸ್ತಿತ್ವವೇ ಪ್ರಕಟವಾಗುತ್ತದೆ. ಸಮಸ್ತ ವಸ್ತುಗಳ ಅಸ್ತಿತ್ವದ ರೂಪದಲ್ಲಿಯೂ ಕೇವಲ ನೀನೇ ಕಂಡುಬರುತ್ತಿರುವೆ. ಅಂತಹ ನಿನಗೆ ನಾನು ನಮಸ್ಕರಿಸುತ್ತೇನೆ. ॥ ೧೪ ॥ ನೀನು ಎಲ್ಲರ ಮೂಲ ಕಾರಣನಾಗಿರುವೆ. ನಿನಗೆ ಯಾವ ಕಾರಣವೂ ಇಲ್ಲ. ನೀನು ಜಗತ್ತಿನ ಸೃಷ್ಟಿಗೆ ಕಾರಣನಾದರೂ ನಿನ್ನಲ್ಲಿ ವಿಕಾರವಾಗಲೀ, ಪರಿಣಾಮವಾಗಲೀ ಉಂಟಾಗುವುದಿಲ್ಲ. ಆದುದರಿಂದ ನೀನು ಅದ್ಭುತಕಾರಣನಾಗಿರುವೆ. ನಿನಗೆ ಬಾರಿ-ಬಾರಿಗೂ ನಮಸ್ಕಾರವು. ನದೀನದಗಳಿಗೆಲ್ಲ ಪರಮಾಶ್ರಯವು ಸಮುದ್ರವಿರುವಂತೆ ಸಮಸ್ತ ವೇದಶಾಸ್ತ್ರಗಳಿಗೆ ನೀನೇ ಪರಮ ತಾತ್ಪರ್ಯನಾಗಿರುವೆ. ನೀನು ಮೋಕ್ಷಸ್ವರೂಪನೂ, ಸಾಧು-ಸತ್ಪುರುಷರಿಗೆ ಪರಮಾಶ್ರಯನೂ ಆಗಿರುವೆ ಅಂತಹ ನಿನಗೆ ನಮಸ್ಕಾರವು. ॥ ೧೫ ॥ ಯಜ್ಞದ ಅರಣಿಯಲ್ಲಿ ಅಗ್ನಿಯು ಗುಪ್ತವಾಗಿರುವಂತೆಯೇ ನೀನು ನಿನ್ನ ಜ್ಞಾನವನ್ನು ಗುಣಮಯ ಮಾಯೆಯಿಂದ ಮುಚ್ಚಿಟ್ಟಿರುವೆ. ಗುಣಗಳಲ್ಲಿ ಕ್ಷೋಭೆ ಉಂಟಾದಾಗ ಅವುಗಳ ಮೂಲಕ ವಿವಿಧ ಪ್ರಕಾರದ ಸೃಷ್ಟಿರಚನೆಯ ಸಂಕಲ್ಪವನ್ನು ನೀನು ಮಾಡುವೆ. ಸರ್ವಕರ್ಮ ಸಂನ್ಯಾಸ ಅಥವಾ ಕರ್ಮಸಮರ್ಪಣಮಾಡಿ ವಿಧಿನಿಷೇಧಗಳಿಗೆ ಒಳಪಡದಿರುವ ಜ್ಞಾನಿಗಳ ಹೃದಯದಲ್ಲಿ ನೀನು ಸ್ವಯಂಪ್ರಕಾಶನಾಗಿರುವೆ. ಇಂತಹ ನಿನಗೆ ನಮಸ್ಕಾರವು. ॥ ೧೬ ॥ ದಯಾಳುವಾದ ಮನುಷ್ಯನು ಬಂಧನಕ್ಕೆ ಸಿಕ್ಕಿಹಾಕಿಕೊಂಡಿರುವ ಪಶುವನ್ನು ಬಿಡಿಸುವಂತೆ ಸಂಸಾರಬಂಧನದಿಂದ ಬಂಧಿಸಲ್ಪಟ್ಟಿರುವ ಶರಣಾಗತನಾಗಿರುವ ನನ್ನನ್ನೂ ವಿಮುಕ್ತಗೊಳಿಸುವೆ. ನೀನು ನಿತ್ಯಮುಕ್ತನಾಗಿದ್ದು ಕರುಣಾಮಯನಾಗಿರುವೆ. ಭಕ್ತರಿಗೆ ಕಲ್ಯಾಣವನ್ನುಂಟುಮಾಡಲು ನಿನಗೆ ಎಂದಿಗೂ ಆಲಸ್ಯವೆಂಬುದೇ ಇಲ್ಲ, ಅಂತಹ ಪರಮಕಾರುಣಿಕನಾದ ನಿನಗೆ

ಆತ್ಮಾತ್ಮಜಾಪ್ತಗೃಹವಿತ್ತಜನೇಷು ಸಕ್ತೈ-
ರ್ದುಷ್ಪ್ರಾಪಣಾಯ ಗುಣಸಂಗವಿವರ್ಜಿತಾಯ ।
ಮುಕ್ತಾತ್ಮಭಿಃ ಸ್ವಹೃದಯೇ ಪರಿಭಾವಿತಾಯ
ಜ್ಞಾನಾತ್ಮನೇ ಭಗವತೇ ನಮ ಈಶ್ವರಾಯ ॥ ೧೮ ॥

ಯಂ ಧರ್ಮಕಾಮಾರ್ಥವಿಮುಕ್ತಿಕಾಮಾ
ಭಜಂತ ಇಷ್ಟಾಂ ಗತಿಮಾಪ್ನುವಂತಿ ।
ಕಿಂ ತ್ವಾಶಿಷೋ ರಾತ್ಯಪಿ ದೇಹಮವ್ಯಯಂ
ಕರೋತು ಮೇಽದಭ್ರದಯೋ ವಿಮೋಕ್ಷಣಮ್ ॥ ೧೯ ॥

ಏಕಾಂತಿನೋ ಯಸ್ಯ ನ ಕಂಚನಾರ್ಥಂ
ವಾಂಛಂತಿ ಯೇ ವೈ ಭಗವತ್ಪ್ರಪನ್ನಾಃ ।
ಅತ್ಯದ್ಭುತಂ ತಚ್ಚರಿತಂ ಸುಮಂಗಲಂ
ಗಾಯಂತ ಆನಂದ ಸಮುದ್ರಮಗ್ನಾಃ ॥ ೨೦ ॥

ತಮಕ್ಷರಂ ಬ್ರಹ್ಮ ಪರಂ ಪರೇಶ-
ಮವ್ಯಕ್ತಮಾಧ್ಯಾತ್ಮಿಕಯೋಗಗಮ್ಯಮ್ ।
ಅತೀಂದ್ರಿಯಂ ಸೂಕ್ಷ್ಮಮಿವಾತಿದೂರ-
ಮನಂತಮಾದ್ಯಂ ಪರಿಪೂರ್ಣಮೀಡೇ ॥ ೨೧ ॥

ಯಸ್ಯ ಬ್ರಹ್ಮಾದಯೋ ದೇವಾ ವೇದಾ ಲೋಕಾಶ್ಚರಾಚರಾಃ ।
ನಾಮರೂಪವಿಭೇದೇನ ಫಲ್ಗ್ವ್ಯಾ ಚ ಕಲಯಾ ಕೃತಾಃ ॥ ೨೨ ॥

ಯಥಾರ್ಚಿಷೋಽಗ್ನೇಃ ಸವಿತುರ್ಗಭಸ್ತಯೋ
ನಿರ್ಯಾಂತಿ ಸಂಯಾಂತ್ಯಸಕೃತ್ಸ್ವರೋಚಿಷಃ ।
ತಥಾ ಯತೋಽಯಂ ಗುಣಸಂಪ್ರವಾಹೋ
ಬುದ್ಧಿರ್ಮನಃ ಖಾನಿ ಶರೀರಸರ್ಗಾಃ ॥ ೨೩ ॥

ಸ ವೈ ನ ದೇವಾಸುರಮರ್ತ್ಯತಿರ್ಯಙ್
ನ ಸ್ತ್ರೀ ನ ಷಂಢೋ ನ ಪುಮಾನ್ನ ಜಂತುಃ ।
ನಾಯಂ ಗುಣಃ ಕರ್ಮ ನ ಸನ್ನ ಚಾಸನ್
ನಿಷೇಧಶೇಷೋ ಜಯತಾದಶೇಷಃ ॥ ೨೪ ॥

ನಮಸ್ಕರಿಸುತ್ತೇನೆ. ಸಮಸ್ತ ಪ್ರಾಣಿಗಳ ಹೃದಯದಲ್ಲಿಯೂ ನಿನ್ನ ಅಂಶದ ಮೂಲಕ ಅಂತರಾತ್ಮನಾಗಿ ನೀನು ಸರ್ವೈಶ್ವರ್ಯಪೂರ್ಣನೂ, ಅಪರಿಚ್ಛಿನ್ನನೂ ಆಗಿರುವೆ. ಇಂತಹ ನಿನಗೆ ನಮಸ್ಕಾರ ಮಾಡುತ್ತೇನೆ. ॥ ೧೭ ॥ ಶರೀರ, ಪುತ್ರರು, ಆಪ್ತರು, ಮನೆ, ಸಂಪತ್ತು, ಸ್ವಜನರು – ಹೀಗೆ ಇವರಲ್ಲಿ ಆಸಕ್ತರಾದ ಜನರಿಗೆ ನಿನ್ನ ಪ್ರಾಪ್ತಿಯು ಅತ್ಯಂತ ಕಠಿಣವಾಗಿದೆ. ಏಕೆಂದರೆ ನೀನು ಸ್ವತಃ ಗುಣಗಳ ಆಸಕ್ತಿಯಿಂದ ರಹಿತನಾಗಿರುವೆ. ಜೀವನ್ಮುಕ್ತರಾದವರು ತಮ್ಮ ಹೃದಯದಲ್ಲಿ ನಿರಂತರವಾಗಿ ನಿನ್ನನ್ನು ಚಿಂತಿಸುತ್ತಾ ಇರುತ್ತಾರೆ. ■ ಸರ್ವೈಶ್ವರ್ಯಸಂಪನ್ನ ಜ್ಞಾನಸ್ವರೂಪನಾದ ಭಗವಂತನಿಗೆ ನಾನು ನಮಸ್ಕರಿಸುತ್ತೇನೆ. ॥ ೧೮ ॥ ಧರ್ಮ, ಅರ್ಥ, ಕಾಮ, ಮೋಕ್ಷಗಳೆಂಬ ಈ ಪುರುಷಾರ್ಥಗಳ ಕಾಮನೆಯಿಂದ ಮನುಷ್ಯರು ಭಗವಂತನನ್ನು ಭಜಿಸಿ ತಮ್ಮ ಇಷ್ಟಾರ್ಥಗಳನ್ನು ಪಡೆದುಕೊಳ್ಳುತ್ತಾರೆ. ಇಷ್ಟು ಮಾತ್ರವಲ್ಲ ಪ್ರಸನ್ನನಾದ ಶ್ರೀಭಗವಂತನು ಭಕ್ತರಿಗೆ ಇತರ ಅನೇಕ ವಿಧವಾದ ಸುಖಗಳನ್ನೂ, ನಾಶರಹಿತವಾದ ದಿವ್ಯಶರೀರವನ್ನೂ ದಯಪಾಲಿಸುತ್ತಾನೆ. ಅಂತಹ ಪರಮ ದಯಾಳುವಾದ ಪರಮಾತ್ಮನು ಈ ಮೊಸಳೆಯಿಂದ ನನ್ನನ್ನು ಬಿಡುಗಡೆಮಾಡಲಿ. ॥ ೧೯ ॥ ಭಗವಂತನಿಗೆ ಶರಣಾಗತರಾದ ಅವನ ಅನನ್ಯ ಭಕ್ತರು ಯಾವುದೇ ಪ್ರಯೋಜನವನ್ನು ಅಪೇಕ್ಷಿಸುವುದಿಲ್ಲ. ಸರ್ವಾಪೇಕ್ಷಿತವಾದ ಮೋಕ್ಷವನ್ನೂ ಬಯಸುವುದಿಲ್ಲ, ಮಂಗಳಕರವಾದ ಅತ್ಯದ್ಭುತವಾದ ಪರಮಾತ್ಮನ ಚರಿತ್ರೆಗಳನ್ನು ಹಾಡುತ್ತಾ, ನಲಿಯುತ್ತಾ ಆನಂದಸಮುದ್ರದಲ್ಲಿ ಮುಳುಗಿರುತ್ತಾರೆ. ॥ ೨೦ ॥ ಅವಿನಾಶಿಯೂ, ಸರ್ವಶಕ್ತಿ ಸಂಪನ್ನನೂ, ಅವ್ಯಕ್ತನೂ, ಇಂದ್ರಿಯಾತೀತನೂ, ಅತ್ಯಂತ ಸೂಕ್ಷ್ಮನೂ ಆದವನು ಅತ್ಯಂತ ಹತ್ತಿರವಿದ್ದರೂ ಬಹಳ ದೂರನೆಂದು ಭಾಸವಾಗುವವನೂ, ಆಧ್ಯಾತ್ಮಿಕಯೋಗ ಅರ್ಥಾತ್ ಜ್ಞಾನಯೋಗ-ಭಕ್ತಿಯೋಗದಿಂದ ದೊರೆಯುವಂತಹವನೂ ಆದ ಆ ಆದಿಪುರುಷ ಅನಂತ, ಪರಿಪೂರ್ಣ ಪರಬ್ರಹ್ಮ ಪರಮಾತ್ಮನನ್ನು ನಾನು ಸ್ತುತಿಸುತ್ತೇನೆ. ॥ ೨೧ ॥

ಯಾರ ಅತ್ಯಲ್ಪವಾದ ಅಂಶದಿಂದ ನಾನಾರೂಪಗಳ ಮತ್ತು ನಾಮಗಳ ಭೇದದಿಂದ ಕೂಡಿದ ಬ್ರಹ್ಮಾದಿದೇವತೆಗಳೂ, ವೇದಗಳೂ, ಚರಾಚರಗಳೂ, ಲೋಕಗಳೂ ರಚಿತವಾದುವೋ, ಹೇಗೆ ಧಗ-ಧಗನೆ ಉರಿಯುವ ಅಗ್ನಿಯಿಂದ ಜ್ವಾಲೆಗಳು ಮತ್ತು ಸೂರ್ಯನಿಂದ ಅವನ ಕಿರಣಗಳು ಹಲವು ಬಾರಿ ಹೊರಹೊಮ್ಮಿ ಲೀನವಾಗುವುವೋ, ಹಾಗೆಯೇ ಯಾವ ಸ್ವಯಂಪ್ರಕಾಶ ಪರಮಾತ್ಮನಿಂದ ಗುಣಗಳ ಪ್ರವಾಹರೂಪವಾದ ಬುದ್ಧಿ, ಮನಸ್ಸು, ಇಂದ್ರಿಯಗಳು ಮತ್ತು ಶರೀರಗಳು ಮತ್ತೆ-ಮತ್ತೆ ಪ್ರಕಟವಾಗಿ, ಲೀನವಾಗಿ ಹೋಗುತ್ತವೆ. ■ ಭಗವಂತನು ದೇವತೆಯಲ್ಲ, ರಾಕ್ಷಸನಲ್ಲ, ಮನುಷ್ಯನಲ್ಲ, ಪಶು-ಪಕ್ಷಿಯೂ ಅಲ್ಲ. ಅವನು ಸ್ತ್ರೀಯಲ್ಲ, ಪುರುಷನಲ್ಲ, ನಪುಂಸಕನಲ್ಲ, ಅವನು ಯಾವುದೇ ಸಾಧಾರಣ ಅಥವಾ ಅಸಾಧಾರಣ ಪ್ರಾಣಿಯೂ ಅಲ್ಲ. ಅವನು ಗುಣವಲ್ಲ, ಕರ್ಮವಲ್ಲ, ಕಾರ್ಯವೂ ಅಲ್ಲ, ಕಾರಣವೂ ಅಲ್ಲ, ಎಲ್ಲವೂ ನಿಷೇಧವಾದ ಬಳಿಕ ಉಳಿಯುವುದೇ ಅವನ ಸ್ವರೂಪವಾಗಿದೆ ಹಾಗೂ ಅವನೇ ಎಲ್ಲವೂ ಆಗಿದ್ದಾನೆ. ಆ ಪರಮಾತ್ಮನೇ ನನ್ನ ಉದ್ಧಾರಕ್ಕಾಗಿ ಪ್ರಕಟನಾಗಲೀ. ॥ ೨೨-೨೪ ॥

ಜಿಜೀವಿಷೇ ನಾಹಮಿಹಾಮುಯಾ ಕಿ-
ಮಂತರ್ಬಹಿಶ್ಚಾವೃತಯೇಭಯೋನ್ಯಾ ।
ಇಚ್ಛಾಮಿ ಕಾಲೇನ ನ ಯಸ್ಯ ವಿಪ್ಲವ-
ಸ್ತಸ್ಯಾತ್ಮಲೋಕಾವರಣಸ್ಯ ಮೋಕ್ಷಮ್ ॥ ೨೫ ॥

ಸೋಽಹಂ ವಿಶ್ವಸೃಜಂ ವಿಶ್ವಮವಿಶ್ವಂ ವಿಶ್ವವೇದಸಮ್ ।
ವಿಶ್ವಾತ್ಮಾನಮಜಂ ಬ್ರಹ್ಮ ಪ್ರಣತೋಽಸ್ಮಿ ಪರಂ ಪದಮ್ ॥ ೨೬ ॥

ಯೋಗರಂಧಿತಕರ್ಮಾಣೋ
ಹೃದಿ ಯೋಗವಿಭಾವಿತೇ ।
ಯೋಗಿನೋ ಯಂ ಪ್ರಪಶ್ಯಂತಿ
ಯೋಗೇಶಂ ತಂ ನತೋಽಸ್ಮ್ಯಹಮ್ ॥ ೨೭ ॥

ನಮೋ ನಮಸ್ತುಭ್ಯಮಸಹ್ಯವೇಗ-
ಶಕ್ತಿತ್ರಯಾಯಾಖಿಲಧೀಗುಣಾಯ ।
ಪ್ರಪನ್ನಪಾಲಾಯ ದುರಂತಶಕ್ತಯೇ
ಕದಿಂದ್ರಿಯಾಣಾಮನವಾಪ್ಯವರ್ತ್ಮನೇ ॥ ೨೮ ॥

ನಾಯಂ ವೇದ ಸ್ವಮಾತ್ಮಾನಂ
ಯಚ್ಛಕ್ತ್ಯಾಹಂಧಿಯಾಹತಮ್ ।
ತಂ ದುರತ್ಯಯಮಾಹಾತ್ಮ್ಯಂ
ಭಗವಂತಮಿತೋಽಸ್ಮ್ಯಹಮ್ ॥ ೨೯ ॥

ಶ್ರೀಶುಕ ಉವಾಚ

ಏವಂ ಗಜೇಂದ್ರಮುಪವರ್ಣಿತನಿರ್ವಿಶೇಷಂ
ಬ್ರಹ್ಮಾದಯೋ ವಿವಿಧಲಿಂಗಭಿದಾಭಿಮಾನಾಃ ।
ನೈತೇ ಯದೋಪಸಸೃಪುರ್ನಿಖಿಲಾತ್ಮಕತ್ವಾ-
ತ್ತತ್ರಾಖಿಲಾಮರಮಯೋ ಹರಿರಾವಿರಾಸೀತ್ ॥ ೩೦ ॥

ತಂ ತದ್ವದಾರ್ತಮುಪಲಭ್ಯ ಜಗನ್ನಿವಾಸಃ
ಸ್ತೋತ್ರಂ ನಿಶಮ್ಯ ದಿವಿಜೈಃ ಸಹ ಸಂಸ್ತುವದ್ಭಿಃ ।
ಛಂದೋಮಯೇನ ಗರುಡೇನ ಸಮುಹ್ಯಮಾನ-
ಶ್ಚಕ್ರಾಯುಧೋಽಭ್ಯಗಮದಾಶು ಯತೋ ಗಜೇಂದ್ರಃ ॥ ೩೦ ॥

ನಾನು ಬದುಕಿರಲು ಬಯಸುವುದಿಲ್ಲ. ಈ ಆನೆಯ ಶರೀರವು ಒಳಗೆ-ಹೊರಗೆ ಎಲ್ಲ ಕಡೆಯಿಂದ ಅಜ್ಞಾನರೂಪೀ ಆವರಣದಿಂದ ಮುಚ್ಚಿ ಹೋಗಿದೆ. ಇದನ್ನು ಇರಿಸಿಕೊಂಡು ಏನು ಮಾಡಲಿ? ನಾನಾದರೋ ಆತ್ಮಪ್ರಕಾಶವನ್ನು ಮುಚ್ಚಿರುವ ಆ ಅಜ್ಞಾನರೂಪವಾದ ಆವರಣದಿಂದ ಬಿಡುಗಡೆಯನ್ನು ಬಯಸುತ್ತಿದ್ದೇನೆ. ಅದು ಕಾಲ ಕ್ರಮದಿಂದ ತಾನಾಗಿ ಬಿಟ್ಟುಹೋಗದು. ಅದು ಕೇವಲ ಭಗವತ್ಕೃಪೆಯಿಂದ ಅಥವಾ ತತ್ತ್ವಜ್ಞಾನದಿಂದಲೇ ನಾಶವಾಗುತ್ತದೆ. ॥ ೨೫ ॥ ಅದಕ್ಕಾಗಿ ನಾನು ಆ ಪರಬ್ರಹ್ಮ ಪರಮಾತ್ಮನಲ್ಲಿ ಶರಣಾಗಿದ್ದೇನೆ. ಆವನು ವಿಶ್ವರಹಿತನಾಗಿದ್ದರೂ ವಿಶ್ವವನ್ನು ರಚಿಸುವವನು. ವಿಶ್ವರೂಪನೂ ಆಗಿದ್ದಾನೆ. ಜೊತೆಗೆ ಆವನು ವಿಶ್ವದ ಅಂತರಾತ್ಮನ ರೂಪದಲ್ಲಿ ವಿಶ್ವರೂಪೀ ಸಾಮಗ್ರಿಗಳಿಂದ ಕ್ರೀಡಿಸುತ್ತಲೂ ಇರುವನು. ಅಂತಹ ಜನ್ಮರಹಿತ, ಪರಮಪದ ಸ್ವರೂಪನಾದ ಪರಬ್ರಹ್ಮನಿಗೆ ನಾನು ನಮಸ್ಕರಿಸುತ್ತೇನೆ. ॥ ೨೬ ॥ ಯೋಗಿಗಳು ಯೋಗದಿಂದ ಕರ್ಮಗಳು, ಕರ್ಮವಾಸನೆ ಮತ್ತು ಕರ್ಮಫಲಗಳನ್ನು ಭಸ್ಮಮಾಡಿ ತಮ್ಮ ಯೋಗಶುದ್ಧ ಹೃದಯದಲ್ಲಿ ಯೋಗೇಶ್ವರ ಭಗವಂತನ ಸಾಕ್ಷಾತ್ಕಾರ ಮಾಡಿಕೊಳ್ಳುವರು. ಅಂತಹ ಸ್ವಾಮಿಯನ್ನು ನಾನು ನಮಸ್ಕರಿಸುತ್ತೇನೆ. ॥ ೨೭ ॥ ಪ್ರಭುವೇ! ನಿನ್ನ ಮೂರು ಶಕ್ತಿಗಳಾದ ಸತ್ತ್ವ, ರಜ, ತಮಗಳ ರಾಗಾದಿ ವೇಗಗಳು ಅಸಹ್ಯವಾಗಿವೆ. ಸಮಸ್ತ ಇಂದ್ರಿಯಗಳು ಮತ್ತು ಮನಸ್ಸಿನ ವಿಷಯಗಳ ರೂಪದಲ್ಲಿಯೂ ನೀನೇ ಕಂಡುಬರುತ್ತೀಯೆ. ಅದಕ್ಕಾಗಿ ಇಂದ್ರಿಯಗಳು ವಶದಲ್ಲಿ ಇರದೇ ಇರುವವರಾದರೋ ನಿನ್ನ ಪ್ರಾಪ್ತಿಯ ಮಾರ್ಗವನ್ನೂ ತಿಳಿಯಲಾರರು. ನಿನ್ನ ಶಕ್ತಿಯು ಅನಂತವಾಗಿದೆ. ನೀನು ಶರಣಾಗತವತ್ಸಲನಾಗಿರುವೆ. ನಿನಗೆ ನಾನು ಮತ್ತೆ-ಮತ್ತೆ ನಮಸ್ಕರಿಸುತ್ತೇನೆ. ॥ ೨೮ ॥ ನಿನ್ನ ಮಾಯೆಯ ಅಹಂಬುದ್ಧಿಯಿಂದ ಆತ್ಮನ ಸ್ವರೂಪವು ಮುಚ್ಚಿಹೋಗಿದೆ. ಇದರಿಂದ ಈ ಜೀವನು ತನ್ನ ಸ್ವರೂಪವನ್ನು ತಿಳಿಯಲಾರನು. ನಿನ್ನ ಮಹಿಮೆ ಅಪಾರವಾಗಿದೆ. ಅಂತಹ ಸರ್ವಶಕ್ತಿಸಂಪನ್ನನಿಗೆ ಹಾಗೂ ಮಾಧುರ್ಯನಿಧಿ ಭಗವಂತನಲ್ಲಿ ನಾನು ಶರಣಾಗಿದ್ದೇನೆ. ॥ ೨೯ ॥

ಶ್ರೀಶುಕದೇವರು ಹೇಳುತ್ತಾರೆ – ಪರೀಕ್ಷಿತನೇ! ಗಜೇಂದ್ರನು ಯಾವುದೇ ಭೇದಭಾವವಿಲ್ಲದೆ ನಿರ್ವಿಶೇಷರೂಪದಿಂದ ಭಗವಂತನ ಸ್ತುತಿಯನ್ನು ಮಾಡಿದ್ದನು. ಅದಕ್ಕಾಗಿ ಭಿನ್ನ-ಭಿನ್ನ ನಾಮ-ರೂಪಗಳನ್ನು ತಮ್ಮ ಸ್ವರೂಪವೆಂದು ತಿಳಿದಿರುವ ಬ್ರಹ್ಮಾದಿದೇವತೆಗಳು ಆವನ ರಕ್ಷಣೆಗೆ ಬರಲಿಲ್ಲ, ಏಕೆಂದರೆ, ಅವರ ನಾಮಗಳನ್ನು ನಿರ್ದೇಶಿಸಿ ಆವನು ಪ್ರಾರ್ಥಿಸಿರಲಿಲ್ಲ. ಆ ಸಮಯದಲ್ಲಿ ಸರ್ವಾತ್ಮನಾದ ಕಾರಣ ಸರ್ವದೇವಸ್ವರೂಪನಾದ ಸ್ವತಃ ಭಗವಾನ್ ಶ್ರೀಹರಿಯು ಪ್ರಕಟನಾದನು. ॥ ೩೦ ॥ ವಿಶ್ವದ ಏಕಮಾತ್ರ ಆಧಾರನಾದ ಭಗವಂತನು – ಗಜೇಂದ್ರನು ಅತ್ಯಂತ ಪೀಡಿತನಾಗಿದ್ದಾನೆಂದು ನೋಡಿದನು. ಆದ್ದರಿಂದ ಆವನ ಸ್ತುತಿಯನ್ನು ಕೇಳಿ ಚಕ್ರಧಾರಿಯಾದ ಶ್ರೀಹರಿಯು ವೇದಮಯ, ಗರುಡನಮೇಲೆ ಏರಿ, ಅತೀವ ಶೀಘ್ರವಾಗಿ ಗಜೇಂದ್ರನು ಭಾರೀ ಸಂಕಟದಲ್ಲಿ ಬಿದ್ದಲ್ಲಿಗೆ ಆಗಮಿಸಿದನು. ಆವನೊಡನೆ ಭಗವಂತನನ್ನು ಸ್ತುತಿಮಾಡುತ್ತಾ ಎಲ್ಲ ದೇವತೆಗಳೂ ಬಂದರು. ॥ ೩೦ ॥

ಸೋಽನ್ತಃಸರಸ್ಯುರುಬಲೇನ ಗೃಹೀತ ಆರ್ತೋ
ದೃಷ್ಟ್ವಾ ಗರುತ್ಮತಿ ಹರಿಂ ಖ ಉಪಾತ್ತಚಕ್ರಮ್ ।
ಉತ್ಕ್ಷಿಪ್ಯ ಸಾಂಬುಜಕರಂ ಗಿರಮಾಹ ಕೃಚ್ಛ್ರಾ-
ನ್ನಾರಾಯಣಾಖಿಲಗುರೋ ಭಗವನ್ನಮಸ್ತೇ ॥ ೩೨ ॥

ಸರೋವರದೊಳಗೆ ಬಲಿಷ್ಠವಾದ ಮೊಸಳೆಯು ಗಜೇಂದ್ರನನ್ನು ಹಿಡಿದುಕೊಂಡಿತ್ತು. ಗಜೇಂದ್ರನು ಅತ್ಯಂತ ವ್ಯಾಕುಲನಾಗಿದ್ದನು. ಆಕಾಶದಲ್ಲಿ ಗರುಡನ ಹೆಗಲೇರಿ, ಕೈಯಲ್ಲಿ ಸುದರ್ಶನ ಚಕ್ರವನ್ನು ಧರಿಸಿರುವ ಶ್ರೀಹರಿಯು ಬರುತ್ತಿರುವುದನ್ನು ಕಂಡು ಗಜೇಂದ್ರನು ತನ್ನ ಸೊಂಡಿಲಿನಿಂದ ಒಂದು ಸುಂದರ ಕಮಲ ಪುಷ್ಪವನ್ನು ಮೇಲೆತ್ತಿಕೊಂಡು ಅತೀವ ಕಷ್ಟದಿಂದ 'ನಾರಾಯಣಾ! ಜಗದ್ಗುರುವೇ! ಭಗವಂತಾ! ನಿನಗೆ ನಮಸ್ಕಾರವು' ಎಂದು ಸ್ತುತಿಸಿದನು. ॥ ೩೨ ॥ ಗಜೇಂದ್ರನು ಮೊಸಳೆಯಿಂದ ಪೀಡಿಸಲ್ಪಡುತ್ತಿರುವುದನ್ನು ನೋಡಿದೊಡನೆಯೇ ದಯಾಮಯನಾದ ನಾರಾಯಣನು ಗರುಡನಿಂದ ಥಟ್ಟನೆ ಕೆಳಗಿಳಿದು ಗಜೇಂದ್ರನೊಡನೆ ಅವನ ಕಾಲನ್ನು ಹಿಡಿದಿದ್ದ ಮೊಸಳೆಯನ್ನು ಅತಿಶೀಘ್ರವಾಗಿ ಸರೋವರದಿಂದ ಹೊರಗೆ ಎಳೆದುಕೊಂಡನು. ಮರುಕ್ಷಣದಲ್ಲೇ ಎಲ್ಲ ದೇವತೆಗಳು ನೋಡುತ್ತಿದ್ದಂತೆಯೇ ಶ್ರೀಹರಿಯು ಚಕ್ರಾಯುಧದಿಂದ ಮೊಸಳೆಯ ಬಾಯನ್ನು ಸೀಳಿಹಾಕಿ ಗಜೇಂದ್ರನನ್ನು ಬಿಡಿಸಿದನು. ॥ ೩೩ ॥

ತಂ ವೀಕ್ಷ್ಯ ಪೀಡಿತಮಜಃ ಸಹಸಾವತೀರ್ಯ
ಸಗ್ರಾಹಮಾಶು ಸರಸಃ ಕೃಪಯೋಜ್ಜಹಾರ ।
ಗ್ರಾಹಾದ್ವಿಪಾಟಿತಮುಖಾದರಿಣಾ ಗಜೇಂದ್ರಂ
ಸಂಪಶ್ಯತಾಂ ಹರಿರಮೂಮುಚದುಸ್ರಿಯಾಣಾಮ್ ॥ ೩೩ ॥

ಮೂರನೆಯ ಅಧ್ಯಾಯವು ಮುಗಿಯಿತು. ॥ ೩ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಮ್ ಅಷ್ಟಮಸ್ಕಂಧೇ ಗಜೇಂದ್ರಮೋಕ್ಷಣೇ ತೃತೀಯೋಽಧ್ಯಾಯಃ ॥ ೩ ॥

ನಾಲ್ಕನೆಯ ಅಧ್ಯಾಯ

ಗಜೇಂದ್ರ ಮತ್ತು ಮೊಸಳೆಯ ಪೂರ್ವಚರಿತ್ರೆ ಹಾಗೂ ಅವರ ಉದ್ಧಾರ

ಶ್ರೀಶುಕ ಉವಾಚ

ತದಾ ದೇವರ್ಷಿಗಂಧರ್ವಾ ಬ್ರಹ್ಮೇಶಾನಪುರೋಗಮಾಃ ।
ಮುಮುಚುಃ ಕುಸುಮಾಸಾರಂ ಶಂಸಂತಃ ಕರ್ಮ ತದ್ಧರೇಃ ॥ ೧ ॥

ನೇದುರ್ದುಂದುಭಯೋ ದಿವ್ಯಾ ಗಂಧರ್ವಾ ನನೃತುರ್ಜಗುಃ ।
ಋಷಯಶ್ಚಾರಣಾಃ ಸಿದ್ಧಾಸ್ತುಷ್ಟುವುಃ ಪುರುಷೋತ್ತಮಮ್ ॥ ೨ ॥

ಯೋಽಸೌ ಗ್ರಾಹಃ ಸ ವೈ ಸದ್ಯಃ ಪರಮಾಶ್ಚರ್ಯರೂಪಧೃಕ್ ।
ಮುಕ್ತೋ ದೇವಲಶಾಪೇನ ಹೂಹೂರ್ಗಂಧರ್ವಸತ್ತಮಃ ॥ ೩ ॥

ಪ್ರಣಮ್ಯ ಶಿರಸಾಧೀಶಮುತ್ತಮಶ್ಲೋಕಮವ್ಯಯಮ್ ।
ಅಗಾಯತ ಯಶೋಧಾಮ ಕೀರ್ತನ್ಯಗುಣಸತ್ಕಥಮ್ ॥ ೪ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿದ್ರಾಜನೇ! ಆ ಸಮಯದಲ್ಲಿ ಬ್ರಹ್ಮ-ರುದ್ರರೇ ಮುಂತಾದ ದೇವತೆಗಳೂ, ಗಂಧರ್ವರೂ, ಋಷಿಗಳೂ ಶ್ರೀಹರಿಯ ಈ ಅದ್ಭುತ ಕಾರ್ಯವನ್ನು ಪ್ರಶಂಸಿಸುತ್ತಾ ಹೂಮಳೆಯನ್ನು ಸುರಿಸತೊಡಗಿದರು. ॥ ೧ ॥ ಸ್ವರ್ಗದಲ್ಲಿ ದೇವದುಂದುಭಿಗಳು ಮೊಳಗಿದವು. ಗಂಧರ್ವಾಪ್ಸರೆಯರು ನೃತ್ಯಗಾನವನ್ನು ಮಾಡತೊಡಗಿದರು. ಋಷಿ-ಚಾರಣ-ಸಿದ್ಧರು ಭಗವಾನ್ ಶ್ರೀಪುರುಷೋತ್ತಮನನ್ನು ಸ್ತುತಿಸತೊಡಗಿದರು. ॥ ೨ ॥ ಗಜೇಂದ್ರನ ಕಾಲನ್ನು ಹಿಡಿದುಕೊಂಡಿದ್ದ ಆ ಮೊಸಳೆಯು ಭಗವಂತನ ಚಕ್ರಸ್ಪರ್ಶಗುತ್ತಲೇ ಪರಮ ಆಶ್ಚರ್ಯಮಯ ದಿವ್ಯ ಶರೀರವನ್ನು ಹೊಂದಿತು. ಇವನು ಮೊದಲು ದೇವಲರ ಶಾಪದಿಂದ ಮೊಸಳೆಯಾಗಿದ್ದ ಹೂಹೂ ಎಂಬ ಗಂಧರ್ವನು. ಈಗ ಭಗವಂತನ ಕೃಪೆಯಿಂದ ಅವನು ಮುಕ್ತನಾದನು. ॥ ೩ ॥ ಅವನು ಸರ್ವೇಶ್ವರನಾದ ಶ್ರೀಭಗವಂತನ ಚರಣಗಳಲ್ಲಿ ಶಿರವನ್ನಿಟ್ಟು ಪ್ರಣಾಮಗೈದು, ಅವನ ಸತ್ಕೀರ್ತಿಯನ್ನು ಗಾನಮಾಡತೊಡಗಿದನು. ವಾಸ್ತವಿಕವಾಗಿ ಅವಿನಾಶೀ ಭಗವಂತನೇ ಸರ್ವಶ್ರೇಷ್ಠ ಕೀರ್ತಿಯಿಂದ ಸಂಪನ್ನನಾಗಿರುವನು. ಅವನ ಗುಣ ಗಳು ಮತ್ತು ಮನೋಹರ ಲೀಲೆಗಳೇ ಗಾನಮಾಡಲು ಯೋಗ್ಯವಾದುವುಗಳು. ॥ ೪ ॥

ಸೋಽನುಕಂಪಿತ ಈಶೇನ ಪರಿಕ್ರಮ್ಯ ಪ್ರಣಮ್ಯ ತಮ್ ।
ಲೋಕಸ್ಯ ಪಶ್ಯತೋ ಲೋಕಂ ಸ್ವಮಗಾನ್ಮುಕ್ತಕಿಲ್ಬಿಷಃ ॥ ೫ ॥

ಗಜೇಂದ್ರೋ ಭಗವತ್ಸ್ಪರ್ಶಾದ್ವಿಮುಕ್ತೋಽಜ್ಞಾನಬಂಧನಾತ್ ।
ಪ್ರಾಪ್ತೋ ಭಗವತೋ ರೂಪಂ ಪೀತವಾಸಾಶ್ಚತುರ್ಭುಜಃ ॥ ೬ ॥

ಸ ವೈ ಪೂರ್ವಮಭೂದ್ರಾಜಾ ಪಾಂಡ್ಯೋ ದ್ರವಿಡಸತ್ತಮಃ ।
ಇಂದ್ರದ್ಯುಮ್ನ ಇತಿ ಖ್ಯಾತೋ ವಿಷ್ಣುವ್ರತಪರಾಯಣಃ ॥ ೭ ॥

ಸ ಏಕದಾಽಽರಾಧನಕಾಲ ಆತ್ಮವಾನ್
ಗೃಹೀತಮೌನವ್ರತ ಈಶ್ವರಂ ಹರಿಮ್ ।
ಜಟಾಧರಸ್ತಾಪಸ ಆಪ್ಲುತೋಽಚ್ಯುತಂ
ಸಮರ್ಚಯಾಮಾಸ ಕುಲಾಚಲಾಶ್ರಮಃ ॥ ೮ ॥

ಯದೃಚ್ಛಯಾ ತತ್ರ ಮಹಾಯಶಾ ಮುನಿಃ
ಸಮಾಗಮಚ್ಛಿಷ್ಯಗಣೈಃ ಪರಿಶ್ರಿತಃ ।
ತಂ ವೀಕ್ಷ್ಯ ತೂಷ್ಣೀಮಕೃತಾರ್ಹಣಾದಿಕಂ
ರಹಸ್ಯುಪಾಸೀನಮೃಷಿಶ್ಚುಕೋಪ ಹ ॥ ೯ ॥

ತಸ್ಮಾ ಇಮಂ ಶಾಪಮದಾದಸಾಧು-
ರಯಂ ದುರಾತ್ಮಾಕೃತಬುದ್ಧಿರದ್ಯ ।
ವಿಪ್ರಾವಮಂತಾ ವಿಶತಾಂ ತಮೋಽಂಧಂ
ಯಥಾ ಗಜಃ ಸ್ತಬ್ಧಮತಿಃ ಸ ಏವ ॥ ೧೦ ॥

ಶ್ರೀಶುಕ ಉವಾಚ

ಏವಂ ಶಪ್ತ್ವಾ ಗತೋಽಗಸ್ತ್ಯೋ ಭಗವಾನ್ನೃಪ ಸಾನುಗಃ ।
ಇಂದ್ರದ್ಯುಮ್ನೋಽಪಿ ರಾಜರ್ಷಿರ್ದಿಷ್ಟಂ ತದುಪಧಾರಯನ್ ॥ ೧೧ ॥

ಆಪನ್ನಃ ಕೌಂಜರೀಂ ಯೋನಿಮಾತ್ಮಸ್ಮೃತಿವಿನಾಶಿನೀಮ್ ।
ಹರ್ಯರ್ಚನಾನುಭಾವೇನ ಯದ್ಗಜತ್ವೇಽಪ್ಯನುಸ್ಮೃತಿಃ ॥ ೧೨ ॥

ಏವಂ ವಿಮೋಕ್ಷ್ಯ ಗಜಯೂಥಪಮಬ್ಜನಾಭ-
ಸ್ತೇನಾಪಿ ಪಾರ್ಷದಗತಿಂ ಗಮಿತೇನ ಯುಕ್ತಃ ।
ಗಂಧರ್ವಸಿದ್ಧವಿಬುಧೈರುಪಗೀಯಮಾನ-
ಕರ್ಮಾದ್ಭುತಂ ಸ್ವಭವನಂ ಗರುಡಾಸನೋಽಗಾತ್ ॥ ೧೩ ॥

ಏತನ್ಮಹಾರಾಜ ತವೇರಿತೋ ಮಯಾ
ಕೃಷ್ಣಾನುಭಾವೋ ಗಜರಾಜಮೋಕ್ಷಣಮ್ ।
ಸ್ವರ್ಗ್ಯಂ ಯಶಸ್ಯಂ ಕಲಿಕಲ್ಮಷಾಪಹಂ
ದುಃಸ್ವಪ್ನನಾಶಂ ಕುರುವರ್ಯ ಶೃಣ್ವತಾಮ್ ॥ ೧೪ ॥

ಭಗವಂತನ ಕೃಪಾಪೂರ್ಣ ಸ್ಪರ್ಶದಿಂದ ಅವನ ಪಾಪಗಳೆಲ್ಲ ನಾಶವಾಗಿ ಹೋದುವು. ಅವನು ಭಗವಂತನಿಗೆ ಪ್ರದಕ್ಷಿಣೆ ಬಂದು ಅವನ ಚರಣಗಳಲ್ಲಿ ವಂದಿಸಿಕೊಂಡು ಎಲ್ಲರೂ ನೋಡು-ನೋಡುತ್ತಿರುವಂತೆ ತನ್ನ ಲೋಕಕ್ಕೆ ತೆರಳಿದನು. ॥ ೫ ॥

ಗಜೇಂದ್ರನೂ ಭಗವಂತನ ಸ್ಪರ್ಶಮಾತ್ರದಿಂದಲೇ ಅಜ್ಞಾನದ ಬಂಧನದಿಂದ ಮುಕ್ತನಾದನು. ಅವನಿಗೆ ಭಗವಂತನ ಸಾರೂಪ್ಯವು ಪ್ರಾಪ್ತವಾಯಿತು. ಅವನು ಪೀತಾಂಬರಧಾರಿಯಾಗಿ ಚತುರ್ಭುಜದಿಂದ ಕಂಗೊಳಿಸಿದನು. ॥ ೬ ॥ ಗಜೇಂದ್ರನು ಹಿಂದಿನ ಜನ್ಮದಲ್ಲಿ ದ್ರವಿಡದೇಶದ ಪಾಂಡ್ಯವಂಶೀಯ ರಾಜನಾಗಿದ್ದನು. ಅವನಿಗೆ ಇಂದ್ರದ್ಯುಮ್ನ ಎಂಬ ಹೆಸರಿತ್ತು. ಅವನು ಭಗವಂತನ ಶ್ರೇಷ್ಠ ಉಪಾಸಕನಾಗಿದ್ದು ಖ್ಯಾತನಾಗಿದ್ದನು. ॥ ೭ ॥ ಒಮ್ಮೆ ಇಂದ್ರದ್ಯುಮ್ನ ಮಹಾರಾಜನು ರಾಜ್ಯವೈಭವಗಳನ್ನು ಬಿಟ್ಟು ಮಲಯ ಪರ್ವತದಲ್ಲಿ ಇರುತ್ತಿದ್ದನು. ಅವನು ಜಟೆಗಳನ್ನು ಬೆಳೆಸಿ, ತಪಸ್ವಿಯ ವೇಷವನ್ನು ಧರಿಸಿದ್ದನು. ಒಂದು ದಿನ ಸ್ನಾನಾನಂತರ ಪೂಜೆಯ ಸಮಯ ಮನಸ್ಸನ್ನು ಏಕಾಗ್ರಗೊಳಿಸಿ, ಮೌನವ್ರತವನ್ನಾಂತು ಅವನು ಸರ್ವಶಕ್ತಿಸಂಪನ್ನ ಭಗವಂತನನ್ನು ಆರಾಧಿಸತೊಡಗಿದ್ದನು. ॥ ೮ ॥ ಅದೇ ಸಮಯಕ್ಕೆ ದೈವಯೋಗದಿಂದ ಪರಮ ತಪಸ್ವಿಗಳಾದ ಅಗಸ್ತ್ಯಮುನಿಗಳು ತನ್ನ ಶಿಷ್ಯಸಂದೋಹದೊಂದಿಗೆ ಅಲ್ಲಿಗೆ ಆಗಮಿಸಿದರು. ಇಂದ್ರದ್ಯುಮ್ನನು ಪ್ರಜಾಪಾಲನೆ, ಗೃಹಸ್ಥರಿಗೆ ಉಚಿತವಾದ ಅತಿಥಿಸೇವೆ ಮುಂತಾದ ಧರ್ಮಗಳನ್ನು ತ್ಯಜಿಸಿ, ತಪಸ್ವಿಗಳಂತೆ ಏಕಾಂತದಲ್ಲಿ ಮೌನವಾಗಿ ಕುಳಿತು ಉಪಾಸನೆ ಮಾಡುವುದನ್ನು ಕಂಡ ಅವರು ರಾಜನ ಮೇಲೆ ಕ್ರೋಧಗೊಂಡರು. ॥ ೯ ॥ "ಈ ರಾಜನು ಗುರುಹಿರಿಯರಿಂದ ಶಿಕ್ಷಣವನ್ನು ಗ್ರಹಿಸಲಿಲ್ಲ, ಅಭಿಮಾನಕ್ಕೆ ವಶನಾಗಿ ಪರೋಪಕಾರದಿಂದ ನಿವೃತ್ತನಾಗಿ ಮನಬಂದಂತೆ ಮಾಡುತ್ತಿದ್ದಾನೆ. ಬ್ರಾಹ್ಮಣರಿಗೆ ಅಪಮಾನಮಾಡುವ ಇವನು ಆನೆಯಂತೆ ಜಡಬುದ್ಧಿಯವನಾಗಿದ್ದಾನೆ. ಆದರಿಂದ ಇವನಿಗೆ ಘೋರ ಅಜ್ಞಾನಮಯ ಆನೆಯ ಜನ್ಮವು ದೊರೆಯಲಿ" ಎಂದು ಶಾಪವನ್ನು ಕೊಟ್ಟರು. ॥ ೧೦ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ! ಶಾಪಾನುಗ್ರಹ ಸಮರ್ಥರಾದ ಅಗಸ್ತ್ಯಋಷಿಗಳು ಇಂದ್ರದ್ಯುಮ್ನನಿಗೆ ಹೀಗೆ ಶಾಪವನ್ನು ಕೊಟ್ಟು ಶಿಷ್ಯರೊಡನೆ ಅಲ್ಲಿಂದ ಹೊರಟುಹೋದರು. ಇದು ನನ್ನ ಪ್ರಾರಬ್ಧವೇ ಹೀಗಿತ್ತು ಎಂದು ರಾಜರ್ಷಿಯು ಸಂತೋಷವಾಗಿ ಶಾಪವನ್ನು ಸ್ವೀಕರಿಸಿದನು. ॥ ೧೧ ॥ ಇದಾದ ಬಳಿಕ ಆತ್ಮವಿಸ್ಮೃತಿಯನ್ನು ಗೊಳಿಸುವ ಆನೆಯ ಯೋನಿಯು ರಾಜನಿಗೆ ಪ್ರಾಪ್ತವಾಯಿತು. ಆದರೆ ಅವನು ಆನೆಯಾಗಿದ್ದರೂ ಭಗವಂತನ ಆರಾಧನೆಯ ಪ್ರಭಾವದಿಂದ ಅವನಿಗೆ ಭಗವಂತನ ಸ್ಮೃತಿಯು ಹಿಂದಿನಂತೆಯೇ ಇತ್ತು. ॥ ೧೨ ॥ ಭಗವಾನ್ ಶ್ರೀಹರಿಯು ಹೀಗೆ ಗಜೇಂದ್ರನ ಉದ್ಧಾರಮಾಡಿ ಅವನನ್ನು ತನ್ನ ಪಾರ್ಷದನನ್ನಾಗಿಸಿಕೊಂಡನು. ಗಂಧರ್ವರು, ಸಿದ್ಧರು, ದೇವತೆಗಳು ಶ್ರೀಹರಿಯ ಈ ಲೀಲೆಯನ್ನು ಹಾಡತೊಡಗಿದರು ಮತ್ತು ಅವನು ಪಾರ್ಷದರೂಪೀ ಗಜೇಂದ್ರನೊಂದಿಗೆ ಗರುಡವಾಹನನಾಗಿ ಅಲೌಕಿಕವಾದ ತನ್ನ ಲೋಕಕ್ಕೆ ಹೊರಟುಹೋದನು. ॥ ೧೩ ॥ ಕುರುವಂಶಶಿರೋಮಣಿ ಪರೀಕ್ಷಿತನೇ! ನಾನು ನಿನಗೆ ಭಗವಾನ್ ಶ್ರೀಕೃಷ್ಣನ ಮಹಿಮೆಯನ್ನು ಹಾಗೂ ಗಜೇಂದ್ರನ ಉದ್ಧಾರದ

ಯಥಾನುಕೀರ್ತಯಂತ್ಯೇತಚ್ಛ್ರೇಯಸ್ಕಾಮಾ ದ್ವಿಜಾತಯಃ ।
ಶುಚಯಃ ಪ್ರಾತರುತ್ಥಾಯ ದುಃಸ್ವಪ್ನಾದ್ಯುಪಶಾಂತಯೇ
॥ ೧೫ ॥

ಇದಮಾಹ ಹರಿಃ ಪ್ರೀತೋ ಗಜೇಂದ್ರಂ ಕುರುಸತ್ತಮ ।
ಶೃಣ್ವತಾಂ ಸರ್ವಭೂತಾನಾಂ ಸರ್ವಭೂತಮಯೋ ವಿಭುಃ
॥ ೧೬ ॥

ಶ್ರೀಭಗವಾನುವಾಚ

ಯೇ ಮಾಂ ತ್ವಾಂ ಚ ಸರಶ್ಚೇದಂ ಗಿರಿಕಂದರಕಾನನಮ್ ।
ವೇತ್ರ ಕೀಚಕವೇಣೂನಾಂ ಗುಲ್ಮಾನಿ ಸುರಪಾದಪಾನ್
॥ ೧೭ ॥

ಶೃಂಗಾಣೀಮಾನಿ ಧಿಷ್ಣ್ಯಾನಿ ಬ್ರಹ್ಮಣೋ ಮೇ ಶಿವಸ್ಯ ಚ ।
ಕ್ಷೀರೋದಂ ಮೇ ಪ್ರಿಯಂ ಧಾಮ ಶ್ವೇತದ್ವೀಪಂ ಚ ಭಾಸ್ವರಮ್
॥ ೧೮ ॥

ಶ್ರೀವತ್ಸಂ ಕೌಸ್ತುಭಂ ಮಾಲಾಂ ಗದಾಂ ಕೌಮೋದಕೀಂ ಮಮ ।
ಸುದರ್ಶನಂ ಪಾಂಚಜನ್ಯಂ ಸುಪರ್ಣಂ ಪತಗೇಶ್ವರಮ್
॥ ೧೯ ॥

ಶೇಷಂ ಚ ಮತ್ಕಲಾಂ ಸೂಕ್ಷ್ಮಾಂ
ಶ್ರಿಯಂ ದೇವೀಂ ಮದಾಶ್ರಯಾಮ್ ।
ಬ್ರಹ್ಮಾಣಂ ನಾರದಮೃಷಿಂ
ಭವಂ ಪ್ರಹ್ಲಾದಮೇವ ಚ ॥ ೨೦ ॥

ಮತ್ಸ್ಯಕೂರ್ಮವರಾಹಾದ್ಯೈರವತಾರೈಃ ಕೃತಾನಿ ಮೇ ।
ಕರ್ಮಾಣ್ಯನಂತಪುಣ್ಯಾನಿ ಸೂರ್ಯಂ ಸೋಮಂ ಹುತಾಶನಮ್
॥ ೨೧ ॥

ಪ್ರಣವಂ ಸತ್ಯಮವ್ಯಕ್ತಂ ಗೋವಿಪ್ರಾನ್ ಧರ್ಮಮವ್ಯಯಮ್ ।
ದಾಕ್ಷಾಯಣೀರ್ಧರ್ಮಪತ್ನೀಃ ಸೋಮಕಶ್ಯಪಯೋರಪಿ
॥ ೨೨ ॥

ಗಂಗಾಂ ಸರಸ್ವತೀಂ ನಂದಾಂ ಕಾಲಿಂದೀಂ ಸಿತವಾರಣಮ್ ।
ಧ್ರುವಂ ಬ್ರಹ್ಮಋಷೀನ್ಸಪ್ತ ಪುಣ್ಯಶ್ಲೋಕಾಂಶ್ಚ ಮಾನವಾನ್
॥ ೨೩ ॥

ಉತ್ಥಾಯಾಪರರಾತ್ರಾಂತೇ ಪ್ರಯತಾಃ ಸುಸಮಾಹಿತಾಃ ।
ಸ್ಮರಂತಿ ಮಮ ರೂಪಾಣಿ ಮುಚ್ಯಂತೇ ಹ್ಯೇನಸೋಽಖಿಲಾತ್
॥ ೨೪ ॥

ಯೇ ಮಾಂ ಸ್ತುವಂತ್ಯನೇನಾಂಗ ಪ್ರತಿಬುಧ್ಯ ನಿಶಾತ್ಯಯೇ ।
ತೇಷಾಂ ಪ್ರಾಣಾತ್ಯಯೇ ಚಾಹಂ ದದಾಮಿ ವಿಮಲಾಂ ಮತಿಮ್
॥ ೨೫ ॥

ಶ್ರೀಶುಕ ಉವಾಚ

ಇತ್ಯಾದಿಶ್ಯ ಹೃಷೀಕೇಶಃ ಪ್ರಧ್ಮಾಯ ಜಲಜೋತ್ತಮಮ್ ।
ಹರ್ಷಯನ್ವಿಬುಧಾನೀಕಮಾರುರೋಹ ಖಗಾಧಿಪಮ್
॥ ೨೬ ॥

ಕಥೆಯನ್ನು ಹೇಳಿದೆನು. ಈ ಕಥಾಪ್ರಸಂಗವು ಕೇಳುವವರ ಕಲಿಮಲ ಮತ್ತು ದುಃಸ್ವಪ್ನವನ್ನು ಇಲ್ಲವಾಗಿಸಿ, ಅವರಿಗೆ ಯಶಸ್ಸು, ಉನ್ನತಿ ಹಾಗೂ ಸ್ವರ್ಗವನ್ನು ಕೊಡುವಂತಹುದು. ॥ ೧೪ ॥ ಅದಕ್ಕಾಗಿ ಶ್ರೇಯಸ್ಸನ್ನು ಬಯಸುವ ದ್ವಿಜರು ದುಃಸ್ವಪ್ನಾದಿಗಳ ಶಾಂತಿಗಾಗಿ ಪ್ರಾತಃಕಾಲ ಎದ್ದೊಡನೆಯೇ ಪವಿತ್ರರಾಗಿ ಇದನ್ನು ಪಾರಾಯಣ ಮಾಡುತ್ತಾರೆ. ॥ ೧೫ ॥ ಪರೀಕ್ಷಿತನೇ! ಗಜೇಂದ್ರನ ಸ್ತುತಿಯಿಂದ ಪ್ರಸನ್ನನಾದ ಸರ್ವವ್ಯಾಪಕನೂ, ಸರ್ವಸ್ವರೂಪನೂ ಆದ ಭಗವಾನ್ ಶ್ರೀಹರಿಯು ಎಲ್ಲ ಜನರು ಕೇಳುವಂತೆ ಈ ಮಾತನ್ನು ಹೇಳಿದ್ದನು. ॥ ೧೬ ॥

ಶ್ರೀಭಗವಂತನು ಹೇಳಿದನು – ಗಜೇಂದ್ರನೇ! ಯಾವ ಜನರು ಬ್ರಾಹ್ಮೀಮುಹೂರ್ತದಲ್ಲೆದ್ದು ಇಂದ್ರಿಯನಿಗ್ರಹಪೂರ್ವಕ ವಾಗಿ, ಏಕಾಗ್ರಮನಸ್ಸಿನಿಂದ ನನ್ನನ್ನು-ನಿನ್ನನ್ನು ಹಾಗೂ ಈ ಸರೋವರ, ಪರ್ವತ ಮತ್ತು ಗುಹೆಗಳನ್ನು, ವನವನ್ನೂ, ಬೆತ್ತ-ಬಿದಿರುಗಳ ಪೊದರುಗಳನ್ನು, ಇಲ್ಲಿಯ ದಿವ್ಯ ವೃಕ್ಷಗಳನ್ನೂ, ಪರ್ವತ ಶಿಖರಗಳನ್ನೂ, ನನ್ನ-ಬ್ರಹ್ಮದೇವರ-ಶಿವನ ನಿವಾಸಸ್ಥಾನಗಳನ್ನು ನನಗೆ ಪ್ರಿಯವಾದ ಕ್ಷೀರಸಾಗರ, ಪ್ರಕಾಶಮಯ ಶ್ವೇತದ್ವೀಪವನ್ನು, ಶ್ರೀವತ್ಸ, ಕೌಸ್ತುಭಮಣಿ, ವನಮಾಲೆ, ನನ್ನ ಕೌಮೋದಕೀ ಗದೆ, ಸುದರ್ಶನ ಚಕ್ರ, ಪಾಂಚಜನ್ಯ ಶಂಖ ಇವುಗಳನ್ನೂ, ಪಕ್ಷಿರಾಜ ಗರುಡ, ನನ್ನ ಸೂಕ್ಷ್ಮವಾದ ಕಲಾಸ್ವರೂಪವಾದ ಆದಿಶೇಷನನ್ನು, ನನ್ನಲ್ಲೇ ಆಶ್ರಿತಳಾಗಿರುವ ಲಕ್ಷ್ಮೀದೇವಿಯನ್ನು, ಬ್ರಹ್ಮದೇವರನ್ನು, ದೇವರ್ಷಿನಾರದರನ್ನೂ, ಶಂಕರನನ್ನು ಹಾಗೂ ಭಕ್ತರಾಜ ಪ್ರಹ್ಲಾದನನ್ನೂ, ಮತ್ಸ್ಯ, ಕೂರ್ಮ, ವರಾಹ ಮುಂತಾದ ಅವತಾರಗಳಲ್ಲಿ ನನ್ನಿಂದ ಮಾಡಲ್ಪಟ್ಟ ಅನಂತ ಪುಣ್ಯಮಯ ಚರಿತ್ರೆಗಳನ್ನು, ಸೂರ್ಯ, ಚಂದ್ರ, ಅಗ್ನಿ ಓಂಕಾರ, ಸತ್ಯ, ಮೂಲಪ್ರಕೃತಿ, ಗೋವು, ಬ್ರಾಹ್ಮಣರು, ಅವಿನಾಶೀ ಸನಾತನಧರ್ಮವನ್ನು, ಸೋಮ, ಕಶ್ಯಪ ಇವರನ್ನು ಮತ್ತು ಧರ್ಮನ ಪತ್ನೀ ದಕ್ಷಕನ್ಯೆಯರನ್ನು, ಗಂಗಾ, ಸರಸ್ವತೀ, ಅಲಕನಂದಾ, ಯಮುನಾ, ಗಜರಾಜ, ಐರಾವತ, ಭಕ್ತಶಿರೋಮಣಿ ಧ್ರುವ, ಏಳು ಸಪ್ತರ್ಷಿಗಳನ್ನು, ಪುಣ್ಯಕೀರ್ತಿ (ನಳ, ಯುಧಿಷ್ಠಿರ, ಜನಕ ಮುಂತಾದ) ಮಹಾಪುರುಷರನ್ನು ಹೀಗೆ ಇವರೆಲ್ಲರನ್ನು ಸ್ಮರಿಸುತ್ತಾರೋ, ಅವರು ಸಮಸ್ತ ಪಾಪಗಳಿಂದ ಬಿಡುಗಡೆ ಹೊಂದುವರು. ಏಕೆಂದರೆ, ಇವೆಲ್ಲವೂ ನನ್ನ ಸ್ವರೂಪಗಳೇ ಆಗಿವೆ. ॥ ೧೭-೨೪ ॥ ಪ್ರಿಯ ಗಜೇಂದ್ರನೇ! ಬ್ರಾಹ್ಮೀ ಮುಹೂರ್ತದಲ್ಲಿ ಎಚ್ಚರಗೊಂಡು ನೀನು ಮಾಡಿದ ಸ್ತೋತ್ರದಿಂದ ನನ್ನನ್ನು ಸ್ತುತಿಸುವವರ ಮೃತ್ಯುವಿನ ಸಮಯದಲ್ಲಿ ಅವರಿಗೆ ನಾನು ನಿರ್ಮಲ ಬುದ್ಧಿಯನ್ನು ಕರುಣಿಸುವೆನು. ॥ ೨೫ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ! ಭಗವಾನ್ ಶ್ರೀಕೃಷ್ಣನು ಹೀಗೆ ಹೇಳಿ, ದೇವತೆಗಳನ್ನು ಆನಂದಪಡಿಸುತ್ತಾ ತನ್ನ ಶ್ರೇಷ್ಠವಾದ ಶಂಖವನ್ನು ಊದಿದನು ಹಾಗೂ ಗರುಡನನ್ನು ಏರಿದನು. ॥ ೨೬ ॥

ನಾಲ್ಕನೆಯ ಅಧ್ಯಾಯವು ಮುಗಿಯಿತು. ॥ ೪ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಅಷ್ಟಮ ಸ್ಕಂಧೇ ಗಜೇಂದ್ರಮೋಕ್ಷಣಂ ನಾಮ ಚತುರ್ಥೋಽಧ್ಯಾಯಃ ॥ ೪ ॥

ಐದನೆಯ ಅಧ್ಯಾಯ

ದೇವತೆಗಳೆಲ್ಲರೂ ಬ್ರಹ್ಮನ ಬಳಿಗೆ ಹೋದುದು, ಬ್ರಹ್ಮದೇವರು ಭಗವಂತನನ್ನು ಸ್ತುತಿಸಿದುದು

ಶ್ರೀಶುಕ ಉವಾಚ

ರಾಜನ್ನುದಿತಮೇತತ್ತೇ ಹರೇಃ ಕರ್ಮಾಘನಾಶನಮ್ ।
ಗಜೇಂದ್ರಮೋಕ್ಷಣಂ ಪುಣ್ಯಂ ರೈವತಂ ತ್ವಂತರಂ ಶೃಣು ॥ ೧ ॥

ಪಂಚಮೋ ರೈವತೋ ನಾಮ ಮನುಸ್ತಾಮಸಸೋದರಃ ।
ಬಲಿವಿಂಧ್ಯಾದಯಸ್ತಸ್ಯ ಸುತಾ ಅರ್ಜುನಪೂರ್ವಕಾಃ ॥ ೨ ॥

ವಿಭುರಿಂದ್ರಃ ಸುರಗಣಾ ರಾಜನ್ ಭೂತರಯಾದಯಃ ।
ಹಿರಣ್ಯರೋಮಾ ವೇದಶಿರಾ ಊರ್ಧ್ವಬಾಹ್ವಾದಯೋ ದ್ವಿಜಾಃ ॥ ೩ ॥

ಪತ್ನೀ ವಿಕುಂಠಾ ಶುಭ್ರಸ್ಯ ವೈಕುಂಠೈಃ ಸುರಸತ್ತಮೈಃ ।
ತಯೋಃ ಸ್ವಕಲಯಾ ಜಜ್ಞೇ ವೈಕುಂಠೋ ಭಗವಾನ್ಸ್ವಯಮ್ ॥ ೪ ॥

ವೈಕುಂಠಃ ಕಲ್ಪಿತೋ ಯೇನ ಲೋಕೋ ಲೋಕನಮಸ್ಕೃತಃ ।
ರಮಯಾ ಪ್ರಾರ್ಥ್ಯಮಾನೇನ ದೇವ್ಯಾ ತತ್ಪ್ರಿಯಕಾಮ್ಯಯಾ ॥ ೫ ॥

ತಸ್ಯಾನುಭಾವಃ ಕಥಿತೋ ಗುಣಾಶ್ಚ ಪರಮೋದಯಾಃ ।
ಭೌಮಾನ್ರೇಣೂನ್ಸ ವಿಮಮೇ ಯೋ ವಿಷ್ಣೋರ್ವರ್ಣಯೇದ್ಗುಣಾನ್ ॥ ೬ ॥

ಷಷ್ಠಶ್ಚ ಚಕ್ಷುಷಃ ಪುತ್ರಶ್ಚಾಕ್ಷುಷೋ ನಾಮ ವೈ ಮನುಃ ।
ಪೂರುಪೂರುಷಸುದ್ಯುಮ್ನ ಪ್ರಮುಖಾಶ್ಚಾಕ್ಷುಷಾತ್ಮಜಾಃ ॥ ೭ ॥

ಇಂದ್ರೋ ಮಂತ್ರದ್ರುಮಸ್ತತ್ರ ದೇವಾ ಆಪ್ಯಾದಯೋ ಗಣಾಃ ।
ಮುನಯಸ್ತತ್ರ ವೈ ರಾಜನ್ಹವಿಷ್ಮದ್ವೀರಕಾದಯಃ ॥ ೮ ॥

ತತ್ರಾಪಿ ದೇವಃ ಸಂಭೂತ್ಯಾಂ ವೈರಾಜಸ್ಯಾಭವತ್ಸುತಃ ।
ಅಜಿತೋ ನಾಮ ಭಗವಾನಂಶೇನ ಜಗತಃ ಪತಿಃ ॥ ೯ ॥

ಪಯೋಧಿಂ ಯೇನ ನಿರ್ಮಥ್ಯ ಸುರಾಣಾಂ ಸಾಧಿತಾ ಸುಧಾ ।
ಭ್ರಮಮಾಣೋಽಂಭಸಿ ಧೃತಃ ಕೂರ್ಮರೂಪೇಣ ಮಂದರಃ ॥ ೧೦ ॥

ರಾಜೋವಾಚ

ಯಥಾ ಭಗವತಾ ಬ್ರಹ್ಮನ್ಮಥಿತಃ ಕ್ಷೀರಸಾಗರಃ ।
ಯದರ್ಥಂ ವಾ ಯತಶ್ಚಾದ್ರಿಂ ದಧಾರಾಂಬುಚರಾತ್ಮನಾ ॥ ೧೧ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ! ಭಗವಂತನ ಈ ಗಜೇಂದ್ರಮೋಕ್ಷದ ಪವಿತ್ರ ಲೀಲೆಯು ಸಮಸ್ತ ಪಾಪಗಳನ್ನು ನಾಶಮಾಡುವಂತಹುದು. ಅದನ್ನು ನಾನು ನಿನಗೆ ಹೇಳಿದೆನು. ಈಗ ರೈವತ ಮನ್ವಂತರದ ಕಥೆಯನ್ನು ಕೇಳು. ॥ ೧ ॥ ಐದನೆಯ ಮನುವಿನ ಹೆಸರು ರೈವತ. ಇವನು ನಾಲ್ಕನೆಯ ಮನುವಾದ ತಾಮಸನ ತಮ್ಮನು. ಅವನಿಗೆ ಅರ್ಜುನ, ಬಲಿ, ವಿಂಧ್ಯ ಮುಂತಾದವರು ಮಕ್ಕಳಿದ್ದರು. ॥ ೨ ॥ ಆ ಮನ್ವಂತರದಲ್ಲಿ ವಿಭು ಎಂಬುವನು ಇಂದ್ರನಾಗಿದ್ದನು. ಭೂತರಯ ಮುಂತಾದ ದೇವತೆಗಳು ಮುಖ್ಯರಾಗಿದ್ದರು. ಪರೀಕ್ಷಿತನೇ! ಆಗ ಹಿರಣ್ಯರೋಮಾ, ವೇದಶಿರಾ, ಊರ್ಧ್ವಬಾಹು ಮುಂತಾದವರು ಸಪ್ತರ್ಷಿಗಳಿದ್ದರು. ॥ ೩ ॥ ಅವರಲ್ಲಿ ಶುಭ್ರ ಎಂಬ ಋಷಿಯ ಪತ್ನಿಯ ಹೆಸರು ವಿಕುಂಠಾ. ಅವಳ ಗರ್ಭದಲ್ಲಿ ವೈಕುಂಠರೆಂಬ ಶ್ರೇಷ್ಠದೇವತೆಗಳೊಡನೆ ತನ್ನ ಅಂಶದಿಂದ ಸ್ವಯಂ ಭಗವಂತನು ವೈಕುಂಠನೆಂಬ ಹೆಸರಿನಿಂದ ಅವತರಿಸಿದನು. ॥ ೪ ॥ ಅವನು ಲಕ್ಷ್ಮೀದೇವಿಯ ಪ್ರಾರ್ಥನೆಯಂತೆ ಅವಳನ್ನು ಸಂತೋಷಪಡಿಸಲು ವೈಕುಂಠಧಾಮವನ್ನು ರಚಿಸಿದನು. ಆ ಲೋಕವು ಇತರ ಎಲ್ಲ ಲೋಕಗಳಿಗಿಂತ ಶ್ರೇಷ್ಠವಾದುದು. ॥ ೫ ॥ ಆ ವೈಕುಂಠನಾಥನ ಕಲ್ಯಾಣಗುಣಗಳನ್ನು ಮತ್ತು ಮಹಿಮೆಯನ್ನು ನಾನು ಸಂಕ್ಷೇಪವಾಗಿ (ಮೂರನೆಯ ಸ್ಕಂಧದಲ್ಲಿ) ಹಿಂದೆಯೇ ವರ್ಣಿಸಿದ್ದೇನೆ. ಭಗವಾನ್ ವಿಷ್ಣುವಿನ ಸಂಪೂರ್ಣಗುಣಗಳನ್ನಾದರೋ ಪೃಥಿವಿಯಲ್ಲಿರುವ ಧೂಳಿನ ಕಣಗಳನ್ನು ಎಣಿಸಬಲ್ಲವನೇ ವರ್ಣಿಸಬಲ್ಲನು. ಅಂದರೆ ವರ್ಣನಾತೀತವಾದವುಗಳು. ॥ ೬ ॥

ಆರನೆಯ ಮನುವು ಚಕ್ಷುವಿನ ಪುತ್ರ ಚಾಕ್ಷುಷನಾಗಿದ್ದನು. ಅವನಿಗೆ ಪೂರು, ಪುರುಷ, ಸುದ್ಯುಮ್ನ ಮುಂತಾದ ಅನೇಕ ಪುತ್ರರಿದ್ದರು. ॥ ೭ ॥ ಅವರಲ್ಲಿ ಮಂತ್ರದ್ರುಮನೆಂಬ ಇಂದ್ರನಿದ್ದನು ಮತ್ತು ಆಪ್ಯ ಮುಂತಾದ ಪ್ರಧಾನ ದೇವತೆಗಳಿದ್ದರು. ಆ ಮನ್ವಂತರದಲ್ಲಿ ಹವಿಷ್ಮಾನ್, ವೀರಕ ಮುಂತಾದವರು ಸಪ್ತರ್ಷಿಗಳಾಗಿದ್ದರು. ॥ ೮ ॥ ಜಗತ್ಪತಿಯಾದ ಭಗವಂತನು ಆ ಸಮಯದಲ್ಲಿಯೂ ವೈರಾಜನ ಪತ್ನಿಯಾದ ಸಂಭೂತಿಯಲ್ಲಿ ಅಜಿತನೆಂಬ ಹೆಸರಿನಿಂದ ಅಂಶಾವತಾರವನ್ನು ತಾಳಿದನು. ॥ ೯ ॥ ಅವನೇ ಸಮುದ್ರಮಂಥನ ಮಾಡಿ ದೇವತೆಗಳಿಗೆ ಅಮೃತವನ್ನು ಕುಡಿಸಿದ್ದನು ಮತ್ತು ಕೂರ್ಮರೂಪವನ್ನು ಧರಿಸಿ ಗಿರ-ಗಿರನೆ ತಿರುಗುತ್ತಿದ್ದ ಮಂದರಾಚಲವನ್ನು ತನ್ನ ಬೆನ್ನಲ್ಲಿ ಹೊತ್ತನು. ॥ ೧೦ ॥

ಪರೀಕ್ಷಿದ್ರಾಜನು ಕೇಳಿದನು – ಬ್ರಾಹ್ಮಣಶ್ರೇಷ್ಠರೇ! ಭಗವಂತನು ಕ್ಷೀರಸಾಗರ ಮಂಥನವನ್ನು ಹೇಗೆ ಮಾಡಿದನು? ಅವನು ಕೂರ್ಮರೂಪವನ್ನು ಧರಿಸಿ ಯಾವ ಕಾರಣದಿಂದ ಮತ್ತು ಯಾವ ಉದ್ದೇಶದಿಂದ ಮಂದರಪರ್ವತವನ್ನು ಬೆನ್ನ ಮೇಲೆ ಹೊತ್ತುಕೊಂಡನು? ॥ ೧೧ ॥ ದೇವತೆಗಳಿಗೆ ಆ ಸಮಯದಲ್ಲಿ ಅಮೃತವು ಹೇಗೆ ದೊರೆಯಿತು? ಇನ್ನೂ ಯಾವ-ಯಾವ

ಯಥಾಮೃತಂ ಸುರೈಃ ಪ್ರಾಪ್ತಂ ಕಿಂಚಾನ್ಯದಭವತ್ತತಃ ।
ಏತದ್ಭಗವತಃ ಕರ್ಮ ವದಸ್ವ ಪರಮಾದ್ಭುತಮ್ ॥ ೧೨ ॥

ತ್ವಯಾ ಸಂಕಥ್ಯಮಾನೇನ ಮಹಿಮ್ನಾ ಸಾತ್ವತಾಂ ಪತೇಃ ।
ನಾತಿತೃಪ್ಯತಿ ಮೇ ಚಿತ್ತಂ ಸುಚಿರಂ ತಾಪತಾಪಿತಮ್ ॥ ೧೩ ॥

ಸೂತ ಉವಾಚ

ಸಂಪೃಷ್ಟೋ ಭಗವಾನೇವಂ ದ್ವೈಪಾಯನಸುತೋ ದ್ವಿಜಾಃ ।
ಅಭಿನಂದ್ಯ ಹರೇರ್ವೀರ್ಯಮಭ್ಯಾಚಷ್ಟುಂ ಪ್ರಚಕ್ರಮೇ ॥ ೧೪ ॥

ಶ್ರೀಶುಕ ಉವಾಚ

ಯದಾ ಯುದ್ಧೇಽಸುರೈರ್ದೇವಾ ಬಾಧ್ಯಮಾನಾಃ ಶಿತಾಯುಧೈಃ ।
ಗತಾಸವೋ ನಿಪತಿತಾ ನೋತ್ತಿಷ್ಠೇರನ್ಸ್ಮ ಭೂಯಶಃ ॥ ೧೫ ॥

ಯದಾ ದುರ್ವಾಸಃ ಶಾಪಾತ್ಸೇಂದ್ರಾ ಲೋಕಾಸ್ತ್ರಯೋ ನೃಪ ।
ನಿಃಶ್ರೀಕಾಶ್ಚಾಭವಂಸ್ತತ್ರ ನೇಶುರಿಜ್ಯಾದಯಃ ಕ್ರಿಯಾಃ ॥ ೧೬ ॥

ನಿಶಾಮ್ಯೈತತ್ಸುರಗಣಾ ಮಹೇಂದ್ರವರುಣಾದಯಃ ।
ನಾಧ್ಯಗಚ್ಛನ್ಸ್ವಯಂ ಮಂತ್ರೈರ್ಮಂತ್ರಯಂತೋ ವಿನಿಶ್ಚಯಮ್ ॥ ೧೭ ॥

ತತೋ ಬ್ರಹ್ಮಸಭಾಂ ಜಗ್ಮುರ್ಮೇರೋರ್ಮೂರ್ಧನಿ ಸರ್ವಶಃ ।
ಸರ್ವಂ ವಿಜ್ಞಾಪಯಾಂಚಕ್ರುಃ ಪ್ರಣತಾಃ ಪರಮೇಷ್ಠಿನೇ ॥ ೧೮ ॥

ಸ ವಿಲೋಕ್ಯೇಂದ್ರವಾಯ್ವಾದೀನ್ನಿಃಸತ್ತ್ವಾನ್ವಿಗತಪ್ರಭಾನ್ ।
ಲೋಕಾನಮಂಗಲಪ್ರಾಯಾನಸುರಾನಯಥಾ ವಿಭುಃ ॥ ೧೯ ॥

ಸಮಾಹಿತೇನ ಮನಸಾ ಸಂಸ್ಮರನ್ಪುರುಷಂ ಪರಮ್ ।
ಉವಾಚೋತ್ಫುಲ್ಲವದನೋ ದೇವಾನ್ಸ ಭಗವಾನ್ಪರಃ ॥ ೨೦ ॥

ಅಹಂ ಭವೋ ಯೂಯಮಥೋಽಸುರಾದಯೋ
ಮನುಷ್ಯತಿರ್ಯಗ್ದ್ರುಮಘರ್ಮಜಾತಯಃ ।
ಯಸ್ಯಾವತಾರಾಂಶಕಲಾವಿಸರ್ಜಿತಾ
ವ್ರಜಾಮ ಸರ್ವೇ ಶರಣಂ ತಮವ್ಯಯಮ್ ॥ ೨೧ ॥

ವಸ್ತುಗಳು ಸಮುದ್ರಮಂಥನದಿಂದ ದೊರೆತವು ? ಭಗವಂತನ ಈ ಲೀಲೆಯು ನಿಶ್ಚಯವಾಗಿಯೂ ಪರಮಾದ್ಭುತವಾಗಿದೆ. ಕೃಪೆಯಿಟ್ಟು ತಾವು ಇದೆಲ್ಲವನ್ನೂ ವಿಶದವಾಗಿ ವರ್ಣಿಸಿರಿ. ॥ ೧೨ ॥ ಭಕ್ತವತ್ಸಲನಾದ ಭಗವಂತನ ಮಹಿಮೆಗಳನ್ನು ನೀವು ವರ್ಣಿಸಿದಂತೆಯೇ ನನ್ನ ಹೃದಯವು ಅವನ್ನು ಕೇಳಲು ಅಷ್ಟೇ ಉತ್ಸುಕವಾಗುತ್ತಾ ಹೋಗುತ್ತದೆ. ಬೇಸರಬರುವ ಮಾತೇ ಇಲ್ಲ. ಸಂಸಾರತಾಪದಿಂದ ಬೇಯುತ್ತಿರುವ ನನ್ನ ಮನಸ್ಸು ತವಕಪಡುತ್ತದೆ. ॥ ೧೩ ॥

ಸೂತಪುರಾಣಿಕರು ಹೇಳಿದರು – ಶೌನಕಾದಿ ಋಷಿಗಳಿರಾ ! ಪೂಜ್ಯರಾದ ಶ್ರೀಶುಕಮಹಾಮುನಿಗಳು ಪರೀಕ್ಷಿದ್ರಾಜನ ಈ ಪ್ರಶ್ನೆಯನ್ನು ಕೇಳಿ, ಅವನನ್ನು ಅಭಿನಂದಿಸುತ್ತಾ ಭಗವಂತನ ಸಮುದ್ರಮಂಥನ ಲೀಲೆಯನ್ನು ವರ್ಣಿಸತೊಡಗಿದರು. ॥ ೧೪ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತ ರಾಜನೇ ! ಹಿಂದೊಮ್ಮೆ ಅಸುರರು ತಮ್ಮ ನಿಶಿತವಾದ ಶಸ್ತ್ರಾಸ್ತ್ರಗಳಿಂದ ದೇವತೆಗಳನ್ನು ಪರಾಜಿತಗೊಳಿಸಿದರು. ಆ ದೇವಾಸುರರ ಯುದ್ಧದಲ್ಲಿ ಹಲವಾರು ದೇವತೆಗಳೂ ಅಸುನೀಗಿದ್ದರು. ಕೆಳಕ್ಕೆ ಬಿದ್ದವರು ಮೇಲೇಳಲೇ ಇಲ್ಲ. ॥ ೧೫ ॥ ದುರ್ವಾಸರ ಶಾಪದಿಂದ* ಮೂರು ಲೋಕಗಳು ಸೇರಿ ಸ್ವತಃ ಇಂದ್ರನೂ ಕೂಡ ಶ್ರೀಹೀನನಾದನು. ಇದರಿಂದ ಯಜ್ಞ-ಯಾಗಾದಿ ಧರ್ಮ-ಕರ್ಮಗಳೂ ನಿಂತುಹೋದುವು. ॥ ೧೬ ॥ ಈ ದುರ್ದಶೆಯನ್ನು ಕಂಡು ಇಂದ್ರ, ವರುಣರೇ ಮುಂತಾದ ದೇವತೆಗಳು ಪರಸ್ಪರ ಅನೇಕ ವಿಧದಿಂದ ವಿಚಾರಮಾಡಿದರೂ ತಮ್ಮ ವಿಚಾರಗಳಿಂದ ಯಾವುದೇ ಇತ್ಯರ್ಥಕ್ಕೆ ಬರಲಾಗಲಿಲ್ಲ. ॥ ೧೭ ॥ ಆಗ ಅವರೆಲ್ಲರೂ ಸುಮೇರುಪರ್ವತದ ಶಿಖರದಲ್ಲಿದ್ದ ಬ್ರಹ್ಮದೇವರ ಸಭೆಗೆ ಹೋದರು. ಅಲ್ಲಿ ಅವರು ಅತಿನಮ್ರರಾಗಿ ಬ್ರಹ್ಮದೇವರ ಸೇವೆಯಲ್ಲಿ ತೊಡಗಿ ತಮ್ಮ ಪರಿಸ್ಥಿತಿಯನ್ನು ವಿಶದವಾಗಿ ತಿಳಿಸಿದರು. ॥ ೧೮ ॥ ಬ್ರಹ್ಮದೇವರು ನೋಡಿದರು – ಇಂದ್ರ, ವಾಯು ಮುಂತಾದ ದೇವತೆಗಳು ಶ್ರೀಹೀನ ಮತ್ತು ಶಕ್ತಿಹೀನರಾಗಿರುವರು. ಜನರ ಪರಿಸ್ಥಿತಿಯು ಬಲು ವಿಕಟ, ಸಂಕಟಗ್ರಸ್ತವಾಗಿದೆ. ಅಸುರರಾದರೋ ಇದಕ್ಕೆ ವಿಪರೀತವಾಗಿ ಉನ್ನತಿಯನ್ನು ಪಡೆಯುತ್ತಿದ್ದಾರೆ. ॥ ೧೯ ॥ ಆಗ ಸರ್ವಸಮರ್ಥರಾದ ಬ್ರಹ್ಮದೇವರು ತಮ್ಮ ಮನಸ್ಸನ್ನು ಏಕಾಗ್ರಗೊಳಿಸಿ ಪರಮ ಪುರುಷ ಭಗವಂತನನ್ನು ಸ್ಮರಿಸಿದರು. ಮತ್ತೆ ಸ್ವಲ್ಪಹೊತ್ತು ತಡೆದು, ಪ್ರಫುಲ್ಲಿತ ವದನಾರವಿಂದದಿಂದ ದೇವತೆಗಳನ್ನು ಸಂಬೋಧಿಸಿ ಹೇಳಿದರು – ॥ ೨೦ ॥ ದೇವತೆಗಳಿರಾ ! ನಾನು, ಶಂಕರನು, ನೀವುಗಳು ಹಾಗೂ ಅಸುರರು, ದೈತ್ಯರು, ಮನುಷ್ಯರು, ಪಶು-ಪಕ್ಷಿಗಳು, ವೃಕ್ಷಗಳು, ಸ್ವೇದಜ ಮುಂತಾದ ಸಮಸ್ತ ಪ್ರಾಣಿಗಳು ಯಾರ ವಿರಾಟ್ ರೂಪದ ಒಂದು ಅತ್ಯಂತ ಸ್ವಲ್ಪಾತಿಸ್ವಲ್ಪ ಅಂಶದಿಂದ ರಚಿತವಾಗಿವೆಯೋ, [illegible] ಅವಿನಾಶೀ ಪ್ರಭುವಿಗೆ ನಾವುಗಳು ಶರಣಾಗಬೇಕು. ॥ ೨೧ ॥

* ಈ ಪ್ರಸಂಗವು ವಿಷ್ಣುಪುರಾಣದಲ್ಲಿ ಹೀಗೆ ಬಂದಿದೆ – ಒಮ್ಮೆ ದುರ್ವಾಸರು ವೈಕುಂಠದಿಂದ ಬರುತ್ತಿದ್ದರು. ದಾರಿಯಲ್ಲಿ ಐರಾವತವನ್ನೇರಿದ ದೇವೇಂದ್ರನು ಸಿಕ್ಕಿದನು. ಅವನನ್ನು ತ್ರಿಲೋಕಾಧಿಪತಿ ಎಂದೆಣಿಸಿ ದುರ್ವಾಸರು ಭಗವಂತನ ಪ್ರಸಾದದ ಮಾಲೆಯನ್ನು ಕೊಟ್ಟರು. ಆದರೆ ಇಂದ್ರನು ಐಶ್ವರ್ಯದ ಮದದಿಂದ ಅದನ್ನು ಸ್ವಲ್ಪವೂ ಆದರಿಸದೆ ಐರಾವತದ ತಲೆಯಮೇಲಿಟ್ಟನು. ಐರಾವತವು ಅದನ್ನು ಸೊಂಡಿಲಿನಿಂದ ಎತ್ತಿಕೊಂಡು ಕಾಲಿನಿಂದ ತುಳಿದುಬಿಟ್ಟಿತು. ಇದರಿಂದ ದುರ್ವಾಸರು ಕ್ರೋಧಗೊಂಡು – 'ನೀನು ಮೂರು ಲೋಕಗಳಸಹಿತ ಶ್ರೀಹೀನನಾಗು. ಅಂದರೆ ಸಂಪತ್ತುರಹಿತನಾಗು' ಎಂದು ಶಪಿಸಿದರು. ಇದರಿಂದ ಇಂದ್ರನು ಶ್ರೀಯನ್ನು ಕಳಕೊಂಡನು.

ನ ಯಸ್ಯ ವಧ್ಯೋ ನ ಚ ರಕ್ಷಣೀಯೋ
ನೋಪೇಕ್ಷಣೀಯಾದರಣೀಯಪಕ್ಷಃ ।
ಅಥಾಪಿ ಸರ್ಗಸ್ಥಿತಿಸಂಯಮಾರ್ಥಂ
ಧತ್ತೇ ರಜಃಸತ್ತ್ವತಮಾಂಸಿ ಕಾಲೇ ॥ ೨೨ ॥

ಅಯಂ ಚ ತಸ್ಯ ಸ್ಥಿತಿಪಾಲನಕ್ಷಣಃ
ಸತ್ತ್ವಂ ಜುಷಾಣಸ್ಯ ಭವಾಯ ದೇಹಿನಾಮ್ ।
ತಸ್ಮಾದ್ವ್ರಜಾಮಃ ಶರಣಂ ಜಗದ್ಗುರುಂ
ಸ್ವಾನಾಂ ಸ ನೋ ಧಾಸ್ಯತಿ ಶಂ ಸುರಪ್ರಿಯಃ ॥ ೨೩ ॥

ಶ್ರೀಶುಕ ಉವಾಚ

ಇತ್ಯಾಭಾಷ್ಯ ಸುರಾನ್ವೇಧಾಃ ಸಹ ದೇವೈರರಿಂದಮ ।
ಅಜಿತಸ್ಯ ಪದಂ ಸಾಕ್ಷಾಜ್ಜಗಾಮ ತಮಸಃ ಪರಮ್ ॥ ೨೪ ॥

ತತ್ರಾದೃಷ್ಟಸ್ವರೂಪಾಯ ಶ್ರುತಪೂರ್ವಾಯ ವೈ ವಿಭೋಃ ।
ಸ್ತುತಿಮಬ್ರೂತ ದೈವೀಭಿರ್ಗೀರ್ಭಿಸ್ತ್ವವಹಿತೇಂದ್ರಿಯಃ ॥ ೨೫ ॥

ಬ್ರಹ್ಮೋವಾಚ

ಅವಿಕ್ರಿಯಂ ಸತ್ಯಮನಂತಮಾದ್ಯಂ
ಗುಹಾಶಯಂ ನಿಷ್ಕಲಮಪ್ರತರ್ಕ್ಯಮ್ ।
ಮನೋಽಗ್ರಯಾನಂ ವಚಸಾನಿರುಕ್ತಂ
ನಮಾಮಹೇ ದೇವವರಂ ವರೇಣ್ಯಮ್ ॥ ೨೬ ॥

ವಿಪಶ್ಚಿತಂ ಪ್ರಾಣಮನೋಧಿಯಾತ್ಮನಾ-
ಮರ್ಥೇಂದ್ರಿಯಾಭಾಸಮನಿದ್ರಮವ್ರಣಮ್ ।
ಛಾಯಾತಪೌ ಯತ್ರ ನ ಗೃಧ್ರಪಕ್ಷೌ
ತಮಕ್ಷರಂ ಖಂ ತ್ರಿಯುಗಂ ವ್ರಜಾಮಹೇ ॥ ೨೭ ॥

ಅಜಸ್ಯ ಚಕ್ರಂ ತ್ವಜಯೇರ್ಯಮಾಣಂ
ಮನೋಮಯಂ ಪಂಚದಶಾರಮಾಶು ।
ತ್ರಿನಾಭಿ ವಿದ್ಯುಚ್ಚಲಮಷ್ಟನೇಮಿ
ಯದಕ್ಷಮಾಹುಸ್ತಮೃತಂ ಪ್ರಪದ್ಯೇ ॥ ೨೮ ॥

ಅವನ ದೃಷ್ಟಿಯಲ್ಲಿ ವಧಾರ್ಹನಾಗಲೀ, ರಕ್ಷಿಸಲ್ಪಡತಕ್ಕವ ರಾಗಲೀ, ಯಾರೂ ಇಲ್ಲದಿದ್ದರೂ, ಅವನಿಗೆ ಉಪೇಕ್ಷಣೀಯ ಹಾಗೂ ಆದರಣೀಯರು ಯಾರೂ ಇಲ್ಲದಿದ್ದರೂ ಸೃಷ್ಟಿ ಸ್ಥಿತಿ ಪ್ರಳಯಕ್ಕಾಗಿ ಆಗಾಗ ಅವನು ರಜೋಗುಣವನ್ನೂ, ಸತ್ತ್ವ ಗುಣ ವನ್ನು, ತಮೋಗುಣವನ್ನು ಸ್ವೀಕರಿಸುತ್ತಾನೆ. ॥ ೨೨ ॥ ಅವನು ಈ ಸಮಯದಲ್ಲಿ ಪ್ರಾಣಿಗಳ ಕಲ್ಯಾಣಕ್ಕಾಗಿ ಸತ್ತ್ವಗುಣವನ್ನು ಸ್ವೀಕರಿಸಿ ರುವನು. ಅದಕ್ಕಾಗಿ ಇದು ಜಗತ್ತಿನ ಸ್ಥಿತಿ ಮತ್ತು ರಕ್ಷಣೆಯ ಸಮಯ ವಾಗಿದೆ. ಆದ್ದರಿಂದ ನಾವೆಲ್ಲರೂ ಜಗದ್ಗುರು ಪರಮಾತ್ಮನನ್ನೇ ಶರಣು ಹೊಂದೋಣ. ಅವನಿಗೆ ದೇವತೆಗಳು ಪ್ರಿಯರೂ, ದೇವತೆ ಗಳಿಗೆ ಅವನೂ ಪ್ರಿಯನಾಗಿರುವನು. ಆದರಿಂದ ತನ್ನವರಾದ ನಮ್ಮನ್ನು ಅವನು ಖಂಡಿತವಾಗಿ ರಕ್ಷಿಸುವನು. ॥ ೨೩ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ! ಬ್ರಹ್ಮದೇವರು ದೇವತೆಗಳಿಗೆ ಹೀಗೆ ಹೇಳಿ ಅವರನ್ನೊಳಗೊಂಡು ಭಗವಾನ್ ಅಜಿತನ ನಿಜಧಾಮವಾದ ವೈಕುಂಠಕ್ಕೆ ಹೋದರು. ಆ ಧಾಮವು ತಮೋಮಯ ಪ್ರಕೃತಿಯಿಂದ ಹೊರಟಾಗಿದೆ. ॥ ೨೪ ॥ ಇವರೆಲ್ಲರೂ ಭಗವಂತನ ಸ್ವರೂಪ ಮತ್ತು ಧಾಮದ ಸಂಬಂಧ ವಾಗಿ ಮೊದಲಿನಿಂದಲೇ ಬಹಳಷ್ಟು ಕೇಳಿದ್ದರು. ಆದರೆ ಅಲ್ಲಿಗೆ ಹೋದಮೇಲೆ ಅವರಿಗೆ ಏನೂ ಕಂಡುಬಂದಿಲ್ಲ, ಅದಕ್ಕಾಗಿ ಬ್ರಹ್ಮ ದೇವರು ಏಕಾಗ್ರ ಮನಸ್ಸಿನಿಂದ ವೇದವಾಣಿಯ ಮೂಲಕ ವೇದ ಗಮ್ಯನಾದ ಭಗವಂತನನ್ನು ಸ್ತುತಿಸತೊಡಗಿದರು. ॥ ೨೫ ॥

ಬ್ರಹ್ಮದೇವರು ಹೇಳಿದರು – ನೀನು ನಿರ್ವಿಕಾರನೂ, ಸತ್ಯ ಸ್ವರೂಪನೂ, ಅನಂತನೂ, ಆದಿಪುರುಷನೂ, ಎಲ್ಲರ ಹೃದಯ ದಲ್ಲಿ ಅಂತರ್ಯಾಮಿಯ ರೂಪದಲ್ಲಿ ವಿರಾಜಿಸುತ್ತಿರುವವನೂ, ಉಪಾಧಿರಹಿತನೂ, ಊಹಿಸಲು ಅಸಾಧ್ಯನಾದವನೂ, ಮನಸ್ಸಿ ಗಿಂತಲೂ ವೇಗವಾದ ಗಮನವುಳ್ಳವನೂ, ಮಾತಿನಿಂದ ವಿವರಿಸಲು ಅಶಕ್ಯನಾದವನೂ, ದೇವತೆಗಳಲ್ಲಿ ಶ್ರೇಷ್ಠನೂ, ಸರ್ವೋತ್ತಮನೂ ಆಗಿರುವೆ. ಅಂತಹ ಭಗವಂತನಾದ ನಿನಗೆ ನಮಸ್ಕರಿಸುತ್ತೇವೆ. ॥ ೨೬ ॥ ನೀನು ಪ್ರಾಣ, ಮನಸ್ಸು ಬುದ್ಧಿ ಅಹಂಕಾರಗಳನ್ನು ತಿಳಿ ದವನಾಗಿರುವೆ. ಇಂದ್ರಿಯಗಳು ಮತ್ತು ಅವುಗಳ ವಿಷಯಗಳು ಎರಡೂ ನಿನ್ನಿಂದಲೇ ಪ್ರಕಾಶಿತವಾಗುತ್ತವೆ. ಅಜ್ಞಾನವು ನಿನ್ನನ್ನು ಸ್ಪರ್ಶಿಸಲಾರದು. ಪ್ರಕೃತಿಯ ವಿಕಾರವಾದ ಜನ್ಮ-ಮರಣಗಳಿಂದ ಕೂಡಿದ ಶರೀರದಿಂದಲೂ ನೀನು ರಹಿತನಾಗಿರುವೆ. ಜೀವಿಯ ಎರಡು ರೆಕ್ಕೆಗಳಾದ ವಿದ್ಯೆ-ಅವಿದ್ಯೆಗಳು ನಿನ್ನಲ್ಲಿರುವುದಿಲ್ಲ. ನೀನು ಅವಿನಾಶಿಯೂ, ಸುಖಸ್ವರೂಪನೂ ಆಗಿರುವೆ. ಕೃತ, ತ್ರೇತಾ, ದ್ವಾಪರ ಯುಗಗಳಲ್ಲಿ ನೀನು ಅವತರಿಸುವೆ. ಅಂತಹ ನಿನ್ನನ್ನು ನಾವೆಲ್ಲರೂ ಶರಣುಹೊಂದುತ್ತೇವೆ. ॥ ೨೭ ॥ ಈ ಶರೀರವು ಜೀವಿಯ ಒಂದು ಮನೋಮಯ ಚಕ್ರವಾಗಿದೆ. ಹತ್ತು ಇಂದ್ರಿಯ ಗಳು ಮತ್ತು ಐದು ಪ್ರಾಣಗಳು – ಹೀಗೆ ಹದಿನೈದು ಅದರ ಅರೆಕಾಲುಗಳು. ಸತ್ತ್ವ, ರಜ, ತಮಗಳೆಂಬ ಮೂರು ಗುಣಗಳು ಆ ಚಕ್ರದ ನಾಭಿಯಾಗಿದೆ. ಪೃಥಿವಿ, ಜಲ, ತೇಜ, ವಾಯು, ಆಕಾಶ, ಮನ, ಬುದ್ಧಿ ಅಹಂಕಾರ ಇವು ಎಂಟು ಚಕ್ರದ ಅಂಚಾಗಿದೆ. ಮಾಯೆಯೇ ಈ ಚಕ್ರವನ್ನು ನಡೆಸುತ್ತದೆ. ಇದು ಮಿಂಚಿಗಿಂತಲೂ ಹೆಚ್ಚು ಶೀಘ್ರಗಾಮಿಯಾಗಿದೆ. ಈ ಚಕ್ರಕ್ಕೆ ಸ್ವಯಂ ಪರಮಾತ್ಮನೇ ಅಚ್ಚುಮರವಾಗಿದ್ದಾನೆ. ಏಕಮಾತ್ರ ಸತ್ಯಸ್ವರೂಪನಾದ ಅವನಿಗೆ ನಾವು ಶರಣಾಗಿದ್ದೇವೆ. ॥ ೨೮ ॥

ಯ ಏಕವರ್ಣಂ ತಮಸಃ ಪರಂ ತತ್
ಅಲೋಕಮವ್ಯಕ್ತಮನಂತಪಾರಮ್ ।
ಆಸಾಂಚಕಾರೋಪಸುಪರ್ಣಮೇನ-
ಮುಪಾಸತೇ ಯೋಗರಥೇನ ಧೀರಾಃ ॥ ೨೯ ॥

ಯಾರು ಏಕಮಾತ್ರ ಜ್ಞಾನಸ್ವರೂಪನೂ, ಪ್ರಕೃತಿಗೆ ಅತೀತನೂ, ಅದೃಶ್ಯನೂ ಆಗಿರುವನೋ, ಯಾರು ಸಮಸ್ತ ವಸ್ತುಗಳ ಮೂಲದಲ್ಲಿ ಅವ್ಯಕ್ತನಾಗಿರುವನೋ, ದೇಶ, ಕಾಲಗಳಿಗೆ ಒಳಪಡದವನೋ, ಆ ಪ್ರಭುವೇ ಈ ಜೀವಿಯ ಹೃದಯದಲ್ಲಿ ಅಂತರ್ಯಾಮಿರೂಪದಿಂದ ವಿರಾಜಿಸುತ್ತಿರುವನು. ಧೀರರಾದ ಮನುಷ್ಯರು ಭಕ್ತಿಯೋಗದ ಮೂಲಕ ಅವನನ್ನೇ ಆರಾಧಿಸುತ್ತಾರೆ. ॥ ೨೯ ॥

ನ ಯಸ್ಯ ಕಶ್ಚಾತಿತಿತರ್ತಿ ಮಾಯಾಂ
ಯಯಾ ಜನೋ ಮುಹ್ಯತಿ ವೇದ ನಾರ್ಥಮ್ ।
ತಂ ನಿರ್ಜಿತಾತ್ಮಾತ್ಮಗುಣಂ ಪರೇಶಂ
ನಮಾಮ ಭೂತೇಷು ಸಮಂ ಚರಂತಮ್ ॥ ೩೦ ॥

ಯಾವ ಮಾಯೆಯಿಂದ ಮೋಹಿತನಾದ ಈ ಜೀವನು ತನ್ನ ವಾಸ್ತವಿಕ ಲಕ್ಷ್ಯವನ್ನು ಅಥವಾ ಸ್ವರೂಪವನ್ನು ಮರೆತಿರುವನೋ, ಅಂತಹ ಮಾಯೆಯು ಅವನದೇ ಆಗಿದೆ. ಬೇರೆ ಯಾರೂ ಅದನ್ನು ದಾಟಲಾರರು. ಆದರೆ ಸರ್ವಶಕ್ತಿಸಂಪನ್ನ ಪ್ರಭುವು ತನ್ನ ಆ ಮಾಯೆಯನ್ನು ಹಾಗೂ ಅದರ ಗುಣಗಳನ್ನು ತನ್ನ ವಶದಲ್ಲಿರಿಸಿಕೊಂಡು ಸಮಸ್ತ ಪ್ರಾಣಿಗಳ ಹೃದಯದಲ್ಲಿ ಸಮಭಾವದಿಂದ ಸಂಚರಿಸುತ್ತಿರುವನು. ಜೀವನು ತನ್ನ ಪುರುಷಾರ್ಥದಿಂದ ಅವನನ್ನು ಪಡೆಯಲಾರದೆ ಅವನ ಕೃಪೆಯಿಂದಲೇ ಪಡೆದುಕೊಳ್ಳಬಲ್ಲನು. ನಾವು ಅವನ ಚರಣಗಳಲ್ಲಿ ನಮಸ್ಕರಿಸುತ್ತೇವೆ. ॥ ೩೦ ॥

ಇಮೇ ವಯಂ ಯತ್ಪ್ರಿಯಯೈವ ತನ್ವಾ
ಸತ್ತ್ವೇನ ಸೃಷ್ಟಾ ಬಹಿರಂತರಾವಿಃ ।
ಗತಿಂ ನ ಸೂಕ್ಷ್ಮಾಮೃಷಯಶ್ಚ ವಿದ್ಮಹೇ
ಕುತೋಽಸುರಾದ್ಯಾ ಇತರಪ್ರಧಾನಾಃ ॥ ೩೧ ॥

ದೇವತೆಗಳಾದ ನಾವು, ಋಷಿಗಳು ಅವನ ಪರಮಪ್ರಿಯ ಸತ್ತ್ವಮಯ ಶರೀರದಿಂದಲೇ ಉತ್ಪನ್ನರಾದವರು. ಹೀಗಿದ್ದರೂ ಅವನ ಒಳ-ಹೊರ ಏಕರಸವಾಗಿ ಪ್ರಾಕಟ್ಯವಾದ ವಾಸ್ತವಿಕ ಸ್ವರೂಪವನ್ನು ನಾವು ತಿಳಿಯಲಾರೆವು. ಹಾಗಿರುವಾಗ ರಜೋಗುಣ-ತಮೋಗುಣ ಪ್ರಧಾನರಾದ ಅಸುರರೇ ಮುಂತಾದವರು ಅವನನ್ನು ಹೇಗೆ ತಿಳಿಯಬಲ್ಲರು? ಅಂತಹ ಪ್ರಭುವಿನ ಚರಣಗಳಲ್ಲಿ ನಾವು ನಮಸ್ಕರಿಸುತ್ತೇವೆ. ॥ ೩೧ ॥

ಪಾದೌ ಮಹೀಯಂ ಸ್ವಕೃತೈವ ಯಸ್ಯ
ಚತುರ್ವಿಧೋ ಯತ್ರ ಹಿ ಭೂತಸರ್ಗಃ ।
ಸ ವೈ ಮಹಾಪೂರುಷ ಆತ್ಮತಂತ್ರಃ
ಪ್ರಸೀದತಾಂ ಬ್ರಹ್ಮ ಮಹಾವಿಭೂತಿಃ ॥ ೩೨ ॥

ಅವನಿಂದಲೇ ರಚಿತವಾದ ಈ ಪೃಥಿವಿಯು ಅವನ ಚರಣವಾಗಿದೆ. ಈ ಪೃಥಿವಿಯಲ್ಲೇ ಜರಾಯುಜ, ಅಂಡಜ, ಸ್ವೇದಜ ಮತ್ತು ಉದ್ಭಿಜ್ಜ – ಈ ನಾಲ್ಕು ಪ್ರಕಾರದ ಪ್ರಾಣಿಗಳು ವಾಸಿಸುತ್ತವೆ. ಆ ಪರಮ ಸ್ವತಂತ್ರ, ಪರಮ ಐಶ್ವರ್ಯಶಾಲಿಯಾದ ಪುರುಷೋತ್ತಮ ಪರಬ್ರಹ್ಮನು ನಮ್ಮ ಮೇಲೆ ಪ್ರಸನ್ನನಾಗಿರಲಿ. ॥ ೩೨ ॥

ಅಂಭಸ್ತು ಯದ್ರೇತ ಉದಾರವೀರ್ಯಂ
ಸಿಧ್ಯಂತಿ ಜೀವಂತ್ಯುತ ವರ್ಧಮಾನಾಃ ।
ಲೋಕಾಸ್ತ್ರಯೋಽಥಾಖಿಲಲೋಕಪಾಲಾಃ
ಪ್ರಸೀದತಾಂ ಬ್ರಹ್ಮ ಮಹಾವಿಭೂತಿಃ ॥ ೩೩ ॥

ಈ ಪರಮಶಕ್ತಿಶಾಲಿಯಾದ ಜಲವು ಅವನ ವೀರ್ಯವಾಗಿದೆ. ಇದರಿಂದಲೇ ಮೂರು ಲೋಕಗಳೂ ಮತ್ತು ಸಮಸ್ತ ಲೋಕಗಳ ಲೋಕಪಾಲರು ಉತ್ಪನ್ನರಾಗುತ್ತಾರೆ, ಬೆಳೆಯುತ್ತಾರೆ, ಜೀವಿಸಿ ಇರುತ್ತಾರೆ. ಆ ಪರಮ ಐಶ್ವರ್ಯಶಾಲಿಯಾದ ಪರಬ್ರಹ್ಮನು ನಮ್ಮ ಮೇಲೆ ಪ್ರಸನ್ನನಾಗಲೀ. ॥ ೩೩ ॥

ಸೋಮಂ ಮನೋ ಯಸ್ಯ ಸಮಾಮನಂತಿ
ದಿವೌಕಸಾಂ ವೈ ಬಲಮಂಧ ಆಯುಃ ।
ಈಶೋ ನಗಾನಾಂ ಪ್ರಜನಃ ಪ್ರಜಾನಾಂ
ಪ್ರಸೀದತಾಂ ನಃ ಸ ಮಹಾವಿಭೂತಿಃ ॥ ೩೪ ॥

ಚಂದ್ರನು ಆ ಪ್ರಭುವಿನ ಮನಸ್ಸು ಆಗಿದ್ದಾನೆ ಎಂದು ಶ್ರುತಿಗಳು ಹೇಳುತ್ತವೆ. ಈ ಚಂದ್ರನೇ ಸಮಸ್ತ ದೇವತೆಗಳ ಅನ್ನ, ಬಲ, ಆಯುಸ್ಸು ಆಗಿದ್ದಾನೆ. ಅವನೇ ವೃಕ್ಷಗಳ ಒಡೆಯನೂ, ಪ್ರಜೆಯನ್ನು ವೃದ್ಧಿಪಡಿಸುವವನೂ ಆಗಿದ್ದಾನೆ. ಅಂತಹ ಮನಸ್ಸನ್ನು ಸ್ವೀಕರಿಸುವ ಪರಮ ಐಶ್ವರ್ಯಶಾಲಿಯಾದ ಪ್ರಭುವು ನಮ್ಮ ಮೇಲೆ ಪ್ರಸನ್ನನಾಗಲಿ. ॥ ೩೪ ॥

ಅಗ್ನಿರ್ಮುಖಂ ಯಸ್ಯ ತು ಜಾತವೇದಾ
ಜಾತಃ ಕ್ರಿಯಾಕಾಂಡನಿಮಿತ್ತಜನ್ಮಾ ।
ಅಂತಃಸಮುದ್ರೇಽನುಪಚನ್ ಸ್ವಧಾತೂನ್
ಪ್ರಸೀದತಾಂ ನಃ ಸ ಮಹಾವಿಭೂತಿಃ ॥ ೩೫ ॥

ಅಗ್ನಿಯು ಪ್ರಭುವಿನ ಮುಖವಾಗಿದೆ. ಅದರ ಉತ್ಪತ್ತಿಯೂ – ವೇದದ ಯಜ್ಞ-ಯಾಗಾದಿ ಕರ್ಮಕಾಂಡವನ್ನು ಸಾಂಗವಾಗಿ ನೆರವೇರಲೆಂದೇ ಆಗಿದೆ. ಈ ಅಗ್ನಿಯೇ ಶರೀರದೊಳಗೆ ಜಠರಾಗ್ನಿಯ ರೂಪದಿಂದ ಮತ್ತು ಸಮುದ್ರದೊಳಗೆ ಬಡವಾನಲ ರೂಪದಿಂದ ಇದ್ದು ಅವುಗಳಲ್ಲಿರುವ ಅನ್ನ, ಜಲ ಮುಂತಾದ ಧಾತುಗಳನ್ನು ಜೀರ್ಣವಾಗಿಸುತ್ತಾನೆ. ಸಮಸ್ತ ದ್ರವ್ಯಗಳ ಉತ್ಪತ್ತಿಯೂ ಅದರಿಂದಲೇ ಆಗಿದೆ. ಅಂತಹ ಪರಮೈಶ್ವರ್ಯ ಸಂಪನ್ನನಾದ ಭಗವಂತನು ನಮ್ಮಮೇಲೆ ಪ್ರಸನ್ನನಾಗಲೀ. ॥ ೩೫ ॥

ಯಚ್ಚಕ್ಷುರಾಸೀತ್ತರಣಿರ್ದೇವಯಾನಂ
ತ್ರಯೀಮಯೋ ಬ್ರಹ್ಮಣ ಏಷ ಧಿಷ್ಣ್ಯಮ್ ।
ದ್ವಾರಂ ಚ ಮುಕ್ತೇರಮೃತಂ ಚ ಮೃತ್ಯುಃ
ಪ್ರಸೀದತಾಂ ನಃ ಸ ಮಹಾವಿಭೂತಿಃ ॥ ೩೬ ॥

ಪ್ರಾಣಾದಭೂದ್ಯಸ್ಯ ಚರಾಚರಾಣಾಂ
ಪ್ರಾಣಃ ಸಹೋ ಬಲಮೋಜಶ್ಚ ವಾಯುಃ ।
ಅನ್ವಾಸ್ಮ ಸಮ್ರಾಜಮಿವಾನುಗಾ ವಯಂ
ಪ್ರಸೀದತಾಂ ನಃ ಸ ಮಹಾವಿಭೂತಿಃ ॥ ೩೭ ॥

ಶ್ರೋತ್ರಾದ್ದಿಶೋ ಯಸ್ಯ ಹೃದಶ್ಚ ಖಾನಿ
ಪ್ರಜಜ್ಞಿರೇ ಖಂ ಪುರುಷಸ್ಯ ನಾಭ್ಯಾಃ ।
ಪ್ರಾಣೇಂದ್ರಿಯಾತ್ಮಾಸುಶರೀರಕೇತಃ
ಪ್ರಸೀದತಾಂ ನಃ ಸ ಮಹಾವಿಭೂತಿಃ ॥ ೩೮ ॥

ಬಲಾನ್ಮಹೇಂದ್ರಸ್ತ್ರಿದಶಾಃ ಪ್ರಸಾದಾನ್
ಮನ್ಯೋರ್ಗಿರೀಶೋ ಧಿಷಣಾದ್ವಿರಿಂಚಿಃ ।
ಖೇಭ್ಯಶ್ಚ ಛಂದಾಂಸ್ಯೃಷಯೋ ಮೇಢ್ರತಃ ಕಃ
ಪ್ರಸೀದತಾಂ ನಃ ಸ ಮಹಾವಿಭೂತಿಃ ॥ ೩೯ ॥

ಶ್ರೀರ್ವಕ್ಷಸಃ ಪಿತರಶ್ಛಾಯಯಾಽಽಸನ್
ಧರ್ಮಃ ಸ್ತನಾದಿತರಃ ಪೃಷ್ಠತೋಽಭೂತ್ ।
ದ್ಯೌರ್ಯಸ್ಯ ಶೀರ್ಷ್ಣೋಽಪ್ಸರಸೋ ವಿಹಾರಾತ್
ಪ್ರಸೀದತಾಂ ನಃ ಸ ಮಹಾವಿಭೂತಿಃ ॥ ೪೦ ॥

ವಿಪ್ರೋ ಮುಖಂ ಬ್ರಹ್ಮ ಚ ಯಸ್ಯ ಗುಹ್ಯಂ
ರಾಜನ್ಯ ಆಸೀದ್ಭುಜಯೋರ್ಬಲಂ ಚ ।
ಊರ್ವೋರ್ವಿಡೋಜೋಽಂಘ್ರಿರವೇದಶೂದ್ರೌ
ಪ್ರಸೀದತಾಂ ನಃ ಸ ಮಹಾವಿಭೂತಿಃ ॥ ೪೧ ॥

ಲೋಭೋಽಧರಾತ್ಪ್ರೀತಿರುಪರ್ಯಭೂದ್ದ್ಯುತಿ-
ರ್ನಸ್ತಃ ಪಶವ್ಯಃ ಸ್ಪರ್ಶೇನ ಕಾಮಃ ।
ಭ್ರುವೋರ್ಯಮಃ ಪಕ್ಷ್ಮಭವಸ್ತು ಕಾಲಃ
ಪ್ರಸೀದತಾಂ ನಃ ಸ ಮಹಾವಿಭೂತಿಃ ॥ ೪೨ ॥

ಯಾರ ಮೂಲಕ ಜೀವ ಭಾವ ತೊರೆದ ನಿಷ್ಕಾಮ ಕರ್ಮಯೋಗಿಗಳು ದೇವಯಾನಮಾರ್ಗದಿಂದ ಬ್ರಹ್ಮಲೋಕವನ್ನು ಸೇರುವರೋ, ಯಾರು ವೇದಗಳ ಸಾಕ್ಷಾತ್ ಮೂರ್ತಿಯಾಗಿದ್ದು, ಭಗವಂತನ ಧ್ಯಾನಮಾಡಲು ಯೋಗ್ಯವಾದ ಧಾಮನಾಗಿರುವನೋ, ಯಾರು ಪುಣ್ಯಲೋಕ ಸ್ವರೂಪನಾದ ಕಾರಣ ಮುಕ್ತಿಯ ದ್ವಾರ ಹಾಗೂ ಅಮೃತಮಯನಾಗಿರುವನೋ ಮತ್ತು ಕಾಲರೂಪನಾದ್ದರಿಂದ ಮೃತ್ಯುವೂ ಕೂಡ ಆಗಿರುವನೋ ಸೂರ್ಯನು ಯಾರ ಕಣ್ಣು ಆಗಿರುವನೋ ಆ ಪರಮೈಶ್ವರ್ಯಸಂಪನ್ನ ಭಗವಂತನು ನಮ್ಮ ಮೇಲೆ ಪ್ರಸನ್ನನಾಗಲೀ. ॥ ೩೬ ॥ ಪ್ರಭುವಿನ ಪ್ರಾಣದಿಂದಲೇ ಚರಾಚರದ ಪ್ರಾಣ ಹಾಗೂ ಅವುಗಳಿಗೆ ಮಾನಸಿಕ, ಶಾರೀರಿಕ. ಇಂದ್ರಿಯ ಸಂಬಂಧೀ ಬಲವನ್ನು ಕೊಡುವಂತಹ ವಾಯುವು ಪ್ರಕಟವಾಯಿತು. ಅವನು ಚಕ್ರವರ್ತಿ ಸಾಮ್ರಾಟನಾದರೆ ಇಂದ್ರಿಯಗಳ ಅಧಿಷ್ಠಾತೃದೇವತೆಗಳಾದ ನಾವೆಲ್ಲರೂ ಸೇವಕರಂತೆ ಅವನನ್ನು ಹಿಂಬಾಲಿಸುವೆವು. ಅಂತಹ ಪರಮೈಶ್ವರ್ಯ ಸಂಪನ್ನನಾದ ಭಗವಂತನು ನಮ್ಮ ಮೇಲೆ ಪ್ರಸನ್ನನಾಗಲಿ. ॥ ೩೭ ॥ ಪರಮಾತ್ಮನ ಕಿವಿಗಳಿಂದ ದಿಕ್ಕುಗಳು, ಹೃದಯದಿಂದ ಇಂದ್ರಿಯಗೋಲಕಗಳು, ನಾಭಿಯಿಂದ ಆಕಾಶವು ಉಂಟಾಯಿತು. ಐದು ಪ್ರಾಣಗಳಿಗೂ, ಐದು ಉಪ ಪ್ರಾಣಗಳಿಗೂ ಹತ್ತು ಇಂದ್ರಿಯಗಳಿಗೂ, ಮನಸ್ಸಿಗೂ, ಶರೀರಗಳಿಗೂ ಆಶ್ರಯನು ಅವನೇ. ಅಂತಹ ಮಹದೈಶ್ವರ್ಯಸಂಪನ್ನನಾದ ಭಗವಂತನು ನಮ್ಮ ಮೇಲೆ ಪ್ರಸನ್ನನಾಗಲೀ. ॥ ೩೮ ॥ ಯಾರ ಬಲದಿಂದ ಇಂದ್ರನೂ, ಪ್ರಸನ್ನತೆಯಿಂದ ದೇವತೆಗಳೂ, ಕ್ರೋಧದಿಂದ ಶಂಕರನೂ, ಬುದ್ಧಿಯಿಂದ ಬ್ರಹ್ಮನೂ (ನಾನು), ಇಂದ್ರಿಯಗಳಿಂದ ಋಷಿಗಳೂ ಮತ್ತು ವೇದಗಳೂ, ಲಿಂಗದಿಂದ ಪ್ರಜಾಪತಿಯೂ ಉತ್ಪನ್ನರಾದರೋ, ಅಂತಹ ಪರಮೈಶ್ವರ್ಯಸಂಪನ್ನನಾದ ಭಗವಂತನು ನಮ್ಮ ಮೇಲೆ ಪ್ರಸನ್ನನಾಗಲೀ. ॥ ೩೯ ॥ ಯಾರ ವಕ್ಷಃಸ್ಥಳದಿಂದ ಲಕ್ಷ್ಮಿಯೂ, ನೆರಳಿನಿಂದ ಪಿತೃಗಳೂ, ಸ್ತನದಿಂದ ಧರ್ಮವೂ, ಬೆನ್ನಿನಿಂದ ಅಧರ್ಮವೂ, ತಲೆಯಿಂದ ಆಕಾಶವೂ, ವಿಹಾರದಿಂದ ಅಪ್ಸರೆಯರೂ ಹುಟ್ಟಿದರೋ ಆ ಪರಮ ಐಶ್ವರ್ಯಸಂಪನ್ನನಾದ ಪರಮಾತ್ಮನು ನಮ್ಮ ಮೇಲೆ ಪ್ರಸನ್ನನಾಗಲೀ. ॥ ೪೦ ॥ ಯಾರ ಮುಖದಿಂದ ಬ್ರಾಹ್ಮಣರು ಮತ್ತು ಅತ್ಯಂತ ರಹಸ್ಯಮಯ ವೇದಗಳು, ಭುಜಗಳಿಂದ, ಕ್ಷತ್ರಿಯರೂ ಮತ್ತು ಬಲವೂ, ತೊಡೆಗಳಿಂದ ವೈಶ್ಯರೂ ಮತ್ತು ಅವರ ವೃತ್ತಿ-ವ್ಯಾಪಾರ ಕುಶಲತೆಯೂ, ಚರಣಗಳಿಂದ ಶೂದ್ರರೂ ಮತ್ತು ಅವರ ಸೇವಾವೃತ್ತಿಯೂ ಪ್ರಕಟವಾಗಿರುವುದೋ, ಆ ಪರಮೈಶ್ವರ್ಯಸಂಪನ್ನ ಭಗವಂತನು ನಮ್ಮ ಮೇಲೆ ಪ್ರಸನ್ನನಾಗಲೀ. ॥ ೪೧ ॥ ಯಾರ ಕೆಳದುಟಿಯಿಂದ ಲೋಭವೂ, ಮೇಲ್ದುಟಿಯಿಂದ ಪ್ರೀತಿಯೂ, ಮೂಗಿನಿಂದ ಕಾಂತಿಯೂ, ಸ್ಪರ್ಶದಿಂದ ಪಶುಗಳಿಗೆ ಪ್ರಿಯವಾದ ಕಾಮವೂ, ಹುಬ್ಬುಗಳಿಂದ ಯಮನೂ, ರೆಪ್ಪೆಗಳಿಂದ ಕಾಲವೂ ಹುಟ್ಟಿರುವರೋ ಅಂತಹ ಪರಮೈಶ್ವರ್ಯಸಂಪನ್ನ ಭಗವಂತನು ನಮ್ಮ ಮೇಲೆ ಪ್ರಸನ್ನನಾಗಲೀ. ॥ ೪೨ ॥

ದ್ರವ್ಯಂ ವಯಃ ಕರ್ಮ ಗುಣಾನ್ವಿಶೇಷಂ
ಯದ್ಯೋಗಮಾಯಾವಿಹಿತಾನ್ವದಂತಿ ।
ಯದ್ದುರ್ವಿಭಾವ್ಯಂ ಪ್ರಬುಧಾಪಬಾಧಂ
ಪ್ರಸೀದತಾಂ ನಃ ಸ ಮಹಾವಿಭೂತಿಃ ॥ ೪೩ ॥

ನಮೋಽಸ್ತು ತಸ್ಮಾ ಉಪಶಾಂತಶಕ್ತಯೇ
ಸ್ವಾರಾಜ್ಯಲಾಭಪ್ರತಿಪೂರಿತಾತ್ಮನೇ ।
ಗುಣೇಷು ಮಾಯಾರಚಿತೇಷು ವೃತ್ತಿಭಿ-
ರ್ನ ಸಜ್ಜಮಾನಾಯ ನಭಸ್ವದೂತಯೇ ॥ ೪೪ ॥

ಸ ತ್ವಂ ನೋ ದರ್ಶಯಾತ್ಮಾನಮಸ್ಮತ್ಕರಣಗೋಚರಮ್ ।
ಪ್ರಪನ್ನಾನಾಂ ದಿದೃಕ್ಷೂಣಾಂ ಸ್ಮಿತಂ ತೇ ಮುಖಾಂಬುಜಮ್ ॥ ೪೫ ॥

ತೈಸ್ತೈಃ ಸ್ವೇಚ್ಛಾಧೃತೈ ರೂಪೈಃ ಕಾಲೇ ಕಾಲೇ ಸ್ವಯಂ ವಿಭೋ ।
ಕರ್ಮ ದುರ್ವಿಷಹಂ ಯನ್ನೋ ಭಗವಾಂಸ್ತತ್ಕರೋತಿ ಹಿ ॥ ೪೬ ॥

ಕ್ಲೇಶಭೂರ್ಯಲ್ಪಸಾರಾಣಿ ಕರ್ಮಾಣಿ ವಿಫಲಾನಿ ವಾ ।
ದೇಹಿನಾಂ ವಿಷಯಾರ್ತಾನಾಂ ನ ತಥೈವಾರ್ಪಿತಂ ತ್ವಯಿ ॥ ೪೭ ॥

ನಾವಮಃ ಕರ್ಮಕಲ್ಪೋಽಪಿ ವಿಫಲಾಯೇಶ್ವರಾರ್ಪಿತಃ ।
ಕಲ್ಪತೇ ಪುರುಷಸ್ಯೈವ ಸ ಹ್ಯಾತ್ಮಾ ದಯಿತೋ ಹಿತಃ ॥ ೪೮ ॥

ಯಥಾ ಹಿ ಸ್ಕಂಧಶಾಖಾನಾಂ ತರೋರ್ಮೂಲಾವಸೇಚನಮ್ ।
ಏವಮಾರಾಧನಂ ವಿಷ್ಣೋಃ ಸರ್ವೇಷಾಮಾತ್ಮನಶ್ಚ ಹಿ ॥ ೪೯ ॥

ನಮಸ್ತುಭ್ಯಮನಂತಾಯ ದುರ್ವಿತರ್ಕ್ಯಾತ್ಮಕರ್ಮಣೇ ।
ನಿರ್ಗುಣಾಯ ಗುಣೇಶಾಯ ಸತ್ತ್ವಸ್ಥಾಯ ಚ ಸಾಂಪ್ರತಮ್ ॥ ೫೦ ॥

ಪಂಚಭೂತಗಳೂ, ಕಾಲ, ಕರ್ಮ ಸತ್ತ್ವಾದಿಗುಣಗಳು ಮತ್ತು ವಿವೇಕ ಪುರುಷರಿಂದ ನಿರಾಕರಿಸಲ್ಪಡುವ ನಿರ್ವಚನೀಯ ಅಥವಾ ಅನಿರ್ವಚನೀಯ ವಿಶೇಷ ಪದಾರ್ಥಗಳು – ಇವೆಲ್ಲವೂ ಭಗವಂತನ ಯೋಗಮಾಯೆಯಿಂದಲೇ ಉಂಟಾಗಿವೆ ಎಂದು ಶಾಸ್ತ್ರಗಳು ಹೇಳುತ್ತವೆ. ಅಂತಹ ಪರಮೈಶ್ವರ್ಯಸಂಪನ್ನ ಭಗವಂತನು ನಮ್ಮ ಮೇಲೆ ಪ್ರಸನ್ನನಾಗಲೀ. ॥ ೪೩ ॥ ಯಾರು ಮಾಯಾ ನಿರ್ಮಿತ ಗುಣಗಳಲ್ಲಿ ದರ್ಶನಾದಿವೃತ್ತಿಗಳ ಮೂಲಕ ಆಸಕ್ತ ನಾಗುವುದಿಲ್ಲವೋ, ಯಾರು ವಾಯುವಿನಂತೆ ಸದಾಕಾಲ ಅಸಂಗ ನಾಗಿರುವನೋ, ಯಾರಲ್ಲಿ ಸಮಸ್ತ ಶಕ್ತಿಗಳು ಶಾಂತವಾಗಿವೆಯೋ, ಆ ತನ್ನ ಆತ್ಮಾನಂದದ ಲಾಭದಿಂದ ಪರಿಪೂರ್ಣನೂ, ಆತ್ಮ ಸ್ವರೂಪನೂ ಆದ ಭಗವಂತನಿಗೆ ನಮ್ಮ ನಮಸ್ಕಾರಗಳು. ॥ ೪೪ ॥

ಪ್ರಭುವೇ! ನಾವು ನಿನ್ನಲ್ಲಿ ಶರಣಾಗತರಾಗಿದ್ದೇವೆ ಮತ್ತು ಮಂದ-ಮಂದ ಮುಗುಳ್ನಗೆಯಿಂದ ಕೂಡಿದ ನಿನ್ನ ಮುಖಕಮಲವನ್ನು ನಮ್ಮ ಕಣ್ಣುಗಳು ನೋಡಲಿ ಎಂದೇ ಬಯಸುತ್ತೇವೆ. ಕೃಪೆದೋರಿ ನೀನು ನಮಗೆ ಅದರ ದರ್ಶನಮಾಡಿಸು. ॥ ೪೫ ॥ ಪ್ರಭೋ! ನೀನು ಆಗಾಗ ಸ್ವತಃ ತನ್ನ ಇಚ್ಛೆಯಿಂದ ಅನೇಕ ರೂಪಗಳನ್ನು ಧರಿಸಿ, ನಮಗೆ ಅತ್ಯಂತ ಕಠಿಣವಾಗಿ ತೋರುವ ಕಾರ್ಯವನ್ನು ನೀನು ಸಹಜವಾಗಿ ಮಾಡಿಬಿಡುತ್ತೀಯೆ. ನೀನು ಸರ್ವಶಕ್ತಿ ಸಂಪನ್ನನಾಗಿರುವೆ. ನಿನಗೆ ಇದರಲ್ಲಿ ಯಾವ ಕಷ್ಟವಿದೆ? ॥ ೪೬ ॥ ವಿಷಯಗಳ ಲೋಭದಲ್ಲಿ ಬಿದ್ದು ದುಃಖವನ್ನು ಭೋಗಿಸುತ್ತಿರುವ ದೇಹಾಭಿಮಾನಿಗಳಿಗೆ ಕರ್ಮಮಾಡಲು ಪರಿಶ್ರಮ, ಕ್ಲೇಶಗಳು ಬಹಳ ಹೆಚ್ಚಾಗಿರುತ್ತವೆ. ಆದರೆ ಫಲವು ಬಹಳ ಕಮ್ಮಿ ಸಿಗುತ್ತದೆ. ಹೆಚ್ಚಾಗಿ ಅದರಲ್ಲಿ ವಿಫಲತೆಯೇ ಕೈಗೆ ಬರುತ್ತದೆ. ಆದರೆ ನಿನಗೆ ಸಮರ್ಪಿಸಲ್ಪಡುವ ಕರ್ಮಗಳನ್ನು ಮಾಡುವಾಗಲೂ ಪರಮ ಸುಖವುಂಟಾಗುತ್ತದೆ. ಅವು ಸ್ವಯಂ ಫಲರೂಪವೇ ಆಗಿರುತ್ತವೆ. ॥ ೪೭ ॥ ಭಗವಂತನಿಗೆ ಅರ್ಪಿಸಲ್ಪಟ್ಟ ಅತಿ ಚಿಕ್ಕ ಕರ್ಮವೂ ಕೂಡ ಎಂದೂ ವಿಫಲವಾಗುವುದಿಲ್ಲ, ಏಕೆಂದರೆ ಭಗವಂತನು ಜೀವರ ಪರಮ ಹಿತೈಷಿಯೂ, ಪರಮ ಪ್ರಿಯತಮನೂ, ಆತ್ಮನೂ ಆಗಿರುವನು. ॥ ೪೮ ॥ ಮರದ ಬೇರಿಗೆ ನೀರೆರೆದರೆ ಅದರ ಕಾಂಡ-ಶಾಖೆಗಳು ತಣಿಯುವಂತೆಯೇ ಸರ್ವಾತ್ಮಾ ಭಗವಂತನ ಆರಾಧನೆಯಿಂದ ಸಮಸ್ತ ಪ್ರಾಣಿಗಳ ಮತ್ತು ತನ್ನದೂ ಕೂಡ ಆರಾಧನೆ ಆದಂತಾಗುತ್ತದೆ. ॥ ೪೯ ॥ ಯಾರು ಮೂರೂ ಕಾಲಗಳಲ್ಲಿಯೂ ಮತ್ತು ಅದರಿಂದ ಆಚೆಗೂ ಏಕರಸನಾಗಿ ಸ್ಥಿತನಾಗಿರುವನೋ, ಯಾರ ಲೀಲೆಗಳ ರಹಸ್ಯವು ತರ್ಕ-ವಿತರ್ಕಗಳಿಂದ ದೂರವಾಗಿದೆಯೋ, ಯಾರು ಸ್ವಯಂ ಗುಣಗಳಿಂದ ಅತೀತನಾಗಿದ್ದರೂ ಎಲ್ಲ ಗುಣಗಳ ಸ್ವಾಮಿಯಾಗಿರುವನೋ, ಈಗ ಸತ್ತ್ವ ಗುಣದಲ್ಲಿ ನೆಲೆಸಿರುವನೋ, ಅಂತಹ ನಿನಗೆ ಮತ್ತೆ-ಮತ್ತೆ ನಮಸ್ಕರಿಸುತ್ತೇನೆ. ॥ ೫೦ ॥

ಐದನೆಯ ಅಧ್ಯಾಯವು ಮುಗಿಯಿತು. ॥ ೫ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಅಷ್ಟಮ ಸ್ಕಂಧೇ
ಅಮೃತಮಥನೇ ಪಂಚಮೋಽಧ್ಯಾಯಃ ॥ ೫ ॥

ಆರನೆಯ ಅಧ್ಯಾಯ

ದೇವ-ದಾನವರು ಸೇರಿ ಸಮುದ್ರವನ್ನು ಕಡೆದುದು

ಶ್ರೀಶುಕ ಉವಾಚ

ಏವಂ ಸ್ತುತಃ ಸುರಗಣೈರ್ಭಗವಾನ್ಹರಿರೀಶ್ವರಃ ।
ತೇಷಾಮಾವಿರಭೂದ್ರಾಜನ್ಸಹಸ್ರಾರ್ಕೋದಯದ್ಯುತಿಃ ॥ ೧ ॥

ತೇನೈವ ಮಹಸಾ ಸರ್ವೇ ದೇವಾಃ ಪ್ರತಿಹತೇಕ್ಷಣಾಃ ।
ನಾಪಶ್ಯನ್ ಖಂ ದಿಶಃ ಕ್ಷೋಣೀಮಾತ್ಮಾನಂ ಚ ಕುತೋ ವಿಭುಮ್ ॥ ೨ ॥

ವಿರಿಂಚೋ ಭಗವಾನ್ದೃಷ್ಟ್ವಾ ಸಹ ಶರ್ವೇಣ ತಾಂ ತನುಮ್ ।
ಸ್ವಚ್ಛಾಂ ಮರಕತಶ್ಯಾಮಾಂ ಕಂಜಗರ್ಭಾರುಣೇಕ್ಷಣಾಮ್ ॥ ೩ ॥

ತಪ್ತಹೇಮಾವದಾತೇನ ಲಸತ್ಕೌಶೇಯವಾಸಸಾ ।
ಪ್ರಸನ್ನಚಾರುಸರ್ವಾಂಗೀಂ ಸುಮುಖೀಂ ಸುಂದರಭ್ರುವಮ್ ॥ ೪ ॥

ಮಹಾಮಣಿಕಿರೀಟೇನ ಕೇಯೂರಾಭ್ಯಾಂ ಚ ಭೂಷಿತಾಮ್ ।
ಕರ್ಣಾಭರಣನಿರ್ಭಾತಕಪೋಲಶ್ರೀಮುಖಾಂಬುಜಾಮ್ ॥ ೫ ॥

ಕಾಂಚೀಕಲಾಪವಲಯಹಾರನೂಪುರಶೋಭಿತಾಮ್ ।
ಕೌಸ್ತುಭಾಭರಣಾಂ ಲಕ್ಷ್ಮೀಂ ಬಿಭ್ರತೀಂ ವನಮಾಲಿನೀಮ್ ॥ ೬ ॥

ಸುದರ್ಶನಾದಿಭಿಃ ಸ್ವಾಸ್ತ್ರೈರ್ಮೂರ್ತಿಮದ್ಭಿರುಪಾಸಿತಾಮ್ ।
ತುಷ್ಟಾವ ದೇವಪ್ರವರಃ ಸಶರ್ವಃ ಪುರುಷಂ ಪರಮ್ ।
ಸರ್ವಾಮರಗಣೈಃ ಸಾಕಂ ಸರ್ವಾಂಗೈರವನಿಂ ಗತೈಃ ॥ ೭ ॥

ಬ್ರಹ್ಮೋವಾಚ

ಅಜಾತಜನ್ಮಸ್ಥಿತಿಸಂಯಮಾಯಾ-
  ಗುಣಾಯ ನಿರ್ವಾಣಸುಖಾರ್ಣವಾಯ ।
ಅಣೋರಣಿಮ್ನೇಽಪರಿಗಣ್ಯಧಾಮ್ನೇ
  ಮಹಾನುಭಾವಾಯ ನಮೋ ನಮಸ್ತೇ ॥ ೮ ॥

ರೂಪಂ ತವೈತತ್ಪುರುಷರ್ಷಭೇಜ್ಯಂ
  ಶ್ರೇಯೋಽರ್ಥಿಭಿರ್ವೈದಿಕತಾಂತ್ರಿಕೇಣ ।
ಯೋಗೇನ ಧಾತಃ ಸಹ ನಸ್ತ್ರಿಲೋಕಾನ್
  ಪಶ್ಯಾಮ್ಯಮುಷ್ಮಿನ್ನು ಹ ವಿಶ್ವಮೂರ್ತೌ ॥ ೯ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ! ದೇವತೆಗಳು ಸರ್ವೇಶ್ವರನಾದ ಭಗವಾನ್ ಶ್ರೀಹರಿಯನ್ನು ಹೀಗೆ ಸ್ತುತಿಸಿದಾಗ ಅವನು ಅವರ ನಡುವೆಯೇ ಪ್ರಕಟನಾದನು. ಅವನ ಶರೀರದ ಪ್ರಭೆಯು ಸಾವಿರಾರು ಸೂರ್ಯರು ಒಮ್ಮೆಲೇ ಉದಯಿಸಿದಂತೆ ಇತ್ತು. ॥ ೧ ॥ ಭಗವಂತನ ಉಜ್ವಲವಾದ ಪ್ರಭೆಯಿಂದಾಗಿ ದೇವತೆಗಳ ಕಣ್ಣುಗಳು ಕೋರೈಸಿ ಅವನನ್ನು ನೋಡುವುದಿರಲಿ, ಪೃಥಿವ್ಯಾಕಾಶಗಳನ್ನಾಗಲೀ, ದಿಕ್ಕುಗಳನ್ನಾಗಲೀ ನೋಡಲು ಅವರಿಂದ ಸಾಧ್ಯವಾಗಲಿಲ್ಲ, ಕಡೆಗೆ ತಮ್ಮ ಶರೀರಗಳನ್ನೂ ನೋಡಿಕೊಳ್ಳಲಾಗಲಿಲ್ಲ. ॥ ೨ ॥ ಕೇವಲ, ಭಗವಾನ್ ಶಂಕರನು ಮತ್ತು ಬ್ರಹ್ಮದೇವರು ಅವನ ದರ್ಶನ ಮಾಡಿದರು. ಅವನ ಸ್ವರೂಪವು ತುಂಬಾ ಸುಂದರವಾಗಿತ್ತು. ನಿರ್ಮಲವೂ, ಸ್ವಚ್ಛವೂ ಆದ ಅವನ ಅಂಗಕಾಂತಿಯು ಮರಕತಮಣಿಯಂತೆ ಶ್ಯಾಮಲವರ್ಣದಿಂದ ಶೋಭಿಸುತ್ತಿತ್ತು. ಕಮಲದ ಒಳಭಾಗದಲ್ಲಿರುವ ಕೆಂಪಾದ ಪರಾಗದಂತಹ ಎಣ್ಣೆಗೆಂಪಿನ ಕಣ್ಣುಗಳು, ಪುಟಕ್ಕಿಟ್ಟ ಚಿನ್ನದಂತೆ ಥಳ-ಥಳಿಸುವ ರೇಶ್ಮೆಯ ಪೀತಾಂಬರ, ಸರ್ವಾಂಗಸುಂದರ ಶರೀರದ ರೋಮ-ರೋಮಗಳಲ್ಲಿ ಪ್ರಸನ್ನತೆ ಉಕ್ಕುತ್ತಿತ್ತು. ಧನುಸ್ಸಿನಂತೆ ಬಾಗಿದ ಹುಬ್ಬುಗಳು, ಅತ್ಯಂತ ಸುಂದರವಾದ ಮುಖ-ತಲೆಯ ಮೇಲೆ ಮಹಾಮಣಿಮಯ ದಿವ್ಯಕಿರೀಟ, ಭುಜಗಳಲ್ಲಿ ಕನಕಾಂಗದ - ಕೇಯೂರಗಳು. ಕಿವಿಗಳಲ್ಲಿ ಓಲಾಡುತ್ತಿದ್ದ ಮಕರಕುಂಡಲಗಳ ಪ್ರಭೆಯಿಂದ ಕಂಗೊಳಿಸುವ ಕಪೋಲಗಳು ಇನ್ನೂ ಸುಂದರವಾಗಿದ್ದುವು. ಅದರಿಂದ ಮುಖವು ಮತ್ತಷ್ಟು ಶೋಭಿಸುತ್ತಿತ್ತು. ಒಡ್ಯಾಣ, ಕೈಕಡಗ, ಕಾಲಂದುಗೆ, ಕೊರಳಲ್ಲಿ ಮುತ್ತಿನಹಾರ ಇವುಗಳಿಂದ ಶೋಭಾಯಮಾನನಾಗಿದ್ದನು. ವಕ್ಷಃಸ್ಥಳದಲ್ಲಿ ಲಕ್ಷ್ಮೀ ಮತ್ತು ಕೊರಳಲ್ಲಿ ಕೌಸ್ತುಭಮಣಿ, ವನಮಾಲೆ ಸುಶೋಭಿಸುತ್ತಿತ್ತು. ॥ ೩-೬ ॥ ಭಗವಂತನ ಸುದರ್ಶನವೇ ಮುಂತಾದ ದಿವ್ಯಾಯುಧಗಳು ಮೂರ್ತಿಮತ್ತಾಗಿ ನಿಂತು ಪ್ರಭುವಿನ ಸೇವೆ ಮಾಡುತ್ತಿದ್ದವು. ಎಲ್ಲ ದೇವತೆಗಳು ಸಾಷ್ಟಾಂಗ ನಮಸ್ಕಾರಮಾಡಿ ಮತ್ತೆ ದೇವತೆಗಳೆಲ್ಲರೊಡನೆ ಸೇರಿ ಪರಶಿವನು ಮತ್ತು ಬ್ರಹ್ಮದೇವರು ಪರಮಪುರುಷನನ್ನು ಸ್ತುತಿಸತೊಡಗಿದರು. ॥ ೭ ॥

ಬ್ರಹ್ಮದೇವರು ಹೇಳಿದರು – ಯಾರು ಜನ್ಮ, ಸ್ಥಿತಿ, ಪ್ರಳಯಗಳೊಂದಿಗೆ ಯಾವುದೇ ಸಂಬಂಧವಿರಿಸಿಕೊಳ್ಳುವುದಿಲ್ಲವೋ, ಯಾರು ಪ್ರಾಕೃತ ಗುಣಗಳಿಂದ ರಹಿತನೂ, ಮೋಕ್ಷಸ್ವರೂಪನಾದ ಪರಮಾನಂದದ ಮಹಾಸಮುದ್ರನಾಗಿರುವನೋ, ಯಾರು ಸೂಕ್ಷ್ಮಕ್ಕೂ ಸೂಕ್ಷ್ಮನೋ, ಯಾರ ಸ್ವರೂಪವು ಅನಂತವಾಗಿದೆಯೋ ಆ ಪರಮೈಶ್ವರ್ಯಸಂಪನ್ನ ಪ್ರಭುವಿಗೆ ನಾವು ಮತ್ತೆ-ಮತ್ತೆ ನಮಸ್ಕರಿಸುತ್ತೇವೆ. ॥ ೮ ॥ ಪುರುಷೋತ್ತಮನೇ! ತಮ್ಮ ಶ್ರೇಯಸ್ಸನ್ನು ಬಯಸುವ ಸಾಧಕರು ವೇದೋಕ್ತ ಹಾಗೂ ಪಾಂಚರಾತ್ರೋಕ್ತ ವಿಧಿಯಿಂದ ನಿನ್ನ ಇದೇ ಸ್ವರೂಪವನ್ನು ಉಪಾಸನೆ

ತ್ವಯ್ಯಗ್ರ ಆಸೀತ್ತ್ವಯಿ ಮಧ್ಯ ಆಸೀ-
ತ್ತ್ವಯ್ಯಂತ ಆಸೀದಿದಮಾತ್ಮತಂತ್ರೇ ।
ತ್ವಮಾದಿರಂತೋ ಜಗತೋಽಸ್ಯ ಮಧ್ಯಂ
ಘಟಸ್ಯ ಮೃತ್ಸ್ನೇವ ಪರಃ ಪರಸ್ಮಾತ್ ॥ ೧೦ ॥

ತ್ವಂ ಮಾಯಯಾಽಽತ್ಮಾಶ್ರಯಯಾ ಸ್ವಯೇದಂ
ನಿರ್ಮಾಯ ವಿಶ್ವಂ ತದನುಪ್ರವಿಷ್ಟಃ ।
ಪಶ್ಯಂತಿ ಯುಕ್ತಾ ಮನಸಾ ಮನೀಷಿಣೋ
ಗುಣವ್ಯವಾಯೇಽಪ್ಯಗುಣಂ ವಿಪಶ್ಚಿತಃ ॥ ೧೧ ॥

ಯಥಾಗ್ನಿಮೇಧಸ್ಯಮೃತಂ ಚ ಗೋಷು
ಭುವ್ಯನ್ನಮಂಬೂದ್ಯಮನೇ ಚ ವೃತ್ತಿಮ್ ।
ಯೋಗೈರ್ಮನುಷ್ಯಾ ಅಧಿಯಂತಿ ಹಿ ತ್ವಾಂ
ಗುಣೇಷು ಬುದ್ಧ್ಯಾ ಕವಯೋ ವದಂತಿ ॥ ೧೨ ॥

ತಂ ತ್ವಾಂ ವಯಂ ನಾಥ ಸಮುಜ್ಜಿಹಾನಂ
ಸರೋಜನಾಭಾತಿಚಿರೇಪ್ಸಿತಾರ್ಥಮ್ ।
ದೃಷ್ಟ್ವಾ ಗತಾ ನಿರ್ವೃತಿಮದ್ಯ ಸರ್ವೇ
ಗಜಾ ದವಾರ್ತಾ ಇವ ಗಾಂಗಮಂಭಃ ॥ ೧೩ ॥

ಸ ತ್ವಂ ವಿಧತ್ಸ್ವಾಖಿಲಲೋಕಪಾಲಾ
ವಯಂ ಯದರ್ಥಾಸ್ತವ ಪಾದಮೂಲಮ್ ।
ಸಮಾಗತಾಸ್ತೇ ಬಹಿರಂತರಾತ್ಮನ್
ಕಿಂ ವಾನ್ಯವಿಜ್ಞಾಪ್ಯಮಶೇಷಸಾಕ್ಷಿಣಃ ॥ ೧೪ ॥

ಅಹಂ ಗಿರಿತ್ರಶ್ಚ ಸುರಾದಯೋ ಯೇ
ದಕ್ಷಾದಯೋಽಗ್ನೇರಿವ ಕೇತವಸ್ತೇ ।
ಕಿಂ ವಾ ವಿದಾಮೇಶ ಪೃಥಗ್ವಿಭಾತಾ
ವಿಧತ್ಸ್ವ ಶಂ ನೋ ದ್ವಿಜದೇವಮಂತ್ರಮ್ ॥ ೧೫ ॥

ಶ್ರೀಶುಕ ಉವಾಚ

ಏವಂ ವಿರಿಂಚಾದಿಭಿರೀಡಿತಸ್ತದ್
ವಿಜ್ಞಾಯ ತೇಷಾಂ ಹೃದಯಂ ತಥೈವ ।
ಜಗಾದ ಜೀಮೂತಗಭೀರಯಾ ಗಿರಾ
ಬದ್ಧಾಂಜಲೀನ್ಸಂವೃತಸರ್ವಕಾರಕಾನ್ ॥ ೧೬ ॥

ಮಾಡುತ್ತಾರೆ. ನನ್ನನ್ನೂ ಸೃಷ್ಟಿಸಿದ ಪ್ರಭೋ! ನಿನ್ನ ಈ ವಿಶ್ವಮಯ ಸ್ವರೂಪದಲ್ಲಿ ನನಗೆ ಸಮಸ್ತ ದೇವತೆಗಳ ಸಹಿತ ಮೂರು ಲೋಕಗಳು ಕಂಡುಬರುತ್ತಿವೆ. ॥ ೯ ॥ ನಿನ್ನಲ್ಲೇ ಮೊದಲು ಈ ಜಗತ್ತು ಲೀನವಾಗಿತ್ತು, ನಡುವೆಯೂ ಇದು ನಿನ್ನಲ್ಲೇ ನೆಲೆಸಿತ್ತು. ಕೊನೆಗೆ ಇದು ಪುನಃ ನಿನ್ನಲ್ಲೇ ಲೀನವಾಗಿ ಹೋದೀತು. ನೀನು ಸ್ವತಃ ಕಾರ್ಯ-ಕಾರಣಗಳಿಂದ ಅತೀತ ಪರಮ ಸ್ವತಂತ್ರನಾಗಿರುವೆ. ಗಡಿಗೆಯಲ್ಲಿ ಆದಿ, ಮಧ್ಯ, ಅಂತ್ಯದಲ್ಲಿ ಮಣ್ಣೇ ಇರುವಂತೆ ಈ ಜಗತ್ತಿನ ಆದಿ, ಅಂತ್ಯ ಮತ್ತು ಮಧ್ಯದಲ್ಲಿ ನೀನೇ ಆಗಿರುವೆ. ॥ ೧೦ ॥ ನೀನು ನಿನ್ನಲ್ಲೇ ಆಶ್ರಿತನಾಗಿರುವ ನಿನ್ನ ಮಾಯೆಯಿಂದ ಈ ಪ್ರಪಂಚವನ್ನು ರಚಿಸುತ್ತೀಯೆ ಮತ್ತು ಇದರಲ್ಲಿ ಪುನಃ ಪ್ರವೇಶಿಸಿ ಅಂತರ್ಯಾಮಿಯ ರೂಪದಲ್ಲಿ ವಿರಾಜಿಸುತ್ತಿರುವೆ. ಅದಕ್ಕಾಗಿ ವಿವೇಕಿಗಳೂ, ಶಾಸ್ತ್ರಜ್ಞರೂ ಆದ ಜನರು ಹೆಚ್ಚು ಎಚ್ಚರಿಕೆಯಿಂದ ತಮ್ಮ ಮನಸ್ಸನ್ನು ಏಕಾಗ್ರಗೊಳಿಸಿ ಈ ಗುಣಗಳ, ವಿಷಯಗಳ ಗದ್ದಲದಲ್ಲಿಯೂ ನಿನ್ನ ನಿರ್ಗುಣ ಸ್ವರೂಪವನ್ನೇ ಸಾಕ್ಷಾತ್ಕರಿಸಿ ಕೊಳ್ಳುವರು. ॥ ೧೧ ॥ ಮನುಷ್ಯನು ಯುಕ್ತಿಯಿಂದ ಕಟ್ಟಿಗೆಯಿಂದ ಬೆಂಕಿಯನ್ನೂ, ಹಸುವಿನಿಂದ ಅಮೃತದಂತಿರುವ ಹಾಲನ್ನೂ, ಪೃಥಿವಿಯಿಂದ ನೀರು ಹಾಗೂ ಅನ್ನವನ್ನೂ ಮತ್ತು ವ್ಯಾಪಾರದಿಂದ ತನ್ನ ಜೀವನ ನಿರ್ವಹಣೆಯನ್ನು ಪಡೆದುಕೊಳ್ಳುವನೋ ಹಾಗೆಯೇ ವಿವೇಕಿ ಮನುಷ್ಯನೂ ಕೂಡ ತನ್ನ ಶುದ್ಧಬುದ್ಧಿಯಿಂದ, ಭಕ್ತಿಯೋಗ-ಜ್ಞಾನಯೋಗ ಮುಂತಾದವುಗಳ ಮೂಲಕ ನಿನ್ನನ್ನು ಈ ವಿಷಯಗಳಲ್ಲೇ ಪಡೆದುಕೊಳ್ಳುವರು ಹಾಗೂ ತಮ್ಮ ಅನುಭವಕ್ಕನುಸಾರವಾಗಿ ನಿನ್ನನ್ನು ವರ್ಣಿಸುವರು. ॥ ೧೨ ॥ ಪದ್ಮನಾಭಾ! ಕಾಡುಗಿಚ್ಚಿನಿಂದ ಬೆಂದು ನೊಂದಿರುವ ಆನೆಯು ಗಂಗಾನದಿಯಲ್ಲಿ ಮುಳುಗಿ ಸುಖ-ಸಂತೋಷಪಡುವಂತೆಯೇ, ನಿನ್ನ ಆವಿರ್ಭಾವದಿಂದ ನಾವುಗಳು ಪರಮಸುಖಿಗಳು ಮತ್ತು ಶಾಂತಿಯನ್ನು ಹೊಂದಿರುವೆವು. ಸ್ವಾಮಿ! ನಾವುಗಳು ಅನೇಕ ದಿನಗಳಿಂದ ನಿನ್ನ ದರ್ಶನಕ್ಕಾಗಿ ಅತ್ಯಂತ ಕಾತರರಾಗಿದ್ದೆವು. ॥ ೧೩ ॥ ನೀನೇ ನಮ್ಮ ಹೊರಗಿನ-ಒಳಗಿನ ಆತ್ಮನಾಗಿರುವೆ. ನಾವೆಲ್ಲ ಲೋಕಪಾಲರು ಯಾವ ಉದ್ದೇಶದಿಂದ ನಿನ್ನ ಚರಣಗಳಲ್ಲಿ ಶರಣಾಗಿದ್ದೇವೋ ಅದನ್ನು ನೀನು ಕೃಪೆಮಾಡಿ ಪೂರ್ಣಮಾಡು. ನೀನು ಎಲ್ಲರ ಸಾಕ್ಷಿಯಾಗಿರುವೆ. ಆದ್ದರಿಂದ ಈ ವಿಷಯದಲ್ಲಿ ನಾವುಗಳು ನಿನ್ನಲ್ಲಿ ಇನ್ನೇನು ನಿವೇದಿಸಿಕೊಳ್ಳಲಿ? ॥ ೧೪ ॥ ಪ್ರಭೋ! ನಾನೂ, ಶಂಕರನೂ, ಬೇರೆ ದೇವತೆಗಳೂ, ಋಷಿಗಳೂ, ದಕ್ಷರೇ ಮುಂತಾದ ಪ್ರಜಾಪತಿಗಳೆಲ್ಲರೂ ಬೆಂಕಿಯಿಂದ ಸಿಡಿದ ಕಿಡಿಯಂತೆ ನಿನ್ನ ಅಂಶರೇ ಆಗಿದ್ದೇವೆ ಇಂತಹ ಸ್ಥಿತಿಯಲ್ಲಿ ಪ್ರಭೋ! ನಾವೇನು ಬಲ್ಲೆವು? ಬ್ರಾಹ್ಮಣರ ಮತ್ತು ದೇವತೆಗಳ ಕಲ್ಯಾಣಕ್ಕಾಗಿ ಏನು ಮಾಡುವ ಆವಶ್ಯಕತೆ ಇದೆಯೋ ಅದನ್ನು ನೀನೇ ಅಪ್ಪಣೆ ಮಾಡಬೇಕು ಹಾಗೂ ನೀನೂ ಸ್ವತಃ ಹಾಗೆಯೇ ಮಾಡು. ॥ ೧೫ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಹೀಗೆ ಬ್ರಹ್ಮಾದಿ ದೇವತೆಗಳು ಸ್ತುತಿಮಾಡಿದಾಗ ಶ್ರೀಹರಿಯು ಅವರ ಮನಸ್ಸಿನ ಆಶಯವನ್ನು ತಿಳಿದವನಾಗಿ ಜಿತೇಂದ್ರಿಯರಾಗಿದ್ದು ಕೈಜೋಡಿಸಿಕೊಂಡಿದ್ದ ಬ್ರಹ್ಮನೇ ಮುಂತಾದ ದೇವತೆಗಳನ್ನು ಕುರಿತು ಮೇಘದಂತೆ ಗಂಭೀರವಾದ ಮಾತಿನಿಂದ ಇಂತೆಂದನು – ॥ ೧೬ ॥

ಏಕ ಏವೇಶ್ವರಸ್ತಸ್ಮಿನ್ಸುರಕಾರ್ಯೇ ಸುರೇಶ್ವರಃ ।
ವಿಹರ್ತುಕಾಮಸ್ತಾನಾಹ ಸಮುದ್ರೋನ್ಮಥನಾದಿಭಿಃ ॥ ೧೭ ॥

ಶ್ರೀಭಗವಾನುವಾಚ

ಹಂತ ಬ್ರಹ್ಮನ್ನಹೋ ಶಂಭೋ ಹೇ ದೇವಾ ಮಮ ಭಾಷಿತಮ್ ।
ಶೃಣುತಾವಹಿತಾಃ ಸರ್ವೇ ಶ್ರೇಯೋ ವಃ ಸ್ಯಾದ್ಯಥಾ ಸುರಾಃ ॥ ೧೮ ॥

ಯಾತ ದಾನವದೈತೇಯೈಸ್ತಾವತ್ಸಂಧಿರ್ವಿಧೀಯತಾಮ್ ।
ಕಾಲೇನಾನುಗೃಹೀತೈಸ್ತೈರ್ಯಾವದ್ವೋ ಭವ ಆತ್ಮನಃ ॥ ೧೯ ॥

ಅರಯೋಽಪಿ ಹಿ ಸಂಧೇಯಾಃ ಸತಿ ಕಾರ್ಯಾರ್ಥಗೌರವೇ ।
ಅಹಿಮೂಷಕವದ್ದೇವಾ ಹ್ಯರ್ಥಸ್ಯ ಪದವೀಂ ಗತೈಃ ॥ ೨೦ ॥

ಅಮೃತೋತ್ಪಾದನೇ ಯತ್ನಃ ಕ್ರಿಯತಾಮವಿಲಂಬಿತಮ್ ।
ಯಸ್ಯ ಪೀತಸ್ಯ ವೈ ಜಂತುರ್ಮೃತ್ಯುಗ್ರಸ್ತೋಽಮರೋ ಭವೇತ್ ॥ ೨೧ ॥

ಕ್ಷಿಪ್ತ್ವಾ ಕ್ಷೀರೋದಧೌ ಸರ್ವಾ ವೀರುತ್ತೃಣಲತೌಷಧೀಃ ।
ಮಂಥಾನಂ ಮಂದರಂ ಕೃತ್ವಾ ನೇತ್ರಂ ಕೃತ್ವಾ ತು ವಾಸುಕಿಮ್ ॥ ೨೨ ॥

ಸಹಾಯೇನ ಮಯಾ ದೇವಾ ನಿರ್ಮಂಥಧ್ವಮತಂದ್ರಿತಾಃ ।
ಕ್ಲೇಶಭಾಜೋ ಭವಿಷ್ಯಂತಿ ದೈತ್ಯಾ ಯೂಯಂ ಫಲಗ್ರಹಾಃ ॥ ೨೩ ॥

ಯೂಯಂ ತದನುಮೋದಧ್ವಂ ಯದಿಚ್ಛಂತ್ಯಸುರಾಃ ಸುರಾಃ ।
ನ ಸಂರಂಭೇಣ ಸಿಧ್ಯಂತಿ ಸರ್ವೇಽರ್ಥಾಃ ಸಾಂತ್ವಯಾ ಯಥಾ ॥ ೨೪ ॥

ನ ಭೇತವ್ಯಂ ಕಾಲಕೂಟಾದ್ವಿಷಾಜ್ಜಲಧಿಸಂಭವಾತ್ ।
ಲೋಭಃ ಕಾರ್ಯೋ ನ ವೋ ಜಾತು ರೋಷಃ ಕಾಮಸ್ತು ವಸ್ತುಷು ॥ ೨೫ ॥

ಶ್ರೀಶುಕ ಉವಾಚ

ಇತಿ ದೇವಾನ್ಸಮಾದಿಶ್ಯ ಭಗವಾನ್ಪುರುಷೋತ್ತಮಃ ।
ತೇಷಾಮಂತರ್ದಧೇ ರಾಜನ್ಸ್ವಚ್ಛಂದಗತಿರೀಶ್ವರಃ ॥ ೨೬ ॥

ಪರೀಕ್ಷಿದ್ರಾಜನೇ! ಸಮಸ್ತ ದೇವತೆಗಳಿಗೂ ಹಾಗೂ ಜಗತ್ತಿಗೂ ಏಕಮಾತ್ರ ಸ್ವಾಮಿಯಾದ ಭಗವಂತನೊಬ್ಬನೇ ಅವರ ಕಾರ್ಯಗಳನ್ನು ಮಾಡಿಕೊಡಲು ಸಮರ್ಥನಾಗಿದ್ದರೂ ಸಮುದ್ರಮಂಥನವೇ ಮುಂತಾದ ಲೀಲೆಗಳನ್ನು ತೋರಿಸಲಿಚ್ಛಿಸಿ ದೇವತೆಗಳಿಗೆ ಹೀಗೆ ಹೇಳತೊಡಗಿದನು. ॥ ೧೭ ॥

ಶ್ರೀಭಗವಂತನು ಹೇಳಿದನು – ಚತುರ್ಮುಖನೇ! ಶಂಕರನೇ! ದೇವತೆಗಳೇ! ನೀವು ಸಾವಧಾನರಾಗಿ ನನ್ನ ಸಲಹೆಯನ್ನು ಕೇಳಿರಿ. ನಿಮ್ಮ ಶ್ರೇಯಸ್ಸಿನ ಉಪಾಯವು ಇದೇ ಆಗಿದೆ. ॥ ೧೮ ॥ ಈಗ ಅಸುರರಿಗೆ ಒಳ್ಳೆಯ ಕಾಲವಾಗಿದೆ. ಅದಕ್ಕಾಗಿ ನಿಮ್ಮ ಅಭ್ಯುದಯ ಮತ್ತು ಉನ್ನತಿಯ ಸಮಯವು ಬರುವವರೆಗೆ ನೀವು ದೈತ್ಯ-ದಾನವರ ಬಳಿಗೆ ಹೋಗಿ ಅವರೊಂದಿಗೆ ಸಂಧಿಯನ್ನು ಮಾಡಿಕೊಳ್ಳಿರಿ. ॥ ೧೯ ॥ ದೇವತೆಗಳಿರಾ! ಯಾವುದಾದರೂ ದೊಡ್ಡ ಕಾರ್ಯವನ್ನು ಸಾಧಿಸಬೇಕಾದರೆ ಶತ್ರುಗಳೊಂದಿಗೆ ಸಂಧಾನ ಮಾಡಿಕೊಳ್ಳಬೇಕು. ಕೆಲಸವು ಸಿದ್ಧಿಸಿದ ಬಳಿಕ ಅವರೊಂದಿಗೆ ಹಾವು-ಇಲಿಯಂತೆ* ವರ್ತಿಸುವುದು ಅವಶ್ಯಕವಾಗಿದೆ. ॥ ೨೦ ॥ ನೀವು ದಾನವರೊಡನೆ ಸೇರಿ ತಡಮಾಡದೆ ಅಮೃತದ ಪ್ರಾಪ್ತಿಗಾಗಿ ಪ್ರಯತ್ನಿಸಿರಿ. ಅದನ್ನು ಕುಡಿದರೆ ಮರಣ ಧರ್ಮವಿರುವ ಪ್ರಾಣಿಯೂ ಅಮರನಾಗುತ್ತಾನೆ. ॥ ೨೧ ॥ ನೀವು ಮೊಟ್ಟಮೊದಲಿಗೆ ಕ್ಷೀರಸಾಗರದಲ್ಲಿ ಎಲ್ಲ ಪ್ರಕಾರದ ಹುಲ್ಲು, ಬಳ್ಳಿಗಳು, ನಾರು-ಬೇರು, ಔಷಧಿಗಳನ್ನು ಹಾಕಿರಿ. ಮತ್ತೆ ಮಂದರಪರ್ವತವನ್ನು ಕಡೆಗೋಲಾಗಿಸಿಯೂ, ವಾಸುಕಿಯನ್ನು ಕಡೆಯುವ ಹಗ್ಗವನ್ನಾಗಿಯೂ ಮಾಡಿಕೊಂಡು, ನನ್ನ ಸಹಾಯದಿಂದ ದಾನವರೊಡಗೂಡಿ ಸಮುದ್ರವನ್ನು ಕಡೆಯಿರಿ. ಈಗ ಆಲಸ್ಯ ಮತ್ತು ಪ್ರಮಾದದ ಸಮಯವಲ್ಲ, ದೇವತೆಗಳಿರಾ! ದೈತ್ಯರಿಗೆ ಕೇವಲ ಶ್ರಮ, ಕ್ಲೇಶವೇ ದೊರೆಯುವುದು. ಆದರೆ ನಿಮಗೆ ಸತ್ಫಲ ದೊರೆಯುವುದರಲ್ಲಿ ವಿಶ್ವಾಸವಿಡಿರಿ. ॥ ೨೨-೨೩ ॥ ದೇವತೆಗಳಿರಾ! ಅಸುರರು ಬಯಸುವುದೆಲ್ಲವನ್ನು ಸ್ವೀಕರಿಸಿರಿ. ಶಾಂತಿಯಿಂದ ಎಲ್ಲ ಕೆಲಸಗಳು ಕೈಗೂಡುವುವು. ಕ್ರೋಧದಿಂದ ಏನೂ ಆಗುವುದಿಲ್ಲ. ॥ ೨೪ ॥ ಮೊದಲಿಗೆ ಸಮುದ್ರದಿಂದ ಕಾಲಕೂಟವಿಷವು ಹೊರಡುವುದು. ಅದಕ್ಕೆ ಭಯಪಡಬೇಡಿರಿ. ಯಾವುದೇ ವಸ್ತುಗಾಗಿಯೂ ಲೋಭವಿಲ್ಲದಿರಲಿ. ಮೊದಲಿಗೆ ಯಾವುದೇ ವಸ್ತುವಿನ ಕಾಮನೆಯೇ ಇಲ್ಲದಿರಲಿ. ಆದರೆ ಕಾಮನೆ ಇದ್ದು ಅದು ಪೂರ್ಣವಾಗದಿದ್ದರೂ ಕ್ರೋಧವನ್ನಂತೂ ಮಾಡಬಾರದು. ॥ ೨೫ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ! ದೇವತೆಗಳಿಗೆ, ಹೀಗೆ ಆದೇಶಿಸಿ ಭಗವಾನ್ ಪುರುಷೋತ್ತಮನು ಅವರು ನೋಡುತ್ತಿರುವಂತೆ ತನ್ನ ಇಚ್ಛಾನುಸಾರವಾಗಿ ಅಂತರ್ಧಾನನಾದನು. ಅವನ ಲೀಲಾರಹಸ್ಯವನ್ನು ಯಾರು ಬಲ್ಲರು? ॥ ೨೬ ॥

* 'ಅಹಿಮೂಷಕನ್ಯಾಯ' – ಹಾವಾಡಿಗನ ಬುಟ್ಟಿಯಲ್ಲಿ ಹಾವೊಂದು ಮೊದಲಿನಿಂದಲೇ ಇತ್ತು. ಆಕಸ್ಮಾತ್ತಾಗಿ ಒಂದು ಇಲಿಯು ಅದರೊಳಗೆ ಬಂದು ಸೇರಿತು. ಇಲಿಯು ಭಯಗೊಂಡಿದ್ದರೂ ಹಾವು ಅದಕ್ಕೆ ಪ್ರೇಮದಿಂದ ಹೇಳಿತು. ಇಲಿರಾಯಾ! ನೀನು ಈ ಬುಟ್ಟಿಯನ್ನು ಕಡಿದು ತೂತುಮಾಡು. ಇದರಿಂದ ನಾವಿಬ್ಬರೂ ಇಲ್ಲಿಂದ ಹೊರಗೆ ಹೋಗಬಹುದು. ಮೊದಲಿಗೆ ಇಲಿಗೆ ಹಾವಿನ ಮಾತಿನಲ್ಲಿ ವಿಶ್ವಾಸ ಮೂಡಲಿಲ್ಲ. ಆದರೆ ಕೊನೆಗೆ, ಅದು ಬುಟ್ಟಿಯನ್ನು ಕೊರೆದು ರಂಧ್ರವನ್ನು ಮಾಡಿತು. ಹೀಗೆ ತನ್ನ ಕೆಲಸ ಸಾಧಿಸಿದಾಗ ಹಾವು ಇಲಿಯನ್ನು ನುಂಗಿಹಾಕಿ ಬುಟ್ಟಿಯಿಂದ ಹೊರಟುಹೋಯಿತು.

ಅಥ ತಸ್ಮೈ ಭಗವತೇ ನಮಸ್ಕೃತ್ಯ ಪಿತಾಮಹಃ ।
ಭವಶ್ಚ ಜಗ್ಮತುಃ ಸ್ವಂ ಸ್ವಂ ಧಾಮೋಪೇಯುರ್ಬಲಿಂ ಸುರಾಃ ॥ ೨೭ ॥

ದೃಷ್ಟ್ವಾರೀನಪ್ಯಸಂಯತ್ತಾನ್‌ಜಾತಕ್ಷೋಭಾನ್ ಸ್ವನಾಯಕಾನ್ ।
ನ್ಯಷೇಧದ್ದೈತ್ಯರಾಟ್ ಶ್ಲೋಕ್ಯಃ ಸಂಧಿವಿಗ್ರಹಕಾಲವಿತ್ ॥ ೨೮ ॥

ತೇ ವೈರೋಚನಿಮಾಸೀನಂ ಗುಪ್ತಂ ಚಾಸುರಯೂಥಪೈಃ ।
ಶ್ರಿಯಾ ಪರಮಯಾ ಜುಷ್ಟಂ ಜಿತಾಶೇಷಮುಪಾಗಮನ್ ॥ ೨೯ ॥

ಮಹೇಂದ್ರಃ ಶ್ಲಕ್ಷ್ಣಯಾ ವಾಚಾ ಸಾಂತ್ವಯಿತ್ವಾ ಮಹಾಮತಿಃ ।
ಅಭ್ಯಭಾಷತ ತತ್ಸರ್ವಂ ಶಿಕ್ಷಿತಂ ಪುರುಷೋತ್ತಮಾತ್ ॥ ೩೦ ॥

ತದರೋಚತ ದೈತ್ಯಸ್ಯ ತತ್ರಾನ್ಯೇ ಯೇಽಸುರಾಧಿಪಾಃ ।
ಶಂಬರೋಽರಿಷ್ಟನೇಮಿಶ್ಚ ಯೇ ಚ ತ್ರಿಪುರವಾಸಿನಃ ॥ ೩೧ ॥

ತತೋ ದೇವಾಸುರಾಃ ಕೃತ್ವಾ ಸಂವಿದಂ ಕೃತಸೌಹೃದಾಃ ।
ಉದ್ಯಮಂ ಪರಮಂ ಚಕ್ರುರಮೃತಾರ್ಥೇ ಪರಂತಪ ॥ ೩೨ ॥

ತತಸ್ತೇ ಮಂದರಗಿರಿಮೋಜಸೋತ್ಪಾಟ್ಯ ದುರ್ಮದಾಃ ।
ನದಂತ ಉದಧಿಂ ನಿನ್ಯುಃ ಶಕ್ತಾಃ ಪರಿಘಬಾಹವಃ ॥ ೩೩ ॥

ದೂರಭಾರೋದ್ವಹಶ್ರಾಂತಾಃ ಶಕ್ರವೈರೋಚನಾದಯಃ ।
ಅಪಾರಯಂತಸ್ತಂ ವೋಢುಂ ವಿವಶಾ ವಿಜಹುಃ ಪಥಿ ॥ ೩೪ ॥

ನಿಪತನ್ಸ ಗಿರಿಸ್ತತ್ರ ಬಹೂನಮರದಾನವಾನ್ ।
ಚೂರ್ಣಯಾಮಾಸ ಮಹತಾ ಭಾರೇಣ ಕನಕಾಚಲಃ ॥ ೩೫ ॥

ತಾಂಸ್ತಥಾ ಭಗ್ನಮನಸೋ ಭಗ್ನಬಾಹೂರುಕಂಧರಾನ್ ।
ವಿಜ್ಞಾಯ ಭಗವಾಂಸ್ತತ್ರ ಬಭೂವ ಗರುಡಧ್ವಜಃ ॥ ೩೬ ॥

ಗಿರಿಪಾತವಿನಿಷ್ಪಿಷ್ಟಾನ್ವಿಲೋಕ್ಯಾಮರದಾನವಾನ್ ।
ಈಕ್ಷಯಾ ಜೀವಯಾಮಾಸ ನಿರ್ಜರಾನ್ನಿರ್ವ್ರಣಾನ್ಯಥಾ ॥ ೩೭ ॥

ಅನಂತರ ಬ್ರಹ್ಮ-ಶಂಕರರು ಶ್ರೀಭಗವಂತನಿಗೆ ಪುನಃ ನಮಸ್ಕರಿಸಿ ತಮ್ಮ-ತಮ್ಮ ಲೋಕಗಳಿಗೆ ಹೊರಟು ಹೋದರು. ಬಳಿಕ ಇಂದ್ರಾದಿ ದೇವತೆಗಳು ಬಲಿರಾಜನ ಬಳಿಗೆ ಹೋದರು. ॥ ೨೭ ॥ ದೇವತೆಗಳು ಶಸ್ತ್ರಾಸ್ತ್ರರಹಿತರಾಗಿ ತಮ್ಮ ಬಳಿಗೆ ಬಂದುದನ್ನು ನೋಡಿ ದೈತ್ಯ ಸೇನಾಪತಿಗಳ ಮನಸ್ಸಿನಲ್ಲಿ ತಳಮಳವುಂಟಾಯಿತು. ಅವರು ದೇವತೆಗಳನ್ನು ಬಂಧಿಸಲು ಬಯಸಿದರು. ಆದರೆ ಪವಿತ್ರಕೀರ್ತಿಯುಳ್ಳ ದೈತ್ಯರಾಜ ಬಲಿಯು ಸಂಧಿ-ವಿಗ್ರಹಗಳ ಕಾಲವನ್ನು ತಿಳಿದಿದ್ದನಾದ ಕಾರಣ ದೇವತೆಗಳನ್ನು ಬಂಧಿಸದಂತೆ ದೈತ್ಯರನ್ನು ತಡೆದನು. ॥ ೨೮ ॥ ಮೂರು ಲೋಕಗಳನ್ನೂ ಜಯಿಸಿದ್ದ, ಸಮಸ್ತ ಸಂಪತ್ತುಗಳಿಂದ ಸಂಪನ್ನನಾಗಿದ್ದು ಅಸುರಸೇನಾನಾಯಕರಿಂದ ರಕ್ಷಿಸಲ್ಪಡುತ್ತಿದ್ದ ರಾಜಸಿಂಹಾಸನಾರೂಢನಾದ ಬಲಿಚಕ್ರವರ್ತಿಯನ್ನು ಇಂದ್ರಾದಿ ದೇವತೆಗಳು ಸಂಧಿಸಿದರು. ॥ ೨೯ ॥ ಮಹಾಮತಿಯಾದ ಇಂದ್ರನು ಬಲಿಚಕ್ರವರ್ತಿಯನ್ನು ಮೃದು-ಮಧುರವಾದ ಮಾತುಗಳಿಂದ ಸಂತೈಸುತ್ತಾ ಭಗವಂತನು ಹೇಳಿ ಕಳುಹಿಸಿದ್ದಂತೆ ಎಲ್ಲ ವಿಷಯಗಳನ್ನು ಅವನಲ್ಲಿ ಹೇಳಿದನು. ॥ ೩೦ ॥ ಇಂದ್ರನು ಹೇಳಿದ ಮಾತು ಬಲಿಚಕ್ರವರ್ತಿಗೂ, ಅಲ್ಲಿ ಕುಳಿತಿದ್ದ ಶಂಬರ, ಅರಿಷ್ಟನೇಮಿ, ತ್ರಿಪುರಾಸುರ ಮುಂತಾದ ದೈತ್ಯನಾಯಕರಿಗೂ ಸಮ್ಮತವಾಯಿತು. ॥ ೩೧ ॥ ಬಳಿಕ ದೇವಾಸುರರು ಪರಸ್ಪರ ಶಾಂತಿ-ಸಂಧಾನವನ್ನು ಮಾಡಿಕೊಂಡು ಮಿತ್ರರಾದರು. ಪರೀಕ್ಷಿತನೇ! ಅವರೆಲ್ಲರೂ ಸೇರಿ ಅಮೃತದ ಪ್ರಾಪ್ತಿಗಾಗಿ ಸಮುದ್ರ ಮಂಥನಕ್ಕಾಗಿ ಅಗಾಧವಾದ ಪ್ರಯತ್ನಕ್ಕೆ ತೊಡಗಿದರು. ॥ ೩೨ ॥ ಪರಿಘಾಯುಧದಂತೆ ತೋಳುಗಳನ್ನು ಹೊಂದಿದ್ದ ಮಹಾಶಕ್ತಿವಂತರಾದ, ಬಲದಿಂದ ಕೊಬ್ಬಿಹೋಗಿದ್ದ ದೇವ-ದಾನವರು ತಮ್ಮ ಬಲ-ಪರಾಕ್ರಮದಿಂದ ಮಂದರಪರ್ವತವನ್ನು ಕಿತ್ತು ಅದನ್ನೆತ್ತಿಕೊಂಡು ನಾಲ್ಕು ದಿಕ್ಕುಗಳೂ ಪ್ರತಿಧ್ವನಿಸುವಂತೆ ಗರ್ಜನೆ ಮಾಡುತ್ತಾ ಕ್ಷೀರಸಮುದ್ರದ ಕಡೆಗೆ ಹೊರಟರು. ॥ ೩೩ ॥ ಆದರೆ ■ ಮಂದರಪರ್ವತವು ಭಾರೀ ಭಾರವಾಗಿತ್ತು ಮತ್ತು ಕೊಂಡು ಹೋಗಲೂ ಬಹಳ ದೂರವಿತ್ತು. ಇದರಿಂದ ಇಂದ್ರ, ಬಲಿ ಮುಂತಾದವರೆಲ್ಲರೂ ಸೋತುಹೋದರು. ಯಾವರೀತಿಯಿಂದಲೂ ಮಂದರಾಚಲವನ್ನು ಮುಂದಕ್ಕೆ ಸಾಗಿಸದಾದಾಗ ವಿವಶರಾಗಿ ಅವರು ದಾರಿಯಲ್ಲೇ ಇರಿಸಿದರು. ॥ ೩೪ ॥ ಮಹಾಭಾರದಿಂದ ಕೂಡಿದ್ದ ಆ ಸ್ವರ್ಣಪರ್ವತವು ಕೆಳಕ್ಕೆ ಬೀಳುವಾಗ ಅದರ ಬುಡದಲ್ಲಿ ಹಲವಾರು ದೇವತೆಗಳು, ದಾನವರು ನುಚ್ಚುನೂರಾದರು. ॥ ೩೫ ॥

ಆ ದೇವತೆಗಳ-ದೈತ್ಯರ, ಕೈ, ಸೊಂಟ, ಭುಜಗಳು ಮುರಿದೇ ಹೋಗಿದ್ದುವು. ಅವರ ಮನಸ್ಸೂ ಮುರಿದುಹೋಗಿತ್ತು. ಅವರ ಉತ್ಸಾಹಭಂಗಗೊಂಡಿರುವುದನ್ನು ಕಂಡ ಭಗವಂತನು ಗರುಡನನ್ನೇರಿ ಬಂದು ಅಲ್ಲಿ ಕಾಣಿಸಿಕೊಂಡನು. ॥ ೩೬ ॥ ದೇವತೆಗಳು, ಅಸುರರು ಪರ್ವತವು ಬೀಳುವುದರಿಂದ ಪುಡಿ-ಪುಡಿಯಾಗಿರುವುದನ್ನು ನೋಡಿ ಅವನು ತನ್ನ ಅಮೃತಮಯ ದೃಷ್ಟಿಯಿಂದ ಅವರನ್ನು ನೋಡಿ ಅವರ ಗಾಯಗಳು ವಾಸಿಯಾಗಿ, ಸಂಕಟರಹಿತರಾಗಿಸಿದನು. ॥ ೩೭ ॥ ಬಳಿಕ ಶ್ರೀಹರಿಯು ಲೀಲಾಜಾಲವಾಗಿ ಒಂದೇ

ಗಿರಿಂ ಚಾರೋಪ್ಯ ಗರುಡೇ ಹಸ್ತೇನೈಕೇನ ಲೀಲಯಾ ।
ಆರುಹ್ಯ ಪ್ರಯಯಾವಬ್ಧಿಂ ಸುರಾಸುರಗಣೈರ್ವೃತಃ
॥ ೩೮ ॥

ಅವರೋಪ್ಯ ಗಿರಿಂ ಸ್ಕಂಧಾತ್ಸುಪರ್ಣಃ ಪತತಾಂ ವರಃ ।
ಯಯೌ ಜಲಾಂತ ಉತ್ಸೃಜ್ಯ ಹರಿಣಾ ಸ ವಿಸರ್ಜಿತಃ
॥ ೩೯ ॥

ಕೈಯಿಂದ ಆ ಪರ್ವತವನ್ನು ಎತ್ತಿ ಗರುಡನ ಹೆಗಲಮೇಲಿಟ್ಟುಕೊಂಡು ತಾನು ಹತ್ತಿಕೊಂಡು ಮತ್ತೆ ದೇವತೆಗಳು ಹಾಗೂ ಅಸುರರೊಂದಿಗೆ ಸಮುದ್ರದ ತಟಕ್ಕೆ ತೆರಳಿದನು. ॥ ೩೮ ॥ ಪಕ್ಷಿರಾಜ ಗರುಡನು ಸಮುದ್ರತೀರದಲ್ಲಿ ಆ ಪರ್ವತವನ್ನು ಇಳಿಸಿ, ಸಮುದ್ರದ ಮಧ್ಯದಲ್ಲಿ ಅದನ್ನು ಇರಿಸಿ, ಭಗವಂತನಿಂದ ಬೀಳ್ಕೊಂಡು ಅಲ್ಲಿಂದ ಹೊರಟುಹೋದನು. ॥ ೩೯ ॥

ಆರನೆಯ ಅಧ್ಯಾಯವು ಮುಗಿಯಿತು. ॥ ೬ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಅಷ್ಟಮ ಸ್ಕಂಧೇ
ಅಮೃತಮಥನೇ ಮಂದರಾಚಲಾನಯನಂ ನಾಮ ಷಷ್ಠೋಽಧ್ಯಾಯಃ ॥ ೬ ॥

ಏಳನೆಯ ಅಧ್ಯಾಯ

ಸಮುದ್ರಮಂಥನದ ಪ್ರಾರಂಭ – ಪರಶಿವನು ವಿಷವನ್ನು ಪಾನಮಾಡಿದುದು

ಶ್ರೀಶುಕ ಉವಾಚ

ತೇ ನಾಗರಾಜಮಾಮಂತ್ರ್ಯ ಫಲಭಾಗೇನ ವಾಸುಕಿಮ್ ।
ಪರಿವೀಯ ಗಿರೌ ತಸ್ಮಿನ್ನೇತ್ರಮಬ್ಧಿಂ ಮುದಾನ್ವಿತಾಃ
॥ ೧ ॥

ಆರೇಭಿರೇ ಸುಸಂಯತ್ತಾ ಅಮೃತಾರ್ಥಂ ಕುರೂದ್ವಹ ।
ಹರಿಃ ಪುರಸ್ತಾಜ್ಜಗೃಹೇ ಪೂರ್ವಂ ದೇವಾಸ್ತತೋಽಭವನ್
॥ ೨ ॥

ತನ್ನೈಚ್ಛನ್ ದೈತ್ಯಪತಯೋ ಮಹಾಪುರುಷಚೇಷ್ಟಿತಮ್ ।
ನ ಗೃಹ್ಣೀಮೋ ವಯಂ ಪುಚ್ಛಮಹೇರಂಗಮಮಂಗಲಮ್
॥ ೩ ॥

ಸ್ವಾಧ್ಯಾಯಶ್ರುತಸಂಪನ್ನಾಃ ಪ್ರಖ್ಯಾತಾ ಜನ್ಮಕರ್ಮಭಿಃ ।
ಇತಿ ತೂಷ್ಣೀಂ ಸ್ಥಿತಾನ್ ದೈತ್ಯಾನ್ವಿಲೋಕ್ಯ ಪುರುಷೋತ್ತಮಃ ।
ಸ್ಮಯಮಾನೋ ವಿಸೃಜ್ಯಾಗ್ರಂ ಪುಚ್ಛಂ ಜಗ್ರಾಹ ಸಾಮರಃ
॥ ೪ ॥

ಕೃತಸ್ಥಾನವಿಭಾಗಾಸ್ತ ಏವಂ ಕಶ್ಯಪನಂದನಾಃ ।
ಮಮಂಥುಃ ಪರಮಾಯತ್ತಾ ಅಮೃತಾರ್ಥಂ ಪಯೋನಿಧಿಮ್
॥ ೫ ॥

ಮಥ್ಯಮಾನೇಽರ್ಣವೇ ಸೋಽದ್ರಿರನಾಧಾರೋ ಹ್ಯಪೋಽವಿಶತ್ ।
ಧ್ರಿಯಮಾಣೋಽಪಿ ಬಲಿಭಿರ್ಗೌರವಾತ್ಪಾಂಡುನಂದನ
॥ ೬ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿದ್ರಾಜನೇ! ದೇವ-ದಾನವರು ವಾಸುಕಿಯ ಬಳಿಗೆ ಹೋಗಿ ನೀನು ಮಂದರ ಪರ್ವತವೆಂಬ ಕಡಗೋಲಿಗೆ ಹಗ್ಗವಾಗಬೇಕು. ಅಮೃತವನ್ನು ಕಡೆದ ನಂತರ ಅಮೃತದಲ್ಲಿ ನಿನಗೂ ಭಾಗವನ್ನು ಕೊಡುವೆವು ಎಂದು ಹೇಳಿ ಅವನನ್ನು ಒಪ್ಪಿಸಿದರು. ಸಂತೋಷಭರಿತರಾಗಿ ವಾಸುಕಿಯನ್ನು ಕರೆತಂದು ಮಂದರಪರ್ವತಕ್ಕೆ ಸುತ್ತಿದರು. ಅಮೃತವನ್ನು ಪಡೆಯಲಿಕ್ಕಾಗಿ ದೇವ-ದಾನವರು ಒಟ್ಟಾಗಿ ಸೇರಿ ಪ್ರಯತ್ನಪೂರ್ವಕ ಸಮುದ್ರವನ್ನು ಕಡೆಯಲು ಪ್ರಾರಂಭಿಸಿದರು. ಆಗ ಮೊಟ್ಟಮೊದಲಿಗೆ ಶ್ರೀಹರಿಯು ವಾಸುಕಿಯ ತಲೆಯಕಡೆ ಹಿಡಿದುಕೊಂಡನು. ಅದರಿಂದ ದೇವತೆಗಳೂ ಅವನನ್ನು ಅನುಸರಿಸಿ ಅತ್ತಕಡೆಗೆ ಸೇರಿದರು. ॥ ೧-೨ ॥ ಆದರೆ ಭಗವಂತನ ಈ ವ್ಯವಸ್ಥೆ ದೈತ್ಯಸೇನಾಪತಿಗಳಿಗೆ ಮೆಚ್ಚುಗೆಯಾಗಲಿಲ್ಲ. ಅವರೆಂದರು – ಬಾಲವಾದರೋ ಹಾವಿನ ಅಶುಭ ಅಂಗವಾಗಿದೆ. ನಾವು ಅದನ್ನು ಹಿಡಿಯುವುದಿಲ್ಲ. ॥ ೩ ॥ ನಾವು ವಿಧಿವತ್ತಾಗಿ ವೇದ-ಶಾಸ್ತ್ರಗಳನ್ನು ಅಧ್ಯಯನ ಮಾಡಿದ್ದೇವೆ, ಹಿರಿದಾದ ವಂಶದಲ್ಲಿ ನಾವು ಹುಟ್ಟಿದ್ದೇವೆ ಮತ್ತು ಪರಾಕ್ರಮದಿಂದ ದೊಡ್ಡ-ದೊಡ್ಡ ಕಾರ್ಯಗಳನ್ನು ಮಾಡಿದ್ದೇವೆ. ನಾವು ದೇವತೆಗಳಿಗಿಂತ ಯಾವುದರಲ್ಲಿ ಕಮ್ಮಿಯಾಗಿದ್ದೇವೆ. ಹೀಗೆ ಹೇಳಿ ಅವರು ಸುಮ್ಮನೆ ಒಂದೆಡೆ ನಿಂತುಕೊಂಡಿರಲು, ಭಗವಂತನು ಅವರ ಮನೋವೃತ್ತಿಯನ್ನು ಅರಿತು ಮುಗುಳ್ನಕ್ಕು ವಾಸುಕಿಯ ತಲೆಯನ್ನು ಬಿಟ್ಟು ದೇವತೆಗಳೊಂದಿಗೆ ಅದರ ಬಾಲವನ್ನು ಹಿಡಿದುಕೊಂಡನು. ॥ ೪ ॥ ಹೀಗೆ ತಮ್ಮ-ತಮ್ಮ ಸ್ಥಾನಗಳನ್ನು ನಿಶ್ಚಯಿಸಿಕೊಂಡು ದೇವತೆಗಳು ಮತ್ತು ಅಸುರರು ಅಮೃತದ ಪ್ರಾಪ್ತಿಗಾಗಿ ಪೂರ್ಣತೆಯಾಗಿ ಸಮುದ್ರವನ್ನು ಕಡೆಯಲು ಪ್ರಾರಂಭಿಸಿದರು. ॥ ೫ ॥

ಪರೀಕ್ಷಿತನೇ! ಸಮುದ್ರಮಂಥನವು ಪ್ರಾರಂಭವಾಗುತ್ತಲೇ ಮಹಾಬಲಿಷ್ಠರಾದ ದೇವ-ದಾನವರು ಕಡಗೋಲನ್ನು ವಾಸುಕಿಯ

ತೇ ಸುನಿರ್ವಿಣ್ಣಮನಸಃ ಪರಿಮ್ಲಾನಮುಖಶ್ರಿಯಃ ।
ಆಸನ್ಸ್ವಪೌರುಷೇ ನಷ್ಟೇ ದೈವೇನಾತಿಬಲೀಯಸಾ ॥ ೭ ॥

ವಿಲೋಕ್ಯ ವಿಘ್ನೇಶವಿಧಿಂ ತದೇಶ್ವರೋ
ದುರಂತವೀರ್ಯೋಽವಿತಥಾಭಿಸಂಧಿಃ ।
ಕೃತ್ವಾ ವಪುಃ ಕಾಚ್ಛಪಮದ್ಭುತಂ ಮಹ-
ತ್ಪ್ರವಿಶ್ಯ ತೋಯಂ ಗಿರಿಮುಜ್ಜಹಾರ ॥ ೮ ॥

ತಮುತ್ಥಿತಂ ವೀಕ್ಷ್ಯ ಕುಲಾಚಲಂ ಪುನಃ
ಸಮುತ್ಥಿತಾ ನಿರ್ಮಥಿತುಂ ಸುರಾಸುರಾಃ ।
ದಧಾರ ಪೃಷ್ಠೇನ ಸ ಲಕ್ಷಯೋಜನ-
ಪ್ರಸ್ತಾರಿಣಾ ದ್ವೀಪ ಇವಾಪರೋ ಮಹಾನ್ ॥ ೯ ॥

ಸುರಾಸುರೇಂದ್ರೈರ್ಭುಜವೀರ್ಯವೇಪಿತಂ
ಪರಿಭ್ರಮಂತಂ ಗಿರಿಮಂಗ ಪೃಷ್ಠತಃ ।
ಬಿಭ್ರತ್ತದಾವರ್ತನಮಾದಿಕಚ್ಛಪೋ
ಮೇನೇಽಂಗಕಂಡೂಯನಮಪ್ರಮೇಯಃ ॥ ೧೦ ॥

ತಥಾಸುರಾನಾವಿಶದಾಸುರೇಣ
ರೂಪೇಣ ತೇಷಾಂ ಬಲವೀರ್ಯಮೀರಯನ್ ।
ಉದ್ದೀಪಯನ್ ದೇವಗಣಾಂಶ್ಚ ವಿಷ್ಣು-
ರ್ದೈವೇನ ನಾಗೇಂದ್ರಮಬೋಧರೂಪಃ ॥ ೧೧ ॥

ಉಪರ್ಯಗೇಂದ್ರಂ ಗಿರಿರಾಡಿವಾನ್ಯ
ಆಕ್ರಮ್ಯ ಹಸ್ತೇನ ಸಹಸ್ರಬಾಹುಃ ।
ತಸ್ಥೌ ದಿವಿ ಬ್ರಹ್ಮಭವೇಂದ್ರಮುಖ್ಯೈ-
ರಭಿಷ್ಟುವದ್ಭಿಃ ಸುಮನೋಽಭಿವೃಷ್ಟಃ ॥ ೧೨ ॥

ಉಪರ್ಯಧಶ್ಚಾತ್ಮನಿ ಗೋತ್ರನೇತ್ರಯೋಃ
ಪರೇಣ ತೇ ಪ್ರಾವಿಶತಾ ಸಮೇಧಿತಾಃ ।
ಮಮಂಥುರಬ್ಧಿಂ ತರಸಾ ಮದೋತ್ಕಟಾ
ಮಹಾದ್ರಿಣಾ ಕ್ಷೋಭಿತನಕ್ರಚಕ್ರಮ್ ॥ ೧೩ ॥

ಮೂಲಕ ಭದ್ರವಾಗಿ ಹಿಡಿದುಕೊಂಡಿದ್ದರೂ ಪರ್ವತವು ಮಹಾಭಾರವಾದ್ದರಿಂದ ಹಾಗೂ ಅದಕ್ಕೆ ಕೆಳಗಡೆಯಲ್ಲಿ ಯಾವುದೇ ಆಧಾರವಿಲ್ಲದೇ ಇರುವುದರಿಂದ ಮಂದರಾಚಲವು ಸಮುದ್ರದಲ್ಲಿ ಮುಳುಗತೊಡಗಿತು. ॥ ೬ ॥ ಹೀಗೆ ಅತ್ಯಂತ ಬಲಿಷ್ಠವಾದ ದೈವದಿಂದ ತಮ್ಮ ಪುರುಷಪ್ರಯತ್ನವೆಲ್ಲವೂ ನಷ್ಟವಾದುದನ್ನು ನೋಡಿ ಖೇದಗೊಂಡು ದೇವ-ದಾನವರ ಮುಖವು ಕಳೆಗುಂದಿತು. ॥ ೭ ॥ ಇದಾದರೋ ವಿಘ್ನೇಶ್ವರನ ಕಾರ್ಯರೂಪವಾದ ವಿಘ್ನವನ್ನು ನೋಡಿದ ಭಗವಂತನು ಅದನ್ನು ನಿವಾರಿಸುವ ಉಪಾಯವನ್ನು ಯೋಚಿಸಿ ಆಗ ಅತ್ಯಂತ ವಿಶಾಲವೂ, ವಿಚಿತ್ರವೂ ಆದ ಕೂರ್ಮ(ಆಮೆ)ರೂಪವನ್ನು ಧರಿಸಿ ಸಮುದ್ರಜಲದಲ್ಲಿ ಮುಳುಗಿ ಮಂದರಾಚಲವನ್ನು ಮೇಲಕ್ಕೆತ್ತಿದನು. ಭಗವಂತನ ಶಕ್ತಿ ಅನಂತವಾಗಿದೆ. ಅವನು ಸತ್ಯಸಂಕಲ್ಪನಾಗಿರುವನು. ಅವನಿಗೆ ಇದು ಯಾವ ಮಹಾದೊಡ್ಡ ಕೆಲಸ? ॥ ೮ ॥ ಮಂದರ ಪರ್ವತವು ಮೇಲಕ್ಕೆ ಬಂದುದನ್ನು ನೋಡಿ ದೇವಾಸುರರು ಪುನಃ ಸಮುದ್ರಮಂಥನಕ್ಕಾಗಿ ಸಿದ್ಧರಾದರು. ಆಗ ಭಗವಂತನು ಜಂಬೂದ್ವೀಪದಂತೆ ಒಂದು ಲಕ್ಷಯೋಜನ ವಿಸ್ತಾರವಾದ ತನ್ನ ಬೆನ್ನಮೇಲೆ ಮಂದರಾಚಲವನ್ನು ಧರಿಸಿಕೊಂಡಿದ್ದನು. ॥ ೯ ॥ ರಾಜೇಂದ್ರ! ಮಹಾಪರಾಕ್ರಮಿಗಳಾದ ದೇವ-ದಾನವರು ತಮ್ಮ ಭುಜಬಲದಿಂದ ಮಂದರಾಚಲವನ್ನು ಕಡೆದಾಗ ಅದು ಭಗವಂತನ ಬೆನ್ನಿನ ಮೇಲೆ ತಿರುಗತೊಡಗಿತು. ಅಪ್ರಮೇಯ ಆದಿಕಚ್ಛಪ ಭಗವಂತನಿಗೆ ಆ ಪರ್ವತವು ಗಿರ-ಗಿರನೆ ತಿರುಗುತ್ತಿರುವಾಗ ಯಾರೋ ತನ್ನ ಬೆನ್ನನ್ನು ತುರಿಸುತ್ತಿರುವರೋ ಎಂದೆನಿಸಿತು. ॥ ೧೦ ॥ ಜೊತೆಗೆ ಸಮುದ್ರಮಂಥನವನ್ನು ಸಂಪನ್ನವಾಗಿಸಲು ಭಗವಂತನು ಅಸುರರಲ್ಲಿ ಅವರ ಶಕ್ತಿ-ಬಲಗಳನ್ನು ಹೆಚ್ಚಿಸಲೋಸುಗ ಅಸುರರೂಪದಿಂದ ಪ್ರವೇಶಿಸಿದನು. ಹಾಗೆಯೇ ದೇವತೆಗಳನ್ನು ಪ್ರೋತ್ಸಾಹಿಸಲಿಕ್ಕಾಗಿ ಅವರಲ್ಲಿ ದೇವತಾರೂಪದಿಂದ ಪ್ರವೇಶಿಸಿದನು ಹಾಗೂ ವಾಸುಕಿಯಲ್ಲಿ ನಿದ್ರಾರೂಪದಿಂದ ಪ್ರವೇಶಿಸಿದನು. ॥ ೧೧ ॥ ಇತ್ತ ಮಂದರಪರ್ವತದ ತುದಿಯಲ್ಲಿ ಇನ್ನೊಂದು ಪರ್ವತದಂತೆ ಸಹಸ್ರಬಾಹುವಾದ ಭಗವಂತನು ತನ್ನ ಕೈಗಳಿಂದ ಅದನ್ನು ಒತ್ತಿಹಿಡಿದು ಸ್ಥಿತನಾದನು. ಆ ಸಮಯದಲ್ಲಿ ಬ್ರಹ್ಮ-ರುದ್ರ-ಇಂದ್ರರೇ ಮುಂತಾದವರು ಅವನನ್ನು ಸ್ತುತಿಸುತ್ತಾ ಅವನ ಮೇಲೆ ಹೂಮಳೆಯನ್ನು ಸುರಿಸಿದರು. ॥ ೧೨ ॥ ಹೀಗೆ ಭಗವಂತನು ಪರ್ವತದ ಮೇಲ್ಗಡೆಯಿಂದ ಅದನ್ನು ಒತ್ತಿಹಿಡಿದ ರೂಪದಿಂದ, ಕೆಳಗಡೆಯಿಂದ ಅದಕ್ಕೆ ಆಧಾರವಾಗಿ ಕೂರ್ಮರೂಪದಿಂದ, ದೇವತೆಗಳ ಮತ್ತು ಅಸುರರ ಶರೀರಗಳಲ್ಲಿ ಅವರ ಶಕ್ತಿರೂಪದಿಂದ, ಪರ್ವತದಲ್ಲಿ ದೃಢತೆಯ ರೂಪದಿಂದ, ಕಡೆಯುವ ಹಗ್ಗವಾದ ವಾಸುಕಿಯಲ್ಲಿ ಅವನಿಗೆ ಕಷ್ಟವಾಗದಿರಲೆಂದು ನಿದ್ರೆಯ ರೂಪದಿಂದ ಪ್ರವೇಶಮಾಡಿ ಎಲ್ಲ ಕಡೆಯುವ, ಎಲ್ಲರನ್ನು ಶಕ್ತಿಸಂಪನ್ನವಾಗಿಸಿದನು. ಆಗ ಅವರು ತಮ್ಮ ಬಲದಿಂದ ಉನ್ಮತ್ತರಾಗಿ ಮಂದರಾಚಲದಿಂದ ಅತ್ಯಂತ ವೇಗದಿಂದ ಸಮುದ್ರವನ್ನು ಕಡೆಯತೊಡಗಿದರು. ಇದರ ಪರಿಣಾಮವಾಗಿ ಸಮುದ್ರದಲ್ಲಿ ವಾಸಿಸುತ್ತಿದ್ದ ಮೀನು ಮೊಸಳೆಯೇ ಮುಂತಾದವುಗಳು ಕಳವಳಗೊಂಡವು. ॥ ೧೩ ॥

ಅಹೀಂದ್ರಸಾಹಸ್ರಕಠೋರದೃಙ್ಮುಖ-
  ಶ್ವಾಸಾಗ್ನಿಧೂಮಾಹತವರ್ಚಸೋಽಸುರಾಃ ।
ಪೌಲೋಮಕಾಲೇಯಬಲೀಲ್ವಲಾದಯೋ
  ದವಾಗ್ನಿದಗ್ಧಾಃ ಸರಲಾ ಇವಾಭವನ್ ॥ ೧೪ ॥

ದೇವಾಂಶ್ಚ ತಚ್ಛ್ವಾಸಶಿಖಾಹತಪ್ರಭಾನ್
  ಧೂಮ್ರಾಂಬರಸ್ರಗ್ವರಕಂಚುಕಾನನಾನ್ ।
ಸಮಭ್ಯವರ್ಷನ್ಭಗವದ್ವಶಾ ಘನಾ
  ವವುಃ ಸಮುದ್ರೋರ್ಮ್ಯುಪಗೂಢವಾಯವಃ ॥ ೧೫ ॥

ಮಥ್ಯಮಾನಾತ್ತಥಾ ಸಿಂಧೋರ್ದೇವಾಸುರವರೂಥಪೈಃ ।
ಯದಾ ಸುಧಾ ನ ಜಾಯೇತ ನಿರ್ಮಮಂಥಾಜಿತಃ ಸ್ವಯಮ್ ॥ ೧೬ ॥

ಮೇಘಶ್ಯಾಮಃ ಕನಕಪರಿಧಿಃ ಕರ್ಣವಿದ್ಯೋತವಿದ್ಯು-
ನ್ಮೂರ್ಧ್ನಿ ಭ್ರಾಜದ್ವಿಲುಲಿತಕಚಃ ಸ್ರಗ್ಧರೋ ರಕ್ತನೇತ್ರಃ ।
ಜೈತ್ರೈರ್ದೋರ್ಭಿರ್ಜಗದಭಯದೈರ್ದಂದಶೂಕಂ ಗೃಹೀತ್ವಾ
ಮಥ್ನನ್ಮಥ್ನಾ ಪ್ರತಿಗಿರಿರಿವಾಶೋಭತಾಥೋ ಧೃತಾದ್ರಿಃ ॥ ೧೭ ॥

ನಿರ್ಮಥ್ಯಮಾನಾದುದಧೇರಭೂದ್ವಿಷಂ
  ಮಹೋಲ್ಬಣಂ ಹಾಲಹಲಾಹ್ವಮಗ್ರತಃ ।
ಸಂಭ್ರಾಂತ ಮೀನೋನ್ಮಕರಾಹಿಕಚ್ಛಪಾತ್
  ತಿಮಿದ್ವಿಪಗ್ರಾಹತಿಮಿಂಗಿಲಾಕುಲಾತ್ ॥ ೧೮ ॥

ತದುಗ್ರವೇಗಂ ದಿಶಿ ದಿಶ್ಯುಪರ್ಯಧೋ
  ವಿಸರ್ಪದುತ್ಸರ್ಪದಸಹ್ಯಮಪ್ರತಿ ।
ಭೀತಾಃ ಪ್ರಜಾ ದುದ್ರುವುರಂಗ ಸೇಶ್ವರಾ
  ಅರಕ್ಷ್ಯಮಾಣಾಃ ಶರಣಂ ಸದಾಶಿವಮ್ ॥ ೧೯ ॥

ಆಗ ನಾಗರಾಜನಾದ ವಾಸುಕಿಯ ಕಠೋರವಾದ ಸಾವಿರಾರು ಕಣ್ಣುಗಳಿಂದಲೂ, ಮುಖಗಳಿಂದಲೂ, ನಿಟ್ಟುಸಿರಿನಿಂದಲೂ ವಿಷದ ಜ್ವಾಲೆಗಳು ಹೊರಹೊಮ್ಮತೊಡಗಿದವು. ಇದರ ಹೊಗೆಯಿಂದ ಮುಖದ ಭಾಗವನ್ನೇ ಹಿಡಿದುಕೊಂಡಿದ್ದ ಪೌಲೋಮ, ಕಾಲೇಯ, ಬಲಿ, ಇಲ್ವಲ ಮುಂತಾದ ಅಸುರರು ನಿಸ್ತೇಜರಾದರು. ಆಗ ಅವರು ಕಾಡುಗಿಚ್ಚಿನಿಂದ ಬೆಂದುಹೋದ ಸಾಲವೃಕ್ಷಗಳಂತೆ ಕಂಡು ಬರುತ್ತಿದ್ದರು. ॥ ೧೪॥ ದೇವತೆಗಳೂ ಕೂಡ ಅದರಿಂದ ತಪ್ಪಿಸಿ ಕೊಳ್ಳಲಾರದೆ ಹೋದರು. ವಾಸುಕಿಯ ಶ್ವಾಸದ ವಿಷಜ್ವಾಲೆ ಗಳಿಂದ ಅವರ ತೇಜವೂ ಕಳೆಗುಂದಿತು. ವಸ್ತ್ರಗಳು, ಮಾಲೆಗಳು, ಕವಚಗಳು ಹಾಗೂ ಮುಖಗಳೂ ಹೊಗೆಯಿಂದ ಕಪ್ಪಿಟ್ಟವು. ಅವರ ಈ ದುಸ್ಥಿತಿಯನ್ನು ಕಂಡು ಭಗವಂತನ ಪ್ರೇರಣೆಯಿಂದ ಮೋಡ ಗಳು ದೇವತೆಗಳ ಮೇಲೆ ಮಳೆಗರೆಯತೊಡಗಿದವು. ವಾಯುವು ಸಮುದ್ರದ ತರಂಗಗಳ ಮೇಲಿಂದ ಬೀಸುತ್ತಾ ತಂಪನ್ನೂ ಸುಗಂಧ ವನ್ನೂ ನೀಡಿದನು. ॥ ೧೫ ॥

ಹೀಗೆ ದೇವಾಸುರರು ಸಮುದ್ರಮಥನವನ್ನು ಮುಂದುವರಿ ಸಿದರೂ ಅಮೃತವು ಬಾರದಿರಲು ಭಗವಂತನಾದ ಅಜಿತನೇ ಸಮುದ್ರವನ್ನು ಕಡೆಯಲು ಪ್ರಾರಂಭಿಸಿದನು. ॥ ೧೬ ॥ ಆಗ ಮೇಘಶ್ಯಾಮನಾದ ಭಗವಂತನು ಚಿನ್ನದ ಬಣ್ಣದ ಪೀತಾಂಬರ ವನ್ನು ಉಟ್ಟಿದ್ದನು. ಅವನ ಕಿವಿಗಳಲ್ಲಿ ಮಿಂಚಿನಂತೆ ಹೊಳೆಯುವ ಕುಂಡಲಗಳಿದ್ದವು. ತಲೆಯಲ್ಲಿ ಹೊಳೆಯುತ್ತಿದ್ದು ಹಾರಾಡುವ ಗುಂಗುರುಕೂದಲುಗಳಿದ್ದವು. ಕಮನೀಯ ಕಣ್ಣುಗಳು ಕೆಂಬಣ್ಣ ದಿಂದ ಕೂಡಿದ್ದವು. ಕೊರಳಲ್ಲಿ ವನಮಾಲೆಯು ಶೋಭಿಸುತ್ತಿತ್ತು. ಸಮಸ್ತ ಜಗತ್ತಿಗೆ ಅಭಯದಾನವನ್ನೀಯುವ ಭುಜದಂಡಗಳು ವಾಸುಕಿಯನ್ನು ಹಿಡಿದುಕೊಂಡು, ಕೂರ್ಮರೂಪದಿಂದ ಪರ್ವತ ವನ್ನು ಹೊತ್ತುಕೊಂಡು, ಭಗವಂತನು ಮಂದರಾಚಲವೆಂಬ ಕಡೆ ಗೋಲಿನಿಂದ ಸಮುದ್ರವನ್ನು ಕಡೆಯುತ್ತಿರುವಾಗ ಅವನು ಇನ್ನೊಂದು ಪರ್ವತದಂತೆ ಅತ್ಯಂತ ಸುಂದರವಾಗಿ ಕಾಣುತ್ತಿ ದ್ದನು. ॥ ೧೭ ॥ ಅಜಿತ ಭಗವಂತನು ಹೀಗೆ ಸಮುದ್ರವನ್ನು ಕಡೆಯುವಾಗ ಸಮುದ್ರದಲ್ಲಿ ಕೋಲಾಹಲವುಂಟಾಗಿ, ಮೀನು, ಮೊಸಳೆ, ಹಾವುಗಳು, ಆಮೆಗಳು ಭಯಗೊಂಡು ಮೇಲಕ್ಕೆ ಬಂದು ಅತ್ತ-ಇತ್ತ ಓಡತೊಡಗಿದವು. ತಿಮಿ-ತಿಮಿಂಗಿಲಗಳು ಮುಂತಾದ ಮೀನುಗಳೂ, ನೀರಾನೆಗಳೂ, ಮೊಸಳೆಗಳೂ ತಳಮಳಗೊಂಡವು. ಅದೇ ಸಮಯಕ್ಕೆ ಕ್ಷೀರಸಾಗರದಿಂದ ಮೊಟ್ಟಮೊದಲು ಹಾಲಾಹಲವೆಂಬ ಅತ್ಯಂತ ಉಗ್ರವಾದ ವಿಷವು ಹೊರಟಿತು. ॥ ೧೮॥ ಮಹಾಘೋರವಾದ ಆ ಹಾಲಾಹಲ ಮಹಾ ವಿಷವು ದಿಕ್ಕುಗಳಲ್ಲಿಯೂ, ಉಪದಿಕ್ಕುಗಳಲ್ಲಿಯೂ, ಭೂಮ್ಯಂತ ರಿಕ್ಷಗಳಲ್ಲಿಯೂ ಸರ್ವತ್ರ ವ್ಯಾಪಿಸತೊಡಗಿತು. ಸಹಿಸಲು ಅಶಕ್ಯ ವಾದ ಆ ವಿಷದ ಜ್ವಾಲೆಯಿಂದ ಭಯಗೊಂಡ ಪ್ರಜೆಗಳೂ, ಪ್ರಜಾಪತಿಗಳೂ ಬೇರೆ ಯಾರೂ ರಕ್ಷಕರಿಲ್ಲದಿರಲು ಭಗವಾನ್ ಸದಾಶಿವನಿಗೆ ಶರಣುಹೋದರು. ॥ ೧೯ ॥ ಭಗವಾನ್ ಸದಾ ಶಿವನು ಪಾರ್ವತೀದೇವಿಯೊಡನೆ ಕೈಲಾಸದಲ್ಲಿ ವಿರಾಜಮಾನನಾಗಿ ದ್ದನು. ದೊಡ್ಡ-ದೊಡ್ಡ ಋಷಿ-ಮುನಿಗಳು ಅವನನ್ನು ಸೇವಿಸು

ವಿಲೋಕ್ಯ ತಂ ದೇವವರಂ ತ್ರಿಲೋಕ್ಯಾ
ಭವಾಯ ದೇವ್ಯಾಭಿಮತಂ ಮುನೀನಾಮ್ ।
ಆಸೀನಮದ್ರಾವಪವರ್ಗಹೇತೋ-
ಸ್ತಪೋ ಜುಷಾಣಂ ಸ್ತುತಿಭಿಃ ಪ್ರಣೇಮುಃ ॥ ೨೦ ॥

ಪ್ರಜಾಪತಯ ಊಚುಃ

ದೇವದೇವ ಮಹಾದೇವ ಭೂತಾತ್ಮನ್ ಭೂತಭಾವನ ।
ತ್ರಾಹಿ ನಃ ಶರಣಾಪನ್ನಾಂಸ್ತ್ರೈಲೋಕ್ಯದಹನಾದ್ವಿಷಾತ್ ॥ ೨೧ ॥

ತ್ವಮೇಕಃ ಸರ್ವಜಗತ ಈಶ್ವರೋ ಬಂಧಮೋಕ್ಷಯೋಃ ।
ತಂ ತ್ವಾಮರ್ಚಂತಿ ಕುಶಲಾಃ ಪ್ರಪನ್ನಾರ್ತಿಹರಂ ಗುರುಮ್ ॥ ೨೨ ॥

ಗುಣಮಯ್ಯಾ ಸ್ವಶಕ್ತ್ಯಾಸ್ಯ ಸರ್ಗಸ್ಥಿತ್ಯಪ್ಯಯಾನ್ವಿಭೋ ।
ಧತ್ಸೇ ಯದಾ ಸ್ವದೃಗ್ಭೂಮನ್ಬ್ರಹ್ಮವಿಷ್ಣುಶಿವಾಭಿಧಾಮ್ ॥ ೨೩ ॥

ತ್ವಂ ಬ್ರಹ್ಮ ಪರಮಂ ಗುಹ್ಯಂ ಸದಸದ್ಭಾವಭಾವನಃ ।
ನಾನಾಶಕ್ತಿಭಿರಾಭಾತಸ್ತ್ವಮಾತ್ಮಾ ಜಗದೀಶ್ವರಃ ॥ ೨೪ ॥

ತ್ವಂ ಶಬ್ದಯೋನಿರ್ಜಗದಾದಿರಾತ್ಮಾ
ಪ್ರಾಣೇಂದ್ರಿಯದ್ರವ್ಯಗುಣಸ್ವಭಾವಃ ।
ಕಾಲಃ ಕ್ರತುಃ ಸತ್ಯಮೃತಂ ಚ ಧರ್ಮ-
ಸ್ತ್ವಯ್ಯಕ್ಷರಂ ಯತ್ತ್ರಿವೃದಾಮನಂತಿ ॥ ೨೫ ॥

ಅಗ್ನಿರ್ಮುಖಂ ತೇಽಖಿಲದೇವತಾತ್ಮಾ
ಕ್ಷಿತಿಂ ವಿದುರ್ಲೋಕಭವಾಂಘ್ರಿಪಂಕಜಮ್ ।
ಕಾಲಂ ಗತಿಂ ತೇಽಖಿಲದೇವತಾತ್ಮನೋ
ದಿಶಶ್ಚ ಕರ್ಣೌ ರಸನಂ ಜಲೇಶಮ್ ॥ ೨೬ ॥

ನಾಭಿರ್ನಭಸ್ತೇ ಶ್ವಸನಂ ನಭಸ್ವಾ-
ನ್ಸೂರ್ಯಶ್ಚ ಚಕ್ಷೂಂಷಿ ಜಲಂ ಸ್ಮ ರೇತಃ ।
ಪರಾವರಾತ್ಮಾಶ್ರಯಣಂ ತವಾತ್ಮಾ
ಸೋಮೋ ಮನೋ ದ್ಯೌರ್ಭಗವನ್ ಶಿರಸ್ತೇ ॥ ೨೭ ॥

ತ್ತಿದ್ದನು. ಅವನು ಅಲ್ಲಿ ಮೂರುಲೋಕಗಳ ಅಭ್ಯುದಯಕ್ಕಾಗಿ ಹಾಗೂ ಮೋಕ್ಷಕ್ಕಾಗಿ ತಪಸ್ಸು ಮಾಡುತ್ತಿದ್ದನು. ಅಂತಹ ಪರಮೇಶ್ವರನನ್ನು ಪ್ರಜಾಪತಿಗಳು ದರ್ಶಿಸುತ್ತಾ, ಸ್ತುತಿಸುತ್ತಾ ಸಾಷ್ಟಾಂಗ ಪ್ರಣಾಮಮಾಡಿದರು. ॥ ೨೦ ॥

ಪ್ರಜಾಪತಿಗಳು ಭಗವಾನ್ ಶಂಕರನನ್ನು ಸ್ತುತಿಸುತ್ತಿದ್ದಾರೆ – ಓ ದೇವದೇವನೇ! ಮಹಾದೇವನೇ! ಸಕಲ ಪ್ರಾಣಿಗಳಲ್ಲಿಯೂ ಆತ್ಮರೂಪದಲ್ಲಿರುವವನೇ! ಪ್ರಾಣಿಗಳನ್ನು ಸೃಷ್ಟಿಸುವವನೇ! ಮೂರು ಲೋಕಗಳನ್ನೂ ಸುಡುತ್ತಿರುವ ಈ ಮಹಾವಿಷದಿಂದ ಶರಣಾಗತರಾಗಿರುವ ನಮ್ಮನ್ನು ರಕ್ಷಿಸು. ॥ ೨೧ ॥ ಪರಮೇಶ್ವರನೇ! ಸಮಸ್ತ ಲೋಕಗಳ, ಪ್ರಾಣಿಗಳ ಬಂಧನ ಮತ್ತು ಮೋಕ್ಷಕ್ಕೆ ನೀನೊಬ್ಬನೇ ಒಡೆಯನು. ಆದ್ದರಿಂದ ಕುಶಲಮತಿಗಳಾದರೂ ಶರಣಾಗತರ ಕಷ್ಟಗಳನ್ನು ಪರಿಹರಿಸುವ ಲೋಕಗುರುವಾದ ನಿನ್ನನ್ನೇ ಆರಾಧಿಸುತ್ತಾರೆ. ॥ ೨೨ ॥ ಪ್ರಭೋ! ನಿನ್ನ ಗುಣಮಯ ಶಕ್ತಿಯಿಂದ ಈ ಜಗತ್ತಿನ ಸೃಷ್ಟಿ, ಸ್ಥಿತಿ, ಸಂಹಾರಗಳನ್ನು ಮಾಡುವುದಕ್ಕಾಗಿ ನೀನು ಅನಂತನೂ, ಏಕರಸನೂ ಆಗಿದ್ದರೂ ಬ್ರಹ್ಮಾ, ವಿಷ್ಣು, ಶಿವ ಮುಂತಾದ ನಾಮಗಳನ್ನು ಧರಿಸಿಕೊಂಡಿರುವೆ. ॥ ೨೩ ॥ ದೇವದೇವನೇ! ನೀನು ಅತಿಗುಹ್ಯವಾದ ಬ್ರಹ್ಮತತ್ತ್ವವೇ ಆಗಿರುವೆ. ಕಾರ್ಯ-ಕಾರಣರೂಪದಿಂದ ದೇವತೆಗಳನ್ನೂ, ಮನುಷ್ಯರನ್ನೂ, ಪಶುಪಕ್ಷಿಗಳನ್ನೂ ಸೃಷ್ಟಿಸಿ ಪೋಷಿಸುವವನೂ ನೀನೇ ಆಗಿರುವೆ. ಅನೇಕ ಶಕ್ತಿಗಳ ರೂಪದಲ್ಲಿಯೂ ಕಾಣಿಸಿಕೊಳ್ಳುವೆ. ಸಕಲ ಪ್ರಾಣಿಗಳ ಆತ್ಮಸ್ವರೂಪನೂ ಆಗಿರುವ ನೀನು ಜಗದೀಶ್ವರನೂ ಆಗಿರುವೆ. ॥ ೨೪ ॥ ಮಹಾದೇವನೇ! ಸಮಸ್ತ ವೇದಗಳು ನಿನ್ನಿಂದಲೇ ಪ್ರಕಟವಾಗಿವೆ. ಆದರಿಂದ ನೀನು ಸಮಸ್ತ ಜ್ಞಾನಗಳಿಗೂ ಮೂಲಸ್ರೋತನಾಗಿ ಜ್ಞಾನಸ್ವರೂಪನೇ ಆಗಿರುವೆ. ಜಗತ್ತಿನ ಆದಿಕಾರಣ ಮಹತ್ತತ್ತ್ವ ಮತ್ತು ತ್ರಿವಿಧ ಅಹಂಕಾರವೂ ನೀನೇ ಆಗಿರುವೆ. ಪ್ರಾಣ, ಇಂದ್ರಿಯಗಳು, ಪಂಚಭೂತಗಳು ಹಾಗೂ ಶಬ್ದಾದಿ ವಿಷಯಗಳ ಬೇರೆ-ಬೇರೆ ಸ್ವಭಾವಗಳೂ, ಮೂಲಕಾರಣವೂ ನೀನೇ ಆಗಿರುವೆ. ಪ್ರಾಣಿಗಳನ್ನು ವೃದ್ಧಿಗೊಳಿಸುವ ಮತ್ತು ವಿನಾಶಗೊಳಿಸುವ ಕಾಲನೂ ನೀನೇ ಆಗಿರುವೆ. ಪ್ರಾಣಿಗಳಿಗೆ ಕಲ್ಯಾಣವನ್ನುಂಟುಮಾಡುವ ಯಜ್ಞಸ್ವರೂಪನೂ ನೀನೇ. ಸತ್ಯ ಮತ್ತು ಋತಗಳೂ ನೀನೇ. ಧರ್ಮವೆಂಬುದು ನಿನ್ನ ಸ್ವರೂಪವೇ ಆಗಿದೆ. ಅ–ಉ–ಮ–ಈ ಮೂರು ಅಕ್ಷರಗಳಿಂದ ಯುಕ್ತವಾದ ಓಂಕಾರಸ್ವರೂಪನೂ ನೀನೇ. ತ್ರಿಗುಣಾತ್ಮಕವಾದ ಪ್ರಕೃತಿಯೂ ನೀನೇ. ಹೀಗೆ ವೇದವಾದಿಗಳಾದ ಮಹಾತ್ಮರು ನಿನ್ನ ಗುಣಗಾನ ಮಾಡುತ್ತಾರೆ. ॥ ೨೫ ॥ ಮೂರು ಲೋಕಗಳಿಗೂ ಅಭ್ಯುದಯವನ್ನು ಮಾಡುವ ಶಂಕರನೇ! ಸರ್ವದೇವ ಸ್ವರೂಪನಾದ ಅಗ್ನಿಯು ನಿನಗೆ ಮುಖವಾಗಿದ್ದಾನೆ. ಈ ಭೂಮಂಡಲವು ನಿನ್ನ ಚರಣಕಮಲವಾಗಿದೆ. ನೀನು ಸಕಲ ದೇವತಾಸ್ವರೂಪನಾಗಿರುವೆ. ಈ ಕಾಲವೇ ನಿನ್ನ ಗತಿಯಾಗಿದೆ. ದಿಕ್ಕುಗಳೇ ನಿನ್ನ ಕಿವಿಗಳಾಗಿವೆ. ವರುಣನೇ ನಿನ್ನ ರಸನೇಂದ್ರಿಯನಾಗಿದ್ದಾನೆ. ॥ ೨೬ ॥ ಭಗವಂತನೇ! ಆಕಾಶವೇ ನಿನ್ನ ನಾಭಿಯು. ವಾಯುವು ಉಸಿರಾಗಿದೆ. ಸೂರ್ಯನು ಕಣ್ಣುಗಳಾಗಿದ್ದಾನೆ. ಜಲವೇ ನಿನ್ನ ರೇತಸ್ಸು, ನಿನ್ನ ಅಹಂಕಾರವೇ ಉಚ್ಚ–ನೀಚ ಸಮಸ್ತ ಪ್ರಾಣಿಗಳಿಗೂ ಪರಮಾಶ್ರಯವಾಗಿದೆ. ಚಂದ್ರನೇ ನಿನ್ನ ಮನಸ್ಸು, ಸ್ವರ್ಗವೇ ನಿನ್ನ ತಲೆಯಾಗಿದೆ. ॥ ೨೭ ॥

ಕುಕ್ಷಿಃ ಸಮುದ್ರಾ ಗಿರಯೋಽಸ್ಥಿ ಸಂಘಾ
ರೋಮಾಣಿ ಸರ್ವೌಷಧಿವೀರುಧಸ್ತೇ ।
ಛಂದಾಂಸಿ ಸಾಕ್ಷಾತ್ತವ ಸಪ್ತ ಧಾತವ-
ಸ್ತ್ರಯೀಮಯಾತ್ಮನ್ ಹೃದಯಂ ಸರ್ವಧರ್ಮಃ ॥ ೨೮ ॥

ಮುಖಾನಿ ಪಂಚೋಪನಿಷದಸ್ತವೇಶ
ಯೈಸ್ತ್ರಿಂಶದಷ್ಟೋತ್ತರಮಂತ್ರವರ್ಗಃ ।
ಯತ್ತಚ್ಛಿವಾಖ್ಯಂ ಪರಮಾರ್ಥತತ್ತ್ವಂ
ದೇವ ಸ್ವಯಂಜ್ಯೋತಿರವಸ್ಥಿತಿಸ್ತೇ ॥ ೨೯ ॥

ಛಾಯಾ ತ್ವಧರ್ಮೋರ್ಮಿಷು ಯೈರ್ವಿಸರ್ಗೋ
ನೇತ್ರತ್ರಯಂ ಸತ್ತ್ವರಜಸ್ತಮಾಂಸಿ ।
ಸಾಂಖ್ಯಾತ್ಮನಃ ಶಾಸ್ತ್ರಕೃತಸ್ತವೇಕ್ಷಾ
ಛಂದೋಮಯೋ ದೇವ ಋಷಿಃ ಪುರಾಣಃ ॥ ೩೦ ॥

ನ ತೇ ಗಿರಿತ್ರಾಖಿಲಲೋಕಪಾಲ-
ವಿರಿಂಚವೈಕುಂಠಸುರೇಂದ್ರಗಮ್ಯಮ್ ।
ಜ್ಯೋತಿಃ ಪರಂ ಯತ್ರ ರಜಸ್ತಮಶ್ಚ
ಸತ್ತ್ವಂ ನ ಯದ್ಬ್ರಹ್ಮ ನಿರಸ್ತಭೇದಮ್ ॥ ೩೧ ॥

ಕಾಮಾಧ್ವರತ್ರಿಪುರಕಾಲಗರಾದ್ಯನೇಕ-
ಭೂತದ್ರುಹಃ ಕ್ಷಪಯತಃ ಸ್ತುತಯೇ ನ ತತ್ತೇ ।
ಯಸ್ತ್ವಂತಕಾಲ ಇದಮಾತ್ಮಕೃತಂ ಸ್ವನೇತ್ರ-
ವಹ್ನಿಸ್ಫುಲಿಂಗಶಿಖಯಾ ಭಸಿತಂ ನ ವೇದ ॥ ೩೨ ॥

ಯೇ ತ್ವಾತ್ಮರಾಮಗುರುಭಿರ್ಹೃದಿ ಚಿಂತಿತಾಂಘ್ರಿ-
ದ್ವಂದ್ವಂ ಚರಂತಮುಮಯಾ ತಪಸಾಭಿತಪ್ತಮ್ ।
ಕತ್ಥಂತ ಉಗ್ರಪರುಷಂ ನಿರತಂ ಶ್ಮಶಾನೇ
ತೇ ನೂನಮೂತಿಮವಿದಂಸ್ತವ ಹಾತಲಜ್ಜಾಃ ॥ ೩೩ ॥

ವೇದಸ್ವರೂಪನಾದ ಭಗವಂತನೇ! ಸಮುದ್ರಗಳೇ ನಿನಗೆ ಹೊಟ್ಟೆಯಾಗಿದೆ. ಪರ್ವತಗಳೇ ಮೂಳೆಯಾಗಿವೆ. ಎಲ್ಲ ಪ್ರಕಾರದ ಔಷಧಿಗಳೂ, ಹುಲ್ಲುಗಳೂ ನಿನ್ನ ರೋಮವಾಗಿವೆ. ಗಾಯತ್ರಿಯೇ ಮೊದಲಾದ ಛಂದಸ್ಸುಗಳೇ ನಿನ್ನ ಸಪ್ತಧಾತುಗಳು. ಸಮಸ್ತ ಧರ್ಮಗಳೂ ನಿನ್ನ ಹೃದಯವೇ ಆಗಿದೆ. ॥ ೨೮ ॥ ಸರ್ವೇಶನೇ! ಸದ್ಯೋಜಾತಾದಿ ಐದು ಉಪನಿಷತ್ತು ಮಂತ್ರಗಳೇ ನಿನ್ನ ತತ್ಪುರುಷ, ಅಘೋರ, ಸದ್ಯೋಜಾತ, ವಾಮದೇವ ಮತ್ತು ಈಶಾನವೆಂಬ ಐದು ಮುಖಗಳಾಗಿವೆ. ಅವುಗಳ ಪದಚ್ಛೇದದಿಂದಲೇ ಮೂವತ್ತೆಂಟು ಕಲಾತ್ಮಕ ಮಂತ್ರಗಳು ಉಂಟಾಗುತ್ತವೆ. ನೀನು ಸಮಸ್ತ ಪ್ರಪಂಚದಿಂದ ಉಪರತನಾಗಿ ನಿನ್ನ ಸ್ವರೂಪದಲ್ಲಿ ನೆಲೆಸಿದಾಗ ಅದೇ ಸ್ಥಿತಿಯ ಹೆಸರು 'ಶಿವ' ಎಂದಾಗಿದೆ. ವಾಸ್ತವವಾಗಿ ಅದೇ ಸ್ವಯಂ ಪ್ರಕಾಶ ಪರಮಾರ್ಥತತ್ತ್ವವಾಗಿದೆ. ॥ ೨೯ ॥ ಅಧರ್ಮಕ್ಕೆ ಮೂಲವಾದ ದೇಹಾಭಿಮಾನ ಅಹಂಕಾರಗಳೆಂಬ ತರಂಗಗಳೇ ನಿನ್ನ ನೆರಳಾಗಿದೆ. ವಿಧ-ವಿಧವಾದ ಸೃಷ್ಟಿಗೆ ಕಾರಣವಾಗಿರುವಂತಹ ಸತ್ತ್ವ-ರಜಸ್ತಮೋಗುಣಗಳೇ ನಿನ್ನ ಮೂರು ಕಣ್ಣುಗಳಾಗಿವೆ. ಪ್ರಭುವೇ! ಗಾಯತ್ರಿಯೇ ಮುಂತಾದ ಛಂದೋರೂಪವಾದ ಸನಾತನ ವೇದಗಳು ನಿನ್ನ ಸ್ವರೂಪವನ್ನೇ ಪ್ರತಿಪಾದಿಸುತ್ತವೆ. ಏಕೆಂದರೆ ನೀನೇ ಸಾಂಖ್ಯ ಮುಂತಾದ ಸಮಸ್ತ ಶಾಸ್ತ್ರಗಳ ರೂಪದಲ್ಲಿ ಸ್ಥಿತನಾಗಿದ್ದು ಅವುಗಳ ಕರ್ತೃವೂ ನೀನೇ ಆಗಿರುವೆ. ॥ ೩೦ ॥ ಗಿರಿತ್ರನೇ! ಪರಮೇಶ್ವರನೇ! ನೀನು ಪರಂಜ್ಯೋತಿ ಸ್ವರೂಪನು. ಪರಬ್ರಹ್ಮ ಪರಾತ್ಪರ ತತ್ತ್ವವೇ ಆಗಿರುವೆ. ಸಚ್ಚಿದಾನಂದ ಸ್ವರೂಪನೂ ನೀನೇ. ಪರಂಜ್ಯೋತಿ ಸ್ವರೂಪನಾದ ನಿನ್ನಲ್ಲಿ ಸತ್ತ್ವರಜಸ್ತಮೋಗುಣಗಳಾಗಲೀ, ಯಾವುದೇ ಭೇದಭಾವವಾಗಲೀ ಇಲ್ಲ. ಅಂತಹ ನಿನ್ನ ಚಿದಾನಂದಘನ ಸ್ವರೂಪವನ್ನು ಲೋಕಪಾಲಕರಾಗಲೀ, ಬ್ರಹ್ಮೇಂದ್ರವಿಷ್ಣುಗಳಾಗಲೀ ಅರಿಯರು. ॥ ೩೧ ॥ ಕಾಮದಹನ, ದಕ್ಷಯಜ್ಞ ವಿಧ್ವಂಸ, ತ್ರಿಪುರಾಸುರಸಂಹಾರ, (ಈಗ ನಮ್ಮ ಪ್ರಾರ್ಥನೆಯಂತೆ ನಡೆಯಲಿರುವ) ಕಾಲಕೂಟವಿಷಭಕ್ಷಣ, ಜೀವದ್ರೋಹಿ ಅನೇಕ ರಾಕ್ಷಸರ ಸಂಹಾರ ಮುಂತಾದ ಪ್ರಪಂಚಕ್ಕೆ ಹಿತವಾದ ಕಾರ್ಯಗಳನ್ನು ನೀನು ಮಾಡಿರುವೆ. ಇದು ನಿನ್ನನ್ನು ಸ್ತುತಿಮಾಡುವುದಕ್ಕಾಗಿ ಹೇಳುತ್ತಿರುವ ಮಾತಲ್ಲ. ಏಕೆಂದರೆ, ಪ್ರಳಯಕಾಲದಲ್ಲಿ ನೀನೇ ಸೃಷ್ಟಿಸಿದ ಈ ಜಗತ್ತು ನಿನ್ನ ಕಣ್ಣಿಂದ ಹೊರಡುವ ಅಗ್ನಿಯ ಕಿಡಿಯ ಜ್ವಾಲೆಗಳಿಂದ ಕ್ಷಣಮಾತ್ರದಲ್ಲಿ ಭಸ್ಮವಾಗಿ ಹೋಗುತ್ತದೆ. ಸದಾ ಧ್ಯಾನಮಗ್ನನಾಗಿರುವ ನೀನು ಈ ಕಾರ್ಯಗಳ ಸಾಧನೆಯ ಬಗ್ಗೆ ಯೋಚಿಸುವುದೇ ಇಲ್ಲ. ನಿನ್ನ ಪರಮಾದ್ಭುತವಾದ ಶಕ್ತಿಯಿಂದ ತಾನೇ ತಾನಾಗಿ ಎಲ್ಲವೂ ನಡೆದುಹೋಗುತ್ತದೆ. ॥ ೩೨ ॥ ಜೀವನ್ಮುಕ್ತರೂ, ಆತ್ಮಾರಾಮರೂ ಆದ ಗುರುಜನರು ತಮ್ಮ ಹೃದಯಕಮಲದಲ್ಲಿ ನಿನ್ನ ದಿವ್ಯವಾದ ಪಾದದ್ವಯಗಳನ್ನು ಧ್ಯಾನಮಾಡುತ್ತಿರುತ್ತಾರೆ. ನೀನೂ ಕೂಡ ನಿರಂತರ ಜ್ಞಾನ, ತಪಸ್ಸಿನಲ್ಲೇ ಲೀನನಾಗಿರುವೆ. ಅಂತಹ ನಿನ್ನನ್ನು ಕೆಲವರು ಕಾಮಾಸಕ್ತನೆಂದೂ ಸದಾ ಉಮೆಯೊಡನೆ ತಿರುಗುತ್ತಿರುವವನೆಂದೂ ಹೇಳುತ್ತಾರೆ. ಯಾವಾಗಲೂ ಸ್ಮಶಾನದಲ್ಲೇ ವಾಸಮಾಡುವ ನಿನ್ನನ್ನು ಉಗ್ರಪುರುಷನೆಂದೂ ತೆಗಳುತ್ತಾರೆ. ನಾಚಿಕೆಗೆಟ್ಟು ಹೀಗೆ ಹೇಳುವ ಅವರಿಗೆ ನಿನ್ನ ಮಹಿಮೆಯೇನಾದರೂ ತಿಳಿದಿರುವುದೇ? ॥ ೩೩ ॥

ತತ್ತಸ್ಯ ತೇ ಸದಸತೋಃ ಪರತಃ ಪರಸ್ಯ
ನಾಂಜಃ ಸ್ವರೂಪಗಮನೇ ಪ್ರಭವಂತಿ ಭೂಮ್ನಃ ।
ಬ್ರಹ್ಮಾದಯಃ ಕಿಮುತ ಸಂಸ್ತವನೇ ವಯಂ ತು
ತತ್ಸರ್ಗಸರ್ಗವಿಷಯಾ ಅಪಿ ಶಕ್ತಿಮಾತ್ರಮ್ ॥ ೩೪ ॥

ಪ್ರಭುವೇ! ಕಾರ್ಯ-ಕಾರಣವಾದ ಈ ಜಗತ್ತಿನ ಆಚೆ ಮಾಯೆ ಇದೆ. ಆ ಮಾಯೆಗೂ ಅತೀತನಾಗಿ ನೀನಿರುವೆ. ನಿನ್ನ ಅನಂತಸ್ವರೂಪದ ಸಾಕ್ಷಾತ್ಕಾರ ಮಾಡಿಕೊಳ್ಳಲು ಬ್ರಹ್ಮಾದಿಗಳೂ ಅಸಮರ್ಥರೇ ಸರಿ. ನಿನ್ನ ಸ್ವರೂಪವೇ ತಿಳಿಯದಿದ್ದರೆ ಸ್ತುತಿಮಾಡುವುದಾದರೂ ಹೇಗೆ ಸಾಧ್ಯ? ಹೀಗಿರುವಾಗ ಬ್ರಹ್ಮನ ಅಂಶಾಂಶಸಂಭೂತರಾಗಿರುವ ನಾವೇನು ಮಾಡಬಲ್ಲೆವು? ಆದರೂ ನಮ್ಮ ಶಕ್ತಿಗನುಸಾರವಾಗಿ ನಿನ್ನ ಗುಣಗಾನವನ್ನು ಮಾಡುತ್ತಿದ್ದೇವೆ. ಇದರಿಂದಲೇ ತೃಪ್ತನಾಗಿ ವರದಾನವನ್ನು ಮಾಡು. ॥ ೩೪ ॥

ಏತತ್ಪರಂ ಪ್ರಪಶ್ಯಾಮೋ ನ ಪರಂ ತೇ ಮಹೇಶ್ವರ ।
ಮೃಡನಾಯ ಹಿ ಲೋಕಸ್ಯ ವ್ಯಕ್ತಿಸ್ತೇಽವ್ಯಕ್ತಕರ್ಮಣಃ ॥ ೩೫ ॥

ನಾವಾದರೋ ಕೇವಲ ನಿನ್ನ ಈ ಲೀಲಾವಿಹಾರೀ ಸ್ವರೂಪವನ್ನೇ ನೋಡುತ್ತಿದ್ದೇವೆ. ನಿನ್ನ ಪರಮಸ್ವರೂಪವನ್ನು ನಾವು ತಿಳಿಯಲಾರೆವು. ಮಹೇಶ್ವರಾ! ನಿನ್ನ ಲೀಲೆಗಳು ಅವ್ಯಕ್ತವಾಗಿದ್ದರೂ ಜಗತ್ತಿನ ಕಲ್ಯಾಣಕ್ಕಾಗಿಯೇ ನೀನು ವ್ಯಕ್ತರೂಪದಿಂದಲೂ ಇರುತ್ತೀಯೆ ॥ ೩೫ ॥

ಶ್ರೀಶುಕ ಉವಾಚ

ತದ್ವೀಕ್ಷ್ಯ ವ್ಯಸನಂ ತಾಸಾಂ ಕೃಪಯಾ ಭೃಶಪೀಡಿತಃ ।
ಸರ್ವಭೂತಸುಹೃದ್ದೇವ ಇದಮಾಹ ಸತೀಂ ಪ್ರಿಯಾಮ್ ॥ ೩೬ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿದ್ರಾಜನೇ! ಪ್ರಜೆಗಳ ಈ ಸಂಕಟವನ್ನು ನೋಡಿ ಸಮಸ್ತ ಪ್ರಾಣಿಗಳ ಹಿತೈಷಿಯೂ, ದೇವಾಧಿದೇವನೂ, ಕರುಣಾಮಯನೂ ಆದ ಭಗವಾನ್ ಶಂಕರನು ಹೃದಯದಲ್ಲಿ ವ್ಯಥೆಗೊಂಡು ಪ್ರೇಯಸಿಯಾದ ಪಾರ್ವತಿಯೊಡನೆ ಹೀಗೆಂದನು. ॥ ೩೬ ॥

ಶ್ರೀಶಿವ ಉವಾಚ

ಅಹೋ ಬತ ಭವಾನ್ಯೇತತ್ಪ್ರಜಾನಾಂ ಪಶ್ಯ ವೈಶಸಮ್ ।
ಕ್ಷೀರೋದಮಥನೋದ್ಭೂತಾತ್ಕಾಲಕೂಟಾದುಪಸ್ಥಿತಮ್ ॥ ೩೭ ॥

ಶ್ರೀಶಿವನು ಹೇಳಿದನು – ದೇವಿ! ಅಯ್ಯೋ ಪಾಪ! ಕ್ಷೀರಸಮುದ್ರವನ್ನು ಕಡೆಯುವಿಕೆಯಿಂದ ಹುಟ್ಟಿದ ಮಹಾಘೋರವಾದ ಕಾಲಕೂಟವಿಷದಿಂದ ಪ್ರಜೆಗಳಿಗುಂಟಾದ ದುಃಖವನ್ನಾದರೂ ನೋಡು. ॥ ೩೭ ॥

ಆಸಾಂ ಪ್ರಾಣಪರೀಪ್ಸೂನಾಂ ವಿಧೇಯಮಭಯಂ ಹಿ ಮೇ ।
ಏತಾವಾನ್ಹಿ ಪ್ರಭೋರರ್ಥೋ ಯದ್ದೀನಪರಿಪಾಲನಮ್ ॥ ೩೮ ॥

ಈ ಬಡಪಾಯಿಗಳು ಹೇಗಾದರೂ ತಮ್ಮ ಪ್ರಾಣಗಳನ್ನು ಉಳಿಸಿಕೊಳ್ಳಲು ಬಯಸುತ್ತಾರೆ. ಇವರನ್ನು ನಿರ್ಭಯರನ್ನಾಗಿಸುವುದೇ ಈಗ ನನ್ನ ಕರ್ತವ್ಯವಾಗಿದೆ. ಸಮರ್ಥನಾದ ಪ್ರಭುವಿಗೆ ದೀನರಾದವರ ಸಂಕಟವನ್ನು ಪರಿಹರಿಸುವುದೇ ಜೀವನದ ಮುಖ್ಯ ಪ್ರಯೋಜನವಾಗಿದೆ. ॥ ೩೮ ॥

ಪ್ರಾಣೈಃ ಸ್ವೈಃ ಪ್ರಾಣಿನಃ ಪಾಂತಿ ಸಾಧವಃ ಕ್ಷಣಭಂಗುರೈಃ ।
ಬದ್ಧವೈರೇಷು ಭೂತೇಷು ಮೋಹಿತೇಷ್ವಾತ್ಮಮಾಯಯಾ ॥ ೩೯ ॥

ಸಜ್ಜನರಾದವರು ತಮ್ಮ ಕ್ಷಣಭಂಗುರವಾದ ಪ್ರಾಣಗಳನ್ನು ಬಲಿಕೊಟ್ಟಾದರೂ ಬೇರೆಯವರ ಪ್ರಾಣಗಳನ್ನು ರಕ್ಷಿಸುತ್ತಾರೆ. ಕಲ್ಯಾಣೀ! ತಮ್ಮದೇ ಆದ ಮೋಹದ ಮಾಯೆಯಲ್ಲಿ ಸಿಕ್ಕಿಹಾಕಿಕೊಂಡು ಪ್ರಪಂಚದ ಪ್ರಾಣಿಗಳು ಮೋಹಿತರಾಗಿ ಪರಸ್ಪರವಾಗಿ ವೈರಕಟ್ಟಿಕೊಳ್ಳುವರು. ॥ ೩೯ ॥

ಪುಂಸಃ ಕೃಪಯತೋ ಭದ್ರೇ ಸರ್ವಾತ್ಮಾ ಪ್ರೀಯತೇ ಹರಿಃ ।
ಪ್ರೀತೇ ಹರೌ ಭಗವತಿ ಪ್ರೀಯೇಽಹಂ ಸಚರಾಚರಃ ।
ತಸ್ಮಾದಿದಂ ಗರಂ ಭುಂಜೇ ಪ್ರಜಾನಾಂ ಸ್ವಸ್ತಿರಸ್ತು ಮೇ ॥ ೪೦ ॥

ಸರ್ವಮಂಗಳೇ! ಇಂತಹವರ ಮೇಲೆ ಕೃಪೆ ಮಾಡುವವನ ಮೇಲೆ ಸರ್ವಾತ್ಮನಾದ ಶ್ರೀಹರಿಯು ಪ್ರಸನ್ನನಾಗುವನು. ಭಗವಂತನು ಪ್ರಸನ್ನನಾದಾಗ ಚರಾಚರ ಜಗತ್ತಿನೊಂದಿಗೆ ನಾನೂ ಪ್ರಸನ್ನನಾಗುತ್ತೇನೆ. ಅದಕ್ಕಾಗಿ ಈಗಿಂದೀಗಲೇ ನಾನು ಈ ವಿಷವನ್ನು ಕುಡಿಯುತ್ತೇನೆ. ಇದರಿಂದ ನನ್ನ ಪ್ರಜೆಗಳಿಗೆ ಕಲ್ಯಾಣವುಂಟಾಗಲೀ; ಲೋಕಕ್ಕೆ ಕ್ಷೇಮವಾಗಲೀ. ॥ ೪೦ ॥

ಶ್ರೀಶುಕ ಉವಾಚ

ಏವಮಾಮಂತ್ರ್ಯ ಭಗವಾನ್ಭವಾನೀಂ ವಿಶ್ವಭಾವನಃ ।
ತದ್ವಿಷಂ ಜಗ್ಧುಮಾರೇಭೇ ಪ್ರಭಾವಜ್ಞಾನ್ವಮೋದತ ॥ ೪೧ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ವಿಶ್ವದ ಜೀವನದಾತನಾದ ಭಗವಾನ್ ಶಂಕರನು ಹೀಗೆ ಪಾರ್ವತಿಗೆ ಹೇಳಿ, ಆಕೆಯ ಸಮ್ಮತಿಯನ್ನು ಪಡೆದು ಆ ಹಾಲಾಹಲವಿಷವನ್ನು ಕುಡಿಯಲು ಸಿದ್ಧನಾದನು. ಶಿವನ ಪ್ರಭಾವವನ್ನು ಚೆನ್ನಾಗಿ ಅರಿತಿದ್ದ ಪಾರ್ವತಿಯು ಹೃತ್ಪೂರ್ವಕವಾಗಿ ಅದಕ್ಕೆ ಸಮ್ಮತಿಸಿದಳು. ॥ ೪೧ ॥

ತತಃ ಕರತಲೀಕೃತ್ಯ ವ್ಯಾಪಿ ಹಾಲಾಹಲಂ ವಿಷಮ್ ।
ಅಭಕ್ಷಯನ್ಮಹಾದೇವಃ ಕೃಪಯಾ ಭೂತಭಾವನಃ ॥ ೪೨ ॥

ತಸ್ಯಾಪಿ ದರ್ಶಯಾಮಾಸ ಸ್ವವೀರ್ಯಂ ಜಲಕಲ್ಮಷಃ ।
ಯಚ್ಚಕಾರ ಗಲೇ ನೀಲಂ ತಚ್ಚ ಸಾಧೋರ್ವಿಭೂಷಣಮ್ ॥ ೪೩ ॥

ತಪ್ಯಂತೇ ಲೋಕತಾಪೇನ ಸಾಧವಃ ಪ್ರಾಯಶೋ ಜನಾಃ ।
ಪರಮಾರಾಧನಂ ತದ್ಧಿ ಪುರುಷಸ್ಯಾಖಿಲಾತ್ಮನಃ ॥ ೪೪ ॥

ನಿಶಮ್ಯ ಕರ್ಮ ತಚ್ಛಂಭೋರ್ದೇವದೇವಸ್ಯ ಮೀಢುಷಃ ।
ಪ್ರಜಾ ದಾಕ್ಷಾಯಣೀ ಬ್ರಹ್ಮಾ ವೈಕುಂಠಶ್ಚ ಶಶಂಸಿರೇ ॥ ೪೫ ॥

ಪ್ರಸ್ಕನ್ನಂ ಪಿಬತಃ ಪಾಣೇರ್ಯತ್ಕಿಂಚಿಜ್ಜಗೃಹುಃ ಸ್ಮ ತತ್ ।
ವೃಶ್ಚಿಕಾಹಿವಿಷೌಷಧ್ಯೋ ದಂದಶೂಕಾಶ್ಚ ಯೇಽಪರೇ ॥ ೪೬ ॥

ಪ್ರಾಣಿಗಳ ಹಿತೈಷಿಯಾದ ಭಗವಾನ್ ಶಂಕರನ ಶಕ್ತಿಯಿಂದಲೇ ಸಮಸ್ತ ಪ್ರಾಣಿಗಳು ಜೀವಿಸಿರುತ್ತಾರೆ. ಅವನು ತೀಕ್ಷ್ಣವಾದ ಹಾಲಾಹಲವಿಷವನ್ನು ತನ್ನ ಅಂಗೈಯಲ್ಲಿ ಎತ್ತಿಕೊಂಡು ಕುಡಿದು ಬಿಟ್ಟನು. ॥ ೪೨ ॥ ಜಲಕ್ಕೆ ಕಲ್ಮಷಪ್ರಾಯವಾಗಿದ್ದ ಆ ವಿಷವು ಪರಶಿವನ ಕೊರಳಲ್ಲಿ ಕಪ್ಪನ್ನುಂಟುಮಾಡಿ ತನ್ನ ಶಕ್ತಿಯನ್ನು ಪ್ರದರ್ಶಿಸಿತು. ಆದರೆ ನೀಲಚ್ಛಾಯೆಯೂ ಜಗದ್ರಕ್ಷಕನಾದ ಪರಮೇಶ್ವರನಿಗೆ ಅಲಂಕಾರವೇ ಆಯಿತು. ॥ ೪೩ ॥ ಪರೋಪಕಾರೀ ಸಜ್ಜನರು ಪ್ರಾಯಶಃ ಪ್ರಜೆಗಳ ದುಃಖವನ್ನು ನಿವಾರಿಸಲಿಕ್ಕಾಗಿ ಸ್ವತಃ ದುಃಖವನ್ನು ಸ್ವೀಕರಿಸುತ್ತಾರೆ. ಆದರೆ ಅಂತಹ ಸೇವಾಕಾರ್ಯವು ಸರ್ವಾತ್ಮನಾದ ಪರಮಪುರುಷನ ಆರಾಧನೆಯೇ ಆಗುತ್ತದೆ. ॥ ೪೪ ॥

ದೇವಾಧಿದೇವನಾದ ಭಗವಾನ್ ಶಂಕರನು ಎಲ್ಲರ ಕಾಮನೆಗಳನ್ನು ಪೂರ್ಣಮಾಡುವವನಾಗಿದ್ದಾನೆ. ಅವನ ಈ ಕಲ್ಯಾಣಕಾರೀ ಅದ್ಭುತ ಕರ್ಮವನ್ನು ಕೇಳಿ ಸಮಸ್ತ ಪ್ರಜೆ, ದಾಕ್ಷಾಯಿಣೀ, ಬ್ರಹ್ಮದೇವರು ಹಾಗೂ ಸ್ವಯಂ ಭಗವಾನವ ವಿಷ್ಣುವೂ ಕೂಡ ಅವನನ್ನು ಪ್ರಶಂಸಿಸಿದರು. ॥ ೪೫ ॥ ಭಗವಾನ್ ಶಂಕರನು ವಿಷಪಾನ ಮಾಡುವಾಗ ಅವನ ಕೈಯಿಂದ ಸ್ವಲ್ಪ ವಿಷವು ಕೆಳಗೆ ಚೆಲ್ಲಿತ್ತು. ಅದನ್ನು ಚೇಳುಗಳೂ, ಹಾವುಗಳೂ ಹಾಗೂ ಇತರ ವಿಷಜಂತುಗಳೂ, ಕೆಲವು ವಿಷೌಷಧಿಗಳೂ ಅದನ್ನು ಸ್ವೀಕರಿಸಿದವು. ॥ ೪೬ ॥

ಏಳನೆಯ ಅಧ್ಯಾಯವು ಮುಗಿಯಿತು. ॥ ೭ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಅಷ್ಟಮ ಸ್ಕಂಧೇ
ಅಮೃತಮಥನೇ ಸಪ್ತಮೋಽಧ್ಯಾಯಃ ॥ ೭ ॥

ಎಂಟನೆಯ ಅಧ್ಯಾಯ

ಕ್ಷೀರಸಮುದ್ರದಲ್ಲಿ ಅಮೃತವು ಪ್ರಕಟವಾದುದು – ಭಗವಂತನ ಮೋಹಿನೀ ಅವತಾರವು

ಶ್ರೀಶುಕ ಉವಾಚ

ಪೀತೇ ಗರೇ ವೃಷಾಂಕೇಣ ಪ್ರೀತಾಸ್ತೇಽಮರದಾನವಾಃ ।
ಮಮಂಥುಸ್ತರಸಾ ಸಿಂಧುಂ ಹವಿರ್ಧಾನೀ ತತೋಽಭವತ್ ॥ ೧ ॥

ತಾಮಗ್ನಿಹೋತ್ರೀಮೃಷಯೋ ಜಗೃಹುರ್ಬ್ರಹ್ಮವಾದಿನಃ ।
ಯಜ್ಞಸ್ಯ ದೇವಯಾನಸ್ಯ ಮೇಧ್ಯಾಯ ಹವಿಷೇ ನೃಪ ॥ ೨ ॥

ತತ ಉಚ್ಚೈಃಶ್ರವಾ ನಾಮ ಹಯೋಽಭೂಚ್ಚಂದ್ರಪಾಂಡುರಃ ।
ತಸ್ಮಿನ್ಬಲಿಃ ಸ್ಪೃಹಾಂ ಚಕ್ರೇ ನೇಂದ್ರ ಈಶ್ವರಶಿಕ್ಷಯಾ ॥ ೩ ॥

ತತ ಐರಾವತೋ ನಾಮ ವಾರಣೇಂದ್ರೋ ವಿನಿರ್ಗತಃ ।
ದಂತೈಶ್ಚತುರ್ಭಿಃ ಶ್ವೇತಾದ್ರೇರ್ಹರನ್ಭಗವತೋ ಮಹಿಮ್ ॥ ೪ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ವೃಷಾಂಕನಾದ ಪರಶಿವನು ಹಾಲಾಹಲವಿಷವನ್ನು ಕುಡಿಯಲಾಗಿ ದೇವ-ದಾನವರು ಸಂತೋಷಗೊಂಡರು. ಮತ್ತೆ ಅವರು ಹೊಸದಾದ ಉತ್ಸಾಹದಿಂದ ಸಮುದ್ರವನ್ನು ಕಡೆಯಲು ತೊಡಗಿದರು. ಆಗ ಕ್ಷೀರಸಾಗರದಿಂದ ಕಾಮಧೇನುವು ಪ್ರಕಟವಾದಳು. ॥ ೧ ॥ ಅವಳು ಅಗ್ನಿಹೋತ್ರದ ಸಾಮಗ್ರಿಗಳನ್ನು ಉತ್ಪನ್ನಮಾಡುವವಳಾಗಿದ್ದಳು. ಅದಕ್ಕಾಗಿ ಬ್ರಹ್ಮಲೋಕದವರೆಗೆ ತಲುಪಿಸುವ ಯಜ್ಞಗಳಿಗಾಗಿ ಉಪಯೋಗಿಸುವ ಪವಿತ್ರ ಹಾಲು, ತುಪ್ಪ ಮುಂತಾದವುಗಳನ್ನು ಪಡೆಯಲಿಕ್ಕಾಗಿ ಬ್ರಹ್ಮವಾದಿಗಳಾದ ಋಷಿಗಳು ಆಕೆಯನ್ನು ಸ್ವೀಕರಿಸಿದರು. ॥ ೨ ॥ ಬಳಿಕ ಚಂದ್ರನಂತೆ ಬಿಳುಪಾದ ಉಚ್ಚೈಃಶ್ರವಸ್ಸೆಂಬ ಕುದುರೆಯು ಹೊರಟಿತು. ಅದನ್ನು ಪಡೆಯಲು ಬಲಿಯು ಇಚ್ಛಿಸಿದನು. ಇಂದ್ರನು ಅದನ್ನು ಬಯಸಲಿಲ್ಲ. ಏಕೆಂದರೆ, ಭಗವಂತನು ಮೊದಲೇ ಅವನಿಗೆ ಆದೇಶಿಸಿದ್ದನು. ॥ ೩ ॥ ಬಳಿಕ ನಾಲ್ಕು ದಂತಗಳುಳ್ಳ ಶ್ರೇಷ್ಠವಾದ ಐರಾವತವೆಂಬ ಆನೆಯು ಹುಟ್ಟಿತು. ಅದರ ಉಜ್ಜ್ವಲಶೋಭೆಯು ರುದ್ರನ ಉಜ್ಜ್ವಲವಾದ ಕಾಂತಿಯಿಂದ ಕೂಡಿದ್ದ ಕೈಲಾಸವನ್ನೂ ಮೀರಿಸುವಂತಿತ್ತು. ॥ ೪ ॥

ಕೌಸ್ತುಭಾಖ್ಯಮಭೂದ್ರತ್ನಂ ಪದ್ಮರಾಗೋ ಮಹೋದಧೇಃ ।
ತಸ್ಮಿನ್ಹರಿಃ ಸ್ಪೃಹಾಂ ಚಕ್ರೇ ವಕ್ಷೋಽಲಂಕರಣೇ ಮಣೌ ॥ ೫ ॥

ತತೋಽಭವತ್ಪಾರಿಜಾತಃ ಸುರಲೋಕವಿಭೂಷಣಮ್ ।
ಪೂರಯತ್ಯರ್ಥಿನೋ ಯೋಽರ್ಥೈಃ ಶಶ್ವದ್ಭುವಿ ಯಥಾ ಭವಾನ್ ॥ ೬ ॥

ತತಶ್ಚಾಪ್ಸರಸೋ ಜಾತಾ ನಿಷ್ಕಕಂಠ್ಯಃ ಸುವಾಸಸಃ ।
ರಮಣ್ಯಃ ಸ್ವರ್ಗಿಣಾಂ ವಲ್ಗುಗತಿಲೀಲಾವಲೋಕನೈಃ ॥ ೭ ॥

ತತಶ್ಚಾವಿರಭೂತ್ಸಾಕ್ಷಾಚ್ಛ್ರೀ ರಮಾ ಭಗವತ್ಪರಾ ।
ರಂಜಯಂತೀ ದಿಶಃ ಕಾಂತ್ಯಾ ವಿದ್ಯುತ್ಸೌದಾಮನೀ ಯಥಾ ॥ ೮ ॥

ತಸ್ಯಾಂ ಚಕ್ರುಃ ಸ್ಪೃಹಾಂ ಸರ್ವೇ ಸಸುರಾಸುರಮಾನವಾಃ ।
ರೂಪೌದಾರ್ಯವಯೋವರ್ಣಮಹಿಮಾಕ್ಷಿಪ್ತಚೇತಸಃ ॥ ೯ ॥

ತಸ್ಯಾ ಆಸನಮಾನಿನ್ಯೇ ಮಹೇಂದ್ರೋ ಮಹದದ್ಭುತಮ್ ।
ಮೂರ್ತಿಮತ್ಯಃ ಸರಿಚ್ಛ್ರೇಷ್ಠಾ ಹೇಮಕುಂಭೈರ್ಜಲಂ ಶುಚಿ ॥ ೧೦ ॥

ಆಭಿಷೇಚನಿಕಾ ಭೂಮಿರಾಹರತ್ಸಕಲೌಷಧೀಃ ।
ಗಾವಃ ಪಂಚ ಪವಿತ್ರಾಣಿ ವಸಂತೋ ಮಧುಮಾಧವೌ ॥ ೧೧ ॥

ಋಷಯಃ ಕಲ್ಪಯಾಂಚಕ್ರುರಭಿಷೇಕಂ ಯಥಾವಿಧಿ ।
ಜಗುರ್ಭದ್ರಾಣಿ ಗಂಧರ್ವಾ ನಟ್ಯಶ್ಚ ನನೃತುರ್ಜಗುಃ ॥ ೧೨ ॥

ಮೇಘಾ ಮೃದಂಗಪಣವಮುರಜಾನಕಗೋಮುಖಾನ್ ।
ವ್ಯನಾದಯನ್ ಶಂಖವೇಣುವೀಣಾಸ್ತುಮುಲನಿಃಸ್ವನಾನ್ ॥ ೧೩ ॥

ತತೋಽಭಿಷಿಷಿಚುರ್ದೇವೀಂ ಶ್ರಿಯಂ ಪದ್ಮಕರಾಂ ಸತೀಮ್ ।
ದಿಗಿಭಾಃ ಪೂರ್ಣಕಲಶೈಃ ಸೂಕ್ತವಾಕ್ಯೈರ್ದ್ವಿಜೇರಿತೈಃ ॥ ೧೪ ॥

ಸಮುದ್ರಃ ಪೀತಕೌಶೇಯವಾಸಸೀ ಸಮುಪಾಹರತ್ ।
ವರುಣಃ ಸ್ರಜಂ ವೈಜಯಂತೀಂ ಮಧುನಾ ಮತ್ತಷಟ್ಪದಾಮ್ ॥ ೧೫ ॥

ಭೂಷಣಾನಿ ವಿಚಿತ್ರಾಣಿ ವಿಶ್ವಕರ್ಮಾ ಪ್ರಜಾಪತಿಃ ।
ಹಾರಂ ಸರಸ್ವತೀ ಪದ್ಮಮಜೋ ನಾಗಾಶ್ಚ ಕುಂಡಲೇ ॥ ೧೬ ॥

ಬಳಿಕ ಕ್ಷೀರಸಮುದ್ರದಿಂದ ಕೌಸ್ತುಭವೆಂಬ ಪದ್ಮರಾಗ ಮಣಿಯು ಹೊರಟಿತು. ಆ ಮಣಿಯನ್ನು ತನ್ನ ವಕ್ಷಸ್ಥಳದಲ್ಲಿ ಅಲಂಕರಿಸಿಕೊಳ್ಳಲು ಅಜಿತನಾದ ಭಗವಾನ್ ಮಹಾವಿಷ್ಣುವು ಸ್ವೀಕರಿಸಿದನು. ॥ ■ ॥ ಬಳಿಕ ಸ್ವರ್ಗಲೋಕದ ಶೋಭೆಯನ್ನು ಹೆಚ್ಚಿಸುವ ಪಾರಿಜಾತ ಹುಟ್ಟಿತು. ಪರೀಕ್ಷಿತನೇ! ಭೂಮಂಡಲದಲ್ಲಿ ನೀನು ಸಕಲರ ಇಚ್ಛೆಗಳನ್ನು ಈಡೇರಿಸುವಂತೆಯೇ ಆ ಕಲ್ಪವೃಕ್ಷವು ಬೇಡಿದವರ ಇಷ್ಟಾರ್ಥಗಳೆಲ್ಲವನ್ನೂ ಪೂರ್ಣಗೊಳಿಸುತ್ತದೆ. ॥ ೬ ॥ ಅನಂತರ ಸುವರ್ಣದ ಹಾರಗಳಿಂದ ಸಮಲಂಕೃತರಾದ, ದಿವ್ಯವಸ್ತ್ರಗಳನ್ನುಟ್ಟಿದ್ದ, ನಡೆ-ಬೆಡಗು ನೋಟಗಳಿಂದ ದೇವತೆಗಳನ್ನು ಸಂತೋಷ ಪಡಿಸುವ ಕಮನೀಯರಾದ ಅಪ್ಸರೆಯರು ಹುಟ್ಟಿದರು. ॥ ೭ ॥ ಅನಂತರ ಭಗವಂತನ ನಿತ್ಯಶಕ್ತಿಯಾದ ಸೌಂದರ್ಯವೇ ಮೂರ್ತಿಭವಿಸಿದಂತೆ ಭಗವತಿ ಶ್ರೀಲಕ್ಷ್ಮೀದೇವಿಯು ಪ್ರಕಟಳಾದಳು. ಅವಳ ಮಿಂಚಿನಂತಹ ದಿವ್ಯವಾದ ಕಾಂತಿಯಿಂದ ದಶದಿಕ್ಕುಗಳು ಬೆಳಗುತ್ತಿದ್ದುವು. ॥ ೮ ॥ ಆ ಶ್ರೀದೇವಿಯ ರೂಪ, ಔದಾರ್ಯ, ಯೌವನ, ನಯನಮನೋಹರವಾದ ಶರೀರಕಾಂತಿ ಹಾಗೂ ಮಹಿಮೆಗಳಿಗೆ ಎಲ್ಲರ ಚಿತ್ತವೂ ಆಕರ್ಷಿಸಿತು. ದೇವತೆಗಳು, ಅಸುರರು, ಮನುಷ್ಯರು ಹೀಗೆ ಎಲ್ಲರೂ ಇವಳು ನಮಗೆ ದೊರೆಯಲಿ ಎಂದು ಬಯಸಿದರು. ॥ ೯ ॥ ಸ್ವತಃ ದೇವೇಂದ್ರನೇ ತನ್ನ ಕೈಗಳಿಂದ ಆವಳಿಗೆ ಕುಳಿತುಕೊಳ್ಳಲು ಅದ್ಭುತವಾದ ದಿವ್ಯ ಆಸನವನ್ನು ತಂದಿರಿಸಿದನು. ಶ್ರೇಷ್ಠನದಿಗಳೆಲ್ಲವೂ ಮೂರ್ತಿವತ್ತಾಗಿ ಬಂದು ಅವಳ ಅಭಿಷೇಕಕ್ಕಾಗಿ ಚಿನ್ನದ ಬಿಂದಿಗೆಗಳಲ್ಲಿ ಪರಿಶುದ್ಧವಾದ ನೀರನ್ನು ತಂದರು. ॥ ೧೦ ॥ ಭೂದೇವಿಯು ಅಭಿಷೇಕಕ್ಕಾಗಿ ಬೇಕಾದ ಗಿಡಮೂಲಿಕೆಗಳನ್ನು ಸಿದ್ಧಪಡಿಸಿದಳು. ಗೋವುಗಳು ಪವಿತ್ರವಾದ ಪಂಚಗವ್ಯವನ್ನೂ, ವಸಂತನು ಚೈತ್ರ-ವೈಶಾಖದಲ್ಲಿ ದೊರೆಯುವ ಬಗೆ-ಬಗೆಯ ಫಲ-ಪುಷ್ಪಗಳನ್ನು ಕಾಣಿಕೆಯಾಗಿ ಅರ್ಪಿಸಿದನು. ॥ ೧೧ ॥ ಇವೆಲ್ಲ ಸಾಮಗ್ರಿಗಳಿಂದ ಋಷಿಗಳು ಲಕ್ಷ್ಮೀದೇವಿಗೆ ಶಾಸ್ತ್ರೋಕ್ತವಾಗಿ ಶುದ್ಧ ಜಲದಿಂದ ಅಭಿಷೇಕ ಮಾಡಿದರು. ಗಂಧರ್ವರು ಮಂಗಳಗೀತೆಗಳನ್ನು ಹಾಡಿದರು. ನರ್ತಕಿಯರು ಹಾಡುತ್ತಾ, ನರ್ತಿಸುತ್ತಾ ಸೇವೆ ಸಲ್ಲಿಸಿದರು. ॥ ೧೨ ॥ ಮೇಘಗಳು ಮೂರ್ತಿವತ್ತಾಗಿ ಬಂದು ಮೃದಂಗ, ಪಣವ, ಆನಕ, ಗೋಮುಖ, ಶಂಖ, ಕೊಳಲು, ವೀಣೆ ಮುಂತಾದ ವಾದ್ಯಗಳನ್ನು ಇಂಪಾಗಿ ನುಡಿಸಿತು. ॥ ೧೩ ॥ ಆಗ ಭಗವತೀ ಲಕ್ಷ್ಮೀ ದೇವಿಯು ಕೈಯಲ್ಲಿ ಕಮಲವನ್ನು ಹಿಡಿದುಕೊಂಡ ದಿವ್ಯ ಸಿಂಹಾಸನದಲ್ಲಿ ವಿರಾಜಮಾನಳಾದಳು. ಬ್ರಾಹ್ಮಣೋತ್ತಮರು ವೇದ ಮಂತ್ರಗಳನ್ನು ಪಠಿಸುತ್ತಿರುವಂತೆ, ದಿಗ್ಗಜಗಳು ಪೂರ್ಣ ಕುಂಭ ಗಳಿಂದ ಅವಳಿಗೆ ಅಭಿಷೇಕಮಾಡಿದುವು. ॥ ೧೪ ॥ ಸಮುದ್ರ ರಾಜನು ಅವಳಿಗೆ ಎರಡು ರೇಷ್ಮೆಯ ಪೀತಾಂಬರಗಳನ್ನು ಉಡಲು ಕೊಟ್ಟನು. ವರುಣನು ಮಧುಪಾನದಿಂದ ಮತ್ತವಾದ ದುಂಬಿಗಳಿಂದ ಕೂಡಿದ್ದ ವೈಜಯಂತೀ ಮಾಲೆಯನ್ನು ಸಮರ್ಪಿಸಿದನು. ॥ ೧೫ ॥ ವಿಶ್ವಕರ್ಮ ಪ್ರಜಾಪತಿಯು ನಾನಾವಿಧವಾದ ವಿಚಿತ್ರವಾದ ಆಭರಣಗಳನ್ನೂ, ಸರಸ್ವತೀ ದೇವಿಯು ಮುತ್ತಿನ ಹಾರವನ್ನೂ, ಬ್ರಹ್ಮನು ದಿವ್ಯವಾದ ಕಮಲವನ್ನೂ, ನಾಗಶ್ರೇಷ್ಠರು ನಯನ ಮನೋಹರವಾದ ಕುಂಡಲಗಳನ್ನೂ ಲಕ್ಷ್ಮೀದೇವಿಗೆ ಅರ್ಪಿಸಿದರು. ॥೧೬॥

ತತಃ ಕೃತಸ್ವಸ್ತ್ಯಯನೋತ್ಪಲಸ್ರಜಂ
ನದದ್ದ್ವಿರೇಫಾಂ ಪರಿಗೃಹ್ಯ ಪಾಣಿನಾ ।
ಚಚಾಲ ವಕ್ತ್ರಂ ಸುಕಪೋಲಕುಂಡಲಂ
ಸವ್ರೀಡಹಾಸಂ ದಧತೀ ಸುಶೋಭನಮ್ ॥ ೧೭ ॥

ಇದಾದ ನಂತರ ವಿಪ್ರೋತ್ತಮರು ಸ್ವಸ್ತಿಮಂತ್ರಗಳನ್ನು ಪಠಿಸಿದ ಬಳಿಕ ಶ್ರೀರಮಾದೇವಿಯು ಝೇಂಕರಿಸುತ್ತಿದ್ದ ದುಂಬಿಗಳಿಂದ ವ್ಯಾಪ್ತವಾಗಿದ್ದ ಕನ್ನೈದಿಲೆಯ ಮಾಲೆಯನ್ನು ಕೈಯಲ್ಲಿ ಹಿಡಿದುಕೊಂಡಳು. ಕುಂಡಲಗಳ ಕಾಂತಿಯಿಂದ ಶ್ರೀಲಕ್ಷ್ಮೀದೇವಿಯ ಮುಖದ ಸೌಂದರ್ಯ ಅವರ್ಣನೀಯವಾಗಿತ್ತು. ಅವಳು ನಾಚಿಕೆಯಿಂದೊಡಗೂಡಿ ಕಿರುನಗೆಯಿಂದ ಕೂಡಿ ಮೆಲ್ಲನೆ ಹೊರಟಳು. ॥ ೧೭ ॥

ಸ್ತನದ್ವಯಂ ಚಾತಿಕೃಶೋದರೀ ಸಮಂ
ನಿರಂತರಂ ಚಂದನಕುಂಕುಮೋಕ್ಷಿತಮ್ ।
ತತಸ್ತತೋ ನೂಪುರವಲ್ಗುಶಿಂಜಿತೈ-
ರ್ವಿಸರ್ಪತೀ ಹೇಮಲತೇವ ಸಾ ಬಭೌ ॥ ೧೮ ॥

ಲಕ್ಷ್ಮೀದೇವಿಯ ಸೊಂಟವು ಬಹಳ ಸೂಕ್ಷ್ಮವಾಗಿತ್ತು. ಸುಂದರವಾದ ಆಕೆಯ ಸ್ತನಗಳು ಒಂದಕ್ಕೊಂದು ಸೇರಿಕೊಂಡು ತುಂಬಿಕೊಂಡಿದ್ದು ಕುಂಕುಮಕೇಸರಿಯ ಗಂಧದಿಂದ ಲೇಪಿಸಲ್ಪಟ್ಟಿದ್ದವು. ಕಾಲ್ಗೆಜ್ಜೆಗಳ ಝುಣ-ಝುಣ ಶಬ್ದದೊಡನೆ ಅತ್ತಿಂದಿತ್ತ ಸುಳಿದಾಡುತ್ತಿದ್ದ ರಮಾದೇವಿಯು ಚಿನ್ನದ ಬಳ್ಳಿಯಂತೆಯೇ ಕಾಣುತ್ತಿದ್ದಳು. ॥ ೧೮ ॥

ವಿಲೋಕಯಂತೀ ನಿರವದ್ಯಮಾತ್ಮನಃ
ಪದಂ ಧ್ರುವಂ ಚಾವ್ಯಭಿಚಾರಿಸದ್ಗುಣಮ್ ।
ಗಂಧರ್ವಯಕ್ಷಾಸುರಸಿದ್ಧಚಾರಣ-
ತ್ರೈಪಿಷ್ಟಪೇಯಾದಿಷು ನಾನ್ವವಿಂದತ ॥ ೧೯ ॥

ದೋಷರಹಿತನಾದ, ಸಮಸ್ತ ಉತ್ತಮವಾದ ಗುಣಗಳಿಂದ ಸಂಪನ್ನನಾದ, ಅವಿನಾಶಿಯಾದ ಪುರುಷನ ಆಶ್ರಯವನ್ನು ಬಯಸಿ ಆಕೆಯು ಹೊರಟಿದ್ದಳು. ಆದರೆ ಗಂಧರ್ವ, ಯಕ್ಷ, ರಾಕ್ಷಸ, ಸಿದ್ಧ, ಚಾರಣ, ದೇವತೆಗಳೇ ಮೊದಲಾದವರಲ್ಲಿ ಅಂತಹ ಪುರುಷನು ಅವಳಿಗೆ ಸಿಗಲೇ ಇಲ್ಲ. ॥ ೧೯ ॥

ನೂನಂ ತಪೋ ಯಸ್ಯ ನ ಮನ್ಯುನಿರ್ಜಯೋ
ಜ್ಞಾನಂ ಕ್ವಚಿತ್ತಚ್ಚ ನ ಸಂಗವರ್ಜಿತಮ್ ।
ಕಶ್ಚಿನ್ಮಹಾಂಸ್ತಸ್ಯ ನ ಕಾಮನಿರ್ಜಯಃ
ಸ ಈಶ್ವರಃ ಕಿಂ ಪರತೋವ್ಯಪಾಶ್ರಯಃ ॥ ೨೦ ॥

ಆಗ ಅವಳು ತನ್ನಲ್ಲೇ ಹೀಗೆ ಯೋಚಿಸಿದಳು – ಕೆಲವರು ತಪಸ್ವಿಗಳೇನೋ ಹೌದು, ಆದರೆ ಕ್ರೋಧವನ್ನು ಗೆದ್ದುಕೊಂಡಿಲ್ಲ. (ದುರ್ವಾಸರು ತಪಸ್ವಿಗಳು, ಆದರೆ ಕೋಪವನ್ನು ಜಯಿಸಿದವರಲ್ಲ.) ಕೆಲವರಲ್ಲಿ ಜ್ಞಾನವೇನೋ ಇದೆ. ಆದರೆ ಅವರು ಪೂರ್ಣ ಅನಾಸಕ್ತರಲ್ಲ. (ಗುರು-ಶುಕ್ರರಲ್ಲಿ ಜ್ಞಾನ, ತಪಸ್ಸೂ ಇದೆ. ಆದರೆ ಪ್ರಾಣಿಗಳಿಗೆ ಒಳ್ಳೆಯ ಕೆಟ್ಟ ಫಲಗಳನ್ನು ಕೊಡುವುದರಲ್ಲೇ ಆಸಕ್ತರಾದ್ದರಿಂದ ಸಂಗವರ್ಜಿತರಲ್ಲ.) ಕೆಲವರು ಮಹಾತ್ಮರಿರುತ್ತಾರೆ. ಆದರೆ ಕಾಮವನ್ನು ಗೆಲ್ಲಲಿಲ್ಲ. (ಚಂದ್ರನು ಮಹಾತ್ಮನೇ ಸರಿ. ಆದರೆ ದೇವಗುರುವಿನ ಪತ್ನಿಯಲ್ಲಿ ಆಸಕ್ತನಾದನು.) ಕೆಲವರಲ್ಲಿ ಐಶ್ವರ್ಯವೂ ಬಹಳವಿದೆ, ಆದರೆ ಅವರು ಬೇರೆಯವರ ಆಶ್ರಯ ಪಡೆಯಬೇಕಾಗುತ್ತದೆ. (ಇತರರ ಆಶ್ರಯದಿಂದಲೇ ತ್ರೈಲೋಕ್ಯಾಧಿಪತ್ಯವನ್ನು ಗಳಿಸಿದ ಇಂದ್ರನನ್ನು ಪ್ರಭು ಎಂದು ಎನ್ನಲಾದೀತೇ?) ॥ ೨೦ ॥

ಧರ್ಮಃ ಕ್ವಚಿತ್ತತ್ರ ನ ಭೂತಸೌಹೃದಂ
ತ್ಯಾಗಃ ಕ್ವಚಿತ್ತತ್ರ ನ ಮುಕ್ತಿಕಾರಣಮ್ ।
ವೀರ್ಯಂ ನ ಪುಂಸೋಽಸ್ತ್ಯಜವೇಗನಿಷ್ಕೃತಂ
ನ ಹಿ ದ್ವಿತೀಯೋ ಗುಣಸಂಗವರ್ಜಿತಃ ॥ ೨೧ ॥

ಕೆಲವರಲ್ಲಿ ಧರ್ಮವಿದೆ. ಆದರೆ ಭೂತದಯೆಯಿಲ್ಲ. (ಧರ್ಮಾತ್ಮರಿಗೆ ಮುಖ್ಯವಾಗಿ ಭೂತದಯೆ ಇರಬೇಕು. ಯಮಧರ್ಮನು ಧರ್ಮಾತ್ಮನೇ ಸರಿ. ಆದರೆ ಅವನಲ್ಲಿ ಭೂತದಯೆ ಇಲ್ಲ, ನಿಷ್ಕರುಣೆಯಿಂದ ಪ್ರಾಣಿಗಳನ್ನು ಸಂಹರಿಸುವನು.) ಕೆಲವರಲ್ಲಿ ತ್ಯಾಗವಿದೆ, ಆದರೆ ಆ ತ್ಯಾಗ ಮುಕ್ತಿಗೆ ಕಾರಣವಾಗುವುದಿಲ್ಲ. (ಮೋಕ್ಷಾಪೇಕ್ಷೆಯಿಂದಲೇ ತ್ಯಾಗ ಮಾಡಬೇಕು. ಶಿಬಿ ಮೊದಲಾದವರಲ್ಲಿ ತ್ಯಾಗವಿದೆ, ಆದರೆ ಅದು ನಿಷ್ಕಾಮಬುದ್ಧಿಯಿಂದ ಮಾಡಿದ ತ್ಯಾಗವಲ್ಲ.) ಕೆಲ-ಕೆಲವರಲ್ಲಿ ವೀರ್ಯ-ಪರಾಕ್ರಮಗಳಿವೆ. ಆದರೆ ಅವರು ಕಾಲನ ಹಿಡಿತದಿಂದ ಹೊರಗಾದವರಲ್ಲ. (ಕಾರ್ತವೀರ್ಯನೇ ಮೊದಲಾದವರಲ್ಲಿ ಶೌರ್ಯ-ಪರಾಕ್ರಮಗಳಿದ್ದರೂ ಕಾಲಚಕ್ರವನ್ನು ಗೆಲ್ಲಲಾಗಲಿಲ್ಲ.) ಕೆಲವು ಮಹಾತ್ಮರಲ್ಲಿ ವಿಷಯಾಸಕ್ತಿಯೂ ಖಂಡಿತವಾಗಿ ಇಲ್ಲ. ಆದರೆ ಅವರು ನಿರಂತರ ಅದ್ವೈತ-ಸಮಾಧಿಯಲ್ಲೇ ತಲ್ಲೀನರಾಗಿರುತ್ತಾರೆ. (ಪ್ರಕೃತಿಯ ಸಂಗವನ್ನೇ ತೊರೆದಿರುವ ಸನಕಾದಿಗಳು ವಿರಕ್ತರಾದ್ದರಿಂದ ನನಗೆ ತಕ್ಕವರಲ್ಲ.) ॥ ೨೧ ॥

ಕ್ವಚಿಚ್ಚಿರಾಯುರ್ನ ಹಿ ಶೀಲಮಂಗಲಂ
ಕ್ವಚಿತ್ತದಪ್ಯಸ್ತಿ ನ ವೇದ್ಯಮಾಯುಷಃ ।
ಯತ್ರೋಭಯಂ ಕುತ್ರ ಚ ಸೋಽಪ್ಯಮಂಗಲಃ
ಸುಮಂಗಲಃ ಕಶ್ಚ ನ ಕಾಂಕ್ಷತೇ ಹಿ ಮಾಮ್ ॥ ೨೨ ॥

ಯಾರೋ ಋಷಿಯು ಚಿರಾಯುವಾಗಿರುತ್ತಾನೆ, ಆದರೆ ಅವನಲ್ಲಿ ಶುಭಕರವಾದ ನಡತೆಯಿರುವುದಿಲ್ಲ. (ಮಾರ್ಕಂಡೇಯನೇ ಮೊದಲಾದವರು ಚಿರಂಜೀವಿಗಳೇ ಸರಿ. ಆದರೆ ಅವರು ನಿರಂತರ ಇಂದ್ರಿಯಗಳನ್ನು ನಿಗ್ರಹಿಸಿಯೇ ಇರುವುದರಿಂದ ಗೃಹಸ್ಥಾಶ್ರಮೋಚಿತವಾದ ಒಳ್ಳೆಯ ನಡವಳಿಕೆ ಅವರಲ್ಲಿರುವುದಿಲ್ಲ.) ಕೆಲವರಲ್ಲಿ ಶುಭಕರವಾದ ನಡವಳಿಕೆಯಿರುತ್ತದೆ, ಆದರೆ ಅವರು ಚಿರಾಯುಗಳಾಗಿರುವುದಿಲ್ಲ. (ಹಿರಣ್ಯಕಶಿಪು ಮುಂತಾದವರಲ್ಲಿ ಒಳ್ಳೆಯ ನಡತೆಯಿದ್ದರೂ ಆಯುಸ್ಸಿನ ಭರವಸೆ ಇಲ್ಲ.) ಕೆಲವರಲ್ಲಿ ದೀರ್ಘಾಯುಷ್ಯ ಮತ್ತು ಶೀಲ ಎರಡೂ ಇರುತ್ತವೆ. ಆದರೆ ಅವರು ಅಮಂಗಳ ವೇಷದಲ್ಲೇ ಇರುತ್ತಾರೆ. ಇನ್ನು ಉಳಿದವನೆಂದರೆ ಸಕಲ ಕಲ್ಯಾಣಗುಣಗಳಿಂದ ಕೂಡಿದ, ನಿರ್ದೋಷನಾದವನು ಭಗವಾನ್ ಮಹಾವಿಷ್ಣು ಒಬ್ಬನೇ. ಆದರೆ ಅವನು ನನ್ನನ್ನು ಬಯಸುವುದಿಲ್ಲ, ಅವನು ಆತ್ಮಾರಾಮನಾಗಿರುವುದೇ ಇದಕ್ಕೆ ಕಾರಣ. ॥ ೨೨ ॥

ಏವಂ ವಿಮೃಶ್ಯಾವ್ಯಭಿಚಾರಿಸದ್ಗುಣೈ-
ರ್ವರಂ ನಿಜೈಕಾಶ್ರಯತಾಽಗುಣಾಶ್ರಯಮ್ ।
ವವ್ರೇ ವರಂ ಸರ್ವಗುಣೈರಪೇಕ್ಷಿತಂ
ರಮಾ ಮುಕುಂದಂ ನಿರಪೇಕ್ಷಮೀಪ್ಸಿತಮ್ ॥ ೨೩ ॥

ಪರೀಕ್ಷಿತನೇ ! ಹೀಗೆ ಮಹಾಲಕ್ಷ್ಮಿಯು ಬಹಳವಾಗಿ ಯೋಚಿಸಿ ಕಡೆಗೆ ತನಗೆ ಇಷ್ಟವಾಗಿದ್ದ ಭಗವಾನ್ ಮುಕುಂದನನ್ನೇ ಪತಿಯನ್ನಾಗಿ ವರಿಸಿದಳು. ಏಕೆಂದರೆ, ಅವನಲ್ಲಿ ಸಮಸ್ತ ಸದ್ಗುಣಗಳು ಯಾವಾಗಲೂ ವಾಸಮಾಡುತ್ತಿದ್ದವು. ಪ್ರಾಕೃತಗುಣಗಳು ಅವನನ್ನು ಎಂದೂ ಸ್ಪರ್ಶಿಸಲಾರವು. ಅಣಿಮಾದಿ ಅಷ್ಟಸಿದ್ಧಿಗಳೂ ಅವನನ್ನೇ ಅಪೇಕ್ಷಿಸುತ್ತಿದ್ದವು. ಆದರೆ ಅವನು ಮಾತ್ರ ಯಾವುದನ್ನೂ ಅಪೇಕ್ಷಿಸುತ್ತಿರಲಿಲ್ಲ. ವಾಸ್ತವವಾಗಿ ಮಹಾಲಕ್ಷ್ಮಿಗೆ ಪರಮಾಶ್ರಯನು ಭಗವಂತನಾದ ಶ್ರೀಹರಿಯೇ ಆಗಿದ್ದನು. ಇದರಿಂದ ಅವಳು ಅವನನ್ನೇ ವರಿಸಿದಳು. ॥ ೨೩ ॥

ತಸ್ಯಾಂಸದೇಶ ಉಶತೀಂ ನವಕಂಜಮಾಲಾಂ
ಮಾದ್ಯನ್ಮಧುವ್ರತವರೂಥಗಿರೋಪಘುಷ್ಟಾಮ್ ।
ತಸ್ಥೌ ನಿಧಾಯ ನಿಕಟೇ ತದುರಃ ಸ್ವಧಾಮ
ಸವ್ರೀಡಹಾಸವಿಕಸನ್ನಯನೇನ ಯಾತಾ ॥ ೨೪ ॥

ಹೀಗೆ ರಮಾದೇವಿಯು ತನ್ನ ಕೈಯಲ್ಲಿ ಹಿಡಿದಿದ್ದ ಸುಂದರವಾದ, ಮದಿಸಿದ ದುಂಬಿಗಳ ಝೇಂಕಾರದಿಂದ ಕೂಡಿದ, ನವನೂತನವಾದ ಕಮಲದ ಹಾರವನ್ನು ಶ್ರೀಮುಕುಂದನ ಕೊರಳಲ್ಲಿ ಹಾಕಿದಳು. ನಾಚಿಕೆಯಿಂದ ಕೂಡಿದ ಕಿರುನಗೆಯ ನೋಟದಿಂದ ತನ್ನ ವಾಸಸ್ಥಳವಾದ ಶ್ರೀಹರಿಯ ವಕ್ಷಸ್ಥಳವನ್ನೇ ವೀಕ್ಷಿಸುತ್ತಾ ಅವನ ಬಳಿಗೆ ಹೋಗಿ ನಿಂತಳು. ॥ ೨೪ ॥

ತಸ್ಯಾಃ ಶ್ರಿಯಸ್ತ್ರಿಜಗತೋ ಜನಕೋ ಜನನ್ಯಾ
ವಕ್ಷೋನಿವಾಸಮಕರೋತ್ಪರಮಂ ವಿಭೂತೇಃ ।
ಶ್ರೀಃ ಸ್ವಾಃ ಪ್ರಜಾಃ ಸಕರುಣೇನ ನಿರೀಕ್ಷಣೇನ
ಯತ್ರ ಸ್ಥಿತೈಧಯತ ಸಾಧಿಪತೀಂಸ್ತ್ರಿಲೋಕಾನ್ ॥ ೨೫ ॥

ಜಗತ್ಪತಿಯಾದ ಭಗವಂತನು ಜಗಜ್ಜನನಿಯಾದ ಸಮಸ್ತ ಸಂಪತ್ತುಗಳ ಅಧಿಷ್ಠಾತೃದೇವತೆಯಾದ ಲಕ್ಷ್ಮೀದೇವಿಗೆ ತನ್ನ ವಕ್ಷಸ್ಥಳದಲ್ಲೇ ನಿರಂತರವಾಗಿ ವಾಸಮಾಡಿಕೊಂಡಿರಲು ಸ್ಥಾನವನ್ನು ಕಲ್ಪಿಸಿಕೊಟ್ಟನು. ರಮಾದೇವಿಯು ವಿಷ್ಣುವಿನ ವಕ್ಷಸ್ಥಳದಲ್ಲಿಯೇ ವಿರಾಜಮಾನಳಾಗಿರುತ್ತಾ ದಯಾಪೂರ್ಣವಾದ ನೋಟದಿಂದ ಮೂರು ಲೋಕಗಳನ್ನೂ, ಲೋಕಪತಿಗಳನ್ನೂ, ಅವರ ಪ್ರಜೆಗಳನ್ನೂ ಅಭಿವೃದ್ಧಿಪಡಿಸಿದಳು. ॥ ೨೫ ॥

ಶಂಖತೂರ್ಯಮೃದಂಗಾನಾಂ
ವಾದಿತ್ರಾಣಾಂ ಪೃಥುಃ ಸ್ವನಃ ।
ದೇವಾನುಗಾನಾಂ ಸಸ್ತ್ರೀಣಾಂ
ನೃತ್ಯತಾಂ ಗಾಯತಾಮಭೂತ್ ॥ ೨೬ ॥

ಲಕ್ಷ್ಮೀನಾರಾಯಣರ ಮಂಗಳಮಯ ಈ ಕಲ್ಯಾಣೋತ್ಸವದಲ್ಲಿ ಯಕ್ಷ-ಗಂಧರ್ವ-ಕಿನ್ನರರೇ ಮೊದಲಾದವರು ಶಂಖ, ಮೃದಂಗ, ಭೇರಿ ಮೊದಲಾದ ವಾದ್ಯಗಳನ್ನು ನುಡಿಸುತ್ತಾ ಅಪ್ಸರೆಯರೊಂದಿಗೆ ನರ್ತನಮಾಡಿದರು. ಇದರಿಂದಾದ ಭಾರೀ ಶಬ್ದವು ಎಲ್ಲೆಡೆ ವ್ಯಾಪಿಸಿತು. ॥ ೨೬ ॥

ಬ್ರಹ್ಮರುದ್ರಾಂಗಿರೋಮುಖ್ಯಾಃ ಸರ್ವೇ ವಿಶ್ವಸೃಜೋ ವಿಭುಮ್ ।
ಈಡಿರೇಽವಿತಥೈರ್ಮಂತ್ರೈಸ್ತಲ್ಲಿಂಗೈಃ ಪುಷ್ಪವರ್ಷಿಣಃ ॥ ೨೭ ॥

ಬ್ರಹ್ಮ-ರುದ್ರ-ಅಂಗಿರಸ ಮೊದಲಾದ ಸಮಸ್ತ ಪ್ರಜಾಪತಿಗಳು ಪುಷ್ಪವೃಷ್ಟಿಯನ್ನು ಮಾಡುತ್ತಾ ಭಗವಂತನ ಗುಣ, ಸ್ವರೂಪ, ಲೀಲೆಗಳೇ ಮುಂತಾದವುಗಳನ್ನು ಯಥಾರ್ಥವಾಗಿ ವರ್ಣಿಸುತ್ತಿರುವ ಮಂತ್ರಗಳಿಂದ ಅವನನ್ನು ಸ್ತುತಿಸತೊಡಗಿದರು. ॥ ೨೭ ॥

ಶ್ರಿಯಾ ವಿಲೋಕಿತಾ ದೇವಾಃ ಸಪ್ರಜಾಪತಯಃ ಪ್ರಜಾಃ ।
ಶೀಲಾದಿಗುಣಸಂಪನ್ನಾ ಲೇಭಿರೇ ನಿರ್ವೃತಿಂ ಪರಾಮ್
॥ ೨೮ ॥

ನಿಃಸತ್ತ್ವಾ ಲೋಲುಪಾ ರಾಜನ್ನಿರುದ್ಯೋಗಾ ಗತತ್ರಪಾಃ ।
ಯದಾ ಚೋಪೇಕ್ಷಿತಾ ಲಕ್ಷ್ಮ್ಯಾ ಬಭೂವುರ್ದೈತ್ಯದಾನವಾಃ
॥ ೨೯ ॥

ಅಥಾಸೀದ್ವಾರುಣೀ ದೇವೀ ಕನ್ಯಾ ಕಮಲಲೋಚನಾ ।
ಅಸುರಾ ಜಗೃಹುಸ್ತಾಂ ವೈ ಹರೇರನುಮತೇನ ತೇ
॥ ೩೦ ॥

ಅಥೋದಧೇರ್ಮಥ್ಯಮಾನಾತ್ಕಾಶ್ಯಪೈರಮೃತಾರ್ಥಿಭಿಃ ।
ಉದತಿಷ್ಠನ್ಮಹಾರಾಜ ಪುರುಷಃ ಪರಮಾದ್ಭುತಃ
॥ ೩೧ ॥

ದೀರ್ಘಪೀವರದೋರ್ದಂಡಃ ಕಂಬುಗ್ರೀವೋಽರುಣೇಕ್ಷಣಃ ।
ಶ್ಯಾಮಲಸ್ತರುಣಃ ಸ್ರಗ್ವೀ ಸರ್ವಾಭರಣಭೂಷಿತಃ
॥ ೩೨ ॥

ಪೀತವಾಸಾ ಮಹೋರಸ್ಕಃ ಸುಮೃಷ್ಟಮಣಿಕುಂಡಲಃ ।
ಸ್ನಿಗ್ಧಕುಂಚಿತಕೇಶಾಂತಃ ಸುಭಗಃ ಸಿಂಹವಿಕ್ರಮಃ
॥ ೩೩ ॥

ಅಮೃತಾಪೂರ್ಣಕಲಶಂ ಬಿಭ್ರದ್ವಲಯಭೂಷಿತಃ ।
ಸ ವೈ ಭಗವತಃ ಸಾಕ್ಷಾದ್ವಿಷ್ಣೋರಂಶಾಂಶಸಂಭವಃ
॥ ೩೪ ॥

ಧನ್ವಂತರಿರಿತಿ ಖ್ಯಾತ ಆಯುರ್ವೇದದೃಗಿಜ್ಯಭಾಕ್ ।
ತಮಾಲೋಕ್ಯಾಸುರಾಃ ಸರ್ವೇ ಕಲಶಂ ಚಾಮೃತಾಭೃತಮ್
॥ ೩೫ ॥

ಲಿಪ್ಸಂತಃ ಸರ್ವವಸ್ತೂನಿ ಕಲಶಂ ತರಸಾಹರನ್ ।
ನೀಯಮಾನೇಽಸುರೈಸ್ತಸ್ಮಿನ್ಕಲಶೇಽಮೃತಭಾಜನೇ
॥ ೩೬ ॥

ವಿಷಣ್ಣಮನಸೋ ದೇವಾ ಹರಿಂ ಶರಣಮಾಯಯುಃ ।
ಇತಿ ತದ್ದೈನ್ಯಮಾಲೋಕ್ಯ ಭಗವಾನ್ಭೃತ್ಯಕಾಮಕೃತ್ ।
ಮಾ ಖಿದ್ಯತ ಮಿಥೋಽರ್ಥಂ ವಃ ಸಾಧಯಿಷ್ಯೇ ಸ್ವಮಾಯಯಾ
॥ ೩೭ ॥

ಸಮಸ್ತ ದೇವತೆಗಳೂ, ಪ್ರಜಾಪತಿಗಳೂ, ಪ್ರಜೆಗಳೂ ಶ್ರೀಲಕ್ಷ್ಮೀದೇವಿಯ ಕೃಪಾಕಟಾಕ್ಷದಿಂದ ಸೌಶೀಲ್ಯವೇ ಮುಂತಾದ ಶ್ರೇಷ್ಠ ಸದ್ಗುಣಗಳಿಂದ ಸಂಪನ್ನರಾಗಿ ಪರಮಾನಂದವನ್ನು ಹೊಂದಿದರು. ॥ ೨೮ ॥ ಮಹಾರಾಜಾ! ಇತ್ತ ಲಕ್ಷ್ಮೀದೇವಿಯು ದೈತ್ಯ-ದಾನವರನ್ನು ಉಪೇಕ್ಷಿಸಿದಾಗ ಅವರೆಲ್ಲರೂ ನಿರ್ಬಲರೂ, ನಿಸ್ಸತ್ತ್ವರೂ, ನಿರುದ್ಯೋಗಿಗಳೂ, ನಿರ್ಲಜ್ಜರೂ, ಕಡುಲೋಭಿಗಳೂ ಆದರು. ॥ ೨೯ ॥

ಇದಾದ ಬಳಿಕ ಸಮುದ್ರಮಂಥನವನ್ನು ಮುಂದುವರಿಸಿದಾಗ ಕಮಲಲೋಚನೆಯಾದ ಕನ್ಯೆಯ ರೂಪದಲ್ಲಿ ವಾರುಣೀದೇವಿಯು ಪ್ರಕಟಳಾದಳು. ಭಗವಂತನ ಅನುಮತಿಯಂತೆ ದೈತ್ಯರು ಆಕೆಯನ್ನು ಪಡೆದುಕೊಂಡರು. ॥ ೩೦ ॥ ಅನಂತರ ಮಹಾರಾಜಾ! ಕಶ್ಯಪನ ಮಕ್ಕಳಾದ ದೇವ-ದಾನವರು ಅಮೃತವನ್ನು ಬಯಸಿ ಸಮುದ್ರಮಂಥನವನ್ನು ಮುಂದುವರಿಸಿದಾಗ ಅದರಿಂದ ಪರಮಾದ್ಭುತನಾದ ಪುರುಷನೊಬ್ಬನು ಪ್ರಕಟನಾದನು. ॥ ೩೧ ॥ ಅವನ ತೋಳುಗಳು ನೀಳವಾಗಿಯೂ, ದಪ್ಪವಾಗಿಯೂ ಇದ್ದುವು. ಅವನ ಕುತ್ತಿಗೆಯು ಶಂಖವನ್ನು ಹೋಲುತ್ತಿತ್ತು. ಕಡೆಗಣ್ಣುಗಳು ಕೆಂಪಾಗಿದ್ದುವು. ಅವನು ಶ್ಯಾಮಲವರ್ಣದ ಅಂಗಕಾಂತಿಯಿಂದ ಸುಂದರನಾಗಿದ್ದನು. ಕೊರಳಲ್ಲಿ ಮಾಲೆ, ಅಂಗಾಂಗಗಳಲ್ಲಿ ಸಮಸ್ತ ಆಭರಣಗಳಿಂದ ಸಮಲಂಕೃತನಾಗಿದ್ದನು. ಪೀತಾಂಬರವನ್ನು ಉಟ್ಟಿದ್ದನು. ಕಿವಿಗಳಲ್ಲಿ ಹೊಳೆಯುತ್ತಿರುವ ಕುಂಡಲಗಳಿದ್ದುವು. ಅಗಲವಾದ ವಕ್ಷಸ್ಥಳವಿದ್ದು ಯುವಕನಾಗಿದ್ದನು. ಸಿಂಹದಂತಹ ಪರಾಕ್ರಮ, ಅನುಪಮ ಸೌಂದರ್ಯ, ನುಣುಪಾದ ಗುಂಗುರು ಕೂದಲುಗಳು ಹಾರಾಡುತ್ತಾ ಅವನ ಸ್ವರೂಪವು ಅದ್ವಿತೀಯವಾಗಿತ್ತು. ॥ ೩೨-೩೩ ॥ ಅವನ ಕೈಗಳಲ್ಲಿ ಕಂಕಣಗಳಿದ್ದು, ಅಮೃತದಿಂದ ತುಂಬಿದ ಕಲಶವನ್ನು ಹಿಡಿದುಕೊಂಡಿದ್ದನು. ಅವನು ಸಾಕ್ಷಾತ್ ಭಗವಾನ್ ವಿಷ್ಣುವಿನ ಅಂಶಾಂಶ ಅವತಾರನಾಗಿದ್ದನು. ॥ ೩೪ ॥ ಅವನು ಆಯುರ್ವೇದ ಪ್ರವರ್ತಕನೂ, ಯಜ್ಞಭೋಕ್ತೃವೂ ಆದ ಧನ್ವಂತರೀ ಎಂಬ ಹೆಸರಿನಿಂದ ಪ್ರಸಿದ್ಧನಾಗಿದ್ದನು. ಅವನ ಮೇಲೆ ಮತ್ತು ಅವನ ಕೈಯಲ್ಲಿದ್ದ ಅಮೃತಕಲಶದ ಮೇಲೆ ದೈತ್ಯರ ದೃಷ್ಟಿಬೀಳುತ್ತಲೇ ಅವರು ಶೀಘ್ರವಾಗಿ, ಬಲವಂತವಾಗಿ ಆ ಅಮೃತಕಲಶವನ್ನು ಕಸಿದುಕೊಂಡರು. ಅವರಾದರೋ ಮೊದಲಿನಿಂದಲೇ ಯಾವುದೇ ರೀತಿಯಿಂದ ಸಮುದ್ರಮಂಥನದಿಂದ ದೊರಕಿದ ಎಲ್ಲ ವಸ್ತುಗಳು ತಮಗೇ ಸೇರಬೇಕೆಂದು ಹೊಂಚುಹಾಕುತ್ತಿದ್ದರು. ಅಸುರರು ಅಮೃತದಿಂದ ತುಂಬಿದ ಕಲಶವನ್ನು ಕಸಿದುಕೊಂಡಾಗ ದೇವತೆಗಳ ಮನಸ್ಸು ವಿಷಾದದಿಂದ ತುಂಬಿಹೋಯಿತು. ಅನ್ಯಮಾರ್ಗವನ್ನು ಕಾಣದೆ ಅವರು ಶ್ರೀಹರಿಯಲ್ಲಿ ಶರಣಾದರು. ದೇವತೆಗಳ ಆ ದೈನ್ಯಾವಸ್ಥೆಯನ್ನು ಕಂಡು ಭಕ್ತರ ಕಲ್ಪತರುವಾದ ಭಗವಂತನು ಹೇಳಿದನು – ದೇವತೆಗಳಿರಾ! ನೀವು ದುಃಖಿಸದೇಇರಿ. ನಾನು ನನ್ನ ಮಾಯೆಯಿಂದ ಅವರಲ್ಲಿ ಪರಸ್ಪರ ಕಲಹ ಉಂಟಾಗುವಂತೆ ಮಾಡಿ ಈಗಲೇ ನಿಮ್ಮ ಕಾರ್ಯವನ್ನು ಸಾಧಿಸಿಕೊಡುವೆನು. ॥ ೩೫-೩೭ ॥

ಮಿಥಃ ಕಲಿರಭೂತ್ತೇಷಾಂ ತದರ್ಥೇ ತರ್ಷಚೇತಸಾಮ್ ।
ಅಹಂ ಪೂರ್ವಮಹಂ ಪೂರ್ವಂ ನ ತ್ವಂ ನ ತ್ವಮಿತಿ ಪ್ರಭೋ
॥ ೩೮ ॥

ದೇವಾಃ ಸ್ವಂ ಭಾಗಮರ್ಹಂತಿ ಯೇ ತುಲ್ಯಾಯಾಸಹೇತವಃ ।
ಸತ್ರಯಾಗ ಇವೈತಸ್ಮಿನ್ನೇಷ ಧರ್ಮಃ ಸನಾತನಃ
॥ ೩೯ ॥

ಇತಿ ಸ್ವಾನ್ಪ್ರತ್ಯಷೇಧನ್ವೈ ದೈತೇಯಾ ಜಾತಮತ್ಸರಾಃ ।
ದುರ್ಬಲಾಃ ಪ್ರಬಲಾನ್ರಾಜನ್ಗೃಹೀತಕಲಶಾನ್ಮುಹುಃ
॥ ೪೦ ॥

ಏತಸ್ಮಿನ್ನಂತರೇ ವಿಷ್ಣುಃ ಸರ್ವೋಪಾಯವಿದೀಶ್ವರಃ ।
ಯೋಷಿದ್ರೂಪಮನಿರ್ದೇಶ್ಯಂ ದಧಾರ ಪರಮಾದ್ಭುತಮ್
॥ ೪೧ ॥

ಪ್ರೇಕ್ಷಣೀಯೋತ್ಪಲಶ್ಯಾಮಂ ಸರ್ವಾವಯವಸುಂದರಮ್ ।
ಸಮಾನಕರ್ಣಾಭರಣಂ ಸುಕಪೋಲೋನ್ನಸಾನನಮ್
॥ ೪೨ ॥

ನವಯೌವನನಿರ್ವೃತ್ತಸ್ತನಭಾರಕೃಶೋದರಮ್ ।
ಮುಖಾಮೋದಾನುರಕ್ತಾಲಿಝಂಕಾರೋದ್ವಿಗ್ನಲೋಚನಮ್
॥ ೪೩ ॥

ಬಿಭ್ರತ್ಸುಕೇಶಭಾರೇಣ ಮಾಲಾಮುತ್ಫುಲ್ಲಮಲ್ಲಿಕಾಮ್ ।
ಸುಗ್ರೀವಕಂಠಾಭರಣಂ ಸುಭುಜಾಂಗದಭೂಷಿತಮ್
॥ ೪೪ ॥

ವಿರಜಾಂಬರಸಂವೀತನಿತಂಬದ್ವೀಪಶೋಭಯಾ ।
ಕಾಂಚ್ಯಾ ಪ್ರವಿಲಸದ್ವಲ್ಗುಚಲಚ್ಚರಣನೂಪುರಮ್
॥ ೪೫ ॥

ಸವ್ರೀಡಸ್ಮಿತವಿಕ್ಷಿಪ್ತಭ್ರೂವಿಲಾಸಾವಲೋಕನೈಃ ।
ದೈತ್ಯಯೂಥಪಚೇತಃಸು ಕಾಮಮುದ್ದೀಪಯನ್ಮುಹುಃ
॥ ೪೬ ॥

ಪರೀಕ್ಷಿತನೇ! ಅಮೃತಲೋಲುಪರಾದ ದೈತ್ಯರಲ್ಲಿ ಅದರ ಕುರಿತು ಪರಸ್ಪರ ಜಗಳ ಪ್ರಾರಂಭವಾಯಿತು. ನಾನು ಮೊದಲು ಕುಡಿಯುವೆ – ನಾನು ಮೊದಲು ಕುಡಿಯುವೆ, ನೀನಲ್ಲವೆಂದು ಎಲ್ಲರೂ ಹೇಳತೊಡಗಿದರು. ॥ ೩೮ ॥ ಅವರಲ್ಲಿ ದುರ್ಬಲರಾದವರು ಬಲಿಷ್ಠರಾದ ದೈತ್ಯರೊಡನೆ ವಿರೋಧಮಾಡತೊಡಗಿದರು. ಕಲಶವನ್ನು ಕಿತ್ತುಕೊಂಡು ಕೈವಶಪಡಿಸಿಕೊಂಡಿರುವವರು ಈರ್ಷೆಯಿಂದ ಧರ್ಮದ ನೆಪವನ್ನೊಡ್ಡಿ ಅವರನ್ನು ತಡೆಯುತ್ತಾ ಪದೇ-ಪದೇ ಹೇಳತೊಡಗಿದರು – ಅಯ್ಯಾ! ದೇವತೆಗಳೂ ನಮ್ಮಂತೆಯೇ ಪರಿಶ್ರಮಪಟ್ಟಿರುವರು. ಅವರಿಗೂ ಯಜ್ಞಭಾಗದಂತೆ ಸಮಾನವಾಗಿ ಇದರ ಭಾಗ ಸಿಗಬೇಕಲ್ಲ! ಇದೇ ಸನಾತನ ಧರ್ಮವಾಗಿದೆ. ॥ ೩೯-೪೦ ॥ ಇತ್ತ ಹೀಗೆ ದೈತ್ಯರು ನಾನು-ನಾನು ಎಂದು ಕಚ್ಚಾಡುತ್ತಿದ್ದಾಗ ■ ಕಡೆ ಸಮಸ್ತ ಉಪಾಯಗಳನ್ನು ಬಲ್ಲಿದನಾದ ಲೋಕೇಶ್ವರ, ಚತುರಶಿರೋಮಣಿ ಭಗವಂತನು ಅತ್ಯಂತ ಅದ್ಭುತವಾದ, ಅವರ್ಣನೀಯವಾದ ಮೋಹಿನಿಯ ರೂಪವನ್ನು ಧರಿಸಿದನು. ॥ ೪೧ ॥ ಪ್ರೇಕ್ಷಣೀಯಳಾದ ಆ ಸುಂದರಿಯ ಶರೀರವು ನೈದಿಲೆಯಂತೆ ಶ್ಯಾಮಲವರ್ಣದಿಂದ ಶೋಭಿಸುತ್ತಿತ್ತು. ಅವಳ ಎಲ್ಲ ಅಂಗಾಂಗಗಳು ಆಕರ್ಷಣೀಯವಾಗಿದ್ದವು. ಎರಡೂ ಕಿವಿಗಳಲ್ಲಿ ಸಮಾನವಾದ ಕರ್ಣಾಭರಣಗಳು ಶೋಭಿಸುತ್ತಿದ್ದವು. ಸುಂದರವಾದ ಕಪೋಲಗಳು, ಎತ್ತರವೂ ನೀಳವೂ ಆದ ಮೂಗಿನಿಂದ ಕೂಡಿದ ಮುಖವು ರಮಣೀಯವಾಗಿತ್ತು. ॥ ೪೨ ॥ ಹೊಸ ಜವ್ವನೆಯಾದ್ದರಿಂದ ದುಂಡಾಗಿ ಹೊರಹೊಮ್ಮುತ್ತಿದ್ದ ಸ್ತನಗಳ ಭಾರದಿಂದ ಸೊಂಟವು ಕೃಶವಾಗಿ ಬಳಕುತ್ತಿರುವಂತೆ ಕಾಣುತ್ತಿದ್ದಿತು. ಮುಖದ ಸುವಾಸನೆಯಿಂದ ಪುಷ್ಪವೆಂದು ಭ್ರಮಿಸಿ ಮುತ್ತಿಡುತ್ತಿದ್ದ ದುಂಬಿಗಳ ಝೇಂಕಾರದಿಂದ ಕಣ್ಣಾಲಿಗಳು ಉದ್ವಿಗ್ನವಾಗಿದ್ದವು. ॥ ೪೩ ॥ ಜೋಲುಬಿದ್ದಿದ್ದ ತುರುಬಿನಲ್ಲಿ ಅರಳಿದ ಮಲ್ಲಿಗೆಯ ಹಾರವು ಕಂಗೊಳಿಸುತ್ತಿದ್ದುವು. ಕಂಠಾಭರಣದಿಂದ ಕುತ್ತಿಗೆಯೂ ಅಂಗದ ಕೇಯೂರಗಳಿಂದ ತೋಳುಗಳು ಸುಂದರವಾಗಿ ಶೋಭಿಸುತ್ತಿದ್ದುವು. ॥ ೪೪ ॥ ದ್ವೀಪಗಳಂತಿದ್ದ ಎರಡು ನಿತಂಬಗಳು ಸ್ವಚ್ಛವಾದ ವಸ್ತ್ರದಿಂದಲೂ, ಡಾಬಿನಿಂದಲೂ ಸಮಲಂಕೃತವಾಗಿ ಮನೋಹರವಾಗಿ ಕಾಣುತ್ತಿದ್ದವು. ಅವಳ ಕಾಲಂದುಗೆಗಳು ಸುಮಧುರವಾಗಿ ಝಣ-ಝಣ ಶಬ್ದಮಾಡುತ್ತಿದ್ದವು. ॥ ೪೫ ॥ ಸರ್ವಾಂಗಸುಂದರಿಯಾದ ಆ ಮೋಹಿನಿಯು ನಾಚಿಕೆಯಿಂದ ಕೂಡಿದ ಕಿರುನಗೆಯಿಂದಲೂ, ಹಾರಿಸಲ್ಪಡುತ್ತಿದ್ದ ಹುಬ್ಬುಗಳಿಂದಲೂ, ವೈಯಾರದ ನೋಟದಿಂದಲೂ ದೈತ್ಯನಾಯಕರ ಮನಸ್ಸಿನಲ್ಲಿದ್ದ ಕಾಮವನ್ನು ಉದ್ದೀಪನಗೊಳಿಸಿದಳು. ॥ ೪೬ ॥

ಎಂಟನೆಯ ಅಧ್ಯಾಯವು ಮುಗಿಯಿತು. ॥ ೮ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಅಷ್ಟಮ ಸ್ಕಂಧೇ
ಭಗವನ್ಮಾಯೋಪಲಂಭನಂ ನಾಮಾಷ್ಟಮೋಽಧ್ಯಾಯಃ ॥ ೮ ॥

ಒಂಭತ್ತನೆಯ ಅಧ್ಯಾಯ

ಭಗವಂತನು ಮೋಹಿನಿಯ ರೂಪದಲ್ಲಿ ಅಮೃತವನ್ನು ಹಂಚಿದುದು

ಶ್ರೀಶುಕ ಉವಾಚ

ತೇಽನ್ಯೋನ್ಯತೋಽಸುರಾಃ ಪಾತ್ರಂ ಹರಂತಸ್ತ್ಯಕ್ತಸೌಹೃದಾಃ ।
ಕ್ಷಿಪಂತೋ ದಸ್ಯುಧರ್ಮಾಣ ಆಯಾಂತೀಂ ದದೃಶುಃ ಸ್ತ್ರಿಯಮ್ ॥ ೧ ॥

ಅಹೋ ರೂಪಮಹೋ ಧಾಮ ಅಹೋ ಅಸ್ಯಾ ನವಂ ವಯಃ ।
ಇತಿ ತೇ ತಾಮಭಿದ್ರುತ್ಯ ಪಪ್ರಚ್ಛುರ್ಜಾತಹೃಚ್ಛಯಾಃ ॥ ೨ ॥

ಕಾ ತ್ವಂ ಕಂಜಪಲಾಶಾಕ್ಷಿ ಕುತೋ ವಾ ಕಿಂ ಚಿಕೀರ್ಷಸಿ ।
ಕಸ್ಯಾಸಿ ವದ ವಾಮೋರು ಮಥ್ನಂತೀವ ಮನಾಂಸಿ ನಃ ॥ ೩ ॥

ನ ವಯಂ ತ್ವಾಮರೈರ್ದೈತ್ಯೈಃ ಸಿದ್ಧಗಂಧರ್ವಚಾರಣೈಃ ।
ನಾಸ್ಪೃಷ್ಟಪೂರ್ವಾಂ ಜಾನೀಮೋ ಲೋಕೇಶೈಶ್ಚ ಕುತೋ ನೃಭಿಃ ॥ ೪ ॥

ನೂನಂ ತ್ವಂ ವಿಧಿನಾ ಸುಭ್ರೂಃ ಪ್ರೇಷಿತಾಸಿ ಶರೀರಿಣಾಮ್ ।
ಸರ್ವೇಂದ್ರಿಯಮನಃಪ್ರೀತಿಂ ವಿಧಾತುಂ ಸಘೃಣೇನ ಕಿಮ್ ॥ ೫ ॥

ಸಾ ತ್ವಂ ನಃ ಸ್ಪರ್ಧಮಾನಾನಾಮೇಕವಸ್ತುನಿ ಮಾನಿನಿ ।
ಜ್ಞಾತೀನಾಂ ಬದ್ಧವೈರಾಣಾಂ ಶಂ ವಿಧತ್ಸ್ವ ಸುಮಧ್ಯಮೇ ॥ ೬ ॥

ವಯಂ ಕಶ್ಯಪದಾಯಾದಾ ಭ್ರಾತರಃ ಕೃತಪೌರುಷಾಃ ।
ವಿಭಜಸ್ವ ಯಥಾನ್ಯಾಯಂ ನೈವ ಭೇದೋ ಯಥಾ ಭವೇತ್ ॥ ೭ ॥

ಇತ್ಯುಪಾಮಂತ್ರಿತೋ ದೈತ್ಯೈರ್ಮಾಯಾಯೋಷಿದ್ವಪುರ್ಹರಿಃ ।
ಪ್ರಹಸ್ಯ ರುಚಿರಾಪಾಂಗೈರ್ನಿರೀಕ್ಷನ್ನಿದಮಬ್ರವೀತ್ ॥ ೮ ॥

ಶ್ರೀಭಗವಾನುವಾಚ

ಕಥಂ ಕಶ್ಯಪದಾಯಾದಾಃ ಪುಂಶ್ಚಲ್ಯಾಂ ಮಯಿ ಸಂಗತಾಃ ।
ವಿಶ್ವಾಸಂ ಪಂಡಿತೋ ಜಾತು ಕಾಮಿನೀಷು ನ ಯಾತಿ ಹಿ ॥ ೯ ॥

ಸಾಲಾವೃಕಾಣಾಂ ಸ್ತ್ರೀಣಾಂ ಚ ಸ್ವೈರಿಣೀನಾಂ ಸುರದ್ವಿಷಃ ।
ಸಖ್ಯಾನ್ಯಾಹುರನಿತ್ಯಾನಿ ನೂತ್ನಂ ನೂತ್ನಂ ವಿಚಿನ್ವತಾಮ್ ॥ ೧೦ ॥

ಶ್ರೀಶುಕಮುನಿಗಳು ಹೇಳುತ್ತಾರೆ – ಎಲೈ ಪರೀಕ್ಷಿತನೇ! ಅಸುರರು ತಮ್ಮ-ತಮ್ಮಲ್ಲಿಯೇ ಸದ್ಭಾವವನ್ನೂ, ವಿಶ್ವಾಸ ವನ್ನೂ ಕಳಕೊಂಡು ಒಬ್ಬರು ಮತ್ತೊಬ್ಬರನ್ನು ನಿಂದಿಸುತ್ತಾ, ಕಳ್ಳರಂತೆ ಒಬ್ಬರಿಂದ ಮತ್ತೊಬ್ಬರು ಅಮೃತಕಲಶವನ್ನು ಕಸಿದುಕೊಳ್ಳುತ್ತಾ ಇದ್ದರು. ಅದೇ ಸಮಯಕ್ಕೆ ಸರಿಯಾಗಿ ಸುಂದರಿಯಾದ ಓರ್ವ ಸ್ತ್ರೀಯು ತಮ್ಮ ಕಡೆಗೆ ಬರುತ್ತಿರುವುದನ್ನು ನೋಡಿದರು. ॥ ೧ ॥ ಆಹಾ! ಎಂತಹ ರೂಪ! ಎಂತಹ ತೇಜಸ್ಸು! ಎಂತಹ ನವ ಯೌವನ! ಎಂದು ಉದ್ಗರಿಸುತ್ತಾ ಕಾಮೋದ್ದೀಪ್ತರಾದ ದಾನವರು ಅವಳ ಬಳಿಗೆ ಓಡಿಬಂದು ಕೇಳತೊಡಗಿದರು. ॥ ೨ ॥ ಪದ್ಮ ಪತ್ರಾಕ್ಷಿಯೇ! ಸುಂದರಿಯೇ! ನೀನು ಯಾರು? ಎಲ್ಲಿಂದ ಬಂದಿರುವೆ? ಏನು ಮಾಡಲು ಬಯಸಿ ಇಲ್ಲಿಗೆ ಬಂದಿರುವೆ? ನೀನು ಯಾರ ಮಗಳಾಗಿರುವೆ? ನಿನ್ನನ್ನು ನೋಡಿ ನಮ್ಮ ಮನಸ್ಸು ಕಲಕಿಹೋಗಿದೆ. ॥ ೩ ॥ ಸುಂದರಿಯೇ! ನಮಗೆ ತಿಳಿದಿರುವಂತೆ ದೇವತೆಗಳಾಗಲೀ ದೈತ್ಯರಾಗಲೀ, ಸಿದ್ಧ-ಗಂಧರ್ವ-ಚಾರಣ ರಾಗಲೀ ನಿನ್ನನ್ನು ಸ್ಪರ್ಶಿಸಿರುವುದಿಲ್ಲ. ಹೀಗಿರುವಾಗ ಮನುಷ್ಯರು ನಿನ್ನನ್ನು ಹೇಗೆ ಸ್ಪರ್ಶಿಸಬಲ್ಲರು? ॥ ೪ ॥ ಸುಂದರೀ! ಖಂಡಿತ ವಾಗಿ ವಿಧಾತನೇ ದಯೆಗೈದು ಶರೀರಧಾರಿಗಳ ಸಮಸ್ತ ಇಂದ್ರಿಯ ಗಳನ್ನೂ, ಮನಸ್ಸನ್ನೂ ತೃಪ್ತಿಪಡಿಸಲಿಕ್ಕಾಗಿಯೇ ನಿನ್ನನ್ನು ಇಲ್ಲಿಗೆ ಕಳಿಸಿರಬಹುದೇ? ನಿಜ! ಹಾಗೆಯೇ ಆಗಿರಬೇಕು. ॥ ೫ ॥ ಮಾನಿನೀ! ಹಾಗಂತ ನಾವುಗಳೆಲ್ಲ ಒಂದೇ ಜಾತಿಯವರು. ಹಾಗೂ ನಾವೆಲ್ಲ ಒಂದೇ ವಸ್ತುವನ್ನು ಬಯಸುತ್ತಿದ್ದೇವೆ. ಆದರಿಂದ ನಮ್ಮಲ್ಲಿ ಅಸೂಯೆ, ಬದ್ಧವೈರ ಉಂಟಾಗಿದೆ. ಸುಂದರೀ! ನೀನು ನಮ್ಮ ಜಗಳವನ್ನು ಕೊನೆಗಾಣಿಸು. ॥ ೬ ॥ ನಾವೆಲ್ಲರೂ ಕಶ್ಯಪನ ಮಕ್ಕಳು. ಅಣ್ಣ-ತಮ್ಮಂದಿರು. ನಾವುಗಳು ಅಮೃತಕ್ಕಾಗಿ ಭಾರೀ ಪುರುಷಾರ್ಥವನ್ನು ಮಾಡಿರುವೆವು. ನೀನು ನ್ಯಾಯವಾಗಿ ನಿಷ್ಪಕ್ಷ ಭಾವದಿಂದ ಇದನ್ನು ಹಂಚಿಬಿಡು. ಇದರಿಂದ ಮತ್ತೆ ನಮ್ಮಲ್ಲಿ ಯಾವುದೇ ಜಗಳ ಆಗದಿರಲಿ. ॥ ೭ ॥ ಅಸುರರು ಹೀಗೆ ಪ್ರಾರ್ಥಿಸಿದಾಗ ಮಾಯೆಯಿಂದ ಸ್ತ್ರೀವೇಷವನ್ನು ಧರಿಸಿದ್ದ ಶ್ರೀಹರಿಯು ನಗುತ್ತಾ ಸುಂದರವಾದ ಕಟಾಕ್ಷವೀಕ್ಷಣದಿಂದ ಅವರ ಕಡೆಗೆ ನೋಡುತ್ತಾ ಇಂತೆಂದನು. ॥ ೮ ॥

ಶ್ರೀಭಗವಂತನು ಹೇಳಿದನು – ದೈತ್ಯರೇ! ಮಹರ್ಷಿಗಳಾದ ಕಶ್ಯಪರ ಮಕ್ಕಳಾದ ನೀವು, ಸ್ವೇಚ್ಛೆಯಿಂದ ಮನೆ-ಮನೆ ತಿರುಗುವ ಕುಲಟೆಯಾದ ನನ್ನ ಮೇಲೆ ನ್ಯಾಯದ ಭಾರವನ್ನು ಏಕೆ ಹಾಕುತ್ತಿದ್ದೀರಿ? ಪಂಡಿತರಾದವರು ಯಾವಾಗಲೂ ಕಾಮಿನಿಯರಲ್ಲಿ ವಿಶ್ವಾಸ ವನ್ನಿಡುವುದಿಲ್ಲ. ॥ ೯ ॥ ದೈತ್ಯರೇ! ನಾಯಿಯಲ್ಲಿ ಮತ್ತು ಜಾರಿಣಿಯಾದ ಸ್ತ್ರೀಯರ ವಿಷಯದಲ್ಲಿ ಸ್ನೇಹವು ಅನಿತ್ಯವಾದುದು ಎಂದು ವಿದ್ವಾಂಸರು ಹೇಳುತ್ತಾರೆ. ಅವರಿಬ್ಬರೂ ಸದಾಕಾಲ ಹೊಸ-ಹೊಸ ಬೇಟೆಯನ್ನು ಹುಡುಕುತ್ತಾ ಇರುತ್ತಾರೆ. ॥ ೧೦ ॥

ಶ್ರೀಶುಕ ಉವಾಚ

ಇತಿ ತೇ ಕ್ಷ್ವೇಲಿತೈಸ್ತಸ್ಯಾ ಆಶ್ವಸ್ತಮನಸೋಽಸುರಾಃ ।
ಜಹಸುರ್ಭಾವಗಂಭೀರಂ ದದುಶ್ಚಾಮೃತಭಾಜನಮ್ ॥ ೧೧ ॥

ತತೋ ಗೃಹೀತ್ವಾಮೃತಭಾಜನಂ ಹರಿ-
ರ್ಬಭಾಷ ಈಷತ್ಸ್ಮಿತಶೋಭಯಾ ಗಿರಾ ।
ಯದ್ಯಭ್ಯುಪೇತಂ ಕ್ವ ಚ ಸಾಧ್ವಸಾಧು ವಾ
ಕೃತಂ ಮಯಾ ವೋ ವಿಭಜೇ ಸುಧಾಮಿಮಾಮ್ ॥ ೧೨ ॥

ಇತ್ಯಭಿವ್ಯಾಹೃತಂ ತಸ್ಯಾ ಆಕರ್ಣ್ಯಾಸುರಪುಂಗವಾಃ ।
ಅಪ್ರಮಾಣವಿದಸ್ತಸ್ಯಾಸ್ತತ್ತಥೇತ್ಯನ್ವಮಂಸತ ॥ ೧೩ ॥

ಅಥೋಪೋಷ್ಯ ಕೃತಸ್ನಾನಾ ಹುತ್ವಾ ಚ ಹವಿಷಾನಲಮ್ ।
ದತ್ತ್ವಾ ಗೋವಿಪ್ರಭೂತೇಭ್ಯಃ ಕೃತಸ್ವಸ್ತ್ಯಯನಾ ದ್ವಿಜೈಃ ॥ ೧೪ ॥

ಯಥೋಪಜೋಷಂ ವಾಸಾಂಸಿ ಪರಿಧಾಯಾಹತಾನಿ ತೇ ।
ಕುಶೇಷು ಪ್ರಾವಿಶನ್ಸರ್ವೇ ಪ್ರಾಗಗ್ರೇಷ್ವಭಿಭೂಷಿತಾಃ ॥ ೧೫ ॥

ಪ್ರಾಙ್ಮುಖೇಷೂಪವಿಷ್ಟೇಷು ಸುರೇಷು ದಿತಿಜೇಷು ಚ ।
ಧೂಪಾಮೋದಿತಶಾಲಾಯಾಂ ಜುಷ್ಟಾಯಾಂ ಮಾಲ್ಯದೀಪಕೈಃ ॥ ೧೬ ॥

ತಸ್ಯಾಂ ನರೇಂದ್ರ ಕರಭೋರುರುಶದ್ದುಕೂಲ-
ಶ್ರೋಣೀತಟಾಲಸಗತಿರ್ಮದವಿಹ್ವಲಾಕ್ಷೀ ।
ಸಾ ಕೂಜತೀ ಕನಕನೂಪುರಶಿಂಜಿತೇನ
ಕುಂಭಸ್ತನೀ ಕಲಶಪಾಣಿರಥಾವಿವೇಶ ॥ ೧೭ ॥

ತಾಂ ಶ್ರೀಸಖೀಂ ಕನಕಕುಂಡಲಚಾರುಕರ್ಣ-
ನಾಸಾಕಪೋಲವದನಾಂ ಪರದೇವತಾಖ್ಯಾಮ್ ।
ಸಂವೀಕ್ಷ್ಯ ಸಂಮುಮುಹುರುತ್ಸ್ಮಿತವೀಕ್ಷಣೇನ
ದೇವಾಸುರಾ ವಿಗಲಿತಸ್ತನಪಟ್ಟಿಕಾಂತಾಮ್ ॥ ೧೮ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿದ್ರಾಜನೇ! ಮೋಹಿನಿಯ ಇಂತಹ ಹುಡುಗಾಟದ ಮಾತುಗಳಿಂದ ದೈತ್ಯರ ಮನಸ್ಸಿನಲ್ಲಿ ಅವಳ ಮೇಲೆ ವಿಶ್ವಾಸವು ಹುಟ್ಟಿತು. ಅವರೆಲ್ಲರೂ ಗಂಭೀರವಾಗಿ ನಕ್ಕು ಅಮೃತಕಲಶವನ್ನು ಆಕೆಯ ಕೈಗಿತ್ತರು. ॥ ೧೧ ॥ ಭಗವಂತನು ಅಮೃತದ ಕಲಶವನ್ನು ತನ್ನ ಕೈಯಲ್ಲಿ ಪಡೆದು ಕೊಂಚ ನಸುನಗುತ್ತಾ ಸವಿನುಡಿಗಳಿಂದ ಇಂತೆಂದನು – ದೈತ್ಯಶಿರೋಮಣಿಗಳೇ! ನಾನು ಮಾಡುವ ವಿಭಾಗ ಸರಿಯಾಗಿರಲಿ, ಸರಿಯಲ್ಲದಿರಲಿ ನೀವು ಅದನ್ನು ಸಮ್ಮತಿಸುವುದಾದರೆ, ನಿಮ್ಮ ಪ್ರಾರ್ಥನೆಯಂತೆ ಈ ಕಲಶದಲ್ಲಿರುವ ಅಮೃತವನ್ನು ನಾನು ಹಂಚುತ್ತೇನೆ. ॥ ೧೨ ॥ ಹೀಗೆ ಆಕೆಯ ಸವಿಮಾತುಗಳನ್ನು ಕೇಳಿ, ಅವಳ ಮಾತಿನಲ್ಲಿದ್ದ ಅಪ್ರಾಮಾಣ್ಯವನ್ನು ತಿಳಿಯದೆ ದೊಡ್ಡ-ದೊಡ್ಡ ದೈತ್ಯರೆಲ್ಲರೂ ಏಕಕಂಠದಿಂದ 'ನಮಗೆ ಸಮ್ಮತವಿದೆ' ಎಂದು ನುಡಿದರು. ಅವರಿಗೆ ಮೋಹಿನಿಯ ವಾಸ್ತವಿಕ ಸ್ವರೂಪದ ಅರಿವು ಇರಲಿಲ್ಲ. ॥ ೧೩ ॥

ಇದಾದ ಬಳಿಕ ಮೋಹಿನಿಯ ನಿರ್ದೇಶದಂತೆ ದೇವ-ದಾನವರು ಒಂದು ದಿನದ ಉಪವಾಸಮಾಡಿ ಎಲ್ಲರೂ ಸ್ನಾನಮಾಡಿದರು. ಹವಿಸ್ಸಿನಿಂದ ಯಜ್ಞೇಶ್ವರನಲ್ಲಿ ಹೋಮಮಾಡಿ, ಗೋ-ಬ್ರಾಹ್ಮಣರಿಗೂ, ಪ್ರಾಣಿಗಳಿಗೂ ಯಥಾಯೋಗ್ಯವಾದ ಉಪಹಾರಗಳನ್ನು ಕೊಟ್ಟು, ಬ್ರಾಹ್ಮಣರಿಂದ ಸ್ವಸ್ತಿವಾಚನ ಮಾಡಿಸಿದರು. ॥ ೧೪ ॥ ತಮ್ಮ ಇಚ್ಛಾನುಸಾರವಾಗಿ ನೂತನವಾದ ವಸ್ತ್ರಗಳನ್ನು ಧರಿಸಿ, ಗಂಧ-ಮಾಲ್ಯಾದಿಗಳಿಂದ ಅಲಂಕರಿಸಿಕೊಂಡು ಪೂರ್ವಾಗ್ರವಾಗಿದ್ದ ದರ್ಭಾಸನಗಳಲ್ಲಿ ಕುಳಿತು ಕೊಂಡರು. ॥ ೧೫ ॥ ದೇವ-ದಾನವರೆಲ್ಲರೂ ಧೂಪದಿಂದ ಸುಗಂಧಿತವಾದ, ಮಾಲೆಗಳಿಂದ, ದೀಪಗಳಿಂದ ಅಲಂಕೃತವಾದ ಭವ್ಯಭವನದಲ್ಲಿ ಪೂರ್ವಾಗ್ರಗಳುಳ್ಳ ದರ್ಭಾಸನದಲ್ಲಿ ಕುಳಿತಿರುವಾಗ ಮೋಹಿನಿಯು ಅಮೃತದ ಕಲಶವನ್ನೆತ್ತಿಕೊಂಡು ಆ ಸಭಾಭವನಕ್ಕೆ ಆಗಮಿಸಿದಳು. ಆಗ ಅವಳು ಕಮನೀಯವಾದ ಪೀತಾಂಬರವನ್ನು ಉಟ್ಟಿದ್ದಳು. ಮೃದುವಾದ ನಿತಂಬಗಳ ಭಾರದಿಂದಾಗಿ ಮೆಲ್ಲ-ಮೆಲ್ಲನೆ ನಡೆಯುತ್ತಿದ್ದಳು. ಕಣ್ಣುಗಳು ಮದದಿಂದ ವಿಹ್ವಲವಾಗಿದ್ದವು. ಕಲಶಗಳಂತಿದ್ದ ಸ್ತನಗಳೂ ಉನ್ನತವಾಗಿದ್ದವು. ಆನೆಮರಿಯ ಸೊಂಡಿಲಿನಂತೆ ತೊಡೆಗಳು ದುಂಡಾಗಿದ್ದವು. ಚಿನ್ನದ ಕಾಲಂದುಗೆಗಳಿಂದ ಝಣ-ಝಣನೆ ಶಬ್ದಮಾಡುತ್ತಾ ಅಮೃತಹಸ್ತಳಾಗಿ ಸಭಾಭವನವನ್ನು ಬೆಳಗುತ್ತಾ ಪ್ರವೇಶಿಸಿದಳು. ॥ ೧೬–೧೭ ॥ ಅವಳ ಸುಂದರವಾದ ಕಿವಿಗಳಲ್ಲಿ ಸ್ವರ್ಣಕುಂಡಲಗಳು ಶೋಭಿಸುತ್ತಿದ್ದವು. ಮೂಗೂ, ಕಪೋಲಗಳು, ಮುಖವು ಬಹು ಅಂದವಾಗಿದ್ದವು. ಸ್ವಯಂ ಪರದೇವತೆಯಾದ ಭಗವಂತನು ಆ ಮೋಹಿನಿಯ ರೂಪದಲ್ಲಿ ಸಾಕ್ಷಾತ್ ಲಕ್ಷ್ಮೀದೇವಿಯ ಯಾರೋ ಶ್ರೇಷ್ಠ ಸಖಿಯೇ ಬಂದಂತೆ ಕಾಣುತ್ತಿದ್ದನು. ಮೋಹಿನಿಯು ತನ್ನ ಮುಂದಹಾಸದಿಂದ ಕೂಡಿದ ಓರೆನೋಟದಿಂದ ದೇವ-ದಾನವರನ್ನು ನೋಡಿದಾಗ ಅವರೆಲ್ಲರೂ ಮೋಹಿತರಾಗಿ ಬಿಟ್ಟರು. ಆಗ ಅವಳ ಸೆರಗು ಸ್ತನಗಳಿಂದ ಸ್ವಲ್ಪ ಜಾರಿತ್ತು. ॥ ೧೮ ॥ ಭಗವಂತನು ಮೋಹಿನೀರೂಪದಲ್ಲಿರುವಾಗ ಅಸುರರಾದರೋ ಜನ್ಮತಃ ಕ್ರೂರ ಸ್ವಭಾವದವರು,

ಅಸುರಾಣಾಂ ಸುಧಾದಾನಂ ಸರ್ಪಾಣಾಮಿವ ದುರ್ನಯಮ್ ।
ಮತ್ವಾ ಜಾತಿನೃಶಂಸಾನಾಂ ನ ತಾಂ ವ್ಯಭಜದಚ್ಯುತಃ ॥ ೧೯ ॥

ಕಲ್ಪಯಿತ್ವಾ ಪೃಥಕ್ಪಂಕ್ತೀರುಭಯೇಷಾಂ ಜಗತ್ಪತಿಃ ।
ತಾಂಶ್ಚೋಪವೇಶಯಾಮಾಸ ಸ್ವೇಷು ಸ್ವೇಷು ಚ ಪಂಕ್ತಿಷು ॥ ೨೦ ॥

ದೈತ್ಯಾನ್ಗೃಹೀತಕಲಶೋ ವಂಚಯನ್ನುಪಸಂಚರೈಃ ।
ದೂರಸ್ಥಾನ್ಪಾಯಯಾಮಾಸ ಜರಾಮೃತ್ಯುಹರಾಂ ಸುಧಾಮ್ ॥ ೨೧ ॥

ತೇ ಪಾಲಯಂತಃ ಸಮಯಮಸುರಾಃ ಸ್ವಕೃತಂ ನೃಪ ।
ತೂಷ್ಣೀಮಾಸನ್ಕೃತಸ್ನೇಹಾಃ ಸ್ತ್ರೀವಿವಾದಜುಗುಪ್ಸಯಾ ॥ ೨೨ ॥

ತಸ್ಯಾಂ ಕೃತಾತಿಪ್ರಣಯಾಃ ಪ್ರಣಯಾಪಾಯಕಾತರಾಃ ।
ಬಹುಮಾನೇನ ಚಾಬದ್ಧಾ ನೋಚುಃ ಕಿಂಚನ ವಿಪ್ರಿಯಮ್ ॥ ೨೩ ॥

ದೇವಲಿಂಗಪ್ರತಿಚ್ಛನ್ನಃ ಸ್ವರ್ಭಾನುರ್ದೇವಸಂಸದಿ ।
ಪ್ರವಿಷ್ಟಃ ಸೋಮಮಪಿಬಚ್ಚಂದ್ರಾರ್ಕಾಭ್ಯಾಂ ಚ ಸೂಚಿತಃ ॥ ೨೪ ॥

ಚಕ್ರೇಣ ಕ್ಷುರಧಾರೇಣ ಜಹಾರ ಪಿಬತಃ ಶಿರಃ ।
ಹರಿಸ್ತಸ್ಯ ಕಬಂಧಸ್ತು ಸುಧಯಾಪ್ಲಾವಿತೋಽಪತತ್ ॥ ೨೫ ॥

ಶಿರಸ್ತ್ವಮರತಾಂ ನೀತಮಜೋ ಗ್ರಹಮಚೀಕ್ಲೃಪತ್ ।
ಯಸ್ತು ಪರ್ವಣಿ ಚಂದ್ರಾರ್ಕಾವಭಿಧಾವತಿ ವೈರಧೀಃ ॥ ೨೬ ॥

ಪೀತಪ್ರಾಯೇಽಮೃತೇ ದೇವೈರ್ಭಗವಾಲ್ಲೋಕಭಾವನಃ ।
ಪಶ್ಯತಾಮಸುರೇಂದ್ರಾಣಾಂ ಸ್ವಂ ರೂಪಂ ಜಗೃಹೇ ಹರಿಃ ॥ ೨೭ ॥

ಇವರಿಗೆ ಅಮೃತ ಕುಡಿಸಿದರೆ ಹಾವಿಗೆ ಹಾಲೆರೆದಂತೆ ಅನ್ಯಾಯವೇ ಆದೀತು ಎಂದು ವಿಚಾರಮಾಡಿ, ಅವನು ಅಸುರರಿಗೆ ಅಮೃತವನ್ನು ಹಂಚಿಕೊಡಲಿಲ್ಲ. ॥ ೧೯ ॥ ಭಗವಂತನು ದೇವತೆಗಳನ್ನು ಮತ್ತು ದಾನವರನ್ನು ಬೇರೆ-ಬೇರೆ ಪಂಕ್ತಿಗಳನ್ನಾಗಿಸಿದನು. ಅವರೆಲ್ಲರೂ ತಮ್ಮ-ತಮ್ಮವರೊಂದಿಗೆ ಎರಡುಸಾಲು ಹಿಡಿದು ಕುಳಿತುಬಿಟ್ಟರು. ॥ ೨೦ ॥ ಇದಾದ ಬಳಿಕ ಅಮೃತಕಲಶವನ್ನೆತ್ತಿಕೊಂಡು ಭಗವಂತನು ದೈತ್ಯರ ಬಳಿಗೆ ಬಂದನು. ಅವರನ್ನು ಹಾವ-ಭಾವ ಕಟಾಕ್ಷ-ವೀಕ್ಷಣಗಳಿಂದ ಮೋಹಿತರನ್ನಾಗಿಸಿ, ದೂರದಲ್ಲಿ ಕುಳಿತಿದ್ದ ದೇವತೆಗಳ ಬಳಿಗೆಬಂದು, ಯಾವುದನ್ನು ಕುಡಿಯುವುದರಿಂದ ಮುಪ್ಪು-ಸಾವುಗಳು ತೊಲಗುವುವೋ ಅಂತಹ ಅಮೃತವನ್ನು ದೇವತೆಗಳಿಗೆ ಕುಡಿಸಿದನು. ॥ ೨೧ ॥ ಪರೀಕ್ಷಿತನೇ! ಅಸುರರು ತಾವು ಮಾಡಿದ ಪ್ರತಿಜ್ಞೆಯನ್ನು ಪಾಲಿಸುತ್ತಿದ್ದರು. ಅವರಿಗೆ ಮೋಹಿನಿಯಲ್ಲಿ ಅಪಾರ ಸ್ನೇಹವೂ ಇತ್ತು ಹಾಗೂ ಸ್ತ್ರೀಯೊಡನೆ ಜಗಳಾಡುವುದು ತಮಗೆ ನಿಂದನೀಯವೆಂದೇ ತಿಳಿಯುತ್ತಿದ್ದರು. ಅದಕ್ಕಾಗಿ ಅವರು ಸುಮ್ಮನೆ ಕುಳಿತುಬಿಟ್ಟರು. ॥ ೨೨ ॥ ಮೋಹಿನಿಯಲ್ಲಿ ಅವರಿಗೆ ಅತ್ಯಂತ ಪ್ರೇಮ ಉಂಟಾಗಿತ್ತು. ಅವಳೊಂದಿಗಿನ ನಮ್ಮ ಪ್ರೇಮದ ಸಂಬಂಧ ಕಡಿದುಹೋದೀತೆಂದು ಅವರು ಭಯಪಡುತ್ತಿದ್ದರು. ಮೋಹಿನಿಯೂ ಮೊದಲಿಗೆ ಅವರಿಗೆ ಬಹಳ ಸಮ್ಮಾನ ಮಾಡಿದ್ದಳು. ಇದರಿಂದ ಅವರು ಮತ್ತೂ ಬಂಧಿತರಾಗಿದ್ದರು. ಈ ಕಾರಣದಿಂದಲೇ ಅವರು ಮೋಹಿನಿಗೆ ಯಾವುದೇ ಅಪ್ರಿಯ ಮಾತನ್ನೂ ಆಡಲಿಲ್ಲ. ॥ ೨೩ ॥

ಭಗವಂತನು ದೇವತೆಗಳಿಗೆ ಅಮೃತವನ್ನು ಕುಡಿಸುತ್ತಿರುವಾಗ ಸ್ವರ್ಭಾನು (ರಾಹು) ಎಂಬ ದಾನವನು ದೇವತೆಗಳ ವೇಷವನ್ನು ತೊಟ್ಟು ಅವರ ಸಾಲಿನಲ್ಲಿ ಬಂದು ಕುಳಿತಿದ್ದನು. ದೇವತೆಗಳೊಂದಿಗೆ ಅವನೂ ಅಮೃತವನ್ನು ಕುಡಿದುಬಿಟ್ಟನು. ಆದರೆ ಒಡನೆಯೇ ಸೂರ್ಯ-ಚಂದ್ರರು ಅವನ ಕಪಟವನ್ನು ಬಯಲುಗೊಳಿಸಿದರು. ॥ ೨೪ ॥ ಅಮೃತವನ್ನು ಕುಡಿಸುತ್ತಿರುವಾಗಲೇ ಭಗವಂತನು ತನ್ನ ತೀಕ್ಷ್ಣವಾದ ಸುದರ್ಶನ ಚಕ್ರದಿಂದ ಅವನ ತಲೆಯನ್ನು ತರಿದನು. ■ ವೇಳೆಗೆ ಅಮೃತವು ಗಂಟಲಿನಿಂದ ಕೆಳಗೆ ಹೋಗದಿರುವುದರಿಂದ ಕಬಂಧವು (ತಲೆಯಿಲ್ಲದ ಶರೀರವು) ಬಿದ್ದುಹೋಯಿತು. ॥ ೨೫ ॥ ಆದರೆ ತಲೆಯು ಅಮರವಾಯಿತು. ಬ್ರಹ್ಮದೇವರು ಅದನ್ನು ಗ್ರಹವನ್ನಾಗಿಸಿದರು. ಅದೇ ರಾಹುವು ಪರ್ವದಿನಗಳಲ್ಲಿ (ಗ್ರಹಣಗಳಲ್ಲಿ) ದ್ವೇಷಬುದ್ಧಿಯುಳ್ಳವನಾಗಿ ಸೂರ್ಯ-ಚಂದ್ರರನ್ನು ನುಂಗಲು ಹೋಗುತ್ತದೆ. ॥ ೨೬ ॥ ದೇವತೆಗಳು ಅಮೃತ ಪಾನಮಾಡಿದ ಬಳಿಕ ಸಮಸ್ತ ಲೋಕಗಳಿಗೆ ಜೀವನದಾನ ಮಾಡುವಂತಹ ಭಗವಂತನು ದೊಡ್ಡ-ದೊಡ್ಡ ದೈತ್ಯರ ಇದಿರಿನಲ್ಲೇ ಮೋಹಿನೀ ರೂಪವನ್ನು ತ್ಯಜಿಸಿ ನಿಜರೂಪವನ್ನು ತಾಳಿದನು. ॥ ೨೭ ॥ ಪರೀಕ್ಷಿತನೇ! ಹೀಗೆ ದೇವ-ದಾನವರು ಒಂದೇ ಕಡೆಯಲ್ಲಿ, ಒಂದೇ ಕಾಲದಲ್ಲಿ, ಅಮೃತರೂಪವಾದ ಒಂದೇ ಪ್ರಯೋಜನಕ್ಕಾಗಿ, ಒಂದೇ ವಸ್ತುವಿಗಾಗಿ, ಒಂದೇ ವಿಚಾರದಿಂದ, ಒಂದೇ ಕರ್ಮವನ್ನು ಮಾಡಿದ್ದರು; ಆದರೆ ಫಲದಲ್ಲಿ ದೊಡ್ಡ ಭೇದವೇ ಉಂಟಾಯಿತು. ಅವರಲ್ಲಿ

ಏವಂ ಸುರಾಸುರಗಣಾಃ ಸಮದೇಶಕಾಲ-
ಹೇತ್ವರ್ಥಕರ್ಮಮತಯೋಽಪಿ ಫಲೇ ವಿಕಲ್ಪಾಃ ।
ತತ್ರಾಮೃತಂ ಸುರಗಣಾಃ ಫಲಮಂಜಸಾಽಽಪು-
ರ್ಯತ್ಪಾದಪಂಕಜರಜಃಶ್ರಯಣಾನ್ನ ದೈತ್ಯಾಃ ॥ ೨೮ ॥

ದೇವತೆಗಳು ತುಂಬಾ ಸುಲಭವಾಗಿ ತಮ್ಮ ಪರಿಶ್ರಮದ ಫಲ-ಅಮೃತವನ್ನು ಪಡೆದುಕೊಂಡರು. ಏಕೆಂದರೆ, ಅವರು ಭಗವಂತನ ಚರಣರಜವನ್ನು ಆಶ್ರಯಿಸಿದ್ದರು. ಆದರೆ ದೈತ್ಯರು ಭಗವಂತನನ್ನು ವಿರೋಧಿಸುವುದರಿಂದ ಅಮೃತದಿಂದ ವಂಚಿತರಾದರು. ॥ ೨೮ ॥

ಯದ್ಯುಜ್ಯತೇಽಸುವಸುಕರ್ಮಮನೋವಚೋಭಿ-
ರ್ದೇಹಾತ್ಮಜಾದಿಷು ನೃಭಿಸ್ತದಸತ್ಪೃಥಕ್ತ್ವಾತ್ ।
ತೈರೇವ ಸದ್ಭವತಿ ಯತ್ಕ್ರಿಯತೇಽಪೃಥಕ್ತ್ವಾತ್
ಸರ್ವಸ್ಯ ತದ್ಭವತಿ ಮೂಲನಿಷೇಚನಂ ಯತ್ ॥ ೨೯ ॥

ಮನುಷ್ಯನು ತನ್ನ ಪ್ರಾಣ, ಧನ, ಕರ್ಮ, ಮನಸ್ಸು, ಮಾತು ಮುಂತಾದವುಗಳಿಂದ ಶರೀರ ಮತ್ತು ಪುತ್ರಾದಿಗಳಿಗಾಗಿ ಮಾಡುವುದೆಲ್ಲವೂ ವ್ಯರ್ಥವೇ ಸರಿ. ಏಕೆಂದರೆ, ಅದರ ಮೂಲದಲ್ಲಿ ಭೇದಬುದ್ಧಿ ಇರುತ್ತದೆ. ಆದರೆ ಅದೇ ಪ್ರಾಣ ಮುಂತಾದ ವಸ್ತುಗಳಿಂದ ಭಗವಂತನಿಗಾಗಿ ಮಾಡಲಾಗುವುದೆಲ್ಲವೂ ಭೇದಭಾವದಿಂದ ರಹಿತವಾಗಿರುವದರಿಂದ ತನ್ನ ಶರೀರ, ಪುತ್ರ ಮತ್ತು ಸಮಸ್ತ ಜಗತ್ತಿಗಾಗಿ ಸಫಲವಾಗಿ ಹೋಗುತ್ತದೆ. ವೃಕ್ಷದ ಬೇರುಗಳಿಗೆ ನೀರುಣಿಸಿದರೆ ಅದರ ಶಾಖೋಪಶಾಖೆಗಳಿಗೆ ನೀರು ಸಿಗುವಂತೆ ಭಗವಂತನಿಗಾಗಿ ಕರ್ಮಮಾಡುವುದರಿಂದ ಅವು ಎಲ್ಲರಿಗಾಗಿ ಆಗಿಹೋಗುತ್ತವೆ. ॥ ೨೯ ॥

ಒಂಭತ್ತನೆಯ ಅಧ್ಯಾಯವು ಮುಗಿಯಿತು. ॥ ೯ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಅಷ್ಟಮ ಸ್ಕಂಧೇ
ಅಮೃತಮಥನೇ ನವಮೋಽಧ್ಯಾಯಃ ॥ ೯ ॥

ಹತ್ತನೆಯ ಅಧ್ಯಾಯ

ದೇವಾಸುರರ ಸಂಗ್ರಾಮ

ಶ್ರೀಶುಕ ಉವಾಚ

ಇತಿ ದಾನವದೈತೇಯಾ ನಾವಿಂದನ್ನಮೃತಂ ನೃಪ ।
ಯುಕ್ತಾಃ ಕರ್ಮಣಿ ಯತ್ತಾಶ್ಚ ವಾಸುದೇವಪರಾಙ್ಮುಖಾಃ ॥ ೧ ॥

ಸಾಧಯಿತ್ವಾಮೃತಂ ರಾಜನ್ಪಾಯಯಿತ್ವಾ ಸ್ವಕಾನ್ಸುರಾನ್ ।
ಪಶ್ಯತಾಂ ಸರ್ವಭೂತಾನಾಂ ಯಯೌ ಗರುಡವಾಹನಃ ॥ ೨ ॥

ಸಪತ್ನಾನಾಂ ಪರಾಮೃದ್ಧಿಂ ದೃಷ್ಟ್ವಾ ತೇ ದಿತಿನಂದನಾಃ ।
ಅಮೃಷ್ಯಮಾಣಾ ಉತ್ಪೇತುರ್ದೇವಾನ್ಪ್ರತ್ಯುದ್ಯತಾಯುಧಾಃ ॥ ೩ ॥

ತತಃ ಸುರಗಣಾಃ ಸರ್ವೇ ಸುಧಯಾ ಪೀತಯೈಧಿತಾಃ ।
ಪ್ರತಿಸಂಯುಯುಧುಃ ಶಸ್ತ್ರೈರ್ನಾರಾಯಣಪದಾಶ್ರಯಾಃ ॥ ೪ ॥

ತತ್ರ ದೈವಾಸುರೋ ನಾಮ ರಣಃ ಪರಮದಾರುಣಃ ।
ರೋಧಸ್ಯುದನ್ವತೋ ರಾಜಂಸ್ತುಮುಲೋ ರೋಮಹರ್ಷಣಃ ॥ ೫ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಓ ಪರೀಕ್ಷಿತನೇ! ದೈತ್ಯ-ದಾನವರು ಅಧಿಕ ಪ್ರಯಾಸದಿಂದಲೂ, ಅತ್ಯಂತ ಸಾಹಸದಿಂದಲೂ ಸಮುದ್ರಮಂಥನದ ಕೆಲಸದಲ್ಲಿ ಪಾಲ್ಗೊಂಡಿದ್ದರೂ, ಅವರು ಭಗವಂತನಿಂದ ವಿಮುಖರಾಗಿದ್ದರಿಂದ ಅವರಿಗೆ ಅಮೃತ ದೊರೆಯಲಿಲ್ಲ. ॥ ೧ ॥ ರಾಜನೇ! ಭಗವಂತನು ಕ್ಷೀರ ಸಮುದ್ರವನ್ನು ಕಡೆದು ಅಮೃತವನ್ನು ಪಡೆದು, ತನ್ನವರಾದ ದೇವತೆಗಳಿಗೆ ಪಾನಮಾಡಿಸಿ, ಎಲ್ಲರೂ ನೋಡುತ್ತಿರುವಂತೆ ಗರುಡಾರೂಢನಾಗಿ ಅಲ್ಲಿಂದ ಹೊರಟುಹೋದನು. ॥ ೨ ॥ ತಮ್ಮ ಶತ್ರುಗಳಿಗೆ ಅಮೃತಪಾನದಂತಹ ಸಫಲತೆ ದೊರೆತುದನ್ನು ಕಂಡು ದೈತ್ಯರು ಅವರ ಹಿರಿಮೆಯನ್ನು ಸಹಿಸದಾದರು. ಅವರು ಒಡನೆಯೇ ಆಯುಧಗಳನ್ನೆತ್ತಿಕೊಂಡು ದೇವತೆಗಳನ್ನು ಆಕ್ರಮಿಸಿದರು. ॥ ೩ ॥ ಇತ್ತ ದೇವತೆಗಳು ಅಮೃತವನ್ನು ಕುಡಿದು ವಿಶೇಷವಾದ ಶಕ್ತಿಯನ್ನು ಪಡೆದಿದ್ದರು; ಜೊತೆಗೆ ಭಗವಂತನ ಚರಣಕಮಲಗಳ ಆಶ್ರಯವೂ ಇತ್ತು. ಸರಿ, ಅವರೂ ಶಸ್ತ್ರಾಸ್ತ್ರಗಳಿಂದ ಸಜ್ಜಾಗಿ ದೈತ್ಯರೊಡನೆ ಹೋರಾಡತೊಡಗಿದರು. ॥ ೪ ॥ ಪರೀಕ್ಷಿತನೇ! ಕ್ಷೀರಸಾಗರದ ತೀರದಲ್ಲಿ ದೇವತೆಗಳಿಗೂ, ದಾನವರಿಗೂ 'ದೇವಾಸುರಸಂಗ್ರಾಮ'ವೆಂಬ ಪರಮ ದಾರುಣವಾದ, ರೋಮಾಂಚಕರವಾದ, ಭೀಕರವಾದ ಯುದ್ಧವು ಪ್ರಾರಂಭವಾಯಿತು. ॥ ೫ ॥ ದೇವ-ದಾನವರಿಬ್ಬರೂ ಪರಸ್ಪರ ಪರಮ ಶತ್ರುಗಳಾಗಿದ್ದರು. ಉಭಯ ಪಕ್ಷದವರು

ತತ್ರಾನ್ಯೋನ್ಯಂ ಸಪತ್ನಾಸ್ತೇ ಸಂರಬ್ಧಮನಸೋ ರಣೇ ।
ಸಮಾಸಾದ್ಯಾಸಿಭಿರ್ಬಾಣೈರ್ನಿಜಘ್ನುರ್ವಿವಿಧಾಯುಧೈಃ ॥ ೬ ॥

ಶಂಖತೂರ್ಯಮೃದಂಗಾನಾಂ ಭೇರೀಡಮರಿಣಾಂ ಮಹಾನ್ ।
ಹಸ್ತ್ಯಶ್ವರಥಪತ್ತೀನಾಂ ನದತಾಂ ನಿಸ್ವನೋಽಭವತ್ ॥ ೭ ॥

ರಥಿನೋ ರಥಿಭಿಸ್ತತ್ರ ಪತ್ತಿಭಿಃ ಸಹ ಪತ್ತಯಃ ।
ಹಯಾ ಹಯೈರಿಭಾಶ್ಚೇಭೈಃ ಸಮಸಜ್ಜಂತ ಸಂಯುಗೇ ॥ ೮ ॥

ಉಷ್ಟ್ರೈಃ ಕೇಚಿದಿಭೈಃ ಕೇಚಿದಪರೇ ಯುಯುಧುಃ ಖರೈಃ ।
ಕೇಚಿದ್ಗೌರಮುಖೈರೃಕ್ಷೈರ್ದ್ವೀಪಿಭಿರ್ಹರಿಭಿರ್ಭಟಾಃ ॥ ೯ ॥

ಗೃಧ್ರೈಃ ಕಂಕೈರ್ಬಕೈರನ್ಯೇ ಶ್ಯೇನಭಾಸೈಸ್ತಿಮಿಂಗಿಲೈಃ ।
ಶರಭೈರ್ಮಹಿಷೈಃ ಖಡ್ಗೈರ್ಗೋವೃಷೈರ್ಗವಯಾರುಣೈಃ ॥ ೧೦ ॥

ಶಿವಾಭಿರಾಖುಭಿಃ ಕೇಚಿತ್ಕೃಕಲಾಸೈಃ ಶಶೈರ್ನರೈಃ ।
ಬಸ್ತೈರೇಕೇ ಕೃಷ್ಣಸಾರೈರ್ಹಂಸೈರನ್ಯೇ ಚ ಸೂಕರೈಃ ॥ ೧೧ ॥

ಅನ್ಯೇ ಜಲಸ್ಥಲಖಗೈಃ ಸತ್ತ್ವೈರ್ವಿಕೃತವಿಗ್ರಹೈಃ ।
ಸೇನಯೋರುಭಯೋ ರಾಜನ್ವಿವಿಶುಸ್ತೇಽಗ್ರತೋಽಗ್ರತಃ ॥ ೧೨ ॥

ಚಿತ್ರಧ್ವಜಪಟೈ ರಾಜನ್ನಾತಪತ್ರೈಃ ಸಿತಾಮಲೈಃ ।
ಮಹಾಧನೈರ್ವಜ್ರದಂಡೈರ್ವ್ಯಜನೈರ್ಬಾರ್ಹಚಾಮರೈಃ ॥ ೧೩ ॥

ವಾತೋದ್ಧೂತೋತ್ತರೋಷ್ಣೀಷೈರರ್ಚಿರ್ಭಿರ್ವರ್ಮಭೂಷಣೈಃ ।
ಸ್ಫುರದ್ಭಿರ್ವಿಶದೈಃ ಶಸ್ತ್ರೈಃ ಸುತರಾಂ ಸೂರ್ಯರಶ್ಮಿಭಿಃ ॥ ೧೪ ॥

ದೇವದಾನವವೀರಾಣಾಂ ಧ್ವಜಿನ್ಯೌ ಪಾಂಡುನಂದನ ।
ರೇಜತುರ್ವೀರಮಾಲಾಭಿರ್ಯಾದಸಾಮಿವ ಸಾಗರೌ ॥ ೧೫ ॥

ವೈರೋಚನೋ ಬಲಿಃ ಸಂಖ್ಯೇ ಸೋಽಸುರಾಣಾಂ ಚಮೂಪತಿಃ ।
ಯಾನಂ ವೈಹಾಯಸಂ ನಾಮ ಕಾಮಗಂ ಮಯನಿರ್ಮಿತಮ್ ॥ ೧೬ ॥

ಸರ್ವಸಾಂಗ್ರಾಮಿಕೋಪೇತಂ ಸರ್ವಾಶ್ಚರ್ಯಮಯಂ ಪ್ರಭೋ ।
ಅಪ್ರತರ್ಕ್ಯಮನಿರ್ದೇಶ್ಯಂ ದೃಶ್ಯಮಾನಮದರ್ಶನಮ್ ॥ ೧೭ ॥

ಕ್ರೋಧಾಭಿಭೂತರಾಗಿದ್ದರು. ಒಬ್ಬರಿಗೊಬ್ಬರು ಇದಿರು-ಬದುರು ನಿಂತು ಬಾಣ-ಖಡ್ಗ ಮುಂತಾದ ಅನೇಕಾನೇಕ ಅಸ್ತ್ರ-ಶಸ್ತ್ರಗಳಿಂದ ಪರಸ್ಪರ ಹೊಡೆದಾಡತೊಡಗಿದರು. ॥ ೬ ॥ ಆಗ ರಣರಂಗದಲ್ಲಿ ಶಂಖ, ತೂರ್ಯ, ಮೃದಂಗ, ಭೇರಿ, ಡಮರು ಮುಂತಾದ ವಾದ್ಯಗಳು ಜೋರಾಗಿ ಮೊಳಗಿದವು. ಆನೆಗಳ ಘೀಂಕಾರ, ಕುದುರೆಗಳ ಹೇಷಾರವ, ರಥಗಳ ಚೀತ್ಕಾರ, ಪದಾತಿಗಳ ಸಿಂಹನಾದ ಇವುಗಳಿಂದ ಭಾರೀ ಕೋಲಾಹಲವುಂಟಾಯಿತು. ॥ ೭॥ ■ ಮಹಾಯುದ್ಧದಲ್ಲಿ ರಥಿಕರು-ರಥಿಕರೊಡನೆಯೂ, ಪದಾತಿಗಳು- ಕಾಲಾಳುಗಳೊಡನೆಯೂ, ಕುದುರೆಸವಾರರು-ಅಶ್ವಾರೋಹಿಗಳೊಡನೆಯೂ, ಗಜಸೈನಿಕರು-ಗಜಸೈನಿಕರೊಡನೆಯೂ ಕಾದಾಡುತ್ತಿದ್ದರು. ॥ ೮ ॥ ಅವರಲ್ಲಿ ಕೆಲವರು ಒಂಟೆಗಳ ಮೇಲೂ, ಕೆಲವರು ಆನೆಗಳ ಮೇಲೂ, ಕತ್ತೆಗಳ ಮೇಲೂ, ಕೆಲವರು ಗೌರಮೃಗಗಳ ಮೇಲೂ, ಕೆಲವರು ಕರಡಿ, ಹುಲಿ, ಸಿಂಹಗಳ ಮೇಲೂ ಹತ್ತಿಕೊಂಡು ಯುದ್ಧ ಮಾಡುತ್ತಿದ್ದರು. ॥ ೯ ॥ ಕೆಲ-ಕೆಲವು ಸೈನಿಕರು ಹದ್ದುಗಳ ಮೇಲೂ, ಬಕಗಳ ಮೇಲೆಯೂ, ಗಿಡುಗ, ತಿಮಿಂಗಿಲ, ಮೊಸಳೆ, ಶರಭ, ಎಮ್ಮೆ, ಖಡ್ಗಮೃಗ, ಎತ್ತು, ಗವಯ ಮುಂತಾದವುಗಳ ಮೇಲೆ ಕುಳಿತು ಯುದ್ಧ ಮಾಡುತ್ತಿದ್ದರು. ॥ ೧೦ ॥ ಕೆಲವರು ರುಣಗಳೆಂಬ ಪ್ರಾಣಿಗಳ ಮೇಲೂ, ನರಿಗಳು, ಇಲಿಗಳು, ಓತಿಕೇತ, ಇಲಿ, ಮೊಲ, ಮನುಷ್ಯ, ಟಗರು, ಜಿಂಕೆ, ಹಂಸ, ಹಂದಿಗಳು ಮುಂತಾದ ಪ್ರಾಣಿಗಳ ಮೇಲೆ ಕುಳಿತುಕೊಂಡು ಕಾದಾಡುತ್ತಿದ್ದರು. ॥ ೧೧ ॥ ಹೀಗೆ ನೆಲ-ಜಲ-ನಭಗಳಲ್ಲಿ ವಾಸಿಸುವ, ನೋಡಲು ಭಯಂಕರವಾದ ಶರೀರಗಳುಳ್ಳ ಅನೇಕ ಪ್ರಾಣಿಗಳ ಮೇಲೆ ಹತ್ತಿಕೊಂಡು ದೇವ-ದಾನವರು ಮುಂದೆ ನುಗ್ಗುತ್ತಾ ಹೋರಾಡುತ್ತಿದ್ದರು. ॥ ೧೨ ॥

ಪರೀಕ್ಷಿತನೇ! ಚಿತ್ರ-ವಿಚಿತ್ರವಾದ ಧ್ವಜ-ಪತಾಕೆಗಳಿಂದಲೂ, ಸ್ಫಟಿಕದಂತೆ ನಿರ್ಮಲವಾದ ಶುಭ್ರ ಛತ್ರಗಳಿಂದಲೂ, ವಜ್ರಖಚಿತವಾದ ದಂಡಗಳಿಂದಲೂ, ಬಹುಮೂಲ್ಯ ಬೀಸಣಿಗೆಗಳಿಂದಲೂ, ನವಿಲುಗರಿಗಳೂ, ಚಾಮರಗಳಿಂದಲೂ, ಗಾಳಿಗೆ ಹಾರಾಡುತ್ತಿದ್ದ ಉತ್ತರೀಯಗಳಿಂದಲೂ, ಪೇಟಗಳಿಂದಲೂ, ಸೈನಿಕರು ಧರಿಸಿದ್ದ ವಸ್ತ್ರಾಭರಣಗಳಿಂದಲೂ, ಸೂರ್ಯಕಿರಣಗಳಂತೆ ಹೊಳೆಯುವ ಖಡ್ಗವೇ ಮುಂತಾದ ಆಯುಧಗಳಿಂದಲೂ, ವೀರಮಾಲೆಗಳನ್ನು ಧರಿಸಿದ್ದ ದೇವತೆಗಳ ಸಾಲುಗಳಿಂದಲೂ, ಅಸುರರ ಸೈನ್ಯದಿಂದ ತುಂಬಿದ ಆ ರಣರಂಗವು ಜಲ-ಜಂತುಗಳಿಂದ ತುಂಬಿದ ಎರಡನೆಯ ಸಮುದ್ರದಂತೆ ಕಂಗೊಳಿಸುತ್ತಿತ್ತು. ॥ ೧೩-೧೫ ॥ ಪರೀಕ್ಷಿತನೇ! ರಣಾಂಗಣದಲ್ಲಿ ದೈತ್ಯರ ಸೇನಾಪತಿಯಾದ ವಿರೋಚನಪುತ್ರ ಬಲಿಯು ಮಯದಾನವನಿಂದ ನಿರ್ಮಿತವಾದ ವೈಹಾಯಸವೆಂಬ ವಿಮಾನದಲ್ಲಿ ಕುಳಿತಿದ್ದನು. ಆ ವಿಮಾನವು ಕುಳಿತಿದ್ದವರು ಇಚ್ಛಿಸಿದೆಡೆಗೆ ಹೋಗುವುದಾಗಿತ್ತು. ॥ ೧೬ ॥ ಅದರಲ್ಲಿ ಯುದ್ಧದ ಸಮಸ್ತ ಸಾಮಗ್ರಿಗಳು ಸುಸಜ್ಜಿತವಾಗಿದ್ದವು. ಮಹಾರಾಜಾ! ಆ ವಿಮಾನವು ಅತ್ಯಂತ ಆಶ್ಚರ್ಯಕರವಾಗಿದ್ದು ಕೆಲವು ವೇಳೆ ಕಾಣಿಸಿಕೊಳ್ಳುತ್ತಾ, ಕೆಲವು ಸಲ ಅದೃಶ್ಯವಾಗಿರುತ್ತಿತ್ತು. ಅದು ಎಲ್ಲಿದೆ ಎಂದು ಯಾರಿಂದಲೂ ಹೇಳಲಾಗುತ್ತಿರಲಿಲ್ಲ; ಊಹಿಸಲಾಗುತ್ತಿರಲಿಲ್ಲ. ॥ ೧೭ ॥

ಆಸ್ಥಿತಸ್ತದ್ವಿಮಾನಾಗ್ರ್ಯಂ ಸರ್ವಾನೀಕಾಧಿಪೈರ್ವೃತಃ ।
ಬಾಲವ್ಯಜನಛತ್ರಾಗ್ರ್ಯೈ ರೇಜೇ ಚಂದ್ರ ಇವೋದಯೇ
॥ ೧೮ ॥

ತಸ್ಯಾಸನ್ಸರ್ವತೋ ಯಾನೈರ್ಯೂಥಾನಾಂ ಪತಯೋಽಸುರಾಃ ।
ನಮುಚಿಃ ಶಂಬರೋ ಬಾಣೋ ವಿಪ್ರಚಿತ್ತಿರಯೋಮುಖಃ
॥ ೧೯ ॥

ದ್ವಿಮೂರ್ಧಾ ಕಾಲನಾಭೋಽಥ ಪ್ರಹೇತಿರ್ಹೇತಿರಿಲ್ವಲಃ ।
ಶಕುನಿರ್ಭೂತಸಂತಾಪೋ ವಜ್ರದಂಷ್ಟ್ರೋ ವಿರೋಚನಃ
॥ ೨೦ ॥

ಹಯಗ್ರೀವಃ ಶಂಕುಶಿರಾಃ ಕಪಿಲೋ ಮೇಘದುಂದುಭಿಃ ।
ತಾರಕಶ್ಚಕ್ರದೃಕ್ಶುಂಭೋ ನಿಶುಂಭೋ ಜಂಭ ಉತ್ಕಲಃ
॥ ೨೧ ॥

ಅರಿಷ್ಟೋಽರಿಷ್ಟನೇಮಿಶ್ಚ ಮಯಶ್ಚ ತ್ರಿಪುರಾಧಿಪಃ ।
ಅನ್ಯೇ ಪೌಲೋಮಕಾಲೇಯಾ ನಿವಾತಕವಚಾದಯಃ
॥ ೨೨ ॥

ಅಲಬ್ಧಭಾಗಾಃ ಸೋಮಸ್ಯ ಕೇವಲಂ ಕ್ಲೇಶಭಾಗಿನಃ ।
ಸರ್ವ ಏತೇ ರಣಮುಖೇ ಬಹುಶೋ ನಿರ್ಜಿತಾಮರಾಃ
॥ ೨೩ ॥

ಸಿಂಹನಾದಾನ್ವಿಮುಂಚಂತಃ ಶಂಖಾನ್‌ದಧ್ಮುರ್ಮಹಾರವಾನ್ ।
ದೃಷ್ಟ್ವಾ ಸಪತ್ನಾನುತ್ಸಿಕ್ತಾನ್ಬಲಭಿತ್ಕುಪಿತೋ ಭೃಶಮ್
॥ ೨೪ ॥

ಐರಾವತಂ ದಿಕ್ಕರಿಣಮಾರೂಢಃ ಶುಶುಭೇ ಸ್ವರಾಟ್ ।
ಯಥಾ ಸ್ರವತ್ಪ್ರಸ್ರವಣಮುದಯಾದ್ರಿಮಹರ್ಪತಿಃ
॥ ೨೫ ॥

ತಸ್ಯಾಸನ್ಸರ್ವತೋ ದೇವಾ ನಾನಾವಾಹಧ್ವಜಾಯುಧಾಃ ।
ಲೋಕಪಾಲಾಃ ಸಹ ಗಣೈರ್ವಾಯ್ವಗ್ನಿವರುಣಾದಯಃ
॥ ೨೬ ॥

ತೇಽನ್ಯೋನ್ಯಮಭಿಸಂಸೃತ್ಯ
ಕ್ಷಿಪಂತೋ ಮರ್ಮಭಿರ್ಮಿಥಃ ।
ಆಹ್ವಯಂತೋ ವಿಶಂತೋಽಗ್ರೇ
ಯುಯುಧುರ್ದ್ವಂದ್ವಯೋಧಿನಃ ॥ ೨೭ ॥

ಯುಯೋಧ ಬಲಿರಿಂದ್ರೇಣ ತಾರಕೇಣ ಗುಹೋಽಸ್ಯತ ।
ವರುಣೋ ಹೇತಿನಾಯುಧ್ಯನ್ಮಿತ್ರೋ ರಾಜನ್ಪ್ರಹೇತಿನಾ
॥ ೨೮ ॥

ಯಮಸ್ತು ಕಾಲನಾಭೇನ ವಿಶ್ವಕರ್ಮಾ ಮಯೇನ ವೈ ।
ಶಂಬರೋ ಯುಯುಧೇ ತ್ವಷ್ಟ್ರಾ ಸವಿತ್ರಾ ತು ವಿರೋಚನಃ
॥ ೨೯ ॥

ಅಪರಾಜಿತೇನ ನಮುಚಿರಶ್ವಿನೌ ವೃಷಪರ್ವಣಾ ।
ಸೂರ್ಯೋ ಬಲಿಸುತೈರ್ದೇವೋ ಬಾಣಜ್ಯೇಷ್ಠೈಃ ಶತೇನ ಚ
॥ ೩೦ ॥

ಅಂತಹ ಶ್ರೇಷ್ಠವಿಮಾನದಲ್ಲಿ ಬಲಿಯು ಕುಳಿತಿದ್ದನು. ದೊಡ್ಡ-ದೊಡ್ಡ ಸೇನಾಪತಿಗಳು ಅವನನ್ನು ಸುತ್ತುವರಿಯಲ್ಪಟ್ಟಿದ್ದರು. ಚಾಮರ, ಬೀಸಣಿಗೆ, ಬೆಳ್ಗೊಡೆ ಮುಂತಾದವುಗಳಿಂದ ಕೂಡಿದ ಬಲಿಯು ಆಗತಾನೇ ಉದಯಿಸಿದ ಚಂದ್ರನಂತೆ ಪ್ರಕಾಶಿಸುತ್ತಿದ್ದನು. ॥ ೧೮ ॥ ಅವನ ಸುತ್ತಲೂ ವಿಮಾನಾರೂಢ ಯೂಥಪತಿಗಳಾದ ನಮೂಚಿ, ಶಂಬರ, ಬಾಣ, ವಿಪ್ರಚಿತ್ತಿ, ಅಯೋಮುಖ, ದ್ವಿಮೂರ್ಧಾ, ಕಾಲನಾಭ, ಪ್ರಹೇತಿ, ಹೇತಿ, ಇಲ್ವಲ, ಶಕುನಿ, ಭೂತಸಂತಾಪ, ವಜ್ರದಂಷ್ಟ್ರ, ವಿರೋಚನ, ಹಯಗ್ರೀವ, ಶಂಕುಶಿರ, ಕಪಿಲ, ಮೇಘದುಂದುಭಿ, ತಾರಕ, ಚಕ್ರಾಕ್ಷ, ಶುಂಭ, ನಿಶುಂಭ, ಜಂಭ, ಉತ್ಕಲ, ಅರಿಷ್ಟ, ಅರಿಷ್ಟನೇಮಿ, ತ್ರಿಪುರಾಧಿಪತಿಯಾದ ಮಯ, ಪೌಲೋಮ, ಕಾಲೇಯ, ನಿವಾತಕವಚ ಮೊದಲಾದವರು ತಮ್ಮ ತುಕಡಿಗಳಿಂದ ಯುದ್ಧ ಸನ್ನದ್ಧರಾಗಿದ್ದರು. ॥ ೧೯-೨೨ ॥ ಇವರೆಲ್ಲರೂ ಸಮುದ್ರ ಮಂಥನದಲ್ಲಿ ಪಾಲ್ಗೊಂಡವರೇ ಆಗಿದ್ದರು. ಆದರೆ ಇವರಿಗೆ ಅಮೃತದ ಪಾಲು ಸಿಗದೆ ಕೇವಲ ಕ್ಲೇಶವೇ ಕೈಸತ್ತಿತ್ತು. ಇವೆಲ್ಲ ಅಸುರರು ಒಮ್ಮೆಯಲ್ಲ, ಅನೇಕ ಬಾರಿ ಯುದ್ಧದಲ್ಲಿ ದೇವತೆಗಳನ್ನು ಸೋಲಿಸಿದ್ದರು. ॥ ೨೩ ॥ ಇದರಿಂದಾಗಿ ಅವರು ಭಾರೀ ಉತ್ಸಾಹದಿಂದ ಸಿಂಹನಾದವನ್ನು ಮಾಡುತ್ತಾ ತಮ್ಮ ಘೋರವಾದ ಶಬ್ದವುಳ್ಳ ಶಂಖಗಳನ್ನು ಊದುತ್ತಿದ್ದರು. ಸ್ವರ್ಗಾಧಿಪತಿಯಾದ ಇಂದ್ರನು – ಗರ್ವದಿಂದ ಬೀಗುತ್ತಿದ್ದ ಯುದ್ಧೋದ್ಯುಕ್ತರಾದ ಶತ್ರುಗಳನ್ನು ಕಂಡು ಭಾರೀ ಕ್ರುದ್ಧನಾದನು. ॥ ೨೪ ॥ ಗಿರಿ–ನದಿಗಳಿಂದ ಕೂಡಿದ ಉದಯಾಚಲವನ್ನೇರಿ ಪ್ರಕಾಶಿಸುವ ಸೂರ್ಯನಂತೆ ಇಂದ್ರನು ಮದೋದಕವನ್ನು ಸುರಿಸುತ್ತಿದ್ದ ಐರಾವತವೆಂಬ ದಿಗ್ಗಜದ ಮೇಲೆ ಕುಳಿತು ಬಹಳವಾಗಿ ಪ್ರಕಾಶಿಸಿದನು. ॥ ೨೫ ॥ ದೇವೇಂದ್ರನ ಸುತ್ತಲೂ ಅನೇಕ ವಿಧವಾದ ವಾಹನಗಳಿಂದಲೂ, ಧ್ವಜಗಳಿಂದಲೂ, ಆಯುಧಗಳಿಂದಲೂ ಯುಕ್ತರಾದ ವಾಯು, ಅಗ್ನಿ, ವರುಣ ಮುಂತಾದ ಲೋಕಪಾಲರು ತಮ್ಮ-ತಮ್ಮ ಗಣಗಳೊಂದಿಗೆ ಯುದ್ಧಸನ್ನದ್ಧರಾಗಿ ನಿಂತಿದ್ದರು. ॥ ೨೬ ॥

ದೇವ-ದಾನವರ ಸೈನ್ಯಗಳು ಎದುರು-ಬದುರಾಗಿ ನಿಂತವು. ಇಬ್ಬಿಬ್ಬರೇ ನಿಂತು ಮಾಡುವ ದ್ವಂದ್ವಯುದ್ಧವನ್ನು ಪ್ರಾರಂಭಿಸಿದರು. ಕೆಲವರು ಮುಂದೆ ಬಂದು ತಮ್ಮ ಎದುರಾಳಿಯನ್ನು ಹೆಸರುಹಿಡಿದು ಕರೆಯುತ್ತಿದ್ದರೆ, ಕೆಲವರು ಮರ್ಮಭೇದಕ ಚುಚ್ಚುಮಾತುಗಳಿಂದ ನಿಂದಿಸುತ್ತಿದ್ದರು. ॥ ೨೭ ॥ ರಾಜೇಂದ್ರನೇ! ಬಲಿಯು ಇಂದ್ರನೊಡನೆಯೂ, ತಾರಕನು ಕುಮಾರಸ್ವಾಮಿಯೊಂದಿಗೂ, ಹೇತಿಯು ವರುಣನೊಡನೆಯೂ, ಪ್ರಹೇತಿಯು ಸೂರ್ಯನೊಡನೆಯೂ ದ್ವಂದ್ವಯುದ್ಧವನ್ನು ಪ್ರಾರಂಭಿಸಿದರು. ॥ ೨೮ ॥ ಯಮನು ಕಾಲನಾಭನೊಡನೆಯೂ, ವಿಶ್ವಕರ್ಮನು ಮಯನೊಡನೆಯೂ, ಶಂಬರಾಸುರನು ತ್ವಷ್ಟ್ರುವಿನೊಡನೆಯೂ, ಸವಿತೃವು ವಿರೋಚನನೊಡನೆಯೂ ದ್ವಂದ್ವಯುದ್ಧವನ್ನು ಪ್ರಾರಂಭಿಸಿದರು. ॥ ೨೯ ॥ ನಮುಚಿಯು ಅಪರಾಜಿತನೊಡನೆಯೂ, ಅಶ್ವಿನೀಕುಮಾರರು ವೃಷಪರ್ವನೊಡನೆಯೂ, ಸೂರ್ಯನು ಬಾಣನೇ ಮೊದಲಾದ ಬಲಿಯ ನೂರು ಮಕ್ಕಳೊಂದಿಗೂ ಯುದ್ಧ ಮಾಡತೊಡಗಿದರು. ॥ ೩೦ ॥

ರಾಹುಣಾ ಚ ತಥಾ ಸೋಮಃ ಪುಲೋಮ್ನಾ ಯುಯುಧೇಽನಿಲಃ।
ನಿಶುಂಭಶುಂಭಯೋರ್ದೇವೀ ಭದ್ರಕಾಲೀ ತರಸ್ವಿನೀ ॥ ೩೦ ॥

ವೃಷಾಕಪಿಸ್ತು ಜಂಭೇನ ಮಹಿಷೇಣ ವಿಭಾವಸುಃ ।
ಇಲ್ವಲಃ ಸಹ ವಾತಾಪಿರ್ಬ್ರಹ್ಮಪುತ್ರೈರರಿಂದಮ ॥ ೩೨ ॥

ಕಾಮದೇವೇನ ದುರ್ಮರ್ಷ ಉತ್ಕಲೋ ಮಾತೃಭಿಃ ಸಹ।
ಬೃಹಸ್ಪತಿಶ್ಚೋಶನಸಾ ನರಕೇಣ ಶನೈಶ್ಚರಃ ॥ ೩೩ ॥

ಮರುತೋ ನಿವಾತಕವಚೈಃ ಕಾಲೇಯೈರ್ವಸವೋಽಮರಾಃ ।
ವಿಶ್ವೇದೇವಾಸ್ತು ಪೌಲೋಮೈ ರುದ್ರಾಃ ಕ್ರೋಧವಶೈಃ ಸಹ ॥ ೩೪ ॥

ತ ಏವಮಾಜಾವಸುರಾಃ ಸುರೇಂದ್ರಾ
ದ್ವಂದ್ವೇನ ಸಂಹತ್ಯ ಚ ಯುಧ್ಯಮಾನಾಃ ।
ಅನ್ಯೋನ್ಯಮಾಸಾದ್ಯ ನಿಜಘ್ನುರೋಜಸಾ
ಜಿಗೀಷವಸ್ತೀಕ್ಷ್ಣಶರಾಸಿತೋಮರೈಃ ॥ ೩೫ ॥

ಭುಶುಂಡಿಭಿಶ್ಚಕ್ರಗದರ್ಷ್ಟಿಪಟ್ಟಿಶೈಃ
ಶಕ್ತ್ಯುಲ್ಮುಕೈಃ ಪ್ರಾಸಪರಶ್ವಧೈರಪಿ ।
ನಿಸ್ತ್ರಿಂಶಭಲ್ಲೈಃ ಪರಿಘೈಃ ಸಮುದ್ಗರೈಃ
ಸಭಿಂದಿಪಾಲೈಶ್ಚ ಶಿರಾಂಸಿ ಚಿಚ್ಛಿದುಃ ॥ ೩೬ ॥

ಗಜಾಸ್ತುರಂಗಾಃ ಸರಥಾಃ ಪದಾತಯಃ
ಸಾರೋಹವಾಹಾ ವಿವಿಧಾ ವಿಖಂಡಿತಾಃ ।
ನಿಕೃತ್ತಬಾಹೂರುಶಿರೋಧರಾಂಘ್ರಯ-
ಶ್ಛಿನ್ನಧ್ವಜೇಷ್ವಾಸತನುತ್ರಭೂಷಣಾಃ ॥ ೩೭ ॥

ತೇಷಾಂ ಪದಾಘಾತರಥಾಂಗಚೂರ್ಣಿತಾ-
ದಾಯೋಧನಾದುಲ್ಬಣ ಉತ್ಥಿತಸ್ತದಾ ।
ರೇಣುರ್ದಿಶಃ ಖಂ ದ್ಯುಮಣಿಂ ಚ ಛಾದಯನ್
ನ್ಯವರ್ತತಾಸೃಕ್‌ಸ್ರುತಿಭಿಃ ಪರಿಪ್ಲುತಾತ್ ॥ ೩೮ ॥

ಶಿರೋಭಿರುದ್ಧೂತಕಿರೀಟಕುಂಡಲೈಃ
ಸಂರಂಭದೃಗ್ಭಿಃ ಪರಿದಷ್ಟದಚ್ಛದೈಃ ।
ಮಹಾಭುಜೈಃ ಸಾಭರಣೈಃ ಸಹಾಯುಧೈಃ
ಸಾ ಪ್ರಾಸ್ತೃತಾ ಭೂಃ ಕರಭೋರುಭಿರ್ಬಭೌ ॥ ೩೯ ॥

ಕಬಂಧಾಸ್ತತ್ರ ಚೋತ್ಪೇತುಃ ಪತಿತಸ್ವಶಿರೋಽಕ್ಷಿಭಿಃ ।
ಉದ್ಯತಾಯುಧದೋರ್ದಂಡೈರಾಧಾವಂತೋ ಭಟಾನ್ಮೃಧೇ ॥ ೪೦ ॥

ಚಂದ್ರನು ರಾಹುವಿನೊಂದಿಗೂ, ವಾಯುವು ಪುಲೋಮನೊಂದಿಗೂ ಕಾದಾಡಿದರು. ಭದ್ರಕಾಳಿಯು ಶುಂಭ, ನಿಶುಂಭ ರೊಡನೆ ಹೋರಾಡಿದಳು. ॥ ೩೦ ॥ ಪರೀಕ್ಷಿತನೇ! ಜಂಭಾಸುರ ನೊಡನೆ ಮಹಾದೇವನೂ, ಮಹಿಷಾಸುರನೊಡನೆ ಅಗ್ನಿದೇವನೂ, ವಾತಾಪಿ-ಇಲ್ವಲರೊಡನೆ ಬ್ರಹ್ಮನ ಮಕ್ಕಳಾದ ಮರೀಚಿಯೇ ಮೊದಲಾದವರು ಯುದ್ಧಮಾಡಿದರು. ॥ ೩೨ ॥ ದುರ್ಮರ್ಷಣ ನೊಡನೆ ಕಾಮದೇವನೂ, ಉತ್ಕಲನೊಡನೆ ಮಾತೃದೇವತೆಗಳೂ, ಶುಕ್ರಾಚಾರ್ಯನೊಡನೆ ಬೃಹಸ್ಪತ್ಯಾಚಾರ್ಯರೂ, ನರಕಾಸುರ ನೊಡನೆ ಶನೈಶ್ಚರನೂ ಯುದ್ಧಮಾಡತೊಡಗಿದರು. ॥ ೩೩ ॥ ನಿವಾತಕವಚ ರೊಡನೆ ಮರುದ್ಗಣರೂ, ಕಾಲೇಯರೊಡನೆ ವಸುಗಣ ಗಳೂ, ಪೌಲೋಮರೊಡನೆ ವಿಶ್ವೇದೇವಗಣಗಳೂ, ಕ್ರೋಧವಶ ರೊಡನೆ ರುದ್ರಗಣಗಳೂ ದ್ವಂದ್ವಯುದ್ಧದಲ್ಲಿ ತೊಡಗಿದರು. ॥ ೩೪ ॥

ಹೀಗೆ ದೇವತೆಗಳೂ, ಅಸುರರೂ ರಣಭೂಮಿಯಲ್ಲಿ ದ್ವಂದ್ವ ಯುದ್ಧದ ಮೂಲಕವೂ, ಸಾಮೂಹಿಕಯುದ್ಧದ ಮೂಲಕವೂ ಒಂದು ಪಕ್ಷದವರು ಇನ್ನೊಂದು ಪಕ್ಷದವರೊಡನೆ ಕಾದಾಡುತ್ತಾ ವಿಜಯದ ಇಚ್ಛೆಯಿಂದ ಉತ್ಸಾಹದಿಂದ ತೀಕ್ಷ್ಣವಾದ ಖಡ್ಗಗಳಿಂದಲೂ, ಭಲ್ಲೆಗಳಿಂದಲೂ, ಬಾಣಗಳಿಂದಲೂ, ಪರಸ್ಪರ ಪ್ರಹಾರಮಾಡುತ್ತಾ ನಾನಾರೀತಿಯಿಂದ ಯುದ್ಧಮಾಡುತ್ತಿದ್ದಾರೆ. ॥ ೩೫ ॥ ಭುಶುಂಡಿ, ಚಕ್ರ, ಗದೆ, ಋಷ್ಟಿ, ಪಟ್ಟಿಶ, ಶಕ್ತಿ, ಉಲ್ಮುಕ, ಪ್ರಾಸ, ಗಂಡುಕೊಡಲಿ, ಕತ್ತಿ, ಭಲ್ಲೆ, ಮುದ್ಗರ, ಪರಿಘ, ಭಿಂದಿಪಾಲ ಮುಂತಾದ ಆಯುಧಗಳಿಂದ ಒಬ್ಬರು ಮತ್ತೊಬ್ಬರ ತಲೆಯನ್ನು ಕಡಿಯತೊಡಗಿದರು. ॥ ೩೬ ॥ ಭಯಂಕರವಾದ ಆ ಮಹಾ ಯುದ್ಧದಲ್ಲಿ ಗಜಾಶ್ವ ಸೈನಿಕರ, ರಥಿಕರ, ಪದಾತಿಗಳ, ಸೇನಾಪತಿಗಳ ತೋಳು, ತೊಡೆ, ತಲೆ, ಕಾಲುಗಳೂ, ಅವರು ಧರಿಸಿದ್ದ ಧ್ವಜ, ಧನುಸ್ಸು, ಕವಚ, ಆಭೂಷಣಗಳೂ ಛಿನ್ನ-ಭಿನ್ನವಾದುವು. ॥ ೩೭ ॥ ಸೈನಿಕರ ಕಾಲುಗಳ ಸಂಘಟ್ಟನೆಯಿಂದಲೂ, ರಥಚಕ್ರಗಳ ಹರಿದಾಟದಿಂದಲೂ, ರಣರಂಗದಲ್ಲಿ ಎದ್ದಿರುವ ಧೂಳಿಯು ಎಲ್ಲ ದಿಕ್ಕುಗಳನ್ನೂ, ಅಂತರಿಕ್ಷವನ್ನೂ, ಸೂರ್ಯನನ್ನೂ ಮುಸುಕಿಬಿಟ್ಟಿತು. ಆದರೆ ಮರುಕ್ಷಣದಲ್ಲೇ ಪ್ರವಾಹರೂಪದಿಂದ ಹರಿದ ರಕ್ತದಿಂದ ನೆನೆದು ಆ ಧೂಳಿಯು ಉಡುಗಿಹೋಯಿತು. ॥ ೩೮ ॥ ಅನಂತರ ರಣರಂಗವು ಕತ್ತರಿಸಲ್ಪಟ್ಟ ಶಿರಸ್ಸುಗಳಿಂದ ತುಂಬಿ ಹೋಯಿತು. ಸೈನಿಕರ ಕಿರೀಟಗಳೂ, ಕುಂಡಲಗಳೂ ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದವು. ಕೆಲವರ ಕಣ್ಣುಗಳಿಂದ ಕ್ರೋಧದ ಚಿಹ್ನೆಯು ಕಾಣುತ್ತಿದ್ದಿತು. ಕೆಲವರು ಹಲ್ಲುಗಳಿಂದ ತುಟಿಗಳನ್ನು ಕಚ್ಚಿದ್ದರು. ಅನೇಕರ ಆಭೂಷಣಗಳಿಂದ, ಶಸ್ತ್ರಗಳಿಂದ ಸುಸಜ್ಜಿತವಾಗಿದ್ದ ಉದ್ದುದ್ದ ಬಾಹುಗಳು ತುಂಡಾಗಿ ಬಿದ್ದಿದ್ದವು. ಅನೇಕರ ದುಂಡಾದ ತೊಡೆಗಳು ಕತ್ತರಿಸಲ್ಪಟ್ಟು ಬಿದ್ದಿದ್ದವು. ಹೀಗೆ ಆ ರಣಭೂಮಿಯು ಬಹಳ ಭಯಂಕರವಾಗಿ ಕಾಣುತ್ತಿತ್ತು. ॥ ೩೯ ॥ ■ ರಣರಂಗದ ಕೆಲವುಕಡೆ ತಲೆಯಿಲ್ಲದ ಮುಂಡಗಳು ಬಿದ್ದಿರುವ ತಲೆಗಳ ಕಣ್ಣುಗಳಿಂದ ನೋಡುತ್ತಾ ಕೈಗಳಲ್ಲಿ ಆಯುಧಗಳನ್ನೆತ್ತಿಕೊಂಡು ವೀರರತ್ತ ಓಡುತ್ತಾ ನೆಗೆಯುತ್ತಿದ್ದವು. ॥ ೪೦ ॥

ಬಲಿರ್ಮಹೇಂದ್ರಂ ದಶಭಿಸ್ತ್ರಿಭಿರೈರಾವತಂ ಶರೈಃ ।
ಚತುರ್ಭಿಶ್ಚತುರೋ ವಾಹಾನೇಕೇನಾರೋಹಮಾರ್ಚ್ಛಯತ್ ॥ ೪೧ ॥

ಸ ತಾನಾಪತತಃ ಶಕ್ರಸ್ತಾವದ್ಭಿಃ ಶೀಘ್ರವಿಕ್ರಮಃ ।
ಚಿಚ್ಛೇದ ನಿಶಿತೈರ್ಭಲ್ಲೈರಸಮ್ಪ್ರಾಪ್ತಾನ್ಹಸನ್ನಿವ ॥ ೪೨ ॥

ತಸ್ಯ ಕರ್ಮೋತ್ತಮಂ ವೀಕ್ಷ್ಯ ದುರ್ಮರ್ಷಃ ಶಕ್ತಿಮಾದದೇ ।
ತಾಂ ಜ್ವಲಂತೀಂ ಮಹೋಲ್ಕಾಭಾಂ ಹಸ್ತಸ್ಥಾಮಚ್ಛಿನದ್ಧರಿಃ ॥ ೪೩ ॥

ತತಃ ಶೂಲಂ ತತಃ ಪ್ರಾಸಂ ತತಸ್ತೋಮರಮೃಷ್ಟಯಃ ।
ಯದ್ಯಚ್ಛಸ್ತ್ರಂ ಸಮಾದದ್ಯಾತ್ಸರ್ವಂ ತದಚ್ಛಿನದ್ವಿಭುಃ ॥ ೪೪ ॥

ಸಸರ್ಜಾಥಾಸುರೀಂ ಮಾಯಾಮಂತರ್ಧಾನಗತೋಽಸುರಃ ।
ತತಃ ಪ್ರಾದುರಭೂಚ್ಛೈಲಃ ಸುರಾನೀಕೋಪರಿ ಪ್ರಭೋ ॥ ೪೫ ॥

ತತೋ ನಿಪೇತುಸ್ತರವೋ ದಹ್ಯಮಾನಾ ದವಾಗ್ನಿನಾ ।
ಶಿಲಾಃ ಸಟಂಕಶಿಖರಾಶ್ಚೂರ್ಣಯಂತ್ಯೋ ದ್ವಿಷದ್ಬಲಮ್ ॥ ೪೬ ॥

ಮಹೋರಗಾಃ ಸಮುತ್ಪೇತುರ್ದಂದಶೂಕಾಃ ಸವೃಶ್ಚಿಕಾಃ ।
ಸಿಂಹವ್ಯಾಘ್ರವರಾಹಾಶ್ಚ ಮರ್ದಯಂತೋ ಮಹಾಗಜಾನ್ ॥ ೪೭ ॥

ಯಾತುಧಾನ್ಯಶ್ಚ ಶತಶಃ ಶೂಲಹಸ್ತಾ ವಿವಾಸಸಃ ।
ಛಿಂಧಿ ಭಿಂಧೀತಿ ವಾದಿನ್ಯಸ್ತಥಾ ರಕ್ಷೋಗಣಾಃ ಪ್ರಭೋ ॥ ೪೮ ॥

ತತೋ ಮಹಾಘನಾ ವ್ಯೋಮ್ನಿ ಗಂಭೀರಪರುಷಸ್ವನಾಃ ।
ಅಂಗಾರಾನ್ಮುಮುಚುರ್ವಾತೈರಾಹತಾಃ ಸ್ತನಯಿತ್ನವಃ ॥ ೪೯ ॥

ಸೃಷ್ಟೋ ದೈತ್ಯೇನ ಸುಮಹಾನ್ವಹ್ನಿಃ ಶ್ವಸನಸಾರಥಿಃ ।
ಸಾಂವರ್ತಕ ಇವಾತ್ಯುಗ್ರೋ ವಿಬುಧಧ್ವಜಿನೀಮಧಾಕ್ ॥ ೫೦ ॥

ತತಃ ಸಮುದ್ರ ಉದ್ವೇಲಃ ಸರ್ವತಃ ಪ್ರತ್ಯದೃಶ್ಯತ ।
ಪ್ರಚಂಡವಾತೈರುದ್ಧೂತತರಂಗಾವರ್ತಭೀಷಣಃ ॥ ೫೧ ॥

ಬಲಿಚಕ್ರವರ್ತಿಯು ಹತ್ತು ಬಾಣಗಳನ್ನು ಇಂದ್ರನ ಮೇಲೆಯೂ, ಮೂರು ಅವನ ವಾಹನವಾದ ಐರಾವತಕ್ಕೂ, ನಾಲ್ಕು ಅವನ ಅಂಗರಕ್ಷಕರಿಗೂ, ಒಂದು ಬಾಣವನ್ನು ಮಾವಟಿಗನ ಮೇಲೆಯೂ ಒಟ್ಟಿಗೆ ಹದಿನೆಂಟು ಬಾಣಗಳನ್ನು ಪ್ರಯೋಗಿಸಿದನು. ॥ ೪೧ ॥ ಬಲಿಯ ಬಾಣಗಳಾದರೋ ನಮ್ಮನ್ನು ಘಾಸಿಪಡಿಸುವುವು ಎಂದು ನೋಡಿದ ಶೀಘ್ರವಿಕ್ರಮಿಯಾದ ಇಂದ್ರನು ಆ ಬಾಣಗಳು ತನ್ನ ಬಳಿಗೆ ಬರುವುದರೊಳಗಾಗಿಯೇ ಅಷ್ಟೇ ಸಂಖ್ಯೆಯ ಭಲ್ಲವೆಂಬ ಬಾಣಗಳಿಂದ ನಗು-ನಗುತ್ತಲೇ ಕತ್ತರಿಸಿಹಾಕಿದನು. ॥ ೪೨ ॥ ಇಂದ್ರನ ಈ ಶ್ರೇಷ್ಠವಾದ ಧನುರ್ವಿದ್ಯಾ ಪಾಂಡಿತ್ಯವನ್ನು ಕಂಡು ಕೆರಳಿದ ಬಲಿಯು ಇಂದ್ರನ ಮೇಲೆ ಪ್ರಯೋಗಿಸಲು ಪಂಜಿನಂತೆ ಪ್ರಜ್ವಲಿಸುತ್ತಿದ್ದ ಒಂದು ಭಾರೀ ಶಕ್ತ್ಯಾಯುಧವನ್ನು ಎತ್ತಿಕೊಂಡನು. ಅದನ್ನು ಅವನು ಪ್ರಯೋಗಿಸುವ ಮೊದಲೇ, ಅವನ ಕೈಯಲ್ಲಿರುವಾಗಲೇ ಇಂದ್ರನು ಅದನ್ನೂ ಕತ್ತರಿಸಿಬಿಟ್ಟನು. ॥ ೪೩ ॥ ಬಳಿಕ ಬಲಿಯು ರೋಷಾವೇಶದಿಂದ ಕೈಗೆತ್ತಿಕೊಂಡ ಶೂಲ, ಪ್ರಾಸ, ತೋಮರ, ಋಷ್ಟಿ ಮುಂತಾದ ಆಯುಧಗಳನ್ನು ಒಂದಾದ ಮೇಲೆ ಮತ್ತೊಂದರಂತೆ ಇಂದ್ರನು ಕತ್ತರಿಸಿ ಹಾಕಿದನು. ಇಂತಹ ಕೈಚಳಕದಿಂದ ಇಂದ್ರನ ಐಶ್ವರ್ಯವು ಇನ್ನೂ ಬೆಳಗಿತು. ॥ ೪೪ ॥

ಪರೀಕ್ಷಿತನೇ! ಇಂದ್ರನ ಪರಾಕ್ರಮದಿಂದ ಗಾಬರಿಗೊಂಡ ಬಲಿಯು ಅಂತರ್ಧಾನನಾಗಿ ಮತ್ತೆ ಅವನು ಆಸುರೀ ಮಾಯೆಯನ್ನು ಸೃಷ್ಟಿಸಿದನು. ಮರುಕ್ಷಣದಲ್ಲೇ ದೊಡ್ಡ ಪರ್ವತವೊಂದು ದೇವಸೈನ್ಯದ ಮೇಲೆ ಬಿತ್ತು. ॥ ೪೫ ॥ ಅದನ್ನನುಸರಿಸಿ ಕಾಡುಗಿಚ್ಚಿನಿಂದ ಸುಡುತ್ತಿದ್ದ ವೃಕ್ಷಗಳು ಬೀಳತೊಡಗಿದವು. ಬಳಿಕ ಕಲ್ಲುಳಿಗಳಂತೆ ಹರಿತವಾದ ಶಿಖರಗಳಿಂದ ಕೂಡಿದ್ದ ಬಂಡೆಗಳು ದೇವಸೈನ್ಯವನ್ನು ನುಚ್ಚುನೂರಾಗಿಸುತ್ತಾ ಬೀಳತೊಡಗಿದವು. ॥ ೪೬ ॥ ಅನಂತರ ಹೆಬ್ಬಾವುಗಳೂ, ಚೇಳುಗಳೂ, ವಿಷಸರ್ಪಗಳೂ ಹಾಗೂ ಇತರ ವಿಷಜಂತುಗಳೂ ನೆಗೆ-ನೆಗೆಯುತ್ತಾ ದೇವಸೈನ್ಯವನ್ನು ಕಡಿಯತೊಡಗಿದವು. ಸಿಂಹ, ಹುಲಿ, ಕಾಡಹಂದಿಗಳು ಸೈನ್ಯದ ದೊಡ್ಡ-ದೊಡ್ಡ ಆನೆಗಳನ್ನೂ ಹರಿದು ನುಂಗತೊಡಗಿದವು. ॥ ೪೭ ॥ ರಾಜೇಂದ್ರಾ! ಕೈಯಲ್ಲಿ ಶೂಲಾಯುಧವನ್ನು ಹಿಡಿದುಕೊಂಡಿದ್ದ ಬೆತ್ತಲೆಯರಾದ ರಾಕ್ಷಸಿಯರು ಮತ್ತು ರಾಕ್ಷಸರು 'ಕಡಿ-ಬಡಿ-ಕಿವಿ' ಎಂದು ಅರಚಿಕೊಳ್ಳುತ್ತಾ ಸಮರಾಂಗಣಕ್ಕೆ ನುಗ್ಗಿದವು. ॥ ೪೮ ॥ ಕೆಲವೇ ಕ್ಷಣದಲ್ಲಿ ಆಕಾಶದಲ್ಲಿ ಘನಘೋರವಾದ ಕಾರ್ಮೋಡಗಳು ದಟ್ಟವಾಗಿ ವ್ಯಾಪಿಸಿದುವು. ಅವುಗಳು ಪರಸ್ಪರ ಅಪ್ಪಳಿಸಿದಾಗ ಭಯಂಕರ ಕಠೋರವಾದ ಶಬ್ದವಾಗತೊಡಗಿತು. ಮಿಂಚುಗಳು ಬೀಳತೊಡಗಿದವು. ಚಂಡಮಾರುತದೊಂದಿಗೆ ಬೆಂಕಿಯ ಮಳೆಯೇ ಬೀಳತೊಡಗಿತು. ॥ ೪೯ ॥ ದೈತ್ಯರಾಜ ಬಲಿಯು ಪ್ರಳಯಾಗ್ನಿಯಂತಹ ಭಯಾನಕ ಬೆಂಕಿಯನ್ನು ಸೃಷ್ಟಿಸಿದನು. ಅದು ನೋಡು-ನೋಡುತ್ತಲೇ ಗಾಳಿಯ ಸಹಾಯದಿಂದ ದೇವತೆಗಳ ಸೈನ್ಯವನ್ನು ಸುಡಲುತೊಡಗಿತು. ॥ ೫೦ ॥ ಬಳಿಕ ಚಂಡಮಾರುತದಿಂದ ಎಬ್ಬಿಸಲ್ಪಟ್ಟ ಅಲೆಗಳಿಂದಲೂ, ಸುಳಿಗಳಿಂದಲೂ ಕೂಡಿದ್ದ ಸಮುದ್ರವು ಎಲ್ಲ ಕಡೆಗಳಿಂದ ತನ್ನೆಲ್ಲೆಯನ್ನು ಮೀರಿ ಮುನ್ನುಗ್ಗಿ ಬರುತ್ತಿರುವಂತೆ ಎನಿಸಿತು. ॥ ೫೧ ॥

ಏವಂ ದೈತ್ಯೈರ್ಮಹಾಮಾಯೈರಲಕ್ಷ್ಯಗತಿಭೀಷಣೈಃ ।
ಸೃಜ್ಯಮಾನಾಸು ಮಾಯಾಸು ವಿಷೇದುಃ ಸುರಸೈನಿಕಾಃ ॥ ೫೨ ॥

ನ ತತ್ಪ್ರತಿವಿಧಿಂ ಯತ್ರ ವಿದುರಿಂದ್ರಾದಯೋ ನೃಪ ।
ಧ್ಯಾತಃ ಪ್ರಾದುರಭೂತ್ತತ್ರ ಭಗವಾನ್ವಿಶ್ವಭಾವನಃ ॥ ೫೩ ॥

ತತಃ ಸುಪರ್ಣಾಂಸಕೃತಾಂಘ್ರಿಪಲ್ಲವಃ
ಪಿಶಂಗವಾಸಾ ನವಕಂಜಲೋಚನಃ ।
ಅದೃಶ್ಯತಾಷ್ಟಾಯುಧಬಾಹುರುಲ್ಲಸ-
ಚ್ಛ್ರೀಕೌಸ್ತುಭಾನರ್ಘ್ಯಕಿರೀಟಕುಂಡಲಃ ॥ ೫೪ ॥

ತಸ್ಮಿನ್ಪ್ರವಿಷ್ಟೇಽಸುರಕೂಟಕರ್ಮಜಾ
ಮಾಯಾ ವಿನೇಶುರ್ಮಹಿನಾ ಮಹೀಯಸಃ ।
ಸ್ವಪ್ನೋ ಯಥಾ ಹಿ ಪ್ರತಿಬೋಧ ಆಗತೇ
ಹರಿಸ್ಮೃತಿಃ ಸರ್ವವಿಪದ್ವಿಮೋಕ್ಷಣಮ್ ॥ ೫೫ ॥

ದೃಷ್ಟ್ವಾ ಮೃಧೇ ಗರುಡವಾಹಮಿಭಾರಿವಾಹ
ಆವಿಧ್ಯ ಶೂಲಮಹಿನೋದಥ ಕಾಲನೇಮಿಃ ।
ತಲ್ಲೀಲಯಾ ಗರುಡಮೂರ್ಧ್ನಿ ಪತದ್ಗೃಹೀತ್ವಾ
ತೇನಾಹನನ್ನೃಪ ಸವಾಹಮರಿಂ ತ್ರ್ಯಧೀಶಃ ॥ ೫೬ ॥

ಮಾಲೀ ಸುಮಾಲ್ಯತಿಬಲೌ ಯುಧಿ ಪೇತತುರ್ಯ-
ಚ್ಚಕ್ರೇಣ ಕೃತ್ತಶಿರಸಾವಥ ಮಾಲ್ಯವಾಂಸ್ತಮ್ ।
ಆಹತ್ಯ ತಿಗ್ಮಗದಯಾಹನದಂಡಜೇಂದ್ರಂ
ತಾವಚ್ಛಿರೋಽಚ್ಛಿನದರೇರ್ನದತೋಽರಿಣಾಽಽದ್ಯಃ ॥ ೫೭ ॥

ಹೀಗೆ ಭಯಂಕರರಾದ ಅಸುರರು ಅದೃಶ್ಯರಾಗಿ ಚಿತ್ರ-ವಿಚಿತ್ರವಾದ ಮಾಯೆಯನ್ನು ಸೃಷ್ಟಿಮಾಡಿ ದೇವತೆಗಳ ಸೈನ್ಯವನ್ನು ಪೀಡಿಸುತ್ತಿದ್ದರು. ಅವರು ಅದೃಶ್ಯರಾಗಿದ್ದುದರಿಂದ ಅವರ ಮೇಲೆ ಶಸ್ತ್ರಾಸ್ತ್ರಗಳನ್ನು ಪ್ರಯೋಗಿಸಲೂ ಸಾಧ್ಯವಾಗುತ್ತಿರಲಿಲ್ಲ. ಇದರಿಂದಾಗಿ ದೇವತೆಗಳು ಬಹಳ ಖಿನ್ನರಾದರು. ॥ ೫೨ ॥ ಪರೀಕ್ಷಿತನೇ! ಅಸುರರು ಕಲ್ಪಿಸಿದ ಮಾಯೆಗೆ ಪ್ರತೀಕಾರವನ್ನು ಮಾಡಲು ಇಂದ್ರಾದಿ ದೇವತೆಗಳು ಬಹಳವಾಗಿ ಯೋಚಿಸಿದರು. ಆದರೆ ಅವರಿಗೆ ಏನೂ ತೋಚಲಿಲ್ಲ. ಕೊನೆಗೆ ಅವರೆಲ್ಲರೂ ಜಗದ್ರಕ್ಷಕನಾದ ಭಗವಂತನನ್ನು ಅನನ್ಯ ಭಕ್ತಿಯಿಂದ ಧ್ಯಾನಮಾಡಿದರು. ಒಡನೆಯೇ ಭಕ್ತಪರಾಧೀನನಾದ ಶ್ರೀಹರಿಯು ಅಲ್ಲಿ ಪ್ರಕಟಗೊಂಡನು. ॥ ೫೩ ॥ ಅವನ ದರ್ಶನವು ಬಹು ಸುಂದರವಾಗಿತ್ತು. ಗರುಡನ ಹೆಗಲಿನಲ್ಲಿ ಭಗವಂತನ ಚರಣಕಮಲಗಳು ವಿರಾಜಮಾನವಾಗಿದ್ದವು. ನವಕಮಲದಂತೆ ವಿಶಾಲ ನೇತ್ರಗಳಿದ್ದವು. ದೇವದೇವನು ಪೀತಾಂಬರವನ್ನು ಧರಿಸಿದ್ದನು. ಎಂಟು ಕೈಗಳಿಂದ ಎಂಟು ಆಯುಧಗಳನ್ನು ಧರಿಸಿದ್ದನು. ಕೊರಳಲ್ಲಿ ಕೌಸ್ತುಭಮಣಿಯೂ, ಶಿರದಲ್ಲಿ ಅಮೂಲ್ಯವಾದ ಕಿರೀಟವೂ, ಕಿವಿಗಳಲ್ಲಿ ದಿವ್ಯಕುಂಡಲಗಳೂ ರಾರಾಜಿಸುತ್ತಿದ್ದವು. ಇಂತಹ ದಿವ್ಯವಾದ ಕಾಂತಿಯಿಂದ ಭಗವಂತನು ದೇವತೆಗಳಿಗೆ ಕಾಣಿಸಿಕೊಂಡನು. ॥ ೫೪ ॥ ಪರಮಪುರುಷ ಪರಮಾತ್ಮನು ಪ್ರಕಟವಾದೊಡನೆಯೇ ಅವನ ಪ್ರಭಾವದಿಂದ ಅಸುರರ ಆ ಕಪಟ ಮಾಯೆಯು – ಎಚ್ಚರವಾದಾಗ ಸ್ವಪ್ನವು ಇಲ್ಲವಾಗುವಂತೆ ವಿಲೀನವಾಗಿ ಹೋಯಿತು. 'ಹರಿಸ್ಮೃತಿಃ ಸರ್ವವಿಪದ್ವಿಮೋಕ್ಷಣಮ್' ಶ್ರೀಹರಿಯ ಸ್ಮರಣೆಯು ಸಮಸ್ತ ವಿಪತ್ತುಗಳನ್ನು ಪರಿಹರಿಸುತ್ತದೆ. ॥ [illegible] ॥ ಇದಾದ ಬಳಿಕ ಯುದ್ಧರಂಗದಲ್ಲಿ ಗರುಡವಾಹನ ಭಗವಂತನು ಬಂದಿರುವುದನ್ನು ನೋಡಿದ ಕಾಲನೇಮಿ ಎಂಬ ದೈತ್ಯನು ತನ್ನ ಸಿಂಹದ ಮೇಲೆ ಕುಳಿತಿದ್ದೇ ಭಯಂಕರವಾದ ಶೂಲಾಯುಧವನ್ನು ಗರಗರನೇ ತಿರುಗಿಸುತ್ತಾ ಶ್ರೀಹರಿಯ ಮೇಲೆ ಪ್ರಯೋಗಿಸಿದನು. ಶ್ರೀಹರಿಯಾದರೋ ಗರುಡನ ತಲೆಯಮೇಲೆ ಬೀಳಲಿದ್ದ ಆ ಶೂಲಾಯುಧವನ್ನು ಲೀಲಾಜಾಲವಾಗಿ ಹಿಡಿದು ಅದೇ ಶೂಲಾಯುಧದಿಂದ ಸಿಂಹದ ಮೇಲೆ ಕುಳಿತಿದ್ದ ಕಾಲನೇಮಿಯನ್ನು ವಾಹನಸಹಿತನಾಗಿ ಸಂಹಾರಮಾಡಿದನು. ॥ ೫೬ ॥ ಬಳಿಕ ಮಾಲಿ ಮತ್ತು ಸುಮಾಲಿ ಎಂಬ ಮಹಾಬಲಿಷ್ಠರಾದ ರಾಕ್ಷಸರಿಬ್ಬರೂ ಶ್ರೀಹರಿಯನ್ನು ಆಕ್ರಮಿಸಿದರು. ಭಗವಂತನು ಕ್ಷಣಮಾತ್ರದಲ್ಲಿ ಅವರ ತಲೆಗಳನ್ನು ಚಕ್ರಾಯುಧದಿಂದ ಕುಂಡರಿಸಿಬಿಟ್ಟನು. ಮತ್ತೆ ಮಾಲ್ಯವಂತನೆಂಬ ಮಹಾದೈತ್ಯನು ಭಾರೀ ಗರ್ಜಿಸುತ್ತಾ ಪ್ರಚಂಡ ವೇಗದಿಂದ ಗದೆಯನ್ನು ಗರುಡನ ಮೇಲೆ ಎಸೆದಾಗ ಅದು ಗರುಡನನ್ನು ಮುಟ್ಟುವ ಮೊದಲೇ ಭಗವಂತನು ಅದನ್ನು ನಿವಾರಿಸಿ ಮಾಲ್ಯವಂತನ ಶಿರಸ್ಸನ್ನು ಚಕ್ರದಿಂದ ಕತ್ತರಿಸಿಬಿಟ್ಟನು. ॥ ೫೭ ॥

ಹತ್ತನೆಯ ಅಧ್ಯಾಯವು ಮುಗಿಯಿತು. ॥ ೧೦ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಅಷ್ಟಮ ಸ್ಕಂಧೇ
ದೇವಾಸುರಸಂಗ್ರಾಮೇ ದಶಮೋಽಧ್ಯಾಯಃ ॥ ೧೦ ॥

ಹನ್ನೊಂದನೆಯ ಅಧ್ಯಾಯ

ದೇವಾಸುರರ ಸಂಗ್ರಾಮದ ಸಮಾಪ್ತಿ

ಶ್ರೀಶುಕ ಉವಾಚ

ಅಥೋ ಸುರಾಃ ಪ್ರತ್ಯುಪಲಬ್ಧಚೇತಸಃ
ಪರಸ್ಯ ಪುಂಸಃ ಪರಯಾನುಕಂಪಯಾ ।
ಜಘ್ನುರ್ಭೃಶಂ ಶಕ್ರಸಮೀರಣಾದಯ-
ಸ್ತಾಂಸ್ತಾನ್ರಣೇ ಯೈರಭಿಸಂಹತಾಃ ಪುರಾ ॥ ೧ ॥

ವೈರೋಚನಾಯ ಸಂರಬ್ಧೋ ಭಗವಾನ್ಪಾಕಶಾಸನಃ ।
ಉದಯಚ್ಛದ್ಯದಾ ವಜ್ರಂ ಪ್ರಜಾ ಹಾ ಹೇತಿ ಚುಕ್ರುಶುಃ ॥ ೨ ॥

ವಜ್ರಪಾಣಿಸ್ತಮಾಹೇದಂ ತಿರಸ್ಕೃತ್ಯ ಪುರಃಸ್ಥಿತಮ್ ।
ಮನಸ್ವಿನಂ ಸುಸಂಪನ್ನಂ ವಿಚರಂತಂ ಮಹಾಮೃಧೇ ॥ ೩ ॥

ನಟವನ್ಮೂಢ ಮಾಯಾಭಿರ್ಮಾಯೇಶಾನ್ನೋ ಜಿಗೀಷಸಿ ।
ಜಿತ್ವಾ ಬಾಲಾನ್ನಿಬದ್ಧಾಕ್ಷಾನ್ನಟೋ ಹರತಿ ತದ್ಧನಮ್ ॥ ೪ ॥

ಆರುರುಕ್ಷಂತಿ ಮಾಯಾಭಿರುತ್ಸಿಸೃಪ್ಸಂತಿ ಯೇ ದಿವಮ್ ।
ತಾಂದಸ್ಯೂನ್ವಿಧುನೋಮ್ಯಜ್ಞಾನ್ಪೂರ್ವಸ್ಮಾಚ್ಚ ಪದಾದಧಃ ॥ ೫ ॥

ಸೋಽಹಂ ದುರ್ಮಾಯಿನಸ್ತೇಽದ್ಯ ವಜ್ರೇಣ ಶತಪರ್ವಣಾ ।
ಶಿರೋ ಹರಿಷ್ಯೇ ಮಂದಾತ್ಮನ್ಘಟಸ್ವ ಜ್ಞಾತಿಭಿಃ ಸಹ ॥ ೬ ॥

ಬಲಿರುವಾಚ

ಸಂಗ್ರಾಮೇ ವರ್ತಮಾನಾನಾಂ
ಕಾಲಚೋದಿತಕರ್ಮಣಾಮ್ ।
ಕೀರ್ತಿರ್ಜಯೋಽಜಯೋ ಮೃತ್ಯುಃ
ಸರ್ವೇಷಾಂ ಸ್ಯುರನುಕ್ರಮಾತ್ ॥ ೭ ॥

ತದಿದಂ ಕಾಲರಶನಂ ಜನಾಃ ಪಶ್ಯಂತಿ ಸೂರಯಃ ।
ನ ಹೃಷ್ಯಂತಿ ನ ಶೋಚಂತಿ ತತ್ರ ಯೂಯಮಪಂಡಿತಾಃ ॥ ೮ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಎಲೈ ಪರೀಕ್ಷಿತನೇ ! ಪರಮ ಪುರುಷನಾದ ಭಗವಂತನ ನಿರತಿಶಯವಾದ ಕೃಪೆಯಿಂದ ದೇವತೆಗಳ ಭಯವು ದೂರವಾಗಿ ಅವರಲ್ಲಿ ನವಚೈತನ್ಯ ವುಂಟಾಯಿತು. ಈ ಹಿಂದೆ ಇಂದ್ರ, ವಾಯುಗಳೇ ಮೊದಲಾದ ದೇವತೆಗಳು ಯಾವ-ಯಾವ ದೈತ್ಯರೊಡನೆ ಹೋರಾಡುತ್ತಿದ್ದರೋ ಪುನಃ ಅದೇ ದೈತ್ಯರನ್ನೆದುರಿಸಿ ಶೌರ್ಯದಿಂದ ಯುದ್ಧಮಾಡ ತೊಡಗಿದರು. ॥ ೧ ॥ ಮಹಾ ಮಹಿಮನಾದ ಇಂದ್ರನು ಅತ್ಯಂತ ಕ್ರುದ್ಧನಾಗಿ ಬಲಿಯನ್ನು ಸಂಹರಿಸಬೇಕೆಂಬ ಆಶಯದಿಂದ ವಜ್ರಾಯುಧವನ್ನೆತ್ತಿದನು. ಆಗ ಸಮಸ್ತ ಪ್ರಜೆಗಳಲ್ಲಿ ಹಾಹಾಕಾರವೆದ್ದಿತು. ॥ ೨ ॥ ಬಲಿಯು ಅಸ್ತ್ರ-ಶಸ್ತ್ರಗಳಿಂದ ಸುಸಜ್ಜಿತನಾಗಿ, ನಿರ್ಭಯನಾಗಿ ಪರಮೋತ್ಸಾಹದಿಂದ ಯುದ್ಧಭೂಮಿಯಲ್ಲಿ ಸಂಚರಿಸುತ್ತಿದ್ದನು. ತನ್ನ ಎದುರಿಗೆ ಬಂದ ಅವನನ್ನು ತಿರಸ್ಕರಿಸುತ್ತಾ ವಜ್ರಪಾಣಿಯಾದ ಇಂದ್ರನು ಇಂತೆಂದನು – ॥ ೩ ॥ ಎಲೈ ಮೂರ್ಖಾ! ನಟನು (ಐಂದ್ರಜಾಲಿಕನು) ಮಕ್ಕಳ ಕಣ್ಣುಕಟ್ಟಿ ತನ್ನ ಮಾಯಾಜಾಲದಿಂದ ಅವರಲ್ಲಿದ್ದ ಹಣವನ್ನು ದೋಚುವಂತೆಯೇ ನೀನು ಮಾಯಾಜಾಲದಿಂದ ನಮ್ಮ ಮೇಲೆ ವಿಜಯ ಪಡೆಯಬಹುದೆಂದು ಬಯಸಿದ್ದೆ. ಆದರೆ ನಾವುಗಳು ಮಾಯೆಯ ಅಧಿಪತಿಗಳೆಂದು ನೀನು ಅರಿಯೆ. ಅದು ನಮ್ಮನ್ನು ಏನೂ ಮಾಡಲಾರದು. ॥ ೪ ॥ ಮಾಯೆಯ ಮೂಲಕ ಸ್ವರ್ಗದ ಮೇಲೆ ಅಧಿಕಾರವನ್ನು ನಡೆಸಲು ಬಯಸುವವನು ಹಾಗೂ ಅದನ್ನು ದಾಟಿ ಮೇಲಿನ ಲೋಕಗಳಲ್ಲಿಯೂ ಅಧಿಕಾರ ಸ್ಥಾಪಿಸಲು ಬಯಸುವಂತಹ ಮೂರ್ಖ ದರೋಡೆಕೋರರನ್ನು ನಾನು ಅವನು ಮೊದಲಿದ್ದ ಸ್ಥಾನದಿಂದಲೂ ಕೆಳಗೆ ತಳ್ಳಿಬಿಡುತ್ತೇನೆ. ॥ ೫ ॥ ಎಲವೋ ಮಂದಮತಿಯೇ! ನೀನು ಭಾರೀ ದೊಡ್ಡ ಮಾಯಾಜಾಲವನ್ನು ರಚಿಸಿದ್ದೆ ನೋಡು. ಇಂದು ನಾನು ನನ್ನ ನೂರು ಗಿಣ್ಣುಗಳಿಂದ ಕೂಡಿದ ಅಜೇಯ ವಜ್ರಾಯುಧದಿಂದ ನಿನ್ನ ರುಂಡ-ಮುಂಡಗಳನ್ನು ಬೇರ್ಪಡಿಸಿಬಿಡುತ್ತೇನೆ. ನೀನು ನಿನ್ನ ಜ್ಞಾತಿಗಳೊಡನೆ ಸೇರಿ ಏನು ಮಾಡಬಹುದೋ ಅದನ್ನು ಮಾಡು. ॥ ೬ ॥

ಬಲಿಯು ಹೇಳಿದನು – ಮಹೇಂದ್ರ ! ಕಾಲಶಕ್ತಿಯ ಪ್ರೇರಣೆಯಿಂದ ತನ್ನ ಕರ್ಮಕ್ಕನುಸಾರ ಯುದ್ಧಮಾಡುವವರಿಗೆ ಜಯಾಪಜಯಗಳು ಅಥವಾ ಕೀರ್ತಿ-ಅಪಕೀರ್ತಿ, ಅಥವಾ ಮೃತ್ಯು ಇವುಗಳು ಅನುಕ್ರಮವಾಗಿ ಆಗುತ್ತಲೇ ಇರುತ್ತವೆ. ॥ ೭ ॥ ಆದುದರಿಂದ ಪಂಡಿತರಾದವರು ಈ ಜಗತ್ತನ್ನು ಕಾಲಕ್ಕೆ ಅಧೀನವೆಂದು ತಿಳಿದು ವಿಜಯಿಯಾದಾಗ ಹರ್ಷಪಡುವುದಿಲ್ಲ. ಅಪಕೀರ್ತಿ, ಸೋಲು, ಮೃತ್ಯು ಸಂಭವಿಸಿದಾಗ ಶೋಕಕ್ಕೆ ವಶರಾಗುವುದಿಲ್ಲ. ನೀವೆಲ್ಲರೂ ಈ ತತ್ತ್ವವನ್ನು ತಿಳಿದವರಲ್ಲ. ॥ ೮ ॥ ನೀವುಗಳು ತಮ್ಮನ್ನು ಜಯ-ಪರಾಜಯಗಳ ಕರ್ತೃಗಳೆಂದು ತಿಳಿಯುತ್ತಿರುವಿರಿ. ಅದಕ್ಕಾಗಿ ಮಹಾತ್ಮರ ದೃಷ್ಟಿಯಲ್ಲಿ ನೀವುಗಳು ಶೋಚನೀಯರಾಗಿರುವಿರಿ.

ನ ವಯಂ ಮನ್ಯಮಾನಾನಾಮಾತ್ಮಾನಂ ತತ್ರ ಸಾಧನಮ್ ।
ಗಿರೋ ವಃ ಸಾಧುಶೋಚ್ಯಾನಾಂ ಗೃಹ್ಣೀಮೋ ಮರ್ಮತಾಡನಾಃ ॥ ೯ ॥

ಶ್ರೀಶುಕ ಉವಾಚ

ಇತ್ಯಾಕ್ಷಿಪ್ಯ ವಿಭುಂ ವೀರೋ ನಾರಾಚೈರ್ವೀರಮರ್ದನಃ ।
ಆಕರ್ಣಪೂರ್ಣೈರಹನದಾಕ್ಷೇಪೈರಾಹತಂ ಪುನಃ ॥ ೧೦ ॥

ಏವಂ ನಿರಾಕೃತೋ ದೇವೋ ವೈರಿಣಾ ತಥ್ಯವಾದಿನಾ ।
ನಾಮೃಷ್ಯತ್ತದಧಿಕ್ಷೇಪಂ ತೋತ್ರಾಹತ ಇವ ದ್ವಿಪಃ ॥ ೧೧ ॥

ಪ್ರಾಹರತ್ಕುಲಿಶಂ ತಸ್ಮಾ ಅಮೋಘಂ ಪರಮರ್ದನಃ ।
ಸಯಾನೋ ನ್ಯಪತದ್ಭೂಮೌ ಛಿನ್ನಪಕ್ಷ ಇವಾಚಲಃ ॥ ೧೨ ॥

ಸಖಾಯಂ ಪತಿತಂ ದೃಷ್ಟ್ವಾ ಜಂಭೋ ಬಲಿಸಖಃ ಸುಹೃತ್ ।
ಅಭ್ಯಯಾತ್ಸೌಹೃದಂ ಸಖ್ಯುರ್ಹತಸ್ಯಾಪಿ ಸಮಾಚರನ್ ॥ ೧೩ ॥

ಸ ಸಿಂಹವಾಹ ಆಸಾದ್ಯ ಗದಾಮುದ್ಯಮ್ಯ ರಂಹಸಾ ।
ಜತ್ರಾವತಾಡಯಚ್ಛಕ್ರಂ ಗಜಂ ಚ ಸುಮಹಾಬಲಃ ॥ ೧೪ ॥

ಗದಾಪ್ರಹಾರವ್ಯಥಿತೋ ಭೃಶಂ ವಿಹ್ವಲಿತೋ ಗಜಃ ।
ಜಾನುಭ್ಯಾಂ ಧರಣೀಂ ಸ್ಪೃಷ್ಟ್ವಾ ಕಶ್ಮಲಂ ಪರಮಂ ಯಯೌ ॥ ೧೫ ॥

ತತೋ ರಥೋ ಮಾತಲಿನಾ ಹರಿಭಿರ್ದಶಶತೈರ್ವೃತಃ ।
ಆನೀತೋ ದ್ವಿಪಮುತ್ಸೃಜ್ಯ ರಥಮಾರುರುಹೇ ವಿಭುಃ ॥ ೧೬ ॥

ತಸ್ಯ ತತ್ಪೂಜಯನ್ಕರ್ಮ ಯಂತುರ್ದಾನವಸತ್ತಮಃ ।
ಶೂಲೇನ ಜ್ವಲತಾ ತಂ ತು ಸ್ಮಯಮಾನೋಽಹನನ್ಮೃಧೇ ॥ ೧೭ ॥

ಸೇಹೇ ರುಜಂ ಸುದುರ್ಮರ್ಷಾಂ ಸತ್ತ್ವಮಾಲಂಬ್ಯ ಮಾತಲಿಃ ।
ಇಂದ್ರೋ ಜಂಭಸ್ಯ ಸಂಕ್ರುದ್ಧೋ ವಜ್ರೇಣಾಪಾಹರಚ್ಛಿರಃ ॥ ೧೮ ॥

ಜಂಭಂ ಶ್ರುತ್ವಾ ಹತಂ ತಸ್ಯ ಜ್ಞಾತಯೋ ನಾರದಾದೃಷೇಃ ।
ನಮುಚಿಶ್ಚ ಬಲಃ ಪಾಕಸ್ತತ್ರಾಪೇತುಸ್ತ್ವರಾನ್ವಿತಾಃ ॥ ೧೯ ॥

ವಚೋಭಿಃ ಪರುಷೈರಿಂದ್ರಮರ್ದಯಂತೋಽಸ್ಯ ಮರ್ಮಸು ।
ಶರೈರವಾಕಿರನ್ಮೇಘಾ ಧಾರಾಭಿರಿವ ಪರ್ವತಮ್ ॥ ೨೦ ॥

ಹರೀನ್ ದಶಶತಾನ್ಯಾಜೌ ಹರ್ಯಶ್ವಸ್ಯ ಬಲಃ ಶರೈಃ ।
ತಾವದ್ಭಿರರ್ದಯಾಮಾಸ ಯುಗಪಲ್ಲಘುಹಸ್ತವಾನ್ ॥ ೨೧ ॥

ಆದುದರಿಂದ ನಿನ್ನ ಮರ್ಮಭೇದಿಗಳಾದ ಮಾತನ್ನು ನಾವು ಲೆಕ್ಕಿಸುವುದೇ ಇಲ್ಲ. ॥ ೯ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ವೀರನಾದ ಬಲಿಯು ಇಂದ್ರನನ್ನು ಹೀಗೆ ನಿಂದಿಸಿದನು. ಬಲಿಯ ನಿಂದನೆಯಿಂದ ಇಂದ್ರನು ಸ್ವಲ್ಪನಾಚಿಕೊಂಡನು. ಅಷ್ಟರಲ್ಲಿ ಶತ್ರುಸೂದನನಾದ ಬಲಿಯು ತನ್ನ ಧನುಸ್ಸನ್ನು ಆಕರ್ಣಾಂತವಾಗಿ ಸೆಳೆದು ಅನೇಕ ಬಾಣಗಳನ್ನು ಪ್ರಯೋಗಿಸಿದನು. ॥ ೧೦ ॥ ಹೀಗೆ ಸತ್ಯವಾದಿಯಾದ ದೇವಶತ್ರು ಬಲಿಯಿಂದ ತಿರಸ್ಕರಿಸಲ್ಪಟ್ಟ ದೇವೇಂದ್ರನು ಅಂಕುಶದಿಂದ ತಿವಿಯಲ್ಪಟ್ಟ ಆನೆಯಂತೆ ಕೆರಳಿ ಆ ಬಲಿಯ ಮಾತುಗಳನ್ನು ಸಹಿಸಿಕೊಳ್ಳಲಿಲ್ಲ. ॥ ೧೧ ॥ ಅರಿಮರ್ದನನಾದ ಇಂದ್ರನು ಬಲಿಯನ್ನು ತನ್ನ ಅಮೋಘವಾದ ವಜ್ರಾಯುಧದಿಂದ ಪ್ರಹರಿಸಿದನು. ಏಟಿನಿಂದ ಬಲಿಯು ರೆಕ್ಕೆ ತುಂಡಾದ ಪರ್ವತದಂತೆ ವಿಮಾನದೊಂದಿಗೆ ನೆಲಕ್ಕೆ ಉರುಳಿದನು. ॥ ೧೨ ॥ ಬಲಿಯ ಮಿತ್ರನೂ, ಆಪ್ತನೂ ಆದ ಜಂಭಾಸುರನೆಂಬ ರಾಕ್ಷಸನು ತನ್ನ ಮಿತ್ರನಾದ ಬಲಿಯು ಕೆಳಕ್ಕೆ ಬಿದ್ದುದನ್ನು ನೋಡಿ ಅವನು ಸತ್ತುಹೋಗಿದ್ದರೂ ಅವನ ಸ್ನೇಹವನ್ನು ನೆನೆಯುತ್ತಾ ಅದರ ಪ್ರತೀಕಾರದಿಂದ ಇಂದ್ರನ ಮುಂದೆ ಯುದ್ಧಕ್ಕೆ ಬಂದುನಿಂತನು. ॥ ೧೩ ॥ ಸಿಂಹವನ್ನೇರಿ ಇಂದ್ರನ ಬಳಿಗೆ ಬಂದು ಭಾರೀ ವೇಗದಿಂದ ತನ್ನ ಗದೆಯನ್ನು ಎತ್ತಿ ಇಂದ್ರನ ಕೊರಳ ಪ್ರದೇಶದಲ್ಲಿ ಪ್ರಹರಿಸಿದನು. ಜೊತೆಗೆ ಆ ಬಲಶಾಲಿಯು ಐರಾವತವನ್ನೂ ಗದೆಯಿಂದ ಪ್ರಹರಿಸಿದನು. ॥ ೧೪ ॥ ಗದಾಪ್ರಹಾರದಿಂದ ಐರಾವತವು ಬಹಳ ವ್ಯಥೆಗೊಂಡು ಮೊಣಕಾಲೂರಿ ನೆಲಕ್ಕೆ ಬಾಗಿ ಮೂರ್ಛಿತವಾಯಿತು. ॥ ೧೫ ॥ ಆಗಲೇ ಇಂದ್ರನ ಸಾರಥಿಯಾದ ಮಾತಲಿಯು ಸಾವಿರ ಕುದುರೆಗಳನ್ನು ಹೂಡಿದ್ದ ದಿವ್ಯವಾದ ರಥವನ್ನು ತಂದನು. ಶಕ್ತಿಶಾಲಿಯಾದ ಇಂದ್ರನು ಐರಾವತವನ್ನು ಬಿಟ್ಟು ಶೀಘ್ರವಾಗಿ ರಥಾರೂಢನಾದನು. ॥ ೧೬ ॥ ದಾನವೇಂದ್ರನಾದ ಜಂಭಾಸುರನು ಮಾತಲಿಯ ಈ ಕಾರ್ಯವನ್ನು ಪ್ರಶಂಸಿಸಿ ಮುಗುಳ್ನಗುತ್ತಾ ಹೊಳೆಯುತ್ತಿರುವ ತ್ರಿಶೂಲವೊಂದನ್ನು ಅವನ ಮೇಲೆ ಪ್ರಯೋಗಿಸಿದನು. ॥ ೧೭ ॥ ಮಾತಲಿಯು ಧೈರ್ಯದಿಂದ ಆ ಸಹಿಸಲಸಾಧ್ಯವಾದ ಸಂಕಟವನ್ನು ಸಹಿಸಿಕೊಂಡನು. ಇದನ್ನು ನೋಡಿದ ಇಂದ್ರನು ಕ್ರೋಧಗೊಂಡು ತನ್ನ ವಜ್ರಾಯುಧದಿಂದ ಜಂಭನ ತಲೆಯನ್ನು ತುಂಡರಿಸಿಬಿಟ್ಟನು. ॥ ೧೮ ॥

ಜಂಭಾಸುರನು ಹತನಾದುದನ್ನು ನಾರದ ಮಹರ್ಷಿಗಳಿಂದ ಕೇಳಿದ ಅವನ ಬಂಧುಗಳಾದ ನಮುಚಿ, ಬಲ, ಪಾಕ ಮುಂತಾದವರು ತ್ವರಿತವಾಗಿ ಯುದ್ಧಭೂಮಿಗೆ ಆಗಮಿಸಿದರು. ॥ ೧೯ ॥ ನಮುಚಿಯೇ ಮುಂತಾದ ರಾಕ್ಷಸರು ಇಂದ್ರನ ಕುರಿತು ಅತಿ ಕಠೋರವಾದ ಮರ್ಮಸ್ಪರ್ಶಿ ಮಾತುಗಳನ್ನಾಡಿ, ಮೇಘಗಳು ಜಲಧಾರೆಯಿಂದ ಪರ್ವತವನ್ನು ಮುಚ್ಚಿಬಿಡುವಂತೆ ಶರವರ್ಷಗಳಿಂದ ಇಂದ್ರನನ್ನು ಮುಚ್ಚಿಬಿಟ್ಟರು. ॥ ೨೦ ॥ ಬಲಾಸುರನು ತನ್ನ ಕೈಚಳಕದಿಂದ ಒಂದೇ ಬಾರಿಗೆ ಒಂದುಸಾವಿರ ಬಾಣಗಳನ್ನು ಪ್ರಯೋಗಿಸಿ ಇಂದ್ರನ ಒಂದುಸಾವಿರ ಕುದುರೆಗಳನ್ನು ಘಾಸಿಗೊಳಿಸಿದನು. ॥ ೨೧ ॥ ಪಾಕನು ನೂರು ಬಾಣಗಳಿಂದ ಮಾತಲಿಯನ್ನೂ ನೂರು ಬಾಣಗಳಿಂದ ರಥದ ಅವಯವಗಳನ್ನೂ ಭೇದಿ

ತಾಭ್ಯಾಂ ಮಾತಲಿಂ ಪಾಕೋ ರಥಂ ಸಾವಯವಂ ಪೃಥಕ್ ।
ಸಕೃತ್ಸಂಧಾನಮೋಕ್ಷೇಣ ತದದ್ಭುತಮಭೂದ್ರಣೇ ॥ ೨೨ ॥

ನಮುಚಿಃ ಪಂಚದಶಭಿಃ ಸ್ವರ್ಣಪುಂಖೈರ್ಮಹೇಷುಭಿಃ ।
ಆಹತ್ಯ ವ್ಯನದತ್ಸಂಖ್ಯೇ ಸತೋಯ ಇವ ತೋಯದಃ ॥ ೨೩ ॥

ಸರ್ವತಃ ಶರಕೂಟೇನ ಶಕ್ರಂ ಸರಥಸಾರಥಿಮ್ ।
ಛಾದಯಾಮಾಸುರಸುರಾಃ ಪ್ರಾವೃಟ್ಸೂರ್ಯಮಿವಾಂಬುದಾಃ ॥ ೨೪ ॥

ಅಲಕ್ಷಯಂತಸ್ತಮತೀವ ವಿಹ್ವಲಾ
ವಿಚುಕ್ರುಶುರ್ದೇವಗಣಾಃ ಸಹಾನುಗಾಃ ।
ಅನಾಯಕಾಃ ಶತ್ರುಬಲೇನ ನಿರ್ಜಿತಾ
ವಣಿಕ್ಪಥಾ ಭಿನ್ನನವೋ ಯಥಾರ್ಣವೇ ॥ ೨೫ ॥

ತತಸ್ತುರಾಷಾಡಿಷುಬದ್ಧಪಂಜರಾದ್-
ವಿನಿರ್ಗತಃ ಸಾಶ್ವರಥಧ್ವಜಾಗ್ರಣೀಃ ।
ಬಭೌ ದಿಶಃ ಖಂ ಪೃಥಿವೀಂ ಚ ರೋಚಯನ್
ಸ್ವತೇಜಸಾ ಸೂರ್ಯ ಇವ ಕ್ಷಪಾತ್ಯಯೇ ॥ ೨೬ ॥

ನಿರೀಕ್ಷ್ಯ ಪೃತನಾಂ ದೇವಃ ಪರೈರಭ್ಯರ್ದಿತಾಂ ರಣೇ ।
ಉದಯಚ್ಛದ್ರಿಪುಂ ಹಂತುಂ ವಜ್ರಂ ವಜ್ರಧರೋ ರುಷಾ ॥ ೨೭ ॥

ಸ ತೇನೈವಾಷ್ಟಧಾರೇಣ ಶಿರಸೀ ಬಲಪಾಕಯೋಃ ।
ಜ್ಞಾತೀನಾಂ ಪಶ್ಯತಾಂ ರಾಜನ್ ಜಹಾರ ಜನಯನ್ಭಯಮ್ ॥ ೨೮ ॥

ನಮುಚಿಸ್ತದ್ವಧಂ ದೃಷ್ಟ್ವಾ ಶೋಕಾಮರ್ಷರುಷಾನ್ವಿತಃ ।
ಜಿಘಾಂಸುರಿಂದ್ರಂ ನೃಪತೇ ಚಕಾರ ಪರಮೋದ್ಯಮಮ್ ॥ ೨೯ ॥

ಅಶ್ಮಸಾರಮಯಂ ಶೂಲಂ ಘಂಟಾವದ್ಧೇಮಭೂಷಣಮ್ ।
ಪ್ರಗೃಹ್ಯಾಭ್ಯದ್ರವತ್ಕ್ರುದ್ಧೋ ಹತೋಽಸೀತಿ ವಿತರ್ಜಯನ್ ।
ಪ್ರಾಹಿಣೋದ್ದೇವರಾಜಾಯ ನಿನದನ್ಮೃಗರಾಡಿವ ॥ ೩೦ ॥

ತದಾಪತದ್ ಗಗನತಲೇ ಮಹಾಜವಂ
ವಿಚಿಚ್ಛಿದೇ ಹರಿರಿಷುಭಿಃ ಸಹಸ್ರಧಾ ।
ತಮಾಹನನ್ನೃಪ ಕುಲಿಶೇನ ಕಂಧರೇ
ರುಷಾನ್ವಿತಸ್ತ್ರಿದಶಪತಿಃ ಶಿರೋ ಹರನ್ ॥ ೩೧ ॥

ಸಿದನು. ಯುದ್ಧಭೂಮಿಯಲ್ಲಿ ಒಂದೇ ಬಾರಿಗೆ ಇಷ್ಟೊಂದು ಬಾಣಗಳನ್ನು ಹೂಡಿ, ಪ್ರಯೋಗಿಸಿದುದು ಪರಮಾದ್ಭುತವಾದ ಘಟನೆಯಾಗಿತ್ತು. ॥ ೨೨ ॥ ನಮುಚಿಯು ಚಿನ್ನದ ಗರಿಕಟ್ಟಿದ ಭಾರೀ ಹದಿನೈದು ಬಾಣಗಳಿಂದ ಇಂದ್ರನನ್ನು ಪ್ರಹರಿಸಿ-ನೀರುತುಂಬಿದ ಮೇಘಗಳಂತೆ ಯುದ್ಧರಂಗದಲ್ಲಿ ಅವನು ಗರ್ಜಿಸಿದನು. ॥ ೨೩ ॥ ವರ್ಷಾಕಾಲದಲ್ಲಿ ಮೋಡಗಳು ಸೂರ್ಯನನ್ನು ಮುಚ್ಚಿಬಿಡುವಂತೆಯೇ ಅಸುರರು ಬಾಣಗಳ ಮಳೆಯಿಂದ ಇಂದ್ರನನ್ನೂ, ಅವನ ರಥ-ಸಾರಥಿಯನ್ನೂ ಎಲ್ಲೆಡೆಗಳಿಂದ ಮುಚ್ಚಿಬಿಟ್ಟರು. ॥ ೨೪ ॥ ತಮ್ಮ ನಾಯಕನಾದ ಇಂದ್ರನನ್ನು ಕಾಣದೆ ದೇವತೆಗಳೂ, ಅವನ ಅನುಚರರೂ ವಿಹ್ವಲರಾಗಿ ಅಳತೊಡಗಿದರು. ಒಂದು ಶತ್ರುಗಳಿಂದ ಜಯಿಸಲ್ಪಟ್ಟವರಾಗಿದ್ದರು, ಇನ್ನೊಂದು ಅವರಿಗೆ ಯಾರೂ ಸೇನಾಪತಿಯು ಇರಲಿಲ್ಲ. ಆಗ ಸಮುದ್ರಮಧ್ಯದಲ್ಲಿ ಒಡೆದುಹೋದ ನಾವೆಯಲ್ಲಿದ್ದ ವರ್ತಕರಂತೆ ಅವರ ಸ್ಥಿತಿಯಾಗಿತ್ತು. ॥ ೨೫ ॥ ಅಷ್ಟರಲ್ಲೇ ರಥಾಶ್ವ-ಧ್ವಜಗಳಿಂದ ಕೂಡಿದ ಇಂದ್ರನು ಬಾಣಗಳ ಪಂಜರದಿಂದ ಹೊರಬಂದು ಬೆಳಗಾದಕೂಡಲೇ ತನ್ನ ತೇಜಸ್ಸಿನಿಂದ ದಿಕ್ಕುಗಳನ್ನೂ, ಆಕಾಶವನ್ನೂ ಭೂಮಿಯನ್ನೂ ಪ್ರಕಾಶಗೊಳಿಸುವ ಸೂರ್ಯನಂತೆ ಇಂದ್ರನು ಬೆಳಗಿದನು. ॥ ೨೬ ॥ ಯುದ್ಧದಲ್ಲಿ ಶತ್ರುಗಳಿಂದ ಸತತವಾಗಿ ಪೀಡಿಸಲ್ಪಡುತ್ತಿದ್ದ ತನ್ನ ಸೈನ್ಯವನ್ನು ನೋಡಿ ವಜ್ರಧರನಾದ ಇಂದ್ರನು ಪರಮ ಕ್ರುದ್ಧನಾಗಿ ಶತ್ರುಗಳನ್ನು ನಿರ್ಮೂಲನ ಮಾಡುವುದಕ್ಕಾಗಿ ವಜ್ರಾಯುಧದಿಂದ ಆಕ್ರಮಣ ಮಾಡಿದನು. ॥ ೨೭ ॥ ಪರೀಕ್ಷಿತನೇ! ಎಂಟು ಮೂಲೆಗಳುಳ್ಳ ವಜ್ರದಿಂದ ಆ ದೈತ್ಯರ ಬಂಧುಗಳಿಗೆ ಭಯವನ್ನುಂಟುಮಾಡುತ್ತಾ ಇಂದ್ರನು ಬಲ ಮತ್ತು ಪಾಕ ಇವರ ತಲೆಗಳನ್ನು ಹಾರಿಸಿಬಿಟ್ಟನು. ॥ ೨೮ ॥

ಪರೀಕ್ಷಿತನೇ! ಬಲ-ಪಾಕರಿಬ್ಬರೂ ಇಂದ್ರನಿಂದ ಹತರಾದುದನ್ನು ನೋಡಿ ನಮುಚಿಗೆ ಭಾರೀ ಶೋಕವುಂಟಾಯಿತು. ಅವನು ಅಸಹನೆಯಿಂದಲೂ, ಕೋಪದಿಂದಲೂ ಕೆಂಪೇರಿ ಅಸುರಶತ್ರುವಾದ ಇಂದ್ರನನ್ನು ಸಂಹರಿಸಲು ಬಹಳವಾಗಿ ಪ್ರಯತ್ನಿಸಿದನು. ॥ ೨೯ ॥ ಕಿರುಗಂಟೆಗಳಿಂದ ಝಣ-ಝಣಿಸುತ್ತಾ, ಸುವರ್ಣಭೂಷಿತವಾಗಿದ್ದ ಒಂದು ಶೂಲವನ್ನೆತ್ತಿಕೊಂಡು ಅತ್ಯಂತ ಕ್ರುದ್ಧನಾಗಿ – ಇಂದ್ರನೇ! 'ಈಗ ನೀನು ಬದುಕುಳಿಯಲಾರೆ' ಎಂದು ಗರ್ಜಿಸುತ್ತಾ, ಸಿಂಹನಾದವನ್ನು ಮಾಡುತ್ತಾ ದೇವೇಂದ್ರನ ಮೇಲೆ ಆ ನಮುಚಿಯು ಶೂಲವನ್ನು ರಭಸದಿಂದ ಎಸೆದನು. ॥ ೩೦ ॥ ರಾಜೇಂದ್ರನೇ! ನಮುಚಿಯಿಂದ ಬಿಡಲ್ಪಟ್ಟ ತ್ರಿಶೂಲವು ತನ್ನ ಕಡೆಗೆ ಬರುತ್ತಿರುವುದನ್ನು ನೋಡಿದ ಇಂದ್ರನು ತನ್ನ ನಿಶಿತವಾದ ಬಾಣಗಳಿಂದ ಆಕಾಶದಲ್ಲೇ ಸಾವಿರಾರು ತುಂಡುಗಳಾಗಿ ಕತ್ತರಿಸಿಬಿಟ್ಟನು. ಇದಾದ ಬಳಿಕ ದೇವೇಂದ್ರನು ಅತ್ಯಂತ ಕ್ರುದ್ಧನಾಗಿ ಅವನ ಶಿರವನ್ನು ತುಂಡರಿಸಲಿಕ್ಕಾಗಿ ವಜ್ರಾಯುಧವನ್ನು ರಾಕ್ಷಸನ ಕತ್ತಿನ ಮೇಲೆ ಪ್ರಯೋಗಿಸಿದನು. ॥ ೩೧ ॥ ಇಂದ್ರನು ಭಾರೀ ವೇಗದಿಂದ ಆ ವಜ್ರವನ್ನು ಪ್ರಯೋಗಿಸಿದ್ದರೂ, ಆ ಯಶಸ್ವೀ ವಜ್ರದಿಂದ ಅವನ ಚರ್ಮದ ಮೇಲೆ ಗುರುತುಕೂಡ ಮಾಡದೆ ಹೋಯಿತು. ಯಾವ ವಜ್ರವು ಮಹಾಬಲಶಾಲಿಯಾದ ವೃತ್ರಾಸುರನ ಶರೀರವನ್ನು

ನ ತಸ್ಯ ಹಿ ತ್ವಚಮಪಿ ವಜ್ರ ಊರ್ಜಿತೋ
ಬಿಭೇದ ಯಃ ಸುರಪತಿನೌಜಸೇರಿತಃ ।
ತದದ್ಭುತಂ ಪರಮತಿವೀರ್ಯವೃತ್ರಭಿತ್
ತಿರಸ್ಕೃತೋ ನಮುಚಿಶಿರೋಧರತ್ವಚಾ ॥ ೩೨ ॥

ತಸ್ಮಾದಿಂದ್ರೋಽಬಿಭೇಚ್ಛತ್ರೋರ್ವಜ್ರಃ ಪ್ರತಿಹತೋ ಯತಃ ।
ಕಿಮಿದಂ ದೈವಯೋಗೇನ ಭೂತಂ ಲೋಕವಿಮೋಹನಮ್ ॥ ೩೩ ॥

ಯೇನ ಮೇ ಪೂರ್ವಮದ್ರೀಣಾಂ ಪಕ್ಷಚ್ಛೇದಃ ಪ್ರಜಾತ್ಯಯೇ ।
ಕೃತೋ ನಿವಿಶತಾಂ ಭಾರೈಃ ಪತತ್ರೈಃ ಪತತಾಂ ಭುವಿ ॥ ೩೪ ॥

ತಪಃಸಾರಮಯಂ ತ್ವಾಷ್ಟ್ರಂ ವೃತ್ರೋ ಯೇನ ವಿಪಾಟಿತಃ ।
ಅನ್ಯೇ ಚಾಪಿ ಬಲೋಪೇತಾಃ ಸರ್ವಾಸ್ತ್ರೈರಕ್ಷತತ್ವಚಃ ॥ ೩೫ ॥

ಸೋಽಯಂ ಪ್ರತಿಹತೋ ವಜ್ರೋ
ಮಯಾ ಮುಕ್ತೋಽಸುರೇಽಲ್ಪಕೇ ।
ನಾಹಂ ತದಾದದೇ ದಂಡಂ
ಬ್ರಹ್ಮತೇಜೋಽಪ್ಯಕಾರಣಮ್ ॥ ೩೬ ॥

ಇತಿ ಶಕ್ರಂ ವಿಷೀದಂತಮಾಹ ವಾಗಶರೀರಿಣೀ ।
ನಾಯಂ ಶುಷ್ಕೈರಥೋ ನಾರ್ದ್ರೈರ್ವಧಮರ್ಹತಿ ದಾನವಃ ॥ ೩೭ ॥

ಮಯಾಸ್ಮೈ ಯದ್ವರೋ ದತ್ತೋ
ಮೃತ್ಯುರ್ನೈವಾರ್ದ್ರಶುಷ್ಕಯೋಃ ।
ಅತೋಽನ್ಯಶ್ಚಿಂತನೀಯಸ್ತೇ
ಉಪಾಯೋ ಮಘವನ್ರಿಪೋಃ ॥ ೩೮ ॥

ತಾಂ ದೈವೀಂ ಗಿರಮಾಕರ್ಣ್ಯ ಮಘವಾನ್ಸುಸಮಾಹಿತಃ ।
ಧ್ಯಾಯನ್ ಫೇನಮಥಾಪಶ್ಯದುಪಾಯಮುಭಯಾತ್ಮಕಮ್ ॥ ೩೯ ॥

ನ ಶುಷ್ಕೇಣ ನ ಚಾರ್ದ್ರೇಣ ಜಹಾರ ನಮುಚೇಃ ಶಿರಃ ।
ತಂ ತುಷ್ಟುವುರ್ಮುನಿಗಣಾ ಮಾಲ್ಯೈಶ್ಚಾವಾಕಿರನ್ವಿಭುಮ್ ॥ ೪೦ ॥

ಗಂಧರ್ವಮುಖ್ಯೌ ಜಗತುರ್ವಿಶ್ವಾವಸುಪರಾವಸೂ ।
ದೇವದುಂದುಭಯೋ ನೇದುರ್ನರ್ತಕ್ಯೋ ನನೃತುರ್ಮುದಾ ॥ ೪೧ ॥

ಅನ್ಯೇಽಪ್ಯೇವಂ ಪ್ರತಿದ್ವಂದ್ವಾನ್ವಾಯ್ವಗ್ನಿವರುಣಾದಯಃ ।
ಸೂದಯಾಮಾಸುರಸ್ತ್ರೌಘೈರ್ಮೃಗಾನ್ಕೇಸರಿಣೋ ಯಥಾ ॥ ೪೨ ॥

ತುಂಡು-ತುಂಡುಮಾಡಿತ್ತೋ ಅದನ್ನು ನಮೂಚಿಯ ಕತ್ತಿನ ತ್ವಚೆಯು ತಿರಸ್ಕರಿಸಿತ್ತು. ಇದೊಂದು ಪರಮಾಶ್ಚರ್ಯಕರ ಘಟನೆ ನಡೆಯಿತು. ॥ ೩೨ ॥ ವಜ್ರಾಯುಧವು ನಮೂಚಿಯ ವಿಷಯದಲ್ಲಿ ಬಲಹೀನವಾಗಿರುವುದನ್ನು ಕಂಡು ಇಂದ್ರನು ಭಯಗೊಂಡನು. 'ಲೋಕಗಳನ್ನು ವಿಮೋಹಗೊಳಿಸುವ ರಾಕ್ಷಸ ರೂಪದ ಈ ಪ್ರಾಣಿಯು ದೈವಯೋಗದಿಂದಲೇ ಹುಟ್ಟಿರಬಹುದೇ ?' ಎಂದು ಇಂದ್ರನು ಯೋಚಿಸತೊಡಗಿದನು. ॥ ೩೩ ॥ ಹಿಂದಿನ ಯುಗದಲ್ಲಿ ಈ ಪರ್ವತಗಳು ರೆಕ್ಕೆಗಳಿಂದ ಹಾರಾಡುತ್ತಾ, ತಿರುಗುತ್ತಿರುವಾಗ ಭೂಮಿಯಲ್ಲಿ ಬಿದ್ದು ಪ್ರಜೆಗಳನ್ನು ನಾಶಮಾಡುತ್ತಿದ್ದವು. ಇದನ್ನು ಕಂಡ ನಾನು ನನ್ನ ಈ ವಜ್ರಾಯುಧದಿಂದಲೇ ಪರ್ವತಗಳ ರೆಕ್ಕೆಗಳನ್ನು ಕತ್ತರಿಸಿಹಾಕಿದ್ದೆ. ಈಗ ವಜ್ರಾಯುಧವು ನಮೂಚಿಯ ವಿಷಯದಲ್ಲಿ ವ್ಯರ್ಥವಾಗಿ ಬಿಟ್ಟಿದೆಯಲ್ಲ! ॥ ೩೪ ॥ ತ್ವಷ್ಟ್ರ ಪ್ರಜಾಪತಿಯ ತಪಸ್ಸಿನ ಸಾರವೇ ವೃತ್ರಾಸುರನ ರೂಪದಲ್ಲಿ ಪ್ರಕಟವಾಗಿತ್ತು. ಅಂತಹವನನ್ನೇ ನಾನು ಈ ವಜ್ರದಿಂದ ಸಂಹರಿಸಿಬಿಟ್ಟಿದ್ದೆ. ಇನ್ನೂ ಅನೇಕ ಬಲಿಷ್ಠರಾಗಿದ್ದ ಮತ್ತು ಯಾವುದೇ ಶಸ್ತ್ರಗಳಿಂದ ಕಿಂಚಿತ್ತಾದರೂ ಗಾಯಗೊಳ್ಳದಿದ್ದ ಮಹಾಸುರರನ್ನು ಈ ವಜ್ರಾಯುಧದಿಂದಲೇ ನಾನು ಸಂಹರಿಸಿದ್ದೆ. ॥ ೩೫ ॥ ಅಂತಹ ಶ್ರೇಷ್ಠವಾದ ನನ್ನ ವಜ್ರಾಯುಧವು ಅಲ್ಪನಾದ ಈ ನಮೂಚಿರಾಕ್ಷಸನ ವಿಷಯದಲ್ಲಿ ಪರಾಭವವನ್ನು ಹೊಂದಿತು. ಈ ವಜ್ರಾಯುಧವು ಮಹಾಮಹಿಮನಾದ ದಧೀಚಿ ಮಹರ್ಷಿಯ ಬ್ರಹ್ಮತೇಜದಿಂದ ರೂಪಿತವಾಗಿದ್ದರೂ ನಿಷ್ಕಾರಣವಾಗಿ ಬಲಗುಂದಿದ ಇದನ್ನು ನಾನು ಇನ್ನು ಮುಂದೆ ಹಿಡಿಯುವುದಿಲ್ಲ. ॥ ೩೬ ॥ ಹೀಗೆ ಇಂದ್ರನು ವಿಷಾದಿಸುತ್ತಿರುವಾಗ ಆಕಾಶವಾಣಿಯು ಹೀಗೆಂದು ನುಡಿಯಿತು – 'ವಾಸವನೇ ! ಈ ರಾಕ್ಷಸನನ್ನು ಒಣಗಿರುವ ವಸ್ತುವಿನಿಂದಾಗಲೀ, ಹಸಿಯಾಗಿರುವ ವಸ್ತುವಿನಿಂದಾಗಲೀ ವಧಿಸಲು ಸಾಧ್ಯವಿಲ್ಲ. ಅವನಿಗೆ ಇಂತಹ ವರಬಲವಿದೆ. ಈಗ ನೀನು ಇವನನ್ನು ಕೊಲ್ಲುವ ಬೇರೆ ಉಪಾಯವನ್ನು ಯೋಚಿಸು'. ॥ ೩೭-೩೮ ॥ ಮಹೇಂದ್ರನು ಆ ದೇವವಾಣಿಯನ್ನು ಕೇಳಿ ಏಕಾಗ್ರಚಿತ್ತನಾಗಿ ಯೋಚಿಸುತ್ತಾ- ಯೋಚಿಸುತ್ತಾ ಕೊನೆಗೆ ಅವನಿಗೆ ಹೊಳೆಯಿತು – ಸಮುದ್ರದ ನೊರೆಯು ಒಣಗಿದ್ದೂ ಅಲ್ಲ, ಹಸಿಯೂ ಅಲ್ಲ. ॥ ೩೯ ॥ ಆದ್ದರಿಂದ ಅದನ್ನು ಹಸಿ ಎಂದೂ ಹೇಳುವ ಹಾಗಿಲ್ಲ, ಒಣಗಿದ್ದು ಎಂದೂ ಹೇಳುವ ಹಾಗಿಲ್ಲ. ಆದ್ದರಿಂದ ಇಂದ್ರನು ■ ನೊರೆಯಿಂದಲೇ ನಮೂಚಿಯ ಶಿರವನ್ನು ತುಂಡರಿಸಿದನು. ಆಗ ಋಷಿ-ಮುನಿಗಳು ಒಡೆಯನಾದ ಇಂದ್ರನನ್ನು ಸ್ತುತಿಸಿ ಅವನ ಮೇಲೆ ಹೂಮಾಲೆಗಳನ್ನು ಮಳೆಗರೆದರು. ॥ ೪೦ ॥ ಗಂಧರ್ವ ಶಿರೋಮಣಿ ವಿಶ್ವಾವಸು ಹಾಗೂ ಪರಾವಸುಗಳು ಹಾಡತೊಡಗಿದರು. ದೇವತೆಗಳು ದುಂದುಭಿಗಳನ್ನು ನುಡಿಸತೊಡಗಿದರು. ನರ್ತಕಿಯರು ಕುಣಿಯತೊಡಗಿದರು. ॥ ೪೧ ॥ ಹೀಗೆಯೇ ವಾಯು, ಅಗ್ನಿ, ವರುಣ ಮುಂತಾದ ಇತರ ದೇವತೆಗಳೂ ಕೂಡ ತಮ್ಮ ಅಸ್ತ್ರ-ಶಸ್ತ್ರಗಳಿಂದ ಸಿಂಹವು ಜಿಂಕೆಗಳನ್ನು ಕೊಂದುಹಾಕುವಂತೆ ಎದುರಾಳಿ ರಾಕ್ಷಸರನ್ನು ಧ್ವಂಸಮಾಡಿದರು. ॥ ೪೨ ॥ ಪರೀಕ್ಷಿತನೇ ! ದಾನವರದ್ದಾದರೋ ಪೂರ್ಣನಾಶವಾಗಿದೆ ಎಂದು ನೋಡಿದ ಬ್ರಹ್ಮದೇವರು ದೇವರ್ಷಿಗಳಾದ

ಬ್ರಹ್ಮಣಾ ಪ್ರೇಷಿತೋ ದೇವಾನ್ ದೇವರ್ಷಿರ್ನಾರದೋ ನೃಪ ।
ವಾರಯಾಮಾಸ ವಿಬುಧಾನ್ದೃಷ್ಟ್ವಾ ದಾನವಸಂಕ್ಷಯಮ್
॥ ೪೩ ॥

ನಾರದ ಉವಾಚ

ಭವದ್ಭಿರಮೃತಂ ಪ್ರಾಪ್ತಂ ನಾರಾಯಣಭುಜಾಶ್ರಯೈಃ ।
ಶ್ರಿಯಾ ಸಮೇಧಿತಾಃ ಸರ್ವ ಉಪಾರಮತ ವಿಗ್ರಹಾತ್
॥ ೪೪ ॥

ಶ್ರೀಶುಕ ಉವಾಚ

ಸಂಯಮ್ಯ ಮನ್ಯುಸಂರಂಭಂ
ಮಾನಯಂತೋ ಮುನೇರ್ವಚಃ ।
ಉಪಗೀಯಮಾನಾನುಚರೈ-
ರ್ಯಯುಃ ಸರ್ವೇ ತ್ರಿವಿಷ್ಟಪಮ್ ॥ ೪೫ ॥

ಯೇಽವಶಿಷ್ಟಾ ರಣೇ ತಸ್ಮಿನ್ನಾರದಾನುಮತೇನ ತೇ ।
ಬಲಿಂ ವಿಪನ್ನಮಾದಾಯ ಅಸ್ತಂ ಗಿರಿಮುಪಾಗಮನ್
॥ ೪೬ ॥

ತತ್ರಾವಿನಷ್ಟಾವಯವಾನ್ವಿದ್ಯಮಾನಶಿರೋಧರಾನ್ ।
ಉಶನಾ ಜೀವಯಾಮಾಸ ಸಂಜೀವಿನ್ಯಾ ಸ್ವವಿದ್ಯಯಾ
॥ ೪೭ ॥

ಬಲಿಶ್ಚೋಶನಸಾ ಸ್ಪೃಷ್ಟಃ ಪ್ರತ್ಯಾಪನ್ನೇಂದ್ರಿಯಸ್ಮೃತಿಃ ।
ಪರಾಜಿತೋಽಪಿ ನಾಖಿದ್ಯಲ್ಲೋಕತತ್ತ್ವವಿಚಕ್ಷಣಃ
॥ ೪೮ ॥

ನಾರದರನ್ನು ದೇವತೆಗಳ ಬಳಿಗೆ ಕಳಿಸಿದರು. ನಾರದರು ಅಲ್ಲಿಗೆ ಹೋಗಿ ಮುಂದೆ ಯುದ್ಧ ಮಾಡದಂತೆ ದೇವತೆಗಳನ್ನು ತಡೆದರು. ॥ ೪೩ ॥

ನಾರದರು ಹೇಳಿದರು – ದೇವತೆಗಳಿರಾ ! ಶ್ರೀನಾರಾಯಣನ ಭುಜಬಲವನ್ನು ಆಶ್ರಯಿಸಿ ನೀವು ಅಮೃತವನ್ನು ಪಡೆದಿರಿ. ಶ್ರೀಲಕ್ಷ್ಮೀದೇವಿಯ ಕೃಪಾಕಟಾಕ್ಷದಿಂದ ಅಭಿವೃದ್ಧಿಯನ್ನು ಹೊಂದಿರುವಿರಿ. ನೀವು ಯುದ್ಧವನ್ನು ನಿಲ್ಲಿಸಿಬಿಡಿರಿ. ॥ ೪೪ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ರಾಜೇಂದ್ರ ! ದೇವರ್ಷಿ ನಾರದರ ಮಾತನ್ನು ಅನುಮೋದಿಸಿ ದೇವತೆಗಳು ಕೋಪವನ್ನು ತೊರೆದು ಶಾಂತರಾದರು. ಮತ್ತೆ ಗಂಧರ್ವಾಪ್ಸರೆಯರು ಸ್ತುತಿಸುತ್ತಾ ಇರುವಾಗ ಅವರು ತಮ್ಮ ಸ್ವರ್ಗಲೋಕಕ್ಕೆ ಹಿಂತಿರುಗಿದರು. ॥ ೪೫ ॥ ಯುದ್ಧದಲ್ಲಿ ಉಳಿದುಳಿದಿದ್ದ ದೈತ್ಯರು ನಾರದ ಮಹರ್ಷಿಗಳ ಸಮ್ಮತಿಯಿಂದ ವಜ್ರಾಯುಧದಿಂದ ಸತ್ತುಬಿದ್ದಿದ್ದ ಬಲಿಯನ್ನು ಎತ್ತಿಕೊಂಡು ಅಸ್ತಾಚಲಕ್ಕೆ ತೆರಳಿದರು. ॥ ೪೬ ॥ ಅಲ್ಲಿ ಶುಕ್ರಾಚಾರ್ಯರು ತಮ್ಮ ಸಂಜೀವನೀ ವಿದ್ಯೆಯಿಂದ ಅಂಗಾಂಗಗಳು ಪೂರ್ಣವಾಗಿ ತುಂಡಾಗದಿದ್ದವರನ್ನು, ಗಾಯಗೊಂಡವರನ್ನು ಬದುಕಿಸಿದರು. ॥ ೪೭ ॥ ಶುಕ್ರಾಚಾರ್ಯರು ಸ್ಪರ್ಶಿಸಿದೊಡನೆ ಬಲಿಯ ಇಂದ್ರಿಯಗಳಲ್ಲಿ ಚೈತನ್ಯವೂ, ಮನಸ್ಸಿನಲ್ಲಿ ಸ್ಮೃತಿಯೂ ಮರುಕಳಿಸಿ ಜೀವಂತನಾದನು. ಪ್ರಪಂಚದಲ್ಲಿ ಜಯಾಪಜಯಗಳು, ಜೀವನ-ಮೃತ್ಯುಗಳು ಕಾಲನ ಪ್ರೇರಣೆಯಿಂದ ನಡೆಯುತ್ತಿವೆ ಎಂದು ತಿಳಿದಿದ್ದ ಬಲಿಯು ತಾನು ಪರಾಜಿತನಾದುದಕ್ಕೆ ಸ್ವಲ್ಪವಾದರೂ ದುಃಖಿಸಲಿಲ್ಲ. ॥ ೪೮ ॥

ಹನ್ನೊಂದನೆಯ ಅಧ್ಯಾಯವು ಮುಗಿಯಿತು. ॥ ೧೧ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಅಷ್ಟಮ ಸ್ಕಂಧೇ ದೇವಾಸುರಸಂಗ್ರಾಮೇ ಏಕಾದಶೋಽಧ್ಯಾಯಃ ॥ ೧೧ ॥

ಹನ್ನೆರಡನೆಯ ಅಧ್ಯಾಯ

ಮೋಹಿನೀರೂಪವನ್ನು ನೋಡಿ ಮಹಾದೇವನು ಮೋಹಿತನಾದುದು

ಶ್ರೀಬಾದರಾಯಣಿರುವಾಚ

ವೃಷಧ್ವಜೋ ನಿಶಮ್ಯೇದಂ ಯೋಷಿದ್ರೂಪೇಣ ದಾನವಾನ್ ।
ಮೋಹಯಿತ್ವಾ ಸುರಗಣಾನ್ಹರಿಃ ಸೋಮಮಪಾಯಯತ್
॥ ೧ ॥

ವೃಷಮಾರುಹ್ಯ ಗಿರಿಶಃ ಸರ್ವಭೂತಗಣೈರ್ವೃತಃ ।
ಸಹ ದೇವ್ಯಾ ಯಯೌ ದ್ರಷ್ಟುಂ ಯತ್ರಾಸ್ತೇ ಮಧುಸೂದನಃ
॥ ೨ ॥

ಸಭಾಜಿತೋ ಭಗವತಾ ಸಾದರಂ ಸೋಮಯಾ ಭವಃ ।
ಸೂಪವಿಷ್ಟ ಉವಾಚೇದಂ ಪ್ರತಿಪೂಜ್ಯ ಸ್ಮಯನ್ಹರಿಮ್
॥ ೩ ॥

ಶ್ರೀಶುಕಮುನಿಗಳು ಹೇಳುತ್ತಾರೆ – ಎಲೈ ಪರೀಕ್ಷಿತನೇ ! ಶ್ರೀಹರಿಯು ಸ್ತ್ರೀರೂಪವನ್ನು ಧರಿಸಿ ಅಸುರರಿಗೆ ಮೋಹವನ್ನುಂಟುಮಾಡಿ, ದೇವತೆಗಳಿಗೆ ಅಮೃತವನ್ನು ಕುಡಿಸಿದನು ಎಂದು ಕೇಳಿ ವೃಷಭಧ್ವಜನಾದ ಪರಮೇಶ್ವರನು ಪಾರ್ವತಿಯೊಡನೆ ವೃಷಭವನ್ನೇರಿ ಸಮಸ್ತ ಭೂತಗಣಗಳನ್ನು ಸೇರಿಸಿಕೊಂಡು ಭಗವಾನ್ ಮಧುಸೂದನನು ಇದ್ದಲ್ಲಿಗೆ ಆಗಮಿಸಿದನು. ॥ ೧-೨ ॥ ಭಗವಾನ್ ಶ್ರೀಹರಿಯು ಪ್ರೇಮದಿಂದ ಭಗವಂತನಾದ ಪಾರ್ವತೀ ಪರಮೇಶ್ವರರನ್ನು ಸ್ವಾಗತಿಸಿ ಸತ್ಕಾರಮಾಡಿದನು. ಶಿವನು ಸುಖಾಸೀನನಾಗಿ ಭಗವಂತನನ್ನು ಸಮ್ಮಾನಿಸುತ್ತಾ ನಸುನಗುತ್ತಾ ಇಂತೆಂದನು. ॥ ೩ ॥

ಶ್ರೀಮಹಾದೇವ ಉವಾಚ

ದೇವದೇವ ಜಗದ್ವ್ಯಾಪಿನ್ ಜಗದೀಶ ಜಗನ್ಮಯ ।
ಸರ್ವೇಷಾಮಪಿ ಭಾವಾನಾಂ ತ್ವಮಾತ್ಮಾ ಹೇತುರೀಶ್ವರಃ ॥ ೪ ॥

ಆದ್ಯಂತಾವಸ್ಯ ಯನ್ಮಧ್ಯಮಿದಮನ್ಯದಹಂ ಬಹಿಃ ।
ಯತೋಽವ್ಯಯಸ್ಯ ನೈತಾನಿ ತತ್ಸತ್ಯಂ ಬ್ರಹ್ಮ ಚಿದ್ಭವಾನ್ ॥ ೫ ॥

ತವೈವ ಚರಣಾಂಭೋಜಂ ಶ್ರೇಯಸ್ಕಾಮಾ ನಿರಾಶಿಷಃ ।
ವಿಸೃಜ್ಯೋಭಯತಃ ಸಂಗಂ ಮುನಯಃ ಸಮುಪಾಸತೇ ॥ ೬ ॥

ತ್ವಂ ಬ್ರಹ್ಮ ಪೂರ್ಣಮಮೃತಂ ವಿಗುಣಂ ವಿಶೋಕ-
ಮಾನಂದಮಾತ್ರಮವಿಕಾರಮನನ್ಯದನ್ಯತ್ ।
ವಿಶ್ವಸ್ಯ ಹೇತುರುದಯಸ್ಥಿತಿಸಂಯಮಾನಾ-
ಮಾತ್ಮೇಶ್ವರಶ್ಚ ತದಪೇಕ್ಷತಯಾನಪೇಕ್ಷಃ ॥ ೭ ॥

ಏಕಸ್ತ್ವಮೇವ ಸದಸದ್ದ್ವಯಮದ್ವಯಂ ಚ
ಸ್ವರ್ಣಂ ಕೃತಾಕೃತಮಿವೇಹ ನ ವಸ್ತುಭೇದಃ ।
ಅಜ್ಞಾನತಸ್ತ್ವಯಿ ಜನೈರ್ವಿಹಿತೋ ವಿಕಲ್ಪೋ
ಯಸ್ಮಾದ್ಗುಣವ್ಯತಿಕರೋ ನಿರುಪಾಧಿಕಸ್ಯ ॥ ೮ ॥

ತ್ವಾಂ ಬ್ರಹ್ಮ ಕೇಚಿದವಯಂತ್ಯುತ ಧರ್ಮಮೇಕೇ
ಏಕೇ ಪರಂ ಸದಸತೋಃ ಪುರುಷಂ ಪರೇಶಮ್ ।
ಅನ್ಯೇಽವಯಂತಿ ನವಶಕ್ತಿಯುತಂ ಪರಂ ತ್ವಾಂ
ಕೇಚಿನ್ಮಹಾಪುರುಷಮವ್ಯಯಮಾತ್ಮತಂತ್ರಮ್ ॥ ೯ ॥

ನಾಹಂ ಪರಾಯುರ್ಋಷಯೋ ನ ಮರೀಚಿಮುಖ್ಯಾ
ಜಾನಂತಿ ಯದ್ವಿರಚಿತಂ ಖಲು ಸತ್ತ್ವಸರ್ಗಾಃ ।
ಯನ್ಮಾಯಯಾ ಮುಷಿತಚೇತಸ ಈಶ ದೈತ್ಯ-
ಮರ್ತ್ಯಾದಯಃ ಕಿಮುತ ಶಶ್ವದಭದ್ರವೃತ್ತಾಃ ॥ ೧೦ ॥

ಶ್ರೀಮಹಾದೇವನು ಹೇಳಿದನು – ದೇವದೇವನೇ! ಪ್ರಪಂಚವೆಲ್ಲವನ್ನು ವ್ಯಾಪಿಸಿಕೊಂಡಿರುವವನೇ! ಮೂಜಗದೊಡೆಯನೇ! ಜಗತ್ಸ್ವರೂಪನೇ! ಸಮಸ್ತ ಚರಾಚರ ಪದಾರ್ಥಗಳ ಮೂಲ ಕಾರಣನೂ, ಈಶ್ವರನೂ, ಆತ್ಮನೂ ನೀನೇ ಆಗಿರುವೆ. ॥ ೪ ॥ ಈ ಜಗತ್ತಿಗೆ ಆದಿ-ಮಧ್ಯ-ಅಂತ್ಯವೂ ನೀನೇ ಆಗಿರುವೆ. ಆದರೆ ನಿನಗೆ ಆದಿ-ಮಧ್ಯಾಂತಗಳಾವುವೂ ಇಲ್ಲ. ನಿನ್ನ ಅವಿನಾಶೀ ಸ್ವರೂಪದಲ್ಲಿ ದ್ರಷ್ಟಾ, ದೃಶ್ಯ, ಭೋಕ್ತಾ, ಭೋಗ್ಯ ಮುಂತಾದ ಭೇದಗಳಾವುವೂ ಇಲ್ಲ. ವಾಸ್ತವವಾಗಿ ನೀನು ಸತ್ಯ, ಚಿನ್ಮಾತ್ರ ಬ್ರಹ್ಮನೇ ಆಗಿರುವೆ. ॥ ೫ ॥ ಶ್ರೇಯಸ್ಕಾಮರಾದ ಮಹಾತ್ಮರು ಇಹ-ಪರಲೋಕಗಳ ಆಸಕ್ತಿಯನ್ನು ತೊರೆದು, ಸಮಸ್ತ ಕಾಮನೆಗಳನ್ನು ಪರಿತ್ಯಾಗಮಾಡಿ ನಿನ್ನ ಚರಣಕಮಲಗಳ ಆರಾಧನೆಯಲ್ಲೇ ಸದಾಕಾಲ ಆಸಕ್ತರಾಗಿರುತ್ತಾರೆ. ॥ ೬ ॥ ಪರಂಜ್ಯೋತಿಯೇ! ಪರಮಾತ್ಮನೇ! ನೀನು ಅಮೃತಸ್ವರೂಪನು. ಸಮಸ್ತ ಪ್ರಾಕೃತಗುಣಗಳಿಂದ ರಹಿತನಾದವನು. ಶೋಕದ ನೆರಳೂ ಕೂಡ ಇಲ್ಲದವನು. ನೀನು ಪರಿಪೂರ್ಣ ಬ್ರಹ್ಮಸ್ವರೂಪನಾಗಿರುವೆ. ಕೇವಲ ಆನಂದಸ್ವರೂಪನಾಗಿದ್ದು ನಿರ್ವಿಕಾರನಾಗಿರುವೆ. ನಿನ್ನಿಂದ ಭಿನ್ನವಾದುದು ಏನೂ ಇಲ್ಲ. ಆದರೆ ನೀನು ಎಲ್ಲಕ್ಕಿಂತ ಭಿನ್ನನಾಗಿರುವೆ. ನೀನು ವಿಶ್ವದ ಉತ್ಪತ್ತಿ-ಸ್ಥಿತಿ-ಪ್ರಳಯಗಳಿಗೆ ಪರಮ ಕಾರಣನಾಗಿರುವೆ. ಸಮಸ್ತ ಜೀವರಿಗೆ ಶುಭಾಶುಭ ಕರ್ಮಫಲಗಳನ್ನು ಕೊಡುವ ಸ್ವಾಮಿಯೂ ನೀನೇ ಆಗಿರುವೆ. ಆದರೆ ಇವೆಲ್ಲ ಮಾತುಗಳು ಜೀವಿಗಳ ಅಪೇಕ್ಷೆಯಿಂದಲೇ ಹೇಳಲಾಗುತ್ತವೆ. ವಾಸ್ತವವಾಗಿ ನೀನು ಎಲ್ಲರ ಅಪೇಕ್ಷೆಯಿಂದ ರಹಿತ – ಅನಪೇಕ್ಷನಾಗಿರುವೆ. ॥ ೭ ॥ ಸ್ವಾಮಿಯೇ! ಆಭರಣದ ರೂಪದಲ್ಲಿರುವ ಚಿನ್ನಕ್ಕೂ, ಮೂಲರೂಪದಲ್ಲಿರುವ ಚಿನ್ನಕ್ಕೂ ಯಾವ ವ್ಯತ್ಯಾಸವೂ ಇರದೆ ಎರಡೂ ಒಂದೇ ವಸ್ತುವಾಗಿದೆ. ಹಾಗೆಯೇ ಇಲ್ಲಿ ಇರುವ ಕಾರ್ಯ-ಕಾರಣ, ದ್ವೈತ-ಅದ್ವೈತ ಇವೆಲ್ಲವೂ ಏಕಮಾತ್ರ ನೀನೇ ಆಗಿರುವೆ. ನಿನ್ನ ವಾಸ್ತವಿಕ ಸ್ವರೂಪವನ್ನು ತಿಳಿಯದ ಕಾರಣ ಜನರು ನಿನ್ನಲ್ಲಿ ನಾನಾರೀತಿಯ ಭೇದಭಾವಗಳನ್ನು ಮತ್ತು ವಿಕಲ್ಪಗಳನ್ನು ಮಾಡುತ್ತಾರೆ. ನಿನ್ನಲ್ಲಿ ಯಾವುದೇ ಪ್ರಕಾರದ ಉಪಾಧಿಯೂ ಇಲ್ಲದಿದ್ದರೂ ಗುಣಗಳಿಂದಾಗಿ ಭೇದದ ಪ್ರತೀತಿಯಾಗುವುದೇ ಇದಕ್ಕೆ ಕಾರಣವಾಗಿದೆ. ॥ ೮ ॥ ಪ್ರಭುವೇ! ನಿನ್ನನ್ನು ಕೆಲವರು ಬ್ರಹ್ಮನೆಂದು ತಿಳಿಯುತ್ತಾರೆ. ಬೇರೆ ಕೆಲವರು ನಿನ್ನನ್ನು ಧರ್ಮನೆಂದು ತಿಳಿದು ವರ್ಣಿಸುತ್ತಾರೆ. ಹೀಗೆಯೇ ಇನ್ನೂ ಕೆಲವರು ನಿನ್ನನ್ನು ಪ್ರಕೃತಿ ಮತ್ತು ಪುರುಷರಿಗಿಂತಲೂ ಅತೀತನಾದ ಪರಮೇಶ್ವರನೆಂದು ಅರಿಯುತ್ತಾರೆ. ಕೆಲವರು ನಿನ್ನನ್ನು ವಿಮಲಾ, ಉತ್ಕರ್ಷಿಣೀ, ಜ್ಞಾನಾ, ಕ್ರಿಯಾ, ಯೋಗಾ, ಪ್ರಹ್ವೀ, ಸತ್ಯಾ, ಈಶಾನಾ ಮತ್ತು ಅನುಗ್ರಹಾ ಎಂಬ ಒಂಭತ್ತು ಶಕ್ತಿಗಳಿಂದ ಯುಕ್ತನಾದ ಮಹಾಪುರುಷನೆಂದು ಹೇಳುತ್ತಾರೆ. ಕೆಲವರು ಕ್ಲೇಶ-ಕರ್ಮ ಮುಂತಾದ ಬಂಧನಗಳಿಂದ ರಹಿತನಾದವನೆಂದೂ, ಪೂರ್ವಜರಿಗೂ ಪೂರ್ವಜನೆಂದೂ, ಅವಿನಾಶಿಯೆಂದೂ, ಸರ್ವತಂತ್ರಸ್ವತಂತ್ರನಾದ ಮಹಾಪುರುಷನೆಂದೂ ತಿಳಿಯುತ್ತಾರೆ. ॥ ೯ ॥ ಪ್ರಭೋ! ಸತ್ತ್ವಗುಣದ ಸೃಷ್ಟಿಯ ಅಂತರ್ಗತರಾಗಿರುವ ನಾನು ಬ್ರಹ್ಮಾ, ಮರೀಚಿಯೇ ಮೊದಲಾದ ಮಹರ್ಷಿಗಳೂ ಕೂಡ ನಿನ್ನ ಸೃಷ್ಟಿಯ ರಹಸ್ಯವನ್ನು ಅರಿಯೆವು.

ಸ ತ್ವಂ ಸಮೀಹಿತಮದಃ ಸ್ಥಿತಿಜನ್ಮನಾಶಂ
ಭೂತೇಹಿತಂ ಚ ಜಗತೋ ಭವಬಂಧಮೋಕ್ಷೌ ।
ವಾಯುರ್ಯಥಾ ವಿಶತಿ ಖಂ ಚ ಚರಾಚರಾಖ್ಯಂ
ಸರ್ವಂ ತದಾತ್ಮಕತಯಾವಗಮೋಽವರುಂತ್ಸೇ ॥ ೧೧ ॥

ಅವತಾರಾ ಮಯಾ ದೃಷ್ಟಾ
ರಮಮಾಣಸ್ಯ ತೇ ಗುಣೈಃ ।
ಸೋಽಹಂ ತದ್ದ್ರಷ್ಟುಮಿಚ್ಛಾಮಿ
ಯತ್ತೇ ಯೋಷಿದ್ವಪುರ್ಧೃತಮ್ ॥ ೧೨ ॥

ಯೇನ ಸಮ್ಮೋಹಿತಾ ದೈತ್ಯಾಃ ಪಾಯಿತಾಶ್ಚಾಮೃತಂ ಸುರಾಃ ।
ತದ್ದಿದೃಕ್ಷವ ಆಯಾತಾಃ ಪರಂ ಕೌತೂಹಲಂ ಹಿ ನಃ ॥ ೧೩ ॥

ಶ್ರೀಶುಕ ಉವಾಚ

ಏವಮಭ್ಯರ್ಥಿತೋ ವಿಷ್ಣುರ್ಭಗವಾನ್ ಶೂಲಪಾಣಿನಾ ।
ಪ್ರಹಸ್ಯ ಭಾವಗಂಭೀರಂ ಗಿರಿಶಂ ಪ್ರತ್ಯಭಾಷತ ॥ ೧೪ ॥

ಶ್ರೀಭಗವಾನುವಾಚ

ಕೌತೂಹಲಾಯ ದೈತ್ಯಾನಾಂ ಯೋಷಿದ್ವೇಷೋ ಮಯಾ ಕೃತಃ ।
ಪಶ್ಯತಾ ಸುರಕಾರ್ಯಾಣಿ ಗತೇ ಪೀಯೂಷಭಾಜನೇ ॥ ೧೫ ॥

ತತ್ತೇಽಹಂ ದರ್ಶಯಿಷ್ಯಾಮಿ ದಿದೃಕ್ಷೋಃ ಸುರಸತ್ತಮ ।
ಕಾಮಿನಾಂ ಬಹು ಮಂತವ್ಯಂ ಸಂಕಲ್ಪಪ್ರಭವೋದಯಮ್ ॥ ೧೬ ॥

ಶ್ರೀಶುಕ ಉವಾಚ

ಇತಿ ಬ್ರುವಾಣೋ ಭಗವಾಂಸ್ತತ್ರೈವಾಂತರಧೀಯತ ।
ಸರ್ವತಶ್ಚಾರಯಂಶ್ಚಕ್ಷುರ್ಭವ ಆಸ್ತೇ ಸಹೋಮಯಾ ॥ ೧೭ ॥

ತತೋ ದದರ್ಶೋಪವನೇ ವರಸ್ತ್ರಿಯಂ
ವಿಚಿತ್ರಪುಷ್ಪಾರುಣಪಲ್ಲವದ್ರುಮೇ ।
ವಿಕ್ರೀಡತೀಂ ಕಂದುಕಲೀಲಯಾ ಲಸದ್
ದುಕೂಲಪರ್ಯಸ್ತನಿತಂಬ ಮೇಖಲಾಮ್ ॥ ೧೮ ॥

ಹಾಗಿರುವಾಗ ನಿನ್ನನ್ನು ತಿಳಿಯುವುದಾದರೂ ಹೇಗೆ? ಮತ್ತೆ ಮಾಯೆಯಿಂದ ಅಪಹೃತವಾದ ಚಿತ್ತವುಳ್ಳ, ರಜಸ್ತಮೋಗುಣ ಪ್ರಧಾನವಾದ ಕರ್ಮಗಳಲ್ಲೇ ಆಸಕ್ತರಾದ ಅಸುರರು, ಮನುಷ್ಯರು ನಿನ್ನ ಸೃಷ್ಟಿಯ ರಹಸ್ಯವನ್ನು ಹೇಗೆ ತಾನೇ ತಿಳಿದಾರು? ॥ ೧೦ ॥ ಸ್ವಾಮಿಯೇ! ನೀನು ಸರ್ವಾತ್ಮನೂ, ಜ್ಞಾನಸ್ವರೂಪನೂ ಆಗಿರುವೆ. ಆದರಿಂದ ವಾಯುವಿನಂತೆ ಆಕಾಶದಲ್ಲಿ ಅದೃಶ್ಯನಾಗಿದ್ದರೂ ಸಂಪೂರ್ಣ ಚರಾಚರ ಜಗತ್ತಿನಲ್ಲಿಯೂ ನೀನು ಸದಾ-ಸರ್ವದಾ ಉಪಸ್ಥಿತನಾಗಿರುವೆ. ಈ ಜಗತ್ತಿನ ಸ್ಥಿತಿ, ಉತ್ಪತ್ತಿ, ನಾಶ, ಪ್ರಾಣಿಗಳ ಕರ್ಮಗಳು, ಸಂಸಾರದ ಬಂಧನ-ಮೋಕ್ಷ ಇವೆಲ್ಲವನ್ನೂ ನೀನು ತಿಳಿದವನಾಗಿರುವೆ. ॥ ೧೧ ॥ ಪ್ರಭುವೇ! ನೀನು ಗುಣಗಳನ್ನು ಸ್ವೀಕರಿಸಿ ಲೀಲೆಮಾಡಲೋಸುಗ ಅನೇಕ ಅವತಾರಗಳನ್ನು ಮಾಡಿದಾಗ ನಾನು ಅವುಗಳ ದರ್ಶನವನ್ನು ಮಾಡಿಯೇ ಮಾಡುತ್ತೇನೆ. ಈಗ ನೀನು ಸ್ತ್ರೀರೂಪವನ್ನು ಧರಿಸಿ ಮೋಹಿನಿಯ ಅವತಾರವನ್ನು ಮಾಡಿರುವೆಯೋ ಆ ಅವತಾರವನ್ನೂ ದರ್ಶಿಸಲು ನಾನು ಬಯಸುತ್ತೇನೆ. ॥ ೧೨ ॥ ಆದರಿಂದ ದೈತ್ಯರನ್ನು ಮೋಹಗೊಳಿಸಿ ನೀನು ದೇವತೆಗಳಿಗೆ ಅಮೃತವನ್ನು ಕುಡಿಸಿದ್ದೆ ಸ್ವಾಮಿ! ಅದನ್ನು ನೋಡಲೆಂದೇ ನಾವೆಲ್ಲರೂ ಬಂದಿರುವೆವು. ನಮ್ಮ ಮನಸ್ಸಿನಲ್ಲಿ ಅದನ್ನು ನೋಡಲು ಬಹಳ ಕುತೂಹಲವಿದೆ. ॥ ೧೩ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಭಗವಾನ್ ಶಂಕರನು ಮಹಾವಿಷ್ಣುವಿನಲ್ಲಿ ಹೀಗೆ ಪ್ರಾರ್ಥಿಸಿದಾಗ ಗಂಭೀರಭಾವದಿಂದ ನಗುತ್ತಾ ಶಿವನಲ್ಲಿ ಇಂತೆಂದನು – ॥ ೧೪ ॥

ಶ್ರೀಭಗವಾನ್ ವಿಷ್ಣುವು ಹೇಳಿದನು – ಶಂಕರನೇ! ಆ ಸಮಯದಲ್ಲಿ ಅಮೃತಕಲಶವು ದೈತ್ಯರ ಕೈಸೇರಿ ಹೋಗಿತ್ತು. ಅದ್ದರಿಂದ ದೇವತೆಗಳ ಕಾರ್ಯವನ್ನು ನೆರವೇರಿಸಲೋಸುಗ ಹಾಗೂ ದೈತ್ಯರ ಮನಸ್ಸಿಗೆ ಹೊಸದೊಂದು ಕುತೂಹಲವನ್ನು ತೋರಲೋಸುಗ ನಾನೇ ಆ ಸ್ತ್ರೀರೂಪವನ್ನು ಧರಿಸಿದ್ದೆ. ॥ ೧೫ ॥ ದೇವಶಿರೋಮಣಿಯೇ! ಈಗ ನೀವೆಲ್ಲರೂ ಆ ರೂಪವನ್ನು ನೋಡಲು ಬಯಸುತ್ತಿರುವುದರಿಂದ ನಾನು ನಿಮಗೆ ತೋರಿಸುತ್ತೇನೆ. ಆದರೆ ಆ ನನ್ನ ರೂಪವು ಕಾಮಿಗಳಾದ ಪುರುಷರಿಗೆ ಆದರಣೀಯವಾದುದು. ಏಕೆಂದರೆ, ಅದು ಕಾಮಭಾವವನ್ನು ಉತ್ತೇಜಿತಗೊಳಿಸುವಂತಹುದು. ॥ ೧೬ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ! ಭಗವಂತನು ಶಿವನಲ್ಲಿ ಹೀಗೆ ಹೇಳಿ ಅಲ್ಲಿಯೇ ಅಂತರ್ಧಾನನಾದನು. ಭಗವಾನ್ ಶಂಕರನು ಉಮೆಯೊಡನೆ ನಾಲ್ಕೂ ದಿಕ್ಕುಗಳನ್ನು ನೋಡುತ್ತಾ ಅಲ್ಲಿಯೇ ಕುಳಿತಿದ್ದನು. ॥ ೧೭ ॥ ಅಷ್ಟರಲ್ಲಿ ಇದಿರ್ಗಡೆಯೇ ಒಂದು ಸುಂದರವಾದ ಉಪವನವನ್ನು ನೋಡಿದನು. ಅದರಲ್ಲಿ ಹಲವು ಬಗೆಯ ವೃಕ್ಷಗಳಿದ್ದು ಅವುಗಳು ಬಣ್ಣ-ಬಣ್ಣದ ಹೂವುಗಳಿಂದಲೂ ಚಿಗುರುಗಳಿಂದಲೂ ತುಂಬಿ-ತುಳುಕುತ್ತಿದ್ದವು. ಆ ಉದ್ಯಾನವನದಲ್ಲಿ ಪ್ರಕಾಶಮಾನವಾದ ಪೀತಾಂಬರವನ್ನು ಉಟ್ಟುಕೊಂಡು, ಸೊಂಟದಲ್ಲಿ ಒಡ್ಯಾಣ ಧರಿಸಿದ್ದು ಚೆಂಡಾಟವಾಡುತ್ತಿದ್ದ ಅತಿ ಚೆಲುವೆಯಾದ ಸ್ತ್ರೀಯನ್ನು ನೋಡಿದನು. ॥ ೧೮ ॥

ಆವರ್ತನೋದ್ವರ್ತನಕಂಪಿತಸ್ತನ-
ಪ್ರಕೃಷ್ಟಹಾರೋರುಭರೈಃ ಪದೇ ಪದೇ ।
ಪ್ರಭಜ್ಯಮಾನಾಮಿವ ಮಧ್ಯತಶ್ಚಲತ್
ಪದಪ್ರವಾಲಂ ನಯತೀಂ ತತಸ್ತತಃ ॥ ೧೯ ॥

ದಿಕ್ಷು ಭ್ರಮತ್ಕಂದುಕಚಾಪಲೈರ್ಭೃಶಂ
ಪ್ರೋದ್ವಿಗ್ನತಾರಾಯತಲೋಲಲೋಚನಾಮ್ ।
ಸ್ವಕರ್ಣವಿಭ್ರಾಜಿತಕುಂಡಲೋಲ್ಲಸತ್
ಕಪೋಲನೀಲಾಲಕಮಂಡಿತಾನನಾಮ್ ॥ ೨೦ ॥

ಶ್ಲಥದ್ದುಕೂಲಂ ಕಬರೀಂ ಚ ವಿಚ್ಯುತಾಂ
ಸನ್ನಹ್ಯತೀಂ ವಾಮಕರೇಣ ವಲ್ಗುನಾ ।
ವಿನಿಘ್ನತೀಮನ್ಯಕರೇಣ ಕಂದುಕಂ
ವಿಮೋಹಯಂತೀಂ ಜಗದಾತ್ಮಮಾಯಯಾ ॥ ೨೧ ॥

ತಾಂ ವೀಕ್ಷ್ಯ ದೇವ ಇತಿ ಕಂದುಕಲೀಲಯೇಷದ್
ವ್ರೀಡಾಸ್ಫುಟಸ್ಮಿತವಿಸೃಷ್ಟಕಟಾಕ್ಷಮುಷ್ಟಃ ।
ಸ್ತ್ರೀಪ್ರೇಕ್ಷಣಪ್ರತಿಸಮೀಕ್ಷಣವಿಹ್ವಲಾತ್ಮಾ
ನಾತ್ಮಾನಮಂತಿಕ ಉಮಾಂ ಸ್ವಗಣಾಂಶ್ಚ ವೇದ ॥ ೨೨ ॥

ತಸ್ಯಾಃ ಕರಾಗ್ರಾತ್ಸ ತು ಕಂದುಕೋ ಯದಾ
ಗತೋ ವಿದೂರಂ ತಮನುವ್ರಜತ್ಸ್ತ್ರಿಯಾಃ ।
ವಾಸಃ ಸಸೂತ್ರಂ ಲಘು ಮಾರುತೋಽಹರದ್
ಭವಸ್ಯ ದೇವಸ್ಯ ಕಿಲಾನುಪಶ್ಯತಃ ॥ ೨೩ ॥

ಏವಂ ತಾಂ ರುಚಿರಾಪಾಂಗೀಂ
ದರ್ಶನೀಯಾಂ ಮನೋರಮಾಮ್ ।
ದೃಷ್ಟ್ವಾ ತಸ್ಯಾಂ ಮನಶ್ಚಕ್ರೇ
ವಿಷಜ್ಜಂತ್ಯಾಂ ಭವಃ ಕಿಲ ॥ ೨೪ ॥

ತಯಾಪಹೃತವಿಜ್ಞಾನಸ್ತತ್ಕೃತಸ್ಮರವಿಹ್ವಲಃ ।
ಭವಾನ್ಯಾ ಅಪಿ ಪಶ್ಯಂತ್ಯಾ ಗತಹ್ರೀಸ್ತತ್ಪದಂ ಯಯೌ ॥ ೨೫ ॥

ಸಾ ತಮಾಯಾಂತಮಾಲೋಕ್ಯ ವಿವಸ್ತ್ರಾ ವ್ರೀಡಿತಾ ಭೃಶಮ್ ।
ನಿಲೀಯಮಾನಾ ವೃಕ್ಷೇಷು ಹಸಂತೀ ನಾನ್ವತಿಷ್ಠತ ॥ ೨೬ ॥

ತಾಮನ್ವಗಚ್ಛದ್ಭಗವಾನ್ಭವಃ ಪ್ರಮುಷಿತೇಂದ್ರಿಯಃ ।
ಕಾಮಸ್ಯ ಚ ವಶಂ ನೀತಃ ಕರೇಣುಮಿವ ಯೂಥಪಃ ॥ ೨೭ ॥

ಸೋಽನುವ್ರಜ್ಯಾತಿವೇಗೇನ ಗೃಹೀತ್ವಾನಿಚ್ಛತೀಂ ಸ್ತ್ರಿಯಮ್ ।
ಕೇಶಬಂಧ ಉಪಾನೀಯ ಬಾಹುಭ್ಯಾಂ ಪರಿಷಸ್ವಜೇ ॥ ೨೮ ॥

ಆಕೆಯು ಚೆಂಡಿನೊಡನೆ ಆಡುತ್ತಿದ್ದಾಗ ಅವಳ ಸ್ತನಗಳೂ, ಹಾರಗಳೂ ಕುಣಿದಾಡುತ್ತಿದ್ದವು. ಸ್ತನಗಳ ಭಾರದಿಂದ ಆಕೆಯು ತೆಳುವಾದ ಕಟಿಯು ಮುರಿದುಬೀಳುವುದೋ ಎಂದು ಅನಿಸುತ್ತಿತ್ತು. ನಲುಗಿ ಹೋಗಬಹುದೆಂಬ ಭಯದಿಂದ ಆ ಲಲನಾಮಣಿಯು ಚಿಗುರಿನಂತೆ ಸುಕೋಮಲವಾದ ಕೆಂಪು-ಕೆಂಪಾದ ತನ್ನ ಹೆಜ್ಜೆಗಳನ್ನು ಮೆಲ್ಲ-ಮೆಲ್ಲನೆ ಇಡುತ್ತಿದ್ದಳು. ॥ ೧೯ ॥ ನೆಗೆಯುತ್ತಿರುವ ಚೆಂಡನ್ನು ಹಾರಿ ಅದನ್ನು ಹಿಡಿದುಕೊಳ್ಳುತ್ತಿದ್ದಳು. ಇದರಿಂದ ಆ ಸುಂದರಿಯ ವಿಶಾಲವಾದ ಕಣ್ಣುಗಳು ಉದ್ವಿಗ್ನವಾಗಿರುವಂತೆ ಕಾಣುತ್ತಿತ್ತು. ಹೊಳೆಯುತ್ತಿರುವ ಕರ್ಣಕುಂಡಲ ಕಾಂತಿಯಿಂದ ಬೆಳಗುವ ಕಪೋಲಗಳಿಂದಲೂ, ಕಪ್ಪಾದ ಮುಂಗುರುಳುಗಳಿಂದಲೂ ಆಕೆಯ ಸುಂದರವಾದ ಮುಖಾರವಿಂದವು ಇನ್ನೂ ಅರಳಿದಂತಿತ್ತು. ॥ ೨೦ ॥ ಯಾವಾಗಲಾದರೂ ಸೆರಗುಜಾರಿ ಹೋದರೆ, ಕಬರಿಯು ಬಿಚ್ಚಿಹೋದರೆ, ಆಗಲೂ ಚೆಂಡಾಟವನ್ನು ನಿಲ್ಲಿಸದೆ ಬಲಗೈಯಿಂದ ಆಡುತ್ತಾ, ಎಡಗೈಯಿಂದ ಸೆರಗನ್ನೂ, ಕೂದಲನ್ನೂ ಸರಿಪಡಿಸಿಕೊಳ್ಳುತ್ತಾ, ಇಡೀ ಜಗತ್ತನ್ನು ತನ್ನ ಮಾಯೆಯಿಂದ ಮರುಳುಗೊಳಿಸುತ್ತಿದ್ದಳು. ॥ ೨೧ ॥ ಹೀಗೆ ಚೆಂಡಾಟವನ್ನು ಆಡುತ್ತಾ-ಆಡುತ್ತಾ ಆಕೆಯು ಸ್ವಲ್ಪ ಲಜ್ಜೆಯ ಭಾವದಿಂದ ಮುಗುಳ್ನಕ್ಕು ಓರೆನೋಟದಿಂದ ಶಂಕರನ ಕಡೆಗೆ ನೋಡಿದಳು. ಆ ಸ್ತ್ರೀಯ ಕಟಾಕ್ಷವೀಕ್ಷಣೆಯಿಂದಲೂ, ಪ್ರೇಮಭಾವದ ಸೂಚನೆಯಿಂದಲೂ ಕಾಮಪರವಶನಾದ ಶಂಕರನು ತನ್ನನ್ನು ತಾನೇ ಮರೆತನು. ಹೀಗಿರುವಾಗ ಹತ್ತಿರದಲ್ಲೇ ಕುಳಿತಿದ್ದ ಉಮೆ ಮತ್ತು ಗಣಗಳ ನೆನಪಾದರೂ ಹೇಗೆ ಇರಬಲ್ಲದು ? ॥ ೨೨ ॥ ಒಮ್ಮೆ ಚೆಂಡು ಮೋಹಿನಿಯ ಕೈಯಿಂದ ಜಾರಿ ದೂರಕ್ಕೆ ಹೋಯಿತು. ಆಕೆಯು ಅದರ ಹಿಂದೆಯೇ ಓಡಿದಳು. ಆ ಸಮಯದಲ್ಲಿ ಶಿವನು ನೋಡುತ್ತಿರುವಂತೆಯೇ ವಾಯುವು ಆಕೆಯು ಉಟ್ಟಿದ್ದ ತೆಳ್ಳಗಿನ ಸೀರೆಯನ್ನು ಒಡ್ಯಾಣಸಹಿತವಾಗಿ ಹಾರಿಸಿಬಿಟ್ಟನು. ॥ ೨೩ ॥ ಮೋಹಿನಿಯ ಪ್ರತಿಯೊಂದು ಅಂಗಾಂಗವೂ ಮನೋಹರವಾಗಿತ್ತು. ಒಮ್ಮೆ ಕಣ್ಣು ನೆಟ್ಟರೆ ಕೀಳಲು ಸಾಧ್ಯವಾಗುತ್ತಿರಲಿಲ್ಲ. ಅಷ್ಟೇ ಅಲ್ಲ, ಮನಸ್ಸೂ ಅಲ್ಲೇ ರಮಮಾಣವಾಗುತ್ತಿತ್ತು. ಈ ಸ್ಥಿತಿಯಲ್ಲಿ ಆಕೆಯನ್ನು ನೋಡಿದ ಭಗವಾನ್ ಶಂಕರನು ಅವಳ ಕಡೆಗೆ ಅತ್ಯಂತ ಆಕರ್ಷಿತನಾದನು. ಮೋಹಿನಿಯೂ ತನ್ನ ಕುರಿತು ಆಸಕ್ತಳಾಗಿರುವಂತೇ ಅವನಿಗೆ ಕಂಡಿತು. ॥ ೨೪ ॥ ಆಕೆಯು ಶಂಕರನ ವಿವೇಕವನ್ನು ಅಪಹರಿಸಿದಳು. ಆಕೆಯ ಹಾವ-ಭಾವಗಳಿಂದ ಶಿವನು ಕಾಮಾತುರನಾದನು ಮತ್ತು ಭವಾನಿಯ ಇದಿರಿನಲ್ಲೇ ಲಜ್ಜೆಬಿಟ್ಟು ಅವಳ ಕಡೆಗೆ ಓಡಿದನು. ॥ ೨೫ ॥ ಆ ಮೋಹಿನಿಯು ತನ್ನ ಕಡೆಗೆ ಶಿವನು ಬರುತ್ತಿರುವುದನ್ನು ನೋಡಿ ಬಹಳ ನಾಚಿಕೆಯಿಂದ ಕಿಲ-ಕಿಲನೆ ನಗುತ್ತಾ ಅಲ್ಲಿ ನಿಲ್ಲದೆ ವೃಕ್ಷದ ಹಿಂದೆ ಅವಿತುಕೊಂಡಳು. ॥ ೨೬ ॥ ಭಗವಾನ್ ಶಂಕರನ ಇಂದ್ರಿಯಗಳು ಅವನ ಕೈಯಿಂದ ಜಾರಿಹೋದುವು. ಅವನು ಕಾಮಪರವಶನಾಗಿದ್ದನು. ಅದ್ದರಿಂದ ಹೆಣ್ಣಾನೆಯ ಹಿಂದೆ ಓಡುವ ಗಂಡಾನೆಯಂತೆ ಆಕೆಯ ಹಿಂದೆ-ಹಿಂದೆ ಓಡತೊಡಗಿದನು. ॥ ೨೭ ॥ ಅವನು ಅತ್ಯಂತ ವೇಗದಿಂದ ಆಕೆಯನ್ನು ಹಿಂಬಾಲಿಸಿ ಹಿಂದಿನಿಂದ ಆಕೆಯ ಮುಡಿಯನ್ನು ಹಿಡಿದುಕೊಂಡನು. ಆಕೆ ಬಯಸದೇ ಇದ್ದರೂ ಶಿವನು ಅವಳನ್ನು ಎರಡೂ ಭುಜಗಳಿಂದ ಬಾಚಿ ತಬ್ಬಿಕೊಂಡನು. ॥ ೨೮ ॥

ಸೋಪಗೂಢಾ ಭಗವತಾ ಕರಿಣಾ ಕರಿಣೀ ಯಥಾ ।
ಇತಸ್ತತಃ ಪ್ರಸರ್ಪಂತೀ ವಿಪ್ರಕೀರ್ಣಶಿರೋರುಹಾ ॥ ೨೯ ॥

ಆತ್ಮಾನಂ ಮೋಚಯಿತ್ವಾಂಗ ಸುರರ್ಷಭಭುಜಾಂತರಾತ್ ।
ಪ್ರಾದ್ರವತ್ಸಾ ಪೃಥುಶ್ರೋಣೀ ಮಾಯಾ ದೇವವಿನಿರ್ಮಿತಾ ॥ ೩೦ ॥

ತಸ್ಯಾಸೌ ಪದವೀಂ ರುದ್ರೋ ವಿಷ್ಣೋರದ್ಭುತಕರ್ಮಣಃ ।
ಪ್ರತ್ಯಪದ್ಯತ ಕಾಮೇನ ವೈರಿಣೇವ ವಿನಿರ್ಜಿತಃ ॥ ೩೧ ॥

ತಸ್ಯಾನುಧಾವತೋ ರೇತಃ ಚಸ್ಕಂದಾಮೋಘರೇತಸಃ ।
ಶುಷ್ಮಿಣೋ ಯೂಥಪಸ್ಯೇವ ವಾಸಿತಾಮನು ಧಾವತಃ ॥ ೩೨ ॥

ಯತ್ರ ಯತ್ರಾಪತನ್ಮಹ್ಯಾಂ ರೇತಸ್ತಸ್ಯ ಮಹಾತ್ಮನಃ ।
ತಾನಿ ರೂಪ್ಯಸ್ಯ ಹೇಮ್ನಶ್ಚ ಕ್ಷೇತ್ರಾಣ್ಯಾಸನ್ಮಹೀಪತೇ ॥ ೩೩ ॥

ಸರಿತ್ಸರಸ್ಸು ಶೈಲೇಷು ವನೇಷೂಪವನೇಷು ಚ ।
ಯತ್ರ ಕ್ವ ಚಾಸನ್ನೃಷಯಸ್ತತ್ರ ಸಂನಿಹಿತೋ ಹರಃ ॥ ೩೪ ॥

ಸ್ಕನ್ನೇ ರೇತಸಿ ಸೋಽಪಶ್ಯದಾತ್ಮಾನಂ ದೇವಮಾಯಯಾ ।
ಜಡೀಕೃತಂ ನೃಪಶ್ರೇಷ್ಠ ಸಂನ್ಯವರ್ತತ ಕಶ್ಮಲಾತ್ ॥ ೩೫ ॥

ಅಥಾವಗತಮಾಹಾತ್ಮ್ಯ ಆತ್ಮನೋ ಜಗದಾತ್ಮನಃ ।
ಅಪರಿಜ್ಞೇಯವೀರ್ಯಸ್ಯ ನ ಮೇನೇ ತದು ಹಾದ್ಭುತಮ್ ॥ ೩೬ ॥

ತಮವಿಕ್ಲವಮವ್ರೀಡಮಾಲಕ್ಷ್ಯ ಮಧುಸೂದನಃ ।
ಉವಾಚ ಪರಮಪ್ರೀತೋ ಬಿಭ್ರತ್ಸ್ವಾಂ ಪೌರುಷೀಂ ತನುಮ್ ॥ ೩೭ ॥

ಶ್ರೀಭಗವಾನುವಾಚ

ದಿಷ್ಟ್ಯಾ ತ್ವಂ ವಿಬುಧಶ್ರೇಷ್ಠ
ಸ್ವಾಂ ನಿಷ್ಠಾಮಾತ್ಮನಾ ಸ್ಥಿತಃ ।
ಯನ್ಮೇ ಸ್ತ್ರೀರೂಪಯಾ ಸ್ವೈರಂ
ಮೋಹಿತೋಽಪ್ಯಂಗ ಮಾಯಯಾ ॥ ೩೮ ॥

ಕೋ ನು ಮೇಽತಿತರೇನ್ಮಾಯಾಂ ವಿಷಕ್ತಸ್ತ್ವದೃತೇ ಪುಮಾನ್ ।
ತಾಂಸ್ತಾನ್ವಿಸೃಜತೀಂ ಭಾವಾನ್ ದುಸ್ತರಾಮಕೃತಾತ್ಮಭಿಃ ॥ ೩೯ ॥

ಸೇಯಂ ಗುಣಮಯೀ ಮಾಯಾ ನ ತ್ವಾಮಭಿಭವಿಷ್ಯತಿ ।
ಮಯಾ ಸಮೇತಾ ಕಾಲೇನ ಕಾಲರೂಪೇಣ ಭಾಗಶಃ ॥ ೪೦ ॥

ಗಂಡಾನೆಯು ಹೆಣ್ಣಾನೆಯನ್ನು ಆಲಿಂಗಿಸಿಕೊಳ್ಳುವಂತೆ ಭಗವಾನ್ ಶಂಕರನು ಆಕೆಯನ್ನು ಆಲಿಂಗಿಸಿಕೊಂಡನು. ಆಕೆಯು ಕೊಸರಾಡಿಕೊಂಡು ಅವನಿಂದ ಬಿಡಿಸಿಕೊಳ್ಳಲು ಪ್ರಯತ್ನಿಸುತ್ತಿದ್ದಾಗ ಆಕೆಯ ಮುಡಿಯು ಬಿಚ್ಚಿಹೋಯಿತು. ॥ ೨೯ ॥ ವಾಸ್ತವವಾಗಿ ಆ ಸುಂದರಿಯು ಭಗವಂತನಿಂದ ರಚಿತವಾದ ಮಾಯೆಯೇ ಆಗಿತ್ತು. ಇದರಿಂದ ಆಕೆಯು ಹೇಗೋ ಶಂಕರನ ಬಾಹುಪಾಶದಿಂದ ತನ್ನನ್ನು ಬಿಡಿಸಿಕೊಂಡು ವೇಗವಾಗಿ ಓಡಿಹೋದಳು. ॥ ೩೦ ॥ ಭಗವಾನ್ ಶಂಕರನೂ ಕೂಡ ಆ ಮೋಹಿನೀವೇಷಧಾರಿಯಾದ ಅದ್ಭುತಕರ್ಮಿಯಾದ ಭಗವಾನ್ ವಿಷ್ಣುವಿನ ಹಿಂದೆ-ಹಿಂದೆ ಓಡತೊಡಗಿದನು. ಆಗ ಅವನ ಶತ್ರುವಾದ ಕಾಮದೇವನು ಈಗ ಅವನ ಮೇಲೆ ವಿಜಯವನ್ನು ಸಾಧಿಸಿದಂತೆ ಕಂಡುಬರುತ್ತಿತ್ತು. ॥ ೩೧ ॥ ಕಾಮುಕವಾದ ಹೆಣ್ಣಾನೆಯ ಹಿಂದೆ ಓಡುವ ಮದಭರಿತವಾದ ಗಂಡಾನೆಯಂತೆ ಮೋಹಿನಿಯ ಹಿಂದೆ-ಹಿಂದೆ ಶಂಕರನು ಓಡುತ್ತಿದ್ದನು. ಭಗವಾನ್ ಶಂಕರನ ವೀರ್ಯವು ಅಮೋಘವಾಗಿದ್ದರೂ ಮೋಹಿನಿಯ ಮಾಯೆಯಿಂದ ಅದು ಸ್ಖಲಿತವಾಯಿತು. ॥ ೩೨ ॥ ಮಹೀಪತಿಯೇ! ಭಗವಾನ್ ಶಂಕರನ ವೀರ್ಯವು ಭೂಮಿಯಲ್ಲಿ ಬಿದ್ದಲ್ಲೆಲ್ಲ ಚಿನ್ನದ, ಬೆಳ್ಳಿಯ ಗಣಿಗಳಾದುವು. ॥ ೩೩ ॥ ಹೀಗೆ ಮೋಹಿನಿಯನ್ನು ಹಿಂಬಾಲಿಸುತ್ತಾ ಪರಶಿವನು ನದೀ-ನದ-ಸರೋವರ, ಪರ್ವತ, ವನ-ಉಪವನ ಹೀಗೆ ಋಷಿ-ಮುನಿಗಳು ವಾಸವಾಗಿದ್ದ ಆಶ್ರಮದಲ್ಲೆಲ್ಲ ಅಡ್ಡಾಡಿದನು. ॥ ೩೪ ॥

ಪರೀಕ್ಷಿತನೇ! ರೇತಸ್ಖಲನವಾದನಂತರ ಮಹರ್ಷಿಗಳ ಆಶ್ರಮಕ್ಕೆ ಬಂದ ಶಿವನು ವಿಷ್ಣುಮಾಯೆಯಿಂದ ವಿವೇಕಶೂನ್ಯನಾದೆನೆಂದು ಭಾವಿಸಿ ಕಾಮವಿಕಾರದಿಂದ ಮನಸ್ಸನ್ನು ಹಿಂದೆಗೆದುಕೊಂಡನು. ॥ ೩೫ ॥ ಇದಾದ ಬಳಿಕ ಆತ್ಮಸ್ವರೂಪನಾದ ಸರ್ವಾತ್ಮಾ ಭಗವಂತನ ಈ ಮಹಿಮೆಯನ್ನು ಅರಿತುಕೊಂಡು ಅವನಿಗೆ ಆಶ್ಚರ್ಯವಾಗಲಿಲ್ಲ. ಭಗವಂತನ ಶಕ್ತಿಗಳ ಅಂತವನ್ನು ಯಾರು ತಾನೇ ತಿಳಿಯಬಲ್ಲನು? ॥ ೩೬ ॥ ಭಗವಾನ್ ಶಂಕರನಿಗೆ ಇದರಿಂದ ವಿಷಾದ ಅಥವಾ ನಾಚಿಕೆಯಾಗಲಿಲ್ಲವೆಂದು ತಿಳಿದ ಭಗವಂತನು ಪುರುಷಶರೀರವನ್ನು ಧರಿಸಿಕೊಂಡು ಪ್ರಕಟನಾದನು ಹಾಗೂ ಪರಮಪ್ರೀತಿಯಿಂದ ಶಿವನಲ್ಲಿ ಇಂತೆಂದನು – ॥ ೩೭ ॥

ಶ್ರೀಭಗವಂತನು ಹೇಳಿದನು – ದೇವಶಿರೋಮಣಿಯೇ! ನನ್ನ ಸ್ತ್ರೀರೂಪವಾದ ಮಾಯೆಯಿಂದ ವಿಮೋಹಿತನಾದರೂ ನೀನು ಸ್ವಯಂ ನಿನ್ನ ನಿಷ್ಠೆಯಲ್ಲಿ ಸ್ಥಿತನಾಗಿರುವೆ. ಇದು ತುಂಬಾ ಆನಂದದ ಮಾತಾಗಿದೆ. ॥ ೩೮ ॥ ನನ್ನ ಮಾಯೆಯು ಅಪಾರವಾದುದು. ಅಜಿತೇಂದ್ರಿಯರಾದವರು ಯಾವ ವಿಧದಿಂದಲೂ ಅದರಿಂದ ಬಿಡಿಸಿಕೊಳ್ಳಲಾರದಂತಹ ಹಾವ-ಭಾವಗಳನ್ನು ರಚಿಸುತ್ತದೆ. ನೀನಲ್ಲದೆ ಬೇರೆ ಯಾರು ತಾನೇ ಒಮ್ಮೆ ನನ್ನ ಮಾಯಾಜಾಲದಲ್ಲಿ ಸಿಕ್ಕಿಹಾಕಿಕೊಂಡು ಸ್ವತಃ ಹೊರಬರಬಲ್ಲನು? ॥ ೩೯ ॥ ನನ್ನ ಈ ಗುಣಮಯ ಮಾಯೆಯು ದೊಡ್ಡ-ದೊಡ್ಡವರಿಗೂ ಮೋಹಿಸಿಬಿಡುತ್ತಿದ್ದರೂ ಇನ್ನು ಇದು ನಿನ್ನನ್ನು ಎಂದಿಗೂ ಮೋಹಿತಗೊಳಿಸಲಾರದು. ಏಕೆಂದರೆ, ಸೃಷ್ಟ್ಯಾದಿಗಳಿಗೆ ಆಯಾ ಸಮಯಗಳಲ್ಲಿ ಅದನ್ನು ಕ್ಷೋಭಿಸುತ್ತಿರುವ ಕಾಲನು ನಾನೇ ಆಗಿರುವೆನು. ಆದ್ದರಿಂದ ನನ್ನ ಇಚ್ಛೆಗೆ ವಿರುದ್ಧವಾಗಿ ಅದು ರಜೋಗುಣಾದಿ ಸೃಷ್ಟಿಯನ್ನು ಮಾಡಲಾರದು. ॥ ೪೦ ॥

ಶ್ರೀಶುಕ ಉವಾಚ

ಏವಂ ಭಗವತಾ ರಾಜನ್ ಶ್ರೀವತ್ಸಾಂಕೇನ ಸತ್ಕೃತಃ ।
ಆಮಂತ್ರ್ಯ ತಂ ಪರಿಕ್ರಮ್ಯ ಸಗಣಃ ಸ್ವಾಲಯಂ ಯಯೌ ॥ ೪೧ ॥

ಆತ್ಮಾಂಶಭೂತಾಂ ತಾಂ ಮಾಯಾಂ ಭವಾನೀಂ ಭಗವಾನ್ ಭವಃ ।
ಶಂಸತಾಮೃಷಿಮುಖ್ಯಾನಾಂ ಪ್ರೀತ್ಯಾಽಽಚಷ್ಟಾಥ ಭಾರತ ॥ ೪೨ ॥

ಅಪಿ ವ್ಯಪಶ್ಯಸ್ತ್ವಮಜಸ್ಯ ಮಾಯಾಂ
ಪರಸ್ಯ ಪುಂಸಃ ಪರದೇವತಾಯಾಃ ।
ಅಹಂ ಕಲಾನಾಮೃಷಭೋ ವಿಮುಹ್ಯೇ
ಯಯಾವಶೋಽನ್ಯೇ ಕಿಮುತಾಸ್ವತಂತ್ರಾಃ ॥ ೪೩ ॥

ಯಂ ಮಾಮಪೃಚ್ಛಸ್ತ್ವಮುಪೇತ್ಯ ಯೋಗಾ-
ತ್ಸಮಾಸಹಸ್ರಾಂತ ಉಪಾರತಂ ವೈ ।
ಸ ಏವ ಸಾಕ್ಷಾತ್ಪುರುಷಃ ಪುರಾಣೋ
ನ ಯತ್ರ ಕಾಲೋ ವಿಶತೇ ನ ವೇದಃ ॥ ೪೪ ॥

ಶ್ರೀಶುಕ ಉವಾಚ

ಇತಿ ತೇಽಭಿಹಿತಸ್ತಾತ ವಿಕ್ರಮಃ ಶಾರ್ಙ್ಗಧನ್ವನಃ ।
ಸಿಂಧೋರ್ನಿರ್ಮಥನೇ ಯೇನ ಧೃತಃ ಪೃಷ್ಠೇ ಮಹಾಚಲಃ ॥ ೪೫ ॥

ಏತನ್ಮುಹುಃ ಕೀರ್ತಯತೋಽನುಶೃಣ್ವತೋ
ನ ರಿಷ್ಯತೇ ಜಾತು ಸಮುದ್ಯಮಃ ಕ್ವಚಿತ್ ।
ಯದುತ್ತಮಶ್ಲೋಕಗುಣಾನುವರ್ಣನಂ
ಸಮಸ್ತ ಸಂಸಾರಪರಿಶ್ರಮಾಪಹಮ್ ॥ ೪೬ ॥

ಅಸದವಿಷಯಮಂಘ್ರಿಂ ಭಾವಗಮ್ಯಂ ಪ್ರಪನ್ನಾ-
ನಮೃತಮಮರವರ್ಯಾನಾಶಯತ್ಸಿಂಧುಮಥ್ಯಮ್ ।
ಕಪಟಯುವತಿವೇಷೋ ಮೋಹಯನ್ಯಃ ಸುರಾರೀಂ-
ಸ್ತಮಹಮುಪಸೃತಾನಾಂ ಕಾಮಪೂರಂ ನತೋಽಸ್ಮಿ ॥ ೪೭ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ! ಭಗವಾನ್ ಮಹಾವಿಷ್ಣುವು ಹೀಗೆ ಶಂಕರನನ್ನು ಸತ್ಕರಿಸಿದನು. ಆಗ ಪರಶಿವನು ಅವನಿಂದ ಬೀಳ್ಕೊಂಡು, ಅವನಿಗೆ ಪ್ರದಕ್ಷಿಣೆ ಬಂದು ತನ್ನ ಗಣಗಳೊಂದಿಗೆ ಕೈಲಾಸಕ್ಕೆ ಹೊರಟುಹೋದನು. ॥ ೪೧ ॥ ಎಲೈ ಭರತವಂಶಶಿರೋಮಣಿಯೇ! ಭಗವಾನ್ ಶಂಕರನು ದೊಡ್ಡ-ದೊಡ್ಡ ಋಷಿಗಳ ಸಭೆಯಲ್ಲಿ ತನ್ನ ಅರ್ಧಾಂಗಿನಿಯಾದ ಪಾರ್ವತಿದೇವಿಗೆ ತನ್ನ ವಿಷ್ಣುಸ್ವರೂಪದ ಅಂಶಸಂಭೂತ ಮಾಯಾಮಯ ಮೋಹಿನಿಯನ್ನು ಈ ವಿಧವಾಗಿ ಪ್ರೇಮದಿಂದ ವರ್ಣಿಸಿದನು. ॥ ೪೨ ॥ ದೇವೀ! ಪರಮಪುರುಷ ಪರಮೇಶ್ವರನಾದ ಭಗವಾನ್ ವಿಷ್ಣುವಿನ ಮಾಯೆಯನ್ನು ನೀನು ನೋಡಿದೆಯಲ್ಲ! ಸಮಸ್ತ ಕಲಾವಲ್ಲಭನಾದ ನಾನೇ ಕಾಮವಶನಾಗಿ ವಿಮೋಹಗೊಂಡೆನು. ಹೀಗಿರುವಾಗ ಅಸ್ವತಂತ್ರವಾದ (ರಾಗ-ದ್ವೇಷಾದಿಗಳಿಗೆ ವಶರಾದ) ಇತರರ ವಿಷಯದಲ್ಲಿ ಹೇಳುವುದೇನಿದೆ? ॥ ೪೩ ॥ ಹಿಂದೆ ನಾನು ಒಂದುಸಾವಿರ ವರ್ಷಗಳ ಕಾಲದ ಸಮಾಧಿಯಿಂದ ಎಚ್ಚೆತ್ತಿರುವಾಗ ನೀನು ಬಳಿಗೆ ಬಂದು 'ಸ್ವಾಮಿ! ನೀವು ಯಾರ ಉಪಾಸನ ಮಾಡುತ್ತಿದ್ದೀರಿ?' ಎಂದು ಕೇಳಿದ್ದೆ, ಅವನು ಇದೇ ಸಾಕ್ಷಾತ್ ಸನಾತನ ಪುರುಷನಾಗಿದ್ದಾನೆ. ಕಾಲನೂ ಇವನನ್ನು ತನ್ನ ಸೀಮೆಯಲ್ಲಿ ಬಂಧಿಸಲಾರನು. ವೇದಗಳು ಇವನನ್ನು ಪೂರ್ಣವಾಗಿ ವರ್ಣಿಸಲಾರವು. ಇವನ ವಾಸ್ತವಿಕ ಸ್ವರೂಪವು ಅನಂತವೂ, ಅನಿರ್ವಚನೀಯವೂ ಆಗಿದೆ. ॥ ೪೪ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪ್ರಿಯ ಪರೀಕ್ಷಿತನೇ! ಸಮುದ್ರಮಂಥನ ಕಾಲದಲ್ಲಿ ದೊಡ್ಡದಾದ ಮಂದರ ಪರ್ವತವನ್ನು ಬೆನ್ನಮೇಲೆ ಧರಿಸಿದ ಕೂರ್ಮರೂಪಿಯಾದ ಶಾರ್ಙ್ಗಧನ್ವನಾದ ಮಹಾವಿಷ್ಣುವಿನ ಮಹಿಮೆಯನ್ನು ನಿನಗೆ ವರ್ಣಿಸಿ ಹೇಳಿರುವೆನು. ॥ ೪೫ ॥ ಈ ಪ್ರಸಂಗವನ್ನು ಪದೇ-ಪದೇ ಕೀರ್ತಿಸುವವನ ಹಾಗೂ ಶ್ರವಣಿಸುವವನ ಪ್ರಯತ್ನವು ಎಂದಿಗೂ, ಎಲ್ಲಿಯೂ ನಿಷ್ಫಲವಾಗುವುದಿಲ್ಲ. ಏಕೆಂದರೆ ಪವಿತ್ರಕೀರ್ತಿಯಾದ ಭಗವಂತನ ಗುಣ-ಲೀಲೆಗಳ ಸಂಕೀರ್ತನವು ಪ್ರಪಂಚದ ಸಮಸ್ತ ಕ್ಲೇಶಗಳನ್ನೂ, ಪರಿಶ್ರಮಗಳನ್ನೂ ಹೋಗಲಾಡಿಸುತ್ತದೆ. ॥ ೪೬ ॥ ದುಷ್ಟಜನರಿಗೆ ಶ್ರೀಭಗವಂತನ ದಿವ್ಯ ಚರಣಕಮಲಗಳು ಎಂದಿಗೂ ದೊರಕುವುದಿಲ್ಲ. ಅವುಗಳು ಭಕ್ತಿಭಾವದಿಂದ ಕೂಡಿರುವ ಮನುಷ್ಯರಿಗೇ ಮಾತ್ರ ಲಭ್ಯವಾಗುತ್ತವೆ. ಇದರಿಂದಲೇ ಅವನು ಮಾಯಾಮಯವಾದ ಹೆಂಗಸಿನರೂಪವನ್ನು ಧರಿಸಿ ದೈತ್ಯರನ್ನು ಮೋಹಪರವಶರನ್ನಾಗಿ ಮಾಡಿದನು. ತನ್ನ ಚರಣಕಮಲಗಳಿಗೆ ಶರಣಾಗಿ ಬಂದಿರುವ ದೇವತೆಗಳಿಗೆ ಸಮುದ್ರಮಂಥನದಿಂದ ದೊರಕಿದ ಅಮೃತವನ್ನು ಕುಡಿಸಿದನು. ಕೇವಲ ದೇವತೆಗಳಿಗೆ ಮಾತ್ರವಲ್ಲ – ಅವನ ದಿವ್ಯ ಚರಣಕಮಲಗಳಿಗೆ ಯಾರೇ ಶರಣಾಗಲೀ, ಅವರ ಸಮಸ್ತ ಕಾಮನೆಗಳನ್ನು ಪೂರ್ಣಗೊಳಿಸುವನು. ಅಂತಹ ಪ್ರಭುವಿನ ಚರಣಕಮಲಗಳಿಗೆ ನಾನು ನಮಸ್ಕರಿಸುತ್ತೇನೆ. ॥ ೪೭ ॥

ಹನ್ನೆರಡನೆಯ ಅಧ್ಯಾಯವು ಮುಗಿಯಿತು. ॥ ೧೨ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಅಷ್ಟಮಸ್ಕಂಧೇ ಶಂಕರಮೋಹನಂ ನಾಮ ದ್ವಾದಶೋಽಧ್ಯಾಯಃ ॥ ೧೨ ॥

ಹದಿಮೂರನೆಯ ಅಧ್ಯಾಯ

ಮುಂದಿನ ಏಳು ಮನ್ವಂತರಗಳ ವರ್ಣನೆ

ಶ್ರೀಶುಕ ಉವಾಚ

ಮನುರ್ವಿವಸ್ವತಃ ಪುತ್ರಃ ಶ್ರಾದ್ಧದೇವ ಇತಿ ಶ್ರುತಃ ।
ಸಪ್ತಮೋ ವರ್ತಮಾನೋ ಯಸ್ತದಪತ್ಯಾನಿ ಮೇ ಶೃಣು ॥ ೧ ॥

ಇಕ್ಷ್ವಾಕುರ್ನಭಗಶ್ಚೈವ ಧೃಷ್ಟಃ ಶರ್ಯಾತಿರೇವ ಚ ।
ನರಿಷ್ಯಂತೋಽಥ ನಾಭಾಗಃ ಸಪ್ತಮೋ ದಿಷ್ಟ ಉಚ್ಯತೇ ॥ ೨ ॥

ಕರೂಷಶ್ಚ ಪೃಷಧ್ರಶ್ಚ ದಶಮೋ ವಸುಮಾನ್ಸ್ಮೃತಃ ।
ಮನೋರ್ವೈವಸ್ವತಸ್ಯೈತೇ ದಶ ಪುತ್ರಾಃ ಪರಂತಪ ॥ ೩ ॥

ಆದಿತ್ಯಾ ವಸವೋ ರುದ್ರಾ ವಿಶ್ವೇದೇವಾ ಮರುದ್ಗಣಾಃ ।
ಅಶ್ವಿನಾವೃಭವೋ ರಾಜನ್ನಿಂದ್ರಸ್ತೇಷಾಂ ಪುರಂದರಃ ॥ ೪ ॥

ಕಶ್ಯಪೋಽತ್ರಿರ್ವಸಿಷ್ಠಶ್ಚ ವಿಶ್ವಾಮಿತ್ರೋಽಥ ಗೌತಮಃ ।
ಜಮದಗ್ನಿರ್ಭರದ್ವಾಜ ಇತಿ ಸಪ್ತರ್ಷಯಃ ಸ್ಮೃತಾಃ ॥ ೫ ॥

ಅತ್ರಾಪಿ ಭಗವಜ್ಜನ್ಮ ಕಶ್ಯಪಾದದಿತೇರಭೂತ್ ।
ಆದಿತ್ಯಾನಾಮವರಜೋ ವಿಷ್ಣುರ್ವಾಮನರೂಪಧೃಕ್ ॥ ೬ ॥

ಸಂಕ್ಷೇಪತೋ ಮಯೋಕ್ತಾನಿ ಸಪ್ತ ಮನ್ವಂತರಾಣಿ ತೇ ।
ಭವಿಷ್ಯಾಣ್ಯಥ ವಕ್ಷ್ಯಾಮಿ ವಿಷ್ಣೋಃ ಶಕ್ತ್ಯಾನ್ವಿತಾನಿ ಚ ॥ ೭ ॥

ವಿವಸ್ವತಶ್ಚ ದ್ವೇ ಜಾಯೇ ವಿಶ್ವಕರ್ಮಸುತೇ ಉಭೇ ।
ಸಂಜ್ಞಾ ಛಾಯಾ ಚ ರಾಜೇಂದ್ರ ಯೇ ಪ್ರಾಗಭಿಹಿತೇ ತವ ॥ ೮ ॥

ತೃತೀಯಾಂ ವಡವಾಮೇಕೇ ತಾಸಾಂ ಸಂಜ್ಞಾಸುತಾಸ್ತ್ರಯಃ ।
ಯಮೋ ಯಮೀ ಶ್ರಾದ್ಧದೇವಶ್ಛಾಯಾಯಾಶ್ಚ ಸುತಾನ್ ಶೃಣು ॥ ೯ ॥

ಸಾವರ್ಣಿಸ್ತಪತೀ ಕನ್ಯಾ ಭಾರ್ಯಾ ಸಂವರಣಸ್ಯ ಯಾ ।
ಶನೈಶ್ಚರಸ್ತೃತೀಯೋಽಭೂದಶ್ವಿನೌ ವಡವಾತ್ಮಜೌ ॥ ೧೦ ॥

ಅಷ್ಟಮೇಽಂತರ ಆಯಾತೇ ಸಾವರ್ಣಿರ್ಭವಿತಾ ಮನುಃ ।
ನಿರ್ಮೋಕವಿರಜಸ್ಕಾದ್ಯಾಃ ಸಾವರ್ಣಿತನಯಾ ನೃಪ ॥ ೧೧ ॥

ತತ್ರ ದೇವಾಃ ಸುತಪಸೋ ವಿರಜಾ ಅಮೃತಪ್ರಭಾಃ ।
ತೇಷಾಂ ವಿರೋಚನಸುತೋ ಬಲಿರಿಂದ್ರೋ ಭವಿಷ್ಯತಿ ॥ ೧೨ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಎಲೈ ಪರೀಕ್ಷಿತನೇ! ಈಗ ನಡೆಯುತ್ತಿರುವ ಏಳನೆಯ ಮನ್ವಂತರದ ಮನುವು ವಿವಸ್ವಂತನ ಮಗನೂ ಯಶೋವಂತನಾದ ಶ್ರಾದ್ಧದೇವ (ವೈವಸ್ವತ) ನೆಂಬುವನು. ಅವನ ಸಂತಾನವನ್ನು ನಾನು ವರ್ಣಿಸುತ್ತೇನೆ, ಕೇಳು. ॥ ೧ ॥ ವೈವಸ್ವತ ಮನುವಿಗೆ ಇಕ್ಷ್ವಾಕು, ನಭಗ, ಧೃಷ್ಟ, ಶರ್ಯಾತಿ, ನರಿಷ್ಯಂತ, ನಾಭಾಗ, ದಿಷ್ಟ, ಕರೂಷ, ಪೃಷಧ್ರ ಮತ್ತು ವಸುಮಾನರೆಂಬ ಹತ್ತು ಪುತ್ರರಿದ್ದಾರೆ. ॥ ೨-೩ ॥ ಪರೀಕ್ಷಿದ್ರಾಜಾ! ಈ ಮನ್ವಂತರದಲ್ಲಿ ಆದಿತ್ಯ, ವಸು, ರುದ್ರ, ವಿಶ್ವೇದೇವ, ಮರುದ್ಗಣ, ಅಶ್ವಿನೀಕುಮಾರರು ಮತ್ತು ಋಭು ಇವರುಗಳು ಪ್ರಧಾನ ದೇವತೆಗಳು. ಇವರಿಗೆ ಪುರಂದರನೆಂಬ ಇಂದ್ರನು ಇದ್ದಾನೆ. ॥ ೪ ॥ ಕಶ್ಯಪ, ಅತ್ರಿ, ವಸಿಷ್ಠ, ವಿಶ್ವಾಮಿತ್ರ, ಗೌತಮ, ಜಮದಗ್ನಿ ಮತ್ತು ಭಾರದ್ವಾಜ ಇವರು ಸಪ್ತರ್ಷಿಗಳು. ॥ ೫ ॥ ಈ ಮನ್ವಂತರದಲ್ಲಿಯೂ ಕಶ್ಯಪರ ಪತ್ನಿಯಾದ ಅದಿತಿಯ ಗರ್ಭದಿಂದ ಆದಿತ್ಯರ ಕಡೆಯ ತಮ್ಮನಾಗಿ ವಾಮನ ರೂಪದಲ್ಲಿ ಭಗವಂತನು ಅವತರಿಸಿದ್ದನು. ॥ ೬ ॥

ಪರೀಕ್ಷಿತನೇ! ಹೀಗೆ ನಾನು ನಿನಗೆ ಸಂಕ್ಷೇಪವಾಗಿ ಏಳು ಮನ್ವಂತರಗಳ ವರ್ಣನೆಯನ್ನು ಮಾಡಿದ್ದೇನೆ. ಇನ್ನು ಭಗವಂತನ ಶಕ್ತಿಯಿಂದ ಕೂಡಿದ ಮುಂದೆ ಬರುವ ಏಳು ಮನ್ವಂತರಗಳನ್ನು ವರ್ಣಿಸುತ್ತೇನೆ. ॥ ೭ ॥

ರಾಜೇಂದ್ರಾ! ನಾನು ಈ ಹಿಂದೆ ಆರನೆಯ ಸ್ಕಂಧದಲ್ಲಿ ವಿವಸ್ವಾನ್ (ಸೂರ್ಯದೇವನು) ಎಂಬುವನಿಗೆ ಸಂಜ್ಞಾ ಮತ್ತು ಛಾಯಾ ಎಂಬಿಬ್ಬರು ಮಡದಿಯರಿದ್ದ ವಿಷಯವನ್ನು ಹೇಳಿದ್ದೆ. ಇವರಿಬ್ಬರೂ ವಿಶ್ವಕರ್ಮನ ಪುತ್ರಿಯರಾಗಿದ್ದರು. ॥ ೮ ॥ ಸೂರ್ಯನಿಗೆ ವಡವಾ ಎಂಬ ಮೂರನೆಯ ಪತ್ನಿಯೂ ಇದ್ದಳೆಂದು ಕೆಲವರು ಹೇಳುತ್ತಾರೆ. (ನನ್ನ ವಿಚಾರದಲ್ಲಿ ಸಂಜ್ಞಾದೇವಿಗೆ ವಡವಾ ಎಂಬ ಹೆಸರಿತ್ತು.) ಆ ಸೂರ್ಯನ ಪತ್ನಿಯರಲ್ಲಿ ಸಂಜ್ಞಾದೇವಿಗೆ ಯಮ, ಯಮೀ ಮತ್ತು ಶ್ರಾದ್ಧದೇವರೆಂಬ ಮೂರು ಮಕ್ಕಳಾದರು. ಛಾಯೆಯಲ್ಲಿಯೂ ಸಾವರ್ಣಿ, ಶನೈಶ್ಚರ ಮತ್ತು ತಪತೀ ಎಂಬ ಮೂವರು ಮಕ್ಕಳು ಹುಟ್ಟಿದ್ದರು. ತಪತೀ ಎಂಬ ಕನ್ಯೆಯು ಸಂವರಣನ ಪತ್ನಿಯಾದಳು. ಸಂಜ್ಞೆಯು ವಡವಾ ಎಂಬ ರೂಪವನ್ನು ತಾಳಿದಾಗ ಅವಳಿಂದ ಅಶ್ವಿನೀಕುಮಾರರಿಬ್ಬರು ಜನಿಸಿದರು. ॥ ೯-೧೦ ॥ ಎಂಟನೆಯ ಮನ್ವಂತರದಲ್ಲಿ ಸಾವರ್ಣಿ ಎಂಬುವನು ಮನುವಾಗುವನು. ಅವನಿಗೆ ನಿರ್ಮೋಕ, ವಿರಜಸ್ಕ ಮೊದಲಾದ ಪುತ್ರರು ಹುಟ್ಟುವರು. ॥ ೧೧ ॥ ಪರೀಕ್ಷಿತನೇ! ಆ ಸಮಯದಲ್ಲಿ ಸುತಪಾ, ವಿರಜಾ ಮತ್ತು ಅಮೃತಪ್ರಭರೆಂಬ ದೇವತಾಗಣವಿರುವರು. ಈ ದೇವತೆಗಳಿಗೆ ವಿರೋಚನಪುತ್ರ ಬಲಿಯೇ ಇಂದ್ರನಾಗುವನು. ॥ ೧೨ ॥

ದತ್ತ್ವೇಮಾಂ ಯಾಚಮಾನಾಯ ವಿಷ್ಣವೇ ಯಃ ಪದತ್ರಯಮ್ ।
ರಾದ್ಧಮಿಂದ್ರಪದಂ ಹಿತ್ವಾ ತತಃ ಸಿದ್ಧಿಮವಾಪ್ಸ್ಯತಿ ॥ ೧೩ ॥

ಯೋಽಸೌ ಭಗವತಾ ಬದ್ಧಃ ಪ್ರೀತೇನ ಸುತಲೇ ಪುನಃ ।
ನಿವೇಶಿತೋಽಧಿಕೇ ಸ್ವರ್ಗಾದಧುನಾಽಽಸ್ತೇ ಸ್ವರಾಡಿವ ॥ ೧೪ ॥

ಗಾಲವೋ ದೀಪ್ತಿಮಾನ್ರಾಮೋ ದ್ರೋಣಪುತ್ರಃ ಕೃಪಸ್ತಥಾ ।
ಋಷ್ಯಶೃಂಗಃ ಪಿತಾಸ್ಮಾಕಂ ಭಗವಾನ್ಬಾದರಾಯಣಃ ॥ ೧೫ ॥

ಇಮೇ ಸಪ್ತರ್ಷಯಸ್ತತ್ರ ಭವಿಷ್ಯಂತಿ ಸ್ವಯೋಗತಃ ।
ಇದಾನೀಮಾಸತೇ ರಾಜನ್ಸ್ವೇ ಸ್ವ ಆಶ್ರಮಮಂಡಲೇ ॥ ೧೬ ॥

ದೇವಗುಹ್ಯಾತ್ಸರಸ್ವತ್ಯಾಂ ಸಾರ್ವಭೌಮ ಇತಿ ಪ್ರಭುಃ ।
ಸ್ಥಾನಂ ಪುರಂದರಾದ್ಧೃತ್ವಾ ಬಲಯೇ ದಾಸ್ಯತೀಶ್ವರಃ ॥ ೧೭ ॥

ನವಮೋ ದಕ್ಷಸಾವರ್ಣಿರ್ಮನುರ್ವರುಣಸಂಭವಃ ।
ಭೂತಕೇತುರ್ದೀಪ್ತಕೇತುರಿತ್ಯಾದ್ಯಾಸ್ತತ್ಸುತಾ ನೃಪ ॥ ೧೮ ॥

ಪಾರಾ ಮರೀಚಿಗರ್ಭಾದ್ಯಾ ದೇವಾ ಇಂದ್ರೋಽದ್ಭುತಃ ಸ್ಮೃತಃ ।
ದ್ಯುತಿಮತ್ಪ್ರಮುಖಾಸ್ತತ್ರ ಭವಿಷ್ಯಂತ್ಯೃಷಯಸ್ತತಃ ॥ ೧೯ ॥

ಆಯುಷ್ಮತೋಽಂಬುಧಾರಾಯಾಮೃಷಭೋ ಭಗವತ್ಕಲಾ ।
ಭವಿತಾ ಯೇನ ಸಂರಾದ್ಧಾಂ ತ್ರಿಲೋಕೀಂ ಭೋಕ್ಷ್ಯತೇಽದ್ಭುತಃ ॥ ೨೦ ॥

ದಶಮೋ ಬ್ರಹ್ಮಸಾವರ್ಣಿರುಪಶ್ಲೋಕಸುತೋ ಮಹಾನ್ ।
ತತ್ಸುತಾ ಭೂರಿಷೇಣಾದ್ಯಾ ಹವಿಷ್ಮತ್ಪ್ರಮುಖಾ ದ್ವಿಜಾಃ ॥ ೨೧ ॥

ಹವಿಷ್ಮಾನ್ಸುಕೃತಿಃ ಸತ್ಯೋ ಜಯೋ ಮೂರ್ತಿಸ್ತದಾ ದ್ವಿಜಾಃ ।
ಸುವಾಸನವಿರುದ್ಧಾದ್ಯಾ ದೇವಾಃ ಶಂಭುಃ ಸುರೇಶ್ವರಃ ॥ ೨೨ ॥

ವಿಷ್ವಕ್ಸೇನೋ ವಿಷೂಚ್ಯಾಂ ತು ಶಂಭೋಃ ಸಖ್ಯಂ ಕರಿಷ್ಯತಿ ।
ಜಾತಃ ಸ್ವಾಂಶೇನ ಭಗವಾನ್ಗೃಹೇ ವಿಶ್ವಸೃಜೋ ವಿಭುಃ ॥ ೨೩ ॥

ಮನುರ್ವೈ ಧರ್ಮಸಾವರ್ಣಿರೇಕಾದಶಮ ಆತ್ಮವಾನ್ ।
ಅನಾಗತಾಸ್ತತ್ಸುತಾಶ್ಚ ಸತ್ಯಧರ್ಮಾದಯೋ ದಶ ॥ ೨೪ ॥

ವಿಹಂಗಮಾಃ ಕಾಮಗಮಾ ನಿರ್ವಾಣರುಚಯಃ ಸುರಾಃ ।
ಇಂದ್ರಶ್ಚ ವೈಧೃತಸ್ತೇಷಾಮೃಷಯಶ್ಚಾರುಣಾದಯಃ ॥ ೨೫ ॥

ಭಗವಂತನಾದ ಮಹಾವಿಷ್ಣುವು ವಾಮನಾವತಾರವನ್ನು ತಾಳಿ ಈ ಬಲಿಯಿಂದಲೇ ಮೂರು ಹೆಜ್ಜೆ ಭೂಮಿಯನ್ನು ಕೇಳಿದ್ದನು. ಆದರೆ ಇವನು ಭಗವಂತನಿಗೆ ಮೂರು ಲೋಕಗಳನ್ನೇ ಅರ್ಪಿಸಿಬಿಟ್ಟನು. ಭಗವಂತನು ಒಮ್ಮೆ ಬಲಿಯನ್ನು ಬಂಧಿಸಿದ್ದನು. ಆದರೆ ಮತ್ತೆ ಪ್ರಸನ್ನನಾಗಿ ಅವನು ಇವನಿಗೆ ಸ್ವರ್ಗಕ್ಕಿಂತಲೂ ಶ್ರೇಷ್ಠವಾದ ಸುತಲ ಲೋಕದ ರಾಜ್ಯವನ್ನು ಕೊಟ್ಟನು. ಅವನು ಈಗಲೂ ಇಂದ್ರನಂತೆ ವಿರಾಜಮಾನನಾಗಿದ್ದಾನೆ. ಮುಂದೆ ಇವನೇ ಇಂದ್ರನಾಗುವನು ಮತ್ತು ಸಮಸ್ತ ಐಶ್ವರ್ಯದಿಂದ ಕೂಡಿದ ಇಂದ್ರಪದವಿಯನ್ನೂ ಪರಿತ್ಯಜಿಸಿ ಪರಮ ಸಿದ್ಧಿಯನ್ನು ಹೊಂದುವನು. ॥ ೧೩-೧೪ ॥ ಗಾಲವ, ದೀಪ್ತಿಮಾನ್, ಪರಶುರಾಮ, ಅಶ್ವತ್ಥಾಮಾ, ಕೃಪಾಚಾರ್ಯರು, ಋಷ್ಯಶೃಂಗ ಮತ್ತು ನನ್ನ ತಂದೆ ಭಗವಾನ್ ವೇದವ್ಯಾಸರು ಈ ಎಂಟನೆಯ ಮನ್ವಂತರದಲ್ಲಿ ಸಪ್ತರ್ಷಿಗಳಾಗುವರು. ಈ ಸಮಯದಲ್ಲವರು ಯೋಗಬಲದಿಂದ ತಮ್ಮ-ತಮ್ಮ ಆಶ್ರಮಗಳಲ್ಲಿ ನೆಲೆಸಿದ್ದಾರೆ. ॥ ೧೫-೧೬ ॥ ದೇವಗುಹ್ಯನ ಪತ್ನಿಯಾದ ಸರಸ್ವತೀ ಎಂಬುವಳ ಗರ್ಭದಲ್ಲಿ ಸಾರ್ವಭೌಮನೆಂಬ ಹೆಸರಿನಿಂದ ಭಗವಂತನು ಅವತರಿಸುವನು. ಇವನೇ ಒಡೆಯನಾದ ಇಂದ್ರನಿಂದ ಸ್ವರ್ಗದ ರಾಜ್ಯವನ್ನು ಕಿತ್ತುಕೊಂಡು ಬಲಿರಾಜನಿಗೆ ಕೊಡುವನು. ॥ ೧೭ ॥

ಪರೀಕ್ಷಿತನೇ! ವರುಣನ ಪುತ್ರನಾದ ದಕ್ಷಸಾವರ್ಣಿಯು ಒಂಭತ್ತನೆಯ ಮನು ಆಗುವನು. ಇವನಿಗೆ ಭೂತಕೇತು, ದೀಪ್ತಕೇತು ಮೊದಲಾದ ಅನೇಕ ಪುತ್ರರು ಹುಟ್ಟುವರು. ॥ ೧೮ ॥ ಪಾರ, ಮರೀಚಿಗರ್ಭ, ಮೊದಲಾದ ದೇವತಾಗಣಗಳು ಇರುವರು ಮತ್ತು ಅದ್ಭುತನೆಂಬ ಹೆಸರಿನ ಇಂದ್ರನಾಗುವನು. ಆ ಮನ್ವಂತರದಲ್ಲಿ ದ್ಯುತಿಮಾನ್ ಮೊದಲಾದವರು ಸಪ್ತರ್ಷಿಗಳಾಗುವರು. ॥ ೧೯ ॥ ಆಯುಷ್ಮಂತನ ಪತ್ನಿಯಾದ ಅಂಬುಧಾರಾ ಎಂಬುವಳ ಗರ್ಭದಿಂದ ಋಷಭನ ರೂಪದಲ್ಲಿ ಭಗವಂತನ ಕಲಾವತಾರವಾಗುವುದು. ಅದ್ಭುತನೆಂಬ ಇಂದ್ರನು ಇವನು ಕೊಟ್ಟಿರುವ ತ್ರೈಲೋಕ್ಯದ ರಾಜ್ಯವನ್ನು ಅನುಭವಿಸುವನು. ॥ ೨೦ ॥

ಉಪಶ್ಲೋಕನ ಪುತ್ರ ಬ್ರಹ್ಮಸಾವರ್ಣಿಯು ಹತ್ತನೆಯ ಮನುವಾಗುವನು. ಅವನಲ್ಲಿ ಸಮಸ್ತ ಸದ್ಗುಣಗಳು ವಾಸವಾಗಿರುವುವು. ಭೂರಿಷೇಣನೇ ಮುಂತಾದವರು ಅವನಿಗೆ ಮಕ್ಕಳಾಗುವರು. ಹವಿಷ್ಮಾನ್, ಸುಕೃತಿ, ಸತ್ಯ, ಜಯ, ಮೂರ್ತಿ ಮೊದಲಾದವರು ಸಪ್ತರ್ಷಿಗಳಾಗುವರು. ಸುವಾಸನ, ವಿರುದ್ಧ ಮೊದಲಾದವರು ದೇವತೆಗಳಾಗಿದ್ದು, ಶಂಭು ಎಂಬುವನು ಇಂದ್ರನಾಗುವನು. ॥ ೨೧-೨೨ ॥ ವಿಶ್ವಸೃಜನ ಪತ್ನಿ ವಿಷೂಚಿಯ ಗರ್ಭದಲ್ಲಿ ಭಗವಂತನು ವಿಷ್ವಕ್ಸೇನನ ರೂಪದಲ್ಲಿ ಅಂಶಾವತಾರವನ್ನು ಎತ್ತಿ ಶಂಭುವೆಂಬ ಇಂದ್ರನೊಡನೆ ಸಖ್ಯ ಬೆಳೆಸುವನು. ॥ ೨೩ ॥

ಅತ್ಯಂತ ಸಂಯಮಿಯಾದ ಧರ್ಮಸಾವರ್ಣಿಯು ಹನ್ನೊಂದನೆಯ ಮನು ಆಗುವನು. ಅವನಿಗೆ ಸತ್ಯ, ಧರ್ಮ ಮೊದಲಾದ ಹತ್ತು ಪುತ್ರರಾಗುವರು. ॥ ೨೪ ॥ ವಿಹಂಗಮ, ಕಾಮಗಮ, ನಿರ್ವಾಣರುಚಿ ಮೊದಲಾದವರು ದೇವತೆಗಳಾಗುವರು. ಅರುಣಾದಿ ಸಪ್ತರ್ಷಿಗಳಿದ್ದು ವೈಧೃತನೆಂಬುವನು ಇಂದ್ರನಾಗುವನು. ॥ ೨೫ ॥

ಆರ್ಯಕಸ್ಯ ಸುತಸ್ತತ್ರ ಧರ್ಮಸೇತುರಿತಿ ಸ್ಮೃತಃ ।
ವೈಧೃತಾಯಾಂ ಹರೇರಂಶಸ್ತ್ರಿಲೋಕೀಂ ಧಾರಯಿಷ್ಯತಿ ॥ ೨೬ ॥

ಆರ್ಯಕನೆಂಬುವನ ಪತ್ನೀ ವೈಧೃತಿಯ ಗರ್ಭದಿಂದ ಧರ್ಮಸೇತುವಿನ ರೂಪದಲ್ಲಿ ಭಗವಂತನ ಅಂಶಾವತಾರವಾಗುವುದು ಮತ್ತು ಅದೇ ರೂಪದಲ್ಲಿ ಅವನು ತ್ರೈಲೋಕ್ಯವನ್ನು ರಕ್ಷಿಸುವನು. ॥ ೨೬ ॥

ಭವಿತಾ ರುದ್ರಸಾವರ್ಣೀ ರಾಜನ್ದ್ವಾದಶಮೋ ಮನುಃ ।
ದೇವವಾನುಪದೇವಶ್ಚ ದೇವಶ್ರೇಷ್ಠಾದಯಃ ಸುತಾಃ ॥ ೨೭ ॥

ಋತಧಾಮಾ ಚ ತತ್ರೇಂದ್ರೋ ದೇವಾಶ್ಚ ಹರಿತಾದಯಃ ।
ಋಷಯಶ್ಚ ತಪೋಮೂರ್ತಿಸ್ತಪಸ್ವ್ಯಾಗ್ನೀಧ್ರಕಾದಯಃ ॥ ೨೮ ॥

ಪರೀಕ್ಷಿತನೇ! ಹನ್ನೆರಡನೆಯ ಮನುವು ರುದ್ರಸಾವರ್ಣಿಯಾಗುವನು. ಅವನಿಗೆ ದೇವವಾನ್, ಉಪದೇವ, ದೇವಶ್ರೇಷ್ಠ ಮುಂತಾದವರು ಪುತ್ರರು ಹುಟ್ಟುವರು. ॥ ೨೭ ॥ ಆ ಮನ್ವಂತರದಲ್ಲಿ ಋತಧಾಮಾನೆಂಬುವನು ಇಂದ್ರನಾಗುವನು. ಹರಿತರೇ ಮುಂತಾದವರು ದೇವತೆಗಳಿರುವರು. ತಪೋಮೂರ್ತಿ, ತಪಸ್ವೀ, ಅಗ್ನೀಧ್ರಕ ಮೊದಲಾದವರು ಸಪ್ತರ್ಷಿಗಳಾಗುವರು. ॥ ೨೮ ॥ ಸತ್ಯಸಹಾಯನ ಪತ್ನೀ ಸೂನೃತಾಳ ಗರ್ಭದಿಂದ ಸ್ವಧಾಮವೆಂಬ ರೂಪದಲ್ಲಿ ಭಗವಂತನ ಅಂಶಾವತಾರವಾಗುವುದು ಹಾಗೂ ಅದೇ ರೂಪದಲ್ಲಿ ಭಗವಂತನು ಆ ಮನ್ವಂತರವನ್ನು ಪಾಲಿಸುವನು. ॥ ೨೯ ॥

ಸ್ವಧಾಮಾಖ್ಯೋ ಹರೇರಂಶಃ ಸಾಧಯಿಷ್ಯತಿ ತನ್ಮನೋಃ ।
ಅಂತರಂ ಸತ್ಯಸಹಸಃ ಸೂನೃತಾಯಾಃ ಸುತೋ ವಿಭುಃ ॥ ೨೯ ॥

ಮನುಸ್ತ್ರಯೋದಶೋ ಭಾವ್ಯೋ ದೇವಸಾವರ್ಣಿರಾತ್ಮವಾನ್ ।
ಚಿತ್ರಸೇನವಿಚಿತ್ರಾದ್ಯಾ ದೇವಸಾವರ್ಣಿದೇಹಜಾಃ ॥ ೩೦ ॥

ಪರಮ ಜಿತೇಂದ್ರಿಯನಾದ ದೇವಸಾವರ್ಣಿಯು ಹದಿಮೂರನೆಯ ಮನುವಾಗುವನು. ಚಿತ್ರಸೇನ, ವಿಚಿತ್ರ ಮುಂತಾದವರು ಅವನಿಗೆ ಪುತ್ರರಾಗಿ ಜನಿಸುವರು. ॥ ೩೦ ॥ ಸುಕರ್ಮ, ಸುತ್ರಾಮ ಮೊದಲಾದವರು ದೇವತೆಗಳಿರುವರು. ದಿವಸ್ಪತಿ ಎಂಬುವನು ಇಂದ್ರನಾಗುವನು. ನಿರ್ಮೋಕ ಮತ್ತು ತತ್ತ್ವದರ್ಶ ಮೊದಲಾದವರು ಸಪ್ತರ್ಷಿಗಳಾಗುವರು. ॥ ೩೧ ॥ ದೇವಹೋತ್ರನ ಪತ್ನೀ ಬೃಹತಿಯ ಗರ್ಭದಿಂದ ಯೋಗೇಶ್ವರನ ರೂಪದಲ್ಲಿ ಭಗವಂತನ ಅಂಶಾವತಾರವಾಗುವುದು. ಅದೇ ರೂಪದಲ್ಲಿ ದಿವಸ್ಪತಿಗೆ ಇಂದ್ರಪದವಿಯನ್ನು ಕರುಣಿಸುವನು. ॥ ೩೨ ॥

ದೇವಾಃ ಸುಕರ್ಮಸುತ್ರಾಮಸಂಜ್ಞಾ ಇಂದ್ರೋ ದಿವಸ್ಪತಿಃ ।
ನಿರ್ಮೋಕತತ್ತ್ವದರ್ಶಾದ್ಯಾ ಭವಿಷ್ಯಂತ್ಯೃಷಯಸ್ತದಾ ॥ ೩೧ ॥

ದೇವಹೋತ್ರಸ್ಯ ತನಯ ಉಪಹರ್ತಾ ದಿವಸ್ಪತೇಃ ।
ಯೋಗೇಶ್ವರೋ ಹರೇರಂಶೋ ಬೃಹತ್ಯಾಂ ಸಂಭವಿಷ್ಯತಿ ॥ ೩೨ ॥

ಮನುರ್ವಾ ಇಂದ್ರಸಾವರ್ಣಿಶ್ಚತುರ್ದಶಮ ಏಷ್ಯತಿ ।
ಉರುಗಂಭೀರಬುದ್ಧ್ಯಾದ್ಯಾ ಇಂದ್ರಸಾವರ್ಣಿವೀರ್ಯಜಾಃ ॥ ೩೩ ॥

ರಾಜೇಂದ್ರ! ಇಂದ್ರಸಾವರ್ಣಿಯು ಹದಿನಾಲ್ಕನೆಯ ಮನು ಆಗುವನು. ಉರು, ಗಂಭೀರಬುದ್ಧಿ ಮುಂತಾದವರು ಅವನಿಗೆ ಪುತ್ರರಾಗುವರು. ॥ ೩೩ ॥ ಆಗ ಪವಿತ್ರ, ಚಾಕ್ಷುಷ ಮುಂತಾದವರು ದೇವತೆಗಳಾಗುವರು. ಶುಚಿಯೆಂಬುವನು ಇಂದ್ರನಾಗುವನು. ಅಗ್ನಿ ಬಾಹು, ಶುಚಿ, ಶುದ್ಧ, ಮಾಗಧ ಮುಂತಾದವರು ಸಪ್ತರ್ಷಿಗಳಾಗುವರು. ॥ ೩೪ ॥ ಆ ಸಮಯದಲ್ಲಿ ಸತ್ರಾಯಣನ ಪತ್ನೀ ವಿತಾನಾಳ ಗರ್ಭದಿಂದ ಬೃಹದ್ಭಾನುರೂಪನಾಗಿ ಭಗವಂತನು ಅವತರಿಸಿ ಕರ್ಮಕಾಂಡವನ್ನು ವಿಸ್ತರಿಸುವನು. ॥ ೩೫ ॥

ಪವಿತ್ರಾಶ್ಚಾಕ್ಷುಷಾ ದೇವಾಃ ಶುಚಿರಿಂದ್ರೋ ಭವಿಷ್ಯತಿ ।
ಅಗ್ನಿರ್ಬಾಹುಃ ಶುಚಿಃ ಶುದ್ಧೋ ಮಾಗಧಾದ್ಯಾಸ್ತಪಸ್ವಿನಃ ॥ ೩೪ ॥

ಸತ್ರಾಯಣಸ್ಯ ತನಯೋ ಬೃಹದ್ಭಾನುಸ್ತದಾ ಹರಿಃ ।
ವಿತಾನಾಯಾಂ ಮಹಾರಾಜ ಕ್ರಿಯಾತಂತೂನ್ವಿತಾಯಿತಾ ॥ ೩೫ ॥

ರಾಜಂಶ್ಚತುರ್ದಶೈತಾನಿ ತ್ರಿಕಾಲಾನುಗತಾನಿ ತೇ ।
ಪ್ರೋಕ್ತಾನ್ಯೇಭಿರ್ಮಿತಃ ಕಲ್ಪೋ ಯುಗಸಾಹಸ್ರಪರ್ಯಯಃ ॥ ೩೬ ॥

ಪರೀಕ್ಷಿತನೇ! ಈ ಹದಿನಾಲ್ಕು ಮನ್ವಂತರಗಳು ಭೂತ, ವರ್ತಮಾನ, ಭವಿಷ್ಯ – ಮೂರೂ ಕಾಲಗಳಲ್ಲಿ ನಡೆಯುತ್ತಾ ಇರುತ್ತವೆ. ಇವುಗಳ ಮೂಲಕವೇ ಒಂದುಸಾವಿರ ಚತುರ್ಯುಗಗಳುಳ್ಳ ಕಲ್ಪದ ಗಣನೆ ಮಾಡಲಾಗುತ್ತದೆ. ॥ ೩೬ ॥

ಹದಿಮೂರನೆಯ ಅಧ್ಯಾಯವು ಮುಗಿಯಿತು. ॥ ೧೩ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಅಷ್ಟಮ ಸ್ಕಂಧೇ
ಮನ್ವಂತರಾನುವರ್ಣನಂ ನಾಮ ತ್ರಯೋದಶೋಽಧ್ಯಾಯಃ ॥ ೧೩ ॥

ಹದಿನಾಲ್ಕನೆಯ ಅಧ್ಯಾಯ

ಮನುವೇ ಮೊದಲಾದವರ ಕರ್ತವ್ಯ ನಿರೂಪಣೆ

ರಾಜೋವಾಚ

ಮನ್ವಂತರೇಷು ಭಗವನ್ಯಥಾ ಮನ್ವಾದಯಸ್ತ್ವಿಮೇ ।
ಯಸ್ಮಿನ್ಕರ್ಮಣಿ ಯೇ ಯೇನ ನಿಯುಕ್ತಾಸ್ತದ್ವದಸ್ವ ಮೇ ॥ ೧ ॥

ಋಷಿರುವಾಚ

ಮನವೋ ಮನುಪುತ್ರಾಶ್ಚ ಮುನಯಶ್ಚ ಮಹೀಪತೇ ।
ಇಂದ್ರಾಃ ಸುರಗಣಾಶ್ಚೈವ ಸರ್ವೇ ಪುರುಷಶಾಸನಾಃ ॥ ೨ ॥

ಯಜ್ಞಾದಯೋ ಯಾಃ ಕಥಿತಾಃ ಪೌರುಷ್ಯಸ್ತನವೋ ನೃಪ ।
ಮನ್ವಾದಯೋ ಜಗದ್ಯಾತ್ರಾಂ ನಯಂತ್ಯಾಭಿಃ ಪ್ರಚೋದಿತಾಃ ॥ ೩ ॥

ಚತುರ್ಯುಗಾಂತೇ ಕಾಲೇನ ಗ್ರಸ್ತಾನ್ಛ್ರುತಿಗಣಾನ್ಯಥಾ ।
ತಪಸಾ ಋಷಯೋಽಪಶ್ಯನ್ಯತೋ ಧರ್ಮಃ ಸನಾತನಃ ॥ ೪ ॥

ತತೋ ಧರ್ಮಂ ಚತುಷ್ಪಾದಂ ಮನವೋ ಹರಿಣೋದಿತಾಃ ।
ಯುಕ್ತಾಃ ಸಂಚಾರಯಂತ್ಯದ್ಧಾ ಸ್ವೇ ಸ್ವೇ ಕಾಲೇ ಮಹೀಂ ನೃಪ ॥ ೫ ॥

ಪಾಲಯಂತಿ ಪ್ರಜಾಪಾಲಾ ಯಾವದಂತಂ ವಿಭಾಗಶಃ ।
ಯಜ್ಞಭಾಗಭುಜೋ ದೇವಾ ಯೇ ಚ ತತ್ರಾನ್ವಿತಾಶ್ಚ ತೈಃ ॥ ೬ ॥

ಇಂದ್ರೋ ಭಗವತಾ ದತ್ತಾಂ
ತ್ರೈಲೋಕ್ಯಶ್ರಿಯಮೂರ್ಜಿತಾಮ್ ।
ಭುಂಜಾನಃ ಪಾತಿ ಲೋಕಾಂ-
ಸ್ತ್ರೀನ್ಕಾಮಂ ಲೋಕೇ ಪ್ರವರ್ಷತಿ ॥ ೭ ॥

ಜ್ಞಾನಂ ಚಾನುಯುಗಂ ಬ್ರೂತೇ ಹರಿಃ ಸಿದ್ಧಸ್ವರೂಪಧೃಕ್ ।
ಋಷಿರೂಪಧರಃ ಕರ್ಮ ಯೋಗಂ ಯೋಗೇಶರೂಪಧೃಕ್ ॥ ೮ ॥

ಸರ್ಗಂ ಪ್ರಜೇಶರೂಪೇಣ ದಸ್ಯೂನ್ಹನ್ಯಾತ್ಸ್ವರಾಡ್ವಪುಃ ।
ಕಾಲರೂಪೇಣ ಸರ್ವೇಷಾಮಭಾವಾಯ ಪೃಥಗ್ಗುಣಃ ॥ ೯ ॥

ಪರೀಕ್ಷಿದ್ರಾಜನು ಕೇಳಿದನು – ಪೂಜ್ಯರೇ! ತಾವು ವರ್ಣಿಸಿದ ಈ ಮನುಗಳು, ಮನುಪುತ್ರರು, ಸಪ್ತರ್ಷಿಗಳು ತಮ್ಮ-ತಮ್ಮ ಮನ್ವಂತರಗಳಲ್ಲಿ ಯಾರಿಂದ ನಿಯುಕ್ತರಾಗುತ್ತಾರೆ? ಯಾವ-ಯಾವ ಕರ್ಮಗಳನ್ನು ಹೇಗೇಗೆ ಮಾಡುತ್ತಾರೆ? ಇದನ್ನು ತಾವು ದಯಮಾಡಿ ನನಗೆ ಹೇಳುವವರಾಗಿರಿ. ॥ ೧ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಎಲೈ ಪರೀಕ್ಷಿತನೇ! ಮನುಗಳನ್ನು, ಮನುಪುತ್ರರನ್ನು, ಸಪ್ತರ್ಷಿಗಳನ್ನು, ದೇವತೆಗಳನ್ನು, ಇಂದ್ರನನ್ನು ನಿಯುಕ್ತಗೊಳಿಸುವವನು ಸ್ವತಃ ಭಗವಂತನೇ ಆಗಿರುವನು. ॥ ೨ ॥ ರಾಜನೇ! ಯಜ್ಞಪುರುಷನೇ ಮೊದಲಾದ ಭಗವಂತನ ಅಂಶಾವತಾರಗಳನ್ನು ನಾನು ಹೇಳಿರುವೆನಲ್ಲ, ಅವುಗಳ ಪ್ರೇರಣೆಯಿಂದಲೇ ಮನುವೇ ಮೊದಲಾದವರು ಲೋಕದ ರಕ್ಷಣೆಯ ಕಾರ್ಯವನ್ನು ನಿರ್ವಹಿಸುತ್ತಾರೆ. ॥ ೩ ॥ ಕೃತ, ತ್ರೇತ, ದ್ವಾಪರ, ಕಲಿಗಳೆಂಬ ಚತುರ್ಯುಗಗಳ ಅಂತ್ಯದಲ್ಲಿ ಕಾಲಾನುಗುಣವಾಗಿ ನಷ್ಟವಾದ ವೇದಗಳನ್ನು ಸಪ್ತರ್ಷಿಗಳು ತಮ್ಮ ತಪಸ್ಸಿನಿಂದ ಪುನಃ ಕಂಡುಕೊಳ್ಳುವರು. ಆ ವೇದಗಳ ಸಮೂಹದಿಂದಲೇ ಸನಾತನ ಧರ್ಮದ ರಕ್ಷಣೆಯಾಗುತ್ತದೆ. ॥ ೪ ॥ ರಾಜೇಂದ್ರಾ! ಭಗವಂತನ ಪ್ರೇರಣೆಯಿಂದ ತಮ್ಮ-ತಮ್ಮ ಮನ್ವಂತರಗಳಲ್ಲಿ ಪ್ರಯತ್ನಪೂರ್ವಕ ಎಲ್ಲ ಮನುಗಳು ಪೃಥಿವಿಯಲ್ಲಿ ನಾಲ್ಕು ಚರಣಗಳಿಂದಲೂ ಪರಿಪೂರ್ಣವಾದ ಧರ್ಮದ ಅನುಷ್ಠಾನವನ್ನು ಮಾಡಿಸುತ್ತಾರೆ. ॥ ೫ ॥ ಮನುಪುತ್ರರು ಆಯಾ ಮನ್ವಂತರದ ಕಡೆಯವರೆಗೂ ಕಾಲ-ದೇಶಗಳನ್ನು ವಿಭಾಗಿಸಿಕೊಂಡು ಪ್ರಜಾಪಾಲನೆಯನ್ನೂ ಧರ್ಮದ ರಕ್ಷಣೆಯನ್ನೂ ಮಾಡುತ್ತಿರುತ್ತಾರೆ. ಪಂಚಮಹಾಯಜ್ಞಗಳಲ್ಲಿ ಭೋಕ್ತೃಗಳಾದ ಋಷಿಗಳೂ, ಪಿತೃಗಳೂ, ಭೂತಗಳೂ, ಮನುಷ್ಯರೂ ಇವರೊಡನೆ ದೇವತೆಗಳೂ ಆಯಾ ಮನ್ವಂತರದಲ್ಲಿ ನಡೆಯುವ ಯಜ್ಞಗಳ ಹವಿರ್ಭಾಗಗಳನ್ನು ಸ್ವೀಕರಿಸುತ್ತಾರೆ. ॥ ೬ ॥ ಇಂದ್ರನು ಭಗವಂತನಿಂದ ಕೊಡಲ್ಪಟ್ಟ ಸಂಪತ್ಸಮೃದ್ಧವಾದ ಮೂರು ಲೋಕಗಳ ಐಶ್ವರ್ಯವನ್ನೂ ಉಪಭೋಗಿಸುತ್ತಾ ಪ್ರಜೆಯ ಪಾಲನೆಯನ್ನು ಮಾಡುತ್ತಾನೆ. ಪ್ರಪಂಚದಲ್ಲಿ ಯಥೇಷ್ಟವಾಗಿ ಮಳೆಗರೆಯುವ ಅಧಿಕಾರವು ಇಂದ್ರನಿಗೇ ಇದೆ. ॥ ೭ ॥ ಭಗವಂತನು ಪ್ರತಿ ಯುಗ-ಯುಗಗಳಲ್ಲಿ ಸನಕಾದಿ ಸಿದ್ಧರ ರೂಪಗಳನ್ನು ಧರಿಸಿ ಜ್ಞಾನವನ್ನೂ, ಯಾಜ್ಞವಲ್ಕ್ಯಾದಿ ಋಷಿಗಳ ರೂಪದಿಂದ ಕರ್ತವ್ಯವನ್ನೂ, ದತ್ತಾತ್ರೇಯಾದಿ ಯೋಗೇಶ್ವರರ ರೂಪದಿಂದ ಯೋಗವನ್ನೂ ಉಪದೇಶಮಾಡುತ್ತಾನೆ. ॥ ೮ ॥ ಆತನು ಮರೀಚಿಯೇ ಮುಂತಾದ ಪ್ರಜಾಪತಿಗಳ ರೂಪದಿಂದ ಸೃಷ್ಟಿಯ ವಿಸ್ತಾರವನ್ನು ಮಾಡುತ್ತಾನೆ. ಸಾಮ್ರಾಟನ ರೂಪದಿಂದ ದುಷ್ಟರನ್ನು ಸಂಹರಿಸುತ್ತಾನೆ. ಶೀತೋಷ್ಣವೇ ಮೊದಲಾದ ವಿಭಿನ್ನ ಗುಣಗಳನ್ನು ಧರಿಸಿ ಕಾಲರೂಪದಿಂದ ಎಲ್ಲರನ್ನು ಸಂಹಾರದ ಕಡೆಗೆ ಒಯ್ಯುವನು. ॥ ೯ ॥ ನಾಮ ಮತ್ತು ರೂಪಗಳ ಮಾಯೆಯಿಂದ ಪ್ರಾಣಿಗಳ

ಸ್ತೂಯಮಾನೋ ಜನೈರೇಭಿ-
ರ್ಮಾಯಯಾ ನಾಮರೂಪಯಾ ।
ವಿಮೋಹಿತಾತ್ಮಭಿರ್ನಾನಾ-
ದರ್ಶನೈರ್ನ ಚ ದೃಶ್ಯತೇ ॥ ೧೦ ॥

ಬುದ್ಧಿಯು ವಿಮೂಢವಾಗಿಬಿಟ್ಟಿದೆ. ಈ ಕಾರಣದಿಂದಲೇ ಅನೇಕ ಪ್ರಕಾರದ ದರ್ಶನ ಶಾಸ್ತ್ರಗಳ ಮೂಲಕ ಭಗವಂತನ ಮಹಿಮೆಯನ್ನೇ ಕೀರ್ತಿಸುತ್ತಿದ್ದರೂ ಅವನ ವಾಸ್ತವಿಕ ಸ್ವರೂಪವನ್ನು ತಿಳಿಯದೇ ಹೋಗುವರು. ॥ ೧೦ ॥

ಏತತ್ಕಲ್ಪವಿಕಲ್ಪಸ್ಯ ಪ್ರಮಾಣಂ ಪರಿಕೀರ್ತಿತಮ್ ।
ಯತ್ರ ಮನ್ವಂತರಾಣ್ಯಾಹುಶ್ಚತುರ್ದಶ ಪುರಾವಿದಃ ॥ ೧೧ ॥

ಪರೀಕ್ಷಿತನೇ! ಹೀಗೆ ನಾನು ನಿನಗೆ ಮಹಾಕಲ್ಪ ಮತ್ತು ಅವಾಂತರ ಕಲ್ಪದ ಪರಿಮಾಣವನ್ನು ಹೇಳಿದೆ. ಪುರಾಣತತ್ತ್ವವನ್ನು ಬಲ್ಲ ವಿದ್ವಾಂಸರು ಪ್ರತಿಯೊಂದು ಅವಾಂತರ ಕಲ್ಪದಲ್ಲಿ ಹದಿನಾಲ್ಕು ಮನ್ವಂತರಗಳನ್ನು ಹೇಳಿರುವರು. ॥ ೧೧ ॥

ಹದಿನಾಲ್ಕನೆಯ ಅಧ್ಯಾಯವು ಮುಗಿಯಿತು. ॥ ೧೪ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಅಷ್ಟಮ ಸ್ಕಂಧೇ ಚತುರ್ದಶೋಽಧ್ಯಾಯಃ ॥ ೧೪ ॥

ಹದಿನೈದನೆಯ ಅಧ್ಯಾಯ

ಬಲಿಚಕ್ರವರ್ತಿಯು ಸ್ವರ್ಗವನ್ನು ಜಯಿಸಿದುದು – ವಾಮನಾವತಾರದ ಕಥೆ

ರಾಜೋವಾಚ

ಬಲೇಃ ಪದತ್ರಯಂ ಭೂಮೇಃ ಕಸ್ಮಾದ್ಧರಿರಯಾಚತ ।
ಭೂತ್ವೇಶ್ವರಃ ಕೃಪಣವಲ್ಲಬ್ಧಾರ್ಥೋಽಪಿ ಬಬಂಧ ತಮ್ ॥ ೧ ॥

ಏತದ್ವೇದಿತುಮಿಚ್ಛಾಮೋ ಮಹತ್ಕೌತೂಹಲಂ ಹಿ ನಃ ।
ಯಜ್ಞೇಶ್ವರಸ್ಯ ಪೂರ್ಣಸ್ಯ ಬಂಧನಂ ಚಾಪ್ಯನಾಗಸಃ ॥ ೨ ॥

ಪರೀಕ್ಷಿದ್ರಾಜನು ಕೇಳಿದನು – ಪೂಜ್ಯರೇ! ಶ್ರೀಹರಿಯು ಸ್ವಯಂ ಎಲ್ಲರಿಗೂ ಸ್ವಾಮಿಯಾಗಿದ್ದಾನೆ. ಹೀಗಿರುವಾಗ ಅವನು ದೀನನಂತೆ ಬಲಿಚಕ್ರವರ್ತಿಯ ಬಳಿ ಮೂರು ಹೆಜ್ಜೆ ಭೂಮಿಯನ್ನು ಏಕೆ ಬೇಡಿದನು? ಬೇಡಿದುದನ್ನು ಪಡೆದುಕೊಂಡ ಮೇಲೆ ಶ್ರೀಹರಿಯು ಬಲಿಯನ್ನು ಏಕೆ ಬಂಧಿಸಿದನು? ॥ ೧ ॥ ಪರಿಪೂರ್ಣಸ್ವರೂಪನೂ, ಯಜ್ಞೇಶ್ವರನೂ ಆದ ಭಗವಂತನು ಯಾಚಿಸಿದ್ದು ಮತ್ತು ನಿರಪರಾಧಿಯಾದ ಬಲಿಯನ್ನು ಬಂಧಿಸಿದ್ದು ಇವೆರಡೂ ನನಗೆ ಬಹಳ ಆಶ್ಚರ್ಯವುಂಟುಮಾಡಿದೆ. ಇದು ಹೇಗೆ ಸಂಭವಿಸಿತು? ಇವೆಲ್ಲವನ್ನು ನಾವು ಕೇಳಲು ಬಯಸುತ್ತೇವೆ. ॥ ೨ ॥

ಶ್ರೀಶುಕ ಉವಾಚ

ಪರಾಜಿತಶ್ರೀರಸುಭಿಶ್ಚ ಹಾಪಿತೋ
ಹೀಂದ್ರೇಣ ರಾಜನ್ಭೃಗುಭಿಃ ಸ ಜೀವಿತಃ ।
ಸರ್ವಾತ್ಮನಾ ತಾನಭಜದ್ಭೃಗೂನ್ಬಲಿಃ
ಶಿಷ್ಯೋ ಮಹಾತ್ಮಾರ್ಥನಿವೇದನೇನ ॥ ೩ ॥

ತಂ ಬ್ರಾಹ್ಮಣಾ ಭೃಗವಃ ಪ್ರೀಯಮಾಣಾ
ಅಯಾಜಯನ್ವಿಶ್ವಜಿತಾ ತ್ರಿಣಾಕಮ್ ।
ಜಿಗೀಷಮಾಣಂ ವಿಧಿನಾಭಿಷಿಚ್ಯ
ಮಹಾಭಿಷೇಕೇಣ ಮಹಾನುಭಾವಾಃ ॥ ೪ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಎಲೈ ಪರೀಕ್ಷಿತನೇ! ಇಂದ್ರನು ಬಲಿಯನ್ನು ಪರಾಭವಗೊಳಿಸಿ ಅವನ ಸಂಪತ್ತನ್ನೂ ಕಸಿದುಕೊಂಡನಲ್ಲದೆ ಅವನ ಪ್ರಾಣಗಳನ್ನೂ ಕಿತ್ತುಕೊಂಡಾಗ ಭೃಗುನಂದನ ಶುಕ್ರಾಚಾರ್ಯರು ಅವನನ್ನು ಸಂಜೀವನೀ ವಿದ್ಯೆಯಿಂದ ಬದುಕಿಸಿದರು. ಇದರಿಂದ ಶುಕ್ರಾಚಾರ್ಯರ ಶಿಷ್ಯನಾದ ಮಹಾತ್ಮಾ ಬಲಿಯು ತನ್ನ ಸರ್ವಸ್ವವನ್ನು ಅವರ ಚರಣಗಳಲ್ಲಿ ಅರ್ಪಿಸಿದನು ಹಾಗೂ ಅವನು ತನು-ಮನದಿಂದ ಗುರುಗಳೊಂದಿಗೆ ಸಮಸ್ತ ಭೃಗುವಂಶೀಯರಾದ ಬ್ರಾಹ್ಮಣರ ಸೇವೆ ಮಾಡತೊಡಗಿದನು. ॥ ೩ ॥ ಇದರಿಂದ ಪ್ರಭಾವಶಾಲಿಗಳಾದ ಭೃಗುವಂಶೀ ಬ್ರಾಹ್ಮಣರು ಅವನ ಮೇಲೆ ಬಹಳ ಪ್ರಸನ್ನರಾದರು. ಸ್ವರ್ಗವನ್ನು ಜಯಿಸಬೇಕೆಂಬ ಇಚ್ಛೆಯುಳ್ಳ ಬಲಿಚಕ್ರವರ್ತಿಗೆ ಮಹಾನುಭಾವರಾದ ಅವರು ಮಹಾಭಿಷೇಕದ ವಿಧಿಯಿಂದ ಅಭಿಷೇಕಮಾಡಿ ಅವನಿಂದ ವಿಶ್ವಜಿತ್ ಎಂಬ ಯಜ್ಞವನ್ನು ಮಾಡಿಸಿದರು. ॥ ೪ ॥ ಯಜ್ಞದ ವಿಧಿಯಿಂದ ಹವಿಸ್ಸುಗಳ ಮೂಲಕ ಯಜ್ಞೇಶ್ವರನನ್ನು ಪೂಜಿಸುವಾಗ ಅಗ್ನಿಕುಂಡದಿಂದ ಇಂದ್ರನ

ತತೋ ರಥಃ ಕಾಂಚನಪಟ್ಟನದ್ಧೋ
ಹಯಾಶ್ಚ ಹರ್ಯಶ್ವತುರಂಗವರ್ಣಾಃ ।
ಧ್ವಜಶ್ಚ ಸಿಂಹೇನ ವಿರಾಜಮಾನೋ
ಹುತಾಶನಾದಾಸ ಹವಿರ್ಭಿರಿಷ್ಟಾತ್ ॥ ■ ॥

ಧನುಶ್ಚ ದಿವ್ಯಂ ಪುರಟೋಪನದ್ಧಂ
ತೂಣಾವರಿಕ್ತೌ ಕವಚಂ ಚ ದಿವ್ಯಮ್ ।
ಪಿತಾಮಹಸ್ತಸ್ಯ ದದೌ ಚ ಮಾಲಾ-
ಮಮ್ಲಾನಪುಷ್ಪಾಂ ಜಲಜಂ ಚ ಶುಕ್ರಃ ॥ ೬ ॥

ಏವಂ ಸ ವಿಪ್ರಾರ್ಜಿತಯೋಧನಾರ್ಥ-
ಸ್ತೈಃ ಕಲ್ಪಿತಸ್ವಸ್ತ್ಯಯನೋಽಥ ವಿಪ್ರಾನ್ ।
ಪ್ರದಕ್ಷಿಣೀಕೃತ್ಯ ಕೃತಪ್ರಣಾಮಃ
ಪ್ರಹ್ಲಾದಮಾಮಂತ್ರ್ಯ ನಮಶ್ಚಕಾರ ॥ ೭ ॥

ಅಥಾರುಹ್ಯ ರಥಂ ದಿವ್ಯಂ ಭೃಗುದತ್ತಂ ಮಹಾರಥಃ ।
ಸುಸ್ರಗ್ಧರೋಽಥ ಸಂನಹ್ಯ ಧನ್ವೀ ಖಡ್ಗೀ ಧೃತೇಷುಧಿಃ ॥ ೮ ॥

ಹೇಮಾಂಗದಲಸದ್ಬಾಹುಃ ಸ್ಫುರನ್ಮಕರಕುಂಡಲಃ ।
ರರಾಜ ರಥಮಾರೂಢೋ ಧಿಷ್ಣ್ಯಸ್ಥ ಇವ ಹವ್ಯವಾಟ್ ॥ ೯ ॥

ತುಲ್ಯೈಶ್ವರ್ಯಬಲಶ್ರೀಭಿಃ ಸ್ವಯೂಥೈರ್ದೈತ್ಯಯೂಥಪೈಃ ।
ಪಿಬದ್ಭಿರಿವ ಖಂ ದೃಗ್ಭಿರ್ದಹದ್ಭಿಃ ಪರಿಧೀನಿವ ॥ ೧೦ ॥

ವೃತೋ ವಿಕರ್ಷನ್ಮಹತೀಮಾಸುರೀಂ ಧ್ವಜಿನೀಂ ವಿಭುಃ ।
ಯಯಾವಿಂದ್ರಪುರೀಂ ಸ್ವೃದ್ಧಾಂ ಕಂಪಯನ್ನಿವ ರೋದಸೀ ॥ ೧೧ ॥

ರಮ್ಯಾಮುಪವನೋದ್ಯಾನೈಃ ಶ್ರೀಮದ್ಭಿರ್ನಂದನಾದಿಭಿಃ ।
ಕೂಜದ್ವಿಹಂಗಮಿಥುನೈರ್ಗಾಯನ್ಮತ್ತಮಧುವ್ರತೈಃ ॥ ೧೨ ॥

ಪ್ರವಾಲಫಲಪುಷ್ಪೋರುಭಾರಶಾಖಾಮರದ್ರುಮೈಃ ।
ಹಂಸಸಾರಸಚಕ್ರಾಹ್ವಕಾರಂಡವಕುಲಾಕುಲಾಃ ।
ನಲಿನ್ಯೋ ಯತ್ರ ಕ್ರೀಡಂತಿ ಪ್ರಮದಾಃ ಸುರಸೇವಿತಾಃ ॥ ೧೩ ॥

ಆಕಾಶಗಂಗಯಾ ದೇವ್ಯಾ ವೃತಾಂ ಪರಿಖಭೂತಯಾ ।
ಪ್ರಾಕಾರೇಣಾಗ್ನಿವರ್ಣೇನ ಸಾಟ್ಟಾಲೇನೋನ್ನತೇನ ಚ ॥ ೧೪ ॥

ಕುದುರೆಗಳಂತಿರುವ ಹಸುರುಬಣ್ಣದ್ದೆಲ್ಲ ಕುದುರೆಗಳಿಂದಲೂ, ಸಿಂಹದ ಚಿಹ್ನೆಯಿಂದ ವಿರಾಜಿಸುತ್ತಿದ್ದ ಧ್ವಜದಿಂದಲೂ ಕೂಡಿದ ಚಿನ್ನದ ಪಟ್ಟಿಗಳಿಂದ ಸಮಲಂಕೃತವಾದ ರಥವೊಂದು ಹೊರಬಂದಿತು. ॥ ೫ ॥ ಜೊತೆಗೆ ಸ್ವರ್ಣಭೂಷಿತ ದಿವ್ಯ ಧನುಸ್ಸೂ, ಅಕ್ಷಯವಾದ ಬತ್ತಳಿಕೆಯೂ, ದಿವ್ಯವಾದ ಅಭೇದ್ಯಕವಚವೂ ಪ್ರಕಟಗೊಂಡವು. ಬಳಿಕ ಬ್ರಹ್ಮದೇವರು ಬಾಡದೇ ಇರುವ ಕಮಲದ ಮಾಲೆಯನ್ನೂ, ಶುಕ್ರಾಚಾರ್ಯರೂ ಒಂದು ಶಂಖವನ್ನು ಅವನಿಗೆ ಅನುಗ್ರಹಿಸಿದರು. ॥ ೬ ॥ ಹೀಗೆ ಬ್ರಾಹ್ಮಣರ ಕೃಪೆಯಿಂದ ಯುದ್ಧದ ಸಾಮಗ್ರಿಯನ್ನು ಪಡೆದುಕೊಂಡು, ಅವರಿಂದ ಸ್ವಸ್ತಿವಾಚನವನ್ನು ಮಾಡಿಸಿ ಬಲಿಚಕ್ರವರ್ತಿಯು ಆ ಬ್ರಾಹ್ಮಣರಿಗೆ ಪ್ರದಕ್ಷಿಣೆಮಾಡಿ ನಮಸ್ಕರಿಸಿದನು. ಬಳಿಕ ಅಜ್ಜನಾದ ಪ್ರಹ್ಲಾದನಿಂದಲೂ ದಿಗ್ವಿಜಯಕ್ಕೆ ಅನುಮತಿಯನ್ನು ಪಡೆದು ಅವನಿಗೂ ನಮಸ್ಕರಿಸಿದನು. ॥ ೭ ॥ ಮತ್ತೆ ಬ್ರಹ್ಮನು ಅನುಗ್ರಹಿಸಿದ ಬಾಡದಿರುವ ಕಮಲದ ಮಾಲೆಯನ್ನು ಧರಿಸಿ, ಭೃಗುವಂಶೀಯ ಬ್ರಾಹ್ಮಣರು ಕೊಟ್ಟಿರುವ ದಿವ್ಯವಾದ ರಥವನ್ನೇರಿ, ಧನುಸ್ಸನ್ನು ಹಿಡಿದುಕೊಂಡು, ಕತ್ತಿಯನ್ನು ಸೊಂಟಕ್ಕೆ ಬಿಗಿದು, ಬಂದಾಗದ ಬತ್ತಳಿಕೆಯನ್ನು ಬೆನ್ನಿಗೇರಿಸಿದನು. ॥ ೮ ॥ ಸುವರ್ಣಮಯ ಭುಜಕೀರ್ತಿಗಳಿಂದಲೂ, ಹೊಳೆಯುತ್ತಿರುವ ಮಕರಾಕಾರದ ಕುಂಡಲಗಳಿಂದಲೂ ಶೋಭಿಸುತ್ತಿದ್ದನು. ರಥಾರೂಢನಾಗಿ ಕುಳಿತಿರುವ ಬಲಿಚಕ್ರವರ್ತಿಯು ಅಗ್ನಿಕುಂಡದಲ್ಲಿ ಪ್ರಜ್ವಲಿಸುವ ಅಗ್ನಿಯಂತೆ ಕಂಗೊಳಿಸುತ್ತಿದ್ದನು. ॥ ೯ ॥ ಅವನ ಜೊತೆಗೆ ಅವನಂತೆ ಐಶ್ವರ್ಯ, ಬಲ, ಪರಾಕ್ರಮಗಳಿಂದ ಕೂಡಿದ ದೈತ್ಯಸೇನಾಪತಿಗಳು ತಮ್ಮ-ತಮ್ಮ ಸೈನ್ಯದೊಂದಿಗೆ ಹೊರಟರು. ಬಲಿಚಕ್ರವರ್ತಿಯು ಕ್ರೋಧತುಂಬಿದ ಕಣ್ಣುಗಳಿಂದಲೇ ಆಕಾಶವನ್ನು ಕುಡಿಯುತ್ತಿರುವನೋ, ಎಂಟೆಂಟೆಯೂ ದಿಕ್ಕುಗಳನ್ನು ಸುಟ್ಟು ಬಿಡುತ್ತಿರುವನೋ ಎಂದು ಕಾಣುತ್ತಿತ್ತು. ॥ ೧೦ ॥ ರಾಕ್ಷಸರ ದೊಡ್ಡದಾದ ಸೈನ್ಯದೊಡನೆ ಪ್ರಭುವಾದ ಬಲಿಯು ಭೂಮ್ಯಾಕಾಶಗಳನ್ನು ನಡುಗಿಸುತ್ತಿರುವನೋ ಎಂಬಂತೆ ಗರ್ಜಿಸುತ್ತಾ ಸಂಪತ್ಸಮೃದ್ಧವಾದ ಅಮರಾವತಿಗೆ ಧಾಳಿಯಿಟ್ಟನು. ॥ ೧೧ ॥

ದೇವತೆಗಳ ಆ ರಾಜಧಾನಿ ಅಮರಾವತಿಯು ಭಾರೀ ಸುಂದರವಾದ ನಂದನವನವೇ ಮೊದಲಾದ ಉದ್ಯಾನವನಗಳಿಂದಲೂ, ಉಪವನಗಳಿಂದಲೂ ಪರಿಶೋಭಿಸುತ್ತಿತ್ತು. ಆ ಉದ್ಯಾನ-ಉಪವನಗಳಲ್ಲಿ ಪಕ್ಷಿಗಳ ಜೋಡಿಗಳೂ, ಮಧುಪಾನದಿಂದ ಮತ್ತೇರಿದ ದುಂಬಿಗಳು ಉಲಿಯುತ್ತಿದ್ದವು. ॥ ೧೨ ॥ ನವಪಲ್ಲವಗಳಿಂದಲೂ, ಫಲ-ಪುಷ್ಪಗಳಿಂದಲೂ, ಕಲ್ಪವೃಕ್ಷದ ಕೊಂಬೆಗಳು ಶೋಭಿಸುತ್ತಿದ್ದವು. ಅಲ್ಲಿಯ ಸರೋವರಗಳು ಹಂಸ, ಸಾರಸ, ಚಕ್ರವಾಕ, ಕಾರಂಡವ ಮೊದಲಾದ ಪಕ್ಷಿಗಳಿಂದ ತುಂಬಿದ್ದವು. ಆ ಸರೋವರಗಳಲ್ಲೇ ದೇವತೆಗಳಿಂದ ಸಮ್ಮಾನಿತರಾದ ದೇವಾಂಗನೆಯರು ಜಲಕ್ರೀಡೆಯಾಡುತ್ತಿದ್ದರು. ॥ ೧೩ ॥ ಜ್ಯೋತಿರ್ಮಯ ಆಕಾಶಗಂಗೆಯು ಕಂದಕದಂತೆ ಅಮರಾವತಿಯನ್ನು ಸುತ್ತಲೂ ಆವರಿಸಿಕೊಂಡಿತ್ತು. ಅಮರಾವತಿಯ ಸುತ್ತಲೂ ಎತ್ತರವಾದ ಬೆಂಕಿಯಂತೆ ದೇದೀಪ್ಯಮಾನವಾಗಿದ್ದ, ಉಪ್ಪರಿಗೆಯಿಂದ ಕೂಡಿದ ಸುವರ್ಣಮಯವಾದ ಪ್ರಾಕಾರವಿದ್ದಿತು. ॥ ೧೪ ॥ ಆ ಪ್ರಾಕಾರದ ಸುತ್ತಲೂ

ರುಕ್ಮಪಟ್ಟಕಪಾಟೈಶ್ಚ ದ್ವಾರೈಃ ಸ್ಫಟಿಕಗೋಪುರೈಃ ।
ಜುಷ್ಟಾಂ ವಿಭಕ್ತಪ್ರಪಥಾಂ ವಿಶ್ವಕರ್ಮವಿನಿರ್ಮಿತಾಮ್
॥ ೧೫ ॥

ಸಭಾಚತ್ವರರಥ್ಯಾಢ್ಯಾಂ ವಿಮಾನೈರ್ನ್ಯರ್ಬುದೈರ್ಯುತಾಮ್ ।
ಶೃಂಗಾಟಕೈರ್ಮಣಿಮಯೈರ್ವಜ್ರವಿದ್ರುಮವೇದಿಭಿಃ
॥ ೧೬ ॥

ಯತ್ರ ನಿತ್ಯವಯೋರೂಪಾಃ ಶ್ಯಾಮಾ ವಿರಜವಾಸಸಃ ।
ಭ್ರಾಜಂತೇ ರೂಪವನ್ನಾರ್ಯೋ ಹ್ಯರ್ಚಿರ್ಭಿರಿವ ವಹ್ನಯಃ
॥ ೧೭ ॥

ಸುರಸ್ತ್ರೀಕೇಶವಿಭ್ರಷ್ಟನವಸೌಗಂಧಿಕಸ್ರಜಾಮ್ ।
ಯತ್ರಾಮೋದಮುಪಾದಾಯ ಮಾರ್ಗ ಆವಾತಿ ಮಾರುತಃ
॥ ೧೮ ॥

ಹೇಮಜಾಲಾಕ್ಷನಿರ್ಗಚ್ಛದ್ಧೂಮೇನಾಗುರುಗಂಧಿನಾ ।
ಪಾಂಡುರೇಣ ಪ್ರತಿಚ್ಛನ್ನಮಾರ್ಗೇ ಯಾಂತಿ ಸುರಪ್ರಿಯಾಃ
॥ ೧೯ ॥

ಮುಕ್ತಾವಿತಾನೈರ್ಮಣಿಹೇಮಕೇತುಭಿ-
ರ್ನಾನಾಪತಾಕಾವಲಭೀಭಿರಾವೃತಾಮ್ ।
ಶಿಖಂಡಿಪಾರಾವತಭೃಂಗನಾದಿತಾಂ
ವೈಮಾನಿಕಸ್ತ್ರೀಕಲಗೀತಮಂಗಲಾಮ್ ॥ ೨೦ ॥

ಮೃದಂಗಶಂಖಾನಕದುಂದುಭಿಸ್ವನೈಃ
ಸತಾಲವೀಣಾಮುರಜರ್ಷ್ಟಿವೇಣುಭಿಃ ।
ನೃತ್ಯೈಃ ಸವಾದ್ಯೈರುಪದೇವಗೀತಕೈ-
ರ್ಮನೋರಮಾಂ ಸ್ವಪ್ರಭಯಾ ಜಿತಪ್ರಭಾಮ್ ॥ ೨೧ ॥

ಯಾಂ ನ ವ್ರಜಂತ್ಯಧರ್ಮಿಷ್ಠಾಃ ಖಲಾ ಭೂತದ್ರುಹಃ ಶಠಾಃ ।
ಮಾನಿನಃ ಕಾಮಿನೋ ಲುಬ್ಧಾ ಏಭಿರ್ಹೀನಾ ವ್ರಜಂತಿ ಯತ್
॥ ೨೨ ॥

ತಾಂ ದೇವಧಾನೀಂ ಸ ವರೂಥಿನೀಪತಿ-
ರ್ಬಹಿಃ ಸಮಂತಾದ್ರುರುಧೇ ಪೃತನ್ಯಯಾ ।
ಆಚಾರ್ಯದತ್ತಂ ಜಲಜಂ ಮಹಾಸ್ವನಂ
ದಧ್ಮೌ ಪ್ರಯುಂಜನ್ಭಯಮಿಂದ್ರಯೋಷಿತಾಮ್ ॥ ೨೩ ॥

ಚಿನ್ನದ ಕವಾಟಗಳಿಂದ ಕೂಡಿದ ಮಹಾದ್ವಾರಗಳೂ, ಸ್ಫಟಿಕ ಮಯವಾದ ಗೋಪುರಗಳಿದ್ದವು. ಅಲ್ಲಿ ಬೇರೆ-ಬೇರೆಯಾದ ದೊಡ್ಡ-ದೊಡ್ಡ ರಾಜಮಾರ್ಗಗಳಿದ್ದು, ಸ್ವತಃ ವಿಶ್ವಕರ್ಮನೇ ಆ ನಗರವನ್ನು ನಿರ್ಮಿಸಿದ್ದನು. ॥ ೧೫ ॥ ಸಭಾಭವನಗಳಿಂದಲೂ, ಚೌಕಗಳಿಂದಲೂ, ಅಗಲವಾದ ರಥಬೀದಿಗಳಿಂದಲೂ ಅದು ಶೋಭಾಯಮಾನವಾಗಿತ್ತು. ಹತ್ತುಕೋಟಿ ವಿಮಾನಗಳು ಅಮರಾವತಿಯನ್ನು ಅಲಂಕರಿಸಿದ್ದವು. ರತ್ನಖಚಿತವಾದ ವಜ್ರ, ಹವಳಗಳಿಂದ ಚೆಂದವಾಗಿ ನಿರ್ಮಿಸಲ್ಪಟ್ಟ ಜಗುಲಿಗಳು ಅಮರಾವತಿಯ ನಾಲ್ಕು ಮಾರ್ಗಗಳು ಕೂಡುವ ಚೌಕಗಳಲ್ಲಿ ಶೋಭಿಸುತ್ತಿದ್ದವು. ॥ ೧೬ ॥ ಅಲ್ಲಿಯ ಸ್ತ್ರೀಯರು ಯಾವಾಗಲೂ ಹದಿನಾರು ವರ್ಷದವರಂತೆ ಇರುತ್ತಾರೆ. ಅವರ ಯೌವನ ಮತ್ತು ಸೌಂದರ್ಯವು ಸ್ಥಿರವಾಗಿರುತ್ತದೆ. ಅವರು ನಿರ್ಮಲವಾದ ವಸ್ತ್ರಗಳನ್ನು ಟ್ಟುಕೊಂಡು ಆ ನಾರಿಯರು ಜ್ವಾಲೆಗಳಿಂದ ಕೂಡಿದ ಅಗ್ನಿಯೋಪಾದಿಯಲ್ಲಿ ರಾರಾಜಿಸುತ್ತಿದ್ದರು. ॥ ೧೭ ॥

ದೇವಾಂಗನೆಯರ ಮುಡಿಯಿಂದ ಜಾರಿಬಿದ್ದ ನೂತನ ಸೌಗಂಧಿಕಾಪುಷ್ಪಗಳ ಸುರಭಿಯನ್ನು ಹೊತ್ತು ವಾಯುದೇವನು ಅಲ್ಲಿಯ ಮಾರ್ಗಗಳಲ್ಲಿ ಮಂದ-ಮಂದವಾಗಿ ಬೀಸುತ್ತಿದ್ದನು. ॥ ೧೮ ॥ ಮಹಾಸೌಧಗಳ ಸ್ವರ್ಣಮಯ ಕಿಟಕಿಗಳಿಂದ ಹೊರಸೂಸುತ್ತಿದ್ದ ಅಗರುವಾಸನೆಯಿಂದ ಕೂಡಿದ ಬಿಳಿಯ ಹೊಗೆಯಿಂದ ಸಮಾವೃತವಾದ ಮಾರ್ಗಗಳಲ್ಲಿ ದೇವಾಂಗನೆಯರು ಸಂಚರಿಸುತ್ತಿದ್ದರು. ॥ ೧೯ ॥ ಅಲ್ಲಲ್ಲಿ ಮುತ್ತುಗಳ ಝಲ್ಲರಿಗಳಿಂದ ಅಲಂಕೃತವಾದ ಮಂಟಪಗಳಿಂದಲೂ, ರತ್ನಖಚಿತವಾದ ಚಿನ್ನದ ಧ್ವಜಗಳಿಂದಲೂ, ಸೌಧಗಳ ಮೇಲೆ ಹಾರಾಡುತ್ತಿದ್ದ ನಾನಾ ವಿಧವಾದ ಪತಾಕೆಗಳಿಂದಲೂ ಸಮಾವೃತವಾಗಿದ್ದು, ನವಿಲು, ಪಾರಿವಾಳ, ದುಂಬಿಗಳ ಧ್ವನಿಗಳಿಂದಲೂ, ದೇವತೆಗಳ ಇಂಪಾದ ಸಂಗೀತದಿಂದಲೂ ಅಲ್ಲಿ ಮಂಗಳಮಯ ವಾತಾವರಣ ನಿರ್ಮಾಣವಾಗಿತ್ತು. ॥ ೨೦ ॥ ಮೃದಂಗ, ಶಂಖ, ಆನಕ, ಡೋಲು, ವೀಣಾ-ವೇಣು ಮೊದಲಾದ ವಾದ್ಯಗಳು ನುಡಿಸಲ್ಪಡುತ್ತಿದ್ದವು. ಗಂಧರ್ವರು ವಾದ್ಯಗಳ ಜೊತೆಗೆ ಹಾಡುತ್ತಿದ್ದರೆ, ಅಪ್ಸರೆಯರು ನರ್ತನ ಮಾಡುತ್ತಿದ್ದರು. ಆ ಅಮರಾವತಿಯು ತನ್ನ ಕಾಂತಿಯಿಂದ ಕಾಂತಿಯ ಅಧಿದೇವತೆಯನ್ನೂ ಧಿಕ್ಕರಿಸುತ್ತಿದೆಯೋ ಎಂಬಂತೆ ಕಾಣುತ್ತಿದ್ದಿತು. ಅಂತಹ ಅಮರಾವತಿಯನ್ನು ಬಲಿಯು ನೋಡಿದನು. ॥ ೨೧ ॥ ಆ ಪುರಿಯಲ್ಲಿ ಅಧರ್ಮಿಗಳು, ದುಷ್ಟರು, ಜೀವದ್ರೋಹಿಗಳು, ಮೋಸಗಾರರು, ದುರಭಿಮಾನಿಗಳು, ಕಾಮುಕರು, ಲೋಭಿಗಳು ಹೋಗಲಾರರು. ಇಂತಹ ದೋಷಗಳಿಂದ ರಹಿತರಾದವರು ಮಾತ್ರ ಅಲ್ಲಿಗೆ ಹೋಗಬಲ್ಲರು. ॥ ೨೨ ॥ ಅಸುರರ ಸೇನೆಯ ಒಡೆಯನಾದ ಬಲಿಚಕ್ರವರ್ತಿಯು ತನ್ನ ಭಾರೀ ದೊಡ್ಡ ಸೈನ್ಯದಿಂದ ಅಮರಾವತಿಯನ್ನು ಹೊರಗಿನಿಂದ ಮುತ್ತಿಗೆ ಹಾಕಿದನು. ಅವನು ಶುಕ್ರಾಚಾರ್ಯರು ಇತ್ತ ಮಹಾಶಂಖವನ್ನು ಊದಿದನು. ಇದರಿಂದ ಇಂದ್ರಪತ್ನಿಯರ ಹೃದಯದಲ್ಲಿ ಭಯವನ್ನು ಹುಟ್ಟಿಸುತ್ತಾ ಆ ಶಂಖಧ್ವನಿಯು ಎಲ್ಲೆಡೆ ಹರಡಿಕೊಂಡಿತು. ॥ ೨೩ ॥

ಮಘವಾಂಸ್ತಮಭಿಪ್ರೇತ್ಯ ಬಲೇಃ ಪರಮಮುದ್ಯಮಮ್ ।
ಸರ್ವದೇವಗಣೋಪೇತೋ ಗುರುಮೇತದುವಾಚ ಹ ॥ ೨೪ ॥

ಭಗವನ್ನುದ್ಯಮೋ ಭೂಯಾನ್ಬಲೇರ್ನಃ ಪೂರ್ವವೈರಿಣಃ ।
ಅವಿಷಹ್ಯಮಿಮಂ ಮನ್ಯೇ ಕೇನಾಸೀತ್ತೇಜಸೋರ್ಜಿತಃ ॥ ೨೫ ॥

ನೈನಂ ಕಶ್ಚಿತ್ಕುತೋ ವಾಪಿ ಪ್ರತಿವ್ಯೋಢುಮಧೀಶ್ವರಃ ।
ಪಿಬನ್ನಿವ ಮುಖೇನೇದಂ ಲಿಹನ್ನಿವ ದಿಶೋ ದಶ ।
ದಹನ್ನಿವ ದಿಶೋ ದೃಗ್ಭಿಃ ಸಂವರ್ತಾಗ್ನಿರಿವೋತ್ಥಿತಃ ॥ ೨೬ ॥

ಬ್ರೂಹಿ ಕಾರಣಮೇತಸ್ಯ ದುರ್ಧರ್ಷತ್ವಸ್ಯ ಮದ್ರಿಪೋಃ ।
ಓಜಃ ಸಹೋ ಬಲಂ ತೇಜೋ ಯತ ಏತತ್ಸಮುದ್ಯಮಃ ॥ ೨೭ ॥

ಗುರುರುವಾಚ

ಜಾನಾಮಿ ಮಘವನ್ ಶತ್ರೋರುನ್ನತೇರಸ್ಯ ಕಾರಣಮ್ ।
ಶಿಷ್ಯಾಯೋಪಭೃತಂ ತೇಜೋ ಭೃಗುಭಿರ್ಬ್ರಹ್ಮವಾದಿಭಿಃ ॥ ೨೮ ॥

ಭವದ್ವಿಧೋ ಭವಾನ್ವಾಪಿ ವರ್ಜಯಿತ್ವೇಶ್ವರಂ ಹರಿಮ್ ।
ನಾಸ್ಯ ಶಕ್ತಃ ಪುರಃ ಸ್ಥಾತುಂ ಕೃತಾಂತಸ್ಯ ಯಥಾ ಜನಾಃ ॥ ೨೯ ॥

ತಸ್ಮಾನ್ನಿಲಯಮುತ್ಸೃಜ್ಯ ಯೂಯಂ ಸರ್ವೇ ತ್ರಿವಿಷ್ಟಪಮ್ ।
ಯಾತ ಕಾಲಂ ಪ್ರತೀಕ್ಷಂತೋ ಯತಃ ಶತ್ರೋರ್ವಿಪರ್ಯಯಃ ॥ ೩೦ ॥

ಏಷ ವಿಪ್ರಬಲೋದರ್ಕಃ ಸಂಪ್ರತ್ಯೂರ್ಜಿತವಿಕ್ರಮಃ ।
ತೇಷಾಮೇವಾಪಮಾನೇನ ಸಾನುಬಂಧೋ ವಿನಂಕ್ಷ್ಯತಿ ॥ ೩೦ ॥

ಏವಂ ಸುಮಂತ್ರಿತಾರ್ಥಾಸ್ತೇ ಗುರುಣಾರ್ಥಾನುದರ್ಶಿನಾ ।
ಹಿತ್ವಾ ತ್ರಿವಿಷ್ಟಪಂ ಜಗ್ಮುರ್ಗೀರ್ವಾಣಾಃ ಕಾಮರೂಪಿಣಃ ॥ ೩೨ ॥

ದೇವೇಷ್ವಥ ನಿಲೀನೇಷು ಬಲಿರ್ವೈರೋಚನಃ ಪುರೀಮ್ ।
ದೇವಧಾನೀಮಧಿಷ್ಠಾಯ ವಶಂ ನಿನ್ಯೇ ಜಗತ್ತ್ರಯಮ್ ॥ ೩೩ ॥

ತಂ ವಿಶ್ವಜಯಿನಂ ಶಿಷ್ಯಂ ಭೃಗವಃ ಶಿಷ್ಯವತ್ಸಲಾಃ ।
ಶತೇನ ಹಯಮೇಧಾನಾಮನುವ್ರತಮಯಾಜಯನ್ ॥ ೩೪ ॥

ಬಲಿಯು ಯುದ್ಧಕ್ಕಾಗಿ ಭಾರೀ ಸಿದ್ಧತೆಯನ್ನು ಮಾಡಿರುವನು ಎಂದು ನೋಡಿದ ಇಂದ್ರನು ಎಲ್ಲ ದೇವತೆಗಳೊಂದಿಗೆ ತಮ್ಮ ಗುರುಗಳಾದ ಬೃಹಸ್ಪತ್ಯಾಚಾರ್ಯರ ಬಳಿಗೆ ಹೋಗಿ ಇಂತೆಂದನು – ॥ ೨೪ ॥ ಪೂಜ್ಯರೇ! ಹಿಂದಿನ ನಮ್ಮ ಶತ್ರುವಾದ ಬಲಿಯು ಈ ಬಾರಿ ಯುದ್ಧಕ್ಕಾಗಿ ಭಾರೀ ಸಿದ್ಧತೆ ಮಾಡಿರುವನು. ನಮ್ಮಿಂದ ಅವನನ್ನು ಇದಿರಿಸಲು ಸಾಧ್ಯವಾಗದೆಂದೇ ನನಗೆ ಅನಿಸುತ್ತದೆ. ಇವನು ಯಾವ ಶಕ್ತಿಯಿಂದ ನಮ್ಮನ್ನು ಎದುರಿಸುವಷ್ಟು ಬಲಶಾಲಿಯಾಗಿದ್ದಾನೆ, ತಿಳಿಯದು. ॥ ೨೫ ॥ ಈ ಸಮಯದಲ್ಲಿ ಬಲಿಯನ್ನು ಯಾರೂ ಕೂಡ ಯಾವ ರೀತಿಯಿಂದಲೂ ತಡೆಯಲಾರರು ಎಂದು ನನಗೆ ಭಾಸವಾಗುತ್ತದೆ. ಅವನು ಪ್ರಳಯಾಗ್ನಿಯಂತೆ ಬೆಳೆದಿರುವನು ಮತ್ತು ಈ ವಿಶ್ವವನ್ನೇ ಬಾಯಿಂದ ಹಿಂದುಬಿಡುವನೋ ಎಂದೆನಿಸುತ್ತದೆ. ಹತ್ತು ದಿಕ್ಕುಗಳನ್ನೂ ನಾಲಗೆಯಿಂದ ನೆಕ್ಕಿಬಿಡುವನೋ ಮತ್ತು ಕಣ್ಣುಗಳ ಜ್ವಾಲೆಗಳಿಂದ ದಶದಿಕ್ಕುಗಳನ್ನೂ ಸುಟ್ಟುಬಿಡುವನೋ ಎಂಬಂತಿದೆ. ॥ ೨೬ ॥ ನನ್ನ ಶತ್ರುವಾದ ಬಲಿಗೆ ನಾನೂ ಕೂಡ ಎದುರಿಸಲಾರದಷ್ಟು ಪರಾಕ್ರಮವು ಎಲ್ಲಿಂದ ಬಂತು? ಯಾವುದರಿಂದ ಇವನಿಗೆ ಇಂದ್ರಿಯ ಶಕ್ತಿಯೂ, ಮನಶ್ಶಕ್ತಿಯೂ, ದೇಹಶಕ್ತಿಯೂ, ತೇಜಸ್ಸು ಮತ್ತು ಈ ಸಮುದ್ಯೋಗಕ್ಕೆ ಪ್ರೇರಣೆಯೂ ಲಭಿಸಿತು? ಎಂಬುದನ್ನು ದಯಯಿಟ್ಟು ಹೇಳಿರಿ. ॥ ೨೭ ॥

ದೇವಗುರು ಬೃಹಸ್ಪತ್ಯಾಚಾರ್ಯರು ಹೇಳಿದರು – ಇಂದ್ರನೇ! ನಿನ್ನ ಈ ಶತ್ರುವಿನ ಉನ್ನತಿಯ ಕಾರಣವನ್ನು ಬಲ್ಲೆನು. ಬ್ರಹ್ಮವಾದಿಗಳಾದ ಭೃಗುವಂಶೀಯರು ತಮ್ಮ ಶಿಷ್ಯ ಬಲಿಯಲ್ಲಿ ಮಹಾನ್ ತೇಜ-ಬಲಗಳ ಭಂಡಾರವನ್ನೇ ತುಂಬಿರುವರು. ॥ ೨೮ ॥ ಸರ್ವೇಶ್ವರನಾದ ಶ್ರೀಹರಿಯನ್ನು ಬಿಟ್ಟು ನೀನಾಗಲೀ, ನಿನ್ನಂತಹವರು ಯಾರೂ ಬಲಿಯ ಮುಂದೆ – ಕಾಲನ ಮುಂದೆ ಪ್ರಾಣಿಗಳು ಹೇಗೆ ನಿಲ್ಲಲಾರರೋ ಹಾಗೇ ನಿಲ್ಲಲಾರಿರಿ. ॥ ೨೯ ॥ ಅದಕ್ಕಾಗಿ ನೀವೆಲ್ಲ ಸ್ವರ್ಗವನ್ನು ಬಿಟ್ಟು ಅಡಗಿಕೊಂಡಿರಿ. ಶತ್ರುವಿನ ಭಾಗ್ಯಚಕ್ರವು ವಿಪರೀತವಾಗುವವರೆಗೆ ನೀವು ಪ್ರತೀಕ್ಷೆಮಾಡುತ್ತಾ ಇರಿ. ॥ ೩೦ ॥ ಈ ಸಮಯದಲ್ಲಿ ಭೃಗುವಂಶೀ ಬ್ರಾಹ್ಮಣರ ತೇಜದಿಂದಲೇ ಬಲಿಯ ಅಭಿವೃದ್ಧಿ ಉತ್ತರೋತ್ತರವಾಗಿ ಬೆಳೆಯುತ್ತಾ ಇದೆ. ಅವನು ಬ್ರಾಹ್ಮಣರನ್ನು ತಿರಸ್ಕರಿಸಿದಾಗ, ಅವಮಾನಗೊಳಿಸಿದಾಗ ಅವನು ತನ್ನ ಪರಿವಾರದೊಂದಿಗೆ ವಿನಾಶಹೊಂದುವನು. ॥ ೩೦॥ ದೇವಗುರು ಬೃಹಸ್ಪತ್ಯಾಚಾರ್ಯರು ದೇವತೆಗಳ ಸ್ವಾರ್ಥ ಮತ್ತು ಪರಮಾರ್ಥವೆಲ್ಲವನ್ನು ಬಲ್ಲವರಾಗಿದ್ದರು. ಗುರುಗಳು ಹೀಗೆ ದೇವತೆಗಳಿಗೆ ಸಲಹೆ ನೀಡಿದಾಗ ಅವರೆಲ್ಲರೂ ಇಚ್ಛಾನುಸಾರವಾದ ರೂಪಗಳನ್ನು ಧರಿಸಿ ಸ್ವರ್ಗವನ್ನು ಬಿಟ್ಟು ಹೊರಟು ಹೋದರು. ॥ ೩೨ ॥ ದೇವತೆಗಳು ಅಡಗಿಕೊಂಡಾಗ ವಿರೋಚನನಂದನ ಬಲಿಯು ಅಮರಾವತಿಯ ಮೇಲೆ ತನ್ನ ಅಧಿಕಾರವನ್ನು ಸ್ಥಾಪಿಸಿ, ಮೂರುಲೋಕಗಳನ್ನು ವಶಪಡಿಸಿಕೊಂಡು ಆಳತೊಡಗಿದನು. ॥ ೩೩ ॥ ಬಲಿಚಕ್ರವರ್ತಿಯು ವಿಶ್ವವಿಜಯಿಯಾದಾಗ ಶಿಷ್ಯಪ್ರೇಮಿ ಶುಕ್ರಾಚಾರ್ಯರೇ ಮೊದಲಾದ ಭೃಗುವಂಶೀಯರು ತಮ್ಮ ಶಿಷ್ಯನಾದ ಬಲಿಯಿಂದ ನೂರು ಅಶ್ವಮೇಧ ಯಜ್ಞಗಳನ್ನು ಮಾಡಿಸಿದರು. ॥ ೩೪ ॥

ತತಸ್ತದನುಭಾವೇನ ಭುವನತ್ರಯವಿಶ್ರುತಾಮ್ ।
ಕೀರ್ತಿಂ ದಿಕ್ಷು ವಿತನ್ವಾನಃ ಸ ರೇಜ ಉಡುರಾಡಿವ ॥ ೩೫ ॥

ಬುಭುಜೇ ಚ ಶ್ರಿಯಂ ಸ್ವೃದ್ಧಾಂ ದ್ವಿಜದೇವೋಪಲಂಭಿತಾಮ್ ।
ಕೃತಕೃತ್ಯಮಿವಾತ್ಮಾನಂ ಮನ್ಯಮಾನೋ ಮಹಾಮನಾಃ ॥ ೩೬ ॥

ಆ ಯಜ್ಞಗಳ ಮೂಲಕ ಬಲಿಯ ಕೀರ್ತಿ ಕೌಮುದಿಯು ಮೂರು ಲೋಕಗಳನ್ನೂ ಆಕ್ರಮಿಸಿ ದಶದಿಕ್ಕುಗಳಲ್ಲಿಯೂ ಪಸರಿಸಿತು ಹಾಗೂ ಅವನು ನಕ್ಷತ್ರಗಳ ರಾಜನಾದ ಚಂದ್ರನಂತೆ ಶೋಭಾಯಮಾನನಾದನು. ॥ ೩೫ ॥ ದೇವತಾ ಸ್ವರೂಪರಾದ ಬ್ರಾಹ್ಮಣರ ಕೃಪಾಶ್ರಯದಿಂದ ಲಭಿಸಿದ ಸಂಪತ್ಸಮೃದ್ಧವಾದ ರಾಜ್ಯಲಕ್ಷ್ಮಿಯನ್ನು ಮಹಾತ್ಮನಾದ ಬಲಿಯು ಉಪಭೋಗಿಸುತ್ತಾ ತನ್ನನ್ನು ಕೃತಕೃತ್ಯನೆಂದು ಭಾವಿಸಿಕೊಂಡನು. ॥ ೩೬ ॥

ಹದಿನೈದನೆಯ ಅಧ್ಯಾಯವು ಮುಗಿಯಿತು. ॥ ೧೫ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಅಷ್ಟಮ ಸ್ಕಂಧೇ
ಪಂಚದಶೋಽಧ್ಯಾಯಃ ॥ ೧೫ ॥

ಹದಿನಾರನೆಯ ಅಧ್ಯಾಯ

ಕಶ್ಯಪರು ಅದಿತಿಗೆ ಪಯೋವ್ರತವನ್ನು ಉಪದೇಶಿಸಿದುದು

ಶ್ರೀಶುಕ ಉವಾಚ

ಏವಂ ಪುತ್ರೇಷು ನಷ್ಟೇಷು ದೇವಮಾತಾದಿತಿಸ್ತದಾ ।
ಹೃತೇ ತ್ರಿವಿಷ್ಟಪೇ ದೈತ್ಯೈಃ ಪರ್ಯತಪ್ಯದನಾಥವತ್ ॥ ೧ ॥

ಏಕದಾ ಕಶ್ಯಪಸ್ತಸ್ಯಾ ಆಶ್ರಮಂ ಭಗವಾನಗಾತ್ ।
ನಿರುತ್ಸವಂ ನಿರಾನಂದಂ ಸಮಾಧೇರ್ವಿರತಶ್ಚಿರಾತ್ ॥ ೨ ॥

ಸ ಪತ್ನೀಂ ದೀನವದನಾಂ ಕೃತಾಸನಪರಿಗ್ರಹಃ ।
ಸಭಾಜಿತೋ ಯಥಾನ್ಯಾಯಮಿದಮಾಹ ಕುರೂದ್ವಹ ॥ ೩ ॥

ಅಪ್ಯಭದ್ರಂ ನ ವಿಪ್ರಾಣಾಂ ಭದ್ರೇ ಲೋಕೇಽಧುನಾಽಽಗತಮ್ ।
ನ ಧರ್ಮಸ್ಯ ನ ಲೋಕಸ್ಯ ಮೃತ್ಯೋಶ್ಛಂದಾನುವರ್ತಿನಃ ॥ ೪ ॥

ಅಪಿ ವಾಕುಶಲಂ ಕಿಂಚಿದ್ ಗೃಹೇಷು ಗೃಹಮೇಧಿನಿ ।
ಧರ್ಮಸ್ಯಾರ್ಥಸ್ಯ ಕಾಮಸ್ಯ ಯತ್ರ ಯೋಗೋ ಹ್ಯಯೋಗಿನಾಮ್ ॥ ೫ ॥

ಅಪಿ ವಾತಿಥಯೋಽಭ್ಯೇತ್ಯ ಕುಟುಂಬಾಸಕ್ತಯಾ ತ್ವಯಾ ।
ಗೃಹಾದಪೂಜಿತಾ ಯಾತಾಃ ಪ್ರತ್ಯುತ್ಥಾನೇನ ವಾ ಕ್ವಚಿತ್ ॥ ೬ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತ ಮಹಾರಾಜಾ! ದೇವತೆಗಳು ಹೀಗೆ ಸ್ವರ್ಗದಿಂದ ಪಲಾಯನಮಾಡಿ ಅಡಗಿಕೊಂಡರು ಮತ್ತು ದೈತ್ಯರು ಅಮರಾವತಿಯ ಮೇಲೆ ಅಧಿಕಾರವನ್ನು ಸ್ಥಾಪಿಸಿದಾಗ ದೇವಮಾತೆಯಾದ ಅದಿತಿಯು ದಿಕ್ಕಿಲ್ಲದವಳಂತೆ ಬಹಳವಾಗಿ ಸಂಕಟಪಟ್ಟಳು. ॥ ೧ ॥ ಬಹಳ ಕಾಲದ ಬಳಿಕ ಒಂದುದಿನ ಪರಮಪ್ರಭಾವಶಾಲಿಗಳಾದ ಕಶ್ಯಪ ಮಹಾಮುನಿಗಳು ಸಮಾಧಿಯಿಂದ ಬಹಿರ್ಮುಖರಾಗಿ ಅದಿತಿಯ ಆಶ್ರಮಕ್ಕೆ ಆಗಮಿಸಿದರು. ಅಲ್ಲಿ ಸುಖವಾಗಲೀ, ಶಾಂತಿಯಾಗಲೀ, ಉತ್ಸಾಹವಾಗಲೀ, ಅಲಂಕಾರವಾಗಲೀ ಏನೂ ಅವರಿಗೆ ಕಂಡುಬರಲಿಲ್ಲ. ॥ ೨ ॥ ಪರೀಕ್ಷಿತನೇ! ಅವರು ಅಲ್ಲಿಗೆ ಹೋಗಿ ಆಸನದಲ್ಲಿ ಮಂಡಿಸಿದಾಗ ಅದಿತಿಯು ವಿಧಿವತ್ತಾಗಿ ಅವರನ್ನು ಪೂಜಿಸಿ-ಸತ್ಕರಿಸಿದಳು. ಬಾಡಿದ ಮುಖಭಾವದಿಂದ ಕೂಡಿದ ಪತ್ನಿಯನ್ನು ನೋಡಿ ಕಶ್ಯಪರು ಕೇಳಿದರು – ॥ ೩॥ ಕಲ್ಯಾಣೀ! ಈ ಸಮಯದಲ್ಲಿ ಜಗತ್ತಿನಲ್ಲಿ ಬ್ರಾಹ್ಮಣರ ಮೇಲೆ ಯಾವುದೇ ವಿಪತ್ತುಗಳು ಬಂದಿಲ್ಲವಲ್ಲ! ಧರ್ಮಪಾಲನೆಯು ಸರಿಯಾಗಿ ನಡೆಯುತ್ತಾ ಇದೆಯಲ್ಲ! ಮೃತ್ಯುವಿನ ವಶವರ್ತಿಗಳಾದ ಜನರಿಗೂ ಯಾವುದೇ ತೊಂದರೆಯೂ ಆಗಿಲ್ಲವಲ್ಲ? ॥ ೪ ॥ ಪ್ರಿಯೇ! ಗೃಹಸ್ಥಾಶ್ರಮವಾದರೋ ಯೋಗಾಭ್ಯಾಸವನ್ನು ಮಾಡದಿರುವವರಿಗೂ ಕೂಡ ಯೋಗದ ಫಲವನ್ನು ಕೊಡುವಂತಹುದು. ಇಂತಹ ಗೃಹಸ್ಥಾಶ್ರಮದಲ್ಲಿದ್ದು ಧರ್ಮ, ಅರ್ಥ, ಕಾಮ ಇವುಗಳ ಸೇವನೆಯಲ್ಲಿ ಯಾವುದೇ ವಿಘ್ನಗಳಾದರೋ ಇಲ್ಲವಲ್ಲ! ॥ ೫ ॥ ನೀನು ಯಾವಾಗಲಾದರೋ ಮನೆಕೆಲಸದಲ್ಲಿ ತೊಡಗಿದ್ದ ಸಮಯದಲ್ಲಿ ಯಾರಾದರೂ ಅತಿಥಿಗಳು ಬಂದು, ಅವರನ್ನು ನೀನು ಎದ್ದುಹೋಗಿ ಸತ್ಕರಿಸದೇ ಅವರು ನಿರಾಶರಾಗಿ ನಿನ್ನ ಮನೆಯಿಂದ ಹೊರಟುಹೋದರೇ ? ಆದರಿಂದೇನಾದರೂ ಖಿನ್ನಮನಸ್ಕಳಾಗಿರುವೆಯಾ ? ॥ ೬ ॥

ಗೃಹೇಷು ಯೇಷ್ವತಿಥಯೋ ನಾರ್ಚಿತಾಃ ಸಲಿಲೈರಪಿ ।
ಯದಿ ನಿರ್ಯಾಂತಿ ತೇ ನೂನಂ ಫೇರುರಾಜಗೃಹೋಪಮಾಃ ॥ ೭ ॥

ಅಪ್ಯಗ್ನಯಸ್ತು ವೇಲಾಯಾಂ ನ ಹುತಾ ಹವಿಷಾ ಸತಿ ।
ತ್ವಯೋದ್ವಿಗ್ನಧಿಯಾ ಭದ್ರೇ ಪ್ರೋಷಿತೇ ಮಯಿ ಕರ್ಹಿಚಿತ್ ॥ ೮ ॥

ಯತ್ಪೂಜಯಾ ಕಾಮದುಘಾನ್ಯಾತಿ ಲೋಕಾನ್ಗೃಹಾನ್ವಿತಃ ।
ಬ್ರಾಹ್ಮಣೋಽಗ್ನಿಶ್ಚ ವೈ ವಿಷ್ಣೋಃ ಸರ್ವದೇವಾತ್ಮನೋ ಮುಖಮ್ ॥ ೯ ॥

ಅಪಿ ಸರ್ವೇ ಕುಶಲಿನಸ್ತವ ಪುತ್ರಾ ಮನಸ್ವಿನಿ ।
ಲಕ್ಷಯೇಽಸ್ವಸ್ಥಮಾತ್ಮಾನಂ ಭವತ್ಯಾ ಲಕ್ಷಣೈರಹಮ್ ॥ ೧೦ ॥

ಅದಿತಿರುವಾಚ

ಭದ್ರಂ ದ್ವಿಜಗವಾಂ ಬ್ರಹ್ಮನ್ಧರ್ಮಸ್ಯಾಸ್ಯ ಜನಸ್ಯ ಚ ।
ತ್ರಿವರ್ಗಸ್ಯ ಪರಂ ಕ್ಷೇತ್ರಂ ಗೃಹಮೇಧಿನ್ಗೃಹಾ ಇಮೇ ॥ ೧೧ ॥

ಅಗ್ನಯೋಽತಿಥಯೋ ಭೃತ್ಯಾ ಭಿಕ್ಷವೋ ಯೇ ಚ ಲಿಪ್ಸವಃ ।
ಸರ್ವಂ ಭಗವತೋ ಬ್ರಹ್ಮನ್ನನುಧ್ಯಾನಾನ್ನ ರಿಷ್ಯತಿ ॥ ೧೨ ॥

ಕೋ ನು ಮೇ ಭಗವನ್ಕಾಮೋ ನ ಸಂಪದ್ಯೇತ ಮಾನಸಃ ।
ಯಸ್ಯಾ ಭವಾನ್ಪ್ರಜಾಧ್ಯಕ್ಷ ಏವಂ ಧರ್ಮಾನ್ಪ್ರಭಾಷತೇ ॥ ೧೩ ॥

ತವೈವ ಮಾರೀಚ ಮನಃಶರೀರಜಾಃ
ಪ್ರಜಾ ಇಮಾಃ ಸತ್ತ್ವರಜಸ್ತಮೋಜುಷಃ ।
ಸಮೋ ಭವಾಂಸ್ತಾಸ್ವಸುರಾದಿಷು ಪ್ರಭೋ
ತಥಾಪಿ ಭಕ್ತಂ ಭಜತೇ ಮಹೇಶ್ವರಃ ॥ ೧೪ ॥

ತಸ್ಮಾದೀಶ ಭಜಂತ್ಯಾ ಮೇ ಶ್ರೇಯಶ್ಚಿಂತಯ ಸುವ್ರತ ।
ಹೃತಶ್ರಿಯೋ ಹೃತಸ್ಥಾನಾನ್ಸಪತ್ನೈಃ ಪಾಹಿ ನಃ ಪ್ರಭೋ ॥ ೧೫ ॥

ಪರೈರ್ವಿವಾಸಿತಾ ಸಾಹಂ ಮಗ್ನಾ ವ್ಯಸನಸಾಗರೇ ।
ಐಶ್ವರ್ಯಂ ಶ್ರೀರ್ಯಶಃ ಸ್ಥಾನಂ ಹೃತಾನಿ ಪ್ರಬಲೈರ್ಮಮ ॥ ೧೬ ॥

ಯಥಾ ತಾನಿ ಪುನಃ ಸಾಧೋ ಪ್ರಪದ್ಯೇರನ್ಮಮಾತ್ಮಜಾಃ ।
ತಥಾ ವಿಧೇಹಿ ಕಲ್ಯಾಣಂ ಧಿಯಾ ಕಲ್ಯಾಣಕೃತ್ತಮ ॥ ೧೭ ॥

ಯಾವ ಮನೆಗಳಲ್ಲಿ ಬಂದಿರುವ ಅತಿಥಿಗಳಿಗೆ ನೀರಿನಿಂದಾದರೂ ಸತ್ಕರಿಸಲಾಗುವುದಿಲ್ಲವೋ, ಬಂದವರು ನಿರಾಶರಾಗಿ ಹಿಂತಿರುಗುವರೋ ಆ ಮನೆಯು ನರಿಗಳ ಮನೆಯಂತೆ ಆಗಿದೆ. ॥ ೭ ॥ ಪ್ರಿಯೇ! ನಾನು ತಪಸ್ಸಿಗೆ ಹೊರಟುಹೋಗಿರಲು ಕಳವಳಗೊಂಡ ಮನಸ್ಸಿನಿಂದ ಕೂಡಿದ ನೀನು ಆಯಾ ಕಾಲಗಳಲ್ಲಿ ಅಗ್ನಿ ಪರಿಚರ್ಯೆಯನ್ನು ಮಾಡದೇ ಹೋದೆಯಾ? ॥ ೮ ॥ ಸರ್ವದೇವಮಯನಾದ ಭಗವಂತನಿಗೆ ಬ್ರಾಹ್ಮಣರು ಮತ್ತು ಅಗ್ನಿಯು ಮುಖಪ್ರಾಯರಾಗಿದ್ದಾರೆ. ಗೃಹಸ್ಥನಾದ ಪುರುಷನು ಬ್ರಾಹ್ಮಣರನ್ನೂ, ಅಗ್ನಿಯನ್ನೂ ಆರಾಧಿಸಿದ್ದೇ ಆದರೆ ಸಮಸ್ತ ಕಾಮನೆಗಳನ್ನು ಪೂರ್ಣಗೊಳಿಸುವಂತಹ ಪುಣ್ಯಲೋಕಗಳಿಗೆ ಹೋಗುತ್ತಾನೆ. ॥ ೯ ॥ ಮನಸ್ವಿನಿಯೇ! ನಿನ್ನ ಮಕ್ಕಳೆಲ್ಲರೂ ಕುಶಲಿಗಳಾಗಿರುವರೇ? ನಿನ್ನ ಮುಖಲಕ್ಷಣಗಳಿಂದ ನೀನು ಸ್ವಲ್ಪ ಅಸ್ವಸ್ಥಳಾಗಿರುವೆಯೆಂದು ನಾನು ಗಮನಿಸುತ್ತಿದ್ದೇನೆ. ॥ ೧೦ ॥

ಅದಿತಿಯು ಹೇಳಿದಳು – ಪೂಜ್ಯರಾದ ಬ್ರಾಹ್ಮಣಶ್ರೇಷ್ಠರೇ! ಬ್ರಾಹ್ಮಣರು, ಗೋವುಗಳು, ಧರ್ಮವೂ ಹಾಗೂ ನಿಮ್ಮ ಸೇವಕಿಯಾದ ನಾನೂ – ಎಲ್ಲರೂ ಕುಶಲಿಗಳಾಗಿದ್ದೇವೆ. ಸ್ವಾಮಿಯೇ! ಈ ಗೃಹಸ್ಥಾಶ್ರಮವು ಧರ್ಮ, ಅರ್ಥ, ಕಾಮ ಇವುಗಳ ಸಾಧನೆಯಲ್ಲಿ ಪರಮ ಸಹಾಯಕವಾಗಿದೆ. ॥ ೧೧ ॥ ಪ್ರಭೋ! ನಿಮ್ಮ ನಿರಂತರ ಸ್ಮರಣೆ ಮತ್ತು ಶುಭಕಾಮನೆಯಿಂದಲೂ ಅಗ್ನಿ, ಅತಿಥಿ, ಸೇವಕ, ಭಿಕ್ಷುಕರು ಹಾಗೂ ಇತರ ಯಾಚಕರನ್ನೂ ತಿರಸ್ಕಾರ ಭಾವದಿಂದ ಕಂಡಿಲ್ಲ. ಎಲ್ಲರನ್ನೂ ಯಥಾಯೋಗ್ಯವಾಗಿ ಸತ್ಕರಿಸಿದ್ದೇನೆ. ॥ ೧೨ ॥ ಪೂಜ್ಯರೇ! ನಿಮ್ಮಂತಹ ಪ್ರಜಾಧ್ಯಕ್ಷರು ನನಗೆ ಧರ್ಮೋಪದೇಶ ಮಾಡುತ್ತಿರುವಾಗ ನನ್ನ ಮನಸ್ಸಿನ ಯಾವ ಕಾಮನೆಗಳು ತಾನೇ ಈಡೇರಲಾರವು? ॥ ೧೩ ॥ ಆರ್ಯಪುತ್ರ! ಸಮಸ್ತ ಪ್ರಜೆಯು ಸತ್ತ್ವಗುಣೀಯಾಗಿರಲೀ, ರಜೋಗುಣಿಯಾಗಿರಲೀ, ತಮೋಗುಣಿಯಾಗಿರಲೀ ನಿಮ್ಮ ಸಂತಾನವೇ ಆಗಿದೆಯಲ್ಲ? ಕೆಲವರು ಸಂಕಲ್ಪದಿಂದಲಾದರೆ, ಕೆಲವು ಶರೀರದಿಂದ ಉತ್ಪನ್ನರಾಗಿದ್ದಾರೆ. ಭಗವಂತನೇ! ಅಸುರರಾಗಿರಲೀ, ದೇವತೆಗಳಾಗಿರಲೀ ತಾವು ತಮ್ಮ ಸಂತಾನದ ಕುರಿತು ಒಂದೇ ರೀತಿಯ ಸಮಭಾವವನ್ನೇ ಇರಿಸಿರುವಿರಿ. ಆದರೂ ಸ್ವತಃ ಪರಮೇಶ್ವರನೂ ಕೂಡ ತನ್ನ ಭಕ್ತರ ಅಭಿಲಾಷೆಯನ್ನು ಪೂರ್ಣಗೊಳಿಸುತ್ತಾ ಇರುವನಲ್ಲ! ॥ ೧೪ ॥ ನನ್ನ ಸ್ವಾಮಿಯೇ! ನಾನು ನಿಮ್ಮ ದಾಸಿಯಾಗಿರುವೆನು. ನೀವು ನನ್ನ ಒಳಿತಿಗಾಗಿ ವಿಚಾರಮಾಡಿರಿ. ಮಾನಧನನೇ! ಪ್ರಭುವೇ! ಶತ್ರುಗಳು ನಮ್ಮ ಸಂಪತ್ತನ್ನೂ, ರಾಜ್ಯವನ್ನೂ ಅಪಹರಿಸಿ ಬಿಟ್ಟಿರುವರು. ತಾವು ನಮ್ಮನ್ನು ರಕ್ಷಿಸಿರಿ. ॥ ೧೫ ॥ ಬಲಿಷ್ಠರಾದ ದೈತ್ಯರು ನಮ್ಮ ಐಶ್ವರ್ಯ, ಧನ, ಯಶಸ್ಸು, ಪದವಿ ಎಲ್ಲವನ್ನೂ ಕಸಿದುಕೊಂಡು, ನಮ್ಮನ್ನು ರಾಜ್ಯದಿಂದ ಹೊರಗೆ ಹಾಕಿರುವರು. ಹೀಗೆ ನಾನು ದುಃಖದ ಸಮುದ್ರದಲ್ಲಿ ಮುಳುಗಿಹೋಗಿದ್ದೇನೆ. ॥ ೧೬ ॥ ನಿಮ್ಮನ್ನು ಬಿಟ್ಟು ನಮ್ಮಗಳ ಒಳಿತನ್ನು ಮಾಡುವವರು ಬೇರೆ ಯಾರೂ ಇಲ್ಲ. ಆದಕ್ಕಾಗಿ ನನ್ನ ಹಿತೈಷಿಗಳಾದ ಸ್ವಾಮಿಯೇ! ನೀವು ಚೆನ್ನಾಗಿ ವಿಚಾರಮಾಡಿ ನನ್ನ ಮಕ್ಕಳಿಗೆ ಕಳೆದುಹೋದ ವಸ್ತುಗಳು ಪುನಃ ದೊರಕುವಂತೆ ತಮ್ಮ ಸಂಕಲ್ಪದಿಂದಲೇ ನನ್ನ ಕಲ್ಯಾಣವಾಗುವಂತಹ ಯಾವುದಾದರೂ ಉಪಾಯವನ್ನು ಮಾಡಿರಿ. ॥ ೧೭ ॥

ಶ್ರೀಶುಕ ಉವಾಚ

ಏವಮಭ್ಯರ್ಥಿತೋಽದಿತ್ಯಾ ಕಸ್ತಾಮಾಹ ಸ್ಮಯನ್ನಿವ ।
ಅಹೋ ಮಾಯಾಬಲಂ ವಿಷ್ಣೋಃ ಸ್ನೇಹಬದ್ಧಮಿದಂ ಜಗತ್
॥ ೧೮ ॥

ಕ್ವ ದೇಹೋ ಭೌತಿಕೋಽನಾತ್ಮಾ ಕ್ವ ಚಾತ್ಮಾ ಪ್ರಕೃತೇಃ ಪರಃ ।
ಕಸ್ಯ ಕೇ ಪತಿಪುತ್ರಾದ್ಯಾ ಮೋಹ ಏವ ಹಿ ಕಾರಣಮ್
॥ ೧೯ ॥

ಉಪತಿಷ್ಠಸ್ವ ಪುರುಷಂ ಭಗವಂತಂ ಜನಾರ್ದನಮ್ ।
ಸರ್ವಭೂತಗುಹಾವಾಸಂ ವಾಸುದೇವಂ ಜಗದ್ಗುರುಮ್
॥ ೨೦ ॥

ಸ ವಿಧಾಸ್ಯತಿ ತೇ ಕಾಮಾನ್ ಹರಿರ್ದೀನಾನುಕಂಪನಃ ।
ಅಮೋಘಾ ಭಗವದ್ಭಕ್ತಿರ್ನೇತರೇತಿ ಮತಿರ್ಮಮ
॥ ೨೧ ॥

ಅದಿತಿರುವಾಚ

ಕೇನಾಹಂ ವಿಧಿನಾ ಬ್ರಹ್ಮನ್ನುಪಸ್ಥಾಸ್ಯೇ ಜಗತ್ಪತಿಮ್ ।
ಯಥಾ ಮೇ ಸತ್ಯಸಂಕಲ್ಪೋ ವಿದಧ್ಯಾತ್ಸ ಮನೋರಥಮ್
॥ ೨೨ ॥

ಆದಿಶ ತ್ವಂ ದ್ವಿಜಶ್ರೇಷ್ಠ ವಿಧಿಂ ತದುಪಧಾವನಮ್ ।
ಆಶು ತುಷ್ಯತಿ ಮೇ ದೇವಃ ಸೀದಂತ್ಯಾಃ ಸಹ ಪುತ್ರಕೈಃ
॥ ೨೩ ॥

ಕಶ್ಯಪ ಉವಾಚ

ಏತನ್ಮೇ ಭಗವಾನ್ಪೃಷ್ಟಃ ಪ್ರಜಾಕಾಮಸ್ಯ ಪದ್ಮಜಃ ।
ಯದಾಹ ತೇ ಪ್ರವಕ್ಷ್ಯಾಮಿ ವ್ರತಂ ಕೇಶವತೋಷಣಮ್
॥ ೨೪ ॥

ಫಾಲ್ಗುನಸ್ಯಾಮಲೇ ಪಕ್ಷೇ ದ್ವಾದಶಾಹಂ ಪಯೋವ್ರತಃ ।
ಅರ್ಚಯೇದರವಿಂದಾಕ್ಷಂ ಭಕ್ತ್ಯಾ ಪರಮಯಾನ್ವಿತಃ
॥ ೨೫ ॥

ಸಿನೀವಾಲ್ಯಾಂ ಮೃದಾಽಽಲಿಪ್ಯ ಸ್ನಾಯಾತ್ಕ್ರೋಡವಿದೀರ್ಣಯಾ ।
ಯದಿ ಲಭ್ಯೇತ ವೈ ಸ್ರೋತಸ್ಯೇತಂ ಮಂತ್ರಮುದೀರಯೇತ್
॥ ೨೬ ॥

ತ್ವಂ ದೇವ್ಯಾದಿವರಾಹೇಣ ರಸಾಯಾಃ ಸ್ಥಾನಮಿಚ್ಛತಾ ।
ಉದ್ಧೃತಾಸಿ ನಮಸ್ತುಭ್ಯಂ ಪಾಪ್ಮಾನಂ ಮೇ ಪ್ರಣಾಶಯ
॥ ೨೭ ॥

ನಿರ್ವರ್ತಿತಾತ್ಮನಿಯಮೋ ದೇವಮರ್ಚೇತ್ಸಮಾಹಿತಃ ।
ಅರ್ಚಾಯಾಂ ಸ್ಥಂಡಿಲೇ ಸೂರ್ಯೇ ಜಲೇ ವಹ್ನೌ ಗುರಾವಪಿ
॥ ೨೮ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಹೀಗೆ ಅದಿತಿಯು ಕಶ್ಯಪರಲ್ಲಿ ಪ್ರಾರ್ಥಿಸಿದಾಗ ಅವರು ಕೊಂಚ ವಿಸ್ಮಿತರಾಗಿ ನುಡಿದರು – ದೇವೀ! ಇದೆಂತಹ ಆಶ್ಚರ್ಯದ ಮಾತಾಗಿದೆ? ಭಗವಂತನ ಮಾಯೆಯು ಎಷ್ಟು ಪ್ರಬಲವಾಗಿದೆ! ಈ ಇಡೀ ಪ್ರಪಂಚವು ಸ್ನೇಹವೆಂಬ ಹಗ್ಗದಿಂದ ಕಟ್ಟಲ್ಪಟ್ಟಿದೆ. ॥ ೧೮ ॥ ಪಂಚಭೂತಗಳಿಂದ ಸೃಷ್ಟಿಯಾಗಿರುವ ಅನಾತ್ಮವಾದ ಶರೀರವೆಲ್ಲಿ? ಪ್ರಕೃತಿಗಿಂತಲೂ ಆಚೆ ಇರುವ ಆತ್ಮನೆಲ್ಲಿ? ಯಾರಿಗೆ ಯಾರೂ ಪತಿಯೂ ಇಲ್ಲ, ಪುತ್ರನೂ ಇಲ್ಲ, ಸಂಬಂಧಿಯೂ ಇಲ್ಲ. ಮೋಹವೇ ಎಲ್ಲ ಮನುಷ್ಯರನ್ನು ಕುಣಿಸುತ್ತಾ ಇದೆ. ॥ ೧೯ ॥ ಪ್ರಿಯೇ! ನೀನು ಸಮಸ್ತ ಪ್ರಾಣಿಗಳ ಹೃದಯದಲ್ಲಿ ವಿರಾಜಮಾನನಾಗಿರುವ ತನ್ನ ಭಕ್ತರ ದುಃಖಗಳನ್ನು ಕಳೆಯುವಂತಹ ಜಗದ್ಗುರು ಭಗವಾನ್ ವಾಸುದೇವನನ್ನು ಆರಾಧಿಸು. ॥ ೨೦ ॥ ಅವನು ಅತ್ಯಂತ ದಯಾಳುವಾಗಿದ್ದಾನೆ. ಆ ಶ್ರೀಹರಿಯು ಅವಶ್ಯವಾಗಿಯೇ ನಿನ್ನ ಕಾಮನೆಯನ್ನು ಪೂರ್ಣಗೊಳಿಸುವನು. ಭಗವಂತನ ಭಕ್ತಿಯು ಎಂದಿಗೂ ವ್ಯರ್ಥವಾಗುವುದಿಲ್ಲ ಎಂಬ ದೃಢವಾದ ವಿಶ್ವಾಸವು ನನಗಿದೆ. ಇದು ಬಿಟ್ಟರೆ ಬೇರೆ ಯಾವ ಉಪಾಯವೂ ಇಲ್ಲ. ॥ ೨೧ ॥

ಅದಿತಿಯು ಕೇಳಿದಳು – ಪೂಜ್ಯರೇ! ಸತ್ಯಸಂಕಲ್ಪನಾದ ಭಗವಾನ್ ಜಗದೀಶ್ವರನು ನನ್ನ ಮನೋರಥವನ್ನು ಪೂರ್ಣಗೊಳಿಸುವಂತೆ ಅವನನ್ನು ನಾನು ಹೇಗೆ ಆರಾಧಿಸಬೇಕು? ನನಗೆ ತಿಳಿಸಿರಿ. ॥ ೨೨ ॥ ಪತಿದೇವಾ! ನಾನು ನನ್ನ ಮಕ್ಕಳೊಡನೆ ಬಹಳವಾದ ದುಃಖವನ್ನು ಅನುಭವಿಸುತ್ತಿರುವೆನು. ಪರಬ್ರಹ್ಮ ಪರಮಾತ್ಮನು ಶೀಘ್ರವಾಗಿ ಪ್ರಸನ್ನನಾಗುವಂತಹ ಆರಾಧನಾ ವಿಧಿಯನ್ನು ನನಗೆ ತಿಳಿಸೋಣವಾಗಲೀ ಎಂದು ಪ್ರಾರ್ಥಿಸಿದಳು. ॥ ೨೩ ॥

ಕಶ್ಯಪರು ಹೇಳಿದರು – ಸಾಧ್ವಿಯೇ! ಹಿಂದೊಮ್ಮೆ ನಾನು ಸಂತಾನದ ಅಪೇಕ್ಷೆಯಿಂದ ಬ್ರಹ್ಮದೇವರ ಬಳಿಯಲ್ಲಿ ಪ್ರಾರ್ಥಿಸಿದ್ದೆ. ನನ್ನ ಪ್ರಾರ್ಥನೆಯಂತೆ ಅವರು ಭಗವಂತನನ್ನು ಪ್ರಸನ್ನಗೊಳಿಸುವಂತಹ (ಸಂತಾನವನ್ನು ಪಡೆಯುವಂತಹ) ವ್ರತವನ್ನು ಉಪದೇಶಿಸಿದ್ದರು. ಅದನ್ನು ನಾನು ನಿನಗೆ ಹೇಳುತ್ತೇನೆ. ॥ ೨೪ ॥ ಫಾಲ್ಗುಣಮಾಸದ ಶುಕ್ಲಪಕ್ಷದಲ್ಲಿ ಪ್ರತಿಪದೆಯಿಂದ ದ್ವಾದಶಿಯವರೆಗೆ ಹನ್ನೆರಡುದಿನಗಳು ಕೇವಲ ಹಾಲನ್ನು ಕುಡಿದುಕೊಂಡು ಅನನ್ಯ ಭಕ್ತಿಯಿಂದ ಭಗವಾನ್ ಕಮಲಾಕ್ಷನನ್ನು ಪೂಜಿಸಬೇಕು. ॥ ೨೫ ॥ ಹಿಂದಿನ ಮಾಘಮಾಸದ ಅಮಾವಾಸ್ಯೆಯ ದಿನ ಕಾಡುಹಂದಿಯು ಅಗೆದು ಹಾಕಿರುವ ಮೃತ್ತಿಕೆಯನ್ನು ಮೈಗೆ ಹಚ್ಚಿಕೊಂಡು ನದಿಯಲ್ಲಿ ಸ್ನಾನಮಾಡಬೇಕು. '**ತ್ವಂ ದೇವ್ಯಾದಿವರಾಹೇಣ......**' ಈ ಮಂತ್ರವನ್ನು ಜಪಿಸಬೇಕು. ॥ ೨೬ ॥ ಹೇ ಭಗವತಿ ಭೂದೇವಿಯೇ! ಪ್ರಾಣಿಗಳಿಗೆ ಜೀವಿಸಲು ಸ್ಥಾನವನ್ನು ಕಲ್ಪಿಸಿಕೊಡುವ ಸಲುವಾಗಿ ಭಗವಾನ್ ವರಾಹಸ್ವಾಮಿಯು ರಸಾತಳದಿಂದ ನಿನ್ನನ್ನು ತಂದು ಉದ್ಧರಿಸಿದ್ದನು. ನಿನಗೆ ನನ್ನ ನಮಸ್ಕಾರವು. ನೀನು ನನ್ನ ಪಾಪಗಳನ್ನು ನಾಶಮಾಡಿಬಿಡು. ॥ ೨೭ ॥ ಸ್ನಾನಾದಿಗಳ ಬಳಿಕ ನಿನ್ನ ನಿತ್ಯಕರ್ಮಗಳನ್ನು ಮುಗಿಸಿಕೊಂಡು ಏಕಾಗ್ರಚಿತ್ತದಿಂದ ಮೂರ್ತಿ, ವೇದೀ, ಸೂರ್ಯ, ಜಲ, ಅಗ್ನಿ ಮತ್ತು ಗುರುದೇವರು – ಹೀಗೆ ಇವರ ರೂಪದಲ್ಲಿ ಭಗವಂತನನ್ನು ಪೂಜಿಸಬೇಕು. ॥ ೨೮ ॥ (ಹಾಗೂ ಈ

ನಮಸ್ತುಭ್ಯಂ ಭಗವತೇ ಪುರುಷಾಯ ಮಹೀಯಸೇ ।
ಸರ್ವಭೂತನಿವಾಸಾಯ ವಾಸುದೇವಾಯ ಸಾಕ್ಷಿಣೇ
॥ ೨೯ ॥

ನಮೋಽವ್ಯಕ್ತಾಯ ಸೂಕ್ಷ್ಮಾಯ ಪ್ರಧಾನಪುರುಷಾಯ ಚ ।
ಚತುರ್ವಿಂಶದ್ಗುಣಜ್ಞಾಯ ಗುಣಸಂಖ್ಯಾನಹೇತವೇ
॥ ೩೦ ॥

ನಮೋ ದ್ವಿಶೀರ್ಷ್ಣೇ ತ್ರಿಪದೇ ಚತುಃಶೃಂಗಾಯ ತಂತವೇ ।
ಸಪ್ತಹಸ್ತಾಯ ಯಜ್ಞಾಯ ತ್ರಯೀವಿದ್ಯಾತ್ಮನೇ ನಮಃ
॥ ೩೧ ॥

ನಮಃ ಶಿವಾಯ ರುದ್ರಾಯ ನಮಃ ಶಕ್ತಿಧರಾಯ ಚ ।
ಸರ್ವವಿದ್ಯಾಧಿಪತಯೇ ಭೂತಾನಾಂ ಪತಯೇ ನಮಃ
॥ ೩೨ ॥

ನಮೋ ಹಿರಣ್ಯಗರ್ಭಾಯ ಪ್ರಾಣಾಯ ಜಗದಾತ್ಮನೇ ।
ಯೋಗೈಶ್ವರ್ಯಶರೀರಾಯ ನಮಸ್ತೇ ಯೋಗಹೇತವೇ
॥ ೩೩ ॥

ನಮಸ್ತ ಆದಿದೇವಾಯ ಸಾಕ್ಷಿಭೂತಾಯ ತೇ ನಮಃ ।
ನಾರಾಯಣಾಯ ಋಷಯೇ ನರಾಯ ಹರಯೇ ನಮಃ
॥ ೩೪ ॥

ನಮೋ ಮರಕತಶ್ಯಾಮವಪುಷೇಽಧಿಗತಶ್ರಿಯೇ ।
ಕೇಶವಾಯ ನಮಸ್ತುಭ್ಯಂ ನಮಸ್ತೇ ಪೀತವಾಸಸೇ
॥ ೩೫ ॥

ತ್ವಂ ಸರ್ವವರದಃ ಪುಂಸಾಂ ವರೇಣ್ಯ ವರದರ್ಷಭ ।
ಅತಸ್ತೇ ಶ್ರೇಯಸೇ ಧೀರಾಃ ಪಾದರೇಣುಮುಪಾಸತೇ
॥ ೩೬ ॥

ಅನ್ವವರ್ತಂತ ಯಂ ದೇವಾಃ ಶ್ರೀಶ್ಚ ತತ್ಪಾದಪದ್ಮಯೋಃ ।
ಸ್ಪೃಹಯಂತ ಇವಾಮೋದಂ ಭಗವಾನ್ಮೇ ಪ್ರಸೀದತಾಮ್
॥ ೩೭ ॥

ಏತೈರ್ಮಂತ್ರೈರ್ಹೃಷೀಕೇಶಮಾವಾಹನಪುರಸ್ಕೃತಮ್ ।
ಅರ್ಚಯೇಚ್ಛ್ರದ್ಧಯಾ ಯುಕ್ತಃ ಪಾದ್ಯೋಪಸ್ಪರ್ಶನಾದಿಭಿಃ
॥ ೩೮ ॥

ಪ್ರಕಾರವಾಗಿ ಸ್ತುತಿಸಬೇಕು) ಷಡ್ಗುಣಸಂಪನ್ನನೂ, ಸಮಸ್ತ ಪ್ರಾಣಿಗಳಲ್ಲಿ ವಾಸಮಾಡುವವನೂ, ಸರ್ವಶ್ರೇಷ್ಠನೂ, ಸಮಸ್ತ ಪ್ರಾಣಿಗಳನ್ನು ತನ್ನಲ್ಲಿಯೇ ಧರಿಸುವವನೂ, ಸಮಸ್ತ ಚರಾಚರ ಜಗತ್ತಿಗೂ, ಅದರ ಕಾರಣಕ್ಕೂ ಸಾಕ್ಷಿಭೂತನಾಗಿರುವವನೂ, ವಾಸುದೇವನೂ ಆದ ನಿನಗೆ ನಮಸ್ಕರಿಸುತ್ತೇನೆ. ॥ ೨೯ ॥ ನೀನು ಅವ್ಯಕ್ತನೂ, ಸೂಕ್ಷ್ಮನೂ ಆಗಿರುವೆ. ಪ್ರಕೃತಿ ಮತ್ತು ಪುರುಷರ ರೂಪದಲ್ಲಿ ನೀನೇ ನೆಲೆಸಿರುವೆ. ನೀನು ಇಪ್ಪತ್ತನಾಲ್ಕು ಗುಣಗಳನ್ನು ತಿಳಿದವನೂ, ಗುಣಗಳನ್ನೂ ಎಣಿಸುವಂತಹ ಸಾಂಖ್ಯಶಾಸ್ತ್ರದ ಪ್ರವರ್ತಕನೂ ಆಗಿರುವೆ. ಅಂತಹ ನಿನಗೆ ನಮಸ್ಕಾರವು. ॥ ೩೦ ॥ ನೀನು ಯಜ್ಞಸ್ವರೂಪನಾಗಿರುವೆ. ಪ್ರಾಪಣೀಯ ಮತ್ತು ಉದಯನೀಯಗಳೆಂಬ ಎರಡು ಯಜ್ಞಕರ್ಮಗಳು ನಿನ್ನ ಶಿರಸ್ಸು ಆಗಿದೆ. ಪ್ರಾತಃಸವನ, ಮಾಧ್ಯಂದಿನಸವನ ಮತ್ತು ಸಾಯಂಸವನ ಎಂಬ ಮೂರು ಸವನಗಳೇ ನಿನ್ನ ಪಾದಗಳು. ನಾಲ್ಕು ವೇದಗಳೇ ನಿನ್ನ ನಾಲ್ಕು ಕೊಂಬುಗಳು. ಗಾಯತ್ರಿಯೇ ಮುಂತಾದ ಏಳು ಛಂದಸ್ಸುಗಳೇ ನಿನ್ನ ಏಳು ಕೈಗಳು. ಧರ್ಮಮಯವಾದ ವೃಷಭರೂಪವಾದ ಈ ಯಜ್ಞವು ವೇದಗಳಿಂದ ಪ್ರತಿಪಾದಿತವಾಗಿದೆ. ಇದರ ಆತ್ಮಾ ನೀನೇ ಆಗಿರುವೆ. ಇಂತಹ ಯಜ್ಞಸ್ವರೂಪನಾದ ನಿನಗೆ ನಮಸ್ಕರಿಸುತ್ತೇನೆ. ॥ ೩೧ ॥ ಭಗವಂತಾ! ಲೋಕಕ್ಕೆ ಕಲ್ಯಾಣವನ್ನುಂಟು ಮಾಡುವ ಶಿವನೂ ನೀನೇ ಆಗಿರುವೆ. ಪ್ರಳಯಕಾರೀ ರುದ್ರನೂ ನೀನೇ. ಸಮಸ್ತ ಶಕ್ತಿಗಳನ್ನು ಧರಿಸುವವನೂ ನೀನೇ. ನಿನಗೆ ಮತ್ತೆ-ಮತ್ತೆ ನಮಸ್ಕಾರಗಳು. ಸಮಸ್ತ ವಿದ್ಯೆಗಳ ಅಧಿಪತಿಯೂ, ಸರ್ವಭೂತರ ಸ್ವಾಮಿಯೂ ನೀನೇ ಆಗಿರುವೆ. ಅಂತಹ ನಿನಗೆ ನಮಸ್ಕರಿಸುತ್ತೇನೆ. ॥ ೩೨ ॥ ನೀನೇ ಎಲ್ಲರ ಪ್ರಾಣನೂ, ಜಗತ್ತಿಗೆ ಆತ್ಮಸ್ವರೂಪನೂ ಆಗಿರುವೆ. ಯೋಗಸ್ವರೂಪನೂ ಮತ್ತು ಯೋಗದಿಂದ ಪ್ರಾಪ್ತನಾಗುವ ಐಶ್ವರ್ಯಸ್ವರೂಪನೂ ನೀನೇ ಆಗಿರುವೆ. ಓ ಹಿರಣ್ಯಗರ್ಭನೇ! ನಿನಗೆ ನನ್ನ ನಮಸ್ಕಾರಗಳು. ॥ ೩೩ ॥ ಆದಿದೇವನಾಗಿರುವ ನಿನಗೆ ನಮಸ್ಕಾರವು. ಎಲ್ಲರ ಸಾಕ್ಷಿಭೂತನಾಗಿರುವ ನಿನಗೆ ನಮಸ್ಕಾರ. ನರ-ನಾರಾಯಣರ ರೂಪದಲ್ಲಿ ಪ್ರಕಟನಾದ ಶ್ರೀಹರಿಗೆ ನಮಸ್ಕಾರವು. ॥ ೩೪ ॥ ಮರಕತಮಣಿಯಂತೆ ಶ್ಯಾಮಲ ಶರೀರವುಳ್ಳ ನಿನಗೆ ನಮಸ್ಕಾರ. ಸಮಸ್ತವಾದ ಸಂಪತ್ತನ್ನೂ, ಸಂಪತ್ತುಗಳಿಗೆ ಅಧಿದೇವತೆಯಾದ ಮಹಾಲಕ್ಷ್ಮಿಯನ್ನು ಹೊಂದಿರುವ ನಿನಗೆ ನಮಸ್ಕಾರವು. ಪೀತಾಂಬರಧರನಾದ ಕೇಶವನೇ ನಿನಗೆ ನಮಸ್ಕಾರವು. ॥ ೩೫ ॥ ನೀನು ಎಲ್ಲ ವಿಧದ ವರಗಳನ್ನು ಕೊಡುವವನಾಗಿರುವೆ. ಭಕ್ತರಿಗೆ ವರಗಳನ್ನು ಕೊಡುವವರಲ್ಲಿ ನೀನು ಶ್ರೇಷ್ಠನಾಗಿರುವೆ. ಆದುದರಿಂದಲೇ ಭಕ್ತರಿಗೆ ನೀನು ಇಷ್ಟನಾಗಿರುವೆ. ಅದಕ್ಕಾಗಿಯೇ ಧೀರರಾದವರು, ವಿವೇಕಿಗಳು ತಮ್ಮ ಶ್ರೇಯಸ್ಸಿಗಾಗಿ ನಿನ್ನ ಚರಣರಜವನ್ನು ಉಪಾಸನೆ ಮಾಡುತ್ತಾರೆ. ॥ ೩೬ ॥ ಯಾರ ಚರಣಕಮಲಗಳ ಸುಗಂಧವನ್ನು ಪಡೆಯುವ ಆಸೆಯಿಂದ ಸಮಸ್ತ ದೇವತೆಗಳೂ, ಮಹಾಲಕ್ಷ್ಮಿಯೂ ನಿರಂತರವಾಗಿ ಆಶ್ರಯಿಸಿಕೊಂಡಿರುವರೋ ಅಂತಹ ಭಗವಂತನು ನನ್ನ ಮೇಲೆ ಪ್ರಸನ್ನನಾಗಲೀ. ॥ ೩೭ ॥

ಪ್ರಿಯೇ! ಅದಿತಿಯೇ! ಈ ಮಂತ್ರಗಳಿಂದ ಹೃಷೀಕೇಶನನ್ನು ಮೊದಲಿಗೆ ಆವಾಹಿಸಬೇಕು. ಬಳಿಕ ವಿಷ್ಣುವನ್ನು ಶ್ರದ್ಧಾಪೂರ್ವಕ

ಅರ್ಚಿತ್ವಾ ಗಂಧಮಾಲ್ಯಾದ್ಯೈಃ ಪಯಸಾ ಸ್ನಪಯೇದ್ವಿಭುಮ್ ।
ವಸ್ತ್ರೋಪವೀತಾಭರಣಪಾದ್ಯೋಪಸ್ಪರ್ಶನೈಸ್ತತಃ ।
ಗಂಧಧೂಪಾದಿಭಿಶ್ಚಾರ್ಚೇದ್ದ್ವಾದಶಾಕ್ಷರವಿದ್ಯಯಾ ॥ ೩೯ ॥

ಶೃತಂ ಪಯಸಿ ನೈವೇದ್ಯಂ ಶಾಲ್ಯನ್ನಂ ವಿಭವೇ ಸತಿ ।
ಸಸರ್ಪಿಃ ಸಗುಡಂ ದತ್ತ್ವಾ ಜುಹುಯಾನ್ಮೂಲವಿದ್ಯಯಾ ॥ ೪೦ ॥

ನಿವೇದಿತಂ ತದ್ಭಕ್ತಾಯ ದದ್ಯಾದ್ಭುಂಜೀತ ವಾ ಸ್ವಯಮ್ ।
ದತ್ತ್ವಾಽಽಚಮನಮರ್ಚಿತ್ವಾ ತಾಂಬೂಲಂ ಚ ನಿವೇದಯೇತ್ ॥ ೪೧ ॥

ಜಪೇದಷ್ಟೋತ್ತರಶತಂ ಸ್ತುವೀತ ಸ್ತುತಿಭಿಃ ಪ್ರಭುಮ್ ।
ಕೃತ್ವಾ ಪ್ರದಕ್ಷಿಣಂ ಭೂಮೌ ಪ್ರಣಮೇದ್ದಂಡವನ್ಮುದಾ ॥ ೪೨ ॥

ಕೃತ್ವಾ ಶಿರಸಿ ತಚ್ಛೇಷಾಂ ದೇವಮುದ್ವಾಸಯೇತ್ತತಃ ।
ದ್ವ್ಯವರಾನ್ಭೋಜಯೇದ್ವಿಪ್ರಾನ್‌ಪಾಯಸೇನ ಯಥೋಚಿತಮ್ ॥ ೪೩ ॥

ಭುಂಜೀತ ತೈರನುಜ್ಞಾತಃ ಶೇಷಂ ಸೇಷ್ಟಃ ಸಭಾಜಿತೈಃ ।
ಬ್ರಹ್ಮಚಾರ್ಯಥ ತದ್ರಾತ್ರ್ಯಾಂ ಶ್ವೋಭೂತೇ ಪ್ರಥಮೇಽಹನಿ ॥ ೪೪ ॥

ಸ್ನಾತಃ ಶುಚಿರ್ಯಥೋಕ್ತೇನ ವಿಧಿನಾ ಸುಸಮಾಹಿತಃ ।
ಪಯಸಾ ಸ್ನಾಪಯಿತ್ವಾರ್ಚೇದ್ಯಾವದ್ವ್ರತಸಮಾಪನಮ್ ॥ ೪೫ ॥

ಪಯೋಭಕ್ಷೋ ವ್ರತಮಿದಂ ಚರೇದ್ವಿಷ್ಣ್ವರ್ಚನಾದೃತಃ ।
ಪೂರ್ವವಜ್ಜುಹುಯಾದಗ್ನಿಂ ಬ್ರಾಹ್ಮಣಾಂಶ್ಚಾಪಿ ಭೋಜಯೇತ್ ॥ ೪೬ ॥

ಏವಂ ತ್ವಹರಹಃ ಕುರ್ಯಾದ್ದ್ವಾದಶಾಹಂ ಪಯೋವ್ರತಃ ।
ಹರೇರಾರಾಧನಂ ಹೋಮಮರ್ಹಣಂ ದ್ವಿಜತರ್ಪಣಮ್ ॥ ೪೭ ॥

ಪ್ರತಿಪದ್ದಿನಮಾರಭ್ಯ ಯಾವಚ್ಛುಕ್ಲತ್ರಯೋದಶೀ ।
ಬ್ರಹ್ಮಚರ್ಯಮಧಃಸ್ವಪ್ನಂ ಸ್ನಾನಂ ತ್ರಿಷವಣಂ ಚರೇತ್ ॥ ೪೮ ॥

ವರ್ಜಯೇದಸದಾಲಾಪಂ ಭೋಗಾನುಚ್ಚಾವಚಾಂಸ್ತಥಾ ।
ಅಹಿಂಸ್ರಃ ಸರ್ವಭೂತಾನಾಂ ವಾಸುದೇವಪರಾಯಣಃ ॥ ೪೯ ॥

ತ್ರಯೋದಶ್ಯಾಮಥೋ ವಿಷ್ಣೋಃ ಸ್ನಪನಂ ಪಂಚಕೈರ್ವಿಭೋಃ ।
ಕಾರಯೇಚ್ಛಾಸ್ತ್ರದೃಷ್ಟೇನ ವಿಧಿನಾ ವಿಧಿಕೋವಿದೈಃ ॥ ೫೦ ॥

ವಾಗಿ ಅರ್ಘ್ಯ, ಪಾದ್ಯ, ಆಚಮನಾದಿಗಳಿಂದ ಅರ್ಚನೆ ಮಾಡಬೇಕು. ॥ ೩೮ ॥ ಮತ್ತೆ ಶ್ರೀಹರಿಯನ್ನು ಹಾಲಿನಿಂದ ಅಭಿಷೇಕ ಮಾಡಿ, ಗಂಧಮಾಲ್ಯಾದಿಗಳಿಂದ ಅರ್ಚಿಸಿ, ವಸ್ತ್ರೋಪವೀತಗಳಿಂದಲೂ, ಆಭರಣಾದಿಗಳಿಂದಲೂ ಪರಮಾತ್ಮನನ್ನು ಅಲಂಕರಿಸಿ, ಪಾದ್ಯಾಚಮನೀಯಗಳಿಂದಲೂ, '**ಓಂ ನಮೋ ಭಗವತೇ ವಾಸುದೇವಾಯ**' ಈ ದ್ವಾದಶಾಕ್ಷರ ಮಂತ್ರವನ್ನು ಹೇಳಿಕೊಂಡು ಗಂಧ-ಅಕ್ಷತೆ-ಪುಷ್ಪ-ಧೂಪ-ದೀಪಾದಿಗಳನ್ನು ಶ್ರೀಹರಿಗೆ ಅರ್ಪಿಸಬೇಕು. ॥ ೩೯ ॥ ಸಾಮರ್ಥ್ಯವಿದ್ದರೆ ಹಾಲಿನಲ್ಲಿ ಪಕ್ವವಾದ ಹಾಗೂ ತುಪ್ಪ-ಬೆಲ್ಲ ಇವುಗಳಿಂದ ಕೂಡಿದ ಶಾಲ್ಯಾನ್ನವನ್ನು ನೈವೇದ್ಯ ಮಾಡಬೇಕು ಹಾಗೂ ಅದೇ ಪಾಯಸದಿಂದ ದ್ವಾದಶಾಕ್ಷರ ಮಂತ್ರದಿಂದ ಹೋಮಮಾಡಬೇಕು. ॥ ೪೦ ॥ ನೈವೇದ್ಯವನ್ನು ಭಗವದ್ಭಕ್ತರಿಗೆ ಹಂಚಿ ತಾನು ಸ್ವೀಕರಿಸಬೇಕು. ಬಳಿಕ ಭಗವಂತನಿಗೆ ಆಚಮನವನ್ನು ಅರ್ಪಿಸಿ ತಾಂಬೂಲವನ್ನು ನಿವೇದಿಸಬೇಕು. ॥ ೪೧ ॥ ಅನಂತರ ನೂರೆಂಟು ಬಾರಿ ದ್ವಾದಶಾಕ್ಷರ ಮಂತ್ರವನ್ನು ಜಪಿಸಿ ಭಗವಂತನನ್ನು ಸ್ತುತಿಗಳಿಂದ ಕೊಂಡಾಡಬೇಕು. ಪ್ರದಕ್ಷಿಣೆ ಮಾಡಿ ದೀರ್ಘದಂಡ ನಮಸ್ಕಾರವನ್ನು ಮಾಡಬೇಕು. ॥ ೪೨ ॥ ನಿರ್ಮಾಲ್ಯವನ್ನು ತಲೆಯಲ್ಲಿ ಧರಿಸಿಕೊಂಡು ಸ್ವಾಮಿಯನ್ನು ಉದ್ವಾಸನೆ ಮಾಡಬೇಕು. ಕನಿಷ್ಠ ಇಬ್ಬರು ಬ್ರಾಹ್ಮಣರಿಗೆ ಯಥೋಚಿತವಾಗಿ ಪಾಯಸಾನ್ನದಿಂದ ಭೋಜನ ಮಾಡಿಸಬೇಕು. ॥ ೪೩ ॥ ದಕ್ಷಿಣಾದಿಗಳಿಂದ ಅವರನ್ನು ಸತ್ಕರಿಸಿ, ಅವರಿಂದ ಅನುಜ್ಞೆಯನ್ನು ಪಡೆದು ತಮ್ಮ ಇಷ್ಟ-ಮಿತ್ರರೊಡನೆ ಪ್ರಸಾದಶೇಷವನ್ನು ಸ್ವೀಕರಿಸಬೇಕು. ಅಂದು ಬ್ರಹ್ಮಚರ್ಯದಿಂದ ಇದ್ದು, ಮರುದಿನ ಪ್ರಾತಃಕಾಲದಲ್ಲೇ ಸ್ನಾನಾದಿಗಳನ್ನು ಮಾಡಿ ಪವಿತ್ರತೆಯಿಂದ ಹಿಂದೆ ಹೇಳಿದ ವಿಧಿಯಿಂದ ಏಕಾಗ್ರತೆಯಿಂದ ಭಗವಂತನನ್ನು ಪೂಜಿಸಬೇಕು. ಹೀಗೆ ವ್ರತ ಸಮಾಪ್ತವಾಗುವತನಕ ಹಾಲಿನಿಂದ ಅಭಿಷೇಕ ಮಾಡಿ ಪ್ರತಿದಿನವೂ ಭಗವಂತನನ್ನು ಪೂಜಿಸಬೇಕು. ॥ ೪೪-೪೫ ॥

ಭಗವಂತನ ಪೂಜೆಯಲ್ಲಿ ಆದರ ಬುದ್ಧಿಯನ್ನಿರಿಸುತ್ತಾ ಕೇವಲ ಪಯೋವ್ರತಿಯಾಗಿದ್ದು ಈ ವ್ರತವನ್ನು ಮಾಡಬೇಕು. ಹಿಂದಿನಂತೆಯೇ ಪ್ರತಿದಿನವೂ ಹೋಮ ಮತ್ತು ಬ್ರಾಹ್ಮಣ ಭೋಜನವನ್ನು ಮಾಡಿಸಬೇಕು. ॥ ೪೬ ॥ ಹೀಗೆ ಪಯೋವ್ರತಿಯಾಗಿದ್ದು ಹನ್ನೆರಡು ದಿನಗಳವರೆಗೆ ಪ್ರತಿದಿನವೂ ಭಗವಂತನ ಆರಾಧನೆ, ಹೋಮ, ಪೂಜೆ, ಬ್ರಾಹ್ಮಣಭೋಜನ ಮಾಡಿಸುತ್ತಾ ಇರಬೇಕು. ॥ ೪೭ ॥

ಫಾಲ್ಗುಣ ಶುದ್ಧ ಪ್ರತಿಪದೆಯಿಂದ ಹಿಡಿದು ತ್ರಯೋದಶಿವರೆಗೆ ಬ್ರಹ್ಮಚರ್ಯದಿಂದ ಇದ್ದು ನೆಲದ ಮೇಲೆ ಮಲಗಬೇಕು. ಮೂರು ಹೊತ್ತು ಸ್ನಾನಮಾಡಬೇಕು. ॥ ೪೮ ॥ ಸುಳ್ಳು ಹೇಳಬಾರದು. ಪಾಪಿಗಳೊಡನೆ ಮಾತನಾಡಬಾರದು. ಕೆಟ್ಟಮಾತುಗಳನ್ನು ಆಡಬಾರದು. ಎಲ್ಲ ರೀತಿಯ ಭೋಗಗಳನ್ನು ತ್ಯಜಿಸಬೇಕು. ಯಾವುದೇ ಪ್ರಾಣಿಗಳಿಗೆ ಹಿಂಸೆ ಮಾಡಬಾರದು. ಭಗವಂತನ ಆರಾಧನೆಯಲ್ಲೇ ತೊಡಗಿರಬೇಕು. ॥ ೪೯ ॥ ತ್ರಯೋದಶಿಯ ದಿನ ಪೂಜಾವಿಧಿ-ವಿಧಾನಗಳನ್ನು ಬಲ್ಲ ಬ್ರಾಹ್ಮಣರ ಮೂಲಕ ಶಾಸ್ತ್ರೋಕ್ತ ವಿಧಿಯಿಂದ ಭಗವಾನ್ ಮಹಾವಿಷ್ಣುವಿಗೆ ಪಂಚಾಮೃತ ಅಭಿಷೇಕವನ್ನು ಮಾಡಿಸಬೇಕು. ॥ ೫೦ ॥ ಅಂದು ವಿತ್ತಶಾಠ್ಯಮಾಡದೆ (ಜಿಪುಣತನವನ್ನು ಬಿಟ್ಟು) ಭಗವಂತನ ಮಹಾಪೂಜೆಯನ್ನು ಮಾಡಬೇಕು. ಹಾಲಿನಲ್ಲಿ ಬೇಯಿಸಿದ ಪಾಯಸವನ್ನು ಮಹಾ

ಪೂಜಾಂ ಚ ಮಹತೀಂ ಕುರ್ಯಾದ್ವಿತ್ತಶಾಠ್ಯವಿವರ್ಜಿತಃ ।
ಚರುಂ ನಿರೂಪ್ಯ ಪಯಸಿ ಶಿಪಿವಿಷ್ಟಾಯ ವಿಷ್ಣವೇ ॥ ೫೧ ॥

ಶೃತೇನ ತೇನ ಪುರುಷಂ ಯಜೇತ ಸುಸಮಾಹಿತಃ ।
ನೈವೇದ್ಯಂ ಚಾತಿಗುಣವದ್ದದ್ಯಾತ್ಪುರುಷತುಷ್ಟಿದಮ್ ॥ ೫೨ ॥

ಆಚಾರ್ಯಂ ಜ್ಞಾನಸಂಪನ್ನಂ ವಸ್ತ್ರಾಭರಣಧೇನುಭಿಃ ।
ತೋಷಯೇದೃತ್ವಿಜಶ್ಚೈವ ತದ್ವಿದ್ಧ್ಯಾರಾಧನಂ ಹರೇಃ ॥ ೫೩ ॥

ಭೋಜಯೇತ್ತಾನ್ಗುಣವತಾ ಸದನ್ನೇನ ಶುಚಿಸ್ಮಿತೇ ।
ಅನ್ಯಾಂಶ್ಚ ಬ್ರಾಹ್ಮಣಾನ್ ಶಕ್ತ್ಯಾ ಯೇ ಚ ತತ್ರ ಸಮಾಗತಾಃ ॥ ೫೪ ॥

ದಕ್ಷಿಣಾಂ ಗುರವೇ ದದ್ಯಾದೃತ್ವಿಗ್ಭ್ಯಶ್ಚ ಯಥಾರ್ಹತಃ ।
ಅನ್ನಾದ್ಯೇನಾಶ್ವಪಾಕಾಂಶ್ಚ ಪ್ರೀಣಯೇತ್ಸಮುಪಾಗತಾನ್ ॥ ೫೫ ॥

ಭುಕ್ತವತ್ಸು ಚ ಸರ್ವೇಷು ದೀನಾಂಧಕೃಪಣೇಷು ಚ ।
ವಿಷ್ಣೋಸ್ತತ್ಪ್ರೀಣನಂ ವಿದ್ವಾನ್ಭುಂಜೀತ ಸಹ ಬಂಧುಭಿಃ ॥ ೫೬ ॥

ನೃತ್ಯವಾದಿತ್ರಗೀತೈಶ್ಚ ಸ್ತುತಿಭಿಃ ಸ್ವಸ್ತಿವಾಚಕೈಃ ।
ಕಾರಯೇತ್ತತ್ಕಥಾಭಿಶ್ಚ ಪೂಜಾಂ ಭಗವತೋಽನ್ವಹಮ್ ॥ ೫೭ ॥

ಏತತ್ಪಯೋವ್ರತಂ ನಾಮ ಪುರುಷಾರಾಧನಂ ಪರಮ್ ।
ಪಿತಾಮಹೇನಾಭಿಹಿತಂ ಮಯಾ ತೇ ಸಮುದಾಹೃತಮ್ ॥ ೫೮ ॥

ತ್ವಂ ಚಾನೇನ ಮಹಾಭಾಗೇ ಸಮ್ಯಕ್ಚೀರ್ಣೇನ ಕೇಶವಮ್ ।
ಆತ್ಮನಾ ಶುದ್ಧಭಾವೇನ ನಿಯತಾತ್ಮಾ ಭಜಾವ್ಯಯಮ್ ॥ ೫೯ ॥

ಅಯಂ ವೈ ಸರ್ವಯಜ್ಞಾಖ್ಯಃ ಸರ್ವವ್ರತಮಿತಿ ಸ್ಮೃತಮ್ ।
ತಪಃಸಾರಮಿದಂ ಭದ್ರೇ ದಾನಂ ಚೇಶ್ವರತರ್ಪಣಮ್ ॥ ೬೦ ॥

ತ ಏವ ನಿಯಮಾಃ ಸಾಕ್ಷಾತ್ತ ಏವ ಚ ಯಮೋತ್ತಮಾಃ ।
ತಪೋ ದಾನಂ ವ್ರತಂ ಯಜ್ಞೋ ಯೇನ ತುಷ್ಯತ್ಯಧೋಕ್ಷಜಃ ॥ ೬೧ ॥

ತಸ್ಮಾದೇತದ್ವ್ರತಂ ಭದ್ರೇ ಪ್ರಯತಾ ಶ್ರದ್ಧಯಾ ಚರ ।
ಭಗವಾನ್ಪರಿತುಷ್ಟಸ್ತೇ ವರಾನಾಶು ವಿಧಾಸ್ಯತಿ ॥ ೬೨ ॥

ವಿಷ್ಣುವಿಗೆ ಅರ್ಪಿಸಬೇಕು. ॥ ೫೧ ॥ ಅತ್ಯಂತ ಏಕಾಗ್ರವಾದ ಮನಸ್ಸಿನಿಂದ ಪುರುಷಸೂಕ್ತಮಂತ್ರಗಳಿಂದ ಹಾಲಿನಿಂದ ಬೇಯಿಸಿದ ಪಾಯಸವನ್ನು ಅಗ್ನಿಯಲ್ಲಿ ಹೋಮಮಾಡಬೇಕು. ಬಳಿಕ ಶ್ರೀಭಗವಂತನಿಗೆ ತೃಪ್ತಿಯಾಗುವ ರೀತಿಯಲ್ಲಿ ಷಡ್ರಸೋಪೇತವಾದ ನೈವೇದ್ಯವನ್ನು ಅರ್ಪಿಸಬೇಕು. ॥ ೫೨ ॥ ಇದಾದ ಬಳಿಕ ಜ್ಞಾನ ಸಂಪನ್ನ ಆಚಾರ್ಯ ಮತ್ತು ಋತ್ವಿಜರಿಗೆ ವಸ್ತ್ರ, ಆಭೂಷಣ, ಗೋವು ಮುಂತಾದವುಗಳನ್ನು ಕೊಟ್ಟು ಸಂತುಷ್ಟಪಡಿಸಬೇಕು. ಬ್ರಾಹ್ಮಣರನ್ನು ಪೂಜಿಸಿ ತೃಪ್ತಿಪಡಿಸುವುದು ಶ್ರೀಹರಿಯ ಆರಾಧನೆಯೇ ಆಗಿದೆ. ॥ ೫೩ ॥ ಪ್ರಿಯೇ! ರುಚಿ-ಶುಚಿಯಾದ ಭಕ್ಷ್ಯ-ಭೋಜ್ಯಾದಿಗಳಿಂದ ಕೂಡಿದ ಮೃಷ್ಟಾನ್ನದಿಂದ ಆಚಾರ್ಯ-ಋತ್ವಿಜರಿಗೂ, ಪೂಜಾ ಸಮಾರಂಭಕ್ಕೆ ಆಗಮಿಸಿರುವ ಇತರ ಬ್ರಾಹ್ಮಣರಿಗೂ ಶಕ್ತ್ಯಾನುಸಾರವಾಗಿ ಭೋಜನಮಾಡಿಸಬೇಕು. ॥ ೫೪ ॥ ಗುರುವಿಗೂ, ಋತ್ವಿಜರಿಗೂ ಯಥಾಯೋಗ್ಯವಾದ ದಕ್ಷಿಣೆಯನ್ನು ಕೊಡಬೇಕು. ಪೂಜೆಯ ಸಮಯಕ್ಕೆ ಆಗಮಿಸಿದ ಚಂಡಾಲರೇ ಮೊದಲಾದವರನ್ನೂ ಅನ್ನ-ವಸ್ತ್ರಗಳಿಂದ ತೃಪ್ತಿಗೊಳಿಸಬೇಕು. ದೀನರು, ಬಡವರು, ಕುಂಟರು, ಕುರುಡರು, ಕೈಲಾಗದವರೂ – ಇವರೆಲ್ಲರೂ ಊಟಮಾಡಿದನಂತರ ಮಹಾವಿಷ್ಣುವು ಸುಪ್ರೀತನಾದನೆಂದು ಭಾವಿಸಿ, ತಮ್ಮ ಬಂಧು-ಬಳಗದವರೊಡನೆ ಕೂತು ಶಿಷ್ಟಾನ್ನವನ್ನು ಊಟಮಾಡಬೇಕು. ॥ ೫೫-೫೬ ॥ ಪಾಡ್ಯದಿಂದ ಹಿಡಿದು ತ್ರಯೋದಶಿವರೆವಿಗೂ ವಿರಾಮಕಾಲದಲ್ಲಿ ಪ್ರತಿದಿನವೂ ಗೀತ-ನೃತ್ಯ, ಸಂಗೀತ, ಸ್ವಸ್ತಿವಾಚನ, ಹರಿಕಥೆಗಳಿಂದ ಭಗವಂತನ ಆರಾಧನೆಯನ್ನೂ, ಸೇವೆಯನ್ನೂ ಮಾಡಬೇಕು. ॥ ೫೭ ॥

ಪ್ರಿಯಳೇ! ಇದು ಭಗವಂತನ ಶ್ರೇಷ್ಠವಾದ ಆರಾಧನೆಯಾಗಿದೆ. ಬ್ರಹ್ಮದೇವರು ನನಗೆ ಉಪದೇಶಿಸಿದ ಈ ಪಯೋವ್ರತವನ್ನು ನಿನಗೆ ಯಥಾವತ್ತಾಗಿ ತಿಳಿಸಿರುವೆನು. ॥ ೫೮ ॥ ದೇವಿ! ಭಾಗ್ಯವತಿಯೇ! ನಿನ್ನ ಇಂದ್ರಿಯಗಳನ್ನು ವಶಪಡಿಸಿಕೊಂಡು, ಶುದ್ಧವಾದ ಭಾವ-ಶ್ರದ್ಧಾಪೂರ್ಣ ಚಿತ್ತದಿಂದ ನೀನೂ ಈ ವ್ರತವನ್ನು ಚೆನ್ನಾಗಿ ಅನುಷ್ಠಾನ ಮಾಡು ಹಾಗೂ ಇದರ ಮೂಲಕ ಅವಿನಾಶಿಯಾದ ಭಗವಂತನನ್ನು ಆರಾಧಿಸು. ॥ ೫೯ ॥ ಕಲ್ಯಾಣೀ! ಈ ವ್ರತವು ಭಗವಂತನನ್ನು ಸಂತುಷ್ಟಗೊಳಿಸುವಂತಹುದು. ಆದಕ್ಕಾಗಿ ಇದನ್ನು 'ಸರ್ವಯಜ್ಞ', 'ಸರ್ವವ್ರತ' ಎಂದು ಹೇಳುತ್ತಾರೆ. ಇದು ಸಮಸ್ತ ತಪಸ್ಸುಗಳ ಸಾರವೂ, ಮುಖ್ಯವಾದ ದಾನವೂ ಆಗಿದೆ. ॥ ೬೦ ॥ ವಾಸ್ತವವಾಗಿ ಭಗವಂತನು ಪ್ರಸನ್ನನಾಗುವಂತಹ ನಿಯಮ, ಯಮ, ತಪಸ್ಸು, ದಾನ, ವ್ರತ, ಯಜ್ಞ ಇವುಗಳೇ ಶ್ರೇಷ್ಠವಾದವುಗಳು. ॥೬೧॥ ಆದಕ್ಕಾಗಿ ಅದಿತಿದೇವಿಯೇ! ಸಂಯಮದಿಂದಲೂ, ಶ್ರದ್ಧೆಯಿಂದಲೂ ನೀನು ಈ ವ್ರತದ ಅನುಷ್ಠಾನವನ್ನು ಆಚರಿಸು. ಭಗವಂತನು ಶೀಘ್ರವಾಗಿಯೇ ನಿನಗೆ ಪ್ರಸನ್ನನಾಗುವನು ಮತ್ತು ನಿನ್ನ ಅಭಿಲಾಷೆಯನ್ನು ಪೂರ್ಣಗೊಳಿಸುವನು.॥೬೨॥

ಹದಿನಾರನೆಯ ಅಧ್ಯಾಯವು ಮುಗಿಯಿತು. ॥ ೧೬ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಅಷ್ಟಮ ಸ್ಕಂಧೇ
ಅದಿತಿಪಯೋವ್ರತಕಥನಂ ನಾಮ ಷೋಡಶೋಽಧ್ಯಾಯಃ ॥ ೧೬ ॥

ಹದಿನೇಳನೆಯ ಅಧ್ಯಾಯ

ಭಗವಂತನು ಪ್ರತ್ಯಕ್ಷನಾಗಿ ಅದಿತಿಗೆ ವರವನ್ನು ಕೊಡುವುದು

ಶ್ರೀಶುಕ ಉವಾಚ

ಇತ್ಯುಕ್ತಾ ಸಾದಿತೀ ರಾಜನ್ಸ್ವಭರ್ತ್ರಾ ಕಶ್ಯಪೇನ ವೈ ।
ಅನ್ವತಿಷ್ಠದ್ವ್ರತಮಿದಂ ದ್ವಾದಶಾಹಮತಂದ್ರಿತಾ ॥ ೧ ॥

ಚಿಂತಯಂತ್ಯೇಕಯಾ ಬುದ್ಧ್ಯಾ ಮಹಾಪುರುಷಮೀಶ್ವರಮ್ ।
ಪ್ರಗೃಹ್ಯೇಂದ್ರಿಯದುಷ್ಟಾಶ್ವಾನ್ಮನಸಾ ಬುದ್ಧಿಸಾರಥಿಃ ॥ ೨ ॥

ಮನಶ್ಚೈಕಾಗ್ರಯಾ ಬುದ್ಧ್ಯಾ ಭಗವತ್ಯಖಿಲಾತ್ಮನಿ ।
ವಾಸುದೇವೇ ಸಮಾಧಾಯ ಚಚಾರ ಹ ಪಯೋವ್ರತಮ್ ॥ ೩ ॥

ತಸ್ಯಾಃ ಪ್ರಾದುರಭೂತ್ತಾತ ಭಗವಾನಾದಿಪೂರುಷಃ ।
ಪೀತವಾಸಾಶ್ಚತುರ್ಬಾಹುಃ ಶಂಖಚಕ್ರಗದಾಧರಃ ॥ ೪ ॥

ತಂ ನೇತ್ರಗೋಚರಂ ವೀಕ್ಷ್ಯ ಸಹಸೋತ್ಥಾಯ ಸಾದರಮ್ ।
ನನಾಮ ಭುವಿ ಕಾಯೇನ ದಂಡವತ್ಪ್ರೀತಿವಿಹ್ವಲಾ ॥ ೫ ॥

ಸೋತ್ಥಾಯ ಬದ್ಧಾಂಜಲಿರೀಡಿತುಂ ಸ್ಥಿತಾ
ನೋತ್ಸೇಹ ಆನಂದಜಲಾಕುಲೇಕ್ಷಣಾ ।
ಬಭೂವ ತೂಷ್ಣೀಂ ಪುಲಕಾಕುಲಾಕೃತಿ-
ಸ್ತದ್ದರ್ಶನಾತ್ಯುತ್ಸವಗಾತ್ರವೇಪಥುಃ ॥ ೬ ॥

ಪ್ರೀತ್ಯಾ ಶನೈರ್ಗದ್ಗದಯಾ ಗಿರಾ ಹರಿಂ
ತುಷ್ಟಾವ ಸಾ ದೇವ್ಯದಿತಿಃ ಕುರೂದ್ವಹ ।
ಉದ್ವೀಕ್ಷತೀ ಸಾ ಪಿಬತೀವ ಚಕ್ಷುಷಾ
ರಮಾಪತಿಂ ಯಜ್ಞಪತಿಂ ಜಗತ್ಪತಿಮ್ ॥ ೭ ॥

ಅದಿತಿರುವಾಚ

ಯಜ್ಞೇಶ ಯಜ್ಞಪುರುಷಾಚ್ಯುತ ತೀರ್ಥಪಾದ
ತೀರ್ಥಶ್ರವಃ ಶ್ರವಣಮಂಗಲನಾಮಧೇಯ ।
ಆಪನ್ನಲೋಕವೃಜಿನೋಪಶಮೋದಯಾದ್ಯ
ಶಂ ನಃ ಕೃಧೀಶ ಭಗವನ್ನಸಿ ದೀನನಾಥಃ ॥ ೮ ॥

ವಿಶ್ವಾಯ ವಿಶ್ವಭವನಸ್ಥಿತಿಸಂಯಮಾಯ
ಸ್ವೈರಂ ಗೃಹೀತಪುರುಶಕ್ತಿಗುಣಾಯ ಭೂಮ್ನೇ ।
ಸ್ವಸ್ಥಾಯ ಶಶ್ವದುಪಬೃಂಹಿತಪೂರ್ಣಬೋಧ-
ವ್ಯಾಪಾದಿತಾತ್ಮತಮಸೇ ಹರಯೇ ನಮಸ್ತೇ ॥ ೯ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಎಲೈ ಪರೀಕ್ಷಿತನೇ! ತನ್ನ ಪತಿಯಾದ ಮಹರ್ಷಿ ಕಶ್ಯಪರ ಉಪದೇಶವನ್ನು ಪಡೆದ ಅದಿತಿದೇವಿಯು ಬಹಳ ಎಚ್ಚರಿಕೆಯಿಂದ ಹನ್ನೆರಡು ದಿನಗಳವರೆಗೆ ಪಯೋವ್ರತವನ್ನು ಆಚರಿಸಿದಳು. ॥ ೧ ॥ ಆಕೆಯು ಬುದ್ಧಿಯನ್ನು ಸಾರಥಿಯನ್ನಾಗಿಸಿಕೊಂಡು, ಮನಸ್ಸೆಂಬ ಲಗಾಮಿನಿಂದ ಇಂದ್ರಿಯ ರೂಪವಾದ ದುಷ್ಟಕುದುರೆಗಳನ್ನು ತನ್ನ ವಶಪಡಿಸಿಕೊಂಡು, ಏಕಾಗ್ರಬುದ್ಧಿಯಿಂದ ಪುರುಷೋತ್ತಮನಾದ ಭಗವಂತನನ್ನು ಧ್ಯಾನಿಸುತ್ತಿದ್ದಳು. ॥ ೨ ॥ ಅದಿತಿಯು ಏಕಾಗ್ರವಾದ ಬುದ್ಧಿಯಿಂದ ತನ್ನ ಮನಸ್ಸನ್ನು ಸರ್ವಾತ್ಮನಾದ ಭಗವಾನ್ ವಾಸುದೇವನಲ್ಲಿ ಸಂಪೂರ್ಣವಾಗಿ ತೊಡಗಿಸಿ ಪಯೋವ್ರತದ ಅನುಷ್ಠಾನವನ್ನು ಮಾಡಿದಳು. ॥ ೩ ॥ ಆಗ ಭಗವಾನ್ ಪುರುಷೋತ್ತಮನು ಅವಳ ಮುಂದೆ ಪ್ರಕಟನಾದನು. ಪರೀಕ್ಷಿತನೇ! ಆ ಭಗವಂತನು ಪೀತಾಂಬರವನ್ನು ಉಟ್ಟಿದ್ದನು. ಚತುರ್ಭುಜನಾಗಿದ್ದು, ಶಂಖ, ಚಕ್ರ, ಗದೆಗಳನ್ನು ಧರಿಸಿದ್ದನು. ॥ ೪ ॥ ತನ್ನ ಕಣ್ಮುಂದೆ ನಿಂತಿದ್ದ ಭಗವಂತನನ್ನು ಸಾಕ್ಷಾತ್ತಾಗಿ ನೋಡಿದ ಅದಿತಿದೇವಿಯು ಒಡನೆಯೇ ಆದರದಿಂದ ಎದ್ದು ನಿಂತು, ಪ್ರೇಮಪರವಶಳಾಗಿ ಭೂಮಿಯ ಮೇಲೆ ದೀರ್ಘದಂಡ ನಮಸ್ಕಾರವನ್ನು ಮಾಡಿದಳು. ॥ ೫ ॥ ಮತ್ತೆ ಮೇಲೆದ್ದು ಕೈಜೋಡಿಸಿಕೊಂಡು ಭಗವಂತನನ್ನು ಸ್ತುತಿಸಲು ಪ್ರಯತ್ನಿಸಿದಳು. ಆದರೆ ಕಣ್ಣುಗಳಲ್ಲಿ ಆನಂದ ಬಾಷ್ಪಗಳು ಉಕ್ಕಿಹರಿಯುತ್ತಿದ್ದುದರಿಂದ, ಕಂಠ ತುಂಬಿಬಂತು. ಮಾತನಾಡಲಾಗಲಿಲ್ಲ. ಶರೀರವಿಡೀ ಪುಳಕಿತವಾಗಿತ್ತು. ದರ್ಶನದ ಆನಂದೋಲ್ಲಾಸದಿಂದ ಅವಳ ಶರೀರವು ನಡುಗುತ್ತಿತ್ತು. ಸ್ತುತಿಸಲಾರದೆ ಅವಳು ಸುಮ್ಮನೆ ನಿಂತಿದ್ದಳು. ॥ ೬ ॥ ಪರೀಕ್ಷಿತನೇ! ಲಕ್ಷ್ಮೀಪತಿಯೂ, ಜಗತ್ಪತಿಯೂ, ಯಜ್ಞಪತಿಯೂ ಆದ ಭಗವಂತನನ್ನು ಕಣ್ಣುಗಳಿಂದಲೇ ಕುಡಿದುಬಿಡುವಳೋ ಎಂಬಂತೆ ಅದಿತಿಯು ತನ್ನ ಕಣ್ಣುಗಳಿಂದ ಪ್ರೇಮಪೂರ್ಣವಾಗಿ ನೋಡುತ್ತಿದ್ದಳು. ಅನಂತರ ಪ್ರೀತಿಯಿಂದ ಗದ್ಗದವಾದ ಮಾತುಗಳಿಂದ ಮೆಲ್ಲ-ಮೆಲ್ಲನೆ ಶ್ರೀಭಗವಂತನನ್ನು ಸ್ತುತಿಸಿದಳು. ॥ ೭ ॥

ಅದಿತಿದೇವಿಯು ಹೇಳಿದಳು – ೮. ಯಜ್ಞೇಶ್ವರನೇ! ಯಜ್ಞಪುರುಷನೇ! ಅಚ್ಯುತನೇ! ತೀರ್ಥಶ್ರೇಷ್ಠವಾದ ಗಂಗಾನದಿಯನ್ನು ಪಾದಗಳಲ್ಲಿ ಧರಿಸಿರುವವನೇ! ಪುಣ್ಯಕೀರ್ತಿಯೇ! ಶ್ರವಣಮಾತ್ರದಿಂದಲೇ ಮಂಗಳವನ್ನುಂಟು ಮಾಡುವ ನಾಮಾವಳಿಗಳುಳ್ಳವನೇ! ಶರಣಾಗತರ ಪಾಪಗಳನ್ನು ಹೋಗಲಾಡಿಸುವುದಕ್ಕಾಗಿಯೇ ಅವತರಿಸಿರುವವನೇ! ಆದಿಪುರುಷನೇ! ನೀನು ದೀನರಿಗೆ ನಾಥನಾಗಿರುವೆ. ನೀನು ನಮಗೆ ಮಂಗಳವನ್ನುಂಟು ಮಾಡು. ॥ ೮ ॥ ನೀನು ವಿಶ್ವದ ಉತ್ಪತ್ತಿ, ಸ್ಥಿತಿ ಮತ್ತು ಪ್ರಳಯಗಳಿಗೆ ಕಾರಣನಾಗಿರುವೆ. ವಿಶ್ವರೂಪನೂ ನೀನೇ ಆಗಿರುವೆ. ಅನಂತನಾಗಿದ್ದರೂ ಸ್ವೇಚ್ಛೆಯಿಂದ ನೀನು ಅನೇಕ ಶಕ್ತಿಗಳನ್ನು ಮತ್ತು ಗುಣಗಳನ್ನು ಸ್ವೀಕರಿಸುತ್ತೀಯೆ. ನೀನು ಸದಾ ನಿನ್ನ ಸ್ವರೂಪದಲ್ಲೇ

ಆಯುಃ ಪರಂ ವಪುರಭೀಷ್ಟಮತುಲ್ಯ ಲಕ್ಷ್ಮೀ-
ದ್ಯೌರ್ಭೂರಸಾಃ ಸಕಲಯೋಗಗುಣಾಸ್ತ್ರಿವರ್ಗಃ ।
ಜ್ಞಾನಂ ಚ ಕೇವಲಮನಂತ ಭವಂತಿ ತುಷ್ಟಾ-
ತ್ತ್ವತ್ತೋ ನೃಣಾಂ ಕಿಮು ಸಪತ್ನಜಯಾದಿರಾಶೀಃ ॥ ೧೦ ॥

ಶ್ರೀಶುಕ ಉವಾಚ

ಅದಿತ್ಯೈವಂ ಸ್ತುತೋ ರಾಜನ್ಭಗವಾನ್ಪುಷ್ಕರೇಕ್ಷಣಃ ।
ಕ್ಷೇತ್ರಜ್ಞಃ ಸರ್ವಭೂತಾನಾಮಿತಿ ಹೋವಾಚ ಭಾರತ ॥ ೧೧ ॥

ಶ್ರೀಭಗವಾನುವಾಚ

ದೇವಮಾತರ್ಭವತ್ಯಾ ಮೇ ವಿಜ್ಞಾತಂ ಚಿರಕಾಂಕ್ಷಿತಮ್ ।
ಯತ್ಸಪತ್ನೈರ್ಹೃತಶ್ರೀಣಾಂ ಚ್ಯಾವಿತಾನಾಂ ಸ್ವಧಾಮತಃ ॥ ೧೨ ॥

ತಾನ್ವಿನಿರ್ಜಿತ್ಯ ಸಮರೇ ದುರ್ಮದಾನಸುರರ್ಷಭಾನ್ ।
ಪ್ರತಿಲಬ್ಧಜಯಶ್ರೀಭಿಃ ಪುತ್ರೈರಿಚ್ಛಸ್ಯುಪಾಸಿತುಮ್ ॥ ೧೩ ॥

ಇಂದ್ರಜ್ಯೇಷ್ಠೈಃ ಸ್ವತನಯೈರ್ಹತಾನಾಂ ಯುಧಿ ವಿದ್ವಿಷಾಮ್ ।
ಸ್ತ್ರಿಯೋ ರುದಂತೀರಾಸಾದ್ಯ ದ್ರಷ್ಟುಮಿಚ್ಛಸಿ ದುಃಖಿತಾಃ ॥ ೧೪ ॥

ಆತ್ಮಜಾನ್ಸುಸಮೃದ್ಧಾಂಸ್ತ್ವಂ ಪ್ರತ್ಯಾಹೃತಯಶಃಶ್ರಿಯಃ ।
ನಾಕಪೃಷ್ಠಮಧಿಷ್ಠಾಯ ಕ್ರೀಡತೋ ದ್ರಷ್ಟುಮಿಚ್ಛಸಿ ॥ ೧೫ ॥

ಪ್ರಾಯೋಽಧುನಾ ತೇಽಸುರಯೂಥನಾಥಾ
ಅಪಾರಣೀಯಾ ಇತಿ ದೇವಿ ಮೇ ಮತಿಃ ।
ಯತ್ತೇಽನುಕೂಲೇಶ್ವರವಿಪ್ರಗುಪ್ತಾ
ನ ವಿಕ್ರಮಸ್ತತ್ರ ಸುಖಂ ದದಾತಿ ॥ ೧೬ ॥

ಅಥಾಪ್ಯುಪಾಯೋ ಮಮ ದೇವಿ ಚಿಂತ್ಯಃ
ಸಂತೋಷಿತಸ್ಯ ವ್ರತಚರ್ಯಯಾ ತೇ ।
ಮಮಾರ್ಚನಂ ನಾರ್ಹತಿ ಗಂತುಮನ್ಯಥಾ
ಶ್ರದ್ಧಾನುರೂಪಂ ಫಲಹೇತುಕತ್ವಾತ್ ॥ ೧೭ ॥

ತ್ವಯಾರ್ಚಿತಶ್ಚಾಹಮಪತ್ಯಗುಪ್ತಯೇ
ಪಯೋವ್ರತೇನಾನುಗುಣಂ ಸಮೀಡಿತಃ ।
ಸ್ವಾಂಶೇನ ಪುತ್ರತ್ವಮುಪೇತ್ಯ ತೇ ಸುತಾನ್
ಗೋಪ್ತಾಸ್ಮಿ ಮಾರೀಚತಪಸ್ಯಧಿಷ್ಠಿತಃ ॥ ೧೮ ॥

ಉಪಧಾವ ಪತಿಂ ಭದ್ರೇ ಪ್ರಜಾಪತಿಮಕಲ್ಮಷಮ್ ।
ಮಾಂ ಚ ಭಾವಯತೀ ಪತ್ಯಾವೇವಂರೂಪಮವಸ್ಥಿತಮ್ ॥ ೧೯ ॥

ನೆಲೆಸಿರುತ್ತೀಯೆ. ನಿತ್ಯ-ನಿರಂತರ ಬೆಳೆಯುತ್ತಿರುವ ಪೂರ್ಣ ಬೋಧದಿಂದ ನೀನು ಹೃದಯದ ಅಂಧಕಾರವನ್ನು ನಾಶಮಾಡಿ ಬಿಡುತ್ತೀಯೆ. ಭಗವಂತಾ ! ನಾನು ನಿನಗೆ ನಮಸ್ಕರಿಸುತ್ತೇನೆ. ॥ ೯ ॥ ಪ್ರಭೋ ! ಅನಂತನೇ ! ನೀನು ಸಂತುಷ್ಟನಾದಲ್ಲಿ ದೀರ್ಘಾಯುಷ್ಯವೂ, ಇಷ್ಟವಾದ ಶರೀರವೂ, ಅಸದೃಶವಾದ ಐಶ್ವರ್ಯವೂ, ಸ್ವರ್ಗ, ಮರ್ತ್ಯ, ಪಾತಾಳಲೋಕಗಳು, ಯೋಗದ ಸಮಸ್ತ ಸಿದ್ಧಿಗಳೂ, ಧರ್ಮಾರ್ಥಕಾಮಗಳೂ, ಇವೆಲ್ಲಕ್ಕಿಂತಲೂ ಮಿಗಿಲಾದ ಅಪರೋಕ್ಷ ಜ್ಞಾನವೂ ಮನುಷ್ಯರಿಗೆ ಪ್ರಾಪ್ತವಾಗುತ್ತದೆ. ಹೀಗಿರುವಾಗ ಶತ್ರುಜಯವೇ ಮೊದಲಾದ ಸಣ್ಣ-ಪುಟ್ಟ ಕೋರಿಕೆಗಳ ವಿಷಯದಲ್ಲಿ ಹೇಳುವುದೇನಿದೆ ? ॥ ೧೦ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿದ್ರಾಜನೇ ! ಅದಿತಿಯು ಕಮಲನಯನ ಭಗವಂತನನ್ನು ಹೀಗೆ ಸ್ತುತಿಸಿದಾಗ ಸಮಸ್ತ ಪ್ರಾಣಿಗಳ ಹೃದಯದಲ್ಲಿ ಅಂತರ್ಯಾಮಿ ಯಾಗಿರುವ ಭಗವಂತನು ಇಂತೆಂದನು – ॥ ೧೧ ॥

ಶ್ರೀಭಗವಂತನು ಹೇಳಿದನು – ಎಲೈ ದೇವಮಾತೆಯಾದ ಅದಿತಿಯೇ ! ನಿನ್ನ ಮನಸ್ಸಿನಲ್ಲಿ ಬಹಳ ಕಾಲದಿಂದಿರುವ ಆಶಯವನ್ನು ನಾನು ಬಲ್ಲೆನು. ಶತ್ರುಗಳು ನಿನ್ನ ಮಕ್ಕಳ ಸಂಪತ್ತನ್ನು ಅಪಹರಿಸುವುದಲ್ಲದೆ ಅವರನ್ನು ಅವರ ಲೋಕ(ಸ್ವರ್ಗ)ದಿಂದ ಓಡಿಸಿಬಿಟ್ಟಿದ್ದಾರೆ. ॥ ೧೨ ॥ ಯುದ್ಧದಲ್ಲಿ ನಿನ್ನ ಮಕ್ಕಳು ಆ ಕೊಬ್ಬಿರುವ ಅಸುರರನ್ನು, ಬಲಿಯನ್ನು ಗೆದ್ದು ವಿಜಯಲಕ್ಷ್ಮಿಯನ್ನು ಪಡೆದುಕೊಂಡಾಗ ನೀನು ಅವರೊಂದಿಗೆ ಭಗವಂತನ ಉಪಾಸನೆ ಮಾಡಬೇಕೆಂದು ಬಯಸುತ್ತಿರುವೆ. ॥ ೧೩ ॥ ಇಂದ್ರನೇ ಮೊದಲಾದ ನಿನ್ನ ಪುತ್ರರು ಶತ್ರುಗಳನ್ನು ಕೊಂದುಹಾಕಿದಾಗ ನೀನು ಆ ದೈತ್ಯಸ್ತ್ರೀಯರು ದುಃಖದಿಂದ ಅಳುವುದನ್ನು ಕಣ್ಣಾರೆ ಕಾಣಬೇಕೆಂಬುದೂ ನಿನ್ನ ಬಯಕೆಯಾಗಿದೆ. ॥ ೧೪ ॥ ಅದಿತಿಯೇ ! ಯುದ್ಧದಲ್ಲಿ ದೈತ್ಯರನ್ನು ಗೆದ್ದು ಕಳೆದುಹೋಗಿದ್ದ ಕೀರ್ತಿ, ಐಶ್ವರ್ಯವನ್ನು ಪುನಃ ಪಡೆದುಕೊಂಡು ಸಕಲೈಶ್ವರ್ಯ ಸಂಪನ್ನರಾಗಿ ಸ್ವರ್ಗಲೋಕದಲ್ಲಿ ಪುನಃ ನೆಲೆಸಿ ಹಿಂದಿನಂತೆ ವಿಹರಿಸಬೇಕೆಂಬುದನ್ನೂ ಬಯಸುತ್ತಿರುವೆಯಲ್ಲ ! ॥ ೧೫ ॥ ಆದರೆ ದೇವೀ ! ಅಸುರ ಸೇನಾಪತಿಗಳನ್ನು ಈ ಸಮಯದಲ್ಲಿ ಜಯಿಸಲು ಸಾಧ್ಯವಾಗದೆಂದು ನನಗೆ ಅನಿಸುತ್ತದೆ. ಏಕೆಂದರೆ, ಈಶ್ವರನು ಮತ್ತು ಬ್ರಾಹ್ಮಣರು ಈಗ ಅವರಿಗೆ ಅನುಕೂಲರಾಗಿದ್ದಾರೆ. ಈಗಲಂತೂ ಅವರೊಂದಿಗೆ ಯುದ್ಧಹೂಡಿದರೆ ಅವರಿಂದ ಸುಖ ಸಿಗುವ ಆಸೆ ಇಲ್ಲ. ॥ ೧೬ ॥ ಹೀಗಿದ್ದರೂ ದೇವಿ ! ನಿನ್ನ ಈ ವ್ರತಾನುಷ್ಠಾನದಿಂದ ನಾನು ಬಹಳ ಪ್ರಸನ್ನನಾಗಿರುವೆನು. ಅದಕ್ಕಾಗಿ ಈ ಸಂಬಂಧವಾಗಿ ನನಗೆ ಏನಾದರೂ ಉಪಾಯ ಮಾಡಲೇ ಬೇಕಾಗಿದೆ. ಏಕೆಂದರೆ, ನನ್ನ ಆರಾಧನೆಯು ವ್ಯರ್ಥವಾಗಬಾರದು. ಅದರಿಂದ ಶ್ರದ್ಧೆಗನುಸಾರವಾಗಿ ಫಲವು ಅವಶ್ಯವಾಗಿ ಸಿಗುತ್ತದೆ. ॥ ೧೭ ॥ ನೀನು ನಿನ್ನ ಪುತ್ರರ ರಕ್ಷಣೆಗಾಗಿಯೇ ವಿಧಿವತ್ತಾಗಿ ಪಯೋವ್ರತದಿಂದ ನನ್ನ ಪೂಜೆ-ಸ್ತುತಿ ಮಾಡಿರುವೆ. ಆದ್ದರಿಂದ ನಾನು ಅಂಶರೂಪದಿಂದ ಕಶ್ಯಪರ ತಪಸ್ಸಿನಲ್ಲಿ ನೆಲೆಸಿ ನಿನ್ನ ಪುತ್ರನಾಗಿ ಅವತರಿಸಿ ನಿನ್ನ ಸಂತಾನವನ್ನು ರಕ್ಷಿಸುವೆನು. ॥ ೧೮ ॥ ಕಲ್ಯಾಣೀ ! ನೀನು ನಿನ್ನ ಪತಿಯಾದ ಕಶ್ಯಪರಲ್ಲಿ ನನ್ನನ್ನು ಇದೇ ರೂಪದಿಂದ ನೆಲೆಸಿರುವನೆಂದು ತಿಳಿದು, ಪಾಪರಹಿತರಾದ ಪ್ರಜಾಪತಿಯ ಸೇವೆಯನ್ನು ಮಾಡು. ॥ ೧೯ ॥

ನೈತತ್ಪರಸ್ಮಾ ಆಖ್ಯೇಯಂ ಪೃಷ್ಟಯಾಪಿ ಕಥಂಚನ ।
ಸರ್ವಂ ಸಂಪದ್ಯತೇ ದೇವಿ ದೇವಗುಹ್ಯಂ ಸುಸಂವೃತಮ್ ॥ ೨೦ ॥

ಶ್ರೀಶುಕ ಉವಾಚ

ಏತಾವದುಕ್ತ್ವಾ ಭಗವಾಂಸ್ತತ್ರೈವಾಂತರಧೀಯತ ।
ಅದಿತಿರ್ದುರ್ಲಭಂ ಲಬ್ಧ್ವಾ ಹರೇರ್ಜನ್ಮಾತ್ಮನಿ ಪ್ರಭೋಃ ॥ ೨೧ ॥

ಉಪಾಧಾವತ್ಪತಿಂ ಭಕ್ತ್ಯಾ ಪರಯಾ ಕೃತಕೃತ್ಯವತ್ ।
ಸ ವೈ ಸಮಾಧಿಯೋಗೇನ ಕಶ್ಯಪಸ್ತದಬುಧ್ಯತ ॥ ೨೨ ॥

ಪ್ರವಿಷ್ಟಮಾತ್ಮನಿ ಹರೇರಂಶಂ ಹ್ಯವಿತಥೇಕ್ಷಣಃ ।
ಸೋಽದಿತ್ಯಾಂ ವೀರ್ಯಮಾಧತ್ತ ತಪಸಾ ಚಿರಸಂಭೃತಮ್ ।
ಸಮಾಹಿತಮನಾ ರಾಜನ್ ದಾರುಣ್ಯಗ್ನಿಂ ಯಥಾನಿಲಃ ॥ ೨೩ ॥

ಅದಿತೇರ್ಧಿಷ್ಠಿತಂ ಗರ್ಭಂ ಭಗವಂತಂ ಸನಾತನಮ್ ।
ಹಿರಣ್ಯಗರ್ಭೋ ವಿಜ್ಞಾಯ ಸಮೀಡೇ ಗುಹ್ಯನಾಮಭಿಃ ॥ ೨೪ ॥

ಬ್ರಹ್ಮೋವಾಚ

ಜಯೋರುಗಾಯ ಭಗವನ್ನುರುಕ್ರಮ ನಮೋಸ್ತು ತೇ ।
ನಮೋ ಬ್ರಹ್ಮಣ್ಯದೇವಾಯ ತ್ರಿಗುಣಾಯ ನಮೋ ನಮಃ ॥ ೨೫ ॥

ನಮಸ್ತೇ ಪೃಶ್ನಿಗರ್ಭಾಯ ವೇದಗರ್ಭಾಯ ವೇಧಸೇ ।
ತ್ರಿನಾಭಾಯ ತ್ರಿಪೃಷ್ಠಾಯ ಶಿಪಿವಿಷ್ಟಾಯ ವಿಷ್ಣವೇ ॥ ೨೬ ॥

ತ್ವಮಾದಿರಂತೋ ಭುವನಸ್ಯ ಮಧ್ಯ-
ಮನಂತಶಕ್ತಿಂ ಪುರುಷಂ ಯಮಾಹುಃ ।
ಕಾಲೋ ಭವಾನಾಕ್ಷಿಪತೀಶ ವಿಶ್ವಂ
ಸ್ರೋತೋ ಯಥಾಂತಃ ಪತಿತಂ ಗಭೀರಮ್ ॥ ೨೭ ॥

ತ್ವಂ ವೈ ಪ್ರಜಾನಾಂ ಸ್ಥಿರಜಂಗಮಾನಾಂ
ಪ್ರಜಾಪತೀನಾಮಸಿ ಸಂಭವಿಷ್ಣುಃ ।
ದಿವೌಕಸಾಂ ದೇವ ದಿವಶ್ಚ್ಯುತಾನಾಂ
ಪರಾಯಣಂ ನೌರಿವ ಮಜ್ಜತೋಽಪ್ಸು ॥ ೨೮ ॥

ದೇವೀ! ನೋಡು, ಯಾರು ಕೇಳಿದರೂ ಈ ಮಾತನ್ನು ಇತರರಿಗೆ ಹೇಳಬೇಡ. ದೇವತೆಗಳ ರಹಸ್ಯ ಗುಪ್ತವಾದಷ್ಟು ಸಫಲವಾಗುತ್ತದೆ. ॥ ೨೦ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಭಗವಂತನು ಹೀಗೆ ಹೇಳಿ ಅಲ್ಲಿಯೇ ಅಂತರ್ಧಾನನಾದನು. ಆ ಸಮಯದಲ್ಲಿ ಸ್ವಯಂ ಭಗವಂತನೇ ನನ್ನ ಗರ್ಭದಿಂದ ಅವತರಿಸುವನು ಎಂದು ತಿಳಿದು, ತಾನು ಕೃತಕೃತ್ಯಳಾದೆನೆಂದು ಭಾವಿಸಿದಳು. ಇದೆಂತಹ ದುರ್ಲಭವಾದ ಮಾತು. ಅವಳು ಬಹಳ ಪ್ರೀತಿಯಿಂದ ಪತಿಯಾದ ಕಶ್ಯಪರನ್ನು ಸೇವೆ ಮಾಡತೊಡಗಿದಳು. ಕಶ್ಯಪರು ಸತ್ಯದರ್ಶಿಗಳಾಗಿದ್ದರು. ಅವರಿಂದ ಮರೆಯಾದ ಯಾವ ಮಾತೂ ಇರಲಿಲ್ಲ. ಭಗವಂತನು ತನ್ನ ಅಂಶದಿಂದ ನನ್ನೊಳಗೆ ಪ್ರವೇಶಿಸಿರುವನೆಂದು ಅವರು ಸಮಾಧಿಯೋಗದಿಂದ ತಿಳಿದುಕೊಂಡರು. ವಾಯುವು ಪ್ರಚಂಡವಾಗಿ ಬೀಸುತ್ತಾ ಬಿದಿರುಗಳ ಘರ್ಷಣೆಯಿಂದ ಅಗ್ನಿಯನ್ನು ಹುಟ್ಟಿಸುವಂತೆಯೇ ಕಶ್ಯಪರು ತಪಸ್ಸು ಮಾಡುತ್ತಾ ಬಹಳ ಕಾಲದಿಂದ ಧರಿಸಿದ್ದ ರೇತಸ್ಸನ್ನು ಅದಿತಿ ದೇವಿಯ ಗರ್ಭದಲ್ಲಿರಿಸಿದರು. ॥ ೨೧-೨೩ ॥ ಅದಿತಿಯ ಗರ್ಭದಲ್ಲಿ ಅವಿನಾಶಿಯಾದ ಭಗವಂತನು ನೆಲೆಸಿರುವನೆಂದು ತಿಳಿದ ಬ್ರಹ್ಮದೇವರು ಬ್ರಹ್ಮಪ್ರತಿಪಾದಕವಾದ ಸ್ತೋತ್ರಗಳಿಂದ ಆ ಶ್ರೀಹರಿಯನ್ನು ಹೊಗಳತೊಡಗಿದರು. ॥ ೨೪ ॥

ಬ್ರಹ್ಮದೇವರು ಹೇಳಿದರು – ಸಮಗ್ರ ಕೀರ್ತಿಗೂ ಆಶ್ರಯನಾಗಿರುವ ಭಗವಂತನೇ! ನಿನಗೆ ಜಯವಾಗಲೀ. ಅನಂತ ಶಕ್ತಿಗಳಿಗೆ ಅಧಿಷ್ಠಾನನಾಗಿರುವವನೇ! ನಿನ್ನ ಚರಣಕಮಲಗಳಿಗೆ ನಮಸ್ಕರಿಸುತ್ತೇನೆ. ಬ್ರಾಹ್ಮಣರಿಗೆ ಹಿತವಾಗಿರುವವನೇ! ತ್ರಿಗುಣಗಳ ನಿಯಾಮಕನೇ! ನಿನ್ನ ಅಡಿದಾವರೆಗಳಲ್ಲಿ ಬಾರಿ-ಬಾರಿಗೂ ನಮಸ್ಕರಿಸುತ್ತೇನೆ. ॥ ೨೫ ॥ ಪೃಶ್ನಿ ಎಂಬುವಳಿಗೆ ಪುತ್ರರೂಪದಲ್ಲಿ ಹುಟ್ಟಿರುವವನೇ! ವೇದಗಳ ಸಮಸ್ತ ಜ್ಞಾನವನ್ನು ನಿನ್ನೊಳಗೆ ಇರಿಸಿಕೊಂಡಿರುವ ಸ್ವಾಮಿಯೇ! ವಾಸ್ತವವಾಗಿ ನೀನೇ ಎಲ್ಲರ ವಿಧಾತೃವಾಗಿರುವೆ. ನಿನಗೆ ನಾನು ಮತ್ತೆ-ಮತ್ತೆ ನಮಸ್ಕರಿಸುತ್ತೇನೆ. ಮೂರೂ ಲೋಕಗಳೂ ನಿನ್ನ ನಾಭಿಯಲ್ಲಿ ನೆಲೆಸಿವೆ. ಮೂರೂ ಲೋಕಗಳಿಗೂ ಅತೀತವಾದ ವೈಕುಂಠದಲ್ಲಿ ನೀನು ಸದಾ ವಿರಾಜಮಾನನಾಗಿರುವೆ. ಸಕಲ ಜೀವರ ಅಂತಃಕರಣದಲ್ಲಿ ಅಂತರ್ಯಾಮಿಯಾಗಿ ನೆಲೆಸಿರುವೆ. ಇಂತಹ ಸರ್ವವ್ಯಾಪಕ ವಿಷ್ಣುವಿಗೆ ನಾನು ನಮಸ್ಕರಿಸುತ್ತೇನೆ. ॥ ೨೬ ॥ ಪ್ರಭೋ! ನೀನೇ ಜಗತ್ತಿನ ಆದಿಯೂ, ಅಂತ್ಯನೂ ಆಗಿರುವುದರಿಂದ ಮಧ್ಯದಲ್ಲಿಯೂ ನೀನೇ ಇರುವೆ. ಇದರಿಂದಲೇ ವೇದಗಳು ನಿನ್ನನ್ನು ಅನಂತ ಶಕ್ತಿಯುಳ್ಳ ಪುರುಷನೆಂದು ಕೊಂಡಾಡುತ್ತವೆ. ಆಳವಾದ ನೀರಿನ ಸುಳಿಯು ಅದರಲ್ಲಿ ಬಿದ್ದ ಪದಾರ್ಥವನ್ನು ಒಳಗೆ ಸೆಳೆದುಕೊಳ್ಳುವಂತೆಯೇ ನೀನು ಕಾಲರೂಪದಿಂದ ಈ ಜಗತ್ತನ್ನು ಪ್ರಳಯಕಾಲದಲ್ಲಿ ಒಳಕ್ಕೆ ಸೆಳೆದು ಕೊಳ್ಳುವೆ. ॥ ೨೭ ॥ ಚರಾಚರ ಪ್ರಜೆಗಳನ್ನೂ, ಪ್ರಜಾಪತಿಗಳನ್ನೂ ಉಂಟುಮಾಡುವ ಮೂಲ ಕಾರಣನು ನೀನೇ ಆಗಿರುವೆ. ದೇವಾಧಿದೇವಾ! ನೀರಿನಲ್ಲಿ ಮುಳುಗುವವನಿಗೆ ದೋಣಿಯು ಆಸರೆಯಾಗಿರುವಂತೆ, ಸ್ವರ್ಗದಿಂದ ಓಡಿಸಿದ ದೇವತೆಗಳಿಗೆ ಏಕಮಾತ್ರ ಆಶ್ರಯವು ನೀನೇ ಆಗಿರುವೆ. ॥ ೨೮ ॥

ಹದಿನೇಳನೆಯ ಅಧ್ಯಾಯವು ಮುಗಿಯಿತು. ॥ ೧೭ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಅಷ್ಟಮ ಸ್ಕಂಧೇ
ವಾಮನಪ್ರಾದುರ್ಭಾವೇ ಸಪ್ತದಶೋಽಧ್ಯಾಯಃ ॥ ೧೭ ॥

ಹದಿನೆಂಟನೆಯ ಅಧ್ಯಾಯ

ಭಗವಾನ್ ವಾಮನನ ಪ್ರಾಕಟ್ಯ ಮತ್ತು ಬಲಿಚಕ್ರವರ್ತಿಯ ಯಜ್ಞಶಾಲೆಯನ್ನು ಪ್ರವೇಶಿಸಿದುದು

ಶ್ರೀಶುಕ ಉವಾಚ

ಇತ್ಥಂ ವಿರಿಂಚಸ್ತುತಕರ್ಮವೀರ್ಯಃ
ಪ್ರಾದುರ್ಬಭೂವಾಮೃತಭೂರದಿತ್ಯಾಮ್ ।
ಚತುರ್ಭುಜಃ ಶಂಖಗದಾಬ್ಜಚಕ್ರಃ
ಪಿಶಂಗವಾಸಾ ನಲಿನಾಯತೇಕ್ಷಣಃ ॥ ೧ ॥

ಶ್ಯಾಮಾವದಾತೋ ಝಷರಾಜಕುಂಡಲ-
ತ್ವಿಷೋಲ್ಲಸಚ್ಛ್ರೀವದನಾಂಬುಜಃ ಪುಮಾನ್ ।
ಶ್ರೀವತ್ಸವಕ್ಷಾ ವಲಯಾಂಗದೋಲ್ಲಸ-
ತ್ಕಿರೀಟಕಾಂಚೀಗುಣಚಾರುನೂಪುರಃ ॥ ೨ ॥

ಮಧುವ್ರತವ್ರಾತವಿಘುಷ್ಟಯಾ ಸ್ವಯಾ
ವಿರಾಜಿತಃ ಶ್ರೀವನಮಾಲಯಾ ಹರಿಃ ।
ಪ್ರಜಾಪತೇರ್ವೇಶ್ಮತಮಃ ಸ್ವರೋಚಿಷಾ
ವಿನಾಶಯನ್ಕಂಠನಿವಿಷ್ಟಕೌಸ್ತುಭಃ ॥ ೩ ॥

ದಿಶಃ ಪ್ರಸೇದುಃ ಸಲಿಲಾಶಯಾಸ್ತದಾ
ಪ್ರಜಾಃ ಪ್ರಹೃಷ್ಟಾ ಋತವೋ ಗುಣಾನ್ವಿತಾಃ ।
ದ್ಯೌರಂತರಿಕ್ಷಂ ಕ್ಷಿತಿರಗ್ನಿಜಿಹ್ವಾ
ಗಾವೋ ದ್ವಿಜಾಃ ಸಂಜಹೃಷುರ್ನಗಾಶ್ಚ ॥ ೪ ॥

ಶ್ರೋಣಾಯಾಂ ಶ್ರವಣದ್ವಾದಶ್ಯಾಂ
ಮುಹೂರ್ತೇಽಭಿಜಿತಿ ಪ್ರಭುಃ ।
ಸರ್ವೇ ನಕ್ಷತ್ರತಾರಾದ್ಯಾ-
ಶ್ಚಕ್ರುಸ್ತಜ್ಜನ್ಮ ದಕ್ಷಿಣಮ್ ॥ ೫ ॥

ದ್ವಾದಶ್ಯಾಂ ಸವಿತಾತಿಷ್ಠನ್ಮಧ್ಯಂದಿನಗತೋ ನೃಪ ।
ವಿಜಯಾ ನಾಮ ಸಾ ಪ್ರೋಕ್ತಾ ಯಸ್ಯಾಂ ಜನ್ಮ ವಿದುರ್ಹರೇಃ
॥ ೬ ॥

ಶಂಖದುಂದುಭಯೋ ನೇದುರ್ಮೃದಂಗಪಣವಾನಕಾಃ ।
ಚಿತ್ರವಾದಿತ್ರತೂರ್ಯಾಣಾಂ ನಿರ್ಘೋಷಸ್ತುಮುಲೋಽಭವತ್
॥ ೭ ॥

ಪ್ರೀತಾಶ್ಚಾಪ್ಸರಸೋಽನೃತ್ಯನ್ಗಂಧರ್ವಪ್ರವರಾ ಜಗುಃ ।
ತುಷ್ಟುವುರ್ಮುನಯೋ ದೇವಾ ಮನವಃ ಪಿತರೋಽಗ್ನಯಃ
॥ ೮ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಎಲೈ ಪರೀಕ್ಷಿತನೇ! ಹೀಗೆ ಬ್ರಹ್ಮದೇವರು ಭಗವಂತನ ಅಪಾರವಾದ ಶಕ್ತಿಯನ್ನೂ, ಲೀಲೆಗಳನ್ನೂ ಸ್ತೋತ್ರಮಾಡಿದ ನಂತರ ಅದ್ಭುತರೂಪನಾದ ಶ್ರೀಹರಿಯು ಅದಿತಿಯ ಮುಂದೆ ಪ್ರಕಟನಾದನು. ಭಗವಂತನಿಗೆ ನಾಲ್ಕು ಭುಜಗಳಿದ್ದು, ಶಂಖ, ಚಕ್ರ, ಗದಾ, ಪದ್ಮಗಳನ್ನು ಧರಿಸಿದ್ದನು. ಕಮಲದಂತೆ ಕೋಮಲ-ವಿಶಾಲವಾದ ನೇತ್ರಗಳಿದ್ದು, ದಿವ್ಯ ಪೀತಾಂಬರವನ್ನು ಧರಿಸಿದ್ದನು. ॥ ೧ ॥ ಭಗವಂತನ ಶರೀರವು ಶ್ಯಾಮಲವರ್ಣದಿಂದ ಕೂಡಿತ್ತು. ಮಕರಾಕೃತಿಯ ಕುಂಡಲಗಳ ಕಾಂತಿಯಿಂದ ಅವನ ಮುಖಕಮಲದ ಶೋಭೆಯು ಇನ್ನೂ ಹೆಚ್ಚಿತ್ತು. ವಕ್ಷಸ್ಥಳವು ಶ್ರೀವತ್ಸ ಚಿಹ್ನೆಯಿಂದ ಸಮಲಂಕೃತವಾಗಿತ್ತು. ಕರಗಳಲ್ಲಿ ಕಂಕಣಗಳೂ, ತೋಳುಗಳಲ್ಲಿ ಬಾಜುಬಂದಿಗಳೂ, ಶಿರದಲ್ಲಿ ಕಿರೀಟವೂ, ನಡುವಿನಲ್ಲಿ ಒಡ್ಯಾಣವೂ, ಚರಣಗಳಲ್ಲಿ ಸುಂದರವಾದ ನೂಪುರಗಳು ಶೋಭಿಸುತ್ತಿದ್ದವು. ॥ ೨ ॥ ಭಗವಂತನ ಕಂಠದಲ್ಲಿ ರತ್ನಹಾರಗಳೂ, ಸ್ವಚ್ಛವಾದ ವನಮಾಲೆಯನ್ನೂ ಧರಿಸಿದ್ದನು. ಅದರ ಸುತ್ತಲೂ ಮತ್ತಭೃಂಗಗಳು ಹಿಂಡುಹಿಂಡಾಗಿ ಝೇಂಕರಿಸುತ್ತಿದ್ದವು. ಕೌಸ್ತುಭಮಣಿಯ ಶೋಭೆಯು ಕಂಠದಲ್ಲಿ ವಿರಾಜಿಸುತ್ತಿತ್ತು. ಭಗವಂತನ ಅಂಗಕಾಂತಿಯಿಂದ ಪ್ರಜಾಪತಿ ಕಶ್ಯಪರ ಆಶ್ರಮದ ಕತ್ತಲೆಯು ಕಳೆದುಹೋಗಿತ್ತು. ॥ ೩ ॥ ಭಗವಂತನು ಅವತರಿಸಿದಾಗ ದಿಕ್ಕುಗಳು ನಿರ್ಮಲವಾದುವು. ನದೀ-ಸರೋವರಗಳ ನೀರು ಸ್ವಚ್ಛವಾಯಿತು. ಪ್ರಜೆಗಳ ಹೃದಯದಲ್ಲಿ ಆನಂದದ ನೆರೆಯೇ ಬಂದಂತಾಯಿತು. ಎಲ್ಲ ಋತುಗಳು ಒಟ್ಟಿಗೆ ತಮ್ಮ-ತಮ್ಮ ಗುಣಗಳನ್ನು ಪ್ರಕಟಿಸಿದುವು. ಸ್ವರ್ಗಲೋಕ, ಅಂತರಿಕ್ಷ, ಪೃಥಿವಿ, ದೇವತೆಗಳು, ಗೋವುಗಳು, ದ್ವಿಜರು, ಪರ್ವತಗಳು ಹೀಗೆ ಎಲ್ಲವೂ ಹರ್ಷಗೊಂಡವು. ॥ ೪ ॥

ಪರೀಕ್ಷಿತನೇ! ಭಗವಂತನು ಅವತರಿಸಿದಾಗ ಚಂದ್ರನು ಶ್ರವಣಾನಕ್ಷತ್ರದಲ್ಲಿದ್ದನು. ಭಾದ್ರಪದ ಮಾಸದ ಶುಕ್ಲ ದ್ವಾದಶೀ ಶ್ರವಣನಕ್ಷತ್ರದ ಅಭಿಜಿನ್ಮುಹೂರ್ತದಲ್ಲಿ ಭಗವಂತನು ಪ್ರಾದುರ್ಭವಿಸಿದನು. ಎಲ್ಲ ಗ್ರಹ-ನಕ್ಷತ್ರಗಳೂ ಜನ್ಮ ಮುಹೂರ್ತವನ್ನು ಮಂಗಲಮಯವಾಗಿಸಿದುವು. ॥ ೫ ॥ ರಾಜೇಂದ್ರಾ! ಭಗವಂತನು ಜನ್ಮತಾಳಿದ ತಿಥಿಯನ್ನು 'ವಿಜಯದ್ವಾದಶೀ' ಎಂದು ಹೇಳುತ್ತಾರೆ. ಆ ಸಮಯದಲ್ಲಿ ಸೂರ್ಯನು ಆಗಸದ ಮಧ್ಯಭಾಗದಲ್ಲಿದ್ದನು. ॥ ೬ ॥ ಭಗವಂತನ ಅವತಾರದ ಸಮಯದಲ್ಲಿ ಶಂಖ, ಡೋಲು, ಮೃದಂಗ, ದುಂದುಭಿ, ಪಣವ, ಆನಕ ಮುಂತಾದ ವಾದ್ಯಗಳು ಮೊಳಗಿದವು. ಹೀಗೆ ನಾನಾರೀತಿಯ ವಾದ್ಯಗಳು, ಕೊಂಬು, ಕಹಳೆ ಮುಂತಾದವುಗಳ ತುಮುಲಧ್ವನಿಯು ಉಂಟಾಯಿತು. ॥ ೭ ॥ ಅಪ್ಸರೆಯರು ಕುಣಿಯತೊಡಗಿದರು, ಗಂಧರ್ವರು ಹಾಡತೊಡಗಿದರು. ಮುನಿಗಳು, ದೇವತೆಗಳು, ಮನುಗಳು, ಪಿತೃಗಳು ಅಗ್ನಿ– ಹೀಗೆ ಎಲ್ಲರೂ ಸ್ತುತಿಸತೊಡಗಿದರು. ॥ ೮ ॥ ಸಿದ್ಧರು, ವಿದ್ಯಾಧ

ಸಿದ್ಧವಿದ್ಯಾಧರಗಣಾಃ ಸಕಿಂಪುರುಷಕಿನ್ನರಾಃ ।
ಚಾರಣಾ ಯಕ್ಷರಕ್ಷಾಂಸಿ ಸುಪರ್ಣಾ ಭುಜಗೋತ್ತಮಾಃ ॥ ೯ ॥

ಗಾಯಂತೋಽತಿಪ್ರಶಂಸಂತೋ ನೃತ್ಯಂತೋ ವಿಬುಧಾನುಗಾಃ ।
ಅದಿತ್ಯಾ ಆಶ್ರಮಪದಂ ಕುಸುಮೈಃ ಸಮವಾಕಿರನ್ ॥ ೧೦ ॥

ದೃಷ್ಟ್ವಾದಿತಿಸ್ತಂ ನಿಜಗರ್ಭಸಂಭವಂ
ಪರಂ ಪುಮಾಂಸಂ ಮುದಮಾಪ ವಿಸ್ಮಿತಾ ।
ಗೃಹೀತದೇಹಂ ನಿಜಯೋಗಮಾಯಯಾ
ಪ್ರಜಾಪತಿಶ್ಚಾಹ ಜಯೇತಿ ವಿಸ್ಮಿತಃ ॥ ೧೧ ॥

ಯತ್ತದ್ವಪುರ್ಭಾತಿ ವಿಭೂಷಣಾಯುಧೈ-
ರವ್ಯಕ್ತಚಿದ್ವ್ಯಕ್ತಮಧಾರಯದ್ಧರಿಃ ।
ಬಭೂವ ತೇನೈವ ಸ ವಾಮನೋ ವಟುಃ
ಸಂಪಶ್ಯತೋರ್ದಿವ್ಯಗತಿರ್ಯಥಾ ನಟಃ ॥ ೧೨ ॥

ತಂ ವಟುಂ ವಾಮನಂ ದೃಷ್ಟ್ವಾ ಮೋದಮಾನಾ ಮಹರ್ಷಯಃ ।
ಕರ್ಮಾಣಿ ಕಾರಯಾಮಾಸುಃ ಪುರಸ್ಕೃತ್ಯ ಪ್ರಜಾಪತಿಮ್ ॥ ೧೩ ॥

ತಸ್ಯೋಪನೀಯಮಾನಸ್ಯ ಸಾವಿತ್ರೀಂ ಸವಿತಾಬ್ರವೀತ್ ।
ಬೃಹಸ್ಪತಿರ್ಬ್ರಹ್ಮಸೂತ್ರಂ ಮೇಖಲಾಂ ಕಶ್ಯಪೋಽದದಾತ್ ॥ ೧೪ ॥

ದದೌ ಕೃಷ್ಣಾಜಿನಂ ಭೂಮಿರ್ದಂಡಂ ಸೋಮೋ ವನಸ್ಪತಿಃ ।
ಕೌಪೀನಾಚ್ಛಾದನಂ ಮಾತಾ ದ್ಯೌಶ್ಛತ್ರಂ ಜಗತಃ ಪತೇಃ ॥ ೧೫ ॥

ಕಮಂಡಲುಂ ವೇದಗರ್ಭಃ ಕುಶಾನ್ಸಪ್ತರ್ಷಯೋ ದದುಃ ।
ಅಕ್ಷಮಾಲಾಂ ಮಹಾರಾಜ ಸರಸ್ವತ್ಯವ್ಯಯಾತ್ಮನಃ ॥ ೧೬ ॥

ತಸ್ಮಾ ಇತ್ಯುಪನೀತಾಯ ಯಕ್ಷರಾಟ್ಪಾತ್ರಿಕಾಮದಾತ್ ।
ಭಿಕ್ಷಾಂ ಭಗವತೀ ಸಾಕ್ಷಾದುಮಾದಾದಂಬಿಕಾ ಸತೀ ॥ ೧೭ ॥

ಸ ಬ್ರಹ್ಮವರ್ಚಸೇನೈವಂ ಸಭಾಂ ಸಂಭಾವಿತೋ ವಟುಃ ।
ಬ್ರಹ್ಮರ್ಷಿಗಣಸಂಜುಷ್ಟಾಮತ್ಯರೋಚತ ಮಾರಿಷಃ ॥ ೧೮ ॥

ಸಮಿದ್ಧಮಾಹಿತಂ ವಹ್ನಿಂ ಕೃತ್ವಾ ಪರಿಸಮೂಹನಮ್ ।
ಪರಿಸ್ತೀರ್ಯ ಸಮಭ್ಯರ್ಚ್ಯ ಸಮಿದ್ಭಿರಜುಹೋದ್ದ್ವಿಜಃ ॥ ೧೯ ॥

ರರು, ಕಿಂಪುರುಷರು, ಕಿನ್ನರರು, ಚಾರಣರು, ಯಕ್ಷರು, ರಾಕ್ಷಸರು, ಪಕ್ಷಿಗಳು, ಮುಖ್ಯ-ಮುಖ್ಯನಾಗರು ಮತ್ತು ದೇವತೆಗಳ ಅನುಚರರು ಹಾಡುತ್ತಾ-ಕುಣಿಯುತ್ತಾ ಭಗವಂತನ ಅಪಾರ ಗುಣಗಳನ್ನೂ, ಸತ್ಕಥೆಗಳನ್ನೂ ಸಂಕೀರ್ತನೆ ಮಾಡುತ್ತಾ ಅದಿತಿಯ ಆಶ್ರಮವನ್ನು ಪುಷ್ಪವೃಷ್ಟಿಯಿಂದ ಮುಚ್ಚಿಬಿಟ್ಟರು. ॥ ೯-೧೦ ॥

ಅದಿತಿಯು ತನ್ನ ಗರ್ಭದಿಂದ ಪ್ರಕಟಗೊಂಡ ಪರಮಪುರುಷ ಪರಮಾತ್ಮನನ್ನು ನೋಡಿದಾಗ ಅವಳು ಅತ್ಯಂತ ಆಶ್ಚರ್ಯಚಕಿತಳಾಗಿ, ಪರಮಾನಂದಭರಿತಳಾದಳು. ಕಶ್ಯಪ ಪ್ರಜಾಪತಿಯೂ ಭಗವಂತನು ತನ್ನ ಯೋಗಮಾಯೆಯಿಂದ ಶರೀರವನ್ನು ಧರಿಸಿರುವುದನ್ನು ನೋಡಿ ವಿಸ್ಮಿತರಾಗಿ 'ಜಯವಾಗಲೀ! ಭಗವಂತನಿಗೆ ಜಯವಾಗಲೀ' ಎಂದು ಉದ್ಗಾರವೆತ್ತಿದರು. ॥ ೧೧ ॥ ಪರೀಕ್ಷಿತನೇ! ಭಗವಂತನು ಸ್ವಯಂ ಅವ್ಯಕ್ತನೂ, ಚಿತ್ಸ್ವರೂಪನು. ಅನಂತವಾದ ಪರಮಕಾಂತಿಮಯ ಆಭರಣ ಮತ್ತು ಆಯುಧಗಳಿಂದ ಕೂಡಿದ ಆ ಶರೀರವನ್ನು ಧರಿಸಿ ಆವಿರ್ಭವಿಸಿದ್ದನು. ಆ ದಿವ್ಯಶರೀರವನ್ನು ಅದಿತಿ-ಕಶ್ಯಪರು ನೋಡು-ನೋಡುತ್ತಿರುವಂತೆ ನಟನು ತನ್ನ ವೇಷವನ್ನು ಬದಲಿಸುವಂತೆ ಭಗವಂತನು ಕುಳ್ಳ ಬ್ರಹ್ಮಚಾರಿಯ ರೂಪವನ್ನು ತಾಳಿದನು. ನಿಶ್ಚಯವಾಗಿಯೂ ಪರಮಾತ್ಮನ ಲೀಲೆಯು ಪರಮಾದ್ಭುತವಾದುದು. ॥ ೧೨ ॥

ಭಗವಂತನನ್ನು ವಾಮನ ಬ್ರಹ್ಮಚಾರಿಯ ರೂಪದಲ್ಲಿ ನೋಡಿ ಮಹರ್ಷಿಗಳಿಗೆ ಮಹದಾನಂದವಾಯಿತು. ಅವರೆಲ್ಲರೂ ಕಶ್ಯಪ ಪ್ರಜಾಪತಿಯನ್ನು ಮುಂದುಮಾಡಿ ಉಪೇಂದ್ರನ ಜಾತಕರ್ಮವೇ ಮೊದಲಾದ ಸಂಸ್ಕಾರಗಳನ್ನು ಮಾಡಿಸಿದರು. ॥ ೧೩ ॥ ಅವನ ಉಪನಯನ ಸಂಸ್ಕಾರವು ಪ್ರಾರಂಭವಾದಾಗ ಗಾಯತ್ರಿಯ ಅಧಿಷ್ಠಾತೃ ದೇವತೆಯಾದ ಸವಿತೃವೇ ವಾಮನನಿಗೆ ಗಾಯತ್ರಿಯನ್ನು ಉಪದೇಶಿಸಿದನು. ದೇವಗುರು ಬೃಹಸ್ಪತಿಯು ಯಜ್ಞೋಪವೀತವನ್ನೂ, ಕಶ್ಯಪರು ಮೇಖಲೆ (ಮೌಂಜಿ)ಯನ್ನು ಕೊಟ್ಟರು. ॥ ೧೪ ॥ ಪೃಥಿವಿದೇವಿಯು ಕೃಷ್ಣಾಜಿನವನ್ನೂ, ವನಸ್ಪತಿಗಳ ಒಡೆಯನಾದ ಚಂದ್ರನು ದಂಡವನ್ನೂ, ಮಾತಾ ಅದಿತಿಯು ಕೌಪೀನವನ್ನೂ ಮತ್ತು ಕಟಿವಸ್ತ್ರವನ್ನೂ, ಆಕಾಶಾಭಿಮಾನಿದೇವತೆಗಳು ವಾಮನವೇಷಧಾರಿಯಾದ ಭಗವಂತನಿಗೆ ಛತ್ರವನ್ನೂ ಅರ್ಪಿಸಿದರು. ॥ ೧೫ ॥ ಪರೀಕ್ಷಿತನೇ! ಅವಿನಾಶಿಯಾದ ವಾಮನಪ್ರಭುವಿಗೆ ಬ್ರಹ್ಮದೇವರು ಕಮಂಡಲುವನ್ನೂ, ಸಪ್ತರ್ಷಿಗಳು ಕುಶಗಳನ್ನೂ, ಸರಸ್ವತಿದೇವಿಯು ರುದ್ರಾಕ್ಷಮಾಲೆಯನ್ನೂ ಅರ್ಪಿಸಿದರು. ॥ ೧೬ ॥ ಹೀಗೆ ಭಗವಾನ್ ವಾಮನನ ಉಪನಯನ ಸಂಸ್ಕಾರವಾದಾಗ ಯಕ್ಷಪತಿ ಕುಬೇರನು ಅವನಿಗೆ ಭಿಕ್ಷಾಪಾತ್ರೆಯನ್ನು ಕೊಟ್ಟನು. ಸತಿಶಿರೋಮಣಿ ಜಗಜ್ಜನನಿಯಾದ ಭಗವತಿ ಉಮಾದೇವಿಯು ಪ್ರಥಮ ಭಿಕ್ಷೆಯನ್ನು ನೀಡಿದಳು. ॥ ೧೭ ॥ ಹೀಗೆ ಋಷಿ-ಮುನಿ-ದೇವತೆಗಳಾದಿಯಾಗಿ ಎಲ್ಲರೂ ವಟುವೇಷಧರನಾದ ಶ್ರೀಭಗವಂತನನ್ನು ಸಮ್ಮಾನಿಸಿದರು. ಬ್ರಹ್ಮರ್ಷಿಗಳಿಂದ ತುಂಬಿದ ಆ ಮಹಾಸಭೆಯಲ್ಲಿ ವಾಮನನು ತನ್ನ ಬ್ರಹ್ಮತೇಜದಿಂದ ಅತ್ಯಂತ ಪ್ರಕಾಶಮಾನನಾದನು. ॥ ೧೮ ॥

ಬಳಿಕ ಭಗವಾನ್ ವಾಮನನು ಸ್ಥಾಪಿಸಲ್ಪಟ್ಟ ಪ್ರಜ್ವಲಿತ ಅಗ್ನಿಯನ್ನು ಕುಶಗಳಿಂದ ಪರಿಸಮೂಹ ಮತ್ತು ಪರಿಸ್ತರಣಗೈದು, ಅಗ್ನಿಪೂಜೆ ಮಾಡಿ ಸಮಿಧೆಗಳಿಂದ ಹೋಮವನ್ನು ಮಾಡಿದನು. ॥ ೧೯ ॥

ಶ್ರುತ್ವಾಶ್ವಮೇಧೈರ್ಯಜಮಾನಮೂರ್ಜಿತಂ
ಬಲಿಂ ಭೃಗೂಣಾಮುಪಕಲ್ಪಿತೈಸ್ತತಃ ।
ಜಗಾಮ ತತ್ರಾಖಿಲಸಾರಸಂಭೃತೋ
ಭಾರೇಣ ಗಾಂ ಸನ್ನಮಯನ್ಪದೇ ಪದೇ ॥ ೨೦ ॥

ತಂ ನರ್ಮದಾಯಾಸ್ತಟ ಉತ್ತರೇ ಬಲೇ-
ರ್ಯ ಋತ್ವಿಜಸ್ತೇ ಭೃಗುಕಚ್ಛಸಂಜ್ಞಕೇ ।
ಪ್ರವರ್ತಯಂತೋ ಭೃಗವಃ ಕ್ರತೂತ್ತಮಂ
ವ್ಯಚಕ್ಷತಾರಾದುದಿತಂ ಯಥಾ ರವಿಮ್ ॥ ೨೧ ॥

ತ ಋತ್ವಿಜೋ ಯಜಮಾನಃ ಸದಸ್ಯಾ
ಹತತ್ವಿಷೋ ವಾಮನತೇಜಸಾ ನೃಪ ।
ಸೂರ್ಯಃ ಕಿಲಾಯಾತ್ಯುತ ವಾ ವಿಭಾವಸುಃ
ಸನತ್ಕುಮಾರೋಽಥ ದಿದೃಕ್ಷಯಾ ಕ್ರತೋಃ ॥ ೨೨ ॥

ಇತ್ಥಂ ಸಶಿಷ್ಯೇಷು ಭೃಗುಷ್ವನೇಕಧಾ
ವಿತರ್ಕ್ಯಮಾಣೋ ಭಗವಾನ್ಸ ವಾಮನಃ ।
ಛತ್ರಂ ಸದಂಡಂ ಸಜಲಂ ಕಮಂಡಲುಂ
ವಿವೇಶ ಬಿಭ್ರದ್ಧಯಮೇಧವಾಟಮ್ ॥ ೨೩ ॥

ಮೌಂಜ್ಯಾ ಮೇಖಲಯಾ ವೀತಮುಪವೀತಾಜಿನೋತ್ತರಮ್ ।
ಜಟಿಲಂ ವಾಮನಂ ವಿಪ್ರಂ ಮಾಯಾಮಾಣವಕಂ ಹರಿಮ್
॥ ೨೪ ॥

ಪ್ರವಿಷ್ಟಂ ವೀಕ್ಷ್ಯ ಭೃಗವಃ ಸಶಿಷ್ಯಾಸ್ತೇ ಸಹಾಗ್ನಿಭಿಃ ।
ಪ್ರತ್ಯಗೃಹ್ಣನ್ಸಮುತ್ಥಾಯ ಸಂಕ್ಷಿಪ್ತಾಸ್ತಸ್ಯ ತೇಜಸಾ
॥ ೨೫ ॥

ಯಜಮಾನಃ ಪ್ರಮುದಿತೋ
ದರ್ಶನೀಯಂ ಮನೋರಮಮ್ ।
ರೂಪಾನುರೂಪಾವಯವಂ
ತಸ್ಮಾ ಆಸನಮಾಹರತ್ ॥ ೨೬ ॥

ಸ್ವಾಗತೇನಾಭಿನಂದ್ಯಾಥ ಪಾದೌ ಭಗವತೋ ಬಲಿಃ ।
ಅವನಿಜ್ಯಾರ್ಚಯಾಮಾಸ ಮುಕ್ತಸಂಗಮನೋರಮಮ್
॥ ೨೭ ॥

ಪರೀಕ್ಷಿತನೇ! ಆ ಸಮಯದಲ್ಲಿ ಸಮಸ್ತ ವಿಧವಾದ ಯಜ್ಞ ಸಾಮಗ್ರಿಗಳಿಂದಲೂ ಸಂಪನ್ನನಾದ ಯಶಸ್ವೀ ಬಲಿಚಕ್ರವರ್ತಿಯು ಭೃಗುವಂಶೀಯ ಬ್ರಾಹ್ಮಣರ ಆದೇಶಾನುಸಾರವಾಗಿ ಹಲವಾರು ಅಶ್ವಮೇಧಗಳನ್ನು ಮಾಡುತ್ತಿರುವನೆಂಬ ವಿಷಯವು ಭಗವಂತನಾದ ವಾಮನಮೂರ್ತಿಗೆ ತಿಳಿಯಿತು. ಆಗ ಸಮಸ್ತ ಶಕ್ತಿಗಳಿಂದಲೂ ಯುಕ್ತನಾಗಿ ಅವನು ನಡೆಯುವಾಗ ಅತ್ಯಂತ ಭಾರವಾದ ಹೆಜ್ಜೆಯನ್ನಿಡುತ್ತಿರುವಾಗ ಭೂಮಿಯನ್ನೇ ಬಗ್ಗಿಸುತ್ತಾ ಬಲಿಚಕ್ರವರ್ತಿಯ ಯಜ್ಞಶಾಲೆಗೆ ಹೊರಟನು. ॥ ೨೦॥ ನರ್ಮದಾ ನದಿಯ ಉತ್ತರದ ತೀರದಲ್ಲಿ 'ಭೃಗುಕಚ್ಛ'ವೆಂಬ ಸುಂದರವಾದ ಮತ್ತು ಪವಿತ್ರವಾದ ಸ್ಥಳವಿದೆ. ಅಲ್ಲಿಯೇ ಭೃಗುವಂಶೀಯ ಋತ್ವಿಜರು ಬಲಿಚಕ್ರವರ್ತಿಯಿಂದ ಯಜ್ಞಗಳನ್ನು ಮಾಡಿಸುತ್ತಿದ್ದರು. ಅವರು ದೂರದಿಂದಲೇ ವಾಮನ ಭಗವಂತನನ್ನು ನೋಡಿ ಸಾಕ್ಷಾತ್ ಸೂರ್ಯನಾರಾಯಣನೇ ಉದಯಿಸಿ ಬರುತ್ತಿರುವಂತೆ ಭಾವಿಸಿದರು. ॥ ೨೧ ॥ ಪರೀಕ್ಷಿತನೇ! ಭಗವಾನ್ ಶ್ರೀವಾಮನನ ದಿವ್ಯ ತೇಜಸ್ಸಿನ ಮುಂದೆ ಋತ್ವಿಜರು, ಯಜಮಾನ, ಸದಸ್ಯರು ಇವರೆಲ್ಲರೂ ನಿಸ್ತೇಜರಾದರು. ಯಜ್ಞವನ್ನು ನೋಡುವ ಸಲುವಾಗಿ ಸೂರ್ಯನೋ, ಅಗ್ನಿಯೋ ಅಥವಾ ಸನತ್ಕುಮಾರನೋ ಅವಶ್ಯವಾಗಿ ಬರುತ್ತಿರಬಹುದೆಂದು ಊಹಿಸಿದರು. ॥ ೨೨ ॥ ಭೃಗುಪುತ್ರ ಶುಕ್ರಾಚಾರ್ಯರೇ ಮೊದಲಾದವರು ತಮ್ಮ ಶಿಷ್ಯರೊಂದಿಗೆ ಹೀಗೆ ಅನೇಕ ಕಲ್ಪನೆಗಳನ್ನು ಮಾಡುತ್ತಿದ್ದರು. ಅದೇ ಸಮಯಕ್ಕೆ ಸರಿಯಾಗಿ ಕೈಯಲ್ಲಿ ಛತ್ರವನ್ನು, ದಂಡವನ್ನು, ನೀರಿನಿಂದ ತುಂಬಿದ ಕಮಂಡಲುವನ್ನು ಹಿಡಿದುಕೊಂಡು ವಾಮನ ಭಗವಂತನು ಅಶ್ವಮೇಧ ಯಜ್ಞದ ಮಂಟಪವನ್ನು ಪ್ರವೇಶಿಸಿದನು. ॥ ೨೩ ॥ ಅವನು ಸೊಂಟದಲ್ಲಿ ಮೌಂಜ (ಮೇಖಲೆ) ಯನ್ನೂ, ಕತ್ತಿನಲ್ಲಿ ಯಜ್ಞೋಪವೀತವನ್ನು ಧರಿಸಿದ್ದನು. ಕಂಕುಳಲ್ಲಿ ಮೃಗಚರ್ಮವಿತ್ತು. ತಲೆಯ ಮೇಲೆ ಜಟೆಯಿತ್ತು. ಈ ಪ್ರಕಾರ ಕುಳ್ಳ ಬ್ರಾಹ್ಮಣನ ವೇಷದಲ್ಲಿ ತನ್ನ ಮಾಯೆಯಿಂದ ಬ್ರಹ್ಮಚಾರಿಯಾದ ಭಗವಂತನು ■ ಯಜ್ಞಶಾಲೆಯನ್ನು ಪ್ರವೇಶಿಸಿದಾಗ ಭೃಗುವಂಶೀ ಬ್ರಾಹ್ಮಣರು ಅವನನ್ನು ನೋಡಿ ತಮ್ಮ ಶಿಷ್ಯರೊಂದಿಗೆ ಅವನ ದಿವ್ಯತೇಜಸ್ಸಿನಿಂದ ನಿಸ್ತೇಜರಾಗಿ ಏನು ಮಾಡಬೇಕೆಂದು ಅರಿಯದೆ ಥಟ್ಟನೆ ಎದ್ದುನಿಂತರು. ತಮ್ಮ ಶಿಷ್ಯನಾದ ಬಲಿಚಕ್ರವರ್ತಿಯೊಡನೆ ಯಜ್ಞೇಶ್ವರನನ್ನು ಮುಂದುಮಾಡಿಕೊಂಡು ಭೃಗುವಂಶೀಯ ಬ್ರಾಹ್ಮಣರು ಶ್ರೀವಾಮನ ಮೂರ್ತಿಯನ್ನು ಸ್ವಾಗತಿಸಿದರು. ॥ ೨೪-೨೫ ॥ ಭಗವಂತನ ಪುಟ್ಟ ರೂಪಕ್ಕನುಸಾರವಾಗಿ ಎಲ್ಲ ಅವಯವಗಳು ಸಣ್ಣ-ಸಣ್ಣದಾಗಿದ್ದು ಬಹಳ ಮನೋಹರ ಹಾಗೂ ದರ್ಶನೀಯವಾಗಿದ್ದವು. ಅವನನ್ನು ನೋಡಿ ಬಲಿಚಕ್ರವರ್ತಿಗೆ ಪರಮಾನಂದವಾಗಿ ಭಗವಾನ್ ವಾಮನನಿಗೆ ಒಂದು ಉತ್ತಮಾಸನವನ್ನು ನೀಡಿದನು. ॥ ೨೬ ॥ ಬಳಿಕ ಬಲಿಯು ಕುಶಲಪ್ರಶ್ನೆಗಳ ಮೂಲಕವಾಗಿ ವಟುವನ್ನು ನಮಸ್ಕರಿಸಿ, ಅವನ ದಿವ್ಯಪಾದಗಳನ್ನು ತೊಳೆದು, ನಿಸ್ಸಂಗರಾದ ಯೋಗಿಗಳ ಮನಸ್ಸಿನಲ್ಲಿ ಸದಾ ರಮಿಸುವ ಆ ವಾಮನಮೂರ್ತಿಯನ್ನು ಯಥಾವಿಧಿಯಾಗಿ ಪ್ರೇಮಾದರಗಳಿಂದ ಪೂಜಿಸಿದನು. ॥ ೨೭ ॥ ಭಗವಂತನ ಚರಣಕಮಲಗಳ ಪಾದತೀರ್ಥವು ಪರಮ ಮಂಗಳಕರವಾದುದು. ಅದರಿಂದ ಜೀವಿಗಳ ಎಲ್ಲ ಪಾಪ-ತಾಪಗಳು ತೊಳೆದುಹೋಗುತ್ತವೆ. ಸ್ವತಃ ದೇವಾಧಿ

ತತ್ಪಾದಶೌಚಂ ಜನಕಲ್ಮಷಾಪಹಂ
ಸ ಧರ್ಮವಿನ್ಮೂರ್ಧ್ನ್ಯದಧಾತ್ಸುಮಂಗಲಮ್ ।
ಯದ್ದೇವದೇವೋ ಗಿರಿಶಶ್ಚಂದ್ರಮೌಲಿ-
ರ್ದಧಾರ ಮೂರ್ಧ್ನಾ ಪರಯಾ ಚ ಭಕ್ತ್ಯಾ ॥ ೨೮ ॥

ದೇವನಾದ ಚಂದ್ರಮೌಳಿ ಭಗವಾನ್ ಶಂಕರನು ಅತ್ಯಂತ ಭಕ್ತಿಭಾವದಿಂದ ಅದನ್ನು ತನ್ನ ತಲೆಯಲ್ಲಿ ಧರಿಸಿದ್ದನು. ಇಂದು ಅದೇ ಚರಣಾಮೃತವು ಧರ್ಮದ ಮರ್ಮಜ್ಞನಾದ ರಾಜಾಬಲಿಗೆ ಪ್ರಾಪ್ತವಾಯಿತು. ಅವನು ಬಹಳ ಭಕ್ತಿಯಿಂದ ಅದನ್ನು ತನ್ನ ತಲೆಯಮೇಲೆ ಇರಿಸಿಕೊಂಡನು. ॥ ೨೮ ॥

ಬಲಿರುವಾಚ

ಸ್ವಾಗತಂ ತೇ ನಮಸ್ತುಭ್ಯಂ ಬ್ರಹ್ಮನ್ಕಿಂ ಕರವಾಮ ತೇ ।
ಬ್ರಹ್ಮರ್ಷೀಣಾಂ ತಪಃ ಸಾಕ್ಷಾನ್ಮನ್ಯೇ ತ್ವಾಽಽರ್ಯ ವಪುರ್ಧರಮ್ ॥ ೨೯ ॥

ಅದ್ಯ ನಃ ಪಿತರಸ್ತೃಪ್ತಾ ಅದ್ಯ ನಃ ಪಾವಿತಂ ಕುಲಮ್ ।
ಅದ್ಯ ಸ್ವಿಷ್ಟಃ ಕ್ರತುರಯಂ ಯದ್ಭವಾನಾಗತೋ ಗೃಹಾನ್ ॥ ೩೦ ॥

ಅದ್ಯಾಗ್ನಯೋ ಮೇ ಸುಹುತಾ ಯಥಾವಿಧಿ
ದ್ವಿಜಾತ್ಮಜ ತ್ವಚ್ಚರಣಾವನೇಜನೈಃ ।
ಹತಾಂಹಸೋ ವಾರ್ಭಿರಿಯಂ ಚ ಭೂರಹೋ
ತಥಾ ಪುನೀತಾ ತನುಭಿಃ ಪದೈಸ್ತವ ॥ ೩೧ ॥

ಯದ್ಯದ್ವಟೋ ವಾಂಛಸಿ ತತ್ಪ್ರತೀಚ್ಛ ಮೇ
ತ್ವಾಮರ್ಥಿನಂ ವಿಪ್ರಸುತಾನುತರ್ಕಯೇ ।
ಗಾಂ ಕಾಂಚನಂ ಗುಣವದ್ಧಾಮ ಮೃಷ್ಟಂ
ತಥಾನ್ನಪೇಯಮುತ ವಾ ವಿಪ್ರಕನ್ಯಾಮ್ ।
ಗ್ರಾಮಾನ್ಸಮೃದ್ಧಾಂಸ್ತುರಗಾನ್ಗಜಾನ್ವಾ
ರಥಾಂಸ್ತಥಾರ್ಹತ್ತಮ ಸಂಪ್ರತೀಚ್ಛ ॥ ೩೨ ॥

ಬಲಿಯು ಹೇಳಿದನು – ಬ್ರಾಹ್ಮಣವಟುವೇ! ನಿನ್ನನ್ನು ಆದರದಿಂದ ಸ್ವಾಗತಿಸುತ್ತೇನೆ ಮತ್ತು ನಿನಗೆ ನಮಸ್ಕಾರ ಮಾಡುತ್ತೇನೆ. ನಾನು ನಿನಗೆ ಯಾವ ಕಾರ್ಯವನ್ನು ಮಾಡಿ ಕೊಡಲಿ! ನಿನ್ನನ್ನು ನೋಡಿದರೆ ಬ್ರಹ್ಮರ್ಷಿಗಳು ಮಾಡಿದ ತಪಸ್ಸೆಲ್ಲವೂ ಒಂದಾಗಿ ಮೂರ್ತಿಭವಿಸಿ ನನ್ನ ಮುಂದೆ ಬಂದಂತಿದೆ. ॥ ೨೯ ॥ ಮಹಾನುಭಾವನೇ! ಇಂದು ನೀನು ನಮ್ಮ ಮನೆಗೆ ಆಗಮಿಸಿದ್ದರಿಂದ ನಮ್ಮ ಪಿತೃದೇವತೆಗಳು ತೃಪ್ತರಾದರು. ನಮ್ಮ ಕುಲವು ಪವಿತ್ರವಾಯಿತು. ಇಂದಿಗೆ ನಾನು ಮಾಡಿದ ಯಜ್ಞವು ಸಫಲವಾಯಿತು. ॥ ೩೦ ॥ ಬ್ರಾಹ್ಮಣಕುಮಾರನೇ! ನಿನ್ನ ಪಾದಪ್ರಕ್ಷಾಳನದಿಂದ ನನ್ನ ಪಾಪಗಳೆಲ್ಲವೂ ತೊಳೆದುಹೋದುವು. ವಿಧಿವತ್ತಾಗಿ ಯಜ್ಞಮಾಡುವುದರಿಂದ, ಅಗ್ನಿಯಲ್ಲಿ ಆಹುತಿಗಳನ್ನು ಅರ್ಪಿಸುವುದರಿಂದ ದೊರೆಯಬಹುದಾದ ಫಲವು ಆಯಾಸವಿಲ್ಲದೆ ನನಗೆ ದೊರೆಯಿತು. ನಿನ್ನ ಈ ಕೋಮಲವಾದ ಮುದ್ದು ಚರಣಗಳಿಂದ ಮತ್ತು ಇವುಗಳನ್ನು ತೊಳೆದುದರಿಂದ ಪೃಥಿವಿಯು ಪವಿತ್ರಳಾದಳು. ॥ ೩೧ ॥ ಬ್ರಾಹ್ಮಣವಟುವೇ! ನೀನು ಏನೋ ಬಯಸುತ್ತಿರುವೆ ಎಂದು ನನಗೆ ಅನಿಸುತ್ತದೆ. ಪರಮಪೂಜ್ಯ ಬ್ರಹ್ಮಚಾರಿಯೇ! ನೀನು ಬಯಸುವ – ಗೋವುಗಳು, ಚಿನ್ನ, ಸಕಲ ಸಾಮಗ್ರಿಗಳಿಂದ ಸುಸಜ್ಜಿತಮನೆ, ಪವಿತ್ರವಾದ ಅನ್ನ, ಕುಡಿಯುವ ವಸ್ತು, ವಿವಾಹಕ್ಕಾಗಿ ಬ್ರಾಹ್ಮಣಕನ್ಯೆ, ಸಂಪತ್ಸಮೃದ್ಧವಾದ ಊರು, ಕುದುರೆ, ಆನೆ, ರಥ – ಇವೆಲ್ಲವನ್ನು ನನ್ನಿಂದ ಕೇಳಿಕೋ. ನಿನಗೆ ಇಷ್ಟವಾದುದನ್ನು ಅವಶ್ಯವಾಗಿ ಕೇಳಿ ಪಡೆದುಕೋ. ॥ ೩೨ ॥

ಹದಿನೆಂಟನೆಯ ಅಧ್ಯಾಯವು ಮುಗಿಯಿತು. ॥ ೧೮ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಅಷ್ಟಮ ಸ್ಕಂಧೇ
ವಾಮನಪ್ರಾದುರ್ಭಾವೇ ಬಲಿವಾಮನಸಂವಾದೇಽಷ್ಟಾದಶೋಽಧ್ಯಾಯಃ ॥ ೧೮ ॥

ಹತ್ತೊಂಬತ್ತನೆಯ ಅಧ್ಯಾಯ

ಭಗವಾನ್ ವಾಮನನು ಬಲಿಯಲ್ಲಿ ಮೂರು ಹೆಜ್ಜೆ ಭೂಮಿಯನ್ನು ಬೇಡಿದುದು, ಬಲಿಯ ಸಮ್ಮತಿ, ಶುಕ್ರಾಚಾರ್ಯರು ತಡೆದುದು

ಶ್ರೀಶುಕ ಉವಾಚ

ಇತಿ ವೈರೋಚನೇರ್ವಾಕ್ಯಂ ಧರ್ಮಯುಕ್ತಂ ಸಸೂನೃತಮ್ ।
ನಿಶಮ್ಯ ಭಗವಾನ್ಪ್ರೀತಃ ಪ್ರತಿನಂದ್ಯೇದಮಬ್ರವೀತ್ ॥ ೧ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ! ಬಲಿಯು ಹೇಳಿದ ಮಾತುಗಳು ಧರ್ಮಯುಕ್ತವಾಗಿಯೂ, ಸತ್ಯವಾಗಿಯೂ, ಪ್ರಿಯವಾಗಿಯೂ ಇದ್ದವು. ಅದನ್ನು ಕೇಳಿದ ಭಗವಾನ್ ವಾಮನನು ಅತ್ಯಂತ ಸಂತೋಷದಿಂದ ಬಲಿಯನ್ನು ಅಭಿನಂದಿಸುತ್ತಾ ಇಂತೆಂದನು – ॥ ೧ ॥

ಶ್ರೀಭಗವಾನುವಾಚ

ವಚಸ್ತವೈತಜ್ಜನದೇವ ಸೂನೃತಂ
ಕುಲೋಚಿತಂ ಧರ್ಮಯುತಂ ಯಶಸ್ಕರಮ್ ।
ಯಸ್ಯ ಪ್ರಮಾಣಂ ಭೃಗವಃ ಸಾಂಪರಾಯೇ
ಪಿತಾಮಹಃ ಕುಲವೃದ್ಧಃ ಪ್ರಶಾಂತಃ ॥ ೨ ॥

ನ ಹ್ಯೇತಸ್ಮಿನ್ಕುಲೇ ಕಶ್ಚಿನ್ನಿಃಸತ್ತ್ವಃ ಕೃಪಣಃ ಪುಮಾನ್ ।
ಪ್ರತ್ಯಾಖ್ಯಾತಾ ಪ್ರತಿಶ್ರುತ್ಯ ಯೋ ವಾದಾತಾ ದ್ವಿಜಾತಯೇ
॥ ೩ ॥

ನ ಸಂತಿ ತೀರ್ಥೇ ಯುಧಿ ಚಾರ್ಥಿನಾರ್ಥಿತಾಃ
ಪರಾಙ್ಮುಖಾ ಯೇ ತ್ವಮನಸ್ವಿನೋ ನೃಪಾಃ ।
ಯುಷ್ಮತ್ಕುಲೇ ಯದ್ಯಶಸಾಮಲೇನ
ಪ್ರಹ್ಲಾದ ಉದ್ಭಾತಿ ಯಥೋಡುಪಃ ಖೇ ॥ ೪ ॥

ಯತೋ ಜಾತೋ ಹಿರಣ್ಯಾಕ್ಷಶ್ಚರನ್ನೇಕ ಇಮಾಂ ಮಹೀಮ್ ।
ಪ್ರತಿವೀರಂ ದಿಗ್ವಿಜಯೇ ನಾವಿಂದತ ಗದಾಯುಧಃ
॥ ೫ ॥

ಯಂ ವಿನಿರ್ಜಿತ್ಯ ಕೃಚ್ಛ್ರೇಣ ವಿಷ್ಣುಃ ಕ್ಷ್ಮೋದ್ಧಾರ ಆಗತಮ್ ।
ಆತ್ಮಾನಂ ಜಯಿನಂ ಮೇನೇ ತದ್ವೀರ್ಯಂ ಭೂರ್ಯನುಸ್ಮರನ್
॥ ೬ ॥

ನಿಶಮ್ಯ ತದ್ವಧಂ ಭ್ರಾತಾ ಹಿರಣ್ಯಕಶಿಪುಃ ಪುರಾ ।
ಹಂತುಂ ಭ್ರಾತೃಹಣಂ ಕ್ರುದ್ಧೋ ಜಗಾಮ ನಿಲಯಂ ಹರೇಃ
॥ ೭ ॥

ತಮಾಯಾಂತಂ ಸಮಾಲೋಕ್ಯ
ಶೂಲಪಾಣಿಂ ಕೃತಾಂತವತ್ ।
ಚಿಂತಯಾಮಾಸ ಕಾಲಜ್ಞೋ
ವಿಷ್ಣುರ್ಮಾಯಾವಿನಾಂ ವರಃ ॥ ೮ ॥

ಯತೋ ಯತೋಽಹಂ ತತ್ರಾಸೌ ಮೃತ್ಯುಃ ಪ್ರಾಣಭೃತಾಮಿವ ।
ಅತೋಽಹಮಸ್ಯ ಹೃದಯಂ ಪ್ರವೇಕ್ಷ್ಯಾಮಿ ಪರಾಗ್ದೃಶಃ
॥ ೯ ॥

ಶ್ರೀಭಗವಂತನು ಹೇಳಿದನು – ಮಹಾರಾಜಾ! ನೀನು ಆಡಿದ ಮಾತುಗಳು ನಿನ್ನ ಕುಲಪರಂಪರೆಗೆ ಅನುರೂಪವಾಗಿವೆ. ಧರ್ಮಭಾವದಿಂದ ಪರಿಪೂರ್ಣವಾಗಿವೆ. ಯಶಸ್ಕರವೂ, ಸತ್ಯವೂ, ಪ್ರಿಯವೂ ಆಗಿವೆ. ಇದಕ್ಕೆ ಕಾರಣ – ಪರಲೋಕಹಿತಕಾರಿಯಾದ ಧರ್ಮದ ಸಂಬಂಧದಲ್ಲಿ ನೀನು ಭೃಗುವಂಶೀಯರಾದ ಶುಕ್ರಾಚಾರ್ಯರನ್ನೇ ಪರಮಪ್ರಮಾಣವೆಂದು ತಿಳಿದಿರುವೆ. ಜೊತೆಗೆ ಕುಲವೃದ್ಧನಾದ ಪಿತಾಮಹ ಪರಮ ಶಾಂತಸ್ವಭಾವದ ಪ್ರಹ್ಲಾದನ ಆಜ್ಞೆಯನ್ನೂ ಪರಮಪ್ರಮಾಣವೆಂದೂ ಪಾಲಿಸುತ್ತಿರುವೆ. ॥ ೨ ॥ ನಿನ್ನ ವಂಶಪರಂಪರೆಯಲ್ಲಿ ಇಂದಿನವರೆಗೆ ಧೈರ್ಯಹೀನರೂ, ಕೃಪಣರೂ ಯಾರೂ ಹುಟ್ಟಲಿಲ್ಲ. ಬ್ರಾಹ್ಮಣನಿಗೆ ದಾನವನ್ನು ಕೊಡದವನಾಗಲೀ, ಇಂತಹ ವಸ್ತುವನ್ನು ಕೊಡುವೆನೆಂದು ಪ್ರತಿಜ್ಞೆಮಾಡಿ ಅದನ್ನು ಭಂಗಪಡಿಸಿದವನಾಗಲೀ ನಿನ್ನ ವಂಶದಲ್ಲಿ ಹುಟ್ಟಲಿಲ್ಲ. ॥ ೩ ॥ ದಾನಕೊಡಬೇಕಾದ ಸಮಯದಲ್ಲಿ ಯಾಚಕರ ಯಾಚನೆಯನ್ನು ಕೇಳಿ ಮುಖತಿರುಗಿಸಿದವನಾಗಲೀ, ಯುದ್ಧದ ಸಂದರ್ಭದಲ್ಲಿ ಶತ್ರುವು ಯುದ್ಧಕ್ಕಾಗಿ ಆಹ್ವಾನಿಸಿದಾಗ ಬೆನ್ನುತೋರುವ ಹೇಡಿಯಾಗಲೀ ನಿನ್ನ ವಂಶದಲ್ಲಿ ಯಾರೂ ಹುಟ್ಟಲಿಲ್ಲ. ನಿಮ್ಮ ಕುಲಪರಂಪರೆಯಲ್ಲಿ ಪ್ರಹ್ಲಾದನು ಈಗಲೂ ಆಕಾಶದಲ್ಲಿರುವ ಚಂದ್ರನಂತೆ ನಿರ್ಮಲವಾದ ಯಶಸ್ಸಿನಿಂದ ಬೆಳಗುತ್ತಿರುವನು. ॥ ೪ ॥ ನಿನ್ನ ಕುಲದಲ್ಲೇ ಹಿರಣ್ಯಾಕ್ಷನಂತಹ ವೀರರ ಜನ್ಮವಾಗಿತ್ತು. ಆ ವೀರನು ಕೈಯಲ್ಲಿ ಗದೆಯನ್ನು ಹಿಡಿದುಕೊಂಡು ಒಬ್ಬಂಟಿಗನಾಗಿ ದಿಗ್ವಿಜಯಕ್ಕಾಗಿ ಹೋದಾಗ ಇಡೀ ಪೃಥಿವಿಯಲ್ಲಿ ತಿರುಗಿದರೂ ಅವನಿಗೆ ತನಗೆ ಸಮಾನನಾದ ವೀರನು ದೊರೆಯಲೇ ಇಲ್ಲ. ॥ ೫ ॥ ಭಗವಾನ್ ವಿಷ್ಣುವು ನೀರಿನಿಂದ ಪೃಥಿವಿಯನ್ನು ಉದ್ಧರಿಸುತ್ತಿದ್ದಾಗ ಅವನು ಅವನ ಮುಂದೆ ಬಂದನು ಮತ್ತು ಭಾರೀ ಕಷ್ಟದಿಂದ ಅವನನ್ನು ಗೆದ್ದುಕೊಂಡನು. ಆದರೂ ಇದಾದ ಬಹಳ ದಿನಗಳವರೆಗೂ ವಿಷ್ಣುವಿಗೆ ಪದೇ-ಪದೇ ಹಿರಣ್ಯಾಕ್ಷನ ಶಕ್ತಿ ಮತ್ತು ಬಲದ ಸ್ಮರಣೆಯಾಗುತ್ತಿತ್ತು. ಅವನನ್ನು ಗೆದ್ದುಕೊಂಡಿದ್ದರೂ ಅವನು ತನ್ನನ್ನು ವಿಜಯಿ ಎಂದು ತಿಳಿಯುತ್ತಿರಲಿಲ್ಲ. ॥ ೬ ॥ ಹಿರಣ್ಯಾಕ್ಷನ ಸಹೋದರ ಹಿರಣ್ಯಕಶಿಪುವಿಗೆ ತನ್ನ ತಮ್ಮನ ವಧೆಯ ವೃತ್ತಾಂತ ತಿಳಿದಾಗ ಅವನು ತನ್ನ ತಮ್ಮನನ್ನು ವಧಿಸಿದವನನ್ನು ಕೊಂದುಹಾಕಲಿಕ್ಕಾಗಿ ಕ್ರೋಧಗೊಂಡು ಭಗವಂತನ ನಿವಾಸಸ್ಥಾನವಾದ ವೈಕುಂಠಕ್ಕೆ ಹೋದನು. ॥ ೭ ॥

ಮಾಯಾವಿಗಳಲ್ಲಿ ಶ್ರೇಷ್ಠನಾದ, ಕಾಲಜ್ಞನಾದ, ಯಾವ ಕಾಲದಲ್ಲಿ ಹೇಗೆ ವರ್ತಿಸಬೇಕೆಂದು ತಿಳಿದಿದ್ದ ವಿಷ್ಣುವು ಯಮನಂತೆ ಶೂಲವನ್ನು ಕೈಯಲ್ಲಿ ಹಿಡಿದುಕೊಂಡು ಹಿರಣ್ಯಕಶಿಪು ತನ್ನನ್ನು ಆಕ್ರಮಿಸುತ್ತಿರುವನೆಂದು ತಿಳಿದು ಹೀಗೆ ಯೋಚಿಸಿದನು. ॥ ೮ ॥ ಯಾವಾಗಲೂ ಮೃತ್ಯುವು ಪ್ರಾಣಿಗಳ ಬೆನ್ನುಬಿಡದೆ ಇರುವಂತೆ ಈ ರಾಕ್ಷಸನು ನಾನು ಹೋದಲ್ಲೆಲ್ಲ ಹಿಂಬಾಲಿಸುವನು. ಆದಕ್ಕಾಗಿ ನಾನು ಇವನ ಹೃದಯದಲ್ಲಿ ಪ್ರವೇಶಿಸುವೆನು. ಆದರಿಂದ ಇವನು ನನ್ನನ್ನು ನೋಡಲಾರನು. ಏಕೆಂದರೆ, ಇವನಾದರೋ ಬಹಿರ್ಮುಖನಾಗಿದ್ದಾನೆ. ಹೊರಗಿನ ವಸ್ತುಗಳನ್ನು ಮಾತ್ರ ನೋಡಬಲ್ಲನು. ॥ ೯ ॥

ಏವಂ ಸ ನಿಶ್ಚಿತ್ಯ ರಿಪೋಃ ಶರೀರ-
ಮಾಧಾವತೋ ನಿರ್ವಿವಿಶೇಽಸುರೇಂದ್ರ ।
ಶ್ವಾಸಾನಿಲಾಂತರ್ಹಿತಸೂಕ್ಷ್ಮದೇಹ-
ಸ್ತತ್ಪ್ರಾಣರಂಧ್ರೇಣ ವಿವಿಗ್ನಚೇತಾಃ ॥ ೧೦ ॥

ಸ ತನ್ನಿಕೇತಂ ಪರಿಮೃಶ್ಯ ಶೂನ್ಯ-
ಮಪಶ್ಯಮಾನಃ ಕುಪಿತೋ ನನಾದ ।
ಕ್ಷ್ಮಾಂ ದ್ಯಾಂ ದಿಶಃ ಖಂ ವಿವರಾನ್ಸಮುದ್ರಾನ್
ವಿಷ್ಣುಂ ವಿಚಿನ್ವನ್ನ ದದರ್ಶ ವೀರಃ ॥ ೧೧ ॥

ಅಪಶ್ಯನ್ನಿತಿ ಹೋವಾಚ ಮಯಾನ್ವಿಷ್ಟಮಿದಂ ಜಗತ್ ।
ಭ್ರಾತೃಹಾ ಮೇ ಗತೋ ನೂನಂ ಯತೋ ನಾವರ್ತತೇ ಪುಮಾನ್ ॥ ೧೨ ॥

ವೈರಾನುಬಂಧ ಏತಾವಾನಾಮೃತ್ಯೋರಿಹ ದೇಹಿನಾಮ್ ।
ಅಜ್ಞಾನಪ್ರಭವೋ ಮನ್ಯುರಹಂಮಾನೋಪಬೃಂಹಿತಃ ॥ ೧೩ ॥

ಪಿತಾ ಪ್ರಹ್ಲಾದಪುತ್ರಸ್ತೇ ತದ್ವಿದ್ವಾನ್ದ್ವಿಜವತ್ಸಲಃ ।
ಸ್ವಮಾಯುರ್ದ್ವಿಜಲಿಂಗೇಭ್ಯೋ ದೇವೇಭ್ಯೋಽದಾತ್ಸ ಯಾಚಿತಃ ॥ ೧೪ ॥

ಭವಾನಾಚರಿತಾನ್ಧರ್ಮಾನಾಸ್ಥಿತೋ ಗೃಹಮೇಧಿಭಿಃ ।
ಬ್ರಾಹ್ಮಣೈಃ ಪೂರ್ವಜೈಃ ಶೂರೈರನ್ಯೈಶ್ಚೋದ್ದಾಮಕೀರ್ತಿಭಿಃ ॥ ೧೫ ॥

ತಸ್ಮಾತ್ತ್ವತ್ತೋ ಮಹೀಮೀಷದ್ವೃಣೇಽಹಂ ವರದರ್ಷಭಾತ್ ।
ಪದಾನಿ ತ್ರೀಣಿ ದೈತ್ಯೇಂದ್ರ ಸಂಮಿತಾನಿ ಪದಾ ಮಮ ॥ ೧೬ ॥

ನಾನ್ಯತ್ತೇ ಕಾಮಯೇ ರಾಜನ್ವದಾನ್ಯಾಜ್ಜಗದೀಶ್ವರಾತ್ ।
ನೈನಃ ಪ್ರಾಪ್ನೋತಿ ವೈ ವಿದ್ವಾನ್ಯಾವದರ್ಥಪ್ರತಿಗ್ರಹಃ ॥ ೧೭ ॥

ಬಲಿರುವಾಚ

ಅಹೋ ಬ್ರಾಹ್ಮಣದಾಯಾದ ವಾಚಸ್ತೇ ವೃದ್ಧಸಂಮತಾಃ ।
ತ್ವಂ ಬಾಲೋ ಬಾಲಿಶಮತಿಃ ಸ್ವಾರ್ಥಂ ಪ್ರತ್ಯಬುಧೋ ಯಥಾ ॥ ೧೮ ॥

ಮಾಂ ವಚೋಭಿಃ ಸಮಾರಾಧ್ಯ
ಲೋಕಾನಾಮೇಕಮೀಶ್ವರಮ್ ।
ಪದತ್ರಯಂ ವೃಣೀತೇ ಯೋಽ-
ಬುದ್ಧಿಮಾನ್ದ್ವೀಪದಾಶುಷಮ್ ॥ ೧೯ ॥

ಅಸುರಶಿರೋಮಣಿಯೇ! ಹಿರಣ್ಯಕಶಿಪು ಅವನ ಮೇಲೆ ಆಕ್ರಮಿಸಿದಾಗ ಹೀಗೆ ಯೋಚಿಸಿ ಭಯದಿಂದ ನಡುಗುತ್ತಾ ಭಗವಾನ್ ವಿಷ್ಣುವು ತನ್ನ ಶರೀರವನ್ನು ಸೂಕ್ಷ್ಮವಾಗಿಸಿಕೊಂಡು ಅವನ ಪ್ರಾಣಗಳೊಂದಿಗೆ ಮೂಗಿನ ಮೂಲಕ ಹೃದಯದಲ್ಲಿ ಹೋಗಿ ಕುಳಿತನು. ॥ ೧೦ ॥ ಹಿರಣ್ಯಕಶಿಪು ಅವನ ಲೋಕವನ್ನು ಚೆನ್ನಾಗಿ ಜಾಲಾಡಿದನು. ಆದರೆ ಅವನು ಎಲ್ಲಿಯೂ ಕಾಣಲಿಲ್ಲ. ಇದರಿಂದ ಕ್ರೋಧಿತನಾಗಿ ಸಿಂಹನಾದವನ್ನು ಮಾಡತೊಡಗಿದನು. ಆ ವೀರನು ಪೃಥಿವಿ, ಸ್ವರ್ಗ, ದಿಕ್ಕುಗಳು, ಆಕಾಶ, ಪಾತಾಳ, ಸಮುದ್ರ – ಹೀಗೆ ಎಲ್ಲೆಡೆ ಮಹಾವಿಷ್ಣುವನ್ನು ಹುಡುಕಿದನು. ಆದರೆ ಅವನು ಎಲ್ಲಿಯೂ ಅವನಿಗೆ ಕಂಡುಬರಲಿಲ್ಲ. ॥ ೧೧ ॥ ಅವನನ್ನು ಎಲ್ಲಿಯೂ ಕಾಣದೆ – 'ನಾನು ಇಡೀ ಜಗತ್ತನ್ನು ಹುಡುಕಿಬಿಟ್ಟೆ. ಆದರೆ ಅವನು ಸಿಗಲೇ ಇಲ್ಲ. ಆ ಭ್ರಾತೃಘಾತಿಯು ಜೀವಿಗಳು ಹೋದಬಳಿಕ ಮರಳಿ ಬರದಿರುವ ಲೋಕಕ್ಕೆ (ಯಮಲೋಕಕ್ಕೆ) ಹೋಗಿರಬೇಕು' ಎಂದು ಯೋಚಿಸಿದನು. ॥ ೧೨ ॥ ಮೃತ್ಯುವಶನಾದವನಲ್ಲಿ ವೈರಭಾವವನ್ನು ಇರಿಸಿಕೊಳ್ಳುವ ಆವಶ್ಯಕತೆ ಇಲ್ಲ. ಏಕೆಂದರೆ, ವೈರವಾದರೋ ದೇಹದೊಂದಿಗೆ ಮುಗಿದುಹೋಗುತ್ತದೆ. ಕ್ರೋಧದ ಕಾರಣ ಅಜ್ಞಾನ ಮತ್ತು ಅಹಂಕಾರದಿಂದ ಅದು ಬೆಳೆಯುತ್ತದೆ. ॥ ೧೩ ॥ ರಾಜನೇ! ನಿನ್ನ ತಂದೆಯಾದ ಪ್ರಹ್ಲಾದನಂದನ ವಿರೋಚನನೂ ಬ್ರಾಹ್ಮಣಭಕ್ತನಾಗಿದ್ದನು. ಅವನ ಶತ್ರುಗಳಾದ ದೇವತೆಗಳು ಬ್ರಾಹ್ಮಣರ ವೇಷವನ್ನು ತಳೆದು ಅವನಲ್ಲಿ ಅವನ ಆಯುಷ್ಯವನ್ನು ದಾನವಾಗಿ ಬೇಡಿದರು. ಅವನು ಬ್ರಾಹ್ಮಣರ ಕಪಟವನ್ನು ಅರಿತಿದ್ದರೂ ತನ್ನ ಆಯುಸ್ಸನ್ನು ದಾನ ಮಾಡಿಬಿಟ್ಟನು. ॥ ೧೪ ॥ ನಿನ್ನ ಪೂರ್ವಜರಂತೆ ನೀನೂ ಕೂಡ ಶುಕ್ರಾಚಾರ್ಯರೇ ಮೊದಲಾದ ಗೃಹಸ್ಥ ಬ್ರಾಹ್ಮಣರು ಆಚರಿಸುವ ಧರ್ಮಗಳನ್ನೂ, ನಿನ್ನ ಪೂರ್ವಜರಾದ ಪ್ರಹ್ಲಾದನೇ ಮೊದಲಾದ ಇತರ ಯಶಸ್ವೀ ವೀರರು ಆಚರಿಸಿದ ಧರ್ಮವನ್ನೇ ಆಚರಿಸುತ್ತಿರುವೆ. ॥ ೧೫ ॥ ದೈತ್ಯೇಂದ್ರನೇ! ನೀನು ಕೇಳಿದ ವಸ್ತುವನ್ನು ಕೊಡುವವರಲ್ಲಿ ಶ್ರೇಷ್ಠನಾಗಿರುವೆ. ಇದರಿಂದಲೇ ನಾನು ನಿನ್ನಲ್ಲಿ ಕೇವಲ ನನ್ನ ಮೂರು ಹೆಜ್ಜೆಗಳಷ್ಟು ಭೂಮಿಯನ್ನು ಬೇಡುತ್ತೇನೆ. ॥ ೧೬ ॥ ಮಹಾರಾಜಾ! ನೀನು ಇಡೀ ಜಗತ್ತಿನ ಒಡೆಯನಾಗಿರುವೆ. ಉದಾರನಾಗಿರುವೆ. ಹೀಗಿದ್ದರೂ ನಾನು ನಿನ್ನಲ್ಲಿ ಇದಕ್ಕಿಂತ ಹೆಚ್ಚಿನದನ್ನು ಬಯಸುವುದಿಲ್ಲ. ವಿದ್ವಾಂಸನಾದವನು ಕೇವಲ ತನ್ನ ಆವಶ್ಯಕತೆಗನುಸಾರವಾಗಿಯೇ ದಾನವನ್ನು ಸ್ವೀಕರಿಸಬೇಕು. ಇದರಿಂದ ಅವನು ಪ್ರತಿಗ್ರಹಜನ್ಯ ದೋಷದಿಂದ ಮುಕ್ತನಾಗುತ್ತಾನೆ. ॥ ೧೭ ॥

ಬಲಿರಾಜನು ಹೇಳಿದನು – ಬ್ರಾಹ್ಮಣಕುಮಾರ! ನಿನ್ನ ಮಾತುಗಳಾದರೋ ವೃದ್ಧರ ಮಾತುಗಳಂತೆ ಇವೆ. ಆದರೆ ನಿನ್ನ ಬುದ್ಧಿಯು ಇನ್ನೂ ಬಾಲಕರಂತೆಯೇ ಇದೆಯಲ್ಲ! ಈಗ ನೀನು ಎಷ್ಟಾದರೂ ಹುಡುಗನೇ ಅಲ್ಲವೇ! ಇದರಿಂದ ನಿನ್ನ ಲಾಭ-ಹಾನಿ ತಿಳಿಯುತ್ತಿಲ್ಲ. ॥ ೧೮ ॥ ನಾನು ಮೂರು ಲೋಕಗಳಿಗೂ ಏಕಮಾತ್ರ ಅಧಿಪತಿಯಾಗಿರುವನು. ಬೇಕಾದರೆ ಒಂದು ದ್ವೀಪವನ್ನೇ ಕೊಡಬಲ್ಲೆನು. ನನ್ನನ್ನು ಸುಮಧುರ ಮಾತುಗಳಿಂದ ಸಂತೋಷಗೊಳಿಸಿ, ಕೇವಲ ಮೂರು ಹೆಜ್ಜೆಗಳಷ್ಟು ಭೂಮಿಯನ್ನು ಬಯಸಿದರೆ ಅವನನ್ನು ಬುದ್ಧಿವಂತನೆಂದು ಹೇಳಬಹುದೇ? ॥ ೧೯ ॥

ನ ಪುಮಾನ್ಮಾಮುಪವ್ರಜ್ಯ ಭೂಯೋ ಯಾಚಿತುಮರ್ಹತಿ ।
ತಸ್ಮಾದ್ವೃತ್ತಿಕರೀಂ ಭೂಮಿಂ ವಟೋ ಕಾಮಂ ಪ್ರತೀಚ್ಛ ಮೇ ॥ ೨೦ ॥

ಶ್ರೀಭಗವಾನುವಾಚ

ಯಾವಂತೋ ವಿಷಯಾಃ ಪ್ರೇಷ್ಠಾಸ್ತ್ರಿಲೋಕ್ಯಾಮಜಿತೇಂದ್ರಿಯಮ್ ।
ನ ಶಕ್ನುವಂತಿ ತೇ ಸರ್ವೇ ಪ್ರತಿಪೂರಯಿತುಂ ನೃಪ ॥ ೨೧ ॥

ತ್ರಿಭಿಃ ಕ್ರಮೈರಸಂತುಷ್ಟೋ ದ್ವೀಪೇನಾಪಿ ನ ಪೂರ್ಯತೇ ।
ನವವರ್ಷಸಮೇತೇನ ಸಪ್ತದ್ವೀಪವರೇಚ್ಛಯಾ ॥ ೨೨ ॥

ಸಪ್ತದ್ವೀಪಾಧಿಪತಯೋ ನೃಪಾ ವೈನ್ಯಗಯಾದಯಃ ।
ಅರ್ಥೈಃ ಕಾಮೈರ್ಗತಾ ನಾಂತಂ ತೃಷ್ಣಾಯಾ ಇತಿ ನಃ ಶ್ರುತಮ್ ॥ ೨೩ ॥

ಯದೃಚ್ಛಯೋಪಪನ್ನೇನ ಸಂತುಷ್ಟೋ ವರ್ತತೇ ಸುಖಮ್ ।
ನಾಸಂತುಷ್ಟಸ್ತ್ರಿಭಿರ್ಲೋಕೈರಜಿತಾತ್ಮೋಪಸಾದಿತೈಃ ॥ ೨೪ ॥

ಪುಂಸೋಽಯಂ ಸಂಸೃತೇರ್ಹೇತು-
ರಸಂತೋಷೋಽರ್ಥಕಾಮಯೋಃ ।
ಯದೃಚ್ಛಯೋಪಪನ್ನೇನ
ಸಂತೋಷೋ ಮುಕ್ತಯೇ ಸ್ಮೃತಃ ॥ ೨೫ ॥

ಯದೃಚ್ಛಾಲಾಭತುಷ್ಟಸ್ಯ ತೇಜೋ ವಿಪ್ರಸ್ಯ ವರ್ಧತೇ ।
ತತ್ಪ್ರಶಾಮ್ಯತ್ಯಸಂತೋಷಾದಂಭಸೇವಾಶುಶುಕ್ಷಣಿಃ ॥ ೨೬ ॥

ತಸ್ಮಾತ್ತ್ರೀಣಿ ಪದಾನ್ಯೇವ ವೃಣೇ ತ್ವದ್ವರದರ್ಷಭಾತ್ ।
ಏತಾವತೈವ ಸಿದ್ಧೋಽಹಂ ವಿತ್ತಂ ಯಾವತ್ಪ್ರಯೋಜನಮ್ ॥ ೨೭ ॥

ಶ್ರೀಶುಕ ಉವಾಚ

ಇತ್ಯುಕ್ತಃ ಸ ಹಸನ್ನಾಹ ವಾಂಛಾತಃ ಪ್ರತಿಗೃಹ್ಯತಾಮ್ ।
ವಾಮನಾಯ ಮಹೀಂ ದಾತುಂ ಜಗ್ರಾಹ ಜಲಭಾಜನಮ್ ॥ ೨೮ ॥

ವಿಷ್ಣವೇ ಕ್ಷ್ಮಾಂ ಪ್ರದಾಸ್ಯಂತಮುಶನಾ ಅಸುರೇಶ್ವರಮ್ ।
ಜಾನಂಶ್ಚಿಕೀರ್ಷಿತಂ ವಿಷ್ಣೋಃ ಶಿಷ್ಯಂ ಪ್ರಾಹ ವಿದಾಂ ವರಃ ॥ ೨೯ ॥

ಶುಕ್ರ ಉವಾಚ

ಏಷ ವೈರೋಚನೇ ಸಾಕ್ಷಾದ್ಭಗವಾನ್ವಿಷ್ಣುರವ್ಯಯಃ ।
ಕಶ್ಯಪಾದದಿತೇರ್ಜಾತೋ ದೇವಾನಾಂ ಕಾರ್ಯಸಾಧಕಃ ॥ ೩೦ ॥

ಬ್ರಹ್ಮಚಾರಿಯೇ! ಯಾರೇ ಆಗಲೀ, ನನ್ನ ಬಳಿಯಲ್ಲಿ ಯಾಚಿಸಲು ಒಮ್ಮೆ ಬಂದವನು ಮತ್ತೆಂದಿಗೂ ಯಾರಲ್ಲಿಯೂ ಪುನಃ ಬೇಡಲು ಹೋಗಬಾರದು. ಇದು ನನ್ನ ಅಭಿಮತವಾಗಿದೆ. ಆದುದರಿಂದ ನಿನ್ನ ಜೀವನನಿರ್ವಾಹಕ್ಕೆ ಬೇಕಾದಷ್ಟು ಫಲವತ್ತಾದ ಭೂಮಿಯನ್ನು ಕೇಳಿಕೋ. ॥ ೨೦ ॥

ಶ್ರೀಭಗವಂತನು ಹೇಳಿದನು – ರಾಜನೇ! ಪ್ರಪಂಚದ ಎಲ್ಲ ಪ್ರಿಯವಾದ ವಿಷಯಗಳು ದೊರೆತರೂ ಜಿತೇಂದ್ರಿಯನಲ್ಲದ, ಸಂತೋಷಿಯಲ್ಲದ ಓರ್ವ ಮನುಷ್ಯನ ಕಾಮನೆಗಳನ್ನೂ ಕೂಡ ಪೂರ್ಣಗೊಳಿಸಲು ಸಮರ್ಥವಾಗಿಲ್ಲ. ॥ ೨೧ ॥ ಮೂರು ಹೆಜ್ಜೆ ಭೂಮಿಯಿಂದ ಸಂತೋಷಪಡದವನಿಗೆ ಒಂದು ದ್ವೀಪವನ್ನೇ ಕೊಟ್ಟರೂ ಅವನು ಸಂತುಷ್ಟನಾಗಲಾರನು. ಏಕೆಂದರೆ, ಅವನ ಮನಸ್ಸಿನಲ್ಲಿ ಏಳೂ ದ್ವೀಪಗಳನ್ನೂ ಪಡೆಯುವ ಇಚ್ಛೆ ಇದ್ದೇ ಇರುತ್ತದೆ. ॥ ೨೨ ॥ ಪೃಥು, ಗಯ, ಮೊದಲಾದ ರಾಜರು ಏಳು ದ್ವೀಪಗಳ ಅಧಿಪತಿಗಳಾಗಿದ್ದರು. ಅವರೂ ಅಷ್ಟು ಧನ, ಭೋಗ ಸಾಮಗ್ರಿಗಳು ದೊರಕಿದರೂ ಅವರು ತೃಷ್ಣೆಯ ಪಾರವನ್ನು ಕಾಣಲು ಸಾಧ್ಯವಾಗಲಿಲ್ಲವೆಂದು ನಾನು ಕೇಳಿದ್ದೇನೆ. ॥ ೨೩ ॥ ಪ್ರಾರಬ್ಧದಿಂದ ದೊರೆತುದರಲ್ಲಿ ಸಂತುಷ್ಟನಾಗಿರುವವನು ತನ್ನ ಜೀವನವನ್ನು ಸುಖವಾಗಿ ಕಳೆಯುತ್ತಾನೆ. ಆದರೆ ಜಿತೇಂದ್ರಿಯನಲ್ಲದವನು ಮೂರುಲೋಕದ ರಾಜ್ಯ ಸಿಕ್ಕಿದರೂ ದುಃಖಿಯಾಗಿಯೇ ಇರುತ್ತಾನೆ. ಏಕೆಂದರೆ, ಅವನ ಹೃದಯದಲ್ಲಿ ಅಸಂತೋಷದ ಅಗ್ನಿಯು ಧಗ-ಧಗಿಸುತ್ತಿರುತ್ತದೆ. ॥ ೨೪ ॥ ಧನ ಮತ್ತು ಭೋಗಗಳಿಂದ ಸಂತೋಷಪಡದಿರುವುದೇ ಜೀವಿಯು ಜನ್ಮ-ಮರಣದ ಚಕ್ರದಲ್ಲಿ ಬೀಳುವುದಾಗಿದೆ. ದೈವೇಚ್ಛೆಯಿಂದ ದೊರೆಯುದರಲ್ಲಿ ಸಂತೋಷ ಪಡುವುದೇ ಮುಕ್ತಿಗೆ ಕಾರಣವಾಗುತ್ತದೆ. ॥ ೨೫ ॥ ತಾನಾಗಿ ದೊರೆತ ವಸ್ತುವಿನಿಂದಲೇ ಸಂತುಷ್ಟನಾಗುವ ಬ್ರಾಹ್ಮಣನ ತೇಜವು ವೃದ್ಧಿಯಾಗುತ್ತದೆ. ಅವನು ಅತೃಪ್ತನಾದರೆ ಅವನ ತೇಜವು – ನೀರಿನಿಂದ ಅಗ್ನಿಯು ಶಾಂತವಾಗುವಂತೆ ಇಲ್ಲವಾಗುತ್ತದೆ. ॥ ೨೬ ॥ ಕೇಳಿದ ವಸ್ತುವನ್ನು ಕೊಡುವುದರಲ್ಲಿ ನೀನು ಶಿರೋಮಣಿಯಾಗಿರುವೆ. ಇದರಲ್ಲಿ ಸಂದೇಹವೇ ಇಲ್ಲ. ಅದಕ್ಕಾಗಿ ನಾನು ನಿನ್ನಲ್ಲಿ ಕೇವಲ ಮೂರು ಹೆಜ್ಜೆ ಭೂಮಿಯನ್ನು ಬೇಡುತ್ತಿದ್ದೇನೆ. ಇಷ್ಟರಿಂದಲೇ ನನ್ನ ಕೆಲಸ ಆಗಿಹೋದೀತು. ಆವಶ್ಯಕತೆ ಇದ್ದಷ್ಟೇ ಧನವನ್ನು ಸಂಗ್ರಹಿಸಬೇಕು. ॥ ೨೭ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಭಗವಂತನು ಹೀಗೆ ಹೇಳಿದಾಗ ಬಲಿಯು ನಗುತ್ತಾ – 'ಒಳ್ಳೆಯದು, ನಿನಗೆ ಇಷ್ಟವಿರುವಷ್ಟೇ ಪಡೆದುಕೋ.' ಹೀಗೆ ಹೇಳಿ ಭಗವಾನ್ ವಾಮನನಿಗೆ ಮೂರು ಹೆಜ್ಜೆ ಭೂಮಿಯನ್ನು ದಾನಮಾಡುವ ಸಂಕಲ್ಪಕ್ಕಾಗಿ ನೀರಿನ ಪಾತ್ರೆಯನ್ನು ಎತ್ತಿಕೊಂಡನು. ॥ ೨೮ ॥ ಶುಕ್ರಾಚಾರ್ಯರು ಎಲ್ಲವನ್ನೂ ಬಲ್ಲವರಾಗಿದ್ದರು. ಭಗವಂತನ ಈ ಲೀಲೆಯೂ ಕೂಡ ಅವರಿಗೆ ತಿಳಿದಿತ್ತು. ಅವರು ರಾಜಾಬಲಿಗೆ ಭೂಮಿಯನ್ನು ಕೊಡಲು ಉದ್ಯುಕ್ತನಾದುದನ್ನು ಕಂಡು ಅವನಲ್ಲಿ ಹೇಳಿದರು – ॥ ೨೯ ॥

ಶುಕ್ರಾಚಾರ್ಯರು ಹೇಳುತ್ತಾರೆ – ವಿರೋಚನಪುತ್ರನಾದ ಬಲಿಯೇ! ಇವನು ಸ್ವತಃ ಅವಿನಾಶಿ ಭಗವಂತನಾಗಿದ್ದಾನೆ. ದೇವತೆಗಳ ಕಾರ್ಯವನ್ನು ಸಾಧಿಸಿಕೊಡಲಿಕ್ಕಾಗಿ ಕಶ್ಯಪರ ಪತ್ನೀ ಅದಿತಿಯ ಗರ್ಭದಿಂದ ಅವತರಿಸಿರುವನು. ॥ ೩೦ ॥

ಪ್ರತಿಶ್ರುತಂ ತ್ವಯೈತಸ್ಮೈ ಯದನರ್ಥಮಜಾನತಾ ।
ನ ಸಾಧು ಮನ್ಯೇ ದೈತ್ಯಾನಾಂ ಮಹಾನುಪಗತೋಽನಯಃ ॥ ೩೧ ॥

ಏಷ ತೇ ಸ್ಥಾನಮೈಶ್ವರ್ಯಂ ಶ್ರಿಯಂ ತೇಜೋ ಯಶಃ ಶ್ರುತಮ್ ।
ದಾಸ್ಯತ್ಯಾಚ್ಛಿದ್ಯ ಶಕ್ರಾಯ ಮಾಯಾಮಾಣವಕೋ ಹರಿಃ ॥ ೩೨ ॥

ತ್ರಿಭಿಃ ಕ್ರಮೈರಿಮಾಂಲ್ಲೋಕಾನ್ವಿಶ್ವಕಾಯಃ ಕ್ರಮಿಷ್ಯತಿ ।
ಸರ್ವಸ್ವಂ ವಿಷ್ಣವೇ ದತ್ತ್ವಾ ಮೂಢ ವರ್ತಿಷ್ಯಸೇ ಕಥಮ್ ॥ ೩೩ ॥

ಕ್ರಮತೋ ಗಾಂ ಪದೈಕೇನ ದ್ವಿತೀಯೇನ ದಿವಂ ವಿಭೋಃ ।
ಖಂ ಚ ಕಾಯೇನ ಮಹತಾ ತಾರ್ತೀಯಸ್ಯ ಕುತೋ ಗತಿಃ ॥ ೩೪ ॥

ನಿಷ್ಠಾಂ ತೇ ನರಕೇ ಮನ್ಯೇ ಹ್ಯಪ್ರದಾತುಃ ಪ್ರತಿಶ್ರುತಮ್ ।
ಪ್ರತಿಶ್ರುತಸ್ಯ ಯೋಽನೀಶಃ ಪ್ರತಿಪಾದಯಿತುಂ ಭವಾನ್ ॥ ೩೫ ॥

ನ ತದ್ದಾನಂ ಪ್ರಶಂಸಂತಿ ಯೇನ ವೃತ್ತಿರ್ವಿಪದ್ಯತೇ ।
ದಾನಂ ಯಜ್ಞಸ್ತಪಃ ಕರ್ಮ ಲೋಕೇ ವೃತ್ತಿಮತೋ ಯತಃ ॥ ೩೬ ॥

ಧರ್ಮಾಯ ಯಶಸೇಽರ್ಥಾಯ ಕಾಮಾಯ ಸ್ವಜನಾಯ ಚ ।
ಪಂಚಧಾ ವಿಭಜನ್ವಿತ್ತಮಿಹಾಮುತ್ರ ಚ ಮೋದತೇ ॥ ೩೭ ॥

ಅತ್ರಾಪಿ ಬಹ್ವೃಚೈರ್ಗೀತಂ ಶೃಣು ಮೇಽಸುರಸತ್ತಮ ।
ಸತ್ಯಮೋಮಿತಿ ಯತ್ಪ್ರೋಕ್ತಂ ಯನ್ನೇತ್ಯಾಹಾನೃತಂ ಹಿ ತತ್ ॥ ೩೮ ॥

ಸತ್ಯಂ ಪುಷ್ಪಫಲಂ ವಿದ್ಯಾದಾತ್ಮವೃಕ್ಷಸ್ಯ ಗೀಯತೇ ।
ವೃಕ್ಷೇಽಜೀವತಿ ತನ್ನ ಸ್ಯಾದನೃತಂ ಮೂಲಮಾತ್ಮನಃ ॥ ೩೯ ॥

ಇವನು ತನ್ನೆಲ್ಲವನ್ನು ಕಸಿದುಕೊಳ್ಳುವನು ಎಂಬುದನ್ನು ನೀನು ತಿಳಿಯೆ. ಇವನಿಗೆ ದಾನವನ್ನು ಕೊಡುವ ಪ್ರತಿಜ್ಞೆಯನ್ನು ಮಾಡಿರುವೆಯಲ್ಲ, ಇದರಿಂದ ಭಾರೀ ಅನರ್ಥವಾದೀತು. ಇದರಿಂದ ಸಕಲ ದೈತ್ಯರಿಗೆ ಅಪಾರ ವಿಪತ್ತು ಸಂಭವಿಸುತ್ತದೆ. ಇದು ಸರಿಯೆಂದು ನನಗೆ ಅನಿಸುವುದಿಲ್ಲ. ॥ ೩೧ ॥ ಸ್ವಯಂ ಭಗವಂತನೇ ತನ್ನ ಯೋಗಮಾಯೆಯಿಂದ ಹೀಗೆ ಬ್ರಹ್ಮಚಾರಿಯಾಗಿ ನಿನ್ನ ಮುಂದೆ ಕುಳಿತಿರುವನು. ಇವನು ನಿನ್ನ ರಾಜ್ಯ, ಐಶ್ವರ್ಯ, ಲಕ್ಷ್ಮೀ, ತೇಜ ಮತ್ತು ವಿಶ್ವವಿಖ್ಯಾತ ಕೀರ್ತಿ – ಇವೆಲ್ಲವನ್ನೂ ನಿನ್ನಿಂದ ಕಸಿದುಕೊಂಡು ಒಪ್ಪಿಸುವನು. ॥ ೩೨ ॥ ಇವನು ವಿಶ್ವರೂಪನಾಗಿದ್ದಾನೆ. ಮೂರು ಹೆಜ್ಜೆಗಳಿಂದ ಇವನು ಎಲ್ಲ ಲೋಕಗಳನ್ನು ಅಳೆದುಕೊಂಡಾನು. ಮೂರ್ಖ! ತನ್ನೆಲ್ಲವನ್ನೂ ನೀನು ವಿಷ್ಣುವಿಗೆ ಕೊಟ್ಟುಬಿಟ್ಟರೆ ನಿನ್ನ ಜೀವನ ನಿರ್ವಾಹ ಹೇಗೆ ತಾನೇ ನಡೆದೀತು? ॥ ೩೩ ॥ ಈ ವಿಶ್ವವ್ಯಾಪಕ ಭಗವಂತನು ಒಂದು ಹೆಜ್ಜೆಯಿಂದ ಪೃಥಿವಿಯನ್ನೂ, ಎರಡನೆ ಹೆಜ್ಜೆಯಿಂದ ಸ್ವರ್ಗವನ್ನೂ ಅಳೆದುಕೊಂಡಾನು. ಇವನ ವಿಶಾಲ ಶರೀರದಿಂದ ಆಕಾಶ ತುಂಬಿಹೋದೀತು. ಆಗ ಇವನು ಮೂರನೆಯ ಹೆಜ್ಜೆಯನ್ನು ಎಲ್ಲಿಡುವನು? ॥ ೩೪ ॥ ನೀನು ಅದನ್ನು ಪೂರ್ಣಗೊಳಿಸಲಾರೆ. ಇಂತಹ ಸ್ಥಿತಿಯಲ್ಲಿ ಪ್ರತಿಜ್ಞೆಮಾಡಿ ಪೂರ್ಣಗೊಳಿಸದೇ ಇರುವುದರಿಂದ ನಿನಗೆ ನರಕಕ್ಕೆ ಹೋಗಬೇಕಾದೀತು ಎಂದು ನಾನು ತಿಳಿಯುತ್ತೇನೆ. ಏಕೆಂದರೆ ನೀನು ಮಾಡಿರುವ ಪ್ರತಿಜ್ಞೆಯನ್ನು ಪೂರ್ಣಗೊಳಿಸಲು ಸರ್ವಥಾ ಅಸಮರ್ಥನಾಗುವೆ. ॥ ೩೫ ॥ ಯಾವ ದಾನಮಾಡಿದ ನಂತರ ಜೀವನ ನಿರ್ವಹಣೆಗೂ ಏನೂ ಉಳಿಯುವುದಿಲ್ಲವೋ, ಆ ದಾನವನ್ನು ವಿದ್ವಾಂಸರು ಪ್ರಶಂಸಿಸುವುದಿಲ್ಲ. ಜೀವನನಿರ್ವಾಹವು ಸರಿಯಾಗಿ ನಡೆಸುವವನೇ ಜಗತ್ತಿನಲ್ಲಿ ದಾನ, ಯಜ್ಞ, ತಪಸ್ಸು, ಪರೋಪಕಾರದ ಕರ್ಮ ಇವುಗಳನ್ನು ಮಾಡಬಲ್ಲನು. ॥ ೩೬ ॥ ತನ್ನ ಧನದಲ್ಲಿ ಸ್ವಲ್ಪ ಧರ್ಮಕ್ಕಾಗಿ, ಸ್ವಲ್ಪ ಕೀರ್ತಿಗಾಗಿ, ಸ್ವಲ್ಪ ಧನದ ಅಭಿವೃದ್ಧಿಗಾಗಿ, ಸ್ವಲ್ಪ ಭೋಗಗಳಿಗಾಗಿ, ಸ್ವಲ್ಪ ಸ್ವಜನರಿಗಾಗಿ ಹೀಗೆ ಐದು ಭಾಗಗಳಲ್ಲಿ ಹಂಚುವ ಮನುಷ್ಯನೇ ಈ ಲೋಕ ಮತ್ತು ಪರಲೋಕದಲ್ಲಿ ಸುಖವಾಗಿರುತ್ತಾನೆ. ॥ ೩೭ ॥ ಅಸುರಶಿರೋಮಣಿಯೇ! ತನ್ನ ಪ್ರತಿಜ್ಞೆಯು ಭಂಗವಾದೀತೆಂಬ ಚಿಂತೆ ನಿನಗಿದ್ದರೆ ನಾನು ಈ ವಿಷಯದಲ್ಲಿ ನಿನಗೆ ಸತ್ಯಾನೃತಗಳ ಕುರಿತು ಋಗ್ವೇದದಲ್ಲಿ ಹೇಳಿರುವುದನ್ನು ತಿಳಿಸುವೆನು ಕೇಳು. ಯಾರಿಗಾದರೂ ಏನಾದರೂ ಕೊಡುತ್ತೇನೆ ಎಂದು ಹೇಳುವುದು ಸತ್ಯವಾಗಿದೆ ಮತ್ತು ಅಸ್ವೀಕಾರ ಮಾಡುವುದು – ಕೊಡುವುದಿಲ್ಲವೆಂದು ಹೇಳುವುದು ಅಸತ್ಯವಾಗಿದೆ. ॥ ೩೮ ॥ ಈ ಶರೀರವು ಒಂದು ವೃಕ್ಷವಾಗಿದೆ. ಸತ್ಯವು ಇದರ ಫಲ-ಪುಷ್ಪವಾಗಿದೆ. ಆದರೆ ವೃಕ್ಷವೇ ಇಲ್ಲದಿದ್ದರೆ (ದೇಹವೇ ಇಲ್ಲದಿದ್ದರೆ) ಫಲ-ಪುಷ್ಪಗಳು ಹೇಗೆ ಇರಬಲ್ಲವು? ಏಕೆಂದರೆ, ಇಲ್ಲವೆಂದು ಹೇಳುವುದು, ತನ್ನ ವಸ್ತುವನ್ನು ಬೇರೆಯವರಿಗೆ ಕೊಡದಿರುವುದು, ಇನ್ನೊಂದು ಅರ್ಥದಲ್ಲಿ ತನ್ನ ಸಂಗ್ರಹವನ್ನು ಉಳಿಸಿಕೊಳ್ಳುವುದು – ಇದೇ ಶರೀರ ವೃಕ್ಷದ ಮೂಲವಾಗಿದೆ. ॥ ೩೯ ॥ ಬೇರುಗಳು ಕತ್ತರಿಸಿದಾಗ ಮರವು ಒಣಗಿಹೋಗಿ ಕೆಲವೇ ದಿನಗಳಲ್ಲಿ ಬಿದ್ದುಹೋಗುವಂತೆಯೇ ಧನವನ್ನು ಕೊಡಲು ಸ್ವೀಕರಿಸಿದರೆ ಈ ಜೀವನವು

ತದ್ಯಥಾ ವೃಕ್ಷ ಉನ್ಮೂಲಃ ಶುಷ್ಯತ್ಯುದ್ವರ್ತತೇಽಚಿರಾತ್ ।
ಏವಂ ನಷ್ಟಾನೃತಃ ಸದ್ಯ ಆತ್ಮಾ ಶುಷ್ಯೇನ್ನ ಸಂಶಯಃ ॥ ೪೦ ॥

ಪರಾಗ್ರಿಕ್ತಮಪೂರ್ಣಂ ವಾ ಅಕ್ಷರಂ ಯತ್ತದೋಮಿತಿ ।
ಯತ್ಕಿಂಚಿದೋಮಿತಿ ಬ್ರೂಯಾತ್ತೇನ ರಿಚ್ಯೇತ ವೈ ಪುಮಾನ್ ।
ಭಿಕ್ಷವೇ ಸರ್ವಮೋಂಕುರ್ವನ್ನಾಲಂ ಕಾಮೇನ ಚಾತ್ಮನೇ ॥ ೪೧ ॥

ಅಥೈತತ್ಪೂರ್ಣಮಭ್ಯಾತ್ಮಂ ಯಚ್ಚ ನೇತ್ಯನೃತಂ ವಚಃ ।
ಸರ್ವಂ ನೇತ್ಯನೃತಂ ಬ್ರೂಯಾತ್ಸ ದುಷ್ಕೀರ್ತಿಃ ಶ್ವಸನ್ಮೃತಃ ॥ ೪೨ ॥

ಸ್ತ್ರೀಷು ನರ್ಮವಿವಾಹೇ ಚ ವೃತ್ತ್ಯರ್ಥೇ ಪ್ರಾಣಸಂಕಟೇ ।
ಗೋಬ್ರಾಹ್ಮಣಾರ್ಥೇ ಹಿಂಸಾಯಾಂ ನಾನೃತಂ ಸ್ಯಾಜ್ಜುಗುಪ್ಸಿತಮ್ ॥ ೪೩ ॥

ಒಣಗಿ ಹೋಗುವುದರಲ್ಲಿ ಸಂದೇಹವೇ ಇಲ್ಲ. ॥ ೪೦ ॥ 'ನಾನು ಕೊಡುವೆನು' ಈ ವಾಕ್ಯವೇ ಧನವನ್ನು ದೂರಕಳಿಸುತ್ತದೆ. ಅದಕ್ಕಾಗಿ ಇದನ್ನು ಉಚ್ಚರಿಸುವುದೇ ಅಪೂರ್ಣ ಅರ್ಥಾತ್ – ಧನವನ್ನು ಖಾಲಿಯಾಗಿಸುವುದಾಗಿದೆ. 'ನಾನು ಕೊಡುತ್ತೇನೆ' ಎಂದು ಹೇಳುವುದೇ ಧನದಿಂದ ಬರಿದಾಗುವ ಕಾರಣವಾಗಿದೆ. ಯಾರು ಯಾಚಕನಿಗೆ ಎಲ್ಲವನ್ನು ಕೊಡಲು ಸ್ವೀಕರಿಸುವನೋ ಅವನು ತನಗಾಗಿ ಭೋಗದ ಯಾವ ಸಾಮಗ್ರಿಯನ್ನು ಇರಿಸಲಾರನು. ॥ ೪೧ ॥ ಇದಕ್ಕೆ ವಿರುದ್ಧವಾಗಿ 'ನಾನು ಕೊಡುವುದಿಲ್ಲ' ಈ ಅಸ್ವೀಕಾರಾತ್ಮಕ ಅಸತ್ಯವು ತನ್ನ ಧನವನ್ನು ಸುರಕ್ಷಿತವಾಗಿಡುವುದು ಹಾಗೂ ಪೂರ್ಣಗೊಳಿಸುವುದಾಗಿದೆ. ಆದರೆ ಎಲ್ಲ ಸಮಯದಲ್ಲಿ ಹೀಗೆ ಮಾಡಬಾರದು. ಇದನ್ನು ಎಲ್ಲರೊಂದಿಗೆ, ಎಲ್ಲ ವಸ್ತುಗಳಿಗಾಗಿ ಹೇಳಬಾರದು. ಇದರಿಂದ ಅಪಕೀರ್ತಿಯು ಉಂಟಾಗುತ್ತದೆ. ಅವನು ಜೀವಿಸಿದ್ದರೂ ಸತ್ತಂತೆಯೇ ಆಗಿದ್ದಾನೆ. ॥ ೪೨ ॥ ಸ್ತ್ರೀಯರನ್ನು ಪ್ರಸನ್ನಗೊಳಿಸಲು, ಪರಿಹಾಸ್ಯಮಾಡುವಾಗ, ಮದುವೆಯ ವಿಷಯದಲ್ಲಿ, ತನ್ನ ಜೀವನದ ರಕ್ಷಣೆಗಾಗಿ, ಪ್ರಾಣಸಂಕಟವು ಸನ್ನಿಹಿತವಾಗಿರುವಾಗ, ಗೋ, ಬ್ರಾಹ್ಮಣರ ಹಿತಾರ್ಥವಾಗಿ ಅಥವಾ ಯಾರನ್ನಾದರೂ ಬದುಕಿಸಲಿಕ್ಕಾಗಿ ಸುಳ್ಳನ್ನೂ ಹೇಳಬೇಕಾಗಿ ಬಂದರೂ ಅದು ನಿಂದನೀಯವಲ್ಲ. ॥ ೪೩ ॥

ಹತ್ತೊಂಭತ್ತನೆಯ ಅಧ್ಯಾಯವು ಮುಗಿಯಿತು. ॥ ೧೯ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಅಷ್ಟಮ ಸ್ಕಂಧೇ ವಾಮನಪ್ರಾದುರ್ಭಾವೇ ಏಕೋನವಿಂಶೋಽಧ್ಯಾಯಃ ॥ ೧೯ ॥

ಇಪ್ಪತ್ತನೆಯ ಅಧ್ಯಾಯ

ಭಗವಾನ್ ವಾಮನನು ವಿರಾಟ್‌ಸ್ವರೂಪನಾಗಿ ಎರಡೇ ಹೆಜ್ಜೆಗಳಿಂದ ಪೃಥಿವೀ ಮತ್ತು ಸ್ವರ್ಗವನ್ನು ಅಳೆದುದು

ಶ್ರೀಶುಕ ಉವಾಚ

ಬಲಿರೇವಂ ಗೃಹಪತಿಃ ಕುಲಾಚಾರ್ಯೇಣ ಭಾಷಿತಃ ।
ತೂಷ್ಣೀಂ ಭೂತ್ವಾ ಕ್ಷಣಂ ರಾಜನ್ನುವಾಚಾವಹಿತೋ ಗುರುಮ್ ॥ ೧ ॥

ಬಲಿರುವಾಚ

ಸತ್ಯಂ ಭಗವತಾ ಪ್ರೋಕ್ತಂ ಧರ್ಮೋಽಯಂ ಗೃಹಮೇಧಿನಾಮ್ ।
ಅರ್ಥಂ ಕಾಮಂ ಯಶೋ ವೃತ್ತಿಂ ಯೋ ನ ಬಾಧೇತ ಕರ್ಹಿಚಿತ್ ॥ ೨ ॥

ಸ ಚಾಹಂ ವಿತ್ತಲೋಭೇನ ಪ್ರತ್ಯಾಚಕ್ಷೇ ಕಥಂ ದ್ವಿಜಮ್ ।
ಪ್ರತಿಶ್ರುತ್ಯ ದದಾಮೀತಿ ಪ್ರಾಹ್ರಾದಿಃ ಕಿತವೋ ಯಥಾ ॥ ೩ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಎಲೈ ರಾಜೇಂದ್ರಾ! ಕುಲಗುರುಗಳಾದ ಶುಕ್ರಾಚಾರ್ಯರು ಹೀಗೆ ಹೇಳಲು ಆದರ್ಶ ಗೃಹಸ್ಥನಾದ ಬಲಿಯು ಸ್ವಲ್ಪಹೊತ್ತು ಸುಮ್ಮನಿದ್ದು, ಅನಂತರ ವಿನಮ್ರನಾಗಿ ಶುಕ್ರಾಚಾರ್ಯರ ಬಳಿಯಲ್ಲಿ ಹೀಗೆಂದನು– ॥ ೧ ॥

ಬಲಿರಾಜನು ಹೇಳುತ್ತಾನೆ – ಪೂಜ್ಯರೇ! ಗೃಹಸ್ಥಾಶ್ರಮದಲ್ಲಿ ಇರುವವರಿಗೆ ಅರ್ಥ, ಕಾಮ, ಯಶಸ್ಸು ಮತ್ತು ಜೀವನನಿರ್ವಹಣೆಯಲ್ಲಿ ಯಾವುದೇ ಬಾಧೆ ಉಂಟಾಗದಿರುವುದೇ ಧರ್ಮವಾಗಿದೆ ಎಂದು ನೀವು ಹೇಳಿರುವುದು ಸತ್ಯವಾಗಿದೆ. ॥ ೨ ॥ ಆದರೆ ಗುರುಗಳೇ! ನಾನು ಪ್ರಹ್ಲಾದನ ಮೊಮ್ಮಗನಾಗಿದ್ದೇನೆ. ಒಮ್ಮೆ ಕೊಡುವೆನೆಂದು ಪ್ರತಿಜ್ಞೆಮಾಡಿಬಿಟ್ಟಿರುವೆನು. ಆದ್ದರಿಂದ ಈಗ ನಾನು ಧನಲೋಭದಿಂದ ಮೋಸಗಾರನಂತೆ 'ನಾನು ಕೊಡುವುದಿಲ್ಲ' ಎಂದು ಬ್ರಾಹ್ಮಣನಲ್ಲಿ ಹೇಗೆ ಹೇಳಲಿ? ॥ ೩ ॥

ನ ಹ್ಯಸತ್ಯಾತ್ಪರೋಽಧರ್ಮ ಇತಿ ಹೋವಾಚ ಭೂರಿಯಮ್ ।
ಸರ್ವಂ ಸೋಢುಮಲಂ ಮನ್ಯೇ ಋತೇಽಲೀಕಪರಂ ನರಮ್ ॥ ೪ ॥

ನಾಹಂ ಬಿಭೇಮಿ ನಿರಯಾನ್ನಾಧನ್ಯಾದಸುಖಾರ್ಣವಾತ್ ।
ನ ಸ್ಥಾನಚ್ಯವನಾನ್ಮೃತ್ಯೋರ್ಯಥಾ ವಿಪ್ರಪ್ರಲಂಭನಾತ್ ॥ ೫ ॥

ಯದ್ಯದ್ಧಾಸ್ಯತಿ ಲೋಕೇಽಸ್ಮಿನ್ಸಂಪರೇತಂ ಧನಾದಿಕಮ್ ।
ತಸ್ಯ ತ್ಯಾಗೇ ನಿಮಿತ್ತಂ ಕಿಂ ವಿಪ್ರಸ್ತುಷ್ಯೇನ್ನ ತೇನ ಚೇತ್ ॥ ೬ ॥

ಶ್ರೇಯಃ ಕುರ್ವಂತಿ ಭೂತಾನಾಂ ಸಾಧವೋ ದುಸ್ತ್ಯಜಾಸುಭಿಃ ।
ದಧ್ಯಙ್‌ಶಿಬಿಪ್ರಭೃತಯಃ ಕೋ ವಿಕಲ್ಪೋ ಧರಾದಿಷು ॥ ೭ ॥

ಯೈರಿಯಂ ಬುಭುಜೇ ಬ್ರಹ್ಮನ್‌ದೈತ್ಯೇಂದ್ರೈರನಿವರ್ತಿಭಿಃ ।
ತೇಷಾಂ ಕಾಲೋಽಗ್ರಸೀಲ್ಲೋಕಾನ್ನ ಯಶೋಽಧಿಗತಂ ಭುವಿ ॥ ೮ ॥

ಸುಲಭಾ ಯುಧಿ ವಿಪ್ರರ್ಷೇ ಹ್ಯನಿವೃತ್ತಾಸ್ತನುತ್ಯಜಃ ।
ನ ತಥಾ ತೀರ್ಥ ಆಯಾತೇ ಶ್ರದ್ಧಯಾ ಯೇ ಧನತ್ಯಜಃ ॥ ೯ ॥

ಮನಸ್ವಿನಃ ಕಾರುಣಿಕಸ್ಯ ಶೋಭನಂ
ಯದರ್ಥಿಕಾಮೋಪನಯೇನ ದುರ್ಗತಿಃ ।
ಕುತಃ ಪುನರ್ಬ್ರಹ್ಮವಿದಾಂ ಭವಾದೃಶಾಂ
ತತೋ ವಟೋರಸ್ಯ ದದಾಮಿ ವಾಂಛಿತಮ್ ॥ ೧೦ ॥

ಯಜಂತಿ ಯಜ್ಞಕ್ರತುಭಿರ್ಯಮಾದೃತಾ
ಭವಂತ ಆಮ್ನಾಯವಿಧಾನಕೋವಿದಾಃ ।
ಸ ಏವ ವಿಷ್ಣುರ್ವರದೋಽಸ್ತು ವಾ ಪರೋ
ದಾಸ್ಯಾಮ್ಯಮುಷ್ಮೈ ಕ್ಷಿತಿಮೀಪ್ಸಿತಾಂ ಮುನೇ ॥ ೧೧ ॥

ಯದ್ಯಪ್ಯಸಾವಧರ್ಮೇಣ ಮಾಂ ಬಧ್ನೀಯಾದನಾಗಸಮ್ ।
ತಥಾಪ್ಯೇನಂ ನ ಹಿಂಸಿಷ್ಯೇ ಭೀತಂ ಬ್ರಹ್ಮತನುಂ ರಿಪುಮ್ ॥ ೧೨ ॥

ಏಷ ವಾ ಉತ್ತಮಶ್ಲೋಕೋ ನ ಜಿಹಾಸತಿ ಯದ್ಯಶಃ ।
ಹತ್ವಾ ಮೈನಾಂ ಹರೇದ್ಯುದ್ಧೇ ಶಯೀತ ನಿಹತೋ ಮಯಾ ॥ ೧೩ ॥

'ಅಸತ್ಯಕ್ಕಿಂತ ಮಿಗಿಲಾದ ಅಧರ್ಮವಿಲ್ಲ. ನಾನು ಎಲ್ಲವನ್ನೂ ಸಹಿಸುವುದರಲ್ಲಿ ಸಮರ್ಥಳಿದ್ದೇನೆ. ಆದರೆ ಸುಳ್ಳುಗಾರನ ಭಾರವನ್ನು ನನ್ನಿಂದ ಸಹಿಸಲಾಗುವುದಿಲ್ಲ' ಎಂದು ಭೂದೇವಿಯು ಹೇಳಿರುವಳು. ॥ ೪ ॥ ಬ್ರಾಹ್ಮಣನಲ್ಲಿ ಪ್ರತಿಜ್ಞೆಮಾಡಿ ಅವನಿಗೆ ಮೋಸ ಮಾಡುವುದಕ್ಕೆ ಹೆದರುವಷ್ಟು ನಾನು ನರಕದಿಂದ, ದರಿದ್ರತೆಯಿಂದ, ದುಃಖದ ಸಮುದ್ರದಿಂದ, ತನ್ನ ರಾಜ್ಯ ನಾಶದಿಂದ ಮತ್ತು ಸಾವಿನಿಂದಲೂ ಹೆದರುವುದಿಲ್ಲ. ॥ ೫ ॥ ಈ ಜಗತ್ತಿನಲ್ಲಿ ಸತ್ತಬಳಿಕ ಧನ-ಕನಕ ಮೊದಲಾದ ವಸ್ತುಗಳು ಇಲ್ಲೇ ಬಿಟ್ಟುಹೋಗುವುವು. ಅವುಗಳ ಮೂಲಕ ಬ್ರಾಹ್ಮಣರನ್ನು ದಾನಾದಿಗಳಿಂದ ಸಂತೋಷಪಡಿಸದಿದ್ದರೆ ಅದರ ತ್ಯಾಗದಿಂದ ಏನು ಲಾಭ? ಅದೆಂತಹ ಸಂಪತ್ತು? ॥ ೬ ॥ ದಧೀಚಿ, ಶಿಬಿ ಮೊದಲಾದ ಮಹಾಪುರುಷರು ತಮ್ಮ ಪರಮಪ್ರಿಯ ಪ್ರಾಣಗಳನ್ನೂ ತ್ಯಜಿಸಲು ಅತಿಕಷ್ಟಕರವಾದ ಪ್ರಾಣಗಳನ್ನೂ ದಾನಮಾಡಿ ಪ್ರಾಣಿಗಳ ಹಿತವನ್ನು ಮಾಡಿರುವರು. ಹಾಗಿರುವಾಗ ಭೂಮಿಯೇ ಮುಂತಾದ ವಸ್ತುಗಳನ್ನು ಕೊಡುವುದರಲ್ಲಿ ಯೋಚಿಸುವ ಆವಶ್ಯಕತೆ ಏನಿದೆ? ॥ ೭ ॥ ಬ್ರಾಹ್ಮಣೋತ್ತಮರೇ! ಹಿಂದಿನ ಯುಗದಲ್ಲಿ ದೊಡ್ಡ-ದೊಡ್ಡ ದೈತ್ಯರಾಜರು ಈ ಪೃಥಿವಿಯನ್ನು ಉಪಭೋಗಿಸಿದರು. ಭೂಮಿಯಲ್ಲಿ ಅವರನ್ನು ಇದಿರಿಸುವವರು ಯಾರೂ ಇರಲಿಲ್ಲ. ಅವರ ಲೋಕ-ಪರಲೋಕಗಳನ್ನು ಕಾಲವು ನುಂಗಿಹಾಕಿತು. ಆದರೆ ಅವರ ಕೀರ್ತಿಯು ಈಗಲೂ ಭೂಮಂಡಲದಲ್ಲಿ ಹಾಗೆಯೇ ಇದೆ. ॥ ೮ ॥ ಗುರುಗಳೇ! ಯುದ್ಧದಲ್ಲಿ ಬೆನ್ನುತೋರದೆ ತಮ್ಮ ಪ್ರಾಣಗಳನ್ನು ಬಲಿದಾನ ಮಾಡಿದ ಅನೇಕ ಜನರು ಈ ಜಗತ್ತಿನಲ್ಲಿ ಇದ್ದರು. ಆದರೆ ಸತ್ಪಾತ್ರನು ದೊರಕಿದಾಗ ಶ್ರದ್ಧೆಯಿಂದ ಧನವನ್ನು ದಾನಮಾಡುವವರು ದುರ್ಲಭರಾಗಿದ್ದಾರೆ. ॥ ೯ ॥ ಗುರುದೇವಾ! ಉದಾರವೂ, ಕರುಣಾಶೀಲನೂ ಆದ ಮನುಷ್ಯನು-ಸಾಮಾನ್ಯ ಯಾಚಕನ ಕಾಮನೆಯನ್ನು ಪೂರ್ಣಗೊಳಿಸಿ ದುರ್ಗತಿಯನ್ನು ಅನುಭವಿಸಿದರೂ, ಆ ದುರ್ಗತಿಯೂ ಕೂಡ ಅವನಿಗೆ ಶೋಭನೀಯವಾಗಿದೆ. ಹಾಗಿರುವಾಗ ನಿಮ್ಮಂತಹ ಬ್ರಹ್ಮವಿದ್ ಪುರುಷರಿಗೆ ದಾನಮಾಡುವುದರಿಂದ ದುಃಖವು ಪ್ರಾಪ್ತವಾದರೆ ಅದಕ್ಕೆ ಏನು ಹೇಳಬೇಕು. ಅದಕ್ಕಾಗಿ ನಾನು ಈ ಬ್ರಹ್ಮಚಾರಿಯು ತಮ್ಮಂತೆಯೇ ಬ್ರಹ್ಮವೇತ್ತಾ ಆಗಿದ್ದಾನೆ. ಆದ್ದರಿಂದ ಇವನ ಇಷ್ಟಾರ್ಥವನ್ನು ಖಂಡಿತವಾಗಿ ಪೂರ್ಣಗೊಳಿಸುವೆನು. ॥ ೧೦ ॥ ಗುರುಗಳೇ! ವೇದವಿಧಿಗಳನ್ನು ತಿಳಿದವರಾದ ನೀವು ಅತ್ಯಾದರದಿಂದ ಯಾವನನ್ನು ಯಜ್ಞ-ಯಾಗಾದಿಗಳ ಮೂಲಕ ಆರಾಧಿಸುವಿರೋ, ಅಂತಹ ವರದನಾದ ಮಹಾವಿಷ್ಣುವೇ ಈ ರೂಪದಿಂದ ಬಂದಿರಲೀ ಅಥವಾ ಬೇರೆ ಯಾರೇ ಆಗಿರಲೀ ಇವನ ಇಚ್ಛೆಗನುಸಾರವಾಗಿ ನಾನು ಇವನಿಗೆ ಭೂಮಿಯನ್ನು ದಾನಮಾಡುವೆನು. ॥ ೧೧ ॥

ನಿರಪರಾಧಿಯಾದ ನನ್ನನ್ನು ಇವನು ಅಧರ್ಮದಿಂದ ಬಂಧಿಸಿದರೂ ನಾನು ಇವನ ಅನಿಷ್ಟವನ್ನು ಬಯಸುವುದಿಲ್ಲ. ಏಕೆಂದರೆ, ನನ್ನ ಶತ್ರುವಾಗಿದ್ದರೂ ಇವನು ಭಯಗೊಂಡು ಬ್ರಾಹ್ಮಣ ಶರೀರವನ್ನು ಧರಿಸಿರುವನು. ॥ ೧೨ ॥ ಇವನು ಪವಿತ್ರಕೀರ್ತಿಯಾದ ಭಗವಾನ್ ವಿಷ್ಣುವೇ ಆಗಿದ್ದರೆ ತನ್ನ ಕೀರ್ತಿಯನ್ನು ಕಳೆದು

ಶ್ರೀಶುಕ ಉವಾಚ

ಏವಮಶ್ರದ್ಧಿತಂ ಶಿಷ್ಯಮನಾದೇಶಕರಂ ಗುರುಃ ।
ಶಶಾಪ ದೈವಪ್ರಹಿತಃ ಸತ್ಯಸಂಧಂ ಮನಸ್ವಿನಮ್ ॥ ೧೪ ॥

ದೃಢಂ ಪಂಡಿತಮಾನ್ಯಜ್ಞಃ ಸ್ತಬ್ಧೋಽಸ್ಯಸ್ಮದುಪೇಕ್ಷಯಾ ।
ಮಚ್ಛಾಸನಾತಿಗೋ ಯಸ್ತ್ವಮಚಿರಾದ್ಭ್ರಶ್ಯಸೇ ಶ್ರಿಯಃ ॥ ೧೫ ॥

ಏವಂ ಶಪ್ತಃ ಸ್ವಗುರುಣಾ ಸತ್ಯಾನ್ನ ಚಲಿತೋ ಮಹಾನ್ ।
ವಾಮನಾಯ ದದಾವೇನಾಮರ್ಚಿತ್ವೋದಕಪೂರ್ವಕಮ್ ॥ ೧೬ ॥

ವಿಂಧ್ಯಾವಲಿಸ್ತದಾಽಽಗತ್ಯ ಪತ್ನೀ ಜಾಲಕಮಾಲಿನೀ ।
ಆನಿನ್ಯೇ ಕಲಶಂ ಹೈಮಮವನೇಜನ್ಯಪಾಂ ಭೃತಮ್ ॥ ೧೭ ॥

ಯಜಮಾನಃ ಸ್ವಯಂ ತಸ್ಯ ಶ್ರೀಮತ್ಪಾದಯುಗಂ ಮುದಾ ।
ಅವನಿಜ್ಯಾವಹನ್ಮೂರ್ಧ್ನಿ ತದಪೋ ವಿಶ್ವಪಾವನೀಃ ॥ ೧೮ ॥

ತದಾಽಸುರೇಂದ್ರಂ ದಿವಿ ದೇವತಾಗಣಾ
ಗಂಧರ್ವವಿದ್ಯಾಧರಸಿದ್ಧಚಾರಣಾಃ ।
ತತ್ಕರ್ಮ ಸರ್ವೇಽಪಿ ಗೃಣಂತ ಆರ್ಜವಂ
ಪ್ರಸೂನವರ್ಷೈರ್ವವೃಷುರ್ಮುದಾನ್ವಿತಾಃ ॥ ೧೯ ॥

ನೇದುರ್ಮುಹುರ್ದುಂದುಭಯಃ ಸಹಸ್ರಶೋ
ಗಂಧರ್ವ ಕಿಂಪೂರುಷಕಿನ್ನರಾ ಜಗುಃ ।
ಮನಸ್ವಿನಾನೇನ ಕೃತಂ ಸುದುಷ್ಕರಂ
ವಿದ್ವಾನದಾದ್ಯದ್ರಿಪವೇ ಜಗತ್ತ್ರಯಮ್ ॥ ೨೦ ॥

ತದ್ವಾಮನಂ ರೂಪಮವರ್ಧತಾದ್ಭುತಂ
ಹರೇರನಂತಸ್ಯ ಗುಣತ್ರಯಾತ್ಮಕಮ್ ।
ಭೂಃ ಖಂ ದಿಶೋ ದ್ಯೌರ್ವಿವರಾಃ ಪಯೋಧಯ-
ಸ್ತಿರ್ಯಙ್ನೃದೇವಾ ಋಷಯೋ ಯದಾಸತ ॥ ೨೧ ॥

ಕಾಯೇ ಬಲಿಸ್ತಸ್ಯ ಮಹಾವಿಭೂತೇಃ
ಸಹರ್ತ್ವಿಗಾಚಾರ್ಯಸದಸ್ಯ ಏತತ್ ।
ದದರ್ಶ ವಿಶ್ವಂ ತ್ರಿಗುಣಂ ಗುಣಾತ್ಮಕೇ
ಭೂತೇಂದ್ರಿಯಾರ್ಥಾಶಯಜೀವಯುಕ್ತಮ್ ॥ ೨೨ ॥

ಕೊಳ್ಳುವುದಿಲ್ಲ (ತಾನು ಬೇಡಿದ ವಸ್ತುವನ್ನು ಪಡೆದೇ ತೀರುವನು) ನನ್ನನ್ನು ಯುದ್ಧದಲ್ಲಿ ಕೊಂದಾದರೂ ಪೃಥಿವಿಯನ್ನು ಪಡೆದುಕೊಳ್ಳ ಬಲ್ಲನು. ಒಂದೊಮ್ಮೆ ಇವನು ಬೇರೆ ಯಾರಾಗಿದ್ದರೆ ನನ್ನ ಬಾಣಗಳ ಹತಿಯಿಂದ ರಣದಲ್ಲಿ ಧರಾಶಾಯಿಯಾಗುವನು. ॥ ೧೩ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ! ಬಲಿಯ ಗುರುಗಳಾದ ಶುಕ್ರಾಚಾರ್ಯರು – ತನ್ನ ಶಿಷ್ಯನು ತನ್ನನ್ನು ಆದರಿಸದೆ ತನ್ನ ಆಜ್ಞೆಯನ್ನು ಉಲ್ಲಂಘಿಸಿರುವನೆಂದು ತಿಳಿದು ದೈವಪ್ರೇರಣೆಯಿಂದ ಸತ್ಯಸಂಧನಾದ, ಸ್ಥಿರಚಿತ್ತನಾದ ರಾಜಾ ಬಲಿಯನ್ನು ಶಪಿಸಿದರು. ॥ ೧೪ ॥ ಎಲೈ ಮೂರ್ಖ! ನೀನು ಅಜ್ಞಾನಿಯಾಗಿದ್ದರೂ ನಿನ್ನನ್ನು ಮಹಾಪಂಡಿತನೆಂದು ತಿಳಿಯು ತ್ತೀಯೆ. ಮಹಾಗರ್ವಿಷ್ಠನಾಗಿ ನನ್ನನ್ನು ಉಪೇಕ್ಷಿಸುತ್ತಿರುವೆ. ನನ್ನ ಆಜ್ಞೆಯನ್ನು ಮೀರಿ ನಡೆಯುತ್ತಿರುವೆ. ಆದರಿಂದ ನೀನು ಬಹು ಬೇಗನೇ ನಿನ್ನ ಸಂಪತ್ತನ್ನು ಕಳೆದುಕೊಳ್ಳುವೆ. ॥ ೧೫ ॥ ಬಲಿ ಚಕ್ರವರ್ತಿಯು ಶ್ರೇಷ್ಠಮಹಾತ್ಮನಾಗಿದ್ದನು. ಗುರುಗಳು ಶಾಪ ವಿತ್ತರೂ ಸತ್ಯದಿಂದ ವಿಚಲಿತನಾಗಲಿಲ್ಲ. ಅವನು ಭಗವಾನ್ ವಾಮನನನ್ನು ವಿಧಿಪೂರ್ವಕವಾಗಿ ಪೂಜಿಸಿ ಕೈಯಲ್ಲಿ ನೀರನ್ನಿತ್ತು ಕೊಂಡು ಮೂರುಹೆಜ್ಜೆ ಭೂದಾನದ ಸಂಕಲ್ಪವನ್ನು ಮಾಡಿದನು. ॥ ೧೬ ॥ ಅದೇ ಸಮಯದಲ್ಲಿ ಮುಕ್ತಾಹಾರಗಳಿಂದ ಅಲಂಕೃತ ಳಾದ ಬಲಿಯ ಪತ್ನಿಯಾದ ವಿಂಧ್ಯಾವಳಿಯು ಭಗವಾನ್ ವಾಮನನ ದಿವ್ಯಪಾದಗಳನ್ನು ತೊಳೆಯಲು ಸ್ವರ್ಣಕಲಶದಲ್ಲಿ ನೀರನ್ನು ತುಂಬಿ ತಂದಿತ್ತಳು. ॥ ೧೭ ॥ ಬಲಿಚಕ್ರವರ್ತಿಯು ತಾನೇ ಶ್ರೀವಾಮನಮೂರ್ತಿಯ ಸುಂದರವಾದ ಪಾದಪದ್ಮಗಳನ್ನು ತೊಳೆದು ಆನಂದಭರಿತನಾಗಿ ಗಂಗೆಗೆ ಸಮಾನವಾದ ವಿಶ್ವಪಾವನ ವಾದ ಆ ಚರಣಾಮೃತವನ್ನು ಭಕ್ತಿಯಿಂದ ತನ್ನ ತಲೆಯಲ್ಲಿ ಧರಿಸಿ ಕೊಂಡನು. ॥ ೧೮ ॥ ಆಗ ಅಂತರಿಕ್ಷದಲ್ಲಿ ಉಪಸ್ಥಿತರಾದ ದೇವ, ಗಂಧರ್ವ, ವಿದ್ಯಾಧರ, ಸಿದ್ಧ, ಚಾರಣ, ಋಷಿ-ಮುನಿ ಹೀಗೆ ಎಲ್ಲರೂ ಬಲಿರಾಜನ ಈ ಅಲೌಕಿಕವಾದ ಕಾರ್ಯವನ್ನೂ, ಸರಳತೆ ಯನ್ನೂ ಸತ್ಯನಿಷ್ಠೆಯನ್ನು ಪ್ರಶಂಸಿಸುತ್ತಾ ಅತೀವ ಆನಂದದಿಂದ ಅವನ ಮೇಲೆ ದಿವ್ಯಪುಷ್ಪಗಳ ಮಳೆಯನ್ನೇ ಸುರಿಸಿದರು. ॥ ೧೯ ॥ ದೇವದುಂದುಭಿಗಳು ಆಡಿಗಡಿಗೆ ಮೊಳಗುತ್ತಲೇ ಇದ್ದವು. ಗಂಧ ರ್ವರು, ಕಿಂಪುರುಷರು, ಕಿನ್ನರರು ಹಾಡತೊಡಗಿದರು. ಆಹಾ! ಧನ್ಯ! ಧನ್ಯ! ಉದಾರಶಿರೋಮಣಿಯಾದ ಬಲಿಚಕ್ರವರ್ತಿಯು ಇತರರಿಗೆ ಮಾಡಲು ಅತ್ಯಂತ ದುಷ್ಕರವಾದ ಕಾರ್ಯವನ್ನೇ ಮಾಡಿತೋರಿರುವನು. ತಿಳಿದೂ-ತಿಳಿದೂ ತನ್ನ ಶತ್ರುವಿಗೆ ಮೂರು ಲೋಕಗಳನ್ನು ದಾನಮಾಡಿಬಿಟ್ಟಿರುವನು. ॥ ೨೦ ॥

ಪರೀಕ್ಷಿತನೇ! ಆಗಲೇ ಅಲ್ಲಿ ಒಂದು ಅದ್ಭುತವಾದ ಘಟ ನೆಯು ನಡೆಯಿತು. ಅನಂತನಾದ ಭಗವಂತನ ಆ ತ್ರಿಗುಣಾತ್ಮಕ ವಾದ ವಾಮನರೂಪವು ಇದ್ದಕ್ಕಿದ್ದಂತೆ ಬೆಳೆಯತೊಡಗಿತು. ಅದು ಬೆಳೆಯುತ್ತಾ-ಬೆಳೆಯುತ್ತಾ ಭೂಮಿ, ಆಕಾಶ, ದಿಕ್ಕುಗಳು, ಸ್ವರ್ಗ, ಪಾತಾಳ, ಸಮುದ್ರ, ಪಶು-ಪಕ್ಷಿ, ಮನುಷ್ಯರು, ದೇವತೆಗಳು, ಋಷಿಗಳು ಹೀಗೆ ಎಲ್ಲವೂ ಅದರೊಳಗೆ ಸೇರಿಹೋಗುವಷ್ಟು ಬೃಹದಾಕಾರವಾಯಿತು. ॥ ೨೧ ॥ ಋತ್ವಿಜರಿಂದಲೂ, ಆಚಾರ್ಯ ರಿಂದಲೂ, ಸಭಾಸದರಿಂದಲೂ ಕೂಡಿದ್ದ ಆ ಬಲಿಯು ಸಮಸ್ತ

ರಸಾಮಚಷ್ಟಾಂಘ್ರಿತಲೇಽಥ ಪಾದಯೋ-
ರ್ಮಹೀಂ ಮಹೀಧ್ರಾನ್ಪುರುಷಸ್ಯ ಜಂಘಯೋಃ ।
ಪತತ್ತ್ರಿಣೋ ಜಾನುನಿ ವಿಶ್ವಮೂರ್ತೇ-
ರೂರ್ವೋರ್ಗಣಂ ಮಾರುತಮಿಂದ್ರಸೇನಃ ॥ ೨೩ ॥

ಸಂಧ್ಯಾಂ ವಿಭೋರ್ವಾಸಸಿ ಗುಹ್ಯ ಐಕ್ಷತ್
ಪ್ರಜಾಪತೀನ್ಜಘನೇ ಆತ್ಮಮುಖ್ಯಾನ್ ।
ನಾಭ್ಯಾಂ ನಭಃ ಕುಕ್ಷಿಷು ಸಪ್ತಸಿಂಧೂ-
ನುರುಕ್ರಮಸ್ಯೋರಸಿ ಚರ್ಕ್ಷಮಾಲಾಮ್ ॥ ೨೪ ॥

ಹೃದ್ಯಂಗ ಧರ್ಮಂ ಸ್ತನಯೋರ್ಮುರಾರೇಃ
ಋತಂ ಚ ಸತ್ಯಂ ಚ ಮನಸ್ಯಥೇಂದುಮ್ ।
ಶ್ರಿಯಂ ಚ ವಕ್ಷಸ್ಯರವಿಂದಹಸ್ತಾಂ
ಕಂಠೇ ಚ ಸಾಮಾನಿ ಸಮಸ್ತರೇಫಾನ್ ॥ ೨೫ ॥

ಇಂದ್ರಪ್ರಧಾನಾನಮರಾನ್ಭುಜೇಷು
ತತ್ಕರ್ಣಯೋಃ ಕಕುಭೋ ದ್ಯೌಶ್ಚ ಮೂರ್ಧ್ನಿ ।
ಕೇಶೇಷು ಮೇಘಾನ್ಛ್ವಸನಂ ನಾಸಿಕಾಯಾ-
ಮಕ್ಷ್ಣೋಶ್ಚ ಸೂರ್ಯಂ ವದನೇ ಚ ವಹ್ನಿಮ್ ॥ ೨೬ ॥

ವಾಣ್ಯಾಂ ಚ ಛಂದಾಂಸಿ ರಸೇ ಜಲೇಶಂ
ಭ್ರುವೋರ್ನಿಷೇಧಂ ಚ ವಿಧಿಂ ಚ ಪಕ್ಷ್ಮಸು ।
ಅಹಶ್ಚ ರಾತ್ರಿಂ ಚ ಪರಸ್ಯ ಪುಂಸೋ
ಮನ್ಯುಂ ಲಲಾಟೇಽಧರ ಏವ ಲೋಭಮ್ ॥ ೨೭ ॥

ಸ್ಪರ್ಶೇ ಚ ಕಾಮಂ ನೃಪ ರೇತಸೋಂಽಭಃ
ಪೃಷ್ಠೇ ತ್ವಧರ್ಮಂ ಕ್ರಮಣೇಷು ಯಜ್ಞಮ್ ।
ಛಾಯಾಸು ಮೃತ್ಯುಂ ಹಸಿತೇ ಚ ಮಾಯಾಂ
ತನೂರುಹೇಷ್ವೋಷಧಿಜಾತಯಶ್ಚ ॥ ೨೮ ॥

ನದೀಶ್ಚ ನಾಡೀಷು ಶಿಲಾ ನಖೇಷು
ಬುದ್ಧಾವಜಂ ದೇವಗಣಾನೃಷೀಂಶ್ಚ ।
ಪ್ರಾಣೇಷು ಗಾತ್ರೇ ಸ್ಥಿರಜಂಗಮಾನಿ
ಸರ್ವಾಣಿ ಭೂತಾನಿ ದದರ್ಶ ವೀರಃ ॥ ೨೯ ॥

ಸರ್ವಾತ್ಮನೀದಂ ಭುವನಂ ನಿರೀಕ್ಷ್ಯ
ಸರ್ವೇಽಸುರಾಃ ಕಶ್ಮಲಮಾಪುರಂಗ ।
ಸುದರ್ಶನಂ ಚಕ್ರಮಸಹ್ಯತೇಜೋ
ಧನುಶ್ಚ ಶಾರ್ಙ್ಗಂ ಸ್ತನಯಿತ್ನುಘೋಷಮ್ ॥ ೩೦ ॥

ಐಶ್ವರ್ಯಗಳ ಸ್ವಾಮಿಯಾದ ಭಗವಂತನ ಆ ತ್ರಿಗುಣಾತ್ಮಕವಾದ ಶರೀರದಲ್ಲಿ ಪಂಚಭೂತಗಳನ್ನೂ, ಇಂದ್ರಿಯಗಳನ್ನು, ಅವುಗಳ ವಿಷಯಗಳನ್ನೂ, ಅಂತಃಕರಣ ಮತ್ತು ಜೀವಿಗಳೊಂದಿಗೆ ಸಮಸ್ತ ತ್ರಿಗುಣಮಯವಾದ ಜಗತ್ತನ್ನೂ ನೋಡಿದನು. ॥ ೨೨ ॥ ಬಲಿಚಕ್ರವರ್ತಿಯು ವಿಶ್ವರೂಪನಾದ ಭಗವಂತನ ಚರಣಗಳ ತಲದಲ್ಲಿ ರಸಾತಲವನ್ನೂ, ಹೆಜ್ಜೆಗಳಲ್ಲಿ ಪೃಥ್ವಿಯನ್ನೂ, ಕಣಕಾಲುಗಳಲ್ಲಿ ಪರ್ವತಗಳನ್ನೂ, ಮೊಣಕಾಲುಗಳಲ್ಲಿ ಪಕ್ಷಿಗಳನ್ನೂ, ತೊಡೆಗಳಲ್ಲಿ ಮರುದ್ಗಣಗಳನ್ನೂ, ನೋಡಿದನು. ॥ ೨೩ ॥ ಹೀಗೆಯೇ ಭಗವಂತನ ವಸ್ತ್ರಗಳಲ್ಲಿ ಸಂಧ್ಯೆಯನ್ನೂ, ಮೇಢ್ರದಲ್ಲಿ ಸಮಸ್ತಪ್ರಜಾಪತಿಗಳನ್ನೂ, ಜಘನದಲ್ಲಿ ತನ್ನ ಮುಂದಾಳುತನದಲ್ಲಿರುವ ಅಸುರರನ್ನೂ, ನಾಭಿಯಲ್ಲಿ ಆಕಾಶವನ್ನೂ, ಹೊಟ್ಟೆಯಲ್ಲಿ ಸಪ್ತಸಮುದ್ರಗಳನ್ನೂ, ವಕ್ಷಸ್ಥಳದಲ್ಲಿ ನಕ್ಷತ್ರಮಂಡಲವನ್ನೂ ನೋಡಿದನು. ॥ ೨೪ ॥ ಭಗವಂತನ ಹೃದಯದಲ್ಲಿ ಧರ್ಮವನ್ನೂ, ಸ್ತನಗಳಲ್ಲಿ ಋತ ಮತ್ತು ಸತ್ಯಗಳನ್ನೂ, ಮನಸ್ಸಿನಲ್ಲಿ ಚಂದ್ರನನ್ನೂ, ಎದೆಯಲ್ಲಿ ಕಮಲಹಸ್ತಳಾದ ಮಹಾಲಕ್ಷ್ಮಿಯನ್ನೂ, ಕೊರಳಿನಲ್ಲಿ ಸಾಮವೇದವೇ ಮುಂತಾದ ಸಮಸ್ತ ವೇದಗಳನ್ನೂ, ಶಬ್ದಸಮೂಹವನ್ನೂ ನೋಡಿದನು. ॥ ೨೫ ॥ ಬಾಹುಗಳಲ್ಲಿ ಇಂದ್ರಾದಿ ಸಮಸ್ತ ದೇವತೆಗಳನ್ನೂ, ಕಿವಿಗಳಲ್ಲಿ ದಿಕ್ಕುಗಳನ್ನೂ, ತಲೆಯಲ್ಲಿ ಸ್ವರ್ಗವನ್ನೂ, ಕೂದಲುಗಳಲ್ಲಿ ಮೇಘಗಳನ್ನೂ, ಮೂಗಿನಲ್ಲಿ ವಾಯುವನ್ನೂ, ಕಣ್ಣುಗಳಲ್ಲಿ ಸೂರ್ಯರನ್ನೂ, ಮುಖದಲ್ಲಿ ಅಗ್ನಿಯನ್ನೂ ನೋಡಿದನು. ॥ ೨೬ ॥ ದೇವದೇವನ ವಾಣಿಯಲ್ಲಿ ವೇದಗಳನ್ನೂ, ನಾಲಿಗೆಯಲ್ಲಿ ವರುಣನನ್ನೂ, ಹುಬ್ಬುಗಳಲ್ಲಿ ವಿಧಿ-ನಿಷೇಧಗಳನ್ನೂ, ರೆಪ್ಪೆಗಳಲ್ಲಿ ಅಹೋರಾತ್ರಿಗಳನ್ನೂ, ವಿಶ್ವರೂಪನ ಹಣೆಯಲ್ಲಿ ಕ್ರೋಧವನ್ನೂ, ಕೆಳತುಟಿಯಲ್ಲಿ ಲೋಭವನ್ನೂ, ದರ್ಶಿಸಿದನು. ॥ ೨೭ ॥ ಪರೀಕ್ಷಿತನೇ! ಅವನ ಸ್ಪರ್ಶದಲ್ಲಿ ಕಾಮವನ್ನೂ, ವೀರ್ಯದಲ್ಲಿ ಜಲವನ್ನೂ, ಬೆನ್ನಿನಲ್ಲಿ ಅಧರ್ಮವನ್ನೂ, ನಡೆಯಲ್ಲಿ ಯಜ್ಞಗಳನ್ನೂ, ನೆರಳಿನಲ್ಲಿ ಮೃತ್ಯುವನ್ನೂ, ನಗುವಿನಲ್ಲಿ ಮಾಯೆಯನ್ನೂ, ಮೈಗೂದಲುಗಳಲ್ಲಿ ಎಲ್ಲ ವಿಧದ ಸಸ್ಯ-ಔಷಧಿಗಳನ್ನೂ ನೋಡಿದರು. ॥ ೨೮ ॥ ಅವನ ನರಗಳಲ್ಲಿ ನದಿಗಳನ್ನೂ, ಉಗುರಗಳಲ್ಲಿ ಕಲ್ಲುಗಳನ್ನೂ, ಬುದ್ಧಿಯಲ್ಲಿ ಬ್ರಹ್ಮನನ್ನೂ, ದೇವತೆಗಳನ್ನೂ, ಋಷಿಗಳನ್ನೂ, ಇಂದ್ರಿಯಗಳನ್ನೂ ಮತ್ತು ಶರೀರದಲ್ಲಿ ಎಲ್ಲ ಸಚರಾಚರ ಪ್ರಾಣಿಗಳನ್ನೂ ಆ ಭಗವಂತನ ಭವ್ಯ ವಿಶ್ವರೂಪದಲ್ಲಿ ಬಲಿಚಕ್ರವರ್ತಿಯು ದರ್ಶಿಸಿದನು. ॥ ೨೯ ॥

ಪರೀಕ್ಷಿತಮಹಾರಾಜನೇ! ಸರ್ವಾತ್ಮನಾದ ಭಗವಂತನಲ್ಲಿ ಈ ಸಮಸ್ತ ಜಗತ್ತನ್ನು ಕಂಡು ಬಲಿಪ್ರಮುಖರಾದ ಎಲ್ಲ ಅಸುರರು ಅತ್ಯಂತ ಭಯಭ್ರಾಂತರಾದರು. ಅದೇ ಸಮಯದಲ್ಲಿ ಸಹಿಸಲಾಗದ ಮಹಾತೇಜಸ್ಸಿನಿಂದ ಕೂಡಿದ ಸುದರ್ಶನ ಚಕ್ರವೂ, ಮೇಘದಂತೆ ಭಯಂಕರ ಟೇಂಕಾರ ಶಬ್ದವಿದ್ದ ಶಾರ್ಙ್ಗವೆಂಬ ಮಹಾ ಧನುಸ್ಸೂ, ಮೇಘದಂತೆ ಗಂಭೀರವಾಗಿ ಶಬ್ದಮಾಡುವ ಪಾಂಚಜನ್ಯ ವೆಂಬ ಶಂಖವೂ, ಅತ್ಯಂತ ವೇಗವುಳ್ಳ ಕೌಮೋದಕೀ ಗದೆಯೂ, ಶತಚಂದ್ರಗಳ ಚಿಹ್ನೆಗಳಿದ್ದ ಗುರಾಣಿಯೂ, ವಿದ್ಯಾಧರವೆಂಬ ಖಡ್ಗವೂ, ಎರಡು ಅಕ್ಷಯ ಬತ್ತಳಿಕೆಗಳೂ,

ಪರ್ಜನ್ಯಘೋಷೋ ಜಲಜಃ ಪಾಂಚಜನ್ಯಃ
ಕೌಮೋದಕೀ ವಿಷ್ಣುಗದಾ ತರಸ್ವಿನೀ ।
ವಿದ್ಯಾಧರೋಽಸಿಃ ಶತಚಂದ್ರಯುಕ್ತ-
ಸ್ತೂಣೋತ್ತಮಾವಕ್ಷಯಸಾಯಕೌ ಚ ॥ ೩೦ ॥

ಸುನಂದಮುಖ್ಯಾ ಉಪತಸ್ಥುರೀಶಂ
ಪಾರ್ಷದಮುಖ್ಯಾಃ ಸಹಲೋಕಪಾಲಾಃ ।
ಸ್ಫುರತ್ಕಿರೀಟಾಂಗದಮೀನಕುಂಡಲ-
ಶ್ರೀವತ್ಸರತ್ನೋತ್ತಮಮೇಖಲಾಂಬರೈಃ ॥ ೩೧ ॥

ಮಧುವ್ರತಸ್ರಗ್ವನಮಾಲಯಾ ವೃತೋ
ರರಾಜ ರಾಜನ್ಭಗವಾನುರುಕ್ರಮಃ ।
ಕ್ಷಿತಿಂ ಪದೈಕೇನ ಬಲೇರ್ವಿಚಕ್ರಮೇ
ನಭಃ ಶರೀರೇಣ ದಿಶಶ್ಚ ಬಾಹುಭಿಃ ॥ ೩೨ ॥

ಪದಂ ದ್ವಿತೀಯಂ ಕ್ರಮತಸ್ತ್ರಿವಿಷ್ಟಪಂ
ನ ವೈ ತೃತೀಯಾಯ ತದೀಯಮಣ್ವಪಿ ।
ಉರುಕ್ರಮಸ್ಯಾಂಘ್ರಿರುಪರ್ಯುಪರ್ಯಥೋ
ಮಹರ್ಜನಾಭ್ಯಾಂ ತಪಸಃ ಪರಂ ಗತಃ ॥ ೩೩ ॥

ಭಗವಂತನ ಬಳಿ ಮೂರ್ತಿಮತ್ತಾಗಿ ನಿಂತಿದ್ದವು. ಸಮಸ್ತ ಲೋಕಪಾಲಕರೊಂದಿಗೆ ಭಗವಂತನ ಸುನಂದರೇ ಮುಂತಾದ ಪಾರ್ಷದರು ಅವನನ್ನು ಸೇವಿಸಲು ಉಪಸ್ಥಿತರಾದರು,. ಆ ಸಮಯದಲ್ಲಿ ಉರುಕ್ರಮ ಭಗವಂತನು ತಲೆಯಲ್ಲಿ ಕಿರೀಟವನ್ನೂ, ತೋಳುಗಳಲ್ಲಿ ಅಂಗದ ಕೇಯೂರಗಳನ್ನೂ, ಕಿವಿಗಳಲ್ಲಿ ಮಕರಾಕೃತಿಯ ಕುಂಡಲಗಳನ್ನೂ, ವಕ್ಷಸ್ಥಳದಲ್ಲಿ ಶ್ರೀವತ್ಸಚಿಹ್ನೆಯನ್ನೂ ಕುತ್ತಿಗೆಯಲ್ಲಿ ಕೌಸ್ತುಭಮಣಿಯನ್ನು ಧರಿಸಿ, ಸೊಂಟದಲ್ಲಿ ಪೀತಾಂಬರ ವನ್ನುಟ್ಟು ಸ್ವರ್ಣಮೇಖಲೆಯನ್ನೂ, ಹೆಗಲಿನಲ್ಲಿ ಉತ್ತರೀಯವನ್ನು ಧರಿಸಿಕೊಂಡು ಅತ್ಯಂತ ಶೋಭಾಯಮಾನವಾಗಿ ಕಾಣುತ್ತಿದ್ದನು. ॥ ೩೦-೩೧ ॥ .ದುಂಬಿಗಳ ಸಮೂಹಗಳಿಂದ ಕೂಡಿದ್ದ ವನಮಾಲೆಯನ್ನೂ ಅವನು ಧರಿಸಿದ್ದನು. ಪರೀಕ್ಷಿತನೇ! ■ ಉರುಕ್ರಮನು (ತ್ರಿವಿಕ್ರಮನು) ತನ್ನ ಒಂದು ಹೆಜ್ಜೆಯಿಂದ ಬಲಿಗೆ ಸೇರಿದ ಭೂ ಮಂಡಲವನ್ನೂ, ಶರೀರದಿಂದ ಅಂತರಿಕ್ಷವನ್ನೂ, ಭುಜಗಳಿಂದ ದಿಕ್ಕುಗಳನ್ನೂ ಆಕ್ರಮಿಸಿದನು. ಎರಡನೆಯ ಹೆಜ್ಜೆಯಿಂದ ಸ್ವರ್ಗವನ್ನೂ ಆಕ್ರಮಿಸಿದನು. ಮೂರನೆಯ ಹೆಜ್ಜೆಯನ್ನಿಡಲು ಬಲಿಯ ಯಾವ ವಸ್ತುವೂ ಉಳಿಯಲಿಲ್ಲ. ಭಗವಂತನಾದ ತ್ರಿವಿಕ್ರಮನ ಆ ಎರಡನೆಯ ಹೆಜ್ಜೆಯು ಮೇಲೆ-ಮೇಲೆ ಬೆಳೆಯುತ್ತಾ ಮಹರ್ಲೋಕ, ಜನೋಲೋಕ, ತಪೋಲೋಕಗಳನ್ನು ದಾಟಿ ಎಲ್ಲಕ್ಕಿಂತ ಮೇಲ್ಭಾಗದಲ್ಲಿರುವ ಸತ್ಯಲೋಕವನ್ನು ಸೇರಿತು. ॥ ೩೨-೩೩ ॥

ಇಪ್ಪತ್ತನೆಯ ಅಧ್ಯಾಯವು ಮುಗಿಯಿತು. ॥ ೨೦ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಅಷ್ಟಮಸ್ಕಂಧೇ
ವಿಶ್ವರೂಪದರ್ಶನಂ ನಾಮ ವಿಂಶೋಽಧ್ಯಾಯಃ ॥ ೨೦ ॥

ಇಪ್ಪತ್ತೊಂದನೆಯ ಅಧ್ಯಾಯ

ಬಲಿಬಂಧನ

ಶ್ರೀಶುಕ ಉವಾಚ

ಸತ್ಯಂ ಸಮೀಕ್ಷ್ಯಾಬ್ಜಭವೋ ನಖೇಂದುಭಿ-
ರ್ಹತಸ್ವಧಾಮದ್ಯುತಿರಾವೃತೋಽಭ್ಯಗಾತ್ ।
ಮರೀಚಿಮಿಶ್ರಾ ಋಷಯೋ ಬೃಹದ್ವ್ರತಾಃ
ಸನಂದನಾದ್ಯಾ ನರದೇವ ಯೋಗಿನಃ ॥ ೧ ॥

ವೇದೋಪವೇದಾ ನಿಯಮಾನ್ವಿತಾ ಯಮಾ-
ಸ್ತರ್ಕೇತಿಹಾಸಾಂಗ ಪುರಾಣಸಂಹಿತಾಃ ।
ಯೇ ಚಾಪರೇ ಯೋಗಸಮೀರದೀಪಿತ-
ಜ್ಞಾನಾಗ್ನಿನಾ ರಂಧಿತಕರ್ಮಕಲ್ಮಷಾಃ ।
ವವಂದಿರೇ ಯತ್ಸ್ಮರಣಾನುಭಾವತಃ
ಸ್ವಾಯಂಭುವಂ ಧಾಮ ಗತಾ ಅಕರ್ಮಕಮ್ ॥ ೨ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ - ಪರೀಕ್ಷಿದ್ರಾಜನೇ! ಭಗವಂತನ ಚರಣಕಮಲವು ಸತ್ಯಲೋಕವನ್ನು ವ್ಯಾಪಿಸಿತು. ಅವನ ದಿವ್ಯವಾದ ನಖಚಂದ್ರಿಕೆಯಿಂದ ಸತ್ಯಲೋಕದ ಕಾಂತಿಯು ಮಸಕಾಗಿ ಹೋಯಿತು. ಸ್ವಯಂ ಬ್ರಹ್ಮನೂ ಕೂಡ ಆ ಪ್ರಕಾಶದಲ್ಲಿ ಮುಳುಗಿಹೋದನು. ಮರೀಚಿಯೇ ಮೊದಲಾದ ಋಷಿಗಳೂ, ಸನಂದನಾದಿ ನೈಷ್ಠಿಕ ಬ್ರಹ್ಮಚಾರಿಗಳೂ, ಇತರ ಮಹಾಮಹಾ ಯೋಗಿಗಳೂ ಕೂಡ ಭಗವಂತನ ಚರಣಕಮಲವನ್ನು ಭಕ್ತಿಭಾವದಿಂದ ಸ್ವಾಗತಿಸಿದರು. ॥ ೧ ॥ ಬ್ರಹ್ಮಲೋಕದಲ್ಲಿ ಮೂರ್ತಿವತ್ತಾಗಿ ನೆಲೆಸುವ ವೇದಗಳೂ, ಉಪವೇದಗಳೂ, ನಿಯಮ-ಯಮಗಳೂ, ತರ್ಕ-ಇತಿಹಾಸಗಳೂ, ವೇದಾಂಗಗಳೂ, ಪುರಾಣ-ಸಂಹಿತೆಗಳೂ ಎಲ್ಲವೂ ಪರಮಪುರುಷನ ಚರಣಾರವಿಂದವನ್ನು ಸ್ವಾಗತಿಸಲು ಸಿದ್ಧರಾದರು. ಯೋಗರೂಪವಾದ ವಾಯುವಿನಿಂದ ಜ್ಞಾನಾಗ್ನಿಯನ್ನು ಪ್ರಜ್ವಲಿತಗೊಳಿಸಿ ಕರ್ಮಮಲವನ್ನು ಭಸ್ಮಗೊಳಿಸಿದ್ದ ಮಹಾತ್ಮರೆಲ್ಲರೂ ಭಗವಂತನ ಚರಣವನ್ನು ವಂದಿಸಿದರು. ಇದೇ ಚರಣಕಮಲದ ಸ್ಮರಣೆಯ ಮಹಿಮೆಯಿಂದ ಇವರೆಲ್ಲರೂ

ಅಥಾಂಘ್ರಯೇ ಪ್ರೋನ್ನಮಿತಾಯ ವಿಷ್ಣೋ-
ರುಪಾಹರತ್ಪದ್ಮಭವೋಽರ್ಹಣೋದಕಮ್ ।
ಸಮರ್ಚ್ಯ ಭಕ್ತ್ಯಾಭ್ಯಗೃಣಾಚ್ಛುಚಿಶ್ರವಾ
ಯನ್ನಾಭಿಪಂಕೇರುಹಸಂಭವಃ ಸ್ವಯಮ್ ॥ ೩ ॥

ಧಾತುಃ ಕಮಂಡಲುಜಲಂ ತದುರುಕ್ರಮಸ್ಯ
ಪಾದಾವನೇಜನಪವಿತ್ರತಯಾ ನರೇಂದ್ರ ।
ಸ್ವರ್ಧುನ್ಯಭೂನ್ನಭಸಿ ಸಾ ಪತತೀ ನಿಮಾರ್ಷ್ಟಿ
ಲೋಕತ್ರಯಂ ಭಗವತೋ ವಿಶದೇವ ಕೀರ್ತಿಃ ॥ ೪ ॥

ಬ್ರಹ್ಮಾದಯೋ ಲೋಕನಾಥಾಃ ಸ್ವನಾಥಾಯ ಸಮಾದೃತಾಃ ।
ಸಾನುಗಾ ಬಲಿಮಾಜಹ್ರುಃ ಸಂಕ್ಷಿಪ್ತಾತ್ಮವಿಭೂತಯೇ ॥ ೫ ॥

ತೋಯೈಃ ಸಮರ್ಹಣೈಃ ಸ್ರಗ್ಭಿರ್ದಿವ್ಯಗಂಧಾನುಲೇಪನೈಃ ।
ಧೂಪೈರ್ದೀಪೈಃ ಸುರಭಿಭಿರ್ಲಾಜಾಕ್ಷತಫಲಾಂಕುರೈಃ ॥ ೬ ॥

ಸ್ತವನೈರ್ಜಯಶಬ್ದೈಶ್ಚ ತದ್ವೀರ್ಯಮಹಿಮಾಂಕಿತೈಃ ।
ನೃತ್ಯವಾದಿತ್ರಗೀತೈಶ್ಚ ಶಂಖದುಂದುಭಿನಿಃಸ್ವನೈಃ ॥ ೭ ॥

ಜಾಂಬವಾನೃಕ್ಷರಾಜಸ್ತು ಭೇರೀಶಬ್ದೈರ್ಮನೋಜವಃ ।
ವಿಜಯಂ ದಿಕ್ಷು ಸರ್ವಾಸು ಮಹೋತ್ಸವಮಘೋಷಯತ್ ॥ ೮ ॥

ಮಹೀಂ ಸರ್ವಾಂ ಹೃತಾಂ ದೃಷ್ಟ್ವಾ ತ್ರಿಪದವ್ಯಾಜಯಾಚ್ಞಯಾ ।
ಊಚುಃ ಸ್ವಭರ್ತುರಸುರಾ ದೀಕ್ಷಿತಸ್ಯಾತ್ಯಮರ್ಷಿತಾಃ ॥ ೯ ॥

ನ ವಾ ಅಯಂ ಬ್ರಹ್ಮಬಂಧುರ್ವಿಷ್ಣುರ್ಮಾಯಾವಿನಾಂ ವರಃ ।
ದ್ವಿಜರೂಪಪ್ರತಿಚ್ಛನ್ನೋ ದೇವಕಾರ್ಯಂ ಚಿಕೀರ್ಷತಿ ॥ ೧೦ ॥

ಅನೇನ ಯಾಚಮಾನೇನ ಶತ್ರುಣಾ ವಟುರೂಪಿಣಾ ।
ಸರ್ವಸ್ವಂ ನೋ ಹೃತಂ ಭರ್ತುರ್ನ್ಯಸ್ತದಂಡಸ್ಯ ಬರ್ಹಿಷಿ ॥ ೧೧ ॥

ಕರ್ಮದಿಂದ ದೊರೆಯದಿರುವ ಬ್ರಹ್ಮದೇವರ ಧಾಮವನ್ನು ಹೊಂದಿದ್ದರು. ॥ ೨ ॥ ಭಗವಾನ್ ಬ್ರಹ್ಮದೇವರ ಕೀರ್ತಿಯು ಪರಿಶುದ್ಧವಾದುದು. ಅವರು ಮಹಾವಿಷ್ಣುವಿನ ನಾಭಿಕಮಲದಿಂದ ಉತ್ಪನ್ನರಾಗಿದ್ದರು. ಅವರು ತಮ್ಮ ಲೋಕಕ್ಕೆ ಆಗಮಿಸಿದ್ದ ವಿಶ್ವ ರೂಪನಾದ ಭಗವಂತನ ಅಡಿದಾವರೆಗೆ ಸ್ವಾಗತವಿತ್ತ ಬಳಿಕ ಅರ್ಘ್ಯ-ಪಾದ್ಯಗಳಿಂದ ಸಂಪೂಜಿಸಿ ಆ ದಿವ್ಯ ಪಾದ-ಪದ್ಮವನ್ನು ತೊಳೆದರು. ಹೀಗೆ ತುಂಬುಭಕ್ತಿಯಿಂದಲೂ ಅರ್ಚಿಸಿದ ಬಳಿಕ ಪ್ರೇಮಭಾವದಿಂದ ಅವನನ್ನು ಸ್ತುತಿಸಿದರು. ॥ ೩ ॥

ಪರೀಕ್ಷಿತನೇ! ಬ್ರಹ್ಮನ ಕಮಂಡಲುವಿನಲ್ಲಿದ್ದ ಆ ತೀರ್ಥವು ಭಗವಾನ್ ತ್ರಿವಿಕ್ರಮನ ಪಾದವನ್ನು ತೊಳೆದುದರಿಂದ ಪವಿತ್ರವಾದ ಗಂಗೆಯಾಗಿ ಪರಿಣಮಿಸಿತು. ಅದು ಆಕಾಶದಿಂದ ಭೂಮಿಗೆ ಬಂದು ಮೂರು ಲೋಕಗಳನ್ನು ಪವಿತ್ರಗೊಳಿಸುತ್ತಿದೆ. ವಿಷ್ಣು ಪಾದೋದ್ಭವೆಯಾದ ಈ ಗಂಗೆಯು ಭಗವಂತನ ಮೂರ್ತಿಮಂತ ಉಜ್ವಲ ಕೀರ್ತಿಯಾಗಿದೆ. ॥ ೪ ॥ ಭಕ್ತರ ಅನುಕೂಲಕ್ಕಾಗಿ ಭಗ ವಂತನು ತನ್ನ ರೂಪವನ್ನು ಸಣ್ಣದಾಗಿಸಿಕೊಂಡು ತನ್ನ ವಿಭೂತಿ ಗಳನ್ನು ಸಂಕೋಚಗೊಳಿಸಿಕೊಂಡಾಗ ಬ್ರಹ್ಮಾದಿ ಲೋಕಪಾಲರು ತಮ್ಮ ಅನುಯಾಯಿಗಳೊಂದಿಗೆ ಅತ್ಯಂತ ಆದರಭಾವದಿಂದ ತಮ್ಮ ಸ್ವಾಮಿಯಾದ ಭಗವಂತನಿಗೆ ಪೂಜೆಯನ್ನು ಸಮರ್ಪಿಸಿದರು. ॥ ೫ ॥ ಅವರು ಅರ್ಘ್ಯ ಪಾದ್ಯಾಚಮನೀಯ ಮಧುಪರ್ಕ ಗಳಿಂದಲೂ, ಪುಷ್ಪಗಳಿಂದಲೂ, ದಿವ್ಯವಾದ ಗಂಧ-ಅಂಗರಾಗ ಗಳಿಂದಲೂ, ಸುವಾಸನೆಯುಳ್ಳ ಧೂಪ-ದೀಪ, ಅರಳು-ಅಕ್ಷತೆ ಗಳಿಂದಲೂ ಫಲ-ಅಂಕುರಗಳಿಂದಲೂ, ಭಗವಂತನ ಪರಾಕ್ರಮ-ಮಹಿಮೆಗಳಿಂದೊಡಗೂಡಿದ ಸ್ತೋತ್ರಗಳಿಂದಲೂ, ಜಯ-ಜಯ ಘೋಷಗಳಿಂದಲೂ, ನೃತ್ಯ-ಗೀತ-ವಾದ್ಯಗಳಿಂದಲೂ, ಶಂಖ-ದುಂದುಭಿಗಳ ಧ್ವನಿಯಿಂದಲೂ ಆ ತ್ರಿವಿಕ್ರಮ ಭಗವಂತನನ್ನು ಆರಾಧಿಸಿದರು. ॥ ೬-೭ ॥ ಆ ಸಮಯದಲ್ಲಿ ಕರಡಿಗಳ ರಾಜ ನಾದ ಜಾಂಬವಂತನು ಮನೋವೇಗಕ್ಕೆ ಸಮಾನವಾಗಿ ವೇಗದಿಂದ ಎಲ್ಲ ದಿಕ್ಕುಗಳಲ್ಲಿಯೂ ಓಡಾಡುತ್ತಾ ಭೇರಿಯ ಶಬ್ದದೊಡನೆ ಭಗವಂತನ ಮಂಗಲಮಯ ವಿಜಯೋತ್ಸವ ವಾರ್ತೆಯನ್ನು ಸಾರಿದನು. ॥ ೮ ॥

ಈ ವಾಮನ ಮೂರ್ತಿಯು ಮೂರಡಿಯಷ್ಟು ಭೂಮಿಯನ್ನು ಬೇಡುವ ನೆಪದಿಂದ ಇಡೀ ಭೂಮಿಯನ್ನೇ ಮೂರು ಲೋಕಗಳನ್ನೇ ತಮ್ಮಿಂದ ಕಿತ್ತುಕೊಂಡಿರುವುದನ್ನು ನೋಡಿ ಅಸುರರು ಅತ್ಯಂತ ಕ್ರುದ್ಧರಾದರು. ಅವರು ತಮ್ಮ-ತಮ್ಮಲ್ಲೇ ಯೋಚಿಸತೊಡಗಿದರು - 'ನಮ್ಮ ಒಡೆಯನು ಈ ಸಮಯದಲ್ಲಿ ಯಜ್ಞದೀಕ್ಷಿತ ನಾಗಿರುವನು. ಆದರಿಂದ ಅವನು ಏನನ್ನೂ ಮಾತನಾಡು ವುದಿಲ್ಲ. ॥ ೯ ॥ ಎಲಾ! ಇವನು ಸಾಮಾನ್ಯ ಬ್ರಾಹ್ಮಣನಲ್ಲ! ಇವನು ಮಹಾಮಾಯಾವಿಯಾದ ವಿಷ್ಣುವೇ ಆಗಿದ್ದಾನೆ. ಬ್ರಾಹ್ಮಣ ರೂಪವನ್ನು ಧರಿಸಿ ಇವನು ದೇವತೆಗಳ ಕಾರ್ಯವನ್ನು ಸಾಧಿ ಸಿಕೊಡಲು ಬಯಸುತ್ತಿರುವನು. ॥ ೧೦ ॥ ನಮ್ಮ ಒಡೆಯನು ಯಜ್ಞದ ದೀಕ್ಷಿತನಾಗಿರುವಾಗ ಯಾರಿಗೂ ಯಾವ ವಿಧವಾದ ಶಿಕ್ಷೆಯನ್ನೂ ಕೊಡಲಾರನು. ಇಂತಹ ಸಮಯದಲ್ಲೇ ಈ ನಮ್ಮ ಶತ್ರುವು ಬ್ರಹ್ಮಚಾರಿಯ ವೇಷವನ್ನು ಧರಿಸಿ ಮೊದಲು ಮೂರಡಿ ಭೂಮಿಯನ್ನು ಯಾಚಿಸಿ ಅನಂತರದಲ್ಲಿ ನಮ್ಮ ಸರ್ವಸ್ವವನ್ನು ಅಪಹರಿಸಿಬಿಟ್ಟನಲ್ಲ! ॥ ೧೧ ॥

ಸತ್ಯವ್ರತಸ್ಯ ಸತತಂ ದೀಕ್ಷಿತಸ್ಯ ವಿಶೇಷತಃ ।
ನಾನೃತಂ ಭಾಷಿತುಂ ಶಕ್ಯಂ ಬ್ರಹ್ಮಣ್ಯಸ್ಯ ದಯಾವತಃ ॥ ೧೨ ॥

ತಸ್ಮಾದಸ್ಯ ವಧೋ ಧರ್ಮೋ ಭರ್ತುಃ ಶುಶ್ರೂಷಣಂ ಚ ನಃ ।
ಇತ್ಯಾಯುಧಾನಿ ಜಗೃಹುರ್ಬಲೇರನುಚರಾಸುರಾಃ ॥ ೧೩ ॥

ತೇ ಸರ್ವೇ ವಾಮನಂ ಹಂತುಂ ಶೂಲಪಟ್ಟಿಶಪಾಣಯಃ ।
ಅನಿಚ್ಛತೋ ಬಲೇ ರಾಜನ್ಪ್ರಾದ್ರವನ್ ಜಾತಮನ್ಯವಃ ॥ ೧೪ ॥

ತಾನಭಿದ್ರವತೋ ದೃಷ್ಟ್ವಾ ದಿತಿಜಾನೀಕಪಾನ್ನೃಪ ।
ಪ್ರಹಸ್ಯಾನುಚರಾ ವಿಷ್ಣೋಃ ಪ್ರತ್ಯಷೇಧನ್ನುದಾಯುಧಾಃ ॥ ೧೫ ॥

ನಂದಃ ಸುನಂದೋಽಥ ಜಯೋ ವಿಜಯಃ ಪ್ರಬಲೋ ಬಲಃ ।
ಕುಮುದಃ ಕುಮುದಾಕ್ಷಶ್ಚ ವಿಷ್ವಕ್ಸೇನಃ ಪತತ್ರಿರಾಟ್ ॥ ೧೬ ॥

ಜಯಂತಃ ಶ್ರುತದೇವಶ್ಚ ಪುಷ್ಪದಂತೋಽಥ ಸಾತ್ವತಃ ।
ಸರ್ವೇ ನಾಗಾಯುತಪ್ರಾಣಾಶ್ಚಮೂಂ ತೇ ಜಘ್ನುರಾಸುರೀಮ್ ॥ ೧೭ ॥

ಹನ್ಯಮಾನಾನ್ಸ್ವಕಾನ್ ದೃಷ್ಟ್ವಾ ಪುರುಷಾನುಚರೈರ್ಬಲಿಃ ।
ವಾರಯಾಮಾಸ ಸಂರಬ್ಧಾನ್ಕಾವ್ಯಶಾಪಮನುಸ್ಮರನ್ ॥ ೧೮ ॥

ಹೇ ವಿಪ್ರಚಿತ್ತೇ ಹೇ ರಾಹೋ ಹೇ ನೇಮೇ ಶ್ರೂಯತಾಂ ವಚಃ ।
ಮಾ ಯುಧ್ಯತ ನಿವರ್ತಧ್ವಂ ನ ನಃ ಕಾಲೋಽಯಮರ್ಥಕೃತ್ ॥ ೧೯ ॥

ಯಃ ಪ್ರಭುಃ ಸರ್ವಭೂತಾನಾಂ ಸುಖದುಃಖೋಪಪತ್ತಯೇ ।
ತಂ ನಾತಿವರ್ತಿತುಂ ದೈತ್ಯಾಃ ಪೌರುಷೈರೀಶ್ವರಃ ಪುಮಾನ್ ॥ ೨೦ ॥

ಯೋ ನೋ ಭವಾಯ ಪ್ರಾಗಾಸೀದಭವಾಯ ದಿವೌಕಸಾಮ್ ।
ಸ ಏವ ಭಗವಾನದ್ಯ ವರ್ತತೇ ತದ್ವಿಪರ್ಯಯಮ್ ॥ ೨೦ ॥

ಬಲೇನ ಸಚಿವೈರ್ಬುದ್ಧ್ಯಾ ದುರ್ಗೈರ್ಮಂತ್ರೌಷಧಾದಿಭಿಃ ।
ಸಾಮಾದಿಭಿರುಪಾಯೈಶ್ಚ ಕಾಲಂ ನಾತ್ಯೇತಿ ವೈ ಜನಃ ॥ ೨೨ ॥

ಭವದ್ಭಿರ್ನಿರ್ಜಿತಾ ಹ್ಯೇತೇ ಬಹುಶೋಽನುಚರಾ ಹರೇಃ ।
ದೈವೇನರ್ದ್ಧೈಸ್ತ ಏವಾದ್ಯ ಯುಧಿ ಜಿತ್ವಾ ನದಂತಿ ನಃ ॥ ೨೩ ॥

ಏತಾನ್ವಯಂ ವಿಜೇಷ್ಯಾಮೋ ಯದಿ ದೈವಂ ಪ್ರಸೀದತಿ ।
ತಸ್ಮಾತ್ಕಾಲಂ ಪ್ರತೀಕ್ಷಧ್ವಂ ಯೋ ನೋಽರ್ಥತ್ವಾಯ ಕಲ್ಪತೇ ॥ ೨೪ ॥

ನಮ್ಮ ಸ್ವಾಮಿಯಾದರೋ ಸತತವಾಗಿ ಸತ್ಯದಲ್ಲಿಯೇ ಪರಮ ನಿಷ್ಠೆಯುಳ್ಳವನು. ಅದರಲ್ಲಿಯೂ ವಿಶೇಷವಾಗಿ ಯಜ್ಞದ ದೀಕ್ಷಿತನಾಗಿರುವನು. ಅವನು ಬ್ರಾಹ್ಮಣ ಭಕ್ತನೂ, ದಯಾಳುವೂ ಆಗಿರುವುದರಿಂದ ಸುಳ್ಳುಹೇಳಲು ಸಾಧ್ಯವಾಗುವುದಿಲ್ಲ. ॥ ೧೨ ॥ ಇಂತಹ ಸಂದರ್ಭದಲ್ಲಿ ನಮ್ಮ ಶತ್ರುವನ್ನು ವಧಿಸುವುದೇ ನಮ್ಮ ಧರ್ಮವೂ, ಕರ್ತವ್ಯವೂ ಆಗಿದೆ. ಇದರಿಂದ ನಮ್ಮ ಒಡೆಯನ ಸೇವೆಯೂ ಆಗುವುದು' ಎಂದು ನಿರ್ಧರಿಸಿ ಬಲಿ ಚಕ್ರವರ್ತಿಯ ಅನುಚರರು ತಮ್ಮ-ತಮ್ಮ ಆಯುಧಗಳಿಂದ ಸಜ್ಜಾದರು. ॥ ೧೩ ॥ ಪರೀಕ್ಷಿತನೇ! ರಾಜನಾದ ಬಲಿಯು ಬಯಸದಿದ್ದರೂ, ಅವನ ಅನುಮತಿಯನ್ನೂ ಪಡೆಯದೆಯೇ ಎಲ್ಲರೂ ಅತ್ಯಂತ ಕ್ರೋಧಗೊಂಡು ಶೂಲ, ಪಟ್ಟಿಶ ಮುಂತಾದ ಆಯುಧಗಳನ್ನು ಹಿಡಿದುಕೊಂಡು ಭಗವಾನ್ ವಾಮನನನ್ನು ಕೊಲ್ಲಲು ಮುಗಿಬಿದ್ದರು. ॥ ೧೪ ॥ ರಾಜೇಂದ್ರಾ! ದೈತ್ಯ ಸೇನಾಪತಿಗಳು ಆಕ್ರಮಣಕ್ಕಾಗಿ ಓಡಿಬರುವುದನ್ನು ಮಹಾವಿಷ್ಣುವಿನ ಪಾರ್ಷದರು ನೋಡಿದಾಗ ಗಹಗಹಿಸಿ ನಗುತ್ತಾ ತಮ್ಮ-ತಮ್ಮ ಶಸ್ತ್ರಾಸ್ತ್ರಗಳನ್ನು ಎತ್ತಿಕೊಂಡು ದೈತ್ಯಸೈನಿಕರನ್ನು ತಡೆದು ನಿಲ್ಲಿಸಿದರು. ॥ ೧೫ ॥ ನಂದ, ಸುನಂದ, ಜಯ, ವಿಜಯ, ಪ್ರಬಲ, ಬಲ, ಕುಮುದ, ಕುಮುದಾಕ್ಷ, ವಿಷ್ವಕ್ಸೇನ, ಗರುಡ, ಜಯಂತ, ಶ್ರುತದೇವ, ಪುಷ್ಪದಂತ, ಸಾತ್ವತ ಮುಂತಾದ ಭಗವಂತನ ಪಾರ್ಷದರೆಲ್ಲರೂ ಹತ್ತು-ಹತ್ತುಸಾವಿರ ಆನೆಗಳ ಬಲವುಳ್ಳವರು. ಇವರೆಲ್ಲರೂ ಅಸುರರ ಸೇನೆಯನ್ನು ಸಂಹರಿಸತೊಡಗಿದರು. ॥ ೧೬-೧೭ ॥ ಭಗವಂತನ ಪಾರ್ಷದರು ತನ್ನ ಸೈನಿಕರನ್ನು ಕೊಲ್ಲುತ್ತಿರುವುದನ್ನು ಬಲಿಯು ನೋಡಿದನು. ನಮ್ಮ ಸೈನಿಕರು ಕ್ರೋಧಗೊಂಡು ಅವರೊಂದಿಗೆ ಯುದ್ಧಮಾಡಲು ಸಿದ್ಧರಾಗಿದ್ದಾರೆ. ಅವನು ಶುಕ್ರಾಚಾರ್ಯರ ಶಾಪವನ್ನು ನೆನೆದು ವಿಪ್ರಚಿತ್ತಿ, ರಾಹು, ನೇಮಿ ಮೊದಲಾದ ದೈತ್ಯರನ್ನು ಸಂಬೋಧಿಸುತ್ತಾ – ಸಹೋದರರೇ! ನನ್ನ ಮಾತನ್ನು ಕೇಳಿರಿ. ಯುದ್ಧಮಾಡದೆ ಹಿಂದೆ ಸರಿಯಿರಿ. ಈ ಸಮಯವು ನಮಗೆ ಅನುಕೂಲವಾಗಿಲ್ಲ ಎಂದು ನುಡಿದನು. ॥ ೧೮-೧೯ ॥ ಸಮಸ್ತ ಪ್ರಾಣಿಗಳಿಗೆ ಸುಖ ಮತ್ತು ದುಃಖವನ್ನು ಕೊಡಲು ಸಮರ್ಥವಾದ ಕಾಲವನ್ನು ಯಾರಾದರೂ ತನ್ನ ಪ್ರಯತ್ನದಿಂದ ಅತಿಕ್ರಮಿಸಲು ಬಯಸಿದರೆ ಅದು ಅವನ ಶಕ್ತಿಗೆ ಮೀರಿದುದು. ॥ ೨೦ ॥ ಯಾವ ಕಾಲಪುರುಷನು ಈ ಹಿಂದೆ ನಮ್ಮ ಉನ್ನತಿಗೂ, ದೇವತೆಗಳ ಅವನತಿಗೂ ಕಾರಣನಾಗಿದ್ದನೋ ಆ ಕಾಲಪುರುಷನೇ ಇಂದು ನಮ್ಮ ಅವನತಿಗೂ, ದೇವತೆಗಳ ಉನ್ನತಿಗೂ ಕಾರಣವಾಗಿದೆ. ॥ ೨೦ ॥ ಮನುಷ್ಯರು – ಬಲ, ಮಂತ್ರೀ, ಬುದ್ಧಿ, ದುರ್ಗ, ಮಂತ್ರ, ಔಷಧಿ ಹಾಗೂ ಸಾಮ-ದಾನ ಮೊದಲಾದ ಉಪಾಯಗಳು – ಇವುಗಳಲ್ಲಿ ಯಾವ ಉಪಾಯದಿಂದಾಗಲೀ, ಅಥವಾ ಎಲ್ಲದರ ಮೂಲಕವಾಗಲೀ ಕಾಲಪುರುಷನನ್ನು ಗೆಲ್ಲಲಾಗುವುದಿಲ್ಲ. ॥ ೨೨ ॥ ದೈವವು ನಿಮಗೆ ಅನುಕೂಲವಾಗಿದ್ದಾಗ ನೀವು ದೇವತೆಗಳನ್ನು ಅನೇಕಬಾರಿ ಗೆದ್ದಿರುವಿರಿ. ಆದರೆ ಇಂದು ಅವರೇ ಯುದ್ಧದಲ್ಲಿ ನಮ್ಮನ್ನು ಗೆದ್ದು ಸಿಂಹನಾದ ಮಾಡುತ್ತಿದ್ದಾರೆ. ॥ ೨೩ ॥ ಮುಂದೆ ದೈವಾನುಕೂಲವು ನಮಗೆ ಒದಗಿ ಬಂದಾಗ ನಾವೂ ಅವರನ್ನು ಗೆದ್ದೇ ಗೆಲ್ಲುತ್ತೇವೆ. ಆದುದರಿಂದ ನೀವೆಲ್ಲ ಈಗ ಯುದ್ಧವನ್ನು ನಿಲ್ಲಿಸಿ, ಕಾರ್ಯಸಿದ್ಧಿಯಾಗುವಂತಹ ಕಾಲವನ್ನು ಪ್ರತೀಕ್ಷೆ ಮಾಡುತ್ತಿರಿ. ॥ ೨೪ ॥

ಶ್ರೀಶುಕ ಉವಾಚ

ಪತ್ಯುರ್ನಿಗದಿತಂ ಶ್ರುತ್ವಾ ದೈತ್ಯದಾನವಯೂಥಪಾಃ ।
ರಸಾಂ ನಿರ್ವಿವಿಶೂ ರಾಜನ್ವಿಷ್ಣುಪಾರ್ಷದತಾಡಿತಾಃ ॥ ೨೫ ॥

ಅಥ ತಾರ್ಕ್ಷ್ಯಸುತೋ ಜ್ಞಾತ್ವಾ ವಿರಾಟ್ಪ್ರಭುಚಿಕೀರ್ಷಿತಮ್ ।
ಬಬಂಧ ವಾರುಣೈಃ ಪಾಶೈರ್ಬಲಿಂ ಸೌತ್ಯೇಽಹನಿ ಕ್ರತೌ ॥ ೨೬ ॥

ಹಾಹಾಕಾರೋ ಮಹಾನಾಸೀ-
ದ್ರೋದಸ್ಯೋಃ ಸರ್ವತೋದಿಶಮ್ ।
ಗೃಹ್ಯಮಾಣೇಽಸುರಪತೌ
ವಿಷ್ಣುನಾ ಪ್ರಭವಿಷ್ಣುನಾ ॥ ೨೭ ॥

ತಂ ಬದ್ಧಂ ವಾರುಣೈಃ ಪಾಶೈರ್ಭಗವಾನಾಹ ವಾಮನಃ ।
ನಷ್ಟಶ್ರಿಯಂ ಸ್ಥಿರಪ್ರಜ್ಞಮುದಾರಯಶಸಂ ನೃಪ ॥ ೨೮ ॥

ಪದಾನಿ ತ್ರೀಣಿ ದತ್ತಾನಿ ಭೂಮೇರ್ಮಹ್ಯಂ ತ್ವಯಾಸುರ ।
ದ್ವಾಭ್ಯಾಂ ಕ್ರಾಂತಾ ಮಹೀ ಸರ್ವಾ ತೃತೀಯಮುಪಕಲ್ಪಯ ॥ ೨೯ ॥

ಯಾವತ್ತಪತ್ಯಸೌ ಗೋಭಿರ್ಯಾವದಿಂದುಃ ಸಹೋಡುಭಿಃ ।
ಯಾವದ್ವರ್ಷತಿ ಪರ್ಜನ್ಯಸ್ತಾವತೀ ಭೂರಿಯಂ ತವ ॥ ೩೦ ॥

ಪದೈಕೇನ ಮಯಾಕ್ರಾಂತೋ ಭೂರ್ಲೋಕಃ ಖಂ ದಿಶಸ್ತನೋಃ ।
ಸ್ವರ್ಲೋಕಸ್ತು ದ್ವಿತೀಯೇನ ಪಶ್ಯತಸ್ತೇ ಸ್ವಮಾತ್ಮನಾ ॥ ೩೧ ॥

ಪ್ರತಿಶ್ರುತಮದಾತುಸ್ತೇ ನಿರಯೇ ವಾಸ ಇಷ್ಯತೇ ।
ವಿಶ ತ್ವಂ ನಿರಯಂ ತಸ್ಮಾದ್ಗುರುಣಾ ಚಾನುಮೋದಿತಃ ॥ ೩೨ ॥

ವೃಥಾ ಮನೋರಥಸ್ತಸ್ಯ ದೂರೇ ಸ್ವರ್ಗಃ ಪತತ್ಯಧಃ ।
ಪ್ರತಿಶ್ರುತಸ್ಯಾದಾನೇನ ಯೋಽರ್ಥಿನಂ ವಿಪ್ರಲಂಭತೇ ॥ ೩೩ ॥

ವಿಪ್ರಲಬ್ಧೋ ದದಾಮೀತಿ ತ್ವಯಾಹಂ ಚಾಢ್ಯಮಾನಿನಾ ।
ತದ್ವ್ಯಲೀಕಫಲಂ ಭುಂಕ್ಷ್ವ ನಿರಯಂ ಕತಿಚಿತ್ಸಮಾಃ ॥ ೩೪ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿದ್ರಾಜನೇ! ಹೀಗೆ ದೈತ್ಯಸೇನಾನಾಯಕರು ತಮ್ಮ ಒಡೆಯನಾದ ಬಲಿಯ ಮಾತನ್ನು ಕೇಳಿ ಭಗವಂತನ ಪಾರ್ಷದರಿಂದ ಪರಾಜಿತರಾದ ದಾನವರೂ, ದೈತ್ಯಸೇನಾಪತಿಗಳೂ ರಸಾತಳಕ್ಕೆ ಹೊರಟು ಹೋದರು. ॥ ೨೫ ॥ ಅವರು ಹೊರಟುಹೋದ ಬಳಿಕ ಪಕ್ಷಿಶ್ರೇಷ್ಠನಾದ ಗರುಡನು ಭಗವಾನ್ ಶ್ರೀವಾಮನನ ಮನಸ್ಸಿನ ಇಂಗಿತವನ್ನು ಅರಿತು, ಬಲಿಯು ಆ ಅಶ್ವಮೇಧ ಯಜ್ಞದಲ್ಲಿ ಸೋಮಪಾನವಾಗಬೇಕಿದ್ದ ಆ ದಿನದಲ್ಲಿ ವರುಣನ ಪಾಶಗಳಿಂದ ಬಲಿಯನ್ನು ಬಂಧಿಸಿದನು. ॥ ೨೬ ॥ ಸರ್ವಶಕ್ತನಾದ ಭಗವಾನ್ ಮಹಾವಿಷ್ಣುವು ಬಲಿಯನ್ನು ಹೀಗೆ ಬಂಧಿಸಿದಾಗ ಭೂಮ್ಯಂತರಿಕ್ಷಗಳಲ್ಲಿಯೂ, ಸಮಸ್ತ ದಿಕ್ಕುಗಳಲ್ಲಿ ಭಾರೀ ಹಾಹಾಕಾರವೇ ಉಂಟಾಯಿತು. ॥ ೨೭ ॥ ಬಲಿಚಕ್ರವರ್ತಿಯು ವರುಣಪಾಶಗಳಿಂದ ಬಂಧಿಸಲ್ಪಟ್ಟಿದ್ದರೂ, ಅವನ ಸಮಸ್ತ ಸಂಪತ್ತು ನಷ್ಟವಾಗಿ ಹೋಗಿದ್ದರೂ ಅವನು ಮಾತ್ರ ಸ್ಥಿರಪ್ರಜ್ಞನಾಗಿದ್ದನು. ಎಲ್ಲರೂ ಅವನ ಶ್ರೇಷ್ಠವಾದ ಯಶಸ್ಸನ್ನು ಕೊಂಡಾಡುತ್ತಿದ್ದರು. ಪರೀಕ್ಷಿತನೇ! ಆಗ ಭಗವಂತನು ಬಲಿಯ ಬಳಿ ಇಂತೆಂದನು – ॥ ೨೮ ॥ ಅಸುರಶ್ರೇಷ್ಠನೇ! ನೀನು ನನಗೆ ಮೂರುಹೆಜ್ಜೆ ಭೂಮಿಯನ್ನು ದಾನವಾಗಿ ಕೊಟ್ಟಿದ್ದೆ. ಎರಡು ಹೆಜ್ಜೆಗಳಿಂದ ನಾನು ಸಮಸ್ತ ಭೂಮಂಡಲವನ್ನೂ, ಸ್ವರ್ಗಪಾತಾಳ ಹೀಗೆ ಎಲ್ಲವನ್ನೂ ಅಳೆದುಕೊಂಡುಬಿಟ್ಟೆ. ಈಗ ನನಗೆ ಕೊಡಬೇಕಾದ ಮೂರನೆಯ ಹೆಜ್ಜೆಗೆ ಸ್ಥಳಾವಕಾಶವನ್ನು ಮಾಡಿಕೊಡು. ॥ ೨೯ ॥ ಸೂರ್ಯನ ಕಿರಣಗಳು ಎಲ್ಲಿಯವರೆಗೆ ಪ್ರಸರಿಸುವವೋ, ಚಂದ್ರ ಮತ್ತು ನಕ್ಷತ್ರಗಳ ಕಿರಣಗಳು ಎಲ್ಲಿಯವರೆಗೆ ಪ್ರಸರಿಸುವವೋ, ಮೋಡಗಳು ಎಲ್ಲಿಯವರೆಗೆ ಮಳೆಗರೆಯುತ್ತವೆಯೋ ಅಲ್ಲಿಯವರೆಗಿನ ಇಡೀ ಪೃಥಿವಿಯು ನಿನ್ನ ಅಧಿಕಾರದಲ್ಲಿತ್ತು. ॥ ೩೦ ॥ ನೀನು ನೋಡು-ನೋಡುತ್ತಿರುವಂತೆ ನಾನು ಒಂದೇ ಹೆಜ್ಜೆಯಿಂದ ಭೂರ್ಲೋಕವನ್ನೂ, ಶರೀರದಿಂದ ಆಕಾಶ ಮತ್ತು ದಿಕ್ಕುಗಳನ್ನು ಅಳೆದುಬಿಟ್ಟೆ. ಎರಡನೆಯ ಹೆಜ್ಜೆಯಿಂದ ಸ್ವರ್ಗವನ್ನು ಅಳೆದುಬಿಟ್ಟೆ. ಹೀಗೆ ನಿನ್ನದೆಲ್ಲವೂ ಈಗ ನನ್ನದಾಗಿದೆ. ॥ ೩೧ ॥ ನೀನು ಮಾಡಿದ ಪ್ರತಿಜ್ಞೆಯನುಸಾರವಾಗಿ ನಿನ್ನಿಂದ ನಡೆಯಲು ಸಾಧ್ಯವಾಗದೆ ಇರುವುದರಿಂದ ನೀನೀಗ ನರಕಕ್ಕೆ ಹೋಗಬೇಕಾಗಿದೆ. ನಿನ್ನ ಗುರುವಿನ ಅನುಮತಿಯು ಇದಕ್ಕೆ ಇದ್ದೇ ಇದೆ. ಈಗ ನೀನು ನರಕವನ್ನು ಪ್ರವೇಶಿಸು. ॥ ೩೨ ॥ ಯಾಚಕನಿಗೆ ದಾನಕೊಡುವ ಪ್ರತಿಜ್ಞೆಮಾಡಿ ಅದನ್ನು ಈಡೇರಿಸದವನು, ಅವನಿಗೆ ಮೋಸ ಮಾಡುವವನ ಎಲ್ಲ ಮನೋರಥಗಳು ವ್ಯರ್ಥವಾಗಿಹೋಗುತ್ತವೆ. ಸ್ವರ್ಗದ ಮಾತಿರಲಿ ಅವನಿಗೆ ನರಕಕ್ಕೆ ಹೋಗಬೇಕಾಗುತ್ತದೆ. ॥ ೩೩ ॥ ನಾನು ಆಢ್ಯನೆಂಬ ಅಭಿಮಾನ ನಿನ್ನಲ್ಲಿತ್ತು. ನಿನಗೆ ಕೊಡುತ್ತೇನೆ ಎಂದು ನೀನು ನನ್ನಲ್ಲಿ ಪ್ರತಿಜ್ಞೆಮಾಡಿ ತಪ್ಪಿರುವೆ. ಈಗ ನೀನು ಕೆಲವು ವರ್ಷಗಳವರೆಗೆ ಈ ಪಾಪದ ಫಲವನ್ನು ಅನುಭವಿಸಬೇಕಾಗುವುದು. ॥ ೩೪ ॥

ಇಪ್ಪತ್ತೊಂದನೆಯ ಅಧ್ಯಾಯವು ಮುಗಿಯಿತು. ॥ ೨೧ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಅಷ್ಟಮ ಸ್ಕಂಧೇ
ವಾಮನಪ್ರಾದುರ್ಭಾವೇ ಬಲಿನಿಗ್ರಹೋ ನಾಮೈಕವಿಂಶೋಽಧ್ಯಾಯಃ ॥ ೨೧ ॥

ಇಪ್ಪತ್ತೆರಡನೆಯ ಅಧ್ಯಾಯ

ಬಲಿಯು ಭಗವಂತನನ್ನು ಸ್ತುತಿಸಿದುದು – ಭಗವಂತನು ಬಲಿಗೆ ಪ್ರಸನ್ನನಾದುದು

ಶ್ರೀಶುಕ ಉವಾಚ

ಏವಂ ವಿಪ್ರಕೃತೋ ರಾಜನ್ಬಲಿರ್ಭಗವತಾಸುರಃ ।
ಭಿದ್ಯಮಾನೋಽಪ್ಯಭಿನ್ನಾತ್ಮಾ ಪ್ರತ್ಯಾಹಾವಿಕ್ಲವಂ ವಚಃ ॥ ೧ ॥

ಬಲಿರುವಾಚ

ಯದ್ಯುತ್ತಮಶ್ಲೋಕ ಭವಾನ್ಮಮೇರಿತಂ
ವಚೋ ವ್ಯಲೀಕಂ ಸುರವರ್ಯ ಮನ್ಯತೇ ।
ಕರೋಮ್ಯೃತಂ ತನ್ನ ಭವೇತ್ಪ್ರಲಂಭನಂ
ಪದಂ ತೃತೀಯಂ ಕುರು ಶೀರ್ಷ್ಣಿ ಮೇ ನಿಜಮ್ ॥ ೨ ॥

ಬಿಭೇಮಿ ನಾಹಂ ನಿರಯಾತ್ಪದಚ್ಯುತೋ
ನ ಪಾಶಬಂಧಾದ್ವ್ಯಸನಾದ್ದುರತ್ಯಯಾತ್ ।
ನೈವಾರ್ಥಕೃಚ್ಛ್ರಾದ್ಭವತೋ ವಿನಿಗ್ರಹಾ-
ದಸಾಧುವಾದಾದ್ಭೃಶಮುದ್ವಿಜೇ ಯಥಾ ॥ ೩ ॥

ಪುಂಸಾಂ ಶ್ಲಾಘ್ಯತಮಂ ಮನ್ಯೇ ದಂಡಮರ್ಹತ್ತಮಾರ್ಪಿತಮ್ ।
ಯಂ ನ ಮಾತಾ ಪಿತಾ ಭ್ರಾತಾ ಸುಹೃದಶ್ಚಾದಿಶಂತಿ ಹಿ ॥ ೪ ॥

ತ್ವಂ ನೂನಮಸುರಾಣಾಂ ನಃ ಪಾರೋಕ್ಷ್ಯಃ ಪರಮೋ ಗುರುಃ ।
ಯೋ ನೋಽನೇಕಮದಾಂಧಾನಾಂ ವಿಭ್ರಂಶಂ ಚಕ್ಷುರಾದಿಶತ್ ॥ ೫ ॥

ಯಸ್ಮಿನ್ವೈರಾನುಬಂಧೇನ ರೂಢೇನ ವಿಬುಧೇತರಾಃ ।
ಬಹವೋ ಲೇಭಿರೇ ಸಿದ್ಧಿಂ ಯಾಮು ಹೈಕಾಂತಯೋಗಿನಃ ॥ ೬ ॥

ತೇನಾಹಂ ನಿಗೃಹೀತೋಽಸ್ಮಿ ಭವತಾ ಭೂರಿಕರ್ಮಣಾ ।
ಬದ್ಧಶ್ಚ ವಾರುಣೈಃ ಪಾಶೈರ್ನಾತಿವ್ರೀಡೇ ನ ಚ ವ್ಯಥೇ ॥ ೭ ॥

ಪಿತಾಮಹೋ ಮೇ ಭವದೀಯಸಮ್ಮತಃ
ಪ್ರಹ್ಲಾದ ಆವಿಷ್ಕೃತಸಾಧುವಾದಃ ।
ಭವದ್ವಿಪಕ್ಷೇಣ ವಿಚಿತ್ರವೈಶಸಂ
ಸಂಪ್ರಾಪಿತಸ್ತ್ವತ್ಪರಮಃ ಸ್ವಪಿತ್ರಾ ॥ ೮ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಎಲೈ ಪರೀಕ್ಷಿತನೇ! ಹೀಗೆ ಭಗವಂತನು ಬಲಿಯನ್ನು ಬಹಳವಾಗಿ ತಿರಸ್ಕರಿಸಿ ಮಾತಾಡಿದರೂ ಬಲಿಯು ಧೈರ್ಯದಿಂದ ಕದಲಲಿಲ್ಲ. ಸ್ವಲ್ಪವಾದರೂ ಎದೆಗುಂದದೆ ನಿರ್ಭಯನಾಗಿ ಇಂತೆಂದನು – ॥ ೧ ॥

ದೈತ್ಯರಾಜ ಬಲಿಯು ಹೇಳಿದನು – ಸುರಶ್ರೇಷ್ಠನೇ! ಪುಣ್ಯಶ್ಲೋಕನೇ! ನಾನು ಕೊಟ್ಟ ಮಾತನ್ನು ಅಸತ್ಯವೆಂದು ಭಾವಿಸುವೆಯಾ? ಹಾಗೆಂದಿಗೂ ಆಗಲಾರದು. ನಾನು ಅದನ್ನು ಸತ್ಯವಾಗಿಸಿ ತೋರುವೆನು. ನಿನ್ನನ್ನು ಎಂದಿಗೂ ವಂಚಿಸುವುದಿಲ್ಲ. ನೀನು ಕೃಪೆದೋರಿ ನಿನ್ನ ಮೂರನೆಯ ಹೆಜ್ಜೆಯನ್ನು ನನ್ನ ತಲೆಯ ಮೇಲಿರಿಸು. ॥ ೨ ॥ ನನಗೆ ನರಕಕ್ಕೆ ಹೋಗಲು ಅಥವಾ ರಾಜ್ಯಭ್ರಷ್ಟನಾದ ಬಗ್ಗೆ ದುಃಖವಿಲ್ಲ. ನಾನು ಪಾಶಗಳಿಂದ ಬಂಧಿತನಾಗಿ, ಅಪಾರವಾದ ದುಃಖಸಾಗರದಲ್ಲಿ ಮುಳುಗಿದರೂ ನನಗೆ ಭಯವಿಲ್ಲ. ಅರ್ಥವೆಲ್ಲವೂ ಹೋಗಿ ದಾರಿದ್ರ್ಯ ಬಂತೆಂದೂ, ನೀನು ನನ್ನನ್ನು ಶಿಕ್ಷಿಸುವೆಯೆಂದೂ ನಾನು ಅಂಜುವುದಿಲ್ಲ. ನಾನು ಭಯಪಡುವುದು ಕೇವಲ ಅಪಯಶಸ್ಸಿಗೆ ಮಾತ್ರ. ॥ ೩ ॥ ಪೂಜ್ಯತಮನಾದ ಭಗವಂತನು ಕೊಡುವ ಶಿಕ್ಷೆಯು ಪುರುಷರಿಗೆ ಶ್ರೇಯಸ್ಕರವೆಂದೇ ನಾನು ಭಾವಿಸುತ್ತೇನೆ. ಏಕೆಂದರೆ, ಅಂತಹ ಶಿಕ್ಷೆಯನ್ನು ಮೋಹಪರವಶರಾದ ಮಾತಾ-ಪಿತೃಗಳಾಗಲೀ, ಸಹೋದರ-ಸುಹೃದಯರಾಗಲೀ ಕೊಡಲಾರರು. ॥ ೪ ॥ ನೀನು ಅಡಗಿಕೊಂಡೇ ಅಸುರರಾದ ನಮಗೆ ಉತ್ತಮವಾದ ಶಿಕ್ಷಣವನ್ನು ಕೊಡುತ್ತಾ ಇರುವೆ. ಆದ್ದರಿಂದ ನೀನು ನಮಗೆ ಪರಮ ಗುರುವಾಗಿರುವೆ. ನಾವುಗಳು ಧನ-ಕುಲ-ಬಲ ಮುಂತಾದ ಮದಗಳಿಂದ ಕುರುಡರಾದಾಗ ನೀನು ಆ ವಸ್ತುಗಳನ್ನು ನಮ್ಮಿಂದ ಕಸಿದುಕೊಂಡು ಜ್ಞಾನದೃಷ್ಟಿಯನ್ನು ಕೊಡುವೆ. ॥ ೫ ॥ ಅಸುರರಾದ ನಮಗೆ ನಿನ್ನಿಂದ ಆಗುವ ಉಪಕಾರವನ್ನು ನಾನು ಎಷ್ಟೆಂದು ಹೇಳಲಿ? ಅನನ್ಯ ಭಾವದಿಂದ ಯೋಗವನ್ನಾಚರಿಸಿ ಯೋಗಿಗಳು ಪಡೆಯುವ ಸಿದ್ಧಿಯನ್ನೇ ಅನೇಕ ಅಸುರರು ನಿನ್ನೊಡನೆ ದೃಢಮೂಲವಾದ ವೈರಭಾವದಿಂದಲೇ ಪಡೆದುಕೊಂಡಿಲ್ಲವೇ? ॥ ೬ ॥ ಇಂತಹ ಅಪಾರ ಮಹಿಮೆಯೂ, ಅನಂತವಾದ ಲೀಲೆಗಳುಳ್ಳ ಪರಮಪುರುಷ ಪರಮಾತ್ಮನಾದ ನಿನ್ನಿಂದ ನಾನು ಶಿಕ್ಷಿಸಲ್ಪಟ್ಟು ವರುಣಪಾಶಗಳಿಂದ ಬಂಧಿತನಾಗಿದ್ದೇನೆ. ಇದರಿಂದ ನನಗೆ ಯಾವ ವಿಧವಾದ ನಾಚಿಕೆಯೂ, ವ್ಯಥೆಯೂ ಇಲ್ಲ. ॥ ೭ ॥ ಪ್ರಭುವೇ! ನನ್ನ ಪಿತಾಮಹನಾದ ಪ್ರಹ್ಲಾದನ ಕೀರ್ತಿಯು ಜಗತ್ಪ್ರಸಿದ್ಧವಾಗಿದೆ. ಅವನನ್ನು ನಿನ್ನ ಭಕ್ತರಲ್ಲಿ ಶ್ರೇಷ್ಠನೆಂದು ಪರಿಗಣಿಸಲ್ಪಟ್ಟಿದೆ. ಅವನ ತಂದೆಯಾದ ಹಿರಣ್ಯಕಶಿಪುವಿಗೆ ನಿನ್ನಲ್ಲಿ ವೈರವಿದ್ದ ಕಾರಣ ಅವನು ಮಗುವಿಗೆ ಅನೇಕ ಪ್ರಕಾರದ ದುಃಖವನ್ನು ಕೊಟ್ಟನು. ಆದರೂ ಪ್ರಹ್ಲಾದನು ನಿನ್ನನ್ನೇ ಪರಮಾಶ್ರಯವನ್ನಾಗಿ ಭಾವಿಸಿದನು. ತನ್ನ ಜೀವನವನ್ನೇ ಅವನು ಸಂಪೂರ್ಣವಾಗಿ ನಿನಗೆ ಒಪ್ಪಿಸಿಬಿಟ್ಟನು. ॥ ೮ ॥ ನಮ್ಮ ತಾತನಾದ ಪ್ರಹ್ಲಾದನ ಅಭಿಪ್ರಾಯ

ಕಿಮಾತ್ಮನಾನೇನ ಜಹಾತಿ ಯೋಽಂತತಃ
ಕಿಂ ರಿಕ್ಥಹಾರೈಃ ಸ್ವಜನಾಖ್ಯದಸ್ಯುಭಿಃ ।
ಕಿಂ ಜಾಯಯಾ ಸಂಸೃತಿಹೇತುಭೂತಯಾ
ಮರ್ತ್ಯಸ್ಯ ಗೇಹೈಃ ಕಿಮಿಹಾಯುಷೋ ವ್ಯಯಃ ॥ ೯ ॥

ಇತ್ಥಂ ಸ ನಿಶ್ಚಿತ್ಯ ಪಿತಾಮಹೋ ಮಹಾ-
ನಗಾಧಬೋಧೋ ಭವತಃ ಪಾದಪದ್ಮಮ್ ।
ಧ್ರುವಂ ಪ್ರಪೇದೇ ಹ್ಯಕುತೋಭಯಂ ಜನಾದ್
ಭೀತಃ ಸ್ವಪಕ್ಷಕ್ಷಪಣಸ್ಯ ಸತ್ತಮಃ ॥ ೧೦ ॥

ಅಥಾಹಮಪ್ಯಾತ್ಮರಿಪೋಸ್ತವಾಂತಿಕಂ
ದೈವೇನ ನೀತಃ ಪ್ರಸಭಂ ತ್ಯಾಜಿತಶ್ರೀಃ ।
ಇದಂ ಕೃತಾಂತಾಂತಿಕವರ್ತಿ ಜೀವಿತಂ
ಯಯಾಧ್ರುವಂ ಸ್ತಬ್ಧಮತಿರ್ನ ಬುಧ್ಯತೇ ॥ ೧೧ ॥

ಶ್ರೀಶುಕ ಉವಾಚ

ತಸ್ಯೇತ್ಥಂ ಭಾಷಮಾಣಸ್ಯ ಪ್ರಹ್ಲಾದೋ ಭಗವತ್ಪ್ರಿಯಃ ।
ಆಜಗಾಮ ಕುರುಶ್ರೇಷ್ಠ ರಾಕಾಪತಿರಿವೋತ್ಥಿತಃ
॥ ೧೨ ॥

ತಮಿಂದ್ರಸೇನಃ ಸ್ವಪಿತಾಮಹಂ ಶ್ರಿಯಾ
ವಿರಾಜಮಾನಂ ನಲಿನಾಯತೇಕ್ಷಣಮ್ ।
ಪ್ರಾಂಶುಂ ಪಿಶಂಗಾಂಬರಮಂಜನತ್ವಿಷಂ
ಪ್ರಲಂಬಬಾಹುಂ ಸುಭಗಂ ಸಮೈಕ್ಷತ ॥ ೧೩ ॥

ತಸ್ಮೈ ಬಲಿರ್ವಾರುಣಪಾಶಯಂತ್ರಿತಃ
ಸಮರ್ಹಣಂ ನೋಪಜಹಾರ ಪೂರ್ವವತ್ ।
ನನಾಮ ಮೂರ್ಧ್ನಾಶ್ರುವಿಲೋಲಲೋಚನಃ
ಸವ್ರೀಡನೀಚೀನಮುಖೋ ಬಭೂವ ಹ ॥ ೧೪ ॥

ಸ ತತ್ರ ಹಾಸೀನಮುದೀಕ್ಷ್ಯ ಸತ್ಪತಿಂ
ಸುನಂದನಂದಾದ್ಯನುಗೈರುಪಾಸಿತಮ್ ।
ಉಪೇತ್ಯ ಭೂಮೌ ಶಿರಸಾ ಮಹಾಮನಾ
ನನಾಮ ಮೂರ್ಧ್ನಾ ಪುಲಕಾಶ್ರುವಿಕ್ಲವಃ ॥ ೧೫ ॥

ಪ್ರಹ್ಲಾದ ಉವಾಚ

ತ್ವಯೈವ ದತ್ತಂ ಪದಮೈಂದ್ರಮೂರ್ಜಿತಂ
ಹೃತಂ ತದೇವಾದ್ಯ ತಥೈವ ಶೋಭನಮ್ ।
ಮನ್ಯೇ ಮಹಾನಸ್ಯ ಕೃತೋ ಹ್ಯನುಗ್ರಹೋ
ವಿಭ್ರಂಶಿತೋ ಯಚ್ಛ್ರಿಯ ಆತ್ಮಮೋಹನಾತ್ ॥ ೧೬ ॥

ಹೀಗಿದ್ದು – ಎಂದಾದರೊಂದು ದಿನ ಕಳಚಿ ಬಿದ್ದುಹೋಗುವ ಶರೀರದಿಂದ ಏನು ಪ್ರಯೋಜನವಿದೆ? ಧನ-ಸಂಪತ್ತನ್ನು ದೋಚುವ ಸ್ವಜನರಂತೆ ಕಂಡುಬರುವ ಕಳ್ಳರಿಂದ ತನಗೆ ಏನಾಗಬೇಕಾಗಿದೆ? ಜನ್ಮ-ಮರಣ ಚಕ್ರದಲ್ಲಿ ಕೆಡಹುವಂತಹ ಹೆಂಡತಿಯಿಂದಲಾದರೂ ಏನು ಲಾಭವಿದೆ? ಒಂದಲ್ಲ ಒಂದುದಿನ ಸಾಯಲೇಬೇಕಾಗಿರುವಾಗ ಮನೆಯ ಕುರಿತು ಮೋಹವಿಡುವುದರಲ್ಲಿ ಯಾವ ಸ್ವಾರ್ಥವಿದೆ? ಇವೆಲ್ಲ ವಸ್ತುಗಳಲ್ಲಿ ಮೈಮರೆಯುವುದು ಕೇವಲ ತನ್ನ ಆಯುಸ್ಸನ್ನು ಹಾಳುಮಾಡುವುದು ಮಾತ್ರವಾಗಿದೆ. ॥ ೯ ॥ ಹೀಗೆ ನಿಶ್ಚಯಮಾಡಿದ ನನ್ನ ಪಿತಾಮಹ ಪ್ರಹ್ಲಾದನು ಲೌಕಿಕ ದೃಷ್ಟಿಯಿಂದ ಅವನ ಬಂಧು-ಬಾಂಧವರನ್ನು ನಾಶಮಾಡುವ ಶತ್ರುವು ನೀನೇ ಎಂದು ತಿಳಿದಿದ್ದರೂ ಭಯ ರಹಿತವಾದ, ಅವಿನಾಶಿಯಾದ ನಿನ್ನ ಚರಣ ಕಮಲಗಳಲ್ಲೇ ಶರಣಾಗಿದ್ದನು. ಏನೇ ಇರಲಿ, ಅವನು ಸಂಸಾರದಿಂದ ಪರಮ ವಿರಕ್ತನೂ, ಅಗಾಧಬೋಧಸಂಪನ್ನನೂ, ಉದಾರ ಹೃದಯನೂ, ಸಂತ ಶಿರೋಮಣಿಯೂ ಆಗಿದ್ದನು. ॥ ೧೦ ॥ ಹಾಗೆ ನೋಡಿದರೆ ನೀನೂ ನನ್ನ ಶತ್ರುವೇ ಆಗಿರುವೆ. ಹಾಗಿದ್ದರೂ ವಿಧಿಯು ನನ್ನನ್ನು ಬಲವಂತವಾಗಿ ಸಕಲ ಸಂಪತ್ತಿನಿಂದ ಬೇರ್ಪಡಿಸಿ ನಿನ್ನ ಬಳಿಗೆ ತಂದುಬಿಟ್ಟಿದೆ. ಇದೂ ಒಳ್ಳೆಯದೇ ಆಯಿತು. ಏಕೆಂದರೆ, ಸಂಪತ್ತು-ಐಶ್ವರ್ಯದಿಂದ ಜೀವಿಯ ಬುದ್ಧಿಯು ಜಡವಾಗಿ – ನನ್ನ ಈ ಜೀವನ ಮೃತ್ಯುವಿನ ಹಿಡಿತದಲ್ಲಿದೆ, ಇದು ಅನಿತ್ಯವಾಗಿದೆ ಎಂಬುದೂ ತಿಳಿಯದೇ ಹೋಗುತ್ತಾನೆ. ॥ ೧೧ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ! ಬಲಿಚಕ್ರವರ್ತಿಯು ಹೀಗೆ ಹೇಳುತ್ತಿದ್ದಂತೆ ಭಗವಂತನ ಪ್ರೇಮ ಪಾತ್ರನಾದ ಪ್ರಹ್ಲಾದನು ಚಂದ್ರನು ಉದಯಿಸಿಬಂದಂತೆ ಅಲ್ಲಿಗೆ ಆಗಮಿಸಿದನು. ॥ ೧೨ ॥ ಶ್ರೀಸಂಪನ್ನನಾಗಿದ್ದ (ಸೌಂದರ್ಯದಿಂದ ಕೂಡಿದ) ಕಾಂತಿಯಿಂದ ವಿರಾಜಿಸುತ್ತಿದ್ದ, ಕಮಲದಂತೆ ವಿಶಾಲಕಣ್ಣುಗಳುಳ್ಳ, ಆಜಾನುಬಾಹುವಾಗಿದ್ದ ಉನ್ನತವಾಗಿದ್ದ ಶ್ಯಾಮಲ ಶರೀರದಲ್ಲಿ ಪೀತಾಂಬರವನ್ನು ಧರಿಸಿದ್ದ ಪಿತಾಮಹನಾದ ಪ್ರಹ್ಲಾದನನ್ನು ಬಲಿಯು ನೋಡಿದನು. ॥ ೧೩ ॥ ಆ ಸಮಯದಲ್ಲಿ ಬಲಿಯು ವರುಣಪಾಶದಲ್ಲಿ ಬಂಧಿತನಾದ್ದರಿಂದ ಪ್ರಹ್ಲಾದನು ಬಂದಾಗ ಮೊದಲಿನಂತೆ ಪೂಜಿಸದೇ ಹೋದನು. ಕಂಬನಿ ತುಂಬಿದ ಕಣ್ಣುಗಳಿಂದ ಕೂಡಿ ಕೇವಲ ತಲೆಯನ್ನು ತಗ್ಗಿಸುವುದರಿಂದಲೇ ಪ್ರಹ್ಲಾದನನ್ನು ವಂದಿಸಿ ಪುನಃ ನಾಚಿಕೆಯಿಂದ ತಲೆತಗ್ಗಿಸಿ ಕುಳಿತನು. ॥ ೧೪ ॥ ಮಹಾತ್ಮನಾದ ಸುನಂದರೇ ಮೊದಲಾದ ಭಕ್ತರಿಂದ ಸೇವಿಸಲ್ಪಡುತ್ತಿದ್ದ, ಸತ್ಪುರುಷರಿಗೆ ಒಡೆಯನಾದ ಭಕ್ತವತ್ಸಲ ಶ್ರೀಹರಿಯು ಅಲ್ಲೇ ನಿಂತಿರುವುದನ್ನು ನೋಡಿ ಪುಳಕಿತನಾಗಿ, ಆನಂದಬಾಷ್ಪಗಳನ್ನು ಸುರಿಸುತ್ತಾ ಭಗವಂತನ ಬಳಿಗೆ ಹೋಗಿ ದೀರ್ಘದಂಡ ನಮಸ್ಕಾರವನ್ನು ಮಾಡಿ, ಕೈಜೋಡಿಸಿಕೊಂಡು ಇಂತೆಂದನು – ॥ ೧೫ ॥

ಪ್ರಹ್ಲಾದನು ಹೇಳಿದನು – ಭಗವಂತಾ! ಈ ಬಲಿಗೆ ಐಶ್ವರ್ಯಪೂರ್ಣವಾದ ಇಂದ್ರಪದವಿಯನ್ನು ಕೊಟ್ಟವನೂ ನೀನೇ,. ಈಗ ಅದೇ ಸಾರ್ವಭೌಮತ್ವವನ್ನು ಅಪಹರಿಸಿದವನೂ ನೀನೇ. ನೀನು ಕೊಡುವುದು ಎಷ್ಟು ಸುಂದರವೋ ಪಡೆಯುವುದೂ ಅಷ್ಟೇ

ಯಯಾ ಹಿ ವಿದ್ವಾನಪಿ ಮುಹ್ಯತೇ ಯತಃ
ತತ್ಕೋ ವಿಚಷ್ಟೇ ಗತಿಮಾತ್ಮನೋ ಯಥಾ ।
ತಸ್ಮೈ ನಮಸ್ತೇ ಜಗದೀಶ್ವರಾಯ ವೈ
ನಾರಾಯಣಾಯಾಖಿಲಲೋಕಸಾಕ್ಷಿಣೇ ॥ ೧೭ ॥

ಶ್ರೀಶುಕ ಉವಾಚ

ತಸ್ಯಾನುಶೃಣ್ವತೋ ರಾಜನ್ ಪ್ರಹ್ಲಾದಸ್ಯ ಕೃತಾಂಜಲೇಃ ।
ಹಿರಣ್ಯಗರ್ಭೋ ಭಗವಾನುವಾಚ ಮಧುಸೂದನಮ್
॥ ೧೮ ॥

ಬದ್ಧಂ ವೀಕ್ಷ್ಯ ಪತಿಂ ಸಾಧ್ವೀ ತತ್ಪತ್ನೀ ಭಯವಿಹ್ವಲಾ ।
ಪ್ರಾಂಜಲಿಃ ಪ್ರಣತೋಪೇಂದ್ರಂ ಬಭಾಷೇಽವಾಙ್ಮುಖೀ ನೃಪ
॥ ೧೯ ॥

ವಿಂಧ್ಯಾವಲಿರುವಾಚ

ಕ್ರೀಡಾರ್ಥಮಾತ್ಮನ ಇದಂ ತ್ರಿಜಗತ್ಕೃತಂ ತೇ
ಸ್ವಾಮ್ಯಂ ತು ತತ್ರ ಕುಧಿಯೋಽಪರ ಈಶ ಕುರ್ಯುಃ ।
ಕರ್ತುಃ ಪ್ರಭೋಸ್ತವ ಕಿಮಸ್ಯತ ಆವಹಂತಿ
ತ್ಯಕ್ತಹ್ರಿಯಸ್ತ್ವದವರೋಪಿತಕರ್ತೃವಾದಾಃ ॥ ೨೦ ॥

ಬ್ರಹ್ಮೋವಾಚ

ಭೂತಭಾವನ ಭೂತೇಶ ದೇವದೇವ ಜಗನ್ಮಯ ।
ಮುಂಚೈನಂ ಹೃತಸರ್ವಸ್ವಂ ನಾಯಮರ್ಹತಿ ನಿಗ್ರಹಮ್
॥ ೨೧ ॥

ಕೃತ್ಸ್ನಾ ತೇಽನೇನ ದತ್ತಾ ಭೂರ್ಲೋಕಾಃ ಕರ್ಮಾರ್ಜಿತಾಶ್ಚ ಯೇ ।
ನಿವೇದಿತಂ ಚ ಸರ್ವಸ್ವಮಾತ್ಮಾವಿಕ್ಲವಯಾ ಧಿಯಾ
॥ ೨೨ ॥

ಯತ್ಪಾದಯೋರಶಠಧೀಃ ಸಲಿಲಂ ಪ್ರದಾಯ
ದೂರ್ವಾಂಕುರೈರಪಿ ವಿಧಾಯ ಸತೀಂ ಸಪರ್ಯಾಮ್ ।
ಅಪ್ಯುತ್ತಮಾಂ ಗತಿಮಸೌ ಭಜತೇ ತ್ರಿಲೋಕೀಂ
ದಾಶ್ವಾನವಿಕ್ಲವಮನಾಃ ಕಥಮಾರ್ತಿಮೃಚ್ಛೇತ್ ॥ ೨೩ ॥

ಸುಂದರವು. ಮನಸ್ಸನ್ನು ಮರಳುಗೊಳಿಸುವ ರಾಜ್ಯಲಕ್ಷ್ಮಿಯಿಂದ ಇವನನ್ನು ದೂರಗೊಳಿಸಿದುದು ನೀನು ಇವನ ಮೇಲೆ ತೋರಿದ ಪರಮಾನುಗ್ರಹವೆಂದೇ ನಾನು ಭಾವಿಸುತ್ತೇನೆ. ॥ ೧೬ ॥ ಐಶ್ವರ್ಯ ಮದವು ವಿದ್ವಾಂಸನನ್ನೂ ಕೂಡ ಮರಳುಗೊಳಿಸುತ್ತದೆ. ಧನಮದ ವಿರುವಾಗ ಯಾರಿಗೆ ತಾನೇ ನಿಜವಾದ ಸ್ವ-ಸ್ವರೂಪವನ್ನು ಕಂಡು ಕೊಳ್ಳಲು ಸಾಧ್ಯವಾಗುತ್ತದೆ? ಆದ್ದರಿಂದ ಆತ್ಮೋದ್ಧಾರಕ್ಕೆ ತಡೆ ಯನ್ನುಂಟು ಮಾಡುವಂತಹ ಐಶ್ವರ್ಯ ಕಸಿದುಕೊಂಡು ಮಹೋ ಪಕಾರ ಮಾಡಿದ ಸಮಸ್ತ ಜಗತ್ತಿಗೆ ಈಶ್ವರನಾದ, ಎಲ್ಲರ ಹೃದಯ ದಲ್ಲಿ ವಿರಾಜಮಾನನಾದ, ಎಲ್ಲರ ಸಾಕ್ಷಿಭೂತನಾಗಿರುವ ಶ್ರೀಮನ್ನಾ ರಾಯಣನಾದ ನಿನಗೆ ನಾನು ನಮಸ್ಕರಿಸುತ್ತೇನೆ. ॥ ೧೭ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ! ಶ್ರೀವಾಮನಮೂರ್ತಿಯ ಮುಂದೆ ಪ್ರಹ್ಲಾದನು ಕೈಮುಗಿದು ಕೊಂಡು ನಿಂತಿದ್ದನು. ಅವನಿಗೆ ಕೇಳಿಸುವಂತೆ ಪೂಜ್ಯರಾದ ಬ್ರಹ್ಮ ದೇವರು ಭಗವಾನ್ ವಾಮನನ ಬಳಿ ಏನೋ ಹೇಳಬೇಕೆಂದಿದ್ದರು. ॥ ೧೮ ॥ ಆದರೆ ಅಷ್ಟರಲ್ಲಿ ಬಲಿಯಪತ್ನಿಯಾದ ಪರಮ ಸಾಧ್ವಿಯಾದ ವಿಂಧ್ಯಾವಲಿಯು ವರುಣಪಾಶಗಳಿಂದ ಬಂಧಿಸಲ್ಪಟ್ಟ ತನ್ನ ಪತಿಯನ್ನು ನೋಡಿ ಭಯದಿಂದ ಗಾಬರಿಗೊಂಡು ಭಗ ವಂತನ ಪಾದಗಳಲ್ಲಿ ನಮಸ್ಕರಿಸಿ, ಕೈಜೋಡಿಸಿಕೊಂಡು, ತಲೆ ಯನ್ನು ತಗ್ಗಿಸಿಕೊಂಡು ಪ್ರಾರ್ಥಿಸಿದಳು. ॥ ೧೯ ॥

ವಿಂಧ್ಯಾವಲಿಯು ಹೇಳಿದಳು – ಸ್ವಾಮಿಯೇ! ನೀನು ನಿನ್ನ ಕ್ರೀಡೆಗಾಗಿಯೇ ಈ ಮೂರು ಲೋಕಗಳನ್ನು ಸೃಷ್ಟಿಸಿರುವೆ. ಬುದ್ಧಿ ಹೀನರಾದವರೇ ತಮ್ಮನ್ನು ಇದರ ಒಡೆಯರೆಂದು ಭಾವಿಸುತ್ತಾರೆ. ಆದರೆ ನೀನೇ ಇದರ ಸೃಷ್ಟಿ, ಸ್ಥಿತಿ, ಲಯಗಳಿಗೆ ಕಾರಣನಾಗಿರುವೆ. ನಿನ್ನ ಮಾಯೆಯಿಂದ ಮೋಹಿತರಾಗಿ ತಮ್ಮನ್ನು ಸುಳ್ಳು-ಸುಳ್ಳೇ ಕರ್ತೃವೆಂದು ತಿಳಿಯುವ ನಿರ್ಲಜ್ಜರಾದವರು ನಿನಗೇನು ಅರ್ಪಿಸ ಬಲ್ಲರು? ॥ ೨೦ ॥

ಬ್ರಹ್ಮದೇವರು ಹೇಳಿದರು – ಸಕಲ ಪ್ರಾಣಿಗಳನ್ನೂ ಸಲಹತಕ್ಕ ವನೇ! ಎಲ್ಲ ಪ್ರಾಣಿಗಳಿಗೂ ಒಡೆಯನೇ! ಜಗತ್ಸ್ವರೂಪನಾದ ದೇವಶ್ರೇಷ್ಠನೇ! ಈಗ ನೀನು ಇವನನ್ನು ಬಿಟ್ಟುಬಿಡು. ನೀನು ಇವನ ಸರ್ವಸ್ವವನ್ನು ಪಡೆದುಕೊಂಡಿರುವೆ. ಆದ್ದರಿಂದ ಈಗ ಇವನು ಶಿಕ್ಷೆಗೆ ಅರ್ಹನಲ್ಲ. ॥ ೨೧ ॥ ಇವನು ತನ್ನ ಸಮಗ್ರವಾದ ಭೂ ಮಂಡಲವನ್ನು ಹಾಗೂ ಸತ್ಕರ್ಮಗಳಿಂದ ಸಂಪಾದಿಸಿದ ಸ್ವರ್ಗಾದಿ ಪುಣ್ಯಲೋಕಗಳನ್ನೂ, ತನ್ನ ಸರ್ವಸ್ವವನ್ನೂ ಹಾಗೂ ಆತ್ಮವನ್ನೇ (ಶರೀರವನ್ನೇ) ನಿನಗೆ ಸಮರ್ಪಿಸಿಬಿಟ್ಟಿರುವನು. ಹೀಗೆ ಮಾಡು ವಾಗಲೂ ಇವನ ಬುದ್ಧಿಯು ಸ್ಥಿರವಾಗಿದೆ, ಧೈರ್ಯದಿಂದ ಚ್ಯುತ ನಾಗಲಿಲ್ಲ. ॥ ೨೨ ॥ ಓ ಕರುಣಾಳುವಾದ ಪ್ರಭುವೇ! ಶುದ್ಧ ಹೃದಯದಿಂದ ಲೋಭವನ್ನು ಬಿಟ್ಟು ನಿನ್ನ ಚರಣಕಮಲಗಳಲ್ಲಿ ಅರ್ಘ್ಯಪಾದ್ಯಾದಿಗಳನ್ನು ಸಮರ್ಪಿಸಿ ಕೇವಲ ದೂರ್ವಾದಲ (ತುಳಸೀದಳ)ದಿಂದ ನಿನ್ನನ್ನು ಪೂಜಿಸುವವನೂ ಕೂಡ ಉತ್ತಮಗತಿ ಯನ್ನು ಹೊಂದುತ್ತಾನೆ. ಹೀಗಿರುವಾಗ ಆದರಪೂರ್ವಕವಾಗಿ ಧೈರ್ಯ ಮತ್ತು ಸ್ಥಿರತೆಯಿಂದ ತನ್ನ ಮೂರುಲೋಕಗಳನ್ನೇ ನಿನಗೆ ದಾನವಾಗಿ ನಿನ್ನ ಪಾದಾರವಿಂದಗಳಲ್ಲಿ ಸಮರ್ಪಿಸಿರುವ ಈ ಬಲಿಯು ಹೇಗೆ ತಾನೇ ದುಃಖಕ್ಕೆ ಭಾಗಿಯಾಗುವನು? ॥ ೨೩ ॥

ಶ್ರೀಭಗವಾನುವಾಚ

ಬ್ರಹ್ಮನ್ಯಮನುಗೃಹ್ಣಾಮಿ ತದ್ವಿಶೋ ವಿಧುನೋಮ್ಯಹಮ್ ।
ಯನ್ಮದಃ ಪುರುಷಃ ಸ್ತಬ್ಧೋ ಲೋಕಂ ಮಾಂ ಚಾವಮನ್ಯತೇ
॥ ೨೪ ॥

ಯದಾ ಕದಾಚಿಜ್ಜೀವಾತ್ಮಾ ಸಂಸರನ್ನಿಜಕರ್ಮಭಿಃ ।
ನಾನಾಯೋನಿಷ್ವನೀಶೋಽಯಂ ಪೌರುಷೀಂ ಗತಿಮಾವ್ರಜೇತ್
॥ ೨೫ ॥

ಜನ್ಮಕರ್ಮವಯೋರೂಪವಿದ್ಯೈಶ್ವರ್ಯಧನಾದಿಭಿಃ ।
ಯದ್ಯಸ್ಯ ನ ಭವೇತ್ಸ್ತಂಭಸ್ತತ್ರಾಯಂ ಮದನುಗ್ರಹಃ
॥ ೨೬ ॥

ಮಾನಸ್ತಂಭನಿಮಿತ್ತಾನಾಂ ಜನ್ಮಾದೀನಾಂ ಸಮಂತತಃ ।
ಸರ್ವಶ್ರೇಯಃಪ್ರತೀಪಾನಾಂ ಹಂತ ಮುಹ್ಯೇನ್ನ ಮತ್ಪರಃ
॥ ೨೭ ॥

ಏಷ ದಾನವದೈತ್ಯಾನಾಮಗ್ರಣೀಃ ಕೀರ್ತಿವರ್ಧನಃ ।
ಅಜೈಷೀದಜಯಾಂ ಮಾಯಾಂ ಸೀದನ್ನಪಿ ನ ಮುಹ್ಯತಿ
॥ ೨೮ ॥

ಕ್ಷೀಣರಿಕ್ಥಶ್ಚ್ಯುತಃ ಸ್ಥಾನಾತ್ ಕ್ಷಿಪ್ತೋ ಬದ್ಧಶ್ಚ ಶತ್ರುಭಿಃ ।
ಜ್ಞಾತಿಭಿಶ್ಚ ಪರಿತ್ಯಕ್ತೋ ಯಾತನಾಮನುಯಾಪಿತಃ
॥ ೨೯ ॥

ಗುರುಣಾ ಭರ್ತ್ಸಿತಃ ಶಪ್ತೋ ಜಹೌ ಸತ್ಯಂ ನ ಸುವ್ರತಃ ।
ಛಲೈರುಕ್ತೋ ಮಯಾ ಧರ್ಮೋ ನಾಯಂ ತ್ಯಜತಿ ಸತ್ಯವಾಕ್
॥ ೩೦ ॥

ಏಷ ಮೇ ಪ್ರಾಪಿತಃ ಸ್ಥಾನಂ ದುಷ್ಪ್ರಾಪಮಮರೈರಪಿ ।
ಸಾವರ್ಣೇರಂತರಸ್ಯಾಯಂ ಭವಿತೇಂದ್ರೋ ಮದಾಶ್ರಯಃ
॥ ೩೧ ॥

ತಾವತ್ಸುತಲಮಧ್ಯಾಸ್ತಾಂ ವಿಶ್ವಕರ್ಮವಿನಿರ್ಮಿತಮ್ ।
ಯನ್ನಾಧಯೋ ವ್ಯಾಧಯಶ್ಚ ಕ್ಲಮಸ್ತಂದ್ರಾ ಪರಾಭವಃ ।
ನೋಪಸರ್ಗಾ ನಿವಸತಾ ಸಂಭವಂತಿ ಮಮೇಕ್ಷಯಾ
॥ ೩೨ ॥

ಇಂದ್ರಸೇನ ಮಹಾರಾಜ ಯಾಹಿ ಭೋ ಭದ್ರಮಸ್ತು ತೇ ।
ಸುತಲಂ ಸ್ವರ್ಗಿಭಿಃ ಪ್ರಾರ್ಥ್ಯಂ ಜ್ಞಾತಿಭಿಃ ಪರಿವಾರಿತಃ
॥ ೩೩ ॥

ನ ತ್ವಾಮಭಿಭವಿಷ್ಯಂತಿ ಲೋಕೇಶಾಃ ಕಿಮುತಾಪರೇ ।
ತ್ವಚ್ಛಾಸನಾತಿಗಾನ್ ದೈತ್ಯಾಂಶ್ಚಕ್ರಂ ಮೇ ಸೂದಯಿಷ್ಯತಿ
॥ ೩೪ ॥

ಶ್ರೀಭಗವಂತನು ಹೇಳಿದನು – ಬ್ರಹ್ಮನೇ ನಾನು ಯಾರಮೇಲೆ ಕೃಪೆದೋರುವೆನೋ ಅವನ ಧನವನ್ನು ಮೊದಲಿಗೆ ಕಿತ್ತುಕೊಳ್ಳುವೆನು. ಏಕೆಂದರೆ, ಮನುಷ್ಯನು ಧನಮದದಿಂದ ಉನ್ಮತ್ತನಾದಾಗ ನನ್ನನ್ನೂ, ಲೋಕವನ್ನೂ (ಜನರನ್ನೂ) ತಿರಸ್ಕಾರಬುದ್ಧಿಯಿಂದ ಕಾಣುತ್ತಾನೆ. ॥ ೨೪ ॥ ಈ ಜೀವಿಯು ತಾನು ಮಾಡಿದ ಶುಭಾ ಶುಭ ಕರ್ಮಗಳಿಂದ ವಿವಶನಾಗಿ ಅನೇಕ ಯೋನಿಗಳಲ್ಲಿ ಅಲೆಯುತ್ತಾ ಇರುತ್ತಾನೆ. ಎಂದಾದರೊಮ್ಮೆ ನನ್ನ ಹಿರಿದಾದ ಕೃಪೆಯಿಂದ ಮನುಷ್ಯ ಶರೀರವನ್ನು ಪಡೆಯುತ್ತಾನೆ. ॥ ೨೫ ॥ ಮನುಷ್ಯನಾಗಿ ಹುಟ್ಟಿದ ಬಳಿಕ ಕುಲೀನತೆ, ಕರ್ಮ, ವಯಸ್ಸು, ರೂಪ, ವಿದ್ಯೆ, ಐಶ್ವರ್ಯ, ಸಂಪತ್ತು ಇತ್ಯಾದಿಗಳಿಂದ ಅಹಂಕಾರ ಬಾರದಿದ್ದರೆ ನನ್ನ ಅನುಗ್ರಹಕ್ಕೆ ಪಾತ್ರನಾಗಿದ್ದಾನೆ ಎಂದು ತಿಳಿಯಬೇಕು. ॥ ೨೬ ॥ ಕುಲೀನತೆ, ವಿದ್ಯೆ, ಸಂಪತ್ತು ಮುಂತಾದವುಗಳು ಅಹಂಕಾರ, ಜಡತೆಗಳನ್ನುಂಟು ಮಾಡುವುದಾದರೂ, ಮನುಷ್ಯನ ಶ್ರೇಯಸ್ಸಿಗೆ ಪ್ರತಿಬಂಧಕಗಳಾಗಿದ್ದರೂ, ನನಗೆ ಶರಣಾಗತರಾದವರು ಇವುಗಳಿಂದ ಮೋಹಿತರಾಗುವುದಿಲ್ಲ. ॥ ೨೭ ॥ ದೈತ್ಯ-ದಾನವ ವಂಶಗಳೆರಡರಲ್ಲೂ ಅಗ್ರಗಣ್ಯನಾಗಿರುವ ಈ ಬಲಿಯು ಆ ವಂಶಗಳ ಕೀರ್ತಿಯನ್ನು ಹೆಚ್ಚಿಸುವವನಾಗಿದ್ದಾನೆ. ಈತನು ಜಯಿಸಲು ಅಸಾಧ್ಯವಾದ ನನ್ನ ಮಾಯೆಯನ್ನು ಗೆದ್ದಿರುವನು. ನೀನೇ ನೋಡುತ್ತಿರುವಂತೆ ಇಷ್ಟು ಕಷ್ಟಪಡುತ್ತಿದ್ದರೂ ಇವನು ಮೋಹಿತನಾಗಲಿಲ್ಲ. ॥ ೨೮ ॥ ಇವನ ಧನ-ಐಶ್ವರ್ಯ ಕಸಿದುಕೊಂಡೆ. ರಾಜ್ಯಪದವಿ ಕೈಬಿಟ್ಟುಹೋಯಿತು. ಅನೇಕ ವಿಧದಿಂದ ಆಕ್ಷೇಪಿಸಿದೆ. ಶತ್ರುಗಳಿಂದ ಬಂಧಿಸಲ್ಪಟ್ಟನು. ಬಂಧು-ಬಾಂಧವರು ತೊರೆದು ಹೋದರು. ಇಷ್ಟೇ ಅಲ್ಲ, ಇವನ ಗುರುಗಳಾದ ಶುಕ್ರಾಚಾರ್ಯರು ಗದರಿಸಿದರು. ಕಡೆಗೆ ಶಾಪವನ್ನೂ ಕೊಟ್ಟರು. ನಾನೂ ಕೂಡ ವಂಚಿಸಲೆಂದೇ ಧರ್ಮೋಪದೇಶ ಮಾಡಿದೆ. ಆದರೆ ಈ ಸತ್ಯವಾದಿಯೂ, ದೃಢವ್ರತಿಯೂ ಆದ ಬಲಿಯು ತನ್ನ ಧರ್ಮವನ್ನು ಬಿಡಲಿಲ್ಲ. ॥ ೨೯-೩೦ ॥ ಆದ್ದರಿಂದ ಶ್ರೇಷ್ಠ ದೇವತೆಗಳಿಗೂ ಅತಿಕಷ್ಟದಿಂದ ದೊರೆಯಬಹುದಾದ ಸ್ಥಾನವನ್ನು ನಾನು ಇವನಿಗೆ ಕೊಟ್ಟಿರುವೆನು. ಇವನು ಸಾವರ್ಣಿ ಮನ್ವಂತರದಲ್ಲಿ ನನ್ನ ಆಶ್ರಯವನ್ನು ಪಡೆದು ಇಂದ್ರನಾಗುವನು. ॥ ೩೧ ॥ ಅಲ್ಲಿಯವರೆಗೆ ಇವನು ವಿಶ್ವಕರ್ಮನಿಂದ ನಿರ್ಮಿತವಾದ ಸುತಲಲೋಕದಲ್ಲಿ ವಾಸಿಸುವನು. ಅಲ್ಲಿ ಇರುವವರಿಗೆ ನನ್ನ ಕೃಪಾದೃಷ್ಟಿಯಿಂದ ಮಾನಸಿಕರೋಗವಾಗಲೀ, ಬಳಲಿಕೆಯಾಗಲೀ, ಸೋಮಾರಿತನವಾಗಲೀ, ಅಂತರ್ಬಾಹ್ಯ ಶತ್ರುಗಳಿಂದ ಪರಾಜಯವಾಗಲೀ ಉಂಟಾಗುವುದಿಲ್ಲ. ॥ ೩೨ ॥ ಹೀಗೆ ಬ್ರಹ್ಮದೇವರಿಗೆ ಹೇಳಿ ಬಲಿಯನ್ನು ಸಂಬೋಧಿಸುತ್ತಾ – ಮಹಾರಾಜ ಇಂದ್ರಸೇನನೇ! ನಿನಗೆ ಮಂಗಳವಾಗಲಿ. ಈಗ ನೀನು ಸ್ವರ್ಗದ ದೇವತೆಗಳೂ ಕೂಡ ಬಯಸುವಂತಹ ಸುತಲ ಲೋಕಕ್ಕೆ ಹೋಗಿ ನಿನ್ನ ಪರಿವಾರದೊಂದಿಗೆ ಇರು. ॥ ೩೩ ॥ ಅಲ್ಲಿ ವಾಸವಾಗಿರುವ ನಿನ್ನನ್ನು ಲೋಕಪಾಲರೂ ಕೂಡ ಸೋಲಿಸಲಾರರು. ಇತರರ ಮಾತಿರಲಿ, ನಿನ್ನ ಅಪ್ಪಣೆಯನ್ನು ಮೀರಿ ನಡೆಯುವ ದೈತ್ಯರನ್ನು ನನ್ನ ಸುದರ್ಶನಚಕ್ರವೇ ನಾಶಗೊಳಿಸುತ್ತದೆ. ॥ ೩೪ ॥ ವೀರವರೇಣ್ಯನೇ! ನಿನ್ನನ್ನು, ನಿನ್ನ ಅನುಯಾಯಿಗಳನ್ನು, ನಿನ್ನ ಭೋಗ

ರಕ್ಷಿಷ್ಯೇ ಸರ್ವತೋಽಹಂ ತ್ವಾಂ ಸಾನುಗಂ ಸಪರಿಚ್ಛದಮ್ ।
ಸದಾ ಸನ್ನಿಹಿತಂ ವೀರ ತತ್ರ ಮಾಂ ದ್ರಕ್ಷ್ಯತೇ ಭವಾನ್ ॥ ೩೫ ॥

ತತ್ರ ದಾನವದೈತ್ಯಾನಾಂ ಸಂಗಾತ್ತೇ ಭಾವ ಆಸುರಃ ।
ದೃಷ್ಟ್ವಾ ಮದನುಭಾವಂ ವೈ ಸದ್ಯಃ ಕುಂಠೋ ವಿನಂಕ್ಷ್ಯತಿ ॥ ೩೬ ॥

ಸಾಮಗ್ರಿಗಳನ್ನು ನಾನು ಎಲ್ಲ ವಿಧದಿಂದ ರಕ್ಷಿಸುವೆನು. ಅಲ್ಲಿ ನೀನು ಯಾವಾಗಲೂ ನನ್ನನ್ನು ನಿನ್ನ ಬಳಿಯಲ್ಲೇ ನೋಡುತ್ತಾ ಇರುವೆ. ॥ [illegible] ॥ ದೈತ್ಯ-ದಾನವರ ಸಂಬಂಧದಿಂದ ಉಂಟಾದ ನಿನ್ನ ಆಸುರಭಾವವು ನನ್ನ ಮಹಿಮೆಯಿಂದಾಗಿ, ನನ್ನ ಸಾನ್ನಿಧ್ಯವಿರುವುದರಿಂದ ಕುಗ್ಗಿಹೋಗಿ ನಾಶಹೊಂದುವುದು. ॥ ೩೬ ॥

ಇಪ್ಪತ್ತೆರಡನೆಯ ಅಧ್ಯಾಯವು ಮುಗಿಯಿತು. ॥ ೨೨ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಅಷ್ಟಮ ಸ್ಕಂಧೇ
ವಾಮನಪ್ರಾದುರ್ಭಾವೇ ಬಲಿವಾಮನಸಂವಾದೋ ನಾಮ ದ್ವಾವಿಂಶೋಽಧ್ಯಾಯಃ ॥ ೨೨ ॥

ಇಪ್ಪತ್ತಮೂರನೆಯ ಅಧ್ಯಾಯ

ಬಲಿಯು ಬಂಧನದಿಂದ ಬಿಡುಗಡೆಹೊಂದಿ ಸುತಲಲೋಕಕ್ಕೆ ಹೋದುದು

ಶ್ರೀಶುಕ ಉವಾಚ

ಇತ್ಯುಕ್ತವಂತಂ ಪುರುಷಂ ಪುರಾತನಂ
ಮಹಾನುಭಾವೋಽಖಿಲಸಾಧುಸಂಮತಃ ।
ಬದ್ಧಾಂಜಲಿರ್ಬಾಷ್ಪಕಲಾಕುಲೇಕ್ಷಣೋ
ಭಕ್ತ್ಯುದ್ಗಲೋ ಗದ್ಗದಯಾ ಗಿರಾಬ್ರವೀತ್ ॥ ೧ ॥

ಬಲಿರುವಾಚ

ಅಹೋ ಪ್ರಣಾಮಾಯ ಕೃತಃ ಸಮುದ್ಯಮಃ
ಪ್ರಪನ್ನಭಕ್ತಾರ್ಥವಿಧೌ ಸಮಾಹಿತಃ ।
ಯಲ್ಲೋಕಪಾಲೈಸ್ತ್ವದನುಗ್ರಹೋಽಮರೈ-
ರಲಬ್ಧಪೂರ್ವೋಽಪಸದೇಽಸುರೇಽರ್ಪಿತಃ ॥ ೨ ॥

ಶ್ರೀಶುಕ ಉವಾಚ

ಇತ್ಯುಕ್ತ್ವಾ ಹರಿಮಾನತ್ಯ ಬ್ರಹ್ಮಾಣಂ ಸಭವಂ ತತಃ ।
ವಿವೇಶ ಸುತಲಂ ಪ್ರೀತೋ ಬಲಿರ್ಮುಕ್ತಃ ಸಹಾಸುರೈಃ ॥ ೩ ॥

ಏವಮಿಂದ್ರಾಯ ಭಗವಾನ್ಪ್ರತ್ಯಾನೀಯ ತ್ರಿವಿಷ್ಟಪಮ್ ।
ಪೂರಯಿತ್ವಾದಿತೇಃ ಕಾಮಮಶಾಸತ್ಸಕಲಂ ಜಗತ್ ॥ ೪ ॥

ಲಬ್ಧಪ್ರಸಾದಂ ನಿರ್ಮುಕ್ತಂ ಪೌತ್ರಂ ವಂಶಧರಂ ಬಲಿಮ್ ।
ನಿಶಾಮ್ಯ ಭಕ್ತಿಪ್ರವಣಃ ಪ್ರಹ್ರಾದ ಇದಮಬ್ರವೀತ್ ॥ ೫ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಎಲೈ ಪರೀಕ್ಷಿತನೇ! ಪುರಾಣಪುರುಷನಾದ ಭಗವಂತನು ಹೀಗೆ ಹೇಳುತ್ತಲೇ ಸಾಧುಗಳ ಆದರಣೀಯನಾದ ಮಹಾನುಭಾವನಾದ ದೈತ್ಯರಾಜನ ಕಣ್ಣುಗಳಿಂದ ಆನಂದಬಾಷ್ಪಗಳು ಸುರಿಯತೊಡಗಿದವು. ಪ್ರೇಮೋದ್ರೇಕದಿಂದ ಅವನ ಕಂಠವು ಬಿಗಿಯಿತು. ಕೈಮುಗಿದುಕೊಂಡು ಗದ್ಗದಧ್ವನಿಯಿಂದ ಬಲಿಯು ಭಗವಂತನಲ್ಲಿ ಇಂತೆಂದನು – ॥ ೧ ॥

ಬಲಿಯು ಹೇಳಿದನು – ಪ್ರಭುವೇ! ನಾನಾದರೋ ನಿನಗೆ ಪೂರ್ಣವಾಗಿ ಪ್ರಣಾಮವನ್ನೂ ಮಾಡಲಿಲ್ಲ, ಪ್ರಣಾಮಮಾಡಲು ಪ್ರಯತ್ನಿಸಿದೆ ಅಷ್ಟೆ. ಇಷ್ಟರಿಂದಲೇ ನಿನ್ನ ಚರಣಕಮಲಗಳಲ್ಲಿ ಶರಣಾಗತರಾದ ಭಕ್ತರಿಗೆ ದೊರೆಯುವಂತಹ ಫಲವು ನನಗೆ ಸಿಕ್ಕಿಬಿಟ್ಟಿತು. ಲೋಕಪಾಲಕರಿಗಾಗಲೀ, ದೇವತೆಗಳಿಗಾಗಲೀ ಅಲಭ್ಯವಾದ ಅನುಗ್ರಹವನ್ನು ನೀಚ ಅಸುರನಾದ ನನ್ನ ಮೇಲೆ ತೋರಿರುವೆ. ಪರಮ ಕರುಣಾಶಾಲಿಯಾದ ನಿನಗೆ ನಮೋ ನಮಃ ॥ ೨ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿದ್ರಾಜನೇ! ಹೀಗೆ ಹೇಳುವಂತೆಯೇ ಬಲಿಯು ವರುಣಪಾಶಗಳಿಂದ ಬಿಡುಗಡೆಹೊಂದಿದನು. ಆಗ ಅವನು ಭಗವಾನ್ ಶ್ರೀಹರಿಯನ್ನೂ, ಬ್ರಹ್ಮದೇವನನ್ನೂ, ರುದ್ರದೇವರನ್ನೂ, ನಮಸ್ಕರಿಸಿ, ಪರಮ ಸಂತುಷ್ಟನಾಗಿ ತನ್ನ ಪರಿವಾರದೊಡನೆ ಸುತಲಲೋಕವನ್ನು ಪ್ರವೇಶಿಸಿದನು. ॥ ೩ ॥ ಈ ವಿಧವಾಗಿ ಭಗವಂತನು ಬಲಿಯಿಂದ ಸ್ವರ್ಗವನ್ನು ಕಿತ್ತುಕೊಂಡು ಇಂದ್ರನಿಗೆ ಕೊಟ್ಟನು. ಅದಿತಿಯ ಆಶಯವನ್ನು ಪೂರ್ಣಗೊಳಿಸಿದನು. ತಾನು ಉಪೇಂದ್ರನಾಗಿ (ಇಂದ್ರನ ತಮ್ಮನಾಗಿ) ಸಮಸ್ತ ಜಗತ್ತನ್ನು ಶಾಸನಮಾಡತೊಡಗಿದನು. ॥ ೪ ॥ ತನ್ನ ಮೊಮ್ಮಗನಾದ ಬಲಿಯು ವರುಣನ ಪಾಶಗಳಿಂದ ಮುಕ್ತನಾದುದನ್ನು ಮತ್ತು ಭಗವಂತನ ಪೂರ್ಣಾನುಗ್ರಹವನ್ನು ಪಡೆದುಕೊಂಡುದನ್ನು ಭಕ್ತಾಗ್ರೇಸರನಾದ ಪ್ರಹ್ಲಾದನು ನೋಡಿ ಸಂತೋಷಭರಿತನಾಗಿ ಭಕ್ತಿಭಾವದಿಂದ ಭಗವಂತನನ್ನು ಇಂತು ಸ್ತುತಿಸಿದನು. ॥ ೫ ॥

ಪ್ರಹ್ಲಾದ ಉವಾಚ

ನೇಮಂ ವಿರಿಂಚೋ ಲಭತೇ ಪ್ರಸಾದಂ
ನ ಶ್ರೀರ್ನ ಶರ್ವಃ ಕಿಮುತಾಪರೇ ತೇ ।
ಯನ್ನೋಽಸುರಾಣಾಮಸಿ ದುರ್ಗಪಾಲೋ
ವಿಶ್ವಾಭಿವಂದ್ಯೈರಪಿ ವಂದಿತಾಂಘ್ರಿಃ ॥ ೬ ॥

ಯತ್ಪಾದಪದ್ಮಮಕರಂದನಿಷೇವಣೇನ
ಬ್ರಹ್ಮಾದಯಃ ಶರಣದಾಶ್ನುವತೇ ವಿಭೂತೀಃ ।
ಕಸ್ಮಾದ್ವಯಂ ಕುಸೃತಯಃ ಖಲಯೋನಯಸ್ತೇ
ದಾಕ್ಷಿಣ್ಯದೃಷ್ಟಿಪದವೀಂ ಭವತಃ ಪ್ರಣೀತಾಃ ॥ ೭ ॥

ಚಿತ್ರಂ ತವೇಹಿತಮಹೋಽಮಿತಯೋಗಮಾಯಾ-
ಲೀಲಾವಿಸೃಷ್ಟಭುವನಸ್ಯ ವಿಶಾರದಸ್ಯ ।
ಸರ್ವಾತ್ಮನಃ ಸಮದೃಶೋ ವಿಷಮಃ ಸ್ವಭಾವೋ
ಭಕ್ತಪ್ರಿಯೋ ಯದಸಿ ಕಲ್ಪತರುಸ್ವಭಾವಃ ॥ ೮ ॥

ಶ್ರೀಭಗವಾನುವಾಚ

ವತ್ಸ ಪ್ರಹ್ಲಾದ ಭದ್ರಂ ತೇ ಪ್ರಯಾಹಿ ಸುತಲಾಲಯಮ್ ।
ಮೋದಮಾನಃ ಸ್ವಪೌತ್ರೇಣ ಜ್ಞಾತೀನಾಂ ಸುಖಮಾವಹ
॥ ೯ ॥

ನಿತ್ಯಂ ದ್ರಷ್ಟಾಸಿ ಮಾಂ ತತ್ರ ಗದಾಪಾಣಿಮವಸ್ಥಿತಮ್ ।
ಮದ್ದರ್ಶನಮಹಾಹ್ಲಾದಧ್ವಸ್ತಕರ್ಮನಿಬಂಧನಃ
॥ ೧೦ ॥

ಶ್ರೀಶುಕ ಉವಾಚ

ಆಜ್ಞಾಂ ಭಗವತೋ ರಾಜನ್ಪ್ರಹ್ಲಾದೋ ಬಲಿನಾ ಸಹ ।
ಬಾಢಮಿತ್ಯಮಲಪ್ರಜ್ಞೋ ಮೂರ್ಧ್ನ್ಯಾಧಾಯ ಕೃತಾಂಜಲಿಃ
॥ ೧೧ ॥

ಪರಿಕ್ರಮ್ಯಾದಿಪುರುಷಂ ಸರ್ವಾಸುರಚಮೂಪತಿಃ ।
ಪ್ರಣತಸ್ತದನುಜ್ಞಾತಃ ಪ್ರವಿವೇಶ ಮಹಾಬಿಲಮ್
॥ ೧೨ ॥

ಅಥಾಹೋಶನಸಂ ರಾಜನ್ಹರಿರ್ನಾರಾಯಣೋಽಂತಿಕೇ ।
ಆಸೀನಮೃತ್ವಿಜಾಂ ಮಧ್ಯೇ ಸದಸಿ ಬ್ರಹ್ಮವಾದಿನಾಮ್
॥ ೧೩ ॥

ಶ್ರೀಭಗವಾನುವಾಚ

ಬ್ರಹ್ಮನ್ಸಂತನು ಶಿಷ್ಯಸ್ಯ ಕರ್ಮಚ್ಛಿದ್ರಂ ವಿತನ್ವತಃ ।
ಯತ್ತತ್ಕರ್ಮಸು ವೈಷಮ್ಯಂ ಬ್ರಹ್ಮದೃಷ್ಟಂ ಸಮಂ ಭವೇತ್
॥ ೧೪ ॥

ಪ್ರಹ್ಲಾದನು ಹೇಳಿದನು – ಪ್ರಭುವೇ! ಬ್ರಹ್ಮದೇವರಿಗಾಗಲೀ, ಲಕ್ಷ್ಮೀದೇವಿಗಾಗಲೀ, ರುದ್ರದೇವರಿಗಾಗಲೀ ಇಂತಹ ಕೃಪಾಪ್ರಸಾದವು ದೊರೆಯಲಿಲ್ಲ. ಹಾಗಿರುವಾಗ ಇತರರ ಮಾತಿರಲಿ, ವಿಶ್ವವಂದ್ಯರಾದ ಬ್ರಹ್ಮಾದಿಗಳು ಯಾರ ಚರಣಾರವಿಂದಗಳಿಗೆ ನಮಸ್ಕರಿಸುವರೋ ಅಂತಹ ಪರಮದಯಾಳುವಾದ ನೀನು ನಮ್ಮಂತಹ ಅಸುರರ ಬಾಗಿಲುಕಾಯುವವನಾದೆ. ಇದೆಂತಹ ಆಶ್ಚರ್ಯದ ಮಾತು! ॥ ೬ ॥ ಓ ಶರಣಾಗತವತ್ಸಲನಾದ ಪ್ರಭುವೇ! ಬ್ರಹ್ಮಾದಿ ಲೋಕಪಾಲರು ನಿನ್ನ ಚರಣಾರವಿಂದಗಳ ಮಕರಂದವನ್ನು ಪಾನಮಾಡುವುದರಿಂದ ಸೃಷ್ಟಿರಚನಾದಿ ಅನೇಕ ಶಕ್ತಿಗಳನ್ನೂ, ವಿಭೂತಿಗಳನ್ನೂ ಪಡೆದುಕೊಳ್ಳುವರು. ನಾವಾದರೋ ಜನ್ಮದಿಂದಲೇ ಖಲರೂ, ಕುಮಾರ್ಗಿಗಳು. ಇಂತಹ ನಮ್ಮ ಮೇಲೆ ನಿನ್ನ ದಾಕ್ಷಿಣ್ಯದಿಂದ ಕೂಡಿದ ಅನುಗ್ರಹ ದೃಷ್ಟಿಯು ಹೇಗೆ ತಾನೇ ಬಿದ್ದಿತು? ಇಂತಹ ಪರಮಾನುಗ್ರಹದಿಂದ ನೀನು ನಮ್ಮ ಮನೆಯ ದ್ವಾರಪಾಲಕನೇ ಆಗಿಬಿಟ್ಟೆಯಲ್ಲ? ॥ ೭ ॥ ನೀನು ನಿನ್ನ ಯೋಗಮಾಯೆಯಿಂದ ಲೀಲಾಮಾತ್ರದಿಂದ ತ್ರಿಭುವನಗಳನ್ನು ರಚಿಸಿಬಿಟ್ಟಿರುವೆ. ನೀನು ಸರ್ವಜ್ಞನೂ, ಸರ್ವಾತ್ಮನೂ, ಸಮದರ್ಶಿಯೂ ಆಗಿರುವೆ. ಹೀಗಿದ್ದರೂ ನಿನ್ನ ಲೀಲಾವಿಲಾಸವು ತುಂಬಾ ವಿಚಿತ್ರವಾಗಿದೆ. ನಿನ್ನ ಸ್ವಭಾವವು ಕಲ್ಪವೃಕ್ಷದಂತೆ ಇದೆ. ಏಕೆಂದರೆ, ನೀನು ನಿನ್ನ ಭಕ್ತರಲ್ಲಿ ಅತ್ಯಂತ ಪ್ರೀತಿಯನ್ನು ತೋರುತ್ತಿರುವೆ. ಇದರಿಂದಲೇ ಕೆಲವೊಮ್ಮೆ ಉಪಾಸಕರ ಕುರಿತು ಪಕ್ಷಪಾತ ಮತ್ತು ನಿನಗೆ ವಿಮುಖರಾದವರಲ್ಲಿ ನಿರ್ದಯಕತೆಯೂ ಕಂಡುಬರುತ್ತದೆ. ॥ ೮ ॥

ಶ್ರೀಭಗವಂತನು ಹೇಳಿದನು – ವತ್ಸ! ಪ್ರಹ್ಲಾದನೇ! ನಿನಗೆ ಮಂಗಳವಾಗಲಿ. ಈಗ ನೀನು ಕೂಡ ಸುತಲಲೋಕಕ್ಕೆ ಹೋಗು. ಅಲ್ಲಿ ನಿನ್ನ ಮೊಮ್ಮಗನೊಂದಿಗೆ ಆನಂದವಾಗಿ ಇರುತ್ತಾ ನಿನ್ನ ಜ್ಞಾತಿ-ಬಾಂಧವರಿಗೆ ಸುಖದಾಯಕನಾಗು. ॥ ೯ ॥ ಅಲ್ಲಿ ನೀನು ನಿತ್ಯವೂ ಗದಾಪಾಣಿಯಾಗಿ ನಿಂತಿರುವ ನನ್ನನ್ನು ನೋಡುವೆ. ನನ್ನ ದರ್ಶನದ ಪರಮಾನಂದದಲ್ಲಿ ಮುಳುಗಿ ಇರುವ ನಿನ್ನ ಸರ್ವ ಕರ್ಮಬಂಧನಗಳು ನಾಶವಾಗಿಹೋಗುವುವು. ॥ ೧೦॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ! ಸಮಸ್ತ ದೈತ್ಯಸೈನ್ಯಗಳಿಗೂ ಸ್ವಾಮಿಯಾಗಿದ್ದ ವಿಶುದ್ಧ ಬುದ್ಧಿಯುಳ್ಳ ಪ್ರಹ್ಲಾದನು 'ಹಾಗೆಯೇ ಆಗಲಿ' ಎಂದು ಹೇಳಿ ಭಗವಂತನ ಆಜ್ಞೆಯನ್ನು ಶಿರಸಾವಹಿಸಿ, ಕೈಜೋಡಿಸಿಕೊಂಡು ಅವನಿಗೆ ನಮಸ್ಕರಿಸಿ, ಬಲಿಯೊಂದಿಗೆ ಆದಿಪುರುಷನಾದ ಭಗವಂತನಿಗೆ ಪ್ರದಕ್ಷಿಣೆ ಬಂದು ವಂದಿಸಿ, ಆವನ ಅನುಜ್ಞೆಯನ್ನು ಪಡೆದುಕೊಂಡು ಸುತಲಲೋಕಕ್ಕೆ ಹೊರಟುಹೋದನು. ॥ ೧೧-೧೨ ॥ ರಾಜೇಂದ್ರನೇ! ಆಗ ಭಗವಾನ್ ಶ್ರೀಹರಿಯು ಬ್ರಹ್ಮವಾದಿಗಳಾದ ಋತ್ವಿಜರ ಸಭೆಯಲ್ಲಿ ತನ್ನ ಬಳಿಯಲ್ಲೇ ಕುಳಿತಿರುವ ಶುಕ್ರಾಚಾರ್ಯರನ್ನು ಕುರಿತು ಇಂತೆಂದನು – ॥ ೧೩ ॥

ಶ್ರೀಭಗವಂತನು ಹೇಳಿದನು – 'ಬ್ರಾಹ್ಮಣಶ್ರೇಷ್ಠನೇ! ನಿಮ್ಮ ಶಿಷ್ಯನು ಯಜ್ಞವನ್ನು ಮಾಡುತ್ತಿದ್ದನು. ಅದರಲ್ಲಿ ಇರುವ ಕೊರತೆಯನ್ನು ನೀವು ಪೂರ್ಣಗೊಳಿಸಿರಿ. ಏಕೆಂದರೆ, ಕರ್ಮಗಳಲ್ಲೇನಾದರೂ ನ್ಯೂನಾತಿರೇಕಗಳು ಉಂಟಾದರೆ, ಅವೆಲ್ಲವೂ ಬ್ರಾಹ್ಮಣರ ಕೃಪಾದೃಷ್ಟಿಯಿಂದಲೇ ಪರಿಹಾರವಾಗಿ ಬಿಡುತ್ತವೆ.' ॥ ೧೪ ॥

ಶುಕ್ರ ಉವಾಚ

ಕುತಸ್ತತ್ಕರ್ಮವೈಷಮ್ಯಂ ಯಸ್ಯ ಕರ್ಮೇಶ್ವರೋ ಭವಾನ್ ।
ಯಜ್ಞೇಶೋ ಯಜ್ಞಪುರುಷಃ ಸರ್ವಭಾವೇನ ಪೂಜಿತಃ ॥ ೧೫ ॥

ಮಂತ್ರತಸ್ತಂತ್ರತಶ್ಛಿದ್ರಂ ದೇಶಕಾಲಾರ್ಹವಸ್ತುತಃ ।
ಸರ್ವಂ ಕರೋತಿ ನಿಶ್ಛಿದ್ರಂ ನಾಮಸಂಕೀರ್ತನಂ ತವ ॥ ೧೬ ॥

ತಥಾಪಿ ವದತೋ ಭೂಮನ್ಕರಿಷ್ಯಾಮ್ಯನುಶಾಸನಮ್ ।
ಏತಚ್ಛ್ರೇಯಃ ಪರಂ ಪುಂಸಾಂ ಯತ್ತವಾಜ್ಞಾನುಪಾಲನಮ್ ॥ ೧೭ ॥

ಶ್ರೀಶುಕ ಉವಾಚ

ಅಭಿನಂದ್ಯ ಹರೇರಾಜ್ಞಾಮುಶನಾ ಭಗವಾನಿತಿ ।
ಯಜ್ಞಚ್ಛಿದ್ರಂ ಸಮಾಧತ್ತ ಬಲೇರ್ವಿಪ್ರರ್ಷಿಭಿಃ ಸಹ ॥ ೧೮ ॥

ಏವಂ ಬಲೇರ್ಮಹೀಂ ರಾಜನ್ಭಿಕ್ಷಿತ್ವಾ ವಾಮನೋ ಹರಿಃ ।
ದದೌ ಭ್ರಾತ್ರೇ ಮಹೇಂದ್ರಾಯ ತ್ರಿದಿವಂ ಯತ್ಪರೈರ್ಹೃತಮ್ ॥ ೧೯ ॥

ಪ್ರಜಾಪತಿಪತಿರ್ಬ್ರಹ್ಮಾ ದೇವರ್ಷಿ ಪಿತೃಭೂಮಿಪೈಃ ।
ದಕ್ಷಭೃಗ್ವಂಗಿರೋಮುಖ್ಯೈಃ ಕುಮಾರೇಣ ಭವೇನ ಚ ॥ ೨೦ ॥

ಕಶ್ಯಪಸ್ಯಾದಿತೇಃ ಪ್ರೀತ್ಯೈ ಸರ್ವಭೂತಭವಾಯ ಚ ।
ಲೋಕಾನಾಂ ಲೋಕಪಾಲಾನಾಮಕರೋದ್ವಾಮನಂ ಪತಿಮ್ ॥ ೨೧ ॥

ವೇದಾನಾಂ ಸರ್ವದೇವಾನಾಂ ಧರ್ಮಸ್ಯ ಯಶಸಃ ಶ್ರಿಯಃ ।
ಮಂಗಲಾನಾಂ ವ್ರತಾನಾಂ ಚ ಕಲ್ಪಂ ಸ್ವರ್ಗಾಪವರ್ಗಯೋಃ ॥ ೨೨ ॥

ಉಪೇಂದ್ರಂ ಕಲ್ಪಯಾಂಚಕ್ರೇ ಪತಿಂ ಸರ್ವವಿಭೂತಯೇ ।
ತದಾ ಸರ್ವಾಣಿ ಭೂತಾನಿ ಭೃಶಂ ಮುಮುದಿರೇ ನೃಪ ॥ ೨೩ ॥

ತತಸ್ತ್ವಿಂದ್ರಃ ಪುರಸ್ಕೃತ್ಯ ದೇವಯಾನೇನ ವಾಮನಮ್ ।
ಲೋಕಪಾಲೈರ್ದಿವಂ ನಿನ್ಯೇ ಬ್ರಹ್ಮಣಾ ಚಾನುಮೋದಿತಃ ॥ ೨೪ ॥

ಪ್ರಾಪ್ಯ ತ್ರಿಭುವನಂ ಚೇಂದ್ರ ಉಪೇಂದ್ರಭುಜಪಾಲಿತಃ ।
ಶ್ರಿಯಾ ಪರಮಯಾ ಜುಷ್ಟೋ ಮುಮುದೇ ಗತಸಾಧ್ವಸಃ ॥ ೨೫ ॥

ಶುಕ್ರಾಚಾರ್ಯರು ಹೇಳಿದರು – ಭಗವಂತನೇ! ಯಾರು ತನ್ನ ಸಮಸ್ತ ಕರ್ಮಗಳನ್ನು ಕರ್ಮೇಶ್ವರನಾದ ನಿನಗೆ ಅರ್ಪಿಸಿ, ಯಜ್ಞೇಶ್ವರನೂ, ಯಜ್ಞಪುರುಷನೂ ಆದ ನಿನ್ನನ್ನು ಆರಾಧಿಸಿರುವನೋ, ಅವನ ಕರ್ಮದಲ್ಲಿ ಕೊರತೆ, ವಿಷಮತೆ ಹೇಗೆ ಉಳಿಯಬಲ್ಲದು? ॥ ೧೫ ॥ ಏಕೆಂದರೆ, ಮಂತ್ರಗಳ, ಅನುಷ್ಠಾನ ಪದ್ಧತಿಯ, ದೇಶ, ಕಾಲ, ಪಾತ್ರ, ವಸ್ತು ಇವೆಲ್ಲವುಗಳ ಲೋಪ ದೋಷಗಳು ಅಚ್ಯುತಾನಂತಗೋವಿಂದ ಎಂಬ ನಿನ್ನ ನಾಮಸಂಕೀರ್ತನೆಯಿಂದಲೇ ಪರಿಹಾರವಾಗುವುವು. ನಿನ್ನ ನಾಮವು ಎಲ್ಲ ಕೊರತೆಗಳನ್ನೂ ಪೂರ್ಣಗೊಳಿಸುವುದು. ॥ ೧೬ ॥ ಆದರೂ ಅನಂತನೇ! ನೀನು ಸ್ವತಃ ಹೇಳುತ್ತಿರುವೆ. ಆದ್ದರಿಂದ ನಿನ್ನ ಆಜ್ಞೆಯನ್ನು ಅವಶ್ಯವಾಗಿ ಪಾಲಿಸುತ್ತೇನೆ. ನಿನ್ನ ಆಜ್ಞೆಯನ್ನು ಪಾಲಿಸುವುದೇ ಮನುಷ್ಯನಿಗೆ ಶ್ರೇಯಸ್ಸಿನ ದೊಡ್ಡ ಸಾಧನೆಯಾಗಿದೆ. ॥ ೧೭ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ರಾಜಾ! ಪೂಜ್ಯರಾದ ಶುಕ್ರಾಚಾರ್ಯರು ಭಗವಾನ್ ಶ್ರೀಹರಿಯ ಈ ಆಜ್ಞೆಯನ್ನು ಶಿರಸಾವಹಿಸಿ ಇತರ ಬ್ರಹ್ಮರ್ಷಿಗಳೊಡನೆ ಬಲಿಯ ಯಜ್ಞದಲ್ಲಿ ಉಳಿದಿರುವ ಕರ್ಮಾಂಗಗಳನ್ನು ವಿಧಿವತ್ತಾಗಿ ಪೂರ್ಣಗೊಳಿಸಿದರು. ॥ ೧೮ ॥ ಪರೀಕ್ಷಿತನೇ! ಹೀಗೆ ಭಗವಾನ್ ವಾಮನನು ಬಲಿಯಿಂದ ಮೂರು ಹೆಜ್ಜೆಗಳಷ್ಟು ಭೂಮಿಯನ್ನು ದಾನವಾಗಿ ಕೇಳಿ, ಶತ್ರುಗಳು ಅಪಹರಿಸಿಕೊಂಡಿದ್ದ ಸ್ವರ್ಗದ ರಾಜ್ಯವನ್ನು ತನ್ನ ಅಣ್ಣನಾದ ಇಂದ್ರನಿಗೆ ಕೊಡಿಸಿದನು. ॥ ೧೯ ॥ ಇದಾದ ಬಳಿಕ ಪ್ರಜಾಪತಿಗಳಿಗೆ ಒಡೆಯರಾದ ಬ್ರಹ್ಮದೇವರು ದೇವತೆಗಳು, ಋಷಿಗಳು, ಪಿತೃಗಳು, ಮನು, ದಕ್ಷ, ಭೃಗು, ಅಂಗಿರಾ, ಸನತ್ಕುಮಾರರು ಮತ್ತು ರುದ್ರದೇವರು ಇವರುಗಳೊಡನೆ ಕಶ್ಯಪ-ಅದಿತಿಯರಿಗೆ ಸಂತೋಷಗೊಳಿಸಲು ಹಾಗೂ ಸಮಸ್ತ ಪ್ರಾಣಿಗಳ ಅಭ್ಯುದಯಕ್ಕಾಗಿ, ಎಲ್ಲ ಲೋಕಗಳಿಗೂ, ಲೋಕಪಾಲಕರಿಗೂ ಒಡೆಯನನ್ನಾಗಿ ಶ್ರೀವಾಮನಮೂರ್ತಿಯನ್ನು ಅಭಿಷೇಕ ಮಾಡಿದರು. ॥ ೨೦-೨೧ ॥

ಪರೀಕ್ಷಿತನೇ! ವೇದಗಳು, ಸಮಸ್ತ ದೇವತೆಗಳು, ಧರ್ಮ, ಯಶಸ್ಸು, ಲಕ್ಷ್ಮೀ, ಮಂಗಳ, ವ್ರತ, ಸ್ವರ್ಗ, ಅಪವರ್ಗ ಇವೆಲ್ಲದರ ರಕ್ಷಣ ರೂಪದಲ್ಲಿ ಸಮಸ್ತರ ಪರಮ ಕಲ್ಯಾಣಕ್ಕಾಗಿ ಸರ್ವಶಕ್ತಿವಂತನಾದ ಭಗವಾನ್ ವಾಮನನನ್ನು ಬ್ರಹ್ಮದೇವರು ಉಪೇಂದ್ರನ ಪದವಿಯಲ್ಲಿ ಕುಳ್ಳಿರಿಸಿ ಪಟ್ಟಾಭಿಷೇಕ ಮಾಡಿದರು. ಇದನ್ನು ನೋಡಿ ಎಲ್ಲ ಪ್ರಾಣಿಗಳಿಗೂ ಮಹದಾನಂದವಾಯಿತು. ॥ ೨೨-೨೩ ॥ ಬಳಿಕ ದೇವೇಂದ್ರನು ಬ್ರಹ್ಮದೇವರ ಅಪ್ಪಣೆಯಂತೆ ಲೋಕಪಾಲಕರೊಂದಿಗೆ ವಾಮನ ಭಗವಂತನನ್ನು ಮುಂದೆಮಾಡಿಕೊಂಡು ವಿಮಾನದಲ್ಲಿ ಕುಳ್ಳಿರಿಸಿಕೊಂಡು ತನ್ನೊಂದಿಗೆ ಸ್ವರ್ಗಕ್ಕೆ ಕೊಂಡುಹೋದನು. ॥ ೨೪ ॥ ದೇವೇಂದ್ರನಿಗಾದರೋ ಮೂರು ಲೋಕದ ರಾಜ್ಯ ದೊರೆಯಿತು. ಅದಕ್ಕಿಂತಲೂ ಮಿಗಿಲಾಗಿ ಭಗವಾನ್ ವಾಮನನ ಕರಕಮಲಗಳ ಛತ್ರಛಾಯೆ ದೊರೆಯಿತು. ಸರ್ವಶ್ರೇಷ್ಠ ಐಶ್ವರ್ಯಲಕ್ಷ್ಮಿಯಿಂದ ಸೇವಿತನಾಗಿ ಅವನು ನಿರ್ಭಯನಾಗಿ ಆನಂದೋತ್ಸವವನ್ನು ಆಚರಿಸಿದನು. ॥ ೨೫ ॥

ಬ್ರಹ್ಮಾ ಶರ್ವಃ ಕುಮಾರಶ್ಚ ಭೃಗ್ವಾದ್ಯಾ ಮುನಯೋ ನೃಪ ।
ಪಿತರಃ ಸರ್ವಭೂತಾನಿ ಸಿದ್ಧಾ ವೈಮಾನಿಕಾಶ್ಚ ಯೇ ॥ ೨೬ ॥

ಸುಮಹತ್ಕರ್ಮ ತದ್ವಿಷ್ಣೋರ್ಗಾಯಂತಃ ಪರಮಾದ್ಭುತಮ್ ।
ಧಿಷ್ಣ್ಯಾನಿ ಸ್ವಾನಿ ತೇ ಜಗ್ಮುರದಿತಿಂ ಚ ಶಶಂಸಿರೇ ॥ ೨೭ ॥

ಸರ್ವಮೇತನ್ಮಯಾಽಽಖ್ಯಾತಂ ಭವತಃ ಕುಲನಂದನ ।
ಉರುಕ್ರಮಸ್ಯ ಚರಿತಂ ಶ್ರೋತೄಣಾಮಘಮೋಚನಮ್ ॥ ೨೮ ॥

ಪಾರಂ ಮಹಿಮ್ನ ಉರು ವಿಕ್ರಮತೋ ಗೃಣಾನೋ
ಯಃ ಪಾರ್ಥಿವಾನಿ ವಿಮಮೇ ಸ ರಜಾಂಸಿ ಮರ್ತ್ಯಃ ।
ಕಿಂ ಜಾಯಮಾನ ಉತ ಜಾತ ಉಪೈತಿ ಮರ್ತ್ಯ
ಇತ್ಯಾಹ ಮಂತ್ರದೃಗೃಷಿಃ ಪುರುಷಸ್ಯ ಯಸ್ಯ ॥ ೨೯ ॥

ಯ ಇದಂ ದೇವದೇವಸ್ಯ ಹರೇರದ್ಭುತಕರ್ಮಣಃ ।
ಅವತಾರಾನುಚರಿತಂ ಶೃಣ್ವನ್ಯಾತಿ ಪರಾಂ ಗತಿಮ್ ॥ ೩೦ ॥

ಕ್ರಿಯಮಾಣೇ ಕರ್ಮಣೀದಂ ದೈವೇ ಪಿತ್ರ್ಯೇಽಥ ಮಾನುಷೇ ।
ಯತ್ರ ಯತ್ರಾನುಕೀರ್ತ್ಯೇತ ತತ್ತೇಷಾಂ ಸುಕೃತಂ ವಿದುಃ ॥ ೩೧ ॥

ಶಿವ, ವಿರಿಂಚಿ, ಸನತ್ಕುಮಾರರು, ಭೃಗುವೇ ಮುಂತಾದ ಮುನಿಗಳು, ಪಿತೃಗಳು, ಸಮಸ್ತ ಪ್ರಾಣಿಗಳು, ಸಿದ್ಧರೂ, ವಿಮಾನಾರೂಢರಾದ ದೇವತೆಗಳು ಭಗವಂತನ ಈ ಪರಮ ಅದ್ಭುತವಾದ ಹಾಗೂ ಅತ್ಯಂತ ಮಹತ್ಕರ್ಮವನ್ನು ಹಾಡುತ್ತಾ, ಅದಿತಿದೇವಿಯನ್ನು ಪ್ರಶಂಸಿಸುತ್ತಾ ತಮ್ಮ-ತಮ್ಮ ಲೋಕಗಳಿಗೆ ತೆರಳಿದರು. ॥ ೨೬-೨೭ ॥

ಕುರುನಂದನನೇ! ಕೇಳಿದವರ ಸಮಸ್ತ ಪಾಪಗಳನ್ನು ಪರಿಹರಿಸುವ ಭಗವಾನ್ ತ್ರಿವಿಕ್ರಮನ ಅದ್ಭುತವಾದ ಈ ಚರಿತ್ರೆಯನ್ನು ನಾನು ನಿನಗೆ ಹೇಳಿರುತ್ತೇನೆ. ॥ ೨೮ ॥ ಭಗವಂತನ ಲೀಲೆಗಳು ಅನಂತ. ಅವನ ಮಹಿಮೆ ಅಪಾರ. ಅವನ ಮಹಿಮೆಯ ಪಾರವನ್ನು ಕಾಣಲಿಚ್ಛಿಸುವವನು ಪೃಥಿವೀಯ ಪರಮಾಣುಗಳನ್ನು ಎಣಿಸಲು ಹೊರಟಿರುವಂತೆ ಇದೆ. ಭಗವಂತನ ಸಂಬಂಧದಲ್ಲಿ ಮಂತ್ರದ್ರಷ್ಟಾರರಾದ ಮಹರ್ಷಿ ವಸಿಷ್ಠರು ವೇದದಲ್ಲಿ - ಭಗವಂತನ ಮಹಿಮೆಯ ಪಾರವನ್ನು ಕಾಣಬಲ್ಲ ಪುರುಷನು ಈ ಹಿಂದೆ ಯಾರೂ ಇರಲಿಲ್ಲ, ಈಗಲೂ ಇಲ್ಲ, ಮುಂದೆಯೂ ಇರಲಾರರು' ಎಂದು ಹೇಳಿರುವರು. ॥ ೨೯ ॥ ದೇವತೆಗಳ ಆರಾಧ್ಯದೇವನಾದ ಅದ್ಭುತಲೀಲಾಧಾರೀ ವಾಮನ ಭಗವಂತನ ಈ ಅವತಾರ ಚರಿತ್ರವನ್ನು ಶ್ರವಣಿಸುವವನಿಗೆ ಪರಮಗತಿಯು ಪ್ರಾಪ್ತವಾಗುವುದು. ॥ ೩೦ ॥ ದೇವಯಜ್ಞ, ಪಿತೃಯಜ್ಞ, ಮನುಷ್ಯಯಜ್ಞ (ಅತಿಥಿಸೇವೆ) ಮುಂತಾದ ಯಾವುದೇ ಕರ್ಮಗಳ ಅನುಷ್ಠಾನ ನಡೆಯುವಲ್ಲಿ ಭಗವಂತನ ಈ ಲೀಲೆಯ ಕೀರ್ತನೆಯು ಆ ಕರ್ಮವನ್ನು ಸಫಲಗೊಳಿಸುತ್ತದೆ ಎಂದು ಮಹಾ-ಮಹಾ ವಿದ್ವಾಂಸರು ಹೇಳುತ್ತಾರೆ. ॥ ೩೧ ॥

ಇಪ್ಪತ್ತಮೂರನೆಯ ಅಧ್ಯಾಯವು ಮುಗಿಯಿತು. ॥ ೨೩ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಅಷ್ಟಮ ಸ್ಕಂಧೇ
ವಾಮನಾವತಾರಚರಿತೇ ತ್ರಯೋವಿಂಶೋಽಧ್ಯಾಯಃ ॥ ೨೩ ॥

ಇಪ್ಪತ್ತನಾಲ್ಕನೆಯ ಅಧ್ಯಾಯ

ಭಗವಂತನ ಮತ್ಸ್ಯಾವತಾರದ ಕಥೆ

ರಾಜೋವಾಚ

ಭಗವನ್ ಶ್ರೋತುಮಿಚ್ಛಾಮಿ ಹರೇರದ್ಭುತಕರ್ಮಣಃ ।
ಅವತಾರಕಥಾಮಾದ್ಯಾಂ ಮಾಯಾಮತ್ಸ್ಯವಿಡಂಬನಮ್ ॥ ೧ ॥

ಯದರ್ಥಮದಧಾದ್ರೂಪಂ ಮಾತ್ಸ್ಯಂ ಲೋಕಜುಗುಪ್ಸಿತಮ್ ।
ತಮಃಪ್ರಕೃತಿ ದುರ್ಮರ್ಷಂ ಕರ್ಮಗ್ರಸ್ತ ಇವೇಶ್ವರಃ ॥ ೨ ॥

ಪರೀಕ್ಷಿದ್ರಾಜನು ಕೇಳಿದನು - ಪೂಜ್ಯರೇ! ಭಗವಂತನ ಕರ್ಮಗಳು ಪರಮಾದ್ಭುತವಾದವುಗಳು. ಅವನೊಮ್ಮೆ ತನ್ನ ಯೋಗಮಾಯೆಯಿಂದ ಮತ್ಸ್ಯಾವತಾರವನ್ನು ತಾಳಿ ಸುಂದರವಾದ ಲೀಲೆಗಳನ್ನು ತೋರಿಸಿದನು. ನಾನು ಭಗವಂತನ ಆ ಆದಿ ಅವತಾರದ ಕಥೆಯನ್ನು ಕೇಳಲು ಇಚ್ಛಿಸುತ್ತೇನೆ. ॥ ೧ ॥ ಪೂಜ್ಯರೇ! ಮತ್ಸ್ಯಯೋನಿಯಾದರೋ ಲೋಕನಿಂದಿತವಾಗಿದೆ. ಇನ್ನೊಂದು ತಮೋಗುಣೀ ಮತ್ತು ಅಸಹ್ಯ ಪರತಂತ್ರತೆಯಿಂದಲೂ ಕೂಡಿದೆ. ಸರ್ವಶಕ್ತನಾಗಿದ್ದರೂ ಭಗವಂತನು ಕರ್ಮಬಂಧನದಲ್ಲಿ ಬಂಧಿತರಾದ ಜೀವಿಗಳಂತೆ ಈ ಮತ್ಸ್ಯರೂಪವನ್ನು ಏಕೆ ಧರಿಸಿದನು? ॥ ೨ ॥ ಮಹಾತ್ಮರೇ! ಮಹಾತ್ಮರಿಂದ ಕೀರ್ತಿಸಲ್ಪಡುವ

ಏತನ್ನೋ ಭಗವನ್ಸರ್ವಂ ಯಥಾವದ್ವಕ್ತುಮರ್ಹಸಿ ।
ಉತ್ತಮಶ್ಲೋಕಚರಿತಂ ಸರ್ವಲೋಕಸುಖಾವಹಮ್ ॥ ೩ ॥

ಸೂತ ಉವಾಚ

ಇತ್ಯುಕ್ತೋ ವಿಷ್ಣುರಾತೇನ ಭಗವಾನ್ಬಾದರಾಯಣಿಃ ।
ಉವಾಚ ಚರಿತಂ ವಿಷ್ಣೋರ್ಮತ್ಸ್ಯರೂಪೇಣ ಯತ್ಕೃತಮ್ ॥ ೪ ॥

ಶ್ರೀಶುಕ ಉವಾಚ

ಗೋವಿಪ್ರಸುರಸಾಧೂನಾಂ ಛಂದಸಾಮಪಿ ಚೇಶ್ವರಃ ।
ರಕ್ಷಾಮಿಚ್ಛಂಸ್ತನೂರ್ಧತ್ತೇ ಧರ್ಮಸ್ಯಾರ್ಥಸ್ಯ ಚೈವ ಹಿ ॥ ೫ ॥

ಉಚ್ಚಾವಚೇಷು ಭೂತೇಷು ಚರನ್ವಾಯುರಿವೇಶ್ವರಃ ।
ನೋಚ್ಚಾವಚತ್ವಂ ಭಜತೇ ನಿರ್ಗುಣತ್ವಾದ್ಧಿಯೋ ಗುಣೈಃ ॥ ೬ ॥

ಆಸೀದತೀತಕಲ್ಪಾಂತೇ ಬ್ರಾಹ್ಮೋ ನೈಮಿತ್ತಿಕೋ ಲಯಃ ।
ಸಮುದ್ರೋಪಪ್ಲುತಾಸ್ತತ್ರ ಲೋಕಾ ಭೂರಾದಯೋ ನೃಪ ॥ ೭ ॥

ಕಾಲೇನಾಗತನಿದ್ರಸ್ಯ ಧಾತುಃ ಶಿಶಯಿಷೋರ್ಬಲೀ ।
ಮುಖತೋ ನಿಸ್ಸೃತಾನ್ವೇದಾನ್ಹಯಗ್ರೀವೋಽಂತಿಕೇಽಹರತ್ ॥ ೮ ॥

ಜ್ಞಾತ್ವಾ ತದ್ದಾನವೇಂದ್ರಸ್ಯ ಹಯಗ್ರೀವಸ್ಯ ಚೇಷ್ಟಿತಮ್ ।
ದಧಾರ ಶಫರೀರೂಪಂ ಭಗವಾನ್ಹರಿರೀಶ್ವರಃ ॥ ೯ ॥

ತತ್ರ ರಾಜಋಷಿಃ ಕಶ್ಚಿನ್ನಾಮ್ನಾ ಸತ್ಯವ್ರತೋ ಮಹಾನ್ ।
ನಾರಾಯಣಪರೋಽತಪ್ಯತ್ತಪಃ ಸ ಸಲಿಲಾಶನಃ ॥ ೧೦ ॥

ಯೋಽಸಾವಸ್ಮಿನ್ಮಹಾಕಲ್ಪೇ ತನಯಃ ಸ ವಿವಸ್ವತಃ ।
ಶ್ರಾದ್ಧದೇವ ಇತಿ ಖ್ಯಾತೋ ಮನುತ್ವೇ ಹರಿಣಾರ್ಪಿತಃ ॥ ೧೧ ॥

ಏಕದಾ ಕೃತಮಾಲಾಯಾಂ ಕುರ್ವತೋ ಜಲತರ್ಪಣಮ್ ।
ತಸ್ಯಾಂಜಲ್ಯುದಕೇ ಕಾಚಿಚ್ಛಫರ್ಯೇಕಾಭ್ಯಪದ್ಯತ ॥ ೧೨ ॥

ಸತ್ಯವ್ರತೋಽಂಜಲಿಗತಾಂ ಸಹ ತೋಯೇನ ಭಾರತ ।
ಉತ್ಸಸರ್ಜ ನದೀತೋಯೇ ಶಫರೀಂ ದ್ರವಿಡೇಶ್ವರಃ ॥ ೧೩ ॥

ಭಗವಂತನ ಚರಿತ್ರೆಯು ಸಮಸ್ತ ಪ್ರಾಣಿಗಳಿಗೆ ಸುಖವನ್ನು ಕೊಡುವಂತಹುದಾಗಿದೆ. ತಾವು ದಯಮಾಡಿ ಅವನ ಆ ಎಲ್ಲ ಲೀಲೆಗಳನ್ನು ಪೂರ್ಣರೂಪದಿಂದ ವರ್ಣಿಸಿರಿ. ॥ ೩ ॥

ಸೂತಪುರಾಣಿಕರು ಹೇಳುತ್ತಾರೆ – ಶೌನಕಾದಿ ಋಷಿಗಳಿರಾ! ಪರೀಕ್ಷಿದ್ರಾಜನು ಶ್ರೀಶುಕಮಹಾಮುನಿಗಳಲ್ಲಿ ಹೀಗೆ ಪ್ರಶ್ನಿಸಿದಾಗ ಅವರು ಮತ್ಸ್ಯಾವತಾರವನ್ನೆತ್ತಿ ಮಹಾವಿಷ್ಣುವು ಮಾಡಿದ ಕರ್ಮಗಳನ್ನು ವರ್ಣಿಸಲು ಪ್ರಾರಂಭಿಸಿದರು – ॥ ೪ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಎಲೈ ಪರೀಕ್ಷಿತನೇ! ಭಗವಂತನಾದರೋ ಎಲ್ಲರ ಏಕಮಾತ್ರ ಸ್ವಾಮಿಯಾಗಿದ್ದಾನೆ. ಹೀಗಿದ್ದರೂ ಅವನು ಗೋವು, ಬ್ರಾಹ್ಮಣರು, ದೇವತೆಗಳು, ಸಾಧುಗಳು, ವೇದ, ಧರ್ಮಾರ್ಥಗಳು ಹೀಗೆ ಇವುಗಳ ರಕ್ಷಣೆಗಾಗಿ ನಾನಾ ವಿಧವಾದ ಶರೀರಗಳನ್ನು ಧರಿಸಿ ಅವತರಿಸುತ್ತಾನೆ. ॥ ೫ ॥ [illegible] ಸರ್ವಶಕ್ತನಾದ ಪ್ರಭುವು ವಾಯುವಿನಂತೆ ಮೇಲೆ-ಕೆಳಗೆ, ಸಣ್ಣ-ದೊಡ್ಡ ಎಲ್ಲ ಪ್ರಾಣಿಗಳಲ್ಲಿ ಅಂತರ್ಯಾಮಿರೂಪದಿಂದ ಲೀಲೆ ಮಾಡುತ್ತಾನೆ. ಆದರೆ ಆಯಾ ಪ್ರಾಣಿಗಳ ಬುದ್ಧಿಗತ ಗುಣಗಳಿಂದ ಅವನು ಸಣ್ಣವನು-ದೊಡ್ಡವನು, ಎತ್ತರ-ತಗ್ಗು ಆಗುವುದಿಲ್ಲ. ಏಕೆಂದರೆ, ಅವನು ವಾಸ್ತವವಾಗಿ ಸಮಸ್ತ ಪ್ರಾಕೃತಗುಣಗಳಿಂದ ರಹಿತನಾಗಿದ್ದು ನಿರ್ಗುಣನೇ ಆಗಿದ್ದಾನೆ. ॥ ೬ ॥ ರಾಜೇಂದ್ರ! ಹಿಂದಿನ ಕಲ್ಪದ ಅಂತ್ಯದಲ್ಲಿ ಬ್ರಹ್ಮದೇವರು ನಿದ್ರಿಸಿದ್ದರಿಂದ ಬ್ರಾಹ್ಮವೆಂಬ ನೈಮಿತ್ತಿಕ ಪ್ರಳಯವಾಗಿತ್ತು. ಆಗ ಭೂರ್ಲೋಕ ಮೊದಲಾದ ಎಲ್ಲ ಲೋಕಗಳು ಸಮುದ್ರದಲ್ಲಿ ಮುಳುಗಿಹೋಗಿದ್ದವು. ॥ ೭ ॥ ಹಗಲು ಕಳೆದುಹೋಗಿ ರಾತ್ರಿಯು ಪ್ರಾರಂಭವಾದ ಕಾರಣ ಬ್ರಹ್ಮನು ನಿದ್ರಾಪರವಶನಾದನು. ಆ ಸಮಯದಲ್ಲಿ ವೇದಗಳು ಅವನ ಮುಖದಿಂದ ಹೊರಬಂದವು. ಆಗ ಸಮೀಪದಲ್ಲಿಯೇ ಇದ್ದ ಹಯಗ್ರೀವನೆಂಬ ಬಲಾಢ್ಯನಾದ ದೈತ್ಯನು ವೇದಗಳನ್ನು ಯೋಗಬಲದಿಂದ ಅಪಹರಿಸಿಬಿಟ್ಟನು. ॥ ೮ ॥ ಸರ್ವಶಕ್ತನಾದ ಭಗವಾನ್ ಶ್ರೀಹರಿಗೆ ದಾನವರಾಜನಾದ ಹಯಗ್ರೀವನ ಈ ಕಾರ್ಯವು ತಿಳಿದುಹೋಯಿತು. ವೇದಗಳನ್ನು ಉದ್ಧರಿಸುವುದಕ್ಕಾಗಿಯೇ ಅವನು ಮತ್ಸ್ಯಾವತಾರವನ್ನು ತಾಳಿದನು. ॥ ೯ ॥

ಪರೀಕ್ಷಿದ್ರಾಜನೇ! ಆ ಸಮಯದಲ್ಲಿ ಸತ್ಯವ್ರತನೆಂಬ ಉದಾರಿಯೂ, ನಾರಾಯಣಪರಾಯಣನೂ ಆದ ರಾಜರ್ಷಿಯು ಕೇವಲ ನೀರನ್ನು ಮಾತ್ರ ಕುಡಿದು ತಪಸ್ಸನ್ನಾಚರಿಸುತ್ತಿದ್ದನು. ॥ ೧೦ ॥ ಆ ಸತ್ಯವ್ರತನೇ ವರ್ತಮಾನ ಶ್ವೇತವರಾಹ ಮಹಾಕಲ್ಪದಲ್ಲಿ ಸೂರ್ಯದೇವನ ಮಗನಾಗಿ ಶ್ರಾದ್ಧದೇವನೆಂಬ ಹೆಸರಿನಿಂದ ವಿಖ್ಯಾತನಾಗಿದ್ದಾನೆ. ಅವನನ್ನು ಭಗವಂತನು ವೈವಸ್ವತಮನುವನ್ನಾಗಿ ಮಾಡಿರುವನು. ॥ ೧೧ ॥ ಒಂದು ದಿನ ಆ ರಾಜರ್ಷಿಯು ಕೃತಮಾಲಾ ನದಿಯಲ್ಲಿ ನೀರಿನಿಂದ ತರ್ಪಣಗಳನ್ನು ಕೊಡುತ್ತಿದ್ದನು. ಆಗಲೇ ಅವನ ಬೊಗಸೆಯ ನೀರಿನಲ್ಲಿ ಒಂದು ಸಣ್ಣ ಮೀನು ಬಂದುಬಿಟ್ಟಿತು. ॥ ೧೨ ॥ ಪರೀಕ್ಷಿತನೇ! ದ್ರವಿಡದೇಶದ ಸತ್ಯವ್ರತರಾಜನು ತನ್ನ ಬೊಗಸೆಯಲ್ಲಿ ಬಂದಿರುವ ಮೀನನ್ನು ನೀರಿನೊಂದಿಗೆ ಪುನಃ ನದಿಯಲ್ಲಿ ಬಿಟ್ಟುಬಿಟ್ಟನು. ॥ ೧೩ ॥ ನೀರಿಗೆ ಬಿಟ್ಟೊಡನೆ ಆ ಮೀನು ಕರುಣಾಜನಕ ರೀತಿಯಿಂದ ಪರಮದ

ತಮಾಹ ಸಾತಿಕರುಣಂ ಮಹಾಕಾರುಣಿಕಂ ನೃಪಮ್ ।
ಯಾದೋಭ್ಯೋ ಜ್ಞಾತಿಘಾತಿಭ್ಯೋ ದೀನಾಂ ಮಾಂ ದೀನವತ್ಸಲ ।
ಕಥಂ ವಿಸೃಜಸೇ ರಾಜನ್ಭೀತಾಮಸ್ಮಿನ್ಸರಿಜ್ಜಲೇ ॥ ೧೪ ॥

ತಮಾತ್ಮನೋಽನುಗ್ರಹಾರ್ಥಂ ಪ್ರೀತ್ಯಾ ಮತ್ಸ್ಯವಪುರ್ಧರಮ್ ।
ಅಜಾನನ್ರಕ್ಷಣಾರ್ಥಾಯ ಶಫರ್ಯಾಃ ಸ ಮನೋ ದಧೇ ॥ ೧೫ ॥

ತಸ್ಯಾ ದೀನತರಂ ವಾಕ್ಯಮಾಶ್ರುತ್ಯ ಸ ಮಹೀಪತಿಃ ।
ಕಲಶಾಪ್ಸು ನಿಧಾಯೈನಾಂ ದಯಾಲುರ್ನಿನ್ಯ ಆಶ್ರಮಮ್ ॥ ೧೬ ॥

ಸಾ ತು ತತ್ರೈಕರಾತ್ರೇಣ ವರ್ಧಮಾನಾ ಕಮಂಡಲೌ ।
ಅಲಬ್ಧ್ವಾಽಽತ್ಮಾವಕಾಶಂ ವಾ ಇದಮಾಹ ಮಹೀಪತಿಮ್ ॥ ೧೭ ॥

ನಾಹಂ ಕಮಂಡಲಾವಸ್ಮಿನ್ ಕೃಚ್ಛ್ರಂ ವಸ್ತುಮಿಹೋತ್ಸಹೇ ।
ಕಲ್ಪಯೌಕಃ ಸುವಿಪುಲಂ ಯತ್ರಾಹಂ ನಿವಸೇ ಸುಖಮ್ ॥ ೧೮ ॥

ಸ ಏನಾಂ ತತ ಆದಾಯ ನ್ಯಧಾದೌದಂಚನೋದಕೇ ।
ತತ್ರ ಕ್ಷಿಪ್ತಾ ಮುಹೂರ್ತೇನ ಹಸ್ತತ್ರಯಮವರ್ಧತ ॥ ೧೯ ॥

ನ ಮ ಏತದಲಂ ರಾಜನ್ಸುಖಂ ವಸ್ತುಮುದಂಚನಮ್ ।
ಪೃಥು ದೇಹಿ ಪದಂ ಮಹ್ಯಂ ಯತ್ತ್ವಾಹಂ ಶರಣಂ ಗತಾ ॥ ೨೦ ॥

ತತ ಆದಾಯ ಸಾ ರಾಜ್ಞಾ ಕ್ಷಿಪ್ತಾ ರಾಜನ್ಸರೋವರೇ ।
ತದಾವೃತ್ಯಾತ್ಮನಾ ಸೋಽಯಂ ಮಹಾಮೀನೋಽನ್ವವರ್ಧತ ॥ ೨೧ ॥

ನೈತನ್ಮೇ ಸ್ವಸ್ತಯೇ ರಾಜನ್ನುದಕಂ ಸಲಿಲೌಕಸಃ ।
ನಿಧೇಹಿ ರಕ್ಷಾಯೋಗೇನ ಹ್ರದೇ ಮಾಮವಿದಾಸಿನಿ ॥ ೨೨ ॥

ಇತ್ಯುಕ್ತಃ ಸೋಽನಯನ್ಮತ್ಸ್ಯಂ ತತ್ರ ತತ್ರಾವಿದಾಸಿನಿ ।
ಜಲಾಶಯೇ ಸಮ್ಮಿತಂ ತಂ ಸಮುದ್ರೇ ಪ್ರಾಕ್ಷಿಪಜ್ಝಷಮ್ ॥ ೨೩ ॥

ಕ್ಷಿಪ್ಯಮಾಣಸ್ತಮಾಹೇದಮಿಹ ಮಾಂ ಮಕರಾದಯಃ ।
ಅದಂತ್ಯತಿಬಲಾ ವೀರ ಮಾಂ ನೇಹೋತ್ಸ್ರಷ್ಟುಮರ್ಹಸಿ ॥ ೨೪ ॥

ಯಾಳುವಾದ ರಾಜನಲ್ಲಿ ಹೇಳಿತು – ಮಹಾರಾಜನೇ! ನೀನು ದೀನವತ್ಸಲನಾಗಿರುವೆ. ನೀರಿನಲ್ಲಿರುವ ಜಂತುಗಳು ತಮ್ಮ ಜಾತಿಗೆ ಸೇರಿದವರನ್ನೇ ತಿಂದುಹಾಕುತ್ತವೆ. ಚಿಕ್ಕಮೀನನ್ನು ದೊಡ್ಡಮೀನುಗಳು ನುಂಗಿಹಾಕುತ್ತವೆ. ನಾನು ಅವುಗಳ ಭಯದಿಂದ ಅತ್ಯಂತ ವ್ಯಾಕುಲವಾಗಿದ್ದೇನೆ. ನೀನು ನನ್ನನ್ನು ಪುನಃ ಈ ನದಿಯ ನೀರಿನಲ್ಲಿ ಏಕೆ ಬಿಡುತ್ತಿರುವೆ? ॥ ೧೪ ॥ ಸತ್ಯವ್ರತಮಹಾರಾಜನಿಗೆ ಭಗವಂತನೇ ಸ್ವತಃ ನನ್ನ ಮೇಲೆ ಪ್ರಸನ್ನನಾಗಿ ಕರುಣೆದೋರಲು ಮತ್ಸ್ಯ ರೂಪದಿಂದ ಆಗಮಿಸಿದ್ದಾನೆ ಎಂಬುದು ತಿಳಿಯದು. ಅದಕ್ಕಾಗಿ ಅವನು ಆ ಮೀನನ್ನು ರಕ್ಷಿಸಬೇಕೆಂದು ಮನಸ್ಸಿನಲ್ಲೇ ಸಂಕಲ್ಪಿಸಿದನು. ॥ ೧೫ ॥

ಆ ಮೀನಿನ ಅತ್ಯಂತ ದೈನ್ಯದ ಮಾತನ್ನು ಕೇಳಿದ ರಾಜಾ ಸತ್ಯವ್ರತನು ದಯಾರ್ದ್ರಹೃದಯನಾಗಿ ತನ್ನ ಕಮಂಡಲುವಿನ ನೀರಿನಲ್ಲಿ ಅದನ್ನಿಟ್ಟುಕೊಂಡು ಆಶ್ರಮಕ್ಕೆ ತಂದನು. ॥ ೧೬ ॥ ಆಶ್ರಮಕ್ಕೆ ತಂದಬಳಿಕ ಒಂದೇ ರಾತ್ರಿಯಲ್ಲಿ ಆ ಮೀನು ಕಮಂಡಲುವಿನಲ್ಲಿ ಹಿಡಿಸಲಾರದಷ್ಟು ದೊಡ್ಡದಾಯಿತು. ಆಗ ಆ ಮೀನು ರಾಜನಲ್ಲಿ ಹೇಳಿತು – ॥ ೧೭ ॥ ಮಹಾರಾಜಾ! ಈ ಕಮಂಡಲುವಿನಲ್ಲಿ ನಾನು ಕಷ್ಟಪಟ್ಟಾದರೂ ಇರಲು ಸಾಧ್ಯವಾಗದು. ಆದ್ದರಿಂದ ನಾನು ಸುಖವಾಗಿ ಇರಬಹುದಾದ ಒಂದು ದೊಡ್ಡದಾದ ಸ್ಥಾನವನ್ನು ನನಗಾಗಿ ಕಲ್ಪಿಸಿಕೊಡು. ॥ ೧೮ ॥ ಸತ್ಯವ್ರತರಾಜನು ಮೀನಿನ ಮಾತನ್ನು ಕೇಳಿ ಒಂದು ದೊಡ್ಡದಾದ ನೀರಿನ ಮಡಕೆಯಲ್ಲಿ (ಹರಿಯಲ್ಲಿ) ಇರಿಸಿದನು. ಆದರೆ ಅದರಲ್ಲಿ ಇರಿಸುತ್ತಲೇ ಎರಡೇ ಗಳಿಗೆಯಲ್ಲಿ ಮೂರು ಮೊಳದಷ್ಟು ದೊಡ್ಡದಾಯಿತು. ॥ ೧೯ ॥ ಪುನಃ ಅದು ರಾಜನಿಗೆ ಹೇಳಿತು – ಸತ್ಯವ್ರತನೇ! ಈಗ ಈ ಮಡಕೆಯೂ ನನಗೆ ಸುಖವಾಗಿ ಇರಲು ಸಾಲದಾಗಿದೆ. ನಾನು ನಿನ್ನನ್ನೇ ಮರೆಹೊಕ್ಕಿದ್ದೇನೆ. ಅದಕ್ಕಾಗಿ ನನಗೆ ಇರಲು ಯಾವುದಾದರೊಂದು ಯೋಗ್ಯವಾದ ದೊಡ್ಡ ಸ್ಥಾನವನ್ನು ಕಲ್ಪಿಸಿಕೊಡು. ॥ ೨೦ ॥

ಪರೀಕ್ಷಿತನೇ! ಸತ್ಯವ್ರತಮಹಾರಾಜನು ಆ ಮೀನನ್ನು ಅಲ್ಲಿಂದ ಎತ್ತಿಕೊಂಡುಹೋಗಿ ಒಂದು ದೊಡ್ಡ ಸರೋವರದಲ್ಲಿ ಇರಿಸಿದನು. ಆದರೆ ಅದು ಸ್ವಲ್ಪಹೊತ್ತಿನಲ್ಲೇ ಒಂದು ಮಹಾಮತ್ಸ್ಯವಾಗಿ ಬೆಳೆದು ತನ್ನ ಶರೀರದಿಂದ ಆ ಸರೋವರವನ್ನೆಲ್ಲಾ ವ್ಯಾಪಿಸಿಬಿಟ್ಟಿತು. ॥ ೨೧ ॥ ಮತ್ತೆ ಪುನಃ ಹೇಳಿತು – ರಾಜನೇ! ನಾನು ಜಲಚರ ಪ್ರಾಣಿಯಾಗಿದ್ದೇನೆ. ಈ ಸರೋವರದ ನೀರೂ ಕೂಡ ನನಗೆ ಸುಖವಾಗಿ ವಾಸಿಸಲು ಸಾಲದಾಗಿದೆ. ಅದಕ್ಕಾಗಿ ನೀನು ನನ್ನನ್ನು ರಕ್ಷಿಸಿ ನನಗೆ ಯಾವುದಾದರೂ ಆಳವಾದ ದೊಡ್ಡ ಸರೋವರದಲ್ಲಿ ಇರಿಸು. ॥ ೨೨ ॥ ಅದರಂತೆ ರಾಜನು ಅದಕ್ಕಿಂತ ದೊಡ್ಡ ಸರೋವರದಲ್ಲಿ ಇರಿಸಿದಾಗ ಆ ಮೀನು ಬೆಳೆಯುತ್ತಲೇ ಹೋಯಿತು. ಮತ್ತೊಂದು ಸರೋವರ ಅದು ಸಾಲದಾದಾಗ ಇನ್ನೊಂದು ಸರೋವರ ಹೀಗೆ ಕಡೆಗೆ ರಾಜನು ಆ ಲೀಲಾ ಮತ್ಸ್ಯವನ್ನು ಸಮುದ್ರಕ್ಕೆ ತಂದುಬಿಟ್ಟನು. ॥ ೨೩ ॥ ಸಮುದ್ರಕ್ಕೆ ಹಾಕುವ ಸಮಯದಲ್ಲಿ ಮತ್ಸ್ಯರೂಪೀ ಭಗವಂತನು ಸತ್ಯವ್ರತನಿಗೆ ಹೇಳಿದನು – 'ವೀರಾಧಿವೀರನೇ! ಸಮುದ್ರದಲ್ಲಿ ದೊಡ್ಡ-ದೊಡ್ಡ ತಿಮಿಂಗಿಲಗಳಿವೆ. ಅವು ನನ್ನನ್ನು ತಿಂದುಬಿಟ್ಟಾವು. ಅದಕ್ಕಾಗಿ ನೀನು ನನ್ನನ್ನು ಸಮುದ್ರದಲ್ಲಿ ಬಿಡಬೇಡ.' ॥ ೨೪ ॥

ಏವಂ ವಿಮೋಹಿತಸ್ತೇನ ವದತಾ ವಲ್ಗುಭಾರತೀಮ್ ।
ತಮಾಹ ಕೋ ಭವಾನಸ್ಮಾನ್ಮತ್ಸ್ಯರೂಪೇಣ ಮೋಹಯನ್
॥ ೨೫ ॥

ನೈವಂವೀರ್ಯೋ ಜಲಚರೋ ದೃಷ್ಟೋಽಸ್ಮಾಭಿಃ ಶ್ರುತೋಽಪಿ ವಾ ।
ಯೋ ಭವಾನ್ಯೋಜನಶತಮಹ್ನಾಭಿವ್ಯಾನಶೇ ಸರಃ
॥ ೨೬ ॥

ನೂನಂ ತ್ವಂ ಭಗವಾನ್ಸಾಕ್ಷಾದ್ಧರಿರ್ನಾರಾಯಣೋಽವ್ಯಯಃ ।
ಅನುಗ್ರಹಾಯ ಭೂತಾನಾಂ ಧತ್ಸೇ ರೂಪಂ ಜಲೌಕಸಾಮ್
॥ ೨೭ ॥

ನಮಸ್ತೇ ಪುರುಷಶ್ರೇಷ್ಠ ಸ್ಥಿತ್ಯುತ್ಪತ್ತ್ಯಪ್ಯಯೇಶ್ವರ ।
ಭಕ್ತಾನಾಂ ನಃ ಪ್ರಪನ್ನಾನಾಂ ಮುಖ್ಯೋ ಹ್ಯಾತ್ಮಗತಿರ್ವಿಭೋ
॥ ೨೮ ॥

ಸರ್ವೇ ಲೀಲಾವತಾರಾಸ್ತೇ ಭೂತಾನಾಂ ಭೂತಿಹೇತವಃ ।
ಜ್ಞಾತುಮಿಚ್ಛಾಮ್ಯದೋ ರೂಪಂ ಯದರ್ಥಂ ಭವತಾ ಧೃತಮ್
॥ ೨೯ ॥

ನ ತೇಽರವಿಂದಾಕ್ಷ ಪದೋಪಸರ್ಪಣಂ
ಮೃಷಾ ಭವೇತ್ಸರ್ವಸುಹೃತ್ಪ್ರಿಯಾತ್ಮನಃ ।
ಯಥೇತರೇಷಾಂ ಪೃಥಗಾತ್ಮನಾಂ ಸತಾ-
ಮದೀದೃಶೋ ಯದ್ವಪುರದ್ಭುತಂ ಹಿ ನಃ ॥ ೩೦ ॥

ಶ್ರೀಶುಕ ಉವಾಚ

ಇತಿ ಬ್ರುವಾಣಂ ನೃಪತಿಂ ಜಗತ್ಪತಿಃ
ಸತ್ಯವ್ರತಂ ಮತ್ಸ್ಯವಪುರ್ಯುಗಕ್ಷಯೇ ।
ವಿಹರ್ತುಕಾಮಃ ಪ್ರಲಯಾರ್ಣವೇಽಬ್ರವೀ-
ಚ್ಚಿಕೀರ್ಷುರೇಕಾಂತಜನಪ್ರಿಯಃ ಪ್ರಿಯಮ್ ॥ ೩೧ ॥

ಶ್ರೀಭಗವಾನುವಾಚ

ಸಪ್ತಮೇಽದ್ಯತನಾದೂರ್ಧ್ವಮಹನ್ಯೇತದರಿಂದಮ ।
ನಿಮಂಕ್ಷ್ಯತ್ಯಪ್ಯಯಾಂಭೋಧೌ ತ್ರೈಲೋಕ್ಯಂ ಭೂರ್ಭುವಾದಿಕಮ್
॥ ೩೨ ॥

ತ್ರಿಲೋಕ್ಯಾಂ ಲೀಯಮಾನಾಯಾಂ ಸಂವರ್ತಾಂಭಸಿ ವೈ ತದಾ ।
ಉಪಸ್ಥಾಸ್ಯತಿ ನೌಃ ಕಾಚಿದ್ವಿಶಾಲಾ ತ್ವಾಂ ಮಯೇರಿತಾ
॥ ೩೩ ॥

ತ್ವಂ ತಾವದೋಷಧೀಃ ಸರ್ವಾ ಬೀಜಾನ್ಯುಚ್ಚಾವಚಾನಿ ಚ ।
ಸಪ್ತರ್ಷಿಭಿಃ ಪರಿವೃತಃ ಸರ್ವಸತ್ತ್ವೋಪಬೃಂಹಿತಃ
॥ ೩೪ ॥

ಭಗವಾನ್ ಮತ್ಸ್ಯಮೂರ್ತಿಯ ಈ ಸುಮಧುರ ವಾಣಿಯನ್ನು ಕೇಳಿ ಸತ್ಯವ್ರತರಾಜನು ಮೋಹಮುಗ್ಧನಾಗಿ ಹೇಳಿದನು – ಮತ್ಸ್ಯ ರೂಪವನ್ನು ಧರಿಸಿ ನನ್ನನ್ನು ವಿಮೋಹಗೊಳಿಸುತ್ತಿರುವ ನೀನು ಯಾರು ? ॥ ೨೫ ॥ ಮಹಾನುಭಾವನೇ ! ನೀನು ಒಂದೇ ದಿನದಲ್ಲಿ ನೂರುಯೋಜನ ವಿಸ್ತಾರವುಳ್ಳ ಸರೋವರವನ್ನು ವ್ಯಾಪಿಸಿಬಿಟ್ಟಿರುವೆ. ಇಂತಹ ಅಮೋಘಶಕ್ತಿಯುಳ್ಳ ಜಲಚರವನ್ನು ನಾವು ಇಂದಿನವರೆಗೆ ಕಂಡಿಲ್ಲ, ಕೇಳಿಲ್ಲ. ॥ ೨೬ ॥ ನಿಶ್ಚಯವಾಗಿಯೂ ನೀನು ಸರ್ವಶಕ್ತಿಯುಳ್ಳ, ಸರ್ವಾಂತರ್ಯಾಮಿ, ಅವಿನಾಶಿ ಸಾಕ್ಷಾತ್ ಭಗವಾನ್ ಶ್ರೀಹರಿಯೇ ಆಗಿರುವೆ. ಜೀವಿಗಳ ಮೇಲೆ ಅನುಗ್ರಹ ತೋರಲೆಂದೇ ನೀನು ಜಲಚರದ ರೂಪವನ್ನು ಧರಿಸಿರುವೆ. ॥ ೨೭ ॥ ಪುರುಷೋತ್ತಮನೇ ! ನೀನೇ ಜಗತ್ತಿನ ಉತ್ಪತ್ತಿ, ಸ್ಥಿತಿ, ಸಂಹಾರಮಾಡುವ ಸ್ವಾಮಿಯಾಗಿರುವೆ. ನಿನಗೆ ನಾನು ನಮಸ್ಕರಿಸುತ್ತೇನೆ. ವಿಭುವೇ ! ಶರಣಾಗತ ಭಕ್ತರಾದ ನಮ್ಮಂತಹವರಿಗೆ ನೀನೇ ಪರಮಾತ್ಮನೂ, ಪರಮಾಶ್ರಯನೂ ಆಗಿರುವೆ. ॥ ೨೮ ॥ ನಿನ್ನ ಎಲ್ಲ ಲೀಲಾವತಾರಗಳು ಪ್ರಾಣಿಗಳ ಶ್ರೇಯಸ್ಸಿಗಾಗಿಯೇ ಇದ್ದರೂ ನೀನು ಈ ರೂಪವನ್ನು ಯಾವ ಉದ್ದೇಶಕ್ಕಾಗಿ ಧರಿಸಿರುವೆ ? ಇದನ್ನು ತಿಳಿಯಲು ನಾನು ಇಚ್ಛಿಸುತ್ತೇನೆ. ॥ ೨೯ ॥ ಅರವಿಂದನೇ ! ದೇಹಾದಿ ಅನಾತ್ಮ ಪದಾರ್ಥಗಳಲ್ಲಿ ಆತ್ಮಬುದ್ಧಿಯ ಅಭಿಮಾನಪಡುವ ಸಂಸಾರೀ ಜನರ ಆಶ್ರಯವು ವ್ಯರ್ಥವಾಗಿ ಹೋಗುವಂತೆ ನಿನ್ನ ಚರಣಕಮಲಗಳ ಶರಣಾಗತಿಯು ವ್ಯರ್ಥವಾಗಲಾರದು. ಏಕೆಂದರೆ, ನೀನು ಎಲ್ಲರ ಅಹೈತುಕ ಪ್ರೇಮಿಯಾಗಿರುವೆ. ಪರಮ ಪ್ರಿಯತಮನಾಗಿರುವೆ, ಆತ್ಮನಾಗಿರುವೆ. ಈಗ ನಮಗೆ ದರ್ಶನ ಕೊಡುತ್ತಿರುವ ಈ ರೂಪವು ಅದ್ಭುತವಾಗಿದೆ. ॥ ೩೦ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ ! ಭಕ್ತಪ್ರಿಯನಾದ, ಜಗತ್ಪತಿಯಾದ ಭಗವಂತನು ಮತ್ಸ್ಯರೂಪವನ್ನು ಧರಿಸಿ ಪ್ರಳಯಕಾಲದಲ್ಲಿ ಸಮುದ್ರದಲ್ಲಿ ವಿಹರಿಸಬೇಕೆಂಬ ಇಚ್ಛೆಯಿಂದ ಕೂಡಿದ್ದನು. ತನ್ನನ್ನು ನಾನಾ ಪ್ರಕಾರವಾಗಿ ಸ್ತೋತ್ರ ಮಾಡುತ್ತಿದ್ದ ಸತ್ಯವ್ರತನಿಗೆ ಪ್ರಿಯವನ್ನುಂಟುಮಾಡಬೇಕೆಂದು ಬಯಸಿ ಇಂತೆಂದನು – ॥ ೩೧ ॥

ಶ್ರೀಭಗವಂತನು ಹೇಳಿದನು – ಸತ್ಯವ್ರತಮಹಾರಾಜನೇ ! ಇಂದಿನಿಂದ ಏಳನೆಯ ದಿನ ಭೂಲೋಕವೇ ಮೊದಲಾದ ಮೂರೂ ಲೋಕಗಳೂ ಪ್ರಳಯಸಮುದ್ರದಲ್ಲಿ ಮುಳುಗಿಹೋಗುವುವು. ॥ ೩೨ ॥ ಮೂರೂ ಲೋಕಗಳು ಪ್ರಳಯಜಲದಲ್ಲಿ ಮುಳುಗಿಹೋದಾಗ ನನ್ನ ಪ್ರೇರಣೆಯಂತೆ ನಿನ್ನ ಬಳಿಗೆ ವಿಶಾಲವಾದೊಂದು ನೌಕೆಯು ಬರುವುದು. ॥ ೩೩ ॥ ಆಗ ನೀನು ಸಮಸ್ತ ಪ್ರಾಣಿಗಳ ಸೂಕ್ಷ್ಮಶರೀರಗಳನ್ನು ತೆಗೆದುಕೊಂಡು ಸಪ್ತರ್ಷಿಗಳೊಡನೆ ಆ ನೌಕೆಯನ್ನು ಹತ್ತಬೇಕು. ಸಮಸ್ತ ಮೂಲಿಕೆಗಳನ್ನು, ಬಗೆ-ಬಗೆಯ ಬೀಜಗಳನ್ನು ನೀನು ಜೊತೆಯಲ್ಲಿರಿಸಿಕೊಳ್ಳಬೇಕು. ॥ ೩೪ ॥ ಆ ಸಮಯದಲ್ಲಿ ಎಲ್ಲ ಕಡೆಯಲ್ಲಿಯೂ ಮಹಾಸಾಗರವೇ ಕಂಡುಬಂದೀತು. ಬೆಳಕೂ ಇರುವುದಿಲ್ಲ, ಕೇವಲ ಸಪ್ತರ್ಷಿಗಳ ದಿವ್ಯ ಪ್ರಕಾಶವನ್ನೇ ನೀನು ಕಾಣುವೆ. ಆದರಿಂದಾಗಿ ಯಾವುದೇ ಭಯ

ಆರುಹ್ಯ ಬೃಹತೀಂ ನಾವಂ ವಿಚರಿಷ್ಯಸ್ಯವಿಕ್ಲವಃ ।
ಏಕಾರ್ಣವೇ ನಿರಾಲೋಕೇ ಋಷೀಣಾಮೇವ ವರ್ಚಸಾ
॥ ೩೫ ॥

ದೋಧೂಯಮಾನಾಂ ತಾಂ ನಾವಂ ಸಮೀರೇಣ ಬಲೀಯಸಾ ।
ಉಪಸ್ಥಿತಸ್ಯ ಮೇ ಶೃಂಗೇ ನಿಬಧ್ನೀಹಿ ಮಹಾಹಿನಾ
॥ ೩೬ ॥

ಅಹಂ ತ್ವಾಮೃಷಿಭಿಃ ಸಾಕಂ ಸಹನಾವಮುದನ್ವತಿ ।
ವಿಕರ್ಷನ್ವಿಚರಿಷ್ಯಾಮಿ ಯಾವದ್ಬ್ರಾಹ್ಮೀ ನಿಶಾ ಪ್ರಭೋ
॥ ೩೭ ॥

ಮದೀಯಂ ಮಹಿಮಾನಂ ಚ ಪರಂ ಬ್ರಹ್ಮೇತಿ ಶಬ್ದಿತಮ್ ।
ವೇತ್ಸ್ಯಸ್ಯನುಗೃಹೀತಂ ಮೇ ಸಂಪ್ರಶ್ನೈರ್ವಿವೃತಂ ಹೃದಿ
॥ ೩೮ ॥

ಇತ್ಥಮಾದಿಶ್ಯ ರಾಜಾನಂ ಹರಿರಂತರಧೀಯತ ।
ಸೋಽನ್ವವೈಕ್ಷತ ತಂ ಕಾಲಂ ಯಂ ಹೃಷೀಕೇಶ ಆದಿಶತ್
॥ ೩೯ ॥

ಆಸ್ತೀರ್ಯ ದರ್ಭಾನ್ಪ್ರಾಕ್ಕೂಲಾನ್ರಾಜರ್ಷಿಃ ಪ್ರಾಗುದಙ್ಮುಖಃ ।
ನಿಷಸಾದ ಹರೇಃ ಪಾದೌ ಚಿಂತಯನ್ಮತ್ಸ್ಯರೂಪಿಣಃ
॥ ೪೦ ॥

ತತಃ ಸಮುದ್ರ ಉದ್ವೇಲಃ ಸರ್ವತಃ ಪ್ಲಾವಯನ್ಮಹೀಮ್ ।
ವರ್ಧಮಾನೋ ಮಹಾಮೇಘೈರ್ವರ್ಷದ್ಭಿಃ ಸಮದೃಶ್ಯತ
॥ ೪೧ ॥

ಧ್ಯಾಯನ್ಭಗವದಾದೇಶಂ ದದೃಶೇ ನಾವಮಾಗತಾಮ್ ।
ತಾಮಾರುರೋಹ ವಿಪ್ರೇಂದ್ರೈರಾದಾಯೌಷಧಿವೀರುಧಃ
॥ ೪೨ ॥

ತಮೂಚುರ್ಮುನಯಃ ಪ್ರೀತಾ ರಾಜನ್ ಧ್ಯಾಯಸ್ವ ಕೇಶವಮ್ ।
ಸ ವೈ ನಃ ಸಂಕಟಾದಸ್ಮಾದವಿತಾ ಶಂ ವಿಧಾಸ್ಯತಿ
॥ ೪೩ ॥

ಸೋಽನುಧ್ಯಾತಸ್ತತೋ ರಾಜ್ಞಾ ಪ್ರಾದುರಾಸೀನ್ಮಹಾರ್ಣವೇ ।
ಏಕಶೃಂಗಧರೋ ಮತ್ಸ್ಯೋ ಹೈಮೋ ನಿಯುತಯೋಜನಃ
॥ ೪೪ ॥

ನಿಬಧ್ಯ ನಾವಂ ತಚ್ಛೃಂಗೇ ಯಥೋಕ್ತೋ ಹರಿಣಾ ಪುರಾ ।
ವರತ್ರೇಣಾಹಿನಾ ತುಷ್ಟಸ್ತುಷ್ಟಾವ ಮಧುಸೂದನಮ್
॥ ೪೫ ॥

ರಾಜೋವಾಚ

ಅನಾದ್ಯವಿದ್ಯೋಪಹತಾತ್ಮಸಂವಿದ-
ಸ್ತನ್ಮೂಲಸಂಸಾರಪರಿಶ್ರಮಾತುರಾಃ ।
ಯದೃಚ್ಛಯೇಹೋಪಸೃತಾ ಯಮಾಪ್ನುಯು-
ರ್ವಿಮುಕ್ತಿದೋ ನಃ ಪರಮೋ ಗುರುರ್ಭವಾನ್ ॥ ೪೬ ॥

ವಿಲ್ಲದೆ ನೀನು ಆ ವಿಶಾಲವಾದ ನೌಕೆಯಲ್ಲಿ ಕುಳಿತುಕೊಂಡು ಎಲ್ಲೆಡೆ ಸಂಚರಿಸುತ್ತಿರು. ॥ ೩೫ ॥ ಪ್ರಚಂಡವಾದ ಚಂಡಮಾರುತದಿಂದ ನೌಕೆಯು ಅಲ್ಲೋಲ ಕಲ್ಲೋಲವಾದಾಗ ನಾನು ಇದೇ ರೂಪದಿಂದ ಅಲ್ಲಿಗೆ ಬರುವೆನು. ಆಗ ನೀವುಗಳು ಸರ್ಪರಾಜನಾದ ವಾಸುಕಿಯನ್ನು ಹಗ್ಗವನ್ನಾಗಿಸಿ ಆ ನೌಕೆಯನ್ನು ನನ್ನ ಕೊಂಬಿಗೆ ಕಟ್ಟಿಹಾಕಿ. ॥ ೩೬ ॥ ಸತ್ಯವ್ರತನೇ ! ಬಳಿಕ ಬ್ರಹ್ಮದೇವರ ರಾತ್ರಿಯು ಇರುವತನಕ ನಾನು ಸಪ್ತರ್ಷಿಗಳೊಡನೆ ನಿನ್ನನ್ನು ಆ ನೌಕೆಯಲ್ಲಿ ಕುಳ್ಳಿರಿಸಿಕೊಂಡು ಅದನ್ನು ಎಳೆದುಕೊಂಡು ಹೋಗುತ್ತಾ ಸಮುದ್ರದಲ್ಲಿ ಸಂಚರಿಸುವೆನು. ॥ ೩೭ ॥

ಆಗ ನೀನು ಪ್ರಶ್ನಿಸಿದುದಕ್ಕೆಲ್ಲ ನಾನು ಉತ್ತರಿಸುತ್ತಾ ಇರುವೆನು. ನನ್ನ ವಾಸ್ತವಿಕ ಪರಬ್ರಹ್ಮ ಮಹಿಮೆಯು ನನ್ನ ಅನುಗ್ರಹದಿಂದ ನಿನ್ನ ಹೃದಯದಲ್ಲಿ ಪ್ರಕಟವಾದೀತು. ಅದರಿಂದ ನೀನು ಸರಿಯಾಗಿ ಅರಿತುಕೊಳ್ಳುವೆ. ॥ ೩೮ ॥ ಸತ್ಯವ್ರತರಾಜನಿಗೆ ಹೀಗೆ ಆದೇಶವನ್ನಿತ್ತು ಭಗವಂತನು ಅಂತರ್ಧಾನನಾದನು. ಆದ್ದರಿಂದ ಭಗವಂತನು ನಿರ್ದೇಶಿಸಿದ್ದ ಆ ಕಾಲವನ್ನು ರಾಜನು ನಿರೀಕ್ಷಿಸುತ್ತಾ ಇದ್ದನು. ॥ ೩೯ ॥ ಬಳಿಕ ರಾಜರ್ಷಿಯಾದ ಸತ್ಯವ್ರತನು ಪೂರ್ವಾಗ್ರವಾಗಿ ದರ್ಭೆಗಳನ್ನು ಹಾಸಿ ಈಶಾನ್ಯದಿಕ್ಕಿಗೆ ಅಭಿಮುಖನಾಗಿ ಕುಳಿತು, ಮತ್ಸ್ಯರೂಪಿಯಾದ ಭಗವಂತನ ಚರಣಕಮಲಗಳನ್ನು ಧ್ಯಾನಿಸುತ್ತಿದ್ದನು. ॥ ೪೦ ॥ ಇಷ್ಟರಲ್ಲೇ ಭಗವಂತನು ಹೇಳಿದ ಆ ಸಮಯ ಸನ್ನಿಹಿತವಾಯಿತು. ರಾಜನು ನೋಡುತ್ತಾನೆ – ಸಮುದ್ರವು ತನ್ನ ಮೇರೆಗಳನ್ನು ಮೀರಿ ಉಕ್ಕುತ್ತಾ ಇದೆ. ಪ್ರಳಯಕಾಲದ ಭಯಂಕರ ಮೇಘಗಳು ಮಳೆಗರೆಯುತ್ತಾ ಇದೆ. ನೋಡುನೋಡುತ್ತಿರುವಂತೆ ಇಡೀ ಪೃಥಿವಿಯು ನೀರಿನಲ್ಲಿ ಮುಳುಗ ತೊಡಗಿತು. ॥ ೪೧ ॥ ಆಗ ರಾಜನು ಭಗವಂತನ ಆದೇಶವನ್ನು ನೆನೆದಾಗ ಒಂದು ನೌಕೆಯು ಬಳಿಗೆ ಬಂದಿರುವುದನ್ನು ನೋಡಿದನು. ಸತ್ಯವ್ರತನು ಸಕಲ ಔಷಧಿ–ವನಸ್ಪತಿ–ಧಾನ್ಯಬೀಜಗಳನ್ನು ಎತ್ತಿಕೊಂಡು ಸಪ್ತರ್ಷಿಗಳೊಡನೆ ನಾವೆಯನ್ನು ಹತ್ತಿದನು. ॥ ೪೨ ॥ ಸಪ್ತರ್ಷಿಗಳು ತುಂಬುಪ್ರೇಮದಿಂದ ಸತ್ಯವ್ರತರಾಜನಲ್ಲಿ ಹೇಳಿದರು – ರಾಜನೇ ! ನೀನು ಭಗವಂತನನ್ನು ಧ್ಯಾನಿಸು. ಅವನೇ ನಮ್ಮನ್ನು ಈ ಸಂಕಟದಿಂದ ಪಾರುಗೊಳಿಸುವನು ಹಾಗೂ ಪರಮಸುಖವನ್ನು ಅನುಗ್ರಹಿಸುವನು. ॥ ೪೩ ॥ ಅವರ ಆದೇಶದಂತೆ ರಾಜನು ಭಗವಂತನ ಧ್ಯಾನ ಮಾಡಿದನು. ಆಗಲೇ ಆ ಮಹಾಸಮುದ್ರದಲ್ಲಿ ಮತ್ಸ್ಯರೂಪದಿಂದ ಭಗವಂತನು ಪ್ರಕಟನಾದನು. ಮತ್ಸ್ಯಭಗವಂತನ ಶರೀರವು ಬಂಗಾರದಂತೆ ಹೊಳೆಯುತ್ತಿತ್ತು. ಅವನ ಶರೀರವು ಒಂದುಲಕ್ಷ ಯೋಜನ ವಿಸ್ತಾರವಾಗಿತ್ತು. ತಲೆಯಲ್ಲಿ ಭಾರೀ ದೊಡ್ಡ ಒಂದು ಕೊಂಬೂ ಇತ್ತು. ॥ ೪೪ ॥ ಭಗವಂತನು ಹಿಂದೆ ಹೇಳಿದಂತೆ ಆ ನೌಕೆಯನ್ನು ನಾಗರಾಜ ವಾಸುಕಿಯನ್ನು ಹಗ್ಗವಾಗಿಸಿ ಭಗವಂತನ ಕೊಂಬಿಗೆ ಕಟ್ಟಲಾಯಿತು. ಬಳಿಕ ಸತ್ಯವ್ರತ ರಾಜನು ಪರಮ ಸಂತುಷ್ಟನಾಗಿ ಭಗವಂತನನ್ನು ಸ್ತುತಿಸತೊಡಗಿದನು. ॥ ೪೫ ॥

ಸತ್ಯವ್ರತರಾಜನು ಹೇಳಿದನು – ಪ್ರಭುವೇ ! ಪ್ರಪಂಚದಲ್ಲಿರುವ ಜೀವಿಗಳ ಆತ್ಮಜ್ಞಾನವು ಅನಾದಿಯಾದ ಅವಿದ್ಯೆಯಿಂದ

ಜನೋಽಬುಧೋಽಯಂ ನಿಜಕರ್ಮಬಂಧನಃ
ಸುಖೇಚ್ಛಯಾ ಕರ್ಮ ಸಮೀಹತೇಽಸುಖಮ್ ।
ಯತ್ಸೇವಯಾ ತಾಂ ವಿಧುನೋತ್ಯಸನ್ಮತಿಂ
ಗ್ರಂಥಿಂ ಸ ಭಿಂದ್ಯಾದ್ಧೃದಯಂ ಸ ನೋ ಗುರುಃ ॥ ೪೭ ॥

ಯತ್ಸೇವಯಾಗ್ನೇರಿವ ರುದ್ರರೋದನಂ
ಪುಮಾನ್ವಿಜಹ್ಯಾನ್ಮಲಮಾತ್ಮನಸ್ತಮಃ ।
ಭಜೇತ ವರ್ಣಂ ನಿಜಮೇಷ ಸೋಽವ್ಯಯೋ
ಭೂಯಾತ್ಸ ಈಶಃ ಪರಮೋ ಗುರೋರ್ಗುರುಃ ॥ ೪೮ ॥

ನ ಯತ್ಪ್ರಸಾದಾಯುತಭಾಗಲೇಶ-
ಮನ್ಯೇ ಚ ದೇವಾ ಗುರವೋ ಜನಾಃ ಸ್ವಯಮ್ ।
ಕರ್ತುಂ ಸಮೇತಾಃ ಪ್ರಭವಂತಿ ಪುಂಸ-
ಸ್ತಮೀಶ್ವರಂ ತ್ವಾಂ ಶರಣಂ ಪ್ರಪದ್ಯೇ ॥ ೪೯ ॥

ಅಚಕ್ಷುರಂಧಸ್ಯ ಯಥಾಗ್ರಣೀಃ ಕೃತ-
ಸ್ತಥಾ ಜನಸ್ಯಾವಿದುಷೋಽಬುಧೋ ಗುರುಃ ।
ತ್ವಮರ್ಕದೃಕ್ಸರ್ವದೃಶಾಂ ಸಮೀಕ್ಷಣೋ
ವೃತೋ ಗುರುರ್ನಃ ಸ್ವಗತಿಂ ಬುಭುತ್ಸತಾಮ್ ॥ ೫೦ ॥

ಜನೋ ಜನಸ್ಯಾದಿಶತೇಽಸತೀಂ ಮತಿಂ
ಯಯಾ ಪ್ರಪದ್ಯೇತ ದುರತ್ಯಯಂ ತಮಃ ।
ತ್ವಂ ತ್ವವ್ಯಯಂ ಜ್ಞಾನಮಮೋಘಮಂಜಸಾ
ಪ್ರಪದ್ಯತೇ ಯೇನ ಜನೋ ನಿಜಂ ಪದಮ್ ॥ ೫೧ ॥

ತ್ವಂ ಸರ್ವಲೋಕಸ್ಯ ಸುಹೃತ್ಪ್ರಿಯೇಶ್ವರೋ
ಹ್ಯಾತ್ಮಾ ಗುರುರ್ಜ್ಞಾನಮಭೀಷ್ಟಸಿದ್ಧಿಃ ।
ತಥಾಪಿ ಲೋಕೋ ನ ಭವಂತಮಂಧಧೀ-
ರ್ಜಾನಾತಿ ಸಂತಂ ಹೃದಿ ಬದ್ಧಕಾಮಃ ॥ ೫೨ ॥

ತಂ ತ್ವಾಮಹಂ ದೇವವರಂ ವರೇಣ್ಯಂ
ಪ್ರಪದ್ಯ ಈಶಂ ಪ್ರತಿಬೋಧನಾಯ ।
ಛಿಂಧ್ಯರ್ಥದೀಪೈರ್ಭಗವನ್ವಚೋಭಿ-
ರ್ಗ್ರಂಥೀನ್ ಹೃದಯ್ಯಾನ್ವಿವೃಣು ಸ್ವಮೋಕಃ ॥ ೫೩ ॥

ಮುಚ್ಚಿಹೋಗಿದೆ. ಇದರಿಂದಲೇ ಅವರು ಅನೇಕಾನೇಕ ಪ್ರಾಪಂಚಿಕ ಕ್ಲೇಶಗಳಿಂದ ಪೀಡಿತರಾಗಿ ಅನಾಯಾಸವಾಗಿಯೇ ನಿನ್ನ ಅನುಗ್ರಹದಿಂದ ಅವರು ನಿನಗೆ ಶರಣಾದಾಗ ನಿನ್ನನ್ನು ಪಡೆದುಕೊಳ್ಳುವರು. ಆದ್ದರಿಂದ ನಮ್ಮನ್ನು ಬಂಧನದಿಂದ ಬಿಡಿಸಿ ನಿಜವಾದ ಮುಕ್ತಿಯನ್ನು ದಯಪಾಲಿಸುವ ಪರಮಗುರು ನೀನೇ ಆಗಿರುವೆ. ॥ ೪೬॥ ಅಜ್ಞಾನಿಯಾದ ಈ ಜೀವನು ತನ್ನ ಕರ್ಮಗಳಿಂದ ಬಂಧಿತನಾಗಿದ್ದಾನೆ. ಅವನು ವಿಷಯಸುಖಗಳ ಇಚ್ಛೆಯಿಂದ ಕಷ್ಟಕರವಾದ ಕರ್ಮಾನುಷ್ಠಾನಗಳನ್ನು ಮಾಡುತ್ತಾನೆ. ಯಾವನ ಸೇವೆಯಿಂದ ಅವನ ಈ ಅಜ್ಞಾನವು ನಷ್ಟವಾಗುತ್ತದೋ, ಆ ಪರಮಗುರುವಾದ ನೀನು ನನ್ನ ಹೃದಯಗ್ರಂಥಿಯನ್ನು ಕತ್ತರಿಸಿಬಿಡು. ॥ ೪೭ ॥ ಬೆಂಕಿಯಲ್ಲಿ ಕಾಯಿಸಿದ ಚಿನ್ನ-ಬೆಳ್ಳಿಗಳು ಕೊಳೆಯನ್ನು ನೀಗಿ ತನ್ನ ನಿಜವಾದ ಹೊಳಪನ್ನು ಪಡೆಯುವಂತೆಯೇ, ನಿನ್ನ ಸೇವೆಯಿಂದ ಜೀವನು ತನ್ನ ಅಂತಃಕರಣದ ಅಜ್ಞಾನವೆಂಬ ಕೊಳೆಯನ್ನು ತೊಳೆದುಕೊಂಡು ತನ್ನ ನಿಜವಾದ ಸ್ವರೂಪ ಸ್ಥಿತಿಯಲ್ಲಿ ನೆಲೆಸುವನು. ಸರ್ವಶಕ್ತನೂ, ಅವಿನಾಶಿಯೂ, ಪ್ರಭುವೂ ಆದ ನೀನೇ ನಮ್ಮ ಗುರುಜನರಿಗೂ ಪರಮಗುರುವಾಗಿರುವೆ. ಆದ್ದರಿಂದ ಈಶನಾದ ನೀನೇ ನನಗೂ ಗುರು ಆಗಿರುವೆ. ॥ ೪೮ ॥ ಪ್ರಪಂಚದಲ್ಲಿ ಎಷ್ಟು ದೇವತೆಗಳಿರುವರೋ, ಎಷ್ಟು ಗುರುಗಳು-ಸಾಧು-ಸತ್ಪುರುಷರಿರುವರೋ, ಅವರೆಲ್ಲರೂ ಒಟ್ಟಾಗಿ ಸೇರಿ ಕೃಪೆದೋರಿದರೂ ಅವರೆಲ್ಲರ ಕೃಪೆಯೂ ಕೃಪಾಸಾಗರನಾದ ನಿನ್ನ ಕೃಪೆಯ ಹತ್ತುಸಾವಿರದಲ್ಲಿ ಒಂದು ಅಂಶಕ್ಕೂ ಸರಿದೂಗಲಾರದು. ಪ್ರಭುವೇ! ನೀನು ಸರ್ವಶಕ್ತನಾಗಿರುವೆ. ನಾನು ನಿನ್ನನ್ನೇ ಶರಣು ಹೋಗುತ್ತೇನೆ. ॥ ೪೯ ॥ ಕುರುಡನಿಗೆ ಕುರುಡನೇ ದಾರಿತೋರುವವನಾಗುವಂತೆಯೇ ಅಜ್ಞಾನಿಯಾದ ಜೀವನು ಅಜ್ಞಾನಿಯನ್ನೇ ತನ್ನ ಗುರುವನ್ನಾಗಿ ಕೊಳ್ಳುವನು. ನೀನು ಸೂರ್ಯನಂತೆ ಸ್ವಯಂ ಪ್ರಕಾಶನೂ, ಸಮಸ್ತ ಇಂದ್ರಿಯಗಳ ಪ್ರೇರಕನೂ ಆಗಿರುವೆ. ಆತ್ಮತತ್ತ್ವದ ಜಿಜ್ಞಾಸುಗಳಾದ ನಾವು ನಿನ್ನನ್ನೇ ಗುರುವಾಗಿ ಪರಿಗ್ರಹಿಸಿದ್ದೇವೆ. ॥ ೫೦ ॥ ಅಜ್ಞಾನಿಯಾದ ಮನುಷ್ಯನು ಮಾಡುವ ಉಪದೇಶವು ಅಜ್ಞಾನವಾಗಿಯೇ ಇರುತ್ತದೆ. ಅದರಿಂದ ಸಂಸಾರರೂಪವಾದ ಅಂಧಕಾರವೇ ಹೆಚ್ಚೆಚ್ಚು ದೊರೆಯುತ್ತದೆ. ಆದರೆ ನೀನಾದರೋ ಅವಿನಾಶಿಯಾದ, ಅಮೋಘವಾದ ಜ್ಞಾನವನ್ನೇ ಉಪದೇಶಿಸುವೆ. ಇದರಿಂದ ಮನುಷ್ಯನು ಸುಲಭವಾಗಿ ಸ್ವಸ್ವರೂಪವನ್ನು ಪಡೆದುಕೊಳ್ಳುವನು. ॥ ೫೧ ॥ ಮಹಾನುಭಾವನೇ! ನೀನು ಸಮಸ್ತ ಜನರಿಗೂ ಹಿತೈಷಿಯೂ, ಪ್ರಿಯತಮನೂ, ಒಡೆಯನೂ, ಆತ್ಮನೂ ಆಗಿರುವೆ. ಗುರುವಿನ ಮೂಲಕ ದೊರೆಯುವ ಜ್ಞಾನವೂ, ಅಭೀಷ್ಟವಾದ ಸಿದ್ಧಿಯೂ ನಿನ್ನ ಸ್ವರೂಪವೇ ಆಗಿದೆ. ಹೀಗಿದ್ದರೂ ಕಾಮನೆಗಳಲ್ಲಿ ಬಂಧಿತರಾದ ಜನರು ಕುರುಡರಾಗಿದ್ದಾರೆ. ಅವರಿಗೆ ನೀನೇ ಅವರ ಹೃದಯದಲ್ಲಿ ವಿರಾಜಿಸುತ್ತಿರುವೆ ಎಂಬುದೂ ತಿಳಿಯದು. ॥ ೫೨ ॥ ನೀನು ದೇವತೆಗಳಿಗೂ ಪರಮಾರಾಧ್ಯ, ಪರಮ ಪೂಜನೀಯ ಪರಮೇಶ್ವರನಾಗಿರುವೆ. ನಾನು ನಿನ್ನಿಂದ ಜ್ಞಾನವನ್ನು ಪಡೆಯಲಿಕ್ಕಾಗಿ ನಿನಗೆ ಶರಣು ಬಂದಿರುವೆನು. ಭಗವಂತಾ! ಪರಮಾರ್ಥವನ್ನು ಪ್ರಕಾಶಗೊಳಿಸುವಂತಹ ನಿನ್ನ ವಾಣಿಯ ಮೂಲಕ ನನ್ನ ಹೃದಯಗ್ರಂಥಿಯನ್ನು ಛೇದಿಸಿಬಿಡು ಹಾಗೂ ನಿನ್ನ ನಿಜಸ್ವರೂಪವನ್ನು ಪ್ರಕಾಶಗೊಳಿಸು. ॥ ೫೩ ॥

ಶ್ರೀಶುಕ ಉವಾಚ

ಇತ್ಯುಕ್ತವಂತಂ ನೃಪತಿಂ ಭಗವಾನಾದಿಪೂರುಷಃ ।
ಮತ್ಸ್ಯರೂಪೀ ಮಹಾಂಭೋಧೌ ವಿಹರನ್ ತತ್ತ್ವಮಬ್ರವೀತ್
॥ ೫೪ ॥

ಪುರಾಣಸಂಹಿತಾಂ ದಿವ್ಯಾಂ ಸಾಂಖ್ಯಯೋಗಕ್ರಿಯಾವತೀಮ್ ।
ಸತ್ಯವ್ರತಸ್ಯ ರಾಜರ್ಷೇರಾತ್ಮಗುಹ್ಯಮಶೇಷತಃ
॥ ೫೫ ॥

ಅಶ್ರೌಷೀದೃಷಿಭಿಃ ಸಾಕಮಾತ್ಮತತ್ತ್ವಮಸಂಶಯಮ್ ।
ನಾವ್ಯಾಸೀನೋ ಭಗವತಾ ಪ್ರೋಕ್ತಂ ಬ್ರಹ್ಮ ಸನಾತನಮ್
॥ ೫೬ ॥

ಅತೀತಪ್ರಲಯಾಪಾಯ ಉತ್ಥಿತಾಯ ಸ ವೇಧಸೇ ।
ಹತ್ವಾಸುರಂ ಹಯಗ್ರೀವಂ ವೇದಾನ್ ಪ್ರತ್ಯಾಹರದ್ಧರಿಃ
॥ ೫೭ ॥

ಸ ತು ಸತ್ಯವ್ರತೋ ರಾಜಾ ಜ್ಞಾನವಿಜ್ಞಾನಸಂಯುತಃ ।
ವಿಷ್ಣೋಃ ಪ್ರಸಾದಾತ್ಕಲ್ಪೇಽಸ್ಮಿನ್ನಾಸೀದ್ವೈವಸ್ವತೋ ಮನುಃ
॥ ೫೮ ॥

ಸತ್ಯವ್ರತಸ್ಯ ರಾಜರ್ಷೇರ್ಮಾಯಾಮತ್ಸ್ಯಸ್ಯ ಶಾರ್ಙ್ಗಿಣಃ ।
ಸಂವಾದಂ ಮಹದಾಖ್ಯಾನಂ ಶ್ರುತ್ವಾ ಮುಚ್ಯೇತ ಕಿಲ್ಬಿಷಾತ್
॥ ೫೯ ॥

ಅವತಾರೋ ಹರೇರ್ಯೋಽಯಂ ಕೀರ್ತಯೇದನ್ವಹಂ ನರಃ ।
ಸಂಕಲ್ಪಾಸ್ತಸ್ಯ ಸಿಧ್ಯಂತಿ ಸ ಯಾತಿ ಪರಮಾಂ ಗತಿಮ್
॥ ೬೦ ॥

ಪ್ರಲಯಪಯಸಿ ಧಾತುಃ ಸುಪ್ತಶಕ್ತೇರ್ಮುಖೇಭ್ಯಃ
ಶ್ರುತಿಗಣಮಪನೀತಂ ಪ್ರತ್ಯುಪಾದತ್ತ ಹತ್ವಾ ।
ದಿತಿಜಮಕಥಯದ್ಯೋ ಬ್ರಹ್ಮ ಸತ್ಯವ್ರತಾನಾಂ
ತಮಹಮಖಿಲಹೇತುಂ ಜಿಹ್ಮಮೀನಂ ನತೋಽಸ್ಮಿ ॥ ೬೧ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ! ಸತ್ಯವ್ರತರಾಜನು ಹೀಗೆ ಪ್ರಾರ್ಥಿಸಿದಾಗ ಮತ್ಸ್ಯರೂಪಧಾರೀ ಭಗವಾನ್ ಪುರುಷೋತ್ತಮನು ಪ್ರಳಯಸಮುದ್ರದಲ್ಲಿ ವಿಹರಿಸುತ್ತಿರುವಂತೆಯೇ ಅವನಿಗೆ ಆತ್ಮತತ್ತ್ವವನ್ನು ಉಪದೇಶಿಸಿದನು. ॥ ೫೪ ॥ ರಾಜರ್ಷಿ ಸತ್ಯವ್ರತನಿಗೆ ಭಗವಂತನು ತನ್ನ ಸ್ವರೂಪದ ಸಮಗ್ರ ರಹಸ್ಯವನ್ನು ವರ್ಣಿಸುತ್ತಾ ಜ್ಞಾನ, ಭಕ್ತಿ, ಕರ್ಮಯೋಗಗಳಿಂದ ಪರಿಪೂರ್ಣವಾದ ಜ್ಞಾನವನ್ನು ಉಪದೇಶಿಸಿದನು. ಅದನ್ನೇ 'ಮತ್ಸ್ಯಪುರಾಣ'ವೆಂದು ಹೇಳುತ್ತಾರೆ. ॥ ೫೫ ॥ ಸತ್ಯವ್ರತನು ಸಪ್ತರ್ಷಿಗಳೊಂದಿಗೆ ನೌಕೆಯಲ್ಲಿ ಕುಳಿತುಕೊಂಡೇ ಭಗವಂತನಿಂದ ಹೇಳಲ್ಪಟ್ಟ ಸನಾತನ ಬ್ರಹ್ಮಸ್ವರೂಪ ಆತ್ಮತತ್ತ್ವವನ್ನು ಸ್ವಲ್ಪವೂ ಸಂದೇಹಕ್ಕೆ ಎಡೆಯಿಲ್ಲದೆ ಶ್ರವಣಿಸಿದನು. ॥ ೫೬ ॥ ಇದಾದ ಬಳಿಕ ಹಿಂದಿನ ಪ್ರಳಯವು ಅಂತ್ಯವಾಗಿ ಬ್ರಹ್ಮದೇವರು ಎಚ್ಚರಗೊಂಡಾಗ ಭಗವಂತನು ಹಯಗ್ರೀವ ಅಸುರನನ್ನು ಕೊಂದು ಅವನು ಕದ್ದೊಯ್ದ ವೇದಗಳನ್ನು ತಂದು ಬ್ರಹ್ಮದೇವರಿಗೆ ಹಿಂದಿರುಗಿಸಿದನು. ॥ ೫೭ ॥ ಭಗವಂತನ ಕೃಪೆಯಿಂದ ಸತ್ಯವ್ರತರಾಜನೇ ಜ್ಞಾನ ಮತ್ತು ವಿಜ್ಞಾನದಿಂದ ಕೂಡಿಕೊಂಡು ಈ ಕಲ್ಪದಲ್ಲಿ ವೈವಸ್ವತಮನು ಆದನು. ॥ ೫೮ ॥ ತನ್ನ ಯೋಗಮಾಯೆಯಿಂದ ಮತ್ಸ್ಯರೂಪವನ್ನು ಧರಿಸಿದ ಭಗವಾನ್ ಮಹಾವಿಷ್ಣುವಿನ ಮತ್ತು ರಾಜರ್ಷಿ ಸತ್ಯವ್ರತರ ಈ ಸಂವಾದರೂಪವಾದ ಶ್ರೇಷ್ಠವಾದ ಆಖ್ಯಾನವನ್ನು ಶ್ರವಣಿಸಿ ಮನುಷ್ಯನು ಎಲ್ಲ ವಿಧವಾದ ಪಾಪಗಳಿಂದ ಬಿಡುಗಡೆ ಹೊಂದುವನು. ॥ ೫೯ ॥ ಭಗವಂತನ ಈ ಅವತಾರವನ್ನು ಪ್ರತಿದಿನವೂ ಕೀರ್ತಿಸುವವನ ಎಲ್ಲ ಸಂಕಲ್ಪಗಳು ಸಿದ್ಧಿಯಾಗುತ್ತವೆ ಮತ್ತು ಅವನಿಗೆ ಪರಮಗತಿಯು ಪ್ರಾಪ್ತವಾಗುತ್ತದೆ. ॥ ೬೦ ॥

ಪ್ರಳಯಕಾಲದ ಸಮುದ್ರದಲ್ಲಿ, ಬ್ರಹ್ಮದೇವರು ಮಲಗಿದ್ದಾಗ, ಅವರ ಸೃಷ್ಟಿಶಕ್ತಿಯು ಲುಪ್ತವಾಗಿದ್ದಾಗ, ಅವರ ಬಾಯಿಂದ ಹೊರಟ ವೇದಗಳನ್ನು ಕದ್ದು ಹಯಗ್ರೀವನೆಂಬ ದೈತ್ಯನು ಪಾತಾಳಕ್ಕೆ ಕೊಂಡುಹೋಗಿದ್ದನು. ಭಗವಂತನು ಅವನನ್ನು ಸಂಹರಿಸಿ ಆ ವೇದಗಳನ್ನು ಬ್ರಹ್ಮದೇವರಿಗೆ ಹಿಂದಿರುಗಿಸಿದನು ಹಾಗೂ ಸತ್ಯವ್ರತ ಮತ್ತು ಸಪ್ತರ್ಷಿಗಳಿಗೆ ಬ್ರಹ್ಮತತ್ತ್ವವನ್ನು ಉಪದೇಶಿಸಿದನು. ಅಂತಹ ಸಮಸ್ತ ಜಗತ್ತಿನ ಪರಮಕಾರಣನಾದ ಮಾಯಾಮತ್ಸ್ಯ ಭಗವಂತನಿಗೆ ನಾನು ನಮಸ್ಕಾರಮಾಡುತ್ತೇನೆ. ॥ ೬೧ ॥

ಇಪ್ಪತ್ತನಾಲ್ಕನೆಯ ಅಧ್ಯಾಯವು ಮುಗಿಯಿತು. ॥ ೨೪ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಅಷ್ಟಮ ಸ್ಕಂಧೇ
ಮತ್ಸ್ಯಾವತಾರಚರಿತಾನುವರ್ಣನಂ ನಾಮ ಚತುರ್ವಿಂಶೋಽಧ್ಯಾಯಃ ॥ ೨೪ ॥

ಎಂಟನೆಯ ಸ್ಕಂಧವು ಸಂಪೂರ್ಣವಾಯಿತು.

॥ ಶ್ರೀಹರಿಃ ॥

ಶ್ರೀಮದ್ಭಾಗವತದ ವಿಷಯಾನುಕ್ರಮಣಿಕೆ

ದ್ವಿತೀಯ ಖಂಡ

ಅಧ್ಯಾಯ ವಿಷಯ ಪುಟ

ನವಮ ಸ್ಕಂಧ

ಅಧ್ಯಾಯ ವಿಷಯ ಪುಟ

ದಶಮ ಸ್ಕಂಧ (ಪೂರ್ವಾರ್ಧ)

ದಶಮ ಸ್ಕಂಧ (ಉತ್ತರಾರ್ಧ)

ಶ್ರೀ ಶುಕಮಹಾಮುನಿಗಳಿಗೆ ನಮಸ್ಕಾರ

ಯಂ ಪ್ರವ್ರಜಂತಮನುಪೇತಮಪೇತಕೃತ್ಯಂ ದ್ವೈಪಾಯನೋ ವಿರಹಕಾತರ ಆಜುಹಾವ ।
ಪುತ್ರೇತಿ ತನ್ಮಯತಯಾ ತರವೋಽಭಿನೇದುಸ್ತಂ ಸರ್ವಭೂತಹೃದಯಂ ಮುನಿಮಾನತೋಽಸ್ಮಿ ॥ (೧-೨-೨)

ಸಮಸ್ತ ಪ್ರಾಣಿಗಳ ಆತ್ಮ ಸ್ವರೂಪರಾದ ಶ್ರೀ ಶುಕಮಹಾಮುನಿಗಳಿಗೆ ನಮಸ್ಕಾರವು. ಸಂಸಾರ ಸಂಬಂಧವನ್ನು ಕೂಡಿಕೊಳ್ಳದೆ ಎಲ್ಲ ಕರ್ಮಗಳಿಂದಲೂ ಬಿಡುಗಡೆಹೊಂದಿ ಕೃತಕೃತ್ಯರಾಗಿದ್ದ, ಜ್ಞಾನ-ವೈರಾಗ್ಯನಿಧಿಗಳಾದ ಈ ಮಹಾತ್ಮರು ಸರ್ವಸಂಗ ಪರಿತ್ಯಾಗಮಾಡಿ ಒಬ್ಬಂಟಿಗರಾಗಿ ಮನೆಯಿಂದ ಹೊರಟುಬಿಟ್ಟಾಗ ತಂದೆಯಾದ ವೇದವ್ಯಾಸರು ಪುತ್ರವಿಯೋಗದಿಂದ ತಲ್ಲಣಿಸುತ್ತಾ ಓ ಪುತ್ರಾ ! ಓ ಪುತ್ರಾ ! ಎಂದು ಕೂಗತೊಡಗಿದರು. ಆಗ ಅಲ್ಲಿದ್ದ ವೃಕ್ಷಗಳೇ ತನ್ಮಯತೆಯಿಂದ ಕೂಡಿ ಅವರ ಪರವಾಗಿ 'ಭೋಃ' ಎಂದು ಓಗೊಟ್ಟವು. ಇಂತಹ ಎಲ್ಲರ ಹೃದಯದಲ್ಲಿ ವಿರಾಜಮಾನರಾಗಿ ಆತ್ಮರೂಪರಾಗಿರುವ ಗುರು ಶ್ರೀ ಶುಕಮಹಾಮುನಿಗಳಿಗೆ ನಾನು ವಂದಿಸುತ್ತೇನೆ.

ಯಃ ಸ್ವಾನುಭಾವಮಖಿಲಶ್ರುತಿಸಾರಮೇಕಮಧ್ಯಾತ್ಮದೀಪಮತಿತಿತೀರ್ಷತಾಂ ತಮೋಽಂಧಮ್ ।
ಸಂಸಾರಿಣಾಂ ಕರುಣಯಾಽಽಹ ಪುರಾಣಗುಹ್ಯಂ ತಂ ವ್ಯಾಸಸೂನುಮುಪಯಾಮಿ ಗುರುಂ ಮುನೀನಾಮ್ ॥ (೧-೨-೩)

ಈ ಶ್ರೀಮದ್ಭಾಗವತವು ಅತ್ಯಂತ ಗೋಪನೀಯ-ರಹಸ್ಯಾತ್ಮಕ ಪುರಾಣವಾಗಿದೆ. ಇದು ಭಗವತ್ ಸ್ವರೂಪದ ಅನುಭವ ಮಾಡಿಸುವಂತಹುದು ಹಾಗೂ ಸಮಸ್ತ ವೇದಗಳ ಸಾರವಾಗಿದೆ. ಸಂಸಾರ ಚಕ್ರದಲ್ಲಿ ಸಿಕ್ಕಿಕೊಂಡು ಘೋರ ಅಜ್ಞಾನಾಂಧಕಾರದಿಂದ ದಾಟಿ ಹೋಗಲು ಬಯಸುವ ಜನರಿಗಾಗಿ ಇದು ಆಧ್ಯಾತ್ಮಿಕ ತತ್ತ್ವಗಳನ್ನು ಪ್ರಕಾಶಿಸುವ ಒಂದು ಅದ್ವಿತೀಯ ದೀಪವಾಗಿದೆ. ನಿಜವಾಗಿ ಅಂತಹವರ ಮೇಲೆ ಕರುಣೆತೋರಿ ದೊಡ್ಡ ದೊಡ್ಡ ಮುನಿಗಳಿಗೂ, ಆಚಾರ್ಯರಾದ ಶ್ರೀಶುಕಮಹರ್ಷಿಗಳು ಇದನ್ನು ವರ್ಣಿಸಿರುವರು. ನಾನು ಅವರಿಗೆ ಶರಣು ಹೊಂದುತ್ತೇನೆ.

ಸ್ವಸುಖನಿಭೃತಚೇತಾಸ್ತದ್ ವ್ಯುದಸ್ತಾನ್ಯಭಾವೋಽಪ್ಯಜಿತರುಚಿರಲೀಲಾಕೃಷ್ಟಸಾರಸ್ತದೀಯಮ್ ।
ವ್ಯತನುತ ಕೃಪಯಾ ಯಸ್ತತ್ತ್ವದೀಪಂ ಪುರಾಣಂ ತಮಖಿಲವೃಜಿನಘ್ನಂ ವ್ಯಾಸಸೂನುಂ ನತೋಽಸ್ಮಿ ॥ (೧೨-೧೨-೬೮)

ಶ್ರೀಶುಕಮಹಾಮುನಿಗಳು ತಮ್ಮ ಆತ್ಮಾನಂದದಲ್ಲೇ ಮುಳುಗಿದ್ದರು. ಈ ಅಖಂಡ ಅದ್ವೈತ ಸ್ಥಿತಿಯಿಂದ ಅವರ ಭೇದ ದೃಷ್ಟಿಯು ಸರ್ವಥಾ ಹೊರಟುಹೋಗಿತ್ತು. ಹೀಗಿದ್ದರೂ ಮುರಳೀಮನೋಹರ ಶ್ಯಾಮಸುಂದರನ ಮಧುರ, ಮಂಗಲಮಯ ಮನೋಹಾರಿಣಿ ಲೀಲೆಗಳು ಅವರ ವೃತ್ತಿಗಳನ್ನು ತಮ್ಮ ಕಡೆಗೆ ಆಕರ್ಷಿಸಿಕೊಂಡಿದ್ದವು. ಅವರು ಜಗತ್ತಿನ ಪ್ರಾಣಿಗಳ ಮೇಲೆ ಕೃಪೆ ಮಾಡಿ ಭಗವತ್ತತ್ತ್ವವನ್ನು ಪ್ರಕಾಶಿತಗೊಳಿಸುವ ಈ ಮಹಾಪುರಾಣದ ವಿಸ್ತಾರ ಮಾಡಿದರು. ಅಂತಹ ಸರ್ವಪಾಪಹಾರೀ ವ್ಯಾಸನಂದನ ಭಗವಾನ್ ಶ್ರೀಶುಕಮಹಾಮುನಿಗಳ ಚರಣಗಳಲ್ಲಿ ನಾನು ನಮಸ್ಕಾರ ಮಾಡುತ್ತೇನೆ.

॥ ಓಂ ನಮೋ ಭಗವತೇ ವಾಸುದೇವಾಯ ॥

ಶ್ರೀಮದ್ಭಾಗವತ ಮಾಹಾತ್ಮ್ಯೆ

(ಶ್ರೀಭಗವಂತನು ಬ್ರಹ್ಮದೇವರಿಗೆ ತನ್ನ ಮುಖಾರವಿಂದಿಂದಲೇ ಅನುಗ್ರಹಿಸಿದ್ದು)

ಶ್ರೀಮದ್ಭಾಗವತಂ ನಾಮ ಪುರಾಣಂ ಲೋಕವಿಶ್ರುತಮ್ ।
ಶೃಣುಯಾಚ್ಛ್ರದ್ಧಯಾ ಯುಕ್ತೋ ಮಮ ಸಂತೋಷ ಕಾರಣಮ್ ॥ ೧ ॥

ನಿತ್ಯಂ ಭಾಗವಂತ ಯಸ್ತು ಪುರಾಣಂ ಪಠತೇ ನರಃ ।
ಪ್ರತ್ಯಕ್ಷರಂ ಭವೇತ್ತಸ್ಯ ಕಪಿಲಾದಾನಜಂ ಫಲಮ್ ॥ ೨ ॥

ಶ್ಲೋಕಾರ್ಧಂ ಶ್ಲೋಕಪಾದಂ ವಾ ನಿತ್ಯಂ ಭಾಗವತೋದ್ಭವಮ್ ।
ಪಠತೇ ಶೃಣುಯಾದ್ಯಸ್ತು ಗೋಸಹಸ್ರಫಲಂ ಲಭೇತ್ ॥ ೩ ॥

ಯಃ ಪಠೇತ್ ಪ್ರಯತೋ ನಿತ್ಯ ಶ್ಲೋಕಂ ಭಾಗವತಂ ಸುತ ।
ಅಷ್ಟಾದಶ ಪುರಾಣಾನಾಂ ಫಲಮಾಪ್ನೋತಿ ಮಾನವಃ ॥ ೪ ॥

ನಿತ್ಯಂ ಮಮ ಕಥಾ ಯತ್ರ ತತ್ರ ತಿಷ್ಠಂತಿ ವೈಷ್ಣವಾಃ ।
ಕಲಿಬಾಹ್ಯಾ ನರಾಸ್ತೇ ವೈ ಯೇಽರ್ಚಯಂತಿ ಸದಾ ಮಮ ॥ ೫ ॥

ವೈಷ್ಣವಾನಾಂ ತು ಶಾಸ್ತ್ರಾಣಿ ಯೇಽರ್ಚಯಂತಿ ಗೃಹೇ ನರಾಃ ।
ಸರ್ವಪಾಪವಿನಿರ್ಮುಕ್ತಾ ಭವಂತಿ ಸುರವಂದಿತಾಃ ॥ ೬ ॥

ಯೇಽರ್ಚಯಂತಿ ಗೃಹೇ ನಿತ್ಯಂ ಶಾಸ್ತ್ರಂ ಭಾಗವತಂ ಕಲೌ ।
ಆಸ್ಫೋಟಯಂತಿ ವಲ್ಗಂತಿ ತೇಷಾಂ ಪ್ರೀತೋ ಭವಾಮ್ಯಹಮ್ ॥ ೭ ॥

ಯಾವದ್ದಿನಾನಿ ಹೇ ಪುತ್ರ ಶಾಸ್ತ್ರಂ ಭಾಗವತಂ ಗೃಹೇ ।
ತಾವತ್ ಪಿಬಂತಿ ಪಿತರಃ ಕ್ಷೀರಂ ಸರ್ಪಿರ್ಮಧೂದಕಮ್ ॥ ೮ ॥

ಯಚ್ಛಂತಿ ವೈಷ್ಣವೇ ಭಕ್ತ್ಯಾ ಶಾಸ್ತ್ರಂ ಭಾಗವತಂ ಹಿ ಯೇ ।
ಕಲ್ಪಕೋಟಿಸಹಸ್ರಾಣಿ ಮಮ ಲೋಕೇ ವಸಂತಿ ತೇ ॥ ೯ ॥

ಯೇಽರ್ಚಯಂತಿ ಸದಾ ಗೇಹೇ ಶಾಸ್ತ್ರಂ ಭಾಗವತಂ ನರಾಃ ।
ಪ್ರೀಣಿತಾಸ್ತೈಶ್ಚ ವಿಬುಧಾ ಯಾವದಾಭೂತಸಂಪ್ಲವಮ್ ॥ ೧೦ ॥

ಲೋಕವಿಖ್ಯಾತವಾಗಿರುವ ಶ್ರೀಮದ್ಭಾಗವತವೆಂಬ ಪುರಾಣ ರತ್ನವನ್ನು ಶ್ರದ್ಧೆಯಿಂದ ಶ್ರವಣ ಮಾಡಬೇಕು. ಇದು ನನಗೆ ಸಂತೋಷವನ್ನುಂಟುಮಾಡುತ್ತದೆ. ॥ ೧ ॥ ಪ್ರತಿದಿನವೂ ಶ್ರೀಮದ್ಭಾಗವತವನ್ನು ಪಾರಾಯಣ ಮಾಡುವವನಿಗೆ ಒಂದೊಂದು ಅಕ್ಷರದ ಪಠನಕ್ಕೂ ಒಂದೊಂದು ಕಪಿಲಾಗೋವನ್ನು ದಾನ ಮಾಡಿದ ಪುಣ್ಯ ಫಲ ದೊರೆಯುತ್ತದೆ. ॥೨ ॥ ಪ್ರತಿದಿನವೂ ಶ್ರೀಮದ್ಭಾಗವತದಿಂದ ಅರ್ಧ ಶ್ಲೋಕವನ್ನಾಗಲೀ ಒಂದು ಪಾದವನ್ನಾಗಲೀ ಓದುವವನು ಅಥವಾ ಕೇಳುವವನು ಸಾವಿರ ಗೋವುಗಳನ್ನು ದಾನ ಮಾಡಿದ ಪುಣ್ಯಕ್ಕೆ ಭಾಗಿಯಾಗುವನು. ॥ ೩ ॥

ಎಲೈ ಪುತ್ರನೇ ! ಪ್ರತಿದಿನವೂ ಸಂಯಮದಿಂದ ಕೂಡಿ ಶ್ರೀಮದ್ಭಾಗವತವನ್ನು ಯಾವನು ಪಾರಾಯಣ ಮಾಡುತ್ತಾನೆಯೋ ಅವನಿಗೆ ಹದಿನೆಂಟು ಪುರಾಣಗಳನ್ನೂ ಪಾರಾಯಣ ಮಾಡಿದ ಫಲ ಸಿಕ್ಕುವುದು. ॥ ೪ ॥ ನಿತ್ಯವೂ ನನ್ನ ಕಥೆಯು ನಡೆಯುವಲ್ಲಿ ಪ್ರಹ್ಲಾದನೇ ಮುಂತಾದ ನನ್ನ ಭಕ್ತ ಪಾರ್ಷದರು ಉಪಸ್ಥಿತರಾಗಿರುತ್ತಾರೆ. ಈ ಭಾಗವತವನ್ನು ಪೂಜೆ ಮಾಡುವ ಮನುಷ್ಯರು ಕಲಿಯ ಅಧಿಕಾರಕ್ಕೆ ಒಳಪಡುವುದಿಲ್ಲ. ॥ ೫ ॥ ಮಹಾ ವಿಷ್ಣುವನ್ನು ಕುರಿತ ಶಾಸ್ತ್ರಗಳನ್ನು ಮನೆಯಲ್ಲಿ ಪೂಜೆ ಮಾಡುವ ಮನುಷ್ಯರು ಸಮಸ್ತ ಪಾಪಗಳಿಂದಲೂ ಬಿಡುಗಡೆಹೊಂದಿ ದೇವತೆಗಳಿಂದಲೂ ವಂದಿತರಾಗುತ್ತಾರೆ. ॥ ೬ ॥ ಕಲಿಯುಗದಲ್ಲಿ ತಮ್ಮ ಮನೆಯಲ್ಲಿ ಶ್ರೀಮದ್ಭಾಗವತ ಶಾಸ್ತ್ರವನ್ನು ಪ್ರತಿನಿತ್ಯವೂ ಪೂಜೆ ಮಾಡುತ್ತಾ ಕಲಿಪುರುಷನಿಗೆ ಹೆದರದೇ ಚಪ್ಪಾಳೆತಟ್ಟಿ ಕುಣಿದು ಕುಪ್ಪಳಿಸುವವರ ವಿಷಯದಲ್ಲಿ ನಾನು ಪ್ರಸನ್ನನಾಗಿರುತ್ತೇನೆ. ॥ ೭ ॥ ಪುತ್ರ ! ಮನುಷ್ಯನು ಎಷ್ಟು ದಿನಗಳ ಕಾಲ ತನ್ನ ಗೃಹದಲ್ಲಿ ಶ್ರೀಮದ್ಭಾಗವತವನ್ನು ಇಟ್ಟುಕೊಂಡಿರುತ್ತಾನೋ ಅಲ್ಲಿಯವರೆಗೂ ಅವನ ಪಿತೃಗಳು ಹಾಲು, ತುಪ್ಪ, ಜೇನು ಮತ್ತು ಸಿಹಿ ನೀರನ್ನು ಕುಡಿಯುತ್ತಿರುವರು ॥ ೮ ॥ ವಿಷ್ಣುಭಕ್ತನಿಗೆ ಭಕ್ತಿ ಪೂರ್ವಕವಾಗಿ ಶ್ರೀಮದ್ಭಾಗವತವನ್ನು ಸಮರ್ಪಿಸುವ ಸುಕೃತಿಗಳು ಸಾವಿರಾರು ಕೋಟಿ ಕಲ್ಪ ಕಾಲದವರೆಗೆ ವೈಕುಂಠಧಾಮದಲ್ಲಿ ವಾಸ ಮಾಡುವರು. ॥ ೯ ॥ ಸದಾ ತಮ್ಮ ಮನೆಯಲ್ಲಿ ಶ್ರೀಮದ್ಭಾಗವತ ಶಾಸ್ತ್ರವನ್ನು ಪೂಜಿಸುವವರು ಕಲ್ಪ ಕಾಲದವರೆಗೆ ಸಮಸ್ತ ದೇವತೆಗಳನ್ನೂ ತೃಪ್ತಿಪಡಿಸಿದಂತೆಯೇ ಸರಿ. ॥ ೧೦ ॥ ಮನೆಯಲ್ಲಿ ನೂರಾರು ಸಾವಿರಾರು ಇತರ ಶಾಸ್ತ್ರ ಸಂಗ್ರಹವನ್ನು ಇಟ್ಟುಕೊಂಡು ಏನು ಫಲ? ಶ್ರೀಮದ್ಭಾಗವತದ ಒಂದು ಶ್ಲೋಕದ ಅರ್ಧ ಭಾಗವನ್ನಾಗಲೀ

ಶ್ಲೋಕಾರ್ಧಂ ಶ್ಲೋಕಪಾದಂ ವಾ ವರಂ ಭಾಗವತಂ ಗೃಹೇ ।
ಶತಶೋಽಥ ಸಹಸ್ರೈಶ್ಚ ಕಿಮನ್ಯೈಃ ಶಾಸ್ತ್ರಸಂಗ್ರಹೈಃ ॥ ೧೧ ॥

ನ ಯಸ್ಯ ತಿಷ್ಠತೇ ಶಾಸ್ತ್ರಂ ಗೃಹೇ ಭಾಗವತಂ ಕಲೌ ।
ನ ತಸ್ಯ ಪುನರಾವೃತ್ತಿಃ ಯಾಮ್ಯಪಾಶಾತ್ಕದಾಚನ ॥ ೧೨ ॥

ಕಥಂ ಸ ವೈಷ್ಣವೋ ಜ್ಞೇಯಃ ಶಾಸ್ತ್ರಂ ಭಾಗವತಂ ಕಲೌ ।
ಗೃಹೇ ನ ತಿಷ್ಠತೇ ಯಸ್ಯ ಶ್ವಪಚಾದಧಿಕೋ ಹಿ ಸಃ ॥ ೧೩ ॥

ಸರ್ವಸ್ವೇನಾಪಿ ಲೋಕೇಶ ಕರ್ತವ್ಯಃ ಶಾಸ್ತ್ರಸಂಗ್ರಹಃ ।
ವೈಷ್ಣವಸ್ತು ಸದಾ ಭಕ್ತ್ಯಾ ತುಷ್ಟ್ಯರ್ಥಂ ಮಮ ಪುತ್ರಕ ॥ ೧೪ ॥

ಯತ್ರ ಯತ್ರ ಭವೇತ್ ಪುಣ್ಯಂ ಶಾಸ್ತ್ರಂ ಭಾಗವತಂ ಕಲೌ ।
ತತ್ರ ತತ್ರ ಸದೈವಾಹಂ ಭವಾಮಿ ತ್ರಿದಶೈಃ ಸಹ ॥ ೧೫ ॥

ತತ್ರ ಸರ್ವಾಣಿ ತೀರ್ಥಾನಿ ನದೀನದಸರಾಂಸಿ ಚ ।
ಯಜ್ಞಾಃ ಸಪ್ತಪುರೀ ನಿತ್ಯಂ ಪುಣ್ಯಾಃ ಸರ್ವೇ ಶಿಲೋಚ್ಚಯಾಃ ॥ ೧೬ ॥

ಶ್ರೋತವ್ಯಂ ಮಮ ಶಾಸ್ತ್ರಂ ಹಿ ಯಶೋಧರ್ಮಜಯಾರ್ಥಿನಾ ।
ಪಾಪಕ್ಷಯಾರ್ಥಂ ಲೋಕೇಶ ಮೋಕ್ಷಾರ್ಥಂ ಧರ್ಮಬುದ್ಧಿನಾ ॥ ೧೭ ॥

ಶ್ರೀಮದ್ಭಾಗವತಂ ಪುಣ್ಯಮಾಯುರಾರೋಗ್ಯವರ್ಧನಮ್ ।
ಪಠನಾತ್ ಶ್ರವಣಾದ್ವಾಪಿ ಸರ್ವಪಾಪೈಃ ಪ್ರಮುಚ್ಯತೇ ॥ ೧೮ ॥

ನ ಶೃಣ್ವಂತಿ ನ ಹೃಷ್ಯಂತಿ ಶ್ರೀಮದ್ಭಾಗವತಂ ಪರಮ್ ।
ಸತ್ಯಂ ಸತ್ಯಂ ಹಿ ಲೋಕೇಶ ತೇಷಾಂ ಸ್ವಾಮೀ ಸದಾ ಯಮಃ ॥ ೧೯ ॥

ನ ಗಚ್ಛತಿ ಯದಾ ಮರ್ತ್ಯಃ ಶ್ರೋತುಂ ಭಾಗವತಂ ಸುತ ।
ಏಕಾದಶ್ಯಾಂ ವಿಶೇಷೇಣ ನಾಸ್ತಿ ಪಾಪರತಸ್ತತಃ ॥ ೨೦ ॥

ಶ್ಲೋಕಂ ಭಾಗವತಂ ಚಾಪಿ ಶ್ಲೋಕಾರ್ಧಂ ಪಾದಮೇವ ವಾ ।
ಲಿಖಿತಂ ತಿಷ್ಠತೇ ಯಸ್ಯ ಗೃಹೇ ತಸ್ಯ ವಸಾಮ್ಯಹಮ್ ॥ ೨೧ ॥

ಸರ್ವಾಶ್ರಮಾಭಿಗಮನಂ ಸರ್ವತೀರ್ಥಾವಗಾಹನಮ್ ।
ನ ತಥಾ ಪಾವನಂ ನೃಣಾಂ ಶ್ರೀಮದ್ಭಾಗವತಂ ಯಥಾ ॥ ೨೨ ॥

ಅಥವಾ ಒಂದು ಪಾದವನ್ನಾಗಲೀ ಇಟ್ಟುಕೊಂಡರೂ ಅದಕ್ಕಿಂತಲೂ ಉತ್ತಮವೇ. ॥ ೧೧ ॥

ಕಲಿಯುಗದಲ್ಲಿ ಯಾವ ಮನುಷ್ಯನ ಮನೆಯಲ್ಲಿ ಭಾಗವತ ಶಾಸ್ತ್ರ ಇರುವುದಿಲ್ಲವೋ ಅವನು ಯಮನ ಪಾಶದಿಂದ ಬಿಡುಗಡೆಯಾಗುವುದಿಲ್ಲ. ॥ ೧೨ ॥ ಯಾವನ ಗೃಹದಲ್ಲಿ ಶ್ರೀಮದ್ಭಾಗವತ ಶಾಸ್ತ್ರವಿರುವುದಿಲ್ಲವೋ ಅವನನ್ನು ವಿಷ್ಣುಭಕ್ತನೆಂದು ಹೇಗೆ ಕರೆಯಲಾದೀತು ? ಅವನು ಶ್ವಪಚನಿಗಿಂತಲೂ ತುಂಬಾ ಕೀಳುಮಟ್ಟದವನೇ. ॥ ೧೩ ॥ ನನ್ನ ಪ್ರಿಯಪುತ್ರನೇ! ಲೋಕೇಶ್ವರನಾದ ಬ್ರಹ್ಮನೇ ! ಮನುಷ್ಯನು ತನ್ನ ಸರ್ವಸ್ವವನ್ನಾದರೂ ಕೊಟ್ಟು ಭಕ್ತಿಪೂರ್ವಕವಾಗಿ ನನ್ನನ್ನು ಸಂತೋಷ ಪಡಿಸಲು ಈ ವಿಷ್ಣುಪರವಾದ ಶಾಸ್ತ್ರವನ್ನು ಸಂಗ್ರಹಿಸಿಟ್ಟುಕೊಳ್ಳಬೇಕು. ॥ ೧೪ ॥ ಕಲಿಯುಗದಲ್ಲಿ ಈ ಪವಿತ್ರವಾದ ಭಾಗವತ ಶಾಸ್ತ್ರ ಎಲ್ಲೆಲ್ಲಿ ಇರುವುದೋ ಅಲ್ಲೆಲ್ಲಾ ನಾನು ದೇವತೆಗಳ ಸಹಿತನಾಗಿ ಸದಾ ಇರುವೆನು. ॥ ೧೫ ॥ ಈ ಜಾಗದಲ್ಲಿ ನದ-ನದೀ ಮತ್ತು ಸರೋವರ ರೂಪವಾದ ಸಮಸ್ತ ತೀರ್ಥಗಳೂ ಮತ್ತು ಸಮಸ್ತ ಯಜ್ಞಗಳೂ, ಅಯೋಧ್ಯಾ, ಮಥುರಾ, ಮಾಯಾ, ಕಾಶೀ, ಕಂಚೀ, ಅವಂತಿ, ದ್ವಾರಾವತಿಗಳೆಂಬ ಸಪ್ತ ಮೋಕ್ಷಪ್ರದಪುರಿಗಳೂ ಮತ್ತು ಸಮಸ್ತ ಪವಿತ್ರ ಪರ್ವತಗಳೂ ಸದಾ ವಾಸವಾಗಿರುತ್ತವೆ. ॥ ೧೬ ॥

ಓ ಲೋಕೇಶ್ವರನೇ! ಯಶಸ್ಸು, ಧರ್ಮ ಮತ್ತು ವಿಜಯಗಳನ್ನು ಬಯಸುವವನು ಮತ್ತು ಧರ್ಮಬುದ್ಧಿಯುಳ್ಳವನು ಪಾಪಕ್ಷಯಕ್ಕಾಗಿ ಮತ್ತು ಮೋಕ್ಷಪ್ರಾಪ್ತಿಗಾಗಿ ಈ ನನ್ನ ಶಾಸ್ತ್ರವನ್ನು ಅವಶ್ಯವಾಗಿ ಕೇಳಬೇಕು. ॥ ೧೭ ॥ ಈ ಪವಿತ್ರವಾದ ಪುರಾಣವು ಆಯುಸ್ಸು-ಆರೋಗ್ಯಗಳನ್ನು ವೃದ್ಧಿಪಡಿಸುವುದು. ಇದನ್ನು ಪಾರಾಯಣ ಮಾಡಿದರೆ ಅಥವಾ ಶ್ರವಣ ಮಾಡಿದರೂ ಸಾಕು ; ಸಮಸ್ತ ಪಾಪಗಳಿಂದಲೂ ಬಿಡುಗಡೆಯಾಗುತ್ತದೆ. ॥ ೧೮ ॥

ಓ ಲೋಕೇಶನೇ ! ಈ ಪರಮೋತ್ತಮವಾದ ಶ್ರೀಮದ್ಭಾಗವತವನ್ನು ಯಾರು ಕೇಳುವುದಿಲ್ಲವೋ, ಕೇಳಿ ಸಂತೋಷ ಪಡುವುದಿಲ್ಲವೋ - ಅವರು ಸದಾ ಯಮರಾಜನ ವಶದಲ್ಲೇ ಇರುವರು. ನಾನು ಹೇಳುತ್ತಿರುವ ಮಾತು ಸತ್ಯ, ಸತ್ಯವಾದುದು. ॥ ೧೯ ॥ ಪುತ್ರನೇ ! ಯಾವ ಮನುಷ್ಯನು ಎಲ್ಲ ದಿನಗಳಲ್ಲಿಯೂ ಮತ್ತು ವಿಶೇಷವಾಗಿ ಏಕಾದಶೀ ದಿನದಲ್ಲಿ ಶ್ರೀಮದ್ಭಾಗವತವನ್ನು ಶ್ರವಣ ಮಾಡಲು ಹೋಗುವುದಿಲ್ಲವೋ - ಅವನಿಗಿಂತಲೂ ದೊಡ್ಡ ಪಾಪಿಷ್ಠ ಬೇರಾವನೂ ಇಲ್ಲ. ॥ ೨೦ ॥ ಯಾವನ ಮನೆಯಲ್ಲಿ ಶ್ರೀಮದ್ಭಾಗವತದ ಒಂದೇ ಒಂದು ಶ್ಲೋಕವಾಗಲೀ, ಶ್ಲೋಕದ ಅರ್ಧಭಾಗವಾಗಲೀ, ಶ್ಲೋಕದ ಒಂದು ಪಾದವೇ ಆಗಲಿ ಬರೆಯಲ್ಪಟ್ಟಿರುತ್ತದೆಯೋ ಆತನ ಮನೆಯಲ್ಲಿ ನಾನು ಸದಾ ವಾಸ ಮಾಡುತ್ತೇನೆ. ॥ ೨೧ ॥ ಮನುಷ್ಯರಿಗೆ ಎಲ್ಲ ಪುಣ್ಯಾಶ್ರಮಗಳಿಗೆ ಯಾತ್ರೆ ಮಾಡುವುದಾಗಲೀ ಅಥವಾ ಸಮಸ್ತ ತೀರ್ಥಗಳಲ್ಲಿ ಸ್ನಾನ ಮಾಡುವುದಾಗಲೀ ಶ್ರೀಮದ್ಭಾಗವತದಷ್ಟು ಪವಿತ್ರಕರವಲ್ಲ. ॥ ೨೨ ॥

ಯತ್ರ ಯತ್ರ ಚತುರ್ವಕ್ತ್ರ ಶ್ರೀಮದ್ಭಾಗವತಂ ಭವೇತ್ ।
ಗಚ್ಛಾಮಿ ತತ್ರ ತತ್ರಾಹಂ ಗೌರ್ಯಥಾ ಸುತವತ್ಸಲಾ
॥ ೨೩ ॥

ಮತ್ಕಥಾವಾಚಕಂ ನಿತ್ಯಂ ಮತ್ಕಥಾಶ್ರವಣೇ ರತಮ್ ।
ಮತ್ಕಥಾಪ್ರೀತಮನಸಂ ನಾಹಂ ತ್ಯಕ್ಷ್ಯಾಮಿ ತಂ ನರಮ್
॥ ೨೪ ॥

ಶ್ರೀಮದ್ಭಾಗವತಂ ಪುಣ್ಯಂ ದೃಷ್ಟ್ವಾ ನೋತ್ತಿಷ್ಠತೇ ಹಿ ಯಃ ।
ಸಾಂವತ್ಸರಂ ತಸ್ಯ ಪುಣ್ಯಂ ವಿಲಯಂ ಯಾತಿ ಪುತ್ರಕ
॥ ೨೫ ॥

ಶ್ರೀಮದ್ಭಾಗವತಂ ದೃಷ್ಟ್ವಾ ಪ್ರತ್ಯುತ್ಥಾನಾಭಿವಾದನೈಃ ।
ಸಮ್ಮಾನಯೇತ ತಂ ದೃಷ್ಟ್ವಾ ಭವೇತ್ ಪ್ರೀತಿರ್ಮಮಾತುಲಾ
॥ ೨೬ ॥

ದೃಷ್ಟ್ವಾ ಭಾಗವತಂ ದೂರಾತ್ ಪ್ರಕ್ರಮೇತ್ಸಮ್ಮುಖಂ ಹಿ ಯಃ ।
ಪದೇ ಪದೇಽಶ್ವಮೇಧಸ್ಯ ಫಲಂ ಪ್ರಾಪ್ನೋತ್ಯಸಂಶಯಮ್
॥ ೨೭ ॥

ಉತ್ಥಾಯ ಪ್ರಣಮೇದ್ ಯೋ ವೈ ಶ್ರೀಮದ್ಭಾಗವತಂ ನರಃ ।
ಧನಪುತ್ರಾಂಸ್ತಥಾ ದಾರಾನ್ ಭಕ್ತಿಂ ಚ ಪ್ರದದಾಮ್ಯಹಮ್
॥ ೨೮ ॥

ಮಹಾರಾಜೋಪಚಾರೈಸ್ತು ಶ್ರೀಮದ್ಭಾಗವತಂ ಸುತ ।
ಶೃಣ್ವಂತಿ ಯೇ ನರಾ ಭಕ್ತ್ಯಾ ತೇಷಾಂ ವಶ್ಯೋ ಭವಾಮ್ಯಹಮ್
॥ ೨೯ ॥

ಮಮೋತ್ಸವೇಷು ಸರ್ವೇಷು ಶ್ರೀಮದ್ಭಾಗವತಂ ಪರಮ್ ।
ಶೃಣ್ವಂತಿ ಯೇ ನರಾ ಭಕ್ತ್ಯಾ ಮಮ ಪ್ರೀತ್ಯೈ ಚ ಸುವ್ರತ
॥ ೩೦ ॥

ವಸ್ತ್ರಾಲಂಕರಣೈಃ ಪುಷ್ಪೈಃ ಧೂಪದೀಪೋಪಹಾರಕೈಃ ।
ವಶೀಕೃತೋ ಹ್ಯಹಂ ತೈಶ್ಚ ಸತ್‌ಸ್ತ್ರಿಯಾ ಸತ್ಪತಿರ್ಯಥಾ
॥ ೩೧ ॥

ಚತುರ್ಮುಖನೇ ! ಕರುವಿನಲ್ಲಿ ವಾತ್ಸಲ್ಯವುಳ್ಳ ಹಸುವು ಕರು ಹೋದಲ್ಲೆಲ್ಲ ಹೋಗುವುದಿಲ್ಲವೇ ? ಹಾಗೆಯೇ ನಾನು ಶ್ರೀಮದ್ಭಾಗವತ ಕಥೆಯು ಎಲ್ಲಿ ನಡೆಯುತ್ತದೆಯೋ ಅಲ್ಲಿಗೆಲ್ಲಾ ಹೋಗುವೆನು. ॥ ೨೩ ॥

ನನ್ನ ಕಥೆಯನ್ನು ಹೇಳುವವನನ್ನು, ಅದನ್ನು ಕೇಳುವುದರಲ್ಲೇ ಸದಾ ನಿರತನಾಗಿರುವವನನ್ನು ಮತ್ತು ನನ್ನ ಕಥೆಯಿಂದ ಮನಸ್ಸಿನಲ್ಲಿ ಸಂತೋಷ ಪಟ್ಟುಕೊಳ್ಳುವವನನ್ನು ನಾನು ಎಂದಿಗೂ ತ್ಯಜಿಸುವುದಿಲ್ಲ. ॥ ೨೪ ॥ ಪ್ರಿಯಪುತ್ರನೇ ಪರಮ ಪುಣ್ಯಕರವಾದ ಶ್ರೀಮದ್ಭಾಗವತವನ್ನು ನೋಡಿದಾಗ ಯಾವನು ಭಕ್ತಿ-ಗೌರವಗಳಿಂದ ತನ್ನ ಆಸನದಿಂದ ಎದ್ದು ನಿಲ್ಲುವುದಿಲ್ಲವೋ-ಅವನು ಒಂದು ವರ್ಷ ಪೂರ್ತಿ ಮಾಡಿದ ಪುಣ್ಯಫಲಗಳನ್ನು ಕಳೆದುಕೊಳ್ಳುವನು॥ ೨೫ ॥

ಶ್ರೀಮದ್ಭಾಗವನ್ನು ಕಂಡೊಡನೆಯೇ ಎದುರುಗೊಂಡು ಎದ್ದು ನಿಂತು ನಮಸ್ಕಾರಗಳಿಂದ ಅದನ್ನು ಗೌರವಿಸುವವರನ್ನು ಕಂಡರೆ ನನಗೆ ಎಣೆಯಿಲ್ಲದ ಪ್ರಸನ್ನತೆ ಉಂಟಾಗುತ್ತದೆ ॥ ೨೬ ॥ ಶ್ರೀಮದ್ಭಾಗವತವನ್ನು ದೂರ ದಿಂದ ಕಂಡೊಡನೆಯೇ ಯಾವನು ನಗುಮುಖದಿಂದ ಅದರ ಹತ್ತಿರ ಹೋಗುವನೋ – ಅವನಿಡುವ ಪ್ರತಿ ಹೆಜ್ಜೆಗೂ ಅಶ್ವಮೇಧ ಯಜ್ಞ ಮಾಡಿದ ಫಲವು ಲಭಿಸುವುದು. ಇದು ನಿಶ್ಚಿತ; ಸಂದೇಹವೇ ಬೇಡ. ಎದ್ದು ನಿಂತು ಶ್ರೀಮದ್ಭಾಗವತಕ್ಕೆ ನಮಸ್ಕಾರ ಮಾಡುವ ಮನುಷ್ಯನಿಗೆ ನಾನು ಹಣ–ಕಾಸು, ಮಡದಿ–ಮಕ್ಕಳನ್ನೂ ಮತ್ತು ಭಕ್ತಿಯನ್ನೂ ಅನುಗ್ರಹಿಸುವೆನು. ॥ ೨೭–೨೮ ॥ ಎಲೈ ಪುತ್ರನೇ ! ಯಾವ ಮನುಷ್ಯರು ಮಹಾರಾಜನಿಗೆ ಉಚಿತವಾದ ಉಪಚಾರಗಳೊಡನೆ ಭಕ್ತಿಯಿಂದ ಕೂಡಿ ಶ್ರೀಮದ್ಭಾಗವತವನ್ನು ಕೇಳುತ್ತಾರೋ ಅವರಿಗೆ ನಾನು ವಶನಾಗಿ ಬಿಡುವೆನು. ॥ ೨೯ ॥

ಎಲೈ ಉತ್ತಮವ್ರತಿಯೇ ! ಯಾರು ನನ್ನ ಎಲ್ಲ ಉತ್ಸವಗಳಲ್ಲೂ ನನ್ನ ಪ್ರೀತಿಗೋಸ್ಕರ ವಸ್ತ್ರ, ಅಲಂಕಾರ, ಪುಷ್ಪ, ಧೂಪ, ದೀಪ-ಇತ್ಯಾದಿ ಉಪಹಾರಗಳನ್ನು ಸಮರ್ಪಿಸುತ್ತಾ ಪರಮೋತ್ತಮವಾದ ಶ್ರೀಮದ್ಭಾಗವತವನ್ನು ಭಕ್ತಿಪೂರ್ವಕವಾಗಿ ಶ್ರವಣ ಮಾಡುತ್ತಾರೋ, ಅವರು ಸಾಧ್ವಿಯಾದ ಹೆಂಗುಸು ತನ್ನ ಸಾಧುವಾದ ಪತಿಯನ್ನು ವಶಪಡಿಸಿಕೊಳ್ಳುವಂತೆ ನನ್ನನ್ನು ವಶಪಡಿಸಿ ಕೊಂಡು ಬಿಡುತ್ತಾರೆ. ॥ ೩೦ – ೩೧ ॥ *

* ಸ್ಕಂದಪುರಾಣ, ವಿಷ್ಣುಖಂಡ, ಮಾರ್ಗಶೀರ್ಷ ಮಾಹಾತ್ಮ್ಯ, ಅ. ೧೬.

॥ ಓಂ ನಮೋ ಭಗವತೇ ವಾಸುದೇವಾಯ ॥

ಶ್ರೀಮದ್ಭಾಗವತಮಹಾಪುರಾಣಮ್

ನವಮಃ ಸ್ಕಂಧಃ

ಮೊದಲನೆಯ ಅಧ್ಯಾಯ

ವೈವಸ್ವತ ಮನುವಿನ ಪುತ್ರ ಸುದ್ಯುಮ್ನರಾಜನ ಕಥೆ

ರಾಜೋವಾಚ

ಮನ್ವಂತರಾಣಿ ಸರ್ವಾಣಿ ತ್ವಯೋಕ್ತಾನಿ ಶ್ರುತಾನಿ ಮೇ ।
ವೀರ್ಯಾಣ್ಯನಂತವೀರ್ಯಸ್ಯ ಹರೇಸ್ತತ್ರ ಕೃತಾನಿ ಚ ॥ ೧ ॥

ಯೋಽಸೌ ಸತ್ಯವ್ರತೋ ನಾಮ ರಾಜರ್ಷಿರ್ದ್ರವಿಡೇಶ್ವರಃ ।
ಜ್ಞಾನಂ ಯೋಽತೀತಕಲ್ಪಾಂತೇ ಲೇಭೇ ಪುರುಷಸೇವಯಾ ॥ ೨ ॥

ಸ ವೈ ವಿವಸ್ವತಃ ಪುತ್ರೋ ಮನುರಾಸೀದಿತಿ ಶ್ರುತಮ್ ।
ತ್ವತ್ತಸ್ತಸ್ಯ ಸುತಾಃ ಪ್ರೋಕ್ತಾ ಇಕ್ಷ್ವಾಕುಪ್ರಮುಖಾ ನೃಪಾಃ ॥ ೩ ॥

ತೇಷಾಂ ವಂಶಂ ಪೃಥಗ್ಬ್ರಹ್ಮನ್ವಂಶ್ಯಾನುಚರಿತಾನಿ ಚ ।
ಕೀರ್ತಯಸ್ವ ಮಹಾಭಾಗ ನಿತ್ಯಂ ಶುಶ್ರೂಷತಾಂ ಹಿ ನಃ ॥ ೪ ॥

ಯೇ ಭೂತಾ ಯೇ ಭವಿಷ್ಯಾಶ್ಚ ಭವಂತ್ಯದ್ಯತನಾಶ್ಚ ಯೇ ।
ತೇಷಾಂ ನಃ ಪುಣ್ಯಕೀರ್ತೀನಾಂ ಸರ್ವೇಷಾಂ ವದ ವಿಕ್ರಮಾನ್ ॥ ೫ ॥

ಸೂತ ಉವಾಚ

ಏವಂ ಪರೀಕ್ಷಿತಾ ರಾಜ್ಞಾ ಸದಸಿ ಬ್ರಹ್ಮವಾದಿನಾಮ್ ।
ಪೃಷ್ಟಃ ಪ್ರೋವಾಚ ಭಗವಾಞ್ಛುಕಃ ಪರಮಧರ್ಮವಿತ್ ॥ ೬ ॥

ಶ್ರೀಶುಕ ಉವಾಚ

ಶ್ರೂಯತಾಂ ಮಾನವೋ ವಂಶಃ ಪ್ರಾಚುರ್ಯೇಣ ಪರಂತಪ ।
ನ ಶಕ್ಯತೇ ವಿಸ್ತರತೋ ವಕ್ತುಂ ವರ್ಷಶತೈರಪಿ ॥ ೭ ॥

ಪರಾವರೇಷಾಂ ಭೂತಾನಾಮಾತ್ಮಾ ಯಃ ಪುರುಷಃ ಪರಃ ।
ಸ ಏವಾಸೀದಿದಂ ವಿಶ್ವಂ ಕಲ್ಪಾಂತೇಽನ್ಯನ್ನ ಕಿಂಚನ ॥ ೮ ॥

ತಸ್ಯ ನಾಭೇಃ ಸಮಭವತ್ಪದ್ಮಕೋಶೋ ಹಿರಣ್ಮಯಃ ।
ತಸ್ಮಿಞ್ಜಜ್ಞೇ ಮಹಾರಾಜ ಸ್ವಯಂಭೂಶ್ಚತುರಾನನಃ ॥ ೯ ॥

ಪರೀಕ್ಷಿತ ಮಹಾರಾಜನು ಕೇಳಿದನು – ಪೂಜ್ಯರೇ! ತಾವು ಇದುವರೆಗೆ ವರ್ಣಿಸಿದ ಎಲ್ಲ ಮನ್ವಂತರಗಳ ಮತ್ತು ಅವುಗಳಲ್ಲಿ ನಡೆದ ಅನಂತವೀರ್ಯನಾದ, ಅಪ್ರಮೇಯನಾದ ಶ್ರೀಹರಿಯ ಐಶ್ವರ್ಯಪೂರ್ಣ ಚರಿತ್ರೆಗಳನ್ನು ನಾನು ಶ್ರವಣಿಸಿ ಧನ್ಯನಾಗಿರುವೆನು. ॥ ೧ ॥ ಹಿಂದಿನ ಕಲ್ಪಾಂತ್ಯದಲ್ಲಿ ದ್ರವಿಡದೇಶದ ಅರಸನಾದ ರಾಜರ್ಷಿ ಸತ್ಯವ್ರತನು ಭಗವಂತನ ಸೇವೆಯಿಂದ ಜ್ಞಾನಪಡೆದು, ಅವನೇ ಈ ಮನ್ವಂತರದಲ್ಲಿ ವೈವಸ್ವತ ಮನುವಾದನು ಎಂದು ನೀವು ಹೇಳಿದಿರಿ. ಹಾಗೆಯೇ ಅವನ ಇಕ್ಷ್ವಾಕು ಮೊದಲಾದ ರಾಜಪುತ್ರರ ಪರಿಚಯವನ್ನು ವರ್ಣಿಸಿದಿರಿ. ॥ ೨-೩ ॥ ಬ್ರಾಹ್ಮಣಶ್ರೇಷ್ಠರೇ! ಈಗ ದಯಮಾಡಿ ಅವರ ವಂಶ ಮತ್ತು ವಂಶದಲ್ಲಿ ನಡೆದ ಬೇರೆ-ಬೇರೆ ಚರಿತ್ರೆಗಳನ್ನೂ ತಾವು ವರ್ಣಿಸಿರಿ. ಮಹಾನುಭಾವರೇ! ನಮ್ಮ ಹೃದಯದಲ್ಲಿ ಸದಾಕಾಲವೂ ಕಥೆಯನ್ನು ಕೇಳುವ ಉತ್ಸುಕತೆ ಇದೆ. ॥ ೪ ॥ ವೈವಸ್ವತ ಮನುವಿನ ವಂಶದಲ್ಲಿ ಇದುವರೆಗೆ ಎಷ್ಟುಮಂದಿ ರಾಜರು ಆಗಿ ಹೋದರು? ಈಗ ಯಾವ ರಾಜರು ಆಳುತ್ತಿದ್ದಾರೆ? ಮುಂದೆ ಯಾರು-ಯಾರು ಆಗುವರು? ಆ ಎಲ್ಲ ಪುಣ್ಯಕೀರ್ತಿಗಳಾದ ಪುರುಷರ ಪರಾಕ್ರಮವನ್ನು ವರ್ಣಿಸಿರಿ. ॥ ೫ ॥

ಸೂತಪುರಾಣಿಕರು ಹೇಳುತ್ತಾರೆ – ಶೌನಕಾದಿ ಋಷಿಗಳಿರಾ! ಪರೀಕ್ಷಿದ್ರಾಜನು ಬ್ರಹ್ಮವಾದಿಗಳ ಸಭೆಯಲ್ಲಿ ಹೀಗೆ ಪ್ರಶ್ನಿಸಿದಾಗ ಧರ್ಮದ ಪರಮ ಮರ್ಮಜ್ಞರಾದ, ಮಹಾತ್ಮರಾದ ಶ್ರೀಶುಕಮಹಾಮುನಿಗಳು ಇಂತು ಹೇಳತೊಡಗಿದರು. ॥ ೬ ॥

ಶ್ರೀಶುಕಮುನಿಗಳು ಹೇಳುತ್ತಾರೆ – ಎಲೈ ಪರೀಕ್ಷಿತನೇ! ಮನುವಂಶದ ವರ್ಣನೆಯನ್ನು ಸಂಕ್ಷೇಪವಾಗಿ ಹೇಳುವೆನು ಕೇಳು. ವಿಸ್ತಾರವಾಗಿ ವರ್ಣಿಸಲು ನೂರಾರು ವರ್ಷಗಳೂ ಸಾಕಾಗಲಾರವು. ॥ ೭ ॥ ಪರಮಪುರುಷ ಪರಮಾತ್ಮನು ಸ್ಥೂಲ- ಸೂಕ್ಷ್ಮ ಪ್ರಾಣಿಗಳೆಲ್ಲರ ಆತ್ಮನಾಗಿರುವನು. ಪ್ರಳಯಕಾಲದಲ್ಲಿ ಕೇವಲ ಅವನೊಬ್ಬನೇ ಇದ್ದನು. ಈ ವಿಶ್ವವು ಹಾಗೂ ಬೇರೆ ಏನೂ ಇರಲಿಲ್ಲ. ॥ ೮ ॥ ಮಹಾರಾಜಾ! ಅಂತಹ ಪರಮಪುರುಷನ ನಾಭಿಯಲ್ಲಿ ಸುವರ್ಣಮಯವಾದ ಕಮಲವೊಂದು ಪ್ರಕಟವಾಯಿತು. ಅದರಲ್ಲೇ ಚತುರ್ಮುಖರಾದ ಬ್ರಹ್ಮದೇವರು ಆವಿರ್ಭವಿಸಿದರು. ॥ ೯ ॥

ಮರೀಚಿರ್ಮನಸಸ್ತಸ್ಯ ಜಜ್ಞೇ ತಸ್ಯಾಪಿ ಕಶ್ಯಪಃ ।
ದಾಕ್ಷಾಯಣ್ಯಾಂ ತತೋಽದಿತ್ಯಾಂ ವಿವಸ್ವಾನಭವತ್ಸುತಃ ॥ ೧೦ ॥

ತತೋ ಮನುಃ ಶ್ರಾದ್ಧದೇವಃ ಸಂಜ್ಞಾಯಾಮಾಸ ಭಾರತ ।
ಶ್ರದ್ಧಾಯಾಂ ಜನಯಾಮಾಸ ದಶ ಪುತ್ರಾನ್ಸ ಆತ್ಮವಾನ್ ॥ ೧೧ ॥

ಇಕ್ಷ್ವಾಕುನೃಗಶರ್ಯಾತಿದಿಷ್ಟಧೃಷ್ಟಕರೂಷಕಾನ್ ।
ನರಿಷ್ಯಂತಂ ಪೃಷಧ್ರಂ ಚ ನಭಗಂ ಚ ಕವಿಂ ವಿಭುಃ ॥ ೧೨ ॥

ಅಪ್ರಜಸ್ಯ ಮನೋಃ ಪೂರ್ವಂ ವಸಿಷ್ಠೋ ಭಗವಾನ್ಕಿಲ ।
ಮಿತ್ರಾವರುಣಯೋರಿಷ್ಟಿಂ ಪ್ರಜಾರ್ಥಮಕರೋತ್ಪ್ರಭುಃ ॥ ೧೩ ॥

ತತ್ರ ಶ್ರದ್ಧಾ ಮನೋಃ ಪತ್ನೀ ಹೋತಾರಂ ಸಮಯಾಚತ ।
ದುಹಿತ್ರರ್ಥಮುಪಾಗಮ್ಯ ಪ್ರಣಿಪತ್ಯ ಪಯೋವ್ರತಾ ॥ ೧೪ ॥

ಪ್ರೇಷಿತೋಽಧ್ವರ್ಯುಣಾ ಹೋತಾ ಧ್ಯಾಯಂಸ್ತತ್ಸುಸಮಾಹಿತಃ ।
ಹವಿಷಿ ವ್ಯಚರತ್ತೇನ ವಷಟ್ಕಾರಂ ಗೃಣನ್‌ದ್ವಿಜಃ ॥ ೧೫ ॥

ಹೋತುಸ್ತದ್‌ವ್ಯಭಿಚಾರೇಣ ಕನ್ಯೇಲಾ ನಾಮ ಸಾಭವತ್ ।
ತಾಂ ವಿಲೋಕ್ಯ ಮನುಃ ಪ್ರಾಹ ನಾತಿಹೃಷ್ಟಮನಾ ಗುರುಮ್ ॥ ೧೬ ॥

ಭಗವನ್ ಕಿಮಿದಂ ಜಾತಂ ಕರ್ಮ ವೋ ಬ್ರಹ್ಮವಾದಿನಾಮ್ ।
ವಿಪರ್ಯಯಮಹೋ ಕಷ್ಟಂ ಮೈವಂ ಸ್ಯಾದ್ಬ್ರಹ್ಮವಿಕ್ರಿಯಾ ॥ ೧೭ ॥

ಯೂಯಂ ಮಂತ್ರವಿದೋ ಯುಕ್ತಾಸ್ತಪಸಾ ದಗ್ಧಕಿಲ್ಬಿಷಾಃ ।
ಕುತಃ ಸಂಕಲ್ಪವೈಷಮ್ಯಮನೃತಂ ವಿಬುಧೇಷ್ವಿವ ॥ ೧೮ ॥

ತನ್ನಿಶಮ್ಯ ವಚಸ್ತಸ್ಯ ಭಗವಾನ್ ಪ್ರಪಿತಾಮಹಃ ।
ಹೋತುರ್ವ್ಯತಿಕ್ರಮಂ ಜ್ಞಾತ್ವಾ ಬಭಾಷೇ ರವಿನಂದನಮ್ ॥ ೧೯ ॥

ಏತತ್ಸಂಕಲ್ಪವೈಷಮ್ಯಂ ಹೋತುಸ್ತೇ ವ್ಯಭಿಚಾರತಃ ।
ತಥಾಪಿ ಸಾಧಯಿಷ್ಯೇ ತೇ ಸುಪ್ರಜಾಸ್ತ್ವಂ ಸ್ವತೇಜಸಾ ॥ ೨೦ ॥

ಬ್ರಹ್ಮದೇವರ ಮನಸ್ಸಿನಿಂದ ಮರೀಚಿ ಮತ್ತು ಮರೀಚಿಯ ಪುತ್ರ ಕಶ್ಯಪರು ಹುಟ್ಟಿದರು. ಅವರ ಧರ್ಮಪತ್ನೀ ದಕ್ಷಕುಮಾರೀ ಅದಿತಿಯಲ್ಲಿ ವಿವಸ್ವಂತನು (ಸೂರ್ಯನು) ಜನ್ಮತಾಳಿದನು. ॥ ೧೦ ॥ ವಿವಸ್ವಂತನ ಪತ್ನಿಯಾದ ಸಂಜ್ಞೆ ಎಂಬುವಳಲ್ಲಿ ಶ್ರಾದ್ಧದೇವ ಮನುವು ಹುಟ್ಟಿದನು. ಪರೀಕ್ಷಿತನೇ! ಆತ್ಮಜ್ಞಾನಿಯಾದ ಶ್ರಾದ್ಧದೇವನ ಪತ್ನಿಯಾದ ಶ್ರದ್ಧೆಯಲ್ಲಿ – ಇಕ್ಷ್ವಾಕು, ನೃಗ, ಶರ್ಯಾತಿ, ದಿಷ್ಟ, ಧೃಷ್ಟ, ಕರೂಷ, ನರಿಷ್ಯಂತ, ಪೃಷಧ್ರ, ನಭಗ ಮತ್ತು ಕವಿ ಎಂಬ ಹತ್ತು ಪುತ್ರರು ಉದಿಸಿದರು. ॥ ೧೧-೧೨ ॥

ವೈವಸ್ವತ ಮನುವಿಗೆ ಮೊದಲು ಮಕ್ಕಳಿರಲಿಲ್ಲ. ಆ ಸಮಯದಲ್ಲಿ ಸರ್ವಸಮರ್ಥರಾದ ಪೂಜ್ಯರಾದ ವಸಿಷ್ಠರು ಸಂತಾನಪ್ರಾಪ್ತಿಗಾಗಿ ವೈವಸ್ವತಮನುವಿನಿಂದ ಮಿತ್ರಾವರುಣೇಷ್ಟಿಯನ್ನು ಮಾಡಿಸಿದರು. ॥ ೧೩ ॥ ಯಜ್ಞಾನುಷ್ಠಾನದಲ್ಲಿ ಪಯೋವ್ರತಳಾಗಿದ್ದ (ಕೇವಲ ಹಾಲನ್ನು ಮಾತ್ರ ಕುಡಿಯುತ್ತಿದ್ದ) ವೈವಸ್ವತ ಮನುವಿನ ಧರ್ಮಪತ್ನಿಯಾದ ಶ್ರದ್ಧಾದೇವಿಯು ಹೋತೃವಿನ ಬಳಿಗೆ ಹೋಗಿ ವಿನಯಪೂರ್ವಕವಾಗಿ ನಮಸ್ಕರಿಸಿ, ತನಗೆ ಹೆಣ್ಣುಶಿಶುವು ಹುಟ್ಟುವಂತೆ ಬೇಡಿಕೊಂಡಳು. ॥ ೧೪ ॥ ಆಗ ಅಧ್ವರ್ಯುವಿನ ಪ್ರೇರಣೆಯಂತೆ ಯಜ್ಞಕುಂಡದಲ್ಲಿ ಆಹುತಿಯನ್ನು ಹಾಕಬೇಕಾದ ಸಮಯದಲ್ಲಿ ಶ್ರದ್ಧಾದೇವಿಯ ಪ್ರಾರ್ಥನೆಯನ್ನು ಸ್ಮರಿಸಿ ಹೆಣ್ಣುಶಿಶುವಾಗಬೇಕೆಂದು ಸಂಕಲ್ಪಿಸಿ ವಷಟ್ಕಾರವನ್ನು ಹೇಳುತ್ತಾ ಯಜ್ಞೇಶ್ವರನಲ್ಲಿ ಹವಿಸ್ಸನ್ನು ಹೋಮಮಾಡಿದನು. ॥ ೧೫ ॥ ಹೋತೃವು ಹೀಗೆ ವಿಪರೀತ ಕರ್ಮಾಚರಿಸಿದಾಗ ಯಜ್ಞದ ಫಲವಾಗಿ ಪುತ್ರನ ಸ್ಥಾನದಲ್ಲಿ ಇಲಾ ಎಂಬ ಹೆಸರಿನ ಕನ್ಯೆಯು ಹುಟ್ಟಿದಳು. ಅದನ್ನು ನೋಡಿ ವೈವಸ್ವತ ಮನುವಿಗೆ ಅಷ್ಟೊಂದು ಸಂತೋಷವಾಗಲಿಲ್ಲ. ಅವನು ತಮ್ಮ ಗುರುಗಳಾದ ವಸಿಷ್ಠರಲ್ಲಿ ಹೇಳಿದನು – ॥ ೧೬ ॥ ಪೂಜ್ಯರೇ! ನೀವಾದರೋ ಬ್ರಹ್ಮವಾದಿಗಳಾಗಿದ್ದೀರಿ. ನಿಮ್ಮ ಕರ್ಮವು ಈ ಪ್ರಕಾರ ವಿಪರೀತ ಫಲ ಕೊಡುವಂತಹುದು ಹೇಗಾಯಿತು? ಕಷ್ಟ! ಕಷ್ಟ! ಇದು ಬಹಳ ದುಃಖದ ವಿಚಾರವಾಗಿದೆ. ವೈದಿಕ ಕರ್ಮದ ಫಲವಾದರೋ ಹೀಗೆ ವಿಪರೀತ ಎಂದಿಗೂ ಆಗಬಾರದು. ॥ ೧೭ ॥ ನಿಮ್ಮಗಳ ಮಂತ್ರಜ್ಞಾನವಾದರೋ ಪರಿಪೂರ್ಣವಾಗಿದೆ. ಇದಲ್ಲದೆ ತಾವು ಜಿತೇಂದ್ರಿಯರೂ ಆಗಿರುವಿರಿ. ತಪಸ್ಸಿನಿಂದಾಗಿ ನಿಷ್ಪಾಪರೂ ಆಗಿಬಿಟ್ಟಿದ್ದೀರಿ. ದೇವತೆಗಳಲ್ಲಿ ಸುಳ್ಳಿರುವಂತೆ (ದೇವತೆಗಳು ಕೊಟ್ಟ ವರವು ಸುಳ್ಳಾದಂತೆ) ನಿಮ್ಮ ಸಂಕಲ್ಪಕ್ಕೆ ವಿರುದ್ಧವಾದ ಫಲ ಹೇಗಾಯಿತು? ॥ ೧೮ ॥

ಪರೀಕ್ಷಿತನೇ! ನಮ್ಮ ಮುತ್ತಾತಂದಿರಾದ ಪೂಜ್ಯರಾದ ವಸಿಷ್ಠರು ರಾಜನ ಮಾತನ್ನು ಕೇಳಿ, ಹೋತೃವು ವಿಪರೀತ ಸಂಕಲ್ಪವನ್ನು ಮಾಡಿದ್ದನು ಎಂದು ತಿಳಿದುಕೊಂಡರು. ಇದರಿಂದ ಅವರು ವೈವಸ್ವತ ಮನುವಿಗೆ ಹೇಳಿದರು – ॥ ೧೯ ॥ ಮಹಾರಾಜನೇ! ನಿನ್ನ ಹೋತೃವಿನ ವಿಪರೀತ ಸಂಕಲ್ಪದಿಂದಾಗಿ ನಮ್ಮ ಸಂಕಲ್ಪವು ಸರಿಯಾಗಿ ನೆರವೇರಲಿಲ್ಲ. ಹೀಗಿದ್ದರೂ ನನ್ನ ತಪಃಪ್ರಭಾವದಿಂದ ನಾನು ನಿನಗೆ ಶ್ರೇಷ್ಠಪುತ್ರನನ್ನು ಕರುಣಿಸುತ್ತೇನೆ. ॥ ೨೦ ॥

ಏವಂ ವ್ಯವಸಿತೋ ರಾಜನ್ ಭಗವಾನ್ಸ ಮಹಾಯಶಾಃ ।
ಅಸ್ತೌಷೀದಾದಿಪುರುಷಮಿಲಾಯಾಃ ಪುಂಸ್ತ್ವಕಾಮ್ಯಯಾ ॥ ೨೧ ॥

ತಸ್ಮೈ ಕಾಮವರಂ ತುಷ್ಟೋ ಭಗವಾನ್ಹರಿರೀಶ್ವರಃ ।
ದದಾವಿಲಾಭವತ್ತೇನ ಸುದ್ಯುಮ್ನಃ ಪುರುಷರ್ಷಭಃ ॥ ೨೨ ॥

ಸ ಏಕದಾ ಮಹಾರಾಜ ವಿಚರನ್ಮೃಗಯಾಂ ವನೇ ।
ವೃತಃ ಕತಿಪಯಾಮಾತ್ಯೈರಶ್ವಮಾರುಹ್ಯ ಸೈಂಧವಮ್ ॥ ೨೩ ॥

ಪ್ರಗೃಹ್ಯ ರುಚಿರಂ ಚಾಪಂ ಶರಾಂಶ್ಚ ಪರಮಾದ್ಭುತಾನ್ ।
ದಂಶಿತೋಽನುಮೃಗಂ ವೀರೋ ಜಗಾಮ ದಿಶಮುತ್ತರಾಮ್ ॥ ೨೪ ॥

ಸ ಕುಮಾರೋ ವನಂ ಮೇರೋರಧಸ್ತಾತ್ಪ್ರವಿವೇಶ ಹ ।
ಯತ್ರಾಸ್ತೇ ಭಗವಾಞ್ಛರ್ವೋ ರಮಮಾಣಃ ಸಹೋಮಯಾ ॥ ೨೫ ॥

ತಸ್ಮಿನ್ಪ್ರವಿಷ್ಟ ಏವಾಸೌ ಸುದ್ಯುಮ್ನಃ ಪರವೀರಹಾ ।
ಅಪಶ್ಯತ್ ಸ್ತ್ರಿಯಮಾತ್ಮಾನಮಶ್ವಂ ಚ ವಡವಾಂ ನೃಪ ॥ ೨೬ ॥

ತಥಾ ತದನುಗಾಃ ಸರ್ವೇ ಆತ್ಮಲಿಂಗವಿಪರ್ಯಯಮ್ ।
ದೃಷ್ಟ್ವಾ ವಿಮನಸೋಽಭೂವನ್ವೀಕ್ಷಮಾಣಾಃ ಪರಸ್ಪರಮ್ ॥ ೨೭ ॥

ರಾಜೋವಾಚ

ಕಥಮೇವಂಗುಣೋ ದೇಶಃ ಕೇನ ವಾ ಭಗವನ್ಕೃತಃ ।
ಪ್ರಶ್ನಮೇನಂ ಸಮಾಚಕ್ಷ್ವ ಪರಂ ಕೌತೂಹಲಂ ಹಿ ನಃ ॥ ೨೮ ॥

ಶ್ರೀಶುಕ ಉವಾಚ

ಏಕದಾ ಗಿರಿಶಂ ದ್ರಷ್ಟುಮೃಷಯಸ್ತತ್ರ ಸುವ್ರತಾಃ ।
ದಿಶೋ ವಿತಿಮಿರಾಭಾಸಾಃ ಕುರ್ವಂತಃ ಸಮುಪಾಗಮನ್ ॥ ೨೯ ॥

ತಾನ್ವಿಲೋಕ್ಯಾಂಬಿಕಾ ದೇವೀ ವಿವಾಸಾ ವ್ರೀಡಿತಾ ಭೃಶಮ್ ।
ಭರ್ತುರಂಕಾತ್ಸಮುತ್ಥಾಯ ನೀವೀಮಾಶ್ವಥ ಪರ್ಯಧಾತ್ ॥ ೩೦ ॥

ಋಷಯೋಽಪಿ ತಯೋರ್ವೀಕ್ಷ್ಯ ಪ್ರಸಂಗಂ ರಮಮಾಣಯೋಃ ।
ನಿವೃತ್ತಾಃ ಪ್ರಯಯುಸ್ತಸ್ಮಾನ್ನರನಾರಾಯಣಾಶ್ರಮಮ್ ॥ ೩೧ ॥

ತದಿದಂ ಭಗವಾನಾಹ ಪ್ರಿಯಾಯಾಃ ಪ್ರಿಯಕಾಮ್ಯಯಾ ।
ಸ್ಥಾನಂ ಯಃ ಪ್ರವಿಶೇದೇತತ್ಸ ವೈ ಯೋಷಿದ್ಭವೇದಿತಿ ॥ ೩೨ ॥

ಪರೀಕ್ಷಿದ್ರಾಜನೇ! ಪರಮ ಯಶಸ್ವಿಗಳಾದ ಮಹಾತ್ಮಾ ವಸಿಷ್ಠರು ಮನುವಿಗೆ ಹೀಗೆ ಆಶ್ವಾಸನೆಯನ್ನಿತ್ತು ಇಲಾ ಎಂಬ ಕನ್ಯೆಯನ್ನು ಪುರುಷನನ್ನಾಗಿಸಲು ಪುರುಷೋತ್ತಮನಾದ ಭಗವಾನ್ ಶ್ರೀಹರಿಯನ್ನು ಸ್ತುತಿಮಾಡಿದನು. ॥ ೨೧ ॥ ಸರ್ವ ಶಕ್ತಿವಂತನಾದ ಭಗವಾನ್ ಶ್ರೀಹರಿಯು ಸಂತುಷ್ಟನಾಗಿ ಅವರಿಗೆ ಬೇಡಿದ ವರವನ್ನು ದಯಪಾಲಿಸಿದನು. ವರಪ್ರಭಾವದಿಂದ ಆ ಇಲಾ ಕನ್ಯೆಯೇ ಪುರುಷತ್ವವನ್ನು ಪಡೆದು ಸುದ್ಯುಮ್ನನೆಂಬ ಹೆಸರಿನಿಂದ ಪ್ರಸಿದ್ಧನಾದನು. ॥ ೨೨ ॥

ರಾಜೇಂದ್ರಾ! ಒಮ್ಮೆ ಸುದ್ಯುಮ್ನರಾಜನು ಸಿಂಧುದೇಶದ ಕುದುರೆಯನ್ನೇರಿ ಕೆಲವು ಮಂತ್ರಿಗಳೊಂದಿಗೆ ಬೇಟೆಯಾಡಲು ಕಾಡಿಗೆ ಹೋದನು. ॥ ೨೩ ॥ ಸುಂದರವಾದ ಧನುಸ್ಸನ್ನೂ, ಪರಮಾದ್ಭುತವಾದ ಬಾಣಗಳನ್ನೂ ಹಿಡಿದುಕೊಂಡು, ಕವಚವನ್ನೂ ಧರಿಸಿದ್ದ ವೀರನಾದ ಸುದ್ಯುಮ್ನನು ಜಿಂಕೆಯೊಂದನ್ನು ಹಿಂಬಾಲಿಸುತ್ತಾ ಉತ್ತರದಿಕ್ಕಿನ ಕಡೆಗೆ ಬಹುದೂರ ಹೋದನು. ॥ ೨೪ ॥ ಕೊನೆಗೆ ಸುದ್ಯುಮ್ನನು ಮೇರುಪರ್ವತದ ತಪ್ಪಲಿನ ಒಂದು ವನವನ್ನು ಪ್ರವೇಶಿಸಿದನು. ಆ ವನದಲ್ಲಿ ಭಗವಂತನಾದ ಶಂಕರನು ಪಾರ್ವತಿಯೊಂದಿಗೆ ವಿಹರಿಸುತ್ತಿದ್ದನು. ॥ ೨೫ ॥ ಆ ವನವನ್ನು ಪ್ರವೇಶಿಸುತ್ತಲೇ ಪರಮವೀರನಾದ ಸುದ್ಯುಮ್ನನು ತಾನು ಹೆಣ್ಣಾಗಿರುವುದನ್ನು ಕಂಡುಕೊಂಡನು. ಅವನ ಕುದುರೆಯೂ ಹೆಣ್ಣುಕುದುರೆಯಾಗಿ ಹೋಗಿತ್ತು. ॥ ೨೬ ॥ ಪರೀಕ್ಷಿತನೇ! ಜೊತೆಗೆ ಅವನ ಅನುಚರರೆಲ್ಲರೂ ತಾವು ಹೆಣ್ಣಾಗಿ ಹೋಗಿರುವುದನ್ನು ಕಂಡರು. ಅವರೆಲ್ಲರೂ ಪರಸ್ಪರ ಮುಖಗಳನ್ನೂ ನೋಡಿಕೊಳ್ಳುತ್ತಾ ಅವರೆಲ್ಲರ ಮನಸ್ಸಿಗೆ ಬೇಸರವಾಯಿತು. ॥ ೨೭ ॥

ಪರೀಕ್ಷಿದ್ರಾಜನು ಕೇಳಿದನು – ಮಹಾತ್ಮರೇ! ಆ ಭೂ ಖಂಡದಲ್ಲಿ ಇಂತಹ ವಿಚಿತ್ರ ಗುಣ ಹೇಗೆ ಬಂತು? ಯಾರು ಅದನ್ನು ಹಾಗಾಗಿಸಿದರು? ತಾವು ದಯಮಾಡಿ ನಮ್ಮ ಈ ಪ್ರಶ್ನೆಗಳಿಗೆ ಉತ್ತರಿಸಿರಿ. ಏಕೆಂದರೆ ನಮಗೆ ಬಹಳ ಕುತೂಹಲ ಉಂಟಾಗಿದೆ. ॥೨೮॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಎಲೈ ಪರೀಕ್ಷಿತನೇ! ಒಮ್ಮೆ ವ್ರತನಿಷ್ಠರಾದ ಮಹರ್ಷಿಗಳು ತಮ್ಮ ದಿವ್ಯವಾದ ತೇಜಸ್ಸಿನಿಂದ ಎಲ್ಲ ದಿಕ್ಕುಗಳನ್ನು ಬೆಳಗಿಸುತ್ತಾ ಭಗವಾನ್ ಶಂಕರನನ್ನು ಸಂದರ್ಶಿಸಲು ಆ ವನಕ್ಕೆ ಆಗಮಿಸಿದರು. ॥ ೨೯ ॥ ಆ ಸಮಯದಲ್ಲಿ ಶಂಕರನೊಡನೆ ಕ್ರೀಡಿಸುತ್ತಿದ್ದ ಪಾರ್ವತಿಯು ಉಡುಗೆ ಸಡಿಲಿಸಿದ್ದರಿಂದ ಋಷಿಗಳು ಬಂದುದನ್ನು ನೋಡಿ ಬಹಳವಾಗಿ ನಾಚಿಕೊಂಡು ಒಡನೆಯೇ ಶಿವನ ತೊಡೆಯಿಂದ ಮೇಲೆದ್ದು ಸೀರೆಯನ್ನು ಸರಿಪಡಿಸಿಕೊಂಡಳು. ॥ ೩೦ ॥

ಮಹರ್ಷಿಗಳೂ ಕೂಡ ಶ್ರೀಶಂಕರನು ಗೌರಿಯೊಡನೆ ವಿಹರಿಸುತ್ತಿರುವನೆಂದು ನೋಡಿ ಒಡನೆಯೇ ಅಲ್ಲಿಂದ ಹಿಂದಿರುಗಿ ನರ-ನಾರಾಯಣಾಶ್ರಮವನ್ನು ಸೇರಿದರು. ॥ ೩೧ ॥ ಆ ಸಮಯದಲ್ಲಿ ಭಗವಾನ್ ಶಂಕರನು ಪಾರ್ವತಿಯನ್ನು ಸಂತೋಷಗೊಳಿಸಲು – 'ನಾನಲ್ಲದೆ ಯಾರೇ ಪುರುಷನೂ ಈ ಪ್ರದೇಶವನ್ನು ಪ್ರವೇಶಿಸುವವನು ಹೆಣ್ಣಾಗಲಿ' ಎಂದು ಹೇಳಿದನು. ॥ ೩೨ ॥

ತತ ಊರ್ಧ್ವಂ ವನಂ ತದ್ವೈ ಪುರುಷಾ ವರ್ಜಯಂತಿ ಹಿ ।
ಸಾ ಚಾನುಚರಸಂಯುಕ್ತಾ ವಿಚಚಾರ ವನಾದ್ವನಮ್ ॥ ೩೩ ॥

ಅಥ ತಾಮಾಶ್ರಮಾಭ್ಯಾಶೇ ಚರಂತೀಂ ಪ್ರಮದೋತ್ತಮಾಮ್ ।
ಸ್ತ್ರೀಭಿಃ ಪರಿವೃತಾಂ ವೀಕ್ಷ್ಯ ಚಕಮೇ ಭಗವಾನ್ಬುಧಃ ॥ ೩೪ ॥

ಸಾಪಿ ತಂ ಚಕಮೇ ಸುಭ್ರೂಃ ಸೋಮರಾಜಸುತಂ ಪತಿಮ್ ।
ಸ ತಸ್ಯಾಂ ಜನಯಾಮಾಸ ಪುರೂರವಸಮಾತ್ಮಜಮ್ ॥ ೩೫ ॥

ಏವಂ ಸ್ತ್ರೀತ್ವಮನುಪ್ರಾಪ್ತಃ ಸುದ್ಯುಮ್ನೋ ಮಾನವೋ ನೃಪಃ ।
ಸಸ್ಮಾರ ಸ್ವಕುಲಾಚಾರ್ಯಂ ವಸಿಷ್ಠಮಿತಿ ಶುಶ್ರುಮ ॥ ೩೬ ॥

ಸ ತಸ್ಯ ತಾಂ ದಶಾಂ ದೃಷ್ಟ್ವಾ ಕೃಪಯಾ ಭೃಶಪೀಡಿತಃ ।
ಸುದ್ಯುಮ್ನಸ್ಯಾಶಯನ್ ಪುಂಸ್ತ್ವಮುಪಾಧಾವತ ಶಂಕರಮ್ ॥ ೩೭ ॥

ತುಷ್ಟಸ್ತಸ್ಮೈ ಸ ಭಗವಾನ್ ಋಷಯೇ ಪ್ರಿಯಮಾವಹನ್ ।
ಸ್ವಾಂ ಚ ವಾಚಮೃತಾಂ ಕುರ್ವನ್ನಿದಮಾಹ ವಿಶಾಂಪತೇ ॥ ೩೮ ॥

ಮಾಸಂ ಪುಮಾನ್ಸ ಭವಿತಾ ಮಾಸಂ ಸ್ತ್ರೀ ತವ ಗೋತ್ರಜಃ ।
ಇತ್ಥಂ ವ್ಯವಸ್ಥಯಾ ಕಾಮಂ ಸುದ್ಯುಮ್ನೋಽವತು ಮೇದಿನೀಮ್ ॥ ೩೯ ॥

ಆಚಾರ್ಯಾನುಗ್ರಹಾತ್ಕಾಮಂ ಲಬ್ಧ್ವಾ ಪುಂಸ್ತ್ವಂ ವ್ಯವಸ್ಥಯಾ ।
ಪಾಲಯಾಮಾಸ ಜಗತೀಂ ನಾಭ್ಯನಂದನ್ ಸ್ಮ ತಂ ಪ್ರಜಾಃ ॥ ೪೦ ॥

ತಸ್ಯೋತ್ಕಲೋ ಗಯೋ ರಾಜನ್ವಿಮಲಶ್ಚ ಸುತಾಸ್ತ್ರಯಃ ।
ದಕ್ಷಿಣಾಪಥರಾಜಾನೋ ಬಭೂವುರ್ಧರ್ಮವತ್ಸಲಾಃ ॥ ೪೧ ॥

ತತಃ ಪರಿಣತೇ ಕಾಲೇ ಪ್ರತಿಷ್ಠಾನಪತಿಃ ಪ್ರಭುಃ ।
ಪುರೂರವಸ ಉತ್ಸೃಜ್ಯ ಗಾಂ ಪುತ್ರಾಯ ಗತೋ ವನಮ್ ॥ ೪೨ ॥

ಪರೀಕ್ಷಿತನೇ! ಅಂದಿನಿಂದ ಪುರುಷರಾರೂ ಆ ಸ್ಥಾನವನ್ನು ಪ್ರವೇಶಿಸುವುದಿಲ್ಲ. ಈಗ ಸುದ್ಯುಮ್ನನು ಸ್ತ್ರೀಯಾಗಿದ್ದನಲ್ಲ, ಅದಕ್ಕಾಗಿ ಅವನು ಹೆಣ್ಣುಗಳಾಗಿದ್ದ ತನ್ನ ಅನುಚರರೊಂದಿಗೆ ಒಂದು ವನದಿಂದ ಇನ್ನೊಂದು ವನಕ್ಕೆ ಹೀಗೆ ಸಂಚರಿಸುತ್ತಿದ್ದನು. ॥ ೩೩ ॥

ಅದೇ ಸಮಯದಲ್ಲಿ ಶಕ್ತಿವಂತನಾದ ಬುಧನು – ತನ್ನ ಆಶ್ರಮದ ಬಳಿಯಲ್ಲೇ ಅನೇಕ ಸ್ತ್ರೀಯರಿಂದ ಪರಿವೃತಳಾಗಿ ಸಂಚರಿಸುತ್ತಿದ್ದ ಸ್ತ್ರೀರತ್ನವನ್ನು ನೋಡಿದನು. ಅವಳ ಸೌಂದರ್ಯಕ್ಕೆ ಆಕರ್ಷಿತನಾಗಿ ಅವಳನ್ನು ತನ್ನವಳನ್ನಾಗಿಸಿಕೊಳ್ಳಬೇಕೆಂದು ಬಯಸಿದನು. ॥ ೩೪ ॥ ಆ ಸುಂದರಿಯೂ ಚಂದ್ರಕುಮಾರ ಬುಧನನ್ನು ಪತಿಯನ್ನಾಗಿ ವರಿಸಿದಳು. ಇದಾದ ಬಳಿಕ ಬುಧನು ಅವಳ ಗರ್ಭದಿಂದ ಪುರೂರವ ಎಂಬ ಪುತ್ರನನ್ನು ಪಡೆದನು. ॥ ೩೫ ॥ ಹೀಗೆ ಮನುಪುತ್ರನಾದ ಸುದ್ಯುಮ್ನನು ಸ್ತ್ರೀಯಾಗಿದ್ದ ಆ ಸ್ಥಿತಿಯಲ್ಲಿ ತನ್ನ ಕುಲಪುರೋಹಿತರಾದ ವಸಿಷ್ಠರನ್ನು ಸ್ಮರಿಸಿದನೆಂದು ಕೇಳಿದ್ದೇವೆ. ॥ ೩೬ ॥

ಸುದ್ಯುಮ್ನನ ಈ ಸ್ಥಿತಿಯನ್ನು ನೋಡಿ ವಸಿಷ್ಠರಿಗೆ ತುಂಬಾ ಕನಿಕರ ಉಂಟಾಯಿತು. ಅವರು ಸುದ್ಯುಮ್ನನನ್ನು ಪುನಃ ಪುರುಷನನ್ನಾಗಿಸಲು ಭಗವಾನ್ ಶಂಕರನನ್ನು ಆರಾಧಿಸಿದರು. ॥ ೩೭ ॥ ಪರೀಕ್ಷಿತನೇ! ಭಗವಾನ್ ಶಂಕರನು ವಸಿಷ್ಠರಲ್ಲಿ ಪ್ರಸನ್ನರಾಗಿ ಅವರ ಅಭಿಲಾಷೆಯನ್ನು ಪೂರ್ಣಗೊಳಿಸಲಿಕ್ಕಾಗಿ ತನ್ನ ಮಾತೂ ಸುಳ್ಳಾಗದ ರೀತಿಯಲ್ಲಿ ಹೀಗೆಂದನು – ॥ ೩೮ ॥

ವಸಿಷ್ಠರೇ! ನಿಮ್ಮ ಈ ಯಜಮಾನನು (ಯಜಮಾನನು ಪುರೋಹಿತರ ಗೋತ್ರದವನೆಂದೇ ಪರಿಗಣಿಸಲ್ಪಡುತ್ತಾನೆ) ಒಂದು ತಿಂಗಳು ಪುರುಷನಾಗಿರುವನು ಮತ್ತೊಂದು ತಿಂಗಳಲ್ಲಿ ಹೆಣ್ಣಾಗಿರುವನು. ಈ ವ್ಯವಸ್ಥೆಯಿಂದ ಸುದ್ಯುಮ್ನನು ಇಚ್ಛಾನುಸಾರವಾಗಿ ಭೂಮಂಡಲವನ್ನು ಪಾಲಿಸಲಿ. ॥ ೩೯ ॥ ಹೀಗೆ ವಸಿಷ್ಠರ ಅನುಗ್ರಹದಿಂದ ವ್ಯವಸ್ಥಾಪೂರ್ವಕ ಬಯಸಿದ ಪುರುಷತ್ವವನ್ನು ಪಡೆದು ಸುದ್ಯುಮ್ನನು ಪೃಥಿವಿಯನ್ನು ಪಾಲಿಸತೊಡಗಿದನು. ಆದರೂ ಪ್ರಜೆ ಅವನನ್ನು ಅಭಿನಂದಿಸುತ್ತಿರಲಿಲ್ಲ. ॥ ೪೦ ॥ ಅವನಿಗೆ ಉತ್ಕಲ, ಗಯ ಮತ್ತು ವಿಮಲ ಎಂಬ ಮೂವರು ಪುತ್ರರು ಹುಟ್ಟಿದರು. ರಾಜೇಂದ್ರಾ! ಅವರೆಲ್ಲರೂ ದಕ್ಷಿಣಾಪಥದ ರಾಜರಾದರು. ॥ ೪೧ ॥ ಅನೇಕ ದಿನಗಳ ಬಳಿಕ ಪ್ರತಿಷ್ಠಾನ ನಗರದ ಅಧಿಪತಿಯಾದ ಸುದ್ಯುಮ್ನನು ವೃದ್ಧನಾದಾಗ ತನ್ನ ಪುತ್ರ ಪುರೂರವನಿಗೆ ರಾಜ್ಯವನ್ನು ಒಪ್ಪಿಸಿ, ತಾನು ತಪಸ್ಸಿಗಾಗಿ ಕಾಡಿಗೆ ತೆರಳಿದನು. ॥ ೪೨ ॥

ಮೊದಲನೆಯ ಅಧ್ಯಾಯವು ಮುಗಿಯಿತು. ॥ ೧ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ನವಮಸ್ಕಂಧೇ
ಐಲೋಪಾಖ್ಯಾನೇ ಪ್ರಥಮೋಽಧ್ಯಾಯಃ ॥ ೧ ॥

ಎರಡನೆಯ ಅಧ್ಯಾಯ

ಪೃಷಧ್ರ ಮುಂತಾದ ಮನುವಿನ ಐವರು ಪುತ್ರರ ವಂಶ

ಶ್ರೀಶುಕ ಉವಾಚ

ಏವಂ ಗತೇಽಥ ಸುದ್ಯುಮ್ನೇ ಮನುರ್ವೈವಸ್ವತಃ ಸುತೇ ।
ಪುತ್ರಕಾಮಸ್ತಪಸ್ತೇಪೇ ಯಮುನಾಯಾಂ ಶತಂ ಸಮಾಃ ॥ ೧ ॥

ತತೋಽಯಜನ್ಮನುರ್ದೇವಮಪತ್ಯಾರ್ಥಂ ಹರಿಂ ಪ್ರಭುಮ್ ।
ಇಕ್ಷ್ವಾಕುಪೂರ್ವಜಾನ್ಪುತ್ರಾಲ್ಲೇಭೇ ಸ್ವಸದೃಶಾನ್ ದಶ ॥ ೨ ॥

ಪೃಷಧ್ರಸ್ತು ಮನೋಃ ಪುತ್ರೋ ಗೋಪಾಲೋ ಗುರುಣಾ ಕೃತಃ ।
ಪಾಲಯಾಮಾಸ ಗಾ ಯತ್ತೋ ರಾತ್ರ್ಯಾಂ ವೀರಾಸನವ್ರತಃ ॥ ೩ ॥

ಏಕದಾ ಪ್ರಾವಿಶದ್ಗೋಷ್ಠಂ ಶಾರ್ದೂಲೋ ನಿಶಿ ವರ್ಷತಿ ।
ಶಯಾನಾ ಗಾವ ಉತ್ಥಾಯ ಭೀತಾಸ್ತಾ ಬಭ್ರಮುರ್ವ್ರಜೇ ॥ ೪ ॥

ಏಕಾಂ ಜಗ್ರಾಹ ಬಲವಾನ್ ಸಾ ಚುಕ್ರೋಶ ಭಯಾತುರಾ ।
ತಸ್ಯಾಸ್ತತ್ಕ್ರಂದಿತಂ ಶ್ರುತ್ವಾ ಪೃಷಧ್ರೋಽಭಿಸಸಾರ ಹ ॥ ೫ ॥

ಖಡ್ಗಮಾದಾಯ ತರಸಾ ಪ್ರಲೀನೋಡುಗಣೇ ನಿಶಿ ।
ಅಜಾನನ್ನಹನದ್ಬಭ್ರೋಃ ಶಿರಃ ಶಾರ್ದೂಲಶಂಕಯಾ ॥ ೬ ॥

ವ್ಯಾಘ್ರೋಽಪಿ ವೃಕ್ಣಶ್ರವಣೋ ನಿಸ್ತ್ರಿಂಶಾಗ್ರಾಹತಸ್ತತಃ ।
ನಿಶ್ಚಕ್ರಾಮ ಭೃಶಂ ಭೀತೋ ರಕ್ತಂ ಪಥಿ ಸಮುತ್ಸೃಜನ್ ॥ ೭ ॥

ಮನ್ಯಮಾನೋ ಹತಂ ವ್ಯಾಘ್ರಂ ಪೃಷಧ್ರಃ ಪರವೀರಹಾ ।
ಅದ್ರಾಕ್ಷೀತ್ ಸ್ವಹತಾಂ ಬಭ್ರುಂ ವ್ಯುಷ್ಟಾಯಾಂ ನಿಶಿ ದುಃಖಿತಃ ॥ ೮ ॥

ತಂ ಶಶಾಪ ಕುಲಾಚಾರ್ಯಃ ಕೃತಾಗಸಮಕಾಮತಃ ।
ನ ಕ್ಷತ್ರಬಂಧುಃ ಶೂದ್ರಸ್ತ್ವಂ ಕರ್ಮಣಾ ಭವಿತಾಮುನಾ ॥ ೯ ॥

ಏವಂ ಶಪ್ತಸ್ತು ಗುರುಣಾ ಪ್ರತ್ಯಗೃಹ್ಣಾತ್ಕೃತಾಂಜಲಿಃ ।
ಅಧಾರಯದ್ವ್ರತಂ ವೀರ ಊರ್ಧ್ವರೇತಾ ಮುನಿಪ್ರಿಯಮ್ ॥ ೧೦ ॥

ವಾಸುದೇವೇ ಭಗವತಿ ಸರ್ವಾತ್ಮನಿ ಪರೇಽಮಲೇ ।
ಏಕಾಂತಿತ್ವಂ ಗತೋ ಭಕ್ತ್ಯಾ ಸರ್ವಭೂತಸುಹೃತ್ಸಮಃ ॥ ೧೧ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಎಲೈ ಪರೀಕ್ಷಿತನೇ! ಹೀಗೆ ಸುದ್ಯುಮ್ನನು ತಪಸ್ಸಿಗಾಗಿ ಕಾಡಿಗೆ ಹೊರಟುಹೋದ ಬಳಿಕ ವೈವಸ್ವತಮನುವು ಪುತ್ರಕಾಮನಾಗಿ ಯಮುನಾನದಿಯ ತೀರದಲ್ಲಿ ನೂರು ವರ್ಷಗಳ ಕಾಲ ತಪಸ್ಸು ಮಾಡಿದನು. ॥ ೧ ॥ ಇದಾದ ಬಳಿಕ ಅವನು ಸಂತಾನವನ್ನು ಪಡೆಯಲು ಸರ್ವಶಕ್ತನಾದ ಭಗವಾನ್ ಶ್ರೀಹರಿಯನ್ನು ಆರಾಧಿಸಿದನು ಹಾಗೂ ತನಗೆ ಸಮಾನರಾದ ಇಕ್ಷ್ವಾಕುವೇ ಮೊದಲಾದ ಹತ್ತು ಪುತ್ರರನ್ನು ಪಡೆದನು. ॥ ೨ ॥

ಮನುವಿನ ಹತ್ತುಪುತ್ರರಲ್ಲಿ ಒಬ್ಬನ ಹೆಸರು ಪೃಷಧ್ರ ಎಂದಿತ್ತು. ಗುರುಗಳಾದ ವಸಿಷ್ಠರು ಅವನನ್ನು ಗೋವುಗಳ ರಕ್ಷಣೆಗಾಗಿ ನೇಮಿಸಿದರು. ಆದ್ದರಿಂದ ಅವನು ರಾತ್ರಿಯಲ್ಲಿ ತುಂಬಾ ಎಚ್ಚರಿಕೆಯಿಂದ ವೀರಾಸನದಲ್ಲಿ ಕುಳಿತುಕೊಂಡು ಹಸುಗಳನ್ನು ಕಾಯುತ್ತಿದ್ದನು. ॥ ೩ ॥ ಒಂದು ರಾತ್ರಿಯಲ್ಲಿ ಮಳೆ ಬೀಳುತ್ತಿತ್ತು. ಆಗ ಆ ಹಸುಗಳ ಮಂದೆಯಲ್ಲಿ ಒಂದು ಹುಲಿಯು ನುಗ್ಗಿತು. ಇದರಿಂದ ಹೆದರಿದ ಹಸುಗಳು ಎದ್ದು ಗೋಶಾಲೆಯಲ್ಲಿ ಅತ್ತ-ಇತ್ತ ಓಡಲು ತೊಡಗಿದವು. ॥ ೪ ॥ ಬಲಶಾಲಿಯಾಗಿದ್ದ ಆ ಹುಲಿಯು ಒಂದು ಹಸುವನ್ನು ಹಿಡಿದುಕೊಂಡಿತು. ಅದು ಅತ್ಯಂತ ಭಯಗೊಂಡು 'ಅಂಬಾ' ಎಂದು ಕೂಗತೊಡಗಿತು. ಅದರ ಆ ಕರುಣಾಕ್ರಂದನವನ್ನು ಕೇಳಿದ ಪೃಷಧ್ರನು ಹಸುವಿನ ಬಳಿಗೆ ಓಡಿ ಬಂದನು. ॥ ೫ ॥ ಒಂದುಕಡೆ ರಾತ್ರಿಯು ಘೋರ ಅಂಧಕಾರ, ಮತ್ತೊಂದೆಡೆ ದಟ್ಟವಾದ ಮೋಡಗಳು ಕವಿದುದರಿಂದ ನಕ್ಷತ್ರಗಳೂ ಕಾಣುತ್ತಿರಲಿಲ್ಲ. ಅವನು ಕೈಯಲ್ಲಿ ಖಡ್ಗವನ್ನೆತ್ತಿಕೊಂಡು ಬಂದವನೇ ಹುಲಿಯನ್ನು ಕೊಲ್ಲಬೇಕೆಂದು ಖಡ್ಗಬೀಸಿದಾಗ ಹಸುವಿನ ಕತ್ತು ಕತ್ತರಿಸಿಹೋಯಿತು. ॥ ೬ ॥ ಹಸುವಿನ ತಲೆಯ ಜೊತೆಯಲ್ಲೇ ಖಡ್ಗದ ತುದಿಯಿಂದ ಹುಲಿಯ ಕಿವಿಯು ಕತ್ತರಿಸಿಹೋಯಿತು. ಅದು ಹೆದರಿ ದಾರಿಯಲ್ಲಿ ರಕ್ತವನ್ನು ಸುರಿಸುತ್ತಾ ಅಲ್ಲಿಂದ ಓಡಿಹೋಯಿತು. ॥ ೭ ॥ ಹುಲಿಯನ್ನೇ ಕೊಂದೆನೆಂದು ಶತ್ರುದಮನ ಪೃಷಧ್ರನು ತಿಳಿದನು. ಆದರೆ ರಾತ್ರಿಯು ಕಳೆಯುತ್ತಲೇ ತಾನು ಹಸುವನ್ನೇ ಕೊಂದಿದ್ದೇನೆ ಎಂದು ನೋಡಿದನು. ಇದರಿಂದ ಅವನಿಗೆ ಬಹಳ ದುಃಖವಾಯಿತು. ॥ ೮ ॥ ಪೃಷಧ್ರನು ತಿಳಿದು-ತಿಳಿದು ತಪ್ಪುಮಾಡದಿದ್ದರೂ ಕುಲಪುರೋಹಿತರಾದ ವಸಿಷ್ಠರು – 'ನೀನು ಈ ಗೋವಧೆಯಿಂದ ಕ್ಷತ್ರಿಯನಾಗಿ ಉಳಿಯಲಾರೆ; ಶೂದ್ರನಾಗಿ ಹೋಗು' ಎಂದು ಶಾಪವಿತ್ತರು. ॥ ೯ ॥ ಪೃಷಧ್ರನು ಗುರುಗಳ ಶಾಪವನ್ನು ಅಂಜಲಿಬದ್ಧನಾಗಿ ಸ್ವೀಕರಿಸಿದನು. ಬಳಿಕ ಅವನು ಎಂದೆಂದಿಗೂ ಮುನಿಗಳಿಗೆ ಪ್ರಿಯವಾದ ನೈಷ್ಠಿಕ ಬ್ರಹ್ಮಚರ್ಯವನ್ನು ಕೈಗೊಂಡನು. ॥ ೧೦ ॥ ಅವನು ಸಮಸ್ತ ಪ್ರಾಣಿಗಳ ಅಹೈತುಕ ಹಿತೈಷಿಯಾಗಿ, ಎಲ್ಲರ ಕುರಿತು ಸಮಭಾವದಿಂದ ಕೂಡಿಕೊಂಡು ಭಕ್ತಿಯ ಮೂಲಕ ಪರಮ ವಿಶುದ್ಧನೂ, ಸರ್ವಾತ್ಮನೂ ಆದ ಭಗವಾನ್ ವಾಸುದೇವನ ಅನನ್ಯ ಪ್ರೇಮಿಯಾದನು. ॥ ೧೧ ॥

ವಿಮುಕ್ತಸಂಗಃ ಶಾಂತಾತ್ಮಾ ಸಂಯತಾಕ್ಷೋಽಪರಿಗ್ರಹಃ ।
ಯದೃಚ್ಛಯೋಪಪನ್ನೇನ ಕಲ್ಪಯನ್ ವೃತ್ತಿಮಾತ್ಮನಃ
॥ ೧೨ ॥

ಆತ್ಮನ್ಯಾತ್ಮಾನಮಾಧಾಯ ಜ್ಞಾನತೃಪ್ತಃ ಸಮಾಹಿತಃ ।
ವಿಚಚಾರ ಮಹೀಮೇತಾಂ ಜಡಾಂಧಬಧಿರಾಕೃತಿಃ
॥ ೧೩ ॥

ಏವಂವೃತ್ತೋ ವನಂ ಗತ್ವಾ ದೃಷ್ಟ್ವಾ ದಾವಾಗ್ನಿಮುತ್ಥಿತಮ್ ।
ತೇನೋಪಯುಕ್ತಕರಣೋ ಬ್ರಹ್ಮ ಪ್ರಾಪ ಪರಂ ಮುನಿಃ
॥ ೧೪ ॥

ಕವಿಃ ಕನೀಯಾನ್ವಿಷಯೇಷು ನಿಃಸ್ಪೃಹೋ
ವಿಸೃಜ್ಯ ರಾಜ್ಯಂ ಸಹ ಬಂಧುಭಿರ್ವನಮ್ ।
ನಿವೇಶ್ಯ ಚಿತ್ತೇ ಪುರುಷಂ ಸ್ವರೋಚಿಷಂ
ವಿವೇಶ ಕೈಶೋರವಯಾಃ ಪರಂ ಗತಃ ॥ ೧೫ ॥

ಕರೂಷಾನ್ಮಾನವಾದಾಸನ್ ಕಾರೂಷಾಃ ಕ್ಷತ್ರಜಾತಯಃ ।
ಉತ್ತರಾಪಥಗೋಪ್ತಾರೋ ಬ್ರಹ್ಮಣ್ಯಾ ಧರ್ಮವತ್ಸಲಾಃ
॥ ೧೬ ॥

ಧೃಷ್ಟಾದ್ಧಾರ್ಷ್ಟಮಭೂತ್ ಕ್ಷತ್ರಂ ಬ್ರಹ್ಮಭೂಯಂ ಗತಂ ಕ್ಷಿತೌ ।
ನೃಗಸ್ಯ ವಂಶಃ ಸುಮತಿರ್ಭೂತಜ್ಯೋತಿಸ್ತತೋ ವಸುಃ
॥ ೧೭ ॥

ವಸೋಃ ಪ್ರತೀಕಸ್ತತ್ಪುತ್ರ ಓಘವಾನೋಘವತ್ಪಿತಾ ।
ಕನ್ಯಾ ಚೌಘವತೀ ನಾಮ ಸುದರ್ಶನ ಉವಾಹ ತಾಮ್
॥ ೧೮ ॥

ಚಿತ್ರಸೇನೋ ನರಿಷ್ಯಂತಾದ್ದಕ್ಷಸ್ತಸ್ಯ ಸುತೋಽಭವತ್ ।
ತಸ್ಯ ಮೀಢ್ವಾಂಸ್ತತಃ ಕೂರ್ಚ ಇಂದ್ರಸೇನಸ್ತು ತತ್ಸುತಃ
॥ ೧೯ ॥

ವೀತಿಹೋತ್ರಸ್ತ್ವಿಂದ್ರಸೇನಾತ್ತಸ್ಯ ಸತ್ಯಶ್ರವಾ ಅಭೂತ್ ।
ಉರುಶ್ರವಾಃ ಸುತಸ್ತಸ್ಯ ದೇವದತ್ತಸ್ತತೋಽಭವತ್
॥ ೨೦ ॥

ತತೋಽಗ್ನಿವೇಶ್ಯೋ ಭಗವಾನಗ್ನಿಃ ಸ್ವಯಮಭೂತ್ಸುತಃ ।
ಕಾನೀನ ಇತಿ ವಿಖ್ಯಾತೋ ಜಾತೂಕರ್ಣ್ಯೋ ಮಹಾನೃಷಿಃ
॥ ೨೧ ॥

ತತೋ ಬ್ರಹ್ಮಕುಲಂ ಜಾತಮಾಗ್ನಿವೇಶ್ಯಾಯನಂ ನೃಪ ।
ನರಿಷ್ಯಂತಾನ್ವಯಃ ಪ್ರೋಕ್ತೋ ದಿಷ್ಟವಂಶಮತಃ ಶೃಣು
॥ ೨೨ ॥

ನಾಭಾಗೋ ದಿಷ್ಟಪುತ್ರೋಽನ್ಯಃ ಕರ್ಮಣಾ ವೈಶ್ಯತಾಂ ಗತಃ ।
ಭಲಂದನಃ ಸುತಸ್ತಸ್ಯ ವತ್ಸಪ್ರೀತಿರ್ಭಲಂದನಾತ್
॥ ೨೩ ॥

ಅವನ ಎಲ್ಲ ಆಸಕ್ತಿಗಳು ಇಂಗಿಹೋದುವು. ವೃತ್ತಿಗಳು ಶಾಂತವಾದುವು. ಇಂದ್ರಿಯಗಳು ವಶವಾದುವು. ಅವನು ಎಂದೂ ಯಾವುದೇ ಸಂಗ್ರಹ-ಪರಿಗ್ರಹವನ್ನು ಇಟ್ಟುಕೊಳ್ಳುತ್ತಿರಲಿಲ್ಲ. ದೈವವಶದಿಂದ ದೊರೆತುದರಲ್ಲೇ ತನ್ನ ಜೀವನ ನಿರ್ವಾಹ ನಡೆಸುತ್ತಿದ್ದನು. ॥ ೧೨ ॥ ಅವನು ಆತ್ಮಜ್ಞಾನದಿಂದ ತೃಪ್ತನಾಗಿ ತನ್ನ ಚಿತ್ತವನ್ನು ಪರಮಾತ್ಮನಲ್ಲಿ ನೆಲೆಗೊಳಿಸಿ, ಸಾಧಾರಣವಾಗಿ ಸಮಾಧಿಸ್ಥಿತಿಯಲ್ಲೇ ಇರುತ್ತಿದ್ದನು. ಕೆಲವೊಮ್ಮೆ ಜಡನಂತೆಯೂ, ಕುರುಡನಂತೆಯೂ, ಕಿವುಡನಂತೆಯೂ ಇದ್ದು ಜಗತ್ತಿನಲ್ಲಿ ಸಂಚರಿಸುತ್ತಿದ್ದನು. ॥ ೧೩ ॥ ಹೀಗೆ ಜೀವನ ನಡೆಸುತ್ತಾ ಅವನು ಒಂದು ದಿನ ಕಾಡಿಗೆ ಹೋದನು. ಅಲ್ಲಿ ಕಾಡ್ಗಿಚ್ಚು ಧಗ-ಧಗನೆ ಉರಿಯುತ್ತಿರುವುದನ್ನು ಕಂಡು, ಮನನಶೀಲನಾದ ಪೃಷಧ್ರನು ತನ್ನ ಶರೀರವನ್ನು ಅದೇ ಅಗ್ನಿಯಲ್ಲಿ ಭಸ್ಮಗೈಯ್ದು ಪರಬ್ರಹ್ಮ ಪರಮಾತ್ಮನನ್ನು ಹೊಂದಿದನು. ॥ ೧೪ ॥

ಮನುವಿನ ಎಲ್ಲರಿಗಿಂತ ಕಿರಿಯ ಮಗನಾದ ಕವಿಯು ವಿಷಯಗಳಿಂದ ಅತ್ಯಂತ ನಿಃಸ್ಪೃಹನಾಗಿದ್ದನು. ಅವನು ರಾಜ್ಯವನ್ನು ತ್ಯಜಿಸಿ ತನ್ನ ಬಂಧುಗಳೊಡನೆ ಕಾಡಿಗೆ ಹೊರಟುಹೋದನು ಮತ್ತು ಹೃದಯದಲ್ಲಿ ಸ್ವಯಂ ಪ್ರಕಾಶನಾದ ಪರಮಾತ್ಮನನ್ನು ಧ್ಯಾನದ ಮೂಲಕ ಕಂಡುಕೊಂಡು ಬಾಲ್ಯದಲ್ಲೇ ಪರಮಪದವನ್ನು ಪಡೆದನು. ॥ ೧೫ ॥

ಮನುವಿನ ಮತ್ತೊಬ್ಬ ಪುತ್ರ ಕರೂಷನಿಂದ ಕಾರೂಷರೆಂಬ ಕ್ಷತ್ರಿಯರು ಉತ್ಪನ್ನರಾದರು. ಅವರೆಲ್ಲರೂ ಬ್ರಾಹ್ಮಣಭಕ್ತರೂ, ಧರ್ಮಪ್ರೇಮಿಗಳೂ ಆಗಿದ್ದು, ಉತ್ತರ ದಿಕ್ಕಿನ ರಕ್ಷಕರಾದರು. ॥ ೧೬ ॥ ಮತ್ತೊಬ್ಬ ಮಗನಾದ ಧೃಷ್ಟನಿಂದ ಧಾರ್ಷ್ಟರೆಂಬ ಕ್ಷತ್ರಿಯರಾದರು. ಕೊನೆಗೆ ಅವನು ಈ ಶರೀರದಿಂದಲೇ (ಕ್ಷತ್ರಿಯ ಶರೀರದಿಂದಲೇ) ಬ್ರಾಹ್ಮಣರಾದರು. ನೃಗನಿಗೆ ಸುಮತಿ ಎಂಬ ಪುತ್ರನಾದನು. ಅವನ ಪುತ್ರ ಭೂತಜ್ಯೋತಿ ಮತ್ತು ಭೂತಜ್ಯೋತಿಯ ಪುತ್ರ ವಸು ಎಂಬುವನಿದ್ದನು. ॥ ೧೭ ॥ ವಸುವಿನ ಪುತ್ರ ಪ್ರತೀಕ ಹಾಗೂ ಪ್ರತೀಕನ ಮಗ ಓಘವಾನ್. ಓಘವಂತನ ಮಗನ ಹೆಸರೂ ಓಘವಂತ ಎಂದೇ ಇತ್ತು. ಅವನಿಗೆ ಓಘವತಿ ಎಂಬ ಓರ್ವ ಕನ್ಯೆಯೂ ಇದ್ದಳು. ಅವಳ ವಿವಾಹವು ಸುದರ್ಶನನೊಂದಿಗೆ ಆಯಿತು. ॥ ೧೮ ॥ ಮನುಪುತ್ರ ನರಿಷ್ಯಂತನಿಂದ ಚಿತ್ರಸೇನ, ಅವನಿಂದ ದಕ್ಷ, ದಕ್ಷನಿಂದ ಮೀಢ್ವಾನ್, ಮೀಢ್ವಂತನಿಂದ ಕೂರ್ಚ ಮತ್ತು ಅವನಿಂದ ಇಂದ್ರಸೇನ ಉತ್ಪತ್ತಿಯಾದರು. ॥ ೧೯ ॥ ಇಂದ್ರಸೇನನಿಂದ ವೀತಿಹೋತ್ರ, ಅವನಿಂದ ಸತ್ಯಶ್ರವಾ, ಸತ್ಯಶ್ರವನಿಂದ ಉರುಶ್ರವಾ ಮತ್ತು ಅವನಿಂದ ದೇವದತ್ತನ ಉತ್ಪತ್ತಿಯಾಯಿತು. ॥ ೨೦ ॥

ದೇವದತ್ತನಿಗೆ ಅಗ್ನಿವೇಶ್ಯನೆಂಬ ಪುತ್ರನು ಜನಿಸಿದನು. ಅವನು ಸಾಕ್ಷಾತ್ ಅಗ್ನಿದೇವನೇ ಆಗಿದ್ದನು. ಮುಂದೆ ಅವನೇ ಕಾನೀನ ಮತ್ತು ಮಹರ್ಷಿ ಜಾತೂಕರ್ಣ್ಯ ಎಂಬ ಹೆಸರಿನಿಂದ ವಿಖ್ಯಾತನಾದನು. ॥ ೨೧ ॥ ಪರೀಕ್ಷಿತನೇ! ಬ್ರಾಹ್ಮಣರ 'ಅಗ್ನಿವೇಶ್ಯಾಯನ' ಎಂಬ ಗೋತ್ರ ಇವನಿಂದಲೇ ಪ್ರವರ್ತಿತವಾಯಿತು. ಹೀಗೆ ನರಿಷ್ಯಂತನ ವಂಶವನ್ನು ನಾನು ವರ್ಣಿಸಿದೆ. ಈಗ ದಿಷ್ಟನ ವಂಶವನ್ನು ಕೇಳು. ॥ ೨೨ ॥

ದಿಷ್ಟನ ಮಗನ ಹೆಸರು ನಾಭಾಗ ಎಂದಿತ್ತು. ನಾನು ಮುಂದೆ ವರ್ಣಿಸುವ ನಾಭಾಗನಿಂದ ಇವನು ಬೇರೆಯಾಗಿದ್ದನು. ಅವನು ತನ್ನ ಕರ್ಮದ ಕಾರಣದಿಂದಾಗಿ ವೈಶ್ಯನಾದನು. ಅವನ ಪುತ್ರ ಭಲಂದನ ಮತ್ತು ಅವನಿಗೆ ವತ್ಸಪ್ರೀತಿ ಹುಟ್ಟಿದನು. ॥ ೨೩ ॥

ವತ್ಸಪ್ರೀತೇಃ ಸುತಃ ಪ್ರಾಂಶುಸ್ತತ್ಸುತಂ ಪ್ರಮತಿಂ ವಿದುಃ ।
ಖನಿತ್ರಃ ಪ್ರಮತೇಸ್ತಸ್ಮಾಚ್ಚಾಕ್ಷುಷೋಽಥ ವಿವಿಂಶತಿಃ ॥ ೨೪ ॥

ವಿವಿಂಶತಿಸುತೋ ರಂಭಃ ಖನಿನೇತ್ರೋಽಸ್ಯ ಧಾರ್ಮಿಕಃ ।
ಕರಂಧಮೋ ಮಹಾರಾಜ ತಸ್ಯಾಸೀದಾತ್ಮಜೋ ನೃಪ ॥ ೨೫ ॥

ತಸ್ಯಾವೀಕ್ಷಿತ್ಸುತೋ ಯಸ್ಯ ಮರುತ್ತಶ್ಚಕ್ರವರ್ತ್ಯಭೂತ್ ।
ಸಂವರ್ತೋಽಯಾಜಯದ್ ಯಂ ವೈ ಮಹಾಯೋಗ್ಯಂಗಿರಸುತಃ ॥ ೨೬ ॥

ಮರುತ್ತಸ್ಯ ಯಥಾ ಯಜ್ಞೋ ನ ತಥಾನ್ಯಸ್ಯ ಕಶ್ಚನ ।
ಸರ್ವಂ ಹಿರಣ್ಮಯಂ ತ್ವಾಸೀದ್ಯತ್ಕಿಂಚಿಚ್ಚಾಸ್ಯ ಶೋಭನಮ್ ॥ ೨೭ ॥

ಅಮಾದ್ಯದಿಂದ್ರಃ ಸೋಮೇನ ದಕ್ಷಿಣಾಭಿರ್ದ್ವಿಜಾತಯಃ ।
ಮರುತಃ ಪರಿವೇಷ್ಟಾರೋ ವಿಶ್ವೇದೇವಾಃ ಸಭಾಸದಃ ॥ ೨೮ ॥

ಮರುತ್ತಸ್ಯ ದಮಃ ಪುತ್ರಸ್ತಸ್ಯಾಸೀದ್ರಾಜ್ಯವರ್ಧನಃ ।
ಸುಧೃತಿಸ್ತತ್ಸುತೋ ಜಜ್ಞೇ ಸೌಧೃತೇಯೋ ನರಃ ಸುತಃ ॥ ೨೯ ॥

ತತ್ಸುತಃ ಕೇವಲಸ್ತಸ್ಮಾದ್ಬಂಧುಮಾನ್ವೇಗವಾಂಸ್ತತಃ ।
ಬಂಧುಸ್ತಸ್ಯಾಭವದ್ಯಸ್ಯ ತೃಣಬಿಂದುರ್ಮಹೀಪತಿಃ ॥ ೩೦ ॥

ತಂ ಭೇಜೇಽಲಂಬುಷಾ ದೇವೀ ಭಜನೀಯಗುಣಾಲಯಮ್ ।
ವರಾಪ್ಸರಾ ಯತಃ ಪುತ್ರಾಃ ಕನ್ಯಾ ಚೇಡವಿಡಾಭವತ್ ॥ ೩೧ ॥

ತಸ್ಯಾಮುತ್ಪಾದಯಾಮಾಸ ವಿಶ್ರವಾ ಧನದಂ ಸುತಮ್ ।
ಪ್ರಾದಾಯ ವಿದ್ಯಾಂ ಪರಮಾಮೃಷಿರ್ಯೋಗೇಶ್ವರಾತ್ಪಿತುಃ ॥ ೩೨ ॥

ವಿಶಾಲಃ ಶೂನ್ಯಬಂಧುಶ್ಚ ಧೂಮ್ರಕೇತುಶ್ಚ ತತ್ಸುತಾಃ ।
ವಿಶಾಲೋ ವಂಶಕೃದ್ರಾಜಾ ವೈಶಾಲೀಂ ನಿರ್ಮಮೇ ಪುರೀಮ್ ॥ ೩೩ ॥

ಹೇಮಚಂದ್ರಃ ಸುತಸ್ತಸ್ಯ ಧೂಮ್ರಾಕ್ಷಸ್ತಸ್ಯ ಚಾತ್ಮಜಃ ।
ತತ್ಪುತ್ರಾತ್ಸಂಯಮಾದಾಸೀತ್ಕೃಶಾಶ್ವಃ ಸಹದೇವಜಃ ॥ ೩೪ ॥

ಕೃಶಾಶ್ವಾತ್ಸೋಮದತ್ತೋಽಭೂದ್ಯೋಽಶ್ವಮೇಧೈರಿಡಸ್ಪತಿಮ್ ।
ಇಷ್ಟ್ವಾ ಪುರುಷಮಾಪಾಗ್ರ್ಯಾಂ ಗತಿಂ ಯೋಗೇಶ್ವರಾಶ್ರಿತಃ ॥ ೩೫ ॥

ಸೌಮದತ್ತಿಸ್ತು ಸುಮತಿಸ್ತತ್ಸುತೋ ಜನಮೇಜಯಃ ।
ಏತೇ ವೈಶಾಲಭೂಪಾಲಾಸ್ತೃಣಬಿಂದೋರ್ಯಶೋಧರಾಃ ॥ ೩೬ ॥

ವತ್ಸಪ್ರೀತಿಯ ಪ್ರಾಂಶು, ಪ್ರಾಂಶುವಿನ ಪುತ್ರ ಪ್ರಮತಿಯಾದನು. ಪ್ರಮತಿಯಿಂದ ಖನಿತ್ರ, ಖನಿತ್ರನಿಂದ ಚಾಕ್ಷುಷ, ಅವನಿಗೆ ವಿವಿಂಶತಿ ಪುತ್ರನಾದನು. ॥ ೨೪ ॥ ವಿವಿಂಶತಿಯ ಪುತ್ರರಂಭ, ರಂಭನ ಪುತ್ರ ಖನಿನೇತ್ರ, ಇವರಿಬ್ಬರೂ ಪರಮ ಧಾರ್ಮಿಕರಾಗಿದ್ದರು. ಅವನ ಪುತ್ರ ಕರಂಧಮ, ಕರಂಧಮನ ಮಗ ಅವೀಕ್ಷಿತ್, ಪರೀಕ್ಷಿದ್ರಾಜನೇ ಅವೀಕ್ಷಿವಂತನ ಪುತ್ರ ಮರುತ್ತನು ಚಕ್ರವರ್ತಿರಾಜನಾದನು. ಅವನಿಂದ ಅಂಗಿರಸ್ಸುವಿನ ಪುತ್ರ ಮಹಾಯೋಗಿ ಸಂವರ್ತಕ ಋಷಿಯು ಯಜ್ಞವನ್ನು ಮಾಡಿಸಿದ್ದನು. ॥ ೨೫-೨೬ ॥ ಮರುತ್ತ ಚಕ್ರವರ್ತಿಯ ಯಜ್ಞದಂತೆ ಬೇರೆಯಾವ ಯಜ್ಞವೂ ಆಗಲಿಲ್ಲ. ಆ ಯಜ್ಞದಲ್ಲಿ ಉಪಯೋಗಿಸುತ್ತಿದ್ದ ಸಮಸ್ತ ಪಾತ್ರೆಗಳು ಸುಂದರವಾಗಿಯೂ, ಸುವರ್ಣಮಯವಾಗಿಯೂ ಆಗಿದ್ದವು. ॥ ೨೭ ॥ ಆ ಯಜ್ಞದಲ್ಲಿ ಸೋಮಪಾನ ಮಾಡಿದ ಇಂದ್ರನು ಮತ್ತನಾಗಿದ್ದನು. ದಕ್ಷಿಣೆಗಳಿಂದ ಬ್ರಾಹ್ಮಣರು ತೃಪ್ತರಾಗಿದ್ದರು. ಅಲ್ಲಿ ಬಡಿಸುವವರು ಮರುದ್ಗಣರಾಗಿದ್ದು ಸಭಾಸದರು ವಿಶ್ವೇದೇವತೆಗಳಾಗಿದ್ದರು. ॥ ೨೮ ॥

ಮರುತ್ತನಿಗೆ ದಮನೆಂಬ ಪುತ್ರನಿದ್ದನು. ದಮನಿಂದ ರಾಜವರ್ಧನ, ಅವನಿಂದ ಸುಧೃತಿ ಮತ್ತು ಸುಧೃತಿಯಿಂದ ನರನೆಂಬ ಪುತ್ರನು ಹುಟ್ಟಿದನು. ॥ ೨೯ ॥ ನರನಿಂದ ಕೇವಲ, ಕೇವಲನಿಂದ ಬಂಧುಮಾನ್, ಬಂಧುಮಂತನಿಂದ ವೇಗವಾನ್, ವೇಗವಂತನಿಂದ ಬಂಧು ಹಾಗೂ ಬಂಧುವಿನಿಂದ ತೃಣಬಿಂದು ರಾಜನ ಜನ್ಮವಾಯಿತು. ॥ ೩೦ ॥ ತೃಣಬಿಂದುವು ಆದರ್ಶ ಗುಣಗಳ ಭಂಡಾರನಾಗಿದ್ದನು. ಅಪ್ಸರೆಯರಲ್ಲಿ ಶ್ರೇಷ್ಠಳಾದ ಅಲಂಬುಷಾದೇವಿಯು ಇವನನ್ನು ವರಿಸಿದಳು. ಅವಳಿಂದ ಅವನಿಗೆ ಕೆಲವು ಪುತ್ರರೂ ಮತ್ತು ಇಡವಿಡಾ ಎಂಬ ಒಂದು ಕನ್ಯೆಯೂ ಹುಟ್ಟಿದಳು. ॥ ೩೧ ॥ ಮುನಿಶ್ರೇಷ್ಠರಾದ ವಿಶ್ರವಸುವು ತನ್ನ ಯೋಗೇಶ್ವರ ತಂದೆಯಾದ ಪುಲಸ್ತ್ಯರಿಂದ ಉತ್ತಮ ವಿದ್ಯೆಯನ್ನು ಪಡೆದು, ಇಡವಿಡಾ ಗರ್ಭದಿಂದ ಲೋಕಪಾಲ ಕುಬೇರನನ್ನು ಪುತ್ರನನ್ನಾಗಿ ಪಡೆದನು. ॥ ೩೨ ॥ ತೃಣಬಿಂದು ಮಹಾರಾಜನು ತನ್ನ ಧರ್ಮಪತ್ನಿಯಿಂದ ವಿಶಾಲ, ಶೂನ್ಯಬಂಧು ಮತ್ತು ಧೂಮ್ರಕೇತು ಎಂಬ ಮೂವರು ಪುತ್ರರನ್ನು ಪಡೆದನು. ಅವರಲ್ಲಿ ವಿಶಾಲರಾಜನು ವಂಶಧರನಾದನು. ಅವನು ವೈಶಾಲಿ ಎಂಬ ನಗರವನ್ನು ಸ್ಥಾಪಿಸಿದನು. ॥ ೩೩ ॥ ವಿಶಾಲನಿಂದ ಹೇಮಚಂದ್ರ, ಹೇಮಚಂದ್ರನಿಂದ ಧೂಮ್ರಾಕ್ಷ, ಧೂಮ್ರಾಕ್ಷನಿಂದ ಸಂಯಮ ಮತ್ತು ಸಂಯಮನಿಂದ ಕೃಶಾಶ್ವ ಮತ್ತು ದೇವಜರೆಂಬ ಇರ್ವರು ಪುತ್ರರು ಉದಿಸಿದರು. ॥ ೩೪ ॥ ಕೃಶಾಶ್ವನಿಗೆ ಸೋಮದತ್ತನೆಂಬ ಪುತ್ರನಿದ್ದನು. ಅವನು ಅಶ್ವಮೇಧದ ಮೂಲಕ ಯಜ್ಞಪತಿ ಭಗವಂತನನ್ನು ಆರಾಧಿಸಿ, ಯೋಗೇಶ್ವರ ಮಹಾತ್ಮರ ಆಶ್ರಯ ಪಡೆದು ಉತ್ತಮಗತಿಯನ್ನು ಪಡೆದುಕೊಂಡನು. ॥ ೩೫ ॥ ಸೋಮದತ್ತನ ಮಗ ಸುಮತಿಯಾದನು ಮತ್ತು ಸುಮತಿಯಿಂದ ಜನಮೇಜಯನಾದನು. ಇವರೆಲ್ಲರೂ ತೃಣಬಿಂದುವಿನ ಕೀರ್ತಿಯನ್ನು ಬೆಳೆಸುವ ವಿಶಾಲ ವಂಶದ ರಾಜರಾಗಿದ್ದರು. ॥ ೩೬ ॥

ಎರಡನೆಯ ಅಧ್ಯಾಯವು ಮುಗಿಯಿತು. ॥ ೨ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ನವಮ ಸ್ಕಂಧೇ ದ್ವಿತೀಯೋಽಧ್ಯಾಯಃ ॥ ೨ ॥

ಮೂರನೆಯ ಅಧ್ಯಾಯ

ಮಹರ್ಷಿ ಚ್ಯವನ ಮತ್ತು ಸುಕನ್ಯೆಯ ಚರಿತ್ರೆ, ಶರ್ಯಾತಿರಾಜನ ವಂಶವರ್ಣನೆ

ಶ್ರೀಶುಕ ಉವಾಚ

**ಶರ್ಯಾತಿರ್ಮಾನವೋ ರಾಜಾ ಬ್ರಹ್ಮಿಷ್ಠಃ ಸ ಬಭೂವ ಹ ।
ಯೋ ವಾ ಅಂಗಿರಸಾಂ ಸತ್ರೇ ದ್ವಿತೀಯಮಹ ಊಚಿವಾನ್ ॥ ೧ ॥**

**ಸುಕನ್ಯಾ ನಾಮ ತಸ್ಯಾಸೀತ್ಕನ್ಯಾ ಕಮಲಲೋಚನಾ ।
ತಯಾ ಸಾರ್ಧಂ ವನಗತೋ ಹ್ಯಗಮಚ್ಚ್ಯವನಾಶ್ರಮಮ್ ॥ ೨ ॥**

**ಸಾ ಸಖೀಭಿಃ ಪರಿವೃತಾ ವಿಚಿನ್ವತ್ಯಂಘ್ರಿಪಾನ್ವನೇ ।
ವಲ್ಮೀಕರಂಧ್ರೇ ದದೃಶೇ ಖದ್ಯೋತೇ ಇವ ಜ್ಯೋತಿಷೀ ॥ ೩ ॥**

**ತೇ ದೈವಚೋದಿತಾ ಬಾಲಾ ಜ್ಯೋತಿಷೀ ಕಂಟಕೇನ ವೈ ।
ಅವಿಧ್ಯನ್ಮುಗ್ಧಭಾವೇನ ಸುಸ್ರಾವಾಸೃಕ್ ತತೋ ಬಹು ॥ ೪ ॥**

**ಶಕೃನ್ಮೂತ್ರನಿರೋಧೋಽಭೂತ್ ಸೈನಿಕಾನಾಂ ಚ ತತ್ಕ್ಷಣಾತ್ ।
ರಾಜರ್ಷಿಸ್ತಮುಪಾಲಕ್ಷ್ಯ ಪುರುಷಾನ್ವಿಸ್ಮಿತೋಽಬ್ರವೀತ್ ॥ ೫ ॥**

**ಅಪ್ಯಭದ್ರಂ ನ ಯುಷ್ಮಾಭಿರ್ಭಾರ್ಗವಸ್ಯ ವಿಚೇಷ್ಟಿತಮ್ ।
ವ್ಯಕ್ತಂ ಕೇನಾಪಿ ನಸ್ತಸ್ಯ ಕೃತಮಾಶ್ರಮದೂಷಣಮ್ ॥ ೬ ॥**

**ಸುಕನ್ಯಾ ಪ್ರಾಹ ಪಿತರಂ ಭೀತಾ ಕಿಂಚಿತ್ಕೃತಂ ಮಯಾ ।
ದ್ವೇ ಜ್ಯೋತಿಷೀ ಅಜಾನಂತ್ಯಾ ನಿರ್ಭಿನ್ನೇ ಕಂಟಕೇನ ವೈ ॥ ೭ ॥**

**ದುಹಿತುಸ್ತದ್ವಚಃ ಶ್ರುತ್ವಾ ಶರ್ಯಾತಿರ್ಜಾತಸಾಧ್ವಸಃ ।
ಮುನಿಂ ಪ್ರಸಾದಯಾಮಾಸ ವಲ್ಮೀಕಾಂತರ್ಹಿತಂ ಶನೈಃ ॥ ೮ ॥**

**ತದಭಿಪ್ರಾಯಮಾಜ್ಞಾಯ ಪ್ರಾದಾದ್ದುಹಿತರಂ ಮುನೇಃ ।
ಕೃಚ್ಛ್ರಾನ್ಮುಕ್ತಸ್ತಮಾಮಂತ್ರ್ಯ ಪುರಂ ಪ್ರಾಯಾತ್ಸಮಾಹಿತಃ ॥ ೯ ॥**

**ಸುಕನ್ಯಾ ಚ್ಯವನಂ ಪ್ರಾಪ್ಯ ಪತಿಂ ಪರಮಕೋಪನಮ್ ।
ಪ್ರೀಣಯಾಮಾಸ ಚಿತ್ತಜ್ಞಾ ಅಪ್ರಮತ್ತಾನುವೃತ್ತಿಭಿಃ ॥ ೧೦ ॥**

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಎಲೈ ಪರೀಕ್ಷಿತನೇ ! ಮನುಪುತ್ರನಾದ ಶರ್ಯಾತಿರಾಜನು ವೇದಗಳ ನಿಷ್ಠಾವಂತ ವಿದ್ವಾಂಸನಾಗಿದ್ದನು. ಅವನು ಅಂಗಿರಾ ಗೋತ್ರದ ಋಷಿಗಳ ಯಜ್ಞದಲ್ಲಿ ಎರಡನೆಯ ದಿನದ ಕರ್ಮವನ್ನು ತಿಳಿಸಿದ್ದನು. ॥ ೧ ॥ ಅವನಿಗೆ ಕಮಲಲೋಚನೆಯಾದ ಸುಕನ್ಯೆ ಎಂಬ ಓರ್ವ ಮಗಳಿದ್ದಳು. ಒಂದು ದಿನ ಶರ್ಯಾತಿರಾಜನು ತನ್ನ ಕನ್ಯೆಯೊಂದಿಗೆ ವನದಲ್ಲಿ ಸುತ್ತಾಡುತ್ತಾ ಚ್ಯವನಋಷಿಯ ಆಶ್ರಮಕ್ಕೆ ಬಂದು ತಲುಪಿದನು. ॥ ೨ ॥ ಸುಕನ್ಯೆಯು ತನ್ನ ಸಖಿಯರೊಂದಿಗೆ ವನದಲ್ಲಿ ಅಲೆದಾಡುತ್ತಾ ವೃಕ್ಷಗಳ ಸೌಂದರ್ಯವನ್ನು ನೋಡುತ್ತಿದ್ದಳು. ವೃಕ್ಷದ ಬುಡದಲ್ಲಿದ್ದ ಒಂದು ಹುತ್ತದಲ್ಲಿ ಸುಕನ್ಯೆಯು ಮಿಣುಕುಹುಳುಗಳಂತೆ ಮಿನುಗುತ್ತಿದ್ದ ಎರಡು ಜ್ಯೋತಿಗಳನ್ನು (ಅವು ಚ್ಯವನ ಮಹರ್ಷಿಯ ಎರಡುಕಣ್ಣುಗಳಾಗಿದ್ದವು.) ನೋಡಿದಳು. ॥ ೩ ॥ ದೈವಪ್ರೇರಣೆಯಿಂದಾಗಿ ಅರಿವಿಲ್ಲದ ಆ ಬಾಲೆಯು ಹುಡುಗಾಟಕ್ಕಾಗಿ ಮಿನುಗುತ್ತಿದ್ದ ಆ ಬೆಳಕುಗಳನ್ನು ಮುಳ್ಳಿನಿಂದ ಚುಚ್ಚಿದಳು. ಇದರಿಂದ ಚುಚ್ಚಿದ್ದ ಸ್ಥಳದಿಂದ ರಕ್ತವು ಹರಿಯತೊಡಗಿತು. ॥ ೪ ॥ ಅದೇ ಸಮಯದಲ್ಲಿ ರಾಜಾ ಶರ್ಯಾತಿಯ ಸೈನಿಕರ ಮಲ-ಮೂತ್ರಗಳು ಅವರೋಧವಾದುವು. ರಾಜರ್ಷಿ ಶರ್ಯಾತಿಗೆ ಇದನ್ನು ನೋಡಿ ಬಹಳ ಆಶ್ಚರ್ಯವಾಯಿತು. ಅವನು ಸೈನಿಕರಲ್ಲಿ ಕೇಳಿದನು – ॥ ೫ ॥ ಸೈನಿಕರೇ ! ನೀವೇನಾದರೂ ಚ್ಯವನಮಹರ್ಷಿಯ ವಿಷಯದಲ್ಲಿ ಅನುಚಿತವಾಗಿ ವ್ಯವಹರಿಸಿರಾ ? ನಮ್ಮಲ್ಲಿ ಯಾರಾದರೂ ಅವರ ಆಶ್ರಮದಲ್ಲಿ ದುಷ್ಕಾರ್ಯವನ್ನು ಮಾಡಿರಬಹುದೆಂದು ನನಗೆ ಸ್ಪಷ್ಟವಾಗಿ ಕಾಣುತ್ತಿದೆ. ॥ ೬ ॥ ಆಗ ಸುಕನ್ಯೆಯು ತಂದೆಯ ಬಳಿಯಲ್ಲಿ ಹೆದರುತ್ತಲೇ ಹೇಳಿದಳು – ಅಪ್ಪಾ ! ನಾನೇ ಅಪರಾಧವನ್ನು ಮಾಡಿಬಿಟ್ಟಿದ್ದೇನೆ. ನಾನು ಅರಿವಿಲ್ಲದೆ ಹುತ್ತದಲ್ಲಿ ಥಳ-ಥಳಿಸುತ್ತಿದ್ದ ಎರಡು ಜ್ಯೋತಿಗಳನ್ನು ಮುಳ್ಳಿನಿಂದ ತಿವಿದುಬಿಟ್ಟಿರುವೆನು. ॥ ೭ ॥ ಮಗಳ ಈ ಮಾತನ್ನು ಕೇಳಿ ಶರ್ಯಾತಿಗೆ ಬಹಳ ಭಯವಾಯಿತು. ಅವನು ಹುತ್ತದಲ್ಲಿದ್ದ (ಕಣ್ಣುಗಳನ್ನು ಕಳಕೊಂಡ) ಚ್ಯವನಮಹರ್ಷಿಯನ್ನು ಸ್ತೋತ್ರಮಾಡುತ್ತಾ ಸ್ವಲ್ಪ-ಸ್ವಲ್ಪವಾಗಿ ಅವನನ್ನು ಸಮಾಧಾನಗೊಳಿಸಿದನು. ॥ ೮ ॥ ಅನಂತರ ಚ್ಯವನಮುನಿಯ ಅಭಿಪ್ರಾಯವನ್ನು ಅರಿತು ಅವನು ತನ್ನ ಮಗಳನ್ನು ವಿವಾಹಮಾಡಿಕೊಟ್ಟನು. ಚ್ಯವನನ ಅನುಗ್ರಹದಿಂದ ಈ ಸಂಕಟದಿಂದ ಬಿಡುಗಡೆಹೊಂದಿ, ಸಮಾಧಾನಗೊಂಡ ಶರ್ಯಾತಿಯು ಅವರ ಅನುಮತಿಯನ್ನು ಪಡೆದು ತನ್ನ ರಾಜಧಾನಿಗೆ ಮರಳಿದನು. ॥ ೯ ॥

ಇತ್ತ ಸುಕನ್ಯೆಯು ಪರಮಕ್ರೋಧಿಯಾದ ಚ್ಯವನಋಷಿಯನ್ನು ತನ್ನ ಪತಿಯನ್ನಾಗಿ ಪಡೆದುಕೊಂಡು ಬಹಳ ಎಚ್ಚರಿಕೆಯಿಂದ ಅವರ ಸೇವೆಮಾಡುತ್ತಾ ಅವರನ್ನು ಸಂತೋಷಪಡಿಸುತ್ತಿದ್ದಳು. ಅವಳು ಅವರ ಮನೋವೃತ್ತಿಯನ್ನು ಅರಿತುಕೊಂಡು ಅದಕ್ಕನುಸಾರವಾಗಿಯೇ ವರ್ತಿಸುತ್ತಿದ್ದಳು. ॥ ೧೦ ॥

ಕಸ್ಯಚಿತ್ತ್ವಥ ಕಾಲಸ್ಯ ನಾಸತ್ಯಾವಾಶ್ರಮಾಗತೌ ।
ತೌ ಪೂಜಯಿತ್ವಾ ಪ್ರೋವಾಚ ವಯೋ ಮೇ ದತ್ತಮೀಶ್ವರೌ ॥ ೧೧ ॥

ಗ್ರಹಂ ಗ್ರಹೀಷ್ಯೇ ಸೋಮಸ್ಯ ಯಜ್ಞೇ ವಾಮಪ್ಯಸೋಮಪೋಃ ।
ಕ್ರಿಯತಾಂ ಮೇ ವಯೋ ರೂಪಂ ಪ್ರಮದಾನಾಂ ಯದೀಪ್ಸಿತಮ್ ॥ ೧೨ ॥

ಬಾಢಮಿತ್ಯೂಚತುರ್ವಿಪ್ರಮಭಿನಂದ್ಯ ಭಿಷಕ್ತಮೌ ।
ನಿಮಜ್ಜತಾಂ ಭವಾನಸ್ಮಿನ್ ಹ್ರದೇ ಸಿದ್ಧವಿನಿರ್ಮಿತೇ ॥ ೧೩ ॥

ಇತ್ಯುಕ್ತ್ವಾ ಜರಯಾ ಗ್ರಸ್ತದೇಹೋ ಧಮನಿಸಂತತಃ ।
ಹ್ರದಂ ಪ್ರವೇಶಿತೋಽಶ್ವಿಭ್ಯಾಂ ವಲೀಪಲಿತವಿಪ್ರಿಯಃ ॥ ೧೪ ॥

ಪುರುಷಾಸ್ತ್ರಯ ಉತ್ತಸ್ಥುರಪೀವ್ಯಾ ವನಿತಾಪ್ರಿಯಾಃ ।
ಪದ್ಮಸ್ರಜಃ ಕುಂಡಲಿನಸ್ತುಲ್ಯರೂಪಾಃ ಸುವಾಸಸಃ ॥ ೧೫ ॥

ತಾನ್ನಿರೀಕ್ಷ್ಯ ವರಾರೋಹಾ ಸರೂಪಾನ್ಸೂರ್ಯವರ್ಚಸಃ ।
ಅಜಾನತೀ ಪತಿಂ ಸಾಧ್ವೀ ಅಶ್ವಿನೌ ಶರಣಂ ಯಯೌ ॥ ೧೬ ॥

ದರ್ಶಯಿತ್ವಾ ಪತಿಂ ತಸ್ಯೈ ಪಾತಿವ್ರತ್ಯೇನ ತೋಷಿತೌ ।
ಋಷಿಮಾಮಂತ್ರ್ಯ ಯಯತುರ್ವಿಮಾನೇನ ತ್ರಿವಿಷ್ಟಪಮ್ ॥ ೧೭ ॥

ಯಕ್ಷ್ಯಮಾಣೋಽಥ ಶರ್ಯಾತಿಶ್ಚ್ಯವನಸ್ಯಾಶ್ರಮಂ ಗತಃ ।
ದದರ್ಶ ದುಹಿತುಃ ಪಾರ್ಶ್ವೇ ಪುರುಷಂ ಸೂರ್ಯವರ್ಚಸಮ್ ॥ ೧೮ ॥

ರಾಜಾ ದುಹಿತರಂ ಪ್ರಾಹ ಕೃತಪಾದಾಭಿವಂದನಾಮ್ ।
ಆಶಿಷಶ್ಚಾಪ್ರಯುಂಜಾನೋ ನಾತಿಪ್ರೀತಮನಾ ಇವ ॥ ೧೯ ॥

ಚಿಕೀರ್ಷಿತಂ ತೇ ಕಿಮಿದಂ ಪತಿಸ್ತ್ವಯಾ
ಪ್ರಲಂಭಿತೋ ಲೋಕನಮಸ್ಕೃತೋ ಮುನಿಃ ।
ಯತ್ತ್ವಂ ಜರಾಗ್ರಸ್ತಮಸತ್ಯಸಮ್ಮತಂ
ವಿಹಾಯ ಜಾರಂ ಭಜಸೇಽಮುಮಧ್ವಗಮ್ ॥ ೨೦ ॥

ಕೆಲವು ಕಾಲ ಕಳೆದ ಬಳಿಕ ಒಮ್ಮೆ ಚ್ಯವನರ ಆಶ್ರಮಕ್ಕೆ ಅಶ್ವಿನೀಕುಮಾರರಿಬ್ಬರೂ ಆಗಮಿಸಿದರು. ಚ್ಯವನರು ಅವರಿಗೆ ಯಥೋಚಿತವಾಗಿ ಸತ್ಕಾರಗೈದು ಹೇಳಿದರು – ನೀವಿಬ್ಬರೂ ಸಮರ್ಥರಾಗಿದ್ದೀರಿ. ಆದ್ದರಿಂದ ನನ್ನನ್ನು ಯುವಕನನ್ನಾಗಿಸಿರಿ. ನನ್ನ ರೂಪ ಹಾಗೂ ವಯಸ್ಸು ಯುವತಿಸ್ತ್ರೀಯರೂ ಬಯಸುವಂತೆ ಸುಂದರವಾಗಿಸಿರಿ. ನಿಮಗೆ ಸೋಮಪಾನದ ಅಧಿಕಾರವಿಲ್ಲ ಎಂಬುದನ್ನೂ ನಾನು ಬಲ್ಲೆನು. ಹೀಗಿದ್ದರೂ ನಾನು ನಿಮಗೆ ಸೋಮರಸದ ಪಾಲನ್ನು ಕೊಡುವೆನು. ॥ ೧೧-೧೨ ॥ ವೈದ್ಯಶಿರೋಮಣಿಗಳಾದ ಅಶ್ವಿನೀಕುಮಾರರು ಚ್ಯವನಮಹರ್ಷಿಯನ್ನು ಅಭಿನಂದಿಸುತ್ತಾ 'ಹಾಗೇ ಆಗಲಿ' ಎಂದು ಹೇಳಿದರು. ಅನಂತರ 'ಇದು ಸಿದ್ಧರ ಮೂಲಕ ನಿರ್ಮಾಣಗೊಂಡ ಒಂದು ಕುಂಡವಾಗಿದೆ. ಇದರಲ್ಲಿ ನೀವು ಸ್ನಾನಮಾಡಿರಿ' ಎಂದು ಹೇಳಿದರು. ॥ ೧೩ ॥ ಚ್ಯವನಮುನಿಯ ಶರೀರದಲ್ಲಿ ಮುದಿತನವು ಆವರಿಸಿತ್ತು. ಮೈಮೇಲೆ ನರಗಳು ಎದ್ದು ಕಾಣುತ್ತಿದ್ದವು. ಚರ್ಮ ಸುಕ್ಕುಗಟ್ಟಿತ್ತು. ಕೂದಲು ಹಣ್ಣಾದ್ದರಿಂದ ಕುರೂಪಿಗಳಂತೆ ಕಾಣುತ್ತಿದ್ದರು. ಅಶ್ವಿನೀಕುಮಾರರು ಅವರನ್ನು ತನ್ನ ಜೊತೆಗೆ ಕರೆದುಕೊಂಡು ಹೋಗಿ ಕುಂಡದಲ್ಲಿ ಪ್ರವೇಶಿಸಿದರು. ೧೪ ॥ ಆ ಸಮಯದಲ್ಲಿ ಕುಂಡದಿಂದ ಮೂವರು ಪುರುಷರು ಹೊರಬಂದರು. ಅವರು ಮೂವರೂ ಕಮಲಗಳ ಮಾಲೆಯನ್ನೂ, ಕುಂಡಲ ಮತ್ತು ಸುಂದರವಾದ ವಸ್ತ್ರಗಳನ್ನು ಧರಿಸಿದ್ದು, ಒಂದೇ ರೀತಿಯಾಗಿ ಕಂಡು ಬರುತ್ತಿದ್ದರು. ಅವರು ಅತೀವ ಸುಂದರರಾಗಿದ್ದು ಸ್ತ್ರೀಯರಿಗೆ ಪ್ರಿಯದರ್ಶನರಾಗಿದ್ದರು. ॥ ೧೫ ॥ ಪರಮಸಾಧ್ವಿಯಾದ ಸುಂದರಿಯಾದ ಸುಕನ್ಯೆಯು – ಈ ಮೂವರೂ ಒಂದೇ ರೂಪವುಳ್ಳವರಾಗಿದ್ದು, ಸೂರ್ಯನಂತೆ ತೇಜಸ್ವಿಗಳಾಗಿರುವುದನ್ನು ನೋಡಿದಾಗ ತನ್ನ ಪತಿಯನ್ನು ಗುರುತಿಸಲಾರದೆ ಅವಳು ಅಶ್ವಿನೀಕುಮಾರರನ್ನೇ ಶರಣು ಹೊಂದಿದಳು. ॥ ೧೬ ॥ ಅವಳ ಪಾತಿವ್ರತ್ಯದಿಂದ ಅಶ್ವಿನೀಕುಮಾರರು ಪರಮಸಂತುಷ್ಟರಾದರು. ಅವರು ಅವಳ ಪತಿಯನ್ನು ತೋರಿಸಿಕೊಟ್ಟು, ಮತ್ತೆ ಚ್ಯವನರಿಂದ ಅನುಮತಿಯನ್ನು ಪಡೆದು ವಿಮಾನದ ಮೂಲಕ ಅವರು ಸ್ವರ್ಗಕ್ಕೆ ಹೊರಟು ಹೋದರು. ॥ ೧೭ ॥

ಕೆಲಕಾಲದ ನಂತರ ಯಜ್ಞಮಾಡುವ ಇಚ್ಛೆಯಿಂದ ಶರ್ಯಾತಿ ರಾಜನು ಚ್ಯವನಮುನಿಯ ಆಶ್ರಮಕ್ಕೆ ಬಂದನು. ಅಲ್ಲಿ ತನ್ನ ಮಗಳು ಸುಕನ್ಯೆಯ ಬಳಿಯಲ್ಲಿ ಸೂರ್ಯನಂತೆ ತೇಜಸ್ವಿ ಪುರುಷನೊಬ್ಬನು ಕುಳಿತಿರುವುದನ್ನು ಕಂಡನು. ॥ ೧೮ ॥ ಸುಕನ್ಯೆಯು ತಂದೆಯ ಚರಣಗಳಿಗೆ ವಂದಿಸಿಕೊಂಡಳು. ಶರ್ಯಾತಿಯು ಅವಳಿಗೆ ಆಶೀರ್ವದಿಸದೆ ಸ್ವಲ್ಪ ಅಸಂತೋಷವನ್ನು ವ್ಯಕ್ತಪಡಿಸುತ್ತಾ ಹೇಳಿದನು – ॥ ೧೯ ॥ ಎಲೈ ದುಷ್ಟಳೇ! ನೀನು ಇದೇನು ಮಾಡಿಬಿಟ್ಟೆ? ಲೋಕನಮಸ್ಕೃತನಾದ ಚ್ಯವನಮುನಿಯನ್ನು ವಂಚಿಸಿಬಿಟ್ಟೆಯಾ? ನೀನು ಖಂಡಿತವಾಗಿ ಇವನು ಮುದುಕನೂ, ನಿಷ್ಪ್ರಯೋಜಕನೂ ಎಂದು ತಿಳಿದು ತ್ಯಜಿಸಿ, ಈ ದಾರಿಹೋಕ ಜಾರಪುರುಷನನ್ನು ಸೇವಿಸುತ್ತಿರುವೆಯಲ್ಲ? ॥ ೨೦ ॥

ಕಥಂ ಮತಿಸ್ತೇಽವಗತಾನ್ಯಥಾ ಸತಾಂ
ಕುಲಪ್ರಸೂತೇ ಕುಲದೂಷಣಂ ತ್ವಿದಮ್ ।
ಬಿಭರ್ಷಿ ಜಾರಂ ಯದಪತ್ರಪಾ ಕುಲಂ
ಪಿತುಶ್ಚ ಭರ್ತುಶ್ಚ ನಯಸ್ಯಧಸ್ತಮಃ ॥ ೨೦ ॥

ಏವಂ ಬ್ರುವಾಣಂ ಪಿತರಂ ಸ್ಮಯಮಾನಾ ಶುಚಿಸ್ಮಿತಾ ।
ಉವಾಚ ತಾತ ಜಾಮಾತಾ ತವೈಷ ಭೃಗುನಂದನಃ ॥ ೨೧ ॥

ಶಶಂಸ ಪಿತ್ರೇ ತತ್ಸರ್ವಂ ವಯೋರೂಪಾಭಿಲಂಭನಮ್ ।
ವಿಸ್ಮಿತಃ ಪರಮಪ್ರೀತಸ್ತನಯಾಂ ಪರಿಷಸ್ವಜೇ ॥ ೨೨ ॥

ಸೋಮೇನ ಯಾಜಯನ್ವೀರಂ ಗ್ರಹಂ ಸೋಮಸ್ಯ ಚಾಗ್ರಹೀತ್ ।
ಅಸೋಮಪೋರಪ್ಯಶ್ವಿನೋಶ್ಚ್ಯವನಃ ಸ್ವೇನ ತೇಜಸಾ ॥ ೨೩ ॥

ಹಂತುಂ ತಮಾದದೇ ವಜ್ರಂ ಸದ್ಯೋಮನ್ಯುರಮರ್ಷಿತಃ ।
ಸವಜ್ರಂ ಸ್ತಂಭಯಾಮಾಸ ಭುಜಮಿಂದ್ರಸ್ಯ ಭಾರ್ಗವಃ ॥ ೨೪ ॥

ಅನ್ವಜಾನಂಸ್ತತಃ ಸರ್ವೇ ಗ್ರಹಂ ಸೋಮಸ್ಯ ಚಾಶ್ವಿನೋಃ ।
ಭಿಷಜಾವಿತಿ ಯತ್ಪೂರ್ವಂ ಸೋಮಾಹುತ್ಯಾ ಬಹಿಷ್ಕೃತೌ ॥ ೨೫ ॥

ಉತ್ತಾನಬರ್ಹಿರಾನರ್ತೋ ಭೂರಿಷೇಣ ಇತಿ ತ್ರಯಃ ।
ಶರ್ಯಾತೇರಭವನ್ಪುತ್ರಾ ಆನರ್ತಾದ್ ರೇವತೋಽಭವತ್ ॥ ೨೬ ॥

ಸೋಽನ್ತಃಸಮುದ್ರೇ ನಗರೀಂ ವಿನಿರ್ಮಾಯ ಕುಶಸ್ಥಲೀಮ್ ।
ಆಸ್ಥಿತೋಽಭುಂಕ್ತ ವಿಷಯಾನಾನರ್ತಾದೀನರಿಂದಮ ॥ ೨೭ ॥

ತಸ್ಯ ಪುತ್ರಶತಂ ಜಜ್ಞೇ ಕಕುದ್ಮಿಜ್ಯೇಷ್ಠಮುತ್ತಮಮ್ ।
ಕಕುದ್ಮೀ ರೇವತೀಂ ಕನ್ಯಾಂ ಸ್ವಾಮಾದಾಯ ವಿಭುಂ ಗತಃ ॥ ೨೮ ॥

ಕನ್ಯಾವರಂ ಪರಿಪ್ರಷ್ಟುಂ ಬ್ರಹ್ಮಲೋಕಮಪಾವೃತಮ್ ।
ಆವರ್ತಮಾನೇ ಗಾಂಧರ್ವೇ ಸ್ಥಿತೋಽಲಬ್ಧಕ್ಷಣಃ ಕ್ಷಣಮ್ ॥ ೨೯ ॥

ತದಂತ ಆದ್ಯಮಾನಮ್ಯ ಸ್ವಾಭಿಪ್ರಾಯಂ ನ್ಯವೇದಯತ್ ।
ತಚ್ಛ್ರುತ್ವಾ ಭಗವಾನ್ಬ್ರಹ್ಮಾ ಪ್ರಹಸ್ಯ ತಮುವಾಚ ಹ ॥ ೩೦ ॥

ಅಹೋ ರಾಜನ್ನಿರುದ್ಧಾಸ್ತೇ ಕಾಲೇನ ಹೃದಿ ಯೇ ಕೃತಾಃ ।
ತತ್ಪುತ್ರಪೌತ್ರನಪ್ತೄಣಾಂ ಗೋತ್ರಾಣಿ ಚ ನ ಶೃಣ್ಮಹೇ ॥ ೩೧ ॥

ನೀನು ಶ್ರೇಷ್ಠ ಕುಲದಲ್ಲಿ ಹುಟ್ಟಿದವಳು. ಇಂತಹ ವಿಪರೀತ ಬುದ್ಧಿಯು ನಿನಗೆ ಹೇಗೆ ಉಂಟಾಯಿತು? ನಿನ್ನ ಈ ವ್ಯವಹಾರವಾದರೋ ಕುಲಕಲಂಕವಾಗಿದೆ. ಅಯ್ಯೋ! ಶಿವ! ಶಿವಾ!! ನೀನು ನಿರ್ಲಜ್ಜಳಾಗಿ ಜಾರಪುರುಷನ ಸೇವೆ ಮಾಡುತ್ತಿರುವೆ. ಹೀಗೆ ತಂದೆಯ ಮತ್ತು ಪತಿಯ ಎರಡೂ ವಂಶಗಳನ್ನೂ ಘೋರ ನರಕಕ್ಕೆ ತಳ್ಳಿ ಬಿಟ್ಟಿರುವೆಯಲ್ಲ! ॥ ೨೦ ॥ ಶುಚಿಸ್ಮಿತೆಯಾದ ಸುಕನ್ಯೆಯು ಮುಗುಳ್ನಗುತ್ತಾ ತನ್ನನ್ನು ನಿಂದಿಸುತ್ತಿದ್ದ ತಂದೆ ಶರ್ಯಾತಿಗೆ ಹೇಳಿದಳು – ಅಪ್ಪಾ! ಇವರು ನಿಮ್ಮ ಅಳಿಯ ಭೃಗುನಂದನ ಚ್ಯವನ ಮಹರ್ಷಿಗಳೇ ಆಗಿದ್ದಾರೆ. ॥ ೨೧ ॥ ಅನಂತರ ಅವಳು ಮಹರ್ಷಿ ಚ್ಯವನರ ಯೌವನ ಮತ್ತು ಸೌಂದರ್ಯವು ದೊರೆತ ಎಲ್ಲ ವೃತ್ತಾಂತವನ್ನು ತಂದೆಯ ಬಳಿಯಲ್ಲಿ ಹೇಳಿದಳು. ಅದೆಲ್ಲವನ್ನೂ ಕೇಳಿ ಶರ್ಯಾತಿರಾಜನಿಗೆ ಅತ್ಯಂತ ವಿಸ್ಮಯವಾಯಿತು. ಅವನು ತುಂಬಾ ಪ್ರೇಮದಿಂದ ತನ್ನ ಮಗಳನ್ನು ಅಪ್ಪಿಕೊಂಡನು.॥ ೨೨ ।

ಮಹರ್ಷಿ ಚ್ಯವನರು ವೀರಶರ್ಯಾತಿಯಿಂದ ಸೋಮಯಜ್ಞದ ಅನುಷ್ಠಾನವನ್ನು ಮಾಡಿಸಿ, ಸೋಮರಸದ ಅಧಿಕಾರಿಗಳಲ್ಲದಿದ್ದರೂ ಅಶ್ವಿನೀಕುಮಾರರಿಗೆ ತನ್ನ ಪ್ರಭಾವದಿಂದ ಸೋಮಪಾನ ಮಾಡಿಸಿದರು. ॥ ೨೩ । ಇದನ್ನು ಸಹಿಸಿಕೊಳ್ಳಲಾರದೆ ಇಂದ್ರನು ಪರಮಕ್ರುದ್ಧನಾದನು. ಶರ್ಯಾತಿಯನ್ನು ಕೊಲ್ಲಲಿಕ್ಕಾಗಿ ವಜ್ರಾಯುಧವನ್ನೇ ಮೇಲೆತ್ತಿಕೊಂಡನು. ಮಹರ್ಷಿಚ್ಯವನರು ವಜ್ರದೊಂದಿಗೆ ಅವನ ಕೈಯನ್ನು ಹಾಗೆಯೇ ಸ್ತಂಭಿಸಿಬಿಟ್ಟರು. । ೨೪ ॥ ಆಗ ಎಲ್ಲ ದೇವತೆಗಳು ಅಶ್ವಿನೀಕುಮಾರರಿಗೆ ಸೋಮಪಾನದ ಪಾಲನ್ನು ಕೊಡಲು ಒಪ್ಪಿಕೊಂಡರು. ವೈದ್ಯರಾಗಿದ್ದ ಕಾರಣ ಮೊದಲು ಅವರು ಸೋಮಪಾನದಿಂದ ಬಹಿಷ್ಕೃತರಾಗಿದ್ದರು. ॥ ೨೫ ॥

ಪರೀಕ್ಷಿತನೇ! ಶರ್ಯಾತಿಗೆ ಉತ್ತಾನಬರ್ಹಿ, ಆನರ್ತ ಮತ್ತು ಭೂರಿಷೇಣರೆಂಬ ಮೂವರು ಪುತ್ರರಿದ್ದರು. ಆನರ್ತನಿಗೆ ರೇವತನೆಂಬ ಮಗನಿದ್ದನು. ॥ ೨೬ ॥ ರಾಜೇಂದ್ರ! ರೇವತನು ಸಮುದ್ರದ ಮಧ್ಯದಲ್ಲಿ ಕುಶಸ್ಥಲೀ ಎಂಬ ಹೆಸರಿನ ಒಂದು ನಗರವನ್ನು ನಿರ್ಮಿಸಿದನು. ಅದರಲ್ಲೇ ವಾಸಿಸುತ್ತಾ ಆನರ್ತ ಮುಂತಾದ ದೇಶಗಳನ್ನು ಆಳುತ್ತಿದ್ದನು. ॥ ೨೭ ॥ ರೇವತನಿಗೆ ನೂರು ಮಂದಿ ಶ್ರೇಷ್ಠ ಮಕ್ಕಳು ಇದ್ದರು. ಅವರಲ್ಲಿ ಹಿರಿಯವನು ಕಕುದ್ಮಿಯಾಗಿದ್ದನು. ಕಕುದ್ಮಿಯು ತನ್ನ ಮಗಳಾದ ರೇವತಿಯನ್ನು ಕರೆದುಕೊಂಡು ಅವಳಿಗೆ ಯೋಗ್ಯನಾದ ವರನ ಕುರಿತು ವಿಚಾರಿಸಲು ಬ್ರಹ್ಮದೇವರ ಬಳಿಗೆ ಹೋದನು. ಆಗಿನ ಕಾಲದಲ್ಲಿ ಬ್ರಹ್ಮಲೋಕದ ರಹದಾರಿಯು ಇಂತಹವರಿಗೆ ಮುಕ್ತವಾಗಿತ್ತು. ಬ್ರಹ್ಮಲೋಕದಲ್ಲಿ ಆಗ ಸಂಗೀತ ಉತ್ಸವ ನಡೆಯುತ್ತಿತ್ತು. ಅದರಿಂದ ಬ್ರಹ್ಮನೊಡನೆ ಮಾತನಾಡಲು ಅವಕಾಶ ಸಿಗಲಿಲ್ಲ; ಸ್ವಲ್ಪಹೊತ್ತು ಅಲ್ಲೇ ಕಾಯಬೇಕಾಯಿತು. ॥ ೨೮ ೨೯ ॥ ಸಂಗೀತೋತ್ಸವದ ಕೊನೆಯಲ್ಲಿ ಬ್ರಹ್ಮದೇವರಿಗೆ ನಮಸ್ಕರಿಸಿ ಕಕುದ್ಮಿಯು ತನ್ನ ಅಭಿಪ್ರಾಯವನ್ನು ನಿವೇದಿಸಿಕೊಂಡನು. ಅವನ ಮಾತನ್ನು ಕೇಳಿ ಬ್ರಹ್ಮನು ನಕ್ಕು ಅವನಲ್ಲಿ ಹೇಳಿದರು – ॥ ೩೦ ॥ 'ಮಹಾರಾಜನೇ! ನೀನು ಮನಸ್ಸಿನಲ್ಲಿ ಯಾವ ರಾಜಕುಮಾರರ ಕುರಿತು ಯೋಚಿಸಿದ್ದೀಯೋ ಅವರೆಲ್ಲರೂ ಕಾಲವಶರಾಗಿರುವರು. ಈಗ ಅವರ ಮಕ್ಕಳು, ಮೊಮ್ಮಕ್ಕಳು ಅಥವಾ ಸಂಬಂಧಿಗಳೇ ಏನು, ಆ ಗೋತ್ರದ ಹೆಸರೂ ಕೂಡ ಈಗ ಕೇಳುವಂತಿಲ್ಲ. ॥ ೩೧ ॥

ಕಾಲೋಽಭಿಯಾತಸ್ತ್ರಿಣವಚತುರ್ಯುಗವಿಕಲ್ಪಿತಃ ।
ತದ್ಗಚ್ಛ ದೇವದೇವಾಂಶೋ ಬಲದೇವೋ ಮಹಾಬಲಃ
॥ ೩೩ ॥

ಕನ್ಯಾರತ್ನಮಿದಂ ರಾಜನ್ ನರರತ್ನಾಯ ದೇಹಿ ಭೋಃ ।
ಭುವೋ ಭಾರಾವತಾರಾಯ ಭಗವಾನ್ಭೂತಭಾವನಃ
॥ ೩೪ ॥

ಅವತೀರ್ಣೋ ನಿಜಾಂಶೇನ ಪುಣ್ಯಶ್ರವಣಕೀರ್ತನಃ ।
ಇತ್ಯಾದಿಷ್ಟೋಽಭಿವಂದ್ಯಾಜಂ ನೃಪಃ ಸ್ವಪುರಮಾಗತಃ ।
ತ್ಯಕ್ತಂ ಪುಣ್ಯಜನತ್ರಾಸಾದ್ ಭ್ರಾತೃಭಿರ್ದಿಕ್ಷ್ವವಸ್ಥಿತೈಃ
॥ ೩೫ ॥

ಸುತಾಂ ದತ್ತ್ವಾನವದ್ಯಾಂಗೀಂ ಬಲಾಯ ಬಲಶಾಲಿನೇ ।
ಬದರ್ಯಾಖ್ಯಂ ಗತೋ ರಾಜಾ ತಪ್ತುಂ ನಾರಾಯಣಾಶ್ರಮಮ್
॥ ೩೬ ॥

ಇಷ್ಟರೊಳಗೆ ಇಪ್ಪತ್ತೇಳು ಚತುರ್ಯುಗಗಳ ಸಮಯವು ಕಳೆದುಹೋಗಿದೆ. ಅದಕ್ಕಾಗಿ ನೀನು ಭೂಲೋಕಕ್ಕೆ ಹೋಗು. ಈಗ ಭಗವಾನ್ ನಾರಾಯಣನ ಅಂಶಾವತಾರ ಮಹಾಬಲಾಢ್ಯನಾದ ಬಲರಾಮದೇವನು ಆಳುತ್ತಿದ್ದಾನೆ. ॥ ೩೩ ॥ ರಾಜನೇ! ಈ ಕನ್ಯಾರತ್ನವನ್ನು ಆ ನರಶ್ರೇಷ್ಠನಾದ ಬಲರಾಮನಿಗೆ ಸಮರ್ಪಿಸಿಬಿಡು. ಅವನ ನಾಮ, ಲೀಲಾದಿಗಳು, ಶ್ರವಣ-ಕೀರ್ತನಗಳು ಬಹಳ ಪವಿತ್ರವಾದವುಗಳು. ಪ್ರಾಣಿಗಳ ಜೀವನ ಸರ್ವಸ್ವನಾದ ಆ ಭಗವಂತನೇ ಭೂಭಾರವನ್ನು ಇಳುಹಲೋಸುಗ ತನ್ನ ಅಂಶದಿಂದ ಅವತರಿಸಿರುವನು.' ಕಕುದ್ಮಿ ಮಹಾರಾಜನು ಬ್ರಹ್ಮದೇವರ ಅಪ್ಪಣೆಯನ್ನು ಪಡೆದು, ಅವನ ಚರಣಗಳಿಗೆ ವಂದಿಸಿ ತನ್ನ ಊರಿಗೆ ಮರಳಿದನು. ಅವನ ವಂಶಜರು ಯಕ್ಷರ ಭಯದಿಂದ ಆ ನಗರವನ್ನು ಬಿಟ್ಟು ಅಲ್ಲಲ್ಲಿ ವಾಸಮಾಡುತ್ತಿದ್ದಾರೆ. ॥ ೩೪-೩೫ ॥ ರಾಜಾ ಕಕುದ್ಮಿಯು ಸರ್ವಾಂಗಸುಂದರಿಯಾದ ತನ್ನ ಮಗಳನ್ನು ಮಹಾಬಲಶಾಲಿಯಾದ ಬಲರಾಮದೇವನಿಗೆ ವಿವಾಹಮಾಡಿ ಕೊಟ್ಟು ತಾನು ತಪಸ್ಸಿಗಾಗಿ ಭಗವಾನ್ ನರ-ನಾರಾಯಣರ ಬದರಿಕಾಶ್ರಮಕ್ಕೆ ತೆರಳಿದನು. ॥ ೩೬ ॥

ಮೂರನೆಯ ಅಧ್ಯಾಯವು ಮುಗಿಯಿತು. ॥ ೩ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ನವಮಸ್ಕಂಧೇ
ತೃತೀಯೋಽಧ್ಯಾಯಃ ॥ ೩ ॥

ನಾಲ್ಕನೆಯ ಅಧ್ಯಾಯ

ನಾಭಾಗ ಮತ್ತು ಅಂಬರೀಷರ ಕಥೆ

ಶ್ರೀಶುಕ ಉವಾಚ

ನಾಭಾಗೋ ನಭಗಾಪತ್ಯಂ ಯಂ ತತಂ ಭ್ರಾತರಃ ಕವಿಮ್ ।
ಯವಿಷ್ಠಂ ವ್ಯಭಜನ್ ದಾಯಂ ಬ್ರಹ್ಮಚಾರಿಣಮಾಗತಮ್
॥ ೧ ॥

ಭ್ರಾತರೋಽಭಾಂಕ್ತ ಕಿಂ ಮಹ್ಯಂ ಭಜಾಮ ಪಿತರಂ ತವ ।
ತ್ವಾಂ ಮಮಾರ್ಯಾಸ್ತತಾಭಾಂಕ್ಷುರ್ಮಾ ಪುತ್ರಕ ತದಾದೃಥಾಃ
॥ ೨ ॥

ಇಮೇ ಅಂಗಿರಸಃ ಸತ್ರಮಾಸತೇಽದ್ಯ ಸುಮೇಧಸಃ ।
ಷಷ್ಠಂ ಷಷ್ಠಮುಪೇತ್ಯಾಹಃ ಕವೇ ಮುಹ್ಯಂತಿ ಕರ್ಮಣಿ
॥ ೩ ॥

ತಾಂಸ್ತ್ವಂ ಶಂಸಯ ಸೂಕ್ತೇ ದ್ವೇ ವೈಶ್ವದೇವೇ ಮಹಾತ್ಮನಃ ।
ತೇ ಸ್ವರ್ಯಂತೋ ಧನಂ ಸತ್ರಪರಿಶೇಷಿತಮಾತ್ಮನಃ
॥ ೪ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಎಲೈ ಪರೀಕ್ಷಿತನೇ! ಮನುಪುತ್ರನಾದ ನಭಗನಿಗೆ ನಾಭಾಗನೆಂಬ ಕಿರಿಯ ಮಗನಿದ್ದನು. ಅವನು ಬಹಳ ಕಾಲದವರೆಗೆ ಬ್ರಹ್ಮಚರ್ಯವ್ರತದಲ್ಲಿದ್ದು ಮಹಾವಿದ್ವಾಂಸನಾಗಿ ಮನೆಗೆ ಮರಳಿದನು. ॥ ೧ ॥ ಆಗ ಅವನು ಕೇಳಿದನು – ಸೋದರರೇ! ನೀವು ನನ್ನ ಪಾಲನ್ನು ಏನು ಕೊಟ್ಟಿರುವಿರಿ? ಆಗ ಅವರು ನಿನಗೆ ನಿನ್ನ ಪಾಲಾಗಿ ತಂದೆಯವರನ್ನೇ ಕೊಟ್ಟಿರುವೆವು ಎಂದು ಹೇಳಿದರು. ಅವನು ತಂದೆಯ ಬಳಿಗೆ ಹೋಗಿ ವಿಚಾರಿಸಿದನು – ಅಪ್ಪಾ! ನನ್ನ ಅಣ್ಣಂದಿರು ನನ್ನ ಪಾಲಿನಲ್ಲಿ ನಿಮ್ಮನ್ನೇ ಕೊಟ್ಟಿರುವರು. ತಂದೆ ಹೇಳಿದನು – 'ಮಗೂ! ನೀನು ಇವರ ಮಾತನ್ನು ಕೇಳಬೇಡ. ॥ ೨ ॥ ನಿನ್ನ ಜೀವನೋಪಾಯಕ್ಕೊಂದು ಮಾರ್ಗವನ್ನು ಸೂಚಿಸುವೆನು. ಒಳ್ಳೆಯ ಮೇಧಾವಂತರಾದ ಅಂಗಿರಸರು ಈಗ ಒಂದು ದೊಡ್ಡ ಯಜ್ಞವನ್ನು ಮಾಡುತ್ತಿದ್ದಾರೆ. ಅವರು ಬುದ್ಧಿವಂತರೆಂಬುದೂ ಸತ್ಯ. ಆದರೆ ಅವರು ಆರನೆಯ ದಿನ ತಮ್ಮ ಕರ್ಮಗಳನ್ನು ಮರೆತು ಕಿಂಕರ್ತವ್ಯಮೂಢರಾಗುವರು. ॥ ೩ ॥ ಮಗೂ! ನೀನು ಆ ಮಹಾತ್ಮರ ಬಳಿಗೆ ಹೋಗಿ ಅವರಿಗೆ ವೈಶ್ವದೇವ ಸಂಬಂಧಿ ಎರಡು ಸೂಕ್ತಗಳನ್ನು ಉಪದೇಶಿಸು. ಆದರಿಂದ ಅವರು ಸ್ವರ್ಗಕ್ಕೆ ಹೋಗುವಾಗ ಯಜ್ಞದಲ್ಲಿ ಉಳಿದಿರುವ ತಮ್ಮ ಸಕಲ ಧನವನ್ನೂ ನಿನಗೆ ಕೊಡುವರು.

ದಾಸ್ಯಂತಿ ತೇಽಥ ತಾನ್ ಗಚ್ಛ ತಥಾ ಸ ಕೃತವಾನ್ಯಥಾ ।
ತಸ್ಮೈ ದತ್ತ್ವಾ ಯಯುಃ ಸ್ವರ್ಗಂ ತೇ ಸತ್ರಪರಿಶೇಷಿತಮ್ ॥ ೫ ॥

ತಂ ಕಶ್ಚಿತ್ ಸ್ವೀಕರಿಷ್ಯಂತಂ ಪುರುಷಃ ಕೃಷ್ಣದರ್ಶನಃ ।
ಉವಾಚೋತ್ತರತೋಽಭ್ಯೇತ್ಯ ಮಮೇದಂ ವಾಸ್ತುಕಂ ವಸು ॥ ೬ ॥

ಮಮೇದಮೃಷಿಭಿರ್ದತ್ತಮಿತಿ ತರ್ಹಿ ಸ್ಮ ಮಾನವಃ ।
ಸ್ಯಾನ್ನೌ ತೇ ಪಿತರಿ ಪ್ರಶ್ನಃ ಪೃಷ್ಟವಾನ್ ಪಿತರಂ ತಥಾ ॥ ೭ ॥

ಯಜ್ಞವಾಸ್ತುಗತಂ ಸರ್ವಮುಚ್ಛಿಷ್ಟಮೃಷಯಃ ಕ್ವಚಿತ್ ।
ಚಕ್ರುರ್ವಿಭಾಗಂ ರುದ್ರಾಯ ಸ ದೇವಃ ಸರ್ವಮರ್ಹತಿ ॥ ೮ ॥

ನಾಭಾಗಸ್ತಂ ಪ್ರಣಮ್ಯಾಹ ತವೇಶ ಕಿಲ ವಾಸ್ತುಕಮ್ ।
ಇತ್ಯಾಹ ಮೇ ಪಿತಾ ಬ್ರಹ್ಮಂಛಿರಸಾ ತ್ವಾಂ ಪ್ರಸಾದಯೇ ॥ ೯ ॥

ಯತ್ತೇ ಪಿತಾವದದ್ಧರ್ಮಂ ತ್ವಂ ಚ ಸತ್ಯಂ ಪ್ರಭಾಷಸೇ ।
ದದಾಮಿ ತೇ ಮಂತ್ರದೃಶೇ ಜ್ಞಾನಂ ಬ್ರಹ್ಮ ಸನಾತನಮ್ ॥ ೧೦ ॥

ಗೃಹಾಣ ದ್ರವಿಣಂ ದತ್ತಂ ಮತ್ಸತ್ರೇ ಪರಿಶೇಷಿತಮ್ ।
ಇತ್ಯುಕ್ತ್ವಾಂತರ್ಹಿತೋ ರುದ್ರೋ ಭಗವಾನ್ ಸತ್ಯವತ್ಸಲಃ ॥ ೧೧ ॥

ಯ ಏತತ್ಸಂಸ್ಮರೇತ್ ಪ್ರಾತಃ ಸಾಯಂ ಚ ಸುಸಮಾಹಿತಃ ।
ಕವಿರ್ಭವತಿ ಮಂತ್ರಜ್ಞೋ ಗತಿಂ ಚೈವ ತಥಾಽಽತ್ಮನಃ ॥ ೧೨ ॥

ನಾಭಾಗಾದಂಬರೀಷೋಽಭೂನ್ಮಹಾಭಾಗವತಃ ಕೃತೀ ।
ನಾಸ್ಪೃಶದ್ ಬ್ರಹ್ಮಶಾಪೋಽಪಿ ಯಂ ನ ಪ್ರತಿಹತಃ ಕ್ವಚಿತ್ ॥ ೧೩ ॥

ರಾಜೋವಾಚ

ಭಗವನ್ ಶ್ರೋತುಮಿಚ್ಛಾಮಿ ರಾಜರ್ಷೇಸ್ತಸ್ಯ ಧೀಮತಃ ।
ನ ಪ್ರಾಭೂದ್ಯತ್ರ ನಿರ್ಮುಕ್ತೋ ಬ್ರಹ್ಮದಂಡೋ ದುರತ್ಯಯಃ ॥ ೧೪ ॥

ಅದಕ್ಕಾಗಿ ನೀನು ಈಗಲೇ ಅವರ ಬಳಿಗೆ ಹೋಗು.’ ತಂದೆಯ ಆದೇಶದಂತೆ ನಾಭಾಗನು ಹಾಗೆ ಮಾಡಿದನು. ಆ ಅಂಗೀರಸರೂ ಕೂಡ ಯಜ್ಞಶಿಷ್ಟಭಾಗವನ್ನು ಅವನಿಗೆ ಕೊಟ್ಟು ಸ್ವರ್ಗಕ್ಕೆ ಹೊರಟುಹೋದರು. ॥ ೪-೫ ॥

ನಾಭಾಗನು ಆ ಧನವನ್ನು ತೆಗೆದುಕೊಳ್ಳತೊಡಗಿದಾಗ ಉತ್ತರದ ಕಡೆಯಿಂದ ಓರ್ವ ಕಪ್ಪಾದ ಪುರುಷನು ಬಂದನು. ಅವನು ಹೇಳಿದನು – ‘ಈ ಯಜ್ಞಭೂಮಿಯಲ್ಲಿ ಉಳಿದೆಲ್ಲ ಧನಭಾಗವೂ ನನ್ನದಾಗಿದೆ.’ ॥ ೬ ॥

ನಾಭಾಗನು ಹೇಳಿದನು – ‘ಋಷಿಗಳು ಈ ಧನವನ್ನು ನನಗೆ ಕೊಟ್ಟಿರುವರು, ಅದಕ್ಕಾಗಿ ನನ್ನದಾಗಿದೆ.’ ಆಗ ಆ ಪುರುಷನು ಹೇಳಿದನು – ನಮ್ಮ ಈ ವಿವಾದವು ನಿನ್ನ ತಂದೆಯಮುಂದೆ ಇಡಲ್ಪಡಲಿ. ನಾಭಾಗನು ಅದರಂತೆ ತಂದೆಯ ಬಳಿಗೆ ಹೋಗಿ ಕೇಳಿದನು –॥ ೭ ॥ ತಂದೆಯು ಹೇಳಿದನು – ‘ಒಮ್ಮೆ ದಕ್ಷ ಪ್ರಜಾಪತಿಯ ಯಜ್ಞದಲ್ಲಿ – ‘ಯಜ್ಞಭೂಮಿಯಲ್ಲಿ ಉಳಿದೆಲ್ಲವೂ ರುದ್ರದೇವರ ಪಾಲು ಆಗಿದೆ’ ಎಂದು ನಿಶ್ಚಯಿಸಿಬಿಟ್ಟಿರುವರು. ಅದಕ್ಕಾಗಿ ಈ ಧನವಾದರೋ ಮಹಾದೇವನಿಗೇ ಸಿಗಬೇಕು.’ ॥ ೮ ॥ ನಾಭಾಗನು ಹೋಗಿ ಆ ಕಪ್ಪಾದ ಪುರುಷನಾದ ಭಗವಾನ್ ರುದ್ರದೇವರಿಗೆ ನಮಸ್ಕಾರಮಾಡಿ ಹೇಳಿದನು – ಸ್ವಾಮಿ! ಯಜ್ಞಭೂಮಿಯ ಎಲ್ಲ ವಸ್ತುಗಳೂ ತಮ್ಮದೇ ಆಗಿವೆ ಎಂದು ನನ್ನ ತಂದೆಯವರು ಹೇಳಿರುವರು. ಭಗವಂತಾ! ನನ್ನಿಂದ ಅಪರಾಧವಾಯಿತು. ನಾನು ತಲೆಬಾಗಿ ತಮ್ಮಲ್ಲಿ ಕ್ಷಮೆಯನ್ನು ಯಾಚಿಸುತ್ತೇನೆ. ॥ ೯ ॥ ಆಗ ಭಗವಾನ್ ರುದ್ರದೇವರು ಹೇಳಿದರು – ‘ನಿನ್ನ ತಂದೆಯು ಧರ್ಮಕ್ಕೆ ಅನುಕೂಲವಾದ ನಿರ್ಣಯವನ್ನೇ ಕೊಟ್ಟಿರುವನು. ನೀನೂ ಕೂಡ ನನ್ನಲ್ಲಿ ಸತ್ಯವನ್ನೇ ನುಡಿದಿರುವೆ. ನೀನು ವೇದಗಳ ಅರ್ಥವನ್ನಾದರೋ ಮೊದಲಿನಿಂದಲೇ ತಿಳಿದಿರುವೆ. ಈಗ ನಾನು ನಿನಗೆ ಸನಾತನ ಬ್ರಹ್ಮತತ್ತ್ವದ ಜ್ಞಾನವನ್ನು ಉಪದೇಶಿಸುವೆನು. ॥ ೧೦ ॥ ಇಲ್ಲಿ ಯಜ್ಞದಲ್ಲಿ ಉಳಿದಿರುವ ನನ್ನ ಅಂಶವಾದ ಈ ಧನವನ್ನೂ ನಿನಗೇ ಕೊಡುತ್ತಿದ್ದೇನೆ. ನೀನು ಇದನ್ನು ಸ್ವೀಕರಿಸು.’ ಇಷ್ಟು ಹೇಳಿ ಸತ್ಯಪ್ರಿಯ ಭಗವಾನ್ ರುದ್ರದೇವನು ಅಂತರ್ಧಾನನಾದನು. ॥ ೧೧ ॥ ಪ್ರಾತಃಕಾಲ-ಸಾಯಂಕಾಲಗಳಲ್ಲಿ ಏಕಾಗ್ರ ಚಿತ್ತದಿಂದ ಈ ಆಖ್ಯಾನವನ್ನು ಸ್ಮರಿಸುವ ಮನುಷ್ಯನು ಪ್ರತಿಭಾಶಾಲಿಯಾಗಿ, ವೇದಜ್ಞನಾಗುವನು; ಜೊತೆಗೆ ತನ್ನ ಸ್ವಸ್ವರೂಪವನ್ನೂ ಅರಿತುಕೊಳ್ಳುವನು. ॥ ೧೨ ॥ ನಾಭಾಗನಿಗೆ ಅಂಬರೀಷನೆಂಬ ಪುತ್ರನಾದನು. ಅವನು ಭಗವತ್ಪ್ರೇಮಿಯೂ, ಧರ್ಮಾತ್ಮನೂ, ಭಾಗವತೋತ್ತಮನೂ ಆಗಿದ್ದನು. ಎಂದಿಗೂ ತಡೆಯಲು ಅಶಕ್ಯವಾದ ಬ್ರಹ್ಮಶಾಪವೂ ಕೂಡ ಅಂಬರೀಷನನ್ನು ಸ್ಪರ್ಶಿಸಲಾರದೆ ಹೋಯಿತು. ॥ ೧೩ ॥

ಪರೀಕ್ಷಿದ್ರಾಜನು ಕೇಳಿದನು – ಮಹಾಮುನಿಗಳೇ! ಪರಮ ಜ್ಞಾನಿಯಾದ ರಾಜರ್ಷಿ ಅಂಬರೀಷನ ಚರಿತ್ರವನ್ನು ನಾನು ಕೇಳಲು ಬಯಸುತ್ತಿರುವೆನು. ಬ್ರಾಹ್ಮಣನು ಕ್ರೋಧಗೊಂಡು ಯಾವ ರೀತಿಯಿಂದಲೂ ನಿವಾರಿಸಲು ಸಾಧ್ಯವಿಲ್ಲದ ಬ್ರಹ್ಮದಂಡವನ್ನು ವಿಧಿಸಿದರೂ ಅಂಬರೀಷನ ಕೂದಲೂ ಕೊಂಕಿಸಲಾಗಲಿಲ್ಲ. ಇಂತಹವನ ಚರಿತ್ರೆಯನ್ನು ಹೇಳಿರಿ. ॥ ೧೪ ॥

ಶ್ರೀಶುಕ ಉವಾಚ

ಅಂಬರೀಷೋ ಮಹಾಭಾಗಃ ಸಪ್ತದ್ವೀಪವತೀಂ ಮಹೀಮ್ ।
ಅವ್ಯಯಾಂ ಚ ಶ್ರಿಯಂ ಲಬ್ಧ್ವಾ ವಿಭವಂ ಚಾತುಲಂ ಭುವಿ ॥ ೧೫ ॥

ಮೇನೇಽತಿದುರ್ಲಭಂ ಪುಂಸಾಂ ಸರ್ವಂ ತತ್ಸ್ವಪ್ನಸಂಸ್ತುತಮ್ ।
ವಿದ್ವಾನ್ವಿಭವನಿರ್ವಾಣಂ ತಮೋ ವಿಶತಿ ಯತ್ಪುಮಾನ್ ॥ ೧೬ ॥

ವಾಸುದೇವೇ ಭಗವತಿ ತದ್ಭಕ್ತೇಷು ಚ ಸಾಧುಷು ।
ಪ್ರಾಪ್ತೋ ಭಾವಂ ಪರಂ ವಿಶ್ವಂ ಯೇನೇದಂ ಲೋಷ್ಟ್ರವತ್ ಸ್ಮೃತಮ್ ॥ ೧೭ ॥

ಸ ವೈ ಮನಃ ಕೃಷ್ಣಪದಾರವಿಂದಯೋ-
ರ್ವಚಾಂಸಿ ವೈಕುಂಠ ಗುಣಾನುವರ್ಣನೇ ।
ಕರೌ ಹರೇರ್ಮಂದಿರಮಾರ್ಜನಾದಿಷು
ಶ್ರುತಿಂ ಚಕಾರಾಚ್ಯುತಸತ್ಕಥೋದಯೇ ॥ ೧೮ ॥

ಮುಕುಂದಲಿಂಗಾಲಯದರ್ಶನೇ ದೃಶೌ
ತದ್ಭೃತ್ಯಗಾತ್ರಸ್ಪರ್ಶೇಽಙ್ಗ ಸಂಗಮಮ್ ।
ಘ್ರಾಣಂ ಚ ತತ್ಪಾದಸರೋಜಸೌರಭೇ
ಶ್ರೀಮತ್ತುಲಸ್ಯಾ ರಸನಾಂ ತದರ್ಪಿತೇ ॥ ೧೯ ॥

ಪಾದೌ ಹರೇಃ ಕ್ಷೇತ್ರಪದಾನುಸರ್ಪಣೇ
ಶಿರೋ ಹೃಷೀಕೇಶಪದಾಭಿವಂದನೇ ।
ಕಾಮಂ ಚ ದಾಸ್ಯೇ ನ ತು ಕಾಮಕಾಮ್ಯಯಾ
ಯಥೋತ್ತಮಶ್ಲೋಕಜನಾಶ್ರಯಾ ರತಿಃ ॥ ೨೦ ॥

ಏವಂ ಸದಾ ಕರ್ಮಕಲಾಪಮಾತ್ಮನಃ
ಪರೇಽಧಿಯಜ್ಞೇ ಭಗವತ್ಯಧೋಕ್ಷಜೇ ।
ಸರ್ವಾತ್ಮಭಾವಂ ವಿದಧನ್ಮಹೀಮಿಮಾಂ
ತನ್ನಿಷ್ಠವಿಪ್ರಾಭಿಹಿತಃ ಶಶಾಸ ಹ ॥ ೨೧ ॥

ಈಜೇಽಶ್ವಮೇಧೈರಧಿಯಜ್ಞಮೀಶ್ವರಂ
ಮಹಾವಿಭೂತ್ಯೋಪಚಿತಾಂಗ ದಕ್ಷಿಣೈಃ ।
ತತೈರ್ವಸಿಷ್ಠಾಸಿತಗೌತಮಾದಿಭಿ-
ರ್ಧನ್ವನ್ಯಭಿಸ್ರೋತಮಸೌ ಸರಸ್ವತೀಮ್ ॥ ೨೨ ॥

ಶ್ರೀಶುಕಮಹಾಮುನಿಗಳು ಹೇಳಿದರು – ಪರೀಕ್ಷಿದ್ರಾಜನೇ! ಅಂಬರೀಷನು ಮಹಾಭಾಗ್ಯಶಾಲಿಯಾಗಿದ್ದನು. ಸಪ್ತದ್ವೀಪಗಳಿಂದೊಡಗೊಂಡ ಅಖಂಡ ಭೂಮಂಡಲಕ್ಕೆ ಒಡೆಯನಾಗಿ ಅಚಲ ಸಂಪತ್ತು ಮತ್ತು ಅತುಲ ಐಶ್ವರ್ಯವು ಅವನಿಗೆ ಪ್ರಾಪ್ತವಾಗಿತ್ತು. ಇವೆಲ್ಲವೂ ಸಾಮಾನ್ಯ ಮನುಷ್ಯರಿಗೆ ಅತ್ಯಂತ ದುರ್ಲಭವಾಗಿದ್ದರೂ ಅವನು ಇವನ್ನು ಸ್ವಪ್ನದಂತೆ ಕ್ಷಣಿಕವೆಂದೇ ತಿಳಿಯುತ್ತಿದ್ದನು. ಏಕೆಂದರೆ, ಯಾವ ವೈಭವ-ಸಂಪತ್ತಿನ ಲೋಭದಿಂದ ಮನುಷ್ಯನು ತಮೋಗುಣದಲ್ಲಿ ಮುಳುಗಿ ನರಕಕ್ಕೆ ಹೋಗುತ್ತಾನೋ. ಅಂತಹ ವೈಭವಗಳೆಲ್ಲವೂ ಒಂದುದಿನ ನಾಶವಾಗುವುದೆಂಬುದನ್ನು ಅಂಬರೀಷನು ಅರಿತಿದ್ದನು. ॥ ೧೫-೧೬ ॥ ಭಗವಾನ್ ವಾಸುದೇವನಲ್ಲಿ ಹಾಗೂ ಅವನ ಏಕಾಂತ ಭಕ್ತರಲ್ಲಿ ಅಂಬರೀಷನಿಗೆ ಪರಮ ಪ್ರೀತಿ-ಭಕ್ತಿಯಿತ್ತು. ಅಂತಹ ಭಕ್ತಿಯು ಪ್ರಾಪ್ತವಾದ ಮೇಲಂತೂ ಈ ಇಡೀ ವಿಶ್ವ ಮತ್ತು ಸಮಸ್ತ ಸಂಪತ್ತು ಮಣ್ಣಿನಹೆಂಟೆಯಂತೆ ಕಂಡು ಬರುತ್ತಿತ್ತು. ॥ ೧೭ ॥ ಪರಮಭಾಗವತನಾದ ಅಂಬರೀಷನು ಮನಸ್ಸನ್ನು ಭಗವಾನ್ ಶ್ರೀಕೃಷ್ಣನ ಚರಣಾರವಿಂದಗಳಲ್ಲಿ ಲೀನಗೊಳಿಸಿದ್ದನು. ವಾಣಿಯನ್ನು ಭಗವದ್ಗುಣ ಕೀರ್ತನೆಯಲ್ಲಿ, ಕೈಗಳನ್ನು ಶ್ರೀಹರಿಮಂದಿರವನ್ನು ಗುಡಿಸುವುದು, ಸಾರಿಸುವುದರಲ್ಲಿ. ತನ್ನ ಕಿವಿಗಳನ್ನು ಭಗವಾನ್ ಅಚ್ಯುತನ ಮಂಗಲಮಯ ಕಥಾಶ್ರವಣದಲ್ಲಿ ತೊಡಗಿಸಿದ್ದನು. ॥ ೧೮ ॥ ಅವನು ತನ್ನ ಕಣ್ಣುಗಳನ್ನು ಮುಕುಂದನ ಮೂರ್ತಿಯನ್ನೂ, ಮಂದಿರಗಳನ್ನೂ ದರ್ಶಿಸಲು, ಅಂಗ-ಸಂಗವನ್ನು ಭಗವದ್ಭಕ್ತರ ಶರೀರಸ್ಪರ್ಶದಲ್ಲಿಯೂ, ಮೂಗನ್ನು ಭಗವಂತನ ಚರಣಕಮಲಗಳಲ್ಲಿ ಅರ್ಪಿಸಿದ ತುಲಸಿಯ ದಿವ್ಯ ಪರಿಮಳವನ್ನು ಆಘ್ರಾಣಿಸಲು, ನಾಲಿಗೆಯನ್ನು ಪರಮಾತ್ಮನಿಗೆ ಅರ್ಪಿಸಿದ ನೈವೇದ್ಯ-ಪ್ರಸಾದ ಸೇವಿಸಲು ಮೀಸಲಾಗಿಟ್ಟಿದ್ದನು. ॥ ೧೯ ॥ ಅಂಬರೀಷನು ತನ್ನ ಕಾಲುಗಳನ್ನು ಭಗವಂತನ ದಿವ್ಯ ತೀರ್ಥಕ್ಷೇತ್ರಯಾತ್ರೆ ಮಾಡುವುದರಲ್ಲೂ ತೊಡಗಿಸಿದ್ದನು. ಅವನು ಸದಾಕಾಲ ತಲೆಯಿಂದ ಭಗವಾನ್ ಶ್ರೀಕೃಷ್ಣನ ಚರಣಕಮಲಗಳ ವಂದನೆಯನ್ನು ಮಾಡುತ್ತಿದ್ದನು. ಭಗವಂತನ ದಾಸ್ಯ ಮಾಡಬೇಕೆಂಬುದೇ ಅವನ ಮುಖ್ಯ ಕಾಮನೆಯಾಗಿತ್ತು. ಆ ದಾಸ್ಯವೂ ನಿಷ್ಕಾಮದಾಸ್ಯವಾಗಿದ್ದು ಹರಿಪ್ರೀತ್ಯರ್ಥವಾಗಿಯೇ ಇತ್ತು. ಉತ್ತಮ ಕೀರ್ತಿಯುಳ್ಳ ಭಗವದ್ಭಕ್ತರನ್ನು ಅವನ ಪ್ರೀತಿಯು ಆಶ್ರಯಿಸಿತ್ತು. ಶ್ರೀಕೃಷ್ಣನ ಭಕ್ತರಲ್ಲಿ ಅಂಬರೀಷನಿಗೆ ಅಪಾರವಾದ ಭಕ್ತಿಯಿತ್ತು. ॥ ೨೦ ॥ ಹೀಗೆ ಅವನು ತನ್ನ ಸಮಸ್ತ ಕರ್ಮಗಳನ್ನು – ಯಜ್ಞಪುರುಷ, ಇಂದ್ರಿಯಾತೀತ ಭಗವಂತನನ್ನು ಸರ್ವಾತ್ಮಾ ಸರ್ವಸ್ವರೂಪನೆಂದು ತಿಳಿದು ಅರ್ಪಿಸಿಬಿಟ್ಟಿದ್ದನು. ಭಗವದ್ಭಕ್ತ ಬ್ರಾಹ್ಮಣರ ಅನುಶಾಸನದಂತೆ ಅವನು ರಾಜ್ಯವನ್ನಾಳುತ್ತಿದ್ದನು. ॥ ೨೧ ॥ ಅವನು 'ಧನ್ವ' ಎಂಬ ಮರುಭೂಮಿಯಲ್ಲಿ ಸರಸ್ವತಿಯ ನದಿಯ ಪ್ರವಾಹಕ್ಕೆ ಎದುರಾಗಿ ವಸಿಷ್ಠ, ಅಸಿತ, ಗೌತಮ ಮೊದಲಾದ ಮಹಾ ಆಚಾರ್ಯರ ಮೂಲಕ ಬಹು ದಕ್ಷಿಣೆಗಳುಳ್ಳ, ಸರ್ವಾಂಗ ಪರಿಪೂರ್ಣವಾದ ಹಲವಾರು ಅಶ್ವಮೇಧ ಯಜ್ಞಗಳನ್ನು ಮಾಡಿ ಯಜ್ಞಪತಿಯಾದ ಭಗವಂತನನ್ನು ಆರಾಧಿಸಿದ್ದನು. ॥ ೨೨ ॥

ಯಸ್ಯ ಕ್ರತುಷು ಗೀರ್ವಾಣೈಃ ಸದಸ್ಯಾ ಋತ್ವಿಜೋ ಜನಾಃ ।
ತುಲ್ಯರೂಪಾಶ್ಚಾನಿಮಿಷಾ ವ್ಯದೃಶ್ಯಂತ ಸುವಾಸಸಃ
॥ ೨೩ ॥

ಸ್ವರ್ಗೋ ನ ಪ್ರಾರ್ಥಿತೋ ಯಸ್ಯ ಮನುಜೈರಮರಪ್ರಿಯಃ ।
ಶೃಣ್ವದ್ಭಿರುಪಗಾಯದ್ಭಿರುತ್ತಮಶ್ಲೋಕಚೇಷ್ಟಿತಮ್
॥ ೨೪ ॥

ಸಮರ್ದ್ಧಯಂತಿ ತಾನ್ಕಾಮಾಃ ಸ್ವಾರಾಜ್ಯಪರಿಭಾವಿತಾಃ ।
ದುರ್ಲಭಾ ನಾಪಿ ಸಿದ್ಧಾನಾಂ ಮುಕುಂದಂ ಹೃದಿ ಪಶ್ಯತಃ
॥ ೨೫ ॥

ಸ ಇತ್ಥಂ ಭಕ್ತಿಯೋಗೇನ ತಪೋಯುಕ್ತೇನ ಪಾರ್ಥಿವಃ ।
ಸ್ವಧರ್ಮೇಣ ಹರಿಂ ಪ್ರೀಣನ್ ಸಂಗಾನ್ ಸರ್ವಾನ್ ಶನೈರ್ಜಹೌ
॥ ೨೬ ॥

ಗೃಹೇಷು ದಾರೇಷು ಸುತೇಷು ಬಂಧುಷು
ದ್ವಿಪೋತ್ತಮಸ್ಯಂದನವಾಜಿಪತ್ತಿಷು ।
ಅಕ್ಷಯ್ಯರತ್ನಾಭರಣಾಯುಧಾದಿ-
ಷ್ವನಂತಕೋಶೇಷ್ವಕರೋದಸನ್ಮತಿಮ್ ॥ ೨೭ ॥

ತಸ್ಮಾ ಅದಾದ್ಧರಿಶ್ಚಕ್ರಂ ಪ್ರತ್ಯನೀಕಭಯಾವಹಮ್ ।
ಏಕಾಂತಭಕ್ತಿಭಾವೇನ ಪ್ರೀತೋ ಭೃತ್ಯಾಭಿರಕ್ಷಣಮ್
॥ ೨೮ ॥

ಆರಿರಾಧಯಿಷುಃ ಕೃಷ್ಣಂ ಮಹಿಷ್ಯಾ ತುಲ್ಯಶೀಲಯಾ ।
ಯುಕ್ತಃ ಸಾಂವತ್ಸರಂ ವೀರೋ ದಧಾರ ದ್ವಾದಶೀವ್ರತಮ್
॥ ೨೯ ॥

ವ್ರತಾಂತೇ ಕಾರ್ತಿಕೇ ಮಾಸಿ ತ್ರಿರಾತ್ರಂ ಸಮುಪೋಷಿತಃ ।
ಸ್ನಾತಃ ಕದಾಚಿತ್ಕಾಲಿಂದ್ಯಾಂ ಹರಿಂ ಮಧುವನೇಽರ್ಚಯತ್
॥ ೩೦ ॥

ಮಹಾಭಿಷೇಕವಿಧಿನಾ ಸರ್ವೋಪಸ್ಕರಸಂಪದಾ ।
ಅಭಿಷಿಚ್ಯಾಂಬರಾಕಲ್ಪೈರ್ಗಂಧಮಾಲ್ಯಾರ್ಹಣಾದಿಭಿಃ
॥ ೩೧ ॥

ತದ್ಗತಾಂತರಭಾವೇನ ಪೂಜಯಾಮಾಸ ಕೇಶವಮ್ ।
ಬ್ರಾಹ್ಮಣಾಂಶ್ಚ ಮಹಾಭಾಗಾನ್ ಸಿದ್ಧಾರ್ಥಾನಪಿ ಭಕ್ತಿತಃ
॥ ೩೨ ॥

ಅವನ ಯಜ್ಞದಲ್ಲಿ ದೇವತೆಗಳೊಂದಿಗೆ ಸದಸ್ಯರು ಮತ್ತು ಋತ್ವಿಜರು ಕುಳಿತಿದ್ದಾಗ ಅವರು ತನ್ನ ಸುಂದರ ವಸ್ತ್ರ ಮತ್ತು ದಿವ್ಯರೂಪದಿಂದ ರೆಪ್ಪೆ ಮಿಟುಕಿಸದ ದೇವತೆಗಳಂತೆ ಕಾಣುತ್ತಿದ್ದರು. ॥ ೨೩ ॥ ಅವನ ಪ್ರಜೆಗಳು ಕೆಲವೊಮ್ಮೆ ಮಹಾತ್ಮರಿಂದ ಹಾಡಲ್ಪಟ್ಟ ಭಗವಂತನ ಉತ್ತಮ ಚರಿತ್ರೆಗಳನ್ನು ಭಕ್ತಿಯಿಂದ ಶ್ರವಣಿಸುತ್ತಿದ್ದರೆ, ಕೆಲವೊಮ್ಮೆ ಭಗವದ್ಗುಣಗಳನ್ನು ಕೀರ್ತಿಸುತ್ತಿದ್ದರು. ಈ ವಿಧವಾಗಿ ಅವನ ರಾಜ್ಯದ ಪ್ರಜೆಗಳು ದೇವತೆಗಳ ಅತ್ಯಂತ ಪ್ರಿಯವಾದ ಸ್ವರ್ಗವನ್ನೂ ಕೂಡ ಬಯಸುತ್ತಿರಲಿಲ್ಲ. ॥ ೨೪ ॥ ಅಂಬರೀಷನ ಪ್ರಜೆಗಳು ನಿತ್ಯ-ನಿರಂತರವಾಗಿ ತಮ್ಮ ಹೃದಯಮಂದಿರದಲ್ಲಿ ಶ್ರೀಕೃಷ್ಣನನ್ನು ಕಾಣುತ್ತಿದ್ದರು. ಆದರಿಂದಲೇ ಅವರಿಗೆ ಸಿದ್ಧರಿಗೂ ದುರ್ಲಭವಾದ ಅಣಿಮಾದಿ ಅಷ್ಟೈಶ್ವರ್ಯಗಳೂ ಹರ್ಷವನ್ನುಂಟು ಮಾಡುತ್ತಿರಲಿಲ್ಲ. ಆತ್ಮಾನಂದದ ಮುಂದೆ ಇವೆಲ್ಲ ವಸ್ತುಗಳೂ ಅವರಿಗೆ ತುಚ್ಛವಾಗಿ ಕಾಣುತ್ತಿದ್ದವು, ತಿರಸ್ಕೃತವಾಗಿದ್ದವು. ॥ ೨೫ ॥ ಹೀಗೆ ಅಂಬರೀಷಮಹಾರಾಜನು ತಪಸ್ಸಿನಿಂದ ಕೂಡಿದ ಭಕ್ತಿಯೋಗದಿಂದಲೂ, ಪ್ರಜಾಪಾಲನರೂಪವಾದ ಸ್ವಧರ್ಮದ ಮೂಲಕವಾಗಿ ಭಗವಂತನನ್ನು ಪ್ರಸನ್ನಗೊಳಿಸಿ, ನಿಧಾನವಾಗಿ ಅವನು ಎಲ್ಲ ವಿಧದ ಆಸಕ್ತಿಗಳನ್ನು ಪರಿತ್ಯಾಗ ಮಾಡಿದನು. ॥ ೨೬ ॥ ಅರಮನೆ, ಪತ್ನೀ, ಪುತ್ರರು, ಬಂಧು-ಬಾಂಧವರು, ಶ್ರೇಷ್ಠವಾದ ಆನೆ, ಕುದುರೆ, ರಥ, ಕಾಲಾಳುಗಳೆಂಬ ಚತುರಂಗ ಸೈನ್ಯ, ಅಕ್ಷಯವಾದ ಭಂಡಾರ – ಇವೆಲ್ಲವೂ ಅನಿತ್ಯವಾದುವುಗಳೆಂದು ಭಾವಿಸಿ, ಇವೆಲ್ಲವುಗಳಿಂದ ವಿರಕ್ತನಾದನು. ॥ ೨೭ ॥ ಅವನ ಅನನ್ಯ ಪ್ರೇಮಮಯವಾದ ಭಕ್ತಿಯಿಂದ ಸುಪ್ರೀತನಾದ ಶ್ರೀಹರಿಯು ಅವನ ರಕ್ಷಣೆಗಾಗಿ ವಿರೋಧಿಗಳಿಗೆ ಭಯವನ್ನುಂಟು ಮಾಡುವ, ಭಗವದ್ಭಕ್ತರಿಗೆ ರಕ್ಷಕವಾಗಿದ್ದ ಸುದರ್ಶನ ಚಕ್ರವನ್ನು ನಿಯಮಿಸಿದ್ದನು. ॥ ೨೮ ॥

ಅಂಬರೀಷರಾಜನ ಪತ್ನಿಯೂ ಅವನಂತೆಯೇ ಧರ್ಮಶೀಲಳೂ, ಸಂಸಾರದಿಂದ ವಿರಕ್ತಳೂ, ಭಕ್ತಿಪರಾಯಣಳೂ ಆಗಿದ್ದಳು. ಒಮ್ಮೆ ಅವನು ಪತ್ನಿಯೊಡನೆ ಭಗವಾನ್ ಶ್ರೀಕೃಷ್ಣನನ್ನು ಆರಾಧಿಸಲಿಕ್ಕಾಗಿ ಒಂದು ವರ್ಷದ ದ್ವಾದಶೀ ಪ್ರಧಾನವಾದ ಏಕಾದಶೀ ವ್ರತವನ್ನು ಕೈಗೊಂಡನು. ॥ ೨೯ ॥ ವ್ರತದ ಸಮಾಪ್ತಿಯಾದಾಗ ಕಾರ್ತಿಕ ಮಾಸದಲ್ಲಿ ರಾಜನು ಮೂರು ರಾತ್ರಿಗಳು ಉಪವಾಸವಿದ್ದು ಯಮುನಾನದಿಯಲ್ಲಿ ಸ್ನಾನಮಾಡಿ ಮಧುವನದಲ್ಲಿ ಭಗವಾನ್ ಶ್ರೀಹರಿಯನ್ನು ಪೂಜಿಸಿದನು. ॥ ೩೦ ॥ ರಾಜನು ಮಹಾಭಿಷೇಕವಿಧಿಯಿಂದಲೂ ಸಮಸ್ತ ಪರಿಕರಗಳೊಂದಿಗೆ ಹಾಗೂ ಸಂಪತ್ತಿನ ಮೂಲಕ ಭಗವಂತನಿಗೆ ಅಭಿಷೇಕಮಾಡಿ, ತನ್ಮಯವಾದ ಮನಸ್ಸಿನಿಂದ ವಸ್ತ್ರ, ಭೂಷಣ, ಚಂದನ, ಹೂಮಾಲೆಗಳಿಂದಲೂ, ಅರ್ಘ್ಯ-ಪಾದ್ಯಾದಿಗಳಿಂದಲೂ ಹರಿಯನ್ನು ಪೂಜಿಸಿದನು. ಅಂತೆಯೇ ಮಹಾಭಾಗ್ಯಶಾಲಿಗಳಾದ ಸಿದ್ಧಾರ್ಥರಾದ ಬ್ರಾಹ್ಮಣಶ್ರೇಷ್ಠರನ್ನೂ ಭಕ್ತಿಪೂರ್ವಕವಾಗಿ ಅರ್ಘ್ಯ-ಪಾದ್ಯಾದಿಗಳಿಂದ ಸತ್ಕರಿಸಿದನು. ಬಳಿಕ ರಾಜನು ಬ್ರಾಹ್ಮಣರಿಗೆ ರುಚಿಕರವಾದ ಮತ್ತು ಗುಣವತ್ತರವಾದ ಭೋಜನವನ್ನು ಮಾಡಿಸಿ, ಸಮಲಂಕೃತವಾದ ಅರವತ್ತು ಕೋಟಿ ಗೋವುಗಳನ್ನು ಬ್ರಾಹ್ಮಣರಿಗೆ ದಾನವಾಗಿ ಕೊಟ್ಟನು. ಆ ಗೋವುಗಳ ಕೊಂಬುಗಳು ಸುವರ್ಣದಿಂದಲೂ,

ಗವಾಂ ರುಕ್ಮವಿಷಾಣೀನಾಂ ರೂಪ್ಯಾಂಘ್ರೀಣಾಂ ಸುವಾಸಸಾಮ್ ।
ಪಯಃಶೀಲವಯೋರೂಪವತ್ಸೋಪಸ್ಕರಸಂಪದಾಮ್
॥ ೩೩ ॥

ಪ್ರಾಹಿಣೋತ್ಸಾಧುವಿಪ್ರೇಭ್ಯೋ ಗೃಹೇಷು ನ್ಯರ್ಬುದಾನಿ ಷಟ್ ।
ಭೋಜಯಿತ್ವಾ ದ್ವಿಜಾನಗ್ರೇ ಸ್ವಾದ್ವನ್ನಂ ಗುಣವತ್ತಮಮ್
॥ ೩೪ ॥

ಲಬ್ಧಕಾಮೈರನುಜ್ಞಾತಃ ಪಾರಣಾಯೋಪಚಕ್ರಮೇ ।
ತಸ್ಯ ತರ್ಹ್ಯತಿಥಿಃ ಸಾಕ್ಷಾದ್ದುರ್ವಾಸಾ ಭಗವಾನಭೂತ್
॥ ೩೫ ॥

ತಮಾನರ್ಚಾತಿಥಿಂ ಭೂಪಃ ಪ್ರತ್ಯುತ್ಥಾನಾಸನಾರ್ಹಣೈಃ ।
ಯಯಾಚೇಽಭ್ಯವಹಾರಾಯ ಪಾದಮೂಲಮುಪಾಗತಃ
॥ ೩೬ ॥

ಪ್ರತಿನಂದ್ಯ ಸ ತದ್ ಯಾಚ್ಞಾಂ ಕರ್ತುಮಾವಶ್ಯಕಂ ಗತಃ ।
ನಿಮಮಜ್ಜ ಬೃಹದ್ಧ್ಯಾಯನ್ ಕಾಲಿಂದೀಸಲಿಲೇ ಶುಭೇ
॥ ೩೭ ॥

ಮುಹೂರ್ತಾರ್ಧಾವಶಿಷ್ಟಾಯಾಂ ದ್ವಾದಶ್ಯಾಂ ಪಾರಣಂ ಪ್ರತಿ ।
ಚಿಂತಯಾಮಾಸ ಧರ್ಮಜ್ಞೋ ದ್ವಿಜೈಸ್ತದ್ಧರ್ಮಸಂಕಟೇ
॥ ೩೮ ॥

ಬ್ರಾಹ್ಮಣಾತಿಕ್ರಮೇ ದೋಷೋ
ದ್ವಾದಶ್ಯಾಂ ಯದಪಾರಣೇ ।
ಯತ್ಕೃತ್ವಾ ಸಾಧು ಮೇ ಭೂಯಾದ-
ಧರ್ಮೋ ವಾ ನ ಮಾಂ ಸ್ಪೃಶೇತ್ ॥ ೩೯ ॥

ಅಂಭಸಾ ಕೇವಲೇನಾಥ ಕರಿಷ್ಯೇ ವ್ರತಪಾರಣಮ್ ।
ಪ್ರಾಹುರಬ್ಭಕ್ಷಣಂ ವಿಪ್ರಾ ಹ್ಯಶಿತಂ ನಾಶಿತಂ ಚ ತತ್
॥ ೪೦ ॥

ಇತ್ಯಪಃ ಪ್ರಾಶ್ಯ ರಾಜರ್ಷಿಶ್ಚಿಂತಯನ್ಮನಸಾಚ್ಯುತಮ್ ।
ಪ್ರತ್ಯಚಷ್ಟ ಕುರುಶ್ರೇಷ್ಠ ದ್ವಿಜಾಗಮನಮೇವ ಸಃ
॥ ೪೧ ॥

ದುರ್ವಾಸಾ ಯಮುನಾಕೂಲಾತ್ಕೃತಾವಶ್ಯಕ ಆಗತಃ ।
ರಾಜ್ಞಾಭಿನಂದಿತಸ್ತಸ್ಯ ಬುಬುಧೇ ಚೇಷ್ಟಿತಂ ಧಿಯಾ
॥ ೪೨ ॥

ಮನ್ಯುನಾ ಪ್ರಚಲದ್ಗಾತ್ರೋ ಭ್ರುಕುಟೀಕುಟಿಲಾನನಃ ।
ಬುಭುಕ್ಷಿತಶ್ಚ ಸುತರಾಂ ಕೃತಾಂಜಲಿಮಭಾಷತ
॥ ೪೩ ॥

ಕಾಲುಗಳು ಬೆಳ್ಳಿಯಿಂದಲೂ ಅಲಂಕೃತವಾಗಿತ್ತು. ಅವುಗಳಿಗೆ ಸುಂದರವಾದ ವಸ್ತ್ರಗಳನ್ನು ಹೊದಿಸಿದ್ದರು. ಅವೆಲ್ಲವೂ ಹೇರಳವಾಗಿ ಹಾಲುಕೊಡುತ್ತಿದ್ದವು. ಒಳ್ಳೆಯ ಸ್ವಭಾವದವುಗಳಾಗಿದ್ದು ಪಡ್ಡೆ ಹಸುಗಳಾಗಿದ್ದವು. ನೋಡಲು ಸುಂದರವಾಗಿದ್ದವು. ಕರುಗಳ ಸಮೇತವಾಗಿದ್ದವು. ಜೊತೆಗೆ ಹಾಲುಕರೆಯುವ ಪಾತ್ರೆಗಳನ್ನೂ ರಾಜನು ಬ್ರಾಹ್ಮಣರಿಗೆ ದಾನವಾಗಿಕೊಟ್ಟನು. ॥ ೩೧-೩೪ ॥ ಗೋವುಗಳನ್ನು ಪಡೆದು ಕಾಮನೆಗಳನ್ನು ಪೂರ್ಣಗೊಳಿಸಿಕೊಂಡ ಬ್ರಾಹ್ಮಣರಿಂದ ಅನುಜ್ಞೆಯನ್ನು ಪಡೆದು ರಾಜನು ವ್ರತಪಾರಣೆಗಾಗಿ ಸಿದ್ಧನಾಗುತ್ತಿದ್ದನು. ಅದೇ ಸಮಯದಲ್ಲಿ ಶಾಪಾನುಗ್ರಹ ಸಮರ್ಥರಾದ ದುರ್ವಾಸರು ಅವನಲ್ಲಿಗೆ ಅತಿಥಿಗಳಾಗಿ ಆಗಮಿಸಿದರು. ॥ ೩೫ ॥

ಅಂಬರೀಷ ಮಹಾರಾಜನು ಅವರನ್ನು ನೋಡುತ್ತಲೇ ಎದ್ದು ನಿಂತು, ಆದರದಿಂದ ಆಸನವನ್ನಿತ್ತು ಕುಳ್ಳಿರಿಸಿ ಅತಿಥಿಯಾಗಿ ಬಂದಿರುವ ದುರ್ವಾಸರನ್ನು ವಿಧ-ವಿಧವಾಗಿ ಪೂಜಿಸಿದನು. ಅವರ ಚರಣಗಳಲ್ಲಿ ನಮಸ್ಕಾರಮಾಡಿ ರಾಜನು ಭೋಜನಕ್ಕಾಗಿ ಪ್ರಾರ್ಥಿಸಿಕೊಂಡನು. ॥ ೩೬ ॥ ದುರ್ವಾಸರು ಅಂಬರೀಷನ ಪ್ರಾರ್ಥನೆಯನ್ನು ಸ್ವೀಕರಿಸಿ ಆವಶ್ಯಕ ಕರ್ಮಗಳನ್ನು ಪೂರ್ಣಗೊಳಿಸಲಿಕ್ಕಾಗಿ ನದೀ ತೀರಕ್ಕೆ ಹೋದರು. ಅವರು ಬ್ರಹ್ಮವಸ್ತುವನ್ನು ಧ್ಯಾನಿಸುತ್ತಾ ಯಮುನೆಯ ಪವಿತ್ರತೀರ್ಥದಲ್ಲಿ ಸ್ನಾನ ಮಾಡತೊಡಗಿದರು. ॥ ೩೭ ॥ ಇತ್ತ ದ್ವಾದಶಿಯು ಕೇವಲ ಒಂದುಗಳಿಗೆ ಮಾತ್ರ ಉಳಿದಿತ್ತು. ಧರ್ಮಜ್ಞನಾದ ಅಂಬರೀಷನು ಧರ್ಮ-ಸಂಕಟಕ್ಕೊಳಗಾಗಿ ಬ್ರಾಹ್ಮಣರೊಂದಿಗೆ ವಿಚಾರ ವಿಮರ್ಶೆ ಮಾಡಿದನು. ॥ ೩೮ ॥ ರಾಜನೆಂದನು – ಬ್ರಾಹ್ಮಣೋತ್ತಮರೇ! ಅತಿಥಿಯಾದ ಬ್ರಾಹ್ಮಣನಿಗೆ ಭೋಜನಮಾಡಿಸದೆ ಭೋಜನ ಮಾಡುವುದು ಮತ್ತು ದ್ವಾದಶಿ ಕಳೆದಮೇಲೆ ಪಾರಣೆಮಾಡುವುದು ಎರಡೂ ದೋಷವಾಗಿದೆ. ಅದಕ್ಕಾಗಿ ಇಂತಹ ಸಮಯದಲ್ಲಿ ನನಗೆ ಪಾಪವು ತಟ್ಟದೆ ಶ್ರೇಯಸ್ಸಾಗುವಂತಹ ಯಾವ ಕಾರ್ಯವನ್ನು ಮಾಡಬೇಕು? ॥ ೩೯ ॥ ಆಗ ಬ್ರಾಹ್ಮಣರೊಂದಿಗೆ ವಿಚಾರ ವಿಮರ್ಶಿಸಿ ಅವನೆಂದನು – ಬ್ರಾಹ್ಮಣಶ್ರೇಷ್ಠರೇ! ಕೇವಲ ನೀರು ಕುಡಿಯುವುದರಿಂದ ಭೋಜನ ಮಾಡಿದಂತೆಯೂ, ಮಾಡದಂತೆಯೂ ಇದೆ ಎಂದು ಶ್ರುತಿಗಳಲ್ಲಿ ಹೇಳಿದೆ. ಅದಕ್ಕಾಗಿ ಈ ಸಮಯದಲ್ಲಿ ಕೇವಲ ನೀರು ಕುಡಿದು ಪಾರಣೆ ಮಾಡುತ್ತೇನೆ ಎಂದು ಹೇಳಿಕೊಂಡನು. ॥ ೪೦ ॥ ಹೀಗೆ ನಿಶ್ಚಯಿಸಿ ಮನಸ್ಸಿನಲ್ಲೇ ಭಗವಂತನನ್ನು ಚಿಂತಿಸುತ್ತಾ ರಾಜರ್ಷಿ ಅಂಬರೀಷನು ಜಲಪ್ರಾಶನ ಮಾಡಿದನು ಹಾಗೂ ಪರೀಕ್ಷಿತನೇ! ದುರ್ವಾಸರ ಆಗಮನವನ್ನೇ ಎದುರು ನೋಡುತ್ತಿದ್ದನು. ॥ ೪೧ ॥ ದುರ್ವಾಸರು ಆವಶ್ಯಕ ಕರ್ಮಗಳಿಂದ ನಿವೃತ್ತರಾಗಿ ಯಮುನಾ ನದಿಯಿಂದ ಮರಳಿದರು. ರಾಜನು ಮುಂದೆ ಹೋಗಿ ಅವರಿಗೆ ಅಭಿನಂದಿಸಿದಾಗ ಅವರು – ರಾಜನು ಪಾರಣೆಮಾಡಿರುವನೆಂದು ಅನುಮಾನದಿಂದಲೇ ತಿಳಿದುಕೊಂಡರು. ॥ ೪೨ ॥ ಆ ಸಮಯದಲ್ಲಿ ದುರ್ವಾಸರು ಬಹಳ ಹಸಿದಿದ್ದರು. ಇದರಿಂದ ರಾಜನು ಪಾರಣೆ ಮಾಡಿರುವನೆಂದು ತಿಳಿದು ಅವರ ಶರೀರವೆಲ್ಲವೂ ಕೋಪದಿಂದ ಥರ-ಥರನೆ ನಡುಗುತ್ತಿತ್ತು. ಹುಬ್ಬುಗಂಟಿಕ್ಕಿದ್ದರಿಂದ ಮುಖವು ವಿಕಟವಾಗಿತ್ತು. ಕೈಜೋಡಿಸಿ ನಿಂತುಕೊಂಡಿದ್ದ ಅಂಬರೀಷನನ್ನು ಗದರಿಸುತ್ತಾ ಅವರು ಹೇಳಿದರು – ॥ ೪೩ ॥

ಅಹೋ ಅಸ್ಯ ನೃಶಂಸಸ್ಯ ಶ್ರಿಯೋನ್ಮತ್ತಸ್ಯ ಪಶ್ಯತ ।
ಧರ್ಮವ್ಯತಿಕ್ರಮಂ ವಿಷ್ಣೋರಭಕ್ತಸ್ಯೇಶಮಾನಿನಃ ॥ ೪೪ ॥

ಯೋ ಮಾಮತಿಥಿಮಾಯಾತಮಾತಿಥ್ಯೇನ ನಿಮಂತ್ರ್ಯ ಚ ।
ಅದತ್ತ್ವಾ ಭುಕ್ತವಾಂಸ್ತಸ್ಯ ಸದ್ಯಸ್ತೇ ದರ್ಶಯೇ ಫಲಮ್ ॥ ೪೫ ॥

ಏವಂ ಬ್ರುವಾಣ ಉತ್ಕೃತ್ಯ ಜಟಾಂ ರೋಷವಿದೀಪಿತಃ ।
ತಯಾ ಸ ನಿರ್ಮಮೇ ತಸ್ಮೈ ಕೃತ್ಯಾಂ ಕಾಲಾನಲೋಪಮಾಮ್ ॥ ೪೬ ॥

ತಾಮಾಪತಂತೀಂ ಜ್ವಲತೀಮಸಿಹಸ್ತಾಂ ಪದಾ ಭುವಮ್ ।
ವೇಪಯಂತೀಂ ಸಮುದ್ವೀಕ್ಷ್ಯ ನ ಚಚಾಲ ಪದಾನ್ನೃಪಃ ॥ ೪೭ ॥

ಪ್ರಾಗ್ದಿಷ್ಟಂ ಭೃತ್ಯರಕ್ಷಾಯಾಂ ಪುರುಷೇಣ ಮಹಾತ್ಮನಾ ।
ದದಾಹ ಕೃತ್ಯಾಂ ತಾಂ ಚಕ್ರಂ ಕ್ರುದ್ಧಾಹಿಮಿವ ಪಾವಕಃ ॥ ೪೮ ॥

ತದಭಿದ್ರವದುದ್ವೀಕ್ಷ್ಯ ಸ್ವಪ್ರಯಾಸಂ ಚ ನಿಷ್ಫಲಮ್ ।
ದುರ್ವಾಸಾ ದುದ್ರುವೇ ಭೀತೋ ದಿಕ್ಷು ಪ್ರಾಣಪರೀಪ್ಸಯಾ ॥ ೪೯ ॥

ತಮನ್ವಧಾವದ್ಭಗವದ್ರಥಾಂಗಂ
ದಾವಾಗ್ನಿರುದ್ಧೂತಶಿಖೋ ಯಥಾಹಿಮ್ ।
ತಥಾನುಷಕ್ತಂ ಮುನಿರೀಕ್ಷಮಾಣೋ
ಗುಹಾಂ ವಿವಿಕ್ಷುಃ ಪ್ರಸಸಾರ ಮೇರೋಃ ॥ ೫೦ ॥

ದಿಶೋ ನಭಃ ಕ್ಷ್ಮಾಂ ವಿವರಾನ್ ಸಮುದ್ರಾನ್
ಲೋಕಾನ್ಸಪಾಲಾಂಸ್ತ್ರಿದಿವಂ ಗತಃ ಸಃ ।
ಯತೋ ಯತೋ ಧಾವತಿ ತತ್ರ ತತ್ರ
ಸುದರ್ಶನಂ ದುಷ್ಪ್ರಸಹಂ ದದರ್ಶ ॥ ೫೧ ॥

ಅಲಬ್ಧನಾಥಃ ಸ ಯದಾ ಕುತಶ್ಚಿತ್
ಸಂತ್ರಸ್ತಚಿತ್ತೋಽರಣಮೇಷಮಾಣಃ ।
ದೇವಂ ವಿರಿಂಚಂ ಸಮಗಾದ್ವಿಧಾತಃ
ತ್ರಾಹ್ಯಾತ್ಮಯೋನೇಽಜಿತತೇಜಸೋ ಮಾಮ್ ॥ ೫೨ ॥

ಬ್ರಹ್ಮೋವಾಚ

ಸ್ಥಾನಂ ಮದೀಯಂ ಸಹವಿಶ್ವಮೇತತ್
ಕ್ರೀಡಾವಸಾನೇ ದ್ವಿಪರಾರ್ಧಸಂಜ್ಞೇ ।
ಭ್ರೂಭಂಗಮಾತ್ರೇಣ ಹಿ ಸಂದಿಧಕ್ಷೋಃ
ಕಾಲಾತ್ಮನೋ ಯಸ್ಯ ತಿರೋಭವಿಷ್ಯತಿ ॥ ೫೩ ॥

ಏನಾಶ್ಚರ್ಯ! ಕ್ರೂರಿಯಾದ, ಸಂಪತ್ತಿನಿಂದ ಮದಿಸಿರುವ, ವಿಷ್ಣುವಿನ ಭಕ್ತನಲ್ಲದ, ತಾನೇ ಸರ್ವೇಶ್ವರನೆಂದು ಭಾವಿಸಿ ಕೊಂಡಿರುವ ಈ ರಾಜನ ಧರ್ಮೋಲ್ಲಂಘನೆಯನ್ನು ಎಲ್ಲರೂ ನೋಡಿರಿ. ॥ ೪೪ ॥ ನಾನು ಅತಿಥಿಯಾಗಿ ಇವನಲ್ಲಿಗೆ ಬಂದಿರುವೆನು. ಆತಿಥ್ಯ ಸತ್ಕಾರಮಾಡಲು ರಾಜನು ನನಗೆ ಆಮಂತ್ರಣವನ್ನೂ ಕೊಟ್ಟನು. ಹೀಗಿದ್ದರೂ ನನಗೆ ಊಟಮಾಡಿಸದೆಯೇ ಇವನು ಭೋಜನ ಮಾಡಿರುವನು. ಇಂತಹ ಧರ್ಮವ್ಯತಿಕ್ರಮಕ್ಕೆ ಸಿಗುವ ಫಲ ಏನೆಂಬುದನ್ನು ನಾನೀಗಲೇ ತೋರಿಸಿಕೊಡುತ್ತೇನೆ. ॥ ೪೫ ॥ ಹೀಗೆ ಹೇಳುತ್ತಾ- ಹೇಳುತ್ತಾ ಅವರು ಸಿಟ್ಟಿನಿಂದ ಉರಿದೆದ್ದರು. ಅವರು ತಮ್ಮ ಒಂದು ಜಟೆಯನ್ನು ಕಿತ್ತು ಅದರಿಂದ ಅಂಬರೀಷನನ್ನು ಕೊಂದುಬಿಡಲು ಒಂದು ಕೃತ್ಯೆಯನ್ನು ನಿರ್ಮಿಸಿದರು. ಅದು ಪ್ರಳಯಾಗ್ನಿಯಂತೆ ಧಗ-ಧಗಿಸುತ್ತಿತ್ತು. ॥ ೪೬ ॥ ಅದು ಬೆಂಕಿಯಂತೆ ಉರಿಯುತ್ತಾ ಕೈಯಲ್ಲಿ ಖಡ್ಗವನ್ನು ಝಳಪಿಸುತ್ತಾ, ಪಾದ ಘಟ್ಟನೆಯಿಂದ ಭೂಮಿಯನ್ನು ನಡುಗಿಸುತ್ತಾ ಅಂಬರೀಷನ ಮೇಲೆ ಆಕ್ರಮಿಸಿತು. ಆದರೆ ಅಂಬರೀಷ ರಾಜನು ಅದನ್ನು ನೋಡಿ ನಿಂತ ಜಾಗದಿಂದ ಕದಲದೆ ಹಾಗೆಯೇ ನಿಂತಿದ್ದನು. ॥ ೪೭ ॥ ಪರಮ ಪುರುಷ ಪರಮಾತ್ಮನು ತನ್ನ ಸೇವಕನ ರಕ್ಷಣೆಗಾಗಿ ಮೊದಲೇ ಸುದರ್ಶನ ಚಕ್ರವನ್ನು ನಿಯುಕ್ತಗೊಳಿಸಿದ್ದನು. ಕೋಪಗೊಂಡಿರುವ ಘಟಸರ್ಪವನ್ನು ದಾವಾಗ್ನಿಯು ಕ್ಷಣಮಾತ್ರದಲ್ಲಿ ಭಸ್ಮಮಾಡಿಬಿಡುವಂತೆ ಸುದರ್ಶನಚಕ್ರವು ದುರ್ವಾಸರ ಕೃತ್ಯೆಯನ್ನು ಸುಟ್ಟು ಬೂದಿ ಮಾಡಿಬಿಟ್ಟಿತು. ॥ ೪೮ ॥ ತಾನು ಸೃಷ್ಟಿಸಿದ ಕೃತ್ಯೆಯು ಭಸ್ಮವಾದುದನ್ನು ಮತ್ತು ಚಕ್ರವು ತನ್ನೆಡೆಗೆ ಬರುತ್ತಿರುವುದನ್ನು ಕಂಡು ದುರ್ವಾಸರು ಭಯಗೊಂಡು ತನ್ನ ಪ್ರಾಣಗಳನ್ನು ಉಳಿಸಿಕೊಳ್ಳಲು ದಿಕ್ಕಾಪಾಲಾಗಿ ಓಡಿಹೋದರು. ॥ ೪೯ ॥ ಎತ್ತರವಾದ ಜ್ವಾಲೆಗಳಿಂದ ಕೂಡಿದ್ದ ಕಾಡ್ಗಿಚ್ಚು ಸರ್ಪವನ್ನು ಹಿಂಬಾಲಿಸಿ ಹೋಗುವಂತೆ ಭಗವಂತನ ಸುದರ್ಶನಚಕ್ರವು ಅವರನ್ನು ಅಟ್ಟಿಸಿಕೊಂಡು ಹೋಯಿತು. ಆಗ ದುರ್ವಾಸರು ಸುಮೇರು ಪರ್ವತದ ಗುಹೆಯನ್ನು ಪ್ರವೇಶಿಸಲು ಅತ್ತಕಡೆಗೆ ಓಡಿದರು. ॥ ೫೦ ॥ ದುರ್ವಾಸರು – ದಶದಿಕ್ಕುಗಳಲ್ಲಿ, ಆಕಾಶ, ಪೃಥಿವಿ, ಅತಲ-ವಿತಲ ಮುಂತಾದ ಕೆಳಗಿನ ಲೋಕಗಳಲ್ಲಿ, ಸಮುದ್ರ, ಲೋಕಪಾಲರಿಂದ ರಕ್ಷಿತವಾದ ಲೋಕಗಳಲ್ಲಿ, ಸ್ವರ್ಗದಲ್ಲಿ, ಹೀಗೆ ಎಲ್ಲೆಡೆಗಳಲ್ಲಿ ಓಡಾಡಿದರು. ಆದರೆ ಅವರು ಹೋದಲ್ಲೆಲ್ಲ ಸಹಿಸಲಸಾಧ್ಯವಾದ ತೇಜಸ್ಸಿನಿಂದ ಕೂಡಿದ ಸುದರ್ಶನವು ತನ್ನನ್ನು ಹಿಂಬಾಲಿಸುವುದನ್ನು ಕಂಡರು. ॥ ೫೧ ॥ ಎಲ್ಲಿಯೂ ಯಾರೂ ರಕ್ಷಕರು ದೊರೆಯದಿದ್ದಾಗ ಅವರು ಇನ್ನೂ ಭಯಗೊಂಡರು. ತನಗಾಗಿ ಬದುಕುಳಿಯಲು ಸ್ಥಳವನ್ನು ಹುಡುಕುತ್ತಾ ಅವರು ಬ್ರಹ್ಮದೇವರ ಬಳಿಗೆ ಹೋಗಿ ಬೇಡಿಕೊಂಡರು – 'ಓ ವಿರಿಂಚಿಯೇ! ನೀವು ಸ್ವಯಂಭೂ ಆಗಿರುವಿರಿ. ಭಗವಂತನ ಈ ತೇಜೋಮಯ ಚಕ್ರದಿಂದ ನನ್ನನ್ನು ಕಾಪಾಡಿರಿ.' ॥ ೫೨ ॥

ಬ್ರಹ್ಮದೇವರು ಹೇಳಿದರು – ಮಹರ್ಷಿಯೇ! ನನ್ನ ಎರಡು ಪರಾರ್ಧಗಳ ಆಯುಷ್ಯವು ಮುಗಿದಾಗ ಕಾಲಸ್ವರೂಪವಾದ ಭಗವಂತನು ತನ್ನ ಈ ಸೃಷ್ಟಿಲೀಲೆಯನ್ನು ಸಮಾಪ್ತಗೊಳಿಸಲು ಬಯಸಿ ಈ ಜಗತ್ತನ್ನು ಸುಡಲು ಬಯಸಿದಾಗ ಅವನ ಭ್ರೂಭಂಗ ಮಾತ್ರದಿಂದ ಈ ಇಡೀ ಪ್ರಪಂಚ ಮತ್ತು ನನ್ನ ಈ ಲೋಕವೂ ಕೂಡ ಲೀನವಾಗಿ ಹೋದೀತು. ॥ ೫೩ ॥

ಅಹಂ ಭವೋ ದಕ್ಷಭೃಗುಪ್ರಧಾನಾಃ
ಪ್ರಜೇಶಭೂತೇಶಸುರೇಶಮುಖ್ಯಾಃ ।
ಸರ್ವೇ ವಯಂ ಯನ್ನಿಯಮಂ ಪ್ರಪನ್ನಾ
ಮೂರ್ಧ್ನ್ಯರ್ಪಿತಂ ಲೋಕಹಿತಂ ವಹಾಮಃ ॥ ೫೪ ॥

ಪ್ರತ್ಯಾಖ್ಯಾತೋ ವಿರಿಂಚೇನ ವಿಷ್ಣುಚಕ್ರೋಪತಾಪಿತಃ ।
ದುರ್ವಾಸಾಃ ಶರಣಂ ಯಾತಃ ಶರ್ವಂ ಕೈಲಾಸವಾಸಿನಮ್ ॥ ೫೫ ॥

ಶ್ರೀರುದ್ರ ಉವಾಚ

ವಯಂ ನ ತಾತ ಪ್ರಭವಾಮ ಭೂಮ್ನಿ
ಯಸ್ಮಿನ್ಪರೇಽನ್ಯೇಽಪ್ಯಜಜೀವಕೋಶಾಃ ।
ಭವಂತಿ ಕಾಲೇ ನ ಭವಂತಿ ಹೀದೃಶಾಃ
ಸಹಸ್ರಶೋ ಯತ್ರ ವಯಂ ಭ್ರಮಾಮಃ ॥ ೫೬ ॥

ಅಹಂ ಸನತ್ಕುಮಾರಶ್ಚ ನಾರದೋ ಭಗವಾನಜಃ ।
ಕಪಿಲೋಽಪಾಂತರತಮೋ ದೇವಲೋ ಧರ್ಮ ಆಸುರಿಃ ॥ ೫೭ ॥

ಮರೀಚಿಪ್ರಮುಖಾಶ್ಚಾನ್ಯೇ ಸಿದ್ಧೇಶಾಃ ಪಾರದರ್ಶನಾಃ ।
ವಿದಾಮ ನ ವಯಂ ಸರ್ವೇ ಯನ್ಮಾಯಾಂ ಮಾಯಯಾಽಽವೃತಾಃ ॥ ೫೮ ॥

ತಸ್ಯ ವಿಶ್ವೇಶ್ವರಸ್ಯೇದಂ ಶಸ್ತ್ರಂ ದುರ್ವಿಷಹಂ ಹಿ ನಃ ।
ತಮೇವ ಶರಣಂ ಯಾಹಿ ಹರಿಸ್ತೇ ಶಂ ವಿಧಾಸ್ಯತಿ ॥ ೫೯ ॥

ತತೋ ನಿರಾಶೋ ದುರ್ವಾಸಾಃ ಪದಂ ಭಗವತೋ ಯಯೌ ।
ವೈಕುಂಠಾಖ್ಯಂ ಯದಧ್ಯಾಸ್ತೇ ಶ್ರೀನಿವಾಸಃ ಶ್ರಿಯಾ ಸಹ ॥ ೬೦ ॥

ಸಂದಹ್ಯಮಾನೋಽಜಿತಶಸ್ತ್ರವಹ್ನಿನಾ
ತತ್ಪಾದಮೂಲೇ ಪತಿತಃ ಸವೇಪಥುಃ ।
ಆಹಾಚ್ಯುತಾನಂತ ಸದೀಪ್ಸಿತ ಪ್ರಭೋ
ಕೃತಾಗಸಂ ಮಾವ ಹಿ ವಿಶ್ವಭಾವನ ॥ ೬೧ ॥

ಅಜಾನತಾ ತೇ ಪರಮಾನುಭಾವಂ
ಕೃತಂ ಮಯಾಘಂ ಭವತಃ ಪ್ರಿಯಾಣಾಮ್ ।
ವಿಧೇಹಿ ತಸ್ಯಾಪಚಿತಿಂ ವಿಧಾತ-
ರ್ಮುಚ್ಯೇತ ಯನ್ನಾಮ್ನ್ಯುದಿತೇ ನಾರಕೋಽಪಿ ॥ ೬೨ ॥

ಶ್ರೀಭಗವಾನುವಾಚ

ಅಹಂ ಭಕ್ತಪರಾಧೀನೋ ಹ್ಯಸ್ವತಂತ್ರ ಇವ ದ್ವಿಜ ।
ಸಾಧುಭಿರ್ಗ್ರಸ್ತಹೃದಯೋ ಭಕ್ತೈರ್ಭಕ್ತಜನಪ್ರಿಯಃ ॥ ೬೩ ॥

ನಾನು, ಶಂಕರನು, ದಕ್ಷ ಭೃಗು ಮೊದಲಾದ ಪ್ರಜಾಪತಿಗಳು, ಭೂತೇಶರು, ಸುರೇಶಮುಖ್ಯರು, ಇವರೆಲ್ಲರೂ ಯಾರು ನಿರ್ಮಿಸಿದ ನಿಯಮಗಳಲ್ಲಿ ಬಂಧಿತರಾಗಿರುವೆವೋ, ಅವನ ಆಜ್ಞೆಯನ್ನು ಶಿರಸಾವಹಿಸಿ ನಾವೆಲ್ಲರೂ ಪ್ರಪಂಚದ ಹಿತವನ್ನು ಮಾಡುತ್ತೇವೆ. ಅಂತಹ ಮಹಾಮಹಿಮನಾದ ವಿಷ್ಣುವಿನ ಭಕ್ತನಿಗೆ ದ್ರೋಹ ಎಸಗಿರುವ ನಿನಗೆ ರಕ್ಷಣೆ ಯನ್ನೀಯಲು ನಾವು ಸಮರ್ಥರಲ್ಲ ॥ ೫೪ ॥ ಬ್ರಹ್ಮದೇವರು ಹೀಗೆ ದುರ್ವಾಸರನ್ನು ನಿರಾಶಗೊಳಿಸಿದಾಗ ಭಗವಂತನ ಚಕ್ರದ ಬೇಗೆಯಿಂದ ಬೇಯುತ್ತಿದ್ದ ಅವರು ಕೈಲಾಸವಾಸೀ ಭಗವಾನ್ ಶಂಕರನಲ್ಲಿ ಶರಣುಹೊಕ್ಕರು. ಓ ಪರಮೇಶ್ವರಾ! ನನ್ನನ್ನು ಈ ವಿಷ್ಣುಚಕ್ರದಿಂದ ಕಾಪಾಡು ಎಂದು ಬೇಡಿದಾಗ ಶಿವನೆಂದನು – ॥ ೫೫ ॥

ಶ್ರೀಮಹಾದೇವನು ಹೇಳಿದನು – ದುರ್ವಾಸನೇ! ಯಾವ ಅಪಾರಮಹಿಮನಾದ ಪರಮಾತ್ಮನಲ್ಲಿ ಕೇವಲ ಈ ಬ್ರಹ್ಮ ಈ ಜೀವರು ಮಾತ್ರವಲ್ಲದೆ ಅನೇಕ ಬ್ರಹ್ಮರು, ಅನೇಕ ಬ್ರಹ್ಮಾಂಡಗಳು ಹುಟ್ಟುತ್ತಿರುತ್ತವೆಯೋ ಮತ್ತು ಲೀನವಾಗುತ್ತಿರುತ್ತವೆಯೋ–ಅಂತಹ ಅನೇಕ ಕೋಟಿ ಬ್ರಹ್ಮಾಂಡಗಳಲ್ಲಿ ನಾವೂ ಕೂಡ ಸಾವಿರಾರು ಬಾರಿ ಹುಟ್ಟಿ ಅವನಲ್ಲೇ ಲೀನವಾಗುತ್ತೇವೆಯೋ ಅಂತಹ ಪ್ರಭುವಿನ ಸಂಬಂಧದಲ್ಲಿ ನಾವು ಏನನ್ನೂ ಮಾಡಲು ಸಮರ್ಥರಲ್ಲ ॥ ೫೬ ॥ ನಾನಾಗಲೀ, ಸನತ್ಕುಮಾರ, ನಾರದ, ಬ್ರಹ್ಮದೇವರು, ಕಪಿಲರು, ಅಪಾಂತರತಮ-ದೇವಲರಾಗಲೀ, ಧರ್ಮ-ಆಸುರೀ-ಮರೀಚಿಯೇ ಮೊದಲಾದ ಸರ್ವಜ್ಞರಾದ ಸಿದ್ಧೇಶ್ವರರಾಗಲೀ ಭಗವಂತನ ಮಾಯೆಯನ್ನು ಅರಿಯೆವು. ಏಕೆಂದರೆ, ನಾವೆಲ್ಲರೂ ಅದೇ ಮಾಯೆಯಿಂದಲೇ ಆವೃತರಾಗಿದ್ದೇವೆ. ॥ ೫೭–೫೮ ॥ ಈ ಚಕ್ರವು ಆ ವಿಶ್ವೇಶ್ವರನಾದ ಮಹಾವಿಷ್ಣುವಿನ ಶಸ್ತ್ರವಾಗಿದೆ. ಇದರ ಉಜ್ವಲವಾದ ಪ್ರಭೆಯನ್ನು ನಾವೂ ಸಹಿಸಲಾರೆವು. ನೀನು ಆ ಶ್ರೀಹರಿಗೆ ಶರಣುಹೋಗು. ಅವನೇ ನಿನಗೆ ಮಂಗಳವನ್ನು ಉಂಟುಮಾಡುತ್ತಾನೆ. ॥ ೫೯ ॥ ಅಲ್ಲಿಯೂ ಕೂಡ ನಿರಾಶರಾದ ದುರ್ವಾಸರು ಲಕ್ಷ್ಮೀಪತಿಯಾದ ಭಗವಂತನು ರಮೆಯೊಂದಿಗೆ ವಾಸಿಸುವ ಪರಮಧಾಮವಾದ ವೈಕುಂಠಕ್ಕೆ ಹೋದರು. ॥ ೬೦ ॥ ದುರ್ವಾಸರು ಭಗವಂತನ ಸುದರ್ಶನದಿಂದ ಬೇಯುತ್ತಿದ್ದರು. ಅವರು ನಡುಗುತ್ತಾ ಭಗವಂತನ ಚರಣಗಳಲ್ಲಿ ಅಡ್ಡಬಿದ್ದರು. ಓ ಅಚ್ಯುತಾ! ಅನಂತಾ! ಸತ್ಪುರುಷರಿಗೆ ಬೇಕಾದವನೇ! ಪ್ರಭುವೇ! ಲೋಕರಕ್ಷಕನೇ! ಅಪರಾಧಿಯಾದ ನನ್ನನ್ನು ರಕ್ಷಿಸು ಕಾಪಾಡು ಎಂದು ಅಂಗಲಾಚಿದರು. ॥ ೬೧ ॥ ನಿನ್ನ ಪರಮಾದ್ಭುತವಾದ ಪ್ರಭಾವವನ್ನು ಅರಿಯದೆ ನಾನು ನಿನ್ನ ಪ್ರಿಯಭಕ್ತನಿಗೆ ಅಪರಾಧ ಮಾಡಿಬಿಟ್ಟೆ ಪ್ರಭುವೇ! ನನ್ನನ್ನು ಈ ಸುದರ್ಶನದಿಂದ ಪಾರುಮಾಡು. ನಿನ್ನ ನಾಮೋಚ್ಚಾರಣ ಮಾತ್ರದಿಂದಲೇ ನರಕದಲ್ಲಿರುವ ಜೀವರು ಮುಕ್ತರಾಗಿ ಹೋಗುತ್ತಾರೆ. ॥ ೬೨ ॥

ಶ್ರೀಭಗವಂತನು ಹೇಳಿದನು – ದುರ್ವಾಸರೇ! ನಾನು ಸರ್ವಥಾ ಭಕ್ತರಿಗೆ ಅಧೀನನಾಗಿ ಬಿಟ್ಟಿರುವೆನು. ನಾನು ಅಸ್ವತಂತ್ರನು. ನನಗೆ ಯಾವ ಸ್ವಾತಂತ್ರ್ಯವೂ ಇಲ್ಲ. ಸಾಧುಗಳಾದ ನನ್ನ ಭಕ್ತರು ನನ್ನ ಹೃದಯವನ್ನು ಕೈವಶಮಾಡಿಕೊಂಡಿದ್ದಾರೆ. ಭಕ್ತರು ನನ್ನನ್ನು ಪ್ರೀತಿಸುವಂತೆ ನಾನೂ ಅವರನ್ನು ಪ್ರೀತಿಸುತ್ತೇನೆ. ॥ ೬೩ ॥

ನಾಹಮಾತ್ಮಾನಮಾಶಾಸೇ ಮದ್ಭಕ್ತೈಃ ಸಾಧುಭಿರ್ವಿನಾ ।
ಶ್ರಿಯಂ ಚಾತ್ಯಂತಿಕೀಂ ಬ್ರಹ್ಮನ್ ಯೇಷಾಂ ಗತಿರಹಂ ಪರಾ
॥ ೬೪ ॥

ಯೇ ದಾರಾಗಾರಪುತ್ರಾಪ್ತಾನ್ ಪ್ರಾಣಾನ್ವಿತ್ತಮಿಮಂ ಪರಮ್ ।
ಹಿತ್ವಾ ಮಾಂ ಶರಣಂ ಯಾತಾಃ ಕಥಂ ತಾಂಸ್ತ್ಯಕ್ತುಮುತ್ಸಹೇ
॥ ೬೫ ॥

ಮಯಿ ನಿರ್ಬದ್ಧಹೃದಯಾಃ ಸಾಧವಃ ಸಮದರ್ಶನಾಃ ।
ವಶೀಕುರ್ವಂತಿ ಮಾಂ ಭಕ್ತ್ಯಾ ಸತ್‌ಸ್ತ್ರಿಯಃ ಸತ್ಪತಿಂ ಯಥಾ
॥ ೬೬ ॥

ಮತ್ಸೇವಯಾ ಪ್ರತೀತಂ ಚ ಸಾಲೋಕ್ಯಾದಿಚತುಷ್ಟಯಮ್ ।
ನೇಚ್ಛಂತಿ ಸೇವಯಾ ಪೂರ್ಣಾಃ ಕುತೋಽನ್ಯತ್ಕಾಲವಿಪ್ಲುತಮ್
॥ ೬೭ ॥

ಸಾಧವೋ ಹೃದಯಂ ಮಹ್ಯಂ ಸಾಧೂನಾಂ ಹೃದಯಂ ತ್ವಹಮ್ ।
ಮದನ್ಯತ್ತೇ ನ ಜಾನಂತಿ ನಾಹಂ ತೇಭ್ಯೋ ಮನಾಗಪಿ
॥ ೬೮ ॥

ಉಪಾಯಂ ಕಥಯಿಷ್ಯಾಮಿ ತವ ವಿಪ್ರ ಶೃಣುಷ್ವ ತತ್ ।
ಅಯಂ ಹ್ಯಾತ್ಮಾಭಿಚಾರಸ್ತೇ ಯತಸ್ತಂ ಯಾಹಿ ವೈ ಭವಾನ್ ।
ಸಾಧುಷು ಪ್ರಹಿತಂ ತೇಜಃ ಪ್ರಹರ್ತುಃ ಕುರುತೇಽಶಿವಮ್
॥ ೬೯ ॥

ತಪೋ ವಿದ್ಯಾ ಚ ವಿಪ್ರಾಣಾಂ ನಿಃಶ್ರೇಯಸಕರೇ ಉಭೇ ।
ತೇ ಏವ ದುರ್ವಿನೀತಸ್ಯ ಕಲ್ಪೇತೇ ಕರ್ತುರನ್ಯಥಾ
॥ ೭೦ ॥

ಬ್ರಹ್ಮಂಸ್ತದ್ಗಚ್ಛ ಭದ್ರಂ ತೇ ನಾಭಾಗತನಯಂ ನೃಪಮ್ ।
ಕ್ಷಮಾಪಯ ಮಹಾಭಾಗಂ ತತಃ ಶಾಂತಿರ್ಭವಿಷ್ಯತಿ
॥ ೭೧ ॥

ಬ್ರಾಹ್ಮಣೋತ್ತಮನೇ! ನನ್ನ ಭಕ್ತರ ಏಕಮಾತ್ರ ಆಶ್ರಯ ನಾನೇ ಆಗಿರುವೆನು. ಆದರಿಂದ ಸಾಧುಸ್ವಭಾವವುಳ್ಳ ನನ್ನ ಭಕ್ತರನ್ನು ಬಿಟ್ಟು ನಾನು ಸ್ವತಃ ನನ್ನನ್ನಾಗಲೀ, ವಿನಾಶರಹಿತಳಾದ ನನ್ನ ಅರ್ಧಾಂಗಿನಿಯಾದ ಲಕ್ಷ್ಮಿಯನ್ನೂ ಬಯಸುವುದಿಲ್ಲ. ॥ ೬೪ ॥ ಯಾವ ಭಕ್ತನು ಪತ್ನಿ, ಪುತ್ರ, ಗೃಹ, ಗುರುಜನರು, ಪ್ರಾಣ, ಧನ ಇಹಲೋಕ, ಪರಲೋಕ – ಎಲ್ಲವನ್ನೂ ಬಿಟ್ಟು ಕೇವಲ ನನಗೇ ಶರಣುಬಂದಿರುವನೋ, ಅಂತಹವನನ್ನು ನಾನು ಹೇಗೆ ತಾನೇ ತ್ಯಜಿಸಬಲ್ಲೆನು? ॥ ೬೫ ॥ ಸಾಧ್ವಿಯಾದ ಸ್ತ್ರೀಯು ತನ್ನ ಪಾತಿವ್ರತ್ಯದಿಂದ ಸದಾಚಾರಿಯಾದ ಪತಿಯನ್ನು ವಶಪಡಿಸಿಕೊಳ್ಳುವಂತೆಯೇ ನನ್ನೊಂದಿಗೆ ತಮ್ಮ ಹೃದಯವನ್ನು ಪ್ರೇಮಬಂಧನದಿಂದ ಬಂಧಿಸಿರುವ ಸಮದರ್ಶಿಗಳಾದ ಸಾಧುಗಳು ಭಕ್ತಿಯ ಮೂಲಕ ನನ್ನನ್ನು ವಶಪಡಿಸಿಕೊಂಡು ಬಿಡುತ್ತಾರೆ. ॥ ೬೬ ॥ ನನ್ನ ಅನನ್ಯಪ್ರೇಮಿ ಭಕ್ತರು ನನ್ನ ಸೇವೆಯಿಂದಲೇ ತಮ್ಮನ್ನು ಪರಿಪೂರ್ಣ-ಕೃತಕೃತ್ಯರೆಂದು ತಿಳಿಯುತ್ತಾರೆ. ನನ್ನ ಸೇವೆಯ ಫಲಸ್ವರೂಪವಾಗಿ ಅವರಿಗೆ ಸಾಲೋಕ್ಯ-ಸಾರೂಪ್ಯಾದಿ ಮುಕ್ತಿಗಳು ದೊರಕಿದರೂ ಅವರು ಅದನ್ನೂ ಸ್ವೀಕರಿಸಲು ಬಯಸುವುದಿಲ್ಲ, ಮತ್ತೆ ಕಾಲವಶವಾದ ವಸ್ತುಗಳ ಬಗೆಗೆ ಹೇಳುವುದೇನಿದೆ? ॥ ೬೭ ॥ ದುರ್ವಾಸರೇ! ಹೆಚ್ಚೇನು ಹೇಳಲಿ? ಸಾಧುಗಳೇ ನನ್ನ ಹೃದಯಸ್ವರೂಪರಾಗಿದ್ದಾರೆ. ಸಾಧುಗಳಿಗೆ ನಾನು ಹೃದಯಸ್ವರೂಪನಾಗಿರುವೆನು. ಅವರು ನನ್ನನ್ನು ಬಿಟ್ಟು ಬೇರೆ ಏನನ್ನೂ ತಿಳಿಯರು ಹಾಗೂ ನಾನು ಅವರಲ್ಲದೆ ಬೇರೆ ಯಾರನ್ನೂ ಅರಿಯೆ. ॥ ೬೮ ॥ ವಿಪ್ರರೇ! ನಾನೊಂದು ಉಪಾಯವನ್ನು ಹೇಳುತ್ತೇನೆ; ಕೇಳಿರಿ. ಯಾರ ಅನಿಷ್ಟ ಮಾಡಿದ್ದುದರಿಂದ ನಿಮಗೆ ಈ ವಿಪತ್ತು ಸಂಭವಿಸಿತೋ, ನೀವು ಅವರ ಬಳಿಗೇ ಹೋಗಿರಿ. ನಿರಪರಾಧಿಗಳಾದ ಸಾಧುಗಳಿಗೆ ಮಾಡಿದ ಅನಿಷ್ಟದಿಂದಾಗಿ ಮಾಡಿದವರಿಗೇ ಅಮಂಗಳ ಉಂಟಾಗುತ್ತದೆ. ॥ ೬೯ ॥

ಬ್ರಾಹ್ಮಣರಿಗೆ ತಪಸ್ಸು ಮತ್ತು ವಿದ್ಯೆಯೇ ಪರಮ ಶ್ರೇಯಸ್ಸಿನ ಸಾಧನೆಯಾಗಿದೆ ಎಂಬುದರಲ್ಲಿ ಸಂದೇಹವೇ ಇಲ್ಲ. ಆದರೆ ಬ್ರಾಹ್ಮಣನು ಉದ್ದಂಡನಾಗಿ, ಅನ್ಯಾಯಿಯಾದರೆ ಅವೆರಡೂ ವಿಪರೀತ ಫಲವನ್ನು ಕೊಡುತ್ತವೆ. ॥ ೭೦ ॥ ದುರ್ವಾಸರೇ! ನಿಮಗೆ ಮಂಗಳವಾಗಲಿ. ನೀವು ನಾಭಾಗನಂದನ ಪರಮಭಾಗ್ಯಶಾಲಿ ಅಂಬರೀಷರಾಜನ ಬಳಿಗೆ ಹೋಗಿರಿ. ಅವನಲ್ಲಿ ಕ್ಷಮೆಯಾಚಿಸಿರಿ. ಆಗ ನಿಮಗೆ ಶಾಂತಿಯು ಲಭಿಸುವುದು. ॥ ೭೧ ॥

ನಾಲ್ಕನೆಯ ಅಧ್ಯಾಯವು ಮುಗಿಯಿತು. ॥ ೪ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ನವಮಸ್ಕಂಧೇ
ಅಂಬರೀಷಚರಿತೇ ಚತುರ್ಥೋಽಧ್ಯಾಯಃ ॥ ೪ ॥

ಐದನೆಯ ಅಧ್ಯಾಯ

ದುರ್ವಾಸರು ದುಃಖದಿಂದ ಪಾರಾದುದು

ಶ್ರೀಶುಕ ಉವಾಚ

ಏವಂ ಭಗವತಾಽಽದಿಷ್ಟೋ ದುರ್ವಾಸಾಶ್ಚಕ್ರತಾಪಿತಃ ।
ಅಂಬರೀಷಮುಪಾವೃತ್ಯ ತತ್ಪಾದೌ ದುಃಖಿತೋಽಗ್ರಹೀತ್ ॥ ೧ ॥

ತಸ್ಯ ಸೋದ್ಯಮನಂ ವೀಕ್ಷ್ಯ ಪಾದಸ್ಪರ್ಶವಿಲಜ್ಜಿತಃ ।
ಅಸ್ತಾವೀತ್ತದ್ಧರೇರಸ್ತ್ರಂ ಕೃಪಯಾ ಪೀಡಿತೋ ಭೃಶಮ್ ॥ ೨ ॥

ಅಂಬರೀಷ ಉವಾಚ

ತ್ವಮಗ್ನಿರ್ಭಗವಾನ್ಸೂರ್ಯಸ್ತ್ವಂ ಸೋಮೋ ಜ್ಯೋತಿಷಾಂ ಪತಿಃ ।
ತ್ವಮಾಪಸ್ತ್ವಂ ಕ್ಷಿತಿರ್ವ್ಯೋಮ ವಾಯುರ್ಮಾತ್ರೇಂದ್ರಿಯಾಣಿ ಚ ॥ ೩ ॥

ಸುದರ್ಶನ ನಮಸ್ತುಭ್ಯಂ ಸಹಸ್ರಾರಾಚ್ಯುತಪ್ರಿಯ ।
ಸರ್ವಾಸ್ತ್ರಘಾತಿನ್ ವಿಪ್ರಾಯ ಸ್ವಸ್ತಿ ಭೂಯಾ ಇಡಸ್ಪತೇ ॥ ೪ ॥

ತ್ವಂ ಧರ್ಮಸ್ತ್ವಮೃತಂ ಸತ್ಯಂ ತ್ವಂ ಯಜ್ಞೋಽಖಿಲಯಜ್ಞಭುಕ್ ।
ತ್ವಂ ಲೋಕಪಾಲಃ ಸರ್ವಾತ್ಮಾ ತ್ವಂ ತೇಜಃ ಪೌರುಷಂ ಪರಮ್ ॥ ೫ ॥

ನಮಃ ಸುನಾಭಾಖಿಲಧರ್ಮಸೇತವೇ
ಹ್ಯಧರ್ಮಶೀಲಾಸುರಧೂಮಕೇತವೇ ।
ತ್ರೈಲೋಕ್ಯಗೋಪಾಯ ವಿಶುದ್ಧವರ್ಚಸೇ
ಮನೋಜವಾಯಾದ್ಭುತಕರ್ಮಣೇ ಗೃಣೇ ॥ ೬ ॥

ತ್ವತ್ತೇಜಸಾ ಧರ್ಮಮಯೇನ ಸಂಹೃತಂ
ತಮಃ ಪ್ರಕಾಶಶ್ಚ ಧೃತೋ ಮಹಾತ್ಮನಾಮ್ ।
ದುರತ್ಯಯಸ್ತೇ ಮಹಿಮಾ ಗಿರಾಂ ಪತೇ
ತ್ವದ್ರೂಪಮೇತತ್ಸದಸತ್ಪರಾವರಮ್ ॥ ೭ ॥

ಯದಾ ವಿಸೃಷ್ಟಸ್ತ್ವಮನಂಜನೇನ ವೈ
ಬಲಂ ಪ್ರವಿಷ್ಟೋಽಜಿತ ದೈತ್ಯದಾನವಮ್ ।
ಬಾಹೂದರೋರ್ವಂಘ್ರಿಶಿರೋಧರಾಣಿ
ವೃಶ್ಚನ್ನಜಸ್ರಂ ಪ್ರಧನೇ ವಿರಾಜಸೇ ॥ ೮ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಎಲೈ ಪರೀಕ್ಷಿತನೇ! ಭಗವಂತನು ಹೀಗೆ ಅಪ್ಪಣೆ ಕೊಡಿಸಿದಾಗ ಸುದರ್ಶನಚಕ್ರದ ಜ್ವಾಲೆಯಿಂದ ಬೇಯುತ್ತಿದ್ದ ದುರ್ವಾಸರು ಮರಳಿ ಅಂಬರೀಷ ರಾಜನ ಬಳಿಗೆ ಹೋಗಿ ಅತ್ಯಂತ ದುಃಖಿತರಾಗಿ ಅವನ ಎರಡೂ ಕಾಲುಗಳನ್ನು ಗಟ್ಟಿಯಾಗಿ ಹಿಡಿದುಕೊಂಡರು. ॥ ೧ ॥ ದುರ್ವಾಸರ ಈ ಕಾರ್ಯವನ್ನು ನೋಡಿ ಮತ್ತು ತನ್ನ ಪಾದಗಳನ್ನು ಹಿಡಿದುಕೊಂಡಿದ್ದರಿಂದ ಅಂಬರೀಷನು ಕಡು ನಾಚಿಕೊಂಡು ಅವನ ಹೃದಯ ದಯೆಯಿಂದ ಕರಗಿಹೋಗಿ ಭಗವಂತನ ಸುದರ್ಶನ ಚಕ್ರವನ್ನು ಸ್ತುತಿಸತೊಡಗಿದನು. ॥ ೨ ॥

ಅಂಬರೀಷನು ಹೇಳುತ್ತಾನೆ – ಓ ಸುದರ್ಶನಚಕ್ರವೇ! ನೀನೇ ಅಗ್ನಿಯಾಗಿರುವೆ. ಸರ್ವಸಮರ್ಥನಾದ ಸೂರ್ಯನೂ ನೀನೇ. ಸಮಸ್ತ ನಕ್ಷತ್ರಮಂಡಲದ ಅಧಿಪತಿ ಚಂದ್ರನೂ ನೀನೇ. ಜಲ, ಪೃಥಿವಿ, ಆಕಾಶ, ವಾಯು ಪಂಚತನ್ಮಾತ್ರೆಗಳೂ ಮತ್ತು ಎಲ್ಲ ಇಂದ್ರಿಯಗಳ ರೂಪದಲ್ಲಿಯೂ ನೀನೇ ಆಗಿರುವೆ. ॥ ೩ ॥ ಓ ಸುದರ್ಶನಚಕ್ರಾಧಿದೇವತೆಯೇ! ನಿನಗೆ ನಮಸ್ಕರಿಸುತ್ತೇನೆ. ಸಾವಿರ ಅರೆಕಾಲುಗಳಿಂದ ಕೂಡಿರುವವನೇ! ಅಚ್ಯುತಪ್ರಿಯನೇ! ಸಮಸ್ತ ಅಸ್ತ್ರ-ಶಸ್ತ್ರಗಳನ್ನು ನಾಶಗೊಳಿಸುವ ಭೂಮಂಡಲಕ್ಕೆ ಒಡೆಯನಾದವನೇ! ನೀನು ಈ ಬ್ರಾಹ್ಮಣನನ್ನು ರಕ್ಷಿಸು. ॥ ೪ ॥ ನೀನೇ ಧರ್ಮಸ್ವರೂಪನಾಗಿರುವೆ. ಅಮೃತಸ್ವರೂಪನಾಗಿರುವೆ. ಸತ್ಯ ಸ್ವರೂಪನಾಗಿರುವೆ. ಸಮಸ್ತಯಜ್ಞಗಳೂ ನೀನೇ ; ಯಜ್ಞಭೋಕ್ತೃವೂ ನೀನೇ. ಸಮಸ್ತ ಲೋಕಗಳ ರಕ್ಷಕನೂ, ಸರ್ವಲೋಕಸ್ವರೂಪನೂ ನೀನೆ. ನೀನು ಪರಮಪುರುಷ ಪರಮಾತ್ಮನ ಶ್ರೇಷ್ಠವಾದ ತೇಜಸ್ಸು ಮತ್ತು ಪೌರುಷವೂ ಆಗಿರುವೆ. ॥ ೫ ॥ ಓ ಸುಂದರವಾದ ಸುದರ್ಶನ ಚಕ್ರವೇ! ನೀನು ಸಮಸ್ತ ಧರ್ಮಗಳ ಮರ್ಯಾದೆಗಳನ್ನು ರಕ್ಷಿಸುವವನೇ! ಅಧರ್ಮವನ್ನು ಆಚರಿಸುವ ಅಸುರರನ್ನು ಭಸ್ಮಮಾಡುವ ಸಾಕ್ಷಾತ್ ಅಗ್ನಿಸ್ವರೂಪನು ನೀನೇ ಆಗಿರುವೆ. ನೀನೇ ಮೂರು ಲೋಕಗಳ ರಕ್ಷಕನೂ. ವಿಶುದ್ಧ ತೇಜೋಮಯನಾಗಿರುವೆ. ನಿನ್ನ ಗತಿಯು ಮನೋವೇಗದಂತೆ ಇದ್ದು ನಿನ್ನ ಕರ್ಮಗಳು ಅದ್ಭುತವಾಗಿವೆ. ನಿನಗೆ ನಮಸ್ಕಾರ ಮಾಡುತ್ತಾ, ಸ್ತೋತ್ರಮಾಡುತ್ತೇನೆ. ॥ ೬ ॥ ವೇದವಾಣಿಗಳಿಗೆ ಅಧೀಶ್ವರನೇ! ನಿನ್ನ ಧರ್ಮಮಯ ತೇಜಸ್ಸಿನಿಂದ ಅಂಧಕಾರವು ನಾಶವಾಗುತ್ತದೆ. ನಿನ್ನಿಂದಲೇ ಮಹಾಪುರುಷರ ಪ್ರಕಾಶದ ರಕ್ಷಣೆಯಾಗುತ್ತದೆ. ನಿನ್ನ ಮಹಿಮೆಯ ಪಾರವನ್ನು ತಿಳಿಯಲು ಯಾರಿಗೂ ಶಕ್ಯವಿಲ್ಲ. ಸದಸದ್ರೂಪವಾದ ಉಚ್ಚ ನೀಚ ಭಾವನೆಗಳಿಂದ ಕೂಡಿರುವ ಸಮಸ್ತ ಕಾರ್ಯಕಾರಣಾತ್ಮಕವಾದ ಪ್ರಪಂಚವು ನಿನ್ನ ಸ್ವರೂಪವೇ ಆಗಿದೆ. ॥ ೭ ॥ ಸುದರ್ಶನಚಕ್ರವೇ! ದೇವತೆಯೇ! ನಿನ್ನನ್ನು ಯಾರೂ ಗೆಲ್ಲಲಾರರು. ನಿರಂಜನ ಭಗವಂತನು ನಿನ್ನನ್ನು ಪ್ರಯೋಗಿಸಿದಾಕ್ಷಣ ನೀನು ದೈತ್ಯ-ದಾನವರ ಸೇನೆಯನ್ನು ಪ್ರವೇಶಿಸಿದಾಗ, ಯುದ್ಧಭೂಮಿಯಲ್ಲಿ ಅವರ ಭುಜಗಳನ್ನು, ಉದರವನ್ನು, ತೊಡೆ ಕಾಲುಗಳನ್ನು, ಕತ್ತನ್ನು ನಿರಂತರವಾಗಿ ಕತ್ತರಿಸುತ್ತಿರುವ ನೀನು ಅತ್ಯಂತ ಶೋಭೆಯಿಂದ ಬೆಳಗುತ್ತಿರುವೆ. ॥ ೮ ॥

ಸ ತ್ವಂ ಜಗತ್ತ್ರಾಣ ಖಲಪ್ರಹಾಣಯೇ
ನಿರೂಪಿತಃ ಸರ್ವಸಹೋ ಗದಾಭೃತಾ ।
ವಿಪ್ರಸ್ಯ ಚಾಸ್ಮತ್ಕುಲದೈವಹೇತವೇ
ವಿಧೇಹಿ ಭದ್ರಂ ತದನುಗ್ರಹೋ ಹಿ ನಃ ॥ ೯ ॥

ಯದ್ಯಸ್ತಿ ದತ್ತಮಿಷ್ಟಂ ವಾ ಸ್ವಧರ್ಮೋ ವಾ ಸ್ವನುಷ್ಠಿತಃ ।
ಕುಲಂ ನೋ ವಿಪ್ರದೈವಂ ಚೇದ್ದ್ವಿಜೋ ಭವತು ವಿಜ್ವರಃ ॥ ೧೦ ॥

ಯದಿ ನೋ ಭಗವಾನ್ ಪ್ರೀತ ಏಕಃ ಸರ್ವಗುಣಾಶ್ರಯಃ ।
ಸರ್ವಭೂತಾತ್ಮಭಾವೇನ ದ್ವಿಜೋ ಭವತು ವಿಜ್ವರಃ ॥ ೧೧ ॥

ಶ್ರೀಶುಕ ಉವಾಚ

ಇತಿ ಸಂಸ್ತುವತೋ ರಾಜ್ಞೋ ವಿಷ್ಣುಚಕ್ರಂ ಸುದರ್ಶನಮ್ ।
ಅಶಾಮ್ಯತ್ಸರ್ವತೋ ವಿಪ್ರಂ ಪ್ರದಹದ್ರಾಜಯಾಂಚಯಾ ॥ ೧೨ ॥

ಸ ಮುಕ್ತೋಽಸ್ತ್ರಾಗ್ನಿತಾಪೇನ ದುರ್ವಾಸಾಃ ಸ್ವಸ್ತಿಮಾಂಸ್ತತಃ ।
ಪ್ರಶಶಂಸ ತಮುರ್ವೀಶಂ ಯುಂಜಾನಃ ಪರಮಾಶಿಷಃ ॥ ೧೩ ॥

ದುರ್ವಾಸಾ ಉವಾಚ

ಅಹೋ ಅನಂತದಾಸಾನಾಂ ಮಹತ್ತ್ವಂ ದೃಷ್ಟಮದ್ಯ ಮೇ ।
ಕೃತಾಗಸೋಽಪಿ ಯದ್ರಾಜನ್ಮಂಗಲಾನಿ ಸಮೀಹಸೇ ॥ ೧೪ ॥

ದುಷ್ಕರಃ ಕೋ ನು ಸಾಧೂನಾಂ
ದುಸ್ತ್ಯಜೋ ವಾ ಮಹಾತ್ಮನಾಮ್ ।
ಯೈಃ ಸಂಗೃಹೀತೋ ಭಗವಾನ್
ಸಾತ್ವತಾಮೃಷಭೋ ಹರಿಃ ॥ ೧೫ ॥

ಯನ್ನಾಮಶ್ರುತಿಮಾತ್ರೇಣ ಪುಮಾನ್ ಭವತಿ ನಿರ್ಮಲಃ ।
ತಸ್ಯ ತೀರ್ಥಪದಃ ಕಿಂ ವಾ ದಾಸಾನಾಮವಶಿಷ್ಯತೇ ॥ ೧೬ ॥

ರಾಜನ್ನನುಗೃಹೀತೋಽಹಂ ತ್ವಯಾತಿಕರುಣಾತ್ಮನಾ ।
ಮದಘಂ ಪೃಷ್ಠತಃ ಕೃತ್ವಾ ಪ್ರಾಣಾ ಯನ್ಮೇಽಭಿರಕ್ಷಿತಾಃ ॥ ೧೭ ॥

ರಾಜಾ ತಮಕೃತಾಹಾರಃ ಪ್ರತ್ಯಾಗಮನಕಾಂಕ್ಷಯಾ ।
ಚರಣಾವುಪಸಂಗೃಹ್ಯ ಪ್ರಸಾದ್ಯ ಸಮಭೋಜಯತ್ ॥ ೧೮ ॥

ಓ ವಿಶ್ವರಕ್ಷಕನೇ! ನೀನು ರಣಾಂಗಣದಲ್ಲಿ ಎಲ್ಲ ಪ್ರಹಾರಗಳನ್ನು ಸಹಿಸುವ ಸಾಮರ್ಥ್ಯವುಳ್ಳವನು. ನಿನ್ನನ್ನು ಯಾರೂ ಘಾತಿಸಲಾರರು. ಗದಾಧರನಾದ ಭಗವಂತನು ದುಷ್ಟರ ಸಂಹಾರಕ್ಕಾಗಿ ನಿನ್ನನ್ನು ನಿಯಮಿಸಿರುವನು. ದಯಮಾಡಿ ನೀನು ನಮ್ಮ ಕುಲದ ಭಾಗ್ಯೋದಯಕ್ಕಾಗಿ ದುರ್ವಾಸರಿಗೆ ಮಂಗಳವನ್ನುಂಟುಮಾಡು. ಇದೇ ನಮಗೆ ಪರಮಾನುಗ್ರಹವಾಗಿದೆ. । ೯ । ನನ್ನಲ್ಲಿ ಅಲ್ಪ-ಸ್ವಲ್ಪ ದಾನ, ಯಜ್ಞಮಾಡಿದ ಫಲವೇನಾದರೂ ಇದ್ದರೆ, ಅಥವಾ ಸ್ವಧರ್ಮವನ್ನು ಪಾಲಿಸಿದ್ದರೆ, ನಮ್ಮ ವಂಶದವರು ಬ್ರಾಹ್ಮಣರನ್ನೇ ಪರಮಾರಾಧ್ಯವೆಂದು ತಿಳಿಯುತ್ತಿದ್ದರೆ, ದುರ್ವಾಸರ ಉರಿಯನ್ನು ಶಾಂತಗೊಳಿಸು. ॥ ೧೦ ॥ ಭಗವಂತನು ಸಮಸ್ತ ಗುಣಗಳ ಏಕಮಾತ್ರ ಆಶ್ರಯನಾಗಿದ್ದಾನೆ. ನಾನು ಸಮಸ್ತ ಪ್ರಾಣಿಗಳ ಆತ್ಮರೂಪದಲ್ಲಿ ಅವನನ್ನು ದರ್ಶಿಸುತ್ತಿದ್ದರೆ ಹಾಗೂ ಅವನು ನನ್ನ ಮೇಲೆ ಪ್ರಸನ್ನನಾಗಿದ್ದರೆ ದುರ್ವಾಸರ ಹೃದಯದ ತಾಪವನ್ನು (ಉರಿಯನ್ನು) ಇಲ್ಲವಾಗಿಸು. ॥ ೧೧ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ! ದುರ್ವಾಸಮುನಿಯನ್ನು ಎಲ್ಲ ಕಡೆಯಿಂದ ಸುಡುತ್ತಿರುವ ಭಗವಂತನ ಸುದರ್ಶನಚಕ್ರವನ್ನು ರಾಜಾ ಅಂಬರೀಷನು ಈ ವಿಧವಾಗಿ ಸ್ತುತಿಸಿದಾಗ ಅವನ ಪ್ರಾರ್ಥನೆಯಂತೆ ಸುದರ್ಶನವು ಶಾಂತವಾಯಿತು. ॥ ೧೨ ॥ ದುರ್ವಾಸರು ಚಕ್ರದ ಉರಿಯಿಂದ ವಿಮುಕ್ತರಾಗಿ, ಸ್ವಸ್ಥಚಿತ್ತರಾದಾಗ ಅವರು ಅಂಬರೀಷನಿಗೆ ಅನೇಕಾನೇಕ ಶುಭಾಶೀರ್ವಾದಗಳನ್ನು ಕೊಡುತ್ತಾ, ಅವನನ್ನು ಪ್ರಶಂಸಿಸಿದರು. ॥೧೩॥

ದುರ್ವಾಸರು ಹೇಳಿದರು – ಮಹಾರಾಜಾ! ನೀನು ಧನ್ಯನಾಗಿರುವೆ. ಭಗವಂತನ ಪ್ರೇಮಿ ಭಕ್ತರ ಮಹತ್ವವನ್ನು ಇಂದು ನಾನು ಕಂಡೆ, ನಿನ್ನ ಕುರಿತು ಅಪರಾಧ ಮಾಡಿದೆ. ಹೀಗಿದ್ದರೂ ನೀನು ನನಗಾಗಿ ಮಂಗಲವನ್ನೇ ಬಯಸುತ್ತಿರುವೆ. ॥ ೧೪ । ಭಕ್ತವತ್ಸಲ ಭಗವಾನ್ ಶ್ರೀಹರಿಯ ಚರಣಕಮಲಗಳನ್ನು ಭಕ್ತಿಭಾವದಿಂದ ದೃಢವಾಗಿ ಹಿಡಿದಿರುವ ಸಾಧು-ಸತ್ಪುರುಷರಿಗೆ ಕಠಿಣವಾದ ಕಾರ್ಯವು ಯಾವುದಿದೆ? ಉದಾರ ಹೃದಯವುಳ್ಳ ಮಹಾತ್ಮರು ಯಾವ ವಸ್ತುವನ್ನು ತಾನೇ ಪರಿತ್ಯಾಗ ಮಾಡಲಾರರು? ॥ ೧೫ । ಯಾರ ಮಂಗಲಮಯ ನಾಮಗಳ ಶ್ರವಣ ಮಾತ್ರದಿಂದಲೇ ಜೀವಿಯು ನಿರ್ಮಲರಾಗಿ ಹೋಗುವರೋ, ಅಂತಹ ತೀರ್ಥಪಾದನಾದ ಶ್ರೀಭಗವಂತನ ಚರಣಕಮಲಗಳ ದಾಸರಾದ ಭಕ್ತರಿಗೆ ಯಾವ ಕರ್ತವ್ಯವು ತಾನೇ ಶೇಷವಾಗಿ ಉಳಿದಿರುತ್ತದೆ? ॥ ೧೬ ॥ ಅಂಬರೀಷ ಮಹಾರಾಜಾ! ನಿನ್ನ ಹೃದಯವು ಕರುಣಾಭಾವದಿಂದ ಪರಿಪೂರ್ಣವಾಗಿದೆ. ನೀನು ನನ್ನ ಮೇಲೆ ಮಹಾನ್ ಅನುಗ್ರಹವನ್ನು ಮಾಡಿರುವೆ. ಅಯ್ಯಾ! ನೀನು ನನ್ನ ಅಪರಾಧಗಳನ್ನು ಮರೆತು ನನ್ನ ಪ್ರಾಣಗಳನ್ನು ರಕ್ಷಿಸಿರುವೆ. ॥ ೧೭ ॥

ಪರೀಕ್ಷಿತನೇ! ದುರ್ವಾಸರು ಓಡಿಹೋದಂದಿನಿಂದ ಇಂದಿನವರೆಗೆ ಅಂಬರೀಷರಾಜನು ಭೋಜನವನ್ನು ಮಾಡಿರಲಿಲ್ಲ. ಅವನು ಅವರು ಮರಳಿ ಬರುವ ದಾರಿ ಕಾಯುತ್ತಿದ್ದನು. ಈಗ ಅವನು ದುರ್ವಾಸರ ಕಾಲಿಗೆ ಬಿದ್ದು ಅವರನ್ನೂ ಸಂತೋಷಪಡಿಸಿ, ವಿಧಿವತ್ತಾಗಿ ಭೋಜನವನ್ನು ಮಾಡಿಸಿದನು. ॥ ೧೮ ॥

ಸೋಽಶಿತ್ವಾಽಽದೃತಮಾನೀತಮಾತಿಥ್ಯಂ ಸಾರ್ವಕಾಮಿಕಮ್ ।
ತೃಪ್ತಾತ್ಮಾ ನೃಪತಿಂ ಪ್ರಾಹ ಭುಜ್ಯತಾಮಿತಿ ಸಾದರಮ್ ॥ ೧೯ ॥

ಪ್ರೀತೋಽಸ್ಮ್ಯನುಗೃಹೀತೋಽಸ್ಮಿ ತವ ಭಾಗವತಸ್ಯ ವೈ ।
ದರ್ಶನಸ್ಪರ್ಶನಾಲಾಪೈರಾತಿಥ್ಯೇನಾತ್ಮಮೇಧಸಾ ॥ ೨೦ ॥

ಕರ್ಮಾವದಾತಮೇತತ್ತೇ ಗಾಯಂತಿ ಸ್ವಃಸ್ತ್ರಿಯೋ ಮುಹುಃ ।
ಕೀರ್ತಿಂ ಪರಮಪುಣ್ಯಾಂ ಚ ಕೀರ್ತಯಿಷ್ಯತಿ ಭೂರಿಯಮ್ ॥ ೨೧ ॥

ಶ್ರೀಶುಕ ಉವಾಚ

ಏವಂ ಸಂಕೀರ್ತ್ಯ ರಾಜಾನಂ ದುರ್ವಾಸಾಃ ಪರಿತೋಷಿತಃ ।
ಯಯೌ ವಿಹಾಯಸಾಽಽಮಂತ್ರ್ಯ ಬ್ರಹ್ಮಲೋಕಮಹೈತುಕಮ್ ॥ ೨೨ ॥

ಸಂವತ್ಸರೋಽತ್ಯಗಾತ್ತಾವದ್ ಯಾವತಾ ನಾಗತೋ ಗತಃ ।
ಮುನಿಸ್ತದ್ದರ್ಶನಾಕಾಂಕ್ಷೋ ರಾಜಾಽಬ್ಭಕ್ಷೋ ಬಭೂವ ಹ ॥ ೨೩ ॥

ಗತೇ ಚ ದುರ್ವಾಸಸಿ ಸೋಽಂಬರೀಷೋ
ದ್ವಿಜೋಪಯೋಗಾತಿಪವಿತ್ರಮಾಹರತ್ ।
ಋಷೇರ್ವಿಮೋಕ್ಷಂ ವ್ಯಸನಂ ಚ ಬುದ್ಧ್ವಾ
ಮೇನೇ ಸ್ವವೀರ್ಯಂ ಚ ಪರಾನುಭಾವಮ್ ॥ ೨೪ ॥

ಏವಂವಿಧಾನೇಕಗುಣಃ ಸ ರಾಜಾ
ಪರಾತ್ಮನಿ ಬ್ರಹ್ಮಣಿ ವಾಸುದೇವೇ ।
ಕ್ರಿಯಾಕಲಾಪೈಃ ಸಮುವಾಹ ಭಕ್ತಿಂ
ಯಯಾಽಽವಿರಿಂಚ್ಯಾನ್ನಿರಯಾಂಶ್ಚಕಾರ ॥ ೨೫ ॥

ಅಥಾಂಬರೀಷಸ್ತನಯೇಷು ರಾಜ್ಯಂ
ಸಮಾನಶೀಲೇಷು ವಿಸೃಜ್ಯ ಧೀರಃ ।
ವನಂ ವಿವೇಶಾತ್ಮನಿ ವಾಸುದೇವೇ
ಮನೋ ದಧದ್ಧ್ವಸ್ತಗುಣಪ್ರವಾಹಃ ॥ ೨೬ ॥

ಇತ್ಯೇತತ್ಪುಣ್ಯಮಾಖ್ಯಾನಮಂಬರೀಷಸ್ಯ ಭೂಪತೇಃ ।
ಸಂಕೀರ್ತಯನ್ನನುಧ್ಯಾಯನ್ ಭಕ್ತೋ ಭಗವತೋ ಭವೇತ್ ॥ ೨೭ ॥

ಅಂಬರೀಷನು ಅತಿ ಆದರದಿಂದ ಅತಿಥಿಗೆ ಯೋಗ್ಯವಾದ ಎಲ್ಲ ವಿಧದ ಭೋಜನ ಸಾಮಗ್ರಿಯನ್ನು ತರಿಸಿದನು. ದುರ್ವಾಸರು ಭೋಜನಮಾಡಿ ತೃಪ್ತರಾದರು. ಆಗ ಅವರು ಆದರದಿಂದ ರಾಜನೇ! ಇನ್ನು ನೀನೂ ಭೋಜನವನ್ನು ಮಾಡು ಎಂದು ನುಡಿದರು. ॥ ೧೯ ॥ ಅಂಬರೀಷನೇ! ನೀನು ಭಗವಂತನಿಗೆ ಪರಮ ಪ್ರಿಯಭಕ್ತನಾಗಿರುವೆ. ನಿನ್ನ ದರ್ಶನ, ಸ್ಪರ್ಶ, ಸಂಭಾಷಣ ಮತ್ತು ಮನಸ್ಸನ್ನು ಭಗವಂತನ ಕಡೆಗೆ ಪ್ರವೃತ್ತಗೊಳಿಸುವಂತಹ ಆತಿಥ್ಯದಿಂದ ನಾನು ಅತ್ಯಂತ ಸಂತೋಷಗೊಂಡಿರುವೆನು; ಅನುಗ್ರಹಿತನಾಗಿರುವೆನು. ॥ ೨೦ ॥ ಸ್ವರ್ಗದ ದೇವಾಂಗನೆಯರು ಪದೇ-ಪದೇ ನಿನ್ನ ಈ ಉಜ್ವಲ ಚರಿತ್ರೆಯನ್ನು ಕೊಂಡಾಡುವರು. ಈ ಭೂಮಂಡಲದಲ್ಲಿರುವ ಜನರೂ ಕೂಡ ಪರಮ ಪುಣ್ಯಮಯವಾದ ನಿನ್ನ ಕೀರ್ತಿಯನ್ನು ಸಂಕೀರ್ತನೆ ಮಾಡುತ್ತಾ ಇರುವರು.॥೨೧॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ! ದುರ್ವಾಸರು ಬಹಳ ಸಂತುಷ್ಟರಾಗಿ ಅಂಬರೀಷರಾಜನ ಸದ್ಗುಣಗಳನ್ನು ಪ್ರಶಂಸಿಸುತ್ತಾ ಅವನಿಂದ ಬೀಳ್ಕೊಂಡು, ಕೇವಲ ನಿಷ್ಕಾಮ ಕರ್ಮದಿಂದಲೇ ದೊರೆಯಬಹುದಾದ ಬ್ರಹ್ಮಲೋಕಕ್ಕಾಗಿ ಆಕಾಶ ಮಾರ್ಗದಿಂದ ಪ್ರಯಾಣಮಾಡಿದರು. ॥ ೨೨ ॥ ರಾಜನೇ! ಸುದರ್ಶನಚಕ್ರದಿಂದ ಭಯಗೊಂಡು ದುರ್ವಾಸರು ಓಡಿಹೋದ ಅಂದಿನಿಂದ, ಅವರು ಮರಳಿ ಬರುವ ವೇಳೆಗೆ ಒಂದು ವರ್ಷ ಕಳೆದುಹೋಗಿತ್ತು. ಇಷ್ಟು ದಿನಗಳವರೆಗೂ ಅಂಬರೀಷರಾಜನು ಅವರ ದರ್ಶನದ ಆಕಾಂಕ್ಷೆಯಿಂದ ಕೇವಲ ನೀರು ಕುಡಿದುಕೊಂಡೇ ಇದ್ದನು. ॥ ೨೩ ॥

ದುರ್ವಾಸರು ಹೊರಟುಹೋದ ಬಳಿಕ ಅವರು ಭೋಜನ ಮಾಡಿದ ಮೇಲೆ ಮಿಕ್ಕಿ ಉಳಿದಿರುವ ಅತ್ಯಂತ ಪವಿತ್ರವಾದ ಅನ್ನವನ್ನು ಅಂಬರೀಷನು ಊಟಮಾಡಿದನು. ತನ್ನ ಕಾರಣದಿಂದಲೇ ದುರ್ವಾಸರಿಗೆ ಉಂಟಾದ ದುಃಖ ಹಾಗೂ ತನ್ನ ಪ್ರಾರ್ಥನೆಯಿಂದಲೇ ಅದರ ನಿವೃತ್ತಿ ಎರಡೂ ತನ್ನಿಂದಲೇ ನಡೆದಿದ್ದರೂ, ಇದನ್ನು ಭಗವಂತನ ಮಹಿಮೆ ಎಂದೇ ಅಂಬರೀಷನು ತಿಳಿದನು. ॥ ೨೪ ॥ ಅಂಬರೀಷ ಮಹಾರಾಜನಲ್ಲಿ ಇಂತಹ ಅನೇಕ ಗುಣಗಳಿದ್ದವು. ತನ್ನ ಕರ್ಮಗಳ ಮೂಲಕ ಅವನು ಪರಬ್ರಹ್ಮ ಪರಮಾತ್ಮಾ ಶ್ರೀಭಗವಂತನಲ್ಲಿ ಭಕ್ತಿಭಾವವನ್ನು ಅಭಿವೃದ್ಧಿಪಡಿಸುತ್ತಲೇ ಇದ್ದನು. ಆ ಭಕ್ತಿಯ ಪ್ರಭಾವದಿಂದ ಅವನು ಬ್ರಹ್ಮಲೋಕದವರೆಗಿನ ಸಮಸ್ತ ಭೋಗಗಳನ್ನು ನರಕದಂತೆ ತಿಳಿಯುತ್ತಿದ್ದನು. ॥ ೨೫ ॥

ಅನಂತರ ಅಂಬರೀಷ ರಾಜನು ತನ್ನಂತೆಯೇ ಇದ್ದ ಭಕ್ತರಾದ ಪುತ್ರರಿಗೆ ರಾಜ್ಯವನ್ನು ಒಪ್ಪಿಸಿ, ಸ್ವತಃ ತಪಸ್ಸಿಗಾಗಿ ಕಾಡಿಗೆ ತೆರಳಿದನು. ಅಲ್ಲಿ ಧೀರನಾದ ಅವನು ಆತ್ಮಸ್ವರೂಪನಾದ ವಾಸುದೇವನಲ್ಲಿ ತನ್ನ ಮನಸ್ಸನ್ನು ಲೀನಗೊಳಿಸಿ ಗುಣಗಳ ಪ್ರವಾಹರೂಪವಾದ ಪ್ರಪಂಚದಿಂದ ಮುಕ್ತನಾಗಿ ಹೋದನು. ॥ ೨೬ ॥ ಪರೀಕ್ಷಿತನೇ! ಮಹಾರಾಜಾ ಅಂಬರೀಷನ ಈ ಆಖ್ಯಾನವು ಪರಮ ಪವಿತ್ರವಾಗಿದೆ. ಇದನ್ನು ಸಂಕೀರ್ತನೆ, ಸ್ಮರಣೆ ಮಾಡುವವನು ಅಂಬರೀಷನಂತೆ ಭಗವಂತನ ಭಕ್ತನಾಗಿ ಹೋಗುತ್ತಾನೆ. ॥ ೨೭ ॥

ಐದನೆಯ ಅಧ್ಯಾಯವು ಮುಗಿಯಿತು. ॥ ೫ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ನವಮಸ್ಕಂಧೇ ಅಂಬರೀಷಚರಿತಂ ನಾಮ ಪಂಚಮೋಽಧ್ಯಾಯಃ ॥ ೫ ॥

ಆರನೆಯ ಅಧ್ಯಾಯ

ಇಕ್ಷ್ವಾಕುವಂಶದ ವರ್ಣನೆ, ಮಾಂಧಾತಾ ಮತ್ತು ಸೌಭರೀ ಋಷಿಯ ಕಥೆ

ಶ್ರೀಶುಕ ಉವಾಚ

ವಿರೂಪಃ ಕೇತುಮಾಞ್ಛಂಭುರಂಬರೀಷಸುತಾಸ್ತ್ರಯಃ ।
ವಿರೂಪಾತ್ ಪೃಷದಶ್ವೋಽಭೂತ್ತತ್ಪುತ್ರಸ್ತು ರಥೀತರಃ ॥ ೧ ॥

ರಥೀತರಸ್ಯಾಪ್ರಜಸ್ಯ ಭಾರ್ಯಾಯಾಂ ತಂತವೇಽರ್ಥಿತಃ ।
ಅಂಗಿರಾ ಜನಯಾಮಾಸ ಬ್ರಹ್ಮವರ್ಚಸ್ವಿನಃ ಸುತಾನ್ ॥ ೨ ॥

ಏತೇ ಕ್ಷೇತ್ರೇ ಪ್ರಸೂತಾ ವೈ ಪುನಸ್ತ್ವಾಂಗಿರಸಾಃ ಸ್ಮೃತಾಃ ।
ರಥೀತರಾಣಾಂ ಪ್ರವರಾಃ ಕ್ಷತ್ರೋಪೇತಾ ದ್ವಿಜಾತಯಃ ॥ ೩ ॥

ಕ್ಷುವತಸ್ತು ಮನೋರ್ಜಜ್ಞೇ ಇಕ್ಷ್ವಾಕುರ್ಘ್ರಾಣತಃ ಸುತಃ ।
ತಸ್ಯ ಪುತ್ರಶತಜ್ಯೇಷ್ಠಾ ವಿಕುಕ್ಷಿನಿಮಿದಂಡಕಾಃ ॥ ೪ ॥

ತೇಷಾಂ ಪುರಸ್ತಾದಭವನ್ನಾರ್ಯಾವರ್ತೇ ನೃಪಾ ನೃಪ ।
ಪಂಚವಿಂಶತಿಃ ಪಶ್ಚಾಚ್ಚ ತ್ರಯೋ ಮಧ್ಯೇ ಪರೇಽನ್ಯತಃ ॥ ೫ ॥

ಸ ಏಕದಾಷ್ಟಕಾಶ್ರಾದ್ಧೇ ಇಕ್ಷ್ವಾಕುಃ ಸುತಮಾದಿಶತ್ ।
ಮಾಂಸಮಾನೀಯತಾಂ ಮೇಧ್ಯಂ ವಿಕುಕ್ಷೇ ಗಚ್ಛ ಮಾಚಿರಮ್ ॥ ೬ ॥

ತಥೇತಿ ಸ ವನಂ ಗತ್ವಾ ಮೃಗಾನ್ಹತ್ವಾ ಕ್ರಿಯಾರ್ಹಣಾನ್ ।
ಶ್ರಾಂತೋ ಬುಭುಕ್ಷಿತೋ ವೀರಃ ಶಶಂ ಚಾದದಪಸ್ಮೃತಿಃ ॥ ೭ ॥

ಶೇಷಂ ನಿವೇದಯಾಮಾಸ ಪಿತ್ರೇ ತೇನ ಚ ತದ್ಗುರುಃ ।
ಚೋದಿತಃ ಪ್ರೋಕ್ಷಣಾಯಾಹ ದುಷ್ಟಮೇತದಕರ್ಮಕಮ್ ॥ ೮ ॥

ಜ್ಞಾತ್ವಾ ಪುತ್ರಸ್ಯ ತತ್ಕರ್ಮ ಗುರುಣಾಭಿಹಿತಂ ನೃಪಃ ।
ದೇಶಾನ್ನಿಃಸಾರಯಾಮಾಸ ಸುತಂ ತ್ಯಕ್ತವಿಧಿಂ ರುಷಾ ॥ ೯ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಎಲೈ ಪರೀಕ್ಷಿತನೇ! ಅಂಬರೀಷನಿಗೆ ವಿರೂಪ, ಕೇತುಮಾನ್ ಮತ್ತು ಶಂಭು ಎಂಬ ಮೂವರು ಪುತ್ರರಿದ್ದರು. ವಿರೂಪನ ಮಗ ಪೃಷದಶ್ವ ಹಾಗೂ ಪೃಷದಶ್ವನ ಪುತ್ರ ರಥೀತರನಾಗಿದ್ದನು. ॥ ೧ ॥ ರಥೀತರನು ಸಂತಾನ ಹೀನನಾಗಿದ್ದನು. ವಂಶಪರಂಪರೆಯ ರಕ್ಷಣೆಗಾಗಿ ಅವನು ಅಂಗೀರಸ ಮಹರ್ಷಿಯನ್ನು ಪ್ರಾರ್ಥಿಸಿದನು. ಅವನ ಪ್ರಾರ್ಥನೆಯಂತೆ ಅಂಗೀರಸನು ರಥೀತರನ ಕ್ಷೇತ್ರದಲ್ಲಿ ಬ್ರಹ್ಮವರ್ಚಸ್ವಿಗಳಾದ ಹಲವಾರು ಪುತ್ರರನ್ನು ಪಡೆದನು. ॥ ೨ ॥ ಇವರೆಲ್ಲರೂ ರಥೀತರನ ಕ್ಷೇತ್ರಜರಾದ್ದರಿಂದ ಇವರ ಗೋತ್ರವು ಅದೇ ಆಗಬೇಕಾಗಿತ್ತು. ಹೀಗಿದ್ದರೂ ಅವರು ಅಂಗೀರಸರೆಂದೇ ಕರೆಯಲ್ಪಟ್ಟರು. ಇವರೇ ರಥೀತರ ವಂಶದವರ ಪ್ರವರ (ಕುಲದಲ್ಲಿ ಸರ್ವಶ್ರೇಷ್ಠ ಪುರುಷ) ಪ್ರವರ್ತಕರಾದರು. ಏಕೆಂದರೆ, ಇವರು ಕ್ಷತ್ರೋಪೇತ ಬ್ರಾಹ್ಮಣರಾಗಿದ್ದರು. ಕ್ಷತ್ರಿಯರು ಮತ್ತು ಬ್ರಾಹ್ಮಣರು ಎರಡೂ ಗೋತ್ರಗಳೊಂದಿಗೆ ಇವರ ಸಂಬಂಧವಿತ್ತು. ॥ ೩ ॥

ಪರೀಕ್ಷಿತನೇ! ಒಮ್ಮೆ ಮನುವು ಸೀನಿದಾಗ ಅವನ ಮೂಗಿನಿಂದ ಇಕ್ಷ್ವಾಕು ಎಂಬ ಮಗನು ಹುಟ್ಟಿದನು. ಇಕ್ಷ್ವಾಕುವಿಗೆ ನೂರುಮಂದಿ ಮಕ್ಕಳಿದ್ದರು. ಅವರಲ್ಲಿ ವಿಕುಕ್ಷಿ, ನಿಮಿ ಮತ್ತು ದಂಡಕರೆಂಬ ಮೂವರು ಹಿರಿಯರಾಗಿದ್ದರು. ॥ ೪ ॥ ರಾಜೇಂದ್ರನೇ! ಅವರಿಂದ ಕಿರಿಯವರಾದ ಇಪ್ಪತ್ತೈದು ಪುತ್ರರು ಆರ್ಯಾವರ್ತದ ಪೂರ್ವಭಾಗವನ್ನು ಮತ್ತು ಇಪ್ಪತ್ತೈದು ಮಂದಿ ಪಶ್ಚಿಮಭಾಗವನ್ನು ಆಳುತ್ತಿದ್ದರು. ವಿಕುಕ್ಷಿ ಮೊದಲಾದ ಮೂವರು ಮಧ್ಯಭಾಗಕ್ಕೆ ಅಧಿಪತಿಗಳಾದರು. ಉಳಿದ ನಲವತ್ತೇಳು ಮಂದಿ ದಕ್ಷಿಣೋತ್ತರ ಪ್ರಾಂತಕ್ಕೆ ಅಧಿಪತಿಗಳಾದರು. ॥ ೫ ॥ ಒಮ್ಮೆ ಇಕ್ಷ್ವಾಕುವು ಅಷ್ಟಕಾಶ್ರಾದ್ಧದ ಸಮಯದಲ್ಲಿ ತನ್ನ ಹಿರಿಯ ಮಗನಿಗೆ – 'ಎಲೈ ವಿಕುಕ್ಷಿಯೇ! ಬೇಗನೇ ಹೋಗಿ ಶ್ರಾದ್ಧಕ್ಕೆ ಯೋಗ್ಯವಾದ ಮಾಂಸವನ್ನು ತೆಗೆದುಕೊಂಡು ಬಾ' ಎಂದು ಆಜ್ಞಾಪಿಸಿದನು. ॥ ೬ ॥ ವೀರ ವಿಕುಕ್ಷಿಯು 'ಹಾಗೆಯೇ ಆಗಲಿ' ಎಂದು ಹೇಳಿ ವನಕ್ಕೆ ಹೋದನು. ಅಲ್ಲಿ ಅವನು ಶ್ರಾದ್ಧಕ್ಕೆ ಯೋಗ್ಯವಾದ ಬಹಳಷ್ಟು ಪಶುಗಳನ್ನು ಬೇಟೆಯಾಡಿದನು. ಅವನು ತುಂಬಾ ಬಳಲಿದ್ದನು. ಹಸಿವೆಯೂ ಆಗಿತ್ತು. ಆದರಿಂದ ಶ್ರಾದ್ಧಕ್ಕಾಗಿ ಕೊಂದಿರುವ ಪಶುಗಳನ್ನು ಸ್ವತಃ ತಿನ್ನಬಾರದೆಂಬುದನ್ನು ಮರೆತು, ಅವನು ಒಂದು ಮೊಲದ ಮಾಂಸವನ್ನು ತಿಂದುಬಿಟ್ಟನು. ॥ ೭ ॥ ವಿಕುಕ್ಷಿಯು ಉಳಿದಿರುವ ಮಾಂಸವನ್ನು ತಂದು ತಂದೆಗೆ ಕೊಟ್ಟನು. ಇಕ್ಷ್ವಾಕುವು ಗುರುಗಳಿಗೆ ಅದನ್ನು ಪ್ರೋಕ್ಷಿಸಲು ಹೇಳಿದಾಗ, ಗುರುಗಳು ಹೇಳಿದರು – ಈ ಮಾಂಸವು ದೂಷಿತವಾಗಿದೆ ಹಾಗೂ ಶ್ರಾದ್ಧಕ್ಕೆ ಅಯೋಗ್ಯವಾಗಿದೆ. ॥ ೮ ॥ ಪರೀಕ್ಷಿತನೇ! ಗುರುಗಳು ಹೇಳಿದಾಗ ಇಕ್ಷ್ವಾಕು ರಾಜನು ತನ್ನ ಮಗನನ್ನು ವಿಚಾರಿಸಿ, ಅವನ ಕೃತ್ಯವನ್ನು ತಿಳಿದುಕೊಂಡನು. ಶಾಸ್ತ್ರವಿಧಿಯನ್ನು ಉಲ್ಲಂಘಿಸಿದ ಪುತ್ರನನ್ನು ಕ್ರೋಧಗೊಂಡು ತನ್ನ ದೇಶದಿಂದಲೇ ಓಡಿಸಿಬಿಟ್ಟನು. ॥ ೯ ॥

ಸ ತು ವಿಪ್ರೇಣ ಸಂವಾದಂ ಜ್ಞಾಪಕೇನ ಸಮಾಚರನ್ ।
ತ್ಯಕ್ತ್ವಾ ಕಲೇವರಂ ಯೋಗೀ ಸ ತೇನಾವಾಪ ಯತ್ಪರಮ್ ॥ ೧೦ ॥

ಪಿತರ್ಯುಪರತೇಽಭ್ಯೇತ್ಯ ವಿಕುಕ್ಷಿಃ ಪೃಥಿವೀಮಿಮಾಮ್ ।
ಶಾಸದೀಜೇ ಹರಿಂ ಯಜ್ಞೈಃ ಶಶಾದ ಇತಿ ವಿಶ್ರುತಃ ॥ ೧೧ ॥

ಪುರಂಜಯಸ್ತಸ್ಯ ಸುತ ಇಂದ್ರವಾಹ ಇತೀರಿತಃ ।
ಕಕುತ್ಸ್ಥ ಇತಿ ಚಾಪ್ಯುಕ್ತಃ ಶೃಣು ನಾಮಾನಿ ಕರ್ಮಭಿಃ ॥ ೧೨ ॥

ಕೃತಾಂತ ಆಸೀತ್ಸಮರೋ ದೇವಾನಾಂ ಸಹ ದಾನವೈಃ ।
ಪಾರ್ಷ್ಣಿಗ್ರಾಹೋ ವೃತೋ ವೀರೋ ದೇವೈರ್ದೈತ್ಯಪರಾಜಿತೈಃ ॥ ೧೩ ॥

ವಚನಾದ್ದೇವದೇವಸ್ಯ ವಿಷ್ಣೋರ್ವಿಶ್ವಾತ್ಮನಃ ಪ್ರಭೋಃ ।
ವಾಹನತ್ವೇ ವೃತಸ್ತಸ್ಯ ಬಭೂವೇಂದ್ರೋ ಮಹಾವೃಷಃ ॥ ೧೪ ॥

ಸ ಸನ್ನದ್ಧೋ ಧನುರ್ದಿವ್ಯಮಾದಾಯ ವಿಶಿಖಾಂಛಿತಾನ್ ।
ಸ್ತೂಯಮಾನಃ ಸಮಾರುಹ್ಯ ಯುಯುತ್ಸುಃ ಕಕುದಿ ಸ್ಥಿತಃ ॥ ೧೫ ॥

ತೇಜಸಾಽಽಪ್ಯಾಯಿತೋ ವಿಷ್ಣೋಃ ಪುರುಷಸ್ಯ ಮಹಾತ್ಮನಃ ।
ಪ್ರತೀಚ್ಯಾಂ ದಿಶಿ ದೈತ್ಯಾನಾಂ ನ್ಯರುಣತ್ತ್ರಿದಶೈಃ ಪುರಮ್ ॥ ೧೬ ॥

ತೈಸ್ತಸ್ಯ ಚಾಭೂತ್ಪ್ರಧನಂ ತುಮುಲಂ ಲೋಮಹರ್ಷಣಮ್ ।
ಯಮಾಯ ಭಲ್ಲೈರನಯದ್ದೈತ್ಯಾನ್ಯೇಽಭಿಯಯುರ್ಮೃಧೇ ॥ ೧೭ ॥

ತಸ್ಯೇಷುಪಾತಾಭಿಮುಖಂ ಯುಗಾಂತಾಗ್ನಿಮಿವೋಲ್ಬಣಮ್ ।
ವಿಸೃಜ್ಯ ದುದ್ರುವುರ್ದೈತ್ಯಾ ಹನ್ಯಮಾನಾಃ ಸ್ವಮಾಲಯಮ್ ॥ ೧೮ ॥

ಜಿತ್ವಾ ಪುರಂ ಧನಂ ಸರ್ವಂ ಸಶ್ರೀಕಂ ವಜ್ರಪಾಣಯೇ ।
ಪ್ರತ್ಯಯಚ್ಛತ್ಸ ರಾಜರ್ಷಿರಿತಿ ನಾಮಭಿರಾಹೃತಃ ॥ ೧೯ ॥

ಪುರಂಜಯಸ್ಯ ಪುತ್ರೋಽಭೂದನೇನಾಸ್ತತ್ಸುತಃ ಪೃಥುಃ ।
ವಿಶ್ವಗಂಧಿಸ್ತತಶ್ಚಂದ್ರೋ ಯುವನಾಶ್ವಸ್ತು ತತ್ಸುತಃ ॥ ೨೦ ॥

ಅನಂತರ ರಾಜಾ ಇಕ್ಷ್ವಾಕುವು ತನ್ನ ಗುರುಗಳಾದ ವಸಿಷ್ಠರೊಡನೆ ಜ್ಞಾನದ ವಿಷಯವಾಗಿ ಚರ್ಚಿಸಿ ಜ್ಞಾನಿಯಾಗಿ ಯೋಗದ ಮೂಲಕ ಶರೀರವನ್ನು ಪರಿತ್ಯಜಿಸಿ ಅವನು ಪರಮಪದವನ್ನು ಪಡೆದು ಕೊಂಡನು. ॥ ೧೦ ॥ ತಂದೆಯು ದೇಹಾಂತವಾದಾಗ ವಿಕುಕ್ಷಿಯು ತನ್ನ ರಾಜಧಾನಿಗೆ ಮರಳಿ ಈ ಪೃಥಿವಿಯ ಶಾಸನವನ್ನು ಮಾಡತೊಡಗಿದನು. ಅವನು ಹಲವಾರು ಯಜ್ಞಗಳಿಂದ ಭಗವಂತನನ್ನು ಆರಾಧಿಸಿದನು. ಜಗತ್ತಿನಲ್ಲಿ ಅವನು ಶಶಾದ ಎಂಬ ಹೆಸರಿನಿಂದ ಪ್ರಸಿದ್ಧನಾದನು. ॥ ೧೧ ॥ ವಿಕುಕ್ಷಿಯ ಪುತ್ರನ ಹೆಸರು ಪುರಂಜಯನೆಂದಿತ್ತು. ಅವನನ್ನೇ ಕೆಲವರು 'ಇಂದ್ರವಾಹ' ಮತ್ತು ಕೆಲವರು 'ಕಕುತ್ಸ್ಥ' ಎಂದು ಹೇಳುತ್ತಿದ್ದರು. ಯಾವ ಕರ್ಮಗಳಿಂದ ಇವನಿಗೆ ಈ ಹೆಸರುಗಳು ಬಂತೆಂಬುದನ್ನು ಕೇಳು. ॥ ೧೨ ॥

ಸತ್ಯಯುಗದ ಕೊನೆಯಲ್ಲಿ ದೇವ-ದಾನವರ ಘನಘೋರ ಸಂಗ್ರಾಮವಾಗಿತ್ತು. ಅದರಲ್ಲಿ ಎಲ್ಲ ದೇವತೆಗಳು ದೈತ್ಯರಿಂದ ಪರಾಭವಗೊಂಡರು. ಆಗ ದೇವತೆಗಳು ವೀರ ಪುರಂಜಯನನ್ನು ಸಹಾಯಕ್ಕಾಗಿ ತಮ್ಮ ಮಿತ್ರನನ್ನಾಗಿಸಿಕೊಂಡರು. ॥ ೧೩ ॥ ಪುರಂಜಯನು ಹೇಳಿದನು – 'ದೇವೇಂದ್ರನು ನನಗೆ ವಾಹನನಾದರೆ ನಾನು ಯುದ್ಧವನ್ನು ಮಾಡಬಲ್ಲೆನು.' ಮೊದಲಿಗೆ ದೇವೇಂದ್ರನು ನಿರಾಕರಿಸಿದನು. ಆದರೆ ದೇವತೆಗಳ ಆರಾಧ್ಯದೇವನಾದ ಸರ್ವಶಕ್ತಿವಂತನಾದ ವಿಶ್ವಾತ್ಮಾ ಭಗವಂತನ ಮಾತನ್ನು ಮನ್ನಿಸಿ ಇಂದ್ರನು ಒಂದು ದೊಡ್ಡ ಎತ್ತಾಗಿ ಪರಿವರ್ತನಗೊಂಡನು. ॥ ೧೪ ॥ ಸರ್ವಾಂತರ್ಯಾಮಿಯಾದ ಭಗವಾನ್ ವಿಷ್ಣುವು ಪುರಂಜಯನಲ್ಲಿ ತನ್ನ ಶಕ್ತಿಯನ್ನು ತುಂಬಿದನು. ಅವನು ಕವಚವನ್ನು ಧರಿಸಿಕೊಂಡು ದಿವ್ಯ ಧನುಸ್ಸು ಮತ್ತು ಹರಿತವಾದ ಬಾಣಗಳನ್ನೆತ್ತಿಕೊಂಡನು. ಅನಂತರ ಆ ಎತ್ತನ್ನು ಏರಿ ಅವನು ಅದರ ಹಿಳಿಲಿನ (ಕಕುದ್) ಹತ್ತಿರ ಕುಳಿತನು. ಹೀಗೆ ಅವನು ಯುದ್ಧಕ್ಕಾಗಿ ಸಿದ್ಧನಾದಾಗ ದೇವತೆಗಳು ಅವನನ್ನು ಸ್ತುತಿಸತೊಡಗಿದರು. ದೇವತೆಗಳನ್ನು ಜೊತೆಯಾಗಿಸಿಕೊಂಡು ಅವನು ಪಶ್ಚಿಮ ದಿಕ್ಕಿನಿಂದ ದೈತ್ಯರ ನಗರವನ್ನು ಆಕ್ರಮಿಸಿದನು. ॥ ೧೫-೧೬ ॥ ವೀರ ಪುರಂಜಯನಿಗೂ ದೈತ್ಯರಿಗೂ ಅತ್ಯಂತ ಘೋರ ರೋಮಾಂಚಕಾರಿ ಸಂಗ್ರಾಮ ನಡೆಯಿತು. ಯುದ್ಧದಲ್ಲಿ ತನ್ನೆದುರಿಗೆ ಬಂದ ದೈತ್ಯರೆಲ್ಲರನ್ನು ಪುರಂಜಯನು ಬಾಣಗಳಿಂದ ಯಮಸದನಕ್ಕೆ ಅಟ್ಟಿದನು. ॥ ೧೭ ॥ ಪ್ರಳಯಕಾಲದಲ್ಲಾಗುವ ಭಯಂಕರ ಅಗ್ನಿವರ್ಷದಂತೆ ಅವನು ಬಾಣಗಳ ಮಳೆಗರೆದನು. ಅವನೆದುರಿಗೆ ಬಂದ ದೈತ್ಯರು ಛಿನ್ನ-ಭಿನ್ನರಾಗುತ್ತಿದ್ದರು. ದೈತ್ಯರ ಪರಾಕ್ರಮ ತಗ್ಗಿಹೋಯಿತು. ಅವರು ರಣಾಂಗಣ ಬಿಟ್ಟು ಓಡಿಹೋಗಿ ತಮ್ಮ-ತಮ್ಮ ಮನೆಗಳಲ್ಲಿ ಅವಿತುಕೊಂಡರು. ॥ ೧೮ ॥ ಪುರಂಜಯನು ಅವರ ನಗರ, ಧನ, ಐಶ್ವರ್ಯ ಎಲ್ಲವನ್ನು ಗೆದ್ದು ಇಂದ್ರನಿಗೆ ಕೊಡಿಸಿದನು. ಇದರಿಂದ ಆ ರಾಜರ್ಷಿಗೆ ಪುರವನ್ನು ಗೆದ್ದಿರುವುದರಿಂದ 'ಪುರಂಜಯ'ನೆಂದೂ, ಇಂದ್ರನನ್ನು ವಾಹನನನ್ನಾಗಿಸಿದ್ದರಿಂದ 'ಇಂದ್ರವಾಹ'ನೆಂದೂ, ಎತ್ತಿನ ಭುಜದ ಮೇಲೆ ಕುಳಿತಿದ್ದರಿಂದ 'ಕಕುತ್ಸ್ಥ' ಎಂದೂ ಹೇಳಲಾಗುತ್ತದೆ. ॥ ೧೯ ॥

ಪುರಂಜಯನಿಗೆ ಅನೇನಸನೆಂಬ ಪುತ್ರನಿದ್ದನು. ಅವನ ಪುತ್ರ ಪೃಥು ಆದನು. ಪೃಥುವಿಗೆ ವಿಶ್ವರಂಧಿ, ಅವನಿಂದ ಚಂದ್ರ, ಚಂದ್ರನಿಂದ ಯುವನಾಶ್ವನಾದನು. ॥ ೨೦ ॥

ಶಾಬಸ್ತಸ್ತತ್ಸುತೋ ಯೇನ ಶಾಬಸ್ತೀ ನಿರ್ಮಮೇ ಪುರೀ ।
ಬೃಹದಶ್ವಸ್ತು ಶಾಬಸ್ತಿಸ್ತತಃ ಕುವಲಯಾಶ್ವಕಃ ॥ ೨೧ ॥

ಯಃ ಪ್ರಿಯಾರ್ಥಮುತಂಕಸ್ಯ ಧುಂಧುನಾಮಾಸುರಂ ಬಲೀ ।
ಸುತಾನಾಮೇಕವಿಂಶತ್ಯಾ ಸಹಸ್ರೈರಹನದ್ವೃತಃ ॥ ೨೨ ॥

ಧುಂಧುಮಾರ ಇತಿ ಖ್ಯಾತಸ್ತತ್ಸುತಾಸ್ತೇ ಚ ಜಜ್ವಲುಃ ।
ಧುಂಧೋರ್ಮುಖಾಗ್ನಿನಾ ಸರ್ವೇ ತ್ರಯ ಏವಾವಶೇಷಿತಾಃ ॥ ೨೩ ॥

ದೃಢಾಶ್ವಃ ಕಪಿಲಾಶ್ವಶ್ಚ ಭದ್ರಾಶ್ವ ಇತಿ ಭಾರತ ।
ದೃಢಾಶ್ವಪುತ್ರೋ ಹರ್ಯಶ್ವೋ ನಿಕುಂಭಸ್ತತ್ಸುತಃ ಸ್ಮೃತಃ ॥ ೨೪ ॥

ಬರ್ಹಣಾಶ್ವೋ ನಿಕುಂಭಸ್ಯ ಕೃಶಾಶ್ವೋಽಥಾಸ್ಯ ಸೇನಜಿತ್ ।
ಯುವನಾಶ್ವೋಽಭವತ್ತಸ್ಯ ಸೋಽನಪತ್ಯೋ ವನಂ ಗತಃ ॥ ೨೫ ॥

ಭಾರ್ಯಾಶತೇನ ನಿರ್ವಿಣ್ಣ ಋಷಯೋಽಸ್ಯ ಕೃಪಾಲವಃ ।
ಇಷ್ಟಿಂ ಸ್ಮ ವರ್ತಯಾಂಚಕ್ರುರೈಂದ್ರೀಂ ತೇ ಸುಸಮಾಹಿತಾಃ ॥ ೨೬ ॥

ರಾಜಾ ತದ್ಯಜ್ಞಸದನಂ ಪ್ರವಿಷ್ಟೋ ನಿಶಿ ತರ್ಷಿತಃ ।
ದೃಷ್ಟ್ವಾ ಶಯಾನಾನ್ವಿಪ್ರಾಂಸ್ತಾನ್ಪಪೌ ಮಂತ್ರಜಲಂ ಸ್ವಯಮ್ ॥ ೨೭ ॥

ಉತ್ಥಿತಾಸ್ತೇ ನಿಶಾಮ್ಯಾಥ ವ್ಯುದಕಂ ಕಲಶಂ ಪ್ರಭೋ ।
ಪಪ್ರಚ್ಛುಃ ಕಸ್ಯ ಕರ್ಮೇದಂ ಪೀತಂ ಪುಂಸವನಂ ಜಲಮ್ ॥ ೨೮ ॥

ರಾಜ್ಞಾ ಪೀತಂ ವಿದಿತ್ವಾಥ ಈಶ್ವರಪ್ರಹಿತೇನ ತೇ ।
ಈಶ್ವರಾಯ ನಮಶ್ಚಕ್ರುರಹೋ ದೈವಬಲಂ ಬಲಮ್ ॥ ೨೯ ॥

ತತಃ ಕಾಲ ಉಪಾವೃತ್ತೇ ಕುಕ್ಷಿಂ ನಿರ್ಭಿದ್ಯ ದಕ್ಷಿಣಮ್ ।
ಯುವನಾಶ್ವಸ್ಯ ತನಯಶ್ಚಕ್ರವರ್ತೀ ಜಜಾನ ಹ ॥ ೩೦ ॥

ಕಂ ಧಾಸ್ಯತಿ ಕುಮಾರೋಽಯಂ
ಸ್ತನ್ಯಂ ರೋರೂಯತೇ ಭೃಶಮ್ ।
ಮಾಂ ಧಾತಾ ವತ್ಸ ಮಾ ರೋದೀ-
ರಿತೀಂದ್ರೋ ದೇಶಿನೀಮದಾತ್ ॥ ೩೧ ॥

ನ ಮಮಾರ ಪಿತಾ ತಸ್ಯ ವಿಪ್ರದೇವಪ್ರಸಾದತಃ ।
ಯುವನಾಶ್ವೋಽಥ ತತ್ರೈವ ತಪಸಾ ಸಿದ್ಧಿಮನ್ವಗಾತ್ ॥ ೩೨ ॥

ಯುವನಾಶ್ವನ ಪುತ್ರ ಶಾಬಸ್ತನಾದನು. ಅವನು ಶಾಬಸ್ತಿ ಎಂಬ ಪಟ್ಟಣವನ್ನು ನಿರ್ಮಿಸಿದನು. ಶಾಬಸ್ತನಿಗೆ ಬೃಹದಶ್ವ ಹುಟ್ಟಿದನು. ಅವನಿಗೆ ಕುವಲಯಾಶ್ವನಾದನು. ॥ ೨೧ ॥ ಇವನು ಮಹಾ ಬಲಾಢ್ಯನಾಗಿದ್ದನು. ಇವನು ಉತಂಕ ಋಷಿಯನ್ನು ಸಂತೋಷ ಪಡಿಸಲು ತನ್ನ ಇಪ್ಪತ್ತೊಂದುಸಾವಿರ ಪುತ್ರರೊಂದಿಗೆ ಧುಂಧು ಎಂಬ ದೈತ್ಯನನ್ನು ವಧಿಸಿದನು. ॥ ೨೨ ॥ ಇದರಿಂದ ಅವನ ಹೆಸರು ಧುಂಧುಮಾರ ಎಂದಾಯಿತು. ಧುಂಧುದೈತ್ಯನ ಮುಖಾಗ್ನಿಯಿಂದ ಅವನ ಎಲ್ಲ ಪುತ್ರರು ಸುಟ್ಟುಹೋಗಿ ಕೇವಲ ಮೂವರು ಮಾತ್ರ ಉಳಿದರು. ॥ ೨೩ ॥ ಪರೀಕ್ಷಿತನೇ! ದೃಢಾಶ್ವ, ಕಪಿಲಾಶ್ವ ಮತ್ತು ಭದ್ರಾಶ್ವ ಇವರೇ ಆ ಉಳಿದ ಮೂವರು ಪುತ್ರರು. ದೃಢಾಶ್ವನಿಂದ ಹರ್ಯಶ್ವ ಹಾಗೂ ಅವನಿಂದ ನಿಕುಂಭನ ಜನ್ಮವಾಯಿತು. ॥ ೨೪ ॥ ನಿಕುಂಭನ ಮಗ ಬರ್ಹಣಾಶ್ವ, ಬರ್ಹಣಾಶ್ವನ ಮಗ ಕೃಶಾಶ್ವ, ಕೃಶಾಶ್ವನಿಂದ ಸೇನಜಿತ್, ಸೇನಜಿತ್ತುವಿನಿಂದ ಯುವನಾಶ್ವನಾದನು. ಯುವನಾಶ್ವನು ಸಂತಾನಹೀನನಾದ್ದರಿಂದ ಬಹಳ ದುಃಖಿತನಾಗಿ ತನ್ನ ನೂರು ಪತ್ನಿಯರೊಂದಿಗೆ ಕಾಡಿಗೆ ಹೊರಟು ಹೋದನು. ಅಲ್ಲಿ ಋಷಿಗಳು ಇವನ ಮೇಲೆ ಕೃಪೆಗೈದು ಯುವನಾಶ್ವನಿಂದ ಪುತ್ರಪ್ರಾಪ್ತಿಗಾಗಿ ಇಂದ್ರದೇವತಾಕ್ಕವಾದ ಯಜ್ಞವನ್ನು ಮಾಡಿಸಿದರು. ॥ ೨೫-೨೬ ॥ ಒಂದು ದಿನ ಯುವನಾಶ್ವನಿಗೆ ರಾತ್ರಿಯಲ್ಲಿ ತುಂಬಾ ಬಾಯಾರಿಕೆ ಉಂಟಾಯಿತು. ಅವನು ಯಜ್ಞಶಾಲೆಗೆ ಹೋಗಿ ನೋಡಲು ಋಷಿಗಳೆಲ್ಲರೂ ಮಲಗಿದ್ದರು. ನೀರು ಎಲ್ಲಿಯೂ ಸಿಗದೆ ಕೊನೆಗೆ ಋಷಿಗಳು ಅಭಿಮಂತ್ರಿಸಿ ಇಟ್ಟಿದ್ದ ನೀರನ್ನು ಕುಡಿದುಬಿಟ್ಟನು. ॥ ೨೭ ॥ ಪರೀಕ್ಷಿತನೇ! ಪ್ರಾತಃಕಾಲದಲ್ಲಿ ಎದ್ದು ಋಷಿಗಳು ನೋಡಿದಾಗ ಕಲಶದಲ್ಲಿ ಮಂತ್ರಪೂತವಾದ ನೀರು ಇರಲಿಲ್ಲ. ಪುತ್ರೋತ್ಪನ್ನಕರವಾದ ನೀರನ್ನು ಕುಡಿದು ಬಿಟ್ಟಿದ್ದಾರೆ! ಇದು ಯಾರ ಕೆಲಸ? ಎಂದು ಕೇಳಿದರು. ॥ ೨೮ ॥ ಭಗವಂತನ ಪ್ರೇರಣೆಯಿಂದ ರಾಜ ಯುವನಾಶ್ವನೇ ಆ ನೀರನ್ನು ಕುಡಿದಿರುವನು ಎಂದು ಅವರಿಗೆ ತಿಳಿದಾಗ ಆ ಋಷಿಗಳು ಭಗವಂತನ ಚರಣಗಳಿಗೆ ನಮಸ್ಕಾರಮಾಡಿ, 'ಆಹಾ! ಇದು ಭಗವಂತನ ಇಚ್ಛೆಯೇ' ಎಂದು ತಿಳಿದರು. ॥ ೨೯ ॥ ಇದಾದ ಬಳಿಕ ಪ್ರಸವದ ಸಮಯ ಬಂದಾಗ ಯುವನಾಶ್ವನ ಹೊಟ್ಟೆಯ ಬಲಭಾಗವನ್ನು ಭೇದಿಸಿಕೊಂಡು ಚಕ್ರವರ್ತಿಯಾಗಲಿದ್ದ ಒಂದು ಗಂಡು ಶಿಶುವು ಹೊರಬಂದಿತು. ॥ ೩೦ ॥ ಅದು ಅಳುತ್ತಿರುವುದನ್ನು ಕಂಡು ಋಷಿಗಳು – 'ಈ ಮಗು ಹಾಲಿಗಾಗಿ ಅಳುತ್ತಿದೆ. ಇದಕ್ಕೆ ಯಾರು ಹಾಲು ಕುಡಿಸುವರು?' ಎಂದು ವಿಚಾರಿಸಿದಾಗ ಇಂದ್ರನು ಹೇಳಿದನು – ನನ್ನ ಹಾಲನ್ನು (ಅಮೃತವನ್ನೇ) ಕುಡಿಯುವನು (ಮಾಂ ಧಾಸ್ಯತಿ) ಮಗೂ! ಅಳಬೇಡ! ಹೀಗೆ ಹೇಳಿ ಇಂದ್ರನು ತನ್ನ ಅಮೃತಮಯವಾದ ತೋರುಬೆರಳನ್ನು ಮಗುವಿನ ಬಾಯಿಗೆ ಇಟ್ಟನು. ॥ ೩೧ ॥ ಬ್ರಾಹ್ಮಣರ ಮತ್ತು ದೇವತೆಗಳ ವರಪ್ರಸಾದದಿಂದ ಹೊಟ್ಟೆಯು ಸೀಳಿ ಹೋಗಿದ್ದರೂ ಯುವನಾಶ್ವನು ಸಾಯಲಿಲ್ಲ. ಅವನು ಅಲ್ಲೇ ತಪಸ್ಸು ಮಾಡಿ ಮುಕ್ತನಾಗಿ ಹೋದನು. ॥ ೩೨ ॥

ತ್ರಸದ್ದಸ್ಯುರಿತೀಂದ್ರೋಽಙ್ಗ ವಿದಧೇ ನಾಮ ತಸ್ಯ ವೈ ।
ಯಸ್ಮಾತ್ತ್ರಸಂತಿ ಹ್ಯುದ್ವಿಗ್ನಾ ದಸ್ಯವೋ ರಾವಣಾದಯಃ
॥ ೩೩ ॥

ಯೌವನಾಶ್ವೋಽಥ ಮಾಂಧಾತಾ ಚಕ್ರವರ್ತ್ಯವನೀಂ ಪ್ರಭುಃ ।
ಸಪ್ತದ್ವೀಪವತೀಮೇಕಃ ಶಶಾಸಾಚ್ಯುತತೇಜಸಾ
॥ ೩೪ ॥

ಈಜೇ ಚ ಯಜ್ಞಂ ಕ್ರತುಭಿರಾತ್ಮವಿದ್ಭೂರಿದಕ್ಷಿಣೈಃ ।
ಸರ್ವದೇವಮಯಂ ದೇವಂ ಸರ್ವಾತ್ಮಕಮತೀಂದ್ರಿಯಮ್
॥ ೩೫ ॥

ದ್ರವ್ಯಂ ಮಂತ್ರೋ ವಿಧಿರ್ಯಜ್ಞೋ ಯಜಮಾನಸ್ತಥರ್ತ್ವಿಜಃ ।
ಧರ್ಮೋ ದೇಶಶ್ಚ ಕಾಲಶ್ಚ ಸರ್ವಮೇತದ್ಯದಾತ್ಮಕಮ್
॥ ೩೬ ॥

ಯಾವತ್ಸೂರ್ಯ ಉದೇತಿ ಸ್ಮ ಯಾವಚ್ಚ ಪ್ರತಿತಿಷ್ಠತಿ ।
ಸರ್ವಂ ತದ್ಯೌವನಾಶ್ವಸ್ಯ ಮಾಂಧಾತುಃ ಕ್ಷೇತ್ರಮುಚ್ಯತೇ
॥ ೩೭ ॥

ಶಶಬಿಂದೋರ್ದುಹಿತರಿ ಬಿಂದುಮತ್ಯಾಮಧಾನ್ನೃಪಃ ।
ಪುರುಕುತ್ಸಮಂಬರೀಷಂ ಮುಚುಕುಂದಂ ಚ ಯೋಗಿನಮ್ ।
ತೇಷಾಂ ಸ್ವಸಾರಃ ಪಂಚಾಶತ್ಸೌಭರಿಂ ವವ್ರಿರೇ ಪತಿಮ್
॥ ೩೮ ॥

ಯಮುನಾಂತರ್ಜಲೇ ಮಗ್ನಸ್ತಪ್ಯಮಾನಃ ಪರಂತಪಃ ।
ನಿರ್ವೃತಿಂ ಮೀನರಾಜಸ್ಯ ವೀಕ್ಷ್ಯ ಮೈಥುನಧರ್ಮಿಣಃ
॥ ೩೯ ॥

ಜಾತಸ್ಪೃಹೋ ನೃಪಂ ವಿಪ್ರಃ ಕನ್ಯಾಮೇಕಾಮಯಾಚತ ।
ಸೋಽಪ್ಯಾಹ ಗೃಹ್ಯತಾಂ ಬ್ರಹ್ಮನ್ಕಾಮಂ ಕನ್ಯಾ ಸ್ವಯಂವರೇ
॥ ೪೦ ॥

ಸ ವಿಚಿಂತ್ಯಾಪ್ರಿಯಂ ಸ್ತ್ರೀಣಾಂ ಜರಠೋಽಯಮಸಮ್ಮತಃ ।
ವಲೀಪಲಿತ ಏಜತ್ಕ ಇತ್ಯಹಂ ಪ್ರತ್ಯುದಾಹೃತಃ
॥ ೪೧ ॥

ಸಾಧಯಿಷ್ಯೇ ತಥಾಽಽತ್ಮಾನಂ ಸುರಸ್ತ್ರೀಣಾಮಭೀಪ್ಸಿತಮ್ ।
ಕಿಂ ಪುನರ್ಮನುಜೇಂದ್ರಾಣಾಮಿತಿ ವ್ಯವಸಿತಃ ಪ್ರಭುಃ
॥ ೪೨ ॥

ಪರೀಕ್ಷಿತನೇ! ಇಂದ್ರನು ಆ ಬಾಲಕನ ಹೆಸರನ್ನು 'ತ್ರಸದಸ್ಯು' ಎಂದಿಟ್ಟನು. ಏಕೆಂದರೆ, ರಾವಣನೇ ಮೊದಲಾದ ದುಷ್ಟರು ಅವನಿಂದ ಉದ್ವಿಗ್ನರಾಗಿ ಭಯಪಡುತ್ತಿದ್ದರು. ॥ ೩೩ ॥ ಯುವನಾಶ್ವನ ಪುತ್ರ ಮಾಂಧಾತನು (ತ್ರಸದಸ್ಯು) ಚಕ್ರವರ್ತಿ ರಾಜನಾದನು. ಭಗವಂತನ ತೇಜಸ್ಸಿನಿಂದ ಸಂಪನ್ನನಾಗಿದ್ದ ಅವನು ಸಪ್ತದ್ವೀಪವಿಂದ ಒಡಗೂಡಿದ ಇಡೀ ಪೃಥ್ವಿಯನ್ನು ಆಳಿದನು. ॥ ೩೪ ॥ ಅವನು ಆತ್ಮಜ್ಞಾನಿಯಾಗಿದ್ದನು. ಅವನಿಗೆ ಕರ್ಮಕಾಂಡದ ಯಾವುದೇ ಅವಶ್ಯಕತೆ ಇಲ್ಲದಿದ್ದರೂ ಅವನು ಬಹು ದಕ್ಷಿಣೆಗಳುಳ್ಳ ಯಜ್ಞಗಳಿಂದ ಸ್ವಯಂಪ್ರಕಾಶನೂ, ಸರ್ವದೇವ ಸ್ವರೂಪನೂ, ಸರ್ವಾತ್ಮನೂ, ಇಂದ್ರಿಯಾತೀತನೂ ಆದ ಯಜ್ಞಸ್ವರೂಪೀ ಪ್ರಭುವನ್ನು ಆರಾಧಿಸಿದನು. ॥ ೩೫ ॥ ಭಗವಂತನಿಂದ ಬೇರೆಯಾದುದು ಪ್ರಪಂಚದಲ್ಲಿ ಇನ್ನೇನಿದೆ? ಯಜ್ಞದ ಸಾಮಗ್ರಿ, ಮಂತ್ರ, ವಿಧಿ - ವಿಧಾನ, ಯಜ್ಞ, ಯಜಮಾನ, ಋತ್ವಿಜರು, ಧರ್ಮ, ದೇಶ - ಕಾಲ – ಇವೆಲ್ಲವೂ ಭಗವಂತನ ಸ್ವರೂಪವೇ ಆಗಿದೆಯಲ್ಲ! ॥ ೩೬ ॥ ಪರೀಕ್ಷಿತನೇ! ಸೂರ್ಯನು ಉದಯಿಸುವ ಮತ್ತು ಅಸ್ತವಾಗುವ ಸಮಸ್ತ ಭೂಭಾಗವೂ ಯುವನಾಶ್ವಪುತ್ರ ಮಾಂಧಾತನ ಆಳ್ವಿಕೆಯಲ್ಲಿತ್ತು. ॥ ೩೭ ॥

ಚಕ್ರವರ್ತಿ ಮಾಂಧಾತನಿಗೆ ಶಶಬಿಂದುವಿನ ಪುತ್ರಿ 'ಬಿಂದುಮತಿ' ಎಂಬುವಳು ಪತ್ನಿಯಾಗಿದ್ದಳು. ಅವಳಿಂದ ಪುರುಕುತ್ಸ, ಅಂಬರೀಷ (ಇವನು ಇನ್ನೊಬ್ಬ ಅಂಬರೀಷ) ಮತ್ತು ಯೋಗೀ ಮುಚುಕುಂದ ಎಂಬ ಮೂವರು ಪುತ್ರರು ಹುಟ್ಟಿದರು. ಅವರಿಗೆ ಐವತ್ತು ಮಂದಿ ತಂಗಿಯಂದಿರಿದ್ದರು. ಆ ಐವತ್ತು ಮಂದಿಯೂ ಒಬ್ಬನೇ ಸೌಭರಿ ಋಷಿಯನ್ನು ಪತಿಯನ್ನಾಗಿ ವರಿಸಿದರು. ॥ ೩೮ ॥ ಪರಮ ತಪಸ್ವಿಯಾದ ಸೌಭರಿಋಷಿಯು ಒಮ್ಮೆ ಯಮುನೆಯಲ್ಲಿ ಮುಳುಗಿ ತಪಸ್ಸು ಮಾಡುತ್ತಿದ್ದನು. ಒಂದು ದಿನ ಗಂಡುಮೀನೊಂದು ಹೆಣ್ಣುಮೀನುಗಳೊಡನೆ ಸರಸವಾಡುತ್ತಿರುವುದನ್ನು ಅವನು ನೋಡಿದನು. ಆದರ ಈ ಸರಸವಿಲಾಸವನ್ನು ಕಂಡು ಸೌಭರಿಯ ಮನಸ್ಸಿನಲ್ಲಿಯೂ ತಾನು ವಿವಾಹ ಮಾಡಿಕೊಳ್ಳಬೇಕೆಂಬ ಇಚ್ಛೆಯು ಜಾಗ್ರತವಾಯಿತು. ॥ ೩೯ ॥ ಅವನು ಮಾಂಧಾತರಾಜನಲ್ಲಿಗೆ ಹೋಗಿ ಐವತ್ತು ಕನ್ಯೆಯರಲ್ಲಿ ಒಂದು ಕನ್ಯೆಯನ್ನು ಯಾಚಿಸಿದನು. ರಾಜನೆಂದ – ಬ್ರಾಹ್ಮಣೋತ್ತಮರೇ! ಕನ್ಯೆಯು ಸ್ವಯಂವರದಲ್ಲಿ ನಿಮ್ಮನ್ನು ವರಿಸಿದರೆ ತಾವು ಅವಳನ್ನು ಕೊಂಡುಹೋಗಿರಿ. ॥ ೪೦ ॥ ಸೌಭರಿಋಷಿಯು ಮಾಂಧಾತನ ಅಭಿಪ್ರಾಯವನ್ನು ಅರಿತುಕೊಂಡನು. ಈಗ ನಾನು ಮುದುಕನಾಗಿದ್ದೇನೆ. ಶರೀರದಲ್ಲಿ ನೆರಿಗೆಗಳು ಬಿದ್ದಿವೆ. ಕೂದಲು ಹಣ್ಣಾಗಿವೆ. ತಲೆ ನಡುಗುತ್ತಿದೆ. ಆಗ ಯಾವ ಸ್ತ್ರೀಯೂ ನನ್ನನ್ನು ಪ್ರೇಮಿಸಲಾರಳು ಎಂದು ರಾಜನು ತಿಳಿದುದರಿಂದ ಹೀಗೆ ಜಾರಿಕೆಯ ಉತ್ತರ ನೀಡಿರುವನು ಎಂದು ಯೋಚಿಸಿದರು. ॥ ೪೧ ॥ ಇರಲಿ! ರಾಜಕನ್ಯೆಯರೇನು ದೇವಾಂಗನೆಯರೂ ಕೂಡ ನನ್ನನ್ನು ನೋಡಿ ಮೋಹಗೊಳ್ಳುವಂತಹ ಸುಂದರ ಶರೀರವನ್ನು ಧರಿಸುವೆನು ಎಂಬುದಾಗಿ ಅಂದುಕೊಂಡು ಹಾಗೆಯೇ ಮಾಡಿದನು. ॥ ೪೨ ॥

ಮುನಿಃ ಪ್ರವೇಶಿತಃ ಕ್ಷತ್ರಾ ಕನ್ಯಾಂತಃಪುರಮೃದ್ಧಿಮತ್ ।
ವೃತಶ್ಚ ರಾಜಕನ್ಯಾಭಿರೇಕಃ ಪಂಚಾಶತಾ ವರಃ ॥ ೪೩ ॥

ತಾಸಾಂ ಕಲಿರಭೂದ್ಭೂಯಾಂ-
ಸ್ತದರ್ಥೇಽಪೋಹ್ಯ ಸೌಹೃದಮ್ ।
ಮಮಾನುರೂಪೋ ನಾಯಂ ವ
ಇತಿ ತದ್ಗತಚೇತಸಾಮ್ ॥ ೪೪ ॥

ಸ ಬಹ್ವೃಚಸ್ತಾಭಿರಪಾರಣೀಯ-
ತಪಃ ಶ್ರಿಯಾನರ್ಘ್ಯಪರಿಚ್ಛದೇಷು ।
ಗೃಹೇಷು ನಾನೋಪವನಾಮಲಾಂಭಃ-
ಸರಸ್ಸು ಸೌಗಂಧಿಕಕಾನನೇಷು ॥ ೪೫ ॥

ಮಹಾರ್ಹಶಯ್ಯಾಸನವಸ್ತ್ರಭೂಷಣ-
ಸ್ನಾನಾನುಲೇಪಾಭ್ಯವಹಾರಮಾಲ್ಯಕೈಃ ।
ಸ್ವಲಂಕೃತಸ್ತ್ರೀಪುರುಷೇಷು ನಿತ್ಯದಾ
ರೇಮೇಽನುಗಾಯದ್ದ್ವಿಜಭೃಂಗವಂದಿಷು ॥ ೪೬ ॥

ಯದ್ಗಾರ್ಹಸ್ಥ್ಯಂ ತು ಸಂವೀಕ್ಷ್ಯ ಸಪ್ತದ್ವೀಪವತೀಪತಿಃ ।
ವಿಸ್ಮಿತಃ ಸ್ತಂಭಮಜಹಾತ್ಸಾರ್ವಭೌಮಶ್ರಿಯಾನ್ವಿತಮ್ ॥ ೪೭ ॥

ಏವಂ ಗೃಹೇಷ್ವಭಿರತೋ ವಿಷಯಾನ್ವಿವಿಧೈಃ ಸುಖೈಃ ।
ಸೇವಮಾನೋ ನ ಚಾತುಷ್ಯದಾಜ್ಯಸ್ತೋಕೈರಿವಾನಲಃ ॥ ೪೮ ॥

ಸ ಕದಾಚಿದುಪಾಸೀನ ಆತ್ಮಾಪಹ್ನವಮಾತ್ಮನಃ ।
ದದರ್ಶ ಬಹ್ವೃಚಾಚಾರ್ಯೋ ಮೀನಸಂಗಸಮುತ್ಥಿತಮ್ ॥ ೪೯ ॥

ಅಹೋ ಇಮಂ ಪಶ್ಯತ ಮೇ ವಿನಾಶಂ
ತಪಸ್ವಿನಃ ಸಚ್ಚರಿತವ್ರತಸ್ಯ ।
ಅಂತರ್ಜಲೇ ವಾರಿಚರಪ್ರಸಂಗಾತ್
ಪ್ರಚ್ಯಾವಿತಂ ಬ್ರಹ್ಮ ಚಿರಂ ಧೃತಂ ಯತ್ ॥ ೫೦ ॥

ಇನ್ನೇನು? ಅಂತಃಪುರದ ರಕ್ಷಕರು – ಚಂದನ ಮಾಲೆಗಳಿಂದ ಅಲಂಕೃತನಾದ ಸೌಭರಿ ಮುನಿಯನ್ನು ಶೃಂಗರಿಸಲ್ಪಟ್ಟ ಕನ್ಯಾಂತಃಪುರಕ್ಕೆ ಕೊಂಡುಹೋದರು. ಹಾಗಿರುವಾಗ ಆ ಐವತ್ತು ಕನ್ಯೆಯರೂ ಓರ್ವ ಸೌಭರಿಯನ್ನೇ ತಮ್ಮ ಪತಿಯನ್ನಾಗಿ ವರಿಸಿದರು. ॥ ೪೩ ॥ ಆ ಕನ್ಯೆಯರೆಲ್ಲರ ಮನಸ್ಸು ಸೌಭರಿಯಲ್ಲಿ ಅತ್ಯಂತ ಪ್ರೇಮಾಸಕ್ತವಾಯಿತು. ಇದರಿಂದ ಪರಸ್ಪರ ಅವರಲ್ಲೇ ವೈಶಮ್ಯವುಂಟಾಗಿ ಅಸೂಯೆಪಡತೊಡಗಿದರು. 'ಇವರು ನಿನಗೆ ಯೋಗ್ಯರಲ್ಲ, ನನಗೆ ಯೋಗ್ಯರಾಗಿದ್ದಾರೆ' ಎಂದು ಜಗಳ ಕಾಯುತ್ತಿದ್ದರು. ॥ ೪೪ ॥ ಋಗ್ವೇದಿಯಾದ ಸೌಭರಿಯು ಆ ಎಲ್ಲ ಕನ್ಯೆಯರ ಪಾಣಿಗ್ರಹಣ ಮಾಡಿದನು. ಅವನು ತನ್ನ ಅಪಾರ ತಪಸ್ಸಿನ ಪ್ರಭಾವದಿಂದ ಅನೇಕ ಉಪವನಗಳಿಂದಲೂ, ನಿರ್ಮಲ ಜಲದಿಂದ ತುಂಬಿದ ಸರೋವರಗಳಿಂದಲೂ, ಸೌಗಂಧಿಕ ಮುಂತಾದ ಪುಷ್ಪೋದ್ಯಾನಗಳಿಂದ ಕೂಡಿದ ಅಮೂಲ್ಯ ಸಾಮಗ್ರಿಗಳಿಂದ ಸುಸಜ್ಜಿತವಾದ ಅರಮನೆಯಲ್ಲಿ ಬಹುಮೂಲ್ಯ ಶಯ್ಯೆಗಳು, ಆಸನ, ವಸ್ತ್ರ, ಆಭೂಷಣ, ಸ್ನಾನ, ಅನುಲೇಪನ, ಸ್ವಾದಿಷ್ಟಭೋಜನ, ಪುಷ್ಪಮಾಲೆ ಇವುಗಳ ಮೂಲಕ ತನ್ನ ಪತ್ನಿಯರೊಂದಿಗೆ ವಿಹರಿಸತೊಡಗಿದನು. ಸುಂದರವಾದ ವಸ್ತ್ರಾಭರಣಗಳನ್ನು ಧರಿಸಿದ ಅನೇಕ ಸ್ತ್ರೀ-ಪುರುಷ ಸೇವಕರು ಅವರ ಸೇವೆಯಲ್ಲಿ ಸಿದ್ಧರಿದ್ದರು. ಕೆಲವೆಡೆ ಪಕ್ಷಿಗಳ ಕೂಜನವಿದ್ದರೆ, ಕೆಲವೆಡೆ ದುಂಬಿಗಳು ಝೇಂಕರಿಸುತ್ತಿದ್ದವು. ಕೆಲವೆಡೆ ವಂದಿ-ಮಾಗಧರು ಅವರ ಬಿರುದಾವಳಿಯನ್ನು ಹೊಗಳುತ್ತಿದ್ದರು. ॥ ೪೫-೪೬ ॥ ಸಪ್ತದ್ವೀಪದಿಂದೊಡಗೂಡಿದ ಪೃಥಿವಿಯ ಪಾಲಕನಾದ ಮಾಂಧಾತನು ಸೌಭರಿಯ ಗಾರ್ಹಸ್ಥ್ಯಸುಖವನ್ನು ಕಂಡು ಆಶ್ಚರ್ಯಚಕಿತನಾದನು. ಸಾರ್ವಭೌಮ ಸಂಪತ್ತಿನಿಂದ ಸಂಪನ್ನನಾಗಿರುವೆನೆಂಬ ಮಾಂಧಾತನ ಗರ್ವವು ಉಡುಗಿ ಹೋಯಿತು. ॥ ೪೭ ॥ ಹೀಗೆ ಸೌಭರಿಯು ಗಾರ್ಹಸ್ಥ್ಯ ಜೀವನದಲ್ಲಿ ರಮಮಾಣನಾದನು. ತನ್ನ ನಿರೋಗಿಯಾದ ಇಂದ್ರಿಯಗಳಿಂದ ಅನೇಕ ವಿಷಯಗಳನ್ನು ಸೇವಿಸುತ್ತಿದ್ದರೂ ತುಪ್ಪದ ಧಾರೆಯಿಂದ ಅಗ್ನಿಯು ತೃಪ್ತ (ಶಾಂತ)ವಾಗದಿರುವಂತೆಯೇ ಸೌಭರಿಗೂ ವಿಷಯಗಳಿಂದ ಸಂತೋಷವಾಗಲಿಲ್ಲ. ॥ ೪೮ ॥

ಋಗ್ವೇದಾಚಾರ್ಯ ಸೌಭರಿಯು ಒಂದು ದಿನ ಶಾಂತಚಿತ್ತದಿಂದ ಕುಳಿತಿದ್ದನು. ಹಿಂದಿನ ಘಟನೆಯನ್ನು ನೆನೆಯುತ್ತಾ ಯಮುನಾನದಿಯಲ್ಲಿ ಮತ್ಸ್ಯದ ಕ್ಷಣಿಕ ಸಂಗದಿಂದ ನಾನು ಹೇಗೆ ನನ್ನ ತಪಸ್ಸನ್ನು ಅದರ ಫಲವನ್ನೂ ಕಳೆದುಕೊಂಡು ಬಿಟ್ಟೆನಲ್ಲ! ॥ ೪೯ ॥ ಅವರು ಉದ್ಗರಿಸಿದರು – ಅಯ್ಯೋ! ನನ್ನ ಪತನವೇ! ನಾನು ದೊಡ್ಡ ತಪಸ್ವಿಯಾಗಿದ್ದೆ. ನಾನು ಚೆನ್ನಾಗಿ ವ್ರತಾನುಷ್ಠಾನಗಳನ್ನು ಮಾಡಿದ್ದೆ. ಈಗ ನೋಡಿ! ನನ್ನ ಅಧಃಪತನವಾಗಿದೆ. ನಾನು ಬಹಳ ಕಾಲದಿಂದ ಬ್ರಹ್ಮತೇಜಸ್ಸನ್ನು ಕಾಪಾಡಿಕೊಂಡು ಬಂದಿದ್ದೆ. ಆದರೆ ನೀರಿನಲ್ಲಿ ವಿಹರಿಸುತ್ತಿದ್ದ ಮತ್ಸ್ಯದಂಪತಿಗಳ ಸಂಸರ್ಗದಿಂದಾಗಿ ನನ್ನ ಬ್ರಹ್ಮತೇಜಸ್ಸೆಲ್ಲವೂ ನಷ್ಟವಾಗಿ ಹೋಯಿತಲ್ಲ! ॥ ೫೦ ॥

ಸಂಗಂ ತ್ಯಜೇತ ಮಿಥುನವ್ರತಿನಾಂ ಮುಮುಕ್ಷುಃ
ಸರ್ವಾತ್ಮನಾ ನ ವಿಸೃಜೇದ್ಬಹಿರಿಂದ್ರಿಯಾಣಿ ।
ಏಕಶ್ಚರನ್ರಹಸಿ ಚಿತ್ತಮನಂತ ಈಶೇ
ಯುಂಜೀತ ತದ್ವ್ರತಿಷು ಸಾಧುಷು ಚೇತ್ಪ್ರಸಂಗಃ ॥ ೫೧ ॥

ಆದ್ದರಿಂದ ಮೋಕ್ಷದ ಇಚ್ಛೆಯುಳ್ಳವನು ಭೋಗಿಗಳಾದ ಪ್ರಾಣಿಗಳ ಸಂಗವನ್ನು ಪೂರ್ಣವಾಗಿ ಬಿಡಬೇಕು. ಒಂದು ಕ್ಷಣಕ್ಕಾದರೂ ತನ್ನ ಇಂದ್ರಿಯಗಳನ್ನು ಬಹಿರ್ಮುಖವಾಗಲು ಬಿಡಬಾರದು. ಏಕಾಂತದಲ್ಲಿ ಒಬ್ಬಂಟಿಗನಾಗಿದ್ದು ಸರ್ವಶಕ್ತನಾದ ಭಗವಂತನಲ್ಲಿ ಚಿತ್ತವನ್ನು ತೊಡಗಿಸಬೇಕು. ಸಂಗಮಾಡುವ ಅವಶ್ಯಕತೆ ಬಿದ್ದರೆ ಭಗವಂತನ ಅನನ್ಯಭಕ್ತರಾದ ನಿಷ್ಠೆಯುಳ್ಳ ಮಹಾತ್ಮರ ಸಂಗವನ್ನು ಮಾತ್ರ ಮಾಡಬೇಕು. ॥ ೫೧ ॥

ಏಕಸ್ತಪಸ್ವ್ಯಹಮಥಾಂಭಸಿ ಮತ್ಸ್ಯಸಂಗಾತ್
ಪಂಚಾಶದಾಸಮುತ ಪಂಚಸಹಸ್ರಸರ್ಗಃ ।
ನಾಂತಂ ವ್ರಜಾಮ್ಯುಭಯಕೃತ್ಯಮನೋರಥಾನಾಂ
ಮಾಯಾಗುಣೈರ್ಹೃತಮತಿರ್ವಿಷಯೇಽರ್ಥಭಾವಃ ॥ ೫೨ ॥

ನಾನು ಮೊದಲು ಏಕಾಂತದಲ್ಲಿ ಒಬ್ಬನೇ ತಪಸ್ಸಿನಲ್ಲಿ ತೊಡಗಿದ್ದೆ. ಹಾಗಿರುವಾಗ ನೀರಿನಲ್ಲಿ ಮೀನಿನ ಸಂಗದಿಂದಾಗಿ ವಿವಾಹವಾಗಿ ಐವತ್ತೊಂದಾಗಿ ಮತ್ತೆ ಸಂತಾನದ ರೂಪದಲ್ಲಿ ಐದುಸಾವಿರನಾದೆ. ವಿಷಯಗಳಲ್ಲಿ ಸತ್ಯತ್ವದ ಬುದ್ಧಿಯುಂಟಾಗಿ ಮಾಯೆಯ ಗುಣಗಳು ನನ್ನ ಬುದ್ಧಿಯನ್ನು ಅಪಹರಿಸಿದವು. ಈಗಲಾದರೋ ಇಹ-ಪರಲೋಕಗಳ ಸಂಬಂಧದಲ್ಲಿ ಯಾವ ರೀತಿಯಿಂದಲೂ ದಾಟಲಾರದಷ್ಟು ನನ್ನ ಮನಸ್ಸು ಲಾಲಸೆಗಳಿಂದ ತುಂಬಿಹೋಗಿದೆ. ॥ ೫೨ ॥

ಏವಂ ವಸನ್ಗೃಹೇ ಕಾಲಂ ವಿರಕ್ತೋ ನ್ಯಾಸಮಾಸ್ಥಿತಃ ।
ವನಂ ಜಗಾಮಾನುಯಯುಸ್ತತ್ಪತ್ನ್ಯಃ ಪತಿದೇವತಾಃ ॥ ೫೩ ॥

ಹೀಗೆ ವಿಚಾರಮಾಡುತ್ತಾ ಅವರು ಕೆಲವು ದಿನಗಳು ಮನೆಯಲ್ಲೇ ಉಳಿದರು. ಮತ್ತೆ ವಿರಕ್ತರಾಗಿ ಅವರು ಸಂನ್ಯಾಸವನ್ನು ಸ್ವೀಕರಿಸಿ, ಕಾಡಿಗೆ ಹೊರಟುಹೋದರು. ತನ್ನ ಪತಿಯನ್ನೇ ಸರ್ವಸ್ವವೆಂದು ತಿಳಿಯುತ್ತಿದ್ದ ಅವನ ಪತ್ನಿಯರೂ ಅವರೊಂದಿಗೇ ಕಾಡಿಗೆ ತೆರಳಿದರು. ॥ ೫೩ ॥

ತತ್ರ ತಪ್ತ್ವಾ ತಪಸ್ತೀಕ್ಷ್ಣಮಾತ್ಮಕರ್ಶನಮಾತ್ಮವಾನ್ ।
ಸ ಹೈವಾಗ್ನಿಭಿರಾತ್ಮಾನಂ ಯುಯೋಜ ಪರಮಾತ್ಮನಿ ॥ ೫೪ ॥

ಅಲ್ಲಿಗೆ ಹೋಗಿ ಪರಮ ಸಂಯಮಿಯಾದ ಸೌಭರಿಯು ಘೋರವಾದ ತಪಸ್ಸನ್ನಾಚರಿಸಿದರು. ಶರೀರವನ್ನು ಶೋಷಿಸಿಬಿಟ್ಟರು. ಆಹವನೀಯಾದಿ ಅಗ್ನಿಗಳೊಂದಿಗೆ ತನ್ನನ್ನು ಪರಮಾತ್ಮನಲ್ಲಿ ಲೀನವಾಗಿಸಿಕೊಂಡನು. ॥ ೫೪ ॥

ತಾಃ ಸ್ವಪತ್ಯುರ್ಮಹಾರಾಜ ನಿರೀಕ್ಷ್ಯಾಧ್ಯಾತ್ಮಿಕೀಂ ಗತಿಮ್ ।
ಅನ್ವೀಯುಸ್ತತ್ಪ್ರಭಾವೇಣ ಅಗ್ನಿಂ ಶಾಂತಮಿವಾರ್ಚಿಷಃ ॥ ೫೫ ॥

ಪರೀಕ್ಷಿತನೇ! ಅವರ ಪತ್ನಿಯರೂ ಕೂಡ ಸೌಭರಿಮುನಿಯ ಆಧ್ಯಾತ್ಮಿಕ ಗತಿಯನ್ನು ನೋಡಿದಾಗ, ಶಾಂತವಾದ ಅಗ್ನಿಯಲ್ಲಿ ಜ್ವಾಲೆಗಳು ಲೀನವಾಗುವಂತೆ ಅವರೆಲ್ಲರೂ ಮುನಿಯ ಪ್ರಭಾವದಿಂದ ಸಹಗಮನದಿಂದ ಅವರಲ್ಲೇ ಲೀನವಾಗಿ, ಅವರ ಗತಿಯನ್ನೇ ಪಡೆದುಕೊಂಡರು. ॥ ೫೫ ॥

ಆರನೆಯ ಅಧ್ಯಾಯವು ಮುಗಿಯಿತು. ॥ ೬ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ನವಮಸ್ಕಂಧೇ ಸೌಭರ್ಯಾಖ್ಯಾನೇ ಷಷ್ಠೋಽಧ್ಯಾಯಃ ॥ ೬ ॥

ಏಳನೆಯ ಅಧ್ಯಾಯ

ತ್ರಿಶಂಕುರಾಜನ ಮತ್ತು ಹರಿಶ್ಚಂದ್ರನ ಕಥೆ

ಶ್ರೀಶುಕ ಉವಾಚ

ಮಾಂಧಾತುಃ ಪುತ್ರಪ್ರವರೋ ಯೋಽಂಬರೀಷಃ ಪ್ರಕೀರ್ತಿತಃ ।
ಪಿತಾಮಹೇನ ಪ್ರವೃತೋ ಯೌವನಾಶ್ವಸ್ತು ತತ್ಸುತಃ ।
ಹಾರೀತಸ್ತಸ್ಯ ಪುತ್ರೋಽಭೂನ್ಮಾಂಧಾತೃಪ್ರವರಾ ಇಮೇ ॥ ೧ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿದ್ರಾಜನೇ! ಮಾಂಧಾತನ ಪುತ್ರರಲ್ಲಿ ಅಂಬರೀಷನು ಎಲ್ಲರಿಂದ ಶ್ರೇಷ್ಠನಾಗಿದ್ದನು ಎಂಬುದನ್ನು ನಾನು ವರ್ಣಿಸಿರುವೆನು. ಅವನ ಅಜ್ಜನಾದ ಯುವನಾಶ್ವನು ಅವನನ್ನು ಪುತ್ರರೂಪದಿಂದ ಸ್ವೀಕರಿಸಿದ್ದನು. ಅವನಿಗೆ ಯೌವನಾಶ್ವನೆಂಬ ಮಗ ಹುಟ್ಟಿದನು. ಯೌವನಾಶ್ವನಿಂದ ಹಾರೀತನಾದನು. ಮಾಂಧಾತನ ವಂಶದಲ್ಲಿ ಈ ಮೂವರೂ ಅವಾಂತರ ಗೋತ್ರದ ಪ್ರವರ್ತಕರಾದರು. ॥ ೧ ॥

ನರ್ಮದಾ ಭ್ರಾತೃಭಿರ್ದತ್ತಾ ಪುರುಕುತ್ಸಾಯ ಯೋರಗೈಃ ।
ತಯಾ ರಸಾತಲಂ ನೀತೋ ಭುಜಗೇಂದ್ರಪ್ರಯುಕ್ತಯಾ ॥ ೨ ॥

ಮಾಂಧಾತನ ಹಿರಿಯ ಮಗ ಪುರುಕುತ್ಸನಿಗೆ ರಸಾತಲವಾಸಿಗಳಾದ ನಾಗರು ತಮ್ಮ ಸಹೋದರಿ ನರ್ಮದೆಯನ್ನು ವಿವಾಹಮಾಡಿ ಕೊಟ್ಟಿದ್ದರು. ನಾಗರಾಜ ವಾಸುಕಿಯ ಅಪ್ಪಣೆಯಂತೆ ನರ್ಮದೆಯು ತನ್ನ ಪತಿಯನ್ನು ರಸಾತಲಕ್ಕೆ ಕೊಂಡುಹೋದಳು. ॥ ೨ ॥

ಗಂಧರ್ವಾನವಧೀತ್ತತ್ರ ವಧ್ಯಾನ್ವೈ ವಿಷ್ಣುಶಕ್ತಿಧೃಕ್ ।
ನಾಗಾಲ್ಲಬ್ಧವರಃ ಸರ್ಪಾದಭಯಂ ಸ್ಮರತಾಮಿದಮ್
॥ ೩ ॥

ತ್ರಸದ್ದಸ್ಯುಃ ಪೌರುಕುತ್ಸೋ ಯೋಽನರಣ್ಯಸ್ಯ ದೇಹಕೃತ್ ।
ಹರ್ಯಶ್ವಸ್ತತ್ಸುತಸ್ತಸ್ಮಾದರುಣೋಽಥ ತ್ರಿಬಂಧನಃ
॥ ೪ ॥

ತಸ್ಯ ಸತ್ಯವ್ರತಃ ಪುತ್ರಸ್ತ್ರಿಶಂಕುರಿತಿ ವಿಶ್ರುತಃ ।
ಪ್ರಾಪ್ತಶ್ಚಾಂಡಾಲತಾಂ ಶಾಪಾದ್ಗುರೋಃ ಕೌಶಿಕತೇಜಸಾ
॥ ೫ ॥

ಸಶರೀರೋ ಗತಃ ಸ್ವರ್ಗಮದ್ಯಾಪಿ ದಿವಿ ದೃಶ್ಯತೇ ।
ಪಾತಿತೋಽವಾಕ್ಶಿರಾ ದೇವೈಸ್ತೇನೈವ ಸ್ತಂಭಿತೋ ಬಲಾತ್
॥ ೬ ॥

ತ್ರೈಶಂಕವೋ ಹರಿಶ್ಚಂದ್ರೋ ವಿಶ್ವಾಮಿತ್ರವಸಿಷ್ಠಯೋಃ ।
ಯನ್ನಿಮಿತ್ತಮಭೂದ್ಯುದ್ಧಂ ಪಕ್ಷಿಣೋರ್ಬಹುವಾರ್ಷಿಕಮ್
॥ ೭ ॥

ಸೋಽನಪತ್ಯೋ ವಿಷಣ್ಣಾತ್ಮಾ ನಾರದಸ್ಯೋಪದೇಶತಃ ।
ವರುಣಂ ಶರಣಂ ಯಾತಃ ಪುತ್ರೋ ಮೇ ಜಾಯತಾಂ ಪ್ರಭೋ
॥ ೮ ॥

ಯದಿ ವೀರೋ ಮಹಾರಾಜ ತೇನೈವ ತ್ವಾಂ ಯಜೇ ಇತಿ ।
ತಥೇತಿ ವರುಣೇನಾಸ್ಯ ಪುತ್ರೋ ಜಾತಸ್ತು ರೋಹಿತಃ
॥ ೯ ॥

ಜಾತಃ ಸುತೋ ಹ್ಯನೇನಾಂಗ ಮಾಂ ಯಜಸ್ವೇತಿ ಸೋಽಬ್ರವೀತ್ ।
ಯದಾ ಪಶುರ್ನಿರ್ದಶಃ ಸ್ಯಾದಥ ಮೇಧ್ಯೋ ಭವೇದಿತಿ
॥ ೧೦ ॥

ನಿರ್ದಶೇ ಚ ಸ ಆಗತ್ಯ ಯಜಸ್ವೇತ್ಯಾಹ ಸೋಽಬ್ರವೀತ್ ।
ದಂತಾಃ ಪಶೋರ್ಯಜ್ಜಾಯೇರನ್ನಥ ಮೇಧ್ಯೋ ಭವೇದಿತಿ
॥ ೧೧ ॥

ಜಾತಾ ದಂತಾ ಯಜಸ್ವೇತಿ ಸ ಪ್ರತ್ಯಾಹಾಥ ಸೋಽಬ್ರವೀತ್ ।
ಯದಾ ಪತಂತ್ಯಸ್ಯ ದಂತಾ ಅಥ ಮೇಧ್ಯೋ ಭವೇದಿತಿ
॥ ೧೨ ॥

ಪಶೋರ್ನಿಪತಿತಾ ದಂತಾ ಯಜಸ್ವೇತ್ಯಾಹ ಸೋಽಬ್ರವೀತ್ ।
ಯದಾ ಪಶೋಃ ಪುನರ್ದಂತಾ ಜಾಯಂತೇಽಥ ಪಶುಃ ಶುಚಿಃ
॥ ೧೩ ॥

ಅಲ್ಲಿ ಭಗವಂತನ ಶಕ್ತಿಯಿಂದ ಸಂಪನ್ನನಾಗಿ ಪುರುಕುತ್ಸನು ವಧಾರ್ಹರಾದ ಗಂಧರ್ವರನ್ನು ಸಂಹರಿಸಿಬಿಟ್ಟನು. ಇದರಿಂದ ಸಂತೋಷಗೊಂಡ ನಾಗರಾಜನು ಪುರುಕುತ್ಸನಿಗೆ – 'ಈ ಪ್ರಸಂಗವನ್ನು ಸ್ಮರಿಸುವವನು ಸರ್ಪಗಳಿಂದ ನಿರ್ಭಯನಾಗುವನು' ಎಂಬ ವರವನ್ನು ಕೊಟ್ಟನು. ॥ ೩ ॥ ರಾಜಾ ಪುರುಕುತ್ಸನಿಗೆ ತ್ರಸದ್ದಸ್ಯು ಎಂಬ ಪುತ್ರನಿದ್ದನು. ಅವನಿಗೆ ಅನರಣ್ಯನೆಂಬ ಪುತ್ರನಾದನು. ಅನರಣ್ಯನಿಂದ ಹರ್ಯಶ್ವ, ಅವನಿಂದ ಅರುಣ, ಅರುಣನ ಪುತ್ರ ತ್ರಿಬಂಧನನಾದನು. ॥ ೪ ॥ ತ್ರಿಬಂಧನನ ಪುತ್ರ ಸತ್ಯವ್ರತನಾದನು. ಈ ಸತ್ಯವ್ರತನೇ ತ್ರಿಶಂಕು ಎಂಬ ಹೆಸರಿನಿಂದ ವಿಖ್ಯಾತನಾದನು. ತ್ರಿಶಂಕುವು ತಂದೆ ಮತ್ತು ಗುರುವಿನ ಶಾಪದಿಂದ ಚಾಂಡಾಲನಾಗಿದ್ದನು. ಆದರೂ ವಿಶ್ವಾಮಿತ್ರನ ಪ್ರಭಾವದಿಂದಲೇ ಸಶರೀರಿಯಾಗಿ ಸ್ವರ್ಗಕ್ಕೆ ಹೋದನು. ದೇವತೆಗಳು ಅವನನ್ನು ಅಲ್ಲಿಂದ ತಳ್ಳಿಬಿಟ್ಟರು. ಅವನು ತಲೆಕೆಳಗಾಗಿ ಬೀಳುತ್ತಿದ್ದಾಗ ವಿಶ್ವಾಮಿತ್ರನು ತನ್ನ ತಪೋಬಲದಿಂದ ಅವನನ್ನು ಆಕಾಶದಲ್ಲೇ ಸ್ಥಿರಗೊಳಿಸಿದನು. ಅವನು ಈಗಲೂ ಆಕಾಶದಲ್ಲಿ ನೇತಾಡುತ್ತಿದ್ದಾನೆ. ॥ ೫-೬ ॥

ತ್ರಿಶಂಕುವಿನ ಪುತ್ರನು ಹರಿಶ್ಚಂದ್ರನಾಗಿದ್ದನು. ಅವನಿಗಾಗಿ ವಿಶ್ವಾಮಿತ್ರರು ಮತ್ತು ವಸಿಷ್ಠರು ಪರಸ್ಪರ ಶಾಪಕೊಟ್ಟುಕೊಂಡು ಪಕ್ಷಿಗಳಾಗಿ ಅನೇಕ ವರ್ಷಗಳವರೆಗೆ ಕಾದಾಡುತ್ತಲೇ ಇದ್ದರು ॥ ೭ ॥ ಹರಿಶ್ಚಂದ್ರನಿಗೆ ಸಂತಾನವಿರಲಿಲ್ಲ, ಇದರಿಂದ ಅವನು ಬಹಳ ದುಃಖಿತನಾಗಿದ್ದನು. ನಾರದರ ಉಪದೇಶದಂತೆ ಅವನು ವರುಣದೇವರಿಗೆ ಶರಣಾಗಿ ಪ್ರಾರ್ಥಿಸಿದನು – ಪ್ರಭೋ! ನನಗೆ ಪುತ್ರಸಂತಾನ ಪ್ರಾಪ್ತವಾಗಲೀ. ॥ ೮ ॥ ನಿನ್ನ ಅನುಗ್ರಹದಿಂದ ನನಗೆ ವೀರಪುತ್ರನು ಹುಟ್ಟಿದರೆ, ಅವನನ್ನೇ ಯಜ್ಞಪಶುವನ್ನಾಗಿ ನಿನ್ನ ಪ್ರೀತ್ಯರ್ಥವಾಗಿ ಯಜ್ಞಮಾಡುವೆನು. ವರುಣನೆಂದನು – 'ಹಾಗೆಯೇ ಆಗಲಿ.' ಆಗ ವರುಣನ ಕೃಪೆಯಿಂದ ಹರಿಶ್ಚಂದ್ರನಿಗೆ ರೋಹಿತನೆಂಬ ಮಗನು ಹುಟ್ಟಿದನು. ॥ ೯ ॥ ಪುತ್ರನು ಹುಟ್ಟುತ್ತಲೇ ವರುಣನು ಬಂದು ಹೇಳಿದನು – ಹರಿಶ್ಚಂದ್ರಾ! ನಿನಗೆ ಪುತ್ರಸಂತಾನವಾಗಿದೆ. ಈಗ ಇವನ ಮೂಲಕ ಯಜ್ಞವನ್ನು ಮಾಡು. ಹರಿಶ್ಚಂದ್ರನೆಂದನು – ಈಗ ನಿನ್ನ ಈ ಯಜ್ಞಪಶುವು (ರೋಹಿತನು) ಹತ್ತುದಿವಸಗಳು ತುಂಬಿದಾಗ ಇವನು ಯಜ್ಞಕ್ಕೆ ಯೋಗ್ಯನಾಗುತ್ತಾನೆ. ॥ ೧೦ ॥ ಹತ್ತು ದಿವಸಗಳು ಕಳೆದಾಗ ವರುಣನು ಪುನಃ ಬಂದು – 'ಈಗ ನನ್ನ ಯಜ್ಞವನ್ನು ಮಾಡು' ಎಂದು ಹೇಳಿದನು. ಆಗ ಹರಿಶ್ಚಂದ್ರನು – ನಿನ್ನ ಯಜ್ಞಪಶುವಿಗೆ ಹಲ್ಲುಗಳು ಹುಟ್ಟಿದಾಗ ಅವನು ಯಜ್ಞಕ್ಕೆ ಯೋಗ್ಯನಾಗುತ್ತಾನೆ' ಎಂದನು. ॥ ೧೧ ॥ ರೋಹಿತನಿಗೆ ಹಲ್ಲುಹುಟ್ಟಿದಾಗ ವರುಣನೆಂದನು – ರಾಜಾ! ಈಗ ಇವನಿಗೆ ಹಲ್ಲುಗಳು ಹುಟ್ಟಿರುವುವು. ಈಗ ಯಜ್ಞಮಾಡು. ಹರಿಶ್ಚಂದ್ರನೆಂದ – ಇವನ ಹಾಲುಹಲ್ಲುಗಳು ಬಿದ್ದುಹೋದಾಗ ಇವನು ಯಜ್ಞಕ್ಕೆ ಯೋಗ್ಯನಾಗುವನು. ॥ ೧೨ ॥ ಹಾಲುಹಲ್ಲುಗಳು ಬಿದ್ದುಹೋದಾಗ ವರುಣನು ಬಂದು – ಈಗ ಹಾಲುಹಲ್ಲುಗಳು ಬಿದ್ದುಹೋಗಿವೆ, ನನ್ನ ಯಜ್ಞವನ್ನು ಮಾಡು ಎಂದು ಹೇಳಿದನು. ಹರಿಶ್ಚಂದ್ರನೆಂದ – ಇವನಿಗೆ ಎರಡನೆಯ ಬಾರಿ ಹಲ್ಲುಗಳು ಬಂದಾಗ ಈ ಪಶುವು ಯಜ್ಞಕ್ಕೆ ಯೋಗ್ಯನಾದಾನು. ॥ ೧೩ ॥

ಪುನರ್ಜಾತಾ ಯಜಸ್ವೇತಿ ಸ ಪ್ರತ್ಯಾಹಾಥ ಸೋಽಬ್ರವೀತ್ ।
ಸಾನ್ನಾಹಿಕೋ ಯದಾ ರಾಜನ್ರಾಜನ್ಯೋಽಥ ಪಶುಃ ಶುಚಿಃ ॥ ೧೪ ॥

ಇತಿ ಪುತ್ರಾನುರಾಗೇಣ ಸ್ನೇಹಯಂತ್ರಿತಚೇತಸಾ ।
ಕಾಲಂ ವಂಚಯತಾ ತಂ ತಮುಕ್ತೋ ದೇವಸ್ತಮೈಕ್ಷತ ॥ ೧೫ ॥

ರೋಹಿತಸ್ತದಭಿಜ್ಞಾಯ ಪಿತುಃ ಕರ್ಮ ಚಿಕೀರ್ಷಿತಮ್ ।
ಪ್ರಾಣಪ್ರೇಪ್ಸುರ್ಧನುಷ್ಪಾಣಿರರಣ್ಯಂ ಪ್ರತ್ಯಪದ್ಯತ ॥ ೧೬ ॥

ಪಿತರಂ ವರುಣಗ್ರಸ್ತಂ ಶ್ರುತ್ವಾ ಜಾತಮಹೋದರಮ್ ।
ರೋಹಿತೋ ಗ್ರಾಮಮೇಯಾಯ ತಮಿಂದ್ರಃ ಪ್ರತ್ಯಷೇಧತ ॥ ೧೭ ॥

ಭೂಮೇಃ ಪರ್ಯಟನಂ ಪುಣ್ಯಂ ತೀರ್ಥಕ್ಷೇತ್ರನಿಷೇವಣೈಃ ।
ರೋಹಿತಾಯಾದಿಶಚ್ಛಕ್ರಃ ಸೋಽಪ್ಯರಣ್ಯೇಽವಸತ್ಸಮಾಮ್ ॥ ೧೮ ॥

ಏವಂ ದ್ವಿತೀಯೇ ತೃತೀಯೇ ಚತುರ್ಥೇ ಪಂಚಮೇ ತಥಾ ।
ಅಭ್ಯೇತ್ಯಾಭ್ಯೇತ್ಯ ಸ್ಥವಿರೋ ವಿಪ್ರೋ ಭೂತ್ವಾಽಽಹ ವೃತ್ರಹಾ ॥ ೧೯ ॥

ಷಷ್ಠಂ ಸಂವತ್ಸರಂ ತತ್ರ ಚರಿತ್ವಾ ರೋಹಿತಃ ಪುರೀಮ್ ।
ಉಪವ್ರಜನ್ನಜೀಗರ್ತಾದಕ್ರೀಣಾನ್ಮಧ್ಯಮಂ ಸುತಮ್ ॥ ೨೦ ॥

ಶುನಃಶೇಪಂ ಪಶುಂ ಪಿತ್ರೇ ಪ್ರದಾಯ ಸಮವಂದತ ।
ತತಃ ಪುರುಷಮೇಧೇನ ಹರಿಶ್ಚಂದ್ರೋ ಮಹಾಯಶಾಃ ॥ ೨೧ ॥

ಮುಕ್ತೋದರೋಽಯಜದ್ದೇವಾನ್ವರುಣಾದೀನ್ಮಹತ್ಕಥಃ ।
ವಿಶ್ವಾಮಿತ್ರೋಽಭವತ್ತಸ್ಮಿನ್ಹೋತಾ ಚಾಧ್ವರ್ಯುರಾತ್ಮವಾನ್ ॥ ೨೨ ॥

ಜಮದಗ್ನಿರಭೂದ್ಬ್ರಹ್ಮಾ ವಸಿಷ್ಠೋಽಯಾಸ್ಯಃ ಸಾಮಗಃ ।
ತಸ್ಮೈ ತುಷ್ಟೋ ದದಾವಿಂದ್ರಃ ಶಾತಕೌಂಭಮಯಂ ರಥಮ್ ॥ ೨೩ ॥

ಶುನಃಶೇಪಸ್ಯ ಮಾಹಾತ್ಮ್ಯಮುಪರಿಷ್ಟಾತ್ಪ್ರಚಕ್ಷ್ಯತೇ ।
ಸತ್ಯಸಾರಾಂ ಧೃತಿಂ ದೃಷ್ಟ್ವಾ ಸಭಾರ್ಯಸ್ಯ ಚ ಭೂಪತೇಃ ॥ ೨೪ ॥

ಎರಡನೆಯ ಸಲ ಹಲ್ಲುಗಳು ಹುಟ್ಟಿದಾಗ ವರುಣನು ಬಂದು – 'ಈಗ ನನ್ನ ಯಜ್ಞವನ್ನು ಮಾಡು' ಎಂದು ಹೇಳಿದನು. ಹರಿಶ್ಚಂದ್ರನು – ವರುಣದೇವನೇ! ಕ್ಷತ್ರಿಯಪಶುವು ಕವಚ ಧರಿಸಲು ಯೋಗ್ಯನಾದಾಗ ಯಜ್ಞಕ್ಕೆ ಯೋಗ್ಯನಾಗುತ್ತಾನಲ್ಲ! ॥ ೧೪ ॥ ಪರೀಕ್ಷಿತನೇ! ಹೀಗೆ ಹರಿಶ್ಚಂದ್ರರಾಜನು ಪುತ್ರವ್ಯಾಮೋಹದಿಂದಾಗಿ ಅನಿಯಂತ್ರಿತವಾದ ಬುದ್ಧಿಯಿಂದ ಇಲ್ಲಸಲ್ಲದ ಕುಂಟುನೆಪಗಳನ್ನು ಹೇಳುತ್ತಾ ಕಾಲವನ್ನು ಕಳೆಯುತ್ತಿದ್ದನು. ವರುಣನೂ ಅವನು ಹೇಳಿದಂತೆ ಕಾಲವನ್ನು ಎದುರು ನೋಡುತ್ತಿದ್ದನು. ॥ ೧೫ ॥ ತಂದೆಯವರು ನನ್ನನ್ನು ಯಜ್ಞಪಶುವನ್ನಾಗಿ ಯಜ್ಞಮಾಡಲು ಬಯಸುವರೆಂಬುದನ್ನು ತಿಳಿದ ರೋಹಿತನು ಆತ್ಮರಕ್ಷಣೆಗಾಗಿ ಕೈಯಲ್ಲಿ ಧನುರ್ಬಾಣಗಳನ್ನು ಧರಿಸಿಕೊಂಡು ಅರಣ್ಯಕ್ಕೆ ಹೊರಟುಹೋದನು. ॥ ೧೬ ॥ ಕೆಲವು ದಿನಗಳ ಬಳಿಕ – ವರುಣದೇವನು ಕುಪಿತನಾಗಿ ನನ್ನ ತಂದೆಯನ್ನು ಆಕ್ರಮಿಸಿರುವನು. ಅದರಿಂದ ಪಿತನು ಜಲೋದರ ರೋಗದಿಂದ ಪೀಡಿತನಾಗಿದ್ದಾನೆ ಎಂದು ತಿಳಿದ ರೋಹಿತನು ತನ್ನ ನಗರಕ್ಕೆ ಹೊರಟನು. ಆದರೆ ಇಂದ್ರನು ಬಂದು ಅವನನ್ನು ತಡೆದುಬಿಟ್ಟನು. ೧೭ . ಇಂದ್ರನು ಹೇಳಿದನು – ಮಗೂ ರೋಹಿತ! ಯಜ್ಞಪಶುವಾಗಿ ಸಾಯುವುದಕ್ಕಿಂತ ಪವಿತ್ರ ತೀರ್ಥ-ಕ್ಷೇತ್ರಗಳನ್ನು ಸೇವಿಸುತ್ತಾ ಪೃಥಿವಿಯಲ್ಲಿ ಸಂಚರಿಸುವುದು ಶ್ರೇಷ್ಠವಾಗಿದೆ. ಇಂದ್ರನ ಮಾತನ್ನು ಮನ್ನಿಸಿ ಅದನ್ನು ಒಂದು ವರ್ಷಕಾಲ ಮತ್ತೆ ವನದಲ್ಲೇ ಇದ್ದನು. ॥ ೧೮ ॥ ಹೀಗೆಯೇ ಎರಡನೆಯ, ಮೂರನೆಯ, ನಾಲ್ಕನೆಯ, ಐದನೆಯ ವರ್ಷಗಳಲ್ಲಿಯೂ ರೋಹಿತನು ತಂದೆಯ ಬಳಿಗೆ ಹೋಗುವ ವಿಚಾರ ಮಾಡಿದನು. ಆದರೆ ಪ್ರತಿಸಲವೂ ವೃದ್ಧಬ್ರಾಹ್ಮಣನಾಗಿ ಇಂದ್ರನು ಬಂದು ಅವನನ್ನು ತಡೆಯುತ್ತಿದ್ದನು. ॥ ೧೯ ॥ ಹೀಗೆ ಆರು ವರ್ಷಗಳ ಕಾಲ ರೋಹಿತನು ಕಾಡಿನಲ್ಲೇ ಇದ್ದನು. ಏಳನೆಯ ವರ್ಷದಲ್ಲಿ ಅವನು ತನ್ನ ನಗರಕ್ಕೆ ಹೊರಟಾಗ ಅಜೀಗರ್ತನಿಂದ ಅವನ ನಡುವಣ ಪುತ್ರ ಶುನಃಶೇಪನನ್ನು ಹಣಕೊಟ್ಟು ಪಡೆದು ಅವನನ್ನು ಯಜ್ಞಪಶುವನ್ನಾಗಿಸಲು ತನ್ನ ತಂದೆಗೆ ಒಪ್ಪಿಸಿ, ಅವನ ಚರಣಗಳಿಗೆ ವಂದಿಸಿಕೊಂಡನು. ಪರಮ ಯಶೋವಂತನೂ, ಶ್ರೇಷ್ಠ ಚರಿತ್ರವುಳ್ಳವನೂ ಆದ ಹರಿಶ್ಚಂದ್ರನು ಮಹೋದರ ರೋಗದಿಂದ ಬಿಡುಗಡೆಹೊಂದಲು ಪುರುಷಮೇಧದ ಮೂಲಕ ವರುಣನೇ ಮೊದಲಾದ ದೇವತೆಗಳ ಯಜ್ಞವನ್ನು ಮಾಡಿದನು. ಆ ಯಜ್ಞದಲ್ಲಿ ವಿಶ್ವಾಮಿತ್ರರು ಹೋತೃಗಳಾಗಿದ್ದರು. ಪರಮ ಸಂಯಮಿ ಜಮದಗ್ನಿಯು ಅಧ್ವರ್ಯು ಆಗಿದ್ದನು. ವಸಿಷ್ಠರು ಬ್ರಹ್ಮನ ಕೆಲಸ ನಿರ್ವಹಿಸಿದರು. ಅಯಾಸ್ಯ ಮುನಿಯು ಸಾಮಗಾನ ಮಾಡುವ ಉದ್ಗಾತೃವಾದನು. ಆ ಸಮಯದಲ್ಲಿ ಇಂದ್ರನು ಪ್ರಸನ್ನನಾಗಿ ಹರಿಶ್ಚಂದ್ರನಿಗೆ ಒಂದು ಚಿನ್ನದ ರಥವನ್ನು ಕೊಟ್ಟಿದ್ದನು. ॥ ೨೦-೨೩ ॥

ಪರೀಕ್ಷಿತನೇ! ಮುಂದೆ ನಾನು ನಿನಗೆ ಶುನಃಶೇಪನ ಮಹಾತ್ಮ್ಯೆಯನ್ನು ವರ್ಣಿಸುವೆನು. ಹರಿಶ್ಚಂದ್ರನು ತನ್ನ ಪತ್ನಿಯೊಡನೆ ಸತ್ಯನಿಷ್ಠೆಯಲ್ಲಿ ದೃಢವಾಗಿ ಇರುವುದನ್ನು ಕಂಡು ವಿಶ್ವಾಮಿತ್ರರು ಬಹಳ ಸಂತೋಷಗೊಂಡು ಅವನಿಗೆ ಎಂದೂ ನಾಶವಾಗದಿರುವ ಜ್ಞಾನವನ್ನು ಉಪದೇಶಿಸಿದರು. ಆ ಜ್ಞಾನದಿಂದಾಗಿ ಹರಿಶ್ಚಂದ್ರನು ತನ್ನ

ವಿಶ್ವಾಮಿತ್ರೋ ಭೃಶಂ ಪ್ರೀತೋ ದದಾವವಿಹತಾಂ ಗತಿಮ್ ।
ಮನಃ ಪೃಥಿವ್ಯಾಂ ತಾಮದ್ಭಿಸ್ತೇಜಸಾಪೋಽನಿಲೇನ ತತ್
॥ ೨೫ ॥

ಖೇ ವಾಯುಂ ಧಾರಯಂಸ್ತಚ್ಚ ಭೂತಾದೌ ತಂ ಮಹಾತ್ಮನಿ ।
ತಸ್ಮಿನ್ ಜ್ಞಾನಕಲಾಂ ಧ್ಯಾತ್ವಾ ತಯಾಜ್ಞಾನಂ ವಿನಿರ್ದಹನ್
॥ ೨೬ ॥

ಹಿತ್ವಾ ತಾಂ ಸ್ವೇನ ಭಾವೇನ ನಿರ್ವಾಣಸುಖಸಂವಿದಾ ।
ಅನಿರ್ದೇಶ್ಯಾಪ್ರತರ್ಕ್ಯೇಣ ತಸ್ಥೌ ವಿಧ್ವಸ್ತ ಬಂಧನಃ
॥ ೨೭ ॥

ಮನವನ್ನು ಪೃಥಿವಿಯಲ್ಲೂ, ಪೃಥಿವಿಯನ್ನು ಜಲದಲ್ಲೂ, ಜಲವನ್ನು ತೇಜದಲ್ಲೂ, ತೇಜವನ್ನು ವಾಯುವಿನಲ್ಲೂ, ವಾಯುವನ್ನು ಆಕಾಶದಲ್ಲಿಯೂ ನೆಲೆಗೊಳಿಸಿ, ಆಕಾಶವನ್ನು ಅಹಂಕಾರದಲ್ಲಿ ಲೀನಗೊಳಿಸಿದನು. ಮತ್ತೆ ಅಹಂಕಾರವನ್ನು ಮಹತ್ತತ್ತ್ವದಲ್ಲಿ ಲೀನಗೊಳಿಸಿ ಅದರಲ್ಲಿ ಜ್ಞಾನ-ಕಲೆಯ ಧ್ಯಾನಮಾಡುತ್ತಾ ಅದರಿಂದ ಅಜ್ಞಾನವನ್ನು ಭಸ್ಮವಾಗಿಸಿ ಬಿಟ್ಟನು. ॥ ೨೪-೨೬ ॥ ಇದಾದ ಬಳಿಕ ನಿರ್ವಾಣ-ಸುಖದ ಅನುಭೂತಿಯಿಂದ ಆ ಜ್ಞಾನ-ಕಲೆಯನ್ನೂ ಪರಿತ್ಯಾಗಮಾಡಿ, ಸಮಸ್ತ ಬಂಧನಗಳಿಂದ ಮುಕ್ತನಾಗಿ ಅವನು – ನಿರ್ದೇಶಿಸುವುದಕ್ಕಾಗಲೀ, ಊಹಿಸುವುದಕ್ಕಾಗಲೀ ಸಾಧ್ಯವಾಗದ ಪರಮಾನಂದ ಮಯವಾದ ಸ್ವಸ್ವರೂಪದಲ್ಲಿ ನೆಲೆಗೊಂಡನು. ॥ ೨೭ ॥

ಏಳನೆಯ ಅಧ್ಯಾಯವು ಮುಗಿಯಿತು. ॥ ೭ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ನವಮ ಸ್ಕಂಧೇ
ಹರಿಶ್ಚಂದ್ರೋಪಾಖ್ಯಾನಂ ನಾಮ ಸಪ್ತಮೋಽಧ್ಯಾಯಃ ॥ ೭ ॥

ಎಂಟನೆಯ ಅಧ್ಯಾಯ

ಸಗರನ ಚರಿತ್ರೆ

ಶ್ರೀಶುಕ ಉವಾಚ

ಹರಿತೋ ರೋಹಿತಸುತಶ್ಚಂಪಸ್ತಸ್ಮಾದ್ವಿನಿರ್ಮಿತಾ ।
ಚಂಪಾಪುರೀ ಸುದೇವೋಽತೋ ವಿಜಯೋ ಯಸ್ಯ ಚಾತ್ಮಜಃ
॥ ೧ ॥

ಭರುಕಸ್ತತ್ಸುತಸ್ತಸ್ಮಾದ್ವೃಕಸ್ತಸ್ಯಾಪಿ ಬಾಹುಕಃ ।
ಸೋಽರಿಭಿರ್ಹೃತಭೂ ರಾಜಾ ಸಭಾರ್ಯೋ ವನಮಾವಿಶತ್
॥ ೨ ॥

ವೃದ್ಧಂ ತಂ ಪಂಚತಾಂ ಪ್ರಾಪ್ತಂ ಮಹಿಷ್ಯನು ಮರಿಷ್ಯತೀ ।
ಔರ್ವೇಣ ಜಾನತಾಽಽತ್ಮಾನಂ ಪ್ರಜಾವಂತಂ ನಿವಾರಿತಾ
॥ ೩ ॥

ಆಜ್ಞಾಯಾಸ್ಯೈ ಸಪತ್ನೀಭಿರ್ಗರೋ ದತ್ತೋಽಂಧಸಾ ಸಹ ।
ಸಹ ತೇನೈವ ಸಂಜಾತಃ ಸಗರಾಖ್ಯೋ ಮಹಾಯಶಾಃ
॥ ೪ ॥

ಸಗರಃ ಚಕ್ರವರ್ತ್ಯಾಸೀತ್ಸಾಗರೋ ಯತ್ಸುತೈಃ ಕೃತಃ ।
ಯಸ್ತಾಲಜಂಘಾನ್ಯವನಾಂಛಕಾನ್ ಹೈಹಯಬರ್ಬರಾನ್
॥ ೫ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಎಲೈ ಪರೀಕ್ಷಿತನೇ ! ಹರಿಶ್ಚಂದ್ರನ ಮಗ ರೋಹಿತನಿಗೆ ಹರಿತನೆಂಬ ಮಗನಿದ್ದನು. ಹರಿತನ ಮಗ ಚಂಪ. ಇವನೇ ಚಂಪಾಪುರಿಯನ್ನು ನಿರ್ಮಿಸಿದನು. ಚಂಪನಿಂದ ಸುದೇವ, ಅವನ ಪುತ್ರ ವಿಜಯನಾದನು. ॥ ೧ ॥ ವಿಜಯನ ಮಗ ಭರುಕ, ಭರುಕನಿಂದ ವೃಕ, ವೃಕನಿಂದ ಬಾಹುಕನು ಹುಟ್ಟಿದನು. ಶತ್ರುಗಳು ಬಾಹುಕನಿಂದ ರಾಜ್ಯವನ್ನು ವಶಪಡಿಸಿಕೊಂಡಾಗ ಅವನು ತನ್ನ ಪತ್ನಿಯೊಂದಿಗೆ ಕಾಡಿಗೆ ಹೊರಟು ಹೋದನು. ॥ ೨ ॥ ಕಾಡಿಗೆ ಹೋಗಿ ವೃದ್ಧಾಪ್ಯದಿಂದಾಗಿ ಬಾಹುಕನ ಮೃತ್ಯುವಾದಾಗ ಅವನ ಪತ್ನಿಯೂ ಅವನೊಂದಿಗೆ ಸಹಗಮನಕ್ಕೆ ಸಿದ್ಧಳಾದಳು. ಆದರೆ ಇವಳು ಗರ್ಭಿಣಿ ಎಂದು ಮಹರ್ಷಿ ಔರ್ವನಿಗೆ ತಿಳಿದಿತ್ತು. ಅದರಿಂದಾಗಿ ಅವನು ಅವಳನ್ನು ಸಹಗಮನದಿಂದ ತಡೆದನು. ॥ ೩ ॥ ಅವಳ ಸವತಿಯರಿಗೆ ಈ ಮಾತು ತಿಳಿದಾಗ ಅವರು ಅವಳಿಗೆ ಊಟದೊಂದಿಗೆ ಗರ (ವಿಷ) ವನ್ನು ತಿನ್ನಿಸಿದರು. ಆದರೆ ಆ ವಿಷವು ಗರ್ಭದ ಮೇಲೆ ಯಾವ ಪ್ರಭಾವವನ್ನೂ ಬೀರದೆ ಆ ವಿಷದೊಂದಿಗೆ ಬಾಲಕನ ಜನ್ಮವಾಯಿತು. ಗರ(ವಿಷ)ದೊಂದಿಗೆ ಹುಟ್ಟಿದ ಕಾರಣದಿಂದ ಅವನು 'ಸಗರ' ನೆಂದು ವಿಖ್ಯಾತನಾದನು. ಸಗರನು ಮಹಾಯಶೋವಂತ ರಾಜನಾದನು. ॥ ೪ ॥

ಸಗರನು ಚಕ್ರವರ್ತಿ, ಸಾಮ್ರಾಟನಾಗಿದ್ದನು. ಅವನ ಪುತ್ರರೇ ನೆಲವನ್ನು ಅಗೆದು ಸಮುದ್ರವನ್ನು ನಿರ್ಮಿಸಿದ್ದರು. ಸಗರನು ತನ್ನ ಗುರುವಾದ ಔರ್ವನ ಆಜ್ಞೆಯನ್ನು ಗೌರವಿಸಿ, ತಾಲಜಂಘ, ಯವನ, ಶಕ, ಹೈಹಯ, ಬರ್ಬರ ಮುಂತಾದ ಜಾತಿಯವರನ್ನು

ನಾವಧೀದ್ಗುರುವಾಕ್ಯೇನ ಚಕ್ರೇ ವಿಕೃತವೇಷಿಣಃ ।
ಮುಂಡಾಂಛ್ಮಶ್ರುಧರಾನ್ಕಾಂಶ್ಚಿನ್ಮುಕ್ತಕೇಶಾರ್ಧಮುಂಡಿತಾನ್ ॥ ೬ ॥

ಅನಂತರ್ವಾಸಸಃ ಕಾಂಶ್ಚಿದಬಹಿರ್ವಾಸಸೋಽಪರಾನ್ ।
ಸೋಽಶ್ವಮೇಧೈರಯಜತ ಸರ್ವವೇದಸುರಾತ್ಮಕಮ್ ॥ ೭ ॥

ಔರ್ವೋಪದಿಷ್ಟಯೋಗೇನ ಹರಿಮಾತ್ಮಾನಮೀಶ್ವರಮ್ ।
ತಸ್ಯೋತ್ಸೃಷ್ಟಂ ಪಶುಂ ಯಜ್ಞೇ ಜಹಾರಾಶ್ವಂ ಪುರಂದರಃ ॥ ೮ ॥

ಸುಮತ್ಯಾಸ್ತನಯಾ ದೃಪ್ತಾಃ ಪಿತುರಾದೇಶಕಾರಿಣಃ ।
ಹಯಮನ್ವೇಷಮಾಣಾಸ್ತೇ ಸಮಂತಾನ್ನ್ಯಖನನ್ಮಹೀಮ್ ॥ ೯ ॥

ಪ್ರಾಗುದೀಚ್ಯಾಂ ದಿಶಿ ಹಯಂ ದದೃಶುಃ ಕಪಿಲಾಂತಿಕೇ ।
ಏಷ ವಾಜಿಹರಶ್ಚೌರ ಆಸ್ತೇ ಮೀಲಿತಲೋಚನಃ ॥ ೧೦ ॥

ಹನ್ಯತಾಂ ಹನ್ಯತಾಂ ಪಾಪ ಇತಿ ಷಷ್ಟಿಸಹಸ್ರಿಣಃ ।
ಉದಾಯುಧಾ ಅಭಿಯಯುರುನ್ಮಿಮೇಷ ತದಾ ಮುನಿಃ ॥ ೧೧ ॥

ಸ್ವಶರೀರಾಗ್ನಿನಾ ತಾವನ್ಮಹೇಂದ್ರಹೃತಚೇತಸಃ ।
ಮಹದ್ವ್ಯತಿಕ್ರಮಹತಾ ಭಸ್ಮಸಾದಭವನ್ ಕ್ಷಣಾತ್ ॥ ೧೨ ॥

ನ ಸಾಧುವಾದೋ ಮುನಿಕೋಪಭರ್ಜಿತಾ
ನೃಪೇಂದ್ರಪುತ್ರಾ ಇತಿ ಸತ್ತ್ವಧಾಮನಿ ।
ಕಥಂ ತಮೋ ರೋಷಮಯಂ ವಿಭಾವ್ಯತೇ
ಜಗತ್ಪವಿತ್ರಾತ್ಮನಿ ಖೇ ರಜೋ ಭುವಃ ॥ ೧೩ ॥

ಯಸ್ಯೇರಿತಾ ಸಾಂಖ್ಯಮಯೀ ದೃಢೇಹ ನೌ-
ರ್ಯಯಾ ಮುಮುಕ್ಷುಸ್ತರತೇ ದುರತ್ಯಯಮ್ ।
ಭವಾರ್ಣವಂ ಮೃತ್ಯುಪಥಂ ವಿಪಶ್ಚಿತಃ
ಪರಾತ್ಮಭೂತಸ್ಯ ಕಥಂ ಪೃಥಙ್ಮತಿಃ ॥ ೧೪ ॥

ವಧಿಸಲಿಲ್ಲ. ಅವರ ರೂಪವನ್ನು ವಿರೂಪಗೊಳಿಸಿದನು. ಅವರಲ್ಲಿ ಕೆಲವರು ತಲೆಯನ್ನು ಬೋಳಿಸಿದರು. ಕೆಲವರು ತಲೆ ಬೋಳಿಸಿ, ಗಡ್ಡ-ಮೀಸೆ ಹಾಗೆ ಬಿಟ್ಟರು. ಕೆಲವರು ಕೂದಲನ್ನು ಹಾಗೇ ಬಿಟ್ಟರು. ಕೆಲವರು ಅರ್ಧ ತಲೆ ಬೋಳಿಸಿದ್ದರು. ॥ ೫-೬ ॥ ಕೆಲವು ಜನರಿಗೆ ಸಗರನು ಬಟ್ಟೆಯನ್ನು ಉಡದೇ ಕೇವಲ ಹೊದೆಯಲು ಅನುಮತಿ ನೀಡಿದನು. ಕೆಲವರಿಗೆ ಬಟ್ಟೆಯನ್ನು ಹೊದದುಕೊಳ್ಳದೆ ಕೇವಲ ಕೌಪೀನ ಮಾತ್ರ ಉಡಲು ಹೇಳಿದನು. ಇದಾದ ಬಳಿಕ ಸಗರ ಚಕ್ರವರ್ತಿಯು ಔರ್ವ ಋಷಿಯ ಉಪದೇಶದಂತೆ ಅಶ್ವಮೇಧ ಯಜ್ಞದ ಮೂಲಕ ಸಂಪೂರ್ಣ ವೇದ ಹಾಗೂ ದೇವತಾಮಯ, ಆತ್ಮಸ್ವರೂಪ, ಸರ್ವಶಕ್ತಿವಂತ ಭಗವಂತನನ್ನು ಆರಾಧಿಸಿದನು. ಅವನ ಯಜ್ಞದಲ್ಲಿ ಬಿಟ್ಟಿದ್ದ ಕುದುರೆಯನ್ನು ಇಂದ್ರನು ಕದ್ದೊಯ್ದನು. ॥ ೭-೮ ॥ ಆ ಸಮಯದಲ್ಲಿ ಮಹಾರಾಣಿ ಸುಮತಿಯ ಗರ್ಭದಿಂದ ಹುಟ್ಟಿದ ಸಗರಪುತ್ರರು ತಮ್ಮ ತಂದೆಯ ಆಜ್ಞೆಯಂತೆ ಕುದುರೆಗಾಗಿ ಇಡೀ ಪೃಥಿವಿಯನ್ನು ಜಾಲಾಡಿದರು. ಅವರಿಗೆ ಕುದುರೆಯು ಎಲ್ಲಿಯೂ ಸಿಗದಿದ್ದಾಗ ಗರ್ವಿಷ್ಠರಾಗಿದ್ದ ಅವರು ಎಲ್ಲ ಕಡೆಯಲ್ಲಿ ಭೂಮಿಯನ್ನು ಅಗೆದುಹಾಕಿದರು. ॥ ೯ ॥ ಅಗೆಯುತ್ತಾ-ಅಗೆಯುತ್ತಾ ಅವರಿಗೆ ಈಶಾನ್ಯದಿಕ್ಕಿನಲ್ಲಿ ತಪಸ್ಸು ಮಾಡುತ್ತಿದ್ದ ಕಪಿಲರ ಬಳಿಯಲ್ಲಿ ತಮ್ಮ ಯಜ್ಞಾಶ್ವವು ಕಂಡುಬಂತು. ಕುದುರೆಯನ್ನು ನೋಡುತ್ತಲೇ ಅರವತ್ತುಸಾವಿರ ರಾಜಕುಮಾರರು ಶಸ್ತ್ರಗಳನ್ನೆತ್ತಿಕೊಂಡು ಇವನೇ ನಮ್ಮ ಕುದುರೆಯನ್ನು ಕದ್ದಿರುವ ಕಳ್ಳನೆಂದು ಹೇಳುತ್ತಾ ಅವರತ್ತ ಓಡಿದರು. ನೋಡಿರಲ್ಲ, ಇವನು ಕಣ್ಣುಮುಚ್ಚಿಕೊಂಡಿರುವನು. ಇವನು ಪಾಪಿಯಾಗಿದ್ದಾನೆ. ಇವನನ್ನು ಕೊಂದುಬಿಡಿ, ಕೊಂದುಬಿಡಿ ಎಂದು ಕೂಗಿಕೊಂಡರು. ಆಗಲೇ ಕಪಿಲಮುನಿಯು ಕಣ್ಣು ಬಿಟ್ಟನು. ॥ ೧೦-೧೧ ॥ ಇಂದ್ರನು ರಾಜಕುಮಾರರ ಬುದ್ಧಿಯನ್ನು ಅಪಹರಿಸಿದ್ದನು. ಇದರಿಂದ ಅವರು ಕಪಿಲಮುನಿಯಂತಹ ಮಹಾಪುರುಷರನ್ನು ತಿರಸ್ಕರಿಸಿದ್ದರು. ಈ ತಿರಸ್ಕಾರದಿಂದಾಗಿ ಅವರ ಶರೀರಗಳಲ್ಲಿ ಬೆಂಕಿ ಉರಿಯತೊಡಗಿ ಕ್ಷಣಾರ್ಧದಲ್ಲಿ ಅವರೆಲ್ಲರೂ ಸುಟ್ಟು ಬೂದಿಯಾಗಿ ಬಿಟ್ಟರು. ॥ ೧೨ ॥ ಪರೀಕ್ಷಿತನೇ! ಸಗರ ಪುತ್ರರು ಕಪಿಲಮುನಿಯ ಕ್ರೋಧಾಗ್ನಿಯಿಂದ ಸುಟ್ಟುಹೋದರು ಎಂದು ಹೇಳುವುದು ಉಚಿತವಾಗಲಾರದು. ಕಪಿಲರಾದರೋ ಶುದ್ಧ ಸತ್ತ್ವಗುಣಕ್ಕೆ ಪರಮಾಶ್ರಯರಾಗಿದ್ದರು. ಅವರ ಶರೀರವು ಪ್ರಪಂಚವನ್ನೇ ಪವಿತ್ರಗೊಳಿಸುವಂತಹುದು. ಅಂತಹವರಲ್ಲಿ ತಮೋಭೂತವಾದ ಕ್ರೋಧವಿರುವುದೆಂದು ಭಾವಿಸಲು ಹೇಗೆ ತಾನೇ ಸಾಧ್ಯವಾಗುತ್ತದೆ? ಭೂಮಿಯಲ್ಲಿರುವ ಧೂಳಿನೊಡನೆ ಆಕಾಶದ ಸಂಬಂಧವೇನಾದರೂ ಇರುತ್ತದೆಯೇ? ॥ ೧೩ ॥ ಈ ಸಂಸಾರ ಸಾಗರವು ಮೃತ್ಯುವಿನ ಮಾರ್ಗವಾಗಿದೆ. ಇದನ್ನು ದಾಟಿಹೋಗುವುದು ಅತ್ಯಂತ ಕಷ್ಟವಾಗಿದೆ. ಆದರೆ ಕಪಿಲಮುನಿಗಳು ಈ ಜಗತ್ತಿನಲ್ಲಿ ಸಾಂಖ್ಯಶಾಸ್ತ್ರದ ಒಂದು ದೃಢವಾದ ನೌಕೆಯನ್ನು ಸಿದ್ಧಮಾಡಿ ಕೊಟ್ಟಿರುವರು. ಮುಕ್ತಿಯ ಇಚ್ಛೆಯುಳ್ಳವರು ಯಾರೇ ಆಗಲಿ ಅದರ ಮೂಲಕ ಈ ಸಂಸಾರ ಸಮುದ್ರದಿಂದ ದಾಟಿ ಹೋಗಬಲ್ಲರು. ಅವರು ಕೇವಲ ಪರಮಜ್ಞಾನಿಗಳು ಮಾತ್ರವಾಗಿರದೆ ಸ್ವಯಂ ಪರಮಾತ್ಮನಾಗಿರುವನು. ಅವರಲ್ಲಿ ಈ ಶತ್ರು-ಮಿತ್ರವೆಂಬ ಭೇದಬುದ್ಧಿಯು ಹೇಗೆ ತಾನೇ ಇರಬಲ್ಲದು? ॥ ೧೪ ॥

ಯೋಽಸಮಂಜಸ ಇತ್ಯುಕ್ತಃ ಸ ಕೇಶಿನ್ಯಾ ನೃಪಾತ್ಮಜಃ ।
ತಸ್ಯ ಪುತ್ರೋಽಂಶುಮಾನ್ನಾಮ ಪಿತಾಮಹಹಿತೇ ರತಃ ॥ ೧೪ ॥

ಅಸಮಂಜಸ ಆತ್ಮಾನಂ ದರ್ಶಯನ್ನಸಮಂಜಸಮ್ ।
ಜಾತಿಸ್ಮರಃ ಪುರಾ ಸಂಗಾದ್ಯೋಗೀ ಯೋಗಾದ್ವಿಚಾಲಿತಃ ॥ ೧೫ ॥

ಆಚರನ್ಗರ್ಹಿತಂ ಲೋಕೇ ಜ್ಞಾತೀನಾಂ ಕರ್ಮ ವಿಪ್ರಿಯಮ್ ।
ಸರಯ್ವಾಂ ಕ್ರೀಡತೋ ಬಾಲಾನ್ಪ್ರಾಸ್ಯದುದ್ವೇಜಯಂಜನಮ್ ॥ ೧೬ ॥

ಏವಂವೃತ್ತಃ ಪರಿತ್ಯಕ್ತಃ ಪಿತ್ರಾ ಸ್ನೇಹಮಪೋಹ್ಯ ವೈ ।
ಯೋಗೈಶ್ವರ್ಯೇಣ ಬಾಲಾಂಸ್ತಾಂದರ್ಶಯಿತ್ವಾ ತತೋ ಯಯೌ ॥ ೧೭ ॥

ಅಯೋಧ್ಯಾವಾಸಿನಃ ಸರ್ವೇ ಬಾಲಕಾನ್ಪುನರಾಗತಾನ್ ।
ದೃಷ್ಟ್ವಾ ವಿಸಿಸ್ಮಿರೇ ರಾಜನ್ ರಾಜಾ ಚಾಪ್ಯನ್ವತಪ್ಯತ ॥ ೧೮ ॥

ಅಂಶುಮಾಂಶ್ಚೋದಿತೋ ರಾಜ್ಞಾ ತುರಂಗಾನ್ವೇಷಣೇ ಯಯೌ ।
ಪಿತೃವ್ಯಖಾತಾನುಪಥಂ ಭಸ್ಮಾಂತಿ ದದೃಶೇ ಹಯಮ್ ॥ ೧೯ ॥

ತತ್ರಾಸೀನಂ ಮುನಿಂ ವೀಕ್ಷ್ಯ ಕಪಿಲಾಖ್ಯಮಧೋಕ್ಷಜಮ್ ।
ಅಸ್ತೌತ್ಸಮಾಹಿತಮನಾಃ ಪ್ರಾಂಜಲಿಃ ಪ್ರಣತೋ ಮಹಾನ್ ॥ ೨೦ ॥

ಅಂಶುಮಾನುವಾಚ

ನ ಪಶ್ಯತಿ ತ್ವಾಂ ಪರಮಾತ್ಮನೋಽಜನೋ
ನ ಬುಧ್ಯತೇಽದ್ಯಾಪಿ ಸಮಾಧಿಯುಕ್ತಿಭಿಃ ।
ಕುತೋಽಪರೇ ತಸ್ಯ ಮನಃಶರೀರಧೀ-
ವಿಸರ್ಗಸೃಷ್ಟಾ ವಯಮಪ್ರಕಾಶಾಃ ॥ ೨೧ ॥

ಯೇ ದೇಹಭಾಜಸ್ತ್ರಿಗುಣಪ್ರಧಾನಾ
ಗುಣಾನ್ವಿಪಶ್ಯಂತ್ಯುತ ವಾ ತಮಶ್ಚ ।
ಯನ್ಮಾಯಯಾ ಮೋಹಿತಚೇತಸಸ್ತ್ವಾಂ
ವಿದುಃ ಸ್ವಸಂಸ್ಥಂ ನ ಬಹಿಃಪ್ರಕಾಶಾಃ ॥ ೨೨ ॥

ಸಗರನಿಗೆ ಕೇಶಿನೀ ಎಂಬ ಇನ್ನೊಬ್ಬ ಪತ್ನಿಯಿದ್ದಳು. ಅವಳ ಗರ್ಭದಲ್ಲಿ ಅಸಮಂಜಸನೆಂಬ ಪುತ್ರನು ಹುಟ್ಟಿದ್ದನು. ಅಸಮಂಜಸನ ಪುತ್ರನ ಹೆಸರು ಅಂಶುಮಾನ್ ಎಂದಿತ್ತು. ಅವನು ತನ್ನ ಅಜ್ಜನಾದ ಸಗರನ ಆದೇಶಗಳನ್ನು ಪಾಲಿಸುತ್ತಾ, ಅವನ ಸೇವೆಯಲ್ಲೇ ತೊಡಗಿರುತ್ತಿದ್ದನು. ॥ ೧೪ ॥ ಅಸಮಂಜಸನು ಹಿಂದಿನ ಜನ್ಮದಲ್ಲಿ ಯೋಗಿಯಾಗಿದ್ದನು. ಸಂಗದಿಂದಾಗಿ ಅವನು ಯೋಗದಿಂದ ವಿಚಲಿತನಾಗಿದ್ದನು. ಆದರೆ ಈಗಲೂ ಅವನಿಗೆ ಪೂರ್ವಜನ್ಮದ ಸ್ಮರಣೆ ಹಾಗೆಯೇ ಇತ್ತು. ಆದಕ್ಕಾಗಿ ಅವನು ಬಂಧು-ಬಾಂಧವರಿಗೆ ಮೆಚ್ಚುಗೆಯಾಗದ ಕೆಲಸಗಳನ್ನೇ ಮಾಡುತ್ತಿದ್ದನು. ಅವನು ಕೆಲವೊಮ್ಮೆ ಅತ್ಯಂತ ನಿಂದಿತ ಕರ್ಮಗಳನ್ನು ಮಾಡಿಬಿಡುತ್ತಿದ್ದನು ಮತ್ತು ತನ್ನನ್ನು ಹುಚ್ಚನಂತೆ ತೋರಿಸಿಕೊಳ್ಳುತ್ತಿದ್ದನು. ಆಡುತ್ತಿದ್ದ ಬಾಲಕರನ್ನು ಎತ್ತಿಕೊಂಡು ಸರಯೂನದಿಗೆ ಎಸೆದುಬಿಡುತ್ತಿದ್ದನು. ಇದರಿಂದ ಪ್ರಜೆಗಳು ಬಹಳವಾಗಿ ಉದ್ವೇಗಗೊಂಡರು. ॥ ೧೫-೧೬ ॥ ಕೊನೆಗೆ ಅವನ ಉಪಟಳವನ್ನು ಸಹಿಸಲಾರದೆ ಅವನ ತಂದೆಯು ಪುತ್ರಸ್ನೇಹವನ್ನು ತೊರೆದು ಅವನನ್ನು ಕಾಡಿಗಟ್ಟಿಬಿಟ್ಟನು. ಬಳಿಕ ಅಸಮಂಜಸನು ತನ್ನ ಯೋಗಬಲದಿಂದ ಸರಯೂನದಿಗೆ ಎಸೆದ ಎಲ್ಲ ಬಾಲಕರನ್ನೂ ಜೀವಂತಗೊಳಿಸಿ ತಂದೆಗೆ ತೋರಿಸಿದನು. ಮತ್ತೆ ಕಾಡಿಗೆ ಹೊರಟುಹೋದನು. ॥ ೧೭ ॥ ಅಯೋಧ್ಯೆಯ ನಾಗರಿಕರಿಗೆ – ತಮ್ಮ ಮಕ್ಕಳು ಜೀವಂತರಾಗಿ ಪುನಃ ಬಂದಿರುವುದನ್ನು ಕಂಡು ಪರಮಾಶ್ಚರ್ಯವಾಯಿತು. ಅಂತಹ ಯೋಗಿಯಾದ ಮಗನನ್ನು ಕಳೆದುಕೊಂಡುದಕ್ಕಾಗಿ ಸಗರನಿಗೂ ಪಶ್ಚಾತ್ತಾಪ ಉಂಟಾಯಿತು. ॥ ೧೮ ॥ ಇದಾದ ಬಳಿಕ ಸಗರನ ಅಪ್ಪಣೆಯಂತೆ ಅಂಶುಮಂತನು ಕುದುರೆಯನ್ನು ಹುಡುಕಲು ಹೊರಟನು. ಅವನು ತನ್ನ ಚಿಕ್ಕಪ್ಪಂದಿರು ಭೂಮಿಯನ್ನು ಅಗೆದು ನಿರ್ಮಿಸಿದ ಸಾಗರದ ತಟದಲ್ಲೇ ಮುಂದರಿಯುತ್ತಾ ಚಿಕ್ಕಪ್ಪಂದಿರ ಭಸ್ಮರಾಶಿಯನ್ನೂ, ಯಜ್ಞದ ಕುದುರೆಯನ್ನೂ ನೋಡಿದನು. ॥ ೧೯ ॥ ಅಲ್ಲೇ ಭಗವಂತನ ಅವತಾರನಾದ ಕಪಿಲಮುನಿಯು ಕುಳಿತಿದ್ದನು. ಅವರನ್ನು ನೋಡಿ ಉದಾರಹೃದಯಿಯಾದ ಅಂಶುಮಂತನು ಅವರ ಚರಣಗಳಲ್ಲಿ ವಂದಿಸಿ, ಕೈಜೋಡಿಸಿಕೊಂಡು ಏಕಾಗ್ರತೆಯಿಂದ ಸ್ತುತಿಸತೊಡಗಿದನು. ॥ ೨೦ ॥

ಅಂಶುಮಂತನು ಹೇಳಿದನು – ಭಗವಾನ್ ಕಪಿಲನೇ! ನೀನು ಅಜನ್ಮನಾದ ಬ್ರಹ್ಮನಿಗಿಂತಲೂ ಶ್ರೇಷ್ಠನಾಗಿರುವೆ. ಅದಕ್ಕಾಗಿಯೇ ಅವರು ನಿನ್ನನ್ನು ಪ್ರತ್ಯಕ್ಷವಾಗಿ ಕಾಣಲಾರರು. ಪ್ರತ್ಯಕ್ಷವಾಗಿ ನೋಡುವುದಿರಲಿ, ಸಮಾಧಿಯೋಗದಿಂದಲೂ, ಯೋಗವೇ ಮುಂತಾದ ಉಪಾಯಗಳಿಂದಲೂ ನಿನ್ನನ್ನು ಇಂದಿನವರೆಗೆ ತಿಳಿಯಲೂ ಆಗಲಿಲ್ಲ. ನಾವಾದರೋ ಅವರ ಮನ, ಶರೀರ, ಬುದ್ಧಿಯಿಂದ ಉಂಟಾಗುವ ಸೃಷ್ಟಿಯ ಮೂಲಕ ಹುಟ್ಟಿದ ಅಜ್ಞಾನೀ ಜೀವರಾಗಿದ್ದೇವೆ. ನಾವು ಹೇಗೆ ತಾನೇ ನಿನ್ನ ಸ್ವರೂಪವನ್ನು ತಿಳಿಯಬಲ್ಲೆವು? ॥ ೨೧ ॥ ಈ ಪ್ರಪಂಚದಲ್ಲಿರುವ ಶರೀರಧಾರಿಗಳೆಲ್ಲರೂ ಸತ್ತ್ವಗುಣ, ರಜೋಗುಣ ಅಥವಾ ತಮೋಗುಣ ಪ್ರಧಾನರಾಗಿದ್ದಾರೆ. ಅವರು ಜಾಗ್ರತ್ ಮತ್ತು ಸ್ವಪ್ನಾವಸ್ಥೆಯಲ್ಲಿ ಕೇವಲ ಗುಣಮಯ ಪದಾರ್ಥಗಳನ್ನು, ವಿಷಯಗಳನ್ನು ಹಾಗೂ ಸುಷುಪ್ತಿಯಲ್ಲಿ ತಮೋಮಯ ಅಜ್ಞಾನವನ್ನೇ ನೋಡುತ್ತಾರೆ. ನಿನ್ನ ಮಾಯೆಯಿಂದ

ತಂ ತ್ವಾಮಹಂ ಜ್ಞಾನಘನಂ ಸ್ವಭಾವ-
ಪ್ರಧ್ವಸ್ತಮಾಯಾಗುಣಭೇದಮೋಹೈಃ ।
ಸನಂದನಾದ್ಯೈರ್ಮುನಿಭಿರ್ವಿಭಾವ್ಯಂ
ಕಥಂ ಹಿ ಮೂಢಃ ಪರಿಭಾವಯಾಮಿ ॥ ೨೪ ॥

ಪ್ರಶಾಂತಮಾಯಾಗುಣಕರ್ಮಲಿಂಗ-
ಮನಾಮರೂಪಂ ಸದಸದ್ವಿಮುಕ್ತಮ್ ।
ಜ್ಞಾನೋಪದೇಶಾಯ ಗೃಹೀತದೇಹಂ
ನಮಾಮಹೇ ತ್ವಾಂ ಪುರುಷಂ ಪುರಾಣಮ್ ॥ ೨೫ ॥

ತ್ವನ್ಮಾಯಾರಚಿತೇ ಲೋಕೇ ವಸ್ತುಬುದ್ಧ್ಯಾ ಗೃಹಾದಿಷು ।
ಭ್ರಮಂತಿ ಕಾಮಲೋಭೇರ್ಷ್ಯಾಮೋಹವಿಭ್ರಾಂತಚೇತಸಃ ॥ ೨೬ ॥

ಅದ್ಯ ನಃ ಸರ್ವಭೂತಾತ್ಮನ್ಕಾಮಕರ್ಮೇಂದ್ರಿಯಾಶಯಃ ।
ಮೋಹಪಾಶೋ ದೃಢಶ್ಛಿನ್ನೋ ಭಗವಂಸ್ತವ ದರ್ಶನಾತ್ ॥ ೨೭ ॥

ಶ್ರೀಶುಕ ಉವಾಚ

ಇತ್ಥಂ ಗೀತಾನುಭಾವಸ್ತಂ ಭಗವಾನ್ಕಪಿಲೋ ಮುನಿಃ ।
ಅಂಶುಮಂತಮುವಾಚೇದಮನುಗೃಹ್ಯ ಧಿಯಾ ನೃಪ ॥ ೨೮ ॥

ಶ್ರೀಭಗವಾನುವಾಚ

ಅಶ್ವೋಽಯಂ ನೀಯತಾಂ ವತ್ಸ ಪಿತಾಮಹಪಶುಸ್ತವ ।
ಇಮೇ ಚ ಪಿತರೋ ದಗ್ಧಾ ಗಂಗಾಂಭೋಽರ್ಹಂತಿ ನೇತರತ್ ॥ ೨೯ ॥

ತಂ ಪರಿಕ್ರಮ್ಯ ಶಿರಸಾ ಪ್ರಸಾದ್ಯ ಹಯಮಾನಯತ್ ।
ಸಗರಸ್ತೇನ ಪಶುನಾ ಕ್ರತುಶೇಷಂ ಸಮಾಪಯತ್ ॥ ೩೦ ॥

ರಾಜ್ಯಮಂಶುಮತಿ ನ್ಯಸ್ಯ ನಿಃಸ್ಪೃಹೋ ಮುಕ್ತಬಂಧನಃ ।
ಔರ್ವೋಪದಿಷ್ಟಮಾರ್ಗೇಣ ಲೇಭೇ ಗತಿಮನುತ್ತಮಾಮ್ ॥ ೩೧ ॥

ಮೋಹಿತರಾಗಿರುವುದೇ ಇದಕ್ಕೆ ಕಾರಣವಾಗಿದೆ. ಅವರು ಬಹಿರ್ಮುಖರಾದ್ದರಿಂದ ಹೊರಗಿನ ವಸ್ತುಗಳನ್ನು ಮಾತ್ರ ನೋಡುತ್ತಾರೆ. ಆದರೆ ತಮ್ಮ ಹೃದಯದಲ್ಲಿ ನೆಲೆಸಿರುವ ನಿನ್ನನ್ನು ನೋಡಲಾರರು. ॥ ೨೩ ॥ ನೀನು ಜ್ಞಾನಘನನೂ, ಏಕರಸನೂ ಆಗಿರುವೆ. ಮಾಯೆಯಿಂದ ಉಂಟಾಗುವ ಭೇದಭಾವವನ್ನೂ ಮತ್ತು ಅದರಿಂದ ಉಂಟಾಗುವ ಅಜ್ಞಾನವನ್ನೂ ನಾಶಪಡಿಸಿಕೊಂಡಿರುವ ಮುನಿಗಳು ಆತ್ಮಸ್ವರೂಪದ ಅನುಭವದಿಂದ ನಿನ್ನನ್ನು ನಿರಂತರವಾಗಿ ಧ್ಯಾನಿಸುತ್ತಿರುವರು. ಮಾಯೆಯ ಗುಣಗಳಿಗೆ ವಶನಾಗಿ ಮೂಢನಾದ ನಾನು ನಿನ್ನನ್ನು ಹೇಗೆ ತಾನೇ ಧ್ಯಾನಿಸಬಲ್ಲೆನು ? ॥ ೨೪ ॥ ಮಾಯೆಯ ಗುಣಗಳು, ಗುಣಗಳಿಂದಾಗುವ ಕರ್ಮ ಹಾಗೂ ಕರ್ಮಗಳ ಸಂಸ್ಕಾರಗಳು ಇವುಗಳಿಂದುಂಟಾದ ಲಿಂಗಶರೀರವು ನಿನ್ನಲ್ಲಿ ಇಲ್ಲವೇ ಇಲ್ಲ. ನಿನಗೆ ನಾಮವಾಗಲೀ, ರೂಪವಾಗಲೀ ಇಲ್ಲ. ನಿನ್ನಲ್ಲಿ ಕಾರ್ಯವಾಗಲೀ, ಕಾರಣವಾಗಲೀ ಇಲ್ಲ. ನೀನು ಸನಾತನ ಆತ್ಮನಾಗಿರುವೆ. ಜ್ಞಾನೋಪದೇಶಕ್ಕಾಗಿಯೇ ನೀನು ಈ ಶರೀರವನ್ನು ಧರಿಸಿಕೊಂಡಿರುವೆ. ಅಂತಹ ಪುರಾಣಪುರುಷನಾದ ನಿನಗೆ ನಾನು ನಮಸ್ಕರಿಸುತ್ತೇನೆ. ॥ ೨೫ ॥ ಪ್ರಭೋ! ನಿನ್ನ ಮಾಯೆಯಿಂದ ರಚಿತವಾದ ಈ ಲೋಕದಲ್ಲಿ ಕಾಮ, ಕ್ರೋಧ, ಲೋಭ, ಈರ್ಷ್ಯೆ, ಮೋಹಾದಿಗಳಿಂದ ಬುದ್ಧಿಗೆಟ್ಟಿರುವ ಜನರು ಮಡದಿ, ಮಕ್ಕಳು, ಮನೆ-ಮಠ ಇವುಗಳನ್ನು ಶಾಶ್ವತವೆಂದು ಭ್ರಮಿಸಿ ಸಂಸಾರದಲ್ಲಿ ಅಲೆಯುತ್ತಾ ಇರುತ್ತಾರೆ. ॥ ೨೬ ॥ ಸಮಸ್ತ ಪ್ರಾಣಿಗಳಿಗೆ ಆತ್ಮನಾಗಿರುವ ಪ್ರಭೋ! ಇಂದು ನಿನ್ನ ದಿವ್ಯದರ್ಶನದಿಂದ ನನ್ನಲ್ಲಿದ್ದ ಕಾಮ-ಕರ್ಮೇಂದ್ರಿಯಗಳಿಗೆ ಆಶ್ರಯಭೂತವಾಗಿರುವ ದೃಢವಾದ ಮೋಹಪಾಶವು ಕತ್ತರಿಸಲ್ಪಟ್ಟಿತು. ॥ ೨೭ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ! ಭಗವಾನ್ ಕಪಿಲಮುನಿಯನ್ನು ಅಂಶುಮಂತನು ಹೀಗೆ ಕೀರ್ತಿಸಿದಾಗ ಅವನು ಮನಸ್ಸಿನಲ್ಲೇ ಅಂಶುಮಂತನನ್ನು ಅನುಗ್ರಹಿಸುತ್ತಾ ಇಂತೆಂದನು. ॥ ೨೮ ॥

ಶ್ರೀಭಗವಂತನು ಹೇಳಿದನು – ವತ್ಸ! ಈ ಕುದುರೆಯು ನಿನ್ನ ತಾತನ ಯಜ್ಞಪಶುವಾಗಿದೆ. ಇದನ್ನು ನೀನು ತೆಗೆದುಕೊಂಡು ಹೋಗು. ಸುಟ್ಟುಹೋಗಿರುವ ನಿನ್ನ ಚಿಕ್ಕಪ್ಪಂದಿರ ಉದ್ಧಾರವು ಕೇವಲ ಗಂಗಾಜಲದಿಂದ ಆದೀತು. ಇದಲ್ಲದೆ ಬೇರೆ ಯಾವ ಉಪಾಯವೂ ಇಲ್ಲ. ॥ ೨೯ ॥ ಇದನ್ನು ಕೇಳಿ ಅಂಶುಮಂತನು ಪ್ರದಕ್ಷಿಣೆಮಾಡಿ ಮುನಿಯನ್ನು ನಮಸ್ಕರಿಸಿ, ಅವನನ್ನು ಪ್ರಸನ್ನಗೊಳಿಸಿ ಕುದುರೆಯನ್ನು ರಾಜಧಾನಿಗೆ ತಂದನು. ಸಗರನು ಆ ಯಜ್ಞಪಶುವಿನಿಂದ ಉಳಿದ ಯಜ್ಞಕ್ರಿಯೆಗಳನ್ನು ಮುಗಿಸಿದನು. ॥ ೩೦ ॥ ಬಳಿಕ ಸಗರರಾಜನು ಅಂಶುಮಂತನಿಗೆ ರಾಜ್ಯಭಾರವನ್ನು ವಹಿಸಿಕೊಟ್ಟು ತಾನು ವಿಷಯಗಳಿಂದ ನಿಸ್ಪೃಹನಾಗಿ, ಬಂಧನಮುಕ್ತನಾದನು. ಅವನು ಮಹರ್ಷಿ ಔರ್ವರು ಅರುಹಿದ ಮಾರ್ಗದಂತೆ ಪರಮಪದವನ್ನು ಪಡೆದುಕೊಂಡನು. ॥ ೩೧ ॥

ಎಂಟನೆಯ ಅಧ್ಯಾಯವು ಮುಗಿಯಿತು. ॥ ೮ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ನವಮಸ್ಕಂಧೇ ಸಗರೋಪಾಖ್ಯಾನೇಽಷ್ಟಮೋಽಧ್ಯಾಯಃ ॥ ೮ ॥

ಒಂಭತ್ತನೆಯ ಅಧ್ಯಾಯ

ಭಗೀರಥನ ಚರಿತ್ರೆ ಮತ್ತು ಗಂಗಾವತರಣ

ಶ್ರೀಶುಕ ಉವಾಚ

ಅಂಶುಮಾಂಶ್ಚ ತಪಸ್ತೇಪೇ ಗಂಗಾನಯನಕಾಮ್ಯಯಾ ।
ಕಾಲಂ ಮಹಾಂತಂ ನಾಶಕ್ನೋತ್ತತಃ ಕಾಲೇನ ಸಂಸ್ಥಿತಃ ॥ ೧ ॥

ದಿಲೀಪಸ್ತತ್ಸುತಸ್ತದ್ವದಶಕ್ತಃ ಕಾಲಮೇಯಿವಾನ್ ।
ಭಗೀರಥಸ್ತಸ್ಯ ಪುತ್ರಸ್ತೇಪೇ ಸ ಸುಮಹತ್ತಪಃ ॥ ೨ ॥

ದರ್ಶಯಾಮಾಸ ತಂ ದೇವೀ ಪ್ರಸನ್ನಾ ವರದಾಸ್ಮಿ ತೇ ।
ಇತ್ಯುಕ್ತಃ ಸ್ವಮಭಿಪ್ರಾಯಂ ಶಶಂಸಾವನತೋ ನೃಪಃ ॥ ೩ ॥

ಕೋಽಪಿ ಧಾರಯಿತಾ ವೇಗಂ ಪತಂತ್ಯಾ ಮೇ ಮಹೀತಲೇ ।
ಅನ್ಯಥಾ ಭೂತಲಂ ಭಿತ್ತ್ವಾ ನೃಪ ಯಾಸ್ಯೇ ರಸಾತಲಮ್ ॥ ೪ ॥

ಕಿಂ ಚಾಹಂ ನ ಭುವಂ ಯಾಸ್ಯೇ ನರಾ ಮಯ್ಯಾಮೃಜಂತ್ಯಘಮ್ ।
ಮೃಜಾಮಿ ತದಘಂ ಕುತ್ರ ರಾಜಂಸ್ತತ್ರ ವಿಚಿಂತ್ಯತಾಮ್ ॥ ೫ ॥

ಭಗೀರಥ ಉವಾಚ

ಸಾಧವೋ ನ್ಯಾಸಿನಃ ಶಾಂತಾ ಬ್ರಹ್ಮಿಷ್ಠಾ ಲೋಕಪಾವನಾಃ ।
ಹರಂತ್ಯಘಂ ತೇಽಙ್ಗಸಂಗಾತ್ತೇಷ್ವಾಸ್ತೇ ಹ್ಯಘಭಿದ್ಧರಿಃ ॥ ೬ ॥

ಧಾರಯಿಷ್ಯತಿ ತೇ ವೇಗಂ ರುದ್ರಸ್ತ್ವಾತ್ಮಾ ಶರೀರಿಣಾಮ್ ।
ಯಸ್ಮಿನ್ನೋತಮಿದಂ ಪ್ರೋತಂ ವಿಶ್ವಂ ಶಾಟೀವ ತಂತುಷು ॥ ೭ ॥

ಇತ್ಯುಕ್ತ್ವಾ ಸ ನೃಪೋ ದೇವಂ ತಪಸಾತೋಷಯಚ್ಛಿವಮ್ ।
ಕಾಲೇನಾಲ್ಪೀಯಸಾ ರಾಜಂಸ್ತಸ್ಯೇಶಃ ಸಮತುಷ್ಯತ ॥ ೮ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಎಲೈ ಪರೀಕ್ಷಿತನೇ! ಅಂಶುಮಂತನು ಗಂಗೆಯನ್ನು ಕರೆತರುವ ಆಶಯದಿಂದ ಅನೇಕ ವರ್ಷಗಳವರೆಗೆ ಘೋರ ತಪಸ್ಸನ್ನಾಚರಿಸಿದನು. ಆದರೆ ಅವನಿಗೆ ಸಫಲತೆ ದೊರೆಯಲಿಲ್ಲ. ಕಾಲವು ಸನ್ನಿಹಿತವಾಗಲು ಅವನು ಕಾಲವಶನಾದನು. ॥ ೧ ॥ ಅಂಶುಮಂತನ ಪುತ್ರ ದಿಲೀಪನೂ ತಂದೆಯಂತೆಯೇ ತಪಸ್ಸನ್ನು ಮಾಡಿದನು. ಆದರೆ ಅವನೂ ಅಸಫಲನೇ ಆದನು. ಕಾಲಧರ್ಮದಿಂದ ಅವನೂ ಮೃತ್ಯುವಶನಾದನು. ದಿಲೀಪನ ಪುತ್ರ ಭಗೀರಥನೂ ಮಹಾತಪಸ್ಸನ್ನು ಆಚರಿಸಿದನು. ॥ ೨ ॥ ಅವನ ತಪಸ್ಸಿನಿಂದ ಪ್ರಸನ್ನಳಾದ ಭಗವತಿ ಗಂಗಾದೇವಿಯು ಅವನಿಗೆ ದರ್ಶನವಿತ್ತು – 'ರಾಜನೇ! ನಿನಗೆ ವರವನ್ನು ಕೊಡಲು ಬಂದಿರುವೆನು' ಎಂದು ಹೇಳಿದಳು. ಆಗ ರಾಜಾ ಭಗೀರಥನು ವಿನಮ್ರನಾಗಿ 'ತಾಯೇ! ನೀನು ಭೂಲೋಕಕ್ಕೆ ಆಗಮಿಸು' ಎಂದು ತನ್ನ ಮನೋರಥವನ್ನು ಪ್ರಕಟಪಡಿಸಿದನು. ॥ ೩ ॥

ಗಂಗಾದೇವಿಯು ಹೇಳಿದಳು – ವತ್ಸ ಭಗೀರಥ! ರಭಸದಿಂದ ನಾನು ಸ್ವರ್ಗದಿಂದ ಭೂಮಿಗೆ ಧುಮುಕುವಾಗ ನನ್ನ ವೇಗವನ್ನು ಧರಿಸುವವರು ಯಾರಾದರೂ ಇರಬೇಕು. ಇಲ್ಲದಿದ್ದರೆ ನಾನು ಪೃಥಿವಿಯನ್ನು ಭೇದಿಸಿಕೊಂಡು ರಸಾತಳಕ್ಕೆ ಸೇರಿ ಹೋಗುವೆನು. ॥ ೪ ॥ ಇದಲ್ಲದೆ ಜನರು ನನ್ನಲ್ಲಿ ತಮ್ಮ ಪಾಪಗಳನ್ನು ತೊಳೆದುಕೊಳ್ಳುವರು. ಮತ್ತೆ ನಾನು ಆ ಪಾಪಗಳನ್ನು ಎಲ್ಲಿ ತೊಳೆದುಕೊಳ್ಳಲೀ? ಈ ಕಾರಣದಿಂದಲೂ ನಾನು ಭೂಮಿಗೆ ಬರಲಾರೆನು. ಭಗೀರಥನೇ! ಈ ವಿಷಯದಲ್ಲಿ ನೀನೂ ವಿಚಾರ ಮಾಡು. ॥ ೫ ॥

ಭಗೀರಥನು ಹೇಳಿದನು – ತಾಯೇ! ಲೋಕ- ಪರಲೋಕಗಳನ್ನೂ, ಮಡದಿ-ಮಕ್ಕಳನ್ನೂ, ಮನೆ-ಮಠಗಳನ್ನೂ, ಐಶ್ವರ್ಯವನ್ನೂ, ಸುಖೋಪಭೋಗಗಳನ್ನೂ, ಕಾಮ - ಕ್ರೋಧಾದಿಗಳನ್ನೂ, ಪರಿತ್ಯಜಿಸಿರುವ ಶಾಂತರಾದ, ಬ್ರಹ್ಮನಿಷ್ಠರಾದ, ಲೋಕಪಾವನರಾದ ಸಾಧುಗಳು ತಮ್ಮ ಅಂಗಸ್ಪರ್ಶದಿಂದ ನಿನ್ನ ಪಾಪಗಳನ್ನು ತೊಳೆದುಬಿಡುವರು. ಏಕೆಂದರೆ, ಅವರ ಹೃದಯಕಮಲದಲ್ಲಿ ಅಘ ರೂಪನಾದ ಅಘಾಸುರನ ಹಂತಕನಾದ, ಪಾಪನಾಶಕನಾದ ಶ್ರೀಹರಿಯು ಸರ್ವದಾ ನೆಲೆಸಿರುತ್ತಾನೆ. ॥ ೬ ॥ ಸಮಸ್ತ ಪ್ರಾಣಿಗಳಿಗೂ ಆತ್ಮಸ್ವರೂಪನಾದ ರುದ್ರದೇವರು ನಿನ್ನ ವೇಗವನ್ನು ಧರಿಸುತ್ತಾನೆ. ಬಟ್ಟೆಯಲ್ಲಿ ದಾರವು ವ್ಯಾಪಿಸಿರುವಂತೆ ಸಮಸ್ತ ಜಗತ್ತು ರುದ್ರದೇವರಲ್ಲಿ ಹಾಸುಹೊಕ್ಕಾಗಿದೆ. ॥ ೭ ॥ ಪರೀಕ್ಷಿತನೇ! ಗಂಗಾಮಾತೆಗೆ ಹೀಗೆ ಹೇಳಿ ಭಗೀರಥನು ತಪಸ್ಸಿನ ಮೂಲಕ ಭಗವಾನ್ ಶಂಕರನನ್ನು ಒಲಿಸಿದನು. ಆಶುತೋಷನಾದ ಪರಶಿವನು ಅತ್ಯಲ್ಪಕಾಲದಲ್ಲೇ ಪ್ರಸನ್ನನಾದನು. ॥ ೮ ॥

ತಥೇತಿ ರಾಜ್ಞಾಭಿಹಿತಂ ಸರ್ವಲೋಕಹಿತಃ ಶಿವಃ ।
ದಧಾರಾವಹಿತೋ ಗಂಗಾಂ ಪಾದಪೂತಜಲಾಂ ಹರೇಃ ॥ ೯ ॥

ಭಗೀರಥಃ ಸ ರಾಜರ್ಷಿರ್ನಿನ್ಯೇ ಭುವನಪಾವನೀಮ್ ।
ಯತ್ರ ಸ್ವಪಿತೄಣಾಂ ದೇಹಾ ಭಸ್ಮೀಭೂತಾಃ ಸ್ಮ ಶೇರತೇ ॥ ೧೦ ॥

ರಥೇನ ವಾಯುವೇಗೇನ ಪ್ರಯಾಂತಮನುಧಾವತೀ ।
ದೇಶಾನ್ ಪುನಂತೀ ನಿರ್ದಗ್ಧಾನಾಸಿಂಚತ್ಸಗರಾತ್ಮಜಾನ್ ॥ ೧೧ ॥

ಯಜ್ಜಲಸ್ಪರ್ಶಮಾತ್ರೇಣ ಬ್ರಹ್ಮದಂಡಹತಾ ಅಪಿ ।
ಸಗರಾತ್ಮಜಾ ದಿವಂ ಜಗ್ಮುಃ ಕೇವಲಂ ದೇಹಭಸ್ಮಭಿಃ ॥ ೧೨ ॥

ಭಸ್ಮೀಭೂತಾಂಗಸಂಗೇನ ಸ್ವರ್ಯಾತಾಃ ಸಗರಾತ್ಮಜಾಃ ।
ಕಿಂ ಪುನಃ ಶ್ರದ್ಧಯಾ ದೇವೀಂ ಯೇ ಸೇವಂತೇ ಧೃತವ್ರತಾಃ ॥ ೧೩ ॥

ನ ಹ್ಯೇತತ್ಪರಮಾಶ್ಚರ್ಯಂ ಸ್ವರ್ಧುನ್ಯಾ ಯದಿಹೋದಿತಮ್ ।
ಅನಂತಚರಣಾಂಭೋಜಪ್ರಸೂತಾಯಾ ಭವಚ್ಛಿದಃ ॥ ೧೪ ॥

ಸಂನಿವೇಶ್ಯ ಮನೋ ಯಸ್ಮಿಞ್ಛ್ರದ್ಧಯಾ ಮುನಯೋಽಮಲಾಃ ।
ತ್ರೈಗುಣ್ಯಂ ದುಸ್ತ್ಯಜಂ ಹಿತ್ವಾ ಸದ್ಯೋ ಯಾತಾಸ್ತದಾತ್ಮತಾಮ್ ॥ ೧೫ ॥

ಶ್ರುತೋ ಭಗೀರಥಾಜ್ಜಜ್ಞೇ ತಸ್ಯ ನಾಭೋಽಪರೋಽಭವತ್ ।
ಸಿಂಧುದ್ವೀಪಸ್ತತಸ್ತಸ್ಮಾದಯುತಾಯುಸ್ತತೋಽಭವತ್ ॥ ೧೬ ॥

ಋತುಪರ್ಣೋ ನಲಸಖೋ ಯೋಽಶ್ವವಿದ್ಯಾಮಯಾನ್ನಲಾತ್ ।
ದತ್ತ್ವಾಕ್ಷಹೃದಯಂ ಚಾಸ್ಮೈ ಸರ್ವಕಾಮಸ್ತು ತತ್ಸುತಃ ॥ ೧೭ ॥

ತತಃ ಸುದಾಸಸ್ತತ್ಪುತ್ರೋ ಮದಯಂತೀಪತಿರ್ನೃಪ ।
ಆಹುರ್ಮಿತ್ರಸಹಂ ಯಂ ವೈ ಕಲ್ಮಾಷಾಂಘ್ರಿಮುತ ಕ್ವಚಿತ್ ।
ವಸಿಷ್ಠಶಾಪಾದ್ರಕ್ಷೋಽಭೂದನಪತ್ಯಃ ಸ್ವಕರ್ಮಣಾ ॥ ೧೮ ॥

ಭಗವಾನ್ ಪರಶಿವನಾದರೋ ಸಮಸ್ತ ವಿಶ್ವದ ಹಿತೈಷಿಯಾಗಿದ್ದಾನೆ. ರಾಜನ ಮಾತಿಗೆ 'ತಥಾಸ್ತು' ಎಂದು ಹೇಳಿ ಅಂಗೀಕರಿಸಿ, ಆಕಾಶದ ಕಡೆಯಿಂದ ಭೋರ್ಗರೆಯುತ್ತಾ ಬಂದ, ವಿಷ್ಣುವಿನ ಪಾದಸ್ಪರ್ಶದಿಂದ ಪಾವನವಾದ ಜಲ ಪ್ರವಾಹದಿಂದ ಕೂಡಿದ್ದ ಗಂಗಾದೇವಿಯನ್ನು ಅವನು ಜಾಗರೂಕನಾಗಿ ತನ್ನ ಶಿರಸ್ಸಿನಲ್ಲಿ ಧರಿಸಿದನು. ॥ ೯ ॥ ಇದಾದ ಬಳಿಕ ರಾಜರ್ಷಿಯಾದ ಭಗೀರಥನು ಶಿವನ ಜಟಾಜೂಟದಿಂದ ಹರಿದುಬಂದ ಆ ಗಂಗಾನದಿಯನ್ನು ತನ್ನ ಪಿತೃಗಳ ಭಸ್ಮೀಭೂತವಾದ ಶರೀರಗಳಿದ್ದ ಸ್ಥಳಕ್ಕೆ ಕರೆದುಕೊಂಡು ಹೋದನು. ॥ ೧೦ ॥ ವಾಯುವೇಗಕ್ಕೆ ಸಮಾನವಾದ ವೇಗವುಳ್ಳ ರಥದಲ್ಲಿ ಕುಳಿತು ಭಗೀರಥನು ಮುಂದೆ ಹೋಗುತ್ತಿದ್ದನು. ಹಲವಾರು ದೇಶಗಳನ್ನು ತನ್ನ ಶುಭ ಜಲಪ್ರವಾಹದಿಂದ ಪಾವನಗೊಳಿಸುತ್ತಾ ಗಂಗಾದೇವಿಯೂ ಭಗೀರಥನ ಹಿಂದೆಯೇ ಹೋಗುತ್ತಿದ್ದಳು. ಹೀಗೆ ಗಂಗಾ- ಸಾಗರ ಸಂಗಮಕ್ಕೆ ತಲುಪಿದ ಗಂಗೆಯು ಸುಟ್ಟು ಹೋಗಿದ್ದ ಸಗರನ ಅರವತ್ತುಸಾವಿರ ಮಕ್ಕಳನ್ನು ತನ್ನ ಪುಣ್ಯಜಲದಲ್ಲಿ ಮುಳುಗಿಸಿಬಿಟ್ಟಳು. ॥ ೧೧ ॥ ಸಗರನ ಪುತ್ರರು ಬ್ರಾಹ್ಮಣನ ತಿರಸ್ಕಾರದಿಂದ ಭಸ್ಮವಾಗಿ ಹೋಗಿದ್ದರಿಂದ ಅವರ ಉದ್ಧಾರಕ್ಕೆ ಇತರ ಯಾವುದೇ ಉಪಾಯವಿಲ್ಲದಿದ್ದರೂ ಕೇವಲ ಶರೀರದ ಬೂದಿಯೊಂದಿಗೆ ಗಂಗಾಜಲದ ಸ್ಪರ್ಶವಾದ್ದರಿಂದ ಅವರೆಲ್ಲರೂ ಸ್ವರ್ಗಲೋಕಕ್ಕೆ ಹೋದರು. ॥ ೧೨ ॥ ಪರೀಕ್ಷಿತನೇ! ಪವಿತ್ರವಾದ ಗಂಗಾಜಲವು ಸಗರನ ಮಕ್ಕಳ ಶರೀರದ ಭಸ್ಮವನ್ನು ಸ್ಪರ್ಶಿಸಿದ್ದರಿಂದಲೇ ಅವರೆಲ್ಲರೂ ಸ್ವರ್ಗಕ್ಕೆ ಹೋದರೆಂದ ಮೇಲೆ ಶ್ರದ್ಧೆಯಿಂದ ವ್ರತಾನುಷ್ಠಾನಮಾಡುತ್ತಾ ಶ್ರೀಗಂಗಾದೇವಿಯನ್ನು ಸೇವಿಸುವವರ ವಿಷಯದಲ್ಲಿ ಹೇಳುವುದೇನಿದೆ? ॥ ೧೩ ॥ ಗಂಗಾ ದೇವಿಯ ಮಹಿಮೆಯ ಸಂಬಂಧದಲ್ಲಿ ನಾನು ಹೇಳಿದುದರಲ್ಲಿ ಆಶ್ಚರ್ಯ ಪಡಬೇಕಾಗಿಲ್ಲ, ಏಕೆಂದರೆ, ಗಂಗೆಯು ಭಗವಂತನ ಚರಣ ಕಮಲಗಳಿಂದ ಹೊರಟಿರುವವಳು. ಆ ಚರಣಗಳನ್ನು ಶ್ರದ್ಧೆಯಿಂದ ಚಿಂತಿಸುತ್ತಾ ಮಹಾಮುನಿಗಳೆಲ್ಲರೂ ನಿರ್ಮಲರಾಗಿ ಹೋಗುತ್ತಾರೆ. ತ್ರಿಗುಣಗಳ ಕಷ್ಟತರ ಬಂಧನವನ್ನು ಕತ್ತರಿಸಿ ಒಡನೆಯೇ ಭಗವತ್ ಸ್ವರೂಪರಾಗಿ ಹೋಗುತ್ತಾರೆ. ಹಾಗಿರುವಾಗ ಗಂಗೆಯು ಸಂಸಾರ ಬಂಧನವನ್ನು ಕತ್ತರಿಸುವುದರಲ್ಲಿ ಆಶ್ಚರ್ಯವೇನಿದೆ? ॥ ೧೪-೧೫ ।

ಭಗೀರಥನಿಗೆ ಶ್ರುತನೆಂಬ ಪುತ್ರನಿದ್ದನು. ಶ್ರುತನಿಗೆ ನಾಭ ಇವನು ಹಿಂದಿನ ನಾಭನಿಗಿಂತ ಬೇರೆಯಾದವನು. ನಾಭನಿಗೆ ಸಿಂಧುದ್ವೀಪನೆಂಬ ಪುತ್ರನು. ಅವನಲ್ಲಿ ಅಯುತಾಯು ಜನಿಸಿದನು. ಅಯುತಾಯುವಿಗೆ ಋತುಪರ್ಣ ಮಗನಾದನು. ಅವನು ನಳನ ಮಿತ್ರನಾಗಿದ್ದನು. ಋತುಪರ್ಣನು ನಳನಿಂದ ಅಶ್ವವಿದ್ಯೆಯನ್ನು ಕಲಿತು, ಬದಲಿಗೆ ನಳನಿಗೆ ಅಕ್ಷಹೃದಯ (ಪಗಡೆಯಾಟ)ವನ್ನು ಹೇಳಿಕೊಟ್ಟನು. ಋತುಪರ್ಣನಿಗೆ ಸರ್ವಕಾಮನೆಂಬ ಪುತ್ರನಾದನು. ॥ ೧೬-೧೭ ॥ ಪರೀಕ್ಷಿತನೇ! ಸರ್ವಕಾಮನಿಗೆ ಸುದಾಸನೆಂಬ ಮಗನಿದ್ದನು. ಸುದಾಸನ ಪುತ್ರ ಸೌದಾಸನು. ಸೌದಾಸನಿಗೆ ಮದಯಂತಿ ಎಂಬ ಪತ್ನಿಯಿದ್ದಳು. ಸೌದಾಸನನ್ನೇ ಕೆಲವರು ಮಿತ್ರಸಹನೆಂದು ಹೇಳುತ್ತಿದ್ದರು. ಇನ್ನೂ ಕೆಲವರು ಕಲ್ಮಾಷಪಾದ ಎಂದೂ ಕರೆಯುತ್ತಿದ್ದರು. ಅವನು ವಸಿಷ್ಠರ ಶಾಪದಿಂದ ರಾಕ್ಷಸನಾಗಿದ್ದನು. ಮತ್ತೆ ತನ್ನ ಕರ್ಮಗಳಿಂದಾಗಿ ಸಂತಾನಹೀನನಾದನು. ॥ ೧೮ ॥

ರಾಜೋವಾಚ

ಕಿಂ ನಿಮಿತ್ತೋ ಗುರೋಃ ಶಾಪಃ ಸೌದಾಸಸ್ಯ ಮಹಾತ್ಮನಃ ।
ಏತದ್ವೇದಿತುಮಿಚ್ಛಾಮಃ ಕಥ್ಯತಾಂ ನ ರಹೋ ಯದಿ ॥ ೧೯ ॥

ಪರೀಕ್ಷಿದ್ರಾಜನು ಕೇಳಿದನು – ಪೂಜ್ಯರೇ! ಮಹಾತ್ಮನಾದ ಸೌದಾಸನಿಗೆ ಗುರು ವಸಿಷ್ಠರು ಏಕೆ ಶಪಿಸಿದರು? ಇದನ್ನು ತಿಳಿಯಲು ನಾವೆಲ್ಲರೂ ಬಯಸುತ್ತಿದ್ದೇವೆ. ಯಾವುದೇ ರಹಸ್ಯವಿಲ್ಲದಿದ್ದರೆ ದಯಮಾಡಿ ಹೇಳಿರಿ. ॥ ೧೯ ॥

ಶ್ರೀಶುಕ ಉವಾಚ

ಸೌದಾಸೋ ಮೃಗಯಾಂ ಕಿಂಚಿಚ್ಚರನ್ರಕ್ಷೋ ಜಘಾನ ಹ ।
ಮುಮೋಚ ಭ್ರಾತರಂ ಸೋಽಥ ಗತಃ ಪ್ರತಿಚಿಕೀರ್ಷಯಾ ॥ ೨೦ ॥

ಸ ಚಿಂತಯನ್ನಘಂ ರಾಜ್ಞಃ ಸೂದರೂಪಧರೋ ಗೃಹೇ ।
ಗುರವೇ ಭೋಕ್ತುಕಾಮಾಯ ಪಕ್ತ್ವಾ ನಿನ್ಯೇ ನರಾಮಿಷಮ್ ॥ ೨೧ ॥

ಪರಿವೇಕ್ಷ್ಯಮಾಣಂ ಭಗವಾನ್ವಿಲೋಕ್ಯಾಭಕ್ಷ್ಯಮಂಜಸಾ ।
ರಾಜಾನಮಶಪತ್ಕ್ರುದ್ಧೋ ರಕ್ಷೋ ಹ್ಯೇವಂ ಭವಿಷ್ಯಸಿ ॥ ೨೨ ॥

ರಕ್ಷಃಕೃತಂ ತದ್ವಿದಿತ್ವಾ ಚಕ್ರೇ ದ್ವಾದಶವಾರ್ಷಿಕಮ್ ।
ಸೋಽಪ್ಯಪೋಽಂಜಲಿಮಾದಾಯ ಗುರುಂ ಶಪ್ತುಂ ಸಮುದ್ಯತಃ ॥ ೨೩ ॥

ವಾರಿತೋ ಮದಯಂತ್ಯಾಪೋ ರುಶತೀಃ ಪಾದಯೋರ್ಜಹೌ ।
ದಿಶಃ ಖಮವನೀಂ ಸರ್ವಂ ಪಶ್ಯಂಜೀವಮಯಂ ನೃಪಃ ॥ ೨೪ ॥

ರಾಕ್ಷಸಂ ಭಾವಮಾಪನ್ನಃ ಪಾದೇ ಕಲ್ಮಾಷತಾಂ ಗತಃ ।
ವ್ಯವಾಯಕಾಲೇ ದದೃಶೇ ವನೌಕೋದಂಪತೀ ದ್ವಿಜೌ ॥ ೨೫ ॥

ಕ್ಷುಧಾರ್ತೋ ಜಗೃಹೇ ವಿಪ್ರಂ ತತ್ಪತ್ನ್ಯಾಹಾಕೃತಾರ್ಥವತ್ ।
ನ ಭವಾನ್ರಾಕ್ಷಸಃ ಸಾಕ್ಷಾದಿಕ್ಷ್ವಾಕೂಣಾಂ ಮಹಾರಥಃ ॥ ೨೬ ॥

ಮದಯಂತ್ಯಾಃ ಪತಿರ್ವೀರ ನಾಧರ್ಮಂ ಕರ್ತುಮರ್ಹಸಿ ।
ದೇಹಿ ಮೇಽಪತ್ಯಕಾಮಾಯಾ ಅಕೃತಾರ್ಥಂ ಪತಿಂ ದ್ವಿಜಮ್ ॥ ೨೭ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ! ಒಮ್ಮೆ ರಾಜಾ ಸೌದಾಸನು ಬೇಟೆಯಾಡಲು ಕಾಡಿಗೆ ಹೋಗಿದ್ದನು. ಅವನು ಓರ್ವ ರಾಕ್ಷಸನನ್ನು ಕೊಂದುಹಾಕಿದನು ಹಾಗೂ ಅವನ ತಮ್ಮನನ್ನು ಬಿಟ್ಟುಬಿಟ್ಟನು. ಅವನು ರಾಜನ ಈ ಕೆಲಸವನ್ನು ಅನ್ಯಾಯವೆಂದು ತಿಳಿದು, ಅಣ್ಣನ ಸಾವಿನ ಸೇಡು ತೀರಿಸಿಕೊಳ್ಳಲು ಅವನು ಅಡಿಗೆಯವನಾಗಿ ರಾಜನ ಅರಮನೆ ಸೇರಿದನು. ಒಂದು ದಿನ ಗುರು ವಸಿಷ್ಠರು ಸೌದಾಸನಲ್ಲಿಗೆ ಊಟಕ್ಕೆ ಬಂದಾಗ ಅಡಿಗೆಯವನು ನರಮಾಂಸವನ್ನು ಬೇಯಿಸಿ ಬಡಿಸಿದನು. ॥ ೨೦-೨೧ ॥ ಬಡಿಸಿದ ವಸ್ತುವು ಸರ್ವಥಾ ಅಭಕ್ಷ್ಯವಾದುದು ಎಂದು ತಿಳಿದಾಗ ಸರ್ವಸಮರ್ಥರಾದ ವಸಿಷ್ಠರು ಕ್ರೋಧಗೊಂಡು ರಾಜನಿಗೆ – 'ಈ ಕೃತ್ಯದಿಂದಾಗಿ ನೀನು ರಾಕ್ಷಸನಾಗಿ ಹೋಗು' ಎಂದು ಶಾಪವನ್ನು ಕೊಟ್ಟರು. ॥ ೨೨ ॥ ಆದರೆ ಈ ಕೆಲಸವು ರಾಜನದ್ದಲ್ಲ, ರಾಕ್ಷಸನದು ಎಂದು ತಿಳಿದಾಗ ಅವರು ಆ ಶಾಪವನ್ನು ಕೇವಲ ಹನ್ನೆರಡು ವರ್ಷಗಳಿಗೆ ಸೀಮಿತಗೊಳಿಸಿದರು. ಆ ಸಮಯದಲ್ಲಿ ಸೌದಾಸನೂ ತನ್ನ ಬೊಗಸೆಯಲ್ಲಿ ನೀರನ್ನೆತ್ತಿಕೊಂಡು ಗುರು ವಸಿಷ್ಠರಿಗೆ ಶಾಪವನ್ನೀಯಲು ಸಿದ್ಧನಾದನು. ॥ ೨೩ ॥ ಆದರೆ ರಾಜನ ಪತ್ನಿ ಮದಯಂತಿಯು ಹೀಗೆ ಮಾಡಬಾರದೆಂದು ತಡೆದಳು. ಆಗ ಸೌದಾಸನು ಯೋಚಿಸಿದನು – ದಿಕ್ಕುಗಳು, ಆಕಾಶ ಮತ್ತು ಪೃಥಿವಿ ಎಲ್ಲವೂ ಜೀವಮಯವೇ ಆಗಿರುವುವು. ಎಲ್ಲಿಯೇ ಆಗಲಿ, ಈ ತೀಕ್ಷ್ಣ ಜಲವನ್ನು ಚೆಲ್ಲಿದರೂ ಪ್ರಾಣಿಗಳ ವಿನಾಶವಾಗಬಹುದು ಎಂದು ಭಾವಿಸಿ ಕೊನೆಗೆ ಅವನು ಅದನ್ನು ತನ್ನ ಕಾಲುಗಳ ಮೇಲೆಯೇ ಹಾಕಿಕೊಂಡನು. ಇದರಿಂದ ಸೌದಾಸನಿಗೆ ಮಿತ್ರಸಹನೆಂಬ ಹೆಸರಾಯಿತು. ॥ ೨೪ ॥ ಆ ಜಲದಿಂದ ಅವನ ಕಾಲುಗಳು ಕಪ್ಪಾದುವು. ಅದರಿಂದ ಅವನಿಗೆ ಕಲ್ಮಾಷಪಾದ ಎಂದೂ ಹೆಸರಾಯಿತು. ಈಗ ಅವನು ರಾಕ್ಷಸನಾಗಿದ್ದನು. ಒಂದು ದಿನ ರಾಕ್ಷಸನಾಗಿದ್ದ ಕಲ್ಮಾಷಪಾದ ರಾಜನು ಕಾಡಿನಲ್ಲಿ ಸಂಚರಿಸುತ್ತಿದ್ದಾಗ ಬ್ರಾಹ್ಮಣ ದಂಪತಿಗಳು ರತಿಸುಖದಲ್ಲಿರುವುದನ್ನು ನೋಡಿದನು. ॥ ೨೫ ॥ ಕಲ್ಮಾಷಪಾದನು ಹಸಿದಿದ್ದನು. ಅವನು ಬ್ರಾಹ್ಮಣನನ್ನು ಹಿಡಿದುಕೊಂಡನು. ಆಗ ಬ್ರಾಹ್ಮಣ ಪತ್ನಿಯ ಕಾಮನೆಯು ಪೂರ್ಣಗೊಂಡಿರಲಿಲ್ಲ, ಅವಳೆಂದಳು – ಮಹಾರಾಜ! ನೀನು ನಿಶ್ಚಯವಾಗಿ ರಾಕ್ಷಸನಲ್ಲ. ನೀನು ಇಕ್ಷ್ವಾಕುವಂಶದ ವೀರ ಮಹಾರಥಿ ಮಹಾರಾಣಿ ಮದಯಂತಿಯ ಪತಿಯಾಗಿರುವೆ. ನೀನು ಇಂತಹ ಅಧರ್ಮವನ್ನು ಮಾಡುವುದು ಉಚಿತವಲ್ಲ, ನಾನು ಸಂತಾನದ ಕಾಮನೆಯಿಂದ ನನ್ನ ಪತಿಯೊಡನೆ ಸೇರಿದ್ದೆ. ನನ್ನ ಪತಿಯೂ ಪೂರ್ಣಕಾಮನಾಗಲಿಲ್ಲ. ಆದುದರಿಂದ ದಯಮಾಡಿ ನನ್ನ ಪತಿಯನ್ನು ಬಿಟ್ಟುಬಿಡು. ॥ ೨೬-೨೭ ॥

ದೇಹೋಽಯಂ ಮಾನುಷೋ ರಾಜನ್ಪುರುಷಸ್ಯಾಖಿಲಾರ್ಥದಃ ।
ತಸ್ಮಾದಸ್ಯ ವಧೋ ವೀರ ಸರ್ವಾರ್ಥವಧ ಉಚ್ಯತೇ ॥ ೨೮ ॥

ಏಷ ಹಿ ಬ್ರಾಹ್ಮಣೋ ವಿದ್ವಾಂಸ್ತಪಃಶೀಲಗುಣಾನ್ವಿತಃ ।
ಆರಿರಾಧಯಿಷುರ್ಬ್ರಹ್ಮ ಮಹಾಪುರುಷಸಂಜ್ಞಿತಮ್ ।
ಸರ್ವಭೂತಾತ್ಮಭಾವೇನ ಭೂತೇಷ್ವಂತರ್ಹಿತಂ ಗುಣೈಃ ॥ ೨೯ ॥

ಸೋಽಯಂ ಬ್ರಹ್ಮರ್ಷಿವರ್ಯಸ್ತೇ ರಾಜರ್ಷಿಪ್ರವರಾದ್ವಿಭೋ ।
ಕಥಮರ್ಹತಿ ಧರ್ಮಜ್ಞ ವಧಂ ಪಿತುರಿವಾತ್ಮಜಃ ॥ ೩೦ ॥

ತಸ್ಯ ಸಾಧೋರಪಾಪಸ್ಯ ಭ್ರೂಣಸ್ಯ ಬ್ರಹ್ಮವಾದಿನಃ ।
ಕಥಂ ವಧಂ ಯಥಾ ಬಭ್ರೋರ್ಮನ್ಯತೇ ಸನ್ಮತೋ ಭವಾನ್ ॥ ೩೧ ॥

ಯದ್ಯಯಂ ಕ್ರಿಯತೇ ಭಕ್ಷಸ್ತರ್ಹಿ ಮಾಂ ಖಾದ ಪೂರ್ವತಃ ।
ನ ಜೀವಿಷ್ಯೇ ವಿನಾ ಯೇನ ಕ್ಷಣಂ ಚ ಮೃತಕಂ ಯಥಾ ॥ ೩೨ ॥

ಏವಂ ಕರುಣಭಾಷಿಣ್ಯಾ ವಿಲಪಂತ್ಯಾ ಅನಾಥವತ್ ।
ವ್ಯಾಘ್ರಃ ಪಶುಮಿವಾಖಾದತ್ಸೌದಾಸಃ ಶಾಪಮೋಹಿತಃ ॥ ೩೩ ॥

ಬ್ರಾಹ್ಮಣೀ ವೀಕ್ಷ್ಯ ದಿಧಿಷುಂ ಪುರುಷಾದೇನ ಭಕ್ಷಿತಮ್ ।
ಶೋಚಂತ್ಯಾತ್ಮಾನಮುರ್ವೀಶಮಶಪತ್ಕುಪಿತಾ ಸತೀ ॥ ೩೪ ॥

ಯಸ್ಮಾನ್ಮೇ ಭಕ್ಷಿತಃ ಪಾಪ ಕಾಮಾರ್ತಾಯಾಃ ಪತಿಸ್ತ್ವಯಾ ।
ತವಾಪಿ ಮೃತ್ಯುರಾಧಾನಾದಕೃತಪ್ರಜ್ಞ ದರ್ಶಿತಃ ॥ ೩೫ ॥

ಏವಂ ಮಿತ್ರಸಹಂ ಶಪ್ತ್ವಾ ಪತಿಲೋಕಪರಾಯಣಾ ।
ತದಸ್ಥೀನಿ ಸಮಿದ್ಧೇಽಗ್ನೌ ಪ್ರಾಸ್ಯ ಭರ್ತುರ್ಗತಿಂ ಗತಾ ॥ ೩೬ ॥

ರಾಜನೇ! ಈ ಮನುಷ್ಯ ಶರೀರವು ಜೀವನಿಗೆ ಧರ್ಮ, ಅರ್ಥ, ಕಾಮ, ಮೋಕ್ಷ ಎಂಬ ನಾಲ್ಕುವಿಧವಾದ ಪುರುಷಾರ್ಥಗಳನ್ನು ಸಾಧಿಸಿ ಕೊಡುವಂತಹುದು. ಅದಕ್ಕಾಗಿ ವೀರನೇ! ಈ ಶರೀರವನ್ನು ನಾಶಗೊಳಿಸುವುದು ಎಲ್ಲ ಪುರುಷಾರ್ಥಗಳನ್ನು ಹತ್ಯೆಮಾಡಿದಂತೆ ಎಂದು ಹೇಳಲಾಗಿದೆ. ॥ ೨೮ ॥ ಈ ಬ್ರಾಹ್ಮಣನಾದರೋ ವಿದ್ವಾಂಸನಾಗಿದ್ದಾನೆ. ತಪಸ್ಸು, ಸೌಶೀಲ್ಯ ಮತ್ತು ಉತ್ತಮ ಗುಣಗಳಿಂದ ಸಂಪನ್ನನಾಗಿರುವನು. ಯಾರು ಸಮಸ್ತ ಪದಾರ್ಥಗಳಲ್ಲಿ ಇದ್ದರೂ ಅವುಗಳ ಬೇರೆ-ಬೇರೆ ಗುಣಗಳಿಂದ ಅಡಗಿರುವನೋ, ಅಂತಹ ಪರಬ್ರಹ್ಮ ಪುರುಷೋತ್ತಮನನ್ನು ಸಮಸ್ತ ಪ್ರಾಣಿಗಳ ಆತ್ಮರೂಪನೆಂದು ಅರಿತು ಇವನು ಆರಾಧಿಸುತ್ತಿರುವನು. ॥ ೨೯ ॥ ಮಹಾರಾಜನೇ! ನೀನು ಶಕ್ತಿಶಾಲಿಯಾಗಿರುವೆ ಧರ್ಮದ ಮರ್ಮವನ್ನು ಚೆನ್ನಾಗಿ ಅರಿತುಕೊಂಡಿರುವೆ. ತಂದೆಯ ಕೈಯಿಂದ ಮಗನ ಹತ್ಯೆಯು ಉಚಿತವಲ್ಲವೋ ಅಂತೆಯೇ ನಿನ್ನಂತಹ ಶ್ರೇಷ್ಠ ರಾಜರ್ಷಿಯ ಕೈಯಿಂದ ನನ್ನ ಪತಿಯಾದ ಈ ಶ್ರೇಷ್ಠಬ್ರಹ್ಮರ್ಷಿಯನ್ನು ವಧಿಸುವುದು ಯಾವರೀತಿಯಿಂದಲೂ ಉಚಿತವಲ್ಲ. ॥ ೩೦ ॥ ನೀನು ಸಾಧುಸಮ್ಮತನಾಗಿರುವೆ. ನನ್ನ ಪತಿಯು ನಿಷ್ಪಾಪನೂ, ಪರಮ ಸಾಧುವೂ, ಬ್ರಹ್ಮವಾದಿಯೂ, ಶ್ರೋತ್ರಿಯನೂ ಆಗಿರುವನು. ಗೋಹತ್ಯೆಗೆ ಸಮಾನವಾದ ನನ್ನ ಪತಿಯ ವಧೆಯನ್ನು ನೀನು ಸಮುಚಿತವಾದುದೆಂದು ಹೇಗೆ ಭಾವಿಸುವೆ? ॥ ೩೧ ॥ ಹೀಗಿದ್ದರೂ ನೀನು ಇವರನ್ನು ತಿಂದು ಬಿಡುವುದಾದರೆ ಮೊದಲಿಗೆ ನನ್ನನ್ನು ತಿಂದುಬಿಡು. ಏಕೆಂದರೆ, ಪತಿಯ ಹೊರತು ನಾನು ಹೆಣದಂತಾಗುವೆನು. ಒಂದು ಕ್ಷಣವೂ ಜೀವಿಸಿರಲಾರೆನು. ॥ ೩೨ ॥ ಬ್ರಾಹ್ಮಣಪತ್ನಿಯು ಕರುಣಾಪೂರ್ಣವಾದ ಮಾತುಗಳಿಂದ ಹೀಗೆ ಹೇಳಿ ಅನಾಥಳಂತೆ ಅಳತೊಡಗಿದಳು. ಆದರೆ ಸೌದಾಸನು ಶಾಪದಿಂದ ಮೋಹಿತನಾದ್ದರಿಂದ ಅವಳ ಪ್ರಾರ್ಥನೆಯ ಕಡೆಗೆ ಸ್ವಲ್ಪವೂ ಗಮನ ಕೊಡಲಿಲ್ಲ. ಅವನು ಹುಲಿಯು ಪಶುವನ್ನು ತಿಂದುಬಿಡುವಂತೆ ಆ ಬ್ರಾಹ್ಮಣನನ್ನು ತಿಂದುಬಿಟ್ಟನು. ॥ ೩೩ ॥ ಗರ್ಭಾಧಾನಮಾಡಲಿದ್ದ ಪತಿಯನ್ನು ರಾಕ್ಷಸರೂಪದಲ್ಲಿದ್ದ ರಾಜನು ತನ್ನ ಸಮಕ್ಷದಲ್ಲಿಯೇ ಭಕ್ಷಿಸಿದ್ದಕ್ಕಾಗಿ ಬ್ರಾಹ್ಮಣಿಗೆ ಅತೀವ ದುಃಖವಾಯಿತು. ಮರುಕ್ಷಣದಲ್ಲೇ ಆ ಸಾಧ್ವಿ ಬ್ರಾಹ್ಮಣಿಯು ಕ್ರೋಧಗೊಂಡು ರಾಜನಿಗೆ ಶಾಪವನ್ನಿತ್ತಳು. ॥ ೩೪ ॥ 'ಎಲವೋ ಪಾಪಿಯೇ! ಮೂರ್ಖನೇ! ಕಾಮಪೀಡಿತಳಾಗಿದ್ದ ನನ್ನ ಮನೋರಥವು ಪೂರೈಸುವುದರೊಳಗಾಗಿ ನೀನು ನನ್ನ ಪತಿಯನ್ನು ಭಕ್ಷಿಸಿದೆಯಾದ ಕಾರಣ ನೀನು ಗರ್ಭಾಧಾನಕ್ಕಾಗಿ ಪತ್ನಿಯನ್ನು ಸೇರಿದೊಡನೆ ನಿನಗೆ ಮೃತ್ಯುದೇವತೆಯು ಕಾಣಿಸಿಕೊಳ್ಳುತ್ತದೆ.' ॥ ೩೫ ॥ ಹೀಗೆ ಪತಿಲೋಕಪರಾಯಣೆಯಾದ ಬ್ರಾಹ್ಮಣಿಯು ಮಿತ್ರಸಹನಿಗೆ ಶಾಪವನ್ನಿತ್ತು, ಪತಿಯ ಅಸ್ಥಿಗಳನ್ನು ಸಂಗ್ರಹಿಸಿ ಚಿತೆಯನ್ನು ರಚಿಸಿ ಅದರ ಮೇಲಿಟ್ಟು ಧಗ-ಧಗಿಸುವ ಅಗ್ನಿಯಲ್ಲಿ ತಾನೂ ಧುಮುಕಿ ಪತಿಯೊಡನೆ ಸಹಗಮನ ಮಾಡಿ ಪತಿಯು ಪಡೆದ ಸದ್ಗತಿಯನ್ನೇ ತಾನೂ ಪಡೆದುಕೊಂಡಳು. ॥ ೩೬ ॥

ವಿಶಾಪೋ ದ್ವಾದಶಾಬ್ದಾಂತೇ ಮೈಥುನಾಯ ಸಮುದ್ಯತಃ ।
ವಿಜ್ಞಾಪ್ಯ ಬ್ರಾಹ್ಮಣೀಶಾಪಂ ಮಹಿಷ್ಯಾ ಸ ನಿವಾರಿತಃ ॥ ೩೭ ॥

ಅತ ಊರ್ಧ್ವಂ ಸ ತತ್ಯಾಜ ಸ್ತ್ರೀಸುಖಂ ಕರ್ಮಣಾಪ್ರಜಾಃ ।
ವಸಿಷ್ಠಸ್ತದನುಜ್ಞಾತೋ ಮದಯಂತ್ಯಾಂ ಪ್ರಜಾಮಧಾತ್ ॥ ೩೮ ॥

ಸಾ ವೈ ಸಪ್ತ ಸಮಾ ಗರ್ಭಮಬಿಭ್ರನ್ನ ವ್ಯಜಾಯತ ।
ಜಘ್ನೇಽಶ್ಮನೋದರಂ ತಸ್ಯಾಃ ಸೋಽಶ್ಮಕಸ್ತೇನ ಕಥ್ಯತೇ ॥ ೩೯ ॥

ಅಶ್ಮಕಾನ್ಮೂಲಕೋ ಜಜ್ಞೇ ಯಃ ಸ್ತ್ರೀಭಿಃ ಪರಿರಕ್ಷಿತಃ ।
ನಾರೀಕವಚ ಇತ್ಯುಕ್ತೋ ನಿಃಕ್ಷತ್ರೇ ಮೂಲಕೋಽಭವತ್ ॥ ೪೦ ॥

ತತೋ ದಶರಥಸ್ತಸ್ಮಾತ್ಪುತ್ರ ಐಡವಿಡಸ್ತತಃ ।
ರಾಜಾ ವಿಶ್ವಸಹೋ ಯಸ್ಯ ಖಟ್ವಾಂಗಶ್ಚಕ್ರವರ್ತ್ಯಭೂತ್ ॥ ೪೧ ॥

ಯೋ ದೇವೈರರ್ಥಿತೋ ದೈತ್ಯಾನವಧೀದ್ಯುಧಿ ದುರ್ಜಯಃ ।
ಮುಹೂರ್ತಮಾಯುರ್ಜ್ಞಾತ್ವೈತ್ಯ ಸ್ವಪುರಂ ಸಂದಧೇ ಮನಃ ॥ ೪೨ ॥

ನ ಮೇ ಬ್ರಹ್ಮಕುಲಾತ್ಪ್ರಾಣಾಃ ಕುಲದೈವಾನ್ನ ಚಾತ್ಮಜಾಃ ।
ನ ಶ್ರಿಯೋ ನ ಮಹೀ ರಾಜ್ಯಂ ನ ದಾರಾಶ್ಚಾತಿವಲ್ಲಭಾಃ ॥ ೪೩ ॥

ನ ಬಾಲ್ಯೇಽಪಿ ಮತಿರ್ಮಹ್ಯಮಧರ್ಮೇ ರಮತೇ ಕ್ವಚಿತ್ ।
ನಾಪಶ್ಯಮುತ್ತಮಶ್ಲೋಕಾದನ್ಯತ್ಕಿಂಚನ ವಸ್ತ್ವಹಮ್ ॥ ೪೪ ॥

ದೇವೈಃ ಕಾಮವರೋ ದತ್ತೋ ಮಹ್ಯಂ ತ್ರಿಭುವನೇಶ್ವರೈಃ ।
ನ ವೃಣೇ ತಮಹಂ ಕಾಮಂ ಭೂತಭಾವನಭಾವನಃ ॥ ೪೫ ॥

ಯೇ ವಿಕ್ಷಿಪ್ತೇಂದ್ರಿಯಧಿಯೋ ದೇವಾಸ್ತೇ ಸ್ವಹೃದಿ ಸ್ಥಿತಮ್ ।
ನ ವಿಂದಂತಿ ಪ್ರಿಯಂ ಶಶ್ವದಾತ್ಮಾನಂ ಕಿಮುತಾಪರೇ ॥ ೪೬ ॥

ಹನ್ನೆರಡು ವರ್ಷಗಳು ಕಳೆದ ಬಳಿಕ ಸೌದಾಸನು ಶಾಪಮುಕ್ತನಾದನು. ಸಂತೋಷಭರಿತನಾಗಿದ್ದ ರಾಜನು ಪತ್ನಿಯೊಡನೆ ಸಮಾಗಮಕ್ಕೆ ಹೋದಾಗ ಮದಯಂತಿಯು ಆತನನ್ನು ತಡೆದಳು. ಏಕೆಂದರೆ, ಅವಳಿಗೆ ಬ್ರಾಹ್ಮಣಿಯ ಶಾಪವೃತ್ತಾಂತವು ತಿಳಿದಿತ್ತು. ॥ ೩೭ ॥

ಅನಂತರ ರಾಜನು ಸ್ತ್ರೀಸುಖವನ್ನು ಪೂರ್ಣವಾಗಿ ಪರಿತ್ಯಜಿಸಿದನು. ಹೀಗೆ ಅವನು ತನ್ನ ಕರ್ಮಫಲದಿಂದಾಗಿ ಸಂತಾನಹೀನನಾದನು. ರಾಜನ ಅನುಮತಿಯನ್ನು ಪಡೆದು ವಸಿಷ್ಠರು ಮದಯಂತಿಗೆ ಗರ್ಭಾಧಾನಮಾಡಿದರು. ॥ ೩೮ ॥ ಮದಯಂತಿಯು ಏಳು ವರ್ಷಗಳವರೆಗೆ ಗರ್ಭಧಾರಣೆ ಮಾಡಿದಳು. ಆದರೆ ಅವಳಿಗೆ ಮಗು ಹುಟ್ಟಲಿಲ್ಲ. ಆಗ ವಸಿಷ್ಠರು ಅವಳ ಹೊಟ್ಟೆಯನ್ನು ಕಲ್ಲಿನಿಂದ ಕುಟ್ಟಿದಾಗ ಶಿಶುವಿನ ಜನನವಾಯಿತು. ಕಲ್ಲಿನ ಏಟಿನಿಂದ ಹುಟ್ಟಿದ್ದರಿಂದ ಆ ಮಗುವಿನ ಹೆಸರು ಅಶ್ಮಕವೆಂದಾಯಿತು. ॥ ೩೯ ॥ ಅಶ್ಮಕನಿಗೆ 'ಮೂಲಕ'ನೆಂಬುವನು ಪುತ್ರನಾದನು. ಪರಶುರಾಮನು ಪೃಥಿವಿಯನ್ನು ಕ್ಷತ್ರಿಯರಹಿತವನ್ನಾಗಿಸುತ್ತಿದ್ದಾಗ ಸ್ತ್ರೀಯರು ಮೂಲಕನನ್ನು ಅಡಗಿಸಿಟ್ಟಿದ್ದರು. ಇದರಿಂದ ಇವನಿಗೆ 'ನಾರೀಕವಚ' ಎಂದೂ ಹೆಸರಾಯಿತು. ಅವನು ಪೃಥಿವಿಯು ಕ್ಷತ್ರಿಯಹೀನವಾದಾಗ ಆ ವಂಶದ ಮೂಲ(ಪ್ರವರ್ತಕ)ನಾದ್ದರಿಂದ ಅವನನ್ನು 'ಮೂಲಕ'ನೆಂದು ಕರೆಯುತ್ತಿದ್ದರು. ॥ ೪೦ ॥ ಮೂಲಕನಿಗೆ ದಶರಥನು ಹುಟ್ಟಿದನು. ದಶರಥನಿಗೆ ಏಡವಿಡನಾದನು. ಏಡವಿಡನಿಗೆ ವಿಶ್ವಸಹ ರಾಜನಾದನು. ವಿಶ್ವಸಹನ ಪುತ್ರನೇ ಚಕ್ರವರ್ತಿ ಖಟ್ವಾಂಗರಾಜನಾದನು. ॥ ೪೧ ॥ ಯುದ್ಧದಲ್ಲಿ ಅವನು ಅಜೇಯನಾಗಿದ್ದನು. ದೇವತೆಗಳ ಪ್ರಾರ್ಥನೆಯಂತೆ ಅವನು ರಾಕ್ಷಸರನ್ನು ವಧಿಸಿದ್ದನು. ದೇವತೆಗಳಿಂದ ಅವನಿಗೆ ತನ್ನ ಆಯುಸ್ಸು, ಕೇವಲ ಎರಡೇ ಗಳಿಗೆಗಳು ಮಾತ್ರ ಉಳಿದಿದೆ ಎಂದು ತಿಳಿದಾಗ ಖಟ್ವಾಂಗನು ರಾಜಧಾನಿಗೆ ಮರಳಿ ತನ್ನ ಮನಸ್ಸನ್ನು ಭಗವಂತನಲ್ಲಿ ತೊಡಗಿಸಿದನು. ॥ ೪೨ ॥ ಅವನು ಮನಸ್ಸಿನಲ್ಲೇ ಅಂದುಕೊಂಡನು – 'ನನ್ನ ಕುಲದ ಇಷ್ಟದೇವರು ಬ್ರಾಹ್ಮಣರಾಗಿದ್ದಾರೆ. ಅವರಿಂದ ಹೊರತಾಗಿ ನನಗೆ ನನ್ನ ಪ್ರಾಣಗಳೂ ಪ್ರಿಯವಾಗಿಲ್ಲ. ಪತ್ನಿ, ಪುತ್ರರು, ಸಂಪತ್ತು, ರಾಜ್ಯ, ಪೃಥಿವಿಯೂ ಕೂಡ ನನಗೆ ಬ್ರಾಹ್ಮಣರಷ್ಟು ಪ್ರಿಯರಲ್ಲ. ॥ ೪೩ ॥ ಬಾಲ್ಯದಿಂದಲೂ ನನ್ನ ಮನಸ್ಸು ಎಂದಿಗೂ ಅಧರ್ಮದ ಕಡೆಗೆ ಹೋಗಲಿಲ್ಲ. ನಾನು ಪುಣ್ಯಶ್ಲೋಕನಾದ ಭಗವಂತನನ್ನು ಬಿಟ್ಟು ಬೇರೇನನ್ನೂ ಕಂಡಿಲ್ಲ. ॥ ೪೪ ॥ ಮೂರುಲೋಕಗಳ ಒಡೆಯರಾದ ದೇವತೆಗಳು ನನಗೆ ಬಯಸಿದ ವರವನ್ನು ಕೇಳಲು ಹೇಳಿದಾಗಲೂ, ನಾನು ಭೋಗಲಾಲಸೆಯಿಂದ ಆ ವರವನ್ನು ಪಡೆದುಕೊಳ್ಳಲಿಲ್ಲ. ಏಕೆಂದರೆ, ಸಮಸ್ತ ಪ್ರಾಣಿಗಳ ಜೀವನಪ್ರದನಾದ ಶ್ರೀಹರಿಯ ಧ್ಯಾನದಲ್ಲಿಯೇ ನನ್ನ ಮನಸ್ಸು ಲೀನವಾಗಿಬಿಟ್ಟಿತ್ತು. ॥ ೪೫ ॥ ದೇವತೆಗಳ ಇಂದ್ರಿಯಗಳು, ಮನಸ್ಸು ವಿಷಯಾದಿಗಳಲ್ಲಿ ರಮಿಸುವುದರಿಂದ, ಸತ್ತ್ವಗುಣ ಪ್ರಧಾನರಾಗಿದ್ದರೂ ತಮ್ಮ ಹೃದಯದಲ್ಲಿ ವಿರಾಜಮಾನನಾಗಿರುವ, ಸದಾಕಾಲ ಪ್ರಿಯತಮನರೂಪದಲ್ಲಿರುವ ಆತ್ಮಸ್ವರೂಪೀ ಭಗವಂತನನ್ನು ಅರಿಯರು. ಹಾಗಿರುವಾಗ ರಜೋಗುಣೀ ಮತ್ತು ತಮೋಗುಣಿಗಳಾದವರು ಹೇಗೆ ತಾನೆ ತಿಳಿಯಬಲ್ಲರು ? ॥ ೪೬ ॥

ಅಥೇಶಮಾಯಾರಚಿತೇಷು ಸಂಗಂ
ಗುಣೇಷು ಗಂಧರ್ವಪುರೋಪಮೇಷು ।
ರೂಢಂ ಪ್ರಕೃತ್ಯಾಽಽತ್ಮನಿ ವಿಶ್ವಕರ್ತುರ್-
ಭಾವೇನ ಹಿತ್ವಾ ತಮಹಂ ಪ್ರಪದ್ಯೇ ॥ ೪೭ ॥

ಅದಕ್ಕಾಗಿ ನಾನು ಈಗ ಈ ವಿಷಯಗಳಲ್ಲಿ ರಮಿಸುವುದಿಲ್ಲ. ಇದಾದರೋ ಮಾಯೆಯ ಆಟವಾಗಿದೆ. ಆಕಾಶದಲ್ಲಿ ಕಂಡು ಬರುವ ಮಿಥ್ಯೆಯಾದ ಗಂಧರ್ವನಗರಕ್ಕಿಂತ ಹೆಚ್ಚಿನ ಅಸ್ತಿತ್ವ ಇವುಗಳಿಗಿಲ್ಲ. ಇವುಗಳಾದರೋ ಅಜ್ಞಾನವಶದಿಂದಲೇ ಚಿತ್ತದಲ್ಲಿ ನೆಲೆಸಿವೆ. ಪ್ರಪಂಚದ ನಿಜವಾದ ಕರ್ತೃವಾದ ಭಗವಂತನ ಧ್ಯಾನದಲ್ಲಿ ಲೀನನಾಗಿ, ವಿಷಯಗಳನ್ನು ಬಿಟ್ಟು ಕೇವಲ ಅವನನ್ನೇ ಶರಣು ಹೊಂದುತ್ತೇನೆ. ॥ ೪೭ ॥

ಇತಿ ವ್ಯವಸಿತೋ ಬುದ್ಧ್ಯಾ ನಾರಾಯಣಗೃಹೀತಯಾ ।
ಹಿತ್ವಾನ್ಯಭಾವಮಜ್ಞಾನಂ ತತಃ ಸ್ವಂ ಭಾವಮಾಶ್ರಿತಃ
॥ ೪೮ ॥

ಪರೀಕ್ಷಿತನೇ ! ಭಗವಂತನು ಖಟ್ವಾಂಗನ ಬುದ್ಧಿಯನ್ನು ಮೊದಲಿಂದಲೇ ತನ್ನತ್ತ ಸೆಳೆದು ಕೊಂಡಿದ್ದನು. ಇದರಿಂದ ಅವನು ಅಂತ್ಯಸಮಯದಲ್ಲಿ ಇಂತಹ ನಿಶ್ಚಯ ಮಾಡಲು ಸಾಧ್ಯವಾಯಿತು. ಈಗ ಅವನು ಶರೀರಾದಿ ಅನಾತ್ಮ ಪದಾರ್ಥಗಳಲ್ಲಿದ್ದ ಅಜ್ಞಾನ ಮೂಲವಾದ ಆತ್ಮ ಭಾವವನ್ನು ಪರಿತ್ಯಜಿಸಿ ತನ್ನ ವಾಸ್ತವಿಕ ಆತ್ಮ ಸ್ವರೂಪದಲ್ಲಿ ಸ್ಥಿತನಾದನು. ॥ ೪೮ ॥

ಯತ್ತದ್ಬ್ರಹ್ಮ ಪರಂ ಸೂಕ್ಷ್ಮಮಶೂನ್ಯಂ ಶೂನ್ಯಕಲ್ಪಿತಮ್ ।
ಭಗವಾನ್ವಾಸುದೇವೇತಿ ಯಂ ಗೃಣಂತಿ ಹಿ ಸಾತ್ವತಾಃ
॥ ೪೯ ॥

ಆ ಸ್ವರೂಪವು ಸಾಕ್ಷಾತ್ ಪರಬ್ರಹ್ಮವಾಗಿದೆ. ಅದು ಸೂಕ್ಷ್ಮಕ್ಕೂ ಸೂಕ್ಷ್ಮವಾಗಿದ್ದು ಶೂನ್ಯದಂತೆ ಇದೆ. ಆದರೆ ಅದು ಶೂನ್ಯವಲ್ಲ ಪೂರ್ಣ, ಪರಮಸತ್ಯವಾಗಿದೆ. ಪರಮ ಭಕ್ತರು ಅದನ್ನೇ 'ಭಗವಾನ್ ವಾಸುದೇವ' ಎಂಬ ಹೆಸರಿನಿಂದ ವರ್ಣಿಸುತ್ತಾ ಇರುವರು. ॥ ೪೯ ॥

ಒಂಬತ್ತನೆಯ ಅಧ್ಯಾಯವು ಮುಗಿಯಿತು. ॥ ೯ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ನವಮಸ್ಕಂಧೇ
ಸೂರ್ಯವಂಶಾನುವರ್ಣನೇ ನವಮೋಽಧ್ಯಾಯಃ ॥ ೯ ॥

ಹತ್ತನೆಯ ಅಧ್ಯಾಯ

ಭಗವಾನ್ ಶ್ರೀರಾಮನ ಲೀಲಾವರ್ಣನೆಗಳು

ಶ್ರೀಶುಕ ಉವಾಚ

ಖಟ್ವಾಂಗಾದ್ದೀರ್ಘಬಾಹುಶ್ಚ ರಘುಸ್ತಸ್ಮಾತ್ ಪೃಥುಶ್ರವಾಃ ।
ಅಜಸ್ತತೋ ಮಹಾರಾಜಸ್ತಸ್ಮಾದ್ ದಶರಥೋಽಭವತ್
॥ ೧ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಎಲೈ ಪರೀಕ್ಷಿತನೇ ! ಖಟ್ವಾಂಗನಿಗೆ ದೀರ್ಘಬಾಹು ಎಂಬ ಪುತ್ರನಿದ್ದನು. ಅವನಿಂದ ಪರಮಯಶಸ್ವೀ ರಘು ಜನಿಸಿದನು. ರಘುವಿನಿಂದ ಅಜನೂ, ಅಜನಿಂದ ದಶರಥ ಮಹಾರಾಜನು ಜನಿಸಿದನು. ॥ ೧ ॥

ತಸ್ಯಾಪಿ ಭಗವಾನೇಷ ಸಾಕ್ಷಾದ್ಬ್ರಹ್ಮಮಯೋ ಹರಿಃ ।
ಅಂಶಾಂಶೇನ ಚತುರ್ಧಾಗಾತ್ಪುತ್ರತ್ವಂ ಪ್ರಾರ್ಥಿತಃ ಸುರೈಃ ।
ರಾಮಲಕ್ಷ್ಮಣಭರತಶತ್ರುಘ್ನಾ ಇತಿ ಸಂಜ್ಞಯಾ
॥ ೨ ॥

ದೇವತೆಗಳ ಪ್ರಾರ್ಥನೆಯಂತೆ ಸಾಕ್ಷಾತ್ ಪರಬ್ರಹ್ಮ ಪರಮಾತ್ಮನಾದ ಭಗವಾನ್ ಶ್ರೀಹರಿಯು ತನ್ನ ಅಂಶಾಂಶಗಳಿಂದ ನಾಲ್ಕು ರೂಪಗಳನ್ನು ಧರಿಸಿ ದಶರಥಮಹಾರಾಜನಿಗೆ ಪುತ್ರರೂಪನಾದನು. ಅವರ ಹೆಸರು – ರಾಮ, ಲಕ್ಷ್ಮಣ, ಭರತ ಮತ್ತು ಶತ್ರುಘ್ನ ಎಂಬುದಾಗಿದ್ದವು. ॥ ೨ ॥

ತಸ್ಯಾನುಚರಿತಂ ರಾಜನ್ನೃಷಿಭಿಸ್ತತ್ತ್ವದರ್ಶಿಭಿಃ ।
ಶ್ರುತಂ ಹಿ ವರ್ಣಿತಂ ಭೂರಿ ತ್ವಯಾ ಸೀತಾಪತೇರ್ಮುಹುಃ
॥ ೩ ॥

ಪರೀಕ್ಷಿತನೇ ! ಸೀತಾಪತಿ ಭಗವಾನ್ ಶ್ರೀರಾಮನ ಚರಿತ್ರೆಯಾದರೋ ತತ್ತ್ವದರ್ಶಿಗಳಾದ ಋಷಿಗಳು ಬಹಳವಾಗಿ ವರ್ಣಿಸಿರುವರು. ನೀನು ಅದನ್ನು ಅನೇಕಬಾರಿ ಕೇಳಿಯೂ ಇರುವೆ. ॥ ೩ ॥

ಗುರ್ವರ್ಥೇ ತ್ಯಕ್ತರಾಜ್ಯೋ ವ್ಯಚರದನುವನಂ
ಪದ್ಮಪದ್ಭ್ಯಾಂ ಪ್ರಿಯಾಯಾಃ
ಪಾಣಿಸ್ಪರ್ಶಾಕ್ಷಮಾಭ್ಯಾಂ ಮೃಜಿತಪಥರುಜೋ-
ಯೋ ಹರೀಂದ್ರಾನುಜಾಭ್ಯಾಮ್ ।

ಭಗವಂತನಾದ ಶ್ರೀರಾಮನು ತನ್ನ ತಂದೆ ದಶರಥನ ವಾಕ್ಯವನ್ನು ಸತ್ಯವಾಗಿಸಲು ರಾಜ್ಯಸಿಂಹಾಸನವನ್ನು ಪರಿತ್ಯಜಿಸಿ ಕಾಡಾಡಿಯಾಗಿ ಸಂಚರಿಸಿದನು. ಪರಮ ಸುಕುಮಾರಿಯಾದ ಜಾನಕಿಯ ಕರಸ್ಪರ್ಶವನ್ನೂ ಸಹಿಸದಷ್ಟು ಸುಕೋಮಲವಾಗಿದ್ದವು ಶ್ರೀರಾಮಚಂದ್ರನ ಚರಣಗಳು. ಅಂತಹ ಚರಣಕಮಲಗಳು ವನದಲ್ಲಿ ಸಂಚರಿಸು

ವೈರೂಪ್ಯಾಚ್ಛೂರ್ಪಣಖ್ಯಾಃ ಪ್ರಿಯವಿರಹರುಷಾಽಽ-
ರೋಪಿತಭ್ರೂವಿಜೃಂಭ-
ತ್ರಸ್ತಾಬ್ಧಿರ್ಬದ್ಧಸೇತುಃ ಖಲದವದಹನಃ
ಕೋಸಲೇಂದ್ರೋಽವತಾನ್ನಃ ॥ ೪ ॥

ವಿಶ್ವಾಮಿತ್ರಾಧ್ವರೇ ಯೇನ ಮಾರೀಚಾದ್ಯಾ ನಿಶಾಚರಾಃ ।
ಪಶ್ಯತೋ ಲಕ್ಷ್ಮಣಸ್ಯೈವ ಹತಾ ನೈರ್ಋತಪುಂಗವಾಃ
॥ ೫ ॥

ಯೋ ಲೋಕವೀರಸಮಿತೌ ಧನುರೈಶಮುಗ್ರಂ
ಸೀತಾಸ್ವಯಂವರಗೃಹೇ ತ್ರಿಶತೋಪನೀತಮ್ ।
ಆದಾಯ ಬಾಲಗಜಲೀಲ ಇವೇಕ್ಷುಯಷ್ಟಿಂ
ಸಜ್ಜೀಕೃತಂ ನೃಪ ವಿಕೃಷ್ಯ ಬಭಂಜ ಮಧ್ಯೇ ॥ ೬ ॥

ಜಿತ್ವಾನುರೂಪಗುಣಶೀಲವಯೋಽಙ್ಗರೂಪಾಂ
ಸೀತಾಭಿಧಾಂ ಶ್ರಿಯಮುರಸ್ಯಭಿಲಬ್ಧಮಾನಾಮ್ ।
ಮಾರ್ಗೇ ವ್ರಜನ್ ಭೃಗುಪತೇರ್ವ್ಯನಯತ್ಪ್ರರೂಢಂ
ದರ್ಪಂ ಮಹೀಮಕೃತ ಯಸ್ತ್ರಿರರಾಜಬೀಜಾಮ್ ॥ ೭ ॥

ಯಃ ಸತ್ಯಪಾಶಪರಿವೀತಪಿತುರ್ನಿದೇಶಂ
ಸ್ತ್ರೈಣಸ್ಯ ಚಾಪಿ ಶಿರಸಾ ಜಗೃಹೇ ಸಭಾರ್ಯಃ ।
ರಾಜ್ಯಂ ಶ್ರಿಯಂ ಪ್ರಣಯಿನಃ ಸುಹೃದೋ ನಿವಾಸಂ
ತ್ಯಕ್ತ್ವಾ ಯಯೌ ವನಮಸೂನಿವ ಮುಕ್ತಸಂಗಃ ॥ ೮ ॥

ರಕ್ಷಸ್ಸ್ವಸುರ್ವ್ಯಕೃತ ರೂಪಮಶುದ್ಧಬುದ್ಧೇ-
ಸ್ತಸ್ಯಾಃ ಖರತ್ರಿಶಿರದೂಷಣಮುಖ್ಯಬಂಧೂನ್ ।
ಜಘ್ನೇ ಚತುರ್ದಶ ಸಹಸ್ರಮಪಾರಣೀಯ-
ಕೋದಂಡಪಾಣಿರಟಮಾನ ಉವಾಸ ಕೃಚ್ಛ್ರಮ್ ॥ ೯ ॥

ವಾಗ, ದಣಿದಾಗ ಹನುಮಂತ ಮತ್ತು ಲಕ್ಷ್ಮಣರು ಅವನನ್ನು ಒತ್ತುತ್ತಾ ದಣಿವಾರಿಸುತ್ತಿದ್ದರು. ಶೂರ್ಪಣಖಿಯ ಕಿವಿ-ಮೂಗುಗಳನ್ನು ಕತ್ತರಿಸಿ ಅವಳನ್ನು ವಿರೂಪಗೊಳಿಸಿದುದರಿಂದ ಪ್ರಿಯತಮೆಯಾದ ಸೀತೆಯ ವಿಯೋಗದುಃಖವನ್ನು ಶ್ರೀರಾಮನು ಸಹಿಸಬೇಕಾಯಿತು. ಈ ವಿಯೋಗದಿಂದ ಕ್ರುದ್ಧನಾದ ಶ್ರೀರಾಮನ ಹುಬ್ಬುಗಳು ಗಂಟಿಕ್ಕಿದುವು. ಇದನ್ನು ನೋಡಿದ ಸಮುದ್ರರಾಜನೂ ಭಯಗೊಂಡನು. ಇದಾದ ಬಳಿಕ ಶ್ರೀರಾಮನು ಸಮುದ್ರಕ್ಕೆ ಸೇತುವೆಯನ್ನು ಕಟ್ಟಿ, ಲಂಕೆಗೆ ಹೋಗಿ ದುಷ್ಟರಾದ ರಾಕ್ಷಸರನ್ನು ಕಾಡ್ಗಿಚ್ಚು ಕಾಡನ್ನು ಸುಟ್ಟುಬಿಡುವಂತೆ ಭಸ್ಮಮಾಡಿಬಿಟ್ಟನು. ಅಂತಹ ಕೋಸಲೇಂದ್ರನಾದ ಶ್ರೀರಾಮನು ನಮ್ಮನ್ನು ರಕ್ಷಿಸಲಿ. ॥ ೪ ॥

ಭಗವಾನ್ ಶ್ರೀರಾಮನು ವಿಶ್ವಾಮಿತ್ರನ ಯಜ್ಞರಕ್ಷಣೆಯಲ್ಲಿ ಲಕ್ಷ್ಮಣನ ಸಮಕ್ಷಮದಲ್ಲಿ ಮಾರೀಚನೇ ಮೊದಲಾದ ಮಹಾ ರಾಕ್ಷಸರನ್ನು ಸಂಹರಿಸಿದನು. ॥ ೫ ॥ ಪರೀಕ್ಷಿತನೇ! ಜನಕಪುರಿಯಲ್ಲಿ ಸೀತಾಸ್ವಯಂವರದ ಸಿದ್ಧತೆಗಳಾಗುತ್ತಿದ್ದುವು. ಜಗತ್ತಿನಲ್ಲಿ ವೀರರೆನಿಸಿಕೊಂಡಿರುವರೆಲ್ಲರೂ ಅಲ್ಲಿಗೆ ಆಗಮಿಸಿದ್ದರು. ಆ ಎಲ್ಲ ವೀರರ ಮಧ್ಯದಲ್ಲಿ ಭಯಂಕರವಾದ ಭಗವಾನ್ ಶಿವನ ಧನುಸ್ಸನ್ನು ಇರಿಸಲಾಗಿತ್ತು. ಅದು ಎಷ್ಟು ಭಾರವಾಗಿತ್ತೆಂದರೆ – ಮೂರುನೂರು ವೀರಭಟರಿಂದ ಬಹು ಪ್ರಯಾಸದಿಂದ ಅದನ್ನು ಸ್ವಯಂವರ ಮಂಟಪಕ್ಕೆ ತರಲಾಗಿತ್ತು. ಅಂತಹ ಧನುಸ್ಸನ್ನು ಮೇಲಕ್ಕೆತ್ತಿ ಅದನ್ನು ಹೆದೆಯೇರಿಸಿ ನಾಣನ್ನು ಸೆಳೆದೊಡನೆಯೇ ಆ ಧನುಸ್ಸು ಮಧ್ಯದಲ್ಲಿ ಮುರಿದು ಎರಡು ತುಂಡಾಗಿ ಕೆಳಕ್ಕೆ ಬಿತ್ತು. ॥ ೬ ॥ ಭಗವಂತನು ತನ್ನ ವಕ್ಷಸ್ಥಳದಲ್ಲಿ ಧರಿಸಿಕೊಂಡು ಸಮ್ಮಾನಿತಳಾದ ಶ್ರೀಲಕ್ಷ್ಮೀದೇವಿಯೇ ಸೀತೆಯಾಗಿ ಜನಕನ ಪಟ್ಟಣದಲ್ಲಿ ಅವತರಿಸಿದ್ದಳು. ಅವಳು ಗುಣ, ಶೀಲ, ವಯಸ್ಸು, ಆಕೃತಿ ಮತ್ತು ರೂಪಗಳಲ್ಲಿ ಶ್ರೀರಾಮನಿಗೆ ಅನುರೂಪಳಾಗಿದ್ದಳು. ಭಗವಂತನು ಧನುಸ್ಸನ್ನು ಭಂಜಿಸಿ ಸೀತೆಯನ್ನು ಗೆದ್ದುಕೊಂಡಿದ್ದನು. ಅಲ್ಲಿಂದ ಅಯೋಧ್ಯೆಗೆ ಮರಳಿ ಬರುವಾಗ ದಾರಿಯಲ್ಲಿ ಇಪ್ಪತ್ತೊಂದು ಬಾರಿ ಭೂಮಂಡಲದ ಕ್ಷತ್ರಿಯರನ್ನೆಲ್ಲ ಸಂಹರಿಸಿದ ಪರಶುರಾಮರು ಭೆಟ್ಟಿಯಾದರು. ಭಗವಾನ್ ಶ್ರೀರಾಮನು ಪರಶುರಾಮರ ಬೆಳೆದಿರುವ ಗರ್ವವನ್ನು ಅಡಗಿಸಿದನು. ॥ ೭ ॥ ಇದಾದ ಬಳಿಕ ತಂದೆಯ ಮಾತನ್ನು ಸತ್ಯವಾಗಿಸಲು ಶ್ರೀರಾಮನು ವನವಾಸವನ್ನು ಕೈಗೊಂಡನು. ಮಹಾರಾಜಾ ದಶರಥನು ತನ್ನ ಪತ್ನಿಗೆ ಅಧೀನನಾಗಿಯೇ ಅವಳಿಗೆ ಅಂತಹ ಮಾತನ್ನು ಕೊಟ್ಟಿದ್ದನು. ಏಕೆಂದರೆ, ಅವನು ಸತ್ಯವೆಂಬ ಬಂಧನದಿಂದ ಕಟ್ಟಲ್ಪಟ್ಟಿದ್ದನು. ಅದಕ್ಕಾಗಿ ಭಗವಂತನು ತನ್ನ ತಂದೆಯ ಆಜ್ಞೆಯನ್ನು ಶಿರಸಾವಹಿಸಿಕೊಂಡು ಅನಾಸಕ್ತ ಪುರುಷನು ತನ್ನ ಪ್ರಾಣಗಳನ್ನು ತ್ಯಜಿಸುವಂತೆ – ರಾಜ್ಯವನ್ನೂ, ಐಶ್ವರ್ಯವನ್ನೂ, ಪ್ರಿಯರನ್ನೂ, ಹಿತೈಷಿಗಳನ್ನೂ, ಮಿತ್ರರನ್ನೂ, ಅರಮನೆಯನ್ನೂ ಬಿಟ್ಟು ತನ್ನ ಪತ್ನಿಯೊಂದಿಗೆ ಅರಣ್ಯಕ್ಕೆ ಹೊರಟನು. ಏಕೆಂದರೆ, ಅವನಿಗೆ ಯಾರ ಕುರಿತು ಯಾವುದೇ ಆಸಕ್ತಿ ಇರಲಿಲ್ಲ. ॥ ೮ ॥ ಹಾಗೆ ತೆರಳಿ ಭಗವಂತನು ಅಲ್ಲಿ ರಾಕ್ಷಸರಾಜನಾದ ರಾವಣನ ತಂಗಿಯಾದ ಶೂರ್ಪಣಖಿಯನ್ನು ವಿರೂಪಗೊಳಿಸಿದನು. ಏಕೆಂದರೆ, ಅವಳ ಬುದ್ಧಿಯು ಬಹಳ ಕಲುಷಿತ, ಕಾಮವಾಸನೆಯಿಂದ ಅಶುದ್ಧವಾಗಿತ್ತು. ಅವಳ ಮುಖ್ಯ ಬಂಧುಗಳಾದ

ಸೀತಾಕಥಾಶ್ರವಣದೀಪಿತಹೃಚ್ಛಯೇನ
ಸೃಷ್ಟಂ ವಿಲೋಕ್ಯ ನೃಪತೇ ದಶಕಂಧರೇಣ ।
ಜಘ್ನೇಽದ್ಭುತೈಣವಪುಷಾಽಽಶ್ರಮತೋಽಪಕೃಷ್ಟೋ
ಮಾರೀಚಮಾಶು ವಿಶಿಖೇನ ಯಥಾ ಕಮುಗ್ರಃ ॥ ೧೦ ॥

ರಕ್ಷೋಽಧಮೇನ ವೃಕವದ್ವಿಪಿನೇಽಸಮಕ್ಷಂ
ವೈದೇಹರಾಜದುಹಿತರ್ಯಪಯಾಪಿತಾಯಾಮ್ ।
ಭ್ರಾತ್ರಾ ವನೇ ಕೃಪಣವತ್ಪ್ರಿಯಯಾ ವಿಯುಕ್ತಃ
ಸ್ತ್ರೀಸಂಗಿನಾಂ ಗತಿಮಿತಿ ಪ್ರಥಯಂಶ್ಚಚಾರ ॥ ೧೧ ॥

ದಗ್ಧ್ವಾಽಽತ್ಮಕೃತ್ಯಹತಕೃತ್ಯಮಹನ್ ಕಬಂಧಂ
ಸಖ್ಯಂ ವಿಧಾಯ ಕಪಿಭಿರ್ದಯಿತಾಗತಿಂ ತೈಃ ।
ಬುದ್ಧ್ವಾಥ ವಾಲಿನಿ ಹತೇ ಪ್ಲವಗೇಂದ್ರಸೈನ್ಯೈ-
ರ್ವೇಲಾಮಗಾತ್ಸ ಮನುಜೋಽಜಭವಾರ್ಚಿತಾಂಘ್ರಿಃ ॥ ೧೨ ॥

ಯದ್ರೋಷವಿಭ್ರಮವಿವೃತ್ತಕಟಾಕ್ಷಪಾತ-
ಸಂಭ್ರಾಂತನಕ್ರಮಕರೋ ಭಯಗೀರ್ಣಘೋಷಃ ।
ಸಿಂಧುಃ ಶಿರಸ್ಯರ್ಹಣಂ ಪರಿಗೃಹ್ಯ ರೂಪೀ
ಪಾದಾರವಿಂದಮುಪಗಮ್ಯ ಬಭಾಷ ಏತತ್ ॥ ೧೩ ॥

ನ ತ್ವಾಂ ವಯಂ ಜಡಧಿಯೋ ನು ವಿದಾಮ ಭೂಮನ್
ಕೂಟಸ್ಥಮಾದಿಪುರುಷಂ ಜಗತಾಮಧೀಶಮ್ ।
ಯತ್ಸತ್ತ್ವತಃ ಸುರಗಣಾ ರಜಸಃ ಪ್ರಜೇಶಾ
ಮನ್ಯೋಶ್ಚ ಭೂತಪತಯಃ ಸ ಭವಾನ್ಗುಣೇಶಃ ॥ ೧೪ ॥

ಖರ-ತ್ರಿಶಿರ-ದೂಷಣರನ್ನು ಹಾಗೂ ಹದಿನಾಲ್ಕು ಸಾವಿರ ರಾಕ್ಷಸರನ್ನೂ ಸಂಹರಿಸಿದನು. ಶತ್ರುಗಳಿಂದ ಎದುರಿಸಲು ಅಸಾಧ್ಯವಾದ ಕೋದಂಡವನ್ನು ಧರಿಸಿದ್ದ ಶ್ರೀರಾಮನು ಅರಣ್ಯದಲ್ಲಿ ಸಂಚರಿಸುತ್ತಾ ಬಹಳ ಕಷ್ಟದಿಂದ ಕಾಲಕಳೆಯುತ್ತಿದ್ದನು. ॥ ೯ ॥ ಪರೀಕ್ಷಿತನೇ! ಸೀತಾದೇವಿಯ ರೂಪ ಲಾವಣ್ಯಗಳನ್ನು ಶೂರ್ಪಣಖಿಯಿಂದ ಕೇಳಿದ ರಾವಣನು ಕಾಮಾತುರನಾದನು. ಅವನು ಮಾರೀಚನನ್ನು ಅದ್ಭುತವಾದ ಜಿಂಕೆಯ ವೇಷದಲ್ಲಿ ಶ್ರೀರಾಮನ ಪರ್ಣಕುಟಿಯ ಬಳಿಗೆ ಕಳಿಸಿದನು. ಮಾರೀಚನು ನಿಧಾನವಾಗಿ ಭಗವಂತನನ್ನು ದೂರಕ್ಕೆ ಕೊಂಡೊಯ್ದನು ಕೊನೆಗೆ ಶ್ರೀರಾಮನು ತನ್ನ ಬಾಣದಿಂದ ಅವನನ್ನು ದಕ್ಷಪ್ರಜಾಪತಿಯನ್ನು ವೀರಭದ್ರನು ಸಂಹರಿಸಿದಂತೆ ಕ್ಷಣಮಾತ್ರದಲ್ಲಿ ಸಂಹರಿಸಿಬಿಟ್ಟನು. ॥ ೧೦ ॥ ಭಗವಾನ್ ಶ್ರೀರಾಮನು ಆಶ್ರಮದಿಂದ ಬಹಳ ದೂರ ಹೋಗಿರಲಾಗಿ, ಲಕ್ಷ್ಮಣನೂ ಆಶ್ರಮದಲ್ಲಿರದಿದ್ದಾಗ ನೀಚನಾದ ರಾಕ್ಷಸ ರಾವಣನು ತೋಳವು ಕುರಿಮರಿಯನ್ನು ಅಪಹರಿಸುವಂತೆ ವಿದೇಹನಂದಿನಿಯಾದ, ಸುಕುಮಾರಿಯಾದ ಶ್ರೀಸೀತಾದೇವಿಯನ್ನು ಅಪಹರಿಸಿ ಕೊಂಡುಹೋದನು. ಹೀಗೆ ಪ್ರಾಣಪ್ರಿಯಳಾದ ಸೀತೆಯಿಂದ ಅಗಲಿದ ಶ್ರೀರಾಮನು ಲಕ್ಷ್ಮಣನೊಡನೆ ಕಾಡಿನಲ್ಲಿ ದೀನನಂತೆ ಅಲೆದಾಡುತ್ತಿದ್ದನು. ತನ್ನ ದುರವಸ್ಥೆಯಿಂದಾಗಿ ರಾಮನು ಸ್ತ್ರೀಸಂಗಿಗಳಾದ ಸಂಸಾರಿಗಳಿಗೆ ಇದೇ ವಿಧವಾದ ಪರಿಸ್ಥಿತಿಯುಂಟಾಗುವುದೆಂಬುದನ್ನು ಪ್ರಸಿದ್ಧಪಡಿಸುತ್ತಾ ಸಂಚರಿಸುತ್ತಿದ್ದನು. ॥ ೧೧ ॥ ಬಳಿಕ ಶ್ರೀರಾಮನು ಭಗವತ್ಸೇವಾರೂಪವಾದ ಕರ್ಮದಿಂದ ಮೊದಲೇ ಕರ್ಮಬಂಧನದಿಂದ ಮುಕ್ತನಾದ ಜಟಾಯುವಿಗೆ ದಾಹಸಂಸ್ಕಾರ ಮಾಡಿದನು. ಮತ್ತೆ ಕಬಂಧನನ್ನು ಸಂಹರಿಸಿದನು. ಅನಂತರ ಸುಗ್ರೀವಾದಿ ವಾನರರೊಂದಿಗೆ ಸ್ನೇಹವನ್ನು ಬೆಳೆಸಿ ವಾಲಿಯನ್ನು ವಧಿಸಿ, ವಾನರರ ಮೂಲಕ ತನ್ನ ಪ್ರಾಣಪ್ರಿಯೆಯು ಎಲ್ಲಿರುವಳೆಂದು ತಿಳಿದುಕೊಂಡನು. ಬ್ರಹ್ಮರುದ್ರರಿಂದ ಅರ್ಚಿಸಲ್ಪಡುವ ಪಾದಪದ್ಮಗಳುಳ್ಳ, ಮನುಷ್ಯರಂತೆ ಲೀಲೆಯಾಡುತ್ತಿರುವ ಭಗವಾನ್ ಶ್ರೀರಾಮನು ಕಪಿಗಳ ಸೈನ್ಯದೊಂದಿಗೆ ಸಮುದ್ರತೀರಕ್ಕೆ ತಲುಪಿದನು. ॥ ೧೨ ॥ ಅಲ್ಲಿ ಉಪವಾಸ ವ್ರತದಿಂದಾಗಲೀ, ಪ್ರಾರ್ಥನೆಯಿಂದಾಗಲೀ ಸಮುದ್ರರಾಜನ ಮೇಲೆ ಯಾವುದೇ ಪ್ರಭಾವ ಬೀಳದಿದ್ದಾಗ ಭಗವಂತನು ಕ್ರೋಧದ ಲೀಲೆಯನ್ನು ತೋರುತ್ತಾ ತನ್ನ ಉಗ್ರವಾದ ಓರೆನೋಟದಿಂದ ಸಮುದ್ರರಾಜನನ್ನು ನೋಡಿದನು. ಆಗಲೇ ಸಮುದ್ರದ ದೊಡ್ಡ ದೊಡ್ಡ ಮೀನು, ಮೊಸಳೆಗಳು ಭ್ರಾಂತವಾದವು. ಭಯದಿಂದಾಗಿ ಸಮುದ್ರದ ಗರ್ಜನೆ ಉಡುಗಿಹೋಯಿತು. ಆಗ ಸಮುದ್ರನು ಶರೀರಿಯಾಗಿ ತನ್ನ ತಲೆಯಲ್ಲಿ ಅನರ್ಘ್ಯವಾದ ಉಪಹಾರಗಳನ್ನು ಹೊತ್ತುಕೊಂಡು ಬಂದು ಭಗವಂತನ ಚರಣಕಮಲಗಳಲ್ಲಿ ಶರಣಾಗಿ ಇಂತೆಂದನು. ॥ ೧೩ ॥ ಓ ಅನಂತನೇ! ನಾವು ಮೂರ್ಖರಾಗಿರುವುದರಿಂದ ನಿನ್ನ ನಿಜವಾದ ಸ್ವರೂಪವನ್ನು ತಿಳಿಯೆವು. ನೀನು ಸಮಸ್ತ ಜಗತ್ತಿನ ಏಕಮಾತ್ರ ಸ್ವಾಮಿಯೂ, ಆದಿಕಾರಣನೂ, ಜಗತ್ತಿನ ಪರಿವರ್ತನೆಗಳಲ್ಲಿ ವಿಕಾರನೂ ಆಗಿರುವೆ. ನೀನು ಸಮಸ್ತ ಗುಣಗಳ

ಕಾಮಂ ಪ್ರಯಾಹಿ ಜಹಿ ವಿಶ್ರವಸೋಽವಮೇಹಂ
ತ್ರೈಲೋಕ್ಯರಾವಣಮವಾಪ್ನುಹಿ ವೀರ ಪತ್ನೀಮ್ ।
ಬಧ್ನೀಹಿ ಸೇತುಮಿಹ ತೇ ಯಶಸೋ ವಿತತ್ಯೈ
ಗಾಯಂತಿ ದಿಗ್ವಿಜಯಿನೋ ಯಮುಪೇತ್ಯ ಭೂಪಾಃ ॥ ೧೫ ॥

ಸ್ವಾಮಿ ಯಾಗಿರುವೆ. ಇದರಿಂದ ನೀನು ಸತ್ತ್ವಗುಣವನ್ನು ಸ್ವೀಕರಿಸಿದಾಗ ದೇವತೆಗಳ, ರಜೋಗುಣವನ್ನು ಸ್ವೀಕರಿಸಿದಾಗ ಪ್ರಜಾಪತಿಗಳ, ತಮೋಗುಣವನ್ನು ಸ್ವೀಕರಿಸಿದಾಗ ನಿನ್ನ ಕ್ರೋಧದಿಂದ ರುದ್ರಗಣಗಳ ಉತ್ಪತ್ತಿಯಾಗುತ್ತದೆ. ॥ ೧೪ ॥

ವೀರಶಿರೋಮಣಿಯೇ! ನೀನು ನಿನ್ನ ಇಚ್ಛಾನುಸಾರವಾಗಿ ನನ್ನನ್ನು (ಸಮುದ್ರವನ್ನು) ದಾಟಿಕೊಂಡು ಹೋಗಬಹುದು. ಮೂರು ಲೋಕಗಳನ್ನು ಗೋಳಾಡಿಸುತ್ತಿರುವ ವಿಶ್ರವಸನ ಕುಪುತ್ರನಾದ ರಾವಣನನ್ನು ಸಂಹರಿಸಿ ನಿನ್ನ ಪತ್ನಿಯನ್ನು ಶೀಘ್ರವಾಗಿ ಪಡೆದುಕೋ. ಆದರೆ ನನ್ನದೊಂದು ಪ್ರಾರ್ಥನೆಯಿದೆ. ನೀನು ಇಲ್ಲಿ ನನ್ನಮೇಲೆ ಒಂದು ಸೇತುವೆಯನ್ನು ನಿರ್ಮಿಸು. ಇದರಿಂದ ನಿನ್ನ ಕೀರ್ತಿಯ ವಿಸ್ತಾರವಾಗುವುದು ಹಾಗೂ ಮುಂದೆ ಮಹಾ-ಮಹಾ ನರಪತಿಗಳು ದಿಗ್ವಿಜಯಮಾಡುತ್ತಾ ಇಲ್ಲಿಗೆ ಬಂದಾಗ ಅವರು ನಿನ್ನ ಕೀರ್ತಿಯ ಗುಣಗಾನಮಾಡುವರು.॥ ೧೫ ॥

ಬದ್ಧ್ವೋದಧೌ ರಘುಪತಿರ್ವಿವಿಧಾದ್ರಿಕೂಟೈಃ
ಸೇತುಂ ಕಪೀಂದ್ರಕರಕಂಪಿತಭೂರುಹಾಂಗೈಃ ।
ಸುಗ್ರೀವನೀಲಹನುಮತ್ಪ್ರಮುಖೈರನೀಕೈಃ
ಲಂಕಾಂ ವಿಭೀಷಣದೃಶಾಽಽವಿಶದಗ್ರದಗ್ಧಾಮ್ ॥ ೧೬ ॥

ಸಾ ವಾನರೇಂದ್ರಬಲರುದ್ಧವಿಹಾರಕೋಷ್ಠ-
ಶ್ರೀದ್ವಾರಗೋಪುರಸದೋವಲಭೀವಿಟಂಕಾ ।
ನಿರ್ಭಜ್ಯಮಾನಧಿಷಣಧ್ವಜಹೇಮಕುಂಭ-
ಶೃಂಗಾಟಕಾ ಗಜಕುಲೈರ್ಹ್ರದಿನೀವ ಘೂರ್ಣಾ ॥ ೧೭ ॥

ರಕ್ಷಃಪತಿಸ್ತದವಲೋಕ್ಯ ನಿಕುಂಭಕುಂಭ-
ಧೂಮ್ರಾಕ್ಷದುರ್ಮುಖಸುರಾಂತನರಾಂತಕಾದೀನ್ ।
ಪುತ್ರಂ ಪ್ರಹಸ್ತಮತಿಕಾಯವಿಕಂಪನಾದೀನ್
ಸರ್ವಾನುಗಾನ್ಸಮಹಿನೋದಥ ಕುಂಭಕರ್ಣಮ್ ॥ ೧೮ ॥

ತಾಂ ಯಾತುಧಾನಪೃತನಾಮಸಿಶೂಲಚಾಪ-
ಪ್ರಾಸರ್ಷ್ಟಿಶಕ್ತಿಶರತೋಮರಖಡ್ಗದುರ್ಗಾಮ್ ।
ಸುಗ್ರೀವಲಕ್ಷ್ಮಣಮರುತ್ಸುತಗಂಧಮಾದ-
ನೀಲಾಂಗದರ್ಕ್ಷಪನಸಾದಿಭಿರನ್ವಿತೋಽಗಾತ್ ॥ ೧೯ ॥

ಭಗವಾನ್ ಶ್ರೀರಾಮನು ಅನೇಕಾನೇಕ ಪರ್ವತ ಶಿಖರಗಳಿಂದ ಸಮುದ್ರದ ಮೇಲೆ ಸೇತುವೆಯನ್ನು ಕಟ್ಟಿಸಿದನು. ದೊಡ್ಡ-ದೊಡ್ಡ ವಾನರರು ತಮ್ಮ ಕೈಗಳಿಂದ ಪರ್ವತಗಳನ್ನು ಎತ್ತಿ ತರುತ್ತಿದ್ದಾಗ ಅವುಗಳ ವೃಕ್ಷಗಳು, ದೊಡ್ಡ-ದೊಡ್ಡ ಬಂಡೆಗಳು ಗಡ-ಗಡನೆ ನಡುಗುತ್ತಿದ್ದವು. ಇದಾದ ಬಳಿಕ ವಿಭೀಷಣನ ಸಲಹೆಯಂತೆ ಭಗವಂತನು ಸುಗ್ರೀವ, ನೀಲ, ಹನುಮಂತ ಮುಂತಾದ ಪ್ರಮುಖ ವೀರರೊಂದಿಗೆ ಮತ್ತು ಅತುಲ ವಾನರ ಸೇನೆಯೊಂದಿಗೆ ಲಂಕೆಯನ್ನು ಪ್ರವೇಶಿಸಿದನು. ಅದಾದರೋ ಶ್ರೀಹನುಮಂತನಿಂದ ಮೊದಲೇ ಸುಡಲ್ಪಟ್ಟಿತ್ತು. ॥ ೧೬ ॥ ಆ ಸಮಯದಲ್ಲಿ ವಾನರ ರಾಜನ ಸೈನ್ಯವು ಲಂಕೆಯಲ್ಲಿ ಅಡ್ಡಾಡುತ್ತಾ ವಿಹಾರಸ್ಥಾನಗಳನ್ನೂ, ಧಾನ್ಯದ ಕಣಜಗಳನ್ನೂ, ಬಾಗಿಲುಗಳನ್ನೂ, ಮಹಾದ್ವಾರಗಳನ್ನೂ, ಸಭಾಭವನಗಳನ್ನೂ, ಮೊಗಸಾಲೆಗಳನ್ನೂ ಮತ್ತು ಪಕ್ಷಿಗಳು ವಾಸಿಸುವ ಸ್ಥಳಗಳನ್ನೂ ಆಕ್ರಮಿಸಿತು. ಅವರು ಅಲ್ಲಿಯ ವೇದಿಗಳನ್ನು, ಧ್ವಜಗಳನ್ನೂ, ಚಿನ್ನದ ಕಲಶಗಳನ್ನೂ, ಚೌಕಗಳನ್ನೂ ಒಡೆದು ಹಾಕಿದರು. ಆಗ ಲಂಕೆಯು ಆನೆಗಳ ಹಿಂಡು ನದಿಯನ್ನು ಕದಡಿ ಹಾಕಿದಂತೆ ಕಂಡುಬರುತ್ತಿತ್ತು. ॥ ೧೭ ॥ ಇದನ್ನು ನೋಡಿದ ರಾಕ್ಷಸ ರಾಜ ರಾವಣನು ನಿಕುಂಭ, ಕುಂಭ, ಧೂಮ್ರಾಕ್ಷ, ದುರ್ಮುಖ, ಸುರಾಂತಕ, ನರಾಂತಕ, ಪ್ರಹಸ್ತ, ಅತಿಕಾಯ, ವಿಕಂಪನ ಮುಂತಾದ ತನ್ನ ಎಲ್ಲ ಅನುಚರರನ್ನು, ಪುತ್ರನಾದ ಮೇಘನಾದನನ್ನು, ಕೊನೆಗೆ ತಮ್ಮನಾದ ಕುಂಭಕರ್ಣನನ್ನೂ ಯುದ್ಧಮಾಡಲು ಕೊಟ್ಟು ಕಳಿಸಿದನು. ॥ ೧೮ ॥ ರಾಕ್ಷಸರ ಆ ವಿಶಾಲವಾದ ಸೈನ್ಯವು ಖಡ್ಗ, ತ್ರಿಶೂಲ, ಧನುಸ್ಸು, ಪ್ರಾಸ, ಋಷ್ಟಿ, ಶಕ್ತಿ, ಬಾಣ, ಶೂಲ ಮುಂತಾದ ಅಸ್ತ್ರ-ಶಸ್ತ್ರಗಳಿಂದ ಸುರಕ್ಷಿತ ಮತ್ತು ಅತ್ಯಂತ ದುರ್ಗಮವಾಗಿತ್ತು. ಭಗವಾನ್ ಶ್ರೀರಾಮನು ಸುಗ್ರೀವ, ಲಕ್ಷ್ಮಣ, ಹನುಮಂತ, ಗಂಧಮಾದನ, ನೀಲ, ಅಂಗದ, ಜಾಂಬವಂತ, ಪನಸ ಮೊದಲಾದ ವೀರರನ್ನು ಜೊತೆಗೂಡಿ ರಾಕ್ಷಸರ ಸೈನ್ಯವನ್ನು ಎದುರಿಸಿದನು. ॥ ೧೯ ॥ ರಘುವಂಶ ಶಿರೋಮಣಿಯಾದ ಭಗವಾನ್ ಶ್ರೀರಾಮನ ಅಂಗದಾದಿ ಎಲ್ಲ ಸೇನಾಪತಿಗಳು ರಾಕ್ಷಸರ ರಥ-ಗಜಾಶ್ವ-ಪದಾತಿ ಸೈನ್ಯವನ್ನು ದ್ವಂದ್ವಯುದ್ಧದ ಮೂಲಕವಾಗಿ ಎದುರಿಸಿದರು ಮತ್ತು ರಾಕ್ಷಸರನ್ನು ವೃಕ್ಷಗಳಿಂದ, ಪರ್ವತ ಶಿಖರ

ತೇಽನೀಕಪಾ ರಘುಪತೇರಭಿಪತ್ಯ ಸರ್ವೇ
ದ್ವಂದ್ವಂ ವರೂಥಮಿಭಪತ್ತಿರಥಾಶ್ವಯೋಧೈಃ ।
ಜಘ್ನುರ್ದ್ರುಮೈರ್ಗಿರಿಗದೇಷುಭಿರಂಗದಾದ್ಯಾಃ
ಸೀತಾಭಿಮರ್ಶಹತಮಂಗಲರಾವಣೇಶಾನ್ ॥ ೨೦ ॥

ರಕ್ಷಃಪತಿಃ ಸ್ವಬಲನಷ್ಟಿಮವೇಕ್ಷ್ಯ ರುಷ್ಟ
ಆರುಹ್ಯ ಯಾನಕಮಥಾಭಿಸಸಾರ ರಾಮಮ್ ।
ಸ್ವಃಸ್ಯಂದನೇ ದ್ಯುಮತಿ ಮಾತಲಿನೋಪನೀತೇ
ವಿಭ್ರಾಜಮಾನಮಹನನ್ನಿಶಿತೈಃ ಕ್ಷುರಪ್ರೈಃ ॥ ೨೧ ॥

ರಾಮಸ್ತಮಾಹ ಪುರುಷಾದಪುರೀಷ ಯನ್ನಃ
ಕಾಂತಾಸಮಕ್ಷಮಸತಾಪಹೃತಾ ಶ್ವವತ್ತೇ ।
ತ್ಯಕ್ತತ್ರಪಸ್ಯ ಫಲಮದ್ಯ ಜುಗುಪ್ಸಿತಸ್ಯ
ಯಚ್ಛಾಮಿ ಕಾಲ ಇವ ಕರ್ತುರಲಂಘ್ಯವೀರ್ಯಃ ॥ ೨೨ ॥

ಏವಂ ಕ್ಷಿಪನ್ ಧನುಷಿ ಸಂಧಿತಮುತ್ಸಸರ್ಜ
ಬಾಣಂ ಸ ವಜ್ರಮಿವ ತದ್ಧೃದಯಂ ಬಿಭೇದ ।
ಸೋಽಸೃಗ್ವಮನ್ ದಶಮುಖೈರ್ನ್ಯಪತದ್ ವಿಮಾನಾ-
ದ್ಧಾಹೇತಿ ಜಲ್ಪತಿ ಜನೇ ಸುಕೃತೀವ ರಿಕ್ತಃ ॥ ೨೩ ॥

ತತೋ ನಿಷ್ಕ್ರಮ್ಯ ಲಂಕಾಯಾ ಯಾತುಧಾನ್ಯಃ ಸಹಸ್ರಶಃ ।
ಮಂದೋದರ್ಯಾ ಸಮಂ ತಸ್ಮಿನ್ ಪ್ರರುದತ್ಯ ಉಪಾದ್ರವನ್
॥ ೨೪ ॥

ಸ್ವಾನ್ ಸ್ವಾನ್ ಬಂಧೂನ್ಪರಿಷ್ವಜ್ಯ ಲಕ್ಷ್ಮಣೇಷುಭಿರರ್ದಿತಾನ್ ।
ರುರುದುಃ ಸುಸ್ವರಂ ದೀನಾ ಘ್ನಂತ್ಯ ಆತ್ಮಾನಮಾತ್ಮನಾ
॥ ೨೫ ॥

ಹಾ ಹತಾಃ ಸ್ಮ ವಯಂ ನಾಥ ಲೋಕರಾವಣ ರಾವಣ ।
ಕಂ ಯಾಯಾಚ್ಛರಣಂ ಲಂಕಾ ತ್ವದ್ವಿಹೀನಾ ಪರಾರ್ದಿತಾ
॥ ೨೬ ॥

ನೈವಂ ವೇದ ಮಹಾಭಾಗ ಭವಾನ್ಕಾಮವಶಂ ಗತಃ ।
ತೇಜೋಽನುಭಾವಂ ಸೀತಾಯಾ ಯೇನ ನೀತೋ ದಶಾಮಿಮಾಮ್
॥ ೨೭ ॥

ಗಳಿಂದ ಗದೆ, ಬಾಣಗಳಿಂದಲೂ ಪ್ರಹರಿಸಿದರು. ಮಂಗಳಮಯಿಯಾದ ಸೀತಾದೇವಿಯನ್ನು ಸ್ಪರ್ಶಿಸಿದ ಕಾರಣದಿಂದಾಗಿ ಅಮಂಗಳನಾಗಿದ್ದ ರಾವಣನನ್ನು ಒಡೆಯನನ್ನಾಗಿ ಹೊಂದಿದ್ದ ರಾಕ್ಷಸರಿಗೆ ವಿನಾಶವೆಂಬುದು ಮೊದಲೇ ಸಿದ್ಧವಾಗಿ ಹೋಗಿದ್ದಿತು. ॥ ೨೦ ॥

ರಾಕ್ಷಸರಾಜನಾದ ರಾವಣೇಶ್ವರನು ತನ್ನ ಸೈನ್ಯವು ದಿನ-ದಿನಕ್ಕೂ ನಾಶವಾಗುವುದನ್ನು ಕಂಡು ಅತ್ಯಂತ ಕ್ರುದ್ಧನಾಗಿ ಪುಷ್ಪಕ ವಿಮಾನವನ್ನೇರಿ ಬಂದು ಶ್ರೀರಾಮನಿಗೆ ಎದುರಾಗಿ ನಿಂತನು. ಆ ಸಮಯಕ್ಕೆ ಸರಿಯಾಗಿ ಇಂದ್ರನ ಸಾರಥಿಯಾದ ಮಾತಲಿಯು ತೇಜೋಮಯವಾದ ದಿವ್ಯರಥವನ್ನು ನಡೆಸಿಕೊಂಡು ಶ್ರೀರಾಮನ ಬಳಿಗೆ ಬಂದನು. ಮಂಗಳಮೂರ್ತಿಯಾದ ಶ್ರೀರಾಮನು ಆ ದಿವ್ಯ ರಥವನ್ನು ಹತ್ತಿಕುಳಿತನು. ಒಡನೆಯೇ ರಾವಣನು ತನ್ನ ತೀಕ್ಷ್ಣವಾದ ಬಾಣಗಳಿಂದ ಶ್ರೀರಾಮನನ್ನು ಪ್ರಹರಿಸತೊಡಗಿದನು. ॥ ೨೧ ॥ ಆಗ ಭಗವಾನ್ ಶ್ರೀರಾಮನು ರಾವಣನಿಗೆ ಹೇಳಿದನು – ಎಲೈ ನೀಚರಾಕ್ಷಸನೇ! ಹವಿಸ್ಸನ್ನು ಕದಿಯುವ ನಾಯಿಯಂತೆ ನೀನು ನಾನು ಇಲ್ಲದಿರುವಾಗ ನನ್ನ ಪ್ರಾಣಪ್ರಿಯಳಾದ ಪತ್ನಿಯನ್ನು ಅಪಹರಿಸಿ ತಂದಿರುವೆ. ನಿನ್ನಂತಹ ನಿಂದ್ಯನೂ, ನಾಚಿಕೆಗೆಟ್ಟವನೂ ಬೇರೆ ಯಾವನಿದ್ದಾನೆ? ಮೀರಿ ನಡೆಯಲು ಅಸಾಧ್ಯನಾದ ಕಾಲಪುರುಷನು ಅವ್ರಗಳ ಕರ್ಮಾನುಸಾರವಾಗಿ ಪ್ರಾಣಗಳನ್ನು ಶಿಕ್ಷಿಸುವಂತೆ ನಿನ್ನ ಜುಗುಪ್ಸಿತವಾದ ಕಾರ್ಯಕ್ಕೆ ತಕ್ಕ ಫಲವನ್ನು ನಾನೀಗಲೇ ಕೊಡುತ್ತೇನೆ. ॥ ೨೨ ॥ ಹೀಗೆ ದುಷ್ಟನಾದ ರಾವಣನನ್ನು ನಿಂದಿಸುತ್ತಾ ಭಗವಾನ್ ಶ್ರೀರಾಮನು ಧನುಸ್ಸಿಗೆ ಹೂಡಿದ್ದ ಬಾಣವನ್ನು ಅವನ ಮೇಲೆ ಪ್ರಯೋಗಿಸಿದನು. ಆ ಬಾಣವು ವಜ್ರದಂತಿರುವ ಅವನ ಹೃದಯವನ್ನು ಭೇದಿಸಿಬಿಟ್ಟಿತು. ಅವನು ತನ್ನ ಹತ್ತು ಮುಖಗಳಿಂದಲೂ ರಕ್ತವನ್ನು ಕಾರುತ್ತಾ ಪುಣ್ಯಾತ್ಮರು ಭೋಗ ಮುಗಿದಾಗ ಸ್ವರ್ಗದಿಂದ ಕೆಳಗೆ ಬೀಳುವಂತೆಯೇ ವಿಮಾನದಿಂದ ಉರುಳಿ ಬಿದ್ದನು. ಆ ಸಮಯದಲ್ಲಿ ಅವನ ಪುರಜನರೂ, ಪರಿಜನರೂ ಅಯ್ಯೋ! ಅಯ್ಯೋ! ಎಂದು ಕೂಗಿಕೊಂಡರು. ॥ ೨೩ ॥

ಅನಂತರ ಸಾವಿರಾರು ರಾಕ್ಷಸಿಯರು ಮಂದೋದರಿಯೊಂದಿಗೆ ಅಳುತ್ತಾ ಲಂಕೆಯಿಂದ ಹೊರಬಿದ್ದು ರಣಭೂಮಿಗೆ ಬಂದರು. ॥ ೨೪ ॥ ಅವರ ಸ್ವಜನ-ಸಂಬಂಧಿಗಳು ಲಕ್ಷ್ಮಣನ ಬಾಣಗಳಿಂದ ಛಿನ್ನ-ಭಿನ್ನರಾಗಿ ಬಿದ್ದಿರುವುದನ್ನು ನೋಡಿದರು. ಅವರು ತಮ್ಮ ಕೈಯಿಂದ ಎದೆಯನ್ನು ಬಡಿದುಕೊಂಡು ತಮ್ಮ ಸಂಬಂಧಿಗಳನ್ನು ಅಪ್ಪಿಕೊಳ್ಳುತ್ತಾ ಗಟ್ಟಿಯಾಗಿ ವಿಲಾಪಿಸ ತೊಡಗಿದರು. ॥ ೨೫ ॥ ಅಯ್ಯೋ! ಮೂರು ಲೋಕಗಳನ್ನೂ ಭಯದಿಂದ ತಲ್ಲಣಗೊಳಿಸುತ್ತಿದ್ದ ರಾವಣೇಶ್ವರನೇ! ನಾಥನೇ! ಇಂದು ನಾವೆಲ್ಲರೂ ಹಾಳಾಗಿ ಹೋದೆವು. ನೀನಿಲ್ಲದ ಕಾರಣದಿಂದಾಗಿ ಶತ್ರುಗಳಿಂದ ಈ ಲಂಕೆಯು ಧ್ವಂಸವಾಗಿಬಿಟ್ಟಿದೆ. ಈಗ ಲಂಕೆಯು ಯಾರ ಅಧೀನದಲ್ಲಿರುವುದೆಂಬುದೇ ಒಂದು ಪ್ರಶ್ನೆಯಾಗಿದೆ. ॥ ೨೬ ॥ ಪ್ರಭುವೇ! ನೀನು ಎಲ್ಲ ರೀತಿಯಿಂದಲೂ ಸಂಪನ್ನನಾಗಿದ್ದೆ. ಯಾವುದೇ ಕೊರತೆ ಇರಲಿಲ್ಲ. ಆದರೆ ನೀನು ಕಾಮವಶನಾಗಿ ಸೀತೆಯು ಎಷ್ಟು ತೇಜಸ್ವಿನಿಯಾಗಿದ್ದಾಳೆ, ಅವಳ ಪ್ರಭಾವವೆಷ್ಟೆಂಬುದನ್ನು ತಿಳಿಯದೇ ಹೋದೆ. ನಿನ್ನ ಈ ತಪ್ಪೇ ಇಂತಹ ದುರ್ದಶೆಗೆ ಕಾರಣವಾಯಿತಲ್ಲ! ॥ ೨೭ ॥

ಕೃತೈಷಾ ವಿಧವಾ ಲಂಕಾ ವಯಂ ಚ ಕುಲನಂದನ ।
ದೇಹಃ ಕೃತೋಽನ್ನಂ ಗೃಧ್ರಾಣಾಮಾತ್ಮಾ ನರಕಹೇತವೇ ॥ ೨೮ ॥

ಶ್ರೀಶುಕ ಉವಾಚ

ಸ್ವಾನಾಂ ವಿಭೀಷಣಶ್ಚಕ್ರೇ ಕೋಸಲೇಂದ್ರಾನುಮೋದಿತಃ ।
ಪಿತೃಮೇಧವಿಧಾನೇನ ಯದುಕ್ತಂ ಸಾಂಪರಾಯಿಕಮ್ ॥ ೨೯ ॥

ತತೋ ದದರ್ಶ ಭಗವಾನಶೋಕವನಿಕಾಶ್ರಮೇ ।
ಕ್ಷಾಮಾಂ ಸ್ವವಿರಹವ್ಯಾಧಿಂ ಶಿಂಶಪಾಮೂಲಮಾಶ್ರಿತಾಮ್ ॥ ೩೦ ॥

ರಾಮಃ ಪ್ರಿಯತಮಾಂ ಭಾರ್ಯಾಂ ದೀನಾಂ ವೀಕ್ಷ್ಯಾನ್ವಕಂಪತ ।
ಆತ್ಮಸಂದರ್ಶನಾಹ್ಲಾದವಿಕಸನ್ಮುಖಪಂಕಜಾಮ್ ॥ ೩೧ ॥

ಆರೋಪ್ಯಾರುರುಹೇ ಯಾನಂ ಭ್ರಾತೃಭ್ಯಾಂ ಹನುಮದ್ಯುತಃ ।
ವಿಭೀಷಣಾಯ ಭಗವಾನ್ ದತ್ತ್ವಾ ರಕ್ಷೋಗಣೇಶತಾಮ್ ॥ ೩೨ ॥

ಲಂಕಾಮಾಯುಶ್ಚ ಕಲ್ಪಾಂತಂ ಯಯೌ ಚೀರ್ಣವ್ರತಃ ಪುರೀಮ್ ।
ಅವಕೀರ್ಯಮಾಣಃ ಕುಸುಮೈರ್ಲೋಕಪಾಲಾರ್ಪಿತೈಃ ಪಥಿ ॥ ೩೩ ॥

ಉಪಗೀಯಮಾನಚರಿತಃ ಶತಧೃತ್ಯಾದಿಭಿರ್ಮುದಾ ।
ಗೋಮೂತ್ರಯಾವಕಂ ಶ್ರುತ್ವಾ ಭ್ರಾತರಂ ವಲ್ಕಲಾಂಬರಮ್ ॥ ೩೪ ॥

ಮಹಾಕಾರುಣಿಕೋಽತಪ್ಯಜ್ಜಟಿಲಂ ಸ್ಥಂಡಿಲೇಶಯಮ್ ।
ಭರತಃ ಪ್ರಾಪ್ತಮಾಕರ್ಣ್ಯ ಪೌರಾಮಾತ್ಯಪುರೋಹಿತೈಃ ॥ ೩೫ ॥

ಪಾದುಕೇ ಶಿರಸಿ ನ್ಯಸ್ಯ ರಾಮಂ ಪ್ರತ್ಯುದ್ಯತೋಽಗ್ರಜಮ್ ।
ನಂದಿಗ್ರಾಮಾತ್ ಸ್ವಶಿಬಿರಾದ್ ಗೀತವಾದಿತ್ರನಿಸ್ವನೈಃ ॥ ೩೬ ॥

ಅಂದು ನಿನ್ನ ಕಾರ್ಯಗಳಿಂದ ನಾವೆಲ್ಲರೂ ಮತ್ತು ಸಮಸ್ತ ರಾಕ್ಷಸವಂಶವು ಆನಂದಿತರಾಗಿದ್ದೆವು. ಇಂದು ನಾವೆಲ್ಲರೂ ಹಾಗೂ ಇಡೀ ಲಂಕಾ ನಗರಿಯು ವಿಧವೆಯಾಯಿತು. ನಿನ್ನ ದೇಹವು ರಣಹದ್ದು ಮೊದಲಾದ ಪಕ್ಷಿಗಳಿಗೆ ಆಹಾರವಾಗಿ ಪರಿಣಮಿಸಿತು. ನಿನ್ನ ಆತ್ಮವು ನರಕಭಾಜನವಾಗಿದೆ. ಇದೆಲ್ಲವೂ ನಿನ್ನ ಮೂರ್ಖತೆಯ ಮತ್ತು ಕಾಮುಕತೆಯ ಫಲವಾಗಿದೆ. ॥ ೨೮ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ! ಕೋಸಲೇಶ್ವರನಾದ ಭಗವಾನ್ ಶ್ರೀರಾಮಚಂದ್ರನ ಅಣತಿಯಂತೆ ವಿಭೀಷಣನು ತನ್ನ ಸ್ವಜನ-ಸಂಬಂಧಿಗಳಿಗೆ ಪಿತೃಮೇಧವಿಧಿಯನ್ನನುಸರಿಸಿ ಅಂತ್ಯೇಷ್ಟಿಗಳನ್ನು ಮಾಡಿದನು. ॥ ೨೯ ॥ ಇದಾದ ಬಳಿಕ ಭಗವಾನ್ ಶ್ರೀರಾಮನು ಅಶೋಕವನದ ಆಶ್ರಮದಲ್ಲಿ ಅಶೋಕ ವೃಕ್ಷದ ಬುಡದಲ್ಲಿ ಕುಳಿತಿದ್ದ ಸೀತಾದೇವಿಯನ್ನು ನೋಡಿದನು. ಅವಳು ಅವನ ವಿರಹವ್ಯಥೆಯಿಂದ ಪೀಡಿತಳಾಗಿದ್ದು ಅತ್ಯಂತ ದುರ್ಬಲಳಾಗಿದ್ದಳು. ॥ ೩೦ ॥ ಅತ್ಯಂತ ದೈನ್ಯಾವಸ್ಥೆಯಲ್ಲಿದ್ದ ಪ್ರಿಯತಮೆಯಾದ ಅರ್ಧಾಂಗಿನಿಯನ್ನು ನೋಡಿ ಶ್ರೀರಾಮನ ಹೃದಯವು ಪ್ರೀತಿ ಮತ್ತು ಕೃಪೆಯಿಂದ ತುಂಬಿಹೋಯಿತು. ಇತ್ತ ಭಗವಂತನ ದರ್ಶನವನ್ನು ಪಡೆದ ಸೀತೆಯ ಹೃದಯವೂ ಪ್ರೇಮಾನಂದದಿಂದ ಪರಿಪೂರ್ಣವಾಯಿತು. ಆಕೆಯ ಮುಖಕಮಲವು ಅರಳಿಕೊಂಡಿತು. ॥ ೩೧ ॥ ಭಗವಂತನು ವಿಭೀಷಣನಿಗೆ ರಾಕ್ಷಸರ ಒಡೆತನ, ಲಂಕೆಯ ರಾಜ್ಯ ಮತ್ತು ಒಂದು ಕಲ್ಪದ ಆಯುಸ್ಸನ್ನೂ ದಯಪಾಲಿಸಿದನು. ಇದಾದ ಬಳಿಕ ಮೊದಲಿಗೆ ಸೀತೆಯನ್ನು ಪುಷ್ಪಕವಿಮಾನದಲ್ಲಿ ಕುಳ್ಳಿರಿಸಿ ತನ್ನ ಇಬ್ಬರೂ ತಮ್ಮಂದಿರಾದ ಲಕ್ಷ್ಮಣ, ಸುಗ್ರೀವರನ್ನೂ ಹಾಗೂ ಸೇವಕನಾದ ಹನುಮಂತನೊಂದಿಗೆ ಸ್ವಯಂ ಪುಷ್ಪಕವಿಮಾನವನ್ನೇರಿದನು. ಹೀಗೆ ಹದಿನಾಲ್ಕು ವರ್ಷಗಳ ವ್ರತವು ಪೂರ್ಣವಾದಾಗ ಅವನು ತನ್ನ ನಗರಕ್ಕೆ ಹೊರಟನು. ಆಗ ಮಾರ್ಗದಲ್ಲಿ ಬ್ರಹ್ಮಾದಿ ಲೋಕಪಾಲರೂ, ದೇವತೆಗಳೂ ತುಂಬು ಪ್ರೇಮದಿಂದ ಹೂವುಗಳ ಮಳೆಯನ್ನು ಕರೆಯುತ್ತಿದ್ದರು. ॥ ೩೨-೩೩ ॥

ಇತ್ತ ಬ್ರಹ್ಮಾದಿ ದೇವತೆಗಳು ಆನಂದಭರಿತರಾಗಿ ಭಗವಂತನ ಲೀಲಾಪ್ರಸಂಗಗಳನ್ನು ಗಾನಮಾಡುತ್ತಿದ್ದರು. ಅತ್ತಲಾಗಿ ಶ್ರೀರಾಮನ ಆಗಮನದ ನಿರೀಕ್ಷಣೆಯಲ್ಲಿಯೇ ಕಾತರನಾಗಿದ್ದ ಭರತನು ಕೇವಲ ಗೋಮೂತ್ರದಲ್ಲಿ ಬೇಯಿಸಿದ ಜವೆಯ ಗಂಜಿಯನ್ನು ಮಾತ್ರವೇ ಸೇವಿಸುತ್ತಿದ್ದನು. ಅಣ್ಣನಂತೆಯೇ ನಾರುಮಡಿಯನ್ನೇ ಉಡುತ್ತಿದ್ದನು. ಜಟಾಧಾರಿಯಾಗಿದ್ದನು. ನೆಲದ ಮೇಲೆ ದರ್ಭೆಗಳನ್ನು ಹಾಸಿಕೊಂಡು ಮಲಗುತ್ತಿದ್ದನು. ಈ ಸಮಾಚಾರವನ್ನು ಕೇಳಿದ ಪರಮ ಕಾರುಣಿಕನಾದ ಶ್ರೀರಾಮನು ಕಳವಳಗೊಂಡನು. ಹದಿನಾಲ್ಕು ವರ್ಷಗಳ ವನವಾಸವನ್ನು ಮುಗಿಸಿ ಶ್ರೀರಾಮನು ಅಯೋಧ್ಯೆಯ ಕಡೆಗೆ ಬರುತ್ತಿರುವನೆಂದು ತಿಳಿದೊಡನೆಯೇ ಆನಂದಭರಿತನಾದ ಭರತನು ಪುರವಾಸಿಗಳನ್ನು, ಮಂತ್ರಿ, ಪುರೋಹಿತರನ್ನು ಜೊತೆಗೆ ಕರೆದುಕೊಂಡು ಭಗವಂತನ ಚರಣಪಾದುಕೆಗಳನ್ನು ಶಿರದಮೇಲೆ ಹೊತ್ತುಕೊಂಡು ರಾಮನ ಸ್ವಾಗತಕ್ಕಾಗಿ ಹೊರಟನು. ನಂದಿಗ್ರಾಮದಲ್ಲಿದ್ದ ತನ್ನ ಶಿಬಿರದಿಂದ ಭರತನು ಹೊರಟಾಗ ಪುರಜನರು ಅವನೊಂದಿಗೆ ಮಂಗಳಗೀತೆಗಳನ್ನು ಹಾಡುತ್ತಾ, ವಾದ್ಯಘೋಷ

ಬ್ರಹ್ಮಘೋಷೇಣ ಚ ಮುಹುಃ ಪಠದ್ಭಿರ್ಬ್ರಹ್ಮವಾದಿಭಿಃ ।
ಸ್ವರ್ಣಕಕ್ಷಪತಾಕಾಭಿರ್ಹೈಮೈಶ್ಚಿತ್ರಧ್ವಜೈ ರಥೈಃ
॥ ೩೭ ॥

ಸದಶ್ವೈ ರುಕ್ಮಸನ್ನಾಹೈರ್ಭಟೈಃ ಪುರಟವರ್ಮಭಿಃ ।
ಶ್ರೇಣೀಭಿರ್ವಾರಮುಖ್ಯಾಭಿರ್ಭೃತ್ಯೈಶ್ಚೈವ ಪದಾನುಗೈಃ
॥ ೩೮ ॥

ಪಾರಮೇಷ್ಠ್ಯಾನ್ಯುಪಾದಾಯ ಪಣ್ಯಾನ್ಯುಚ್ಚಾವಚಾನಿ ಚ ।
ಪಾದಯೋರ್ನ್ಯಪತತ್ಪ್ರೇಮ್ಣಾ ಪ್ರಕ್ಲಿನ್ನಹೃದಯೇಕ್ಷಣಃ
॥ ೩೯ ॥

ಪಾದುಕೇ ನ್ಯಸ್ಯ ಪುರತಃ ಪ್ರಾಂಜಲಿರ್ಬಾಷ್ಪಲೋಚನಃ ।
ತಮಾಶ್ಲಿಷ್ಯ ಚಿರಂ ದೋರ್ಭ್ಯಾಂ ಸ್ನಾಪಯನ್ನೇತ್ರಜೈರ್ಜಲೈಃ
॥ ೪೦ ॥

ರಾಮೋ ಲಕ್ಷ್ಮಣಸೀತಾಭ್ಯಾಂ ವಿಪ್ರೇಭ್ಯೋ ಯೇಽರ್ಹಸತ್ತಮಾಃ ।
ತೇಭ್ಯಃ ಸ್ವಯಂ ನಮಶ್ಚಕ್ರೇ ಪ್ರಜಾಭಿಶ್ಚ ನಮಸ್ಕೃತಃ
॥ ೪೧ ॥

ಧುನ್ವಂತ ಉತ್ತರಾಸಂಗಾನ್ಪತಿಂ ವೀಕ್ಷ್ಯ ಚಿರಾಗತಮ್ ।
ಉತ್ತರಾಃ ಕೋಸಲಾ ಮಾಲ್ಯೈಃ ಕಿರಂತೋ ನನೃತುರ್ಮುದಾ
॥ ೪೨ ॥

ಪಾದುಕೇ ಭರತೋಽಗೃಹ್ಣಾಚ್ಚಾಮರವ್ಯಜನೋತ್ತಮೇ ।
ವಿಭೀಷಣಃ ಸಸುಗ್ರೀವಃ ಶ್ವೇತಚ್ಛತ್ರಂ ಮರುತ್ಸುತಃ
॥ ೪೩ ॥

ಧನುರ್ನಿಷಂಗಾಞ್ಛತ್ರುಘ್ನಃ ಸೀತಾ ತೀರ್ಥಕಮಂಡಲುಮ್ ।
ಅಬಿಭ್ರದಂಗದಃ ಖಡ್ಗಂ ಹೈಮಂ ಚರ್ಮರ್ಕ್ಷರಾಣ್ನೃಪ
॥ ೪೪ ॥

ಪುಷ್ಪಕಸ್ಥೋಽನ್ವಿತಃ ಸ್ತ್ರೀಭಿಃ ಸ್ತೂಯಮಾನಶ್ಚ ವಂದಿಭಿಃ ।
ವಿರೇಜೇ ಭಗವಾನ್ರಾಜನ್ ಗ್ರಹೈಶ್ಚಂದ್ರ ಇವೋದಿತಃ
॥ ೪೫ ॥

ಭ್ರಾತೃಭಿರ್ನಂದಿತಃ ಸೋಽಪಿ ಸೋತ್ಸವಾಂ ಪ್ರಾವಿಶತ್ಪುರೀಮ್ ।
ಪ್ರವಿಶ್ಯ ರಾಜಭವನಂ ಗುರುಪತ್ನೀಃ ಸ್ವಮಾತರಮ್
॥ ೪೬ ॥

ಗಳೊಡನೆ ಹೊರಟರು. ವೇದವಿದರಾದ ಬ್ರಾಹ್ಮಣರು ಸ್ವಸ್ತಿವಾಚನ ಮಾಡುತ್ತಿದ್ದರು. ಅವರ ಧ್ವನಿಯು ಎಲ್ಲೆಡೆ ಪ್ರತಿಧ್ವನಿಸಿತು. ಸುವರ್ಣಮಯವಾದ ಪತಾಕೆಗಳು ಎಲ್ಲೆಡೆ ಹಾರಾಡುತ್ತಿದ್ದವು. ಚಿತ್ರವಿಚಿತ್ರವಾದ ಧ್ವಜಗಳಿಂದ ಕೂಡಿದ ಸುವರ್ಣಮಯವಾದ ರಥಗಳೂ, ಸುವರ್ಣಮಯವಾದ ಜೀನುಗಳಿಂದ ಸಮಲಂಕೃತವಾದ ಕುದುರೆಗಳೂ, ಸುವರ್ಣಮಯವಾದ ಕವಚಗಳನ್ನೂ ಧರಿಸಿದ್ದ ಸೈನಿಕರು ಭರತನನ್ನು ಹಿಂಬಾಲಿಸಿ ಹೋಗುತ್ತಿದ್ದರು. ಶ್ರೀಮಂತ ಶ್ರೇಷ್ಠವರ್ಗ, ಶ್ರೇಷ್ಠ ವಾರಾಂಗನೆಯರೂ, ಕಾಲಾಳುಗಳು ಮಹಾರಾಜನಿಗೆ ಯೋಗ್ಯವಾದ ಸಕಲ ವಸ್ತುಗಳನ್ನು ಎತ್ತಿಕೊಂಡು ಭರತನೊಂದಿಗೆ ನಡೆಯುತ್ತಿದ್ದರು. ಭಗವಂತನನ್ನು ನೋಡುತ್ತಲೇ ಪ್ರೇಮೋದ್ರೇಕದಿಂದ ಭರತನ ಹೃದಯವು ಕರಗಿ, ಕಣ್ಣುಗಳಲ್ಲಿ ಆನಂದಾಶ್ರುಗಳು ಚಿಮ್ಮಿದುವು. ಅವನು ಭಗವಂತನ ಶ್ರೀಚರಣಗಳಲ್ಲಿ ಬಿದ್ದು ಹೊರಳಾಡಿದನು. ॥ ೩೪-೩೯ ॥ ಭರತನು ಪ್ರಭುವಿನ ಮುಂದೆ ಅವನ ಪಾದುಕೆಗಳನ್ನು ಇರಿಸಿದನು ಮತ್ತು ಕೈ ಜೋಡಿಸಿಕೊಂಡು ನಿಂತುಕೊಂಡನು. ಕಣ್ಣುಗಳಿಂದ ಅಶ್ರುಗಳು ಹರಿಯುತ್ತಿದ್ದವು. ಭಗವಂತನು ತನ್ನ ಎರಡೂ ಕೈಗಳಿಂದ ಬರಸೆಳೆದುಕೊಂಡು ದೀರ್ಘವಾಗಿ ಭರತನನ್ನು ಆಲಿಂಗಿಸಿ ಕೊಂಡನು. ಭಗವಂತನ ಕಣ್ಣುಗಳಿಂದ ಹರಿದ ಅಶ್ರುಜಲದಿಂದ ಭರತನ ಮೈ ನೆನೆದುಹೋಯಿತು. ॥ ೪೦ ॥ ಅನಂತರ ಸೀತಾ ಲಕ್ಷ್ಮಣರೊಂದಿಗೆ ಭಗವಾನ್ ಶ್ರೀರಾಮನು ಬ್ರಾಹ್ಮಣರಿಗೆ, ಪೂಜ್ಯ ಗುರುಗಳಿಗೆ, ಹಿರಿಯರಿಗೆ ನಮಸ್ಕರಿಸಿದನು. ಸಮಸ್ತ ಪ್ರಜಾಜನರು ಭಕ್ತಿಯಿಂದ ತಲೆಬಾಗಿ ಭಗವಂತನ ಚರಣಗಳಲ್ಲಿ ವಂದಿಸಿಕೊಂಡರು. ॥ ೪೧ ॥ ಆ ಸಮಯದಲ್ಲಿ ಉತ್ತರ ಕೋಸಲದೇಶದಲ್ಲಿ ವಾಸಿಸುವ ಸಮಸ್ತ ಪ್ರಜೆಯು ತನ್ನ ಸ್ವಾಮಿಯಾದ ಭಗವಂತನನ್ನು ಬಹಳ ದಿನಗಳ ಬಳಿಕ ಬಂದಿರುವುದನ್ನು ಕಂಡು ತಮ್ಮ ಉತ್ತರೀಯವನ್ನು ಹಾರಿಸುತ್ತಾ ಶ್ರೀರಾಮನ ಮೇಲೆ ಹೂವುಗಳ ಮಳೆಗರೆಯುತ್ತಾ ಆನಂದದಿಂದ ಕುಣಿದಾಡಿದರು. ॥ ೪೨ ॥ ಭರತನು ಭಗವಂತನ ಪಾದುಕೆಗಳನ್ನು ಎತ್ತಿಕೊಂಡನು, ವಿಭೀಷಣನು ಚಾಮರವನ್ನೂ, ಸುಗ್ರೀವನು ಬೀಸಣಿಗೆಯನ್ನೂ, ಹನುಮಂತನು ಬಿಳಿಯ ಕೊಡೆಯನ್ನೂ ಹಿಡಿದುಕೊಂಡರು. ॥ ೪೩ ॥ ಪರೀಕ್ಷಿತನೇ! ಶತ್ರುಘ್ನನು ಶ್ರೀರಾಮನ ಧನುಸ್ಸನ್ನೂ, ಬತ್ತಳಿಕೆಯನ್ನೂ, ಸೀತೆಯು ತೀರ್ಥಗಳಿಂದ ತುಂಬಿದ ಕಮಂಡಲುವನ್ನೂ, ಅಂಗದನು ಚಿನ್ನದ ಖಡ್ಗವನ್ನೂ, ಜಾಂಬವಂತನು ಗುರಾಣಿಯನ್ನು ಹಿಡಿದು ಕೊಂಡರು. ॥ ೪೪ ॥ ಇವರೊಂದಿಗೆ ಭಗವಂತನು ಪುಷ್ಪಕವಿಮಾನದಲ್ಲಿ ವಿರಾಜಮಾನನಾದನು. ಸುತ್ತಲೂ ಶುಭಾಂಗಿಯರು ಯಥಾಸ್ಥಾನದಲ್ಲಿ ಕುಳಿತರು. ವಂದಿ-ಮಾಗಧರು ಸ್ತುತಿಸತೊಡಗಿದರು. ಗ್ರಹಗಳೊಡನೆ ಚಂದ್ರನೇ ಉದಯಿಸಿರುವನೋ ಎಂಬಂತೆ ಶ್ರೀರಾಮಚಂದ್ರನು ಪುಷ್ಪಕವಿಮಾನದಲ್ಲಿ ಶೋಭಿಸಿದನು. ॥ ೪೫ ॥

ಭಗವಂತನು ಹೀಗೆ ಸಹೋದರರಿಂದ ಅಭಿನಂದನೆಯನ್ನು ಸ್ವೀಕರಿಸಿ, ಅವರೊಂದಿಗೆ ಅಯೋಧ್ಯಾಪುರವನ್ನು ಪ್ರವೇಶಿಸಿದನು. ಆಗ ಆ ಪುರವು ಆನಂದೋತ್ಸವದಿಂದ ಪರಿಪೂರ್ಣವಾಗಿ ಹೋಗಿತ್ತು. ಅರಮನೆಯನ್ನು ಪ್ರವೇಶಿಸಿ ಶ್ರೀರಾಮನು ತಾಯಿ ಕೌಸಲ್ಯೆಗೂ,

ಗುರೂನ್ನಮಸ್ಯನ್ನವರಜಾನ್ ಪೂಜಿತಃ ಪ್ರತ್ಯಪೂಜಯತ್ ।
ವೈದೇಹೀ ಲಕ್ಷ್ಮಣಶ್ಚೈವ ಯಥಾವತ್ ಸಮುಪೇಯತುಃ ॥ ೪೭ ॥

ಪುತ್ರಾನ್ ಸ್ವಮಾತರಸ್ತಾಸ್ತು ಪ್ರಾಣಾಂಸ್ತನ್ವ ಇವೋತ್ಥಿತಾಃ ।
ಆರೋಪ್ಯಾಂಕೇಽಭಿಷಿಂಚಂತ್ಯೋ ಬಾಷ್ಪೌಘೈರ್ವಿಜಹುಃ ಶುಚಃ ॥ ೪೮ ॥

ಜಟಾ ನಿರ್ಮುಚ್ಯ ವಿಧಿವತ್ ಕುಲವೃದ್ಧೈಃ ಸಮಂ ಗುರುಃ ।
ಅಭ್ಯಷಿಂಚದ್ಯಥೈವೇಂದ್ರಂ ಚತುಃಸಿಂಧುಜಲಾದಿಭಿಃ ॥ ೪೯ ॥

ಏವಂ ಕೃತಶಿರಃಸ್ನಾನಃ ಸುವಾಸಾಃ ಸ್ರಗ್ವ್ಯಲಂಕೃತಃ ।
ಸ್ವಲಂಕೃತೈಃ ಸುವಾಸೋಭಿರ್ಭ್ರಾತೃಭಿರ್ಭಾರ್ಯಯಾ ಬಭೌ ॥ ೫೦ ॥

ಅಗ್ರಹೀದಾಸನಂ ಭ್ರಾತ್ರಾ ಪ್ರಣಿಪತ್ಯ ಪ್ರಸಾದಿತಃ ।
ಪ್ರಜಾಃ ಸ್ವಧರ್ಮನಿರತಾ ವರ್ಣಾಶ್ರಮಗುಣಾನ್ವಿತಾಃ ।
ಜುಗೋಪ ಪಿತೃವದ್ರಾಮೋ ಮೇನಿರೇ ಪಿತರಂ ಚ ತಮ್ ॥ ೫೧ ॥

ತ್ರೇತಾಯಾಂ ವರ್ತಮಾನಾಯಾಂ ಕಾಲಃ ಕೃತಸಮೋಽಭವತ್ ।
ರಾಮೇ ರಾಜನಿ ಧರ್ಮಜ್ಞೇ ಸರ್ವಭೂತಸುಖಾವಹೇ ॥ ೫೨ ॥

ವನಾನಿ ನದ್ಯೋ ಗಿರಯೋ ವರ್ಷಾಣಿ ದ್ವೀಪಸಿಂಧವಃ ।
ಸರ್ವೇ ಕಾಮದುಘಾ ಆಸನ್ಪ್ರಜಾನಾಂ ಭರತರ್ಷಭ ॥ ೫೩ ॥

ನಾಧಿವ್ಯಾಧಿಜರಾಗ್ಲಾನಿದುಃಖಶೋಕಭಯಕ್ಲಮಾಃ ।
ಮೃತ್ಯುಶ್ಚಾನಿಚ್ಛತಾಂ ನಾಸೀದ್ರಾಮೇ ರಾಜನ್ಯಧೋಕ್ಷಜೇ ॥ ೫೪ ॥

ಏಕಪತ್ನೀವ್ರತಧರೋ ರಾಜರ್ಷಿಚರಿತಃ ಶುಚಿಃ ।
ಸ್ವಧರ್ಮಂ ಗೃಹಮೇಧೀಯಂ ಶಿಕ್ಷಯನ್ ಸ್ವಯಮಾಚರತ್ ॥ ೫೫ ॥

ಇತರ ತಾಯಂದಿರಿಗೂ, ಗುರುಹಿರಿಯರಿಗೂ ವಂದಿಸಿದನು. ಸಮಾನರಾದ ಮಿತ್ರರನ್ನು, ಚಿಕ್ಕವರನ್ನು ಯಥಾಯೋಗ್ಯವಾಗಿ ಸಮ್ಮಾನಿಸಿದನು ಹಾಗೂ ಅವರಿಂದ ಸಮ್ಮಾನವನ್ನು ಸ್ವೀಕರಿಸಿದನು. ಶ್ರೀಸೀತಾದೇವಿಯೂ, ಲಕ್ಷ್ಮಣನೂ ಭಗವಂತನೊಂದಿಗೆ ಎಲ್ಲರೊಡನೆ ಯಥಾಯೋಗ್ಯವಾಗಿ ವ್ಯವಹರಿಸಿದರು. ॥ ೪೬-೪೭ ॥ ಆಗ ಮೃತದೇಹದಲ್ಲಿ ಪ್ರಾಣಸಂಚಾರವಾದಂತೆ ತಾಯಂದಿರು ಪುತ್ರರ ಆಗಮನದಿಂದ ಹರ್ಷಿತರಾದರು. ಅವರನ್ನು ತನ್ನ ತೊಡೆಯಲ್ಲಿ ಕುಳ್ಳಿರಿಸಿಕೊಂಡು ಅವರನ್ನು ತಮ್ಮ ಕಣ್ಣೀರಿನಿಂದ ಅಭಿಷೇಕ ಮಾಡಿದರು. ಆ ಸಮಯದಲ್ಲಿ ಅವರ ಶೋಕವೆಲ್ಲ ಅಳಿದುಹೋಯಿತು. ॥ ೪೮ ॥ ಇದಾದ ಬಳಿಕ ಗುರು ವಸಿಷ್ಠರು ಇತರ ಹಿರಿಯರೊಂದಿಗೆ ವಿಧಿವತ್ತಾಗಿ ಶ್ರೀರಾಮನ ಜಟೆಯನ್ನು ತೆಗೆಸಿ - ಬೃಹಸ್ಪತಿಯು ದೇವೇಂದ್ರನಿಗೆ ಪಟ್ಟಾಭಿಷೇಕ ಮಾಡಿದಂತೆಯೇ ನಾಲ್ಕು ಸಮುದ್ರಗಳಿಂದ ಪುಣ್ಯೋದಕವನ್ನು ತರಿಸಿ ಶ್ರೀರಾಮನಿಗೆ ಪಟ್ಟಾಭಿಷೇಕ ಮಾಡಿದರು. ॥ ೪೯ ॥ ಹೀಗೆ ಮಂಗಳಮಯವಾದ, ಮಂತ್ರಪೂತವಾದ ಶುದ್ಧೋದಕದಿಂದ ತಲೆಗೆ ಸ್ನಾನಮಾಡಿದ ಶ್ರೀರಾಮನು ಸುಂದರವಾದ ವಸ್ತ್ರಾಭರಣಗಳಿಂದಲೂ, ಗಂಧಮಾಲ್ಯಾದಿಗಳಿಂದಲೂ ಸಮಲಂಕೃತನಾದನು. ಎಲ್ಲ ಸಹೋದರರೂ ಮತ್ತು ಜಾನಕೀದೇವಿಯೂ ಸುಂದರ ವಸ್ತ್ರಾಲಂಕಾರಗಳನ್ನೂ ಧರಿಸಿದರು. ಅವರೊಂದಿಗೆ ಶ್ರೀರಾಮಚಂದ್ರನು ಅತ್ಯಂತ ಶೋಭಾಯಮಾನವಾಗಿ ವಿರಾಜಿಸಿದನು. ॥ ೫೦ ॥ ಭರತನು ಅವನ ಚರಣಗಳಲ್ಲಿ ವಂದಿಸಿ ಅವನನ್ನು ಪ್ರಸನ್ನಗೊಳಿಸಿದನು ಮತ್ತು ಅವನ ಆಗ್ರಹದಿಂದ ಭಗವಾನ್ ಶ್ರೀರಾಮನು ರಾಜ್ಯಸಿಂಹಾಸನವನ್ನು ಸ್ವೀಕರಿಸಿದನು. ಬಳಿಕ ಅವನು ತಮ್ಮ-ತಮ್ಮ ಧರ್ಮಗಳಲ್ಲಿ ತತ್ಪರರಾದ ಹಾಗೂ ವರ್ಣಾಶ್ರಮದ ಆಚಾರಗಳನ್ನು ಪಾಲಿಸುವ ಪ್ರಜೆಯನ್ನು ತಂದೆಯಂತೆ ಪಾಲಿಸತೊಡಗಿದನು. ಅವನ ಪ್ರಜೆಯೂ ಆತನನ್ನು ತಂದೆಯಂತೆ ಭಾವಿಸುತ್ತಿದ್ದರು. ॥ ೫೧ ॥ ಪರೀಕ್ಷಿತನೇ! ಸಮಸ್ತ ಪ್ರಾಣಿಗಳಿಗೆ ಸುಖವನ್ನು ನೀಡುವ ಪರಮ ಧರ್ಮಜ್ಞನಾದ ಭಗವಾನ್ ಶ್ರೀರಾಮನು ರಾಜನಾದಾಗ ತ್ರೇತಾಯುಗವಿದ್ದರೂ ಕೃತಯುಗದಂತೆ ಭಾಸವಾಗುತ್ತಿತ್ತು. ॥ ೫೨ ॥ ಭರತರ್ಷಭ! ಆ ಸಮಯದಲ್ಲಿ ವನ, ಪರ್ವತಗಳು, ವರ್ಷ, ದ್ವೀಪ, ನದಿ, ಸಮುದ್ರ ಇವೆಲ್ಲವೂ ಪ್ರಜೆಗಳಿಗೆ ಕಾಮಧೇನುವಿನಂತೆ ಸಮಸ್ತ ಕಾಮನೆಗಳನ್ನೂ ಪೂರ್ಣಗೊಳಿಸುತ್ತಿದ್ದವು. ॥ ೫೩ ॥ ಇಂದ್ರಿಯಾತೀತ ಭಗವಾನ್ ಶ್ರೀರಾಮನು ರಾಜ್ಯವಾಳುತ್ತಿರುವಾಗ ಯಾರಿಗೂ ಮಾನಸಿಕ ಚಿಂತೆಯಾಗಲೀ, ಶಾರೀರಿಕ ರೋಗವಾಗಲೀ ಇರಲಿಲ್ಲ. ವೃದ್ಧಾಪ್ಯ, ದೌರ್ಬಲ್ಯ, ದುಃಖ, ಶೋಕ, ಭಯ ಹಾಗೂ ಬಳಲಿಕೆ ಹೆಸರಿಗೆ ಮಾತ್ರವೂ ಇರಲಿಲ್ಲ. ಸಾಯಲು ಬಯಸದವರ ಮೃತ್ಯುವೂ ಕೂಡ ಆಗುತ್ತಿರಲಿಲ್ಲ. ॥ ೫೪ ॥ ಭಗವಾನ್ ಶ್ರೀರಾಮನು ಏಕಪತ್ನೀವ್ರತವನ್ನು ಕೈಗೊಂಡಿದ್ದನು. ಅವನ ಚರಿತ್ರವು ಅತ್ಯಂತ ಪವಿತ್ರವಾಗಿದ್ದು ರಾಜರ್ಷಿಗಳಂತೆಯೇ ಇತ್ತು. ಗೃಹಸ್ಥೋಚಿತ ಸ್ವಧರ್ಮದ ಶಿಕ್ಷಣಕ್ಕಾಗಿ ಅವನು ಸ್ವತಃ ಆ ಧರ್ಮವನ್ನು ಆಚರಿಸುತ್ತಿದ್ದನು. ॥ ೫೫ ॥

ಪ್ರೇಮ್ಣಾನುವೃತ್ತ್ಯಾ ಶೀಲೇನ ಪ್ರಶ್ರಯಾವನತಾ ಸತೀ ।
ಧಿಯಾ ಹ್ರಿಯಾ ಚ ಭಾವಜ್ಞಾ ಭರ್ತುಃ ಸೀತಾಹರನ್ಮನಃ ॥ ೫೬ ॥

ಸತೀಶಿರೋಮಣಿಯಾದ ಸೀತಾದೇವಿಯು ತನ್ನ ಪತಿಯ ಹೃದ್ಗತವನ್ನು ಅರಿತಿದ್ದಳು. ಅವಳು ಪ್ರೇಮದಿಂದ, ಸೇವೆಯಿಂದ, ಸಚ್ಛೀಲದಿಂದ, ಅತ್ಯಂತ ವಿನಯದಿಂದ ಹಾಗೂ ತನ್ನ ಬುದ್ಧಿ ಲಜ್ಜೆ ಮುಂತಾದ ಗುಣಗಳಿಂದ ತನ್ನ ಪತಿ ಭಗವಾನ್ ಶ್ರೀರಾಮನ ಮನಸ್ಸನ್ನು ಗೆದ್ದಿದ್ದಳು. ॥ ೫೬ ॥

ಹತ್ತನೆಯ ಅಧ್ಯಾಯವು ಮುಗಿಯಿತು. ॥ ೧೦ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ನವಮಸ್ಕಂಧೇ
ರಾಮಚರಿತೇ ದಶಮೋಽಧ್ಯಾಯಃ ॥ ೧೦ ॥

ಹನ್ನೊಂದನೆಯ ಅಧ್ಯಾಯ

ಭಗವಾನ್ ಶ್ರೀರಾಮನ ಉಳಿದ ಲೀಲೆಗಳ ವರ್ಣನೆ

ಶ್ರೀಶುಕ ಉವಾಚ

ಭಗವಾನಾತ್ಮನಾತ್ಮಾನಂ ರಾಮ ಉತ್ತಮಕಲ್ಪಕೈಃ ।
ಸರ್ವದೇವಮಯಂ ದೇವಮೀಜ ಆಚಾರ್ಯವಾನ್ಮಖೈಃ ॥ ೧ ॥

ಹೋತ್ರೇಽದದಾದ್ದಿಶಂ ಪ್ರಾಚೀಂ ಬ್ರಹ್ಮಣೇ ದಕ್ಷಿಣಾಂ ಪ್ರಭುಃ ।
ಅಧ್ವರ್ಯವೇ ಪ್ರತೀಚೀಂ ಚ ಉದೀಚೀಂ ಸಾಮಗಾಯ ಸಃ ॥ ೨ ॥

ಆಚಾರ್ಯಾಯ ದದೌ ಶೇಷಾಂ ಯಾವತೀ ಭೂಸ್ತದಂತರಾ ।
ಮನ್ಯಮಾನ ಇದಂ ಕೃತ್ಸ್ನಂ ಬ್ರಾಹ್ಮಣೋಽರ್ಹತಿ ನಿಃಸ್ಪೃಹಃ ॥ ೩ ॥

ಇತ್ಯಯಂ ತದಲಂಕಾರವಾಸೋಭ್ಯಾಮವಶೇಷಿತಃ ।
ತಥಾ ರಾಜ್ಞ್ಯಪಿ ವೈದೇಹೀ ಸೌಮಂಗಲ್ಯಾವಶೇಷಿತಾ ॥ ೪ ॥

ತೇ ತು ಬ್ರಹ್ಮಣ್ಯದೇವಸ್ಯ ವಾತ್ಸಲ್ಯಂ ವೀಕ್ಷ್ಯ ಸಂಸ್ತುತಮ್ ।
ಪ್ರೀತಾಃ ಕ್ಲಿನ್ನಧಿಯಸ್ತಸ್ಮೈ ಪ್ರತ್ಯರ್ಪ್ಯೇದಂ ಬಭಾಷಿರೇ ॥ ೫ ॥

ಅಪ್ರತ್ತಂ ನಸ್ತ್ವಯಾ ಕಿಂ ನು ಭಗವನ್ಭುವನೇಶ್ವರ ।
ಯನ್ನೋಽಂತರ್ಹೃದಯಂ ವಿಶ್ಯ ತಮೋ ಹಂಸಿ ಸ್ವರೋಚಿಷಾ ॥ ೬ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಎಲೈ ಪರೀಕ್ಷಿತನೇ ! ಷಡ್ಗುಣೈಶ್ವರ್ಯಸಂಪನ್ನನಾದ ಶ್ರೀರಾಮನು ಗುರುವಸಿಷ್ಠರನ್ನು ಆಚಾರ್ಯರನ್ನಾಗಿ ಇಟ್ಟುಕೊಂಡು ಶ್ರೇಷ್ಠತಮವಾದ ಸಾಮಗ್ರಿಗಳಿಂದ ಕೂಡಿದ ಯಜ್ಞದ ಮೂಲಕ ಸರ್ವದೇವ ಸ್ವರೂಪನಾದ, ಸ್ವಯಂ ಪ್ರಕಾಶನಾದ ಪರಮಾತ್ಮನನ್ನು ಆರಾಧಿಸಿದನು. ॥ ೧ ॥ ಯಜ್ಞಾಂತ್ಯದಲ್ಲಿ ಶ್ರೀರಾಮನು ಹೋತೃವಿಗೆ ಪೂರ್ವದಿಕ್ಕನ್ನೂ, ಬ್ರಹ್ಮನಿಗೆ ದಕ್ಷಿಣದಿಕ್ಕನ್ನೂ, ಅಧ್ವರ್ಯುವಿಗೆ ಪಶ್ಚಿಮದಿಕ್ಕನ್ನೂ, ಉದ್ಗಾತೃವಿಗೆ ಉತ್ತರದಿಕ್ಕನ್ನೂ (ಈ ದಿಕ್ಕುಗಳಿದ್ದ ರಾಜ್ಯಗಳನ್ನು) ದಕ್ಷಿಣೆಯ ರೂಪದಲ್ಲಿ ಕೊಟ್ಟನು. ॥ ೨ ॥ ಇವುಗಳ ಮಧ್ಯಭಾಗದಲ್ಲಿದ್ದ ಭೂಭಾಗವೆಲ್ಲವನ್ನು ಆಚಾರ್ಯರಾಗಿದ್ದ ವಸಿಷ್ಠರಿಗೆ ದಕ್ಷಿಣೆಯಾಗಿ ನೀಡಿದನು. ಇಡೀ ಭೂಮಂಡಲಕ್ಕೂ ನಿಸ್ಪೃಹರಾದ ಬ್ರಾಹ್ಮಣರೇ ಏಕಮಾತ್ರ ಅಧಿಕಾರಿಗಳಾಗಿದ್ದಾರೆ ಎಂಬುದು ಶ್ರೀರಾಮನ ನಿಶ್ಚಯವಾಗಿತ್ತು. ॥ ೩ ॥ ಹೀಗೆ ಇಡೀ ಭೂಮಂಡಲವನ್ನು ದಾನಮಾಡಿದ ನಂತರ ಅವನ ಬಳಿಯಲ್ಲಿ ಉಟ್ಟವಸ್ತ್ರ, ತೊಟ್ಟ ಅಲಂಕಾರಾದಿಗಳು ಮಾತ್ರ ಉಳಿದಿದ್ದುವು. ಅಂತೆಯೇ ಪಟ್ಟಮಹಿಷಿಯಾದ ಸೀತಾದೇವಿಯಲ್ಲಿಯೂ ಮಾಂಗಲ್ಯ ಸೂಚಕ ವಸ್ತ್ರಾಭರಣಗಳು ಮಾತ್ರವೇ ಉಳಿದಿದ್ದುವು. ॥ ೪ ॥ ಭಗವಾನ್ ಶ್ರೀರಾಮನಾದರೋ ಬ್ರಾಹ್ಮಣರನ್ನೇ ತನ್ನ ಇಷ್ಟದೇವರಾಗಿ ಭಾವಿಸಿದ್ದಾನೆ, ಅವನ ಹೃದಯದಲ್ಲಿ ಬ್ರಾಹ್ಮಣರ ಕುರಿತು ಅನಂತ ಪ್ರೀತಿಯಿದೆ ಎಂಬುದನ್ನು ಅರಿತ ಆಚಾರ್ಯಾದಿ ಬ್ರಾಹ್ಮಣರ ಹೃದಯವು ಪ್ರೇಮದಿಂದ ದ್ರವಿತವಾಯಿತು. ಅವರು ಸಂತುಷ್ಟರಾಗಿ ಇಡೀ ಪೃಥಿವಿಯನ್ನು ಭಗವಂತನಿಗೆ ಮರಳಿ ಒಪ್ಪಿಸಿ ವಿಜ್ಞಾಪಿಸಿಕೊಂಡರು. ॥ ೫ ॥ ಪ್ರಭುವೇ ! ನೀನು ಸರ್ವಲೋಕಗಳ ಏಕಮಾತ್ರ ಸ್ವಾಮಿಯಾಗಿರುವೆ. ನೀನಾದರೋ ನಮ್ಮ ಹೃದಯದೊಳಗಿದ್ದು ನಿನ್ನ ತೇಜಸ್ಸಿನಿಂದ ಅಜ್ಞಾನಾಂಧಕಾರವನ್ನು ನಾಶಪಡಿಸುತ್ತಿರುವೆ. ಹೀಗಿರುವಾಗ ನೀನು ನಮಗೆ ಕೊಡದಿರುವ ವಸ್ತುವು ಯಾವುದು ತಾನೇ ಇದೆ ? (ಆತ್ಮಸ್ವರೂಪವನ್ನೇ ನಮಗೆ ದರ್ಶನಮಾಡಿಸಿರುವಾಗ ಬೇರಾವುದನ್ನು ನಮಗೆ ಕೊಡಬೇಕಾಗಿದೆ ?) ॥ ೬ ॥

ನಮೋ ಬ್ರಹ್ಮಣ್ಯದೇವಾಯ ರಾಮಾಯಾಕುಂಠ ಮೇಧಸೇ ।
ಉತ್ತಮಶ್ಲೋಕಧುರ್ಯಾಯ ನ್ಯಸ್ತದಂಡಾರ್ಪಿತಾಂಘ್ರಯೇ
॥ ೭ ॥

ಕದಾಚಿಲ್ಲೋಕಜಿಜ್ಞಾಸುರ್ಗೂಢೋ ರಾತ್ರ್ಯಾಮಲಕ್ಷಿತಃ ।
ಚರನ್ವಾಚೋಽಶೃಣೋದ್ರಾಮೋ ಭಾರ್ಯಾಮುದ್ದಿಶ್ಯ ಕಸ್ಯಚಿತ್
॥ ೮ ॥

ನಾಹಂ ಬಿಭರ್ಮಿ ತ್ವಾಂ ದುಷ್ಟಾಮಸತೀಂ ಪರವೇಶ್ಮಗಾಮ್ ।
ಸ್ತ್ರೀಲೋಭೀ ಬಿಭೃಯಾತ್ಸೀತಾಂ ರಾಮೋ ನಾಹಂ ಭಜೇ ಪುನಃ
॥ ೯ ॥

ಇತಿ ಲೋಕಾದ್ಬಹುಮುಖಾದ್ದುರಾರಾಧ್ಯಾದಸಂವಿದಃ ।
ಪತ್ಯಾ ಭೀತೇನ ಸಾ ತ್ಯಕ್ತಾ ಪ್ರಾಪ್ತಾ ಪ್ರಾಚೇತಸಾಶ್ರಮಮ್
॥ ೧೦ ॥

ಅಂತರ್ವತ್ನ್ಯಾಗತೇ ಕಾಲೇ ಯಮೌ ಸಾ ಸುಷುವೇ ಸುತೌ ।
ಕುಶೋ ಲವ ಇತಿ ಖ್ಯಾತೌ ತಯೋಶ್ಚಕ್ರೇ ಕ್ರಿಯಾ ಮುನಿಃ
॥ ೧೧ ॥

ಅಂಗದಶ್ಚಿತ್ರಕೇತುಶ್ಚ ಲಕ್ಷ್ಮಣಸ್ಯಾತ್ಮಜೌ ಸ್ಮೃತೌ ।
ತಕ್ಷಃ ಪುಷ್ಕಲ ಇತ್ಯಾಸ್ತಾಂ ಭರತಸ್ಯ ಮಹೀಪತೇ
॥ ೧೨ ॥

ಸುಬಾಹುಃ ಶ್ರುತಸೇನಶ್ಚ ಶತ್ರುಘ್ನಸ್ಯ ಬಭೂವತುಃ ।
ಗಂಧರ್ವಾನ್ಕೋಟಿಶೋ ಜಘ್ನೇ ಭರತೋ ವಿಜಯೇ ದಿಶಾಮ್
॥ ೧೩ ॥

ತದೀಯಂ ಧನಮಾನೀಯ ಸರ್ವಂ ರಾಜ್ಞೇ ನ್ಯವೇದಯತ್ ।
ಶತ್ರುಘ್ನಶ್ಚ ಮಧೋಃ ಪುತ್ರಂ ಲವಣಂ ನಾಮ ರಾಕ್ಷಸಮ್ ।
ಹತ್ವಾ ಮಧುವನೇ ಚಕ್ರೇ ಮಥುರಾಂ ನಾಮ ವೈ ಪುರೀಮ್
॥ ೧೪ ॥

ಮುನೌ ನಿಕ್ಷಿಪ್ಯ ತನಯೌ ಸೀತಾ ಭರ್ತ್ರಾ ವಿವಾಸಿತಾ ।
ಧ್ಯಾಯಂತೀ ರಾಮಚರಣೌ ವಿವರಂ ಪ್ರವಿವೇಶ ಹ
॥ ೧೫ ॥

ತಚ್ಛ್ರುತ್ವಾ ಭಗವಾನ್ರಾಮೋ ರುಂಧನ್ನಪಿ ಧಿಯಾ ಶುಚಃ ।
ಸ್ಮರಂಸ್ತಸ್ಯಾ ಗುಣಾಂಸ್ತಾನ್‌ಸ್ತಾನ್ ನಾಶಕ್ನೋದ್ರೋದ್ಧುಮೀಶ್ವರಃ
॥ ೧೬ ॥

ಪ್ರಭೋ! ನಿನ್ನ ಜ್ಞಾನವು ಅನಂತವಾಗಿದೆ. ಪುಣ್ಯಶ್ಲೋಕರಲ್ಲಿ ನೀನು ಅಗ್ರಗಣ್ಯನಾಗಿರುವೆ. ಯಾರನ್ನು ಯಾವ ಕಾರಣದಿಂದಲೂ ಪೀಡಿಸದಿರುವ ಮಹಾತ್ಮರಿಗೆ ನೀನು ತನ್ನ ಚರಣಕಮಲಗಳನ್ನು ಕರುಣಿಸಿರುವೆ. ಹೀಗಿದ್ದರೂ ನೀನು ಬ್ರಾಹ್ಮಣರನ್ನು ನಿನ್ನ ಇಷ್ಟ ದೇವರೆಂದು ಭಾವಿಸುತ್ತಿರುವೆ. ಭಗವಂತಾ! ನಿನ್ನ ಈ ರಾಮ ರೂಪವನ್ನು ನಾವು ನಮಸ್ಕರಿಸುತ್ತೇವೆ. ॥ ೭ ॥

ಪರೀಕ್ಷಿತನೇ! ಒಮ್ಮೆ ಶ್ರೀರಾಮನು ತನ್ನ ಪ್ರಜೆಗಳ ಸ್ಥಿತಿಗತಿಗಳನ್ನು ತಿಳಿಯಲು ವೇಷವನ್ನು ಮರೆಸಿಕೊಂಡು, ಯಾರಿಗೂ ತಿಳಿಯದಂತೆ ಪಟ್ಟಣದಲ್ಲಿ ಅಡ್ಡಾಡುತ್ತಿದ್ದನು. ಆಗ ಓರ್ವವ್ಯಕ್ತಿಯು ತನ್ನ ಭಾರ್ಯೆಯನ್ನು ಉದ್ದೇಶಿಸಿ ಆಡುತ್ತಿದ್ದ ಮಾತುಗಳನ್ನು ರಾಮನು ಕೇಳಿಸಿಕೊಂಡನು. ॥ ೮ ॥ 'ಎಲೆಗೇ! ನೀನು ದುಷ್ಟಳೂ, ಕುಲಟೆಯೂ ಆಗಿರುವೆ. ಅನ್ಯರ ಮನೆಯಲ್ಲಿದ್ದು ಬಂದಿರುವೆ. ಸ್ತ್ರೀಲೋಭಿಯಾದ ರಾಮನು ಲಂಕೆಯಲ್ಲಿದ್ದು ಬಂದಿರುವ ಸೀತೆಯನ್ನು ಇಟ್ಟುಕೊಂಡಿರಬಹುದು. ಆದರೆ ನಾನು ನಿನ್ನನ್ನು ಪುನಃ ಮನೆ ಸೇರಿಸಲಾರೆ. ॥ ೯ ॥ ಎಲ್ಲ ಜನರನ್ನು ಸಂತೋಷ ಪಡಿಸುವುದು ನಿಜವಾಗಿಯೂ ಬಹು ಕಷ್ಟತರವಾಗಿದೆ. ಏಕೆಂದರೆ, ಮೂರ್ಖರಿಗೆ ಕೊರತೆಯಿಲ್ಲ ತಾನೇ! ಭಗವಾನ್ ಶ್ರೀರಾಮನು ಬಹುಜನರ ಬಾಯಿಂದ ಕೇಳಿದ ಇಂತಹ ಮಾತಿನಿಂದ ಲೋಕಾಪವಾದಕ್ಕೆ ಹೆದರಿ ಸತೀ-ಸಾಧ್ವಿಯಾದ ಸೀತಾದೇವಿಯನ್ನು ತ್ಯಜಿಸಿಯೇ ಬಿಟ್ಟನು. ಸೀತೆಯು ವಾಲ್ಮೀಕಿಗಳ ಆಶ್ರಮದಲ್ಲಿ ಇರತೊಡಗಿದಳು. ॥ ೧೦ ॥ ಸೀತಾದೇವಿಯು ಆಗ ಗರ್ಭಿಣಿಯಾಗಿದ್ದಳು. ದಿನಗಳು ತುಂಬುತ್ತಲೇ ಆಕೆಯು ಅವಳಿ-ಜವಳಿ ಮಕ್ಕಳಿಗೆ ಜನ್ಮವಿತ್ತಳು. ಕುಶ-ಲವರೆಂಬ ಶುಭ ನಾಮಗಳಿಂದ ಅವರು ಪ್ರಸಿದ್ಧರಾದರು. ವಾಲ್ಮೀಕಿಗಳು ಅವರ ಜಾತಕರ್ಮಾದಿ ಸಂಸ್ಕಾರಗಳನ್ನು ನೆರವೇರಿಸಿದರು. ॥ ೧೧ ॥ ಲಕ್ಷ್ಮಣನಿಗೆ ಅಂಗದ ಮತ್ತು ಚಿತ್ರಕೇತು ಎಂಬ ಈರ್ವರು ಪುತ್ರರಾದರು. ಪರೀಕ್ಷಿತನೇ! ಹೀಗೆಯೇ ಭರತನಿಗೂ ತಕ್ಷ ಹಾಗೂ ಪುಷ್ಕಲ ಎಂಬ ಇಬ್ಬರು ಪುತ್ರರಿದ್ದರು. ॥ ೧೨ ॥ ಶತ್ರುಘ್ನನಿಗೆ ಸುಬಾಹು ಮತ್ತು ಶ್ರುತಸೇನರೆಂಬ ಇಬ್ಬರು ಪುತ್ರರಾದರು. ಭರತನು ದಿಗ್ವಿಜಯವನ್ನು ಮಾಡಿ ಕೋಟಿ-ಕೋಟಿ ಗಂಧರ್ವರನ್ನು ಸಂಹರಿಸಿದನು. । ೧೩ । ಅವನು ಅವರ ಸರ್ವಸಂಪತ್ತನ್ನು ತಂದು ಅಣ್ಣನಾದ ಭಗವಾನ್ ಶ್ರೀರಾಮನ ಸೇವೆಯಲ್ಲಿ ಅರ್ಪಿಸಿದನು. ಶತ್ರುಘ್ನನು ಮಧುವನದಲ್ಲಿದ್ದ ಮಧು ಎಂಬ ದಾನವನ ಪುತ್ರನಾದ ಲವಣಾಸುರನನ್ನು ಕೊಂದು ಅಲ್ಲಿ ಮಥುರಾಪುರಿಯನ್ನು ನಿರ್ಮಿಸಿದನು. ॥ ೧೪ ॥ ಭಗವಾನ್ ಶ್ರೀರಾಮನಿಂದ ಪರಿತ್ಯಕ್ತಳಾದ ಸೀತಾದೇವಿಯು ಲವ-ಕುಶರನ್ನು ವಾಲ್ಮೀಕಿಯವರಿಗೆ ಒಪ್ಪಿಸಿ ಶ್ರೀರಾಮಚಂದ್ರನ ಚರಣ ಕಮಲಗಳನ್ನು ಧ್ಯಾನಿಸುತ್ತಾ ಪೃಥಿವಿ ದೇವಿಯ ಲೋಕವನ್ನು ಸೇರಿದಳು. ॥ ೧೫ ॥ ಈ ವಾರ್ತೆಯನ್ನು ಕೇಳಿದ ಸಮರ್ಥನಾದ ಭಗವಾನ್ ಶ್ರೀರಾಮನು ತನ್ನ ಶೋಕಾವೇಶವನ್ನು ಬುದ್ಧಿಯ ಮೂಲಕವಾಗಿ ತಡೆಯಲು ಪ್ರಯತ್ನಿಸಿದರೂ ಸಾಧ್ವಿಯಾದ ಸೀತಾ ದೇವಿಯ ಅನುಪಮವಾದ ಪವಿತ್ರವಾದ ಗುಣಗಳನ್ನು ಮತ್ತೆ-ಮತ್ತೆ ಸ್ಮರಿಸುತ್ತಲೇ ಇದ್ದನು. ॥ ೧೬ ॥

ಸ್ತ್ರೀಪುಂಪ್ರಸಂಗ ಏತಾದೃಕ್ಸರ್ವತ್ರ ತ್ರಾಸಮಾವಹಃ ।
ಅಪೀಶ್ವರಾಣಾಂ ಕಿಮುತ ಗ್ರಾಮ್ಯಸ್ಯ ಗೃಹಚೇತಸಃ ॥ ೧೭ ॥

ಪರೀಕ್ಷಿತನೇ! ಪತಿ-ಪತ್ನಿಯ ಈ ಸಂಬಂಧವು ಎಲ್ಲೆಡೆ ಹೀಗೆಯೇ ದುಃಖಕ್ಕೆ ಕಾರಣವಾಗಿದೆ. ಈ ಮಾತು ಮಹಾಸಮರ್ಥ ಜನರ ವಿಷಯದಲ್ಲಿಯೂ ಹೀಗೆಯೇ ಇರುವಾಗ ಗೃಹಾಸಕ್ತ ವಿಷಯಿಗಳ ಕುರಿತಾದರೋ ಹೇಳುವುದು ಏನಿದೆ? ॥ ೧೭ ॥

ತತ ಊರ್ಧ್ವಂ ಬ್ರಹ್ಮಚರ್ಯಂ ಧಾರಯನ್ನಜುಹೋತ್ಪ್ರಭುಃ ।
ತ್ರಯೋದಶಾಬ್ದಸಾಹಸ್ರಮಗ್ನಿಹೋತ್ರಮಖಂಡಿತಮ್ ॥ ೧೮ ॥

ಸ್ಮರತಾಂ ಹೃದಿ ವಿನ್ಯಸ್ಯ ವಿದ್ಧಂ ದಂಡಕಕಂಟಕೈಃ ।
ಸ್ವಪಾದಪಲ್ಲವಂ ರಾಮ ಆತ್ಮಜ್ಯೋತಿರಗಾತ್ತತಃ ॥ ೧೯ ॥

ಇದಾದ ಬಳಿಕ ಭಗವಾನ್ ಶ್ರೀರಾಮನು ಬ್ರಹ್ಮಚರ್ಯ ವ್ರತವನ್ನು ಕೈಗೊಂಡು ಹದಿಮೂರುಸಾವಿರ ವರ್ಷಗಳ ಕಾಲ ಅಖಂಡವಾಗಿ ಅಗ್ನಿಹೋತ್ರವನ್ನು ಮಾಡಿದನು ॥ ೧೮ ॥ ಅನಂತರ ಶ್ರೀರಾಮನು ದಂಡಕಾರಣ್ಯದಲ್ಲಿ ಮುಳ್ಳುಗಳಿಂದ ಚುಚ್ಚಲ್ಪಟ್ಟಿದ್ದ, ಚಿಗುರಿನಂತೆ ಸುಕೋಮಲವಾದ ತನ್ನ ಪಾದಪಂಕಜಗಳನ್ನು ತನ್ನನ್ನು ಸ್ಮರಿಸುವ ಭಕ್ತರ ಹೃದಯದಲ್ಲಿ ನೆಲೆಗೊಳಿಸಿ ಆತ್ಮಜ್ಯೋತಿಯಲ್ಲಿ ಸೇರಿಹೋದನು. ॥ ೧೯ ॥

ನೇದಂ ಯಶೋ ರಘುಪತೇಃ ಸುರಯಾಚ್ಞಯಾಽಽತ್ತ-
ಲೀಲಾತನೋರಧಿಕಸಾಮ್ಯವಿಮುಕ್ತಧಾಮ್ನಃ ।
ರಕ್ಷೋವಧೋ ಜಲಧಿಬಂಧನಮಸ್ತ್ರಪೂಗೈಃ
ಕಿಂ ತಸ್ಯ ಶತ್ರುಹನನೇ ಕಪಯಃ ಸಹಾಯಾಃ ॥ ೨೦ ॥

ಪರೀಕ್ಷಿತನೇ! ಭಗವಂತನಂತಹ ಪ್ರತಾಪಶಾಲಿಯು ಬೇರೆ ಯಾರೂ ಇಲ್ಲದಿರುವಾಗ ಅವನಿಗಿಂತ ಮಿಗಿಲಾದವನು ಹೇಗೆ ಇರಬಲ್ಲರು? ಅವನು ದೇವತೆಗಳ ಪ್ರಾರ್ಥನೆಯಿಂದಲೇ ಈ ಲೀಲಾವಿಗ್ರಹವನ್ನು ಧರಿಸಿದ್ದನು. ಇಂತಹ ಸ್ಥಿತಿಯಲ್ಲಿ ರಘುವಂಶ ಶಿರೋಮಣಿ ಭಗವಾನ್ ಶ್ರೀರಾಮನಿಗೆ – ಅಸ್ತ್ರ-ಶಸ್ತ್ರಗಳಿಂದ ರಾಕ್ಷಸರನ್ನು ಸಂಹರಿಸಿದುದು, ಸಮುದ್ರಕ್ಕೆ ಸೇತುವೆ ಕಟ್ಟಿದುದು ಇದೇನೂ ದೊಡ್ಡ ಗೌರವದ ಮಾತಲ್ಲ. ಅವನಿಗೆ ಶತ್ರುಗಳನ್ನು ಕೊಲ್ಲಲಿಕ್ಕಾಗಿ ಕಪಿಗಳ ಸಹಾಯದ ಆವಶ್ಯಕತೆಯಾದರೂ ಏನಿತ್ತು? ಇದೆಲ್ಲವೂ ಅವನ ಲೀಲೆ ಮಾತ್ರವಾಗಿದೆ. ॥ ೨೦ ॥

ಯಸ್ಯಾಮಲಂ ನೃಪಸದಸ್ಸು ಯಶೋಽಧುನಾಪಿ
ಗಾಯಂತ್ಯಘಘ್ನಮೃಷಯೋ ದಿಗಿಭೇಂದ್ರಪಟ್ಟಮ್ ।
ತಂ ನಾಕಪಾಲವಸುಪಾಲಕಿರೀಟಜುಷ್ಟ-
ಪಾದಾಂಬುಜಂ ರಘುಪತಿಂ ಶರಣಂ ಪ್ರಪದ್ಯೇ ॥ ೨೧ ॥

ಭಗವಾನ್ ಶ್ರೀರಾಮಚಂದ್ರನ ನಿರ್ಮಲವಾದ ಯಶಸ್ಸು ಸಮಸ್ತ ಪಾಪಗಳನ್ನು ಪರಿಹರಿಸುವಂತಹುದು. ಅದು ದಿಗ್ಗಜಗಳಿಗೆ ಪಟ್ಟವಸ್ತ್ರದಂತಿರುವ ಶ್ರೀರಾಮಚಂದ್ರನ ಯಶಸ್ಸು ದಿಗಂತದ ವರೆಗೂ ಹರಡಿದೆ. ಇಂದೂ ಕೂಡ ಮಹಾ-ಮಹಾ ಋಷಿ-ಮಹರ್ಷಿಗಳು ರಾಜರುಗಳ ಸಭೆಗಳಲ್ಲಿ ಗಾನಮಾಡುತ್ತಿದ್ದಾರೆ. ಸ್ವರ್ಗದ ದೇವತೆಗಳು ಮತ್ತು ಪೃಥಿವಿಯ ನರಪತಿಗಳು ತಮ್ಮ ಸುಂದರ ಕಿರೀಟಗಳಿಂದ ಅವನ ಚರಣಕಮಲಗಳ ಸೇವೆಯನ್ನು ಮಾಡುತ್ತಿದ್ದಾರೆ. ನಾನೂ ಕೂಡ ಅಂತಹ ರಘುವಂಶ ಶಿರೋಮಣಿ ಭಗವಾನ್ ಶ್ರೀರಾಮಚಂದ್ರನನ್ನು ಶರಣು ಹೊಂದುತ್ತೇನೆ. ॥ ೨೧ ॥

ಸ ಯೈಃ ಸ್ಪೃಷ್ಟೋಽಭಿದೃಷ್ಟೋ ವಾ ಸಂವಿಷ್ಟೋಽನುಗತೋಽಪಿ ವಾ ।
ಕೋಸಲಾಸ್ತೇ ಯಯುಃ ಸ್ಥಾನಂ ಯತ್ರ ಗಚ್ಛಂತಿ ಯೋಗಿನಃ ॥ ೨೨ ॥

ಯಾರು ಭಗವಾನ್ ಶ್ರೀರಾಮನ ದರ್ಶನ ಪಡೆದಿದ್ದರೋ ಸ್ಪರ್ಶಿಸಿದ್ದರೋ, ಅವನ ಸಹವಾಸದಲ್ಲಿದ್ದರೋ, ಅವನನ್ನು ಅನುಸರಿಸಿದ್ದರೋ ಅವರೆಲ್ಲರೂ ಹಾಗೂ ಕೋಸಲ ದೇಶದ ನಿವಾಸಿಗಳೂ ಕೂಡ ಮಹಾಯೋಗಿಗಳು ಯೋಗಸಾಧನೆಯಿಂದ ಪಡೆದುಕೊಳ್ಳುವ ದಿವ್ಯ ಲೋಕವನ್ನು ಸೇರಿರುವರು. ॥ ೨೨ ॥

ಪುರುಷೋ ರಾಮಚರಿತಂ ಶ್ರವಣೈರುಪಧಾರಯನ್ ।
ಆನೃಶಂಸ್ಯಪರೋ ರಾಜನ್ಕರ್ಮಬಂಧೈರ್ವಿಮುಚ್ಯತೇ ॥ ೨೩ ॥

ಯಾವ ಪುರುಷರು ತಮ್ಮ ಕಿವಿಯಾರೆ ಭಗವಾನ್ ಶ್ರೀರಾಮನ ಚರಿತ್ರೆಯನ್ನು ಕೇಳುವರೋ, ಅವರಿಗೆ ಸರಳತೆ, ಕೋಮಲತೆ ಮುಂತಾದ ಸದ್ಗುಣಗಳ ಪ್ರಾಪ್ತಿಯಾಗುತ್ತದೆ. ಪರೀಕ್ಷಿತನೇ! ಕೇವಲ ಇಷ್ಟೇ ಅಲ್ಲ, ಅವನು ಸಮಸ್ತ ಕರ್ಮ ಬಂಧನದಿಂದ ಮುಕ್ತನಾಗುವನು. ॥ ೨೩ ॥

ರಾಜೋವಾಚ

ಕಥಂ ಸ ಭಗವಾನ್ರಾಮೋ ಭ್ರಾತೄನ್ವಾ ಸ್ವಯಮಾತ್ಮನಃ ।
ತಸ್ಮಿನ್ವಾ ತೇಽನ್ವವರ್ತಂತ ಪ್ರಜಾಃ ಪೌರಾಶ್ಚ ಈಶ್ವರೇ ॥ ೨೪ ॥

ಪರೀಕ್ಷಿದ್ರಾಜನು ಕೇಳಿದನು – ಪೂಜ್ಯರೇ! ಭಗವಾನ್ ಶ್ರೀರಾಮನು ತನ್ನ ಸಹೋದರರೊಡನೆ ಹೇಗೆ ವರ್ತಿಸುತ್ತಿದ್ದನು? ಭರತನೇ ಮೊದಲಾದ ಅವನ ಅನುಜರೂ, ಪ್ರಜೆಗಳೂ, ಅಯೋಧ್ಯಾ ನಿವಾಸಿಗಳೂ ಶ್ರೀರಾಮನ ಕುರಿತು ಹೇಗೆ ವ್ಯವಹರಿಸುತ್ತಿದ್ದರು? ॥ ೨೪ ॥

ಶ್ರೀಶುಕ ಉವಾಚ

ಅಥಾದಿಶದ್ದಿಗ್ವಿಜಯೇ ಭ್ರಾತೄಂಸ್ತ್ರಿಭುವನೇಶ್ವರಃ ।
ಆತ್ಮಾನಂ ದರ್ಶಯನ್ ಸ್ವಾನಾಂ ಪುರೀಮೈಕ್ಷತ ಸಾನುಗಃ ॥ ೨೫ ॥

ಆಸಿಕ್ತಮಾರ್ಗಾಂ ಗಂಧೋದೈಃ ಕರಿಣಾಂ ಮದಶೀಕರೈಃ ।
ಸ್ವಾಮಿನಂ ಪ್ರಾಪ್ತಮಾಲೋಕ್ಯ ಮತ್ತಾಂ ವಾ ಸುತರಾಮಿವ ॥ ೨೬ ॥

ಪ್ರಾಸಾದಗೋಪುರಸಭಾಚೈತ್ಯದೇವಗೃಹಾದಿಷು ।
ವಿನ್ಯಸ್ತಹೇಮಕಲಶೈಃ ಪತಾಕಾಭಿಶ್ಚ ಮಂಡಿತಾಮ್ ॥ ೨೭ ॥

ಪೂಗೈಃ ಸವೃಂತೈರಂಭಾಭಿಃ ಪಟ್ಟಿಕಾಭಿಃ ಸುವಾಸಸಾಮ್ ।
ಆದರ್ಶೈರಂಶುಕೈಃ ಸ್ರಗ್ಭಿಃ ಕೃತಕೌತುಕತೋರಣಾಮ್ ॥ ೨೮ ॥

ತಮುಪೇಯುಸ್ತತ್ರ ತತ್ರ
ಪೌರಾ ಅರ್ಹಣಪಾಣಯಃ ।
ಆಶಿಷೋ ಯುಯುಜುರ್ದೇವ
ಪಾಹೀಮಾಂ ಪ್ರಾಕ್ತ್ವಯೋದ್ಧೃತಾಮ್ ॥ ೨೯ ॥

ತತಃ ಪ್ರಜಾ ವೀಕ್ಷ್ಯ ಪತಿಂ ಚಿರಾಗತಂ
ದಿದೃಕ್ಷಯೋತ್ಸೃಷ್ಟಗೃಹಾಃ ಸ್ತ್ರಿಯೋ ನರಾಃ ।
ಆರುಹ್ಯ ಹರ್ಮ್ಯಾಣ್ಯರವಿಂದಲೋಚನ-
ಮತೃಪ್ತನೇತ್ರಾಃ ಕುಸುಮೈರವಾಕಿರನ್ ॥ ೩೦ ॥

ಅಥ ಪ್ರವಿಷ್ಟಃ ಸ್ವಗೃಹಂ ಜುಷ್ಟಂ ಸ್ವೈಃ ಪೂರ್ವರಾಜಭಿಃ ।
ಅನಂತಾಖಿಲಕೋಶಾಢ್ಯಮನರ್ಘ್ಯೋರುಪರಿಚ್ಛದಮ್ ॥ ೩೧ ॥

ವಿದ್ರುಮೋದುಂಬರದ್ವಾರೈರ್ವೈದೂರ್ಯಸ್ತಂಭಪಂಕ್ತಿಭಿಃ ।
ಸ್ಥಲೈರ್ಮಾರಕತೈಃ ಸ್ವಚ್ಛೈರ್ಭ್ರಾಜತ್ಸ್ಫಟಿಕಭಿತ್ತಿಭಿಃ ॥ ೩೨ ॥

ಚಿತ್ರಸ್ರಗ್ಭಿಃ ಪಟ್ಟಿಕಾಭಿರ್ವಾಸೋಮಣಿಗಣಾಂಶುಕೈಃ ।
ಮುಕ್ತಾಫಲೈಶ್ಚಿದುಲ್ಲಾಸೈಃ ಕಾಂತಕಾಮೋಪಪತ್ತಿಭಿಃ ॥ ೩೩ ॥

ಶ್ರೀಶುಕಮಹಾಮುನಿಗಳು ಹೇಳಿದರು – ಪರೀಕ್ಷಿತನೇ! ತ್ರಿಭುವನೇಶ್ವರ ಮಹಾರಾಜನಾದ ಶ್ರೀರಾಮನು ರಾಜ್ಯಸಿಂಹಾಸನವನ್ನು ಸ್ವೀಕರಿಸಿದ ಬಳಿಕ ತನ್ನ ಅನುಜರಿಗೆ ದಿಗ್ವಿಜಯಮಾಡಿಕೊಂಡು ಬರಲು ಆಜ್ಞಾಪಿಸಿದನು. ತಾನು ತನ್ನ ಪರಿಜನ-ಪುರಜನರಿಗೆ ದರ್ಶನವನ್ನೀಯುತ್ತಾ ತನ್ನ ಅನುಚರರೊಂದಿಗೆ ಅಯೋಧ್ಯಾಪಟ್ಟಣದ ಸೊಬಗನ್ನು ನೋಡಲು ಹೊರಟನು. ॥ ೨೫ ॥ ಆ ಸಮಯದಲ್ಲಿ ಅಯೋಧ್ಯಾನಗರದ ಮಾರ್ಗಗಳು ಸುಗಂಧಜಲದಿಂದ ಮತ್ತು ಆನೆಗಳ ಮದೋದಕದಿಂದ ನೆನೆದಿದ್ದವು. ಈ ನಗರಿಯು ಸ್ವಾಮಿಯಾದ ಭಗವಾನ್ ಶ್ರೀರಾಮನನ್ನು ನೋಡಿ ಅತ್ಯಂತ ಆನಂದ ಭರಿತವಾಗಿದೆಯೋ ಎಂಬಂತೆ ಕಾಣುತ್ತಿತ್ತು. ॥ ೨೬ ॥ ಶ್ರೀರಾಮನು ನಗರದರ್ಶನ ಮಾಡಿಕೊಂಡು ಬರುತ್ತಿರುವಾಗ ಸುವರ್ಣಕಲಶಗಳಿಂದ ಯುಕ್ತವಾಗಿದ್ದ ಪ್ರಾಸಾದಗಳನ್ನೂ, ಗೋಪುರಗಳನ್ನೂ, ಸಭಾಭವನಗಳನ್ನೂ, ವಿಹಾರಸ್ಥಳಗಳನ್ನೂ, ದೇವಾಲಯಗಳನ್ನೂ ನೋಡಿದನು. ಅಲ್ಲಲ್ಲಿ ಪತಾಕೆಗಳು ಹಾರಾಡುತ್ತಿದ್ದವು. ॥ ೨೭ ॥ ಗೊಂಚಲುಗಳಿಂದ ಕೂಡಿದ ಅಡಿಕೆಮರಗಳಿಂದಲೂ, ಬಾಳೆಯ ಕಂಭದಿಂದಲೂ, ಸುಂದರವಾದ ಪಟ್ಟವಸ್ತ್ರಗಳಿಂದಲೂ ಶೃಂಗರಿಸಲ್ಪಟ್ಟಿತ್ತು. ಕನ್ನಡಿಗಳಿಂದಲೂ, ವಸ್ತ್ರ-ಪುಷ್ಪಮಾಲೆಗಳಿಂದಲೂ, ಮಾಂಗಲಿಕ ಚಿಹ್ನೆಗಳಿಂದ ಚಿತ್ರಿತವಾಗಿದ್ದ ಕೌತುಕವನ್ನುಂಟುಮಾಡುವ ತೋರಣಗಳಿಂದಲೂ ಇಡೀ ನಗರವು ಝಗ-ಝಗಿಸುತ್ತಿತ್ತು. ॥ ೨೮ ॥ ನಗರವಾಸಿಗಳು ತಮ್ಮ ಕೈಗಳಲ್ಲಿ ನಾನಾರೀತಿಯ ಕಪ್ಪ-ಕಾಣಿಕೆಗಳನ್ನು ಹಿಡಿದುಕೊಂಡು ಭಗವಂತನ ಬಳಿಗೆ ಬಂದು, ಅವನನ್ನು ಪ್ರಾರ್ಥಿಸುತ್ತಾರೆ – ದೇವದೇವನೇ! ನೀನು ನಿನ್ನ ಹಿಂದಿನ ವರಾಹಾವತಾರದಲ್ಲಿ ಈ ಭೂಮಿಯನ್ನು ಉದ್ಧರಿಸಿದ್ದೆ. ಈಗ ಇದರ ಪಾಲನೆಯನ್ನೂ ಮಾಡು. ॥ ೨೯ ॥ ಪರೀಕ್ಷಿತನೇ! ಆ ಸಮಯದಲ್ಲಿ ಬಹಳ ದಿನಗಳ ಬಳಿಕ ಭಗವಾನ್ ಶ್ರೀರಾಮನು ಇತ್ತ ಆಗಮಿಸುತ್ತಿದ್ದಾನೆ ಎಂದು ತಿಳಿದಾಗ ಎಲ್ಲ ಪ್ರಜಾಜನರು, ಸ್ತ್ರೀ-ಪುರುಷರಾದಿಯಾಗಿ ಅವನ ದರ್ಶನದ ಉತ್ಕಂಠತೆಯಿಂದ ಮನೆಗಳ ಬಾಗಿಲುಗಳನ್ನು ಹಾರುಹೊಡೆದು ಅವನ ಕಡೆಗೆ ಓಡುತ್ತಿದ್ದರು. ಅವರು ಎತ್ತರವಾದ ಮಹಡಿಗಳಲ್ಲಿ ಹತ್ತಿಕೊಂಡು ತೃಪ್ತಿಹೊಂದದ ಕಣ್ಣುಗಳಿಂದ ಕಮಲನಯನ ಭಗವಂತನನ್ನು ನೋಡುತ್ತಾ ಅವನ ಮೇಲೆ ಹೂವುಗಳ ಮಳೆಗರೆಯುತ್ತಿದ್ದರು. ॥ ೩೦ ॥

ಹೀಗೆ ಪ್ರಜಾಜನರ ನಿರೀಕ್ಷಣಮಾಡಿ ಭಗವಂತನು ಮರಳಿ ಅರಮನೆಗೆ ಬರುತ್ತಿದ್ದನು. ಆ ಅರಮನೆಯು ಹಿಂದಿನ ರಾಜರಿಂದ ಸೇವಿಸಲ್ಪಟ್ಟಿತ್ತು. ಅದರಲ್ಲಿ ಎಂದೂ ಬರಿದಾಗದ ದೊಡ್ಡ-ದೊಡ್ಡ ರತ್ನಭಂಡಾರಗಳಿದ್ದವು. ಬಹುಮೂಲ್ಯವಾದ ಅನೇಕ ಸಾಮಗ್ರಿಗಳಿಂದ ಸುಸಜ್ಜಿತವಾಗಿತ್ತು. ॥ ೩೧ ॥ ಆ ಅರಮನೆಯ ದ್ವಾರಬಂಧಗಳು, ದ್ವಾರಗಳು ಹವಳಗಳಿಂದಲೇ ನಿರ್ಮಿತವಾಗಿದ್ದವು. ಅದರಲ್ಲಿರುವ ಎಲ್ಲ ಕಂಭಗಳು ವೈಡೂರ್ಯಮಣಿಗಳದ್ದಾಗಿದ್ದವು. ಮರಕತಮಣಿಯಿಂದ ರಚಿಸಿದ ಸುಂದರ ನೆಲವಿತ್ತು. ಸ್ಫಟಿಕದ ಗೋಡೆಗಳು ಹೊಳೆಯುತ್ತಿದ್ದವು. ॥ ೩೨ ॥ ಬಣ್ಣ-ಬಣ್ಣದ ಮಾಲೆಗಳಿಂದಲೂ, ಪತಾಕೆಗಳಿಂದಲೂ, ಮಣಿಗಳ ಹೊಳಪಿನಿಂದಲೂ, ಶುದ್ಧಚೇತನದಂತೆ ಉಜ್ವಲ ಮುತ್ತುಗಳಿಂದಲೂ, ಸುಂದರವಾದ ಭೋಗಸಾಮಗ್ರಿಗಳಿಂದಲೂ, ಸುಗಂಧಿತ ಧೂಪ-ದೀಪ

ಧೂಪದೀಪೈಃ ಸುರಭಿಭಿರ್ಮಂಡಿತಂ ಪುಷ್ಪಮಂಡನೈಃ ।
ಸ್ತ್ರೀಪುಂಭಿಃ ಸುರಸಂಕಾಶೈರ್ಜುಷ್ಟಂ ಭೂಷಣಭೂಷಣೈಃ ॥ ೩೪ ॥

ಗಳಿಂದಲೂ, ಪುಷ್ಪಗಳಿಂದಲೂ, ಒಡವೆಗಳಿಂದಲೂ ಆ ಅರಮನೆಯನ್ನು ತುಂಬಾ ಶೃಂಗರಿಸಿದ್ದರು. ಅಂತಹ ದಿವ್ಯವಾದ ಅರಮನೆಯನ್ನು ಶ್ರೀರಾಮನು ಪ್ರವೇಶಿಸುತ್ತಲೇ ಆಭೂಷಣಗಳಿಗೂ ಅಲಂಕಾರಪ್ರಾಯರಾದ ದೇವೋಪಮ ಸ್ತ್ರೀ-ಪುರುಷರು ಅವನ ಸೇವೆಯಲ್ಲಿ ಸರ್ವದಾ ನಿರತರಾಗಿರುತ್ತಿದ್ದರು. ॥ ೩೩-೩೪ ॥

ತಸ್ಮಿನ್ಸ ಭಗವಾನ್ರಾಮಃ ಸ್ನಿಗ್ಧಯಾ ಪ್ರಿಯಯೇಷ್ಟಯಾ ।
ರೇಮೇ ಸ್ವಾರಾಮಧೀರಾಣಾಮೃಷಭಃ ಸೀತಯಾ ಕಿಲ ॥ ೩೫ ॥

ಪರೀಕ್ಷಿತನೇ! ಭಗವಾನ್ ಶ್ರೀರಾಮನು ಆತ್ಮಾರಾಮರಾದ ಜಿತೇಂದ್ರಿಯರಾದ ಪುರುಷರೆಲ್ಲರಿಗೂ ಶ್ರೇಷ್ಠನಾಗಿದ್ದನು. ಆ ದಿವ್ಯವಾದ ಅರಮನೆಯಲ್ಲಿ ಅವನು ತನ್ನ ಪ್ರಾಣಪ್ರಿಯಳಾದ ಪ್ರೇಮಮಯಿಯಾದ ಪತ್ನೀ ಶ್ರೀಸೀತಾದೇವಿಯೊಡನೆ ವಿಹರಿಸುತ್ತಿದ್ದನು. ॥ ೩೫ ॥

ಬುಭುಜೇ ಚ ಯಥಾಕಾಲಂ ಕಾಮಾನ್ ಧರ್ಮಮಪೀಡಯನ್ ।
ವರ್ಷಪೂಗಾನ್ಬಹೂನ್ ನೄಣಾಮಭಿಧ್ಯಾತಾಂಘ್ರಿಪಲ್ಲವಃ ॥ ೩೬ ॥

ಸಮಸ್ತ ಸ್ತ್ರೀ-ಪುರುಷರು ಯಾರ ಚರಣಕಮಲಗಳನ್ನು ಧ್ಯಾನಮಾಡುತ್ತಾ ಇರುವರೋ ಅಂತಹ ಭಗವಾನ್ ಶ್ರೀರಾಮನು ಬಹಳ ವರ್ಷಗಳವರೆಗೆ ಧರ್ಮ-ಮರ್ಯಾದೆಗಳನ್ನು ಪಾಲಿಸುತ್ತಾ ಕಾಲೋಚಿತವಾಗಿ ಸುಖೋಪಭೋಗಗಳನ್ನು ಸೇವಿಸುತ್ತಾ ರಾಜ್ಯಭಾರ ಮಾಡುತ್ತಿದ್ದನು. ॥ ೩೬ ॥

ಹನ್ನೊಂದನೆಯ ಅಧ್ಯಾಯವು ಮುಗಿಯಿತು. ॥ ೧೧ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ನವಮ ಸ್ಕಂಧೇ ಶ್ರೀರಾಮೋಪಾಖ್ಯಾನೇ ಏಕಾದಶೋಽಧ್ಯಾಯಃ ॥ ೧೧ ॥

ಹನ್ನೆರಡನೆಯ ಅಧ್ಯಾಯ

ಉಳಿದ ಇಕ್ಷ್ವಾಕು ವಂಶದ ಅರಸರ ವರ್ಣನೆ

ಶ್ರೀಶುಕ ಉವಾಚ

ಕುಶಸ್ಯ ಚಾತಿಥಿಸ್ತಸ್ಮಾನ್ನಿಷಧಸ್ತತ್ಸುತೋ ನಭಃ ।
ಪುಂಡರೀಕೋಽಥ ತತ್ಪುತ್ರಃ ಕ್ಷೇಮಧನ್ವಾಭವತ್ತತಃ ॥ ೧ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಎಲೈ ಪರೀಕ್ಷಿತನೇ! ಶ್ರೀರಾಮನಿಗೆ ಕುಶ-ಲವರೆಂಬ ಯಮಳರು ಹುಟ್ಟಿದ್ದರೆಂದು ಹೇಳಿದ್ದೆನಲ್ಲವೇ? ಮುಂದೆ ಕುಶನ ಸಂತಾನವು ಬೆಳೆಯಿತು. ಕುಶನ ಮಗ ಅತಿಥಿ, ಅವನಿಗೆ ನಿಷಧ, ನಿಷಧನಿಂದ ನಭ, ನಭನಿಗೆ ಪುಂಡರೀಕ, ಪುಂಡರೀಕನಿಗೆ ಕ್ಷೇಮಧನ್ವಾ ಹುಟ್ಟಿದನು. ॥ ೧ ॥

ದೇವಾನೀಕಸ್ತತೋಽನೀಹಃ ಪಾರಿಯಾತ್ರೋಽಥ ತತ್ಸುತಃ ।
ತತೋ ಬಲಸ್ಥಲಸ್ತಸ್ಮಾದ್ವಜ್ರನಾಭೋಽರ್ಕಸಂಭವಃ ॥ ೨ ॥

ಕ್ಷೇಮಧನ್ವನಿಗೆ ದೇವಾನೀಕ ಪುತ್ರನಾದನು. ದೇವಾನೀಕನಿಂದ ಅನೀಹ, ಅನೀಹನಿಂದ ಪಾರಿಯಾತ್ರ, ಪಾರಿಯಾತ್ರನಿಂದ ಬಲಸ್ಥಲ, ಬಲಸ್ಥಲನಿಗೆ ವಜ್ರನಾಭನೆಂಬ ಪುತ್ರನಾದನು. ಇವನು ಸೂರ್ಯನ ಅಂಶವಾಗಿದ್ದನು. ॥ ೨ ॥

ಖಗಣಸ್ತತ್ಸುತಸ್ತಸ್ಮಾದ್ವಿಧೃತಿಶ್ಚಾಭವತ್ ಸುತಃ ।
ತತೋ ಹಿರಣ್ಯನಾಭೋಽಭೂದ್ಯೋಗಾಚಾರ್ಯಸ್ತು ಜೈಮಿನೇಃ ॥ ೩ ॥

ವಜ್ರನಾಭನಿಂದ ಖಗಣ. ಖಗಣನಿಂದ ವಿಧೃತಿ, ವಿಧೃತಿಯಿಂದ ಹಿರಣ್ಯನಾಭನ ಉತ್ಪತ್ತಿಯಾಯಿತು. ಅವನು ಜೈಮಿನಿಯ ಶಿಷ್ಯನಾಗಿದ್ದು ಯೋಗಾಚಾರ್ಯನಾಗಿದ್ದನು. ॥ ೩ ॥

ಶಿಷ್ಯಃ ಕೌಸಲ್ಯ ಆಧ್ಯಾತ್ಮಂ ಯಾಜ್ಞವಲ್ಕ್ಯೋಽಧ್ಯಗಾದ್ಯತಃ ।
ಯೋಗಂ ಮಹೋದಯಮೃಷಿರ್ಹೃದಯಗ್ರಂಥಿಭೇದಕಮ್ ॥ ೪ ॥

ಕೋಸಲದೇಶನಿವಾಸಿ ಯಾಜ್ಞವಲ್ಕ್ಯ ಋಷಿಯು ಅವನ ಶಿಷ್ಯನಾಗಿ ಅವನಿಂದ ಅಧ್ಯಾತ್ಮಯೋಗದ ಶಿಕ್ಷಣವನ್ನು ಪಡೆದಿದ್ದನು. ಆ ಯೋಗವು ಹೃದಯಗ್ರಂಥಿಯನ್ನು ಕತ್ತರಿಸುವಂತಹುದು ಮತ್ತು ಪರಮ ಸಿದ್ಧಿಪ್ರದವಾಗಿದೆ. ॥ ೪ ॥

ಪುಷ್ಯೋ ಹಿರಣ್ಯನಾಭಸ್ಯ ಧ್ರುವಸಂಧಿಸ್ತತೋಽಭವತ್ ।
ಸುದರ್ಶನೋಽಥಾಗ್ನಿವರ್ಣಃ ಶೀಘ್ರಸ್ತಸ್ಯ ಮರುಃ ಸುತಃ ॥ ೫ ॥

ಹಿರಣ್ಯನಾಭನಿಗೆ ಪುಷ್ಯ, ಪುಷ್ಯನಿಗೆ ಧ್ರುವಸಂಧಿ, ಧ್ರುವಸಂಧಿಗೆ ಸುದರ್ಶನ, ಸುದರ್ಶನನಿಗೆ ಅಗ್ನಿವರ್ಣ, ಅಗ್ನಿವರ್ಣನಿಗೆ ಶೀಘ್ರ, ಶೀಘ್ರನಿಗೆ ಮರು ಎಂಬ ಪುತ್ರ ಹುಟ್ಟಿದನು. ॥ ೫ ॥

ಸೋಽಸಾವಾಸ್ತೇ ಯೋಗಸಿದ್ಧಃ ಕಲಾಪಗ್ರಾಮಮಾಶ್ರಿತಃ ।
ಕಲೇರಂತೇ ಸೂರ್ಯವಂಶಂ ನಷ್ಟಂ ಭಾವಯಿತಾ ಪುನಃ ॥ ೬ ॥

ಮರುವು ಯೋಗಸಾಧನೆಯಿಂದ ಸಿದ್ಧಿಯನ್ನು ಪಡೆದುಕೊಂಡು ಅವನು ಈಗಲೂ ಕಲಾಪಗ್ರಾಮದಲ್ಲಿ ಇರುತ್ತಿರುವನು. ಕಲಿಯುಗದ ಅಂತ್ಯದಲ್ಲಿ ಸೂರ್ಯವಂಶವು ನಾಶವಾದಾಗ ಅವನು ಅದನ್ನು ಪುನಃ ಮುಂದುವರೆಸುವನು. ॥ ೬ ॥

ತಸ್ಮಾತ್ಪ್ರಸುಶ್ರುತಸ್ತಸ್ಯ ಸಂಧಿಸ್ತಸ್ಯಾಪ್ಯಮರ್ಷಣಃ ।
ಮಹಸ್ವಾಂಸ್ತತ್ಸುತಸ್ತಸ್ಮಾದ್ವಿಶ್ವಸಾಹ್ವೋಽನ್ವಜಾಯತ ॥ ೭ ॥

ತತಃ ಪ್ರಸೇನಜಿತ್ತಸ್ಮಾತ್ತಕ್ಷಕೋ ಭವಿತಾ ಪುನಃ ।
ತತೋ ಬೃಹದ್ಬಲೋ ಯಸ್ತು ಪಿತ್ರಾ ತೇ ಸಮರೇ ಹತಃ ॥ ೮ ॥

ಏತೇ ಹೀಕ್ಷ್ವಾಕುಭೂಪಾಲಾ ಅತೀತಾಃ ಶೃಣ್ವನಾಗತಾನ್ ।
ಬೃಹದ್ಬಲಸ್ಯ ಭವಿತಾ ಪುತ್ರೋ ನಾಮ ಬೃಹದ್ರಣಃ ॥ ೯ ॥

ಉರುಕ್ರಿಯಸ್ತತಸ್ತಸ್ಯ ವತ್ಸವೃದ್ಧೋ ಭವಿಷ್ಯತಿ ।
ಪ್ರತಿವ್ಯೋಮಸ್ತತೋ ಭಾನುರ್ದಿವಾಕೋ ವಾಹಿನೀಪತಿಃ ॥ ೧೦ ॥

ಸಹದೇವಸ್ತತೋ ವೀರೋ ಬೃಹದಶ್ವೋಽಥ ಭಾನುಮಾನ್ ।
ಪ್ರತೀಕಾಶ್ವೋ ಭಾನುಮತಃ ಸುಪ್ರತೀಕೋಽಥ ತತ್ಸುತಃ ॥ ೧೧ ॥

ಭವಿತಾ ಮರುದೇವೋಽಥ ಸುನಕ್ಷತ್ರೋಽಥ ಪುಷ್ಕರಃ ।
ತಸ್ಯಾಂತರಿಕ್ಷಸ್ತತ್ಪುತ್ರಃ ಸುತಪಾಸ್ತದಮಿತ್ರಜಿತ್ ॥ ೧೨ ॥

ಬೃಹದ್ರಾಜಸ್ತು ತಸ್ಯಾಪಿ ಬರ್ಹಿಸ್ತಸ್ಮಾತ್ಕೃತಂಜಯಃ ।
ರಣಂಜಯಸ್ತಸ್ಯ ಸುತಃ ಸಂಜಯೋ ಭವಿತಾ ತತಃ ॥ ೧೩ ॥

ತಸ್ಮಾಚ್ಛಾಕ್ಯೋಽಥ ಶುದ್ಧೋದೋ ಲಾಂಗಲಸ್ತತ್ಸುತಃ ಸ್ಮೃತಃ ।
ತತಃ ಪ್ರಸೇನಜಿತ್ತಸ್ಮಾತ್ ಕ್ಷುದ್ರಕೋ ಭವಿತಾ ತತಃ ॥ ೧೪ ॥

ರಣಕೋ ಭವಿತಾ ತಸ್ಮಾತ್ಸುರಥಸ್ತನಯಸ್ತತಃ ।
ಸುಮಿತ್ರೋ ನಾಮ ನಿಷ್ಠಾಂತ ಏತೇ ಬಾರ್ಹದ್ಬಲಾನ್ವಯಾಃ ॥ ೧೫ ॥

ಇಕ್ಷ್ವಾಕೂಣಾಮಯಂ ವಂಶಃ ಸುಮಿತ್ರಾಂತೋ ಭವಿಷ್ಯತಿ ।
ಯತಸ್ತಂ ಪ್ರಾಪ್ಯ ರಾಜಾನಂ ಸಂಸ್ಥಾಂ ಪ್ರಾಪ್ಸ್ಯತಿ ವೈ ಕಲೌ ॥ ೧೬ ॥

ಮರುವಿನಿಂದ ಪ್ರಸುಶ್ರುತ, ಅವನಿಂದ ಸಂಧಿ, ಸಂಧಿಯಿಂದ ಅಮರ್ಷಣನು ಹುಟ್ಟಿದನು. ಅಮರ್ಷಣನಿಂದ ಮಹಸ್ವಂತ, ಮಹಸ್ವಂತನಿಂದ ವಿಶ್ವಸಾಹ್ವನಾದನು. ॥ ೭ ॥ ವಿಶ್ವಸಾಹ್ವನ ಪುತ್ರ ಪ್ರಸೇನಜಿತ್, ಪ್ರಸೇನಜಿತ್ತುವಿನಿಂದ ತಕ್ಷಕ, ತಕ್ಷಕಪುತ್ರ ಬೃಹದ್ಬಲನಾದನು. ಪರೀಕ್ಷಿತನೇ! ಇದೇ ಬೃಹದ್ಬಲನನ್ನು ನಿನ್ನ ತಂದೆ ಅಭಿಮನ್ಯುವು ಯುದ್ಧದಲ್ಲಿ ಕೊಂದಿದ್ದನು. ॥ ೮ ॥

ಪರೀಕ್ಷಿದ್ರಾಜೇಂದ್ರನೇ! ಇಕ್ಷ್ವಾಕುವಂಶದಲ್ಲಿ ಇಂದಿನವರೆಗೆ ಇಷ್ಟು ಭೂಪಾಲರು ಆಗಿಹೋಗಿದ್ದಾರೆ. ಈಗ ಮುಂದೆ ಆಗುವವರ ವಿಷಯವನ್ನು ಕೇಳು. ಬೃಹದ್ಬಲನಿಗೆ ಬೃಹದ್ರಣ ಪುತ್ರನಾಗುವನು. ॥ ೯ ॥ ಬೃಹದ್ರಣನಿಗೆ ಉರುಕ್ರಿಯ, ಅವನಿಗೆ ವತ್ಸವೃದ್ಧ ವತ್ಸವೃದ್ಧನಿಗೆ ಪ್ರತಿವ್ಯೋಮ, ಪ್ರತಿವ್ಯೋಮನಿಗೆ ಭಾನು, ಭಾನುವಿಗೆ ಸೇನಾಪತಿ ದಿವಾಕನೆಂಬ ಪುತ್ರನಾಗುವನು. ॥ ೧೦ ॥ ದಿವಾಕನಿಗೆ ವೀರಸಹದೇವ, ಸಹದೇವನಿಗೆ ಬೃಹದಶ್ವ, ಬೃಹದಶ್ವನಿಗೆ ಭಾನುಮಾನ್, ಭಾನುಮಂತನಿಗೆ ಪ್ರತೀಕಾಶ್ವ, ಪ್ರತೀಕಾಶ್ವನಿಗೆ ಸುಪ್ರತೀಕ ಪುತ್ರನಾಗುವನು. ॥ ೧೧ ॥ ಸುಪ್ರತೀಕನಿಗೆ ಮರುದೇವ, ಮರುದೇವನಿಗೆ ಸುನಕ್ಷತ್ರ, ಸುನಕ್ಷತ್ರನಿಗೆ ಪುಷ್ಕರ. ಪುಷ್ಕರನಿಗೆ ಅಂತರಿಕ್ಷ, ಅಂತರಿಕ್ಷನಿಗೆ ಸುತಪಾ, ಅವನಿಗೆ ಅಮಿತ್ರಜಿತ್ ಎಂಬ ಪುತ್ರನಾಗುವನು. ॥ ೧೨ ॥ ಅಮಿತ್ರಜಿತ್ತುವಿಗೆ ಬೃಹದ್ರಾಜ, ಬೃಹದ್ರಾಜನಿಗೆ ಬರ್ಹಿ, ಬರ್ಹಿಗೆ ಕೃತಂಜಯ, ಕೃತಂಜಯನಿಗೆ ರಣಂಜಯ, ಅವನಿಗೆ ಸಂಜಯನೆಂಬ ಪುತ್ರನಾಗುವನು. ॥ ೧೩ ॥ ಸಂಜಯನಿಗೆ ಶಾಕ್ಯ, ಅವನಿಗೆ ಶುದ್ಧೋದ, ಶುದ್ಧೋದನಿಗೆ ಲಾಂಗಲ, ಲಾಂಗಲನಿಗೆ ಪ್ರಸೇನಜಿತ್, ಪ್ರಸೇನಜಿತ್ತುವಿಗೆ ಕ್ಷುದ್ರಕನೆಂಬ ಪುತ್ರನಾಗುವನು. ॥ ೧೪ ॥ ಕ್ಷುದ್ರಕನಿಗೆ ರಣಕ, ರಣಕನಿಗೆ ಸುರಥ, ಸುರಥನಿಗೆ ಈ ವಂಶದ ಕೊನೆಯ ರಾಜನಾದ ಸುಮಿತ್ರನು ಹುಟ್ಟುವನು. ಇವರೆಲ್ಲರೂ ಬೃಹದ್ಬಲನ ವಂಶಧರರಾಗುವರು. ॥ ೧೫ ॥ ಇಕ್ಷ್ವಾಕುವಿನ ಈ ವಂಶವು ಸುಮಿತ್ರನವರೆಗೆ ಉಳಿದೀತು. ಏಕೆಂದರೆ ಸುಮಿತ್ರನು ರಾಜನಾದಾಗ ಕಲಿಯುಗದಲ್ಲಿ ಈ ವಂಶವು ಮುಗಿದುಹೋದೀತು. ॥ ೧೬ ॥

ಹನ್ನೆರಡನೆಯ ಅಧ್ಯಾಯವು ಮುಗಿಯಿತು. ॥ ೧೨ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ನವಮ ಸ್ಕಂಧೇ ಇಕ್ಷ್ವಾಕುವಂಶವರ್ಣನಂ ನಾಮ ದ್ವಾದಶೋಽಧ್ಯಾಯಃ ॥ ೧೨ ॥

ಹದಿಮೂರನೆಯ ಅಧ್ಯಾಯ

ನಿಮಿರಾಜನ ವಂಶದ ವರ್ಣನೆ

ಶ್ರೀಶುಕ ಉವಾಚ

ನಿಮಿರಿಕ್ಷ್ವಾಕುತನಯೋ ವಸಿಷ್ಠಮವೃತರ್ತ್ವಿಜಮ್ ।
ಆರಭ್ಯ ಸತ್ರಂ ಸೋಽಪ್ಯಾಹ ಶಕ್ರೇಣ ಪ್ರಾಗ್ವೃತೋಽಸ್ಮಿ ಭೋಃ ॥ ೧ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಎಲೈ ಪರೀಕ್ಷಿತನೇ! ಇಕ್ಷ್ವಾಕುವಿಗೆ ನಿಮಿ ಎಂಬ ಪುತ್ರನಿದ್ದನು. ಅವನು ಯಜ್ಞವನ್ನು ಪ್ರಾರಂಭಿಸಿ ಮಹರ್ಷಿ ವಸಿಷ್ಠರನ್ನು ಋತ್ವಿಜರನ್ನಾಗಿ ವರಣ ಮಾಡಿದನು. ವಸಿಷ್ಠರು ಹೇಳಿದರು – ರಾಜನೇ! ಇಂದ್ರನು ತನ್ನ ಯಜ್ಞಕ್ಕಾಗಿ ನನ್ನನ್ನು ಮೊದಲೇ ವರಣಮಾಡಿರುವನು. ॥ ೧ ॥




राजा भगीरथकी प्रार्थनापर भगवान् शिवका गङ्गाको अपने सिरपर धारण करना
Entreated by Bhagīratha Lord Śiva holds Gaṅgā on his head




मर्यादापुरुषोत्तम भगवान् श्रीराम

Lord Rāma the Maryādapuruṣottama



भगवान् श्रीकृष्णके बालचरित्र (क)

Childly pranks of Lord Śrī Kṛṣṇa (A)



भगवान् श्रीकृष्णके बालचरित (ख)

Childly pranks of Lord Śrī Kṛṣṇa (B)



जरासन्धके कारागारसे राजाओंकी मुक्ति

The release of kings from the prison of Jarāsandha



शाल्व-संग्राम Battle with Śālva




दन्तवक्त्र और विदूरथका उद्धार
Liberation of Dantavakra and Vidūratha



माता देवकीके मृत पुत्रोंको वापस लाना

Restoration of dead sons of Devaki



यदुकुलके विनाशका शाप

Curse for the annihilation of Yadu dynasty



परमधाम-गमनके पूर्वकी झाँकी

The glimpse of final departure of Lord

ತಂ ನಿರ್ವರ್ತ್ಯಾಗಮಿಷ್ಯಾಮಿ ತಾವನ್ಮಾಂ ಪ್ರತಿಪಾಲಯ ।
ತೂಷ್ಣೀಮಾಸೀದ್ಗೃಹಪತಿಃ ಸೋಽಪೀಂದ್ರಸ್ಯಾಕರೋನ್ಮಖಮ್ ॥ ೨ ॥

ನಿಮಿಶ್ಚಲಮಿದಂ ವಿದ್ವಾನ್ಸತ್ರಮಾರಭತಾತ್ಮವಾನ್ ।
ಋತ್ವಿಗ್ಭಿರಪರೈಸ್ತಾವನ್ನಾಗಮದ್ಯಾವತಾ ಗುರುಃ ॥ ೩ ॥

ಶಿಷ್ಯವ್ಯತಿಕ್ರಮಂ ವೀಕ್ಷ್ಯ ನಿರ್ವರ್ತ್ಯ ಗುರುರಾಗತಃ ।
ಅಶಪತ್ಪತತಾದ್ದೇಹೋ ನಿಮೇಃ ಪಂಡಿತಮಾನಿನಃ ॥ ೪ ॥

ನಿಮಿಃ ಪ್ರತಿದದೌ ಶಾಪಂ ಗುರವೇಽಧರ್ಮವರ್ತಿನೇ ।
ತವಾಪಿ ಪತತಾದ್ದೇಹೋ ಲೋಭಾದ್ಧರ್ಮಮಜಾನತಃ ॥ ೫ ॥

ಇತ್ಯುತ್ಸಸರ್ಜ ಸ್ವಂ ದೇಹಂ ನಿಮಿರಧ್ಯಾತ್ಮಕೋವಿದಃ ।
ಮಿತ್ರಾವರುಣಯೋರ್ಜಜ್ಞೇ ಉರ್ವಶ್ಯಾಂ ಪ್ರಪಿತಾಮಹಃ ॥ ೬ ॥

ಗಂಧವಸ್ತುಷು ತದ್ದೇಹಂ ನಿಧಾಯ ಮುನಿಸತ್ತಮಾಃ ।
ಸಮಾಪ್ತೇ ಸತ್ರಯಾಗೇಽಥ ದೇವಾನೂಚುಃ ಸಮಾಗತಾನ್ ॥ ೭ ॥

ರಾಜ್ಞೋ ಜೀವತು ದೇಹೋಽಯಂ ಪ್ರಸನ್ನಾಃ ಪ್ರಭವೋ ಯದಿ ।
ತಥೇತ್ಯುಕ್ತೇ ನಿಮಿಃ ಪ್ರಾಹ ಮಾ ಭೂನ್ಮೇ ದೇಹಬಂಧನಮ್ ॥ ೮ ॥

ಯಸ್ಯ ಯೋಗಂ ನ ವಾಂಛಂತಿ ವಿಯೋಗಭಯಕಾತರಾಃ ।
ಭಜಂತಿ ಚರಣಾಂಭೋಜಂ ಮುನಯೋ ಹರಿಮೇಧಸಃ ॥ ೯ ॥

ದೇಹಂ ನಾವರುರುತ್ಸೇಽಹಂ ದುಃಖಶೋಕಭಯಾವಹಮ್ ।
ಸರ್ವತ್ರಾಸ್ಯ ಯತೋ ಮೃತ್ಯುರ್ಮತ್ಸ್ಯಾನಾಮುದಕೇ ಯಥಾ ॥ ೧೦ ॥

ದೇವಾ ಊಚುಃ

ವಿದೇಹ ಉಷ್ಯತಾಂ ಕಾಮಂ ಲೋಚನೇಷು ಶರೀರಿಣಾಮ್ ।
ಉನ್ಮೇಷಣನಿಮೇಷಾಭ್ಯಾಂ ಲಕ್ಷಿತೋಽಧ್ಯಾತ್ಮಸಂಸ್ಥಿತಃ ॥ ೧೧ ॥

ಅವನ ಯಜ್ಞವನ್ನು ಪೂರೈಸಿ ನಾನು ನಿನ್ನ ಬಳಿಗೆ ಬರುವೆನು. ಅಲ್ಲಿಯವರೆಗೆ ನನ್ನ ಪ್ರತೀಕ್ಷೆ ಮಾಡು. ಈ ಮಾತನ್ನು ಕೇಳಿ ನಿಮಿ ರಾಜನು ಮೌನವಾಗಿದ್ದನು. ವಸಿಷ್ಠರು ಇಂದ್ರನಿಂದ ಯಜ್ಞವನ್ನು ಮಾಡಿಸಲು ಹೊರಟುಹೋದರು. ॥ ೨ ॥ ಜೀವನವು ಕ್ಷಣಭಂಗುರವಾದುದರಿಂದ ವಸಿಷ್ಠರಿಗಾಗಿ ಕಾಯುವುದು ಉಚಿತವಲ್ಲವೆಂದು ಭಾವಿಸಿದ ನಿಮಿಯು ವಸಿಷ್ಠರು ಬರುವ ಮೊದಲೇ ಬೇರೆ ಋತ್ವಿಜರನ್ನು ಆಹ್ವಾನಿಸಿ ಯಜ್ಞವನ್ನು ಪ್ರಾರಂಭಿಸಿದನು. ॥ ೩ ॥ ಗುರು ವಸಿಷ್ಠರು ಇಂದ್ರನ ಯಜ್ಞವನ್ನು ಮುಗಿಸಿ ಮರಳಿದಾಗ ತನ್ನ ಶಿಷ್ಯನಾದ ನಿಮಿಯು ನನ್ನ ಮಾತನ್ನು ಮನ್ನಿಸದೆ ಯಜ್ಞವನ್ನು ಪ್ರಾರಂಭಿಸಿರುವುದನ್ನು ನೋಡಿದರು. ಆದರಿಂದ ಅವರು ಕೋಪಗೊಂಡು – 'ತನ್ನನ್ನೇ ಮಹಾಪಂಡಿತನೆಂದು ಭಾವಿಸಿಕೊಂಡಿರುವ ನಿನ್ನ ಶರೀರವು ಬಿದ್ದುಹೋಗಲಿ' ಎಂದು ಶಾಪವನ್ನಿತ್ತರು. ॥ ೪ ॥ ನಿಮಿಯ ದೃಷ್ಟಿಯಿಂದ ವಸಿಷ್ಠರಿತ್ತ ಶಾಪವು ಧರ್ಮಕ್ಕೆ ವಿರೋಧವಾಗಿತ್ತು. ಈ ಕಾರಣದಿಂದ ಅವನೂ ವಸಿಷ್ಠರಿಗೆ ಶಾಪವನ್ನಿತ್ತನು – 'ಲೋಭಪರವಶನಾಗಿ ಧರ್ಮವನ್ನು ಆದರಿಸದೇ ಇರುವುದರಿಂದ ನಿನ್ನ ಶರೀರವೂ ಬಿದ್ದುಹೋಗಲಿ.' ॥ ೫ ॥ ಹೀಗೆ ಶಾಪವನ್ನಿತ್ತು ಆತ್ಮವಿದ್ಯಾನಿಪುಣನಾದ ನಿಮಿಯು ದೇಹತ್ಯಾಗಮಾಡಿದನು. ಪರೀಕ್ಷಿತನೇ! ಇತ್ತ ನನ್ನ ವೃದ್ಧ ಪ್ರಪಿತಾಮಹರಾದ ವಸಿಷ್ಠರೂ ಕೂಡ ತನ್ನ ಶರೀರವನ್ನು ತ್ಯಜಿಸಿ, ಮಿತ್ರಾವರುಣರ ಪುತ್ರರಾಗಿ ಊರ್ವಶಿಯ ಗರ್ಭದಲ್ಲಿ ಜನ್ಮ ತಾಳಿದರು. ॥ ೬ ॥ ನಿಮಿರಾಜನ ಯಜ್ಞಕ್ಕೆ ಬಂದಿರುವ ಶ್ರೇಷ್ಠ ಮುನಿಗಳು ರಾಜನ ಶರೀರವನ್ನು ಸುಗಂಧಿತ ವಸ್ತುಗಳಲ್ಲಿ ಇರಿಸಿದರು. ಸತ್ರಯಾಗವು ಮುಗಿದು ದೇವತೆಗಳು ಆಗಮಿಸಿದಾಗ ಋತ್ವಿಜರೆಲ್ಲರೂ ಸೇರಿ ದೇವತೆಗಳನ್ನು ಪ್ರಾರ್ಥಿಸಿದರು. ॥ ೭ ॥ ಮಹಾನುಭಾವರೇ! ನೀವೆಲ್ಲ ಸಮರ್ಥರಾಗಿದ್ದೀರಿ. ನೀವು ಈ ಯಾಗದಿಂದ ಪ್ರಸನ್ನರಾಗಿರುವಿರಾದರೆ ನಿಮಿರಾಜನ ಶರೀರವು ಪುನಃ ಜೀವಿತವಾಗಲಿ. 'ಹಾಗೆಯೇ ಆಗಲಿ' ಎಂದು ದೇವತೆಗಳು ಹೇಳಿದಾಗ ನಿಮಿಯು ಹೇಳಿದನು – 'ನನಗೆ ಪುನಃ ದೇಹದ ಬಂಧನಬೇಕಾಗಿಲ್ಲ. ॥ ೮॥ ವಿಚಾರಶೀಲರಾದ ಮುನಿಗಳು ತಮ್ಮ ಬುದ್ಧಿಯನ್ನು ಪೂರ್ಣವಾಗಿ ಭಗವಂತನಲ್ಲೇ ತೊಡಗಿಸುವರು. ಅವನ ಚರಣಕಮಲಗಳನ್ನೇ ಭಜಿಸುತ್ತಾರೆ. ಒಂದಲ್ಲ ಒಂದುದಿನ ಈ ಶರೀರವು ಖಂಡಿತವಾಗಿ ಬಿದ್ದುಹೋಗುವುದು. ಈ ಭಯದಿಂದಾಗಿ ಅವರು ಈ ಶರೀರದ ಸಂಯೋಗವನ್ನು ಎಂದಿಗೂ ಬಯಸುವುದಿಲ್ಲ, ಅವರಾದರೋ ಮುಕ್ತರಾಗಲು ಬಯಸುತ್ತಿರುವರು. ॥ ೯ ॥ ಆದ್ದರಿಂದ ನಾನು ಈಗ ದುಃಖ, ಶೋಕ, ಭಯಕ್ಕೆ ಮೂಲಕಾರಣವಾದ ಈ ಶರೀರವನ್ನು ಧರಿಸಲು ಬಯಸುವುದಿಲ್ಲ. ನೀರಿನಲ್ಲಿರುವ ಮೀನಿಗೆ ಎಲ್ಲೆಡೆ ಮೃತ್ಯುಭಯವೇ ಇರುವಂತೆ ಈ ಶರೀರಕ್ಕೂ ಎಲ್ಲೆಡೆ ಮೃತ್ಯುವೇ ಮೃತ್ಯುವಿದೆ.' ॥ ೧೦ ॥

ದೇವತೆಗಳು ಹೇಳಿದರು – ಮುನಿಗಳೇ! ನಿಮಿರಾಜನು ತನ್ನ ಇಚ್ಛೆಯಂತೆ ಶರೀರರಹಿತನಾಗಿ ಪ್ರಾಣಿಗಳ ಕಣ್ಣುಗಳಲ್ಲಿ ನೆಲಸಲಿ. ಅವನು ಅಲ್ಲಿದ್ದುಕೊಂಡು ಸೂಕ್ಷ್ಮಶರೀರದಿಂದ ಭಗವಂತನನ್ನು ಧ್ಯಾನಮಾಡಲಿ. ರೆಪ್ಪೆಗಳು ಮುಚ್ಚಿ ತೆರೆಯುವುದರಿಂದ ಅವನ ಅಸ್ತಿತ್ವದ ಅರಿವು ಉಂಟಾಗುವುದು. ॥ ೧೧ ॥

ಅರಾಜಕಭಯಂ ನೃಣಾಂ ಮನ್ಯಮಾನಾ ಮಹರ್ಷಯಃ ।
ದೇಹಂ ಮಮಂಥುಃ ಸ್ಮ ನಿಮೇಃ ಕುಮಾರಃ ಸಮಜಾಯತ ॥ ೧೨ ॥

ಜನ್ಮನಾ ಜನಕಃ ಸೋಽಭೂದ್ವೈದೇಹಸ್ತು ವಿದೇಹಜಃ ।
ಮಿಥಿಲೋ ಮಥನಾಜ್ಜಾತೋ ಮಿಥಿಲಾ ಯೇನ ನಿರ್ಮಿತಾ ॥ ೧೩ ॥

ತಸ್ಮಾದುದಾವಸುಸ್ತಸ್ಯ ಪುತ್ರೋಽಭೂನ್ನಂದಿವರ್ಧನಃ ।
ತತಃ ಸುಕೇತುಸ್ತಸ್ಯಾಪಿ ದೇವರಾತೋ ಮಹೀಪತೇ ॥ ೧೪ ॥

ತಸ್ಮಾದ್ಬೃಹದ್ರಥಸ್ತಸ್ಯ ಮಹಾವೀರ್ಯಃ ಸುಧೃತ್ಪಿತಾ ।
ಸುಧೃತೇರ್ಧೃಷ್ಟಕೇತುರ್ವೈ ಹರ್ಯಶ್ವೋಽಥ ಮರುಸ್ತತಃ ॥ ೧೫ ॥

ಮರೋಃ ಪ್ರತೀಪಕಸ್ತಸ್ಮಾಜ್ಜಾತಃ ಕೃತಿರಥೋ ಯತಃ ।
ದೇವಮೀಢಸ್ತಸ್ಯ ಸುತೋ ವಿಶ್ರುತೋಽಥ ಮಹಾಧೃತಿಃ ॥ ೧೬ ॥

ಕೃತಿರಾತಸ್ತತಸ್ತಸ್ಮಾನ್ಮಹಾರೋಮಾಥ ತತ್ಸುತಃ ।
ಸ್ವರ್ಣರೋಮಾ ಸುತಸ್ತಸ್ಯ ಹ್ರಸ್ವರೋಮಾ ವ್ಯಜಾಯತ ॥ ೧೭ ॥

ತತಃ ಸೀರಧ್ವಜೋ ಜಜ್ಞೇ ಯಜ್ಞಾರ್ಥಂ ಕರ್ಷತೋ ಮಹೀಮ್ ।
ಸೀತಾ ಸೀರಾಗ್ರತೋ ಜಾತಾ ತಸ್ಮಾತ್ಸೀರಧ್ವಜಃ ಸ್ಮೃತಃ ॥ ೧೮ ॥

ಕುಶಧ್ವಜಸ್ತಸ್ಯ ಪುತ್ರಸ್ತತೋ ಧರ್ಮಧ್ವಜೋ ನೃಪಃ ।
ಧರ್ಮಧ್ವಜಸ್ಯ ದ್ವೌ ಪುತ್ರೌ ಕೃತಧ್ವಜಮಿತಧ್ವಜೌ ॥ ೧೯ ॥

ಕೃತಧ್ವಜಾತ್ಕೇಶಿಧ್ವಜಃ ಖಾಂಡಿಕ್ಯಸ್ತು ಮಿತಧ್ವಜಾತ್ ।
ಕೃತಧ್ವಜಸುತೋ ರಾಜನ್ನಾತ್ಮವಿದ್ಯಾವಿಶಾರದಃ ॥ ೨೦ ॥

ಖಾಂಡಿಕ್ಯಃ ಕರ್ಮತತ್ತ್ವಜ್ಞೋ ಭೀತಃ ಕೇಶಿಧ್ವಜಾದ್ದ್ರುತಃ ।
ಭಾನುಮಾಂಸ್ತಸ್ಯ ಪುತ್ರೋಽಭೂಚ್ಛತದ್ಯುಮ್ನಸ್ತು ತತ್ಸುತಃ ॥ ೨೧ ॥

ಶುಚಿಸ್ತತ್ತನಯಸ್ತಸ್ಮಾತ್ಸನದ್ವಾಜಸ್ತತೋಽಭವತ್ ।
ಊರ್ಧ್ವಕೇತುಃ ಸನದ್ವಾಜಾದಜೋಽಥ ಪುರುಜಿತ್ಸುತಃ ॥ ೨೨ ॥

ಅರಿಷ್ಟನೇಮಿಸ್ತಸ್ಯಾಪಿ ಶ್ರುತಾಯುಸ್ತತ್ಸುಪಾರ್ಶ್ವಕಃ ।
ತತಶ್ಚಿತ್ರರಥೋ ಯಸ್ಯ ಕ್ಷೇಮಧಿರ್ಮಿಥಿಲಾಧಿಪಃ ॥ ೨೩ ॥

ತಸ್ಮಾತ್ಸಮರಥಸ್ತಸ್ಯ ಸುತಃ ಸತ್ಯರಥಸ್ತತಃ ।
ಆಸೀದುಪಗುರುಸ್ತಸ್ಮಾದುಪಗುಪ್ತೋಽಗ್ನಿಸಂಭವಃ ॥ ೨೪ ॥

ವಸ್ವನಂತೋಽಥ ತತ್ಪುತ್ರೋ ಯುಯುಧೋ ಯತ್ಸುಭಾಷಣಃ ।
ಶ್ರುತಸ್ತತೋ ಜಯಸ್ತಸ್ಮಾದ್ವಿಜಯೋಽಸ್ಮಾದೃತಃ ಸುತಃ ॥ ೨೫ ॥

ಇದಾದ ಬಳಿಕ ರಾಜನು ಇಲ್ಲದಿದ್ದಾಗ ಜನರಲ್ಲಿ ಅರಾಜಕತೆ ಹರಡಿಕೊಂಡೀತು ಎಂದು ಯೋಚಿಸಿದ ಮಹರ್ಷಿಗಳು ನಿಮಿ ರಾಜನ ಶರೀರವನ್ನು ಕಡೆದರು. ಅದರಿಂದ ಓರ್ವ ಕುಮಾರನು ಹುಟ್ಟಿದನು. ॥ ೧೨ ॥ ಅಸಾಧಾರಣವಾದ ರೀತಿಯಲ್ಲಿ ಹುಟ್ಟಿದ ಕಾರಣ ಜನಕನೆಂದೂ, ಪ್ರಾಣವಿಲ್ಲದ ದೇಹದಿಂದ ಹುಟ್ಟಿದ್ದರಿಂದ ವಿದೇಹನೆಂದೂ, ಶರೀರ ಮಂಥನದಿಂದ ಹುಟ್ಟಿದನಾದ್ದರಿಂದ ಮಿಥಿಲನೆಂದೂ ಆ ಕುಮಾರನನ್ನು ಜನರು ಕರೆದರು. ಇವನೇ ಮಿಥಿಲಾಪುರಿಯನ್ನು ನಿರ್ಮಿಸಿದನು. ॥ ೧೩ ॥

ಪರೀಕ್ಷಿತನೇ! ಜನಕನಿಗೆ ಉದಾವಸುವೆಂಬ ಪುತ್ರನು ಹುಟ್ಟಿದನು. ಅವನಿಗೆ ನಂದಿವರ್ಧನನು ಹುಟ್ಟಿದನು. ನಂದಿವರ್ಧನನಿಂದ ಸುಕೇತು, ಅವನಿಗೆ ದೇವರಾತ, ದೇವರಾತನಿಗೆ ಬೃಹದ್ರಥ, ಬೃಹದ್ರಥನಿಗೆ ಮಹಾವೀರ್ಯ, ಮಹಾವೀರ್ಯನಿಗೆ ಸುಧೃತಿ, ಸುಧೃತಿಯಿಂದ ಧೃಷ್ಟಕೇತು, ಧೃಷ್ಟಕೇತುವಿನಿಂದ ಹರ್ಯಶ್ವ, ಅವನಿಗೆ ಮರು ಎಂಬ ಪುತ್ರನು ಹುಟ್ಟಿದನು. ॥ ೧೪-೧೫ ॥ ಮರುವಿನಿಂದ ಪ್ರತೀಪಕ, ಪ್ರತೀಪಕನಿಂದ ಕೃತಿರಥ, ಕೃತಿರಥನಿಂದ ದೇವಮೀಢ, ದೇವಮೀಢನಿಂದ ವಿಶ್ರುತ, ವಿಶ್ರುತನಿಂದ ಮಹಾಧೃತಿಯ ಜನ್ಮವಾಯಿತು. ॥ ೧೬ ॥ ಮಹಾಧೃತಿಗೆ ಕೃತಿರಾತ, ಕೃತಿರಾತನಿಗೆ ಮಹಾರೋಮಾ, ಮಹಾರೋಮನಿಗೆ ಸ್ವರ್ಣರೋಮಾ, ಸ್ವರ್ಣರೋಮನಿಗೆ ಹ್ರಸ್ವರೋಮನು ಮಗನಾದನು. ॥ ೧೭ ॥ ಇದೇ ಹ್ರಸ್ವರೋಮನ ಪುತ್ರ ಸೀರಧ್ವಜ ಮಹಾರಾಜನಾಗಿದ್ದನು. ಅವನು ಯಜ್ಞಕ್ಕಾಗಿ ನೆಲವನ್ನು ಉಳುತ್ತಿರುವಾಗ ನೇಗಿಲಿನ ತುದಿಯಿಂದಾಗಿ ಭೂಮಿಯಿಂದ ಸೀತೆಯು ಜನ್ಮ ತಾಳಿದಳು. ಇದರಿಂದ ಇವನ ಹೆಸರು ಸೀರಧ್ವಜನೆಂದಾಯಿತು. ॥ ೧೮ ॥ ಸೀರಧ್ವಜನಿಗೆ ಕುಶಧ್ವಜ, ಕುಶಧ್ವಜನಿಗೆ ಧರ್ಮಧ್ವಜ, ಧರ್ಮಧ್ವಜನಿಗೆ ಕೃತಧ್ವಜ ಮತ್ತು ಮಿತಧ್ವಜರೆಂಬ ಇಬ್ಬರು ಪುತ್ರರಾದರು. ॥ ೧೯ ॥ ಕೃತಧ್ವಜನಿಗೆ ಕೇಶಿಧ್ವಜ ಮತ್ತು ಮಿತಧ್ವಜನಿಗೆ ಖಾಂಡಿಕ್ಯ ಹುಟ್ಟಿದ್ದನು. ಕೇಶಿಧ್ವಜನು ಆತ್ಮವಿದ್ಯೆಯಲ್ಲಿ ಮಹಾಪ್ರವೀಣನಾಗಿದ್ದನು. ॥ ೨೦ ॥ ಖಾಂಡಿಕ್ಯನು ಕರ್ಮಕಾಂಡದ ಮರ್ಮಜ್ಞನಾಗಿದ್ದನು. ಅವನು ಕೇಶಿಧ್ವಜನಿಂದ ಭಯಗೊಂಡು ಓಡಿಹೋದನು. ಕೇಶಿಧ್ವಜನ ಪುತ್ರ ಭಾನುಮಾನ್, ಭಾನುಮಂತನಿಗೆ ಶತದ್ಯುಮ್ನ ಮಗ ಹುಟ್ಟಿದನು. ॥ ೨೧ ॥ ಶತದ್ಯುಮ್ನನಿಂದ ಶುಚಿ, ಶುಚಿಯಿಂದ ಸನದ್ವಾಜ, ಸನದ್ವಾಜನಿಂದ ಊರ್ಧ್ವಕೇತು, ಊರ್ಧ್ವಕೇತುವಿನಿಂದ ಅಜ, ಅಜನಿಂದ ಪುರುಜಿತ್, ಪುರುಜಿತ್ತುವಿನಿಂದ ಅರಿಷ್ಟನೇಮಿ, ಅರಿಷ್ಟನೇಮಿಯಿಂದ ಶ್ರುತಾಯು, ಶ್ರುತಾಯುವಿನಿಂದ ಸುಪಾರ್ಶ್ವಕ, ಸುಪಾರ್ಶ್ವಕನಿಂದ ಚಿತ್ರರಥ, ಚಿತ್ರರಥನಿಂದ ಮಿಥಿಲಾಪತಿ ಕ್ಷೇಮಧಿಯ ಜನ್ಮವಾಯಿತು. ॥ ೨೨-೨೩ ॥ ಕ್ಷೇಮಧಿಯಿಂದ ಸಮರಥ, ಸಮರಥನಿಂದ ಸತ್ಯರಥ, ಸತ್ಯರಥನಿಂದ ಉಪಗುರು, ಉಪಗುರುವಿನಿಂದ ಉಪಗುಪ್ತನೆಂಬ ಪುತ್ರನಾದನು. ಇವನು ಅಗ್ನಿಯ ಅಂಶನಾಗಿದ್ದನು. ॥ ೨೪ ॥ ಉಪಗುಪ್ತನಿಂದ ವಸ್ವನಂತ, ವಸ್ವನಂತನಿಂದ ಯುಯುಧ, ಯುಯುಧನಿಂದ ಸುಭಾಷಣ, ಸುಭಾಷಣನಿಂದ ಶ್ರುತ, ಶ್ರುತನಿಂದ ಜಯ, ಜಯನಿಂದ ವಿಜಯ, ವಿಜಯನಿಂದ ಋತನೆಂಬ ಪುತ್ರನು ಹುಟ್ಟಿದನು. ॥ ೨೫ ॥

ಶುನಕಸ್ತತ್ಸುತೋ ಜಜ್ಞೇ ವೀತಹವ್ಯೋ ಧೃತಿಸ್ತತಃ ।
ಬಹುಲಾಶ್ವೋ ಧೃತೇಸ್ತಸ್ಯ ಕೃತಿರಸ್ಯ ಮಹಾವಶೀ ॥ ೨೬ ॥

ಋತನಿಗೆ ಶುನಕ, ಶುನಕನಿಗೆ ವೀತಹವ್ಯ, ವೀತಹವ್ಯನಿಂದ ಧೃತಿ, ಧೃತಿಯಿಂದ ಬಹುಲಾಶ್ವ, ಬಹುಲಾಶ್ವನಿಂದ ಕೃತಿ, ಕೃತಿಗೆ ಮಹಾವಶೀ ಎಂಬ ಪುತ್ರನು ಜನಿಸಿದನು. ॥ ೨೬ ॥

ಏತೇ ವೈ ಮೈಥಿಲಾ ರಾಜನ್ನಾತ್ಮವಿದ್ಯಾವಿಶಾರದಾಃ ।
ಯೋಗೇಶ್ವರಪ್ರಸಾದೇನ ದ್ವಂದ್ವೈರ್ಮುಕ್ತಾ ಗೃಹೇಷ್ವಪಿ ॥ ೨೭ ॥

ಪರೀಕ್ಷಿತನೇ! ಇವರೆಲ್ಲರೂ ಮಿಥಿಲನ ವಂಶದಲ್ಲಿ ಹುಟ್ಟಿದ್ದರಿಂದ ಮೈಥಿಲರೆಂದು ಕರೆಸಿಕೊಂಡರು. ಇವರೆಲ್ಲರೂ ಆತ್ಮಜ್ಞಾನದಿಂದ ಸಂಪನ್ನರಾಗಿದ್ದು ಗೃಹಸ್ಥಾಶ್ರಮದಲ್ಲೇ ಇದ್ದು ಸುಖ-ದುಃಖಾದಿ ದ್ವಂದ್ವಗಳಿಂದ ಮುಕ್ತರಾಗಿದ್ದರು. ಯಾಜ್ಞವಲ್ಕ್ಯಾದಿ ಮಹಾ-ಮಹಾ ಯೋಗೀಶ್ವರರ ಮಹಾನ್ ಕೃಪೆಯು ಇವರ ಮೇಲೆ ಇತ್ತು. ॥ ೨೭ ॥

ಹದಿಮೂರನೆಯ ಅಧ್ಯಾಯವು ಮುಗಿಯಿತು. ॥ ೧೩ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ನವಮಸ್ಕಂಧೇ
ನಿಮಿವಂಶಾನುವರ್ಣನಂ ನಾಮ ತ್ರಯೋದಶೋಽಧ್ಯಾಯಃ ॥ ೧೩ ॥

ಹದಿನಾಲ್ಕನೆಯ ಅಧ್ಯಾಯ

ಚಂದ್ರವಂಶದ ವರ್ಣನೆ

ಶ್ರೀಶುಕ ಉವಾಚ

ಅಥಾತಃ ಶ್ರೂಯತಾಂ ರಾಜನ್ವಂಶಃ ಸೋಮಸ್ಯ ಪಾವನಃ ।
ಯಸ್ಮಿನ್ನೈಲಾದಯೋ ಭೂಪಾಃ ಕೀರ್ತ್ಯಂತೇ ಪುಣ್ಯಕೀರ್ತಯಃ ॥ ೧ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಎಲೈ ಪರೀಕ್ಷಿತನೇ! ಈಗ ನಾನು ನಿನಗೆ ಪರಮ ಪವಿತ್ರವಾದ ಚಂದ್ರವಂಶದ ಚರಿತ್ರೆಯನ್ನು ಹೇಳುತ್ತೇನೆ. ಈ ವಂಶದಲ್ಲಿ ಪುರೂರವನೇ ಮೊದಲಾದ ದೊಡ್ಡ-ದೊಡ್ಡ ರಾಜರ ಪವಿತ್ರವಾದ ಕೀರ್ತಿಯ ಸಂಕೀರ್ತನವಿದೆ. ॥ ೧ ॥

ಸಹಸ್ರಶಿರಸಃ ಪುಂಸೋ ನಾಭಿಹ್ರದಸರೋರುಹಾತ್ ।
ಜಾತಸ್ಯಾಸೀತ್ಸುತೋ ಧಾತುರತ್ರಿಃ ಪಿತೃಸಮೋ ಗುಣೈಃ ॥ ೨ ॥

ಸಹಸ್ರಶೀರ್ಷನಾದ ವಿರಾಟ್ಪುರುಷನಾದ ಶ್ರೀಮನ್ನಾರಾಯಣನ ನಾಭಿಕಮಲದಿಂದ ಚತುರ್ಮುಖಬ್ರಹ್ಮನು ಆವಿರ್ಭವಿಸಿದನು. ಬ್ರಹ್ಮನಿಗೆ ಅತ್ರಿಯು ಮಗನಾದನು. ಅವನು ತನ್ನ ಸದ್ಗುಣಗಳಿಂದ ಬ್ರಹ್ಮನಿಗೆ ಸಮಾನನೇ ಆಗಿದ್ದನು. ॥ ೨ ॥

ತಸ್ಯ ದೃಗ್ಭ್ಯೋಽಭವತ್ಪುತ್ರಃ ಸೋಮೋಽಮೃತಮಯಃ ಕಿಲ ।
ವಿಪ್ರೌಷಧ್ಯುಡುಗಣಾನಾಂ ಬ್ರಹ್ಮಣಾ ಕಲ್ಪಿತಃ ಪತಿಃ ॥ ೩ ॥

ಆ ಅತ್ರಿಮಹರ್ಷಿಯ ಕಣ್ಣುಗಳಿಂದ ಅಮೃತಮಯ ಚಂದ್ರನ ಜನ್ಮವಾಯಿತು. ಬ್ರಹ್ಮದೇವರು ಚಂದ್ರನನ್ನು ಬ್ರಾಹ್ಮಣರಿಗೂ, ಓಷಧಿಗಳಿಗೂ, ನಕ್ಷತ್ರಗಳಿಗೂ ಅಧಿಪತಿಯನ್ನಾಗಿಸಿದನು. ॥ ೩ ॥

ಸೋಽಯಜದ್ರಾಜಸೂಯೇನ ವಿಜಿತ್ಯ ಭುವನತ್ರಯಮ್ ।
ಪತ್ನೀಂ ಬೃಹಸ್ಪತೇರ್ದರ್ಪಾತ್ತಾರಾಂ ನಾಮಾಹರದ್ಬಲಾತ್ ॥ ೪ ॥

ಚಂದ್ರನು ಮೂರು ಲೋಕಗಳನ್ನೂ ಜಯಿಸಿ ರಾಜಸೂಯ ಯಜ್ಞವನ್ನು ಮಾಡಿದನು. ಇದರಿಂದ ಕೊಬ್ಬಿದ ಚಂದ್ರನು ಬೃಹಸ್ಪತಿಯ ಪತ್ನಿಯಾದ ತಾರಾದೇವಿಯನ್ನು ಬಲಾತ್ಕಾರಪೂರ್ವಕವಾಗಿ ಅಪಹರಿಸಿದನು. ॥ ೪ ॥

ಯದಾ ಸ ದೇವಗುರುಣಾ ಯಾಚಿತೋಽಭೀಕ್ಷ್ಣಶೋ ಮದಾತ್ ।
ನಾತ್ಯಜತ್ತತ್ಕೃತೇ ಜಜ್ಞೇ ಸುರದಾನವವಿಗ್ರಹಃ ॥ ೫ ॥

ದೇವಗುರು ಬೃಹಸ್ಪತಿಯು ತನ್ನ ಪತ್ನಿಯನ್ನು ಕಳುಹಿಸಿಕೊಡಲು ಹಲವುಬಾರಿ ಚಂದ್ರನಿಗೆ ಹೇಳಿದನು. ಆದರೆ ಮದದಿಂದ ಕೊಬ್ಬಿಹೋಗಿದ್ದ ಚಂದ್ರನು ಆಕೆಯನ್ನು ಹಿಂದಕ್ಕೆ ಕಳಿಸಲೇ ಇಲ್ಲ. ಇಂತಹ ಸನ್ನಿವೇಶದಲ್ಲಿ ಇದೇ ಕಾರಣದಿಂದ ದೇವತೆಗಳಿಗೂ, ದಾನವರಿಗೂ ಘೋರಸಂಗ್ರಾಮ ಏರ್ಪಟ್ಟಿತು. ॥ ೫ ॥

ಶುಕ್ರೋ ಬೃಹಸ್ಪತೇರ್ದ್ವೇಷಾದಗ್ರಹೀತ್ಸಾಸುರೋಡುಪಮ್ ।
ಹರೋ ಗುರುಸುತಂ ಸ್ನೇಹಾತ್ಸರ್ವಭೂತಗಣಾವೃತಃ ॥ ೬ ॥

ಶುಕ್ರಾಚಾರ್ಯರು ಬೃಹಸ್ಪತ್ಯಾಚಾರ್ಯರ ಮೇಲಿನ ದ್ವೇಷದಿಂದ ಅಸುರರೊಡನೆ ಚಂದ್ರನ ಪಕ್ಷವನ್ನು ವಹಿಸಿದರು. ಮಹಾದೇವನು ಸ್ನೇಹವಶನಾಗಿ ಸಮಸ್ತ ಭೂತಗಣಗಳೊಂದಿಗೆ ತನ್ನ ವಿದ್ಯಾಗುರು ಅಂಗಿರಸ್ಸಿನ ಪುತ್ರ ಬೃಹಸ್ಪತಿಯ ಪಕ್ಷವನ್ನು ಸೇರಿದನು. ॥ ೬ ॥

ಸರ್ವದೇವಗಣೋಪೇತೋ ಮಹೇಂದ್ರೋ ಗುರುಮನ್ವಯಾತ್ ।
ಸುರಾಸುರವಿನಾಶೋಽಭೂತ್ ಸಮರಸ್ತಾರಕಾಮಯಃ ॥ ೭ ॥

ನಿವೇದಿತೋಽಥಾಂಗಿರಸಾ ಸೋಮಂ ನಿರ್ಭರ್ತ್ಸ್ಯ ವಿಶ್ವಕೃತ್ ।
ತಾರಾಂ ಸ್ವಭರ್ತ್ರೇ ಪ್ರಾಯಚ್ಛದಂತರ್ವತ್ನೀಮವೈತ್ಪತಿಃ ॥ ೮ ॥

ತ್ಯಜ ತ್ಯಜಾಶು ದುಷ್ಪ್ರಜ್ಞೇ ಮತ್ಕ್ಷೇತ್ರಾದಾಹಿತಂ ಪರೈಃ ।
ನಾಹಂ ತ್ವಾಂ ಭಸ್ಮಸಾತ್ಕುರ್ಯಾಂ ಸ್ತ್ರಿಯಂ ಸಾಂತಾನಿಕಃ ಸತಿ ॥ ೯ ॥

ತತ್ಯಾಜ ವ್ರೀಡಿತಾ ತಾರಾ ಕುಮಾರಂ ಕನಕಪ್ರಭಮ್ ।
ಸ್ಪೃಹಾಮಾಂಗಿರಸಶ್ಚಕ್ರೇ ಕುಮಾರೇ ಸೋಮ ಏವ ಚ ॥ ೧೦ ॥

ಮಮಾಯಂ ನ ತವೇತ್ಯುಚ್ಚೈಸ್ತಸ್ಮಿನ್ವಿವದಮಾನಯೋಃ ।
ಪಪ್ರಚ್ಛುರ್ಋಷಯೋ ದೇವಾ ನೈವೋಚೇ ವ್ರೀಡಿತಾ ತು ಸಾ ॥ ೧೧ ॥

ಕುಮಾರೋ ಮಾತರಂ ಪ್ರಾಹ ಕುಪಿತೋಽಲೀಕಲಜ್ಜಯಾ ।
ಕಿಂ ನ ವೋಚಸ್ಯಸದ್ವೃತ್ತೇ ಆತ್ಮಾವದ್ಯಂ ವದಾಶು ಮೇ ॥ ೧೨ ॥

ಬ್ರಹ್ಮಾ ತಾಂ ರಹ ಆಹೂಯ ಸಮಪ್ರಾಕ್ಷೀಚ್ಚ ಸಾಂತ್ವಯನ್ ।
ಸೋಮಸ್ಯೇತ್ಯಾಹ ಶನಕೈಃ ಸೋಮಸ್ತಂ ತಾವದಗ್ರಹೀತ್ ॥ ೧೩ ॥

ತಸ್ಯಾತ್ಮಯೋನಿರಕೃತ ಬುಧ ಇತ್ಯಭಿಧಾಂ ನೃಪ ।
ಬುದ್ಧ್ಯಾ ಗಂಭೀರಯಾ ಯೇನ ಪುತ್ರೇಣಾಪೋಡುರಾಣ್ಮುದಮ್ ॥ ೧೪ ॥

ತತಃ ಪುರೂರವಾ ಜಜ್ಞೇ ಇಲಾಯಾಂ ಯ ಉದಾಹೃತಃ ।
ತಸ್ಯ ರೂಪಗುಣೌದಾರ್ಯಶೀಲದ್ರವಿಣವಿಕ್ರಮಾನ್ ॥ ೧೫ ॥

ದೇವೇಂದ್ರನೂ ಕೂಡ ಸಮಸ್ತ ದೇವತೆಗಳೊಂದಿಗೆ ತನ್ನ ಗುರುವಾದ ಬೃಹಸ್ಪತಿಯ ಪಕ್ಷವನ್ನೇ ವಹಿಸಿದನು. ಈ ಪ್ರಕಾರ ತಾರೆಯ ನಿಮಿತ್ತದಿಂದ ದೇವಾಸುರರಲ್ಲಿ ಸಂಹಾರಕ್ಕೆ ಕಾರಣವಾದ ಘೋರ ಸಂಗ್ರಾಮವು ಪ್ರಾರಂಭವಾಯಿತು. ॥ ೭ ॥

ಬಳಿಕ ಅಂಗಿರಸ ಮಹರ್ಷಿಯು ಬ್ರಹ್ಮದೇವರ ಬಳಿಗೆ ಬಂದು ಸರ್ವವಿನಾಶಕರವಾದ ಈ ಯುದ್ಧವನ್ನು ನಿಲ್ಲಿಸುವಂತೆ ಪ್ರಾರ್ಥಿಸಿಕೊಂಡನು. ವಿಶ್ವಕರ್ತೃವಾದ ಬ್ರಹ್ಮನು ಚಂದ್ರನನ್ನು ಗದರಿ ತಾರಾದೇವಿಯನ್ನು ಆಕೆಯ ಪತಿಯಾದ ಬೃಹಸ್ಪತಿಗೆ ಒಪ್ಪಿಸುವಂತೆ ಮಾಡಿದನು. ತಾರೆಯು ಗರ್ಭವತಿಯಾಗಿರುವಳೆಂಬುದನ್ನು ಅರಿತಾಗ ಬೃಹಸ್ಪತಿಯು ತನ್ನ ಪತ್ನಿಗೆ ಹೇಳಿದನು – ॥ ೮ ॥ 'ಎಲೈ ದುಷ್ಟಳೇ! ನನ್ನ ಕ್ಷೇತ್ರದಲ್ಲಿ ಬೇರೆಯವರ ಗರ್ಭವಿದೆ. ಅದನ್ನು ನೀನೀಗಲೇ ಪರಿತ್ಯಜಿಸು. ನಿನ್ನಲ್ಲಿ ಕ್ಷಣಮಾತ್ರವೂ ಅದು ಇರಬಾರದು. ಭಯಪಡಬೇಡ, ನಾನು ನಿನ್ನನ್ನು ಸುಟ್ಟುಹಾಕುವುದಿಲ್ಲ. ಏಕೆಂದರೆ, ನೀನು ಸ್ತ್ರೀಯಾಗಿರುವೆ. ಮೇಲಾಗಿ ನಿನ್ನಲ್ಲಿ ಸಂತಾನ ಪಡೆಯುವ ಆಸೆಯೂ ನನಗಿದೆ. ದೇವಿಯಾದ್ದರಿಂದ ನೀನು ನಿರ್ದೋಷಳೂ ಆಗಿರುವೆ. ॥ ೯ ॥ ಪತಿಯ ಮಾತನ್ನು ಕೇಳಿ ತಾರೆಯು ಅತ್ಯಂತ ನಾಚಿಕೊಂಡಳು. ಆಕೆಯು ಚಿನ್ನದ ಕಾಂತಿಯಿಂದ ಕೂಡಿದ ಶಿಶುವನ್ನು ಒಡನೆಯೇ ವಿಸರ್ಜಿಸಿದಳು. ಶಿಶುವಿನ ದಿವ್ಯಕಾಂತಿಯನ್ನು ನೋಡಿ ಬೃಹಸ್ಪತಿ ಮತ್ತು ಚಂದ್ರ ಇಬ್ಬರೂ ಮೋಹಿತರಾಗಿ ಈ ಶಿಶುವು ತನಗೆ ಸೇರಬೇಕೆಂದು ಆಶಿಸಿದರು. ॥ ೧೦ ॥ ಆಶಿಸಿದ್ದು ಮಾತ್ರವಲ್ಲ 'ಇದು ನನ್ನ ಮಗು, ನಿನ್ನದಲ್ಲ' ಎಂದು ಗಟ್ಟಿಯಾಗಿ ಜಗಳಾಡಿದರು. ಈ ವಿವಾದವನ್ನು ಬಗೆಹರಿಸಲು ದೇವತೆಗಳು, ಋಷಿಗಳು ತಾರೆಯ ಬಳಿಯಲ್ಲಿ ಕೇಳಿದರು – ಈ ಮಗು ಯಾರಿಗೆ ಸೇರಿದುದು? ಆದರೆ ತಾರೆಯು ನಾಚಿಕೆಯುಂಟಾಗಿ ಏನೂ ಹೇಳಲಿಲ್ಲ. ॥ ೧೧ ॥ ತನ್ನ ತಾಯಿಯ ಹುಸಿಯ ಲಜ್ಜೆಯಿಂದ ಕುಪಿತನಾದ ಆ ಬಾಲಕನು ತಾಯಿಗೆ ಹೇಳಿದನು – 'ಎಲೈ ದುಷ್ಟಳೇ! ನೀನೇಕೆ ಮಾತಾಡುತ್ತಿಲ್ಲ? ಕುತ್ಸಿತವಾದ ನಿನ್ನ ನಡವಳಿಕೆಯನ್ನು ಬೇಗನೇ ನನಗೆ ಹೇಳು. ಯಾರ ಮಗನೆಂದು ನಾನಾದರೂ ತಿಳಿಯಬೇಡವೇ? ॥ ೧೨ ॥ ಅದೇ ಸಮಯದಲ್ಲಿ ಬ್ರಹ್ಮದೇವರು ತಾರೆಯನ್ನು ಏಕಾಂತಕ್ಕೆ ಕೊಂಡೊಯ್ದು ಆಕೆಯನ್ನು ಸಾಂತ್ವನಗೊಳಿಸಿ ಕೇಳಿದರು. ಆಗ ತಾರೆಯು ಮೆಲ್ಲನೆ 'ಇದು ಚಂದ್ರನಿಗೆ ಸೇರಿದುದು' ಎಂದು ಹೇಳಿದಳು. ಇದರಿಂದಾಗಿ ಚಂದ್ರನು ಆ ಬಾಲಕನನ್ನು ಪಡೆದುಕೊಂಡು ಹೊರಟನು. ॥ ೧೩ ॥ ಪರೀಕ್ಷಿತನೇ! ಬ್ರಹ್ಮದೇವರು ಆ ಬಾಲಕನಿಗೆ ಬುಧನೆಂದು ಹೆಸರಿಟ್ಟರು. ಏಕೆಂದರೆ, ಅವನ ಬುದ್ಧಿಯು ಬಹಳ ಗಂಭೀರವಾಗಿದ್ದಿತು. ಇಂತಹ ಪುತ್ರನನ್ನು ಪಡೆದು ಚಂದ್ರನಿಗೆ ಬಹಳ ಆನಂದವಾಯಿತು. ॥ ೧೪ ॥

ಪರೀಕ್ಷಿದ್ರಾಜನೇ! ಬುಧನಿಗೆ ಇಳೆಯ ಗರ್ಭದಿಂದ ಪುರೂರವನು ಹುಟ್ಟಿದನು ಎಂಬುದನ್ನೂ ನಾನು ಹಿಂದೆಯೇ ಹೇಳಿಬಿಟ್ಟಿರುವೆನು. ಒಂದು ದಿನ ದೇವೇಂದ್ರನ ಸಭೆಯಲ್ಲಿ ದೇವರ್ಷಿಗಳಾದ ನಾರದರು ಬುಧನ ಪುತ್ರನಾದ ಪುರೂರವನ ರೂಪ, ಗುಣ, ಉದಾರತೆ, ಶೀಲ-ಸ್ವಭಾವ, ಧನ-ಸಂಪತ್ತು, ಪರಾಕ್ರಮ ಇವುಗಳನ್ನು

ಶ್ರುತ್ವೋರ್ವಶೀಂದ್ರಭವನೇ ಗೀಯಮಾನಾನ್ಸುರರ್ಷಿಣಾ ।
ತದಂತಿಕಮುಪೇಯಾಯ ದೇವೀ ಸ್ಮರಶರಾರ್ದಿತಾ
॥ ೧೬ ॥

ಮಿತ್ರಾವರುಣಯೋಃ ಶಾಪಾದಾಪನ್ನಾ ನರಲೋಕತಾಮ್ ।
ನಿಶಮ್ಯ ಪುರುಷಶ್ರೇಷ್ಠಂ ಕಂದರ್ಪಮಿವ ರೂಪಿಣಮ್ ।
ಧೃತಿಂ ವಿಷ್ಟಭ್ಯ ಲಲನಾ ಉಪತಸ್ಥೇ ತದಂತಿಕೇ
॥ ೧೭ ॥

ಸ ತಾಂ ವಿಲೋಕ್ಯ ನೃಪತಿರ್ಹರ್ಷೇಣೋತ್ಫುಲ್ಲಲೋಚನಃ ।
ಉವಾಚ ಶ್ಲಕ್ಷ್ಣಯಾ ವಾಚಾ ದೇವೀಂ ಹೃಷ್ಟತನೂರುಹಃ
॥ ೧೮ ॥

ರಾಜೋವಾಚ

ಸ್ವಾಗತಂ ತೇ ವರಾರೋಹೇ ಆಸ್ಯತಾಂ ಕರವಾಮ ಕಿಮ್ ।
ಸಂರಮಸ್ವ ಮಯಾ ಸಾಕಂ ರತಿರ್ನೌ ಶಾಶ್ವತೀಃ ಸಮಾಃ
॥ ೧೯ ॥

ಉರ್ವಶ್ಯುವಾಚ

ಕಸ್ಯಾಸ್ತ್ವಯಿ ನ ಸಜ್ಜೇತ ಮನೋ ದೃಷ್ಟಿಶ್ಚ ಸುಂದರ ।
ಯದಂಗಾಂತರಮಾಸಾದ್ಯ ಚ್ಯವತೇ ಹ ರಿರಂಸಯಾ
॥ ೨೦ ॥

ಏತಾವುರಣಕೌ ರಾಜನ್ ನ್ಯಾಸೌ ರಕ್ಷಸ್ವ ಮಾನದ ।
ಸಂರಂಸ್ಯೇ ಭವತಾ ಸಾಕಂ ಶ್ಲಾಘ್ಯಃ ಸ್ತ್ರೀಣಾಂ ವರಃ ಸ್ಮೃತಃ
॥ ೨೧ ॥

ಘೃತಂ ಮೇ ವೀರ ಭಕ್ಷ್ಯಂ ಸ್ಯಾನ್ನೇಕ್ಷೇ ತ್ವಾನ್ಯತ್ರ ಮೈಥುನಾತ್ ।
ವಿವಾಸಸಂ ತತ್ತಥೇತಿ ಪ್ರತಿಪೇದೇ ಮಹಾಮನಾಃ
॥ ೨೨ ॥

ಅಹೋ ರೂಪಮಹೋ ಭಾವೋ ನರಲೋಕವಿಮೋಹನಮ್ ।
ಕೋ ನ ಸೇವೇತ ಮನುಜೋ ದೇವೀಂ ತ್ವಾಂ ಸ್ವಯಮಾಗತಾಮ್
॥ ೨೩ ॥

ತಯಾ ಸ ಪುರುಷಶ್ರೇಷ್ಠೋ ರಮಯಂತ್ಯಾ ಯಥಾರ್ಹತಃ ।
ರೇಮೇ ಸುರವಿಹಾರೇಷು ಕಾಮಂ ಚೈತ್ರರಥಾದಿಷು
॥ ೨೪ ॥

ಕೊಂಡಾಡಿದರು. ಇದನ್ನು ಕೇಳಿದ ಊರ್ವಶಿಯ ಮನಸ್ಸಿನಲ್ಲಿ ಕಾಮಭಾವವು ಉದಯಿಸಿತು. ಅದರಿಂದ ಪೀಡಿತಳಾಗಿ ಆ ದೇವಾಂಗನೆಯು ಪುರೂರವನ ಬಳಿಗೆ ಬಂದುಬಿಟ್ಟಳು. ॥ ೧೫-೧೬ ॥ ಮಿತ್ರಾವರುಣರು ಊರ್ವಶಿಗೆ ಕೊಟ್ಟಿದ್ದ ಶಾಪವೂ ಕೂಡ ಅವಳು ಭೂಲೋಕಕ್ಕೆ ಬರಲು ಒಂದು ಕಾರಣವಾಗಿದ್ದರೂ, ಪುರುಷಶಿರೋಮಣಿ ಪುರೂರವನು ಮೂರ್ತಿಮಂತ ಮನ್ಮಥನೇ ಆಗಿರುವನೆಂದು ಕೇಳಿ ಸುರಸುಂದರಿಯಾದ ಊರ್ವಶಿಯು ಧೈರ್ಯ ವಹಿಸಿ ತಾನಾಗಿಯೇ ಪುರೂರವನ ಬಳಿಗೆ ಆಗಮಿಸಿದಳು. ॥ ೧೭ ॥ ದೇವಾಂಗನೆಯಾದ ಊರ್ವಶಿಯನ್ನು ಕಂಡು ಪುರೂರವರಾಜನ ಕಣ್ಣುಗಳು ಅರಳಿದವು. ಶರೀರವು ರೋಮಾಂಚನವಾಯಿತು. ಅವನು ಸವಿಮಾತುಗಳಿಂದ ಇಂತೆಂದನು – ॥ ೧೮ ॥

ರಾಜಾ ಪುರೂರವನು ಕೇಳಿದನು – ಎಲೈ ಸುಂದರಿಯೇ! ನಿನ್ನನ್ನು ನಾನು ಸ್ವಾಗತಿಸುತ್ತೇನೆ. ಇಲ್ಲಿಯೇ ನನ್ನ ಬಳಿಯಲ್ಲಿ ಕುಳಿತುಕೋ. ನಾನು ನಿನಗೇನು ಸೇವೆ ಮಾಡಲಿ? ಒಲಿದು ಬಂದಿರುವ ಅರಗಿಣಿಯೇ! ನನ್ನೊಡನೆ ವಿಹರಿಸು. ನಮ್ಮಿಬ್ಬರ ಈ ವಿಹಾರವು ಅನಂತಕಾಲದವರೆಗೂ ನಡೆಯುತ್ತಲೇ ಇರಲಿ. । ೧೯ ।

ಊರ್ವಶಿಯು ಹೇಳಿದಳು – ಸುಂದರಾಂಗನೇ! ನೀನು ಸೌಂದರ್ಯದ ಮೂರ್ತಸ್ವರೂಪನಾಗಿರುವೆ. ದೃಷ್ಟಿ ಮತ್ತು ಮನಸ್ಸುಗಳನ್ನು ನಿನ್ನಂತಹ ಕದುಬೆಲುವನಲ್ಲಿ ಲೀನಗೊಳಿಸದೆ ಇರುವ ಕಾಮಿನಿಯರು ಯಾರಿದ್ದಾರೆ? ನಿನ್ನ ಸಮೀಪಕ್ಕೆ ಬಂದಿರುವ ನನ್ನ ಮನಸ್ಸು ನಿನ್ನೊಡನೆ ಕ್ರೀಡಿಸಲು ತವಕಪಡುತ್ತಿದೆ. ॥ ೨೦ ॥ ರಾಜನೇ! ಯಾವ ಪುರುಷನು ರೂಪದಿಂದಲೂ, ಗುಣದಿಂದಲೂ, ಪ್ರಶಂಸನೀಯನಾಗಿರುವನೋ ಅಂತಹವನೇ ಸ್ತ್ರೀಯರಿಗೆ ಅಭೀಷ್ಟನಾಗಿರುತ್ತಾನೆ ಆದುದರಿಂದ ನಾನು ಅವಶ್ಯವಾಗಿ ನಿನ್ನ ಅಭೀಷ್ಟವನ್ನು ಈಡೇರಿಸಿಕೊಡುತ್ತೇನೆ. ಆದರೆ ಪ್ರಿಯತಮನೇ! ನನ್ನದೊಂದು ಸಣ್ಣ ನಿಬಂಧನೆಯಿದೆ. ನಾನು ನಿನ್ನಲ್ಲಿ ಅಡವಾಗಿ ಎರಡು ಮೇಕೆಗಳನ್ನು ಒಪ್ಪಿಸುತ್ತೇನೆ. ನೀನು ಅವನ್ನು ರಕ್ಷಿಸಬೇಕು. ॥ ೨೧ ॥ ವೀರಶಿರೋಮಣಿಯೇ! ನಾನು ಕೇವಲ ತುಪ್ಪವನ್ನು ಮಾತ್ರ ತಿನ್ನುವೆನು. ಮೈಥುನದ ಸಮಯವಲ್ಲದೆ ಬೇರೆ ಯಾವ ಸಮಯದಲ್ಲೂ ನಿನ್ನನ್ನು ವಿವಸ್ತ್ರನಾಗಿ ನೋಡಲು ಅವಕಾಶವಿರಬಾರದು. ಪುರೂರವನು 'ಹಾಗೆಯೇ ಆಗಲಿ' ಎಂದು ಹೇಳಿ ಅವಳ ನಿಬಂಧನೆಯನ್ನು ಸ್ವೀಕರಿಸಿದನು. ॥ ೨೨ ॥ ಮತ್ತೆ ಊರ್ವಶಿಯ ಬಳಿ ಹೇಳಿದನು – ಆಹಾ! ಎಂತಹ ರೂಪ! ಎಂತಹ ಭಾವ! ಎಂತಹ ಪ್ರೀತಿ! ಎಂತಹ ವಿಶ್ವಾಸ! ಇವೆಲ್ಲವು ಮನುಷ್ಯಲೋಕವನ್ನೇ ಮೋಹಿತಗೊಳಿಸುವಂತಹುದು. ದೇವೀ! ಕೃಪೆಮಾಡಿ ನೀನಾಗಿ ಇಲ್ಲಿಗೆ ಬಂದಿರುವೆ. ಹಾಗಿರುವಾಗ ನಿನ್ನನ್ನು ಸೇವಿಸದ ಮನುಷ್ಯನು ಯಾರು ತಾನೇ ಇರಬಲ್ಲನು? ॥ ೨೩ ॥

ಪರೀಕ್ಷಿತನೇ! ಆಗ ಊರ್ವಶಿಯು ಕಾಮಶಾಸ್ತ್ರಾನುಸಾರವಾಗಿ ಪುರುಷಶ್ರೇಷ್ಠ ಪುರೂರವನೊಂದಿಗೆ ವಿಹರಿಸತೊಡಗಿದಳು. ಅವನೂ ಕೂಡ ದೇವತೆಗಳ ವಿಹಾರಸ್ಥಳವಾದ ಚೈತ್ರರಥ, ನಂದನ ವನ ಮೊದಲಾದ ಉಪವನಗಳಲ್ಲಿ ಅವಳೊಂದಿಗೆ ಸ್ವಚ್ಛಂದವಾಗಿ ವಿಹರಿಸಿದನು. ॥ ೨೪ ॥

ರಮಮಾಣಸ್ತಯಾ ದೇವ್ಯಾ ಪದ್ಮಕಿಂಜಲ್ಕಗಂಧಯಾ ।
ತನ್ಮುಖಾಮೋದಮುಷಿತೋ ಮುಮುದೇಽಹರ್ಗಣಾನ್ಬಹೂನ್ ॥ ೨೫ ॥

ಅಪಶ್ಯನ್ನುರ್ವಶೀಮಿಂದ್ರೋ ಗಂಧರ್ವಾನ್ಸಮಚೋದಯತ್ ।
ಉರ್ವಶೀರಹಿತಂ ಮಹ್ಯಮಾಸ್ಥಾನಂ ನಾತಿಶೋಭತೇ ॥ ೨೬ ॥

ತೇ ಉಪೇತ್ಯ ಮಹಾರಾತ್ರೇ ತಮಸಿ ಪ್ರತ್ಯುಪಸ್ಥಿತೇ ।
ಉರ್ವಶ್ಯಾ ಉರಣೌ ಜಹ್ರುರ್ನ್ಯಸ್ತೌ ರಾಜನಿ ಜಾಯಯಾ ॥ ೨೭ ॥

ನಿಶಮ್ಯಾಕ್ರಂದಿತಂ ದೇವೀ ಪುತ್ರಯೋರ್ನೀಯಮಾನಯೋಃ ।
ಹತಾಸ್ಮ್ಯಹಂ ಕುನಾಥೇನ ನಪುಂಸಾ ವೀರಮಾನಿನಾ ॥ ೨೮ ॥

ಯದ್ವಿಸ್ರಂಭಾದಹಂ ನಷ್ಟಾ ಹೃತಾಪತ್ಯಾ ಚ ದಸ್ಯುಭಿಃ ।
ಯಃ ಶೇತೇ ನಿಶಿ ಸಂತ್ರಸ್ತೋ ಯಥಾ ನಾರೀ ದಿವಾ ಪುಮಾನ್ ॥ ೨೯ ॥

ಇತಿ ವಾಕ್ಸಾಯಕೈರ್ವಿದ್ಧಃ ಪ್ರತೋತ್ತ್ರೈರಿವ ಕುಂಜರಃ ।
ನಿಶಿ ನಿಸ್ತ್ರಿಂಶಮಾದಾಯ ವಿವಸ್ತ್ರೋಽಭ್ಯದ್ರವದ್ರುಷಾ ॥ ೩೦ ॥

ತೇ ವಿಸೃಜ್ಯೋರಣೌ ತತ್ರ ವ್ಯದ್ಯೋತಂತ ಸ್ಮ ವಿದ್ಯುತಃ ।
ಆದಾಯ ಮೇಷಾವಾಯಾಂತಂ ನಗ್ನಮೈಕ್ಷತ ಸಾ ಪತಿಮ್ ॥ ೩೦ ॥

ಐಲೋಽಪಿ ಶಯನೇ ಜಾಯಾಮಪಶ್ಯನ್ವಿಮನಾ ಇವ ।
ತಚ್ಚಿತ್ತೋ ವಿಹ್ವಲಃ ಶೋಚನ್ಬಭ್ರಾಮೋನ್ಮತ್ತವನ್ಮಹೀಮ್ ॥ ೩೨ ॥

ಸ ತಾಂ ವೀಕ್ಷ್ಯ ಕುರುಕ್ಷೇತ್ರೇ ಸರಸ್ವತ್ಯಾಂ ಚ ತತ್ಸಖೀಃ ।
ಪಂಚ ಪ್ರಹೃಷ್ಟವದನಾಃ ಪ್ರಾಹ ಸೂಕ್ತಂ ಪುರೂರವಾಃ ॥ ೩೩ ॥

ಅಹೋ ಜಾಯೇ ತಿಷ್ಠ ತಿಷ್ಠ ಘೋರೇ ನ ತ್ಯಕ್ತುಮರ್ಹಸಿ ।
ಮಾಂ ತ್ವಮದ್ಯಾಪ್ಯನಿರ್ವೃತ್ಯ ವಚಾಂಸಿ ಕೃಣವಾವಹೈ ॥ ೩೪ ॥

ದೇವಿ ಊರ್ವಶಿಯ ಶರೀರದಿಂದ ಕಮಲಕೇಸರದಂತಹ ಸುಗಂಧವು ಸೂಸುತ್ತಿತ್ತು. ಅವಳೊಡನೆ ಪುರೂರವನು ಅನೇಕ ವರ್ಷಗಳ ಕಾಲ ಆನಂದವಾಗಿ ವಿಹರಿಸಿದನು. ಅವನು ಆಕೆಯ ಮುಖಸುರಭಿಯಿಂದ ಮರುಳಾಗಿ ಬಿಟ್ಟಿದ್ದನು. ॥ ೨೫ ॥ ಇತ್ತ ಸ್ವರ್ಗದಲ್ಲಿ ಊರ್ವಶಿಯು ಇಲ್ಲದಿರುವುದನ್ನು ನೋಡಿದ ಇಂದ್ರನು ಗಂಧರ್ವರಿಗೆ – 'ಊರ್ವಶಿಯು ಎಲ್ಲಿಯೇ ಇರಲಿ ಅವಳನ್ನು ಕರೆತನ್ನಿರಿ, ಅವಳಿಲ್ಲದೆ ಈ ಸ್ವರ್ಗವು ಶೋಭಿಸುವುದಿಲ್ಲ' ಎಂದು ಹೇಳಿ ಅವರನ್ನು ಕಳಿಸಿದನು. ॥ ೨೬ ॥ ಆ ಗಂಧರ್ವರು ಅರ್ಧ ರಾತ್ರಿಯ ಅಂಧಕಾರದಲ್ಲಿ– ಊರ್ವಶಿಯು ರಾಜನಲ್ಲಿ ಅಡವಾಗಿ ಇಟ್ಟಿದ್ದ ಎರಡೂ ಮೇಕೆಗಳನ್ನು ಕದ್ದುಕೊಂಡುಹೋದರು. ॥ ೨೭ ॥ ತನ್ನ ಪುತ್ರರಂತೆ ಇದ್ದ ಪ್ರಿಯ ಮೇಕೆಗಳ ಬೇ-ಬೇ ಧ್ವನಿಯನ್ನು ಕೇಳಿ, ಗಂಧರ್ವರು ಅವನ್ನು ಕದ್ದುಕೊಂಡು ಹೋಗುವುದನ್ನು ನೋಡಿ, ಎದ್ದು ಅಯ್ಯೋ! ಈ ಹೇಡಿಯನ್ನು ನಾನು ಪತಿಯನ್ನಾಗಿಸಿಕೊಂಡು ಸತ್ತೆ! ನಾನು ಕೆಟ್ಟೆ! ಇವನಿಂದ ನನ್ನ ಮೇಕೆಗಳನ್ನೂ ರಕ್ಷಿಸಲಾಗಲಿಲ್ಲವಲ್ಲ! ಎಂದು ಮರುಗಿದಳು. ॥ ೨೮ ॥ ಇವನ ಮೇಲೆ ವಿಶ್ವಾಸವಿಟ್ಟಿದ್ದರಿಂದ ಕಳ್ಳರು ನನ್ನ ಮರಿಗಳನ್ನು ಕದ್ದುಕೊಂಡು ಹೋಗುತ್ತಿದ್ದಾರೆ. ನಾನಾದರೋ ಹಾಳಾದೆ. ನೋಡಿರಲ್ಲ! ಇವನು ಹಗಲಲ್ಲಿ ಗಂಡಸಾಗಿದ್ದು ರಾತ್ರಿಯಲ್ಲಿ ಸ್ತ್ರೀಯರಂತೆ ಹೆದರಿ ಮಲಗಿರುತ್ತಾನೆ. ॥ ೨೯ ॥ ಪರೀಕ್ಷಿತನೇ! ಆನೆಯನ್ನು ಅಂಕುಶದಿಂದ ತಿವಿಯುವಂತೆ ಊರ್ವಶಿಯು ತನ್ನ ವಾಗ್ಬಾಣಗಳಿಂದ ರಾಜನನ್ನು ಘಾಸಿಗೊಳಿಸಿದಳು. ರಾಜಾ ಪುರೂರವನಿಗೆ ಭಾರೀ ಕೋಪ ಬಂತು ಹಾಗೂ ಕೈಯಲ್ಲಿ ಖಡ್ಗವನ್ನೆತ್ತಿಕೊಂಡು ವಿವಸ್ತ್ರನಾಗಿಯೇ ಗಂಧರ್ವರತ್ತ ಓಡಿದನು. ॥ ೩೦ ॥ ಪುರೂರವನು ಅಟ್ಟಿಕೊಂಡು ಬರುವುದನ್ನು ನೋಡಿ ಮೇಕೆಗಳನ್ನು ಅಲ್ಲೇ ಬಿಟ್ಟು ಗಂಧರ್ವರು ಮಿಂಚಿನಂತೆ ಪ್ರಕಾಶಿಸಿದರು. ರಾಜನು ಮೇಕೆಗಳನ್ನು ತಂದು ಮರಳಿಸಿದಾಗ, ಊರ್ವಶಿಯು ಆ ಪ್ರಕಾಶದಲ್ಲಿ ಅವನನ್ನು ವಿವಸ್ತ್ರನಾಗಿರುವುದನ್ನು ನೋಡಿದಳು. ಸರಿ! ಆ ಕ್ಷಣದಲ್ಲೇ ಆಕೆಯು ಪುರೂರವನನ್ನು ಬಿಟ್ಟು ಹೊರಟುಹೋದಳು. ॥ ೩೦ ॥

ಪರೀಕ್ಷಿತನೇ! ಪುರೂರವನು ಶಯನಾಗಾರದಲ್ಲಿ ತನ್ನ ಪ್ರಿಯ ಪತ್ನಿಯಾದ ಊರ್ವಶಿಯನ್ನು ಕಾಣದಿದ್ದಾಗ ಅವನಿಗೆ ದುಃಖವುಂಟಾಯಿತು. ಅವನ ಮನಸ್ಸು ಊರ್ವಶಿಯಲ್ಲೇ ನೆಟ್ಟಿತ್ತು. ಅವನು ಅವಳಿಗಾಗಿ ಶೋಕದಿಂದ ವಿಹ್ವಲನಾಗಿ ಹುಚ್ಚನಂತೆ ಭೂಮಂಡಲದಲ್ಲೆಲ್ಲ ಅಲೆದಾಡತೊಡಗಿದನು. ॥ ೩೨ ॥

ಹೀಗೆ ಅಲೆಯುತ್ತಿರುವಾಗ ಒಂದು ದಿನ ಕುರುಕ್ಷೇತ್ರದಲ್ಲಿ ಸರಸ್ವತೀ ನದೀತೀರದಲ್ಲಿ ಅವನು ಊರ್ವಶಿಯನ್ನೂ ಮತ್ತು ಪ್ರಸನ್ನ ಮುಖಿಯರಾದ ಆಕೆಯ ಐವರು ಸಖಿಯರನ್ನೂ ನೋಡಿದನು. ಆಗ ಆನಂದತುಂದಿಲನಾಗಿ ಅವನು ಸವಿಮಾತುಗಳಿಂದ ನುಡಿದನು. ॥ ೩೩ ॥ ಪ್ರಿಯೇ! ಸ್ವಲ್ಪಹೊತ್ತು ನಿಲ್ಲು! ಒಮ್ಮೆ ನನ್ನ ಮಾತನ್ನೂ ಆಲಿಸು. ಕಠೋರವಾದ ಮನಸ್ಸನ್ನು ಹೊಂದಿರುವವಳೇ! ಇಂದು ನೀನು ನನ್ನನ್ನು ಸುಖಿಯನ್ನಾಗಿ ಮಾಡದೆ ಖಂಡಿತವಾಗಿ ಹೋಗಬಾರದು. ಕ್ಷಣಕಾಲವಾದರೂ ನಿಲ್ಲು. ನಾವಿಬ್ಬರು ಕಲೆತು ಸ್ವಲ್ಪ ಹೊತ್ತಾದರೂ ಮಾತಾಡೋಣ. ॥ ೩೪ ॥

ಸುದೇಹೋಽಯಂ ಪತತ್ಯತ್ರ ದೇವಿ ದೂರಂ ಹೃತಸ್ತ್ವಯಾ ।
ಖಾದಂತ್ಯೇನಂ ವೃಕಾ ಗೃಧ್ರಾಸ್ತ್ವತ್ಪ್ರಸಾದಸ್ಯ ನಾಸ್ಪದಮ್
॥ ೩೫ ॥

ದೇವೀ! ಈಗ ಈ ಶರೀರದ ಮೇಲೆ ನಿನ್ನ ಕೃಪಾಪ್ರಸಾದವು ಉಳಿಯಲಿಲ್ಲ. ಇದರಿಂದ ನೀನು ಇದನ್ನು ದೂರಕ್ಕೆಸೆದು ಬಿಟ್ಟೆ. ಆದ್ದರಿಂದ ನನ್ನ ಈ ಸುಂದರ ಶರೀರವು ಈಗಲೇ ಬಿದ್ದು ಹೋಗುವುದು. ನೀನು ನೋಡು- ನೋಡುತ್ತಿರುವಾಗಲೇ ಇದನ್ನು ತೋಳಗಳು, ಹದ್ದುಗಳು ತಿಂದುಬಿಡುವುವು. ॥ ೩೫ ॥

ಉರ್ವಶ್ಯುವಾಚ

ಮಾ ಮೃಥಾಃ ಪುರುಷೋಽಸಿ ತ್ವಂ ಮಾ ಸ್ಮ ತ್ವಾದ್ಯುರ್ವೃಕಾ ಇಮೇ ।
ಕ್ವಾಪಿ ಸಖ್ಯಂ ನ ವೈ ಸ್ತ್ರೀಣಾಂ ವೃಕಾಣಾಂ ಹೃದಯಂ ಯಥಾ
॥ ೩೬ ॥

ಸ್ತ್ರಿಯೋ ಹ್ಯಕರುಣಾಃ ಕ್ರೂರಾ ದುರ್ಮರ್ಷಾಃ ಪ್ರಿಯಸಾಹಸಾಃ ।
ಘ್ನಂತ್ಯಲ್ಪಾರ್ಥೇಽಪಿ ವಿಶ್ರಬ್ಧಂ ಪತಿಂ ಭ್ರಾತರಮಪ್ಯುತ
॥ ೩೭ ॥

ವಿಧಾಯಾಲೀಕವಿಶ್ರಂಭಮಜ್ಞೇಷು ತ್ಯಕ್ತಸೌಹೃದಾಃ ।
ನವಂ ನವಮಭೀಪ್ಸಂತ್ಯಃ ಪುಂಶ್ಚಲ್ಯಃ ಸ್ವೈರವೃತ್ತಯಃ
॥ ೩೮ ॥

ಸಂವತ್ಸರಾಂತೇ ಹಿ ಭವಾನೇಕರಾತ್ರಂ ಮಯೇಶ್ವರ ।
ವತ್ಸ್ಯತ್ಯಪತ್ಯಾನಿ ಚ ತೇ ಭವಿಷ್ಯಂತ್ಯಪರಾಣಿ ಭೋಃ
॥ ೩೯ ॥

ಉರ್ವಶಿಯು ಹೇಳಿದಳು – ರಾಜನೇ! ನೀನು ಪುರುಷನಾಗಿರುವೆ. ಈ ಪ್ರಕಾರವಾಗಿ ಸಾಯಬೇಡ. ಸತ್ತನಂತರ ತೋಳಗಳು ನಿನ್ನನ್ನು ತಿನ್ನುವುದು ಬೇಡ. ಸ್ತ್ರೀಯರಲ್ಲಿ ಯಾರೊಂದಿಗೂ ನಿಜವಾದ ಮೈತ್ರಿ ಇರುವುದಿಲ್ಲ. ಸ್ತ್ರೀಯರ ಹೃದಯ ಮತ್ತು ತೋಳಗಳ ಹೃದಯ ಒಂದೇ ರೀತಿಯದಾಗಿರುತ್ತದೆ. ॥ ೩೬ ॥ ಸ್ತ್ರೀಯರು ದಯಾಹೀನರಾಗಿರುತ್ತಾರೆ. ಕ್ರೌರ್ಯವು ಅವರ ಸ್ವಾಭಾವಿಕ ಗುಣವೇ ಆಗಿದೆ. ತಾಳ್ಮೆಯಿಲ್ಲದವರು ಪ್ರಿಯವಾದುದನ್ನು ಪಡೆಯಲಿಕ್ಕಾಗಿ ಅಸಾಧ್ಯವಾದ ಕಾರ್ಯವನ್ನು ಮಾಡಿಬಿಡುತ್ತಾರೆ. ವಿಶ್ವಾಸಪಾತ್ರನಾಗಿರುವ ಪತಿಯನ್ನಾಗಲೀ, ಸಹೋದರನನ್ನಾಗಲೀ ಅಲ್ಪ ಪ್ರಯೋಜನಕ್ಕಾಗಿ ಕೊಂದೇ ಹಾಕುತ್ತಾರೆ. ॥ ೩೭ ॥ ಇವರ ಹೃದಯದಲ್ಲಿ ಸೌಹಾರ್ದವೆಂಬುದು ಎಳ್ಳಷ್ಟಾದರೂ ಇರುವುದಿಲ್ಲ. ಕುಲಟೆಯರಾದ ಈ ಸ್ತ್ರೀಯರು ಅರಿಯದವರಿಗೆ ತೋರಿಕೆಯ ವಿಶ್ವಾಸವನ್ನು ತೋರಿಸುತ್ತಾ ಸ್ವಲ್ಪವಾದರೂ ಮರುಕವಿಲ್ಲದೆ ಹೊಸ-ಹೊಸ ಗಂಡಂದಿರನ್ನು ಹುಡುಕುತ್ತಾ ಸ್ವೇಚ್ಛಾಚಾರಿಣಿಯರಾಗಿರುತ್ತಾರೆ. ॥ ೩೮ ॥ ಮಹಾರಾಜಾ! ಧೈರ್ಯತಾಳು. ನೀನು ರಾಜರಾಜೇಶ್ವರನಾಗಿರುವೆ. ವರ್ಷಕ್ಕೊಮ್ಮೆ ಒಂದು ರಾತ್ರಿ ನೀನು ನನ್ನೊಡನೆ ಇರಬಹುದಾಗಿದೆ. ಆಗ ನಿನಗೆ ಇನ್ನೂ ಸಂತಾನಗಳು ಆಗಬಹುದು. ॥ ೩೯ ॥

ಅಂತರ್ವತ್ನೀಮುಪಾಲಕ್ಷ್ಯ ದೇವೀಂ ಸ ಪ್ರಯಯೌ ಪುರಮ್ ।
ಪುನಸ್ತತ್ರ ಗತೋಽಬ್ದಾಂತೇ ಉರ್ವಶೀಂ ವೀರಮಾತರಮ್
॥ ೪೦ ॥

ಉಪಲಭ್ಯ ಮುದಾ ಯುಕ್ತಃ ಸಮುವಾಸ ತಯಾ ನಿಶಾಮ್ ।
ಅಥೈನಮುರ್ವಶೀ ಪ್ರಾಹ ಕೃಪಣಂ ವಿರಹಾತುರಮ್
॥ ೪೧ ॥

ಗಂಧರ್ವಾನುಪಧಾವೇಮಾಂಸ್ತುಭ್ಯಂ ದಾಸ್ಯಂತಿ ಮಾಮಿತಿ ।
ತಸ್ಯ ಸಂಸ್ತುವತಸ್ತುಷ್ಟಾ ಅಗ್ನಿಸ್ಥಾಲೀಂ ದದುರ್ನೃಪ ।
ಉರ್ವಶೀಂ ಮನ್ಯಮಾನಸ್ತಾಂ ಸೋಽಬುಧ್ಯತ ಚರನ್ವನೇ
॥ ೪೨ ॥

ಸ್ಥಾಲೀಂ ನ್ಯಸ್ಯ ವನೇ ಗತ್ವಾ ಗೃಹಾನಾಧ್ಯಾಯತೋ ನಿಶಿ ।
ತ್ರೇತಾಯಾಂ ಸಂಪ್ರವೃತ್ತಾಯಾಂ ಮನಸಿ ತ್ರಯ್ಯವರ್ತತ
॥ ೪೩ ॥

ಉರ್ವಶಿಯು ಗರ್ಭವತಿಯಾಗಿರುವುದನ್ನು ಅರಿತು ಪುರೂರವನು ಸಂತುಷ್ಟನಾಗಿ ತನ್ನ ರಾಜಧಾನಿಗೆ ಮರಳಿದನು. ಒಂದು ವರ್ಷ ಕಳೆದಾಗ ಪುನಃ ಅವಳು ಹೇಳಿದ್ದ ಸ್ಥಳಕ್ಕೆ ಹೋದನು. ಆಗ ಉರ್ವಶಿಯು ಓರ್ವ ವೀರಪುತ್ರನ ತಾಯಿಯಾಗಿದ್ದಳು. ॥ ೪೦ ॥ ಉರ್ವಶಿಯ ಸಮಾಗಮದಿಂದ ರಾಜನಿಗೆ ಮಹದಾನಂದವಾಯಿತು. ಒಂದು ರಾತ್ರಿಯನ್ನು ಅವನು ಅವಳೊಂದಿಗೆ ಕಳೆದನು. ಬೆಳಗ್ಗೆ ಆಗುತ್ತಲೇ ಅಗಲಬೇಕಾದ ಸಮಯಬಂದಾಗ ವಿರಹ ದುಃಖದಿಂದ ಅವನು ದೀನನಾದನು. ಆಗ ಉರ್ವಶಿಯು ಹೇಳಿದಳು. ॥ ೪೧ ॥ 'ಮಹಾರಾಜ! ನೀನು ಈ ಗಂಧರ್ವರನ್ನು ಸ್ತೋತ್ರ ಮಾಡು. ಅವರು ಬಯಸಿದರೆ ನಿನಗೆ ನನ್ನನ್ನು ಕೊಡಬಹುದು.' ಆಗ ಪುರೂರವನು ಗಂಧರ್ವರನ್ನು ಸ್ತುತಿಸಿದನು. ಪರೀಕ್ಷಿತನೇ! ಪುರೂರವನ ಸ್ತೋತ್ರದಿಂದ ಸಂತುಷ್ಟರಾದ ಗಂಧರ್ವರು ಅವನಿಗೆ ಒಂದು ಅಗ್ನಿಸ್ಥಾಲಿಯನ್ನು ಕೊಟ್ಟರು. ರಾಜನು ಆ ಅಗ್ನಿಸ್ಥಾಲಿಯನ್ನೇ ಉರ್ವಶಿಯೆಂದು ಭಾವಿಸಿ ಅದನ್ನು ತಬ್ಬಿಕೊಂಡು ವನಗಳಲ್ಲಿ ಅಲೆಯುತ್ತಿದ್ದನು. ॥ ೪೨ ॥ ಅವನಿಗೆ ಅರಿವು ಮೂಡಿದಾಗ ಅವನು ಆ ಅಗ್ನಿಸ್ಥಾಲಿಯನ್ನು ಅಲ್ಲೇ ಕಾಡಿನಲ್ಲಿ ಬಿಟ್ಟು ತನ್ನ ಅರಮನೆಗೆ ಮರಳಿದನು. ರಾತ್ರಿಯಲ್ಲಿ ರಾಜನು ಸದಾ ಉರ್ವಶಿಯನ್ನೇ ಧ್ಯಾನಿಸುತ್ತಿದ್ದನು. ಹೀಗಿರಲು ಕೃತಯುಗವು ಕಳೆದು ತ್ರೇತಾಯುಗವು ಪ್ರಾರಂಭವಾಯಿತು. ಆಗ ಅವನ ಹೃದಯದಲ್ಲಿ ಋಗ್ಯಜುಸ್ಸಾಮ ವೇದಗಳು ಪ್ರಕಟಗೊಂಡವು. ॥ ೪೩ ॥

ಸ್ಥಾಲೀಸ್ಥಾನಂ ಗತೋಽಶ್ವತ್ಥಂ ಶಮೀಗರ್ಭಂ ವಿಲಕ್ಷ್ಯ ಸಃ ।
ತೇನ ದ್ವೇ ಅರಣೀ ಕೃತ್ವಾ ಉರ್ವಶೀಲೋಕಕಾಮ್ಯಯಾ ॥ ೪೪ ॥

ಉರ್ವಶೀಂ ಮಂತ್ರತೋ ಧ್ಯಾಯನ್ನಧರಾರಣಿಮುತ್ತರಾಮ್ ।
ಆತ್ಮಾನಮುಭಯೋರ್ಮಧ್ಯೇ ಯತ್ತತ್ಪ್ರಜನನಂ ಪ್ರಭುಃ ॥ ೪೫ ॥

ತಸ್ಯ ನಿರ್ಮಂಥನಾಜ್ಜಾತೋ ಜಾತವೇದಾ ವಿಭಾವಸುಃ ।
ತ್ರಯ್ಯಾ ಸ ವಿದ್ಯಯಾ ರಾಜ್ಞಾ ಪುತ್ರತ್ವೇ ಕಲ್ಪಿತಸ್ತ್ರಿವೃತ್ ॥ ೪೬ ॥

ತೇನಾಯಜತ ಯಜ್ಞೇಶಂ ಭಗವಂತಮಧೋಕ್ಷಜಮ್ ।
ಉರ್ವಶೀಲೋಕಮನ್ವಿಚ್ಛನ್ಸರ್ವದೇವಮಯಂ ಹರಿಮ್ ॥ ೪೭ ॥

ಏಕ ಏವ ಪುರಾ ವೇದಃ ಪ್ರಣವಃ ಸರ್ವವಾಙ್ಮಯಃ ।
ದೇವೋ ನಾರಾಯಣೋ ನಾನ್ಯ ಏಕೋಽಗ್ನಿರ್ವರ್ಣ ಏವ ಚ ॥ ೪೮ ॥

ಪುರೂರವಸ ಏವಾಸೀತ್ತ್ರಯೀ ತ್ರೇತಾಮುಖೇ ನೃಪ ।
ಅಗ್ನಿನಾ ಪ್ರಜಯಾ ರಾಜಾ ಲೋಕಂ ಗಾಂಧರ್ವಮೇಯಿವಾನ್ ॥ ೪೯ ॥

ಮೂರು ವೇದಗಳನ್ನು ಹೃದಯದಲ್ಲಿ ಕಂಡುಕೊಂಡ ರಾಜನು ಅಗ್ನಿಸ್ಥಾಲಿಯನ್ನು ಬಿಟ್ಟು ಅರಣ್ಯಕ್ಕೆ ಧಾವಿಸಿದನು. ಅಲ್ಲಿ ಬನ್ನಿಮರದ ಗರ್ಭದಲ್ಲಿ ಒಂದು ಅರಳೀಮರವು ಹುಟ್ಟಿಕೊಂಡಿತ್ತು. ಅದನ್ನು ಕಂಡು ರಾಜನು ಅವುಗಳಿಂದ ಅಗ್ನಿಯನ್ನು ಕಡೆಯುವ ಎರಡು ಅರಣಿ (ಅಗ್ನಿಮಂಥನದ ಮರ)ಗಳನ್ನು ಸಿದ್ಧಪಡಿಸಿದನು. ಮತ್ತೆ ಊರ್ವಶಿಯ ಲೋಕದ ಕಾಮನೆಯಿಂದ ಪುರೂರವನು ಕೆಳಗಿನ ಅರಣಿಯನ್ನು ಊರ್ವಶಿಯನ್ನಾಗಿಯೂ, ಮೇಲಿನ ಅರಣಿಯನ್ನು ಪುರೂರವನನ್ನಾಗಿ, ಮಧ್ಯದ ಮರವನ್ನು ಪುತ್ರರೂಪದಿಂದ ಭಾವಿಸಿಕೊಂಡು ಅಗ್ನಿಯನ್ನು ಪ್ರಜ್ವಲಿಸುವ ಮಂತ್ರಗಳಿಂದ ಅವುಗಳನ್ನು ಕಡೆದನು. ॥ ೪೪-೪೫ ॥ ಹೀಗೆ ಮಂಥನ ಮಾಡುವಾಗ ಜಾತವೇದನೆಂಬ ಅಗ್ನಿಯು ಪ್ರಾದುರ್ಭವಿಸಿದನು. ರಾಜಾ ಪುರೂರವನು ಆ ಅಗ್ನಿಯನ್ನು ತ್ರಯೀವಿದ್ಯೆಯ ಮೂಲಕ ಆಹವನೀಯ, ಗಾರ್ಹಪತ್ಯ, ದಕ್ಷಿಣಾಗ್ನಿಗಳೆಂಬ ಮೂರು ವಿಭಾಗಗಳನ್ನು ಮಾಡಿ ಅವನ್ನು ರಾಜನು ಪುತ್ರರೂಪದಿಂದ ಸ್ವೀಕರಿಸಿದನು. ॥ ೪೬ ॥ ಮತ್ತೆ ಊರ್ವಶಿಯ ಲೋಕದ ಬಯಕೆಯಿಂದ ಪುರೂರವನು ಆ ಮೂರು ಅಗ್ನಿಗಳ ಮೂಲಕ ಸರ್ವದೇವಸ್ವರೂಪನೂ, ಇಂದ್ರಿಯಾತೀತನೂ ಆದ ಯಜ್ಞಪತಿ ಭಗವಾನ್ ಶ್ರೀಹರಿಯನ್ನು ಆರಾಧಿಸಿದನು. ॥ ೪೭ ॥

ಪರೀಕ್ಷಿತನೇ! ತ್ರೇತಾಯುಗಕ್ಕೆ ಮೊದಲು ಕೃತಯುಗದಲ್ಲಿ ಏಕಮಾತ್ರ ಪ್ರಣವ (ಓಂಕಾರ) ಮಾತ್ರ ವೇದವಾಗಿತ್ತು. ಎಲ್ಲ ವೇದ-ಶಾಸ್ತ್ರಗಳು ಅದರ ಅಂತರ್ಭೂತವಾಗಿದ್ದವು. ನಾರಾಯಣನೊಬ್ಬನಲ್ಲದೆ ಇತರ ಯಾವ ದೇವತೆಗಳೂ ಇರಲಿಲ್ಲ, ಅಗ್ನಿಗಳೂ ಮೂರಾಗಿರದೆ ಒಂದೇ ಆಗಿದ್ದಿತು. ಹಂಸವೆಂಬ ಒಂದೇ ವರ್ಣ ಇದ್ದಿತು. ॥ ೪೮ ॥ ರಾಜೇಂದ್ರಾ! ತ್ರೇತಾಯುಗದ ಪ್ರಾರಂಭದಲ್ಲಿ ಪುರೂರವನಿಂದಲೇ ವೇದತ್ರಯೀ ಮತ್ತು ಅಗ್ನಿತ್ರಯೀ ಇವುಗಳ ಆವಿರ್ಭಾವವಾಯಿತು. ಪುರೂರವರಾಜನು ಅಗ್ನಿಯನ್ನು ಸಂತಾನರೂಪದಿಂದ ಸ್ವೀಕರಿಸಿ ಗಂಧರ್ವಲೋಕವನ್ನು ಹೊಂದಿದನು. ॥ ೪೯ ॥

ಹದಿನಾಲ್ಕನೆಯ ಅಧ್ಯಾಯವು ಮುಗಿಯಿತು. ॥ ೧೪ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ನವಮಸ್ಕಂಧೇ
ಐಲೋಪಾಖ್ಯಾನೇ ಚತುರ್ದಶೋಽಧ್ಯಾಯಃ ॥ ೧೪ ॥

ಹದಿನೈದನೆಯ ಅಧ್ಯಾಯ

ಋಚೀಕ – ಜಮದಗ್ನಿ ಮತ್ತು ಪರಶುರಾಮರ ಚರಿತ್ರೆ

ಶ್ರೀಶುಕ ಉವಾಚ

ಐಲಸ್ಯ ಚೋರ್ವಶೀಗರ್ಭಾತ್ ಷಡಾಸನ್ನಾತ್ಮಜಾ ನೃಪ ।
ಆಯುಃ ಶ್ರುತಾಯುಃ ಸತ್ಯಾಯೂ ರಯೋಽಥ ವಿಜಯೋ ಜಯಃ ॥ ೧ ॥

ಶ್ರುತಾಯೋರ್ವಸುಮಾನ್ಪುತ್ರಃ ಸತ್ಯಾಯೋಶ್ಚ ಶ್ರುತಂಜಯಃ ।
ರಯಸ್ಯ ಸುತ ಏಕಶ್ಚ ಜಯಸ್ಯ ತನಯೋಽಮಿತಃ ॥ ೨ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಎಲೈ ಪರೀಕ್ಷಿತನೇ! ಊರ್ವಶಿಯ ಗರ್ಭದಿಂದ ಪುರೂರವನಿಗೆ ಆಯು, ಶ್ರುತಾಯು, ಸತ್ಯಾಯು, ರಯ, ವಿಜಯ ಮತ್ತು ಜಯ ಎಂಬ ಆರು ಪುತ್ರರು ಹುಟ್ಟಿದರು. ॥ ೧ ॥ ಶ್ರುತಾಯುವಿಗೆ ವಸುಮಂತನೆಂಬ ಪುತ್ರನು ಹುಟ್ಟಿದನು. ಸತ್ಯಾಯುವಿಗೆ ಶ್ರುತಂಜಯನು, ರಯನಿಗೆ ಏಕನೂ, ಜಯನಿಗೆ ಅಮಿತನೆಂಬ ಪುತ್ರರಾದರು. ॥ ೨ ॥

ಭೀಮಸ್ತು ವಿಜಯಸ್ಯಾಥ ಕಾಂಚನೋ ಹೋತ್ರಕಸ್ತತಃ ।
ತಸ್ಯ ಜಹ್ನುಃ ಸುತೋ ಗಂಗಾಂ ಗಂಡೂಷೀಕೃತ್ಯ ಯೋಽಪಿಬತ್ ।
ಜಹ್ನೋಸ್ತು ಪೂರುಸ್ತತ್ಪುತ್ರೋ ಬಲಾಕಶ್ಚಾತ್ಮಜೋಽಜಕಃ
॥ ೩ ॥

ತತಃ ಕುಶಃ ಕುಶಸ್ಯಾಪಿ ಕುಶಾಂಬುಸ್ತನಯೋ ವಸುಃ ।
ಕುಶನಾಭಶ್ಚ ಚತ್ವಾರೋ ಗಾಧಿರಾಸೀತ್ಕುಶಾಂಬುಜಃ
॥ ೪ ॥

ತಸ್ಯ ಸತ್ಯವತೀಂ ಕನ್ಯಾಮೃಚೀಕೋಽಯಾಚತ ದ್ವಿಜಃ ।
ವರಂ ವಿಸದೃಶಂ ಮತ್ವಾ ಗಾಧಿರ್ಭಾರ್ಗವಮಬ್ರವೀತ್
॥ ೫ ॥

ಏಕತಃ ಶ್ಯಾಮಕರ್ಣಾನಾಂ ಹಯಾನಾಂ ಚಂದ್ರವರ್ಚಸಾಮ್ ।
ಸಹಸ್ರಂ ದೀಯತಾಂ ಶುಲ್ಕಂ ಕನ್ಯಾಯಾಃ ಕುಶಿಕಾ ವಯಮ್
॥ ೬ ॥

ಇತ್ಯುಕ್ತಸ್ತನ್ಮತಂ ಜ್ಞಾತ್ವಾ ಗತಃ ಸ ವರುಣಾಂತಿಕಮ್ ।
ಆನೀಯ ದತ್ವಾ ತಾನಶ್ವಾನುಪಯೇಮೇ ವರಾನನಾಮ್
॥ ೭ ॥

ಸ ಋಷಿಃ ಪ್ರಾರ್ಥಿತಃ ಪತ್ನ್ಯಾ ಶ್ವಶ್ರ್ವಾ ಚಾಪತ್ಯಕಾಮ್ಯಯಾ ।
ಶ್ರಪಯಿತ್ವೋಭಯೈರ್ಮಂತ್ರೈಶ್ಚರುಂ ಸ್ನಾತುಂ ಗತೋ ಮುನಿಃ
॥ ೮ ॥

ತಾವತ್ಸತ್ಯವತೀ ಮಾತ್ರಾ ಸ್ವಚರುಂ ಯಾಚಿತಾ ಸತೀ ।
ಶ್ರೇಷ್ಠಂ ಮತ್ವಾ ತಯಾಯಚ್ಛನ್ಮಾತ್ರೇ ಮಾತುರದತ್ಸ್ವಯಮ್
॥ ೯ ॥

ತದ್ವಿಜ್ಞಾಯ ಮುನಿಃ ಪ್ರಾಹ ಪತ್ನೀಂ ಕಷ್ಟಮಕಾರಷೀಃ ।
ಘೋರೋ ದಂಡಧರಃ ಪುತ್ರೋ ಭ್ರಾತಾ ತೇ ಬ್ರಹ್ಮವಿತ್ತಮಃ
॥ ೧೦ ॥

ಪ್ರಸಾದಿತಃ ಸತ್ಯವತ್ಯಾ ಮೈವಂ ಭೂರಿತಿ ಭಾರ್ಗವಃ ।
ಅಥ ತರ್ಹಿ ಭವೇತ್ಪೌತ್ರೋ ಜಮದಗ್ನಿಸ್ತತೋಽಭವತ್
॥ ೧೧ ॥

ಸಾ ಚಾಭೂತ್ಸುಮಹಾಪುಣ್ಯಾ ಕೌಶಿಕೀ ಲೋಕಪಾವನೀ ।
ರೇಣೋಃ ಸುತಾಂ ರೇಣುಕಾಂ ವೈ ಜಮದಗ್ನಿರುವಾಹ ಯಾಮ್
॥ ೧೨ ॥

ವಿಜಯನಿಗೆ ಭೀಮ, ಭೀಮನಿಗೆ ಕಾಂಚನ, ಕಾಂಚನನಿಗೆ ಹೋತ್ರ, ಹೋತ್ರನಿಗೆ ಜಹ್ನು ಹುಟ್ಟಿದನು. ಗಂಗೆಯನ್ನು ಬೊಗಸೆಯಿಂದ ಕುಡಿದ ಮಹಾ ಮಹಿಮನಾದ ಜಹ್ನುವು ಇವನೇ ಆಗಿದ್ದನು. ಜಹ್ನುವಿಗೆ ಪುರೂ, ಪುರೂವಿಗೆ ಬಲಾಕ, ಬಲಾಕನಿಗೆ ಅಜಕನೆಂಬುವನು ಹುಟ್ಟಿದನು. ॥ ೩ ॥ ಅಜನ ಪುತ್ರ ಕುಶನಾಗಿ ಇದ್ದನು. ಕುಶನಿಗೆ – ಕುಶಾಂಬು, ತನಯ, ವಸು, ಕುಶನಾಭ ಎಂಬ ನಾಲ್ಕು ಪುತ್ರರಾದರು. ಇವರಲ್ಲಿ ಕುಶಾಂಬುವಿನ ಪುತ್ರ ಗಾಧಿಯಾದನು. ॥ ೪ ॥

ಪರೀಕ್ಷಿತನೇ ! ಗಾಧಿಗೆ ಸತ್ಯವತಿಯೆಂಬ ಕನ್ಯೆಯಿದ್ದಳು. ಋಚೀಕ ಋಷಿಯು ಗಾಧಿಯ ಬಳಿ ಸತ್ಯವತಿಯನ್ನು ಯಾಚಿಸಿದನು. ಇವನು ತನ್ನ ಕನ್ಯೆಗೆ ಯೋಗ್ಯವರನಲ್ಲವೆಂದು ಯೋಚಿಸಿ ಋಚೀಕನಲ್ಲಿ ಹೇಳಿದನು – ॥ ೫ ॥ ಮುನಿವರ್ಯರೇ ! ಕುಶಿಕ ವಂಶದವರು ನಾವು. ನಮ್ಮ ಕನ್ಯೆ ಸಿಗುವುದು ಕಷ್ಟವೇ. ಅದಕ್ಕಾಗಿ ನೀವು – ಶರೀರವು ಬೆಳ್ಳಗಿದ್ದು ಒಂದು ಕಿವಿಯು ಕಪ್ಪಾಗಿರುವ ಒಂದುಸಾವಿರ ಕುದುರೆಗಳನ್ನು ಕನ್ಯಾಶುಲ್ಕವಾಗಿ ತಂದು ನನಗೆ ಕೊಡಬೇಕು. ಆಗ ಮದುವೆಯಾಗಬಹುದು. ॥ ೬ ॥ ಗಾಧಿಯು ಈ ಮಾತನ್ನು ಹೇಳಿದಾಗ ಅವನ ಮನದಾಶಯವನ್ನು ತಿಳಿದ ಋಚೀಕ ಮುನಿಯು ವರುಣನಲ್ಲಿಗೆ ಹೋಗಿ ಅಂತಹ ಕುದುರೆಗಳನ್ನು ತಂದನು ಹಾಗೂ ಅವನ್ನು ನೀಡಿದ ಗಾಧಿಯು ಸತ್ಯವತಿಯನ್ನು ಮದುವೆ ಮಾಡಿಕೊಟ್ಟನು. ॥ ೭ ॥

ಒಮ್ಮೆ ಸತ್ಯವತಿ ಮತ್ತು ಅವಳ ತಾಯಿ ಇಬ್ಬರೂ ಸಂತಾನಾರ್ಥವಾಗಿ ಋಚೀಕನಲ್ಲಿ ಪ್ರಾರ್ಥಿಸಿದರು. ಋಚೀಕ ಮಹರ್ಷಿಗಳು ಪತ್ನಿಯ ಹಾಗೂ ಅತ್ತೆಯ ಪ್ರಾರ್ಥನೆಯನ್ನು ಅಂಗೀಕರಿಸಿ ಇಬ್ಬರಿಗೂ ಬೇರೆ-ಬೇರೆಯಾಗಿ ಎರಡು ಮಂತ್ರಗಳಿಂದ ಚರುವನ್ನು ಬೇಯಿಸಿಟ್ಟು ಸ್ನಾನಕ್ಕಾಗಿ ಹೊರಟುಹೋದರು. ॥ ೮ ॥ ಋಷಿಯು ತನ್ನ ಪತ್ನಿಗಾಗಿ ಶ್ರೇಷ್ಠಚರುವನ್ನು ಸಿದ್ಧಗೊಳಿಸಿರಬಹುದು ಎಂದು ಸತ್ಯವತಿಯ ತಾಯಿಯು ತಿಳಿದು, ಸತ್ಯವತಿಗಾಗಿ ಅಭಿಮಂತ್ರಿಸಿದ ಚರುವನ್ನು ಮಗಳಲ್ಲಿ ಬೇಡಿಕೊಂಡು ತಾನು ತಿಂದಳು. ಸತ್ಯವತಿಯು ತಾಯಿಗಾಗಿ ಸಿದ್ಧಗೊಳಿಸಿದ ಚರುವನ್ನು ತಿಂದುಬಿಟ್ಟಳು. ॥ ೯ ॥ ಋಚೀಕ ಮುನಿಗಳಿಗೆ ಈ ವಿಷಯ ತಿಳಿದಾಗ ಅವರು ತನ್ನ ಪತ್ನಿಯಾದ ಸತ್ಯವತಿಯಲ್ಲಿ ಹೇಳಿದರು – ನೀನು ದೊಡ್ಡ ಅನರ್ಥವನ್ನೆಸಗಿದೆ. ಚರುವಿನ ವಿನಿಮಯದಿಂದಾಗಿ ನಿನ್ನ ಗರ್ಭದಲ್ಲಿ ಘೋರ ಪ್ರಕೃತಿಯುಳ್ಳ ದಂಡಧರನಾದ ಕ್ಷಾತ್ರಸ್ವಭಾವವುಳ್ಳ ಮಗನು ಹುಟ್ಟುವನು. ನಿನ್ನ ತಮ್ಮನು ಶ್ರೇಷ್ಠ ಬ್ರಹ್ಮವಿತ್ತಮನಾಗುವನು. ॥ ೧೦ ॥ ಸತ್ಯವತಿಯು ಋಚೀಕನನ್ನು ಬಹಳವಾಗಿ ಪ್ರಸನ್ನಗೊಳಿಸಿ – 'ಸ್ವಾಮಿ ! ಹೀಗಾಗಬಾರದು' ಎಂದು ಪ್ರಾರ್ಥಿಸಿದಳು. ಆಗ ಋಚೀಕನೆಂದ– ಸರಿ. ಒಳ್ಳೆಯದು. ಮಗನ ಬದಲಿಗೆ ಮೊಮ್ಮಗನು ಅಂತಹ ಘೋರ ಪ್ರಕೃತಿಯವನಾಗುವನು. ಸಕಾಲದಲ್ಲಿ ಸತ್ಯವತಿಯ ಗರ್ಭದಿಂದ ಜಮದಗ್ನಿಯ ಜನ್ಮವಾಯಿತು. ॥ ೧೧ ॥ ಸತ್ಯವತಿಯು ಸಮಸ್ತ ಲೋಕಗಳನ್ನು ಪವಿತ್ರಗೊಳಿಸುವಂತಹ ಪುಣ್ಯವತಿಯಾದ 'ಕೌಶಿಕೀ' ನದಿಯಾದಳು. ರೇಣು ಎಂಬ ಋಷಿಯ ಕನ್ಯೆಯಾದ ರೇಣುಕೆಯನ್ನು ಜಮದಗ್ನಿಯು ವಿವಾಹವಾದನು. ॥ ೧೨ ॥

ತಸ್ಯಾಂ ವೈ ಭಾರ್ಗವಋಷೇಃ ಸುತಾ ವಸುಮದಾದಯಃ ।
ಯವೀಯಾಂಜಜ್ಞ ಏತೇಷಾಂ ರಾಮ ಇತ್ಯಭಿವಿಶ್ರುತಃ ॥ ೧೩ ॥

ರೇಣುಕೆಯ *ಗರ್ಭ*ದಿಂದ ಜಮದಗ್ನಿಗಳು ವಸುಮಂತ ಮೊದಲಾದ ಅನೇಕ ಪುತ್ರರನ್ನು ಪಡೆದರು. ಅವರಲ್ಲಿ ಕಿರಿಯವನು ಸುಪ್ರಸಿದ್ಧನಾದ ಪರಶುರಾಮನಾಗಿದ್ದನು. ॥ ೧೩ ॥

ಯಮಾಹುರ್ವಾಸುದೇವಾಂಶಂ ಹೈಹಯಾನಾಂ ಕುಲಾಂತಕಮ್ ।
ತ್ರಿಃಸಪ್ತಕೃತ್ವೋ ಯ ಇಮಾಂ ಚಕ್ರೇ ನಿಃಕ್ಷತ್ರಿಯಾಂ ಮಹೀಮ್ ॥ ೧೪ ॥

ದುಷ್ಟಂ ಕ್ಷತ್ರಂ ಭುವೋ ಭಾರಮಬ್ರಹ್ಮಣ್ಯಮನೀನಶತ್ ।
ರಜಸ್ತಮೋವೃತಮಹನ್ಫಲ್ಗುನ್ಯಪಿ ಕೃತೇಽಂಹಸಿ ॥ ೧೫ ॥

ಹೈಹಯವಂಶವನ್ನು ಅಂತ್ಯಗೊಳಿಸಲೆಂದೇ ಸ್ವಯಂ ಭಗವಂತನೇ ಪರಶುರಾಮ ರೂಪದಲ್ಲಿ ಅಂಶಾವತಾರ ಮಾಡಿದ್ದನು ಎಂದು ಹೇಳುತ್ತಾರೆ. ಪರಶುರಾಮನು ಈ ಭೂಮಂಡಲವನ್ನು ಇಪ್ಪತ್ತೊಂದು ಬಾರಿ ನಿಃಕ್ಷತ್ರಿಯವನ್ನಾಗಿ ಮಾಡಿಬಿಟ್ಟನು. ॥ ೧೪ ॥ ಕ್ಷತ್ರಿಯರು ಪರಶುರಾಮನ ಕುರಿತು ಮಾಡಿದ ಅಪರಾಧವು ಅಲ್ಪವಾಗಿದ್ದರೂ ಅವರು ಭಾರೀ ದುಷ್ಟರೂ, ಬ್ರಾಹ್ಮಣ ದ್ವೇಷಿಗಳೂ, ರಜೋಗುಣಿಗಳೂ ಆಗಿದ್ದು ವಿಶೇಷವಾಗಿ ತಮೋ ಗುಣಿಗಳೇ ಆಗಿದ್ದರು. ಇದೇ ಕಾರಣದಿಂದ ಅವರು ಭೂಭಾರಕರಾಗಿದ್ದರು. ಇದರ ಫಲವಾಗಿ ಭಗವಾನ್ ಪರಶುರಾಮನು ದುಷ್ಟ ಕ್ಷತ್ರಿಯರನ್ನು ಇಪ್ಪತ್ತೊಂದು ಬಾರಿ ತರಿದು ಭೂಭಾರವನ್ನಿಳಿಸಿದನು. ॥ ೧೫ ॥

ರಾಜೋವಾಚ

ಕಿಂ ತದಂಹೋ ಭಗವತೋ ರಾಜನ್ಯೈರಜಿತಾತ್ಮಭಿಃ ।
ಕೃತಂ ಯೇನ ಕುಲಂ ನಷ್ಟಂ ಕ್ಷತ್ರಿಯಾಣಾಮಭೀಕ್ಷ್ಣಶಃ ॥ ೧೬ ॥

ಪರೀಕ್ಷಿದ್ರಾಜನು ಕೇಳಿದನು – ಪೂಜ್ಯರೇ! ನೀವು ಹೇಳಿದಂತೆ ಆ ಸಮಯದಲ್ಲಿ ಕ್ಷತ್ರಿಯರು ವಿಷಯಲೋಲುಪರೂ ದುಷ್ಟರೂ ಅವಶ್ಯರಾಗಿದ್ದರು. ಆದರೆ ಅವರು ಪರಶುರಾಮನಿಗೆ ಅಂತಹ ಯಾವ ಅಪರಾಧವನ್ನು ಮಾಡಿದ್ದಕ್ಕಾಗಿ ಅವನು ಪದೇ-ಪದೇ ಕ್ಷತ್ರಿಯರ ವಂಶವನ್ನೇ ಸಂಹಾರಮಾಡಿದನು? ॥ ೧೬ ॥

ಶ್ರೀಶುಕ ಉವಾಚ

ಹೈಹಯಾನಾಮಧಿಪತಿರರ್ಜುನಃ ಕ್ಷತ್ರಿಯರ್ಷಭಃ ।
ದತ್ತಂ ನಾರಾಯಣಸ್ಯಾಂಶಮಾರಾಧ್ಯ ಪರಿಕರ್ಮಭಿಃ ॥ ೧೭ ॥

ಬಾಹೂನ್ದಶಶತಂ ಲೇಭೇ ದುರ್ಧರ್ಷತ್ವಮರಾತಿಷು ।
ಅವ್ಯಾಹತೇಂದ್ರಿಯೌಜಃಶ್ರೀತೇಜೋವೀರ್ಯಯಶೋಬಲಮ್ ॥ ೧೮ ॥

ಶ್ರೀಶುಕಮಹಾಮುನಿಗಳು ಹೇಳಿದರು – ಪರೀಕ್ಷಿತನೇ! ಆ ಸಮಯದಲ್ಲಿ ಕ್ಷತ್ರಿಯಶ್ರೇಷ್ಠನಾದ ಅರ್ಜುನನು ಹೈಹಯರಿಗೆ ಅಧಿಪತಿಯಾಗಿದ್ದನು. ಅವನು ಅನೇಕ ವಿಧವಾದ ಸೇವಾ-ಶುಶ್ರೂಷೆಗಳಿಂದ ಭಗವನ್ನಾರಾಯಣನ ಅಂಶಾವತಾರನಾದ ದತ್ತಾತ್ರೇಯನನ್ನು ಒಲಿಸಿಕೊಂಡು – ಒಂದು ಸಾವಿರ ಬಾಹುಗಳನ್ನು ಹಾಗೂ ಯಾವನೇ ಶತ್ರುವು ಯುದ್ಧದಲ್ಲಿ ಪರಾಜಿತಗೊಳಿಸದಂತಹ ವರವನ್ನು ಪಡೆದಿದ್ದನು. ಜೊತೆಗೆ ಅಬಾಧಿತವಾದ ಇಂದ್ರಿಯಗಳ ಬಲವನ್ನೂ, ಅತುಲಸಂಪತ್ತನ್ನೂ, ತೇಜಸ್ಸನ್ನೂ, ಪರಾಕ್ರಮವನ್ನೂ, ಕೀರ್ತಿಯನ್ನೂ, ಶಾರೀರಿಕ ಬಲವನ್ನೂ ಅವನು ದತ್ತಾತ್ರೇಯನ ಕೃಪೆಯಿಂದ ಪಡೆದುಕೊಂಡಿದ್ದನು. ॥ ೧೭-೧೮ ॥

ಯೋಗೇಶ್ವರತ್ವಮೈಶ್ವರ್ಯಂ ಗುಣಾ ಯತ್ರಾಣಿಮಾದಯಃ ।
ಚಚಾರಾವ್ಯಾಹತಗತಿರ್ಲೋಕೇಷು ಪವನೋ ಯಥಾ ॥ ೧೯ ॥

ಅವನು ಯೋಗೇಶ್ವರನಾಗಿದ್ದನು. ಅವನಿಗೆ ಅತಿಸೂಕ್ಷ್ಮ ಮತ್ತು ಅತಿಸ್ಥೂಲ ರೂಪವನ್ನು ಧರಿಸುವಂತಹ ಎಲ್ಲ ಐಶ್ವರ್ಯಸಿದ್ಧಿಗಳು ಪ್ರಾಪ್ತವಾಗಿದ್ದವು. ಅವನು ಪ್ರಪಂಚದಲ್ಲೆಲ್ಲ ವಾಯುವಿನಂತೆ ಯಾವುದೇ ಅಡೆ-ತಡೆಗಳಿಲ್ಲದೆ ಸಂಚರಿಸುತ್ತಿದ್ದನು. ॥ ೧೯ ॥

ಸ್ತ್ರೀರತ್ನೈರಾವೃತಃ ಕ್ರೀಡನ್ ರೇವಾಂಭಸಿ ಮದೋತ್ಕಟಃ ।
ವೈಜಯಂತೀಂ ಸ್ರಜಂ ಬಿಭ್ರದ್ರುರೋಧ ಸರಿತಂ ಭುಜೈಃ ॥ ೨೦ ॥

ವಿಪ್ಲಾವಿತಂ ಸ್ವಶಿಬಿರಂ ಪ್ರತಿಸ್ರೋತಃಸರಿಜ್ಜಲೈಃ ।
ನಾಮೃಷ್ಯತ್ತಸ್ಯ ತದ್ವೀರ್ಯಂ ವೀರಮಾನೀ ದಶಾನನಃ ॥ ೨೧ ॥

ಒಮ್ಮೆ ಕತ್ತಿನಲ್ಲಿ ವೈಜಯಂತಿಯನ್ನು ಧರಿಸಿಕೊಂಡ ಸಹಸ್ರಾರ್ಜುನನು ಅನೇಕ ಸುಂದರಿಯರೊಂದಿಗೆ ನರ್ಮದಾ ನದಿಯಲ್ಲಿ ಜಲವಿಹಾರ ಮಾಡುತ್ತಿದ್ದನು. ಆಗ ಮದೋನ್ಮತ್ತನಾದ ಸಹಸ್ರಬಾಹುವು ತನ್ನ ಕೈಗಳಿಂದ ನದಿಯ ಪ್ರವಾಹವನ್ನೂ ತಡೆದುಬಿಟ್ಟನು. ॥ ೨೦ ॥ ದಶಕಂಠ ರಾವಣನು ಅಲ್ಲೇ ಸಮೀಪದಲ್ಲೇ ಬೀಡುಬಿಟ್ಟಿದ್ದನು. ನದಿಯ ನೀರು ಉಕ್ಕಿ ಅವನ ಶಿಬಿರವು ಮುಳುಗತೊಡಗಿತು. ರಾವಣನಾದರೋ ತನ್ನನ್ನು ಮಹಾಪರಾಕ್ರಮಿ ವೀರನೆಂದು ತಿಳಿದಿದ್ದನು. ಅದಕ್ಕಾಗಿ ಸಹಸ್ರಾರ್ಜುನನ ಈ ಪರಾಕ್ರಮವು ಅವನಿಂದ ಸಹಿಸಲಾಗಲಿಲ್ಲ. ॥ ೨೧ ॥

ಗೃಹೀತೋ ಲೀಲಯಾ ಸ್ತ್ರೀಣಾಂ ಸಮಕ್ಷಂ ಕೃತಕಿಲ್ಬಿಷಃ ।
ಮಾಹಿಷ್ಮತ್ಯಾಂ ಸಂನಿರುದ್ಧೋ ಮುಕ್ತೋ ಯೇನ ಕಪಿರ್ಯಥಾ ॥ ೨೨ ॥

ಸ ಏಕದಾ ತು ಮೃಗಯಾಂ ವಿಚರನ್ವಿಪಿನೇ ವನೇ ।
ಯದೃಚ್ಛಯಾಽಽಶ್ರಮಪದಂ ಜಮದಗ್ನೇರುಪಾವಿಶತ್ ॥ ೨೩ ॥

ತಸ್ಮೈ ಸ ನರದೇವಾಯ ಮುನಿರರ್ಹಣಮಾಹರತ್ ।
ಸಸೈನ್ಯಾಮಾತ್ಯವಾಹಾಯ ಹವಿಷ್ಮತ್ಯಾ ತಪೋಧನಃ ॥ ೨೪ ॥

ಸ ವೀರಸ್ತತ್ರ ತದ್ದೃಷ್ಟ್ವಾ ಆತ್ಮೈಶ್ವರ್ಯಾತಿಶಾಯನಮ್ ।
ತನ್ನಾದ್ರಿಯತಾಗ್ನಿಹೋತ್ರ್ಯಾಂ ಸಾಭಿಲಾಷಃ ಸ ಹೈಹಯಃ ॥ ೨೫ ॥

ಹವಿರ್ಧಾನೀಮೃಷೇರ್ದರ್ಪಾನ್ನರಾನ್ಹರ್ತುಮಚೋದಯತ್ ।
ತೇ ಚ ಮಾಹಿಷ್ಮತೀಂ ನಿನ್ಯುಃ ಸವತ್ಸಾಂ ಕ್ರಂದತೀಂ ಬಲಾತ್ ॥ ೨೬ ॥

ಅಥ ರಾಜನಿ ನಿರ್ಯಾತೇ ರಾಮ ಆಶ್ರಮ ಆಗತಃ ।
ಶ್ರುತ್ವಾ ತತ್ತಸ್ಯ ದೌರಾತ್ಮ್ಯಂ ಚುಕ್ರೋಧಾಹಿರಿವಾಹತಃ ॥ ೨೭ ॥

ಘೋರಮಾದಾಯ ಪರಶುಂ ಸತೂಣಂ ಚರ್ಮ ಕಾರ್ಮುಕಮ್ ।
ಅನ್ವಧಾವತ ದುರ್ಮರ್ಷೋ ಮೃಗೇಂದ್ರ ಇವ ಯೂಥಪಮ್ ॥ ೨೮ ॥

ತಮಾಪತಂತಂ ಭೃಗುವರ್ಯಮೋಜಸಾ
ಧನುರ್ಧರಂ ಬಾಣಪರಶ್ವಧಾಯುಧಮ್ ।
ಐಣೇಯಚರ್ಮಾಂಬರಮರ್ಕಧಾಮಭಿ-
ರ್ಯುತಂ ಜಟಾಭಿರ್ದದೃಶೇ ಪುರೀಂ ವಿಶನ್ ॥ ೨೯ ॥

ಅಚೋದಯದ್ಧಸ್ತಿರಥಾಶ್ವಪತ್ತಿಭಿ-
ರ್ಗದಾಸಿಬಾಣರ್ಷ್ಟಿಶತಘ್ನಿಶಕ್ತಿಭಿಃ ।
ಅಕ್ಷೌಹಿಣೀಃ ಸಪ್ತದಶಾತಿಭೀಷಣಾ-
ಸ್ತಾ ರಾಮ ಏಕೋ ಭಗವಾನಸೂದಯತ್ ॥ ೩೦ ॥

ರಾವಣನು ಸಹಸ್ರಾರ್ಜುನನ ಬಳಿಗೆ ಹೋಗಿ ಅವನನ್ನು ನಿಂದಿಸತೊಡಗಿದಾಗ ಅವನು ನಾರಿಯರ ಇದುರಿನಲ್ಲೇ ಲೀಲಾಜಾಲವಾಗಿ ಸೆರೆಹಿಡಿದುಕೊಂಡು ತನ್ನ ರಾಜಧಾನಿ ಮಾಹಿಷ್ಮತಿಗೆ ತಂದು ಕಪಿಯನ್ನು ಬೋನಿನಲ್ಲಿರುವಂತೆ ರಾವಣನನ್ನು ಸೆರೆಯಲ್ಲಿಟ್ಟನು. ಬಳಿಕ ಪುಲಸ್ತ್ಯ ಮಹರ್ಷಿಗಳು ಹೇಳಿದಾಗ ಸಹಸ್ರಾರ್ಜುನನು ಅವನನ್ನು ಬಿಡುಗಡೆ ಗೊಳಿಸಿದನು. ॥ ೨೨ ॥

ಇಂತಹ ಅತುಲ ಪರಾಕ್ರಮಿಯಾದ ಸಹಸ್ರಾರ್ಜುನನು ಒಮ್ಮೆ ಬೇಟೆಯಾಡಲು ಗೊಂಡಾರಣ್ಯವನ್ನು ಪ್ರವೇಶಿಸಿದನು. ದೈವವಶದಿಂದ ಅವನು ಜಮದಗ್ನಿ ಮುನಿಯ ಆಶ್ರಮವನ್ನು ತಲುಪಿದನು. ॥ ೨೩ ॥ ಪರಮ ತಪಸ್ವಿಗಳಾದ ಜಮದಗ್ನಿ ಮುನಿಯ ಆಶ್ರಮದಲ್ಲಿ ಕಾಮಧೇನುವಿದ್ದಿತು. ಅದರ ಪ್ರಭಾವದಿಂದ ಮುನಿಗಳು ಆಶ್ರಮಕ್ಕೆ ಬಂದ ಹೈಹಯಾಧಿಪತಿಯನ್ನು, ಮಂತ್ರಿ, ಸೈನ್ಯ, ವಾಹನಗಳೊಂದಿಗೆ ತುಂಬಾ ಸ್ವಾಗತ-ಸತ್ಕಾರ ಮಾಡಿದರು. ॥ ೨೪ ॥ ವೀರ ಸಹಸ್ರಾರ್ಜುನನು ನೋಡಿದನು – ಈ ಮುನಿಯ ಐಶ್ವರ್ಯವಾದರೋ ನನಗಿಂತಲೂ ಮಿಗಿಲಾಗಿದೆ. ಅದಕ್ಕಾಗಿ ಅವನು ಅವರ ಸ್ವಾಗತ-ಸತ್ಕಾರವನ್ನು ಏನನ್ನೂ ಆದರಿಸದೆ ಕಾಮಧೇನುವನ್ನೇ ಕೊಂಡುಹೋಗಲು ಬಯಸಿದನು. ॥ ೨೫ ॥ ದುರಭಿಮಾನಿಯಾದ ಅವನು ಜಮದಗ್ನಿಯಲ್ಲಿ ಕೇಳಿಕೊಳ್ಳದೆ 'ಕಾಮಧೇನುವನ್ನು ಎಳೆದುಕೊಂಡು ಹೋಗಿರಿ' ಎಂದು ತನ್ನ ಸೇವಕರಿಗೆ ಆಜ್ಞೆಯನ್ನು ಇತ್ತನು. ಅವನ ಅಪ್ಪಣೆಯಂತೆ ಸೇವಕರು ಕರುವಿನೊಂದಿಗೆ ಅಂಬಾ! ಅಂಬಾ! ಎಂದು ಅರಚಿಕೊಳ್ಳುತ್ತಿದ್ದ ಕಾಮಧೇನುವನ್ನು ಬಲವಂತವಾಗಿ ಮಾಹಿಷ್ಮತಿಗೆಕೊಂಡು ಹೋದರು. ॥ ೨೬ ॥ ಇವೆಲ್ಲವೂ ನಡೆದಾಗ ಪರಶುರಾಮನು ಆಶ್ರಮಕ್ಕೆ ಬಂದನು. ರಾಜನ ದುಷ್ಕೃತ್ಯದ ವೃತ್ತಾಂತವನ್ನು ಕೇಳಿ ಏಟುತಿಂದ ಸರ್ಪದಂತೆ ಕೋಪದಿಂದ ಕಿಡಿ-ಕಿಡಿಯಾದನು. ॥ ೨೭ ॥ ಅವನು ತನ್ನ ಭಯಂಕರವಾದ ಗಂಡುಕೊಡಲಿಯನ್ನೂ, ಧನುಸ್ಸನ್ನೂ, ಬತ್ತಳಿಕೆಯನ್ನೂ, ಗುರಾಣಿಯನ್ನೂ ಎತ್ತಿಕೊಂಡು ಯಾರಿಂದಲೂ ತಡೆಯಲಾರದ ಸಿಂಹವು ಆನೆಯ ಮೇಲೆ ಎರಗುವಂತೆ ಅತಿವೇಗವಾಗಿ ಅವನನ್ನು ಹಿಂಬಾಲಿಸಿದನು. ॥ ೨೮ ॥

ಸಹಸ್ರಾರ್ಜುನನು ಇನ್ನೇನು ತನ್ನ ನಗರವನ್ನು ಪ್ರವೇಶಿಸುವಾಗಲೇ ಭಗವಾನ್ ಪರಶುರಾಮನು ಅತಿವೇಗದಿಂದ ತನ್ನತ್ತ ಬರುತ್ತಿರುವುದನ್ನು ನೋಡಿದನು. ಅವನ ರೂಪವು ಅತ್ಯಂತ ವಿಲಕ್ಷಣವಾಗಿತ್ತು. ಅವನು ಕೈಯಲ್ಲಿ ಧನುರ್ಬಾಣಗಳನ್ನೂ, ಗಂಡುಕೊಡಲಿಯನ್ನೂ ಧರಿಸಿದ್ದನು. ಶರೀರದ ಮೇಲೆ ಕೃಷ್ಣಮೃಗ ಚರ್ಮವನ್ನು ಧರಿಸಿದ್ದು, ಅವನ ಜಟೆಗಳು ಸೂರ್ಯಕಿರಣಗಳಂತೆ ಹೊಳೆಯುತ್ತಿದ್ದವು. ॥ ೨೯ ॥ ಅವನನ್ನು ನೋಡುತ್ತಲೇ ಅರ್ಜುನನು ಗದೆ, ಖಡ್ಗ, ಬಾಣ, ಋಷ್ಟಿ, ಶತಘ್ನೀ, ಶಕ್ತಿ ಮುಂತಾದ ಆಯುಧಗಳಿಂದ ಸುಸಜ್ಜಿತವಾದ ಅತ್ಯಂತ ಭಯಂಕರವಾದ ಹದಿನೇಳು ಅಕ್ಷೌಹಿಣಿ ಚತುರಂಗಿಣಿ ಸೇನೆಯನ್ನು ಪರಶುರಾಮನೊಂದಿಗೆ ಯುದ್ಧಕ್ಕೆ ಕಳಿಸಿದನು. ಅಷ್ಟೊಂದು ಅಪಾರವಾದ ಸೈನ್ಯವನ್ನು ಭಗವಾನ್ ಪರಶುರಾಮನೊಬ್ಬನೇ ಕ್ಷಣಮಾತ್ರದಲ್ಲಿ ಧ್ವಂಸಮಾಡಿಬಿಟ್ಟನು. ॥ ೩೦ ॥

ಯತೋ ಯತೋಽಸೌ ಪ್ರಹರತ್ಪರಶ್ವಧೋ
ಮನೋಽನಿಲೌಜಾಃ ಪರಚಕ್ರಸೂದನಃ ।
ತತಸ್ತತಶ್ಛಿನ್ನಭುಜೋರುಕಂಧರಾ
ನಿಪೇತುರುರ್ವ್ಯಾಂ ಹತಸೂತವಾಹನಾಃ ॥ ೩೧ ॥

ದೃಷ್ಟ್ವಾ ಸ್ವಸೈನ್ಯಂ ರುಧಿರೌಘಕರ್ದಮೇ
ರಣಾಜಿರೇ ರಾಮಕುಠಾರಸಾಯಕೈಃ ।
ವಿವೃಕ್ಣಚರ್ಮಧ್ವಜಚಾಪವಿಗ್ರಹಂ
ನಿಪಾತಿತಂ ಹೈಹಯ ಆಪತದ್ರುಷಾ ॥ ೩೨ ॥

ಅಥಾರ್ಜುನಃ ಪಂಚಶತೇಷು ಬಾಹುಭಿ-
ರ್ಧನುಃಷು ಬಾಣಾನ್ಯುಗಪತ್ಸ ಸಂದಧೇ ।
ರಾಮಾಯ ರಾಮೋಽಸ್ತ್ರಭೃತಾಂ ಸಮಗ್ರಣೀಃ
ತಾನ್ಯೇಕ ಧನ್ವೇಷುಭಿರಾಚ್ಛಿನತ್ಸಮಮ್ ॥ ೩೩ ॥

ಪುನಃ ಸ್ವಹಸ್ತೈರಚಲಾನ್ಮೃಧೇಽಂಘ್ರಿಪಾ-
ನುತ್ಕ್ಷಿಪ್ಯ ವೇಗಾದಭಿಧಾವತೋ ಯುಧಿ ।
ಭುಜಾನ್ಕುಠಾರೇಣ ಕಠೋರನೇಮಿನಾ
ಚಿಚ್ಛೇದ ರಾಮಃ ಪ್ರಸಭಂ ತ್ವಹೇರಿವ ॥ ೩೪ ॥

ಕೃತ್ತಬಾಹೋಃ ಶಿರಸ್ತಸ್ಯ ಗಿರೇಃ ಶೃಂಗಮಿವಾಹರತ್ ।
ಹತೇ ಪಿತರಿ ತತ್ಪುತ್ರಾ ಅಯುತಂ ದುದ್ರುವುರ್ಭಯಾತ್
॥ ೩೫ ॥

ಅಗ್ನಿಹೋತ್ರೀಮುಪಾವರ್ತ್ಯ ಸವತ್ಸಾಂ ಪರವೀರಹಾ ।
ಸಮುಪೇತ್ಯಾಶ್ರಮಂ ಪಿತ್ರೇ ಪರಿಕ್ಲಿಷ್ಟಾಂ ಸಮರ್ಪಯತ್
॥ ೩೬ ॥

ಸ್ವಕರ್ಮ ತತ್ಕೃತಂ ರಾಮಃ ಪಿತ್ರೇ ಭ್ರಾತೃಭ್ಯ ಏವ ಚ ।
ವರ್ಣಯಾಮಾಸ ತಚ್ಛ್ರುತ್ವಾ ಜಮದಗ್ನಿರಭಾಷತ
॥ ೩೭ ॥

ರಾಮ ರಾಮ ಮಹಾಬಾಹೋ ಭವಾನ್ಪಾಪಮಕಾರಷೀತ್ ।
ಅವಧೀನ್ನರದೇವಂ ಯತ್ಸರ್ವದೇವಮಯಂ ವೃಥಾ
॥ ೩೮ ॥

ವಯಂ ಹಿ ಬ್ರಾಹ್ಮಣಾಸ್ತಾತ ಕ್ಷಮಯಾರ್ಹಣತಾಂ ಗತಾಃ ।
ಯಯಾ ಲೋಕಗುರುರ್ದೇವಃ ಪಾರಮೇಷ್ಠ್ಯಮಗಾತ್ಪದಮ್
॥ ೩೯ ॥

ಕ್ಷಮಯಾ ರೋಚತೇ ಲಕ್ಷ್ಮೀರ್ಬ್ರಾಹ್ಮೀ ಸೌರೀ ಯಥಾ ಪ್ರಭಾ ।
ಕ್ಷಮಿಣಾಮಾಶು ಭಗವಾಂಸ್ತುಷ್ಯತೇ ಹರಿರೀಶ್ವರಃ
॥ ೪೦ ॥

ಭಗವಾನ್ ಪರಶುರಾಮನ ಗತಿಯು ವಾಯು-ಮನೋವೇಗದಂತಿತ್ತು. ಅವನು ಶತ್ರುಗಳ ಸೈನ್ಯವನ್ನು ಕೊಚ್ಚುತ್ತಲೇ ನಡೆಯುತ್ತಿದ್ದನು. ಅವನು ಗಂಡುಕೊಡಲಿಯಿಂದ ಪ್ರಹರಿಸಿದಲ್ಲೆಲ್ಲ ಸಾರಥಿಗಳು ವಾಹನದೊಂದಿಗೆ ನುಚ್ಚು ನೂರಾಗುತ್ತಿದ್ದವು. ಮಹಾ ಮಹಾ ವೀರರ ತೋಳು, ತೊಡೆ, ಹೆಗಲು ತುಂಡು-ತುಂಡಾಗಿ ನೆಲಕ್ಕೆ ಬೀಳುತ್ತಿದ್ದವು. ॥ ೩೧ ॥ ಹೈಹಯಾಧಿಪತಿಯ ಸೇನೆಯ ಸೈನಿಕರು, ಅವರ ಧನುಸ್ಸುಗಳು, ಧ್ವಜಗಳು, ಗುರಾಣಿಗಳು ಭಗವಾನ್ ಪರಶುರಾಮನ ಕೊಡಲಿಯಿಂದ ಮತ್ತು ಬಾಣಗಳಿಂದ ತುಂಡು ತುಂಡಾಗಿ ರಣರಂಗದ ರಕ್ತದ ಮಡುವಿನಲ್ಲಿ ಬಿದ್ದಿರುವರು. ದಾರುಣವಾದ ಈ ಸಂಹಾರ ಕಾರ್ಯವನ್ನು ನೋಡಿದ ಅರ್ಜುನನಿಗೆ ಕೋಪವನ್ನು ತಡೆಯಲು ಸಾಧ್ಯವಾಗದೆ, ಧನುಷ್ಪಾಣಿಯಾಗಿ ಸ್ವತಃ ಯುದ್ಧಕ್ಕಾಗಿ ಬಂದನು. ॥ ೩೨ ॥ ಅವನು ಒಮ್ಮೆಗೆ ತನ್ನ ಸಾವಿರ ಭುಜಗಳಿಂದ ಐದುನೂರು ಧನುಸ್ಸುಗಳಲ್ಲಿ ಬಾಣಗಳನ್ನು ಹೂಡಿ ಪರಶುರಾಮನ ಮೇಲೆ ಪ್ರಯೋಗಿಸಿದನು. ಸಮಸ್ತ ಶಸ್ತ್ರಧಾರಿಗಳಲ್ಲಿ ಶಿರೋಮಣಿಯಾದ ಪರಶುರಾಮನು ಒಂದೇ ಧನುಸ್ಸಿನ ಮೂಲಕ ಪ್ರಯೋಗಿಸಿದ ಒಂದೇ ಬಾಣದಿಂದ ಆ ಐದುನೂರು ಬಾಣಗಳನ್ನೂ ತುಂಡರಿಸಿ ಬಿಟ್ಟನು. ॥ ೩೩ ॥ ಈಗ ಅರ್ಜುನನು ತನ್ನ ಕೈಗಳಲ್ಲಿ ಪರ್ವತಗಳನ್ನೂ, ವೃಕ್ಷಗಳನ್ನೂ ಎತ್ತಿಕೊಂಡು ಪರಶುರಾಮನ ಮೇಲೆ ಎರಗಿದನು. ಆದರೆ ಪರಶುರಾಮನು ತನ್ನ ತೀಕ್ಷ್ಣವಾದ ಗಂಡುಕೊಡಲಿಯಿಂದ ಕ್ಷಣಮಾತ್ರದಲ್ಲಿ ಅರ್ಜುನನ ಸರ್ಪಗಳ ಹೆಡೆಗಳಂತಿದ್ದ ಸಾವಿರ ತೋಳುಗಳನ್ನು ಕತ್ತರಿಸಿ ಹಾಕಿದನು. ॥ ೩೪ ॥ ಬಾಹುಗಳು ಕತ್ತರಿಸಿದ ಬಳಿಕ ಪರ್ವತದ ಶಿಖರವನ್ನು ಕತ್ತರಿಸುವಂತೆ ಪರಶುರಾಮನು ಅವನ ಶಿರಸ್ಸನ್ನು ತುಂಡರಿಸಿದನು. ತಂದೆಯು ಸತ್ತದ್ದನ್ನು ನೋಡಿದ ಅವನ ಹತ್ತುಸಾವಿರ ಮಕ್ಕಳು ಹೆದರಿ ಓಡಿಹೋದರು. ॥ ೩೫ ॥

ಪರೀಕ್ಷಿತನೇ! ಶತ್ರುವೀರಹಂತಕನಾದ ಪರಶುರಾಮನು ಅತೀವ ದುಃಖಿತೆಯಾಗಿದ್ದ ಕಾಮಧೇನುವನ್ನು ಕರುವಿನೊಂದಿಗೆ ಮರಳಿ ತಂದು ತನ್ನ ಆಶ್ರಮದಲ್ಲಿದ್ದ ತಂದೆಗೆ ಒಪ್ಪಿಸಿದನು. ॥ ೩೬ ॥ ಮಾಹಿಷ್ಮತಿ ಪಟ್ಟಣದಲ್ಲಿ ತಾನು ಮಾಡಿದ ವಿಧ್ವಂಸನಕಾರ್ಯವನ್ನು ತಂದೆಗೂ, ಸಹೋದರರಿಗೂ ವಿವರಿಸಿ ಹೇಳಿದನು. ಮಹಾ ಪರಾಕ್ರಮಿಯಾದ ಸಹಸ್ರಾರ್ಜುನನನ್ನು ಸಂಹರಿಸಿದ ವಿಷಯವನ್ನೂ ತಿಳಿಸಿದನು. ಇದೆಲ್ಲವನ್ನು ಕೇಳಿ ಜಮದಗ್ನಿ ಮುನಿಗಳು ಹೇಳಿದರು - ॥ ೩೭ ॥ "ರಾಮಾ! ಪರಶುರಾಮಾ! ನೀನು ತುಂಬಾ ಪಾಪವನ್ನು ಮಾಡಿಬಿಟ್ಟೆ ಮಹಾಬಾಹುವೇ! ನೀನು ಮಹಾವೀರನೇ ಹೌದು. ಆದರೂ ಸರ್ವದೇವಮಯನಾದ ರಾಜನನ್ನು ವೃಥಾ ಸಂಹರಿಸಿದೆ. ॥ ೩೮ ॥ ಮಗು! ನಾವು ಬ್ರಾಹ್ಮಣರಾಗಿದ್ದೇವೆ. ನಮ್ಮಲ್ಲಿ ಕ್ಷಮಾಗುಣವಿರುವುದರಿಂದಲೇ ನಾವು ಲೋಕದಲ್ಲಿ ಪೂಜ್ಯರಾಗಿದ್ದೇವೆ. ಹೆಚ್ಚೇನು, ಲೋಕಗುರುವಾದ ದೇವನಾದ ಚತುರ್ಮುಖನೂ ಕೂಡ ಕ್ಷಮೆಯಿಂದಲೇ ಪರಮಪದವನ್ನು ಅಲಂಕರಿಸಿರುವನು. ॥ ೩೯ ॥ ಕ್ಷಮೆಯಿಂದಲೇ ಬ್ರಾಹ್ಮಣರ ಶೋಭೆಯು ಸೂರ್ಯನಂತೆ ಬೆಳಗುತ್ತದೆ. ಸರ್ವಶಕ್ತನಾದ ಭಗವಾನ್ ಶ್ರೀಹರಿಯೂ ಕೂಡ ಕ್ಷಮೆಯುಳ್ಳವರ ಮೇಲೆ ಬೇಗನೇ ಪ್ರಸನ್ನನಾಗುತ್ತಾನೆ. ॥ ೪೦ ॥

ರಾಜ್ಞೋ ಮೂರ್ಧಾಭಿಷಿಕ್ತಸ್ಯ ವಧೋ ಬ್ರಹ್ಮವಧಾದ್ಗುರುಃ ।
ತೀರ್ಥಸಂಸೇವಯಾ ಚಾಂಹೋ ಜಹ್ಯಂಗಾಚ್ಯುತಚೇತನಃ ॥ ೪೧ ॥

ಮಗು ! ಸಾರ್ವಭೌಮನಾದ ರಾಜನ ವಧೆಯು ಬ್ರಾಹ್ಮಣನ ಹತ್ಯೆಗಿಂತಲೂ ಮಿಗಿಲಾದುದು. ಹೋಗು, ಭಗವಂತನನ್ನು ಸ್ಮರಿಸುತ್ತಾ ಪುಣ್ಯತೀರ್ಥಗಳ ಸೇವನೆಗೈದು ನಿನ್ನ ಪಾಪಗಳನ್ನು ತೊಳೆದುಕೋ." ॥ ೪೧ ॥

ಹದಿನೈದನೇ ಅಧ್ಯಾಯವು ಮುಗಿಯಿತು ॥ ೧೫ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ನವಮಸ್ಕಂಧೇ ಪಂಚದಶೋಽಧ್ಯಾಯಃ ॥ ೧೫ ॥

ಹದಿನಾರನೆಯ ಅಧ್ಯಾಯ

ಪರಶುರಾಮನಿಂದ ಸಮಸ್ತ ಕ್ಷತ್ರಿಯರ ಸಂಹಾರ – ವಿಶ್ವಾಮಿತ್ರನ ವಂಶದ ಕಥೆ

ಶ್ರೀಶುಕ ಉವಾಚ

ಪಿತ್ರೋಪಶಿಕ್ಷಿತೋ ರಾಮಸ್ತಥೇತಿ ಕುರುನಂದನ ।
ಸಂವತ್ಸರಂ ತೀರ್ಥಯಾತ್ರಾಂ ಚರಿತ್ವಾಽಽಶ್ರಮಮಾವ್ರಜತ್ ॥ ೧ ॥

ಕದಾಚಿದ್ರೇಣುಕಾ ಯಾತಾ ಗಂಗಾಯಾಂ ಪದ್ಮಮಾಲಿನಮ್ ।
ಗಂಧರ್ವರಾಜಂ ಕ್ರೀಡಂತಮಪ್ಸರೋಭಿರಪಶ್ಯತ ॥ ೨ ॥

ವಿಲೋಕಯಂತೀ ಕ್ರೀಡಂತಮುದಕಾರ್ಥಂ ನದೀಂ ಗತಾ ।
ಹೋಮವೇಲಾಂ ನ ಸಸ್ಮಾರ ಕಿಂಚಿಚ್ಚಿತ್ರರಥಸ್ಪೃಹಾ ॥ ೩ ॥

ಕಾಲಾತ್ಯಯಂ ತಂ ವಿಲೋಕ್ಯ ಮುನೇಃ ಶಾಪವಿಶಂಕಿತಾ ।
ಆಗತ್ಯ ಕಲಶಂ ತಸ್ಥೌ ಪುರೋಧಾಯ ಕೃತಾಂಜಲಿಃ ॥ ೪ ॥

ವ್ಯಭಿಚಾರಂ ಮುನಿರ್ಜ್ಞಾತ್ವಾ ಪತ್ನ್ಯಾಃ ಪ್ರಕುಪಿತೋಽಬ್ರವೀತ್ ।
ಘ್ನತೈನಾಂ ಪುತ್ರಕಾಃ ಪಾಪಾಮಿತ್ಯುಕ್ತಾಸ್ತೇ ನ ಚಕ್ರಿರೇ ॥ ೫ ॥

ರಾಮಃ ಸಂಚೋದಿತಃ ಪಿತ್ರಾ ಭ್ರಾತೄನ್ಮಾತ್ರಾ ಸಹಾವಧೀತ್ ।
ಪ್ರಭಾವಜ್ಞೋ ಮುನೇಃ ಸಮ್ಯಕ್ಸಮಾಧೇಸ್ತಪಸಶ್ಚ ಸಃ ॥ ೬ ॥

ವರೇಣಚ್ಛಂದಯಾಮಾಸ ಪ್ರೀತಃ ಸತ್ಯವತೀಸುತಃ ।
ವವ್ರೇ ಹತಾನಾಂ ರಾಮೋಽಪಿ ಜೀವಿತಂ ಚಾಸ್ಮೃತಿಂ ವಧೇ ॥ ೭ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಎಲೈ ಪರೀಕ್ಷಿತನೇ ! ಹೀಗೆ ತಂದೆಯಿಂದ ಆಜ್ಞಪ್ತನಾದ ಪರಶುರಾಮನು 'ಹಾಗೆಯೇ ಆಗಲಿ' ಎಂದು ಹೇಳಿ ಒಡನೆಯೇ ಹೊರಟು ಒಂದು ವರ್ಷಕಾಲ ತೀರ್ಥಯಾತ್ರೆಯನ್ನು ಮಾಡಿ ಆಶ್ರಮಕ್ಕೆ ಮರಳಿದನು. ॥ ೧ ॥ ಒಮ್ಮೆ ಪರಶುರಾಮನ ತಾಯಿಯಾದ ರೇಣುಕೆಯು ಗಂಗಾತೀರಕ್ಕೆ ಹೋಗಿದ್ದಳು. ಅಲ್ಲಿ ಗಂಧರ್ವರಾಜನಾದ ಚಿತ್ರರಥನು ಕಮಲಗಳ ಮಾಲೆಗಳನ್ನು ಧರಿಸಿದ ಅಪ್ಸರೆಯರೊಂದಿಗೆ ವಿಹರಿಸುತ್ತಿದ್ದನು. ॥ ೨ ॥ ರೇಣುಕೆಯು ನೀರು ತರಲು ನದಿಗೆ ಹೋಗಿದ್ದಳು. ಆದರೆ ಅಲ್ಲಿ ಜಲಕ್ರೀಡೆಯಾಡುತ್ತಿರುವ ಗಂಧರ್ವನನ್ನು ನೋಡತೊಡಗಿದಳು ಹಾಗೂ ಪತಿದೇವರ ಹವನದ ಸಮಯವಾಗಿದೆ ಎಂಬುವನ್ನೂ ಮರೆತುಬಿಟ್ಟಳು. ಆಕೆಯ ಮನಸ್ಸು ಸ್ವಲ್ಪಕಾಲ ಚಿತ್ರರಥನ ಕಡೆಗೆ ಸೆಳೆಯಲ್ಪಟ್ಟಿತ್ತು. ॥ ೩ ॥ ಹವನದ ಸಮಯವು ಮೀರಿ ಹೋಗಿದೆ ಎಂಬುದನ್ನರಿತ ಆಕೆಯು ಭಯಗೊಂಡು ಲಗುಬಗೆಯಿಂದ ಆಶ್ರಮಕ್ಕೆ ಬಂದು ನೀರಿನ ಗಡಿಗೆಯನ್ನು ಮಹರ್ಷಿಗಳ ಮುಂದಿರಿಸಿ ಕೈಜೋಡಿಸಿಕೊಂಡು ನಿಂತುಬಿಟ್ಟಳು. ॥ ೪ ॥ ಜಮದಗ್ನಿ ಮುನಿಯು ತನ್ನ ಪತ್ನಿಯ ಮಾನಸಿಕ ವ್ಯಭಿಚಾರವನ್ನು ತಿಳಿದುಕೊಂಡು ಕ್ರೋಧಗೊಂಡು ಹೇಳಿದರು – 'ನನ್ನ ಮಕ್ಕಳಿರಾ ! ಪಾಪಿನಿಯಾದ ಈಕೆಯನ್ನು ಕೊಂದುಬಿಡಿರಿ.' ಆದರೆ ಅವರ ಯಾವ ಪುತ್ರನೂ ಆ ಆಜ್ಞೆಯಂತೆ ತಾಯಿಯನ್ನು ಕೊಲ್ಲಲು ಮುಂದಾಗಲಿಲ್ಲ. ॥ ೫ ॥ ಬಳಿಕ ತಂದೆಯ ಆಜ್ಞೆಯಂತೆ ಕಿರಿಯವನಾದ ಪರಶುರಾಮನು ತಾಯಿಯೊಂದಿಗೆ ಎಲ್ಲ ಸಹೋದರರನ್ನೂ ಕೊಂದುಹಾಕಿದನು. ಅವನು ತನ್ನ ತಂದೆಯ ಯೋಗ ಮತ್ತು ತಪಸ್ಸಿನ ಮಹಿಮೆಯನ್ನು ಚೆನ್ನಾಗಿ ತಿಳಿದಿದ್ದುದೇ ಇದಕ್ಕೆ ಕಾರಣವಾಗಿದೆ. ॥ ೬ ॥ ಪರಶುರಾಮನ ಈ ಕಾರ್ಯದಿಂದ ಸತ್ಯವತೀ ನಂದನ ಮಹರ್ಷಿ ಜಮದಗ್ನಿಯು ತುಂಬಾ ಪ್ರಸನ್ನರಾಗಿ 'ಮಗು ! ನಿನಗೆ ಇಚ್ಛೆಯುಳ್ಳ ವರವನ್ನು ಬೇಡು' ಎಂದು ಹೇಳಿದರು. ಪರಶುರಾಮನು ಅಪ್ಪಾ ! ನನ್ನ ತಾಯಿ ಮತ್ತು ಎಲ್ಲ ಸಹೋದರರು ಜೀವಂತರಾಗಲಿ ಮತ್ತು ನಾನು ಸಂಹರಿಸಿದ ಸ್ಮರಣೆಯು ಅವರಿಗೆ ಇರಬಾರದು ಎಂಬ ವರವನ್ನು ಬೇಡಿದನು. ॥ ೭ ।

ಉತ್ತಸ್ಥುಸ್ತೇ ಕುಶಲಿನೋ ನಿದ್ರಾಪಾಯ ಇವಾಂಜಸಾ ।
ಪಿತುರ್ವಿದ್ವಾಂಸ್ತಪೋವೀರ್ಯಂ ರಾಮಶ್ಚಕ್ರೇ ಸುಹೃದ್ವಧಮ್ ॥ ೮ ॥

ಯೇಽರ್ಜುನಸ್ಯ ಸುತಾ ರಾಜನ್ಸ್ಮರಂತಃ ಸ್ವಪಿತುರ್ವಧಮ್ ।
ರಾಮವೀರ್ಯಪರಾಭೂತಾ ಲೇಭಿರೇ ಶರ್ಮ ನ ಕ್ವಚಿತ್ ॥ ೯ ॥

ಏಕದಾಽಽಶ್ರಮತೋ ರಾಮೇ ಸಭ್ರಾತರಿ ವನಂ ಗತೇ ।
ವೈರಂ ಸಿಸಾಧಯಿಷವೋ ಲಬ್ಧಚ್ಛಿದ್ರಾ ಉಪಾಗಮನ್ ॥ ೧೦ ॥

ದೃಷ್ಟ್ವಾಗ್ನ್ಯಾಗಾರ ಆಸೀನಮಾವೇಶಿತಧಿಯಂ ಮುನಿಮ್ ।
ಭಗವತ್ಯುತ್ತಮಶ್ಲೋಕೇ ಜಘ್ನುಸ್ತೇ ಪಾಪನಿಶ್ಚಯಾಃ ॥ ೧೧ ॥

ಯಾಚ್ಯಮಾನಾಃ ಕೃಪಣಯಾ ರಾಮಮಾತ್ರಾತಿದಾರುಣಾಃ ।
ಪ್ರಸಹ್ಯ ಶಿರ ಉತ್ಕೃತ್ಯ ನಿನ್ಯುಸ್ತೇ ಕ್ಷತ್ರಬಂಧವಃ ॥ ೧೨ ॥

ರೇಣುಕಾ ದುಃಖಶೋಕಾರ್ತಾ ನಿಘ್ನಂತ್ಯಾತ್ಮಾನಮಾತ್ಮನಾ ।
ರಾಮ ರಾಮೇತಿ ತಾತೇತಿ ವಿಚುಕ್ರೋಶೋಚ್ಚಕೈಃ ಸತೀ ॥ ೧೩ ॥

ತದುಪಶ್ರುತ್ಯ ದೂರಸ್ಥೋ ಹಾ ರಾಮೇತ್ಯಾರ್ತವತ್ಸ್ವನಮ್ ।
ತ್ವರಯಾಽಽಶ್ರಮಮಾಸಾದ್ಯ ದದೃಶೇ ಪಿತರಂ ಹತಮ್ ॥ ೧೪ ॥

ತದ್ದುಃಖರೋಷಾಮರ್ಷಾರ್ತಿಶೋಕವೇಗವಿಮೋಹಿತಃ ।
ಹಾ ತಾತ ಸಾಧೋ ಧರ್ಮಿಷ್ಠ ತ್ಯಕ್ತ್ವಾಸ್ಮಾನ್ಸ್ವರ್ಗತೋ ಭವಾನ್ ॥ ೧೫ ॥

ವಿಲಪ್ಯೈವಂ ಪಿತುರ್ದೇಹಂ ನಿಧಾಯ ಭ್ರಾತೃಷು ಸ್ವಯಮ್ ।
ಪ್ರಗೃಹ್ಯ ಪರಶುಂ ರಾಮಃ ಕ್ಷತ್ರಾಂತಾಯ ಮನೋ ದಧೇ ॥ ೧೬ ॥

ಗತ್ವಾ ಮಾಹಿಷ್ಮತೀಂ ರಾಮೋ ಬ್ರಹ್ಮಘ್ನವಿಹತಶ್ರಿಯಮ್ ।
ತೇಷಾಂ ಸ ಶೀರ್ಷಭೀ ರಾಜನ್ಮಧ್ಯೇ ಚಕ್ರೇ ಮಹಾಗಿರಿಮ್ ॥ ೧೭ ॥

ಪರಶುರಾಮನು ಹೀಗೆ ಹೇಳುತ್ತಲೇ ನಿದ್ರೆಯಿಂದ ಎದ್ದವರಂತೆ ಎಲ್ಲರೂ ಅನಾಯಾಸವಾಗಿ ಕುಶಲರಾಗಿ ಎದ್ದು ಕುಳಿತರು. ಪರಶುರಾಮನು ತನ್ನ ತಂದೆಯ ತಪೋಬಲವನ್ನು ತಿಳಿದೇ ತನ್ನ ಸುಹೃದರನ್ನು ವಧಿಸಿದ್ದನು. ॥ ೮ ॥

ಪರೀಕ್ಷಿತನೇ! ಪರಶುರಾಮನೊಡನೆ ಮಾಡಿದ ಯುದ್ಧದಲ್ಲಿ ಪರಾಜಿತರಾಗಿ ಓಡಿಹೋಗಿದ್ದ ಸಹಸ್ರಾರ್ಜುನನ ಮಕ್ಕಳು ತಮ್ಮ ತಂದೆಯು ಪರಶುರಾಮನಿಂದ ಹತನಾದುದನ್ನು ಸ್ಮರಿಸುತ್ತಲೇ ಇದ್ದರು. ಹೀಗೆ ಸ್ಮರಿಸುತ್ತಿದ್ದುದರಿಂದ ಅವರ ಮನಸ್ಸು ಅಶಾಂತವಾಗಿತ್ತು. ॥ ೯ ॥ ಒಂದುದಿನ ಪರಶುರಾಮನು ತನ್ನ ಸಹೋದರರೊಂದಿಗೆ ದರ್ಭೆ-ಸಮಿತ್ತು ತರಲು ಆಶ್ರಮದಿಂದ ಹೊರಗೆ ಅರಣ್ಯಕ್ಕೆ ಹೋಗಿದ್ದನು. ವೈರವನ್ನು ಸಾಧಿಸಲು ಇದೇ ಸುಸಂದರ್ಭವೆಂದು ತಿಳಿದು ಸಹಸ್ರಾರ್ಜುನನ ಮಕ್ಕಳು ಅಲ್ಲಿಗೆ ಬಂದರು. ॥ ೧೦ ॥ ಆಗ ಜಮದಗ್ನಿ ಮಹರ್ಷಿಗಳು ಯಜ್ಞಶಾಲೆಯಲ್ಲಿ ಕುಳಿತಿದ್ದರು. ತನ್ನ ಸಮಸ್ತ ವೃತ್ತಿಗಳನ್ನು ಪುಣ್ಯಕೀರ್ತಿ ಭಗವಂತನ ಧ್ಯಾನದಲ್ಲೇ ತೊಡಗಿಸಿದ್ದರು. ಅವರಿಗೆ ಬಾಹ್ಯ ಪ್ರಪಂಚದ ಜ್ಞಾನವೇ ಇರಲಿಲ್ಲ. ಅದೇ ಸಮಯದಲ್ಲಿ ಆ ಪಾಪಿಗಳು ಜಮದಗ್ನಿಯನ್ನು ಕೊಂದು ಹಾಕಿದರು. ಅವರು ಮೊದಲಿನಿಂದಲೇ ಇಂತಹ ಪಾಪಪೂರ್ಣ ನಿಶ್ಚಯ ಮಾಡಿಕೊಂಡಿದ್ದರು. ॥ ೧೧ ॥ ಪರಶುರಾಮನ ತಾಯಿ ರೇಣುಕೆಯು ಅತಿದೀನಳಾಗಿ ಅವರಲ್ಲಿ ಪ್ರಾರ್ಥಿಸುತ್ತಿದ್ದಳು. ಆದರೆ ಅವರೆಲ್ಲರೂ ಆಕೆಯ ಒಂದು ಮಾತೂ ಕೇಳದೆ ಬಲವಂತವಾಗಿ ಮಹರ್ಷಿ ಜಮದಗ್ನಿಯ ಶಿರವನ್ನು ಕತ್ತರಿಸಿಕೊಂಡುಹೋದರು. ಪರೀಕ್ಷಿತನೇ! ನಿಜವಾಗಿ ಅವರು ನೀಚ ಕ್ಷತ್ರಿಯರಾಗಿದ್ದು ಅತ್ಯಂತ ಕ್ರೂರಿಯಾಗಿದ್ದರು. ॥ ೧೨ ॥ ದುಃಖ-ಶೋಕ ಪೀಡಿತಳಾಗಿದ್ದ ರೇಣುಕೆಯು ತನ್ನ ಕೈಗಳಿಂದ ತಲೆಯನ್ನೂ, ಎದೆಯನ್ನೂ ಬಡಿದುಕೊಂಡು ಗಟ್ಟಿಯಾಗಿ ಗೋಳಾಡುತ್ತಾ 'ಮಗು! ಪರಶುರಾಮಾ! ಬೇಗನೇ ಓಡಿ ಬಾ!' ಎಂದು ಗಟ್ಟಿಯಾಗಿ ಕರೆಯುತ್ತಿದ್ದಳು. ॥ ೧೩ ॥ ಪರಶುರಾಮನು ಬಹಳ ದೂರದಿಂದಲೇ 'ಹಾ ರಾಮಾ!' ಎಂಬ ಕರುಣಾಕ್ರಂದನ ಕೇಳಿದನು. ಅವನು ಅತಿಶೀಘ್ರವಾಗಿ ಆಶ್ರಮಕ್ಕೆ ಬಂದು ನೋಡುತ್ತಾನೆ – ತನ್ನ ತಂದೆಯು ಕೊಲ್ಲಲ್ಪಟ್ಟಿದ್ದನು. ॥ ೧೪ ॥ ಪರೀಕ್ಷಿತನೇ! ಆಗ ಪರಶುರಾಮನಿಗೆ ಅತ್ಯಂತ ದುಃಖವಾಯಿತು. ಜೊತೆಗೆ ಕ್ರೋಧ, ಅಸಹಿಷ್ಣುತೆ, ಮಾನಸಿಕ ಪೀಡೆ ಮತ್ತು ಶೋಕದ ಆವೇಗದಿಂದ ಅತ್ಯಂತ ವಿಮೋಹವು ಉಂಟಾಯಿತು. ಅಯ್ಯೋ! ತಂದೆಯೇ! ನೀನಾದರೋ ಮಹಾತ್ಮನಾಗಿದ್ದೆ, ಧರ್ಮಾತ್ಮನಾಗಿದ್ದೆ, ನಮ್ಮೆಲ್ಲರನ್ನೂ ಬಿಟ್ಟು ನೀನು ಸ್ವರ್ಗಕ್ಕೆ ಹೊರಟು ಹೋದೆಯಲ್ಲ! ॥ ೧೫ ॥ ಹೀಗೆ ವಿಲಾಪಿಸಿದ ಅವನು ತಂದೆಯ ಶರೀರವನ್ನು ಸಹೋದರರಿಗೆ ಒಪ್ಪಿಸಿ, ಸ್ವಯಂ ಕೈಯಲ್ಲಿ ಗಂಡು ಕೊಡಲಿಯನ್ನು ಎತ್ತಿಕೊಂಡು ದುಷ್ಟ ಕ್ಷತ್ರಿಯರ ಸಂಹಾರ ಮಾಡಿಬಿಡುವ ನಿಶ್ಚಯವನ್ನು ಮಾಡಿದನು. ॥ ೧೬ ॥

ಪರೀಕ್ಷಿದ್ರಾಜೇಂದ್ರ! ಪರಶುರಾಮನು ಮಾಹಿಷ್ಮತಿ ನಗರಕ್ಕೆ ಹೋಗಿ ಸಹಸ್ರಬಾಹು ಅರ್ಜುನನ ಮಕ್ಕಳ ತಲೆಗಳನ್ನು ಚೆಂಡಾಡಿ ನಗರ ಮಧ್ಯಭಾಗದಲ್ಲಿ ಗುಡ್ಡೆಹಾಕಿದನು. ಆ ನಗರದ ಶೋಭೆಯಾದರೋ ಆ ಬ್ರಾಹ್ಮಣಘಾತಿಗಳಾದ ಕ್ಷತ್ರಿಯರ ಕಾರಣದಿಂದ ನಾಶವಾಗಿ ಹೋಗಿತ್ತು. ॥ ೧೭ ॥

ತದ್ರಕ್ತೇನ ನದೀಂ ಘೋರಾಮಬ್ರಹ್ಮಣ್ಯಭಯಾವಹಾಮ್ ।
ಹೇತುಂ ಕೃತ್ವಾ ಪಿತೃವಧಂ ಕ್ಷತ್ರೇಽಮಂಗಲಕಾರಿಣಿ ॥ ೧೮ ॥

ತ್ರಿಃಸಪ್ತಕೃತ್ವಃ ಪೃಥಿವೀಂ ಕೃತ್ವಾ ನಿಃಕ್ಷತ್ರಿಯಾಂ ಪ್ರಭುಃ ।
ಸಮಂತಪಂಚಕೇ ಚಕ್ರೇ ಶೋಣಿತೋದಾನ್ ಹ್ರದಾನ್ನವ ॥ ೧೯ ॥

ಪಿತುಃ ಕಾಯೇನ ಸಂಧಾಯ ಶಿರ ಆದಾಯ ಬರ್ಹಿಷಿ ।
ಸರ್ವದೇವಮಯಂ ದೇವಮಾತ್ಮಾನಮಯಜನ್ಮಖೈಃ ॥ ೨೦ ॥

ದದೌ ಪ್ರಾಚೀಂ ದಿಶಂ ಹೋತ್ರೇ ಬ್ರಹ್ಮಣೇ ದಕ್ಷಿಣಾಂ ದಿಶಮ್ ।
ಅಧ್ವರ್ಯವೇ ಪ್ರತೀಚೀಂ ವೈ ಉದ್ಗಾತ್ರೇ ಉತ್ತರಾಂ ದಿಶಮ್ ॥ ೨೧ ॥

ಅನ್ಯೇಭ್ಯೋಽವಾಂತರದಿಶಃ ಕಶ್ಯಪಾಯ ಚ ಮಧ್ಯತಃ ।
ಆರ್ಯಾವರ್ತಮುಪದ್ರಷ್ಟ್ರೇ ಸದಸ್ಯೇಭ್ಯಸ್ತತಃ ಪರಮ್ ॥ ೨೨ ॥

ತತಶ್ಚಾವಭೃಥಸ್ನಾನವಿಧೂತಾಶೇಷಕಿಲ್ಬಿಷಃ ।
ಸರಸ್ವತ್ಯಾಂ ಬ್ರಹ್ಮನದ್ಯಾಂ ರೇಜೇ ವ್ಯಭ್ರ ಇವಾಂಶುಮಾನ್ ॥ ೨೩ ॥

ಸ್ವದೇಹಂ ಜಮದಗ್ನಿಸ್ತು ಲಬ್ಧ್ವಾ ಸಂಜ್ಞಾನಲಕ್ಷಣಮ್ ।
ಋಷೀಣಾಂ ಮಂಡಲೇ ಸೋಽಭೂತ್ಸಪ್ತಮೋ ರಾಮಪೂಜಿತಃ ॥ ೨೪ ॥

ಜಾಮದಗ್ನ್ಯೋಽಪಿ ಭಗವಾನ್ರಾಮಃ ಕಮಲಲೋಚನಃ ।
ಆಗಾಮಿನ್ಯಂತರೇ ರಾಜನ್ವರ್ತಯಿಷ್ಯತಿ ವೈ ಬೃಹತ್ ॥ ೨೫ ॥

ಆಸ್ತೇಽದ್ಯಾಪಿ ಮಹೇಂದ್ರಾದ್ರೌ ನ್ಯಸ್ತದಂಡಃ ಪ್ರಶಾಂತಧೀಃ ।
ಉಪಗೀಯಮಾನಚರಿತಃ ಸಿದ್ಧಗಂಧರ್ವಚಾರಣೈಃ ॥ ೨೬ ॥

ಏವಂ ಭೃಗುಷು ವಿಶ್ವಾತ್ಮಾ ಭಗವಾನ್ ಹರಿರೀಶ್ವರಃ ।
ಅವತೀರ್ಯ ಪರಂ ಭಾರಂ ಭುವೋಽಹನ್ಬಹುಶೋ ನೃಪಾನ್ ॥ ೨೭ ॥

ಗಾಧೇರಭೂನ್ಮಹಾತೇಜಾಃ ಸಮಿದ್ಧ ಇವ ಪಾವಕಃ ।
ತಪಸಾ ಕ್ಷಾತ್ರಮುತ್ಸೃಜ್ಯ ಯೋ ಲೇಭೇ ಬ್ರಹ್ಮವರ್ಚಸಮ್ ॥ ೨೮ ॥

ವಿಶ್ವಾಮಿತ್ರಸ್ಯ ಚೈವಾಸನ್ಪುತ್ರಾ ಏಕಶತಂ ನೃಪ ।
ಮಧ್ಯಮಸ್ತು ಮಧುಚ್ಛಂದಾ ಮಧುಚ್ಛಂದಸ ಏವ ತೇ ॥ ೨೯ ॥

ಅವರ ರಕ್ತದ ಒಂದು ದೊಡ್ಡ ಭಯಂಕರ ನದಿಯೇ ಹರಿಯಿತು. ಇದನ್ನು ನೋಡಿ ಬ್ರಾಹ್ಮಣ ದ್ರೋಹಿಗಳ ಹೃದಯಗಳು ಭಯದಿಂದ ನಡುಗಿಹೋದುವು. ಎಲ್ಲ ಕ್ಷತ್ರಿಯರು ಅತ್ಯಾಚಾರಿಗಳಾಗಿದ್ದಾರೆ ಎಂದು ಭಗವಾನ್ ಪರಶುರಾಮನು ಭಾವಿಸಿದನು. ಆದ್ದರಿಂದ ರಾಜನೇ! ಅವನು ತನ್ನ ತಂದೆಯ ವಧೆಯ ನೆಪವನ್ನು ಮಾಡಿಕೊಂಡು ಪೃಥಿವಿಯನ್ನು ಇಪ್ಪತ್ತೊಂದು ಬಾರಿ ನಿಃಕ್ಷತ್ರಿಯವನ್ನಾಗಿಸಿದನು. ಕೊನೆಗೆ ಕುರುಕ್ಷೇತ್ರದ ಸ್ಯಮಂತಪಂಚಕದಲ್ಲಿ ರಕ್ತದಿಂದ ತುಂಬಿದ ಒಂಭತ್ತು ಮಡುಗಳನ್ನು ನಿರ್ಮಿಸಿದ್ದನು. ॥ ೧೮-೧೯ ॥ ಪರಶುರಾಮನು ತನ್ನ ತಂದೆಯ ಶಿರವನ್ನು ತಂದು ಮುಂಡದೊಡನೆ ಜೋಡಿಸಿ ಯಜ್ಞಗಳ ಮೂಲಕ ಸರ್ವದೇವಮಯನಾದ, ಆತ್ಮಸ್ವರೂಪನಾದ ಭಗವಂತನನ್ನು ಆರಾಧಿಸಿದನು. ॥ ೨೦ ॥ ಹಾಗೆ ಮಾಡಿದ ಯಜ್ಞದಲ್ಲವನು ಪೂರ್ವದಿಕ್ಕನ್ನು ಹೋತೃವಿಗೂ, ದಕ್ಷಿಣದಿಕ್ಕನ್ನು ಬ್ರಹ್ಮನಿಗೂ, ಪಶ್ಚಿಮದಿಕ್ಕನ್ನು ಅಧ್ವರ್ಯುವಿಗೂ, ಉತ್ತರದಿಕ್ಕನ್ನು ಸಾಮಗಾನ ಮಾಡುವ ಉದ್ಗಾತೃವಿಗೂ ದಕ್ಷಿಣೆಯಾಗಿ ನೀಡಿದನು. ॥ ೨೧ ॥ ಹೀಗೆಯೇ ಆಗ್ನೇಯಾದಿ ವಿದಿಶೆಗಳನ್ನು ಋತ್ವಿಜರಿಗೆ ಕೊಟ್ಟನು. ಮಧ್ಯದ ಭೂಮಿಯನ್ನು ಕಶ್ಯಪನಿಗೆ ಕೊಟ್ಟನು. ಉಪದ್ರಷ್ಟಾನಿಗೆ ಆರ್ಯಾವರ್ತವನ್ನು ಕೊಟ್ಟು, ಇತರ ಸದಸ್ಯರಿಗೆ ಬೇರೆ-ಬೇರೆ ದಿಕ್ಕುಗಳನ್ನು ದಾನಮಾಡಿದನು. ॥ ೨೨ ॥ ಅನಂತರ ಯಜ್ಞಾಂತ ಅವಭೃತಸ್ನಾನಮಾಡಿ ಅವನು ಸಮಸ್ತ ಪಾಪಗಳಿಂದ ಮುಕ್ತನಾದನು ಹಾಗೂ ಬ್ರಹ್ಮನದಿಯಾದ ಸರಸ್ವತಿಯ ತೀರದಲ್ಲಿ ಮೋಡಗಳಿಲ್ಲದ ಸೂರ್ಯನಂತೆ ಪ್ರಕಾಶಿಸಿದನು. ॥ ೨೩ ॥ ಮಹರ್ಷಿ ಜಮದಗ್ನಿಯವರಿಗೆ ಸ್ಮೃತಿರೂಪ ಸಂಕಲ್ಪಮಯ ಶರೀರವು ಪ್ರಾಪ್ತವಾಯಿತು. ಪರಶುರಾಮನಿಂದ ಸಮ್ಮಾನಿತರಾಗಿ ಅವರು ಸಪ್ತರ್ಷಿಗಳ ಮಂಡಲದಲ್ಲಿ ಏಳನೆಯ ಋಷಿಗಳಾದರು. ॥ ೨೪ ॥ ಪರೀಕ್ಷಿತನೇ! ಜಮದಗ್ನಿನಂದನ ಕಮಲಲೋಚನ ಭಗವಾನ್ ಪರಶುರಾಮನು ಮುಂದಿನ ಮನ್ವಂತರದಲ್ಲಿ ಸಪ್ತರ್ಷಿಗಳ ಮಂಡಲದಲ್ಲಿದ್ದು ವೇದಗಳನ್ನು ವಿಸ್ತಾರಮಾಡುವನು. ॥ ೨೫ ॥ ಅವನು ಇಂದೂ ಕೂಡ ಯಾರಿಗೂ ಯಾವರೀತಿಯಿಂದಲೂ ದಂಡಿಸದೆ ಶಾಂತಚಿತ್ತನಾಗಿ ಮಹೇಂದ್ರ ಪರ್ವತದಲ್ಲಿ ವಾಸವಾಗಿದ್ದಾನೆ. ಅಲ್ಲಿ ಸಿದ್ಧರೂ, ಗಂಧರ್ವರೂ, ಚಾರಣರೂ ಪರಶುರಾಮನ ಚರಿತ್ರೆಯನ್ನು ಮಧುರವಾಗಿ ಹಾಡುತ್ತಾ ಇರುವರು. ॥ ೨೬ ॥ ಸರ್ವಶಕ್ತನಾದ ವಿಶ್ವಾತ್ಮಾ ಭಗವಾನ್ ಶ್ರೀಹರಿಯು ಈ ಪ್ರಕಾರ ಭೃಗುವಂಶದಲ್ಲಿ ಅವತಾರವೆತ್ತಿ ಭೂಭಾರಕರಾದ ರಾಜರನ್ನು ಅನೇಕಬಾರಿ ವಧಿಸಿದ್ದನು. ॥ ೨೭ ॥

ಗಾಧಿ ಮಹಾರಾಜನಿಗೆ ಪ್ರಜ್ವಲಿತ ಅಗ್ನಿಯಂತೆ ಪರಮ ತೇಜಸ್ವೀ ವಿಶ್ವಾಮಿತ್ರನು ಪುತ್ರನಾದನು. ಇವನು ತನ್ನ ತಪೋಬಲದಿಂದ ಕ್ಷತ್ರಿಯತ್ವವನ್ನು ತ್ಯಜಿಸಿ ಬ್ರಹ್ಮತೇಜವನ್ನು ಪಡೆದಿದ್ದನು. ॥ ೨೮ ॥ ಪರೀಕ್ಷಿತನೇ! ವಿಶ್ವಾಮಿತ್ರನಿಗೆ ನೂರು ಪುತ್ರರಿದ್ದರು. ಅವರಲ್ಲಿ ಮಧ್ಯಮನು ಮಧುಚ್ಛಂದನು. ಆದ್ದರಿಂದ ಎಲ್ಲ ಪುತ್ರರೂ ಮಧುಚ್ಛಂದಸ ಹೆಸರಿನಿಂದಲೇ ವಿಖ್ಯಾತರಾದರು. ॥ ೨೯ ॥

ಪುತ್ರಂ ಕೃತ್ವಾ ಶುನಃಶೇಪಂ ದೇವರಾತಂ ಚ ಭಾರ್ಗವಮ್ ।
ಆಜೀಗರ್ತಂ ಸುತಾನಾಹ ಜ್ಯೇಷ್ಠ ಏಷ ಪ್ರಕಲ್ಪ್ಯತಾಮ್ ॥ ೩೦ ॥

ಯೋ ವೈ ಹರಿಶ್ಚಂದ್ರಮಖೇ ವಿಕ್ರೀತಃ ಪುರುಷಃ ಪಶುಃ ।
ಸ್ತುತ್ವಾ ದೇವಾನ್ ಪ್ರಜೇಶಾದೀನ್ಮುಮುಚೇ ಪಾಶಬಂಧನಾತ್ ॥ ೩೧ ॥

ಯೋ ರಾತೋ ದೇವಯಜನೇ ದೇವೈರ್ಗಾಧಿಷು ತಾಪಸಃ ।
ದೇವರಾತ ಇತಿ ಖ್ಯಾತಃ ಶುನಃಶೇಪಃ ಸ ಭಾರ್ಗವಃ ॥ ೩೨ ॥

ಯೇ ಮಧುಚ್ಛಂದಸೋ ಜ್ಯೇಷ್ಠಾಃ ಕುಶಲಂ ಮೇನಿರೇ ನ ತತ್ ।
ಅಶಪತ್ತಾನ್ಮುನಿಃ ಕ್ರುದ್ಧೋ ಮ್ಲೇಚ್ಛಾ ಭವತ ದುರ್ಜನಾಃ ॥ ೩೩ ॥

ಸ ಹೋವಾಚ ಮಧುಚ್ಛಂದಾಃ ಸಾರ್ಧಂ ಪಂಚಾಶತಾ ತತಃ ।
ಯನ್ನೋ ಭವಾನ್ಸಂಜಾನೀತೇ ತಸ್ಮಿಂಸ್ತಿಷ್ಠಾಮಹೇ ವಯಮ್ ॥ ೩೪ ॥

ಜ್ಯೇಷ್ಠಂ ಮಂತ್ರದೃಶಂ ಚಕ್ರುಸ್ತ್ವಾಮನ್ವಂಚೋ ವಯಂ ಸ್ಮ ಹಿ ।
ವಿಶ್ವಾಮಿತ್ರಃ ಸುತಾನಾಹ ವೀರವಂತೋ ಭವಿಷ್ಯಥ ।
ಯೇ ಮಾನಂ ಮೇಽನುಗೃಹ್ಣಂತೋ ವೀರವಂತಮಕರ್ತ ಮಾಮ್ ॥ ೩೫ ॥

ಏಷ ವಃ ಕುಶಿಕಾ ವೀರೋ ದೇವರಾತಸ್ತಮನ್ವಿತ ।
ಅನ್ಯೇ ಚಾಷ್ಟಕಹಾರೀತಜಯಕ್ರತುಮದಾದಯಃ ॥ ೩೬ ॥

ಏವಂ ಕೌಶಿಕಗೋತ್ರಂ ತು ವಿಶ್ವಾಮಿತ್ರೈಃ ಪೃಥಗ್ವಿಧಮ್ ।
ಪ್ರವರಾಂತರಮಾಪನ್ನಂ ತದ್ಧಿ ಚೈವಂ ಪ್ರಕಲ್ಪಿತಮ್ ॥ ೩೭ ॥

ವಿಶ್ವಾಮಿತ್ರನು ಭೃಗುವಂಶೀಯ ಅಜೀಗರ್ತನಪುತ್ರನೂ ತನ್ನ ಅಳಿಯನೂ ಆದ ಶುನಃಶೇಪನನ್ನು ಪುತ್ರರೂಪದಿಂದ ಸ್ವೀಕರಿಸಿದನು. ಇವನಿಗೆ ದೇವರಾತನೆಂದೂ ಇನ್ನೊಂದು ಹೆಸರಿತ್ತು. ಈ ಶುನಃಶೇಪನನ್ನು ನಿಮ್ಮ ಹಿರಿಯಣ್ಣನೆಂದು ಭಾವಿಸಿರಿ ಎಂದು ತಮ್ಮ ಪುತ್ರರಿಗೆ ತಿಳಿಸಿದನು. ॥ ೩೦ ॥ ಇವನು – ಹರಿಶ್ಚಂದ್ರನ ಯಜ್ಞದಲ್ಲಿ ಯಜ್ಞಪಶುವಾಗಿ ಕೊಂಡುತಂದ ಪ್ರಸಿದ್ಧ ಭೃಗುವಂಶೀಯ ಶುನಃಶೇಪನಾಗಿದ್ದನು. ವಿಶ್ವಾಮಿತ್ರರು ಪ್ರಜಾಪತಿ, ವರುಣ ಮೊದಲಾದ ದೇವತೆಗಳನ್ನು ಸ್ತುತಿಸಿ ಅವನನ್ನು ಪಾಶಮುಕ್ತಗೊಳಿಸಿದ್ದರು. ದೇವತೆಗಳ ಯಜ್ಞದಲ್ಲಿ ಈ ಶುನಃಶೇಪನೇ ದೇವತೆಗಳ ಮೂಲಕ ವಿಶ್ವಾಮಿತ್ರರಿಗೆ ಕೊಡಲ್ಪಟ್ಟಿದ್ದನು. ಆದ್ದರಿಂದ 'ದೇವೈಃ ರಾತಃ' ಈ ವ್ಯುತ್ಪತ್ತಿಗನುಸಾರ ಗಾಧಿವಂಶದಲ್ಲಿ ಇವನು ದೇವರಾತನೆಂಬ ಹೆಸರಿನಿಂದ ವಿಖ್ಯಾತನಾದನು. ॥ ೩೧-೩೨ ॥ ವಿಶ್ವಾಮಿತ್ರರ ಪುತ್ರರಲ್ಲಿ ಹಿರಿಯರಾಗಿದ್ದವರಿಗೆ ಶುನಃಶೇಪನನ್ನು ಹಿರಿಯಣ್ಣನೆಂದು ತಿಳಿಯುವ ಮಾತು ರುಚಿಸಲಿಲ್ಲ. ಇದರಿಂದ ವಿಶ್ವಾಮಿತ್ರರು ಕ್ರೋಧಗೊಂಡು – 'ಎಲೈ ದುಷ್ಟರಿರಾ! ನೀವೆಲ್ಲರೂ ಮ್ಲೇಚ್ಛರಾಗಿರಿ' ಎಂದು ಶಾಪಕೊಟ್ಟರು. ॥ ೩೩ ॥ ಹೀಗೆ ನಲವತ್ತೊಂಭತ್ತು ಸಹೋದರರು ಮ್ಲೇಚ್ಛರಾದಾಗ ವಿಶ್ವಾಮಿತ್ರರ ಮಧ್ಯಮ ಮಗನಾದ ಮಧುಚ್ಛಂದನು ತನ್ನಿಂದ ಕಿರಿಯವರಾದ ಐವತ್ತು ಮಂದಿ ತಮ್ಮಂದಿರೊಡನೆ – 'ಅಪ್ಪಾ! ನೀವು ನಮಗೆ ಹೇಗೆ ಅಪ್ಪಣೆ ಕೊಡಿಸುವಿರೋ ಹಾಗೆಯೇ ನಾವು ನಡೆಯಲು ಸಿದ್ಧರಿದ್ದೇವೆ' ಎಂದು ಹೇಳಿದನು. ॥ ೩೪ ॥ ಹೀಗೆ ಹೇಳಿ ಮಧುಚ್ಛಂದನು ಮಂತ್ರದ್ರಷ್ಟಾ ಶುನಃಶೇಪನನ್ನು ಹಿರಿಯಣ್ಣನೆಂದು ಸ್ವೀಕರಿಸಿ ಹೇಳಿದನು – ನಾವೆಲ್ಲರೂ ನಿನ್ನ ಅನುಯಾಯಿಗಳಾದ ಸಣ್ಣ ತಮ್ಮಂದಿರಾಗಿದ್ದೇವೆ. ಆಗ ವಿಶ್ವಾಮಿತ್ರರು ತಮ್ಮ ಆಜ್ಞಾಕಾರಿಯಾದ ಪುತ್ರರಲ್ಲಿ ಹೇಳಿದನು – 'ನೀವೆಲ್ಲರೂ ನನ್ನ ಮಾತನ್ನು ಮನ್ನಿಸಿ ನನ್ನ ಸಮ್ಮಾನವನ್ನು ರಕ್ಷಿಸಿದಿರಿ. ಆದರಿಂದ ನಿಮ್ಮಂತಹ ಸತ್ಪುತ್ರರನ್ನು ಪಡೆದ ನಾನು ಧನ್ಯನಾದೆನು. 'ನಿಮಗೂ ಸತ್ಪುತ್ರರಾಗಲಿ' ಎಂದು ನಾನು ನಿಮ್ಮನ್ನು ಆಶೀರ್ವದಿಸುತ್ತೇನೆ. ॥ ೩೫ । ನನ್ನ ಪ್ರೀತಿಯ ಮಕ್ಕಳಿರಾ! ಈ ದೇವರಾತ ಶುನಃಶೇಪನೂ ನಿಮ್ಮ ಗೋತ್ರದವನೇ ಆಗಿರುವನು. ನೀವೆಲ್ಲರೂ ಇವನ ಆಜ್ಞೆಯಂತೆ ನಡೆಯಿರಿ. ಪರೀಕ್ಷಿತನೇ! ವಿಶ್ವಾಮಿತ್ರರಿಗೆ ಅಷ್ಟಕ, ಹಾರೀತ, ಜಯ, ಕ್ರತುಮಾನ್ ಮೊದಲಾದ ಇನ್ನೂ ಅನೇಕ ಪುತ್ರರಿದ್ದರು. ॥ ೩೬ ॥ ಈ ಪ್ರಕಾರ ವಿಶ್ವಾಮಿತ್ರರ ಸಂತಾನದಿಂದ ಕೌಶಿಕಗೋತ್ರದಲ್ಲಿ ಅನೇಕ ಭೇದಗಳಾದವು ಮತ್ತು ದೇವರಾತನನ್ನು ಹಿರಿಯಣ್ಣನೆಂದು ಭಾವಿಸಿದ್ದರಿಂದ ಅವನ ಪ್ರವರವೂ ಬೇರೆಯಾಯಿತು. ॥ ೩೭ ॥

ಹದಿನಾರನೆಯ ಅಧ್ಯಾಯವು ಮುಗಿಯಿತು. ॥ ೧೬ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ನವಮ ಸ್ಕಂಧೇ
ಷೋಡಶೋಽಧ್ಯಾಯಃ ॥ ೧೬ ॥

ಹದಿನೇಳನೆಯ ಅಧ್ಯಾಯ

ಕ್ಷತ್ರವೃದ್ಧ, ರಜಿ ಮೊದಲಾದ ರಾಜರ ವಂಶದ ವರ್ಣನೆ

ಶ್ರೀಶುಕ ಉವಾಚ

ಯಃ ಪುರೂರವಸಃ ಪುತ್ರ ಆಯುಸ್ತಸ್ಯಾಭವನ್ಸುತಾಃ ।
ನಹುಷಃ ಕ್ಷತ್ರವೃದ್ಧಶ್ಚ ರಜೀ ರಂಭಶ್ಚ ವೀರ್ಯವಾನ್ ॥ ೧ ॥

ಅನೇನಾ ಇತಿ ರಾಜೇಂದ್ರ ಶೃಣು ಕ್ಷತ್ರವೃಧೋಽನ್ವಯಮ್ ।
ಕ್ಷತ್ರವೃದ್ಧಸುತಸ್ಯಾಸನ್ಸುಹೋತ್ರಸ್ಯಾತ್ಮಜಾಸ್ತ್ರಯಃ ॥ ೨ ॥

ಕಾಶ್ಯಃ ಕುಶೋ ಗೃತ್ಸಮದ ಇತಿ ಗೃತ್ಸಮದಾದಭೂತ್ ।
ಶುನಕಃ ಶೌನಕೋ ಯಸ್ಯ ಬಹ್ವೃಚಪ್ರವರೋ ಮುನಿಃ ॥ ೩ ॥

ಕಾಶ್ಯಸ್ಯ ಕಾಶಿಸ್ತತ್ಪುತ್ರೋ ರಾಷ್ಟ್ರೋ ದೀರ್ಘತಮಃಪಿತಾ ।
ಧನ್ವಂತರಿರ್ದೀರ್ಘತಮ ಆಯುರ್ವೇದಪ್ರವರ್ತಕಃ ॥ ೪ ॥

ಯಜ್ಞಭುಗ್ವಾಸುದೇವಾಂಶಃ ಸ್ಮೃತಮಾತ್ರಾರ್ತಿನಾಶನಃ ।
ತತ್ಪುತ್ರಃ ಕೇತುಮಾನಸ್ಯ ಜಜ್ಞೇ ಭೀಮರಥಸ್ತತಃ ॥ ೫ ॥

ದಿವೋದಾಸೋ ದ್ಯುಮಾಂಸ್ತಸ್ಮಾತ್ಪ್ರತರ್ದನ ಇತಿ ಸ್ಮೃತಃ ।
ಸ ಏವ ಶತ್ರುಜಿದ್ವತ್ಸ ಋತಧ್ವಜ ಇತೀರಿತಃ ।
ತಥಾ ಕುವಲಯಾಶ್ವೇತಿ ಪ್ರೋಕ್ತೋಽಲರ್ಕಾದಯಸ್ತತಃ ॥ ೬ ॥

ಷಷ್ಟಿಂ ವರ್ಷಸಹಸ್ರಾಣಿ ಷಷ್ಟಿಂ ವರ್ಷಶತಾನಿ ಚ ।
ನಾಲರ್ಕಾದಪರೋ ರಾಜನ್ಮೇದಿನೀಂ ಬುಭುಜೇ ಯುವಾ ॥ ೭ ॥

ಅಲರ್ಕಾತ್ಸಂತತಿಸ್ತಸ್ಮಾತ್ಸುನೀಥೋಽಥ ಸುಕೇತನಃ ।
ಧರ್ಮಕೇತುಃ ಸುತಸ್ತಸ್ಮಾತ್ ಸತ್ಯಕೇತುರಜಾಯತ ॥ ೮ ॥

ಧೃಷ್ಟಕೇತುಃ ಸುತಸ್ತಸ್ಮಾತ್ಸುಕುಮಾರಃ ಕ್ಷಿತೀಶ್ವರಃ ।
ವೀತಿಹೋತ್ರಸ್ಯ ಭರ್ಗೋಽತೋ ಭಾರ್ಗಭೂಮಿರಭೂನ್ನೃಪಃ ॥ ೯ ॥

ಇತೀಮೇ ಕಾಶಯೋ ಭೂಪಾಃ ಕ್ಷತ್ರವೃದ್ಧಾನ್ವಯಾಯಿನಃ ।
ರಂಭಸ್ಯ ರಭಸಃ ಪುತ್ರೋ ಗಂಭೀರಶ್ಚಾಕ್ರಿಯಸ್ತತಃ ॥ ೧೦ ॥

ತಸ್ಯ ಕ್ಷೇತ್ರೇ ಬ್ರಹ್ಮ ಜಜ್ಞೇ ಶೃಣು ವಂಶಮನೇನಸಃ ।
ಶುದ್ಧಸ್ತತಃ ಶುಚಿಸ್ತಸ್ಮಾತ್ತ್ರಿಕಕುದ್ಧರ್ಮಸಾರಥಿಃ ॥ ೧೧ ॥

ತತಃ ಶಾಂತರಯೋ ಜಜ್ಞೇ ಕೃತಕೃತ್ಯಃ ಸ ಆತ್ಮವಾನ್ ।
ರಜೇಃ ಪಂಚಶತಾನ್ಯಾಸನ್ಪುತ್ರಾಣಾಮಮಿತೌಜಸಾಮ್ ॥ ೧೨ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ! ಪುರೂರವನಿಗೆ ಆಯುವೆಂಬ ಓರ್ವ ಮಗನಿದ್ದನು. ಅವನಿಗೆ ನಹುಷ, ಕ್ಷತ್ರವೃದ್ಧ, ರಜಿ, ಶಕ್ತಿಶಾಲಿ ರಂಭ ಮತ್ತು ಅನೇನಾ ಎಂಬ ಐದು ಮಕ್ಕಳಿದ್ದರು. ಈಗ ಕ್ಷತ್ರವೃದ್ಧನ ವಂಶವನ್ನು ವಿವರಿಸುತ್ತೇನೆ. ಕೇಳು. ಕ್ಷತ್ರವೃದ್ಧನಿಗೆ ಸುಹೋತ್ರನೆಂಬ ಪುತ್ರನಿದ್ದನು. ಸುಹೋತ್ರನಿಗೆ – ಕಾಶ್ಯ, ಕುಶ, ಗೃತ್ಸಮದರೆಂಬ ಮೂವರು ಪುತ್ರರಾದರು. ಗೃತ್ಸಮದನಿಗೆ ಶುನಕ ಹುಟ್ಟಿದನು. ಈ ಶುನಕನ ಪುತ್ರನೇ ಋಗ್ವೇದಿಗಳಲ್ಲಿ ಶ್ರೇಷ್ಠಮುನಿವರ ಶೌನಕನು. ॥ ೧-೩ ॥ ಕಾಶ್ಯನ ಪುತ್ರ ಕಾಶಿ. ಕಾಶಿಗೆ ರಾಷ್ಟ್ರ, ರಾಷ್ಟ್ರನಿಗೆ ದೀರ್ಘತಮಾ ಮತ್ತು ದೀರ್ಘತಮನಿಗೆ ಧನ್ವಂತರಿ ಎಂಬ ಪುತ್ರ ಹುಟ್ಟಿದನು. ಇವನೇ ಆಯುರ್ವೇದದ ಪ್ರವರ್ತಕನಾಗಿದ್ದಾನೆ. ॥ ೪ ॥ ಇವನು ಯಜ್ಞಭಾಗದ ಭೋಕ್ತನೂ ಭಗವಾನ್ ವಾಸುದೇವನ ಅಂಶನಾಗಿರುವನು. ಇವನ ಸ್ಮರಣಮಾತ್ರದಿಂದಲೇ ಎಲ್ಲ ಪ್ರಕಾರದ ರೋಗಗಳು ದೂರವಾಗುತ್ತದೆ. ಧನ್ವಂತರಿಗೆ ಕೇತುಮಂತ ಪುತ್ರನಾದನು. ಕೇತುಮಂತನಿಗೆ ಭೀಮರಥನು ಪುತ್ರನಾದನು. ॥ ೫ ॥ ಭೀಮರಥನಿಗೆ ದಿವೋದಾಸನು. ದಿವೋದಾಸನಿಗೆ ದ್ಯುಮಾನ್ ಆದನು. ಇವನಿಗೆ ಪ್ರತರ್ದನ ಎಂಬ ಇನ್ನೊಂದು ಹೆಸರೂ ಇದೆ. ಈ ದ್ಯುಮಂತನೇ ಶತ್ರುಜಿತ್, ವತ್ಸ, ಋತಧ್ವಜ ಮತ್ತು ಕುವಲಯಾಶ್ವ ಎಂಬ ಹೆಸರುಗಳಿಂದಲೂ ಪ್ರಸಿದ್ಧನಾಗಿದ್ದಾನೆ. ದ್ಯುಮಂತನಿಗೆ ಅಲರ್ಕನೇ ಮೊದಲಾದ ಪುತ್ರರಾದರು. ॥ ೬ ॥ ಪರೀಕ್ಷಿತನೇ! ಅಲರ್ಕನಲ್ಲದೆ ಬೇರೆ ಯಾವ ರಾಜನೂ ಅರವತ್ತಾರು ಸಾವಿರ ವರ್ಷಗಳವರೆಗೆ ಯುವಕನಾಗಿದ್ದು ರಾಜ್ಯವನ್ನು ಆಳಲಿಲ್ಲ. ॥ ೭ ॥ ಅಲರ್ಕನ ಪುತ್ರನು ಸಂತತಿ. ಸಂತತಿಗೆ ಸುನೀಥ, ಸುನೀಥನಿಗೆ ಸುಕೇತನ, ಸುಕೇತನನಿಗೆ ಧರ್ಮಕೇತು, ಧರ್ಮಕೇತುವಿಗೆ ಸತ್ಯಕೇತು ಹುಟ್ಟಿದನು. ॥ ೮ ॥ ಸತ್ಯಕೇತುವಿಗೆ ಧೃಷ್ಟಕೇತು. ಧೃಷ್ಟಕೇತುವಿನಿಂದ ರಾಜಾ ಸುಕುಮಾರನು, ಸುಕುಮಾರನಿಂದ ವೀತಿಹೋತ್ರ, ವೀತಿಹೋತ್ರನಿಂದ ಭರ್ಗ ಮತ್ತು ಭರ್ಗನಿಂದ ರಾಜಾ ಭಾರ್ಗಭೂಮಿಯ ಜನ್ಮವಾಯಿತು. ॥ ೯ ॥

ಇವರೆಲ್ಲರೂ ಕ್ಷತ್ರವೃದ್ಧನ ವಂಶದಲ್ಲಿ ಕಾಶಿಯಿಂದ ಉತ್ಪನ್ನರಾದ ರಾಜರು. ರಂಭನಿಗೆ ರಭಸನೆಂಬ ಪುತ್ರನಿದ್ದನು. ಅವನಿಂದ ಗಂಭೀರ, ಗಂಭೀರನಿಂದ ಅಕ್ರಿಯನ ಜನ್ಮವಾಯಿತು. ॥ ೧೦ ॥ ಅಕ್ರಿಯನ ಪತ್ನಿಯಿಂದ ಬ್ರಾಹ್ಮಣವಂಶವು ನಡೆಯಿತು. ಈಗ ಅನೇನಾ ಇವನ ವಂಶವನ್ನು ಕೇಳು. ಅನೇನನಿಗೆ ಶುದ್ಧನೆಂಬ ಪುತ್ರನಿದ್ದನು. ಶುದ್ಧನಿಗೆ ಶುಚಿ, ಶುಚಿಗೆ ತ್ರಿಕಕುದ್, ತ್ರಿಕಕುದನಿಗೆ ಧರ್ಮಸಾರಥಿ ಹುಟ್ಟಿದನು. ॥ ೧೧ ॥ ಧರ್ಮಸಾರಥಿಗೆ ಶಾಂತರಯನೆಂಬ ಪುತ್ರನಿದ್ದನು. ಅವನು ಆತ್ಮಜ್ಞಾನಿಯಾದ್ದರಿಂದ ಕೃತಕೃತ್ಯನಾಗಿದ್ದನು. ಆದ್ದರಿಂದ ಅವನಿಗೆ ಸಂತಾನದ ಇಚ್ಛೆಯಿರಲಿಲ್ಲ. ಪರೀಕ್ಷಿತನೇ! ಆಯುವಿನ ಪುತ್ರ ರಜಿಗೆ ಅತ್ಯಂತ ತೇಜಸ್ವೀ ಐದುನೂರು ಪುತ್ರರಿದ್ದರು. ॥ ೧೨ ॥

ದೇವೈರಭ್ಯರ್ಥಿತೋ ದೈತ್ಯಾನ್ ಹತ್ವೇಂದ್ರಾಯಾದದಾದ್ದಿವಮ್ ।
ಇಂದ್ರಸ್ತಸ್ಮೈ ಪುನರ್ದತ್ತ್ವಾ ಗೃಹೀತ್ವಾ ಚರಣೌ ರಜೇಃ
॥ ೧೩ ॥

ಆತ್ಮಾನಮರ್ಪಯಾಮಾಸ ಪ್ರಹ್ರಾದಾದ್ಯರಿಶಂಕಿತಃ ।
ಪಿತರ್ಯುಪರತೇ ಪುತ್ರಾ ಯಾಚಮಾನಾಯ ನೋ ದದುಃ
॥ ೧೪ ॥

ತ್ರಿವಿಷ್ಟಪಂ ಮಹೇಂದ್ರಾಯ ಯಜ್ಞಭಾಗಾನ್ಸಮಾದದುಃ ।
ಗುರುಣಾ ಹೂಯಮಾನೇಽಗ್ನೌ ಬಲಭಿತ್ತನಯಾನ್ರಜೇಃ
॥ ೧೫ ॥

ಅವಧೀದ್ಭ್ರಂಶಿತಾನ್ ಮಾರ್ಗಾನ್ನ ಕಶ್ಚಿದವಶೇಷಿತಃ ।
ಕುಶಾತ್ಪ್ರತಿಃ ಕ್ಷಾತ್ರವೃದ್ಧಾತ್ಸಂಜಯಸ್ತತ್ಸುತೋ ಜಯಃ
॥ ೧೬ ॥

ತತಃ ಕೃತಃ ಕೃತಸ್ಯಾಪಿ ಜಜ್ಞೇ ಹರ್ಯವನೋ ನೃಪಃ ।
ಸಹದೇವಸ್ತತೋ ಹೀನೋ ಜಯಸೇನಸ್ತು ತತ್ಸುತಃ
॥ ೧೭ ॥

ಸಂಕೃತಿಸ್ತಸ್ಯ ಚ ಜಯಃ ಕ್ಷತ್ರಧರ್ಮಾ ಮಹಾರಥಃ ।
ಕ್ಷತ್ರವೃದ್ಧಾನ್ವಯಾ ಭೂಪಾಃ ಶೃಣು ವಂಶಂ ಚ ನಾಹುಷಾತ್
॥ ೧೮ ॥

ದೇವತೆಗಳ ಪ್ರಾರ್ಥನೆಯಿಂದ ರಜಿಯು ದೈತ್ಯರನ್ನು ವಧಿಸಿ ಇಂದ್ರನಿಗೆ ಸ್ವರ್ಗರಾಜ್ಯವನ್ನು ಕೊಟ್ಟನು. ಆದರೆ ಅವನು ಪ್ರಹ್ಲಾದಾದಿ ತನ್ನ ಶತ್ರುಗಳಿಂದ ಭಯ ಗೊಂಡಿದ್ದನು. ಅದಕ್ಕಾಗಿ ಅವನು ಸ್ವರ್ಗವನ್ನು ಪುನಃ ರಜಿಗೇ ಮರಳಿಸಿದನು. ಅವನ ಕಾಲುಹಿಡಿದು ಅವನಿಗೆ ತನ್ನ ರಕ್ಷಣೆಯ ಹೊಣೆಯನ್ನು ಒಪ್ಪಿಸಿದನು. ರಜಿಯ ಮೃತ್ಯುವಾದಾಗ ಇಂದ್ರನು ಬೇಡಿದರೂ ರಜಿಯ ಪುತ್ರರು ಸ್ವರ್ಗವನ್ನು ಮರಳಿಕೊಡಲಿಲ್ಲ, ಅವರು ಸ್ವತಃ ಯಜ್ಞಗಳ ಭಾಗವನ್ನೂ ಪಡೆಯುತ್ತಿದ್ದರು. ಆಗ ಗುರುಗಳಾದ ಬೃಹಸ್ಪತ್ಯಾಚಾರ್ಯರು ಇಂದ್ರನ ಪ್ರಾರ್ಥನೆಯಂತೆ ಅಭಿಚಾರಿಕ ವಿಧಿಯಿಂದ ಹೋಮವನ್ನು ಮಾಡಿದರು. ಇದರಿಂದ ಅವರು ಧರ್ಮಭ್ರಷ್ಟರಾಗಿ ಹೋದರು. ಆಗ ಇಂದ್ರನು ಅನಾಯಾಸವಾಗಿ ಆ ಎಲ್ಲ ರಜಿಯ ಪುತ್ರರನ್ನು ಕೊಂದುಹಾಕಿದನು. ಅವರಲ್ಲಿ ಯಾರೂ ಉಳಿಯಲಿಲ್ಲ, ಕ್ಷತ್ರವೃದ್ಧನ ಮೊಮ್ಮಗ ಕುಶನಿಂದ ಪ್ರತಿ, ಪ್ರತಿಯಿಂದ ಸಂಜಯ, ಸಂಜಯನಿಂದ ಜಯ ಎಂಬ ಮಗನು ಹುಟ್ಟಿದನು. ॥ ೧೩-೧೬ ॥ ಜಯನಿಂದ ಕೃತ, ಕೃತನಿಂದ ಹರ್ಯವನ, ಹರ್ಯವನನಿಂದ ಸಹದೇವ, ಸಹದೇವ ನಿಂದ ಹೀನ, ಹೀನನಿಂದ ಜಯಸೇನನೆಂಬ ಪುತ್ರನು ಹುಟ್ಟಿದನು. ॥ ೧೭ ॥ ಜಯಸೇನನಿಂದ ಸಂಕೃತಿ, ಸಂಕೃತಿಗೆ ಮಹಾರಥಿ ವೀರ ಶಿರೋಮಣಿ ಜಯನೆಂಬ ಪುತ್ರನಾದನು. ಕ್ಷತ್ರವೃದ್ಧನ ವಂಶ ಪರಂಪರೆಯಲ್ಲಿ ಇಷ್ಟೇ ರಾಜರಾದರು. ಈಗ ನಹುಷನ ವಂಶದ ವರ್ಣನೆಯನ್ನು ಕೇಳು. ॥ ೧೮ ॥

ಹದಿನೇಳನೆಯ ಅಧ್ಯಾಯವು ಮುಗಿಯಿತು. ॥ ೧೭ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ನವಮ ಸ್ಕಂಧೇ
ಚಂದ್ರವಂಶಾನುವರ್ಣನೇ ಸಪ್ತದಶೋಽಧ್ಯಾಯಃ ॥ ೧೭ ॥

ಹದಿನೆಂಟನೆಯ ಅಧ್ಯಾಯ

ಯಯಾತಿಯ ಚರಿತ್ರೆ

ಶ್ರೀಶುಕ ಉವಾಚ

ಯತಿರ್ಯಯಾತಿಃ ಸಂಯಾತಿರಾಯತಿರ್ವಿಯತಿಃ ಕೃತಿಃ ।
ಷಡಿಮೇ ನಹುಷಸ್ಯಾಸನ್ನಿಂದ್ರಿಯಾಣೀವ ದೇಹಿನಃ
॥ ೧ ॥

ರಾಜ್ಯಂ ನೈಚ್ಛದ್ಯತಿಃ ಪಿತ್ರಾ ದತ್ತಂ ತತ್ಪರಿಣಾಮವಿತ್ ।
ಯತ್ರ ಪ್ರವಿಷ್ಟಃ ಪುರುಷ ಆತ್ಮಾನಂ ನಾವಬುಧ್ಯತೇ
॥ ೨ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ! ದೇಹಧಾರಿಗಳಿಗೆ ಆರು ಇಂದ್ರಿಯಗಳು ಇರುವಂತೆ ನಹುಷನಿಗೆ ಯತಿ, ಯಯಾತಿ, ಸಂಯಾತಿ, ಆಯತಿ, ವಿಯತಿ ಮತ್ತು ಕೃತಿ ಗಳೆಂಬ ಆರುಮಂದಿ ಮಕ್ಕಳಿದ್ದರು. ॥ ೧ ॥ ನಹುಷನು ತನ್ನ ಹಿರಿಯಮಗನಾದ ಯತಿಗೆ ರಾಜ್ಯವನ್ನು ಕೊಡಬೇಕೆಂದು ಬಯಸು ತ್ತಿದ್ದನು. ಆದರೆ ಅವನು ಅದನ್ನು ಸ್ವೀಕರಿಸಲಿಲ್ಲ. ಏಕೆಂದರೆ, ಯತಿಯು ರಾಜ್ಯಭಾರವನ್ನು ವಹಿಸಿಕೊಂಡರೆ ಅದರಿಂದ ಉಂಟಾಗುವ ಪರಿಣಾಮವನ್ನು ಚೆನ್ನಾಗಿ ಅರಿತಿದ್ದನು. ರಾಜ್ಯಭಾರ ದಲ್ಲಿ ತೊಡಗಿದ ಮನುಷ್ಯನು ತನ್ನ ಆತ್ಮಸ್ವರೂಪವನ್ನು ಅರಿತುಕೊಳ್ಳ ಲಾರನು. ॥ ೨ ॥

ಪಿತರಿ ಭ್ರಂಶಿತೇ ಸ್ಥಾನಾದಿಂದ್ರಾಣ್ಯಾ ಧರ್ಷಣಾದ್ದ್ವಿಜೈಃ ।
ಪ್ರಾಪಿತೇಽಜಗರತ್ವಂ ವೈ ಯಯಾತಿರಭವನ್ನೃಪಃ ॥ ೩ ॥

ಚತಸೃಷ್ವಾದಿಶದ್ದಿಕ್ಷು ಭ್ರಾತೄನ್ಭ್ರಾತಾ ಯವೀಯಸಃ ।
ಕೃತದಾರೋ ಜುಗೋಪೋರ್ವೀಂ ಕಾವ್ಯಸ್ಯ ವೃಷಪರ್ವಣಃ ॥ ೪ ॥

ರಾಜೋವಾಚ

ಬ್ರಹ್ಮರ್ಷಿರ್ಭಗವಾನ್ಕಾವ್ಯಃ ಕ್ಷತ್ರಬಂಧುಶ್ಚ ನಾಹುಷಃ ।
ರಾಜನ್ಯವಿಪ್ರಯೋಃ ಕಸ್ಮಾದ್ವಿವಾಹಃ ಪ್ರತಿಲೋಮಕಃ ॥ ೫ ॥

ಶ್ರೀಶುಕ ಉವಾಚ

ಏಕದಾ ದಾನವೇಂದ್ರಸ್ಯ ಶರ್ಮಿಷ್ಠಾ ನಾಮ ಕನ್ಯಕಾ ।
ಸಖೀಸಹಸ್ರಸಂಯುಕ್ತಾ ಗುರುಪುತ್ರ್ಯಾ ಚ ಭಾಮಿನೀ ॥ ೬ ॥

ದೇವಯಾನ್ಯಾ ಪುರೋದ್ಯಾನೇ ಪುಷ್ಪಿತದ್ರುಮಸಂಕುಲೇ ।
ವ್ಯಚರತ್ಕಲಗೀತಾಲಿನಲಿನೀಪುಲಿನೇಽಬಲಾ ॥ ೭ ॥

ತಾ ಜಲಾಶಯಮಾಸಾದ್ಯ ಕನ್ಯಾಃ ಕಮಲಲೋಚನಾಃ ।
ತೀರೇ ನ್ಯಸ್ಯ ದುಕೂಲಾನಿ ವಿಜಹ್ರುಃ ಸಿಂಚತೀರ್ಮಿಥಃ ॥ ೮ ॥

ವೀಕ್ಷ್ಯ ವ್ರಜಂತಂ ಗಿರಿಶಂ ಸಹ ದೇವ್ಯಾ ವೃಷಸ್ಥಿತಮ್ ।
ಸಹಸೋತ್ತೀರ್ಯ ವಾಸಾಂಸಿ ಪರ್ಯಧುರ್ವ್ರೀಡಿತಾಃ ಸ್ತ್ರಿಯಃ ॥ ೯ ॥

ಶರ್ಮಿಷ್ಠಾಜಾನತೀ ವಾಸೋ ಗುರುಪುತ್ರ್ಯಾಃ ಸಮವ್ಯಯತ್ ।
ಸ್ವೀಯಂ ಮತ್ವಾ ಪ್ರಕುಪಿತಾ ದೇವಯಾನೀದಮಬ್ರವೀತ್ ॥ ೧೦ ॥

ಅಹೋ ನಿರೀಕ್ಷ್ಯತಾಮಸ್ಯಾ ದಾಸ್ಯಾಃ ಕರ್ಮ ಹ್ಯಸಾಮ್ಪ್ರತಮ್ ।
ಅಸ್ಮದ್ಧಾರ್ಯಂ ಧೃತವತೀ ಶುನೀವ ಹವಿರಧ್ವರೇ ॥ ೧೧ ॥

ಯೈರಿದಂ ತಪಸಾ ಸೃಷ್ಟಂ ಮುಖಂ ಪುಂಸಃ ಪರಸ್ಯ ಯೇ ।
ಧಾರ್ಯತೇ ಯೈರಿಹ ಜ್ಯೋತಿಃ ಶಿವಃ ಪಂಥಾಶ್ಚ ದರ್ಶಿತಃ ॥ ೧೨ ॥

ಇಂದ್ರನ ಪತ್ನಿಯಾದ ಶಚೀದೇವಿಯನ್ನು ಬಯಸಿದ ನಹುಷನನ್ನು ಬ್ರಾಹ್ಮಣರು ಇಂದ್ರಪದವಿಯಿಂದ ತಳ್ಳಿಬಿಟ್ಟರು ಮತ್ತು ಶಾಪವಿತ್ತು ಅಜಗರನನ್ನಾಗಿಸಿದರು. ಆಗ ಯಯಾತಿಯು ರಾಜ್ಯಸಿಂಹಾಸನವನ್ನು ಏರಿದನು. ॥ ೩ ॥ ಯಯಾತಿಯು ತನ್ನ ನಾಲ್ಕು ಸೋದರರನ್ನು ನಾಲ್ಕು ದಿಕ್ಕುಗಳಲ್ಲಿ ಅಧಿಪತಿಗಳನ್ನಾಗಿ ಮಾಡಿದನು. ತಾನು ಸ್ವತಃ ಶುಕ್ರಾಚಾರ್ಯರ ಪುತ್ರಿಯಾದ ದೇವಯಾನಿಯನ್ನೂ ಮತ್ತು ದೈತ್ಯರಾಜನಾದ ವೃಷಪರ್ವನ ಮಗಳಾದ ಶರ್ಮಿಷ್ಠೆಯನ್ನೂ ಪತ್ನಿಯರಾಗಿ ಪರಿಗ್ರಹಿಸಿ ಭೂಮಂಡಲವನ್ನು ಆಳುತ್ತಿದ್ದನು. ॥ ೪ ॥

ಪರೀಕ್ಷಿದ್ರಾಜನು ಕೇಳಿದನು – ಪೂಜ್ಯರೇ! ಮಹಾತ್ಮರಾದ ಶುಕ್ರಾಚಾರ್ಯರು ಬ್ರಾಹ್ಮಣರಾಗಿದ್ದರು. ಯಯಾತಿಯು ಕ್ಷತ್ರಿಯ. ಹೀಗಿದ್ದರೂ ಬ್ರಾಹ್ಮಣಕನ್ಯೆಗೂ ಕ್ಷತ್ರಿಯವರನಿಗೂ ಪ್ರತಿಲೋಮದ ವಿವಾಹವು ಹೇಗೆ ನಡೆಯಿತು? ॥ ೫ ॥

ಶ್ರೀಶುಕಮುನಿಗಳು ಹೇಳಿದರು – ಪರೀಕ್ಷಿತನೇ! ದಾನವ ರಾಜನಾದ ವೃಷಪರ್ವನಿಗೆ ಮಾನಿಸ್ಥೆಯಾದ ಶರ್ಮಿಷ್ಠೆ ಎಂಬ ಮಗಳಿದ್ದಳು. ಅವಳು ಒಂದುದಿನ ಶುಕ್ರಾಚಾರ್ಯರ ಪುತ್ರಿಯಾದ ದೇವಯಾನಿ ಮತ್ತು ಸಾವಿರಾರು ಸಖಿಯರೊಂದಿಗೆ ತನ್ನ ರಾಜಧಾನಿಯ ಶ್ರೇಷ್ಠ ಉದ್ಯಾನವನದಲ್ಲಿ ಅಡ್ಡಾಡುತ್ತಿದ್ದಳು. ಆ ಪುಷ್ಪೋದ್ಯಾನವನದಲ್ಲಿ ಸುಂದರವಾದ ಪುಷ್ಪಗಳಿಂದ ಕೂಡಿದ ಅನೇಕ ವೃಕ್ಷಗಳಿದ್ದುವು. ಅಲ್ಲಿ ಒಂದು ಅಂದವಾದ ಸರೋವರವು ಇದ್ದು, ಅದರಲ್ಲಿ ಕಮಲಗಳು ಅರಳಿದ್ದುವು. ಆ ಕಮಲಗಳಲ್ಲಿ ದುಂಬಿಗಳು ಕುಳಿತು ಸುಮಧುರವಾಗಿ ಗುಂಜಾರವ ಮಾಡುತ್ತಿದ್ದುವು. ಅವುಗಳ ಇಂಚರದಿಂದ ಸರೋವರದ ದಡಗಳು ಪ್ರತಿಧ್ವನಿಸುತ್ತಿದ್ದುವು. ॥ ೬-೭ ॥ ಸರೋವರದ ಸಮೀಪಕ್ಕೆ ಸಾರಿದ ಆ ಸುಂದರಿಯರು ತಮ್ಮ-ತಮ್ಮ ವಸ್ತ್ರಗಳನ್ನು ಸರೋವರದ ದಡದಲ್ಲಿ ಬಿಚ್ಚಿಟ್ಟು ನೀರಿಗಿಳಿದು ಒಬ್ಬರು ಮತ್ತೊಬ್ಬರ ಮೇಲೆ ನೀರನ್ನೆರಚುತ್ತಾ ಜಲಕ್ರೀಡೆಯಾಡುತ್ತಿದ್ದರು. ॥ ೮ ॥ ಅದೇ ಸಮಯದಲ್ಲಿ ಆ ಕಡೆಯಿಂದ ಪಾರ್ವತಿದೇವಿಯೊಂದಿಗೆ ನಂದಿಯನ್ನೇರಿ ಬರುತ್ತಿದ್ದ ಭಗವಾನ್ ಶಂಕರನನ್ನು ಆ ಕನ್ಯೆಯರು ನೋಡಿದರು. ಪರಶಿವನನ್ನು ನೋಡುತ್ತಲೇ ನಾಚಿಕೆಯಿಂದ ಮುದುಡಿಹೋದ ಲಲನೆಯರು ಮೇಲೆ ಬಂದು ಲಗುಬಗೆಯಿಂದ ವಸ್ತ್ರಗಳನ್ನು ಉಟ್ಟುಕೊಂಡರು. ॥ ೯ ॥ ಅವಸರದ ಪರಿಸ್ಥಿತಿಯಲ್ಲಿ ಶರ್ಮಿಷ್ಠೆಯು ಅರಿಯದೆ ದೇವಯಾನಿಯ ವಸ್ತ್ರವನ್ನು ತೊಟ್ಟುಕೊಂಡಳು. ಇದರಿಂದ ದೇವಯಾನಿಯು ಕ್ರೋಧದಿಂದ ಕಿಡಿ-ಕಿಡಿಯಾಗಿ ಶರ್ಮಿಷ್ಠೆಯನ್ನು ಮೂದಲಿಸುತ್ತಾ ಹೇಳಿದಳು – ॥ ೧೦ ॥ ಸಖಿಯರೇ! ಈ ದಾಸಿಯು ಎಂತಹ ಅನುಚಿತವಾದ ಕಾರ್ಯವನ್ನು ಮಾಡಿರುವಳೆಂಬುದನ್ನು ನೋಡಿರಲ್ಲ! ಅಯ್ಯೋ! ನಾಯಿಯು ಯಜ್ಞದ ಹವಿಸ್ಸನ್ನು ತಿಂದುಹಾಕುವಂತೆ ನಾವು ಧರಿಸಬೇಕಾದ ವಸ್ತ್ರವನ್ನು ಈಕೆ ಧರಿಸಿದ್ದಾಳಲ್ಲ! ॥ ೧೧ ॥ ಯಾವ ಬ್ರಾಹ್ಮಣರು ತಮ್ಮ ತಪೋಬಲದಿಂದ ಈ ಪ್ರಪಂಚವನ್ನು ಸೃಷ್ಟಿಸಿರುವರೋ, ಯಾರು ಪರಮಪುರುಷ ಪರಮಾತ್ಮನ ಮುಖರೂಪರಾಗಿದ್ದಾರೋ, ಯಾರು ತಮ್ಮ ಹೃದಯದಲ್ಲಿ ನಿರಂತರವಾಗಿ ಜ್ಯೋತಿರ್ಮಯ ಪರಮಾತ್ಮನನ್ನು

ಯಾನ್ವಂದನ್ತ್ಯುಪತಿಷ್ಠಂತೇ ಲೋಕನಾಥಾಃ ಸುರೇಶ್ವರಾಃ ।
ಭಗವಾನಪಿ ವಿಶ್ವಾತ್ಮಾ ಪಾವನಃ ಶ್ರೀನಿಕೇತನಃ
॥ ೧೩ ॥

ವಯಂ ತತ್ರಾಪಿ ಭೃಗವಃ ಶಿಷ್ಯೋಽಸ್ಯಾ ನಃ ಪಿತಾಸುರಃ ।
ಅಸ್ಮದ್ಧಾರ್ಯಂ ಧೃತವತೀ ಶೂದ್ರೋ ವೇದಮಿವಾಸತೀ
॥ ೧೪ ॥

ಏವಂ ಕ್ಷಿಪಂತೀಂ ಶರ್ಮಿಷ್ಠಾ ಗುರುಪುತ್ರೀಮಭಾಷತ ।
ರುಷಾ ಶ್ವಸಂತ್ಯುರಂಗೀವ ಧರ್ಷಿತಾ ದಷ್ಟದಚ್ಛದಾ
॥ ೧೫ ॥

ಆತ್ಮವೃತ್ತಮವಿಜ್ಞಾಯ ಕತ್ಥಸೇ ಬಹು ಭಿಕ್ಷುಕಿ ।
ಕಿಂ ನ ಪ್ರತೀಕ್ಷಸೇಽಸ್ಮಾಕಂ ಗೃಹಾನ್ಬಲಿಭುಜೋ ಯಥಾ
॥ ೧೬ ॥

ಏವಂವಿಧೈಃ ಸುಪರುಷೈಃ ಕ್ಷಿಪ್ತ್ವಾಽಽಚಾರ್ಯಸುತಾಂ ಸತೀಮ್ ।
ಶರ್ಮಿಷ್ಠಾ ಪ್ರಾಕ್ಷಿಪತ್ಕೂಪೇ ವಾಸ ಆದಾಯ ಮನ್ಯುನಾ
॥ ೧೭ ॥

ತಸ್ಯಾಂ ಗತಾಯಾಂ ಸ್ವಗೃಹಂ ಯಯಾತಿರ್ಮೃಗಯಾಂ ಚರನ್ ।
ಪ್ರಾಪ್ತೋ ಯದೃಚ್ಛಯಾ ಕೂಪೇ ಜಲಾರ್ಥೀ ತಾಂ ದದರ್ಶ ಹ
॥ ೧೮ ॥

ದತ್ತ್ವಾ ಸ್ವಮುತ್ತರಂ ವಾಸಸ್ತಸ್ಯೈ ರಾಜಾ ವಿವಾಸಸೇ ।
ಗೃಹೀತ್ವಾ ಪಾಣಿನಾ ಪಾಣಿಮುಜ್ಜಹಾರ ದಯಾಪರಃ
॥ ೧೯ ॥

ತಂ ವೀರಮಾಹೌಶನಸೀ ಪ್ರೇಮನಿರ್ಭರಯಾ ಗಿರಾ ।
ರಾಜಂಸ್ತ್ವಯಾ ಗೃಹೀತೋ ಮೇ ಪಾಣಿಃ ಪರಪುರಂಜಯ
॥ ೨೦ ॥

ಹಸ್ತಗ್ರಾಹೋಽಪರೋ ಮಾ ಭೂದ್ಗೃಹೀತಾಯಾಸ್ತ್ವಯಾ ಹಿ ಮೇ ।
ಏಷ ಈಶಕೃತೋ ವೀರ ಸಂಬಂಧೋ ನೌ ನ ಪೌರುಷಃ ।
ಯದಿದಂ ಕೂಪಮಗ್ನಾಯಾ ಭವತೋ ದರ್ಶನಂ ಮಮ
॥ ೨೧ ॥

ಧರಿಸಿಕೊಂಡಿರುವರೋ, ಯಾರು ಸಮಸ್ತ ಪ್ರಾಣಿಗಳಿಗಾಗಿ ಶ್ರೇಯಸ್ಸಿಗಾಗಿ ವೈದಿಕಮಾರ್ಗವನ್ನು ನಿರ್ದೇಶಿಸಿರುವರೋ, ಯಾರ ಪಾದಕಮಲಗಳಿಗೆ ಸಮಸ್ತ ಲೋಕಪಾಲರೂ, ಬ್ರಹ್ಮೇಂದ್ರಾದಿಗಳೂ ವಂದಿಸುತ್ತಾ ಅವರ ಸೇವೆಯಲ್ಲಿ ನಿರತರಾಗಿರುವರೋ, ಲಕ್ಷ್ಮೀದೇವಿಗೆ ಏಕಮಾತ್ರ ಆಶ್ರಯನಾದ ಪರಮ ಪಾವನ ವಿಶ್ವಾತ್ಮಾ ಭಗವಂತನೂ ಕೂಡ ವಂದಿಸಿ, ಸ್ತುತಿಸುತ್ತಿರುವನೋ, ಅಂತಹ ಬ್ರಾಹ್ಮಣರಲ್ಲಿ ನಾವು ಸರ್ವಶ್ರೇಷ್ಠ ಭೃಗುವಂಶೀಯರಾಗಿದ್ದೇವೆ. ಇವಳ ತಂದೆಯಾದರೋ ಅಸುರನಾಗಿದ್ದು, ನಮ್ಮ ಶಿಷ್ಯನಾಗಿದ್ದಾನೆ. ಹೀಗಿದ್ದರೂ ಈ ದುಷ್ಟೆಯು ಶೂದ್ರನು ವೇದವನ್ನು ಓದುವಂತೆ ನಮ್ಮ ಬಟ್ಟೆಗಳನ್ನು ಉಟ್ಟುಕೊಂಡಿರುವಳಲ್ಲ ॥ ೧೨-೧೪ ॥ ದೇವಯಾನಿಯು ಹೀಗೆ ಬಯ್ಯಕೊಡಗಿದಾಗ ಶರ್ಮಿಷ್ಠೆಯು ಕ್ರೋಧದಿಂದ ಕಿಡಿ-ಕಿಡಿಯಾಗಿ, ಏಟುತಿಂದ ಸರ್ಪಿಣಿಯು ಬುಸುಗುಟ್ಟುವಂತೆ ನಿಟ್ಟುಸಿರು ಬಿಡುತ್ತಿದ್ದಳು. ತುಟಿಯನ್ನು ಕಡಿಯುತ್ತಾ ಇಂತೆಂದಳು - ॥ ೧೫ ॥ ಎಲೆಗೆ ಭಿಕ್ಷುಕಿಯೇ ! ಮೊದಲು ನಿನ್ನ ಯೋಗ್ಯತೆಯೇನೆಂಬುದನ್ನು ಅರಿತುಕೊಳ್ಳದೆ ಬಡ ಬಡಿಸುತ್ತಿರುವೆಯಲ್ಲ? ಕಾಗೆಗಳೂ, ನಾಯಿಗಳೂ ರೊಟ್ಟಿಯ ಚೂರಿಗಾಗಿ ನಮ್ಮ ಅರಮನೆಯ ಬಾಗಿಲಲ್ಲಿ ಕಾಯುವಂತೆ ನೀವೂ ಕೂಡ ನಮ್ಮ ಅರಮನೆಯ ಬಾಗಿಲಿಗೆ ಬಂದು ಕಾಯುತ್ತಿರಲಿಲ್ಲವೇ ? ॥ ೧೬ ॥ ಶರ್ಮಿಷ್ಠೆಯು ಇಂತಹ ಕಟುನುಡಿಗಳಿಂದ ಆಚಾರ್ಯಪುತ್ರಿಯಾದ ದೇವಯಾನಿಯನ್ನು ತಿರಸ್ಕರಿಸಿ, ನಿಂದಿಸುತ್ತಾ, ಕೋಪಾವಿಷ್ಟಳಾಗಿ ದೇವಯಾನಿಯ ವಸ್ತ್ರಗಳನ್ನು ಕಿತ್ತು ಕೊಂಡು ಅವಳನ್ನು ಬಾವಿಯಲ್ಲಿ ತಳ್ಳಿಬಿಟ್ಟಳು. ॥ ೧೭ ॥

ಶರ್ಮಿಷ್ಠೆಯು ಹೊರಟುಹೋದ ಬಳಿಕ ಕಾಲ-ಕರ್ಮ ಸಂಯೋಗದಿಂದ ಅದೇ ಸ್ಥಳಕ್ಕೆ ಯಯಾತಿಯು ಬೇಟೆಯಾಡಲು ಬಂದನು. ನೀರನ್ನು ಅಪೇಕ್ಷಿಸಿದ್ದ ರಾಜನು ನೀರಿಗಾಗಿ ಬಾವಿಯಲ್ಲಿ ಇಣಿಕಿ ನೋಡಿದಾಗ ಅಲ್ಲಿ ವಿವಸ್ತ್ರಳಾಗಿದ್ದ ದೇವಯಾನಿಯನ್ನು ನೋಡಿದನು. ॥ ೧೮ ॥ ಆಗ ಅವಳು ವಸ್ತ್ರಹೀನೆಯಾದ್ದರಿಂದ ತನ್ನ ಉತ್ತರೀಯವನ್ನೇ ಆಕೆಗೆ ಇತ್ತು ದಯೆಯಿಂದ ತನ್ನ ಕೈಯಿಂದ ಆಕೆಯ ಕೈಹಿಡಿದು ಆಕೆಯನ್ನು ಮೇಲಕ್ಕೆ ಎತ್ತಿಕೊಂಡನು. ॥ ೧೯ ॥ ಅದರಿಂದ ದೇವಯಾನಿಯ ಮನಸ್ಸಿನಲ್ಲಿ ಆತನಲ್ಲಿ ಪ್ರೇಮ ವಂಕುರಿಸಿತು. ಪ್ರೇಮಪೂರ್ಣವಾದ ಸುಮಧುರವಾದ ಮಾತಿನಿಂದ ವೀರ ಯಯಾತಿಯಲ್ಲಿ ಹೀಗೆಂದಳು - ವೀರಶಿರೋಮಣಿಯಾದ ರಾಜನೇ ! ನೀನಿಂದು ನನ್ನ ಕೈಯನ್ನು ಹಿಡಿದುಕೊಂಡೆ. ನೀನು ಪಾಣಿಗ್ರಹಣಮಾಡಿದ ಈ ಕೈಯನ್ನು ಬೇರೆ ಯಾರೂ ಹಿಡಿಯದಿರಲಿ. ವೀರಶ್ರೇಷ್ಠನೇ ! ಬಾವಿಗೆ ಬಿದ್ದದ್ದರಿಂದ ನನಗೆ ಆಚಾನಕವಾಗಿ ನಿಮ್ಮ ದರ್ಶನವಾಯಿತು. ಇದು ಭಗವಂತನೇ ಮಾಡಿದ ಸಂಬಂಧವೆಂದು ತಿಳಿಯಬೇಕು. ಇದರಲ್ಲಿ ದೈವವಲ್ಲದೆ ನಮ್ಮದಾಗಲೀ ಅಥವಾ ಬೇರೆಯಾರದ್ದಾಗಲೀ ಯಾವುದೇ ಪ್ರಯತ್ನವು ಇಲ್ಲ. ॥ ೨೦-೨೧ ॥

ನ ಬ್ರಾಹ್ಮಣೋ ಮೇ ಭವಿತಾ ಹಸ್ತಗ್ರಾಹೋ ಮಹಾಭುಜ ।
ಕಚಸ್ಯ ಬಾರ್ಹಸ್ಪತ್ಯಸ್ಯ ಶಾಪಾದ್ಯಮಶಪಂ ಪುರಾ ॥ ೨೨ ॥

ಯಯಾತಿರನಭಿಪ್ರೇತಂ ದೈವೋಪಹೃತಮಾತ್ಮನಃ ।
ಮನಸ್ತು ತದ್ಗತಂ ಬುದ್ಧ್ವಾ ಪ್ರತಿಜಗ್ರಾಹ ತದ್ವಚಃ ॥ ೨೩ ॥

ಗತೇ ರಾಜನಿ ಸಾ ವೀರೇ ತತ್ರ ಸ್ಮ ರುದತೀ ಪಿತುಃ ।
ನ್ಯವೇದಯತ್ತತಃ ಸರ್ವಮುಕ್ತಂ ಶರ್ಮಿಷ್ಠಯಾ ಕೃತಮ್ ॥ ೨೪ ॥

ದುರ್ಮನಾ ಭಗವಾನ್ಕಾವ್ಯಃ ಪೌರೋಹಿತ್ಯಂ ವಿಗರ್ಹಯನ್ ।
ಸ್ತುವನ್ವೃತ್ತಿಂ ಚ ಕಾಪೋತೀಂ ದುಹಿತ್ರಾ ಸ ಯಯೌ ಪುರಾತ್ ॥ ೨೫ ॥

ವೃಷಪರ್ವಾ ತಮಾಜ್ಞಾಯ ಪ್ರತ್ಯನೀಕವಿವಕ್ಷಿತಮ್ ।
ಗುರುಂ ಪ್ರಸಾದಯನ್ಮೂರ್ಧ್ನಾ ಪಾದಯೋಃ ಪತಿತಃ ಪಥಿ ॥ ೨೬ ॥

ಕ್ಷಣಾರ್ಧಮನ್ಯುರ್ಭಗವಾನ್ ಶಿಷ್ಯಂ ವ್ಯಾಚಷ್ಟ ಭಾರ್ಗವಃ ।
ಕಾಮೋಽಸ್ಯಾಃ ಕ್ರಿಯತಾಂ ರಾಜನ್ನೈನಾಂ ತ್ಯಕ್ತುಮಿಹೋತ್ಸಹೇ ॥ ೨೭ ॥

ತಥೇತ್ಯವಸ್ಥಿತೇ ಪ್ರಾಹ ದೇವಯಾನೀ ಮನೋಗತಮ್ ।
ಪಿತ್ರಾ ದತ್ತಾ ಯತೋ ಯಾಸ್ಯೇ ಸಾನುಗಾ ಯಾತು ಮಾಮನು ॥ ೨೮ ॥

ಸ್ವಾನಾಂ ತತ್ಸಂಕಟಂ ವೀಕ್ಷ್ಯ ತದರ್ಥಸ್ಯ ಚ ಗೌರವಮ್ ।
ದೇವಯಾನೀಂ ಪರ್ಯಚರತ್ ಸ್ತ್ರೀಸಹಸ್ರೇಣ ದಾಸವತ್ ॥ ೨೯ ॥

ನಾಹುಷಾಯ ಸುತಾಂ ದತ್ತ್ವಾ ಸಹ ಶರ್ಮಿಷ್ಠಯೋಶನಾ ।
ತಮಾಹ ರಾಜನ್ ಶರ್ಮಿಷ್ಠಾಮಾಧಾಸ್ತಲ್ಪೇ ನ ಕರ್ಹಿಚಿತ್ ॥ ೩೦ ॥

ವೀರಶ್ರೇಷ್ಠನೇ! ಮೊದಲು ನಾನು ಬೃಹಸ್ಪತಿಯ ಪುತ್ರನಾದ ಕಚನಿಗೆ ಶಾಪಕೊಟ್ಟಿದ್ದೆ. ಅದರಿಂದ ಅವನೂ ನನ್ನನ್ನು ಶಪಿಸಿದ್ದನು. ಈ ಕಾರಣದಿಂದಲೇ ಯಾವ ಬ್ರಾಹ್ಮಣನು ನನ್ನ ಪಾಣಿಗ್ರಹಣ ಮಾಡಲಾರನು.* ॥ ೨೨ ॥ ಪ್ರತಿಲೋಮ ವಿವಾಹವು ಶಾಸ್ತ್ರಕ್ಕೆ ವಿರುದ್ಧವಾದುದರಿಂದ ಯಯಾತಿಗೆ ಈ ಸಂಬಂಧವು ಇಷ್ಟವಿರಲಿಲ್ಲ. ಆದರೆ ಪ್ರಾರಬ್ಧವೇ ನನಗೆ ಈ ಸಂಬಂಧವನ್ನು ಒದಗಿಸಿಕೊಟ್ಟಿದೆ. ಮೇಲಾಗಿ ನನ್ನ ಮನಸ್ಸೂ ಇವಳಲ್ಲಿ ಅನುರಕ್ತವಾಗಿದೆ ಎಂದು ಯೋಚಿಸಿ ಆಕೆಯ ಮಾತನ್ನು ಒಪ್ಪಿಕೊಂಡನು. ॥ ೨೩ ॥

ವೀರ ಯಯಾತಿಯು ಹೊರಟುಹೋದಾಗ ದೇವಯಾನಿಯು ಅಳುತ್ತಾ-ಕರೆಯುತ್ತಾ ತನ್ನ ತಂದೆಯಾದ ಶುಕ್ರಾಚಾರ್ಯರ ಬಳಿಗೆ ಬಂದು ಶರ್ಮಿಷ್ಠೆಯು ಮಾಡಿದುದೆಲ್ಲವನ್ನು ಹೇಳಿದಳು. ॥ ೨೪ ॥ ಶರ್ಮಿಷ್ಠೆಯ ವ್ಯವಹಾರದಿಂದ ಭಗವಾನ್ ಶುಕ್ರಾಚಾರ್ಯರ ಮನಸ್ಸಿಗೂ ಬೇಸರ ಉಂಟಾಯಿತು. ಅವರು ಪೌರೋಹಿತ್ಯ ವೃತ್ತಿಯನ್ನೇ ನಿಂದಿಸತೊಡಗಿದರು. ಕಾಪೋತವೃತ್ತಿಯನ್ನೇ ಶ್ಲಾಘಿಸುತ್ತಾ ಮಗಳೊಡನೆ ನಗರವನ್ನು ಬಿಟ್ಟು ಹೊರಟುಬಿಟ್ಟರು. ॥ ೨೫ ॥ ವೃಷಪರ್ವನಿಗೆ ಇದು ಗೊತ್ತಾಗುತ್ತಲೇ ಅವನ ಮನಸ್ಸಿನಲ್ಲಿ ಗುರುಗಳು ಎಲ್ಲಾದರೂ ಶತ್ರುಗಳ ವಿಜಯವನ್ನು ಮಾಡಿಸುವರೋ, ಅಥವಾ ನನಗೆ ಶಾಪಕೊಡಬಹುದೇ ಎಂದು ಶಂಕಿಸಿ ಅವರನ್ನು ಒಲಿಸಿಕೊಳ್ಳಲು ಅವರ ಹಿಂದೆಯೇ ಹೋಗಿ ದಾರಿಯಲ್ಲೇ ಚರಣಗಳಲ್ಲಿ ಶಿರವನ್ನಿಟ್ಟು ವಂದಿಸಿದನು. ॥ ೨೬ ॥ ಭಗವಾನ್ ಶುಕ್ರಾಚಾರ್ಯರ ಕ್ರೋಧವಾದರೋ ಕ್ಷಣ ಮಾತ್ರವಿತ್ತು. ಅವರು ವೃಷಪರ್ವನಿಗೆ ಹೇಳಿದರು – ರಾಜನೇ! ನಾನು ನನ್ನ ಪುತ್ರಿ ದೇವಯಾನಿಯನ್ನು ಬಿಡಲಾರೆನು. ಅದಕ್ಕಾಗಿ ಆಕೆಯ ಇಚ್ಛೆಯನ್ನು ನೀನು ಪೂರ್ಣಗೊಳಿಸು. ಹಾಗಾದರೆ ನನಗೆ ಮರಳಿ ಬರುವುದರಲ್ಲಿ ಯಾವ ಅಭ್ಯಂತರವೂ ಇಲ್ಲ. ॥ ೨೭ ॥ ವೃಷಪರ್ವನು 'ಹಾಗೆಯೇ ಆಗಲಿ' ಎಂದು ಹೇಳಿ ಅವರ ಆಜ್ಞೆಯನ್ನು ಸ್ವೀಕರಿಸಿದಾಗ ದೇವಯಾನಿಯು ತನ್ನ ಮನಸ್ಸಿನಲ್ಲಿದ್ದುದನ್ನು ಹೇಳಿದಳು – 'ತಂದೆಯೇ! ನನ್ನನ್ನು ಯಾರಿಗೆ ಮದುವೆಮಾಡಿ ಕೊಡುವೆಯೋ ಹಾಗೂ ನಾನು ಎಲ್ಲಿಗೆ ಹೋಗುವೆನೋ, ಶರ್ಮಿಷ್ಠೆಯೂ ತನ್ನ ಸಖಿಯರೊಂದಿಗೆ ನನ್ನ ಸೇವೆಗಾಗಿ ಅಲ್ಲಿಗೆ ಬರಬೇಕು.'' ॥ ೨೮ ॥

ಶರ್ಮಿಷ್ಠೆಯು ತನ್ನ ಪರಿವಾರದವರ ಸಂಕಟವನ್ನೂ, ಅವರ ಕಾರ್ಯಗೌರವವನ್ನೂ ಕಂಡು ದೇವಯಾನಿಯ ಮಾತನ್ನು ಸ್ವೀಕರಿಸಿದಳು. ಆಕೆಯು ಒಂದು ಸಾವಿರ ಸಖಿಯರೊಂದಿಗೆ ದಾಸಿಯಂತೆ ದೇವಯಾನಿಯ ಸೇವೆಯಲ್ಲಿ ಇರತೊಡಗಿದಳು. ॥ ೨೯ ॥ ಶುಕ್ರಾಚಾರ್ಯರು ದೇವಯಾನಿಯ ವಿವಾಹವನ್ನು ಯಯಾತಿಯೊಂದಿಗೆ ನಡೆಸಿದರು ಮತ್ತು ಶರ್ಮಿಷ್ಠೆಯನ್ನು ದಾಸಿಯ ರೂಪದಲ್ಲಿ ಒಪ್ಪಿಸಿ ಹೇಳಿದರು – ರಾಜನೇ! ಈ ಶರ್ಮಿಷ್ಠೆಯನ್ನು ನಿನ್ನ ಹಾಸಿಗೆಗೆ ಎಂದೂ ಬರಲು ಬಿಡಬಾರದು. ॥ ೩೦ ॥

* ಬೃಹಸ್ಪತಿಯ ಪುತ್ರ ಕಚನು ಶುಕ್ರಾಚಾರ್ಯರ ಬಳಿ ಮೃತಸಂಜೀವಿನೀ ವಿದ್ಯೆಯನ್ನು ಕಲಿಯುತ್ತಿದ್ದನು. ಅಧ್ಯಯನ ಮುಗಿಸಿ ಅವನು ಮನೆಗೆ ತೆರಳುವಾಗ ದೇವಯಾನಿಯು ಅವನನ್ನು ವರಿಸಲು ಬಯಸಿದಳು. ಆದರೆ ಗುರುಪುತ್ರಿಯಾದ್ದರಿಂದ ಕಚನು ಆಕೆಯ ಇಂಗಿತವನ್ನು ಸ್ವೀಕರಿಸಲಿಲ್ಲ. ಅದರಿಂದ ಬೇಸರಗೊಂಡ ದೇವಯಾನಿಯು – 'ನೀನು ಕಲಿತ ವಿದ್ಯೆಯು ನಿಷ್ಫಲವಾಗಲಿ' ಎಂದು ಶಾಪವನ್ನು ಕೊಟ್ಟಳು. ಕಚನೂ ಕೂಡ ಆಕೆಯನ್ನು ಶಪಿಸಿದನು 'ಯಾವ ಬ್ರಾಹ್ಮಣನೂ ನಿನ್ನನ್ನು ಪತ್ನಿಯಾಗಿ ಸ್ವೀಕರಿಸದೆ ಹೋಗಲಿ.' ಇದರಿಂದ ದೇವಯಾನಿಗೆ ಬ್ರಾಹ್ಮಣಪತಿಯು ದೊರಕುವುದು ಶಕ್ಯವಾಗಿರಲಿಲ್ಲ.

ವಿಲೋಕ್ಯೌಶನಸೀಂ ರಾಜನ್ ಶರ್ಮಿಷ್ಠಾ ಸುಪ್ರಜಾಂ ಕ್ವಚಿತ್ ।
ತಮೇವ ವವ್ರೇ ರಹಸಿ ಸಖ್ಯಾಃ ಪತಿಮೃತೌ ಸತೀ ॥ ೩೧ ॥

ರಾಜಪುತ್ರ್ಯಾರ್ಥಿತೋಽಪತ್ಯೇ ಧರ್ಮಂ ಚಾವೇಕ್ಷ್ಯ ಧರ್ಮವಿತ್ ।
ಸ್ಮರಞ್ಛುಕ್ರವಚಃ ಕಾಲೇ ದಿಷ್ಟಮೇವಾಭ್ಯಪದ್ಯತ ॥ ೩೨ ॥

ಯದುಂ ಚ ತುರ್ವಸುಂ ಚೈವ ದೇವಯಾನೀ ವ್ಯಜಾಯತ ।
ದ್ರುಹ್ಯುಂ ಚಾನುಂ ಚ ಪೂರುಂ ಚ ಶರ್ಮಿಷ್ಠಾ ವಾರ್ಷಪರ್ವಣೀ ॥ ೩೩ ॥

ಗರ್ಭಸಂಭವಮಾಸುರ್ಯಾ ಭರ್ತುರ್ವಿಜ್ಞಾಯ ಮಾನಿನೀ ।
ದೇವಯಾನೀ ಪಿತುರ್ಗೇಹಂ ಯಯೌ ಕ್ರೋಧವಿಮೂರ್ಛಿತಾ ॥ ೩೪ ॥

ಪ್ರಿಯಾಮನುಗತಃ ಕಾಮೀ ವಚೋಭಿರುಪಮಂತ್ರಯನ್ ।
ನ ಪ್ರಸಾದಯಿತುಂ ಶೇಕೇ ಪಾದಸಂವಾಹನಾದಿಭಿಃ ॥ ೩೫ ॥

ಶುಕ್ರಸ್ತಮಾಹ ಕುಪಿತಃ ಸ್ತ್ರೀಕಾಮಾನೃತಪೂರುಷ ।
ತ್ವಾಂ ಜರಾ ವಿಶತಾಂ ಮಂದ ವಿರೂಪಕರಣೀ ನೃಣಾಮ್ ॥ ೩೬ ॥

ಯಯಾತಿರುವಾಚ

ಅತೃಪ್ತೋಽಸ್ಮ್ಯದ್ಯ ಕಾಮಾನಾಂ ಬ್ರಹ್ಮನ್ದುಹಿತರಿ ಸ್ಮ ತೇ ।
ವ್ಯತ್ಯಸ್ಯತಾಂ ಯಥಾಕಾಮಂ ವಯಸಾ ಯೋಽಭಿಧಾಸ್ಯತಿ ॥ ೩೭ ॥

ಇತಿ ಲಬ್ಧವ್ಯವಸ್ಥಾನಃ ಪುತ್ರಂ ಜ್ಯೇಷ್ಠಮವೋಚತ ।
ಯದೋ ತಾತ ಪ್ರತೀಚ್ಛೇಮಾಂ ಜರಾಂ ದೇಹಿ ನಿಜಂ ವಯಃ ॥ ೩೮ ॥

ಮಾತಾಮಹಕೃತಾಂ ವತ್ಸ ನ ತೃಪ್ತೋ ವಿಷಯೇಷ್ವಹಮ್ ।
ವಯಸಾ ಭವದೀಯೇನ ರಂಸ್ಯೇ ಕತಿಪಯಾಃ ಸಮಾಃ ॥ ೩೯ ॥

ಯದುರುವಾಚ

ನೋತ್ಸಹೇ ಜರಸಾ ಸ್ಥಾತುಮಂತರಾ ಪ್ರಾಪ್ತಯಾ ತವ ।
ಅವಿದಿತ್ವಾ ಸುಖಂ ಗ್ರಾಮ್ಯಂ ವೈತೃಷ್ಣ್ಯಂ ನೈತಿ ಪೂರುಷಃ ॥ ೪೦ ॥

ಪರೀಕ್ಷಿತನೇ! ಕೆಲದಿವಸಗಳು ಕಳೆದನಂತರ ದೇವಯಾನಿಯು ಪುತ್ರವತಿಯಾದಳು. ಅವಳು ಪುತ್ರವತಿಯಾದುದನ್ನು ನೋಡಿ ಶರ್ಮಿಷ್ಠೆಯು ತನ್ನ ಋತುಕಾಲದಲ್ಲಿ ದೇವಯಾನಿಯ ಪತಿಯೊಡನೆ ಏಕಾಂತದಲ್ಲಿ ಸಮಾಗಮವನ್ನು ಯಾಚಿಸಿದಳು. ॥ ೩೧ ॥ ಶರ್ಮಿಷ್ಠೆಯ ಪುತ್ರಪ್ರಾಪ್ತಿಯ ಪ್ರಾರ್ಥನೆಯು ಧರ್ಮಸಂಗತವಾಗಿದೆ ಎಂದು ತಿಳಿದು ಧರ್ಮಜ್ಞನಾದ ಯಯಾತಿಯು ಶುಕ್ರಾಚಾರ್ಯರ ಮಾತು ನೆನಪಿನಲ್ಲಿದ್ದರೂ ಕಾಲದಲ್ಲಿ ಪ್ರಾರಬ್ಧಕ್ಕನುಸಾರ ಏನಾಗಬೇಕೋ ಅದು ಆಗಿಯೇ ತೀರುವುದು ಎಂದು ನಿಶ್ಚಯಿಸಿದನು. ॥ ೩೨ ॥ ದೇವಯಾನಿಗೆ ಯದು ಮತ್ತು ತುರ್ವಸು ಎಂಬ ಎರಡು ಮಕ್ಕಳಾದರು. ಹಾಗೆಯೇ ವೃಷಪರ್ವನ ಮಗಳಾದ ಶರ್ಮಿಷ್ಠೆಗೆ ದ್ರುಹ್ಯು, ಅನು, ಪುರು ಎಂಬ ಮೂವರು ಪುತ್ರರಾದರು. ॥ ೩೩ ॥ ಮಾನಿನಿಯಾದ ದೇವಯಾನಿಗೆ ತನ್ನಂತೆಯೇ ಶರ್ಮಿಷ್ಠೆಗೂ ತನ್ನ ಪತಿಯಿಂದಲೇ ಮಕ್ಕಳಾಗುತ್ತಿವೆ ಎಂಬುದನ್ನು ಅರಿತಾಗ ಅವಳು ಕ್ರೋಧಗೊಂಡು ತನ್ನ ತಂದೆಯ ಮನೆಗೆ ಹೊರಟುಹೋದಳು. ॥ ೩೪ ॥

ಕಾಮಿಯಾದ ಯಯಾತಿಯು ದೇವಯಾನಿಯನ್ನು ಒಲಿಸಿಕೊಳ್ಳಲು ಸುಮಧುರ ಮಾತುಗಳಿಂದ, ವಿನಯದಿಂದ ಪ್ರಯತ್ನಿಸಿದರೂ ಯಾವ ಪ್ರಯೋಜನವೂ ಆಗಲಿಲ್ಲ. ಅವಳ ಕಾಲುಗಳನ್ನೊತ್ತಿ ಸೇವೆ ಮಾಡಿದರೂ, ಅವಳ ಹಿಂದೆ-ಹಿಂದೆಯೇ ಹೋದರೂ ಪ್ರಯೋಜನವಾಗಲಿಲ್ಲ. ॥ ೩೫ ॥ ಶುಕ್ರಾಚಾರ್ಯರೂ ಕೂಡ ಕೋಪಗೊಂಡು ಯಯಾತಿಗೆ ಹೇಳಿದರು – 'ನೀನು ಅತ್ಯಂತ ಸ್ತ್ರೀಲಂಪಟನಾಗಿರುವೆ. ಮಂದಬುದ್ಧಿಯವನೂ, ಸುಳ್ಳುಗಾರನೂ ಆಗಿರುವೆ. ಮನುಷ್ಯರನ್ನು ಕುರೂಪಗೊಳಿಸುವಂತಹ ಮುದಿತನವು ನಿನಗೆ ಉಂಟಾಗಲಿ ನಡೆ ಇಲ್ಲಿಂದ' ಎಂದು ಹೇಳಿದರು. ॥ ೩೬ ॥

ಯಯಾತಿಯು ಹೇಳಿದನು – ಬ್ರಾಹ್ಮಣಶ್ರೇಷ್ಠರೇ! ನಿಮ್ಮ ಮಗಳೊಡನೆ ವಿಷಯಭೋಗಗಳನ್ನು ಅನುಭವಿಸುತ್ತಿರುವ ನನಗೆ ಇನ್ನೂ ತೃಪ್ತಿಯೇ ಆಗಲಿಲ್ಲ. ಈ ಶಾಪದಿಂದಲಾದರೋ ನಿಮ್ಮ ಮಗಳಿಗೂ ಅನಿಷ್ಟವೇ ಪರಿಣಮಿಸುತ್ತದೆ. ಆಗ ಶುಕ್ರಾಚಾರ್ಯರಿಗೂ ಯಯಾತಿಯ ಮಾತು ಸರಿ ಎನಿಸಿತು. ಶಾಪದಲ್ಲಿ ಸ್ವಲ್ಪ ತಿದ್ದುಪಡಿ ಮಾಡಿ ಹೇಳಿದರು – ಸರಿ ಹೋಗು. ಸಂತೋಷದಿಂದ ನಿನಗೆ ತನ್ನ ತಾರುಣ್ಯವನ್ನು ಯಾರಾದರೂ ಕೊಟ್ಟರೆ ಅದನ್ನು ಪಡೆದು ಈ ವೃದ್ಧಾಪ್ಯವನ್ನು ಅವನಿಗೆ ಕೊಡಬಹುದು. ॥ ೩೭ ॥ ಶುಕ್ರಾಚಾರ್ಯರು ಇಂತಹ ವ್ಯವಸ್ಥೆ ಮಾಡಿದಾಗ ಯಯಾತಿಯು ತನ್ನ ರಾಜಧಾನಿಗೆ ಬಂದು ತನ್ನ ಹಿರಿಯಪುತ್ರನಾದ ಯದುವಿನಲ್ಲಿ – ಮಗೂ! ನೀನು ನಿನ್ನ ಯೌವನವನ್ನು ನನಗೆ ಕೊಟ್ಟು, ನಿನ್ನ ಅಜ್ಜನು ಕೊಟ್ಟಿರುವ ಈ ವೃದ್ಧಾಪ್ಯವನ್ನು ನೀನು ಪಡೆ. ಏಕೆಂದರೆ, ಪ್ರಿಯ ಪುತ್ರನೇ! ನಾನು ಇನ್ನೂ ವಿಷಯಗಳಿಂದ ತೃಪ್ತನಾಗಲಿಲ್ಲ. ಅದಕ್ಕಾಗಿ ನಿನ್ನ ಯೌವನವನ್ನು ಪಡೆದು ನಾನು ಕೆಲವು ವರ್ಷಗಳವರೆಗೆ ಇನ್ನೂ ಆನಂದವನ್ನು ಅನುಭವಿಸುವೆನು. ॥ ೩೮-೩೯ ॥

ಯದುವು ಹೇಳಿದನು – ತಂದೆಯೇ! ಅಕಾಲದಲ್ಲಿ ಪ್ರಾಪ್ತವಾದ ನಿಮ್ಮ ಮುದಿತನವನ್ನು ಪಡೆದು ನಾನು ಬದುಕಲು ಬಯಸುವುದಿಲ್ಲ. ಏಕೆಂದರೆ, ವಿಷಯಸುಖಗಳನ್ನು ಅನುಭವಿಸದೆ ಯಾವ ಮನುಷ್ಯನೂ ವೈರಾಗ್ಯವನ್ನು ಹೊಂದಲಾರನು. ॥ ೪೦ ॥

ತುರ್ವಸುಶ್ಚೋದಿತಃ ಪಿತ್ರಾ ದ್ರುಹ್ಯುಶ್ಚಾನುಶ್ಚ ಭಾರತ ।
ಪ್ರತ್ಯಾಚಖ್ಯುರಧರ್ಮಜ್ಞಾ ಹ್ಯನಿತ್ಯೇ ನಿತ್ಯಬುದ್ಧಯಃ ॥ ೪೧ ॥

ಅಪೃಚ್ಛತ್ತನಯಂ ಪೂರುಂ ವಯಸೋನಂ ಗುಣಾಧಿಕಮ್ ।
ನ ತ್ವಮಗ್ರಜವದ್ವತ್ಸ ಮಾಂ ಪ್ರತ್ಯಾಖ್ಯಾತುಮರ್ಹಸಿ ॥ ೪೨ ॥

ಪೂರುರುವಾಚ

ಕೋ ನು ಲೋಕೇ ಮನುಷ್ಯೇಂದ್ರ ಪಿತುರಾತ್ಮಕೃತಃ ಪುಮಾನ್ ।
ಪ್ರತಿಕರ್ತುಂ ಕ್ಷಮೋ ಯಸ್ಯ ಪ್ರಸಾದಾದ್ವಿಂದತೇ ಪರಮ್ ॥ ೪೩ ॥

ಉತ್ತಮಶ್ಚಿಂತಿತಂ ಕುರ್ಯಾತ್ಪ್ರೋಕ್ತಕಾರೀ ತು ಮಧ್ಯಮಃ ।
ಅಧಮೋಽಶ್ರದ್ಧಯಾ ಕುರ್ಯಾದಕರ್ತೋಚ್ಚರಿತಂ ಪಿತುಃ ॥ ೪೪ ॥

ಇತಿ ಪ್ರಮುದಿತಃ ಪೂರುಃ ಪ್ರತ್ಯಗೃಹ್ಣಾಜ್ಜರಾಂ ಪಿತುಃ ।
ಸೋಽಪಿ ತದ್ವಯಸಾ ಕಾಮಾನ್ಯಥಾವಜ್ಜುಜುಷೇ ನೃಪ ॥ ೪೫ ॥

ಸಪ್ತದ್ವೀಪಪತಿಃ ಸಮ್ಯಕ್ಪಿತೃವತ್ಪಾಲಯನ್ ಪ್ರಜಾಃ ।
ಯಥೋಪಜೋಷಂ ವಿಷಯಾಂಜುಜುಷೇಽವ್ಯಾಹತೇಂದ್ರಿಯಃ ॥ ೪೬ ॥

ದೇವಯಾನ್ಯಪ್ಯನುದಿನಂ ಮನೋವಾಗ್ದೇಹವಸ್ತುಭಿಃ ।
ಪ್ರೇಯಸಃ ಪರಮಾಂ ಪ್ರೀತಿಮುವಾಹ ಪ್ರೇಯಸೀ ರಹಃ ॥ ೪೭ ॥

ಅಯಜದ್ಯಜ್ಞಪುರುಷಂ ಕ್ರತುಭಿರ್ಭೂರಿದಕ್ಷಿಣೈಃ ।
ಸರ್ವದೇವಮಯಂ ದೇವಂ ಸರ್ವವೇದಮಯಂ ಹರಿಮ್ ॥ ೪೮ ॥

ಯಸ್ಮಿನ್ನಿದಂ ವಿರಚಿತಂ ವ್ಯೋಮ್ನೀವ ಜಲದಾವಲಿಃ ।
ನಾನೇವ ಭಾತಿ ನಾಭಾತಿ ಸ್ವಪ್ನಮಾಯಾಮನೋರಥಃ ॥ ೪೯ ॥

ಪರೀಕ್ಷಿತನೇ! ಹೀಗೆಯೇ ತುರ್ವಸು, ದ್ರುಹ್ಯು ಮತ್ತು ಅನು ಇವರೂ ತಂದೆಯ ಆಜ್ಞೆಯನ್ನು ತಿರಸ್ಕರಿಸಿದರು. ಅವರೆಲ್ಲರೂ ಧರ್ಮವನ್ನು ತಿಳಿದವರಾಗಿರಲಿಲ್ಲ ಮತ್ತು ಅನಿತ್ಯವಾದ ಶರೀರವನ್ನೇ ಶಾಶ್ವತವೆಂದು ತಿಳಿದಿದ್ದರು. ॥ ೪೧ ॥ ಈಗ ಯಯಾತಿಯು ವಯಸ್ಸಿನಲ್ಲಿ ಅತಿ ಸಣ್ಣವನಾಗಿದ್ದರೂ ಗುಣಗಳಲ್ಲಿ ದೊಡ್ಡವನಾಗಿದ್ದ ತನ್ನ ಪುತ್ರ ಪುರುವನ್ನು ಕರೆದು ಕೇಳಿದನು - ಮಗು! ನೀನು ನಿನ್ನ ಅಣ್ಣಂದಿರಂತೆ ನನ್ನ ಮಾತನ್ನು ತಿರಸ್ಕರಿಸಬೇಡ. ನನ್ನ ಮುದಿತನವನ್ನು ಸ್ವಲ್ಪ ಕಾಲದವರೆಗೆ ಪಡೆದು ನಿನ್ನ ಯೌವನವನ್ನು ನನಗೆ ಕೊಡು. ॥ ೪೨ ॥

ಪುರುವು ಹೇಳಿದನು – ತಂದೆಯೇ! ಪಿತೃವಿನ ಕೃಪೆಯಿಂದಲೇ ಮನುಷ್ಯನಿಗೆ ಪರಮಪದವು ಲಭಿಸುವುದು. ವಾಸ್ತವದಲ್ಲಿ ಪುತ್ರನ ಶರೀರವು ತಂದೆಯೇ ಕೊಟ್ಟದ್ದಾಗಿದೆ. ಇಂತಹ ಸ್ಥಿತಿಯಲ್ಲಿ ಪ್ರಪಂಚದಲ್ಲಿ ತಂದೆಯ ಉಪಕಾರವನ್ನು ತೀರಿಸಬಲ್ಲವನು ಯಾವನು ತಾನೇ ಇರುವನು? ॥ ೪೩ ॥ ತಂದೆಯ ಮನಸ್ಸಿನ ಮಾತನ್ನು ಹೇಳದೆಯೇ ನಡೆಸುವವನೇ ಉತ್ತಮ ಪುತ್ರನಾಗಿರುವನು. ಹೇಳಿದ ಮೇಲೆ ಶ್ರದ್ಧೆಯಿಂದ ಆಜ್ಞೆಯನ್ನು ಪಾಲಿಸುವವನು ಮಧ್ಯಮನು. ಆಜ್ಞೆ ಪಡೆದರೂ ಅಶ್ರದ್ಧೆಯಿಂದ ಅದನ್ನು ಪಾಲಿಸುವ ಪುತ್ರನು ಅಧಮನು. ಯಾವ ರೀತಿಯಿಂದಲೂ ತಂದೆಯ ಆಜ್ಞೆಯನ್ನು ಪಾಲಿಸದಿರುವವನನ್ನು ಪುತ್ರನೆಂದು ಹೇಳುವುದೇ ಕಷ್ಟ. ಅವನಾದರೋ ತಂದೆಯ ಮಲದಂತೆ ಆಗಿರುವನು. ॥ ೪೪ ॥ ಪರೀಕ್ಷಿತನೇ! ಹೀಗೆ ಹೇಳಿ ಪುರುವು ಬಹಳ ಆನಂದದಿಂದ ತಂದೆಯ ಮುದಿತನವನ್ನು ಸ್ವೀಕರಿಸಿದನು. ಯಯಾತಿಯೂ ಮಗನ ಯೌವನವನ್ನು ಪಡೆದು ಹಿಂದಿನಂತೆ ವಿಷಯಗಳ ಸೇವನೆಯಲ್ಲಿ ತೊಡಗಿದನು. ॥ ೪೫ ॥ ಯಯಾತಿಯು ಏಳು ದ್ವೀಪಗಳಿಗೂ ಸಾಮ್ರಾಟನಾಗಿದ್ದನು. ತಂದೆಯಂತೆಯೇ ಪ್ರಜೆಗಳನ್ನು ಚೆನ್ನಾಗಿಯೇ ನೋಡಿದ್ದನು. ಅವನ ಇಂದ್ರಿಯಗಳಲ್ಲಿ ಪರಿಪೂರ್ಣವಾದ ಶಕ್ತಿ ತುಂಬಿತ್ತು. ಅವನು ಯಥಾವಕಾಶದಲ್ಲಿ ಬೇಕಾದ ವಿಷಯಗಳನ್ನು ಯಥೇಚ್ಛವಾಗಿ ಅನುಭವಿಸುತ್ತಿದ್ದನು. ॥ ೪೬ ॥ ಅವನ ಪ್ರಿಯತಮೆಯಾದ ದೇವಯಾನಿಯೂ ತನ್ನ ಪ್ರಿಯತಮನಾದ ಯಯಾತಿಯನ್ನು ಮನಸ್ಸು, ಮಾತು, ಶರೀರದಿಂದ ಮತ್ತು ವಸ್ತುಗಳಿಂದ ಪ್ರತಿದಿನವೂ ಸಂತೋಷಪಡಿಸುತ್ತಾ ಏಕಾಂತದಲ್ಲಿಯೂ ಸುಖವನ್ನು ನೀಡುತ್ತಿದ್ದಳು. ॥ ೪೭ ॥ ಸಾಮ್ರಾಟ ಯಯಾತಿಯು ವೇದಪ್ರತಿಪಾದ್ಯನಾದ ಸರ್ವದೇವಸ್ವರೂಪನಾದ ಯಜ್ಞಪುರುಷ ಭಗವಾನ್ ಶ್ರೀಹರಿಯನ್ನು ಅನೇಕ ಮಹಾ-ಮಹಾ ದಕ್ಷಿಣೆಗಳುಳ್ಳ ಯಜ್ಞಗಳ ಮೂಲಕ ಆರಾಧಿಸಿದನು. ॥ ೪೮ ॥ ಕೆಲವೊಮ್ಮೆ ಆಕಾಶದಲ್ಲಿ ದಟ್ಟವಾದ ಮೋಡಗಳು ಕಾಣಿಸಿಕೊಳ್ಳುತ್ತವೆ. ಕೆಲವೊಮ್ಮೆ ಕಾಣದೆ ನಿರ್ಮಲವಾಗಿರುವಂತೆಯೇ ಪರಮಾತ್ಮನ ಸ್ವರೂಪದಲ್ಲಿ ಈ ಜಗತ್ತು ಸ್ವಪ್ನ, ಮಾಯೆ ಮತ್ತು ಮನೋರಾಜ್ಯದಂತೆ ಕಲ್ಪಿತವಾಗಿದೆ. ಇದು ಕೆಲವೊಮ್ಮೆ ನಾಮ-ರೂಪಗಳಿಂದ ಕಾಣಿಸಿಕೊಳ್ಳುತ್ತದೆ, ಕೆಲವೊಮ್ಮೆ ಕಾಣಿಸುವುದೂ ಇಲ್ಲ. ॥ ೪೯ ॥

ತಮೇವ ಹೃದಿ ವಿನ್ಯಸ್ಯ ವಾಸುದೇವಂ ಗುಹಾಶಯಮ್ ।
ನಾರಾಯಣಮಣೀಯಾಂಸಂ ನಿರಾಶೀರಯಜತ್ಪ್ರಭುಮ್
॥ ೫೦ ॥

ಏವಂ ವರ್ಷಸಹಸ್ರಾಣಿ ಮನಃಷಷ್ಠೈರ್ಮನಃಸುಖಮ್ ।
ವಿದಧಾನೋಽಪಿ ನಾತೃಪ್ಯತ್ಸಾರ್ವಭೌಮಃ ಕದಿಂದ್ರಿಯೈಃ
॥ ೫೧ ॥

ಆ ಪರಮಾತ್ಮನು ಎಲ್ಲರ ಹೃದಯದಲ್ಲಿ ವಿರಾಜಮಾನನಾಗಿದ್ದಾನೆ. ಅವನ ಸ್ವರೂಪವು ಸೂಕ್ಷ್ಮಕ್ಕೂ ಸೂಕ್ಷ್ಮವಾಗಿದೆ. ಅಂತಹ ಸರ್ವಶಕ್ತನಾದ ಸರ್ವವ್ಯಾಪೀ ಭಗವಾನ್ನಾರಾಯಣನನ್ನೇ ತನ್ನ ಹೃದಯದಲ್ಲಿ ನೆಲೆಗೊಳಿಸಿ ಯಯಾತಿಯು ನಿಷ್ಕಾಮ ಭಾವದಿಂದ ಅವನನ್ನು ಆರಾಧಿಸಿದನು. ॥ ೫೦ ॥ ಈ ಪ್ರಕಾರವಾಗಿ ಅವನು ಒಂದುಸಾವಿರ ವರ್ಷಗಳವರೆಗೆ ತನ್ನ ಉಚ್ಛೃಂಖಲ ಇಂದ್ರಿಯಗಳೊಂದಿಗೆ ಮನಸ್ಸನ್ನು ಜೋಡಿಸಿ ಅದಕ್ಕೆ ಪ್ರಿಯವಾದ ವಿಷಯಗಳನ್ನು ಅನುಭವಿಸಿದನು. ಇಷ್ಟಾದರೂ ಚಕ್ರವರ್ತೀ ಯಯಾತಿಗೆ ಭೋಗಗಳಿಂದ ತೃಪ್ತಿಯಾಗಲೇ ಇಲ್ಲ. ॥ ೫೧ ॥

ಹದಿನೆಂಟನೆಯ ಅಧ್ಯಾಯವು ಮುಗಿಯಿತು. ॥ ೧೮ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ನವಮಸ್ಕಂಧೇ
ಅಷ್ಟಾದಶೋಽಧ್ಯಾಯಃ ॥ ೧೮ ॥

ಹತ್ತೊಂಭತ್ತನೆಯ ಅಧ್ಯಾಯ

ಯಯಾತಿಯ ಗೃಹತ್ಯಾಗ

ಶ್ರೀಶುಕ ಉವಾಚ

ಸ ಇತ್ಥಮಾಚರನ್ ಕಾಮಾನ್ ಸ್ತ್ರೈಣೋಽಪಹ್ನವಮಾತ್ಮನಃ ।
ಬುದ್ಧ್ವಾ ಪ್ರಿಯಾಯೈ ನಿರ್ವಿಣ್ಣೋ ಗಾಥಾಮೇತಾಮಗಾಯತ
॥ ೧ ॥

ಶೃಣು ಭಾರ್ಗವ್ಯಮೂಂ ಗಾಥಾಂ ಮದ್ವಿಧಾಚರಿತಾಂ ಭುವಿ ।
ಧೀರಾ ಯಸ್ಯಾನುಶೋಚಂತಿ ವನೇ ಗ್ರಾಮನಿವಾಸಿನಃ
॥ ೨ ॥

ಬಸ್ತ ಏಕೋ ವನೇ ಕಶ್ಚಿದ್ವಿಚಿನ್ವನ್ ಪ್ರಿಯಮಾತ್ಮನಃ ।
ದದರ್ಶ ಕೂಪೇ ಪತಿತಾಂ ಸ್ವಕರ್ಮವಶಗಾಮಜಾಮ್
॥ ೩ ॥

ತಸ್ಯಾ ಉದ್ಧರಣೋಪಾಯಂ ಬಸ್ತಃ ಕಾಮೀ ವಿಚಿಂತಯನ್ ।
ವ್ಯಧತ್ತ ತೀರ್ಥಮುದ್ಧೃತ್ಯ ವಿಷಾಣಾಗ್ರೇಣ ರೋಧಸಿ
॥ ೪ ॥

ಸೋತ್ತೀರ್ಯ ಕೂಪಾತ್ಸುಶ್ರೋಣೀ ತಮೇವ ಚಕಮೇ ಕಿಲ ।
ತಯಾ ವೃತಂ ಸಮುದ್ವೀಕ್ಷ್ಯ ಬಹ್ವ್ಯೋಽಜಾಃ ಕಾಂತಕಾಮಿನೀಃ
॥ ೫ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಎಲೈ ಪರೀಕ್ಷಿತನೇ! ಹೀಗೆ ಯಯಾತಿಯು ಸ್ತ್ರೀವಶನಾಗಿ ವಿಷಯಗಳನ್ನು ಉಪಭೋಗಿಸುತ್ತಿದ್ದನು. ಒಂದು ದಿನ ಇದ್ದಕ್ಕಿದ್ದಂತೆ ತನ್ನ ಅಧಃಪತನದತ್ತ ದೃಷ್ಟಿಯು ಹರಿದಾಗ ಅವನಿಗೆ ವೈರಾಗ್ಯವುಂಟಾಗಿ ತನ್ನ ಪ್ರಿಯಪತ್ನಿಯಾದ ದೇವಯಾನಿಯಲ್ಲಿ ಈ ಕಥೆಯನ್ನು ಹೇಳಿದನು – ॥ ೧ ॥ ಭೃಗುನಂದಿನೀ! ಈ ಕಥೆಯನ್ನು ಕೇಳು. ಭೂಮಿಯಲ್ಲಿ ನನ್ನಂತೆಯೇ ಇರುವ ವಿಷಯಾಪೇಕ್ಷಿಯ ಸತ್ಯ ಇತಿಹಾಸ ಇದಾಗಿದೆ. ಹೀಗೆಯೇ ಗ್ರಾಮವಾಸಿಗಳಾದ ವಿಷಯೀ ಪುರುಷರ ಸಂಬಂಧವಾಗಿ ವನವಾಸೀ ಜಿತೇಂದ್ರಿಯ ಪುರುಷರು ಇವರ ಶ್ರೇಯಸ್ಸು ಹೇಗಾದೀತೆಂದು ದುಃಖದಿಂದ ಯೋಚಿಸುತ್ತಾರೆ. ॥ ೨ ॥ ಪ್ರಿಯೆ! ಕಾಡಿನಲ್ಲಿ ಒಂದು ಹೋತವು ತನಗೆ ಪ್ರಿಯವಾದುದನ್ನು ಹುಡುಕುತ್ತಾ ಸಂಚರಿಸುತ್ತಿತ್ತು. ಒಮ್ಮೆ ತನ್ನ ಕರ್ಮಫಲದಿಂದಲೇ ಒಂದು ಮೇಕೆಯು ಬಾವಿಯಲ್ಲಿ ಬಿದ್ದಿರುವುದನ್ನು ನೋಡಿತು. ॥ ೩ ॥ ಆ ಹೋತವು ಬಹಳ ಕಾಮಿಯಾಗಿತ್ತು. ಈ ಮೇಕೆಯನ್ನು ಬಾವಿಯಿಂದ ಹೇಗೆ ಮೇಲೆತ್ತಬಹುದೆಂದು ಯೋಚಿಸಿ ಅದು ತನ್ನ ಕೋಡುಗಳಿಂದ ಬಾವಿಯ ದಂಡೆಗಳನ್ನು ಅಗೆದು ದಾರಿಮಾಡಿತು. ॥ ೪ ॥ ಹೋತನ ಸಹಾಯದಿಂದ ಮೇಲಕ್ಕೆ ಬಂದ ಮೇಕೆಯು ಆ ಹೋತನನ್ನೇ ಮೋಹಿಸಿತು. ಆ ಹೋತವು ಗಡ್ಡ-ಮೀಸೆಗಳನ್ನು ಹೊಂದಿ, ಹೃಷ್ಟಪುಷ್ಟ ತರುಣವಾಗಿದ್ದು, ಮೇಕೆಗಳಿಗೆ ಸುಖವನ್ನೀಯುವುದರಲ್ಲಿ ವಿಹಾರ ಕುಶಲವಾಗಿದ್ದಿತು. ಬಾವಿಯಲ್ಲಿ ಬಿದ್ದ ಮೇಕೆಯು ಆ ಹೋತವನ್ನು ತನ್ನ ಪ್ರಿಯಕರನಾಗಿ ಆರಿಸಿಕೊಂಡಿರುವುದನ್ನು ನೋಡಿದ ಇತರ ಮೇಕೆಗಳೂ ಅದನ್ನೇ ತಮ್ಮ ಪತಿಯನ್ನಾಗಿ ಕೊಂಡವು. ಅವುಗಳಾದರೋ ಮೊದಲಿನಿಂದಲೂ

ಪೀವಾನಂ ಶ್ಮಶ್ರುಲಂ ಪ್ರೇಷ್ಠಂ ಮೀಢ್ವಾಂಸಂ ಯಾಭಕೋವಿದಮ್ ।
ಸ ಏಕೋಽಜವೃಷಸ್ತಾಸಾಂ ಬಹ್ವೀನಾಂ ರತಿವರ್ಧನಃ ।
ರೇಮೇ ಕಾಮಗ್ರಹಗ್ರಸ್ತ ಆತ್ಮಾನಂ ನಾವಬುಧ್ಯತ ॥ ೬ ॥

ತಮೇವ ಪ್ರೇಷ್ಠತಮಯಾ ರಮಮಾಣಮಜಾನ್ಯಯಾ ।
ವಿಲೋಕ್ಯ ಕೂಪಸಂವಿಗ್ನಾ ನಾಮೃಷ್ಯದ್ ಬಸ್ತಕರ್ಮ ತತ್ ॥ ೭ ॥

ತಂ ದುರ್ಹೃದಂ ಸುಹೃದ್ರೂಪಂ ಕಾಮಿನಂ ಕ್ಷಣಸೌಹೃದಮ್ ।
ಇಂದ್ರಿಯಾರಾಮಮುತ್ಸೃಜ್ಯ ಸ್ವಾಮಿನಂ ದುಃಖಿತಾ ಯಯೌ ॥ ೮ ॥

ಸೋಽಪಿ ಚಾನುಗತಃ ಸ್ತ್ರೈಣಃ ಕೃಪಣಸ್ತಾಂ ಪ್ರಸಾದಿತುಮ್ ।
ಕುರ್ವನ್ನಿಡವಿಡಾಕಾರಂ ನಾಶಕ್ನೋತ್ಪಥಿ ಸಂಧಿತುಮ್ ॥ ೯ ॥

ತಸ್ಯ ತತ್ರ ದ್ವಿಜಃ ಕಶ್ಚಿದಜಾಸ್ವಾಮ್ಯಚ್ಛಿನದ್ರುಷಾ ।
ಲಂಬಂತಂ ವೃಷಣಂ ಭೂಯಃ ಸಂದಧೇಽರ್ಥಾಯ ಯೋಗವಿತ್ ॥ ೧೦ ॥

ಸಂಬದ್ಧವೃಷಣಃ ಸೋಽಪಿ ಹ್ಯಜಯಾ ಕೂಪಲಬ್ಧಯಾ ।
ಕಾಲಂ ಬಹುತಿಥಂ ಭದ್ರೇ ಕಾಮೈರ್ನಾದ್ಯಾಪಿ ತುಷ್ಯತಿ ॥ ೧೧ ॥

ತಥಾಹಂ ಕೃಪಣಃ ಸುಭ್ರು ಭವತ್ಯಾಃ ಪ್ರೇಮಯಂತ್ರಿತಃ ।
ಆತ್ಮಾನಂ ನಾಭಿಜಾನಾಮಿ ಮೋಹಿತಸ್ತವ ಮಾಯಯಾ ॥ ೧೨ ॥

ಯತ್ ಪೃಥಿವ್ಯಾಂ ವ್ರೀಹಿಯವಂ ಹಿರಣ್ಯಂ ಪಶವಃ ಸ್ತ್ರಿಯಃ ।
ನ ದುಹ್ಯಂತಿ ಮನಃಪ್ರೀತಿಂ ಪುಂಸಃ ಕಾಮಹತಸ್ಯ ತೇ ॥ ೧೩ ॥

ನ ಜಾತು ಕಾಮಃ ಕಾಮಾನಾಮುಪಭೋಗೇನ ಶಾಮ್ಯತಿ ।
ಹವಿಷಾ ಕೃಷ್ಣವರ್ತ್ಮೇವ ಭೂಯ ಏವಾಭಿವರ್ಧತೇ ॥ ೧೪ ॥

ಯದಾ ನ ಕುರುತೇ ಭಾವಂ ಸರ್ವಭೂತೇಷ್ವಮಂಗಲಮ್ ।
ಸಮದೃಷ್ಟೇಸ್ತದಾ ಪುಂಸಃ ಸರ್ವಾಃ ಸುಖಮಯಾ ದಿಶಃ ॥ ೧೫ ॥

ಯಾ ದುಸ್ತ್ಯಜಾ ದುರ್ಮತಿಭಿರ್ಜೀರ್ಯತೋ ಯಾ ನ ಜೀರ್ಯತೇ ।
ತಾಂ ತೃಷ್ಣಾಂ ದುಃಖನಿವಹಾಂ ಶರ್ಮಕಾಮೋ ದ್ರುತಂ ತ್ಯಜೇತ್ ॥ ೧೬ ॥

ಪತಿಯ ಅನ್ವೇಷಣೆಯಲ್ಲಿದ್ದವು. ಆ ಒಂದೇ ಹೋತವು ಹಲವಾರು ಮೇಕೆಗಳೊಡನೆ ಮದನಪಿಶಾಚಗ್ರಸ್ತವಾಗಿ ವಿಹರಿಸುತ್ತಾ ತನ್ನನ್ನೇ ತಾನು ಮರೆತುಬಿಟ್ಟಿತು. ॥ ೫-೬ ॥ ಬಾವಿಯಿಂದ ಮೇಲೆ ಬಂದಿದ್ದ ಮೇಕೆಗೆ ತನ್ನ ಪತಿಯಾದರೋ ಇತರ ಮೇಕೆಗಳೊಡನೆ ವಿಹರಿಸುತ್ತಿದೆ ಎಂದು ತಿಳಿದಾಗ, ಅದಕ್ಕೆ ಆ ಹೋತನ ನಡೆವಳಿಕೆ ಸಹಿಸಲಾಗಲಿಲ್ಲ. ॥ ೭ ॥ ಈ ಹೋತವು ಬಹಳ ಕಾಮಿಯೆಂದೂ, ಇವನ ಯಾವ ಭರವಸೆಯೂ ಇಲ್ಲವೆಂದೂ, ಇದು ಮಿತ್ರರೂಪದಿಂದ ಶತ್ರುವಿನ ಕೆಲಸಮಾಡುತ್ತಿದೆ ಎಂದೂ ತಿಳಿದು ಆ ಮೇಕೆಯು ಆ ಇಂದ್ರಿಯಲೋಲುಪ ಹೋತನನ್ನು ಬಿಟ್ಟು ಭಾರೀ ದುಃಖದಿಂದ ತನ್ನನ್ನು ಸಾಕುವವನ ಬಳಿಗೆ ಹೊರಟುಹೋಯಿತು. ॥ ೮ ॥ ಆ ದೀನವೂ, ಕಾಮಿಯೂ ಆದ ಹೋತವು ಅದನ್ನು ಒಲಿಸಿಕೊಳ್ಳಲು ಮ್ಯಾ ಮ್ಯಾ ಎಂದುಕೊಂಡು ಅದರ ಹಿಂದೆಯೇ ಹೋಯಿತು. ಆದರೆ ಆ ಮೇಕೆಯನ್ನು ದಾರಿಯಲ್ಲಿ ಒಲಿಸಿಕೊಳ್ಳಲಾಗಲಿಲ್ಲ. ॥ ೯ ॥ ಆ ಮೇಕೆಯ ಒಡೆಯನು ಓರ್ವ ಬ್ರಾಹ್ಮಣನಾಗಿದ್ದನು. ಅವನು ಸಿಟ್ಟುಗೊಂಡು ಹೋತನ ಜೋಲಾಡುತ್ತಿದ್ದ ವೃಷಣಗಳನ್ನು ಕತ್ತರಿಸಿ ಹಾಕಿದನು. ಆದರೆ ಮತ್ತೆ ಮೇಕೆಯ ಒಳಿತನ್ನು ಯೋಚಿಸಿ ಪುನಃ ಅವನ್ನು ಜೋಡಿಸಿಬಿಟ್ಟನು. ಅವನಿಗೆ ಇಂತಹ ಅನೇಕ ಉಪಾಯಗಳು ತಿಳಿದಿದ್ದುವು. ॥ ೧೦ ॥

ಪ್ರಿಯೇ! ಹೀಗೆ ವೃಷಣಗಳು ಜೋಡಿಸಿದಾಗ ಆ ಹೋತವು ಪುನಃ ಬಾವಿಯಲ್ಲಿ ಸಿಕ್ಕಿದ ಮೇಕೆಯೊಂದಿಗೆ ಅನೇಕ ದಿನಗಳವರೆಗೆ ವಿಷಯ ಭೋಗಗಳನ್ನು ಅನುಭವಿಸುತ್ತಾ ಇದ್ದರೂ ಇಂದಿನವರೆಗೆ ಅದಕ್ಕೆ ಸಂತೋಷವಾಗಲಿಲ್ಲ. ॥ ೧೧ ॥ ಸುಂದರೀ! ನನ್ನ ಸ್ಥಿತಿಯೂ ಇದೇ ಆಗಿದೆ. ನಿನ್ನ ಪ್ರೇಮ ಪಾಶದಲ್ಲಿ ಬಂಧಿತನಾದ ನಾನೂ ಅತ್ಯಂತ ದೀನನಾಗಿ ಹೋದೆನು. ನಿನ್ನ ಮಾಯೆಯಿಂದ ಮೋಹಿತನಾದ ನಾನು ನನ್ನನ್ನೇ ಮರೆತುಬಿಟ್ಟಿರುವೆನು. ॥ ೧೨ ॥

ಪ್ರಿಯೇ! ಭೂಮಂಡಲದಲ್ಲಿ ಎಷ್ಟು ಧಾನ್ಯಗಳಿವೆಯೋ, ಸುವರ್ಣರಾಶಿಗಳಿವೆಯೋ, ಪಶುಗಳಿವೆಯೋ, ಸ್ತ್ರೀಯರಿರುವರೋ, ಇವೆಲ್ಲವೂ ಜೊತೆಗೂಡಿ ಬಂದರೂ ಕಾಮಹತನಾದ ಮನುಷ್ಯನ ಮನಸ್ಸನ್ನು ಸಂತುಷ್ಟಗೊಳಿಸಲಾರವು. ॥ ೧೩ ॥ ವಿಷಯಗಳನ್ನು ಭೋಗಿಸುವುದರಿಂದ ಭೋಗವಾಸನೆಯು ಎಂದೂ ಶಾಂತವಾಗಲಾರದು. ಬದಲಿಗೆ ತುಪ್ಪದ ಆಹುತಿ ಹಾಕಿದಾಗ ಯಜ್ಞೇಶ್ವರನು ಮತ್ತೆ ವೃದ್ಧಿ ಹೊಂದುತ್ತಿರುವಂತೆ ಭೋಗವಾಸನೆಗಳು ಕಾಮೋಪಭೋಗಗಳಿಂದ ಮತ್ತೂ ಪ್ರಬಲವಾಗುತ್ತವೆ. ॥ ೧೪ ॥ ಮನುಷ್ಯನು ಯಾವುದೇ ಪ್ರಾಣಿ ಮತ್ತು ಯಾವುದೇ ವಸ್ತುವಿನೊಡನೆ ರಾಗ-ದ್ವೇಷಗಳ ಭಾವವಿಡದಿದ್ದಾಗ, ಅವನು ಸಮದರ್ಶಿಯಾಗುತ್ತಾನೆ. ಸಮಸ್ತ ದಿಕ್ಕುಗಳೂ ಅಂತಹವನಿಗೆ ಸುಖಮಯವಾಗುತ್ತವೆ. ॥ ೧೫ ॥ ವಿಷಯಗಳ ತೃಷ್ಣೆಯೇ ದುಃಖಗಳ ಉಗಮಸ್ಥಾನವಾಗಿದೆ. ಮಂದಬುದ್ಧಿಯುಳ್ಳವರಾದ ಜನರು ಅಂತಹ ತೃಷ್ಣೆಯನ್ನು ಬಹಳ ಕಷ್ಟದಿಂದಲೂ ತ್ಯಾಗಮಾಡಲಾರರು. ಮುದಿತನವು ಬಂದರೂ ತೃಷ್ಣೆಯು ನಿತ್ಯನೂತನವಾಗಿಯೇ ಇರುತ್ತದೆ. ಆದ್ದರಿಂದ ತನ್ನ ಶ್ರೇಯಸ್ಸನ್ನು ಬಯಸುವವನು ಶೀಘ್ರಾತಿಶೀಘ್ರವಾಗಿ ಈ ತೃಷ್ಣೆಯನ್ನು ಪರಿತ್ಯಜಿಸಬೇಕು. ॥ ೧೬ ॥

ಮಾತ್ರಾ ಸ್ವಸ್ರಾ ದುಹಿತ್ರಾ ವಾ ನಾವಿವಿಕ್ತಾಸನೋ ಭವೇತ್ ।
ಬಲವಾನಿಂದ್ರಿಯಗ್ರಾಮೋ ವಿದ್ವಾಂಸಮಪಿ ಕರ್ಷತಿ ॥ ೧೭ ॥

ಪೂರ್ಣಂ ವರ್ಷಸಹಸ್ರಂ ಮೇ ವಿಷಯಾನ್ ಸೇವತೋಽಸಕೃತ್ ।
ತಥಾಪಿ ಚಾನುಸವನಂ ತೃಷ್ಣಾ ತೇಷೂಪಜಾಯತೇ ॥ ೧೮ ॥

ತಸ್ಮಾದೇತಾಮಹಂ ತ್ಯಕ್ತ್ವಾ ಬ್ರಹ್ಮಣ್ಯಧ್ಯಾಯ ಮಾನಸಮ್ ।
ನಿರ್ದ್ವಂದ್ವೋ ನಿರಹಂಕಾರಶ್ಚರಿಷ್ಯಾಮಿ ಮೃಗೈಃ ಸಹ ॥ ೧೯ ॥

ದೃಷ್ಟಂ ಶ್ರುತಮಸದ್ಬುದ್ಧ್ವಾ ನಾನುಧ್ಯಾಯೇನ್ನ ಸಂವಿಶೇತ್ ।
ಸಂಸೃತಿಂ ಚಾತ್ಮನಾಶಂ ಚ ತತ್ರ ವಿದ್ವಾನ್ಸ ಆತ್ಮದೃಕ್ ॥ ೨೦ ॥

ಇತ್ಯುಕ್ತ್ವಾ ನಾಹುಷೋ ಜಾಯಾಂ ತದೀಯಂ ಪೂರವೇ ವಯಃ ।
ದತ್ತ್ವಾ ಸ್ವಾಂ ಜರಸಂ ತಸ್ಮಾದಾದದೇ ವಿಗತಸ್ಪೃಹಃ ॥ ೨೧ ॥

ದಿಶಿ ದಕ್ಷಿಣಪೂರ್ವಸ್ಯಾಂ ದ್ರುಹ್ಯುಂ ದಕ್ಷಿಣತೋ ಯದುಮ್ ।
ಪ್ರತೀಚ್ಯಾಂ ತುರ್ವಸುಂ ಚಕ್ರ ಉದೀಚ್ಯಾಮನುಮೀಶ್ವರಮ್ ॥ ೨೨ ॥

ಭೂಮಂಡಲಸ್ಯ ಸರ್ವಸ್ಯ ಪೂರುಮರ್ಹತ್ತಮಂ ವಿಶಾಮ್ ।
ಅಭಿಷಿಚ್ಯಾಗ್ರಜಾಂಸ್ತಸ್ಯ ವಶೇ ಸ್ಥಾಪ್ಯ ವನಂ ಯಯೌ ॥ ೨೩ ॥

ಆಸೇವಿತಂ ವರ್ಷಪೂಗಾನ್ ಷಡ್ವರ್ಗಂ ವಿಷಯೇಷು ಸಃ ।
ಕ್ಷಣೇನ ಮುಮುಚೇ ನೀಡಂ ಜಾತಪಕ್ಷ ಇವ ದ್ವಿಜಃ ॥ ೨೪ ॥

ಸ ತತ್ರ ನಿರ್ಮುಕ್ತಸಮಸ್ತಸಂಗ
ಆತ್ಮಾನುಭೂತ್ಯಾ ವಿಧುತತ್ರಿಲಿಂಗಃ ।
ಪರೇಽಮಲೇ ಬ್ರಹ್ಮಣಿ ವಾಸುದೇವೇ
ಲೇಭೇ ಗತಿಂ ಭಾಗವತೀಂ ಪ್ರತೀತಃ ॥ ೨೫ ॥

ಶ್ರುತ್ವಾ ಗಾಥಾಂ ದೇವಯಾನೀ ಮೇನೇ ಪ್ರಸ್ತೋಭಮಾತ್ಮನಃ ।
ಸ್ತ್ರೀಪುಂಸೋಃ ಸ್ನೇಹವೈಕ್ಲವ್ಯಾತ್ಪರಿಹಾಸಮಿವೇರಿತಮ್ ॥ ೨೬ ॥

ತನ್ನ ತಾಯಿಯೇ ಇರಲಿ, ಮಗಳೇ ಇರಲಿ, ತಂಗಿಯಾಗಿರಲಿ, ಏಕಾಂತದಲ್ಲಿ ಒಂದೇ ಆಸನದಲ್ಲಿ ಸೇರಿ ಕುಳಿತುಕೊಳ್ಳಬಾರದು. ಏಕೆಂದರೆ, ಇಂದ್ರಿಯಗಳು ಅತಿಬಲಿಷ್ಠವಾದುವುಗಳು. ಮಹಾ ಮಹಾ ವಿದ್ವಾಂಸರನ್ನೂ ಕೂಡ ಅವುಗಳು ವಿಚಲಿತರನ್ನಾಗಿಸಿ ಬಿಡುತ್ತವೆ. ॥ ೧೭ ॥ ವಿಷಯಗಳನ್ನು ಪುನಃ ಪುನಃ ಸೇವಿಸುತ್ತಾ ನಾನು ಒಂದು ಸಾವಿರವರ್ಷಗಳನ್ನು ಕಳೆದೆನು. ಹೀಗಿದ್ದರೂ ಪ್ರತಿಕ್ಷಣವೂ ಆ ಭೋಗಗಳ ಲಾಲಸೆಯು ಬೆಳೆಯುತ್ತಲೇ ಇದೆ. ॥ ೧೮ ॥ ಅದಕ್ಕಾಗಿ ನಾನೀಗ ಈ ಭೋಗಗಳ ತೃಷ್ಣೆಯನ್ನು ಸಂಪೂರ್ಣವಾಗಿ ಪರಿತ್ಯಜಿಸಿ, ಮನಸ್ಸನ್ನು ಪರಬ್ರಹ್ಮ ಪರಮಾತ್ಮನಲ್ಲಿ ಲೀನಗೊಳಿಸಿ, ಶೀತೋಷ್ಣ ಸುಖ-ದುಃಖಾದಿ ದ್ವಂದ್ವಗಳಿಂದ ರಹಿತನಾಗಿ, ಅಹಂಕಾರದಿಂದಲೂ ಮುಕ್ತನಾಗಿ, ಜಿಂಕೆಗಳೊಡನೆ ಅರಣ್ಯದಲ್ಲಿ ಸಂಚರಿಸುವೆನು. ॥ ೧೯ ॥ ಇಹ-ಪರ ಲೋಕಗಳೆರಡರ ಭೋಗಗಳು ಅಸತ್ತಾಗಿವೆ ಎಂದು ಭಾವಿಸಿ, ಅವನ್ನು ಚಿಂತಿಸದೆ, ಭೋಗಿಸದೇ ಇರಬೇಕು. ಅವುಗಳ ಚಿಂತನದಿಂದಲೇ ಜನ್ಮ-ಮೃತ್ಯುರೂಪವಾದ ಸಂಸಾರವು ಪ್ರಾಪ್ತವಾಗುವುದೆಂಬುದನ್ನು ತಿಳಿಯಬೇಕು. ಅವುಗಳ ಭೋಗದಿಂದಲಾದರೋ ಆತ್ಮನಾಶವಾಗುವುದೆಂಬ ರಹಸ್ಯವನ್ನು ತಿಳಿದು ಅವುಗಳಿಂದ ದೂರವುಳಿಯುವವನೇ ಆತ್ಮಜ್ಞಾನಿಯು. ॥ ೨೦ ॥

ಪರೀಕ್ಷಿತನೇ! ಯಯಾತಿಯು ತನ್ನ ಪತ್ನಿಗೆ ಹೀಗೆ ಹೇಳಿ ಪುರುವಿನ ಯೌವನವನ್ನು ಅವನಿಗೆ ಮರಳಿಸಿ, ತನ್ನ ಮುದಿತನವನ್ನು ಅವನಿಂದ ಮರಳಿ ಸ್ವೀಕರಿಸಿ ನಿಃಸ್ಪೃಹನಾದನು. ಅವನಿಗೆ ವಿಷಯ ಸುಖಗಳಲ್ಲಿ ಆಸಕ್ತಿಯು ತೊಲಗಿಹೋಯಿತು. ॥ ೨೧ ॥ ಬಳಿಕ ಅವನು ಆಗ್ನೇಯ ದಿಕ್ಕಿನ ರಾಜ್ಯಗಳಿಗೆ ದ್ರುಹ್ಯುವನ್ನೂ, ದಕ್ಷಿಣದ ರಾಜ್ಯಗಳಿಗೆ ಯದುವನ್ನೂ, ಪಶ್ಚಿಮದಲ್ಲಿ ತುರ್ವಸುವನ್ನೂ, ಉತ್ತರದ ರಾಜ್ಯಗಳನ್ನು ಅನು ಎಂಬುವನಿಗೆ ಹಂಚಿದನು. ॥ ೨೨ ॥ ಭೂಮಂಡಲದಲ್ಲಿರುವ ಸಮಸ್ತವಾದ ಸಂಪತ್ತನ್ನೂ ಹೊಂದಲು ಯೋಗ್ಯನಾದ ಪುರುವನ್ನು ತನ್ನ ಸಿಂಹಾಸನದಲ್ಲಿ ಕುಳ್ಳಿರಿಸಿ ರಾಜ್ಯಾಭಿಷೇಕವನ್ನು ಮಾಡಿ ಪುರುವಿನ ಅಗ್ರಜರೆಲ್ಲರನ್ನು ಅವನ ವಶಕ್ಕೆ ಒಪ್ಪಿಸಿ ಯಯಾತಿಯು ಕಾಡಿಗೆ ಹೊರಟು ಹೋದನು. ॥ ೨೩ ॥ ರಾಜಾ ಯಯಾತಿಯು ಬಹಳ ವರ್ಷಗಳವರೆಗೆ ಇಂದ್ರಿಯಗಳಿಂದ ವಿಷಯಸುಖಗಳನ್ನು ಭೋಗಿಸಿದ್ದರೂ ರೆಕ್ಕೆ ಮೂಡಿದ ಪಕ್ಷಿಯು ಗೂಡನ್ನು ಬಿಟ್ಟು ಹಾರಿಹೋಗುವಂತೆ ಅವನು ಕ್ಷಣಮಾತ್ರದಲ್ಲಿ ಸರ್ವಸ್ವವನ್ನು ಪರಿತ್ಯಜಿಸಿಬಿಟ್ಟನು. ॥ ೨೪ ॥ ವನಕ್ಕೆ ತೆರಳಿದ ರಾಜನಾದ ಯಯಾತಿಯು ಸಮಸ್ತ ಆಸಕ್ತಿಗಳಿಂದ ಮುಕ್ತನಾಗಿಬಿಟ್ಟನು. ಆತ್ಮಸಾಕ್ಷಾತ್ಕಾರದ ಮೂಲಕ ಅವನ ತ್ರಿಗುಣಮಯ ಲಿಂಗಶರೀರವು ನಾಶವಾಯಿತು. ಅವನು ಮಾಯಾಮಲದಿಂದ ರಹಿತನಾದ ಪರಬ್ರಹ್ಮ ಪರಮಾತ್ಮ ವಾಸುದೇವನಲ್ಲಿ ಒಂದಾಗಿ ಭಗವತ್ಪ್ರೇಮಿಗಳಾದ ಸಂತರಿಗೆ ಲಭ್ಯವಾಗುವ ಭಾಗವತೀ ಗತಿಯನ್ನು ಸೇರಿದನು. ॥ ೨೫ ॥

ದೇವಯಾನಿಯು ಯಯಾತಿಯು ಹೇಳಿದ ಕಥೆಯನ್ನು ಕೇಳಿದಾಗ, ಇವರು ನನ್ನನ್ನು ನಿವೃತ್ತಿಮಾರ್ಗಕ್ಕಾಗಿ ಪ್ರೋತ್ಸಾಹಿಸುತ್ತಿದ್ದಾರೆ ಎಂದು ತಿಳಿದುಕೊಂಡಳು. ಏಕೆಂದರೆ, ಸ್ತ್ರೀ-ಪುರುಷರಲ್ಲಿ ಪರಸ್ಪರ ಪ್ರೇಮದಿಂದಾಗಿ ವಿರಹವು ಇದಿರಾದಾಗ ವಿಕಲತೆ

ಸಾ ಸನ್ನಿವಾಸಂ ಸುಹೃದಾಂ ಪ್ರಪಾಯಾಮಿವ ಗಚ್ಛತಾಮ್ ।
ವಿಜ್ಞಾಯೇಶ್ವರತಂತ್ರಾಣಾಂ ಮಾಯಾವಿರಚಿತಂ ಪ್ರಭೋಃ
॥ ೨೭ ॥

ಸರ್ವತ್ರ ಸಂಗಮುತ್ಸೃಜ್ಯ ಸ್ವಪ್ನೌಪಮ್ಯೇನ ಭಾರ್ಗವೀ ।
ಕೃಷ್ಣೇ ಮನಃ ಸಮಾವೇಶ್ಯ ವ್ಯಧುನೋಲ್ಲಿಂಗಮಾತ್ಮನಃ
॥ ೨೮ ॥

ನಮಸ್ತುಭ್ಯಂ ಭಗವತೇ ವಾಸುದೇವಾಯ ವೇಧಸೇ ।
ಸರ್ವಭೂತಾಧಿವಾಸಾಯ ಶಾಂತಾಯ ಬೃಹತೇ ನಮಃ
॥ ೨೯ ॥

ಉಂಟಾಗುತ್ತದೆ. ಇದನ್ನು ಯೋಚಿಸಿಯೇ ಇವರು ಪರಿಹಾಸ ಮಾಡುವಂತೆ ಈ ಕಥೆಯನ್ನು ಹೇಳಿರುವರೆಂದು ಭಾವಿಸಿದಳು. ।೨೬॥ ಈಶ್ವರನಿಗೆ ಅಧೀನರಾಗಿರುವ ಬಂಧುಗಳು - ಅರವಟ್ಟಿಗೆಯಲ್ಲಿ ದಾರಿಹೋಕರು ಸೇರುವಂತೆ ಒಂದೆಡೆಯಲ್ಲಿ ಸೇರಿರುವರು. ಇದೆಲ್ಲವೂ ಭಗವಂತನ ಮಾಯೆಯ ಆಟವಾಗಿದ್ದು ಸ್ವಪ್ನ ದಂತೆಯೇ ಇದೆ. ಹೀಗೆ ತಿಳಿದು ದೇವಯಾನಿಯೂ ಎಲ್ಲ ಪದಾರ್ಥಗಳ ಆಸಕ್ತಿಯನ್ನು ತ್ಯಜಿಸಿ ತನ್ನ ಮನಸ್ಸನ್ನು ಭಗವಾನ್ ಶ್ರೀಕೃಷ್ಣನಲ್ಲಿ ತನ್ಮಯಗೊಳಿಸಿದಳು. ಬಂಧನಕ್ಕೆ ಕಾರಣವಾದ ಲಿಂಗ ಶರೀರವನ್ನು ಪರಿತ್ಯಜಿಸಿ ಆಕೆಯು ಭಗವಂತನನ್ನು ಹೊಂದಿದಳು ॥ ೨೭-೨೮ ॥ ದೇವಯಾನಿಯು ಭಗವಂತನನ್ನು ನಮಸ್ಕರಿಸುತ್ತಾ ಪ್ರಾರ್ಥಿಸಿದಳು - ಸಮಸ್ತ ಜಗತ್ತಿನ ರಚಯಿತನೂ, ಸರ್ವಾಂತರ್ಯಾಮಿಯೂ, ಎಲ್ಲರ ಆಶ್ರಯಸ್ವರೂಪನೂ, ಸರ್ವಶಕ್ತನೂ ಆದ ಭಗವಾನ್ ವಾಸುದೇವನಿಗೆ ವಂದಿಸುತ್ತೇನೆ. ಪರಮ ಶಾಂತ ಮತ್ತು ಅನಂತ ತತ್ತ್ವವಾದ ಪರಮಾತ್ಮನಿಗೆ ನಾನು ನಮಸ್ಕರಿಸುತ್ತೇನೆ. ॥ ೨೯ ॥

ಹತ್ತೊಂಭತ್ತನೆಯ ಅಧ್ಯಾಯವು ಮುಗಿಯಿತು. ॥ ೧೯ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ನವಮ ಸ್ಕಂಧೇ ಏಕೋನವಿಂಶೋಽಧ್ಯಾಯಃ ॥ ೧೯ ॥

ಇಪ್ಪತ್ತನೆಯ ಅಧ್ಯಾಯ

ಪುರುವಿನ ವಂಶ, ರಾಜಾ ದುಷ್ಯಂತ ಮತ್ತು ಭರತನ ಚರಿತ್ರವರ್ಣನೆ

ಶ್ರೀಶುಕ ಉವಾಚ

ಪೂರೋರ್ವಂಶಂ ಪ್ರವಕ್ಷ್ಯಾಮಿ ಯತ್ರ ಜಾತೋಽಸಿ ಭಾರತ ।
ಯತ್ರ ರಾಜರ್ಷಯೋ ವಂಶ್ಯಾ ಬ್ರಹ್ಮವಂಶ್ಯಾಶ್ಚ ಜಜ್ಞಿರೇ
॥ ೧ ॥

ಜನಮೇಜಯೋ ಹ್ಯಭೂತ್ಪೂರೋಃ ಪ್ರಚಿನ್ವಾಂಸ್ತತ್ಸುತಸ್ತತಃ ।
ಪ್ರವೀರೋಽಥ ನಮಸ್ಯುರ್ವೈ ತಸ್ಮಾಚ್ಚಾರುಪದೋಽಭವತ್
॥ ೨ ॥

ತಸ್ಯ ಸುದ್ಯುರಭೂತ್ಪುತ್ರಸ್ತಸ್ಮಾದ್ಬಹುಗವಸ್ತತಃ ।
ಸಂಯಾತಿಸ್ತಸ್ಯಾಹಂಯಾತೀ ರೌದ್ರಾಶ್ವಸ್ತತ್ಸುತಃ ಸ್ಮೃತಃ
॥ ೩ ॥

ಋತೇಯುಸ್ತಸ್ಯ ಕಕ್ಷೇಯುಃ ಸ್ಥಂಡಿಲೇಯುಃ ಕೃತೇಯುಕಃ ।
ಜಲೇಯುಃ ಸಂತತೇಯುಶ್ಚ ಧರ್ಮಸತ್ಯವ್ರತೇಯವಃ
॥ ೪ ॥

ದಶೈತೇಽಪ್ಸರಸಃ ಪುತ್ರಾ ವನೇಯುಶ್ಚಾವಮಃ ಸ್ಮೃತಃ ।
ಘೃತಾಚ್ಯಾಮಿಂದ್ರಿಯಾಣೀವ ಮುಖ್ಯಸ್ಯ ಜಗದಾತ್ಮನಃ
॥ ೫ ॥

ಋತೇಯೋ ರಂತಿಭಾರೋಽಭೂತ್ತ್ರಯಸ್ತಸ್ಯಾತ್ಮಜಾ ನೃಪ ।
ಸುಮತಿರ್ಧ್ರುವೋಽಪ್ರತಿರಥಃ ಕಣ್ವೋಽಪ್ರತಿರಥಾತ್ಮಜಃ
॥ ೬ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ - ಪರೀಕ್ಷಿತನೇ! ಈಗ ನಾನು ಪುರುರಾಜನ ವಂಶವನ್ನು ವರ್ಣಿಸುವೆನು. ಇದೇ ವಂಶದಲ್ಲಿ ನೀನು ಜನ್ಮ ತಾಳಿರುವೆ. ಈ ವಂಶದಲ್ಲಿಯೇ ಹಲವಾರು ರಾಜರ್ಷಿಗಳೂ, ಬ್ರಹ್ಮರ್ಷಿಗಳೂ ಆಗಿಹೋಗಿದ್ದಾರೆ. ॥ ೧ ॥ ಪುರುವಿಗೆ ಜನಮೇಜಯ ಪುತ್ರನು ಹುಟ್ಟಿದನು. ಜನಮೇಜಯನಿಗೆ ಪ್ರಚಿನ್ವಾನ್, ಪ್ರಚಿನ್ವಂತನಿಗೆ ಪ್ರವೀರ, ಪ್ರವೀರನಿಗೆ ನಮಸ್ಯು, ನಮಸ್ಯುವಿಗೆ ಚಾರುಪದ ಪುತ್ರನಾದನು. ॥ ೨ ॥ ಚಾರುಪದನಿಂದ ಸುದ್ಯು, ಸುದ್ಯುವಿನಿಂದ ಬಹುಗವ, ಬಹುಗವನಿಂದ ಸಂಯಾತಿ, ಸಂಯಾತಿಯಿಂದ ಅಹಂಯಾತಿ, ಅಹಂಯಾತಿಯಿಂದ ರೌದ್ರಾಶ್ವ ಹುಟ್ಟಿದನು. ॥ ೩ ॥ ಪರೀಕ್ಷಿತನೇ! ವಿಶ್ವಾತ್ಮಾ ಪ್ರಧಾನ ಪ್ರಾಣದಿಂದ ಹತ್ತು ಇಂದ್ರಿಯಗಳು ಆಗುವಂತೆಯೇ ಘೃತಾಚಿ ಅಪ್ಸರೆಯ ಗರ್ಭದಿಂದ ರೌದ್ರಾಶ್ವನು - ಋತೇಯು, ಕಕ್ಷೇಯು, ಸ್ಥಂಡಿಲೇಯು, ಕೃತೇಯು, ಜಲೇಯು, ಸಂತತೇಯು, ಧರ್ಮೇಯು, ಸತ್ಯೇಯು, ವ್ರತೇಯು ಮತ್ತು ವನೇಯು ಎಂಬ ಹತ್ತು ಪುತ್ರರನ್ನು ಪಡೆದನು. ॥ ೪-೫ ॥ ರಾಜೇಂದ್ರ! ಅವರಲ್ಲಿ ಋತೇಯುವಿನ ಪುತ್ರ ರಂತಿಭಾರ ಹುಟ್ಟಿದನು. ರಂತಿಭಾರನಿಗೆ - ಸುಮತಿ, ಧ್ರುವ, ಅಪ್ರತಿರಥರೆಂಬ ಮೂವರು ಪುತ್ರರಾದರು. ಅಪ್ರತಿರಥನಿಗೆ ಕಣ್ವ ನೆಂಬ ಪುತ್ರನಾದನು. ॥ ೬ ॥

ತಸ್ಯ ಮೇಧಾತಿಥಿಸ್ತಸ್ಮಾತ್ಪ್ರಸ್ಕಣ್ಣಾದ್ಯಾ ದ್ವಿಜಾತಯಃ ।
ಪುತ್ರೋಽಭೂತ್ಸುಮತೇ ರೈಭ್ಯೋ ದುಷ್ಯಂತಸ್ತತ್ಸುತೋ ಮತಃ ॥ ೭ ॥

ದುಷ್ಯಂತೋ ಮೃಗಯಾಂ ಯಾತಃ ಕಣ್ವಾಶ್ರಮಪದಂ ಗತಃ ।
ತತ್ರಾಸೀನಾಂ ಸ್ವಪ್ರಭಯಾ ಮಂಡಯಂತೀಂ ರಮಾಮಿವ ॥ ೮ ॥

ವಿಲೋಕ್ಯ ಸದ್ಯೋ ಮುಮುಹೇ ದೇವಮಾಯಾಮಿವ ಸ್ತ್ರಿಯಮ್ ।
ಬಭಾಷೇ ತಾಂ ವರಾರೋಹಾಂ ಭಟೈಃ ಕತಿಪಯೈರ್ವೃತಃ ॥ ೯ ॥

ತದ್ದರ್ಶನಪ್ರಮುದಿತಃ ಸಂನಿವೃತ್ತ ಪರಿಶ್ರಮಃ ।
ಪಪ್ರಚ್ಛ ಕಾಮಸಂತಪ್ತಃ ಪ್ರಹಸನ್ ಶ್ಲಕ್ಷ್ಣಯಾ ಗಿರಾ ॥ ೧೦ ॥

ಕಾ ತ್ವಂ ಕಮಲಪತ್ರಾಕ್ಷಿ ಕಸ್ಯಾಸಿ ಹೃದಯಂಗಮೇ ।
ಕಿಂ ವಾ ಚಿಕೀರ್ಷಿತಂ ತತ್ರ ಭವತ್ಯಾ ನಿರ್ಜನೇ ವನೇ ॥ ೧೧ ॥

ವ್ಯಕ್ತಂ ರಾಜನ್ಯತನಯಾಂ ವೇದ್ಮ್ಯಹಂ ತ್ವಾಂ ಸುಮಧ್ಯಮೇ ।
ನ ಹಿ ಚೇತಃ ಪೌರವಾಣಾಮಧರ್ಮೇ ರಮತೇ ಕ್ವಚಿತ್ ॥ ೧೨ ॥

ಶಕುಂತಲೋವಾಚ

ವಿಶ್ವಾಮಿತ್ರಾತ್ಮಜೈವಾಹಂ ತ್ಯಕ್ತಾ ಮೇನಕಯಾ ವನೇ ।
ವೇದೈತದ್ಭಗವಾನ್ ಕಣ್ವೋ ವೀರ ಕಿಂ ಕರವಾಮ ತೇ ॥ ೧೩ ॥

ಆಸ್ಯತಾಂ ಹ್ಯರವಿಂದಾಕ್ಷ ಗೃಹ್ಯತಾಮರ್ಹಣಂ ಚ ನಃ ।
ಭುಜ್ಯತಾಂ ಸಂತಿ ನೀವಾರಾ ಉಷ್ಯತಾಂ ಯದಿ ರೋಚತೇ ॥ ೧೪ ॥

ದುಷ್ಯಂತ ಉವಾಚ

ಉಪಪನ್ನಮಿದಂ ಸುಭ್ರು ಜಾತಾಯಾಃ ಕುಶಿಕಾನ್ವಯೇ ।
ಸ್ವಯಂ ಹಿ ವೃಣುತೇ ರಾಜ್ಞಾಂ ಕನ್ಯಕಾಃ ಸದೃಶಂ ವರಮ್ ॥ ೧೫ ॥

ಓಮಿತ್ಯುಕ್ತೇ ಯಥಾಧರ್ಮಮುಪಯೇಮೇ ಶಕುಂತಲಾಮ್ ।
ಗಾಂಧರ್ವವಿಧಿನಾ ರಾಜಾ ದೇಶಕಾಲವಿಧಾನವಿತ್ ॥ ೧೬ ॥

ಅಮೋಘವೀರ್ಯೋ ರಾಜರ್ಷಿರ್ಮಹಿಷ್ಯಾಂ ವೀರ್ಯಮಾದಧೇ ।
ಶ್ವೋಭೂತೇ ಸ್ವಪುರಂ ಯಾತಃ ಕಾಲೇನಾಸೂತ ಸಾ ಸುತಮ್ ॥ ೧೭ ॥

ಕಣ್ವನಿಗೆ ಪುತ್ರನಾದವನು ಮೇಧಾತಿಥಿ. ಮೇಧಾತಿಥಿಯಿಂದ ಪ್ರಸ್ಕಣ್ಣ ಮೊದಲಾದ ಬ್ರಾಹ್ಮಣರು ಉತ್ಪನ್ನರಾದರು. ಸುಮತಿಗೆ ರೈಭ್ಯನೆಂಬ ಪುತ್ರನಾದನು. ಈ ರೈಭ್ಯನ ಪುತ್ರನೇ ದುಷ್ಯಂತ. ॥ ೭ ॥

ಒಮ್ಮೆ ದುಷ್ಯಂತನು ತನ್ನ ಕೆಲವು ಸೈನಿಕರೊಂದಿಗೆ ಬೇಟೆಯಾಡಲು ವನಕ್ಕೆ ಹೋದನು. ಬೇಟೆಯಾಡುತ್ತಾ ಅವನು ಕಣ್ವಮುನಿಯ ಆಶ್ರಮಕ್ಕೆ ಹೋದನು. ಆ ಆಶ್ರಮದಲ್ಲಿ ದೇವಮಾಯೆಯಂತಿರುವ ಮನೋಹರವಾದ ಓರ್ವ ಯುವತಿಯು ಕುಳಿತಿದ್ದಳು. ಲಕ್ಷ್ಮಿಗೆ ಸಮಾನವಾದ ಆಕೆಯ ಅಂಗಕಾಂತಿಯಿಂದ ಆ ಆಶ್ರಮವು ಬೆಳಗುತ್ತಿತ್ತು. ಅಂತಹ ಸುಂದರಿಯನ್ನು ನೋಡುತ್ತಲೇ ದುಷ್ಯಂತನು ವಿಮೋಹಿತನಾಗಿ ಅವಳೊಂದಿಗೆ ಮಾತನಾಡತೊಡಗಿದನು. ॥ ೮-೯ ॥ ಅವಳನ್ನು ನೋಡಿದೊಡನೆಯೇ ಅವನಿಗೆ ಪರಮಾನಂದವಾಯಿತು. ಅವನ ಮನಸ್ಸಿನಲ್ಲಿ ಕಾಮವಾಸನೆ ಜಾಗ್ರತವಾಯಿತು. ಬಳಲಿಕೆಯೆಲ್ಲವೂ ಪರಿಹಾರವಾಯಿತು. ಅವನು ಮುಗುಳ್ನಗುತ್ತಾ ಮಧುರವಾದ ಮಾತುಗಳಿಂದ ಅವಳಲ್ಲಿ ಕೇಳಿದನು – ॥ ೧೦ ॥ ಎಲೈ ಕಮಲಾಕ್ಷಿಯೇ! ನೀನು ಯಾರು? ಯಾರ ಮಗಳು? ನನ್ನ ಹೃದಯವನ್ನು ನಿನ್ನತ್ತ ಆಕರ್ಷಿಸಿದ ಸುಂದರಿಯೇ! ನೀನು ಈ ನಿರ್ಜನ ವನದಲ್ಲಿ ಇದ್ದುಕೊಂಡು ಏನು ಮಾಡಬೇಕೆಂದಿರುವೆ? ॥ ೧೧ ॥ ಸುಂದರಿಯೇ! ನೀನು ಯಾರೋ ಕ್ಷತ್ರಿಯನ ಮಗಳಾಗಿರಬೇಕೆಂದು ನಾನು ಸ್ಪಷ್ಟವಾಗಿ ತಿಳಿಯುತ್ತಿದ್ದೇನೆ. ಏಕೆಂದರೆ, ಪುರುವಂಶೀಯರ ಚಿತ್ತವು ಎಂದೂ ಅಧರ್ಮದ ಕಡೆಗೆ ವಾಲುವುದಿಲ್ಲ. ॥ ೧೨ ॥

ಶಕುಂತಲೆಯು ಹೇಳಿದಳು – ಮಹಾರಾಜ! ನೀವು ಹೇಳಿರುವುದು ನಿಜವಾಗಿದೆ. ನಾನು ವಿಶ್ವಾಮಿತ್ರರ ಮಗಳು. ಮೇನಕೆಯೆಂಬ ಅಪ್ಸರೆಯು ನನ್ನನ್ನು ವನದಲ್ಲಿ ಬಿಟ್ಟುಹೋಗಿದ್ದಳು. ಈ ಮಾತಿಗೆ ನನ್ನನ್ನು ಸಾಕಿ ಪೋಷಿಸಿದ ಮಹರ್ಷಿ ಕಣ್ವರೇ ಸಾಕ್ಷಿಯಾಗಿದ್ದಾರೆ. ವೀರಶಿರೋಮಣಿಯೇ! ನಾನು ನಿಮಗೆ ಏನು ಸೇವೆ ಮಾಡಲಿ? ॥ ೧೩ ॥ ಕಮಲಾಕ್ಷನೇ! ಇಲ್ಲಿಯೇ ಕುಳಿತುಕೋ. ನಾವು ಮಾಡಲಿರುವ ಯತ್ಕಿಂಚಿತ್ ಸತ್ಕಾರವನ್ನು ಸ್ವೀಕರಿಸು. ಆಶ್ರಮದಲ್ಲಿ ಶಾಲ್ಯಾನ್ನವಿದೆ. ನೀನು ಬಯಸುವಿರಾದರೆ ಊಟಮಾಡು. ಉಚಿತವೆನಿಸಿದರೆ ಇಲ್ಲೇ ಉಳಿದುಕೊಳ್ಳಬಹುದು. ॥ ೧೪ ॥

ದುಷ್ಯಂತನು ಹೇಳಿದನು – ಸುಂದರಿಯೇ! ನೀನು ಕುಶಿಕ ವಂಶದಲ್ಲಿ ಹುಟ್ಟಿರುವೆ. ಆದ್ದರಿಂದ ಈ ಪ್ರಕಾರದ ಆತಿಥ್ಯ-ಸತ್ಕಾರ ಮಾಡುವುದು ನಿನಗೆ ಯೋಗ್ಯವೇ ಆಗಿದೆ. ಏಕೆಂದರೆ ರಾಜಕನ್ಯೆಯರು ಸ್ವತಃ ತಮ್ಮ ಪತಿಯನ್ನು ವರಣಮಾಡಿಕೊಳ್ಳುವರು. ॥ ೧೫ ॥ ಶಕುಂತಲೆಯ ಸ್ವೀಕೃತಿ ದೊರೆತಾಗ ದೇಶ, ಕಾಲ ಮತ್ತು ಶಾಸ್ತ್ರದ ವಿಧಿ- ವಿಧಾನಗಳನ್ನೂ ಬಲ್ಲ ದುಷ್ಯಂತನು ಗಾಂಧರ್ವವಿಧಿಯಿಂದ ಆಕೆಯನ್ನು ವಿವಾಹವಾದನು. ॥ ೧೬ ॥ ಅಮೋಘವೀರ್ಯನಾದ ದುಷ್ಯಂತನು ಅಂದು ರಾತ್ರಿ ಅಲ್ಲಿಯೇ ಇದ್ದು ಗರ್ಭಾಧಾನ ಸಂಸ್ಕಾರವನ್ನು ಮುಗಿಸಿ, ಬೆಳಗಾಗುತ್ತಲೇ ತನ್ನ ರಾಜಧಾನಿಗೆ ತೆರಳಿದನು. ನವಮಾಸಗಳು ತುಂಬುತ್ತಲೇ ಶಕುಂತಲೆಯು ಗಂಡುಮಗುವನ್ನು ಹಡೆದಳು. ॥ ೧೭ ॥

ಕಣ್ವಃ ಕುಮಾರಸ್ಯ ವನೇ ಚಕ್ರೇ ಸಮುಚಿತಾಃ ಕ್ರಿಯಾಃ ।
ಬದ್ಧ್ವಾ ಮೃಗೇಂದ್ರಾಂಸ್ತರಸಾ ಕ್ರೀಡತಿ ಸ್ಮ ಸ ಬಾಲಕಃ ॥ ೧೮ ॥

ತಂ ದುರತ್ಯಯವಿಕ್ರಾಂತಮಾದಾಯ ಪ್ರಮದೋತ್ತಮಾ ।
ಹರೇರಂಶಾಂಶಸಂಭೂತಂ ಭರ್ತುರಂತಿಕಮಾಗಮತ್ ॥ ೧೯ ॥

ಯದಾ ನ ಜಗೃಹೇ ರಾಜಾ ಭಾರ್ಯಾಪುತ್ರಾವನಿಂದಿತೌ ।
ಶೃಣ್ವತಾಂ ಸರ್ವಭೂತಾನಾಂ ಖೇ ವಾಗಾಹಾಶರೀರಿಣೀ ॥ ೨೦ ॥

ಮಾತಾ ಭಸ್ತ್ರಾ ಪಿತುಃ ಪುತ್ರೋ ಯೇನ ಜಾತಃ ಸ ಏವ ಸಃ ।
ಭರಸ್ವ ಪುತ್ರಂ ದುಷ್ಯಂತ ಮಾವಮಂಸ್ಥಾಃ ಶಕುಂತಲಾಮ್ ॥ ೨೧ ॥

ರೇತೋಧಾಃ ಪುತ್ರೋ ನಯತಿ ನರದೇವ ಯಮಕ್ಷಯಾತ್ ।
ತ್ವಂ ಚಾಸ್ಯ ಧಾತಾ ಗರ್ಭಸ್ಯ ಸತ್ಯಮಾಹ ಶಕುಂತಲಾ ॥ ೨೨ ॥

ಪಿತರ್ಯುಪರತೇ ಸೋಽಪಿ ಚಕ್ರವರ್ತೀ ಮಹಾಯಶಾಃ ।
ಮಹಿಮಾ ಗೀಯತೇ ತಸ್ಯ ಹರೇರಂಶಭುವೋ ಭುವಿ ॥ ೨೩ ॥

ಚಕ್ರಂ ದಕ್ಷಿಣಹಸ್ತೇಽಸ್ಯ ಪದ್ಮಕೋಶೋಽಸ್ಯ ಪಾದಯೋಃ ।
ಈಜೇ ಮಹಾಭಿಷೇಕೇಣ ಸೋಽಭಿಷಿಕ್ತೋಽಧಿರಾಡ್ವಿಭುಃ ॥ ೨೪ ॥

ಪಂಚಪಂಚಾಶತಾ ಮೇಧ್ಯೈರ್ಗಂಗಾಯಾಮನು ವಾಜಿಭಿಃ ।
ಮಾಮತೇಯಂ ಪುರೋಧಾಯ ಯಮುನಾಯಾಮನು ಪ್ರಭುಃ ॥ ೨೫ ॥

ಅಷ್ಟಸಪ್ತತಿಮೇಧ್ಯಾಶ್ವಾನ್ ಬಬಂಧ ಪ್ರದದದ್ವಸು ।
ಭರತಸ್ಯ ಹಿ ದೌಷ್ಯಂತೇರಗ್ನಿಃ ಸಾಚೀಗುಣೇ ಚಿತಃ ।
ಸಹಸ್ರಂ ಬದ್ವಶೋ ಯಸ್ಮಿನ್ ಬ್ರಾಹ್ಮಣಾ ಗಾ ವಿಭೇಜಿರೇ ॥ ೨೬ ॥

ಮಹರ್ಷಿ ಕಣ್ವರು ಕಾಡಿನಲ್ಲೇ ಆ ರಾಜಕುಮಾರನ ಜಾತಕರ್ಮಾದಿ ಸಂಸ್ಕಾರಗಳನ್ನು ವಿಧಿವತ್ತಾಗಿ ನೆರವೇರಿಸಿದರು. ಆ ಬಾಲಕನು ಬಾಲ್ಯದಲ್ಲೇ ದೊಡ್ಡ-ದೊಡ್ಡ ಸಿಂಹಗಳನ್ನು ಹಿಡಿದು ಕಟ್ಟಿಹಾಕಿ ಅವುಗಳೊಂದಿಗೆ ಆಡುತ್ತಿದ್ದನು. ॥ ೧೮ ॥

ಆ ಬಾಲಕನು ಭಗವಂತನ ಅಂಶಾಂಶಾವತಾರನಾಗಿದ್ದನು. ಅವನ ಬಲ ಪರಾಕ್ರಮಗಳು ಅಪರಿಮಿತವಾಗಿದ್ದುವು. ಪ್ರಮದೆಯರಲ್ಲಿ ಶ್ರೇಷ್ಠಳಾದ ಶಕುಂತಲೆಯು ಅವನನ್ನು ಜೊತೆಗೆ ಕರೆದುಕೊಂಡು ತನ್ನ ಪತಿಯಬಳಿಗೆ ಹೋದಳು. ॥ ೧೯ ॥ ನಿರ್ದೋಷಿಗಳಾದ ಭಾರ್ಯಾ-ಪುತ್ರರನ್ನು ರಾಜನು ಸ್ವೀಕರಿಸಲಿಲ್ಲ. ಅವರ ವಿಷಯವಾಗಿ ತಾನು ಏನನ್ನೂ ಅರಿಯೆನೆಂದು ಹೇಳಿಬಿಟ್ಟನು. ಈ ಸಮಯದಲ್ಲಿ ಸಮಸ್ತ ಪ್ರಾಣಿಗಳು ಕೇಳಿಸುವಂತೆ ಆಕಾಶದಲ್ಲಿ ಅಶರೀರವಾಣಿಯೊಂದು ನುಡಿಯಿತು - ॥ ೨೦ ॥ "ಪುತ್ರನ ಉತ್ಪತ್ತಿಯಲ್ಲಿ ತಾಯಿಯು ಕೇವಲ ಚರ್ಮದ ಚೀಲಕ್ಕೆ ಸಮಾನಳಾಗಿರುತ್ತಾಳೆ. ವಾಸ್ತವವಾಗಿ ಪುತ್ರನು ಪಿತನಿಗೇ ಸೇರಿದವನು. ಏಕೆಂದರೆ, ತಂದೆಯೇ ಸಾಕ್ಷಾತ್ತಾಗಿ ಪುತ್ರನ ರೂಪದಲ್ಲಿ ಜನಿಸುತ್ತಾನೆ. ಎಲೈ ದುಷ್ಯಂತನೇ! ನೀನು ಶಕುಂತಲೆಯನ್ನು ತಿರಸ್ಕರಿಸಬೇಡ. ನಿನ್ನ ಪುತ್ರನ ಭರಣ-ಪೋಷಣೆ ಮಾಡು. ॥ ೨೧ ॥ ರಾಜನೇ! ವಂಶದ ವೃದ್ಧಿಯನ್ನು ಮಾಡುವ ಪುತ್ರನು ತನ್ನ ತಂದೆಯನ್ನು ನರಕದಿಂದ ಉದ್ಧರಿಸುವನು. ಆದುದರಿಂದ ನಿನ್ನ ಮಗನನ್ನು ತಿರಸ್ಕರಿಸಬೇಡ. ಶಕುಂತಲೆಯಲ್ಲಿ ಗರ್ಭವನ್ನು ಇಟ್ಟವನು ನೀನೇ ಆಗಿರುವೆ. ಆಕೆಯು ಹೇಳುವುದು ಸತ್ಯವಾಗಿದೆ." ॥ ೨೨ ॥

ಆಕಾಶವಾಣಿಯಂತೆ ದುಷ್ಯಂತನು ಶಕುಂತಲೆಯನ್ನೂ, ತನ್ನ ಪುತ್ರನನ್ನು ಯಥಾಯೋಗ್ಯವಾಗಿ ಸ್ವೀಕರಿಸಿ, ಆ ಬಾಲಕನಿಗೆ ಭರತನೆಂದು ನಾಮಕರಣಮಾಡಿದನು. ಪರೀಕ್ಷಿತನೇ! ತಂದೆಯಾದ ದುಷ್ಯಂತನ ಮೃತ್ಯುವಾದ ಬಳಿಕ ಪರಮ ಯಶಸ್ವಿಯೂ, ಭಗವಂತನ ಅಂಶಸಂಭೂತನಾಗಿದ್ದ ಭರತನು ಚಕ್ರವರ್ತಿಯಾದನು. ಇಂದೂ ಕೂಡ ಅವನ ಮಹಿಮೆಯನ್ನು ಭೂಮಂಡಲದಲ್ಲಿ ಹಾಡಲಾಗುತ್ತದೆ. ॥ ೨೩ ॥ ಅವನ ಬಲದ ಕೈಯಲ್ಲಿ ಚಕ್ರದ ಚಿಹ್ನೆಯಿದ್ದಿತು. ಪಾದಗಳಲ್ಲಿ ಕಮಲಕೋಶದ ಚಿಹ್ನೆಗಳಿದ್ದವು. ಮಹಾಭಿಷೇಕದ ವಿಧಿಯಿಂದ ಪುರೋಹಿತರು ಭರತನನ್ನು ರಾಜಾಧಿರಾಜನಾದ ಚಕ್ರವರ್ತಿಯ ಪದವಿಯಲ್ಲಿ ಕುಳ್ಳಿರಿಸಿ ಪಟ್ಟಾಭಿಷೇಕ ಮಾಡಿದರು. ಅವನು ಮಹಾಶಕ್ತಿಶಾಲಿಯಾದ ರಾಜನಾಗಿದ್ದನು. ॥ ೨೪ ॥ ಭರತ ಚಕ್ರವರ್ತಿಯು ಮಮತಾ ಎಂಬುವಳ ಪುತ್ರ ದೀರ್ಘತಮನೆಂಬ ಮುನಿಯನ್ನು ಪುರೋಹಿತನನ್ನಾಗಿಸಿಕೊಂಡು ಗಂಗೋತ್ರಿಯಿಂದ ಹಿಡಿದು ಗಂಗಾಸಾಗರಸಂಗಮದವರೆಗಿನ ಗಂಗಾತಟದಲ್ಲಿ ಐವತ್ತೈದು ಅಶ್ವಮೇಧಗಳನ್ನು ಮಾಡಿದನು. ಹೀಗೆಯೇ ಯಮುನೋತ್ರಿಯಿಂದ ಪ್ರಯಾಗದವರೆಗಿನ ಯಮುನಾತೀರದಲ್ಲಿ ಎಪ್ಪತ್ತೆಂಟು ಅಶ್ವಮೇಧಗಳನ್ನು ಮಾಡಿದನು. ಈ ಎಲ್ಲ ಯಜ್ಞಗಳಲ್ಲಿಯೂ ಭರತನು ಅಪಾರವಾದ ಧನರಾಶಿಯನ್ನು ಬ್ರಾಹ್ಮಣರಿಗೆ ದಾನ ಮಾಡಿದನು. ಅವನು ಶ್ರೇಷ್ಠವಾದ ಗುಣಗಳಿಂದ ಕೂಡಿದ ಪ್ರದೇಶದಲ್ಲಿ ಅಗ್ನಿಚಯನ ಮಾಡಿ, ಆ ಪ್ರದೇಶದಲ್ಲಿ ಒಂದು ಸಾವಿರ ಬ್ರಾಹ್ಮಣರು ಭರತನಿಂದ ದಕ್ಷಿಣೆಯಾಗಿ ಕೊಡಲ್ಪಟ್ಟ ಗೋವುಗಳನ್ನು ಬದ್ವ-ಬದ್ವ ಸಂಖ್ಯೆಯಲ್ಲಿ (ಒಂದು ಬದ್ವವೆಂದರೆ ೧೩,೦೮೪) ಹಂಚಿಕೊಂಡರು. ॥ ೨೫-೨೬ ॥

ತ್ರಯಸ್ತ್ರಿಂಶಚ್ಛತಂ ಹ್ಯಶ್ವಾನ್ಬದ್ಧ್ವಾ ವಿಸ್ಮಾಪಯನ್ನೃಪಾನ್ ।
ದೌಷ್ಮಂತಿರತ್ಯಗಾನ್ಮಾಯಾಂ ದೇವಾನಾಂ ಗುರುಮಾಯಯೌ ॥ ೨೭ ॥

ಮೃಗಾನ್ ಶುಕ್ಲದತಃ ಕೃಷ್ಣಾನ್ ಹಿರಣ್ಯೇನ ಪರೀವೃತಾನ್ ।
ಅದಾತ್ಕರ್ಮಣಿ ಮಷ್ಣಾರೇ ನಿಯುತಾನಿ ಚತುರ್ದಶ ॥ ೨೮ ॥

ಭರತಸ್ಯ ಮಹತ್ಕರ್ಮ ನ ಪೂರ್ವೇ ನಾಪರೇ ನೃಪಾಃ ।
ನೈವಾಪುರ್ನೈವ ಪ್ರಾಪ್ಸ್ಯಂತಿ ಬಾಹುಭ್ಯಾಂ ತ್ರಿದಿವಂ ಯಥಾ ॥ ೨೯ ॥

ಕಿರಾತಹೂಣಾನ್ಯವನಾನಂಧ್ರಾನ್ಕಂಕಾನ್ಖಶಾಂಛಕಾನ್ ।
ಅಬ್ರಹ್ಮಣ್ಯಾನ್ನೃಪಾಂಶ್ಚಾಹನ್ ಮ್ಲೇಚ್ಛಾನ್ದಿಗ್ವಿಜಯೇಽಖಿಲಾನ್ ॥ ೩೦ ॥

ಜಿತ್ವಾ ಪುರಾಸುರಾ ದೇವಾನ್ಯೇ ರಸೌಕಾಂಸಿ ಭೇಜಿರೇ ।
ದೇವಸ್ತ್ರಿಯೋ ರಸಾಂ ನೀತಾಃ ಪ್ರಾಣಿಭಿಃ ಪುನರಾಹರತ್ ॥ ೩೧ ॥

ಸರ್ವಕಾಮಾನ್ ದುದುಹತುಃ ಪ್ರಜಾನಾಂ ತಸ್ಯ ರೋದಸೀ ।
ಸಮಾಸ್ತ್ರಿಣವಸಾಹಸ್ರೀರ್ದಿಕ್ಷು ಚಕ್ರಮವರ್ತಯತ್ ॥ ೩೨ ॥

ಸ ಸಂರಾಡ್ಲೋಕಪಾಲಾಖ್ಯಮೈಶ್ವರ್ಯಮಧಿರಾಟ್ ಶ್ರಿಯಮ್ ।
ಚಕ್ರಂ ಚಾಸ್ಖಲಿತಂ ಪ್ರಾಣಾನ್ಮೃಷೇತ್ಯುಪರರಾಮ ಹ ॥ ೩೩ ॥

ತಸ್ಯಾಸನ್ನೃಪ ವೈದರ್ಭ್ಯಃ ಪತ್ನ್ಯಸ್ತಿಸ್ರಃ ಸುಸಮ್ಮತಾಃ ।
ಜಘ್ನುಸ್ತ್ಯಾಗಭಯಾತ್ಪುತ್ರಾನ್ನಾನುರೂಪಾ ಇತೀರಿತೇ ॥ ೩೪ ॥

ತಸ್ಯೈವಂ ವಿತಥೇ ವಂಶೇ ತದರ್ಥಂ ಯಜತಃ ಸುತಮ್ ।
ಮರುತ್ಸ್ತೋಮೇನ ಮರುತೋ ಭರದ್ವಾಜಮುಪಾದದುಃ ॥ ೩೫ ॥

ಅಂತರ್ವತ್ನ್ಯಾಂ ಭ್ರಾತೃಪತ್ನ್ಯಾಂ ಮೈಥುನಾಯ ಬೃಹಸ್ಪತಿಃ ।
ಪ್ರವೃತ್ತೋ ವಾರಿತೋ ಗರ್ಭಂ ಶಪ್ತ್ವಾ ವೀರ್ಯಮವಾಸೃಜತ್ ॥ ೩೬ ॥

ಹೀಗೆ ಭರತ ಚಕ್ರವರ್ತಿಯು ಆ ಯಜ್ಞಗಳಲ್ಲಿ ಒಂದು ನೂರಮೂವತ್ತಮೂರು ಕುದುರೆಗಳನ್ನು ಯೂಪಗಳಿಗೆ ಕಟ್ಟಿ ನೂರಮೂವತ್ತಮೂರು ಯಜ್ಞಗಳನ್ನು ಮಾಡಿ ಸಮಸ್ತ ರಾಜರನ್ನು ಆಶ್ಚರ್ಯಗೊಳಿಸಿದನು. ಈ ಯಜ್ಞಗಳ ಮೂಲಕ ಈ ಲೋಕದಲ್ಲಿ ಭರತನಿಗೆ ಪರಮ ಯಶಸ್ಸು ಲಭಿಸಿತು. ಕೊನೆಗೆ ಅವನು ಮಾಯೆಯನ್ನು ಜಯಿಸಿ, ದೇವತೆಗಳ ಪರಮಗುರುವಾದ ಭಗವಾನ್ ಶ್ರೀಹರಿಯನ್ನು ಪಡೆದುಕೊಂಡನು. ॥ ೨೭ ॥ ಯಜ್ಞದಲ್ಲಿ 'ಮಷ್ಣಾರ' ಎಂಬ ಒಂದು ಕರ್ಮವಿರುತ್ತದೆ. ಅದರಲ್ಲಿ ಭರತನು ಸುವರ್ಣ ವಿಭೂಷಿತವಾದ ಬಿಳಿಯ ದಂತಗಳಿಂದ ಕೂಡಿದ್ದ ಕಪ್ಪುಬಣ್ಣದ ಹದಿನಾಲ್ಕು ಲಕ್ಷ ಆನೆಗಳನ್ನು ದಾನಮಾಡಿದನು. ॥ ೨೮ ॥ ಭರತನು ಮಾಡಿದಂತಹ ಮಹಾಕಾರ್ಯವನ್ನು ಹಿಂದೆ ಯಾರೂ ಮಾಡಿರಲಿಲ್ಲ, ಮುಂದೆ ಯಾರೂ ಮಾಡಲಾರರು. ಯಾರಾದರೂ ಕೈಯಿಂದ ಸ್ವರ್ಗವನ್ನು ಮುಟ್ಟಬಲ್ಲನೇ? ॥ ೨೯ ॥ ಭರತ ಚಕ್ರವರ್ತಿಯು ದಿಗ್ವಿಜಯದ ಸಮಯದಲ್ಲಿ ಕಿರಾತ, ಹೂಣ, ಯವನ, ಅಂಧ್ರ, ಕಂಕ, ಖಸ, ಶಕ, ಮ್ಲೇಚ್ಛ ಮೊದಲಾದ ಸಮಸ್ತ ಬ್ರಾಹ್ಮಣದ್ರೋಹಿಗಳನ್ನು ಕೊಂದುಹಾಕಿದನು. ॥ ೩೦ ॥ ಬಲಿಷ್ಠರಾದ ಅಸುರರು ದೇವತೆಗಳನ್ನು ಗೆದ್ದು, ದೇವಸ್ತ್ರೀಯರನ್ನು ಅಪಹರಿಸಿಕೊಂಡು ರಸಾತಳಕ್ಕೆ ಹೋಗಿ ವಾಸಮಾಡುತ್ತಿದ್ದರು. ದೇವತೆಗಳ ಪ್ರಾರ್ಥನೆಯಂತೆ ಭರತಚಕ್ರವರ್ತಿಯು ಆ ದೇವತಾ ಸ್ತ್ರೀಯರನ್ನು ಬಿಡಿಸಿ ತಂದು ದೇವತೆಗಳಿಗೆ ಒಪ್ಪಿಸಿದನು. ॥ ೩೧ ॥ ಭರತನ ರಾಜ್ಯದಲ್ಲಿ ಭೂಮ್ಯಂತರಿಕ್ಷಗಳು ಪ್ರಜೆಗಳ ಸಕಲ ಆವಶ್ಯಕತೆಗಳನ್ನು ಪೂರ್ಣಗೊಳಿಸುತ್ತಿದ್ದವು. ಅವನು ಇಪ್ಪತ್ತೇಳುಸಾವಿರ ವರ್ಷಗಳವರೆಗೆ ಅಖಂಡ ಭೂಮಂಡಲದ ಏಕಚ್ಛತ್ರ ರಾಜ್ಯವಾಳಿದನು. ॥ ೩೨ ॥ ಕೊನೆಗೆ ಭರತ ಚಕ್ರವರ್ತಿಯು – ಲೋಕಪಾಲರನ್ನೂ ಚಕಿತಗೊಳಿಸುವಂತಹ ಐಶ್ವರ್ಯ, ಸಾರ್ವಭೌಮ ಸಂಪತ್ತು, ಅಖಂಡ ಶಾಸನ ಮತ್ತು ಈ ಜೀವನವೂ ಕೂಡ ಮಿಥ್ಯೆಯೇ ಆಗಿದೆ ಎಂದು ನಿಶ್ಚಯಿಸಿ ಸಂಸಾರದಿಂದ ವಿರಕ್ತನಾದನು. ॥ ೩೩ ॥

ಪರೀಕ್ಷಿತನೇ! ವಿದರ್ಭರಾಜನ ಮೂವರು ಕನ್ಯೆಯರು ಭರತ ಚಕ್ರವರ್ತಿಯ ಪತ್ನಿಯರಾಗಿದ್ದರು. ಅವರು ಪತಿಯನ್ನು ಬಹಳವಾಗಿ ಆದರಿಸುತ್ತಿದ್ದರು. ಆದರೆ ಭರತನು ಅವರಲ್ಲಿ – ನಿಮ್ಮಲ್ಲಿ ಹುಟ್ಟಿದ ಮಕ್ಕಳು ನನಗೆ ಅನುರೂಪರಾಗಿಲ್ಲವೆಂದು ಹೇಳಿದಾಗ ಅವರೆಲ್ಲರೂ ಹೆದರಿ – ಸಾಮ್ರಾಟನು ನಮ್ಮನ್ನು ತ್ಯಜಿಸದಿರಲಿ ಎಂದು ತಮ್ಮ ಮಕ್ಕಳನ್ನು ಕೊಂದುಹಾಕಿದರು. ॥ ೩೪ ॥ ಹೀಗೆ ಭರತಚಕ್ರವರ್ತಿಯ ವಂಶವು ವಿಚ್ಛಿನ್ನವಾಯಿತು. ಆಗ ಅವನು ಸಂತಾನದ ಪ್ರಾಪ್ತಿಗಾಗಿ 'ಮರುತ್ಸ್ತೋಮ'ವೆಂಬ ಯಜ್ಞವನ್ನು ಮಾಡಿದನು. ಇದರಿಂದ ಮರುದ್ಗಣರು ಸುಪ್ರೀತರಾಗಿ ಭರತನಿಗೆ ಭರದ್ವಾಜನೆಂಬ ಪುತ್ರನನ್ನು ದಯಪಾಲಿಸಿದರು. ॥ ೩೫ ॥ ಭರದ್ವಾಜರ ಉತ್ಪತ್ತಿಯ ಪ್ರಸಂಗ ಇಂತಿದೆ – ಒಮ್ಮೆ ಬೃಹಸ್ಪತಿಯು ತನ್ನ ತಮ್ಮನಾದ ಉತಥ್ಯನ ಗರ್ಭವತಿಯಾದ ಪತ್ನಿಯೊಡನೆ ಸಮಾಗಮವನ್ನು ಬಯಸಿದರು. ಆ ಸಮಯದಲ್ಲಿ ಗರ್ಭದಲ್ಲಿ ಬಾಲಕ (ದೀರ್ಘತಮಾ)ನು ಅವನನ್ನು ತಡೆದನು. ಆದರೆ ಬೃಹಸ್ಪತಿಯು ಅದರ ಮಾತಿಗೆ ಕಿವಿಗೊಡದೆ ಅದಕ್ಕೆ 'ನೀನು ಕುರುಡನಾಗು' ಎಂದು ಶಪಿಸಿ ಗರ್ಭಾಧಾನವನ್ನು ಮಾಡಿಬಿಟ್ಟನು. ॥ ೩೬ ॥

ತಂ ತ್ಯಕ್ತುಕಾಮಾಂ ಮಮತಾಂ ಭರ್ತೃತ್ಯಾಗವಿಶಂಕಿತಾಮ್ ।
ನಾಮನಿರ್ವಚನಂ ತಸ್ಯ ಶ್ಲೋಕಮೇನಂ ಸುರಾ ಜಗುಃ ॥ ೩೭ ॥

ಉತಥ್ಯನ ಪತ್ನೀ ಮಮತೆಯು – ತನ್ನ ಪತಿಯು ತನ್ನನ್ನು ತ್ಯಜಿಸಿಬಿಡುವನೆಂದು ಹೆದರಿದಳು. ಅದಕ್ಕಾಗಿ ಬೃಹಸ್ಪತಿಯ ಮೂಲಕ ಹುಟ್ಟಲಿರುವ ಶಿಶುವನ್ನು ತ್ಯಜಿಸಲು ಬಯಸಿದಳು. ಆ ಸಮಯದಲ್ಲಿ ದೇವತೆಗಳು ಗರ್ಭಸ್ಥವಾದ ಶಿಶುವಿನ ನಾಮನಿರ್ವಚನ ಮಾಡುತ್ತಾ ಈ ಶ್ಲೋಕವನ್ನು ಹೇಳಿದರು. ॥ ೩೭ ॥

ಮೂಢೇ ಭರ ದ್ವಾಜಮಿಮಂ ಭರ ದ್ವಾಜಂ ಬೃಹಸ್ಪತೇ ।
ಯಾತೌ ಯದುಕ್ತ್ವಾ ಪಿತರೌ ಭರದ್ವಾಜಸ್ತತಸ್ತ್ವಯಮ್ ॥ ೩೮ ॥

ಮೂಢಳೇ! ನಿನ್ನ ಪತಿಗೂ ಮತ್ತು ಬೃಹಸ್ಪತಿಗೂ ಮಗನಾಗಿರುವ ಈ ದ್ವಾಜನನ್ನು ನೀನೇ ಭರಿಸು. ಹೆದರಬೇಡ ಎಂದು ಹೇಳಿದಾಗ ಮಮತೆಯು ಒಲ್ಲೆನೆಂದಳು. ಆಗ ಬೃಹಸ್ಪತಿಯೇ! ನಿನಗೂ ನಿನ್ನ ತಮ್ಮನಿಗೂ ಪುತ್ರರೂಪದಲ್ಲಿರುವ ಈ ದ್ವಾಜನನ್ನು ನೀನೇ ಭರಿಸು. ದೇವತೆಗಳ ಮಾತಿಗೆ ಬೃಹಸ್ಪತಿಯು ಒಲ್ಲೆನೆಂದನು. ಇದರಿಂದಾಗಿ ಈ ಮಗುವಿಗೆ ಭರದ್ವಾಜನೆಂದು ಹೆಸರಾಯಿತು. ॥ ೩೮ ॥

ಚೋದ್ಯಮಾನಾ ಸುರೈರೇವಂ ಮತ್ವಾ ವಿತಥಮಾತ್ಮಜಮ್ ।
ವ್ಯಸೃಜನ್ಮರುತೋಽಬಿಭ್ರನ್ ದತ್ತೋಽಯಂ ವಿತಥೇಽನ್ವಯೇ ॥ ೩೯ ॥

ದೇವತೆಗಳ ಮೂಲಕ ಹೀಗೆ ನಾಮನಿರ್ವಚನವಾದರೂ ಮಮತೆಯು ನನ್ನ ಈ ಪುತ್ರನು ಅನ್ಯಾಯದಿಂದ ಹುಟ್ಟಿರುವನು ಎಂದು ತಿಳಿದು ಆಕೆಯು ಆ ಶಿಶುವನ್ನು ಬಿಟ್ಟುಬಿಟ್ಟಳು. ಆಗ ಮರುದ್ಗಣರೇ ಅದನ್ನು ಸಾಕಿದರು. ಭರತನ ವಂಶವು ನಿಂತುಹೋಗುವಾಗ, ಅವನನ್ನು ತಂದು ಭರತನಿಗೆ ಇತ್ತರು. ಈ ವಿತಥನೇ (ಭರದ್ವಾಜ) ಭರತನಿಗೆ ದತ್ತಪುತ್ರನಾದನು. ॥ ೩೯ ॥

ಇಪ್ಪತ್ತನೆಯ ಅಧ್ಯಾಯವು ಮುಗಿಯಿತು. ॥ ೨೦ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ನವಮಸ್ಕಂಧೇ ವಿಂಶೋಽಧ್ಯಾಯಃ ॥ ೨೦ ॥

ಇಪ್ಪತ್ತೊಂದನೆಯ ಅಧ್ಯಾಯ

ಭರತವಂಶದ ವರ್ಣನೆ – ರಂತಿದೇವನ ಕಥೆ

ಶ್ರೀಶುಕ ಉವಾಚ

ವಿತಥಸ್ಯ ಸುತೋ ಮನ್ಯುರ್ಬೃಹತ್ಕ್ಷತ್ರೋ ಜಯಸ್ತತಃ ।
ಮಹಾವೀರ್ಯೋ ನರೋ ಗರ್ಗಃ ಸಂಕೃತಿಸ್ತು ನರಾತ್ಮಜಃ ॥ ೧ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಎಲೈ ಪರೀಕ್ಷಿತನೇ! ವಿತಥ ಅಥವಾ ಭರದ್ವಾಜನ ಮಗ ಮನ್ಯು ಎಂಬುವನು. ಮನ್ಯುವಿಗೆ – ಬೃಹತ್ಕ್ಷತ್ರ, ಜಯ, ಮಹಾವೀರ್ಯ, ನರ, ಗರ್ಗರೆಂಬ ಐವರು ಪುತ್ರರಾದರು. ನರನಿಗೆ ಸಂಕೃತಿ ಎಂಬ ಮಗನಿದ್ದನು. ॥ ೧ ॥

ಗುರುಶ್ಚ ರಂತಿದೇವಶ್ಚ ಸಂಕೃತೇಃ ಪಾಂಡುನಂದನ ।
ರಂತಿದೇವಸ್ಯ ಹಿ ಯಶ ಇಹಾಮುತ್ರ ಚ ಗೀಯತೇ ॥ ೨ ॥

ಸಂಕೃತಿಗೆ ಗುರು ಮತ್ತು ರಂತಿದೇವರೆಂಬ ಇಬ್ಬರು ಮಕ್ಕಳಾದರು. ಪರೀಕ್ಷಿತನೇ! ರಂತಿದೇವನ ನಿರ್ಮಲವಾದ ಕೀರ್ತಿಯು ಇಹಪರಲೋಕಗಳಲ್ಲಿ ಎಲ್ಲೆಡೆ ಕೊಂಡಾಡಲ್ಪಡುತ್ತದೆ. ॥ ೨ ॥

ವಿಯದ್ವಿತ್ತಸ್ಯ ದದತೋ ಲಬ್ಧಂ ಲಬ್ಧಂ ಬುಭುಕ್ಷತಃ ।
ನಿಷ್ಕಿಂಚನಸ್ಯ ಧೀರಸ್ಯ ಸಕುಟುಂಬಸ್ಯ ಸೀದತಃ ॥ ೩ ॥

ರಂತಿದೇವನು ಆಕಾಶದಂತೆ ಪ್ರಯತ್ನವಿಲ್ಲದೆ ದೈವವಶದಿಂದ ಪ್ರಾಪ್ತವಾದ ವಸ್ತುಗಳನ್ನು ಉಪಭೋಗಿಸುತ್ತಿರುವಾಗ ದಿನಗಳೆದಂತೆ ಅವನ ಸಂಪತ್ತು ಕರಗಿಹೋಯಿತು. ಏನಾದರೂ ದೊರಕಿದರೆ ಅದನ್ನು ಇತರರಿಗೆ ಕೊಟ್ಟು ತಾನು ಹಸಿದುಕೊಂಡೇ ಇರುತ್ತಿದ್ದನು. ಅವನು ಸಂಗ್ರಹ-ಪರಿಗ್ರಹ, ಮಮತೆಯಿಂದ ರಹಿತನಾಗಿ ಧೈರ್ಯಶಾಲಿಯಾಗಿದ್ದನು ಮತ್ತು ತನ್ನ ಕುಟುಂಬದೊಡನೆ ದುಃಖವನ್ನು ಅನುಭವಿಸುತ್ತಾ ಇದ್ದನು. ॥ ೩ ॥

ವ್ಯತೀಯುರಷ್ಟಚತ್ವಾರಿಂಶದಹಾನ್ಯಪಿಬತಃ ಕಿಲ ।
ಘೃತಪಾಯಸಸಂಯಾವಂ ತೋಯಂ ಪ್ರಾತರುಪಸ್ಥಿತಮ್ ॥ ೪ ॥

ಒಮ್ಮೆ ಸತತವಾಗಿ ನಲವತ್ತೆಂಟು ದಿನಗಳವರೆಗೆ ಅವನಿಗೆ ನೀರೂ ಕೂಡ ಸಿಗದೆ ಕಳೆದುಹೋದುವು. ನಲವತ್ತೊಂಭತ್ತನೆಯ ದಿನ ಬೆಳಗ್ಗೆಯೇ ಅವನಿಗೆ ಸ್ವಲ್ಪ ತುಪ್ಪ, ಪಾಯಸ, ಗೋದಿಯ ಅನ್ನ ಮತ್ತು ನೀರು ದೊರಕಿವು. ॥ ೪ ॥

ಕೃಚ್ಛ್ರಪ್ರಾಪ್ತಕುಟುಂಬಸ್ಯ ಕ್ಷುತ್ತೃಡ್ಭ್ಯಾಂ ಜಾತವೇಪಥೋಃ ।
ಅತಿಥಿರ್ಬ್ರಾಹ್ಮಣಃ ಕಾಲೇ ಭೋಕ್ತುಕಾಮಸ್ಯ ಚಾಗಮತ್ ॥ ೫ ॥

ತಸ್ಮೈ ಸಂವ್ಯಭಜತ್ಸೋಽನ್ನಮಾದೃತ್ಯ ಶ್ರದ್ಧಯಾನ್ವಿತಃ ।
ಹರಿಂ ಸರ್ವತ್ರ ಸಂಪಶ್ಯನ್ಸ ಭುಕ್ತ್ವಾ ಪ್ರಯಯೌ ದ್ವಿಜಃ ॥ ೬ ॥

ಅಥಾನ್ಯೋ ಭೋಕ್ಷ್ಯಮಾಣಸ್ಯ ವಿಭಕ್ತಸ್ಯ ಮಹೀಪತೇ ।
ವಿಭಕ್ತಂ ವ್ಯಭಜತ್ತಸ್ಮೈ ವೃಷಲಾಯ ಹರಿಂ ಸ್ಮರನ್ ॥ ೭ ॥

ಯಾತೇ ಶೂದ್ರೇ ತಮನ್ಯೋಽಗಾದತಿಥಿಃ ಶ್ವಭಿರಾವೃತಃ ।
ರಾಜನ್ಮೇ ದೀಯತಾಮನ್ನಂ ಸಗಣಾಯ ಬುಭುಕ್ಷತೇ ॥ ೮ ॥

ಸ ಆದೃತ್ಯಾವಶಿಷ್ಟಂ ಯದ್ಬಹುಮಾನಪುರಸ್ಕೃತಮ್ ।
ತಚ್ಚ ದತ್ತ್ವಾ ನಮಶ್ಚಕ್ರೇ ಶ್ವಭ್ಯಃ ಶ್ವಪತಯೇ ವಿಭುಃ ॥ ೯ ॥

ಪಾನೀಯಮಾತ್ರಮುಚ್ಛೇಷಂ ತಚ್ಚೈಕಪರಿತರ್ಪಣಮ್ ।
ಪಾಸ್ಯತಃ ಪುಲ್ಕಸೋಽಭ್ಯಾಗಾದಪೋ ದೇಹ್ಯಶುಭಸ್ಯ ಮೇ ॥ ೧೦ ॥

ತಸ್ಯ ತಾಂ ಕರುಣಾಂ ವಾಚಂ ನಿಶಮ್ಯ ವಿಪುಲಶ್ರಮಾಮ್ ।
ಕೃಪಯಾ ಭೃಶಸಂತಪ್ತ ಇದಮಾಹಾಮೃತಂ ವಚಃ ॥ ೧೧ ॥

ನ ಕಾಮಯೇಽಹಂ ಗತಿಮೀಶ್ವರಾತ್ಪರಾ-
ಮಷ್ಟರ್ದ್ಧಿಯುಕ್ತಾಮಪುನರ್ಭವಂ ವಾ ।
ಆರ್ತಿಂ ಪ್ರಪದ್ಯೇಽಖಿಲದೇಹಭಾಜಾ-
ಮಂತಃ ಸ್ಥಿತೋ ಯೇನ ಭವಂತ್ಯದುಃಖಾಃ ॥ ೧೨ ॥

ಕ್ಷುತ್ತೃಟ್ಶ್ರಮೋ ಗಾತ್ರಪರಿಶ್ರಮಶ್ಚ
ದೈನ್ಯಂ ಕ್ಲಮಃ ಶೋಕವಿಷಾದಮೋಹಾಃ ।
ಸರ್ವೇ ನಿವೃತ್ತಾಃ ಕೃಪಣಸ್ಯ ಜಂತೋ-
ರ್ಜಿಜೀವಿಷೋರ್ಜೀವಜಲಾರ್ಪಣಾನ್ಮೇ ॥ ೧೩ ॥

ಅವನ ಪರಿವಾರವು ಹಸಿವು-ಬಾಯಾರಿಕೆಯಿಂದ ಬಹಳ ಸಂಕಟಪಡುತ್ತಾ ಗಡ-ಗಡನೆ ನಡುಗುತ್ತಿತ್ತು. ಆದರೆ ಅವರೆಲ್ಲರೂ ಇನ್ನೇನು ಭೋಜನ ಮಾಡಬೇಕೆಂದಿರುವಾಗ ಓರ್ವ ಬ್ರಾಹ್ಮಣನು ಅತಿಥಿಯಾಗಿ ಬಂದನು. ॥ ೫ ॥ ರಂತಿದೇವನು ಎಲ್ಲರಲ್ಲಿ ಶ್ರೀಭಗವಂತನನ್ನೇ ದರ್ಶಿಸುತ್ತಿದ್ದನು. ಆದುದರಿಂದ ಅವನು ಅತ್ಯಂತ ಶ್ರದ್ಧಾದರಗಳಿಂದ ದೊರಕಿದ ಅದೇ ಅನ್ನದಿಂದ ಬ್ರಾಹ್ಮಣನಿಗೆ ಭೋಜನ ಮಾಡಿಸಿದನು. ಬ್ರಾಹ್ಮಣನು ಭೋಜನಮಾಡಿ ಹೊರಟುಹೋದನು. ॥ ೬ ॥

ಪರೀಕ್ಷಿತನೇ! ಈಗ ಉಳಿದಿರುವ ಅನ್ನವನ್ನು ಪರಸ್ಪರ ಹಂಚಿಕೊಂಡು ಊಟಮಾಡಲು ರಂತಿದೇವನು ಬಯಸಿದನು. ಅದೇ ಸಮಯಕ್ಕೆ ಇನ್ನೋರ್ವ ಶೂದ್ರನು ಅತಿಥಿಯಾಗಿ ಬಂದನು. ರಂತಿದೇವನು ಭಗವಂತನನ್ನು ಸ್ಮರಿಸುತ್ತಾ ಆ ಉಳಿದ ಅನ್ನದಲ್ಲಿಯೂ ಸ್ವಲ್ಪ ಭಾಗವನ್ನು ಶೂದ್ರನ ರೂಪದಲ್ಲಿ ಬಂದ ಅತಿಥಿಗೆ ಊಟ ಮಾಡಿಸಿದನು. ॥ ೭ ॥ ಶೂದ್ರನು ತಿಂದುಂಡು ಹೊರಟುಹೋದಾಗ ನಾಯಿಗಳೊಂದಿಗೆ ಮತ್ತೋರ್ವ ಅತಿಥಿಯು ಬಂದನು. ಅವನೆಂದನು – ರಾಜನೇ! ನಾನು ಮತ್ತು ನನ್ನ ನಾಯಿಗಳು ಹಸಿದಿದ್ದೇವೆ. ತಿನ್ನಲು ಏನಾದರೂ ಕೊಡು. ॥ ೮ ॥ ರಂತಿದೇವನು ಅತ್ಯಂತ ಆದರಭಾವದಿಂದ ಬಂದ ಅತಿಥಿಗೆ ಉಳಿದ ಅನ್ನವನ್ನು ಕೊಟ್ಟನು ಮತ್ತು ಭಗವನ್ಮಯನಾಗಿ ನಾಯಿಯ ಒಡೆಯನ ರೂಪದಲ್ಲಿ ಬಂದ ಭಗವಂತನನ್ನು ನಮಸ್ಕರಿಸಿದನು. ॥ ೯ ॥ ಈಗ ಕೇವಲ ನೀರು ಮಾತ್ರ ಉಳಿದಿತ್ತು. ಅದೂ ಕೂಡ ಒಬ್ಬನಿಗೆ ಕುಡಿಯಲು ಸಾಕಾಗುವಷ್ಟೇ ಇತ್ತು. ಅದನ್ನು ತಮ್ಮಲ್ಲಿ ಹಂಚಿಕೊಂಡು ಕುಡಿಯಬೇಕೆಂದಿರುವಾಗ ಓರ್ವ ಚಾಂಡಾಲನು ಬಂದುಬಿಟ್ಟನು – 'ಸ್ವಾಮಿ! ನಾನು ಅತ್ಯಂತ ನೀಚನಾಗಿರುವೆನು. ನನಗೆ ನೀರನ್ನು ಕುಡಿಸು' ಎಂದು ಹೇಳಿದನು. ॥ ೧೦ ॥ ಹೀಗೆ ಹೇಳಲೂ ಕೂಡ ಬಹಳ ಬಳಲಿ ಕಷ್ಟಪಡುತ್ತಿದ್ದ ಆ ಚಾಂಡಾಲನ ಕರುಣಾಪೂರ್ಣವಾದ ಮಾತನ್ನು ಕೇಳಿ, ಕರುಣಾಶಾಲಿಯಾದ ರಂತಿದೇವನು ದಯೆಯಿಂದ ಅತ್ಯಂತ ಸಂಕಟಪಡುತ್ತಾ ಅಮೃತಮಯ ಈ ಮಾತನ್ನು ಹೇಳಿದನು. ॥ ೧೧ ॥ ನಾನು ಭಗವಂತನಲ್ಲಿ ಅಣಿಮಾದಿ ಅಷ್ಟಸಿದ್ಧಿಗಳಿಂದ ಕೂಡಿದ ಪರಮಗತಿಯನ್ನು ಬಯಸುವುದಿಲ್ಲ. ಹೆಚ್ಚೇನು ಮೋಕ್ಷವನ್ನೂ ಕೂಡ ಬೇಕೆಂದು ಕೇಳುವುದಿಲ್ಲ. ನಾನು ಸಮಸ್ತ ಪ್ರಾಣಿಗಳ ಹೃದಯದಲ್ಲಿ ನೆಲೆಸಿ ಅವರ ಎಲ್ಲ ದುಃಖಗಳನ್ನು ನಾನೇ ಸಹಿಸುವಂತಾಗಲಿ. ಹೀಗೆ ಮಾಡುವುದರಿಂದ ಯಾವ ಪ್ರಾಣಿಗೂ ದುಃಖವಾಗದಿರಲೆಂದು ಮಾತ್ರ ನನ್ನ ಅಪೇಕ್ಷೆಯಾಗಿದೆ. ॥ ೧೨ ॥ ಈ ದೀನ ಪ್ರಾಣಿಯು ನೀರು ಕುಡಿದಾದರೂ ಬದುಕಲು ಬಯಸುತ್ತಿದೆ. ನೀರನ್ನು ಕೊಟ್ಟರೆ ಇವನ ಜೀವನದ ರಕ್ಷಣೆಯಾಗುವುದು. ಇದರಿಂದಾಗಿ ನನ್ನ ಹಸಿವು-ಬಾಯಾರಿಕೆಯ ಪೀಡೆ, ಶರೀರದ ಶಿಥಿಲತೆ, ದೀನತೆ, ಗ್ಲಾನಿ, ಶೋಕ, ವಿಷಾದ, ಮೋಹ ಇವೆಲ್ಲವೂ ಹೊರಟುಹೋಗುತ್ತವೆ. ನಿಶ್ಚಯವಾಗಿ ಈಗ ನಾನೇ ಸುಖಿಯು ॥ ೧೩ ॥

ಇತಿ ಪ್ರಭಾಷ್ಯ ಪಾನೀಯಂ ಮ್ರಿಯಮಾಣಃ ಪಿಪಾಸಯಾ ।
ಪುಲ್ಕಸಾಯಾದದಾದ್ಧೀರೋ ನಿಸರ್ಗಕರುಣೋ ನೃಪಃ ॥ ೧೪ ॥

ತಸ್ಯ ತ್ರಿಭುವನಾಧೀಶಾಃ ಫಲದಾಃ ಫಲಮಿಚ್ಛತಾಮ್ ।
ಆತ್ಮಾನಂ ದರ್ಶಯಾಂಚಕ್ರುರ್ಮಾಯಾ ವಿಷ್ಣುವಿನಿರ್ಮಿತಾಃ ॥ ೧೫ ॥

ಸ ವೈ ತೇಭ್ಯೋ ನಮಸ್ಕೃತ್ಯ ನಿಃಸಂಗೋ ವಿಗತಸ್ಪೃಹಃ ।
ವಾಸುದೇವೇ ಭಗವತಿ ಭಕ್ತ್ಯಾ ಚಕ್ರೇ ಮನಃ ಪರಮ್ ॥ ೧೬ ॥

ಈಶ್ವರಾಲಂಬನಂ ಚಿತ್ತಂ ಕುರ್ವತೋಽನನ್ಯರಾಧಸಃ ।
ಮಾಯಾ ಗುಣಮಯೀ ರಾಜನ್ಸ್ವಪ್ನವತ್ಪ್ರತ್ಯಲೀಯತ ॥ ೧೭ ॥

ತತ್ಪ್ರಸಂಗಾನುಭಾವೇನ ರಂತಿದೇವಾನುವರ್ತಿನಃ ।
ಅಭವನ್ಯೋಗಿನಃ ಸರ್ವೇ ನಾರಾಯಣಪರಾಯಣಾಃ ॥ ೧೮ ॥

ಗರ್ಗಾಚ್ಛಿನಿಸ್ತತೋ ಗಾರ್ಗ್ಯಃ ಕ್ಷತ್ರಾದ್ಬ್ರಹ್ಮ ಹ್ಯವರ್ತತ ।
ದುರಿತಕ್ಷಯೋ ಮಹಾವೀರ್ಯಾತ್ತಸ್ಯ ತ್ರಯ್ಯಾರುಣಿಃ ಕವಿಃ ॥ ೧೯ ॥

ಪುಷ್ಕರಾರುಣಿರಿತ್ಯತ್ರ ಯೇ ಬ್ರಾಹ್ಮಣಗತಿಂ ಗತಾಃ ।
ಬೃಹತ್ಕ್ಷತ್ರಸ್ಯ ಪುತ್ರೋಽಭೂದ್ಧಸ್ತೀ ಯದ್ಧಸ್ತಿನಾಪುರಮ್ ॥ ೨೦ ॥

ಅಜಮೀಢೋ ದ್ವಿಮೀಢಶ್ಚ ಪುರುಮೀಢಶ್ಚ ಹಸ್ತಿನಃ ।
ಅಜಮೀಢಸ್ಯ ವಂಶ್ಯಾಃ ಸ್ಯುಃ ಪ್ರಿಯಮೇಧಾದಯೋ ದ್ವಿಜಾಃ ॥ ೨೧ ॥

ಅಜಮೀಢಾದ್ಬೃಹದಿಷುಸ್ತಸ್ಯ ಪುತ್ರೋ ಬೃಹದ್ಧನುಃ ।
ಬೃಹತ್ಕಾಯಸ್ತತಸ್ತಸ್ಯ ಪುತ್ರ ಆಸೀಜ್ಜಯದ್ರಥಃ ॥ ೨೨ ॥

ತತ್ಸುತೋ ವಿಶದಸ್ತಸ್ಯ ಸೇನಜಿತ್ಸಮಜಾಯತ ।
ರುಚಿರಾಶ್ವೋ ದೃಢಹನುಃ ಕಾಶ್ಯೋ ವತ್ಸಶ್ಚ ತತ್ಸುತಾಃ ॥ ೨೩ ॥

ರುಚಿರಾಶ್ವಸುತಃ ಪಾರಃ ಪೃಥುಸೇನಸ್ತದಾತ್ಮಜಃ ।
ಪಾರಸ್ಯ ತನಯೋ ನೀಪಸ್ತಸ್ಯ ಪುತ್ರಶತಂ ತ್ವಭೂತ್ ॥ ೨೪ ॥

ಹೀಗೆ ಹೇಳಿ ರಂತಿದೇವನು ಆ ಉಳಿದಿರುವ ನೀರನ್ನೂ ಕೂಡ ಆ ಚಾಂಡಾಲನಿಗೆ ಕೊಟ್ಟನು. ನೀರಿಲ್ಲದೆ ಅವನು ಸ್ವತಃ ಸಾಯುತ್ತಿದ್ದರೂ ಸ್ವಾಭಾವಿಕವಾಗಿಯೇ ಅವನ ಹೃದಯವು ಕರುಣಾಪೂರ್ಣವಾಗಿತ್ತು. ಅದರಿಂದ ಜೀವನಾಧಾರವಾದ ನೀರನ್ನೂ ಇಟ್ಟುಕೊಳ್ಳಲು ಕೂಡ ಅವನಿಗೆ ಸಾಧ್ಯವಾಗಲಿಲ್ಲ. ಅವನ ಧೈರ್ಯಕ್ಕೆ ಏನಾದರೂ ಸೀಮೆ ಇದೆಯೇ? ॥ ೧೪ ॥ ಪರೀಕ್ಷಿತನೇ! ಈ ಅತಿಥಿಗಳು ವಾಸ್ತವವಾಗಿ ಭಗವಂತನಿಂದ ರಚಿತವಾದ ಮಾಯೆಯ ವಿಭಿನ್ನರೂಪಗಳಾಗಿದ್ದವು. ಪರೀಕ್ಷೆಯು ಪೂರ್ಣಗೊಂಡಾಗ ತನ್ನ ಭಕ್ತರ ಅಭಿಲಾಷೆಯನ್ನು ಪೂರ್ಣಗೊಳಿಸುವಂತಹ ತ್ರಿಭುವನಕ್ಕೆ ಒಡೆಯರಾದ ಬ್ರಹ್ಮಾ, ವಿಷ್ಣು, ಮಹೇಶ್ವರ ಮೂವರು ಅವನೆದುರಿಗೆ ಪ್ರತ್ಯಕ್ಷರಾದರು. ॥ ೧೫ ॥ ರಂತಿದೇವನು ಅವರ ಚರಣಗಳಲ್ಲಿ ನಮಸ್ಕರಿಸಿದನು. ಭಗವಂತನ ಕೃಪೆಯಿಂದ ಅವನು ನಿಸ್ಸಂಗನೂ, (ನಿರಾಸಕ್ತನೂ) ನಿಸ್ಪೃಹನೂ ಆಗಿದ್ದನು. ಪರಮ ಪ್ರೇಮಮಯ ಭಕ್ತಿಭಾವದಿಂದ ತನ್ನ ಮನಸ್ಸನ್ನು ಭಗವಾನ್ ವಾಸುದೇವನಲ್ಲಿ ತನ್ಮಯಗೊಳಿಸಿ, ಅವರಲ್ಲಿ ಏನನ್ನೂ ಬೇಡಲಿಲ್ಲ. ॥ ೧೬ ॥ ಪರೀಕ್ಷಿತನೇ! ಅವನಿಗೆ ಭಗವಂತನಲ್ಲದೆ ಯಾವ ವಸ್ತುವಿನ ಇಚ್ಛೆಯೂ ಇರಲಿಲ್ಲ. ಅವನು ತನ್ನ ಮನಸ್ಸನ್ನು ಪೂರ್ಣವಾಗಿ ಭಗವಂತನಲ್ಲಿ ತೊಡಗಿಸಿದನು. ಅದರಿಂದ ಎಚ್ಚರವಾದಾಗ ಸ್ವಪ್ನ ದೃಶ್ಯವು ಇಲ್ಲವಾಗುವಂತೆ ತ್ರಿಗುಣಮಯವಾದ ಮಾಯೆಯು ನಾಶವಾಗಿಹೋಯಿತು. ॥ ೧೭ ॥ ರಂತಿದೇವನ ಅನುಯಾಯಿಗಳೂ ಕೂಡ ಅವನ ಸಂಗದಿಂದ ಯೋಗಿಗಳಾಗಿ, ಎಲ್ಲರೂ ನಾರಾಯಣ ಪರಾಯಣರಾದರು. ॥ ೧೮ ॥

ಮನ್ಯುಪುತ್ರನಾದ ಗರ್ಗನಿಂದ ಶಿನಿ ಮತ್ತು ಶಿನಿಯಿಂದ ಗಾರ್ಗ್ಯನ ಜನ್ಮವಾಯಿತು. ಗಾರ್ಗ್ಯನು ಕ್ಷತ್ರಿಯನಾಗಿದ್ದರೂ ಅವನಿಂದ ತ್ರಯ್ಯಾರುಣಿ, ಕವಿ, ಪುಷ್ಕರಾರುಣಿ ಎಂಬ ಮೂವರು ಪುತ್ರರಾದರು. ಈ ಮೂವರೂ ಬ್ರಾಹ್ಮಣರಾದರು. ಬೃಹತ್‌ಕ್ಷತ್ರನ ಪುತ್ರ ಹಸ್ತಿ ಎಂಬುವನು. ಅವನೇ ಹಸ್ತಿನಾಪುರವನ್ನು ನೆಲೆಗೊಳಿಸಿದನು. ॥ ೧೯-೨೦ ॥ ಹಸ್ತಿಗೆ-ಅಜಮೀಢ, ದ್ವಿಮೀಢ ಮತ್ತು ಪುರುಮೀಢರೆಂಬ ಮೂವರು ಪುತ್ರರಿದ್ದರು. ಅಜಮೀಢನ ಪುತ್ರರಲ್ಲಿ ಪ್ರಿಯಮೇಧ ಮೊದಲಾದವರು ಬ್ರಾಹ್ಮಣರಾದರು. ॥ ೨೧ ॥ ಇದೇ ಅಜಮೀಢನ ಓರ್ವ ಪುತ್ರನ ಹೆಸರು ಬೃಹದಿಷು ಎಂದಿತ್ತು. ಬೃಹದಿಷುವಿಗೆ ಬೃಹದ್ಧನು ಪುತ್ರನಾದನು. ಬೃಹದ್ಧನುವಿಗೆ ಬೃಹತ್ಕಾಯ, ಬೃಹತ್ಕಾಯನಿಗೆ ಜಯದ್ರಥನು ಹುಟ್ಟಿದನು. ॥ ೨೨ ॥ ಜಯದ್ರಥನ ಪುತ್ರ ವಿಶದನಾದನು. ವಿಶದನಿಗೆ ಸೇನಜಿತ್ ಹುಟ್ಟಿದನು. ಸೇನಜಿತ್ತುವಿಗೆ ರುಚಿರಾಶ್ವ, ದೃಢಹನು, ಕಾಶ್ಯ ಮತ್ತು ವತ್ಸ ಎಂಬ ನಾಲ್ವರು ಪುತ್ರರಾದರು. ॥ ೨೩ ॥ ರುಚಿರಾಶ್ವನಿಗೆ ಪಾರನೆಂಬ ಪುತ್ರನಿದ್ದನು. ಪಾರನಿಗೆ ಪೃಥುಸೇನ ಜನಿಸಿದನು. ಪಾರನ ಇನ್ನೊಬ್ಬ ಪುತ್ರನ ಹೆಸರು ನೀಪ ಎಂದಿತ್ತು. ಅವನಿಗೆ ನೂರು ಮಕ್ಕಳಾದರು. ॥ ೨೪ ॥ ಇದೇ ನೀಪನು ಛಾಯಾ*ಶುಕನ ಕನ್ಯೆಯಾದ ಕೃತ್ವಿಯೊಂದಿಗೆ ವಿವಾಹವಾಗಿದ್ದನು. ಅವನಿಂದ ಬ್ರಹ್ಮದತ್ತನೆಂಬ ಪುತ್ರನು ಜನಿಸಿದನು. ಬ್ರಹ್ಮದತ್ತನು

* ಶುಕಮುನಿಯು ಯಾವಾಗಲೂ ಅಸಂಗನೇ ಆಗಿದ್ದನು. ಆದರೆ ಅವನು ವಿರಾಗಿಯಾಗಿ ವನಕ್ಕೆ ಹೋಗುವ ಸಮಯದಲ್ಲಿ ಓರ್ವ ಛಾಯಾ ಶುಕನನ್ನು ರಚಿಸಿ, ಬಿಟ್ಟುಹೋಗಿದ್ದನು. ಆ ಛಾಯಾ ಶುಕನೇ ಗೃಹಸ್ಥೋಚಿತವಾದ ವ್ಯವಹಾರಗಳನ್ನು ನಡೆಸಿದ್ದನು.

ಸ ಕೃತ್ವ್ಯಾಂ ಶುಕಕನ್ಯಾಯಾಂ ಬ್ರಹ್ಮದತ್ತಮಜೀಜನತ್ ।
ಸ ಯೋಗೀ ಗವಿ ಭಾರ್ಯಾಯಾಂ ವಿಷ್ವಕ್ಸೇನಮಧಾತ್ಸುತಮ್ ॥ ೨೫ ॥

ಜೈಗೀಷವ್ಯೋಪದೇಶೇನ ಯೋಗತಂತ್ರಂ ಚಕಾರ ಹ ।
ಉದಕ್ಸ್ವನಸ್ತತಸ್ತಸ್ಮಾದ್ಭಲ್ಲಾದೋ ಬಾರ್ಹದೀಷವಾಃ ॥ ೨೬ ॥

ಯವೀನರೋ ದ್ವಿಮೀಢಸ್ಯ ಕೃತಿಮಾಂಸ್ತತ್ಸುತಃ ಸ್ಮೃತಃ ।
ನಾಮ್ನಾ ಸತ್ಯಧೃತಿರ್ಯಸ್ಯ ದೃಢನೇಮಿಃ ಸುಪಾರ್ಶ್ವಕೃತ್ ॥ ೨೭ ॥

ಸುಪಾರ್ಶ್ವಾತ್ಸುಮತಿಸ್ತಸ್ಯ ಪುತ್ರಃ ಸನ್ನತಿಮಾಂಸ್ತತಃ ।
ಕೃತಿರ್ಹಿರಣ್ಯನಾಭಾದ್ಯೋ ಯೋಗಂ ಪ್ರಾಪ್ಯ ಜಗೌ ಸ್ಮ ಷಟ್ ॥ ೨೮ ॥

ಸಂಹಿತಾಃ ಪ್ರಾಚ್ಯಸಾಮ್ನಾಂ ವೈ ನೀಪೋ ಹ್ಯುಗ್ರಾಯುಧಸ್ತತಃ ।
ತಸ್ಯ ಕ್ಷೇಮ್ಯಃ ಸುವೀರೋಽಥ ಸುವೀರಸ್ಯ ರಿಪುಂಜಯಃ ॥ ೨೯ ॥

ತತೋ ಬಹುರಥೋ ನಾಮ ಪುರುಮೀಢೋಽಪ್ರಜೋಽಭವತ್ ।
ನಲಿನ್ಯಾಮಜಮೀಢಸ್ಯ ನೀಲಃ ಶಾಂತಿಃ ಸುತಸ್ತತಃ ॥ ೩೦ ॥

ಶಾಂತೇಃ ಸುಶಾಂತಿಸ್ತತ್ಪುತ್ರಃ ಪುರುಜೋಽರ್ಕಸ್ತತೋಽಭವತ್ ।
ಭರ್ಮ್ಯಾಶ್ವಸ್ತನಯಸ್ತಸ್ಯ ಪಂಚಾಸನ್ಮುದ್ಗಲಾದಯಃ ॥ ೩೧ ॥

ಯವೀನರೋ ಬೃಹದಿಷುಃ ಕಾಂಪಿಲ್ಯಃ ಸಂಜಯಃ ಸುತಾಃ ।
ಭರ್ಮ್ಯಾಶ್ವಃ ಪ್ರಾಹ ಪುತ್ರಾ ಮೇ ಪಂಚಾನಾಂ ರಕ್ಷಣಾಯ ಹಿ ॥ ೩೨ ॥

ವಿಷಯಾಣಾಮಲಮಿಮೇ ಇತಿ ಪಂಚಾಲಸಂಜ್ಞಿತಾಃ ।
ಮುದ್ಗಲಾದ್ಬ್ರಹ್ಮನಿರ್ವೃತ್ತಂ ಗೋತ್ರಂ ಮೌದ್ಗಲ್ಯಸಂಜ್ಞಿತಮ್ ॥ ೩೩ ॥

ಮಿಥುನಂ ಮುದ್ಗಲಾದ್ಭಾರ್ಮ್ಯಾದ್ದಿವೋದಾಸಃ ಪುಮಾನಭೂತ್ ।
ಅಹಲ್ಯಾ ಕನ್ಯಕಾ ಯಸ್ಯಾಂ ಶತಾನಂದಸ್ತು ಗೌತಮಾತ್ ॥ ೩೪ ॥

ತಸ್ಯ ಸತ್ಯಧೃತಿಃ ಪುತ್ರೋ ಧನುರ್ವೇದವಿಶಾರದಃ ।
ಶರದ್ವಾಂಸ್ತತ್ಸುತೋ ಯಸ್ಮಾದುರ್ವಶೀದರ್ಶನಾತ್ಕಿಲ ॥ ೩೫ ॥

ಶರಸ್ತಂಬೇಽಪತದ್ರೇತೋ ಮಿಥುನಂ ತದಭೂಚ್ಛುಭಮ್ ।
ತದ್ದೃಷ್ಟ್ವಾ ಕೃಪಯಾಗೃಹ್ಣಾಚ್ಛಂತನುರ್ಮೃಗಯಾಂ ಚರನ್ ।
ಕೃಪಃ ಕುಮಾರಃ ಕನ್ಯಾ ಚ ದ್ರೋಣಪತ್ನ್ಯಭವತ್ಕೃಪೀ ॥ ೩೬ ॥

ಮಹಾಯೋಗಿಯಾಗಿದ್ದನು. ಅವನು ತನ್ನ ಪತ್ನಿ ಸರಸ್ವತಿಯ ಗರ್ಭದಿಂದ ವಿಷ್ವಕ್ಸೇನನೆಂಬ ಪುತ್ರನನ್ನು ಪಡೆದನು. ॥ ೨೫ ॥ ಈ ವಿಷ್ವಕ್ಸೇನನೇ ಜೈಗೀಷವ್ಯರ ಉಪದೇಶದಿಂದ ಯೋಗ ಶಾಸ್ತ್ರವನ್ನು ರಚಿಸಿದನು. ವಿಷ್ವಕ್ಸೇನನ ಪುತ್ರನು ಉದಕ್ಸ್ವನ ಮತ್ತು ಉದಕ್ಸ್ವನಿಗೆ ಭಲ್ಲಾದನೆಂಬ ಪುತ್ರನಾದನು. ಇವರೆಲ್ಲರೂ ಬೃಹದಿಷುವಿನ ವಂಶಜರಾದರು. ॥ ೨೬ ॥

ದ್ವಿಮೀಢನಿಗೆ ಯವೀನರನೆಂಬ ಪುತ್ರನಿದ್ದನು. ಯವೀನರನಿಂದ ಕೃತಿಮಾನ್, ಕೃತಿಮಂತನಿಂದ ಸತ್ಯಧೃತಿ, ಸತ್ಯಧೃತಿಯಿಂದ ದೃಢನೇಮಿ, ಮತ್ತು ದೃಢನೇಮಿಗೆ ಸುಪಾರ್ಶ್ವನೆಂಬ ಪುತ್ರನಾದನು. ॥ ೨೭ ॥ ಸುಪಾರ್ಶ್ವನಿಂದ ಸುಮತಿ, ಸುಮತಿಯಿಂದ ಸನ್ನತಿಮಾನ್, ಸನ್ನತಿಮಂತನಿಂದ ಕೃತಿಯು ಹುಟ್ಟಿದನು. ಅವನು ಹಿರಣ್ಯನಾಭನಿಂದ ಯೋಗವಿದ್ಯೆಯನ್ನು ಪಡೆದಿದ್ದನು ಮತ್ತು 'ಪ್ರಾಚ್ಯಸಾಮ' ಎಂಬ ಋಚೆಗಳ ಆರು ಸಂಹಿತೆಗಳನ್ನು ಹೇಳಿದ್ದನು. ಕೃತಿಯ ಪುತ್ರ ನೀಪನೆಂಬುವನಿದ್ದನು. ನೀಪನಿಗೆ ಉಗ್ರಾಯುಧ, ಉಗ್ರಾಯುಧನಿಗೆ ಕ್ಷೇಮ್ಯ, ಕ್ಷೇಮ್ಯನಿಗೆ ಸುವೀರ, ಸುವೀರನಿಗೆ ರಿಪುಂಜಯನೆಂಬ ಪುತ್ರನಿದ್ದನು. ॥ ೨೮–೨೯ ॥ ರಿಪುಂಜಯನಿಗೆ ಬಹುರಥನೆಂಬ ಪುತ್ರನಿದ್ದನು. ದ್ವಿಮೀಢನ ತಮ್ಮ ಪುರುಮೀಢನಿಗೆ ಯಾವುದೇ ಸಂತಾನವಿರಲಿಲ್ಲ. ಅಜಮೀಢನ ಇನ್ನೊಬ್ಬ ಪತ್ನಿಯ ಹೆಸರು ನಳಿನಿ ಎಂದಿತ್ತು. ಅವಳ ಗರ್ಭದಿಂದ ನೀಲನ ಜನ್ಮವಾಯಿತು. ನೀಲನಿಂದ ಶಾಂತಿ, ಶಾಂತಿಗೆ ಸುಶಾಂತಿ, ಸುಶಾಂತಿಗೆ ಪುರುಜ. ಪುರುಜನಿಗೆ ಅರ್ಕ, ಅರ್ಕನಿಗೆ ಭರ್ಮ್ಯಾಶ್ವ, ಭರ್ಮ್ಯಾಶ್ವನಿಗೆ – ಮುದ್ಗಲ, ಯವೀನರ, ಬೃಹದಿಷು, ಕಾಂಪಿಲ್ಯ ಮತ್ತು ಸಂಜಯ ಎಂಬ ಐದು ಮಂದಿ ಮಕ್ಕಳಾದರು. ಭರ್ಮ್ಯಾಶ್ವನು ಹೇಳಿದನು – ಈ ನನ್ನ ಐವರು ಪುತ್ರರು (ಪಂಚ) ದೇಶಗಳಿಗೆ ಶಾಸನ ಮಾಡುವುದರಲ್ಲಿ ಸಮರ್ಥರಾಗಿರುವರು (ಪಂಚ ಅಲಮ್). ಇದರಿಂದ ಇವರು 'ಪಾಂಚಾಲ'ರೆಂದು ಪ್ರಸಿದ್ಧರಾದರು. ಇವರಲ್ಲಿ ಮುದ್ಗಲನಿಂದ 'ಮೌದ್ಗಲ್ಯ'ವೆಂಬ ಬ್ರಾಹ್ಮಣಗೋತ್ರವು ಪ್ರವೃತ್ತವಾಯಿತು. ॥ ೩೦–೩೩ ॥

ಭರ್ಮ್ಯಾಶ್ವನ ಪುತ್ರ ಮುದ್ಗಲನಿಗೆ ಅವಳಿ ಮಕ್ಕಳು ಹುಟ್ಟಿದರು. ಅವರಲ್ಲಿ ಪುತ್ರನ ಹೆಸರು ದಿವೋದಾಸ ಮತ್ತು ಪುತ್ರಿಯ ಹೆಸರು ಅಹಲ್ಯೆ ಎಂದಿತ್ತು. ಅಹಲ್ಯೆಯ ವಿವಾಹವು ಮಹರ್ಷಿ ಗೌತಮರೊಂದಿಗೆ ನಡೆಯಿತು. ಗೌತಮನಿಗೆ ಶತಾನಂದನೆಂಬ ಮಗನು ಹುಟ್ಟಿದನು. ॥ ೩೪ ॥ ಶತಾನಂದನ ಪುತ್ರ ಸತ್ಯಧೃತಿಯಾಗಿದ್ದನು. ಅವನು ಧನುರ್ವಿದ್ಯೆಯಲ್ಲಿ ಅತ್ಯಂತ ನಿಪುಣನಾಗಿದ್ದನು. ಸತ್ಯಧೃತಿಯ ಪುತ್ರನ ಹೆಸರು ಶರದ್ವಾನ್. ಒಂದು ದಿನ ಊರ್ವಶಿಯನ್ನು ಕಂಡು ಶರದ್ವಂತನ ವೀರ್ಯವು ಸ್ಖಲನವಾಗಿ ಜೊಂಡುಹುಲ್ಲಿನ ಮೇಲೆ ಬಿತ್ತು. ಅದರಿಂದ ಶುಭಲಕ್ಷಣಗಳುಳ್ಳ ಒರ್ವ ಪುತ್ರ ಮತ್ತು ಒಂದು ಪುತ್ರಿಯ ಜನ್ಮವಾಯಿತು. ಶಂತನು ಮಹಾರಾಜನು ಬೇಟೆಯಾಡಲು ಆ ಕಡೆ ಹೋದಾಗ ಅವರನ್ನು ನೋಡಿದನು. ದಯಾಪರನಾದ ಶಂತನು ಇಬ್ಬರನ್ನೂ ಎತ್ತಿತಂದನು. ಅವರಲ್ಲಿನ ಪುತ್ರನ ಹೆಸರು ಕೃಪಾಚಾರ್ಯನೆಂದಿತ್ತು ಮತ್ತು ಕನ್ಯೆಯ ಹೆಸರು ಕೃಪಿ ಯೆಂದಿತ್ತು. ಇವಳು ದ್ರೋಣಾಚಾರ್ಯರ ಪತ್ನಿಯಾದಳು. ॥ ೩೫–೩೬ ॥

ಇಪ್ಪತ್ತೊಂದನೆಯ ಅಧ್ಯಾಯವು ಮುಗಿಯಿತು. ॥ ೨೧ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ನವಮಸ್ಕಂಧೇ ಏಕವಿಂಶೋಽಧ್ಯಾಯಃ ॥ ೨೧ ॥

ಇಪ್ಪತ್ತೆರಡನೆಯ ಅಧ್ಯಾಯ

ಪಾಂಚಾಲ, ಕೌರವ ಮತ್ತು ಮಗಧದೇಶದ ರಾಜರ ವಂಶವರ್ಣನೆ

ಶ್ರೀಶುಕ ಉವಾಚ

ಮಿತ್ರೇಯುಶ್ಚ ದಿವೋದಾಸಾಚ್ಚ್ಯವನಸ್ತತ್ಸುತೋ ನೃಪ ।
ಸುದಾಸಃ ಸಹದೇವೋಽಥ ಸೋಮಕೋ ಜಂತುಜನ್ಮಕೃತ್ ॥ ೧ ॥

ತಸ್ಯ ಪುತ್ರಶತಂ ತೇಷಾಂ ಯವೀಯಾನ್ ಪೃಷತಃ ಸುತಃ ।
ದ್ರುಪದೋ ದ್ರೌಪದೀ ತಸ್ಯ ಧೃಷ್ಟದ್ಯುಮ್ನಾದಯಃ ಸುತಾಃ ॥ ೨ ॥

ಧೃಷ್ಟದ್ಯುಮ್ನಾದ್ಧೃಷ್ಟಕೇತುರ್ಭಾರ್ಮ್ಯಾಃ ಪಾಂಚಾಲಕಾ ಇಮೇ ।
ಯೋಽಜಮೀಢಸುತೋ ಹ್ಯನ್ಯ ಋಕ್ಷಃ ಸಂವರಣಸ್ತತಃ ॥ ೩ ॥

ತಪತ್ಯಾಂ ಸೂರ್ಯಕನ್ಯಾಯಾಂ ಕುರುಕ್ಷೇತ್ರಪತಿಃ ಕುರುಃ ।
ಪರೀಕ್ಷಿತ್ಸುಧನುರ್ಜಹ್ನುರ್ನಿಷಧಾಶ್ಚ ಕುರೋಃ ಸುತಾಃ ॥ ೪ ॥

ಸುಹೋತ್ರೋಽಭೂತ್ಸುಧನುಷಶ್ಚ್ಯವನೋಽಥ ತತಃ ಕೃತೀ ।
ವಸುಸ್ತಸ್ಯೋಪರಿಚರೋ ಬೃಹದ್ರಥಮುಖಾಸ್ತತಃ ॥ ೫ ॥

ಕುಶಾಂಬಮತ್ಸ್ಯಪ್ರತ್ಯಗ್ರಚೇದಿಪಾದ್ಯಾಶ್ಚ ಚೇದಿಪಾಃ ।
ಬೃಹದ್ರಥಾತ್ಕುಶಾಗ್ರೋಽಭೂದೃಷಭಸ್ತಸ್ಯ ತತ್ಸುತಃ ॥ ೬ ॥

ಜಜ್ಞೇ ಸತ್ಯಹಿತೋಽಪತ್ಯಂ ಪುಷ್ಪವಾಂಸ್ತತ್ಸುತೋ ಜಹುಃ ।
ಅನ್ಯಸ್ಯಾಂ ಚಾಪಿ ಭಾರ್ಯಾಯಾಂ ಶಕಲೇ ದ್ವೇ ಬೃಹದ್ರಥಾತ್ ॥ ೭ ॥

ತೇ ಮಾತ್ರಾ ಬಹಿರುತ್ಸೃಷ್ಟೇ ಜರಯಾ ಚಾಭಿಸಂಧಿತೇ ।
ಜೀವ ಜೀವೇತಿ ಕ್ರೀಡಂತ್ಯಾ ಜರಾಸಂಧೋಽಭವತ್ಸುತಃ ॥ ೮ ॥

ತತಶ್ಚ ಸಹದೇವೋಽಭೂತ್ಸೋಮಾಪಿರ್ಯಚ್ಛ್ರುತಶ್ರವಾಃ ।
ಪರೀಕ್ಷಿದನಪತ್ಯೋಽಭೂತ್ಸುರಥೋ ನಾಮ ಜಾಹ್ನವಃ ॥ ೯ ॥

ತತೋ ವಿದೂರಥಸ್ತಸ್ಮಾತ್ ಸಾರ್ವಭೌಮಸ್ತತೋಽಭವತ್ ।
ಜಯಸೇನಸ್ತತ್ತನಯೋ ರಾಧಿಕೋಽತೋಽಯುತೋ ಹ್ಯಭೂತ್ ॥ ೧೦ ॥

ತತಶ್ಚ ಕ್ರೋಧನಸ್ತಸ್ಮಾದ್ದೇವಾತಿಥಿರಮುಷ್ಯ ಚ ।
ಋಷ್ಯಸ್ತಸ್ಯ ದಿಲೀಪೋಽಭೂತ್ಪ್ರತೀಪಸ್ತಸ್ಯ ಚಾತ್ಮಜಃ ॥ ೧೧ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಎಲೈ ಪರೀಕ್ಷಿತನೇ! ದಿವೋದಾಸನಿಗೆ ಮಿತ್ರೇಯು ಎಂಬ ಪುತ್ರನಿದ್ದನು. ಮಿತ್ರೇಯುವಿಗೆ – ಚ್ಯವನ, ಸುದಾಸ, ಸಹದೇವ ಮತ್ತು ಸೋಮಕರೆಂಬ ನಾಲ್ಕು ಪುತ್ರರಾದರು. ಸೋಮಕನಿಗೆ ನೂರು ಮಕ್ಕಳಿದ್ದರು. ಅವರಲ್ಲಿ ಹಿರಿಯವನು ಜಂತು ಮತ್ತು ಕಿರಿಯವನು ಪೃಷತನಾಗಿದ್ದನು. ಪೃಷತನಿಗೆ ದ್ರುಪದನೆಂಬ ಪುತ್ರನಿದ್ದನು. ದ್ರುಪದನಿಗೆ ದ್ರೌಪದಿ ಎಂಬ ಕನ್ಯೆಯೂ, ಧೃಷ್ಟದ್ಯುಮ್ನನೇ ಮೊದಲಾದ ಪುತ್ರರಿದ್ದರು. ॥ ೧-೨ ॥ ಧೃಷ್ಟದ್ಯುಮ್ನನಿಗೆ ಧೃಷ್ಟಕೇತು ಎಂಬ ಪುತ್ರನಿದ್ದನು. ಭರ್ಮ್ಯಾಶ್ವನ ವಂಶದಲ್ಲಿ ಹುಟ್ಟಿದ ಈ ರಾಜರೆಲ್ಲರೂ ಪಾಂಚಾಲರೆಂದು ಖ್ಯಾತರಾದರು. ಅಜಮೀಢನಿಗೆ ಋಕ್ಷನೆಂಬ ಇನ್ನೊರ್ವ ಪುತ್ರನಿದ್ದನು. ಅವನಿಂದ ಸಂವರಣನು ಹುಟ್ಟಿದನು. ॥ ೩ ॥ ಸಂವರಣನ ವಿವಾಹವು ಸೂರ್ಯನ ಮಗಳಾದ ತಪತಿಯೊಂದಿಗೆ ನಡೆಯಿತು. ಅವಳ ಗರ್ಭದಿಂದ ಕುರುಕ್ಷೇತ್ರದ ಒಡೆಯ ಕುರುವಿನ ಜನ್ಮವಾಯಿತು. ಕುರುವಿಗೆ – ಪರೀಕ್ಷಿತ, ಸುಧನ್ವಾ, ಜಹ್ನು ಮತ್ತು ನಿಷಧಾಶ್ವ ಎಂಬ ನಾಲ್ಕು ಪುತ್ರರು ಹುಟ್ಟಿದರು. ॥ ೪ ॥ ಸುಧನ್ವನಿಂದ ಸುಹೋತ್ರ, ಸುಹೋತ್ರನಿಂದ ಚ್ಯವನ, ಚ್ಯವನನಿಂದ ಕೃತಿ, ಕೃತಿಯಿಂದ ಉಪರಿಚರವಸು ಮತ್ತು ಉಪರಿಚರವಸುವಿನಿಂದ ಬೃಹದ್ರಥರೇ ಮೊದಲಾದ ಅನೇಕ ಪುತ್ರರು ಹುಟ್ಟಿದರು. ॥ ೫ ॥ ಅವರಲ್ಲಿ ಬೃಹದ್ರಥ, ಕುಶಾಂಬ, ಮತ್ಸ್ಯ, ಪ್ರತ್ಯಗ್ರ ಮತ್ತು ಚೇದಿಪ ಮೊದಲಾದವರು ಚೇದಿದೇಶದ ರಾಜರಾದರು. ಬೃಹದ್ರಥನಿಗೆ ಕುಶಾಗ್ರನೆಂಬ ಪುತ್ರನಿದ್ದನು. ಕುಶಾಗ್ರನಿಂದ ಋಷಭ, ಋಷಭನಿಂದ ಸತ್ಯಹಿತ, ಸತ್ಯಹಿತನಿಂದ ಪುಷ್ಪವಾನ್, ಪುಷ್ಪವಂತನಿಂದ ಜಹುನೆಂಬವ ಪುತ್ರನಾದನು. ಬೃಹದ್ರಥನ ಇನ್ನೊರ್ವ ಪತ್ನಿಯ ಗರ್ಭದಿಂದ ಒಂದು ಶರೀರದ ಎರಡು ಸೀಳುಗಳು ಹುಟ್ಟಿದವು. ॥ ೬-೭ ॥ ಅವನ್ನು ತಾಯಿಯು ಹೊರಗೆ ಎಸೆದುಬಿಟ್ಟಳು. ಆಗ 'ಜರಾ' ಎಂಬ ರಾಕ್ಷಸಿಯು 'ಬದುಕು-ಬದುಕು' ಎಂದು ಹೇಳಿ ಲೀಲಾಜಾಲವಾಗಿ ಅವೆರಡೂ ತುಂಡುಗಳನ್ನು ಜೋಡಿಸಿದಳು. ಆ ಜೋಡಿಸಿದ ಬಾಲಕನೇ ಜರಾಸಂಧನಾದನು. ॥ ೮ ॥ ಜರಾಸಂಧನಿಗೆ ಸಹದೇವ, ಸಹದೇವನಿಗೆ ಸೋಮಾಪಿ, ಸೋಮಾಪಿಗೆ ಶ್ರುತಶ್ರವಾ ಪುತ್ರನಾದನು. ಕುರುವಿನ ಜ್ಯೇಷ್ಠಪುತ್ರ ಪರೀಕ್ಷಿತನಿಗೆ ಯಾವ ಸಂತಾನವೂ ಆಗಲಿಲ್ಲ. ಜಹ್ನುವಿಗೆ ಸುರಥನೆಂಬ ಪುತ್ರನಿದ್ದನು. ॥ ೯ ॥ ಸುರಥನಿಗೆ ವಿದೂರಥ, ವಿದೂರಥನಿಗೆ ಸಾರ್ವಭೌಮ, ಸಾರ್ವಭೌಮನಿಗೆ ಜಯಸೇನ, ಜಯಸೇನನಿಗೆ ರಾಧಿಕ, ರಾಧಿಕನಿಗೆ ಅಯುತನೆಂಬ ಪುತ್ರನಾದನು. ॥ ೧೦ ॥ ಅಯುತನಿಗೆ ಕ್ರೋಧನ, ಕ್ರೋಧನನಿಗೆ ದೇವಾತಿಥಿ, ದೇವಾತಿಥಿಗೆ ಋಷ್ಯ, ಋಷ್ಯನಿಗೆ ದಿಲೀಪ, ದಿಲೀಪನಿಗೆ ಪ್ರತೀಪನೆಂಬ ಮಗನಾದನು. ॥ ೧೧ ॥

ದೇವಾಪಿಃ ಶಂತನುಸ್ತಸ್ಯ ಬಾಹ್ಲೀಕ ಇತಿ ಚಾತ್ಮಜಾಃ ।
ಪಿತೃರಾಜ್ಯಂ ಪರಿತ್ಯಜ್ಯ ದೇವಾಪಿಸ್ತು ವನಂ ಗತಃ ॥ ೧೨ ॥

ಅಭವಚ್ಛಂತನೂ ರಾಜಾ ಪ್ರಾಙ್ಮಹಾಭಿಷಸಂಜ್ಞಿತಃ ।
ಯಂ ಯಂ ಕರಾಭ್ಯಾಂ ಸ್ಪೃಶತಿ ಜೀರ್ಣಂ ಯೌವನಮೇತಿ ಸಃ ॥ ೧೩ ॥

ಶಾಂತಿಮಾಪ್ನೋತಿ ಚೈವಾಗ್ರ್ಯಾಂ ಕರ್ಮಣಾ ತೇನ ಶಂತನುಃ ।
ಸಮಾ ದ್ವಾದಶ ತದ್ರಾಜ್ಯೇ ನ ವವರ್ಷ ಯದಾ ವಿಭುಃ ॥ ೧೪ ॥

ಶಂತನುರ್ಬ್ರಾಹ್ಮಣೈರುಕ್ತಃ ಪರಿವೇತ್ತಾಯಮಗ್ರಭುಕ್ ।
ರಾಜ್ಯಂ ದೇಹ್ಯಗ್ರಜಾಯಾಶು ಪುರರಾಷ್ಟ್ರವಿವೃದ್ಧಯೇ ॥ ೧೫ ॥

ಏವಮುಕ್ತೋ ದ್ವಿಜೈರ್ಜ್ಯೇಷ್ಠಂ ಛಂದಯಾಮಾಸ ಸೋಽಬ್ರವೀತ್ ।
ತನ್ಮಂತ್ರಿಪ್ರಹಿತೈರ್ವಿಪ್ರೈರ್ವೇದಾದ್ ವಿಭ್ರಂಶಿತೋ ಗಿರಾ ॥ ೧೬ ॥

ವೇದವಾದಾತಿವಾದಾನ್ವೈ ತದಾ ದೇವೋ ವವರ್ಷ ಹ ।
ದೇವಾಪಿರ್ಯೋಗಮಾಸ್ಥಾಯ ಕಲಾಪಗ್ರಾಮಮಾಶ್ರಿತಃ ॥ ೧೭ ॥

ಸೋಮವಂಶೇ ಕಲೌ ನಷ್ಟೇ ಕೃತಾದೌ ಸ್ಥಾಪಯಿಷ್ಯತಿ ।
ಬಾಹ್ಲೀಕಾತ್ಸೋಮದತ್ತೋಽಭೂದ್ಭೂರಿರ್ಭೂರಿಶ್ರವಾಸ್ತತಃ ॥ ೧೮ ॥

ಶಲಶ್ಚ ಶಂತನೋರಾಸೀದ್ಗಂಗಾಯಾಂ ಭೀಷ್ಮ ಆತ್ಮವಾನ್ ।
ಸರ್ವಧರ್ಮವಿದಾಂ ಶ್ರೇಷ್ಠೋ ಮಹಾಭಾಗವತಃ ಕವಿಃ ॥ ೧೯ ॥

ಪ್ರತೀಪನಿಗೆ – ದೇವಾಪಿ, ಶಂತನು, ಬಾಹ್ಲೀಕ ಎಂಬ ಮೂವರು ಪುತ್ರರಿದ್ದರು. ದೇವಾಪಿಯು ಪಿತ್ರಾರ್ಜಿತ ರಾಜ್ಯವನ್ನು ಬಿಟ್ಟು ವನಕ್ಕೆ ಹೊರಟು ಹೋದನು. ॥ ೧೨ ॥ ಅದಕ್ಕಾಗಿ ಅವನ ತಮ್ಮನಾದ ಶಂತನು ರಾಜನಾದನು. ಹಿಂದಿನ ಜನ್ಮದಲ್ಲಿ ಶಂತನುವಿನ ಹೆಸರು ಮಹಾಭಿಷನೆಂದಿತ್ತು. ಈ ಜನ್ಮದಲ್ಲಿಯೂ ಅವನು ತನ್ನ ಕೈಯಿಂದ ಸ್ಪರ್ಶಿಸಿದವರು ಮುದುಕರಾಗಿದ್ದವರು ತರುಣರಾಗುತ್ತಿದ್ದರು. ॥ ೧೩ ॥ ಅವನಿಗೆ ಪರಮ ಶಾಂತಿಯು ಲಭಿಸಿತ್ತು. ಈ ಅದ್ಭುತ ಶಕ್ತಿಯಿಂದಲೇ ಅವನು 'ಶಂತನು' ಎಂದು ಖ್ಯಾತನಾದನು. ಒಮ್ಮೆ ಹನ್ನೆರಡು ವರ್ಷಗಳಕಾಲ ಶಂತನುವಿನ ರಾಜ್ಯದಲ್ಲಿ ಇಂದ್ರನು ಮಳೆ ಗರೆಯಲೇ ಇಲ್ಲ. ಇದರ ಕಾರಣವನ್ನು ಬ್ರಾಹ್ಮಣರನ್ನು ಕರೆದು ಕೇಳಿದನು; ಬ್ರಾಹ್ಮಣರೆಂದರು – ರಾಜನೇ! ನೀನು ನಿನ್ನಣ್ಣನಾದ ದೇವಾಪಿಯು ವಿವಾಹವಾಗುವುದಕ್ಕೆ ಮೊದಲೇ ವಿವಾಹವಾದೆ. ಅಗ್ನಿಹೋತ್ರ ಮತ್ತು ರಾಜ್ಯಪದವಿಯನ್ನೂ ಸ್ವೀಕರಿಸಿದೆ. ಆದ್ದರಿಂದ ನೀನು ಪರಿವೇತ್ತಾ* ಆಗಿರುವೆ. ಇದರಿಂದ ನಿನ್ನ ರಾಜ್ಯದಲ್ಲಿ ಮಳೆಯಾಗಲಿಲ್ಲ. ಈಗ ನೀನು ನಿನ್ನ ರಾಜ್ಯದ, ರಾಷ್ಟ್ರದ ಉನ್ನತಿಯನ್ನು ಬಯಸುವೆಯಾದರೆ ಶೀಘ್ರಾತಿಶೀಘ್ರವಾಗಿ ನಿನ್ನಣ್ಣನಿಗೆ ರಾಜ್ಯವನ್ನು ಮರಳಿಸಿಬಿಡು. ॥ ೧೪-೧೫ ॥ ಬ್ರಾಹ್ಮಣರು ಶಂತನುವಿನ ಬಳಿ ಹೀಗೆ ಹೇಳಿದಾಗ ಅವನು ವನಕ್ಕೆ ಹೋಗಿ ತನ್ನಣ್ಣನಲ್ಲಿ ರಾಜ್ಯವನ್ನು ಸ್ವೀಕರಿಸುವಂತೆ ಪ್ರಾರ್ಥಿಸಿದನು. ಆದರೆ ಶಂತನುವಿನ ಮಂತ್ರಿಯಾದ ಅಶ್ವರಾತನು ಮೊದಲೇ ದೇವಾಪಿಯ ಬಳಿಗೆ ಕೆಲವು ಬ್ರಾಹ್ಮಣರನ್ನು ಕಳಿಸಿ, ವೇದಗಳನ್ನು ದೂಷಿತಗೊಳಿಸುವಂತಹ ವಚನಗಳಿಂದ ದೇವಾಪಿಯನ್ನು ವೇದಮಾರ್ಗದಿಂದ ವಿಚಲಿತಗೊಳಿಸಿದ್ದನು. ಇದರ ಫಲವಾಗಿ ದೇವಾಪಿಯು ವೇದಮಾರ್ಗಕ್ಕನುಸಾರ ಗೃಹಸ್ಥಾಶ್ರಮವನ್ನು ಸ್ವೀಕರಿಸುವ ಬದಲು ಅವನ್ನು ನಿಂದಿಸತೊಡಗಿದನು. ಇದರಿಂದ ಅವನು ರಾಜ್ಯಾಧಿಕಾರದಿಂದ ವಂಚಿತನಾದನು. ಆಗ ಶಂತನುವಿನ ರಾಜ್ಯದಲ್ಲಿ ಮಳೆಯಾಯಿತು. ದೇವಾಪಿಯು ಈಗಲೂ ಯೋಗಸಾಧನೆಯನ್ನು ಮಾಡುತ್ತಾ ಯೋಗಿಗಳ ಪ್ರಸಿದ್ಧ ನಿವಾಸಸ್ಥಾನವಾದ ಕಲಾಪಗ್ರಾಮದಲ್ಲಿ ಇರುವನು. ॥ ೧೬-೧೭ ॥ ಕಲಿಯುಗದಲ್ಲಿ ಚಂದ್ರವಂಶವು ಅಸ್ತವಾದಾಗ ಕೃತಯುಗದ ಪ್ರಾರಂಭದಲ್ಲಿ ಅವನು ಪುನಃ ಚಂದ್ರವಂಶವನ್ನು ಸ್ಥಾಪಿಸುವನು. ಶಂತನುವಿನ ತಮ್ಮ ಬಾಹ್ಲೀಕನಿಗೆ ಸೋಮದತ್ತನೆಂಬ ಪುತ್ರನಾದನು. ಸೋಮದತ್ತನಿಗೆ ಭೂರಿ, ಭೂರಿಶ್ರವಾ ಮತ್ತು ಶಲ ಎಂಬ ಮೂವರು ಪುತ್ರರಾದರು. ಶಂತನುವಿನಿಂದ ಗಂಗಾದೇವಿಯ ಗರ್ಭದಿಂದ ನೈಷ್ಠಿಕ ಬ್ರಹ್ಮಚಾರೀ ಭೀಷ್ಮನ ಜನ್ಮವಾಯಿತು. ಅವನು ಸಮಸ್ತ ಧರ್ಮಜ್ಞರ ಶಿರೋಮಣಿಯಾಗಿದ್ದನು. ಭಗವಂತನ ಪರಮಪ್ರೇಮೀ ಭಕ್ತನು ಮತ್ತು ಪರಮ ಜ್ಞಾನಿಯಾಗಿದ್ದನು. ॥ ೧೮-೧೯ ॥

* ದಾರಾಗ್ನಿಹೋತ್ರಸಂಯೋಗಂ ಕುರುತೇ ಯೋಽಗ್ರಜೇ ಸ್ಥಿತೇ । ಪರಿವೇತ್ತಾ ಸ ವಿಜ್ಞೇಯಃ ಪರಿವಿತ್ತಿಸ್ತು ಪೂರ್ವಜಃ ॥
ಅಣ್ಣನಿಗಿಂತಲೂ ಮೊದಲು ಮದುವೆಯಾಗಿ ಅಗ್ನಿಹೋತ್ರವನ್ನು ನಡೆಸುವ ತಮ್ಮನು ಪರಿವೇತ್ತನೆಂದೂ ಅವನ ಅಣ್ಣನು 'ಪರಿವಿತ್ತಿ' ಎಂದು ಕರೆಯಲ್ಪಡುತ್ತಾರೆ.

ವೀರಯೂಥಾಗ್ರಣೀರ್ಯೇನ ರಾಮೋಽಪಿ ಯುಧಿ ತೋಷಿತಃ ।
ಶಂತನೋರ್ದಾಶಕನ್ಯಾಯಾಂ ಜಜ್ಞೇ ಚಿತ್ರಾಂಗದಃ ಸುತಃ
॥ ೨೦ ॥

ವಿಚಿತ್ರ ವೀರ್ಯಶ್ಚಾವರಜೋ ನಾಮ್ನಾ ಚಿತ್ರಾಂಗದೋ ಹತಃ ।
ಯಸ್ಯಾಂ ಪರಾಶರಾತ್ಸಾಕ್ಷಾದವತೀರ್ಣೋ ಹರೇಃ ಕಲಾ
॥ ೨೧ ॥

ವೇದಗುಪ್ತೋ ಮುನಿಃ ಕೃಷ್ಣೋ ಯತೋಽಹಮಿದಮಧ್ಯಗಾಮ್ ।
ಹಿತ್ವಾ ಸ್ವಶಿಷ್ಯಾನ್ಪೈಲಾದೀನ್ಭಗವಾನ್ಬಾದರಾಯಣಃ
॥ ೨೨ ॥

ಮಹ್ಯಂ ಪುತ್ರಾಯ ಶಾಂತಾಯ ಪರಂ ಗುಹ್ಯಮಿದಂ ಜಗೌ ।
ವಿಚಿತ್ರವೀರ್ಯೋಽಥೋವಾಹ ಕಾಶಿರಾಜಸುತೇ ಬಲಾತ್
॥ ೨೩ ॥

ಸ್ವಯಂವರಾದುಪಾನೀತೇ ಅಂಬಿಕಾಂಬಾಲಿಕೇ ಉಭೇ ।
ತಯೋರಾಸಕ್ತಹೃದಯೋ ಗೃಹೀತೋ ಯಕ್ಷ್ಮಣಾ ಮೃತಃ
॥ ೨೪ ॥

ಕ್ಷೇತ್ರೇಽಪ್ರಜಸ್ಯ ವೈ ಭ್ರಾತುರ್ಮಾತ್ರೋಕ್ತೋ ಬಾದರಾಯಣಃ ।
ಧೃತರಾಷ್ಟ್ರಂ ಚ ಪಾಂಡುಂ ಚ ವಿದುರಂ ಚಾಪ್ಯಜೀಜನತ್
॥ ೨೫ ॥

ಗಾಂಧಾರ್ಯಾಂ ಧೃತರಾಷ್ಟ್ರಸ್ಯ ಜಜ್ಞೇ ಪುತ್ರಶತಂ ನೃಪ ।
ತತ್ರ ದುರ್ಯೋಧನೋ ಜ್ಯೇಷ್ಠೋ ದುಃಶಲಾ ಚಾಪಿ ಕನ್ಯಕಾ
॥ ೨೬ ॥

ಶಾಪಾನ್ಮೈಥುನರುದ್ಧಸ್ಯ ಪಾಂಡೋಃ ಕುಂತ್ಯಾಂ ಮಹಾರಥಾಃ ।
ಜಾತಾ ಧರ್ಮಾನಿಲೇಂದ್ರೇಭ್ಯೋ ಯುಧಿಷ್ಠಿರಮುಖಾಸ್ತ್ರಯಃ
॥ ೨೭ ॥

ಅವನು ಜಗತ್ತಿನ ಸಮಸ್ತ ವೀರರಲ್ಲಿ ಅಗ್ರಗಣ್ಯನಾಗಿದ್ದನು. ಬೇರೆಯ ಮಾತೇನು ? ಅವನು ತನ್ನ ಗುರುಗಳಾದ ಭಗವಾನ್ ಪರಶುರಾಮನನ್ನೂ ಕೂಡ ಯುದ್ಧದಲ್ಲಿ ಸಂತುಷ್ಟಗೊಳಿಸಿದ್ದನು. ಶಂತನುವು ದಾಶರಾಜನ ಮಗಳ* ಗರ್ಭದಿಂದ ಚಿತ್ರಾಂಗದ ಮತ್ತು ವಿಚಿತ್ರವೀರ್ಯರೆಂಬ ಈರ್ವರು ಪುತ್ರರನ್ನು ಪಡೆದನು. ಚಿತ್ರಾಂಗದನನ್ನು ಚಿತ್ರಾಂಗದನೆಂಬ ಗಂಧರ್ವನು ಕೊಂದು ಹಾಕಿದನು. ಇದೇ ದಾಶರಾಜನ ಕನ್ಯೆಯಾದ ಸತ್ಯವತಿಯಿಂದ ಪರಾಶರರ ಮೂಲಕ ನನ್ನ ತಂದೆಯಾದ ಭಗವಂತನ ಕಲಾವತಾರವಾಗಿದ್ದ ಸ್ವಯಂ ಭಗವಂತನು ಶ್ರೀಕೃಷ್ಣದ್ವೈಪಾಯನರಾದ ವೇದವ್ಯಾಸರು ಅವತರಿಸಿದರು. ಅವರು ವೇದಗಳನ್ನು ವಿಭಾಗಮಾಡಿ ರಕ್ಷಿಸಿದರು. ಪರೀಕ್ಷಿತನೇ ! ನಾನು ಅವರಿಂದಲೇ ಈ ಶ್ರೀಮದ್ಭಾಗವತ ಮಹಾಪುರಾಣವನ್ನು ಅಧ್ಯಯನ ಮಾಡಿದೆನು. ಈ ಪುರಾಣವು ಪರಮ ಗೋಪ್ಯವೂ, ಅತ್ಯಂತ ರಹಸ್ಯಮಯವೂ ಆಗಿದೆ. ಇದರಿಂದ ನನ್ನ ತಂದೆಯಾದ ಭಗವಾನ್ ವ್ಯಾಸರು ತಮ್ಮ ಪೈಲರೇ ಮೊದಲಾದ ಶಿಷ್ಯರಿಗೆ ಉಪದೇಶಿಸಲಿಲ್ಲ, ನನ್ನನ್ನೇ ಯೋಗ್ಯ ಅಧಿಕಾರಿಯೆಂದರಿತು ನನಗೆ ಉಪದೇಶಿಸಿದರು. ನಾನು ಅವರ ಪುತ್ರನೇ ಆಗಿದ್ದೆನಲ್ಲ! ಅಲ್ಲದೆ ಶಾಂತಿ ಮುಂತಾದ ಸದ್ಗುಣಗಳು ನನ್ನಲ್ಲಿ ವಿಶೇಷವಾಗಿದ್ದುವು. ಶಂತನುವಿನ ಎರಡನೇ ಮಗನಾದ ವಿಚಿತ್ರವೀರ್ಯನು ಕಾಶಿರಾಜನ ಕನ್ಯೆಯರಾದ ಅಂಬಿಕಾ ಮತ್ತು ಅಂಬಾಲಿಕೆಯನ್ನು ವಿವಾಹವಾದನು. ಅವರಿಬ್ಬರನ್ನೂ ಸ್ವಯಂವರದಲ್ಲಿ ಭೀಷ್ಮರು ಬಲವಂತವಾಗಿ ಗೆದ್ದು ತಂದಿದ್ದರು. ವಿಚಿತ್ರವೀರ್ಯನು ತನ್ನ ಇಬ್ಬರೂ ಪತ್ನಿಯರಲ್ಲಿ ಅತೀವ ಆಸಕ್ತನಾದನು. ಇದರಿಂದ ಅವನು ರಾಜಯಕ್ಷ್ಮಾ (ಕ್ಷಯರೋಗ) ರೋಗಕ್ಕೆ ತುತ್ತಾಗಿ ಅದರಿಂದಲೇ ಮೃತ್ಯುವನ್ನಪ್ಪಿದನು. ॥ ೨೦-೨೪ ॥ ತಾಯಿಯಾದ ಸತ್ಯವತಿಯ ನಿರ್ದೇಶನದಂತೆ ಭಗವಾನ್ ವ್ಯಾಸರು ಸಂತಾನಹೀನೆಯರಾಗಿದ್ದ ತನ್ನ ತಮ್ಮನ ಭಾರ್ಯೆಯರಿಗೆ ಧೃತರಾಷ್ಟ್ರ ಮತ್ತು ಪಾಂಡು ಎಂಬ ಇಬ್ಬರು ಪುತ್ರರನ್ನು ಅನುಗ್ರಹಿಸಿದರು. ಅವರ ದಾಸಿಯವರಲ್ಲಿ ವೇದವ್ಯಾಸರ ಅನುಗ್ರಹದಿಂದ ವಿದುರನು ಜನಿಸಿದನು. ॥ ೨೫ ॥

ಪರೀಕ್ಷಿತನೇ ! ಧೃತರಾಷ್ಟ್ರನಿಗೆ ಗಾಂಧಾರಿ ಎಂಬ ಪತ್ನಿಯಲ್ಲಿ ನೂರು ಮಕ್ಕಳಾದರು. ಅವರಲ್ಲಿ ಹಿರಿಯವನೇ ದುರ್ಯೋಧನ. ದುಃಶಲಾ ಎಂಬ ಕಿರಿಯ ಕನ್ಯೆಯೂ ಇದ್ದಳು. ॥ ೨೬ ॥ ಪಾಂಡುವಿಗೆ ಕುಂತಿ ಎಂಬ ಪತ್ನಿಯಿದ್ದಳು. ಶಾಪವಶದಿಂದಾಗಿ ಪಾಂಡುವು ಸ್ತ್ರೀಸಹವಾಸವನ್ನು ಮಾಡಲಾಗಲಿಲ್ಲ. ಆದರಿಂದ ಅವನ ಪತ್ನೀ ಕುಂತಿಯ ಗರ್ಭದಿಂದ ಧರ್ಮ, ವಾಯು, ಇಂದ್ರ ಇವರ ಮೂಲಕ ಕ್ರಮವಾಗಿ ಯುಧಿಷ್ಠಿರ, ಭೀಮ, ಅರ್ಜುನ ಎಂಬ ಮೂವರು ಪುತ್ರರು ಉದಿಸಿದರು. ಇವರು ಮೂವರೂ ಮಹಾರಥಿಗಳಾಗಿದ್ದರು. ॥ ೨೭ ॥

* ಈ ಕನ್ಯೆಯು ನಿಜವಾಗಿ ಉಪಚರವಸುವಿನ ವೀರ್ಯದಿಂದ ಮೀನಿನ ಹೊಟ್ಟೆಯಲ್ಲಿ ಹುಟ್ಟಿದವಳು. ಆದರೆ ದಾಶ (ಬೆಸ್ತ)ನಿಂದ ಸಾಕಲ್ಪಟ್ಟಿದ್ದರಿಂದ ಅವಳು ದಾಶರಾಜಕನ್ಯೆಯೆನಿಸಿದಳು.

ನಕುಲಃ ಸಹದೇವಶ್ಚ ಮಾದ್ರ್ಯಾಂ ನಾಸತ್ಯದಸ್ರಯೋಃ ।
ದ್ರೌಪದ್ಯಾಂ ಪಂಚ ಪಂಚಭ್ಯಃ ಪುತ್ರಾಸ್ತೇ ಪಿತರೋಽಭವನ್
॥ ೨೮ ॥

ಯುಧಿಷ್ಠಿರಾತ್ಪ್ರತಿವಿಂಧ್ಯಃ ಶ್ರುತಸೇನೋ ವೃಕೋದರಾತ್ ।
ಅರ್ಜುನಾಚ್ಛ್ರುತಕೀರ್ತಿಸ್ತು ಶತಾನೀಕಸ್ತು ನಾಕುಲಿಃ
॥ ೨೯ ॥

ಸಹದೇವಸುತೋ ರಾಜನ್ ಶ್ರುತಕರ್ಮಾ ತಥಾಪರೇ ।
ಯುಧಿಷ್ಠಿರಾತ್ತು ಪೌರವ್ಯಾಂ ದೇವಕೋಽಥ ಘಟೋತ್ಕಚಃ
॥ ೩೦ ॥

ಭೀಮಸೇನಾದ್ಧಿಡಿಂಬಾಯಾಂ ಕಾಲ್ಯಾಂ ಸರ್ವಗತಸ್ತತಃ ।
ಸಹದೇವಾತ್ಸುಹೋತ್ರಂ ತು ವಿಜಯಾಸೂತ ಪಾರ್ವತೀ
॥ ೩೧ ॥

ಕರೇಣುಮತ್ಯಾಂ ನಕುಲೋ ನರಮಿತ್ರಂ ತಥಾರ್ಜುನಃ ।
ಇರಾವಂತಮುಲೂಪ್ಯಾಂ ವೈ ಸುತಾಯಾಂ ಬಭ್ರುವಾಹನಮ್ ।
ಮಣಿಪೂರಪತೇಃ ಸೋಽಪಿ ತತ್ಪುತ್ರಃ ಪುತ್ರಿಕಾಸುತಃ
॥ ೩೨ ॥

ತವ ತಾತಃ ಸುಭದ್ರಾಯಾಮಭಿಮನ್ಯುರಜಾಯತ ।
ಸರ್ವಾತಿರಥಜಿದ್ವೀರ ಉತ್ತರಾಯಾಂ ತತೋ ಭವಾನ್
॥ ೩೩ ॥

ಪರಿಕ್ಷೀಣೇಷು ಕುರುಷು ದ್ರೌಣೇರ್ಬ್ರಹ್ಮಾಸ್ತ್ರತೇಜಸಾ ।
ತ್ವಂ ಚ ಕೃಷ್ಣಾನುಭಾವೇನ ಸಜೀವೋ ಮೋಚಿತೋಽಂತಕಾತ್
॥ ೩೪ ॥

ತವೇಮೇ ತನಯಾಸ್ತಾತ ಜನಮೇಜಯಪೂರ್ವಕಾಃ ।
ಶ್ರುತಸೇನೋ ಭೀಮಸೇನ ಉಗ್ರಸೇನಶ್ಚ ವೀರ್ಯವಾನ್
॥ ೩೫ ॥

ಜನಮೇಜಯಸ್ತ್ವಾಂ ವಿದಿತ್ವಾ ತಕ್ಷಕಾನ್ನಿಧನಂ ಗತಮ್ ।
ಸರ್ಪಾನ್ವೈ ಸರ್ಪಯಾಗಾಗ್ನೌ ಸ ಹೋಷ್ಯತಿ ರುಷಾನ್ವಿತಃ
॥ ೩೬ ॥

ಕಾವಷೇಯಂ ಪುರೋಧಾಯ ತುರಂ ತುರಗಮೇಧಯಾಟ್ ।
ಸಮಂತಾತ್ಪೃಥಿವೀಂ ಸರ್ವಾಂ ಜಿತ್ವಾ ಯಕ್ಷ್ಯತಿ ಚಾಧ್ವರೈಃ
॥ ೩೭ ॥

ತಸ್ಯ ಪುತ್ರಃ ಶತಾನೀಕೋ ಯಾಜ್ಞವಲ್ಕ್ಯಾತ್ತ್ರಯೀಂ ಪಠನ್ ।
ಅಸ್ತ್ರಜ್ಞಾನಂ ಕ್ರಿಯಾಜ್ಞಾನಂ ಶೌನಕಾತ್ಪರಮೇಷ್ಯತಿ
॥ ೩೮ ॥

ಪಾಂಡುವಿನ ಇನ್ನೊರ್ವ ಪತ್ನಿಯ ಹೆಸರು ಮಾದ್ರಿಯೆಂದಿತ್ತು. ಅವಳಲ್ಲಿ ಅಶ್ವಿನೀದೇವತೆಗಳ ಅನುಗ್ರಹದಿಂದ ನಕುಲ-ಸಹದೇವರೆಂಬ ಯಮಳರು ಹುಟ್ಟಿದರು. ಪರೀಕ್ಷಿತನೇ! ಈ ಪಂಚಪಾಂಡವರ ಪತ್ನಿಯಾದ ದ್ರೌಪದಿಯಲ್ಲಿ ನಿನ್ನ ಐವರು ಚಿಕ್ಕಪ್ಪಂದಿರು ಜನಿಸಿದರು. ॥ ೨೮ ॥ ಇವರಲ್ಲಿ ಯುಧಿಷ್ಠಿರನಿಂದ ಪ್ರತಿವಿಂಧ್ಯ, ಭೀಮಸೇನನಿಂದ ಶ್ರುತಸೇನ, ಅರ್ಜುನನಿಂದ ಶ್ರುತಕೀರ್ತಿ, ನಕುಲನಿಂದ ಶತಾನೀಕ, ಸಹದೇವನಿಂದ ಶ್ರುತಕರ್ಮಾ ಎಂಬುವರು ಹುಟ್ಟಿದರು. ಇವರುಗಳಲ್ಲದೆ ಯುಧಿಷ್ಠಿರನ ಪೌರವೀ ಎಂಬ ಪತ್ನಿಯಿಂದ ದೇವಕನೂ, ಭೀಮಸೇನನ ಪತ್ನಿ ಹಿಡಿಂಬೆಯಿಂದ ಘಟೋತ್ಕಚ ಮತ್ತು ಕಾಳಿ ಎಂಬುವಳಲ್ಲಿ ಸರ್ವಗತನೆಂಬ ಮಗನೂ ಹುಟ್ಟಿದರು. ಸಹದೇವನ ಪರ್ವತಕುಮಾರಿ ವಿಜಯಳಿಂದ ಸುಹೋತ್ರನೂ, ನಕುಲನ ಕರೇಣುಮತಿಯಿಂದ ನರಮಿತ್ರರೆಂಬ ಪುತ್ರರಾದರು. ಅರ್ಜುನನಿಂದ ನಾಗಕನ್ಯೆ ಉಲೂಪಿಯ ಗರ್ಭದಲ್ಲಿ ಇರಾವಂತ ಮತ್ತು ಮಣಿಪುರದ ರಾಜನ ಮಗಳಾದ ಚಿತ್ರಾಂಗದೆಯಿಂದ ಬಭ್ರುವಾಹನನು ಹುಟ್ಟಿದನು. ಆದರೆ ಹಿಂದೆ ಮಾಡಿಕೊಂಡಿದ್ದ ಒಪ್ಪಂದದಂತೆ ಬಭ್ರುವಾಹನನು ಪುತ್ರಿಕಾಸುತನಾಗಿ ಅವನ ಅಜ್ಜನಿಗೇ ಮಗನಾದನು. ॥ ೨೯-೩೨ ॥ ಅರ್ಜುನನಿಗೆ ಸುಭದ್ರೆ ಎಂಬ ಪತ್ನಿಯಲ್ಲಿ ನಿನ್ನ ತಂದೆಯಾದ ಅಭಿಮನ್ಯುವಿನ ಜನ್ಮವಾಯಿತು. ವೀರಅಭಿಮನ್ಯುವು ಎಲ್ಲ ಅತಿರಥಿಯರನ್ನೂ ಗೆದ್ದುಕೊಂಡಿದ್ದನು. ಅಭಿಮನ್ಯುವಿನ ಮೂಲಕ ಉತ್ತರೆಯ ಗರ್ಭದಲ್ಲಿ ನಿನ್ನ ಜನ್ಮವಾಗಿದೆ. ॥ ೩೩ ॥ ಪರೀಕ್ಷಿತನೇ! ಆ ಸಮಯದಲ್ಲಿ ಕುರುವಂಶವು ನಾಶವಾಗಿಹೋಗಿತ್ತು. ಅಶ್ವತ್ಥಾಮನ ಬ್ರಹ್ಮಾಸ್ತ್ರದಿಂದ ನೀನು ಸುಟ್ಟುಹೋಗಿದ್ದೆ. ಆದರೆ ಭಗವಾನ್ ಶ್ರೀಕೃಷ್ಣನು ತನ್ನ ಪ್ರಭಾವದಿಂದ ನಿನ್ನನ್ನು ಆ ಮೃತ್ಯುವಿನಿಂದ ಕಾಪಾಡಿ ಬದುಕಿಸಿದನು. ॥ ೩೪ ॥

ಪರೀಕ್ಷಿತನೇ! ನಿನ್ನ ಪುತ್ರರಾದ ಜನಮೇಜಯ, ಶ್ರುತಸೇನ, ಭೀಮಸೇನ ಮತ್ತು ಉಗ್ರಸೇನರು ನಿನ್ನ ಮುಂದೆಯೇ ಕುಳಿತಿದ್ದಾರೆ. ಇವರೆಲ್ಲರೂ ಮಹಾ ಪರಾಕ್ರಮಿಗಳಾಗಿದ್ದಾರೆಂಬುದು ನಿನಗೆ ತಿಳಿದೇ ಇದೆ. ॥ ೩೫ ॥ ತಕ್ಷಕನು ಕಚ್ಚಿದೊಡನೆ ನಿನ್ನ ಮೃತ್ಯುವಾದಾಗ ಇದನ್ನು ತಿಳಿದ ಜನಮೇಜಯನು ಬಹಳ ಸಿಟ್ಟುಗೊಂಡು, ಸರ್ಪಯಾಗದಿಂದ ಎಲ್ಲ ಸರ್ಪಗಳನ್ನು ಯಜ್ಞೇಶ್ವರನಿಗೆ ಆಹುತಿಯಾಗಿಸುವನು. ॥ ೩೬ ॥ ಕಾವಷೇಯನ ಪುತ್ರನಾದ ತುರನೆಂಬುವನನ್ನು ಪುರೋಹಿತನನ್ನಾಗಿಸಿಕೊಂಡು ಜನಮೇಜಯನು ಅಶ್ವಮೇಧ ಯಜ್ಞವನ್ನು ಮಾಡುವನು ಮತ್ತು ಎಲ್ಲ ದಿಕ್ಕುಗಳಲ್ಲಿ ಪೃಥಿವಿಯನ್ನು ಜಯಿಸಿ ಯಜ್ಞಗಳ ಮೂಲಕ ಭಗವಂತನನ್ನು ಆರಾಧಿಸುವನು. ॥ ೩೭ ॥ ಜನಮೇಜಯನಿಗೆ ಶತಾನೀಕನೆಂಬ ಪುತ್ರನು ಹುಟ್ಟುವನು. ಅವನು ಯಾಜ್ಞವಲ್ಕ್ಯರಿಂದ ಮೂರು ವೇದಗಳನ್ನು ಮತ್ತು ಕರ್ಮಕಾಂಡವನ್ನು ಕಲಿತು, ಕೃಪಾಚಾರ್ಯರಿಂದ ಅಸ್ತ್ರವಿದ್ಯೆಯನ್ನು ಪಡೆದುಕೊಳ್ಳುವನು. ಶೌನಕರಿಂದ ಆತ್ಮಜ್ಞಾನವನ್ನು ಸಂಪಾದಿಸಿ ಪರಮಾತ್ಮನನ್ನು ಹೊಂದುವನು. ॥ ೩೮ ॥

ಸಹಸ್ರಾನೀಕಸ್ತತ್ಪುತ್ರಸ್ತತಶ್ಚೈವಾಶ್ವಮೇಧಜಃ ।
ಅಸೀಮಕೃಷ್ಣಸ್ತಸ್ಯಾಪಿ ನೇಮಿಚಕ್ರಸ್ತು ತತ್ಸುತಃ ॥ ೩೯ ॥

ಗಜಾಹ್ವಯೇ ಹೃತೇ ನದ್ಯಾ ಕೌಶಾಂಬ್ಯಾಂ ಸಾಧು ವತ್ಸ್ಯತಿ ।
ಉಕ್ತಸ್ತತಶ್ಚಿತ್ರರಥಸ್ತಸ್ಮಾತ್ಕವಿರಥಃ ಸುತಃ ॥ ೪೦ ॥

ತಸ್ಮಾಚ್ಚ ವೃಷ್ಟಿಮಾಂಸ್ತಸ್ಯ ಸುಷೇಣೋಽಥ ಮಹೀಪತಿಃ ।
ಸುನೀಥಸ್ತಸ್ಯ ಭವಿತಾ ನೃಚಕ್ಷುರ್ಯತ್ಸುಖೀನಲಃ ॥ ೪೧ ॥

ಪರಿಪ್ಲವಃ ಸುತಸ್ತಸ್ಮಾನ್ಮೇಧಾವೀ ಸುನಯಾತ್ಮಜಃ ।
ನೃಪಞ್ಜಯಸ್ತತೋ ದೂರ್ವಸ್ತಿಮಿಸ್ತಸ್ಮಾಜ್ಜನಿಷ್ಯತಿ ॥ ೪೨ ॥

ತಿಮೇರ್ಬೃಹದ್ರಥಸ್ತಸ್ಮಾಚ್ಛತಾನೀಕಃ ಸುದಾಸಜಃ ।
ಶತಾನೀಕಾದ್ದುರ್ದಮನಸ್ತಸ್ಯಾಪತ್ಯಂ ಮಹೀನರಃ ॥ ೪೩ ॥

ದಂಡಪಾಣಿರ್ನಿಮಿಸ್ತಸ್ಯ ಕ್ಷೇಮಕೋ ಭವಿತಾ ನೃಪಃ ।
ಬ್ರಹ್ಮಕ್ಷತ್ರಸ್ಯ ವೈ ಪ್ರೋಕ್ತೋ ವಂಶೋ ದೇವರ್ಷಿಸತ್ಕೃತಃ ॥ ೪೪ ॥

ಕ್ಷೇಮಕಂ ಪ್ರಾಪ್ಯ ರಾಜಾನಂ ಸಂಸ್ಥಾಂ ಪ್ರಾಪ್ಸ್ಯತಿ ವೈ ಕಲೌ ।
ಅಥ ಮಾಗಧರಾಜಾನೋ ಭವಿತಾರೋ ವದಾಮಿ ತೇ ॥ ೪೫ ॥

ಭವಿತಾ ಸಹದೇವಸ್ಯ ಮಾರ್ಜಾರಿರ್ಯಚ್ಛ್ರುತಶ್ರವಾಃ ।
ತತೋಽಯುತಾಯುಸ್ತಸ್ಯಾಪಿ ನಿರಮಿತ್ರೋಽಥ ತತ್ಸುತಃ ॥ ೪೬ ॥

ಸುನಕ್ಷತ್ರಃ ಸುನಕ್ಷತ್ರಾದ್ಬೃಹತ್ಸೇನೋಽಥ ಕರ್ಮಜಿತ್ ।
ತತಃ ಸೃತಞ್ಜಯಾದ್ವಿಪ್ರಃ ಶುಚಿಸ್ತಸ್ಯ ಭವಿಷ್ಯತಿ ॥ ೪೭ ॥

ಕ್ಷೇಮೋಽಥ ಸುವ್ರತಸ್ತಸ್ಮಾದ್ಧರ್ಮಸೂತ್ರಃ ಶಮಸ್ತತಃ ।
ದ್ಯುಮತ್ಸೇನೋಽಥ ಸುಮತಿಃ ಸುಬಲೋ ಜನಿತಾ ತತಃ ॥ ೪೮ ॥

ಸುನೀಥಃ ಸತ್ಯಜಿದಥ ವಿಶ್ವಜಿದ್ ಯದ್ ರಿಪುಂಜಯಃ ।
ಬಾರ್ಹದ್ರಥಾಶ್ಚ ಭೂಪಾಲಾ ಭಾವ್ಯಾಃ ಸಾಹಸ್ರವತ್ಸರಮ್ ॥ ೪೯ ॥

ಶತಾನೀಕನಿಗೆ ಸಹಸ್ರಾನೀಕ, ಸಹಸ್ರಾನೀಕನಿಗೆ ಅಶ್ವಮೇಧಜ, ಅಶ್ವಮೇಧಜನಿಗೆ ಅಸೀಮಕೃಷ್ಣ ಮತ್ತು ಅಸೀಮಕೃಷ್ಣನಿಗೆ ನೇಮಿಚಕ್ರ ಪುತ್ರನು ಹುಟುವನು. ॥ ೩೯ ॥ ಹಸ್ತಿನಾಪುರವು ಗಂಗೆಯಲ್ಲಿ ಕೊಚ್ಚಿಕೊಂಡು ಹೋದಾಗ ನೇಮಿಯು ಕೌಶಾಂಬಿ ಪುರದಲ್ಲಿ ಸುಖವಾಗಿ ನೆಲಸುವನು. ನೇಮಿಗೆ ಚಿತ್ರರಥ ಪುತ್ರನಾಗುವನು. ಚಿತ್ರರಥನಿಗೆ ಕವಿರಥ, ಕವಿರಥನಿಗೆ ವೃಷ್ಟಿಮಾನ್, ವೃಷ್ಟಿಮಂತನಿಗೆ ಸುಷೇಣ, ಸುಷೇಣನಿಗೆ ಸುನೀಥ, ಸುನೀಥನಿಗೆ ನೃಚಕ್ಷು, ನೃಚಕ್ಷುವಿಗೆ ಸುಖೀನಲ, ಸುಖೀನಲನಿಗೆ ಪರಿಪ್ಲವ, ಪರಿಪ್ಲವನಿಗೆ ಸುನಯ, ಸುನಯನಿಗೆ ಮೇಧಾವೀ, ಮೇಧಾವಿಗೆ ನೃಪಂಜಯ, ನೃಪಂಜಯನಿಗೆ ದೂರ್ವ, ದೂರ್ವನಿಗೆ ತಿಮಿ ಎಂಬ ಪುತ್ರನು ಉದಿಸುವನು. ॥ ೪೦-೪೨ ॥ ತಿಮಿಯಿಂದ ಬೃಹದ್ರಥನು, ಬೃಹದ್ರಥನಿಗೆ ಸುದಾಸ, ಸುದಾಸನಿಗೆ ಶತಾನೀಕ, ಶತಾನೀಕನಿಗೆ ದುರ್ದಮನ, ದುರ್ದಮನನಿಗೆ ಮಹೀನರ, ಮಹೀನರನಿಗೆ ದಂಡಪಾಣಿ, ದಂಡಪಾಣಿಗೆ ನಿಮಿ ಮತ್ತು ನಿಮಿಗೆ ರಾಜಾಕ್ಷೇಮಕನ ಜನ್ಮವಾಗುವುದು. ಹೀಗೆ ನಾನು ನಿನಗೆ ಬ್ರಾಹ್ಮಣರು ಮತ್ತು ಕ್ಷತ್ರಿಯರ ಉತ್ಪತ್ತಿಸ್ಥಾನವಾದ ಚಂದ್ರವಂಶವನ್ನು ವರ್ಣಿಸಿ ಹೇಳಿರುವೆನು. ಮಹಾ-ಮಹಾ ದೇವತೆಗಳೂ, ಋಷಿಗಳೂ ಈ ವಂಶವನ್ನು ಸತ್ಕರಿಸುವರು. ॥ ೪೩-೪೪ ॥ ಈ ವಂಶವು ಕಲಿಯುಗದಲ್ಲಿ ಕ್ಷೇಮಕನೊಂದಿಗೆ ಸಮಾಪ್ತವಾಗುವುದು. ಈಗ ನಾನು ಭವಿಷ್ಯದಲ್ಲಾಗುವ ಮಗಧ ದೇಶದ ರಾಜರನ್ನು ವರ್ಣಿಸುವೆನು ಕೇಳು. ॥ ೪೫ ॥

ಜರಾಸಂಧನಮಗನಾದ ಸಹದೇವನಿಗೆ ಮಾರ್ಜಾರಿ, ಮಾರ್ಜಾರಿಯಿಂದ ಶ್ರುತಶ್ರವಾ, ಶ್ರುತಶ್ರವನಿಂದ ಅಯುತಾಯು,ಅಯುತಾಯುವಿನಿಂದ ನಿರಮಿತ್ರನೆಂಬ ಪುತ್ರನಾಗುವನು. ॥ ೪೬॥ ನಿರಮಿತ್ರನಿಂದ ಸುನಕ್ಷತ್ರ, ಸುನಕ್ಷತ್ರನಿಂದ ಬೃಹತ್ಸೇನ, ಬೃಹತ್ಸೇನನಿಂದ ಕರ್ಮಜಿತ್, ಕರ್ಮಜಿತ್ತುವಿನಿಂದ ಸೃತಂಜಯ, ಸೃತಂಜಯನಿಂದ ವಿಪ್ರ, ವಿಪ್ರನಿಂದ ಶುಚಿ ಎಂಬ ಪುತ್ರನಾಗುವನು. ॥ ೪೭ ॥ ಶುಚಿಗೆ ಕ್ಷೇಮ, ಕ್ಷೇಮನಿಗೆ ಸುವ್ರತ, ಸುವ್ರತನಿಗೆ ಧರ್ಮಸೂತ್ರ, ಧರ್ಮಸೂತ್ರನಿಗೆ ಶಮ, ಶಮನಿಗೆ ದ್ಯುಮತ್ಸೇನ, ದ್ಯುಮತ್ಸೇನನಿಗೆ ಸುಮತಿ, ಸುಮತಿಗೆ ಸುಬಲನು ಹುಟ್ಟುವನು. ॥ ೪೮ ॥ ಸುಬಲನಿಗೆ ಸುನೀಥ, ಸುನೀಥನಿಗೆ ಸತ್ಯಜಿತ್, ಸತ್ಯಜಿತ್ತುವಿಗೆ ವಿಶ್ವಜಿತ್, ವಿಶ್ವಜಿತ್ತುವಿಗೆ ರಿಪುಂಜಯ ಪುತ್ರನು ಹುಟ್ಟುವನು. ಇವರೆಲ್ಲರೂ ಬೃಹದ್ರಥವಂಶದ ರಾಜರಾಗುವರು. ಇವರ ಶಾಸನಕಾಲವು ಒಂದು ಸಾವಿರವರ್ಷಗಳು ಮಾತ್ರ ಇರುವುದು. ॥ ೪೯ ॥

ಇಪ್ಪತ್ತೆರಡನೆಯ ಅಧ್ಯಾಯವು ಮುಗಿಯಿತು. ॥ ೨೨ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ನವಮ ಸ್ಕಂಧೇ
ದ್ವಾವಿಂಶೋಽಧ್ಯಾಯಃ ॥ ೨೨ ॥

ಇಪ್ಪತ್ತಮೂರನೆಯ ಅಧ್ಯಾಯ

ಅನು, ದ್ರುಹ್ಯು, ತುರ್ವಸು ಮತ್ತು ಯದು ಇವರ ವಂಶದ ವರ್ಣನೆ

ಶ್ರೀಶುಕ ಉವಾಚ

ಅನೋಃ ಸಭಾನರಶ್ಚಕ್ಷುಃ ಪರೋಕ್ಷಶ್ಚ ತ್ರಯಃ ಸುತಾಃ ।
ಸಭಾನರಾತ್ಕಾಲನರಃ ಸೃಞ್ಜಯಸ್ತತ್ಸುತಸ್ತತಃ ॥ ೧ ॥

ಜನಮೇಜಯಸ್ತಸ್ಯ ಪುತ್ರೋ ಮಹಾಶೀಲೋ ಮಹಾಮನಾಃ ।
ಉಶೀನರಸ್ತಿತಿಕ್ಷುಶ್ಚ ಮಹಾಮನಸ ಆತ್ಮಜೌ ॥ ೨ ॥

ಶಿಬಿರ್ವನಃ ಶಮಿರ್ದಕ್ಷಶ್ಚತ್ವಾರೋಶೀನರಾತ್ಮಜಾಃ ।
ವೃಷಾದರ್ಭಃ ಸುವೀರಶ್ಚ ಮದ್ರಃ ಕೈಕೇಯ ಆತ್ಮಜಾಃ ॥ ೩ ॥

ಶಿಬೇಶ್ಚತ್ವಾರ ಏವಾಸಂಸ್ತಿತಿಕ್ಷೋಶ್ಚ ರುಷದ್ರಥಃ ।
ತತೋ ಹೇಮೋಽಥ ಸುತಪಾ ಬಲಿಃ ಸುತಪಸೋಽಭವತ್ ॥ ೪ ॥

ಅಂಗವಂಗಕಲಿಂಗಾದ್ಯಾಃ ಸುಹ್ಮಪುಂಡ್ರಾಂಧ್ರಸಂಜ್ಞಿತಾಃ ।
ಜಜ್ಞಿರೇ ದೀರ್ಘತಮಸೋ ಬಲೇಃ ಕ್ಷೇತ್ರೇ ಮಹೀಕ್ಷಿತಃ ॥ ೫ ॥

ಚಕ್ರುಃ ಸ್ವನಾಮ್ನಾ ವಿಷಯಾನ್ಷಡಿಮಾನ್ಪ್ರಾಚ್ಯಕಾಂಶ್ಚ ತೇ ।
ಖನಪಾನೋಽಂಗತೋ ಜಜ್ಞೇ ತಸ್ಮಾದ್ದಿವಿರಥಸ್ತತಃ ॥ ೬ ॥

ಸುತೋ ಧರ್ಮರಥೋ ಯಸ್ಯ ಜಜ್ಞೇ ಚಿತ್ರರಥೋಽಪ್ರಜಾಃ ।
ರೋಮಪಾದ ಇತಿ ಖ್ಯಾತಸ್ತಸ್ಮೈ ದಶರಥಃ ಸಖಾ ॥ ೭ ॥

ಶಾಂತಾಂ ಸ್ವಕನ್ಯಾಂ ಪ್ರಾಯಚ್ಛದೃಷ್ಯಶೃಂಗ ಉವಾಹ ತಾಮ್ ।
ದೇವೇಽವರ್ಷತಿ ಯಂ ರಾಮಾ ಆನಿನ್ಯುರ್ಹರಿಣೀಸುತಮ್ ॥ ೮ ॥

ನಾಟ್ಯಸಂಗೀತವಾದಿತ್ರೈರ್ವಿಭ್ರಮಾಲಿಂಗನಾರ್ಹಣೈಃ ।
ಸ ತು ರಾಜ್ಞೋಽನಪತ್ಯಸ್ಯ ನಿರೂಪ್ಯೇಷ್ಟಿಂ ಮರುತ್ವತಃ ॥ ೯ ॥

ಪ್ರಜಾಮದಾದ್ದಶರಥೋ ಯೇನ ಲೇಭೇಽಪ್ರಜಾಃ ಪ್ರಜಾಃ ।
ಚತುರಂಗೋ ರೋಮಪಾದಾತ್ಪೃಥುಲಾಕ್ಷಸ್ತು ತತ್ಸುತಃ ॥ ೧೦ ॥

ಬೃಹದ್ರಥೋ ಬೃಹತ್ಕರ್ಮಾ ಬೃಹದ್ಭಾನುಶ್ಚ ತತ್ಸುತಾಃ ।
ಆದ್ಯಾದ್ಬೃಹನ್ಮನಾಸ್ತಸ್ಮಾಜ್ಜಯದ್ರಥ ಉದಾಹೃತಃ ॥ ೧೧ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ! ಯಯಾತಿಯ ಮತ್ತೊಬ್ಬ ಮಗನಾದ ಅನು ಎಂಬುವನಿಗೆ ಸಭಾನರ, ಚಕ್ಷು, ಪರೋಕ್ಷ ಎಂಬ ಮೂವರು ಪುತ್ರರಿದ್ದರು. ಸಭಾನರನಿಗೆ ಕಾಲನರ, ಕಾಲನರನಿಗೆ ಸೃಂಜಯ, ಸೃಂಜಯನಿಗೆ ಜನಮೇಜಯ, ಜನಮೇಜಯನಿಗೆ ಮಹಾಶೀಲ, ಮಹಾಶೀಲನಿಗೆ ಮಹಾಮನಾ ಎಂಬ ಪುತ್ರನಾದನು. ಮಹಾಮನನಿಗೆ ಉಶೀನರ ಮತ್ತು ತಿತಿಕ್ಷು ಎಂಬ ಇಬ್ಬರು ಪುತ್ರರಾದರು. ॥ ೧-೨ ॥ ಉಶೀನರನಿಗೆ ಶಿಬಿ, ವನ, ಶಮೀ, ದಕ್ಷ ಎಂಬ ನಾಲ್ಕು ಮಕ್ಕಳಿದ್ದರು. ಶಿಬಿಗೆ – ವೃಷಾದರ್ಭ, ಸುವೀರ, ಮದ್ರ, ಕೈಕೇಯ ಎಂಬ ನಾಲ್ಕು ಪುತ್ರರಾದರು. ಉಶೀನರನ ತಮ್ಮ ತಿತಿಕ್ಷುವಿಗೆ ರುಶದ್ರಥ, ರುಶದ್ರಥನಿಗೆ ಹೇಮ, ಹೇಮನಿಗೆ ಸುತಪಾ, ಸುತಪನಿಗೆ ಬಲಿ ಎಂಬ ಪುತ್ರನಾದನು. ॥ ೩-೪ ॥ ರಾಜಾ ಬಲಿಯ ಪತ್ನಿಯ ಗರ್ಭದಿಂದ ದೀರ್ಘತಮಾ ಋಷಿಯು – ಅಂಗ, ವಂಗ, ಕಲಿಂಗ, ಸುಹ್ಮ, ಪುಂಡ್ರ ಮತ್ತು ಅಂಧ್ರ ಎಂಬ ಆರು ಮಂದಿ ಪುತ್ರರನ್ನು ಪಡೆದನು. ॥ ೫ ॥ ಇವರು ತಮ್ಮ-ತಮ್ಮ ಹೆಸರುಗಳಿಂದ ಪೂರ್ವ ದಿಕ್ಕಿನಲ್ಲಿ ಆರು ದೇಶಗಳನ್ನು ಸ್ಥಾಪಿಸಿದರು. ಅಂಗನಿಗೆ ಖನಪಾನನೆಂಬ ಪುತ್ರನಾದನು. ಖನಪಾನನಿಗೆ ದಿವಿರಥ, ದಿವಿರಥನಿಗೆ ಧರ್ಮರಥ, ಧರ್ಮರಥನಿಗೆ ಚಿತ್ರರಥನಾದನು. ಈ ಚಿತ್ರರಥನೇ ರೋಮಪಾದನೆಂದು ಪ್ರಸಿದ್ಧನಾಗಿದ್ದನು. ಅಯೋಧ್ಯಾಪತಿ ದಶರಥನು ಇವನಿಗೆ ಮಿತ್ರನಾಗಿದ್ದನು. ರೋಮಪಾದನಿಗೆ ಸಂತಾನ ವಿರಲಿಲ್ಲ, ಅದಕ್ಕಾಗಿ ದಶರಥನು ತನ್ನ ಮಗಳಾದ ಶಾಂತಾ ಎಂಬುವಳನ್ನು ದತ್ತಕವಾಗಿ ಕೊಟ್ಟನು. ಶಾಂತಾಳ ವಿವಾಹವು ಋಷ್ಯಶೃಂಗ ಮುನಿಯೊಂದಿಗೆ ಜರುಗಿತು. ಋಷ್ಯಶೃಂಗನು ವಿಭಾಂಡಕ ಋಷಿಯಿಂದ ಜಿಂಕೆಯ ಹೊಟ್ಟೆಯಲ್ಲಿ ಹುಟ್ಟಿದ್ದನು. ಒಮ್ಮೆ ರೋಮಪಾದರಾಜನ ರಾಜ್ಯದಲ್ಲಿ ಬಹಳ ದಿನಗಳವರೆಗೆ ಮಳೆಯಾಗಲಿಲ್ಲ, ಆಗ ಗಣಿಕೆಯರು ತಮ್ಮ ನೃತ್ಯ, ಸಂಗೀತ, ವಾದ್ಯ, ಹಾವ-ಭಾವ, ಆಲಿಂಗನ ಮತ್ತು ವಿಧ-ವಿಧವಾದ ಉಪಹಾರಗಳಿಂದ ಋಷ್ಯಶೃಂಗನನ್ನು ಮೋಹಿತನನ್ನಾಗಿಸಿ ರಾಜ್ಯಕ್ಕೆ ಕರೆತಂದರು. ಅವನು ಬರುತ್ತಲೇ ಮಳೆ ಸುರಿಯಿತು. ಅವನೇ ರೋಮಪಾದನಿಂದ ಇಂದ್ರ ದೇವತೆಯ ಯಜ್ಞವನ್ನು ಮಾಡಿಸಿದಾಗ ಸಂತಾನಹೀನನಾದ ಅವನಿಗೆ ಪುತ್ರನಾದನು. ಪುತ್ರಹೀನನಾದ ದಶರಥನೂ ಕೂಡ ಅವರ ಪ್ರಯತ್ನದಿಂದಲೇ ನಾಲ್ಕು ಮಕ್ಕಳನ್ನು ಪಡೆದನು. ರೋಮಪಾದನ ಪುತ್ರ ಚತುರಂಗನಾದನು. ಚತುರಂಗನಿಗೆ ಪೃಥುಲಾಕ್ಷನೆಂಬುವನು ಹುಟ್ಟಿದನು. ॥ ೬-೧೦ ॥ ಪೃಥುಲಾಕ್ಷನಿಗೆ ಬೃಹದ್ರಥ, ಬೃಹತ್ಕರ್ಮಾ ಮತ್ತು ಬೃಹದ್ಭಾನು ಎಂಬ ಮೂವರು ಪುತ್ರರಾದರು. ಬೃಹದ್ರಥನಿಗೆ ಬೃಹನ್ಮನಾ, ಬೃಹನ್ಮನನಿಗೆ ಜಯದ್ರಥನು ಹುಟ್ಟಿದನು. ॥ ೧೧ ॥

ವಿಜಯಸ್ತಸ್ಯ ಸಂಭೂತ್ಯಾಂ ತತೋ ಧೃತಿರಜಾಯತ ।
ತತೋ ಧೃತವ್ರತಸ್ತಸ್ಯ ಸತ್ಕರ್ಮಾಧಿರಥಸ್ತತಃ ॥ ೧೨ ॥

ಯೋಽಸೌ ಗಂಗಾತಟೇ ಕ್ರೀಡನ್ ಮಂಜೂಷಾಂತರ್ಗತಂ ಶಿಶುಮ್ ।
ಕುಂತ್ಯಾಪವಿದ್ಧಂ ಕಾನೀನಮನಪತ್ಯೋಽಕರೋತ್ಸುತಮ್ ॥ ೧೩ ॥

ವೃಷಸೇನಃ ಸುತಸ್ತಸ್ಯ ಕರ್ಣಸ್ಯ ಜಗತೀಪತೇ ।
ದ್ರುಹ್ಯೋಶ್ಚ ತನಯೋ ಬಭ್ರುಃ ಸೇತುಸ್ತಸ್ಯಾತ್ಮಜಸ್ತತಃ ॥ ೧೪ ॥

ಆರಬ್ಧಸ್ತಸ್ಯ ಗಾಂಧಾರಸ್ತಸ್ಯ ಧರ್ಮಸ್ತತೋ ಧೃತಃ ।
ಧೃತಸ್ಯ ದುರ್ಮನಾಸ್ತಸ್ಮಾತ್ಪ್ರಚೇತಾಃ ಪ್ರಾಚೇತಸಂ ಶತಮ್ ॥ ೧೫ ॥

ಮ್ಲೇಚ್ಛಾಧಿಪತಯೋಽಭೂವನ್ನುದೀಚೀಂ ದಿಶಮಾಶ್ರಿತಾಃ ।
ತುರ್ವಸೋಶ್ಚ ಸುತೋ ವಹ್ನಿರ್ವಹ್ನೇರ್ಭರ್ಗೋಽಥ ಭಾನುಮಾನ್ ॥ ೧೬ ॥

ತ್ರಿಭಾನುಸ್ತತ್ಸುತೋಽಸ್ಯಾಪಿ ಕರಂಧಮ ಉದಾರಧೀಃ ।
ಮರುತಸ್ತತ್ಸುತೋಽಪುತ್ರಃ ಪುತ್ರಂ ಪೌರವಮನ್ವಭೂತ್ ॥ ೧೭ ॥

ದುಷ್ಮಂತಃ ಸ ಪುನರ್ಭೇಜೇ ಸ್ವಂ ವಂಶಂ ರಾಜ್ಯಕಾಮುಕಃ ।
ಯಯಾತೇರ್ಜ್ಯೇಷ್ಠಪುತ್ರಸ್ಯ ಯದೋರ್ವಂಶಂ ನರರ್ಷಭ ॥ ೧೮ ॥

ವರ್ಣಯಾಮಿ ಮಹಾಪುಣ್ಯಂ ಸರ್ವಪಾಪಹರಂ ನೃಣಾಮ್ ।
ಯದೋರ್ವಂಶಂ ನರಃ ಶ್ರುತ್ವಾ ಸರ್ವಪಾಪೈಃ ಪ್ರಮುಚ್ಯತೇ ॥ ೧೯ ॥

ಯತ್ರಾವತೀರ್ಣೋ ಭಗವಾನ್ಪರಮಾತ್ಮಾ ನರಾಕೃತಿಃ ।
ಯದೋಃ ಸಹಸ್ರಜಿತ್ಕ್ರೋಷ್ಟಾ ನಲೋ ರಿಪುರಿತಿ ಶ್ರುತಾಃ ॥ ೨೦ ॥

ಚತ್ವಾರಃ ಸೂನವಸ್ತತ್ರ ಶತಜಿತ್ಪ್ರಥಮಾತ್ಮಜಃ ।
ಮಹಾಹಯೋ ವೇಣುಹಯೋ ಹೈಹಯಶ್ಚೇತಿ ತತ್ಸುತಾಃ ॥ ೨೧ ॥

ಧರ್ಮಸ್ತು ಹೈಹಯಸುತೋ ನೇತ್ರಃ ಕುಂತೇಃ ಪಿತಾ ತತಃ ।
ಸೋಹಂಜಿರಭವತ್ಕುಂತೇರ್ಮಹಿಷ್ಮಾನ್ಭದ್ರಸೇನಕಃ ॥ ೨೨ ॥

ದುರ್ಮದೋ ಭದ್ರಸೇನಸ್ಯ ಧನಕಃ ಕೃತವೀರ್ಯಸೂಃ ।
ಕೃತಾಗ್ನಿಃ ಕೃತವರ್ಮಾ ಚ ಕೃತೌಜಾ ಧನಕಾತ್ಮಜಾಃ ॥ ೨೩ ॥

ಅರ್ಜುನಃ ಕೃತವೀರ್ಯಸ್ಯ ಸಪ್ತದ್ವೀಪೇಶ್ವರೋಽಭವತ್ ।
ದತ್ತಾತ್ರೇಯಾದ್ಧರೇರಂಶಾತ್ ಪ್ರಾಪ್ತಯೋಗಮಹಾಗುಣಃ ॥ ೨೪ ॥

ಜಯದ್ರಥನಿಗೆ ಸಂಭೂತಿ ಎಂಬ ಪತ್ನಿಯಿದ್ದಳು. ಅವಳ ಗರ್ಭದಿಂದ ವಿಜಯನ ಜನ್ಮವಾಯಿತು. ವಿಜಯನಿಗೆ ಧೃತಿ, ಧೃತಿಗೆ ಧೃತವ್ರತ, ಧೃತವ್ರತನಿಗೆ ಸತ್ಕರ್ಮಾ, ಸತ್ಕರ್ಮನಿಗೆ ಅಧಿರಥನೆಂಬ ಪುತ್ರನಾದನು. ॥ ೧೨ ॥ ಅಧಿರಥನಿಗೆ ಸಂತಾನವಿರಲಿಲ್ಲ. ಒಂದುದಿನ ಅವನು ಗಂಗಾತೀರದಲ್ಲಿ ಕ್ರೀಡಿಸುತ್ತಿದ್ದಾಗ ಗಂಗಾನದಿಯಲ್ಲಿ ತೇಲಿಬರುತ್ತಿದ್ದ ಪೆಟ್ಟಿಗೆಯಲ್ಲಿ ಒಂದು ಹಸುಳೆಯನ್ನು ನೋಡಿದನು. ಕುಂತಿಯು ಅವನನ್ನು ಕನ್ಯಾವಸ್ಥೆಯಲ್ಲೇ ಸೂರ್ಯನ ಅನುಗ್ರಹದಿಂದ ಪಡೆದಿದ್ದಳು. ಲೋಕಾಪವಾದಕ್ಕೆ ಹೆದರಿ ಅವನನ್ನು ನದಿಯಲ್ಲಿ ತೇಲಿಬಿಟ್ಟಿದ್ದಳು. ಅಧಿರಥನು ಅವನನ್ನು ತನ್ನ ಪುತ್ರನನ್ನಾಗಿಸಿಕೊಂಡನು. ಅವನೇ ವಿಖ್ಯಾತನಾದ ಕರ್ಣನಾದನು. ॥ ೧೩ ॥ ಪರೀಕ್ಷಿತನೇ! ಕರ್ಣನಿಗೆ ವೃಷಸೇನನೆಂಬ ಮಗನಿದ್ದನು. ಯಯಾತಿಯ ಪುತ್ರನಾದ ದ್ರುಹ್ಯುವಿಗೆ ಬಭ್ರುವಿನ ಜನ್ಮವಾಯಿತು. ಬಭ್ರುವಿಗೆ ಸೇತು, ಸೇತುವಿಗೆ ಆರಬ್ಧ ಆರಬ್ಧನಿಗೆ ಗಾಂಧಾರ, ಗಾಂಧಾರನಿಗೆ ಧರ್ಮ, ಧರ್ಮನಿಗೆ ಧೃತ, ಧೃತನಿಗೆ ದುರ್ಮನಾ, ದುರ್ಮನನಿಗೆ ಪ್ರಚೇತಾ ಎಂಬ ಪುತ್ರನಾದನು. ಪ್ರಚೇತನಿಗೆ ನೂರು ಮಕ್ಕಳಾದರು. ಇವರು ಉತ್ತರ ದಿಕ್ಕಿನಲ್ಲಿ ಮ್ಲೇಂಛರಿಗೆ ರಾಜರಾದರು. ಯಯಾತಿಯ ಪುತ್ರ ತುರ್ವಸುವಿಗೆ ವಹ್ನಿ, ವಹ್ನಿಗೆ ಭರ್ಗ, ಭರ್ಗನಿಗೆ ಭಾನುಮಾನ್, ಭಾನುಮಂತನಿಗೆ ತ್ರಿಭಾನು, ತ್ರಿಭಾನುವಿಗೆ ಉದಾರಬುದ್ಧಿಯ ಕರಂಧಮನು. ಕರಂಧಮನಿಗೆ ಮರುತನೆಂಬ ಪುತ್ರನಾದನು. ಮರುತ್ತನು ಸಂತಾನಹೀನನಾಗಿದ್ದನು. ಅದಕ್ಕಾಗಿ ಅವನು ಪೂರುವಂಶೀ ದುಷ್ಯಂತನನ್ನು ತನ್ನ ಪುತ್ರನನ್ನಾಗಿಸಿಕೊಂಡಿದ್ದನು. ॥ ೧೪- ೧೭ ॥ ಆದರೆ ದುಷ್ಯಂತನು ರಾಜ್ಯದ ಬಯಕೆಯಿಂದ ತನ್ನ ವಂಶಕ್ಕೆ ಮರಳಿದನು. ಪರೀಕ್ಷಿತನೇ! ಇನ್ನು ನಾನು ಯಯಾತಿಯ ಹಿರಿಯ ಮಗನಾದ ಯದುವಿನ ವಂಶವನ್ನು ವರ್ಣಿಸುವೆನು. ಆಲಿಸು. ॥ ೧೮ ॥

ಪರೀಕ್ಷಿತನೇ! ಯದು ಮಹಾರಾಜನ ವಂಶವು ಪರಮ ಪವಿತ್ರವಾದುದು ಹಾಗೂ ಮನುಷ್ಯರ ಸಮಸ್ತ ಪಾಪಗಳನ್ನೂ ಪರಿಹರಿಸುವಂತಹುದು. ಇದನ್ನು ಶ್ರವಣಿಸುವವನು ಸಮಸ್ತ ಪಾಪಗಳಿಂದ ಮುಕ್ತನಾಗುವನು. ॥ ೧೯ ॥

ಈ ವಂಶದಲ್ಲಿ ಸ್ವಯಂ ಭಗವಾನ್ ಪರಬ್ರಹ್ಮ ಶ್ರೀಕೃಷ್ಣನು ಮನುಷ್ಯರೂಪದಿಂದ ಅವತರಿಸಿದ್ದನು. ಯದುವಿಗೆ – ಸಹಸ್ರಜಿತ್, ಕ್ರೋಷ್ಟಾ, ನಲ ಮತ್ತು ರಿಪು ಎಂಬ ನಾಲ್ವರು ಪುತ್ರರಿದ್ದರು. ಸಹಸ್ರಜಿತ್ತುವಿಗೆ ಶತಜಿತ್ ನಾದನು. ಶತಜಿತ್ತುವಿಗೆ – ಮಹಾಹಯ, ವೇಣುಹಯ, ಮತ್ತು ಹೈಹಯ ಎಂಬ ಮೂವರು ಪುತ್ರರಾದರು. ॥ ೨೦–೨೧ ॥ ಹೈಹಯನಿಗೆ ಧರ್ಮ, ಧರ್ಮನಿಗೆ ನೇತ್ರ, ನೇತ್ರನಿಗೆ ಕುಂತಿ, ಕುಂತಿಗೆ ಸೋಹಂಜಿ, ಸೋಹಂಜಿಗೆ ಮಹಿಷ್ಮಾನ್, ಮಹಿಷ್ಮಂತನಿಗೆ ಭದ್ರಸೇನನೆಂಬ ಪುತ್ರನಾದನು. ॥ ೨೨ ॥ ಭದ್ರಸೇನನಿಗೆ ದುರ್ಮದ ಮತ್ತು ಧನಕರೆಂಬ ಇಬ್ಬರು ಪುತ್ರರಿದ್ದರು. ಧನಕನಿಗೆ – ಕೃತವೀರ್ಯ, ಕೃತಾಗ್ನಿ, ಕೃತವರ್ಮಾ, ಕೃತೌಜಾ ಎಂಬ ನಾಲ್ಕು ಮಕ್ಕಳಿದ್ದರು. ॥ ೨೩ ॥ ಕೃತವೀರ್ಯನಿಗೆ ಅರ್ಜುನನಾಗಿದ್ದನು. ಅವನು ಸಪ್ತದ್ವೀಪಗಳಿಗೆ ಏಕಚ್ಛತ್ರ ಸಾಮ್ರಾಟನಾಗಿದ್ದನು. ಅವನು ಭಗವಂತನ ಅಂಶಾವತಾರವಾದ ದತ್ತಾತ್ರೇಯನಿಂದ ಯೋಗವಿದ್ಯೆ ಮತ್ತು ಅಣಿಮಾ, ಲಘಿಮಾ ಮುಂತಾದ ಮಹಾಸಿದ್ಧಿಗಳನ್ನು ಪಡೆದಿದ್ದನು. ॥ ೨೪ ॥

ನ ನೂನಂ ಕಾರ್ತವೀರ್ಯಸ್ಯ ಗತಿಂ ಯಾಸ್ಯಂತಿ ಪಾರ್ಥಿವಾಃ ।
ಯಜ್ಞದಾನತಪೋಯೋಗಶ್ರುತವೀರ್ಯಜಯಾದಿಭಿಃ ॥ ೨೫ ॥

ಪಂಚಾಶೀತಿಸಹಸ್ರಾಣಿ ಹ್ಯವ್ಯಾಹತಬಲಃ ಸಮಾಃ ।
ಅನಷ್ಟವಿತ್ತಸ್ಮರಣೋ ಬುಭುಜೇಽಕ್ಷಯ್ಯಷಡ್ವಸು ॥ ೨೬ ॥

ತಸ್ಯ ಪುತ್ರಸಹಸ್ರೇಷು ಪಂಚೈವೋರ್ವರಿತಾ ಮೃಧೇ ।
ಜಯಧ್ವಜಃ ಶೂರಸೇನೋ ವೃಷಭೋ ಮಧುರೂರ್ಜಿತಃ ॥ ೨೭ ॥

ಜಯಧ್ವಜಾತ್ತಾಲಜಂಘಸ್ತಸ್ಯ ಪುತ್ರಶತಂ ತ್ವಭೂತ್ ।
ಕ್ಷತ್ರಂ ಯತ್ತಾಲಜಂಘಾಖ್ಯಮೌರ್ವತೇಜೋಪಸಂಹೃತಮ್ ॥ ೨೮ ॥

ತೇಷಾಂ ಜ್ಯೇಷ್ಠೋ ವೀತಿಹೋತ್ರೋ
ವೃಷ್ಣಿಃ ಪುತ್ರೋ ಮಧೋಃ ಸ್ಮೃತಃ ।
ತಸ್ಯ ಪುತ್ರಶತಂ ತ್ವಾಸೀ-
ದ್ವೃಷ್ಣಿಜ್ಯೇಷ್ಠಂ ಯತಃ ಕುಲಮ್ ॥ ೨೯ ॥

ಮಾಧವಾ ವೃಷ್ಣಯೋ ರಾಜನ್ ಯಾದವಾಶ್ಚೇತಿ ಸಂಜ್ಞಿತಾಃ ।
ಯದುಪುತ್ರಸ್ಯ ಚ ಕ್ರೋಷ್ಟೋಃ ಪುತ್ರೋ ವೃಜಿನವಾಂಸ್ತತಃ ॥ ೩೦ ॥

ಸ್ವಾಹಿತೋಽತೋ ರುಶೇಕುರ್ವೈ
ತಸ್ಯ ಚಿತ್ರರಥಸ್ತತಃ ।
ಶಶಬಿಂದುರ್ಮಹಾಯೋಗೀ
ಮಹಾಭೋಗೋ ಮಹಾನಭೂತ್ ॥ ೩೦ ॥

ಚತುರ್ದಶಮಹಾರತ್ನಶ್ಚಕ್ರವರ್ತ್ಯಪರಾಜಿತಃ ।
ತಸ್ಯ ಪತ್ನೀಸಹಸ್ರಾಣಾಂ ದಶಾನಾಂ ಸುಮಹಾಯಶಾಃ ॥ ೩೨ ॥

ದಶಲಕ್ಷಸಹಸ್ರಾಣಿ ಪುತ್ರಾಣಾಂ ತಾಸ್ವಜೀಜನತ್ ।
ತೇಷಾಂ ತು ಷಟ್ಪ್ರಧಾನಾನಾಂ ಪೃಥುಶ್ರವಸ ಆತ್ಮಜಃ ॥ ೩೩ ॥

ಪ್ರಪಂಚದಲ್ಲಿ ಯಾವ ಸಾಮ್ರಾಟನು ಯಜ್ಞ, ದಾನ, ತಪಸ್ಸು, ಯೋಗ, ಶಾಸ್ತ್ರಜ್ಞಾನ, ಪರಾಕ್ರಮ, ವಿಜಯ ಮುಂತಾದ ಗುಣಗಳಿಂದ ಕೂಡಿದ ಕಾರ್ತವೀರ್ಯಾರ್ಜುನನಿಗೆ ಸಮಾನನಾಗಲಾರನು. ಇದರಲ್ಲಿ ಸಂದೇಹವೇ ಇಲ್ಲ. ॥ ೨೫ ॥ ಸಹಸ್ರಾರ್ಜುನನು ಎಂಭತ್ತೈದುಸಾವಿರ ವರ್ಷಗಳವರೆಗೆ ಆರೂ ಇಂದ್ರಿಯಗಳಿಂದ ಅಕ್ಷಯ ವಿಷಯಗಳನ್ನು ಅನುಭವಿಸುತ್ತಾ ಇದ್ದನು. ಇದರ ನಡುವೆ ಅವನು ಶರೀರಬಲ ಕುಂದುವುದಾಗಲೀ, ಧನದ ನಾಶವಾಗುವುದಾಗಲೀ ಸ್ಮರಿಸಲೇ ಇಲ್ಲ. ಅವನ ಧನವು ನಾಶವಾಗುವುದಿರಲಿ, ಅವನ ಸ್ಮರಣೆಯಿಂದ ಕಳೆದುಹೋದ ಧನವು ಪುನಃ ದೊರಕುತ್ತಿತ್ತು.* ಅಂತಹ ಪ್ರಭಾವ ಅವನದಾಗಿತ್ತು. ॥ ೨೬ ॥ ಅವನ ಸಾವಿರ ಮಕ್ಕಳಲ್ಲಿ ಕೇವಲ ಐವರು ಮಾತ್ರ ಜೀವಂತರಾಗಿದ್ದರು. ಉಳಿದವರೆಲ್ಲರೂ ಪರಶುರಾಮನ ಕ್ರೋಧಾಗ್ನಿಯಲ್ಲಿ ಭಸ್ಮವಾಗಿ ಹೋಗಿದ್ದರು. ಉಳಿದ ಪುತ್ರರ ಹೆಸರುಗಳು – ಜಯಧ್ವಜ, ಶೂರಸೇನ, ವೃಷಭ, ಮಧು ಮತ್ತು ಊರ್ಜಿತ ಎಂದಿದ್ದವು. ॥ ೨೭ ॥

ಜಯಧ್ವಜನಿಗೆ ತಾಲಜಂಘನೆಂಬ ಪುತ್ರನಿದ್ದನು. ತಾಲಜಂಘನಿಗೆ ನೂರು ಪುತ್ರರಾದರು. ಅವರು 'ತಾಲಜಂಘ'ರೆಂಬ ಹೆಸರಿನಿಂದ ಆ ಕ್ಷತ್ರಿಯರು ಕರೆಸಿಕೊಂಡರು. ಮಹರ್ಷಿ ಔರ್ವರ ಶಕ್ತಿಯಿಂದ ಸಗರರಾಜನು ಇವರನ್ನು ಸಂಹರಿಸಿಬಿಟ್ಟನು. ॥ ೨೮ ॥ ಆ ನೂರು ಪುತ್ರರಲ್ಲಿ ಹಿರಿಯವನು ವೀತಿಹೋತ್ರನಾಗಿದ್ದನು. ವೀತಿಹೋತ್ರನ ಮಗ ಮಧುವಾದನು. ಮಧುವಿಗೆ ನೂರು ಮಕ್ಕಳಿದ್ದರು. ಅವರಲ್ಲಿ ಎಲ್ಲರಿಗಿಂತ ಹಿರಿಯವನು ವೃಷ್ಣಿ ಎಂಬುವನಿದ್ದನು. ॥ ೨೯ ॥ ಪರೀಕ್ಷಿತನೇ! ಇವರೇ ಮಧು, ವೃಷ್ಣಿ ಮತ್ತು ಯದುವಿನ ಕಾರಣದಿಂದ ಈ ವಂಶವು ಮಾಧವ, ವಾರ್ಷ್ಣೇಯ ಮತ್ತು ಯಾದವ ಎಂಬ ಹೆಸರುಗಳಿಂದ ಪ್ರಸಿದ್ಧವಾಯಿತು. ಯದುನಂದನ ಕ್ರೋಷ್ಟುವಿಗೆ ವೃಜಿನವಾನ್‌ನೆಂಬ ಪುತ್ರನಿದ್ದನು. ॥ ೩೦ ॥ ವೃಜಿನವಂತನಿಗೆ ಸ್ವಾಹಿ. ಸ್ವಾಹಿಗೆ ರುಶೇಕು, ರುಶೇಕುವಿಗೆ ಚಿತ್ರರಥ, ಚಿತ್ರರಥನಿಗೆ ಶಶಬಿಂದು ಎಂಬ ಪುತ್ರನಿದ್ದನು. ಅವನು ಪರಮಯೋಗಿಯೂ, ಮಹಾಭೋಗೈಶ್ವರ್ಯ ಸಂಪನ್ನನೂ, ಅತ್ಯಂತ ಪರಾಕ್ರಮಿಯೂ ಆಗಿದ್ದನು. ॥ ೩೦ ॥ ಅವನು ಹದಿನಾಲ್ಕು ರತ್ನಗಳಿಗೂ** ಒಡೆಯನೂ, ಚಕ್ರವರ್ತಿಯೂ, ಯುದ್ಧದಲ್ಲಿ ಅಜೇಯನೂ ಆಗಿದ್ದನು. ಪರಮ ಯಶಸ್ವೀ ಶಶಬಿಂದುವಿಗೆ ಹತ್ತುಸಾವಿರ ಪತ್ನಿಯರಿದ್ದರು. ಅವರಲ್ಲಿ ಒಬ್ಬೊಬ್ಬರಿಗೂ ಲಕ್ಷ-ಲಕ್ಷ ಸಂತಾನಗಳಿದ್ದವು. ಹೀಗೆ ಅವನು ನೂರುಕೋಟಿ ಮಕ್ಕಳನ್ನು ಪಡೆದನು. ಅವರಲ್ಲಿ ಪೃಥುಶ್ರವಾ ಮುಂತಾದ ಆರು ಪುತ್ರರು ಪ್ರಧಾನರಾಗಿದ್ದರು. ಪೃಥು ಶ್ರವಸ್ಸಿಗೆ

* ಕಳೆದುಹೋದ ವಸ್ತುವನ್ನು ಪಡೆದುಕೊಳ್ಳಲು ಈಗಲೂ ಕೆಳಗಿನ ಈ ಕಾರ್ತವೀರ್ಯಾರ್ಜುನನ ಮಂತ್ರವನ್ನು ಪಠಿಸುತ್ತಾರೆ.

೧) ಹೈಹಯಾನಾಂ ಮಹಾರಾಜಃ ಕಾರ್ತವೀರ್ಯೇತಿ ವಿಶ್ರುತಃ । ಯಸ್ಯ ಸ್ಮರಣ ಮಾತ್ರೇಣ ಹೃತಂ ನಷ್ಟಂ ಚ ಲಭ್ಯತೇ ॥

೨) ಕಾರ್ತವೀರ್ಯಾರ್ಜುನೋ ನಾಮ ರಾಜಾ ಬಾಹು ಸಹಸ್ರವಾನ್ । ಯಸ್ಯಸ್ಮರಣಮಾತ್ರೇಣ ಗತಂ ನಷ್ಟಂ ಚ ಲಭ್ಯತೇ ॥

** ಆನೆ, ಕುದುರೆ, ರಥ, ಸ್ತ್ರೀ, ಬಾಣ, ಭಂಡಾರ, ಮಾಲೆ, ವಸ್ತ್ರ, ವೃಕ್ಷ, ಶಕ್ತಿ, ಪಾಶ, ಮಣಿ, ಛತ್ರ ಮತ್ತು ವಿಮಾನ – ಇವು ಹದಿನಾಲ್ಕು ರತ್ನಗಳು.

ಧರ್ಮೋ ನಾಮೋಶನಾ ತಸ್ಯ ಹಯಮೇಧಶತಸ್ಯ ಯಾಟ್ ।
ತತ್ಸುತೋ ರುಚಕಸ್ತಸ್ಯ ಪಂಚಾಸನ್ನಾತ್ಮಜಾಃ ಶೃಣು ॥ ೩೪ ॥

ಪುರುಜಿದ್ರುಕ್ಮರುಕ್ಮೇಷು ಪೃಥುಜ್ಯಾಮಘಸಂಜ್ಞಿತಾಃ ।
ಜ್ಯಾಮಘಸ್ತ್ವಪ್ರಜೋಽಪ್ಯನ್ಯಾಂ ಭಾರ್ಯಾಂ ಶೈಬ್ಯಾಪತಿರ್ಭಯಾತ್ ॥ ೩೫ ॥

ನಾವಿಂದಚ್ಛತ್ರುಭವನಾದ್ಭೋಜ್ಯಾಂ ಕನ್ಯಾಮಹಾರಷೀತ್ ।
ರಥಸ್ಥಾಂ ತಾಂ ನಿರೀಕ್ಷ್ಯಾಹ ಶೈಬ್ಯಾ ಪತಿಮಮರ್ಷಿತಾ ॥ ೩೬ ॥

ಕೇಯಂ ಕುಹಕ ಮತ್ಸ್ಥಾನಂ ರಥಮಾರೋಪಿತೇತಿ ವೈ ।
ಸ್ನುಷಾ ತವೇತ್ಯಭಿಹಿತೇ ಸ್ಮಯಂತೀ ಪತಿಮಬ್ರವೀತ್ ॥ ೩೭ ॥

ಅಹಂ ವಂಧ್ಯಾಽಸಪತ್ನೀ ಚ ಸ್ನುಷಾ ಮೇ ಯುಜ್ಯತೇ ಕಥಮ್ ।
ಜನಯಿಷ್ಯಸಿ ಯಂ ರಾಜ್ಞಿ ತಸ್ಯೇಯಮುಪಯುಜ್ಯತೇ ॥ ೩೮ ॥

ಅನ್ವಮೋದಂತ ತದ್ವಿಶ್ವೇದೇವಾಃ ಪಿತರ ಏವ ಚ ।
ಶೈಬ್ಯಾ ಗರ್ಭಮಧಾತ್ಕಾಲೇ ಕುಮಾರಂ ಸುಷುವೇ ಶುಭಮ್ ।
ಸ ವಿದರ್ಭ ಇತಿ ಪ್ರೋಕ್ತ ಉಪಯೇಮೇ ಸ್ನುಷಾಂ ಸತೀಮ್ ॥ ೩೯ ॥

ಧರ್ಮನೆಂಬ ಪುತ್ರನಿದ್ದನು. ಧರ್ಮನಿಗೆ ಉಶನಾ ಎಂಬ ಪುತ್ರನಾದನು. ಅವನು ನೂರು ಅಶ್ವಮೇಧಗಳನ್ನು ಮಾಡಿದ್ದನು. ಉಶನನಿಗೆ ರುಚಕನೆಂಬ ಪುತ್ರನಾದನು. ರುಚಕನಿಗೆ ಐವರು ಪುತ್ರರಾದರು. ಅವರ ಹೆಸರು ಇಂತಿದೆ. ॥ ೩೩-೩೪ ॥ ಪುರುಜಿತ್, ರುಕ್ಮ ರುಕ್ಮೇಷು, ಪೃಥು ಮತ್ತು ಜ್ಯಾಮಘ. ಜ್ಯಾಮಘನ ಪತ್ನಿಯ ಹೆಸರು ಶೈಬ್ಯಾ ಎಂದಿತ್ತು. ಜ್ಯಾಮಘನಿಗೆ ಅನೇಕ ದಿನಗಳವರೆಗೆ ಸಂತಾನವಾಗಲಿಲ್ಲ. ಆದರೆ ಅವನು ತನ್ನ ಪತ್ನಿಯ ಭಯದಿಂದ ಇನ್ನೊಂದು ಮದುವೆ ಮಾಡಿಕೊಳ್ಳಲಿಲ್ಲ. ಒಮ್ಮೆ ಅವನು ತನ್ನ ಶತ್ರುವಿನ ಮನೆಯಿಂದ ಭೋಜ್ಯಾ ಎಂಬ ಕನ್ಯೆಯನ್ನು ಕದ್ದು ತಂದನು. ಶೈಬ್ಯಳು ಪತಿಯ ರಥದಲ್ಲಿ ಆ ಕನ್ಯೆಯನ್ನು ನೋಡಿದಾಗ ಅವಳು ಕೆರಳಿ ತನ್ನ ಪತಿಯಲ್ಲಿ ಕೇಳಿದಳು – 'ಕಪಟಿಯೇ ! ನಾನು ಕುಳಿತುಕೊಳ್ಳುವ ಸ್ಥಳದಲ್ಲಿ ಇಂದು ಯಾರನ್ನು ಕುಳ್ಳಿರಿಸಿ ತರುತ್ತಿರುವೆ ?' ಜ್ಯಾಮಘನು – 'ಇವಳಾದರೋ ನಿನ್ನ ಸೊಸೆಯಾಗಿದ್ದಾಳೆ' ಎಂದು ಹೇಳಿದನು. ಶೈಬ್ಯಳು ಮುಗುಳ್ನಕ್ಕು ಪತಿಯಲ್ಲಿ ಹೇಳಿದಳು – ॥ ೩೫-೩೭ ॥ 'ನಾನಾದರೋ ಜನ್ಮತಃ ಬಂಜೆಯಾಗಿರುವೆನು. ನನಗೆ ಸವತಿಯೂ ಯಾರೂ ಇಲ್ಲ. ಹಾಗಿರುವಾಗ ಇವಳು ಸೊಸೆ ಹೇಗಾಗಬಲ್ಲಳು ?' ಜ್ಯಾಮಘನು – 'ರಾಣೀ ! ನಿನಗೆ ಹುಟ್ಟಲಿರುವ ಮಗನ ಪತ್ನಿಯಾಗುವಳು ಇವಳು' ಎಂದು ಹೇಳಿದನು. ॥ ೩೮ ॥ ಜ್ಯಾಮಘರಾಜನ ಈ ಮಾತನ್ನು ವಿಶ್ವೇದೇವತೆಗಳು ಮತ್ತು ಪಿತೃಗಳು ಅನುಮೋದಿಸಿದರು. ಇವರಿಂದಾಗಿ ಸಕಾಲದಲ್ಲಿ ಶೈಬ್ಯಾಳು ಗರ್ಭವತಿಯಾಗಿ, ಅವಳು ಬಹಳ ಸುಂದರವಾದ ಬಾಲಕನಿಗೆ ಜನ್ಮ ನೀಡಿದಳು. ಅವನ ಹೆಸರು ವಿದರ್ಭನೆಂದಾಯ್ತು. ಅವನು ಶೈಬ್ಯಳ ಸಾಧ್ವಿಯಾದ ಸೊಸೆಯಾದ ಭೋಜ್ಯಾಳೊಂದಿಗೆ ವಿವಾಹ ಮಾಡಿದನು. ॥ ೩೯ ॥

ಇಪ್ಪತ್ತಮೂರನೆಯ ಅಧ್ಯಾಯವು ಮುಗಿಯಿತು. ॥ ೨೩ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ನವಮಸ್ಕಂಧೇ
ಯದುವಂಶಾನುವರ್ಣನೇ ತ್ರಯೋವಿಂಶೋಽಧ್ಯಾಯಃ ॥ ೨೩ ॥

ಇಪ್ಪತ್ತನಾಲ್ಕನೆಯ ಅಧ್ಯಾಯ

ವಿದರ್ಭವಂಶದ ವರ್ಣನೆ

ಶ್ರೀಶುಕ ಉವಾಚ

ತಸ್ಯಾಂ ವಿದರ್ಭೋಽಜನಯತ್ಪುತ್ರೌ ನಾಮ್ನಾ ಕುಶಕ್ರಥೌ ।
ತೃತೀಯಂ ರೋಮಪಾದಂ ಚ ವಿದರ್ಭಕುಲನಂದನಮ್ ॥ ೧ ॥

ರೋಮಪಾದಸುತೋ ಬಭ್ರುರ್ಬಭ್ರೋಃ ಕೃತಿರಜಾಯತ ।
ಉಶಿಕಸ್ತತ್ಸುತಸ್ತಸ್ಮಾಚ್ಚೇದಿಶ್ಚೈದ್ಯಾದಯೋ ನೃಪ ॥ ೨ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಎಲೈ ಪರೀಕ್ಷಿತನೇ ! ವಿದರ್ಭರಾಜನು ಪತ್ನಿಯಾದ ಭೋಜ್ಯಾಳಿಂದ ಕುಶ, ಕ್ರಥ ಮತ್ತು ರೋಮಪಾದರೆಂಬ ಮೂವರು ಪುತ್ರರನ್ನು ಪಡೆದನು. ರೋಮಪಾದನು ವಿದರ್ಭವಂಶದಲ್ಲಿ ಅತ್ಯಂತ ಶ್ರೇಷ್ಠರಾಜನಾಗಿದ್ದನು. ॥ ೧ ॥ ರೋಮಪಾದನಿಗೆ ಬಭ್ರು, ಬಭ್ರುವಿಗೆ ಕೃತಿ, ಕೃತಿಗೆ ಉಶಿಕ, ಉಶಿಕನಿಗೆ ಚೇದಿ ಎಂಬುವನಾದನು. ರಾಜನೇ ! ಈ ಚೇದಿಯ ವಂಶದಲ್ಲೇ ದಮಘೋಷ ಹಾಗೂ ಶಿಶುಪಾಲರೇ ಮುಂತಾದವರಾದರು. ॥ ೨ ॥

ಕ್ರಥಸ್ಯ ಕುಂತಿಃ ಪುತ್ರೋಽಭೂದ್ವೃಷ್ಣಿಸ್ತಸ್ಯಾಥ ನಿರ್ವೃತಿಃ ।
ತತೋ ದಶಾರ್ಹೋ ನಾಮ್ನಾಭೂತ್ತಸ್ಯ ವ್ಯೋಮಃ ಸುತಸ್ತತಃ ॥ ೩ ॥

ಜೀಮೂತೋ ವಿಕೃತಿಸ್ತಸ್ಯ ಯಸ್ಯ ಭೀಮರಥಃ ಸುತಃ ।
ತತೋ ನವರಥಃ ಪುತ್ರೋ ಜಾತೋ ದಶರಥಸ್ತತಃ ॥ ೪ ॥

ಕರಂಭಿಃ ಶಕುನೇಃ ಪುತ್ರೋ ದೇವರಾತಸ್ತದಾತ್ಮಜಃ ।
ದೇವಕ್ಷತ್ರಸ್ತತಸ್ತಸ್ಯ ಮಧುಃ ಕುರುವಶಾದನುಃ ॥ ೫ ॥

ಪುರುಹೋತ್ರಸ್ತ್ವನೋಃ ಪುತ್ರಸ್ತಸ್ಯಾಯುಃ ಸಾತ್ವತಸ್ತತಃ ।
ಭಜಮಾನೋ ಭಜಿರ್ದಿವ್ಯೋ ವೃಷ್ಣಿರ್ದೇವಾವೃಧೋಽಂಧಕಃ ॥ ೬ ॥

ಸಾತ್ವತಸ್ಯ ಸುತಾಃ ಸಪ್ತ ಮಹಾಭೋಜಶ್ಚ ಮಾರಿಷ ।
ಭಜಮಾನಸ್ಯ ನಿಮ್ಲೋಚಿಃ ಕಿಂಕಣೋ ಧೃಷ್ಟಿರೇವ ಚ ॥ ೭ ॥

ಏಕಸ್ಯಾಮಾತ್ಮಜಾಃ ಪತ್ನ್ಯಾಮನ್ಯಸ್ಯಾಂ ಚ ತ್ರಯಃ ಸುತಾಃ ।
ಶತಾಜಿಚ್ಚ ಸಹಸ್ರಾಜಿದಯುತಾಜಿದಿತಿ ಪ್ರಭೋ ॥ ೮ ॥

ಬಭ್ರುರ್ದೇವಾವೃಧಸುತಸ್ತಯೋಃ ಶ್ಲೋಕೌ ಪಠಂತ್ಯಮೂ ।
ಯಥೈವ ಶೃಣುಮೋ ದೂರಾತ್ಸಂಪಶ್ಯಾಮಸ್ತಥಾಂತಿಕಾತ್ ॥ ೯ ॥

ಬಭ್ರುಃ ಶ್ರೇಷ್ಠೋ ಮನುಷ್ಯಾಣಾಂ ದೇವೈರ್ದೇವಾವೃಧಃ ಸಮಃ ।
ಪುರುಷಾಃ ಪಂಚಷಷ್ಟಿಶ್ಚ ಷಟ್ಸಹಸ್ರಾಣಿ ಚಾಷ್ಟ ಚ ॥ ೧೦ ॥

ಯೇಽಮೃತತ್ವಮನುಪ್ರಾಪ್ತಾ ಬಭ್ರೋರ್ದೇವಾವೃಧಾದಪಿ ।
ಮಹಾಭೋಜೋಽಪಿ ಧರ್ಮಾತ್ಮಾ ಭೋಜಾ ಆಸಂಸ್ತದನ್ವಯೇ ॥ ೧೧ ॥

ವೃಷ್ಣೇಃ ಸುಮಿತ್ರಃ ಪುತ್ರೋಽಭೂದ್ಯುಧಾಜಿಚ್ಚ ಪರಂತಪ ।
ಶಿನಿಸ್ತಸ್ಯಾನಮಿತ್ರಶ್ಚ ನಿಮ್ನೋಽಭೂದನಮಿತ್ರತಃ ॥ ೧೨ ॥

ಸತ್ರಾಜಿತಃ ಪ್ರಸೇನಶ್ಚ ನಿಮ್ನಸ್ಯಾಪ್ಯಾಸತುಃ ಸುತೌ ।
ಅನಮಿತ್ರಸುತೋ ಯೋಽನ್ಯಃ ಶಿನಿಸ್ತಸ್ಯಾಥ ಸತ್ಯಕಃ ॥ ೧೩ ॥

ಯುಯುಧಾನಃ ಸಾತ್ಯಕಿರ್ವೈ ಜಯಸ್ತಸ್ಯ ಕುಣಿಸ್ತತಃ ।
ಯುಗಂಧರೋಽನಮಿತ್ರಸ್ಯ ವೃಷ್ಣಿಃ ಪುತ್ರೋಽಪರಸ್ತತಃ ॥ ೧೪ ॥

ಕ್ರಥನಿಗೆ ಕುಂತಿ ಎಂಬ ಪುತ್ರನಾದನು. ಕುಂತಿಗೆ ಧೃಷ್ಟಿ, ಧೃಷ್ಟಿಗೆ ನಿರ್ವೃತಿ, ನಿರ್ವೃತಿಗೆ ದಶಾರ್ಹ, ದಶಾರ್ಹನಿಗೆ ವ್ಯೋಮನೆಂಬುವನು ಹುಟ್ಟಿದನು. ॥ ೩ ॥ ವ್ಯೋಮನಿಂದ ಜೀಮೂತ, ಜೀಮೂತನಿಗೆ ವಿಕೃತಿ, ವಿಕೃತಿಗೆ ಭೀಮರಥ, ಭೀಮರಥನಿಗೆ ನವರಥ, ನವರಥನಿಗೆ ದಶರಥನು ಹುಟ್ಟಿದನು. ॥ ೪ ॥ ದಶರಥನಿಂದ ಶಕುನಿ, ಶಕುನಿಯಿಂದ ಕರಂಭಿ, ಕರಂಭಿಯಿಂದ ದೇವರಾತ, ದೇವರಾತನಿಂದ ದೇವಕ್ಷತ್ರ, ದೇವಕ್ಷತ್ರನಿಂದ ಮಧು, ಮಧುವಿನಿಂದ ಕುರುವಶ, ಕುರುವಶನಿಂದ ಅನು ಹುಟ್ಟಿದನು. ॥ ೫ ॥ ಅನುವಿನಿಂದ ಪುರುಹೋತ್ರ, ಪುರುಹೋತ್ರನಿಂದ ಆಯು ಮತ್ತು ಆಯುವಿನಿಂದ ಸಾತ್ವತನ ಜನ್ಮವಾಯಿತು. ಪರೀಕ್ಷಿತನೇ! ಸಾತ್ವತನಿಗೆ – ಭಜಮಾನ, ಭಜಿ, ದಿವ್ಯ, ವೃಷ್ಣಿ, ದೇವಾವೃಧ, ಅಂಧಕ ಮತ್ತು ಮಹಾಭೋಜರೆಂಬ ಏಳು ಪುತ್ರರು ಉದಿಸಿದರು. ಭಜಮಾನನಿಗೆ ಇಬ್ಬರು ಪತ್ನಿಯರಿದ್ದರು. ಒಬ್ಬಳಿಂದ – ನಿಮ್ಲೋಚಿ, ಕಿಂಕಣ ಮತ್ತು ಧೃಷ್ಟಿ ಎಂಬ ಮೂವರು ಪುತ್ರರಾದರು. ಇನ್ನೊಬ್ಬಳಿಂದ – ಶತಾಜಿತ್, ಸಹಸ್ರಾಜಿತ್ ಮತ್ತು ಅಯುತಾಜಿತ್ ಎಂಬ ಮೂವರು ಪುತ್ರರಾದರು. ॥ ೬-೮ ॥ ಸಾತ್ವತನ ಐದನೆಯ ಮಗನಾದ ದೇವಾವೃಧನಿಗೆ ಬಭ್ರು ಎಂಬ ಮಗನಿದ್ದನು. ದೇವಾವೃಧ ಮತ್ತು ಬಭ್ರುಗಳ ಸಂಬಂಧದಲ್ಲಿ ಈ ಗಾಥೆಯು ಹೇಳಲ್ಪಡುತ್ತದೆ – 'ನಾವು ದೂರದಲ್ಲಿ ಜನರ ಬಾಯಿಂದ ಕೇಳಿದ ಸದ್ಗುಣಗಳೇ ಇವರಲ್ಲಿ ಪ್ರತ್ಯಕ್ಷದಲ್ಲಿಯೂ ಕೂಡ ನೋಡುತ್ತಿದ್ದೇವೆ. ॥ ೯ ॥ ಬಭ್ರು ಮನುಷ್ಯರಲ್ಲಿ ಶ್ರೇಷ್ಠನಾಗಿದ್ದಾನೆ ಮತ್ತು ದೇವಾವೃಧನು ದೇವತೆಗಳಿಗೆ ಸಮಾನನಾಗಿದ್ದಾನೆ. ಇದರ ಕಾರಣ – ಬಭ್ರು ಮತ್ತು ದೇವಾವೃಧರಿಂದ ಉಪದೇಶಪಡೆದು ಹದಿನಾಲ್ಕು ಸಾವಿರದ ಅರವತ್ತೈದು ಮಂದಿಗಳು ಪರಮಪದವನ್ನು ಪಡೆದುಕೊಂಡಿರುವರು. ಸಾತ್ವತನ ಪುತ್ರರಲ್ಲಿ ಮಹಾಭೋಜನೂ ಕೂಡ ಮಹಾ ಧರ್ಮಾತ್ಮನಾಗಿದ್ದನು. ಅವನ ವಂಶದಲ್ಲೇ ಭೋಜ ವಂಶೀಯ ಯಾದವರಾದರು. ॥ ೧೦-೧೧ ॥

ಪರೀಕ್ಷಿತನೇ! ವೃಷ್ಣಿಗೆ – ಸುಮಿತ್ರ ಮತ್ತು ಯುಧಾಜಿತ್ತು ಎಂಬ ಇಬ್ಬರು ಪುತ್ರರಾದರು. ಯುಧಾಜಿತ್ತುವಿಗೆ ಶಿನಿ ಮತ್ತು ಅನಮಿತ್ರರೆಂಬ ಇಬ್ಬರು ಮಕ್ಕಳಿದ್ದರು. ಅನಮಿತ್ರನಿಂದ ನಿಮ್ನನ ಜನ್ಮವಾಯಿತು. ॥ ೧೨ ॥ ಸತ್ರಾಜಿತ್ ಹಾಗೂ ಪ್ರಸೇನರೆಂಬ ಪ್ರಸಿದ್ಧರಾದ ಯಾದವರು ನಿಮ್ನನ ಪುತ್ರರೇ ಆಗಿದ್ದರು. ಅನಮಿತ್ರನಿಗೆ ಇನ್ನೊಬ್ಬ ಶಿನಿ ಎಂಬ ಮಗನಿದ್ದನು. ಶಿನಿಯಿಂದ ಸತ್ಯಕನ ಜನ್ಮವಾಯಿತು. ॥ ೧೩ ॥ ಇದೇ ಸತ್ಯಕನ ಪುತ್ರನೇ ಯುಯುಧಾನನಾಗಿದ್ದನು. ಅವನು ಸಾತ್ಯಕಿ ಎಂಬ ಹೆಸರಿನಿಂದಲೂ ಪ್ರಸಿದ್ಧನಾಗಿ ಇರುವನು. ಸಾತ್ಯಕಿಯ ಮಗ ಜಯ, ಜಯನಿಗೆ ಕುಣಿ ಮತ್ತು ಕುಣಿಗೆ ಯುಗಂಧರನೆಂಬ ಪುತ್ರನು ಹುಟ್ಟಿದನು. ಅನಮಿತ್ರನ ಮೂರನೆಯ ಮಗನ ಹೆಸರು ವೃಷ್ಣಿಯೆಂದಿತ್ತು. ವೃಷ್ಣಿಗೆ ಶ್ವಫಲ್ಕ ಮತ್ತು ಚಿತ್ರರಥರೆಂಬ ಇಬ್ಬರು ಪುತ್ರರಿದ್ದರು. ಶ್ವಫಲ್ಕನ ಪತ್ನಿಯ ಹೆಸರು ಗಾಂದಿನೀ ಎಂದಿತ್ತು. ಅವರಲ್ಲಿ ಅತ್ಯಂತ ಶ್ರೇಷ್ಠ ಅಕ್ರೂರನಲ್ಲದೆ – ಆಸಂಗ, ಸಾರಮೇಯ, ಮೃದುರ, ಮೃದುವಿದ್, ಗಿರಿ, ಧರ್ಮವೃದ್ಧ, ಸುಕರ್ಮಾ, ಕ್ಷೇತ್ರೋಪೇಕ್ಷ, ಅರಿಮರ್ದನ,

ಶ್ವಫಲ್ಕಶ್ಚಿತ್ರರಥಶ್ಚ ಗಾಂದಿನ್ಯಾಂ ಚ ಶ್ವಫಲ್ಕತಃ ।
ಅಕ್ರೂರಪ್ರಮುಖಾ ಆಸನ್ಪುತ್ರಾ ದ್ವಾದಶ ವಿಶ್ರುತಾಃ ॥ ೧೫ ॥

ಆಸಂಗಃ ಸಾರಮೇಯಶ್ಚ ಮೃದುರೋ ಮೃದುವಿದ್ಗಿರಿಃ ।
ಧರ್ಮವೃದ್ಧಃ ಸುಕರ್ಮಾ ಚ ಕ್ಷೇತ್ರೋಪೇಕ್ಷೋಽರಿಮರ್ದನಃ ॥ ೧೬ ॥

ಶತ್ರುಘ್ನೋ ಗಂಧಮಾದಶ್ಚ ಪ್ರತಿಬಾಹುಶ್ಚ ದ್ವಾದಶ ।
ತೇಷಾಂ ಸ್ವಸಾ ಸುಚೀರಾಖ್ಯಾ ದ್ವಾವಕ್ರೂರಸುತಾವಪಿ ॥ ೧೭ ॥

ದೇವವಾನುಪದೇವಶ್ಚ ತಥಾ ಚಿತ್ರರಥಾತ್ಮಜಾಃ ।
ಪೃಥುರ್ವಿದೂರಥಾದ್ಯಾಶ್ಚ ಬಹವೋ ವೃಷ್ಣಿನಂದನಾಃ ॥ ೧೮ ॥

ಕುಕುರೋ ಭಜಮಾನಶ್ಚ ಶುಚಿಃ ಕಂಬಲಬರ್ಹಿಷಃ ।
ಕುಕುರಸ್ಯ ಸುತೋ ವಹ್ನಿರ್ವಿಲೋಮಾ ತನಯಸ್ತತಃ ॥ ೧೯ ॥

ಕಪೋತರೋಮಾ ತಸ್ಯಾನುಃ ಸಖಾ ಯಸ್ಯ ಚ ತುಂಬುರುಃ ।
ಅಂಧಕೋ ದುಂದುಭಿಸ್ತಸ್ಮಾದರಿದ್ಯೋತಃ ಪುನರ್ವಸುಃ ॥ ೨೦ ॥

ತಸ್ಯಾಹುಕಶ್ಚಾಹುಕೀ ಚ ಕನ್ಯಾ ಚೈವಾಹುಕಾತ್ಮಜೌ ।
ದೇವಕಶ್ಚೋಗ್ರಸೇನಶ್ಚ ಚತ್ವಾರೋ ದೇವಕಾತ್ಮಜಾಃ ॥ ೨೧ ॥

ದೇವವಾನುಪದೇವಶ್ಚ ಸುದೇವೋ ದೇವವರ್ಧನಃ ।
ತೇಷಾಂ ಸ್ವಸಾರಃ ಸಪ್ತಾಸನ್ ಧೃತದೇವಾದಯೋ ನೃಪ ॥ ೨೨ ॥

ಶಾಂತಿದೇವೋಪದೇವಾ ಚ ಶ್ರೀದೇವಾ ದೇವರಕ್ಷಿತಾ ।
ಸಹದೇವಾ ದೇವಕೀ ಚ ವಸುದೇವ ಉವಾಹ ತಾಃ ॥ ೨೩ ॥

ಕಂಸಃ ಸುನಾಮಾ ನ್ಯಗ್ರೋಧಃ ಕಂಕಃ ಶಂಕುಃ ಸುಹೂಸ್ತಥಾ ।
ರಾಷ್ಟ್ರಪಾಲೋಽಥ ಸೃಷ್ಟಿಶ್ಚ ತುಷ್ಟಿಮಾನೌಗ್ರಸೇನಯಃ ॥ ೨೪ ॥

ಕಂಸಾ ಕಂಸವತೀ ಕಂಕಾ ಶೂರಭೂ ರಾಷ್ಟ್ರಪಾಲಿಕಾ ।
ಉಗ್ರಸೇನದುಹಿತರೋ ವಸುದೇವಾನುಜಸ್ತ್ರಿಯಃ ॥ ೨೫ ॥

ಶೂರೋ ವಿದೂರಥಾದಾಸೀದ್ಭಜಮಾನಃ ಸುತಸ್ತತಃ ।
ಶಿನಿಸ್ತಸ್ಮಾತ್ಸ್ವಯಂಭೋಜೋ ಹೃದೀಕಸ್ತತ್ಸುತೋ ಮತಃ ॥ ೨೬ ॥

ದೇವಬಾಹುಃ ಶತಧನುಃ ಕೃತವರ್ಮೇತಿ ತತ್ಸುತಾಃ ।
ದೇವಮೀಢಸ್ಯ ಶೂರಸ್ಯ ಮಾರಿಷಾ ನಾಮ ಪತ್ನ್ಯಭೂತ್ ॥ ೨೭ ॥

ಶತ್ರುಘ್ನ, ಗಂಧಮಾದನ, ಪ್ರತಿಬಾಹು ಎಂಬ ಹನ್ನೆರಡು ಪುತ್ರರು ಹುಟ್ಟಿದರು. ಇವರಿಗೆ ಸುಚೀರಾ ಎಂಬ ಓರ್ವ ತಂಗಿಯೂ ಇದ್ದಳು. ಅಕ್ರೂರನಿಗೆ – ದೇವವಾನ್ ಮತ್ತು ಉಪದೇವರೆಂಬ ಇಬ್ಬರು ಪುತ್ರರಿದ್ದರು. ಶ್ವಫಲ್ಕನ ತಮ್ಮ ಚಿತ್ರರಥನಿಗೆ ಪೃಥು, ವಿದೂರಥ ಮೊದಲಾದ ಅನೇಕ ಪುತ್ರರಾದರು. ಅವರೆಲ್ಲರೂ ವೃಷ್ಣಿವಂಶೀಯರಲ್ಲಿ ಶ್ರೇಷ್ಠರೆಂದು ಪರಿಗಣಿಸಲ್ಪಟ್ಟಿರುವರು. ॥ ೧೪-೧೮ ॥ ಸಾತ್ವತನ ಪುತ್ರನಾದ ಅಂಧಕನಿಗೆ ಕುಕುರ, ಭಜಮಾನ, ಶುಚಿ, ಕಂಬಲಬರ್ಹಿ ಎಂಬ ನಾಲ್ವರು ಪುತ್ರರಾದರು. ಅವರಲ್ಲಿ ಕುಕುರನ ಪುತ್ರ ವಹ್ನಿ, ವಹ್ನಿಗೆ ವಿಲೋಮಾ, ವಿಲೋಮನಿಗೆ ಕಪೋತರೋಮಾ, ಕಪೋತರೋಮನಿಗೆ ಅನು ಎಂಬುವನು ಹುಟ್ಟಿದನು. ತುಂಬುರು ಗಂಧರ್ವನೊಂದಿಗೆ ಅವನಿಗೆ ಅತ್ಯಂತ ಮಿತ್ರತೆ ಇತ್ತು. ಅನುವಿನ ಪುತ್ರ ಅಂಧಕ, ಅಂಧಕನಿಗೆ ದುಂದುಭಿ, ದುಂದುಭಿಗೆ ಅರಿದ್ಯೋತ, ಅರಿದ್ಯೋತನಿಗೆ ಪುನರ್ವಸು, ಪುನರ್ವಸುವಿಗೆ ಆಹುಕನೆಂಬ ಓರ್ವ ಪುತ್ರನೂ, ಆಹುಕಿ ಎಂಬ ಓರ್ವ ಕನ್ಯೆಯು ಹುಟ್ಟಿದರು. ಆಹುಕನಿಗೆ ದೇವಕ ಮತ್ತು ಉಗ್ರಸೇನರೆಂಬ ಇಬ್ಬರು ಪುತ್ರರಾದರು. ದೇವಕನಿಗೆ ನಾಲ್ಕು ಮಕ್ಕಳಾದರು. ॥ ೧೯-೨೦ ॥ ದೇವವಾನ್, ಉಪದೇವ, ಸುದೇವ ಮತ್ತು ದೇವವರ್ಧನ ಇವರು ದೇವಕನ ಮಕ್ಕಳು. ಇವರಿಗೆ – ಧೃತದೇವಾ, ಶಾಂತಿದೇವಾ, ಉಪದೇವಾ, ಶ್ರೀದೇವಾ, ದೇವರಕ್ಷಿತಾ, ಸಹದೇವಾ ಮತ್ತು ದೇವಕಿ ಎಂಬ ಏಳುಮಂದಿ ತಂಗಿಯರಿದ್ದರು. ವಸುದೇವನು ಇವರೆಲ್ಲರೊಂದಿಗೆ ವಿವಾಹವಾಗಿದ್ದನು. ॥ ೨೧-೨೩ ॥ ಉಗ್ರಸೇನನಿಗೆ – ಕಂಸ, ಸುನಾಮಾ, ನ್ಯಗ್ರೋಧ, ಕಂಕ, ಶಂಕು, ಸುಹೂ, ರಾಷ್ಟ್ರಪಾಲ, ಸೃಷ್ಟಿ ಮತ್ತು ತುಷ್ಟಿಮಾನ್ ಎಂಬ ಒಂಭತ್ತು ಮಕ್ಕಳಿದ್ದರು. ॥ ೨೪ ॥ ಉಗ್ರಸೇನನಿಗೆ – ಕಂಸಾ, ಕಂಸವತೀ, ಕಂಕಾ, ಶೂರಭೂ, ರಾಷ್ಟ್ರಪಾಲಿಕಾ ಎಂಬ ಐದು ಮಂದಿ ಕನ್ಯೆಯರೂ ಇದ್ದರು. ಇವರ ವಿವಾಹವು – ದೇವಭಾಗ ಮೊದಲಾದ ವಸುದೇವನ ತಮ್ಮಂದಿರೊಂದಿಗೆ ಆಗಿತ್ತು. ॥ ೨೫ ॥

ಚಿತ್ರರಥನ ಪುತ್ರನಾದ ವಿದೂರಥನಿಗೆ ಶೂರ, ಶೂರನಿಂದ ಭಜಮಾನ, ಭಜಮಾನನಿಂದ ಶಿನಿ, ಶಿನಿಯಿಂದ ಸ್ವಯಂಭೋಜ, ಸ್ವಯಂಭೋಜನಿಂದ ಹೃದೀಕ ಹುಟ್ಟಿದರು. ॥ ೨೬ ॥

ಹೃದೀಕನಿಗೆ – ದೇವಬಾಹು, ಶತಧನ್ವಾ, ಕೃತವರ್ಮಾ ಎಂಬ ಮೂರು ಮಕ್ಕಳಾದರು. ದೇವಮೀಢನ ಪುತ್ರನಾದ ಶೂರನ ಪತ್ನಿಯ ಹೆಸರು ಮಾರಿಷಾ ಎಂದಿತ್ತು. ॥ ೨೭ ॥ ಶೂರಸೇನನು ಮಾರಿಷಾಳಿಂದ ವಸುದೇವ, ದೇವಭಾಗ, ದೇವಶ್ರವಾ, ಆನಕ, ಸೃಂಜಯ, ಶ್ಯಾಮಕ, ಕಂಕ, ಶಮೀಕ, ವತ್ಸಕ ಮತ್ತು ವೃಕ ಎಂಬ ಪುಣ್ಯಾತ್ಮರಾದ ಹತ್ತು ಮಕ್ಕಳನ್ನು ಪಡೆದನು. ವಸುದೇವನು ಹುಟ್ಟುವಾಗ ದೇವದುಂದುಭಿಗಳು ತಾನಾಗಿಯೇ ಮೊಳಗಿದವು. ಆದ್ದರಿಂದ ಅವನನ್ನು, 'ಆನಕದುಂದುಭಿ' ಎಂದೂ ಕರೆಯುತ್ತಿದ್ದರು. ಅವನೇ ಭಗವಾನ್ ಶ್ರೀಕೃಷ್ಣನಿಗೆ ತಂದೆಯಾದನು. ವಸುದೇವನಿಗೆ ಪೃಥಾ, (ಕುಂತಿ) ಶ್ರುತದೇವಾ, ಶ್ರುತಕೀರ್ತಿ, ಶ್ರುತಶ್ರವಾ ಮತ್ತು ರಾಜಾಧಿದೇವಿ ಎಂಬ ಐದು ತಂಗಿಯರೂ ಇದ್ದರು. ವಸುದೇವನ

ತಸ್ಯಾಂ ಸ ಜನಯಾಮಾಸ ದಶ ಪುತ್ರಾನಕಲ್ಮಷಾನ್ ।
ವಸುದೇವಂ ದೇವಭಾಗಂ ದೇವಶ್ರವಸಮಾನಕಮ್ ॥ ೨೮ ॥

ಸೃಂಜಯಂ ಶ್ಯಾಮಕಂ ಕಂಕಂ ಶಮೀಕಂ ವತ್ಸಕಂ ವೃಕಮ್ ।
ದೇವದುಂದುಭಯೋ ನೇದುರಾನಕಾ ಯಸ್ಯ ಜನ್ಮನಿ ॥ ೨೯ ॥

ವಸುದೇವಂ ಹರೇಃ ಸ್ಥಾನಂ ವದಂತ್ಯಾನಕದುಂದುಭಿಮ್ ।
ಪೃಥಾ ಚ ಶ್ರುತದೇವಾ ಚ ಶ್ರುತಕೀರ್ತಿಃ ಶ್ರುತಶ್ರವಾಃ ॥ ೩೦ ॥

ರಾಜಾಧಿದೇವೀ ಚೈತೇಷಾಂ ಭಗಿನ್ಯಃ ಪಂಚ ಕನ್ಯಕಾಃ ।
ಕುಂತೇಃ ಸಖ್ಯುಃ ಪಿತಾ ಶೂರೋ ಹ್ಯಪುತ್ರಸ್ಯ ಪೃಥಾಮದಾತ್ ॥ ೩೧ ॥

ಸಾಽಽಪ ದುರ್ವಾಸಸೋ ವಿದ್ಯಾಂ ದೇವಹೂತೀಂ ಪ್ರತೋಷಿತಾತ್ ।
ತಸ್ಯಾ ವೀರ್ಯಪರೀಕ್ಷಾರ್ಥಮಾಜುಹಾವ ರವಿಂ ಶುಚಿಃ ॥ ೩೨ ॥

ತದೈವೋಪಾಗತಂ ದೇವಂ ವೀಕ್ಷ್ಯ ವಿಸ್ಮಿತಮಾನಸಾ ।
ಪ್ರತ್ಯಯಾರ್ಥಂ ಪ್ರಯುಕ್ತಾ ಮೇ ಯಾಹಿ ದೇವ ಕ್ಷಮಸ್ವ ಮೇ ॥ ೩೩ ॥

ಅಮೋಘಂ ದರ್ಶನಂ ದೇವಿ ಆಧಿತ್ಸೇ ತ್ವಯಿ ಚಾತ್ಮಜಮ್ ।
ಯೋನಿರ್ಯಥಾ ನ ದುಷ್ಯೇತ ಕರ್ತಾಹಂ ತೇ ಸುಮಧ್ಯಮೇ ॥ ೩೪ ॥

ಇತಿ ತಸ್ಯಾಂ ಸ ಆಧಾಯ ಗರ್ಭಂ ಸೂರ್ಯೋ ದಿವಂ ಗತಃ ।
ಸದ್ಯಃ ಕುಮಾರಃ ಸಂಜಜ್ಞೇ ದ್ವಿತೀಯ ಇವ ಭಾಸ್ಕರಃ ॥ ೩೫ ॥

ತಂ ಸಾತ್ಯಜನ್ನದೀತೋಯೇ ಕೃಚ್ಛ್ರಾಲ್ಲೋಕಸ್ಯ ಬಿಭ್ಯತೀ ।
ಪ್ರಪಿತಾಮಹಸ್ತಾಮುವಾಹ ಪಾಂಡುರ್ವೈ ಸತ್ಯವಿಕ್ರಮಃ ॥ ೩೬ ॥

ಶ್ರುತದೇವಾಂ ತು ಕಾರೂಷೋ ವೃದ್ಧಶರ್ಮಾ ಸಮಗ್ರಹೀತ್ ।
ಯಸ್ಯಾಮಭೂದ್ದಂತವಕ್ತ್ರ ಋಷಿಶಪ್ತೋ ದಿತೇಃ ಸುತಃ ॥ ೩೭ ॥

ಕೈಕೇಯೋ ಧೃಷ್ಟಕೇತುಶ್ಚ ಶ್ರುತಕೀರ್ತಿಮವಿಂದತ ।
ಸಂತರ್ದನಾದಯಸ್ತಸ್ಯ ಪಂಚಾಸನ್ಕೈಕಯಾಃ ಸುತಾಃ ॥ ೩೮ ॥

ರಾಜಾಧಿದೇವ್ಯಾಮಾವಂತ್ಯೌ ಜಯಸೇನೋಽಜನಿಷ್ಟ ಹ ।
ದಮಘೋಷಶ್ಚೇದಿರಾಜಃ ಶ್ರುತಶ್ರವಸಮಗ್ರಹೀತ್ ॥ ೩೯ ॥

ಶಿಶುಪಾಲಃ ಸುತಸ್ತಸ್ಯಾಃ ಕಥಿತಸ್ತಸ್ಯ ಸಂಭವಃ ।
ದೇವಭಾಗಸ್ಯ ಕಂಸಾಯಾಂ ಚಿತ್ರಕೇತುಬೃಹದ್ಬಲೌ ॥ ೪೦ ॥

ತಂದೆ ಶೂರಸೇನನಿಗೆ ಕುಂತಿಭೋಜನೆಂಬ ಮಿತ್ರನಿದ್ದನು. ಕುಂತಿಭೋಜನಿಗೆ ಯಾವ ಸಂತಾನವೂ ಇರಲಿಲ್ಲ, ಅದಕ್ಕಾಗಿ ಶೂರಸೇನನು ಅವನಿಗೆ ತನ್ನ ಹಿರಿಯಳಾದ ಪೃಥಾಳನ್ನು ದತ್ತಕವಾಗಿ ಕೊಟ್ಟಿದ್ದನು. ॥ ೨೮-೩೧ ॥

ಪೃಥಾದೇವಿಯು ದುರ್ವಾಸರನ್ನು ತನ್ನ ಸೇವೆಯಿಂದ ಪ್ರಸನ್ನಗೊಳಿಸಿ ಅವರ ಅನುಗ್ರಹದಿಂದ ದೇವತೆಗಳನ್ನೂ ಸಮಾಗಮಕ್ಕಾಗಿ ಕರೆಯಬಹುದಾದ ವಿದ್ಯೆಯನ್ನು ಕಲಿತಳು. ಒಂದು ದಿನ ಆ ವಿದ್ಯೆಯನ್ನು ಪರೀಕ್ಷಿಸಲೋಸುಗ ಪೃಥೆಯು ಪರಮಪವಿತ್ರಳಾಗಿ ಭಗವಾನ್ ಸೂರ್ಯನನ್ನು ಆವಾಹನೆ ಮಾಡಿದಳು. ॥ ೩೨ ॥ ಮಂತ್ರಪಠಿಸಿ ಆಹ್ವಾನಿಸಿದೊಡನೆ ಸೂರ್ಯ ಭಗವಂತನು ಅವಳ ಬಳಿಗೆ ಬಂದೇಬಿಟ್ಟನು. ಸೂರ್ಯನನ್ನು ನೋಡಿ ಕುಂತಿಯು ಆಶ್ಚರ್ಯಗೊಂಡು ಹೇಳಿದಳು - "ಸೂರ್ಯಭಗವಂತ! ನನ್ನನ್ನು ಕ್ಷಮಿಸಬೇಕು. ಮುನಿಗಳ ಮಾತನ್ನು ಪರೀಕ್ಷಿಸಲು ಈ ವಿದ್ಯೆಯನ್ನು ಪ್ರಯೋಗಿಸಿದೆನು. ಮಂತ್ರದ ಪ್ರಭಾವ ನನಗೀಗ ತಿಳಿದು ಹೋಯಿತು. ನೀನಿನ್ನು ಹೊರಡಬಹುದು. ॥ ೩೩ ॥ ಸೂರ್ಯದೇವನು ಹೇಳಿದನು - ದೇವೀ! ನನ್ನ ದರ್ಶನವು ನಿಷ್ಫಲವಾಗಬಾರದು. ಅದಕ್ಕಾಗಿ ನಾನೀಗಲೇ ನಿನಗೆ ಒಬ್ಬ ಪುತ್ರನನ್ನು ಅನುಗ್ರಹಿಸುತ್ತೇನೆ. ಇದರಿಂದ ನಿನ್ನ ಕ್ಷೇತ್ರವು ದೂಷಿತವಾಗುವುದಿಲ್ಲ, ನೀನು ಕನ್ಯೆಯಾಗಿಯೇ ಉಳಿಯುವೆ. ॥ ೩೪ ॥ ಹೀಗೆ ಹೇಳಿ ಸೂರ್ಯದೇವನು ಆಕೆಗೆ ದಿವ್ಯವಾದ ಒಂದು ಗಂಡು ಮಗುವನ್ನು ಕರುಣಿಸಿ ಸ್ವರ್ಗಕ್ಕೆ ಹೊರಟುಹೋದನು. ಆ ಮಗುವು ಅತ್ಯಂತ ಸುಂದರವಾಗಿದ್ದು ಪ್ರತಿಸೂರ್ಯನಂತೆ ಕಂಗೊಳಿಸುತ್ತಿತ್ತು. ॥ ೩೫ ॥ ಪೃಥೆಯು ಲೋಕನಿಂದೆಗೆ ಹೆದರಿ, ಅತೀವ ದುಃಖದಿಂದ ಆ ಮುದ್ದು ಬಾಲಕನನ್ನು ಒಂದು ಪೆಟ್ಟಿಗೆಯಲ್ಲಿಟ್ಟು ಗಂಗೆಯಲ್ಲಿ ತೇಲಿಬಿಟ್ಟಳು. ಪರೀಕ್ಷಿತನೇ! ಆ ಪೃಥೆಯನ್ನೇ ನಿನ್ನ ಮುತ್ತಾತನಾದ ಪಾಂಡುವು ವಿವಾಹವಾದನು. ಅವನು ನಿಜವಾಗಿ ಮಹಾಪರಾಕ್ರಮಿಯಾಗಿದ್ದನು. ॥ ೩೬ ॥

ಪರೀಕ್ಷಿತನೇ! ಪೃಥೆಯ ತಂಗಿ ಶ್ರುತದೇವಾ ಎಂಬುವಳನ್ನು ಕರೂಷದೇಶದ ಅಧಿಪತಿ ವೃದ್ಧಶರ್ಮ ವಿವಾಹವಾದನು. ಆಕೆಯ ಗರ್ಭದಿಂದ ದಂತವಕ್ತ್ರನ ಜನ್ಮವಾಯಿತು. ಪೂರ್ವಜನ್ಮದಲ್ಲಿ ಸನಕಾದಿ ಋಷಿಗಳ ಶಾಪದಿಂದ ಹಿರಣ್ಯಾಕ್ಷನಾದವನೇ ಈ ದಂತವಕ್ತ್ರನಾಗಿದ್ದನು. ॥ ೩೭ ॥

ಕೇಕಯದೇಶದ ರಾಜಾ ಧೃಷ್ಟಕೇತುವು ಶ್ರುತಕೀರ್ತಿಯೊಂದಿಗೆ ವಿವಾಹವಾದನು. ಅವಳಲ್ಲಿ ಸಂತರ್ದನರೇ ಆದಿ ಐದು ಕೈಕಯ ರಾಜಕುಮಾರರು ಹುಟ್ಟಿದರು. ॥ ೩೮ ॥ ರಾಜಾಧಿದೇವಿಯ ವಿವಾಹವು ಜಯಸೇನನೊಂದಿಗೆ ನಡೆಯಿತು. ಅವಳಿಗೆ ವಿಂದ ಮತ್ತು ಅನುವಿಂದ ಎಂಬ ಇಬ್ಬರು ಪುತ್ರರಾದರು. ಇವರಿಬ್ಬರೂ ಅವಂತಿ ನರೇಶರಾದರು. ಚೇದಿರಾಜ ದಮಘೋಷನು ಶ್ರುತಶ್ರವಾ ಎಂಬುವಳನ್ನು ಪಾಣಿ ಗ್ರಹಣಮಾಡಿದನು. ॥ ೩೯ ॥ ಅವಳ ಪುತ್ರನೇ ಶಿಶುಪಾಲನು. ಇವನ ವಿಷಯವಾಗಿ ನಾನು ಮೊದಲೇ (ಏಳನೆಯ ಸ್ಕಂಧದಲ್ಲಿ) ವರ್ಣಿಸಿರುವೆನು. ವಸುದೇವನ ತಮ್ಮಂದಿರಲ್ಲಿ ದೇವಭಾಗನ ಪತ್ನಿಯಾದ ಕಂಸೆಯಿಂದ ಚಿತ್ರಕೇತು ಮತ್ತು ಬೃಹದ್ಬಲರೆಂಬ ಇಬ್ಬರು ಪುತ್ರರು ಹುಟ್ಟಿದರು. ॥ ೪೦ ॥

ಕಂಸವತ್ಯಾಂ ದೇವಶ್ರವಸಃ ಸುವೀರ ಇಷುಮಾಂಸ್ತಥಾ ।
ಕಂಕಾಯಾಮಾನಕಾಜ್ಜಾತಃ ಸತ್ಯಜಿತ್ಪುರುಜಿತ್ತಥಾ ॥ ೪೦ ॥

ಸೃಂಜಯೋ ರಾಷ್ಟ್ರಪಾಲ್ಯಾಂ ಚ ವೃಷದುರ್ಮರ್ಷಣಾದಿಕಾನ್ ।
ಹರಿಕೇಶಹಿರಣ್ಯಾಕ್ಷೌ ಶೂರಭೂಮ್ಯಾಂ ಚ ಶ್ಯಾಮಕಃ ॥ ೪೧ ॥

ಮಿಶ್ರಕೇಶ್ಯಾಮಪ್ಸರಸಿ ವೃಕಾದೀನ್ವತ್ಸಕಸ್ತಥಾ ।
ತಕ್ಷಪುಷ್ಕರಶಾಲಾದೀಂದುರ್ವಾರ್ಕ್ಷ್ಯಾಂ ವೃಕ ಆದಧೇ ॥ ೪೨ ॥

ಸುಮಿತ್ರಾರ್ಜುನಪಾಲಾದೀನ್ ಶಮೀಕಾತ್ತು ಸುದಾಮಿನೀ ।
ಕಂಕಶ್ಚ ಕರ್ಣಿಕಾಯಾಂ ವೈ ಋತಧಾಮಜಯಾವಪಿ ॥ ೪೩ ॥

ಪೌರವೀ ರೋಹಿಣೀ ಭದ್ರಾ ಮದಿರಾ ರೋಚನಾ ಇಲಾ ।
ದೇವಕೀಪ್ರಮುಖಾ ಆಸನ್ಪತ್ನ್ಯ ಆನಕದುಂದುಭೇಃ ॥ ೪೪ ॥

ಬಲಂ ಗದಂ ಸಾರಣಂ ಚ ದುರ್ಮದಂ ವಿಪುಲಂ ಧ್ರುವಮ್ ।
ವಸುದೇವಸ್ತು ರೋಹಿಣ್ಯಾಂ ಕೃತಾದೀನುದಪಾದಯತ್ ॥ ೪೫ ॥

ಸುಭದ್ರೋ ಭದ್ರವಾಹಶ್ಚ ದುರ್ಮದೋ ಭದ್ರ ಏವ ಚ ।
ಪೌರವ್ಯಾಸ್ತನಯಾ ಹ್ಯೇತೇ ಭೂತಾದ್ಯಾ ದ್ವಾದಶಾಭವನ್ ॥ ೪೬ ॥

ನಂದೋಪನಂದಕೃತಕಶೂರಾದ್ಯಾ ಮದಿರಾತ್ಮಜಾಃ ।
ಕೌಸಲ್ಯಾ ಕೇಶಿನಂ ತ್ವೇಕಮಸೂತ ಕುಲನಂದನಮ್ ॥ ೪೭ ॥

ರೋಚನಾಯಾಮತೋ ಜಾತಾ ಹಸ್ತಹೇಮಾಂಗದಾದಯಃ ।
ಇಲಾಯಾ ಮುರುವಲ್ಕಾದೀನ್ಯದುಮುಖ್ಯಾನಜೀಜನತ್ ॥ ೪೮ ॥

ವಿಪೃಷ್ಠೋ ಧೃತದೇವಾಯಾಮೇಕ ಆನಕದುಂದುಭೇಃ ।
ಶಾಂತಿದೇವಾತ್ಮಜಾ ರಾಜನ್ ಶ್ರಮಪ್ರತಿಶ್ರುತಾದಯಃ ॥ ೪೯ ॥

ರಾಜಾನಃ ಕಲ್ಪವರ್ಷಾದ್ಯಾ ಉಪದೇವಾಸುತಾ ದಶ ।
ವಸುಹಂಸಸುವಂಶಾದ್ಯಾಃ ಶ್ರೀದೇವಾಯಾಸ್ತು ಷಟ್ಸುತಾಃ ॥ ೫೦ ॥

ದೇವರಕ್ಷಿತಯಾ ಲಬ್ಧಾ ನವ ಚಾತ್ರ ಗದಾದಯಃ ।
ವಸುದೇವಃ ಸುತಾನಷ್ಟಾವಾದಧೇ ಸಹದೇವಯಾ ॥ ೫೧ ॥

ಪುರುವಿಶ್ರುತಮುಖ್ಯಾಂಸ್ತು ಸಾಕ್ಷಾದ್ಧರ್ಮೋ ವಸೂನಿವ ।
ವಸುದೇವಸ್ತು ದೇವಕ್ಯಾಮಷ್ಟ ಪುತ್ರಾನಜೀಜನತ್ ॥ ೫೨ ॥

ಕೀರ್ತಿಮಂತಂ ಸುಷೇಣಂ ಚ ಭದ್ರಸೇನಮುದಾರಧೀಃ ।
ಋಜುಂ ಸಮ್ಮರ್ದನಂ ಭದ್ರಂ ಸಂಕರ್ಷಣಮಹೀಶ್ವರಮ್ ॥ ೫೩ ॥

ದೇವಶ್ರವಾನ ಪತ್ನಿಯಾದ ಕಂಸವತಿಯಿಂದ ಸುವೀರ ಹಾಗೂ ಇಷುಮಾನ್‌ರೆಂಬ ಇಬ್ಬರು ಪುತ್ರರಾದರು. ಆನಕನ ಪತ್ನಿಯಾದ ಕಂಕಾಳಿಂದ – ಸತ್ಯಜಿತ್ ಮತ್ತು ಪುರುಜಿತ್‌ರೆಂಬ ಇಬ್ಬರು ಪುತ್ರರು ಹುಟ್ಟಿದರು. ॥ ೪೦ ॥ ಸೃಂಜಯನು ತನ್ನ ಪತ್ನಿಯಾದ ರಾಷ್ಟ್ರಪಾಲಿಕೆಯಿಂದ ವೃಷ ಮತ್ತು ದುರ್ಮರ್ಷಣಾದಿ ಮೊದಲಾದ ಅನೇಕ ಪುತ್ರರನ್ನು ಪಡೆದನು. ಹೀಗೆಯೇ ಶ್ಯಾಮಕನು ಶೂರಭೂಮಿ (ಶೂರಭೂ) ಎಂಬ ಪತ್ನಿಯಿಂದ ಹರಿಕೇಶ ಮತ್ತು ಹಿರಣ್ಯಾಕ್ಷರೆಂಬ ಇಬ್ಬರು ಮಕ್ಕಳನ್ನು ಪಡೆದನು. ॥ ೪೧ ॥ ಮಿಶ್ರಕೇಶೀ ಅಪ್ಸರೆಯ ಗರ್ಭದಿಂದ ವತ್ಸಕನೂ ಕೂಡ ವೃಕ ಮೊದಲಾದ ಅನೇಕ ಪುತ್ರರನ್ನು ಹೊಂದಿದನು. ವೃಕನು ದುರ್ವಾರ್ಕ್ಷಿಯಿಂದ ತಕ್ಷ, ಪುಷ್ಕರ, ಶಾಲ ಮೊದಲಾದ ಹಲವು ಮಕ್ಕಳನ್ನು ಪಡೆದುಕೊಂಡನು. ॥ ೪೨ ॥ ಶಮೀಕನ ಪತ್ನಿಯಾದ ಸುದಾಮಿನಿಯು ಸುಮಿತ್ರ, ಅರ್ಜುನಪಾಲ ಮೊದಲಾದ ಅನೇಕ ಮಕ್ಕಳನ್ನು ಪಡೆದಳು. ಕಂಕನ ಪತ್ನಿ ಕರ್ಣಿಕೆಯಿಂದ ಋತುಧಾಮ ಮತ್ತು ಜಯರೆಂಬ ಇಬ್ಬರು ಮಕ್ಕಳು ಉಂಟಾದರು. ॥ ೪೩ ॥

ಆನಕದುಂದುಭಿಯಾದ ವಸುದೇವನಿಗೆ ಪೌರವೀ, ರೋಹಿಣೀ ಭದ್ರಾ, ಮದಿರಾ, ರೋಚನಾ, ಇಲಾ ಮತ್ತು ದೇವಕಿ ಮುಂತಾದ ಅನೇಕ ಪತ್ನಿಯರಿದ್ದರು. ॥ ೪೪ ॥ ರೋಹಿಣಿಯ ಗರ್ಭದಿಂದ ವಸುದೇವನು ಬಲರಾಮ, ಗದ, ಸಾರಣ, ದುರ್ಮದ, ವಿಪುಲ, ಧ್ರುವ ಮತ್ತು ಕೃತ ಮುಂತಾದ ಪುತ್ರರನ್ನು ಪಡೆದನು. ॥ ೪೫ ॥ ಪೌರವಿಯ ಗರ್ಭದಿಂದ ಭೂತ ಸುಭದ್ರ, ಭದ್ರವಾಹ, ದುರ್ಮದ, ಭದ್ರ ಮೊದಲಾದ ಹನ್ನೆರಡು ಮಕ್ಕಳನ್ನು ಪಡೆದನು. ॥ ೪೬ ॥ ಮದಿರೆಯ ಗರ್ಭದಿಂದ ನಂದ, ಉಪನಂದ, ಕೃತಕ, ಶೂರ ಮುಂತಾದವರು ಹುಟ್ಟಿದರು. ಕೌಸಲ್ಯೆಯು ಕುಲಕ್ಕೆ ಆನಂದ ದಾಯಕನಾದ 'ಕೇಶೀ' ಎಂಬ ಓರ್ವನೇ ಪುತ್ರನನ್ನು ಪಡೆದಳು. ॥ ೪೭ ॥ ರೋಚನಾ ಎಂಬುವಳಲ್ಲಿ ಹಸ್ತ, ಹೇಮಾಂಗ ಮೊದಲಾದವರು, ಇಲೆಯಿಂದ ಉರುವಲ್ಕ ಮೊದಲಾದ ಯಾದವ ಮುಖ್ಯರಾದ ಪುತ್ರರನ್ನು ಪಡೆದನು. ॥ ೪೮ ॥ ಪರೀಕ್ಷಿತನೇ! ವಸುದೇವನ ಪತ್ನಿಯಾದ ಧೃತದೇವಾ ಎಂಬುವಳಲ್ಲಿ ವಿಪೃಷ್ಠ ಎಂಬ ಒಬ್ಬ ಮಗನಾದನು. ಶಾಂತಿದೇವಿಯಲ್ಲಿ ಶ್ರಮ ಮತ್ತು ಪ್ರತಿಶ್ರುತ ಮೊದಲಾದ ಅನೇಕ ಪುತ್ರರು ಹುಟ್ಟಿದರು. ॥ ೪೯ ॥

ಉಪದೇವಾ ಎಂಬುವಳಿಂದ ಕಲ್ಪವರ್ಷ ಮೊದಲಾದ ಹತ್ತು ರಾಜರನ್ನು ಪಡೆದನು. ಶ್ರೀದೇವಾಳಿಂದ ವಸು, ಹಂಸ, ಸುವಂಶ ಮೊದಲಾದ ಆರು ಪುತ್ರರಾದರು. ॥ ೫೦ ॥ ದೇವರಕ್ಷಿತೆಯಿಂದ ಗದ ಮೊದಲಾದ ಒಂಭತ್ತು ಪುತ್ರರಾದರು. ಧರ್ಮನು ಎಂಟು ವಸುಗಳನ್ನು ಪಡೆದುಕೊಂಡಂತೆ ವಸುದೇವನು ಸಹದೇವಾಳಿಂದ ಪುರುವಿಶ್ರುತ ಮೊದಲಾದ ಎಂಟು ಪುತ್ರರನ್ನು ಪಡೆದನು. ಪರಮಉದಾರ ವಸುದೇವನು ದೇವಕಿಯ ಗರ್ಭದಿಂದಲೂ ಎಂಟುಮಂದಿ ಪುತ್ರರನ್ನು ಪಡೆದನು. ಅವರಲ್ಲಿ ಏಳು ಹೆಸರು – ಕೀರ್ತಿಮಾನ್, ಸುಷೇಣ, ಭದ್ರಸೇನ, ಋಜು, ಸಮ್ಮರ್ದನ, ಭದ್ರ ಮತ್ತು ಶೇಷಾವತಾರೀ ಶ್ರೀಬಲರಾಮ ಎಂದಿತ್ತು ॥ ೫೧-೫೩ ॥

ಅಷ್ಟಮಸ್ತು ತಯೋರಾಸೀತ್ಸ್ವಯಮೇವ ಹರಿಃ ಕಿಲ ।
ಸುಭದ್ರಾ ಚ ಮಹಾಭಾಗಾ ತವ ರಾಜನ್ಪಿತಾಮಹೀ ॥ ೫೫ ॥

ಯದಾ ಯದೇಹ ಧರ್ಮಸ್ಯ ಕ್ಷಯೋ ವೃದ್ಧಿಶ್ಚ ಪಾಪ್ಮನಃ ।
ತದಾ ತು ಭಗವಾನೀಶ ಆತ್ಮಾನಂ ಸೃಜತೇ ಹರಿಃ ॥ ೫೬ ॥

ನ ಹ್ಯಸ್ಯ ಜನ್ಮನೋ ಹೇತುಃ ಕರ್ಮಣೋ ವಾ ಮಹೀಪತೇ ।
ಆತ್ಮಮಾಯಾಂ ವಿನೇಶಸ್ಯ ಪರಸ್ಯ ದ್ರಷ್ಟುರಾತ್ಮನಃ ॥ ೫೭ ॥

ಯನ್ಮಾಯಾಚೇಷ್ಟಿತಂ ಪುಂಸಃ ಸ್ಥಿತ್ಯುತ್ಪತ್ತ್ಯಪ್ಯಯಾಯ ಹಿ ।
ಅನುಗ್ರಹಸ್ತನ್ನಿವೃತ್ತೇರಾತ್ಮಲಾಭಾಯ ಚೇಷ್ಯತೇ ॥ ೫೮ ॥

ಅಕ್ಷೌಹಿಣೀನಾಂ ಪತಿಭಿರಸುರೈರ್ನೃಪಲಾಂಛನೈಃ ।
ಭುವ ಆಕ್ರಮ್ಯಮಾಣಾಯಾ ಅಭಾರಾಯ ಕೃತೋದ್ಯಮಃ ॥ ೫೯ ॥

ಕರ್ಮಾಣ್ಯಪರಿಮೇಯಾಣಿ ಮನಸಾಪಿ ಸುರೇಶ್ವರೈಃ ।
ಸಹಸಂಕರ್ಷಣಶ್ಚಕ್ರೇ ಭಗವಾನ್ಮಧುಸೂದನಃ ॥ ೬೦ ॥

ಕಲೌ ಜನಿಷ್ಯಮಾಣಾನಾಂ ದುಃಖಶೋಕತಮೋನುದಮ್ ।
ಅನುಗ್ರಹಾಯ ಭಕ್ತಾನಾಂ ಸುಪುಣ್ಯಂ ವ್ಯತನೋದ್ಯಶಃ ॥ ೬೧ ॥

ಯಸ್ಮಿನ್ಸತ್ಕರ್ಣಪೀಯೂಷೇ ಯಶಸ್ತೀರ್ಥವರೇ ಸಕೃತ್ ।
ಶ್ರೋತ್ರಾಂಜಲಿರುಪಸ್ಪೃಶ್ಯ ಧುನುತೇ ಕರ್ಮವಾಸನಾಮ್ ॥ ೬೨ ॥

ಭೋಜವೃಷ್ಣ್ಯಂಧಕಮಧುಶೂರಸೇನದಶಾರ್ಹಕೈಃ ।
ಶ್ಲಾಘನೀಯೇಹಿತಃ ಶಶ್ವತ್ಕುರುಸೃಂಜಯಪಾಂಡುಭಿಃ ॥ ೬೩ ॥

ಸ್ನಿಗ್ಧಸ್ಮಿತೇಕ್ಷಿತೋದಾರೈರ್ವಾಕ್ಯೈರ್ವಿಕ್ರಮಲೀಲಯಾ ।
ನೃಲೋಕಂ ರಮಯಾಮಾಸ ಮೂರ್ತ್ಯಾ ಸರ್ವಾಂಗರಮ್ಯಯಾ ॥ ೬೪ ॥

ಯಸ್ಯಾನನಂ ಮಕರಕುಂಡಲಚಾರುಕರ್ಣ-
ಭ್ರಾಜತ್ಕಪೋಲಸುಭಗಂ ಸವಿಲಾಸಹಾಸಮ್ ।
ನಿತ್ಯೋತ್ಸವಂ ನ ತತೃಪುರ್ದೃಶಿಭಿಃ ಪಿಬಂತ್ಯೋ
ನಾರ್ಯೋ ನರಾಶ್ಚ ಮುದಿತಾಃ ಕುಪಿತಾ ನಿಮೇಶ್ಚ ॥ ೬೫ ॥

ಅವರಿಬ್ಬರಲ್ಲಿ ಎಂಟನೆಯವನಾಗಿ ಸ್ವತಃ ಭಗವಂತನೇ ಆಗಿದ್ದನು. ಪರೀಕ್ಷಿತನೇ! ನಿನ್ನ ಪಿತಾಮಹಿ ಪರಮ ಸೌಭಾಗ್ಯವತಿಯಾದ ಸುಭದ್ರೆಯೂ ದೇವಕನ ಮಗಳಾಗಿದ್ದಳು. ॥ ೫೫ ॥

ಪ್ರಪಂಚದಲ್ಲಿ ಧರ್ಮದ ಹ್ರಾಸ ಮತ್ತು ಪಾಪದ ವೃದ್ಧಿಯಾದಾಗಲೆಲ್ಲ ಸರ್ವಶಕ್ತನಾದ ಭಗವಾನ್ ಶ್ರೀಹರಿಯು ಅವತರಿಸುವನು. ॥ ೫೬ ॥ ಪರೀಕ್ಷಿತನೇ! ಭಗವಂತನು ಎಲ್ಲರ ದ್ರಷ್ಟಾ ಮತ್ತು ವಾಸ್ತವವಾಗಿ ಅಸಂಗನಾದ ಆತ್ಮನೇ ಆಗಿರುವನು. ಅದಕ್ಕಾಗಿ ಅವನ ಜನ್ಮ ಮತ್ತು ಕರ್ಮಗಳಿಗೆ ಆತ್ಮಸ್ವರೂಪಿಣಿಯಾದ ಯೋಗಮಾಯೆಯಲ್ಲದೆ ಬೇರೆ ಯಾವ ಕಾರಣವೂ ಇಲ್ಲ. ॥ ೫೭ ॥ ಅವನ ಮಾಯೆಯ ವಿಲಾಸವೇ ಜೀವಿಯ ಜನ್ಮ, ಜೀವನ, ಮರಣ ಇವುಗಳ ಕಾರಣವಾಗಿದೆ. ಅವನ ಅನುಗ್ರಹವೇ ಮಾಯೆಯನ್ನು ಕಳೆದು ಆತ್ಮಸ್ವರೂಪವನ್ನು ದೊರಕಿಸಿಕೊಡುವಂತಹುದಾಗಿದೆ. ॥ ೫೮ ॥ ಅಸುರರು ರಾಜರ ವೇಷವನ್ನು ತೊಟ್ಟು ಬಹಳಷ್ಟು ಅಕ್ಷೌಹಿಣೀ ಸೈನ್ಯವನ್ನು ಒಟ್ಟುಗೂಡಿಸಿ ಪೃಥ್ವಿಯನ್ನು ಆಕ್ರಮಿಸಿ ಭೂಭಾರವಾದಾಗ ಭಗವಾನ್ ಮಧುಸೂದನನು ಬಲರಾಮನೊಂದಿಗೆ ಅವತರಿಸಿದನು. ಸಂಕರ್ಷಣನೊಂದಿಗೆ ಆ ಭಗವಂತನು ದೇವತೆಗಳೂ ಕೂಡ ಮನಸ್ಸಿನಿಂದಲೂ ಎಣಿಸಲಾರದ ಪರಮಾದ್ಭುತವಾದ ಲೀಲೆಗಳನ್ನು ನಡೆಸಿದನು. ॥ ೫೯-೬೦ ॥ ಭೂಭಾರವನ್ನು ಇಳಿಸುವುದರ ಜೊತೆಗೆ ಕಲಿಯುಗದಲ್ಲಿ ಹುಟ್ಟುವ, ಹುಟ್ಟಲಿರುವ ಭಕ್ತರ ಮೇಲೆ ಅನುಗ್ರಹ ಮಾಡಲಿಕ್ಕಾಗಿ ಭಗವಂತನು – ಕೇವಲ ಶ್ರವಣಮಾತ್ರದಿಂದಲೇ ಭಕ್ತರ ಶೋಕ-ದುಃಖಗಳನ್ನೂ, ಅಜ್ಞಾನವನ್ನೂ ತೊಲಗಿಸುವಂತಹ ಪರಮ ಪವಿತ್ರ, ಪುಣ್ಯಕರವಾದ ಯಶವನ್ನು ಹರಡಿದನು. ॥ ೬೧ ॥ ಅವನ ಪವಿತ್ರಕೀರ್ತಿಯು ಜನರನ್ನು ಪವಿತ್ರಗೊಳಿಸುವಂತಹ ಪುಣ್ಯತೀರ್ಥವಾಗಿದೆ. ಸಾಧು-ಸಂತರ ಕಿವಿಗಳಿಗೆ ಅದಾದರೋ ಪ್ರತ್ಯಕ್ಷ ಅಮೃತವೇ ಆಗಿದೆ. ಒಂದೇ ಬಾರಿ ಕಿವಿಗಳೆಂಬ ಅಂಜಲಿಯಿಂದ ಪಾನಮಾಡಿದರೆ ಕರ್ಮವಾಸನೆಗಳು ನಿರ್ಮೂಲವಾಗುವುವು. ॥ ೬೨ ॥

ಪರೀಕ್ಷಿತನೇ! ಭೋಜ, ವೃಷ್ಣಿ, ಅಂಧಕ, ಮಧು, ಶೂರಸೇನ, ದಶಾರ್ಹ, ಕುರು, ಸೃಂಜಯ ಮತ್ತು ಪಾಂಡುವಂಶದ ವೀರರು ನಿರಂತರವಾಗಿ ಭಗವಂತನ ಲೀಲೆಗಳನ್ನು ಆದರದಿಂದ ಪ್ರಶಂಸಿಸುತ್ತಾರೆ. ॥ ೬೩ ॥ ಅವನ ಶ್ಯಾಮಲ ಶರೀರವು ಸರ್ವಾಂಗ ಸುಂದರವಾಗಿತ್ತು. ಅವನು ಆ ಮನೋಹರ ವಿಗ್ರಹದಿಂದ ಹಾಗೂ ತನ್ನ ಪ್ರೇಮತುಂಬಿದ ಮುಗುಳ್ನಗೆಯಿಂದ, ಮಧುರ ನೋಟದಿಂದ, ಪ್ರಾಸಾದಿಕ ವಚನಗಳಿಂದ ಮತ್ತು ಪರಾಕ್ರಮದಿಂದ ಕೂಡಿದ ಲೀಲೆಗಳಿಂದ ಇಡೀ ಮನುಷ್ಯಲೋಕವನ್ನು ಆನಂದ ಸಾಗರದಲ್ಲಿ ಮುಳುಗಿಸಿಬಿಟ್ಟನು. ॥ ೬೪ ॥ ಭಗವಂತನ ಮುಖ ಕಮಲದ ಶೋಭೆಯು ಅದ್ಭುತವಾಗಿತ್ತು. ಮಕರಾಕೃತಿಯ ಕುಂಡಲಗಳಿಂದ ಅವನ ಕಿವಿಗಳು ಕಮನೀಯವಾಗಿದ್ದವು. ಕುಂಡಲಗಳ ಕಾಂತಿಯಿಂದ ಕಪೋಲಗಳ ಕಾಂತಿಯು ಇನ್ನೂ ಝಗ-ಝಗಿಸುತ್ತಿತ್ತು. ಅವನು ಮುಗುಳ್ನಗೆಯಿಂದ ಕೂಡಿದ್ದ ಸರ್ವದಾ ಸಂತೋಷವನ್ನೇ ಉಂಟುಮಾಡುತ್ತಿದ್ದ ಶ್ರೀಕೃಷ್ಣನ ಮುಖಾರವಿಂದ ಮಾಧುರಿಯನ್ನು ಸ್ತ್ರೀ-ಪುರುಷರಾದಿಯಾಗಿ ಸಮಸ್ತ ಜನರು ಕಣ್ಣುಗಳೆಂಬ ಪಾತ್ರೆಯಿಂದ ಪಾನಮಾಡುತ್ತಿದ್ದರು. ಅವರಿಗೆ ಎಷ್ಟು ನೋಡಿದರೂ ತೃಪ್ತಿಯೇ ಆಗುತ್ತಿರಲಿಲ್ಲ. ಕಣ್ಣುಗಳನ್ನು ಮುಚ್ಚಿ ತೆರೆಯುವುದಕ್ಕೆ ನಿಯಾಮಕನಾದ ನಿಮಿಯನ್ನೇ ಅವರು ನಿಂದಿಸುತ್ತಿದ್ದರು. ॥ ೬೫ ॥

ಜಾತೋ ಗತಃ ಪಿತೃಗೃಹಾದ್ವ್ರಜಮೇಧಿತಾರ್ಥೋ
ಹತ್ವಾ ರಿಪೂನ್ಸುತಶತಾನಿ ಕೃತೋರುದಾರಃ ।
ಉತ್ಪಾದ್ಯ ತೇಷು ಪುರುಷಃ ಕ್ರತುಭಿಃ ಸಮೀಜೇ
ಆತ್ಮಾನಮಾತ್ಮನಿಗಮಂ ಪ್ರಥಯಂಜನೇಷು ॥ ೬೬ ॥

ಪೃಥ್ವ್ಯಾಃ ಸ ವೈ ಗುರುಭರಂ ಕ್ಷಪಯನ್ಕುರೂಣಾ-
ಮಂತಃ ಸಮುತ್ಥಕಲಿನಾ ಯುಧಿ ಭೂಪಚಮ್ವಃ ।
ದೃಷ್ಟ್ಯಾ ವಿಧೂಯ ವಿಜಯೇ ಜಯಮುದ್ವಿಘೋಷ್ಯ
ಪ್ರೋಚ್ಯೋದ್ಧವಾಯ ಚ ಪರಂ ಸಮಗಾತ್ಸ್ವಧಾಮ ॥ ೬೭ ॥

ಇಂತಹ ಜಗದಾನಂದಕರನಾದ ಭಗವಂತನು ಮಥುರೆಯ ವಸುದೇವನ ಮನೆಯಲ್ಲಿ ಅವತರಿಸಿದ್ದರೂ ಅವನು ಅಲ್ಲಿರದೆ ಗೋಕುಲದ ನಂದಮಹಾರಾಜನ ಮನೆಗೆ ಹೋದನು. ಅಲ್ಲಿ ಗೋಪರನ್ನೂ, ಗೋಪಿಯರನ್ನೂ, ಗೋವುಗಳನ್ನೂ ಸಂತೋಷ ಪಡಿಸಿ ಮಥುರೆಗೆ ಮರಳಿದನು. ವ್ರಜದಲ್ಲಿ, ಮಥುರೆಯಲ್ಲಿ, ದ್ವಾರಕೆಯಲ್ಲಿ ಇದ್ದು ಕೊಂಡು ಅನೇಕ ಶತ್ರುಗಳನ್ನು ಸಂಹರಿಸಿದನು. ಸಾವಿರಾರು ಕನ್ಯೆಯರನ್ನು ವಿವಾಹವಾದನು. ಅವರಲ್ಲಿ ಅಸಂಖ್ಯಾತ ಮಕ್ಕಳನ್ನು ಪಡೆದನು. ಜೊತೆಗೆ ಜನರಲ್ಲಿ ತನ್ನ ಸ್ವರೂಪವನ್ನು ಸಾಕ್ಷಾತ್ಕಾರ ಮಾಡಿಸುವಂತಹ ಶ್ರುತಿಗಳ ಮರ್ಯಾದೆಯನ್ನು ಸ್ಥಾಪಿಸಲಿಕ್ಕಾಗಿ ಅನೇಕ ಯಜ್ಞಗಳ ಮೂಲಕ ಸ್ವಯಂ ತನ್ನನ್ನೇ ತಾನು ಆರಾಧಿಸಿಕೊಂಡನು. ॥ ೬೬ ॥ ಕೌರವ-ಪಾಂಡವರಲ್ಲಿ ಉಂಟಾದ ಪರಸ್ಪರ ಕಲಹದಿಂದ ಅವನು ಪೃಥಿವಿಯ ಬಹಳಷ್ಟು ಭಾರವನ್ನು ಕಳೆದನು. ಕುರುಕ್ಷೇತ್ರದ ಯುದ್ಧದಲ್ಲಿ ತನ್ನ ದೃಷ್ಟಿಮಾತ್ರದಿಂದ ರಾಜರ ಅನೇಕ ಅಕ್ಷೌಹಿಣಿಗಳನ್ನು ಧ್ವಂಸಮಾಡಿ ಜಗತ್ತಿನಲ್ಲಿ ಅರ್ಜುನನ ವಿಜಯದುಂದುಭಿಯನ್ನು ಮೊಳಗಿಸಿದನು. ಮತ್ತೆ ಉದ್ಧವನಿಗೆ ಆತ್ಮತತ್ತ್ವವನ್ನು ಉಪದೇಶಿಸಿ ಕೊನೆಗೆ ತನ್ನ ಪರಮ ಧಾಮಕ್ಕೆ ತೆರಳಿದನು. ॥ ೬೭ ॥

ಇಪ್ಪತ್ತನಾಲ್ಕನೆಯ ಅಧ್ಯಾಯವು ಮುಗಿಯಿತು. ॥ ೨೪ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ನವಮ ಸ್ಕಂಧೇ
ಶ್ರೀಸೂರ್ಯಸೋಮವಂಶಾನುಕೀರ್ತನೇ ಯದುವಂಶಾನುಕೀರ್ತನಂ ನಾಮ ಚತುರ್ವಿಂಶೋಽಧ್ಯಾಯಃ ॥ ೨೪ ॥

ಒಂಭತ್ತನೆಯ ಸ್ಕಂಧವು ಸಂಪೂರ್ಣವಾಯಿತು.

॥ ಶ್ರೀರಾಧಾಕೃಷ್ಣಾಭ್ಯಾಂ ನಮಃ ॥

ಶ್ರೀಮದ್ಭಾಗವತಮಹಾಪುರಾಣ

ದಶಮ ಸ್ಕಂಧ (ಪೂರ್ವಾರ್ಧ)



ದೇವಕ್ಯಾ ಪಾಲಿತೋ ಗರ್ಭೇ ಲಾಲಿತೋಽಂಕೇ ಯಶೋದಯಾ ।
ಯಶೋದಯಾಯುತೋ ಬಾಲೋ ಗೋಪಾಲೋ ರಮತಾಂ ಹೃದಿ ॥

॥ ಓಂ ನಮೋ ಭಗವತೇ ವಾಸುದೇವಾಯ ॥

ಶ್ರೀಮದ್ಭಾಗವತಮಹಾಪುರಾಣಮ್

ದಶಮಃ ಸ್ಕಂಧಃ (ಪೂರ್ವಾರ್ಧ)

ಮೊದಲನೆಯ ಅಧ್ಯಾಯ

ಭಗವಂತನು ಭೂದೇವಿಯನ್ನು ಸಂತೈಸಿದುದು, ವಸುದೇವ ದೇವಕಿಯರ ವಿವಾಹ ಮತ್ತು ಕಂಸನು ದೇವಕಿಯ ಆರು ಪುತ್ರರನ್ನು ವಧಿಸಿದುದು

ರಾಜೋವಾಚ

ಕಥಿತೋ ವಂಶವಿಸ್ತಾರೋ ಭವತಾ ಸೋಮಸೂರ್ಯಯೋಃ ।
ರಾಜ್ಞಾಂ ಚೋಭಯವಂಶ್ಯಾನಾಂ ಚರಿತಂ ಪರಮಾದ್ಭುತಮ್ ॥ ೧ ॥

ಯದೋಶ್ಚ ಧರ್ಮಶೀಲಸ್ಯ ನಿತರಾಂ ಮುನಿಸತ್ತಮ ।
ತತ್ರಾಂಶೇನಾವತೀರ್ಣಸ್ಯ ವಿಷ್ಣೋರ್ವೀರ್ಯಾಣಿ ಶಂಸ ನಃ ॥ ೨ ॥

ಅವತೀರ್ಯ ಯದೋರ್ವಂಶೇ ಭಗವಾನ್ಭೂತಭಾವನಃ ।
ಕೃತವಾನ್ಯಾನಿ ವಿಶ್ವಾತ್ಮಾ ತಾನಿ ನೋ ವದ ವಿಸ್ತರಾತ್ ॥ ೩ ॥

ನಿವೃತ್ತತರ್ಷೈರುಪಗೀಯಮಾನಾದ್
ಭವೌಷಧಾಚ್ಛ್ರೋತ್ರಮನೋಭಿರಾಮಾತ್ ।
ಕ ಉತ್ತಮಶ್ಲೋಕಗುಣಾನುವಾದಾತ್
ಪುಮಾನ್ವಿರಜ್ಯೇತ ವಿನಾ ಪಶುಘ್ನಾತ್ ॥ ೪ ॥

ಪಿತಾಮಹಾ ಮೇ ಸಮರೇಽಮರಂಜಯೈ-
ರ್ದೇವವ್ರತಾದ್ಯಾತಿರಥೈಸ್ತಿಮಿಂಗಿಲೈಃ ।
ದುರತ್ಯಯಂ ಕೌರವಸೈನ್ಯಸಾಗರಂ
ಕೃತ್ವಾತರನ್ವತ್ಸಪದಂ ಸ್ಮ ಯತ್ಪ್ಲವಾಃ ॥ ೫ ॥

ದ್ರೌಣ್ಯಸ್ತ್ರವಿಪ್ಲುಷ್ಟಮಿದಂ ಮದಂಗಂ
ಸಂತಾನಬೀಜಂ ಕುರುಪಾಂಡವಾನಾಮ್ ।
ಜುಗೋಪ ಕುಕ್ಷಿಂಗತ ಆತ್ತಚಕ್ರೋ
ಮಾತುಶ್ಚ ಮೇ ಯಃ ಶರಣಂ ಗತಾಯಾಃ ॥ ೬ ॥

ಪರೀಕ್ಷಿದ್ರಾಜನು ಕೇಳಿದನು – ಎಲೈ ಮುನಿಶ್ರೇಷ್ಠರೇ! ತಾವು ಇಲ್ಲಿಯವರೆಗೆ ಚಂದ್ರವಂಶ ಮತ್ತು ಸೂರ್ಯವಂಶಗಳನ್ನು ವಿಸ್ತಾರವಾಗಿ ವರ್ಣಿಸಿದಿರಿ. ಎರಡೂ ವಂಶದ ರಾಜರುಗಳ ಅತ್ಯಂತ ಅದ್ಭುತವಾದ ಚರಿತ್ರೆಯನ್ನೂ ನಿರೂಪಿಸಿದಿರಿ. ಭಗವಂತನ ಪರಮ ಪ್ರೇಮಿಗಳಾದ ಮುನಿವರ್ಯರೇ! ತಾವು ಸ್ವಾಭಾವಿಕವಾದ ಧರ್ಮಶೀಲವಾದ ಯದುವಂಶವನ್ನೂ ವಿಶದವಾಗಿ ವರ್ಣಿಸಿದಿರಿ. ಈಗ ದಯಮಾಡಿ ಅದೇ ವಂಶದಲ್ಲಿ ತನ್ನ ಅಂಶವಾದ ಶ್ರೀಬಲರಾಮನೊಂದಿಗೆ ಅವತರಿಸಿದ ಭಗವಾನ್ ಶ್ರೀಕೃಷ್ಣನ ಪರಮ ಪವಿತ್ರ ಚರಿತ್ರೆಯನ್ನು ಹೇಳುವವರಾಗಿರಿ. ॥ ೧-೨ ॥ ಭಗವಾನ್ ಶ್ರೀಕೃಷ್ಣನು ಸಮಸ್ತ ಪ್ರಾಣಿಗಳ ಪ್ರಾಣಾಧಾರನೂ, ಸರ್ವಾತ್ಮಕನೂ ಆಗಿರುವನು. ಅವನು ಯದುವಂಶದಲ್ಲಿ ಅವತರಿಸಿ ಮಾಡಿದ ಎಲ್ಲ ಲೀಲೆಗಳನ್ನು ನಮಗೆ ವಿಸ್ತಾರವಾಗಿ ಶ್ರವಣ ಮಾಡಿಸಿರಿ. ॥ ೩ ॥ ಪುಣ್ಯಶ್ಲೋಕನಾದ ಆ ಪರಮಾತ್ಮನ ಕಲ್ಯಾಣ ಗುಣಗಳನ್ನು ಆಶಾಪಾಶಗಳನ್ನು ತೊರೆದ ನಿಷ್ಕಳಂಕರಾದ ಮಹಾತ್ಮರು ಎಷ್ಟು ಅನುಭವಿಸಿದರೂ ತೃಪ್ತಿಯಿಲ್ಲದೆ ಕೀರ್ತನೆ ಮಾಡುತ್ತಾ ಇರುತ್ತಾರೆ. ಅದು ಸಂಸಾರವ್ಯಾಧಿಗೆ ದಿವ್ಯೌಷಧವಾಗಿದೆ. ಕಿವಿಗಳಿಗೂ ಮನಸ್ಸಿಗೂ ಅಮೃತಪ್ರಾಯವಾಗಿದೆ. ಅದರ ಕುರಿತು ಯಾರಿಗೆ ತಾನೇ ಬೇಸರ ಉಂಟಾದೀತು? ಅದರಲ್ಲಿ ಬೇಸರ ಪಡಬೇಕಾದರೆ ಅವನು ಪಶುಘಾತಿಯಾದ ಕಟುಕನೇ ಆಗಿರಬೇಕು. ಅವನನ್ನು ಬಿಟ್ಟು ಬೇರೆ ಯಾರಿಗೂ ಅದರಲ್ಲಿ ವಿರಕ್ತಿ ಉಂಟಾಗುವುದಿಲ್ಲ. ॥ ೪ ॥ ಶ್ರೀಕೃಷ್ಣನಾದರೋ ನನಗೆ ಕುಲದೈವನೇ ಆಗಿರುವನು. ಈ ಭಗವಾನ್ ಶ್ರೀಕೃಷ್ಣನ ಚರಣರೂಪ ನೌಕೆಯಿಂದಲೇ ನನ್ನ ತಾತಂದಿರಾದ ಪಾಂಡವರು ಮಹಾಭಾರತ ಯುದ್ಧದಲ್ಲಿ ದೇವತೆಗಳನ್ನು ಜಯಿಸಬಲ್ಲ ಭೀಷ್ಮ ಪಿತಾಮಹರೇ ಆದಿ ಅತಿರಥಯೋಧರೆಂಬ ತಿಮಿಂಗಿಲಗಳಿಂದ ಕೂಡಿದ ದಾಟಲು ಅಸಾಧ್ಯವಾದ ಕೌರವ ಸೈನ್ಯವೆಂಬ ಮಹಾಸಾಗರವನ್ನು ಕರುವಿನ ಹೆಜ್ಜೆಯಷ್ಟು ಹೊಂಡವನ್ನು ದಾಟುವಂತೆ ಲೀಲಾಜಾಲವಾಗಿ ದಾಟಿಬಿಟ್ಟರು. ॥ ೫ ॥ ತನ್ನನ್ನು ಮರೆಹೊಕ್ಕ ನನ್ನ ತಾಯಿಯ ಗರ್ಭವನ್ನು ಒಳಹೊಕ್ಕು ಚಕ್ರಾಯುಧವನ್ನು ಧರಿಸಿ, ಅಶ್ವತ್ಥಾಮನು ಪ್ರಯೋಗಿಸಿದ ಬ್ರಹ್ಮಾಸ್ತ್ರದಿಂದ ಸುಟ್ಟುಹೋಗುವುದರಲ್ಲಿದ್ದ ಕೌರವ-ಪಾಂಡವ ವಂಶಗಳೆರಡರ ಬೀಜವಾಗಿದ್ದ ನಿಮ್ಮ ಮುಂದೆ ಇರುವ ಈ ದೇಹವನ್ನು ಕಾಪಾಡಿದವನೂ ಅವನೇ. ॥ ೬ ॥

ವೀರ್ಯಾಣಿ ತಸ್ಯಾಖಿಲದೇಹಭಾಜಾ-
ಮಂತರ್ಬಹಿಃ ಪೂರುಷಕಾಲರೂಪೈಃ ।
ಪ್ರಯಚ್ಛತೋ ಮೃತ್ಯುಮುತಾಮೃತಂ ಚ
ಮಾಯಾಮನುಷ್ಯಸ್ಯ ವದಸ್ವ ವಿದ್ವನ್ ॥ ೭ ॥

ಕೇವಲ ನನ್ನ ಮಾತಲ್ಲ, ಅವನು ಸಮಸ್ತ ಶರೀರಧಾರಿಗಳ ಒಳಗೆ ಅಂತರ್ಯಾಮಿ ಆತ್ಮರೂಪದಿಂದ ಇದ್ದು ಅಮೃತತ್ತ್ವವನ್ನು ಕರುಣಿಸುತ್ತಿರುವನು ಮತ್ತು ಹೊರಗೆ ಕಾಲರೂಪದಿಂದ ಇದ್ದು ಮೃತ್ಯುವನ್ನೊಡ್ಡುವನು.* ಮನುಷ್ಯರೂಪದಲ್ಲಿ ಕಾಣಿಸಿಕೊಳ್ಳುವುದು ಅವನ ಒಂದು ಲೀಲೆಯೇ ಆಗಿದೆ. ಅಂತಹವನ ಐಶ್ವರ್ಯ-ಮಾಧುರ್ಯಗಳಿಂದ ಕೂಡಿದ ಲೀಲೆಗಳನ್ನು ತಾವು ವರ್ಣಿಸಿರಿ.॥ ೭ ॥

ರೋಹಿಣ್ಯಾಸ್ತನಯಃ ಪ್ರೋಕ್ತೋ ರಾಮಃ ಸಂಕರ್ಷಣಸ್ತ್ವಯಾ ।
ದೇವಕ್ಯಾ ಗರ್ಭಸಂಬಂಧಃ ಕುತೋ ದೇಹಾಂತರಂ ವಿನಾ ॥ ೮ ॥

ಪೂಜ್ಯರೇ! ಸಂಕರ್ಷಣನೆಂದು ಪ್ರಸಿದ್ಧನಾದ ಬಲರಾಮನು ರೋಹಿಣೀದೇವಿಯ ಪುತ್ರನೆಂದು ನೀವೇ ಹೇಳಿದ್ದಿರಿ. ಬಳಿಕ ಇದೇ ಬಲರಾಮನನ್ನು ದೇವಕಿಯ ಪುತ್ರನೆಂದೂ ಹೇಳಿದಿರಿ. ಜನ್ಮಾಂತರವಿಲ್ಲದೆ ಒಂದೇ ಜನ್ಮದಲ್ಲಿ ಇಬ್ಬರು ತಾಯಂದಿರಿಗೆ ಮಗನಾಗಲು ಹೇಗೆ ಸಾಧ್ಯವಾಗುವುದು? ॥ ೮ ॥

ಕಸ್ಮಾನ್ಮುಕುಂದೋ ಭಗವಾನ್ಪಿತುರ್ಗೇಹಾದ್ವ್ರಜಂ ಗತಃ ।
ಕ್ವ ವಾಸಂ ಜ್ಞಾತಿಭಿಃ ಸಾರ್ಧಂ ಕೃತವಾನ್ಸಾತ್ವತಾಂ ಪತಿಃ ॥ ೯ ॥

ಅಸುರರಿಗೆ ಮುಕ್ತಿಯನ್ನು ಕರುಣಿಸುವವನೂ, ಭಕ್ತರಿಗೆ ಪ್ರೇಮವನ್ನು ವಿತರಿಸುವವನೂ ಆದ ಭಗವಾನ್ ಶ್ರೀಕೃಷ್ಣನು ತನ್ನ ವಾತ್ಸಲ್ಯ-ಸ್ನೇಹದಿಂದ ತುಂಬಿದ ತಂದೆಯ ಮನೆಯನ್ನು ಬಿಟ್ಟು ವ್ರಜಕ್ಕೆ ಏಕೆ ಹೋದನು? ಯದುವಂಶ ಶಿರೋಮಣಿ ಭಕ್ತವತ್ಸಲನಾದ ಪ್ರಭುವು ನಂದಾದಿ ಗೋಪ ಬಾಂಧವರೊಂದಿಗೆ ಎಲ್ಲೆಲ್ಲಿ ವಾಸಮಾಡಿದನು. ॥ ೯ ॥

ವ್ರಜೇ ವಸನ್ಕಿಮಕರೋನ್ಮಧುಪುರ್ಯಾಂ ಚ ಕೇಶವಃ ।
ಭ್ರಾತರಂ ಚಾವಧೀತ್ಕಂಸಂ ಮಾತುರದ್ಧಾತದರ್ಹಣಮ್ ॥ ೧೦ ॥

ಬ್ರಹ್ಮ-ರುದ್ರಾದಿಗಳಿಗೆ ನಿಯಾಮಕನಾದ ಕೇಶವನು ವ್ರಜದಲ್ಲಿ, ಮಥುರೆಯಲ್ಲಿ ನೆಲೆಸಿ ಯಾವ-ಯಾವ ಲೀಲೆಗಳನ್ನು ಮಾಡಿದನು? ಸ್ವಾಮಿ! ಅವನು ತನಗೆ ಸೋದರಮಾವನಾದ ಕಂಸನನ್ನು ತನ್ನ ಕೈಯ್ಯಾರೆ ಏಕೆ ಕೊಂದನು? ಏಕೆಂದರೆ, ಅವನು ತಾಯಿಗೆ ಸೋದರನಾಗಿದ್ದುದರಿಂದ ಶ್ರೀಕೃಷ್ಣನಿಂದ ವಧಿಸಲು ಅನರ್ಹನಾಗಿದ್ದನು.॥ ೧೦ ॥

ದೇಹಂ ಮಾನುಷಮಾಶ್ರಿತ್ಯ ಕತಿ ವರ್ಷಾಣಿ ವೃಷ್ಣಿಭಿಃ ।
ಯದುಪುರ್ಯಾಂ ಸಹಾವಾತ್ಸೀತ್ಪತ್ನ್ಯಃ ಕತ್ಯಭವನ್ಪ್ರಭೋಃ ॥ ೧೧ ॥

ಸಚ್ಚಿದಾನಂದ ಪ್ರಭುವು ಮನುಷ್ಯಶರೀರವನ್ನು ಆಶ್ರಯಿಸಿ ವೃಷ್ಣಿವಂಶೀಯರೊಡನೆ ಎಷ್ಟು ವರ್ಷಗಳವರೆಗೆ ವಾಸಿಸಿದನು? ಸರ್ವಶಕ್ತಿವಂತನಾದ ಶ್ರೀಕೃಷ್ಣನಿಗೆ ಎಷ್ಟು ಮಂದಿ ಪತ್ನಿಯರಿದ್ದರು? ॥ ೧೧ ॥

ಏತದನ್ಯಚ್ಚ ಸರ್ವಂ ಮೇ ಮುನೇ ಕೃಷ್ಣವಿಚೇಷ್ಟಿತಮ್ ।
ವಕ್ತುಮರ್ಹಸಿ ಸರ್ವಜ್ಞ ಶ್ರದ್ದಧಾನಾಯ ವಿಸ್ತೃತಮ್ ॥ ೧೨ ॥

ಮುನಿಶ್ರೇಷ್ಠರೇ! ನಾನು ಕೇಳಿರುವ ಎಲ್ಲ ಪ್ರಶ್ನೆಗಳಿಗೂ ತಾವು ದಯಮಾಡಿ ಉತ್ತರಿಸಬೇಕು. ನಾನು ಪ್ರಶ್ನಿಸದೇ ಇರುವ ಶ್ರೀಕೃಷ್ಣನ ಲೀಲಾವಿನೋದಗಳನ್ನೂ ವಿಸ್ತಾರವಾಗಿ ತಾವು ಹೇಳಿರಿ. ಏಕೆಂದರೆ, ತಾವು ಎಲ್ಲವನ್ನೂ ಬಲ್ಲವರಾಗಿದ್ದೀರಿ. ನಾನು ಶ್ರದ್ಧೆಯಿಂದ ಅದನ್ನು ಕೇಳಬಯಸುತ್ತೇನೆ. ॥ ೧೨ ॥

ನೈಷಾತಿದುಃಸಹಾ ಕ್ಷುನ್ಮಾಂ ತ್ಯಕ್ತೋದಮಪಿ ಬಾಧತೇ ।
ಪಿಬಂತಂ ತ್ವನ್ಮುಖಾಂಭೋಜಚ್ಯುತಂ ಹರಿಕಥಾಮೃತಮ್ ॥ ೧೩ ॥

ಪೂಜ್ಯರೇ! ಅನ್ನದ ಮಾತಿರಲಿ, ನಾನು ಜಲವನ್ನೂ ತ್ಯಜಿಸಿ ಬಿಟ್ಟಿರುವೆನು. ಹೀಗಿದ್ದರೂ ಸಹಿಸಲು ಅಶಕ್ಯವಾದ ಹಸಿವು-ಬಾಯಾರಿಕೆಗಳು (ಆ ಕಾರಣದಿಂದಲೇ ನಾನು ಮುನಿಯ ಕತ್ತಿನಲ್ಲಿ ಸತ್ತ ಸರ್ಪವನ್ನು ಹಾಕಿದ ಅನ್ಯಾಯವನ್ನು ಮಾಡಿದ್ದೆ) ನನಗೆ ಬಾಧಿಸುವುದಿಲ್ಲ. ಏಕೆಂದರೆ, ತಮ್ಮ ಮುಖಾರವಿಂದದಿಂದ ಸ್ರವಿಸುತ್ತಿರುವ ಹರಿಕಥಾಮೃತವನ್ನು ಪಾನಮಾಡುತ್ತಿರುವೆನು. ॥ ೧೩ ॥

* ಸಮಸ್ತ ದೇಹಧಾರಿಗಳ ಅಂತಃಕರಣದಲ್ಲಿ ಅಂತರ್ಯಾಮಿಯಾಗಿ ನೆಲೆಸಿರುವ ಭಗವಂತನು ಅವರ ಜೀವನಕ್ಕೆ ಕಾರಣನಾಗಿರುವನು ಹಾಗೂ ಹೊರಗೆ ಕಾಲರೂಪದಿಂದಿದ್ದು ಅವನೇ ಅವರನ್ನು ನಾಶಮಾಡುತ್ತಾನೆ. ಆದ್ದರಿಂದ ಆತ್ಮಜ್ಞಾನಿಗಳಾದವರು ಅಂತರ್ದೃಷ್ಟಿಯಿಂದ ಆ ಅಂತರ್ಯಾಮಿಯನ್ನು ಉಪಾಸಿಸಿ ಮೋಕ್ಷರೂಪ ಅಮರ ಪದವನ್ನು ಹೊಂದುವರು. ವಿಷಯ ಪರಾಯಣ ಅಜ್ಞಾನಿಗಳು ಬಾಹ್ಯದೃಷ್ಟಿಯಿಂದ ವಿಷಯಚಿಂತನೆಯಲ್ಲೇ ತೊಡಗಿರುವವರು ಜನ್ಮ-ಮರಣರೂಪೀ ಮೃತ್ಯುವಿಗೆ ತುತ್ತಾಗುತ್ತಾರೆ.

ಸೂತ ಉವಾಚ

ಏವಂ ನಿಶಮ್ಯ ಭೃಗುನಂದನ ಸಾಧುವಾದಂ
ವೈಯಾಸಕಿಃ ಸ ಭಗವಾನಥ ವಿಷ್ಣುರಾತಮ್ ।
ಪ್ರತ್ಯರ್ಚ್ಯ ಕೃಷ್ಣಚರಿತಂ ಕಲಿಕಲ್ಮಷಘ್ನಂ
ವ್ಯಾಹರ್ತುಮಾರಭತ ಭಾಗವತಪ್ರಧಾನಃ ॥ ೧೪ ॥

ಸೂತ ಪುರಾಣಿಕರು ಹೇಳುತ್ತಾರೆ – ಶೌನಕಾದಿ ಋಷಿಗಳೇ! ಭಗವಂತನ ಪ್ರೇಮಿಗಳಲ್ಲಿ ಅಗ್ರಗಣ್ಯರೂ, ಸರ್ವಜ್ಞರೂ ಆದ ಶ್ರೀಶುಕಮಹಾಮುನಿಗಳು ಪರೀಕ್ಷಿದ್ರಾಜನ ಇಂತಹ ಸಮೀಚೀನವಾದ ಪ್ರಶ್ನೆಯನ್ನು ಕೇಳಿ (ಸಂತರ ಸಭೆಯಲ್ಲಿ ಭಗವಂತನ ಲೀಲೆಗಳ ವರ್ಣನೆಯ ಉದ್ದೇಶವಿರುತ್ತದೆ.) ಅವನನ್ನು ಅಭಿನಂದಿಸಿ ಸಮಸ್ತ ಕಲಿಮಲದೋಷಗಳನ್ನು ಪೂರ್ಣವಾಗಿ ತೊಳೆದು ಹಾಕುವಂತಹ ಭಗವಾನ್ ಶ್ರೀಕೃಷ್ಣನ ಕರ್ಣಾನಂದಕರವಾದ ಲೀಲೆಗಳನ್ನು ವರ್ಣಿಸಲು ಪ್ರಾರಂಭಿಸಿದರು. ॥ ೧೪ ॥

ಶ್ರೀಶುಕ ಉವಾಚ

ಸಮ್ಯಗ್ವ್ಯವಸಿತಾ ಬುದ್ಧಿಸ್ತವ ರಾಜರ್ಷಿಸತ್ತಮ ।
ವಾಸುದೇವಕಥಾಯಾಂ ತೇ ಯಜ್ಜಾತಾ ನೈಷ್ಠಿಕೀ ರತಿಃ ॥ ೧೫ ॥

ವಾಸುದೇವಕಥಾಪ್ರಶ್ನಃ ಪುರುಷಾಂಸ್ತ್ರೀನ್ಪುನಾತಿ ಹಿ ।
ವಕ್ತಾರಂ ಪೃಚ್ಛಕಂ ಶ್ರೋತ್ರೄಂಸ್ತತ್ಪಾದಸಲಿಲಂ ಯಥಾ ॥ ೧೬ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಭಗವಂತನ ಲೀಲಾಕಥೆಗಳ ರಸಿಕನಾದ ರಾಜರ್ಷಿ ಶ್ರೇಷ್ಠನೇ! ನೀನು ಭಗವತ್ಕಥೆಯನ್ನು ಕೇಳಲು ಮಾಡಿರುವ ನಿಶ್ಚಯವು ಸುಂದರವೂ, ಆದರಣೀಯವೂ ಆಗಿದೆ. ಏಕೆಂದರೆ, ಎಲ್ಲರ ಹೃದಯದಲ್ಲಿ ಆರಾಧ್ಯಮೂರ್ತಿಯಾಗಿ ನೆಲೆಸಿರುವ ಶ್ರೀವಾಸುದೇವನ ಲೀಲೆಗಳ ಕಥಾಶ್ರವಣ ಮಾಡುವುದರಲ್ಲಿ ನಿನಗೆ ಸಹಜವಾದ ಸುದೃಢಪ್ರೀತಿ ಉಂಟಾಗಿದೆಯಲ್ಲ! ॥ ೧೫ ॥ ವಿಷ್ಣುಪಾದೋದ್ಭವೆಯಾದ ಗಂಗಾದೇವಿಯ ಪವಿತ್ರತೀರ್ಥವು ಮೂರು ಲೋಕಗಳನ್ನು ಪಾವನಗೊಳಿಸುವಂತೆ ಶ್ರೀವಾಸುದೇವನ ಕಥೆಗಳ ಸಂಬಂಧವಾಗಿ ಕೇಳುವ ಪ್ರಶ್ನೆಯು ಪ್ರಶ್ನೆಮಾಡುವವನು, ಪ್ರವಚನಮಾಡುವವನು ಮತ್ತು ಕೇಳುವವನು ಹೀಗೆ ಮೂವರನ್ನೂ ಪವಿತ್ರಗೊಳಿಸುತ್ತದೆ. ॥ ೧೬ ॥

ಭೂಮಿರ್ದೃಪ್ತನೃಪವ್ಯಾಜದೈತ್ಯಾನೀಕಶತಾಯುತೈಃ ।
ಆಕ್ರಾಂತಾ ಭೂರಿಭಾರೇಣ ಬ್ರಹ್ಮಾಣಂ ಶರಣಂ ಯಯೌ ॥ ೧೭ ॥

ಗೌರ್ಭೂತ್ವಾಶ್ರುಮುಖೀ ಖಿನ್ನಾ ಕ್ರಂದಂತೀ ಕರುಣಂ ವಿಭೋಃ ।
ಉಪಸ್ಥಿತಾಂತಿಕೇ ತಸ್ಮೈ ವ್ಯಸನಂ ಸ್ವಮವೋಚತ ॥ ೧೮ ॥

ಬ್ರಹ್ಮಾ ತದುಪಧಾರ್ಯಾಥ ಸಹ ದೇವೈಸ್ತಯಾ ಸಹ ।
ಜಗಾಮ ಸತ್ರಿನಯನಸ್ತೀರಂ ಕ್ಷೀರಪಯೋನಿಧೇಃ ॥ ೧೯ ॥

ತತ್ರ ಗತ್ವಾ ಜಗನ್ನಾಥಂ ದೇವದೇವಂ ವೃಷಾಕಪಿಮ್ ।
ಪುರುಷಂ ಪುರುಷಸೂಕ್ತೇನ ಉಪತಸ್ಥೇ ಸಮಾಹಿತಃ ॥ ೨೦ ॥

ಪರೀಕ್ಷಿತನೇ! ಹಿಂದೊಮ್ಮೆ ರಾಜರ ರೂಪದಲ್ಲಿ ದರ್ಪಿಷ್ಠರಾಗಿದ್ದ, ಅಧರ್ಮನಿಷ್ಠರಾಗಿದ್ದ ಸಾವಿರಾರು ಲಕ್ಷ-ಲಕ್ಷ ದೈತ್ಯರು ಭೂಮಂಡಲವನ್ನು ಆಕ್ರಮಿಸಿಕೊಂಡುಬಿಟ್ಟಿದ್ದರು. ಭೂಭಾರದಿಂದ ತತ್ತರಿಸಿದ ಭೂದೇವಿಯು ರಕ್ಷಣೆಗಾಗಿ ಬ್ರಹ್ಮದೇವರನ್ನು ಮೊರೆಹೊಕ್ಕಳು. ॥ ೧೭ ॥ ಆಗ ಭೂದೇವಿಯು ಗೋವಿನ ರೂಪವನ್ನು ಧರಿಸಿ ಬ್ರಹ್ಮನ ಬಳಿಗೆ ಬಂದಿದ್ದಳು. ಕಣ್ಣೀರನ್ನು ಸುರಿಸುತ್ತಾ ಅದು ಮುಖದ ಮೇಲೆಲ್ಲ ಹರಿಯುತ್ತಿತ್ತು. ಶರೀರವು ಕೃಶವಾಗಿದ್ದು ಆವಳು ಅತ್ಯಂತ ಖಿನ್ನಳಾಗಿ ಕರುಣಾಜನಕ ರೀತಿಯಲ್ಲಿ ಹಂಬಲಿಸುತ್ತಿದ್ದಳು. ಬ್ರಹ್ಮನ ಬಳಿಗೆ ಬಂದು ಆಕೆಯು ತನ್ನೆಲ್ಲ ಕಷ್ಟಕಾರ್ಪಣ್ಯಗಳನ್ನು ಹೇಳಿಕೊಂಡಳು. ॥ ೧೮ ॥ ಬ್ರಹ್ಮದೇವರು ತುಂಬಾ ಸಹಾನುಭೂತಿಯಿಂದ ಆಕೆಯ ದುಃಖತುಂಬಿದ ಕಥೆಯನ್ನು ಕೇಳಿದರು. ಬಳಿಕ ಅವರು ಭಗವಾನ್ ಶಂಕರ, ಇಂದ್ರಾದಿದೇವತೆಗಳು, ಗೋರೂಪದಲ್ಲಿದ್ದ ಭೂದೇವಿ ಇವರನ್ನೆಲ್ಲ ಜೊತೆಗೆ ಸೇರಿಸಿಕೊಂಡು ಕ್ಷೀರಸಾಗರದ ತಡಿಗೆ ಹೋದರು. ॥ ೧೯ ॥ ಚತುರ್ಮುಖ ಬ್ರಹ್ಮದೇವರು ದೇವತೆಗಳೊಡನೆ ಕ್ಷೀರಸಮುದ್ರದ ತೀರಕ್ಕೆ ಹೋಗಿ ಸಮಸ್ತ ಜಗತ್ತಿಗೆ ಸ್ವಾಮಿಯಾದ, ದೇವದೇವನಾದ, ವೃಷಾಕಪಿಯಾದ, ಪರಮಪುರುಷನಾದ ಶ್ರೀಮನ್ನಾರಾಯಣನನ್ನು ಏಕಾಗ್ರಚಿತ್ತನಾಗಿ ಪುರುಷಸೂಕ್ತ ಮಂತ್ರಗಳಿಂದ ಸ್ತೋತ್ರ ಮಾಡಿದರು. ಸ್ತುತಿಸುತ್ತಿರುವಂತೆಯೇ, ಬ್ರಹ್ಮದೇವರು ಸಮಾಧಿಸ್ಥರಾದರು. ॥ ೨೦ ॥

ಗಿರಂ ಸಮಾಧೌ ಗಗನೇ ಸಮೀರಿತಾಂ
ನಿಶಮ್ಯ ವೇಧಾಸ್ತ್ರಿದಶಾನುವಾಚ ಹ ।
ಗಾಂ ಪೌರುಷೀಂ ಮೇ ಶೃಣುತಾಮರಾಃ ಪುನ-
ರ್ವಿಧೀಯತಾಮಾಶು ತಥೈವ ಮಾ ಚಿರಮ್ ॥ ೨೧ ॥

ಅವರು ಸಮಾಧಿಸ್ಥಿತಿಯಲ್ಲೇ ಆಕಾಶದಲ್ಲಿ ಸುಸ್ಪಷ್ಟವಾಗಿ ಕೇಳಿಬಂದ ದಿವ್ಯವಾಣಿಯನ್ನು ಆಲಿಸಿ, ದೇವತೆಗಳಿಗೆ ಇಂತೆಂದರು – ದೇವತೆಗಳಿರಾ! ನಾನು ಭಗವಂತನ ವಾಣಿಯನ್ನು ಕೇಳಿದೆನು. ನೀವೆಲ್ಲರೂ ನನ್ನಿಂದ ಕೇಳಿ ಅದರಂತೆ ನಡೆಯಿರಿ. ವಿಳಂಬಮಾಡದೆ ಕಾರ್ಯಮಾಡಿರಿ. ॥ ೨೧ ॥

ಪುರೈವ ಪುಂಸಾವಧೃತೋ ಧರಾಜ್ವರೋ
ಭವದ್ಭಿರಂಶೈರ್ಯದುಷೂಪಜನ್ಯತಾಮ್ ।
ಸ ಯಾವದುರ್ವ್ಯಾ ಭರಮೀಶ್ವರೇಶ್ವರಃ
ಸ್ವಕಾಲಶಕ್ತ್ಯಾ ಕ್ಷಪಯಂಶ್ಚರೇದ್ಭುವಿ ॥ ೨೨ ॥

ವಸುದೇವಗೃಹೇ ಸಾಕ್ಷಾದ್ಭಗವಾನ್ಪುರುಷಃ ಪರಃ ।
ಜನಿಷ್ಯತೇ ತತ್ಪ್ರಿಯಾರ್ಥಂ ಸಂಭವಂತು ಸುರಸ್ತ್ರಿಯಃ ॥ ೨೩ ॥

ವಾಸುದೇವಕಲಾನಂತಃ ಸಹಸ್ರವದನಃ ಸ್ವರಾಟ್ ।
ಅಗ್ರತೋ ಭವಿತಾ ದೇವೋ ಹರೇಃ ಪ್ರಿಯಚಿಕೀರ್ಷಯಾ ॥ ೨೪ ॥

ವಿಷ್ಣೋರ್ಮಾಯಾ ಭಗವತೀ ಯಯಾ ಸಮ್ಮೋಹಿತಂ ಜಗತ್ ।
ಆದಿಷ್ಟಾ ಪ್ರಭುಣಾಂಶೇನ ಕಾರ್ಯಾರ್ಥೇ ಸಂಭವಿಷ್ಯತಿ ॥ ೨೫ ॥

ಶ್ರೀಶುಕ ಉವಾಚ

ಇತ್ಯಾದಿಶ್ಯಾಮರಗಣಾನ್ಪ್ರಜಾಪತಿಪತಿರ್ವಿಭುಃ ।
ಆಶ್ವಾಸ್ಯ ಚ ಮಹೀಂ ಗೀರ್ಭಿಃ ಸ್ವಧಾಮ ಪರಮಂ ಯಯೌ ॥ ೨೬ ॥

ಶೂರಸೇನೋ ಯದುಪತಿರ್ಮಥುರಾಮಾವಸನ್ಪುರೀಮ್ ।
ಮಾಥುರಾನ್ ಶೂರಸೇನಾಂಶ್ಚ ವಿಷಯಾನ್ಬುಭುಜೇ ಪುರಾ ॥ ೨೭ ॥

ರಾಜಧಾನೀ ತತಃ ಸಾಭೂತ್ಸರ್ವಯಾದವಭೂಭುಜಾಮ್ ।
ಮಥುರಾ ಭಗವಾನ್ಯತ್ರ ನಿತ್ಯಂ ಸಂನಿಹಿತೋ ಹರಿಃ ॥ ೨೮ ॥

ತಸ್ಯಾಂ ತು ಕರ್ಹಿಚಿಚ್ಛೌರಿರ್ವಸುದೇವಃ ಕೃತೋದ್ವಹಃ ।
ದೇವಕ್ಯಾ ಸೂರ್ಯಯಾ ಸಾರ್ಧಂ ಪ್ರಯಾಣೇ ರಥಮಾರುಹತ್ ॥ ೨೯ ॥

ಉಗ್ರಸೇನಸುತಃ ಕಂಸಃ ಸ್ವಸುಃ ಪ್ರಿಯಚಿಕೀರ್ಷಯಾ ।
ರಶ್ಮೀನ್ಹಯಾನಾಂ ಜಗ್ರಾಹ ರೌಕ್ಮೈ ರಥಶತೈರ್ವೃತಃ ॥ ೩೦ ॥

ಚತುಃಶತಂ ಪಾರಿಬರ್ಹಂ ಗಜಾನಾಂ ಹೇಮಮಾಲಿನಾಮ್ ।
ಅಶ್ವಾನಾಮಯುತಂ ಸಾರ್ಧಂ ರಥಾನಾಂ ಚ ತ್ರಿಷಟ್ಶತಮ್ ॥ ೩೧ ॥

ದಾಸೀನಾಂ ಸುಕುಮಾರೀಣಾಂ ದ್ವೇ ಶತೇ ಸಮಲಂಕೃತೇ ।
ದುಹಿತ್ರೇ ದೇವಕಃ ಪ್ರಾದಾದ್ಯಾನೇ ದುಹಿತೃವತ್ಸಲಃ ॥ ೩೨ ॥

ಶಂಖತೂರ್ಯಮೃದಂಗಾಶ್ಚ ನೇದುರ್ದುಂದುಭಯಃ ಸಮಮ್ ।
ಪ್ರಯಾಣಪ್ರಕ್ರಮೇ ತಾವದ್ವರವಧ್ವೋಃ ಸುಮಂಗಲಮ್ ॥ ೩೩ ॥

ಭೂದೇವಿಗೆ ಒದಗಿದ ಕಷ್ಟವು ಈ ಹಿಂದೆಯೇ ಪರಮಪುರುಷನಿಗೆ ತಿಳಿದಿದೆ. ಅವನು ಈಶ್ವರರಿಗೂ ಈಶ್ವರನಾಗಿರುವನು. ತನ್ನ ಕಾಲಶಕ್ತಿಯ ಮೂಲಕ ಅವತರಿಸಿ ಭೂಭಾರವನ್ನು ಹರಿಸುತ್ತಾ ಪೃಥಿವಿಯಲ್ಲಿ ಲೀಲೆಗಳನ್ನು ನಡೆಸುವಾಗ ನೀವುಗಳೂ ಕೂಡ ತಮ್ಮ-ತಮ್ಮ ಅಂಶಗಳೊಡನೆ ಯದುಕುಲದಲ್ಲಿ ಹುಟ್ಟಿ ಅವನ ಲೀಲೆಯಲ್ಲಿ ಸಹಯೋಗಿಗಳಾಗಿರಿ. ॥ ೨೨ ॥ ವಸುದೇವನ ಮನೆಯಲ್ಲಿ ಸಾಕ್ಷಾತ್ ಪರಮಪುರುಷನಾದ ಶ್ರೀಹರಿಯು ಪ್ರಕಟಗೊಳ್ಳುವನು. ಅವನಿಗೆ ಪ್ರಿಯವನ್ನುಂಟುಮಾಡುವ ಸಲುವಾಗಿ ದೇವಸ್ತ್ರೀಯರೂ ಯದುವಂಶದಲ್ಲಿ ಅವತರಿಸಲಿ. ॥ ೨೩ ॥ ಅನಂತನಾದ ವಾಸುದೇವನ ಕಲೆಯಿಂದ ಪ್ರಾದುರ್ಭೂತನಾಗಿ ಅನಂತನೇ ಆಗಿರುವ, ಸಹಸ್ರಮುಖನಾದ, ಸ್ವಯಂಪ್ರಕಾಶನಾದ ಶೇಷನು ಶ್ರೀಹರಿಗೆ ಪ್ರಿಯವನ್ನುಂಟುಮಾಡಲು ಯದುವಂಶದಲ್ಲಿ ಶ್ರೀಹರಿಯ ಅಗ್ರಜನಾಗಿ ಅವತರಿಸುವನು. ॥ ೨೪ ॥ ಜಗತ್ತನ್ನೇ ವಿಮೋಹಗೊಳಿಸುವ ಭಗವತಿ ವಿಷ್ಣುಮಾಯೆಯೂ ಪ್ರಭುವಿನಿಂದ ಆಜ್ಞಪ್ತಳಾಗಿ ಅವನ ಕಾರ್ಯಾರ್ಥವಾಗಿ ಅವನ ಅಂಶರೂಪದಿಂದಲೇ ಭುವಿಯಲ್ಲಿ ಅವತರಿಸುವಳು. ॥ ೨೫ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ! ಪ್ರಜಾಪತಿಗಳಿಗೆ ಸ್ವಾಮಿಯಾದ ಬ್ರಹ್ಮದೇವರು ದೇವತೆಗಳಿಗೆ ಹೀಗೆ ಆದೇಶವನ್ನು ನೀಡಿ, ಭೂದೇವಿಯನ್ನು ಸಾಂತ್ವನಗೊಳಿಸಿ ಶ್ರೇಷ್ಠವಾದ ತಮ್ಮ ಸತ್ಯಲೋಕಕ್ಕೆ ಹೊರಟುಹೋದರು. ॥ ೨೬ ॥ ಹಿಂದೆ ಯದುವಂಶದಲ್ಲಿ ಶೂರಸೇನನೆಂಬ ರಾಜನಿದ್ದನು. ಅವನು ಮಥುರಾಪಟ್ಟಣದಲ್ಲಿದ್ದು ಮಥುರಾಮಂಡಲವನ್ನೂ, ಶೂರಸೇನ ಮಂಡಲವನ್ನೂ ಆಳುತ್ತಿದ್ದನು. ॥ ೨೭ ॥ ನಿತ್ಯನಿರಂತರ ಭಗವಾನ್ ಶ್ರೀಹರಿಯ ಸಾನ್ನಿಧ್ಯವನ್ನು ಹೊಂದಿದ್ದ ಆ ಮಥುರಾಪಟ್ಟಣವೇ ಸಮಸ್ತ ಯದುವಂಶೀಯ ರಾಜರಿಗೂ ರಾಜಧಾನಿಯಾಗಿತ್ತು. ॥ ೨೮ ॥ ಒಮ್ಮೆ ಮಥುರೆಯಲ್ಲಿ ಶೂರನ ಪುತ್ರನಾದ ವಸುದೇವನು ವಿವಾಹಮಾಡಿಕೊಂಡು ನೂತನ ವಧುವಾದ ದೇವಕಿಯೊಡನೆ ಮನೆಗೆ ಹೋಗಲು ರಥಾರೂಢನಾದನು. ॥ ೨೯ ॥ ಉಗ್ರಸೇನನ ಮಗನಾದ ಕಂಸನು ತನ್ನ ತಂಗಿಯಾದ ದೇವಕಿಗೆ ಸಂತೋಷವನ್ನುಂಟುಮಾಡಲು ಅವರ ರಥದ ವಾಘೆಯನ್ನು ತಾನೇ ಹಿಡಿದುಕೊಂಡು ರಥವನ್ನು ನಡೆಸತೊಡಗಿದನು. ಆ ದಿವ್ಯರಥವು ನೂರಾರು ಸುವರ್ಣಮಯವಾದ ರಥಗಳಿಂದ ಸಮಾವೃತವಾಗಿತ್ತು. ॥ ೩೦ ॥ ಮಗಳಲ್ಲಿ ವಿಶೇಷವಾದ ಅಕ್ಕರೆಯನ್ನು ಹೊಂದಿದ್ದ ದೇವಕನು ದೇವಕಿಗೆ ಬಳುವಳಿಯಾಗಿ ಚಿನ್ನದ ಹಾರಗಳಿಂದ ಅಲಂಕೃತವಾದ ನಾಲ್ಕುನೂರು ಆನೆಗಳೂ, ಹದಿನೈದುಸಾವಿರ ಕುದುರೆಗಳೂ, ಹದಿನೆಂಟುನೂರು ರಥಗಳೂ ಹಾಗೂ ಸುಂದರವಾದ ವಸ್ತ್ರಾಭೂಷಣಗಳಿಂದ ಅಲಂಕೃತರಾದ ಇನ್ನೂರು ಸುಂದರ ಸುಕುಮಾರಿ ದಾಸಿಯರನ್ನೂ ಕೊಟ್ಟನು. ॥ ೩೧-೩೨ ॥ ಆ ವಧೂವರರ ಪ್ರಯಾಣಕಾಲದಲ್ಲಿ ಮಂಗಲಾರ್ಥವಾಗಿ ಶಂಖ, ಭೇರಿ, ಮೃದಂಗ, ದುಂದುಭಿಗಳು ಏಕಕಾಲದಲ್ಲಿ ಮೊಳಗಿದುವು. ॥ ೩೩ ॥

ಪಥಿ ಪ್ರಗ್ರಹಿಣಂ ಕಂಸಮಾಭಾಷ್ಯಾಹಾಶರೀರವಾಕ್ ।
ಅಸ್ಯಾಸ್ತ್ವಾಮಷ್ಟಮೋ ಗರ್ಭೋ ಹಂತಾ ಯಾಂ ವಹಸೇಽಬುಧ ॥ ೩೪ ॥

ಇತ್ಯುಕ್ತಃ ಸ ಖಲಃ ಪಾಪೋ ಭೋಜಾನಾಂ ಕುಲಪಾಂಸನಃ ।
ಭಗಿನೀಂ ಹಂತುಮಾರಬ್ಧಃ ಖಡ್ಗಪಾಣಿಃ ಕಚೇಽಗ್ರಹೀತ್ ॥ ೩೫ ॥

ತಂ ಜುಗುಪ್ಸಿತಕರ್ಮಾಣಂ ನೃಶಂಸಂ ನಿರಪತ್ರಪಮ್ ।
ವಸುದೇವೋ ಮಹಾಭಾಗ ಉವಾಚ ಪರಿಸಾಂತ್ವಯನ್ ॥ ೩೬ ॥

ವಸುದೇವ ಉವಾಚ

ಶ್ಲಾಘನೀಯಗುಣಃ ಶೂರೈರ್ಭವಾನ್ಭೋಜಯಶಸ್ಕರಃ ।
ಸ ಕಥಂ ಭಗಿನೀಂ ಹನ್ಯಾತ್ ಸ್ತ್ರಿಯಮುದ್ವಾಹಪರ್ವಣಿ ॥ ೩೭ ॥

ಮೃತ್ಯುರ್ಜನ್ಮವತಾಂ ವೀರ ದೇಹೇನ ಸಹ ಜಾಯತೇ ।
ಅದ್ಯ ವಾಬ್ದಶತಾಂತೇ ವಾ ಮೃತ್ಯುರ್ವೈ ಪ್ರಾಣಿನಾಂ ಧ್ರುವಃ ॥ ೩೮ ॥

ದೇಹೇ ಪಂಚತ್ವಮಾಪನ್ನೇ ದೇಹೀ ಕರ್ಮಾನುಗೋಽವಶಃ ।
ದೇಹಾಂತರಮನುಪ್ರಾಪ್ಯ ಪ್ರಾಕ್ತನಂ ತ್ಯಜತೇ ವಪುಃ ॥ ೩೯ ॥

ವ್ರಜಂಸ್ತಿಷ್ಠನ್ಪದೈಕೇನ ಯಥೈವೈಕೇನ ಗಚ್ಛತಿ ।
ಯಥಾ ತೃಣಜಲೂಕೈವಂ ದೇಹೀ ಕರ್ಮಗತಿಂ ಗತಃ ॥ ೪೦ ॥

ಸ್ವಪ್ನೇ ಯಥಾ ಪಶ್ಯತಿ ದೇಹಮೀದೃಶಂ
ಮನೋರಥೇನಾಭಿನಿವಿಷ್ಟಚೇತನಃ ।
ದೃಷ್ಟಶ್ರುತಾಭ್ಯಾಂ ಮನಸಾನುಚಿಂತಯನ್
ಪ್ರಪದ್ಯತೇ ತತ್ಕಿಮಪಿ ಹ್ಯಪಸ್ಮೃತಿಃ ॥ ೪೧ ॥

ಹೀಗೆ ಬಾಜಾಬಜಂತ್ರಿಗಳೊಂದಿಗೆ ಸಂಭ್ರಮದಿಂದ ಕಂಸನು ರಥವನ್ನು ನಡೆಸುತ್ತಿರುವಾಗ ಅವನನ್ನು ಸಂಬೋಧಿಸಿ ಆಕಾಶವಾಣಿಯೊಂದು ಇಂತು ನುಡಿಯಿತು – "ಎಲೈ ಮೂರ್ಖನೇ! ಈಗ ನೀನು ಸಂಭ್ರಮದಿಂದ ಕರೆದೊಯ್ಯುತ್ತಿರುವ ನಿನ್ನ ಈ ತಂಗಿಯ ಎಂಟನೆಯ ಗರ್ಭದಲ್ಲಿ ಹುಟ್ಟುವ ಶಿಶುವು ನಿನಗೆ ಮೃತ್ಯುವಾಗಲಿದೆ." ॥ ೩೪ ॥ ಕಂಸನು ಮಹಾಪಾಪಿಯಾಗಿದ್ದನು. ಅವನ ದುಷ್ಟತನಕ್ಕೆ ಎಲ್ಲೆಯೇ ಇರಲಿಲ್ಲ. ಅವನು ಭೋಜವಂಶಕ್ಕೆ ಕಲಂಕಪ್ರಾಯನಾಗಿದ್ದನು. ಆಕಾಶವಾಣಿಯನ್ನು ಕೇಳುತ್ತಲೇ ಖಡ್ಗವನ್ನೆತ್ತಿಕೊಂಡು ತಂಗಿಯ ಮುಡಿಯನ್ನು ಹಿಡಿದು ಅವಳನ್ನು ಕೊಲ್ಲಲು ಸಿದ್ಧನಾದನು. ॥ ೩೫ ॥ ಅವನು ಅತ್ಯಂತ ಕ್ರೂರನಾಗಿದ್ದು ಪಾಪಕರ್ಮಗಳನ್ನು ಮಾಡಲು ನಿರ್ಲಜ್ಜನೂ ಆಗಿದ್ದನು. ಅವನ ಈ ಕೃತ್ಯವನ್ನು ನೋಡಿ ಮಹಾನುಭಾವನಾದ ವಸುದೇವನು ಅವನನ್ನು ಸಮಾಧಾನಗೊಳಿಸುತ್ತಾ ಇಂತೆಂದನು. ॥ ೩೬ ॥

ವಸುದೇವನು ಹೇಳಿದನು – ರಾಜಕುಮಾರ! ನಿನ್ನ ಗುಣಗಳನ್ನು ಶೂರರು ಹೊಗಳುತ್ತಾರೆ. ನೀನು ಭೋಜವಂಶಕ್ಕೆ ಯಶೋದಾಯಕನಾಗಿರುವೆ. ಅಂತಹ ನೀನು ಒಬ್ಬ ಸ್ತ್ರೀಯನ್ನು, ಅದರಲ್ಲಿಯೂ ಸಾಕ್ಷಾತ್ ತಂಗಿಯನ್ನು, ಇನ್ನು ಮದುವಣಗಿತ್ತಿಯನ್ನು ವಿವಾಹದ ಶುಭಸಮಯದಲ್ಲಿ ಹೇಗೆ ತಾನೇ ಕೊಲ್ಲಬಲ್ಲೆ? ॥ ೩೭ ॥ ವೀರನೇ! ಈ ಲೋಕದಲ್ಲಿ ಜನ್ಮವನ್ನು ತಾಳಿದವರ ಶರೀರದೊಡನೆಯೇ ಮೃತ್ಯುವು ಹುಟ್ಟಿಕೊಳ್ಳುತ್ತದೆ. ಮೃತ್ಯುವು ಇಂದು ಬರಬಹುದು, ಇಲ್ಲವೇ ನೂರುವರ್ಷದ ಮೇಲೆ ಬರಬಹುದು. ಆದರೆ ಹುಟ್ಟಿದ ಪ್ರಾಣಿಗಳಿಗೆ ಮರಣವೆಂಬುದು ನಿಶ್ಚಿತವು. ॥ ೩೮ ॥ ದೇಹವು ಪಂಚಭೂತಗಳಲ್ಲಿ ಲೀನವಾಗಿ ಹೋದಾಗ (ಸತ್ತಾಗ) ಜೀವನು ಅಸ್ವತಂತ್ರನಾಗಿ ತನ್ನ ಕರ್ಮಕ್ಕೆ ಅನುಸಾರ ಬೇರೆ ಶರೀರವನ್ನು ಪಡೆದು ತನ್ನ ಮೊದಲ ಶರೀರವನ್ನು ಬಿಟ್ಟುಬಿಡುತ್ತಾನೆ. ॥ ೩೯ ॥ ಮನುಷ್ಯನು ನಡೆಯುವಾಗ ಒಂದು ಕಾಲನ್ನು ಊರಿ ಇನ್ನೊಂದನ್ನು ಮೇಲೆತ್ತುವನು ಹಾಗೂ ಜಿಗಣೆಯು ಮುಂದಿನ ಹುಲ್ಲುಕಡ್ಡಿಯನ್ನು ಹಿಡಿದ ನಂತರ ಹಿಂದಿನ ಹುಲ್ಲುಕಡ್ಡಿಯನ್ನು ಬಿಡುವಂತೆಯೇ ಜೀವನು ತನ್ನ ಕರ್ಮಕ್ಕನುಸಾರವಾಗಿ ಯಾವುದೋ ಶರೀರವನ್ನು ಪಡೆದ ನಂತರವೇ ಈ ಶರೀರವನ್ನು ಬಿಡುತ್ತಾನೆ. ॥ ೪೦ ॥ ಒಬ್ಬ ಮನುಷ್ಯನು ಜಾಗ್ರತಾವಸ್ಥೆಯಲ್ಲಿ ರಾಜನ ಐಶ್ವರ್ಯವನ್ನು ನೋಡಿ, ಇಂದ್ರಾದಿಗಳ ಐಶ್ವರ್ಯವನ್ನು ಕೇಳಿ, ಅದಕ್ಕೆ ಆಸೆಪಡುತ್ತಾ ಅದನ್ನೇ ಚಿಂತಿಸುತ್ತಾ-ಚಿಂತಿಸುತ್ತಾ, ಮೈಮರೆತುಬಿಡುತ್ತಾನೆ. ಸ್ವಪ್ನದಲ್ಲಿ ತನ್ನನ್ನು ರಾಜನೆಂದೋ, ಇಂದ್ರನೆಂದೋ ಅನುಭವ ಪಡೆಯುತ್ತಾನೆ. ಜೊತೆಗೆ ತನ್ನ ದಾರಿದ್ರ್ಯದ ಶರೀರವನ್ನು ಮರೆತುಬಿಡುತ್ತಾನೆ. ಕೆಲವೊಮ್ಮೆ ಎಚ್ಚರವಾಗಿರುವಾಗಲೇ ಮನೋರಾಜ್ಯವನ್ನು ಕಟ್ಟಿಕೊಂಡು ತನ್ಮಯನಾಗುತ್ತಾನೆ. ಅವನಿಗೆ ಸ್ಥೂಲಶರೀರದ ಎಚ್ಚರವೂ ಇರುವುದಿಲ್ಲ. ಹೀಗೆಯೇ ಜೀವನು ಕರ್ಮಕೃತ ಕಾಮನೆ ಮತ್ತು ಕಾಮನಾಕೃತ ಕರ್ಮಕ್ಕೆ ವಶನಾಗಿ ಇನ್ನೊಂದು ಶರೀರವನ್ನು ಹೊಂದುತ್ತಾನೆ ಹಾಗೂ ತನ್ನ ಮೊದಲಿನ ಶರೀರವನ್ನು ಮರೆತುಬಿಡುತ್ತಾನೆ. ॥ ೪೧ ॥

ಯತೋ ಯತೋ ಧಾವತಿ ದೈವಚೋದಿತಂ
ಮನೋ ವಿಕಾರಾತ್ಮಕಮಾಪ ಪಂಚಸು ।
ಗುಣೇಷು ಮಾಯಾರಚಿತೇಷು ದೇಹ್ಯಸೌ
ಪ್ರಪದ್ಯಮಾನಃ ಸಹ ತೇನ ಜಾಯತೇ ॥ ೪೨ ॥

ಜ್ಯೋತಿರ್ಯಥೈವೋದಕಪಾರ್ಥಿವೇಷ್ವದಃ
ಸಮೀರವೇಗಾನುಗತಂ ವಿಭಾವ್ಯತೇ ।
ಏವಂ ಸ್ವಮಾಯಾರಚಿತೇಷ್ವಸೌ ಪುಮಾನ್
ಗುಣೇಷು ರಾಗಾನುಗತೋ ವಿಮುಹ್ಯತಿ ॥ ೪೩ ॥

ತಸ್ಮಾನ್ನ ಕಸ್ಯಚಿದ್ದ್ರೋಹಮಾಚರೇತ್ಸ ತಥಾವಿಧಃ ।
ಆತ್ಮನಃ ಕ್ಷೇಮಮನ್ವಿಚ್ಛನ್ ದ್ರೋಗ್ಧುರ್ವೈ ಪರತೋ ಭಯಮ್
॥ ೪೪ ॥

ಏಷಾ ತವಾನುಜಾ ಬಾಲಾ ಕೃಪಣಾ ಪುತ್ರಿಕೋಪಮಾ ।
ಹಂತುಂ ನಾರ್ಹಸಿ ಕಲ್ಯಾಣೀಮಿಮಾಂ ತ್ವಂ ದೀನವತ್ಸಲಃ
॥ ೪೫ ॥

ಶ್ರೀಶುಕ ಉವಾಚ

ಏವಂ ಸ ಸಾಮಭಿರ್ಭೇದೈರ್ಬೋಧ್ಯಮಾನೋಽಪಿ ದಾರುಣಃ ।
ನ ನ್ಯವರ್ತತ ಕೌರವ್ಯ ಪುರುಷಾದಾನನುವ್ರತಃ
॥ ೪೬ ॥

ನಿರ್ಬಂಧಂ ತಸ್ಯ ತಂ ಜ್ಞಾತ್ವಾ ವಿಚಿಂತ್ಯಾನಕದುಂದುಭಿಃ ।
ಪ್ರಾಪ್ತಂ ಕಾಲಂ ಪ್ರತಿವ್ಯೋಢುಮಿದಂ ತತ್ರಾನ್ವಪದ್ಯತ
॥ ೪೭ ॥

ಮೃತ್ಯುರ್ಬುದ್ಧಿಮತಾಪೋಹ್ಯೋ ಯಾವದ್ಬುದ್ಧಿಬಲೋದಯಮ್ ।
ಯದ್ಯಸೌ ನ ನಿವರ್ತೇತ ನಾಪರಾಧೋಽಸ್ತಿ ದೇಹಿನಃ
॥ ೪೮ ॥

ಪ್ರದಾಯ ಮೃತ್ಯವೇ ಪುತ್ರಾನ್ಮೋಚಯೇ ಕೃಪಣಾಮಿಮಾಮ್ ।
ಸುತಾ ಮೇ ಯದಿ ಜಾಯೇರನ್ಮೃತ್ಯುರ್ವಾ ನ ಮ್ರಿಯೇತ ಚೇತ್
॥ ೪೯ ॥

ವಿಪರ್ಯಯೋ ವಾ ಕಿಂ ನ ಸ್ಯಾದ್ಗತಿರ್ಧಾತುರ್ದುರತ್ಯಯಾ ।
ಉಪಸ್ಥಿತೋ ನಿವರ್ತೇತ ನಿವೃತ್ತಃ ಪುನರಾಪತೇತ್
॥ ೫೦ ॥

ಜೀವಿಯ ಮನಸ್ಸು ಅನೇಕ ವಿಕಾರಗಳ ಪುಂಜವಾಗಿದೆ. ದೇಹಾಂತ್ಯದ ಸಮಯದಲ್ಲಿ ಅವನು ಅನೇಕ ಜನ್ಮಗಳ ಸಂಚಿತ ಮತ್ತು ಪ್ರಾರಬ್ಧ ಕರ್ಮಗಳ ವಾಸನೆಗಳಿಗೆ ಅಧೀನನಾಗಿ, ಮಾಯೆಯಿಂದ ರಚಿತವಾದ ಅನೇಕ ಪಾಂಚಭೌತಿಕ ದೇಹಗಳಲ್ಲಿನ ಯಾವ ಶರೀರವನ್ನು ಚಿಂತಿಸುವನೋ, ನಾನು ಇದೇ ಆಗಿದ್ದೇನೆ ಎಂದು ತಿಳಿದುಕೊಳ್ಳುವನೋ, ಅದೇ ಶರೀರವನ್ನು ಪಡೆದು ಅವನು ಹುಟ್ಟಬೇಕಾಗುತ್ತದೆ. ॥ ೪೨ ॥ ಸೂರ್ಯ-ಚಂದ್ರರೇ ಮುಂತಾದ ಜ್ಯೋತಿಗಳು ಗಡಿಗೆಯಲ್ಲಿರುವ ನೀರಿನಲ್ಲಿ ಅಥವಾ ಎಣ್ಣೆಯಲ್ಲಿ ಪ್ರತಿಬಿಂಬಿಸುತ್ತವೆ. ಗಾಳಿಯಿಂದ ನೀರು-ಎಣ್ಣೆ ಅಲುಗಾಡಿದರೆ ಅವರೂ ಅಲುಗಾಡುವಂತೆ ಕಾಣುತ್ತಾರೆ. ಹಾಗೆಯೇ ಜೀವನು ತನ್ನ ಸ್ವರೂಪದ ಅಜ್ಞಾನದಿಂದ ರಚಿತವಾದ ಶರೀರಗಳಲ್ಲಿ ಅನುರಾಗವನ್ನು ಹೊಂದಿ ಅವನ್ನೇ ತಾನು ಎಂದು ತಿಳಿದುಬಿಡುತ್ತಾನೆ. ಮೋಹವಶದಿಂದ ಅವುಗಳ ಬಂದು-ಹೋಗುವಿಕೆಯನ್ನೇ ತನ್ನ ಆವಾಗಮನವೆಂದು ತಿಳಿಯತೊಡಗುತ್ತಾನೆ. ॥ ೪೩ ॥ ಆದ್ದರಿಂದ ತನ್ನ ಶ್ರೇಯಸ್ಸನ್ನು ಬಯಸುವವನು ಯಾರಿಗೂ ದ್ರೋಹವನ್ನೆಸಗಬಾರದು. ಏಕೆಂದರೆ, ಜೀವನು ಕರ್ಮಕ್ಕೆ ಅಧೀನನಾದವನು. ದ್ರೋಹವೆಸಗಿದವನಿಗೆ ಈ ಲೋಕದಲ್ಲಿ ಶತ್ರುವಿನಿಂದಲೂ, ಪರಲೋಕದಲ್ಲಿ ಯಮಧರ್ಮನಿಂದಲೂ ಭಯಪಡಬೇಕಾಗುತ್ತದೆ. ॥ ೪೪ ॥ ಕಂಸನೇ ! ನಿನ್ನ ತಂಗಿಯಾದ ಇವಳು ಇನ್ನು ಬಾಲೆ, ದೀನಳಾಗಿರುವಳು. ನಿನ್ನ ಮಗಳಿಗೆ ಸಮಾನಳು. ವೈವಾಹಿಕ ಮಂಗಳ ಚಿಹ್ನೆಗಳು ಇನ್ನೂ ಇವಳ ಶರೀರದಲ್ಲಿ ಅಚ್ಚಳಿಯದಂತೆ ಇವೆ. ಇಂತಹ ಸ್ಥಿತಿಯಲ್ಲಿ ನಿನ್ನಂತಹ ದೀನವತ್ಸಲನು ಈ ಬಡಪಾಯಿಯನ್ನು ವಧಿಸುವುದು ಉಚಿತವಲ್ಲ. । ೪೫ ।

ಶ್ರೀಶುಕ ಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ ! ಹೀಗೆ ವಸುದೇವನು ಕಂಸನಿಗೆ ಸಾಮ-ದಾನ-ಭೇದೋಪಾಯಗಳಿಂದ ಹಿತವನ್ನು ಬೋಧಿಸಿದರೂ, ದಾರುಣನಾದ, ರಾಕ್ಷಸರ ಅನುಯಾಯಿಯಾದ ಆ ಕಂಸನು ತನ್ನ ನಿಶ್ಚಯದಿಂದ ಹಿಂದೆಗೆಯಲಿಲ್ಲ. ॥ ೪೬ ॥ ಆಗ ವಸುದೇವನು ಕಂಸನ ಹಟವನ್ನು ನೋಡಿ, ತತ್ಕಾಲದಲ್ಲಿ ಒದಗಿ ಬಂದಿರುವ ಆಪತ್ತನ್ನು ನಿವಾರಿಸಿಕೊಳ್ಳಲು ಹೀಗೆ ನಿಶ್ಚಯಿಸಿದನು. ॥ ೪೭ ॥ ಲೋಕದಲ್ಲಿ ಬುದ್ಧಿವಂತನಾದವನು ತನ್ನ ಬುದ್ಧಿಶಕ್ತಿ ಇರುವಷ್ಟನ್ನು ಉಪಯೋಗಿಸಿ ಮೃತ್ಯುವನ್ನು ಮುಂದೂಡಲು ಪ್ರಯತ್ನಿಸಬೇಕು. ಪ್ರಯತ್ನಿಸಿದರೂ ನಿವಾರಣೆಯಾಗದಿದ್ದರೆ ಮತ್ತೆ ಪ್ರಯತ್ನಿಸುವವನಲ್ಲಿ ದೋಷವಿರುವುದಿಲ್ಲ, ಕರ್ತವ್ಯಲೋಪವಾಗುವುದಿಲ್ಲ । ೪೮ । ಅದಕ್ಕಾಗಿ ಈ ಮೃತ್ಯುರೂಪೀ ಕಂಸನಿಗೆ ಇವಳಲ್ಲಿ ಹುಟ್ಟುವ ಪುತ್ರರನ್ನು ಕೊಟ್ಟುಬಿಡುವ ಪ್ರತಿಜ್ಞೆಯನ್ನು ಮಾಡಿ ನಾನು ದೀನಳಾದ ದೇವಕಿಯನ್ನು ಉಳಿಸುವೆನು. ಅಷ್ಟರಲ್ಲಿ ನನಗೆ ಮಕ್ಕಳಾಗಿಯೂ ಈ ಕಂಸನು ಸಾಯದಿದ್ದರೆ ದೈವೇಚ್ಛೆಯಿದ್ದಂತಾಗಲಿ. ॥ ೪೯ ॥ ಈ ವಿಷಯದಲ್ಲಿ ವ್ಯತ್ಯಾಸವಾದರೂ ಏಕಾಗಬಾರದು ? ನನ್ನ ಮಗನೇ ಇವನನ್ನು ಕೊಂದುಹಾಕಲೂಬಹುದು. ಏಕೆಂದರೆ, ದೈವಗತಿಯು ದಾಟಲು ಅಸಾಧ್ಯವಾದುದು. ಅದನ್ನು ಮೀರಿ ನಡೆಯಲು ಯಾರಿಂದಲೂ ಸಾಧ್ಯವಿಲ್ಲ. ಸನ್ನಿಹಿತವಾದ ಮೃತ್ಯುವೂ ತಪ್ಪಿಹೋಗಬಹುದು, ತಪ್ಪಿಹೋದ ಮೃತ್ಯುವೂ ಪುನಃ ಬಳಿಗೆ ಬರಬಹುದು. ॥ ೫೦ ॥

ಅಗ್ನೇರ್ಯಥಾ ದಾರುವಿಯೋಗಯೋಗಯೋ-
ರದೃಷ್ಟತೋಽನ್ಯನ್ನ ನಿಮಿತ್ತಮಸ್ತಿ ।
ಏವಂ ಹಿ ಜಂತೋರಪಿ ದುರ್ವಿಭಾವ್ಯಃ
ಶರೀರಸಂಯೋಗವಿಯೋಗ ಹೇತುಃ ॥ ೫೧ ॥

ಏವಂ ವಿಮೃಶ್ಯ ತಂ ಪಾಪಂ ಯಾವದಾತ್ಮನಿದರ್ಶನಮ್ ।
ಪೂಜಯಾಮಾಸ ವೈ ಶೌರಿರ್ಬಹುಮಾನಪುರಃಸರಮ್ ॥ ೫೨ ॥

ಪ್ರಸನ್ನವದನಾಂಭೋಜೋ ನೃಶಂಸಂ ನಿರಪತ್ರಪಮ್ ।
ಮನಸಾ ದೂಯಮಾನೇನ ವಿಹಸನ್ನಿದಮಬ್ರವೀತ್ ॥ ೫೩ ॥

ವಸುದೇವ ಉವಾಚ

ನ ಹ್ಯಸ್ಯಾಸ್ತೇ ಭಯಂ ಸೌಮ್ಯ ಯದ್ವಾಗಾಹಾಶರೀರಿಣೀ ।
ಪುತ್ರಾನ್ಸಮರ್ಪಯಿಷ್ಯೇಽಸ್ಯಾ ಯತಸ್ತೇ ಭಯಮುತ್ಥಿತಮ್ ॥ ೫೪ ॥

ಶ್ರೀಶುಕ ಉವಾಚ

ಸ್ವಸುರ್ವಧಾನ್ನಿವವೃತೇ ಕಂಸಸ್ತದ್ವಾಕ್ಯಸಾರವಿತ್ ।
ವಸುದೇವೋಽಪಿ ತಂ ಪ್ರೀತಃ ಪ್ರಶಸ್ಯ ಪ್ರಾವಿಶದ್ಗೃಹಮ್ ॥ ೫೫ ॥

ಅಥ ಕಾಲ ಉಪಾವೃತ್ತೇ ದೇವಕೀ ಸರ್ವದೇವತಾ ।
ಪುತ್ರಾನ್ಪ್ರಸುಷುವೇ ಚಾಷ್ಟೌ ಕನ್ಯಾಂ ಚೈವಾನುವತ್ಸರಮ್ ॥ ೫೬ ॥

ಕೀರ್ತಿಮಂತಂ ಪ್ರಥಮಜಂ ಕಂಸಾಯಾನಕದುಂದುಭಿಃ ।
ಅರ್ಪಯಾಮಾಸ ಕೃಚ್ಛ್ರೇಣ ಸೋಽನೃತಾದತಿವಿಹ್ವಲಃ ॥ ೫೭ ॥

ಕಿಂ ದುಃಸಹಂ ನು ಸಾಧೂನಾಂ ವಿದುಷಾಂ ಕಿಮಪೇಕ್ಷಿತಮ್ ।
ಕಿಮಕಾರ್ಯಂ ಕದರ್ಯಾಣಾಂ ದುಸ್ತ್ಯಜಂ ಕಿಂ ಧೃತಾತ್ಮನಾಮ್ ॥ ೫೮ ॥

ದೃಷ್ಟ್ವಾ ಸಮತ್ವಂ ತಚ್ಛೌರೇಃ ಸತ್ಯೇ ಚೈವ ವ್ಯವಸ್ಥಿತಿಮ್ ।
ಕಂಸಸ್ತುಷ್ಟಮನಾ ರಾಜನ್ಪ್ರಹಸನ್ನಿದಮಬ್ರವೀತ್ ॥ ೫೯ ॥

ಪ್ರತಿಯಾತು ಕುಮಾರೋಽಯಂ ನ ಹ್ಯಸ್ಮಾದಸ್ತಿ ಮೇ ಭಯಮ್ ।
ಅಷ್ಟಮಾದ್ಯುವಯೋರ್ಗರ್ಭಾನ್ಮೃತ್ಯುರ್ಮೇ ವಿಹಿತಃ ಕಿಲ ॥ ೬೦ ॥

ಕಾಡಿಗೆ ಬೆಂಕಿ ತಗುಲಿದಾಗ ಯಾವ ಕಟ್ಟಿಗೆ ಸುಟ್ಟಿತು, ಯಾವುದು ಸುಡದಿರಬಹುದು! ದೂರದಲ್ಲಿರುವುದು ಸುಟ್ಟು ಹೋಗಿ ಹತ್ತಿರದಲ್ಲಿರುವುದು ಸುಡಲಾರದು. ಇವೆಲ್ಲವೂ ಅದೃಷ್ಟವಲ್ಲದೆ ಬೇರೆ ಯಾವ ಕಾರಣವೂ ಇರುವುದಿಲ್ಲ. ಹಾಗೆಯೇ ಯಾವ ಜೀವಿಯ ಯಾವ ಶರೀರವು ಉಳಿಯುವುದು, ಯಾವ ಕಾರಣದಿಂದ ಯಾವ ಶರೀರ ನಾಶವಾದೀತು ಇದನ್ನು ತಿಳಿಯುವುದು ಬಹಳ ಕಷ್ಟವಾಗಿದೆ. ॥ ೫೧ ॥ ವಸುದೇವನು ತನ್ನ ಶ್ರೇಷ್ಠವಾದ ಬುದ್ಧಿಯಿಂದ ಹೀಗೆ ನಿಶ್ಚಯಿಸಿ ಬಹುಮಾನ ಪುರಸ್ಸರವಾಗಿ ಕ್ರೂರಿಯಾದ ಕಂಸನನ್ನು ಬಹಳ ಪ್ರಶಂಸೆ ಮಾಡಿದನು. ॥ ೫೨ ॥ ಪರೀಕ್ಷಿತನೇ! ಕಂಸನು ಮಹಾಕ್ರೂರಿಯೂ, ನಿರ್ಲಜ್ಜನೂ ಆಗಿದ್ದನು. ಆ ಕಾರಣದಿಂದ ವಸುದೇವನ ಮನಸ್ಸಿನಲ್ಲಿ ಅತೀವ ಪೀಡನೆಯಾಗುತ್ತಿದ್ದರೂ, ಹೊರಗೆ ತೋರಿಸಿಕೊಳ್ಳದೆ ಪ್ರಫುಲ್ಲಿತ ಮುಖಕಮಲದಿಂದ ನಗು-ನಗುತ್ತಾ ಕಂಸನಲ್ಲಿ ಇಂತೆಂದನು – ॥ ೫೩ ॥

ವಸುದೇವನು ಹೇಳಿದನು – ಸೌಮ್ಯನೇ! ಆಕಾಶವಾಣಿಯು ನುಡಿದಂತೆ ನಿನಗೆ ದೇವಕಿಯಿಂದ ಯಾವ ಭಯವೂ ಇಲ್ಲ. ಭಯವಿರುವುದು ಅವಳ ಪುತ್ರರಿಂದ. ಆದ್ದರಿಂದ ನಾನು ಆಣೆಯಿಟ್ಟು ಹೇಳುತ್ತೇನೆ – 'ಇವಳಲ್ಲಿ ಹುಟ್ಟುವ ಮಕ್ಕಳನ್ನು ನಿನಗೆ ಒಪ್ಪಿಸಿ ಬಿಡುತ್ತೇನೆ.' ॥ ೫೪ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ! ವಸುದೇವನು ಸುಳ್ಳು ಹೇಳುತ್ತಿಲ್ಲವೆಂದೂ, ಅವನ ಮಾತು ಯುಕ್ತ-ಯುಕ್ತವಾಗಿದೆ ಎಂದು ಭಾವಿಸಿ ಕಂಸನು ತಂಗಿಯಾದ ದೇವಕಿಯನ್ನು ಕೊಲ್ಲದಿರಲು ನಿಶ್ಚಯಿಸಿದನು. ಇದರಿಂದ ಸಂತೋಷಗೊಂಡ ವಸುದೇವನು ಅವನನ್ನು ಹೊಗಳುತ್ತಾ ಪತ್ನಿಯೊಡನೆ ಮನೆಗೆ ಹೊರಟುಹೋದನು. ॥ ೫೫ ॥ ದೇವಕಿಯು ಸಾಧ್ವಿಶಿರೋಮಣಿಯಾಗಿದ್ದಳು. ಎಲ್ಲ ದೇವತೆಗಳು ಅವಳಲ್ಲಿ ವಾಸಿಸುತ್ತಿದ್ದರು. ಕಾಲವು ಕಳೆದಂತೆ ವರ್ಷಕ್ಕೊಂದರಂತೆ ದೇವಕಿಯ ಗರ್ಭದಿಂದ ಎಂಟು ಪುತ್ರರು ಓರ್ವ ಪುತ್ರಿಯೂ ಜನಿಸಿದರು. ॥ ೫೬ ॥ ಮೊದಲನೆಯ ಪುತ್ರನಾದ ಕೀರ್ತಿಮಂತನನ್ನು ವಸುದೇವನು ತಂದು ಕಂಸನಿಗೆ ಒಪ್ಪಿಸಿದನು. ವಸುದೇವನಿಗೆ ಮಗುವನ್ನು ಒಪ್ಪಿಸುವುದಕ್ಕಿಂತಲೂ, ಸುಳ್ಳುಗಾರನಾಗುವುದು ಅತಿ ಕಷ್ಟಕರವಾಗಿತ್ತು. ॥ ೫೭ ॥ ಪರೀಕ್ಷಿತನೇ! ಸತ್ಯ ಸಂಧರಾದ ಸತ್ಪುರುಷರು ದೊಡ್ಡ-ದೊಡ್ಡ ಕಷ್ಟಗಳನ್ನೂ ಸಹಿಸಿ ಕೊಳ್ಳುವರು. ಜ್ಞಾನಿಗಳಿಗಾದರೋ ಯಾವುದರ ಅಪೇಕ್ಷೆಯೂ ಇರುವುದಿಲ್ಲ. ನೀಚ-ಪುರುಷರು ನೀಚಾತಿನೀಚ ಕೆಲಸವನ್ನೂ ಮಾಡಿಬಿಡುತ್ತಾರೆ. ಜಿತೇಂದ್ರಿಯರಾದವರು ಭಗವಂತನನ್ನು ಹೃದಯದಲ್ಲಿ ಧರಿಸಿಕೊಂಡಿರುವರು. ಅವರು ಎಲ್ಲವನ್ನೂ ತ್ಯಾಗ ಮಾಡಬಲ್ಲರು. ॥ ೫೮ ॥ ವಸುದೇವನಿಗೆ ತನ್ನ ಪುತ್ರನ ಜೀವನ ಮೃತ್ಯುವಿನಲ್ಲಿ ಸಮಭಾವವಿದೆ ಹಾಗೂ ಅವನು ಸತ್ಯನಿಷ್ಠನಾಗಿದ್ದಾನೆ ಎಂಬುದನ್ನು ನೋಡಿ ಕಂಸನು ತುಂಬಾ ಸಂತೋಷಗೊಂಡು ನಗುತ್ತಾ ಶೌರಿಯಲ್ಲಿ ಹೇಳಿದನು – ॥ ೫೯ ॥

ವಸುದೇವನೇ! ನೀನು ಈ ಹಸುಳೆಯನ್ನು ತೆಗೆದುಕೊಂಡು ಹೋಗು. ಇದರಿಂದ ನನಗೇನೂ ಭಯವಿಲ್ಲ. ಏಕೆಂದರೆ, 'ಆಕಾಶವಾಣಿಯು ನುಡಿದುದು – ದೇವಕಿಯ ಎಂಟನೆಯ ಗರ್ಭದಿಂದ ಹುಟ್ಟಿದವನಿಂದ ನಿನ್ನ ಮೃತ್ಯುವಾದೀತು' ಎಂದಿದೆಯಲ್ಲ. ॥ ೬೦ ॥

ತಥೇತಿ ಸುತಮಾದಾಯ ಯಯಾವಾನಕದುಂದುಭಿಃ ।
ನಾಭ್ಯನಂದತ ತದ್ವಾಕ್ಯಮಸತೋಽವಿಜಿತಾತ್ಮನಃ
॥ ೬೧ ॥

ನಂದಾದ್ಯಾ ಯೇ ವ್ರಜೇ ಗೋಪಾ ಯಾಶ್ಚಾಮೀಷಾಂ ಚ ಯೋಷಿತಃ ।
ವೃಷ್ಣಯೋ ವಸುದೇವಾದ್ಯಾ ದೇವಕ್ಯಾದ್ಯಾ ಯದುಸ್ತ್ರಿಯಃ
॥ ೬೨ ॥

ಸರ್ವೇ ವೈ ದೇವತಾಪ್ರಾಯಾ ಉಭಯೋರಪಿ ಭಾರತ ।
ಜ್ಞಾತಯೋ ಬಂಧುಸುಹೃದೋ ಯೇ ಚ ಕಂಸಮನುವ್ರತಾಃ
॥ ೬೩ ॥

ಏತತ್ ಕಂಸಾಯ ಭಗವಾನ್
ಶಶಂಸಾಭ್ಯೇತ್ಯ ನಾರದಃ ।
ಭೂಮೇರ್ಭಾರಾಯಮಾಣಾನಾಂ
ದೈತ್ಯಾನಾಂ ಚ ವಧೋದ್ಯಮಮ್ ॥ ೬೪ ॥

ಋಷೇರ್ವಿನಿರ್ಗಮೇ ಕಂಸೋ ಯದೂನ್ಮತ್ವಾ ಸುರಾನಿತಿ ।
ದೇವಕ್ಯಾ ಗರ್ಭಸಂಭೂತಂ ವಿಷ್ಣುಂ ಚ ಸ್ವವಧಂ ಪ್ರತಿ
॥ ೬೫ ॥

ದೇವಕೀಂ ವಸುದೇವಂ ಚ ನಿಗೃಹ್ಯ ನಿಗಡೈರ್ಗೃಹೇ ।
ಜಾತಂ ಜಾತಮಹನ್ಪುತ್ರಂ ತಯೋರಜನಶಂಕಯಾ
॥ ೬೬ ॥

ಮಾತರಂ ಪಿತರಂ ಭ್ರಾತೄನ್ಸರ್ವಾಂಶ್ಚ ಸುಹೃದಸ್ತಥಾ ।
ಘ್ನಂತಿ ಹ್ಯಸುತೃಪೋ ಲುಬ್ಧಾ ರಾಜಾನಃ ಪ್ರಾಯಶೋ ಭುವಿ
॥ ೬೭ ॥

ಆತ್ಮಾನಮಿಹ ಸಂಜಾತಂ ಜಾನನ್ಪ್ರಾಗ್ವಿಷ್ಣುನಾ ಹತಮ್ ।
ಮಹಾಸುರಂ ಕಾಲನೇಮಿಂ ಯದುಭಿಃ ಸ ವ್ಯರುಧ್ಯತ
॥ ೬೮ ॥

ಉಗ್ರಸೇನಂ ಚ ಪಿತರಂ ಯದುಭೋಜಾಂಧಕಾಧಿಪಮ್ ।
ಸ್ವಯಂ ನಿಗೃಹ್ಯ ಬುಭುಜೇ ಶೂರಸೇನಾನ್ಮಹಾಬಲಃ
॥ ೬೯ ॥

ಕಂಸನ ಮಾತಿನಂತೆ ವಸುದೇವನು ಶಿಶುವನ್ನು ಎತ್ತಿಕೊಂಡು ಮನೆಗೆ ಮರಳಿದನು. ಆದರೆ ಕಂಸನು ಅತಿದುಷ್ಟನಾಗಿದ್ದು, ಅವನ ಮನಸ್ಸು ಅವನ ಹತೋಟಿಯಲ್ಲಿಲ್ಲ, ಮರುಕ್ಷಣದಲ್ಲೇ ಬದಲಾಗಬಹುದು ಎಂಬುದನ್ನು ವಸುದೇವನು ಬಲ್ಲನು. ಅದಕ್ಕಾಗಿ ಅವನಿಗೆ ಕಂಸನ ಮಾತಿನಲ್ಲಿ ವಿಶ್ವಾಸ ಉಂಟಾಗಲಿಲ್ಲ. ॥ ೬೧ ॥

ಪರೀಕ್ಷಿತನೇ! ಇತ್ತ ದೇವಋಷಿಗಳಾದ ನಾರದರು ಕಂಸನ ಬಳಿಗೆ ಬಂದು ಕಂಸನಿಂದ ಸತ್ಕೃತರಾಗಿ ಅವನಿಗೆ ಇಂತೆಂದರು – 'ಎಲೈ ಕಂಸನೇ! ವ್ರಜದಲ್ಲಿ ವಾಸಿಸುವ ನಂದನೇ ಮೊದಲಾದ ಗೋಪರೂ, ಅವನ ಪತ್ನಿಯರೂ, ವಸುದೇವನೇ ಮೊದಲಾದ ವೃಷ್ಣಿವಂಶೀಯ ಯಾದವರೂ, ದೇವಕಿಯೇ ಮೊದಲಾದ ಸ್ತ್ರೀಯರೂ ಹೀಗೆ ನಂದ-ವಸುದೇವರ ಜ್ಞಾತಿಬಾಂಧವರೆಲ್ಲರೂ ದೈವಾಂಶಸಂಭೂತರು. ಈ ಸಮಯದಲ್ಲಿ ನಿನ್ನ ಸೇವೆಯಲ್ಲಿರುವವರೆಲ್ಲರೂ ದೇವತೆಗಳೇ ಆಗಿದ್ದಾರೆ. ದೈತ್ಯರ ಪ್ರಾಬಲ್ಯವು ಹೆಚ್ಚಾಗಿದ್ದು ಪೃಥಿವಿಯ ಭಾರವು ಹೆಚ್ಚಾಗಿದೆ. ಅದಕ್ಕಾಗಿ ದೈತ್ಯರನ್ನು ವಧಿಸಲು ದೇವತೆಗಳೆಲ್ಲ ಸೇರಿ ಕಾರ್ಯಕ್ರಮವನ್ನು ರೂಪಿಸುತ್ತಿದ್ದಾರೆ. ಇರುವ ವಿಷಯ ನಿನಗೆ ಅರುಹಿದೆನು. ನೀನು ಜಾಗರೂಕನಾಗಿರು' ಎಂದು ಹೇಳಿದರು. ॥ ೬೨-೬೪ ॥ ದೇವಋಷಿ ನಾರದರು ಇಷ್ಟು ಹೇಳಿ ಹೊರಟುಹೋದ ಬಳಿಕ ಕಂಸನಿಗೆ – ಈ ಯದುವಂಶೀಯರೆಲ್ಲರು ದೇವತೆಗಳು ಹಾಗೂ ದೇವಕಿಯ ಗರ್ಭದಿಂದ ಭಗವಾನ್ ವಿಷ್ಣುವೇ ನನ್ನನ್ನು ಕೊಲ್ಲಲು ಹುಟ್ಟಲಿರುವನು ಎಂದು ನಿಶ್ಚಯಿಸಿದನು. ಅದಕ್ಕಾಗಿ ಅವನು ವಸುದೇವ ದೇವಕಿಯರಿಬ್ಬರನ್ನು ಸಂಕೋಲೆಗಳಿಂದ ಬಂಧಿಸಿ ಕಾರಾಗೃಹದಲ್ಲಿಟ್ಟನು. ಅವರಲ್ಲಿ ಹುಟ್ಟಿದ ಮಕ್ಕಳನ್ನು ಕೊಲ್ಲುತ್ತಾ ಹೋದನು. ಪ್ರತಿಬಾರಿಯೂ ಅವನಿಗೆ – 'ಎಲ್ಲಾದರೂ ವಿಷ್ಣುವೇ ಈ ಬಾಲಕನ ರೂಪದಲ್ಲಿ ಬಂದಿರಬಹುದೇ?' ಎಂಬ ಸಂಶಯವು ಯಾವಾಗಲೂ ಇರುತ್ತಿತ್ತು. ॥ ೬೫-೬೬ ॥ ಪರೀಕ್ಷಿತನೇ! ಪ್ರಾಯಶಃ ಈ ಲೋಕದಲ್ಲಿ ತಮ್ಮ ಪ್ರಾಣಗಳನ್ನು ಪೋಷಿಸುವ ಲೋಭಿಗಳಾದ ರಾಜರು ತಮ್ಮ ಸ್ವಾರ್ಥಕ್ಕಾಗಿ ತಂದೆ-ತಾಯಿ, ಬಂಧು-ಬಾಂಧವರು ಹಾಗೂ ತಮ್ಮ ಅತ್ಯಂತ ಹಿತೈಷಿಗಳಾದ ಇಷ್ಟ-ಮಿತ್ರರನ್ನು ಕೊಂದುಬಿಡುವುದನ್ನು ನಾವು ನೋಡುತ್ತೇವೆ. ॥ ೬೭ ॥ ತಾನು ಮೊದಲು ಕಾಲನೇಮಿಯೆಂಬ ಅಸುರನಾಗಿದ್ದು ವಿಷ್ಣುವು ನನ್ನನ್ನು ಕೊಂದುಬಿಟ್ಟಿರುವನೆಂದು ಕಂಸನಿಗೆ ತಿಳಿದಿತ್ತು. ಇದರಿಂದ ಅವನು ಯದುವಂಶೀಯರಲ್ಲಿ ಘೋರವಾದ ವಿರೋಧವನ್ನು ಕಟ್ಟಿಕೊಂಡನು. ॥ ೬೮ ॥ ಮಹಾಬಲಿಷ್ಠನಾದ ಕಂಸನು ಯದು, ಭೋಜ, ಅಂಧಕ ವಂಶಗಳಿಗೆ ಅಧಿನಾಯಕನಾಗಿದ್ದ ತನ್ನ ತಂದೆ ಉಗ್ರಸೇನನನ್ನೂ ಕಾರಾಗೃಹದಲ್ಲಿಟ್ಟು ಶೂರಸೇನ ರಾಜ್ಯವನ್ನು ತಾನೇ ಆಳತೊಡಗಿದನು. ॥ ೬೯ ॥

ಮೊದಲನೆಯ ಅಧ್ಯಾಯವು ಮುಗಿಯಿತು. ॥ ೧ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮಸ್ಕಂಧೇ ಪೂರ್ವಾರ್ಧೇ
ಶ್ರೀಕೃಷ್ಣಾವತಾರೋಪಕ್ರಮೇ ಪ್ರಥಮೋಽಧ್ಯಾಯಃ ॥ ೧ ॥

ಎರಡನೆಯ ಅಧ್ಯಾಯ

ಭಗವಂತನು ದೇವಕಿಯ ಗರ್ಭವನ್ನು ಪ್ರವೇಶಿಸಿದುದು, ದೇವತೆಗಳಿಂದ ಗರ್ಭಸ್ತುತಿ

ಶ್ರೀಶುಕ ಉವಾಚ

ಪ್ರಲಂಬಬಕಚಾಣೂರತೃಣಾವರ್ತಮಹಾಶನೈಃ ।
ಮುಷ್ಟಿಕಾರಿಷ್ಟದ್ವಿವಿದಪೂತನಾಕೇಶಿಧೇನುಕೈಃ ॥ ೧ ॥

ಅನ್ಯೈಶ್ಚಾಸುರಭೂಪಾಲೈರ್ಬಾಣಭೌಮಾದಿಭಿರ್ಯುತಃ ।
ಯದೂನಾಂ ಕದನಂ ಚಕ್ರೇ ಬಲೀ ಮಾಗಧಸಂಶ್ರಯಃ ॥ ೨ ॥

ತೇ ಪೀಡಿತಾ ನಿವಿವಿಶುಃ ಕುರುಪಂಚಾಲಕೇಕಯಾನ್ ।
ಶಾಲ್ವಾನ್ವಿದರ್ಭಾನ್ನಿಷಧಾನ್ವಿದೇಹಾನ್ಕೋಸಲಾನಪಿ ॥ ೩ ॥

ಏಕೇ ತಮನುರುಂಧಾನಾ ಜ್ಞಾತಯಃ ಪರ್ಯುಪಾಸತೇ ।
ಹತೇಷು ಷಟ್ಸು ಬಾಲೇಷು ದೇವಕ್ಯಾ ಔಗ್ರಸೇನಿನಾ ॥ ೪ ॥

ಸಪ್ತಮೋ ವೈಷ್ಣವಂ ಧಾಮ ಯಮನಂತಂ ಪ್ರಚಕ್ಷತೇ ।
ಗರ್ಭೋ ಬಭೂವ ದೇವಕ್ಯಾ ಹರ್ಷಶೋಕವಿವರ್ಧನಃ ॥ ೫ ॥

ಭಗವಾನಪಿ ವಿಶ್ವಾತ್ಮಾ ವಿದಿತ್ವಾ ಕಂಸಜಂ ಭಯಮ್ ।
ಯದೂನಾಂ ನಿಜನಾಥಾನಾಂ ಯೋಗಮಾಯಾಂ ಸಮಾದಿಶತ್ ॥ ೬ ॥

ಗಚ್ಛ ದೇವಿ ವ್ರಜಂ ಭದ್ರೇ ಗೋಪಗೋಭಿರಲಂಕೃತಮ್ ।
ರೋಹಿಣೀ ವಸುದೇವಸ್ಯ ಭಾರ್ಯಾಽಽಸ್ತೇ ನಂದಗೋಕುಲೇ ।
ಅನ್ಯಾಶ್ಚ ಕಂಸಸಂವಿಗ್ನಾ ವಿವರೇಷು ವಸಂತಿ ಹಿ ॥ ೭ ॥

ದೇವಕ್ಯಾ ಜಠರೇ ಗರ್ಭಂ ಶೇಷಾಖ್ಯಂ ಧಾಮ ಮಾಮಕಮ್ ।
ತತ್ಸನ್ನಿಕೃಷ್ಯ ರೋಹಿಣ್ಯಾ ಉದರೇ ಸಂನಿವೇಶಯ ॥ ೮ ॥

ಅಥಾಹಮಂಶಭಾಗೇನ ದೇವಕ್ಯಾಃ ಪುತ್ರತಾಂ ಶುಭೇ ।
ಪ್ರಾಪ್ಸ್ಯಾಮಿ ತ್ವಂ ಯಶೋದಾಯಾಂ ನಂದಪತ್ನ್ಯಾಂ ಭವಿಷ್ಯಸಿ ॥ ೯ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಎಲೈ ಪರೀಕ್ಷಿತನೇ! ಮಗಧಾಧಿಪತಿಯಾದ ಜರಾಸಂಧನ ಆಶ್ರಯವನ್ನು ಪಡೆದುಕೊಂಡಿದ್ದ ಮಹಾಬಲಿಷ್ಠನಾಗಿದ್ದ ಕಂಸನಿಗೆ – ಪ್ರಲಂಬಾಸುರ, ಬಕಾಸುರ, ಚಾಣೂರ, ತೃಣಾವರ್ತ, ಅಘಾಸುರ, ಮುಷ್ಟಿಕ, ಅರಿಷ್ಟಾಸುರ, ದ್ವಿವಿದ, ಪೂತನಾ, ಕೇಶೀ ಮತ್ತು ಧೇನುಕ, ಬಾಣಾಸುರ, ಭೌಮಾಸುರ ಮೊದಲಾದ ಮಹಾಸುರರು ಸಹಾಯಕರಾಗಿದ್ದರು. ಇವರನ್ನು ಜೊತೆ ಸೇರಿಸಿಕೊಂಡು ಯದುವಂಶೀಯರನ್ನು ನಾಶಗೊಳಿಸತೊಡಗಿದನು. ॥ ೧-೨ ॥ ಅವರೆಲ್ಲರೂ ಭಯಗೊಂಡು ಕುರು, ಪಾಂಚಾಲ, ಕೇಕಯ, ಶಾಲ್ವ, ವಿದರ್ಭ, ನಿಷಧ, ವಿದೇಹ, ಕೋಸಲ ಮುಂತಾದ ದೇಶಗಳಿಗೆ ವಲಸೆ ಹೋದರು. ॥ ೩ ॥ ವಲಸೆ ಹೋಗಲಾಗದ ಕೆಲವರು ಬಹಿರಂಗದಲ್ಲಿ ಕಂಸನಿಗೆ ನಿಷ್ಠರಾಗಿ ಅವನ ಸೇವೆಯಲ್ಲಿ ನಿರತರಾಗಿದ್ದರು. ಕಂಸನು ಒಂದಾದ ಮೇಲೊಂದರಂತೆ ದೇವಕಿಯ ಆರು ಮಂದಿ ಮಕ್ಕಳನ್ನು ಕೊಂದುಹಾಕಿದಾಗ, ದೇವಕಿಯ ಏಳನೆಯ ಗರ್ಭದಲ್ಲಿ ಭಗವಂತನ ಅಂಶರೂಪನಾದ ಅನಂತನೆಂದು ಕರೆಸಿಕೊಳ್ಳುವ ಶ್ರೀಶೇಷದೇವನು* ನೆಲೆಸಿದನು. ಆನಂದಸ್ವರೂಪನಾದ ಮಹಾಶೇಷನು ಗರ್ಭದಲ್ಲಿ ನೆಲೆಸಿದಾಗ ದೇವಕಿಗೆ ಸ್ವಾಭಾವಿಕವಾಗಿಯೇ ಹರ್ಷವುಂಟಾಯಿತು. ಆದರೆ ಕಂಸನು ಇವನನ್ನೂ ಕೊಂದುಬಿಡಬಹುದೆಂಬ ಭಯದಿಂದ ಶೋಕವು ಹೆಚ್ಚಿತು. ॥ ೪-೫ ॥

ತನ್ನನ್ನೇ ನಾಥನನ್ನಾಗಿ ಭಾವಿಸಿರುವ ಯದುವಂಶೀಯರಿಗೆ ಕಂಸನು ಉಪಟಳವನ್ನು ಕೊಡುತ್ತಿರುವನೆಂಬುದನ್ನೂ ತಿಳಿದ ವಿಶ್ವಾತ್ಮನಾದ ಭಗವಂತನು ತನ್ನ ಯೋಗಮಾಯೆಗೆ ಹೀಗೆ ಆದೇಶಿಸಿದನು. ॥ ೬ ॥ ದೇವೀ! ಕಲ್ಯಾಣೀ! ನೀನೀಗಲೇ ವ್ರಜಭೂಮಿಗೆ ಹೋಗು. ಅದು ಗೋಪಾಲಕರಿಂದಲೂ, ಗೋವುಗಳಿಂದಲೂ ಸುಶೋಭಿತವಾಗಿದೆ. ನಂದನ ಆ ಗೋಕುಲದಲ್ಲಿ ವಸುದೇವನ ಪತ್ನಿಯಾದ ರೋಹಿಣಿಯು ವಾಸವಾಗಿದ್ದಾಳೆ. ಅವನ ಇತರ ಪತ್ನಿಯರು ಕಂಸನ ಭಯದಿಂದ ಗುಪ್ತಸ್ಥಳಗಳಲ್ಲಿ ಅಡಗಿಕೊಂಡಿದ್ದಾರೆ. ॥ ೭ ॥ ಈ ಸಮಯದಲ್ಲಿ ನನ್ನ ಅಂಶವಾದ ಮಹಾಶೇಷನು ದೇವಕಿಯ ಗರ್ಭದಲ್ಲಿ ನೆಲೆಸಿರುವನು. ಅವನನ್ನು ಅಲ್ಲಿಂದ ಸೆಳೆದುಕೊಂಡು ನೀನು ರೋಹಿಣಿಯ ಉದರದಲ್ಲಿರಿಸು. ॥ ೮ ॥ ಕಲ್ಯಾಣಿ! ಈಗ ನಾನು ನನ್ನ ಸಮಸ್ತಜ್ಞಾನ, ಬಲ ಮುಂತಾದ ಅಂಶಗಳೊಂದಿಗೆ ದೇವಕಿಗೆ ಪುತ್ರನಾಗುವೆನು. ನೀನು ನಂದಮಹಾರಾಜನ ಪತ್ನಿಯಾದ ಯಶೋದೆಯ ಗರ್ಭದಲ್ಲಿ ಹುಟ್ಟುವೆ. ॥ ೯ ॥

* ರಾಮಾವತಾರದಲ್ಲಿ ಭಗವಂತನಿಗೆ ನಾನು ತಮ್ಮನಾಗಿದ್ದೆ. ಇದರಿಂದ ಅಣ್ಣನ ಆಜ್ಞೆಯನ್ನು ಪಾಲಿಸಬೇಕಾಯಿತು. ಅವನು ಕಾಡಿಗೆ ಹೋಗುವಾಗ ತಡೆಯಲಾಗಲಿಲ್ಲ. ಈಗ ಕೃಷ್ಣಾವತಾರದಲ್ಲಿ ಅಣ್ಣನಾಗಿ ಭಗವಂತನ ಸೇವೆಯನ್ನು ಚೆನ್ನಾಗಿ ಮಾಡುವೆನು ಎಂದು ವಿಚಾರಮಾಡಿದ ಶೇಷದೇವರು ಶ್ರೀಕೃಷ್ಣನಿಗಿಂತ ಮೊದಲೇ ಗರ್ಭವನ್ನು ಪ್ರವೇಶಿಸಿದರು.

ಅರ್ಚಿಷ್ಯಂತಿ ಮನುಷ್ಯಾಸ್ತ್ವಾಂ ಸರ್ವಕಾಮವರೇಶ್ವರೀಮ್ ।
ಧೂಪೋಪಹಾರಬಲಿಭಿಃ ಸರ್ವಕಾಮವರಪ್ರದಾಮ್ ॥ ೧೦ ॥

ನಾಮಧೇಯಾನಿ ಕುರ್ವಂತಿ ಸ್ಥಾನಾನಿ ಚ ನರಾ ಭುವಿ ।
ದುರ್ಗೇತಿ ಭದ್ರಕಾಲೀತಿ ವಿಜಯಾ ವೈಷ್ಣವೀತಿ ಚ ॥ ೧೧ ॥

ಕುಮುದಾ ಚಂಡಿಕಾ ಕೃಷ್ಣಾ ಮಾಧವೀ ಕನ್ಯಕೇತಿ ಚ ।
ಮಾಯಾ ನಾರಾಯಣೀಶಾನಿ ಶಾರದೇತ್ಯಂಬಿಕೇತಿ ಚ ॥ ೧೨ ॥

ಗರ್ಭಸಂಕರ್ಷಣಾತ್ತಂ ವೈ ಪ್ರಾಹುಃ ಸಂಕರ್ಷಣಂ ಭುವಿ ।
ರಾಮೇತಿ ಲೋಕರಮಣಾದ್ಬಲಂ ಬಲವದುಚ್ಛ್ರಯಾತ್ ॥ ೧೩ ॥

ಸಂದಿಷ್ಟೈವಂ ಭಗವತಾ ತಥೇತ್ಯೋಮಿತಿ ತದ್ವಚಃ ।
ಪ್ರತಿಗೃಹ್ಯ ಪರಿಕ್ರಮ್ಯ ಗಾಂ ಗತಾ ತತ್ತಥಾಕರೋತ್ ॥ ೧೪ ॥

ಗರ್ಭೇ ಪ್ರಣೀತೇ ದೇವಕ್ಯಾ ರೋಹಿಣೀಂ ಯೋಗನಿದ್ರಯಾ ।
ಅಹೋ ವಿಸ್ರಂಸಿತೋ ಗರ್ಭ ಇತಿ ಪೌರಾ ವಿಚುಕ್ರುಶುಃ ॥ ೧೫ ॥

ಭಗವಾನಪಿ ವಿಶ್ವಾತ್ಮಾ ಭಕ್ತಾನಾಮಭಯಂಕರಃ ।
ಆವಿವೇಶಾಂಶಭಾಗೇನ ಮನ ಆನಕದುಂದುಭೇಃ ॥ ೧೬ ॥

ಸ ಬಿಭ್ರತ್ಪೌರುಷಂ ಧಾಮ ಭ್ರಾಜಮಾನೋ ಯಥಾ ರವಿಃ ।
ದುರಾಸದೋಽತಿದುರ್ಧರ್ಷೋ ಭೂತಾನಾಂ ಸಂಬಭೂವ ಹ ॥ ೧೭ ॥

ತತೋ ಜಗನ್ಮಂಗಲಮಚ್ಯುತಾಂಶಂ
ಸಮಾಹಿತಂ ಶೂರಸುತೇನ ದೇವೀ ।
ದಧಾರ ಸರ್ವಾತ್ಮಕಮಾತ್ಮಭೂತಂ
ಕಾಷ್ಠಾ ಯಥಾಽಽನಂದಕರಂ ಮನಸ್ತಃ ॥ ೧೮ ॥

ಸಾ ದೇವಕೀ ಸರ್ವಜಗನ್ನಿವಾಸ-
ನಿವಾಸಭೂತಾ ನಿತರಾಂ ನ ರೇಜೇ ।
ಭೋಜೇಂದ್ರಗೇಹೇಽಗ್ನಿಶಿಖೇವ ರುದ್ಧಾ
ಸರಸ್ವತೀ ಜ್ಞಾನಖಲೇ ಯಥಾ ಸತೀ ॥ ೧೯ ॥

ಜನರು ಬೇಡಿದ ವರಗಳನ್ನು ಕೊಡುವುದರಲ್ಲಿ ನೀನು ಸಮರ್ಥಳಾಗುವೆ. ಮನುಷ್ಯರು ತಮ್ಮ ಸಮಸ್ತ ಅಭಿಲಾಷೆಗಳನ್ನು ಪೂರೈಸುವವಳು ಎಂದು ತಿಳಿದು ನಿನ್ನನ್ನು ಧೂಪ-ದೀಪ ನೈವೇದ್ಯಾದಿ ಉಪಚಾರಗಳಿಂದ ಪೂಜಿಸುವರು. ॥ ೧೦ ॥ ಭೂಲೋಕದಲ್ಲಿ ನಿನ್ನನ್ನು ದುರ್ಗಾ, ಭದ್ರಕಾಲಿ, ವಿಜಯಾ, ವೈಷ್ಣವೀ, ಕುಮುದಾ, ಚಂಡಿಕಾ, ಕೃಷ್ಣಾ, ಮಾಧವೀ, ಕನ್ಯಕಾ, ಮಹಾಮಾಯಾ, ನಾರಾಯಣೀ, ಈಶಾನೀ, ಶಾರದಾ, ಅಂಬಿಕಾ ಇವೇ ಮುಂತಾದ ಅನೇಕ ನಾಮಗಳಿಂದ ಕೊಂಡಾಡುವರು. ॥ ೧೧-೧೨ ॥ ದೇವಕಿಯ ಗರ್ಭದಿಂದ ಸೆಳೆಯಲ್ಪಟ್ಟ ಕಾರಣದಿಂದ ಮಹಾಶೇಷನನ್ನು ಪ್ರಪಂಚದಲ್ಲಿ ಜನರು 'ಸಂಕರ್ಷಣ'ನೆಂದು ಹೇಳುವರು. ಲೋಕರಂಜಕನಾದ್ದರಿಂದ 'ರಾಮ' ಎಂದೂ, ಬಲವಂತರಲ್ಲಿ ಶ್ರೇಷ್ಠನಾದ್ದರಿಂದ 'ಬಲಭದ್ರ' ಎಂದೂ ಹೇಳುವರು. ॥ ೧೩ ॥

ಭಗವಂತನು ಹೀಗೆ ಆಜ್ಞಾಪಿಸಿದಾಗ ಯೋಗಮಾಯೆಯು 'ಹಾಗೆಯೇ ಆಗಲಿ' ಎಂದು ಹೇಳಿ ಅವನ ಮಾತನ್ನು ಶಿರಸಾವಹಿಸಿ, ಅವನಿಗೆ ಪ್ರದಕ್ಷಿಣೆ ಮಾಡಿ ಭೂಲೋಕಕ್ಕೆ ಬಂದು ಭಗವಂತನು ಹೇಳಿದಂತೆಯೇ ಮಾಡಿದಳು. ॥ ೧೪ ॥ ಯೋಗಮಾಯೆಯು ದೇವಕಿಯ ಗರ್ಭವನ್ನು ಕೊಂಡುಹೋಗಿ ರೋಹಿಣಿಯ ಉದರದಲ್ಲಿ ಸ್ಥಾಪಿಸಿದಾಗ ಮಥುರಾಪುರವಾಸಿಗಳು ದುಃಖದಿಂದ ಅಯ್ಯೋ! ಬಡಪಾಯಿ ದೇವಕಿಯ ಈ ಗರ್ಭವು ನಾಶವಾಗಿ ಹೋಯಿತಲ್ಲ! ಎಂದು ಪರಸ್ಪರ ಆಡಿಕೊಳ್ಳತೊಡಗಿದರು. ॥ ೧೫ ॥

ಭಕ್ತರಿಗೆ ಅಭಯವನ್ನು ಕೊಡುವವನೂ, ಎಲ್ಲೆಡೆಗಳಲ್ಲಿ ಎಲ್ಲ ರೂಪಗಳಿಂದ ಇರುವವನೂ, ಬರುವಿಕೆ-ಹೋಗುವಿಕೆ ಎಂಬುದಿಲ್ಲದವನೂ ಆದ ಭಗವಂತನು ತನ್ನ ಸಮಸ್ತ ಕಲೆಗಳೊಂದಿಗೆ ವಸುದೇವನ ಮನಸ್ಸಿನಲ್ಲಿ ಪ್ರಕಟಗೊಂಡನು. ॥ ೧೬ ॥ ಮನಸ್ಸಿನಲ್ಲಿ ಮೊದಲಿನಿಂದಲೂ ಅವ್ಯಕ್ತನಾಗಿದ್ದವನು ವ್ಯಕ್ತನಾದನು. ಭಗವಂತನ ದಿವ್ಯತೇಜಸ್ಸನ್ನು ಧರಿಸಿದ ವಸುದೇವನು ಸೂರ್ಯನಂತೆ ದೇದೀಪ್ಯಮಾನನಾಗಿ ಕಂಗೊಳಿಸಿದನು. ಅವನನ್ನು ನೋಡಿದವರ ಕಣ್ಣುಗಳು ಕುಕ್ಕುತ್ತಿದ್ದವು. ಯಾರೂ ಅವನನ್ನು ಬಲದಿಂದಾಗಲೀ, ವಾಣಿಯಿಂದಾಗಲೀ, ಪ್ರಭಾವದಿಂದಾಗಲೀ ಎದುರಿಸಲಾಗುತ್ತಿರಲಿಲ್ಲ. ॥ ೧೭ ॥ ಜಗತ್ತಿಗೆ ಪರಮ ಮಂಗಳಕರವಾದ ಭಗವಂತನ ಆ ಜ್ಯೋತಿರ್ಮಯ ಅಂಶವು ವಸುದೇವನ ಮೂಲಕ ಆಧಾನ ಮಾಡಲ್ಪಟ್ಟಾಗ ಪೂರ್ವದಿಕ್ಕು ಚಂದ್ರನನ್ನು ಧರಿಸುವಂತೆಯೇ ಶುದ್ಧ ಸತ್ತ್ವಸಂಪನ್ನಳಾದ ದೇವಕೀದೇವಿಯು ವಿಶುದ್ಧ ಮನಸ್ಸಿನಿಂದ ಸರ್ವಾತ್ಮನೂ, ಆತ್ಮಸ್ವರೂಪನೂ ಆದ ಭಗವಂತನನ್ನು ಧರಿಸಿಕೊಂಡಳು. ॥ ೧೮ ॥ ಭಗವಂತನು ಇಡೀ ಜಗತ್ತಿಗೆ ನಿವಾಸಸ್ಥಾನನಾಗಿದ್ದಾನೆ. ದೇವಕಿಯು ಅವನಿಗೂ ನಿವಾಸಸ್ಥಾನಳಾದಳು. ಗಡಿಗೆಯಲ್ಲಿಟ್ಟ ದೀಪದ ಬೆಳಕು ಹೊರಗೆ ಹರಡದಂತೆ, ಜ್ಞಾನವಂತನ ವಿದ್ಯೆಯು ಪ್ರಕಾಶಕ್ಕೆ ಬರದಂತೆಯೇ ಕಂಸನ ಕಾರಾಗೃಹದಲ್ಲಿ ಬಂದಿಯಾಗಿದ್ದ ದೇವಕಿಯ ಪ್ರಭೆಯು ಪೂರ್ಣವಾಗಿ ಶೋಭಿಸಲಿಲ್ಲ. ॥ ೧೯ ॥

ತಾಂ ವೀಕ್ಷ್ಯ ಕಂಸಃ ಪ್ರಭಯಾ ಜಿತಾಂತರಾಂ
ವಿರೋಚಯಂತೀಂ ಭವನಂ ಶುಚಿಸ್ಮಿತಾಮ್ ।
ಆಹೈಷ ಮೇ ಪ್ರಾಣಹರೋ ಹರಿರ್ಗುಹಾಂ
ಧ್ರುವಂ ಶ್ರಿತೋ ಯನ್ನ ಪುರೇಯಮೀದೃಶೀ ॥ ೨೦ ॥

ಕಿಮದ್ಯ ತಸ್ಮಿನ್ಕರಣೀಯಮಾಶು ಮೇ
ಯದರ್ಥತಂತ್ರೋ ನ ವಿಹಂತಿ ವಿಕ್ರಮಮ್ ।
ಸ್ತ್ರಿಯಾಃ ಸ್ವಸುರ್ಗುರುಮತ್ಯಾ ವಧೋಽಯಂ
ಯಶಃ ಶ್ರಿಯಂ ಹಂತ್ಯನುಕಾಲಮಾಯುಃ ॥ ೨೧ ॥

ಸ ಏಷ ಜೀವನ್ ಖಲು ಸಂಪರೇತೋ
ವರ್ತೇತ ಯೋಽತ್ಯಂತನೃಶಂಸಿತೇನ ।
ದೇಹೇ ಮೃತೇ ತಂ ಮನುಜಾಃ ಶಪಂತಿ
ಗಂತಾ ತಮೋಽಂಧಂ ತನುಮಾನಿನೋ ಧ್ರುವಮ್ ॥ ೨೨ ॥

ಇತಿ ಘೋರತಮಾದ್ಭಾವಾತ್ಸಂನಿವೃತ್ತಃ ಸ್ವಯಂ ಪ್ರಭುಃ ।
ಆಸ್ತೇ ಪ್ರತೀಕ್ಷಂಸ್ತಜ್ಜನ್ಮ ಹರೇರ್ವೈರಾನುಬಂಧಕೃತ್ ॥ ೨೩ ॥

ಆಸೀನಃ ಸಂವಿಶಂಸ್ತಿಷ್ಠನ್ಭುಂಜಾನಃ ಪರ್ಯಟನ್ಮಹೀಮ್ ।
ಚಿಂತಯಾನೋ ಹೃಷೀಕೇಶಮಪಶ್ಯತ್ತನ್ಮಯಂ ಜಗತ್ ॥ ೨೪ ॥

ಬ್ರಹ್ಮಾ ಭವಶ್ಚ ತತ್ರೈತ್ಯ ಮುನಿಭಿರ್ನಾರದಾದಿಭಿಃ ।
ದೇವೈಃ ಸಾನುಚರೈಃ ಸಾಕಂ ಗೀರ್ಭಿರ್ವೃಷಣಮೈಡಯನ್ ॥ ೨೫ ॥

ಸತ್ಯವ್ರತಂ ಸತ್ಯಪರಂ ತ್ರಿಸತ್ಯಂ
ಸತ್ಯಸ್ಯ ಯೋನಿಂ ನಿಹಿತಂ ಚ ಸತ್ಯೇ ।
ಸತ್ಯಸ್ಯ ಸತ್ಯಮೃತಸತ್ಯನೇತ್ರಂ
ಸತ್ಯಾತ್ಮಕಂ ತ್ವಾಂ ಶರಣಂ ಪ್ರಪನ್ನಾಃ ॥ ೨೬ ॥

ಭಗವಂತನು ದೇವಕಿಯ ಗರ್ಭದಲ್ಲಿ ವಿರಾಜಮಾನನಾದಾಗ ಆಕೆಯ ಮುಖದಲ್ಲಿ ಪವಿತ್ರ ಮುಗುಳ್ನಗೆ ಇತ್ತು. ಆಕೆಯ ಶರೀರದ ಕಾಂತಿಯಿಂದ ಕಾರಾಗೃಹವು ಬೆಳಗಿ ಹೋಯಿತು. ಕಂಸನು ಬಂದುನೋಡಿದಾಗ ಅವನು ಮನಸ್ಸಿನಲ್ಲೇ ಈ ಬಾರಿ ನನ್ನ ಪ್ರಾಣಹರನಾದ ವಿಷ್ಣುವೇ ಇವಳ ಗರ್ಭದಲ್ಲಿ ನಿಶ್ಚಿತವಾಗಿ ಪ್ರವೇಶಿಸಿರುವನು. ಏಕೆಂದರೆ, ಇದಕ್ಕೆ ಮೊದಲು ದೇವಕಿಯು ಹೀಗೆ ಇರಲಿಲ್ಲವಲ್ಲ! ಎಂದು ತರ್ಕಿಸಿದನು. ॥ ೨೦ ॥ ಶತ್ರುವಿನ ನಿರಸನಕ್ಕಾಗಿ ನಾನು ಕೂಡಲೇ ಏನು ಮಾಡಲಿ? ದೇವಕಿಯನ್ನು ಕೊಲ್ಲುವುದೂ ಸರಿಯಾಗಲಾರದು. ಏಕೆಂದರೆ, ವೀರನಾದವನು ಸ್ವಾರ್ಥಪರನಾಗಿ ತನ್ನ ಪರಾಕ್ರಮವನ್ನು ಕಲಂಕಿತವಾಗಿಸುವುದಿಲ್ಲ. ಮೊದಲನೆಯದಾಗಿ ಇವಳು ಸ್ತ್ರೀಯಾಗಿದ್ದಾಳೆ. ಎರಡನೆಯದು ನನ್ನ ತಂಗಿಯಾಗಿದ್ದಾಳೆ, ಮೂರನೆಯದು ಗರ್ಭಿಣಿ ಬೇರೆ. ಇವಳನ್ನು ಕೊಂದುಬಿಟ್ಟರೆ ತತ್ಕಾಲವೇ ನನ್ನ ಕೀರ್ತಿ, ಲಕ್ಷ್ಮೀ ಮತ್ತು ಆಯುಸ್ಸು ನಾಶವಾಗಿ ಹೋದೀತು. ॥ ೨೧ ॥ ಅತ್ಯಂತ ಕ್ರೂರವಾಗಿ ವರ್ತಿಸುವವನು ಜೀವಿತನಾಗಿದ್ದರೂ ಸತ್ತಂತೆಯೇ ಅವನು. ಸತ್ತಮೇಲೆ ಜನರು ಅವನನ್ನು ಬೈಯ್ಯುವರು. ಇಷ್ಟೇ ಅಲ್ಲ, ಅವನು ದೇಹಾಭಿಮಾನಿಗಳಿಗೆ ಯೋಗ್ಯವಾದ ಘೋರ ನರಕಕ್ಕೆ ಅವಶ್ಯವಾಗಿ ಹೋಗುತ್ತಾನೆ. ॥ ೨೨ ॥ ಕಂಸನು ದೇವಕಿಯನ್ನು ಕೊಲ್ಲಬಲ್ಲವನಾಗಿದ್ದರೂ ಅವನು ಈ ಅತ್ಯಂತ ಕ್ರೂರವಾದ ವಿಚಾರದಿಂದ ನಿವೃತ್ತನಾದನು.* ಈಗ ಭಗವಂತನ ಕುರಿತು ದೃಢವಾದ ವೈರವನ್ನು ಕಟ್ಟಿಕೊಂಡು ಅವನ ಬರುವಿಕೆಯನ್ನು ಪ್ರತೀಕ್ಷೆ ಮಾಡುತ್ತಿದ್ದನು. ॥ ೨೩ ॥ ಈಗ ಅವನು ಕುಳಿತಾಗ-ನಿಂತಾಗ, ಉಂಬಾಗ ತಿಂಬಾಗ, ಮಲಗಿದ್ದಾಗ-ಎದ್ದಾಗ, ನಡೆದಾಡುವಾಗ ಎಲ್ಲ ಹೊತ್ತಿನಲ್ಲೂ ಶ್ರೀಕೃಷ್ಣನ ಚಿಂತನೆಯಲ್ಲೇ ಇರುತ್ತಿದ್ದನು. ಅವನು ಹೋದಲ್ಲಿ, ಎಲ್ಲಾದರೂ ಎಡವಿದಲ್ಲಿ ಅವನಿಗೆ ಶ್ರೀಕೃಷ್ಣನೇ ಕಂಡು ಬರುತ್ತಿದ್ದನು. ಹೀಗೆ ಅವನಿಗೆ ಇಡೀ ಜಗತ್ತೇ ಶ್ರೀಕೃಷ್ಣಮಯವಾಗಿ ಕಾಣತೊಡಗಿತು. ॥ ೨೪ ॥

ಪರೀಕ್ಷಿತನೇ! ಆ ಸಮಯದಲ್ಲಿ ಶಿವದೇವರು ಮತ್ತು ಬ್ರಹ್ಮದೇವರು ತಮ್ಮ ಅನುಚರರೊಡನೆಯೂ ನಾರದರೇ ಮೊದಲಾದ ಋಷಿಗಳೊಡನೆಯೂ ಕಂಸನ ಸೆರೆಮನೆಗೆ ಬಂದು ಸುಮಧುರವಾದ ಮಾತುಗಳಿಂದ ಎಲ್ಲರ ಅಭಿಲಾಷೆಗಳನ್ನು ಪೂರ್ಣಗೊಳಿಸುವಂತಹ ಶ್ರೀಹರಿಯನ್ನು ಹೀಗೆ ಸ್ತುತಿಸಲು ಪ್ರಾರಂಭಿಸಿದರು. ॥ ೨೫ ॥

ಪ್ರಭುವೇ! ನೀನು ಸತ್ಯಸಂಕಲ್ಪನಾಗಿರುವೆ. ಸತ್ಯವೇ ನಿನ್ನನ್ನು ಪಡೆಯುವ ಶ್ರೇಷ್ಠಸಾಧನವಾಗಿದೆ. ಸೃಷ್ಟಿಯ ಮೊದಲು, ಪ್ರಳಯದ ನಂತರ, ಪ್ರಪಂಚದ ಸ್ಥಿತಿಯ ಸಮಯದಲ್ಲಿ – ಈ ಮೂರೂ ಅವಸ್ಥೆಗಳಲ್ಲಿ ಸತ್ಯನಾದ ನೀನೇ ಇರುವವನು. ಪೃಥಿವಿ, ಜಲ, ತೇಜ, ವಾಯು, ಆಕಾಶ ಈ ಐದು ದೃಶ್ಯಮಾನ ಸತ್ಯಗಳ ಕಾರಣನು ನೀನೇ ಆಗಿರುವೆ ಹಾಗೂ ಅವುಗಳ ಅಂತರ್ಯಾಮಿ

* ವಿವಾಹದ ಮಾಂಗಲಿಕ ಚಿಹ್ನೆಗಳನ್ನು ಧರಿಸಿದ್ದ ದೇವಕಿಯನ್ನು ಕೊಲ್ಲಲು ಮುಂದಾದ ಆ ಕಂಸನೇ ಇಂದು ಇಷ್ಟು ಸದಸತ್‌ವಿಚಾರವಂತನಾದನು. ಇದರ ಕಾರಣವೇನು? ದೇವಕಿಯ ಅಂತರಂಗದಲ್ಲಿ – ಗರ್ಭದಲ್ಲಿ ಶ್ರೀಭಗವಂತನಿರುವನು. ಅಂತಹವಳನ್ನು ಇಂದು ಅವನು ನೋಡುತ್ತಿರುವನು. ಯಾರೊಳಗೆ ಭಗವಂತನಿರುವನೋ ಅವನ ದರ್ಶನದಿಂದ ಸದ್ಬುದ್ಧಿಯು ಉದಯಿಸುವುದು ಆಶ್ಚರ್ಯದ ಮಾತಲ್ಲವಲ್ಲ!

ಯವಾಗಿ ವಿರಾಜಿಸುತ್ತಿರುವೆ. ನೀನೇ ಕಾಣುತ್ತಿರುವ ಈ ಜಗತ್ತಿಗೆ ಪರಮಾರ್ಥಸ್ವರೂಪನಾಗಿರುವೆ. ಸತ್ಯವಚನಕ್ಕೂ, ಸಮದೃಷ್ಟಿಗೂ ನೀನೇ ಪ್ರೇರಕನು. ಹೀಗೆ ಸಮಸ್ತ ವಿಷಯಗಳಲ್ಲಿ ಸತ್ಯಸ್ವರೂಪನೇ ಆಗಿರುವ, ಸತ್ಯನೇ ಆದ ನಿನ್ನನ್ನು ಶರಣುಹೊಂದುತ್ತೇವೆ. ॥ ೨೬ ॥

ಏಕಾಯನೋಽಸೌ ದ್ವಿಫಲಸ್ತ್ರಿಮೂಲ-
ಶ್ಚತೂರಸಃ ಪಂಚವಿಧಃ ಷಡಾತ್ಮಾ ।
ಸಪ್ತತ್ವಗಷ್ಟವಿಟಪೋ ನವಾಕ್ಷೋ
ದಶಚ್ಛದೀ ದ್ವಿಖಗೋ ಹ್ಯಾದಿವೃಕ್ಷಃ ॥ ೨೭ ॥

ಈ ಸಂಸಾರವೆಂಬುದು ಒಂದು ಸನಾತನ ವೃಕ್ಷವಾಗಿದೆ. ಈ ಸನಾತನ ವೃಕ್ಷಕ್ಕೆ ಮೂಲಪ್ರಕೃತಿಯೊಂದೇ ಆಶ್ರಯವು. ಸುಖ-ದುಃಖಗಳೇ ಇದರ ಎರಡು ಫಲಗಳು. ಸತ್ತ್ವ-ರಜ-ತಮಸ್ಸುಗಳೆಂಬುದೇ ಈ ವೃಕ್ಷದ ಬೇರುಗಳು. ಇದಕ್ಕೆ ಧರ್ಮ, ಅರ್ಥ, ಕಾಮ, ಮೋಕ್ಷಗಳೆಂಬ ನಾಲ್ಕು ವಿಧವಾದ ರಸಗಳು. ಕಿವಿ, ಚರ್ಮ, ಕಣ್ಣು, ನಾಲಿಗೆ, ಮೂಗು ಈ ಐದು ಇವನ್ನು ತಿಳಿಯುವ ಕರಣಗಳು (ಬೀಳಲು). ಹುಟ್ಟುವುದು, ಇರುವುದು, ಬೆಳೆಯುವುದು, ಬದಲಾಗುವುದು, ಕುಗ್ಗುವುದು, ನಾಶವಾಗುವುದು – ಇವು ಆರು ಇದರ ಸ್ವಭಾವಗಳು. ರಸ, ರುಧಿರ, ಮಾಂಸ, ಮೇದಸ್ಸು, ಮೂಳೆ, ಮಜ್ಜೆ, ಶುಕ್ರ ಇವು ಏಳು ಇದರ ತೊಗಟೆಗಳು. ಪಂಚ-ಮಹಾಭೂತಗಳು, ಮನಸ್ಸು, ಬುದ್ಧಿ, ಅಹಂಕಾರ ಈ ಎಂಟು ರೆಂಬೆಗಳು. ನವದ್ವಾರಗಳೇ ಇದರ ಒಂಬತ್ತು ಪೊಟರೆಗಳು. ಪ್ರಾಣ, ಅಪಾನ, ವ್ಯಾನ, ಉದಾನ, ಸಮಾನ, ನಾಗ, ಕೂರ್ಮ, ಕೃಕಲ, ದೇವದತ್ತ, ಧನಂಜಯ – ಎಂಬ ಹತ್ತು ಪ್ರಾಣಗಳೇ ಇದರ ಎಲೆಗಳು. ಜೀವೇಶ್ವರರು ಈ ಸಂಸಾರವೃಕ್ಷದ ಎರಡು ಹಕ್ಕಿಗಳಂತಿದ್ದಾರೆ. ॥ ೨೭ ॥

ತ್ವಮೇಕ ಏವಾಸ್ಯ ಸತಃ ಪ್ರಸೂತಿ-
ಸ್ತ್ವಂ ಸಂನಿಧಾನಂ ತ್ವಮನುಗ್ರಹಶ್ಚ ।
ತ್ವನ್ಮಾಯಯಾ ಸಂವೃತಚೇತಸಸ್ತ್ವಾಂ
ಪಶ್ಯಂತಿ ನಾನಾ ನ ವಿಪಶ್ಚಿತೋ ಯೇ ॥ ೨೮ ॥

ಈ ಸಂಸಾರರೂಪೀ ವೃಕ್ಷದ ಉತ್ಪತ್ತಿಯ ಆಧಾರನೂ ಏಕಮಾತ್ರ ನೀನೇ ಆಗಿರುವೆ. ನಿನ್ನಲ್ಲೇ ಇದರ ಪ್ರಳಯವಾಗುತ್ತದೆ. ನಿನ್ನ ಅನುಗ್ರಹದಿಂದಲೇ ಇದರ ರಕ್ಷಣೆಯೂ ಆಗುತ್ತದೆ. ಮಾಯೆಯಿಂದ ಆವೃತವಾದ ಚಿತ್ತವುಳ್ಳವರು ಈ ಸತ್ಯವನ್ನು ಅರಿಯದೆ ಇದರ ಉತ್ಪತ್ತಿ, ಸ್ಥಿತಿ, ಪ್ರಳಯ ಮಾಡುವಂತಹ ಅನೇಕ ಬ್ರಹ್ಮಾದಿ ದೇವತೆಗಳನ್ನು ನೋಡುತ್ತಾರೆ. ತತ್ತ್ವಜ್ಞಾನಿಗಳಾದವರು ಎಲ್ಲರ ರೂಪದಲ್ಲಿ ಕೇವಲ ನಿನ್ನನ್ನೇ ದರ್ಶಿಸುತ್ತಾರೆ. ॥ ೨೮ ॥

ಬಿಭರ್ಷಿ ರೂಪಾಣ್ಯವಬೋಧ ಆತ್ಮಾ
ಕ್ಷೇಮಾಯ ಲೋಕಸ್ಯ ಚರಾಚರಸ್ಯ ।
ಸತ್ತ್ವೋಪಪನ್ನಾನಿ ಸುಖಾವಹಾನಿ
ಸತಾಮಭದ್ರಾಣಿ ಮುಹುಃ ಖಲಾನಾಮ್ ॥ ೨೯ ॥

ನೀನು ಜ್ಞಾನಸ್ವರೂಪನಾದ ಆತ್ಮನಾಗಿರುವೆ. ಚರಾಚರ ಜಗತ್ತಿಗೆ ಕಲ್ಯಾಣವನ್ನುಂಟುಮಾಡುವ ಸಲುವಾಗಿ ಅನೇಕ ರೂಪಗಳನ್ನು ಧರಿಸುವೆ. ನಿನ್ನ ಆ ರೂಪಗಳು ಅಪ್ರಾಕೃತವೂ, ಶುದ್ಧ ಸತ್ತ್ವಮಯವೂ ಆಗಿವೆ. ಸತ್ಪುರುಷರಿಗೆ ಸುಖಕರಗಳಾಗಿವೆ. ಜೊತೆಗೆ ದುಷ್ಟರಿಗೆ ದುಷ್ಟತೆಯ ಶಿಕ್ಷೆಯನ್ನೂ ಕೊಡುತ್ತವೆ. ಅವರಿಗೆ ಅಮಂಗಳವೂ ಆಗಿರುತ್ತವೆ. ॥ ೨೯ ॥

ತ್ವಯ್ಯಂಬುಜಾಕ್ಷಾಖಿಲಸತ್ತ್ವಧಾಮ್ನಿ
ಸಮಾಧಿನಾಽಽವೇಶಿತಚೇತಸೈಕೇ ।
ತ್ವತ್ಪಾದಪೋತೇನ ಮಹತ್ಕೃತೇನ
ಕುರ್ವಂತಿ ಗೋವತ್ಸಪದಂ ಭವಾಬ್ಧಿಮ್ ॥ ೩೦ ॥

ಓ ಕಮಲಾಕ್ಷನೇ! ಪ್ರಭುವೇ! ಕೆಲವೇ ಜನರು ಸಮಸ್ತ ಪದಾರ್ಥಗಳ, ಪ್ರಾಣಿಗಳ ಆಶ್ರಯಸ್ವರೂಪನಾದ ನಿನ್ನ ರೂಪದಲ್ಲಿ ಪೂರ್ಣ ಏಕಾಗ್ರತೆಯಿಂದ ತಮ್ಮ ಚಿತ್ತವನ್ನು ನೆಡಬಲ್ಲರು. ನಿನ್ನ ಚರಣಕಮಲರೂಪವಾದ ನೌಕೆಯನ್ನು ಆಶ್ರಯಿಸಿ ಈ ಸಂಸಾರಸಾಗರವನ್ನು ಕರುವಿನ ಗೊರಸಿನಷ್ಟು ಹಳ್ಳವನ್ನು ದಾಟುವಂತೆ ಆಯಾಸವಿಲ್ಲದೆ ದಾಟಿಹೋಗುತ್ತಾರೆ. ಏಕೆಂದರೆ, ಇಂದಿನವರೆಗಿನ ಸಂತರು ಈ ನೌಕೆಯಿಂದಲೇ ಸಂಸಾರಸಾಗರವನ್ನು ದಾಟಿಹೋಗಿದ್ದಾರಲ್ಲ! ॥ ೩೦ ॥ ಪರಮ ಪ್ರಕಾಶಸ್ವರೂಪನಾದ ಪರಮಾತ್ಮನೇ! ನಿನ್ನ ಭಕ್ತಜನರು ಸಮಸ್ತ ಜಗತ್ತಿಗೂ ನಿಷ್ಕಪಟ ಪ್ರೇಮಿಗಳೂ, ಹಿತೈಷಿಗಳೂ ಆಗಿರುತ್ತಾರೆ. ಅವರೇನೋ ಸ್ವತಃ ಈ ದುಸ್ತರವಾದ ಭಯಂಕರ ಸಂಸಾರಸಾಗರವನ್ನು ದಾಟಿಯೇ ಹೋಗುತ್ತಾರೆ.

ಸ್ವಯಂ ಸಮುತ್ತೀರ್ಯ ಸುದುಸ್ತರಂ ದ್ಯುಮ-
ನ್ಭವಾರ್ಣವಂ ಭೀಮಮದಭ್ರಸೌಹೃದಾಃ ।
ಭವತ್ಪದಾಂಭೋರುಹನಾವಮತ್ರ ತೇ
ನಿಧಾಯ ಯಾತಾಃ ಸದನುಗ್ರಹೋ ಭವಾನ್ ॥ ೩೦ ॥

ಯೇಽನ್ಯೇಽರವಿಂದಾಕ್ಷ ವಿಮುಕ್ತಮಾನಿನ-
ಸ್ತ್ವಯ್ಯಸ್ತಭಾವಾದವಿಶುದ್ಧಬುದ್ಧಯಃ ।
ಆರುಹ್ಯ ಕೃಚ್ಛ್ರೇಣ ಪರಂ ಪದಂ ತತಃ
ಪತಂತ್ಯಧೋಽನಾದೃತಯುಷ್ಮದಂಘ್ರಯಃ ॥ ೩೧ ॥

ತಥಾ ನ ತೇ ಮಾಧವ ತಾವಕಾಃ ಕ್ವಚಿದ್
ಭ್ರಶ್ಯಂತಿ ಮಾರ್ಗಾತ್ತ್ವಯಿ ಬದ್ಧಸೌಹೃದಾಃ ।
ತ್ವಯಾಭಿಗುಪ್ತಾ ವಿಚರಂತಿ ನಿರ್ಭಯಾ
ವಿನಾಯಕಾನೀಕಪಮೂರ್ಧಸು ಪ್ರಭೋ ॥ ೩೨ ॥

ಸತ್ತ್ವಂ ವಿಶುದ್ಧಂ ಶ್ರಯತೇ ಭವಾನ್ ಸ್ಥಿತೌ
ಶರೀರಿಣಾಂ ಶ್ರೇಯ ಉಪಾಯನಂ ವಪುಃ ।
ವೇದಕ್ರಿಯಾಯೋಗತಪಃಸಮಾಧಿಭಿ-
ಸ್ತವಾರ್ಹಣಂ ಯೇನ ಜನಃ ಸಮೀಹತೇ ॥ ೩೩ ॥

ಸತ್ತ್ವಂ ನ ಚೇದ್ಧಾತರಿದಂ ನಿಜಂ ಭವೇ-
ದ್ವಿಜ್ಞಾನಮಜ್ಞಾನಭಿದಾಪಮಾರ್ಜನಮ್ ।
ಗುಣಪ್ರಕಾಶೈರನುಮೀಯತೇ ಭವಾನ್
ಪ್ರಕಾಶತೇ ಯಸ್ಯ ಚ ಯೇನ ವಾ ಗುಣಃ ॥ ೩೪ ॥

ನ ನಾಮರೂಪೇ ಗುಣಜನ್ಮಕರ್ಮಭಿ-
ರ್ನಿರೂಪಿತವ್ಯೇ ತವ ತಸ್ಯ ಸಾಕ್ಷಿಣಃ ।
ಮನೋವಚೋಭ್ಯಾಮನುಮೇಯವರ್ತ್ಮನೋ
ದೇವ ಕ್ರಿಯಾಯಾಂ ಪ್ರತಿಯಂತ್ಯಥಾಪಿ ಹಿ ॥ ೩೫ ॥

ಆದರೆ ಬೇರೆಯವರ ಕಲ್ಯಾಣಕ್ಕಾಗಿಯೇ ಅವರು ಇಲ್ಲಿ ನಿನ್ನ ಚರಣ ಕಮಲಗಳ ನೌಕೆಯನ್ನು ಸ್ಥಾಪಿಸಿ ಹೋಗುತ್ತಾರೆ. ಏಕೆಂದರೆ ಸತ್ಪುರುಷರ ಮೇಲೆ ನಿನ್ನ ಮಹತ್ಕೃಪೆ ಇದೆ. ಅವರಿಗಾಗಿ ನೀನು ಅನುಗ್ರಹಸ್ವರೂಪನೇ ಆಗಿರುವೆ. ॥ ೩೦ ॥

ಕಮಲನಯನನೇ! ಜ್ಞಾನಮಾರ್ಗವನ್ನು ಹಿಡಿದಿರುವ ಕೆಲವರು ತಾವು ಮುಕ್ತರೆಂದು ಭಾವಿಸುತ್ತಾರೆ. ಅಂತಹವರಿಗೆ ನಿನ್ನಲ್ಲಿ ಅನನ್ಯ ಭಕ್ತಿಯಿಲ್ಲದ ಕಾರಣ ಅವರ ಬುದ್ಧಿಯು ಶುದ್ಧವಾಗಿ ಇರುವುದಿಲ್ಲ. ಅತಿ ಕಷ್ಟಕರ ಸಾಧನೆಯಿಂದ ಅಂತಹವರು ಪರಮಪದದ ಮಾರ್ಗದಲ್ಲಿ ನಡೆಯುತ್ತಿದ್ದರೂ ನಿನ್ನ ಪಾದಾರವಿಂದಗಳಲ್ಲಿ ಪ್ರೇಮ ಇಲ್ಲದಿರುವುದರಿಂದ ಸ್ವಲ್ಪಕಾಲದಲ್ಲೇ ಸಂಸಾರದಲ್ಲಿ ಬಿದ್ದು ಪತನರಾಗುವರು. ॥ ೩೧ ॥ ಮಾಧವನೇ! ಪ್ರಭುವೇ! ಆದರೆ ನಿನ್ನ ಚರಣಗಳಲ್ಲಿ ನಿಜವಾದ ಪ್ರೀತಿಯುಳ್ಳ ನಿನ್ನ ನಿಜಭಕ್ತರು ಎಂದಿಗೂ ಈ ಜ್ಞಾನಾಭಿಮಾನಿಗಳಂತೆ ತಮ್ಮ ಸಾಧನೆಯಿಂದ ಭ್ರಷ್ಟರಾಗುವುದಿಲ್ಲ. ನಿನ್ನಿಂದ ರಕ್ಷಿಸಲ್ಪಟ್ಟವರಾಗಿ ನಿನ್ನ ಅನುಗ್ರಹದಿಂದ ವಿಘ್ನದೇವತೆಗಳ ತಲೆಯನ್ನು ಮೆಟ್ಟಿ ನಿರ್ಭಯವಾಗಿ ಸಂಚರಿಸುತ್ತಾರೆ. ॥ ೩೨ ॥ ನೀನು ಪ್ರಪಂಚದ ಸ್ಥಿತಿಗಾಗಿ ಸಮಸ್ತದೇಹಧಾರಿಗಳಿಗೆ ಪರಮ ಶ್ರೇಯಸ್ಸನ್ನು ಪ್ರದಾನ ಮಾಡುವ ವಿಶುದ್ಧ ಸತ್ತ್ವಮಯ ಸಚ್ಚಿದಾನಂದಮಯ, ಪರಮ ದಿವ್ಯ ಮಂಗಳವಿಗ್ರಹನಾಗಿ ಪ್ರಕಟಗೊಳ್ಳುವೆ. ಆ ರೂಪದಲ್ಲಿ ಪ್ರಕಟವಾಗುವುದರಿಂದಲೇ ನಿನ್ನ ಭಕ್ತರು ವೇದ, ಕರ್ಮಕಾಂಡ, ಅಷ್ಟಾಂಗಯೋಗ, ತಪಸ್ಸು, ಸಮಾಧಿ ಇವುಗಳ ಮೂಲಕ ನಿನ್ನನ್ನು ಆರಾಧಿಸುತ್ತಾರೆ. ಯಾವುದೇ ಆಶ್ರಯವಿಲ್ಲದೆ ಯಾರ ಆರಾಧನೆ ಮಾಡಬಲ್ಲರು? ॥ ೩೩ ॥ ಪ್ರಭೋ! ನೀನೇ ಎಲ್ಲರ ನಿಯಾಮಕನಾಗಿರುವೆ. ನಿನ್ನ ಈ ವಿಶುದ್ಧ ಸತ್ತ್ವಮಯ ನಿಜಸ್ವರೂಪವು ಇಲ್ಲದಿದ್ದರೆ ಅಜ್ಞಾನ ಮತ್ತು ಅದರಿಂದುಂಟಾಗುವ ಭೇದಭಾವವನ್ನು ನಾಶಗೊಳಿಸುವಂತಹ ಅಪರೋಕ್ಷಜ್ಞಾನ ಯಾರಿಗೂ ಆಗುತ್ತಿರಲಿಲ್ಲ. ಜಗತ್ತಿನಲ್ಲಿ ಕಂಡುಬರುವ ತ್ರಿಗುಣಗಳು ನಿನ್ನವೇ ಆಗಿವೆ, ನಿನ್ನಿಂದಲೇ ಪ್ರಕಾಶಿತವಾಗುವುದೂ ಸತ್ಯವೇ ಆಗಿದೆ. ಆದರೆ ಈ ಗುಣಗಳ ಪ್ರಕಾಶಕ ವೃತ್ತಿಗಳಿಂದ ನಿನ್ನ ಸ್ವರೂಪದ ಕೇವಲ ಅನುಮಾನವೇ ಆಗುತ್ತದೆ, ವಾಸ್ತವಿಕ ಸ್ವರೂಪದ ಸಾಕ್ಷಾತ್ಕಾರವಾಗುವುದಿಲ್ಲ. (ನಿನ್ನ ಸ್ವರೂಪದ ಸಾಕ್ಷಾತ್ಕಾರವಾದರೋ ನಿನ್ನ ಈ ವಿಶುದ್ಧ ಸತ್ತ್ವಮಯ ಸ್ವರೂಪದ ಸೇವೆಮಾಡಿದಾಗಲೇ ನಿನ್ನ ಕೃಪೆಯಿಂದ ಆಗುತ್ತದೆ.) ॥ ೩೪ ॥ ಭಗವಂತನೇ! ಮನಸ್ಸು ಮತ್ತು ವೇದವಾಣಿಯಿಂದ ಕೇವಲ ನಿನ್ನ ಸ್ವರೂಪದ ಅನುಮಾನ ಮಾತ್ರವಾಗುತ್ತದೆ. ಏಕೆಂದರೆ, ನೀನು ಅವುಗಳ ಮೂಲಕ ದೃಶ್ಯನಲ್ಲ; ಅವುಗಳ ಸಾಕ್ಷಿಯಾಗಿರುವೆ. ಅದಕ್ಕಾಗಿ ನಿನ್ನ ಗುಣ, ಜನ್ಮ ಮತ್ತು ಕರ್ಮವೇ ಮೊದಲಾದವುಗಳ ಮೂಲಕ ನಿನ್ನ ನಾಮ-ರೂಪಗಳ ನಿರೂಪಣೆ ಮಾಡಲಾಗುವುದಿಲ್ಲ. ಹೀಗಿದ್ದರೂ ಪ್ರಭುವೇ! ನಿನ್ನ ಭಕ್ತಜನರು ಉಪಾಸನಾದಿ ಕ್ರಿಯಾಯೋಗಗಳ ಮೂಲಕ ನಿನ್ನ ಸಾಕ್ಷಾತ್ಕಾರವನ್ನಾದರೋ ಪಡೆದುಕೊಳ್ಳುವರು. ॥ ೩೫ ॥

ಶೃಣ್ವನ್ ಗೃಣನ್ಸಂಸ್ಮರಯಂಶ್ಚ ಚಿಂತಯನ್
ನಾಮಾನಿ ರೂಪಾಣಿ ಚ ಮಂಗಲಾನಿ ತೇ ।
ಕ್ರಿಯಾಸು ಯಸ್ತ್ವಚ್ಚರಣಾರವಿಂದಯೋ-
ರಾವಿಷ್ಟಚೇತಾ ನ ಭವಾಯ ಕಲ್ಪತೇ ॥ ೩೭ ॥

ನಿನ್ನ ಮಂಗಳಮಯ ನಾಮಗಳನ್ನು ಮತ್ತು ರೂಪಗಳನ್ನು ಶ್ರವಣ ಮಾಡುತ್ತಾ, ಕೀರ್ತಿಸುತ್ತಾ, ಸ್ಮರಿಸುತ್ತಾ, ಧ್ಯಾನಿಸುತ್ತಾ ನಿನ್ನ ಚರಣ ಕಮಲಗಳ ಸೇವೆಯಲ್ಲೇ ಮನಸ್ಸನ್ನು ತೊಡಗಿಸಿದವನಿಗೆ ಮತ್ತೆ ಜನ್ಮ ಮೃತ್ಯುರೂಪವಾದ ಸಂಸಾರಚಕ್ರದಲ್ಲಿ ಸಿಕ್ಕಿಕೊಳ್ಳಬೇಕಾಗುವುದಿಲ್ಲ. ॥ ೩೭ ॥

ದಿಷ್ಟ್ಯಾ ಹರೇಽಸ್ಯಾ ಭವತಃ ಪದೋ ಭುವೋ
ಭಾರೋಽಪನೀತಸ್ತವ ಜನ್ಮನೇಶಿತುಃ ।
ದಿಷ್ಟ್ಯಾಂಕಿತಾಂ ತ್ವತ್ಪದಕೈಃ ಸುಶೋಭನೈ-
ರ್ದ್ರಕ್ಷ್ಯಾಮ ಗಾಂ ದ್ಯಾಂ ಚ ತವಾನುಕಂಪಿತಾಮ್ ॥ ೩೮ ॥

ಸಮಸ್ತ ದುಃಖಗಳನ್ನು ದೂರಮಾಡುವ ದಯಾಮಯನಾದ ಭಗವಂತನೇ! ನೀನು ಸರ್ವೇಶ್ವರನು. ಈ ಪೃಥಿವಿಯಾದರೋ ನಿನ್ನ ಚರಣಕಮಲವೇ ಆಗಿದೆ. ನಿನ್ನ ಅವತಾರದಿಂದ ಇದರ ಭಾರ ದೂರವಾಗುವುದು. ಪ್ರಭೋ! ನಿನ್ನ ಸುಂದರವಾದ ಚರಣ ಚಿಹ್ನೆಗಳಿರುವ ಚರಣಕಮಲಗಳಿಂದ ಭೂಷಿತವಾದ ಈ ಭೂಮಿಯನ್ನು ನೋಡುವ ನಾವೇ ಭಾಗ್ಯಶಾಲಿಗಳು ಮತ್ತು ಸ್ವರ್ಗಲೋಕವನ್ನೂ ನಿನ್ನ ಕೃಪಾವಿಶೇಷದಿಂದ ಕೃತಾರ್ಥವಾಗಿರುವುದನ್ನು ನೋಡುವೆವು. ॥ ೩೮ ॥

ನ ತೇಽಭವಸ್ಯೇಶ ಭವಸ್ಯ ಕಾರಣಂ
ವಿನಾ ವಿನೋದಂ ಬತ ತರ್ಕಯಾಮಹೇ ।
ಭವೋ ನಿರೋಧಃ ಸ್ಥಿತಿರಪ್ಯವಿದ್ಯಯಾ
ಕೃತಾ ಯತಸ್ತ್ವಯ್ಯಭಯಾಶ್ರಯಾತ್ಮನಿ ॥ ೩೯ ॥

ಪ್ರಭುವೇ! ನೀನು ಹುಟ್ಟುಸಾವುಗಳಿಲ್ಲದವನು. ಆದರೆ ಈಗ ಮನುಷ್ಯರೂಪದಿಂದ ಹುಟ್ಟುತ್ತಿರುವೆ. ಇದರ ಕಾರಣವನ್ನು ನಾವು ಊಹಿಸುವುದಾದರೆ – ನೀನು ಭೂಮಿಯಲ್ಲಿ ಹುಟ್ಟುವುದು, ಬೆಳೆಯುವುದು ನಿನ್ನ ಲೀಲಾವಿನೋದವೆಂದೇ ಹೇಳಬೇಕಾಗಿದೆ. ಹೀಗೆ ಹೇಳುವ ಕಾರಣವು – ನೀನಾದರೋ ದ್ವೈತದ ಲವಲೇಶದಿಂದ ರಹಿತನಾದ, ಸರ್ವಾಧಿಷ್ಠಾನ ಸ್ವರೂಪನಾಗಿರುವೆ. ಈ ಜಗತ್ತಿನ ಉತ್ಪತ್ತಿ, ಸ್ಥಿತಿ, ಪ್ರಳಯಗಳನ್ನು ನಿನ್ನಲ್ಲಿ ಅಜ್ಞಾನದಿಂದಲೇ ಆರೋಪಿಸಲಾಗುತ್ತದೆ. ॥ ೩೯ ॥

ಮತ್ಸ್ಯಾಶ್ವಕಚ್ಛಪನೃಸಿಂಹವರಾಹಹಂಸ-
ರಾಜನ್ಯವಿಪ್ರವಿಬುಧೇಷು ಕೃತಾವತಾರಃ ।
ತ್ವಂ ಪಾಸಿ ನಸ್ತ್ರಿಭುವನಂ ಚ ಯಥಾಧುನೇಶ
ಭಾರಂ ಭುವೋ ಹರ ಯದೂತ್ತಮ ವಂದನಂ ತೇ ॥ ೪೦ ॥

ಪ್ರಭುವೇ! ನೀನು ಅನೇಕಬಾರಿ ಮತ್ಸ್ಯ, ಹಯಗ್ರೀವ, ಕಚ್ಛಪ, ನರಸಿಂಹ, ವರಾಹ, ಹಂಸ, ರಾಮ, ಪರಶುರಾಮ, ವಾಮನ ಮೊದಲಾದ ಅನೇಕ ಅವತಾರಗಳನ್ನೆತ್ತಿ ನಮ್ಮನ್ನು ಮತ್ತು ಮೂರು ಲೋಕಗಳನ್ನು ರಕ್ಷಿಸಿದಂತೆಯೇ, ನೀನು ಈ ಸಲವೂ ಭೂಭಾರವನ್ನು ಹರಿಸು. ಯದುನಂದನ! ನಾವು ನಿನ್ನ ಚರಣಗಳಲ್ಲಿ ವಂದಿಸುತ್ತೇವೆ. ॥ ೪೦ ॥

ದಿಷ್ಟ್ಯಾಂಬ ತೇ ಕುಕ್ಷಿಗತಃ ಪರಃ ಪುಮಾನ್
ಅಂಶೇನ ಸಾಕ್ಷಾದ್ಭಗವಾನ್ಭವಾಯ ನಃ ।
ಮಾ ಭೂದ್ಭಯಂ ಭೋಜಪತೇರ್ಮುಮೂರ್ಷೋ-
ರ್ಗೋಪ್ತಾ ಯದೂನಾಂ ಭವಿತಾ ತವಾತ್ಮಜಃ ॥ ೪೧ ॥

(ಅನಂತರ ದೇವಕಿಯನ್ನು ಸಂಬೋಧಿಸುತ್ತಾ –) ತಾಯೇ! ಸೌಭಾಗ್ಯವಶದಿಂದ ನಮ್ಮೆಲ್ಲರಿಗೂ ಕಲ್ಯಾಣವನ್ನುಂಟುಮಾಡುವುದಕ್ಕಾಗಿ ಭಗವಾನ್ ಪುರುಷೋತ್ತಮನು ತನ್ನ ಜ್ಞಾನ, ಬಲವೇ ಮೊದಲಾದ ಅಂಶಗಳೊಡನೆ (ಪೂರ್ಣಸ್ವರೂಪನಾಗಿ) ನಿನ್ನ ಗರ್ಭದಲ್ಲಿದ್ದಾನೆ. ಸಾಯಲು ಸಿದ್ಧನಾಗಿ ನಿಂತಿರುವ ಭೋಜಪತಿ ಯಾದ ಕಂಸನಿಂದ ಇನ್ನು ನಿನಗೆ ಯಾವ ಭಯವೂ ಬೇಡ. ನಿನ್ನ ಪುತ್ರನು ಯದುವಂಶವನ್ನು ರಕ್ಷಿಸುವನು. ॥ ೪೧ ॥

ಶ್ರೀಶುಕ ಉವಾಚ

ಇತ್ಯಭಿಷ್ಟೂಯ ಪುರುಷಂ ಯದ್ರೂಪಮನಿದಂ ಯಥಾ ।
ಬ್ರಹ್ಮೇಶಾನೌ ಪುರೋಧಾಯ ದೇವಾಃ ಪ್ರತಿಯಯುರ್ದಿವಮ್
॥ ೪೨ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ! ಯಾವನ ರೂಪವನ್ನು ಇಂತಹುದೇ ಎಂದು ನಿಶ್ಚಯಮಾಡಲು ಸಾಧ್ಯವಿಲ್ಲವೋ, ಅಂತಹ ಪರಮಪುರುಷನನ್ನು ಹೀಗೆ ಸ್ತೋತ್ರಮಾಡಿದ ಬಳಿಕ ಬ್ರಹ್ಮ-ರುದ್ರರನ್ನು ಮುಂದುಮಾಡಿಕೊಂಡು ದೇವತೆಗಳು ಸ್ವರ್ಗಕ್ಕೆ ತೆರಳಿದರು. ॥ ೪೨ ॥

ಎರಡನೆಯ ಅಧ್ಯಾಯವು ಮುಗಿಯಿತು. ॥ ೨ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮಸ್ಕಂಧೇ ಪೂರ್ವಾರ್ಧೇ
ಗರ್ಭಗತವಿಷ್ಣೋರ್ಬ್ರಹ್ಮಾದಿಕೃತಸ್ತುತಿರ್ನಾಮ ದ್ವಿತೀಯೋಽಧ್ಯಾಯಃ ॥ ೨ ॥

ಮೂರನೆಯ ಅಧ್ಯಾಯ

ಭಗವಾನ್ ಶ್ರೀಕೃಷ್ಣನ ಪ್ರಾಕಟ್ಯ

ಶ್ರೀಶುಕ ಉವಾಚ

ಅಥ ಸರ್ವಗುಣೋಪೇತಃ ಕಾಲಃ ಪರಮಶೋಭನಃ ।
ಯರ್ಹ್ಯೇವಾಜನಜನ್ಮರ್ಕ್ಷಂ ಶಾಂತರ್ಕ್ಷಗ್ರಹತಾರಕಮ್ ॥ ೧ ॥

ದಿಶಃ ಪ್ರಸೇದುರ್ಗಗನಂ ನಿರ್ಮಲೋಡುಗಣೋದಯಮ್ ।
ಮಹೀ ಮಂಗಲಭೂಯಿಷ್ಠಪುರಗ್ರಾಮವ್ರಜಾಕರಾ ॥ ೨ ॥

ನದ್ಯಃ ಪ್ರಸನ್ನಸಲಿಲಾ ಹ್ರದಾ ಜಲರುಹಶ್ರಿಯಃ ।
ದ್ವಿಜಾಲಿಕುಲಸಂನಾದಸ್ತಬಕಾ ವನರಾಜಯಃ ॥ ೩ ॥

ವವೌ ವಾಯುಃ ಸುಖಸ್ಪರ್ಶಃ ಪುಣ್ಯಗಂಧವಹಃ ಶುಚಿಃ ।
ಅಗ್ನಯಶ್ಚ ದ್ವಿಜಾತೀನಾಂ ಶಾಂತಾಸ್ತತ್ರ ಸಮಿಂಧತ ॥ ೪ ॥

ಮನಾಂಸ್ಯಾಸನ್ಪ್ರಸನ್ನಾನಿ ಸಾಧೂನಾಮಸುರದ್ರುಹಾಮ್ ।
ಜಾಯಮಾನೇಽಜನೇ ತಸ್ಮಿನ್ನೇದುರ್ದುಂದುಭಯೋ ದಿವಿ ॥ ೫ ॥

ಜಗುಃ ಕಿನ್ನರಗಂಧರ್ವಾಸ್ತುಷ್ಟುವುಃ ಸಿದ್ಧಚಾರಣಾಃ ।
ವಿದ್ಯಾಧರ್ಯಶ್ಚ ನನೃತುರಪ್ಸರೋಭಿಃ ಸಮಂ ತದಾ ॥ ೬ ॥

ಮುಮುಚುರ್ಮುನಯೋ ದೇವಾಃ ಸುಮನಾಂಸಿ ಮುದಾನ್ವಿತಾಃ ।
ಮಂದಂ ಮಂದಂ ಜಲಧರಾ ಜಗರ್ಜುರನುಸಾಗರಮ್ ॥ ೭ ॥

ನಿಶೀಥೇ ತಮಉದ್ಭೂತೇ ಜಾಯಮಾನೇ ಜನಾರ್ದನೇ ।
ದೇವಕ್ಯಾಂ ದೇವರೂಪಿಣ್ಯಾಂ ವಿಷ್ಣುಃ ಸರ್ವಗುಹಾಶಯಃ ।
ಆವಿರಾಸೀದ್ಯಥಾ ಪ್ರಾಚ್ಯಾಂ ದಿಶೀಂದುರಿವ ಪುಷ್ಕಲಃ ॥ ೮ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ! ಅನಂತರ ಸಮಸ್ತ ಗುಣಗಳಿಂದ ಸಂಪನ್ನವಾದ ಅತ್ಯಂತ ಶೋಭಾಯಮಾನವಾದ ಶುಭಸಮಯವು ಸನ್ನಿಹಿತವಾಯಿತು. ಅಂದು ಬ್ರಹ್ಮದೇವತಾತ್ಮಕವಾದ ರೋಹಿಣೀ ನಕ್ಷತ್ರವಿತ್ತು. ಆಕಾಶದಲ್ಲಿ ಸಮಸ್ತ ಗ್ರಹ, ನಕ್ಷತ್ರ, ತಾರೆಗಳೂ ಶಾಂತವಾಗಿದ್ದವು. ॥ ೧ ॥ ದಿಕ್ಕುಗಳು ಸ್ವಚ್ಛವಾಗಿದ್ದು ಪ್ರಸನ್ನವಾಗಿದ್ದವು. ನಿರ್ಮಲಾಕಾಶದಲ್ಲಿ ತಾರೆಗಳು ಜಗ-ಜಗಿಸುತ್ತಿದ್ದವು. ಭೂಮಂಡಲದ ದೊಡ್ಡ-ದೊಡ್ಡ ಪಟ್ಟಣಗಳಲ್ಲಿ, ಗ್ರಾಮಗಳಲ್ಲಿ, ಗೋಪಾಲಕರ ದೊಡ್ಡಿಗಳಲ್ಲಿಯೂ ಮಂಗಳಕರವಾದ ವಾತಾವರಣವಿತ್ತು. ॥ ೨ ॥ ನದಿಗಳು ತಿಳಿಯಾದ ನೀರಿನಿಂದ ತುಂಬಿ ಹರಿಯುತ್ತಿದ್ದವು. ರಾತ್ರಿಯಲ್ಲಿಯೂ ಕೂಡ ಸರೋವರಗಳಲ್ಲಿ ಕಮಲ-ಕನ್ನೈದಿಲೆಗಳು ಅರಳಿದ್ದವು. ವನಗಳಲ್ಲಿ ವೃಕ್ಷಗಳ ಸಾಲುಗಳು ಫಲ-ಪುಷ್ಪಗಳ ಗೊಂಚಲುಗಳಿಂದ ರಾರಾಜಿಸುತ್ತಿದ್ದವು. ಪಕ್ಷಿಗಳು ಅವುಗಳ ಮೇಲೆ ಕುಳಿತು ಚಿಲಿಪಿಲಿಗುಟ್ಟುತ್ತಿದ್ದವು. ದುಂಬಿಗಳು ಝೇಂಕರಿಸುತ್ತಿದ್ದವು. ॥ ೩ ॥ ಆ ಸಮಯದಲ್ಲಿ ಪರಮ ಪವಿತ್ರ ಹಾಗೂ ಶೀತಲ-ಮಂದ-ಸುಗಂಧಿತ ವಾಯುವು ತನ್ನ ಸ್ಪರ್ಶದಿಂದ ಜನರಿಗೆ ಸುಖದಾಯಕವಾಗಿ ಬೀಸುತ್ತಿತ್ತು. ಎಂದೂ ಆರದಿರುವ ಬ್ರಾಹ್ಮಣರ ಅಗ್ನಿಹೋತ್ರದ ಅಗ್ನಿಗಳು ಕಂಸನ ಅತ್ಯಾಚಾರದಿಂದ ನಂದಿಹೋಗಿದ್ದವು. ಅವು ಪುನಃ ತಮ್ಮಿಂದ ತಾನೇ ಉರಿಯತೊಡಗಿದವು. ॥ ೪ ॥ ಭಗವಂತನು ಆವಿರ್ಭವಿಸುವ ಸಮಯವು ಸನ್ನಿಹಿತವಾದಾಗ ಸತ್ಪುರುಷರ ಮತ್ತು ದೈತ್ಯದ್ರೋಹಿಗಳಾದ ದೇವತೆಗಳ ಮನಸ್ಸು ಪ್ರಸನ್ನತೆಯಿಂದ ತುಂಬಿಹೋಯಿತು. ಸ್ವರ್ಗದಲ್ಲಿ ದೇವದುಂದುಭಿಗಳು ಮೊಳಗತೊಡಗಿದವು. ॥ ೫ ॥ ಗಂಧರ್ವ-ಕಿನ್ನರರು ಮಧುರವಾಗಿ ಹಾಡತೊಡಗಿದರು. ಸಿದ್ಧ-ಚಾರಣರು ಭಗವಂತನ ಮಂಗಲಮಯ ಗುಣಗಳನ್ನು ಸ್ತುತಿಸತೊಡಗಿದರು. ವಿದ್ಯಾಧರ ಸ್ತ್ರೀಯರು ಅಪ್ಸರೆಯರೊಂದಿಗೆ ನಾಟ್ಯವಾಡತೊಡಗಿದರು. ॥ ೬ ॥ ನಾರದರೇ ಮೊದಲಾದ ಮುನಿಗಳು, ಇಂದ್ರಾದಿದೇವತೆಗಳು ಆನಂದ ತುಂದಿಲರಾಗಿ ಹೂಮಳೆಗರೆದರು. ನೀರುತುಂಬಿದ ಮೋಡಗಳು ಕಡಲಿನ ಬಳಿಗೆ ಹೋಗಿ ಗಂಭೀರವಾಗಿ ಗುಡುಗುಟ್ಟುತ್ತಿದ್ದವು. ॥ ೭ ॥ ಹುಟ್ಟು-ಸಾವುಗಳೆಂಬ ಚಕ್ರದಿಂದ ಬಿಡುಗಡೆಗೊಳಿಸುವಂತಹ ಜನಾರ್ದನನ ಅವತಾರದ ಸಮಯ ಮಧ್ಯರಾತ್ರಿಯಾಗಿತ್ತು. ಎಲ್ಲೆಡೆ ಅಂಧಕಾರವೇ ತುಂಬಿತ್ತು. ಅದೇ ಸಮಯದಲ್ಲಿ ಎಲ್ಲರ ಹೃದಯದಲ್ಲಿಯೂ ವಿರಾಜಿಸುವ ಭಗವಾನ್ ಮಹಾವಿಷ್ಣುವು ದೇವರೂಪಿಣಿಯಾದ ದೇವಕಿಯ ಗರ್ಭದಿಂದ ಮೂಡುದಿಕ್ಕಿನಲ್ಲಿ ಷೋಡಶ ಕಲೆಗಳಿಂದ ಕೂಡಿದ ಉಡುಪತಿಯು ಉದಯಿಸುವಂತೆ ಯದುಪತಿಯು ಪ್ರಕಟನಾದನು. ॥ ೮ ॥

ತಮದ್ಭುತಂ ಬಾಲಕಮಂಬುಜೇಕ್ಷಣಂ
ಚತುರ್ಭುಜಂ ಶಂಖಗದಾರ್ಯುದಾಯುಧಮ್ ।
ಶ್ರೀವತ್ಸಲಕ್ಷ್ಮಂ ಗಲಶೋಭಿಕೌಸ್ತುಭಂ
ಪೀತಾಂಬರಂ ಸಾಂದ್ರಪಯೋದಸೌಭಗಮ್ ॥ ೯ ॥

ಮಹಾರ್ಹವೈದೂರ್ಯಕಿರೀಟಕುಂಡಲ-
ತ್ವಿಷಾ ಪರಿಷ್ವಕ್ತ ಸಹಸ್ರಕುಂತಲಮ್ ।
ಉದ್ದಾಮಕಾಂಚ್ಯಂಗದಕಂಕಣಾದಿಭಿ-
ರ್ವಿರೋಚಮಾನಂ ವಸುದೇವ ಐಕ್ಷತ ॥ ೧೦ ॥

ಸ ವಿಸ್ಮಯೋತ್ಫುಲ್ಲವಿಲೋಚನೋ ಹರಿಂ
ಸುತಂ ವಿಲೋಕ್ಯಾನಕದುಂದುಭಿಸ್ತದಾ ।
ಕೃಷ್ಣಾವತಾರೋತ್ಸವಸಂಭ್ರಮೋಽಸ್ಪೃಶನ್
ಮುದಾ ದ್ವಿಜೇಭ್ಯೋಽಯುತಮಾಪ್ಲುತೋ ಗವಾಮ್ ॥ ೧೧ ॥

ಅಥೈನಮಸ್ತೌದವಧಾರ್ಯ ಪೂರುಷಂ
ಪರಂ ನತಾಂಗಃ ಕೃತಧೀಃ ಕೃತಾಂಜಲಿಃ ।
ಸ್ವರೋಚಿಷಾ ಭಾರತ ಸೂತಿಕಾಗೃಹಂ
ವಿರೋಚಯಂತಂ ಗತಭೀಃ ಪ್ರಭಾವವಿತ್ ॥ ೧೨ ॥

ವಸುದೇವ ಉವಾಚ

ವಿದಿತೋಽಸಿ ಭವಾನ್ಸಾಕ್ಷಾತ್ಪುರುಷಃ ಪ್ರಕೃತೇಃ ಪರಃ ।
ಕೇವಲಾನುಭವಾನಂದಸ್ವರೂಪಃ ಸರ್ವಬುದ್ಧಿದೃಕ್ ॥ ೧೩ ॥

ಸ ಏವ ಸ್ವಪ್ರಕೃತ್ಯೇದಂ ಸೃಷ್ಟ್ವಾಗ್ರೇ ತ್ರಿಗುಣಾತ್ಮಕಮ್ ।
ತದನು ತ್ವಂ ಹ್ಯಪ್ರವಿಷ್ಟಃ ಪ್ರವಿಷ್ಟ ಇವ ಭಾವ್ಯಸೇ ॥ ೧೪ ॥

ಯಥೇಮೇಽವಿಕೃತಾ ಭಾವಾಸ್ತಥಾ ತೇ ವಿಕೃತೈಃ ಸಹ ।
ನಾನಾವೀರ್ಯಾಃ ಪೃಥಗ್ಭೂತಾ ವಿರಾಜಂ ಜನಯಂತಿ ಹಿ ॥ ೧೫ ॥

ಸನ್ನಿಪತ್ಯ ಸಮುತ್ಪಾದ್ಯ ದೃಶ್ಯಂತೇಽನುಗತಾ ಇವ ।
ಪ್ರಾಗೇವ ವಿದ್ಯಮಾನತ್ವಾನ್ನ ತೇಷಾಮಿಹ ಸಂಭವಃ ॥ ೧೬ ॥

ತನ್ನ ಮುಂದೆ ಅದ್ಭುತ ಬಾಲಕರೂಪನಾದ ಭಗವಂತನನ್ನು ವಸುದೇವನು ನೋಡಿದನು. ಅವನ ಕಣ್ಣುಗಳು ಕಮಲದಂತೆ ವಿಶಾಲವೂ, ಸುಕೋಮಲವೂ ಆಗಿದ್ದವು. ಸುಂದರವಾದ ನಾಲ್ಕು ಕೈಗಳಲ್ಲಿ ಶಂಖ, ಚಕ್ರ, ಗದೆ, ಪದ್ಮಗಳನ್ನು ಧರಿಸಿದ್ದನು. ಅವನ ವಕ್ಷಸ್ಥಳದಲ್ಲಿ ಅತ್ಯಂತ ಸುಂದರವೂ, ಸುವರ್ಣಮಯವೂ ಆದ ಶ್ರೀವತ್ಸದ ಚಿಹ್ನೆಯು ಇದ್ದಿತು. ಕೊರಳಲ್ಲಿ ಕೌಸ್ತುಭಮಣಿಯು ಝಗ-ಝಗಿಸುತ್ತಿತ್ತು. ವರ್ಷಾಕಾಲದ ಮೇಘದಂತಿರುವ ಪರಮ ಸುಂದರ ಶ್ಯಾಮಲಶರೀರದ ಮೇಲೆ ಮನೋಹರ ಪೀತಾಂಬರವು ಶೋಭಿಸುತ್ತಿತ್ತು. ಬಹುಮೂಲ್ಯ ವೈಡೂರ್ಯಮಣಿಯ ಕಿರೀಟ ಕುಂಡಲಗಳ ಕಾಂತಿಯಿಂದ ಅಂದವಾದ ಗುಂಗುರಾದ ಕೂದಲುಗಳು ಸೂರ್ಯನ ಕಿರಣಗಳಂತೆ ಹೊಳೆಯುತ್ತಿದ್ದವು. ನಡುವಿನಲ್ಲಿ ಒಡ್ಯಾಣವೂ, ಬಾಹುಗಳಲ್ಲಿ ಕೇಯೂರಗಳೂ ಕರಗಳಲ್ಲಿ ಕಂಕಣಗಳೂ ಶೋಭಿಸುತ್ತಿದ್ದವು. ಇವೆಲ್ಲ ಆಭೂಷಣಗಳಿಂದ ಸುಶೋಭಿತನಾದ ಬಾಲಕನ ಸರ್ವಾಂಗದಿಂದ ಅಲೌಕಿಕವಾದ ಸೌಂದರ್ಯವು ಸೂಸುತ್ತಿತ್ತು. ॥ ೯-೧೦ ॥ ತನ್ನ ಪುತ್ರರೂಪದಲ್ಲಿ ಭಗವಂತನೇ ಬಂದಿರುವನೆಂದು ನೋಡಿದಾಗ ವಸುದೇವನಿಗೆ ಮೊದಲಿಗೆ ಅಸೀಮ ಆಶ್ಚರ್ಯವಾಯಿತು. ಆನಂದದಿಂದ ಕಣ್ಣುಗಳು ಅರಳಿದವು. ಅವನ ರೋಮ-ರೋಮಗಳು ಆನಂದದಲ್ಲಿ ಮುಳುಗಿಹೋದವು. ಶ್ರೀಕೃಷ್ಣನ ಜನ್ಮೋತ್ಸವದ ಸಂಭ್ರಮದಲ್ಲಿದ್ದ ಅವನು ಆಗಲೇ ಬ್ರಾಹ್ಮಣರಿಗೆ ಹತ್ತುಸಾವಿರ ಗೋವುಗಳನ್ನು ದಾನ ಮಾಡಲು ಮನಸ್ಸಿನಲ್ಲೇ ಸಂಕಲ್ಪಿಸಿದನು. ॥ ೧೧ ॥ ಪರೀಕ್ಷಿತನೇ! ಭಗವಾನ್ ಶ್ರೀಕೃಷ್ಣನು ತನ ಅಂಗಕಾಂತಿಯಿಂದ ಸೂತಿಕಾಗೃಹವನ್ನು ಬೆಳಗುತ್ತಿದ್ದನು. ಪರಮಪುರುಷ ಪರಮಾತ್ಮನೇ ತನಗೆ ಮಗನಾಗಿ ಬಂದಿರುವನೆಂದು ನಿಶ್ಚಯವಾದಾಗ ಭಗವಂತನ ಪ್ರಭಾವವನ್ನು ಪೂರ್ಣವಾಗಿ ಅರಿತಿದ್ದ ವಸುದೇವನ ಭಯವೆಲ್ಲವೂ ಹೊರಟು ಹೋಯಿತು. ತನ್ನ ಬುದ್ಧಿಯನ್ನು ಸ್ಥಿರಗೊಳಿಸಿ ಅವನು ಭಗವಂತನ ಚರಣಗಳಲ್ಲಿ ತಲೆಯನ್ನಿಟ್ಟು ಕೈಗಳನ್ನು ಜೋಡಿಸಿ ಕೊಂಡು ಅವನನ್ನು ಸ್ತುತಿಸತೊಡಗಿದನು. ॥ ೧೨ ॥

ವಸುದೇವನು ಹೇಳಿದನು – ನೀನು ಪ್ರಕೃತಿಗೆ ಅತೀತನಾದ ಸಾಕ್ಷಾತ್ ಪುರುಷೋತ್ತಮನಾಗಿರುವೆ ಎಂಬುದನ್ನು ನಾನು ತಿಳಿದಿದ್ದೇನೆ. ನಿನ್ನ ಸ್ವರೂಪವು ಕೇವಲ ಅನುಭವೈಕವೇದ್ಯವಾದುದು ಹಾಗೂ ಆನಂದಮಯವಾದುದು. ಸಮಸ್ತ ಬುದ್ಧಿಗಳಿಗೆ ನೀನೇ ಸಾಕ್ಷಿಯಾಗಿರುವೆ. ॥ ೧೩ ॥ ನೀನೇ ಸೃಷ್ಟಿಯ ಮೊದಲಲ್ಲಿ ನಿನ್ನ ಪ್ರಕೃತಿಯಿಂದ ಈ ತ್ರಿಗುಣಮಯವಾದ ಜಗತ್ತನ್ನು ಸೃಷ್ಟಿಸುವೆ. ಮತ್ತೆ ಅದರಲ್ಲಿ ಪ್ರವಿಷ್ಟನಾಗದಿದ್ದರೂ ನೀನು ಸೇರಿ ಕೊಂಡಿರುವಂತೆ ಕಂಡು ಬರುತ್ತೀಯೆ. ॥ ೧೪ ॥ ಮಹತ್ತತ್ತ್ವಾದಿ ಕಾರಣ–ತತ್ತ್ವಗಳು ಬೇರೆ ಬೇರೆಯಾಗಿರುವವರೆಗೂ ಅವುಗಳ ಶಕ್ತಿಯೂ ಬೇರೆ–ಬೇರೆಯಾಗಿಯೇ ಇರುತ್ತದೆ. ಅವು ಇಂದ್ರಿಯಾದಿ ಹದಿನಾರು ತತ್ತ್ವಗಳೊಂದಿಗೆ ಸೇರಿದಾಗ ಈ ಬ್ರಹ್ಮಾಂಡವನ್ನು ರಚಿಸುವುವು ಮತ್ತು ಇದನ್ನು ಸೃಷ್ಟಿಸಿ ಇದರಲ್ಲಿ ನೀನು ಅನುಪ್ರವಿಷ್ಟನಂತೆ ಕಂಡುಬರುತ್ತಿರುವೆ. ಆದರೆ ನಿಜವಾಗಿ ನೀನು ಯಾವುದೇ ಪದಾರ್ಥದಲ್ಲಿ ಪ್ರವೇಶಿಸುವುದಿಲ್ಲ. ಅವುಗಳಿಂದ ರಚಿಸಲ್ಪಟ್ಟ ವಸ್ತುಗಳಲ್ಲಿ ನೀನು ಮೊದಲಿನಿಂದಲೂ ಇದ್ದುದೇ ಹೀಗೆ ಕಂಡುಬರಲು ಕಾರಣವಾಗಿದೆ. ॥ ೧೫-೧೬ ॥

ಏವಂ ಭವಾನ್ಬುದ್ಧ್ಯನುಮೇಯಲಕ್ಷಣೈ-
ರ್ಗ್ರಾಹ್ಯೈರ್ಗುಣೈಃ ಸನ್ನಪಿ ತದ್ಗುಣಾಗ್ರಹಃ ।
ಅನಾವೃತತ್ವಾದ್ಬಹಿರಂತರಂ ನ ತೇ
ಸರ್ವಸ್ಯ ಸರ್ವಾತ್ಮನ ಆತ್ಮವಸ್ತುನಃ ॥ ೧೭ ॥

ಯ ಆತ್ಮನೋ ದೃಶ್ಯಗುಣೇಷು ಸನ್ನಿತಿ
ವ್ಯವಸ್ಯತೇ ಸ್ವವ್ಯತಿರೇಕತೋಽಬುಧಃ ।
ವಿನಾನುವಾದಂ ನ ಚ ತನ್ಮನೀಷಿತಂ
ಸಮ್ಯಗ್ ಯತಸ್ತ್ಯಕ್ತಮುಪಾದದತ್ಪುಮಾನ್ ॥ ೧೮ ॥

ತ್ವತ್ತೋಽಸ್ಯ ಜನ್ಮಸ್ಥಿತಿಸಂಯಮಾನ್ವಿಭೋ
ವದಂತ್ಯನೀಹಾದಗುಣಾದವಿಕ್ರಿಯಾತ್ ।
ತ್ವಯೀಶ್ವರೇ ಬ್ರಹ್ಮಣಿ ನೋ ವಿರುಧ್ಯತೇ
ತ್ವದಾಶ್ರಯತ್ವಾದುಪಚರ್ಯತೇ ಗುಣೈಃ ॥ ೧೯ ॥

ಸ ತ್ವಂ ತ್ರಿಲೋಕಸ್ಥಿತಯೇ ಸ್ವಮಾಯಯಾ
ಬಿಭರ್ಷಿ ಶುಕ್ಲಂ ಖಲು ವರ್ಣಮಾತ್ಮನಃ ।
ಸರ್ಗಾಯ ರಕ್ತಂ ರಜಸೋಪಬೃಂಹಿತಂ
ಕೃಷ್ಣಂ ಚ ವರ್ಣಂ ತಮಸಾ ಜನಾತ್ಯಯೇ ॥ ೨೦ ॥

ತ್ವಮಸ್ಯ ಲೋಕಸ್ಯ ವಿಭೋ ರಿರಕ್ಷಿಷು-
ರ್ಗೃಹೇಽವತೀರ್ಣೋಽಸಿ ಮಮಾಖಿಲೇಶ್ವರ ।
ರಾಜನ್ಯಸಂಜ್ಞಾಸುರಕೋಟಿಯೂಥಪೈ-
ರ್ನಿರ್ವ್ಯೂಹ್ಯಮಾನಾ ನಿಹನಿಷ್ಯಸೇ ಚಮೂಃ ॥ ೨೧ ॥

ಅಯಂ ತ್ವಸಭ್ಯಸ್ತವ ಜನ್ಮ ನೌ ಗೃಹೇ
ಶ್ರುತ್ವಾಗ್ರಜಾಂಸ್ತೇ ನ್ಯವಧೀತ್ಸುರೇಶ್ವರ ।
ಸ ತೇಽವತಾರಂ ಪುರುಷೈಃ ಸಮರ್ಪಿತಂ
ಶ್ರುತ್ವಾಧುನೈವಾಭಿಸರತ್ಯುದಾಯುಧಃ ॥ ೨೨ ॥

ಹಾಗೆಯೇ ಬುದ್ಧಿಯ ಮೂಲಕ ಕೇವಲ ಗುಣಗಳ ಲಕ್ಷಣಗಳೇ ಅನುಮಾನಿಸಲ್ಪಡುತ್ತವೆ. ಮತ್ತು ಇಂದ್ರಿಯಗಳ ಮೂಲಕ ಕೇವಲ ಗುಣಮಯ ವಿಷಯಗಳನ್ನೇ ಗ್ರಹಿಸಲಾಗುತ್ತದೆ. ನೀನು ಅದರಲ್ಲಿ ಇದ್ದರೂ ಆ ಗುಣಗಳ ಗ್ರಹಣದಿಂದ ನಿನ್ನನ್ನು ಗ್ರಹಿಸಿದಂತಾಗುವುದಿಲ್ಲ. ನೀನು ಎಲ್ಲವೂ ಆಗಿದ್ದು ಎಲ್ಲರ ಅಂತರ್ಯಾಮಿಯಾಗಿರುವೆ ಹಾಗೂ ಪರಮಾರ್ಥಸತ್ಯವಾದ ಆತ್ಮಸ್ವರೂಪನಾಗಿರುವುದೇ ಇದರ ಕಾರಣವಾಗಿದೆ. ಗುಣಗಳ ಆವರಣವು ನಿನ್ನನ್ನು ಮುಚ್ಚಿಡಲಾರದು. ಆದ್ದರಿಂದ ನಿನ್ನಲ್ಲಿ ಒಳಗೆ-ಹೊರಗೆ ಎಂಬುದಿಲ್ಲ ಅನಾವೃತನಾಗಿರುವೆ. ಹಾಗಿರುವಾಗ ನೀನು ಯಾವುದರಲ್ಲಿ ಪ್ರವೇಶಿಸುವುದು ? (ಆದ್ದರಿಂದ ಪ್ರವೇಶಿಸದೆಯೇ ನೀನು ಪ್ರವೇಶಿಸಿದಂತೆ ಕಂಡು ಬರುತ್ತೀಯೆ.) ॥ ೧೭ ॥ ನಿನ್ನ ಈ ದೃಶ್ಯಗುಣಗಳು ನಿನ್ನಿಂದ ಬೇರೆ ಎಂದು ಅರಿತು ಸತ್ಯವಾದುವು ಎಂದು ತಿಳಿಯುವವರು ಅಜ್ಞಾನಿಗಳು. ಏಕೆಂದರೆ, ವಿಚಾರಮಾಡಿದಾಗ ಈ ದೇಹ, ಗೇಹ ಮುಂತಾದ ಪದಾರ್ಥಗಳು ವಾಗ್ವಿಲಾಸವಲ್ಲದೆ ಬೇರೆ ಏನೂ ಇಲ್ಲ ಎಂಬುದು ಸಿದ್ಧವಾಗುತ್ತದೆ. ವಿಚಾರದ ಮೂಲಕ ಯಾವ ವಸ್ತುವಿನ ಅಸ್ತಿತ್ವವು ಸಿದ್ಧಿಯಾಗದೆ ನಿರಾಕರಣವಾಗುವ ಅದನ್ನು ಸತ್ಯವೆಂದು ಒಪ್ಪುವ ಮನುಷ್ಯನು ಬುದ್ಧಿವಂತನು ಹೇಗಾಗಬಲ್ಲನು ? ॥೧೮॥ ಪ್ರಭೋ ! ನೀನು ಸ್ವಯಂ ಸಮಸ್ತ ಕ್ರಿಯೆಗಳಿಂದ, ಗುಣಗಳಿಂದ, ವಿಕಾರಗಳಿಂದ ರಹಿತನಾಗಿರುವೆ ಎಂದು ಹೇಳುತ್ತಾರೆ. ಹೀಗಿದ್ದರೂ ಈ ಜಗತ್ತಿನ ಸೃಷ್ಟಿ, ಸ್ಥಿತಿ, ಲಯ ಇವುಗಳು ನಿನ್ನಿಂದಲೇ ಆಗುತ್ತವೆ. ಇಂತಹ ಮಾತು ಪರಮೈಶ್ವರ್ಯಶಾಲಿಯಾದ, ಪರಬ್ರಹ್ಮ ಪರಮಾತ್ಮನಾದ ನಿನಗೆ ಅಸಂಗತವಲ್ಲ. ಏಕೆಂದರೆ, ತ್ರಿಗುಣಗಳ ಆಶ್ರಯ ನೀನೇ ಆಗಿರುವೆ. ಇದರಿಂದ ಆ ಗುಣಗಳ ಕಾರ್ಯವೇ ಮುಂತಾದವುಗಳನ್ನು ನಿನ್ನಲ್ಲೇ ಆರೋಪಿಸಲಾಗುತ್ತದೆ. ॥ ೧೯ ॥ ನೀನೇ ಮೂರುಲೋಕಗಳನ್ನು ರಕ್ಷಿಸಲಿಕ್ಕಾಗಿ ನಿನ್ನ ಮಾಯೆಯಿಂದ ಸತ್ತ್ವಮಯ ಶುಕ್ಲವರ್ಣ (ಪೋಷಕನಾದ ವಿಷ್ಣುರೂಪ)ವನ್ನು ಹೊಂದುವೆ. ಉತ್ಪತ್ತಿಗಾಗಿ ರಜೋಗುಣಪ್ರಧಾನವಾದ ರಕ್ತವರ್ಣ (ಸೃಷ್ಟಿಕರ್ತ ಬ್ರಹ್ಮರೂಪ)ವನ್ನು ಮತ್ತು ಪ್ರಳಯ ಸಮಯ ತಮೋ ಗುಣಪ್ರಧಾನವಾದ ಕೃಷ್ಣವರ್ಣ (ಸಂಹಾರಕಾರಿ ರುದ್ರ ರೂಪ)ವನ್ನು ಸ್ವೀಕರಿಸುವೆ. ॥ ೨೦ ॥ ಪ್ರಭುವೇ ! ನೀನು ಸರ್ವ ಶಕ್ತನೂ, ಸರ್ವರಿಗೂ ಸ್ವಾಮಿಯಾಗಿರುವೆ. ಈ ಜಗತ್ತನ್ನು ರಕ್ಷಿಸಲೆಂದೇ ನೀನು ನನ್ನ ಮನೆಯಲ್ಲಿ ಅವತರಿಸಿರುವೆ. ಇಂದಿನ ದಿನಗಳಲ್ಲಿ ಕೋಟಿ-ಕೋಟಿ ಅಸುರ ಸೇನಾಪತಿಗಳು ತಾವೇ ರಾಜರೆಂದು ಹೇಳಿಕೊಂಡು ತಮ್ಮ ಅಧೀನದಲ್ಲಿ ದೊಡ್ಡ-ದೊಡ್ಡ ಸೈನ್ಯವನ್ನು ಶೇಖರಿಸಿರುವರು. ನೀನು ಅವರೆಲ್ಲರನ್ನೂ ಸಂಹರಿಸುವೆ. ॥ ೨೧ ॥ ದೇವತೆಗಳಿಗೂ ಆರಾಧ್ಯದೇವನಾದ ಪ್ರಭುವೇ ! ಅಸಭ್ಯನಾದ ಈ ದುಷ್ಟ ಕಂಸನಾದರೋ ನನ್ನ ಪತ್ನಿಯಲ್ಲಿ – ಅವನಿಗೆ ಮೃತ್ಯುಪ್ರಾಯನಾದ ನೀನು ಅವತರಿಸುವನೆಂಬ ವಿಷಯವು ತಿಳಿದಾಗ ನಿನ್ನ ಭಯದಿಂದ ನಿನ್ನಣ್ಣಂದಿರೆಲ್ಲರನ್ನು ಕೊಂದು ಹಾಕಿದನು. ಈಗಲೂ ನೀನು ನನ್ನ ಮನೆಯಲ್ಲಿ ಅವತರಿಸಿದೆ ಎಂಬ ಸಮಾಚಾರ ತಿಳಿದೊಡನೆ ಖಡ್ಗವನ್ನೆತ್ತಿಕೊಂಡು ಓಡಿ ಇಲ್ಲಿಗೆ ಬರುವನು. ॥ ೨೨ ॥

ಶ್ರೀಶುಕ ಉವಾಚ

ಅಥೈನಮಾತ್ಮಜಂ ವೀಕ್ಷ್ಯ ಮಹಾಪುರುಷಲಕ್ಷಣಮ್ ।
ದೇವಕೀ ತಮುಪಾಧಾವತ್ಕಂಸಾದ್ಭೀತಾ ಶುಚಿಸ್ಮಿತಾ ॥ ೨೩ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ! ದೇವಕಿಯು ತನ್ನ ಪುತ್ರನಲ್ಲಾದರೋ ಪುರುಷೋತ್ತಮ ಭಗವಂತನ ಎಲ್ಲ ಲಕ್ಷಣಗಳನ್ನು ನೋಡಿ, ಮೊದಲಿಗೆ ಆಕೆಗೆ ಕಂಸನಿಂದ ಸ್ವಲ್ಪ ಭಯವೇ ಆಯಿತು; ಆದರೆ ತತ್ಕ್ಷಣ ಭಗವಂತನ ಸನ್ನಿಧಿಯಿಂದಾಗಿ ನಿರ್ಭಯಳಾಗಿ ಮುಗುಳ್ನಗುತ್ತಾ ಸ್ತುತಿಸ ತೊಡಗಿದಳು. ॥ ೨೩ ॥

ದೇವಕ್ಯುವಾಚ

ರೂಪಂ ಯತ್ತತ್ಪ್ರಾಹುರವ್ಯಕ್ತಮಾದ್ಯಂ
ಬ್ರಹ್ಮ ಜ್ಯೋತಿರ್ನಿರ್ಗುಣಂ ನಿರ್ವಿಕಾರಮ್ ।
ಸತ್ತಾಮಾತ್ರಂ ನಿರ್ವಿಶೇಷಂ ನಿರೀಹಂ
ಸ ತ್ವಂ ಸಾಕ್ಷಾದ್ವಿಷ್ಣುರಧ್ಯಾತ್ಮದೀಪಃ ॥ ೨೪ ॥

ನಷ್ಟೇ ಲೋಕೇ ದ್ವಿಪರಾರ್ಧಾವಸಾನೇ
ಮಹಾಭೂತೇಷ್ವಾದಿಭೂತಂ ಗತೇಷು ।
ವ್ಯಕ್ತೇಽವ್ಯಕ್ತಂ ಕಾಲವೇಗೇನ ಯಾತೇ
ಭವಾನೇಕಃ ಶಿಷ್ಯತೇ ಶೇಷಸಂಜ್ಞಃ ॥ ೨೫ ॥

ಯೋಽಯಂ ಕಾಲಸ್ತಸ್ಯ ತೇಽವ್ಯಕ್ತಬಂಧೋ
ಚೇಷ್ಟಾಮಾಹುಶ್ಚೇಷ್ಟತೇ ಯೇನ ವಿಶ್ವಮ್ ।
ನಿಮೇಷಾದಿರ್ವತ್ಸರಾಂತೋ ಮಹೀಯಾಂ-
ಸ್ತಂ ತ್ವೇಶಾನಂ ಕ್ಷೇಮಧಾಮ ಪ್ರಪದ್ಯೇ ॥ ೨೬ ॥

ಮರ್ತ್ಯೋ ಮೃತ್ಯುವ್ಯಾಲಭೀತಃ ಪಲಾಯನ್
ಲೋಕಾನ್ಸರ್ವಾನ್ನಿರ್ಭಯಂ ನಾಧ್ಯಗಚ್ಛತ್ ।
ತ್ವತ್ಪಾದಾಬ್ಜಂ ಪ್ರಾಪ್ಯ ಯದೃಚ್ಛಯಾದ್ಯ
ಸುಸ್ಥಃ ಶೇತೇ ಮೃತ್ಯುರಸ್ಮಾದಪೈತಿ ॥ ೨೭ ॥

ಸ ತ್ವಂ ಘೋರಾದುಗ್ರಸೇನಾತ್ಮಜಾನ್ನ-
ಸ್ತ್ರಾಹಿ ತ್ರಸ್ತಾನ್ಭೃತ್ಯವಿತ್ರಾಸಹಾಸಿ ।
ರೂಪಂ ಚೇದಂ ಪೌರುಷಂ ಧ್ಯಾನಧಿಷ್ಣ್ಯಂ
ಮಾ ಪ್ರತ್ಯಕ್ಷಂ ಮಾಂಸದೃಶಾಂ ಕೃಷೀಷ್ಠಾಃ ॥ ೨೮ ॥

ದೇವಕೀದೇವಿಯು ಹೇಳುತ್ತಾಳೆ – ಪ್ರಭುವೇ! ನಿನ್ನ ದಿವ್ಯ ರೂಪವನ್ನು ವೇದಗಳೂ, ಯೋಗಿಗಳೂ ಅವ್ಯಕ್ತವೆಂದೂ, ಆದಿ ಕಾರಣವೆಂದೂ, ಬ್ರಹ್ಮವಸ್ತುವೆಂದೂ, ಜ್ಯೋತಿಃಸ್ವರೂಪ ವೆಂದೂ, ನಿರ್ಗುಣ-ನಿರ್ವಿಕಾರವೆಂದೂ, ಸತ್ತಾಮಾತ್ರವೆಂದೂ, ನಿರ್ವಿಶೇಷ ವೆಂದೂ, ನಿಷ್ಕ್ರಿಯ ಹಾಗೂ ಕೇವಲನೆಂದೂ ಹೊಗಳುತ್ತಿರುವರೋ ಅಂತಹ ನೀನು ಮನ-ಬುದ್ಧಿ-ಇಂದ್ರಿಯಗಳ ದೀಪ ಪ್ರಾಯನಾದ ಸಾಕ್ಷಾತ್ ವಿಷ್ಣುವೇ ಆಗಿರುವೆ. ॥ ೨೪ ॥ ಬ್ರಹ್ಮನ ಆಯುಷ್ಯದ ಎರಡು ಪರಾರ್ಧಗಳು ಮುಗಿದು ಹೋದಾಗ ಕಾಲಶಕ್ತಿಯ ಪ್ರಭಾವದಿಂದ ಎಲ್ಲ ಲೋಕಗಳು ವಿನಾಶವಾಗಿ ಹೋಗುತ್ತವೆ. ಪಂಚ-ಮಹಾಭೂತಗಳು ಅಹಂಕಾರದಲ್ಲಿ, ಅಹಂಕಾರವು ಮಹತ್ತತ್ತ್ವದಲ್ಲಿ, ಮಹತ್ತತ್ತ್ವವು ಪ್ರಕೃತಿಯಲ್ಲಿ, ಪ್ರಕೃತಿಯು ನಿನ್ನಲ್ಲಿ ಲೀನವಾಗಿ ಹೋದನಂತರ ಶೇಷವಾಗಿ ನೀನು ಮಾತ್ರ ಉಳಿಯುವೆ. ಅದರಿಂದಲೇ ನಿನ್ನನ್ನು 'ಶೇಷ' ಎಂದೂ ಕರೆಯುತ್ತಾರೆ. ॥ ೨೫ ॥ ಅವ್ಯಕ್ತವಾದ ಪ್ರಕೃತಿಗೆ ಬಂಧುವಾಗಿರ ತಕ್ಕವನೇ! ಪ್ರಭುವೇ! ನಿಮೇಷದಿಂದ ಹಿಡಿದು ಸಂವತ್ಸರ ಪರ್ಯಂತವಾಗಿ ಅಥವಾ ಪರಾರ್ಧಪರ್ಯಂತವಾಗಿ ಹಲವಾರು ವಿಭಾಗಗಳಿಂದ ಕೂಡಿರುವ ಕಾಲದ ಚೇಷ್ಟೆಯಿಂದಲೇ ಈ ಸಮಸ್ತ ವಿಶ್ವವು ಚೇಷ್ಟಿತವಾಗುತ್ತದೆ. ಅದಕ್ಕೆ ಯಾವುದೇ ಎಲ್ಲೆಯು ಇಲ್ಲದೆ ಅದು ನಿನ್ನ ಅಧೀನವಾಗಿದ್ದು ನಿನ್ನ ಲೀಲಾಮಾತ್ರವಾಗಿದೆ. ನೀನು ಸರ್ವಶಕ್ತನೂ ಪರಮಕಲ್ಯಾಣದ ಆಶ್ರಯನಾಗಿರುವೆ. ಅಂತಹ ನಿನಗೆ ನಾನು ಶರಣಾಗತಳಾಗಿದ್ದೇನೆ. ॥ ೨೬ ॥ ಪ್ರಭುವೇ! ಈ ಜೀವನು ಮೃತ್ಯುಗ್ರಸ್ತನಾಗಿದ್ದಾನೆ. ಮೃತ್ಯುವೆಂಬ ಕರಾಳಸರ್ಪಕ್ಕೆ ಹೆದರಿ ಅವನು ಲೋಕ-ಲೋಕಾಂತರದಲ್ಲಿ ಅಲೆಯುತ್ತಿದ್ದಾನೆ. ಆದರೆ ನಿರ್ಭಯವಾಗಿ ಇರಲು ಅವನಿಗೆ ಯಾವ ಸ್ಥಾನವೂ ದೊರೆಯಲಿಲ್ಲ. ಆದರೆ ಅವನಿಗೆ ಇಂದು ಸೌಭಾಗ್ಯವಶದಿಂದ ನಿನ್ನ ಚರಣಾರವಿಂದಗಳ ಶರಣಾಗತಿಯು ಸಿಕ್ಕಿದೆ. ಆದ್ದರಿಂದ ಇನ್ನು ಅವನು ಸ್ವಸ್ಥವಾಗಿ ಮಲಗಿದ್ದಾನೆ. ಮೃತ್ಯುವು ಅವನಿಗೆ ಹೆದರಿ ದೂರ ಸರಿದುಹೋಯಿತು. ॥ ೨೭ ॥ ಪ್ರಭುವೇ! ನೀನು ಭಕ್ತ ಭಯಾಪಹಾರಿಯು. ನಾವಾದರೋ ದುಷ್ಟನಾದ ಈ ಕಂಸನಿಂದ ಭಯಗೊಂಡಿರುವೆವು. ಅವನಿಂದ ನಮ್ಮನ್ನು ನೀನು ರಕ್ಷಿಸು. ನಾಲ್ಕು ಕೈಗಳಿಂದ ಕೂಡಿದ ನಿನ್ನ ಈ ದಿವ್ಯರೂಪವು ಧ್ಯಾನಮಾಡಲು ಯೋಗ್ಯವಾಗಿದೆ. ಇಂತಹ ದಿವ್ಯಸ್ವರೂಪವನ್ನು ಮಾಂಸ-ಮಜ್ಜೆ ಗಳಿಂದ ಕೂಡಿರುವ ಶರೀರಧಾರಿಗಳಾದ ಮನುಷ್ಯರ ಮುಂದೆ ಪ್ರಕಟಿಸಬೇಡ. ॥ ೨೮ ॥

ಜನ್ಮ ತೇ ಮಯ್ಯಸೌ ಪಾಪೋ ಮಾವಿದ್ಯಾನ್ಮಧುಸೂದನ ।
ಸಮುದ್ವಿಜೇ ಭವದ್ಧೇತೋಃ ಕಂಸಾದಹಮಧೀರಧೀಃ ॥ ೨೯ ॥

ಉಪಸಂಹರ ವಿಶ್ವಾತ್ಮನ್ನದೋ ರೂಪಮಲೌಕಿಕಮ್ ।
ಶಂಖಚಕ್ರಗದಾಪದ್ಮಶ್ರಿಯಾ ಜುಷ್ಟಂ ಚತುರ್ಭುಜಮ್ ॥ ೩೦ ॥

ವಿಶ್ವಂ ಯದೇತತ್ಸ್ವತನೌ ನಿಶಾಂತೇ
ಯಥಾವಕಾಶಂ ಪುರುಷಃ ಪರೋ ಭವಾನ್ ।
ಬಿಭರ್ತಿ ಸೋಽಯಂ ಮಮ ಗರ್ಭಗೋಽಭೂ-
ದಹೋ ನೃಲೋಕಸ್ಯ ವಿಡಂಬನಂ ಹಿ ತತ್ ॥ ೩೦ ॥

ಶ್ರೀಭಗವಾನುವಾಚ

ತ್ವಮೇವ ಪೂರ್ವಸರ್ಗೇಽಭೂಃ ಪೃಶ್ನಿಃ ಸ್ವಾಯಂಭುವೇ ಸತಿ ।
ತದಾಯಂ ಸುತಪಾ ನಾಮ ಪ್ರಜಾಪತಿರಕಲ್ಮಷಃ ॥ ೩೨ ॥

ಯುವಾಂ ವೈ ಬ್ರಹ್ಮಣಾಽಽದಿಷ್ಟೌ ಪ್ರಜಾಸರ್ಗೇ ಯದಾ ತತಃ ।
ಸನ್ನಿಯಮ್ಯೇಂದ್ರಿಯಗ್ರಾಮಂ ತೇಪಾಥೇ ಪರಮಂ ತಪಃ ॥ ೩೩ ॥

ವರ್ಷವಾತಾತಪಹಿಮಘರ್ಮಕಾಲಗುಣಾನನು ।
ಸಹಮಾನೌ ಶ್ವಾಸರೋಧವಿನಿರ್ಧೂತಮನೋಮಲೌ ॥ ೩೪ ॥

ಶೀರ್ಣಪರ್ಣಾನಿಲಾಹಾರಾವುಪಶಾಂತೇನ ಚೇತಸಾ ।
ಮತ್ತಃ ಕಾಮಾನಭೀಪ್ಸಂತೌ ಮದಾರಾಧನಮೀಹತುಃ ॥ ೩೫ ॥

ಏವಂ ವಾಂ ತಪ್ಯತೋಸ್ತೀವ್ರಂ ತಪಃ ಪರಮದುಷ್ಕರಮ್ ।
ದಿವ್ಯವರ್ಷಸಹಸ್ರಾಣಿ ದ್ವಾದಶೇಯುರ್ಮದಾತ್ಮನೋಃ ॥ ೩೬ ॥

ತದಾ ವಾಂ ಪರಿತುಷ್ಟೋಽಹಮಮುನಾ ವಪುಷಾನಘೇ ।
ತಪಸಾ ಶ್ರದ್ಧಯಾ ನಿತ್ಯಂ ಭಕ್ತ್ಯಾ ಚ ಹೃದಿ ಭಾವಿತಃ ॥ ೩೭ ॥

ಪ್ರಾದುರಾಸಂ ವರದರಾಡ್ಯುವಯೋಃ ಕಾಮದಿತ್ಸಯಾ ।
ವ್ರಿಯತಾಂ ವರ ಇತ್ಯುಕ್ತೇ ಮಾದೃಶೋ ವಾಂ ವೃತಃ ಸುತಃ ॥ ೩೮ ॥

ಅಜುಷ್ಟಗ್ರಾಮ್ಯವಿಷಯಾವನಪತ್ಯೌ ಚ ದಂಪತೀ ।
ನ ವವ್ರಾಥೇಽಪವರ್ಗಂ ಮೇ ಮೋಹಿತೌ ಮಮ ಮಾಯಯಾ ॥ ೩೯ ॥

ಮಧುಸೂದನನೇ! ನೀನು ನನ್ನ ಗರ್ಭದಲ್ಲಿ ಹುಟ್ಟಿರುವೆ ಯೆಂಬುದು ಈ ಕಂಸನಿಗೆ ತಿಳಿಯದಂತೆ ಮಾಡು. ನನ್ನ ಧೈರ್ಯವು ಕಳೆದುಹೋಗಿದೆ. ನಿನ್ನ ಸಲುವಾಗಿ ಕಂಸನಿಗೆ ನಾನು ಬಹಳ ಹೆದರುತ್ತಿರುವೆನು. ॥ ೨೯ ॥ ವಿಶ್ವಾತ್ಮನೇ! ನಿನ್ನ ಈ ದಿವ್ಯ ರೂಪವು ಅಲೌಕಿಕವಾದುದು. ಶಂಖ-ಚಕ್ರ, ಗದಾ, ಪದ್ಮಗಳ ಶೋಭೆಯಿಂದ ಬೆಳಗುತ್ತಿರುವ ಈ ಚತುರ್ಭುಜರೂಪವನ್ನು ಉಪ ಸಂಹರಿಸು. ॥ ೩೦ ॥ ಪ್ರಳಯದ ಸಮಯದಲ್ಲಿ ಅಖಂಡ ಬ್ರಹ್ಮಾಂಡವನ್ನು – ಮನುಷ್ಯನು ತನ್ನ ಶರೀರದಲ್ಲಿ ಇರುವ ಛಿದ್ರರಹಿತ ಆಕಾಶವನ್ನು ಸ್ವಾಭಾವಿಕವಾಗಿ ಧರಿಸುವಂತೆಯೇ ನೀನು ನಿನ್ನ ಶರೀರದಲ್ಲಿ ಧರಿಸಿಕೊಳ್ಳುವೆ. ಅಂತಹ ಪರಮಪುರುಷ ಪರಮಾತ್ಮನಾದ ನೀನು ನನ್ನ ಗರ್ಭದಲ್ಲಿ ಹುಟ್ಟಿದೆಯೆಂದರೆ ಇದು ನಿನ್ನ ಅದ್ಭುತವಾದ ಲೀಲೆಯಲ್ಲದೆ ಮತ್ತೇನು ? ॥ ೩೦ ॥

ಶ್ರೀಭಗವಂತನು ಹೇಳಿದನು – ದೇವೀ! ಸ್ವಾಯಂಭುವ ಮನ್ವಂತರದಲ್ಲಿ ನೀನು ಮೊದಲು ಹುಟ್ಟಿದಾಗ ನಿನ್ನ ಹೆಸರು ಪೃಶ್ನಿ ಎಂದಿತ್ತು. ಈ ವಸುದೇವನು ಸುತಪಾ ಎಂಬ ಹೆಸರಿನಿಂದ ಪ್ರಜಾಪತಿಯಾಗಿದ್ದನು. ನಿಮ್ಮಿಬ್ಬರ ಹೃದಯಗಳೂ ಬಹಳ ಶುದ್ಧ ವಾಗಿದ್ದವು. ॥ ೩೨ ॥ ಬ್ರಹ್ಮದೇವರು ಸಂತಾನವನ್ನು ಪಡೆದು ಕೊಳ್ಳಲು ನಿಮಗೆ ಅಪ್ಪಣೆಯನ್ನು ಕೊಟ್ಟಾಗ ನೀವಿಬ್ಬರೂ ಇಂದ್ರಿಯ ಗಳನ್ನು ನಿಯಮನ ಮಾಡಿಕೊಂಡು ಶ್ರೇಷ್ಠವಾದ ತಪಸ್ಸನ್ನು ಮಾಡಿದಿರಿ. ॥ ೩೩ ॥ ನೀವಿಬ್ಬರೂ ಮಳೆ, ಗಾಳಿ, ಬಿಸಿಲು, ಚಳಿ-ಸೆಕೆ ಮುಂತಾದ ಕಾಲದ ವಿಭಿನ್ನ ಗುಣಗಳನ್ನು ಸಹಿಸಿ ಕೊಂಡು, ಪ್ರಾಣಾಯಾಮದ ಮೂಲಕವಾಗಿ ಮನಸ್ಸಿನ ಕಲ್ಮಷ ಗಳನ್ನು ಕಳೆದುಕೊಂಡಿರಿ. ॥ ೩೪ ॥ ನೀವುಗಳು ಕೆಲವೊಮ್ಮೆ ಒಣಗಿದ ತರಗೆಲೆಗಳನ್ನು ತಿನ್ನುತ್ತಾ, ಕೆಲವೊಮ್ಮೆ ಗಾಳಿಯನ್ನು ಮಾತ್ರ ಸೇವಿಸುತ್ತಾ ತಪಸ್ಸು ಮಾಡುತ್ತಿದ್ದಿರಿ. ನಿಮ್ಮ ಮನಸ್ಸು ಶಾಂತವಾಗಿತ್ತು. ಹೀಗೆ ನೀವುಗಳು ನನ್ನಿಂದ ಅಭೀಷ್ಟ ವಸ್ತುವನ್ನು ಪಡೆಯುವ ಬಯಕೆಯಿಂದ ನನ್ನನ್ನು ಆರಾಧಿಸಿದಿರಿ. ॥ ೩೫ ॥ ನನ್ನಲ್ಲಿಯೇ ಚಿತ್ತವನ್ನು ನೆಟ್ಟು ಪರಮ ದುಷ್ಕರವಾದ ಘೋರ ತಪಸ್ಸನ್ನು ಮಾಡುತ್ತಾ-ಮಾಡುತ್ತಾ ದೇವತೆಗಳ ಹನ್ನೆರಡು ಸಾವಿರ ವರ್ಷ ಗಳು ಕಳೆದುಹೋದುವು. ॥ ೩೬ ॥ ಪುಣ್ಯಮಯಿಯಾದ ದೇವಿಯೇ! ಆ ಸಮಯದಲ್ಲಿ ನಾನು ನಿಮ್ಮಿಬ್ಬರ ವಿಷಯ ದಲ್ಲಿಯೂ ಪ್ರಸನ್ನನಾದೆನು. ನೀವಿಬ್ಬರೂ ತಪಸ್ಸಿನಿಂದಲೂ, ಶ್ರದ್ಧೆ ಯಿಂದಲೂ, ಭಕ್ತಿಯಿಂದಲೂ ನನ್ನನ್ನೇ ಯಾವಾಗಲೂ ಹೃದಯದಲ್ಲಿ ಭಾವಿಸಿಕೊಂಡಿರುವಿರಿ. ಆ ಸಮಯದಲ್ಲಿ ನಿಮ್ಮ ಅಭಿಲಾಷೆಗಳನ್ನು ಪೂರ್ಣಗೊಳಿಸಲು ವರದರಾಜನಾದ ನಾನು ಇದೇ ರೂಪದಿಂದ ನಿಮಗೆ ಪ್ರತ್ಯಕ್ಷನಾದೆನು. ಬೇಕಾದ ವರವನ್ನು ಕೇಳಿಕೊಳ್ಳಿರೆಂದು ನಾನು ಹೇಳಿದಾಗ ನೀವಿಬ್ಬರೂ ನನ್ನಂತಹ ಪುತ್ರನು ಬೇಕೆಂದು ಹೇಳಿದಿರಿ. ॥ ೩೭–೩೮ ॥ ಆ ಸಮಯದಲ್ಲಿ ನಿಮಗೆ ವಿಷಯಭೋಗಗಳ ಸಂಬಂಧವೇ ಇರಲಿಲ್ಲ, ಸಂತಾನವೂ ಇರಲಿಲ್ಲ. ಆದರೂ ನನ್ನ ಮಾಯೆಯಿಂದ ಮೋಹಿತರಾಗಿ ನೀವಿಬ್ಬರೂ ಮೋಕ್ಷವನ್ನು ಬೇಡಲಿಲ್ಲ. ॥ ೩೯ ॥

ಗತೇ ಮಯಿ ಯುವಾಂ ಲಬ್ಧ್ವಾ ವರಂ ಮತ್ಸದೃಶಂ ಸುತಮ್ ।
ಗ್ರಾಮ್ಯಾನ್ಭೋಗಾನಭುಂಜಾಥಾಂ ಯುವಾಂ ಪ್ರಾಪ್ತಮನೋರಥೌ ॥ ೪೦ ॥

ಅದೃಷ್ಟ್ವಾನ್ಯತಮಂ ಲೋಕೇ ಶೀಲೌದಾರ್ಯಗುಣೈಃ ಸಮಮ್ ।
ಅಹಂ ಸುತೋ ವಾಮಭವಂ ಪೃಶ್ನಿಗರ್ಭ ಇತಿ ಶ್ರುತಃ ॥ ೪೧ ॥

ತಯೋರ್ವಾಂ ಪುನರೇವಾಹಮದಿತ್ಯಾಮಾಸ ಕಶ್ಯಪಾತ್ ।
ಉಪೇಂದ್ರ ಇತಿ ವಿಖ್ಯಾತೋ ವಾಮನತ್ವಾಚ್ಚ ವಾಮನಃ ॥ ೪೨ ॥

ತೃತೀಯೇಽಸ್ಮಿನ್ಭವೇಽಹಂ ವೈ ತೇನೈವ ವಪುಷಾಥ ವಾಮ್ ।
ಜಾತೋ ಭೂಯಸ್ತಯೋರೇವ ಸತ್ಯಂ ಮೇ ವ್ಯಾಹೃತಂ ಸತಿ ॥ ೪೩ ॥

ಏತದ್ವಾಂ ದರ್ಶಿತಂ ರೂಪಂ ಪ್ರಾಗ್ಜನ್ಮಸ್ಮರಣಾಯ ಮೇ ।
ನಾನ್ಯಥಾ ಮದ್ಭವಂ ಜ್ಞಾನಂ ಮರ್ತ್ಯಲಿಂಗೇನ ಜಾಯತೇ ॥ ೪೪ ॥

ಯುವಾಂ ಮಾಂ ಪುತ್ರಭಾವೇನ ಬ್ರಹ್ಮಭಾವೇನ ಚಾಸಕೃತ್ ।
ಚಿಂತಯಂತೌ ಕೃತಸ್ನೇಹೌ ಯಾಸ್ಯೇಥೇ ಮದ್ಗತಿಂ ಪರಾಮ್ ॥ ೪೫ ॥

(ಯದಿ ಕಂಸಾದ್ ಬಿಭೇಷಿ ತ್ವಂ, ತರ್ಹಿ ಮಾಂ ಗೋಕುಲಂ ನಯ ।
ಮನ್ಮಾಯಾಮಾನಯಾಶು ತ್ವಂ ಯಶೋದಾಗರ್ಭಸಂಭವಾಮ್ ॥)

ಶ್ರೀಶುಕ ಉವಾಚ

ಇತ್ಯುಕ್ತ್ವಾಸೀದ್ಧರಿಸ್ತೂಷ್ಣೀಂ ಭಗವಾನಾತ್ಮಮಾಯಯಾ ।
ಪಿತ್ರೋಃ ಸಂಪಶ್ಯತೋಃ ಸದ್ಯೋ ಬಭೂವ ಪ್ರಾಕೃತಃ ಶಿಶುಃ ॥ ೪೬ ॥

ತತಶ್ಚ ಶೌರಿರ್ಭಗವತ್ಪ್ರಚೋದಿತಃ
ಸುತಂ ಸಮಾದಾಯ ಸ ಸೂತಿಕಾಗೃಹಾತ್ ।
ಯದಾ ಬಹಿರ್ಗಂತುಮಿಯೇಷ ತರ್ಹ್ಯಜಾ
ಯಾ ಯೋಗಮಾಯಾಜನಿ ನಂದಜಾಯಯಾ ॥ ೪೭ ॥

ತಯಾ ಹೃತಪ್ರತ್ಯಯಸರ್ವವೃತ್ತಿಷು
ದ್ವಾಃಸ್ಥೇಷು ಪೌರೇಷ್ವಪಿ ಶಾಯಿತೇಷ್ವಥ ।
ದ್ವಾರಶ್ಚ ಸರ್ವಾಃ ಪಿಹಿತಾ ದುರತ್ಯಯಾ
ಬೃಹತ್ಕಪಾಟಾಯಸಕೀಲಶೃಂಖಲೈಃ ॥ ೪೮ ॥

ನನ್ನಂತಹ ಪುತ್ರನು ನಿಮಗೆ ದೊರೆಯಲಿ – ಎಂಬ ಅಮೋಘವಾದ ವರವನ್ನಿತ್ತು ನಾನು ಅದೃಶ್ಯನಾದೆನು. ಸಫಲ ಮನೋರಥರಾದ ನೀವಿಬ್ಬರೂ ಪುತ್ರಪ್ರಾಪ್ತಿಗಾಗಿ ವಿಷಯೋಪಭೋಗಗಳನ್ನು ಅನುಭವಿಸಲು ತೊಡಗಿದಿರಿ. ॥ ೪೦ ॥ ಪ್ರಪಂಚದಲ್ಲಿ ಶೀಲಸ್ವಭಾವ, ಉದಾರತೆ ಹಾಗೂ ಇತರ ಗುಣಗಳಿಂದ ಕೂಡಿದವನು ನಾನಲ್ಲದೆ ಬೇರೆ ಯಾರೂ ಇಲ್ಲವೆಂದು ತಿಳಿದು ನಾನೇ ನಿಮಗೆ ಪುತ್ರನಾದೆನು. ಆ ಸಮಯದಲ್ಲಿ ನಾನು 'ಪೃಶ್ನಿಗರ್ಭ' ಎಂಬ ಹೆಸರಿನಿಂದ ವಿಖ್ಯಾತನಾದೆನು. ॥ ೪೧ ॥ ಮತ್ತೆ ಎರಡನೇ ಜನ್ಮದಲ್ಲಿ ನೀನು ಅದಿತಿಯಾದ ಮತ್ತು ವಸುದೇವನು ಕಶ್ಯಪನಾದನು. ಆ ಸಮಯದಲ್ಲೂ ನಾನು ನಿಮಗೆ ಪುತ್ರನಾದೆನು. ಆಗ ನನ್ನ ಹೆಸರು 'ಉಪೇಂದ್ರ' ಎಂದಿತ್ತು. ಗಿಡ್ಡನಾದ್ದರಿಂದ ನನ್ನನ್ನು ವಾಮನನೆಂದೂ ಜನರು ಹೇಳುತ್ತಿದ್ದರು. ॥ ೪೨ ॥ ಸತಿದೇವೀ ದೇವಕಿಯೇ! ನಿನ್ನ ಈ ಮೂರನೇ ಜನ್ಮದಲ್ಲಿಯೂ ನಾನು ಇದೇ ರೂಪದಿಂದ ನಿಮಗೆ ಪುತ್ರನಾಗಿರುವೆನು.* ನನ್ನ ವಾಣಿಯು ಸದಾಕಾಲ ಸತ್ಯವಾಗಿರುತ್ತದೆ. ॥ ೪೩ ॥ ನಿನಗೆ ನನ್ನ ಹಿಂದಿನ ಅವತಾರಗಳ ಸ್ಮರಣೆ ಉಂಟಾಗಲೆಂದೇ ನನ್ನ ರೂಪವನ್ನು ತೋರಿಸಿದ್ದೇನೆ. ನಾನು ಹೀಗೆ ಮಾಡದಿದ್ದರೆ ಕೇವಲ ಮನುಷ್ಯ ಶರೀರದಿಂದಲೇ ನನ್ನ ಅವತಾರದ ಪರಿಚಯವಾಗುತ್ತಿರಲಿಲ್ಲ. ॥ ೪೪ ॥ ನೀವಿಬ್ಬರೂ ನನ್ನ ಕುರಿತು ಪುತ್ರಭಾವ ಹಾಗೂ ನಿರಂತರ ಬ್ರಹ್ಮಭಾವವನ್ನು ಇರಿಸಿ. ಹೀಗೆ ವಾತ್ಸಲ್ಯ-ಸ್ನೇಹ ಮತ್ತು ಚಿಂತನದಿಂದ ನೀವು ನನ್ನ ಪರಮಪದವಿಯನ್ನು ಸೇರುವಿರಿ. ॥ ೪೫ ॥

(ಎಲೈ ವಸುದೇವನೇ! ನೀನು ಕಂಸನಿಂದ ಭಯಗೊಂಡಿರುವೆಯಾದರೆ ನನ್ನನ್ನು ಗೋಕುಲಕ್ಕೆ ಕೊಂಡುಹೋಗಿ ಅಲ್ಲಿಟ್ಟು, ಅಲ್ಲಿ ಯಶೋದೆಯ ಗರ್ಭದಲ್ಲಿ ಉತ್ಪನ್ನಳಾದ ನನ್ನ ಯೋಗಮಾಯೆಯನ್ನು ಇಲ್ಲಿಗೆ ತೆಗೆದುಕೊಂಡು ಬಾ.)

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ! ಭಗವಂತನು ಹೀಗೆ ಹೇಳಿ ಸುಮ್ಮನಾದನು. ಅನಂತರ ಅವನು ತನ್ನ ಯೋಗಮಾಯೆಯಿಂದ ತಂದೆ-ತಾಯಿಗಳು ನೋಡುತ್ತಿರುವಂತೆ ಒಂದು ಸಾಧಾರಣ ಶಿಶುವಿನ ರೂಪವನ್ನು ಧರಿಸಿದನು. ॥ ೪೬ ॥ ಆಗ ವಸುದೇವನು ಭಗವಂತನ ಪ್ರೇರಣೆಯಿಂದ ತನ್ನ ಪುತ್ರನನ್ನು ಸೂತಿಕಾಗೃಹದಿಂದ ಹೊರಗೆ ಕೊಂಡುಹೋಗಲು ಇಚ್ಛಿಸಿದನು. ಇದೇ ಸಮಯದಲ್ಲಿ ಭಗವಂತನ ಶಕ್ತಿಯಾದ್ದರಿಂದ ಅವನಂತೆಯೇ ಜನ್ಮರಹಿತಳಾದ ಯೋಗಮಾಯೆಯು ನಂದಮಹಾರಾಜನ ಪತ್ನಿಯಾದ ಯಶೋದೆಯ ಗರ್ಭದಿಂದ ಹುಟ್ಟಿದ್ದಳು. ॥ ೪೭ ॥ ಈ ಯೋಗಮಾಯೆಯೇ ದ್ವಾರಪಾಲರ ಮತ್ತು ಸಮಸ್ತ ನಗರವಾಸಿಗಳ ಇಂದ್ರಿಯವೃತ್ತಿಗಳನ್ನು ಅಪಹರಿಸಿಬಿಟ್ಟಳು. ಇದರಿಂದಾಗಿ ಅವರೆಲ್ಲರೂ ನಿಶ್ಚೇಷ್ಟಿತರಾಗಿ ಮಲಗಿಬಿಟ್ಟರು. ಕಾರಾಗೃಹದ ಎಲ್ಲ ಬಾಗಿಲುಗಳು ಮುಚ್ಚಿದ್ದು ಭಾರೀ ಕಟ್ಟಾದ ದೂಗಿಲುಗಳು

* 'ನನ್ನಂತಹ ಪುತ್ರನು ನಿಮಗಾಗುವನು' ಎಂದು ನಾನು ವರವನ್ನು ಕೊಟ್ಟಿದ್ದೆನು. ಆದರೆ ಇದನ್ನು ನಾನು ಪೂರ್ಣಗೊಳಿಸಲಾರದೆ ಹೋದೆನು. ಏಕೆಂದರೆ, ನನ್ನಂಥವನು ಬೇರೆ ಯಾರೂ ಇಲ್ಲ. ಯಾರಿಗಾದರೂ ಯಾವುದಾದರೂ ವಸ್ತುವನ್ನು ಕೊಡುತ್ತೇನೆ ಎಂದು ಪ್ರತಿಜ್ಞೆಮಾಡಿ ಅದನ್ನು ನೀಡಲಾಗದಿದ್ದರೆ ಅದಕ್ಕೆ ಮೂರರಷ್ಟು ವಸ್ತುವನ್ನು ಕೊಡಬೇಕು. ನನ್ನಂತಹ ಪದಾರ್ಥವೇ ಇಲ್ಲದ್ದರಿಂದ ನಾನೇ ಮೂರುಬಾರಿ ಇವರ ಪುತ್ರನಾಗುವೆನು ಎಂದು ಭಗವಾನ್ ಶ್ರೀಕೃಷ್ಣನು ಯೋಚಿಸಿದನು.

ತಾಃ ಕೃಷ್ಣವಾಹೇ ವಸುದೇವ ಆಗತೇ
ಸ್ವಯಂ ವ್ಯವರ್ಯಂತ ಯಥಾ ತಮೋ ರವೇಃ ।
ವವರ್ಷ ಪರ್ಜನ್ಯ ಉಪಾಂಶುಗರ್ಜಿತಃ
ಶೇಷೋಽನ್ವಗಾದ್ವಾರಿ ನಿವಾರಯನ್ಫಣೈಃ ॥ ೪೯ ॥

ಮಘೋನಿ ವರ್ಷತ್ಯಸಕೃದ್ಯಮಾನುಜಾ
ಗಂಭೀರತೋಯೌಘಜವೋರ್ಮಿಫೇನಿಲಾ ।
ಭಯಾನಕಾವರ್ತಶತಾಕುಲಾ ನದೀ
ಮಾರ್ಗಂ ದದೌ ಸಿಂಧುರಿವ ಶ್ರಿಯಃ ಪತೇಃ ॥ ೫೦ ॥

ನಂದವ್ರಜಂ ಶೌರಿರುಪೇತ್ಯ ತತ್ರ ತಾನ್
ಗೋಪಾನ್ಪ್ರಸುಪ್ತಾನುಪಲಭ್ಯ ನಿದ್ರಯಾ ।
ಸುತಂ ಯಶೋದಾಶಯನೇ ನಿಧಾಯ ತತ್
ಸುತಾಮುಪಾದಾಯ ಪುನರ್ಗೃಹಾನಗಾತ್ ॥ ೫೧ ॥

ದೇವಕ್ಯಾಃ ಶಯನೇ ನ್ಯಸ್ಯ ವಸುದೇವೋಽಥ ದಾರಿಕಾಮ್ ।
ಪ್ರತಿಮುಚ್ಯ ಪದೋರ್ಲೋಹಮಾಸ್ತೇ ಪೂರ್ವವದಾವೃತಃ ॥ ೫೨ ॥

ಯಶೋದಾ ನಂದಪತ್ನೀ ಚ ಜಾತಂ ಪರಮಬುಧ್ಯತ ।
ನ ತಲ್ಲಿಂಗಂ ಪರಿಶ್ರಾಂತಾ ನಿದ್ರಯಾಪಗತಸ್ಮೃತಿಃ ॥ ೫೩ ॥

ಸರಪಳಿಗಳಿಂದ ಬಂಧಿಸಲ್ಪಟ್ಟು ಬೀಗಗಳು ಜಡಿಯಲ್ಪಟ್ಟಿದ್ದವು. ಅವುಗಳಿಂದ ಹೊರಗೆ ಹೋಗುವುದು ಬಹಳ ಕಷ್ಟವಾಗಿತ್ತು. ಆದರೆ ವಸುದೇವನು ಭಗವಾನ್ ಶ್ರೀಕೃಷ್ಣನನ್ನು ಎತ್ತಿಕೊಂಡಾಗ ಸೂರ್ಯೋದಯವಾಗುತ್ತಲೇ ಅಂಧಕಾರವು ದೂರವಾಗುವಂತೆ ವಸುದೇವನ ಕೈಕೋಳಗಳು ಮತ್ತು ಬಾಗಿಲುಗಳು ತಾನಾಗಿಯೇ ತೆರೆದುಕೊಂಡವು.* ವಸುದೇವನು ಬಾಲಮುಕುಂದನನ್ನು ಎತ್ತಿಕೊಂಡು ಹೊರಗೆ ಹೊರಟನು. ಅದೇ ಸಮಯದಲ್ಲಿ ಮೋಡಗಳು ಮೆಲ್ಲ-ಮೆಲ್ಲನೆ ಗುಡುಗುತ್ತಾ ಮಳೆಗರೆಯುತ್ತಿದ್ದವು. ಆದಿಶೇಷನು ತನ್ನ ಸಾವಿರ ಹೆಡೆಗಳಿಂದ ಭಗವಂತನ ಮೇಲೆ ನೀರು ಬೀಳದಂತೆ ಕೊಡೆಯಂತಾಗಿ ವಸುದೇವನ ಹಿಂದೆಯೇ ಹಿಂಬಾಲಿಸಿದನು. ॥ ೪೮-೪೯ ॥ ಸತತವಾಗಿ ಮಳೆಯು ಬೀಳುತ್ತಿದ್ದುದರಿಂದ ಯಮುನಾನದಿಯು ತುಂಬಿ ಹರಿಯುತ್ತಿದ್ದಳು. ಅಗಾಧ ಜಲದ ಪ್ರವಾಹದ ವೇಗದಿಂದ ಅಲೆಗಳೆದ್ದು ನದಿಯಲ್ಲಿ ಅಗಾಧವಾದ ನೊರೆಯುಂಟಾಗಿತ್ತು. ನೂರಾರು ಸುಳಿಗಳಿಂದ ಕೂಡಿತ್ತು. ಸೀತಾಪತಿಯಾದ ಶ್ರೀರಾಮಚಂದ್ರನಿಗೆ ಸಮುದ್ರವು ದಾರಿಯನ್ನು ಕಲ್ಪಿಸಿಕೊಟ್ಟಂತೆಯೇ ಯಮುನೆಯು ಭಗವಂತನಿಗೆ ದಾರಿಮಾಡಿಕೊಟ್ಟಳು. ॥ ೫೦ ॥ ವಸುದೇವನು ನಂದರಾಜನ ಗೋಕುಲಕ್ಕೆ ಹೋದಾಗ ಎಲ್ಲಾ ಗೋಪರು ಗಾಢವಾಗಿ ಮಲಗಿರುವುದನ್ನು ನೋಡಿದನು. ಅವನು ತನ್ನ ಪುತ್ರನನ್ನು ಯಶೋದೆಯ ಪಕ್ಕದಲ್ಲಿ ಮಲಗಿಸಿ, ಅವಳ ನವಜಾತ ಹೆಣ್ಣುಮಗುವನ್ನು ತೆಗೆದುಕೊಂಡು ಕಾರಾಗೃಹಕ್ಕೆ ಮರಳಿದನು. ॥ ೫೧ ॥ ಕಾರಾಗೃಹಕ್ಕೆ ಬಂದ ವಸುದೇವನು ಆ ಹೆಣ್ಣು ಮಗುವನ್ನು ದೇವಕಿಯ ಬಳಿಯಲ್ಲಿ ಮಲಗಿಸಿದನು. ಆಗ ಅವನ ಕೈಕಾಲುಗಳಿಗೆ ಸಂಕೋಲೆಗಳು ತೊಡಿಸಲ್ಪಟ್ಟು ಮೊದಲಿದ್ದಂತೆ ಬಂಧಿತನಾದನು. ॥ ೫೨ ॥ ಇತ್ತಲಾಗಿ ಗೋಕುಲದಲ್ಲಿ ನಂದಪತ್ನೀ ಯಶೋದೆಗೆ ತನಗೆ ಮಗು ಹುಟ್ಟಿದುದು ಹಾಗೂ ಅದು ಗಂಡೋ, ಹೆಣ್ಣೋ ಎಂಬುದು ಅರಿವಾಗಲೇ ಇಲ್ಲ. ಏಕೆಂದರೆ ಮೊದಲಿಗೆ ಆಕೆಯು ಬಹಳ ಬಳಲಿದ್ದಳು, ಇನ್ನೊಂದು ಯೋಗಮಾಯೆಯು ಆಕೆಯನ್ನು ಅಚೇತನಳನ್ನಾಗಿಸಿದ್ದಳು.** ॥ ೫೩ ॥

ಮೂರನೆಯ ಅಧ್ಯಾಯವು ಮುಗಿಯಿತು. ॥ ೩ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮ ಸ್ಕಂಧೇ ಪೂರ್ವಾರ್ಧೇ
ಕೃಷ್ಣಜನ್ಮನಿ ತೃತೀಯೋಽಧ್ಯಾಯಃ ॥ ೩ ॥

* ಕೇವಲ ನಾಮ-ಶ್ರವಣಮಾತ್ರದಿಂದಲೇ ಅನಂತ ಜನ್ಮಾರ್ಜಿತ ಪ್ರಾರಬ್ಧ ಬಂಧನವು ಕಳಚಿಹೋಗುವುದೋ ಅಂತಹ ಪ್ರಭುವನ್ನು ಎತ್ತಿಕೊಂಡ ವಸುದೇವನ ಬೇಡಿಗಳು ಕಳಚಿಬೀಳುವುದರಲ್ಲಿ ಆಶ್ಚರ್ಯವೇನಿದೆ?

** ಭಗವಾನ್ ಶ್ರೀಕೃಷ್ಣನು ಈ ಪ್ರಸಂಗದಲ್ಲಿ ತನ್ನನ್ನು ಪ್ರೇಮಪೂರ್ವಕವಾಗಿ ಹೃದಯದಲ್ಲಿ ಧರಿಸುವವನ ಬಂಧನವು ಬಿಡುಗಡೆ ಹೊಂದುವುದು, ಕಾರಾಗೃಹದಿಂದ ಬಿಡುಗಡೆ ಹೊಂದುತ್ತಾನೆ, ದೊಡ್ಡ-ದೊಡ್ಡ ಬಾಗಿಲುಗಳು ತೆರೆಯುತ್ತವೆ, ಕಾವಲುಗಾರರಿಗೆ ಅರಿವಾಗುವುದೇ ಇಲ್ಲ. ಭವನದಿಯು ಎತ್ತಿಕೊಡುತ್ತದೆ. ಗೋಕುಲದ (ಇಂದ್ರಿಯ ಸಮುದಾಯ) ವೃತ್ತಿಗಳು ಲುಪ್ತವಾಗುತ್ತವೆ. ಮಾಯೆಯು ಕೈವಶವಾಗುತ್ತಾಳೆಂಬುದನ್ನು ತೋರಿಸಿಕೊಟ್ಟನು.

ನಾಲ್ಕನೆಯ ಅಧ್ಯಾಯ

ಕಂಸನ ಕೈಯಿಂದ ತಪ್ಪಿಸಿಕೊಂಡ ಯೋಗಮಾಯೆಯು ಆಕಾಶಕ್ಕೆ ಹಾರಿ ಭವಿಷ್ಯವನ್ನು ನುಡಿದುದು

ಶ್ರೀಶುಕ ಉವಾಚ

ಬಹಿರಂತಃಪುರದ್ವಾರಃ ಸರ್ವಾಃ ಪೂರ್ವವದಾವೃತಾಃ ।
ತತೋ ಬಾಲಧ್ವನಿಂ ಶ್ರುತ್ವಾ ಗೃಹಪಾಲಾಃ ಸಮುತ್ಥಿತಾಃ ॥ ೧ ॥

ತೇ ತು ತೂರ್ಣಮುಪವ್ರಜ್ಯ ದೇವಕ್ಯಾ ಗರ್ಭಜನ್ಮ ತತ್ ।
ಆಚಖ್ಯುರ್ಭೋಜರಾಜಾಯ ಯದುದ್ವಿಗ್ನಃ ಪ್ರತೀಕ್ಷತೇ ॥ ೨ ॥

ಸ ತಲ್ಪಾತ್ತೂರ್ಣಮುತ್ಥಾಯ ಕಾಲೋಽಯಮಿತಿ ವಿಹ್ವಲಃ ।
ಸೂತೀಗೃಹಮಗಾತ್ತೂರ್ಣಂ ಪ್ರಸ್ಖಲನ್ಮುಕ್ತಮೂರ್ಧಜಃ ॥ ೩ ॥

ತಮಾಹ ಭ್ರಾತರಂ ದೇವೀ ಕೃಪಣಾ ಕರುಣಂ ಸತೀ ।
ಸ್ನುಷೇಯಂ ತವ ಕಲ್ಯಾಣ ಸ್ತ್ರಿಯಂ ಮಾ ಹಂತುಮರ್ಹಸಿ ॥ ೪ ॥

ಬಹವೋ ಹಿಂಸಿತಾ ಭ್ರಾತಃ ಶಿಶವಃ ಪಾವಕೋಪಮಾಃ ।
ತ್ವಯಾ ದೈವನಿಸೃಷ್ಟೇನ ಪುತ್ರಿಕೈಕಾ ಪ್ರದೀಯತಾಮ್ ॥ ೫ ॥

ನನ್ವಹಂ ತೇ ಹ್ಯವರಜಾ ದೀನಾ ಹತಸುತಾ ಪ್ರಭೋ ।
ದಾತುಮರ್ಹಸಿ ಮಂದಾಯಾ ಅಂಗೇಮಾಂ ಚರಮಾಂ ಪ್ರಜಾಮ್ ॥ ೬ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ! ವಸುದೇವನು ಸೆರೆಮನೆಗೆ ಹಿಂದಿರುಗಿದೊಡನೆಯೇ ಎಲ್ಲ ಹೊರಗಿನ ಮತ್ತು ಒಳಗಿನ ಬಾಗಿಲುಗಳು ಹಿಂದಿನಂತೆಯೇ ಮುಚ್ಚಲ್ಪಟ್ಟವು. ದೇವಕಿಯ ಪಕ್ಕದಲ್ಲಿದ್ದ ನವಜಾತ ಶಿಶುವು ಅಳತೊಡಗಿತು. ಆ ಧ್ವನಿಯನ್ನು ಕೇಳುತ್ತಲೇ ದ್ವಾರಪಾಲರು ಎಚ್ಚರಗೊಂಡರು. ॥ ೧ ॥ ಅವರು ಒಡನೆಯೇ ಭೋಜರಾಜನಾದ ಕಂಸನ ಬಳಿಗೆ ಹೋಗಿ ದೇವಕಿಗೆ ಎಂಟನೆಯ ಶಿಶುವು ಹುಟ್ಟಿರುವ ಸಮಾಚಾರವನ್ನು ತಿಳಿಸಿದರು. ಕಂಸನಾದರೋ ಮಾತನ್ನು ಹೇಳುತ್ತಲೇ ಧುಗ್ಗನೆ ಮೇಲೆದ್ದು ಶೀಘ್ರಾತಿಶೀಘ್ರವಾಗಿ ಸೂತಿಕಾಗೃಹದ ಕಡೆಗೆ ಧಾವಿಸಿದನು. ಈ ಬಾರಿಯಲ್ಲಾದರೋ ನನ್ನ ಮೃತ್ಯುವೇ ಹುಟ್ಟಿರುವನು ಎಂದು ಯೋಚಿಸುತ್ತಾ ಕಾತರಗೊಂಡಿದ್ದನು. ಇದರಿಂದಾಗಿ ತನ್ನ ತಲೆಗೂದಲು ಬಿಚ್ಚಿಕೊಂಡಿದ್ದರೂ ಅವನ ಗಮನಕ್ಕೆ ಬರಲೇ ಇಲ್ಲ. ದಾರಿಯಲ್ಲಿ ಕೆಲವೆಡೆ ಎಡವುತ್ತಾ ಓಡುತ್ತಿದ್ದನು. ॥ ೩ ॥ ಸೆರೆಮನೆಯನ್ನು ಪ್ರವೇಶಿಸುತ್ತಲೇ ಬಹಳ ದುಃಖದಿಂದಲೂ, ಕರುಣೆಯಿಂದಲೂ ದೇವಕೀದೇವಿಯು ಕಂಸನಲ್ಲಿ ಹೇಳಿದಳು – ನನ್ನ ಹಿತೈಷಿಯಾದ ಅಣ್ಣನೇ! ಈ ಹೆಣ್ಣಾದರೋ ನಿನಗೆ ಸೊಸೆಯಾಗಿದ್ದಾಳೆ. ಹೆಣ್ಣುಶಿಶುವು ಹುಟ್ಟಿದೆ. ಆದುದರಿಂದ ಸ್ತ್ರೀಯನ್ನು ಕೊಲ್ಲುವುದು ನಿನಗೆ ಯೋಗ್ಯವಾದುದಲ್ಲ. ॥ ೪ ॥ ಅಣ್ಣಾ! ನೀನು ದೈವವಶಾತ್ ಅಗ್ನಿಯಂತೆ ತೇಜಸ್ವಿಗಳಾದ ನನ್ನ ಹಲವಾರು ಬಾಲಕರನ್ನು ಕೊಂದಿರುವೆ. ಈಗ ಕೇವಲ ಈ ಒಂದು ಕನ್ಯೆಮಾತ್ರ ಉಳಿದಿರುವಳು. ಇದನ್ನಾದರೂ ಕೊಲ್ಲದೆ ನನಗೆ ಕೊಟ್ಟುಬಿಡು. ॥ ೫ ॥ ಅಣ್ಣಾ! ನಾನು ನಿನ್ನ ತಂಗಿಯಲ್ಲವೇ? ನನ್ನ ಅನೇಕ ಮಕ್ಕಳು ಸತ್ತು ಹೋಗಿರುವರು. ಅದಕ್ಕಾಗಿ ನಾನು ಅತ್ಯಂತ ದೀನಳಾಗಿರುವೆನು. ದೈನ್ಯದಿಂದ ಬೇಡಿಕೊಳ್ಳುವೆನು. ಮಂದಭಾಗ್ಯಳಾದ ನನಗೆ ಈ ಕಡೆಯ ಹೆಣ್ಣುಶಿಶುವನ್ನಾದರೂ ದಯಪಾಲಿಸು. ॥ ೬ ॥

ಶ್ರೀಶುಕ ಉವಾಚ

ಉಪಗುಹ್ಯಾತ್ಮಜಾಮೇವಂ ರುದತ್ಯಾ ದೀನದೀನವತ್ ।
ಯಾಚಿತಸ್ತಾಂ ವಿನಿರ್ಭರ್ತ್ಸ್ಯ ಹಸ್ತಾದಾಚಿಚ್ಛಿದೇ ಖಲಃ ॥ ೭ ॥

ತಾಂ ಗೃಹೀತ್ವಾ ಚರಣಯೋರ್ಜಾತಮಾತ್ರಾಂ ಸ್ವಸುಃ ಸುತಾಮ್ ।
ಅಪೋಥಯಚ್ಛಿಲಾಪೃಷ್ಠೇ ಸ್ವಾರ್ಥೋನ್ಮೂಲಿತಸೌಹೃದಃ ॥ ೮ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ! ಹೆಣ್ಣುಮಗುವನ್ನು ತನ್ನ ಮಡಿಲಲ್ಲಿ ಅಡಗಿಸಿಕೊಂಡು ದೇವಕಿಯು ಅತ್ಯಂತ ದೈನ್ಯದಿಂದ ಅಳುತ್ತಾ ಬೇಡಿಕೊಂಡಳು. ಆದರೆ ಕಂಸನು ಬಹಳ ದುಷ್ಟನಾಗಿದ್ದನು. ಅವನು ದೇವಕಿಯನ್ನು ಗದರಿಸುತ್ತಾ ಅವಳ ಕೈಯಲ್ಲಿದ್ದ ಆ ಕನ್ಯೆಯನ್ನು ಕಸಿದುಕೊಂಡನು. ॥ ೭ ॥ ಕಂಸನು ಮಹಾಸ್ವಾರ್ಥಿಯಾಗಿದ್ದು ಅವನ ಮನಸ್ಸಿನಲ್ಲಿ ಸೌಹಾರ್ದವೆಂಬುದು ಲವಲೇಶವೂ ಇರಲಿಲ್ಲ. ಆಗತಾನೇ ಹುಟ್ಟಿದ ತನ್ನ ಸೊಸೆಯಾದ ಆ ಹೆಣ್ಣುಮಗುವಿನ ಕಾಲನ್ನು ಹಿಡಿದು ಒಂದು ಬಂಡೆಯ ಮೇಲೆ ಅಪ್ಪಳಿಸಿದನು. ॥ ೮ ॥

ಸಾ ತದ್ಧಸ್ತಾತ್ಸಮುತ್ಪತ್ಯ ಸದ್ಯೋ ದೇವ್ಯಂಬರಂ ಗತಾ ।
ಅದೃಶ್ಯತಾನುಜಾ ವಿಷ್ಣೋಃ ಸಾಯುಧಾಷ್ಟಮಹಾಭುಜಾ ॥ ೯ ॥

ದಿವ್ಯಸ್ರಗಂಬರಾಲೇಪರತ್ನಾಭರಣಭೂಷಿತಾ ।
ಧನುಃಶೂಲೇಷುಚರ್ಮಾಸಿಶಂಖಚಕ್ರಗದಾಧರಾ ॥ ೧೦ ॥

ಸಿದ್ಧಚಾರಣಗಂಧರ್ವೈರಪ್ಸರಃ ಕಿನ್ನರೋರಗೈಃ ।
ಉಪಾಹೃತೋರುಬಲಿಭಿಃ ಸ್ತೂಯಮಾನೇದಮಬ್ರವೀತ್ ॥ ೧೧ ॥

ಕಿಂ ಮಯಾ ಹತಯಾ ಮಂದ ಜಾತಃ ಖಲು ತವಾಂತಕೃತ್ ।
ಯತ್ರ ಕ್ವ ವಾ ಪೂರ್ವಶತ್ರುರ್ಮಾ ಹಿಂಸೀಃ ಕೃಪಣಾನ್ವೃಥಾ ॥ ೧೨ ॥

ಇತಿ ಪ್ರಭಾಷ್ಯ ತಂ ದೇವೀ ಮಾಯಾ ಭಗವತೀ ಭುವಿ ।
ಬಹುನಾಮನಿಕೇತೇಷು ಬಹುನಾಮಾ ಬಭೂವ ಹ ॥ ೧೩ ॥

ತಯಾಭಿಹಿತಮಾಕರ್ಣ್ಯ ಕಂಸಃ ಪರಮವಿಸ್ಮಿತಃ ।
ದೇವಕೀಂ ವಸುದೇವಂ ಚ ವಿಮುಚ್ಯ ಪ್ರಶ್ರಿತೋಽಬ್ರವೀತ್ ॥ ೧೪ ॥

ಅಹೋ ಭಗಿನ್ಯಹೋ ಭಾಮ ಮಯಾ ವಾಂ ಬತ ಪಾಪ್ಮನಾ ।
ಪುರುಷಾದ ಇವಾಪತ್ಯಂ ಬಹವೋ ಹಿಂಸಿತಾಃ ಸುತಾಃ ॥ ೧೫ ॥

ಸ ತ್ವಹಂ ತ್ಯಕ್ತಕಾರುಣ್ಯಸ್ತ್ಯಕ್ತಜ್ಞಾತಿಸುಹೃತ್ಖಲಃ ।
ಕಾನ್ಲೋಕಾನ್ವೈ ಗಮಿಷ್ಯಾಮಿ ಬ್ರಹ್ಮಹೇವ ಮೃತಃ ಶ್ವಸನ್ ॥ ೧೬ ॥

ದೈವಮಪ್ಯನೃತಂ ವಕ್ತಿ ನ ಮರ್ತ್ಯಾ ಏವ ಕೇವಲಮ್ ।
ಯದ್ವಿಶ್ರಂಭಾದಹಂ ಪಾಪಃ ಸ್ವಸುರ್ನಿಹತವಾನ್ ಶಿಶೂನ್ ॥ ೧೭ ॥

ಮಾ ಶೋಚತಂ ಮಹಾಭಾಗಾವಾತ್ಮಜಾನ್ಸ್ವಕೃತಂಭುಜಃ ।
ಜಂತವೋ ನ ಸದೈಕತ್ರ ದೈವಾಧೀನಾಸ್ತದಾಸತೇ ॥ ೧೮ ॥

ಆದರೆ ಶ್ರೀಕೃಷ್ಣನ ತಂಗಿಯಾದ ಆ ಹೆಣ್ಣು ಸಾಮಾನ್ಯ ಮಗುವಾಗಿರದೆ ದೇವಿಯೇ ಆಗಿದ್ದಳು. ಅವನ ಕೈಯಿಂದ ಜಾರಿ ಒಡನೆಯೇ ಆಕಾಶಕ್ಕೆ ನೆಗೆದು ಅಷ್ಟಭುಜೆಯಾಗಿ ಎಂಟು ಕೈಗಳಲ್ಲಿಯೂ ಆಯುಧಗಳನ್ನು ಧರಿಸಿ ಆಗಸದಲ್ಲಿ ನಿಂತಿದ್ದಳು. ॥ ೯ ॥ ಆಕೆಯು ದಿವ್ಯ ಮಾಲೆಗಳಿಂದಲೂ, ವಸ್ತ್ರ, ಚಂದನ, ಮಣಿಮಯ ಆಭೂಷಣಗಳಿಂದ ವಿಭೂಷಿತಳಾಗಿದ್ದಳು. ಅವಳ ಕೈಗಳಲ್ಲಿ ಧನುಸ್ಸು, ತ್ರಿಶೂಲ, ಬಾಣ, ಗುರಾಣಿ, ಖಡ್ಗ, ಶಂಖ, ಚಕ್ರ, ಗದೆ ಇವೇ ಎಂಟು ಆಯುಧಗಳಿದ್ದವು. ॥ ೧೦ ॥ ಸಿದ್ಧರು, ಚಾರಣರು, ಗಂಧರ್ವರು, ಅಪ್ಸರೆಯರು, ಕಿನ್ನರರು, ನಾಗಗಳೂ ಅನೇಕ ಉಪಾಯನಗಳನ್ನು ಆ ದೇವಿಗೆ ಅರ್ಪಿಸಿ ಸ್ತೋತ್ರ ಮಾಡುತ್ತಿದ್ದರು. ಆ ಸಮಯದಲ್ಲಿ ವಿಷ್ಣುಮಾಯಾದೇವಿಯು ಕಂಸನಿಗೆ ಹೇಳಿದಳು – ॥ ೧೧ ॥ ಎಲವೋ ಮೂರ್ಖನೇ! ನನ್ನನ್ನು ಕೊಲ್ಲುವುದರಿಂದ ನಿನಗೇನು ಸಿಕ್ಕೀತು? ನಿನ್ನ ಪೂರ್ವಜನ್ಮ ಶತ್ರುವು ನಿನ್ನನ್ನು ಕೊಲ್ಲಲಿಕ್ಕಾಗಿ ಎಲ್ಲಿಯೋ ಒಂದೆಡೆ ಹುಟ್ಟಿ ಬೆಳೆಯುತ್ತಿದ್ದಾನೆ. ಈಗ ನೀನು ವ್ಯರ್ಥವಾಗಿ ನಿರ್ದೋಷಿಗಳಾದ ಹಸುಳೆಗಳನ್ನು ಕೊಲ್ಲಬೇಡ. ॥ ೧೨ ॥ ಕಂಸನಿಗೆ ಹೀಗೆ ಹೇಳಿ ಭಗವತಿ ಯೋಗಮಾಯೆಯು ಅಲ್ಲೇ ಅಂತರ್ಧಾನಗೊಂಡಳು ಹಾಗೂ ಭೂಮಂಡಲದಲ್ಲಿ ಅನೇಕ ಸ್ಥಾನಗಳಲ್ಲಿ ಬೇರೆ-ಬೇರೆ ಹೆಸರುಗಳಿಂದ ಪ್ರಸಿದ್ಧಳಾದಳು. ॥ ೧೩ ॥

ದೇವಿಯ ಈ ಮಾತನ್ನು ಕೇಳಿ ಕಂಸನಿಗೆ ಮಹದಾಶ್ಚರ್ಯವಾಯಿತು. ಆಗಲೇ ಅವನು ದೇವಕಿ ಮತ್ತು ವಸುದೇವ ಇವರನ್ನು ಸೆರೆಮನೆಯಿಂದ ಬಿಡುಗಡೆಮಾಡಿ ವಿನಯಪೂರ್ವಕವಾಗಿ ಹೀಗೆಂದನು – ॥ ೧೪ ॥ ನನ್ನ ಪ್ರಿಯತಂಗಿಯೇ ಮತ್ತು ಭಾವನೇ! ಅಯ್ಯೋ! ನಾನು ಮಹಾಪಾಪಿಯಾಗಿದ್ದೇನೆ. ರಾಕ್ಷಸನು ತನ್ನ ಮಕ್ಕಳನ್ನೇ ಕೊಲ್ಲುವಂತೆ ನಾನು ನಿನ್ನ ಅನೇಕ ಮಕ್ಕಳನ್ನು ಕೊಂದು ಹಾಕಿದೆನು. ಇದರಿಂದ ನನಗೆ ಬಹಳ ದುಃಖವಾಗಿದೆ.* ॥ ೧೫ ॥ ಕರುಣೆ ಎಂಬುದಕ್ಕೆ ನನ್ನ ಹೃದಯದಲ್ಲಿ ಸ್ಥಾನವೇ ಇಲ್ಲದಾಗಿತ್ತು. ನಾನು ನನ್ನ ಬಂಧು-ಬಾಂಧವರನ್ನು, ಹಿತೈಷಿಗಳನ್ನೂ ತ್ಯಜಿಸಿಬಿಟ್ಟೆ. ನನಗೆ ಯಾವ ನರಕವು ಕಾದಿದೆಯೋ ತಿಳಿಯದು. ನಿಜವಾಗಿ ಯಾದರೋ ನಾನು ಬ್ರಹ್ಮಘಾತಿಯಂತೆ ಜೀವಿಸಿದ್ದರೂ ಸತ್ತಂತೆಯೇ ಸರಿ. ॥ ೧೬ ॥ ಕೇವಲ ಮನುಷ್ಯನೇ ಸುಳ್ಳುಹೇಳುವುದಲ್ಲ, ವಿಧಾತನೂ ಸುಳ್ಳು ಹೇಳುತ್ತಿರುವನಲ್ಲ! ಅದನ್ನು ನಂಬಿ ನಾನು ನನ್ನ ತಂಗಿಯ ಮಕ್ಕಳನ್ನು ಕೊಂದುಹಾಕಿದೆನಲ್ಲ! ಅಯ್ಯೋ! ನಾನು ಎಂತಹ ಪಾಪಿಯಾಗಿರುವೆನು! ॥ ೧೭ ॥ ನೀವಿಬ್ಬರೂ ಮಹಾತ್ಮರಾಗಿರುವಿರಿ. ನಿಮ್ಮ ಪುತ್ರರಿಗಾಗಿ ಶೋಕಿಸಬೇಡಿರಿ. ಅವರಿಗಾದರೋ ತಮ್ಮ ಕರ್ಮದ ಫಲವೇ ದೊರಕಿದೆ. ಎಲ್ಲ ಪ್ರಾಣಿಗಳು ಪ್ರಾರಬ್ಧಕ್ಕೆ ಅಧೀನರು. ಆದ್ದರಿಂದ ಅವರು ಯಾವಾಗಲೂ ಜೊತೆಯಾಗಿ ಇರಲಾರರು. ॥ ೧೮ ॥

* [illegible] ಎಲ್ಲಿ ಭಗವಂತನು ವಾಸಿಸಿದ್ದನೋ, ಯಾರಿಗೆ ಭಗವದ್ದರ್ಶನವಾಗಿದೆಯೋ ಅಂತಹ ವಸುದೇವ-ದೇವಕಿಯರ ದರ್ಶನದ ಫಲವಾಗಿಯೇ ಕಂಸನ ಹೃದಯದಲ್ಲಿ ವಿನಯ, ವಿಚಾರ, ಉದಾರತೆ ಮುಂತಾದ ಸದ್ಗುಣಗಳ ಉದಯವಾಯಿತು. ಆದರೆ ಅವನ ಮುಂದಿರುವ ಕಸಾಕ ಈ [illegible]. ತನ್ನ ದುಷ್ಟಮಂತ್ರಿಗಳ ಮಧ್ಯದಲ್ಲಿ ಹೋಗುತ್ತಲೇ ಪುನಃ ಹೇಗಿದ್ದನೋ ಹಾಗೆಯೇ ಆದನು.

ಭುವಿ ಭೌಮಾನಿ ಭೂತಾನಿ ಯಥಾ ಯಾಂತ್ಯಪಯಾಂತಿ ಚ ।
ನಾಯಮಾತ್ಮಾ ತಥೈತೇಷು ವಿಪರ್ಯೇತಿ ಯಥೈವ ಭೂಃ ॥ ೧೯ ॥

ಯಥಾನೇವಂವಿದೋ ಭೇದೋ ಯತ ಆತ್ಮವಿಪರ್ಯಯಃ ।
ದೇಹಯೋಗವಿಯೋಗೌ ಚ ಸಂಸೃತಿರ್ನ ನಿವರ್ತತೇ ॥ ೨೦ ॥

ತಸ್ಮಾದ್ಭದ್ರೇ ಸ್ವತನಯಾನ್ಮಯಾ ವ್ಯಾಪಾದಿತಾನಪಿ ।
ಮಾನುಶೋಚ ಯತಃ ಸರ್ವಃ ಸ್ವಕೃತಂ ವಿಂದತೇಽವಶಃ ॥ ೨೧ ॥

ಯಾವದ್ಧತೋಽಸ್ಮಿ ಹಂತಾಸ್ಮೀತ್ಯಾತ್ಮಾನಂ ಮನ್ಯತೇಽಸ್ವದೃಕ್ ।
ತಾವತ್ತದಭಿಮಾನ್ಯಜ್ಞೋ ಬಾಧ್ಯಬಾಧಕತಾಮಿಯಾತ್ ॥ ೨೨ ॥

ಕ್ಷಮಧ್ವಂ ಮಮ ದೌರಾತ್ಮ್ಯಂ ಸಾಧವೋ ದೀನವತ್ಸಲಾಃ ।
ಇತ್ಯುಕ್ತ್ವಾಶ್ರುಮುಖಃ ಪಾದೌ ಶ್ಯಾಲಃ ಸ್ವಸ್ರೋರಥಾಗ್ರಹೀತ್ ॥ ೨೩ ॥

ಮೋಚಯಾಮಾಸ ನಿಗಡಾದ್ವಿಶ್ರಬ್ಧಃ ಕನ್ಯಕಾಗಿರಾ ।
ದೇವಕೀಂ ವಸುದೇವಂ ಚ ದರ್ಶಯನ್ನಾತ್ಮಸೌಹೃದಮ್ ॥ ೨೪ ॥

ಭ್ರಾತುಃ ಸಮನುತಪ್ತಸ್ಯ ಕ್ಷಾಂತರೋಷಾ ಚ ದೇವಕೀ ।
ವ್ಯಸೃಜದ್ವಸುದೇವಶ್ಚ ಪ್ರಹಸ್ಯ ತಮುವಾಚ ಹ ॥ ೨೫ ॥

ಏವಮೇತನ್ಮಹಾಭಾಗ ಯಥಾ ವದಸಿ ದೇಹಿನಾಮ್ ।
ಅಜ್ಞಾನಪ್ರಭವಾಹಂಧೀಃ ಸ್ವಪರೇತಿ ಭಿದಾ ಯತಃ ॥ ೨೬ ॥

ಶೋಕಹರ್ಷಭಯದ್ವೇಷಲೋಭಮೋಹಮದಾನ್ವಿತಾಃ ।
ಮಿಥೋ ಘ್ನಂತಂ ನ ಪಶ್ಯಂತಿ ಭಾವೈರ್ಭಾವಂ ಪೃಥಗ್ದೃಶಃ ॥ ೨೭ ॥

ಮಣ್ಣಿನಿಂದ ಹಲವಾರು ಬಗೆಯ ಗಡಿಗೆಯೇ ಮುಂತಾದ ಪದಾರ್ಥಗಳು ಆಗುತ್ತವೆ, ನಾಶವಾಗುತ್ತವೆ. ಆದರೆ ಮಣ್ಣಿನಲ್ಲಿ ಯಾವುದೇ ವ್ಯತ್ಯಾಸವಾಗುವುದಿಲ್ಲ. ಹಾಗೆಯೇ ಶರೀರಗಳು ಹುಟ್ಟುತ್ತವೆ, ಸಾಯುತ್ತವೆ. ಆದರೆ ಆತ್ಮನಲ್ಲಿ ಇವರ ಯಾವ ಪರಿಣಾಮವೂ ಉಂಟಾಗುವುದಿಲ್ಲ. ॥ ೧೯ ॥ ಈ ತತ್ತ್ವವನ್ನು ತಿಳಿಯದ ಜನರು ಈ ಅನಾತ್ಮ ಶರೀರವನ್ನೇ ಆತ್ಮಾ ಎಂದು ತಿಳಿದು ಬಿಡುತ್ತಾರೆ. ಇದೇ ವಿಪರೀತ ಬುದ್ಧಿ ಅಥವಾ ಅಜ್ಞಾನವಾಗಿದೆ. ಇದರಿಂದಲೇ ಹುಟ್ಟು-ಸಾವುಗಳಾಗುತ್ತಾ ಇರುತ್ತವೆ. ಈ ಅಜ್ಞಾನವು ಅಳಿಯುವವರೆಗೆ ಸುಖ-ದುಃಖರೂಪವಾದ ಸಂಸಾರದಿಂದ ಬಿಡುಗಡೆಯಾಗುವುದಿಲ್ಲ. ॥ ೨೦ ॥ ನನ್ನ ಪ್ರಿಯ ಸೋದರೀ! ನಾನು ನಿನ್ನ ಪುತ್ರರನ್ನು ಕೊಂದುಹಾಕಿದ್ದರೂ ನೀನು ಅವರಿಗಾಗಿ ಶೋಕಿಸಬಾರದು. ಏಕೆಂದರೆ, ಎಲ್ಲ ಪ್ರಾಣಿಗಳೂ ಪರವಶರಾಗಿ ತಮ್ಮ ಕರ್ಮಗಳ ಫಲವನ್ನು ಭೋಗಿಸಬೇಕಾಗುತ್ತದೆ. ॥ ೨೧ ॥ ತನ್ನ ಸ್ವರೂಪವನ್ನು ತಿಳಿದುಕೊಳ್ಳದ ಕಾರಣ ಜೀವನು 'ನಾನು ಕೊಲ್ಲುವವನು ಮತ್ತು ಕೊಲ್ಲಲ್ಪಡುವವನು' ಎಂದು ತಿಳಿಯುತ್ತಿರುವವರೆಗೆ ಶರೀರದ ಹುಟ್ಟು-ಸಾವುಗಳ ಅಭಿಮಾನವನ್ನಿಟ್ಟುಕೊಂಡ ಅಜ್ಞಾನಿಯು ಬಾಧ್ಯ-ಬಾಧಕ ಭಾವವನ್ನು ಪಡೆಯುತ್ತಾನೆ. ಅರ್ಥಾತ್ – ಅವನು ಇತರರಿಗೆ ದುಃಖ ಕೊಡುತ್ತಾನೆ ಮತ್ತು ದುಃಖವನ್ನು ಅನುಭವಿಸುತ್ತಾನೆ. ॥ ೨೨ ॥ ನನ್ನ ಈ ದುಷ್ಟತೆಯನ್ನು ನೀವಿಬ್ಬರೂ ಕ್ಷಮಿಸಿಬಿಡಿರಿ. ಏಕೆಂದರೆ, ನೀವುಗಳು ಸಾಧುಸ್ವಭಾವದವರಾಗಿದ್ದು, ದೀನರ ರಕ್ಷಕರಾಗಿದ್ದೀರಿ. ಹೀಗೆ ಹೇಳಿ ಕಂಸನು ತನ್ನ ತಂಗಿಯಾದ ದೇವಕಿಯ ಮತ್ತು ವಸುದೇವನ ಚರಣಗಳನ್ನು ಭದ್ರವಾಗಿ ಹಿಡಿದುಕೊಂಡು, ಕಣ್ಣೀರು ಸುರಿಸಿದನು. ॥ ೨೩ ॥ ಅನಂತರ ಅವನು ಯೋಗಮಾಯೆಯ ಮಾತಿನಮೇಲೆ ವಿಶ್ವಾಸವಿಟ್ಟು ವಸುದೇವ-ದೇವಕಿಯರನ್ನು ಬಂಧನಮುಕ್ತರಾಗಿಸಿ ಅನೇಕ ರೀತಿಯಿಂದ ಅವರ ಕುರಿತು ತನ್ನ ಪ್ರೀತಿಯನ್ನು ಪ್ರಕಟಪಡಿಸತೊಡಗಿದನು. ॥ ೨೪ ॥ ಅಣ್ಣನಾದ ಕಂಸನು ಪಶ್ಚಾತ್ತಾಪಪಡುತ್ತಿರುವುದನ್ನು ನೋಡಿದ ದೇವಕಿಯು ಅವನನ್ನು ಕ್ಷಮಿಸಿಬಿಟ್ಟಳು. ಆಕೆಯು ಅವನ ಮೊದಲಿನ ಅಪರಾಧಗಳನ್ನು ಮರೆತುಬಿಟ್ಟಳು. ವಸುದೇವನು ನಗುತ್ತಾ ಕಂಸನಲ್ಲಿ ಹೇಳಿದನು – ॥ ೨೫ ॥ ಮಹಾಭಾಗನಾದ ಕಂಸನೇ! ನೀನು ಹೇಳಿರುವುದು ಸರಿಯಾಗಿಯೇ ಇದೆ. ಜೀವನು ಅಜ್ಞಾನದಿಂದಲೇ ಶರೀರಾದಿಗಳನ್ನೂ 'ನಾನೆಂದು' ತಿಳಿದು ಕೊಂಡಿರುವನು. ಇದರಿಂದಲೇ ಸ್ವ-ಪರ ಭೇದಗಳುಂಟಾಗುತ್ತವೆ. ॥ ೨೬ ॥ ಈ ಭೇದದೃಷ್ಟಿ ಉಂಟಾದಾಗಲೇ ಜೀವರು ಶೋಕ, ಹರ್ಷ, ಭಯ, ದ್ವೇಷ, ಲೋಭ, ಮೋಹ, ಮದ ಇವುಗಳಿಂದ ಕುರುಡಾಗಿ ಹೋಗುತ್ತಾರೆ. ಹೀಗಾದಾಗ ಎಲ್ಲರ ಪ್ರೇರಕನಾದ ಭಗವಂತನೇ ಒಂದು ಭಾವದಿಂದ ಇನ್ನೊಂದನ್ನೂ, ಒಂದು ವಸ್ತುವಿನಿಂದ ಇನ್ನೊಂದು ವಸ್ತುವನ್ನು ನಾಶಮಾಡಿಸುತ್ತಾ ಇದ್ದಾನೆ ಎಂಬುದು ಅವರು ಅರಿಯುವುದೇ ಇಲ್ಲ. ॥ ೨೭ ॥

ಶ್ರೀಶುಕ ಉವಾಚ

ಕಂಸ ಏವಂ ಪ್ರಸನ್ನಾಭ್ಯಾಂ ವಿಶುದ್ಧಂ ಪ್ರತಿಭಾಷಿತಃ ।
ದೇವಕೀವಸುದೇವಾಭ್ಯಾಮನುಜ್ಞಾತೋಽವಿಶದ್ಗೃಹಮ್ ॥ ೨೮ ॥

ತಸ್ಯಾಂ ರಾತ್ರ್ಯಾಂ ವ್ಯತೀತಾಯಾಂ ಕಂಸ ಆಹೂಯ ಮಂತ್ರಿಣಃ ।
ತೇಭ್ಯ ಆಚಷ್ಟ ತತ್ಸರ್ವಂ ಯದುಕ್ತಂ ಯೋಗಮಾಯಯಾ ॥ ೨೯ ॥

ಆಕರ್ಣ್ಯ ಭರ್ತುರ್ಗದಿತಂ ತಮೂಚುರ್ದೇವಶತ್ರವಃ ।
ದೇವಾನ್ಪ್ರತಿ ಕೃತಾಮರ್ಷಾ ದೈತೇಯಾ ನಾತಿಕೋವಿದಾಃ ॥ ೩೦ ॥

ಏವಂ ಚೇತ್ತರ್ಹಿ ಭೋಜೇಂದ್ರ ಪುರಗ್ರಾಮವ್ರಜಾದಿಷು ।
ಅನಿರ್ದಶಾನ್ನಿರ್ದಶಾಂಶ್ಚ ಹನಿಷ್ಯಾಮೋಽದ್ಯ ವೈ ಶಿಶೂನ್ ॥ ೩೧ ॥

ಕಿಮುದ್ಯಮೈಃ ಕರಿಷ್ಯಂತಿ ದೇವಾಃ ಸಮರಭೀರವಃ ।
ನಿತ್ಯಮುದ್ವಿಗ್ನಮನಸೋ ಜ್ಯಾಘೋಷೈರ್ಧನುಷಸ್ತವ ॥ ೩೨ ॥

ಅಸ್ಯತಸ್ತೇ ಶರವ್ರಾತೈರ್ಹನ್ಯಮಾನಾಃ ಸಮಂತತಃ ।
ಜಿಜೀವಿಷವ ಉತ್ಸೃಜ್ಯ ಪಲಾಯನಪರಾ ಯಯುಃ ॥ ೩೩ ॥

ಕೇಚಿತ್ಪ್ರಾಂಜಲಯೋ ದೀನಾ ನ್ಯಸ್ತಶಸ್ತ್ರಾ ದಿವೌಕಸಃ ।
ಮುಕ್ತಕಚ್ಛಶಿಖಾಃ ಕೇಚಿದ್ಭೀತಾಃ ಸ್ಮ ಇತಿ ವಾದಿನಃ ॥ ೩೪ ॥

ನ ತ್ವಂ ವಿಸ್ಮೃತಶಸ್ತ್ರಾಸ್ತ್ರಾನ್ವಿರಥಾನ್ಭಯಸಂವೃತಾನ್ ।
ಹಂಸ್ಯನ್ಯಾಸಕ್ತವಿಮುಖಾನ್ಭಗ್ನಚಾಪಾನಯುಧ್ಯತಃ ॥ ೩೫ ॥

ಕಿಂ ಕ್ಷೇಮಶೂರೈರ್ವಿಬುಧೈರಸಂಯುಗವಿಕತ್ಥನೈಃ ।
ರಹೋಜುಷಾ ಕಿಂ ಹರಿಣಾ ಶಂಭುನಾ ವಾ ವನೌಕಸಾ ।
ಕಿಮಿಂದ್ರೇಣಾಲ್ಪವೀರ್ಯೇಣ ಬ್ರಹ್ಮಣಾ ವಾ ತಪಸ್ಯತಾ ॥ ೩೬ ॥

ತಥಾಪಿ ದೇವಾಃ ಸಾಪತ್ನ್ಯಾನ್ನೋಪೇಕ್ಷ್ಯಾ ಇತಿ ಮನ್ಮಹೇ ।
ತತಸ್ತನ್ಮೂಲಖನನೇ ನಿಯುಂಕ್ಷ್ವಾಸ್ಮಾನನುವ್ರತಾನ್ ॥ ೩೭ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ! ವಸುದೇವ-ದೇವಕಿಯರು ಹೀಗೆ ಪ್ರಸನ್ನರಾಗಿ ನಿಷ್ಕಪಟಭಾವದಿಂದ ಕಂಸನೊಂದಿಗೆ ಮಾತನಾಡಿ, ಅವನಿಂದ ಬೀಳ್ಕೊಂಡು ಅವರು ತಮ್ಮ ಅರಮನೆಗೆ ಹೊರಟುಹೋದರು. ॥ ೨೮ ॥ ಆ ರಾತ್ರಿಯು ಕಳೆಯುತ್ತಲೇ ಕಂಸನು ತನ್ನ ಮಂತ್ರಿಗಳನ್ನು ಕರೆಸಿ ಯೋಗಮಾಯೆಯು ಹೇಳಿದುದೆಲ್ಲವನ್ನು ಅವರಿಗೆ ತಿಳಿಸಿದನು. ॥ ೨೯ ॥ ಕಂಸನ ಮಂತ್ರಿಗಳು ಪೂರ್ಣವಾಗಿ ನೀತಿ ನಿಪುಣರಾಗಿರಲಿಲ್ಲ, ದೈತ್ಯರಾದ್ದರಿಂದ ಸ್ವಭಾವತಃ ಅವರು ದೇವತೆಗಳ ಕುರಿತು ಶತ್ರುಭಾವವನ್ನು ಇರಿಸಿಕೊಂಡಿದ್ದರು. ಒಡೆಯನಾದ ಕಂಸನ ಮಾತನ್ನು ಕೇಳಿ ಅವರು ದೇವತೆಗಳ ಬಗೆಗೆ ಇನ್ನೂ ರೊಚ್ಚಿಗೆದ್ದು ಕಂಸನಲ್ಲಿ ಹೇಳತೊಡಗಿದರು. ॥ ೩೦ ॥ ಭೋಜರಾಜನೇ! ನಿನ್ನ ಶತ್ರುವು ಎಲ್ಲಿಯೋ ಹುಟ್ಟಿ ಬೆಳೆಯುತ್ತಿರುವನೆಂದಾದರೆ ನಾವು ಈಗಲೇ ದೊಡ್ಡ-ದೊಡ್ಡ ಪಟ್ಟಣಗಳಲ್ಲಿ, ಸಣ್ಣ-ಪುಟ್ಟ ಗ್ರಾಮಗಳಲ್ಲಿ, ಗೊಲ್ಲರ ದೊಡ್ಡಿಗಳಲ್ಲಿ ಮತ್ತು ಇತರ ಸ್ಥಾನಗಳಲ್ಲಿ ಎಷ್ಟು ಮಕ್ಕಳು ಹುಟ್ಟಿರುವರೋ, ಅವು ಹತ್ತುದಿನಗಳಿಗಿಂತ ಹೆಚ್ಚಿನವರಿರಲಿ, ಕಡಿಮೆಯವರಾಗಿರಲಿ ಎಲ್ಲರನ್ನೂ ಇಂದೇ ಕೊಂದುಬಿಡುವೆವು. ॥ ೩೧ ॥ ಯುದ್ಧಭೀರುಗಳಾದ ದೇವತೆಗಳು ಯುದ್ಧೋದ್ಯೋಗಗೈದು ಏನು ತಾನೇ ಮಾಡಿಯಾರು? ಅವರಾದರೋ ನಿನ್ನ ಧನುಷ್ಟಂಕಾರ ಕೇಳಿಯೇ ಸದಾಕಾಲ ಹೆದರಿರುತ್ತಾರೆ. ॥ ೩೨ ॥ ರಣರಂಗದಲ್ಲಿ ನೀನು ಏಟಿನ ಮೇಲೆ ಏಟು ಕೊಡಲು ತೊಡಗಿದಾಗ, ಬಾಣಗಳ ಮಳೆಯಿಂದ ಗಾಯಗೊಂಡು ತಮ್ಮ ಪ್ರಾಣಗಳನ್ನು ರಕ್ಷಿಸಿಕೊಳ್ಳಲಿಕ್ಕಾಗಿ ಸಮರಾಂಗಣವನ್ನು ಬಿಟ್ಟು ದೇವತೆಗಳು ಪಲಾಯನ-ಪರಾಯಣರಾಗಿ ಕಂಡ-ಕಂಡಲ್ಲಿಗೆ ಓಡಿಹೋಗುತ್ತಾರೆ. ॥ ೩೩ ॥ ಕೆಲವು ದೇವತೆಗಳಾದರೋ ತಮ್ಮ ಅಸ್ತ್ರ-ಶಸ್ತ್ರಗಳನ್ನು ಚೆಲ್ಲಿ, ಕೈಜೋಡಿಸಿಕೊಂಡು ನಿನ್ನ ಮುಂದೆ ದೈನ್ಯವನ್ನು ಪ್ರಕಟಿಸುವರು. ಇನ್ನೂ ಕೆಲವರು ತಮ್ಮ ಜುಟ್ಟನ್ನೂ ಕಚ್ಚೆಯನ್ನೂ ಬಿಚ್ಚಿಕೊಂಡು ನಿನಗೆ ಶರಣಾಗಿ 'ನಾವು ಭಯಗೊಂಡಿದ್ದೇವೆ, ನಮ್ಮನ್ನು ರಕ್ಷಿಸು' ಎಂದು ಹೇಳುತ್ತಾರೆ. ॥ ೩೪ ॥ ಅಸ್ತ್ರ-ಶಸ್ತ್ರಗಳನ್ನು ಮರೆತವರನ್ನು, ರಥ ಮುರಿದುಹೋದವರನ್ನು, ಹೆದರಿದವರನ್ನು, ಯುದ್ಧವನ್ನು ಬಿಟ್ಟು ಅನ್ಯಮನಸ್ಕರಾದವರನ್ನು, ಧನುಸ್ಸು ತುಂಡಾದವರನ್ನು, ಯುದ್ಧದಿಂದ ಪರಾಙ್ಮುಖರಾದವರನ್ನು ಇಂತಹ ಶತ್ರುಗಳನ್ನು ಕೂಡ ನೀನು ಕೊಲ್ಲುವುದಿಲ್ಲ. ॥ ೩೫ ॥ ಯಾವುದೇ ಜಗಳ-ಕಾಳಗವಿಲ್ಲದ ಕಡೆಯಲ್ಲೇ ಆ ದೇವತೆಗಳು ವೀರರೆನಿಸಿಕೊಳ್ಳುವರು. ರಣಭೂಮಿಯಿಂದ ಹೊರಗೆ ನಾವೇ ವೀರರೆಂದು ಬಡಾಯಿ ಕೊಚ್ಚಿಕೊಳ್ಳುವರು. ಅವರಿಂದಾಗಲೀ, ಏಕಾಂತವಾಸೀ ವಿಷ್ಣುವಿನಿಂದಾಗಲೀ, ವನವಾಸೀ ಶಂಕರನಿಂದಾಗಲೀ, ಅಲ್ಪವೀರ್ಯನಾದ ಇಂದ್ರನಿಂದಾಗಲೀ, ತಪಸ್ವೀ ಬ್ರಹ್ಮನಿಂದಾಗಲೀ ನಮಗೆ ಯಾವ ಭಯವು ಇರಬಲ್ಲದು? ॥ ೩೬ ॥ ಹೀಗಿದ್ದರೂ ದೇವತೆಗಳನ್ನು ಉಪೇಕ್ಷಿಸಬಾರದು ಎಂಬುದೇ ನಮ್ಮ ಅಭಿಪ್ರಾಯವು. ಏಕೆಂದರೆ, ಅವರು ಶತ್ರುಗಳೇ ಅಲ್ಲವೇ? ಅದಕ್ಕಾಗಿ ಅವರ ಬೇರನ್ನೇ ಕಿತ್ತೆಸೆಯಲು ನಮ್ಮಂತಹ ವಿಶ್ವಾಸಪಾತ್ರ ಸೇವಕರನ್ನು ನಿಯುಕ್ತಗೊಳಿಸು. ॥ ೩೭ ॥

ಯಥಾಽಽಮಯೋಽಙ್ಗೇ ಸಮುಪೇಕ್ಷಿತೋ ನೃಭಿ-
ರ್ನ ಶಕ್ಯತೇ ರೂಢಪದಶ್ಚಿಕಿತ್ಸಿತುಮ್ ।
ಯಥೇಂದ್ರಿಯಗ್ರಾಮ ಉಪೇಕ್ಷಿತಸ್ತಥಾ
ರಿಪುರ್ಮಹಾನ್ಬದ್ಧಬಲೋ ನ ಚಾಲ್ಯತೇ ॥ ೩೮ ॥

ಮನುಷ್ಯನ ಶರೀರದಲ್ಲಿ ರೋಗವು ಉಂಟಾದಾಗ, ಅದನ್ನು ಉಪೇಕ್ಷೆಮಾಡಿ ಔಷಧೋಪಚಾರವನ್ನು ಮಾಡದಿದ್ದಾಗ ರೋಗವು ಬೇರೂರುವುದು. ಮತ್ತೆ ಅದು ಗುಣಪಡಿಸಲು ಅಸಾಧ್ಯವಾಗುವಂತೆಯೇ ಅಥವಾ ಇಂದ್ರಿಯಗಳನ್ನು ಉಪೇಕ್ಷಿಸಿದಾಗ ಅವುಗಳ ದಮನ ಅಸಂಭವವಾಗುವಂತೆಯೇ, ಮೊದಲಿಗೆ ಶತ್ರುವನ್ನು ಉಪೇಕ್ಷೆಮಾಡಿ, ಅವನು ತಳವೂರಿದರೆ ಮತ್ತೆ ಅವನನ್ನು ಸೋಲಿಸುವುದು ಕಷ್ಟವಾಗುತ್ತದೆ. ॥ ೩೮ ॥

ಮೂಲಂ ಹಿ ವಿಷ್ಣುರ್ದೇವಾನಾಂ ಯತ್ರ ಧರ್ಮಃ ಸನಾತನಃ ।
ತಸ್ಯ ಚ ಬ್ರಹ್ಮ ಗೋವಿಪ್ರಾಸ್ತಪೋಯಜ್ಞಾಃ ಸದಕ್ಷಿಣಾಃ ॥ ೩೯ ॥

ದೇವತೆಗಳ ಮೂಲ (ಬೇರು)ವು ಮಹಾವಿಷ್ಣುವೇ ಆಗಿದ್ದು, ಅವನು ಸನಾತನಧರ್ಮವಿರುವಲ್ಲಿ ಇರುತ್ತಾನೆ. ಸನಾತನಧರ್ಮದ ಬೇರು-ವೇದಗಳು, ಗೋವುಗಳು, ಬ್ರಾಹ್ಮಣರು, ತಪಸ್ಸು ಮತ್ತು ದಕ್ಷಿಣೆಯಿಂದ ಕೂಡಿದ ಯಜ್ಞಗಳಾಗಿವೆ. ॥ ೩೯ ॥

ತಸ್ಮಾತ್ಸರ್ವಾತ್ಮನಾ ರಾಜನ್ ಬ್ರಾಹ್ಮಣಾನ್ ಬ್ರಹ್ಮವಾದಿನಃ ।
ತಪಸ್ವಿನೋ ಯಜ್ಞಶೀಲಾನ್ಗಾಶ್ಚ ಹನ್ಮೋ ಹವಿರ್ದುಘಾಃ ॥ ೪೦ ॥

ಆದ್ದರಿಂದ ಭೋಜರಾಜನೇ! ವೇದವಾದಿಗಳಾದ ಬ್ರಾಹ್ಮಣರನ್ನು, ತಪಸ್ವಿಗಳನ್ನು, ಯಾಜ್ಞಿಕರನ್ನು ಮತ್ತು ಯಜ್ಞಕ್ಕಾಗಿ ಘೃತವೇ ಮುಂತಾದ ಹವಿಷ್ಯ ಪದಾರ್ಥಗಳನ್ನು ಕೊಡುವ ಗೋವುಗಳನ್ನು ನಾವುಗಳು ಸಮೂಲವಾಗಿ ನಾಶ ಮಾಡಿಬಿಡುತ್ತೇವೆ. ॥ ೪೦ ॥

ವಿಪ್ರಾ ಗಾವಶ್ಚ ವೇದಾಶ್ಚ ತಪಃ ಸತ್ಯಂ ದಮಃ ಶಮಃ ।
ಶ್ರದ್ಧಾ ದಯಾ ತಿತಿಕ್ಷಾ ಚ ಕ್ರತವಶ್ಚ ಹರೇಸ್ತನೂಃ ॥ ೪೧ ॥

ಬ್ರಾಹ್ಮಣರು, ಗೋವುಗಳು, ವೇದಗಳು, ತಪಸ್ಸು, ಸತ್ಯ, ಇಂದ್ರಿಯದಮನ ಮನೋನಿಗ್ರಹ, ಶ್ರದ್ಧೆ, ದಯೆ, ತಿತಿಕ್ಷೆ ಮತ್ತು ಯಜ್ಞಗಳು ಇವು ವಿಷ್ಣುವಿನ ಶರೀರವಾಗಿವೆ. ॥ ೪೧ ॥

ಸ ಹಿ ಸರ್ವಸುರಾಧ್ಯಕ್ಷೋ ಹ್ಯಸುರದ್ವಿಡ್ಗುಹಾಶಯಃ ।
ತನ್ಮೂಲಾ ದೇವತಾಃ ಸರ್ವಾಃ ಸೇಶ್ವರಾಃ ಸಚತುರ್ಮುಖಾಃ ।
ಅಯಂ ವೈ ತದ್ವಧೋಪಾಯೋ ಯದೃಷೀಣಾಂ ವಿಹಿಂಸನಮ್ ॥ ೪೨ ॥

ಆ ಮಹಾವಿಷ್ಣುವೇ ಎಲ್ಲ ದೇವತೆಗಳಿಗೆ ಒಡೆಯನಾಗಿದ್ದು, ಅಸುರರ ಮುಖ್ಯ ದ್ವೇಷಿಯಾಗಿರುವನು. ಆದರೆ ಅವನು ಯಾವುದೋ ಗುಹೆಯಲ್ಲಿ ಅಡಗಿರುತ್ತಾನೆ. ಮಹಾದೇವನಿಗೆ, ಚತುರ್ಮುಖಬ್ರಹ್ಮನಿಗೆ, ಇಂದ್ರಾದಿ ಸಕಲದೇವತೆಗಳಿಗೆ ಅವನೇ ಮೂಲನಾಗಿರುವನು. ಋಷಿಗಳನ್ನು ಕೊಂದುಹಾಕುವುದೇ ಅವನನ್ನು ಕೊಲ್ಲುವ ಉಪಾಯವಾಗಿದೆ. ॥ ೪೨ ॥

ಶ್ರೀಶುಕ ಉವಾಚ

ಏವಂ ದುರ್ಮಂತ್ರಿಭಿಃ ಕಂಸಃ ಸಹ ಸಮ್ಮಂತ್ರ್ಯ ದುರ್ಮತಿಃ ।
ಬ್ರಹ್ಮಹಿಂಸಾಂ ಹಿತಂ ಮೇನೇ ಕಾಲಪಾಶಾವೃತೋಽಸುರಃ ॥ ೪೩ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ! ಮೊದಲಿಗೆ ಕಂಸನ ಬುದ್ಧಿಯು ಕೆಟ್ಟುಹೋಗಿತ್ತು. ಮತ್ತೆ ಅವನಿಂದಲೂ ದುಷ್ಟರಾದ ಮಂತ್ರಿಗಳು ಅವನಿಗೆ ದೊರಕಿದ್ದರು. ಈ ಪ್ರಕಾರವಾಗಿ ಅವರಿಂದ ಸಲಹೆ ಪಡೆದು ಕಾಲಪಾಶದಲ್ಲಿ ಸಿಕ್ಕಿಕೊಂಡಿರುವ ಅಸುರನಾದ ಕಂಸನು ಬ್ರಾಹ್ಮಣರನ್ನು ಕೊಲ್ಲುವುದೇ ಸರಿ ಎಂದು ತಿಳಿದನು. ॥ ೪೩ ॥

ಸಂದಿಶ್ಯ ಸಾಧುಲೋಕಸ್ಯ ಕದನೇ ಕದನಪ್ರಿಯಾನ್ ।
ಕಾಮರೂಪಧರಾಂದಿಕ್ಷು ದಾನವಾನ್ಗೃಹಮಾವಿಶತ್ ॥ ೪೪ ॥

ಅವನು ಹಿಂಸಾಪ್ರಿಯರಾದ ರಾಕ್ಷಸರಿಗೆ ಸಂತ-ಸತ್ಪುರುಷರನ್ನು ಹಿಂಸಿಸಲು ಆದೇಶಿಸಿದನು. ಕಾಮರೂಪಿಗಳಾದ ಆ ಅಸುರರನ್ನು ಎಲ್ಲ ಕಡೆಗೆ ಕಳಿಸಿಕೊಟ್ಟು, ಕಂಸನು ತನ್ನರಮನೆಯನ್ನು ಪ್ರವೇಶಿಸಿದನು. ॥ ೪೪ ॥

ತೇ ವೈ ರಜಃಪ್ರಕೃತಯಸ್ತಮಸಾ ಮೂಢಚೇತಸಃ ।
ಸತಾಂ ವಿದ್ವೇಷಮಾಚೇರುರಾರಾದಾಗತಮೃತ್ಯವಃ ॥ ೪೫ ॥

ರಜೋಗುಣ ಪ್ರಕೃತಿಯುಳ್ಳ ಆ ಅಸುರರು ತಮೋಗುಣದಿಂದ ಅವರ ಚಿತ್ತವು ಉಚಿತ-ಅನುಚಿತ ವಿವೇಕದಿಂದ ರಹಿತವಾಗಿತ್ತು. ಅವರ ತಲೆಯಮೇಲೆ ಮೃತ್ಯುವು ಕುಣಿಯುತ್ತಿತ್ತು. ಈ ಕಾರಣದಿಂದಲೇ ಅವರು ಸಂತರನ್ನು ದ್ವೇಷಿಸಿದರು. ॥ ೪೫ ॥

ಆಯುಃ ಶ್ರಿಯಂ ಯಶೋ ಧರ್ಮಂ ಲೋಕಾನಾಶಿಷ ಏವ ಚ ।
ಹಂತಿ ಶ್ರೇಯಾಂಸಿ ಸರ್ವಾಣಿ ಪುಂಸೋ ಮಹದತಿಕ್ರಮಃ ॥ ೪೬ ॥

ಪರೀಕ್ಷಿತನೇ! ಸಂತ-ಸತ್ಪುರುಷರನ್ನು ಅನಾದರ ಮಾಡುವವರ ಆ ಕುಕರ್ಮವೇ ಅವರ ಆಯುಸ್ಸು, ಲಕ್ಷ್ಮೀ, ಕೀರ್ತಿ, ಧರ್ಮ, ಲೋಕ-ಪರಲೋಕ, ವಿಷಯಭೋಗ ಹಾಗೂ ಎಲ್ಲ ಕಲ್ಯಾಣ ಸಾಧನಗಳನ್ನು ನಾಶಮಾಡಿಬಿಡುತ್ತದೆ. ॥ ೪೬ ॥

ನಾಲ್ಕನೆಯ ಅಧ್ಯಾಯವು ಮುಗಿಯಿತು. ॥ ೪ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮ ಸ್ಕಂಧೇ ಪೂರ್ವಾರ್ಧೇ ಚತುರ್ಥೋಽಧ್ಯಾಯಃ । ೪ ॥

ಐದನೆಯ ಅಧ್ಯಾಯ

ಗೋಕುಲದಲ್ಲಿ ಭಗವಂತನ ಜನ್ಮೋತ್ಸವ

ಶ್ರೀಶುಕ ಉವಾಚ

ನಂದಸ್ತ್ವಾತ್ಮಜ ಉತ್ಪನ್ನೇ ಜಾತಾಹ್ಲಾದೋ ಮಹಾಮನಾಃ ।
ಆಹೂಯ ವಿಪ್ರಾನ್ವೇದಜ್ಞಾನ್ ಸ್ನಾತಃ ಶುಚಿರಲಂಕೃತಃ ॥ ೧ ॥

ವಾಚಯಿತ್ವಾ ಸ್ವಸ್ತ್ಯಯನಂ ಜಾತಕರ್ಮಾತ್ಮಜಸ್ಯ ವೈ ।
ಕಾರಯಾಮಾಸ ವಿಧಿವತ್ಪಿತೃದೇವಾರ್ಚನಂ ತಥಾ ॥ ೨ ॥

ಧೇನೂನಾಂ ನಿಯುತೇ ಪ್ರಾದಾದ್ವಿಪ್ರೇಭ್ಯಃ ಸಮಲಂಕೃತೇ ।
ತಿಲಾದ್ರೀನ್ಸಪ್ತ ರತ್ನೌಘಶಾತಕೌಂಭಾಂಬರಾವೃತಾನ್ ॥ ೩ ॥

ಕಾಲೇನ ಸ್ನಾನಶೌಚಾಭ್ಯಾಂ ಸಂಸ್ಕಾರೈಸ್ತಪಸೇಜ್ಯಯಾ ।
ಶುಧ್ಯಂತಿ ದಾನೈಃ ಸಂತುಷ್ಟ್ಯಾ ದ್ರವ್ಯಾಣ್ಯಾತ್ಮಾಽಽತ್ಮವಿದ್ಯಯಾ ॥ ೪ ॥

ಸೌಮಂಗಲ್ಯಗಿರೋ ವಿಪ್ರಾಃ ಸೂತಮಾಗಧವಂದಿನಃ ।
ಗಾಯಕಾಶ್ಚ ಜಗುರ್ನೇದುರ್ಭೇರ್ಯೋ ದುಂದುಭಯೋ ಮುಹುಃ ॥ ೫ ॥

ವ್ರಜಃ ಸಮ್ಮೃಷ್ಟಸಂಸಿಕ್ತದ್ವಾರಾಜಿರಗೃಹಾಂತರಃ ।
ಚಿತ್ರಧ್ವಜಪತಾಕಾಸ್ರಕ್ಚೈಲಪಲ್ಲವತೋರಣೈಃ ॥ ೬ ॥

ಗಾವೋ ವೃಷಾ ವತ್ಸತರಾ ಹರಿದ್ರಾತೈಲರೂಷಿತಾಃ ।
ವಿಚಿತ್ರಧಾತುಬರ್ಹಸ್ರಗ್ವಸ್ತ್ರಕಾಂಚನಮಾಲಿನಃ ॥ ೭ ॥

ಮಹಾರ್ಹವಸ್ತ್ರಾಭರಣಕಂಚುಕೋಷ್ಣೀಷಭೂಷಿತಾಃ ।
ಗೋಪಾಃ ಸಮಾಯಯೂ ರಾಜನ್ನಾನೋಪಾಯನಪಾಣಯಃ ॥ ೮ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ! ಮಹಾನುಭಾವನಾದ ನಂದಗೋಪನು ಬಹಳ ಉದಾರನಾಗಿದ್ದನು. ಪುತ್ರನ ಜನ್ಮವಾದಾಗ ಅವನ ಹೃದಯ ವಿಲಕ್ಷಣ ಆನಂದದಿಂದ ತುಂಬಿಹೋಯಿತು. ಅವನು ಸ್ನಾನಮಾಡಿ ಸುಂದರ ವಸ್ತ್ರಾಭೂಷಣಗಳನ್ನು ಧರಿಸಿದನು. ಮತ್ತೆ ವೇದಜ್ಞರಾದ ಬ್ರಾಹ್ಮಣರನ್ನು ಕರೆಸಿ ಸ್ವಸ್ತಿವಾಚನ ಮತ್ತು ಪುತ್ರನ ಜಾತಕರ್ಮ ಸಂಸ್ಕಾರವನ್ನು ನಡೆಸಿದನು. ಜೊತೆಗೆ ದೇವತೆಗಳನ್ನು ಮತ್ತು ಪಿತೃಗಳನ್ನು ವಿಧಿವತ್ತಾಗಿ ಪೂಜಿಸಿದನು. ॥ ೧-೨ ॥ ಅವನು ಬ್ರಾಹ್ಮಣರಿಗೆ ವಸ್ತ್ರಾಭೂಷಣಗಳಿಂದ ಸುಸಜ್ಜಿತವಾದ ಎರಡು ಲಕ್ಷ ಗೋವುಗಳನ್ನು ದಾನಮಾಡಿದನು. ರತ್ನಗಳಿಂದಲೂ, ಸುವರ್ಣನಾಣ್ಯಗಳಿಂದಲೂ, ವಸ್ತ್ರಗಳಿಂದಲೂ ಸಮಲಂಕೃತವಾದ ಏಳು ಎಳ್ಳಿನ ಪರ್ವತಗಳನ್ನು ದಾನಮಾಡಿದನು. ॥ ೩ ॥ ಹೊಸನೀರು, ನೆಲ ಮುಂತಾದ ದ್ರವ್ಯಗಳು ಸಮಯಕಳೆದಾಗ ಶುದ್ಧವಾಗುತ್ತವೆ. ಶರೀರಾದಿಗಳು ಸ್ನಾನದಿಂದಲೂ, ವಸ್ತ್ರಾದಿಗಳು ತೊಳೆಯುವಿಕೆಯಿಂದಲೂ, ಸಂಸ್ಕಾರಗಳಿಂದ ಗರ್ಭವೂ, ಇಂದ್ರಿಯಾದಿಗಳು ತಪಸ್ಸಿನಿಂದಲೂ, ಬ್ರಾಹ್ಮಣರು ಯಜ್ಞಾದಿಗಳಿಂದಲೂ, ಧನಧಾನ್ಯಗಳು ದಾನದಿಂದಲೂ, ಮನಸ್ಸು ಸಂತೋಷದಿಂದಲೂ ಶುದ್ಧವಾಗುತ್ತವೆ. ಆದರೆ ಆತ್ಮಜ್ಞಾನದಿಂದಲೇ ಆತ್ಮನ ಶುದ್ಧಿಯಾಗುತ್ತದೆ. ॥ ೪ ॥ ಆ ಸಮಯದಲ್ಲಿ ಬ್ರಾಹ್ಮಣರು, ಸೂತರು, ಮಾಗಧರು, ವಂದಿಜನರು ಮಂಗಲಾಶೀರ್ವಾದ ಕೊಡುತ್ತಾ ಸ್ತುತಿಸತೊಡಗಿದರು. ಗಾಯಕರು ಹಾಡತೊಡಗಿದರು. ಭೇರಿ, ದುಂದುಭಿಗಳು ಮೊಳಗಿದವು. ॥ ೫ ॥ ವ್ರಜಮಂಡಲವಾಸಿಗಳೆಲ್ಲರೂ ತಮ್ಮ-ತಮ್ಮ ಮನೆಗಳ ಬಾಗಿಲುಗಳನ್ನೂ, ಅಂಗಳಗಳನ್ನೂ, ಜಗುಲಿಗಳನ್ನೂ ಗುಡಿಸಿ-ಸಾರಿಸಿ ಸುಗಂಧಮಯವಾದ ನೀರನ್ನು ಸಿಂಪಡಿಸಿ, ರಂಗವಲ್ಲಿಯನ್ನಿಟ್ಟು, ಚಿತ್ರ-ವಿಚಿತ್ರವಾದ ಧ್ವಜಪತಾಕೆಗಳಿಂದಲೂ, ಹೂವಿನ ಹಾರಗಳಿಂದಲೂ, ವಸ್ತ್ರಗಳಿಂದ ಕೂಡಿದ ತೋರಣಗಳಿಂದಲೂ, ತಳಿರುತೋರಣಗಳಿಂದಲೂ, ನಯನಾನಂದಕರವಾಗಿ ಸಿಂಗರಿಸಿದರು. ॥ ೬ ॥ ತಮ್ಮ ಮನೆಗಳನ್ನು ಸಿಂಗರಿಸಿದಂತೆ ಗೋಪರು ಗೋವುಗಳಿಗೂ, ಎತ್ತುಗಳಿಗೂ, ಕರುಗಳಿಗೂ ಅರಸಿನ ಎಣ್ಣೆಗಳನ್ನು ಮೈಗೆ ಹಚ್ಚಿದರು. ಮಣ್ಣು, ಶಿಲೆ, ಸಿಂಧೂರ, ಬಣ್ಣ-ಬಣ್ಣದ ಧಾತುಗಳಿಂದ, ನವಿಲುಗರಿಗಳಿಂದ, ಹೂವಿನ ಹಾರಗಳಿಂದ, ನಾನಾರೀತಿಯ ಸುಂದರ ವಸ್ತ್ರಗಳಿಂದ, ಚಿನ್ನದ ಸರಪಳಿಗಳಿಂದ ಅಲಂಕರಿಸಿದರು. ॥ ೭ ॥ ಪರೀಕ್ಷಿತನೇ! ಬಳಿಕ ಸಮಸ್ತಗೋಪರು ಬಹುಮೂಲ್ಯ ವಸ್ತ್ರಗಳಿಂದ, ಒಡವೆಗಳಿಂದ, ಅಂಗಿಗಳಿಂದ ಸುಸಜ್ಜಿತರಾಗಿ ತಲೆಗೆ ಮುಂಡಾಸನ್ನು ಸುತ್ತಿಕೊಂಡು ನಾನಾವಿಧವಾದ ಪಾರಿತೋಷಕಗಳೊಡನೆ ನಂದಗೋಪನ ಮನೆಗೆ ಬಂದರು. ॥ ೮ ॥

ಗೋಪ್ಯಶ್ಚಾಕರ್ಣ್ಯ ಮುದಿತಾ ಯಶೋದಾಯಾಃ ಸುತೋದ್ಭವಮ್ ।
ಆತ್ಮಾನಂ ಭೂಷಯಾಂಚಕ್ರುರ್ವಸ್ತ್ರಾಕಲ್ಪಾಂಜನಾದಿಭಿಃ ॥ ೯ ॥

ನವಕುಂಕುಮಕಿಂಜಲ್ಕಮುಖಪಂಕಜಭೂತಯಃ ।
ಬಲಿಭಿಸ್ತ್ವರಿತಂ ಜಗ್ಮುಃ ಪೃಥುಶ್ರೋಣ್ಯಶ್ಚಲತ್ಕುಚಾಃ ॥ ೧೦ ॥

ಗೋಪ್ಯಃ ಸುಮೃಷ್ಟಮಣಿಕುಂಡಲನಿಷ್ಕಕಂಠ್ಯ-
ಶ್ಚಿತ್ರಾಂಬರಾಃ ಪಥಿ ಶಿಖಾಚ್ಯುತಮಾಲ್ಯವರ್ಷಾಃ ।
ನಂದಾಲಯಂ ಸವಲಯಾ ವ್ರಜತೀರ್ವಿರೇಜು-
ರ್ವ್ಯಾಲೋಲಕುಂಡಲಪಯೋಧರಹಾರಶೋಭಾಃ ॥ ೧೧ ॥

ತಾ ಆಶಿಷಃ ಪ್ರಯುಂಜಾನಾಶ್ಚಿರಂ ಪಾಹೀತಿ ಬಾಲಕೇ ।
ಹರಿದ್ರಾಚೂರ್ಣತೈಲಾದ್ಭಿಃ ಸಿಂಚಂತ್ಯೋಽಜನಮುಜ್ಜಗುಃ ॥ ೧೨ ॥

ಅವಾದ್ಯಂತ ವಿಚಿತ್ರಾಣಿ ವಾದಿತ್ರಾಣಿ ಮಹೋತ್ಸವೇ ।
ಕೃಷ್ಣೇ ವಿಶ್ವೇಶ್ವರೇಽನಂತೇ ನಂದಸ್ಯ ವ್ರಜಮಾಗತೇ ॥ ೧೩ ॥

ಗೋಪಾಃ ಪರಸ್ಪರಂ ಹೃಷ್ಟಾ ದಧಿಕ್ಷೀರಘೃತಾಂಬುಭಿಃ ।
ಆಸಿಂಚಂತೋ ವಿಲಿಂಪಂತೋ ನವನೀತೈಶ್ಚ ಚಿಕ್ಷಿಪುಃ ॥ ೧೪ ॥

ನಂದೋ ಮಹಾಮನಾಸ್ತೇಭ್ಯೋ ವಾಸೋಽಲಂಕಾರಗೋಧನಮ್ ।
ಸೂತಮಾಗಧವಂದಿಭ್ಯೋ ಯೇಽನ್ಯೇ ವಿದ್ಯೋಪಜೀವಿನಃ ॥ ೧೫ ॥

ಯಶೋದಾದೇವಿಗೆ ಗಂಡುಮಗು ಹುಟ್ಟಿದೆ ಎಂದು ಕೇಳಿದ ಗೋಪಿಯರಿಗೆ ಮಹದಾನಂದವಾಯಿತು. ಅವರೂ ಸುಂದರವಾದ ವಸ್ತ್ರಭೂಷಣಗಳಿಂದಲೂ, ಅಂಜನ-ಅಂಗರಾಗಗಳಿಂದಲೂ ಶೃಂಗರಿಸಿಕೊಂಡರು. ॥ ೯ ॥ ಗೋಪಿಯರ ಮುಖಕಮಲಗಳು ಬಹಳ ಸುಂದರವಾಗಿ ಕಾಣುತ್ತಿದ್ದುವು. ಹಣೆಯಲ್ಲಿದ್ದ ಕುಂಕುಮವು ಕಮಲದ ಎಸಳಿನಂತೆ ಕಾಣುತ್ತಿತ್ತು. ಪುಷ್ಟವಾದ ನಿತಂಬಗಳನ್ನು ಹೊಂದಿದ್ದ ಅವರು ಉಪಹಾರ ಸಾಮಗ್ರಿಗಳನ್ನು ಎತ್ತಿಕೊಂಡು ಸಂಭ್ರಮದಿಂದ ಯಶೋದೆಯ ಬಳಿಗೆ ಹೋಗುತ್ತಿದ್ದಾಗ ಅವರ ಕುಚಗಳು ನಲಿದಾಡುತ್ತಿದ್ದುವು. ॥ ೧೦ ॥ ಗೋಪಿಯರ ಕಿವಿಗಳಲ್ಲಿ ಹೊಳೆಯುತ್ತಿದ್ದ ಮಣಿಕುಂಡಲಗಳಿದ್ದುವು. ಕೊರಳಲ್ಲಿ ಸುವರ್ಣಮಯವಾದ ಸರಗಳನ್ನು ತೊಟ್ಟಿದ್ದರು. ಅವರು ಅತ್ಯಂತ ಸುಂದರವಾದ ಬಣ್ಣ-ಬಣ್ಣದ ಸೀರೆಗಳನ್ನು ಉಟ್ಟಿದ್ದರು. ದಾರಿಯಲ್ಲಿ ಅವರು ಮುಡಿದುಕೊಂಡಿದ್ದ ಹೂವುಗಳು ಉದುರುತ್ತಿದ್ದುವು. ಕೈ ಕಡಗಗಳನ್ನು ಧರಿಸಿದ್ದ ಅವರು ನಂದಗೋಪನ ಮನೆಗೆ ಅವಸರ-ಅವಸರವಾಗಿ ಹೋಗುತ್ತಿದ್ದಾಗ ಅವರ ಕಿವಿಯಲ್ಲಿದ್ದ ಕುಂಡಲಗಳೂ, ಪಯೋಧರಗಳೂ, ಹಾರಗಳೂ ಕುಣಿದಾಡುತ್ತಿದ್ದು ಆ ಗೋಪಿಯರು ಬಹಳವಾಗಿ ಪ್ರಕಾಶಿಸಿದರು. ॥ ೧೧ ॥ ನಂದರಾಜನ ಮನೆಗೆ ಹೋಗಿ ಅವರು ನವಜಾತ ಶಿಶುವಿಗೆ – 'ಇವನು ಚಿರಂಜೀವಿಯಾಗಲೀ, ಭಗವಂತನು ಇವನನ್ನು ರಕ್ಷಿಸಲಿ' ಎಂದು ಆಶೀರ್ವಾದಗಳನ್ನು ಕೊಡುತ್ತಿದ್ದರು. ಕುಲಾಚಾರದಂತೆ ಅರಿಸಿನ-ಎಣ್ಣೆಮಿಶ್ರಿತವಾದ ನೀರನ್ನು (ಓಕುಳಿ) ಜನರಮೇಲೆ ಚಿಮುಕಿಸುತ್ತಾ, ಲಾಲಿ-ಶೋಭಾನೆ ಮುಂತಾದ ಮಂಗಳಗೀತೆಗಳನ್ನು ಗಟ್ಟಿಯಾಗಿ ಹಾಡುತ್ತಿದ್ದರು. ॥ ೧೨ ॥

ಭಗವಾನ್ ಶ್ರೀಕೃಷ್ಣನು ಸಮಸ್ತ ಜಗತ್ತಿಗೆ ಏಕಮಾತ್ರ ಸ್ವಾಮಿಯಾಗಿರುವನು. ಅವನ ಐಶ್ವರ್ಯ, ಮಾಧುರ್ಯ, ವಾತ್ಸಲ್ಯ ಎಲ್ಲವೂ ಅನಂತವೇ. ಅವನು ನಂದನ ವ್ರಜದಲ್ಲಿ ಪ್ರಕಟನಾದಾಗ ಅವನ ಜನ್ಮಮಹೋತ್ಸವವನ್ನು ಆಚರಿಸಲಾಯಿತು. ಆಗ ವಿಚಿತ್ರವಾದ ಮಂಗಳವಾದ್ಯಗಳು ಮೊಳಗಿದುವು. ॥ ೧೩ ॥ ಆನಂದಭರಿತರಾದ ಗೋಪಾಲಕರು ಒಬ್ಬರು ಮತ್ತೊಬ್ಬರ ಮೇಲೆ ಹಾಲು, ಮೊಸರು, ತುಪ್ಪ, ನೀರು ಇವುಗಳನ್ನು ಎರಚಾಡಿದರು. ಒಬ್ಬರು ಮತ್ತೊಬ್ಬರ ಮುಖಕ್ಕೆ ಬೆಣ್ಣೆಯನ್ನು ಸವರುತ್ತಾ-ಎಸೆಯುತ್ತಾ ಕುಣಿ-ಕುಣಿದು ಹಾಡುತ್ತಾ ಆನಂದೋತ್ಸವವನ್ನು ಆಚರಿಸಿದರು. ॥ ೧೪ ॥ ಮಹಾನುಭಾವನಾದ ನಂದಗೋಪನು ಪರಮ ಉದಾರಿಯಾಗಿದ್ದನು. ಅವನು ಗೋಪಾಲಕರೆಲ್ಲರಿಗೂ ವಸ್ತ್ರಾಭರಣಗಳನ್ನೂ, ಹಸುಗಳನ್ನೂ, ನಗದು ಕಾಣಿಕೆಗಳನ್ನು ಕೊಟ್ಟನು. ಸೂತ, ಮಾಗಧ, ವಂದಿಗಳಿಗೂ* ನೃತ್ಯ-ವಾದ್ಯ ಮುಂತಾದ ಲಲಿತಕಲೆಗಳಿಂದ ಜೀವನನಿರ್ವಹಿಸುವ ಕಲಾವಿದರಿಗೂ, ವಿದ್ವಾಂಸರಿಗೂ ಅವರವರ ಅಪೇಕ್ಷೆಯಂತೆ ಬಹುಮಾನಗಳನ್ನು ಕೊಟ್ಟು ಅವರೆಲ್ಲರನ್ನೂ ಯಥೋಚಿತವಾಗಿ ಸತ್ಕರಿಸಿದನು. 'ತನ್ನ ಸತ್ಕಾರದಿಂದ

* ಸೂತಾಃ ಪೌರಾಣಿಕಾಃ ಪ್ರೋಕ್ತಾ ಮಾಗಧಾ ವಂಶಶಂಸಕಾಃ । ವಂದಿನಸ್ತ್ವಮಲಪ್ರಜ್ಞಾಃ ಪ್ರಸ್ತಾವಸದೃಶೋಕ್ತಯಃ ॥
ಪುರಾಣಗಳನ್ನು ಹೇಳುವವರಿಗೆ ಸೂತರೆಂದೂ, ವಂಶಾವಳಿಗಳನ್ನು ಹೊಗಳುವವರಿಗೆ ಮಾಗಧರೆಂದೂ, ತತ್ಕಾಲೋಚಿತವಾಗಿ ಮಾತಾಡುವವರಿಗೆ ವಂದಿಗಳೆಂದೂ ಹೆಸರು.

ತೈಸ್ತೈಃ ಕಾಮೈರದೀನಾತ್ಮಾ ಯಥೋಚಿತಮಪೂಜಯತ್ ।
ವಿಷ್ಣೋರಾರಾಧನಾರ್ಥಾಯ ಸ್ವಪುತ್ರಸ್ಯೋದಯಾಯ ಚ
॥ ೧೬ ॥

ರೋಹಿಣೀ ಚ ಮಹಾಭಾಗಾ ನಂದಗೋಪಾಭಿನಂದಿತಾ ।
ವ್ಯಚರದ್ದಿವ್ಯವಾಸಃಸ್ರಕ್ಕಂಠಾಭರಣಭೂಷಿತಾ
॥ ೧೭ ॥

ತತ ಆರಭ್ಯ ನಂದಸ್ಯ ವ್ರಜಃ ಸರ್ವಸಮೃದ್ಧಿಮಾನ್ ।
ಹರೇರ್ನಿವಾಸಾತ್ಮಗುಣೈ ರಮಾಕ್ರೀಡಮಭೂನ್ನೃಪ
॥ ೧೮ ॥

ಗೋಪಾನ್ಗೋಕುಲರಕ್ಷಾಯಾಂ ನಿರೂಪ್ಯ ಮಥುರಾಂ ಗತಃ ।
ನಂದಃ ಕಂಸಸ್ಯ ವಾರ್ಷಿಕ್ಯಂ ಕರಂ ದಾತುಂ ಕುರೂದ್ವಹ
॥ ೧೯ ॥

ವಸುದೇವ ಉಪಶ್ರುತ್ಯ ಭ್ರಾತರಂ ನಂದಮಾಗತಮ್ ।
ಜ್ಞಾತ್ವಾ ದತ್ತಕರಂ ರಾಜ್ಞೇ ಯಯೌ ತದವಮೋಚನಮ್
॥ ೨೦ ॥

ತಂ ದೃಷ್ಟ್ವಾ ಸಹಸೋತ್ಥಾಯ ದೇಹಃ ಪ್ರಾಣಮಿವಾಗತಮ್ ।
ಪ್ರೀತಃ ಪ್ರಿಯತಮಂ ದೋರ್ಭ್ಯಾಂ ಸಸ್ವಜೇ ಪ್ರೇಮವಿಹ್ವಲಃ
॥ ೨೧ ॥

ಪೂಜಿತಃ ಸುಖಮಾಸೀನಃ ಪೃಷ್ಟ್ವಾನಾಮಯಮಾದೃತಃ ।
ಪ್ರಸಕ್ತಧೀಃ ಸ್ವಾತ್ಮಜಯೋರಿದಮಾಹ ವಿಶಾಂಪತೇ
॥ ೨೨ ॥

ದಿಷ್ಟ್ಯಾ ಭ್ರಾತಃ ಪ್ರವಯಸ ಇದಾನೀಮಪ್ರಜಸ್ಯ ತೇ ।
ಪ್ರಜಾಶಾಯಾ ನಿವೃತ್ತಸ್ಯ ಪ್ರಜಾ ಯತ್ಸಮಪದ್ಯತ
॥ ೨೩ ॥

ದಿಷ್ಟ್ಯಾ ಸಂಸಾರಚಕ್ರೇಽಸ್ಮಿನ್ವರ್ತಮಾನಃ ಪುನರ್ಭವಃ ।
ಉಪಲಬ್ಧೋ ಭವಾನದ್ಯ ದುರ್ಲಭಂ ಪ್ರಿಯದರ್ಶನಮ್
॥ ೨೪ ॥

ನೈಕತ್ರ ಪ್ರಿಯಸಂವಾಸಃ ಸುಹೃದಾಂ ಚಿತ್ರಕರ್ಮಣಾಮ್ ।
ಓಘೇನ ವ್ಯೂಹ್ಯಮಾನಾನಾಂ ಪ್ಲವಾನಾಂ ಸ್ರೋತಸೋ ಯಥಾ
॥ ೨೫ ॥

ಮಹಾವಿಷ್ಣುವು ಪ್ರಸನ್ನನಾಗಬೇಕು. ನವಜಾತ ಶಿಶುವಿನ ಅಭ್ಯುದಯವಾಗಬೇಕು ಎಂಬುದೇ ನಂದಗೋಪನ ಮುಖ್ಯ ಉದ್ದೇಶವಾಗಿತ್ತು. ॥ ೧೪-೧೬ ॥ ನಂದಗೋಪನಿಂದ ಅಭಿನಂದಿಸಲ್ಪಟ್ಟ ಪರಮ ಸೌಭಾಗ್ಯವತಿಯಾದ ರೋಹಿಣೀದೇವಿಯೂ ದಿವ್ಯವಾದ ವಸ್ತ್ರಗಳಿಂದಲೂ, ಮಾಲೆಗಳಿಂದಲೂ, ಕಂಠಾಭರಣಗಳಿಂದಲೂ ಸಮಲಂಕೃತಳಾಗಿ ಮನೆಯೊಡತಿಯಂತೆ ಬಂದು-ಹೋಗುವ ಗೋಪಸ್ತ್ರೀಯರನ್ನು ಆದರದಿಂದ ಸತ್ಕರಿಸುತ್ತಾ ಓಡಾಡುತ್ತಿದ್ದಳು. ॥ ೧೭ ॥

ಪರೀಕ್ಷಿತನೇ! ಶ್ರೀಕೃಷ್ಣನ ಜನ್ಮೋತ್ಸವದಿಂದಲೇ ನಂದನ ವ್ರಜಭೂಮಿಯು ಸಮಸ್ತ ಸಂಪತ್ತುಗಳಿಂದ ಸಮೃದ್ಧವಾಯಿತು. ಭಗವಾನ್ ಶ್ರೀಕೃಷ್ಣನ ನಿವಾಸಸ್ಥಾನದಿಂದಲೂ, ತನ್ನ ಸ್ವಾಭಾವಿಕ ಗುಣಗಳ ಕಾರಣದಿಂದ ಅಲ್ಲಿ ಮಹಾಲಕ್ಷ್ಮಿಯು ಆಟವಾಡುತ್ತಿದ್ದಳು. ॥ ೧೮ ॥

ಪರೀಕ್ಷಿತನೇ! ಕೆಲವು ದಿವಸಗಳ ನಂತರ ನಂದಗೋಪನು ಗೋಕುಲದ ರಕ್ಷಣೆಯ ಭಾರವನ್ನು ಇತರ ಗೋಪಾಲಕರಿಗೆ ವಹಿಸಿಕೊಟ್ಟು, ಕಂಸನಿಗೆ ವಾರ್ಷಿಕ ಕಂದಾಯವನ್ನು ಒಪ್ಪಿಸುವ ಸಲುವಾಗಿ ಮಥುರೆಗೆ ಹೊರಟನು. ॥ ೧೯ ॥ ಮಥುರಾ ಪಟ್ಟಣದಲ್ಲೇ ಇದ್ದ ವಸುದೇವನಿಗೆ ತನ್ನ ಸೋದರನಂತಿದ್ದ ನಂದಗೋಪನು ಕಂಸನಿಗೆ ಕಂದಾಯವನ್ನು ಕೊಡಲು ಮಥುರೆಗೆ ಬಂದಿರುವನೆಂದು ತಿಳಿದು, ಅವನು ನಂದನು ಉಳಿದುಕೊಂಡಿದ್ದ ಬಿಡಾರಕ್ಕೆ ಹೋದನು. ॥ ೨೦ ॥ ವಸುದೇವನನ್ನು ನೋಡುತ್ತಲೇ ನಂದಗೋಪನು ಸತ್ತುಹೋದವನು ಬದುಕಿ ಮೇಲೆದ್ದು ನಿಲ್ಲುವಂತೆ ಎದ್ದು ನಿಂತನು. ಅವನು ಅತ್ಯಂತ ಪ್ರೀತಿಯಿಂದ ವಸುದೇವನನ್ನು ಬಾಚಿ ತಬ್ಬಿಕೊಂಡನು. ಆಗ ನಂದಗೋಪನು ಪ್ರೇಮವಿಹ್ವಲನಾಗಿದ್ದನು. ॥ ೨೧ ॥ ಪರೀಕ್ಷಿತನೇ! ನಂದಗೋಪನು ವಸುದೇವನನ್ನು ಒಳಿತಾಗಿ ಸ್ವಾಗತ-ಸತ್ಕಾರ ಮಾಡಿದನು. ಅವನು ಸುಖಾಸನದಲ್ಲಿ ಕುಳಿತು ಕುಶಲ ಪ್ರಶ್ನೆಗಳನ್ನು ಕೇಳತೊಡಗಿದನು. ॥ ೨೨ ॥

ಆ ಸಮಯದಲ್ಲಿ ವಸುದೇವನ ಮನಸ್ಸು ತನ್ನ ಇಬ್ಬರು ಮಕ್ಕಳ ವಿಷಯದಲ್ಲಿ ಆಸಕ್ತವಾಗಿತ್ತು. ಅಂತೆಯೇ ನಂದಗೋಪನಲ್ಲಿ ಹೇಳಿದನು – ಸಹೋದರಾ! ನಿನಗೆ ಇದುವರೆಗೆ ಯಾವುದೇ ಸಂತಾನವೂ ಇರಲಿಲ್ಲ. ವೃದ್ಧನಾದ ಕಾರಣ ಅದರ ಆಸೆಯೂ ಇರಲಿಲ್ಲ. ಸೌಭಾಗ್ಯವಶದಿಂದ ಈಗ ನಿನಗೆ ಸಂತಾನವಾಗಿದೆ. ॥ ೨೩ ॥ ಇದು ಅತ್ಯಂತ ಆನಂದದ ಮಾತಾಗಿದೆ. ಇಂದು ನಮ್ಮುಗಳ ಭೇಟಿಯಾದುದು ಸಂತೋಷವೇ. ಪ್ರಿಯರಾದವರನ್ನು ಸಂದರ್ಶಿಸುವುದೂ ಈಗಿನ ಕಾಲದಲ್ಲಿ ದುರ್ಲಭವೇ ಆಗಿದೆ. ಈ ಸಂಸಾರಚಕ್ರವೇ ಹೀಗಿದೆ. ಇಂದು ನಿನ್ನನ್ನು ಸಂದರ್ಶಿಸಿದ್ದು ಪುನರ್ಜನ್ಮವನ್ನು ಪಡೆದಂತೆಯೇ ಆಗಿದೆ. ॥ ೨೪ ॥ ಪ್ರವಾಹಕ್ಕೆ ಸಿಕ್ಕಿದ ತೃಣ-ಕಾಷ್ಠಗಳು ಯಾವಾಗಲೂ ಒಂದೇಕಡೆ ಸೇರಿಕೊಂಡಿರುವುದಿಲ್ಲ. ಹಾಗೆಯೇ ನಿಜಬಂಧುಗಳೂ, ಸುಹೃದರೂ ಎಲ್ಲರಿಗೂ, ಪ್ರಿಯರಾಗಿದ್ದರೂ ಒಂದೆಡೆ ಇರುವುದು ಸಂಭವಿಸಲಾರದು. ಏಕೆಂದರೆ, ಎಲ್ಲರ ಪ್ರಾರಬ್ಧಕರ್ಮಗಳು ಬೇರೆ-ಬೇರೆಯಾಗಿರುತ್ತವೆ. ॥ ೨೫ ॥

ಕಚ್ಚಿತ್ಪಶವ್ಯಂ ನಿರುಜಂ ಭೂರ್ಯಂಬುತೃಣವೀರುಧಮ್ ।
ಬೃಹದ್ವನಂ ತದಧುನಾ ಯತ್ರಾಸ್ಸೇ ತ್ವಂ ಸುಹೃದ್ವೃತಃ ॥ ೨೬ ॥

ಈಗ ನೀನು ನಿನ್ನ ಬಂಧುಗಳೊಡನೆಯೂ, ಸುಹೃದಯರೊಡನೆಯೂ ವಾಸಿಸುವ ಮಹಾವನದಲ್ಲಿ ಗಿಡ-ಮರ-ಬಳ್ಳಿ ನೀರು-ಹುಲ್ಲು ಇತ್ಯಾದಿಗಳು ಸಮೃದ್ಧವಾಗಿರುವುವೆಯೇ? ಹಸುಗಳನ್ನು ಸಾಕಲು ಅನುಕೂಲವಾಗಿದೆಯೇ? ಆ ಪ್ರದೇಶವು ರೋಗ-ರುಜಿನಗಳಿಂದ ರಹಿತವಾಗಿರುವುದೇ? ॥ ೨೬ ॥

ಭ್ರಾತರ್ಮಮ ಸುತಃ ಕಚ್ಚಿನ್ಮಾತ್ರಾ ಸಹ ಭವದ್ವ್ರಜೇ ।
ತಾತಂ ಭವಂತಂ ಮನ್ವಾನೋ ಭವದ್ಭ್ಯಾಮುಪಲಾಲಿತಃ ॥ ೨೭ ॥

ತಮ್ಮಾ! ನನ್ನ ಮಗನು ತನ್ನ ತಾಯಿ ರೋಹಿಣಿಯೊಡನೆ ನಿನ್ನ ವ್ರಜದಲ್ಲಿ ಇದ್ದಾನೆ. ಅವನ ಲಾಲನೆ-ಪಾಲನೆಗಳನ್ನು ನೀನು ಮತ್ತು ಯಶೋದೆ ಮಾಡುತ್ತಿರುವಿರಿ. ಆದರಿಂದ ಅವನು ನಿಮ್ಮನ್ನೇ ತಂದೆ-ತಾಯಿಯರೆಂದು ಭಾವಿಸಿಕೊಂಡಿರಬಹುದು? ಅವನು ಕ್ಷೇಮವೇ? ॥ ೨೭ ॥

ಪುಂಸಸ್ತ್ರಿವರ್ಗೋ ವಿಹಿತಃ ಸುಹೃದೋ ಹ್ಯನುಭಾವಿತಃ ।
ನ ತೇಷು ಕ್ಲಿಶ್ಯಮಾನೇಷು ತ್ರಿವರ್ಗೋಽರ್ಥಾಯ ಕಲ್ಪತೇ ॥ ೨೮ ॥

ಸ್ವಜನರಿಗೆ ಸುಖವುಂಟಾಗುವಂತಹ ಧರ್ಮ, ಅರ್ಥ, ಕಾಮಗಳೇ ಮನುಷ್ಯನಿಗೆ ಶಾಸ್ತ್ರವಿಹಿತವಾಗಿವೆ. ಈ ತ್ರಿವರ್ಗಗಳು ತನ್ನ ಸುಖಕ್ಕಾಗಿ ಮಾತ್ರವೇ ಆಗಿದ್ದು ಬಂಧುಗಳಿಗೆ ಕ್ಲೇಶದಾಯಕವಾಗಿದ್ದರೆ ಅವನ್ನು ಶಾಸ್ತ್ರವಿಹಿತವೆಂದು ಹೇಳಲಾಗುವುದಿಲ್ಲ. ॥ ೨೮ ॥

ನಂದ ಉವಾಚ

ಅಹೋ ತೇ ದೇವಕೀಪುತ್ರಾಃ ಕಂಸೇನ ಬಹವೋ ಹತಾಃ ।
ಏಕಾವಶಿಷ್ಟಾವರಜಾ ಕನ್ಯಾ ಸಾಪಿ ದಿವಂ ಗತಾ ॥ ೨೯ ॥

ನಂದಗೋಪನು ಹೇಳಿದನು – ಅಣ್ಣಾ! ವಸುದೇವನೇ! ನಿನ್ನ ಮನಸ್ಸಿನ ಸಂಕಟವನ್ನು ನಾನು ಊಹಿಸಿಕೊಳ್ಳಲೂ ಸಾಧ್ಯವಿಲ್ಲ. ದೇವಕಿಯ ಗರ್ಭದಲ್ಲಿ ಹುಟ್ಟಿದ ಆರು ಮಕ್ಕಳನ್ನೂ ಕಂಸನು ಕೊಂದುಹಾಕಿದನು. ಏಳನೆಯದಾದ ಕಡೆಯ ಹೆಣ್ಣುಶಿಶುವೂ ಸ್ವರ್ಗಕ್ಕೆ ಹೊರಟುಹೋಯಿತು. ॥ ೨೯ ॥

ನೂನಂ ಹ್ಯದೃಷ್ಟನಿಷ್ಠೋಽಯಮದೃಷ್ಟಪರಮೋ ಜನಃ ।
ಅದೃಷ್ಟಮಾತ್ಮನಸ್ತತ್ತ್ವಂ ಯೋ ವೇದ ನ ಸ ಮುಹ್ಯತಿ ॥ ೩೦ ॥

ಪ್ರಾಣಿಗಳ ಸುಖ-ದುಃಖಗಳು ಅದೃಷ್ಟವನ್ನೇ ಅವಲಂಬಿಸಿವೆ. ಇದರಲ್ಲಿ ಸಂಶಯವೇ ಇಲ್ಲ. ಜೀವನದಲ್ಲಿನ ಸುಖ-ದುಃಖಗಳ ಕಾರಣವು ಅದೃಷ್ಟವೇ ಆಗಿದೆ ಎಂದು ತಿಳಿಯುವವನು ಅವು ಪ್ರಾಪ್ತವಾದಾಗಲೂ ಮೋಹಿತನಾಗುವುದಿಲ್ಲ. ॥ ೩೦ ॥

ವಸುದೇವ ಉವಾಚ

ಕರೋ ವೈ ವಾರ್ಷಿಕೋ ದತ್ತೋ ರಾಜ್ಞೇ ದೃಷ್ಟಾ ವಯಂ ಚ ವಃ ।
ನೇಹ ಸ್ಥೇಯಂ ಬಹುತಿಥಂ ಸಂತ್ಯುತ್ಪಾತಾಶ್ಚ ಗೋಕುಲೇ ॥ ೩೧ ॥

ವಸುದೇವನು ಹೇಳಿದನು – ತಮ್ಮಾ! ಕಂಸನಿಗೆ ಕೊಡಬೇಕಾಗಿದ್ದ ವಾರ್ಷಿಕ ಕಂದಾಯವನ್ನು ನೀನು ತೀರಿಸಿಯಾಯಿತು. ನಾವಿಬ್ಬರೂ ಕಲೆತು ಕುಶಲಪ್ರಶ್ನೆಗಳ ವಿನಿಮಯವಾದವು. ಇನ್ನು ನೀನು ಹೆಚ್ಚುದಿನ ಇಲ್ಲಿರುವುದು ಉಚಿತವಾಗಿ ಕಾಣುವುದಿಲ್ಲ. ಏಕೆಂದರೆ, ಗೋಕುಲದಲ್ಲಿ ದೊಡ್ಡ-ದೊಡ್ಡ ಉತ್ಪಾತಗಳು ಕಾಣಿಸಿಕೊಳ್ಳುತ್ತಿವೆ. ॥ ೩೧ ॥

ಶ್ರೀಶುಕ ಉವಾಚ

ಇತಿ ನಂದಾದಯೋ ಗೋಪಾಃ ಪ್ರೋಕ್ತಾಸ್ತೇ ಶೌರಿಣಾ ಯಯುಃ ।
ಅನೋಭಿರನಡುದ್ಯುಕ್ತೈಸ್ತಮನುಜ್ಞಾಪ್ಯ ಗೋಕುಲಮ್ ॥ ೩೨ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ! ವಸುದೇವನು ಹೀಗೆ ಹೇಳಿದಾಗ ನಂದನೇ ಮೊದಲಾದ ಗೋಪರು ವಸುದೇವನ ಅನುಮತಿಯನ್ನು ಪಡೆದು ಎತ್ತುಗಳು ಹೂಡಿದ ಚಕ್ಕಡಿಯಲ್ಲಿ ಕುಳಿತು ಗೋಕುಲದತ್ತ ಪ್ರಯಾಣ ಬೆಳೆಸಿದರು. ॥ ೩೨ ॥

ಐದನೆಯ ಅಧ್ಯಾಯವು ಮುಗಿಯಿತು. ॥ ೫ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮಸ್ಕಂಧೇ ಪೂರ್ವಾರ್ಧೇ
ನಂದವಸುದೇವಸಂಗಮೋ ನಾಮ ಪಂಚಮೋಽಧ್ಯಾಯಃ ॥ ೫ ॥

ಆರನೆಯ ಅಧ್ಯಾಯ

ಪೂತನೆಯ ಉದ್ಧಾರ

ಶ್ರೀಶುಕ ಉವಾಚ

ನಂದಃ ಪಥಿ ವಚಃ ಶೌರೇರ್ನ ಮೃಷೇತಿ ವಿಚಿಂತಯನ್ ।
ಹರಿಂ ಜಗಾಮ ಶರಣಮುತ್ಪಾತಾಗಮಶಂಕಿತಃ ॥ ೧ ॥

ಕಂಸೇನ ಪ್ರಹಿತಾ ಘೋರಾ ಪೂತನಾ ಬಾಲಘಾತಿನೀ ।
ಶಿಶೂಂಶ್ಚಚಾರ ನಿಘ್ನಂತೀ ಪುರಗ್ರಾಮವ್ರಜಾದಿಷು ॥ ೨ ॥

ನ ಯತ್ರ ಶ್ರವಣಾದೀನಿ ರಕ್ಷೋಘ್ನಾನಿ ಸ್ವಕರ್ಮಸು ।
ಕುರ್ವಂತಿ ಸಾತ್ವತಾಂ ಭರ್ತುರ್ಯಾತುಧಾನ್ಯಶ್ಚ ತತ್ರ ಹಿ ॥ ೩ ॥

ಸಾ ಖೇಚರ್ಯೇಕದೋತ್ಪತ್ಯ ಪೂತನಾ ನಂದಗೋಕುಲಮ್ ।
ಯೋಷಿತ್ವಾ ಮಾಯಯಾಽಽತ್ಮಾನಂ ಪ್ರಾವಿಶತ್ಕಾಮಚಾರಿಣೀ ॥ ೪ ॥

ತಾಂ ಕೇಶಬಂಧವ್ಯತಿಷಕ್ತಮಲ್ಲಿಕಾಂ
ಬೃಹನ್ನಿತಂಬಸ್ತನಕೃಚ್ಛ್ರಮಧ್ಯಮಾಮ್ ।
ಸುವಾಸಸಂ ಕಲ್ಪಿತಕರ್ಣಭೂಷಣ-
ತ್ವಿಷೋಲ್ಲಸತ್ಕುಂತಲಮಂಡಿತಾನನಾಮ್ ॥ ೫ ॥

ವಲ್ಗುಸ್ಮಿತಾಪಾಂಗವಿಸರ್ಗವೀಕ್ಷಿತೈ-
ರ್ಮನೋ ಹರಂತೀಂ ವನಿತಾಂ ವ್ರಜೌಕಸಾಮ್ ।
ಅಮಂಸತಾಂಭೋಜಕರೇಣ ರೂಪಿಣೀಂ
ಗೋಪ್ಯಃ ಶ್ರಿಯಂ ದ್ರಷ್ಟುಮಿವಾಗತಾಂ ಪತಿಮ್ ॥ ೬ ॥

ಬಾಲಗ್ರಹಸ್ತತ್ರ ವಿಚಿನ್ವತೀ ಶಿಶೂ-
ನ್ಯದೃಚ್ಛಯಾ ನಂದಗೃಹೇಽಸದಂತಕಮ್ ।
ಬಾಲಂ ಪ್ರತಿಚ್ಛನ್ನನಿಜೋರುತೇಜಸಂ
ದದರ್ಶ ತಲ್ಪೇಽಗ್ನಿಮಿವಾಹಿತಂ ಭಸಿ ॥ ೭ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ! ನಂದಗೋಪನು ಪ್ರಯಾಣಮಾಡುತ್ತಿದ್ದಾಗ ದಾರಿಯಲ್ಲಿ – ವಸುದೇವನು ಹೇಳಿದುದನ್ನು ಪುನಃ ಪುನಃ ಸ್ಮರಿಸಿಕೊಂಡು, ಅವನು ಹೇಳಿದ ಮಾತು ಸುಳ್ಳಾಗುವುದಿಲ್ಲ ಎಂದು ಭಾವಿಸಿ ಆತನು ಉತ್ಪಾತಗಳ ನಿವಾರಣೆಗಾಗಿ ಶ್ರೀಹರಿಯನ್ನೇ ಏಕಾಗ್ರವಾದ ಮನಸ್ಸಿನಿಂದ ಶರಣಾದನು. ॥ ೧ ॥

ವರ್ಷದೊಳಗೆ ಹುಟ್ಟಿದ ಮಕ್ಕಳನ್ನು ಕೊಲ್ಲಲು ಕಂಸನಿಂದ ಕಳುಹಿಸಲ್ಪಟ್ಟವರಲ್ಲಿ 'ಪೂತನಾ' ಎಂಬ ಹೆಸರಿನ ಕ್ರೂರರಾಕ್ಷಸಿಯಿದ್ದಳು. ಘೋರರೂಪಿಯಾದ ಬಾಲಹಂತಕಳಾದ ಆ ಪೂತನೆಯು ಪುರ ಗ್ರಾಮ-ಹಳ್ಳಿಗಳಲ್ಲಿ ಸಿಕ್ಕಿದ ಬಾಲಕರೆಲ್ಲರನ್ನೂ ಹಿಡಿದು ಸಾಯಿಸುತ್ತಾ ಸಂಚರಿಸುತ್ತಿದ್ದಳು. ॥ ೨ ॥ ನಿತ್ಯಕರ್ಮಗಳಲ್ಲಿ ರಾಕ್ಷೋಘ್ನಮಂತ್ರಗಳನ್ನು ಜಪಿಸದವರ ಬಳಿಯಲ್ಲಿ ಮತ್ತು ಭಕ್ತವತ್ಸಲ ಭಗವಂತನ ನಾಮ-ಗುಣ-ಲೀಲೆಗಳನ್ನು ಶ್ರವಣ, ಕೀರ್ತನ, ಸ್ಮರಣೆ ಮಾಡದವರ ಬಳಿಯಲ್ಲಿ ಇಂತಹ ರಾಕ್ಷಸರ ಬಲವು ಹೆಚ್ಚಾಗಿರುತ್ತದೆ. ॥ ೩ ॥ ಆ ಪೂತನೆಯು ಆಕಾಶ ಮಾರ್ಗದಿಂದ ಸಂಚರಿಸುವ, ಬೇಕುಬೇಕಾದ ರೂಪಗಳನ್ನು ಧರಿಸುವ ಸಾಮರ್ಥ್ಯವನ್ನು ಹೊಂದಿದ್ದಳು. ಒಂದು ದಿನ ನಂದನ ಗೋಕುಲದ ಬಳಿಗೆ ಬಂದು ಆಕೆಯು ಮಾಯೆಯಿಂದ ತಾನು ಒಂದು ಸುಂದರ ಯುವತಿಯಾಗಿ ಗೋಕುಲವನ್ನು ಪ್ರವೇಶಿಸಿದಳು. ॥ ೪ ॥ ಆಕೆಯು ಮಾಯೆಯಿಂದ ಸುಂದರಸ್ತ್ರೀರೂಪವನ್ನು ಧರಿಸಿದ್ದಳು. ಘಮ-ಘಮಿಸುವ ಮಲ್ಲಿಗೆಯ ದಂಡೆಯನ್ನು ಮುಡಿದುಕೊಂಡಿದ್ದಳು. ಅಂದವಾದ ಸೀರೆಯನ್ನು ಉಟ್ಟಿದ್ದಳು. ಆಕೆಯ ಕರ್ಣಕುಂಡಲಗಳು ಅಲುಗಾಡಿದಾಗ ಆಕೆಯ ಹೊಳೆಯುವ ಮುಖದ ಕಡೆಗೆ ವಾಲಿದ ಮುಂಗುರುಳುಗಳು ಹೆಚ್ಚಿನ ಶೋಭೆಯನ್ನು ಪಡೆದಿದ್ದವು. ಆಕೆಯ ನಿತಂಬಗಳು ಕುಚಕಲಶಗಳು ಉನ್ನತವಾಗಿದ್ದು ನಡುವು ಕಿರಿದಾಗಿತ್ತು. ॥ ೫ ॥ ಅವಳು ತನ್ನ ಮಧುರ ಮಂದಹಾಸದಿಂದ ಮತ್ತು ಕಡೆಗಣ್ಣಿನ ನೋಟದಿಂದ ವ್ರಜವಾಸಿಗಳ ಚಿತ್ತವನ್ನು ಅಪಹರಿಸುತ್ತಿದ್ದಳು. ಆ ರೂಪಸಂಪನ್ನೆಯಾದ ರಮಣಿಯು ಕೈಯಲ್ಲಿ ಕಮಲವನ್ನಿತ್ತುಕೊಂಡು ಬರುತ್ತಿರುವುದನ್ನು ನೋಡಿದ ಗೋಪಿಯರು ಸ್ವಯಂ ಮಹಾಲಕ್ಷ್ಮಿಯೇ ಪತಿಯ ದರ್ಶನಕ್ಕಾಗಿ ಬಂದಿರುವಳೋ ಎಂದು ಭಾವಿಸಿದರು. ॥ ೬ ॥

ಪೂತನೆಯು ಬಾಲಕರಿಗೆ ಬಾಲಗ್ರಹದಂತಿದ್ದಳು. ಆಕೆಯು ಅಲ್ಲಲ್ಲಿ ಬಾಲಕರನ್ನು ಹುಡುಕುತ್ತಾ ಅನಾಯಾಸವಾಗಿ ನಂದಗೋಪನ ಮನೆಯಲ್ಲಿ ನುಗ್ಗಿದಳು. ಬಾಲಕನಾದ ಶ್ರೀಕೃಷ್ಣನು ಹಾಸಿಗೆಯ ಮೇಲೆ ಮಲಗಿದ್ದನು. ಪರೀಕ್ಷಿತನೇ! ಭಗವಾನ್ ಶ್ರೀಕೃಷ್ಣನು ದುಷ್ಟರಿಗೆ ಕಾಲಸ್ವರೂಪನಾಗಿದ್ದನು. ಆದರೆ ಬೂದಿಯರಾಶಿಯಲ್ಲಿ ಬೆಂಕಿಯು ಅಡಗಿರುವಂತೆ ಆಗ ಅವನು ತನ್ನ ಪ್ರಚಂಡ ತೇಜಸ್ಸನ್ನು ಅಡಗಿಸಿಕೊಂಡಿದ್ದನು. ॥ ೭ ॥

ವಿಬುಧ್ಯ ತಾಂ ಬಾಲಕಮಾರಿಕಾಗ್ರಹಂ
ಚರಾಚರಾತ್ಮಾಽಽಸ ನಿಮೀಲಿತೇಕ್ಷಣಃ ।
ಅನಂತಮಾರೋಪಯದಂಕಮಂತಕಂ
ಯಥೋರಗಂ ಸುಪ್ತಮಬುದ್ಧಿರಜ್ಜುಧೀಃ ॥ ೮ ॥

ತಾಂ ತೀಕ್ಷ್ಣಚಿತ್ತಾಮತಿವಾಮಚೇಷ್ಟಿತಾಂ
ವೀಕ್ಷ್ಯಾಂತರಾ ಕೋಶಪರಿಚ್ಛನ್ನಾಸಿವತ್ ।
ವರಸ್ತ್ರಿಯಂ ತತ್ಪ್ರಭಯಾ ಚ ಧರ್ಷಿತೇ
ನಿರೀಕ್ಷ್ಯಮಾಣೇ ಜನನೀ ಹ್ಯತಿಷ್ಠತಾಮ್ ॥ ೯ ॥

ತಸ್ಮಿನ್ ಸ್ತನಂ ದುರ್ಜರವೀರ್ಯಮುಲ್ಬಣಂ
ಘೋರಾಂಕಮಾದಾಯ ಶಿಶೋರ್ದದಾವಥ ।
ಗಾಢಂ ಕರಾಭ್ಯಾಂ ಭಗವಾನ್ಪ್ರಪೀಡ್ಯ ತತ್
ಪ್ರಾಣೈಃ ಸಮಂ ರೋಷಸಮನ್ವಿತೋಽಪಿಬತ್ ॥ ೧೦ ॥

ಸಾ ಮುಂಚ ಮುಂಚಾಲಮಿತಿ ಪ್ರಭಾಷಿಣೀ
ನಿಷ್ಪೀಡ್ಯಮಾನಾಖಿಲಜೀವಮರ್ಮಣಿ ।
ವಿವೃತ್ಯ ನೇತ್ರೇ ಚರಣೌ ಭುಜೌ ಮುಹುಃ
ಪ್ರಸ್ವಿನ್ನಗಾತ್ರಾ ಕ್ಷಿಪತೀ ರುರೋದ ಹ ॥ ೧೧ ॥

ತಸ್ಯಾಃ ಸ್ವನೇನಾತಿಗಭೀರರಂಹಸಾ
ಸಾದ್ರಿರ್ಮಹೀ ದ್ಯೌಶ್ಚ ಚಚಾಲ ಸಗ್ರಹಾ ।
ರಸಾ ದಿಶಶ್ಚ ಪ್ರತಿನೇದಿರೇ ಜನಾಃ
ಪೇತುಃ ಕ್ಷಿತೌ ವಜ್ರನಿಪಾತಶಂಕಯಾ ॥ ೧೨ ॥

ನಿಶಾಚರೀತ್ಥಂ ವ್ಯಥಿತಸ್ತನಾ ವ್ಯಸು-
ರ್ವ್ಯಾದಾಯ ಕೇಶಾಂಶ್ಚರಣೌ ಭುಜಾವಪಿ ।
ಪ್ರಸಾರ್ಯ ಗೋಷ್ಠೇ ನಿಜರೂಪಮಾಸ್ಥಿತಾ
ವಜ್ರಾಹತೋ ವೃತ್ರ ಇವಾಪತನ್ನೃಪ ॥ ೧೩ ॥

ಭಗವಾನ್ ಶ್ರೀಕೃಷ್ಣನು ಚರಾಚರ ಪ್ರಾಣಿಗಳೆಲ್ಲರ ಆತ್ಮನಾಗಿರುವನು. ಅದರಿಂದ ಒಳಗೆ ಬಂದಿರುವ ಇವಳು ಮಕ್ಕಳನ್ನು ಕೊಲ್ಲುವಂತಹ ಬಾಲಘಾತಿನಿ ಎಂಬುದನ್ನು ಕ್ಷಣಮಾತ್ರದಲ್ಲಿ ಅರಿತು ತನ್ನ ಕಣ್ಣುಗಳನ್ನು ಮುಚ್ಚಿಕೊಂಡನು. ಯಾರಾದರೂ ಭ್ರಮೆಯಿಂದ ಮಲಗಿದ ಸರ್ಪವನ್ನು ಹಗ್ಗವೆಂದು ಬಗೆದು ಎತ್ತಿಕೊಳ್ಳುವಂತೆಯೇ ತನ್ನ ಕಾಲಸ್ವರೂಪನಾದ ಭಗವಾನ್ ಶ್ರೀಕೃಷ್ಣನನ್ನು ಪೂತನೆಯು ಎತ್ತಿಕೊಂಡು ತನ್ನ ತೊಡೆಯಲ್ಲಿ ಇರಿಸಿಕೊಂಡಳು. ॥ ೮ ॥ ಒರೆಯಲ್ಲಿರುವ ತೀಕ್ಷ್ಣವಾದ ಅಲಗುಳ್ಳ ಕತ್ತಿಯಂತೆ ಪೂತನೆಯ ಹೃದಯವು ಅತ್ಯಂತ ಕಠೋರವೂ, ಕುಟಿಲವೂ ಆಗಿತ್ತು. ಆದರೆ ಬಹಿರಂಗದಲ್ಲಿ ಮಾತ್ರ ಅವಳು ಮಧುರವೂ, ಸುಂದರವೂ ಆದ ವ್ಯವಹಾರಗಳನ್ನು ಮಾಡುತ್ತಿದ್ದಳು. ನೋಡಲು ಆಕೆಯು ಓರ್ವ ಭದ್ರಮಹಿಳೆಯಂತೆ ಕಂಡುಬರುತ್ತಿದ್ದಳು. ಅದರಿಂದಾಗಿ ರೋಹಿಣಿಯಾಗಲೀ, ಯಶೋದೆಯಾಗಲೀ ಅವಳು ಮನೆಯೊಳಗೆ ಬಂದಾಗ ಆಕೆಯನ್ನು ತಡೆಯದೆ ಅವಳ ಸೌಂದರ್ಯ ಪ್ರಭೆಯಿಂದ ಬೆರಗಾಗಿ ಸುಮ್ಮನೆ ನಿಂತು ನೋಡುತ್ತಿದ್ದರು. ॥ ೯ ॥ ಇತ್ತ ಭಯಂಕರಳಾದ ರಾಕ್ಷಸಿ ಪೂತನೆಯು ಬಾಲಕ ಶ್ರೀಕೃಷ್ಣನನ್ನು ತನ್ನ ತೊಡೆಯಲ್ಲಿ ಮಲಗಿಸಿಕೊಂಡು ಅವನ ಬಾಯಿಯಲ್ಲಿ ತನ್ನ ಸ್ತನವನ್ನಿಟ್ಟಳು. ಅದರಲ್ಲಿ ಭಯಂಕರವಾದ ಮತ್ತು ಯಾವ ರೀತಿಯಿಂದಲೂ ಅರಗದೇ ಇರುವ ವಿಷವನ್ನು ಲೇಪಿಸಿಕೊಂಡಿದ್ದಳು. ಅವಳ ದುಷ್ಟತನವನ್ನು ನೋಡಿ ಅತ್ಯಂತ ರುಷ್ಟನಾದ ಶ್ರೀಕೃಷ್ಣನು ಅವಳ ಸ್ತನಗಳನ್ನು ತನ್ನ ಪುಟ್ಟದಾದ ಎರಡು ಕೈಗಳಿಂದಲೂ ಗಟ್ಟಿಯಾಗಿ ಹಿಡಿದು ಅವಳ ಪ್ರಾಣಗಳೊಡನೆಯೇ ಸ್ತನ್ಯಪಾನ ಮಾಡಿದನು. ॥ ೧೦ ॥ ಆಕೆಯ ಸ್ತನ್ಯದ ಜೊತೆಯಲ್ಲೇ ಪ್ರಾಣಗಳನ್ನೂ ಹೀರುತ್ತಿದ್ದಂತೆ ರಾಕ್ಷಸಿಯ ಮರ್ಮಸ್ಥಾನಗಳೆಲ್ಲ ಶಿಥಿಲಗೊಂಡವು. 'ಅಯ್ಯೋ! ಬಿಡು! ಬಿಟ್ಟುಬಿಡು! ನನ್ನ ಪ್ರಾಣಪಕ್ಷಿಯೇ ಹಾರಿಹೋಗುತ್ತಿದೆ, ಸಾಕುಮಾಡು!' ಎಂದು ರಾಕ್ಷಸಿಯು ಗಟ್ಟಿಯಾಗಿ ಅರಚುತ್ತಿದ್ದಳು. ಕಣ್ಣುಗಳು ಅಗಲವಾಗಿ ಬಿಟ್ಟುಕೊಂಡು, ಬೆವರಿನಿಂದ ತೊಯ್ದುಹೋಗಿ, ಕೈ-ಕಾಲುಗಳನ್ನು ಬಡಿಯುತ್ತಾ ಇದ್ದಳು. ॥ ೧೧ ॥ ಆಕೆಯ ಭಯಂಕರವಾದ ಮತ್ತು ರಭಸದಿಂದ ಕೂಡಿದ ಕಿರುಚಾಟಕ್ಕೆ ಪರ್ವತಗಳಿಂದ ಕೂಡಿದ ಭೂಮಿಯೂ, ಗ್ರಹಗಳಿಂದ ಕೂಡಿದ ಅಂತರಿಕ್ಷವೂ ನಡುಗಿದವು. ಅವಳ ಘೋರವಾದ ಕೂಗಾಟವು ಹತ್ತು ದಿಕ್ಕುಗಳಲ್ಲಿಯೂ, ಏಳು ಪಾತಾಳಗಳಲ್ಲಿಯೂ ಪ್ರತಿಧ್ವನಿಸಿತು. ಅನೇಕ ಜನರು ಸಿಡಿಲು ಬಿದ್ದಿತೆಂಬ ಭಯದಿಂದ ಭೂಮಿಗುರುಳಿದರು. ॥ ೧೨ ॥ ಪರೀಕ್ಷಿತನೇ! ಈ ಪ್ರಕಾರ ನಿಶಾಚರಿಯಾದ ಪೂತನೆಯ ಸ್ತನಗಳಲ್ಲಿ ಉಂಟಾದ ಅತೀವ ನೋವಿನಿಂದ ತನ್ನನ್ನು ಮರೆಮಾಚಿಕೊಳ್ಳದೆ ರಾಕ್ಷಸಿಯಾಗಿ ಪ್ರಕಟಗೊಂಡಳು. ಆಕೆಯ ಶರೀರದಿಂದ ಪ್ರಾಣಗಳು ಹೊರಟುಹೋದುವು. ತೆರೆಯಲ್ಪಟ್ಟ ಬಾಯಿಯಿಂದ, ಕೆದರಿದ ಕೂದಲಿನಿಂದ, ಕೈಕಾಲುಗಳನ್ನು ಚಾಚಿಕೊಂಡು ವಜ್ರಾಹತನಾದ ವೃತ್ರಾಸುರನಂತೆ ಗೊಲ್ಲರಹಳ್ಳಿಯ ಮಧ್ಯದಲ್ಲಿ ಬಿದ್ದುಬಿಟ್ಟಳು. ॥ ೧೩ ॥

ಪತಮಾನೋಽಪಿ ತದ್ದೇಹಸ್ತ್ರಿಗವ್ಯೂತ್ಯಂತರದ್ರುಮಾನ್ ।
ಚೂರ್ಣಯಾಮಾಸ ರಾಜೇಂದ್ರ ಮಹದಾಸೀತ್ತದದ್ಭುತಮ್ ॥ ೧೪ ॥

ಈಷಾಮಾತ್ರೋಗ್ರದಂಷ್ಟ್ರಾಸ್ಯಂ ಗಿರಿಕಂದರನಾಸಿಕಮ್ ।
ಗಂಡಶೈಲಸ್ತನಂ ರೌದ್ರಂ ಪ್ರಕೀರ್ಣಾರುಣಮೂರ್ಧಜಮ್ ॥ ೧೫ ॥

ಅಂಧಕೂಪಗಭೀರಾಕ್ಷಂ ಪುಲಿನಾರೋಹಭೀಷಣಮ್ ।
ಬದ್ಧಸೇತುಭುಜೋರ್ವಂಘ್ರಿ ಶೂನ್ಯತೋಯಹ್ರದೋದರಮ್ ॥ ೧೬ ॥

ಸಂತತ್ರಸುಃ ಸ್ಮ ತದ್ವೀಕ್ಷ್ಯ ಗೋಪಾ ಗೋಪ್ಯಃ ಕಲೇವರಮ್ ।
ಪೂರ್ವಂ ತು ತನ್ನಿಃಸ್ವನಿತಭಿನ್ನಹೃತ್ಕರ್ಣಮಸ್ತಕಾಃ ॥ ೧೭ ॥

ಬಾಲಂ ಚ ತಸ್ಯಾ ಉರಸಿ ಕ್ರೀಡಂತಮಕುತೋಭಯಮ್ ।
ಗೋಪ್ಯಸ್ತೂರ್ಣಂ ಸಮಭ್ಯೇತ್ಯ ಜಗೃಹುರ್ಜಾತಸಂಭ್ರಮಾಃ ॥ ೧೮ ॥

ಯಶೋದಾರೋಹಿಣೀಭ್ಯಾಂ ತಾಃ ಸಮಂ ಬಾಲಸ್ಯ ಸರ್ವತಃ ।
ರಕ್ಷಾಂ ವಿದಧಿರೇ ಸಮ್ಯಗ್ಗೋಪುಚ್ಛಭ್ರಮಣಾದಿಭಿಃ ॥ ೧೯ ॥

ಗೋಮೂತ್ರೇಣ ಸ್ನಾಪಯಿತ್ವಾ ಪುನರ್ಗೋರಜಸಾರ್ಭಕಮ್ ।
ರಕ್ಷಾಂ ಚಕ್ರುಶ್ಚ ಶಕೃತಾ ದ್ವಾದಶಾಂಗೇಷು ನಾಮಭಿಃ ॥ ೨೦ ॥

ಗೋಪ್ಯಃ ಸಂಸ್ಪೃಷ್ಟಸಲಿಲಾ ಅಂಗೇಷು ಕರಯೋಃ ಪೃಥಕ್ ।
ನ್ಯಸ್ಯಾತ್ಮನ್ಯಥ ಬಾಲಸ್ಯ ಬೀಜನ್ಯಾಸಮಕುರ್ವತ ॥ ೨೧ ॥

ರಾಜೇಂದ್ರನೇ! ಪೂತನೆಯ ರಾಕ್ಷಸೀ ಶರೀರವು ಬೀಳುತ್ತಿರುವಾಗ ಅರು ಗಾವುದದೊಳಗಿನ ಮರ-ಗಿಡ-ಬಳ್ಳಿಗಳು ನುಚ್ಚುನೂರಾದವು. ಇದೊಂದು ಪರಮಾದ್ಭುತ ಘಟನೆಯಾಗಿ ಕಂಡಿತು. ॥ ೧೪ ॥ ಪೂತನೆಯ ಶರೀರವು ಅತಿ ಭಯಂಕರವಾಗಿತ್ತು. ಆಕೆಯ ಮುಖದಲ್ಲಿ ನೇಗಿಲಿನಂತಹ ತೀಕ್ಷ್ಣವಾದ ಕೋರೆದಾಡೆಗಳಿದ್ದವು. ಮೂಗಿನ ಹೊಳ್ಳೆಗಳು ಪರ್ವತದ ಗುಹೆಯಂತೆ ವಿಶಾಲವೂ ಆಳವೂ ಆಗಿದ್ದವು. ಸ್ತನಗಳು ಪರ್ವತದಿಂದ ಉರುಳಿದ ದೊಡ್ಡ ಬಂಡೆಗಳಂತೆ ಸ್ಥೂಲವಾಗಿದ್ದವು. ಅವಳ ಕೆಂಪಾದ ತಲೆಗೂದಲು ಕೆದರಿಕೊಂಡಿತ್ತು. ॥ ೧೫ ॥ ಅವಳ ಕಣ್ಣುಗಳು ಪಾಳುಬಾವಿಯಂತೆ ಗುಳಿಬಿದ್ದಿದ್ದವು. ನಿತಂಬಗಳು ನದಿಯಲ್ಲಿನ ಮರಳು ದಿಣ್ಣೆಯಂತೆ ಎತ್ತರವಾಗಿಯೂ ಭಯಂಕರವಾಗಿಯೂ ಇದ್ದವು. ತೋಳು-ತೊಡೆಗಳು-ಕಾಲುಗಳು ನದಿಗೆ ಕಟ್ಟಿದ ಸೇತುವೆಯಂತಿದ್ದವು. ಹೊಟ್ಟೆಯು ಒಣಗಿದ ಸರೋವರದಂತೆ ಕಂಡುಬರುತ್ತಿತ್ತು. ॥ ೧೬ ॥ ಪೂತನೆಯ ಘೋರ ಶರೀರವನ್ನು ನೋಡಿ ಎಲ್ಲ ಗೋಪಾಲಕರೂ, ಗೋಪಿಯರೂ ಭಯಗೊಂಡರು. ಆಕೆಯ ಭಯಂಕರ ಕೂಗಾಟವನ್ನು ಕೇಳಿ ಅವರ ಹೃದಯ, ಕಿವಿಗಳು, ತಲೆಗಳೂ ಮೊದಲೇ ಒಡೆದಂತಾಗಿದ್ದವು. ॥ ೧೭ ॥ ಅಂತಹ ಬೃಹದಾಕಾರವಾದ ಪೂತನೆಯ* ವಕ್ಷಸ್ಥಳದಲ್ಲಿ ಪುಟ್ಟ ಶ್ರೀಕೃಷ್ಣನು ನಿರ್ಭಯನಾಗಿ ಆಡುತ್ತಿರುವುದನ್ನು ನೋಡಿದ ಗೋಪಿಯರು ಗಾಬರಿಗೊಂಡು ಬಹಳ ಆತುರದಿಂದ ಮಗುವನ್ನೆತ್ತಿಕೊಂಡರು. ॥ ೧೮ ॥ ಅನಂತರ ಬಳಿಕ ಯಶೋದೆ ಮತ್ತು ರೋಹಿಣಿಯರೊಂದಿಗೆ ಗೋಪಿಯರು ಹಸುವಿನ ಬಾಲದಿಂದ ಬಾಲಕೃಷ್ಣನಿಗೆ ನಿವಾಳಿಸಿ, ಎಲ್ಲ ರೀತಿಯಿಂದ ರಕ್ಷೆಯನ್ನು ಮಾಡಿದರು. ॥ ೧೯ ॥ ಮೊದಲಿಗೆ ಬಾಲಕೃಷ್ಣನನ್ನು ಗೋಮೂತ್ರದಿಂದ ಸ್ನಾನಮಾಡಿಸಿದರು. ಮತ್ತೆ ಅವನ ಎಲ್ಲ ಅಂಗಾಂಗಗಳಿಗೆ ಗೋಧೂಳಿಯನ್ನು ಹಚ್ಚಿ ಹನ್ನೆರಡು ಅಂಗಗಳಿಗೆ ಸೆಗಣಿಯನ್ನು ಹಚ್ಚಿ, ಭಗವಂತನ ಕೇಶವಾದಿ ದ್ವಾದಶನಾಮಗಳಿಂದ ಅಭಿಮಂತ್ರಿಸಿ ರಕ್ಷೆಯನ್ನಿಟ್ಟರು.** ॥ ೨೦ ॥ ಅನಂತರ ಗೋಪಿಯರು ಆಚಮನಮಾಡಿ 'ಅಜಾದಿ ದ್ವಾದಶ ಬೀಜಮಂತ್ರಗಳಿಂದ ತಮ್ಮ ಶರೀರದಲ್ಲಿ ಬೇರೆ-ಬೇರೆಯಾಗಿ ಅಂಗನ್ಯಾಸ-ಕರನ್ಯಾಸವನ್ನು ಮಾಡಿಕೊಂಡು ಮತ್ತೆ ಬಾಲಕನ ಅಂಗಗಳಲ್ಲಿ ಬೀಜನ್ಯಾಸ ಮಾಡಿದರು. ॥ ೨೧ ॥

---

* ಬಲಿಚಕ್ರವರ್ತಿಗೆ ರತ್ನಮಾಲಾ ಎಂಬ ಕನ್ಯೆಯೊಬ್ಬಳಿದ್ದಳು. ಯಜ್ಞಶಾಲೆಯಲ್ಲಿ ವಾಮನ ಭಗವಂತನನ್ನು ನೋಡಿದ ಆಕೆಯ ಹೃದಯದಲ್ಲಿ ಪುತ್ರಸ್ನೇಹದ ಭಾವವು ಉದಯಿಸಿತು. ಇವನು ನನಗೆ ಸ್ತನ್ಯಪಾನಮಾಡುವಂತಹ ಬಾಲಕನಾದರೆ ನಾನು ಸಂತೋಷದಿಂದ ಇವನಿಗೆ ಸ್ತನ್ಯಪಾನಮಾಡಿಸುವೆ ಎಂದು ಮನಸ್ಸಿನಲ್ಲೇ ಅಂದುಕೊಂಡಳು. ವಾಮನ ಭಗವಂತನು ತನ್ನ ಭಕ್ತನಾದ ಬಲಿಯ ಪುತ್ರಿಯ ಈ ಮನೋರಥವನ್ನು ಮನಸ್ಸಿನಲ್ಲೇ ಅನುಮೋದಿಸಿದನು. ಆ ರತ್ನಮಾಲೆಯೇ ದ್ವಾಪರದಲ್ಲಿ ಪೂತನೆಯಾಗಿ ಹುಟ್ಟಿ ಶ್ರೀಕೃಷ್ಣನ ಸ್ಪರ್ಶದಿಂದ ಅವಳ ಅಭಿಲಾಷೆ ಪೂರ್ಣಗೊಂಡಿತು.

** ಕೇಶವಾದಿ ಹನ್ನೆರಡು ನಾಮಗಳ ನ್ಯಾಸವು ಹೀಗಿದೆ

ಲಲಾಟೇ ಕೇಶವಂ ಧ್ಯಾಯೇನ್ನಾರಾಯಣಮಥೋದರೇ । ವಕ್ಷಃಸ್ಥಲೇ ಮಾಧವಂ ತು ಗೋವಿಂದಂ ಕಂಠಕೂಬರೇ ॥
ವಿಷ್ಣುಂ ಚ ದಕ್ಷಿಣೇ ಕುಕ್ಷೌ ಬಾಹೌ ಚ ಮಧುಸೂದನಮ್ । ತ್ರಿವಿಕ್ರಮಂ ಕಂಧರೇ ತು ವಾಮನಂ ವಾಮಪಾರ್ಶ್ವಕೇ ॥
ಶ್ರೀಧರಂ ವಾಮಬಾಹೌ ತು ಹೃಷೀಕೇಶಂ ತು ಕಂಧರೇ । ಪೃಷ್ಠೇ ತು ಪದ್ಮನಾಭಂ ಚ ಕಟ್ಯಾಂ ದಾಮೋದರಂ ನ್ಯಸೇತ್ ॥

ವೈಷ್ಣವರು ಪ್ರತಿದಿನವೂ ತಮ್ಮ ಹಣೆ, ಹೊಟ್ಟೆ, ಎದೆ, ಕಂಠದ ಮುಂಭಾಗ, ಬಲಹೊಟ್ಟೆ, ಬಲತೋಳು, ಕತ್ತಿನ ಹಿಂಭಾಗ, ಬಲಹೆಗಲು, ಎಡಹೊಟ್ಟೆ, ಎಡತೋಳು, ಎಡಹೆಗಲು, ಬೆನ್ನು, ನಡು ಈ ಅಂಗಗಳಲ್ಲಿ ಅನುಕ್ರಮವಾಗಿ ಕೇಶವ, ನಾರಾಯಣ, ಮಾಧವ, ಗೋವಿಂದ, ವಿಷ್ಣು, ಮಧುಸೂದನ, ತ್ರಿವಿಕ್ರಮ, ವಾಮನ, ಶ್ರೀಧರ, ಹೃಷೀಕೇಶ, ಪದ್ಮನಾಭ, ದಾಮೋದರ – ಎಂಬ ನಾಮಗಳಿಂದ ನ್ಯಾಸಮಾಡಬೇಕು.

ಅವ್ಯಾದಜೋಽಂಘ್ರಿಮಣಿಮಾಂಸ್ತವ ಜಾನ್ವಥೋರೂ
ಯಜ್ಞೋಽಚ್ಯುತಃ ಕಟಿತಟಂ ಜಠರಂ ಹಯಾಸ್ಯಃ ।
ಹೃತ್ಕೇಶವಸ್ತ್ವದುರ ಈಶ ಇನಸ್ತು ಕಂಠಂ
ವಿಷ್ಣುರ್ಭುಜಂ ಮುಖಮುರುಕ್ರಮ ಈಶ್ವರಃ ಕಮ್ ॥ ೨೨ ॥

ಚಕ್ರ್ಯಗ್ರತಃ ಸಹಗದೋ ಹರಿರಸ್ತು ಪಶ್ಚಾ-
ತ್ತ್ವತ್ಪಾರ್ಶ್ವಯೋರ್ಧನುರಸೀ ಮಧುಹಾಜನಶ್ಚ ।
ಕೋಣೇಷು ಶಂಖ ಉರುಗಾಯ ಉಪರ್ಯುಪೇಂದ್ರ-
ಸ್ತಾರ್ಕ್ಷ್ಯಃ ಕ್ಷಿತೌ ಹಲಧರಃ ಪುರುಷಃ ಸಮಂತಾತ್ ॥ ೨೩ ॥

ಇಂದ್ರಿಯಾಣಿ ಹೃಷೀಕೇಶಃ ಪ್ರಾಣಾನ್ನಾರಾಯಣೋಽವತು ।
ಶ್ವೇತದ್ವೀಪಪತಿಶ್ಚಿತ್ತಂ ಮನೋ ಯೋಗೇಶ್ವರೋಽವತು ॥ ೨೪ ॥

ಪೃಶ್ನಿಗರ್ಭಸ್ತು ತೇ ಬುದ್ಧಿಮಾತ್ಮಾನಂ ಭಗವಾನ್ಪರಃ ।
ಕ್ರೀಡಂತಂ ಪಾತು ಗೋವಿಂದಃ ಶಯಾನಂ ಪಾತು ಮಾಧವಃ ॥ ೨೫ ॥

ವ್ರಜಂತಮವ್ಯಾದ್ವೈಕುಂಠ ಆಸೀನಂ ತ್ವಾಂ ಶ್ರಿಯಃ ಪತಿಃ ।
ಭುಂಜಾನಂ ಯಜ್ಞಭುಕ್ಪಾತು ಸರ್ವಗ್ರಹಭಯಂಕರಃ ॥ ೨೬ ॥

ಡಾಕಿನ್ಯೋ ಯಾತುಧಾನ್ಯಶ್ಚ ಕುಷ್ಮಾಂಡಾ ಯೇಽರ್ಭಕಗ್ರಹಾಃ ।
ಭೂತಪ್ರೇತಪಿಶಾಚಾಶ್ಚ ಯಕ್ಷರಕ್ಷೋವಿನಾಯಕಾಃ ॥ ೨೭ ॥

ಕೋಟರಾ ರೇವತೀ ಜ್ಯೇಷ್ಠಾ ಪೂತನಾ ಮಾತೃಕಾದಯಃ ।
ಉನ್ಮಾದಾ ಯೇ ಹ್ಯಪಸ್ಮಾರಾ ದೇಹಪ್ರಾಣೇಂದ್ರಿಯದ್ರುಹಃ ॥ ೨೮ ॥

ಸ್ವಪ್ನದೃಷ್ಟಾ ಮಹೋತ್ಪಾತಾ ವೃದ್ಧಬಾಲಗ್ರಹಾಶ್ಚ ಯೇ ।
ಸರ್ವೇ ನಶ್ಯಂತು ತೇ ವಿಷ್ಣೋರ್ನಾಮಗ್ರಹಣಭೀರವಃ ॥ ೨೯ ॥

ಶ್ರೀಶುಕ ಉವಾಚ

ಇತಿ ಪ್ರಣಯಬದ್ಧಾಭಿರ್ಗೋಪೀಭಿಃ ಕೃತರಕ್ಷಣಮ್ ।
ಪಾಯಯಿತ್ವಾ ಸ್ತನಂ ಮಾತಾ ಸಂನ್ಯವೇಶಯದಾತ್ಮಜಮ್ ॥ ೩೦ ॥

ತಾವನ್ನಂದಾದಯೋ ಗೋಪಾ ಮಥುರಾಯಾ ವ್ರಜಂ ಗತಾಃ ।
ವಿಲೋಕ್ಯ ಪೂತನಾದೇಹಂ ಬಭೂವುರತಿವಿಸ್ಮಿತಾಃ ॥ ೩೧ ॥

ನೂನಂ ಬತರ್ಷಿಃ ಸಂಜಾತೋ ಯೋಗೇಶೋ ವಾ ಸಮಾಸ ಸಃ ।
ಸ ಏವ ದೃಷ್ಟೋ ಹ್ಯುತ್ಪಾತೋ ಯದಾಹಾನಕದುಂದುಭಿಃ ॥ ೩೨ ॥

ಅಜನಾದ ಭಗವಂತನು ನಿನ್ನ ಕಾಲುಗಳನ್ನೂ ರಕ್ಷಿಸಲಿ. ಮಣಿಮಂತನು ನಿನ್ನ ಮೊಣಕಾಲುಗಳನ್ನು ರಕ್ಷಿಸಲಿ. ಯಜ್ಞಪುರುಷನು ತೊಡೆಗಳನ್ನೂ, ಅಚ್ಯುತನು ಸೊಂಟವನ್ನೂ, ಹಯಗ್ರೀವನು ಹೊಟ್ಟೆಯನ್ನೂ, ಕೇಶವನು ಹೃದಯವನ್ನೂ, ಈಶನು ವಕ್ಷಸ್ಥಳವನ್ನೂ, ಸೂರ್ಯನು ಕಂಠವನ್ನೂ, ವಿಷ್ಣುವು ಬಾಹುಗಳನ್ನೂ, ಉರುಕ್ರಮನು ಮುಖವನ್ನೂ, ಈಶ್ವರನು ಶಿರಸ್ಸನ್ನೂ ರಕ್ಷಿಸಲಿ. ॥ ೨೨ ॥ ಚಕ್ರಿಯು ನಿನ್ನ ಮುಂಭಾಗವನ್ನು ರಕ್ಷಿಸಲಿ. ಗದಾಧರನು ನಿನ್ನ ಹಿಂಭಾಗವನ್ನೂ, ಧನುಸ್ಸನ್ನೂ, ಖಡ್ಗವನ್ನೂ ಧರಿಸಿದ ಭಗವಾನ್ ಮಧುಸೂದನನೂ, ಅಜನೂ ಎರಡೂ ಪಾರ್ಶ್ವಗಳನ್ನೂ, ಶಂಖಧರನಾದ ಉರುಗಾಯನು ನಾಲ್ಕು ಮೂಲೆಗಳನ್ನೂ, ಉಪೇಂದ್ರನು ಮೇಲೆಯೂ, ಗರುಡನು ಪೃಥ್ವಿಯ ಮೇಲೆಯೂ, ಭಗವಾನ್ ಪರಮಪುರುಷನಾದ ಹಲಧರನು ಎಲ್ಲ ಕಡೆಯಿಂದಲೂ ರಕ್ಷಿಸಲಿ. ॥ ೨೩ ॥ ಹೃಷೀಕೇಶನು ನಿನ್ನ ಇಂದ್ರಿಯಗಳನ್ನೂ ರಕ್ಷಿಸಲಿ. ನಾರಾಯಣನು ಪ್ರಾಣಗಳನ್ನು ರಕ್ಷಿಸಲಿ. ಚಿತ್ತವನ್ನು ಶ್ವೇತದ್ವೀಪದ ಒಡೆಯನು ರಕ್ಷಿಸಲಿ. ಯೋಗೇಶ್ವರನು ಮನಸ್ಸನ್ನು ರಕ್ಷಿಸಲಿ. ॥ ೨೪ ॥ ಪೃಶ್ನಿಗರ್ಭನು ನಿನ್ನ ಬುದ್ಧಿಯನ್ನೂ, ನಿನ್ನ ಅಹಂಕಾರವನ್ನು ಭಗವಂತನಾದ ಪರಮಾತ್ಮನು ರಕ್ಷಿಸಲಿ. ಆಟವಾಡುತ್ತಿರುವಾಗ ಗೋವಿಂದನು ರಕ್ಷಿಸಲಿ. ಮಲಗಿರುವಾಗ ಮಾಧವನು ರಕ್ಷಿಸಲಿ. ॥ ೨೫ ॥ ನಡೆಯುವಾಗ ಭಗವಾನ್ ವೈಕುಂಠನೂ, ಕುಳಿತಿರುವಾಗ ಭಗವಾನ್ ಶ್ರೀಪತಿಯು ನಿನ್ನನ್ನು ರಕ್ಷಿಸಲಿ. ಸಮಸ್ತ ದುಷ್ಟಗ್ರಹಗಳಿಗೆ ಭಯವನ್ನು ಉಂಟುಮಾಡುವ ಯಜ್ಞಭುಜನು ಊಟಮಾಡುವಾಗ ನಿನ್ನನ್ನು ರಕ್ಷಿಸಲಿ. ॥ ೨೬ ॥ ಡಾಕಿನೀ, ಯಾತು ಧಾನಾ, ಕೂಷ್ಮಾಂಡಾ ಮುಂತಾದ ಬಾಲಗ್ರಹರು : ಭೂತ, ಪ್ರೇತ, ಪಿಶಾಚ, ಯಕ್ಷ, ರಾಕ್ಷಸ, ವಿನಾಯಕ, ಕೋಟರಾ, ರೇವತೀ, ಜ್ಯೇಷ್ಠಾ, ಪೂತನಾ, ಮಾತೃಕಾ ಇವೇ ಮೊದಲಾದವುಗಳು ಶರೀರ, ಪ್ರಾಣ, ಇಂದ್ರಿಯಗಳನ್ನು ನಾಶಪಡಿಸುವಂತಹ ಉನ್ಮಾದ (ಹುಚ್ಚುತನ), ಅಪಸ್ಮಾರ (ಮೂರ್ಛೆ) ಮುಂತಾದ ರೋಗಗಳೂ ಸ್ವಪ್ನದಲ್ಲಿ ಕಾಣಿಸಿಕೊಳ್ಳುವ ಮಹಾ ಉತ್ಪಾತಗಳೂ, ವೃದ್ಧಗ್ರಹ ಬಾಲಗ್ರಹ ಮುಂತಾದವುಗಳೆಲ್ಲ ಅನಿಷ್ಟಗಳು ಭಗವಾನ್ ವಿಷ್ಣುವಿನ ನಾಮೋಚ್ಚಾರಣೆಯಿಂದ ಭಯಗೊಂಡು ನಾಶವಾಗಿ ಹೋಗಲಿ. ॥ ೨೭-೨೯ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ! ಈ ಪ್ರಕಾರವಾಗಿ ಗೋಪಿಯರು ಪ್ರೇಮಪಾಶಕ್ಕೆ ಬಂಧಿತರಾಗಿ ಭಗವಾನ್ ಶ್ರೀಕೃಷ್ಣನಿಗೆ ರಕ್ಷೆಯನ್ನಿಟ್ಟರು. ತಾಯಿ ಯಶೋದೆಯು ತನ್ನ ಮಗುವಿಗೆ ಹಾಲುಣಿಸಿ ತೊಟ್ಟಿಲಲ್ಲಿ ಮಲಗಿಸಿದಳು. ॥ ೩೦ ॥ ಇದೇ ಸಮಯಕ್ಕೆ ನಂದಗೋಪನೂ ಅವನ ಸಂಗಡಿಗರೂ ಮಥುರೆಯಿಂದ ಗೋಕುಲಕ್ಕೆ ಬಂದು ತಲುಪಿದರು. ಅವರು ಪೂತನೆಯ ಭಯಂಕರ ಶರೀರವನ್ನು ನೋಡಿ ಆಶ್ಚರ್ಯಚಕಿತರಾದರು. ॥ ೩೧ ॥ ಇದು ನಿಶ್ಚಯವಾಗಿಯೂ ಆಶ್ಚರ್ಯದ ಸಂಗತಿಯಾಗಿದೆ. ಖಂಡಿತವಾಗಿಯೂ ವಸುದೇವನ ರೂಪದಲ್ಲಿ ಯಾರೋ ಋಷಿಯೇ ಹುಟ್ಟಿರಬೇಕು. ಅಥವಾ ವಸುದೇವನು ಹಿಂದಿನ ಜನ್ಮದಲ್ಲಿ ಯಾರೋ ಯೋಗೇಶ್ವರನಾಗಿರುವ ಸಂಭವವೂ ಇದೆ. ಏಕೆಂದರೆ, ಅವನು ಹೇಳಿದಂತೆಯೇ ಇಲ್ಲಿ ಉತ್ಪಾತವನ್ನು ನೋಡುತ್ತಿದ್ದೇವೆ. ॥ ೩೨ ॥

ಕಲೇವರಂ ಪರಶುಭಿಶ್ಛಿತ್ತ್ವಾ ತತ್ತೇ ವ್ರಜೌಕಸಃ ।
ದೂರೇ ಕ್ಷಿಪ್ತ್ವಾವಯವಶೋ ನ್ಯದಹನ್ಕಾಷ್ಠಧಿಷ್ಠಿತಮ್ ॥ ೩೩ ॥

ದಹ್ಯಮಾನಸ್ಯ ದೇಹಸ್ಯ ಧೂಮಶ್ಚಾಗುರುಸೌರಭಃ ।
ಉತ್ಥಿತಃ ಕೃಷ್ಣನಿರ್ಭುಕ್ತಸಪದ್ಯಾಹತಪಾಪ್ಮನಃ ॥ ೩೪ ॥

ಪೂತನಾ ಲೋಕಬಾಲಘ್ನೀ ರಾಕ್ಷಸೀ ರುಧಿರಾಶನಾ ।
ಜಿಘಾಂಸಯಾಪಿ ಹರಯೇ ಸ್ತನಂ ದತ್ತ್ವಾಽಽಪ ಸದ್ಗತಿಮ್ ॥ ೩೫ ॥

ಕಿಂ ಪುನಃ ಶ್ರದ್ಧಯಾ ಭಕ್ತ್ಯಾ ಕೃಷ್ಣಾಯ ಪರಮಾತ್ಮನೇ ।
ಯಚ್ಛನ್ಪ್ರಿಯತಮಂ ಕಿಂ ನು ರಕ್ತಾಸ್ತನ್ಮಾತರೋ ಯಥಾ ॥ ೩೬ ॥

ಪದ್ಭ್ಯಾಂ ಭಕ್ತಹೃದಿಸ್ಥಾಭ್ಯಾಂ ವಂದ್ಯಾಭ್ಯಾಂ ಲೋಕವಂದಿತೈಃ ।
ಅಂಗಂ ಯಸ್ಯಾಃ ಸಮಾಕ್ರಮ್ಯ ಭಗವಾನಪಿಬತ್ಸ್ತನಮ್ ॥ ೩೭ ॥

ಯಾತುಧಾನ್ಯಪಿ ಸಾ ಸ್ವರ್ಗಮವಾಪ ಜನನೀಗತಿಮ್ ।
ಕೃಷ್ಣಭುಕ್ತಸ್ತನಕ್ಷೀರಾಃ ಕಿಮು ಗಾವೋ ನು ಮಾತರಃ ॥ ೩೮ ॥

ಪಯಾಂಸಿ ಯಾಸಾಮಪಿಬತ್ಪುತ್ರಸ್ನೇಹಸ್ನುತಾನ್ಯಲಮ್ ।
ಭಗವಾನ್ದೇವಕೀಪುತ್ರಃ ಕೈವಲ್ಯಾದ್ಯಖಿಲಪ್ರದಃ ॥ ೩೯ ॥

ತಾಸಾಮವಿರತಂ ಕೃಷ್ಣೇ ಕುರ್ವತೀನಾಂ ಸುತೇಕ್ಷಣಮ್ ।
ನ ಪುನಃ ಕಲ್ಪತೇ ರಾಜನ್ಸಂಸಾರೋಽಜ್ಞಾನಸಂಭವಃ ॥ ೪೦ ॥

ಕಟಧೂಮಸ್ಯ ಸೌರಭ್ಯಮವಘ್ರಾಯ ವ್ರಜೌಕಸಃ ।
ಕಿಮಿದಂ ಕುತ ಏವೇತಿ ವದಂತೋ ವ್ರಜಮಾಯಯುಃ ॥ ೪೧ ॥

ತೇ ತತ್ರ ವರ್ಣಿತಂ ಗೋಪೈಃ ಪೂತನಾಗಮನಾದಿಕಮ್ ।
ಶ್ರುತ್ವಾ ತನ್ನಿಧನಂ ಸ್ವಸ್ತಿ ಶಿಶೋಶ್ಚಾಸನ್ಸುವಿಸ್ಮಿತಾಃ ॥ ೪೨ ॥

ಅಷ್ಟರಲ್ಲಿ ವ್ರಜವಾಸಿಗಳೆಲ್ಲ ಸೇರಿ ಕೊಡಲಿಯಿಂದ ಪೂತನೆಯ ಶರೀರವನ್ನು ತುಂಡು-ತುಂಡಾಗಿಸಿ, ಗೋಕುಲದಿಂದ ದೂರಕ್ಕೆ ಕೊಂಡುಹೋಗಿ ಕಟ್ಟಿಗೆಗಳ ಮೇಲಿರಿಸಿ ಸುಟ್ಟುಬಿಟ್ಟರು. ॥ ೩೩ ॥ ಆಕೆಯ ಶರೀರವು ಹೊತ್ತಿ ಉರಿಯತೊಡಗಿದಾಗ ಅದರಿಂದ ಅಗರುವಿನ ಸುವಾಸನೆಹೊಂದಿದ ಹೊಗೆಯು ಹೊರಹೊಮ್ಮಿತು. ಇದರಲ್ಲಿ ಆಶ್ಚರ್ಯವೇನಿದೆ? ಭಗವಂತನೇ ಅವಳ ಸ್ತನ್ಯವನ್ನು ಕುಡಿದ ಕಾರಣ ಅವಳಲ್ಲಿದ್ದ ಪಾಪಗಳೆಲ್ಲವೂ ಕ್ಷಣಮಾತ್ರದಲ್ಲಿ ನಾಶವಾಗಿ ಹೋಗಿದ್ದವು. ॥ ೩೪ ॥ ಪೂತನೆಯು ಓರ್ವ ರಾಕ್ಷಸಿಯಾಗಿದ್ದಳು. ಜನರ ಮಕ್ಕಳನ್ನು ಕೊಲ್ಲುವುದು, ಅವರ ರಕ್ತ ಕುಡಿಯುವುದು ಇದೇ ಅವಳ ಕೆಲಸವಾಗಿತ್ತು. ಭಗವಂತನನ್ನೂ ಕೊಂದುಹಾಕಲೆಂದೇ ಅವಳು ಸ್ತನ್ಯವನ್ನು ಕುಡಿಸಿದ್ದಳು. ಹೀಗಿದ್ದರೂ ಅವಳಿಗೆ ಸತ್ಪುರುಷರಿಗೆ ಸಿಗುವ ಪರಮಗತಿಯು ದೊರೆಯಿತು.॥ ೩೫ ॥ ಇಂತಹ ಸ್ಥಿತಿಯಲ್ಲಿ ಪರಬ್ರಹ್ಮ ಪರಮಾತ್ಮ ಭಗವಾನ್ ಶ್ರೀಕೃಷ್ಣನನ್ನು ಶ್ರದ್ಧಾಭಕ್ತಿಯಿಂದ ತಾಯಿಯಂತೆ ಅನುರಾಗಪೂರ್ವಕ ತನಗೆ ಅತಿಪ್ರಿಯವಾದ ವಸ್ತುವನ್ನು ಹಾಗೂ ಅವನಿಗೆ ಪ್ರಿಯವಾಗುವ ವಸ್ತುವನ್ನು ಸಮರ್ಪಿಸುವವನ ಕುರಿತು ಹೇಳುವುದೇನಿದೆ? ॥ ೩೬ ॥ ಎಲ್ಲರಿಗೆ ವಂದನೀಯರಾದ ಬ್ರಹ್ಮರುದ್ರರೇ ಆದಿ ದೇವತೆಗಳಿಂದ ವಂದಿತವಾದ ಭಗವಂತನ ಚರಣಕಮಲಗಳು ಭಕ್ತರ ಹೃದಯದ ಧನವಾಗಿದೆ. ಅಂತಹ ಚರಣಗಳಿಂದ ಭಗವಂತನು ಪೂತನೆಯ ಶರೀರವನ್ನು ಒತ್ತಿ ಅವಳ ಸ್ತನ್ಯವನ್ನು ಪಾನಮಾಡಿದ್ದನು. ॥ ೩೭ ॥ ಪೂತನೆಯು ರಾಕ್ಷಸಿಯೇ ಆಗಿದ್ದರೂ ಆಕೆಗೆ – ತಾಯಿಗೆ ಸಿಗಬೇಕಾದ ಉತ್ತಮೋತ್ತಮ ಗತಿಯು ಪ್ರಾಪ್ತವಾಯಿತು ಎಂದಾಗ ಯಾರ ಸ್ತನಗಳ ಹಾಲನ್ನು ಭಗವಂತನು ಅತಿ ಪ್ರೇಮದಿಂದ ಕುಡಿದನೋ, ಅಂತಹ ಗೋವುಗಳ ಮತ್ತು ಮಾತೆಯರ ಕುರಿತು ಹೇಳುವುದೇನಿದೆ? ॥ ೩೮ ॥ ಪರೀಕ್ಷಿತನೇ! ದೇವಕೀನಂದನ ಭಗವಂತನು ಕೈವಲ್ಯವೇ ಮುಂತಾದ ಎಲ್ಲ ರೀತಿಯ ಮುಕ್ತಿಯನ್ನು ಹಾಗೂ ಎಲ್ಲವನ್ನೂ ಕೊಡುವವನಾಗಿದ್ದಾನೆ. ಭಗವಂತನ ಕುರಿತು ಪುತ್ರಭಾವ ಇರುವುದರಿಂದ ವಾತ್ಸಲ್ಯ-ಸ್ನೇಹದ ಹೆಚ್ಚಳದಿಂದ ಸ್ವಯಂ ಸೋರುತ್ತಿರುವ ಗೋಪಿಯರ ಮತ್ತು ಗೋವುಗಳ ಹಾಲನ್ನು ಆ ಭಗವಂತನು ಹೊಟ್ಟೆತುಂಬಾ ಕುಡಿದನು. ॥ ೩೯ ॥ ಪರೀಕ್ಷಿದ್ರಾಜನೇ! ಆ ಗೋವುಗಳು ಮತ್ತು ಗೋಪಿಯರು ನಿತ್ಯ-ನಿರಂತರವಾಗಿ ಭಗವಾನ್ ಶ್ರೀಕೃಷ್ಣನನ್ನು ತನ್ನ ಪುತ್ರನೆಂದೇ ತಿಳಿಯುತ್ತಿದ್ದರು. ಹಾಗಿರುವಾಗ ಅವರು ಜನ್ಮ-ಮೃತ್ಯುರೂಪವಾದ ಸಂಸಾರಚಕ್ರದಲ್ಲಿ ಎಂದಿಗೂ ಬೀಳಲಾರರು. ಏಕೆಂದರೆ, ಈ ಸಂಸಾರವಾದರೋ ಅಜ್ಞಾನದಿಂದಲೇ ಇದೆ. ॥ ೪೦ ॥

ನಂದಗೋಪನ ಜೊತೆಯಲ್ಲಿ ಬಂದಿರುವ ವ್ರಜವಾಸಿಗಳು ಚಿತೆಯಿಂದ ಬರುತ್ತಿದ್ದ ಸುಗಂಧಮಯ ಹೊಗೆಯನ್ನು ಆಘ್ರಾಣಿಸುತ್ತಲೇ 'ಇದೇನಿದು?' ಈ ಸುವಾಸನೆಯು ಎಲ್ಲಿಂದ ಬರುತ್ತದೆ ಎಂದು ಹೇಳುತ್ತಾ ವ್ರಜವನ್ನು ಪ್ರವೇಶಿಸಿದರು. ॥ ೪೧ ॥ ಅಲ್ಲಿ ಗೋಪರು ಅವರಿಗೆ ಪೂತನೆಯು ಬಂದಂದಿನಿಂದ ಸಾಯುವವರೆಗಿನ ಎಲ್ಲ ವೃತ್ತಾಂತವನ್ನು ಹೇಳಿದರು. ಅವರೆಲ್ಲರೂ ಪೂತನೆಯ ಮೃತ್ಯು ಮತ್ತು ಶ್ರೀಕೃಷ್ಣನು ಕುಶಲವಾಗಿ ಬದುಕಿರುವ ಮಾತನ್ನು ಕೇಳಿ ತುಂಬಾ ಆಶ್ಚರ್ಯಚಕಿತರಾದರು. ॥ ೪೨ ॥

ನಂದಃ ಸ್ವಪುತ್ರಮಾದಾಯ ಪ್ರೇತ್ಯಾಗತಮುದಾರಧೀಃ ।
ಮೂರ್ಧ್ನ್ಯವಘ್ರಾಯ ಪರಮಾಂ ಮುದಂ ಲೇಭೇ ಕುರೂದ್ವಹ ॥ ೪೩ ॥

ಪರೀಕ್ಷಿತನೇ! ಉದಾರಶಿರೋಮಣಿಯಾದ ನಂದಗೋಪನು ಮೃತ್ಯುಮುಖದಿಂದ ಬಿಡುಗಡೆಹೊಂದಿದ ತನ್ನ ಮುದ್ದು ಕಂದನನ್ನು ತೊಡೆಯಲ್ಲಿಟ್ಟುಕೊಂಡು ಪದೇ-ಪದೇ ಮಗುವಿನ ನೆತ್ತಿಯನ್ನು ಆಘ್ರಾಣಿಸುತ್ತಾ ಮನಸ್ಸಿನಲ್ಲೇ ಬಹಳ ಆನಂದಿತನಾದನು. ॥ ೪೩ ॥

ಯ ಏತತ್ಪೂತನಾಮೋಕ್ಷಂ ಕೃಷ್ಣಸ್ಯಾರ್ಭಕಮದ್ಭುತಮ್ ।
ಶೃಣುಯಾಚ್ಛ್ರದ್ಧಯಾ ಮರ್ತ್ಯೋ ಗೋವಿಂದೇ ಲಭತೇ ರತಿಮ್ ॥ ೪೪ ॥

ಈ ಪೂತನಾಮೋಕ್ಷವು ಭಗವಾನ್ ಶ್ರೀಕೃಷ್ಣನ ಅದ್ಭುತವಾದ ಬಾಲಲೀಲೆಯಾಗಿದೆ. ಇದನ್ನು ಶ್ರದ್ಧೆಯಿಂದ ಶ್ರವಣಿಸುವವನಿಗೆ ಭಗವಾನ್ ಶ್ರೀಕೃಷ್ಣನಲ್ಲಿ ಅನುರಾಗವು ಉಂಟಾಗುವುದು. ॥ ೪೪ ॥

ಆರನೆಯ ಅಧ್ಯಾಯವು ಮುಗಿಯಿತು. ॥ ೬ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮಸ್ಕಂಧೇ ಪೂರ್ವಾರ್ಧೇ ಷಷ್ಠೋಽಧ್ಯಾಯಃ ॥ ೬ ॥

ಏಳನೆಯ ಅಧ್ಯಾಯ

ಶಕಟಾಸುರ ಭಂಜನ ಮತ್ತು ತೃಣಾವರ್ತನ ಉದ್ಧಾರ

ರಾಜೋವಾಚ

ಯೇನ ಯೇನಾವತಾರೇಣ ಭಗವಾನ್ ಹರಿರೀಶ್ವರಃ ।
ಕರೋತಿ ಕರ್ಣರಮ್ಯಾಣಿ ಮನೋಜ್ಞಾನಿ ಚ ನಃ ಪ್ರಭೋ ॥ ೧ ॥

ಪರೀಕ್ಷಿದ್ರಾಜನು ಕೇಳುತ್ತಾನೆ – ಪ್ರಭುವೇ! ಸರ್ವಶಕ್ತಿಮಂತನಾದ ಭಗವಾನ್ ಶ್ರೀಹರಿಯು ಅನೇಕ ಅವತಾರಗಳನ್ನೆತ್ತಿ ಅತ್ಯಂತ ಸುಂದರವಾದ ಮತ್ತು ಕರ್ಣಾನಂದಕರವಾದ ಲೀಲೆಗಳನ್ನು ಮಾಡುತ್ತಾನೆ. ಅವೆಲ್ಲವೂ ನನ್ನ ಮನಸ್ಸಿಗೆ ಬಹಳ ಆಪ್ಯಾಯಮಾನವನ್ನುಂಟುಮಾಡುತ್ತವೆ. ॥ ೧ ॥ ಅವುಗಳ ಶ್ರವಣಮಾತ್ರದಿಂದ ಅಪ್ರುಗಳು ದೂರವಾಗುತ್ತವೆ ಮತ್ತು ವಿವಿಧ ವಿಷಯಗಳ ತೃಷ್ಣೆಯು ತೊರಟುಹೋಗುತ್ತದೆ. ಮನುಷ್ಯನ ಅಂತಃಕರಣವು ಬಹು ಬೇಗನೇ ಶುದ್ಧವಾಗಿ ಹೋಗುತ್ತದೆ. ಭಗವಂತನ ಚರಣಗಳಲ್ಲಿ ಭಕ್ತಿಯೂ, ಅವನ ಭಕ್ತರಲ್ಲಿ ಪ್ರೀತಿಯೂ ಉಂಟಾಗುತ್ತದೆ. ತಾವು ನನ್ನನ್ನು ಅವುಗಳ ಶ್ರವಣಕ್ಕೆ ಅಧಿಕಾರಿಯೆಂದು ತಿಳಿಯುತ್ತಿದ್ದರೆ ಭಗವಂತನ ಆ ಮನೋಹರವಾದ ಲೀಲೆಗಳನ್ನು ವರ್ಣಿಸಿರಿ. ॥ ೨ ॥ ಭಗವಾನ್ ಶ್ರೀಕೃಷ್ಣನು ಮನುಷ್ಯಲೋಕದಲ್ಲಿ ಅವತರಿಸಿ ಮನುಷ್ಯರ ಸ್ವಭಾವಗುಣಗಳನ್ನು ಅನುಸರಿಸುತ್ತಾ ಮಾಡಿದ ಬಾಲಲೀಲೆಗಳು ಪರಮಾದ್ಭುತವಾದವುಗಳು. ಅದಕ್ಕಾಗಿ ಈಗ ಅವನ ಇತರ ಬಾಲಲೀಲೆಗಳನ್ನೂ ವರ್ಣಿಸಿರಿ. ॥ ೩ ॥

ಯಚ್ಛೃಣ್ವತೋಽಪೈತ್ಯರತಿರ್ವಿತೃಷ್ಣಾ
ಸತ್ತ್ವಂ ಚ ಶುದ್ಧ್ಯತ್ಯಚಿರೇಣ ಪುಂಸಃ ।
ಭಕ್ತಿರ್ಹರೌ ತತ್ಪುರುಷೇ ಚ ಸಖ್ಯಂ
ತದೇವ ಹಾರಂ ವದ ಮನ್ಯಸೇ ಚೇತ್ ॥ ೨ ॥

ಅಥಾನ್ಯದಪಿ ಕೃಷ್ಣಸ್ಯ ತೋಕಾಚರಿತಮದ್ಭುತಮ್ ।
ಮಾನುಷಂ ಲೋಕಮಾಸಾದ್ಯ ತಜ್ಜಾತಿಮನುರುಂಧತಃ ॥ ೩ ॥

ಶ್ರೀಶುಕ ಉವಾಚ

ಕದಾಚಿದೌತ್ಥಾನಿಕಕೌತುಕಾಪ್ಲವೇ
ಜನ್ಮರ್ಕ್ಷಯೋಗೇ ಸಮವೇತಯೋಷಿತಾಮ್ ।
ವಾದಿತ್ರಗೀತದ್ವಿಜಮಂತ್ರವಾಚಕೈ-
ಶ್ಚಕಾರ ಸೂನೋರಭಿಷೇಚನಂ ಸತೀ ॥ ೪ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ! ಮುದ್ದುಕೃಷ್ಣನು ಮೂರು ತಿಂಗಳಿಗೆ ಸರಿಯಾಗಿ ಮಗುಚಲು ಬಿದ್ದನು. ಅಂದಿಗೆ ಸರಿಯಾಗಿ ಅವನ ಜನ್ಮನಕ್ಷತ್ರ ರೋಹಿಣಿ ನಕ್ಷತ್ರದ ಯೋಗವಿತ್ತು. ಮಗುವಿಗೆ ನೀರೆರೆದು ಹಬ್ಬವನ್ನಾಚರಿಸುವ ಸಂಭ್ರಮ. ಹಲವಾರು ಗೋಪಿಯರು ನಂದಗೋಪನ ಮನೆಗೆ ಬಂದರು. ಕೆಲವರು ಸಂಪ್ರದಾಯದ ಹಾಡುಗಳನ್ನು ಹಾಡುತ್ತಿದ್ದರು. ಮಂಗಳ ವಾದ್ಯಗಳು ಮೊಳಗುತ್ತಿದ್ದುವು. ಗೋಪಿಯರ ಮಧ್ಯದಲ್ಲಿದ್ದ ಯಶೋದೆಯು ಮುದ್ದುಕೃಷ್ಣನಿಗೆ ನೀರೆರೆದಳು. ಬ್ರಾಹ್ಮಣರು ಮಂತ್ರಗಳನ್ನು ಹೇಳುತ್ತಾ ಆಶೀರ್ವದಿಸುತ್ತಿದ್ದರು. ॥ ೪ ॥

ನಂದಸ್ಯ ಪತ್ನೀ ಕೃತಮಜ್ಜನಾದಿಕಂ
ವಿಪ್ರೈಃ ಕೃತಸ್ವಸ್ತ್ಯಯನಂ ಸುಪೂಜಿತೈಃ ।
ಅನ್ನಾದ್ಯವಾಸಸ್ಸ್ರಗಭೀಷ್ಟಧೇನುಭಿಃ
ಸಂಜಾತನಿದ್ರಾಕ್ಷಮಶೀಶಯಚ್ಛನೈಃ ॥ ೫ ॥

ನಂದ ರಾಣಿಯಾದ ಯಶೋದಾ ದೇವಿಯು ಬ್ರಾಹ್ಮಣರನ್ನು ಪೂಜಿಸಿ ಸಮ್ಮಾನಿಸಿದಳು. ಅವರಿಗೆ ಅನ್ನ, ವಸ್ತ್ರ, ಮಾಲೆ, ಗೋವುಗಳು ಮುಂತಾದ ಅವರ ಅಭೀಷ್ಟವಸ್ತುಗಳನ್ನು ದಾನಮಾಡಿದಳು. ಯಶೋದೆಯು ಆ ಬ್ರಾಹ್ಮಣರಿಂದ ಸ್ವಸ್ತಿವಾಚನ ಮಾಡಿಸಿ ನೀರೆರೆಯುವುದನ್ನು ಮುಗಿಸಿದಾಗ ಮುದ್ದುಕೃಷ್ಣನಿಗೆ ಕಣ್ಣುಗಳಲ್ಲಿ ನಿದ್ದೆ ತುಂಬಿದೆ ಎಂದು ನೋಡಿ ನಿಧಾನವಾಗಿ ಶಯ್ಯೆಯಲ್ಲಿ ಮಗುವನ್ನು ಮಲಗಿಸಿದಳು. ॥ ೫ ॥

ಔತ್ಥಾನಿಕೌತ್ಸುಕ್ಯಮನಾ ಮನಸ್ವಿನೀ
ಸಮಾಗತಾನ್ಪೂಜಯತೀ ವ್ರಜೌಕಸಃ ।
ನೈವಾಶೃಣೋದ್ವೈ ರುದಿತಂ ಸುತಸ್ಯ ಸಾ
ರುದನ್ ಸ್ತನಾರ್ಥೀ ಚರಣಾವುದಕ್ಷಿಪತ್ ॥ ೬ ॥

ಸ್ವಲ್ಪ ಸಮಯದಲ್ಲಿ ಶ್ಯಾಮಸುಂದರನು ಕಣ್ಣುತೆರೆದು ಸ್ತನ್ಯಪಾನಕ್ಕಾಗಿ ಅಳತೊಡಗಿದನು. ಆಗ ಮನಸ್ವಿನಿಯಾದ ಯಶೋದೆಯು ಉತ್ಸವಕ್ಕೆ ಬಂದಿರುವ ವ್ರಜವಾಸಿಗಳ ಸ್ವಾಗತ-ಸತ್ಕಾರದಲ್ಲಿ ತನ್ಮಯಳಾಗಿದ್ದಳು. ಇದರಿಂದ ಆಕೆಗೆ ಶ್ರೀಕೃಷ್ಣನ ಅಳುವು ಕೇಳಿಸಲಿಲ್ಲ. ಶ್ರೀಕೃಷ್ಣನು ಅಳುತ್ತಾ ಅಳುತ್ತಾ ಕಾಲುಗಳನ್ನು ಬಡಿಯತೊಡಗಿದನು. ॥ ೬ ॥

ಅಧಃ ಶಯಾನಸ್ಯ ಶಿಶೋರನೋಽಲ್ಪಕ-
ಪ್ರವಾಲಮೃದ್ವಂಘ್ರಿಹತಂ ವ್ಯವರ್ತತ ।
ವಿಧ್ವಸ್ತನಾನಾರಸಕುಪ್ಯಭಾಜನಂ
ವ್ಯತ್ಯಸ್ತಚಕ್ರಾಕ್ಷವಿಭಿನ್ನಕೂಬರಮ್ ॥ ೭ ॥

ಬಾಲಕೃಷ್ಣನು ಒಂದು ಬಂಡಿಯ ಕೆಳಗೆ ಮಲಗಿದ್ದನು. ಅವನ ಕಾಲುಗಳು ಎಳೆ ಚಿಗುರಿನಂತೆ ತುಂಬಾ ಕೋಮಲವಾಗಿದ್ದು ಮನೋಹರವಾಗಿದ್ದವು. ಆದರೆ ಆ ಎಳೆಪಾದಗಳು ಆ ವಿಶಾಲವಾದ ಬಂಡಿಗೆ ತಾಗುತ್ತಲೇ ಅದು ತಲೆಕೆಳಗಾಯಿತು.* ಆ ಬಂಡಿಯಲ್ಲಿ ಹಾಲು-ಮೊಸರು ಮುಂತಾದ ಅನೇಕ ರಸಗಳಿಂದ ತುಂಬಿದ ಮಡಕೆಗಳನ್ನೂ, ಇತರ ಪಾತ್ರೆಗಳನ್ನೂ ಇಟ್ಟಿದ್ದರು. ಅವೆಲ್ಲವೂ ಬಿದ್ದು ಒಡೆದುಹೋದವು. ಗಾಡಿಯ ಗಾಲಿಗಳು, ಅಚ್ಚುಮರ, ನೊಗ ಇತ್ಯಾದಿಗಳೆಲ್ಲ ಮುರಿದು ಚೂರು ನೂರಾದವು. ॥ ೭ ॥

ದೃಷ್ಟ್ವಾ ಯಶೋದಾಪ್ರಮುಖಾ ವ್ರಜಸ್ತ್ರಿಯ
ಔತ್ಥಾನಿಕೇ ಕರ್ಮಣಿ ಯಾಃ ಸಮಾಗತಾಃ ।
ನಂದಾದಯಶ್ಚಾದ್ಭುತದರ್ಶನಾಕುಲಾಃ
ಕಥಂ ಸ್ವಯಂ ವೈ ಶಕಟಂ ವಿಪರ್ಯಗಾತ್ ॥ ೮ ॥

ಮುದ್ದುಕೃಷ್ಣನು ಮಗ್ಗುಲುಬದಲಿಸಿದ ಆ ಉತ್ಸವದಲ್ಲಿ ಭಾಗವಹಿಸಲು ಬಂದಿದ್ದ ಗೋಪಿಯರು, ಯಶೋದಾ ರೋಹಿಣೀ ನಂದಗೋಪರೂ, ಗೋಪಾಲಕರೆಲ್ಲರೂ ಈ ವಿಚಿತ್ರ ಘಟನೆಯನ್ನು ನೋಡಿ ವ್ಯಾಕುಲಗೊಂಡರು. 'ಇದೇನಾಯಿತು? ಈ ಗಾಡಿಯು ತಾನಾಗಿಯೇ ಹೇಗೆ ಮಗುಚಿಬಿತ್ತು?' ಎಂದು ಪರಸ್ಪರ ಮಾತನಾಡತೊಡಗಿದರು. ॥ ೮ ॥

ಊಚುರವ್ಯವಸಿತಮತೀನ್ಗೋಪಾನ್ಗೋಪೀಶ್ಚ ಬಾಲಕಾಃ ।
ರುದತಾನೇನ ಪಾದೇನ ಕ್ಷಿಪ್ತಮೇತನ್ನ ಸಂಶಯಃ ॥ ೯ ॥

ಅವರು ಇದರ ಕಾರಣವನ್ನು ನಿಶ್ಚಯಿಸದಾದರು. ಅಲ್ಲೇ ಆಡುತ್ತಿದ್ದ ಗೋಪಬಾಲಕರು ಮತ್ತು ಗೋಪಿಯರು ಹೇಳಿದರು – 'ಈ ಮುದ್ದುಕೃಷ್ಣನೇ ಅಳುತ್ತಾ ಅಳುತ್ತಾ ತನ್ನ ಕಾಲಿನಿಂದ ಒದ್ದು ಗಾಡಿಯನ್ನು ತಲೆಕೆಳಗಾಗಿಸಿದನು.' ಇದರಲ್ಲಿ ಸಂದೇಹವೇ ಇಲ್ಲ. ॥ ೯ ॥

ನ ತೇ ಶ್ರದ್ದಧಿರೇ ಗೋಪಾ ಬಾಲಭಾಷಿತಮಿತ್ಯುತ ।
ಅಪ್ರಮೇಯಂ ಬಲಂ ತಸ್ಯ ಬಾಲಕಸ್ಯ ನ ತೇ ವಿದುಃ ॥ ೧೦ ॥

ಆದರೆ ಗೋಪಾಲಕರು ಅದನ್ನು 'ಹುಡುಗರ ಮಾತು' ಎಂದು ತಿಳಿದು ಅದರಲ್ಲಿ ವಿಶ್ವಾಸವಿಡಲಿಲ್ಲ. ಆ ಗೋಪರು ಈ ಬಾಲಕನ ಅನಂತಬಲವನ್ನು ತಿಳಿಯದಿರುವುದು ಸರಿಯೇ ಆಗಿದೆ. ॥ ೧೦ ॥

* ಶಕಟಾಸುರನ ಪೂರ್ವಕಥೆ – ಉತ್ಕಚನೆಂಬುವವನು ಹಿರಣ್ಯಾಕ್ಷನ ಮಗನು. ಇವನು ಮಹಾಬಲಿಷ್ಠನೂ ಸ್ಥೂಲಕಾಯನೂ ಆಗಿದ್ದನು. ಅವನು ಪ್ರಪಂಚ ಸಂಚಾರ ಮಾಡುತ್ತಿದ್ದಾಗ ಒಮ್ಮೆ ಲೋಮಶಮಹರ್ಷಿಗಳ ಆಶ್ರಮಕ್ಕೆ ಬಂದನು. ಋಷಿ-ಮುನಿಗಳ ವಿಷಯದಲ್ಲಿ ಅವನಿಗೆ ತಿರಸ್ಕಾರ ಬುದ್ಧಿಯಿತ್ತು. ರಾಕ್ಷಸಸಹಜವಾದ ಬುದ್ಧಿಯಿಂದ ಅವನು ಆಶ್ರಮದ ಎದುರಿನಲ್ಲಿದ್ದ ವೃಕ್ಷಗಳೆಲ್ಲವನ್ನೂ ಕೀಳತೊಡಗಿದನು. ಲೋಮಶರು ಕುಪಿತರಾಗಿ ಶಪಿಸಿದರು – 'ದುಷ್ಟನೇ! ನೀನು ದೇಹರಹಿತನಾಗು.' ಮರುಕ್ಷಣದಲ್ಲಿಯೇ ಉತ್ಕಚನು ಹಾವಿನ ಪೊರೆಯಂತೆ ಆಗಿಬಿಟ್ಟನು. ಭಯಗ್ರಸ್ತನಾದ ರಾಕ್ಷಸನು ಎಚ್ಚರಗೊಂಡು ಲೋಮಶರ ಕಾಲುಗಳಿಗೆ ಬಿದ್ದು ಶಾಪದ ನಿವಾರಣೆಗಾಗಿ ಬೇಡಿಕೊಂಡನು. ಲೋಮಶರು ಪ್ರಸನ್ನರಾದರು. ಮಹಾತ್ಮರ ಶಾಪವೂ ಕೆಲವು ವೇಳೆ ವರವಾಗಿ ಪರಿಣಮಿಸುತ್ತದೆ. ಪ್ರಸನ್ನರಾದ ಲೋಮಶರು ಹೇಳಿದರು – 'ವೈವಸ್ವತ ಮನ್ವಂತರದಲ್ಲಿ ಶ್ರೀಕೃಷ್ಣನ ಪಾದಸ್ಪರ್ಶದಿಂದ ನೀನು ಮುಕ್ತನಾಗುವೆ.' ಅದೇ ಶಕಟಾಸುರನಾಗಿ ಬಂದು ಮುದ್ದುಕೃಷ್ಣನ ಪಾದಸ್ಪರ್ಶದಿಂದ ಮುಕ್ತನಾದನು.

ರುದಂತಂ ಸುತಮಾದಾಯ ಯಶೋದಾ ಗ್ರಹಶಂಕಿತಾ ।
ಕೃತಸ್ವಸ್ತ್ಯಯನಂ ವಿಪ್ರೈಃ ಸೂಕ್ತೈಃ ಸ್ತನಮಪಾಯಯತ್ ॥ ೧೧ ॥

ಪೂರ್ವವತ್ಸ್ಥಾಪಿತಂ ಗೋಪೈರ್ಬಲಿಭಿಃ ಸಪರಿಚ್ಛದಮ್ ।
ವಿಪ್ರಾ ಹುತ್ವಾರ್ಚಯಾಂಚಕ್ರುರ್ದಧ್ಯಕ್ಷತಕುಶಾಂಬುಭಿಃ ॥ ೧೨ ॥

ಯೇಽಸೂಯಾನೃತದಂಭೇರ್ಷ್ಯಾಹಿಂಸಾಮಾನವಿವರ್ಜಿತಾಃ ।
ನ ತೇಷಾಂ ಸತ್ಯಶೀಲಾನಾಮಾಶಿಷೋ ವಿಫಲಾಃ ಕೃತಾಃ ॥ ೧೩ ॥

ಇತಿ ಬಾಲಕಮಾದಾಯ ಸಾಮರ್ಗ್ಯಜುರುಪಾಕೃತೈಃ ।
ಜಲೈಃ ಪವಿತ್ರೌಷಧಿಭಿರಭಿಷಿಚ್ಯ ದ್ವಿಜೋತ್ತಮೈಃ ॥ ೧೪ ॥

ವಾಚಯಿತ್ವಾ ಸ್ವಸ್ತ್ಯಯನಂ ನಂದಗೋಪಃ ಸಮಾಹಿತಃ ।
ಹುತ್ವಾ ಚಾಗ್ನಿಂ ದ್ವಿಜಾತಿಭ್ಯಃ ಪ್ರಾದಾದನ್ನಂ ಮಹಾಗುಣಮ್ ॥ ೧೫ ॥

ಗಾವಃ ಸರ್ವಗುಣೋಪೇತಾ ವಾಸಃಸ್ರಗ್ರುಕ್ಮಮಾಲಿನೀಃ ।
ಆತ್ಮಜಾಭ್ಯುದಯಾರ್ಥಾಯ ಪ್ರಾದಾತ್ತೇ ಚಾನ್ವಯುಂಜತ ॥ ೧೬ ॥

ವಿಪ್ರಾ ಮಂತ್ರವಿದೋ ಯುಕ್ತಾಸ್ತೈರ್ಯಾಃ ಪ್ರೋಕ್ತಾಸ್ತಥಾಽಽಶಿಷಃ ।
ತಾ ನಿಷ್ಫಲಾ ಭವಿಷ್ಯಂತಿ ನ ಕದಾಚಿದಪಿ ಸ್ಫುಟಮ್ ॥ ೧೭ ॥

ಏಕದಾಽಽರೋಹಮಾರೂಢಂ ಲಾಲಯಂತೀ ಸುತಂ ಸತೀ ।
ಗರಿಮಾಣಂ ಶಿಶೋರ್ವೋಢುಂ ನ ಸೇಹೇ ಗಿರಿಕೂಟವತ್ ॥ ೧೮ ॥

ಭೂಮೌ ನಿಧಾಯ ತಂ ಗೋಪೀ ವಿಸ್ಮಿತಾ ಭಾರಪೀಡಿತಾ ।
ಮಹಾಪುರುಷಮಾದಧ್ಯೌ ಜಗತಾಮಾಸ ಕರ್ಮಸು ॥ ೧೯ ॥

ದೈತ್ಯೋ ನಾಮ್ನಾ ತೃಣಾವರ್ತಃ ಕಂಸಭೃತ್ಯಃ ಪ್ರಣೋದಿತಃ ।
ಚಕ್ರವಾತಸ್ವರೂಪೇಣ ಜಹಾರಾಸೀನಮರ್ಭಕಮ್ ॥ ೨೦ ॥

ಯಶೋದೆಯು ಈ ಘಟನೆಯನ್ನು ಯಾವುದೋ ಗ್ರಹಚೇಷ್ಟೆಯುಂಟಾದುದೆಂದು ಭಾವಿಸಿದಳು. ಆಕೆಯು ಅಳುತ್ತಿದ್ದ ಮುದ್ದು ಕೃಷ್ಣನನ್ನು ತೊಡೆಯಮೇಲೆ ಎತ್ತಿಕೊಂಡು ಸಮಾಧಾನ ಪಡಿಸುತ್ತಾ, ಬ್ರಾಹ್ಮಣರಿಂದ ಮಂತ್ರಪುರಸ್ಸರವಾಗಿ ಸ್ವಸ್ತಿವಾಚನ ಮಾಡಿಸಿ, ಹಾಲುಣಿಸಿದಳು. ॥ ೧೧ ॥ ಬಲಿಷ್ಠರಾದ ಗೋಪರು ಆ ಬಂಡಿಯನ್ನು ಸರಿಪಡಿಸಿದರು. ಮೊದಲಿದ್ದಂತೆ ಸಾಮಗ್ರಿಗಳನ್ನು ಗಾಡಿಯಲ್ಲಿಟ್ಟರು. ಬ್ರಾಹ್ಮಣರು ಅನಿಷ್ಟವಾರಕಗಳಾದ ಹೋಮಗಳನ್ನು ಮಾಡಿ ಭಗವಂತನನ್ನು ಮತ್ತು ಆ ಗಾಡಿಯನ್ನು ಮೊಸರು, ಅಕ್ಷತೆ, ದರ್ಭೆ, ನೀರು ಇತ್ಯಾದಿಗಳಿಂದ ಪೂಜಿಸಿದರು. ॥ ೧೨ ॥

ಯಾರು ಇತರರಲ್ಲಿ ದೋಷಗಳನ್ನು ಹುಡುಕುವುದಿಲ್ಲವೋ, ಸುಳ್ಳುಹೇಳುವುದಿಲ್ಲವೋ, ದಂಭ, ಈರ್ಷೆ, ಹಿಂಸೆ ಇವುಗಳನ್ನು ಮಾಡುವುದಿಲ್ಲವೋ, ದುರಭಿಮಾನ ಶೂನ್ಯರಾಗಿರುವರೋ, ಅಂತಹ ಸತ್ಯಶೀಲ ಬ್ರಾಹ್ಮಣರ ಆಶೀರ್ವಾದವು ಎಂದೂ ನಿಷ್ಫಲವಾಗುವುದಿಲ್ಲ. ॥ ೧೩ ॥ ಹೀಗೆ ಯೋಚಿಸಿದ ನಂದಗೋಪನು ಮಗುವನ್ನು ತೊಡೆಯಮೇಲೆ ಮಲಗಿಸಿಕೊಂಡು ಬ್ರಾಹ್ಮಣರಿಂದ ಋಗ್ಯಜುಸ್ಸಾಮ ಮಂತ್ರಗಳಿಂದ ಅಭಿಮಂತ್ರಿತವಾದ ಮತ್ತು ಔಷಧಿಗಳಿಂದ ಕೂಡಿದ ಪವಿತ್ರಜಲದಿಂದ ಮಗುವಿಗೆ ಅಭಿಷೇಕವನ್ನು ಮಾಡಿಸಿದನು. ॥ ೧೪ ॥ ನಂದಗೋಪನು ಏಕಾಗ್ರಚಿತ್ತನಾಗಿ ಸ್ವಸ್ತಿವಾಚನ ಮತ್ತು ಹವನಮಾಡಿಸಿ ಬ್ರಾಹ್ಮಣರಿಗೆ ಷಡ್ರಸೋಪೇತವಾದ ಭಕ್ಷ್ಯ-ಭೋಜ್ಯಾದಿಗಳಿಂದ ಭೋಜನ ಮಾಡಿಸಿದನು. ॥ ೧೫ ॥ ಅನಂತರ ನಂದಗೋಪನು ಪುತ್ರನ ಅಭ್ಯುದಯಾರ್ಥವಾಗಿ ವಸ್ತ್ರಗಳಿಂದಲೂ, ಪುಷ್ಪಮಾಲಿಕೆಗಳಿಂದಲೂ, ಚಿನ್ನದ ಹಾರಗಳಿಂದಲೂ ಸಮಲಂಕೃತವಾದ ಒಳ್ಳೆಯ ಗುಣಗಳಿಂದ ಕೂಡಿದ ಅನೇಕ ಗೋವುಗಳನ್ನು ಬ್ರಾಹ್ಮಣರಿಗೆ ದಾನಮಾಡಿದನು. ಬ್ರಾಹ್ಮಣರೆಲ್ಲರೂ ಮುದ್ದುಕೃಷ್ಣನಿಗೂ, ನಂದಗೋಪನಿಗೂ ಆಶೀರ್ವದಿಸಿದರು. ॥ ೧೬ ॥ ಸದಾಚಾರವುಳ್ಳ ವೇದವಿದರಾದ ಬ್ರಾಹ್ಮಣರು ಮಾಡಿದ ಆಶೀರ್ವಾದಗಳು ಎಂದಿಗೂ ನಿಷ್ಫಲವಾಗುವುದಿಲ್ಲವೆಂಬುದು ಸ್ಪಷ್ಟವೇ ಆಗಿದೆ. ॥ ೧೭ ॥

ಮುಂದೆ ಒಂದು ದಿನ ಯಶೋದೆಯು ಮುದ್ದುಕೃಷ್ಣನನ್ನು ತೊಡೆಯಮೇಲೆ ಮಲಗಿಸಿಕೊಂಡು ಆಡಿಸುತ್ತಿದ್ದಳು. ಇದ್ದಕ್ಕಿದ್ದಂತೆ ಶ್ರೀಕೃಷ್ಣನು ಪರ್ವತದಂತೆ ಬಹಳ ಭಾರವಾಗಿಬಿಟ್ಟನು. ಯಶೋದೆಯು ಅವನ ಭಾರವನ್ನು ತಡೆಯದಾದಳು. ॥ ೧೮ ॥ ಆಕೆಯು ಭಾರಪೀಡಿತಳಾಗಿ ಶ್ರೀಕೃಷ್ಣನನ್ನು ನೆಲದ ಮೇಲೆ ಕುಳ್ಳಿರಿಸಿದಳು. ಇಂತಹ ಹೊಸ ಘಟನೆಯಿಂದ ಆಕೆಯು ಅತ್ಯಂತ ಚಕಿತಳಾಗಿದ್ದಳು. ಬಳಿಕ ಅವಳು ಕಂದನಿಗೆ ಯಾವುದೇ ಉಪದ್ರವವೂ ಆಗದಿರಲಿ ಎಂದು ಭಗವಂತನನ್ನು ಧ್ಯಾನಿಸಿ ಗೃಹಕೃತ್ಯದಲ್ಲಿ ತೊಡಗಿದಳು. ॥ ೧೯ ॥

ತೃಣಾವರ್ತನೆಂಬ ದೈತ್ಯನು ಕಂಸನ ಸೇವಕನಾಗಿದ್ದನು. ಕಂಸನ ಪ್ರೇರಣೆಯಿಂದ ಅವನು ಸುಂಟರಗಾಳಿಯ ರೂಪದಿಂದ ಗೋಕುಲಕ್ಕೆ ಬಂದನು ಹಾಗೂ ಕುಳಿತಿರುವ ಶ್ರೀಕೃಷ್ಣನನ್ನು ಹಾರಿಸಿಕೊಂಡು ಆಕಾಶಕ್ಕೆ ನೆಗೆದನು. ॥ ೨೦ ॥

ಗೋಕುಲಂ ಸರ್ವಮಾವೃಣ್ವನ್ಮುಷ್ಣಂಶ್ಚಕ್ಷೂಂಷಿ ರೇಣುಭಿಃ ।
ಈರಯನ್ಸುಮಹಾಘೋರಶಬ್ದೇನ ಪ್ರದಿಶೋ ದಿಶಃ ॥ ೨೧ ॥

ಮುಹೂರ್ತಮಭವದ್ಗೋಷ್ಠಂ ರಜಸಾ ತಮಸಾಽಽವೃತಮ್ ।
ಸುತಂ ಯಶೋದಾ ನಾಪಶ್ಯತ್ತಸ್ಮಿನ್ನ್ಯಸ್ತವತೀ ಯತಃ ॥ ೨೨ ॥

ನಾಪಶ್ಯತ್ಕಶ್ಚನಾತ್ಮಾನಂ ಪರಂ ಚಾಪಿ ವಿಮೋಹಿತಃ ।
ತೃಣಾವರ್ತನಿಸೃಷ್ಟಾಭಿಃ ಶರ್ಕರಾಭಿರುಪದ್ರುತಃ ॥ ೨೩ ॥

ಇತಿ ಖರಪವನಚಕ್ರಪಾಂಸುವರ್ಷೇ
ಸುತಪದವೀಮಬಲಾವಿಲಕ್ಷ್ಯ ಮಾತಾ ।
ಅತಿಕರುಣಮನುಸ್ಮರಂತ್ಯಶೋಚದ್
ಭುವಿ ಪತಿತಾ ಮೃತವತ್ಸಕಾ ಯಥಾ ಗೌಃ ॥ ೨೪ ॥

ರುದಿತಮನುನಿಶಮ್ಯ ತತ್ರ ಗೋಪ್ಯೋ
ಭೃಶಮನುತಪ್ತಧಿಯೋಽಶ್ರುಪೂರ್ಣಮುಖ್ಯಃ ।
ರುರುದುರನುಪಲಭ್ಯ ನಂದಸೂನುಂ
ಪವನ ಉಪಾರತಪಾಂಸುವರ್ಷವೇಗೇ ॥ ೨೫ ॥

ತೃಣಾವರ್ತಃ ಶಾಂತರಯೋ ವಾತ್ಯಾರೂಪಧರೋ ಹರನ್ ।
ಕೃಷ್ಣಂ ನಭೋಗತೋ ಗಂತುಂ ನಾಶಕ್ನೋದ್ಭೂರಿಭಾರಭೃತ್ ॥ ೨೬ ॥

ತಮಶ್ಮಾನಂ ಮನ್ಯಮಾನ ಆತ್ಮನೋ ಗುರುಮತ್ತಯಾ ।
ಗಲೇ ಗೃಹೀತ ಉತ್ಸ್ರಷ್ಟುಂ ನಾಶಕ್ನೋದದ್ಭುತಾರ್ಭಕಮ್ ॥ ೨೭ ॥

ಗಲಗ್ರಹಣನಿಶ್ಚೇಷ್ಟೋ ದೈತ್ಯೋ ನಿರ್ಗತಲೋಚನಃ ।
ಅವ್ಯಕ್ತರಾವೋ ನ್ಯಪತತ್ಸಹಬಾಲೋ ವ್ಯಸುರ್ವ್ರಜೇ ॥ ೨೮ ॥

ತಮಂತರಿಕ್ಷಾತ್ಪತಿತಂ ಶಿಲಾಯಾಂ
ವಿಶೀರ್ಣಸರ್ವಾವಯವಂ ಕರಾಲಮ್ ।
ಪುರಂ ಯಥಾ ರುದ್ರಶರೇಣ ವಿದ್ಧಂ
ಸ್ತ್ರಿಯೋ ರುದತ್ಯೋ ದದೃಶುಃ ಸಮೇತಾಃ ॥ ೨೯ ॥

ಅವನು ಗೋಕುಲದಲ್ಲೆಲ್ಲ ಧೂಳನ್ನು ಎಬ್ಬಿಸಿ ಎಲ್ಲರ ಕಣ್ಣುಗಳನ್ನು ಮುಚ್ಚಿಬಿಟ್ಟನು. ಅವನ (ಸುಂಟರಗಾಳಿಯ) ಅತಿಘೋರವಾದ ಕರ್ಕಶವಾದ ಶಬ್ದವು ಹತ್ತು ದಿಕ್ಕುಗಳಲ್ಲಿ ತುಂಬಿ ಹೋಯಿತು. ॥ ೨೧ ॥ ಮುಹೂರ್ತಕಾಲ ಗೋಕುಲವು ಧೂಳಿನಿಂದ ಮತ್ತು ಕತ್ತಲೆಯಿಂದ ಮುಚ್ಚಿಹೋಗಿತ್ತು. ಯಶೋದೆಯು ಶ್ರೀಕೃಷ್ಣನನ್ನು ಕುಳ್ಳಿರಿಸಿದಲ್ಲಿಗೆ ಬಂದುನೋಡಿದರೆ ಅಲ್ಲಿ ಅವನು ಇರಲಿಲ್ಲ. ॥ ೨೨ ॥ ಆ ಸಮಯದಲ್ಲಿ ತೃಣಾವರ್ತನು ಸುಂಟರಗಾಳಿಯ ರೂಪದಿಂದ ಹಾರಿಸಿದ ಧೂಳು-ಮರಳಿನಿಂದಾಗಿ ಜನರೆಲ್ಲರೂ ಅತ್ಯಂತ ಉದ್ವಿಗ್ನರಾಗಿ, ಕಳವಳಗೊಂಡು, ಒಬ್ಬರು ಮತ್ತೊಬ್ಬರನ್ನು ನೋಡಲಾಗುತ್ತಿರಲಿಲ್ಲ. ॥ ೨೩ ॥ ಜೋರಾಗಿ ಬೀಸುತ್ತಿದ್ದ ಸುಂಟರಗಾಳಿಯಿಂದ, ಧೂಳಿನ ಮಳೆಯಲ್ಲಿ ತನ್ನ ಪುತ್ರನನ್ನು ಕಾಣದೆ ಯಶೋದೆಯು ಅತ್ಯಂತ ಶೋಕಾಕುಲಳಾಗಿ ಪುತ್ರನನ್ನು ನೆನೆಯುತ್ತಾ ಕರುವನ್ನು ಕಳಕೊಂಡ ಹಸುವಿನಂತಾಗಿ ಅತೀವ ದುಃಖದಿಂದ ಅವಳು ನೆಲಕ್ಕುರುಳಿದಳು. ॥ ೨೪ ॥ ಸುಂಟರಗಾಳಿಯು ಶಾಂತವಾಗಿ ಧೂಳಿನ ಮಳೆಯು ಕಡಿಮೆಯಾದಾಗ ಯಶೋದೆಯ ಅಳುವಿನ ಶಬ್ದವನ್ನು ಕೇಳಿ ಗೋಪಿಯರೆಲ್ಲರೂ ಅಲ್ಲಿಗೆ ಧಾವಿಸಿಬಂದರು. ಯಶೋದೆಯ ಬಳಿ ನಂದನಂದನ ಶ್ರೀಕೃಷ್ಣನು ಇಲ್ಲದಿರುವುದನ್ನು ನೋಡಿ ಅವರೆಲ್ಲರೂ ಪರಿತಪಿಸತೊಡಗಿದರು. ಅವರ ಕಣ್ಣುಗಳಿಂದ ಕಂಬನಿಯು ಧಾರಾಕಾರವಾಗಿ ಹರಿಯುತ್ತಿದ್ದು ಅವರೆಲ್ಲರೂ ಬಿಕ್ಕಿ-ಬಿಕ್ಕಿ ಅಳುತ್ತಿದ್ದರು. ॥ ೨೫ ॥

ತೃಣಾವರ್ತನು ಸುಂಟರಗಾಳಿಯ ರೂಪದಿಂದ ಭಗವಾನ್ ಶ್ರೀಕೃಷ್ಣನನ್ನು ಎತ್ತಿಕೊಂಡು ಆಕಾಶಕ್ಕೆ ಹೋದಾಗ ಕೃಷ್ಣನ ಭಾರವನ್ನು ಸಹಿಸಲಾರದೆ ಅವನ ವೇಗವು ಕಡಿಮೆಯಾಯಿತು. ಅವನನ್ನು ಮೇಲೆತ್ತಿಕೊಂಡು ಹೋಗಲು ಸಾಧ್ಯವಾಗಲಿಲ್ಲ. ॥ ೨೬ ॥ ತೃಣಾವರ್ತನು ತನಗಿಂತಲೂ ಹೆಚ್ಚು ಭಾರವಾಗಿರುವ ಶ್ರೀಕೃಷ್ಣನನ್ನು ನೀಲಗಿರಿಯ ಬಂಡೆಯೆಂದೇ ಭಾವಿಸಿದನು. ಅವನನ್ನು ಬಿಟ್ಟುಬಿಡಲು ಸಾಧ್ಯವಾಗದಂತೆ ಶ್ರೀಕೃಷ್ಣನು ಅಸುರನ ಕತ್ತನ್ನು ಗಟ್ಟಿಯಾಗಿ ಹಿಡಿದುಕೊಂಡಿದ್ದನು. ॥ ೨೭ ॥ ಭಗವಂತನು ಬಿಗಿಯಾಗಿ ಅವನ ಕತ್ತನ್ನು ಹಿಡಿದಿದ್ದರಿಂದ ಅಸುರನ ಕಣ್ಣುಗುಡ್ಡೆಗಳು ಹೊರಚಾಚಿಕೊಂಡು ನಿಶ್ಚೇಷ್ಟಿತನಾದನು. ಮಾತು ನಿಂತುಹೋಯಿತು. ಪ್ರಾಣಪಕ್ಷಿಯು ಹಾರಿಹೋಗಿ ಬಾಲಕ ಶ್ರೀಕೃಷ್ಣನೊಂದಿಗೆ ಗೋಕುಲದಲ್ಲಿ ಬಿದ್ದುಬಿಟ್ಟನು.* ॥ ೨೮ ॥ ಮುದ್ದುಕೃಷ್ಣನನ್ನು ಕಾಣದೆ ರೋದಿಸುತ್ತಿದ್ದ ಗೋಪಿಯರೆಲ್ಲರೂ ರಾಕ್ಷಸನೊಬ್ಬನು ಆಕಾಶದಿಂದ ಬಿದ್ದುದನ್ನು ಕಂಡರು. ಅವನು ಆಕಾಶದಿಂದ ಒಂದು ದೊಡ್ಡ ಬಂಡೆಯ ಮೇಲೆ ಬಿದ್ದಿದ್ದನು. ಕರಾಳಸ್ವರೂಪನಾದ ಆ ದೈತ್ಯನು ಬಂಡೆಯ ಮೇಲೆ ಬಿದ್ದೊಡನೆಯೇ ಶಂಕರನ ಬಾಣಗಳಿಂದ ತ್ರಿಪುರಾಸುರರು ಛಿನ್ನ-ಭಿನ್ನವಾದಂತೆ ಅವನು ನುಚ್ಚುನೂರಾಗಿದ್ದನು. ॥ ೨೯ ॥

* ತೃಣಾವರ್ತನ ಪೂರ್ವ ಕಥೆ - ಪಾಂಡ್ಯದೇಶದಲ್ಲಿ ಸಹಸ್ರಾಕ್ಷನೆಂಬ ಹೆಸರಿನ ರಾಜನಿದ್ದನು. ಅವನು ನರ್ಮದಾನದಿಯ ತೀರದಲ್ಲಿ ತನ್ನ ರಾಣಿಯರೊಡನೆ ವಿಹಾರಮಾಡುತ್ತಿದ್ದನು. ಅಲ್ಲಿಗೆ ದೂರ್ವಾಸ ಮುನಿಗಳು ಬಂದರು. ಮಹರ್ಷಿಗಳು ಆಗಮಿಸಿದರೂ ರಾಜನು ಅವರಿಗೆ ನಮಸ್ಕರಿಸಲಿಲ್ಲ. ದೂರ್ವಾಸರು ಕೋಪಗೊಂಡು ರಾಕ್ಷಸನಾಗೆಂದು ಶಾಪಕೊಟ್ಟರು. ರಾಜನು ಮಹರ್ಷಿಗಳ ಕಾಲಿಗೆಬಿದ್ದು ಶಾಪವಿಮೋಚನೆಗೆ ಪ್ರಾರ್ಥಿಸಲಾಗಿ ದಯಾಮಯರಾದ ದೂರ್ವಾಸರು ಹೇಳಿದರು - 'ಭಗವಾನ್ ಶ್ರೀಕೃಷ್ಣಮೂರ್ತಿಯ ಶ್ರೀವಿಗ್ರಹದ ಸ್ಪರ್ಶವಾದೊಡನೆಯೇ ನೀನು ಶಾಪದಿಂದ ಮುಕ್ತನಾಗುವೆ.' ಅಂತೆಯೇ ತೃಣಾವರ್ತನೆಂಬ ರಾಕ್ಷಸನಾಗಿ ಹುಟ್ಟಿದ್ದ ರಾಜನು ಶ್ರೀಕೃಷ್ಣನ ಸ್ಪರ್ಶವಾದೊಡನೆಯೇ ಮುಕ್ತಿಯನ್ನು ಹೊಂದಿದನು.

ಪ್ರಾದಾಯ ಮಾತ್ರೇ ಪ್ರತಿಹೃತ್ಯ ವಿಸ್ಮಿತಾಃ
ಕೃಷ್ಣಂ ಚ ತಸ್ಯೋರಸಿ ಲಂಬಮಾನಮ್ ।
ತಂ ಸ್ವಸ್ತಿಮಂತಂ ಪುರುಷಾದನೀತಂ
ವಿಹಾಯಸಾ ಮೃತ್ಯುಮುಖಾತ್ಪ್ರಮುಕ್ತಮ್ ।
ಗೋಪ್ಯಶ್ಚ ಗೋಪಾಃ ಕಿಲ ನಂದಮುಖ್ಯಾ
ಲಬ್ಧ್ವಾ ಪುನಃ ಪ್ರಾಪುರತೀವ ಮೋದಮ್ ॥ ೩೦ ॥

ಅಹೋ ಬತಾತ್ಯದ್ಭುತಮೇಷ ರಕ್ಷಸಾ
ಬಾಲೋ ನಿವೃತ್ತಿಂ ಗಮಿತೋಽಭ್ಯಗಾತ್ಪುನಃ ।
ಹಿಂಸ್ರಃ ಸ್ವಪಾಪೇನ ವಿಹಿಂಸಿತಃ ಖಲಃ
ಸಾಧುಃ ಸಮತ್ವೇನ ಭಯಾದ್ವಿಮುಚ್ಯತೇ ॥ ೩೧ ॥

ಕಿಂ ನಸ್ತಪಶ್ಚೀರ್ಣಮಧೋಕ್ಷಜಾರ್ಚನಂ
ಪೂರ್ತೇಷ್ಟದತ್ತಮುತ ಭೂತಸೌಹೃದಮ್ ।
ಯತ್ಸಂಪರೇತಃ ಪುನರೇವ ಬಾಲಕೋ
ದಿಷ್ಟ್ಯಾ ಸ್ವಬಂಧೂನ್ಪ್ರಣಯನ್ನುಪಸ್ಥಿತಃ ॥ ೩೨ ॥

ದೃಷ್ಟ್ವಾದ್ಭುತಾನಿ ಬಹುಶೋ ನಂದಗೋಪೋ ಬೃಹದ್ವನೇ ।
ವಸುದೇವವಚೋ ಭೂಯೋ ಮಾನಯಾಮಾಸ ವಿಸ್ಮಿತಃ
॥ ೩೩ ॥

ಏಕದಾರ್ಭಕಮಾದಾಯ ಸ್ವಾಂಕಮಾರೋಪ್ಯ ಭಾಮಿನೀ ।
ಪ್ರಸ್ನುತಂ ಪಾಯಯಾಮಾಸ ಸ್ತನಂ ಸ್ನೇಹಪರಿಪ್ಲುತಾ
॥ ೩೪ ॥

ಪೀತಪ್ರಾಯಸ್ಯ ಜನನೀ ಸಾ ತಸ್ಯ ರುಚಿರಸ್ಮಿತಮ್ ।
ಮುಖಂ ಲಾಲಯತೀ ರಾಜನ್ ಜೃಂಭತೋ ದದೃಶೇ ಇದಮ್
॥ ೩೫ ॥

ಖಂ ರೋದಸೀ ಜ್ಯೋತಿರನೀಕಮಾಶಾಃ
ಸೂರ್ಯೇಂದುವಹ್ನಿಶ್ವಸನಾಂಬುಧೀಂಶ್ಚ ।
ದ್ವೀಪಾನ್ ನಗಾಂಸ್ತದ್ದುಹಿತೄರ್ವನಾನಿ
ಭೂತಾನಿ ಯಾನಿ ಸ್ಥಿರಜಂಗಮಾನಿ ॥ ೩೬ ॥

ಸಾ ವೀಕ್ಷ್ಯ ವಿಶ್ವಂ ಸಹಸಾ ರಾಜನ್ಸಂಜಾತವೇಪಥುಃ ।
ಸಮ್ಮೀಲ್ಯ ಮೃಗಶಾವಾಕ್ಷೀ ನೇತ್ರೇ ಆಸೀತ್ಸುವಿಸ್ಮಿತಾ
॥ ೩೭ ॥

ಭಗವಾನ್ ಶ್ರೀಕೃಷ್ಣನು ಅವನ ಎದೆಯಮೇಲೆ ಆಡುತ್ತಿದ್ದನು. ಇದನ್ನು ನೋಡಿ ಗೋಪಿಯರು ವಿಸ್ಮಿತರಾದರು. ಅವರು ಒಡನೆಯೇ ಅಲ್ಲಿಗೆ ಹೋಗಿ ಶ್ರೀಕೃಷ್ಣನನ್ನು ಎತ್ತಿಕೊಂಡುಬಂದು ಅಳುತ್ತಿದ್ದ ಯಶೋದೆಯ ಕೈಗೆ ಕೊಟ್ಟರು. ಬಾಲಕನು ಮೃತ್ಯುಮುಖದಿಂದ ಸಕುಶಲನಾಗಿ ಮರಳಿದನು. ಅವನನ್ನು ರಾಕ್ಷಸನು ಆಕಾಶಕ್ಕೆ ಎತ್ತಿಕೊಂಡು ಹೋಗಿದ್ದರೂ ಅವನು ಬದುಕುಳಿದನು. ಹೀಗೆ ಬಾಲಕ ಶ್ರೀಕೃಷ್ಣನನ್ನು ಪುನಃ ಪಡೆದ ಯಶೋದೆಯೇ ಮೊದಲಾದ ಗೋಪಿಯರೂ ನಂದಾದಿಗೋಪರು ಅತ್ಯಂತ ಆನಂದಭರಿತರಾದರು. ॥ ೩೦ ॥ ಅವರೆಲ್ಲರೂ ಹೇಳತೊಡಗಿದರು ಆಹಾ! ಎಂತಹ ಆಶ್ಚರ್ಯವಿದು! ಈ ಬಾಲಕನು ರಾಕ್ಷಸನಿಂದ ಮೃತ್ಯುಮುಖದಲ್ಲಿ ಹಾಕಲ್ಪಟ್ಟಿದ್ದನು. ಆದರೂ ಮತ್ತೆ ಬದುಕಿ ಬಂದಿರುವನು. ಹಿಂಸಕನಾದ ಆ ದುಷ್ಟನ ಪಾಪಗಳೇ ಅವನನ್ನು ನುಂಗಿಬಿಟ್ಟಿತು. ನೋಡಿರಲ್ಲ! ಸಾಧು ಪುರುಷನು ತನ್ನ ಸಮತೆಯಿಂದಲೇ ಸಮಸ್ತ ಭಯದಿಂದ ಪಾರಾಗುತ್ತಾನೆ, ಇದು ನಿಜವಾಗಿದೆ. ॥ ೩೧ ॥ ಈ ಬಾಲಕನು ರಾಕ್ಷಸನ ವಶನಾಗಿ ಸತ್ತೇ ಹೋಗಿದ್ದವನು ತಮ್ಮ ಸ್ವಜನರಿಗೆ ಸುಖವನ್ನು ಕೊಡಲು ಮರಳಿ ಬಂದಿರುವುದನ್ನು ನೋಡಿದರೆ – ತಪಸ್ಸು, ಭಗವಂತನ ಪೂಜೆ, ಅರವಟ್ಟಿಗೆ ಇಡುವುದು, ಕೆರೆ ಬಾವಿಗಳನ್ನು ಕಟ್ಟಿಸುವುದು, ಉದ್ಯಾನಗಳನ್ನು ರಚಿಸುವುದು, ಯಜ್ಞ, ದಾನ ಅಥವಾ ಸಮಸ್ತ ಜನರಿಗೆ ಹಿತವನ್ನು ಮಾಡುವುದು ಇವುಗಳಲ್ಲಿ ಏನಾದರೂ ನಾವು ಮಾಡಿರಬೇಕು. ಖಂಡಿತವಾಗಿ ಇದೊಂದು ಸೌಭಾಗ್ಯದ ಮಾತೇ ಆಗಿದೆ. ॥ ೩೨ ॥ ತಾವು ವಾಸಿಸುವ ಮಹಾವನದಲ್ಲಿ ಅನೇಕ ಅದ್ಭುತವಾದ ಘಟನೆಗಳು ನಡೆಯುವುದನ್ನು ನೋಡಿದಾಗ ನಂದಗೋಪನು ಆಶ್ಚರ್ಯಚಕಿತನಾಗಿ ವಸುದೇವನು ಹೇಳಿದ್ದ ಮಾತನ್ನು ಸಮರ್ಥಿಸಿಕೊಂಡನು. ॥ ೩೩ ॥

ಒಂದು ದಿನ ಯಶೋದಾದೇವಿಯು ತಮ್ಮ ಮುದ್ದು ಕಂದಮ್ಮನನ್ನು ತೊಡೆಯಲ್ಲಿಕ್ಕಿಕೊಂಡು ಪ್ರೇಮದಿಂದ ಹಾಲನ್ನು ಉಣಿಸುತ್ತಿದ್ದಳು. ಅವಳು ವಾತ್ಸಲ್ಯ-ಸ್ನೇಹದಲ್ಲಿ ಮುಳುಗಿಹೋಗಿ, ಆಕೆಯ ಸ್ತನಗಳಿಂದ ತನ್ನಿಂದತಾನೇ ಹಾಲು ಹರಿಯುತ್ತಿತ್ತು. ॥ ೩೪ ॥ ಬಾಲಮುಕುಂದನು ಹಾಲುಕುಡಿದಾಗಿತ್ತು, ತಾಯಿ ಯಶೋದೆಯು ಅವನು ಕಿಲಕಿಲನೆ ನಗುತ್ತಿರುವಾಗ ಮುಖವನ್ನು ಮುದ್ದಿಸಿದಳು. ಆಗಲೇ ಶ್ರೀಕೃಷ್ಣನಿಗೆ ಆಕಳಿಕೆ ಬಂತು. ತಾಯಿಯು ಅವನ ಬಾಯಲ್ಲಿ ನೋಡುತ್ತಾಳೆ ॥ ೩೫ ॥ ಅದರಲ್ಲಿ ಆಕಾಶ, ಅಂತರಿಕ್ಷ, ಜ್ಯೋತಿರ್ಮಂಡಲ, ದಿಕ್ಕುಗಳು, ಸೂರ್ಯ, ಚಂದ್ರ, ಅಗ್ನಿ ವಾಯು, ಸಮುದ್ರ, ದ್ವೀಪಗಳು, ಪರ್ವತ, ನದಿಗಳು, ವನಗಳು, ಸಮಸ್ತ ಚರಾಚರ ಪ್ರಾಣಿಗಳು ನೆಲೆಸಿರುವುದನ್ನು ಆಕೆಯು ನೋಡಿದಳು. ॥ ೩೬ ॥ ಪರೀಕ್ಷಿತನೇ! ತನ್ನ ಪುತ್ರನ ಬಾಯಲ್ಲಿ ಹೀಗೆ ಸಮಸ್ತ ಜಗತ್ತನ್ನೂ ನೋಡಿದ ಹರಿಣಾಕ್ಷಿಯಾದ ಯಶೋದೆಯ ಶರೀರ ನಡುಗಿತು. ಆಕೆಯು ತನ್ನ ವಿಶಾಲವಾದ ಕಣ್ಣುಗಳನ್ನು ಮುಚ್ಚಿಕೊಂಡಳು. ಅವಳು ಅತ್ಯಂತ ಆಶ್ಚರ್ಯ ಚಕಿತಳಾದಳು. ॥ ೩೭ ॥

ಏಳನೆಯ ಅಧ್ಯಾಯವು ಮುಗಿಯಿತು. ॥ ೭ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮ ಸ್ಕಂಧೇ ಪೂರ್ವಾರ್ಧೇ
ತೃಣಾವರ್ತಮೋಕ್ಷೋ ನಾಮ ಸಪ್ತಮೋಽಧ್ಯಾಯಃ ॥ ೭ ॥

ಎಂಟನೆಯ ಅಧ್ಯಾಯ

ನಾಮಕರಣ ಸಂಸ್ಕಾರ ಮತ್ತು ಬಾಲಲೀಲೆಗಳು

ಶ್ರೀಶುಕ ಉವಾಚ

ಗರ್ಗಃ ಪುರೋಹಿತೋ ರಾಜನ್ ಯದೂನಾಂ ಸುಮಹಾತಪಾಃ ।
ವ್ರಜಂ ಜಗಾಮ ನಂದಸ್ಯ ವಸುದೇವಪ್ರಚೋದಿತಃ ॥ ೧ ॥

ತಂ ದೃಷ್ಟ್ವಾ ಪರಮಪ್ರೀತಃ ಪ್ರತ್ಯುತ್ಥಾಯ ಕೃತಾಂಜಲಿಃ ।
ಆನರ್ಚಾಧೋಕ್ಷಜಧಿಯಾ ಪ್ರಣಿಪಾತಪುರಸ್ಸರಮ್ ॥ ೨ ॥

ಸೂಪವಿಷ್ಟಂ ಕೃತಾತಿಥ್ಯಂ ಗಿರಾ ಸೂನೃತಯಾ ಮುನಿಮ್ ।
ನಂದಯಿತ್ವಾಬ್ರವೀದ್ಬ್ರಹ್ಮನ್ಪೂರ್ಣಸ್ಯ ಕರವಾಮ ಕಿಮ್ ॥ ೩ ॥

ಮಹದ್ವಿಚಲನಂ ನೃಣಾಂ ಗೃಹಿಣಾಂ ದೀನಚೇತಸಾಮ್ ।
ನಿಃಶ್ರೇಯಸಾಯ ಭಗವನ್ಕಲ್ಪತೇ ನಾನ್ಯಥಾ ಕ್ವಚಿತ್ ॥ ೪ ॥

ಜ್ಯೋತಿಷಾಮಯನಂ ಸಾಕ್ಷಾದ್ಯತ್ತಜ್ಜ್ಞಾನಮತೀಂದ್ರಿಯಮ್ ।
ಪ್ರಣೀತಂ ಭವತಾ ಯೇನ ಪುಮಾನ್ವೇದ ಪರಾವರಮ್ ॥ ೫ ॥

ತ್ವಂ ಹಿ ಬ್ರಹ್ಮವಿದಾಂ ಶ್ರೇಷ್ಠಃ ಸಂಸ್ಕಾರಾನ್ಕರ್ತುಮರ್ಹಸಿ ।
ಬಾಲಯೋರನಯೋರ್ನೃಣಾಂ ಜನ್ಮನಾ ಬ್ರಾಹ್ಮಣೋ ಗುರುಃ ॥ ೬ ॥

ಗರ್ಗ ಉವಾಚ

ಯದೂನಾಮಹಮಾಚಾರ್ಯಃ ಖ್ಯಾತಶ್ಚ ಭುವಿ ಸರ್ವತಃ ।
ಸುತಂ ಮಯಾ ಸಂಸ್ಕೃತಂ ತೇ ಮನ್ಯತೇ ದೇವಕೀಸುತಮ್ ॥ ೭ ॥

ಕಂಸಃ ಪಾಪಮತಿಃ ಸಖ್ಯಂ ತವ ಚಾನಕದುಂದುಭೇಃ ।
ದೇವಕ್ಯಾ ಅಷ್ಟಮೋ ಗರ್ಭೋ ನ ಸ್ತ್ರೀ ಭವಿತುಮರ್ಹತಿ ॥ ೮ ॥

ಇತಿ ಸಂಚಿಂತಯನ್ ಶ್ರುತ್ವಾ ದೇವಕ್ಯಾ ದಾರಿಕಾವಚಃ ।
ಅಪಿ ಹಂತಾಗತಾಶಂಕಸ್ತರ್ಹಿ ತನ್ನೋಽನಯೋ ಭವೇತ್ ॥ ೯ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ! ಗರ್ಗರೆಂಬುವರು ಯದುವಂಶಕ್ಕೆ ಕುಲಪುರೋಹಿತರಾಗಿದ್ದರು. ಅವರು ಮಹಾತಪಸ್ವಿಗಳು. ವಸುದೇವನ ಪ್ರೇರಣೆಯಿಂದ ಅವರೊಮ್ಮೆ ನಂದಗೋಕುಲಕ್ಕೆ ಆಗಮಿಸಿದರು. ॥ ೧ ॥ ಅವರನ್ನು ನೋಡುತ್ತಲೇ ನಂದಗೋಪನಿಗೆ ಮಹದಾನಂದವಾಯಿತು. ಅವನು ಕೈಜೋಡಿಸಿಕೊಂಡು ಎದ್ದು ನಿಂತು ಅವರ ಚರಣಗಳಿಗೆ ನಮಸ್ಕರಿಸಿದನು. ಗರ್ಗರು ಸಾಕ್ಷಾತ್ ಭಗವತ್ಸ್ವರೂಪರೇ ಎಂದು ತಿಳಿದು ಅವರನ್ನು ಅರ್ಘ್ಯ-ಪಾದ್ಯಾದಿಗಳಿಂದ ಪೂಜಿಸಿ ಸತ್ಕರಿಸಿದನು. ॥ ೨ ॥ ಸತ್ಕಾರಗಳೆಲ್ಲ ಮುಗಿದನಂತರ ಗರ್ಗರು ಸುಖಾಸೀನರಾದಾಗ ನಂದಗೋಪನು ಕೈಮುಗಿದುಕೊಂಡು ಮಧುರವಾದ ಮಾತುಗಳಿಂದ ಬಿನ್ನವಿಸಿಕೊಂಡನು – ಬ್ರಾಹ್ಮಣೋತ್ತಮರೇ! ನೀವು ಪೂರ್ಣಕಾಮರಾಗಿರುವಿರಿ. ಹಾಗಿರುವಾಗ ನಾನೇನು ತಮ್ಮ ಸೇವೆಮಾಡಬಲ್ಲೆನು? ॥ ೩ ॥ ತಮ್ಮಂತಹ ಮಹಾತ್ಮರ ಆಗಮನವು ದೀನಮನಸ್ಕರಾದ, ಗೃಹಸ್ಥರಾದ ಮನುಷ್ಯರ ಶ್ರೇಯಸ್ಸಿಗಾಗಿಯೇ ಇರುತ್ತದೆ. ಬೇರೆ ಯಾವ ಕಾರಣದಿಂದಲೂ ಮಹಾತ್ಮರಾದವರು ನಮ್ಮಂತಹವರ ಮನೆಗೆ ಆಗಮಿಸುವುದಿಲ್ಲ. ॥ ೪ ॥ ಸ್ವಾಮಿ! ಯಾವುದು ಇಂದ್ರಿಯಗಳಿಗೆ ಅಗೋಚರವಾದ ವಿಷಯವನ್ನು ತಿಳಿಸುವುದೋ ಅಥವಾ ಭೂತ ಭವಿಷ್ಯದ ಗರ್ಭದಲ್ಲಿ ಏನಿದೆಯೆಂಬುದನ್ನು ಪ್ರತ್ಯಕ್ಷವಾಗಿ ಯಾವ ಶಾಸ್ತ್ರದಿಂದ ತಿಳಿಯಲಾಗುತ್ತದೋ, ಅಂತಹ ಜ್ಯೋತಿಷ್ಯಶಾಸ್ತ್ರವನ್ನು ತಾವು ರಚಿಸಿರುವಿರಿ. ॥ ೫ ॥ ತಾವು ಬ್ರಹ್ಮಜ್ಞರಲ್ಲಿ ಶ್ರೇಷ್ಠರಾಗಿ ಇರುವಿರಿ. ಅದಕ್ಕಾಗಿ ನನ್ನ ಇಬ್ಬರೂ ಬಾಲಕರಿಗೂ ನೀವೇ ನಾಮಕರಣಾದಿ ಸಂಸ್ಕಾರಗಳನ್ನು ಮಾಡಿರಿ. ಏಕೆಂದರೆ, ಬ್ರಾಹ್ಮಣರು ಹುಟ್ಟಿನಿಂದಲೇ ಮನುಷ್ಯಮಾತ್ರರಿಗೆ ಗುರುವಾಗಿರುತ್ತಾರೆ. ॥ ೬ ॥

ಗರ್ಗಾಚಾರ್ಯರು ಹೇಳಿದರು – ನಂದಗೋಪನೇ! ಯದುವಂಶೀಯರಿಗೆ ಆಚಾರ್ಯನೆಂದು ನಾನು ಜಗತ್ತಿನಲ್ಲಿ ಪ್ರಸಿದ್ಧನಾಗಿರುವೆನು. ನಾನು ನಿನ್ನ ಪುತ್ರನ ನಾಮಕರಣಸಂಸ್ಕಾರ ಮಾಡಿದರೆ ಜನರು ಇವನು ದೇವಕಿಯ ಪುತ್ರನೆಂದೇ ತಿಳಿಯುವರು. ॥ ೭ ॥ ಪಾಪಬುದ್ಧಿಯುಳ್ಳವನಾದ ಕಂಸನು ನಿನಗೂ ಮತ್ತು ವಸುದೇವನಿಗೂ ಗಾಢವಾದ ಸ್ನೇಹವಿರುವುದನ್ನು ತಿಳಿದಿರುತ್ತಾನೆ. ದೇವಕಿಯ ಮಗಳಿಂದ 'ನಿನ್ನನ್ನು ಕೊಲ್ಲುವವನು ಬೇರೆಲ್ಲೋ ಬೆಳೆಯುತ್ತಿದ್ದಾನೆ' ಎಂಬ ಮಾತನ್ನು ಕೇಳಿದಂದಿನಿಂದ ಕಂಸನು ದೇವಕಿಯ ಎಂಟನೆಯ ಗರ್ಭದಲ್ಲಿ ಹೆಣ್ಣುಶಿಶುವು ಹುಟ್ಟಲಾರದೆಂದೇ ತರ್ಕಿಸುತ್ತಿದ್ದಾನೆ. ನಿನ್ನ ಪುತ್ರನಿಗೆ ನಾನು ಸಂಸ್ಕಾರವನ್ನು ಮಾಡಿದರೆ ಅವನು ಈ ಬಾಲಕನು ವಸುದೇವನ ಮಗನೆಂದೇ ಬಗೆದು ಕೊಲ್ಲಬಹುದು. ಹಾಗಾದರೆ ನಮ್ಮಿಂದ ಭಾರೀ ಅನ್ಯಾಯವೇ ಆದೀತು. ॥ ೮-೯ ॥

ನಂದ ಉವಾಚ

ಅಲಕ್ಷಿತೋಽಸ್ಮಿನ್ ರಹಸಿ ಮಾಮಕೈರಪಿ ಗೋವ್ರಜೇ ।
ಕುರು ದ್ವಿಜಾತಿಸಂಸ್ಕಾರಂ ಸ್ವಸ್ತಿವಾಚನಪೂರ್ವಕಮ್ ॥ ೧೦ ॥

ನಂದಗೋಪನು ಹೇಳಿದನು – ಆಚಾರ್ಯರೇ! ನೀವು ಏಕಾಂತದಲ್ಲಿ ಗೋಶಾಲೆಯಲ್ಲಿ ಸ್ವಸ್ತಿವಾಚನವನ್ನು ಮಾಡಿ ಈ ಬಾಲಕನಿಗೆ ದ್ವಿಜಾತಿಗೆ ಉಚಿತವಾದ ನಾಮಕರಣಾದಿ ಸಂಸ್ಕಾರಗಳನ್ನು ಮಾಡಿರಿ. ಬೇರೆಯವರಿಗಿರಲಿ, ನನ್ನ ಜ್ಞಾತಿಬಂಧುಗಳಿಗೂ ಈ ವಿಷಯ ತಿಳಿಯದಂತಿರಲಿ. ॥ ೧೦ ॥

ಶ್ರೀಶುಕ ಉವಾಚ

ಏವಂ ಸಂಪ್ರಾರ್ಥಿತೋ ವಿಪ್ರಃ ಸ್ವಚಿಕೀರ್ಷಿತಮೇವ ತತ್ ।
ಚಕಾರ ನಾಮಕರಣಂ ಗೂಢೋ ರಹಸಿ ಬಾಲಯೋಃ ॥ ೧೧ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿದ್ರಾಜನೇ! ಗರ್ಗಾಚಾರ್ಯರಾದರೋ ಸಂಸ್ಕಾರವನ್ನು ಮಾಡಲು ಬಯಸುತ್ತಲೇ ಇದ್ದರು. ನಂದಗೋಪನೂ ಒತ್ತಾಯಿಸಿ ಪ್ರಾರ್ಥಿಸಿದಾಗ ಅವರು ಏಕಾಂತದಲ್ಲಿ ಅಡಗಿಕೊಂಡೇ ಗುಪ್ತವಾಗಿ ಇಬ್ಬರು ಬಾಲಕರಿಗೂ ನಾಮಕರಣ ಸಂಸ್ಕಾರವನ್ನು ಮಾಡಿಬಿಟ್ಟರು. ॥ ೧೧ ॥

ಗರ್ಗ ಉವಾಚ

ಅಯಂ ಹಿ ರೋಹಿಣೀಪುತ್ರೋ ರಮಯನ್ಸುಹೃದೋ ಗುಣೈಃ ।
ಆಖ್ಯಾಸ್ಯತೇ ರಾಮ ಇತಿ ಬಲಾಧಿಕ್ಯಾದ್ಬಲಂ ವಿದುಃ ।
ಯದೂನಾಮಪೃಥಗ್ಭಾವಾತ್ಸಂಕರ್ಷಣಮುಶಂತ್ಯುತ ॥ ೧೨ ॥

ಗರ್ಗಾಚಾರ್ಯರು ಹೇಳುತ್ತಾರೆ – ನಂದಗೋಪನೇ! ಇವನು ರೋಹಿಣಿಯ ಮಗನು. ಆದುದರಿಂದ ಇವನ ಹೆಸರು ರೌಹಿಣೇಯ. ಇವನು ಬಂಧುಗಳಿಗೂ, ಸುಹೃದರಿಗೂ ತನ್ನ ಒಳ್ಳೆಯ ಗುಣಗಳಿಂದ ಆನಂದವನ್ನುಂಟುಮಾಡುವನು. ಆದರಿಂದ ಇವನ ಇನ್ನೊಂದು ಹೆಸರು 'ರಾಮ' ಎಂದಿರುತ್ತದೆ. ಅಸೀಮ ಬಲನಾಗಿರುವುದರಿಂದ ಇವನಿಗೆ 'ಬಲಭದ್ರ'ನೆಂದೂ ಒಂದು ಹೆಸರು ಇದೆ. ಯಾದವರಲ್ಲಿ ಮತ್ತು ನಿಮ್ಮಲ್ಲಿ ಜಗಳವುಂಟಾದಾಗ ಇವನು ಒಂದಾಗಿಸುವನು. ಆದ್ದರಿಂದ 'ಸಂಕರ್ಷಣ'ನೆಂದೂ ಇನ್ನೊಂದು ಹೆಸರಿನಿಂದ ಇವನನ್ನು ಕರೆಯುವರು. ॥ ೧೨ ॥

ಆಸನ್ವರ್ಣಾಸ್ತ್ರಯೋ ಹ್ಯಸ್ಯ ಗೃಹ್ಣತೋಽನುಯುಗಂ ತನೂಃ ।
ಶುಕ್ಲೋ ರಕ್ತಸ್ತಥಾ ಪೀತ ಇದಾನೀಂ ಕೃಷ್ಣತಾಂ ಗತಃ ॥ ೧೩ ॥

ಶ್ರೀಕೃಷ್ಣನ ಕಡೆಗೆ ಕೈತೋರಿಸುತ್ತಾ ಶ್ಯಾಮಲವರ್ಣನಾಗಿರುವ ಇವನು ಪ್ರತಿಯೊಂದು ಯುಗದಲ್ಲಿಯೂ ಒಂದೊಂದು ವರ್ಣದಿಂದ ಶರೀರವನ್ನು ಧರಿಸುವನು. ಕೃತಯುಗದಲ್ಲಿ ಶ್ವೇತವರ್ಣದವನಾಗಿಯೂ, ತ್ರೇತಾಯುಗದಲ್ಲಿ ರಕ್ತವರ್ಣದವನಾಗಿಯೂ, ದ್ವಾಪರಯುಗದಲ್ಲಿ ಪೀತವರ್ಣದವನಾಗಿಯೂ ಹುಟ್ಟಿದ್ದಾನೆ. ಈಗ ದ್ವಾಪರದ ಕಡೆಯಲ್ಲಿ ಕೃಷ್ಣವರ್ಣದವನಾಗಿಯೂ ಹುಟ್ಟಿದ್ದಾನೆ. ಆದುದರಿಂದ ಇವನಿಗೆ ಕೃಷ್ಣನೆಂದೇ ಹೆಸರು ಆಗುವುದು. ॥ ೧೩ ॥

ಪ್ರಾಗಯಂ ವಸುದೇವಸ್ಯ ಕ್ವಚಿಜ್ಜಾತಸ್ತವಾತ್ಮಜಃ ।
ವಾಸುದೇವ ಇತಿ ಶ್ರೀಮಾನಭಿಜ್ಞಾಃ ಸಂಪ್ರಚಕ್ಷತೇ ॥ ೧೪ ॥

ನಂದಗೋಪನೇ! ಈ ನಿನ್ನ ಪುತ್ರನು ಹಿಂದೆ ವಸುದೇವನ ಮಗನಾಗಿಯೂ ಹುಟ್ಟಿದ್ದನು. ಆದುದರಿಂದಲೇ ಈ ರಹಸ್ಯವನ್ನು ತಿಳಿದಿರುವ ಜನರು ಇವನನ್ನು ಶ್ರೀಮಾನ್ ವಾಸುದೇವ' ಎಂದೂ ಕರೆಯುತ್ತಾರೆ. ॥ ೧೪ ॥

ಬಹೂನಿ ಸಂತಿ ನಾಮಾನಿ ರೂಪಾಣಿ ಚ ಸುತಸ್ಯ ತೇ ।
ಗುಣಕರ್ಮಾನುರೂಪಾಣಿ ತಾನ್ಯಹಂ ವೇದ ನೋ ಜನಾಃ ॥ ೧೫ ॥

ನಿನ್ನ ಪುತ್ರನಿಗೆ ಇನ್ನೂ ಹಲವಾರು ನಾಮಧೇಯಗಳೂ ಇವೆ ಹಾಗೂ ರೂಪಗಳೂ ಅನೇಕವಾಗಿವೆ. ಇವನ ಎಲ್ಲ ಗುಣಗಳು ಮತ್ತು ಕರ್ಮಗಳಿಗೆ ಅನುಸಾರ ಬೇರೆ-ಬೇರೆ ನಾಮಧೇಯಗಳಾಗುತ್ತವೆ. ನಾನಾದರೋ ಆವೆಲ್ಲ ನಾಮಗಳನ್ನು ಅರಿತಿರುವೆನು. ಆದರೆ ಜಗತ್ತಿನ ಸಾಧಾರಣ ಜನರು ಅರಿಯಲಾರರು. ॥ ೧೫ ॥

ಏಷ ವಃ ಶ್ರೇಯ ಆಧಾಸ್ಯದ್ಗೋಪಗೋಕುಲನಂದನಃ ।
ಅನೇನ ಸರ್ವದುರ್ಗಾಣಿ ಯೂಯಮಂಜಸ್ತರಿಷ್ಯಥ ॥ ೧೬ ॥

ಇವನು ನಿಮ್ಮಗಳ ಪರಮ ಕಲ್ಯಾಣವನ್ನುಂಟುಮಾಡುವನು. ಸಮಸ್ತ ಗೋಪರಿಗೂ, ಗೋವುಗಳಿಗೂ ಇವನು ಆನಂದಗೊಳಿಸುವನು. ಇವನ ಸಹಾಯದಿಂದ ನೀವುಗಳು ಮಹಾವಿಪತ್ತುಗಳಿಂದ ಸುಲಭವಾಗಿ ಪಾರಾಗುವಿರಿ.॥ ೧೬ ॥

ಪುರಾನೇನ ವ್ರಜಪತೇ ಸಾಧವೋ ದಸ್ಯುಪೀಡಿತಾಃ ।
ಅರಾಜಕೇ ರಕ್ಷ್ಯಮಾಣಾ ಜಿಗ್ಯುರ್ದಸ್ಯೂನ್ಸಮೇಧಿತಾಃ ॥ ೧೭ ॥

ವ್ರಜರಾಜನೇ! ಹಿಂದೊಮ್ಮೆ ಭೂಮಂಡಲವು ಅರಾಜಕವಾಗಿತ್ತು. ದರೋಡೆಕೋರರು ಸತ್ಪುರುಷರನ್ನು ಬಹಳ ಪೀಡಿಸುತ್ತಿದ್ದರು. ಆಗ ನಿನ್ನ ಇದೇ ಪುತ್ರನು ಸಜ್ಜನರನ್ನು ರಕ್ಷಿಸಿದನು. ಇವನಿಂದ ಬಲವನ್ನು ಪಡೆದು ಆ ಜನರು ದರೋಡೆಕೋರರನ್ನು ಜಯಿಸಿದ್ದರು. ॥ ೧೭ ॥

ಯ ಏತಸ್ಮಿನ್ಮಹಾಭಾಗಾಃ ಪ್ರೀತಿಂ ಕುರ್ವಂತಿ ಮಾನವಾಃ ।
ನಾರಯೋಽಭಿಭವಂತ್ಯೇತಾನ್ವಿಷ್ಣುಪಕ್ಷಾನಿವಾಸುರಾಃ ॥ ೧೮ ॥

ತಸ್ಮಾನ್ನಂದಾತ್ಮಜೋಽಯಂ ತೇ ನಾರಾಯಣಸಮೋ ಗುಣೈಃ ।
ಶ್ರಿಯಾ ಕೀರ್ತ್ಯಾನುಭಾವೇನ ಗೋಪಾಯಸ್ವ ಸಮಾಹಿತಃ ॥ ೧೯ ॥

ಇತ್ಯಾತ್ಮಾನಂ ಸಮಾದಿಶ್ಯ ಗರ್ಗೇ ಚ ಸ್ವಗೃಹಂ ಗತೇ ।
ನಂದಃ ಪ್ರಮುದಿತೋ ಮೇನೇ ಆತ್ಮಾನಂ ಪೂರ್ಣಮಾಶಿಷಾಮ್ ॥ ೨೦ ॥

ಕಾಲೇನ ವ್ರಜತಾಲ್ಪೇನ ಗೋಕುಲೇ ರಾಮಕೇಶವೌ ।
ಜಾನುಭ್ಯಾಂ ಸಹ ಪಾಣಿಭ್ಯಾಂ ರಿಂಗಮಾಣೌ ವಿಜಹ್ರತುಃ ॥ ೨೧ ॥

ತಾವಂಘ್ರಿಯುಗ್ಮಮನುಕೃಷ್ಯ ಸರೀಸೃಪಂತೌ
ಘೋಷಪ್ರಘೋಷರುಚಿರಂ ವ್ರಜಕರ್ದಮೇಷು ।
ತನ್ನಾದಹೃಷ್ಟಮನಸಾವನುಸೃತ್ಯ ಲೋಕಂ
ಮುಗ್ಧಪ್ರಭೀತವದುಪೇಯತುರಂತಿ ಮಾತ್ರೋಃ ॥ ೨೨ ॥

ತನ್ಮಾತರೌ ನಿಜಸುತೌ ಘೃಣಯಾ ಸ್ನುವಂತ್ಯೌ
ಪಂಕಾಂಗರಾಗರುಚಿರಾವುಪಗುಹ್ಯ ದೋರ್ಭ್ಯಾಮ್ ।
ದತ್ತ್ವಾ ಸ್ತನಂ ಪ್ರಪಿಬತೋಃ ಸ್ಮ ಮುಖಂ ನಿರೀಕ್ಷ್ಯ
ಮುಗ್ಧಸ್ಮಿತಾಲ್ಪದಶನಂ ಯಯತುಃ ಪ್ರಮೋದಮ್ ॥ ೨೩ ॥

ಯಾವ ಮನುಷ್ಯರು ನಿನ್ನ ಈ ಶ್ಯಾಮಲ ಶಿಶುವನ್ನು ಪ್ರೀತಿಸುವರೋ ಅವರು ಮಹಾ ಭಾಗ್ಯಶಾಲಿಗಳೇ ಸರಿ. ಭಗವಾನ್ ವಿಷ್ಣುವಿನ ಕರಕಮಲಗಳ ಛತ್ರಛಾಯೆಯಲ್ಲಿದ್ದ ದೇವತೆಗಳನ್ನು ಅಸುರರು ಜಯಿಸಲಾರರೋ ಹಾಗೆಯೇ ಇವನನ್ನು ಪ್ರೀತಿಸುವವರನ್ನು ಒಳಗಿನ ಅಥವಾ ಹೊರಗಿನ ಯಾವ ಶತ್ರುಗಳು ಜಯಿಸಲಾರರು. ॥ ೧೮ ॥ ನಂದಗೋಪನೇ! ಯಾರ ದೃಷ್ಟಿಯಿಂದ ನೋಡಿದರೂ ಗುಣಗಳಲ್ಲಿ, ಸಂಪತ್ತಿನಲ್ಲಿ, ಸೌಂದರ್ಯದಲ್ಲಿ, ಕೀರ್ತಿಯಲ್ಲಿ, ಮಹಿಮೆಯಲ್ಲಿ ನಿನ್ನ ಈ ಬಾಲಕನು ಸಾಕ್ಷಾತ್ ಭಗವಾನ್ ನಾರಾಯಣನಿಗೆ ಸಮಾನನಾಗಿರುವನು. ನೀನು ಬಹಳ ಎಚ್ಚರಿಕೆಯಿಂದ, ತತ್ಪರತೆಯಿಂದ ಇವನನ್ನು ರಕ್ಷಿಸುತ್ತಿರು. ॥ ೧೯ ॥ ಹೀಗೆ ನಂದಗೋಪನಿಗೆ ಗರ್ಗರು 'ಇವನೇ ಭಗವಂತ' ಎಂದು ಮಾತ್ರ ಹೇಳದೆ ಉಳಿದೆಲ್ಲ ವಿಷಯವನ್ನು ಹೇಳಿ, ಅವನ ಅನುಮತಿಯನ್ನು ಪಡೆದು ತಮ್ಮ ಆಶ್ರಮಕ್ಕೆ ತೆರಳಿದರು. ಗರ್ಗರ ಮಾತನ್ನು ಕೇಳಿ ನಂದಗೋಪನು ಆನಂದಭರಿತನಾದನು. ತನ್ನ ಆಸೆಗಳೆಲ್ಲವೂ ತೀರಿದುವೆಂದೂ, ಕೃತಕೃತ್ಯನಾದನೆಂದೂ ಆತನು ಭಾವಿಸಿಕೊಂಡನು. ॥ ೨೦ ॥

ಪರೀಕ್ಷಿತನೇ! ಕೆಲವು ದಿವಸಗಳಲ್ಲಿಯೇ ರಾಮ ಮತ್ತು ಶ್ಯಾಮರು ಅಂಬೆಗಾಲಿಟ್ಟುಕೊಂಡು ಗೋಕುಲದಲ್ಲೆಲ್ಲ ಆಟವಾಡತೊಡಗಿದರು. ॥ ೨೧ ॥ ಇಬ್ಬರು ಸೋದರರೂ ತಮ್ಮ ಸುಕುಮಾರವಾದ ಕಾಲುಗಳನ್ನೆಳೆಯುತ್ತಾ ಗೋಕುಲದ ಧೂಳಿನಲ್ಲಿ ನಡೆಯುತ್ತಿದ್ದರು. ಆ ಸಮಯದಲ್ಲಿ ಕಾಲುಗಳಲ್ಲಿ ಮತ್ತು ಸೊಂಟದಲ್ಲಿ ಅಲಂಕೃತವಾದ ಗೆಜ್ಜೆಗಳು ಉಲಿಯುತ್ತಿದ್ದವು. ಆ ಮಂಜುಳ ಮಧುರ ಧ್ವನಿಯನ್ನು ಕೇಳಿ ಅವರಿಬ್ಬರೂ ಕಿಲ-ಕಿಲನೆ ನಗುತ್ತಿದ್ದರು. ಕೆಲವೊಮ್ಮೆ ಅವರು ದಾರಿಯಲ್ಲಿ ಯಾರೋ ಅಜ್ಞಾತವ್ಯಕ್ತಿಯ ಹಿಂದೆ-ಹಿಂದೆಯೇ ಸ್ವಲ್ಪದೂರ ಹೋಗುತ್ತಿದ್ದರು. ಮತ್ತೆ ಇವನು ಯಾರೋ ಬೇರೆ ಎಂದು ತಿಳಿದಾಗ ಮರುಕ್ಷಣದಲ್ಲೇ ಭಯಗೊಂಡವರಂತೆ ರೋಹಿಣೀ-ಯಶೋದೆಯರ ಬಳಿಗೆ ಬಂದು ಬಿಡುತ್ತಿದ್ದರು. ॥ ೨೨ ॥ ತಾಯಂದಿರು ಇದೆಲ್ಲವನ್ನು ನೋಡಿ ಸ್ನೇಹಪರವಶರಾಗುತ್ತಿದ್ದರು. ಅವರ ಸ್ತನಗಳಿಂದ ಹಾಲು ತಾನಾಗಿಯೇ ಒಸರುತ್ತಿತ್ತು. ಅವರ ಇಬ್ಬರೂ ಮುದ್ದುಕಂದಮ್ಮಗಳು ತಮ್ಮ ಶರೀರದಲ್ಲಿ ಧೂಳಿನ ಅಂಗರಾಗವನ್ನು ಹಚ್ಚಿಕೊಂಡು ಮರಳಿದಾಗ ಅವರ ಸೌಂದರ್ಯವು ಇನ್ನೂ ಹೆಚ್ಚುತ್ತಿತ್ತು. ಅವರು ಬರುತ್ತಲೇ ತಾಯಂದಿರು ಎರಡೂ ಕೈಗಳಿಂದ ಬಾಚಿತಬ್ಬಿಕೊಂಡು ತೊಡೆಗಳಲ್ಲಿ ಕುಳ್ಳಿರಿಸಿಕೊಂಡು ಸ್ತನ್ಯಪಾನಮಾಡಿಸುತ್ತಿದ್ದರು. ಅವರು ಹಾಲುಕುಡಿಯುತ್ತಿರುವಾಗ ನಡು-ನಡುವೆ ಮುಗುಳ್ನಗುತ್ತಾ ತಮ್ಮ ತಾಯಂದಿರ ಕಡೆಗೆ ನೋಡತೊಡಗಿದಾಗ ಅವರು ಬಾಲಕರ ಮಂದ-ಮಂದ ಮುಗುಳ್ನಗೆಯನ್ನು ಪುಟ್ಟದಾದ ಹಾಲುಹಲ್ಲುಗಳನ್ನೂ, ಮುದ್ದಾದ ಮುಖವನ್ನೂ ನೋಡಿ ಆನಂದಸಾಗರದಲ್ಲಿ ಮುಳುಗಿಹೋಗುತ್ತಿದ್ದರು. ॥ ೨೩ ॥ ರಾಮ ಮತ್ತು ಶ್ಯಾಮರಿಬ್ಬರೂ ಸ್ವಲ್ಪ ದೊಡ್ಡವರಾದಾಗ ವ್ರಜದ ಮನೆಯ ಹೊರಗೆ ಅವರು ನಡೆಸುತ್ತಿದ್ದ ಲೀಲೆಗಳನ್ನು ಗೋಪಿಯರು ನೋಡುತ್ತಾ ನಿಂತುಬಿಡುತ್ತಿದ್ದರು. ಅವರು ಯಾವುದೋ ಮಲಗಿದ ಕರುವಿನ ಬಾಲ

ಯರ್ಹ್ಯಂಗನಾದರ್ಶನೀಯಕುಮಾರಲೀಲಾ-
ವಂತರ್ವ್ರಜೇ ತದಬಲಾಃ ಪ್ರಗೃಹೀತಪುಚ್ಛೈಃ ।
ವತ್ಸೈರಿತಸ್ತತ ಉಭಾವನುಕೃಷ್ಯಮಾಣೌ
ಪ್ರೇಕ್ಷಂತ್ಯ ಉಜ್ಝಿತಗೃಹಾ ಜಹೃಷುರ್ಹಸಂತ್ಯಃ ॥ ೨೪ ॥

ವನ್ನು ಹಿಡಿದುಕೊಂಡಾಗ ಹಾಗೂ ಕರುವು ಹೆದರಿ ಅತ್ತ-ಇತ್ತ ಓಡುವಾಗ ಅವರಿಬ್ಬರೂ ಇನ್ನೂ ಜೋರಾಗಿ ಬಾಲವನ್ನು ಹಿಡಿದುಕೊಂಡುಬಿಡುತ್ತಿದ್ದರು. ಕರುಗಳು ಅವರನ್ನೂ ಎಳೆದುಕೊಂಡು ಓಡತೊಡಗುತ್ತಿದ್ದವು. ಗೋಪಿಯರು ತಮ್ಮ ಮನೆಗೆಲಸವನ್ನೆಲ್ಲ ಬಿಟ್ಟು ಇದೆಲ್ಲವನ್ನು ನೋಡುತ್ತಲೇ ಇರುತ್ತಿದ್ದರು ಮತ್ತು ಹೊಟ್ಟೆ ಹುಣ್ಣಾಗುವಂತೆ ನಗುತ್ತಾ ಪರಮಾನಂದದಲ್ಲಿ ಮಗ್ನರಾಗುತ್ತಿದ್ದರು. ॥ ೨೪ ॥

ಶೃಂಗ್ಯಗ್ನಿದಂಷ್ಟ್ರ್ಯಸಿಜಲದ್ವಿಜಕಂಟಕೇಭ್ಯಃ
ಕ್ರೀಡಾಪರಾವತಿಚಲೌ ಸ್ವಸುತೌ ನಿಷೇದ್ಧುಮ್ ।
ಗೃಹ್ಯಾಣಿ ಕರ್ತುಮಪಿ ಯತ್ರ ನ ತಜ್ಜನನ್ಯೌ
ಶೇಕಾತ ಆಪತುರಲಂ ಮನಸೋಽನವಸ್ಥಾಮ್ ॥ ೨೫ ॥

ಕೃಷ್ಣ-ಬಲರಾಮರಿಬ್ಬರೂ ಬಹಳ ಚಂಚಲರೂ, ತುಂಟರೂ ಆಗಿದ್ದರು. ಅವರು ಎಲ್ಲೋ ಜಿಂಕೆ, ಹಸು ಮುಂತಾದ ಕೋಡುಗಳುಳ್ಳ ಪಶುಗಳ ಬಳಿಗೆ ಧಾವಿಸಿದರೆ, ಕೆಲವೊಮ್ಮೆ ಉರಿಯುತ್ತಿರುವ ಬೆಂಕಿಯ ಬಳಿಗೆ ಆಡಲು ಓಡುತ್ತಿದ್ದರು. ಕೆಲವೊಮ್ಮೆ ಹಲ್ಲುಗಳಿಂದ ಕಡಿಯುವಂತಹ ನಾಯಿಗಳ ಬಳಿಗೆ ತಲುಪಿದರೆ, ಕೆಲವೊಮ್ಮೆ ಕಣ್ತಪ್ಪಿ ಖಡ್ಗವನ್ನೆತ್ತಿಕೊಳ್ಳುತ್ತಿದ್ದರು. ಕೆಲವೊಮ್ಮೆ ಬಾವಿ-ಹಳ್ಳಗಳ ಬಳಿಗೆ ಹೋಗಿ ನೀರಿನಲ್ಲಿ ಬೀಳುವರೋ ಎಂದು ಅನಿಸುತ್ತಿತ್ತು. ಕೆಲವೊಮ್ಮೆ ನವಿಲು ಮುಂತಾದ ಪಕ್ಷಿಗಳ ಹತ್ತಿರ ಹೋದರೆ, ಕೆಲವೊಮ್ಮೆ ಮುಳ್ಳುಗಳಿರುವಲ್ಲಿಗೆ ಮುಂದರಿಯುತ್ತಿದ್ದರು. ತಾಯಂದಿರು ಅವರನ್ನು ಬಹಳವಾಗಿ ನಿವಾರಿಸುತ್ತಿದ್ದರು. ಆದರೆ ಅವರ ಮಾತು ಕೇಳುತ್ತಲೇ ಇರಲಿಲ್ಲ. ಇಂತಹ ಸ್ಥಿತಿಯಲ್ಲಿ ಅವರಿಂದ ಮನೆಯ ಕೆಲಸವನ್ನು ನಿರ್ವಹಿಸಲಾಗುತ್ತಿರಲಿಲ್ಲ. ಅವರ ಚಿತ್ತವು ಮಕ್ಕಳನ್ನು ಭಯದ ವಸ್ತುಗಳಿಂದ ಕಾಪಾಡುವ ಚಿಂತೆಯಲ್ಲೇ ಅತ್ಯಂತ ಚಂಚಲವಾಗಿರುತ್ತಿತ್ತು. ॥ ೨೫ ॥

ಕಾಲೇನಾಲ್ಪೇನ ರಾಜರ್ಷೇ ರಾಮಃ ಕೃಷ್ಣಶ್ಚ ಗೋಕುಲೇ ।
ಅಘೃಷ್ಟಜಾನುಭಿಃ ಪದ್ಭಿರ್ವಿಚಕ್ರಮತುರಂಜಸಾ ॥ ೨೬ ॥

ರಾಜರ್ಷಿಯೇ! ಕೆಲವೇ ದಿನಗಳಲ್ಲಿ ಯಶೋದೆ ಮತ್ತು ರೋಹಿಣಿಯರ ಮುದ್ದಿನ ಮಕ್ಕಳು ಅಂಬೆಗಾಲಿಕ್ಕುವುದನ್ನು ಬಿಟ್ಟು ಗೋಕುಲದಲ್ಲಿ ನಡೆದಾಡಲು ಪ್ರಾರಂಭಿಸಿದರು. ॥ ೨೬ ॥

ತತಸ್ತು ಭಗವಾನ್ಕೃಷ್ಣೋ ವಯಸ್ಯೈರ್ವ್ರಜಬಾಲಕೈಃ ।
ಸಹರಾಮೋ ವ್ರಜಸ್ತ್ರೀಣಾಂ ಚಿಕ್ರೀಡೇ ಜನಯನ್ಮುದಮ್ ॥ ೨೭ ॥

ಕೃಷ್ಣನು ವ್ರಜವಾಸಿಯರಿಗೆ ಪ್ರತ್ಯಕ್ಷ ಭಗವಂತನೇ ಆಗಿದ್ದು, ಪರಮ ಸುಂದರ, ಪರಮಮಧುರನಾಗಿದ್ದಾನೆ. ಈಗ ಅವನು ಮತ್ತು ಬಲರಾಮರಿಬ್ಬರೂ ತಮ್ಮ ವಯಸ್ಸಿನ ಗೊಲ್ಲಬಾಲಕರೊಂದಿಗೆ ಜೊತೆ ಸೇರಿಕೊಂಡು ಆಟವಾಡಲು ಗೋಕುಲದಲ್ಲೆಲ್ಲ ಓಡಾಡುತ್ತಿದ್ದರು. ವ್ರಜದ ಭಾಗ್ಯವತಿಯರಾದ ಗೋಪಿಯರನ್ನು ಸಂತೋಷಪಡಿಸುತ್ತಾ ಅನೇಕ ರೀತಿಯ ಆಟಗಳನ್ನು ಆಡುತ್ತಾರೆ. ॥ ೨೭ ॥

ಕೃಷ್ಣಸ್ಯ ಗೋಪ್ಯೋ ರುಚಿರಂ ವೀಕ್ಷ್ಯ ಕೌಮಾರಚಾಪಲಮ್ ।
ಶೃಣ್ವಂತ್ಯಾಃ ಕಿಲ ತನ್ಮಾತುರಿತಿ ಹೋಚುಃ ಸಮಾಗತಾಃ ॥ ೨೮ ॥

ಶ್ರೀಕೃಷ್ಣನ ಕೌಮಾರ್ಯದ ಚಂಚಲತೆಯಿಂದ ಕೂಡಿದ ಆಟಪಾಟಗಳು ಅತ್ಯಂತ ಮನೋಹರವಾಗಿದ್ದುವು. ಗೋಪಿಯರಿಗಾದರೋ ಅವುಗಳು ಬಹಳ ಸುಂದರವಾಗಿ, ಮಧುರವಾಗಿ ಕಾಣುತ್ತಿದ್ದವು. ಒಂದು ದಿನ ಅವರೆಲ್ಲರೂ ಸೇರಿ ನಂದಗೋಪನ ಮನೆಗೆ ಬಂದು ತಾಯಿ ಯಶೋದೆಯನ್ನು ಸಂಬೋಧಿಸುತ್ತಾ ಕೃಷ್ಣನ ತುಂಟತನವನ್ನು ಹೇಳತೊಡಗಿದರು. ॥ ೨೮ ॥ ಅಮ್ಮಾ! ಯಶೋದೆಯೇ! ನಿನ್ನ ಮಗನು ಕೊಡುವ ಉಪಟಳವನ್ನು ಎಷ್ಟೆಂದು ವರ್ಣಿಸೋಣ! ನಿನ್ನ ಮಗನು ನಿಶ್ಚಯವಾಗಿ ಬಹಳ ತುಂಟನಾಗಿರುವನು. ಹಾಲು ಕರೆಯುವ ಸಮಯವಲ್ಲದಿದ್ದರೂ ಕರುಗಳನ್ನು ಬಿಟ್ಟುಬಿಡುತ್ತಾನೆ. ನಾವು ಗದರಿಸಿದರೆ ಅಣಕಿಸಿ ನಗುತ್ತಾನೆ. ಇವನು ಉಪಾಯಾಂತರಗಳಿಂದ ನಾವು ಬಚ್ಚಿಟ್ಟ ರುಚಿಕರವಾದ ಹಾಲು-ಮೊಸರುಗಳನ್ನು ಕದ್ದು ತಿನ್ನುತ್ತಾನೆ. ಕೇವಲ

ವತ್ಸಾನ್ಮುಂಚನ್ ಕ್ವಚಿದಸಮಯೇ ಕ್ರೋಶಸಂಜಾತಹಾಸಃ
ಸ್ತೇಯಂ ಸ್ವಾದ್ವತ್ತ್ಯಥ ದಧಿ ಪಯಃ ಕಲ್ಪಿತೈಃ ಸ್ತೇಯಯೋಗೈಃ ।
ಮರ್ಕಾನ್ಭೋಕ್ಷ್ಯನ್ವಿಭಜತಿ ಸ ಚೇನ್ನಾತ್ತಿ ಭಾಂಡಂ ಭಿನತ್ತಿ
ದ್ರವ್ಯಾಲಾಭೇ ಸಗೃಹಕುಪಿತೋ ಯಾತ್ಯುಪಕ್ರೋಶ್ಯ ತೋಕಾನ್ ॥ ೨೯ ॥

ಹಸ್ತಾಗ್ರಾಹ್ಯೇ ರಚಯತಿ ವಿಧಿಂ ಪೀಠಕೋಲೂಖಲಾದ್ಯೈ-
ಶ್ಛಿದ್ರಂ ಹ್ಯಂತರ್ನಿಹಿತವಯುನಃ ಶಿಕ್ಯಭಾಂಡೇಷು ತದ್ವಿತ್ ।
ಧ್ವಾಂತಾಗಾರೇ ಧೃತಮಣಿಗಣಂ ಸ್ವಾಂಗಮರ್ಥಪ್ರದೀಪಂ
ಕಾಲೇ ಗೋಪ್ಯೋ ಯರ್ಹಿ ಗೃಹಕೃತ್ಯೇಷು ಸುವ್ಯಗ್ರಚಿತ್ತಾಃ ॥ ೩೦ ॥

ಏವಂ ಧಾರ್ಷ್ಟ್ಯಾನ್ಯುಶತಿ ಕುರುತೇ ಮೇಹನಾದೀನಿ ವಾಸ್ತೌ
ಸ್ತೇಯೋಪಾಯೈರ್ವಿರಚಿತಕೃತಿಃ ಸುಪ್ರತೀಕೋ ಯಥಾಽಽಸ್ತೇ ।
ಇತ್ಥಂ ಸ್ತ್ರೀಭಿಃ ಸಭಯನಯನಶ್ರೀಮುಖಾಲೋಕಿನೀಭಿ-
ರ್ವ್ಯಾಖ್ಯಾತಾರ್ಥಾ ಪ್ರಹಸಿತಮುಖೀ ನ ಹ್ಯುಪಾಲಬ್ಧುಮೈಚ್ಛತ್ ॥ ೩೦ ॥

ಏಕದಾ ಕ್ರೀಡಮಾನಾಸ್ತೇ ರಾಮಾದ್ಯಾ ಗೋಪದಾರಕಾಃ ।
ಕೃಷ್ಣೋ ಮೃದಂ ಭಕ್ಷಿತವಾನಿತಿ ಮಾತ್ರೇ ನ್ಯವೇದಯನ್ ॥ ೩೨ ॥

ತಾನೇ ತಿಂದರೆ ತಿನ್ನಲಿ, ಪಾಪ. ಆದರೆ ಹಾಗೆಮಾಡದೆ ಇವನು ಎಲ್ಲ ಹಾಲು-ಮೊಸರುಗಳನ್ನು ಮಂಗಗಳಿಗೆ ಮತ್ತು ಜೊತೆಗಾರ ಬಾಲಕರಿಗೆ ಹಂಚಿಬಿಡುತ್ತಾನೆ. ಅವು ಕೂಡ ಹೊಟ್ಟೆತುಂಬಾ ತಿಂದು ಇನ್ನು ತಿನ್ನಲು ಆಗದಿದ್ದಾಗ ಇವನು ನಮ್ಮ ಹಾಲು-ಮೊಸರಿನ ಗಡಿಗೆಗಳನ್ನು ಒಡೆದು ಹಾಕುತ್ತಾನೆ. ಇವನಿಗೆ ಮನೆಯಲ್ಲಿ ಬೇಕಾದ ವಸ್ತುವು ಸಿಗದಿದ್ದರೆ ಮನೆಯವರ ಮೇಲೆ ರೇಗುತ್ತಾನೆ ಮತ್ತು ನಮ್ಮ ಮಕ್ಕಳನ್ನು ಕೀಟಲೆಮಾಡಿ ಅಳಿಸುತ್ತಾನೆ. ॥ ೨೯ ॥ ನಾವು ಹಾಲು ಮೊಸರುಗಳನ್ನು ನೆಲವುಗಳಲ್ಲಿ ಇಟ್ಟುಬಿಡುತ್ತೇವೆ. ಇವನ ಪುಟ್ಟ ಕೈ-ಕಾಲುಗಳು ಅಲ್ಲಿಗೆ ಎಟುಕದಿದ್ದಾಗ ನಾನಾ ಉಪಾಯಗಳನ್ನು ಮಾಡುತ್ತಾನೆ. ಕೆಲವೊಮ್ಮೆ ನಾಲ್ಕಾರು ಮಣೆಗಳನ್ನು ಒಂದರ ಮೇಲೊಂದು ಇಟ್ಟುಬಿಡುತ್ತಾನೆ. ಕೆಲವೊಮ್ಮೆ ಒರಳಿನಮೇಲೆ ಹತ್ತಿಬಿಡುತ್ತಾನೆ. ಕೆಲವೊಮ್ಮೆ ಒರಳಿನ ಮೇಲೆ ಮಣೆಯನ್ನಿಡುತ್ತಾನೆ. ಕೆಲವೊಮ್ಮೆ ತನ್ನ ಜೊತೆಯ ಬಾಲಕನ ಹೆಗಲೇರಿ ಬಿಡುತ್ತಾನೆ. ಇಷ್ಟಾದರೂ ಕಾರ್ಯಸಫಲವಾಗದಿದ್ದರೆ ಇವನು ಕೆಳಗಿನಿಂದಲೇ ಕೋಲಿನಿಂದ ಪಾತ್ರೆಗೆ ತೂತು ಮಾಡಿಬಿಡುತ್ತಾನೆ. ಯಾವ-ಯಾವ ನೆಲುವಿನಲ್ಲಿ ಯಾವ ಪಾತ್ರೆಯಲ್ಲಿ ಏನೇನಿದೆ ಎಂಬುದು ಇವನಿಗೆ ಚೆನ್ನಾಗಿ ತಿಳಿದಿರುತ್ತದೆ. ಯಾರಿಗೂ ತಿಳಿಯದಂತೆ ಪಾತ್ರೆಗೆ ಛಿದ್ರ ಕೊರೆಯುವ ಕಲೆ ಇವನಿಗೆ ಚೆನ್ನಾಗಿ ತಿಳಿದಿದೆ. ನಾವು ನಮ್ಮ ವಸ್ತುಗಳನ್ನು ಗಾಢವಾದ ಕತ್ತಲಲ್ಲಿ ಅಡಗಿಟ್ಟರೂ ನಂದ ರಾಣಿಯೇ! ನೀನು ಇವನಿಗೆ ತೊಡಿಸಿದ ನವರತ್ನಮಯ ಆಭೂಷಣಗಳ ಪ್ರಭೆಯಿಂದ ಎಲ್ಲವನ್ನೂ ನೋಡಿಕೊಳ್ಳುವನು. ಎಲ್ಲವನ್ನೂ ಕಾಣಿಸುವಂತಹ ಒಂದು ಜ್ಯೋತಿಯೇ ಇವನ ಶರೀರದಲ್ಲಿದೆ. ಯಾವಾಗ ಯಾರು ಎಲ್ಲಿ ಇರುತ್ತಾರೆ ಎಂಬುದು ಇವನಿಗೆ ನಿಶ್ಚಿತವಾಗಿ ತಿಳಿಯುವಷ್ಟು ಇವನು ಜಾಣನಾಗಿದ್ದಾನೆ. ನಾವೆಲ್ಲರೂ ಮನೆಗೆಲಸದಲ್ಲಿ ನಿರತರಾದಾಗ ಇವನು ತನ್ನ ಕಾರ್ಯವನ್ನು ಮಾಡಿಬಿಡುತ್ತಾನೆ. ॥ ೩೦ ॥ ಇಷ್ಟು ಮಾಡಿಯೂ ದೊಡ್ಡತನದ ಮಾತನಾಡುತ್ತಾ ನಮ್ಮನ್ನು ಕಳ್ಳಿಯರೆಂದು ದಬಾಯಿಸುತ್ತಾನೆ ಮತ್ತು ಮನೆಯ ಯಜಮಾನನಂತೆ ವರ್ತಿಸುತ್ತಾನೆ. ಇಷ್ಟೇ ಅಲ್ಲ, ನಾವು ಗುಡಿಸಿ, ಸಾರಿಸಿ ಸ್ವಚ್ಛಗೊಳಿಸಿದ ಮನೆಯನ್ನು ಇವನು ಮೂತ್ರ-ಪುರೀಷೋತ್ಸರ್ಜನಗಳಿಂದ ಕೆಡಿಸಿಬಿಡುತ್ತಾನೆ. ಮನೆ-ಮನೆಯಲ್ಲಿಯೂ ಹೀಗೆ ತುಂಟತನ ಮಾಡುವ ಈ ಚೋರನು ನಿನ್ನ ಬಳಿಯಲ್ಲಿ ಏನೂ ಅರಿಯದವನಂತೆ ಹೆದರಿ ನಿಂತಿದ್ದಾನಲ್ಲ! ಎಂದು ದೂರುತ್ತಿದ್ದ ಗೋಪಿಯರ ಮಾತನ್ನು ಕೇಳಿದ ಯಶೋದೆಯು ಭಯಗೊಂಡವನಂತೆ ನಟಿಸುತ್ತಿದ್ದ ಮುದ್ದುಕೃಷ್ಣನ ಮುದ್ದುಮುಖವನ್ನು ನೋಡಿ ನಕ್ಕುಬಿಟ್ಟಳು. ಮುದ್ದಿನ ಕಂದಮ್ಮನಾದ ಕೃಷ್ಣನಲ್ಲಿ ವಿಚಾರಿಸಲೂ ಆಗದಿರುವ ಆಕೆಯು ಗದರಿಸಲು ಸಾಧ್ಯವೇ? ॥ ೩೦ ॥

ಒಂದು ದಿನ ಬಲರಾಮನೇ ಮೊದಲಾದ ಗೋಪಬಾಲಕರು ಶ್ರೀಕೃಷ್ಣನೊಡನೆ ಆಟವಾಡುತ್ತಿದ್ದರು. ಆಗ ಒಮ್ಮೆ ಶ್ರೀಕೃಷ್ಣನು ಆಟ ಆಡುತ್ತಿರುವಾಗ ಮಣ್ಣು ತಿಂದನು. ಗೋಪಾಲಕರು ಇದನ್ನು ನೋಡಿ ಬಂದು ಯಶೋದೆಗೆ ದೂರಿತ್ತರು. ॥ ೩೨ ॥

ಸಾ ಗೃಹೀತ್ವಾ ಕರೇ ಕೃಷ್ಣಮುಪಾಲಭ್ಯ ಹಿತೈಷಿಣೀ ।
ಯಶೋದಾ ಭಯಸಂಭ್ರಾಂತಪ್ರೇಕ್ಷಣಾಕ್ಷಮಭಾಷತ ॥ ೩೩ ॥

ಕಸ್ಮಾನ್ಮೃದಮದಾಂತಾತ್ಮನ್ ಭವಾನ್ಭಕ್ಷಿತವಾನ್ರಹಃ ।
ವದಂತಿ ತಾವಕಾ ಹ್ಯೇತೇ ಕುಮಾರಾಸ್ತೇಽಗ್ರಜೋಽಪ್ಯಯಮ್ ॥ ೩೪ ॥

ಶ್ರೀಕೃಷ್ಣ ಉವಾಚ

ನಾಹಂ ಭಕ್ಷಿತವಾನಂಬ ಸರ್ವೇ ಮಿಥ್ಯಾಭಿಶಂಸಿನಃ ।
ಯದಿ ಸತ್ಯಗಿರಸ್ತರ್ಹಿ ಸಮಕ್ಷಂ ಪಶ್ಯ ಮೇ ಮುಖಮ್ ॥ ೩೫ ॥

ಯದ್ಯೇವಂ ತರ್ಹಿ ವ್ಯಾದೇಹೀತ್ಯುಕ್ತಃ ಸ ಭಗವಾನ್ಹರಿಃ ।
ವ್ಯಾದತ್ತಾವ್ಯಾಹತೈಶ್ವರ್ಯಃ ಕ್ರೀಡಾಮನುಜಬಾಲಕಃ ॥ ೩೬ ॥

ಸಾ ತತ್ರ ದದೃಶೇ ವಿಶ್ವಂ ಜಗತ್ ಸ್ಥಾಸ್ನು ಚ ಖಂ ದಿಶಃ ।
ಸಾದ್ರಿದ್ವೀಪಾಬ್ಧಿಭೂಗೋಲಂ ಸವಾಯ್ವಗ್ನೀಂದುತಾರಕಮ್ ॥ ೩೭ ॥

ಜ್ಯೋತಿಶ್ಚಕ್ರಂ ಜಲಂ ತೇಜೋ ನಭಸ್ವಾನ್ವಿಯದೇವ ಚ ।
ವೈಕಾರಿಕಾಣೀಂದ್ರಿಯಾಣಿ ಮನೋ ಮಾತ್ರಾ ಗುಣಾಸ್ತ್ರಯಃ ॥ ೩೮ ॥

ಏತದ್ವಿಚಿತ್ರಂ ಸಹ ಜೀವಕಾಲ-
ಸ್ವಭಾವಕರ್ಮಾಶಯಲಿಂಗಭೇದಮ್ ।
ಸೂನೋಸ್ತನೌ ವೀಕ್ಷ್ಯ ವಿದಾರಿತಾಸ್ಯೇ
ವ್ರಜಂ ಸಹಾತ್ಮಾನಮವಾಪ ಶಂಕಾಮ್ ॥ ೩೯ ॥

ಕಿಂ ಸ್ವಪ್ನ ಏತದುತ ದೇವಮಾಯಾ
ಕಿಂ ವಾ ಮದೀಯೋ ಬತ ಬುದ್ಧಿಮೋಹಃ ।
ಅಥೋ ಅಮುಷ್ಯೈವ ಮಮಾರ್ಭಕಸ್ಯ
ಯಃ ಕಶ್ಚನೌತ್ಪತ್ತಿಕ ಆತ್ಮಯೋಗಃ ॥ ೪೦ ॥

ಅಥೋ ಯಥಾವನ್ನ ವಿತರ್ಕಗೋಚರಂ
ಚೇತೋಮನಃ ಕರ್ಮವಚೋಭಿರಂಜಸಾ ।
ಯದಾಶ್ರಯಂ ಯೇನ ಯತಃ ಪ್ರತೀಯತೇ
ಸುದುರ್ವಿಭಾವ್ಯಂ ಪ್ರಣತಾಸ್ಮಿ ತತ್ಪದಮ್ ॥ ೪೧ ॥

ಮಗುವಿನ ಹಿತೈಷಿಣಿಯಾದ ಯಶೋದೆಯು ಒಡನೆಯೇ ಶ್ರೀಕೃಷ್ಣನ ಕೈಗಳನ್ನು ಹಿಡಿದುಕೊಂಡಳು. ಆ ಸಮಯದಲ್ಲಿ ಶ್ರೀಕೃಷ್ಣನು ಹೆದರಿದವನಂತೆ ನಟಿಸುತ್ತಿದ್ದ ಅವನ ಕಣ್ಣುಗಳು ಕಳ ಮಳವಾಗಿತ್ತು. ಯಶೋದೆಯು ಗದರಿಸುತ್ತಾ ಕೇಳಿದಳು ॥೩೩॥ ಎಲೋ ತುಂಟ! ನೀನು ಬಹಳ ಉದ್ಧಟನಾಗಿರುವೆ. ನೀನು ಅಡಗಿಕೊಂಡು ಮಣ್ಣನ್ನೇಕೆ ತಿಂದೆ? ಹಾಗೆ ತಿಂದೆಯೆಂದು ನಿನ್ನ ಗೆಳೆಯರು ಹೇಳುತ್ತಿದ್ದಾರೆ. ನಿನ್ನಣ್ಣ ಬಲರಾಮನೂ ಹೇಳುತ್ತಿರುವನು. ॥ ೩೪ ॥

ಭಗವಾನ್ ಶ್ರೀಕೃಷ್ಣನು ಹೇಳಿದನು – ಅಮ್ಮಾ! ನಾನು ಖಂಡಿತವಾಗಿ ಮಣ್ಣು ತಿಂದಿಲ್ಲ. ಇವರೆಲ್ಲರೂ ಸುಳ್ಳನ್ನೇ ಹೇಳುತ್ತಿರುವರು. ನೀನು ಇವರ ಮಾತು ನಿಜವೆಂದು ತಿಳಿಯುವೆಯಾದರೆ ನನ್ನ ಮುಖ ನಿನ್ನ ಇದಿರಿಗೆ ಇದೆಯಲ್ಲ, ನೀನೇ ಪ್ರತ್ಯಕ್ಷವಾಗಿ ಕಣ್ಣಿಂದ ನೋಡು. ಆಗ ನಾನು ಮಣ್ಣು ತಿಂದಿರುವೆನೋ, ಇಲ್ಲವೋ ಎಂಬುದು ಗೊತ್ತಾಗುತ್ತಲ್ಲ! ॥ ೩೫ ॥ ಯಶೋದೆಯು ಹೇಳಿದಳು ಸರಿ, ಹಾಗಾದರೆ ಬಾಯ್ತೆರೆ, ನಾನೇ ನೋಡುತ್ತೇನೆ. ತಾಯಿಯು ಹೀಗೆ ಹೇಳಿದಾಗ ಭಗವಾನ್ ಶ್ರೀಕೃಷ್ಣನು ತನ್ನ ಬಾಯನ್ನು ತೆರೆದನು. ಪರೀಕ್ಷಿತನೇ! ಶ್ರೀಕೃಷ್ಣನು ಅನಂತೈಶ್ವರ್ಯನು. ಅವನು ಕೇವಲ ಲೀಲೆಗಾಗಿಯೇ ಮನುಷ್ಯ ಬಾಲಕನಾಗಿದ್ದನು. ॥ ೩೬ ॥ ಯಶೋದೆಯು ಬಗ್ಗಿ ನೋಡುತ್ತಾಳೆ – ಅವನ ಬಾಯಲ್ಲಿ ಚರಾಚರ ಸಮಸ್ತ ಜಗತ್ತು ಅಡಕವಾಗಿರುವುದನ್ನು ನೋಡಿದಳು. ಆಕಾಶ, ದಿಕ್ಕುಗಳು, ಪರ್ವತಗಳು, ದ್ವೀಪಗಳೂ ಮತ್ತು ಸಮುದ್ರ ಸಹಿತ ಇಡೀ ಭೂಮಂಡಲ, ಬೀಸುವ ಗಾಳಿ, ವಿದ್ಯುತ್, ಅಗ್ನಿ, ಚಂದ್ರ-ತಾರೆಗಳು, ಸಂಪೂರ್ಣವಾದ ಜ್ಯೋತಿರ್ಮಂಡಲ, ಜಲ, ತೇಜಸ್ಸು, ಪವನ, ವಿಯತ್ (ಪ್ರಾಣಿಗಳು ಓಡಾಡುವ ಆಕಾಶ), ರಸಾತಳವೇ ಮುಂತಾದ ಅಧೋಲೋಕಗಳು, ಅಧಿಷ್ಠಾನ ದೇವತೆಗಳಿಂದ ಕೂಡಿದ ಇಂದ್ರಿಯಗಳು, ಮನಸ್ಸು ಪಂಚತನ್ಮಾತ್ರೆಗಳು ಮತ್ತು ತ್ರಿಗುಣಗಳು ಶ್ರೀಕೃಷ್ಣನ ಬಾಯಲ್ಲಿ ಕಂಡು ಬಂದವು. ॥ ೩೭-೩೮ ॥ ಪರೀಕ್ಷಿತನೇ! ಜೀವಾತ್ಮರು, ಕಾಲ, ಸ್ವಭಾವ, ಕರ್ಮ, ಅವರ ವಾಸನೆಗಳು, ಶರೀರಾದಿಗಳಿಂದ ಭಿನ್ನ-ಭಿನ್ನವಾಗಿ ತೋರುವ ಈ ಇಡೀ ವಿಚಿತ್ರ ಜಗತ್ತು, ಅದರಲ್ಲಿಯೇ ಇರುವ ಗೋಕುಲ ಮತ್ತು ಆ ಗೋಕುಲದಲ್ಲಿ ತಾನಿರುವುದನ್ನು ಯಶೋದೆಯು ಶ್ರೀಕೃಷ್ಣನ ಮುದ್ದಾದ ತೆರೆದ ಬಾಯಿಯಲ್ಲಿ ನೋಡಿ ಅವಳಿಗೆ ಶಂಕೆಯುಂಟಾಯಿತು. ॥ ೩೯ ॥ ನಾನೀಗ ಎಲ್ಲಿದ್ದೇನೆ? ಏನನ್ನು ನೋಡುತ್ತಿದ್ದೇನೆ? ಇದೇನು ಸ್ವಪ್ನವೇ? ಅಥವಾ ಭಗವಂತನ ಮಾಯೆಯೇ? ನನ್ನ ಬುದ್ಧಿಯಲ್ಲಿ ಏನಾದರೂ ಭ್ರಮೆಯುಂಟಾಗಲಿಲ್ಲವಲ್ಲ! ನನ್ನ ಈ ಬಾಲಕನಲ್ಲೇ ಯಾವುದೋ ಜನ್ಮಜಾತ ಯೋಗಸಿದ್ಧಿಯಿರುವುದೂ ಸಂಭವವಿದೆ. ಅದನ್ನೇ ನನಗೆ ತೋರುತ್ತಿರುವನು. ॥ ೪೦ ॥ ಯಾವುದು ತರ್ಕಕ್ಕೆ ಗೋಚರವಾಗುವುದಿಲ್ಲವೋ, ಯಾವುದು ಬುದ್ಧಿ, ಮನಸ್ಸು, ಕರ್ಮ ಮತ್ತು ವಾಕ್ಕುಗಳಿಗೆ ನಿಲುಕದೋ, ಈ ಇಡೀ ವಿಶ್ವವು ಯಾವುದನ್ನು ಆಶ್ರಯಿಸಿದೆಯೋ, ಯಾವುದರಿಂದ ಈ ಜಗತ್ತು ವ್ಯಾವಹಾರಿಕವಾಗಿ ಇರುವಂತೆ ತೋರುವುದೋ, ಯಾರ ಸ್ವರೂಪವು ಸರ್ವಥಾ ಅಚಿಂತ್ಯವಾಗಿದೆಯೋ ಅಂತಹ ಪ್ರಭುವಿಗೆ ನಾನು ನಮಸ್ಕರಿಸುತ್ತೇನೆ. ॥ ೪೧ ॥

ಅಹಂ ಮಮಾಸೌ ಪತಿರೇಷ ಮೇ ಸುತೋ
ವ್ರಜೇಶ್ವರಸ್ಯಾಖಿಲವಿತ್ತಪಾ ಸತೀ ।
ಗೋಪ್ಯಶ್ಚ ಗೋಪಾಃ ಸಹಗೋಧನಾಶ್ಚ ಮೇ
ಯನ್ಮಾಯಯೇತ್ಥಂ ಕುಮತಿಃ ಸ ಮೇ ಗತಿಃ ॥ ೪೨ ॥

ಇತ್ಥಂ ವಿದಿತತತ್ತ್ವಾಯಾಂ ಗೋಪಿಕಾಯಾಂ ಸ ಈಶ್ವರಃ ।
ವೈಷ್ಣವೀಂ ವ್ಯತನೋನ್ಮಾಯಾಂ ಪುತ್ರಸ್ನೇಹಮಯೀಂ ವಿಭುಃ ॥ ೪೩ ॥

ಸದ್ಯೋನಷ್ಟಸ್ಮೃತಿರ್ಗೋಪೀ ಸಾಽಽರೋಪ್ಯಾರೋಹಮಾತ್ಮಜಮ್ ।
ಪ್ರವೃದ್ಧಸ್ನೇಹಕಲಿಲಹೃದಯಾಽಽಸೀದ್ಯಥಾ ಪುರಾ ॥ ೪೪ ॥

ತ್ರಯ್ಯಾ ಚೋಪನಿಷದ್ಭಿಶ್ಚ ಸಾಂಖ್ಯಯೋಗೈಶ್ಚ ಸಾತ್ವತೈಃ ।
ಉಪಗೀಯಮಾನಮಾಹಾತ್ಮ್ಯಂ ಹರಿಂ ಸಾಮನ್ಯತಾತ್ಮಜಮ್ ॥ ೪೫ ॥

ರಾಜೋವಾಚ

ನಂದಃ ಕಿಮಕರೋದ್ ಬ್ರಹ್ಮನ್ ಶ್ರೇಯ ಏವಂ ಮಹೋದಯಮ್ ।
ಯಶೋದಾ ಚ ಮಹಾಭಾಗಾ ಪಪೌ ಯಸ್ಯಾಃ ಸ್ತನಂ ಹರಿಃ ॥ ೪೬ ॥

ಪಿತರೌ ನಾನ್ವವಿಂದೇತಾಂ ಕೃಷ್ಣೋದಾರಾರ್ಭಕೇಹಿತಮ್ ।
ಗಾಯಂತ್ಯದ್ಯಾಪಿ ಕವಯೋ ಯಲ್ಲೋಕಶಮಲಾಪಹಮ್ ॥ ೪೭ ॥

ಶ್ರೀಶುಕ ಉವಾಚ

ದ್ರೋಣೋ ವಸೂನಾಂ ಪ್ರವರೋ ಧರಯಾ ಸಹ ಭಾರ್ಯಯಾ ।
ಕರಿಷ್ಯಮಾಣ ಆದೇಶಾನ್ ಬ್ರಹ್ಮಣಸ್ತಮುವಾಚ ಹ ॥ ೪೮ ॥

ಜಾತಯೋರ್ನೌ ಮಹಾದೇವೇ ಭುವಿ ವಿಶ್ವೇಶ್ವರೇ ಹರೌ ।
ಭಕ್ತಿಃ ಸ್ಯಾತ್ಪರಮಾ ಲೋಕೇ ಯಯಾಂಜೋ ದುರ್ಗತಿಂ ತರೇತ್ ॥ ೪೯ ॥

ಪರಮಾತ್ಮನ ಮಾಯೆಯಿಂದ ಬುದ್ಧಿಗೆಟ್ಟವಳಾಗಿ ನಾನು 'ನನ್ನದು' ಎಂಬ ಅಹಂಕಾರದಲ್ಲಿ ತುಂಬಿಹೋಗಿದ್ದೇನೆ. ಇವನು ನನ್ನ ಪತಿ, ಇವನು ನನ್ನ ಮಗ, ವ್ರಜೇಶ್ವರನಾದ ನಂದಗೋಪನ ಸಕಲ ಐಶ್ವರ್ಯಕ್ಕೂ ನಾನೇ ಯಜಮಾನಿ, ನಾನು ಮಹಾಪತಿವ್ರತೆ, ಈ ಗೋಪಿಯರು – ಗೋಪಾಲಕರೆಲ್ಲರೂ ನನ್ನ ಸೇವಕರು ಮುಂತಾಗಿ ಅಹಂಕಾರ ಪಡುತ್ತಿದ್ದೇನೆ. ಇದಕ್ಕೆ ಭಗವಂತನ ಮಾಯೆಯೇ ಕಾರಣ. ಹೀಗೆ ಮಾಯಾವರಣವನ್ನು ಹೊದ್ದಿಸಿ ನನ್ನನ್ನು ಕುಮತಿಯನ್ನಾಗಿಸಿದ ಆ ಪರಮಾತ್ಮನಲ್ಲಿ ನಾನು ಶರಣು ಹೊಂದುತ್ತೇನೆ. ॥ ೪೨ ॥ ಹೀಗೆ ತಾಯಿ ಯಶೋದೆಯು ಶ್ರೀಕೃಷ್ಣನ ತತ್ತ್ವವನ್ನು ತಿಳಿದುಕೊಂಡಾಗ ಸರ್ವಶಕ್ತನಾದ, ಸರ್ವವ್ಯಾಪಕನಾದ ಪ್ರಭುವು ತನ್ನ ಪುತ್ರಸ್ನೇಹವೆಂಬ ವೈಷ್ಣವೀ ಯೋಗಮಾಯೆಯನ್ನು ಅವಳ ಹೃದಯದಲ್ಲಿ ಪ್ರಕಾಶಗೊಳಿಸಿದನು. ॥ ೪೩ ॥ ಯಶೋದೆಗೆ ಒಡನೆಯೇ ಆ ಘಟನೆ ಮರೆತುಹೋಯಿತು. ಆಕೆಯು ತನ್ನ ಮುದ್ದುಕೃಷ್ಣನನ್ನು ತೊಡೆಯಲ್ಲಿ ಕುಳ್ಳಿರಿಸಿಕೊಂಡಳು. ಮೊದಲು ಅವಳ ಹೃದಯದಲ್ಲಿ ಪ್ರೇಮಸಮುದ್ರವು ಉಕ್ಕುತ್ತಿರುವಂತೆಯೇ ಪುನಃ ಉಕ್ಕತೊಡಗಿತು. ॥ ೪೪ ॥ ಸಕಲ ವೇದಗಳೂ ಉಪನಿಷತ್ತುಗಳೂ, ಸಾಂಖ್ಯ-ಯೋಗಶಾಸ್ತ್ರಗಳೂ, ಭಕ್ತಜನರೂ ಯಾವ ಪರಮಪುರುಷನ ಮಾಹಾತ್ಮ್ಯೆಯನ್ನು ನಿರಂತರವಾಗಿ ಕೊಂಡಾಡುವರೋ ಅದೇ ಭಗವಂತನನ್ನು ಯಶೋದೆಯು ತನ್ನ ಪುತ್ರನೆಂದೇ ಭಾವಿಸುತ್ತಿದ್ದಳು. ॥ ೪೫ ॥

ಪರೀಕ್ಷಿದ್ರಾಜನು ಕೇಳಿದನು – ಬ್ರಾಹ್ಮಣಶ್ರೇಷ್ಠರೇ, ಭಗವಂತನನ್ನು ಪುತ್ರನನ್ನಾಗಿ ಪಡೆಯಲು ನಂದಗೋಪನು ಎಂತಹ ಅದ್ಭುತವಾದ ಮಂಗಲಮಯವಾದ ಸಾಧನೆಯನ್ನು ಮಾಡಿದ್ದನು? ಭಗವಂತನು ಅಕ್ಕರೆಯಿಂದ ಸ್ತನ್ಯವನ್ನು ಕುಡಿಯುತ್ತಿದ್ದ ಪರಮ ಭಾಗ್ಯವತಿಯಾದ ಯಶೋದಾದೇವಿಯು ಎಂತಹ ಮಹತ್ತಾದ ತಪಸ್ಸನ್ನು ಮಾಡಿದ್ದಳು! ॥ ೪೬ ॥ ಸಕಲ ಪಾಪಗಳನ್ನು ಹೋಗಲಾಡಿಸುವ ಭಗವಂತನ ಪರಮಾದ್ಭುತವಾದ ಬಾಲಲೀಲೆಗಳನ್ನು ಈಗಲೂ ಜ್ಞಾನೀ ಪುರುಷರು ವರ್ಣಿಸುತ್ತಿರುತ್ತಾರೆ. ಅಂತಹ ಲೀಲೆಗಳನ್ನು ನೋಡಿ ಆನಂದಿಸಲು ಹೆತ್ತ ತಂದೆ-ತಾಯಿಗಳಾದ ವಸುದೇವ-ದೇವಕಿಯರಿಗೂ ಲಭ್ಯವಾಗಲಿಲ್ಲವೋ, ಅವುಗಳನ್ನು ನೋಡಿ ಆನಂದಿಸಲು ನಂದ-ಯಶೋದೆಯರಿಗೆ ಹೇಗೆ ಸಾಧ್ಯವಾಯಿತು? ಇದನ್ನು ದಯಮಾಡಿ ತಿಳಿಸಿರಿ. ॥ ೪೭ ॥

ಶ್ರೀಶುಕಮಹಾಮುನಿಗಳು ಹೇಳಿದರು – ಪರೀಕ್ಷಿತನೇ! ನಂದಗೋಪನು ಹಿಂದಿನ ಜನ್ಮದಲ್ಲಿ ಒಬ್ಬ ಶ್ರೇಷ್ಠನಾದ ವಸುವಾಗಿದ್ದನು. 'ದ್ರೋಣ' ಎಂದು ಅವನಿಗೆ ಹೆಸರಿತ್ತು. ಅವನ ಪತ್ನಿಯ ಹೆಸರು 'ಧರಾದೇವಿ' ಎಂದಿತ್ತು. ಅವರು ಬ್ರಹ್ಮದೇವರ ಆದೇಶವನ್ನು ಪಾಲಿಸುವುದಕ್ಕಾಗಿ ಅವರಲ್ಲಿ ವಿಜ್ಞಾಪಿಸಿಕೊಂಡರು.॥ ೪೮ ॥ ಚತುರ್ಮುಖನೇ! ನಿನ್ನ ಆಜ್ಞೆಯಂತೆ ನಾವು ಭೂಮಿಯಲ್ಲಿ ಹುಟ್ಟಿದಾಗ ಯಾವ ಅನನ್ಯ ಭಕ್ತಿಯ ಮೂಲಕ ಜಗತ್ತಿನ ಜನರು ಅನಾಯಾಸವಾಗಿಯೇ ದುರ್ಗತಿಗಳನ್ನು ದಾಟಿಹೋಗುವರೋ ಅಂತಹ ಅನನ್ಯವಾದ ಪ್ರೇಮಮಯವಾದ ಭಕ್ತಿಯು ಜಗದೀಶ್ವರನಾದ ಭಗವಾನ್ ಶ್ರೀಕೃಷ್ಣನಲ್ಲಿ ಉಂಟಾಗುವಂತೆ ಅನುಗ್ರಹಿಸು. ॥ ೪೯ ॥

ಅಸ್ತ್ವಿತ್ಯುಕ್ತಃ ಸ ಭಗವಾನ್ವ್ರಜೇ ದ್ರೋಣೋ ಮಹಾಯಶಾಃ ।
ಜಜ್ಞೇ ನಂದ ಇತಿ ಖ್ಯಾತೋ ಯಶೋದಾ ಸಾ ಧರಾಭವತ್ ॥ ೫೦ ॥

ತತೋ ಭಕ್ತಿರ್ಭಗವತಿ ಪುತ್ರೀಭೂತೇ ಜನಾರ್ದನೇ ।
ದಂಪತ್ಯೋರ್ನಿತರಾಮಾಸೀದ್ಗೋಪಗೋಪೀಷು ಭಾರತ ॥ ೫೧ ॥

ಕೃಷ್ಣೋ ಬ್ರಹ್ಮಣ ಆದೇಶಂ ಸತ್ಯಂ ಕರ್ತುಂ ವ್ರಜೇ ವಿಭುಃ ।
ಸಹರಾಮೋ ವಸಂಶ್ಚಕ್ರೇ ತೇಷಾಂ ಪ್ರೀತಿಂ ಸ್ವಲೀಲಯಾ ॥ ೫೨ ॥

ಬ್ರಹ್ಮದೇವರು- 'ಹಾಗೆಯೇ ಆಗಲಿ' ಎಂದು ಅವರನ್ನು ಹರಸಿದರು. ಆ ಪರಮಯಶಸ್ವಿ ಭಗವನ್ಮಯ ದ್ರೋಣನೇ ವ್ರಜದಲ್ಲಿ ಹುಟ್ಟಿ ಅವರ ಹೆಸರು ನಂದಗೋಪನೆಂದಾಯಿತು ಮತ್ತು ಆ ಧರಾದೇವಿಯೇ ಈ ಜನ್ಮದಲ್ಲಿ ಯಶೋದಾ ಎಂಬ ಹೆಸರಿನಿಂದ ಅವನ ಪತ್ನಿಯಾದಳು. ॥ ೫೦ ॥ ಪರೀಕ್ಷಿತನೇ ! ಈ ಜನ್ಮದಲ್ಲಿ ಜನ್ಮ-ಮೃತ್ಯುರೂಪವಾದ ಚಕ್ರದಿಂದ ಬಿಡುಗಡೆಗೊಳಿಸುವಂತಹ ಭಗವಂತನು ಇವರಿಗೆ ಪುತ್ರನಾದಾಗ ಸಮಸ್ತ ಗೋಪ-ಗೋಪಿಕೆಯರಿಗಿಂತ ಮಿಗಿಲಾಗಿ ಈ ದಂಪತಿಗಳಾದ ನಂದ-ಯಶೋದೆಯರಿಗೆ ಶ್ರೀಕೃಷ್ಣನ ಕುರಿತು ಅತ್ಯಂತ ಪ್ರೇಮ ಉಂಟಾಯಿತು. ॥ ೫೧ ॥ ಬ್ರಹ್ಮದೇವರ ಮಾತನ್ನು ಸತ್ಯವಾಗಿಸಲೆಂದೇ ಭಗವಾನ್ ಶ್ರೀಕೃಷ್ಣನು ಬಲರಾಮನೊಂದಿಗೆ ವ್ರಜದಲ್ಲಿದ್ದು ಸಮಸ್ತ ವ್ರಜವಾಸಿಗಳನ್ನೂ ತನ್ನ ಬಾಲಲೀಲೆಗಳಿಂದ ಆನಂದಗೊಳಿಸುತ್ತಿದ್ದನು. ॥ ೫೨ ॥

ಎಂಟನೆಯ ಅಧ್ಯಾಯವು ಮುಗಿಯಿತು. ॥ ೮ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮ ಸ್ಕಂಧೇ ಪೂರ್ವಾರ್ಧೇ ವಿಶ್ವರೂಪದರ್ಶನೇಽಷ್ಟಮೋಽಧ್ಯಾಯಃ ॥ ೮ ॥

ಒಂಭತ್ತನೆಯ ಅಧ್ಯಾಯ

ಶ್ರೀಕೃಷ್ಣನನ್ನು ಒರಳಿಗೆ ಕಟ್ಟಿಹಾಕಿದುದು

ಶ್ರೀಶುಕ ಉವಾಚ

ಏಕದಾ ಗೃಹದಾಸೀಷು ಯಶೋದಾ ನಂದಗೇಹಿನೀ ।
ಕರ್ಮಾಂತರನಿಯುಕ್ತಾಸು ನಿರ್ಮಮಂಥ ಸ್ವಯಂ ದಧಿ ॥ ೧ ॥

ಯಾನಿ ಯಾನೀಹ ಗೀತಾನಿ ತದ್ಬಾಲಚರಿತಾನಿ ಚ ।
ದಧಿನಿರ್ಮಂಥನೇ ಕಾಲೇ ಸ್ಮರಂತೀ ತಾನ್ಯಗಾಯತ ॥ ೨ ॥

ಕ್ಷೌಮಂ ವಾಸಃ ಪೃಥುಕಟಿತಟೇ ಬಿಭ್ರತೀ ಸೂತ್ರನದ್ಧಂ
ಪುತ್ರಸ್ನೇಹಸ್ನುತಕುಚಯುಗಂ ಜಾತಕಂಪಂ ಚ ಸುಭ್ರೂಃ ।
ರಜ್ಜ್ವಾಕರ್ಷಶ್ರಮಭುಜಚಲತ್ಕಂಕಣೌ ಕುಂಡಲೇ ಚ
ಸ್ವಿನ್ನಂ ವಕ್ತ್ರಂ ಕಬರವಿಗಲನ್ಮಾಲತೀ ನಿರ್ಮಮಂಥ ॥ ೩ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ ! ಒಮ್ಮೆ ನಂದಪತ್ನಿಯಾದ ಯಶೋದೆಯು ಮನೆಗೆಲಸದ ದಾಸಿಯರನ್ನು ಬೇರೆ ಮನೆಗೆಲಸಕ್ಕೆ ನೇಮಿಸಿ, ಸ್ವತಃ ತನ್ನ ಕಂದಮ್ಮನಿಗೆ ಬೆಣ್ಣೆಯನ್ನು ತಿನ್ನಿಸುವ ಸಲುವಾಗಿ ಮೊಸರುಕಡೆಯಲು ಪ್ರಾರಂಭಿಸಿದಳು. ॥ ೧ ॥ ಮಹಾರಾಜಾ ! ನಾನು ಇದುವರೆಗೆ ಭಗವಂತನ ಯಾವ ಬಾಲಲೀಲೆಗಳನ್ನು ನಿನಗೆ ವರ್ಣಿಸಿ ಹೇಳಿರುವೆನೋ ಅವೆಲ್ಲವನ್ನೂ ಸ್ಮರಿಸಿಕೊಳ್ಳುತ್ತಾ ಹೃದಯಂಗಮವಾಗಿ ಹಾಡುತ್ತಾ ಯಶೋದೆಯು ಮೊಸರು ಕಡೆಯುತ್ತಿದ್ದಳು. ॥ ೨ ॥ ಹೀಗೆ ಮೊಸರು ಕಡೆಯುತ್ತಿರುವಾಗ ಯಶೋದೆಯು ದಿವ್ಯವಾದ ರೇಷ್ಮೆಯ ಸೀರೆಯನ್ನು ಉಟ್ಟಿದ್ದಳು. ಆಕೆಯು ನಡುವಿನಲ್ಲಿ ಕಿರುಗೆಜ್ಜೆಗಳಿಂದ ಕೂಡಿದ ಸ್ವರ್ಣಮಯವಾದ ಸೊಂಟಪಟ್ಟಿಯನ್ನು ಧರಿಸಿದ್ದಳು. ಪುತ್ರಸ್ನೇಹದ ಆಧಿಕ್ಯದಿಂದ ಆಕೆಯ ಸ್ತನಗಳಿಂದ ಹಾಲು ಒಸರುತ್ತಿತ್ತು ಹಾಗೂ ಕಂಪಿಸುತ್ತಿದ್ದವು. ಕಡೆಗೋಲ ಹಗ್ಗವನ್ನು ಎಳೆಯುತ್ತಿರುವಾಗ ಆಕೆಗೆ ಬಳಲಿಕೆ ಉಂಟಾಗಿತ್ತು. ಕೈಗಳಿಂದ ಮೊಸರು ಕಡೆಯುವಾಗ ಕೈಯಲ್ಲಿ ಧರಿಸಿದ ರತ್ನಕಂಕಣಗಳೂ ಝಣ-ಝಣಿಸುತ್ತಿದ್ದವು. ಕರ್ಣಕುಂಡಲಗಳು ಮುಖ ಮಂಡಲದ ಮೇಲೆ ತಮ್ಮ ಕಾಂತಿಯನ್ನು ಎರಚುತ್ತಾ ಅಲುಗಾಡುತ್ತಿದ್ದವು. ಮುಖವು ಬೆವರಿತ್ತು. ಮುಡಿಯಲ್ಲಿ ಮುಡಿದ ಹೂವುಗಳು ಉದುರುತ್ತಿದ್ದವು. ಸುಂದರವಾದ ಹುಬ್ಬುಗಳಿಂದ ಕಂಗೊಳಿಸುತ್ತಿದ್ದ ಯಶೋದೆಯು ಹೀಗೆ ಮೊಸರು ಕಡೆಯುತ್ತಿದ್ದಳು. ॥ ೩ ॥

ತಾಂ ಸ್ತನ್ಯಕಾಮ ಆಸಾದ್ಯ ಮಥ್ನಂತೀಂ ಜನನೀಂ ಹರಿಃ ।
ಗೃಹೀತ್ವಾ ದಧಿಮಂಥಾನಂ ನ್ಯಷೇಧತ್ಪ್ರೀತಿಮಾವಹನ್ ॥ ೪ ॥

ತಮಂಕಮಾರೂಢಮಪಾಯಯತ್ಸ್ತನಂ
ಸ್ನೇಹಸ್ನುತಂ ಸಸ್ಮಿತಮೀಕ್ಷತೀ ಮುಖಮ್ ।
ಅತೃಪ್ತಮುತ್ಸೃಜ್ಯ ಜವೇನ ಸಾ ಯಯಾ-
ವುತ್ಸಿಚ್ಯಮಾನೇ ಪಯಸಿ ತ್ವಧಿಶ್ರಿತೇ ॥ ೫ ॥

ಸಂಜಾತಕೋಪಃ ಸ್ಫುರಿತಾರುಣಾಧರಂ
ಸಂದಶ್ಯ ದದ್ಭಿರ್ದಧಿಮಂಥಭಾಜನಮ್ ।
ಭಿತ್ತ್ವಾ ಮೃಷಾಶ್ರುರ್ದೃಷದಶ್ಮನಾ ರಹೋ
ಜಘಾಸ ಹೈಯಂಗವಮಂತರಂ ಗತಃ ॥ ೬ ॥

ಉತ್ತಾರ್ಯ ಗೋಪೀ ಸುಶೃತಂ ಪಯಃ ಪುನಃ
ಪ್ರವಿಶ್ಯ ಸಂದೃಶ್ಯ ಚ ದಧ್ಯಮತ್ರಕಮ್ ।
ಭಗ್ನಂ ವಿಲೋಕ್ಯ ಸ್ವಸುತಸ್ಯ ಕರ್ಮ ತತ್
ಜಹಾಸ ತಂ ಚಾಪಿ ನ ತತ್ರ ಪಶ್ಯತೀ ॥ ೭ ॥

ಉಲೂಖಲಾಂಘ್ರೇರುಪರಿ ವ್ಯವಸ್ಥಿತಂ
ಮರ್ಕಾಯ ಕಾಮಂ ದದತಂ ಶಿಚಿ ಸ್ಥಿತಮ್ ।
ಹೈಯಂಗವಂ ಚೌರ್ಯವಿಶಂಕಿತೇಕ್ಷಣಂ
ನಿರೀಕ್ಷ್ಯ ಪಶ್ಚಾತ್ಸುತಮಾಗಮಚ್ಛನೈಃ ॥ ೮ ॥

ತಾಮಾತ್ತಯಷ್ಟಿಂ ಪ್ರಸಮೀಕ್ಷ್ಯ ಸತ್ವರಃ
ತತೋಽವರುಹ್ಯಾಪಸಸಾರ ಭೀತವತ್ ।
ಗೋಪ್ಯನ್ವಧಾವನ್ನ ಯಮಾಪ ಯೋಗಿನಾಂ
ಕ್ಷಮಂ ಪ್ರವೇಷ್ಟುಂ ತಪಸೇರಿತಂ ಮನಃ ॥ ೯ ॥

ಆ ವೇಳೆಗೆ ಮುದ್ದುಕೃಷ್ಣನು ಸ್ತನ್ಯಪಾನ ಮಾಡುವ ಸಲುವಾಗಿ ಮೊಸರು ಕಡೆಯುತ್ತಿದ್ದ ತಾಯಿಯ ಬಳಿಗೆ ಬಂದನು. ಅವನು ತನ್ನ ತಾಯಿಯ ಹೃದಯದಲ್ಲಿ ಪ್ರೇಮವನ್ನು ಮತ್ತು ಆನಂದವನ್ನು ಹೆಚ್ಚಿಸುತ್ತಾ ಕಡೆಗೋಲನ್ನು ತನ್ನ ಪುಟ್ಟಕೈಗಳಿಂದ ಹಿಡಿದುಕೊಂಡು ತಾಯಿಯನ್ನು ಮೊಸರು ಕಡೆಯಲು ತಡೆದನು. ॥ ೪ ॥ ಶ್ರೀಕೃಷ್ಣನು ತಾಯಿಯಾದ ಯಶೋದೆಯ ತೊಡೆಯೇರಿದನು. ವಾತ್ಸಲ್ಯ ಸ್ನೇಹದ ಆಧಿಕ್ಯದಿಂದ ಆಕೆಯ ಸ್ತನಗಳಿಂದ ಹಾಲು ತಾನಾಗಿಯೇ ಸುರಿಯುತ್ತಿತ್ತು. ಅವಳು ಕೃಷ್ಣನಿಗೆ ಹಾಲುಣಿಸತೊಡಗಿದಳು ಹಾಗೂ ಮಂದಮಧುರ ಮುಗುಳ್ನಗುತ್ತಿದ್ದ ಕೃಷ್ಣನ ಮುಖವನ್ನೇ ನೋಡುತ್ತಿದ್ದಳು. ಇಷ್ಟರಲ್ಲಿ ಒಲೆಯ ಮೇಲಿಟ್ಟ ಹಾಲುಕ್ಕಿ ಬಂತು. ಅದನ್ನು ನೋಡಿದ ಯಶೋದೆಯು ಅತೃಪ್ತನಾದ ಅವನನ್ನು ಅಲ್ಲೇ ಬಿಟ್ಟು ಲಗುಬಗೆಯಿಂದ ಹಾಲಿಳಿಸಲು ಹೊರಟು ಹೋದಳು. ॥ ೫ ॥ ಇದರಿಂದ ಶ್ರೀಕೃಷ್ಣನಿಗೆ ಸ್ವಲ್ಪ ಸಿಟ್ಟು ಬಂತು. ಅವನ ಕೆಂದುಟಿಗಳು ಅದುರತೊಡಗಿದವು. ಅವನ್ನು ಹಲ್ಲುಗಳಿಂದ ಕಚ್ಚಿ ಶ್ರೀಕೃಷ್ಣನು ಬಳಿಯಲ್ಲೇ ಇದ್ದ ಗುಂಡುಕಲ್ಲಿನಿಂದ ಮೊಸರಿನ ಮಡಕೆಯನ್ನು ಒಡೆದುಹಾಕಿದನು. ಕಳ್ಳ ಅಳುವಿನಿಂದ ಕಣ್ಣಲ್ಲಿ ನೀರನ್ನು ತುಂಬಿಕೊಂಡು ಮೆಲ್ಲನೆ ಒಳಮನೆಗೆ ಹೋಗಿ ಅಲ್ಲಿಟ್ಟಿದ್ದ ಬೆಣ್ಣೆಯನ್ನು ತಿನ್ನತೊಡಗಿದನು. ॥ ೬ ॥

ಯಶೋದೆಯು ಕಾದಿರುವ ಹಾಲನ್ನು ಕೆಳಗಿಳಿಸಿ ಪುನಃ ಮೊಸರು ಕಡೆವಲ್ಲಿಗೆ ಬಂದಳು. ಅಲ್ಲಿ ಬಂದು ನೋಡಿದಳು - ಮೊಸರಿನ ಗಡಿಗೆಯು ಪುಡಿ-ಪುಡಿಯಾಗಿ ಮೊಸರೆಲ್ಲ ಚೆಲ್ಲಿ ಹೋಗಿತ್ತು. ಇದು ಶ್ರೀಕೃಷ್ಣನದೇ ಕೆಲಸವೆಂದು ತಿಳಿಯುವಲ್ಲಿ ತಡವಾಗಲಿಲ್ಲ. ಜೊತೆಗೆ ಅವನು ಅಲ್ಲಿ ಇಲ್ಲದಿರುವುದನ್ನು ನೋಡಿ ಯಶೋದೆಯು ನಗತೊಡಗಿದಳು. ॥ ೭ ॥ ಅಲ್ಲಿ-ಇಲ್ಲಿ ಹುಡುಕಿದಾಗ ಮತ್ತೊಂದು ಕೊಠಡಿಯಲ್ಲಿ ಶ್ರೀಕೃಷ್ಣನು ಒರಳಿನ ಮೇಲೆ ನಿಂತು ನೆಲುವಿನ ಮೇಲೆ ಇಟ್ಟ ಬೆಣ್ಣೆಯನ್ನು ತೆಗೆ-ತೆಗೆದು ಕೋತಿಗಳಿಗೆ ಮತ್ತು ಸಂಗಾತಿಗಳಿಗೆ ಯಥೇಷ್ಟವಾಗಿ ತಿನ್ನಿಸುತ್ತಿದ್ದನು. ಎಲ್ಲಾದರೂ ತನ್ನ ಕಳ್ಳತನ ಬಯಲಾದೀತು ಎಂದು ಹೆದರಿಕೆಯಿಂದ ಸುತ್ತಲೂ ನೋಡುತ್ತಾ ಇದ್ದನು. ಇದನ್ನು ನೋಡಿದ ಯಶೋದಾ ದೇವಿಯು ಹಿಂದಿನಿಂದ ನಿಧಾನವಾಗಿ ಅವನ ಬಳಿಗೆ ಬಂದಳು. ॥ ೮ ॥ ತಾಯಿಯು ಕೈಯಲ್ಲಿ ಕೋಲನ್ನು ಹಿಡಿದುಕೊಂಡು ತನ್ನ ಕಡೆಗೆ ಬರುತ್ತಿರುವುದನ್ನು ನೋಡಿದಾಗ ಶ್ರೀಕೃಷ್ಣನು ಒಡನೆಯೇ ಒರಳಿಂದ ಕೆಳಗೆ ಹಾರಿದನು ಮತ್ತು ಹೆದರಿದವನಂತೆ ನಟಿಸುತ್ತಾ ಓಡಿದನು. ಪರೀಕ್ಷಿತನೇ! ಮಹಾಯೋಗಿಗಳು ತಪಸ್ಸಿನಿಂದ ತಮ್ಮ ಮನಸ್ಸನ್ನು ಏಕಾಗ್ರಗೊಳಿಸಿ ಶುದ್ಧವಾಗಿಸಿಕೊಂಡರೂ ಯಾವನಲ್ಲಿ ಮನಸ್ಸಿನಿಂದಲೂ ಪ್ರವೇಶಿಸಲು ಸಾಧ್ಯವಾಗುವುದಿಲ್ಲವೋ ಅಂತಹ ಭಗವಂತನನ್ನು ಹಿಡಿಯಲು ಅವನ ಹಿಂದೆ-ಹಿಂದೆ ಯಶೋದೆಯು ಓಡುತ್ತಿರುವಳು. ॥ ೯ ॥ ಹೀಗೆ ತಾಯಿ ಯಶೋದೆಯು ಶ್ರೀಕೃಷ್ಣನ ಹಿಂದೆ ಓಡತೊಡಗಿದಾಗ ಸ್ಥೂಲವಾದ ನಿತಂಬಗಳ ಭಾರದಿಂದಲೂ ಅವುಗಳ ಕಂಪನದಿಂದಲೂ ಅವಳ ಓಟ ಮಂದವಾಯಿತು. ಆಕೆಯು ಮುಂದ ಮುಂದಕ್ಕೆ ಓಡುತ್ತಿರುವಾಗ ಅವಳ ಹೆರಳು ಬಿಚ್ಚಿಹೋಗಿ

ಅನ್ವಂಚಮಾನಾ ಜನನೀ ಬೃಹಚ್ಚಲತ್
ಶ್ರೋಣೀಭರಾಕ್ರಾಂತಗತಿಃ ಸುಮಧ್ಯಮಾ ।
ಜವೇನ ವಿಸ್ರಂಸಿತ ಕೇಶಬಂಧನ-
ಚ್ಯುತಪ್ರಸೂನಾನುಗತಿಃ ಪರಾಮೃಶತ್ ॥ ೧೦ ॥

ಅದರಲ್ಲಿದ್ದ ಹೂವುಗಳು ದಾರಿಯುದ್ದಕ್ಕೆ ಎರಚಿದಂತೆ ಬೀಳುತ್ತಿದ್ದುವು. ಹೀಗೆ ಸುಂದರಿಯಾದ ಯಶೋದೆಯು ಹೇಗಾದರೂ ಅವನನ್ನು ಹಿಡಿದುಬಿಟ್ಟಳು. (ಅಥವಾ ತಾಯಿಯ ಕಷ್ಟವನ್ನು ನೋಡಲಾರದೆ ಕರುಣಾಳು ಕೃಷ್ಣನೇ ತನ್ನ ವೇಗವನ್ನು ಕಡಿಮೆಮಾಡಿ ತಾಯಿಯ ಕೈಗೆ ಸಿಕ್ಕಿದನೋ!) ॥ ೧೦ ॥

ಕೃತಾಗಸಂ ತಂ ಪ್ರರುದಂತಮಕ್ಷಿಣೀ
ಕಷಂತಮಂಜನ್ಮಷಿಣೀ ಸ್ವಪಾಣಿನಾ ।
ಉದ್ವೀಕ್ಷಮಾಣಂ ಭಯವಿಹ್ವಲೇಕ್ಷಣಂ
ಹಸ್ತೇ ಗೃಹೀತ್ವಾ ಭಿಷಯಂತ್ಯವಾಗುರತ್ ॥ ೧೧ ॥

ಎಡಗೈಯಿಂದ ಮುದ್ದು ಕೃಷ್ಣನನ್ನು ಹಿಡಿದುಕೊಂಡು, ಬಲಗೈಯಲ್ಲಿದ್ದ ಕೋಲನ್ನು ತೋರಿಸುತ್ತಾ 'ಪೋರ! ಈಗ ಸಿಕ್ಕಿದೆಯಲ್ಲ! ನಾನೇನು ಮಾಡುವೆನು ಗೊತ್ತೇ?' ಎಂದು ಗದರಿಸಿದಳು. ಅಪರಾಧಿಯಾದ ಶ್ರೀಕೃಷ್ಣ ಬಿಕ್ಕಿ-ಬಿಕ್ಕಿ ಅಳುತ್ತಿದ್ದನು. ತಾಯಿ ಎಲ್ಲಿ ಹೊಡೆದುಬಿಡುವಳೋ ಎಂಬ ಭಯವನ್ನು ಕಣ್ಣುಗಳಿಂದಲೂ ಮುಖದಿಂದಲೂ ಸೂಚಿಸುತ್ತಿದ್ದನು. ಅಳುತ್ತಾ ಕೈಗಳಿಂದ ಕಣ್ಣುಗಳನ್ನು ಒರೆಸಿಕೊಳ್ಳುವಾಗ ಕಣ್ಣಿಗೆ ಹಚ್ಚಿದ ಕಾಡಿಗೆಯೆಲ್ಲವೂ ಮುಖಕ್ಕೆಲ್ಲ ಹರಡಿಕೊಂಡಿತು. ॥ ೧೧ ॥

ತ್ಯಕ್ತ್ವಾ ಯಷ್ಟಿಂ ಸುತಂ ಭೀತಂ ವಿಜ್ಞಾಯಾರ್ಭಕವತ್ಸಲಾ ।
ಇಯೇಷ ಕಿಲ ತಂ ಬದ್ಧುಂ ದಾಮ್ನಾತದ್ವೀರ್ಯಕೋವಿದಾ ॥ ೧೨ ॥

ತನ್ನ ಕೈಯಲ್ಲಿರುವ ಕೋಲನ್ನು ನೋಡಿ ತನ್ನ ಮಗನು ಬಹಳ ಭಯಪಟ್ಟಿರುವನೆಂದು ವಾತ್ಸಲ್ಯಮಯಿಯಾದ ತಾಯಿಯು ಭಾವಿಸಿದಳು. ಕೈಯಲ್ಲಿದ್ದ ಕೋಲನ್ನು ಬಿಸಾಡಿದಳು. ಇವನೆಲ್ಲಾದರೂ ಓಡಿಹೋದಾನೆಂದು ಯೋಚಿಸಿ ಇವನನ್ನು ಹಗ್ಗದಿಂದ ಕಟ್ಟಿಹಾಕಬೇಕೆಂದು ನಿಶ್ಚಯಿಸಿದಳು. ಪರೀಕ್ಷಿತನೇ! ಪುತ್ರವತ್ಸಲೆಯಾದ ಅವಳಿಗೆ ತನ್ನ ಮಗನ ಐಶ್ವರ್ಯವೆಷ್ಟೆಂಬುದು ತಿಳಿದಿರಲಿಲ್ಲ. ॥ ೧೨ ॥

ನ ಚಾಂತರ್ನ ಬಹಿರ್ಯಸ್ಯ ನ ಪೂರ್ವಂ ನಾಪಿ ಚಾಪರಮ್ ।
ಪೂರ್ವಾಪರಂ ಬಹಿಶ್ಚಾಂತರ್ಜಗತೋ ಯೋ ಜಗಚ್ಚ ಯಃ ॥ ೧೩ ॥

ತಂ ಮತ್ವಾಽಽತ್ಮಜಮವ್ಯಕ್ತಂ ಮರ್ತ್ಯಲಿಂಗ ಮಧೋಕ್ಷಜಮ್ ।
ಗೋಪಿಕೋಲೂಖಲೇ ದಾಮ್ನಾ ಬಬಂಧ ಪ್ರಾಕೃತಂ ಯಥಾ ॥ ೧೪ ॥

ಸರ್ವಾತ್ಮಕನಾದ ಇವನಿಗೆ ಒಳಗೆ- ಹೊರಗೆಂಬುದಿಲ್ಲ, ಆದಿ-ಅಂತ್ಯಗಳಿಲ್ಲ. ಇವನು ಜಗತ್ಸೃಷ್ಟಿಗೆ ಮೊದಲೂ ಇದ್ದನು. ಜಗತ್ಪ್ರಳಯವಾದ ಮೇಲೆಯೂ ಇರುವನು. ಈ ಜಗತ್ತಿನೊಳಗೆ ಇದ್ದೇ ಇದ್ದಾನೆ, ಹೊರಗಿನ ರೂಪಗಳಲ್ಲೂ ಇದ್ದಾನೆ; ಜಗತ್ಸ್ವರೂಪನೂ ಇವನೇ ಇದ್ದಾನೆ. ಇಷ್ಟೇ ಅಲ್ಲ, ಸಮಸ್ತ ಇಂದ್ರಿಯಗಳಿಂದ ಅತೀತನೂ ಅವ್ಯಕ್ತನೂ ಆದ ಭಗವಂತನು ಮನುಷ್ಯರಂತೆ ರೂಪವನ್ನು ಧರಿಸಿರುವುದರಿಂದ ಇವನು ತನ್ನ ಪುತ್ರನೆಂದೇ ತಿಳಿದ ಯಶೋದಾದೇವಿಯು ಯಾರಾದರೂ ಸಾಮಾನ್ಯ ಬಾಲಕನನ್ನು ಕಟ್ಟಿಹಾಕುವಂತೆ ಹಗ್ಗದಿಂದ ಒರಳಿಗೆ ಕಟ್ಟಿಹಾಕಿದಳು. ॥ ೧೩-೧೪ ॥

ತದ್ದಾಮ ಬಧ್ಯಮಾನಸ್ಯ ಸ್ವಾರ್ಭಕಸ್ಯ ಕೃತಾಗಸಃ ।
ದ್ವ್ಯಂಗುಲೋನಮಭೂತ್ತೇನ ಸಂದಧೇಽನ್ಯಚ್ಚ ಗೋಪಿಕಾ ॥ ೧೫ ॥

ತಾಯಿ ಯಶೋದೆಯು ತನ್ನ ತುಂಟನಾದ ಮಗನನ್ನು ಹಗ್ಗದಿಂದ ಕಟ್ಟತೊಡಗಿದಾಗ ಆ ಹಗ್ಗವು ಎರಡು ಅಂಗುಲಗಳಷ್ಟು ಕಡಿಮೆಯಾಯಿತು. ಆಗ ಆಕೆಯು ಇನ್ನೊಂದು ಹಗ್ಗವನ್ನು ತಂದು ಅದಕ್ಕೆ ಜೋಡಿಸಿದಳು. ॥ ೧೫ ॥

ಯದಾಽಽಸೀತ್ತದಪಿ ನ್ಯೂನಂ ತೇನಾನ್ಯದಪಿ ಸಂದಧೇ ।
ತದಪಿ ದ್ವ್ಯಂಗುಲಂ ನ್ಯೂನಂ ಯದ್ಯದಾದತ್ತ ಬಂಧನಮ್ ॥ ೧೬ ॥

ಆ ಹಗ್ಗವೂ ಸಾಲದಾದಾಗ ಅದಕ್ಕೆ ಇನ್ನೊಂದನ್ನು ಜೋಡಿಸಿದಳು. ಹೀಗೆ ಎಷ್ಟೆಷ್ಟು ಹಗ್ಗಗಳನ್ನು ಜೋಡಿಸಿದರೂ ಕೊನೆಗೆ ಅದು ಎರಡು ಅಂಗುಲ ಕಡಿಮೆಯಾಗಿ ಕೃಷ್ಣನ ಸೊಂಟಕ್ಕೆ ಸಾಕಾಗಲಿಲ್ಲ. ॥ ೧೬ ॥

ಏವಂ ಸ್ವಗೇಹದಾಮಾನಿ ಯಶೋದಾ ಸಂದಧತ್ಯಪಿ ।
ಗೋಪೀನಾಂ ಸುಸ್ಮಯಂತೀನಾಂ ಸ್ಮಯಂತೀ ವಿಸ್ಮಿತಾಭವತ್ ॥ ೧೭ ॥

ಯಶೋದಾದೇವಿಯು ಮನೆಯಲ್ಲಿದ್ದ ಎಲ್ಲ ಹಗ್ಗಗಳನ್ನು ತಂದು ಜೋಡಿಸಿದರೂ ಭಗವಾನ್ ಶ್ರೀಕೃಷ್ಣನನ್ನು ಆಕೆಯಿಂದ ಕಟ್ಟಿಹಾಕಲಾಗಲಿಲ್ಲ. ಅವಳ ಅಸಫಲತೆಯನ್ನು ಕಂಡ ಗೋಪಿಯರು ಮುಗುಳ್ನಗತೊಡಗಿದರು. ಯಶೋದೆಯೂ ನಗುತ್ತಾ ಇದೇನು ಎಂದು ಆಶ್ಚರ್ಯ ಚಕಿತಳಾದಳು. ॥ ೧೭ ॥

ಸ್ವಮಾತುಃ ಸ್ವಿನ್ನಗಾತ್ರಾಯಾ ವಿಸ್ರಸ್ತಕಬರಸ್ರಜಃ ।
ದೃಷ್ಟ್ವಾ ಪರಿಶ್ರಮಂ ಕೃಷ್ಣಃ ಕೃಪಯಾಽಽಸೀತ್ಸ್ವಬಂಧನೇ ॥ ೧೮ ॥

ಭಗವಾನ್ ಶ್ರೀಕೃಷ್ಣನು ನೋಡುತ್ತಾನೆ – ತಾಯಿಯ ಶರೀರವೆಲ್ಲ ಬೆವರಿಹೋಗಿದೆ. ಮುಡಿ ಬಿಚ್ಚಿಹೋಗಿ ಮುಡಿದ ಹೂವುಗಳೆಲ್ಲ ಕೆಳಕ್ಕೆ ಬಿದ್ದಿವೆ. ಬಹಳ ಆಯಾಸಗೊಂಡಿರುವಳು. ಇದನ್ನು ತಿಳಿದ ಕರುಣಾಸಮುದ್ರನಾದ ಭಗವಂತನು ತಾನೇ ತಾಯಿಯ ಬಂಧನಕ್ಕೊಳಗಾದನು. ॥ ೧೮ ॥

ಏವಂ ಸಂದರ್ಶಿತಾ ಹ್ಯಂಗ ಹರಿಣಾ ಭೃತ್ಯವಶ್ಯತಾ ।
ಸ್ವವಶೇನಾಪಿ ಕೃಷ್ಣೇನ ಯಸ್ಯೇದಂ ಸೇಶ್ವರಂ ವಶೇ ॥ ೧೯ ॥

ನೇಮಂ ವಿರಿಂಚೋ ನ ಭವೋ ನ ಶ್ರೀರಪ್ಯಂಗಸಂಶ್ರಯಾ ।
ಪ್ರಸಾದಂ ಲೇಭಿರೇ ಗೋಪೀ ಯತ್ತತ್ಪ್ರಾಪ ವಿಮುಕ್ತಿದಾತ್ ॥ ೨೦ ॥

ನಾಯಂ ಸುಖಾಪೋ ಭಗವಾನ್ ದೇಹಿನಾಂ ಗೋಪಿಕಾಸುತಃ ।
ಜ್ಞಾನಿನಾಂ ಚಾತ್ಮಭೂತಾನಾಂ ಯಥಾ ಭಕ್ತಿಮತಾಮಿಹ ॥ ೨೧ ॥

ಕೃಷ್ಣಸ್ತು ಗೃಹಕೃತ್ಯೇಷು ವ್ಯಗ್ರಾಯಾಂ ಮಾತರಿ ಪ್ರಭುಃ ।
ಅದ್ರಾಕ್ಷೀದರ್ಜುನೌ ಪೂರ್ವಂ ಗುಹ್ಯಕೌ ಧನದಾತ್ಮಜೌ ॥ ೨೨ ॥

ಪುರಾ ನಾರದಶಾಪೇನ ವೃಕ್ಷತಾಂ ಪ್ರಾಪಿತೌ ಮದಾತ್ ।
ನಲಕೂಬರಮಣಿಗ್ರೀವಾವಿತಿ ಖ್ಯಾತೌ ಶ್ರಿಯಾನ್ವಿತೌ ॥ ೨೩ ॥

ಪರೀಕ್ಷಿತನೇ! ಭಗವಾನ್ ಶ್ರೀಕೃಷ್ಣನು ಸರ್ವಸ್ವತಂತ್ರನು. ಬ್ರಹ್ಮಾದಿ ಸಮಸ್ತ ದೇವತೆಗಳೊಂದಿಗೆ ಈ ಸಂಪೂರ್ಣ ಜಗತ್ತು ಅವನ ವಶದಲ್ಲಿದೆ. ಹೀಗಿದ್ದರೂ ತಾಯಿಯಿಂದ ಬಂಧಿತನಾಗಿ ತಾನು ತನ್ನ ಪ್ರಿಯಭಕ್ತರ ವಶನಾಗಿರುವೆನೆಂದು ಜಗತ್ತಿಗೆ ತೋರಿಸಿ ಕೊಟ್ಟಿರುವನು. ॥ ೧೯ ॥ ಗೊಲ್ಲತಿಯಾದ ಯಶೋದಾದೇವಿಯು ಮುಕ್ತಿಪ್ರದನಾದ ಮುಕುಂದನಿಂದ ಪಡೆದುಕೊಂಡ ಅನಿರ್ವಚನೀಯ ಕೃಪಾಪ್ರಸಾದವನ್ನು ಬ್ರಹ್ಮದೇವರಾಗಲೀ, ದೇವದೇವ ಶಂಕರನೇ ಆಗಲೀ, ವಕ್ಷಃಸ್ಥಳದಲ್ಲೇ ವಾಸಿಸುವ ಅರ್ಧಾಂಗಿನಿಯಾದ ಲಕ್ಷ್ಮೀದೇವಿಯೇ ಆಗಲೀ ಪಡೆದುಕೊಳ್ಳಲು ಸಮರ್ಥರಾಗಲಿಲ್ಲ. ॥ ೨೦ ॥ ಈ ಗೋಪಿಕಾನಂದನನಾದ ಭಗವಾನ್ ಶ್ರೀಕೃಷ್ಣನು ಅನನ್ಯ ಪ್ರೇಮಿಗಳಾದ ಭಕ್ತರಿಗೆ ಸುಲಭನಾಗಿರುವಂತೆ, ದೇಹಾಭಿಮಾನಿಗಳಾದ ಕರ್ಮಕಾಂಡಿಗಳಿಗಾಗಲೀ, ತಪಸ್ವಿಗಳಿಗಾಗಲೀ, ತನ್ನ ಸ್ವರೂಪಭೂತ ಜ್ಞಾನಿಗಳಿಗಾಗಲೀ ಸುಲಭನಲ್ಲ. ॥ ೨೧ ॥

ಒರಳುಕಲ್ಲಿಗೆ ಕೃಷ್ಣನನ್ನು ಕಟ್ಟಿಹಾಕಿ ನಂದರಾಣೀ ಯಶೋದೆಯು ಗೃಹಕೃತ್ಯದಲ್ಲಿ ನಿರತಳಾದಳು. ಬಂಧಿತನಾದ ಭಗವಾನ್ ಶ್ಯಾಮಸುಂದರನು ತಾಯಿಗೆ ತನ್ನಕಡೆ ಗಮನವಿಲ್ಲವೆಂದರಿತು ಮೊದಲು ಯಕ್ಷರಾಜನಾದ ಕುಬೇರನ ಪುತ್ರರಾಗಿದ್ದು ಶಾಪದಿಂದ ಅರ್ಜುನ ವೃಕ್ಷಗಳಾಗಿದ್ದ ಇಬ್ಬರನ್ನು ಶಾಪವಿಮೋಚನೆ ಮಾಡಬೇಕೆಂದು ಯೋಚಿಸಿದನು. ॥ ೨೨ ॥ ನಳಕೂಬರ ಮತ್ತು ಮಣಿಗ್ರೀವರೆಂಬ ಇವರಿಬ್ಬರ ಬಳಿ ಧನ, ಸೌಂದರ್ಯ, ಐಶ್ವರ್ಯಗಳು ಪರಿಪೂರ್ಣವಾಗಿದ್ದವು. ಇದರಿಂದ ಉಂಟಾದ ಅಹಂಕಾರವನ್ನು ಕಂಡು ದೇವಋಷಿ ನಾರದರ ಶಾಪದಿಂದ ಅವರು ವೃಕ್ಷಗಳಾಗಿದ್ದರು. ॥ ೨೩ ॥

ಒಂಭತ್ತನೆಯ ಅಧ್ಯಾಯವು ಮುಗಿಯಿತು. ॥ ೯ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮಸ್ಕಂಧೇ ಪೂರ್ವಾರ್ಧೇ ಗೋಪೀಪ್ರಸಾದೋ ನಾಮ ನವಮೋಽಧ್ಯಾಯಃ ॥ ೯ ॥

ಹತ್ತನೆಯ ಅಧ್ಯಾಯ

ಯಮಳಾರ್ಜುನರ ಉದ್ಧಾರ

ರಾಜೋವಾಚ

ಕಥ್ಯತಾಂ ಭಗವನ್ನೇತತ್ತಯೋಃ ಶಾಪಸ್ಯ ಕಾರಣಮ್ ।
ಯತ್ತದ್ವಿಗರ್ಹಿತಂ ಕರ್ಮ ಯೇನ ವಾ ದೇವರ್ಷೇಸ್ತಮಃ ॥ ೧ ॥

ಶ್ರೀಶುಕ ಉವಾಚ

ರುದ್ರಸ್ಯಾನುಚರೌ ಭೂತ್ವಾ ಸುದೃಪ್ತೌ ಧನದಾತ್ಮಜೌ ।
ಕೈಲಾಸೋಪವನೇ ರಮ್ಯೇ ಮಂದಾಕಿನ್ಯಾಂ ಮದೋತ್ಕಟೌ ॥ ೨ ॥

ಪರೀಕ್ಷಿದ್ರಾಜನು ಕೇಳುತ್ತಾನೆ - ಪೂಜ್ಯರೇ! ಕುಬೇರನ ಮಕ್ಕಳಾದ ನಳಕೂಬರ - ಮಣಿಗ್ರೀವರಿಗೆ ಶಾಪ ಏಕೆ ಬಂತು? ಪರಮ ಶಾಂತರಾದ ದೇವರ್ಷಿ ನಾರದರಿಗೂ ಕೋಪ ಬರುವಂತಹ ನಿಂದನೀಯ ಯಾವ ಕರ್ಮಮಾಡಿದ್ದರು ಅವರು? ಇದನ್ನು ದಯಮಾಡಿ ತಿಳಿಸಬೇಕೆಂದು ಬೇಡಿಕೊಳ್ಳುತ್ತೇನೆ. ॥ ೧ ॥

ಶ್ರೀಶುಕಮಹಾಮುನಿಗಳು ಹೇಳಿದರು - ಎಲೈ ರಾಜನೇ! ನಳಕೂಬರ ಮತ್ತು ಮಣಿಗ್ರೀವರು ಕುಬೇರನ ಮಕ್ಕಳಾಗಿದ್ದರಲ್ಲದೆ, ಈಶ್ವರನ ಅನುಚರರೂ ಆಗಿದ್ದರು. ಇದರಿಂದ ಅತ್ಯಂತ ಅಹಂಕಾರಿಗಳಾಗಿದ್ದರು. ಒಂದು ದಿನ ಇವರಿಬ್ಬರೂ ಮಂದಾಕಿನಿಯ ತೀರದಲ್ಲಿ

ವಾರುಣೀಂ ಮದಿರಾಂ ಪೀತ್ವಾ ಮದಾಘೂರ್ಣಿತಲೋಚನೌ ।
ಸ್ತ್ರೀಜನೈರನುಗಾಯದ್ಭಿಶ್ಚೇರತುಃ ಪುಷ್ಪಿತೇ ವನೇ ॥ ೩ ॥

ಅಂತಃ ಪ್ರವಿಶ್ಯ ಗಂಗಾಯಾಮಂಭೋಜವನರಾಜಿನಿ ।
ಚಿಕ್ರೀಡತುರ್ಯುವತಿಭಿರ್ಗಜಾವಿವ ಕರೇಣುಭಿಃ ॥ ೪ ॥

ಯದೃಚ್ಛಯಾ ಚ ದೇವರ್ಷಿರ್ಭಗವಾಂಸ್ತತ್ರ ಕೌರವ ।
ಅಪಶ್ಯನ್ನಾರದೋ ದೇವೌ ಕ್ಷೀಬಾಣೌ ಸಮಬುಧ್ಯತ ॥ ೫ ॥

ತಂ ದೃಷ್ಟ್ವಾ ವ್ರೀಡಿತಾ ದೇವ್ಯೋ ವಿವಸ್ತ್ರಾಃ ಶಾಪಶಂಕಿತಾಃ ।
ವಾಸಾಂಸಿ ಪರ್ಯಧುಃ ಶೀಘ್ರಂ ವಿವಸ್ತ್ರೌ ನೈವ ಗುಹ್ಯಕೌ ॥ ೬ ॥

ತೌ ದೃಷ್ಟ್ವಾ ಮದಿರಾಮತ್ತೌ ಶ್ರೀಮದಾಂಧೌ ಸುರಾತ್ಮಜೌ ।
ತಯೋರನುಗ್ರಹಾರ್ಥಾಯ ಶಾಪಂ ದಾಸ್ಯನ್ನಿದಂ ಜಗೌ ॥ ೭ ॥

ನಾರದ ಉವಾಚ

ನ ಹ್ಯನ್ಯೋ ಜುಷತೋ ಜೋಷ್ಯಾನ್ಬುದ್ಧಿಭ್ರಂಶೋ ರಜೋಗುಣಃ ।
ಶ್ರೀಮದಾದಾಭಿಜಾತ್ಯಾದಿರ್ಯತ್ರ ಸ್ತ್ರೀ ದ್ಯೂತಮಾಸವಃ ॥ ೮ ॥

ಹನ್ಯಂತೇ ಪಶವೋ ಯತ್ರ ನಿರ್ದಯೈರಜಿತಾತ್ಮಭಿಃ ।
ಮನ್ಯಮಾನೈರಿಮಂ ದೇಹಮಜರಾಮೃತ್ಯು ನಶ್ವರಮ್ ॥ ೯ ॥

ದೇವಸಂಜ್ಞಿತಮಪ್ಯಂತೇ ಕೃಮಿವಿಡ್ಭಸ್ಮಸಂಜ್ಞಿತಮ್ ।
ಭೂತಧ್ರುಕ್ತತ್ಕೃತೇ ಸ್ವಾರ್ಥಂ ಕಿಂ ವೇದ ನಿರಯೋ ಯತಃ ॥ ೧೦ ॥

ಕೈಲಾಸದ ರಮಣೀಯವಾದ ಉಪವನದಲ್ಲಿ ವಾರುಣೀ ಎಂಬ ಮದ್ಯವನ್ನು ಕುಡಿದು ಮದೋನ್ಮತ್ತರಾಗಿದ್ದರು. ಮದಿರೆಯ ಅಮಲಿನಲ್ಲಿ ಅವರ ಕಣ್ಣುಗಳು ತಿರುಗುತ್ತಿದ್ದವು. ಬಹಳಷ್ಟು ನಾರಿಯರು ಹಾಡುತ್ತಾ-ಕುಣಿಯುತ್ತಾ ಪುಷ್ಪಭರಿತವಾದ ಆ ವನದಲ್ಲಿ ಅವರೊಂದಿಗೆ ವಿಹರಿಸುತ್ತಿದ್ದರು. ॥ ೨-೩ ॥ ಬಳಿಕ ಅವರು ಕೆಂದಾವರೆಗಳಿಂದ ಮಂಡಿತವಾದ ಗಂಗಾನದಿಯ ನೀರಿನಲ್ಲಿಳಿದು ಗಂಡಾನೆಗಳು ಹೆಣ್ಣಾನೆಗಳೊಂದಿಗೆ ರಮಿಸುವಂತೆ ಸ್ತ್ರೀಯರೊಂದಿಗೆ ಜಲಕ್ರೀಡೆಯಾಡುತ್ತಿದ್ದರು. ॥ ೪ ॥ ಪರೀಕ್ಷಿತನೇ! ಕಾಲ ಕರ್ಮಸಂಯೋಗದಿಂದ ಅದೇ ಮಾರ್ಗವಾಗಿ ದೇವಋಷಿಗಳಾದ ನಾರದರು ಆಗಮಿಸಿದರು. ಸ್ತ್ರೀಯರೊಂದಿಗೆ ಜಲಕ್ರೀಡೆಯಾಡುತ್ತಿದ್ದ ಆ ಯುವಕರನ್ನು ನೋಡಿ, ಇವರು ಮದೋನ್ಮತ್ತರಾಗಿರುವರು ಎಂದು ಅವರು ತಿಳಿದುಕೊಂಡರು. ॥ ೫ ॥ ದೇವರ್ಷಿನಾರದರನ್ನು ಕಂಡೊಡನೆ ಅಪ್ಸರೆಯರು ನಾಚಿಕೊಂಡು, ಮಹರ್ಷಿಗಳು ಶಾಪಕೊಟ್ಟಾರೆಂಬ ಭಯದಿಂದ ಬೇಗ-ಬೇಗನೇ ತಮ್ಮ ತಮ್ಮ ವಸ್ತ್ರಗಳನ್ನು ಉಟ್ಟುಕೊಂಡರು. ಆದರೆ ಈ ಯಕ್ಷ ಕುಮಾರರು ನಾರದರನ್ನು ನೋಡಿಯೂ ವಸ್ತ್ರಗಳನ್ನು ಧರಿಸದೆ ಇದ್ದರು. ॥ ೬ ॥ ಇವರು ದೇವತೆಗಳ ಪುತ್ರರಾಗಿದ್ದರೂ ಧನಮದದಿಂದ ಕುರುಡರಾಗಿ, ಮದಿರಾಪಾನದಿಂದ ಉನ್ಮತ್ತರಾಗಿರುವುದನ್ನು ನೋಡಿದ ದೇವರ್ಷಿನಾರದರೂ ಅವರ ಮೇಲೆ ಅನುಗ್ರಹವನ್ನು ತೋರಲೆಂದೇ ಶಾಪವನ್ನು ಕೊಡುತ್ತಾ ಹೀಗೆಂದರು - ॥ ೭ ॥

ನಾರದರು ಹೇಳಿದರು - ಇಂದ್ರಿಯಗಳಿಗೆ ಪ್ರಿಯವಾದ ವಿಷಯಗಳಲ್ಲಿ ಆಸಕ್ತನಾಗಿರುವ ಮನುಷ್ಯನ ಬುದ್ಧಿಯನ್ನು ಪೂರ್ಣವಾಗಿ ಹಾಳುಮಾಡುವುದು ವಿಶೇಷವಾಗಿ ಧನಮದವೇ ಆಗಿದೆ. ಹಿಂಸೆಯೇ ಮುಂತಾದ ರಜೋಗುಣೀ ಕರ್ಮಗಳಾಗಲೀ, ವಿದ್ಯಾಮದ, ಕುಲಮದ ಮೊದಲಾದವುಗಳಾಗಲೀ ಅಷ್ಟುಮಟ್ಟಿಗೆ ಬುದ್ಧಿಯನ್ನು ಹಾಳುಮಾಡುವುದಿಲ್ಲ. ಏಕೆಂದರೆ, ಧನಮದದ ಜೊತೆ-ಜೊತೆಗೆ ಸ್ತ್ರೀಸಂಗ, ಜೂಜು, ಮದ್ಯಪಾನ ಮುಂತಾದವುಗಳು ಸೇರಿಕೊಂಡೇ ಇರುತ್ತವೆ. ॥ ೮ ॥ ಐಶ್ವರ್ಯಮದ, ಧನಮದದಿಂದ ಕುರುಡರಾಗಿ ತಮ್ಮ ಇಂದ್ರಿಯಗಳ ವಶದಲ್ಲಿರುವ ಕ್ರೂರ ಮನುಷ್ಯರು ತನ್ನ ನಾಶವುಳ್ಳ ಶರೀರವನ್ನು ಅಮರವೆಂದೇ ತಿಳಿದಿರುತ್ತಾರೆ ಹಾಗೂ ತನ್ನಂತೆಯೇ ಶರೀರಧಾರೀ ಪಶುಗಳನ್ನು ಕೊಲ್ಲುತ್ತಾ ಇರುತ್ತಾರೆ. ॥ ೯ ॥ ಅಯ್ಯೋ! ಯಾವ ಶರೀರವನ್ನು 'ಭೂದೇವ', 'ನರದೇವ', 'ದೇವ' ಮುಂತಾದ ಹೆಸರುಗಳಿಂದ ಕರೆಯುತ್ತಾರೋ, ಕೊನೆಗೆ ಅದರ ಗತಿ ಏನಾದೀತು? ಪ್ರಾಣಪಕ್ಷಿಯು ಹಾರಿಹೋದಾಗ ಅದು ಹುಳುಗಳ ರಾಶಿ, ನರಿ ಕಾಗೆಗಳ ಆಹಾರ, ಇಲ್ಲವೇ ಬೂದಿಯ ರಾಶಿಯಷ್ಟೆ. ಇಂತಹ ಶರೀರಕ್ಕಾಗಿಯೇ ಪ್ರಾಣಿಗಳೊಂದಿಗೆ ದ್ರೋಹ ಮಾಡುವುದರಿಂದ ಮನುಷ್ಯನು ತನ್ನ ಯಾವ ಸ್ವಾರ್ಥವನ್ನು ತಿಳಿಯುವನೋ? ಹೀಗೆ ಮಾಡುವುದರಿಂದ ಅವನಿಗೆ ನರಕವೇ ಪ್ರಾಪ್ತಿಯಾಗುವುದು. ॥ ೧೦ ॥ ನಶ್ವರವಾದ ಈ ಶರೀರವು ಯಾರದೆಂದು ನಿರ್ಧರಿಸುವುದು? ಅನ್ನವಿಟ್ಟು ಪೋಷಿಸಿದವನದ್ದೇ? ಗರ್ಭಾಧಾನ ಮಾಡಿದ ತಂದೆಗೆ ಸೇರಿದ್ದೇ ಅಥವಾ ಒಂಭತ್ತು ತಿಂಗಳು

ದೇಹಃ ಕಿಮನ್ನದಾತುಃ ಸ್ವಂ ನಿಷೇಕ್ತುರ್ಮಾತುರೇವ ಚ ।
ಮಾತುಃ ಪಿತುರ್ವಾ ಬಲಿನಃ ಕ್ರೇತುರಗ್ನೇಃ ಶುನೋಽಪಿ ವಾ ॥ ೧೧ ॥

ಏವಂ ಸಾಧಾರಣಂ ದೇಹಮವ್ಯಕ್ತಪ್ರಭವಾಪ್ಯಯಮ್ ।
ಕೋ ವಿದ್ವಾನಾತ್ಮಸಾತ್ಕೃತ್ವಾ ಹಂತಿ ಜಂತೂನೃತೇಽಸತಃ ॥ ೧೨ ॥

ಅಸತಃ ಶ್ರೀಮದಾಂಧಸ್ಯ ದಾರಿದ್ರ್ಯಂ ಪರಮಂಜನಮ್ ।
ಆತ್ಮೌಪಮ್ಯೇನ ಭೂತಾನಿ ದರಿದ್ರಃ ಪರಮೀಕ್ಷತೇ ॥ ೧೩ ॥

ಯಥಾ ಕಂಟಕವಿದ್ಧಾಂಗೋ ಜಂತೋರ್ನೇಚ್ಛತಿ ತಾಂ ವ್ಯಥಾಮ್ ।
ಜೀವಸಾಮ್ಯಂ ಗತೋ ಲಿಂಗೈರ್ನ ತಥಾವಿದ್ಧಕಂಟಕಃ ॥ ೧೪ ॥

ದರಿದ್ರೋ ನಿರಹಂಸ್ತಂಭೋ ಮುಕ್ತಃ ಸರ್ವಮದೈರಿಹ ।
ಕೃಚ್ಛ್ರಂ ಯದೃಚ್ಛಯಾಽಽಪ್ನೋತಿ ತದ್ಧಿ ತಸ್ಯ ಪರಂ ತಪಃ ॥ ೧೫ ॥

ನಿತ್ಯಂ ಕ್ಷುತ್ಕ್ಷಾಮದೇಹಸ್ಯ ದರಿದ್ರಸ್ಯಾನ್ನಕಾಂಕ್ಷಿಣಃ ।
ಇಂದ್ರಿಯಾಣ್ಯನುಶುಷ್ಯಂತಿ ಹಿಂಸಾಪಿ ವಿನಿವರ್ತತೇ ॥ ೧೬ ॥

ದರಿದ್ರಸ್ಯೈವ ಯುಜ್ಯಂತೇ ಸಾಧವಃ ಸಮದರ್ಶಿನಃ ।
ಸದ್ಭಿಃ ಕ್ಷಿಣೋತಿ ತಂ ತರ್ಷಂ ತತ ಆರಾದ್ವಿಶುದ್ಧ್ಯತಿ ॥ ೧೭ ॥

ಹೊತ್ತು ಹೆತ್ತ ತಾಯಿಯದೇ ? ತಾಯಿಯ ಜನ್ಮಕ್ಕೆ ಕಾರಣನಾದ ತಾತನದೇ ? ಬಲವಂತವಾಗಿ ಜಿತಮಾಡಿಕೊಳ್ಳುವ ಧಣಿಯದೇ ? ಅಥವಾ ಗುಲಾಮನಂತೆ ಕ್ರಯಕೊಟ್ಟುಕೊಂಡು ಕೊಂಡವನದೇ ? ಧಗಧಗನೆ ಉರಿಯುವ ಚಿತೆಯಲ್ಲಿ ಸುಟ್ಟು ಹೋಗುವ ಈ ಶರೀರ ಅಗ್ನಿಯದೆ ? ಮೃತಶರೀರವನ್ನು ತಿನ್ನಲು ಕಾದುಕುಳಿತ ನರಿ-ನಾಯಿಗಳದ್ದೇ ? ॥ ೧೧ ॥ ನಿಶ್ಚಯವಾಗಿಯೂ ಈ ದೇಹವು ಸಾಧಾರಣವಾದ ಒಂದು ವಸ್ತುವಾಗಿದೆ. ಪ್ರಕೃತಿಯಿಂದ ಹುಟ್ಟುತ್ತದೆ ಹಾಗೂ ಅದರಲ್ಲೇ ಸೇರಿಹೋಗುತ್ತದೆ. ಯಾವ ವಿದ್ವಾಂಸನು ತಾನೇ ಇಂತಹ ನಶ್ವರವಾದ ದೇಹವನ್ನು ತನ್ನದೆಂಬುದಾಗಿ ಭಾವಿಸಿಕೊಂಡು ಅದರ ಪೋಷಣೆಗಾಗಿ ತನ್ನಂತೆಯೇ ಇರುವ ಇತರ ಪ್ರಾಣಿಗಳನ್ನು ವಧಿಸಬಲ್ಲನು ? ಅಸತ್ಪುರುಷರಲ್ಲದೆ ಬೇರಾರೂ ಹೀಗೆ ಮಾಡುವುದಿಲ್ಲ ॥ ೧೨ ॥ ಧನಮದದಿಂದ ಕುರುಡಾಗಿ ಇದ್ದವನ ಕಣ್ಣು ತೆರೆಸಲು ದಾರಿದ್ರ್ಯವೆಂಬುದೇ ಶ್ರೇಷ್ಠವಾದ ಅಂಜನವಾಗಿದೆ. ಏಕೆಂದರೆ, ದರಿದ್ರನಾದವನು ಬೇರೆ ಪ್ರಾಣಿಗಳನ್ನು ತನ್ನಂತೆಯೇ ಭಾವಿಸಿಕೊಂಡಿರುತ್ತಾನೆ. ಆದುದರಿಂದ ಅವುಗಳನ್ನು ಹಿಂಸಿಸಲು ಹೋಗುವುದಿಲ್ಲ ॥ ೧೩ ॥ ಯಾವನ ಕಾಲಿಗೆ ಒಮ್ಮೆ ಮುಳ್ಳು ಚುಚ್ಚಿದೆಯೋ ಮತ್ತು ಅದರ ಯಾತನೆಯನ್ನು ಅನುಭವಿಸಿರುವನೋ, ಅಂತಹವನು ಇತರರ ಕಾಲಿಗೂ ಮುಳ್ಳು ಚುಚ್ಚಬಾರದೆಂದೇ ಅಪೇಕ್ಷಿಸುತ್ತಾನೆ. ಏಕೆಂದರೆ, ಮುಳ್ಳು ಚುಚ್ಚುವುದರಿಂದ ಆಗುವ ನೋವು-ಕಷ್ಟಗಳನ್ನು ಅವನು ಅನುಭವಿಸಿದ್ದಾನೆ. ಆದರೆ ಮುಳ್ಳು ಚುಚ್ಚದೇ ಇರುವವನಿಗೆ, ಅದರ ಯಾತನೆಯನ್ನು ಅನುಭವಿಸದವನಿಗೆ ಹಾಗೆ ಅನಿಸುವುದಿಲ್ಲ ॥ ೧೪ ॥ ದರಿದ್ರನಲ್ಲಿ ಯಾವುದೇ ಅಹಂಕಾರ, ಮದ ಇರುವುದಿಲ್ಲ. ಅವನು ಎಲ್ಲ ವಿಧವಾದ ಮದಗಳಿಂದಲೂ ದೂರವುಳಿಯುತ್ತಾನೆ. ದೈವವಶಾತ್ ಅವನಿಗೆ ಕಷ್ಟಗಳು ಒದಗಿಬಂದಾಗ ಅವೆಲ್ಲವನ್ನು ಅವನು ಅನುಭವಿಸುತ್ತಲೇ ಇರುತ್ತಾನೆ. ಅದೇ ಅವನಿಗೆ ಒಂದು ತಪಸ್ಸು ಆಗಿದೆ ॥ ೧೫ ॥ ದರಿದ್ರನಾದವನು ಹೊಟ್ಟೆಪಾಡಿಗಾಗಿಯೇ ಒದ್ದಾಡುತ್ತಿರುತ್ತಾನೆ. ಹಸಿವಿನಿಂದ ಅವನ ಶರೀರವು ಕೃಶವಾಗಿ ಇರುತ್ತದೆ. ಕೃಶಗೊಂಡಿದ ಅವನ ಇಂದ್ರಿಯಗಳು ವಿಷಯ ಸುಖಗಳನ್ನು ಬಯಸುವುದಿಲ್ಲ. ದರಿದ್ರನಾದವನು ನಾಲಿಗೆಯ ಚಾಪಲ್ಯಕ್ಕಾಗಿ ಇತರ ಪ್ರಾಣಿಗಳನ್ನು ಕೊಲ್ಲುವುದಿಲ್ಲ, ಹಿಂಸಿಸುವುದಿಲ್ಲ ॥ ೧೬ ॥ ಸಾಧು-ಸತ್ಪುರುಷರು ಸಮದರ್ಶಿಗಳಾಗಿ ಇರುವರು. ಆದುದರಿಂದ ಅವರ ಸಮಾಗಮವು ದರಿದ್ರರಿಗೆ ಸುಲಭವಾಗಿ ದೊರೆಯುತ್ತದೆ. ಏಕೆಂದರೆ, ದರಿದ್ರರಾದವರಲ್ಲಿ ಭೋಗಾದಿಗಳು ಇರುವುದೇ ಇಲ್ಲ, ಆಸೆಯೆಂಬುದೊಂದಿರುತ್ತದೆ. ಸಾಧುಸಮಾಗಮದಿಂದ ಆ ತೃಷ್ಣೆಯೂ ಇಂಗಿಹೋಗಿ ಅವರ ಮನಸ್ಸು ಬಹಳ ಬೇಗ ಶುದ್ಧವಾಗುತ್ತದೆ.* ॥ ೧೭ ॥

* ಅಹಂಕಾರ, ಧನಮದ, ಧನದ ಮೇಲಿನ ಅಭಿಮಾನ ಮತ್ತು ಧನದ ತೃಷ್ಣೆ ಈ ಮೂರು ದೋಷಗಳು ಇರುತ್ತವೆ. ದರಿದ್ರರಲ್ಲಿ ಧನಮದವಾಗಲೀ ಧನದ ಮೇಲಿನ ಅಭಿಮಾನವಾಗಲೀ ಇರುವುದಿಲ್ಲ, ಆದರೆ ಧನತೃಷ್ಣೆಯೆಂಬ ಒಂದು ದೋಷ ಇರುತ್ತದೆ. ಈ ದೋಷವೂ ಕೂಡ ಸತ್ಪುರುಷರ ಸಹವಾಸದಿಂದ ಹೋಗಿಬಿಟ್ಟರೆ ಬೇಗನೇ ಶ್ರೇಯಸ್ಸುಂಟಾಗುತ್ತದೆ.

ಸಾಧೂನಾಂ ಸಮಚಿತ್ತಾನಾಂ ಮುಕುಂದಚರಣೈಷಿಣಾಮ್ ।
ಉಪೇಕ್ಷ್ಯೈಃ ಕಿಂ ಧನಸ್ತಂಭೈರಸದ್ಭಿರಸದಾಶ್ರಯೈಃ ॥ ೧೮ ॥

ತದಹಂ ಮತ್ತಯೋರ್ಮಾಧ್ವ್ಯಾ ವಾರುಣ್ಯಾ ಶ್ರೀಮದಾಂಧಯೋಃ ।
ತಮೋಮದಂ ಹರಿಷ್ಯಾಮಿ ಸ್ತ್ರೈಣಯೋರಜಿತಾತ್ಮನೋಃ ॥ ೧೯ ॥

ಯದಿಮೌ ಲೋಕಪಾಲಸ್ಯ ಪುತ್ರೌ ಭೂತ್ವಾ ತಮಃಪ್ಲುತೌ ।
ನ ವಿವಾಸಸಮಾತ್ಮಾನಂ ವಿಜಾನೀತಃ ಸುದುರ್ಮದೌ ॥ ೨೦ ॥

ಅತೋಽರ್ಹತಃ ಸ್ಥಾವರತಾಂ ಸ್ಯಾತಾಂ ನೈವಂ ಯಥಾ ಪುನಃ ।
ಸ್ಮೃತಿಃ ಸ್ಯಾನ್ಮತ್ಪ್ರಸಾದೇನ ತತ್ರಾಪಿ ಮದನುಗ್ರಹಾತ್ ॥ ೨೧ ॥

ವಾಸುದೇವಸ್ಯ ಸಾನ್ನಿಧ್ಯಂ ಲಬ್ಧ್ವಾ ದಿವ್ಯಶರಚ್ಛತೇ ।
ವೃತ್ತೇ ಸ್ವರ್ಲೋಕತಾಂ ಭೂಯೋ ಲಬ್ಧಭಕ್ತೀ ಭವಿಷ್ಯತಃ ॥ ೨೨ ॥

ಶ್ರೀಶುಕ ಉವಾಚ

ಏವಮುಕ್ತ್ವಾ ಸ ದೇವರ್ಷಿರ್ಗತೋ ನಾರಾಯಣಾಶ್ರಮಮ್ ।
ನಲಕೂಬರಮಣಿಗ್ರೀವಾವಾಸತುರ್ಯಮಲಾರ್ಜುನೌ ॥ ೨೩ ॥

ಋಷೇರ್ಭಾಗವತಮುಖ್ಯಸ್ಯ ಸತ್ಯಂ ಕರ್ತುಂ ವಚೋ ಹರಿಃ ।
ಜಗಾಮ ಶನಕೈಸ್ತತ್ರ ಯತ್ರಾಸ್ತಾಂ ಯಮಲಾರ್ಜುನೌ ॥ ೨೪ ॥

ದೇವರ್ಷಿರ್ಮೇ ಪ್ರಿಯತಮೋ ಯದಿಮೌ ಧನದಾತ್ಮಜೌ ।
ತತ್ತಥಾ ಸಾಧಯಿಷ್ಯಾಮಿ ಯದ್ಗೀತಂ ತನ್ಮಹಾತ್ಮನಾ ॥ ೨೫ ॥

ಇತ್ಯಂತರೇಣಾರ್ಜುನಯೋಃ ಕೃಷ್ಣಸ್ತು ಯಮಯೋರ್ಯಯೌ ।
ಆತ್ಮನಿರ್ವೇಶಮಾತ್ರೇಣ ತಿರ್ಯಗ್ಗತಮುಲೂಖಲಮ್ ॥ ೨೬ ॥

ಬಾಲೇನ ನಿಷ್ಕರ್ಷಯತಾನ್ವಗುಲೂಖಲಂ ತದ್
ದಾಮೋದರೇಣ ತರಸೋತ್ಕಲಿತಾಂಘ್ರಿಬಂಧೌ ।
ನಿಷ್ಪೇತತುಃ ಪರಮವಿಕ್ರಮಿತಾತಿವೇಪ-
ಸ್ಕಂಧಪ್ರವಾಲವಿಟಪೌ ಕೃತಚಂಡಶಬ್ದೌ ॥ ೨೭ ॥

ಯಾವ ಮಹಾತ್ಮರ ಚಿತ್ತದಲ್ಲಿ ಸರ್ವರ ಕುರಿತು ಸಮತ್ವವಿದೆಯೋ, ಶ್ರೀಮುಕುಂದನ ಪಾದಾರವಿಂದಗಳಲ್ಲಿ ಯಾರು ಶರಣು ಹೊಂದಿರುವರೋ, ಅವರಿಗೆ ದುರ್ಗುಣಗಳ ಭಂಡಾರದಂತಿರುವ ಅಥವಾ ದುರಾಚಾರಿಗಳಂತೆ ಜೀವನ ನಡೆಸುವ ಹಾಗೂ ಧನಮದದಿಂದ ಉನ್ಮತ್ತರಾದ ಇಂತಹ ದುಷ್ಟರಿಂದ ಏನಾಗಬೇಕಾಗಿದೆ? ಇವರಾದರೋ ಸತ್ಪುರುಷರ ಉಪೇಕ್ಷೆಗೆ ಪಾತ್ರರಾಗಿ ಇರುತ್ತಾರೆ. ॥ ೧೮ ॥ ಈ ಯಕ್ಷರಿಬ್ಬರೂ ವಾರುಣೀ ಮದ್ಯವನ್ನು ಕುಡಿದು ಉನ್ಮತ್ತರಾಗಿದ್ದು, ಧನಮದದಿಂದ ಕುರುಡರಾಗಿ ಇರುವರು. ತನ್ನ ಇಂದ್ರಿಯಗಳ ಅಧೀನದಲ್ಲಿರುವ ಈ ಸ್ತ್ರೀಲಂಪಟರಾದ ಯಕ್ಷರ ಅಜ್ಞಾನ ಜನಿತವಾದ ಮದವನ್ನು ನಾನು ನಾಶಮಾಡಿ ಬಿಡುತ್ತೇನೆ. ॥ ೧೯ ॥ ಇವರು ಲೋಕಪಾಲ ಕುಬೇರನ ಪುತ್ರರಾಗಿದ್ದರೂ ಮದೋನ್ಮತ್ತರಾಗಿ ಬುದ್ಧಿಗೆಟ್ಟಿರುವರು. ತಾವು ಮತ್ತೊಬ್ಬರ ಮುಂದೆ ನಗ್ನರಾಗಿದ್ದೇವೆಂಬ ಅರಿವೂ ಇವರಿಗಿಲ್ಲವಲ್ಲ! ॥ ೨೦ ॥ ಆದುದರಿಂದ ಇವರಿಬ್ಬರೂ ಈಗ ವೃಕ್ಷಯೋನಿಯನ್ನು ಹೊಂದಲು ಯೋಗ್ಯರಾಗಿದ್ದಾರೆ. ಹೀಗಾದರೆ ಇವರಿಗೆ ಇಂತಹ ಅಭಿಮಾನವು ಉಂಟಾಗಲಾರದು. ವೃಕ್ಷಯೋನಿಯಲ್ಲಿದ್ದರೂ ಇವರಿಗೆ ನನ್ನ ಅನುಗ್ರಹದಿಂದ ಭಗವಂತನ ಸ್ಮರಣೆಯಿರುತ್ತದೆ. ಮತ್ತೆ ನನ್ನ ಅನುಗ್ರಹದಿಂದ ದೇವತೆಗಳ ನೂರು ವರ್ಷಗಳು ಕಳೆದ ಬಳಿಕ ಇವರಿಗೆ ಭಗವಾನ್ ಶ್ರೀಕೃಷ್ಣನ ಸಾನ್ನಿಧ್ಯವು ಪ್ರಾಪ್ತವಾಗಿ, ಭಗವಂತನ ಚರಣಗಳಲ್ಲಿ ಪರಮಭಕ್ತಿಯುಳ್ಳವರಾಗಿ ಮತ್ತೆ ತಮ್ಮ ಲೋಕಗಳಿಗೆ ಹೊರಟು ಹೋಗುವರು. ॥ ೨೧-೨೨ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ರಾಜೇಂದ್ರನೇ! ದೇವರ್ಷಿ ನಾರದರು ಹೀಗೆ ಹೇಳಿ ಭಗವಾನ್ ನರ-ನಾರಾಯಣ ಆಶ್ರಮಕ್ಕೆ ಹೊರಟು ಹೋದರು. ನಾರದರು ಹೇಳಿದಂತೆ ನಳಕೂಬರ-ಮಣಿಗ್ರೀವ ಇವರಿಬ್ಬರೂ ಒಡನೆಯೇ ಅರ್ಜುನ ವೃಕ್ಷಗಳಾಗಿ ಯಮಳಾರ್ಜುನ ವೃಕ್ಷಗಳೆಂದು ಪ್ರಸಿದ್ಧರಾದರು. ॥ ೨೩ ॥ ಭಗವಾನ್ ಶ್ರೀಕೃಷ್ಣನು ಭಾಗವತೋತ್ತಮರಾದ ನಾರದಮುನಿಗಳ ಮಾತನ್ನು ಸತ್ಯವಾಗಿಸಲು ಆ ಒರಳುಕಲ್ಲನ್ನು ನಿಧಾನವಾಗಿ ಎಳೆದುಕೊಂಡೇ ಯಮಳಾರ್ಜುನ ವೃಕ್ಷಗಳ ಬಳಿಗೆ ಸಾರಿದನು. ॥ ೨೪ ॥ ಭಗವಂತನು ಯೋಚಿಸಿದನು – ದೇವರ್ಷಿಗಳಾದ ನಾರದರು ನನಗೆ ಅತ್ಯಂತ ಪ್ರಿಯರು. ಇವರಿಬ್ಬರೂ ಕೂಡ ನನ್ನ ಭಕ್ತನಾದ ಕುಬೇರನ ಮಕ್ಕಳಾಗಿದ್ದಾರೆ. ಆದುದರಿಂದ ಮಹಾತ್ಮರಾದ ನಾರದರು ಹೇಳಿರುವಂತೆಯೇ ಈ ಇಬ್ಬರನ್ನೂ ನಾನು ಉದ್ಧರಿಸುತ್ತೇನೆ. ॥ ೨೫ ॥ ಹೀಗೆ ಅಂದುಕೊಂಡು ಭಗವಾನ್ ಶ್ರೀಕೃಷ್ಣನು ಎರಡೂ ಮರಗಳ ನಡುವೆ ನುಗ್ಗಿದನು. ಅವನಾದರೋ ಆ ಕಡೆ ದಾಟಿದನು, ಆದರೆ ಒರಳುಕಲ್ಲು ಅಡ್ಡವಾಗಿ ಸಿಕ್ಕಿಹಾಕಿ ಕೊಂಡಿತು. ॥ ೨೬ ॥ ದಾಮೋದರ ಭಗವಾನ್ ಶ್ರೀಕೃಷ್ಣನ ಸೊಂಟಕ್ಕೆ ಹಗ್ಗ ಕಟ್ಟಲ್ಪಟ್ಟಿತ್ತು. ಅವನು ತನ್ನ ಹಿಂದೆ ಉರುಳಿ ಬರುತ್ತಿದ್ದ ಒರಳಕಲ್ಲನ್ನು ಸ್ವಲ್ಪ ಜೋರಾಗಿ ಎಳೆದನು. ಆಗಲೇ ವೃಕ್ಷಗಳಲ್ಲಿದ್ದ ದೊಡ್ಡ-ದೊಡ್ಡ ರೆಂಬೆಗಳು, ಚಿಕ್ಕ ರೆಂಬೆಗಳೂ, ಎಲೆಗಳೂ, ಚಿಗುರುಗಳೂ ಕಂಪಿಸಿದವು ಮತ್ತು ಆ ಮಹಾವೃಕ್ಷಗಳು ಬುಡಸಮೇತವಾಗಿ ಸಿಡಿಲಿನಂತೆ ಶಬ್ದಮಾಡುತ್ತಾ ಕೆಳಕ್ಕೆ ಉರುಳಿದವು. ॥ ೨೭ ॥

ತತ್ರ ಶ್ರಿಯಾ ಪರಮಯಾ ಕಕುಭಃ ಸ್ಫುರಂತೌ
ಸಿದ್ಧಾವುಪೇತ್ಯ ಕುಜಯೋರಿವ ಜಾತವೇದಾಃ ।
ಕೃಷ್ಣಂ ಪ್ರಣಮ್ಯ ಶಿರಸಾಖಿಲಲೋಕನಾಥಂ
ಬದ್ಧಾಂಜಲೀ ವಿರಜಸಾವಿದಮೂಚತುಃ ಸ್ಮ ॥ ೨೮ ॥

ಕೃಷ್ಣ ಕೃಷ್ಣ ಮಹಾಯೋಗಿನ್‌ಸ್ತ್ವಮಾದ್ಯಃ ಪುರುಷಃ ಪರಃ ।
ವ್ಯಕ್ತಾವ್ಯಕ್ತಮಿದಂ ವಿಶ್ವಂ ರೂಪಂ ತೇ ಬ್ರಾಹ್ಮಣಾ ವಿದುಃ ॥ ೨೯ ॥

ತ್ವಮೇಕಃ ಸರ್ವಭೂತಾನಾಂ ದೇಹಾಸ್ವಾತ್ಮೇಂದ್ರಿಯೇಶ್ವರಃ ।
ತ್ವಮೇವ ಕಾಲೋ ಭಗವಾನ್ವಿಷ್ಣುರವ್ಯಯ ಈಶ್ವರಃ ॥ ೩೦ ॥

ತ್ವಂ ಮಹಾನ್ಪ್ರಕೃತಿಃ ಸೂಕ್ಷ್ಮಾ ರಜಃಸತ್ತ್ವತಮೋಮಯೀ ।
ತ್ವಮೇವ ಪುರುಷೋಽಧ್ಯಕ್ಷಃ ಸರ್ವಕ್ಷೇತ್ರ ವಿಕಾರವಿತ್ ॥ ೩೧ ॥

ಗೃಹ್ಯಮಾಣೈಸ್ತ್ವಮಗ್ರಾಹ್ಯೋ ವಿಕಾರೈಃ ಪ್ರಾಕೃತೈರ್ಗುಣೈಃ ।
ಕೋ ನ್ವಿಹಾರ್ಹತಿ ವಿಜ್ಞಾತುಂ ಪ್ರಾಕ್ಸಿದ್ಧಂ ಗುಣಸಂವೃತಃ ॥ ೩೨ ॥

ತಸ್ಮೈ ತುಭ್ಯಂ ಭಗವತೇ ವಾಸುದೇವಾಯ ವೇಧಸೇ ।
ಆತ್ಮದ್ಯೋತಗುಣೈಶ್ಛನ್ನಮಹಿಮ್ನೇ ಬ್ರಹ್ಮಣೇ ನಮಃ ॥ ೩೩ ॥

ಯಸ್ಯಾವತಾರಾ ಜ್ಞಾಯಂತೇ ಶರೀರೇಷ್ವಶರೀರಿಣಃ ।
ತೈಸ್ತೈರತುಲ್ಯಾತಿಶಯೈರ್ವೀರ್ಯೈರ್ದೇಹಿಷ್ವಸಂಗತೈಃ ॥ ೩೪ ॥

ಸ ಭವಾನ್ಸರ್ವಲೋಕಸ್ಯ ಭವಾಯ ವಿಭವಾಯ ಚ ।
ಅವತೀರ್ಣೋಽಂಶಭಾಗೇನ ಸಾಂಪ್ರತಂ ಪತಿರಾಶಿಷಾಮ್ ॥ ೩೫ ॥

ನಮಃ ಪರಮಕಲ್ಯಾಣ ನಮಃ ಪರಮಮಂಗಲ ।
ವಾಸುದೇವಾಯ ಶಾಂತಾಯ ಯದೂನಾಂ ಪತಯೇ ನಮಃ ॥ ೩೬ ॥

ಅನುಜಾನೀಹಿ ನೌ ಭೂಮಂಸ್ತವಾನುಚರಕಿಂಕರೌ ।
ದರ್ಶನಂ ನೌ ಭಗವತ ಋಷೇರಾಸೀದನುಗ್ರಹಾತ್ ॥ ೩೭ ॥

ಆ ಎರಡೂ ಅರ್ಜುನವೃಕ್ಷಗಳಿಂದ ಅಗ್ನಿಯಂತೆ ತೇಜಸ್ವಿಗಳಾದ ಇಬ್ಬರು ಸಿದ್ಧಪುರುಷರು ಹೊರಬಂದರು. ಅವರ ದಿವ್ಯ ಪ್ರಭೆಯಿಂದಾಗಿ ದಿಕ್ಕುಗಳು ಬೆಳಗಿದವು. ಅವರು ಅಖಿಲಲೋಕನಾಥನಾದ ಪರಾತ್ಪರನಾದ ಶ್ರೀಕೃಷ್ಣನ ಬಳಿಗೆ ಬಂದು ಅವನ ಚರಣಗಳಲ್ಲಿ ತಲೆಯನ್ನಿಟ್ಟು ನಮಸ್ಕರಿಸಿ, ಕೈಗಳನ್ನು ಜೋಡಿಸಿಕೊಂಡು ಶುದ್ಧಹೃದಯದಿಂದ ಬಾಲಕೃಷ್ಣನನ್ನು ಸ್ತುತಿಸತೊಡಗಿದರು. ॥ ೨೮ ॥

ಓ ಸಚ್ಚಿದಾನಂದ ಸ್ವರೂಪಿಯೇ! ಸಮಸ್ತರನ್ನು ತನ್ನತ್ತ ಆಕರ್ಷಿಸುವ ಯೋಗೇಶ್ವರನಾದ ಕೃಷ್ಣನೇ! ನೀನು ಪ್ರಕೃತಿಗೆ ಅತೀತನಾಗಿ ಸ್ವಯಂ ಪುರುಷೋತ್ತಮನಾಗಿರುವೆ. ಈ ವ್ಯಕ್ತ ಮತ್ತು ಅವ್ಯಕ್ತ ಸಂಪೂರ್ಣ ಜಗತ್ತು ನಿನ್ನದೇ ಸ್ವರೂಪವಾಗಿದೆ ಎಂದು ವೇದಜ್ಞರಾದ ಬ್ರಾಹ್ಮಣರು ತಿಳಿದಿರುತ್ತಾರೆ. ॥ ೨೯ ॥ ನೀನೇ ಸಮಸ್ತ ಪ್ರಾಣಿಗಳ ಶರೀರ, ಪ್ರಾಣ, ಅಂತಃಕರಣ ಮತ್ತು ಇಂದ್ರಿಯಗಳ ಸ್ವಾಮಿಯಾಗಿರುವೆ. ನೀನೇ ಸರ್ವಶಕ್ತನಾದ ಕಾಲಸ್ವರೂಪನೂ, ಸರ್ವವ್ಯಾಪಕನೂ, ಅವಿನಾಶಿಯೂ, ಈಶ್ವರನೂ ಆಗಿರುವೆ. ॥ ೩೦ ॥ ನೀನೇ ಮಹತ್ತತ್ತ್ವವೂ, ಸತ್ತ್ವ-ರಜಸ್ತಮೋ ಗುಣಮಯವಾದ ಅತ್ಯಂತ ಸೂಕ್ಷ್ಮ ಪ್ರಕೃತಿಯೂ ಆಗಿರುವೆ. ನೀನೇ ಸಮಸ್ತ ಸ್ಥೂಲ ಮತ್ತು ಸೂಕ್ಷ್ಮ ಶರೀರಗಳ ಕರ್ಮ, ಭಾವ, ಧರ್ಮ ಮತ್ತು ಸತ್ತೆಯನ್ನು ತಿಳಿಯುವ ಎಲ್ಲರ ಸಾಕ್ಷಿಯಾದ ಪರಮಾತ್ಮನಾಗಿರುವೆ. ॥ ೩೧ ॥ ವೃತ್ತಿಗಳಿಂದ ಗ್ರಹಿಸಲ್ಪಡುವ ಪ್ರಕೃತಿಯ ಗುಣಗಳಿಂದ ಮತ್ತು ವಿಕಾರಗಳಿಂದ ನೀನು ಗ್ರಹಿಸಲ್ಪಡತಕ್ಕವನಲ್ಲ. ಸ್ಥೂಲ ಮತ್ತು ಸೂಕ್ಷ್ಮ ಶರೀರಗಳ ಆವರಣಗಳಿಂದ ಮುಚ್ಚಲ್ಪಟ್ಟ ಯಾವನು ತಾನೇ ನಿನ್ನನ್ನು ತಿಳಿಯಬಲ್ಲನು? ಏಕೆಂದರೆ, ನೀನಾದರೋ ಆ ಶರೀರಗಳು ಉಂಟಾಗುವ ಮೊದಲೇ ಸ್ವಪ್ರಕಾಶನಾಗಿ ಸಿದ್ಧನಾಗಿರುವೆ. ॥ ೩೨ ॥ ಸಮಸ್ತ ಪ್ರಪಂಚದ ಸೃಷ್ಟಿಕರ್ತನಾದ ಭಗವಾನ್ ವಾಸುದೇವನಿಗೆ ನಾವು ನಮಸ್ಕರಿಸುತ್ತೇವೆ. ಪ್ರಭೋ! ನಿನ್ನ ಮೂಲಕ ಪ್ರಕಾಶಿತವಾಗುವ ಗುಣಗಳಿಂದಲೇ ನೀನು ನಿನ್ನ ಮಹಿಮೆಯನ್ನು ಅಡಗಿಸಿಟ್ಟಿರುವೆ. ಪರಬ್ರಹ್ಮ ಸ್ವರೂಪನಾದ ಶ್ರೀಕೃಷ್ಣನೇ! ನಾವು ನಿನಗೆ ನಮಸ್ಕರಿಸುತ್ತಿದ್ದೇವೆ. ॥ ೩೩ ॥ ನೀನು ಪ್ರಾಕೃತ ಶರೀರದಿಂದ ರಹಿತನಾಗಿರುವೆ. ಹೀಗಿದ್ದರೂ ನೀನು ಸಾಧಾರಣವಾಗಿ ಶರೀರಧಾರಿಗಳಿಗೆ ಶಕ್ಯವಲ್ಲದ ಪರಾಕ್ರಮಗಳನ್ನು ಪ್ರಕಟಪಡಿಸುವೆ. ಅದರಿಂದ ಹೆಚ್ಚೇನು ಅದಕ್ಕೆ ಸಮಾನವಾಗಿಯೂ ಯಾರೂ ಮಾಡಲಾಗದಿದ್ದಾಗ ಅವುಗಳ ಮೂಲಕ ಆ ಶರೀರಗಳಲ್ಲಿ ನಿನ್ನ ಅವತಾರಗಳ ಅರಿವು ಉಂಟಾಗುತ್ತದೆ. ॥ ೩೪ ॥ ಪ್ರಭೋ! ನೀನೇ ಸಮಸ್ತ ಲೋಕಗಳ ಅಭ್ಯುದಯ ಮತ್ತು ನಿಶ್ರೇಯಸ್ಸಿಗಾಗಿ ಈಗ ನಿನ್ನ ಸಮಸ್ತ ಶಕ್ತಿಗಳಿಂದ ಅವತರಿಸಿರುವೆ. ನೀನು ಸಮಸ್ತ ಅಭಿಲಾಷೆಗಳನ್ನು ಪೂರ್ಣಗೊಳಿಸುವವನಾಗಿರುವೆ. ॥ ೩೫ ॥ ಪರಮ ಕಲ್ಯಾಣ ಸ್ವರೂಪನೇ! ದಿವ್ಯ ಮಂಗಳ ವಿಗ್ರಹನೇ! ಮಂಗಳ ಸ್ವರೂಪನೇ! ನಿನಗೆ ನಮಸ್ಕರಿಸುತ್ತೇವೆ. ಪ್ರಶಾಂತನೇ! ಯದು ಪತಿಯೇ! ನಿನಗೆ ನಮಸ್ಕರಿಸುತ್ತೇವೆ. ॥ ೩೬ ॥ ಅನಂತನೇ! ನಾವು ನಿನ್ನ ದಾಸಾನುದಾಸರಾಗಿದ್ದೇವೆ. ನೀನು ನಮ್ಮನ್ನು ಸ್ವೀಕರಿಸು. ಮಹರ್ಷಿಗಳಾದ ನಾರದಮುನಿಗಳ ಪರಮಾನುಗ್ರಹದಿಂದಲೇ ಅಪರಾಧಿಗಳಾಗಿದ್ದ ನಮಗೆ ನಿನ್ನ ದಿವ್ಯದರ್ಶನ ದೊರೆಯಿತು. ॥ ೩೭ ॥

ವಾಣೀ ಗುಣಾನುಕಥನೇ ಶ್ರವಣೌ ಕಥಾಯಾಂ
ಹಸ್ತೌ ಚ ಕರ್ಮಸು ಮನಸ್ತವ ಪಾದಯೋರ್ನಃ ।
ಸ್ಮೃತ್ಯಾಂ ಶಿರಸ್ತವ ನಿವಾಸಜಗತ್ಪ್ರಣಾಮೇ
ದೃಷ್ಟಿಃ ಸತಾಂ ದರ್ಶನೇಽಸ್ತು ಭವತ್ತನೂನಾಮ್ ॥ ೩೮ ॥

ಪ್ರಭೋ! ನಮ್ಮ ವಾಣಿಯು ನಿನ್ನ ಮಂಗಳ ಗುಣಗಳನ್ನು ವರ್ಣಿಸುತ್ತಿರಲಿ. ನಮ್ಮ ಕಿವಿಗಳು ನಿನ್ನ ರಸಮಯವಾದ ಕಥಾ ಶ್ರವಣದಲ್ಲಿ ತೊಡಗಿರಲಿ. ನಮ್ಮ ಕೈಗಳು ನಿನ್ನ ಸೇವೆಯಲ್ಲಿ ಮತ್ತು ಮನಸ್ಸು ನಿನ್ನ ಚರಣಕಮಲಗಳ ಸ್ಮರಣೆಯಲ್ಲಿ ತೊಡಗಿರಲಿ. ಈ ಸಮಸ್ತ ಜಗತ್ತು ನಿನ್ನ ನಿವಾಸ ಸ್ಥಾನವಾಗಿದೆ. ಎಲ್ಲರೆದುರು ನಮ್ಮ ಶಿರಸ್ಸು ಬಾಗಿರಲಿ. ಸಂತರು ನಿನ್ನ ಪ್ರತ್ಯಕ್ಷ ಶರೀರವಾಗಿದ್ದಾರೆ. ನಮ್ಮ ಕಣ್ಣುಗಳು ಅವರನ್ನು ದರ್ಶಿಸುತ್ತಿರಲಿ. ॥ ೩೮ ॥

ಶ್ರೀಶುಕ ಉವಾಚ

ಇತ್ಥಂ ಸಂಕೀರ್ತಿತಸ್ತಾಭ್ಯಾಂ ಭಗವಾನ್ಗೋಕುಲೇಶ್ವರಃ ।
ದಾಮ್ನಾ ಚೋಲೂಖಲೇ ಬದ್ಧಃ ಪ್ರಹಸನ್ನಾಹ ಗುಹ್ಯಕೌ ॥ ೩೯ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ - ಪರೀಕ್ಷಿತನೇ! ನಳಕೂಬರ-ಮಣಿಗ್ರೀವರು ಹೀಗೆ ಸ್ತೋತ್ರ ಮಾಡಲು, ಸೌಂದರ್ಯನಿಧಿಯೂ, ಮಾಧುರ್ಯನಿಧಿಯೂ, ಗೋಕುಲೇಶ್ವರನೂ ಆದ ಶ್ರೀಕೃಷ್ಣನು ಹಗ್ಗದಿಂದ ಒರಳಿಗೆ ಕಟ್ಟಲ್ಪಟ್ಟಂತೆ ನಸುನಗುತ್ತಾ ಅವರಲ್ಲಿ ಇಂತೆಂದನು. ॥ ೩೯ ॥

ಶ್ರೀಭಗವಾನುವಾಚ

ಜ್ಞಾತಂ ಮಮ ಪುರೈವೈತದ್‌ಋಷಿಣಾ ಕರುಣಾತ್ಮನಾ ।
ಯಚ್ಛ್ರೀಮದಾಂಧಯೋರ್ವಾಗ್ಭಿರ್ವಿಭ್ರಂಶೋಽನುಗ್ರಹಃ ಕೃತಃ ॥ ೪೦ ॥

ಸಾಧೂನಾಂ ಸಮಚಿತ್ತಾನಾಂ ಸುತರಾಂ ಮತ್ಕೃತಾತ್ಮನಾಮ್ ।
ದರ್ಶನಾನ್ನೋ ಭವೇದ್ಬಂಧಃ ಪುಂಸೋಽಕ್ಷ್ಣೋಃ ಸವಿತುರ್ಯಥಾ ॥ ೪೧ ॥

ತದ್ಗಚ್ಛತಂ ಮತ್ಪರಮೌ ನಲಕೂಬರಸಾದನಮ್ ।
ಸಂಜಾತೋ ಮಯಿ ಭಾವೋ ವಾಮೀಪ್ಸಿತಃ ಪರಮೋಽಭವಃ ॥ ೪೨ ॥

ಶ್ರೀಭಗವಂತನು ಹೇಳಿದನು - ಗುಹ್ಯಕರೇ! ನೀವು ಧನ ಮದದಿಂದ ಕುರುಡರಾಗಿ ಬಿಟ್ಟಿದ್ದಿರಿ. ಪರಮ ಕಾರುಣಿಕರಾದ ನಾರದಮಹರ್ಷಿಗಳು ನಿಮಗೆ ಶಾಪವನ್ನು ಕೊಟ್ಟು ನಿಮ್ಮ ಐಶ್ವರ್ಯವನ್ನು ವಿನಾಶಗೊಳಿಸಿದ್ದರು ಹಾಗೂ ನನ್ನ ಸಾನ್ನಿಧ್ಯವು ಸಿಕ್ಕಿ ಶಾಪ ಮುಕ್ತರಾಗುವಂತೆ ಅನುಗ್ರಹಿಸಿದ್ದರು ಎಂಬುದು ನಾನು ಮೊದಲಿನಿಂದಲೇ ತಿಳಿದಿದ್ದೆ ॥ ೪೦ ॥ ಯಾರ ಬುದ್ಧಿಯು ಸಮದರ್ಶಿಯಾಗಿದೆಯೋ, ಯಾರ ಹೃದಯ ಪೂರ್ಣವಾಗಿ ನನಗೆ ಸಮರ್ಪಿತವಾಗಿದೆಯೋ ಅಂತಹ ಸತ್ಪುರುಷರ ದರ್ಶನ ಮಾತ್ರದಿಂದಲೇ - ಸೂರ್ಯನುದಯಿಸಿದೊಡನೆ ಮನುಷ್ಯರ ಕಣ್ಣುಗಳಿಂದ ಕತ್ತಲೆಯು ದೂರವಾಗುವಂತೆಯೇ - ಸಮಸ್ತವಾದ ಬಂಧನಗಳು ದೂರವಾಗುತ್ತವೆ. ॥ ೪೧ ॥ ಆದ್ದರಿಂದ ನಳಕೂಬರ-ಮಣಿಗ್ರೀವರೇ! ನೀವು ನನ್ನಲ್ಲಿ ಪರಾಯಣರಾಗಿ ನಿಮ್ಮ ನಿಮ್ಮ ಮನೆಗಳಿಗೆ ಹೋಗಿರಿ. ನಿಮ್ಮಗಳಿಗೆ ಇಷ್ಟವಾದ ಸಂಸಾರ ಚಕ್ರದಿಂದ ಬಿಡುಗಡೆಗೊಳಿಸುವಂತಹ ಅನನ್ಯ ಭಕ್ತಿಭಾವವು ಪ್ರಾಪ್ತವಾಗಿದೆ. ॥ ೪೨ ॥

ಶ್ರೀಶುಕ ಉವಾಚ

ಇತ್ಯುಕ್ತೌ ತೌ ಪರಿಕ್ರಮ್ಯ ಪ್ರಣಮ್ಯ ಚ ಪುನಃ ಪುನಃ ।
ಬದ್ಧೋಲೂಖಲಮಾಮಂತ್ರ್ಯ ಜಗ್ಮತುರ್ದಿಶಮುತ್ತರಾಮ್ ॥ ೪೩ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ - ಭಗವಂತನು ಹೀಗೆ ಹೇಳಿದಾಗ ಅವರಿಬ್ಬರೂ ಕೃಷ್ಣನಿಗೆ ಪ್ರದಕ್ಷಿಣೆ ಬಂದು ಪದೇ-ಪದೇ ನಮಸ್ಕಾರ ಮಾಡಿದರು. ಇದಾದ ಬಳಿಕ ಕಟ್ಟಲ್ಪಟ್ಟ ಸರ್ವೇಶ್ವರನ ಅಪ್ಪಣೆಯನ್ನು ಪಡೆದು ಅವರು ಉತ್ತರ ದಿಕ್ಕಿನ ಕಡೆ ಪ್ರಯಾಣ ಮಾಡಿದರು. ॥ ೪೩ ॥

ಹತ್ತನೆಯ ಅಧ್ಯಾಯವು ಮುಗಿಯಿತು. ॥ ೧೦ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮ ಸ್ಕಂಧೇ ಪೂರ್ವಾರ್ಧೇ
ನಾರದಶಾಪೋ ನಾಮ ದಶಮೋಽಧ್ಯಾಯಃ ॥ ೧೦ ॥

ಹನ್ನೊಂದನೆಯ ಅಧ್ಯಾಯ

ಗೋಕುಲದಿಂದ ವೃಂದಾವನಕ್ಕೆ ಹೋದುದು ಹಾಗೂ ವತ್ಸಾಸುರ ಮತ್ತು ಬಕಾಸುರರ ಉದ್ಧಾರ

ಶ್ರೀಶುಕ ಉವಾಚ

**ಗೋಪಾ ನಂದಾದಯಃ ಶ್ರುತ್ವಾ ದ್ರುಮಯೋಃ ಪತತೋ ರವಮ್ ।
ತತ್ರಾಜಗ್ಮುಃ ಕುರುಶ್ರೇಷ್ಠ ನಿರ್ಘಾತಭಯಶಂಕಿತಾಃ ॥ ೧ ॥**

**ಭೂಮ್ಯಾಂ ನಿಪತಿತೌ ತತ್ರ ದದೃಶುರ್ಯಮಲಾರ್ಜುನೌ ।
ಬಭ್ರಮುಸ್ತದವಿಜ್ಞಾಯ ಲಕ್ಷ್ಯಂ ಪತನಕಾರಣಮ್ ॥ ೨ ॥**

**ಉಲೂಖಲಂ ವಿಕರ್ಷಂತಂ ದಾಮ್ನಾ ಬದ್ಧಂ ಚ ಬಾಲಕಮ್ ।
ಕಸ್ಯೇದಂ ಕುತ ಆಶ್ಚರ್ಯಮುತ್ಪಾತ ಇತಿ ಕಾತರಾಃ ॥ ೩ ॥**

**ಬಾಲಾ ಊಚುರನೇನೇತಿ ತಿರ್ಯಗ್ಗತಮುಲೂಖಲಮ್ ।
ವಿಕರ್ಷತಾ ಮಧ್ಯಗೇನ ಪುರುಷಾವಪ್ಯಚಕ್ಷ್ಮಹಿ ॥ ೪ ॥**

**ನ ತೇ ತದುಕ್ತಂ ಜಗೃಹುರ್ನ ಘಟೇತೇತಿ ತಸ್ಯ ತತ್ ।
ಬಾಲಸ್ಯೋತ್ಪಾಟನಂ ತರ್ವೋಃ ಕೇಚಿತ್ಸಂದಿಗ್ಧಚೇತಸಃ ॥ ೫ ॥**

**ಉಲೂಖಲಂ ವಿಕರ್ಷಂತಂ ದಾಮ್ನಾ ಬದ್ಧಂ ಸ್ವಮಾತ್ಮಜಮ್ ।
ವಿಲೋಕ್ಯ ನಂದಃ ಪ್ರಹಸದ್ವದನೋ ವಿಮುಮೋಚ ಹ ॥ ೬ ॥**

**ಗೋಪೀಭಿಃ ಸ್ತೋಭಿತೋಽನೃತ್ಯದ್ಭಗವಾನ್ಬಾಲವತ್ಕ್ವಚಿತ್ ।
ಉದ್ಗಾಯತಿ ಕ್ವಚಿನ್ಮುಗ್ಧಸ್ತದ್ವಶೋ ದಾರುಯಂತ್ರವತ್ ॥ ೭ ॥**

**ಬಿಭರ್ತಿ ಕ್ವಚಿದಾಜ್ಞಪ್ತಃ ಪೀಠಕೋನ್ಮಾನಪಾದುಕಮ್ ।
ಬಾಹುಕ್ಷೇಪಂ ಚ ಕುರುತೇ ಸ್ವಾನಾಂ ಚ ಪ್ರೀತಿಮಾವಹನ್ ॥ ೮ ॥**

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಕುರುಶ್ರೇಷ್ಠನೇ! ಅರ್ಜುನ ವೃಕ್ಷಗಳು ಬಿದ್ದಾಗ ಉಂಟಾದ ಘೋರ ಶಬ್ದವನ್ನು ಗೋಕುಲದ ನಂದನೇ ಮೊದಲಾದ ಗೋಪಾಲಕರು ಕೇಳಿ ಕೊಂಡು, ಸಿಡಿಲೇನಾದರೂ ಬಡಿಯಿತೋ ಎಂಬ ಸಂದೇಹದಿಂದ ಅವರೆಲ್ಲರೂ ಆ ವೃಕ್ಷಗಳ ಬಳಿಗೆ ಬಂದರು. ॥ ೧ ॥ ಎರಡೂ ವೃಕ್ಷಗಳು ಬುಡಮೇಲಾಗಿ ಉರುಳಿ ಬಿದ್ದಿರುವುದನ್ನು ಅವರೆಲ್ಲರೂ ಕಂಡರು. ಆ ವೃಕ್ಷಗಳ ಮಧ್ಯಭಾಗದಿಂದ ಸೊಂಟಕ್ಕೆ ಕಟ್ಟಿದ ಒರಳು ಕಲ್ಲನ್ನು ಕೃಷ್ಣನು ಎಳೆದುಕೊಂಡು ದಾಟಿ ಹೋಗಿರುವುದನ್ನು ನೋಡಿದರು. ಆದರೆ ವೃಕ್ಷಗಳು ಬಿದ್ದ ಕಾರಣವನ್ನು ಅವರು ತಿಳಿಯದೇ ಹೋದರು. ಈ ವೃಕ್ಷಗಳನ್ನು ಉರುಳಿಸಿದವರು ಯಾರು? ಹೇಗೆ ಉರುಳಿದುವು? ಇಂತಹ ಆಶ್ಚರ್ಯಕರವಾದ ಘಟನೆ ಹೇಗೆ ನಡೆಯಿತು? ಎಂದು ಯೋಚಿಸಿ ಗಾಬರಿಗೊಂಡರು. ಅವರ ಬುದ್ಧಿಯು ಭ್ರಮಿಸಿತು. ॥ ೨-೩ ॥

ಅಲ್ಲಿಯೇ ಆಡುತ್ತಿದ್ದ ಕೆಲವು ಬಾಲಕರು ನಂದಾದಿಗಳಿಗೆ ಹೇಳಿದರು – ಅಯ್ಯಾ! ಇದಾದರೋ ಇದೇ ಪುಟ್ಟ ಕೃಷ್ಣನ ಕೆಲಸವಾಗಿದೆ. ಇವನು ಎರಡೂ ವೃಕ್ಷಗಳ ನಡುವಿನಿಂದ ದಾಟಿ ಹೋಗುವಾಗ ಒರಳು ಅಡ್ಡಲಾಗಿ ಸಿಕ್ಕಿಹಾಕಿಕೊಂಡಿತು. ಇವನು ಅದನ್ನು ಸ್ವಲ್ಪ ಎಳೆದಾಗ ಈ ಮರಗಳು ಉರುಳಿ ಬಿದ್ದವು. ನಾವಾದರೋ ಇವುಗಳಿಂದ ಹೊರಟ ಇಬ್ಬರು ದಿವ್ಯ ಪುರುಷರನ್ನೂ ನೋಡಿದೆವು. ॥ ೪ ॥ ಆದರೆ ಗೋಪಾಲಕರು ಈ ಬಾಲಕರ ಮಾತುಗಳನ್ನು ಒಪ್ಪಿಕೊಳ್ಳಲಿಲ್ಲ. 'ಒಂದು ಪುಟ್ಟ ಬಾಲಕನು ಇಷ್ಟು ದೊಡ್ಡದಾದ ಮರಗಳನ್ನು ಕಿತ್ತು ಹಾಕುವುದು ಎಂದೆಂದಿಗೂ ಸಂಭವವಿಲ್ಲ' ಎಂದು ಆಡಿಕೊಂಡರು. ಕೆಲವರ ಮನಸ್ಸಿನಲ್ಲಿ ಶ್ರೀಕೃಷ್ಣನ ಮೊದಲಿನ ಲೀಲೆಗಳನ್ನು ನೆನೆದು ಇರಬಹುದೆಂದು ಸಂದೇಹಿಸಿದರು. ॥ ೫ ॥ ನಂದಗೋಪನು ನೋಡುತ್ತಾನೆ – ತನ್ನ ಪ್ರಾಣಪ್ರಿಯನಾದ ಕಂದಮ್ಮನು ಹಗ್ಗದಿಂದ ಕಟ್ಟಲ್ಪಟ್ಟು ಒರಳನ್ನು ಎಳೆದುಕೊಂಡು ಹೋಗುತ್ತಿರುವನು. ಅವನು ನಗುತ್ತಾ ಲಗುಬಗೆಯಿಂದ ಹೋಗಿ ಹಗ್ಗವನ್ನು ಬಿಚ್ಚಿದನು. ॥ ೬ ॥

ಸರ್ವಶಕ್ತನಾದ ಭಗವಂತನು ಕೆಲವೊಮ್ಮೆ ಗೋಪಿಯರು ಪುಸಲಾಯಿಸಿದಾಗ ಸಾಧಾರಣ ಬಾಲಕರಂತೆ ಕುಣಿಯುತ್ತಿದ್ದನು. ಕೆಲವೊಮ್ಮೆ ಮುಗ್ಧಬಾಲಕನಂತೆ ಹಾಡತೊಡಗುವನು. ಅವನು ಅವರ ಕೈಗೊಂಬೆಯಾಗಿ ಪೂರ್ಣವಾಗಿ ಅವರಿಗೆ ಅಧೀನನಾಗಿ ಬಿಟ್ಟಿದ್ದನು. ॥ ೭ ॥ ಕೆಲವೊಮ್ಮೆ ಅವರ ಆಜ್ಞೆಯಂತೆ ಮಣೆಗಳನ್ನು ಪಾತ್ರೆಗಳನ್ನೂ ಪಾದುಕೆಗಳನ್ನೂ ಹೊತ್ತು ತರುತ್ತಿದ್ದನು. ಕೆಲವೊಮ್ಮೆ ತನ್ನ ಪ್ರೇಮೀ ಭಕ್ತರಿಗೆ (ಗೋಪಿಯರನ್ನು) ಸಂತೋಷವನ್ನು ಉಂಟುಮಾಡಲಿಕ್ಕಾಗಿ ಪೈಲ್ವಾನರಂತೆ ಭುಜಗಳನ್ನು ತಟ್ಟಿಕೊಳ್ಳುತ್ತಾ ಮೇಲೆತ್ತಿ ಹಿಡಿಯುವನು. ॥ ೮ ॥

ದರ್ಶಯಂಸ್ತದ್ವಿದಾಂ ಲೋಕ ಆತ್ಮನೋ ಭೃತ್ಯವಶ್ಯತಾಮ್ ।
ವ್ರಜಸ್ಯೋವಾಹ ವೈ ಹರ್ಷಂ ಭಗವಾನ್ಬಾಲಚೇಷ್ಟಿತೈಃ ॥ ೯ ॥

ಹೀಗೆ ಸರ್ವಶಕ್ತಿಮಂತನಾದ ಭಗವಂತನು ತನ್ನ ಬಾಲಲೀಲೆಗಳಿಂದ ವ್ರಜವಾಸಿಗಳನ್ನು ಸಂತೋಷಪಡಿಸುತ್ತಾ, ಭಗವಂತನೆಂಬ ರಹಸ್ಯವನ್ನು ತಿಳಿದವರಿಗೆ ತಾನು ಭಕ್ತಪರಾಧೀನನೆಂಬುದನ್ನು ಪ್ರಕಟಪಡಿಸುತ್ತಿದ್ದನು. ॥ ೯ ॥

ಕ್ರೀಣೀಹಿ ಭೋಃ ಫಲಾನೀತಿ ಶ್ರುತ್ವಾ ಸತ್ವರಮಚ್ಯುತಃ ।
ಫಲಾರ್ಥೀ ಧಾನ್ಯಮಾದಾಯ ಯಯೌ ಸರ್ವಫಲಪ್ರದಃ ॥ ೧೦ ॥

ಫಲವಿಕ್ರಯಿಣೀ ತಸ್ಯ ಚ್ಯುತಧಾನ್ಯಂ ಕರದ್ವಯಮ್ ।
ಫಲೈರಪೂರಯದ್ರತ್ನೈಃ ಫಲಭಾಂಡಮಪೂರಿ ಚ ॥ ೧೧ ॥

ಒಂದು ದಿನ ಹಣ್ಣುಮಾರುವವಳೊಬ್ಬಳು ಬಂದು 'ಹಣ್ಣು ಬಂದಿದೆ! ಹಣ್ಣು ತೆಗೆದುಕೊಳ್ಳಿ' ಎಂದು ಕೂಗಿಕೊಂಡಳು. ಇದನ್ನು ಕೇಳುತ್ತಲೇ ಸಮಸ್ತ ಕರ್ಮ ಮತ್ತು ಉಪಾಸನೆಗಳ ಫಲವನ್ನು ನೀಡುವಂತಹ ಭಗವಂತನಾದ ಅಚ್ಯುತನು ಹಣ್ಣುಗಳನ್ನು ಕೊಂಡುಕೊಳ್ಳಲು ತನ್ನ ಪುಟ್ಟದಾದ ಬೊಗಸೆಯಲ್ಲಿ ಧಾನ್ಯವನ್ನು ಎತ್ತಿಕೊಂಡು ಓಡಿ ಬಂದನು. ॥ ೧೦ ॥ ಅವನ ಬೊಗಸೆಯಿಂದ ಧಾನ್ಯವಾದರೋ ದಾರಿಯಲ್ಲೇ ಚೆಲ್ಲಿ ಹೋಗಿತ್ತು. ಆದರೆ ಹಣ್ಣು ಮಾರುವವಳು ಅವನ ಎರಡೂ ಕೈತುಂಬಾ ಹಣ್ಣುಗಳನ್ನು ಕೊಟ್ಟಳು. ಇತ್ತ ಭಗವಂತನೂ ಕೂಡ ಆಕೆಯ ಹಣ್ಣುಗಳನ್ನು ತುಂಬುವ ಬುಟ್ಟಿಯನ್ನು ನವರತ್ನಗಳಿಂದ ತುಂಬಿಬಿಟ್ಟನು. ॥ ೧೧ ॥

ಸರಿತ್ತೀರಗತಂ ಕೃಷ್ಣಂ ಭಗ್ನಾರ್ಜುನಮಥಾಹ್ವಯತ್ ।
ರಾಮಂ ಚ ರೋಹಿಣೀ ದೇವೀ ಕ್ರೀಡಂತಂ ಬಾಲಕೈರ್ಭೃಶಮ್ ॥ ೧೨ ॥

ನೋಪೇಯಾತಾಂ ಯದಾಽಽಹೂತೌ ಕ್ರೀಡಾಸಂಗೇನ ಪುತ್ರಕೌ ।
ಯಶೋದಾಂ ಪ್ರೇಷಯಾಮಾಸ ರೋಹಿಣೀ ಪುತ್ರವತ್ಸಲಾಮ್ ॥ ೧೩ ॥

ಕ್ರೀಡಂತಂ ಸಾ ಸುತಂ ಬಾಲೈರತಿವೇಲಂ ಸಹಾಗ್ರಜಮ್ ।
ಯಶೋದಾಜೋಹವೀತ್ಕೃಷ್ಣಂ ಪುತ್ರಸ್ನೇಹಸ್ನುತಸ್ತನೀ ॥ ೧೪ ॥

ಅನಂತರ ಒಂದು ದಿನ ಯಮಳಾರ್ಜುನ ವೃಕ್ಷವನ್ನು ಮುರಿದಿರುವ ಶ್ರೀಕೃಷ್ಣ ಮತ್ತು ಬಲರಾಮರು ಗೊಲ್ಲ ಬಾಲಕರೊಂದಿಗೆ ಆಡುತ್ತಾ-ಆಡುತ್ತಾ ಯಮುನಾ ನದಿಯ ತೀರಕ್ಕೆ ಹೋದರು ಹಾಗೂ ಆಟದಲ್ಲಿ ಮೈಮರೆತರು. ಆಗ ರೋಹಿಣೀದೇವಿಯು ಅವರಿಬ್ಬರನ್ನೂ ಕರೆಯುತ್ತಾ ಓ ಕೃಷ್ಣಾ! ಓ ಬಲರಾಮಾ! ಬೇಗನೇ ಬನ್ನಿ ಇನ್ನು ಆಟ ಸಾಕು. ॥ ೧೨ ॥ ಆದರೆ ರೋಹಿಣಿಯು ಎಷ್ಟು ಕರೆದರೂ ಬರಲಿಲ್ಲ, ಕಾರಣ ಅವರಿಬ್ಬರೂ ಆಟದಲ್ಲಿ ತನ್ಮಯರಾಗಿದ್ದರು. ನಾನಾ ರೀತಿಯಿಂದ ಕರೆದಾಗಲೂ ಬಾಲಕರು ಬಾರದಿದ್ದಾಗ ರೋಹಿಣಿಯು ಪುತ್ರವತ್ಸಲೆಯಾದ ಯಶೋದಾದೇವಿಯನ್ನು ಮಕ್ಕಳನ್ನು ಕರೆತರಲು ಕಳಿಸಿದಳು. ॥ ೧೩ ॥ ಶ್ರೀಕೃಷ್ಣ- ಬಲರಾಮರು ಗೋಪಾಲರೊಡನೆ ಎಷ್ಟೋ ಹೊತ್ತಿನಿಂದ ಆಟವಾಡುತ್ತಿದ್ದರು ಯಶೋದೆಯು ಹೋಗಿ ಅವರನ್ನು ಕರೆದಳು. ಆಗ ಪುತ್ರನಲ್ಲಿದ್ದ ಅತಿಶಯವಾದ ಪ್ರೀತಿಯಿಂದಾಗಿ ಆಕೆಯ ಸ್ತನಗಳಿಂದ ಹಾಲು ಒಸರುತ್ತಿತ್ತು. ॥ ೧೪ ॥

ಕೃಷ್ಣ ಕೃಷ್ಣಾರವಿಂದಾಕ್ಷ ತಾತ ಏಹಿ ಸ್ತನಂ ಪಿಬ ।
ಅಲಂ ವಿಹಾರೈಃ ಕ್ಷುತ್ಕ್ಷಾಂತಃ ಕ್ರೀಡಾಶ್ರಾಂತೋಽಸಿ ಪುತ್ರಕ ॥ ೧೫ ॥

ಹೇ ರಾಮಾಗಚ್ಛ ತಾತಾಶು ಸಾನುಜಃ ಕುಲನಂದನ ।
ಪ್ರಾತರೇವ ಕೃತಾಹಾರಸ್ತದ್ಭವಾನ್ಭೋಕ್ತುಮರ್ಹತಿ ॥ ೧೬ ॥

ಪ್ರತೀಕ್ಷತೇ ತ್ವಾಂ ದಾಶಾರ್ಹ ಭೋಕ್ಷ್ಯಮಾಣೋ ವ್ರಜಾಧಿಪಃ ।
ಏಹ್ಯಾವಯೋಃ ಪ್ರಿಯಂ ದೇಹಿ ಸ್ವಗೃಹಾನ್ಯಾತ ಬಾಲಕಾಃ ॥ ೧೭ ॥

ಯಶೋದೆಯು ಕೃಷ್ಣನನ್ನು ಗಟ್ಟಿಯಾಗಿ ಕೂಗುತ್ತಾ ಓ ಕೃಷ್ಣಾ! ನನ್ನ ಮುದ್ದು ಕಂದಮ್ಮ! ಮೋಹನಕೃಷ್ಣ! ಅರವಿಂದಾಕ್ಷನೇ! ಮಗು! ಚಿನ್ನ! ಬೇಗ ಬಾರೋ! ಸ್ತನ್ಯಪಾನ ಮಾಡು. ಇನ್ನಾದರೂ ನಿನ್ನ ಆಟಗಳನ್ನು ಸಾಕುಮಾಡು, ನೋಡಿಲ್ಲಿ! ಆಟವಾಡಿ ದಣಿದಿರಬಹುದು. ಬೇಗ ಬಾರೋ! ॥ ೧೫ ॥ ಮುದ್ದುಕಂದ ರಾಮಾ! ನೀನೂ ಬೇಗ ಬಾ. ಯದುಕುಲಕ್ಕೆ ಆನಂದವನ್ನುಂಟುಮಾಡುವವನೇ! ತಮ್ಮನನ್ನು ಕರೆದುಕೊಂಡು ಬೇಗನೇ ಬಂದುಬಿಡು. ಇಂದು ನೀವು ಬೆಳಗ್ಗೆ ಬೇಗ ಊಟಮಾಡಿದ್ದೀರಿ. ಈಗ ನಿಮಗೆ ಹಸಿವಾಗಿರಬಹುದು. ಏನಾದರೂ ತಿಂದುಕೊಳ್ಳಿ.॥ ೧೬ ॥ ದಾಶಾರ್ಹಕುಲತಿಲಕನೇ! ವ್ರಜರಾಜರಾದ ನಂದಗೋಪರು ಊಟಮಾಡಲು ನಿಮಗಾಗಿ ಕಾಯುತ್ತಿದ್ದಾರೆ. ಬೇಗನೇ ಬಂದು ನಮ್ಮಿಬ್ಬರನ್ನೂ ಸಂತೋಷಪಡಿಸಿರಿ. ಗೋಪಬಾಲಕರೇ! ನೀವೂ ನಿಮ್ಮ-ನಿಮ್ಮ ಮನೆಗಳಿಗೆ ಹೋಗಿರಿ. ॥ ೧೭ ॥

ಧೂಲಿಧೂಸರಿತಾಂಗಸ್ತ್ವಂ ಪುತ್ರ ಮಜ್ಜನಮಾವಹ ।
ಜನ್ಮರ್ಕ್ಷಮದ್ಯ ಭವತೋ ವಿಪ್ರೇಭ್ಯೋ ದೇಹಿ ಗಾಃ ಶುಚಿಃ ॥ ೧೮ ॥

ಪಶ್ಯ ಪಶ್ಯ ವಯಸ್ಯಾಂಸ್ತೇ ಮಾತೃಮೃಷ್ಟಾನ್ ಸ್ವಲಂಕೃತಾನ್ ।
ತ್ವಂ ಚ ಸ್ನಾತಃ ಕೃತಾಹಾರೋ ವಿಹರಸ್ವ ಸ್ವಲಂಕೃತಃ ॥ ೧೯ ॥

ಇತ್ಥಂ ಯಶೋದಾ ತಮಶೇಷಶೇಖರಂ
ಮತ್ವಾ ಸುತಂ ಸ್ನೇಹನಿಬದ್ಧಧೀರ್ನೃಪ ।
ಹಸ್ತೇ ಗೃಹೀತ್ವಾ ಸಹರಾಮಮಚ್ಯುತಂ
ನೀತ್ವಾ ಸ್ವವಾಟಂ ಕೃತವತ್ಯಥೋದಯಮ್ ॥ ೨೦ ॥

ಗೋಪವೃದ್ಧಾ ಮಹೋತ್ಪಾತಾನನುಭೂಯ ಬೃಹದ್ವನೇ ।
ನಂದಾದಯಃ ಸಮಾಗಮ್ಯ ವ್ರಜಕಾರ್ಯಮಮಂತ್ರಯನ್ ॥ ೨೧ ॥

ತತ್ರೋಪನಂದನಾಮಾಽಽಹ ಗೋಪೋ ಜ್ಞಾನವಯೋಽಧಿಕಃ ।
ದೇಶಕಾಲಾರ್ಥತತ್ತ್ವಜ್ಞಃ ಪ್ರಿಯಕೃದ್ರಾಮಕೃಷ್ಣಯೋಃ ॥ ೨೨ ॥

ಉತ್ಥಾತವ್ಯಮಿತೋಽಸ್ಮಾಭಿರ್ಗೋಕುಲಸ್ಯ ಹಿತೈಷಿಭಿಃ ।
ಆಯಾಂತ್ಯತ್ರ ಮಹೋತ್ಪಾತಾ ಬಾಲಾನಾಂ ನಾಶಹೇತವಃ ॥ ೨೩ ॥

ಮುಕ್ತಃ ಕಥಂಚಿದ್ರಾಕ್ಷಸ್ಯಾ ಬಾಲಘ್ನ್ಯಾ ಬಾಲಕೋ ಹ್ಯಸೌ ।
ಹರೇರನುಗ್ರಹಾನ್ನೂನಮನಶ್ಚೋಪರಿ ನಾಪತತ್ ॥ ೨೪ ॥

ಚಕ್ರವಾತೇನ ನೀತೋಽಯಂ ದೈತ್ಯೇನ ವಿಪದಂ ವಿಯತ್ ।
ಶಿಲಾಯಾಂ ಪತಿತಸ್ತತ್ರ ಪರಿತ್ರಾತಃ ಸುರೇಶ್ವರೈಃ ॥ ೨೫ ॥

ಯನ್ನ ಮ್ರಿಯೇತ ದ್ರುಮಯೋರಂತರಂ ಪ್ರಾಪ್ಯ ಬಾಲಕಃ ।
ಅಸಾವನ್ಯತಮೋ ವಾಪಿ ತದಪ್ಯಚ್ಯುತರಕ್ಷಣಮ್ ॥ ೨೬ ॥

ಮಗೂ! ನೋಡಿಲ್ಲಿ, ನಿನ್ನ ಮೈಗೆ ಧೂಳೆಲ್ಲ ಮೆತ್ತಿಕೊಂಡಿದೆ. ಬಾ, ಬೇಗನೇ ಸ್ನಾನಮಾಡಿಕೋ. ಇಂದು ನಿನ್ನ ಜನ್ಮ ನಕ್ಷತ್ರವಾಗಿದೆ. ಶುಚಿರ್ಭೂತನಾಗಿ ಬ್ರಾಹ್ಮಣರಿಗೆ ಗೋದಾನವನ್ನು ಮಾಡು. ॥ ೧೮ ॥ ಅದೋ ನಿನ್ನ ಜೊತೆಯವರನ್ನು ನೋಡು. ಅವರೆಲ್ಲರನ್ನು ಅವರ ತಾಯಂದಿರು ಸ್ನಾನಮಾಡಿಸಿ ಒಳ್ಳೆಯ ಅಂದವಾದ ಉಡಿಗೆ ತೊಡಿಗೆಗಳಿಂದ ಶೃಂಗರಿಸಿರುವರು. ಈಗ ನೀನೂ ಸ್ನಾನಮಾಡಿಕೊಂಡು, ಒಳ್ಳೆಯ ಬಟ್ಟೆಗಳನ್ನು ಧರಿಸಿಕೊಂಡು, ಉಂಡು-ತಿಂದು ಮತ್ತೆ ಆಡುವೆಯಂತೆ. ॥ ೧೯ ॥ ಪರೀಕ್ಷಿತನೇ! ಯಶೋದೆಯ ಮನ-ಪ್ರಾಣಗಳು ಪುತ್ರಪ್ರೇಮದಿಂದ ಬಂಧಿಸಲ್ಪಟ್ಟಿದ್ದವು. ಅವಳು ಚರಾಚರ ಜಗತ್ತಿನ ಶಿರೋಮಣಿ ಭಗವಂತನನ್ನು ತನ್ನ ಪುತ್ರನೆಂದೇ ತಿಳಿಯುತ್ತಿದ್ದಳು. ಹೀಗೆ ಕರೆದು ಒಂದು ಕೈಯಿಂದ ಬಲರಾಮನನ್ನು ಇನ್ನೊಂದು ಕೈಯಿಂದ ಕೃಷ್ಣನನ್ನೂ ಹಿಡಿದುಕೊಂಡು ಮನೆಗೆ ನಡೆದಳು. ಬಳಿಕ ಅವರಿಗೆ ಸ್ನಾನಾದಿಗಳನ್ನು ಮಾಡಿಸಿ, ಜನ್ಮೋತ್ಸವಕ್ಕೆ ಸಂಬಂಧಪಟ್ಟ ಮಂಗಳ ಕಾರ್ಯಗಳನ್ನು ಅತ್ಯಂತ ಪ್ರೀತಿಯಿಂದ ನೆರವೇರಿಸಿದಳು. ॥ ೨೦ ॥

ಗೋಕುಲದಲ್ಲಿ ಒಂದಿಲ್ಲೊಂದು ಉತ್ಪಾತಗಳು ನಡೆಯುತ್ತಿರುವುದನ್ನು ನಂದಗೋಪನೇ ಮೊದಲಾದ ವೃದ್ಧರಾದ ಗೋಪರು ಗಮನಿಸಿದಾಗ, ಅವರೆಲ್ಲರೂ ಸೇರಿ - 'ಈಗ ವ್ರಜವಾಸಿಗಳು ಏನು ಮಾಡಬೇಕು?' ಎಂದು ಈ ವಿಷಯದ ಕುರಿತು ಯೋಚಿಸತೊಡಗಿದರು. ॥ ೨೧ ॥ ಅವರಲ್ಲಿ ಉಪನಂದನೆಂಬ ವಯೋವೃದ್ಧನೂ, ಜ್ಞಾನವೃದ್ಧನೂ ಆದ ಓರ್ವ ಗೋಪನಿದ್ದನು. ಯಾವ ಸಮಯದಲ್ಲಿ ಯಾರೊಂದಿಗೆ ಹೇಗೆ ವ್ಯವಹರಿಸಬೇಕೆಂಬ ಅರಿವು ಅವನಿಗೆ ಚೆನ್ನಾಗಿತ್ತು. ಜೊತೆಗೆ - 'ಬಲರಾಮ-ಕೃಷ್ಣರು ಸುಖವಾಗಿ ಇರಬೇಕು, ಅವರಿಗೆ ಯಾವುದೇ ಆಪತ್ತು ಬರಬಾರದೆಂದು ಬಯಸುತ್ತಿದ್ದನು. ಅವನೆಂದನು - ॥ ೨೨ ॥ ಬಂಧುಗಳೇ! ನಿಮಗೆ ತಿಳಿದಿರುವಂತೆ ಬಾಲಕರ ವಿನಾಶಕ್ಕೆ ಕಾರಣವಾದ ಉತ್ಪಾತಗಳು ಇಲ್ಲಿ ಆಗಿಂದಾಗ್ಗೆ ನಡೆಯುತ್ತಲೇ ಇವೆ. ಆದುದರಿಂದ ಗೋಕುಲಕ್ಕೂ, ಗೋಪಾಲರಿಗೂ ಹಿತವನ್ನು ಬಯಸುವೆಯಾದರೆ ನಾವು ಇಲ್ಲಿಂದ ಬೇರೆಲ್ಲಿಗಾದರೂ ಹೋಗಬೇಕು. ॥ ೨೩ ॥ ಈ ನಮ್ಮ ನಂದಗೋಪನ ಮಗನಾದ ಶ್ರೀಕೃಷ್ಣನು ಬಾಲಹಂತಕಳಾದ ಪೂತನಾ ರಾಕ್ಷಸಿಯಿಂದ ದೈವವಶಾತ್ ಉಳಿದುಕೊಂಡನು. ಹರಿಯ ಅನುಗ್ರಹದಿಂದಲೇ ಸಾಮಗ್ರಿಗಳು ತುಂಬಿದ್ದ ಗಾಡಿಯು ತಲೆಕೆಳಗಾಗಿ ಬಿದ್ದರೂ ಈ ಬಾಲಕೃಷ್ಣನ ಮೇಲೆ ಬೀಳಲಿಲ್ಲ. ॥ ೨೪ ॥ ಸುಂಟರಗಾಳಿಯಾಗಿ ಬಂದ ತೃಣಾವರ್ತನು ಈ ಮುದ್ದು ಕಂದನನ್ನು ಅಂತರಿಕ್ಷಕ್ಕೆ ಹಾರಿಸಿಕೊಂಡು ಹೋಗಿ ಭಾರೀ ವಿಪತ್ತನ್ನೇ ತಂದೊಡ್ಡಿದನು. ಆದರೆ ಆಗಸದಿಂದ ದೈತ್ಯನೊಂದಿಗೆ ಬಂಡೆಯ ಮೇಲೆ ಬಿದ್ದಾಗಲೂ ಸುರೇಶ್ವರರ ಪರಮಾನುಗ್ರಹದಿಂದ ಬಾಲಕನು ಬದುಕುಳಿದನು. ॥ ೨೫ ॥ ಜೋಡೀ ಅತ್ತಿಮರಗಳು ಉರುಳಿದಾಗ ಅವುಗಳ ಮಧ್ಯದಲ್ಲಿಯೇ ಇದ್ದರೂ ಇವನು ಹಾಗೂ ಇತರ ಬಾಲಕರು ಸಾಯಲಿಲ್ಲ. ಆಗಲೂ ಭಗವಾನ್ ಅಚ್ಯುತನೇ ಇವನನ್ನು ರಕ್ಷಿಸಿದನೆಂದೇ ತಿಳಿಯಬೇಕು. ॥ ೨೬ ॥

ಯಾವದೌತ್ಪಾತಿಕೋಽರಿಷ್ಟೋ ವ್ರಜಂ ನಾಭಿಭವೇದಿತಃ ।
ತಾವದ್ಬಾಲಾನುಪಾದಾಯ ಯಾಸ್ಯಾಮೋಽನ್ಯತ್ರ ಸಾನುಗಾಃ
॥ ೨೭ ॥

ವನಂ ವೃಂದಾವನಂ ನಾಮ ಪಶವ್ಯಂ ನವಕಾನನಮ್ ।
ಗೋಪಗೋಪೀಗವಾಂ ಸೇವ್ಯಂ ಪುಣ್ಯಾದ್ರಿತೃಣವೀರುಧಮ್
॥ ೨೮ ॥

ತತ್ತತ್ರಾದ್ಯೈವ ಯಾಸ್ಯಾಮಃ ಶಕಟಾನ್ಯುಂಕ್ತ ಮಾ ಚಿರಮ್ ।
ಗೋಧನಾನ್ಯಗ್ರತೋ ಯಾಂತು ಭವತಾಂ ಯದಿ ರೋಚತೇ
॥ ೨೯ ॥

ತಚ್ಛ್ರುತ್ವೈಕಧಿಯೋ ಗೋಪಾಃ ಸಾಧು ಸಾಧ್ವಿತಿ ವಾದಿನಃ ।
ವ್ರಜಾನ್ ಸ್ವಾನ್ ಸ್ವಾನ್ ಸಮಾಯುಜ್ಯ ಯಯೂ ರೂಢಪರಿಚ್ಛದಾಃ
॥ ೩೦ ॥

ವೃದ್ಧಾನ್ಬಾಲಾನ್ ಸ್ತ್ರಿಯೋ ರಾಜನ್ಸರ್ವೋಪಕರಣಾನಿ ಚ ।
ಅನಃಸ್ವಾರೋಪ್ಯ ಗೋಪಾಲಾ ಯತ್ತಾ ಆತ್ತಶರಾಸನಾಃ
॥ ೩೧ ॥

ಗೋಧನಾನಿ ಪುರಸ್ಕೃತ್ಯ ಶೃಂಗಾಣ್ಯಾಪೂರ್ಯ ಸರ್ವತಃ ।
ತೂರ್ಯಘೋಷೇಣ ಮಹತಾ ಯಯುಃ ಸಹಪುರೋಹಿತಾಃ
॥ ೩೨ ॥

ಗೋಪ್ಯೋ ರೂಢರಥಾ ನೂತ್ನಕುಚಕುಂಕುಮಕಾಂತಯಃ ।
ಕೃಷ್ಣಲೀಲಾ ಜಗುಃ ಪ್ರೀತಾ ನಿಷ್ಕಕಂಠ್ಯಃ ಸುವಾಸಸಃ
॥ ೩೩ ॥

ತಥಾ ಯಶೋದಾರೋಹಿಣ್ಯಾವೇಕಂ ಶಕಟಮಾಸ್ಥಿತೇ ।
ರೇಜತುಃ ಕೃಷ್ಣರಾಮಾಭ್ಯಾಂ ತತ್ಕಥಾಶ್ರವಣೋತ್ಸುಕೇ
॥ ೩೪ ॥

ವೃಂದಾವನಂ ಸಂಪ್ರವಿಶ್ಯ ಸರ್ವಕಾಲಸುಖಾವಹಮ್ ।
ತತ್ರ ಚಕ್ರುರ್ವ್ರಜಾವಾಸಂ ಶಕಟೈರರ್ಧಚಂದ್ರವತ್
॥ ೩೫ ॥

ಆದ್ದರಿಂದ ಯಾವುದೇ ದೊಡ್ಡ ಅನಿಷ್ಟವು ನಮಗೆ ಮತ್ತು ನಮ್ಮ ಈ ವ್ರಜಕ್ಕೆ ಸಂಭವಿಸಿ ನಾಶವಾಗುವ ಮೊದಲೇ ನಾವುಗಳು ನಮ್ಮ ಮಕ್ಕಳನ್ನು ಕರೆದುಕೊಂಡು, ಅನುಯಾಯಿಗಳೊಂದಿಗೆ ಬೇರೆಲ್ಲಿಗಾದರೂ ಹೊರಟು ಹೋಗಬೇಕು. ॥ ೨೭ ॥ ನನಗೆ ತಿಳಿದಿರುವಂತೆ ಇಲ್ಲಿ ಸಮೀಪವೇ ವೃಂದಾವನ ಎಂಬ ಹಚ್ಚ ಹಸಿರಾದ ಹುಲ್ಲಿನಿಂದಲೂ, ಲತಾ-ವೃಕ್ಷಗಳಿಂದಲೂ ಕೂಡಿದ ನಿರಂತರ ನಿತ್ಯ-ನೂತನವಾದ ಒಂದು ಕಾಡು ಇದೆ. ಅಲ್ಲೊಂದು ಪವಿತ್ರವಾದ, ದೊಡ್ಡ ಪರ್ವತವೊಂದೂ ಇರುವುದು. ನಮ್ಮ ಪಶುಗಳಿಗಂತೂ ಬಹಳ ಹಿತಕರವಾಗಿದೆ. ಗೋಪ-ಗೋಪಿಯರಿಗೆ ಮತ್ತು ಹಸುಗಳಿಗೆ ಅದು ಕೇವಲ ಅನುಕೂಲದಾಯಕವಷ್ಟೇ ಅಲ್ಲ ಸೇವಿಸಲು ಯೋಗ್ಯವಾದ ಸ್ಥಾನವಾಗಿದೆ. ॥ ೨೮ ॥ ನಾನು ಹೇಳಿದುದು ನಿಮ್ಮೆಲ್ಲರಿಗೆ ಸರಿಯೆಂದು ಕಂಡರೆ ಇಂದೇ ನಾವೆಲ್ಲ ಅಲ್ಲಿಗೆ ಹೊರಟುಬಿಡೋಣ. ತಡಮಾಡದೆ ನಮ್ಮ ಸಂಪತ್ತಾದ ಹಸುಗಳು ಮುಂದಾಗಿ ಹೋಗಲಿ. ಬಂಡಿಗಳನ್ನು ಹೂಡಿ ಬೇಗನೆ ಹೊರಡಿರಿ. ॥ ೨೯ ॥

ಪರೀಕ್ಷಿತನೇ! ಉಪನಂದನ ಮಾತನ್ನು ಕೇಳುತ್ತಲೇ ಗೋಪಾಲಕರೆಲ್ಲರೂ ಒಂದೇ ಮನಸ್ಸಿನಿಂದ ಒಳ್ಳೆಯದು ತುಂಬಾ ಒಳ್ಳೆಯದು ನೀನು ಹೇಳಿರುವುದು ಸರಿಯಾಗಿದೆ ಎಂದು ದನಿಗೂಡಿಸಿದರು. ಈ ವಿಷಯದಲ್ಲಿ ಯಾರಿಗೂ ಮತಭೇದವಿರಲಿಲ್ಲ, ಎಲ್ಲರೂ ತಮ್ಮ-ತಮ್ಮ ಹಸುಗಳನ್ನು ಒಂದುಗೂಡಿಸಿ ಮುಂದಿಟ್ಟುಕೊಂಡು ಮನೆಯ ಸಾಮಗ್ರಿಗಳನ್ನು ಬಂಡಿಗಳ ಮೇಲೆ ಹೇರಿ ವೃಂದಾವನದ ಕಡೆಗೆ ಹೊರಟರು. ॥ ೩೦ ॥ ಪರೀಕ್ಷಿದ್ರಾಜನೇ! ಗೋಪಾಲಕರು ಮುದುಕರನ್ನೂ, ಮಕ್ಕಳನ್ನೂ, ಹೆಂಗಸರನ್ನೂ ಗಾಡಿಗಳ ಮೇಲೆ ಕುಳ್ಳಿರಿಸಿಕೊಂಡು ಹಲವಾರು ಬಂಡಿಗಳಲ್ಲಿ ಸಾಮಗ್ರಿಗಳನ್ನು ತುಂಬಿಕೊಂಡು ಧನುರ್ಬಾಣಗಳನ್ನು ಧರಿಸಿಕೊಂಡು ಆ ಗಾಡಿಗಳ ಹಿಂದೆ-ಹಿಂದೆಯೇ ಜಾಗರೂಕತೆಯಿಂದ ಹೋಗುತ್ತಿದ್ದರು. ॥ ೩೧ ॥ ಅವರು ಹಸು-ಕರುಗಳನ್ನು ಮುಂದೆ ಬಿಟ್ಟುಕೊಂಡು ಹಿಂದಿನಿಂದ ಬಾರಿ-ಬಾರಿಗೂ ಕೊಂಬು-ಕಹಳೆಗಳನ್ನು ಜೋರಾಗಿ ಊದುತ್ತಾ, ಪುರೋಹಿತರೊಡನೆ ಗೋಪಾಲಕರು ನಡೆದುಕೊಂಡು ಹೋಗುತ್ತಿದ್ದರು. ॥ ೩೨ ॥ ಗೋಪಿಯರು ಸುಂದರವಾದ ವಸ್ತ್ರಗಳನ್ನು ವಿವಿಧವಾದ ಚಿನ್ನದ ಒಡವೆಗಳನ್ನು ಸಿಂಗರಿಸಿಕೊಂಡು ರಥಗಳಲ್ಲಿ ಕುಳಿತುಕೊಂಡು ಸಾಗುವಾಗ ಭಗವಾನ್ ಶ್ರೀಕೃಷ್ಣನ ಬಾಲ ಲೀಲೆಗಳನ್ನು ಆನಂದವಾಗಿ ಹಾಡುತ್ತಿದ್ದರು. ॥ ೩೩ ॥ ಯಶೋದಾದೇವಿಯೂ, ರೋಹಿಣೀ ಇವರೂ ಅಂದವಾಗಿ ಅಲಂಕರಿಸಿಕೊಂಡು ತಮ್ಮ-ತಮ್ಮ ಕಂದಮ್ಮಗಳಾದ ಬಲರಾಮ, ಶ್ರೀಕೃಷ್ಣರನ್ನು ಎತ್ತಿಕೊಂಡು ಒಂದೇ ಗಾಡಿಯಲ್ಲಿ ಕುಳಿತುಕೊಂಡು ಹೋಗುತ್ತಿದ್ದರು. ಗೊಲ್ಲತಿಯರು ಹಾಡುತ್ತಿದ್ದ ಶ್ರೀಕೃಷ್ಣನ ಪರವಾದ ಗೀತಗಳನ್ನು ವಿಶೇಷವಾದ ಉತ್ಸಾಹದಿಂದ ಕೇಳುತ್ತಿದ್ದರು. ॥ ೩೪ ॥ ವೃಂದಾವನವು ಅತ್ಯಂತ ಸುಂದರವಾದ ವನ. ಎಲ್ಲ ಋತುಗಳಲ್ಲೂ ಅಲ್ಲಿ ಸುಖವೇ ಸುಖವು ತುಂಬಿತ್ತು. ವೃಂದಾವನವನ್ನು ಪ್ರವೇಶಿಸಿ ಗೋಪಾಲಕರು ತಮ್ಮ ಬಂಡಿಗಳನ್ನು ಅರ್ಧಚಂದ್ರಾಕಾರ ಮಂಡಲವಾಗಿಸಿ ನಿಲ್ಲಿಸಿಕೊಂಡು, ತಮ್ಮ ಹಸು-ಕರುಗಳಿಗೆ ಯೋಗ್ಯವಾದ ಸ್ಥಳವನ್ನು ಕಲ್ಪಿಸಿಕೊಂಡರು. ॥ ೩೫ ॥

ವೃಂದಾವನಂ ಗೋವರ್ಧನಂ ಯಮುನಾಪುಲಿನಾನಿ ಚ ।
ವೀಕ್ಷ್ಯಾಸೀದುತ್ತಮಾ ಪ್ರೀತೀ ರಾಮಮಾಧವಯೋರ್ನೃಪ ॥ ೩೬ ॥

ಏವಂ ವ್ರಜೌಕಸಾಂ ಪ್ರೀತಿಂ ಯಚ್ಛಂತೌ ಬಾಲಚೇಷ್ಟಿತೈಃ ।
ಕಲವಾಕ್ಯೈಃ ಸ್ವಕಾಲೇನ ವತ್ಸಪಾಲೌ ಬಭೂವತುಃ ॥ ೩೭ ॥

ಅವಿದೂರೇ ವ್ರಜಭುವಃ ಸಹ ಗೋಪಾಲದಾರಕೈಃ ।
ಚಾರಯಾಮಾಸತುರ್ವತ್ಸಾನ್ನಾನಾಕ್ರೀಡಾಪರಿಚ್ಛದೌ ॥ ೩೮ ॥

ಕ್ವಚಿದ್ವಾದಯತೋ ವೇಣುಂ ಕ್ಷೇಪಣೈಃ ಕ್ಷಿಪತಃ ಕ್ವಚಿತ್ ।
ಕ್ವಚಿತ್ಪಾದೈಃ ಕಿಂಕಿಣೀಭಿಃ ಕ್ವಚಿತ್ಕೃತ್ರಿಮಗೋವೃಷೈಃ ॥ ೩೯ ॥

ವೃಷಾಯಮಾಣೌ ನರ್ದಂತೌ ಯುಯುಧಾತೇ ಪರಸ್ಪರಮ್ ।
ಅನುಕೃತ್ಯ ರುತೈರ್ಜಂತೂಂಶ್ಚೇರತುಃ ಪ್ರಾಕೃತೌ ಯಥಾ ॥ ೪೦ ॥

ಕದಾಚಿದ್ಯಮುನಾತೀರೇ ವತ್ಸಾಂಶ್ಚಾರಯತೋಃ ಸ್ವಕೈಃ ।
ವಯಸ್ಯೈಃ ಕೃಷ್ಣಬಲಯೋರ್ಜಿಘಾಂಸುರ್ದೈತ್ಯ ಆಗಮತ್ ॥ ೪೧ ॥

ತಂ ವತ್ಸರೂಪಿಣಂ ವೀಕ್ಷ್ಯ ವತ್ಸಯೂಥಗತಂ ಹರಿಃ ।
ದರ್ಶಯನ್ಬಲದೇವಾಯ ಶನೈರ್ಮುಗ್ಧ ಇವಾಸದತ್ ॥ ೪೨ ॥

ಗೃಹೀತ್ವಾ ಪರಪಾದಾಭ್ಯಾಂ ಸಹಲಾಂಗೂಲಮಚ್ಯುತಃ ।
ಭ್ರಾಮಯಿತ್ವಾ ಕಪಿತ್ಥಾಗ್ರೇ ಪ್ರಾಹಿಣೋದ್ಗತಜೀವಿತಮ್ ।
ಸ ಕಪಿತ್ಥೈರ್ಮಹಾಕಾಯಃ ಪಾತ್ಯಮಾನೈಃ ಪಪಾತ ಹ ॥ ೪೩ ॥

ತಂ ವೀಕ್ಷ್ಯ ವಿಸ್ಮಿತಾ ಬಾಲಾಃ ಶಶಂಸುಃ ಸಾಧು ಸಾಧ್ವಿತಿ ।
ದೇವಾಶ್ಚ ಪರಿಸಂತುಷ್ಟಾ ಬಭೂವುಃ ಪುಷ್ಪವರ್ಷಿಣಃ ॥ ೪೪ ॥

ಪರೀಕ್ಷಿತನೇ! ವೃಂದಾವನದ ಹಚ್ಚ ಹಸಿರು ವನವನ್ನೂ, ಅತ್ಯಂತ ಮನೋಹರ ಗೋವರ್ಧನ ಪರ್ವತವನ್ನೂ, ಯಮುನಾ ನದಿಯ ತೀರದಲ್ಲಿರುವ ಸುಂದರವಾದ ಮರಳರಾಶಿಗಳನ್ನು ನೋಡಿ ಭಗವಾನ್ ಶ್ರೀಕೃಷ್ಣ ಮತ್ತು ಬಲರಾಮರು ಆನಂದದಿಂದ ಉಬ್ಬಿಹೋದರು. ॥ ೩೬ ॥

ರಾಮ-ಕೃಷ್ಣರಿಬ್ಬರೂ ತಮ್ಮ ತೊದಲು ಮಾತುಗಳಿಂದ ಹಾಗೂ ಅತ್ಯಂತ ಮಧುರ ಬಾಲಲೀಲೆಗಳಿಂದ ಗೋಕುಲದಂತೆ ವೃಂದಾವನದಲ್ಲಿಯೂ ಗೋಪ-ಗೋಪಿಯರಿಗೆ ಆನಂದವನ್ನು ಉಂಟುಮಾಡುತ್ತಿದ್ದರು. ಕೆಲವೇ ದಿನಗಳಲ್ಲಿ ಅವರೂ ಕರುಗಳನ್ನು ಮೇಯಿಸಲು ತೊಡಗಿದರು. ॥ ೩೭ ॥ ಇತರ ಗೊಲ್ಲಬಾಲಕರೊಂದಿಗೆ ಆಟವಾಡಲು ಬಹಳಷ್ಟು ಸಾಮಗ್ರಿಗಳನ್ನು ಎತ್ತಿಕೊಂಡು ಹೊರಟು, ಹಸುಗಳ ಕೊಟ್ಟಿಗೆಗಳ ಬಳಿಯಲ್ಲೇ ತಮ್ಮ ಕರುಗಳನ್ನು ಮೇಯಿಸುತ್ತಾ ಆಟವಾಡುತ್ತಿದ್ದರು. ಕೆಲವು ವೇಳೆ ರಾಮ-ಕೃಷ್ಣರು ಕೊಳಲನ್ನು ನುಡಿಸುತ್ತಿದ್ದರೆ, ಕೆಲವು ವೇಳೆ ಕವಣೆಗಳಿಂದ ಕಲ್ಲುಗಳನ್ನು ಬೀರುತ್ತಿದ್ದರು. ಕೆಲವೊಮ್ಮೆ ಕಾಲುಗಳಿಗೆ ಗೆಜ್ಜೆಗಳನ್ನು ಕಟ್ಟಿಕೊಂಡು ಕುಣಿಯುತ್ತಿದ್ದರೆ, ಕೆಲವೊಮ್ಮೆ ತಾವೇ ಹಸು ಎತ್ತುಗಳಾಗಿ ಆಟವಾಡುತ್ತಿದ್ದರು. ॥ ೩೯ ॥ ಕೆಲವೊಮ್ಮೆ ಆಟದಲ್ಲಿ ಹೋರಿಗಳಂತೆ ಗುಟುರು ಹಾಕುತ್ತಾ ಪರಸ್ಪರ ಕಾದಾಡುತ್ತಿದ್ದರು. ಕೆಲವೊಮ್ಮೆ ನವಿಲು, ಕೋಗಿಲೆ, ಕೋತಿ, ನರಿ, ನಾಯಿ ಮುಂತಾದ ಪಶು-ಪಕ್ಷಿಗಳ ಧ್ವನಿಗಳನ್ನು ಅಣಕವಾಡುತ್ತಿದ್ದರು. ಹೀಗೆ ಸರ್ವಶಕ್ತನಾದ ಭಗವಂತನು ಸಾಧಾರಣ ಬಾಲಕರಂತೆ ಆಟವಾಡುತ್ತಿದ್ದನು. ॥ ೪೦ ॥

ಹೀಗೆ ಇರುತ್ತಿರಲಾಗಿ ಒಂದು ದಿನ ರಾಮ-ಕೃಷ್ಣರು ತಮ್ಮ ಪ್ರಿಯ ಗೆಳೆಯರೊಂದಿಗೆ ಯಮುನಾತೀರದಲ್ಲಿ ಕರುಗಳನ್ನು ಮೇಯಿಸುತ್ತಿದ್ದಾಗ ಇವರನ್ನು ಸಂಹರಿಸುವ ದುರುದ್ದೇಶದಿಂದ ವತ್ಸಾಸುರನೆಂಬ ದೈತ್ಯನೊಬ್ಬನು ಅಲ್ಲಿಗೆ ಬಂದನು. ॥ ೪೧ ॥ ಅವನು ಕರುವಿನ ರೂಪವನ್ನು ಧರಿಸಿ ಕರುಗಳ ಗುಂಪಿನಲ್ಲಿಯೇ ಸೇರಿಕೊಂಡಿರುವುದನ್ನು ಕಂಡ ಭಗವಂತನು ಕಣ್ಸನ್ನೆಯಿಂದ ಬಲರಾಮನಿಗೆ ತೋರಿಸುತ್ತಾ, ಮೆಲ್ಲ-ಮೆಲ್ಲನೆ ಆ ವತ್ಸಾಸುರನ ಬಳಿಗೆ ಹೋದನು. ಆಗ ದೈತ್ಯನನ್ನು ಗುರುತಿಸದೆ ಆ ಸುಂದರ ಕರುವಿನಲ್ಲಿ ಮುಗ್ಧನಾದವನಂತೆ ಕೃಷ್ಣನು ತೋರಿಸಿಕೊಂಡನು. ॥ ೪೨ ॥ ಭಗವಾನ್ ಶ್ರೀಕೃಷ್ಣನು ಕರುವಾಗಿದ್ದ ಆ ಅಸುರನನ್ನು ಬಾಲದೊಂದಿಗೆ ಹಿಂದಿನ ಕಾಲುಗಳನ್ನು ಹಿಡಿದುಕೊಂಡು ಗರಗರನೆ ತಿರುಗಿಸುತ್ತಾ ಬೇಲದ ಮರಕ್ಕೆ ಅಪ್ಪಳಿಸಿದನು. ಇದರಿಂದ ಆ ದೈತ್ಯನು ಗತಪ್ರಾಣನಾಗಿ ಅನೇಕ ಮರಗಳನ್ನು ಉರುಳಿಸುತ್ತಾ ನೆಲದ ಮೇಲೆ ಸತ್ತುಬಿದ್ದನು. ॥ ೪೩ ॥ ಇದನ್ನು ನೋಡಿದ ಗೊಲ್ಲಬಾಲಕರಿಗೆ ಆಶ್ಚರ್ಯದ ಸೀಮೆಯೇ ಉಳಿಯಲಿಲ್ಲ. ಅವರು ಕೃಷ್ಣ! ಭಲೇ-ಭಲೆ ಎಂದು ಕೂಗುತ್ತಾ ಪ್ರಿಯ ಕೃಷ್ಣನನ್ನು ಹೊಗಳತೊಡಗಿದರು. ದೇವತೆಗಳೂ ಕೂಡ ಅತೀವ ಆನಂದದಿಂದ ಹೂಮಳೆಗರೆದರು. ॥ ೪೪ ॥

ತೌ ವತ್ಸಪಾಲಕೌ ಭೂತ್ವಾ ಸರ್ವಲೋಕೈಕಪಾಲಕೌ ।
ಸಪ್ರಾತರಾಶೌ ಗೋವತ್ಸಾಂಶ್ಚಾರಯಂತೌ ವಿಚೇರತುಃ
॥ ೪೫ ॥

ಸ್ವಂ ಸ್ವಂ ವತ್ಸಕುಲಂ ಸರ್ವೇ ಪಾಯಯಿಷ್ಯಂತ ಏಕದಾ ।
ಗತ್ವಾ ಜಲಾಶಯಾಭ್ಯಾಶಂ ಪಾಯಯಿತ್ವಾ ಪಪುರ್ಜಲಮ್
॥ ೪೬ ॥

ತೇ ತತ್ರ ದದೃಶುರ್ಬಾಲಾ ಮಹಾಸತ್ತ್ವಮವಸ್ಥಿತಮ್ ।
ತತ್ರಸುರ್ವಜ್ರನಿರ್ಭಿನ್ನಂ ಗಿರೇಃ ಶೃಂಗಮಿವ ಚ್ಯುತಮ್
॥ ೪೭ ॥

ಸ ವೈ ಬಕೋ ನಾಮ ಮಹಾನಸುರೋ ಬಕರೂಪಧೃಕ್ ।
ಆಗತ್ಯ ಸಹಸಾ ಕೃಷ್ಣಂ ತೀಕ್ಷ್ಣತುಂಡೋಽಗ್ರಸದ್ಬಲೀ
॥ ೪೮ ॥

ಕೃಷ್ಣಂ ಮಹಾಬಕಗ್ರಸ್ತಂ ದೃಷ್ಟ್ವಾ ರಾಮಾದಯೋಽರ್ಭಕಾಃ ।
ಬಭೂವುರಿಂದ್ರಿಯಾಣೀವ ವಿನಾ ಪ್ರಾಣಂ ವಿಚೇತಸಃ
॥ ೪೯ ॥

ತಂ ತಾಲುಮೂಲಂ ಪ್ರದಹಂತಮಗ್ನಿವದ್
ಗೋಪಾಲಸೂನುಂ ಪಿತರಂ ಜಗದ್ಗುರೋಃ ।
ಚಚ್ಛರ್ದ ಸದ್ಯೋಽತಿರುಷಾಕ್ಷತಂ ಬಕ-
ಸ್ತುಂಡೇನ ಹಂತುಂ ಪುನರಭ್ಯಪದ್ಯತ ॥ ೫೦ ॥

ತಮಾಪತಂತಂ ಸ ನಿಗೃಹ್ಯ ತುಂಡಯೋ-
ರ್ದೋರ್ಭ್ಯಾಂ ಬಕಂ ಕಂಸಸಖಂ ಸತಾಂ ಪತಿಃ ।
ಪಶ್ಯತ್ಸು ಬಾಲೇಷು ದದಾರ ಲೀಲಯಾ
ಮುದಾವಹೋ ವೀರಣವದ್ ದಿವೌಕಸಾಮ್ ॥ ೫೧ ॥

ತದಾ ಬಕಾರಿಂ ಸುರಲೋಕವಾಸಿನಃ
ಸಮಾಕಿರನ್ನಂದನಮಲ್ಲಿಕಾದಿಭಿಃ ।
ಸಮೀಡಿರೇ ಚಾನಕಶಂಖಸಂಸ್ತವೈ-
ಸ್ತದ್ವೀಕ್ಷ್ಯ ಗೋಪಾಲಸುತಾ ವಿಸ್ಮಿತಾಃ ॥ ೫೨ ॥

ಪರೀಕ್ಷಿತನೇ! ಸಮಸ್ತ ಲೋಕಗಳಿಗೆ ರಕ್ಷಕರಾದ ರಾಮ-ಕೃಷ್ಣರು ವತ್ಸಪಾಲಕರಾಗಿ ಬೆಳಿಗ್ಗೆ ಬೇಗನೇ ಎದ್ದು ಊಟದ ಬುತ್ತಿಯನ್ನು ಕಟ್ಟಿಕೊಂಡು ಕರುಗಳನ್ನು ಮೇಯಿಸುತ್ತಾ ಒಂದು ಕಾಡಿನಿಂದ ಇನ್ನೊಂದು ಕಾಡಿಗೆ ಹೋಗುತ್ತಾ ಸಂಚರಿಸುತ್ತಿದ್ದರು. ॥ ೪೫ ॥ ಹೀಗಿರುತ್ತಾ ಒಂದು ದಿನ ಎಲ್ಲ ಗೊಲ್ಲ ಬಾಲಕರು ತಮ್ಮ ಕರುಗಳ ಗುಂಪುಗಳಿಗೆ ನೀರು ಕುಡಿಸಲು ಜಲಾಶಯದ ತಟಕ್ಕೆ ಹೊರಟು ಹೋದರು. ಅವರು ಮೊದಲಿಗೆ ಕರುಗಳಿಗೆ ನೀರು ಕುಡಿಸಿ, ತಾವೂ ನೀರು ಕುಡಿದರು. ॥ ೪೬ ॥ ಅಲ್ಲೇ ಒಂದು ಭಾರೀ ದೊಡ್ಡ ಪ್ರಾಣಿಯು ಕುಳಿತಿರುವುದನ್ನು ಗೊಲ್ಲರು ನೋಡಿದರು. ಇಂದ್ರನ ವಜ್ರದಿಂದ ತುಂಡಾದ ಯಾವುದೋ ಬೆಟ್ಟವೇ ಇಲ್ಲಿ ಬಿದ್ದಿದೆಯೋ ಎಂದು ಅನಿಸುತ್ತಿತ್ತು. ॥ ೪೭ ॥ ಗೊಲ್ಲಬಾಲಕರು ಅದನ್ನು ನೋಡಿ ಹೆದರಿ ಹೋದರು. ಅವನು ಬಕನೆಂಬ ಓರ್ವ ಮಹಾ ಅಸುರನಾಗಿದ್ದನು. ಅವನು ಬಕಪಕ್ಷಿಯ ರೂಪವನ್ನು ಧರಿಸಿ ಅಲ್ಲಿಗೆ ಬಂದಿದ್ದನು. ಅದಕ್ಕೆ ಅತಿತೀಕ್ಷ್ಣವಾದ ಕೊಕ್ಕು ಇತ್ತು. ಶ್ರೀಕೃಷ್ಣನನ್ನು ಕಾಣುತ್ತಲೇ ಬಲಿಷ್ಠನಾಗಿದ್ದ ಆ ಅಸುರನು (ಬಕಪಕ್ಷಿಯು) ಚೂಪಾದ ಕೊಕ್ಕಿನಿಂದ ಕೃಷ್ಣನನ್ನು ನುಂಗಿಯೇ ಬಿಟ್ಟನು. ॥ ೪೮ ॥ ಆ ಮಹಾಬಕಪಕ್ಷಿಯು ಶ್ರೀಕೃಷ್ಣನನ್ನು ನುಂಗಿದುದನ್ನು ಕಂಡಾಗ ಬಲರಾಮನೇ ಮುಂತಾದ ಗೋಪಬಾಲಕರು ಪ್ರಾಣಗಳು ಹಾರಿ ಹೋದಾಗ ಉಂಟಾಗುವ ಇಂದ್ರಿಯಗಳ ಸ್ಥಿತಿಯಂತೆ ನಿಶ್ಚೇಷ್ಟಿತರಾದರು. ॥ ೪೯ ॥ ಪರೀಕ್ಷಿತನೇ! ಶ್ರೀಕೃಷ್ಣನು ಲೋಕಪಿತಾಮಹನಾದ ಬ್ರಹ್ಮನಿಗೂ ತಂದೆಯು. ಅವನು ಲೀಲೆಯಿಂದಲೇ ಗೋಪಬಾಲಕನಾಗಿದ್ದನು. ಅವನು ಆ ಬಕಾಸುರನ ದವಡೆಯನ್ನು ಸೇರಿದಾಗ ಒಳಗಿನಿಂದಲೇ ಬೆಂಕಿಯಂತೆ ಸುಡಲಾರಂಭಿಸಿದನು. ಆದ್ದರಿಂದ ಆ ದೈತ್ಯನು ಕೃಷ್ಣನಿಗೆ ಯಾವ ಪೆಟ್ಟೂ ಕೊಡಲಾರದೆ ಕೂಡಲೇ ಅವನನ್ನು ಉಗುಳಬೇಕಾಯಿತು. ಮತ್ತೆ ಅತ್ಯಂತ ಕ್ರುದ್ಧನಾದ ಆ ದಾನವನು ತನ್ನ ಹರಿತವಾದ ಕೊಕ್ಕಿನಿಂದಲೇ ಕೃಷ್ಣನನ್ನು ಘಾತಿಸಲು ಮುನ್ನುಗ್ಗಿದನು. ॥ ೫೦ ॥ ಭಕ್ತವತ್ಸಲನಾದ ಭಗವಾನ್ ಶ್ರೀಕೃಷ್ಣನು ತನ್ನ ಮೇಲೆ ರಭಸದಿಂದ ಬೀಳುತ್ತಿದ್ದ ಕಂಸನ ಮಿತ್ರನಾದ ಬಕಾಸುರನ ಕೊಕ್ಕನ್ನು ಎರಡೂ ಕೈಗಳಿಂದ ಬಲವಾಗಿ ಹಿಡಿದುಕೊಂಡು, ಗೋಪಬಾಲಕರು ನೋಡುತ್ತಿರುವಂತೆ ನೊಜೆ ಹುಲ್ಲನ್ನು ಅತಿಸುಲಭವಾಗಿ ಸೀಳಿಹಾಕುವಂತೆ ಲೀಲಾಜಾಲವಾಗಿ ಆ ಅಸುರನನ್ನು ಸೀಳಿ ಹಾಕಿದನು. ಇದರಿಂದ ದೇವತೆಗಳಿಗೆ ಬಹಳ ಆನಂದವಾಯಿತು. ॥ ೫೧ ॥ ಸಮಸ್ತ ದೇವತೆಗಳು ಭಗವಾನ್ ಶ್ರೀಕೃಷ್ಣನ ಮೇಲೆ ನಂದನವನದಲ್ಲಿ ಸಿಕ್ಕುವ ಮಲ್ಲಿಗೆ, ಜಾಜಿ, ಪುನ್ನಾಗ, ಪಾರಿಜಾತ ಮುಂತಾದ ಹೂವುಗಳ ಮಳೆಗರೆದರು. ವಿಜಯಸೂಚಕವಾದ ಭೇರಿ-ಮೃದಂಗ, ಶಂಖ ಮೊದಲಾದ ವಾದ್ಯಗಳನ್ನು ಮೊಳಗಿಸಿ, ಸ್ತೋತ್ರಗಳ ಮೂಲಕ ಅವನನ್ನು ಕೊಂಡಾಡತೊಡಗಿದರು. ಇದೆಲ್ಲವನ್ನೂ ನೋಡಿದ ಗೊಲ್ಲಬಾಲಕರೆಲ್ಲರೂ ಆಶ್ಚರ್ಯಚಕಿತರಾದರು. ॥ ೫೨ ॥ ಶ್ರೀಕೃಷ್ಣನು ಬಕಪಕ್ಷಿಯ ಬಾಯಿಂದ ಹೊರಟು ತಮ್ಮ ಬಳಿಗೆ ಬಂದುದನ್ನು ನೋಡಿದಾಗ ಬಲರಾಮನೇ ಮುಂತಾದ ಗೋಪಬಾಲಕರು ಪ್ರಾಣಸಂಚಾರವಾದಾಗ ಇಂದ್ರಿಯಗಳು ಸಚೇತನವಾಗುವಂತೆ ಆನಂದತುಂದಿಲರಾದರು. ಎಲ್ಲರೂ ಭಗವಂತನನ್ನು ಪ್ರತ್ಯೇಕ

ಮುಕ್ತಂ ಬಕಾಸ್ಯಾದುಪಲಭ್ಯ ಬಾಲಕಾ
ರಾಮಾದಯಃ ಪ್ರಾಣಮಿವೇಂದ್ರಿಯೋ ಗಣಃ ।
ಸ್ಥಾನಾಗತಂ ತಂ ಪರಿರಭ್ಯ ನಿರ್ವೃತಾಃ
ಪ್ರಣೀಯ ವತ್ಸಾನ್ವ್ರಜಮೇತ್ಯ ತಜ್ಜಗುಃ ॥ ೫೩ ॥

ಶ್ರುತ್ವಾ ತದ್ವಿಸ್ಮಿತಾ ಗೋಪಾ ಗೋಪ್ಯಶ್ಚಾತಿಪ್ರಿಯಾದೃತಾಃ ।
ಪ್ರೇತ್ಯಾಗತಮಿವೌತ್ಸುಕ್ಯಾದೈಕ್ಷಂತ ತೃಷಿತೇಕ್ಷಣಾಃ ॥ ೫೪ ॥

ಅಹೋ ಬತಾಸ್ಯ ಬಾಲಸ್ಯ ಬಹವೋ ಮೃತ್ಯವೋಽಭವನ್ ।
ಅಪ್ಯಾಸೀದ್ವಿಪ್ರಿಯಂ ತೇಷಾಂ ಕೃತಂ ಪೂರ್ವಂ ಯತೋ ಭಯಮ್ ॥ ೫೫ ॥

ಅಥಾಪ್ಯಭಿಭವಂತ್ಯೇನಂ ನೈವ ತೇ ಘೋರದರ್ಶನಾಃ ।
ಜಿಘಾಂಸಯೈನಮಾಸಾದ್ಯ ನಶ್ಯಂತ್ಯಗ್ನೌ ಪತಂಗವತ್ ॥ ೫೬ ॥

ಅಹೋ ಬ್ರಹ್ಮವಿದಾಂ ವಾಚೋ ನಾಸತ್ಯಾಃ ಸಂತಿ ಕರ್ಹಿಚಿತ್ ।
ಗರ್ಗೋ ಯದಾಹ ಭಗವಾನನ್ವಭಾವಿ ತಥೈವ ತತ್ ॥ ೫೭ ॥

ಇತಿ ನಂದಾದಯೋ ಗೋಪಾಃ ಕೃಷ್ಣರಾಮಕಥಾಂ ಮುದಾ ।
ಕುರ್ವಂತೋ ರಮಮಾಣಾಶ್ಚ ನಾವಿಂದನ್ಭವವೇದನಾಮ್ ॥ ೫೮ ॥

ಏವಂ ವಿಹಾರೈಃ ಕೌಮಾರೈಃ ಕೌಮಾರಂ ಜಹತುರ್ವ್ರಜೇ ।
ನಿಲಾಯನೈಃ ಸೇತುಬಂಧೈರ್ಮರ್ಕಟೋತ್ಪ್ಲವನಾದಿಭಿಃ ॥ ೫೯ ॥

ಪ್ರತ್ಯಕ್ಷವಾಗಿ ಬಾಚಿತಬ್ಬಿಕೊಂಡರು. ಇದಾದ ಬಳಿಕ ತಮ್ಮ-ತಮ್ಮ ಕರುಗಳನ್ನು ಅಟ್ಟಿಕೊಂಡು ಎಲ್ಲರೂ ವ್ರಜಕ್ಕೆ ಬಂದು, ಅಲ್ಲಿ ಅವರೆಲ್ಲರೂ ಮನೆಯ ಜನರಿಗೆ ಎಲ್ಲ ವೃತ್ತಾಂತವನ್ನು ಅರುಹಿದರು. ॥ ೫೩ ॥

ಪರೀಕ್ಷಿತನೇ! ಬಕಾಸುರನ ವಧೆಯ ಘಟನೆಯನ್ನು ಕೇಳಿ ಎಲ್ಲ ಗೋಪ-ಗೋಪಿಯರು ಆಶ್ಚರ್ಯಚಕಿತರಾದರು. ಮುದ್ದುಕೃಷ್ಣನು ಸಾಕ್ಷಾತ್ ಮೃತ್ಯುವಿನ ಮುಖದಿಂದ ಬದುಕಿ ಬಂದಂತೆ ಅವರಿಗನ್ನಿಸಿತು. ಅವರೆಲ್ಲರೂ ಪ್ರೇಮಾದರಗಳಿಂದಲೂ, ಉತ್ಸುಕತೆಯಿಂದಲೂ ಶ್ರೀಕೃಷ್ಣನನ್ನು ನೋಡತೊಡಗಿದರು. ಅವರಿಗೆ ಆ ಸುಂದರಮೂರ್ತಿಯನ್ನು ಎಷ್ಟು ನೋಡಿದರೂ ತೃಪ್ತಿಯೇ ಆಗುತ್ತಿರಲಿಲ್ಲ. ॥ ೫೪ ॥ ಅವರು ತಮ್ಮ-ತಮ್ಮಲ್ಲೇ ಹೀಗೆ ಮಾತನಾಡಿಕೊಂಡರು ಅಬ್ಬಾ! ಎಂತಹ ಆಶ್ಚರ್ಯದ ಮಾತಿದು? ಈ ಮುದ್ದು ಬಾಲಕನು ಹಲವು ಬಾರಿ ಮೃತ್ಯುಮುಖಿನಾಗಿದ್ದನು. ಆದರೆ ಇವನಿಗೆ ಅನಿಷ್ಟವನ್ನು ಬಗೆದವರಿಗೇ ಕೇಡಾಯಿತು. ಏಕೆಂದರೆ, ಅವರು ಮೊದಲಿನಿಂದಲೇ ಇತರರಿಗೆ ಅನಿಷ್ಟವನ್ನು ಮಾಡಿದ್ದರು. ॥ ೫೫ ॥ ಇದೆಲ್ಲವೂ ನಡೆದರೂ ಕೂಡ ಆ ಭಯಂಕರ ಅಸುರರು ಇವನನ್ನು ಏನೂ ಮಾಡಲಾರದೆ ಹೋದರು. ಇವನನ್ನು ಕೊಲ್ಲಲೆಂದು ಬರುತ್ತಾರೆ, ಆದರೆ ಬೆಂಕಿಯಿಂದ ಆಕರ್ಷಿತವಾದ ಪತಂಗಗಳು ಒಂದು ಬೆಂಕಿಯಲ್ಲಿ ಬಿದ್ದು ಸಾಯುವಂತೆ ಎಲ್ಲರೂ ಸತ್ತುಹೋಗುತ್ತಾರೆ. ॥ ೫೬ ॥ ಬ್ರಹ್ಮವೇತ್ತರಾದ ಮಹಾತ್ಮರ ವಚನಗಳು ಎಂದೂ ಸುಳ್ಳಾಗುವುದಿಲ್ಲವೆಂಬುದು ದಿಟವೇ ಆಗಿದೆ. ನೋಡಿ! ಮಹಾತ್ಮರಾದ ಗರ್ಗಾಚಾರ್ಯರು ಹೇಳಿದ ಎಲ್ಲ ಮಾತುಗಳೂ ಹಾಗೆಯೇ ನಡೆಯುತ್ತಿವೆಯಲ್ಲ! ॥ ೫೭ ॥ ನಂದಗೋಪನು ಮತ್ತು ಇತರ ಗೋಪರು ಹೀಗೆ ಅತೀವ ಆನಂದದಿಂದ ರಾಮ-ಕೃಷ್ಣರ ವಿಷಯವಾಗಿ ಮಾತನಾಡಿಕೊಳ್ಳುವರು. ಅವರೆಲ್ಲರೂ ಸಂಸಾರದ ದುಃಖ-ಸಂಕಟಗಳು ಅರಿವಿಗೆ ಬಾರದಂತೆ ಭಗವದ್ವಿಷಯದಲ್ಲಿ ತನ್ಮಯರಾಗಿರುತ್ತಿದ್ದರು. ॥ ೫೮ ॥ ಹೀಗೆ ಕೃಷ್ಣ-ಬಲರಾಮರು ಗೊಲ್ಲಬಾಲಕರೊಂದಿಗೆ ಕೆಲವೊಮ್ಮೆ ಕಣ್ಣುಮುಚ್ಚಾಲೆಯಾಡುತ್ತಿದ್ದರೆ, ಕೆಲವೊಮ್ಮೆ ಮರಳಲ್ಲಿ ಸೇತುವೆ ಕಟ್ಟುತ್ತಿದ್ದರು. ಕೆಲವೊಮ್ಮೆ ಮರಕೋತಿ ಆಟವಾಡುತ್ತಿದ್ದರೆ, ಕೆಲವೊಮ್ಮೆ ವಿಚಿತ್ರವಾದ ಆಟಗಳನ್ನಾಡುತ್ತಿದ್ದರು. ಹೀಗೆ ಕುಣಿಯುತ್ತಾ, ಹಾಡುತ್ತಾ, ಆಡುತ್ತಾ ಅವರಿಬ್ಬರೂ ತಮ್ಮ ಬಾಲ್ಯವನ್ನು ವೃಂದಾವನದಲ್ಲಿ ಕಳೆದರು. ॥ ೫೯ ॥

ಹನ್ನೊಂದನೆಯ ಅಧ್ಯಾಯವು ಮುಗಿಯಿತು. ॥ ೧೧ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮಸ್ಕಂಧೇ ಪೂರ್ವಾರ್ಧೇ
ವತ್ಸ-ಬಕವಧೋ ನಾಮೈಕಾದಶೋಽಧ್ಯಾಯಃ ॥ ೧೧ ॥

ಹನ್ನೆರಡನೆಯ ಅಧ್ಯಾಯ

ಅಘಾಸುರನ ಉದ್ಧಾರ

ಶ್ರೀಶುಕ ಉವಾಚ

ಕ್ವಚಿದ್ವನಾಶಾಯ ಮನೋ ದಧದ್ವ್ರಜಾತ್-
ಪ್ರಾತಃ ಸಮುತ್ಥಾಯ ವಯಸ್ಯವತ್ಸಪಾನ್ ।
ಪ್ರಬೋಧಯನ್ ಶೃಂಗರವೇಣ ಚಾರುಣಾ
ವಿನಿರ್ಗತೋ ವತ್ಸಪುರಃಸರೋ ಹರಿಃ ॥ ೧ ॥

ತೇನೈವ ಸಾಕಂ ಪೃಥುಕಾಃ ಸಹಸ್ರಶಃ
ಸ್ನಿಗ್ಧಾಃ ಸುಶಿಗ್ವೇತ್ರವಿಷಾಣವೇಣವಃ ।
ಸ್ವಾನ್ಸ್ವಾನ್ಸಹಸ್ರೋಪರಿಸಂಖ್ಯಯಾನ್ವಿತಾ-
ನ್ವತ್ಸಾನ್ಪುರಸ್ಕೃತ್ಯ ವಿನಿರ್ಯಯುರ್ಮುದಾ ॥ ೨ ॥

ಕೃಷ್ಣವತ್ಸೈರಸಂಖ್ಯಾತೈರ್ಯೂಥೀಕೃತ್ಯ ಸ್ವವತ್ಸಕಾನ್ ।
ಚಾರಯಂತೋಽರ್ಭಲೀಲಾಭಿರ್ವಿಜಹ್ರುಸ್ತತ್ರ ತತ್ರ ಹ ॥ ೩ ॥

ಫಲಪ್ರವಾಲಸ್ತಬಕಸುಮನಃಪಿಚ್ಛಧಾತುಭಿಃ ।
ಕಾಚಗುಂಜಾಮಣಿಸ್ವರ್ಣಭೂಷಿತಾ ಅಪ್ಯಭೂಷಯನ್ ॥ ೪ ॥

ಮುಷ್ಣಂತೋಽನ್ಯೋನ್ಯಶಿಕ್ಯಾದೀನ್ ಜ್ಞಾತಾನಾರಾಚ್ಚ ಚಿಕ್ಷಿಪುಃ ।
ತತ್ರತ್ಯಾಶ್ಚ ಪುನರ್ದೂರಾದ್ಧಸಂತಶ್ಚ ಪುನರ್ದದುಃ ॥ ೫ ॥

ಯದಿ ದೂರಂ ಗತಃ ಕೃಷ್ಣೋ ವನಶೋಭೇಕ್ಷಣಾಯ ತಮ್ ।
ಅಹಂ ಪೂರ್ವಮಹಂ ಪೂರ್ವಮಿತಿ ಸಂಸ್ಪೃಶ್ಯ ರೇಮಿರೇ ॥ ೬ ॥

ಕೇಚಿದ್ವೇಣೂನ್ವಾದಯಂತೋ ಧ್ಮಾಂತಃ ಶೃಂಗಾಣಿ ಕೇಚನ ।
ಕೇಚಿದ್ಭೃಂಗೈಃ ಪ್ರಗಾಯಂತಃ ಕೂಜಂತಃ ಕೋಕಿಲೈಃ ಪರೇ ॥ ೭ ॥

ವಿಚ್ಛಾಯಾಭಿಃ ಪ್ರಧಾವಂತೋ ಗಚ್ಛಂತಃ ಸಾಧು ಹಂಸಕೈಃ ।
ಬಕೈರುಪವಿಶಂತಶ್ಚ ನೃತ್ಯಂತಶ್ಚ ಕಲಾಪಿಭಿಃ ॥ ೮ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ - ಎಲೈ ಪರೀಕ್ಷಿತನೇ ! ಒಂದು ದಿನ ಶ್ರೀಹರಿಗೆ ವನಭೋಜನವನ್ನು ಮಾಡಲು ಮನಸ್ಸು ಆಯಿತು. ಅವನು ಬೆಳಗಾದೊಡನೆಯೇ ಎದ್ದು ಸುಮಧುರವಾಗಿ ಕೊಂಬನ್ನು ಊದಿ ಗೋಪಬಾಲಕರನ್ನೂ ಎಚ್ಚರಗೊಳಿಸಿ, ಕರುಗಳನ್ನು ಮುಂದೆ ಮಾಡಿಕೊಂಡು ಬಾಲಗೋಪಾಲನು ಗೊಲ್ಲರ ಹಳ್ಳಿಯಿಂದ ಹೊರಟನು. ॥ ೧ ॥ ಶ್ರೀಕೃಷ್ಣನೊಂದಿಗೆ ಅವನ ಸ್ನೇಹಪರರಾದ ಸಾವಿರಾರು ಗೊಲ್ಲಬಾಲಕರು ಕರುಗಳ ಮಂದೆಯನ್ನು ಮುಂದಮಾಡಿ ಕೊಂಡು ಆನಂದಭರಿತರಾಗಿ ಸುಂದರವಾದ ನೆಲವು, ಕೋಲು, ಕೊಂಬು, ಕೊಳಲು ಇವುಗಳನ್ನು ಎತ್ತಿಕೊಂಡು ತಮ್ಮ-ತಮ್ಮ ಮನೆಗಳಿಂದ ಹೊರಟರು. ॥ ೨ ॥ ಅವರು ಶ್ರೀಕೃಷ್ಣನ ಅಸಂಖ್ಯ ಕರುಗಳೊಂದಿಗೆ ತಮ್ಮ-ತಮ್ಮ ಕರುಗಳನ್ನು ಒಂದಾಗಿಸಿ ಬಿಟ್ಟರು. ಅಲ್ಲಲ್ಲಿಯೇ ನಿಂತು ಬಾಲಯೋಗ್ಯವಾದ ಆಟಗಳನ್ನಾಡುತ್ತಾ ಸಂಚರಿಸತೊಡಗಿದರು. ॥ ೩ ॥ ಗೋಪಬಾಲಕರೆಲ್ಲರೂ ಗಾಜಿನ ಮಣಿಗಳಿಂದಲೂ, ಚಿನ್ನದ ವಂಕಿಗಳಿಂದಲೂ, ಗುಲುಗುಂಜಿಯ ಸರಗಳಿಂದಲೂ ಸಿಂಗರಿಸಿಕೊಂಡಿದ್ದರೂ ಅವರು ವೃಂದಾವನದ ಕಾಡಿಗೆ ಬರುತ್ತಲೇ ಕೆಂಪು, ಹಳದಿ, ಹಸಿರು ಹಣ್ಣುಗಳಿಂದಲೂ, ಚಿಗುರುಗಳಿಂದಲೂ, ಹೂವುಗಳಿಂದಲೂ ನವಿಲು ಗರಿಗಳಿಂದಲೂ, ಗೈರಿಕಾದಿ ಧಾತುಗಳಿಂದಲೂ ಇನ್ನೂ ಹೆಚ್ಚಾಗಿ ಸಿಂಗರಿಸಿಕೊಂಡು ಕುಣಿದಾಡಿದರು. ॥ ೪ ॥ ಕೆಲವರು ಯಾರದೋ ಬುತ್ತಿಯನ್ನು ಹಾರಿಸಿದರೆ, ಇನ್ನೊಬ್ಬನು ಬೆತ್ತವನ್ನು ಕದಿಯುತ್ತಿದ್ದನು. ಮತ್ತೊಬ್ಬನು ಕೊಳಲನ್ನು ಕಳಕೊಂಡವನಿಗೆ ಕದ್ದವನು ಯಾರೆಂದು ತಿಳಿದು ಪಡೆಯಲು ಬಂದಾಗ ಇನ್ನೊಬ್ಬನ ಬಳಿಗೆ ಎಸೆದುಬಿಡುತ್ತಿದ್ದರು. ಇನ್ನೊಬ್ಬನು ಮತ್ತೊಬ್ಬನ ಬಳಿಗೆ ಹೀಗೆ ಎಸೆಯುತ್ತಾ ಕೊನೆಗೆ ಅವನಿಗೆ ಮರಳಿಸಿ ಕೇಕೆ ಹಾಕಿ ನಗುತ್ತಿದ್ದರು. ॥ ೫ ॥ ಶ್ಯಾಮಸುಂದರ ಶ್ರೀಕೃಷ್ಣನು ವನಶೋಭೆಯನ್ನು ನೋಡುತ್ತಾ ದೂರ ಹೋಗಿಬಿಟ್ಟರೆ, ನಾನು ಮೊದಲು ಹೋಗಿ ಮುಟ್ಟುವೆನು, ನಾನು ಮೊದಲು ಎಂಬ ಸ್ಪರ್ಧೆಯಿಂದ ಎಲ್ಲರೂ ಓಡಿ ಹೋಗಿ ಅವನನ್ನು ಮುಟ್ಟಿ-ಮುಟ್ಟಿ ಸಂತೋಷಪಡುತ್ತಿದ್ದರು. ॥ ೬ ॥ ಕೆಲವರು ಕೊಳಲನ್ನು ಊದುತ್ತಿದ್ದರೆ, ಕೆಲವರು ಕೊಂಬನ್ನು ಊದುತ್ತಿದ್ದರು. ಕೆಲ-ಕೆಲವರು ದುಂಬಿಗಳೊಡನೆ ತಾವೂ ಧ್ವನಿ ಮಾಡುತ್ತಿದ್ದರೆ, ಕೆಲವರು ಕೋಗಿಲೆಯ ಧ್ವನಿಯೊಂದಿಗೆ ತಮ್ಮ ಧ್ವನಿಯನ್ನು ಸೇರಿಸಿ ಅದರಂತೆ ಕೂಗುತ್ತಿದ್ದರು. ॥ ೭ ॥ ಒಂದು ಕಡೆ ಕೆಲವು ಗೊಲ್ಲಬಾಲಕರು ಆಕಾಶದಲ್ಲಿ ಹಾರುತ್ತಿದ್ದ ಪಕ್ಷಿಗಳ ನೆರಳಿನೊಂದಿಗೆ ಓಡತೊಡಗಿದರೆ, ಮತ್ತೊಂದೆಡೆಯಲ್ಲಿ ಕೆಲವರು ಹಂಸದ ನಡೆಯನ್ನು ಅಣಕ ಮಾಡುತ್ತಿದ್ದರು. ಕೆಲವರು ಬಕಪಕ್ಷಿಗಳ ಬಳಿಯಲ್ಲಿ ಕುಳಿತು, ಅವುಗಳಂತೆ ಕಣ್ಣು ಮುಚ್ಚಿಕೊಳ್ಳುತ್ತಿದ್ದರು. ಕೆಲವರು ನವಿಲುಗಳ ಕುಣಿತವನ್ನು ನೋಡಿ ತಾವೂ ಅವುಗಳಂತೆ ಕುಣಿಯುತ್ತಿದ್ದರು. ॥ ೮ ॥

ವಿಕರ್ಷಂತಃ ಕೀಶಬಾಲಾನಾರೋಹಂತಶ್ಚ ತೈರ್ದ್ರುಮಾನ್ ।
ವಿಕುರ್ವಂತಶ್ಚ ತೈಃ ಸಾಕಂ ಪ್ಲವಂತಶ್ಚ ಪಲಾಶಿಷು ॥ ೯ ॥

ಸಾಕಂ ಭೇಕೈರ್ವಿಲಂಘಂತಃ ಸರಿತ್ಪ್ರಸ್ರವಸಂಪ್ಲುತಾಃ ।
ವಿಹಸಂತಃ ಪ್ರತಿಚ್ಛಾಯಾಃ ಶಪಂತಶ್ಚ ಪ್ರತಿಸ್ವನಾನ್ ॥ ೧೦ ॥

ಇತ್ಥಂ ಸತಾಂ ಬ್ರಹ್ಮಸುಖಾನುಭೂತ್ಯಾ
ದಾಸ್ಯಂ ಗತಾನಾಂ ಪರದೈವತೇನ ।
ಮಾಯಾಶ್ರಿತಾನಾಂ ನರದಾರಕೇಣ
ಸಾಕಂ ವಿಜಹ್ರುಃ ಕೃತಪುಣ್ಯಪುಂಜಾಃ ॥ ೧೧ ॥

ಯತ್ಪಾದಪಾಂಸುರ್ಬಹುಜನ್ಮಕೃಚ್ಛ್ರತೋ
ಧೃತಾತ್ಮಭಿರ್ಯೋಗಿಭಿರಪ್ಯಲಭ್ಯಃ ।
ಸ ಏವ ಯದ್ದೃಗ್ವಿಷಯಃ ಸ್ವಯಂ ಸ್ಥಿತಃ
ಕಿಂ ವರ್ಣ್ಯತೇ ದಿಷ್ಟಮತೋ ವ್ರಜೌಕಸಾಮ್ ॥ ೧೨ ॥

ಅಥಾಘನಾಮಾಭ್ಯಪತನ್ಮಹಾಸುರ-
ಸ್ತೇಷಾಂ ಸುಖಕ್ರೀಡನವೀಕ್ಷಣಾಕ್ಷಮಃ ।
ನಿತ್ಯಂ ಯದಂತರ್ನಿಜಜೀವಿತೇಪ್ಸುಭಿಃ
ಪೀತಾಮೃತೈರಪ್ಯಮರೈಃ ಪ್ರತೀಕ್ಷ್ಯತೇ ॥ ೧೩ ॥

ದೃಷ್ಟ್ವಾರ್ಭಕಾನ್ಕೃಷ್ಣಮುಖಾನಘಾಸುರಃ
ಕಂಸಾನುಶಿಷ್ಟಃ ಸ ಬಕೀಬಕಾನುಜಃ ।
ಅಯಂ ತು ಮೇ ಸೋದರನಾಶಕೃತ್ತಯೋ-
ರ್ದ್ವಯೋರ್ಮಮೈನಂ ಸಬಲಂ ಹನಿಷ್ಯೇ ॥ ೧೪ ॥

ಏತೇ ಯದಾ ಮತ್ಸುಹೃದೋಸ್ತಿಲಾಪಃ
ಕೃತಾಸ್ತದಾ ನಷ್ಟಸಮಾ ವ್ರಜೌಕಸಃ ।
ಪ್ರಾಣೇ ಗತೇ ವರ್ಷ್ಮಸು ಕಾ ನು ಚಿಂತಾ
ಪ್ರಜಾಸವಃ ಪ್ರಾಣಭೃತೋ ಹಿ ಯೇ ತೇ ॥ ೧೫ ॥

ಕೆಲವರು ಕೋತಿಗಳ ಬಾಲಗಳನ್ನು ಹಿಡಿದು ಎಳೆಯುತ್ತಿದ್ದರೆ, ಇತರರು ಅವುಗಳೊಂದಿಗೆ ಈ ಮರದಿಂದ ಆ ಮರದ ಮೇಲೆ ಹಾರುತ್ತಿದ್ದರು. ಕೆಲವರು ಅವುಗಳ ಜೊತೆಯಲ್ಲೇ ಕುಳಿತು ಅವುಗಳಂತೇ ಚೇಷ್ಟೆ ಮಾಡುತ್ತಿದ್ದರೆ, ಕೆಲವರು ಅವುಗಳಂತೆ ಒಂದು ಕೊಂಬೆಯಿಂದ ಇನ್ನೊಂದು ಕೊಂಬೆಗೆ ನೆಗೆಯುತ್ತಿದ್ದರು. ॥ ೯ ॥ ಕೆಲವರು ನದಿಯ ನೀರಿನಲ್ಲಿಳಿದು ಕೊಳಚಾಡುತ್ತಾ ಆಟವಾಡುತ್ತಿದ್ದರು. ಕೆಲವರು ಕಪ್ಪೆಗಳೊಂದಿಗೆ ತಾವು ಪಟಗುಟ್ಟುತ್ತಾ ಕುಪ್ಪಳಿಸುತ್ತಿದ್ದರು. ಕೆಲವರು ನೀರಿನಲ್ಲೇ ತಮ್ಮ ಪ್ರತಿಬಿಂಬವನ್ನು ನೋಡಿ ಹಾಸ್ಯಮಾಡುತ್ತಿದ್ದರು. ಬೇರೆ ಕೆಲವರು ತಮ್ಮ ಪ್ರತಿಧ್ವನಿಯನ್ನೇ ಕೇಳಿಸಿಕೊಂಡು ನಾನಾ ರೀತಿಯಿಂದ ಮಾತನಾಡುತ್ತಾ ಆನಂದಿಸುತ್ತಿದ್ದರು. ॥ ೧೦ ॥

ಪರೀಕ್ಷಿತನೇ! ಹೀಗೆ ಸತ್ಪುರುಷರಿಗೆ (ಜ್ಞಾನಿಗಳಿಗೆ) ಬ್ರಹ್ಮಾನಂದಾನುಭವರೂಪನಾಗಿದ್ದ, ದಾಸ್ಯಭಾವದಿಂದ ಆರಾಧಿಸುವ ಭಕ್ತರಿಗೆ ಪರದೇವತೆಯಾಗಿದ್ದ ಮಾಯಾಮೋಹಿತ ವಿಷಯಾಂಧರಿಗೆ ಸಾಧಾರಣ ಮಾನವ ಬಾಲಕನಾಗಿದ್ದ ಭಗವಾನ್ ಶ್ರೀಕೃಷ್ಣನೊಡನೆ ಅತ್ಯಂತ ಪುಣ್ಯಶಾಲಿಗಳಾದ ಗೊಲ್ಲ ಬಾಲಕರು ನಾನಾ ವಿಧವಾದ ಆಟ-ಪಾಟಗಳನ್ನು ಆಡುತ್ತಿದ್ದರು. ॥ ೧೧ ॥ ಭಗವಂತನಾದ ಶ್ರೀಕೃಷ್ಣನ ಪಾದಧೂಳಿಯು ಸಾಮಾನ್ಯವಾದುದಲ್ಲ. ಹಲವಾರು ಜನ್ಮಗಳು ಬಹಳ ಕಷ್ಟಪಟ್ಟು ತಪಸ್ಸು ಮಾಡಿದ ಜಿತೇಂದ್ರಿಯರಾದ ಮಹಾಯೋಗಿಗಳಿಗೂ ಅದು ಅಲಭ್ಯವಾದುದು. ಹೀಗಿರುವಾಗ ಅಂತಹ ಭಗವಂತನು ವ್ರಜವಾಸಿಗಳಾದ ಗೋಪಾಲಕರ ಸಮಕ್ಷಮದಲ್ಲಿ ಇದ್ದು ಅವರೊಡನೆ ಆಟವಾಡುತ್ತಿದ್ದನೆಂದರೆ ಅವರ ಪರಮ ಸೌಭಾಗ್ಯವನ್ನು ಏನೆಂದು ವರ್ಣಿಸೋಣ! ॥ ೧೨ ॥

ಪರೀಕ್ಷಿತರಾಜನೇ! ಆ ಸಮಯಕ್ಕೆ ಸರಿಯಾಗಿ ಅಘಾಸುರ ನೆಂಬ ರಾಕ್ಷಸನು ಅಲ್ಲಿಗೆ ಬಂದನು. ಗೋಪಬಾಲಕರು ಶ್ರೀಕೃಷ್ಣನೊಡನೆ ಆಟವಾಡುತ್ತಾ ಸಂತೋಷವಾಗಿರುವುದನ್ನು ಅವನಿಂದ ನೋಡಲಾಗಲಿಲ್ಲ. ಅವನು ಮಹಾಕ್ರೂರಿಯಾಗಿದ್ದನು. ಅಮೃತಪಾನ ಮಾಡಿ ಅಮರರಾದ ದೇವತೆಗಳೂ ಕೂಡ ಅವನ ಸಾವನ್ನು ಅನುದಿನವೂ ಪ್ರತೀಕ್ಷಿಸುತ್ತಲೇ ಇದ್ದರು. ॥ ೧೩ ॥ ಅಘಾಸುರನು ಪೂತನೆಯ ಮತ್ತು ಬಕಾಸುರನ ತಮ್ಮನಾಗಿದ್ದು, ಕಂಸನಿಂದ ಕಳುಹಲ್ಪಟ್ಟವನಾಗಿದ್ದನು. ಶ್ರೀಕೃಷ್ಣನನ್ನು ಗೋಪಬಾಲಕರ ಸಹಿತ ವಾಗಿ ಸಂಹರಿಸಿ, ಈ ಮೂಲಕ ಕಂಸರಾಜನ ಆಶಯವನ್ನು ಈಡೇರಿಸಿಕೊಡಲು ನಿಶ್ಚಯಿಸಿದನು. ॥ ೧೪ ॥ ಶ್ರೀಕೃಷ್ಣಪ್ರಮುಖರಾದ ಈ ಗೋಪಬಾಲಕರೆಲ್ಲರನ್ನು ಸಂಹರಿಸಿ, ನನ್ನ ಅಕ್ಕನಿಗೂ, ಅಣ್ಣನಿಗೂ ಜಲತರ್ಪಣವನ್ನು ಕೊಡುತ್ತೇನೆ. ಕೃಷ್ಣಾದಿಗಳು ಅವಸಾನ ಹೊಂದಿದೊಡನೆ ವ್ರಜವಾಸಿಗಳೆಲ್ಲರೂ ತಮಗೆ ತಾವೇ ಸತ್ತು ಹೋಗುತ್ತಾರೆ. ಅವರನ್ನು ಸಂಹರಿಸುವ ಶ್ರಮವೇನೂ ಆಗಲಾರದು. ಏಕೆಂದರೆ, ಸಂತಾನವೆಂಬುದೇ ಪ್ರಾಣಿಗಳ ಪ್ರಾಣವಾಗಿದೆ. ಪ್ರಾಣಸ್ವರೂಪವಾದ ಸಂತಾನವೇ ವಿನಾಶ ಹೊಂದಿದ ಬಳಿಕ ಕೇವಲ ದೇಹವು ಹೇಗೆ ತಾನೇ ಉಳಿದೀತು? ಆದುದರಿಂದ ಈ ಮಕ್ಕಳ ವಿನಾಶದಿಂದ ವ್ರಜವಾಸಿಗಳೆಲ್ಲರೂ ತಾನಾಗಿ ಸತ್ತು ಹೋಗುವರು. ॥ ೧೫ ॥

ಇತಿ ವ್ಯವಸ್ಯಾಜಗರಂ ಬೃಹದ್ವಪುಃ
ಸ ಯೋಜನಾಯಾಮಮಹಾದ್ರಿಪೀವರಮ್ ।
ಧೃತ್ವಾದ್ಭುತಂ ವ್ಯಾತ್ತಗುಹಾನನಂ ತದಾ
ಪಥಿ ವ್ಯಶೇತ ಗ್ರಸನಾಶಯಾ ಖಲಃ ॥ ೧೬ ॥

ಹೀಗೆ ನಿಶ್ಚಯಿಸಿ ಆ ದುಷ್ಟ ಅಘಾಸುರನು ಹೆಬ್ಬಾವಿನ ರೂಪವನ್ನು ಧರಿಸಿ ದಾರಿಯಲ್ಲಿ ಮಲಗಿದನು. ಆ ಹೆಬ್ಬಾವಿನ ಶರೀರವು ಒಂದು ಯೋಜನದಷ್ಟು ಉದ್ದವೂ, ಪರ್ವತದಷ್ಟು ಎತ್ತರವಾಗಿಯೂ ಮತ್ತು ದಪ್ಪವಾಗಿಯೂ ಅದ್ಭುತವಾಗಿಯೂ ಇತ್ತು. ಕೃಷ್ಣನ ಸಹಿತ ಗೋಪಬಾಲಕರೆಲ್ಲರನ್ನು ನುಂಗಿಹಾಕುವುದೇ ಅವನ ಆಶಯವಾಗಿತ್ತು. ಆದುದರಿಂದ ಅಘಾಸುರನು ತನ್ನ ಬಾಯನ್ನು ದೊಡ್ಡದಾದ ಗುಹೆಯಂತೆ ತೆರೆದುಕೊಂಡು ಬಿದ್ದಿದ್ದನು. ॥ ೧೬ ॥

ಧರಾಧರೋಷ್ಠೋ ಜಲದೋತ್ತರೋಷ್ಠೋ
ದರ್ಯಾನನಾಂತೋ ಗಿರಿಶೃಂಗದಂಷ್ಟ್ರಃ ।
ಧ್ವಾಂತಾಂತರಾಸ್ಯೋ ವಿತತಾಧ್ವಜಿಹ್ವಃ
ಪರುಷಾನಿಲಶ್ವಾಸದವೇಕ್ಷಣೋಷ್ಣಃ ॥ ೧೭ ॥

ಅವನ ಕೆಳದುಟಿಯು ಭೂಮಿಗೆ ತಾಗಿದ್ದರೆ, ಮೇಲ್ದುಟಿಯು ಆಕಾಶಕ್ಕೆ ಮುಟ್ಟಿತ್ತು. ದವಡೆಗಳು ಗವಿಗಳಂತಿದ್ದು, ಕೋರೆದಾಡೆಗಳು ಪರ್ವತದ ಶಿಖರಗಳಂತಿದ್ದವು. ಬಾಯೊಳಗೆ ಗಾಢಾಂಧಕಾರವು ಕವಿದಿತ್ತು. ನೀಳವಾದ ನಾಲಿಗೆಯು ಒಂದು ಅಗಲವಾದ ಕೆಂಪಾದ ರಾಜಬೀದಿಯಂತೆ ಕಂಗೊಳಿಸುತ್ತಿತ್ತು. ಸುಂಟರಗಾಳಿಯಂತೆ ಅದರ ಶ್ವಾಸ-ನಿಃಶ್ವಾಸವಿತ್ತು. ಅದರ ಕಣ್ಣುಗಳು ದಾವಾಗ್ನಿಯಂತೆ ಪ್ರಜ್ವಲಿಸುತ್ತಿತ್ತು. ॥ ೧೭ ॥

ದೃಷ್ಟ್ವಾ ತಂ ತಾದೃಶಂ ಸರ್ವೇ ಮತ್ವಾ ವೃಂದಾವನಶ್ರಿಯಮ್ ।
ವ್ಯಾತ್ತಾಜಗರತುಂಡೇನ ಹ್ಯುತ್ಪ್ರೇಕ್ಷಂತೇ ಸ್ಮ ಲೀಲಯಾ ॥ ೧೮ ॥

ಅಘಾಸುರನ ಇಂತಹ ಪರಮಾದ್ಭುತವಾದ ರೂಪವನ್ನು ನೋಡಿ ಇದೂ ಒಂದು ವೃಂದಾವನದ ಶೋಭೆಯನ್ನು ಹೆಚ್ಚಿಸುವ ವಸ್ತುವೆಂದು ಬಾಲಕರು ಭಾವಿಸಿದರು. ಅವರು ಅದನ್ನು ಕುತೂಹಲದಿಂದ ಆಟವಾಡುತ್ತಾ ಪರೀಕ್ಷಿಸತೊಡಗಿದರು. ಒಬ್ಬನು ಉತ್ಪ್ರೇಕ್ಷೆಮಾಡುತ್ತಾ ಹೇಳಿದನು – ಅಗಲವಾಗಿ ಬಾಯ್ತೆರೆದು ಕೊಂಡಿರುವ ಇದು ಹೆಬ್ಬಾವು ಇರಬಹುದು. ॥ ೧೮ ॥

ಅಹೋ ಮಿತ್ರಾಣಿ ಗದತ ಸತ್ತ್ವಕೂಟಂ ಪುರಃಸ್ಥಿತಮ್ ।
ಅಸ್ಮತ್ಸಂಗ್ರಸನವ್ಯಾತ್ತವ್ಯಾಲತುಂಡಾಯತೇ ನ ವಾ ॥ ೧೯ ॥

ಮತ್ತೊಬ್ಬ ಹೇಳಿದನು – ಮಿತ್ರರೇ! ಇದೊಂದು ಮಹಾಪ್ರಾಣಿಯೇ ಆಗಿರಬಹುದು. ನಮ್ಮನ್ನೆಲ್ಲ ನುಂಗಿಹಾಕಲು ಹೆಬ್ಬಾವಿನಂತೆ ವೇಷಧರಿಸಿ ಬಾಯ್ತೆರೆದುಕೊಂಡು ಮಲಗಿದಂತಿದೆಯಲ್ಲ! ಎಚ್ಚರಿಕೆಯಿಂದ ಇರಿ. ॥ ೧೯ ॥

ಸತ್ಯಮರ್ಕಕರಾರಕ್ತಮುತ್ತರಾಹನುವದ್ಘನಮ್ ।
ಅಧರಾಹನುವದ್ರೋಧಸ್ತತ್ಪ್ರತಿಚ್ಛಾಯಯಾರುಣಮ್ ॥ ೨೦ ॥

ಪ್ರತಿಸ್ಪರ್ಧೇತೇ ಸೃಕ್ಕಿಭ್ಯಾಂ ಸವ್ಯಾಸವ್ಯೇ ನಗೋದರೇ ।
ತುಂಗಶೃಂಗಾಲಯೋಽಪ್ಯೇತಾಸ್ತದ್ದಂಷ್ಟ್ರಾಭಿಶ್ಚ ಪಶ್ಯತ ॥ ೨೧ ॥

ಇನ್ನೊಬ್ಬ ಬಾಲಕನು ಹೇಳುತ್ತಾನೆ – ಮೇಲ್ಭಾಗದಲ್ಲಿ ನೋಡಿರಿ. ಸೂರ್ಯನ ಕಿರಣಗಳು ಬಿದ್ದು ಎಣ್ಣೆಗೆಂಪಾಗಿ ಕಾಣುತ್ತಿರುವ ಮೋಡಗಳೇ – ಹೌದು-ಹೌದು! ನೋಡಿರಲ್ಲ! ಈ ಮಹಾಪ್ರಾಣಿಯು ಮುಖದ ಎರಡು ಭಾಗಗಳೂ ಗವಿಯಂತೆ ಕಾಣುತ್ತಿವೆ. ಈ ಎತ್ತರವಾದ ಪರ್ವತ ಶಿಖರಗಳಾದರೋ ಅದರ ಕೋರೆದಾಡೆಗಳಂತೆ ಕಂಡುಬರುತ್ತಿವೆಯಲ್ಲ! ॥ ೨೦-೨೧ ॥

ಆಸ್ತೃತಾಯಾಮಮಾರ್ಗೋಽಯಂ ರಸನಾಂ ಪ್ರತಿಗರ್ಜತಿ ।
ಏಷಾಮಂತರ್ಗತಂ ಧ್ವಾಂತಮೇತದಪ್ಯಂತರಾನನಮ್ ॥ ೨೨ ॥

ಇನ್ನೊಬ್ಬ ಹೇಳಿದ- ಗೆಳೆಯರೇ! ನೋಡಿ-ನೋಡಿ! ನೀಳವಾಗಿಯೂ, ಅಗಲವಾಗಿಯೂ ಇರುವ ಈ ಹೆದ್ದಾರಿಯು ಹೆಬ್ಬಾವಿನ ನಾಲಿಗೆಯಂತೆ ಕಾಣುತ್ತಿದೆಯಲ್ಲ! ಗಿರಿಶೃಂಗಗಳ ನಡುವೆ ಇರುವ ಅಂಧಕಾರವು ಈ ಹೆಬ್ಬಾವಿನ ಬಾಯಲ್ಲಿರುವ ಕತ್ತಲೆಯೊಡನೆ ಸೆಣಸುತ್ತಿದೆ. ॥ ೨೨ ॥

ದಾವೋಷ್ಣಖರವಾತೋಽಯಂ ಶ್ವಾಸವದ್ಭಾತಿ ಪಶ್ಯತ ।
ತದ್ದಗ್ಧಸತ್ತ್ವದುರ್ಗಂಧೋಽಪ್ಯಂತರಾಮಿಷಗಂಧವತ್ ॥ ೨೩ ॥

ಯಾರೋ ಇನ್ನೊಬ್ಬ ಗೋಪಬಾಲಕನು ಹೇಳಿದ – ಮಿತ್ರರೇ! ಗಮನಿಸಿರಿ. ಇಲ್ಲೇ ಎಲ್ಲೋ ಕಾಡಿನಲ್ಲಿ ಬೆಂಕಿಬಿದ್ದಿರುವಂತೆ ಕಾಣುತ್ತದೆ. ಅದರಿಂದಲೇ ಈ ಬಿಸಿಯಾದ ಮತ್ತು ತೀಕ್ಷ್ಣವಾದ ಗಾಳಿ ಬರುತ್ತಿದೆ. ಆದರೆ ಹೆಬ್ಬಾವಿನ ನಿಶ್ವಾಸದೊಂದಿಗೆ ಇದು ಹೇಗೆ ಹೊಂದಿಕೊಂಡಿತು ? ಅದೇ ಬೆಂಕಿಯಲ್ಲಿ ಬೆಂದಿರುವ ಪ್ರಾಣಿಗಳ ದುರ್ಗಂಧದಂತೆ ಅಜಗರದ ಹೊಟ್ಟೆಯಲ್ಲಿ ಸತ್ತಿರುವ ಜೀವಿಗಳ ಮಾಂಸದ ದುರ್ಗಂಧವೇ ಆಗಿರಬೇಕು. ॥ ೨೩ ॥

ಅಸ್ಮಾನ್ಕಿಮತ್ರ ಗ್ರಸಿತಾ ನಿವಿಷ್ಟಾ-
ನಯಂ ತಥಾ ಚೇದ್ಬಕವದ್ವಿನಂಕ್ಷ್ಯತಿ ।
ಕ್ಷಣಾದನೇನೇತಿ ಬಕಾರ್ಯುಶನ್ಮುಖಂ
ವೀಕ್ಷ್ಯೋದ್ಧಸಂತಃ ಕರತಾಡನೈರ್ಯಯುಃ ॥ ೨೪ ॥

ಇತ್ಥಂ ಮಿಥೋಽತಥ್ಯಮತಜ್ಜ್ಞಭಾಷಿತಂ
ಶ್ರುತ್ವಾ ವಿಚಿಂತ್ಯೇತ್ಯಮೃಷಾ ಮೃಷಾಯತೇ ।
ರಕ್ಷೋ ವಿದಿತ್ವಾಖಿಲಭೂತಹೃತ್ಸ್ಥಿತಃ
ಸ್ವಾನಾಂ ನಿರೋದ್ಧುಂ ಭಗವಾನ್ಮನೋ ದಧೇ ॥ ೨೫ ॥

ತಾವತ್ಪ್ರವಿಷ್ಟಾಸ್ತ್ವಸುರೋದರಾಂತರಂ
ಪರಂ ನ ಗೀರ್ಣಾಃ ಶಿಶವಃ ಸವತ್ಸಾಃ ।
ಪ್ರತೀಕ್ಷಮಾಣೇನ ಬಕಾರಿವೇಶನಂ
ಹತಸ್ವಕಾಂತಸ್ಮರಣೇನ ರಕ್ಷಸಾ ॥ ೨೬ ॥

ತಾನ್ವೀಕ್ಷ್ಯ ಕೃಷ್ಣಃ ಸಕಲಾಭಯಪ್ರದೋ
ಹ್ಯನನ್ಯನಾಥಾನ್ಸ್ವಕರಾದವಚ್ಯುತಾನ್ ।
ದೀನಾಂಶ್ಚ ಮೃತ್ಯೋರ್ಜಠರಾಗ್ನಿಘಾಸಾನ್-
ಘೃಣಾರ್ದಿತೋ ದಿಷ್ಟಕೃತೇನ ವಿಸ್ಮಿತಃ ॥ ೨೭ ॥

ಕೃತ್ಯಂ ಕಿಮತ್ರಾಸ್ಯ ಖಲಸ್ಯ ಜೀವನಂ
ನ ವಾ ಅಮೀಷಾಂ ಚ ಸತಾಂ ವಿಹಿಂಸನಮ್ ।
ದ್ವಯಂ ಕಥಂ ಸ್ಯಾದಿತಿ ಸಂವಿಚಿಂತ್ಯ ತ-
ಜ್ಜ್ಞಾತ್ವಾವಿಶತ್ತುಂಡಮಶೇಷದೃಗ್ಘರಿಃ ॥ ೨೮ ॥

ತದಾ ಘನಚ್ಛದಾ ದೇವಾ ಭಯಾದ್ಧಾಹೇತಿ ಚುಕ್ರುಶುಃ ।
ಜಹೃಷುರ್ಯೇ ಚ ಕಂಸಾದ್ಯಾಃ ಕೌಣಪಾಸ್ತ್ವಘಬಾಂಧವಾಃ
॥ ೨೯ ॥

ಆಗ ಅವರಲ್ಲಿದ್ದ ಇನ್ನೊಬ್ಬನು ಹೇಳಿದನು – ನಾವುಗಳು ಇದರ ಬಾಯೊಳಗೆ ಪ್ರವೇಶಿಸಿದರೆ ಏನು ನಮ್ಮನ್ನು ನುಂಗಿಬಿಟ್ಟೀತೇ? ಮತ್ತೊಬ್ಬ ಹೇಳಿದ – ಛೇ! ಛೇ! ಇದೇನು ನಮ್ಮನ್ನು ನುಂಗೀತು? ಹಾಗೇನಾದರೂ ಸಾಹಸ ಮಾಡಿದರೆ ಕ್ಷಣಾರ್ಧದಲ್ಲಿ ಇವನೂ ಬಕಾಸುರನಂತೆ ನಾಶವಾಗಿ ಹೋದಾನು. ನಮ್ಮ ಮುದ್ದು ಕೃಷ್ಣನು ನಮ್ಮನ್ನು ನುಂಗಲು ಬಿಡುವನೇ? ಹೀಗೆ ಹೇಳುತ್ತಾ ಆ ಗೊಲ್ಲಬಾಲಕರು ಕೃಷ್ಣನ ನಗುಮುಖವನ್ನು ದಿಟ್ಟಿಸಿ ನೋಡುತ್ತಾ ಚಪ್ಪಾಳೆಗಳನ್ನು ತಟ್ಟುತ್ತಾ ನಗು-ನಗುತ್ತಾ ಹೆಬ್ಬಾವಿನ ಆ ಮುಖದಲ್ಲಿ ನುಗ್ಗಿದರು. ॥ ೨೪ ॥ ಅಜ್ಞರಾದ ಆ ಗೋಪಬಾಲಕರು ಪರಸ್ಪರವಾಗಿ ಮಾತನಾಡಿಕೊಳ್ಳುತ್ತಿದ್ದ ಉತ್ಪ್ರೇಕ್ಷೆಯ ಮಾತುಗಳನ್ನು ಶ್ರೀಕೃಷ್ಣನು ಕೇಳಿಸಿಕೊಂಡು, ಅಯ್ಯೋ! ಇವರಿಗಾದರೋ ನಿಜವಾದ ಸರ್ಪವೂ ಕೂಡ ಸುಳ್ಳೆಂದು ಕಂಡು ಬರುತ್ತಿದೆಯಲ್ಲ ಎಂದು ಯೋಚಿಸಿದನು. ಪರೀಕ್ಷಿತನೇ! ಭಗವಾನ್ ಶ್ರೀಕೃಷ್ಣನು ಇವನು ರಾಕ್ಷಸನಾಗಿದ್ದಾನೆ ಎಂದು ತಿಳಿದುಕೊಂಡನು. ಅವನಿಂದ ಏನು ತಾನೇ ಅಡಗಿರಬಲ್ಲದು? ಅವನು ಎಲ್ಲರ ಹೃದಯದಲ್ಲಿಯೂ ವಾಸವಾಗಿದ್ದಾನೆ. ತನ್ನ ಗೆಳೆಯರಾದ ಗೊಲ್ಲಬಾಲಕರನ್ನು ಅವನ ಬಾಯೊಳಗೆ ಹೋಗುವುದನ್ನು ತಡೆಯಬೇಕೆಂದು ನಿಶ್ಚಯಿಸಿದನು. ॥ ೨೫ ॥ ಭಗವಂತನು ಹೀಗೆ ಯೋಚಿಸುವಾಗಲೇ ಎಲ್ಲ ಗೋಪಾಲಬಾಲಕರು ಕರುಗಳೊಂದಿಗೆ ಅಸುರನ ಹೊಟ್ಟೆಯೊಳಗೆ ಪ್ರವೇಶಿಸಿಯೇ ಬಿಟ್ಟರು. ಆದರೆ ಅಘಾಸುರನು ಅವರನ್ನು ಇನ್ನೂ ನುಂಗಿರಲಿಲ್ಲ. ಇದರ ಕಾರಣ – ಅಘಾಸುರನು ತನ್ನ ಅಣ್ಣ ಬಕಾಸುರ ಮತ್ತು ಅಕ್ಕ ಪೂತನೆಯನ್ನು ವಧಿಸಿದುದನ್ನು ನೆನೆದು, ಅವರನ್ನು ವಧಿಸಿದ ಶ್ರೀಕೃಷ್ಣನು ಬಾಯೊಳಗೆ ಬಂದಾಗ ಎಲ್ಲರನ್ನು ಒಂದೇ ಬಾರಿಗೆ ನುಂಗಿಬಿಡುವೆನೆಂದು ದಾರಿಕಾಯುತ್ತಿದ್ದನು. ॥ ೨೬ ॥ ಸಕಲರಿಗೂ ಅಭಯಪ್ರದನಾದ ಶ್ರೀಕೃಷ್ಣನು ಗೊಲ್ಲಬಾಲಕರಿಗೂ ಇವನೇ ಏಕಮಾತ್ರರಕ್ಷಕನಾಗಿದ್ದನು. ಆದರೂ ಅವರು ಇವನ ಕೈತಪ್ಪಿ ಹೋಗಿದ್ದರು. ಹುಲ್ಲು ಕಡ್ಡಿಯು ಕೈತಪ್ಪಿ ಅಗ್ನಿಗೆ ಬಿದ್ದು ಹೋಗುವಂತೇ ಕರುಗಳೂ, ದೀನರಾದ ಗೋಪಾಲಕರೂ ಕೃಷ್ಣನ ಕೈ ತಪ್ಪಿ ಅಘಾಸುರನ ಜಠರಾಗ್ನಿಗೆ ಬಿದ್ದುಹೋಗಿದ್ದರು. ದಯಾರ್ದ್ರಹೃದಯನಾದ ಶ್ರೀಕೃಷ್ಣನು ದೈವದ ಈ ವಿಚಿತ್ರವಾದ ಗತಿಯನ್ನು ನೋಡಿ ಆಶ್ಚರ್ಯಗೊಂಡನು. ॥ ೨೭ ॥ 'ಈಗ ನಾನೇನು ಮಾಡಲಿ?' ಎಂದು ತಾನು ಮಾಡಬೇಕಾದ ಕರ್ತವ್ಯದ ಕುರಿತಾಗಿ ಯೋಚಿಸಿದನು. ಸಂತಸ್ವಭಾವದ ನನ್ನ ಗೆಳೆಯರಾದ ಗೋಪಾಲರಿಗೂ, ಕರುಗಳಿಗೂ ಯಾವುದೇ ಹಿಂಸೆಯೂ ಆಗಬಾರದು. ಈ ಎರಡನ್ನು ಹೇಗೆ ಸಾಧಿಸಲಿ? ಪರೀಕ್ಷಿತನೇ! ಶ್ರೀಹರಿಯು ಭೂತ ಭವಿಷ್ಯದ್ವರ್ತಮಾನಗಳನ್ನು ತಿಳಿದವನಾಗಿದ್ದನು. ಅವನಿಗೆ ಈ ಉಪಾಯವನ್ನು ತಿಳಿಯುವುದರಲ್ಲಿ ಕಷ್ಟವಾಗಿರಲಿಲ್ಲ. ಅವನು ತನ್ನ ಕರ್ತವ್ಯವನ್ನು ನಿಶ್ಚಯಿಸಿಕೊಂಡು ಹೆಬ್ಬಾವಿನ ಮುಖದಲ್ಲಿ ಪ್ರವೇಶಿಸಿಬಿಟ್ಟನು. ॥ ೨೮ ॥ ಆ ಸಮಯದಲ್ಲಿ ಮೋಡಗಳಲ್ಲಿ ಅಡಗಿದ್ದ ದೇವತೆಗಳು ಭಯಗೊಂಡು ಅಯ್ಯೋ! ಅಯ್ಯೋ! ಸರ್ವನಾಶವಾಯಿತೆಂದು ಕೂಗಿಕೊಂಡರು. ಅಘಾಸುರನ ಹಿತೈಷಿಗಳಾದ ಕಂಸನೇ ಮೊದಲಾದ ರಾಕ್ಷಸರು ಹಿರಿ-ಹಿರಿ ಹಿಗ್ಗಿದರು. ॥ ೨೯ ॥

ತಚ್ಛ್ರುತ್ವಾ ಭಗವಾನ್ ಕೃಷ್ಣಸ್ತ್ವವ್ಯಯಃ ಸಾರ್ಭವತ್ಸಕಮ್ ।
ಚೂರ್ಣೀಚಿಕೀರ್ಷೋರಾತ್ಮಾನಂ ತರಸಾ ವವೃಧೇ ಗಲೇ
॥ ೩೦ ॥

ತತೋಽತಿಕಾಯಸ್ಯ ನಿರುದ್ಧಮಾರ್ಗಿಣೋ
ಹ್ಯುದ್ಗೀರ್ಣದೃಷ್ಟೇರ್ಭ್ರಮತಸ್ತ್ವಿತಸ್ತತಃ ।
ಪೂರ್ಣೋಽನ್ತರಂಗೇ ಪವನೋ ನಿರುದ್ಧೋ
ಮೂರ್ಧನ್ವಿನಿಷ್ಪಾಟ್ಯ ವಿನಿರ್ಗತೋ ಬಹಿಃ ॥ ೩೧ ॥

ತೇನೈವ ಸರ್ವೇಷು ಬಹಿರ್ಗತೇಷು
ಪ್ರಾಣೇಷು ವತ್ಸಾನ್ಸುಹೃದಃ ಪರೇತಾನ್ ।
ದೃಷ್ಟ್ಯಾ ಸ್ವಯೋತ್ಥಾಪ್ಯ ತದನ್ವಿತಃ ಪುನ-
ರ್ವಕ್ತ್ರಾನ್ಮುಕುಂದೋ ಭಗವಾನ್ವಿನಿರ್ಯಯೌ ॥ ೩೨ ॥

ಪೀನಾಹಿಭೋಗೋತ್ಥಿತಮದ್ಭುತಂ ಮಹ-
ಜ್ಜ್ಯೋತಿಃ ಸ್ವಧಾಮ್ನಾ ಜ್ವಲಯದ್ದಿಶೋ ದಶ ।
ಪ್ರತೀಕ್ಷ್ಯ ಖೇಽವಸ್ಥಿತಮೀಶನಿರ್ಗಮಂ
ವಿವೇಶ ತಸ್ಮಿನ್ಮಿಷತಾಂ ದಿವೌಕಸಾಮ್ ॥ ೩೩ ॥

ತತೋಽತಿಹೃಷ್ಟಾಃ ಸ್ವಕೃತೋಽಕೃತಾರ್ಹಣಂ
ಪುಷ್ಪೈಃ ಸುರಾ ಅಪ್ಸರಸಶ್ಚ ನರ್ತನೈಃ ।
ಗೀತೈಃ ಸುಗಾ ವಾದ್ಯಧರಾಶ್ಚ ವಾದ್ಯಕೈಃ
ಸ್ತವೈಶ್ಚ ವಿಪ್ರಾ ಜಯನಿಃಸ್ವನೈರ್ಗಣಾಃ ॥ ೩೪ ॥

ತದದ್ಭುತಸ್ತೋತ್ರಸುವಾದ್ಯಗೀತಿಕಾ-
ಜಯಾದಿನೈಕೋತ್ಸವಮಂಗಲಸ್ವನಾನ್ ।
ಶ್ರುತ್ವಾ ಸ್ವಧಾಮ್ನೋಽನ್ತ್ಯಜ ಆಗತೋಽಚಿರಾದ್
ದೃಷ್ಟ್ವಾ ಮಹೀಶಸ್ಯ ಜಗಾಮ ವಿಸ್ಮಯಮ್ ॥ ೩೫ ॥

ರಾಜನ್ನಾಜಗರಂ ಚರ್ಮ ಶುಷ್ಕಂ ವೃಂದಾವನೇಽದ್ಭುತಮ್ ।
ವ್ರಜೌಕಸಾಂ ಬಹುತಿಥಂ ಬಭೂವಾಕ್ರೀಡಗಹ್ವರಮ್
॥ ೩೬ ॥

ಅಘಾಸುರನು ಕರುಗಳನ್ನು ಮತ್ತು ಗೊಲ್ಲಬಾಲಕರನ್ನು ಭಗವಾನ್ ಶ್ರೀಕೃಷ್ಣನೊಂದಿಗೆ ಕೋರೆಹಲ್ಲುಗಳಿಂದ ಜಗಿದು ನುಂಗಿ ಜೀರ್ಣ ಮಾಡಿಕೊಳ್ಳಲು ಹವಣಿಸುತ್ತಿದ್ದನು. ಆದರೆ ಆಗಲೇ ಅವಿನಾಶೀ ಶ್ರೀಕೃಷ್ಣನು ದೇವತೆಗಳ ಕರುಣಾಕ್ರಂದನವನ್ನು ಕೇಳಿ ಅಸುರನ ಗಂಟಲೊಳಗೆ ತನ್ನ ಶರೀರವನ್ನು ವೇಗವಾಗಿ ಹಿಗ್ಗಿಸ ತೊಡಗಿದನು. ॥ ೩೦ ॥ ಅವನು ಬೆಳೆಯುತ್ತಾ-ಬೆಳೆಯುತ್ತಾ ಅವನ ಗಂಟಲು ತುಂಬಿ ಉಸಿರು ಕಟ್ಟಿಹೋಯಿತು. ಕಣ್ಣುಗಳು ತಿರುಗಿದವು. ಅವನು ವ್ಯಾಕುಲನಾಗಿ ಬಹಳವಾಗಿ ಚಡಪಡಿಸಿದನು. ಶ್ವಾಸೋಚ್ಛ್ವಾಸಗಳು ನಿಂತುಹೋಗಿ ವಾಯುವು ಇಡೀ ಶರೀರದಲ್ಲಿ ತುಂಬಿ ಹೋಯಿತು. ಕೊನೆಗೆ ಪ್ರಾಣವು ಬ್ರಹ್ಮರಂಧ್ರವನ್ನು ಭೇದಿಸಿ ಹೊರಟು ಹೋಯಿತು. ॥ ೩೧ ॥ ಅದೇ ಮಾರ್ಗದಿಂದ ಅವನ ಎಲ್ಲ ಇಂದ್ರಿಯಗಳು ಪ್ರಾಣದೊಂದಿಗೆ ಶರೀರದಿಂದ ಹೊರ ಬಿದ್ದವು. ಆಗಲೇ ಭಗವಾನ್ ಮುಕುಂದನು ತನ್ನ ಅಮೃತಮಯ ದೃಷ್ಟಿಯಿಂದ ಸತ್ತು ಹೋದ ಕರುಗಳನ್ನು ಮತ್ತು ಗೋಪಬಾಲಕರನ್ನು ಬದುಕಿಸಿದನು ಹಾಗೂ ಅವರೆಲ್ಲರನ್ನು ಜೊತೆಗೆ ಕರೆದುಕೊಂಡು ಅವನು ಅಘಾಸುರನ ಬಾಯಿಯಿಂದ ಹೊರಗೆ ಬಂದನು. ॥ ೩೨ ॥ ಆ ಹೆಬ್ಬಾವಿನ ಸ್ಥೂಲ ಶರೀರದಿಂದ ಅತ್ಯಂತ ಅದ್ಭುತ ಹಾಗೂ ಮಹಾಜ್ಯೋತಿಯೊಂದು ಹೊರಟಿತು. ಆಗ ಆ ಜ್ಯೋತಿಯ ಪ್ರಕಾಶದಿಂದ ಹತ್ತು ದಿಕ್ಕುಗಳೂ ಬೆಳಗಿದವು. ಅದು ಸ್ವಲ್ಪ ಹೊತ್ತು ಆಕಾಶದಲ್ಲಿ ನೆಲೆಸಿ ಭಗವಂತನು ಹೊರಬರುವುದನ್ನು ಪ್ರತೀಕ್ಷೆ ಮಾಡುತ್ತಿತ್ತು. ಅವನು ಹೊರಗೆ ಬರುತ್ತಲೇ ಅದು ಸಕಲ ದೇವತೆಗಳು ನೋಡು-ನೋಡುತ್ತಿರುವಂತೆ ಭಗವಂತನಲ್ಲಿ ಸೇರಿ ಹೋಯಿತು. ॥ ೩೩ ॥ ಆ ಸಮಯದಲ್ಲಿ ದೇವತೆಗಳು ಹೂಮಳೆಯನ್ನು ಸುರಿಸಿ, ಅಪ್ಸರೆಯರು ನರ್ತನ ಮಾಡುತ್ತಾ, ಗಂಧರ್ವರು ಹಾಡಿ, ವಿದ್ಯಾಧರರು ವಾದ್ಯಗಳನ್ನು ನುಡಿಸಿ, ಬ್ರಾಹ್ಮಣರು ಸ್ವಸ್ತಿ ವಾಚನ ಮಾಡುತ್ತಾ , ಪಾರ್ಷದರು ಶ್ರೀಕೃಷ್ಣನಿಗೆ ಜಯವಾಗಲಿ. ಯದುಕುಮಾರನಿಗೆ ಜಯವಾಗಲೀ ಎಂದು ಜಯಘೋಷ ಮಾಡುತ್ತಾ ಆನಂದದಿಂದ ಭಗವಂತನನ್ನು ಅಭಿನಂದಿಸಿದರು. ಏಕೆಂದರೆ, ಭಗವಾನ್ ಶ್ರೀಕೃಷ್ಣನು ಅಘಾಸುರನನ್ನು ಕೊಂದು ಅವರೆಲ್ಲರ ದೊಡ್ಡ ಕೆಲಸವನ್ನು ಮಾಡಿದ್ದನು. । ೩೪ । ಆ ಅದ್ಭುತ ಸ್ತುತಿಗಳು, ಮಂಗಳವಾದ್ಯ-ಗೀತೆಗಳು, ಜಯಕಾರ ಧ್ವನಿಗಳೂ, ಆನಂದೋತ್ಸವದ ಮಂಗಳಧ್ವನಿಗಳು ಬ್ರಹ್ಮಲೋಕಕ್ಕೆ ಮುಟ್ಟಿದವು. ಬ್ರಹ್ಮದೇವರು ಆ ಧ್ವನಿಯನ್ನು ಕೇಳಿದಾಗ ಅವರು ಶೀಘ್ರವಾಗಿ ತನ್ನ ವಾಹನವನ್ನೇರಿ ಶ್ರೀಕೃಷ್ಣನಿರುವಲ್ಲಿಗೆ ಬಂದು ಅವನ ಮಹಿಮೆಯನ್ನು ನೋಡಿ ಆಶ್ಚರ್ಯಚಕಿತರಾದರು. ॥ ೩೫ ॥ ಪರೀಕ್ಷಿತನೇ! ವೃಂದಾವನದಲ್ಲಿ ಆ ಹೆಬ್ಬಾವಿನ ಚರ್ಮವು ಒಣಗಿಹೋದಾಗ ಅದು ವ್ರಜವಾಸಿಗಳಿಗೆ ಅನೇಕ ದಿನಗಳವರೆಗೆ ಆಟವಾಡುವ ಒಂದು ಅದ್ಭುತ ಗುಹೆಯಂತಾಗಿತ್ತು. ॥ ೩೬ ॥ ಭಗವಂತನು ಗೊಲ್ಲಬಾಲಕರನ್ನು ಮೃತ್ಯುಮುಖದಿಂದ ಬದುಕಿಸಿದ್ದು ಮತ್ತು ಅಘಾಸುರನಿಗೆ ಮೋಕ್ಷವನ್ನು ಕರುಣಿಸಿದ ಆ ಲೀಲೆಯನ್ನು ತನ್ನ ಕೌಮಾರಾವಸ್ಥೆಯಲ್ಲಿ ಅಂದರೆ ಐದನೇ ವರ್ಷದಲ್ಲಿ ನಡೆಸಿದ್ದನು. ಗೊಲ್ಲಬಾಲಕರು ಅದನ್ನು ಆಗಲೇ ನೋಡಿಯೂ ಇದ್ದರು. ಆದರೆ

ಏತತ್ಕೌಮಾರಜಂ ಕರ್ಮ ಹರೇರಾತ್ಮಾಹಿಮೋಕ್ಷಣಮ್ ।
ಮೃತ್ಯೋಃ ಪೌಗಂಡಕೇ ಬಾಲಾ ದೃಷ್ಟ್ವೋಚುರ್ವಿಸ್ಮಿತಾ ವ್ರಜೇ ॥ ೩೭ ॥

ನೈತದ್ವಿಚಿತ್ರಂ ಮನುಜಾರ್ಭಮಾಯಿನಃ
ಪರಾವರಾಣಾಂ ಪರಮಸ್ಯ ವೇಧಸಃ ।
ಅಘೋಽಪಿ ಯತ್ಸ್ಪರ್ಶನಧೌತಪಾತಕಃ
ಪ್ರಾಪಾತ್ಮಸಾಮ್ಯಂ ತ್ವಸತಾಂ ಸುದುರ್ಲಭಮ್ ॥ ೩೮ ॥

ಸಕೃದ್ಯದಂಗಪ್ರತಿಮಾಂತರಾಹಿತಾ
ಮನೋಮಯೀ ಭಾಗವತೀಂ ದದೌ ಗತಿಮ್ ।
ಸ ಏವ ನಿತ್ಯಾತ್ಮಸುಖಾನುಭೂತ್ಯಭಿ-
ವ್ಯುದಸ್ತಮಾಯೋಽಂತರ್ಗತೋ ಹಿ ಕಿಂ ಪುನಃ ॥ ೩೯ ॥

ಸೂತ ಉವಾಚ

ಇತ್ಥಂ ದ್ವಿಜಾ ಯಾದವದೇವದತ್ತಃ
ಶ್ರುತ್ವಾ ಸ್ವರಾತುಶ್ಚರಿತಂ ವಿಚಿತ್ರಮ್ ।
ಪಪ್ರಚ್ಛ ಭೂಯೋಽಪಿ ತದೇವ ಪುಣ್ಯಂ
ವೈಯಾಸಕಿಂ ಯನ್ನಿಗೃಹೀತಚೇತಾಃ ॥ ೪೦ ॥

ರಾಜೋವಾಚ

ಬ್ರಹ್ಮನ್ಕಾಲಾಂತರಕೃತಂ ತತ್ಕಾಲೀನಂ ಕಥಂ ಭವೇತ್ ।
ಯತ್ಕೌಮಾರೇ ಹರಿಕೃತಂ ಜಗುಃ ಪೌಗಂಡಕೇಽರ್ಭಕಾಃ ॥ ೪೧ ॥

ತದ್ಬ್ರೂಹಿ ಮೇ ಮಹಾಯೋಗಿನ್ಪರಂ ಕೌತೂಹಲಂ ಗುರೋ ।
ನೂನಮೇತದ್ಧರೇರೇವ ಮಾಯಾ ಭವತಿ ನಾನ್ಯಥಾ ॥ ೪೨ ॥

ವಯಂ ಧನ್ಯತಮಾ ಲೋಕೇ ಗುರೋಽಪಿ ಕ್ಷತ್ರಬಂಧವಃ ।
ವಯಂ ಪಿಬಾಮೋ ಮುಹುಸ್ತ್ವತ್ತಃ ಪುಣ್ಯಂ ಕೃಷ್ಣಕಥಾಮೃತಮ್ ॥ ೪೩ ॥

ಪೌಗಂಡಾವಸ್ಥೆಯಲ್ಲಿ* ಅರ್ಥಾತ್ ಆರನೇ ವರ್ಷದಲ್ಲಿ ಅತ್ಯಂತ ಆಶ್ಚರ್ಯಚಕಿತರಾಗಿ ವ್ರಜದಲ್ಲಿ ಅದನ್ನು ವರ್ಣಿಸಿದರು. ॥ ೩೭ ॥ ಅಘಾಸುರನು ಮೂರ್ತಿವೆತ್ತ ಅಘ (ಪಾಪ)ವೇ ಆಗಿದ್ದನು. ಭಗವಂತನ ಸ್ಪರ್ಶಮಾತ್ರದಿಂದ ಅವನ ಪಾಪಗಳೆಲ್ಲವೂ ತೊಳೆದು ಹೋದುವು ಮತ್ತು ಪಾಪಿಗಳಿಗೆ ಎಂದೂ ಸಿಗಲಾರದ ಸಾರೂಪ್ಯ ಮುಕ್ತಿಯು ಅವನಿಗೆ ದೊರೆಯಿತು. ಆದರೆ ಇದೇನು ಆಶ್ಚರ್ಯದ ಮಾತಲ್ಲ. ಏಕೆಂದರೆ, ಮನುಷ್ಯಬಾಲಕನಂತೆ ಲೀಲೆಯನ್ನು ಮಾಡುವ ಅವನೇ ಪರಮಪುರುಷ ಪರಮಾತ್ಮನಾಗಿದ್ದಾನೆ. ಅವನು ವ್ಯಕ್ತ-ಅವ್ಯಕ್ತ ಮತ್ತು ಕಾರ್ಯ-ಕಾರಣರೂಪೀ ಸಮಸ್ತ ಜಗತ್ತಿನ ಏಕಮಾತ್ರ ನಿಯಾಮಕನಾಗಿದ್ದಾನೆ. ॥ ೩೮ ॥ ಭಗವಾನ್ ಶ್ರೀಕೃಷ್ಣನ ಯಾವುದೇ ಒಂದು ಅಂಗದ ಭಾವನಿರ್ಮಿತ ಪ್ರತಿಮೆಯನ್ನು ಧ್ಯಾನದ ಮೂಲಕ ಒಮ್ಮೆಯಾದರೂ ಹೃದಯದಲ್ಲಿ ನೆಲೆಸಿಕೊಂಡರೆ, ಅದು ಸಾಲೋಕ್ಯ, ಸಾಮೀಪ್ಯ ಮೊದಲಾದ ಗತಿಯನ್ನು ಕರುಣಿಸುತ್ತದೆ. ಅದು ಭಗವಂತನ ಅಂತರಂಗ ಭಕ್ತರಿಗೆ ಸದಾ ದೊರೆಯುತ್ತದೆ. ಭಗವಂತನು ಆತ್ಮಾನಂದದ ನಿತ್ಯ ಸಾಕ್ಷಾತ್ಕಾರ ಸ್ವರೂಪನಾಗಿದ್ದಾನೆ. ಮಾಯೆಯು ಅವನ ಬಳಿಯಲ್ಲಿ ಸುಳಿಯುವುದಿಲ್ಲ. ಅಂತಹ ಆ ಭಗವಂತನು ಅಘಾಸುರನ ಶರೀರದಲ್ಲಿ ಪ್ರವೇಶಿಸಿದನೆಂದರೆ ಅವನಿಗೆ ಸದ್ಗತಿಯಾಗುವುದರಲ್ಲಿ ಸಂದೇಹ ಏದೆಯೇ? ॥ ೩೯ ॥

ಸೂತ ಪುರಾಣಿಕರು ಹೇಳುತ್ತಾರೆ – ಶೌನಕಾದಿ ಋಷಿಗಳೇ! ಯದುವಂಶ ಶಿರೋಮಣಿಯಾದ ಶ್ರೀಕೃಷ್ಣನೇ ಪರೀಕ್ಷಿತ್ರಾಜನಿಗೆ ಜೀವನದಾನ ಮಾಡಿದ್ದನು. ಪರೀಕ್ಷಿತನು ತನ್ನ ರಕ್ಷಕನೂ, ಜೀವದಾತನೂ ಆದ ಶ್ರೀಕೃಷ್ಣನ ಮನೋಹರವಾದ ಲೀಲಾ ಪ್ರಸಂಗಗಳನ್ನು ಕೇಳಿದಾಗ ಅವನ ಚಿತ್ತವು ಆ ಅದ್ಭುತವಾದ ಲೀಲೆಗಳಿಂದ ಮುಗ್ಧವಾಗಿ ಹೋಗಿತ್ತು. ಇನ್ನೂ ಕೇಳಬೇಕೆಂದು ಅನಿಸಿತು. ಜಿತೇಂದ್ರಿಯನಾದ ಆ ಪರೀಕ್ಷಿತನು ಶ್ರೀಶುಕಮಹಾಮುನಿಗಳಲ್ಲಿ ಶ್ರೀಕೃಷ್ಣನ ಪವಿತ್ರ ಲೀಲೆಗಳ ಕುರಿತು ಪುನಃ ಪ್ರಶ್ನಿಸಿದನು. ॥ ೪೦ ॥

ಪರೀಕ್ಷಿದ್ರಾಜನು ಕೇಳಿದನು – ಪೂಜ್ಯ ಮಹರ್ಷಿಗಳೇ! ಭಗವಾನ್ ಶ್ರೀಕೃಷ್ಣನು ಐದನೆಯ ವರ್ಷದಲ್ಲಿ ನಡೆಸಿದ ಲೀಲೆಯನ್ನು ಅವನ ಆರನೆಯ ವರ್ಷದಲ್ಲಿ ಗೋಪಾಲಕರು ವ್ರಜದಲ್ಲಿ ಹೋಗಿ ಹೇಳಿದರೆಂದು ತಾವು ಅಪ್ಪಣೆ ಕೊಡಿಸಿದಿರಿ. ಗತಕಾಲದ ಲೀಲೆಯು ವರ್ತಮಾನದಲ್ಲಿ ನಡೆದಂತೆ ಹೇಳಲು ಹೇಗೆ ಸಾಧ್ಯವಾಯಿತು? ॥ ೪೧ ॥ ಮಹಾಯೋಗಿಗಳೇ! ಇದನ್ನು ಕೇಳಲು ನನಗೆ ಹೆಚ್ಚಿನ ಕುತೂಹಲವುಂಟಾಗಿದೆ. ದಯಮಾಡಿ ಹೇಳಿರಿ. ನಿಶ್ಚಯವಾಗಿಯೂ ಇದು ಹರಿಯ ಮಾಯೆಯೇ ಹೊರತು ಬೇರೆ ಯಾವ ರೀತಿಯಿಂದಲೂ ಹೀಗಾಗಲು ಸಾಧ್ಯವಿಲ್ಲ. ॥ ೪೨ ॥ ಗುರುಗಳೇ! ನಾವು ಕ್ಷತ್ರಬಂಧುಗಳಾಗಿದ್ದರೂ (ಕರ್ತವ್ಯವನ್ನು ಪಾಲಿಸದೆ ನಾಮಮಾತ್ರಕ್ಕೆ ಕ್ಷತ್ರಿಯರಾಗಿದ್ದರೂ) ಧನ್ಯತಮರಾಗಿ ಇದ್ದೇವೆ. ತಮ್ಮ ಮುಖಾರವಿಂದದಿಂದ ಪುಣ್ಯತಮವಾದ ಶ್ರೀಕೃಷ್ಣ ಕಥಾಮೃತವನ್ನು ಸತತವಾಗಿ ಪಾನಮಾಡುತ್ತಿದ್ದೇವಲ್ಲವೇ? ॥ ೪೩ ॥

* ಕೌಮಾರ – ಪೌಗಂಡ – **ಕೌಮಾರಂ ಪಂಚಮಾಬ್ದಾಂತಂ ಪೌಗಂಡಂ ದಶಮಾವಧಿ । ಕೈಶೋರಮಾಪಂಚದಶಾದ್ಯೌವನಂ ಚ ತತಃ ಪರಮ್ ॥**

ಸೂತ ಉವಾಚ

ಇತ್ಥಂ ಸ್ಮ ಪೃಷ್ಟಃ ಸ ತು ಬಾದರಾಯಣಿಃ
ತತ್ಸ್ಮಾರಿತಾನಂತಹೃತಾಖಿಲೇಂದ್ರಿಯಃ ।
ಕೃಚ್ಛ್ರಾತ್ಪುನರ್ಲಬ್ಧ ಬಹಿರ್ದೃಶಿಃ ಶನೈಃ
ಪ್ರತ್ಯಾಹ ತಂ ಭಾಗವತೋತ್ತಮೋತ್ತಮ ॥ ೪೪ ॥

ಸೂತ ಪುರಾಣಿಕರು ಹೇಳುತ್ತಾರೆ – ಪರಮಾತ್ಮನ ಪರಮ ಭಕ್ತರಲ್ಲಿ ಶ್ರೇಷ್ಠರಾದ ಶೌನಕಮುನಿವರ್ಯರೇ! ಪರೀಕ್ಷಿತನು ಹೀಗೆ ಪ್ರಶ್ನಿಸಿದಾಗ ಶ್ರೀ ಶುಕದೇವರಿಗೆ ಭಗವಂತನ ಲೀಲಾ ಪ್ರಸಂಗದ ಸ್ಮರಣೆಯುಂಟಾಗಿ ಇಂದ್ರಿಯಗಳೆಲ್ಲವೂ ಬಹಿರ್ವ್ಯಾಪಾರವನ್ನು ತೊರೆದು ಮನಸ್ಸಿನೊಡನೆ ಹೃತ್ಕಮಲದಲ್ಲಿ ಶ್ರೀಕೃಷ್ಣನ ಲೀಲಾ ಪ್ರಸಂಗದಲ್ಲಿ ಲೀನವಾಗಿಬಿಟ್ಟವು. ಹೀಗೆ ಆತ್ಮಾನಂದವನ್ನು ಅನುಭವಿಸುತ್ತಿದ್ದ ಶುಕಬ್ರಹ್ಮರು ಅತ್ಯಂತ ಕಠಿಣತೆಯಿಂದ ಬಹಿರ್ಮುಖರಾಗಿ ಪುನಃ ಭಗವಂತನ ದಿವ್ಯಲೀಲೆಗಳನ್ನು ವರ್ಣಿಸ ತೊಡಗಿದರು. ॥ ೪೪ ॥

ಹನ್ನೆರಡನೆಯ ಅಧ್ಯಾಯವು ಮುಗಿಯಿತು. ॥ ೧೨ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮಸ್ಕಂಧೇ ಪೂರ್ವಾರ್ಧೇ ದ್ವಾದಶೋಽಧ್ಯಾಯಃ ॥ ೧೨ ॥

ಹದಿಮೂರನೆಯ ಅಧ್ಯಾಯ

ಬ್ರಹ್ಮದೇವರ ಮೋಹ ಮತ್ತು ಅದರ ನಿರಸನ

ಶ್ರೀಶುಕ ಉವಾಚ

ಸಾಧು ಪೃಷ್ಟಂ ಮಹಾಭಾಗ ತ್ವಯಾ ಭಾಗವತೋತ್ತಮ ।
ಯನ್ನೂತನಯಸೀಶಸ್ಯ ಶೃಣ್ವನ್ನಪಿ ಕಥಾಂ ಮುಹುಃ ॥ ೧ ॥

ಸತಾಮಯಂ ಸಾರಭೃತಾಂ ನಿಸರ್ಗೋ
ಯದರ್ಥವಾಣೀಶ್ರುತಿಚೇತಸಾಮಪಿ ।
ಪ್ರತಿಕ್ಷಣಂ ನವ್ಯವದಚ್ಯುತಸ್ಯ ಯತ್
ಸ್ತ್ರಿಯಾ ವಿಟಾನಾಮಿವ ಸಾಧು ವಾರ್ತಾ ॥ ೨ ॥

ಶೃಣುಷ್ವಾವಹಿತೋ ರಾಜನ್ನಪಿ ಗುಹ್ಯಂ ವದಾಮಿ ತೇ ।
ಬ್ರೂಯುಃ ಸ್ನಿಗ್ಧಸ್ಯ ಶಿಷ್ಯಸ್ಯ ಗುರವೋ ಗುಹ್ಯಮಪ್ಯುತ ॥ ೩ ॥

ತಥಾಘವದನಾನ್ಮೃತ್ಯೋ ರಕ್ಷಿತ್ವಾ ವತ್ಸಪಾಲಕಾನ್ ।
ಸರಿತ್ಪುಲಿನಮಾನೀಯ ಭಗವಾನಿದಮಬ್ರವೀತ್ ॥ ೪ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ! ಮಹಾಭಾಗ್ಯಶಾಲಿಯೇ! ಭಗವದ್ಭಕ್ತರಲ್ಲಿ ಶ್ರೇಷ್ಠನಾದವನೇ! ನೀನು ಒಳ್ಳೆಯ ಪ್ರಶ್ನೆಯನ್ನೇ ಕೇಳಿರುವೆ. ಶ್ರೀಕೃಷ್ಣನ ಲೀಲಾಕಥೆಗಳನ್ನು ಬಾರಿ-ಬಾರಿಗೂ ಕೇಳುತ್ತಿದ್ದರೂ, ನೀನು ಕೇಳುತ್ತಿರುವ ಪ್ರಶ್ನೆಗಳ ಮೂಲಕ ಅವನ್ನು ಇನ್ನೂ ಸರಸವಾಗಿ-ನೂತನವಾಗಿ ಕೇಳಲು ಆಶಿಸುತ್ತಿರುವೆಯಲ್ಲ! ॥ ೧ ॥ ಕಾಮುಕರಾದ ವಿಟ ಪುರುಷರಿಗೆ ಸ್ತ್ರೀಯರ ವಿಷಯಕವಾದ ಚರ್ಚೆಯಲ್ಲಿ ಹೊಸ-ಹೊಸ ರಸವು ದೊರೆಯುವಂತೆ, ಸತ್ಪುರುಷರ ವಾಣಿ, ಕಿವಿ ಮತ್ತು ಹೃದಯಗಳು ಭಗವಂತನ ಲೀಲೆಗಳನ್ನೇ ಗಾನಮಾಡುವುದು, ಶ್ರವಣಿಸುವುದು ಚಿಂತಿಸುವುದರಲ್ಲೇ ತೊಡಗಿರುತ್ತವೆ. ಅವರು ಪ್ರತಿಕ್ಷಣವೂ ಭಗವಂತನ ಲೀಲೆಗಳನ್ನು ಅಪೂರ್ವ ರಸಮಯ ಹಾಗೂ ನಿತ್ಯನೂತನವಾಗಿ ಅನುಭವಿಸುತ್ತಿರುತ್ತಾರೆ. ಇದು ಅವರ ಸ್ವಭಾವವೇ ಆಗಿದೆ. ॥ ೨ ॥ ಪರೀಕ್ಷಿತನೇ! ನೀನು ಏಕಾಗ್ರಚಿತ್ತನಾಗಿ ಕೇಳು. ಭಗವಂತನ ಈ ಲೀಲೆಯು ಅತ್ಯಂತ ರಹಸ್ಯಮಯವಾಗಿದ್ದರೂ ಕೂಡ ನಾನು ನಿನಗೆ ಹೇಳುತ್ತೇನೆ. ದಯಾಳುಗಳಾದ ಆಚಾರ್ಯರು ತಮ್ಮ ಪ್ರಿಯ ಶಿಷ್ಯನಿಗೆ ರಹಸ್ಯವಿಷಯವನ್ನಾದರೂ ಹೇಳುವಂತೆಯೇ ನಾನು ಎಲ್ಲವನ್ನು ಹೇಳುವೆನು. ॥ ೩ ॥ ಭಗವಾನ್ ಶ್ರೀಕೃಷ್ಣನು ತನ್ನ ಸಂಗಡಿಗರಾದ ಗೋಪಬಾಲಕರನ್ನು ಮೃತ್ಯುರೂಪೀ ಅಘಾಸುರನ ಮುಖದಿಂದ ರಕ್ಷಿಸಿದನೆಂಬುದನ್ನು ನಿನಗೆ ಹೇಳಿದ್ದೆನಲ್ಲವೇ! ಅನಂತರ ಶ್ರೀಕೃಷ್ಣನು ಅವರನ್ನು ಯಮುನಾ ನದಿಯ ತೀರದ ಮರಳದಿಣ್ಣೆಗೆ ಕರೆದುಕೊಂಡು ಬಂದು ತನ್ನ ಮಿತ್ರರಿಗೆ ಹೇಳಿದನು. ॥ ೪ ॥

ಅಹೋಽತಿರಮ್ಯಂ ಪುಲಿನಂ ವಯಸ್ಯಾಃ
ಸ್ವಕೇಲಿಸಂಪನ್ಮೃದುಲಾಚ್ಛವಾಲುಕಮ್ ।
ಸ್ಫುಟತ್ಸರೋಗಂಧಹೃತಾಲಿಪತ್ರಿಕ-
ಧ್ವನಿಪ್ರತಿಧ್ವಾನಲಸದ್ದ್ರುಮಾಕುಲಮ್ ॥ ೫ ॥

ಅತ್ರ ಭೋಕ್ತವ್ಯಮಸ್ಮಾಭಿರ್ದಿವಾ ರೂಢಂ ಕ್ಷುಧಾರ್ದಿತಾಃ ।
ವತ್ಸಾಃ ಸಮೀಪೇಽಪಃ ಪೀತ್ವಾ ಚರಂತು ಶನಕೈಸ್ತೃಣಮ್ ॥ ೬ ॥

ತಥೇತಿ ಪಾಯಯಿತ್ವಾರ್ಭಾ ವತ್ಸಾನಾರುಧ್ಯ ಶಾದ್ವಲೇ ।
ಮುಕ್ತ್ವಾ ಶಿಕ್ಯಾನಿ ಬುಭುಜುಃ ಸಮಂ ಭಗವತಾ ಮುದಾ ॥ ೭ ॥

ಕೃಷ್ಣಸ್ಯ ವಿಷ್ವಕ್ಪುರುರಾಜಿಮಂಡಲೈ-
ರಭ್ಯಾನನಾಃ ಫುಲ್ಲದೃಶೋ ವ್ರಜಾರ್ಭಕಾಃ ।
ಸಹೋಪವಿಷ್ಟಾ ವಿಪಿನೇ ವಿರೇಜು-
ಶ್ಛದಾ ಯಥಾಂಭೋರುಹಕರ್ಣಿಕಾಯಾಃ ॥ ೮ ॥

ಕೇಚಿತ್ಪುಷ್ಪೈರ್ದಲೈಃ ಕೇಚಿತ್ಪಲ್ಲವೈರಂಕುರೈಃ ಫಲೈಃ ।
ಶಿಗ್ಭಿಸ್ತ್ವಗ್ಭಿರ್ದೃಷದ್ಭಿಶ್ಚ ಬುಭುಜುಃ ಕೃತಭಾಜನಾಃ ॥ ೯ ॥

ಸರ್ವೇ ಮಿಥೋ ದರ್ಶಯಂತಃ ಸ್ವಸ್ವಭೋಜ್ಯರುಚಿಂ ಪೃಥಕ್ ।
ಹಸಂತೋ ಹಾಸಯಂತಶ್ಚಾಭ್ಯವಜಹ್ರುಃ ಸಹೇಶ್ವರಾಃ ॥ ೧೦ ॥

ಪ್ರಿಯಮಿತ್ರರೇ! ಯಮುನೆಯ ಈ ಮರಳದಿಣ್ಣೆಯು ಅತ್ಯಂತ ರಮಣೀಯವಾಗಿದೆ. ನೋಡಿರಲ್ಲ! ಇಲ್ಲಿಯ ಮರಳು ಕೋಮಲವಾಗಿ, ಸ್ವಚ್ಛವಾಗಿದೆ. ನಮಗೆ ಆಟವಾಡಲು ಎಲ್ಲ ಆಟದ ಸಾಮಗ್ರಿಗಳು ಇಲ್ಲಿ ಸಿಗುತ್ತವೆ. ಅಲ್ಲಿ ನೋಡಿರಿ! ಒಂದು ಕಡೆ ಬಣ್ಣ-ಬಣ್ಣದ ಕಮಲಗಳು ಅರಳಿದ್ದು, ಅದರ ಸುಗಂಧಕ್ಕೆ ಆಕರ್ಷಿತವಾದ ದುಂಬಿಗಳು ಸುತ್ತಲೂ ಝೇಂಕರಿಸುತ್ತಿವೆ. ಇನ್ನೊಂದೆಡೆ ಸುಂದರವಾದ ಹಕ್ಕಿಗಳು ಮಧುರವಾಗಿ ಕಲ-ಕಲ ನಿನಾದ ಮಾಡುತ್ತಿವೆ. ಅವುಗಳ ಪ್ರತಿಧ್ವನಿಯಿಂದ ಸುಶೋಭಿತವಾದ ವೃಕ್ಷಗಳು ಈ ಸ್ಥಳದ ಶೋಭೆಯನ್ನು ಇನ್ನೂ ಹೆಚ್ಚಿಸಿವೆ. ॥ ೫ ॥ ರಮ್ಯವಾದ ಈ ಸ್ಥಳದಲ್ಲಿ ನಾವೆಲ್ಲರೂ ಊಟಮಾಡೋಣ. ಹೊತ್ತು ಮೀರಿದ್ದು ನಾವೆಲ್ಲರೂ ಬಹಳವಾಗಿ ಹಸಿದಿದ್ದೇವೆ. ಕರುಗಳು ನೀರು ಕುಡಿದು ಇಲ್ಲಿಯ ಸಮೀಪದಲ್ಲೇ ಗರಿಕೆ ಹುಲ್ಲನ್ನು ಸಾವಧಾನವಾಗಿ ಮೇಯುತ್ತಿರಲಿ. ॥ ೬ ॥

ಗೋಪಬಾಲಕರೆಲ್ಲರೂ 'ಹಾಗೆಯೇ ಆಗಲೀ' ಎಂದು ಏಕಕಂಠದಿಂದ ಹೇಳುತ್ತಾ, ಕರುಗಳಿಗೆ ನೀರು ಕುಡಿಸಿ ಹಚ್ಚ ಹಸಿರಾಗಿದ್ದ ಹುಲ್ಲಿರುವಲ್ಲಿ ಮೇಯಲು ಬಿಟ್ಟರು. ತಾವು ತಂದಿದ್ದ ಬುತ್ತಿಗಳೆಲ್ಲವನ್ನು ಬಿಚ್ಚಿ ಶ್ರೀಕೃಷ್ಣನೊಡನೆ ಪರಮಾನಂದದಿಂದ ಊಟಮಾಡಲು ಪ್ರಾರಂಭಿಸಿದರು. ॥ ೭ ॥ ಗೋಪಬಾಲಕರ ಮಧ್ಯದಲ್ಲಿ ಭಗವಾನ್ ಶ್ರೀಕೃಷ್ಣನು ಕುಳಿತಿದ್ದನು. ಗೋಪಬಾಲಕರು ಶ್ರೀಕೃಷ್ಣನ ಸುತ್ತಲೂ ಮಂಡಲಾಕಾರವಾಗಿ ಕುಳಿತಿದ್ದರು. ಎಲ್ಲರ ಮುಖಗಳೂ ಶ್ರೀಕೃಷ್ಣನ ಕಡೆಗೆ ಇದ್ದು, ಎಲ್ಲರ ಕಣ್ಣುಗಳು ಆನಂದದಿಂದ ವಿಕಸಿತವಾಗಿದ್ದವು. ವನ ಭೋಜನದ ಸಮಯ ಶ್ರೀಕೃಷ್ಣನೊಂದಿಗೆ ಕುಳಿತಿರುವ ಗೋಪಬಾಲಕರು ಕಮಲದ ಕರ್ಣಿಕೆಯ ಸುತ್ತಲು ಇರುವ ಎಸಳುಗಳಂತೆ ವಿರಾಜಿಸುತ್ತಿದ್ದರು. ॥ ೮ ॥ ಕೆಲವರು ಭೋಜನ ಮಾಡಲು ಅಗಲವಾದ ಹೂವುಗಳಿಂದಲೆ ತಟ್ಟೆಯನ್ನು ಮಾಡಿಕೊಂಡರೆ, ಕೆಲವರು ಎಸಳುಗಳಿಂದಲೂ, ಕೆಲವರು ಎಲೆಗಳಿಂದಲೂ, ಚಿಗುರುಗಳಿಂದಲೂ, ಹಣ್ಣುಗಳಿಂದಲೂ, ಬುತ್ತಿಯ ನೆಲವುಗಳಿಂದಲೂ, ಭೂರ್ಜಪತ್ರದಿಂದಲೂ, ಭೋಜನ ಪಾತ್ರೆಗಳನ್ನು ಮಾಡಿಕೊಂಡರು. ಕೆಲವರು ಅಗಲವಾದ ಕಲ್ಲನ್ನೇ ಭೋಜನ ಪಾತ್ರೆಯಾಗಿಸಿಕೊಂಡು ಭೋಜನ ಮಾಡ ತೊಡಗಿದರು. ॥ ೯ ॥ ಭಗವಾನ್ ಶ್ರೀಕೃಷ್ಣನು ಮತ್ತು ಗೋಪ ಬಾಲಕರೆಲ್ಲರೂ ಪರಸ್ಪರ ತಮ್ಮ ತಮ್ಮ ಬುತ್ತಿಯ ಬೇರೆ-ಬೇರೆ ರುಚಿಗಳನ್ನು ಪ್ರದರ್ಶಿಸುತ್ತಿದ್ದರು. ಒಬ್ಬರು ಇನ್ನೊಬ್ಬರನ್ನು ನಗಿಸಿದರೆ ಕೆಲವರು ಸ್ವತಃ ನಗುತ್ತಾ-ನಗುತ್ತಾ ಆನಂದತುಂದಿಲರಾಗಿ ಶ್ರೀಕೃಷ್ಣನೊಂದಿಗೆ ಭೋಜನ ಮಾಡುತ್ತಿದ್ದರು. ॥ ೧೦ ॥ ಆ ಸಮಯದಲ್ಲಿ ಶ್ರೀಕೃಷ್ಣನ ಸ್ವರೂಪವು ಮನೋಹರವಾಗಿತ್ತು. ಅವನು ಮುರಳಿಯನ್ನು ಸೊಂಟದಲ್ಲಿ ಪೀತಾಂಬರಕ್ಕೆ ಸಿಕ್ಕಿಸಿದ್ದನು. ಕೊಂಬು ಮತ್ತು ಬೆತ್ತವನ್ನು ಎಡದ ಬಗಲಲ್ಲಿ ಒತ್ತಿಹಿಡಿದಿದ್ದನು. ಕೈಯಲ್ಲಿ ಕೆನೆ ಮೊಸರಿನ ಅನ್ನವಿತ್ತು. ಬೆರಳುಗಳಲ್ಲಿ ನಿಂಬೆ ಹಣ್ಣು-ಮಾವು ಮುಂತಾದ ಹಣ್ಣುಗಳ ಉಪ್ಪಿನಕಾಯಿಗಳನ್ನು ಹಿಡಿದುಕೊಂಡಿದ್ದನು. ಅವನ ಸುತ್ತಲೂ ಗೋಪಬಾಲಕರಿದ್ದರು. ಅವರ ಮಧ್ಯದಲ್ಲಿ ಕುಳಿತ ಯಜ್ಞಭೋಕ್ತೃವಾದ ಶ್ರೀಕೃಷ್ಣನು

ಬಿಭ್ರದ್ವೇಣುಂ ಜಠರಪಟಯೋಃ ಶೃಂಗವೇತ್ರೇ ಚ ಕಕ್ಷೇ
ವಾಮೇ ಪಾಣೌ ಮಸೃಣಕವಲಂ ತತ್ಫಲಾನ್ಯಂಗುಲೀಷು ।
ತಿಷ್ಠನ್ಮಧ್ಯೇ ಸ್ವಪರಿಸುಹೃದೋ ಹಾಸಯನ್ನರ್ಮಭಿಃ ಸ್ವೈಃ
ಸ್ವರ್ಗೇ ಲೋಕೇ ಮಿಷತಿ ಬುಭುಜೇ ಯಜ್ಞಭುಗ್ಬಾಲಕೇಲಿಃ
॥ ೧೧ ॥

ಭಾರತೈವಂ ವತ್ಸಪೇಷು ಭುಂಜಾನೇಷ್ವಚ್ಯುತಾತ್ಮಸು ।
ವತ್ಸಾಸ್ತ್ವಂತರ್ವನೇ ದೂರಂ ವಿವಿಶುಸ್ತೃಣಲೋಭಿತಾಃ
॥ ೧೨ ॥

ತಾನ್‌ದೃಷ್ಟ್ವಾ ಭಯಸಂತ್ರಸ್ತಾನೂಚೇ ಕೃಷ್ಣೋಽಸ್ಯ ಭೀಭಯಮ್ ।
ಮಿತ್ರಾಣ್ಯಾಶಾನ್ಮಾ ವಿರಮತೇಹಾನೇಷ್ಯೇ ವತ್ಸಕಾನಹಮ್
॥ ೧೩ ॥

ಇತ್ಯುಕ್ತ್ವಾದ್ರಿದರೀಕುಂಜಗಹ್ವರೇಷ್ವಾತ್ಮವತ್ಸಕಾನ್ ।
ವಿಚಿನ್ವನ್ಭಗವಾನ್ಕೃಷ್ಣಃ ಸಪಾಣಿಕವಲೋ ಯಯೌ
॥ ೧೪ ॥

ಅಂಭೋಜನ್ಮಜನಿಸ್ತದಂತರಗತೋ ಮಾಯಾರ್ಭಕಸ್ಯೇಶಿತುಃ
ದ್ರಷ್ಟುಂ ಮಂಜು ಮಹಿತ್ವಮನ್ಯದಪಿ ತದ್ವತ್ಸಾನಿತೋ ವತ್ಸಪಾನ್ ।
ನೀತ್ವಾನ್ಯತ್ರ ಕುರೂದ್ವಹಾಂತರದಧಾತ್ಖೇಽವಸ್ಥಿತೋ ಯಃ ಪುರಾ
ದೃಷ್ಟ್ವಾಘಾಸುರಮೋಕ್ಷಣಂ ಪ್ರಭವತಃ ಪ್ರಾಪ್ತಃ ಪರಂ ವಿಸ್ಮಯಮ್
॥ ೧೫ ॥

ತತೋ ವತ್ಸಾನದೃಷ್ಟ್ವೇತ್ಯ ಪುಲಿನೇಽಪಿ ಚ ವತ್ಸಪಾನ್ ।
ಉಭಾವಪಿ ವನೇ ಕೃಷ್ಣೋ ವಿಚಿಕಾಯ ಸಮಂತತಃ
॥ ೧೬ ॥

ಕ್ವಾಪ್ಯದೃಷ್ಟ್ವಾಂತರ್ವಿಪಿನೇ ವತ್ಸಾನ್ಪಾಲಾಂಶ್ಚ ವಿಶ್ವವಿತ್ ।
ಸರ್ವಂ ವಿಧಿಕೃತಂ ಕೃಷ್ಣಃ ಸಹಸಾವಜಗಾಮ ಹ
॥ ೧೭ ॥

ವಿನೋದದ ಮಾತುಗಳನ್ನಾಡುತ್ತಾ ಅವರನ್ನು ನಗಿಸುತ್ತಾ, ತಾನೂ ನಗುತ್ತಾ ಅವರೊಡನೆ ಭೋಜನ ಮಾಡುತ್ತಿದ್ದನು. ಸ್ವರ್ಗಲೋಕದ ದೇವತೆಗಳು ಆಶ್ಚರ್ಯಚಕಿತರಾಗಿ ಭೋಜನದ ಲೀಲೆಯನ್ನು ವೀಕ್ಷಿಸುತ್ತಿದ್ದರು. ॥ ೧೧ ॥

ಭರತವಂಶ ಶಿರೋಮಣಿಯೇ! ಹೀಗೆ ಶ್ರೀಕೃಷ್ಣನ ಲೀಲೆಗಳನ್ನು ನೋಡುತ್ತಾ ಭೋಜನಮಾಡುತ್ತಿದ್ದಾಗ ಗೋಪಬಾಲಕರು ಅವನಲ್ಲಿಯೇ ತನ್ಮಯರಾಗಿಬಿಟ್ಟರು. ಆ ವೇಳೆಗೆ ಮೇಯಲು ಬಿಟ್ಟಿದ್ದ ಕರುಗಳೆಲ್ಲವೂ ಹೊಸ-ಹೊಸ ಹಸಿರು ಹುಲ್ಲಿನ ಆಕರ್ಷಣೆಯಿಂದ ಬಹಳ ದೂರಕ್ಕೆ ಹೋಗಿಬಿಟ್ಟವು. ॥ ೧೨ ॥ ಬಾಲಕರ ಗಮನ ಕರುಗಳ ಕಡೆಗೆ ಹೋದಾಗ ಅವುಗಳನ್ನು ಕಾಣದೆ ಭಯಭ್ರಾಂತರಾದರು. ಆಗ ತನ್ನ ಭಕ್ತರ ಭಯವನ್ನು ಹೊಡೆದಟ್ಟುವ ಭಗವಾನ್ ಶ್ರೀಕೃಷ್ಣನು ಹೇಳಿದನು - 'ನನ್ನ ಪ್ರಿಯ ಮಿತ್ರರೇ! ಹೆದರಬೇಡಿರಿ. ನೀವು ಭೋಜನ ಮಾಡುವುದನ್ನು ನಿಲ್ಲಿಸಬೇಡಿ. ನಾನು ಈಗಾಗಲೇ ಕರುಗಳನ್ನು ಹೊಡೆದುಕೊಂಡು ಬರುತ್ತೇನೆ'. ॥ ೧೩ ॥ ಗೊಲ್ಲಬಾಲಕರಲ್ಲಿ ಹೀಗೆ ಹೇಳಿ ಭಗವಾನ್ ಶ್ರೀಕೃಷ್ಣನು ಕೈಯಲ್ಲಿ ಮೊಸರನ್ನದ ತುತ್ತನ್ನು ಎತ್ತಿಕೊಂಡೇ ಬೆಟ್ಟ-ಗುಡ್ಡಗಳಲ್ಲಿಯೂ, ಗುಹೆಗಳಲ್ಲಿಯೂ, ಪೊದರುಗಳಲ್ಲಿಯೂ ತನ್ನ ಮತ್ತು ಸಂಗಡಿಗರ ಕರುಗಳನ್ನು ಹುಡುಕ ತೊಡಗಿದನು. ॥ ೧೪ ॥ ಪರೀಕ್ಷಿತನೇ! ಬ್ರಹ್ಮದೇವರು ಮೊದಲಿನಿಂದಲೇ ಆಕಾಶದಲ್ಲಿ ಉಪಸ್ಥಿತರಾಗಿದ್ದು, ಪ್ರಭುವಿನ ಪ್ರಭಾವದಿಂದ ಅಘಾಸುರನ ಮೋಕ್ಷವನ್ನು ನೋಡಿ ಅವರಿಗೆ ಬಹಳ ಆಶ್ಚರ್ಯವಾಗಿತ್ತು. ಲೀಲಾಮಾನುಷ ಬಾಲಕನಾದ ಭಗವಾನ್ ಶ್ರೀಕೃಷ್ಣನ ಇತರ ಮನೋಹರವಾದ ಮಹಿಮಾಯುಕ್ತ ಲೀಲೆಯನ್ನು ನೋಡಬೇಕೆಂದು ಅವರು ಯೋಚಿಸಿದರು, ಹೀಗೆ ಆಲೋಚಿಸಿ ಮೊದಲಿಗೆ ಕರುಗಳನ್ನೂ ಹಾಗೂ ಶ್ರೀಕೃಷ್ಣನು ಹೊರಟುಹೋದ ಬಳಿಕ ಗೊಲ್ಲಬಾಲಕರನ್ನು ಬೇರೆ ಕಡೆಗೆಕೊಂಡುಹೋಗಿ ಅಡಗಿಸಿಟ್ಟು, ಸ್ವಯಂ ಅಂತರ್ಧಾನರಾದರು. ಎಷ್ಟಾದರೂ ಜಡವಾದ ಕಮಲಸಂಭವರಲ್ಲವೆ? ॥ ೧೫ ॥

ಭಗವಾನ್ ಶ್ರೀಕೃಷ್ಣನು ಕಾಡು-ಮೇಡುಗಳಲ್ಲಿ, ಗುಹೆ-ಕಂದರಗಳಲ್ಲಿ ಹುಡುಕಿದರೂ ಕರುಗಳು ಸಿಗದಿರುವಾಗ, ಯಮುನಾ ತೀರದಲ್ಲಿದ್ದ ಗೋಪಬಾಲಕರ ಬಳಿಗೆ ಹಿಂದಿರುಗಿದನು. ಆದರೆ ಅಲ್ಲಿ ಗೋಪಬಾಲಕರೂ ಇರಲಿಲ್ಲ. ವಿಸ್ಮಿತನಾದ ಶ್ರೀಕೃಷ್ಣನು ಗೋಪಬಾಲಕರನ್ನೂ ಕರುಗಳನ್ನೂ ಹುಡುಕಲು ಹೊರಟನು. ॥ ೧೬ ॥ ಆದರೆ ಗೊಲ್ಲಬಾಲಕರೂ, ಕರುಗಳೂ ಅವನಿಗೆ ಸಿಗದಿರುವಾಗ, ಅವನು ಇದೆಲ್ಲವೂ ಬ್ರಹ್ಮನದೇ ಕೆಲಸ. ಅವನೇ ಇವರನ್ನು ಬಚ್ಚಿಟ್ಟಿರುವನೆಂದು ಕೂಡಲೇ ತಿಳಿದುಕೊಂಡನು. ಅವನಾದರೋ ವಿಶ್ವದ ಏಕಮಾತ್ರ ಜ್ಞಾತೃವಾಗಿದ್ದನು, ವಿಶ್ವವಿದನಾಗಿದ್ದನು. ॥ ೧೭ ॥ ವಿಶ್ವವನ್ನೇ ಸೃಷ್ಟಿಸುವ ಸಾಮರ್ಥ್ಯವನ್ನು ಹೊಂದಿದ್ದ ವಿಶ್ವಕರ್ತೃವಾದ ಶ್ರೀಕೃಷ್ಣನು ಗೋಪಬಾಲಕರ ತಾಯಂದಿರಿಗೂ, ಗೋವುಗಳಿಗೂ, ಬ್ರಹ್ಮನಿಗೂ ತನ್ನ ಲೀಲೆಯನ್ನು ತೋರಿಸಿ ಆನಂದಗೊಳಿಸಬೇಕೆಂಬ

ತತಃ ಕೃಷ್ಣೋ ಮುದಂ ಕರ್ತುಂ ತನ್ಮಾತೄಣಾಂ ಚ ಕಸ್ಯ ಚ ।
ಉಭಯಾಯಿತಮಾತ್ಮಾನಂ ಚಕ್ರೇ ವಿಶ್ವಕೃದೀಶ್ವರಃ ॥ ೧೮ ॥

ಯಾವದ್ವತ್ಸಪವತ್ಸಕಾಲ್ಪಕವಪುರ್ಯಾವತ್ಕರಾಂಘ್ರ್ಯಾದಿಕಂ
ಯಾವದ್ಯಷ್ಟಿವಿಷಾಣವೇಣುದಲಶಿಗ್ಯಾವದ್ವಿಭೂಷಾಂಬರಮ್ ।
ಯಾವಚ್ಛೀಲಗುಣಾಭಿಧಾಕೃತಿವಯೋ ಯಾವದ್ವಿಹಾರಾದಿಕಂ
ಸರ್ವಂ ವಿಷ್ಣುಮಯಂ ಗಿರೋಽಂಗವದಜಃ ಸರ್ವಸ್ವರೂಪೋ ಬಭೌ ॥ ೧೯ ॥

ಸ್ವಯಮಾತ್ಮಾಽಽತ್ಮಗೋವತ್ಸಾನ್ಪ್ರತಿವಾರ್ಯಾತ್ಮವತ್ಸಪೈಃ ।
ಕ್ರೀಡನ್ನಾತ್ಮವಿಹಾರೈಶ್ಚ ಸರ್ವಾತ್ಮಾ ಪ್ರಾವಿಶದ್ವ್ರಜಮ್ ॥ ೨೦ ॥

ತತ್ತದ್ವತ್ಸಾನ್ಪೃಥಙ್ನೀತ್ವಾ ತತ್ತದ್ಗೋಷ್ಠೇ ನಿವೇಶ್ಯ ಸಃ ।
ತತ್ತದಾತ್ಮಾಭವದ್ರಾಜನ್ಸ್ತತ್ತತ್ಸದ್ಮ ಪ್ರವಿಷ್ಟವಾನ್ ॥ ೨೧ ॥

ತನ್ಮಾತರೋ ವೇಣುರವತ್ವರೋತ್ಥಿತಾ
ಉತ್ಥಾಪ್ಯ ದೋರ್ಭಿಃ ಪರಿರಭ್ಯ ನಿರ್ಭರಮ್ ।
ಸ್ನೇಹಸ್ನುತಸ್ತನ್ಯಪಯಃಸುಧಾಸವಂ
ಮತ್ವಾ ಪರಂ ಬ್ರಹ್ಮ ಸುತಾನಪಾಯಯನ್ ॥ ೨೨ ॥

ತತೋ ನೃಪೋನ್ಮರ್ದನಮಜ್ಜಲೇಪನಾ-
ಲಂಕಾರರಕ್ಷಾತಿಲಕಾಶನಾದಿಭಿಃ ।
ಸಂಲಾಲಿತಃ ಸ್ವಾಚರಿತೈಃ ಪ್ರಹರ್ಷಯನ್
ಸಾಯಂ ಗತೋ ಯಾಮಯಮೇನ ಮಾಧವಃ ॥ ೨೩ ॥

ಆಶಯದಿಂದ, ಕ್ಷಣಮಾತ್ರದಲ್ಲಿ ಗೋಪಬಾಲಕರಾಗಿ, ಕರುಗಳಾಗಿ ತಾನೇ ಆಗಿಬಿಟ್ಟನು.* ॥ ೧೮ ॥ ಪರೀಕ್ಷಿತನೇ! ಆ ಬಾಲಕರು ಮತ್ತು ಕರುಗಳು ಮೊದಲು ಎಷ್ಟು ಸಂಖ್ಯೆಯಲ್ಲಿದ್ದರೋ ಈಗಲೂ ಅಷ್ಟೇ ಸಂಖ್ಯೆಯಲ್ಲಿದ್ದರು. ಗೋಪಬಾಲಕರ ಮತ್ತು ಕರುಗಳ ಶರೀರಗಳು ಎಷ್ಟು ಗಾತ್ರದಲ್ಲಿದ್ದವೋ, ಯಾವ ಬಣ್ಣದಲ್ಲಿದ್ದವೋ ಈಗಲೂ ಅದೇ ಬಣ್ಣ, ಗಾತ್ರದಿಂದ ಕಂಗೊಳಿಸುತ್ತಿದ್ದವು. ಕೋಲು, ಕೊಂಬು, ಕೊಳಲು, ತಲೆಯಲ್ಲಿ ಸಿಂಗರಿಸಿಕೊಂಡಿದ್ದ ಚಿಗುರುಗಳು, ನವಿಲುಗರಿಗಳು, ಬುತ್ತಿ, ಉಡಿಗೆ-ತೊಡಿಗೆಗಳು, ನಡೆ-ನುಡಿಗಳು, ಗುಣಗಳು, ಹೆಸರುಗಳು, ಆಕಾರಗಳು, ವಯಸ್ಸು ಎಲ್ಲವೂ ಯಥಾವತ್ತಾಗಿಯೇ ಇದ್ದವು. ಹಿಂದೆ ಆಡುತ್ತಿದ್ದ ಆಟಗಳನ್ನೇ ಆಡುತ್ತಿದ್ದ. ಅಷ್ಟೇ ರೂಪಗಳಲ್ಲಿ ಸರ್ವಸ್ವರೂಪನಾದ ಭಗವಾನ್ ಶ್ರೀಕೃಷ್ಣನು ಪ್ರಕಟನಾದನು. **'ಸರ್ವಂ ವಿಷ್ಣುಮಯಂ ಜಗತ್'** ಎಂಬ ವೇದವಾಣಿಯು ಮೂರ್ತಿಭವಿಸಿತೋ ಎಂಬಂತೆ ಪ್ರಕಟವಾಗಿತ್ತು. ॥ ೧೯ ॥ ಸರ್ವಾತ್ಮನಾದ ಭಗವಂತನೇ ಸ್ವತಃ ಕರುಗಳಾದನು, ಸ್ವತಃ ಗೋಪಬಾಲಕರಾದನು. ತನ್ನ ಆತ್ಮಸ್ವರೂಪವಾದ ಕರುಗಳನ್ನು, ಆತ್ಮಸ್ವರೂಪರಾದ ಗೊಲ್ಲಬಾಲಕರನ್ನು ಸುತ್ತುವರೆದು ತನ್ನೊಡನೆ ಅನೇಕ ರೀತಿಯ ಆಟಗಳನ್ನಾಡುತ್ತಾ ಶ್ರೀಕೃಷ್ಣನು ಗೊಲ್ಲರಹಟ್ಟಿಯನ್ನು ಪ್ರವೇಶಿಸಿದನು. ॥ ೨೦ ॥ ಪರೀಕ್ಷಿತನೇ! ಒಂದೊಂದು ಕರುವನ್ನು ಪ್ರತ್ಯೇಕ-ಪ್ರತ್ಯೇಕವಾಗಿ ಆಯಾ ಮನೆಗಳಿಗೆ ಸೇರಿಸಿದನು. ಅಂತೆಯೇ ಆತ್ಮಸ್ವರೂಪರಾದ ಗೋಪಬಾಲಕರನ್ನು ಅವರವರ ಮನೆಗೆ ಸೇರುವಂತೆ ಮಾಡಿದನು. ಎಂದಿನಂತೆ ಕೃಷ್ಣಭೂಷರಾದ ಗೋಪಬಾಲಕರು ಕೊಳಲನ್ನು ಊದಿಕೊಂಡೇ ಮನೆಗೆ ಬಂದರು. ॥ ೨೧ ॥

ಕೊಳಲಿನ ಧ್ವನಿಯನ್ನು ಕೇಳುತ್ತಲೇ ಗೋಪಿಯರು ತಟ್ಟನೆ ಮೇಲೆದ್ದು ಪರಬ್ರಹ್ಮನಾದ ಶ್ರೀಕೃಷ್ಣನ ಸ್ವರೂಪಗಳಾಗಿದ್ದ ಗೋಪಬಾಲಕರನ್ನು ತಮ್ಮ ಮಕ್ಕಳೆಂದೇ ಭಾವಿಸಿ, ತೋಳುಗಳಿಂದ ಬಾಚಿತಬ್ಬಿಕೊಂಡು ಅಮೃತಕ್ಕಿಂತಲೂ ಮಧುರವಾಗಿದ್ದ, ಆಸವಕ್ಕಿಂತಲೂ ಹೆಚ್ಚು ಮದವನ್ನುಂಟುಮಾಡುವಂತಹ, ವಾತ್ಸಲ್ಯಪೂರ್ಣವಾದ ಸ್ತನ್ಯವನ್ನು ಅವರಿಗೆ ಉಣಿಸಿದರು. ॥ ೨೨ ॥ ಪರೀಕ್ಷಿತನೇ! ಈ ಪ್ರಕಾರವಾಗಿ ಪ್ರತಿದಿನವೂ ಸಾಯಂಕಾಲ ಭಗವಾನ್ ಶ್ರೀಕೃಷ್ಣನು ಆ ಗೊಲ್ಲಬಾಲಕರ ರೂಪದಲ್ಲಿ ಕಾಡಿನಿಂದ ಮರಳಿ ಬಂದು ತನ್ನ ಬಾಲಸುಲಭವಾದ ಲೀಲೆಗಳಿಂದ ತಾಯಂದಿರನ್ನು ಆನಂದಗೊಳಿಸುತ್ತಿದ್ದನು. ಆ ತಾಯಂದಿರೂ ಕೂಡ ತಮ್ಮ ಆ ಮುದ್ದುಕಂದಮ್ಮರಿಗೆ ಸ್ನಾನಮಾಡಿಸುತ್ತಿದ್ದರು. ಅವರ ಕೈಕಾಲುಗಳನ್ನು ಒತ್ತುತ್ತಿದ್ದರು. ಅವರಿಗೆ ಗಂಧವನ್ನು ಪೂಸಿ, ಅಲಂಕರಿಸುತ್ತಿದ್ದರು. ತಿಲಕವಿಟ್ಟು ರಕ್ಷೆಯನ್ನಿಡುತ್ತಿದ್ದರು. ಭೋಜನ ಮಾಡಿಸುತ್ತಿದ್ದರು. ಇವೇ ಮುಂತಾದ ಉಪಚಾರಗಳಿಂದ ಸಾಕ್ಷಾತ್ ಶ್ರೀಕೃಷ್ಣನನ್ನೇ ಲಾಲಿಸುತ್ತಿದ್ದರು. ॥ ೨೩ ॥

* [illegible]

ಗಾವಸ್ತತೋ ಗೋಷ್ಠಮುಪೇತ್ಯ ಸತ್ವರಂ
ಹುಂಕಾರಘೋಷೈಃ ಪರಿಹೂತಸಂಗತಾನ್ ।
ಸ್ವಕಾನ್ಸ್ವಕಾನ್ವತ್ಸತರಾನಪಾಯಯನ್
ಮುಹುರ್ಲಿಹಂತ್ಯಃ ಸ್ರವದೌಧಸಂ ಪಯಃ ॥ ೨೪ ॥

ಗೋಗೋಪೀನಾಂ ಮಾತೃತಾಸ್ಮಿನ್ನಾಸೀತ್ಸ್ನೇಹರ್ಧಿಕಾಂ ವಿನಾ ।
ಪುರೋವದಾಸ್ವಪಿ ಹರೇಸ್ತೋಕತಾ ಮಾಯಯಾ ವಿನಾ ॥ ೨೫ ॥

ವ್ರಜೌಕಸಾಂ ಸ್ವತೋಕೇಷು ಸ್ನೇಹವಲ್ಲ್ಯಾಬ್ದಮನ್ವಹಮ್ ।
ಶನೈರ್ನಿಃಸೀಮ ವವೃಧೇ ಯಥಾ ಕೃಷ್ಣೇ ತ್ವಪೂರ್ವವತ್ ॥ ೨೬ ॥

ಇತ್ಥಮಾತ್ಮಾಽಽತ್ಮನಾಽಽತ್ಮಾನಂ ವತ್ಸಪಾಲಮಿಷೇಣ ಸಃ ।
ಪಾಲಯನ್ವತ್ಸಪೋ ವರ್ಷಂ ಚಿಕ್ರೀಡೇ ವನಗೋಷ್ಠಯೋಃ ॥ ೨೭ ॥

ಏಕದಾ ಚಾರಯನ್ವತ್ಸಾನ್ಸರಾಮೋ ವನಮಾವಿಶತ್ ।
ಪಂಚಷಾಸು ತ್ರಿಯಾಮಾಸು ಹಾಯನಾಪೂರಣೀಷ್ವಜಃ ॥ ೨೮ ॥

ತತೋ ವಿದೂರಾಚ್ಚರತೋ ಗಾವೋ ವತ್ಸಾನುಪವ್ರಜಮ್ ।
ಗೋವರ್ಧನಾದ್ರಿಶಿರಸಿ ಚರಂತ್ಯೋ ದದೃಶುಸ್ತೃಣಮ್ ॥ ೨೯ ॥

ದೃಷ್ಟ್ವಾಥ ತತ್ಸ್ನೇಹವಶೋಽಸ್ಮೃತಾತ್ಮಾ
ಸ ಗೋವ್ರಜೋಽತ್ಯಾತ್ಮಪದುರ್ಗಮಾರ್ಗಃ ।
ದ್ವಿಪಾತ್ಕಕುದ್ಗ್ರೀವ ಉದಾಸ್ಯಪುಚ್ಛೋಽ-
ಗಾದ್ಧುಂಕೃತೈರಾಸ್ರುಪಯಾ ಜವೇನ ॥ ೩೦ ॥

ಸಮೇತ್ಯ ಗಾವೋಽಧೋ ವತ್ಸಾನ್ವತ್ಸವತ್ಯೋಽಪ್ಯಪಾಯಯನ್ ।
ಗಿಲಂತ್ಯ ಇವ ಚಾಂಗಾನಿ ಲಿಹಂತ್ಯಃ ಸ್ವೌಧಸಂ ಪಯಃ ॥ ೩೧ ॥

ಗೋಪಿಯರಿಗೆ ತಾವು ಗೋಪಬಾಲಕನ ರೂಪದಲ್ಲಿರುವ ಶ್ರೀಕೃಷ್ಣನಿಗೆ ಮೊಲೆಯೂಡಿಸುತ್ತಿದ್ದೇವೆಂಬುದು ತಿಳಿಯದಿದ್ದ ಮೇಲೆ ಹಸುಗಳಾದರೂ ಹೇಗೆ ತಿಳಿಯಬಲ್ಲವು? ಶ್ರೀಕೃಷ್ಣನೇ ಕರುಗಳಾಗಿ ಕೊಟ್ಟಿಗೆಗೆ ಬಂದಾಕ್ಷಣ ಆ ಹಸುಗಳು ವಾತ್ಸಲ್ಯದಿಂದ 'ಹಂಬಾ' ಎಂದು ಕೂಗುವುವು. ಕರುಗಳು ತಾಯಂದಿರ ಬಳಿಗೆ ನಾಗಾಲೋಟದಿಂದ ಓಡಿಹೋಗುವುವು. ಹಾಗೇ ತಮ್ಮ ಬಳಿಗೆ ಓಡಿಬಂದಿರುವ ಕರುಗಳನ್ನು ಅಕ್ಕರೆಯಿಂದ ನೆಕ್ಕುತ್ತಾ, ಕೆಚ್ಚಲಿನಿಂದ ಒಸರುತ್ತಿರುವ ಅಮೃತೋಪಮವಾದ ಹಾಲನ್ನು ಅವುಗಳಿಗೆ ಉಣಿಸುತ್ತಿದ್ದವು. ॥ ೨೪ ॥ ಈ ಹಸುಗಳಲ್ಲಿ ಮತ್ತು ಗೋಪಿಯರಲ್ಲಿ ಮಾತೃಭಾವವೂ ಮೊದಲಿನಿಂದಲೇ ವಿಶುದ್ಧವಾಗಿತ್ತು, ಆದರೂ ಈಗ ತಮ್ಮ ಮಕ್ಕಳ, ಕರುಗಳ ಕುರಿತು ಅವರ ಸ್ನೇಹ ಖಂಡಿತವಾಗಿ ಹೆಚ್ಚಾಗಿತ್ತು. ಹೀಗೆಯೇ ಭಗವಂತನೂ ಮೊದಲಿನ ಮಕ್ಕಳಂತೆ ಪುತ್ರಭಾವವನ್ನು ತೋರುತ್ತಿದ್ದನು. ಆದರೆ ಭಗವಂತನಲ್ಲಿ ಆ ಬಾಲಕರಂತೆ 'ನಾನು ಇವರ ಮಗನಾಗಿದ್ದೇನೆ' ಎಂಬ ಮೋಹಭಾವವಿರಲಿಲ್ಲ. ॥ ೨೫ ॥ ತಮ್ಮ-ತಮ್ಮ ಬಾಲಕರ ಕುರಿತು ವ್ರಜವಾಸಿಗಳ ಸ್ನೇಹಲತೆಯು ಪ್ರತಿದಿನವೂ ಒಂದು ವರ್ಷದವರೆಗೆ ಬೆಳೆಯುತ್ತಲೇ ಇತ್ತು. ಮೊದಲಿಗೆ ಶ್ರೀಕೃಷ್ಣನಲ್ಲಿ ಅವರಿಗಿದ್ದ ಅಸೀಮ ಹಾಗೂ ಅಪೂರ್ವ ಪ್ರೇಮದಂತೆ ತಮ್ಮ ಈ ಬಾಲಕರ ವಿಷಯದಲ್ಲಿಯೂ ಉಂಟಾಯಿತು. ॥ ೨೬ ॥ ಹೀಗೆ ಸರ್ವಾತ್ಮನಾದ ಶ್ರೀಕೃಷ್ಣನು ಕರುಗಳು ಮತ್ತು ಗೋಪಬಾಲಕರ ನೆಪದಿಂದ ಗೋಪಾಲನಾಗಿ ತನ್ನ ಬಾಲಕರೂಪದಿಂದ ಕರುಗಳನ್ನು ಪಾಲಿಸುತ್ತಾ ಒಂದು ವರ್ಷದವರೆಗೆ ವೃಂದಾವನದಲ್ಲಿ, ಹಟ್ಟಿಗಳಲ್ಲಿ ಕ್ರೀಡಿಸುತ್ತಿದ್ದನು. ॥ ೨೭ ॥

ಒಂದು ವರ್ಷ ತುಂಬಲು ಇನ್ನೂ ಐದಾರು ದಿನಗಳಿರುವಾಗ ಒಂದು ದಿನ ಭಗವಾನ್ ಶ್ರೀಕೃಷ್ಣನು ಬಲರಾಮನೊಂದಿಗೆ ಕರುಗಳನ್ನು ಮೇಯಿಸುತ್ತಾ ಕಾಡಿಗೆ ಹೋದನು. ॥ ೨೮ ॥ ಆ ಸಮಯದಲ್ಲಿ ಹಸುಗಳು ಗೋವರ್ಧನದ ತಪ್ಪಲಿನಲ್ಲಿ ಹುಲ್ಲು ಮೇಯುತ್ತಿದ್ದವು. ಅವು ಅಲ್ಲಿಂದಲೇ ಬಹುದೂರದಲ್ಲಿ ಹಳ್ಳಿಯ ಸಮೀಪದಲ್ಲಿ ಕರುಗಳು ಹುಲ್ಲು ಮೇಯುತ್ತಿರುವುದನ್ನು ನೋಡಿದವು. ॥ ೨೯ ॥ ಕರುಗಳನ್ನು ನೋಡುತ್ತಲೇ ಹಸುಗಳಿಗೆ ತಮ್ಮ ಕರುಗಳಲ್ಲಿದ್ದ ವಾತ್ಸಲ್ಯ-ಸ್ನೇಹವು ಉಕ್ಕಿ ಹರಿಯಿತು. ಅವುಗಳಿಗೆ ಮೈಮೇಲೆ ಪ್ರಜ್ಞೆಯೇ ಉಳಿಯಲಿಲ್ಲ. ಮೇಯುವುದನ್ನು ನಿಲ್ಲಿಸಿ ಗೋಪಾಲಕರು ತಡೆಯುತ್ತಿರುವುದನ್ನು ಲೆಕ್ಕಿಸದೆ, ಹಳ್ಳ-ಕೊಳ್ಳಗಳನ್ನು ಪರಿಗಣಿಸದೆ, ಗೋಪಾಲಕರೂ ಹೋಗಲಾಗದ ಮಾರ್ಗದಿಂದ, ಕೊರಳನ್ನೂ, ಮುಖ-ಬಾಲಗಳನ್ನು ಎತ್ತಿಕೊಂಡು ಎರಡು ಕಾಲಿನ ಪ್ರಾಣಿಗಳಂತೆ ಅತ್ಯಂತ ವೇಗವಾಗಿ ಹಾಲನ್ನು ಸುರಿಸುತ್ತಾ 'ಹಂಬಾ' ಎಂದು ಕೂಗಿಕೊಳ್ಳುತ್ತಾ ಕರುಗಳೆಡೆಗೆ ಬಂದು ಸೇರಿದವು. ॥ ೩೦ ॥ ಆ ಹಸುಗಳಿಗೆ ಕೆಲವು ದಿನಗಳ ಹಿಂದೆ ಹುಟ್ಟಿದ್ದ ಚಿಕ್ಕ ಕರುಗಳಿದ್ದರೂ, ಹಳ್ಳಿಯ ಸಮೀಪದಲ್ಲಿದ್ದ ದೊಡ್ಡ ಕರುಗಳನ್ನು ಅತ್ಯಂತ ವಾತ್ಸಲ್ಯದಿಂದ ನೆಕ್ಕುತ್ತಾ ಅವುಗಳಿಗೆ ಹಾಲುಣಿಸತೊಡಗಿದವು. ಅವುಗಳನ್ನು ನೆಕ್ಕುತ್ತಿರುವುದನ್ನು ನೋಡಿದರೆ ಪ್ರೀತಿಯಿಂದ ಅವನ್ನು ನುಂಗಿಬಿಡುತ್ತವೆಯೋ ಎಂಬಂತೆ ಕಾಣುತ್ತಿದ್ದುವು. ॥ ೩೧ ॥

ಗೋಪಾಸ್ತದ್ರೋಧನಾಯಾಸಮೌಘ್ಯಲಜ್ಜೋರುಮನ್ಯುನಾ ।
ದುರ್ಗಾಧ್ವಕೃಚ್ಛ್ರತೋಽಭ್ಯೇತ್ಯ ಗೋವತ್ಸೈರ್ದದೃಶುಃ ಸುತಾನ್ ॥ ೩೨ ॥

ತದೀಕ್ಷಣೋತ್ಪ್ರೇಮರಸಾಪ್ಲುತಾಶಯಾ
ಜಾತಾನುರಾಗಾ ಗತಮನ್ಯವೋಽರ್ಭಕಾನ್ ।
ಉದುಹ್ಯ ದೋರ್ಭಿಃ ಪರಿರಭ್ಯ ಮೂರ್ಧನಿ
ಘ್ರಾಣೈರವಾಪುಃ ಪರಮಾಂ ಮುದಂ ತೇ ॥ ೩೩ ॥

ತತಃ ಪ್ರವಯಸೋ ಗೋಪಾಸ್ತೋಕಾಶ್ಲೇಷಸುನಿರ್ವೃತಾಃ ।
ಕೃಚ್ಛ್ರಾಚ್ಛನೈರಪಗತಾಸ್ತದನುಸ್ಮೃತ್ಯುದಶ್ರವಃ ॥ ೩೪ ॥

ವ್ರಜಸ್ಯ ರಾಮಃ ಪ್ರೇಮರ್ಧೇರ್ವೀಕ್ಷ್ಯೌತ್ಕಂಠ್ಯಮನುಕ್ಷಣಮ್ ।
ಮುಕ್ತಸ್ತನೇಷ್ವಪತ್ಯೇಷ್ವಪ್ಯಹೇತುವಿದಚಿಂತಯತ್ ॥ ೩೫ ॥

ಕಿಮೇತದದ್ಭುತಮಿವ ವಾಸುದೇವೇಽಖಿಲಾತ್ಮನಿ ।
ವ್ರಜಸ್ಯ ಸಾತ್ಮನಸ್ತೋಕೇಷ್ವಪೂರ್ವಂ ಪ್ರೇಮವರ್ಧತೇ ॥ ೩೬ ॥

ಕೇಯಂ ವಾ ಕುತ ಆಯಾತಾ
ದೈವೀ ವಾ ನಾರ್ಯುತಾಸುರೀ ।
ಪ್ರಾಯೋ ಮಾಯಾಸ್ತು ಮೇ ಭರ್ತುರ್
ನಾನ್ಯಾ ಮೇಽಪಿ ವಿಮೋಹಿನೀ ॥ ೩೭ ॥

ಇತಿ ಸಂಚಿಂತ್ಯ ದಾಶಾರ್ಹೋ ವತ್ಸಾನ್ಸವಯಸಾನಪಿ ।
ಸರ್ವಾನಾಚಷ್ಟ ವೈಕುಂಠಂ ಚಕ್ಷುಷಾ ವಯುನೇನ ಸಃ ॥ ೩೮ ॥

ಗೋಪಾಲಕರು ಅವನ್ನು ತಡೆಯಲು ಬಹಳ ಪ್ರಯತ್ನ ಮಾಡಿದರೂ, ಅವರ ಪ್ರಯತ್ನ ವ್ಯರ್ಥವೇ ಆಯಿತು. ಇದರಿಂದ ತಮ್ಮ ವಿಫಲತೆಯ ಕುರಿತು ಅವರಿಗೆ ನಾಚಿಕೆ ಉಂಟಾಗಿ, ಹಸುಗಳ ಮೇಲೆ ಸ್ವಲ್ಪ ಸಿಟ್ಟೂ ಬಂದಿತ್ತು. ಅವರೆಲ್ಲರೂ ಅತ್ಯಂತ ಕಷ್ಟಪಟ್ಟು ದುರ್ಗಮವಾದ ಮಾರ್ಗದಿಂದ ಹಸುಗಳಿದ್ದಲ್ಲಿಗೆ ಬಂದಾಗ ಅವರು ಕರುಗಳೊಂದಿಗೆ ತಮ್ಮ ಬಾಲಕರನ್ನು ಅಲ್ಲಿ ನೋಡಿದರು. ॥ ೩೨ ॥ ತಮ್ಮ ಮಕ್ಕಳನ್ನು ನೋಡುತ್ತಲೇ ಅವರ ಹೃದಯ ಪ್ರೇಮರಸದಿಂದ ತುಂಬಿ ಹೋಯಿತು. ಬಾಲಕರ ಕುರಿತು ಅನುರಾಗದ ನೆರೆಯೇ ಉಕ್ಕಿಬಂತು. ಅವರಲ್ಲಿದ್ದ ಸಿಟ್ಟು ಎಲ್ಲಿಗೆ ಹೋಯಿತೋ ತಿಳಿಯದು. ಅವರೆಲ್ಲರೂ ತಮ್ಮ ತಮ್ಮ ಮಕ್ಕಳನ್ನು ತೊಡೆಯಲ್ಲೆತ್ತಿಕೊಂಡು, ಎದೆಗೆ ಅಪ್ಪಿಕೊಂಡು, ಅವರ ನೆತ್ತಿಯನ್ನು ಮೂಸುತ್ತಾ ಅತ್ಯಂತ ಆನಂದಿತರಾದರು. ॥ ೩೩ ॥ ಪುತ್ರಾಲಿಂಗನದಿಂದ ಆನಂದತುಂದಿಲರಾದ ವೃದ್ಧಗೋಪಾಲಕರಿಗೆ ಬಿಟ್ಟು ಹೋಗಲು ಸಾಧ್ಯವಾಗಲೇ ಇಲ್ಲ. ಬಹಳ ಕಷ್ಟಪಟ್ಟು ಅವರನ್ನು ಬಿಟ್ಟು ಅಗಲಿ ಹೊರಟರು. ಬಿಟ್ಟು ಹೋಗುವಾಗ ಮಕ್ಕಳನ್ನೂ ಅವರ ಆಲಿಂಗನದ ಸೌಖ್ಯವನ್ನು ನೆನೆಯುತ್ತಾ ಕಣ್ಣುಗಳಿಂದ ಆನಂದಬಾಷ್ಪಗಳನ್ನು ಸುರಿಸಿದರು. ॥ ೩೪ ॥

ಗೋಪಬಾಲಕರು ತಾಯಿಯ ಹಾಲು ಕುಡಿಯುವ ಹಸುಳೆಗಳಾಗಿರಲಿಲ್ಲ. ಆದರೂ ಗೋಪ-ಗೋಪಿಯರಿಗೆ ಅವರ ಮೇಲೆ ಪ್ರೀತಿಯು ಕ್ಷಣ-ಕ್ಷಣಕ್ಕೂ ಹೆಚ್ಚುತ್ತಲೇ ಇತ್ತು. ಗೋವುಗಳಿಗೆ ಬೆಳೆದ ಕರುಗಳ ಮೇಲೆ ಚಿಕ್ಕ ಕರುಗಳಂತೆ ವಾತ್ಸಲ್ಯವು ಹೆಚ್ಚುತ್ತಲೇ ಇತ್ತು. ಇದನ್ನು ನೋಡಿದ ಬಲರಾಮನು 'ಇದಕ್ಕೇನು ಕಾರಣವಿರಬಹುದು ?' ಎಂದು ಯೋಚಿಸತೊಡಗಿದನು. ॥ ೩೫ ॥ ಇದೆಂತಹ ಅದ್ಭುತವು ಕಂಡುಬರುತ್ತಿದೆ! 'ಸರ್ವಾತ್ಮನಾದ ಶ್ರೀಕೃಷ್ಣನಲ್ಲಿ ಹಾಗೂ, ಈ ವ್ರಜವಾಸಿಗಳಿಗೂ ಅಪೂರ್ವವಾದ, ಅನಿರ್ವಾಚ್ಯವಾದ ಪ್ರೇಮವಿರುವಂತೆಯೇ ಈ ಬಾಲಕರ ಮೇಲೆ ಮತ್ತು ಕರುಗಳ ಮೇಲೆಯೂ ಪ್ರೇಮವು ಹೆಚ್ಚುತ್ತಾ ಹೋಗುತ್ತಿದೆಯಲ್ಲಾ! ॥ ೩೬ ॥ ಇದೆಂತಹ ಮಾಯೆ ? ಎಲ್ಲಿಂದ ಬಂದಿದೆ ? ಇದು ಯಾವುದಾದರೂ ದೇವತೆಯದೋ, ಮನುಷ್ಯರದೋ, ಅಸುರರ ಮಾಯೆಯೋ ? ಇಲ್ಲ, ಇಲ್ಲ, ಇದು ಬೇರೆ ಯಾರ ಮಾಯೆಯೂ ಅಲ್ಲ. ನನ್ನನ್ನು ಕೂಡ ವಿಮೋಹಗೊಳಿಸುತ್ತಿರುವ ಈ ಮಹಾಮಾಯೆಯು ನನ್ನ ಒಡೆಯನಾದ ಶ್ರೀಕೃಷ್ಣನದೇ ಆಗಿರಬೇಕು. ॥ ೩೭ ॥ ಬಲರಾಮನು ಹೀಗೆ ವಿಚಾರಮಾಡಿ, ಜ್ಞಾನದೃಷ್ಟಿಯಿಂದ ಗೋಪಬಾಲಕರನ್ನು, ಕರುಗಳನ್ನು ನೋಡಿದಾಗ- ಇವೆಲ್ಲ ಕರುಗಳು, ಗೋಪಬಾಲಕರ ರೂಪದಲ್ಲಿ ಕೇವಲ ಶ್ರೀಕೃಷ್ಣನೊಬ್ಬನೇ ಆಗಿರುವನೆಂದು ತಿಳಿದುಕೊಂಡನು. ॥ ೩೮ ॥ ಹೀಗೆ ತಿಳಿದ ಬಳಿಕ ಬಲರಾಮನು ಶ್ರೀಕೃಷ್ಣನನ್ನೇ ನೇರವಾಗಿ ಕೇಳಿದನು- ಶ್ರೀಕೃಷ್ಣನೇ! ಈ ಗೋಪಬಾಲಕರು ಮತ್ತು ಕರುಗಳು ದೇವತೆಗಳಲ್ಲ, ಋಷಿಗಳೂ ಅಲ್ಲ. ಇವೆಲ್ಲ ಬೇರೆ-ಬೇರೆ ರೂಪಗಳ ಆಶ್ರಯ ಪಡೆದರೂ ನೀನೊಬ್ಬನೇ ಇಷ್ಟು ರೂಪಗಳಲ್ಲಿ ಪ್ರಕಾಶಿಸುತ್ತಿರುವೆ. ನೀನು ಹೀಗೆ ಕರುಗಳು, ಬಾಲಕರು, ಕೊಂಬು, ಕೊಳಲು, ಹಗ್ಗ ಮುಂತಾದ ರೂಪಗಳಲ್ಲಿ ಬೇರೆ-ಬೇರೆಯಾಗಿ ಏಕೆ ಪ್ರಕಾಶಿಸು

ನೈತೇ ಸುರೇಶಾ ಋಷಯೋ ನ ಚೈತೇ
ತ್ವಮೇವ ಭಾಸೀಶ ಭಿದಾಶ್ರಯೇಽಪಿ ।
ಸರ್ವಂ ಪೃಥಕ್ತ್ವಂ ನಿಗಮಾತ್ಕಥಂ ವದೇ-
ತ್ಯುಕ್ತೇನ ವೃತ್ತಂ ಪ್ರಭುಣಾ ಬಲೋಽವೈತ್ ॥ ೩೯ ॥

ತಾವದೇತ್ಯಾತ್ಮಭೂರಾತ್ಮಮಾನೇನ ತ್ರುಟ್ಯನೇಹಸಾ ।
ಪುರೋವದಬ್ದಂ ಕ್ರೀಡಂತಂ ದದೃಶೇ ಸಕಲಂ ಹರಿಮ್ ॥ ೪೦ ॥

ಯಾವಂತೋ ಗೋಕುಲೇ ಬಾಲಾಃ ಸವತ್ಸಾಃ ಸರ್ವ ಏವ ಹಿ ।
ಮಾಯಾಶಯೇ ಶಯಾನಾ ಮೇ ನಾದ್ಯಾಪಿ ಪುನರುತ್ಥಿತಾಃ ॥ ೪೧ ॥

ಇತ ಏತೇಽತ್ರ ಕುತ್ರತ್ಯಾ ಮನ್ಮಾಯಾಮೋಹಿತೇತರೇ ।
ತಾವಂತ ಏವ ತತ್ರಾಬ್ದಂ ಕ್ರೀಡಂತೋ ವಿಷ್ಣುನಾ ಸಮಮ್ ॥ ೪೨ ॥

ಏವಮೇತೇಷು ಭೇದೇಷು ಚಿರಂ ಧ್ಯಾತ್ವಾ ಸ ಆತ್ಮಭೂಃ ।
ಸತ್ಯಾಃ ಕೇ ಕತರೇ ನೇತಿ ಜ್ಞಾತುಂ ನೇಷ್ಟೇ ಕಥಂಚನ ॥ ೪೩ ॥

ಏವಂ ಸಮ್ಮೋಹಯನ್ವಿಷ್ಣುಂ ವಿಮೋಹಂ ವಿಶ್ವಮೋಹನಮ್ ।
ಸ್ವಯೈವ ಮಾಯಯಾಜೋಽಪಿ ಸ್ವಯಮೇವ ವಿಮೋಹಿತಃ ॥ ೪೪ ॥

ತಮ್ಯಾಂ ತಮೋವನ್ನೈಹಾರಂ ಖದ್ಯೋತಾರ್ಚಿರಿವಾಹನಿ ।
ಮಹತೀತರಮಾಯೈಶ್ಯಂ ನಿಹಂತ್ಯಾತ್ಮನಿ ಯುಂಜತಃ ॥ ೪೫ ॥

ತಾವತ್ಸರ್ವೇ ವತ್ಸಪಾಲಾಃ ಪಶ್ಯತೋಽಜಸ್ಯ ತತ್ಕ್ಷಣಾತ್ ।
ವ್ಯದೃಶ್ಯಂತ ಘನಶ್ಯಾಮಾಃ ಪೀತಕೌಶೇಯವಾಸಸಃ ॥ ೪೬ ॥

ತ್ತಿರುವೆ? ದಯವಿಟ್ಟು ಸ್ವಲ್ಪದರಲ್ಲೇ ಸ್ಪಷ್ಟಪಡಿಸಿ ತಿಳಿಸು. ಆಗ ಭಗವಂತನು ಬ್ರಹ್ಮದೇವರ ಕಾರ್ಯದಿಂದಾಗಿ ತಾನು ಹೀಗೆ ಆಗಬೇಕಾಯಿತೆಂದು ತಿಳಿಸಿದನು ಹಾಗೂ ಬಲರಾಮನು ಎಲ್ಲವನ್ನೂ ಅರಿತುಕೊಂಡನು. ॥ ೩೯ ॥

ಪರೀಕ್ಷಿತನೇ! ಅದೇ ಹೊತ್ತಿಗೆ ಬ್ರಹ್ಮದೇವರು ತಮ್ಮ ಲೋಕದಿಂದ ವ್ರಜಕ್ಕೆ ಮರಳಿದರು. ಅವರ ಕಾಲಮಾನದಿಂದ ಅಷ್ಟರೊಳಗೆ ಕೇವಲ ಒಂದು ತ್ರುಟಿ (ಸೂಜಿಯಿಂದ ಕಮಲದ ಎಸಳನ್ನು ಚುಚ್ಚುವಷ್ಟು ಕಾಲ) ಮಾತ್ರ ಸಮಯ ಕಳೆದಿತ್ತು. ಭಗವಾನ್ ಶ್ರೀಕೃಷ್ಣನು ಗೊಲ್ಲಬಾಲಕರು ಮತ್ತು ಕರುಗಳೊಂದಿಗೆ ಒಂದು ವರ್ಷದ ಹಿಂದಿನಂತೆಯೇ ಕ್ರೀಡಿಸುತ್ತಿರುವುದನ್ನು ಅವರು ನೋಡಿದರು. ॥ ೪೦॥ ಅವರು ಯೋಚಿಸತೊಡಗಿದರು – ಗೋಕುಲದಲ್ಲಿದ್ದ ಗೊಲ್ಲಬಾಲಕರೆಲ್ಲರೂ, ಕರುಗಳೆಲ್ಲವೂ ನನ್ನ ಮಾಯಾಹಾಸಿಗೆಯಲ್ಲಿ ಮಲಗಿದ್ದಾರೆ. ಅವರೆಲ್ಲರನ್ನು ನಾನು ಮಾಯೆಯಿಂದ ನಿಶ್ಚೇಷ್ಟಿತರನ್ನಾಗಿಸಿ ಬಿಟ್ಟಿರುವೆ; ಅವರು ಆಗಿನಿಂದ ಎಚ್ಚರವಾಗಿಲ್ಲ. ॥ ೪೧ ॥ ಹಾಗಿರುವಾಗ ನನ್ನ ಮಾಯೆಯಿಂದ ಮೋಹಿತರಲ್ಲದ ಒಂದು ವರ್ಷದಿಂದ ಭಗವಂತನೊಂದಿಗೆ ಆಡುತ್ತಿರುವ ಈ ಗೋಪಬಾಲಕರು ಮತ್ತು ಕರುಗಳು ಎಲ್ಲಿಂದ ಬಂದವು? ॥ ೪೨ ॥ ಬ್ರಹ್ಮದೇವರು ಎರಡೂ ಕಡೆಗಳಲ್ಲಿ ಎರಡನ್ನೂ ನೋಡಿದರು ಮತ್ತು ಬಹಳ ಹೊತ್ತು ಧ್ಯಾನಮಾಡುತ್ತಾ ತಮ್ಮ ಜ್ಞಾನದೃಷ್ಟಿಯಿಂದ ಅದರ ರಹಸ್ಯವನ್ನು ತಿಳಿಯಲು ಬಯಸಿದರು, ಆದರೆ ಇವರಿಬ್ಬರಲ್ಲಿ ಮೊದಲಿನವರು ಯಾರು ಹಾಗೂ ಮತ್ತೆ ಸೃಷ್ಟಿಯಾದವರು ಯಾರು? ಇವರಲ್ಲಿ ನಿಜವಾದವರು ಯಾರು, ಕೃತ್ರಿಮವಾದವರು ಯಾರು ಎಂಬುದು ತಿಳಿಯದೇ ಹೋಯಿತು. ॥ ೪೩ ॥ ಭಗವಾನ್ ಶ್ರೀಕೃಷ್ಣನ ಮಾಯೆಯಿಂದ ಎಲ್ಲರೂ ಮುಗ್ಧರಾಗುತ್ತಿದ್ದಾರೆ. ಆದರೆ ಯಾವುದೇ ಮಾಯೆ-ಮೋಹ ಭಗವಂತನನ್ನು ಸ್ಪರ್ಶಿಸಲಾರದು. ಬ್ರಹ್ಮದೇವರು ಅದೇ ಭಗವಾನ್ ಶ್ರೀಕೃಷ್ಣನನ್ನು ತನ್ನ ಮಾಯೆಯಿಂದ ಮೋಹಿತಗೊಳಿಸಲು ಹೊರಟಿದ್ದರು. ಆದರೆ ಅವನನ್ನು ಮೋಹಿತಗೊಳಿಸುವುದು ದೂರವೇ ಉಳಿಯಿತು, ಅವರು ಅಜನ್ಮಾ ಆಗಿದ್ದರೂ ತನ್ನ ಮಾಯೆಯಿಂದ ತಾನೇ ಮೋಹಿತರಾದರು. ॥ ೪೪ ॥ ರಾತ್ರಿಯ ಘೋರ ಅಂಧಕಾರದಲ್ಲಿ ಮಂಜಿನ ಕತ್ತಲೆ ಲಯವಾಗಿ ಹೋಗುವಂತೆ, ಮಿಂಚುಹುಳುವಿನ ಪ್ರಕಾಶವು ಹಗಲಿನಲ್ಲಿ ಲಯವಾಗುವಂತೆಯೇ, ಕ್ಷುದ್ರ ಮನುಷ್ಯನು ಮಹಾಪುರುಷರ ಮೇಲೆ ತನ್ನ ಮಾಯೆಯನ್ನು ಪ್ರಯೋಗಿಸಿದಾಗ, ಅದು ಮಹಾಪುರುಷರಿಗೆ ಏನನ್ನೂ ಮಾಡದೆ ತಾನೇ ತಾನಾಗಿ ಕುಗ್ಗಿ ಹೋಗಿ, ಪ್ರಯೋಗಿಸಿದವನ ಸಾಮರ್ಥ್ಯವೂ ಹೊರಟು ಹೋಗುತ್ತದೆ. ॥ ೪೫ ॥

ಬ್ರಹ್ಮದೇವರು ವಿಚಾರ ಮಾಡುತ್ತಾ ನೋಡುತ್ತಿದ್ದಾಗಲೇ ಎಲ್ಲ ಗೊಲ್ಲಬಾಲಕರು ಮತ್ತು ಕರುಗಳು ಶ್ರೀಕೃಷ್ಣನರೂಪದಲ್ಲಿ ಕಂಡು ಬರತೊಡಗಿದರು. ಎಲ್ಲರೂ ನೀರು ತುಂಬಿದ ಮೋಡಗಳಂತೆ ಶ್ಯಾಮಲವರ್ಣದವರಾಗಿದ್ದು, ಪೀತಾಂಬರವನ್ನು ಧರಿಸಿ ಶಂಖ, ಚಕ್ರ, ಗದೆ ಮತ್ತು ಪದ್ಮಗಳನ್ನು ಧರಿಸಿದ ಚತುರ್ಭುಜರಾಗಿದ್ದರು. ಎಲ್ಲರ ತಲೆಯ ಮೇಲೆ ಕಿರೀಟ, ಕಿವಿಯಲ್ಲಿ ಕುಂಡಲಗಳೂ,

ಚತುರ್ಭುಜಾಃ ಶಂಖಚಕ್ರಗದಾರಾಜೀವಪಾಣಯಃ ।
ಕಿರೀಟಿನಃ ಕುಂಡಲಿನೋ ಹಾರಿಣೋ ವನಮಾಲಿನಃ ॥ ೪೭ ॥

ಶ್ರೀವತ್ಸಾಂಗದದೋರತ್ನಕಂಬುಕಂಕಣಪಾಣಯಃ ।
ನೂಪುರೈಃ ಕಟಕೈರ್ಭಾತಾಃ ಕಟಿಸೂತ್ರಾಂಗುಲೀಯಕೈಃ ॥ ೪೮ ॥

ಆಂಘ್ರಿಮಸ್ತಕಮಾಪೂರ್ಣಾಸ್ತುಲಸೀನವದಾಮಭಿಃ ।
ಕೋಮಲೈಃ ಸರ್ವಗಾತ್ರೇಷು ಭೂರಿಪುಣ್ಯವದರ್ಪಿತೈಃ ॥ ೪೯ ॥

ಚಂದ್ರಿಕಾವಿಶದಸ್ಮೇರೈಃ ಸಾರುಣಾಪಾಂಗವೀಕ್ಷಿತೈಃ ।
ಸ್ವಕಾರ್ಥಾನಾಮಿವ ರಜಃಸತ್ತ್ವಾಭ್ಯಾಂ ಸ್ರಷ್ಟೃಪಾಲಕಾಃ ॥ ೫೦ ॥

ಆತ್ಮಾದಿಸ್ತಂಬಪರ್ಯಂತೈರ್ಮೂರ್ತಿಮದ್ಭಿಶ್ಚರಾಚರೈಃ ।
ನೃತ್ಯಗೀತಾದ್ಯನೇಕಾರ್ಹೈಃ ಪೃಥಕ್ಪೃಥಗುಪಾಸಿತಾಃ ॥ ೫೧ ॥

ಅಣಿಮಾದ್ಯೈರ್ಮಹಿಮಭಿರಜಾದ್ಯಾಭಿರ್ವಿಭೂತಿಭಿಃ ।
ಚತುರ್ವಿಂಶತಿಭಿಸ್ತತ್ತ್ವೈಃ ಪರೀತಾ ಮಹದಾದಿಭಿಃ ॥ ೫೨ ॥

ಕಾಲಸ್ವಭಾವಸಂಸ್ಕಾರಕಾಮಕರ್ಮಗುಣಾದಿಭಿಃ ।
ಸ್ವಮಹಿಧ್ವಸ್ತಮಹಿಭಿರ್ಮೂರ್ತಿಮದ್ಭಿರುಪಾಸಿತಾಃ ॥ ೫೩ ॥

ಸತ್ಯಜ್ಞಾನಾನಂತಾನಂದಮಾತ್ರೈಕರಸಮೂರ್ತಯಃ ।
ಅಸ್ಪೃಷ್ಟಭೂರಿಮಾಹಾತ್ಮ್ಯಾ ಅಪಿ ಹ್ಯುಪನಿಷದ್ದೃಶಾಮ್ ॥ ೫೪ ॥

ಏವಂ ಸಕೃದ್ದದರ್ಶಾಜಃ ಪರಬ್ರಹ್ಮಾತ್ಮನೋಽಖಿಲಾನ್ ।
ಯಸ್ಯ ಭಾಸಾ ಸರ್ವಮಿದಂ ವಿಭಾತಿ ಸಚರಾಚರಮ್ ॥ ೫೫ ॥

ಕೊರಳಲ್ಲಿ ಸುಂದರ ಹಾರಗಳೂ ಹಾಗೂ ವನಮಾಲೆಗಳು ಶೋಭಿಸುತ್ತಿದ್ದುವು. ॥ ೪೬-೪೭ ॥ ಅವರ ವಕ್ಷಃಸ್ಥಳದಲ್ಲಿ ಶ್ರೀವತ್ಸ ಲಾಂಛನವಿದ್ದು, ಬಾಹುಗಳಲ್ಲಿ ಕನಕಾಂಗದ-ಕೇಯೂರಗಳೂ, ಮಣಿಕಟ್ಟುಗಳಲ್ಲಿ ಶಂಖಾಕಾರವಾದ ರತ್ನಗಳನ್ನು ಕೂರಿಸಿದ ಕಂಕಣಗಳನ್ನೂ, ಚರಣಗಳಲ್ಲಿ ನೂಪುರಗಳನ್ನೂ ಧರಿಸಿದ್ದರು. ಸುವರ್ಣಮಯವಾದ ಉಡಿದಾರಗಳನ್ನು ಧರಿಸಿದ್ದರು ಹಾಗೂ ಬೆರಳುಗಳಲ್ಲಿ ರತ್ನದುಂಗುರಗಳು ಹೊಳೆಯುತ್ತಿದ್ದುವು. ॥ ೪೮ ॥ ನಖಶಿಖಾಂತವಾಗಿ ಸಮಸ್ತ ಅಂಗಗಳಲ್ಲಿಯೂ ಪುಣ್ಯವಂತರಾದ ಭಕ್ತರು ಅರ್ಪಿಸಿದ ಸುಕೋಮಲವಾದ, ನೂತನವಾದ ತುಳಸೀಮಾಲೆಗಳಿಂದ ಅಲಂಕೃತರಾಗಿದ್ದರು. ॥ ೪೯ ॥ ಅವರ ಕಿರುನಗೆಯು ಬೆಳದಿಂಗಳಿನಂತೆ ಉಜ್ಜ್ವಲವಾಗಿತ್ತು. ಎಳ್ಳೆಗೆಂಪಿನಿಂದ ಕೂಡಿದ್ದ ಅವರ ಕಡೆಗಣ್ಣಿನ ನೋಟವು ಸುಮಧುರವಾಗಿತ್ತು. ಅವರು ಇವೆರಡರ ಮೂಲಕ ಸತ್ತ್ವಗುಣ ಮತ್ತು ರಜೋಗುಣಗಳನ್ನು ಸ್ವೀಕರಿಸಿ, ಭಕ್ತರ ಇಷ್ಟಾರ್ಥಗಳನ್ನು ನಡೆಸಿಕೊಡಲು ಅವತರಿಸಿದ ಲೋಕಪಾಲಕರಂತೆಯೇ ಕಾಣುತ್ತಿದ್ದರು. ॥ ೫೦ ॥ ತನ್ನನ್ನೂ ಮೊದಲ್ಗೊಂಡು ಹುಲ್ಲುಕಡ್ಡಿಯವರೆಗಿನ ಸಮಸ್ತ ಚರಾಚರ ಪ್ರಾಣಿಗಳೂ ಮೂರ್ತಿವತ್ತಾಗಿ ಬಂದು ಗೀತ-ನೃತ್ಯಗಳೇ ಮೊದಲಾದ ಹಲವಾರು ಪೂಜಾವಿಧಾನಗಳಿಂದ ಪ್ರತ್ಯೇಕ-ಪ್ರತ್ಯೇಕವಾಗಿ ಆ ಎಲ್ಲ ಮೂರ್ತಿಗಳನ್ನು ಪೂಜಿಸುತ್ತಿದ್ದುದನ್ನೂ ಬ್ರಹ್ಮದೇವರು ನೋಡಿದರು. ॥ ೫೧ ॥ ಪ್ರತಿಯೊಂದು ಮೂರ್ತಿಯೂ ಅಣಿಮಾದಿ ಅಷ್ಟಸಿದ್ಧಿಗಳಿಂದಲೂ, ಮಾಯೆಯೇ ಮೊದಲಾದ ಜಗತ್ಕಾರಣ ಶಕ್ತಿಗಳಿಂದಲೂ, ಮಹತ್ತತ್ತ್ವವೇ ಮೊದಲಾದ ಇಪ್ಪತ್ತುನಾಲ್ಕು ತತ್ತ್ವಗಳಿಂದಲೂ ಸುತ್ತುವರಿಯಲ್ಪಟ್ಟಿದ್ದಿತು. ॥ ೫೨ ॥ ಪ್ರಕೃತಿಯಲ್ಲಿ ಕ್ಷೋಭೆಯನ್ನುಂಟು ಮಾಡುವ ಕಾಲ, ಅದರ ಪರಿಣಾಮದ ಕಾರಣ ಸ್ವಭಾವ, ವಾಸನೆಗಳನ್ನು ಜಾಗ್ರತಗೊಳಿಸುವಂತಹ ಸಂಸ್ಕಾರಗಳು, ಕಾಮನೆಗಳು, ಕರ್ಮ, ವಿಷಯ ಮತ್ತು ಫಲ - ಇವೆಲ್ಲವೂ ಮೂರ್ತಿಮಂತರಾಗಿ ಭಗವಂತನ ಪ್ರತಿಯೊಂದು ರೂಪವನ್ನು ಉಪಾಸಿಸುತ್ತಿದ್ದುವು. ಭಗವಂತನ ಸತ್ತೆ ಮತ್ತು ಮಹತ್ತುಗಳ ಎದುರು ಅವೆಲ್ಲವುಗಳ ಅಸ್ತಿತ್ವ ಹಾಗೂ ಮಹತ್ತುಗಳನ್ನು ಕಳಕೊಂಡು ಬಿಟ್ಟಿದ್ದುವು. ॥ ೫೩ ॥ ಅವರೆಲ್ಲರೂ ಭೂತ, ಭವಿಷ್ಯತ್ ಮತ್ತು ವರ್ತಮಾನ ಕಾಲಗಳ ಮೂಲಕ ಸೀಮಿತವಾಗಿರದೆ ತ್ರಿಕಾಲಾಬಾಧಿತ ಸತ್ಯವಾಗಿದ್ದರು. ಅವರೆಲ್ಲರೂ ಸ್ವಯಂ ಪ್ರಕಾಶರೂ, ಕೇವಲ ಅನಂತ ಆನಂದ ಸ್ವರೂಪರೂ ಆಗಿದ್ದಾರೆ. ಅವರಲ್ಲಿ ಜಡತೆ ಮತ್ತು ಚೈತನ್ಯದ ಭೇದಭಾವವೇ ಇಲ್ಲ. ಅವರೆಲ್ಲರೂ ಏಕರಸರಾಗಿದ್ದಾರೆ. ಎಲ್ಲಿಯವರೆಗೆಂದರೆ ಉಪನಿಷದ್ದರ್ಶಿ ತತ್ತ್ವಜ್ಞಾನಿಗಳ ದೃಷ್ಟಿಯೂ ಕೂಡ ಅವರ ಅನಂತ ಮಹಿಮೆಯನ್ನು ಸ್ಪರ್ಶಿಸಲಾರದೆ ಹೋಯಿತು. ॥ ೫೪ ॥ ಹೀಗೆ ಅವರೆಲ್ಲರೂ ಆ ಪರಬ್ರಹ್ಮ ಪರಮಾತ್ಮ ಶ್ರೀಕೃಷ್ಣನೇ ಸ್ವರೂಪರಾಗಿದ್ದಾರೆ. ಅವರ ಪ್ರಕಾಶದಿಂದ ಈ ಇಡೀ ಚರಾಚರ ಜಗತ್ತು ಪ್ರಕಾಶಿಸುತ್ತಿರುವುದನ್ನು ಒಟ್ಟಿಗೆ ಬ್ರಹ್ಮದೇವರು ನೋಡಿದರು. ॥ ೫೫ ॥

ಇಂತಹ ಅತ್ಯಂತ ಆಶ್ಚರ್ಯಮಯ ದೃಶ್ಯವನ್ನು ನೋಡಿ ಬ್ರಹ್ಮದೇವರು ಚಕಿತರಾದರು. ಅವರ ಹನ್ನೊಂದು ಇಂದ್ರಿಯಗಳು (ಐದು ಕರ್ಮೇಂದ್ರಿಯ, ಐದು ಜ್ಞಾನೇಂದ್ರಿಯ ಮತ್ತು ಒಂದು

ತತೋಽತಿಕುತುಕೋದ್ವೃತ್ಯಸ್ತಿಮಿತೈಕಾದಶೇಂದ್ರಿಯಃ ।
ತದ್ಧಾಮ್ನಾಭೂದಜಸ್ತೂಷ್ಣೀಂ ಪೂರ್ದೇವ್ಯಂತೀವ ಪುತ್ರಿಕಾ ॥ ೫೬ ॥

ಇತೀರೇಶೇಽತರ್ಕ್ಯೇ ನಿಜಮಹಿಮನಿ ಸ್ವಪ್ರಮಿತಿಕೇ
ಪರತ್ರಾಜಾತೋಽತನ್ನಿರಸನ ಮುಖಬ್ರಹ್ಮಕಮಿತೌ ।
ಅನೀಶೇಽಪಿ ದ್ರಷ್ಟುಂ ಕಿಮಿದಮಿತಿ ವಾ ಮುಹ್ಯತಿ ಸತಿ
ಚಚ್ಛಾದಾಜೋ ಜ್ಞಾತ್ವಾ ಸಪದಿ ಪರಮೋಽಜಾಜವನಿಕಾಮ್ ॥ ೫೭ ॥

ತತೋಽರ್ವಾಕ್ ಪ್ರತಿಲಬ್ಧಾಕ್ಷಃ ಕಃ ಪರೇತವದುತ್ಥಿತಃ ।
ಕೃಚ್ಛ್ರಾದುನ್ಮೀಲ್ಯ ವೈ ದೃಷ್ಟೀರಾಚಷ್ಟೇದಂ ಸಹಾತ್ಮನಾ ॥ ೫೮ ॥

ಸಪದ್ಯೇವಾಭಿತಃ ಪಶ್ಯನ್ ದಿಶೋಽಪಶ್ಯತ್ಪುರಃಸ್ಥಿತಮ್ ।
ವೃಂದಾವನಂ ಜನಾಜೀವ್ಯದ್ರುಮಾಕೀರ್ಣಂ ಸಮಾಪ್ರಿಯಮ್ ॥ ೫೯ ॥

ಯತ್ರ ನೈಸರ್ಗದುರ್ವೈರಾಃ ಸಹಾಸನ್ನೃಮೃಗಾದಯಃ ।
ಮಿತ್ರಾಣೀವಾಜಿತಾವಾಸದ್ರುತರುಟ್ತರ್ಷಕಾದಿಕಮ್ ॥ ೬೦ ॥

ತತ್ರೋದ್ವಹತ್ಪಶುಪವಂಶಶಿಶುತ್ವನಾಟ್ಯಂ
ಬ್ರಹ್ಮಾದ್ವಯಂ ಪರಮನಂತಮಗಾಧಬೋಧಮ್ ।
ವತ್ಸಾನ್ಸಖೀನಿವ ಪುರಾ ಪರಿತೋ ವಿಚಿನ್ವ-
ದೇಕಂ ಸಪಾಣಿಕವಲಂ ಪರಮೇಷ್ಠ್ಯಚಷ್ಟ ॥ ೬೧ ॥

ಮನಸ್ಸು) ಸ್ತಬ್ಧವಾದುವು. ಅವರು ಭಗವಂತನ ತೇಜದಿಂದ ನಿಸ್ತೇಜಿತರಾಗಿ ಮೌನರಾದರು. ಆಗ ಅವರು ಹೀಗೆ ಸ್ತಬ್ಧರಾಗಿ ನಿಂತಿರುವಾಗ ಗೋಕುಲದ ಅಧಿಷ್ಠಾತೃದೇವತೆಯ ಮುಂದೆ ನಿಂತಿರುವ ಒಂದು ಗೊಂಬೆಯಂತೆಯೇ ಕಾಣುತ್ತಿದ್ದರು. ॥ ೫೬ ॥ ಪರೀಕ್ಷಿತನೇ ! ಭಗವಂತನ ಸ್ವರೂಪವು ತರ್ಕಕ್ಕೆ ಅತೀತವಾದುದು. ಅವನ ಮಹಿಮೆ ಅಸಾಧಾರಣವಾದುದು. ಅವನು ಸ್ವಯಂ ಪ್ರಕಾಶನೂ, ಆನಂದಸ್ವರೂಪನೂ, ಮಾಯೆಯಿಂದ ಅತೀತನೂ ಆಗಿದ್ದಾನೆ. ವೇದಾಂತವೂ ಕೂಡ ಸಾಕ್ಷಾತ್ತಾಗಿ ಅವನನ್ನು ವರ್ಣಿಸಲು ಅಸಮರ್ಥವಾಗಿದೆ. ಆದ್ದರಿಂದ ಅವನಿಂದ ಭಿನ್ನವಾದುದನ್ನು ನಿಷೇಧ ಮಾಡುತ್ತಾ ಆನಂದ ಸ್ವರೂಪೀ ಬ್ರಹ್ಮನನ್ನು ಹೇಗೋ, ಕೆಲವು ಸಂಕೇತ ಮಾಡುತ್ತದೆ. ಬ್ರಹ್ಮದೇವರು ಸಮಸ್ತ ವಿದ್ಯೆಗಳ ಅಧಿಪತಿಯಾಗಿದ್ದರೂ ಭಗವಂತನ ದಿವ್ಯಸ್ವರೂಪವನ್ನು ಇದು ಏನು ಎಂದು ಅವರು ಸ್ವಲ್ಪವೂ ತಿಳಿಯದೆ ಹೋದರು. ಅವರು ಭಗವಂತನ ಆ ಮಹಿಮೆಯುಳ್ಳ ರೂಪಗಳನ್ನು ನೋಡುವುದಕ್ಕೆ ಅಸಮರ್ಥರಾಗಿ ಕಣ್ಣು ಮುಚ್ಚಿಕೊಂಡರು. ಭಗವಾನ್ ಶ್ರೀಕೃಷ್ಣನು ಬ್ರಹ್ಮದೇವರ ಈ ಮೋಹ ಮತ್ತು ಅಸಮರ್ಥತೆಯನ್ನು ಮನಗಂಡು ಯಾವುದೇ ಪ್ರಯಾಸವಿಲ್ಲದೆ ಕೂಡಲೇ ತನ್ನ ಮಾಯೆಯ ತೆರೆಯನ್ನು ಸರಿಸಿಬಿಟ್ಟನು. ॥ ೫೭ ॥ ಇದರಿಂದ ಬ್ರಹ್ಮದೇವರಿಗೆ ಬಾಹ್ಯ ಜ್ಞಾನವುಂಟಾಯಿತು. ಸತ್ತವನು ಬದುಕಿ ಎದ್ದು ಕೂಡುವಂತೆ, ಸಚೇತನರಾಗಿ ಅವರು ಹೇಗೋ ಕಷ್ಟಪಟ್ಟು ತಮ್ಮ ಕಣ್ಣುಗಳನ್ನು ತೆರೆದರು. ಆಗ ಅವರಿಗೆ ತನ್ನ ಶರೀರ ಮತ್ತು ಈ ಜಗತ್ತು ಕಾಣತೊಡಗಿತು. ॥ ೫೮ ॥ ಬ್ರಹ್ಮದೇವರು ಸುತ್ತಲೂ ನೋಡತೊಡಗಿದಾಗ ಮೊದಲಿಗೆ ದಿಕ್ಕುಗಳು, ಅನಂತರ ಆಗಲೇ ಅವರ ಮುಂದೆ ವೃಂದಾವನ ಕಂಡುಬಂತು. ವೃಂದಾವನವು ಎಲ್ಲರಿಗಾಗಿ ಒಂದೇ ರೀತಿ ಪ್ರಿಯವಾಗಿದೆ. ನೋಡಿದಲ್ಲೆಲ್ಲ ಜೀವರಿಗೆ ಜೀವನವನ್ನು ಕೊಡುವಂತಹ ಫಲ-ಪುಷ್ಪಗಳಿಂದ ತುಂಬಿದ, ಹಚ್ಚ ಹಸಿರಾದ ಎಲೆಗಳಿಂದ ಕೂಡಿದ ಮರಗಳ ಸಾಲುಗಳು ಶೋಭಿಸುತ್ತಿದ್ದುವು. ॥ ೫೯ ॥ ಭಗವಾನ್ ಶ್ರೀಕೃಷ್ಣನ ಲೀಲಾಭೂಮಿಯಾದ ವೃಂದಾವನ ಧಾಮದಲ್ಲಿ ಕ್ರೋಧ, ತೃಷ್ಣೆ ಮುಂತಾದ ದೋಷಗಳು ಪ್ರವೇಶಿಸಲಾರವು. ಅಲ್ಲಿ ಸ್ವಭಾವತಃ ಪರಸ್ಪರ ವೈರಿಗಳಾದ ಮನುಷ್ಯರು, ಪಶು-ಪಕ್ಷಿಗಳೂ ಕೂಡ ಪ್ರಿಯಮಿತ್ರರಂತೆ ಒಂದಾಗಿ ಸೇರಿ ವಾಸಿಸುತ್ತಿದ್ದರು. ॥ ೬೦ ॥ ಬ್ರಹ್ಮದೇವರು ವೃಂದಾವನವನ್ನು ದರ್ಶಿಸುವಾಗ ಅದ್ವಿತೀಯ ಪರಬ್ರಹ್ಮನು ಗೋಪ ಬಾಲಕನಂತೆ ನಾಟ್ಯವಾಡುತ್ತಿರುವುದನ್ನು ನೋಡಿದನು. ಒಬ್ಬನಾಗಿದ್ದರೂ ಅವನಿಗೆ ಮಿತ್ರರಿದ್ದಾರೆ, ಅನಂತನಾಗಿದ್ದರೂ ಅವನು ಅತ್ತ-ಇತ್ತ ತಿರುಗುತ್ತಿರುವನು. ಅವನ ಜ್ಞಾನವು ಅಗಾಧವಾಗಿದ್ದರೂ ಅವನು ತನ್ನ ಸ್ನೇಹಿತರಾದ ಗೋಪಬಾಲಕರನ್ನೂ, ಕರುಗಳನ್ನೂ ಹುಡುಕುತ್ತಿರುವನು. ಭಗವಂತನಾದ ಶ್ರೀಕೃಷ್ಣನು ಮೊದಲು ಕೈಯಲ್ಲಿ ಮೊಸರನ್ನದ ತುತ್ತನ್ನು ಎತ್ತಿಕೊಂಡು ಹುಡುಕುತ್ತಿದ್ದನೋ ಹಾಗೆಯೇ ಈಗಲೂ ಒಬ್ಬನಾಗಿಯೇ ಅವನ್ನು ಹುಡುಕುತ್ತಿರುವುದನ್ನೂ ಬ್ರಹ್ಮದೇವರು ನೋಡಿದರು. ॥ ೬೦ ॥

ದೃಷ್ಟ್ವಾ ತ್ವರೇಣ ನಿಜಧೋರಣತೋಽವತೀರ್ಯ
ಪೃಥ್ವ್ಯಾಂ ವಪುಃ ಕನಕದಂಡಮಿವಾಭಿಪಾತ್ಯ ।
ಸ್ಪೃಷ್ಟ್ವಾ ಚತುರ್ಮುಕುಟಕೋಟಿಭಿರಂಘ್ರಿಯುಗ್ಮಂ
ನತ್ವಾ ಮುದಶ್ರುಸುಜಲೈರಕೃತಾಭಿಷೇಕಮ್ ॥ ೬೨ ॥

ಉತ್ಥಾಯೋತ್ಥಾಯ ಕೃಷ್ಣಸ್ಯ ಚಿರಸ್ಯ ಪಾದಯೋಃ ಪತನ್ ।
ಆಸ್ತೇ ಮಹಿತ್ವಂ ಪ್ರಾಗ್ದೃಷ್ಟಂ ಸ್ಮೃತ್ವಾ ಸ್ಮೃತ್ವಾ ಪುನಃ ಪುನಃ
॥ ೬೩ ॥

ಶನೈರಥೋತ್ಥಾಯ ವಿಮೃಜ್ಯ ಲೋಚನೇ
ಮುಕುಂದಮುದ್ವೀಕ್ಷ್ಯ ವಿನಮ್ರಕಂಧರಃ ।
ಕೃತಾಂಜಲಿಃ ಪ್ರಶ್ರಯವಾನ್ಸಮಾಹಿತಃ
ಸವೇಪಥುರ್ಗದ್ಗದಯೈಲತೇಲಯಾ ॥ ೬೪ ॥

ಭಗವಂತನನ್ನು ಕಾಣುತ್ತಲೇ ಬ್ರಹ್ಮದೇವರು ತಮ್ಮ ವಾಹನವಾದ ಹಂಸದಿಂದ ಕೆಳಗಿಳಿದು, ಚಿನ್ನದಂತೆ ಹೊಳೆಯುತ್ತಿರುವ ತನ್ನ ಶರೀರದಿಂದ ಭೂಮಿಯಲ್ಲಿ ದಂಡವತ್ ಪ್ರಣಾಮ ಮಾಡಿದರು. ಅವರು ತಮ್ಮ ನಾಲ್ಕು ಕಿರೀಟಗಳ ಅಗ್ರಭಾಗದಿಂದ ಭಗವಂತನ ಚರಣಗಳನ್ನು ಸ್ಪರ್ಶಿಸುತ್ತಾ ನಮಸ್ಕರಿಸಿದರು ಹಾಗೂ ಆನಂದಾಶ್ರುಗಳಿಂದ ಆ ಪಾದಗಳನ್ನು ತೊಳೆದರು. ॥ ೬೨ ॥ ಅವರು ಭಗವಾನ್ ಶ್ರೀಕೃಷ್ಣನ ಮೊದಲು ನೋಡಿದ ಮಹಿಮೆಯನ್ನು ಪದೇ- ಪದೇ ಸ್ಮರಿಸುತ್ತಾ, ಅವನ ಕಾಲಿಗೆ ಬೀಳುತ್ತಾ, ಏಳುತ್ತಾ ಪುನಃ ಪುನಃ ನಮಸ್ಕರಿಸುತ್ತಾರೆ. ಹೀಗೆ ಬಹಳ ಹೊತ್ತಿನವರೆಗೆ ಅವರು ಭಗವಂತನ ಚರಣಗಳಲ್ಲಿ ಬಿದ್ದುಕೊಂಡೇ ಇದ್ದರು. ॥ ೬೩ ॥ ಮತ್ತೆ ನಿಧಾನವಾಗಿ ಎದ್ದು ತಮ್ಮ ಕಣ್ಣುಗಳನ್ನು ಒರೆಸಿಕೊಂಡರು. ಭಕ್ತಿ ಮತ್ತು ಮುಕ್ತಿಯ ಏಕಮಾತ್ರ ಉದ್ಗಮನಾದ ಭಗವಂತನನ್ನು ನೋಡಿ ಅವರ ಶಿರವು ಬಾಗಿತು. ನಡುಗುತ್ತಾ ಕೈಗಳನ್ನು ಜೋಡಿಸಿಕೊಂಡು ಅತ್ಯಂತ ವಿನಮ್ರರಾಗಿ, ಏಕಾಗ್ರತೆಯಿಂದ ಗದ್ಗದ ವಾಣಿಯಿಂದ ಬ್ರಹ್ಮದೇವರು ಭಗವಂತನನ್ನು ಸ್ತುತಿಸತೊಡಗಿದರು. । ೬೪ ।

ಹದಿಮೂರನೆಯ ಅಧ್ಯಾಯವು ಮುಗಿಯಿತು. ॥ ೧೩ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮಸ್ಕಂಧೇ ಪೂರ್ವಾರ್ಧೇ
ತ್ರಯೋದಶೋಽಧ್ಯಾಯಃ ॥ ೧೩ ॥

ಹದಿನಾಲ್ಕನೆಯ ಅಧ್ಯಾಯ

ಬ್ರಹ್ಮದೇವರು ಮಾಡಿದ ಭಗವಂತನ ಸ್ತುತಿ

ಬ್ರಹ್ಮೋವಾಚ

ನೌಮೀಡ್ಯ ತೇಽಭ್ರವಪುಷೇ ತಡಿದಂಬರಾಯ
ಗುಂಜಾವತಂಸಪರಿಪಿಚ್ಛಲಸನ್ಮುಖಾಯ ।
ವನ್ಯಸ್ರಜೇ ಕವಲವೇತ್ರವಿಷಾಣವೇಣು-
ಲಕ್ಷ್ಮಶ್ರಿಯೇ ಮೃದುಪದೇ ಪಶುಪಾಂಗಜಾಯ ॥ ೧ ॥

ಅಸ್ಯಾಪಿ ದೇವ ವಪುಷೋ ಮದನುಗ್ರಹಸ್ಯ
ಸ್ವೇಚ್ಛಾಮಯಸ್ಯ ನ ತು ಭೂತಮಯಸ್ಯ ಕೋಽಪಿ ।
ನೇಶೇ ಮಹಿ ತ್ವವಸಿತುಂ ಮನಸಾಽಽಂತರೇಣ
ಸಾಕ್ಷಾತ್ತವೈವ ಕಿಮುತಾತ್ಮಸುಖಾನುಭೂತೇಃ ॥ ೨ ॥

ಶ್ರೀಬ್ರಹ್ಮದೇವರು ಸ್ತೋತ್ರಮಾಡುತ್ತಾರೆ - ಸ್ತೋತ್ರಾರ್ಹನಾದ ಭಗವಂತನೇ! ನಾನು ನಿನ್ನ ಚರಣಕಮಲಗಳಲ್ಲಿ ನಮಸ್ಕರಿಸುತ್ತೇನೆ. ನೀಲಮೇಘ ಶ್ಯಾಮನೇ! ಮಿಂಚಿನಂತಹ ಪೀತಾಂಬರವನ್ನು ಧರಿಸಿರುವವನೇ! ಗುಲಗಂಜಿಗಳ ಮಾಲೆಗಳನ್ನು ಧರಿಸಿ, ಮಕರಾಕೃತಿಯ ಕರ್ಣಕುಂಡಲಗಳನ್ನು ಹೊಂದಿರುವವನೇ! ತಲೆಯಲ್ಲಿ ನವಿಲು ಗರಿಯ ಕಿರೀಟವನ್ನು ಧರಿಸಿ ಅದರಿಂದ ಪ್ರಕಾಶಮಾನವಾಗಿ ಕಾಣುವ ಮುಖವುಳ್ಳವನೇ! ವಕ್ಷಸ್ಥಳದಲ್ಲಿ ವನಮಾಲೆಯನ್ನು ಧರಿಸಿರುವವನೇ! ಕೈಯಲ್ಲಿ ಮೊಸರನ್ನದ ತುತ್ತನ್ನು ಹಿಡಿದುಕೊಂಡು, ಉಡಿಯಲ್ಲಿ ಕೊಳಲನ್ನು ಸಿಕ್ಕಿಸಿಕೊಂಡು, ಕಂಕುಳಿನಲ್ಲಿ ಕೊಂಬನ್ನು ಚಾವಟಿಯನ್ನು ಹಿಡಿದುಕೊಂಡು ಅನುಪಮವಾದ ಕಾಂತಿಯಿಂದ ಪ್ರಕಾಶಿಸುತ್ತಿರುವವನೇ! ಮೃದುವಾದ ಪಾದಗಳನ್ನು ಹೊಂದಿರುವವನೇ! ನಂದಗೋಪನ ಸುತನೇ! ನಿನಗೆ ನಮಸ್ಕರಿಸುತ್ತೇನೆ. ॥ ೧ ॥ ದೇವನೇ! ನಿನ್ನ ಶ್ರೀವಿಗ್ರಹವು ಭಕ್ತರ ಅಭಿಲಾಷೆಗಳನ್ನು ಪೂರ್ಣಗೊಳಿಸುವುದಾಗಿದೆ. ನನ್ನನ್ನು ಅನುಗ್ರಹಿಸುವುದಕ್ಕಾಗಿಯೇ ನೀನು ದಿವ್ಯ ರೂಪವನ್ನು ತಾಳಿರುವೆ. ನಿನ್ನ ಈ ಶ್ರೀವಿಗ್ರಹವನ್ನು ಪಂಚಭೂತಾತ್ಮಕವಾದುದೆಂದು ಯಾರು ತಾನೇ ಹೇಳಬಲ್ಲರು? ಖಂಡಿತವಾಗಿಯೂ ನಿನ್ನದು ಪಂಚಭೂತಾತ್ಮಕ ಶರೀರವಲ್ಲ.

ಜ್ಞಾನೇ ಪ್ರಯಾಸಮುದಪಾಸ್ಯ ನಮಂತ ಏವ
ಜೀವಂತಿ ಸನ್ಮುಖರಿತಾಂ ಭವದೀಯವಾರ್ತಾಮ್ ।
ಸ್ಥಾನೇ ಸ್ಥಿತಾಃ ಶ್ರುತಿಗತಾಂ ತನುವಾಙ್ಮನೋಭಿ-
ರ್ಯೇ ಪ್ರಾಯಶೋಽಜಿತ ಜಿತೋಽಪ್ಯಸಿ ತೈಸ್ತ್ರಿಲೋಕ್ಯಾಮ್
॥ ೩ ॥

ಶ್ರೇಯಃಸ್ರುತಿಂ ಭಕ್ತಿಮುದಸ್ಯ ತೇ ವಿಭೋ
ಕ್ಲಿಶ್ಯಂತಿ ಯೇ ಕೇವಲ ಬೋಧಲಬ್ಧಯೇ ।
ತೇಷಾಮಸೌ ಕ್ಲೇಶಲ ಏವ ಶಿಷ್ಯತೇ
ನಾನ್ಯದ್ಯಥಾ ಸ್ಥೂಲತುಷಾವಘಾತಿನಾಮ್ ॥ ೪ ॥

ಪುರೇಹ ಭೂಮನ್ಬಹವೋಽಪಿ ಯೋಗಿನ-
ಸ್ತ್ವದರ್ಪಿತೇಹಾ ನಿಜಕರ್ಮಲಬ್ಧಯಾ ।
ವಿಬುಧ್ಯ ಭಕ್ತ್ಯೈವ ಕಥೋಪನೀತಯಾ
ಪ್ರಪೇದಿರೇಽಂಜೋಽಚ್ಯುತ ತೇ ಗತಿಂ ಪರಾಮ್ ॥ ೫ ॥

ತಥಾಪಿ ಭೂಮನ್ಮಹಿಮಾಗುಣಸ್ಯ ತೇ
ವಿಬೋದ್ಧುಮರ್ಹತ್ಯಮಲಾಂತರಾತ್ಮಭಿಃ ।
ಅವಿಕ್ರಿಯಾತ್ಸ್ವಾನುಭವಾದರೂಪತೋ
ಹ್ಯನನ್ಯಬೋಧ್ಯಾತ್ಮತಯಾ ನ ಚಾನ್ಯಥಾ ॥ ೬ ॥

ಅಪ್ರಾಕೃತವಾದ ಶುದ್ಧಸತ್ತ್ವಮಯ ಶರೀರವಾಗಿದೆ. ನಾನೇ ಆಗಲೀ, ಇತರ ಯೋಗಿಗಳೇ ಆಗಲೀ ಸಮಾಧಿಸ್ಥರಾಗಿ ನಿನ್ನ ಈ ಸಚ್ಚಿದಾನಂದ ವಿಗ್ರಹದ ಸ್ವರೂಪವನ್ನೂ, ಮಹಿಮೆಯನ್ನೂ ತಿಳಿಯಲಾರೆವು. ಆತ್ಮಾನಂದಾನುಭವ ಸ್ವರೂಪವಾದ ನಿನ್ನ ಮಹಿಮೆಯನ್ನು ಏಕಾಗ್ರ ಮನಸ್ಸಿನಿಂದಲಾದರೂ ಯಾರಿಗೆ ತಾನೇ ತಿಳಿಯಲು ಸಾಧ್ಯವಾಗುತ್ತದೆ? ॥ ೨ ॥ ಪ್ರಭುವೇ! ಯಾರು ಜ್ಞಾನಪ್ರಾಪ್ತಿಗಾಗಿ ಪ್ರಯತ್ನಿಸದೆಯೇ ತಾವಿರುವ ಸ್ಥಳದಲ್ಲೇ ಇದ್ದು ಕೊಂಡು ಸತ್ಪುರುಷರ ಸಹವಾಸದಲ್ಲಿರುತ್ತಾ, ನಿನಗೆ ಪ್ರಿಯತಮ ರಾದ ಸಂತರು ಹೇಳುವ ನಿನ್ನ ಲೀಲಾಪ್ರಸಂಗಗಳನ್ನು ಶರೀರ, ಮಾತು, ಮನಸ್ಸುಗಳೆಂಬ ತ್ರಿಕರಣಗಳಿಂದಲೂ ಶ್ರದ್ಧೆಯಿಟ್ಟು ಕೇಳುತ್ತಾ, ಮತ್ತಾವ ಕಾರ್ಯಗಳನ್ನು ಮಾಡದೆ ಇರುತ್ತಾರೋ, ಅಂತಹವರು ತ್ರಿಲೋಕಗಳಲ್ಲಿಯೂ ಯಾರಿಂದಲೂ ಜಯಿಸಲ್ಪಡ ದಿರುವ ನಿನ್ನನ್ನು ಜಯಿಸುತ್ತಾರೆ. ಅನನ್ಯಭಕ್ತಿಯ ಮೂಲಕವಾಗಿ ನಿನ್ನನ್ನು ವಶಪಡಿಸಿ ಕೊಳ್ಳುತ್ತಾರೆ. ॥ ೩ ॥ ಭಗವಂತನೇ! ನಿನ್ನ ಭಕ್ತಿಯು ಎಲ್ಲ ವಿಧದಿಂದ ಶ್ರೇಯಸ್ಸಿನ ಮೂಲಸ್ರೋತವಾಗಿದೆ. ಉದ್ಗಮವಾಗಿದೆ. ಯಾರು ಅದನ್ನು ಬಿಟ್ಟು ಕೇವಲ ಜ್ಞಾನಪ್ರಾಪ್ತಿ ಗಾಗಿ ಶ್ರಮಪಡುವರೋ ಅವರು ದುಃಖವನ್ನೇ ಭೋಗಿಸುವರು. ಅವರಿಗೆ ಕ್ಲೇಶ, ಶ್ರಮವೇ ಉಳಿದುಕೊಳ್ಳುತ್ತದೆ. ಹೊಟ್ಟನ್ನು ಕುಟ್ಟುವ ವನಿಗೆ ಅಕ್ಕಿಯು ಸಿಗದೆ ಕೇವಲ ಪರಿಶ್ರಮ ಮಾತ್ರ ಕೈಗೂಡುತ್ತದೆ. ಹಾಗೆಯೇ ಕೇವಲ ಜ್ಞಾನಕ್ಕಾಗಿ ಶ್ರಮಿಸುವವರಿಗೆ ಶ್ರಮವು ಮಾತ್ರ ಉಳಿದುಕೊಂಡಿರುತ್ತದೆ. ॥ ೪ ॥

ಓ ಅಚ್ಯುತನೇ! ಓ ಅನಂತನೇ! ಈ ಲೋಕದಲ್ಲಿ ಹಿಂದೆಯೂ ಹಲವಾರು ಯೋಗಿಗಳು ಆಗಿಹೋಗಿದ್ದಾರೆ. ಯೋಗವೇ ಮೊದ ಲಾದವುಗಳ ಮೂಲಕ ಅವರಿಗೆ ಪರಮಪದದ ಪ್ರಾಪ್ತಿಯಾಗ ದಿರಲು, ಅವರು ಮಾಡಿದ ತಮ್ಮ ವೈದಿಕ ಮತ್ತು ಲೌಕಿಕಕರ್ಮ ಗಳೆಲ್ಲವನ್ನು ನಿನಗೆ ಸಮರ್ಪಿಸಿದ್ದರಿಂದಲೂ, ನಿನ್ನ ಲೀಲಾ ಪ್ರಸಂಗ ಗಳನ್ನು ಕೇಳುವುದರಿಂದಲೂ ಅವರಿಗೆ ನಿನ್ನಲ್ಲಿ ಅಪಾರವಾದ ಭಕ್ತಿಯುಂಟಾಯಿತು. ಆ ಪರಾಭಕ್ತಿಯಿಂದಲೇ ಅವರು ನಿನ್ನ ಸ್ವರೂಪದ ಜ್ಞಾನವನ್ನು ತಿಳಿದವರಾಗಿ ಬಹಳ ಸುಲಭವಾಗಿ ನಿನ್ನ ಪರಮಪದವನ್ನು ಸೇರಿದರು. ॥ ೫ ॥ ಆದರೂ ಪರಬ್ರಹ್ಮಸ್ವರೂಪ ನಾದ ಪರಮೇಶ್ವರನೇ! ನಿನ್ನ ನಿರ್ಗುಣ ಸ್ವರೂಪದ ಮಹಿಮೆಯೂ ಪರಿಶುದ್ಧವಾದ ಅಂತಃಕರಣವುಳ್ಳವರಿಗೆ ತಿಳಿಯಲು ಸಾಧ್ಯವಾಗ ಬಹುದು. ಆಗಲೂ ಅದು ನಿರ್ವಿಕಾರವೂ ನಿರ್ವಿಷಯವೂ ಆದ ಅಂತಃಕರಣಕ್ಕೆ ಸ್ವಯಂ ಪ್ರಕಾಶವಾಗಿ ಗೋಚರಿಸುತ್ತದೆಯೇ ಹೊರತು ಬೇರೆ ವಿಧದಿಂದ ಗೋಚರಿಸುವುದಿಲ್ಲ. ಯಾವ ವಿಧ ವಾದ ವಿಕಾರವೂ ಇಲ್ಲದೆ ಅದು ಕಾಣುತ್ತದೆ. ಅದಕ್ಕೆ ನಿರ್ದಿಷ್ಟವಾದ ರೂಪವಿಲ್ಲ. ಅದು ಹೀಗಿರುವುದೆಂದು ಇತರರಿಗೆ ಹೇಳಲು ಸಾಧ್ಯವಾಗುವುದಿಲ್ಲ. ಪ್ರಕಾಶಮಾನವಾದ ಆತ್ಮರೂಪದಲ್ಲಿ ಅದನ್ನು ಕಾಣಬಹುದು. ॥ ೬ ॥ ಭಗವಂತ! ಸಮರ್ಥರಾದ ಪುರುಷರು ಹಲವಾರು ಜನ್ಮಗಳ ಪರಿಶ್ರಮದಿಂದ ಭೂಮಿಯಲ್ಲಿರುವ ಕಣ ಗಳನ್ನೂ, ಆಕಾಶದಲ್ಲಿರುವ ಹಿಮದ ತುಂತುರುಗಳನ್ನು

ಗುಣಾತ್ಮನಸ್ತೇಽಪಿ ಗುಣಾನ್ವಿಮಾತುಂ
ಹಿತಾವತೀರ್ಣಸ್ಯ ಕ ಈಶಿರೇಽಸ್ಯ ।
ಕಾಲೇನ ಯೈರ್ವಾ ವಿಮಿತಾಃ ಸುಕಲ್ಪೈ-
ರ್ಭೂಪಾಂಸವಃ ಖೇ ಮಿಹಿಕಾ ದ್ಯುಭಾಸಃ ॥ ೭ ॥

ಝುಗಝುಗಿಸುವ ನಕ್ಷತ್ರ ತಾರೆಗಳನ್ನು ಎಣಿಸಿಯಾರು. ಆದರೆ ನಿನ್ನ ಸಗುಣ ಸ್ವರೂಪದ ಅನಂತಾನಂತ ಗುಣಗಳನ್ನು ಯಾರು ತಾನೇ ಎಣಿಸಬಲ್ಲರು ? ಮಹಾನುಭಾವನೇ ! ನೀನು ಪ್ರಪಂಚಕ್ಕೆ ಕಲ್ಯಾಣವನ್ನುಂಟುಮಾಡಲೆಂದೇ ಅವತರಿಸಿರುವೆ. ನಿನ್ನ ಮಹಿಮೆಯನ್ನು ತಿಳಿಯುವುದು ಅತ್ಯಂತ ಕಠಿಣವೇ ಸರಿ. ॥ ೭ ॥

ತತ್ತೇಽನುಕಂಪಾಂ ಸುಸಮೀಕ್ಷಮಾಣೋ
ಭುಂಜಾನ ಏವಾತ್ಮಕೃತಂ ವಿಪಾಕಮ್ ।
ಹೃದ್ವಾಗ್ವಪುರ್ಭಿರ್ವಿದಧನ್ನಮಸ್ತೇ
ಜೀವೇತ ಯೋ ಮುಕ್ತಿಪದೇ ಸ ದಾಯಭಾಕ್ ॥ ೮ ॥

ಯಾವ ಪುರುಷನು ಹೆಚ್ಚಿನ ಉತ್ಸಾಹದಿಂದ ನಿನ್ನ ಕೃಪೆಯನ್ನು ಕ್ಷಣ-ಕ್ಷಣಕ್ಕೂ ಪ್ರತೀಕ್ಷಿಸುತ್ತಿರುವನೋ, ಪ್ರಾರಬ್ಧ ಕರ್ಮಗಳಿಗೆ ಅನುಸಾರವಾಗಿ ಒದಗಿಬರುವ ಸುಖ-ದುಃಖಗಳನ್ನು ನಿರ್ವಿಕಾರವಾದ ಮನೋಭಾವದಿಂದ ಉಪಭೋಗಿಸುವನೋ, ಪ್ರೇಮಪೂರ್ಣವಾದ ಹೃದಯದಿಂದ, ಗದ್ಗದವಾದ ಧ್ವನಿಯಿಂದ, ಪುಳಕಿತವಾದ ಶರೀರದಿಂದ ತನ್ನನ್ನೇ ತಾನು ನಿನಗೆ ಅರ್ಪಿಸಿಕೊಳ್ಳುವನೋ ಅಂತಹವನು ತಂದೆಯ ಸಂಪತ್ತಿಗೆ ಮಗನು ಸಹಜವಾಗಿಯೇ ಅಧಿಕಾರಿಯಾಗುವಂತೆ ನಿನ್ನ ಪರಮಪದವನ್ನು ಹೊಂದಲು ಅಧಿಕಾರಿಯಾಗುತ್ತಾನೆ. ॥ ೮ ॥

ಪಶ್ಯೇಶ ಮೇಽನಾರ್ಯಮನಂತ ಆದ್ಯೇ
ಪರಾತ್ಮನಿ ತ್ವಯ್ಯಪಿ ಮಾಯಿಮಾಯಿನಿ ।
ಮಾಯಾಂ ವಿತತ್ಯೇಕ್ಷಿತುಮಾತ್ಮವೈಭವಂ
ಹ್ಯಹಂ ಕಿಯಾನೈಚ್ಛಮಿವಾರ್ಚಿರಗ್ನೌ ॥ ೯ ॥

ಪ್ರಭುವೇ ! ನನ್ನ ಕುಟಿಲತೆಯನ್ನಾದರೂ ನೋಡು. ನೀನು ಅನಂತನೂ, ಆದಿ ಪುರುಷನೂ ಆದ ಪರಮಾತ್ಮನಾಗಿರುವೆ. ನನ್ನಂತಹ ದೊಡ್ಡ-ದೊಡ್ಡ ಮಾಯಾವಿಗಳೂ ಸಹ ನಿನ್ನ ಮಾಯಾ ಚಕ್ರಕ್ಕೆ ಸಿಲುಕಿರುತ್ತಾರೆ. ಆದರೂ ನನ್ನ ಮಾಯೆಯನ್ನು ನಿನ್ನ ಮೇಲೆ ಚೆಲ್ಲಿ ನಿನ್ನ ಮಹಿಮೆಯನ್ನು ನಾನು ನೋಡಬಯಸಿದೆನು. ಆದರೆ ನಿನ್ನ ಮಾಯಾಚಕ್ರಕ್ಕೆ ಸಿಕ್ಕಿಕೊಂಡ ನಾನು ಬೆಂಕಿಯ ಮುಂದೆ ಕಿಡಿಯಂತೆ ನಿನ್ನ ಮುಂದೆ ನಗಣ್ಯನಾಗಿದ್ದೇನೆ. ॥ ೯ ॥

ಅತಃ ಕ್ಷಮಸ್ವಾಚ್ಯುತ ಮೇ ರಜೋಭುವೋ
ಹ್ಯಜಾನತಸ್ತ್ವತ್ಪೃಥಗೀಶಮಾನಿನಃ ।
ಅಜಾವಲೇಪಾಂಧತಮೋಽಂಧಚಕ್ಷುಷ
ಏಷೋಽನುಕಂಪ್ಯೋ ಮಯಿ ನಾಥವಾನಿತಿ ॥ ೧೦ ॥

ಓ ಭಗವಂತ ! ನಾನು ರಜೋಗುಣದಿಂದ ಉತ್ಪನ್ನನಾದವನು. ನಿನ್ನ ದಿವ್ಯ ಸ್ವರೂಪವನ್ನು ಮಹಿಮೆಯನ್ನೂ ನಾನು ಚೆನ್ನಾಗಿ ತಿಳಿದವನಾಗಿಲ್ಲ. ಈ ಕಾರಣದಿಂದಲೇ ಈ ಪ್ರಪಂಚಕ್ಕೆ ನಿನ್ನಂತೆಯೇ ನಾನೂ ಒಬ್ಬ ಈಶನೆಂದೇ ಭಾವಿಸಿಕೊಂಡುಬಿಟ್ಟೆನು. 'ನಾನು ಸೃಷ್ಟಿ ರಚಯಿತನೂ, ಜಗತ್ಕರ್ತೃವು ಆಗಿದ್ದೇನೆ' ಎಂಬ ಮಾಯಾಕೃತವಾದ ಮೋಹವೆಂಬ ದಟ್ಟವಾದ ಅಂಧಕಾರದಲ್ಲಿ ಮುಳುಗಿ ಅಂಧನಾಗಿಬಿಟ್ಟಿದ್ದೇನೆ. ಆದುದರಿಂದ ಈ ವಿಷಯವನ್ನು ನೀನು ಮನಗಂಡು 'ಇವನು ನನ್ನ ಅಧೀನದಲ್ಲೇ ಇದ್ದಾನೆ, ನನ್ನ ಸೇವಕನೇ ಆಗಿದ್ದಾನೆ, ಇವನ ಮೇಲೆ ಕೃಪೆ ತೋರುವುದು ಅಗತ್ಯವಾಗಿದೆ' ನೀನೇ ನನ್ನ ಸ್ವಾಮಿಯಾಗಿದ್ದೀಯೇ ಇಂದು ನಾನು ಸನಾಥನಾದೆ. ಎಂದು ಭಾವಿಸಿ ನನ್ನ ಅಪರಾಧವನ್ನು ಕ್ಷಮಿಸಿ ಬಿಡು. ॥ ೧೦ ॥

ಕ್ವಾಹಂ ತಮೋಮಹದಹಂಖಚರಾಗ್ನಿವಾರ್ಭೂ-
ಸಂವೇಷ್ಟಿತಾಂಡಘಟಸಪ್ತವಿತಸ್ತಿಕಾಯಃ ।
ಕ್ವೇದೃಗ್ವಿಧಾವಿಗಣಿತಾಂಡಪರಾಣುಚರ್ಯಾ-
ವಾತಾಧ್ವರೋಮವಿವರಸ್ಯ ಚ ತೇ ಮಹಿತ್ವಮ್ ॥ ೧೧ ॥

ಸ್ವಾಮಿಯೇ ! ಪ್ರಕೃತಿ, ಮಹತ್ತತ್ತ್ವ, ಅಹಂಕಾರ, ಆಕಾಶ, ವಾಯು, ಅಗ್ನಿ ಜಲ ಮತ್ತು ಪೃಥಿವಿರೂಪವಾದ ಆವರಣಗಳಿಂದ ಕೂಡಿರುವ ಈ ಬ್ರಹ್ಮಾಂಡವು ನನ್ನ ಶರೀರವಾಗಿರುವುದು. ಆದರೆ ನಿನ್ನ ರೋಮ-ರೋಮಗಳಲ್ಲಿ ಗವಾಕ್ಷಿಯಿಂದ ಬಂದಿರುವ ಸೂರ್ಯಕಿರಣದಲ್ಲಿ ಕಾಣುವ ಪರಮಾಣುಗಳಂತೆ ಅಗಣಿತವಾದ ಇಂತಹ ಬ್ರಹ್ಮಾಂಡಗಳಿವೆ. ಅಂತಹ ನಿನ್ನ ಅನಂತವಾದ ಮಹಿಮೆಯೆಲ್ಲಿ? ಕೇವಲ ಏಳು ಗೇಣುದ್ದದ ಶರೀರವನ್ನು ಧರಿಸಿರುವ ನಾನೆಲ್ಲಿ? ನಮ್ಮಿಬ್ಬರಿಗೂ ಪರ್ವತ ಪರಮಾಣುಗಳ ಅಂತರವೆಂದೇ ಹೇಳಬಹುದು. ॥ ೧೧ ॥

ಉತ್ಕ್ಷೇಪಣಂ ಗರ್ಭಗತಸ್ಯ ಪಾದಯೋಃ
ಕಿಂ ಕಲ್ಪತೇ ಮಾತುರಧೋಕ್ಷಜಾಗಸೇ ।
ಕಿಮಸ್ತಿನಾಸ್ತಿವ್ಯಪದೇಶಭೂಷಿತಂ
ತವಾಸ್ತಿ ಕುಕ್ಷೇಃ ಕಿಯದಪ್ಯನಂತಃ ॥ ೧೨ ॥

ಅಧೋಕ್ಷಜನೇ! ಮಗುವು ತಾಯಿಯ ಹೊಟ್ಟೆಯಲ್ಲಿರುವಾಗ ಕೈ-ಕಾಲುಗಳನ್ನು ಬಡಿಯುತ್ತದೆ. ಇದರಿಂದಾಗಿ ತಾಯಿಗೆ ಅಪರಾಧ ಮಾಡಿದಂತಾಗುತ್ತದೆಯೇ? ತಾಯಿಯು ಇದನ್ನು ಅಪರಾಧವೆಂದು ಭಾವಿಸುವಳೇ? ಅಸ್ತಿ-ನಾಸ್ತಿ ಎಂದು ಹೇಳಲ್ಪಡುವ ಯಾವುದೇ ವಸ್ತುಗಳಾದರೂ ನಿನ್ನ ಹೊಟ್ಟೆಯನ್ನು ಬಿಟ್ಟು ಬೇರೆಡೆಯಲ್ಲಿರುತ್ತವೆಯೇ? ಆದುದರಿಂದ ನಾನು ನಿನ್ನ ಹೊಟ್ಟೆಯಲ್ಲೇ ಇದ್ದೇನೆ. ಅದರಿಂದಾಗಿ ನಾನು ಮಾಡಿದ ಅಪರಾಧವನ್ನು ನೀನು ಕ್ಷಮಿಸಿ ಬಿಡು. ॥ ೧೨ ॥

ಜಗತ್ತ್ರಯಾಂತೋದಧಿಸಂಪ್ಲವೋದೇ
ನಾರಾಯಣಸ್ಯೋದರನಾಭಿನಾಲಾತ್ ।
ವಿನಿರ್ಗತೋಽಜಸ್ತ್ವಿತಿ ವಾಙ್ನ ವೈ ಮೃಷಾ
ಕಿಂ ತ್ವೀಶ್ವರ ತ್ವನ್ನ ವಿನಿರ್ಗತೋಽಸ್ಮಿ ॥ ೧೩ ॥

ಪ್ರಳಯಕಾಲದಲ್ಲಿ ಮೂರುಲೋಕಗಳೂ ನೀರಿನಲ್ಲಿ ಮುಳುಗಿ ಹೋಗಿದ್ದಾಗ ನಾರಾಯಣನೊಬ್ಬನೇ ಪವಡಿಸಿದ್ದನೆಂದೂ, ಅವನ ನಾಭಿಕಮಲದಿಂದ ಬ್ರಹ್ಮನು ಹುಟ್ಟಿದನೆಂದೂ ಶ್ರುತಿಗಳು ಸಾರುತ್ತವೆ. ಈ ಶ್ರುತಿ ವಾಕ್ಯವು ಖಂಡಿತವಾಗಿ ಸುಳ್ಳಲ್ಲ, ಪ್ರಭೋ! ನೀನೇ ಹೇಳು. ನಿನ್ನ ನಾಭಿಕಮಲದಿಂದ ಹುಟ್ಟಿದ ನಾನು ನಿನ್ನ ಮಗನೇ ಅಲ್ಲವೇ? ॥ ೧೩ ॥

ನಾರಾಯಣಸ್ತ್ವಂ ನ ಹಿ ಸರ್ವದೇಹಿನಾ-
ಮಾತ್ಮಾಸ್ಯಧೀಶಾಖಿಲಲೋಕಸಾಕ್ಷೀ ।
ನಾರಾಯಣೋಽಂಗಂ ನರಭೂಜಲಾಯನಾ-
ತ್ತಚ್ಚಾಪಿ ಸತ್ಯಂ ನ ತವೈವ ಮಾಯಾ ॥ ೧೪ ॥

ಸ್ವಾಮಿಯೇ! ನಾರಾಯಣನಾಗಿರುವ ನೀನು ಸಮಸ್ತ ಶರೀರಿಗಳಿಗೂ ಆತ್ಮಸ್ವರೂಪನಾಗಿರುವೆಯಲ್ಲವೆ? ಅಧೀಶನೂ ಆಗಿರುವೆಯಲ್ಲವೇ? ಸಮಸ್ತ ಲೋಕಗಳಿಗೂ ಸಾಕ್ಷಿಯಾಗಿರುವೆಯಲ್ಲವೇ? ಸಾಕ್ಷಾತ್ ನಾರಾಯಣನು ನೀನೇ ಆಗಿರುವೆ. ನರನಿಂದ ಉತ್ಪನ್ನವಾದ ಜಲವನ್ನು ನಿನ್ನ ಆಶ್ರಯವೆಂದು ಹೇಳಲಾಗುತ್ತದೆ. ಆದರೆ ಅದೂ ಸತ್ಯವಲ್ಲ, ಇದೆಲ್ಲವೂ ನಿನ್ನ ಮಾಯೆಯೇ ಆಗಿದೆ. ॥ ೧೪ ॥

ತಚ್ಚೇಜ್ಜಲಸ್ಥಂ ತವ ಸಜ್ಜಗದ್ವಪುಃ
ಕಿಂ ಮೇ ನ ದೃಷ್ಟಂ ಭಗವಂಸ್ತದೈವ ।
ಕಿಂ ವಾ ಸುದೃಷ್ಟಂ ಹೃದಿ ಮೇ ತದೈವ
ಕಿಂ ನೋ ಸಪದ್ಯೇವ ಪುನರ್ವ್ಯದರ್ಶಿ ॥ ೧೫ ॥

ಭಗವಂತನೇ! ನಿನ್ನ ವಿರಾಟ್ ಸ್ವರೂಪವು ಆ ಸಮಯದಲ್ಲಿ ಜಲದಲ್ಲೇ ಇದ್ದುದಾದರೆ ನಾನು ಕಮಲನಾಳದ ಮೂಲಕ ನೀರಿನ ಒಳಹೊಕ್ಕು ನೂರು ವರ್ಷಗಳವರೆಗೂ ಹುಡುಕಿದರೂ ಆ ನಿನ್ನ ಸ್ವರೂಪವನ್ನು ಏಕೆ ಕಾಣಲಿಲ್ಲ? ಪುನಃ ನಾನು ತಪಸ್ಸು ಮಾಡಿದಾಗ ನನ್ನ ವಕ್ಷಸ್ಥಳದಲ್ಲಿ ಆ ದಿವ್ಯಸ್ವರೂಪವು ಹೇಗೆ ಕಾಣಿಸಿಕೊಂಡಿತು? ಆ ದಿವ್ಯ ಸ್ವರೂಪವು ಹೃದಯ ಗುಹೆಯಲ್ಲಿ ಕ್ಷಣಮಾತ್ರವೇ ಕಂಡು ಪುನಃ ಮರೆಯಾದುದೇಕೆ? ॥ ೧೫ ॥

ಅತ್ರೈವ ಮಾಯಾಧಮನಾವತಾರೇ
ಹ್ಯಸ್ಯ ಪ್ರಪಂಚಸ್ಯ ಬಹಿಃ ಸ್ಫುಟಸ್ಯ ।
ಕೃತ್ಸ್ನಸ್ಯ ಚಾಂತರ್ಜಠರೇ ಜನನ್ಯಾ
ಮಾಯಾತ್ವಮೇವ ಪ್ರಕಟೀಕೃತಂ ತೇ ॥ ೧೬ ॥

ಮಾಯೆಯನ್ನು ಉಪಶಮನಗೊಳಿಸುವ ಮಾಯಾಧವನೇ! ಯುಗಾಂತರದಲ್ಲಿ ನಡೆದ ವಿಷಯವು ಹಾಗಿರಲಿ. ಇದೇ ನಿನ್ನ ಈ ಅವತಾರದಲ್ಲಿಯೇ ಹೊರಗೆ ಸ್ಪಷ್ಟವಾಗಿ ಕಾಣುತ್ತಿರುವ ಈ ಜಗತ್ತನ್ನು ನಿನ್ನ ಹೊಟ್ಟೆಯಲ್ಲಿ ತೋರಿಸಿ ತಾಯಿಯಾದ ಯಶೋದೆಯನ್ನು ತಬ್ಬಿಬ್ಬುಗೊಳಿಸಿಬಿಟ್ಟೆ. ಆದುದರಿಂದ ಈ ಸಮಸ್ತ ಜಗತ್ತು ನಿನ್ನ ಮಾಯಾಕಲ್ಪಿತವೆಂದೇ ಸಿದ್ಧಾಂತವಾಗುತ್ತದೆ. ॥ ೧೬ ॥

ಯಸ್ಯ ಕುಕ್ಷಾವಿದಂ ಸರ್ವಂ ಸಾತ್ಮಂ ಭಾತಿ ಯಥಾ ತಥಾ ।
ತತ್ತ್ವಯ್ಯಪೀಹ ತತ್ಸರ್ವಂ ಕಿಮಿದಂ ಮಾಯಯಾ ವಿನಾ ॥ ೧೭ ॥

ದಯಾಳುವೆ! ನಿನ್ನಿಂದ ಉಂಟಾದ ಈ ಅಖಂಡವಿಶ್ವವು ಹೊರಗೆ ಕಾಣುತ್ತಿರುವಂತೆಯೇ ನಿನ್ನ ಸಹಿತ ನಿನ್ನ ಉದರದಲ್ಲಿಯೂ ಕಂಡಿತು. ಇದು ನಿನ್ನ ಮಾಯೆಯಲ್ಲದೆ ಮತ್ತೇನು? ಇದು ನಿನ್ನ ಲೀಲಾವಿನೋದವೇ ಆಗಿದೆ. ॥ ೧೭ ॥

ಅದ್ಯೈವ ತ್ವದೃತೇಽಸ್ಯ ಕಿಂ ಮಮ ನ ತೇ
ಮಾಯಾತ್ವಮಾದರ್ಶಿತ-
ಮೇಕೋಽಸಿ ಪ್ರಥಮಂ ತತೋ ವ್ರಜಸುಹೃದ್
ವತ್ಸಾಃ ಸಮಸ್ತಾ ಅಪಿ ।

ಅಂದು ನಿನ್ನ ತಾಯಿಗೆ ಉದರದಲ್ಲಿ ಬ್ರಹ್ಮಾಂಡವನ್ನು ತೋರಿಸಿದ್ದ ಮಾತಿರಲಿ; ಇಂದು ನೀನು ತೋರಿಸಿದ ವಿಶ್ವರೂಪವಾದರೂ ಸಾಮಾನ್ಯವಾದ ಲೀಲೆಯೆ? ಮೊದಲು ನೀನು ಒಬ್ಬನೇ ಇದ್ದೆ. ಅನಂತರ ಸಮಸ್ತ ಗೋಪಬಾಲಕರೂ, ಕರುಗಳೂ ನೀನೇ ಆಗಿಬಿಟ್ಟೆ. ಕೊಳಲು, ಕೊಂಬು, ಬೆತ್ತಗಳೂ ನಿನ್ನ ರೂಪಗಳೇ ಆದುವು. ಅನಂತರ ಗೋಪಬಾಲಕರಾದಿಯಾಗಿ ಸಮಸ್ತ ವಸ್ತುಗಳೂ

ತಾವಂತೋಽಸಿ ಚತುರ್ಭುಜಾಸ್ತದಖಿಲೈಃ
ಸಾಕಂ ಮಯೋಪಾಸಿತಾಃ
ತಾವಂತ್ಯೇವ ಜಗಂತ್ಯಭೂಸ್ತದಮಿತಂ
ಬ್ರಹ್ಮಾದ್ವಯಂ ಶಿಷ್ಯತೇ ॥ ೧೮ ॥

ಅಜಾನತಾಂ ತ್ವತ್ಪದವೀಮನಾತ್ಮ-
ನ್ಯಾತ್ಮಾಽಽತ್ಮನಾ ಭಾಸಿ ವಿತತ್ಯ ಮಾಯಾಮ್ ।
ಸೃಷ್ಟಾವಿವಾಹಂ ಜಗತೋ ವಿಧಾನೇ
ಇವ ತ್ವಮೇಷೋಽಂತ ಇವ ತ್ರಿನೇತ್ರಃ ॥ ೧೯ ॥

ಸುರೇಷ್ವೃಷಿಷ್ವೀಶ ತಥೈವ ನೃಷ್ವಪಿ
ತಿರ್ಯಕ್ಷು ಯಾದಸ್ಸ್ವಪಿ ತೇಽಜನಸ್ಯ ।
ಜನ್ಮಾಸತಾಂ ದುರ್ಮದನಿಗ್ರಹಾಯ
ಪ್ರಭೋ ವಿಧಾತಃ ಸದನುಗ್ರಹಾಯ ಚ ॥ ೨೦ ॥

ಕೋ ವೇತ್ತಿ ಭೂಮನ್ಭಗವನ್ಪರಾತ್ಮನ್
ಯೋಗೇಶ್ವರೋತೀರ್ಭವತಸ್ತ್ರಿಲೋಕ್ಯಾಮ್ ।
ಕ್ವ ವಾ ಕಥಂ ವಾ ಕತಿ ವಾ ಕದೇತಿ
ವಿಸ್ತಾರಯನ್ಕ್ರೀಡಸಿ ಯೋಗಮಾಯಾಮ್ ॥ ೨೧ ॥

ತಸ್ಮಾದಿದಂ ಜಗದಶೇಷಮಸತ್ಸ್ವರೂಪಂ
ಸ್ವಪ್ನಾಭಮಸ್ತಧಿಷಣಂ ಪುರುದುಃಖದುಃಖಮ್ ।
ತ್ವಯ್ಯೇವ ನಿತ್ಯಸುಖಬೋಧತನಾವನಂತೇ
ಮಾಯಾತ ಉದ್ಯದಪಿ ಯತ್ಸದಿವಾವಭಾತಿ ॥ ೨೨ ॥

ಏಕಸ್ತ್ವಮಾತ್ಮಾ ಪುರುಷಃ ಪುರಾಣಃ
ಸತ್ಯಃ ಸ್ವಯಂಜ್ಯೋತಿರನಂತ ಆದ್ಯಃ ।
ನಿತ್ಯೋಽಕ್ಷರೋಽಜಸ್ರಸುಖೋ ನಿರಂಜನಃ
ಪೂರ್ಣೋಽದ್ವಯೋ ಮುಕ್ತ ಉಪಾಧಿತೋಽಮೃತಃ ॥ ೨೩ ॥

ಏವಂವಿಧಂ ತ್ವಾಂ ಸಕಲಾತ್ಮನಾಮಪಿ
ಸ್ವಾತ್ಮಾನಮಾತ್ಮಾತ್ಮತಯಾ ವಿಚಕ್ಷತೇ ।
ಗುರ್ವರ್ಕಲಬ್ಧೋಪನಿಷತ್ಸುಚಕ್ಷುಷಾ
ಯೇ ತೇ ತರಂತೀವ ಭವಾನೃತಾಂಬುಧಿಮ್ ॥ ೨೪ ॥

ಚತುರ್ಭುಜರಾಗಿ ಪೀತಾಂಬರಗಳನ್ನು ಧರಿಸಿಕೊಂಡು ಸರ್ವಾಲಂಕಾರ ಭೂಷಿತರಾಗಿ ನನ್ನಿಂದಲೂ, ಇಪ್ಪತ್ತು ನಾಲ್ಕು ತತ್ತ್ವಗಳಿಂದಲೂ ಸೇವಿಸಲ್ಪಡುತ್ತಿರುವಂತೆ ಕಾಣಿಸಿಕೊಂಡೆ. ಅನಂತರ ನೀನೇ ಸಕಲ ಬ್ರಹ್ಮಾಂಡಗಳಾಗಿಯೂ ತೋರಿಕೊಂಡೆ. ಆದರೆ ಈಗ ನೀನೇ ಅಪರಿಚ್ಛಿನ್ನವೂ, ಅದ್ವಿತೀಯವೂ ಆದ ಬ್ರಹ್ಮನಾಗಿ ಉಳಿದಿರುವೆ. ॥ ೧೮ ॥ ಅಜ್ಞಾನವಶರಾದ ಜನರು ನಿನ್ನ ಸ್ವರೂಪವನ್ನು ತಿಳಿಯಲಾರರು. ಅವರಿಗೆ ನೀನು ಪ್ರಕೃತಿಸ್ಥ ಜೀವಿಯ ರೂಪದಲ್ಲಿ ಕಂಡುಬರುವೆ. ಅವರ ಮೇಲೆ ನಿನ್ನ ಮಾಯೆಯ ಜಾಲವನ್ನು ಬೀಸಿ, ಸೃಷ್ಟಿಯ ಸಮಯದಲ್ಲಿ ನನ್ನ (ಬ್ರಹ್ಮ)ರೂಪದಿಂದ, ಪಾಲಿಸುವ ಸಮಯದಲ್ಲಿ ನಿನ್ನ (ವಿಷ್ಣು) ರೂಪದಿಂದ ಮತ್ತು ಸಂಹಾರದ ಸಮಯದಲ್ಲಿ ರುದ್ರರೂಪದಿಂದ ಕಂಡುಬರುವೆ. ॥ ೧೯ ॥ ಪ್ರಭುವೇ! ನೀನು ಸಮಸ್ತ ಪ್ರಪಂಚಕ್ಕೂ ಒಡೆಯನೂ, ನಿಯಾಮಕನೂ ಆಗಿರುವೆ. ನೀನು ಜನ್ಮರಹಿತನೇ ಆದರೂ ದೇವ ಋಷಿ-ಮನುಷ್ಯಾದಿಯೋನಿಗಳಲ್ಲಿಯೂ, ಪಶು-ಪಕ್ಷಿ-ಜಲಚರಾದಿ ಯೋನಿಗಳಲ್ಲಿಯೂ ಅವತರಿಸಿರುವೆ. ಈ ನಿನ್ನ ಅವತಾರಗಳು ದುಷ್ಟರ ನಿಗ್ರಹಕ್ಕಾಗಿ ಮತ್ತು ಸತ್ಪುರುಷರ ಅನುಗ್ರಹಕ್ಕಾಗಿಯೇ ಆಗುವುದು. ॥ ೨೦ ॥ ಭಗವಂತನೇ! ನೀನು ಅನಂತನೂ, ಪರಮಾತ್ಮನೂ, ಯೋಗೇಶ್ವರನೂ ಆಗಿರುವೆ. ನೀನು ನಿನ್ನ ಯೋಗಮಾಯೆಯನ್ನು ವಿಸ್ತರಿಸಿಕೊಂಡು ಯಾವಾಗ? ಎಲ್ಲಿ? ಹೇಗೆ? ಎಷ್ಟು ಕಾಲದವರೆಗೆ ಕ್ರೀಡೆಯಾಡುವೆಯೆಂಬ ವಿಷಯವು ಈ ಮೂರು ಲೋಕಗಳಲ್ಲಿ ಯಾರಿಗೆ ತಾನೇ ತಿಳಿದಿರುತ್ತದೆ? ನಿನ್ನ ಯೋಗಮಾಯೆಯು ನಿನ್ನಂತೆಯೇ ಅಚಿಂತ್ಯವೂ, ಅಪ್ರಮೇಯವೂ ಆಗಿದೆ. ॥ ೨೧ ॥ ಆದುದರಿಂದ ಈ ಸಮಸ್ತ ಜಗತ್ತು ಅಸತ್ಸ್ವರೂಪವಾದುದು. ಇದು ಸ್ವಪ್ನಸದೃಶವಾಗಿಯೂ, ಚೈತನ್ಯರಹಿತವಾಗಿಯೂ, ದುಃಖದ ಮೇಲೆ ದುಃಖ ಒದಗಿಬರುವ ಸ್ಥಾನವೂ ಆಗಿದೆ. ಆದರೂ ಸಚ್ಚಿದಾನಂದಾತ್ಮಕನಾದ ನಿನ್ನಲ್ಲಿ ಜಗತ್ತು ಎಂಬುದು ಮಾಯೆಯಿಂದ ಜನಿಸಿ ಸಚ್ಚಿದಾನಂದಾತ್ಮಕವಾದ ನಿನ್ನ ಅಧಿಷ್ಠಾನದ ಬಲದಿಂದ ಸತ್ಯವಾಗಿರುವಂತೆಯೂ, ಸುಖಸ್ವರೂಪವಾಗಿರುವಂತೆಯೂ, ಚೇತನಸ್ವರೂಪವಾಗಿರುವಂತೆಯೂ ಭಾಸವಾಗುತ್ತದೆ. ॥ ೨೨ ॥ ಪ್ರಭುವೇ! ನೀನು ಏಕಮಾತ್ರ ಸತ್ಯನು. ಹೇಗೆಂದರೆ ನೀನು ಸಮಸ್ತರಲ್ಲಿಯೂ ಆತ್ಮಸ್ವರೂಪನಾಗಿರುವೆ. ನೀನು ಪುರಾಣ ಪುರುಷನಾದುದರಿಂದ ಜನ್ಮಾದಿವಿಕಾರಗಳಿಂದ ರಹಿತನಾಗಿರುವೆ. ಸ್ವಯಂಜ್ಯೋತಿಯೂ, ಅನಂತನೂ, ಆದಿ ಪುರುಷನೂ ನೀನೇ ಆಗಿರುವೆ. ನಿತ್ಯನೂ, ಕ್ಷಯರಹಿತನೂ, ಅಖಂಡಾನಂದ ಸ್ವರೂಪನೂ ನೀನೇ ಆಗಿರುವೆ. ನಿರಂಜನನೂ, ಪೂರ್ಣನೂ, ಅದ್ವಿತೀಯನೂ ನೀನೇ ಆಗಿರುವೆ. ಸಮಸ್ತವಾದ ಉಪಾಧಿಗಳಿಂದಲೂ ಮುಕ್ತನಾಗಿರುವುದರಿಂದ ಅಮೃತಸ್ವರೂಪನೂ ನೀನೇ ಆಗಿರುವೆ. ॥ ೨೩ ॥ ನೀನು ಎಲ್ಲ ಜೀವಿಗಳಲ್ಲಿಯೂ ಆತ್ಮಸ್ವರೂಪವಾಗಿ ಬೆಳಗುವೆ. ಗುರುರೂಪನಾದ ಸೂರ್ಯನಿಂದ ತತ್ತ್ವಜ್ಞಾನ ರೂಪವಾದ ದಿವ್ಯದೃಷ್ಟಿಯನ್ನು ಹೊಂದಿ ನಿನ್ನನ್ನು ತನ್ನಲ್ಲಿಯೇ ಸಾಕ್ಷಾತ್ಕರಿಸಿಕೊಂಡವರು ಈ ಮಿಥ್ಯಾಸಂಸಾರ ಸಾಗರವನ್ನು ದಾಟಿಹೋಗುತ್ತಾರೆ. ॥ ೨೪ ॥

ಆತ್ಮಾನಮೇವಾತ್ಮತಯಾವಿಜಾನತಾಂ
ತೇನೈವ ಜಾತಂ ನಿಖಿಲಂ ಪ್ರಪಂಚಿತಮ್ ।
ಜ್ಞಾನೇನ ಭೂಯೋಽಪಿ ಚ ತತ್ಪ್ರಲೀಯತೇ
ರಜ್ಜ್ವಾಮಹೇರ್ಭೋಗಭವಾಭವೌ ಯಥಾ ॥ ೨೫ ॥

ಅಜ್ಞಾನಸಂಜ್ಞೌ ಭವಬಂಧಮೋಕ್ಷೌ
ದ್ವೌ ನಾಮ ನಾನ್ಯೌ ಸ್ತ ಋತಜ್ಞಭಾವಾತ್ ।
ಅಜಸ್ರಚಿತ್ಯಾತ್ಮನಿ ಕೇವಲೇ ಪರೇ
ವಿಚಾರ್ಯಮಾಣೇ ತರಣಾವಿವಾಹನೀ ॥ ೨೬ ॥

ತ್ವಾಮಾತ್ಮಾನಂ ಪರಂ ಮತ್ವಾ ಪರಮಾತ್ಮಾನಮೇವ ಚ ।
ಆತ್ಮಾ ಪುನರ್ಬಹಿರ್ಮೃಗ್ಯ ಅಹೋಽಜ್ಞಜನತಾಜ್ಞತಾ ॥ ೨೭ ॥

ಅಂತರ್ಭವೇಽನಂತ ಭವಂತಮೇವ
ಹ್ಯತತ್ತ್ಯಜಂತೋ ಮೃಗಯಂತಿ ಸಂತಃ ।
ಅಸಂತಮಪ್ಯಂತ್ಯಹಿಮಂತರೇಣ
ಸಂತಂ ಗುಣಂ ತಂ ಕಿಮು ಯಂತಿ ಸಂತಃ ॥ ೨೮ ॥

ಅಥಾಪಿ ತೇ ದೇವ ಪದಾಂಬುಜದ್ವಯ-
ಪ್ರಸಾದಲೇಶಾನುಗೃಹೀತ ಏವ ಹಿ ।
ಜಾನಾತಿ ತತ್ತ್ವಂ ಭಗವನ್ಮಹಿಮ್ನೋ
ನ ಚಾನ್ಯ ಏಕೋಽಪಿ ಚಿರಂ ವಿಚಿನ್ವನ್ ॥ ೨೯ ॥

ತದಸ್ತು ಮೇ ನಾಥ ಸ ಭೂರಿಭಾಗೋ
ಭವೇಽತ್ರ ವಾನ್ಯತ್ರ ತು ವಾ ತಿರಶ್ಚಾಮ್ ।
ಯೇನಾಹಮೇಕೋಽಪಿ ಭವಜ್ಜನಾನಾಂ
ಭೂತ್ವಾ ನಿಷೇವೇ ತವ ಪಾದಪಲ್ಲವಮ್ ॥ ೩೦ ॥

ಅಹೋಽತಿಧನ್ಯಾ ವ್ರಜಗೋರಮಣ್ಯಃ
ಸ್ತನ್ಯಾಮೃತಂ ಪೀತಮತೀವ ತೇ ಮುದಾ ।
ಯಾಸಾಂ ವಿಭೋ ವತ್ಸತರಾತ್ಮಜಾತ್ಮನಾ
ಯತ್ತೃಪ್ತಯೇಽದ್ಯಾಪಿ ನ ಚಾಲಮಧ್ವರಾಃ ॥ ೩೧ ॥

ಪರಮಾತ್ಮನನ್ನು ಆತ್ಮರೂಪವಾಗಿ ತಿಳಿಯದವರಿಗೆ ಆ ಅಜ್ಞಾನದ ಕಾರಣದಿಂದಲೇ ಈ ನಾಮ-ರೂಪಾತ್ಮಕವಾದ ಅಖಿಲ ಜಗತ್ತಿನ ಉತ್ಪತ್ತಿಯ ಭ್ರಮೆ ಉಂಟಾಗುತ್ತದೆ. ಆದರೆ ಹಗ್ಗದಲ್ಲಿ ಉಂಟಾದ ಸರ್ಪದ ಭ್ರಮೆಯು ನಿವೃತ್ತವಾಗುತ್ತಲೇ ಸರ್ಪದ ಭಯ ಹೊರಟು ಹೋಗುವಂತೆ ಜ್ಞಾನ ಉಂಟಾಗುತ್ತಲೇ ಇದರ ಆತ್ಯಂತಿಕ ಪ್ರಳಯವಾಗಿ ಹೋಗುತ್ತದೆ. ॥ ೨೫ ॥ ಸಂಸಾರ ಸಂಬಂಧವಾದ ಬಂಧನ ಮತ್ತು ಅದರಿಂದ ಮೋಕ್ಷ ಇವೆರಡೂ ಅಜ್ಞಾನ ಕಲ್ಪಿತವೇ ಆಗಿವೆ. ವಾಸ್ತವವಾಗಿ ಇವೆರಡೂ ಅಜ್ಞಾನದ್ದೇ ಹೆಸರಾಗಿದೆ. ಇವುಗಳಿಗೆ ಸತ್ಯನೂ, ಜ್ಞಾನಸ್ವರೂಪನೂ ಆದ ಪರಮಾತ್ಮನಿಂದ ಭಿನ್ನವಾದ ಅಸ್ತಿತ್ವವೇ ಇರುವುದಿಲ್ಲ. ಸೂರ್ಯನಲ್ಲಿ ಹಗಲು-ಕತ್ತಲೆ ಎಂಬ ಭೇದವೇ ಇಲ್ಲದಿರುವಂತೇ ವಿಚಾರ ಮಾಡಿದಾಗ ಅಖಂಡ ಚಿತ್ಸ್ವರೂಪ, ಕೇವಲ ಶುದ್ಧ ಆತ್ಮತತ್ತ್ವದಲ್ಲಿ ಬಂಧನವಾಗಲೀ, ಮೋಕ್ಷವಾಗಲೀ ಇಲ್ಲ. ॥ ೨೬ ॥ ನೀನು ತಮ್ಮ ಆತ್ಮನೇ ಆಗಿದ್ದರೂ ಜನರು ಅದನ್ನು ಬೇರೆಯೆಂದೇ ತಿಳಿಯುತ್ತಾರೆ. ಶರೀರಾದಿಗಳು ಬೇರೆಯಾಗಿದ್ದರೂ ಅವನ್ನು ತನ್ನ ಆತ್ಮನೆಂದೇ ತಿಳಿದಿರುತ್ತಾರೆ. ಮತ್ತೆ ನಿನ್ನನ್ನು ಎಲ್ಲೋ ಹುಡುಕತೊಡಗುತ್ತಾರೆ. ಇದೆಂತಹ ಆಶ್ಚರ್ಯದ ಮಾತಾಗಿದೆ? ಅಜ್ಞಾನೀ ಜೀವಿಯ ಇದು ಅಜ್ಞಾನವೇ ಸರಿ. ॥ ೨೭ ॥ ಓ ಅನಂತನೇ! ನೀನಾದರೋ ಎಲ್ಲರ ಅಂತಃಕರಣದಲ್ಲೇ ವಿರಾಜಮಾನನಾಗಿರುವೆ. ಅದಕ್ಕಾಗಿ ಸಂತರಾದ ಸತ್ಪುರುಷರು ನಿನ್ನನಲ್ಲದೆ ಕಂಡುಬರುವುದೆಲ್ಲವನ್ನೂ ಪರಿತ್ಯಾಗಮಾಡಿ, ತಮ್ಮ ಅಂತರಂಗದಲ್ಲೇ ನಿನ್ನನ್ನು ಹುಡುಕುತ್ತಾರೆ. ಏಕೆಂದರೆ, ಹಗ್ಗದಲ್ಲಿ ಸರ್ಪವಿಲ್ಲದಿದ್ದರೂ ಆ ಮಿಥ್ಯೆಯಾಗಿ ಕಂಡುಬರುವ ಸರ್ಪದ ಭ್ರಮೆಯು ಹೋಗದೆ ಯಾವ ಸತ್ಪುರುಷನು ನಿಜವಾದ ಹಗ್ಗವನ್ನು ತಿಳಿಯ ಬಲ್ಲನು? ॥ ೨೮ ॥

ದೇವನೇ! ಯಾವ ಮನುಷ್ಯರು ನಿನ್ನ ಚರಣಕಮಲಗಳ ಅತ್ಯಲ್ಪವಾದ ಅನುಗ್ರಹವನ್ನಾದರೂ ಪಡೆಯುವರೋ ಅವರು ನಿನ್ನ ಸ್ವರೂಪದ ಮಹಿಮೆಯ ತತ್ತ್ವವನ್ನು ಸುಲಭವಾಗಿ ಬಹಳ ಬೇಗನೇ ತಿಳಿದುಕೊಳ್ಳುತ್ತಾರೆ. ಬೇರೆಯವರು ಜ್ಞಾನ-ವೈರಾಗ್ಯಾದಿಗಳನ್ನು ಬಹಳ ಕಾಲದವರೆಗೂ ಅನುಸಂಧಾನ ಮಾಡಿದರೂ ನಿನ್ನ ಮಹಿಮೆಯನ್ನು ಯಥಾವತ್ತಾಗಿ ತಿಳಿಯಲಾರರು. ॥ ೨೯ ॥ ಆದುದರಿಂದ ಭಗವಂತನೇ! ನನ್ನ ಈ ಜನ್ಮದಲ್ಲಾಗಲೀ, ಬೇರೆ ಜನ್ಮದಲ್ಲಾಗಲೀ, ಪಶು-ಪಕ್ಷಿಗಳ ಜನ್ಮದಲ್ಲೇ ಆಗಲೀ, ನಿನ್ನ ಭಕ್ತ ಸಮೂಹದಲ್ಲಿ ಒಬ್ಬ ಭಕ್ತನಾಗಿದ್ದು ನಿನ್ನ ಚರಣಕಮಲಗಳ ಸೇವೆ ಮಾಡಲು ಸಾಧ್ಯವಾಗುವಂತಹ ಮಹಾಭಾಗ್ಯವು ಪ್ರಾಪ್ತವಾಗುವಂತೆ ಅನುಗ್ರಹಿಸು. ॥ ೩೦ ॥ ಸ್ವಾಮಿಯೇ! ಜಗತ್ತು ಆರಂಭವಾದಾಗಿನಿಂದ ಇದುವರೆಗೂ ನಡೆದ ಹಲವಾರು ಯಜ್ಞಗಳಿಂದ ನಿನ್ನನ್ನು ಪೂರ್ಣವಾಗಿ ತೃಪ್ತಿ ಪಡಿಸಲಾಗಲಿಲ್ಲ. ಆದರೆ ನೀನು ವ್ರಜದ ಹಸುಗಳ ಮತ್ತು ಗೋಪಿಯರ ಕರುಗಳು ಹಾಗೂ ಗೋಪಬಾಲಕರು ಆಗಿ ಅವರ ಸ್ತನಗಳ ಅಮೃತದಂತಹ ಹಾಲನ್ನು ಪರಮಾನಂದದಿಂದ ಕುಡಿದು ತೃಪ್ತನಾದೆ. ಆದುದರಿಂದ ವ್ರಜದಲ್ಲಿರುವ ಗೋವುಗಳು ಹಾಗೂ ಗೋಪ ಸ್ತ್ರೀಯರೇ ಅತ್ಯಂತ ಧನ್ಯರು. ॥ ೩೧ ॥

ಅಹೋ ಭಾಗ್ಯಮಹೋ ಭಾಗ್ಯಂ ನಂದಗೋಪವ್ರಜೌಕಸಾಮ್ ।
ಯನ್ಮಿತ್ರಂ ಪರಮಾನಂದಂ ಪೂರ್ಣಂ ಬ್ರಹ್ಮ ಸನಾತನಮ್
॥ ೩೨ ॥

ಏಷಾಂ ತು ಭಾಗ್ಯಮಹಿಮಾಚ್ಯುತ ತಾವದಾಸ್ತಾ-
ಮೇಕಾದಶೈವ ಹಿ ವಯಂ ಬತ ಭೂರಿಭಾಗಾಃ ।
ಏತದ್ಧೃಷೀಕಚಷಕೈರಸಕೃತ್ಪಿಬಾಮಃ
ಶರ್ವಾದಯೋಽಂಘ್ರ್ಯುದಜಮಧ್ವಮೃತಾಸವಂ ತೇ ॥ ೩೩ ॥

ತದ್ಭೂರಿಭಾಗ್ಯಮಿಹ ಜನ್ಮ ಕಿಮಪ್ಯಟವ್ಯಾಂ
ಯದ್ಗೋಕುಲೇಽಪಿ ಕತಮಾಂಘ್ರಿರಜೋಽಭಿಷೇಕಮ್ ।
ಯಜ್ಜೀವಿತಂ ತು ನಿಖಿಲಂ ಭಗವಾನ್ಮುಕುಂದ-
ಸ್ತ್ವದ್ಯಾಪಿ ಯತ್ಪದರಜಃ ಶ್ರುತಿಮೃಗ್ಯಮೇವ ॥ ೩೪ ॥

ಏಷಾಂ ಘೋಷನಿವಾಸಿನಾಮುತ ಭವಾನ್ಕಿಂ ದೇವರಾತೇತಿ ನ-
ಶ್ಚೇತೋ ವಿಶ್ವಫಲಾತ್ಫಲಂ ತ್ವದಪರಂ ಕುತ್ರಾಪ್ಯಯನ್ಮುಹ್ಯತಿ ।
ಸದ್ ವೇಷಾದಿವ ಪೂತನಾಪಿ ಸಕುಲಾ ತ್ವಾಮೇವ ದೇವಾಪಿತಾ
ಯದ್ಧಾಮಾರ್ಥಸುಹೃತ್ಪ್ರಿಯಾತ್ಮತನಯಪ್ರಾಣಾಶಯಾಸ್ತ್ವತ್ಕೃತೇ
॥ ೩೫ ॥

ತಾವದ್ರಾಗಾದಯಃ ಸ್ತೇನಾಸ್ತಾವತ್ಕಾರಾಗೃಹಂ ಗೃಹಮ್ ।
ತಾವನ್ಮೋಹೋಽಂಘ್ರಿನಿಗಡೋ ಯಾವತ್ ಕೃಷ್ಣ ನ ತೇ ಜನಾಃ
॥ ೩೬ ॥

ಪರಮಾನಂದ ಸ್ವರೂಪನಾದ, ಸನಾತನನಾದ, ಪರಿಪೂರ್ಣನಾದ, ಪರಬ್ರಹ್ಮ ಸ್ವರೂಪನಾದ ನೀನು ಪರಮಮಿತ್ರನೂ, ಸುಹೃದನೂ ಆಗಿರುವ ನಂದನೇ ಮೊದಲಾದ ವ್ರಜದ ಗೋಪ ಗೋಪಬಾಲಕರ ಭಾಗ್ಯವೇ ಭಾಗ್ಯವು! ॥ ೩೨ ॥ ಅಚ್ಯುತನೇ! ಈ ವ್ರಜವಾಸಿಗಳ ಸೌಭಾಗ್ಯದ ಮಹಿಮೆಯು ಹಾಗಿರಲಿ. ಮನಸ್ಸೇ ಮೊದಲಾದ ಹನ್ನೊಂದು ಇಂದ್ರಿಯಗಳ ಅಧಿಷ್ಠಾತೃ ದೇವತೆಗಳಾಗಿರುವ ಮಹಾದೇವನೇ ಮೊದಲಾದ ನಾವುಗಳು ಮಹಾಭಾಗ್ಯಶಾಲಿಗಳಾಗಿದ್ದೇವೆ. ಏಕೆಂದರೆ, ಈ ವ್ರಜವಾಸಿಗಳ ಮನಸ್ಸೇ ಮೊದಲಾದ ಹನ್ನೊಂದು ಇಂದ್ರಿಯಗಳೆಂಬ ಪಾತ್ರೆಗಳನ್ನಾಗಿಸಿಕೊಂಡು ನಾವು ನಿನ್ನ ಚರಣಕಮಲಗಳ ಅಮೃತಕ್ಕಿಂತಲೂ ಮಧುರವಾದ ಮಕರಂದ ರಸವನ್ನು ಪಾನಮಾಡುತ್ತಾ ಇರುತ್ತೇವೆ. ಅವರ ಒಂದೊಂದು ಇಂದ್ರಿಯದಿಂದ ಪಾನಮಾಡಿ ನಾವು ಧನ್ಯರಾಗುತ್ತಿರುವಾಗ ಸಮಸ್ತ ಇಂದ್ರಿಯಗಳಿಂದ ಅದನ್ನು ಸೇವಿಸುತ್ತಿರುವ ವ್ರಜವಾಸಿಗಳ ಸೌಭಾಗ್ಯವು ಎಷ್ಟೆಂಬುದನ್ನು ಹೇಳಬೇಕಾಗಿಯೇ ಇಲ್ಲ. ॥ ೩೩ ॥ ಪ್ರಭುವೇ! ಈ ವ್ರಜಭೂಮಿಯ ಯಾವುದೇ ವನದಲ್ಲಿ ಮತ್ತು ವಿಶೇಷವಾಗಿ ಗೋಕುಲದಲ್ಲಿ ಯಾವುದೇ ಯೋನಿಯಲ್ಲಿ ಜನ್ಮವೆತ್ತುವುದೇ ನಮ್ಮ ಸೌಭಾಗ್ಯದ ಮಾತಾಗಿದೆ. ಏಕೆಂದರೆ, ಇಲ್ಲಿ ಹುಟ್ಟಿದ ಬಳಿಕ ನಿನ್ನ ಯಾರಾದರೂ ಪ್ರೇಮಿಯ (ಭಕ್ತನ) ಚರಣಧೂಳು ನಮ್ಮ ಮೇಲೆ ಬೀಳಬಹುದಲ್ಲ! ಪ್ರಭುವೇ! ನಿನ್ನ ಪ್ರೇಮಿ ವ್ರಜವಾಸಿಗಳ ಸಂಪೂರ್ಣ ಜೀವನವು ನಿನ್ನದೇ ಜೀವನವಾಗಿದೆ. ನೀನೇ ಅವರ ಜೀವನದ ಏಕಮಾತ್ರ ಸರ್ವಸ್ವನಾಗಿರುವೆ. ಅದಕ್ಕಾಗಿ ಅವರ ಚರಣಗಳ ಧೂಳಿ ಸಿಗುವುದೂ ನಿನ್ನ ಚರಣಧೂಳಿ ಸಿಗುವಂತೆ ಇದೆ. ನಿನ್ನ ಚರಣಧೂಳಿಯನ್ನಾದರೋ ಶ್ರುತಿಗಳೂ ಕೂಡ ಅನಾದಿ ಕಾಲದಿಂದ ಇಂದಿನವರೆಗೆ ಹುಡುಕುತ್ತಿರುವುವು. ॥ ೩೪ ॥ ದೇವತೆಗಳಿಗೂ ಆರಾಧ್ಯನಾದ ಪ್ರಭುವೇ! ಈ ವ್ರಜವಾಸಿಗಳು ಮಾಡುವ ಸೇವೆಯ ಬದಲಿಗೆ ನೀನು ಏನು ಫಲವನ್ನು ಕೊಡುವೆ? ಸಮಸ್ತ ಫಲಗಳ ಫಲಸ್ವರೂಪನೇ! ನಿನ್ನಿಂದ ಮಿಗಿಲಾದ ಬೇರೆ ಯಾವುದೇ ಫಲವು ಇಲ್ಲವೇ ಇಲ್ಲ, ಹೀಗೆಂದು ಯೋಚಿಸುತ್ತಾ ನನ್ನ ಚಿತ್ತವು ಮೋಹಿತಗೊಳ್ಳುತ್ತಿದೆ. ಅವರಿಗೆ ನೀನು ತನ್ನ ಸ್ವರೂಪವನ್ನೇ ಕೊಟ್ಟರೂ ಅವರ ಋಣದಿಂದ ಮುಕ್ತನಾಗಲಾರೆ. ಏಕೆಂದರೆ, ನಿನ್ನ ಸ್ವರೂಪವನ್ನೇನೋ ಆ ಪೂತನೆಯೂ ನಿನ್ನ ಸಂಬಂಧದಿಂದ ಅಘಾಸುರ, ಬಕಾಸುರ ಮುಂತಾದವರೊಡನೆ ಪಡೆದುಕೊಂಡಳು. ಅವಳ ವೇಷ ಕೇವಲ ಸಾಧ್ವಿಯಂತೆ ಇತ್ತು ಆದರೆ ಹೃದಯದಿಂದ ಕ್ರೂರಿಯಾಗಿದ್ದಳು. ಹೀಗಿರುವಾಗ ತನ್ನ ಮನೆ, ಧನ, ಸ್ವಜನರು, ಪ್ರಿಯರು, ಶರೀರ, ಪುತ್ರ, ಪ್ರಾಣ ಮತ್ತು ಮನಸ್ಸು ಹೀಗೆ ಎಲ್ಲವನ್ನು ನಿನ್ನ ಚರಣಗಳಲ್ಲಿ ಅರ್ಪಿಸಿರುವ, ಆ ವ್ರಜವಾಸಿಗಳಿಗೂ ಅದೇ ಫಲವನ್ನು ಕೊಟ್ಟು ನೀನು ಹೇಗೆ ಋಣಮುಕ್ತನಾಗುವೆ? ॥ ೩೫ ॥ ಶ್ಯಾಮಸುಂದರನೇ! ಜನರು ನಿನ್ನವರಾಗುವತನಕ, ಭಕ್ತರಾಗುವತನಕ ರಾಗದ್ವೇಷಾದಿ ದೋಷಗಳು ಕಳ್ಳರಂತೆ ಅವರ ಸರ್ವಸ್ವವನ್ನು ಅಪಹರಿಸಿ ಬಿಡುತ್ತವೆ; ಮನೆಯು ಸೆರೆಮನೆಯಾಗಿರುತ್ತದೆ; ಮೋಹವು ಕಾಲುಗಳಿಗೆ ಸಂಕೋಲೆಯಾಗಿ ಬಂಧನಕ್ಕೆ ಕಾರಣವಾಗುತ್ತದೆ. ॥ ೩೬ ॥

ಪ್ರಪಂಚಂ ನಿಷ್ಪ್ರಪಂಚೋಽಪಿ ವಿಡಂಬಯಸಿ ಭೂತಲೇ ।
ಪ್ರಪನ್ನಜನತಾನಂದಸಂದೋಹಂ ಪ್ರಥಿತುಂ ಪ್ರಭೋ ॥ ೩೭ ॥

ಜಾನಂತ ಏವ ಜಾನಂತು ಕಿಂ ಬಹೂಕ್ತ್ಯಾ ನ ಮೇ ಪ್ರಭೋ ।
ಮನಸೋ ವಪುಷೋ ವಾಚೋ ವೈಭವಂ ತವ ಗೋಚರಃ ॥ ೩೮ ॥

ಅನುಜಾನೀಹಿ ಮಾಂ ಕೃಷ್ಣ ಸರ್ವಂ ತ್ವಂ ವೇತ್ಸಿ ಸರ್ವದೃಕ್ ।
ತ್ವಮೇವ ಜಗತಾಂ ನಾಥೋ ಜಗದೇತತ್ತವಾರ್ಪಿತಮ್ ॥ ೩೯ ॥

ಶ್ರೀಕೃಷ್ಣ ವೃಷ್ಣಿಕುಲಪುಷ್ಕರಜೋಷದಾಯಿನ್
ಕ್ಷ್ಮಾನಿರ್ಜರದ್ವಿಜಪಶೂದಧಿವೃದ್ಧಿಕಾರಿನ್ ।
ಉದ್ಧರ್ಮಶಾರ್ವರಹರ ಕ್ಷಿತಿರಾಕ್ಷಸಧ್ರು-
ಗಾಕಲ್ಪಮಾರ್ಕಮರ್ಹನ್ಭಗವನ್ನಮಸ್ತೇ ॥ ೪೦ ॥

ಶ್ರೀಶುಕ ಉವಾಚ

ಇತ್ಯಭಿಷ್ಟೂಯ ಭೂಮಾನಂ ತ್ರಿಃ ಪರಿಕ್ರಮ್ಯ ಪಾದಯೋಃ ।
ನತ್ವಾಭೀಷ್ಟಂ ಜಗದ್ಧಾತಾ ಸ್ವಧಾಮ ಪ್ರತ್ಯಪದ್ಯತ ॥ ೪೧ ॥

ತತೋಽನುಜ್ಞಾಪ್ಯ ಭಗವಾನ್ಸ್ವಭುವಂ ಪ್ರಾಗವಸ್ಥಿತಾನ್ ।
ವತ್ಸಾನ್ಪುಲಿನಮಾನಿನ್ಯೇ ಯಥಾಪೂರ್ವಸಖಂ ಸ್ವಕಮ್ ॥ ೪೨ ॥

ಏಕಸ್ಮಿನ್ನಪಿ ಯಾತೇಽಬ್ದೇ ಪ್ರಾಣೇಶಂ ಚಾಂತರಾಽಽತ್ಮನಃ ।
ಕೃಷ್ಣಮಾಯಾಹತಾ ರಾಜನ್ ಕ್ಷಣಾರ್ಧಂ ಮೇನಿರೇಽರ್ಭಕಾಃ ॥ ೪೩ ॥

ಕಿಂ ಕಿಂ ನ ವಿಸ್ಮರಂತೀಹ ಮಾಯಾಮೋಹಿತಚೇತಸಃ ।
ಯನ್ಮೋಹಿತಂ ಜಗತ್ಸರ್ವಮಭೀಕ್ಷ್ಣಂ ವಿಸ್ಮೃತಾತ್ಮಕಮ್ ॥ ೪೪ ॥

ಪ್ರಭುವೇ! ನೀನು ಜಗದ್ವ್ಯಾಪಾರದಿಂದ ರಹಿತನಾಗಿದ್ದರೂ ಶರಣಾಗತರಾದ ಭಕ್ತರಿಗೆ ಅನಂತವಾದ ಆನಂದವನ್ನು ಹಂಚುವುದಕ್ಕಾಗಿ ಭೂಮಿಯಲ್ಲಿ ಅವತರಿಸಿ ಪ್ರಪಂಚದ ಜನರಂತೆ ನಟಿಸುತ್ತಿರುವೆ. ॥ ೩೭ ॥ ಹೆಚ್ಚು ಹೇಳುವುದರಿಂದ ಪ್ರಯೋಜನವೇನೂ ಇಲ್ಲ. ಲೋಕದಲ್ಲಿ ನಿನ್ನ ಮಹಿಮೆಯನ್ನು ತಿಳಿದಿರುವವರು ತಿಳಿಯುತ್ತಾ ಇರಲಿ. ನನ್ನ ಮನಸ್ಸು, ಮಾತು, ಶರೀರಗಳಂತೂ ನಿನ್ನ ಮಹಿಮೆಯನ್ನು ತಿಳಿಯಲು ಸರ್ವಥಾ ಅಸಮರ್ಥವಾಗಿದೆ. ॥ ೩೮ ॥ ಸಚ್ಚಿದಾನಂದ ಸ್ವರೂಪನಾದ ಶ್ರೀಕೃಷ್ಣನೇ! ನೀನು ಸರ್ವ ಸಾಕ್ಷಿಯಾಗಿ ಎಲ್ಲವನ್ನೂ ತಿಳಿದವನಾಗಿರುವೆ. ಸಕಲ ಜಗತ್ತಿಗೂ ಒಡೆಯನಾಗಿರುವೆ. ಈ ಅಖಂಡ ಭೂಮಂಡಲವೂ ನಿನ್ನಲ್ಲಿಯೇ ನೆಲೆಗೊಂಡಿದೆ. ನಾನು ನಿನ್ನ ವಿಷಯದಲ್ಲಿ ಇನ್ನೇನು ಹೇಳಲಿ ? ನನ್ನನ್ನು ಭಕ್ತನನ್ನಾಗಿ ನೀನು ಸ್ವೀಕರಿಸು. ಸ್ವಾಮಿಯೇ! ನಾನು ನನ್ನ ಲೋಕಕ್ಕೆ ಹೋಗಲು ಅನುಮತಿಯನ್ನು ನೀಡು. ॥ ೩೯ ॥ ಸಮಸ್ತರ ಮನಃಪ್ರಾಣಗಳನ್ನು ರೂಪಮಾಧುರ್ಯಗಳಿಂದ ಆಕರ್ಷಿಸುವ ಶ್ಯಾಮಸುಂದರನೇ! ನೀನು ಯದುವಂಶರೂಪವಾದ ಕಮಲವನ್ನು ವಿಕಸಿತಗೊಳಿಸುವ ಸೂರ್ಯನಾಗಿರುವೆ. ಭೂ-ದೇವತಾ-ಬ್ರಾಹ್ಮಣ ಗೋವು ಮತ್ತು ಸಮುದ್ರವನ್ನು ಅಭಿವೃದ್ಧಿಗೊಳಿಸುವ ಚಂದ್ರನೂ ನೀನೇ ಆಗಿರುವೆ. ಪಾಷಂಡಧರ್ಮವೆಂಬ ರಾತ್ರಿಯ ಘೋರ ಅಂಧಕಾರವನ್ನು ನಾಶಗೊಳಿಸುವುದರಲ್ಲಿ ಚಂದ್ರ-ಸೂರ್ಯರಿಗೆ ಸಮಾನನಾಗಿರುವೆ. ಲೋಕದ್ರೋಹಿಗಳಾದ ಕಂಸನೇ ಮೊದಲಾದ ರಾಕ್ಷಸರಿಗೆ ನೀನು ದ್ರೋಹಿಯಾಗಿರುವೆ. ಭಗವಂತ! ನಾನು ಜೀವವಿರೀ, ಮಹಾ ಕಲ್ಪಾಂತ್ಯದವರೆಗೂ ನಿನಗೆ ನಮಸ್ಕರಿಸುತ್ತಲೇ ಇರುವೆನು. ॥ ೪೦ ॥

ಶ್ರೀಶುಕಮುನಿಗಳು ಹೇಳುತ್ತಾರೆ – ಪರೀಕ್ಷಿತ ಮಹಾರಾಜ! ಸೃಷ್ಟಿಕರ್ತನಾದ ಬ್ರಹ್ಮನು ಈ ಪ್ರಕಾರವಾಗಿ ಭಗವಾನ್ ಶ್ರೀಕೃಷ್ಣನನ್ನು ಸ್ತುತಿಸಿ, ಅವನಿಗೆ ಮೂರು ಪ್ರದಕ್ಷಿಣೆ ಬಂದು, ಅವನ ಚರಣಗಳಲ್ಲಿ ವಂದಿಸಿಕೊಂಡು ತನ್ನ ಸ್ಥಾನವಾದ ಸತ್ಯಲೋಕಕ್ಕೆ ತೆರಳಿದನು. ॥ ೪೧ ॥ ಬ್ರಹ್ಮದೇವನು ಈ ಮೊದಲೇ ಕರುಗಳನ್ನೂ, ಗೋಪ ಬಾಲಕರನ್ನೂ ಅವರು ಹಿಂದಿದ್ದ ಸ್ಥಳಕ್ಕೆ ಕಳುಹಿಸಿಬಿಟ್ಟಿದ್ದನು. ಶ್ರೀಕೃಷ್ಣನು ಬ್ರಹ್ಮದೇವರನ್ನು ಬೀಳ್ಕೊಟ್ಟು, ತನ್ನ ಸ್ನೇಹಿತರಾದ ಗೋಪಬಾಲಕರನ್ನು ಮತ್ತು ಕರುಗಳನ್ನು ಯಮುನಾ ತೀರಕ್ಕೆ ಹೊಡೆದುಕೊಂಡು ಬಂದನು. ॥ ೪೨ ॥ ಪರೀಕ್ಷಿತನೇ! ತಮ್ಮ ಜೀವನ ಸರ್ವಸ್ವನಾದ, ಪ್ರಾಣವಲ್ಲಭನಾದ ಶ್ರೀಕೃಷ್ಣನನ್ನು ಅಗಲಿ ಗೋಪಬಾಲಕರಿಗೆ ಒಂದು ವರ್ಷವೇ ಕಳೆದು ಹೋಗಿತ್ತು. ಆದರೂ ಶ್ರೀಕೃಷ್ಣನ ಯೋಗಮಾಯೆಯಿಂದ ಮರುಳಾದ ಗೋಪಬಾಲಕರಿಗೆ ಆ ಸಮಯವು ಕ್ಷಣಾರ್ಧದಂತೆ ಅನಿಸಿತು. ॥ ೪೩ ॥ ಜಗತ್ತಿನ ಸಮಸ್ತ ಜೀವಿಗಳು ಅದೇ ಮಾಯೆಯಿಂದ ಮೋಹಿತರಾಗಿ ಶಾಸ್ತ್ರ ಮತ್ತು ಆಚಾರ್ಯರು ಪದೇ-ಪದೇ ತಿಳಿಸಿ ಹೇಳಿದರೂ ತನ್ನ ಆತ್ಮವನ್ನು ನಿರಂತರವಾಗಿ ಮರೆತಿರುತ್ತಾರೆ. ನಿಜವಾಗಿ ಆ ಮಾಯೆಯ ಶಕ್ತಿಯೇ ಇಂತಹುದು. ಆದರಿಂದ ಮೋಹಿತನಾದ ಜೀವನು ಇಲ್ಲಿ ಏನೇನೆಲ್ಲ ಮರೆಯುವುದಿಲ್ಲ ? ॥ ೪೪ ॥

ಊಚುಶ್ಚ ಸುಹೃದಃ ಕೃಷ್ಣಂ ಸ್ವಾಗತಂ ತೇಽತಿರಂಹಸಾ ।
ನೈಕೋಽಪ್ಯಭೋಜಿ ಕವಲ ಏಹೀತಃ ಸಾಧು ಭುಜ್ಯತಾಮ್
॥ ೪೫ ॥

ತತೋ ಹಸನ್ ಹೃಷೀಕೇಶೋಽಭ್ಯವಹೃತ್ಯ ಸಹಾರ್ಭಕೈಃ ।
ದರ್ಶಯಂಶ್ಚರ್ಮಾಜಗರಂ ನ್ಯವರ್ತತ ವನಾದ್ವ್ರಜಮ್
॥ ೪೬ ॥

ಬರ್ಹಪ್ರಸೂನವನಧಾತು ವಿಚಿತ್ರಿತಾಂಗಃ
ಪ್ರೋದ್ದಾಮವೇಣುದಲಶೃಂಗರವೋತ್ಸವಾಢ್ಯಃ ।
ವತ್ಸಾನ್ಗೃಣನ್ನನುಗಗೀತಪವಿತ್ರಕೀರ್ತಿ-
ರ್ಗೋಪೀದೃಗುತ್ಸವದೃಶಿಃ ಪ್ರವಿವೇಶ ಗೋಷ್ಠಮ್ ॥ ೪೭ ॥

ಅದ್ಯಾನೇನ ಮಹಾವ್ಯಾಲೋ ಯಶೋದಾನಂದಸೂನುನಾ ।
ಹತೋಽವಿತಾ ವಯಂ ಚಾಸ್ಮಾದಿತಿ ಬಾಲಾ ವ್ರಜೇ ಜಗುಃ
॥ ೪೮ ॥

ರಾಜೋವಾಚ

ಬ್ರಹ್ಮನ್ಪರೋದ್ಭವೇ ಕೃಷ್ಣೇ ಇಯಾನ್ಪ್ರೇಮಾ ಕಥಂ ಭವೇತ್ ।
ಯೋಽಭೂತಪೂರ್ವಸ್ತೋಕೇಷು ಸ್ವೋದ್ಭವೇಷ್ವಪಿ ಕಥ್ಯತಾಮ್
॥ ೪೯ ॥

ಶ್ರೀಶುಕ ಉವಾಚ

ಸರ್ವೇಷಾಮಪಿ ಭೂತಾನಾಂ ನೃಪ ಸ್ವಾತ್ಮೈವ ವಲ್ಲಭಃ ।
ಇತರೇಽಪತ್ಯವಿತ್ತಾದ್ಯಾಸ್ತದ್ವಲ್ಲಭತಯೈವ ಹಿ
॥ ೫೦ ॥

ತದ್ರಾಜೇಂದ್ರಯಥಾ ಸ್ನೇಹಃ ಸ್ವಸ್ವಕಾತ್ಮನಿ ದೇಹಿನಾಮ್ ।
ನ ತಥಾ ಮಮತಾಲಂಬಿಪುತ್ರವಿತ್ತಗೃಹಾದಿಷು
॥ ೫೧ ॥

ದೇಹಾತ್ಮವಾದಿನಾಂ ಪುಂಸಾಮಪಿ ರಾಜನ್ಯಸತ್ತಮ ।
ಯಥಾ ದೇಹಃ ಪ್ರಿಯತಮಸ್ತಥಾ ನ ಹ್ಯನು ಯೇ ಚ ತಮ್
॥ ೫೨ ॥

ಪರೀಕ್ಷಿತನೇ! ಭಗವಾನ್ ಶ್ರೀಕೃಷ್ಣನನ್ನು ನೋಡುತ್ತಲೇ ಗೋಪಬಾಲಕರೆಲ್ಲರೂ ಅತ್ಯುತ್ಸಾಹದಿಂದ ಅವನಲ್ಲಿ ಹೇಳಿದರು "ಶ್ರೀಕೃಷ್ಣ! ನೀನು ಬಂದುದು ಒಳ್ಳೆಯದಾಯಿತು. ನಿನಗೆ ಸ್ವಾಗತ ಬಯಸುತ್ತೇವೆ. ನೀನಿಲ್ಲದೆ ನಾವು ಒಂದು ತುತ್ತು ಅನ್ನವನ್ನು ತಿಂದಿರುವುದಿಲ್ಲ. ಇತ್ತ ಬಾ; ಕುಳಿತುಕೋ. ಆನಂದವಾಗಿ ಭೋಜನ ಮಾಡು." ॥ ೪೫ ॥ ಆಗ ಶ್ರೀಕೃಷ್ಣನು ನಸುನಗುತ್ತಾ ಗೋಪಬಾಲಕರೊಂದಿಗೆ ಭೋಜನ ಮಾಡಿದನು. ಬಳಿಕ ಹೆಬ್ಬಾವಿನ ತೊಗಲನ್ನು ಗೋಪಬಾಲಕರಿಗೆ ತೋರಿಸುತ್ತಾ ವನದಿಂದ ವ್ರಜಕ್ಕೆ ಮರಳಿದನು. ॥ ೪೬ ॥ ಶ್ರೀಕೃಷ್ಣನ ತಲೆಯು ನವಿಲು ಗರಿಗಳಿಂದಲೂ, ಹೂವಿನ ದಂಡೆಯಿಂದಲೂ ಸಮಲಂಕೃತವಾಗಿತ್ತು. ಹೊಸ-ಹೊಸ ಬಣ್ಣದ ಧಾತುಗಳಿಂದ ಆತನ ಶ್ಯಾಮಲ ಶರೀರವು ಚಿತ್ರಿತವಾಗಿತ್ತು. ಅವನು ವ್ರಜದ ಕಡೆಗೆ ಹೋಗುತ್ತಿದ್ದಾಗ ಕೆಲವು ಬಾಲಕರು ಕೊಳಲನ್ನೂದುತ್ತಿದ್ದರು. ಕೆಲವರು ಕೊಂಬುಗಳನ್ನು ಊದುತ್ತಿದ್ದರೆ, ಕೆಲವರು ಎಲೆಗಳಿಂದ ಪೀಪಿಗಳನ್ನು ಮಾಡಿ ಊದುತ್ತಿದ್ದರು. ಇದೊಂದು ವಾದ್ಯೋತ್ಸವದಂತೆಯೇ ಕಾಣುತ್ತಿತ್ತು. ಹಿಂಭಾಗದಲ್ಲಿ ಕೆಲವು ಗೋಪಬಾಲಕರು ಶ್ರೀಕೃಷ್ಣನ ಲೋಕಪಾವನವಾದ ಕೀರ್ತನೆಗಳನ್ನು ಹಾಡುತ್ತಿದ್ದರು. ಕೆಲವರು ತಮ್ಮ ಕರುಗಳ ಹೆಸರುಗಳನ್ನು ಹಿಡಿದು ಕೂಗುತ್ತಿದ್ದರು. ಕೆಲವರು ತಮ್ಮ ಕರುಗಳನ್ನು ಮುದ್ದಾಡುತ್ತಾ ಹೋಗುತ್ತಿದ್ದರು. ಎರಡೂ ಕಡೆಗಳಲ್ಲಿ ನಿಂತು ಉತ್ಸಾಹದಿಂದ ನೋಡುತ್ತಿದ್ದ ಗೋಪಿಯರ ಕಣ್ಣುಗಳಿಗೆ ಹಬ್ಬವನ್ನುಂಟುಮಾಡುತ್ತಾ ಶ್ರೀಕೃಷ್ಣನು ವ್ರಜವನ್ನು ಪ್ರವೇಶಿಸಿದನು. ॥ ೪೭ ॥ ಪರೀಕ್ಷಿತನೇ! ಅದೇ ದಿನ ಬಾಲಕರು ವ್ರಜಕ್ಕೆ ಬಂದು ಹೇಳಿದರು – 'ಇಂದು ಯಶೋದಾಮಾತೆಯ ಮುದ್ದುಕಂದನಾದ ಶ್ರೀಕೃಷ್ಣನು ವೃಂದಾವನದಲ್ಲಿ ಒಂದು ದೊಡ್ಡ ಹೆಬ್ಬಾವನ್ನು ಕೊಂದು ನಮ್ಮೆಲ್ಲರನ್ನು ರಕ್ಷಿಸಿದನು.' ॥ ೪೮ ॥

ಪರೀಕ್ಷಿದ್ರಾಜನು ಕೇಳಿದನು – 'ಬ್ರಾಹ್ಮಣ ಶ್ರೇಷ್ಠರೇ! ವ್ರಜವಾಸಿಗಳಿಗೆ ಶ್ರೀಕೃಷ್ಣನು ತಮ್ಮ ಮಗನಾಗಿರದೆ, ಬೇರೆಯವರ ಮಗನಾಗಿದ್ದನು. ಹೀಗಿದ್ದರೂ ಆತನ ಮೇಲೆ ವ್ರಜವಾಸಿಗಳಿಗೆ ಇಷ್ಟೊಂದು ಪ್ರೇಮ ಹೇಗೆ ಉಂಟಾಯಿತು? ಇಂತಹ ಪ್ರೀತಿಯಾದರೋ ಅವರಿಗೆ ತಮ್ಮ ನಿಜಮಕ್ಕಳಲ್ಲಿಯೂ ಇರಲಿಲ್ಲ. ಇದರ ಕಾರಣವನ್ನು ತಾವು ದಯಮಾಡಿ ತಿಳಿಸಿರಿ.' ॥ ೪೯ ॥

ಶ್ರೀಶುಕಮಹಾಮುನಿಗಳು ಹೇಳಿದರು – ಮಹಾರಾಜ! ಜಗತ್ತಿನ ಸಕಲ ಪ್ರಾಣಿಗಳಿಗೆ ತಮ್ಮ ಆತ್ಮನಲ್ಲಿಯೇ ಹೆಚ್ಚಿನ ಪ್ರೀತಿ ಇರುತ್ತದೆ. ಪುತ್ರ-ಧನ ಮುಂತಾದವುಗಳ ಮೇಲಿನ ಪ್ರೇಮವೂ ಕೂಡ ತಮ್ಮ ಆತ್ಮನ ಮೇಲಿನ ಅಪಾರವಾದ ಪ್ರೇಮದಿಂದಲೇ ಉಂಟಾಗುತ್ತದೆ. ಆತ್ಮಪ್ರೀತಿಗಾಗಿಯೇ ಎಲ್ಲವೂ ಇರುವುದು.॥ ೫೦ ॥ ರಾಜೇಂದ್ರ! ಎಲ್ಲ ಪ್ರಾಣಿಗಳಿಗೆ ತಮ್ಮ ಆತ್ಮನ ಕುರಿತು ಪ್ರೇಮವಿರುವಂತೆ, ತನ್ನದೆಂದು ಹೇಳಿಕೊಳ್ಳುವ ಪುತ್ರ-ಧನ-ಮನೆ ಮುಂತಾದವುಗಳಲ್ಲಿ ಪ್ರೇಮವಿರುವುದಿಲ್ಲ. ॥ ೫೧ ॥ ನೃಪಶ್ರೇಷ್ಠನೇ! ದೇಹವನ್ನೇ ಆತ್ಮನೆಂದು ತಿಳಿದವರೂ ಕೂಡ ತನ್ನ ಶರೀರದಲ್ಲಿ ಪ್ರೀತಿ ಇರುವಂತೆ, ಶರೀರ ಸಂಬಂಧಿ ಪುತ್ರ, ಮಿತ್ರ, ಕಳತ್ರರನ್ನು ಪ್ರೀತಿಸುವುದಿಲ್ಲ. ॥ ೫೨ ॥

ದೇಹೋಽಪಿ ಮಮತಾಭಾಕ್ಚೇತ್ತರ್ಹ್ಯಸೌ ನಾತ್ಮವತ್ಪ್ರಿಯಃ ।
ಯಜ್ಜೀರ್ಯತ್ಯಪಿ ದೇಹೇಽಸ್ಮಿನ್ ಜೀವಿತಾಶಾ ಬಲೀಯಸೀ ॥ ೫೩ ॥

ತಸ್ಮಾತ್ಪ್ರಿಯತಮಃ ಸ್ವಾತ್ಮಾ ಸರ್ವೇಷಾಮಪಿ ದೇಹಿನಾಮ್ ।
ತದರ್ಥಮೇವ ಸಕಲಂ ಜಗದೇತಚ್ಚರಾಚರಮ್ ॥ ೫೪ ॥

ಕೃಷ್ಣಮೇನಮವೇಹಿ ತ್ವಮಾತ್ಮಾನಮಖಿಲಾತ್ಮನಾಮ್ ।
ಜಗದ್ಧಿತಾಯ ಸೋಽಪ್ಯತ್ರ ದೇಹೀವಾಭಾತಿ ಮಾಯಯಾ ॥ ೫೫ ॥

ವಸ್ತುತೋ ಜಾನತಾಮತ್ರ ಕೃಷ್ಣಂ ಸ್ಥಾಸ್ನು ಚರಿಷ್ಣು ಚ ।
ಭಗವದ್ರೂಪಮಖಿಲಂ ನಾನ್ಯದ್ವಸ್ತ್ವಿಹ ಕಿಂಚನ ॥ ೫೬ ॥

ಸರ್ವೇಷಾಮಪಿ ವಸ್ತೂನಾಂ ಭಾವಾರ್ಥೋ ಭವತಿ ಸ್ಥಿತಃ ।
ತಸ್ಯಾಪಿ ಭಗವಾನ್ಕೃಷ್ಣಃ ಕಿಮತದ್ವಸ್ತು ರೂಪ್ಯತಾಮ್ ॥ ೫೭ ॥

ಸಮಾಶ್ರಿತಾ ಯೇ ಪದಪಲ್ಲವಪ್ಲವಂ
ಮಹತ್ಪದಂ ಪುಣ್ಯಯಶೋಮುರಾರೇಃ ।
ಭವಾಂಬುಧಿರ್ವತ್ಸಪದಂ ಪರಂ ಪದಂ
ಪದಂ ಪದಂ ಯದ್ವಿಪದಾಂ ನ ತೇಷಾಮ್ ॥ ೫೮ ॥

ಏತತ್ತೇ ಸರ್ವಮಾಖ್ಯಾತಂ ಯತ್ಪೃಷ್ಟೋಽಹಮಿಹ ತ್ವಯಾ ।
ಯತ್ಕೌಮಾರೇ ಹರಿಕೃತಂ ಪೌಗಂಡೇ ಪರಿಕೀರ್ತಿತಮ್ ॥ ೫೯ ॥

ಏತತ್ಸುಹೃದ್ಭಿಶ್ಚರಿತಂ ಮುರಾರೇ-
ರಘಾರ್ದನಂ ಶಾದ್ವಲಜೇಮನಂ ಚ ।
ವ್ಯಕ್ತೇತರದ್ರೂಪಮಜೋರ್ವಭಿಷ್ಟವಂ
ಶೃಣ್ವನ್ ಗೃಣನ್ನೇತಿ ನರೋಽಖಿಲಾರ್ಥಾನ್ ॥ ೬೦ ॥

ಏವಂ ವಿಹಾರೈಃ ಕೌಮಾರೈಃ ಕೌಮಾರಂ ಜಹತುರ್ವ್ರಜೇ ।
ನಿಲಾಯನೈಃ ಸೇತುಬಂಧೈರ್ಮರ್ಕಟೋತ್ಪ್ಲವನಾದಿಭಿಃ ॥ ೬೧ ॥

ವಿಚಾರದ ಮೂಲಕ 'ಈ ಶರೀರವು ನಾನಲ್ಲ, ಈ ಶರೀರವು ನನ್ನದಾಗಿದೆ' ಎಂಬುದು ತಿಳಿದಾಗ ಈ ಶರೀರದ ಮೇಲೆಯೂ ಕೂಡ ಆತ್ಮನಂತೆ ಪ್ರೀತಿ ಉಳಿಯುವುದಿಲ್ಲ. ಈ ದೇಹವು ಜೀರ್ಣ ಶೀರ್ಣವಾದರೂ ಕೂಡ ಬದುಕಿರುವ ಆಸೆಯು ಪ್ರಬಲವಾಗಿ ಇರುವುದು ಇದೇ ಕಾರಣವಾಗಿದೆ. ॥ ೫೩ ॥ ಎಲ್ಲ ಪ್ರಾಣಿಗಳು ತಮ್ಮ ಆತ್ಮನನ್ನೇ ಎಲ್ಲಕ್ಕಿಂತ ಹೆಚ್ಚು ಪ್ರೀತಿಸುತ್ತಾರೆ ಮತ್ತು ಅದಕ್ಕಾಗಿಯೇ ಚರಾಚರ ಜಗತ್ತೆಲ್ಲವನ್ನೂ ಪ್ರೀತಿಸುತ್ತಾರೆ ಎಂಬುದು ಇದರಿಂದ ಸಿದ್ಧವಾಗುತ್ತದೆ. ॥ ೫೪ ॥ ಶ್ರೀಕೃಷ್ಣನನ್ನೇ ನೀನು ಎಲ್ಲ ಆತ್ಮರ ಆತ್ಮನಾಗಿದ್ದಾನೆಂದು ತಿಳಿ. ಜಗತ್ತಿನ ಕಲ್ಯಾಣಕ್ಕಾಗಿಯೇ ಯೋಗಮಾಯೆಯನ್ನು ಆಶ್ರಯಿಸಿ ಅವನೇ ಇಲ್ಲಿ ದೇಹಧಾರಿಗಳಂತೆ ಕಂಡು ಬರುತ್ತಿರುವನು. ॥ ೫೫ ॥ ಭಗವಾನ್ ಶ್ರೀಕೃಷ್ಣನ ವಾಸ್ತವಿಕ ಸ್ವರೂಪವನ್ನು ತಿಳಿದವರಿಗಾದರೋ ಈ ಜಗತ್ತಿನಲ್ಲಿ ಇರುವ ಚರಾಚರ ಪದಾರ್ಥಗಳು ಅಥವಾ ಅದರಿಂದ ಅತೀತವಾದ ಪರಮಾತ್ಮ ಬ್ರಹ್ಮ ನಾರಾಯಣನೇ ಮೊದಲಾದ ಭಗವತ್ಸ್ವರೂಪಗಳೆಲ್ಲವೂ ಶ್ರೀಕೃಷ್ಣಸ್ವರೂಪವೇ ಆಗಿವೆ. ಶ್ರೀಕೃಷ್ಣನಲ್ಲದ ಬೇರೆ ಯಾವುದೇ ಪ್ರಾಕೃತ-ಅಪ್ರಾಕೃತ ವಸ್ತುವು ಇಲ್ಲವೇ ಇಲ್ಲ. ॥ ೫೬ ॥ ಎಲ್ಲ ವಸ್ತುಗಳ ಅಂತಿಮರೂಪವು ತನ್ನ ಕಾರಣದಲ್ಲೇ ನೆಲೆಸಿರುತ್ತದೆ. ಆ ಕಾರಣಕ್ಕೂ ಪರಮಕಾರಣ ಭಗವಾನ್ ಶ್ರೀಕೃಷ್ಣನಾಗಿದ್ದಾನೆ. ಹಾಗಿರುವಾಗ ಶ್ರೀಕೃಷ್ಣನಿಂದ ಭಿನ್ನವಾದ ವಸ್ತು ಯಾವುದು ತಾನೇ ಇದೆ? ಹೇಳು. ॥ ೫೭ ॥ ಸತ್ಪುರುಷರ ಸರ್ವಸ್ವನಾದ ಪುಣ್ಯಕೀರ್ತಿಯಾದ ಮುಕುಂದ, ಮುರಾರಿಯ ಪದ-ಪಲ್ಲವಗಳ ನೌಕೆಯನ್ನು ಆಶ್ರಯಿಸಿದವರಿಗೆ ಈ ಭವಸಾಗರವು ಕರುವಿನ ಗೊರಸಿನಷ್ಟಾಗಿ ಬಿಡುತ್ತದೆ. ॥ ೫೮ ॥

ಪರೀಕ್ಷಿತನೇ! ಭಗವಂತನ ಐದನೇ ವರ್ಷದ ಲೀಲೆಯನ್ನು ಆರನೇ ವರ್ಷದಲ್ಲಿ ಗೋಪಬಾಲಕರು ಈಗ ನಡೆದಂತೆ ಹೇಳಿದರು. ಇದು ಹೇಗೆ ಎಂದು ನೀನು ಕೇಳಿದ್ದೆಯಲ್ಲ, ಅದರ ಎಲ್ಲ ರಹಸ್ಯವನ್ನು ನಾನು ನಿನಗೆ ತಿಳಿಸಿರುವೆನು. ॥ ೫೯ ॥ ಭಗವಾನ್ ಶ್ರೀಕೃಷ್ಣನು ಗೊಲ್ಲಬಾಲಕರೊಂದಿಗೆ ನಡೆಸಿದ ವನಕ್ರೀಡೆ, ಅಘಾಸುರನ ಸಂಹಾರ, ಹಚ್ಚ-ಹಸುರಾದ ಹುಲ್ಲಿನ ಮೇಲೆ ಕುಳಿತು ಭೋಜನ ಮಾಡುವುದು, ಅಪ್ರಾಕೃತರೂಪಧಾರಿ ಕರುಗಳನ್ನು ಮತ್ತು ಗೋಪಬಾಲಕರನ್ನು ಪ್ರಕಟಿಸುವುದು, ಬ್ರಹ್ಮದೇವರು ಮಾಡಿದ ಈ ಶ್ರೇಷ್ಠ ಸ್ತುತಿ ಇವೆಲ್ಲವನ್ನು ಕೇಳುವ-ಹೇಳುವ ಮನುಷ್ಯನಿಗೆ ಧರ್ಮ, ಅರ್ಥ, ಕಾಮ ಮತ್ತು ಮೋಕ್ಷ ಇವುಗಳ ಪ್ರಾಪ್ತಿಯುಂಟಾಗುವುದು. ॥ ೬೦ ॥ ಪರೀಕ್ಷಿತನೇ! ಹೀಗೆ ಶ್ರೀಕೃಷ್ಣ ಮತ್ತು ಬಲರಾಮರು ಕುಮಾರಾವಸ್ಥೆಗನುರೂಪವಾಗಿ ಕಣ್ಣುಮುಚ್ಚಾಲೆ, ಸೇತುಬಂಧ, ಮರಕೋತಿ ಆಟ ಮುಂತಾದ ಅನೇಕ ಲೀಲೆಗಳನ್ನು ಮಾಡುತ್ತಾ ತಮ್ಮ ಕುಮಾರಾವಸ್ಥೆಯನ್ನು ವ್ರಜಭೂಮಿಯಲ್ಲಿ ಕಳೆದರು. ॥ ೬೧ ॥

ಹದಿನಾಲ್ಕನೆಯ ಅಧ್ಯಾಯವು ಮುಗಿಯಿತು. ॥ ೧೪ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮಸ್ಕಂಧೇ ಪೂರ್ವಾರ್ಧೇ ಬ್ರಹ್ಮಸ್ತುತಿರ್ನಾಮ ಚತುರ್ದಶೋಽಧ್ಯಾಯಃ ॥ ೧೪ ॥

ಹದಿನೈದನೆಯ ಅಧ್ಯಾಯ

ಧೇನುಕಾಸುರ ಉದ್ಧಾರ, ಕಾಲಿಯನಾಗನ ವಿಷದಿಂದ ಗೋಪಬಾಲಕರನ್ನು ಬದುಕಿಸಿದುದು

ಶ್ರೀಶುಕ ಉವಾಚ

ತತಶ್ಚ ಪೌಗಂಡವಯಃ ಶ್ರಿತೌ ವ್ರಜೇ
ಬಭೂವತುಸ್ತೌ ಪಶುಪಾಲಸಮ್ಮತೌ ।
ಗಾಶ್ಚಾರಯಂತೌ ಸಖಿಭಿಃ ಸಮಂ ಪದೈ-
ರ್ವೃಂದಾವನಂ ಪುಣ್ಯಮತೀವ ಚಕ್ರತುಃ ॥ ೧ ॥

ತನ್ಮಾಧವೋ ವೇಣುಮುದೀರಯನ್ವೃತೋ
ಗೋಪೈರ್ಗೃಣದ್ಭಿಃ ಸ್ವಯಶೋ ಬಲಾನ್ವಿತಃ ।
ಪಶೂನ್ಪುರಸ್ಕೃತ್ಯ ಪಶವ್ಯಮಾವಿಶದ್
ವಿಹರ್ತುಕಾಮಃ ಕುಸುಮಾಕರಂ ವನಮ್ ॥ ೨ ॥

ತನ್ಮಂಜುಘೋಷಾಲಿಮೃಗದ್ವಿಜಾಕುಲಂ
ಮಹನ್ಮನಃ ಪ್ರಖ್ಯಪಯಃ ಸರಸ್ವತಾ ।
ವಾತೇನ ಜುಷ್ಟಂ ಶತಪತ್ರಗಂಧಿನಾ
ನಿರೀಕ್ಷ್ಯ ರಂತುಂ ಭಗವಾನ್ಮನೋ ದಧೇ ॥ ೩ ॥

ಸ ತತ್ರ ತತ್ರಾರುಣಪಲ್ಲವಶ್ರಿಯಾ
ಫಲಪ್ರಸೂನೋರುಭರೇಣ ಪಾದಯೋಃ ।
ಸ್ಪೃಶಚ್ಛಿಖಾನ್ವೀಕ್ಷ್ಯ ವನಸ್ಪತೀನ್ಮುದಾ
ಸ್ಮಯನ್ನಿವಾಹಾಗ್ರಜಮಾದಿಪೂರುಷಃ ॥ ೪ ॥

ಶ್ರೀಭಗವಾನುವಾಚ

ಅಹೋ ಅಮೀ ದೇವವರಾಮರಾರ್ಚಿತಂ
ಪಾದಾಂಬುಜಂ ತೇ ಸುಮನಃಫಲಾರ್ಹಣಮ್ ।
ನಮಂತ್ಯುಪಾದಾಯ ಶಿಖಾಭಿರಾತ್ಮನ-
ಸ್ತಮೋಽಪಹತ್ಯೈ ತರುಜನ್ಮ ಯತ್ಕೃತಮ್ ॥ ೫ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ– ಪರೀಕ್ಷಿದ್ರಾಜನೇ! ಶ್ರೀಕೃಷ್ಣ ಬಲರಾಮರಿಗೆ ಈಗ ಪೌಂಗಡಾವಸ್ಥೆಯು ಪ್ರಾಪ್ತವಾಯಿತು. ಈಗ ಅವರಿಗೆ ಹಸುಗಳನ್ನು ಮೇಯಿಸಲು ಸ್ವೀಕೃತಿ ದೊರೆಯಿತು. ಅವರು ತಮ್ಮ ಸ್ನೇಹಿತರಾದ ಗೊಲ್ಲಬಾಲಕರೊಂದಿಗೆ ಹಸುಗಳನ್ನು ಮೇಯಿಸುತ್ತಾ ವೃಂದಾವನಕ್ಕೆ ಹೋಗಿ ತಮ್ಮ ಚರಣಗಳಿಂದ ವೃಂದಾವನವನ್ನು ಅತ್ಯಂತ ಪಾವನ ಗೊಳಿಸುತ್ತಿದ್ದರು. ॥ ೧ ॥ ಈ ವನವು ಹಸುಗಳಿಗೆ ಹಸುರಾದ ಎಳೆ ಹುಲ್ಲಿನಿಂದ ಕೂಡಿದ್ದು ಬಣ್ಣ-ಬಣ್ಣದ ಹೂವುಗಳ ಆಗರವೇ ಆಗಿತ್ತು. ಮುಂದೆ-ಮುಂದೆ ಹಸುಗಳು ಅವುಗಳ ಹಿಂದೆ-ಹಿಂದೆ ಕೊಳಲನ್ನು ಊದುತ್ತಾ ಶ್ಯಾಮಸುಂದರನು ಅವನ ಬೆನ್ನಿಗೆ ಬಲರಾಮನು ಹಾಗೂ ಶ್ರೀಕೃಷ್ಣನ ಕೀರ್ತಿಯನ್ನು ಹಾಡುತ್ತಿರುವ ಗೋಪಾಲಕರು ಅವರ ಹಿಂದೆ ಹೀಗೆ ವಿಹರಿಸುತ್ತಾ ಅವರು ಆ ವೃಂದಾವನವನ್ನು ಪ್ರವೇಶಿಸಿದರು. ॥ ೨ ॥ ಆ ವನದಲ್ಲಿ ಕೆಲವು ಕಡೆಗಳು ಭೃಂಗಗಳು ಗುಂಜಾರವ ಮಾಡುತ್ತಿದ್ದರೆ, ಕೆಲವು ಕಡೆ ಜಿಂಕೆಗಳು ಗುಂಪು ಗುಂಪಾಗಿ ಅತ್ತಂದಿತ್ತ ನೆಗೆಯುತ್ತಿದ್ದವು. ಕೆಲ ಅಂದವಾದ ಪಕ್ಷಿಗಳು ಸುಮಧುರವಾಗಿ ಧ್ವನಿ ಮಾಡುತ್ತಿದ್ದವು. ಅಲ್ಲಲ್ಲಿ ಅತ್ಯಂತ ಸುಂದರವಾದ ಸರೋವರಗಳಿದ್ದವು. ಅವುಗಳಲ್ಲಿ ಮಹಾತ್ಮರ ಹೃದಯದಂತೆ ಸ್ವಚ್ಛವಾದ ತಿಳಿನೀರು ತುಂಬಿತ್ತು. ಅವುಗಳಲ್ಲಿ ಅರಳಿದ ಕಮಲಗಳ ಸುಗಂಧದಿಂದ ಕೂಡಿದ ಶೀತಲ-ಮಂದ ಮಾರುತವು ಆ ವೃಂದಾವನವನ್ನು ಸೇವಿಸುತ್ತಿತ್ತು. ಆ ಮನೋಹರವಾದ ವನವನ್ನು ನೋಡಿ ಭಗವಂತನು ಅಲ್ಲಿ ವಿಹರಿಸಲು ಮನಸ್ಸಿನಲ್ಲೇ ನಿಶ್ಚಯಿಸಿದನು. ॥ ೩ ॥ ಎಳ್ಳೆಗೆಂಪಿನ ಚಿಗುರುಗಳ ಕಾಂತಿಯಿಂದ ಕೂಡಿ ಫಲ-ಪುಷ್ಪಗಳ ಭಾರದಿಂದ ಬಗ್ಗಿದ ರೆಂಬೆಗಳ ವೃಕ್ಷಗಳು ಶ್ರೀಕೃಷ್ಣನ ಪಾದಗಳಿಗೆ ನಮಸ್ಕರಿಸುತ್ತವೆಯೋ ಎಂಬಂತೆ ಕಾಣುತ್ತಿತ್ತು. ಅಂತಹ ನೇತ್ರಾನಂದಕರವಾದ ಅವನ್ನು ನೋಡಿ ಆದಿದೇವನಾದ ಶ್ರೀಕೃಷ್ಣಪರಮಾತ್ಮನು ಅಣ್ಣನಾದ ಬಲರಾಮನಲ್ಲಿ ಹೇಳಿದನು. ॥ ೪ ॥

ಭಗವಾನ್ ಶ್ರೀಕೃಷ್ಣನು ಹೇಳುತ್ತಾನೆ – ದೇವಶಿರೋಮಣಿಯೇ! ಶ್ರೇಷ್ಠರಾದ ದೇವತೆಗಳೇನೋ ನಿನ್ನ ಚರಣಕಮಲಗಳನ್ನು ಪೂಜಿಸುತ್ತಾರೆ. ಆದರೆ ಇಲ್ಲಿ ನೋಡು! ಈ ವೃಕ್ಷಗಳೂ ಕೂಡ ತಮ್ಮ ರೆಂಬೆಗಳ ಮೂಲಕವಾಗಿ ಫಲ-ಪುಷ್ಪಗಳನ್ನು ಹೊತ್ತು ನಿನ್ನ ಚರಣಾರವಿಂದಗಳ ಸೇವೆ ಮಾಡಲು ಬಗ್ಗಿ ನಮಸ್ಕರಿಸುತ್ತವೆ. ಅವುಗಳು ಇಂತಹ ಸೌಭಾಗ್ಯವನ್ನು ಪಡೆಯುವುದಕ್ಕಾಗಿಯೇ ಹಾಗೂ ನಿನ್ನ ದರ್ಶನ, ನಿನ್ನ ಲೀಲಾ ಪ್ರಸಂಗಗಳನ್ನು ಶ್ರವಣ ಮಾಡಿದವರ ಅಜ್ಞಾನವನ್ನು ನಾಶಗೊಳಿಸುವ ಸಲುವಾಗಿ ಈ ಪುಣ್ಯಪ್ರದವಾದ ವೃಂದಾವನದಲ್ಲಿ ವೃಕ್ಷಗಳಾಗಿ ಹುಟ್ಟಿವೆ. ನಿಶ್ಚಯವಾಗಿಯೂ ಇವುಗಳ ಜೀವನವೇ ಧನ್ಯವಾದುದು. ॥ ೫ ॥

ಏತೇಽಲಿನಸ್ತವ ಯಶೋಽಖಿಲಲೋಕತೀರ್ಥಂ
ಗಾಯಂತ ಆದಿಪುರುಷಾನುಪದಂ ಭಜಂತೇ ।
ಪ್ರಾಯೋ ಅಮೀ ಮುನಿಗಣಾ ಭವದೀಯಮುಖ್ಯಾ
ಗೂಢಂ ವನೇಽಪಿ ನ ಜಹತ್ಯನಘಾತ್ಮದೈವಮ್ ॥ ೬ ॥

ನೃತ್ಯಂತ್ಯಮೀ ಶಿಖಿನ ಈಡ್ಯ ಮುದಾ ಹರಿಣ್ಯಃ
ಕುರ್ವಂತಿ ಗೋಪ್ಯ ಇವ ತೇ ಪ್ರಿಯಮೀಕ್ಷಣೇನ ।
ಸೂಕ್ತೈಶ್ಚ ಕೋಕಿಲಗಣಾ ಗೃಹಮಾಗತಾಯ
ಧನ್ಯಾ ವನೌಕಸ ಇಯಾನ್ಹಿ ಸತಾಂ ನಿಸರ್ಗಃ ॥ ೭ ॥

ಧನ್ಯೇಯಮದ್ಯ ಧರಣೀ ತೃಣವೀರುಧಸ್ತ್ವತ್
ಪಾದಸ್ಪೃಶೋ ದ್ರುಮಲತಾಃ ಕರಜಾಭಿಮೃಷ್ಟಾಃ ।
ನದ್ಯೋಽದ್ರಯಃ ಖಗಮೃಗಾಃ ಸದಯಾವಲೋಕೈ-
ರ್ಗೋಪ್ಯೋಽಂತರೇಣ ಭುಜಯೋರಪಿ ಯತ್ಸ್ಪೃಹಾ ಶ್ರೀಃ ॥ ೮ ॥

ಆದಿಪುರುಷನೇ! ನೀನು ಈ ವೃಂದಾವನದಲ್ಲಿ ನಿನ್ನ ಐಶ್ವರ್ಯವನ್ನು ಮರೆಸಿ ಸಾಮಾನ್ಯ ಬಾಲಕರಂತೆ ಲೀಲೆ ಮಾಡುತ್ತಿದ್ದರೂ ನಿನ್ನ ಶ್ರೇಷ್ಠ ಭಕ್ತರಾದ ಮುನಿಗಳು ತಮ್ಮ ಇಷ್ಟ ದೈವವನ್ನು ಗುರುತಿಸಿಕೊಂಡು ಇಲ್ಲಿಯೂ ಪ್ರಾಯಶಃ ದುಂಬಿಗಳಾಗಿ ನಿನ್ನ ಭುವನಪಾವನ ಕೀರ್ತಿಯನ್ನು ನಿರಂತರವಾಗಿ ಹಾಡುತ್ತಾ ನಿನ್ನ ಭಜನೆಯಲ್ಲಿ ತೊಡಗಿರುತ್ತಾರೆ. ಅವರು ಒಂದು ಕ್ಷಣವಾದರೂ ನಿನ್ನನ್ನು ಬಿಡಲು ಬಯಸುವುದಿಲ್ಲ. ॥ ೬ ॥ ಅಣ್ಣಾ! ನಿಜವಾಗಿ ನೀನೇ ಸ್ತುತಿಸಲು ಯೋಗ್ಯನಾಗಿರುವೆ. ತಮ್ಮ ಮನೆಗೆ ಬಂದಿರುವ ನಿನ್ನನ್ನು ನೋಡಿದ ನವಿಲುಗಳು ನಿನ್ನ ದರ್ಶನದಿಂದ ಆನಂದಿತವಾಗಿ ಕುಣಿಯುತ್ತಾ ಇವೆ. ಜಿಂಕೆಗಳು ಮೃಗನಯನೀ ಗೋಪಿಯರಂತೆ ತಮ್ಮ ಪ್ರೇಮಪೂರ್ಣ ಓರೆನೋಟದಿಂದ ನಿನ್ನ ಕುರಿತು ಪ್ರೀತಿಯನ್ನು ಪ್ರಕಟಿಸುತ್ತಾ ನಿನ್ನನ್ನು ಸಂತೋಷಗೊಳಿಸುತ್ತಿರುವವು. ಈ ಕೋಗಿಲೆಗಳು ತಮ್ಮ ಮಧುರ ಪಂಚಮದ ಇಂಚರದಿಂದ ನಿನ್ನನ್ನು ಎಷ್ಟು ಸುಂದರವಾಗಿ ಸ್ವಾಗತಿಸುತ್ತವೆ. ಇವು ವನವಾಸಿಗಳಾಗಿದ್ದರೂ ಧನ್ಯರಾಗಿದ್ದಾರೆ. ಏಕೆಂದರೆ, ಸತ್ಪುರುಷರ ಸ್ವಭಾವವೇ ಹೀಗಿರುತ್ತದೆ. ಅವರು ಮನೆಗೆ ಬಂದಿರುವ ಅತಿಥಿಗೆ ತಮಗೆ ಪ್ರಿಯವಾದ ವಸ್ತುವನ್ನು ಅರ್ಪಿಸಿಬಿಡುತ್ತಾರೆ. ॥ ೭ ॥ ಇಂದು ಇಲ್ಲಿಯ ಭೂಮಿಯು ತನ್ನ ಹಚ್ಚ ಹಸಿರು ಹುಲ್ಲಿನೊಂದಿಗೆ ನಿನ್ನ ಚರಣಗಳನ್ನು ಸ್ಪರ್ಶಿಸುತ್ತಾ ಧನ್ಯವಾಗಿದೆ. ಇಲ್ಲಿಯ ಮರ-ಗಿಡ-ಬಳ್ಳಿಗಳು ನಿನ್ನ ಬೆರಳುಗಳ ಸ್ಪರ್ಶವನ್ನು ಪಡೆದು ತಮ್ಮ ಅಹೋಭಾಗ್ಯವೆಂದು ತಿಳಿಯುತ್ತಿವೆ. ನಿನ್ನ ಕರುಣಾಕಟಾಕ್ಷದಿಂದ ನದಿ, ಪರ್ವತ, ಪಶು-ಪಕ್ಷಿ ಎಲ್ಲವೂ ಕೃತಾರ್ಥರಾಗುತ್ತಿದ್ದಾರೆ. ವ್ರಜದಲ್ಲಿರುವ ಗೋಪಿಕೆಯರು ಸ್ವತಃ ಲಕ್ಷ್ಮೀದೇವಿಯೂ ಕೂಡ ಅಪೇಕ್ಷಿಸುತ್ತಿರುವ ನಿನ್ನ ವಕ್ಷಸ್ಥಲದ ಸ್ಪರ್ಶವನ್ನು ಪಡೆದುಕೊಂಡು ಧನ್ಯರಾಗುತ್ತಿದ್ದಾರೆ. ॥ ೮ ॥

ಶ್ರೀಶುಕ ಉವಾಚ

ಏವಂ ವೃಂದಾವನಂ ಶ್ರೀಮತ್ಕೃಷ್ಣಃ ಪ್ರೀತಮನಾಃ ಪಶೂನ್ ।
ರೇಮೇ ಸಂಚಾರಯನ್ನದ್ರೇಃ ಸರಿದ್ರೋಧಸ್ಸು ಸಾನುಗಃ ॥ ೯ ॥

ಕ್ವಚಿದ್ಗಾಯತಿ ಗಾಯತ್ಸು ಮದಾಂಧಾಲಿಷ್ವನುವ್ರತೈಃ ।
ಉಪಗೀಯಮಾನಚರಿತಃ ಸ್ರಗ್ವೀ ಸಂಕರ್ಷಣಾನ್ವಿತಃ ॥ ೧೦ ॥

ಕ್ವಚಿಚ್ಚ ಕಲಹಂಸಾನಾಮನುಕೂಜತಿ ಕೂಜಿತಮ್ ।
ಅಭಿನೃತ್ಯತಿ ನೃತ್ಯಂತಂ ಬರ್ಹಿಣಂ ಹಾಸಯನ್ಕ್ವಚಿತ್ ॥ ೧೧ ॥

ಮೇಘಗಂಭೀರಯಾ ವಾಚಾ ನಾಮಭಿರ್ದೂರಗಾನ್ಪಶೂನ್ ।
ಕ್ವಚಿದಾಹ್ವಯತಿ ಪ್ರೀತ್ಯಾ ಗೋಗೋಪಾಲಮನೋಜ್ಞಯಾ ॥ ೧೨ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ - ಪರೀಕ್ಷಿತನೇ! ಹೀಗೆ ಪರಮಸುಂದರ ವೃಂದಾವನವನ್ನು ನೋಡಿ ಭಗವಾನ್ ಶ್ರೀಕೃಷ್ಣನು ಬಹಳವಾಗಿ ಆನಂದಿತನಾದನು. ಅವನು ತನ್ನ ಮಿತ್ರರಾದ ಗೊಲ್ಲಬಾಲಕರೊಂದಿಗೆ ಗೋವರ್ಧನದ ತಪ್ಪಲುಗಳಲ್ಲಿ, ಯಮುನಾ ತೀರದಲ್ಲಿ ಹಸುಗಳನ್ನು ಮೇಯಿಸುತ್ತಾ ಅನೇಕ ರೀತಿಯ ಲೀಲೆಗಳನ್ನು ಮಾಡತೊಡಗಿದನು. ॥ ೯ ॥ ಒಂದೆಡೆ ಗೋಪಬಾಲಕರು ಭಗವಾನ್ ಶ್ರೀಕೃಷ್ಣನ ಚರಿತ್ರೆಗಳನ್ನು ಆಲಾಪಿಸುತ್ತಾ ಮಧುರವಾಗಿ ಹಾಡುತ್ತಿದ್ದಾರೆ, ಇನ್ನೊಂದೆಡೆ ಬಲರಾಮನೊಂದಿಗೆ ವನಮಾಲೆಯನ್ನು ಧರಿಸಿರುವ ಶ್ರೀಕೃಷ್ಣನು ಮತ್ತ ಭೃಂಗಗಳ ಸುಮಧುರ ಗುಂಜಾರವದೊಂದಿಗೆ ತನ್ನ ಸ್ವರವನ್ನೂ ಸೇರಿಸಿ ಆಲಾಪಿಸತೊಡಗಿದನು. ॥ ೧೦ ॥ ಕೆಲವೊಮ್ಮೆ ಶ್ರೀಕೃಷ್ಣನು ರಾಜಹಂಸಗಳು ಕೂಗಿದಾಗ ಅವುಗಳಂತೆಯೇ ಅವುಗಳ ಜೊತೆಯಲ್ಲೇ ಕೂಗುತ್ತಾ ಅವುಗಳನ್ನು ಅಣಕಿಸುತ್ತಿದ್ದನು. ಕೆಲವೊಮ್ಮೆ ನೃತ್ಯಮಾಡುವ ನವಿಲುಗಳೊಡನೆ ತಕ-ತಕನೆ ತಾನೂ ಕುಣಿಯುತ್ತಾ ತನ್ನ ಮಿತ್ರರನ್ನು ಸಂತೋಷಗೊಳಿಸುವನು. ॥ ೧೧ ॥ ಕೆಲವೊಮ್ಮೆ ಬಹಳ ದೂರಕ್ಕೆ ಹೋದ ಪಶುಗಳನ್ನು ಅವುಗಳ ಹೆಸರು ಹಿಡಿದು ಮೇಘದಂತೆ ಗಂಭೀರ ಧ್ವನಿಯಿಂದ ಪ್ರೇಮದಿಂದ ಕರೆಯುವನು. ಅವನ ಈ ಮಧುರ ಧ್ವನಿಯನ್ನು ಕೇಳಿ ಗೋವುಗಳ ಮತ್ತು ಗೋಪಾಲಬಾಲಕರ ಮನಸ್ಸಿಗೆ ಉಲ್ಲಾಸವುಂಟಾಗುತ್ತಿತ್ತು. ॥ ೧೨ ॥

ಚಕೋರಕ್ರೌಞ್ಚಚಕ್ರಾಹ್ವಭಾರದ್ವಾಜಾಂಶ್ಚ ಬರ್ಹಿಣಃ ।
ಅನುರೌತಿ ಸ್ಮ ಸತ್ತ್ವಾನಾಂ ಭೀತವದ್ವ್ಯಾಘ್ರಸಿಂಹಯೋಃ ॥ ೧೩ ॥

ಕ್ವಚಿತ್ಕ್ರೀಡಾಪರಿಶ್ರಾಂತಂ ಗೋಪೋತ್ಸಂಗೋಪಬರ್ಹಣಮ್ ।
ಸ್ವಯಂ ವಿಶ್ರಮಯತ್ಯಾರ್ಯಂ ಪಾದಸಂವಾಹನಾದಿಭಿಃ ॥ ೧೪ ॥

ನೃತ್ಯತೋ ಗಾಯತಃ ಕ್ವಾಪಿ ವಲ್ಗತೋ ಯುಧ್ಯತೋ ಮಿಥಃ ।
ಗೃಹೀತಹಸ್ತೌ ಗೋಪಾಲಾನ್ಹಸಂತೌ ಪ್ರಶಶಂಸತುಃ ॥ ೧೫ ॥

ಕ್ವಚಿತ್ಪಲ್ಲವತಲ್ಪೇಷು ನಿಯುದ್ಧಶ್ರಮಕರ್ಶಿತಃ ।
ವೃಕ್ಷಮೂಲಾಶ್ರಯಃ ಶೇತೇ ಗೋಪೋತ್ಸಂಗೋಪಬರ್ಹಣಃ ॥ ೧೬ ॥

ಪಾದಸಂವಾಹನಂ ಚಕ್ರುಃ ಕೇಚಿತ್ತಸ್ಯ ಮಹಾತ್ಮನಃ ।
ಅಪರೇ ಹತಪಾಪ್ಮಾನೋ ವ್ಯಜನೈಃ ಸಮವೀಜಯನ್ ॥ ೧೭ ॥

ಅನ್ಯೇ ತದನುರೂಪಾಣಿ ಮನೋಜ್ಞಾನಿ ಮಹಾತ್ಮನಃ ।
ಗಾಯಂತಿ ಸ್ಮ ಮಹಾರಾಜ ಸ್ನೇಹಕ್ಲಿನ್ನಧಿಯಃ ಶನೈಃ ॥ ೧೮ ॥

ಏವಂ ನಿಗೂಢಾತ್ಮಗತಿಃ ಸ್ವಮಾಯಯಾ
ಗೋಪಾತ್ಮಜತ್ವಂ ಚರಿತೈರ್ವಿಡಂಬಯನ್ ।
ರೇಮೇ ರಮಾಲಾಲಿತಪಾದಪಲ್ಲವೋ
ಗ್ರಾಮ್ಯೈಃ ಸಮಂ ಗ್ರಾಮ್ಯವದೀಶಚೇಷ್ಟಿತಃ ॥ ೧೯ ॥

ಶ್ರೀದಾಮಾ ನಾಮ ಗೋಪಾಲೋ ರಾಮಕೇಶವಯೋಃ ಸಖಾ ।
ಸುಬಲಸ್ತೋಕಕೃಷ್ಣಾದ್ಯಾ ಗೋಪಾಃ ಪ್ರೇಮ್ಣೇದಮಬ್ರುವನ್ ॥ ೨೦ ॥

ರಾಮ ರಾಮ ಮಹಾಬಾಹೋ ಕೃಷ್ಣ ದುಷ್ಟನಿಬರ್ಹಣ ।
ಇತೋಽವಿದೂರೇ ಸುಮಹದ್ವನಂ ತಾಲಾಲಿಸಂಕುಲಮ್ ॥ ೨೧ ॥

ಫಲಾನಿ ತತ್ರ ಭೂರೀಣಿ ಪತಂತಿ ಪತಿತಾನಿ ಚ ।
ಸಂತಿ ಕಿಂತ್ವವರುದ್ಧಾನಿ ಧೇನುಕೇನ ದುರಾತ್ಮನಾ ॥ ೨೨ ॥

ಕೆಲವೊಮ್ಮೆ ಚಕೋರ, ಕ್ರೌಂಚ, ಹಂಸ, ಚಕ್ರವಾಕ, ಭರದ್ವಾಜ, ನವಿಲು ಮುಂತಾದ ಪಕ್ಷಿಗಳ ಧ್ವನಿಯನ್ನು ಅನುಸರಿಸಿ ಕೂಗಿದರೆ, ಕೆಲವೊಮ್ಮೆ ಹುಲಿ, ಸಿಂಹಗಳಂತೆ ಗರ್ಜಿಸುವನು. ಆ ಗರ್ಜನೆಯಿಂದ ಹೆದರಿದ ಜೀವಿಗಳಂತೆ ತಾನೂ ಕೂಡ ಭಯಗೊಂಡವನಂತೆ ನಟಿಸುವನು. ॥ ೧೩ ॥ ಬಲರಾಮನು ಆಟವಾಡುತ್ತಾಡುತ್ತಾ ಬಳಲಿ ಗೋಪಬಾಲಕನ ತೊಡೆಯಲ್ಲಿ ತಲೆಯನ್ನಿಟ್ಟು ಮಲಗಿದಾಗ ಶ್ರೀಕೃಷ್ಣನು ಅವನ ಕಾಲನ್ನು ಒತ್ತುತ್ತಾ ಬೀಸಣಿಗೆಯಿಂದ ಗಾಳಿ ಬೀಸಿ ಅಣ್ಣನ ಆಯಾಸವನ್ನು ಪರಿಹರಿಸುತ್ತಿದ್ದನು. ॥ ೧೪ ॥ ಒಂದೆಡೆ ಗೊಲ್ಲಬಾಲಕರು ಕುಣಿಯುತ್ತಿದ್ದರು. ಮತ್ತೊಂದೆಡೆಯಲ್ಲಿ ಕುಳಿತು ಹಾಡುತ್ತಿದ್ದರು. ಇನ್ನೊಂದೆಡೆಯಲ್ಲಿ ಕುಸ್ತಿಗಳನ್ನಾಡುತ್ತಿದ್ದರು. ಅಂತಹ ಕಡೆಗಳಲ್ಲಿ ಬಲರಾಮ-ಕೃಷ್ಣರು ಕೈ ಕೈಹಿಡಿದುಕೊಂಡು ನಿಂತುಕೊಂಡು ನಗುತ್ತಾ ಭಲೇ, ಭಲೇ ಎಂದು ಪ್ರೋತ್ಸಾಹಿಸುತ್ತಿದ್ದರು. ॥ ೧೫ ॥ ಕೆಲವೊಮ್ಮೆ ಸ್ವಯಂ ಶ್ರೀಕೃಷ್ಣನು ಗೊಲ್ಲಬಾಲಕರೊಂದಿಗೆ ಕುಸ್ತಿಯಾಡುತ್ತಾ ಬಳಲಿದಾಗ ಒಂದು ಸುಂದರ ವೃಕ್ಷದ ಕೆಳಗೆ ಚಿಗುರುಗಳ ಹಾಸಿಗೆಯಲ್ಲಿ ಯಾರೋ ಗೋಪಬಾಲಕನ ತೊಡೆಯನ್ನೇ ದಿಂಬಾಗಿಸಿ ಪವಡಿಸುತ್ತಿದ್ದನು. ॥ ೧೬ ॥ ಪರೀಕ್ಷಿತನೇ! ಆ ಸಮಯದಲ್ಲಿ ಪುಣ್ಯಾತ್ಮರಾದ ಗೋಪಬಾಲಕರು ಮಹಾತ್ಮನಾದ ಶ್ರೀಕೃಷ್ಣನ ಸುಂದರವಾದ ಕಾಲುಗಳನ್ನು ಒತ್ತುತ್ತಿದ್ದರು. ನಿಷ್ಪಾಪರಾದ ಬೇರೆ ಬಾಲಕರು ದೊಡ್ಡ ದೊಡ್ಡ ಎಲೆಗಳಿಂದ ಅಥವಾ ಅಂಗವಸ್ತ್ರದಿಂದ ಗಾಳಿ ಬೀಸುತ್ತಿದ್ದರು ॥ ೧೭ ॥ ಸ್ನೇಹಮುಗ್ಧವಾದ ಮನಸ್ಸಿನಿಂದ ಕೂಡಿದ ಕೆಲವು ಗೋಪಬಾಲಕರು ಶ್ರೀಕೃಷ್ಣನಲೀಲೆಗನುಗುಣವಾಗಿ ಮನೋಜ್ಞವಾಗಿ ಕಿವಿಗಿಂಪಾದ ಗೀತೆಗಳನ್ನು ಅವನ ಸುತ್ತಲೂ ಕುಳಿತುಕೊಂಡು ನಿಧಾನವಾಗಿ ಹಾಡುತ್ತಿದ್ದರು. ॥ ೧೮ ॥ ಭಗವಂತನು ಹೀಗೆ ತನ್ನ ಯೋಗಮಾಯೆಯಿಂದ ತನ್ನ ಐಶ್ವರ್ಯಮಯವಾದ ಸ್ವರೂಪವನ್ನು ಬಚ್ಚಿಟ್ಟುಕೊಂಡಿದ್ದನು. ಅವನು ಮಾಡುವ ಲೀಲೆಗಳು ನಿಜವಾದ ಗೋಪಬಾಲಕರು ಮಾಡುವಂತೆ ಇದ್ದವು. ಸಾಕ್ಷಾತ್ ಲಕ್ಷ್ಮೀದೇವಿಯು ಯಾರ ಚರಣಕಮಲಗಳ ಸೇವೆಯಲ್ಲಿ ನಿರತಳಾಗಿರುತ್ತಿದ್ದಳೋ ಅಂತಹ ಭಗವಂತನು ಈ ಗ್ರಾಮೀಣ ಬಾಲಕರೊಂದಿಗೆ ಅತ್ಯಂತ ಪ್ರೇಮದಿಂದ, ಆನಂದದಿಂದ ಗ್ರಾಮ್ಯರೀತಿಯ ಆಟವಾಡುತ್ತಿದ್ದನು. ಪರೀಕ್ಷಿತನೇ ! ಹೀಗಿದ್ದರೂ ಕೂಡ ಕೆಲವೊಮ್ಮೆ ಅವನ ಐಶ್ವರ್ಯಮಯ ಲೀಲೆಗಳು ಪ್ರಕಟವಾಗುತ್ತಲೇ ಇದ್ದವು. ॥ ೧೯ ॥

ಬಲರಾಮ ಮತ್ತು ಶ್ರೀಕೃಷ್ಣರ ಆಪ್ತಸ್ನೇಹಿತರಲ್ಲಿ ಶ್ರೀದಾಮನೆಂಬ ಒಬ್ಬ ಗೋಪಬಾಲಕನು ಪ್ರಧಾನನಾಗಿದ್ದನು. ಒಂದು ದಿನ ಶ್ರೀದಾಮ, ಸುಬಲ, ಸ್ತೋಕಕೃಷ್ಣ (ಚಿಕ್ಕಕೃಷ್ಣ) ಮೊದಲಾದ ಗೊಲ್ಲಬಾಲಕರು ಪ್ರೇಮಪೂರ್ವಕವಾಗಿ ಬಲರಾಮ-ಕೃಷ್ಣರಲ್ಲಿ ಹೀಗೆಂದರು. ॥ ೨೦ ॥ "ಮಹಾಬಾಹುವಾದ ! ಬಲರಾಮನೇ ! ದುಷ್ಟನಾಶಕನಾದ ಶ್ರೀಕೃಷ್ಣನೇ ! ಇಲ್ಲಿ ಸ್ವಲ್ಪ ದೂರದಲ್ಲಿಯೇ ಸಾಲು-ಸಾಲಾಗಿ ತಾಳೆಯ ಮರಗಳಿಂದ ತುಂಬಿದ ಒಂದು ದೊಡ್ಡ ವನವಿದೆ. ॥ ೨೧ ॥ ಅಲ್ಲಿ ಹಲವಾರು ಪಕ್ವವಾದ ತಾಳೆಯ ಹಣ್ಣುಗಳು ಮರದಿಂದ ಬಿದ್ದಿವೆ. ಇನ್ನು ಬೀಳುತ್ತಲೂ ಇವೆ. ಆದರೆ ಅಲ್ಲಿಯೇ ಇರುವ ದುರಾತ್ಮನಾದ ಧೇನುಕಾಸುರನೆಂಬ ದೈತ್ಯನು ಆ ಹಣ್ಣುಗಳನ್ನು ಬೇರೆ ಯಾರೂ ಮುಟ್ಟದಂತೆ ತಡೆದಿರುವನು. ॥ ೨೨ ॥

ಸೋಽತಿವೀರ್ಯೋಽಸುರೋ ರಾಮ ಹೇ ಕೃಷ್ಣ ಖರರೂಪಧೃಕ್ ।
ಆತ್ಮತುಲ್ಯಬಲೈರನ್ಯೈರ್ಜ್ಞಾತಿಭಿರ್ಬಹುಭಿರ್ವೃತಃ
॥ ೨೩ ॥

ತಸ್ಮಾತ್ಕೃತನರಾಹಾರಾದ್ಭೀತೈರ್ನೃಭಿರಮಿತ್ರಹನ್ ।
ನ ಸೇವ್ಯತೇ ಪಶುಗಣೈಃ ಪಕ್ಷಿಸಂಘೈರ್ವಿವರ್ಜಿತಮ್
॥ ೨೪ ॥

ವಿದ್ಯಂತೇಽಭುಕ್ತಪೂರ್ವಾಣಿ ಫಲಾನಿ ಸುರಭೀಣಿ ಚ ।
ಏಷ ವೈ ಸುರಭಿರ್ಗಂಧೋ ವಿಷೂಚೀನೋಽವಗೃಹ್ಯತೇ
॥ ೨೫ ॥

ಪ್ರಯಚ್ಛ ತಾನಿ ನಃ ಕೃಷ್ಣ ಗಂಧಲೋಭಿತಚೇತಸಾಮ್ ।
ವಾಂಛಾಸ್ತಿ ಮಹತೀ ರಾಮ ಗಮ್ಯತಾಂ ಯದಿ ರೋಚತೇ
॥ ೨೬ ॥

ಏವಂ ಸುಹೃದ್ವಚಃ ಶ್ರುತ್ವಾ ಸುಹೃತ್ಪ್ರಿಯಚಿಕೀರ್ಷಯಾ ।
ಪ್ರಹಸ್ಯ ಜಗ್ಮತುರ್ಗೋಪೈರ್ವೃತೌ ತಾಲವನಂ ಪ್ರಭೂ
॥ ೨೭ ॥

ಬಲಃ ಪ್ರವಿಶ್ಯ ಬಾಹುಭ್ಯಾಂ ತಾಲಾನ್ಸಂಪರಿಕಂಪಯನ್ ।
ಫಲಾನಿ ಪಾತಯಾಮಾಸ ಮತಂಗಜ ಇವೌಜಸಾ
॥ ೨೮ ॥

ಫಲಾನಾಂ ಪತತಾಂ ಶಬ್ದಂ ನಿಶಮ್ಯಾಸುರರಾಸಭಃ ।
ಅಭ್ಯಧಾವತ್ ಕ್ಷಿತಿತಲಂ ಸನಗಂ ಪರಿಕಂಪಯನ್
॥ ೨೯ ॥

ಸಮೇತ್ಯ ತರಸಾ ಪ್ರತ್ಯಗ್ದ್ವಾಭ್ಯಾಂ ಪದ್ಭ್ಯಾಂ ಬಲಂ ಬಲೀ ।
ನಿಹತ್ಯೋರಸಿ ಕಾಶಬ್ದಂ ಮುಂಚನ್ಪರ್ಯಸರತ್ಖಲಃ
॥ ೩೦ ॥

ಪುನರಾಸಾದ್ಯ ಸಂರಬ್ಧ ಉಪಕ್ರೋಷ್ಟಾ ಪರಾಕ್ ಸ್ಥಿತಃ ।
ಚರಣಾವಪರೌ ರಾಜನ್ಬಲಾಯ ಪ್ರಾಕ್ಷಿಪದ್ರುಷಾ
॥ ೩೧ ॥

ಸ ತಂ ಗೃಹೀತ್ವಾ ಪ್ರಪದೋರ್ಭ್ರಾಮಯಿತ್ವೈಕಪಾಣಿನಾ ।
ಚಿಕ್ಷೇಪ ತೃಣರಾಜಾಗ್ರೇ ಭ್ರಾಮಣತ್ಯಕ್ತಜೀವಿತಮ್
॥ ೩೨ ॥

ತೇನಾಹತೋ ಮಹಾತಾಲೋ ವೇಪಮಾನೋ ಬೃಹಚ್ಛಿರಾಃ ।
ಪಾರ್ಶ್ವಸ್ಥಂ ಕಂಪಯನ್ಭಗ್ನಃ ಸ ಚಾನ್ಯಂ ಸೋಽಪಿ ಚಾಪರಮ್
॥ ೩೩ ॥

ಬಲರಾಮ-ಕೃಷ್ಣರೇ ! ಆ ದೈತ್ಯನು ಕತ್ತೆಯ ರೂಪದಿಂದ ಅಲ್ಲಿ ಇರುವನು. ಅವನಾದರೋ ಮಹಾಬಲಶಾಲಿಯಾಗಿದ್ದು ಅವನೊಂದಿಗೆ ಇನ್ನೂ ಅನೇಕ ದೈತ್ಯರು ಬಲಶಾಲಿಯಾಗಿದ್ದು ಕತ್ತೆಗಳ ರೂಪದಿಂದಲೇ ಇದ್ದಾರೆ. ॥ ೨೩ ॥ ಓ ಶತ್ರುಸೂದನನೇ ! ಆ ದೈತ್ಯನು ಇಲ್ಲಿಯವರೆಗೆ ಎಷ್ಟು ಜನರನ್ನು ತಿಂದು ಹಾಕಿರುವನೋ ತಿಳಿಯದು. ಈಗಂತೂ ಮರಣ ಭಯದಿಂದಾಗಿ ಯಾವ ಮನುಷ್ಯನೂ ಅಲ್ಲಿಗೆ ಹೋಗುವುದಿಲ್ಲ, ಮನುಷ್ಯರೇ ಅಲ್ಲ, ಪಶು-ಪಕ್ಷಿಗಳೂ ಕೂಡ ಆ ಕಾಡಿನ ಕಡೆಗೆ ಕಣ್ಣೆತ್ತಿಯೂ ನೋಡುವುದಿಲ್ಲ. ॥ ೨೪ ॥ ತಾಳೆಯ ಫಲಗಳಂತೂ ತುಂಬಾ ಸುಗಂಧಿತವಾಗಿವೆ. ಆದರೆ ನಾವು ಎಂದೂ ಅದನ್ನು ತಿಂದಿಲ್ಲ. ನೋಡಿ, ಸುತ್ತಲೂ ಆ ಹಣ್ಣುಗಳ ಮಂದ-ಮಂದ ಪರಿಮಳವು ಪಸರಿಸಿದೆ. ಸ್ವಲ್ಪ ಮನಸ್ಸಿಟ್ಟು ಗಮನಿಸಿದರೆ ಅದರ ಮಾಧುರ್ಯವನ್ನು ಅರಿಯಬಹುದು. ॥ ೨೫ ॥ ಶ್ರೀಕೃಷ್ಣ ! ಅವುಗಳ ಸುಗಂಧದಿಂದ ನಮ್ಮ ಮನಸ್ಸು ಆಕರ್ಷಿತವಾಗಿದೆ ಹಾಗೂ ಅದನ್ನು ತಿನ್ನಬೇಕೆಂದು ಆಶಿಸುತ್ತಿದೆ. ನೀನು ಆ ಫಲಗಳನ್ನು ನಮಗೆ ತಿನ್ನಿಸು. ಬಲರಾಮ ! ನಮಗೆ ಆ ಫಲಗಳ ಕುರಿತು ಬಹಳ ಉತ್ಕಂಠತೆ ಇದೆ. ನಿಮಗೆ ಉಚಿತವೆನಿಸಿದರೆ ಖಂಡಿತವಾಗಿ ಅಲ್ಲಿಗೆ ಹೋಗೋಣ. ॥ ೨೬ ॥

ತಮ್ಮ ಸ್ನೇಹಿತರು ಆಡಿದ ಮಾತನ್ನು ಕೇಳಿ ಭಗವಾನ್ ಶ್ರೀಕೃಷ್ಣ ಮತ್ತು ಬಲರಾಮರಿಬ್ಬರೂ ನಗುತ್ತಾ ಅವರನ್ನು ಸಂತೋಷಗೊಳಿಸಲಿಕ್ಕಾಗಿ ಅವರೊಂದಿಗೆ ತಾಳೆವನಕ್ಕೆ ಹೊರಟರು. ॥ ೨೭ ॥ ಅಲ್ಲಿಗೆ ಹೋದ ಮೇಲೆ ಬಲರಾಮನು ತನ್ನ ತೋಳುಗಳಿಂದ ತಾಳೆಮರವನ್ನು ಬಿಗಿದಪ್ಪಿ ಆನೆ ಮರಿಯಂತೆ ತಾಳೆಮರವನ್ನು ಜೋರಾಗಿ ಅಲ್ಲಾಡಿಸಿದನು. ನೂರಾರು ಹಣ್ಣುಗಳು ತೊಪ ತೊಪನೆ ಕೆಳಕ್ಕೆ ಬಿದ್ದವು. ॥ ೨೮ ॥ ಕತ್ತೆಯ ರೂಪದಲ್ಲಿದ್ದ ದೈತ್ಯನು ಹಣ್ಣುಗಳು ಬಿದ್ದ ಶಬ್ದವನ್ನು ಕೇಳಿದಾಗ ಅವನು ಪರ್ವತಗಳಿಂದ ಕೂಡಿದ ಭೂಮಿಯನ್ನು ನಡುಗಿಸುತ್ತಾ ಅವರೆಡೆಗೆ ಧಾವಿಸಿ ಬಂದನು. ॥ ೨೯ ॥ ಅವನು ಮಹಾಬಲಶಾಲಿಯಾಗಿದ್ದನು. ತಾಳೆಯ ಮರವನ್ನು ಅಲ್ಲಾಡಿಸುತ್ತಿದ್ದ ಬಲರಾಮನ ಮುಂದೆ ಹಿಮ್ಮುಖವಾಗಿ ನಿಂತು ಹಿಂಗಾಲುಗಳಿಂದ ಅವನ ಎದೆಗೆ ಒದ್ದನು. ಅನಂತರ ಆ ದುಷ್ಟನು ಜೋರಾಗಿ ಕಿರುಚುತ್ತಾ ಹಿಂದಕ್ಕೆ ಸರಿದು ನಿಂತನು. ॥ ೩೦ ॥ ರಾಜೇಂದ್ರ ! ಆ ಕತ್ತೆಯು ಅತ್ಯಂತ ಕ್ರುದ್ಧವಾಗಿ ಪುನಃ ಕಿರುಚುತ್ತಾ ಮತ್ತೆ ಬಲರಾಮನ ಬಳಿಗೆ ಬಂದು ಅವನೆಡೆಗೆ ಬೆನ್ನುಮಾಡಿ ಪುನಃ ತನ್ನ ಹಿಂಗಾಲಿನಿಂದ ಬಲರಾಮನಿಗೆ ಒದೆದನು. ॥ ೩೧ ॥ ಬಲರಾಮನು ತನ್ನ ಒಂದೇ ಕೈಯಿಂದ ಅವನ ಎರಡೂ ಕಾಲುಗಳನ್ನು ಹಿಡಿದು ಗರ-ಗರನೆ ತಿರುಗಿಸಿ ತಾಳೆಯ ಮರದ ಮೇಲಕ್ಕೆ ಎಸೆದನು. ಹಾಗೆ ಗರ-ಗರನೆ ತಿರುಗಿಸುವಾಗಲೇ ರಾಕ್ಷಸನ ಪ್ರಾಣಪಕ್ಷಿ ಹಾರಿಹೋಗಿತ್ತು. ॥ ೩೨ ॥ ತಾಳೆಯ ಮರದ ಮೇಲ್ಭಾಗವು ಗರಿಗಳಿಂದ ಅಗಲವಾಗಿತ್ತು. ದೈತ್ಯನು ಮರದ ಮೇಲೆ ಬೀಳುತ್ತಲೇ ಆ ತಾಳೆಮರವು ಉರುಳಿಬಿತ್ತು. ಅದರ ಜೊತೆಗೆ ಅದಕ್ಕೆ ತಾಗಿನಿಂತ ಅನೇಕ ತಾಳೆಮರಗಳೂ ಉರುಳಿ ಬಿದ್ದವು. ॥ ೩೩ ॥

ಬಲಸ್ಯ ಲೀಲಯೋತ್ಸೃಷ್ಟಖರದೇಹಹತಾಹತಾಃ ।
ತಾಲಾಶ್ಚ ಕಂಪಿರೇ ಸರ್ವೇ ಮಹಾವಾತೇರಿತಾ ಇವ
॥ ೩೪ ॥

ನೈತಚ್ಚಿತ್ರಂ ಭಗವತಿ ಹ್ಯನಂತೇ ಜಗದೀಶ್ವರೇ ।
ಓತಪ್ರೋತಮಿದಂ ಯಸ್ಮಿಂಸ್ತಂತುಷ್ವಂಗ ಯಥಾ ಪಟಃ
॥ ೩೫ ॥

ತತಃ ಕೃಷ್ಣಂ ಚ ರಾಮಂ ಚ ಜ್ಞಾತಯೋ ಧೇನುಕಸ್ಯ ಯೇ ।
ಕ್ರೋಷ್ಟಾರೋಽಭ್ಯದ್ರವನ್ಸರ್ವೇ ಸಂರಬ್ಧಾ ಹತಬಾಂಧವಾಃ
॥ ೩೬ ॥

ತಾಂಸ್ತಾನಾಪತತಃ ಕೃಷ್ಣೋ ರಾಮಶ್ಚ ನೃಪ ಲೀಲಯಾ ।
ಗೃಹೀತಪಶ್ಚಾಚ್ಚರಣಾನ್ಪ್ರಾಹಿಣೋತ್ತೃಣರಾಜಸು
॥ ೩೭ ॥

ಫಲಪ್ರಕರಸಂಕೀರ್ಣಂ ದೈತ್ಯದೇಹೈರ್ಗತಾಸುಭಿಃ ।
ರರಾಜ ಭೂಃ ಸತಾಲಾಗ್ರೈರ್ಘನೈರಿವ ನಭಸ್ತಲಮ್
॥ ೩೮ ॥

ತಯೋಸ್ತತ್ಸುಮಹತ್ಕರ್ಮ ನಿಶಾಮ್ಯ ವಿಬುಧಾದಯಃ ।
ಮುಮುಚುಃ ಪುಷ್ಪವರ್ಷಾಣಿ ಚಕ್ರುರ್ವಾದ್ಯಾನಿ ತುಷ್ಟುವುಃ
॥ ೩೯ ॥

ಅಥ ತಾಲಫಲಾನ್ಯಾದನ್ಮನುಷ್ಯಾ ಗತಸಾಧ್ವಸಾಃ ।
ತೃಣಂ ಚ ಪಶವಶ್ಚೇರುರ್ಹತಧೇನುಕಕಾನನೇ
॥ ೪೦ ॥

ಕೃಷ್ಣಃ ಕಮಲಪತ್ರಾಕ್ಷಃ ಪುಣ್ಯಶ್ರವಣಕೀರ್ತನಃ ।
ಸ್ತೂಯಮಾನೋಽನುಗೈರ್ಗೋಪೈಃ ಸಾಗ್ರಜೋ ವ್ರಜಮಾವ್ರಜತ್
॥ ೪೧ ॥

ತಂ ಗೋರಜಶ್ಛುರಿತಕುಂತಲಬದ್ಧಬರ್ಹ-
ವನ್ಯಪ್ರಸೂನರುಚಿರೇಕ್ಷಣಚಾರುಹಾಸಮ್ ।
ವೇಣುಂ ಕ್ವಣಂತಮನುಗೈರನುಗೀತಕೀರ್ತಿಂ
ಗೋಪ್ಯೋ ದಿದೃಕ್ಷಿತದೃಶೋಽಭ್ಯಗಮನ್ಸಮೇತಾಃ ॥ ೪೨ ॥

ಪೀತ್ವಾ ಮುಕುಂದಮುಖಸಾರಘಮಕ್ಷಿಭೃಂಗೈ-
ಸ್ತಾಪಂ ಜಹುರ್ವಿರಹಜಂ ವ್ರಜಯೋಷಿತೋಽಹ್ನಿ ।
ತತ್ ಸತ್ಕೃತಿಂ ಸಮಧಿಗಮ್ಯ ವಿವೇಶ ಗೋಷ್ಠಂ
ಸವ್ರೀಡಹಾಸವಿನಯಂ ಯದಪಾಂಗಮೋಕ್ಷಮ್ ॥ ೪೩ ॥

ಬಲರಾಮನಿಗೆ ಇದೊಂದು ಲೀಲೆಯೇ ಆಗಿತ್ತು. ಆದರೆ ಅವನಿಂದ ಎಸೆಯಲ್ಪಟ್ಟ ಕತ್ತೆಯ ಶರೀರದ ಏಟಿನಿಂದ ಅಲ್ಲಿಯ ಎಲ್ಲ ಮರಗಳೂ ಬಿರುಗಾಳಿಗೆ ಸಿಲುಕಿದಂತೆ ನಡುಗಿ ಹೋದುವು. ॥ ೩೪ ॥ ಭಗವಾನ್ ಬಲರಾಮನು ಸಾಕ್ಷಾತ್ ಜಗದೀಶ್ವರನೇ ಆಗಿದ್ದಾನೆ. ಅವನಲ್ಲಿ ಈ ಜಗತ್ತು ಬಟ್ಟೆಯಲ್ಲಿ ದಾರವು ಹಾಸುಹೊಕ್ಕಾಗಿರುವಂತೆ ಹೆಣೆದುಕೊಂಡಿದೆ. ಹಾಗಿರುವಾಗ ಅವನ ಕುರಿತು ಇದರಲ್ಲಿ ಆಶ್ಚರ್ಯವೇನಿದೆ. ॥ ೩೫ ॥ ಆ ಸಮಯದಲ್ಲಿ ಧೇನುಕಾಸುರನ ಜ್ಞಾತಿ-ಬಾಂಧವರೆಲ್ಲರೂ ಅತ್ಯಂತ ಕುಪಿತರಾಗಿ ಗಟ್ಟಿಯಾಗಿ ಕಿರುಚಿಕೊಳ್ಳುತ್ತಾ ಬಲರಾಮ ಕೃಷ್ಣರನ್ನು ರಭಸದಿಂದ ಆಕ್ರಮಿಸಿದರು. ॥ ೩೬ ॥ ರಾಜನೇ! ತಮ್ಮ ಬಳಿಗೆ ಬಂದ ಕತ್ತೆಯ ರೂಪದ ರಾಕ್ಷಸರೆಲ್ಲರನ್ನೂ ರಾಮ-ಕೃಷ್ಣರು ಅವುಗಳ ಹಿಂಗಾಲುಗಳನ್ನು ಹಿಡಿದು ಒಬ್ಬೊಬ್ಬರನ್ನಾಗಿ ಗರ-ಗರನೆ ತಿರುಗಿಸುತ್ತಾ ಲೀಲಾಜಾಲವಾಗಿ ತಾಳೆಮರದ ಮೇಲಕ್ಕೆ ಎಸೆಯ ತೊಡಗಿದರು. ॥ ೩೭ ॥ ಆಗ ಅಲ್ಲಿಯ ಭೂಮಿಯು ತಾಳೆ ಹಣ್ಣುಗಳಿಂದ, ಮುರಿದು ಬಿದ್ದ ಮರಗಳಿಂದ ಹಾಗೂ ದೈತ್ಯರ ಪ್ರಾಣಹೀನ ಶರೀರಗಳಿಂದ-ಮೋಡಗಳಿಂದ ಆಕಾಶವು ತುಂಬಿ ಹೋಗಿರುವಂತೆ ಮುಚ್ಚಿ ಹೋಗಿ ಶೋಭಿಸುತ್ತಿತ್ತು. ॥ ೩೮ ॥ ಬಲರಾಮ-ಶ್ರೀಕೃಷ್ಣರ ಈ ಮಂಗಲಮಯ ಲೀಲೆಯನ್ನು ನೋಡಿ ದೇವತೆಗಳು ಅವರ ಮೇಲೆ ಪುಷ್ಪವೃಷ್ಟಿಗರೆದರು. ವಾದ್ಯಗಳನ್ನು ನುಡಿಸುತ್ತಾ ಸ್ತುತಿಸತೊಡಗಿದರು. ॥ ೩೯ ॥ ಧೇನುಕಾಸುರನು ಸತ್ತ ದಿನದಿಂದ ಜನರು ಧೈರ್ಯವಾಗಿ ಆ ವನಕ್ಕೆ ಹೋಗಿ ತಾಳೆ ಫಲಗಳನ್ನು ತಿನ್ನ ತೊಡಗಿದರು. ಪಶುಗಳೂ ಸ್ವಚ್ಛಂದವಾಗಿ ಅಲ್ಲಿ ಹುಲ್ಲು ಮೇಯತೊಡಗಿದವು. ॥ ೪೦ ॥

ಇದಾದ ಬಳಿಕ ಕಮಲದಳ ಲೋಚನನಾದ ಭಗವಾನ್ ಶ್ರೀಕೃಷ್ಣನು ಅಣ್ಣನಾದ ಬಲರಾಮನೊಂದಿಗೆ ವ್ರಜಕ್ಕೆ ಆಗಮಿಸಿದನು. ಆಗ ಅವನ ಸಂಗಡಿಗರಾದ ಗೋಪಬಾಲಕರು ಭಗವಂತನ ಲೀಲೆಗಳ ಶ್ರವಣ-ಕೀರ್ತನವೇ ಎಲ್ಲಕ್ಕೂ ಮಿಗಿಲಾದ ಪವಿತ್ರವಾಗಿ ಇರುವುದರಿಂದ ಆ ಕೀರ್ತನೆಗಳಿಂದ ಸ್ತುತಿಸುತ್ತಾ ಹಿಂದೆ-ಹಿಂದೆಯೇ ಬರುತ್ತಿದ್ದರು. ॥ ೪೧ ॥ ಆ ಸಮಯದಲ್ಲಿ ಶ್ರೀಕೃಷ್ಣನ ಗುಂಗುರು ಕೂದಲುಗಳಲ್ಲಿ ಹಸುಗಳ ಗೊರಸಿನಿಂದ ಎದ್ದ ಧೂಳು ತುಂಬಿತ್ತು. ತಲೆಯಲ್ಲಿ ನವಿಲುಗರಿಗಳ ಮುಕುಟವಿತ್ತು. ಕೂದಲುಗಳಲ್ಲಿ ಅಂದವಾದ ವನಪುಷ್ಪಗಳು ಮುಡಿದಿದ್ದುವು. ಅವನ ಕಡೆಗಣ್ಣ ನೋಟವೂ, ಹುಸಿನಗೆಯೂ ಸುಮಧುರವಾಗಿತ್ತು. ಅವನು ಕರ್ಣಾನಂದಕರವಾಗಿ ಮುರಳಿಯನ್ನು ನುಡಿಸುತ್ತಿದ್ದನು. ಜೊತೆಗೆ ಗೊಲ್ಲಬಾಲಕರು ಅವನ ಕೀರ್ತಿಯನ್ನು ಹಾಡುತ್ತಿದ್ದರು. ಕೊಳಲಿನ ಧ್ವನಿಯನ್ನು ಕೇಳಿದ ಅನೇಕ ಗೋಪಿಯರು ಒಟ್ಟಾಗಿ ಹಟ್ಟಿಯಿಂದ ಹೊರಬಂದು ಅವನನ್ನೇ ದಿಟ್ಟಿಸಿ ನೋಡುತ್ತಿದ್ದರು. ಅವರ ಕಣ್ಣುಗಳು ಎಷ್ಟೋ ಹೊತ್ತಿನಿಂದ ಅವನ ದರ್ಶನಕ್ಕಾಗಿ ಕಾತರವಾಗಿ ಇದ್ದವು. ॥ ೪೨ ॥ ಗೋಪಿಯರು ತಮ್ಮ ಕಣ್ಣುಗಳೆಂಬ ಭ್ರಮರಗಳಿಂದ ಭಗವಂತನ ಮುಖಾರವಿಂದದ ಮಕರಂದ ರಸವನ್ನು ಪಾನಮಾಡಿ ಇಡೀ ದಿನದ ಅಗಲುವಿಕೆಯ ತಾಪವನ್ನು ತಣಿಸಿಕೊಂಡರು. ಭಗವಂತನೂ ಕೂಡ ಅವರ ಲಜ್ಜೆಯಿಂದ ಕೂಡಿದ ಮುಗುಳ್ನಗೆಯನ್ನು ಪ್ರೇಮಪೂರ್ಣ ಓರೆನೋಟಗಳ ಸತ್ಕಾರವನ್ನು ಸ್ವೀಕರಿಸುತ್ತಾ ವ್ರಜವನ್ನು ಪ್ರವೇಶಿಸಿದನು. ॥ ೪೩ ॥

ತಯೋರ್ಯಶೋದಾರೋಹಿಣ್ಯೌ ಪುತ್ರಯೋಃ ಪುತ್ರವತ್ಸಲೇ ।
ಯಥಾಕಾಮಂ ಯಥಾಕಾಲಂ ವ್ಯಧತ್ತಾಂ ಪರಮಾಶಿಷಃ ॥ ೪೪ ॥

ಗತಾಧ್ವಾನಶ್ರಮೌ ತತ್ರ ಮಜ್ಜನೋನ್ಮರ್ದನಾದಿಭಿಃ ।
ನೀವೀಂ ವಸಿತ್ವಾ ರುಚಿರಾಂ ದಿವ್ಯಸ್ರಗ್ಗಂಧಮಂಡಿತೌ ॥ ೪೫ ॥

ಜನನ್ಯುಪಹೃತಂ ಪ್ರಾಶ್ಯ ಸ್ವಾದ್ವನ್ನಮುಪಲಾಲಿತೌ ।
ಸಂವಿಶ್ಯ ವರಶಯ್ಯಾಯಾಂ ಸುಖಂ ಸುಷುಪತುರ್ವ್ರಜೇ ॥ ೪೬ ॥

ಏವಂ ಸ ಭಗವಾನ್ಕೃಷ್ಣೋ ವೃಂದಾವನಚರಃ ಕ್ವಚಿತ್ ।
ಯಯೌ ರಾಮಮೃತೇ ರಾಜನ್ಕಾಲಿಂದೀಂ ಸಖಿಭಿರ್ವೃತಃ ॥ ೪೭ ॥

ಅಥ ಗಾವಶ್ಚ ಗೋಪಾಶ್ಚ ನಿದಾಘಾತಪಪೀಡಿತಾಃ ।
ದುಷ್ಟಂ ಜಲಂ ಪಪುಸ್ತಸ್ಯಾಸ್ತೃಷಾರ್ತಾ ವಿಷದೂಷಿತಮ್ ॥ ೪೮ ॥

ವಿಷಾಂಭಸ್ತದುಪಸ್ಪೃಶ್ಯ ದೈವೋಪಹತಚೇತಸಃ ।
ನಿಪೇತುರ್ವ್ಯಸವಃ ಸರ್ವೇ ಸಲಿಲಾಂತೇ ಕುರೂದ್ವಹ ॥ ೪೯ ॥

ವೀಕ್ಷ್ಯ ತಾನ್ವೈ ತಥಾಭೂತಾನ್ಕೃಷ್ಣೋ ಯೋಗೇಶ್ವರೇಶ್ವರಃ ।
ಈಕ್ಷಯಾಮೃತವರ್ಷಿಣ್ಯಾ ಸ್ವನಾಥಾನ್ಸಮಜೀವಯತ್ ॥ ೫೦ ॥

ತೇ ಸಂಪ್ರತೀತಸ್ಮೃತಯಃ ಸಮುತ್ಥಾಯ ಜಲಾಂತಿಕಾತ್ ।
ಆಸನ್ಸುವಿಸ್ಮಿತಾಃ ಸರ್ವೇ ವೀಕ್ಷಮಾಣಾಃ ಪರಸ್ಪರಮ್ ॥ ೫೧ ॥

ಅನ್ವಮಂಸತ ತದ್ರಾಜನ್ಗೋವಿಂದಾನುಗ್ರಹೇಕ್ಷಿತಮ್ ।
ಪೀತ್ವಾ ವಿಷಂ ಪರೇತಸ್ಯ ಪುನರುತ್ಥಾನಮಾತ್ಮನಃ ॥ ೫೨ ॥

ಅತ್ತ ತಾಯಿ ಯಶೋದೆಯ ಮತ್ತು ರೋಹಿಣಿಯ ಹೃದಯಗಳು ವಾತ್ಸಲ್ಯಭಾವದಿಂದ ಉಕ್ಕಿಹರಿಯುತ್ತಿತ್ತು. ಶ್ಯಾಮ ಮತ್ತು ರಾಮರು ಮನೆಗೆ ಬರುತ್ತಲೇ ಅವರು ಅವರ ಇಚ್ಛೆಗನುಸಾರ ಹಾಗೂ ಸಮಯಕ್ಕನುಸಾರ ಮೊದಲೇ ಸಿದ್ಧಪಡಿಸಿದ್ದ ಭಕ್ಷ್ಯ ಭೋಜ್ಯಗಳನ್ನು ಮೃಷ್ಟಾನ್ನವನ್ನೂ ಅವರಿಗೆ ತಿನ್ನಿಸಿದರು. ॥ ೪೪ ॥ ತಾಯಂದಿರು ಅವರಿಗೆ ಎಣ್ಣೆಹಚ್ಚಿ ಸ್ನಾನಮಾಡಿಸಿದರು. ಇದರಿಂದ ಅವರ ಇಡೀ ದಿನದ ಬಳಲಿಕೆಯು ದೂರವಾಯಿತು. ಮತ್ತೆ ಅವರಿಗೆ ಸುಂದರವಾದ ವಸ್ತ್ರಗಳನ್ನು ತೊಡಿಸಿ ದಿವ್ಯ ಪುಷ್ಪಮಾಲಿಕೆಗಳಿಂದ ಸಿಂಗರಿಸಿ, ಚಂದನವನ್ನು ಪೂಸಿದರು. ॥ ೪೫ ॥ ಬಳಿಕ ಸೋದರರಿಬ್ಬರೂ ತಾಯಂದಿರು ಬಡಿಸಿದ ಸ್ವಾದಿಷ್ಟವಾದ ಭೋಜನವನ್ನು ಮಾಡಿದರು. ಅನಂತರ ಅವರನ್ನು ಮುದ್ದಿಸುತ್ತಾ ಯಶೋದೆ ಮತ್ತು ರೋಹಿಣಿಯರು ಸುಂದರವಾದ ಮೃದುವಾದ ಶಯ್ಯೆಯಲ್ಲಿ ಮಲಗಿಸಿದರು. ರಾಮ-ಕೃಷ್ಣರು ಸುಖವಾಗಿ ನಿದ್ರಿಸಿದರು. ॥ ೪೬ ॥

ಭಗವಾನ್ ಶ್ರೀಕೃಷ್ಣನು ಹೀಗೆ ವೃಂದಾವನದಲ್ಲಿ ಅನೇಕ ಲೀಲೆಗಳನ್ನು ನಡೆಸಿದನು. ಒಂದು ದಿನ ಅವನು ತನ್ನ ಸ್ನೇಹಿತರೊಂದಿಗೆ ಯಮುನಾತೀರಕ್ಕೆ ಹೋದನು. ರಾಜನೇ ! ಆ ದಿನ ಬಲರಾಮನು ಅವನೊಂದಿಗೆ ಹೋಗಿರಲಿಲ್ಲ. ॥ ೪೭ ॥ ಆ ಸಮಯದಲ್ಲಿ ಗೋ-ಗೋಪಾಲಕರು ಬೇಸಿಗೆಯ ಬಿಸಿಲಿನಿಂದ ಬಾಯಾರಿದ್ದು, ಅವರ ಗಂಟಲು ಒಣಗಿ ಹೋಗಿತ್ತು. ಇದರಿಂದಾಗಿ ಅವರು ಯಮುನಾನದಿಯ ವಿಷಮಿಶ್ರಿತ ನೀರನ್ನು ಯಥೇಚ್ಛವಾಗಿ ಕುಡಿದರು. ॥ ೪೮ ॥ ಪರೀಕ್ಷಿತನೇ ! ದುರದೃಷ್ಟವಶಾತ್ ಈ ವಿಷಯವು ಅವರಿಗೆ ತಿಳಿದಿರಲಿಲ್ಲ. ಆ ವಿಷಮಿಶ್ರಿತ ನೀರನ್ನು ಕುಡಿಯುತ್ತಲೇ ಎಲ್ಲ ಗೋವುಗಳು, ಗೋಪಾಲಕರು ಗತಪ್ರಾಣರಾಗಿ ಯಮುನಾತೀರದಲ್ಲಿ ಬಿದ್ದುಬಿಟ್ಟರು. ॥ ೪೯ ॥ ಅವರ ಇಂತಹ ಸ್ಥಿತಿಯನ್ನು ನೋಡಿದ ಯೋಗೇಶ್ವರರಿಗೂ ಈಶ್ವರನಾದ ಭಗವಾನ್ ಶ್ರೀಕೃಷ್ಣನು ತನ್ನ ಅಮೃತವನ್ನು ಸುರಿಸುವ ಕೃಪಾದೃಷ್ಟಿಯಿಂದ ಅವರನ್ನು ಬದುಕಿಸಿದನು. ಅವರಿಗೆ ಸ್ವಾಮಿಯೂ ಸರ್ವಸ್ವವೂ ಏಕಮಾತ್ರ ಶ್ರೀಕೃಷ್ಣನೇ ಆಗಿದ್ದನು. ॥ ೫೦ ॥ ಪರೀಕ್ಷಿತನೇ ! ಚೇತರಿಸಿಕೊಂಡು ಅವರೆಲ್ಲರೂ ಯಮುನಾತೀರದಲ್ಲಿ ಎದ್ದು ನಿಂತು ಆಶ್ಚರ್ಯಚಕಿತರಾಗಿ ಒಬ್ಬರು ಮತ್ತೊಬ್ಬರನ್ನು ನೋಡತೊಡಗಿದರು. ॥ ೫೧ ॥ ರಾಜೇಂದ್ರ ! ಕೊನೆಗೆ 'ನಾವೆಲ್ಲರೂ ವಿಷಯುಕ್ತ ನೀರನ್ನು ಕುಡಿದು ಸತ್ತುಹೋಗಿದ್ದೆವು. ಆದರೆ ನಮ್ಮ ಶ್ರೀಕೃಷ್ಣನೇ ತನ್ನ ಅನುಗ್ರಹ ತುಂಬಿದ ದೃಷ್ಟಿಯಿಂದ ನಮ್ಮನ್ನು ಪುನಃ ಬದುಕಿಸಿದನು' ಎಂದು ಅವರೆಲ್ಲರೂ ನಿಶ್ಚಯಿಸಿಕೊಂಡರು. ॥ ೫೨ ॥

ಹದಿನೈದನೆಯ ಅಧ್ಯಾಯವು ಮುಗಿಯಿತು. ॥ ೧೫ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮ ಸ್ಕಂಧೇ ಪೂರ್ವಾರ್ಧೇ
ಧೇನುಕವಧೋ ನಾಮ ಪಂಚದಶೋಽಧ್ಯಾಯಃ ॥ ೧೫ ॥

ಹದಿನಾರನೆಯ ಅಧ್ಯಾಯ

ಕಾಲಿಯನ ಮೇಲೆ ಕೃಪೆದೋರಿದುದು

ಶ್ರೀಶುಕ ಉವಾಚ

ವಿಲೋಕ್ಯ ದೂಷಿತಾಂ ಕೃಷ್ಣಾಂ ಕೃಷ್ಣಃ ಕೃಷ್ಣಾಹಿನಾ ವಿಭುಃ ।
ತಸ್ಯಾ ವಿಶುದ್ಧಿ ಮನ್ವಿಚ್ಛನ್ಸರ್ಪಂ ತಮುದವಾಸಯತ್ ॥ ೧ ॥

ರಾಜೋವಾಚ

ಕಥಮಂತರ್ಜಲೇಽಗಾಧೇ ನ್ಯಗೃಹ್ಣಾದ್ಭಗವಾನಹಿಮ್ ।
ಸ ವೈ ಬಹುಯುಗಾವಾಸಂ ಯಥಾಸೀದ್ವಿಪ್ರ ಕಥ್ಯತಾಮ್ ॥ ೨ ॥

ಬ್ರಹ್ಮನ್ಭಗವತಸ್ತಸ್ಯ ಭೂಮ್ನಃ ಸ್ವಚ್ಛಂದವರ್ತಿನಃ ।
ಗೋಪಾಲೋದಾರಚರಿತಂ ಕಸ್ತೃಪ್ಯೇತಾಮೃತಂ ಜುಷನ್ ॥ ೩ ॥

ಶ್ರೀಶುಕ ಉವಾಚ

ಕಾಲಿಂದ್ಯಾಂ ಕಾಲಿಯಸ್ಯಾಸೀದ್ಧ್ರದಃ ಕಶ್ಚಿದ್ವಿಷಾಗ್ನಿನಾ ।
ಶ್ರಪ್ಯಮಾಣಪಯಾ ಯಸ್ಮಿನ್ಪತಂತ್ಯುಪರಿಗಾಃ ಖಗಾಃ ॥ ೪ ॥

ವಿಪ್ರುಷ್ಮತಾ ವಿಷೋದೋರ್ಮಿಮಾರುತೇನಾಭಿಮರ್ಶಿತಾಃ ।
ಮ್ರಿಯಂತೇ ತೀರಗಾ ಯಸ್ಯ ಪ್ರಾಣಿನಃ ಸ್ಥಿರಜಂಗಮಾಃ ॥ ೫ ॥

ತಂ ಚಂಡವೇಗವಿಷವೀರ್ಯಮವೇಕ್ಷ್ಯ ತೇನ
ದುಷ್ಟಾಂ ನದೀಂ ಚ ಖಲಸಂಯಮನಾವತಾರಃ ।
ಕೃಷ್ಣಃ ಕದಂಬಮಧಿರುಹ್ಯ ತತೋಽತಿತುಂಗ-
ಮಾಸ್ಫೋಟ್ಯ ಗಾಢರಶನೋ ನ್ಯಪತದ್ವಿಷೋದೇ ॥ ೬ ॥

ಸರ್ಪಹ್ರದಃ ಪುರುಷಸಾರನಿಪಾತವೇಗ-
ಸಂಕ್ಷೋಭಿತೋರಗವಿಷೋಚ್ಛ್ವಸಿತಾಂಬುರಾಶಿಃ ।
ಪರ್ಯಕ್ಪ್ಲುತೋ ವಿಷಕಷಾಯವಿಭೀಷಣೋರ್ಮಿ-
ರ್ಧಾವನ್ಧನುಃಶತಮನಂತಬಲಸ್ಯ ಕಿಂ ತತ್ ॥ ೭ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ - ಪರೀಕ್ಷಿದ್ರಾಜನೇ! ಮಹಾವಿಷವುಳ್ಳ ಕಾಳಿಯನಾಗನು ಯಮುನೆಯ ನೀರನ್ನು ವಿಷಭರಿತವನ್ನಾಗಿ ಮಾಡಿಬಿಟ್ಟಿರುವನೆಂದು ವಿಷಯವನ್ನು ತಿಳಿದ ಭಗವಾನ್ ಶ್ರೀಕೃಷ್ಣನು ಯಮುನೆಯ ನೀರನ್ನು ಶುದ್ಧಗೊಳಿಸಲೋಸುಗ ಆ ಸರ್ಪವನ್ನು ಅಲ್ಲಿಂದ ಓಡಿಸಿಬಿಟ್ಟನು ॥ ೧ ॥

ಪರೀಕ್ಷಿತರಾಜನು ಕೇಳಿದನು - ಬ್ರಹ್ಮರ್ಷಿಯೇ! ಭಗವಾನ್ ಶ್ರೀಕೃಷ್ಣನು ಯಮುನೆಯ ಅಗಾಧವಾದ ನೀರಿನಲ್ಲಿದ್ದ ಕಾಳಿಯನನ್ನು ಹೇಗೆ ದಮನ ಮಾಡಿದನು? ಕಾಳಿಯ ಸರ್ಪವಾದರೋ ಜಲಚರಪ್ರಾಣಿಯಲ್ಲ, ಹಾಗಿದ್ದರೂ ಅದು ಅನೇಕ ಯುಗಗಳಿಂದ ಅಲ್ಲಿ ಹೇಗೆ ವಾಸವಾಗಿತ್ತು? ಆ ವಿಷಯವನ್ನು ದಯಮಾಡಿ ತಿಳಿಸಿರಿ. ॥ ೨ ॥ ಬ್ರಾಹ್ಮಣಶ್ರೇಷ್ಠರೇ! ಪರಬ್ರಹ್ಮ ಸ್ವರೂಪನೂ, ತನ್ನ ಇಚ್ಛಾನುಸಾರವಾಗಿ ವರ್ತಿಸುವವನೂ ಆದ ಶ್ರೀಕೃಷ್ಣನು ಗೋಪಾಲರೂಪದಿಂದ ನಡೆಸಿದ ಅದ್ಭುತ ಲೀಲಾಮೃತವನ್ನು ಎಷ್ಟು ಕುಡಿದರೂ ತೃಪ್ತಿಯುಂಟಾಗುವುದಿಲ್ಲ ॥ ೩ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ - ಪರೀಕ್ಷಿತನೇ! ಯಮುನಾನದಿಯಲ್ಲಿ ಕಾಳಿಯನಾಗನ ನಿವಾಸದ ಒಂದು ಕುಂಡವಿತ್ತು. ಅದರ ನೀರು ವಿಷದಿಂದ ಕುದಿಯುತ್ತಿತ್ತು. ಆ ಕುಂಡದ ಮೇಲೆ ಹಾರಿ ಹೋಗುತ್ತಿದ್ದ ಪಕ್ಷಿಗಳು ವಿಷದ ಬೇಗೆಯನ್ನು ತಾಳಲಾರದೆ ಕುಂಡದಲ್ಲೇ ಸತ್ತು ಬೀಳುತ್ತಿದ್ದವು. ॥ ೪ ॥ ಅದರ ಅಲೆಗಳ ಮೂಲಕವಾಗಿ ಹೊರಬಂದ ತುಂತುರುಗಳಿಂದ ಕೂಡಿದ ವಿಷದ ಗಾಳಿಯು ತೀರಪ್ರದೇಶದಲ್ಲಿ ಬೀಸಿ ಅಲ್ಲಿದ್ದ ಮರ-ಗಿಡಗಳು ಸುಟ್ಟುಹೋಗಿ, ಪಶು-ಪಕ್ಷಿಗಳು ಸತ್ತು ಹೋಗುತ್ತಿದ್ದವು ॥ ೫ ॥ ಪರೀಕ್ಷಿತನೇ! ದುಷ್ಟರದಮನಕ್ಕಾಗಿಯೇ ಅವತರಿಸಿದ್ದ ಭಗವಂತನು ಸರ್ಪದ ವಿಷವು ಪ್ರಚಂಡವಾಗಿರುವುದನ್ನೂ, ಭಯಂಕರವಾದ ಆ ವಿಷವೇ ಕಾಳಿಯ ಸರ್ಪದ ಮಹಾಬಲವಾಗಿರುವುದನ್ನೂ, ಆ ಕಾರಣದಿಂದಲೇ ತಾನು ವಿಹರಿಸುವ ಯಮುನೆಯು ಪೂರ್ಣ ವಿಷದಿಂದ ದೂಷಿತವಾಗಿರುವುದನ್ನೂ ನೋಡಿಕೊಂಡನು. ಆಗ ಭಗವಾನ್ ಶ್ರೀಕೃಷ್ಣನು ಸೊಂಟಕ್ಕೆ ಪಟ್ಟಿಯನ್ನು ಬಿಗಿದು ಒಂದು ಎತ್ತರವಾದ ಕದಂಬ ವೃಕ್ಷವನ್ನೇರಿ ಕೈಗಳಿಂದ ತನ್ನ ಭುಜಗಳನ್ನು ತಟ್ಟಿಕೊಳ್ಳುತ್ತಾ ಮಡುವಿನೊಳಗೆ ಧುಮುಕಿದನು ॥ ೬ ॥ ಯಮುನೆಯ ನೀರು ಸರ್ಪದ ವಿಷದಿಂದ ಮೊದಲೇ ಕುದಿದು ಉಕ್ಕುತ್ತಿತ್ತು. ಅದರ ತೆರೆಗಳು ಕೆಂಪು-ಹಳದಿಯಾಗಿದ್ದು ಅತ್ಯಂತ ಭಯಂಕರವಾಗಿ ಮೇಲೇಳುತ್ತಿದ್ದವು. ಪುರುಷೋತ್ತಮನಾದ ಭಗವಾನ್ ಶ್ರೀಕೃಷ್ಣನು ಹಾರಿದ್ದರಿಂದ ಅದರ ನೀರು ಇನ್ನು ಹೆಚ್ಚು ಉಕ್ಕತೊಡಗಿತು. ಆಗಲಾದರೋ ಕಾಳಿಯ ಮಡುವಿನ ನೀರು ಅತ್ತ-ಇತ್ತ ಹಾರಿ ನೂರು ಗಜಗಳಷ್ಟು ಹರಡಿಕೊಂಡಿತು. ಅಚಿಂತ್ಯ ಅನಂತ ಬಲಶಾಲಿಯಾದ ಭಗವಾನ್ ಶ್ರೀಕೃಷ್ಣನಿಗಾಗಿ ಇದರಲ್ಲಿ ಯಾವುದೇ ಆಶ್ಚರ್ಯದ ವಿಷಯವಾಗಿರಲಿಲ್ಲ ॥ ೭ ॥

ತಸ್ಯ ಹ್ರದೇ ವಿಹರತೋ ಭುಜದಂಡಘೂರ್ಣ-
ವಾರ್ಘೋಷಮಂಗ ವರವಾರಣವಿಕ್ರಮಸ್ಯ ।
ಆಶ್ರುತ್ಯ ತತ್ಸ್ವಸದನಾಭಿಭವಂ ನಿರೀಕ್ಷ್ಯ
ಚಕ್ಷುಃಶ್ರವಾಃ ಸಮಸರತ್ತದಮೃಷ್ಯಮಾಣಃ ॥ ೮ ॥

ತಂ ಪ್ರೇಕ್ಷಣೀಯ ಸುಕುಮಾರಘನಾವದಾತಂ
ಶ್ರೀವತ್ಸಪೀತವಸನಂ ಸ್ಮಿತಸುಂದರಾಸ್ಯಮ್ ।
ಕ್ರೀಡಂತಮಪ್ರತಿಭಯಂ ಕಮಲೋದರಾಂಘ್ರಿಂ
ಸಂದಶ್ಯ ಮರ್ಮಸು ರುಷಾ ಭುಜಯಾ ಚಛಾದ ॥ ೯ ॥

ತಂ ನಾಗಭೋಗಪರಿವೀತಮದೃಷ್ಟಚೇಷ್ಟ-
ಮಾಲೋಕ್ಯ ತತ್ಪ್ರಿಯಸಖಾಃ ಪಶುಪಾ ಭೃಶಾರ್ತಾಃ ।
ಕೃಷ್ಣೇಽರ್ಪಿತಾತ್ಮಸುಹೃದರ್ಥಕಲತ್ರಕಾಮಾ
ದುಃಖಾನುಶೋಕಭಯಮೂಢಧಿಯೋ ನಿಪೇತುಃ ॥ ೧೦ ॥

ಗಾವೋ ವೃಷಾ ವತ್ಸತರ್ಯಃ ಕ್ರಂದಮಾನಾಃ ಸುದುಃಖಿತಾಃ ।
ಕೃಷ್ಣೇ ನ್ಯಸ್ತೇಕ್ಷಣಾ ಭೀತಾ ರುದತ್ಯ ಇವ ತಸ್ಥಿರೇ ॥ ೧೧ ॥

ಅಥ ವ್ರಜೇ ಮಹೋತ್ಪಾತಾಸ್ತ್ರಿವಿಧಾ ಹ್ಯತಿದಾರುಣಾಃ ।
ಉತ್ಪೇತುರ್ಭುವಿ ದಿವ್ಯಾತ್ಮನ್ಯಾಸನ್ನಭಯಶಂಸಿನಃ ॥ ೧೨ ॥

ತಾನಾಲಕ್ಷ್ಯ ಭಯೋದ್ವಿಗ್ನಾ ಗೋಪಾ ನಂದಪುರೋಗಮಾಃ ।
ವಿನಾ ರಾಮೇಣ ಗಾಃ ಕೃಷ್ಣಂ ಜ್ಞಾತ್ವಾ ಚಾರಯಿತುಂ ಗತಮ್ ॥ ೧೩ ॥

ಪರೀಕ್ಷಿತನೇ! ಭಗವಾನ್ ಶ್ರೀಕೃಷ್ಣನು ಕಾಳಿಯ ಮಡುವಿಗೆ ಹಾರಿ ಅತುಲ ಬಲಶಾಲಿಯಾದ ಮತ್ತಗಜದಂತೆ ನೀರನ್ನು ಬಡಿಯತೊಡಗಿದನು. ಹೀಗೆ ಜಲಕ್ರೀಡೆಯಾಡುತ್ತಾ ಅವನ ಭುಜಗಳ ಬಡಿತದಿಂದ ನೀರಿನಲ್ಲಿ ಜೋರಾದ ಶಬ್ದವಾಗತೊಡಗಿತು. ಕಣ್ಣಿಂದಲೇ ಕೇಳುವ ಕಾಳಿಯ ಸರ್ಪನಿಗೆ ಆ ಶಬ್ದವನ್ನು ಕೇಳಿ, ಯಾರೋ ನನ್ನ ನಿವಾಸಸ್ಥಾನವನ್ನು ತಿರಸ್ಕರಿಸುತ್ತಿದ್ದಾನೆಂದು ತಿಳಿಯಿತು. ಇದನ್ನು ಸಹಿಸಲಾಗದೆ ಕಾಳಿಯನು ಕುಪಿತನಾಗಿ ಶ್ರೀಕೃಷ್ಣನ ಮುಂದೆ ಬಂದನು. ॥ ೮ ॥ ಎದುರಿಗೆ ಶ್ಯಾಮಲವರ್ಣದ ಬಾಲಕನನ್ನು ನೋಡಿದನು. ವರ್ಷಾಕಾಲದ ಮೇಘದಂತೆ ಅತ್ಯಂತ ಸುಕುಮಾರ ಶರೀರವಿದ್ದು ಪುನಃ ಪುನಃ ನೋಡಬೇಕೆನ್ನುವಷ್ಟು ಸೌಂದರ್ಯವು ಅವನಲ್ಲಿತ್ತು. ಅವನ ವೃಕ್ಷಸ್ಥಳದಲ್ಲಿ ಸ್ವರ್ಣ ರೇಖೆಯಂತೆ ಶ್ರೀವತ್ಸದ ಚಿಹ್ನೆಯಿದ್ದು ಪೀತಾಂಬರವನ್ನು ಧರಿಸಿದ್ದನು. ಅವನ ಸುಂದರವಾದ ಮುಖಾರವಿಂದದಿಂದ ಸುಮಧುರವಾದ ಮಂದಹಾಸವು ಹೊರಸೂಸುತ್ತಿತ್ತು. ಅವನ ಹೊಕ್ಕುಳು ಮತ್ತು ಪಾದಗಳು ಕಮಲ ಪುಷ್ಪದ ಕರ್ಣಿಕೆಯಂತೆ ಕೋಮಲ ಸುಮನೋಹರವಾಗಿದ್ದವು. ಯಾವ ವಿಧವಾದ ಭಯವೂ ಇಲ್ಲದೆ ಆ ಸುಂದರ ಬಾಲಕನು ನೀರಿನಲ್ಲಿ ಕೊಳಲಾಡುತ್ತಿದ್ದನು. ಇಂತಹ ತಿರಸ್ಕಾರವನ್ನು ಕಂಡ ಸರ್ಪರಾಜನ ಕೋಪವು ನೆತ್ತಿಗೇರಿತು. ಅವನು ಶ್ರೀಕೃಷ್ಣನ ಮರ್ಮಸ್ಥಾನದಲ್ಲಿ ಬಲವಾಗಿ ಕಚ್ಚಿ ತನ್ನ ಶರೀರದಿಂದ ಅವನನ್ನು ಬಂಧಿಸಿದನು. ॥ ೯ ॥ ಭಗವಾನ್ ಶ್ರೀಕೃಷ್ಣನು ನಾಗಪಾಶದಿಂದ ಬಂಧಿತನಾಗಿ ನಿಶ್ಚೇಷ್ಟಿತನಾದನು. ಇದನ್ನು ನೋಡಿದ ಅವನ ಪ್ರಾಣಪ್ರಿಯರಾದ ಗೋಪಬಾಲಕರು ಬಹಳವಾಗಿ ಸಂಕಟಪಟ್ಟರು. ದುಃಖ-ಪಶ್ಚಾತ್ತಾಪ-ಭಯಗಳಿಂದ ಮೂರ್ಛಿತರಾಗಿ ಕೆಳಗೆ ಬಿದ್ದರು. ಏಕೆಂದರೆ, ಅವರು ತಮ್ಮ ಶರೀರ, ಬಂಧುಗಳು, ಮಿತ್ರರು, ಧನಸಂಪತ್ತು, ಪುತ್ರ, ಕಳತ್ರರು, ಭೋಗಗಳು ಮತ್ತು ಸಮಸ್ತ ಕಾಮನೆಗಳು - ಇವೆಲ್ಲವನ್ನು ಭಗವಾನ್ ಶ್ರೀಕೃಷ್ಣನಿಗೆ ಸಮರ್ಪಿಸಿ ಬಿಟ್ಟಿದ್ದರು. ॥ ೧೦ ॥ ಹಸುಗಳು, ಎತ್ತುಗಳು, ಕರುಗಳು, ಎಳೆಗರುಗಳು ಹೀಗೆ ಎಲ್ಲವೂ ಸರ್ಪಪಾಶದಿಂದ ಕಟ್ಟಲ್ಪಟ್ಟ ಬಾಲಕೃಷ್ಣನನ್ನು ದಿಟ್ಟಿಸಿ ನೋಡುತ್ತಾ ಅಪಾರವಾದ ದುಃಖದಿಂದ ಕಿರುಚಿಕೊಳ್ಳುತ್ತಿದ್ದವು. ಭಯಗೊಂಡು ಅಳುತ್ತಿವೆಯೋ ಎಂಬಂತೆ ಸ್ವಲ್ಪವೂ ಕದಲದೆ ನಿಂತಿದ್ದವು. ॥ ೧೧ ॥

ಅತ್ತ ಗೋಕುಲದಲ್ಲಿ ಭಯವು ಸನ್ನಿಹಿತವಾಗುವುದೆಂಬುದನ್ನು ಸೂಚಿಸುವ ಮೂರು ಬಗೆಯ ದಾರುಣವಾದ ಮಹೋತ್ಪಾತಗಳು ಕಾಣಿಸಿಕೊಂಡವು. ಭೂಮಿಯು ಕಂಪಿಸಿತು, ಅಂತರಿಕ್ಷದಿಂದ ಉಲ್ಕೆಗಳು ಬೀಳತೊಡಗಿದವು. ಪುರುಷರ ಎಡ ಅಂಗಗಳು, ಸ್ತ್ರೀಯರ ಬಲ ಅಂಗಗಳೂ ಅದುರ ತೊಡಗಿದವು. ॥ ೧೨ ॥ ನಂದ ಗೋಪನೇ ಮೊದಲಾದವರು ಮಹೋತ್ಪಾತಗಳನ್ನು ನೋಡಿ ಭಯದಿಂದ ಉದ್ವಿಗ್ನರಾದರು. ಬಲರಾಮನನ್ನು ಬಿಟ್ಟು ಶ್ರೀಕೃಷ್ಣನೊಬ್ಬನೇ ಹಸುಗಳನ್ನು ಮೇಯಿಸಲು ಹೋಗಿರುವನೆಂದು ತಿಳಿದ ಬಳಿಕ ಅವರ ಭಯವು ಮತ್ತಷ್ಟು ಉಲ್ಬಣಿಸಿತು. ॥ ೧೩ ॥ ಅವರು ಭಗವಂತನ ಮಹಿಮೆಯನ್ನು ತಿಳಿಯುತ್ತಿರಲಿಲ್ಲ, ಅದಕ್ಕಾಗಿ ಆ ಅಪಶಕುನಗಳನ್ನು ನೋಡಿ - ಇಂದು ಶ್ರೀಕೃಷ್ಣನಿಗೆ ಮೃತ್ಯುವೇ

ತೈರ್ದುರ್ನಿಮಿತ್ತೈರ್ನಿಧನಂ ಮತ್ವಾ ಪ್ರಾಪ್ತಮತದ್ವಿದಃ ।
ತತ್ಪ್ರಾಣಾಸ್ತನ್ಮನಸ್ಕಾಸ್ತೇ ದುಃಖಶೋಕಭಯಾತುರಾಃ ॥ ೧೪ ॥

ಆಬಾಲವೃದ್ಧವನಿತಾಃ ಸರ್ವೇಽಂಗ ಪಶುವೃತ್ತಯಃ ।
ನಿರ್ಜಗ್ಮುರ್ಗೋಕುಲಾದ್ದೀನಾಃ ಕೃಷ್ಣದರ್ಶನಲಾಲಸಾಃ ॥ ೧೫ ॥

ತಾಂಸ್ತಥಾ ಕಾತರಾನ್ವೀಕ್ಷ್ಯ ಭಗವಾನ್ಮಾಧವೋ ಬಲಃ ।
ಪ್ರಹಸ್ಯ ಕಿಂಚಿನ್ನೋವಾಚ ಪ್ರಭಾವಜ್ಞೋಽನುಜಸ್ಯ ಸಃ ॥ ೧೬ ॥

ತೇಽನ್ವೇಷಮಾಣಾ ದಯಿತಂ ಕೃಷ್ಣಂ ಸೂಚಿತಯಾ ಪದೈಃ ।
ಭಗವಲ್ಲಕ್ಷಣೈರ್ಜಗ್ಮುಃ ಪದವ್ಯಾ ಯಮುನಾತಟಮ್ ॥ ೧೭ ॥

ತೇ ತತ್ರ ತತ್ರಾಬ್ಜಯವಾಂಕುಶಾಶನಿ-
ಧ್ವಜೋಪಪನ್ನಾನಿ ಪದಾನಿ ವಿಶ್ಪತೇಃ ।
ಮಾರ್ಗೇ ಗವಾಮನ್ಯಪದಾಂತರಾಂತರೇ
ನಿರೀಕ್ಷಮಾಣಾ ಯಯುರಂಗ ಸತ್ವರಾಃ ॥ ೧೮ ॥

ಅಂತರ್ಹ್ರದೇ ಭುಜಗಭೋಗಪರೀತಮಾರಾತ್
ಕೃಷ್ಣಂ ನಿರೀಹಮುಪಲಭ್ಯ ಜಲಾಶಯಾಂತೇ ।
ಗೋಪಾಂಶ್ಚ ಮೂಢಧಿಷಣಾನ್ಪರಿತಃ ಪಶೂಂಶ್ಚ
ಸಂಕ್ರಂದತಃ ಪರಮಕಶ್ಮಲಮಾಪುರಾರ್ತಾಃ ॥ ೧೯ ॥

ಗೋಪ್ಯೋಽನುರಕ್ತಮನಸೋ ಭಗವತ್ಯನಂತೇ
ತತ್ಸೌಹೃದಸ್ಮಿತವಿಲೋಕಗಿರಃ ಸ್ಮರಂತ್ಯಃ ।
ಗ್ರಸ್ತೇಽಹಿನಾ ಪ್ರಿಯತಮೇ ಭೃಶದುಃಖತಪ್ತಾಃ
ಶೂನ್ಯಂ ಪ್ರಿಯವ್ಯತಿಹೃತಂ ದದೃಶುಸ್ತ್ರಿಲೋಕಮ್ ॥ ೨೦ ॥

ಸಂಭವಿಸಬಹುದೆಂದು ಅವರ ಮನಸ್ಸಿಗೆ ಅನಿಸಿತು. ಅವರು ಆ ಕ್ಷಣವೇ ದುಃಖ, ಶೋಕ, ಭಯದಿಂದ ಆತುರರಾದರು. ಶ್ರೀಕೃಷ್ಣನೇ ಅವರಿಗೆ ಪಂಚಪ್ರಾಣವಾಗಿದ್ದನು. ಅವರ ಮನಸ್ಸು ಯಾವಾಗಲೂ ಅವನಲ್ಲೇ ಲೀನವಾಗಿ ಬಿಟ್ಟಿತ್ತು. ॥ ೧೪ ॥ ಪ್ರಿಯ ಪರೀಕ್ಷಿತನೇ! ವ್ರಜದ ಬಾಲಕ, ವೃದ್ಧ, ಸ್ತ್ರೀಯರ ಸ್ವಭಾವವೂ ಹಸುಗಳಂತೆ ವಾತ್ಸಲ್ಯಪೂರ್ಣವಾಗಿತ್ತು. ಮನಸ್ಸಿಗೆ ಹೀಗೆ ಅನಿಸುತ್ತಲೇ ಅವರು ಅತ್ಯಂತ ದುಃಖಿತರಾಗಿ ತಮ್ಮ ಪ್ರಿಯ ಮುದ್ದು ಕಂದಮ್ಮನನ್ನು ನೋಡಲು ಉತ್ಕಟ ಇಚ್ಛೆಯಿಂದ ಮನೆ-ಮಠ ಬಿಟ್ಟು ಹೊರಟೇ ಬಿಟ್ಟರು. ॥ ೧೫ ॥ ಬಲರಾಮನು ಸಾಕ್ಷಾತ್ ಭಗವಂತನ ಸ್ವರೂಪನೇ ಆಗಿದ್ದು ಸರ್ವಶಕ್ತನಾಗಿದ್ದನು. ವ್ರಜವಾಸಿಗಳು ಇಷ್ಟೊಂದು ಕಾತುರ ಮತ್ತು ಆತುರರಾಗಿರುವುದನ್ನು ನೋಡಿ ಅವನಿಗೆ ನಗುಬಂತು. ಆದರೆ ಅವನು ಏನೂ ಮಾತನಾಡದೆ ಸುಮ್ಮನೆ ಇದ್ದನು. ಏಕೆಂದರೆ, ಅವನು ತನ್ನ ತಮ್ಮನಾದ ಶ್ರೀಕೃಷ್ಣನ ಮಹಿಮೆಯನ್ನು ಚೆನ್ನಾಗಿ ತಿಳಿದಿದ್ದನು. ॥ ೧೬ ॥ ಅನಂತರ ವ್ರಜವಾಸಿಗಳು ತಮಗೆ ಅತ್ಯಂತ ಪ್ರಿಯನಾದ ಶ್ರೀಕೃಷ್ಣನನ್ನು ಹುಡುಕಲು ತೊಡಗಿದರು. ಹುಡುಕಲು ಅವರಿಗೆ ಅಷ್ಟೇನೂ ಕಷ್ಟವಾಗಲಿಲ್ಲ. ಭಗವಂತನಿಟ್ಟಿದ್ದ ಕಮಲ, ಅಂಕುಶಾದಿ ವಿಶೇಷ ಲಕ್ಷಣಗಳುಳ್ಳ ಹೆಜ್ಜೆಗಳನ್ನು ಅನುಸರಿಸಿ ಹೋದರು. ಹೀಗೆ ಅವು ಅವರನ್ನು ಯಮುನಾನದಿಯ ತೀರಕ್ಕೆ ಒಯ್ಯುವು. ॥ ೧೭ ॥

ಪರೀಕ್ಷಿತನೇ! ಮಾರ್ಗದಲ್ಲಿ ಹೋಗುತ್ತಿದ್ದಾಗ ಗೋವುಗಳ, ಕರುಗಳ, ಗೋಪಬಾಲಕರ ಹೆಜ್ಜೆಗಳ ನಡು-ನಡುವೆ ಭಗವಂತನ ಕಮಲ, ಯವ, ಅಂಕುಶ, ವಜ್ರಾಯುಧ, ಧ್ವಜಗಳ ಚಿಹ್ನೆಗಳಿಂದ ಕೂಡಿದ ಹೆಜ್ಜೆಗಳ ಗುರುತೂ ಸ್ಪಷ್ಟವಾಗಿ ಕಾಣಿಸುತ್ತಿದ್ದಿತು. ಅದನ್ನು ನೋಡಿಕೊಂಡು ಅದನ್ನೇ ಅನುಸರಿಸಿ ಗೋಪಾಲರು ಅವಸರದಿಂದ ಯಮುನಾತೀರಕ್ಕೆ ಹೋದರು. ॥ ೧೮ ॥ ದೂರದಿಂದಲೇ ಅವರು ಶ್ರೀಕೃಷ್ಣನು ಕಾಳಿಯ ಸರ್ಪದಿಂದ ಬಂಧಿಸಲ್ಪಟ್ಟು ನಿಶ್ಚೇಷ್ಟನಾಗಿರುವುದನ್ನು ನೋಡಿದರು. ಮಡುವಿನ ಸಮೀಪದಲ್ಲಿ ಗೋಪಬಾಲಕರೂ, ಮೂರ್ಛಿತರಾಗಿ ಬಿದ್ದಿರುವುದನ್ನು, ಹಸುಗಳೂ ಎತ್ತುಗಳೂ-ಕರುಗಳೂ ಕುಂಡದ ಸುತ್ತಲೂ ನಿಂತು ಆರ್ತನಾದವನ್ನು ಮಾಡುತ್ತಿರುವುದನ್ನು ನೋಡಿದರು. ಇದೆಲ್ಲವನ್ನು ನೋಡಿದ ನಂದಗೋಪಾದಿಗಳು ಅತ್ಯಂತ ವ್ಯಾಕುಲರಾಗಿ ಕೊನೆಗೆ ಮೂರ್ಛಿತರಾಗಿ ಬಿದ್ದರು. ॥ ೧೯ ॥ ಗೋಪಿಯರ ಸಂಕಟವಂತೂ ವರ್ಣಿಸಲು ಅಸದಳವಾದದ್ದು. ಭಗವಂತನಾದ ಅನಂತನಲ್ಲಿಯೇ ಅವರ ಮನಸ್ಸು ಅನುರಕ್ತವಾಗಿದ್ದಿತು. ನಿತ್ಯ ನಿರಂತರವಾದ ಭಗವಂತನ ಸೌಹಾರ್ದ, ಅವನ ಸುಮಧುರ ಮಂದಹಾಸ, ಪ್ರೇಮಪೂರ್ಣವಾದ ಮನಸ್ಸನ್ನು ಸೆಳೆಯುವ ಕುಡಿನೋಟ, ಅವನ ಸುಮಧುರವಾದ ವಾಣಿ ಇವೆಲ್ಲವನ್ನೂ ಗೋಪಿಯರು ಒಂದೊಂದಾಗಿ ಸ್ಮರಿಸಿಕೊಂಡರು. ತಮ್ಮ ಪ್ರಿಯತಮನಾದ ಶ್ಯಾಮಸುಂದರನು ಸರ್ಪಪಾಶದಿಂದ ಬಂಧಿತನಾಗಿರುವುದನ್ನು ನೋಡಿದೊಡನೆಯೇ ಅಸಹನೀಯವಾದ ದುಃಖದಿಂದ ಪರಿತಪಿಸಿದರು. ಅವರ ಹೊಟ್ಟೆಗೆ ಬೆಂಕಿ ಬಿದ್ದಂತಾಯಿತು. ಪ್ರಿಯತಮನಾದ ಶ್ರೀಕೃಷ್ಣನಿಲ್ಲದ ಮೂರು ಲೋಕಗಳೂ ಅವರಿಗೆ ಶೂನ್ಯವಾಗಿ ಕಂಡಿತು. ॥ ೨೦ ॥

ತಾಃ ಕೃಷ್ಣಮಾತರಮಪತ್ಯಮನುಪ್ರವಿಷ್ಟಾಂ
ತುಲ್ಯವ್ಯಥಾಃ ಸಮನುಗೃಹ್ಯ ಶುಚಃ ಸ್ರವಂತ್ಯಃ ।
ತಾಸ್ತಾ ವ್ರಜಪ್ರಿಯಕಥಾಃ ಕಥಯಂತ್ಯ ಆಸನ್
ಕೃಷ್ಣಾನನೇಽರ್ಪಿತದೃಶೋ ಮೃತಕಪ್ರತೀಕಾಃ ॥ ೨೦ ॥

ತಾಯಿಯಾದ ಯಶೋದೆಯಂತೂ ತಾನು ಮಡುವಿಗೆ ಬಿದ್ದುಬಿಡುವೆನೆಂದೇ ಧಾವಿಸಿದಳು. ಆದರೆ ಇತರ ಗೋಪಿಯರು ಆಕೆಯನ್ನು ತಡೆದರು. ಇತರ ಗೋಪಿಯರಿಗೂ ಕೃಷ್ಣನಿಲ್ಲದ ದುಃಖವು ಯಶೋದೆಯ ದುಃಖಕ್ಕಿಂತ ಕಡಿಮೆಯಾಗಿರಲಿಲ್ಲ. ಅವರ ಕಣ್ಣುಗಳಿಂದ ಕಂಬನಿಯು ಧಾರಾಕಾರವಾಗಿ ಸುರಿಯುತ್ತಿತ್ತು. ಎಲ್ಲರ ಕಣ್ಣುಗಳೂ ಶ್ರೀಕೃಷ್ಣನಲ್ಲಿಯೇ ಕೇಂದ್ರೀಕೃತವಾಗಿದ್ದವು. ಕೆಲವು ಗೋಪಿಯರು ಪೂತನಾವಧೆ, ತೃಣಾವರ್ತಸಂಹಾರ, ಬಕಾಸುರಸಂಹಾರ, ಇವೇ ಮುಂತಾದ ಕಥೆಗಳನ್ನು ಹೇಳಿಕೊಂಡು ಯಶೋದೆಗೆ ಧೈರ್ಯ ತುಂಬುತ್ತಿದ್ದರು. ಆದರೆ ಹೆಚ್ಚು ಜನರು ಜೀವವಿಲ್ಲದ ಶವಗಳಂತೆಯೇ ಆಗಿಬಿಟ್ಟಿದ್ದರು. ॥ ೨೦ । ಪರೀಕ್ಷಿತನೇ! ಶ್ರೀಕೃಷ್ಣನೇ ತಮ್ಮ ಪಂಚಪ್ರಾಣವೆಂದು ಭಾವಿಸಿಕೊಂಡಿದ್ದ ನಂದನೇ ಮೊದಲಾದ ಗೋಪರು ಮೂರ್ಛೆಯು ತಿಳಿದೊಡನೆಯೇ ಶ್ರೀಕೃಷ್ಣನಿದ್ದ ಕುಂಡಕ್ಕೆ ಧುಮುಕಲು ಮುಂದಾದರು. ಆದರೆ ಬಲರಾಮನು ಶ್ರೀಕೃಷ್ಣನ ಮಹಿಮೆಯನ್ನು ಚೆನ್ನಾಗಿ ತಿಳಿದವನಾದ್ದರಿಂದ ಹಾಗೆ ಕುಂಡಕ್ಕೆ ಧುಮುಕದಂತೆ ಅವರೆಲ್ಲರನ್ನು ತಡೆದನು. ॥ ೨೨ ॥

ಕೃಷ್ಣಪ್ರಾಣಾನ್ನಿರ್ವಿಶತೋ ನಂದಾದೀನ್ವೀಕ್ಷ್ಯ ತಂ ಹ್ರದಮ್ ।
ಪ್ರತ್ಯಷೇಧತ್ಸ ಭಗವಾನ್ರಾಮಃ ಕೃಷ್ಣಾನುಭಾವವಿತ್
॥ ೨೨ ॥

ಇತ್ಥಂ ಸ್ವಗೋಕುಲಮನನ್ಯಗತಿಂ ನಿರೀಕ್ಷ್ಯ
ಸಸ್ತ್ರೀಕುಮಾರಮತಿದುಃಖಿತಮಾತ್ಮಹೇತೋಃ ।
ಆಜ್ಞಾಯ ಮರ್ತ್ಯಪದವೀಮನುವರ್ತಮಾನಃ
ಸ್ಥಿತ್ವಾ ಮುಹೂರ್ತಮುದತಿಷ್ಠದುರಂಗಬಂಧಾತ್ ॥ ೨೩ ॥

ಪರೀಕ್ಷಿತನೇ! ಸರ್ಪದ ಬಂಧನಕ್ಕೆ ಒಳಪಟ್ಟದ್ದು ಶ್ರೀಕೃಷ್ಣನ ಒಂದು ಮಾನುಷ ಲೀಲೆಯೇ ಆಗಿತ್ತು. ವ್ರಜದ ಎಲ್ಲ ಜನರು ಸ್ತ್ರೀಯರೂ ಮಕ್ಕಳಾದಿಯಾಗಿ ನನಗಾಗಿ ಹೀಗೆ ಅತ್ಯಂತ ದುಃಖಿತರಾಗಿದ್ದಾರೆ, ಇವರಿಗೆ ನಿಜವಾಗಿಯೂ ನಾನಲ್ಲದೆ ಬೇರೆ ಯಾವುದೇ ಆಸರೆಯೂ ಇಲ್ಲವೆಂದು ತಿಳಿದಾಗ ಒಂದು ಮುಹೂರ್ತಕಾಲ ಸರ್ಪದ ಬಂಧನದಲ್ಲಿದ್ದು ಹೊರಕ್ಕೆ ಬಂದನು. ॥ ೨೩ ॥ ಭಗವಾನ್ ಶ್ರೀಕೃಷ್ಣನು ಆ ಸಮಯದಲ್ಲಿ ತನ್ನ ಶರೀರವನ್ನು ಹಿಗ್ಗಿಸಿ ಕೊಂಡನು. ಇದರಿಂದ ಸರ್ಪದ ಶರೀರವು ತುಂಡಾಗುವುದೋ ಎಂದೆನಿಸಿ, ಅದು ಕೃಷ್ಣನನ್ನು ಬಿಟ್ಟು ದೂರಹೋಗಿ ನಿಂತಿತು. ಹೆಡೆಯನ್ನು ಬಿಚ್ಚಿಕೊಂಡು ಅತಿರೋಷದಿಂದ ವಿಷದ ಬಾಣಗಳಂತೆ ಮೂಗಿನ ಹೊಳ್ಳೆಗಳಿಂದ ನಿಟ್ಟುಸಿರನ್ನು ಬಿಡುತ್ತಾ ಸ್ವಲ್ಪವಾದರೂ ಅಲುಗಾಡದೆ ಉರಿಯುವ ಪಂಜಿನಂತಹ ಕಣ್ಣುಗಳಿಂದ ಶ್ರೀಕೃಷ್ಣನನ್ನು ದಿಟ್ಟಿಸಿ ನೋಡುತ್ತಾ ಸಟೆದು ನಿಂತನು. ॥ ೨೪ ॥ ಕಾಳಿಯನು ಅತ್ಯಂತ ಕಂಪಿತನಾಗಿ ತನ್ನ ಹೆಡೆಗಳಲ್ಲಿದ್ದ ಎರಡೆರಡು ನಾಲಿಗೆಗಳಿಂದ ಕಟವಾಯಿಯನ್ನು ನೆಕ್ಕಿಕೊಳ್ಳುತ್ತಿದ್ದನು. ಭಯಂಕರವಾದ ಕಣ್ಣುಗಳಿಂದ ವಿಷದ ಜ್ವಾಲೆಗಳನ್ನು ಕಾರುತ್ತಿದ್ದನು. ಆಕಾಶದಲ್ಲಿ ಹಾರಾಡುತ್ತಿರುವ ಗರುಡನು ಭೂಮಿಯ ಮೇಲಿರುವ ಹಾವನ್ನು ಹಿಡಿಯಲು ಹೊಂಚು ಹಾಕುವಂತೆ ಶ್ರೀಕೃಷ್ಣನು ಸರ್ಪವನ್ನು ಹಿಡಿಯಲು ಹೊಂಚುಹಾಕುತ್ತಾ ಅದರ ಸುತ್ತಲೂ ತಿರುಗುತ್ತಿದ್ದನು. ಅಂತೆಯೇ ಕಾಳಿಯನೂ ಶ್ರೀಕೃಷ್ಣನನ್ನು ಬಗ್ಗುಬಡಿಯಲು ಹೊಂಚುಹಾಕುತ್ತಾ ಸುತ್ತಲೂ ಸುತ್ತುತ್ತಿದ್ದನು. ॥ ೨೫ ॥ ಹೀಗೆ ಪರಸ್ಪರ ಒಬ್ಬರು ಮತ್ತೊಬ್ಬರನ್ನು ಹಿಡಿಯಲು ಸುತ್ತುತ್ತಿರುವಾಗ ಕಾಳಿಯನ ಬಲವು ಕ್ಷೀಣಿಸುತ್ತಾ ಬಂತು. ಇದೇ ಸಮಯವನ್ನು ಕಾಯುತ್ತಿದ್ದ ಶ್ರೀಕೃಷ್ಣನು ಸರ್ಪದ ದೊಡ್ಡ-ದೊಡ್ಡ ಹೆಡೆಗಳನ್ನು ಸ್ವಲ್ಪ ಬಗ್ಗಿಸಿ ಛಂಗನೆ ಅವುಗಳ ಮೇಲೆ ಹತ್ತಿದನು. ಕಾಳೀಯನ ಹೆಡೆಗಳಲ್ಲಿದ್ದ ಥಳಥಳಿಸುತ್ತಿದ್ದ ಕೆಂಪು ರತ್ನಗಳು ಶ್ರೀಕೃಷ್ಣನಪಾದಗಳನ್ನು ಬೆಳಗತೊಡಗಿದವು. ರತ್ನಗಳ ಕಾಂತಿಯಿಂದ ಶ್ರೀಕೃಷ್ಣನ ಪಾದಗಳು ಮತ್ತಷ್ಟು ಕೆಂಪಾಗಿ ಕಂಡವು. ಆ ರತ್ನಗಳ ಬೆಳಕಿನಲ್ಲಿ ಸಮಸ್ತ ಕಲೆಗಳಿಗೂ ಆದಿ ಪ್ರವರ್ತಕನಾದ ಶ್ರೀಕೃಷ್ಣನು ನಾನಾ ಭಂಗಿಗಳಲ್ಲಿ ನೃತ್ಯಮಾಡತೊಡಗಿದನು. ॥ ೨೬ ॥

ತತ್ಪ್ರಥ್ಯಮಾನವಪುಷಾ ವ್ಯಥಿತಾತ್ಮಭೋಗ-
ಸ್ತ್ಯಕ್ತ್ವೋನ್ನಮಯ್ಯ ಕುಪಿತಃ ಸ್ವಫಣಾನ್ಭುಜಂಗಃ ।
ತಸ್ಥೌ ಶ್ವಸಞ್ಛ್ವಸನರಂಧ್ರವಿಷಾಂಬರೀಷ-
ಸ್ತಬ್ಧೇಕ್ಷಣೋಲ್ಮುಕಮುಖೋ ಹರಿಮೀಕ್ಷಮಾಣಃ ॥ ೨೪ ॥

ತಂ ಜಿಹ್ವಯಾ ದ್ವಿಶಿಖಯಾ ಪರಿಲೇಲಿಹಾನಂ
ದ್ವೇ ಸೃಕ್ಕಿಣೀ ಹ್ಯತಿಕರಾಲವಿಷಾಗ್ನಿದೃಷ್ಟಿಮ್ ।
ಕ್ರೀಡನ್ನಮುಂ ಪರಿಸಸಾರ ಯಥಾ ಖಗೇಂದ್ರೋ
ಬಭ್ರಾಮ ಸೋಽಪ್ಯವಸರಂ ಪ್ರಸಮೀಕ್ಷಮಾಣಃ ॥ ೨೫ ॥

ಏವಂ ಪರಿಭ್ರಮಹತೌಜಸಮುನ್ನತಾಂಸ-
ಮಾನಮ್ಯ ತತ್ಪೃಥುಶಿರಃಸ್ವಧಿರೂಢ ಆದ್ಯಃ ।
ತನ್ಮೂರ್ಧರತ್ನನಿಕರಸ್ಪರ್ಶಾತಿತಾಮ್ರ-
ಪಾದಾಂಬುಜೋಽಖಿಲಕಲಾದಿಗುರುರ್ನನರ್ತ ॥ ೨೬ ॥

ತಂ ನರ್ತುಮುದ್ಯತಮವೇಕ್ಷ್ಯ ತದಾ ತದೀಯ-
ಗಂಧರ್ವಸಿದ್ಧಸುರಚಾರಣದೇವವಧ್ವಃ ।
ಪ್ರೀತ್ಯಾ ಮೃದಂಗಪಣವಾನಕವಾದ್ಯಗೀತ-
ಪುಷ್ಪೋಪಹಾರನುತಿಭಿಃ ಸಹಸೋಪಸೇದುಃ ॥ ೨೭ ॥

ಭಗವಂತನು ನೃತ್ಯಮಾಡುತ್ತಿರಲು ಅವನ ಪ್ರಿಯಭಕ್ತರಾದ ಗಂಧರ್ವ-ಸಿದ್ಧ-ಚಾರಣರೂ- ದೇವತೆಗಳೂ, ದೇವಾಂಗನೆಯರೂ ಅತ್ಯಂತ ಪ್ರೀತಿಯಿಂದ ತಾಳ- ಮೃದಂಗ- ನಗಾರಿ ಇವೇ ಮೊದಲಾದ ವಾದ್ಯಗಳಿಂದ ಕೂಡಿದವರಾಗಿ ಶ್ರೀಕೃಷ್ಣನ ಲೀಲೆಗಳನ್ನು ಗಾನ ಮಾಡುತ್ತಾ ಪುಷ್ಪೋಪಹಾರಗಳನ್ನು ತೆಗೆದುಕೊಂಡು ಶ್ರೀಕೃಷ್ಣನ ಬಳಿಗೆ ಆಗಮಿಸಿದರು. ॥ ೨೭ ॥

ಯದ್ಯಚ್ಛಿರೋ ನ ನಮತೇಽಂಗ ಶತೈಕಶೀರ್ಷ್ಣ-
ಸ್ತತ್ತನ್ಮಮರ್ದ ಖರದಂಡಧರೋಽಂಘ್ರಿಪಾತೈಃ ।
ಕ್ಷೀಣಾಯುಷೋ ಭ್ರಮತ ಉಲ್ಬಣಮಾಸ್ಯತೋಽಸೃಜ
ನಸ್ತೋ ವಮನ್ಪರಮಕಶ್ಮಲಮಾಪ ನಾಗಃ ॥ ೨೮ ॥

ಪರೀಕ್ಷಿತನೇ! ಕಾಲಿಯನಾಗನಿಗೆ ಒಂದು ಸಾವಿರ ಹೆಡೆಗಳಿದ್ದುವು. ಅವನು ತನ್ನ ಯಾವ ಹೆಡೆಯನ್ನು ಮೇಲೆತ್ತುವನೋ ಅದನ್ನು ಪ್ರಚಂಡ ದಂಡಧಾರಿಯಾದ ಭಗವಂತನು ತನ್ನ ಕಾಲಿನ ತುಳಿತದಿಂದ ಬಗ್ಗು ಬಡಿಯುತ್ತಿದ್ದನು. ಇದರಿಂದ ಕಾಳಿಯನ ಜೀವನ ಶಕ್ತಿಯು ಕ್ಷೀಣಿಸತೊಡಗಿತು. ಅವನ ಮೂಗಿನಿಂದ, ಬಾಯಿಂದ ರಕ್ತವು ಹರಿಯತೊಡಗಿತು. ಕೊನೆಗೆ ಅವನು ಯಾತನೆಯನ್ನು ತಡೆಯಲಾರದೆ ಮೂರ್ಛಿತನಾಗಿ ಬಿಟ್ಟನು. ॥ ೨೮ ॥

ತಸ್ಯಾಕ್ಷಿಭಿರ್ಗರಲಮುದ್ವಮತಃ ಶಿರಸ್ಸು
ಯದ್ಯತ್ಸಮುನ್ನಮತಿ ನಿಃಶ್ವಸತೋ ರುಷೋಚ್ಚೈಃ ।
ನೃತ್ಯನ್ಪದಾನುನಮಯನ್ ದಮಯಾಂಬಭೂವ
ಪುಷ್ಪೈಃ ಪ್ರಪೂಜಿತ ಇವೇಹ ಪುಮಾನ್ಪುರಾಣಃ ॥ ೨೯ ॥

ಅವನು ಸ್ವಲ್ಪ ಎಚ್ಚರಗೊಂಡೊಡನೆಯೇ ಕುಪಿತನಾಗಿ ಪುನಃ ಕಣ್ಣುಗಳಿಂದ ವಿಷವನ್ನು ಸುರಿಸುವನು. ಗಟ್ಟಿಯಾಗಿ ಬುಸುಗುಟ್ಟುವನು. ಹೀಗೆ ಬುಸುಗುಟ್ಟುತ್ತಾ ಯಾವುದಾದರೂ ತಲೆಯನ್ನು ಮೇಲೆತ್ತಿದನೆಂದರೆ ಶ್ರೀಕೃಷ್ಣನು ಒಡನೆಯೇ ಆ ಹೆಡೆಯ ಮೇಲೆ ಹಾರಿ ನಾಟ್ಯವಾಡುತ್ತಾ ಆ ಹೆಡೆಯನ್ನು ಬಗ್ಗಿಸಿಬಿಡುವನು. ಆ ಸಮಯದಲ್ಲಿ ಪುರಾಣ ಪುರುಷೋತ್ತಮ ಭಗವಾನ್ ಶ್ರೀಕೃಷ್ಣನ ಚರಣಗಳಲ್ಲಿ ಬಿದ್ದ ರಕ್ತದ ಬಿಂದುಗಳು- ಗಂಧರ್ವರು ರಕ್ತಪುಷ್ಪಗಳಿಂದ ಅವನ ಪಾದಗಳಿಗೆ ಪೂಜಿಸುತ್ತಿರುವರೋ ಎಂಬಂತೆ ಭಾಸವಾಗುತ್ತಿತ್ತು. ॥ ೨೯ ॥

ತಚ್ಚಿತ್ರತಾಂಡವವಿರುಗ್ಣಫಣಾತಪತ್ರೋ
ರಕ್ತಂ ಮುಖೈರುರು ವಮನ್ನೃಪ ಭಗ್ನಗಾತ್ರಃ ।
ಸ್ಮೃತ್ವಾ ಚರಾಚರಗುರುಂ ಪುರುಷಂ ಪುರಾಣಂ
ನಾರಾಯಣಂ ತಮರಣಂ ಮನಸಾ ಜಗಾಮ ॥ ೩೦ ॥

ಪರೀಕ್ಷಿತನೇ! ಭಗವಂತನ ಆ ಅದ್ಭುತವಾದ ತಾಂಡವ ನೃತ್ಯದಿಂದಾಗಿ ಕಾಳಿಯನ ಛತ್ರರೂಪವಾಗಿದ್ದ ಹೆಡೆಗಳು ಛಿನ್ನ-ಭಿನ್ನವಾದುವು. ಅದರ ಪ್ರತಿಯೊಂದು ಅಂಗವೂ ನುಚ್ಚುನೂರಾಯಿತು. ಬಾಯಿಂದ ರಕ್ತದ ಕೋಡಿಯೇ ಹರಿಯಿತು. ಆಗ ನಾಗನಿಗೆ ಚರಾಚರಾತ್ಮಕವಾದ ಜಗತ್ತಿಗೇ ಗುರುವಾಗಿದ್ದ ಪುರಾಣ ಪುರುಷ ಭಗವಾನ್ ನಾರಾಯಣನ ಸ್ಮರಣೆಯಾಯಿತು. ಕಾಳಿಯನು ಮನಸ್ಸಿನಿಂದಲೇ ಭಗವಂತನಿಗೆ ಶರಣಾದನು. ॥ ೩೦ ॥

ಕೃಷ್ಣಸ್ಯ ಗರ್ಭಜಗತೋಽತಿಭರಾವಸನ್ನಂ
ಪಾರ್ಷ್ಣಿಪ್ರಹಾರಪರಿರುಗ್ಣಫಣಾತಪತ್ರಮ್ ।
ದೃಷ್ಟ್ವಾಹಿಮಾದ್ಯಮುಪಸೇದುರಮುಷ್ಯ ಪತ್ನ್ಯ
ಆರ್ತಾಃ ಶ್ಲಥದ್ವಸನಭೂಷಣಕೇಶಬಂಧಾಃ ॥ ೩೧ ॥

ಭಗವಾನ್ ಶ್ರೀಕೃಷ್ಣನ ಉದರದಲ್ಲಿ ಸಂಪೂರ್ಣ ವಿಶ್ವವು ಅಡಗಿದೆ. ಅದರಿಂದಾಗಿ ಅವನ ಅಪಾರವಾದ ಭಾರವನ್ನು ತಡೆಯಲಾರದೆ ಕುಸಿದುಬಿದ್ದ ಫಣೀಂದ್ರನ ಛತ್ರಿರೂಪವಾಗಿದ್ದ ಫಣಗಳು ಬಾಲಕೃಷ್ಣನ ಹಿಮ್ಮಡಿಗಳ ಏಟಿನಿಂದಾಗಿ ನುಚ್ಚುನೂರಾದುವು. ತನ್ನ ಪತಿಯ ಈ ದುರ್ದಶೆಯನ್ನು ಕಂಡ ಅವನ ಪತ್ನಿಯರು ಭಗವಂತನಿಗೆ ಶರಣಾದರು. ಅವರೆಲ್ಲರೂ ಅತ್ಯಂತ ದುಃಖಿತರಾಗಿದ್ದರು. ಭಯಗ್ರಸ್ತರಾದ ಆ ನಾಗಪತ್ನಿಯರ ವಸ್ತ್ರಾಭರಣಗಳು ಅಸ್ತ-ವ್ಯಸ್ತವಾಗಿದ್ದು ತಲೆಕೂದಲು ಕೆದರಿ ಹೋಗಿದ್ದುವು. ॥ ೩೧ ॥

ತಾಸ್ತಂ ಸುವಿಗ್ನಮನಸೋಽಥ ಪುರಸ್ಕೃತಾರ್ಭಾಃ
ಕಾಯಂ ನಿಧಾಯ ಭುವಿ ಭೂತಪತಿಂ ಪ್ರಣೇಮುಃ ।
ಸಾಧ್ವ್ಯಃ ಕೃತಾಂಜಲಿಪುಟಾಃ ಶಮಲಸ್ಯ ಭರ್ತು-
ರ್ಮೋಕ್ಷೇಪ್ಸವಃ ಶರಣದಂ ಶರಣಂ ಪ್ರಪನ್ನಾಃ ॥ ೩೨ ॥

ಆ ಸಮಯದಲ್ಲಿ ಸಾಧ್ವಿಯರಾದ ನಾಗಪತ್ನಿಯರು ಬಹಳವಾಗಿ ಗಾಬರಿಗೊಂಡಿದ್ದರು. ತಮ್ಮ ಮಕ್ಕಳನ್ನು ಮುಂದೆ ಮಾಡಿಕೊಂಡು, ತಲೆಯನ್ನು ಭೂಮಿಗೆ ಮುಟ್ಟಿಸಿ, ಪ್ರಾಣಿಮಾತ್ರರ ಏಕಮಾತ್ರ ಸ್ವಾಮಿಯಾದ ಭಗವಾನ್ ಶ್ರೀಕೃಷ್ಣನಿಗೆ ಪ್ರಣಾಮ ಮಾಡಿದರು. ಶ್ರೀಕೃಷ್ಣನನ್ನು ಶರಣಾಗತ ವತ್ಸಲನೆಂದು ಅರಿತು ಅಪರಾಧಿಯಾದ ತಮ್ಮ ಪತಿಯನ್ನು ಬಿಡಿಸಿಕೊಳ್ಳುವ ಇಚ್ಛೆಯಿಂದ ಅವರೆಲ್ಲರೂ ಶ್ರೀಕೃಷ್ಣನಿಗೆ ಶರಣಾಗಿ ಅವನನ್ನು ಪರಿಪರಿಯಾಗಿ ಸ್ತುತಿಸುತ್ತಾ ಇಂತೆಂದರು. ॥ ೩೨ ॥

ನಾಗಪತ್ನ್ಯ ಊಚುಃ

ನ್ಯಾಯ್ಯೋ ಹಿ ದಂಡಃ ಕೃತಕಿಲ್ಬಿಷೇಽಸ್ಮಿಂ-
ಸ್ತವಾವತಾರಃ ಖಲನಿಗ್ರಹಾಯ ।
ರಿಪೋಃ ಸುತಾನಾಮಪಿ ತುಲ್ಯದೃಷ್ಟೇ-
ರ್ಧತ್ಸೇ ದಮಂ ಫಲಮೇವಾನುಶಂಸನ್ ॥ ೩೩ ॥

ಅನುಗ್ರಹೋಽಯಂ ಭವತಃ ಕೃತೋ ಹಿ ನೋ
ದಂಡೋಽಸತಾಂ ತೇ ಖಲು ಕಲ್ಮಷಾಪಹಃ ।
ಯದ್ದಂದಶೂಕತ್ವಮಮುಷ್ಯ ದೇಹಿನಃ
ಕ್ರೋಧೋಽಪಿ ತೇಽನುಗ್ರಹ ಏವ ಸಮ್ಮತಃ ॥ ೩೪ ॥

ತಪಃ ಸುತಪ್ತಂ ಕಿಮನೇನ ಪೂರ್ವಂ
ನಿರಸ್ತಮಾನೇನ ಚ ಮಾನದೇನ ।
ಧರ್ಮೋಽಥ ವಾ ಸರ್ವಜನಾನುಕಂಪಯಾ
ಯತೋ ಭವಾಂಸ್ತುಷ್ಯತಿ ಸರ್ವಜೀವಃ ॥ ೩೫ ॥

ಕಸ್ಯಾನುಭಾವೋಽಸ್ಯ ನ ದೇವ ವಿದ್ಮಹೇ
ತವಾಂಘ್ರಿರೇಣುಸ್ಪರ್ಶಾಧಿಕಾರಃ ।
ಯದ್ವಾಂಛಯಾ ಶ್ರೀರ್ಲಲನಾಽಽಚರತ್ತಪೋ
ವಿಹಾಯ ಕಾಮಾನ್ಸುಚಿರಂ ಧೃತವ್ರತಾ ॥ ೩೬ ॥

ನ ನಾಕಪೃಷ್ಠಂ ನ ಚ ಸಾರ್ವಭೌಮಂ
ನ ಪಾರಮೇಷ್ಠ್ಯಂ ನ ರಸಾಧಿಪತ್ಯಮ್ ।
ನ ಯೋಗಸಿದ್ಧೀರಪುನರ್ಭವಂ ವಾ
ವಾಂಛಂತಿ ಯತ್ಪಾದರಜಃಪ್ರಪನ್ನಾಃ ॥ ೩೭ ॥

ತದೇಷ ನಾಥಾಪ ದುರಾಪಮನ್ಯೈ-
ಸ್ತಮೋಜನಿಃ ಕ್ರೋಧವಶೋಽಪ್ಯಹೀಶಃ ।
ಸಂಸಾರಚಕ್ರೇ ಭ್ರಮತಃ ಶರೀರಿಣೋ
ಯದಿಚ್ಛತಃ ಸ್ಯಾದ್ವಿಭವಃ ಸಮಕ್ಷಃ ॥ ೩೮ ॥

ನಾಗಪತ್ನಿಯರು ಹೇಳುತ್ತಾರೆ - ಪ್ರಭುವೇ! ನಿನ್ನ ಈ ಅವತಾರವು ದುಷ್ಟರನ್ನು ಶಿಕ್ಷಿಸುವುದಕ್ಕಾಗಿಯೇ ಆಗಿದೆ. ಅದಕ್ಕಾಗಿ ಈ ಕಾಳಿಯನನ್ನು ಶಿಕ್ಷಿಸುವುದು ಉಚಿತವೇ ಆಗಿದೆ. ನಿನ್ನ ದೃಷ್ಟಿಯಲ್ಲಿ ಶತ್ರು ಮತ್ತು ಪುತ್ರರಲ್ಲಿ ಯಾವ ಭೇದವೂ ಇಲ್ಲ. ಆದರಿಂದ ನೀನು ಕೊಡುವ ಶಿಕ್ಷೆಯು ಅವರ ಪಾಪದ ಪ್ರಾಯಶ್ಚಿತ್ತಕ್ಕಾಗಿ ಮತ್ತು ಅವರ ಪರಮ ಕಲ್ಯಾಣಕ್ಕಾಗಿಯೇ ಇರುತ್ತದೆ. ॥ ೩೩ ॥ ನೀನು ನಮ್ಮ ಮೇಲೆ ಮಹದನುಗ್ರಹವನ್ನೇ ಮಾಡಿರುವೆ. ಇದಾದರೋ ನಿನ್ನ ಕೃಪಾಪ್ರಸಾದವೇ ಆಗಿದೆ. ಏಕೆಂದರೆ, ದುಷ್ಟ ಜನರಿಗೆ ನೀನು ಕೊಡುವ ಶಿಕ್ಷೆಯಿಂದ ಅವರ ಎಲ್ಲ ಪಾಪಗಳೂ ನಾಶವಾಗಿ ಹೋಗುತ್ತವೆ. ಈ ಸರ್ಪವು ಅಪರಾಧಿಯಾಗಿರುವುದರಲ್ಲಿ ಯಾವ ಸಂದೇಹವೂ ಇಲ್ಲ. ಅಪರಾಧಿಯಲ್ಲದಿದ್ದರೆ ಇವನಿಗೆ ಸರ್ಪಯೋನಿ ಏಕೆ ದೊರೆಯುತ್ತಿತ್ತು. ಅದಕ್ಕಾಗಿ ನಾವು ನಿಜವಾದ ಹೃದಯದಿಂದ ನಿನ್ನ ಈ ಕ್ರೋಧವನ್ನು ನಿನ್ನ ಅನುಗ್ರಹವೆಂದೇ ತಿಳಿಯುತ್ತೇವೆ. ॥ ೩೪ ॥ ಇವನು ಹಿಂದಿನ ಜನ್ಮದಲ್ಲಿ ಖಂಡಿತವಾಗಿ ನಿರಹಂಕಾರಿಯಾಗಿ, ಬೇರೆಯವರನ್ನು ಸಮ್ಮಾನಿಸುತ್ತಾ ಯಾವುದೋ ದೊಡ್ಡ ತಪಸ್ಸು ಮಾಡಿರಬೇಕು. ಅಥವಾ ಎಲ್ಲ ಜೀವರ ಮೇಲೆ ದಯೆ ಮಾಡುತ್ತಾ ಇವನು ಯಾವುದೋ ದೊಡ್ಡ ಧರ್ಮಕಾರ್ಯವನ್ನು ಮಾಡಿರಬೇಕು. ಆದರಿಂದಲೇ ನೀನು ಇವನ ಮೇಲೆ ಸಂತುಷ್ಟನಾಗಿರುವೆ. ಏಕೆಂದರೆ, ಸರ್ವಜೀವರ ಸ್ವರೂಪನಾದ ನಿನ್ನ ಪ್ರಸನ್ನತೆಗಾಗಿ ಇದೇ ಉಪಾಯವಾಗಿದೆ. ॥ ೩೫ ॥ ಭಗವಂತಾ! ನಿನ್ನ ಚರಣ ರಜದ ಸ್ಪರ್ಶವನ್ನು ಪಡೆಯುವ ಅಧಿಕಾರಿಯಾದುದು ಇದು ಇವನ ಯಾವ ಸಾಧನೆಯ ಫಲವೆಂದು ನಾವು ತಿಳಿಯುತ್ತಿಲ್ಲ. ನಿನ್ನ ಚರಣಗಳ ರಜವು ಎಷ್ಟು ದುರ್ಲಭವಾದುದೆಂದರೆ, ಅದಕ್ಕಾಗಿ ಅರ್ಧಾಂಗಿನಿಯಾದ ಲಕ್ಷ್ಮೀದೇವಿಯೂ ಕೂಡ ಬಹಳ ದಿನಗಳವರೆಗೆ ಸಮಸ್ತ ಭೋಗಗಳನ್ನು ತ್ಯಜಿಸಿ ನಿಯಮಗಳನ್ನು ಪಾಲಿಸುತ್ತಾ ತಪಸ್ಸು ಮಾಡಬೇಕಾಯಿತು. ॥ ೩೬ ॥ ಪ್ರಭೋ! ನಿನ್ನ ಚರಣಧೂಳಿಯನ್ನು ಶರಣು ಹೋಗುವ ಭಗವದ್ಭಕ್ತರು ಸ್ವರ್ಗವನ್ನಾಗಲೀ, ಸಾರ್ವಭೌಮತ್ವವನ್ನಾಗಲೀ, ರಸಾತಲದ ಅಧಿಪತ್ಯವನ್ನಾಗಲೀ, ಬ್ರಹ್ಮಪದವಿಯನ್ನಾಗಲೀ ಬಯಸುವುದಿಲ್ಲ. ಅವರಿಗೆ ಅಣಿಮಾದಿ ಅಷ್ಟಸಿದ್ಧಿಗಳ ಇಚ್ಛೆಯೇ ಇರುವುದಿಲ್ಲ. ಅವರು ಜನ್ಮ-ಮರಣವನ್ನು ಬಿಡಿಸುವ ಕೈವಲ್ಯ ಮೋಕ್ಷವನ್ನೂ ಅಪೇಕ್ಷಿಸುವುದಿಲ್ಲ. ॥ ೩೭ ॥ ಸ್ವಾಮಿ! ಈ ನಾಗರಾಜನು ತಮೋಗುಣಗಳ ಯೋನಿಯಲ್ಲಿ ಹುಟ್ಟಿದವನು. ಸ್ವಭಾವಿಕವಾಗಿಯೇ ಮಹಾಕ್ರೋಧಿಷ್ಠನೂ ಆಗಿರುವನು. ಹೀಗಿದ್ದರೂ ಇವನಿಗೆ ಬೇರೆಯವರಿಗೆ ದುರ್ಲಭವಾದ ನಿನ್ನ ಪರಮ ಪವಿತ್ರ ಚರಣರಜವು ಪ್ರಾಪ್ತವಾಗಿದೆ. ಅದನ್ನು ಪಡೆಯುವ ಇಚ್ಛಾಮಾತ್ರದಿಂದಲೇ ಸಂಸಾರಚಕ್ರದಲ್ಲಿ ಬಿದ್ದಿರುವ ಜೀವನಿಗೆ ವೈಭವ-ಸಂಪತ್ತುಗಳ ಮಾತೇನು? ಮೋಕ್ಷವೂ ಪ್ರಾಪ್ತವಾಗುತ್ತದೆ. ॥ ೩೮ ॥

ಪ್ರಭೋ! ಅಚಿಂತ್ಯವಾದ ಐಶ್ವರ್ಯವುಳ್ಳ ನಿತ್ಯನಿಧಿಯಾಗಿರುವವನೇ! ಸಮಸ್ತರ ಅಂತಃಕರಣದಲ್ಲಿಯೂ ವಿರಾಜಿಸುತ್ತಿರುವವನೇ! ಸಮಸ್ತ ಪ್ರಾಣಿಗಳಿಗೂ ಮತ್ತು ವಸ್ತುಗಳಿಗೂ ಆಶ್ರಯ

ನಮಸ್ತುಭ್ಯಂ ಭಗವತೇ ಪುರುಷಾಯ ಮಹಾತ್ಮನೇ ।
ಭೂತಾವಾಸಾಯ ಭೂತಾಯ ಪರಾಯ ಪರಮಾತ್ಮನೇ ॥ ೩೯ ॥

ಜ್ಞಾನವಿಜ್ಞಾನನಿಧಯೇ ಬ್ರಹ್ಮಣೇಽನಂತಶಕ್ತಯೇ ।
ಅಗುಣಾಯಾವಿಕಾರಾಯ ನಮಸ್ತೇಽಪ್ರಾಕೃತಾಯ ಚ ॥ ೪೦ ॥

ಕಾಲಾಯ ಕಾಲನಾಭಾಯ ಕಾಲಾವಯವಸಾಕ್ಷಿಣೇ ।
ವಿಶ್ವಾಯ ತದುಪದ್ರಷ್ಟ್ರೇ ತತ್ಕರ್ತ್ರೇ ವಿಶ್ವಹೇತವೇ ॥ ೪೧ ॥

ಭೂತಮಾತ್ರೇಂದ್ರಿಯಪ್ರಾಣಮನೋಬುದ್ಧ್ಯಾಶಯಾತ್ಮನೇ ।
ತ್ರಿಗುಣೇನಾಭಿಮಾನೇನ ಗೂಢಸ್ವಾತ್ಮಾನುಭೂತಯೇ ॥ ೪೨ ॥

ನಮೋಽನಂತಾಯ ಸೂಕ್ಷ್ಮಾಯ ಕೂಟಸ್ಥಾಯ ವಿಪಶ್ಚಿತೇ ।
ನಾನಾವಾದಾನುರೋಧಾಯ ವಾಚ್ಯವಾಚಕಶಕ್ತಯೇ ॥ ೪೩ ॥

ನಮಃ ಪ್ರಮಾಣಮೂಲಾಯ ಕವಯೇ ಶಾಸ್ತ್ರಯೋನಯೇ ।
ಪ್ರವೃತ್ತಾಯ ನಿವೃತ್ತಾಯ ನಿಗಮಾಯ ನಮೋ ನಮಃ ॥ ೪೪ ॥

ನಮಃ ಕೃಷ್ಣಾಯ ರಾಮಾಯ ವಸುದೇವಸುತಾಯ ಚ ।
ಪ್ರದ್ಯುಮ್ನಾಯಾನಿರುದ್ಧಾಯ ಸಾತ್ವತಾಂ ಪತಯೇ ನಮಃ ॥ ೪೫ ॥

ನಮೋ ಗುಣಪ್ರದೀಪಾಯ ಗುಣಾತ್ಮಚ್ಛಾದನಾಯ ಚ ।
ಗುಣವೃತ್ತ್ಯುಪಲಕ್ಷ್ಯಾಯ ಗುಣದ್ರಷ್ಟ್ರೇ ಸ್ವಸಂವಿದೇ ॥ ೪೬ ॥

ನಾಗಿರತಕ್ಕವನೇ! ಪ್ರಾಣಿಗಳ ಹಾಗೂ ಪದಾರ್ಥಗಳ ರೂಪದಲ್ಲಿ ಇರುವವನೇ! ಪ್ರಕೃತಿಗೂ ಅತೀತನಾದ ಪರಮಾತ್ಮನೇ! ನಿನಗೆ ನಮಸ್ಕಾರವು. ॥ ೩೯ ॥ ದೇವ! ನೀನು ಸಮಸ್ತವಾದ ಜ್ಞಾನಗಳಿಗೂ ಮತ್ತು ಅನುಭವಗಳಿಗೂ ನಿಧಿಪ್ರಾಯನಾಗಿರುವೆ. ನಿನ್ನ ಮಹಿಮೆ ಮತ್ತು ಶಕ್ತಿಯು ಅನಂತವಾದುದು. ನಿನ್ನ ಸ್ವರೂಪವು ಅಪ್ರಾಕೃತವೂ, ದಿವ್ಯವೂ, ಚಿನ್ಮಯವೂ ಆಗಿದೆ. ನೀನು ನಿರ್ಗುಣ ನಿರಾಕಾರ- ನಿರ್ವಿಕಾರನು. ನೀನೇ ಪರಬ್ರಹ್ಮ ವಸ್ತುವು. ಅಂತಹ ನಿನಗೆ ನಾವು ನಮಸ್ಕರಿಸುತ್ತೇವೆ. ॥ ೪೦ ॥ ನೀನು ಪ್ರಕೃತಿಯಲ್ಲಿ ಕ್ಷೋಭೆಯನ್ನುಂಟುಮಾಡುವ ಕಾಲಪುರುಷನಾಗಿದ್ದು, ಕಾಲಶಕ್ತಿಗೆ ಆಶ್ರಯನಾಗಿರುವೆ. ಕಾಲದ ಕ್ಷಣ-ಕಲ್ಪಾದಿ ಸಮಸ್ತ ಅವಯವಗಳಿಗೂ ಸಾಕ್ಷಿಯಾಗಿರುವೆ. ನೀನು ವಿಶ್ವರೂಪನಾಗಿದ್ದರೂ ಅದರಿಂದ ಬೇರೆಯಾಗಿದ್ದು ಅದರ ದ್ರಷ್ಟಾರನಾಗಿರುವೆ. ಜಗತ್ತಿಗೆ ಕಾರಣನೂ ನೀನೇ ಆಗಿರುವೆ. ಅಂತಹ ನಿನಗೆ ನಮಸ್ಕರಿಸುತ್ತೇವೆ. ॥ ೪೧ ॥ ಪ್ರಭೋ! ಪಂಚಭೂತಗಳೂ ಮತ್ತು ಪಂಚತನ್ಮಾತ್ರೆಗಳೂ, ಇಂದ್ರಿಯಗಳೂ, ಪ್ರಾಣ, ಮನಸ್ಸು, ಬುದ್ಧಿ ಮತ್ತು ಇವೆಲ್ಲಕ್ಕೆ ಆಶ್ರಯಸ್ಥಾನವಾದ ಚಿತ್ತ - ಇವೆಲ್ಲವೂ ನೀನೇ ಆಗಿರುವೆ. ನಿನ್ನ ಅಂಶಭೂತರಾದ ಜೀವಾತ್ಮರ ಶುದ್ಧ ಜ್ಞಾನವನ್ನು ತ್ರಿಗುಣಾತ್ಮಕವಾದ ಅಹಂಕಾರದಿಂದ ಮರೆ ಮಾಡಿರುವ ನಿನಗೆ ನಮಸ್ಕಾರವು. ॥ ೪೨ ॥ ನೀನು ಅನಂತನೂ, ಸೂಕ್ಷ್ಮನೂ, ವಿಕಾರವಿಲ್ಲದವನೂ, ಸರ್ವಜ್ಞನೂ ಆಗಿರುವೆ. ಇಂತಹ ನಿನಗೆ ನಮಸ್ಕಾರವು. 'ಪರಮಾತ್ಮನು ಇದ್ದಾನೆ, ಪರಮಾತ್ಮನು ಇಲ್ಲ, ಅವನು ಸರ್ವಜ್ಞನು, ಸರ್ವಜ್ಞನಲ್ಲ' - ಇವೇ ಮುಂತಾದ ವಾದ-ವಿವಾದಗಳಿಗೆ ವಿಷಯನಾಗಿಯೂ, ತದ್ರೂಪನಾಗಿಯೂ, ಶಬ್ದಾರ್ಥರೂಪನಾಗಿಯೂ ಮತ್ತು ಅವೆರಡಕ್ಕೂ ಸಂಬಂಧವನ್ನು ಕಲ್ಪಿಸುವ ಶಕ್ತಿಯುಳ್ಳವನಾಗಿಯೂ ಇರುವ ನಿನಗೆ ನಮಸ್ಕಾರವು. ॥ ೪೩ ॥ ಪ್ರತ್ಯಕ್ಷ-ಅನುಮಾನ ಮುಂತಾದ ಪ್ರಮಾಣಗಳನ್ನು ಪ್ರಮಾಣೀಕರಿಸುವ ಮೂಲಪುರುಷನು ನೀನೇ ಆಗಿರುವೆ. ಸಮಸ್ತ ವೇದಶಾಸ್ತ್ರಗಳಿಗೂ ನೀನೇ ಉಗಮಸ್ಥಾನವಾಗಿರುವೆ. ನೀನು ಜ್ಞಾನಸ್ವರೂಪನಾಗಿರುವೆ. ಪ್ರವೃತ್ತಿ ಮಾರ್ಗಸ್ವರೂಪನೂ, ನಿವೃತ್ತಿಮಾರ್ಗಸ್ವರೂಪನೂ ನೀನೇ ಆಗಿರುವೆ. ಪ್ರವೃತ್ತಿ-ನಿವೃತ್ತಿ ಮಾರ್ಗಗಳ ವಿಧಾಯಕಗಳ ವೇದಸ್ವರೂಪನೂ ನೀನೇ. ಅಂತಹ ನಿನಗೆ ಪುನಃ ಪುನಃ ನಮಸ್ಕಾರಗಳು. ॥ ೪೪ ॥ ನೀನು ಶುದ್ಧ ಸತ್ತ್ವಮಯ ವಸುದೇವನ ಪುತ್ರನಾದ ವಾಸುದೇವ, ಸಂಕರ್ಷಣ, ಪ್ರದ್ಯುಮ್ನ, ಅನಿರುದ್ಧನೂ ನೀನೇ ಆಗಿರುವೆ. ಹೀಗೆ ಚತುರ್ವ್ಯೂಹದ ರೂಪದಲ್ಲಿ ನೀನು ಭಕ್ತರಿಗೆ ಹಾಗೂ ಯಾದವರಿಗೆ ಒಡೆಯನಾಗಿರುವೆ. ಶ್ರೀಕೃಷ್ಣ! ನಾವು ನಿನಗೆ ನಮಸ್ಕರಿಸುತ್ತೇವೆ. ॥ ೪೫ ॥ ನೀನು ಅಂತಃಕರಣ ಮತ್ತು ಅದರ ವೃತ್ತಿಗಳ ಪ್ರಕಾಶಕನಾಗಿರುವೆ. ಅವುಗಳ ಮೂಲಕವೇ ತಾನೇ-ತನ್ನನ್ನು ಮುಚ್ಚಿಟ್ಟುಕೊಂಡಿರುವೆ. ಆ ಅಂತಃಕರಣ ಮತ್ತು ವೃತ್ತಿಗಳಿಂದಲೇ ನಿನ್ನ ಸ್ವರೂಪದ ಅಲ್ಪ-ಸ್ವಲ್ಪ ಸಂಕೇತವೂ ದೊರೆಯುತ್ತದೆ. ನೀನು ಆ ಗುಣಗಳ ಹಾಗೂ ಅವುಗಳ ವೃತ್ತಿಗಳ ಸಾಕ್ಷಿ ಮತ್ತು ಸ್ವಯಂ ಪ್ರಕಾಶನಾಗಿರುವೆ. ಅಂತಹ ನಿನಗೆ ನಾವು ನಮಸ್ಕರಿಸುತ್ತೇವೆ. ॥ ೪೬ ॥

ಅವ್ಯಾಕೃತವಿಹಾರಾಯ ಸರ್ವವ್ಯಾಕೃತಸಿದ್ಧಯೇ ।
ಹೃಷೀಕೇಶ ನಮಸ್ತೇಽಸ್ತು ಮುನಯೇ ಮೌನಶೀಲಿನೇ ॥ ೪೭ ॥

ನೀನು ಈ ಮೂಲ ಪ್ರಕೃತಿಯಲ್ಲಿ ನಿತ್ಯವೂ ವಿಹರಿಸುತ್ತಿರುವೆ. ಸಮಸ್ತವಾದ ಸ್ಥೂಲ, ಸೂಕ್ಷ್ಮ ಜಗತ್ತು ನಿನ್ನಿಂದಲೇ ಸಿದ್ಧವಾಗುತ್ತದೆ. ಹೃಷೀಕೇಶನೇ! ನೀನು ಮನನಶೀಲನಾದ ಆತ್ಮಾರಾಮನಾಗಿರುವೆ. ಮೌನವೇ ನಿನ್ನ ಸ್ವಭಾವವಾಗಿದೆ. ಅಂತಹ ನಿನಗೆ ನಮಸ್ಕರಿಸುತ್ತೇವೆ. ॥ ೪೭ ॥

ಪರಾವರಗತಿಜ್ಞಾಯ ಸರ್ವಾಧ್ಯಕ್ಷಾಯ ತೇ ನಮಃ ।
ಅವಿಶ್ವಾಯ ಚ ವಿಶ್ವಾಯ ತದ್ದ್ರಷ್ಟ್ರೇಽಸ್ಯ ಚ ಹೇತವೇ ॥ ೪೮ ॥

ನೀನು ಸ್ಥೂಲ, ಸೂಕ್ಷ್ಮ ಸಮಸ್ತ ಗತಿಗಳನ್ನು ತಿಳಿದವನೂ, ಎಲ್ಲರ ಸಾಕ್ಷಿಯೂ ಆಗಿರುವೆ. ನೀನು ವಿಶ್ವವಲ್ಲದಿದ್ದರೂ ವಿಶ್ವದ ಸ್ವರೂಪನಾಗಿರುವೆ. ಅಂತಹ ವಿಶ್ವಕ್ಕೆ ಸಾಕ್ಷಿಭೂತನೂ ಆಗಿರುವೆ ಮತ್ತು ಕಾರಣನೂ ಆಗಿರುವೆ. ಅಂತಹ ಸರ್ವೋತ್ಕೃಷ್ಟ ಮಹಿಮನಾಗಿರುವ ನಿನಗೆ ನಮಸ್ಕಾರ ಮಾಡುತ್ತೇವೆ. ॥ ೪೮ ॥

ತ್ವಂ ಹ್ಯಸ್ಯ ಜನ್ಮಸ್ಥಿತಿಸಂಯಮಾನ್ಪ್ರಭೋ
ಗುಣೈರನೀಹೋಽಕೃತ ಕಾಲಶಕ್ತಿಧೃಕ್ ।
ತತ್ತತ್ಸ್ವಭಾವಾನ್ಪ್ರತಿಬೋಧಯನ್ಸತಃ
ಸಮೀಕ್ಷಯಾಮೋಘವಿಹಾರ ಈಹಸೇ ॥ ೪೯ ॥

ಪ್ರಭುವೇ! ಕರ್ತೃತ್ವವಿಲ್ಲದ ಕಾರಣ ನೀನು ಯಾವುದೇ ಕರ್ಮವನ್ನು ಮಾಡದೇ ನಿಷ್ಕ್ರಿಯನಾಗಿರುವೆ. ಹಾಗಿದ್ದರೂ ಅನಾದಿಯಾದ ಕಾಲಶಕ್ತಿಯನ್ನು ಸ್ವೀಕರಿಸಿ ಪ್ರಕೃತಿಯ ಗುಣಗಳ ಮೂಲಕ ನೀನೇ ಈ ವಿಶ್ವದ ಉತ್ಪತ್ತಿ, ಸ್ಥಿತಿ, ಪ್ರಳಯ ಎಂಬ ಲೀಲೆಯನ್ನು ಮಾಡುತ್ತಿರುವೆ. ಏಕೆಂದರೆ, ನಿನ್ನ ಲೀಲೆಗಳು ಅಮೋಘವಾಗಿವೆ. ನೀನು ಸತ್ಯಸಂಕಲ್ಪನಾಗಿರುವೆ. ಅದಕ್ಕಾಗಿ ಜೀವರ ಸಂಸ್ಕಾರರೂಪದಿಂದ ಅಡಗಿದ್ದ ಸ್ವಭಾವಗಳನ್ನು ನಿನ್ನ ದೃಷ್ಟಿಯಿಂದ ಜಾಗ್ರತಗೊಳಿಸುತ್ತಿರುವೆ. ॥ ೪೯ ॥ ಪ್ರಭುವೇ! ಮೂರು ಲೋಕಗಳಲ್ಲಿಯೂ ಸತ್ತ್ವಗುಣ ಪ್ರಧಾನವಾದ ಶಾಂತ, ರಜೋಗುಣ ಪ್ರಧಾನವಾದ ಅಶಾಂತ ಮತ್ತು ತಮೋಗುಣ ಪ್ರಧಾನ ಮೂಢ ಎಂಬ ಮೂರು ರೀತಿಯ ಯೋನಿಗಳಿವೆ. ಇವೆಲ್ಲವೂ ನಿನ್ನ ಲೀಲಾ ಮೂರ್ತಿಗಳೇ ಆಗಿವೆ. ಹೀಗಿದ್ದರೂ ಈ ಸಮಯದಲ್ಲಿ ಸತ್ತ್ವಗುಣ ಪ್ರಧಾನವಾದ ಶಾಂತ ಜನರೇ ನಿನ್ನ ವಿಶೇಷ ಪ್ರೀತಿಗೆ ಪಾತ್ರರಾಗಿದ್ದಾರೆ. ಏಕೆಂದರೆ, ನಿನ್ನ ಈ ಅವತಾರವು ಮತ್ತು ಈ ಲೀಲೆಗಳು ಸಾಧುಗಳ ರಕ್ಷಣೆಗಾಗಿಯೂ, ಧರ್ಮದ ರಕ್ಷಣೆ ಹಾಗೂ ವಿಸ್ತಾರಕ್ಕಾಗಿಯೇ ಇದೆ. ॥ ೫೦ ॥ ಶಾಂತಾತ್ಮನೇ! ರಾಜನಾದವನು ತನ್ನ ಪ್ರಜೆಗಳು ಮಾಡಿದ ಮೊದಲ ಅಪರಾಧವನ್ನು ಕ್ಷಮಿಸಬೇಕು. ಹಾಗೆಯೇ ನೀನು ಯಾರೆಂಬುದನ್ನು ತಿಳಿಯದೇ ಮಾಡಿರುವ ಈ ಮೂಢನ (ನಮ್ಮ ಪತಿ) ಈ ಅಪರಾಧವನ್ನು ಕ್ಷಮಿಸಬೇಕು. ॥ ೫೧ ॥ ಭಗವಂತನೇ! ದಯೆದೋರು. ಇಷ್ಟರಲ್ಲೇ ಈ ನಾಗರಾಜನು ಸಾಯುವುದರಲ್ಲಿದ್ದಾನೆ. ಸಾಧುಪುರುಷರು ಯಾವಾಗಲೂ ನಮ್ಮಂತಹ ಅಬಲೆಯರ ಮೇಲೆ ದಯೆತೋರುತ್ತಾರೆ. ಆದುದರಿಂದ ಪ್ರಾಣಸ್ವರೂಪನಾಗಿರುವ ನಮ್ಮ ಪತಿಯನ್ನು ನಮಗೆ ದಯಪಾಲಿಸು. ॥ ೫೨ ॥ ನಾವು ನಿನ್ನ ದಾಸಿಯರಾಗಿದ್ದೇವೆ. ನಾವು ನಿನಗೆ ಯಾವ ವಿಧವಾದ ಸೇವೆಯನ್ನು ಮಾಡಬೇಕೆಂಬುದರ ಕುರಿತು ನಮಗೆ ಆಜ್ಞಾಪಿಸು. ನಿನ್ನ ಆಜ್ಞೆಯನ್ನು ಪಾಲಿಸುತ್ತಾ, ಶ್ರದ್ಧೆಯಿಂದ ಸೇವೆಯನ್ನು ಮಾಡುವವರು ಸಮಸ್ತವಾದ ಭಯಗಳಿಂದಲೂ ಮುಕ್ತರಾಗುತ್ತಾರೆ. ॥ ೫೩ ॥

ತಸ್ಯೈವ ತೇಽಮೂಸ್ತನವಸ್ತ್ರಿಲೋಕ್ಯಾಂ
ಶಾಂತಾ ಅಶಾಂತಾ ಉತ ಮೂಢಯೋನಯಃ ।
ಶಾಂತಾಃ ಪ್ರಿಯಾಸ್ತೇ ಹ್ಯಧುನಾವಿತುಂ ಸತಾಂ
ಸ್ಥಾತುಶ್ಚ ತೇ ಧರ್ಮಪರೀಪ್ಸಯೇಹತಃ ॥ ೫೦ ॥

ಅಪರಾಧಃ ಸಕೃದ್ಭರ್ತ್ರಾ ಸೋಢವ್ಯಃ ಸ್ವಪ್ರಜಾಕೃತಃ ।
ಕ್ಷಂತುಮರ್ಹಸಿ ಶಾಂತಾತ್ಮನ್ಮೂಢಸ್ಯ ತ್ವಾಮಜಾನತಃ ॥ ೫೧ ॥

ಅನುಗೃಹ್ಣೀಷ್ವ ಭಗವನ್ಪ್ರಾಣಾಂಸ್ತ್ಯಜತಿ ಪನ್ನಗಃ ।
ಸ್ತ್ರೀಣಾಂ ನಃ ಸಾಧುಶೋಚ್ಯಾನಾಂ ಪತಿಃ ಪ್ರಾಣಃ ಪ್ರದೀಯತಾಮ್ ॥ ೫೨ ॥

ವಿಧೇಹಿ ತೇ ಕಿಂಕರೀಣಾಮನುಷ್ಠೇಯಂ ತವಾಜ್ಞಯಾ ।
ಯಚ್ಛ್ರದ್ಧಯಾನುತಿಷ್ಠನ್ವೈ ಮುಚ್ಯತೇ ಸರ್ವತೋಭಯಾತ್ ॥ ೫೩ ॥

ಶ್ರೀಶುಕ ಉವಾಚ

ಇತ್ಥಂ ಸ ನಾಗಪತ್ನೀಭಿರ್ಭಗವಾನ್ಸಮಭಿಷ್ಟುತಃ ।
ಮೂರ್ಚ್ಛಿತಂ ಭಗ್ನಶಿರಸಂ ವಿಸಸರ್ಜಾಂಘ್ರಿಕುಟ್ಟನೈಃ
॥ ೫೪ ॥

ಪ್ರತಿಲಬ್ಧೇಂದ್ರಿಯಪ್ರಾಣಃ ಕಾಲಿಯಃ ಶನಕೈರ್ಹರಿಮ್ ।
ಕೃಚ್ಛ್ರಾತ್ಸಮುಚ್ಛ್ವಸನ್ ದೀನಃ ಕೃಷ್ಣಂ ಪ್ರಾಹ ಕೃತಾಂಜಲಿಃ
॥ ೫೫ ॥

ಕಾಲಿಯ ಉವಾಚ

ವಯಂ ಖಲಾಃ ಸಹೋತ್ಪತ್ತ್ಯಾ ತಾಮಸಾ ದೀರ್ಘಮನ್ಯವಃ ।
ಸ್ವಭಾವೋ ದುಸ್ತ್ಯಜೋ ನಾಥ ಲೋಕಾನಾಂ ಯದಸದ್ಗ್ರಹಃ
॥ ೫೬ ॥

ತ್ವಯಾ ಸೃಷ್ಟಮಿದಂ ವಿಶ್ವಂ ಧಾತರ್ಗುಣವಿಸರ್ಜನಮ್ ।
ನಾನಾಸ್ವಭಾವವೀರ್ಯೌಜೋಯೋನಿಬೀಜಾಶಯಾಕೃತಿ
॥ ೫೭ ॥

ವಯಂ ಚ ತತ್ರ ಭಗವನ್ಸರ್ಪಾ ಜಾತ್ಯುರುಮನ್ಯವಃ ।
ಕಥಂ ತ್ಯಜಾಮಸ್ತ್ವನ್ಮಾಯಾಂ ದುಸ್ತ್ಯಜಾಂ ಮೋಹಿತಾಃ ಸ್ವಯಮ್
॥ ೫೮ ॥

ಭವಾನ್ಹಿ ಕಾರಣಂ ತತ್ರ ಸರ್ವಜ್ಞೋ ಜಗದೀಶ್ವರಃ ।
ಅನುಗ್ರಹಂ ನಿಗ್ರಹಂ ವಾ ಮನ್ಯಸೇ ತದ್ವಿಧೇಹಿ ನಃ
॥ ೫೯ ॥

ಶ್ರೀಶುಕ ಉವಾಚ

ಇತ್ಯಾಕರ್ಣ್ಯ ವಚಃ ಪ್ರಾಹ ಭಗವಾನ್ಕಾರ್ಯಮಾನುಷಃ ।
ನಾತ್ರ ಸ್ಥೇಯಂ ತ್ವಯಾ ಸರ್ಪ ಸಮುದ್ರಂ ಯಾಹಿ ಮಾ ಚಿರಮ್ ।
ಸ್ವಜ್ಞಾತ್ಯಪತ್ಯದಾರಾಢ್ಯೋ ಗೋನೃಭಿರ್ಭುಜ್ಯತಾಂ ನದೀ
॥ ೬೦ ॥

ಯ ಏತತ್ಸಂಸ್ಮರೇನ್ಮರ್ತ್ಯಸ್ತುಭ್ಯಂ ಮದನುಶಾಸನಮ್ ।
ಕೀರ್ತಯನ್ನುಭಯೋಃ ಸಂಧ್ಯೋರ್ನ ಯುಷ್ಮದ್ಭಯಮಾಪ್ನುಯಾತ್
॥ ೬೧ ॥

ಯೋಽಸ್ಮಿನ್ಸ್ನಾತ್ವಾ ಮದಾಕ್ರೀಡೇ ದೇವಾದೀಂಸ್ತರ್ಪಯೇಜ್ಜಲೈಃ ।
ಉಪೋಷ್ಯ ಮಾಂ ಸ್ಮರನ್ನರ್ಚೇತ್ಸರ್ವಪಾಪೈಃ ಪ್ರಮುಚ್ಯತೇ
॥ ೬೨ ॥

ದ್ವೀಪಂ ರಮಣಕಂ ಹಿತ್ವಾ ಹ್ರದಮೇತಮುಪಾಶ್ರಿತಃ ।
ಯದ್ಭಯಾತ್ಸ ಸುಪರ್ಣಸ್ತ್ವಾಂ ನಾದ್ಯಾನ್ಮತ್ಪಾದಲಾಂಛಿತಮ್
॥ ೬೩ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ! ಭಗವಂತನ ಪಾದಗಳ ಪ್ರಹಾರದಿಂದ ಕಾಳಿಯ ನಾಗನ ಹೆಡೆಗಳು ಛಿನ್ನ-ಭಿನ್ನವಾಗಿದ್ದವು. ಅವನು ಎಚ್ಚರತಪ್ಪಿ ತಲೆ ತಗ್ಗಿಸಿದ್ದನು. ನಾಗಪತ್ನಿಯರು ಭಗವಂತನನ್ನು ಹೀಗೆ ಸ್ತುತಿಸಿದಾಗ ದಯಾಮಯನಾದ ಭಗವಂತನು ಕಾಳಿಯನನ್ನು ಬಿಟ್ಟುಬಿಟ್ಟನು. ॥ ೫೪ ॥ ನಿಧಾನವಾಗಿ ಕಾಳಿಯನ ಇಂದ್ರಿಯಗಳಲ್ಲಿ, ಪ್ರಾಣಗಳಲ್ಲಿ ಚೈತನ್ಯ ವುಂಟಾಯಿತು. ಅವನು ಕಷ್ಟಪಟ್ಟು ಉಸಿರಾಡತೊಡಗಿದನು. ಸ್ವಲ್ಪ ಹೊತ್ತಿನಲ್ಲಿ ಅತಿದೀನತೆಯಿಂದ ವಿನಮ್ರನಾಗಿ ಭಗವಾನ್ ಶ್ರೀಕೃಷ್ಣನಲ್ಲಿ ಹೀಗೆ ಪ್ರಾರ್ಥಿಸಿದನು. ॥ ೫೫ ॥

ಕಾಳಿಯನಾಗನು ಹೇಳುತ್ತಾನೆ – ನಾಥನೇ! ನಾವು ಜನ್ಮದಿಂದಲೇ ದುಷ್ಟರಾಗಿದ್ದೇವೆ. ತಮೋಗುಣಿಗಳಾಗಿದ್ದೇವೆ. ದೀರ್ಘಕೋಪಿಗಳಾಗಿದ್ದೇವೆ. ಪ್ರಾಣಿಗಳಿಗೆ ತಮ್ಮ ಸ್ವಭಾವವನ್ನು ಬಿಡುವುದು ಬಹಳ ಕಷ್ಟವೇ ಸರಿ. ಈ ಕಾರಣದಿಂದಲೇ ಪ್ರಪಂಚದ ಜನರು ನಾನಾ ಪ್ರಕಾರವಾದ ದುರಾಗ್ರಹಗಳಿಂದ ಕೂಡಿರುತ್ತಾರೆ. ॥ ೫೬ ॥ ವಿಶ್ವವಿಧಾತನೇ! ಸತ್ತ್ವ-ರಜಸ್ತಮೋ ಗುಣಗಳಿಂದ ನೀನೇ ಸೃಷ್ಟಿಸಿರುವ ಈ ಜಗತ್ತಿನಲ್ಲಿ ನಾನಾ ಪ್ರಕಾರವಾದ ಸ್ವಭಾವ, ವೀರ್ಯ, ಬಲ, ಯೋನಿ, ಬೀಜ, ಚಿತ್ತ ಮತ್ತು ಆಕೃತಿಗಳಿವೆ. ॥ ೫೭ ॥ ಭಗವಂತಾ! ನಿನ್ನದೇ ಆದ ಸೃಷ್ಟಿಯಲ್ಲೇ ಸರ್ಪಗಳಾದ ನಾವು ಇರುವುದು. ನಾವು ಹುಟ್ಟಿನಿಂದಲೇ ಅತಿಕ್ರೋಧಿಗಳಾಗಿದ್ದೇವೆ. ನಾವು ಈ ಮಾಯಾಜಾಲದಲ್ಲಿ ಮೋಹಿತರಾಗಿದ್ದೇವೆ. ಹಾಗಿರುವಾಗ ನಮ್ಮ ಪ್ರಯತ್ನದಿಂದ ಈ ದಾಟಲಶಕ್ಯವಾದ ಮಾಯೆಯನ್ನು ಹೇಗೆ ತ್ಯಜಿಸಬಲ್ಲೆವು? ॥ ೫೮ ॥ ನೀನು ಸರ್ವಜ್ಞನೂ, ಸಮಸ್ತ ಜಗತ್ತಿನ ಸ್ವಾಮಿಯೂ ಆಗಿರುವೆ. ನೀನೆ ನಮ್ಮ ಸ್ವಭಾವ ಮತ್ತು ಈ ಮಾಯೆಗೆ ಕಾರಣನಾಗಿರುವೆ. ಈಗ ನೀನು ನಿನ್ನ ಇಚ್ಛೆಯಂತೆ ನಿಗ್ರಹಿಸಬಹುದು, ಅನುಗ್ರಹಿಸಲೂಬಹುದು. ॥ ೫೯ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಕಾಳಿಯನಾಗನ ಮಾತನ್ನು ಕೇಳಿದ ಲೀಲಾಮಾನುಷ ವಿಗ್ರಹನಾದ ಶ್ರೀಕೃಷ್ಣನು ಹೀಗೆ ಎಂದನು – ಎಲೈ ಸರ್ಪವೇ! ನೀನು ಇನ್ನು ಮುಂದೆ ಇಲ್ಲಿರಬಾರದು. ನೀನು ನಿನ್ನ ಪುತ್ರ, ಭ್ರಾತೃ, ಭಾರ್ಯೆ, ಬಂಧುಗಳೊಡನೆ ಸಮುದ್ರಕ್ಕೆ ಹೊರಟುಹೋಗು. ಇಲ್ಲಿರುವ ಗೋವುಗಳೂ, ಗೋಪಾಲಕರೂ ಯಮುನೆಯ ನೀರನ್ನು ಉಪಯೋಗಿಸುವಂತಾಗಲಿ. ॥ ೬೦ ॥ ಎರಡೂ ಸಂಧ್ಯೆಗಳಲ್ಲಿ ನಾನು ನಿನಗಿತ್ತಿರುವ ಆಜ್ಞೆಯನ್ನು ಸ್ಮರಿಸುವವನಿಗೆ, ಕೀರ್ತಿಸುವವನಿಗೆ ಸರ್ಪಗಳಿಂದ ಭಯವು ಎಂದೂ ಉಂಟಾಗದಿರಲಿ. ॥ ೬೧ ॥ ಈ ಕಾಳಿಯ ಮಡುವಿನಲ್ಲಿ ನಾನು ಕ್ರೀಡಿಸಿದ್ದರಿಂದ ಇದರಲ್ಲಿ ಸ್ನಾನಮಾಡಿ, ನೀರಿನಿಂದ ದೇವತೆಗಳಿಗೆ, ತರ್ಪಣ ಮಾಡುವ ಜನರು ಹಾಗೂ ಉಪವಾಸವಿದ್ದು ನನ್ನನ್ನು ಸ್ಮರಿಸುತ್ತಾ, ಪೂಜೆ ಮಾಡುವವರು ಎಲ್ಲಾ ಪಾಪಗಳಿಂದ ಮುಕ್ತರಾಗಿ ಹೋಗುವರು. ॥ ೬೨ ॥ ನೀನು ಗರುಡನ ಭಯದಿಂದ ರಮಣಕದ್ವೀಪವನ್ನು ಬಿಟ್ಟು ಈ ಮಡುವಿನಲ್ಲಿ ಬಂದು ನೆಲೆಸಿದ್ದೆ ಎಂಬುದನ್ನು ನಾನು ಬಲ್ಲೆ. ಈಗ ನಿನ್ನ ಶರೀರವು ನನ್ನ ಚರಣಚಿಹ್ನೆಯಿಂದ ಅಂಕಿತವಾದ್ದರಿಂದ ಇನ್ನು ಮುಂದೆ ಗರುಡನು ನಿನ್ನನ್ನು ತಿನ್ನಲಾರನು, ಹೋಗು. ॥ ೬೩ ॥

ಶ್ರೀಶುಕ ಉವಾಚ

ಏವಮುಕ್ತೋ ಭಗವತಾ ಕೃಷ್ಣೇನಾದ್ಭುತಕರ್ಮಣಾ ।
ತಂ ಪೂಜಯಾಮಾಸ ಮುದಾ ನಾಗಪತ್ನ್ಯಶ್ಚ ಸಾದರಮ್ ॥ ೬೪ ॥

ದಿವ್ಯಾಂಬರಸ್ರಙ್ಮಣಿಭಿಃ ಪರಾರ್ಧ್ಯೈರಪಿ ಭೂಷಣೈಃ ।
ದಿವ್ಯಗಂಧಾನುಲೇಪೈಶ್ಚ ಮಹತ್ಯೋತ್ಪಲಮಾಲಯಾ ॥ ೬೫ ॥

ಪೂಜಯಿತ್ವಾ ಜಗನ್ನಾಥಂ ಪ್ರಸಾದ್ಯ ಗರುಡಧ್ವಜಮ್ ।
ತತಃ ಪ್ರೀತೋಽಭ್ಯನುಜ್ಞಾತಃ ಪರಿಕ್ರಮ್ಯಾಭಿವಂದ್ಯ ತಮ್ ॥ ೬೬ ॥

ಸಕಲತ್ರಸುಹೃತ್ಪುತ್ರೋ ದ್ವೀಪಮಬ್ಧೇರ್ಜಗಾಮ ಹ ।
ತದೈವ ಸಾಮೃತಜಲಾ ಯಮುನಾ ನಿರ್ವಿಷಾಭವತ್ ।
ಅನುಗ್ರಹಾದ್ಭಗವತಃ ಕ್ರೀಡಾಮಾನುಷರೂಪಿಣಃ ॥ ೬೭ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಭಗವಾನ್ ಶ್ರೀಕೃಷ್ಣನ ಒಂದೊಂದು ಲೀಲೆಯೂ ಅದ್ಭುತವಾಗಿದೆ. ಅವನ ಆಜ್ಞೆಯನ್ನು ಪಡೆದು ಕಾಳಿಯ ನಾಗನು ಪತ್ನಿಯರೊಂದಿಗೆ ಆನಂದದಿಂದ ಬಹಳ ಆದರದಿಂದ ಶ್ರೀಕೃಷ್ಣನನ್ನು ಪೂಜಿಸಿದನು. ॥ ೬೪ ॥ ಅವನು ದಿವ್ಯವಸ್ತ್ರ, ಪುಷ್ಪಮಾಲೆ, ಮಣಿ, ಬಹುಮೂಲ್ಯ ಆಭೂಷಣ, ದಿವ್ಯಗಂಧ, ಚಂದನ ಮತ್ತು ಅತಿ ಉತ್ತಮ ಕಮಲಗಳ ಮಾಲೆಗಳಿಂದ ಜಗತ್ಸ್ವಾಮಿಯಾದ ಗರುಡಧ್ವಜ ಭಗವಾನ್ ಶ್ರೀಕೃಷ್ಣನನ್ನು ಪೂಜಿಸಿ ಸಂತೋಷಪಡಿಸಿದನು. ಇದಾದ ಬಳಿಕ ಪ್ರೇಮಾನಂದದಿಂದ ಅವನ ಪ್ರದಕ್ಷಿಣೆ ಮಾಡಿ, ವಂದಿಸಿ, ಅವನಿಂದ ಬೀಳ್ಕೊಂಡು, ತನ್ನ ಪತ್ನೀ, ಪುತ್ರರೊಂದಿಗೆ ಹಾಗೂ ಬಂಧು ಬಾಂಧವರೊಂದಿಗೆ ಸಮುದ್ರದಲ್ಲಿ ಸರ್ಪಗಳು ವಾಸವಾಗಿರುವ ರಮಣಕದ್ವೀಪಕ್ಕೆ ಪ್ರಯಾಣ ಮಾಡಿದನು. ಲೀಲಾಮಾನುಷನಾದ ಭಗವಾನ್ ಶ್ರೀಕೃಷ್ಣನ ಕೃಪೆಯಿಂದ ಯಮುನೆಯ ನೀರು ಕೇವಲ ವಿಷಹೀನವಾದುದಲ್ಲ, ಆಗಿನಿಂದಲೇ ಅಮೃತದಂತೆ ಮಧುರವೂ ಪವಿತ್ರವೂ ಆಯಿತು. ॥ ೬೫-೬೭ ॥

ಹದಿನಾರನೆಯ ಅಧ್ಯಾಯವು ಮುಗಿಯಿತು. ॥ ೧೬ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮಸ್ಕಂಧೇ ಪೂರ್ವಾರ್ಧೇ
ಕಾಲಿಯಮೋಕ್ಷಣಂ ನಾಮ ಷೋಡಶೋಽಧ್ಯಾಯಃ ॥ ೧೬ ॥

ಹದಿನೇಳನೆಯ ಅಧ್ಯಾಯ

ಕಾಲಿಯನು ಯಮುನೆಯ ಮಡುವಿಗೆ ಬರಲು ಕಾರಣ, ದಾವಾನಲದಿಂದ ವ್ರಜವಾಸಿಗಳನ್ನು ಬದುಕಿಸಿದುದು

ರಾಜೋವಾಚ

ನಾಗಾಲಯಂ ರಮಣಕಂ ಕಸ್ಮಾತ್ತತ್ಯಾಜ ಕಾಲಿಯಃ ।
ಕೃತಂ ಕಿಂ ವಾ ಸುಪರ್ಣಸ್ಯ ತೇನೈಕೇನಾಸಮಂಜಸಮ್ ॥ ೧ ॥

ಶ್ರೀಶುಕ ಉವಾಚ

ಉಪಹಾರ್ಯೈಃ ಸರ್ಪಜನೈರ್ಮಾಸಿ ಮಾಸೀಹ ಯೋ ಬಲಿಃ ।
ವಾನಸ್ಪತ್ಯೋ ಮಹಾಬಾಹೋ ನಾಗಾನಾಂ ಪ್ರಾಙ್ನಿರೂಪಿತಃ ॥ ೨ ॥

ಸ್ವಂ ಸ್ವಂ ಭಾಗಂ ಪ್ರಯಚ್ಛಂತಿ ನಾಗಾಃ ಪರ್ವಣಿ ಪರ್ವಣಿ ।
ಗೋಪೀಥಾಯಾತ್ಮನಃ ಸರ್ವೇ ಸುಪರ್ಣಾಯ ಮಹಾತ್ಮನೇ ॥ ೩ ॥

ಪರೀಕ್ಷಿದ್ರಾಜನು ಕೇಳಿದನು – ಪೂಜ್ಯರೇ! ಕಾಲಿಯ ನಾಗನು ನಾಗಗಳ ನಿವಾಸ ಸ್ಥಾನವಾದ ರಮಣಕ ದ್ವೀಪವನ್ನು ಏಕೆ ಬಿಟ್ಟು ಬಂದನು? ಅವನೊಬ್ಬನೇ ಗರುಡನ ಕುರಿತು ಯಾವ ಅಪರಾಧವನ್ನೆಸಗಿದ್ದನು? ॥ ೧ ॥

ಶ್ರೀಶುಕಮಹಾಮುನಿಗಳು ಹೇಳಿದರು – ಪರೀಕ್ಷಿತನೇ! ಹಿಂದಿನ ಕಾಲದಲ್ಲಿ ಗರುಡನೂ ಸರ್ಪಗಳೂ ಸೇರಿ ಗರುಡನ ಸರ್ಪಾಹಾರದ ವಿಷಯದಲ್ಲಿ ಒಂದು ಒಪ್ಪಂದವನ್ನು ಮಾಡಿಕೊಂಡಿದ್ದವು. ಆ ಒಪ್ಪಂದದಂತೆ ಪ್ರತಿ ತಿಂಗಳು ನಿರ್ದಿಷ್ಟವಾದ ಒಂದು ವೃಕ್ಷದಡಿಯಲ್ಲಿ ಗರುಡನ ಆಹಾರಕ್ಕಾಗಿ ಹಾವನ್ನು ಒಪ್ಪಿಸಬೇಕಾಗಿತ್ತು. ॥ ೨ ॥ ಈ ನಿಯಮಕ್ಕನುಸಾರವಾಗಿ ಪ್ರತಿ ಅಮಾವಾಸ್ಯೆ ದಿನ ಸಕಲ ಸರ್ಪಗಳು ತಮ್ಮ ರಕ್ಷಣೆಗಾಗಿ ಮಹಾತ್ಮ ಗರುಡನಿಗೆ ತಮ್ಮ-ತಮ್ಮ ಭಾಗವನ್ನು ಕೊಡುತ್ತಾ ಇದ್ದರು.* ॥ ೩ ॥

* ಇದಕ್ಕೆ ಸಂಬಂಧಪಟ್ಟ ಒಂದು ಕಥೆ ಹೀಗಿದೆ – ಗರುಡನ ತಾಯಿ ವಿನತಾ ಮತ್ತು ಸರ್ಪಗಳ ತಾಯಿ ಕದ್ರುವಿಗೆ ಪರಸ್ಪರ ವೈರವಿತ್ತು. ತಾಯಿಯ ವೈರವನ್ನು ನೆನೆದುಕೊಂಡು ಗರುಡನು ಸಿಕ್ಕಿದ ಸರ್ಪಗಳನ್ನು ತಿನ್ನುತ್ತಾ ಹೋದನು. ಇದರಿಂದ ದುಃಖಿತರಾಗಿ ಎಲ್ಲ ಸರ್ಪಗಳು ಬ್ರಹ್ಮದೇವರಿಗೆ ಶರಣಾದವು. ಆಗ ಬ್ರಹ್ಮದೇವರು – ಪ್ರತಿಯೊಂದು ಅಮಾವಾಸ್ಯೆಗೆ ಪ್ರತಿಯೊಂದು ಸರ್ಪಪರಿವಾರದವರು ಗರುಡನಿಗೆ ಒಂದು ಸರ್ಪವನ್ನು ಒಪ್ಪಿಸುತ್ತಾ ಬರಬೇಕೆಂಬ ನಿಯಮವನ್ನು ಮಾಡಿದರು.

ವಿಷವೀರ್ಯಮದಾವಿಷ್ಟಃ ಕಾದ್ರವೇಯಸ್ತು ಕಾಲಿಯಃ ।
ಕದರ್ಥೀಕೃತ್ಯ ಗರುಡಂ ಸ್ವಯಂ ತಂ ಬುಭುಜೇ ಬಲಿಮ್ ॥ ೪ ॥

ತಚ್ಛ್ರುತ್ವಾ ಕುಪಿತೋ ರಾಜನ್ಭಗವಾನ್ಭಗವತ್ಪ್ರಿಯಃ ।
ವಿಜಿಘಾಂಸುರ್ಮಹಾವೇಗಃ ಕಾಲಿಯಂ ಸಮುಪಾದ್ರವತ್ ॥ ೫ ॥

ತಮಾಪತಂತಂ ತರಸಾ ವಿಷಾಯುಧಃ
ಪ್ರತ್ಯಭ್ಯಯಾದುಚ್ಛ್ರಿತನೈಕಮಸ್ತಕಃ ।
ದದ್ಭಿಃ ಸುಪರ್ಣಂ ವ್ಯದಶದ್ದದಾಯುಧಃ
ಕರಾಲಜಿಹ್ವೋಚ್ಛ್ವಸಿತೋಗ್ರಲೋಚನಃ ॥ ೬ ॥

ತಂ ತಾರ್ಕ್ಷ್ಯಪುತ್ರಃ ಸ ನಿರಸ್ಯ ಮನ್ಯುಮಾನ್
ಪ್ರಚಂಡವೇಗೋ ಮಧುಸೂದನಾಸನಃ ।
ಪಕ್ಷೇಣ ಸವ್ಯೇನ ಹಿರಣ್ಯರೋಚಿಷಾ
ಜಘಾನ ಕದ್ರೂಸುತಮುಗ್ರವಿಕ್ರಮಃ ॥ ೭ ॥

ಸುಪರ್ಣಪಕ್ಷಾಭಿಹತಃ ಕಾಲಿಯೋಽತೀವ ವಿಹ್ವಲಃ ।
ಹ್ರದಂ ವಿವೇಶ ಕಾಲಿಂದ್ಯಾಸ್ತದಗಮ್ಯಂ ದುರಾಸದಮ್ ॥ ೮ ॥

ತತ್ರೈಕದಾ ಜಲಚರಂ ಗರುಡೋ ಭಕ್ಷ್ಯಮೀಪ್ಸಿತಮ್ ।
ನಿವಾರಿತಃ ಸೌಭರಿಣಾ ಪ್ರಸಹ್ಯ ಕ್ಷುಧಿತೋಽಹರತ್ ॥ ೯ ॥

ಮೀನಾನ್ಸುದುಃಖಿತಾನ್ದೃಷ್ಟ್ವಾ ದೀನಾನ್ಮೀನಪತೌ ಹತೇ ।
ಕೃಪಯಾ ಸೌಭರಿಃ ಪ್ರಾಹ ತತ್ರತ್ಯಕ್ಷೇಮಮಾಚರನ್ ॥ ೧೦ ॥

ಅತ್ರ ಪ್ರವಿಶ್ಯ ಗರುಡೋ ಯದಿ ಮತ್ಸ್ಯಾನ್ಸ ಖಾದತಿ ।
ಸದ್ಯಃ ಪ್ರಾಣೈರ್ವಿಯುಜ್ಯೇತ ಸತ್ಯಮೇತದ್ಬ್ರವೀಮ್ಯಹಮ್ ॥ ೧೧ ॥

ತತ್ ಕಾಲಿಯಃ ಪರಂ ವೇದ ನಾನ್ಯಃ ಕಶ್ಚನ ಲೇಲಿಹಃ ।
ಅವಾತ್ಸೀದ್ಗರುಡಾದ್ಭೀತಃ ಕೃಷ್ಣೇನ ಚ ವಿವಾಸಿತಃ ॥ ೧೨ ॥

ಆ ಸರ್ಪಗಳಲ್ಲಿ ಕದ್ರುವಿನ ಪುತ್ರನಾದ ಕಾಲಿಯನಾಗನು ತನ್ನ ವಿಷಬಲದ ಗರ್ವದಿಂದ ಉನ್ಮತ್ತನಾಗಿದ್ದನು. ಅವನು ಗರುಡನನ್ನು ತಿರಸ್ಕರಿಸಿ ಸ್ವತಃ ಬಲಿಕೊಡುವುದಿರಲಿ, ಬೇರೆ ಸರ್ಪಗಳು ಗರುಡನಿಗಾಗಿ ಕೊಟ್ಟ ಬಲಿಯನ್ನು ತಿಂದುಬಿಡುತ್ತಿದ್ದನು. ॥ ೪ ॥ ಪರೀಕ್ಷಿತನೇ! ಇದನ್ನು ತಿಳಿದ ಭಗವಂತನ ಪ್ರಿಯ ಪಾರ್ಷದನಾದ ಶಕ್ತಿಶಾಲಿ ಗರುಡನಿಗೆ ಭಾರೀ ಸಿಟ್ಟು ಬಂತು. ಆದಕ್ಕಾಗಿ ಅವನು ಕಾಲಿಯನಾಗನನ್ನು ಕೊಂದು ಹಾಕುವ ವಿಚಾರದಿಂದ ಅತಿವೇಗದಿಂದ ಅವನ ಮೇಲೆ ಆಕ್ರಮಣ ಮಾಡಿದನು. ॥ ೫ ॥ ವಿಷಧರನಾದ ಕಾಲಿಯನು-ಗರುಡನು ತನ್ನ ಮೇಲೆ ಆಕ್ರಮಿಸುತ್ತಿರುವುದನ್ನು ನೋಡಿದಾಗ ಅವನು ತನ್ನ ನೂರೊಂದು ಹೆಡೆಗಳಿಂದ ಕಚ್ಚಲು ಅವನ ಮೇಲೆ ಎರಗಿದನು. ವಿಷವಿರುವ ಹಲ್ಲುಗಳೇ ಕಾಲಿಯನ ಶಸ್ತ್ರವಾಗಿತ್ತು. ಅದಕ್ಕಾಗಿ ಆ ಹಲ್ಲುಗಳಿಂದಲೇ ಗರುಡನನ್ನು ಕಚ್ಚತೊಡಗಿದನು. ಆಗ ಅವನು ತನ್ನ ಭಯಂಕರವಾದ ನಾಲಿಗೆಗಳಿಂದ ಕಟವಾಯಿಯನ್ನು ನೆಕ್ಕಿಕೊಳ್ಳುತ್ತಿದ್ದನು. ದೀರ್ಘವಾಗಿ ನಿಟ್ಟುಸಿರುಬಿಡುತ್ತಾ ಭಯಂಕರವಾದ ಕಣ್ಣುಗಳಿಂದ ಗರುಡನನ್ನೇ ದುರುಗುಟ್ಟಿಕೊಂಡು ನೋಡುತ್ತಿದ್ದನು. ॥ ೬ ॥ ತಾರ್ಕ್ಷ್ಯನಂದನ ಗರುಡನು ಭಗವಾನ್ ವಿಷ್ಣುವಿನ ವಾಹನನಾಗಿದ್ದು ಅವನ ವೇಗ ಪರಾಕ್ರಮಗಳು ಅತುಲನೀಯವಾಗಿತ್ತು. ಕಾಲಿಯನಾಗನ ಈ ಉದ್ಧಟತನವನ್ನು ಕಂಡು ಅತ್ಯಂತ ಕುಪಿತನಾಗಿ ಸುವರ್ಣಮಯವಾದ ತನ್ನ ಎಡರೆಕ್ಕೆಯಿಂದ ಜೋರಾಗಿ ನಾಗನನ್ನು ಅಪ್ಪಳಿಸಿದನು. ॥ ೭ ॥ ಅವನ ಪಕ್ಷಾಘಾತದಿಂದ ಕಾಳಿಯ ನಾಗನು ಗಾಯಗೊಂಡನು. ಅವನು ಗಾಬರಿಗೊಂಡು ಅಲ್ಲಿಂದ ಓಡಿಹೋಗಿ ಯಮುನೆಯ ಮಡುವಿಗೆ ಬಂದು ನೆಲಸಿದನು. ಯಮುನೆಯ ಈ ಕುಂಡವು ಗರುಡನಿಗೆ ಅಗಮ್ಯವಾಗಿತ್ತು. ಮೇಲಾಗಿ ಆ ಕುಂಡವು ಬೇರೆಯವರು ಪ್ರವೇಶಿಸಲಾಗದಷ್ಟು ಆಳವಾಗಿತ್ತು. ॥ ೮ ॥

ಪರೀಕ್ಷಿತನೇ! ಇದೇ ಸ್ಥಳದಲ್ಲಿ ಒಂದು ದಿನ ಹಸಿದಿರುವ ಗರುಡನು ತಪಸ್ವೀ ಸೌಭರಿಋಷಿಗಳು ತಡೆದರೂ ತನಗೆ ಪ್ರಿಯ ಭಕ್ಷ್ಯವಾದ ಮೀನುಗಳನ್ನು ಬಲವಂತವಾಗಿ ಸೆಳೆದು ಹಿಡಿದು ತಿಂದುಬಿಟ್ಟನು. ॥ ೯ ॥ ತಮಗೆ ಮುಖಂಡನಾಗಿದ್ದ ಮಹಾಮತ್ಸ್ಯವು ಹೀಗೆ ವಿನಾಶವಾಗಲು ಅಲ್ಲಿದ್ದ ಮೀನುಗಳಿಗೆ ಬಹಳ ದುಃಖವುಂಟಾಯಿತು. ಬಹಳ ದೈನ್ಯದಿಂದ ದುಃಖಿಸುತ್ತಿದ್ದ ಆ ಮೀನುಗಳನ್ನು ನೋಡಿ ಪರಮದಯಾಳುವಾದ ಸೌಭರಿ ಮುನಿಯು ಅವುಗಳ ಒಳಿತಿಗಾಗಿ ಗರುಡನಿಗೆ ಶಾಪವಿತ್ತನು ॥ ೧೦ ॥ ಮುಂದೆ ಗರುಡನೇನಾದರು ಈ ಮಡುವನ್ನು ಪ್ರವೇಶಿಸಿ ಮೀನುಗಳನ್ನು ತಿಂದನಾದರೆ ಅವನು ಒಡನೆಯೇ ಪ್ರಾಣಕಳೆದುಕೊಳ್ಳುತ್ತಾನೆ. ಈ ಮಾತನ್ನು ನಾನು ಸತ್ಯವಾಗಿ ಹೇಳುತ್ತಿದ್ದೇನೆ. ॥ ೧೧ ॥ ಪರೀಕ್ಷಿತನೇ! ಮಹರ್ಷಿ ಸೌಭರಿಯ ಈ ಶಾಪ ವೃತ್ತಾಂತವು ಕಾಲಿಯನಾಗನಲ್ಲದೆ ಬೇರೆ ಯಾವ ಸರ್ಪಕ್ಕೂ ತಿಳಿದಿರಲಿಲ್ಲ. ಅದಕ್ಕಾಗಿ ಅವನು ಗರುಡನ ಭಯದಿಂದ ಅಲ್ಲಿ ನೆಲೆಸಿದ್ದನು. ಈಗ ಭಗವಾನ್ ಶ್ರೀಕೃಷ್ಣನು ಅವನನ್ನು ನಿರ್ಭಯನನ್ನಾಗಿಸಿ ಅಲ್ಲಿಂದ ರಮಣಕ ದ್ವೀಪಕ್ಕೆ ಕಳಿಸಿಬಿಟ್ಟನು. ॥ ೧೨ ॥

ಕೃಷ್ಣಂ ಹ್ರದಾದ್ವಿನಿಷ್ಕ್ರಾಂತಂ ದಿವ್ಯಸ್ರಗ್ಗಂಧವಾಸಸಮ್ ।
ಮಹಾಮಣಿಗಣಾಕೀರ್ಣಂ ಜಾಂಬೂನದಪರಿಷ್ಕೃತಮ್ ॥ ೧೩ ॥

ಉಪಲಭ್ಯೋತ್ಥಿತಾಃ ಸರ್ವೇ ಲಬ್ಧಪ್ರಾಣಾ ಇವಾಸವಃ ।
ಪ್ರಮೋದನಿಭೃತಾತ್ಮಾನೋ ಗೋಪಾಃ ಪ್ರೀತ್ಯಾಭಿರೇಭಿರೇ ॥ ೧೪ ॥

ಯಶೋದಾ ರೋಹಿಣೀ ನಂದೋ ಗೋಪ್ಯೋ ಗೋಪಾಶ್ಚ ಕೌರವ ।
ಕೃಷ್ಣಂ ಸಮೇತ್ಯ ಲಬ್ಧೇಹಾ ಆಸಲ್ಲಬ್ಧಮನೋರಥಾಃ ॥ ೧೫ ॥

ರಾಮಶ್ಚಾಚ್ಯುತಮಾಲಿಂಗ್ಯ ಜಹಾಸಾಸ್ಯಾನುಭಾವವಿತ್ ।
ನಗಾ ಗಾವೋ ವೃಷಾ ವತ್ಸಾ ಲೇಭಿರೇ ಪರಮಾಂ ಮುದಮ್ ॥ ೧೬ ॥

ನಂದಂ ವಿಪ್ರಾಃ ಸಮಾಗತ್ಯ ಗುರವಃ ಸಕಲತ್ರಕಾಃ ।
ಊಚುಸ್ತೇ ಕಾಲಿಯಗ್ರಸ್ತೋ ದಿಷ್ಟ್ಯಾ ಮುಕ್ತಸ್ತವಾತ್ಮಜಃ ॥ ೧೭ ॥

ದೇಹಿ ದಾನಂ ದ್ವಿಜಾತೀನಾಂ ಕೃಷ್ಣನಿರ್ಮುಕ್ತಿಹೇತವೇ ।
ನಂದಃ ಪ್ರೀತಮನಾ ರಾಜನ್ಗಾಃ ಸುವರ್ಣಂ ತದಾದಿಶತ್ ॥ ೧೮ ॥

ಯಶೋದಾಪಿ ಮಹಾಭಾಗಾ ನಷ್ಟಲಬ್ಧಪ್ರಜಾ ಸತೀ ।
ಪರಿಷ್ವಜ್ಯಾಂಕಮಾರೋಪ್ಯ ಮುಮೋಚಾಶ್ರುಕಲಾಂ ಮುಹುಃ ॥ ೧೯ ॥

ತಾಂ ರಾತ್ರಿಂ ತತ್ರ ರಾಜೇಂದ್ರ ಕ್ಷುತ್ತೃಡ್ಭ್ಯಾಂ ಶ್ರಮಕರ್ಷಿತಾಃ ।
ಊಷುರ್ವ್ರಜೌಕಸೋ ಗಾವಃ ಕಾಲಿಂದ್ಯಾ ಉಪಕೂಲತಃ ॥ ೨೦ ॥

ತದಾ ಶುಚಿವನೋದ್ಭೂತೋ ದಾವಾಗ್ನಿಃ ಸರ್ವತೋ ವ್ರಜಮ್ ।
ಸುಪ್ತಂ ನಿಶೀಥ ಆವೃತ್ಯ ಪ್ರದಗ್ಧುಮುಪಚಕ್ರಮೇ ॥ ೨೧ ॥

ತತ ಉತ್ಥಾಯ ಸಂಭ್ರಾಂತಾ ದಹ್ಯಮಾನಾ ವ್ರಜೌಕಸಃ ।
ಕೃಷ್ಣಂ ಯಯುಸ್ತೇ ಶರಣಂ ಮಾಯಾಮನುಜಮೀಶ್ವರಮ್ ॥ ೨೨ ॥

ಕೃಷ್ಣ ಕೃಷ್ಣ ಮಹಾಭಾಗ ಹೇ ರಾಮಾಮಿತವಿಕ್ರಮ ।
ಏಷ ಘೋರತಮೋ ವಹ್ನಿಸ್ತಾವಕಾನ್ ಗ್ರಸತೇ ಹಿ ನಃ ॥ ೨೩ ॥

ಪರೀಕ್ಷಿತನೇ! ಇತ್ತಲಾಗಿ ಶ್ರೀಕೃಷ್ಣನು ನಾಗಪತ್ನಿಯರಿಂದ ಕೊಡಲ್ಪಟ್ಟ ದಿವ್ಯವಾದ ಮಾಲೆ-ಗಂಧ-ವಸ್ತ್ರ ಬಹುಮೂಲ್ಯವಾದ ಮಣಿಗಳು - ಸುವರ್ಣಮಯ ಆಭರಣಗಳು - ಇವುಗಳಿಂದ ಅಲಂಕೃತನಾಗಿ ಆ ಮಡುವಿನಿಂದ ಹೊರಕ್ಕೆ ಬಂದನು. ॥ ೧೩ ॥ ಅವನನ್ನು ನೋಡಿದೊಡನೆಯೇ - ಪ್ರಾಣಗಳನ್ನು ಪಡೆದ ಇಂದ್ರಿಯಗಳು ಚೇತನವಾಗುವಂತೆ ಎಲ್ಲ ವ್ರಜವಾಸಿಗಳು ಎದ್ದು ನಿಂತರು. ಸಮಸ್ತ ಗೋಪರ ಹೃದಯ ಆನಂದದಿಂದ ತುಂಬಿಹೋಯಿತು. ಅವರು ಅತ್ಯಂತ ಪ್ರೇಮ ಮತ್ತು ಆನಂದದಿಂದ ಬಾಲಕೃಷ್ಣನನ್ನು ಬಾಚಿ ತಬ್ಬಿಕೊಂಡರು. ॥ ೧೪ ॥ ಪರೀಕ್ಷಿತನೇ! ಯಶೋದೆ, ರೋಹಿಣಿ, ನಂದಗೋಪ, ಗೋಪ-ಗೋಪಿಯರು ಎಲ್ಲರೂ ಶ್ರೀಕೃಷ್ಣನನ್ನು ಪಡೆದುಕೊಂಡು ನವಚೈತನ್ಯವನ್ನು ಹೊಂದಿದರು. ಅವರ ಮನೋರಥ ಸಫಲವಾಯಿತು. ॥ ೧೫ ॥ ಬಲರಾಮನಿಗಾದರೋ ಭಗವಂತನ ಪ್ರಭಾವವು ತಿಳಿದೇ ಇತ್ತು. ಅವನು ಶ್ರೀಕೃಷ್ಣನನ್ನು ಗಾಢವಾಗಿ ಆಲಿಂಗಿಸಿಕೊಂಡು ನಗತೊಡಗಿದನು. ಶ್ರೀಕೃಷ್ಣನ ಪುನರಾಗಮನದಿಂದ ಪರ್ವತ, ವೃಕ್ಷಗಳು, ಹಸುಗಳು, ಎತ್ತುಗಳು, ಕರುಗಳು ಆನಂದಿಸಿದವು. ॥ ೧೬ ॥ ಗೋಪರ ಕುಲಗುರು ಬ್ರಾಹ್ಮಣರು ತಮ್ಮ ಪತ್ನಿಯರೊಂದಿಗೆ ನಂದಗೋಪನ ಬಳಿಗೆ ಬಂದು - ನಂದಮಹಾರಾಜ! ನಿನ್ನ ಬಾಲಕನನ್ನು ಕಾಳಿಯ ನಾಗನು ಹಿಡಿದಿದ್ದನು. ಅವನು ಸೌಭಾಗ್ಯ ವಶದಿಂದ ಬಿಡುಗಡೆ ಹೊಂದಿ ಬಂದನು. ॥ ೧೭ ॥ ಶ್ರೀಕೃಷ್ಣನು ಮೃತ್ಯುಮುಖದಿಂದ ಬದುಕಿ ಬಂದ ಕಾರಣ ನೀನು ಬ್ರಾಹ್ಮಣರಿಗೆ ಯಥೇಚ್ಛವಾಗಿ ದಾನ ಮಾಡು. ಪರೀಕ್ಷಿತನೇ! ಬ್ರಾಹ್ಮಣರ ಮಾತನ್ನು ಕೇಳಿ ನಂದಗೋಪನಿಗೆ ಪರಮಾನಂದವಾಯಿತು. ಅವನು ಬಹಳಷ್ಟು ಚಿನ್ನ, ಹಸುಗಳನ್ನು ಬ್ರಾಹ್ಮಣರಿಗೆ ದಾನ ಮಾಡಿದನು. ॥ ೧೮ ॥ ಪರಮ ಸೌಭಾಗ್ಯವತಿಯಾದ ಯಶೋದಾದೇವಿಯು ಕಾಲನ ದವಡೆಯಿಂದ ಬದುಕಿಬಂದ ತನ್ನ ಮುದ್ದುಕಂದನಾದ ಕೃಷ್ಣನನ್ನು ತೊಡೆಯಲ್ಲಿಟ್ಟುಕೊಂಡು, ಬಾಚಿ ತಬ್ಬಿಕೊಂಡಳು. ಆಕೆಯ ಕಣ್ಣುಗಳಿಂದ ಸುರಿದ ಆನಂದಾಶ್ರುಗಳು ಕೃಷ್ಣನನ್ನು ತೋಯಿಸಿದವು. ॥ ೧೯ ॥

ರಾಜೇಂದ್ರನೇ! ವ್ರಜವಾಸಿಗಳು ಮತ್ತು ಗೋವುಗಳು ಬಹಳ ಆಯಾಸಗೊಂಡಿದ್ದರು. ಮೇಲಾಗಿ ಹಸಿವು-ಬಾಯಾರಿಕೆಯಿಂದ ಬಳಲಿದ್ದರು. ಆದುದರಿಂದ ಅಂದಿನ ರಾತ್ರಿಯಲ್ಲಿ ಅವರು ವ್ರಜಕ್ಕೆ ಹೋಗದೆ, ಅಲ್ಲೇ ಯಮುನಾ ತೀರದಲ್ಲಿ ಮಲಗಿದ್ದರು. ॥ ೨೦ ॥ ಅದು ಬೇಸಿಗೆಯ ಕಾಲವಾಗಿತ್ತು. ಮರ-ಗಿಡಗಳೆಲ್ಲವೂ ಒಣಗಿ ಹೋಗಿದ್ದವು. ಅರ್ಧರಾತ್ರಿಯ ಸಮಯದಲ್ಲಿ ಅವಕ್ಕೆ ಬೆಂಕಿ ಹತ್ತಿಕೊಂಡಿತು. ಆ ಬೆಂಕಿಯು ಮಲಗಿರುವ ವ್ರಜವಾಸಿಗಳನ್ನು ಸುತ್ತುವರಿದು ಅವರನ್ನು ಸುಡತೊಡಗಿತು. ॥ ೨೧ ॥ ಬೆಂಕಿಯ ಕಾವು ತಗಲುತ್ತಲೇ ವ್ರಜವಾಸಿಗಳು ಗಾಬರಿಯಿಂದ ಎದ್ದು ನಿಂತು ಲೀಲಾಮಾನುಷವಿಗ್ರಹನಾದ ಭಗವಾನ್ ಶ್ರೀಕೃಷ್ಣನಿಗೆ ಶರಣು ಹೋದರು. ॥ ೨೨ ॥ "ಕೃಷ್ಣ! ಮುಕುಂದ! ಮಹಾ ಭಾಗ್ಯಶಾಲಿಯೇ! ಅಮಿತ ವಿಕ್ರಮನಾದ ಬಲರಾಮನೇ! ನಿಮ್ಮಿಬ್ಬರ ಬಲಪರಾಕ್ರಮಗಳು ಅಮಿತವಾಗಿವೆ. ನೋಡಿ! ನೋಡಿ! ಈ ಭಯಂಕರ ಕಾಡ್ಗಿಚ್ಚು ನಿಮ್ಮ ಸ್ವಜನ ಸಂಬಂಧಿಗಳಾದ ನಮ್ಮನ್ನು ಸುಡಲು ಬಯಸುತ್ತಿದೆ. ॥ ೨೩ ॥

ಸುದುಸ್ತರಾನ್ನಃ ಸ್ವಾನ್ಪಾಹಿ ಕಾಲಾಗ್ನೇಃ ಸುಹೃದಃ ಪ್ರಭೋ ।
ನ ಶಕ್ನುಮಸ್ತ್ವಚ್ಚರಣಂ ಸಂತ್ಯಕ್ತುಮಕುತೋಭಯಮ್ ॥ ೨೪ ॥

ಎಲ್ಲರೂ ಸರ್ವಸಮರ್ಥರಾಗಿರುವಿರಿ. ನಾವು ನಿಮ್ಮ ಸುಹೃದರಾಗಿದ್ದೇವೆ. ಅದರಿಂದ ಈ ಪ್ರಳಯಾಗ್ನಿಯಿಂದ ರಕ್ಷಿಸಿರಿ. ಪ್ರಭೋ! ನಾವು ಮೃತ್ಯುವಿಗೆ ಹೆದರುವುದಿಲ್ಲ, ಆದರೆ ಅಪಾಯರಹಿತವಾದ ನಿನ್ನ ದಿವ್ಯ ಚರಣಕಮಲಗಳನ್ನು ಬಿಟ್ಟು ಹೋಗಲು ನಾವು ಸಮರ್ಥರಾಗಿಲ್ಲ." ॥ ೨೪ ॥ ಭಗವಂತನು ಅನಂತನಾಗಿದ್ದಾನೆ. ಅವನು ಅನಂತ ಶಕ್ತಿಗಳನ್ನು ಧರಿಸಿರುವನು. ಆ ಜಗದೀಶ್ವರ ಭಗವಾನ್ ಶ್ರೀಕೃಷ್ಣನು ತನ್ನ ಸ್ವಜನರು ಹೀಗೆ ದುಃಖಿತರಾಗಿರುವುದನ್ನು ನೋಡಿದಾಗ ಅವನು ಆ ಭಯಂಕರ ಕಾಡುಗಿಚ್ಚನ್ನು ಕುಡಿದುಬಿಟ್ಟನು. ॥ ೨೫ ॥

ಇತ್ಥಂ ಸ್ವಜನವೈಕ್ಲವ್ಯಂ ನಿರೀಕ್ಷ್ಯ ಜಗದೀಶ್ವರಃ ।
ತಮಗ್ನಿಮಪಿಬತ್ತೀವ್ರಮನಂತೋಽನಂತ ಶಕ್ತಿಧೃಕ್ ॥ ೨೫ ॥

ಹದಿನೇಳನೆಯ ಅಧ್ಯಾಯವು ಮುಗಿಯಿತು. ॥ ೧೭ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮ ಸ್ಕಂಧೇ ಪೂರ್ವಾರ್ಧೇ
ದಾವಾಗ್ನಿಮೋಚನಂ ನಾಮ ಸಪ್ತದಶೋಽಧ್ಯಾಯಃ ॥ ೧೭ ॥

ಹದಿನೆಂಟನೆಯ ಅಧ್ಯಾಯ

ಪ್ರಲಂಬಾಸುರ ಉದ್ಧಾರ

ಶ್ರೀಶುಕ ಉವಾಚ

ಅಥ ಕೃಷ್ಣಃ ಪರಿವೃತೋ ಜ್ಞಾತಿಭಿರ್ಮುದಿತಾತ್ಮಭಿಃ ।
ಅನುಗೀಯಮಾನೋ ನ್ಯವಿಶದ್ವ್ರಜಂ ಗೋಕುಲಮಂಡಿತಮ್ ॥ ೧ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ! ಆನಂದತುಂದಿಲರಾದ ಜ್ಞಾತಿಬಾಂಧವರಿಂದ ಸುತ್ತುವರಿಯಲ್ಪಟ್ಟ ಶ್ರೀಕೃಷ್ಣನು ತನ್ನ ಅನುಯಾಯಿಗಳಿಂದ ಸ್ತುತಿಸಲ್ಪಡುತ್ತಾ ಗೋವುಗಳ ಸಮೂಹದಿಂದ ಸಮಲಂಕೃತವಾದ ಗೊಲ್ಲರಹಳ್ಳಿಯನ್ನು ಪ್ರವೇಶಿಸಿದನು. ॥ ೧ ॥ ಹೀಗೆ ತನ್ನ ಯೋಗಮಾಯೆಯಿಂದ ಗೋಪಾಲನಂತೆ ವೇಷವನ್ನು ತೊಟ್ಟು ರಾಮ-ಕೃಷ್ಣರು ವ್ರಜದಲ್ಲಿ ಕ್ರೀಡಿಸುತ್ತಿದ್ದರು. ಆಗ ಗ್ರೀಷ್ಮ ಋತುವು ಬಂದಿತ್ತು. ಇದು ಶರೀರ ಧಾರಿಗಳಿಗೆ ಅಷ್ಟು ಪ್ರಿಯವಾಗಿರಲಿಲ್ಲ. ॥ ೨ ॥ ಆದರೆ ವೃಂದಾವನದ ಸ್ವಾಭಾವಿಕ ಗುಣಗಳಿಂದ ಅಲ್ಲಿ ವಸಂತ ಋತುವಿನದೇ ಲಕ್ಷಣಗಳಿದ್ದವು. ಭಗವಾನ್ ಶ್ಯಾಮಸುಂದರನೂ, ಬಲರಾಮನೂ ಅಲ್ಲಿ ವಾಸಿಸುತ್ತಿದ್ದುದೇ ಇದಕ್ಕೆ ಕಾರಣವಾಗಿತ್ತು. ॥ ೩ ॥ ಜೀರುಂಡೆಗಳ ಕರ್ಕಶ ಧ್ವನಿಯು ಅಲ್ಲಿ ಹರಿಯುತ್ತಿದ್ದ ನದಿಯ ಮಂಜುಳ ಧ್ವನಿಯಿಂದ ಅಡಗಿಹೋಗಿತ್ತು. ನದಿಗಳ ಪ್ರವಾಹದ ತುಂತುರುಗಳಿಂದ ನೆನೆಸಲ್ಪಟ್ಟು ಹಸಿರಾದ ವೃಕ್ಷಗಳ ಗುಂಪಿನಿಂದ ವೃಂದಾವನವು ಸಮಲಂಕೃತವಾಗಿತ್ತು. ॥ ೪ ॥ ನೋಡಿದಲ್ಲೆಲ್ಲ ಹಚ್ಚ ಹಸಿರಾದ ಹುಲ್ಲಿನಿಂದಾಗಿ ಭೂಪ್ರದೇಶವೆಲ್ಲ ಹಸಿರು ಹಾಸಿಗೆ ಹಾಸಿದಂತಿತ್ತು. ಅಲ್ಲಿನ ತಂಗಾಳಿಯು ನದಿ, ಸರೋವರ, ಗಿರಿನದಿಗಳ ಅಲೆಗಳ ಮೂಲಕವಾಗಿ ಬೀಸುತ್ತಾ ಸೌಗಂಧಿಕ, ಕಮಲ, ಕನ್ನೈದಿಲೆಗಳ ಸುಗಂಧಮಯವಾದ ಧೂಳಿಯನ್ನು ಹೊತ್ತುತಂದು ವೃಂದಾವನವನ್ನೇ ಸುಗಂಧಮಯವಾಗಿಯೂ, ಶೀತಲವಾಗಿಯೂ ಮಾಡುತ್ತಿದ್ದಿತು. ಇಲ್ಲಿ ವಾಸಮಾಡುವವರಿಗೆ ಕಾಡ್ಗಿಚ್ಚಿನ ಬೇಗೆಯಾಗಲೀ, ಗ್ರೀಷ್ಮಸೂರ್ಯನ ತಾಪವಾಗಲೀ ಇರಲಿಲ್ಲ. ॥ ೫ ॥

ವ್ರಜೇ ವಿಕ್ರೀಡತೋರೇವಂ ಗೋಪಾಲಚ್ಛದ್ಮಮಾಯಯಾ ।
ಗ್ರೀಷ್ಮೋ ನಾಮರ್ತುರಭವನ್ನಾತಿಪ್ರೇಯಾನ್ ಶರೀರಿಣಾಮ್ ॥ ೨ ॥

ಸ ಚ ವೃಂದಾವನಗುಣೈರ್ವಸಂತ ಇವ ಲಕ್ಷಿತಃ ।
ಯತ್ರಾಸ್ತೇ ಭಗವಾನ್ಸಾಕ್ಷಾದ್ರಾಮೇಣ ಸಹ ಕೇಶವಃ ॥ ೩ ॥

ಯತ್ರ ನಿರ್ಝರನಿರ್ಹ್ರಾದನಿವೃತ್ತಸ್ವನಝಿಲ್ಲಿಕಮ್ ।
ಶಶ್ವತ್ತಚ್ಛೀಕರರ್ಜೀಷದ್ರುಮಮಂಡಲಮಂಡಿತಮ್ ॥ ೪ ॥

ಸರಿತ್ಸರಃಪ್ರಸ್ರವಣೋರ್ಮಿವಾಯುನಾ
ಕಹ್ಲಾರಕಂಜೋತ್ಪಲರೇಣುಹಾರಿಣಾ ।
ನ ವಿದ್ಯತೇ ಯತ್ರ ವನೌಕಸಾಂ ದವೋ
ನಿದಾಘವಹ್ನ್ಯರ್ಕಭವೋಽತಿಶಾದ್ವಲೇ ॥ ೫ ॥

ಅಗಾಧತೋಯಹ್ರದಿನೀತಟೋರ್ಮಿಭಿ-
ರ್ದ್ರವತ್ಪುರೀಷ್ಯಾಃ ಪುಲಿನೈಃ ಸಮಂತತಃ ।
ನ ಯತ್ರ ಚಂಡಾಂಶುಕರಾ ವಿಷೋಲ್ಬಣಾ
ಭುವೋ ರಸಂ ಶಾದ್ವಲಿತಂ ಚ ಗೃಹ್ಣತೇ ॥ ೬ ॥

ನದಿಗಳಲ್ಲಿ ಆಳವಾದ ನೀರು ತುಂಬಿದ್ದು ಎತ್ತರವಾಗಿ ಎದ್ದು ಬರುತ್ತಿದ್ದ ಅಲೆಗಳು ದಡದಲ್ಲಿದ್ದ ಮರಳು ದಿಣ್ಣೆಗಳಿಗೆ ರಭಸದಿಂದ ಅಪ್ಪಳಿಸುತ್ತಿದ್ದು ಅವನ್ನು ಸ್ವಚ್ಛಗೊಳಿಸುತ್ತಿದ್ದವು. ಅದರಿಂದಾಗಿ ಸುತ್ತಲಿನ ಭೂಮಿಯು ಒದ್ದೆಯಾಗುತ್ತಿತ್ತು. ಸೂರ್ಯನ ಅತ್ಯಂತ ಉಗ್ರಕಿರಣಗಳೂ ಅದನ್ನು ಒಣಗಿಸಲಾಗದೆ ಹಚ್ಚ ಹಸುರಾಗಿಯೇ ಇರುತ್ತಿತ್ತು. ॥ ೬ ॥ ಆ ವೃಂದಾವನದಲ್ಲಿ ವೃಕ್ಷಗಳ ಸಾಲು-ಸಾಲುಗಳು ಹೂವುಗಳಿಂದ ಸೊಂಪಾಗಿ ಸಂಪತ್ಭರಿತವಾಗಿತ್ತು. ನೋಡಿದಲ್ಲೆಲ್ಲ ಸೌಂದರ್ಯವೇ ಮೂರ್ತಿಭವಿಸಿದಂತಿತ್ತು. ಕೆಲವೆಡೆ ಬಣ್ಣ ಬಣ್ಣದ ಹಕ್ಕಿಗಳು ಚಿಲಿಪಿಲಿಗುಟ್ಟುತ್ತಿದ್ದರೆ, ಕೆಲವೆಡೆ ಜಿಂಕೆಗಳು ನೆಗೆಯುತ್ತಾ ಓಡುತ್ತಿದ್ದವು. ಕೆಲವುಕಡೆ ನವಿಲುಗಳು ಜಾಗರವಾಡುತ್ತಿದ್ದರೆ, ದುಂಬಿಗಳು ಝೇಂಕರಿಸುತ್ತಿದ್ದವು. ಕೆಲವೆಡೆ ಕೋಗಿಲೆ ಸಾರಸಪಕ್ಷಿಗಳು ಸುಮಧುರವಾಗಿ ಕೂಗುತ್ತಿದ್ದವು. ॥ ೭ ॥ ಅಂತಹ ಸುಂದರ ವನವನ್ನು ನೋಡಿ ಶ್ಯಾಮಸುಂದರ ಶ್ರೀಕೃಷ್ಣನು ಮತ್ತು ಗೌರಸುಂದರ ಬಲರಾಮನು ಆ ವನದಲ್ಲಿ ವಿಹರಿಸಲು ಮನಮಾಡಿದರು. ಮುಂದೆ-ಮುಂದೆ ಹಸುಗಳು ಹೋಗುತ್ತಿದ್ದವು, ಹಿಂದೆ-ಹಿಂದೆ ಗೋಪಬಾಲಕರು ಮತ್ತು ನಡುವೆ ಅಣ್ಣನೊಡನೆ ಮುರಲಿಯನ್ನು ನುಡಿಸುತ್ತಾ ಶ್ರೀಕೃಷ್ಣನು ಹೋಗುತ್ತಿದ್ದನು. ॥ ೮ ॥

ವನಂ ಕುಸುಮಿತಂ ಶ್ರೀಮನ್ನದಚ್ಚಿತ್ರಮೃಗದ್ವಿಜಮ್ ।
ಗಾಯನ್ಮಯೂರಭ್ರಮರಂ ಕೂಜತ್ಕೋಕಿಲಸಾರಸಮ್ ॥ ೭ ॥

ಕ್ರೀಡಿಷ್ಯಮಾಣಸ್ತತ್ಕೃಷ್ಣೋ ಭಗವಾನ್ಬಲಸಂಯುತಃ ।
ವೇಣುಂ ವಿರಣಯನ್ಗೋಪೈರ್ಗೋಧನೈಃ ಸಂವೃತೋಽವಿಶತ್ ॥ ೮ ॥

ಪ್ರವಾಲಬರ್ಹಸ್ತಬಕಸ್ರಗ್ಧಾತುಕೃತಭೂಷಣಾಃ ।
ರಾಮಕೃಷ್ಣಾದಯೋ ಗೋಪಾ ನನೃತುರ್ಯುಯುಧುರ್ಜಗುಃ ॥ ೯ ॥

ರಾಮ-ಶ್ಯಾಮರೂ ಮತ್ತು ಗೋಪಾಲ ಬಾಲಕರು ಹೊಚ್ಚ ಹೊಸದಾದ ಚಿಗುರುಗಳಿಂದಲೂ, ನವಿಲುಗರಿಗಳಿಂದಲೂ, ವಿಕಸಿತ ಸುಗಂಧ ಪುಷ್ಪಗಳಿಂದಲೂ, ಬಣ್ಣ-ಬಣ್ಣದ ಹರಿದಳ, ಮಣಶಿಲೆ, ಸಿಂಧೂರವೇ ಮೊದಲಾದ ಗೈರಿಕ ಧಾತುಗಳಿಂದಲೂ ತಮ್ಮ ಶರೀರಗಳನ್ನು ನಾನಾ ರೀತಿಯಿಂದ ಸಿಂಗರಿಸಿಕೊಂಡರು. ಅವರಲ್ಲಿ ಕೆಲವರು ಆನಂದ ಮಗ್ನರಾಗಿ ನರ್ತಿಸಲು ತೊಡಗಿದರು. ಕೆಲವರು ತೊಡೆಗಳನ್ನು ತಟ್ಟಿಕೊಂಡು ಕುಸ್ತಿಯಾಡತೊಡಗಿದರು. ಕೆಲವರು ಹಾಡಲು ಪ್ರಾರಂಭಿಸಿದರು. ॥ ೯ ॥ ಶ್ರೀಕೃಷ್ಣನು ನರ್ತಿಸುವಾಗ ಕೆಲವು ಗೊಲ್ಲರು ಹಾಡುವರು, ಕೆಲವರು ಕೊಳಲನ್ನು ನುಡಿಸುವರು, ಕೆಲವರು ಕೈಗಳಿಂದ ಚಪ್ಪಾಳೆತಟ್ಟಿ ತಾಳ ಹಾಕುತ್ತಿದ್ದರು. ಕೆಲವರು ಕೊಂಬುಗಳನ್ನೂದುವರು, ಉಳಿದವರು 'ಭಲೇ ಕೃಷ್ಣ!' ಎನ್ನುತ್ತಾ ನೃತ್ಯವನ್ನು ಪ್ರೋತ್ಸಾಹಿಸುವರು. ॥ ೧೦ ॥ ಪರೀಕ್ಷಿದ್ರಾಜನೇ! ಆ ಸಮಯದಲ್ಲಿ ನಟರು ತಮ್ಮ ನಾಯಕನನ್ನು ಪ್ರಶಂಸೆಮಾಡುವಂತೆ – ಗೋಪಾಲಕರ ವೇಷಗಳನ್ನು ಧರಿಸಿದ್ದ ದೇವತೆಗಳು ಗೊಲ್ಲರಜಾತಿಯಲ್ಲಿ ಜನ್ಮತಳೆದು ತಮ್ಮ ನಿಜ ಸ್ವರೂಪವನ್ನು ಮರೆಸಿಕೊಂಡಿದ್ದ ರಾಮ-ಶ್ಯಾಮರನ್ನು ಸ್ತೋತ್ರಮಾಡತೊಡಗಿದರು. ॥ ೧೧ ॥ ಕಾಕಪಕ್ಷಧರರಾದ * ರಾಮಕೃಷ್ಣರು ಒಮ್ಮೆ ಪರಸ್ಪರ ಕೈಗಳನ್ನು ಹಿಡಿದುಕೊಂಡು ಕುಂಬಾರನ ಚಕ್ರದಂತೆ ಗರಗರನೆ ಸುತ್ತುವರು. ಅಪ್ಪಾಲೆ ತಿಪ್ಪಾಲೆ ಆಟವನ್ನು ಆಡುವರು.

ಕೃಷ್ಣಸ್ಯ ನೃತ್ಯತಃ ಕೇಚಿಜ್ಜಗುಃ ಕೇಚಿದವಾದಯನ್ ।
ವೇಣುಪಾಣಿತಲೈಃ ಶೃಂಗೈಃ ಪ್ರಶಶಂಸುರಥಾಪರೇ ॥ ೧೦ ॥

ಗೋಪಜಾತಿಪ್ರತಿಚ್ಛನ್ನಾ ದೇವಾ ಗೋಪಾಲರೂಪಿಣೌ ।
ಈಡಿರೇ ಕೃಷ್ಣರಾಮೌ ಚ ನಟಾ ಇವ ನಟಂ ನೃಪ ॥ ೧೧ ॥

* ಕಾಕ ಪಕ್ಷ - ಬಾಲಕರ ಕಿವಿಗಳ ಪಕ್ಕದ ಕೆನ್ನೆಗಳ ಮೇಲಿರುವ ಕೂದಲು. ತಲೆಯ ಪಕ್ಕದ ಕೂದಲು, ಕಾಕಪಕ್ಷಧರರೆಂದರೆ ಚಿಕ್ಕ ವಯಸ್ಸಿನವರೂ ಎಂದರ್ಥವಿದೆ.

ಭ್ರಾಮಣೈರ್ಲಂಘನೈಃ ಕ್ಷೇಪೈರಾಸ್ಫೋಟನವಿಕರ್ಷಣೈಃ ।
ಚಿಕ್ರೀಡತುರ್ನಿಯುದ್ಧೇನ ಕಾಕಪಕ್ಷಧರೌ ಕ್ವಚಿತ್ ॥ ೧೨ ॥

ಕ್ವಚಿನ್ನೃತ್ಯತ್ಸು ಚಾನ್ಯೇಷು ಗಾಯಕೌ ವಾದಕೌ ಸ್ವಯಮ್ ।
ಶಶಂಸತುರ್ಮಹಾರಾಜ ಸಾಧು ಸಾಧ್ವಿತಿ ವಾದಿನೌ ॥ ೧೩ ॥

ಕ್ವಚಿದ್ಬಿಲ್ವೈಃ ಕ್ವಚಿತ್ಕುಂಭೈಃ ಕ್ವ ಚಾಮಲಕಮುಷ್ಟಿಭಿಃ ।
ಅಸ್ಪೃಶ್ಯನೇತ್ರಬಂಧಾದ್ಯೈಃ ಕ್ವಚಿನ್ಮೃಗಖಗೇಹಯಾ ॥ ೧೪ ॥

ಕ್ವಚಿಚ್ಚ ದರ್ದುರಪ್ಲಾವೈರ್ವಿವಿಧೈರುಪಹಾಸಕೈಃ ।
ಕದಾಚಿತ್ಸ್ಪಂದೋಲಿಕಯಾ ಕರ್ಹಿಚಿನ್ನೃಪಚೇಷ್ಟಯಾ ॥ ೧೫ ॥

ಏವಂ ತೌ ಲೋಕಸಿದ್ಧಾಭಿಃ ಕ್ರೀಡಾಭಿಶ್ಚೇರತುರ್ವನೇ ।
ನದ್ಯದ್ರಿದ್ರೋಣಿಕುಂಜೇಷು ಕಾನನೇಷು ಸರಸ್ಸು ಚ ॥ ೧೬ ॥

ಪಶೂಂಶ್ಚಾರಯತೋರ್ಗೋಪೈಸ್ತದ್ವನೇ ರಾಮಕೃಷ್ಣಯೋಃ ।
ಗೋಪರೂಪೀ ಪ್ರಲಂಬೋಽಗಾದಸುರಸ್ತಜ್ಜಿಹೀರ್ಷಯಾ ॥ ೧೭ ॥

ತಂ ವಿದ್ವಾನಪಿ ದಾಶಾರ್ಹೋ ಭಗವಾನ್ಸರ್ವದರ್ಶನಃ ।
ಅನ್ವಮೋದತ ತತ್ಸಖ್ಯಂ ವಧಂ ತಸ್ಯ ವಿಚಿಂತಯನ್ ॥ ೧೮ ॥

ತತ್ರೋಪಾಹೂಯ ಗೋಪಾಲಾನ್ಕೃಷ್ಣಃ ಪ್ರಾಹ ವಿಹಾರವಿತ್ ।
ಹೇ ಗೋಪಾ ವಿಹರಿಷ್ಯಾಮೋ ದ್ವಂದ್ವೀಭೂಯ ಯಥಾಯಥಮ್ ॥ ೧೯ ॥

ತತ್ರ ಚಕ್ರುಃ ಪರಿವೃಢೌ ಗೋಪಾ ರಾಮಜನಾರ್ದನೌ ।
ಕೃಷ್ಣಸಂಘಟ್ಟಿನಃ ಕೇಚಿದಾಸನ್ರಾಮಸ್ಯ ಚಾಪರೇ ॥ ೨೦ ॥

ಮತ್ತೊಮ್ಮೆ ಎತ್ತರಕ್ಕೂ ಮತ್ತು ದೂರಕ್ಕೂ ನೆಗೆಯುವರು. ಕೆಲವೊಮ್ಮೆ ವೃಕ್ಷಗಳಲ್ಲಿರುತ್ತಿದ್ದ ಹಣ್ಣುಗಳಿಗೆ ಕವಣೆ ಕಲ್ಲಿನಿಂದ ಹೊಡೆಯುವರು. ಪರಸ್ಪರ ಗುದ್ದಾಡುವರು. ಎರಡು ಗುಂಪಿನವರು ಹಗ್ಗವನ್ನು ಎಳೆದಾಡುತ್ತಾ ಜಗ್ಗಾಜಗ್ಗಿ ಆಟವಾಡುವರು. ಹೀಗೆ ಗೋಪಬಾಲಕರಿಂದ ಕೂಡಿದ ರಾಮ-ಶ್ಯಾಮರು ನಾನಾ ವಿಧವಾದ ಆಟಗಳನ್ನಾಡುತ್ತಿದ್ದರು. ॥ ೧೨ ॥ ಕೆಲವು ಸಮಯಗಳಲ್ಲಿ ಗೋಪಬಾಲಕರು ನೃತ್ಯವನ್ನಾಡುವಾಗ ರಾಮ-ಶ್ಯಾಮರು ಹಾಡುವರು, ಕೊಳಲನ್ನೂದುವರು, ಕೊಂಬು ಬಾರಿಸುವರು, ನಡು-ನಡುವೆ ಭಲೇ! ಭಲೇ! ಎಂದು ಪ್ರಶಂಸೆಯನ್ನು ಮಾಡುವರು. ॥ ೧೩ ॥ ಗೋಪಬಾಲಕರಿಂದ ಪರಿವೃತರಾದ ರಾಮ-ಕೃಷ್ಣರು ಕೆಲವು ವೇಳೆ ಬೇಲದಕಾಯಿಗಳಿಂದಲೂ ಬಿಲ್ವದ ಕಾಯಿಗಳಿಂದಲೂ, ನೆಲ್ಲಿಕಾಯಿಗಳಿಂದಲೂ ಚೆಂಡಿನ ಆಟಗಳನ್ನಾಡುವರು. ಕೆಲವೊಮ್ಮೆ ಗೋಪಬಾಲಕರ ಕಣ್ಣುಗಳಿಗೆ ಬಟ್ಟೆಕಟ್ಟಿ ಕಣ್ಣುಮುಚ್ಚಾಲೆ ಆಟವನ್ನು ಆಡುವರು. ಕೆಲವು ವೇಳೆ ಮೃಗಗಳಂತೆಯೂ, ಪಕ್ಷಿಗಳಂತೆಯೂ ಕೂಗುವರು. ॥ ೧೪ ॥ ಕೆಲವು ಸಲ ಕಪ್ಪೆಗಳಂತೆ ಕುಪ್ಪಳಿಸುವರು. ಕೆಲವು ವೇಳೆ ವಿದೂಷಕರಂತೆ ಮುಖಮಾಡಿಕೊಂಡು ನಾನಾ ವಿಧವಾದ ಅಂಗಚೇಷ್ಟೆಗಳಿಂದ ಎಲ್ಲರನ್ನು ನಗಿಸುವರು. ಕೆಲವು ವೇಳೆ ಮರಗಳ ಕೊಂಬೆಗಳಲ್ಲಿ ಜೋಕಾಲಿಕಟ್ಟಿ ಉಯ್ಯಾಲೆಯಾಡುವರು. ಕೆಲವು ವೇಳೆ ಒಬ್ಬರು ಮತ್ತೊಬ್ಬರನ್ನು ಹೆಗಲಮೇಲೆ ಹೊತ್ತುಕೊಂಡು 'ಕೂಸುಮರಿ' ಆಟವಾಡುವರು. ಕೆಲವೊಮ್ಮೆ ರಾಜಾ-ಮಂತ್ರಿಗಳ ಆಟವಾಡುವರು. ॥ ೧೫ ॥ ಹೀಗೆ ರಾಮ-ಶ್ಯಾಮರು ನದಿಗಳ ತೀರದಲ್ಲಿಯೂ, ಪರ್ವತ ತಪ್ಪಲುಗಳಲ್ಲೂ, ಪೊದರುಗಳಲ್ಲಿಯೂ, ವನ-ಸರೋವರಗಳಲ್ಲಿಯೂ ಸಾಧಾರಣ ಹುಡುಗರು ಆಟವಾಡುವಂತೆ ಆಟವಾಡುತ್ತಾ ಆನಂದದಿಂದ ಸಂಚರಿಸಿದರು. ॥ ೧೬ ॥

ಒಂದು ದಿನ ಬಲರಾಮ-ಕೃಷ್ಣರು ಗೋಪಬಾಲಕರೊಂದಿಗೆ ಆ ವನದಲ್ಲಿ ಹಸುಗಳನ್ನು ಮೇಯಿಸುತ್ತಿದ್ದಾಗ ಪ್ರಲಂಬನೆಂಬ ರಾಕ್ಷಸನು ಗೊಲ್ಲನ ವೇಷವನ್ನು ಧರಿಸಿ ಅಲ್ಲಿಗೆ ಬಂದನು. ರಾಮ-ಶ್ಯಾಮರನ್ನು ಅಪಹರಿಸಿಕೊಂಡು ಹೋಗುವುದೇ ಅವನ ಉದ್ದೇಶವಾಗಿತ್ತು. ॥ ೧೭ ॥ ಸರ್ವಜ್ಞನಾದ ಭಗವಾನ್ ಶ್ರೀಕೃಷ್ಣನು ಅವನನ್ನು ನೋಡುತ್ತಲೇ ಅವನಾರೆಂದು ತಿಳಿದುಕೊಂಡನು. ಹೀಗಿದ್ದರೂ ಅವನ ಮೈತ್ರಿಯ ಪ್ರಸ್ತಾಪವನ್ನು ಸ್ವೀಕರಿಸಿದರೂ, ಇವನನ್ನು ಯಾವಯುಕ್ತಿಯಿಂದ ವಧಿಸುವುದೆಂದು ಮನಸ್ಸಿನಲ್ಲೇ ಯೋಚಿಸುತ್ತಿದ್ದನು. ॥ ೧೮ ॥ ಶ್ರೀಕೃಷ್ಣನು ಬಾಲಕರಲ್ಲಿ ಬಹು ದೊಡ್ಡ ಆಟಗಾರನೂ, ಆಟಗಳ ಆಚಾರ್ಯನೂ ಆಗಿದ್ದನು. ಅವನು ಎಲ್ಲ ಗೋಪಬಾಲಕರನ್ನು ಕರೆದು - 'ಮಿತ್ರರೇ! ಇಂದು ನಮ್ಮಲ್ಲಿ ಎರಡು ಗುಂಪುಗಳಾಗಿಸಿಕೊಂಡು ಯಥಾಯೋಗ್ಯವಾಗಿ ಆನಂದದಿಂದ ಆಟವಾಡೋಣ' ಎಂದು ಹೇಳಿದನು. ॥ ೧೯ ॥ ಎಲ್ಲ ಬಾಲಕರು ಇದಕ್ಕೆ ಒಪ್ಪಿ ಒಂದು ಪಂಗಡಕ್ಕೆ ಶ್ರೀಕೃಷ್ಣನನ್ನು, ಇನ್ನೊಂದು ಪಂಗಡಕ್ಕೆ ಬಲರಾಮನನ್ನು ನಾಯಕರನ್ನಾಗಿ ಕೊಂಡರು. ಕೆಲವರು ಕೃಷ್ಣನ ಪಂಗಡದಲ್ಲಿದ್ದರೆ ಮತ್ತೆ ಕೆಲವರು ಬಲರಾಮನ ಗುಂಪು ಸೇರಿದರು. ॥ ೨೦ ॥

ಆಚೇರುರ್ವಿವಿಧಾಃ ಕ್ರೀಡಾ ವಾಹ್ಯವಾಹಕಲಕ್ಷಣಾಃ ।
ಯತ್ರಾರೋಹಂತಿ ಜೇತಾರೋ ವಹಂತಿ ಚ ಪರಾಜಿತಾಃ ॥ ೨೦ ॥

ವಹಂತೋ ವಾಹ್ಯಮಾನಾಶ್ಚ ಚಾರಯಂತಶ್ಚ ಗೋಧನಮ್ ।
ಭಾಂಡೀರಕಂ ನಾಮ ವಟಂ ಜಗ್ಮುಃ ಕೃಷ್ಣಪುರೋಗಮಾಃ ॥ ೨೧ ॥

ರಾಮಸಂಘಟ್ಟಿನೋ ಯರ್ಹಿ ಶ್ರೀದಾಮವೃಷಭಾದಯಃ ।
ಕ್ರೀಡಾಯಾಂ ಜಯಿನಸ್ತಾಂಸ್ತಾನೂಹುಃ ಕೃಷ್ಣಾದಯೋ ನೃಪ ॥ ೨೨ ॥

ಉವಾಹ ಕೃಷ್ಣೋ ಭಗವಾನ್ ಶ್ರೀದಾಮಾನಂ ಪರಾಜಿತಃ ।
ವೃಷಭಂ ಭದ್ರಸೇನಸ್ತು ಪ್ರಲಂಬೋ ರೋಹಿಣೀಸುತಮ್ ॥ ೨೩ ॥

ಅವಿಷಹ್ಯಂ ಮನ್ಯಮಾನಃ ಕೃಷ್ಣಂ ದಾನವಪುಂಗವಃ ।
ವಹನ್ ದ್ರುತತರಂ ಪ್ರಾಗಾದವರೋಹಣತಃ ಪರಮ್ ॥ ೨೪ ॥

ತಮುದ್ವಹನ್ ಧರಣಿಧರೇಂದ್ರಗೌರವಂ
ಮಹಾಸುರೋ ವಿಗತರಯೋ ನಿಜಂ ವಪುಃ ।
ಸ ಆಸ್ಥಿತಃ ಪುರಟಪರಿಚ್ಛದೋ ಬಭೌ
ತಡಿದ್ದ್ಯುಮಾನುಡುಪತಿವಾಡಿವಾಂಬುದಃ ॥ ೨೫ ॥

ನಿರೀಕ್ಷ್ಯ ತದ್ವಪುರಲಮಂಬರೇ ಚರತ್
ಪ್ರದೀಪ್ತದೃಗ್ಭ್ರುಕುಟಿತಟೋಗ್ರದಂಷ್ಟ್ರಕಮ್ ।
ಜ್ವಲಚ್ಛಿಖಂ ಕಟಕಕಿರೀಟಕುಂಡಲ-
ತ್ವಿಷಾದ್ಭುತಂ ಹಲಧರ ಈಷದತ್ರಸತ್ ॥ ೨೬ ॥

ಅಥಾಗತಸ್ಮೃತಿರಭಯೋ ರಿಪುಂ ಬಲೋ
ವಿಹಾಯಸಾರ್ಥಮಿವ ಹರಂತಮಾತ್ಮನಃ ।
ರುಷಾಹನಚ್ಛಿರಸಿ ದೃಢೇನ ಮುಷ್ಟಿನಾ
ಸುರಾಧಿಪೋ ಗಿರಿಮಿವ ವಜ್ರರಂಹಸಾ ॥ ೨೭ ॥

ಸ ಆಹತಃ ಸಪದಿ ವಿಶೀರ್ಣಮಸ್ತಕೋ
ಮುಖಾದ್ವಮನ್ರುಧಿರಮಪಸ್ಮೃತೋಽಸುರಃ ।
ಮಹಾರವಂ ವ್ಯಸುರಪತತ್ಸಮೀರಯನ್
ಗಿರಿರ್ಯಥಾ ಮಘವತ ಆಯುಧಾಹತಃ ॥ ೨೮ ॥

ಒಂದು ಗುಂಪಿನವರು ಸೋತರೆ ಗೆದ್ದವರ ಗುಂಪಿನ ಬಾಲಕರನ್ನು ಹೊತ್ತುಕೊಂಡು ನಿರ್ದಿಷ್ಟ ಸ್ಥಾನಕ್ಕೆ ಕೊಂಡು ಹೋಗಬೇಕೆಂಬ ನಿಯಮದಿಂದ ನಾನಾ ವಿಧವಾಗಿ ಆಟವಾಡತೊಡಗಿದರು.॥೨೦॥ ಹೀಗೆ ಒಬ್ಬರು ಮತ್ತೊಬ್ಬರನ್ನು ಹೊತ್ತುಕೊಂಡು ಕೃಷ್ಣನೇ ಮೊದಲಾದ ಗೋಪಬಾಲಕರು ಹಸುಗಳನ್ನು ಮೇಯಿಸುತ್ತಾ ಭಾಂಡೀರವೆಂಬ ವಟವೃಕ್ಷದ ಬಳಿಗೆ ತಲುಪಿದರು. ॥೨೧॥

ಪರೀಕ್ಷಿತನೇ! ಒಮ್ಮೆ ಬಲರಾಮನ ಗುಂಪಿನಲ್ಲಿದ್ದ ಶ್ರೀದಾಮಾ, ವೃಷಭ ಮುಂತಾದ ಗೋಪಬಾಲಕರು ಆಟದಲ್ಲಿ ಗೆದ್ದರು. ಆಗ ಶ್ರೀಕೃಷ್ಣನ ಗುಂಪಿನವರು ಗೆದ್ದವರನ್ನು ತನ್ನ ಬೆನ್ನ ಮೇಲೆ ಕುಳ್ಳಿರಿಸಿಕೊಂಡು ಹೋಗುತ್ತಿದ್ದರು. ॥೨೨॥ ಸೋತ ಶ್ರೀಕೃಷ್ಣನು ಶ್ರೀದಾಮನನ್ನು ಹೊತ್ತುಕೊಂಡನು. ಭದ್ರಸೇನನು ವೃಷಭನನ್ನು ಮತ್ತು ಪ್ರಲಂಬನು ಬಲರಾಮನನ್ನು ಹೊತ್ತುಕೊಂಡರು. ॥೨೩॥ ದಾನವಪುಂಗವನಾದ ಪ್ರಲಂಬನು ಶ್ರೀಕೃಷ್ಣನಾದರೋ ಮಹಾ ಬಲಿಷ್ಠನಾಗಿರುವನು, ಅವನನ್ನು ಸೋಲಿಸಲಾರೆ ಎಂದು ತಿಳಿದು ಅವನು ಶ್ರೀಕೃಷ್ಣನ ಪಕ್ಷವನ್ನು ಸೇರಿದನು. ಬಲರಾಮನನ್ನು ಹೊತ್ತುಕೊಂಡು ಬಹಳ ವೇಗವಾಗಿ ಓಡುತ್ತಾ ಬೆನ್ನಿಂದ ಇಳಿಸಬೇಕಾದ ಸ್ಥಳವನ್ನು ಬಿಟ್ಟು ಮುಂದಕ್ಕೆ ಓಡಿ ಹೋದನು. ॥೨೪॥ ಆದರೆ ಬಲರಾಮನನ್ನು ಎತ್ತಿಕೊಂಡು ಬಹಳ ದೂರ ಹೋಗಲು ರಾಕ್ಷಸನಿಂದ ಸಾಧ್ಯವಾಗಲಿಲ್ಲ. ಬಲರಾಮನು ದೊಡ್ಡ ಪರ್ವತದಷ್ಟು ಭಾರವಾದನು. ಅದರಿಂದ ಮುಂದೆ ಹೋಗಲಾರದೆ ಅಲ್ಲೆ ನಿಂತುಬಿಟ್ಟನು. ಆಗ ಅವನು ತನ್ನ ಸ್ವಾಭಾವಿಕವಾದ ದೈತ್ಯರೂಪದಿಂದ ಪ್ರಕಟವಾದನು. ಅವನ ಕಪ್ಪಾದ ಶರೀರದಲ್ಲಿ ಸುವರ್ಣಾಭರಣಗಳು ಹೊಳೆಯುತ್ತಿದ್ದವು. ಗೌರಾಂಗನಾದ ಬಲರಾಮನನ್ನು ಹೊತ್ತುಕೊಂಡಿದ್ದ ಅವನು ಮಿಂಚಿನಿಂದ ಕೂಡಿದ ಕಾರ್ಮುಗಿಲು ಚಂದ್ರನನ್ನು ಒಳಗೊಂಡಿರುವಂತೆ ಶೋಭಿಸಿದನು. ॥೨೫॥ ಅವನ ಕಣ್ಣುಗಳು ಬೆಂಕಿಯಂತೆ ಉರಿಯುತ್ತಿದ್ದವು. ಕೋರದಾಡೆಗಳು ಹುಬ್ಬಿನವರೆಗೆ ಚಾಚಿಕೊಂಡು ಭಯಂಕರವಾಗಿದ್ದವು. ಅವನ ಕೆಂಪಾದ ಕೆದರಿದ ಕೂದಲೂ ಬೆಂಕಿಯ ಜ್ವಾಲೆಯಂತೆ ಹರಡಿಕೊಂಡಿತ್ತು. ಕೈ-ಕಾಲುಗಳಲ್ಲಿ ಕಡಗಗಳೂ, ತಲೆಯಮೇಲೆ ಕಿರೀಟವಿದ್ದು, ಕಿವಿಯಲ್ಲಿ ಕರ್ಣಕುಂಡಲಗಳು ಹೊಳೆಯುತ್ತಿದ್ದವು. ಅವುಗಳ ಕಾಂತಿಯಿಂದ ಅವನು ಭಾರೀ ಅದ್ಭುತವಾಗಿ ಕಾಣುತ್ತಿದ್ದನು. ಆ ಭಯಾನಕ ದೈತ್ಯನು ಅತಿವೇಗದಿಂದ ಆಕಾಶದಲ್ಲಿ ಹೋಗುತ್ತಿರುವುದನ್ನು ಕಂಡು ಬಲರಾಮನು ಮೊದಲಿಗೆ ಹೆದರಿದವನಂತಾದನು.॥೨೬॥ ಆದರೆ ಮರುಕ್ಷಣವೇ ತನ್ನ ಸ್ವರೂಪದ ನೆನಪು ಆಗುತ್ತಲೇ ಅವನ ಭಯವು ಹೊರಟುಹೋಯಿತು. ಕಳ್ಳನು ಯಾರದೋ ಧನವನ್ನು ಕದ್ದುಕೊಂಡು ಹೋಗುವಂತೆ ಈ ಶತ್ರುವು ನನ್ನನ್ನು ಕದ್ದುಕೊಂಡು ಹೋಗುತ್ತಿರುವನೆಂದು ತಿಳಿದ ಬಲರಾಮನು, ಆ ಸಮಯದಲ್ಲಿ ಇಂದ್ರನು ಪರ್ವತಗಳನ್ನು ವಜ್ರದಿಂದ ಪ್ರಹರಿಸುವಂತೆ ಅತ್ಯಂತ ಕ್ರೋಧಗೊಂಡು ಅವನ ತಲೆಯ ಮೇಲೆ ಬಲವಾದ ಮುಷ್ಟಿಪ್ರಹಾರಮಾಡಿದನು. ॥೨೭॥ ಏಟು ಬೀಳುತ್ತಲೇ ಅವನ ತಲೆ ನುಚ್ಚುನೂರಾಯಿತು. ಬಾಯಿಂದ ರಕ್ತವನ್ನು ಉಗುಳುತ್ತಾ, ಚೈತನ್ಯವುಡುಗಿ ಭಯಂಕರ ಶಬ್ದವನ್ನು ಮಾಡುತ್ತಾ ಇಂದ್ರನ ವಜ್ರದಿಂದ

ದೃಷ್ಟ್ವಾ ಪ್ರಲಂಬಂ ನಿಹತಂ ಬಲೇನ ಬಲಶಾಲಿನಾ ।
ಗೋಪಾಃ ಸುವಿಸ್ಮಿತಾ ಆಸನ್ಸಾಧು ಸಾಧ್ವಿತಿ ವಾದಿನಃ ॥ ೩೦ ॥

ಆಶಿಷೋಽಭಿಗೃಣಂತಸ್ತಂ ಪ್ರಶಶಂಸುಸ್ತದರ್ಹಣಮ್ ।
ಪ್ರೇತ್ಯಾಗತಮಿವಾಲಿಂಗ್ಯ ಪ್ರೇಮವಿಹ್ವಲಚೇತಸಃ ॥ ೩೧ ॥

ಪಾಪೇ ಪ್ರಲಂಬೇ ನಿಹತೇ ದೇವಾಃ ಪರಮನಿರ್ವೃತಾಃ ।
ಅಭ್ಯವರ್ಷನ್ಬಲಂ ಮಾಲ್ಯೈಃ ಶಶಂಸುಃ ಸಾಧು ಸಾಧ್ವಿತಿ ॥ ೩೨ ॥

ಪ್ರಹರಿಸಲ್ಪಟ್ಟ ಪರ್ವತದಂತೆ ಆಗಲೇ ಗತಪ್ರಾಣನಾಗಿ ನೆಲಕ್ಕೆ ಉರುಳಿದನು. ॥ ೨೯ ॥

ಮಹಾಬಲಿಷ್ಠನಾದ ಬಲರಾಮನು ಪ್ರಲಂಬಾಸುರನನ್ನು ಸಂಹರಿಸಿದ್ದನ್ನು ನೋಡಿ ಗೋಪರೆಲ್ಲರಿಗೂ ಪರಮಾಶ್ಚರ್ಯವಾಯಿತು. ಅವರೆಲ್ಲರೂ ಭಲೇ! ಭಲೇ! ಎಂದು ಕೊಂಡಾಡಿದರು. ॥ ೩೦ ॥ ಗೊಲ್ಲಬಾಲಕರ ಚಿತ್ತವು ಪ್ರೇಮದಿಂದ ವಿಹ್ವಲವಾಗಿತ್ತು. ಅವರು ಅವನಿಗೆ ಶುಭವನ್ನು ಕೋರುತ್ತಾ ಸತ್ತು ಬದುಕಿ ಬಂದನೆಂದೇ ಭಾವಿಸಿ ಆನಂದಿತರಾದರು. ಪ್ರಶಂಸೆಗೆ ಅರ್ಹನಾದ ಬಲರಾಮನನ್ನು ಅವರೆಲ್ಲ ಆಲಿಂಗಿಸಿಕೊಂಡು, ಆತನ ಪರಾಕ್ರಮವನ್ನು ಪ್ರಶಂಸೆ ಮಾಡಿದರು. ॥ ೩೧ ॥ ಪಾಪಿಷ್ಠನಾದ ಪ್ರಲಂಬಾಸುರನು ಹತನಾದಾಗ ದೇವತೆಗಳೆಲ್ಲರೂ ಸುಖಿಗಳಾದರು. ಅವರು ಎಲ್ಲರೂ ಬಲರಾಮನ ಮೇಲೆ ಹೂಮಳೆಯನ್ನು ಸುರಿಸುತ್ತಾ ಬಲರಾಮ ಸಾಧು! ಎಂದು ಸಾಧುವಾದಗಳನ್ನು ಹೇಳುತ್ತಾ ಬಲಭದ್ರನನ್ನು ಬಹಳವಾಗಿ ಪ್ರಶಂಸಿಸಿದರು. ॥ ೩೨ ॥

ಹದಿನೆಂಟನೆಯ ಅಧ್ಯಾಯವು ಮುಗಿಯಿತು. ॥ ೧೮ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮಸ್ಕಂಧೇ ಪೂರ್ವಾರ್ಧೇ
ಪ್ರಲಂಬವಧೋ ನಾಮಾಷ್ಟಾದಶೋಽಧ್ಯಾಯಃ ॥ ೧೮ ॥

ಹತ್ತೊಂಭತ್ತನೆಯ ಅಧ್ಯಾಯ

ಗೋವುಗಳನ್ನು-ಗೋಪಾಲಕರನ್ನು ಶ್ರೀಕೃಷ್ಣನು ಕಾಡುಗಿಚ್ಚಿನಿಂದ ಕಾಪಾಡಿದುದು

ಶ್ರೀಶುಕ ಉವಾಚ

ಕ್ರೀಡಾಸಕ್ತೇಷು ಗೋಪೇಷು ತದ್ಗಾವೋ ದೂರಚಾರಿಣೀಃ ।
ಸ್ವೈರಂ ಚರಂತ್ಯೋ ವಿವಿಶುಸ್ತೃಣಲೋಭೇನ ಗಹ್ವರಮ್ ॥ ೧ ॥

ಅಜಾ ಗಾವೋ ಮಹಿಷ್ಯಶ್ಚ ನಿರ್ವಿಶಂತ್ಯೋ ವನಾದ್ವನಮ್ ।
ಈಷೀಕಾಟವೀಂ ನಿರ್ವಿವಿಶುಃ ಕ್ರಂದಂತ್ಯೋ ದಾವತರ್ಷಿತಾಃ ॥ ೨ ॥

ತೇಽಪಶ್ಯಂತಃ ಪಶೂನ್ಗೋಪಾಃ ಕೃಷ್ಣರಾಮಾದಯಸ್ತದಾ ।
ಜಾತಾನುತಾಪಾ ನ ವಿದುರ್ವಿಚಿನ್ವಂತೋ ಗವಾಂ ಗತಿಮ್ ॥ ೩ ॥

ತೃಣೈಸ್ತತ್ಖುರದಚ್ಛಿನ್ನೈರ್ಗೋಷ್ಪದೈರಂಕಿತೈರ್ಗವಾಮ್ ।
ಮಾರ್ಗಮನ್ವಗಮನ್ಸರ್ವೇ ನಷ್ಟಾಜೀವ್ಯಾ ವಿಚೇತಸಃ ॥ ೪ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ - ಪರೀಕ್ಷಿತನೇ! ಒಮ್ಮೆ ಗೋಪಬಾಲಕರೆಲ್ಲರೂ ಆಟದಲ್ಲಿ ಮಗ್ನರಾಗಿದ್ದಾಗ ಅವರ ಗೋವುಗಳು ತಡೆಯುವವರೇ ಇಲ್ಲದ ಕಾರಣ ಬಹಳ ದೂರಕ್ಕೆ ಹೋಗಿಬಿಟ್ಟವು. ಹಸಿರು ಹುಲ್ಲಿನ ಆಸೆಯಿಂದ ಒಂದು ಗಹನವಾದ ಕಾಡನ್ನು ಪ್ರವೇಶಿಸಿದುವು. ॥ ೧ ॥ ಅವರ ಕರುಹಾಕದಿರುವ ಹಸುಗಳು, ಹಾಲುಕೊಡುವ ಹಸುಗಳು. ಅನೇಕ ಕರುಗಳಿದ್ದ ಹಸುಗಳು ಒಂದು ಕಾಡಿನಿಂದ ಮತ್ತೊಂದು ಕಾಡಿಗೆ ಹೋಗುತ್ತಾ ಬಿಸಿಲಿನ ತಾಪದಿಂದ ಪರಿತಪಿಸತೊಡಗಿದವು. ಅವುಗಳು ದಿಕ್ಕುಗಾಣದೆ ಕೂಗಿಕೊಳ್ಳುತ್ತಾ ಕೊನೆಗೆ ಮುಂಜಾರಣ್ಯ (ನೊಜೆಹುಲ್ಲಿನ ಕಾಡು)ವನ್ನು ಹೊಕ್ಕವು. ॥ ೨ ॥ ಶ್ರೀಕೃಷ್ಣ ಬಲರಾಮರೇ ಮುಂತಾದ ಗೊಲ್ಲಬಾಲಕರು ತಮ್ಮ ಪಶುಗಳ ಸುಳಿವೇ ಇಲ್ಲದುದನ್ನು ನೋಡಿ ಅವರು ಆಟವನ್ನು ಬಿಟ್ಟು ಅದಕ್ಕಾಗಿ ಪರಿತಪಿಸುತ್ತಾ ಎಲ್ಲೆಡೆ ಹುಡುಕತೊಡಗಿದರು. ಆದರೂ ಅವರಿಗೆ ತಮ್ಮ ಹಸುಗಳು ಕಂಡು ಬರಲಿಲ್ಲ. ॥ ೩ ॥ ಗೋವುಗಳೇ ವ್ರಜವಾಸಿಗಳ ಜೀವನಾಧಾರವಾಗಿದ್ದವು. ಅವುಗಳು ಸಿಗದಿರುವಾಗ ಅವರೆಲ್ಲರೂ ಬುದ್ಧಿಗೆಟ್ಟಂತಾದರು. ಬಳಿಕ ಅವರು ಹಸುಗಳ ಗೊರಸಿನ ಗುರುತನ್ನು ಹುಲ್ಲು ಮೇದುಕೊಂಡು ಹೋದ ಜಾಗಗಳಿಂದ ಅವನ್ನು ಹುಡುಕುತ್ತಾ ಮುಂದೆ ಸಾಗಿದರು. ॥ ೪ ॥

ಮುಂಜಾಟವ್ಯಾಂ ಭ್ರಷ್ಟಮಾರ್ಗಂ ಕ್ರಂದಮಾನಂ ಸ್ವಗೋಧನಮ್ ।
ಸಂಪ್ರಾಪ್ಯ ತೃಷಿತಾಃ ಶ್ರಾಂತಾಸ್ತತಸ್ತೇ ಸಂನ್ಯವರ್ತಯನ್ ॥ ೫ ॥

ತಾ ಆಹೂತಾ ಭಗವತಾ ಮೇಘಗಂಭೀರಯಾ ಗಿರಾ ।
ಸ್ವನಾಮ್ನಾಂ ನಿನದಂ ಶ್ರುತ್ವಾ ಪ್ರತಿನೇದುಃ ಪ್ರಹರ್ಷಿತಾಃ ॥ ೬ ॥

ತತಃ ಸಮಂತಾದ್ದವಧೂಮಕೇತು-
ರ್ಯದೃಚ್ಛಯಾಭೂತ್ಕ್ಷಯಕೃದ್ವನೌಕಸಾಮ್ ।
ಸಮೀರಿತಃ ಸಾರಥಿನೋಲ್ಬಣೋಲ್ಮುಕೈ-
ರ್ವಿಲೇಲಿಹಾನಃ ಸ್ಥಿರಜಂಗಮಾನ್ಮಹಾನ್ ॥ ೭ ॥

ತಮಾಪತಂತಂ ಪರಿತೋ ದವಾಗ್ನಿಂ
ಗೋಪಾಶ್ಚ ಗಾವಃ ಪ್ರಸಮೀಕ್ಷ್ಯ ಭೀತಾಃ ।
ಊಚುಶ್ಚ ಕೃಷ್ಣಂ ಸಬಲಂ ಪ್ರಪನ್ನಾ
ಯಥಾ ಹರಿಂ ಮೃತ್ಯುಭಯಾರ್ದಿತಾ ಜನಾಃ ॥ ೮ ॥

ಕೃಷ್ಣ ಕೃಷ್ಣ ಮಹಾವೀರ ಹೇ ರಾಮಾಮಿತವಿಕ್ರಮ ।
ದಾವಾಗ್ನಿನಾ ದಹ್ಯಮಾನಾನ್ಪ್ರಪನ್ನಾಂಸ್ತ್ರಾತುಮರ್ಹಥಃ ॥ ೯ ॥

ನೂನಂ ತ್ವದ್ಬಾಂಧವಾಃ ಕೃಷ್ಣ ನ ಚಾರ್ಹಂತ್ಯವಸೀದಿತುಮ್ ।
ವಯಂ ಹಿ ಸರ್ವಧರ್ಮಜ್ಞ ತ್ವನ್ನಾಥಾಸ್ತ್ವತ್ಪರಾಯಣಾಃ ॥ ೧೦ ॥

ಶ್ರೀಶುಕ ಉವಾಚ

ವಚೋ ನಿಶಮ್ಯ ಕೃಪಣಂ ಬಂಧೂನಾಂ ಭಗವಾನ್ಹರಿಃ ।
ನಿಮೀಲಯತ ಮಾ ಭೈಷ್ಟ ಲೋಚನಾನೀತ್ಯಭಾಷತ ॥ ೧೧ ॥

ಕೊನೆಗೆ ಅವರು ತಮ್ಮ ಗೋವುಗಳು ಮುಂಜಾಟವಿಯಲ್ಲಿ ದಾರಿಗಾಣದೆ ಕೂಗಿಕೊಳ್ಳುತ್ತಿರುವುದನ್ನು ನೋಡಿ ಅವನ್ನು ಹಿಂದಿರುಗಿಸಲು ಪ್ರಯತ್ನಿಸತೊಡಗಿದರು. ಆಗ ಅವರೆಲ್ಲರೂ ಬಹಳವಾಗಿ ಆಯಾಸಗೊಂಡಿದ್ದು ಬಾಯಾರಿಕೆಯಿಂದ ಬಳಲಿದ್ದು ಅವರಿಗೆ ಮುಂದುವರಿಯಲೂ ಸಾಧ್ಯವಾಗಲಿಲ್ಲ ॥ ೫ ॥ ಗೋವುಗಳ ಆ ಸ್ಥಿತಿಯನ್ನು ನೋಡಿದ ಪ್ರಣತಾರ್ತಿಹರನಾದ ಶ್ರೀಕೃಷ್ಣನು ಮೇಘಸದೃಶವಾದ ಗಂಭೀರ ಧ್ವನಿಯಿಂದ ಹಸುಗಳ ಹೆಸರಿಡಿದು ಕರೆಯತೊಡಗಿದನು. ತಮ್ಮ ಹೆಸರನ್ನು ಕೇಳಿದ ಗೋವುಗಳು ಬಹಳ ಹರ್ಷಿತರಾಗಿ ಪ್ರತ್ಯುತ್ತರವಾಗಿ ತಾವೂ 'ಅಂಬಾ' ಎಂದು ಶ್ರೀಕೃಷ್ಣನ ಕರೆಗೆ ಓಗೊಟ್ಟವು. ॥ ೬ ॥

ಪರೀಕ್ಷಿತನೇ! ಹೀಗೆ ಭಗವಂತನು ಆ ಹಸುಗಳನ್ನು ಕರೆಯುತ್ತಿರುವಾಗಲೇ ಆ ವನದ ನಾಲ್ಕೂ ಕಡೆಗಳಲ್ಲಿ ಆಕಸ್ಮಾತ್ತಾಗಿ ವನವಾಸೀ ಜೀವಿಗಳ ಕಾಲಸ್ವರೂಪವಾದ ಕಾಡ್ಗಿಚ್ಚು ಹೊತ್ತಿಕೊಂಡಿತು. ಜೊತೆಗೆ ಜೋರಾಗಿ ಬಿರುಗಾಳಿಯು ಬೀಸುತ್ತಾ ಆ ಬೆಂಕಿಯ ಉರಿಯನ್ನು ಹೆಚ್ಚಿಸುವುದರಲ್ಲಿ ಸಹಾಯಕವಾಯಿತು. ಇದರಿಂದ ಎಲ್ಲೆಡೆ ಹರಡಿಕೊಂಡ ಆ ಪ್ರಚಂಡ ಅಗ್ನಿಯು ತನ್ನ ಭಯಂಕರ ಜ್ವಾಲೆಗಳಿಂದ ಸಮಸ್ತ ಚರಾಚರ ಜೀವಿಗಳನ್ನು ಭಸ್ಮಮಾಡತೊಡಗಿತು. ॥ ೭ ॥ ಕಾಡ್ಗಿಚ್ಚು ನಾಲ್ಕೂ ಕಡೆಗಳಿಂದ ತಮ್ಮ ಕಡೆಗೆ ಬರುತ್ತಿರುವುದನ್ನು ಕಂಡ ಗೋವುಗಳೂ, ಗೋಪಾಲರೂ ಅತ್ಯಂತ ಭಯಭೀತರಾದರು. ಮರಣಭಯದಿಂದ ಹೆದರಿದ ಜೀವಿಯು ಭಗವಂತನಿಗೆ ಶರಣು ಹೋಗುವಂತೆ ಅವರು ಶ್ರೀಕೃಷ್ಣ ಮತ್ತು ಬಲರಾಮನಿಗೆ ಶರಣಾಗತರಾಗಿ, ಅವರನ್ನು ಕೂಗಿ ಕರೆಯುತ್ತಾ ಇಂತೆಂದರು. ॥ ೮ ॥ ಓ ಮಹಾವೀರನಾದ ಪ್ರಿಯ ಕೃಷ್ಣನೇ! ಪರಮ ಬಲಶಾಲಿಯಾದ ಬಲರಾಮನೇ! ನಾವು ನಿಮಗೆ ಶರಣಾಗಿದ್ದೇವೆ. ಈ ಸಮಯದಲ್ಲಿ ನಾವು ದಾವಾಗ್ನಿಯಿಂದ ಬೆಂದು ಹೋಗುತ್ತಿದ್ದೇವೆ, ನೋಡು! ನೀವಿಬ್ಬರೂ ನಮ್ಮನ್ನು ಸಂರಕ್ಷಿಸಿರಿ. ॥ ೯ ॥ ನಾವೆಲ್ಲರೂ ನಿಶ್ಚಯವಾಗಿಯೂ ನಿಮ್ಮ ಬಂಧುಗಳೇ ಆಗಿದ್ದೇವೆ. ಆಪದ್ಬಾಂಧವನ ಬಂಧುಗಳಾದ ನಾವು ಹೀಗೆ ವಿನಾಶಹೊಂದಬಾರದು. ಸಮಸ್ತವಾದ ಧರ್ಮಗಳನ್ನು ತಿಳಿದಿರತಕ್ಕವನೇ! ನೀನೇ ನಮಗೆ ಏಕಮಾತ್ರ ರಕ್ಷಕನೂ ಪರಮಾಶ್ರಯನೂ ಆಗಿರುವೆ. ನಿನ್ನದೇ ಭರವಸೆಯಿದ್ದ ನಮ್ಮನ್ನು ರಕ್ಷಿಸು. ॥ ೧೦ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಮಹಾರಾಜ! ತನ್ನ ಬಂಧುಗಳಾದ ಗೊಲ್ಲಬಾಲಕರ ದೈನ್ಯದಿಂದ ಕೂಡಿದ ವಚನವನ್ನು ಕೇಳಿದ ಭಗವಾನ್ ಶ್ರೀಕೃಷ್ಣನು ಅಭಯವನ್ನೀಯುತ್ತಾ ಇಂತೆಂದನು – ಹೆದರಬೇಡಿರಿ. ನೀವು ನಿಮ್ಮ ಕಣ್ಣುಗಳನ್ನು ಮುಚ್ಚಿಕೊಳ್ಳಿ. ॥ ೧೧ ॥ ಭಗವಂತನ ಅಪ್ಪಣೆಯನ್ನು ಕೇಳಿದ ಗೋಪಬಾಲಕರು – ಸರಿ; ಹಾಗೆಯೇ ಆಗಲೆಂದು ಹೇಳಿ ತಮ್ಮ ಕಣ್ಣುಗಳನ್ನು ಮುಚ್ಚಿಕೊಂಡರು. ಆಗ ಯೋಗೇಶ್ವರನಾದ ಭಗವಾನ್ ಶ್ರೀಕೃಷ್ಣನು ಭಯಂಕರವಾದ ಆ ಕಾಡ್ಗಿಚ್ಚನ್ನು ತನ್ನ ಬಾಯಿಂದ

ತಥೇತಿ ಮೀಲಿತಾಕ್ಷೇಷು ಭಗವಾನಗ್ನಿಮುಲ್ಬಣಮ್ ।
ಪೀತ್ವಾ ಮುಖೇನ ತಾನ್ಕೃಚ್ಛ್ರಾದ್ಯೋಗಾಧೀಶೋ ವ್ಯಮೋಚಯತ್ ॥ ೧೨ ॥

ತತಶ್ಚ ತೇಽಕ್ಷೀಣ್ಯುನ್ಮೀಲ್ಯ ಪುನರ್ಭಾಂಡೀರಮಾಪಿತಾಃ ।
ನಿಶಾಮ್ಯ ವಿಸ್ಮಿತಾ ಆಸನ್ನಾತ್ಮಾನಂ ಗಾಶ್ಚ ಮೋಚಿತಾಃ ॥ ೧೩ ॥

ಕೃಷ್ಣಸ್ಯ ಯೋಗವೀರ್ಯಂ ತದ್ಯೋಗಮಾಯಾನುಭಾವಿತಮ್ ।
ದಾವಾಗ್ನೇರಾತ್ಮನಃ ಕ್ಷೇಮಂ ವೀಕ್ಷ್ಯ ತೇ ಮೇನಿರೇಽಮರಮ್ ॥ ೧೪ ॥

ಗಾಃ ಸನ್ನಿವರ್ತ್ಯ ಸಾಯಾಹ್ನೇ ಸಹರಾಮೋ ಜನಾರ್ದನಃ ।
ವೇಣುಂ ವಿರಣಯನ್ಗೋಷ್ಠಮಗಾದ್ಗೋಪೈರಭಿಷ್ಟುತಃ ॥ ೧೫ ॥

ಗೋಪೀನಾಂ ಪರಮಾನಂದ ಆಸೀದ್ಗೋವಿಂದದರ್ಶನೇ ।
ಕ್ಷಣಂ ಯುಗಶತಮಿವ ಯಾಸಾಂ ಯೇನ ವಿನಾಭವತ್ ॥ ೧೬ ॥

ಪಾನಮಾಡಿಬಿಟ್ಟನು. ಹೀಗೆ ಅವನು ಗೋಪಬಾಲಕರನ್ನು ಘೋರವಾದ ಸಂಕಟದಿಂದ ಪಾರುಮಾಡಿದನು. ॥ ೧೨ ॥ ಇದಾದ ಬಳಿಕ ಗೋಪಬಾಲಕರು ಕಣ್ಬಿಟ್ಟು ನೋಡಿದಾಗ ತಾವು ಭಾಂಡೀರ ವಟವೃಕ್ಷದ ಬಳಿಯಲ್ಲಿರುವುದನ್ನು ನೋಡಿದರು. ಹೀಗೆ ತಮ್ಮನ್ನು ಮತ್ತು ಗೋವುಗಳನ್ನು ದಾವಾನಲದಿಂದ ಪಾರಾಗಿರುವುದನ್ನು ನೋಡಿ ಅತ್ಯಂತ ವಿಸ್ಮಿತರಾದರು. ॥ ೧೩ ॥ ಶ್ರೀಕೃಷ್ಣನ ಈ ಯೋಗಸಿದ್ಧಿಯನ್ನು ಹಾಗೂ ಯೋಗಮಾಯೆಯ ಪ್ರಭಾವವನ್ನು ಮತ್ತು ದಾವಾನಲದಿಂದ ಆದ ತಮ್ಮ ರಕ್ಷಣೆಯನ್ನು ನೋಡಿ ಅವರೆಲ್ಲರೂ ಶ್ರೀಕೃಷ್ಣನು ಸಾಕ್ಷಾತ್ ದೇವತೆಯೆಂದೇ ಭಾವಿಸಿದರು. ॥ ೧೪ ॥

ಪರೀಕ್ಷಿತನೇ! ಸಾಯಂಕಾಲವಾಗುತ್ತಲೇ ಬಲರಾಮನೊಂದಿಗೆ ಭಗವಾನ್ ಶ್ರೀಕೃಷ್ಣನು ಮುರಳಿಯನ್ನು ನುಡಿಸುತ್ತಾ ಹಸುಗಳನ್ನು ಅಟ್ಟಿಕೊಂಡು ವ್ರಜದ ಕಡೆಗೆ ಹೊರಟನು. ಗೊಲ್ಲಬಾಲಕರು ಅವನನ್ನು ಸ್ತುತಿಸುತ್ತಾ ಅವನ ಹಿಂದೆ-ಹಿಂದೆಯೇ ಬರುತ್ತಿದ್ದರು. ॥ ೧೫ ॥ ಇತ್ತ ವ್ರಜದಲ್ಲಿ ಗೋಪಿಯರಿಗೆ ಶ್ರೀಕೃಷ್ಣನಿಲ್ಲದ ಒಂದೊಂದು ಕ್ಷಣವೂ ನೂರು ಯುಗಗಳಂತೆ ಕಾಣುತ್ತಿತ್ತು. ಭಗವಾನ್ ಶ್ರೀಕೃಷ್ಣನು ಮರಳಿದಾಗ ಅವನ ದರ್ಶನವನ್ನು ಪಡೆದು ಅವರೆಲ್ಲರೂ ಆನಂದ ಸಾಗರದಲ್ಲಿ ಮುಳುಗಿದರು. ॥ ೧೬ ॥

ಹತ್ತೊಂಬತ್ತನೆಯ ಅಧ್ಯಾಯವು ಮುಗಿಯಿತು. ॥ ೧೯ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮಸ್ಕಂಧೇ ಪೂರ್ವಾರ್ಧೇ
ದಾವಾಗ್ನಿಪಾನಂ ನಾಮೈಕೋನವಿಂಶೋಽಧ್ಯಾಯಃ ॥ ೧೯ ॥

ಇಪ್ಪತ್ತನೆಯ ಅಧ್ಯಾಯ

ವರ್ಷಾಋತು ಮತ್ತು ಶರದೃತುವಿನ ವರ್ಣನೆ

ಶ್ರೀಶುಕ ಉವಾಚ

ತಯೋಸ್ತದದ್ಭುತಂ ಕರ್ಮ ದಾವಾಗ್ನೇರ್ಮೋಕ್ಷಮಾತ್ಮನಃ ।
ಗೋಪಾಃ ಸ್ತ್ರೀಭ್ಯಃ ಸಮಾಚಖ್ಯುಃ ಪ್ರಲಂಬವಧಮೇವ ಚ ॥ ೧ ॥

ಗೋಪವೃದ್ಧಾಶ್ಚ ಗೋಪ್ಯಶ್ಚ ತದುಪಾಕರ್ಣ್ಯ ವಿಸ್ಮಿತಾಃ ।
ಮೇನಿರೇ ದೇವಪ್ರವರೌ ಕೃಷ್ಣರಾಮೌ ವ್ರಜಂ ಗತೌ ॥ ೨ ॥

ತತಃ ಪ್ರಾವರ್ತತ ಪ್ರಾವೃಟ್ ಸರ್ವಸತ್ತ್ವಸಮುದ್ಭವಾ ।
ವಿದ್ಯೋತಮಾನಪರಿಧಿರ್ವಿಸ್ಫೂರ್ಜಿತನಭಸ್ತಲಾ ॥ ೩ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ - ಪರೀಕ್ಷಿತನೇ! ಗೊಲ್ಲಬಾಲಕರು ತಮ್ಮ ಮನೆಗೆ ಹೋಗಿ ಮನೆಯಲ್ಲಿದ್ದ ತಾಯಿ ತಂಗಿ-ಹೆಂಡತಿ ಸ್ತ್ರೀಯರ ಬಳಿಯಲ್ಲಿ ಶ್ರೀಕೃಷ್ಣ-ಬಲರಾಮರು ದಾವಾಗ್ನಿಯಿಂದ ನಮ್ಮನ್ನು ರಕ್ಷಿಸಿದುದು ಮತ್ತು ಪ್ರಲಂಬಾಸುರನನ್ನು ವಧಿಸಿದುದು ಮುಂತಾದ ಅವರ ಅದ್ಭುತ ಕರ್ಮವನ್ನು ವರ್ಣಿಸಿದರು. ॥ ೧ ॥ ವ್ರಜದಲ್ಲಿದ್ದ ವೃದ್ಧರಾದ ಗೋಪಾಲಕರೂ ಗೋಪಿಯರೂ ರಾಮ-ಕೃಷ್ಣರ ಅಲೌಕಿಕ ಲೀಲೆಗಳನ್ನು ಕೇಳಿ ವಿಸ್ಮಿತರಾದರು. 'ಶ್ರೀಕೃಷ್ಣ ಮತ್ತು ಬಲರಾಮನ ವೇಷದಲ್ಲಿ ಯಾರೋ ದೇವಶ್ರೇಷ್ಠರು ವ್ರಜದಲ್ಲಿ ಆಗಮಿಸಿರುವರು' ಎಂದು ಅವರೆಲ್ಲರೂ ಭಾವಿಸಿದರು. ॥ ೨ ॥

ಇದಾದ ಬಳಿಕ ವರ್ಷಾಋತುವಿನ ಶುಭಾಗಮನವಾಯಿತು. ಸಕಲ ಪ್ರಾಣಿಗಳಿಗೂ ಜೀವನವನ್ನಿತ್ತು ಸಲಹುವ ಕಾಲವದು. ಸೂರ್ಯ-ಚಂದ್ರರ ಸುತ್ತಲೂ ಪದೇ-ಪದೇ ಪ್ರಕಾಶಮಯ ವೃತ್ತವು ಕಾಣತೊಡಗಿತು. ಗುಡುಗು-ಸಿಡಿಲು-ಮಿಂಚು-ಗಾಳಿಗಳಿಂದ ಆಕಾಶವು ಕ್ಷೋಭೆಗೊಂಡಿತು. ॥ ೩ ॥

ಸಾಂದ್ರನೀಲಾಂಬುದೈರ್ವ್ಯೋಮ ಸವಿದ್ಯುತ್ಸ್ತನಯಿತ್ನುಭಿಃ ।
ಅಸ್ಪಷ್ಟಜ್ಯೋತಿರಾಚ್ಛನ್ನಂ ಬ್ರಹ್ಮೇವ ಸಗುಣಂ ಬಭೌ ॥ ೪ ॥

ಅಷ್ಟೌ ಮಾಸಾನ್ ನಿಪೀತಂ ಯದ್ಭೂಮ್ಯಾಶ್ಚೋದಮಯಂ ವಸು ।
ಸ್ವಗೋಭಿರ್ಮೋಕ್ತುಮಾರೇಭೇ ಪರ್ಜನ್ಯಃ ಕಾಲ ಆಗತೇ ॥ ೫ ॥

ತಡಿತ್ವಂತೋ ಮಹಾಮೇಘಾಶ್ಚಂಡಶ್ವಸನವೇಪಿತಾಃ ।
ಪ್ರೀಣನಂ ಜೀವನಂ ಹ್ಯಸ್ಯ ಮುಮುಚುಃ ಕರುಣಾ ಇವ ॥ ೬ ॥

ತಪಃಕೃಶಾ ದೇವಮೀಢಾ ಆಸೀದ್ವರ್ಷೀಯಸೀ ಮಹೀ ।
ಯಥೈವ ಕಾಮ್ಯತಪಸಸ್ತನುಃ ಸಂಪ್ರಾಪ್ಯ ತತ್ಫಲಮ್ ॥ ೭ ॥

ನಿಶಾಮುಖೇಷು ಖದ್ಯೋತಾಸ್ತಮಸಾ ಭಾಂತಿ ನ ಗ್ರಹಾಃ ।
ಯಥಾ ಪಾಪೇನ ಪಾಖಂಡಾ ನ ಹಿ ವೇದಾಃ ಕಲೌ ಯುಗೇ ॥ ೮ ॥

ಶ್ರುತ್ವಾ ಪರ್ಜನ್ಯನಿನದಂ ಮಂಡೂಕಾ ವ್ಯಸೃಜನ್ಗಿರಃ ।
ತೂಷ್ಣೀಂ ಶಯಾನಾಃ ಪ್ರಾಗ್ಯದ್ವದ್ ಬ್ರಾಹ್ಮಣಾ ನಿಯಮಾತ್ಯಯೇ ॥ ೯ ॥

ಆಸನ್ನುತ್ಪಥವಾಹಿನ್ಯಃ ಕ್ಷುದ್ರನದ್ಯೋಽನುಶುಷ್ಯತೀಃ ।
ಪುಂಸೋ ಯಥಾಸ್ವತಂತ್ರಸ್ಯ ದೇಹದ್ರವಿಣಸಂಪದಃ ॥ ೧೦ ॥

ಹರಿತಾ ಹರಿಭಿಃ ಶಷ್ಪೈರಿಂದ್ರಗೋಪೈಶ್ಚ ಲೋಹಿತಾ ।
ಉಚ್ಛಿಲೀಂಧ್ರಕೃತಚ್ಛಾಯಾ ನೃಣಾಂ ಶ್ರೀರಿವ ಭೂರಭೂತ್ ॥ ೧೧ ॥

ಕ್ಷೇತ್ರಾಣಿ ಸಸ್ಯಸಂಪದ್ಭಿಃ ಕರ್ಷಕಾಣಾಂ ಮುದಂ ದದುಃ ।
ಧನಿನಾಮುಪತಾಪಂ ಚ ದೈವಾಧೀನಮಜಾನತಾಮ್ ॥ ೧೨ ॥

ಆಕಾಶದಲ್ಲಿ ದಟ್ಟವಾದ ಮತ್ತು ಕಪ್ಪಾದ ಮೇಘಗಳು ಆವರಿಸಿದುವು. ಗುಡುಗಿನ ಶಬ್ದದೊಡನೆ ಮಿಂಚು ಕಾಣಿಸಿಕೊಂಡಿತು. ಸೂರ್ಯ-ಚಂದ್ರ-ತಾರೆಗಳು ಮುಚ್ಚಿರುತ್ತಿದ್ದುವು. ಬ್ರಹ್ಮಸ್ವರೂಪನಾಗಿದ್ದರೂ ಗುಣಗಳಿಂದ ಮುಚ್ಚಿಹೋದಾಗ ಜೀವನ ಸ್ಥಿತಿಯಂತೆ ಆಕಾಶವು ಶೋಭಿಸುತ್ತಿತ್ತು. ॥ ೪ ॥ ಸೂರ್ಯನು ರಾಜನಂತೆ ಪೃಥಿವಿರೂಪವಾದ ಪ್ರಜೆಯಿಂದ ಕಂದಾಯವಾಗಿ ಎಂಟು ತಿಂಗಳುಕಾಲ ಸಂಗ್ರಹಿಸಿದ ನೀರನ್ನು ಈಗ ಸಮಯಬಂದಾಗ ಅವನು ತನ್ನ ಕಿರಣಗಳೆಂಬ ಕೈಗಳಿಂದ ಪುನಃ ಅದಕ್ಕೆ ಹಂಚತೊಡಗಿದನು. ॥ ೫ ॥ ದಯಾಳುಗಳಾದ ಮನುಷ್ಯರು ಪೀಡೆಗೊಳಗಾದವರನ್ನು ರಕ್ಷಿಸುವ ಸಲುವಾಗಿ ತಮ್ಮ ಪ್ರಾಣಗಳನ್ನಾದರೂ ಒತ್ತೆಯಿಡುವಂತೆಯೇ ಮೋಡಗಳು ಮಿಂಚೆಂಬ ಕಣ್ಣುಗಳ ಮೂಲಕವಾಗಿ ಪ್ರಪಂಚದ ಜನರ ಕಷ್ಟಗಳನ್ನು ನೋಡಿ ಗಾಳಿಯ ಪ್ರೇರಣೆಯಿಂದ ಜನರ ಶ್ರೇಯಸ್ಸಿಗಾಗಿ ಜೀವನರೂಪೀ ನೀರನ್ನು ಸುರಿಸತೊಡಗಿದುವು. ॥ ೬ ॥ ಸಕಾಮಭಾವದಿಂದ ತಪಸ್ಸು ಮಾಡುವಾಗ ಶರೀರವು ದುರ್ಬಲವಾಗಿ, ಅದರ ಫಲವು ದೊರೆತಾಗ ಅದು ಹೃಷ್ಟ-ಪುಷ್ಟವಾಗುವಂತೆ ಗ್ರೀಷ್ಮಋತುವಿನಲ್ಲಿ ಒಣಗಿಹೋಗಿದ್ದ ಭೂಮಿಯು ಈಗ ವರ್ಷಾಋತುವು ಬಂದೊಡನೆ ವೃದ್ಧಿಹೊಂದಿ ಹಚ್ಚ-ಹಸಿರಾಯಿತು. ॥ ೭ ॥ ಕಲಿಯುಗದಲ್ಲಿ ಪಾಪವು ಪ್ರಬಲವಾದಾಗ ವೈದಿಕ ಸಂಪ್ರದಾಯವು ಮರೆಯಾಗಿ ಪಾಖಂಡ ಮತಗಳು ಪ್ರಚಾರವಾಗುವಂತೆಯೇ, ವರ್ಷಾಕಾಲದ ಸಾಯಂಕಾಲಗಳಲ್ಲಿ ಕಾರ್ಮುಗಿಲಿನಿಂದಾಗಿ ಕತ್ತಲೆ ಆವರಿಸಿ ಗ್ರಹ, ತಾರೆಗಳು ಕಂಡುಬರದೇ ಮಿಣುಕು ಹುಳುಗಳ ಪ್ರಕಾಶವು ಕಾಣಿಸುತ್ತದೆ. ॥ ೮ ॥ ನಿತ್ಯಕರ್ಮಗಳು ಮುಗಿದನಂತರ ಗುರುಗಳ ಆದೇಶದಂತೆ ಬ್ರಹ್ಮಚಾರಿಗಳು ವೇದಗಳನ್ನು ಪಠಿಸುವಂತೆ, ಇಷ್ಟರವರೆಗೆ ಸುಮ್ಮನಿದ್ದ ಕಪ್ಪೆಗಳು ಮೇಘಗರ್ಜನೆಯನ್ನು ಕೇಳಿ ವಟಗುಟ್ಟಲು ಪ್ರಾರಂಭಿಸಿದುವು. ॥ ೯ ॥ ಜಿತೇಂದ್ರಿಯನಲ್ಲದ ಪುರುಷನ ಶರೀರ ಮತ್ತು ಧನ-ಸಂಪತ್ತುಗಳು ಅಪವ್ಯಯವಾಗುವಂತೆ, ಗ್ರೀಷ್ಮ ಋತುವಿನಲ್ಲಿ ಒಣಗಿಹೋಗಿದ್ದ ಸಣ್ಣ-ಪುಟ್ಟ ನದಿಗಳು ವರ್ಷಾಕಾಲದಲ್ಲಿ ಮೇರೆ ಮೀರಿ ಹರಿಯತೊಡಗಿದವು. ॥ ೧೦ ॥ ಕೆಲವು ಕಡೆಗಳಲ್ಲಿ ಭೂಮಿಯು ಹುಲ್ಲಿನಿಂದಾಗಿ ಹಚ್ಚ-ಹಸಿರಾಗಿಯೂ, ಕೆಲವೆಡೆಗಳಲ್ಲಿ ಇಂದ್ರಗೋಪಗಳೆಂಬ ಹುಳುಗಳಿಂದ ತುಂಬಿದ್ದು ಕೆಂಪಾಗಿಯೂ, ಮತ್ತೆ ಕೆಲವೆಡೆಗಳಲ್ಲಿ ನಾಯಿಕೊಡೆಗಳಿಂದ ತುಂಬಿದ್ದು ಬಿಳುಪಾಗಿಯೂ ಕಾಣಿಸುತ್ತಿದ್ದು ನಾನಾ ಬಣ್ಣದ ಉಡುಗೆ ತೊಡಿಗೆಗಳನ್ನು ಧರಿಸಿದ ರಾಜನ ಸೈನಿಕರಂತೆ ಕಾಣುತ್ತಿತ್ತು. ॥ ೧೧ ॥ ಎಲ್ಲ ಹೊಲ-ಗದ್ದೆಗಳು ಸಸ್ಯ ಸಮೃದ್ಧಿಯಿಂದ ಕೂಡಿದ್ದು ರೈತರಿಗೆ ಆನಂದವನ್ನುಂಟು ಮಾಡುತ್ತವೆ. ಸರ್ವಸ್ವವೂ ದೈವಾಧೀನವೆಂಬ ರಹಸ್ಯವನ್ನು ತಿಳಿಯದಿದ್ದ ಧನಿಕರಿಗೆ ರೈತರ ಸಂಪತ್ತು ನೋಡಿ ಇವರೂ ನಮ್ಮಂತೆ ಧನಿಕರಾಗುವರಲ್ಲ ಎಂದು ಅನುತಾಪವುಂಟಾಗುತ್ತದೆ. ॥ ೧೨ ॥

ಜಲಸ್ಥಲೌಕಸಃ ಸರ್ವೇ ನವವಾರಿನಿಷೇವಯಾ ।
ಅಬಿಭ್ರದ್ರುಚಿರಂ ರೂಪಂ ಯಥಾ ಹರಿನಿಷೇವಯಾ ॥ ೧೩ ॥

ಸರಿದ್ಭಿಃ ಸಂಗತಃ ಸಿಂಧುಶ್ಚುಕ್ಷುಭೇ ಶ್ವಸನೋರ್ಮಿಮಾನ್ ।
ಅಪಕ್ವಯೋಗಿನಶ್ಚಿತ್ತಂ ಕಾಮಾಕ್ತಂ ಗುಣಯುಗ್ಯಥಾ ॥ ೧೪ ॥

ಗಿರಯೋ ವರ್ಷಧಾರಾಭಿರ್ಹನ್ಯಮಾನಾ ನ ವಿವ್ಯಥುಃ ।
ಅಭಿಭೂಯಮಾನಾ ವ್ಯಸನೈರ್ಯಥಾಧೋಕ್ಷಜಚೇತಸಃ ॥ ೧೫ ॥

ಮಾರ್ಗಾ ಬಭೂವುಃ ಸಂದಿಗ್ಧಾಸ್ತೃಣೈಶ್ಛನ್ನಾ ಹ್ಯಸಂಸ್ಕೃತಾಃ ।
ನಾಭ್ಯಸ್ಯಮಾನಾಃ ಶ್ರುತಯೋ ದ್ವಿಜೈಃ ಕಾಲಹತಾ ಇವ ॥ ೧೬ ॥

ಲೋಕಬಂಧುಷು ಮೇಘೇಷು ವಿದ್ಯುತಶ್ಚಲಸೌಹೃದಾಃ ।
ಸ್ಥೈರ್ಯಂ ನ ಚಕ್ರುಃ ಕಾಮಿನ್ಯಃ ಪುರುಷೇಷು ಗುಣಿಷ್ವಿವ ॥ ೧೭ ॥

ಧನುರ್ವಿಯತಿ ಮಾಹೇಂದ್ರಂ ನಿರ್ಗುಣಂ ಚ ಗುಣಿನ್ಯಭಾತ್ ।
ವ್ಯಕ್ತೇ ಗುಣವ್ಯತಿಕರೇಽಗುಣವಾನ್ಪುರುಷೋ ಯಥಾ ॥ ೧೮ ॥

ನ ರರಾಜೋಡುಪಶ್ಛನ್ನಃ ಸ್ವಜ್ಯೋತ್ಸ್ನಾ ರಾಜಿತೈರ್ಘನೈಃ ।
ಅಹಂಮತ್ಯಾ ಭಾಸಿತಯಾ ಸ್ವಭಾಸಾ ಪುರುಷೋ ಯಥಾ ॥ ೧೯ ॥

ಮೇಘಾಗಮೋತ್ಸವಾ ಹೃಷ್ಟಾಃ ಪ್ರತ್ಯನಂದನ್ ಶಿಖಂಡಿನಃ ।
ಗೃಹೇಷು ತಪ್ತಾ ನಿರ್ವಿಣ್ಣಾ ಯಥಾಚ್ಯುತಜನಾಗಮೇ ॥ ೨೦ ॥

ಪೀತ್ವಾಪಃ ಪಾದಪಾಃ ಪದ್ಭಿರಾಸನ್ನಾನಾತ್ಮಮೂರ್ತಯಃ ।
ಪ್ರಾಕ್ಕ್ಷಾಮಾಸ್ತಪಸಾ ಶ್ರಾಂತಾ ಯಥಾ ಕಾಮಾನುಸೇವಯಾ ॥ ೨೧ ॥

ಸರಸ್ಸ್ವಶಾಂತರೋಧಸ್ಸು ನ್ಯೂಷುರಂಗಾಪಿ ಸಾರಸಾಃ ।
ಗೃಹೇಷ್ವಶಾಂತಕೃತ್ಯೇಷು ಗ್ರಾಮ್ಯಾ ಇವ ದುರಾಶಯಾಃ ॥ ೨೨ ॥

ಹರಿಸೇವೆಯಿಂದ ಅಂತರ್ಬಾಹ್ಯ ಎರಡೂ ರೂಪಗಳೂ ಸುಂದರವಾಗುವಂತೆ ವರ್ಷಾಕಾಲದ ಹೊಸ ನೀರಿನ ಪಾನದಿಂದ ಜಲಚರ ಭೂಚರ ಪ್ರಾಣಿಗಳ ಸೌಂದರ್ಯಗಳು ಹೆಚ್ಚಿದವು. ॥ ೧೩ ॥ ವಾಸನಾಯುಕ್ತ ಯೋಗಿಯ ಚಿತ್ತವು ವಿಷಯಗಳ ಸಂಪರ್ಕದಿಂದ ಕಾಮನೆಗಳು ಉಕ್ಕುವಂತೆಯೇ, ವರ್ಷಾಋತುವಿನಲ್ಲಿ ಬಿರುಗಾಳಿಗೆ ಸಮುದ್ರವು ಮೊದಲೇ ಎತ್ತರವಾದ ತೆರೆಗಳಿಂದ ಕೂಡಿತ್ತು, ಈಗ ನದಿಗಳ ಸಂಯೋಗದಿಂದ ಅದು ಇನ್ನೂ ಕ್ಷುಬ್ಧವಾಯಿತು. ॥ ೧೪ ॥ ತಮ್ಮ ಚಿತ್ತವನ್ನು ಭಗವಂತನಲ್ಲಿ ಸಮರ್ಪಿಸಿದ ಪುರುಷರಿಗೆ ಎಷ್ಟೇ ದುಃಖಗಳ ಹೊಡೆತಗಳು ಕೂಡ ಯಾವುದೇ ವ್ಯಥೆಯನ್ನು ಉಂಟುಮಾಡದಂತೆ, ಮುಸಲಧಾರ ಮಳೆಯ ಆಘಾತ ಬೀಳುತ್ತಿದ್ದರೂ ಪರ್ವತಗಳಿಗೆ ಯಾವುದೇ ವ್ಯಥೆ ಉಂಟಾಗುವುದಿಲ್ಲ. ॥ ೧೫ ॥ ಸತತವಾಗಿ ಅಭ್ಯಾಸ ಮಾಡದಿರುವ ವೇದಗಳು ದ್ವಿಜರಿಗೆ ಕಾಲಾನುಕ್ರಮದಲ್ಲಿ ಮರೆತು ಹೋಗುವಂತೆ, ಶುದ್ಧಸಂಸ್ಕಾರ ಹೀನವಾದ ಮಾರ್ಗಗಳು ಹುಲ್ಲಿನಿಂದ ತುಂಬಿಕೊಂಡು ಅದನ್ನು ಗುರುತಿಸುವುದೇ ಕಷ್ಟವಾಯಿತು. ॥ ೧೬ ॥ ಚಂಚಲವಾದ ಅನುರಾಗವುಳ್ಳ ಕಾಮಿನಿಯು ಗುಣವಂತನಾದ ಪುರುಷನ ಬಳಿಯಲ್ಲೂ ಸ್ಥಿರಭಾವದಿಂದ ಇರುವುದಿಲ್ಲ, ಹಾಗೆಯೇ ಲೋಕೋಪಕಾರಿಗಳಾದ ಮೇಘಗಳಲ್ಲಿ ಮಿಂಚುಗಳು ಸ್ಥಿರವಾಗಿ ಇರುವುದಿಲ್ಲ. ॥ ೧೭ ॥ ತ್ರಿಗುಣಾತ್ಮಕವಾದ ಈ ಪ್ರಪಂಚದಲ್ಲಿ ನಿರ್ಗುಣನಾದ ಪರಬ್ರಹ್ಮನು ಬೆಳಗುವಂತೆ ಮೋಡಗಳ ಗುಡುಗು ಸಿಡಿಲುಗಳಿಂದ ತುಂಬಿರುವ ಆಕಾಶದಲ್ಲಿ ನಿರ್ಗುಣವಾದ ನಾಣಿಲ್ಲದ ಇಂದ್ರಧನುಸ್ಸು (ಕಾಮನಬಿಲ್ಲು) ಮೂಡಿ ಬರುತ್ತದೆ. ॥ ೧೮ ॥ ಪುರುಷನಲ್ಲಿರುವ ದೇಹಾತ್ಮಭ್ರಾಂತಿಯಿಂದ ಕೂಡಿದ ಅಹಂಕಾರವು ಆತ್ಮವನ್ನು ಮುಚ್ಚಿಬಿಡುವಂತೆ, ಚಂದ್ರನ ಬೆಳದಿಂಗಳಿಂದಲೇ ಪ್ರಕಾಶಗೊಂಡ ಮೋಡಗಳ ಆವರಣದಿಂದ ಚಂದ್ರನು ಮರೆಯಾಗಿದ್ದಾನೆ. ॥ ೧೯ ॥ ತಾಪತ್ರಯಗಳಿಂದ ಬೆಂದು ಪರಿತಪಿಸುವ ಗೃಹಸ್ಥರಮನೆಗೆ ಹರಿಭಕ್ತರು ಬಂದಾಗ ಅವರಿಗೆ ಆಗುವ ಆನಂದೋತ್ಸವದಂತೆ, ಮೇಘಗಳ ಆಗಮನದಿಂದ ನವಿಲುಗಳು ಕೇಕೆಹಾಕುತ್ತಾ ನೃತ್ಯಮಾಡುತ್ತಾ ಆನಂದೋತ್ಸವವನ್ನು ಆಚರಿಸುತ್ತಿರುವುವು. ॥ ೨೦ ॥ ಸಕಾಮ ಭಾವದಿಂದ ತಪಸ್ಸು ಮಾಡುವವರ ಶರೀರವು ಮೊದಲಿಗೆ ಕೃಶವಾಗಿದ್ದರೂ, ಕಾಮನಾಪೂರ್ತಿ ಯಾದಾಗ ಹೃಷ್ಟ-ಪುಷ್ಟರಾಗುವಂತೆ, ಗ್ರೀಷ್ಮದಲ್ಲಿ ಒಣಗಿ ಹೋಗಿದ್ದ ವೃಕ್ಷಗಳು ಈಗ ವರ್ಷಾಋತುವಿನಲ್ಲಿ ಬೇರುಗಳಿಂದ ನೀರನ್ನುಂಡು ಸೊಂಪಾಗಿ ಚಿಗುರಿಕೊಳ್ಳುತ್ತವೆ. ॥ ೨೧ ॥ ಮನಸ್ಸಿಗೆ ಅಹಿತವಾದ ಕಾರ್ಯಗಳು ಮನೆಯಲ್ಲಿ ನಡೆಯುತ್ತಿದ್ದರೂ ವಿಷಯೀ ಪುರುಷರು ಆ ಮನೆಯನ್ನು ತೊರೆದು ಹೋಗುವುದಿಲ್ಲವೋ ಹಾಗೆಯೇ, ಮಳೆ ಸುರಿಯುವಿಕೆಯಿಂದ ಸರೋವರಗಳು ಕೊಚ್ಚೆಯಾಗಿದ್ದರೂ ಸಾರಸಪಕ್ಷಿಗಳು ಅದನ್ನು ವರ್ಷಾಕಾಲದಲ್ಲಿ ಬಿಟ್ಟು ಹೋಗುವುದಿಲ್ಲ. ॥ ೨೨ ॥

ಜಲೌಘೈರ್ನಿರಭಿದ್ಯಂತ ಸೇತವೋ ವರ್ಷತೀಶ್ವರೇ ।
ಪಾಖಂಡಿನಾಮಸದ್ವಾದೈರ್ವೇದಮಾರ್ಗಾಃ ಕಲೌ ಯಥಾ ॥ ೨೩ ॥

ವ್ಯಮುಂಚನ್ವಾಯುಭಿರ್ನುನ್ನಾ ಭೂತೇಭ್ಯೋಽಥಾಮೃತಂ ಘನಾಃ ।
ಯಥಾಽಽಶಿಷೋ ವಿಶ್ಪತಯಃ ಕಾಲೇ ಕಾಲೇ ದ್ವಿಜೇರಿತಾಃ ॥ ೨೪ ॥

ಏವಂ ವನಂ ತದ್ವರ್ಷಿಷ್ಠಂ ಪಕ್ವಖರ್ಜೂರಜಂಬುಮತ್ ।
ಗೋಗೋಪಾಲೈರ್ವೃತೋ ರಂತುಂ ಸಬಲಃ ಪ್ರಾವಿಶದ್ಧರಿಃ ॥ ೨೫ ॥

ಧೇನವೋ ಮಂದಗಾಮಿನ್ಯ ಊಧೋಭಾರೇಣ ಭೂಯಸಾ ।
ಯಯುರ್ಭಗವತಾಽಽಹೂತಾ ದ್ರುತಂ ಪ್ರೀತ್ಯಾ ಸ್ನುತಸ್ತನಾಃ ॥ ೨೬ ॥

ವನೌಕಸಃ ಪ್ರಮುದಿತಾ ವನರಾಜೀರ್ಮಧುಚ್ಯುತಃ ।
ಜಲಧಾರಾ ಗಿರೇರ್ನಾದಾದಾಸನ್ನಾ ದದೃಶೇ ಗುಹಾಃ ॥ ೨೭ ॥

ಕ್ವಚಿದ್ವನಸ್ಪತಿಕ್ರೋಡೇ ಗುಹಾಯಾಂ ಚಾಭಿವರ್ಷತಿ ।
ನಿರ್ವಿಶ್ಯ ಭಗವಾನ್ರೇಮೇ ಕಂದಮೂಲಫಲಾಶನಃ ॥ ೨೮ ॥

ದಧ್ಯೋದನಂ ಸಮಾನೀತಂ ಶಿಲಾಯಾಂ ಸಲಿಲಾಂತಿಕೇ ।
ಸಂಭೋಜನೀಯೈರ್ಬುಭುಜೇ ಗೋಪೈಃ ಸಂಕರ್ಷಣಾನ್ವಿತಃ ॥ ೨೯ ॥

ಶಾದ್ವಲೋಪರಿ ಸಂವಿಶ್ಯ ಚರ್ವತೋ ಮೀಲಿತೇಕ್ಷಣಾನ್ ।
ತೃಪ್ತಾನ್ವೃಷಾನ್ವತ್ಸತರಾನ್ ಗಾಶ್ಚ ಸ್ವೋಧೋಭರಶ್ರಮಾಃ ॥ ೩೦ ॥

ಪ್ರಾವೃಟ್‌ಶ್ರಿಯಂ ಚ ತಾಂ ವೀಕ್ಷ್ಯ ಸರ್ವಭೂತಮುದಾವಹಾಮ್ ।
ಭಗವಾನ್ಪೂಜಯಾಂಚಕ್ರೇ ಆತ್ಮಶಕ್ತ್ಯುಪಬೃಂಹಿತಾಮ್ ॥ ೩೧ ॥

ಏವಂ ನಿವಸತೋಸ್ತಸ್ಮಿನ್ರಾಮಕೇಶವಯೋರ್ವ್ರಜೇ ।
ಶರತ್ಸಮಭವದ್ವ್ಯಭ್ರಾ ಸ್ವಚ್ಛಾಂಬ್ವಪರುಷಾನಿಲಾ ॥ ೩೨ ॥

ಕಲಿಯುಗದಲ್ಲಿ ನಾಸ್ತಿಕರ ಮಿಥ್ಯಾವಾದಗಳಿಂದ ವೈದಿಕಮತವು ಎಲ್ಲೆ ಮೀರುವಂತೆ, ವರ್ಷಾಕಾಲದಲ್ಲಿ ದೇವೇಂದ್ರನು ಸುರಿಸುತ್ತಿರುವ ಮುಸಲಧಾರೆಯಂತಹ ಮಳೆಯ ನೀರಿನ ಪ್ರವಾಹದಿಂದ ಹಲವಾರು ಅಣೆಕಟ್ಟು ಸೇತುವೆಗಳೂ ಕೊಚ್ಚಿಕೊಂಡು ಹೋಗುತ್ತವೆ. ॥ ೨೩ ॥ ಬ್ರಾಹ್ಮಣರ ಪ್ರೇರಣೆಯಿಂದ ಧನಿಕರಾದವರು ಜನೋಪಯೋಗಿ ಕಲ್ಯಾಣ ಕಾರ್ಯಗಳನ್ನು ಮಾಡುವಂತೆ, ವರ್ಷಾಕಾಲದಲ್ಲಿ ವಾಯುವಿನ ಪ್ರೇರಣೆಯಿಂದ ದಟ್ಟವಾದ ಮೇಘಗಳು ಪ್ರಾಣಿಗಳ ಹಿತದ ಸಲುವಾಗಿ ಅಮೃತಮಯವಾದ ನೀರನ್ನು ಸುರಿಸುತ್ತವೆ. ॥ ೨೪ ॥

ವರ್ಷಾಋತುವಿನಲ್ಲಿ ವೃಂದಾವನವು ಹೀಗೆ ಶೋಭಾಯಮಾನವಾಗಿದ್ದು, ಪಕ್ವವಾದ ಖರ್ಜೂರದಿಂದಲೂ, ನೇರಳೆಹಣ್ಣುಗಳಿಂದಲೂ ಸಮೃದ್ಧವಾಗಿತ್ತು. ಅಂತಹ ಸುಂದರವಾದ ವನದಲ್ಲಿ ವಿಹರಿಸಲು ರಾಮ-ಶ್ಯಾಮರು ಗೊಲ್ಲಬಾಲಕರೊಡನೆ ಮತ್ತು ಗೋವುಗಳ ಜೊತೆಗೆ ಪ್ರವೇಶಿಸಿದರು. ॥ ೨೫ ॥ ಕೆಚ್ಚಲುಗಳಲ್ಲಿ ಹಾಲು ತುಂಬಿ ಭಾರವಾದ್ದರಿಂದ ಹಸುಗಳು ನಿಧಾನವಾಗಿ ನಡೆದು ಹೋಗುತ್ತಿದ್ದವು. ಭಗವಾನ್ ಶ್ರೀಕೃಷ್ಣನು ಅವುಗಳ ಹೆಸರಿಡಿದು ಕೂಗಿದಾಗ ಅವು ಪ್ರೇಮಪರವಶರಾಗಿ ಬೇಗ-ಬೇಗನೇ ಓಡತೊಡಗಿದವು. ಹೀಗೆ ಓಡುವಾಗ ಅವುಗಳ ಕೆಚ್ಚಲುಗಳಿಂದ ಹಾಲು ಧಾರಾಕಾರವಾಗಿ ಸುರಿಯುತ್ತಿತ್ತು. ॥ ೨೬ ॥ ಆ ವೃಂದಾವನದಲ್ಲಿ ಶ್ರೀಕೃಷ್ಣನು ಆನಂದತುಂದಿಲರಾದ ವನವಾಸಿಗಳನ್ನು, ಜೇನನ್ನು ಸುರಿಸುತ್ತಿರುವ ವೃಕ್ಷಗಳನ್ನು, ಮೈತುಂಬಿ ಭೋರ್ಗರೆಯುತ್ತಾ ಹರಿಯುತ್ತಿದ್ದ ಗಿರಿನದಿಗಳನ್ನು, ಅವುಗಳ ಸಮೀಪದಲ್ಲೇ ಇದ್ದ ಗುಹೆಗಳನ್ನು ನೋಡಿದನು. ॥ ೨೭ ॥ ಮಳೆಯು ಬಂದಾಗ ಶ್ರೀಕೃಷ್ಣನು ಕೆಲವೊಮ್ಮೆ ಮರದ ಪೊಟರೆಗಳಲ್ಲಿಯೂ, ಕೆಲವು ವೇಳೆ ಗುಹೆಗಳಲ್ಲಿಯೂ ಅಡಗಿಕೊಳ್ಳುತ್ತಿದ್ದನು. ಕೆಲವುವೇಳೆ ಗಡ್ಡೆಗೆಣಸು-ಹಣ್ಣುಗಳನ್ನು ತಿನ್ನುತ್ತಾ ಗೋಪಬಾಲಕರೊಂದಿಗೆ ಆಟವಾಡುತ್ತಿದ್ದನು. ॥ ೨೮ ॥ ಕೆಲವು ವೇಳೆ ಶ್ರೀಕೃಷ್ಣನು ನದಿಯ ತೀರದ ಬಂಡೆಯ ಮೇಲೆ ಬಲರಾಮನೊಡನೆಯೂ, ಗೋಪಬಾಲಕರೊಂದಿಗೂ ಕುಳಿತು ಮನೆಯಿಂದ ತಂದ ಮೊಸರನ್ನವನ್ನು ಮೆಲ್ಲುತ್ತಿದ್ದನು. ॥ ೨೯ ॥ ಆ ವರ್ಷಾಕಾಲದಲ್ಲಿ ಎತ್ತುಗಳು, ಕರುಗಳು, ಕೆಚ್ಚಲಿನ ಭಾರದಿಂದ ದಣಿದಿದ್ದ ಹಸುಗಳು ಕೆಲಹೊತ್ತಿನವರೆಗೆ ಹುಲ್ಲು ಮೇಯುತ್ತಿದ್ದು ಹೊಟ್ಟೆ ತುಂಬಿದ ಮೇಲೆ ಹುಲ್ಲಿನ ಮೇಲೆಯೇ ಮಲಗಿ ಕಣ್ಣು ಮುಚ್ಚಿಕೊಂಡು ಮೆಲುಕುಹಾಕುತ್ತಿದ್ದವು. ಸಮಸ್ತ ಪ್ರಾಣಿಗಳಿಗೂ ಸುಖದಾಯಕವಾದ, ಆನಂದಪ್ರದವಾದ ಇಂತಹ ವರ್ಷಾಕಾಲದ ಸೊಬಗನ್ನು ತನ್ನ ಲೀಲಾವಿಲಾಸದಿಂದಲೇ ಪ್ರಾದುರ್ಭವಿಸಿದ್ದರೂ ಆ ಸನ್ನಿವೇಶವನ್ನು ನೋಡಿ ಶ್ರೀಕೃಷ್ಣನು ಅತ್ಯಂತ ಪ್ರಸನ್ನನಾದನು ಹಾಗೂ ಅವುಗಳನ್ನು ಬಹಳವಾಗಿ ಪ್ರಶಂಸೆ ಮಾಡಿದನು. ॥ ೩೦-೩೧ ॥

ಹೀಗೆ ರಾಮ-ಕೇಶವರಿಬ್ಬರೂ ಮಹದಾನಂದದಿಂದ ವ್ರಜದಲ್ಲಿ ನಿವಾಸಮಾಡುತ್ತಿರಲಾಗಿ, ವರ್ಷಾಋತುವು ಕಳೆದು ಶರದೃತುವಿನ ಆಗಮನವಾಯಿತು. ಆಕಾಶವು ಮೋಡಗಳಿಲ್ಲದೆ ನಿರ್ಮಲವಾಯಿತು. ವಾಯುವು ಮಂದ-ಮಂದವಾಗಿ ಬೀಸತೊಡಗಿತು. ॥೩೨॥

ಶರದಾ ನೀರಜೋತ್ಪತ್ತ್ಯಾ ನೀರಾಣಿ ಪ್ರಕೃತಿಂ ಯಯುಃ ।
ಭ್ರಷ್ಟಾನಾಮಿವ ಚೇತಾಂಸಿ ಪುನರ್ಯೋಗನಿಷೇವಯಾ ॥ ೩೩ ॥

ವ್ಯೋಮ್ನೋಽಬ್ದಂ ಭೂತಶಾಬಲ್ಯಂ ಭುವಃ ಪಂಕಮಪಾಂ ಮಲಮ್ ।
ಶರಜ್ಜಹಾರಾಶ್ರಮಿಣಾಂ ಕೃಷ್ಣೇ ಭಕ್ತಿರ್ಯಥಾಶುಭಮ್ ॥ ೩೪ ॥

ಸರ್ವಸ್ವಂ ಜಲದಾ ಹಿತ್ವಾ ವಿರೇಜುಃ ಶುಭ್ರವರ್ಚಸಃ ।
ಯಥಾ ತ್ಯಕ್ತೈಷಣಾಃ ಶಾಂತಾ ಮುನಯೋ ಮುಕ್ತಕಿಲ್ಬಿಷಾಃ ॥ ೩೫ ॥

ಗಿರಯೋ ಮುಮುಚುಸ್ತೋಯಂ ಕ್ವಚಿನ್ನ ಮುಮುಚುಃ ಶಿವಮ್ ।
ಯಥಾ ಜ್ಞಾನಾಮೃತಂ ಕಾಲೇ ಜ್ಞಾನಿನೋ ದದತೇ ನ ವಾ ॥ ೩೬ ॥

ನೈವಾವಿದನ್ ಕ್ಷೀಯಮಾಣಂ ಜಲಂ ಗಾಧಜಲೇಚರಾಃ ।
ಯಥಾಽಽಯುರನ್ವಹಂ ಕ್ಷಯ್ಯಂ ನರಾ ಮೂಢಾಃ ಕುಟುಂಬಿನಃ ॥ ೩೭ ॥

ಗಾಧವಾರಿಚರಾಸ್ತಾಪಮವಿಂದನ್ ಶರದರ್ಕಜಮ್ ।
ಯಥಾ ದರಿದ್ರಃ ಕೃಪಣಃ ಕುಟುಂಬ್ಯವಿಜಿತೇಂದ್ರಿಯಃ ॥ ೩೮ ॥

ಶನೈಃ ಶನೈರ್ಜಹುಃ ಪಂಕಂ ಸ್ಥಲಾನ್ಯಾಮಂ ಚ ವೀರುಧಃ ।
ಯಥಾಹಂಮಮತಾಂ ಧೀರಾಃ ಶರೀರಾದಿಷ್ವನಾತ್ಮಸು ॥ ೩೯ ॥

ನಿಶ್ಚಲಾಂಬುರಭೂತ್ತೂಷ್ಣೀಂ ಸಮುದ್ರಃ ಶರದಾಗಮೇ ।
ಆತ್ಮನ್ಯುಪರತೇ ಸಮ್ಯಙ್ಮುನಿರ್ವ್ಯುಪರತಾಗಮಃ ॥ ೪೦ ॥

ಕೇದಾರೇಭ್ಯಸ್ತ್ವಪೋಽಗೃಹ್ಣನ್ ಕರ್ಷಕಾ ದೃಢಸೇತುಭಿಃ ।
ಯಥಾ ಪ್ರಾಣೈಃ ಸ್ರವಜ್ಜ್ಞಾನಂ ತನ್ನಿರೋಧೇನ ಯೋಗಿನಃ ॥ ೪೧ ॥

ಯೋಗಭ್ರಷ್ಟನಾದವನ ಚಿತ್ತವು ಪುನಃ ಯೋಗಾಭ್ಯಾಸಮಾಡುವುದರಿಂದ ನಿರ್ಮಲವಾಗುವಂತೆ, ಸರೋವರಗಳಲ್ಲಿ ಪುನಃ ಕಮಲಗಳು ಅರಳಿ, ಜಲಾಶಯಗಳ ನೀರು ತನ್ನ ಸಹಜವಾದ ಸ್ವಚ್ಛತೆಯನ್ನು ಪಡೆದುಕೊಂಡಿತು. ॥ ೩೩ ॥ ಭಗವಂತನ ಅನನ್ಯ ಭಕ್ತಿಯು ಬ್ರಹ್ಮಚಾರಿ, ಗೃಹಸ್ಥ, ವಾನಪ್ರಸ್ಥ ಮತ್ತು ಸಂನ್ಯಾಸಿ ಇವರ ಎಲ್ಲರ ರೀತಿಯ ಕಷ್ಟ ಮತ್ತು ಅಶುಭಗಳನ್ನು ನಾಶಮಾಡಿಬಿಡುವಂತೆಯೇ, ಶರದೃತುವು ಆಕಾಶವನ್ನು ಮೋಡಗಳಿಂದಲೂ, ವರ್ಷಾಕಾಲದಲ್ಲಿ ಬೆಳೆದ ಜೀವ-ಜಂತುಗಳನ್ನು, ಭೂಮಿಯಲ್ಲಿ ಇರುವ ಕೆಸರನ್ನು, ನೀರಿನ ಕೊಳೆಯನ್ನು ನಾಶಮಾಡಿಬಿಟ್ಟಿತು. ॥ ೩೪ ॥ ಪುತ್ರೈಷಣಾ, ವಿತ್ತೈಷಣಾ ಮತ್ತು ಲೋಕೈಷಣಾಗಳೆಂಬ ಈಷಣಾತ್ರಯಗಳನ್ನು ಪರಿತ್ಯಾಗ ಮಾಡಿ, ಕಾಮಕ್ರೋಧಾದಿಗಳನ್ನು ದೂರೀಕರಿಸಿ, ಪಾಪರಹಿತರಾಗಿ ಶುದ್ಧಾತ್ಮರಾದ ಬ್ರಹ್ಮಜ್ಞಾನಿಗಳಂತೆ, ಮೋಡಗಳು ತಮ್ಮಲ್ಲಿದ್ದ ನೀರೆಲ್ಲವನ್ನೂ ದಾನಮಾಡಿ ಪರಿಶುದ್ಧವಾದ ತೇಜಸ್ಸಿನಿಂದ ಕಂಗೊಳಿಸಿದವು. ॥ ೩೫ ॥ ಜ್ಞಾನಿಗಳಾದವರು ಜ್ಞಾನಾಮೃತವನ್ನು ಕೆಲವು ವೇಳೆ ಕೆಲವರಿಗೆ ಅನುಗ್ರಹಿಸುವಂತೆ ಮತ್ತೆ ಕೆಲವರಿಗೆ ಅನುಗ್ರಹಿಸದೆಯೂ ಇರುವಂತೆ, ವರ್ಷಾಕಾಲದಲ್ಲಿ ತುಂಬಿ ಹರಿಯುತ್ತಿದ್ದ ನದಿಗಳು ಶರತ್ಕಾಲದಲ್ಲಿ ಅಮೃತಪ್ರಾಯವಾದ ನೀರಿನಿಂದ ಕೂಡಿ ಹರಿಯುತ್ತಿದ್ದರೆ, ಕೆಲವು ವೇಳೆ ಬತ್ತಿಹೋಗುತ್ತಿದ್ದವು. ॥ ೩೬ ॥ ಕುಟುಂಬ ಪೋಷಣೆಯಲ್ಲೇ ಮೈಮರೆತ ಮೂಢಜನರು ತಮ್ಮ ಆಯುಸ್ಸು ಕ್ಷಣ-ಕ್ಷಣಕ್ಕೆ ಕ್ಷೀಣವಾಗುತ್ತಿರುವುದನ್ನು ತಿಳಿಯಲಾರರು. ಅಂತೆಯೇ ಆಳವಿಲ್ಲದ ಜಲಾಶಯದಲ್ಲಿ ವಾಸಮಾಡುವ ಜಲಚರಗಳು ಜಲಾಶಯದ ನೀರು ದಿನೇ-ದಿನೇ ಬತ್ತಿಹೋಗುತ್ತಿರುವುದನ್ನು ತಿಳಿಯುವುದಿಲ್ಲ. ॥ ೩೭ ॥ ಇಂದ್ರಿಯಗಳಿಗೆ ವಶನಾದ ಕೃಪಣ, ದರಿದ್ರನು ಕುಟುಂಬದ ನಾನಾ ರೀತಿಯ ತಾಪಗಳಿಂದ ಪರಿತಪಿಸುವಂತೆ, ಆಳವಿಲ್ಲದ ನೀರಿನಲ್ಲಿ ವಾಸಿಸುವ ಜಲಚರಗಳು ಶರತ್ಕಾಲದ ಪ್ರಖರ ಸೂರ್ಯನ ತಾಪದಿಂದ ಪರಿತಪಿಸತೊಡಗಿದವು. ॥ ೩೮ ॥ ವಿವೇಕ ಸಂಪನ್ನರಾದ ಧೀರರು ನಿಧಾನವಾಗಿ ಶರೀರವೇ ಮುಂತಾದ ಅನಾತ್ಮ ವಸ್ತುಗಳಲ್ಲಿದ್ದ 'ನಾನು', 'ನನ್ನದು' ಎಂಬ ಅಹಂತೆ, ಮಮತೆಗಳನ್ನು ತೊರೆಯುವಂತೆ, ಶರತ್ಕಾಲದಲ್ಲಿ ಭೂಮಿಯು ಕೆಸರನ್ನು ತೊರೆದು, ಔಷಧಿಲತೆಗಳು ಪರಿಪಕ್ವವಾಗುತ್ತವೆ. ॥ ೩೯ ॥ ಮನಸ್ಸು ನಿಷ್ಕ್ರಿಯವಾದಾಗ ಆತ್ಮಾರಾಮನಾದ ಪುರುಷನು ಕರ್ಮಕಾಂಡದ ಜಂಜಾಟದಿಂದ ದೂರವಾಗಿ ಶಾಂತನಾಗುವಂತೆ, ಶರತ್ಕಾಲದಲ್ಲಿ ಸಮುದ್ರವು ಯಾವುದೇ ಕ್ಷುಬ್ಧತೆಯೂ ಇಲ್ಲದೆ ಗಂಭೀರವಾಗಿಯೂ, ಶಾಂತವಾಗಿಯೂ, ಸ್ಥಿರವಾಯಿತು. ॥ ೪೦ ॥ ಯೋಗಿಗಳಾದವರು ಪ್ರತ್ಯಾಹಾರದ ಮೂಲಕ ಮನಸ್ಸು ಮತ್ತು ಇಂದ್ರಿಯಗಳನ್ನು ವಿಷಯಗಳಿಂದ ತಡೆದು ನಿಲ್ಲಿಸಿ, ಜ್ಞಾನವನ್ನು ರಕ್ಷಿಸಿಕೊಳ್ಳುವರೋ, ಹಾಗೆಯೇ ರೈತರು ಶರತ್ಕಾಲದಲ್ಲಿ ಗದ್ದೆಗಳಿಗೆ ಬಲವಾದ ಬದುಗಳನ್ನು ಕಟ್ಟಿ ಸೋರಿಹೋಗುವ ನೀರನ್ನು ತಡೆಯುತ್ತಿದ್ದರು. ॥ ೪೧ ॥

ಶರದರ್ಕಾಂಶುಜಾಂಸ್ತಾಪಾನ್ಭೂತಾನಾಮುಡುಪೋಽಹರತ್ ।
ದೇಹಾಭಿಮಾನಜಂ ಬೋಧೋ ಮುಕುಂದೋ ವ್ರಜಯೋಷಿತಾಮ್ ॥ ೪೨ ॥

ಖಮಶೋಭತ ನಿರ್ಮೇಘಂ ಶರದ್ವಿಮಲತಾರಕಮ್ ।
ಸತ್ತ್ವಯುಕ್ತಂ ಯಥಾ ಚಿತ್ತಂ ಶಬ್ದಬ್ರಹ್ಮಾರ್ಥದರ್ಶನಮ್ ॥ ೪೩ ॥

ಅಖಂಡಮಂಡಲೋ ವ್ಯೋಮ್ನಿ ರರಾಜೋಡುಗಣೈಃ ಶಶೀ ।
ಯಥಾ ಯದುಪತಿಃ ಕೃಷ್ಣೋ ವೃಷ್ಣಿಚಕ್ರಾವೃತೋ ಭುವಿ ॥ ೪೪ ॥

ಆಶ್ಲಿಷ್ಯ ಸಮಶೀತೋಷ್ಣಂ ಪ್ರಸೂನವನಮಾರುತಮ್ ।
ಜನಾಸ್ತಾಪಂ ಜಹುರ್ಗೋಪ್ಯೋ ನ ಕೃಷ್ಣಹೃತಚೇತಸಃ ॥ ೪೫ ॥

ಗಾವೋ ಮೃಗಾಃ ಖಗಾ ನಾರ್ಯಃ ಪುಷ್ಪಿಣ್ಯಃ ಶರದಾಭವನ್ ।
ಅನ್ವೀಯಮಾನಾಃ ಸ್ವವೃಷೈಃ ಫಲೈರೀಶಕ್ರಿಯಾ ಇವ ॥ ೪೬ ॥

ಉದಹೃಷ್ಯನ್ವಾರಿಜಾನಿ ಸೂರ್ಯೋತ್ಥಾನೇ ಕುಮುದ್ವಿನಾ ।
ರಾಜ್ಞಾ ತು ನಿರ್ಭಯಾ ಲೋಕಾ ಯಥಾ ದಸ್ಯೂನ್ವಿನಾ ನೃಪ ॥ ೪೭ ॥

ಪುರಗ್ರಾಮೇಷ್ವಾಗ್ರಯಣೈರಿಂದ್ರಿಯೈಶ್ಚ ಮಹೋತ್ಸವೈಃ ।
ಬಭೌ ಭೂಃ ಪಕ್ವಸಸ್ಯಾಢ್ಯಾ ಕಲಾಭ್ಯಾಂ ನಿತರಾಂ ಹರೇಃ ॥ ೪೮ ॥

ವಣಿಙ್ಮುನಿನೃಪಸ್ನಾತಾ ನಿರ್ಗಮ್ಯಾರ್ಥಾನ್ಪ್ರಪೇದಿರೇ ।
ವರ್ಷರುದ್ಧಾ ಯಥಾ ಸಿದ್ಧಾಃ ಸ್ವಪಿಂಡಾನ್ಕಾಲ ಆಗತೇ ॥ ೪೯ ॥

ದೇಹಾಭಿಮಾನದಿಂದ ಉಂಟಾದ ಅಜ್ಞಾನವನ್ನು ಜ್ಞಾನವು ಹೋಗಲಾಡಿಸುವಂತೆಯೂ, ಗೋಪಿಯರ ವಿರಹತಾಪವನ್ನು ಶ್ರೀಕೃಷ್ಣನು ಹೋಗಲಾಡಿಸುವಂತೆಯೇ, ಶರತ್ಕಾಲದ ಸೂರ್ಯನ ಪ್ರಖರ ಕಿರಣಗಳಿಂದ ಪ್ರಾಣಿಗಳಿಗೆ ಉಂಟಾದ ತಾಪವನ್ನು ಶರಚ್ಚಂದ್ರನು ರಾತ್ರಿಯಲ್ಲಿ ಪರಿಹರಿಸುತ್ತಾನೆ. ॥ ೪೨ ॥ ವೇದಗಳ ಅರ್ಥವನ್ನು ಸ್ಪಷ್ಟವಾಗಿ ತಿಳಿದಿರುವ ಸತ್ತ್ವಗುಣದ ಚಿತ್ತವು ಅತ್ಯಂತ ಶೋಭಾಯಮಾನವಾಗಿರುವಂತೆ, ಶರದೃತುವಿನ ರಾತ್ರಿಯಲ್ಲಿ ಮೇಘರಹಿತವಾದ ನಿರ್ಮಲ ಆಕಾಶವು ತಾರೆಗಳ ಜ್ಯೋತಿಗಳಿಂದ ಬೆಳಗುತ್ತಿರುತ್ತದೆ. ॥ ೪೩ ॥ ಪರೀಕ್ಷಿತನೇ! ಭೂಮಂಡಲದಲ್ಲಿ ಯದುವಂಶೀಯರಲ್ಲಿ ಯದುಪತಿ ಭಗವಾನ್ ಶ್ರೀಕೃಷ್ಣನು ಶೋಭಿಸುತ್ತಿರುವಂತೆಯೇ, ಆಕಾಶದಲ್ಲಿ ತಾರೆಗಳಿಂದ ಕೂಡಿದ ಚಂದ್ರನು ಶೋಭಿಸತೊಡಗಿದನು. ॥ ೪೪ ॥ ವಿಕಸಿತವಾದ ವನ ಕುಸುಮಗಳನ್ನು ಆಲಿಂಗಿಸಿಕೊಂಡು ಮೆಲ್ಲ-ಮೆಲ್ಲನೇ ಮತ್ತು ಸಮಶೀತೋಷ್ಣವಾಗಿ ಬೀಸುತ್ತಿದ್ದ ಮಾರುತವು ಸಮಸ್ತ ಜನರ ತಾಪವನ್ನು ಪರಿಹರಿಸುತ್ತಿತ್ತು. ಗೋಪಿಯರ ವಿರಹತಾಪವನ್ನು ಮಾತ್ರ ಪರಿಹರಿಸಲು ಸಮರ್ಥವಾಗಲಿಲ್ಲ. ಅವರ ಮನಸ್ಸುಗಳನ್ನು ಶ್ರೀಕೃಷ್ಣನೇ ಅಪಹರಿಸಿ ಬಿಟ್ಟಿದ್ದನು. ॥ ೪೫ ॥ ಸಮರ್ಥರಾದವರಿಂದ ಮಾಡಲ್ಪಡುವ ಕ್ರಿಯೆಗಳನ್ನು ಫಲಗಳು ಅನುಸರಿಸುವವಂತೆ, ಶರತ್ಕಾಲದಲ್ಲಿ ಹಸುಗಳೂ, ಜಿಂಕೆಗಳೂ, ಪಕ್ಷಿಗಳೂ, ಹೆಂಗಸರೂ, ಋತುಮತಿಯರೂ-ಸಂತಾನೋತ್ಪತ್ತಿಯ ಕಾಮನೆಯಿಂದ ಕೂಡಿ ಹೋರಿಗಳನ್ನು, ಗಂಡುಪಕ್ಷಿಗಳನ್ನು, ಗಂಡಸರನ್ನೂ ಅನುಸರಿಸಿದವು. ॥ ೪೬ ॥ ಪರೀಕ್ಷಿತನೇ! ರಾಜನ ಶುಭಾಗಮನದಿಂದ ಕಳ್ಳರನ್ನು ಬಿಟ್ಟು ಉಳಿದವರೆಲ್ಲರೂ ನಿರ್ಭಯರಾಗುವಂತೆಯೇ, ಸೂರ್ಯೋದಯದಿಂದ ನೈದಿಲೆಗಳನ್ನು ಬಿಟ್ಟು ಉಳಿದ ಕಮಲವೇ ಮುಂತಾದ ಪುಷ್ಪಗಳು ವಿಕಸಿತವಾಗುತ್ತವೆ. ॥ ೪೭ ॥ ಶರತ್ಕಾಲದಲ್ಲಿ ದೊಡ್ಡ-ದೊಡ್ಡ ಪಟ್ಟಣಗಳಲ್ಲಿಯೂ, ಹಳ್ಳಿಗಳಲ್ಲಿಯೂ ಆಗ್ರಾಯಣವೂ (ನವಾನ್ನಪ್ರಾಶನ), ಇಂದ್ರನ ಸಂಬಂಧವಾದ ಉತ್ಸವಗಳು ನಡೆಯತೊಡಗಿದವು. ಮಾಗಿನಿಂತ ಬೆಳೆಗಳಿಂದ ಭೂಮಿಯು ಸಂಪನ್ನವಾಗಿತ್ತು ಮತ್ತು ಭಗವಾನ್ ಶ್ರೀಕೃಷ್ಣನ ಹಾಗೂ ಬಲರಾಮನ ಉಪಸ್ಥಿತಿಯಲ್ಲಿ ಭೂಮಂಡಲವು ಅತ್ಯಂತ ಶೋಭಿಸತೊಡಗಿತು. ॥ ೪೮ ॥ ಸಾಧಕರು ತಮ್ಮ ಯೋಗಸಾಧನೆಗಳಿಂದ ಕಾಲಾನುಕ್ರಮವಾಗಿ ದಿವ್ಯಶರೀರಗಳನ್ನು ಪಡೆದುಕೊಳ್ಳುವಂತೆ, ವರ್ಷಾಕಾಲದಲ್ಲಿ ಒಂದೇ ಸ್ಥಳದಲ್ಲಿ ನೆಲೆಸಿದ್ದ ವೈಶ್ಯರು, ರಾಜರು, ಸಂನ್ಯಾಸಿಗಳು ಮತ್ತು ಸ್ನಾತಕರು ಶರತ್ಕಾಲವು ಪ್ರಾರಂಭವಾಗುತ್ತಲೇ ಸ್ವೇಚ್ಛೆಯಿಂದ ತಮ್ಮ-ತಮ್ಮ ಕಾರ್ಯಗಳಲ್ಲಿ ತೊಡಗಿದರು. ॥ ೪೯ ॥

ಇಪ್ಪತ್ತನೆಯ ಅಧ್ಯಾಯವು ಮುಗಿಯಿತು. ॥ ೨೦ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮಸ್ಕಂಧೇ ಪೂರ್ವಾರ್ಧೇ
ಪ್ರಾವೃಟ್ಶರದ್ವರ್ಣನಂ ನಾಮ ವಿಂಶೋಽಧ್ಯಾಯಃ ॥ ೨೦ ॥

ಇಪ್ಪತ್ತೊಂದನೆಯ ಅಧ್ಯಾಯ

ವೇಣುಗೀತೆ

ಶ್ರೀಶುಕ ಉವಾಚ

ಇತ್ಥಂ ಶರತ್ಸ್ವಚ್ಛಜಲಂ ಪದ್ಮಾಕರಸುಗಂಧಿನಾ ।
ನ್ಯವಿಶದ್ವಾಯುನಾ ವಾತಂ ಸಗೋಗೋಪಾಲಕೋಽಚ್ಯುತಃ ॥ ೧ ॥

ಕುಸುಮಿತವನರಾಜಿಶುಷ್ಮಿಭೃಂಗ-
ದ್ವಿಜಕುಲಘುಷ್ಟಸರಃಸರಿನ್ಮಹೀಧ್ರಮ್ ।
ಮಧುಪತಿರವಗಾಹ್ಯ ಚಾರಯನ್ಗಾಃ
ಸಹಪಶುಪಾಲಬಲಶ್ಚುಕೂಜ ವೇಣುಮ್ ॥ ೨ ॥

ತದ್ವ್ರಜಸ್ತ್ರಿಯ ಆಶ್ರುತ್ಯ ವೇಣುಗೀತಂ ಸ್ಮರೋದಯಮ್ ।
ಕಾಶ್ಚಿತ್ಪರೋಕ್ಷಂ ಕೃಷ್ಣಸ್ಯ ಸ್ವಸಖೀಭ್ಯೋಽನ್ವವರ್ಣಯನ್ ॥ ೩ ॥

ತದ್ವರ್ಣಯಿತುಮಾರಬ್ಧಾಃ ಸ್ಮರಂತ್ಯಃ ಕೃಷ್ಣಚೇಷ್ಟಿತಮ್ ।
ನಾಶಕನ್ಸ್ಮರವೇಗೇನ ವಿಕ್ಷಿಪ್ತಮನಸೋ ನೃಪ ॥ ೪ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ - ಪರೀಕ್ಷಿತನೇ! ಶರತ್ಕಾಲದಲ್ಲಿ ಆ ವೃಂದಾವನವು ಬಹಳ ಸುಂದರವಾಗಿ ಕಾಣುತ್ತಿತ್ತು. ನೀರು ನಿರ್ಮಲವಾಗಿತ್ತು ಹಾಗೂ ಜಲಾಶಯಗಳಲ್ಲಿ ಅರಳಿದ ಕಮಲಗಳ ಸುಗಂಧವನ್ನು ಹೊತ್ತು ಮಂದಾನಿಲವು ಬೀಸುತ್ತಿತ್ತು. ಭಗವಾನ್ ಶ್ರೀಕೃಷ್ಣನು ಗೋವುಗಳ ಮತ್ತು ಗೋಪಾಲಬಾಲಕರೊಂದಿಗೆ ಆ ವನವನ್ನು ಪ್ರವೇಶಿಸಿದನು. ॥ ೧ ॥ ಸುಂದರವಾದ ಮತ್ತು ಸುಗಂಧಯುಕ್ತವಾದ ಪುಷ್ಪಗಳಿಂದ ಸಮಲಂಕೃತವಾಗಿದ್ದ ವೃಕ್ಷಗಳ ಸಾಲುಗಳಲ್ಲಿ ದುಂಬಿಗಳು ಝೇಂಕರಿಸುತ್ತಾ ಮಧುಪಾನಮಾಡುತ್ತಿದ್ದುವು. ಸರೋವರಗಳಲ್ಲಿಯೂ, ನದಿಯ ತೀರಗಳಲ್ಲಿಯೂ, ಪರ್ವತದ ತಪ್ಪಲುಗಳಲ್ಲಿಯೂ ನಾನಾ ವಿಧವಾದ ಪಕ್ಷಿಗಳು ಕುಳಿತು ಕಲಕಲ ನಿನಾದ ಮಾಡುತ್ತಿದ್ದವು. ಮಧುಪತಿಯಾದ ಶ್ರೀಕೃಷ್ಣನು ಬಲರಾಮನೊಡನೆ ಮತ್ತು ಗೊಲ್ಲಬಾಲಕರೊಂದಿಗೆ ವೃಂದಾವನವನ್ನು ಪ್ರವೇಶಿಸಿ, ಹಸುಗಳನ್ನು ಮೇಯಿಸುತ್ತಾ ತನ್ನ ಕೊಳಲನ್ನು ಕರ್ಣಾನಂದಕರವಾಗಿ ನುಡಿಸತೊಡಗಿದನು. ॥ ೨ ॥ ಶ್ರೀಕೃಷ್ಣನ ಆ ವೇಣುಗಾನವು ಭಗವಂತನ ವಿಷಯದಲ್ಲಿ ಭಕ್ತಿಭಾವವನ್ನು, ಅವನನ್ನು ಸೇರಬೇಕೆಂಬ ಆಕಾಂಕ್ಷೆಯನ್ನು ಹುಟ್ಟಿಸುವುದಾಗಿತ್ತು. (ಅದನ್ನು ಕೇಳಿ ಗೋಪಿಯರ ಹೃದಯಗಳು ಪ್ರೇಮದಿಂದ ತುಂಬಿ ಹೋದುವು). ಅವರು ಏಕಾಂತದಲ್ಲಿ ಕಲೆತು ಸಖಿಯರೊಂದಿಗೆ ಶ್ರೀಕೃಷ್ಣನ ರೂಪ, ಗುಣ ಮತ್ತು ವೇಣುಗೀತದ ಮಾಧುರ್ಯ, ಪ್ರಭಾವವನ್ನು ವರ್ಣಿಸತೊಡಗಿದರು. ॥ ೩ ॥ ವ್ರಜದ ಗೋಪಿಯರು ವೇಣುಗಾನದ ಮಾಧುರ್ಯವನ್ನು ವರ್ಣಿಸಲು ಪ್ರಾರಂಭಿಸುತ್ತಿರುವಂತೆಯೇ ಅವರಿಗೆ ಕೊಳಲನ್ನು ನುಡಿಸುತ್ತಿದ್ದ ಶ್ರೀಕೃಷ್ಣನ ಸ್ಮರಣೆಯುಂಟಾಗಿ, ಅವನ ಕೆಂದುಟಿ, ಕುಡಿನೋಟ, ಸುಂದರವಾದ ಹುಬ್ಬುಗಳು, ಅವನ ತಲೆಯ ಮೇಲೆ ಬೆಳಗುತ್ತಿದ್ದ ಗುಂಗುರು-ಗುಂಗುರು ಕೂದಲು, ಮುಗುಳ್ನಗೆ - ಇವೆಲ್ಲವೂ ಅವರ ಸ್ಮೃತಿಪಥದಲ್ಲಿ ಸುಳಿದು ಜಗದಾನಂದಕಂದನನ್ನು ಸೇರಬೇಕೆಂಬ ಕಾತರವು ಹೆಚ್ಚಾಯಿತು. ಅವರ ಮನಸ್ಸೆಲ್ಲವೂ ಶ್ರೀಕೃಷ್ಣನಲ್ಲಿಯೇ ಸೇರಿಹೋಗಿದ್ದಿತು. ವೇಣುಗಾನ ಮಾಧುರ್ಯದ ವರ್ಣನೆಯಲ್ಲಿ ಅವರೆಲ್ಲರೂ ಅಸಮರ್ಥರಾದರು. ಕೃಷ್ಣಪ್ರೇಮಿಗಳಾದ ಗೋಪಿಯರು ವ್ರಜದಲ್ಲೇ ಇದ್ದುಕೊಂಡು ಶ್ರೀಕೃಷ್ಣನ ಚಿತ್ರವನ್ನು ತಮ್ಮ ಹೃದಯದಲ್ಲಿ ನೋಡತೊಡಗಿದರು. ॥ ೪ ॥ ಶ್ರೀಕೃಷ್ಣನು ಗೊಲ್ಲಬಾಲಕರೊಂದಿಗೆ ವೃಂದಾವನವನ್ನು ಪ್ರವೇಶಿಸುತ್ತಿದ್ದಾನೆ. ಅವನ ತಲೆಯ ಮೇಲೆ ಮಯೂರ ಪಿಚ್ಛಗಳಿವೆ. ಕಿವಿಗಳು ಕರ್ಣಿಕಾರ ಪುಷ್ಪಗಳಿಂದ ಅಲಂಕೃತವಾಗಿದ್ದವು, ಹೊಂಬಣ್ಣದ ಪೀತಾಂಬರವನ್ನು ಉಟ್ಟಿರುವನು. ಅವನ ಕುತ್ತಿಗೆಯಲ್ಲಿ ಐದು ಪ್ರಕಾರದ ಸುಗಂಧಿತ ಪುಷ್ಪಗಳಿಂದ ಪೋಣಿಸಿದ ವೈಜಯಂತೀ ಮಾಲೆಯಿದೆ. ಸುಂದರವಾದ ವಸ್ತ್ರಗಳನ್ನು ಧರಿಸಿ ನಾಟಕವಾಡಲು

ಬರ್ಹಾಪೀಡಂ ನಟವರವಪುಃ ಕರ್ಣಯೋಃ ಕರ್ಣಿಕಾರಂ
ಬಿಭ್ರದ್ವಾಸಃ ಕನಕಕಪಿಶಂ ವೈಜಯಂತೀಂ ಚ ಮಾಲಾಮ್ ।
ರಂಧ್ರಾನ್ವೇಣೋರಧರಸುಧಯಾ ಪೂರಯನ್ಗೋಪವೃಂದೈ-
ರ್ವೃಂದಾರಣ್ಯಂ ಸ್ವಪದರಮಣಂ ಪ್ರಾವಿಶದ್ಗೀತಕೀರ್ತಿಃ ॥ ೫ ॥

ಇತಿ ವೇಣುರವಂ ರಾಜನ್ಸರ್ವಭೂತಮನೋಹರಮ್ ।
ಶ್ರುತ್ವಾ ವ್ರಜಸ್ತ್ರಿಯಃ ಸರ್ವಾ ವರ್ಣಯಂತ್ಯೋಽಭಿರೇಭಿರೇ ॥ ೬ ॥

ಗೋಪ್ಯ ಊಚುಃ

ಅಕ್ಷಣ್ವತಾಂ ಫಲಮಿದಂ ನ ಪರಂ ವಿದಾಮಃ
ಸಖ್ಯಃ ಪಶೂನನುವಿವೇಶಯತೋರ್ವಯಸ್ಯೈಃ ।
ವಕ್ತ್ರಂ ವ್ರಜೇಶಸುತಯೋರನುವೇಣು ಜುಷ್ಟಂ
ಯೈರ್ವಾ ನಿಪೀತಮನುರಕ್ತಕಟಾಕ್ಷಮೋಕ್ಷಮ್ ॥ ೭ ॥

ಚೂತಪ್ರವಾಲಬರ್ಹಸ್ತಬಕೋತ್ಪಲಾಬ್ಜ-
ಮಾಲಾನುಪೃಕ್ತಪರಿಧಾನವಿಚಿತ್ರವೇಶೌ ।
ಮಧ್ಯೇ ವಿರೇಜತುರಲಂ ಪಶುಪಾಲಗೋಷ್ಠ್ಯಾಂ
ರಂಗೇ ಯಥಾ ನಟವರೌ ಕ್ವಚ ಗಾಯಮಾನೌ ॥ ೮ ॥

ಗೋಪ್ಯಃ ಕಿಮಾಚರದಯಂ ಕುಶಲಂ ಸ್ಮ ವೇಣು-
ರ್ದಾಮೋದರಾಧರಸುಧಾಮಪಿ ಗೋಪಿಕಾನಾಮ್ ।
ಭುಂಕ್ತೇ ಸ್ವಯಂ ಯದವಶಿಷ್ಟರಸಂ ಹ್ರದಿನ್ಯೋ
ಹೃಷ್ಯತ್ತ್ವಚೋಽಶ್ರು ಮುಮುಚುಸ್ತರವೋ ಯಥಾಽಽರ್ಯಾಃ ॥ ೯ ॥

ಸಿದ್ಧನಾದ ನಟನಂತೆ ಶೋಭಿಸುತ್ತಿದ್ದಾನೆ. ಕೊಳಲಿನ ರಂಧ್ರಗಳಲ್ಲಿ ತನ್ನ ಅಧರಾಮೃತವನ್ನು ತುಂಬುತ್ತಿರುವನು. ಅವನ ಕೀರ್ತಿಯನ್ನು ಹಾಡುತ್ತಾ ಗೋಪಬಾಲಕರು ಹಿಂದೆ-ಹಿಂದೆ ನಡೆಯುತ್ತಿದ್ದಾರೆ. ಹೀಗೆ ವೈಕುಂಠಕ್ಕಿಂತಲೂ ಶ್ರೇಷ್ಠವಾದ ವೃಂದಾವನವನ್ನು ತನ್ನ ಚರಣಕಮಲಗಳ ಚಿಹ್ನೆಯಿಂದ ಮತ್ತಷ್ಟು ರಮಣೀಯವನ್ನಾಗಿಸುತ್ತಾ ಮುನ್ನಡೆಯುತ್ತಿದ್ದಾನೆ. ॥ ೫ ॥ ಪರೀಕ್ಷಿತನೇ! ಈ ಮುರಲಿಯ ಧ್ವನಿಯು ಜಡ-ಚೇತನ ಸಮಸ್ತ ಪ್ರಾಣಿಗಳ ಚಿತ್ತವನ್ನು ಅಪಹರಿಸುತ್ತಿತ್ತು. ಗೋಪಿಯರು ಅದನ್ನು ಕೇಳಿದರು ಹಾಗೂ ಕೇಳಿ ಅದನ್ನು ವರ್ಣಿಸತೊಡಗಿದರು. ವರ್ಣನೆ ಮಾಡುತ್ತಾ-ಮಾಡುತ್ತಾ ಅವರು ತನ್ಮಯ ಮನಸ್ಸಿನಲ್ಲೇ ಶ್ರೀಕೃಷ್ಣನ ಸಾನ್ನಿಧ್ಯದ ಅನುಭವವನ್ನು ಪಡೆದುಕೊಂಡು ಆಲಿಂಗಿಸಿಕೊಂಡರು. ॥ ೬ ॥

ಗೋಪಿಯರು ಪರಸ್ಪರ ಆಡಿಕೊಳ್ಳುವರು - ಓರ್ವ ಗೋಪಿಯು ಹೇಳುತ್ತಾಳೆ - ಸಖಿಯರೇ! ಶ್ಯಾಮಸುಂದರ ಶ್ರೀಕೃಷ್ಣ ಮತ್ತು ಗೌರಸುಂದರ ಬಲರಾಮನು ಗೊಲ್ಲಬಾಲಕರೊಂದಿಗೆ ಹಸುಗಳನ್ನು ಅಟ್ಟಿಕೊಂಡು ವ್ರಜದಿಂದ ವೃಂದಾವನಕ್ಕೆ ಹೋಗುವಾಗ, ವ್ರಜಕ್ಕೆ ಬರುವಾಗ ಕೊಳಲಿನಿಂದ ಸಮಲಂಕೃತವಾದ ಅವರ ಮುದ್ದು ಮುಖದಿಂದ ಮತ್ತು ಪ್ರೇಮಪೂರ್ಣವಾದ ಓರೆನೋಟದಿಂದ ನಮ್ಮನ್ನು ನೋಡುತ್ತಿರುವಾಗ, ನಾವು ಅವರ ಆ ಮಧುರ ಮುಖಾರವಿಂದದ ಸವಿಯನ್ನು ಕಣ್ಣುಗಳಿಂದಲೇ ಪಾನಮಾಡುತ್ತೇವಲ್ಲ! ಕಣ್ಣುಗಳನ್ನು ಪಡೆದ ಜೀವರ, ಕಣ್ಣುಗಳ ಸಫಲತೆ ಇದೇಯಲ್ಲವೇ? ಇದರಿಂದ ಬೇರೆಯಾದ ಪ್ರಯೋಜನ ಯಾವುದಿದೆ? ॥ ೭ ॥ ಮತ್ತೊಬ್ಬಳು ಹೇಳಿದಳು - ಎಲೈ ಸಖಿಯೇ! ಶ್ಯಾಮಸುಂದರನಾದ ಶ್ರೀಕೃಷ್ಣನು ಪೀತಾಂಬರವನ್ನು, ಗೌರಾಂಗನಾದ ಬಲರಾಮನು ನೀಲಾಂಬರವನ್ನು ಧರಿಸಿಕೊಂಡು, ವೃಂದಾವನದಲ್ಲಿ ಇವರು ಮಾವಿನ ಎಳೆಚಿಗುರು, ನವಿಲುಗರಿ, ಹೂವುಗಳ ಗೊಂಚಲು, ನೈದಿಲೆ-ತಾವರೆಗಳ ಹಾರಗಳು ಇವುಗಳಿಂದ ಸಿಂಗರಿಸಿಕೊಂಡು ವಿಚಿತ್ರವಾದ ವೇಷಗಳನ್ನು ಧರಿಸಿ ಗೋಪಾಲರ ನಡುವೆ ಹಾಡುಗಳನ್ನು ಹಾಡುತ್ತಾ ರಂಗಮಂಟಪದಲ್ಲಿ ನಟಿಸುವ ಶ್ರೇಷ್ಠರಾದ ನಟರಂತೆಯೇ ವಿರಾಜಿಸುತ್ತಾರೆ. ॥ ೮ ॥ ಇನ್ನೊಬ್ಬಳು ಹೇಳಿದಳು - ಎಲೈ ಗೋಪಿಯರೇ! ಈ ಕೊಳಲಿನ ಭಾಗ್ಯವನ್ನಾದರೂ ನೋಡಿರಿ. ವೇಣುವು ಪುರುಷ ಜಾತಿಯದು. ಆದರೂ ಅದು ಹಿಂದಿನ ಜನ್ಮದಲ್ಲಿ ಎಂತಹ ಪುಣ್ಯಕಾರ್ಯಗಳನ್ನು, ತಪಸ್ಸನ್ನು ಆಚರಿಸಿದೆಯೋ! ನಮಗೆ ಮಾತ್ರವೇ ಮೀಸಲೆಂದು ಭಾವಿಸಲಾಗಿದ್ದ ಮಾಧವನ ಅಧರಾಮೃತವನ್ನು ನಮಗೆ ಸ್ವಲ್ಪವೂ ಉಳಿಯದಂತೆ ಪಾನಮಾಡಿಬಿಡುತ್ತದಲ್ಲ! ಈ ವೇಣುವನ್ನು ಬೆಳೆಸಿ ಪೋಷಿಸಿದ ಸರೋವರಗಳು, ವಿಕಸಿತವಾದ ಕಮಲಗಳ ಮೂಲಕ ತಮಗಾದ ರೋಮಾಂಚನವನ್ನು ವ್ಯಕ್ತಪಡಿಸುತ್ತಿವೆ. ತಮ್ಮ ವಂಶದಲ್ಲಿ ಭಗವದ್ಭಕ್ತರು ಹುಟ್ಟಿದಾಗ ಆನಂದಿಸುವಂತೆ ಬಿದಿರುಮೆಳೆಗಳು ತಮ್ಮ ವಂಶಕ್ಕೆ ಸೇರಿದ ವೇಣುವು ಶ್ರೀಕೃಷ್ಣನ ಅಧರಾಮೃತವನ್ನು ಪಾನಮಾಡುತ್ತಿರುವುದನ್ನು ನೋಡಿ ಹಿರಿ-ಹಿರಿ ಹಿಗ್ಗಿ ಆನಂದಾಶ್ರುಗಳನ್ನು ಸುರಿಸುತ್ತಿರುವವು. ॥ ೯ ॥

ವೃಂದಾವನಂ ಸಖಿ ಭುವೋ ವಿತನೋತಿ ಕೀರ್ತಿಂ
ಯದ್ದೇವಕೀಸುತಪದಾಂಬುಜಲಬ್ಧಲಕ್ಷ್ಮಿ ।
ಗೋವಿಂದ ವೇಣುಮನು ಮತ್ತಮಯೂರನೃತ್ಯಂ
ಪ್ರೇಕ್ಷ್ಯಾದ್ರಿಸಾನ್ವಪರತಾನ್ಯಸಮಸ್ತಸತ್ತ್ವಮ್ ॥ ೧೦ ॥

ಧನ್ಯಾಃ ಸ್ಮ ಮೂಢಮತಯೋಽಪಿ ಹರಿಣ್ಯ ಏತಾ
ಯಾ ನಂದನಂದನಮುಪಾತ್ತವಿಚಿತ್ರವೇಷಮ್ ।
ಆಕರ್ಣ್ಯ ವೇಣುರಣಿತಂ ಸಹಕೃಷ್ಣಸಾರಾಃ
ಪೂಜಾಂ ದಧುರ್ವಿರಚಿತಾಂ ಪ್ರಣಯಾವಲೋಕೈಃ ॥ ೧೧ ॥

ಕೃಷ್ಣಂ ನಿರೀಕ್ಷ್ಯ ವನಿತೋತ್ಸವರೂಪಶೀಲಂ
ಶ್ರುತ್ವಾ ಚ ತತ್ಕ್ವಣಿತವೇಣುವಿಚಿತ್ರಗೀತಮ್ ।
ದೇವ್ಯೋ ವಿಮಾನಗತಯಃ ಸ್ಮರನುನ್ನಸಾರಾ
ಭ್ರಶ್ಯತ್ಪ್ರಸೂನಕಬರಾ ಮುಮುಹುರ್ವಿನೀವ್ಯಃ ॥ ೧೨ ॥

ಗಾವಶ್ಚ ಕೃಷ್ಣಮುಖನಿರ್ಗತವೇಣುಗೀತ-
ಪೀಯೂಷಮುತ್ತಭಿತಕರ್ಣಪುಟೈಃ ಪಿಬಂತ್ಯಃ ।
ಶಾವಾಃ ಸ್ನುತಸ್ತನಪಯಃಕವಲಾಃ ಸ್ಮ ತಸ್ಥು-
ರ್ಗೋವಿಂದಮಾತ್ಮನಿ ದೃಶಾಶ್ರುಕಲಾಃ ಸ್ಪೃಶಂತ್ಯಃ ॥ ೧೩ ॥

ಮತ್ತೊಬ್ಬಳು ಹೇಳುವಳು – ಓ ಸಖಿಯರೇ! ಈ ವೃಂದಾವನವು ಯಶೋದಾನಂದನ ಶ್ರೀಕೃಷ್ಣನ ಚರಣಕಮಲಗಳ ಚಿಹ್ನೆಯನ್ನು ಹೊಂದಿ ಈ ಭೂಲೋಕದ ಕೀರ್ತಿಯು ವೈಕುಂಠದವರೆಗೂ ಹರಡಿದೆ. ಸಖೀ! ಶ್ರೀಕೃಷ್ಣನು ಮುನಿಜನರನ್ನು ವಿಮೋಹಗೊಳಿಸುವ ಮುರಲಿಯನ್ನು ನುಡಿಸುವಾಗ ನವಿಲುಗಳು ಮದವೇರಿ ನರ್ತಿಸತೊಡಗುವವು. ಇದನ್ನು ನೋಡಿದೊಡನೆ ಪರ್ವತದ ತಪ್ಪಲುಗಳಲ್ಲಿ ಸಂಚರಿಸುವ ಪಶು-ಪಕ್ಷಿಗಳೆಲ್ಲವೂ ಮೇಯುವುದನ್ನು ಬಿಟ್ಟು ಶಾಂತವಾಗಿ ನಿಂತು ಬಿಡುವುವು. ಗೆಳತಿಯರೇ! ಪ್ರಾಣವಲ್ಲಭನಾದ ಶ್ರೀಕೃಷ್ಣನು ವಿಚಿತ್ರವಾದ ವೇಷವನ್ನು ಧರಿಸಿಕೊಂಡು ಕೊಳಲನ್ನು ನುಡಿಸಲು ಪ್ರಾರಂಭಿಸುತ್ತಲೇ ಮಂದಮತಿಗಳಾಗಿದ್ದರೂ ಹೆಣ್ಣು ಜಿಂಕೆಗಳು ಮುರಳಿಯ ನಾದವನ್ನು ಕೇಳಿ ಪತಿಗಳಾದ ಕೃಷ್ಣಸಾರ ಮೃಗಗಳೊಂದಿಗೆ ನಂದನಂದನನ ಬಳಿಗೆ ಹೋಗಿ ಕಮಲದಂತೆ ವಿಶಾಲವಾದ ಮತ್ತು ಚಂಚಲವಾದ ಕಣ್ಣುಗಳ ಅವಲೋಕನದಿಂದಲೇ ಶ್ರೀಕೃಷ್ಣನನ್ನು ಪೂಜಿಸುತ್ತವೆ. ನಿಶ್ಚಯವಾಗಿಯೂ ಈ ಜಿಂಕೆಗಳ ಜೀವನವೇ ಧನ್ಯವಲ್ಲವೇ! ॥ ೧೦-೧೧ ॥ ಇನ್ನೊಬ್ಬಳು ಹೇಳಿದಳು ಸಖಿಯರೇ! ಜಿಂಕೆಗಳ ಮಾತಾದರೂ ಹಾಗಿರಲಿ. ಅತ್ತನೋಡಿ! ವಿಮಾನದಲ್ಲಿ ಸಂಚರಿಸುವ ಅಪ್ಸರೆಯರು – ಕಾಮಿನಿಯರ ಕಣ್ಮನಗಳನ್ನು ಸೂರೆಗೊಳ್ಳುವ ಸೌಂದರ್ಯದಿಂದಲೂ, ಸೌಶೀಲ್ಯದಿಂದಲೂ ಕೂಡಿದ ಶ್ರೀಕೃಷ್ಣನನ್ನು ನೋಡಿ, ವೇಣುವಿನಿಂದ ಅವನು ನುಡಿಸುವ ಸುಮಧುರ ಸಂಗೀತವನ್ನು ಕೇಳಿ, ಕಾಮಾವೇಶದಿಂದ ಧೈರ್ಯಗುಂದಿ ತುರುಬುಗಳಿಂದ ಹೂವಿನ ಮಾಲೆಗಳು ಜಾರುತ್ತಿರುವುದನ್ನು, ಉಟ್ಟೀರೆಗಳು ಸಡಿಲವಾಗುತ್ತಿರುವುದನ್ನು ಅರಿಯದೆ ವಿಮೋಹಿತರಾಗಿದ್ದಾರೆ. ॥ ೧೨ ॥ ಮಗದೊಬ್ಬಳು ಹೇಳಿದಳು – ಗೆಳತಿಯರೇ! ಅಪ್ಸರೆಯರ ವಿಷಯವನ್ನು ಏನು ಹೇಳುವಿರಿ? ಮಾತಿಲ್ಲದ ಗೋವುಗಳ ವರ್ತನೆಯನ್ನಾದರೂ ನೋಡಿರಲ್ಲ! ಶ್ರೀಕೃಷ್ಣನ ಮುಖಾರವಿಂದದಿಂದ ಹೊರಟ ವೇಣು ಗಾನ ಸುಧೆಯನ್ನು ಕೇಳಿದೊಡನೆಯೇ ನಮ್ಮ ಗೋವುಗಳು ತಮ್ಮೆರಡು ಕಿವಿಗಳನ್ನು ನಿಮಿರಿಸಿಕೊಂಡು, ಕಿವಿಗಳನ್ನೇ ದೊಗೆಗಳನ್ನಾಗಿಸಿಕೊಂಡು ಗಾನಾಮೃತ ಸುಧೆಯನ್ನು ಹೀರಿಕೊಳ್ಳುತ್ತವೆ. ತಮ್ಮ ಕಣ್ಣುಗಳ ಮೂಲಕವಾಗಿ ಶ್ಯಾಮಸುಂದರನನ್ನು ಹೃದಯದಲ್ಲಿರಿಸಿಕೊಂಡು ಆಲಿಂಗಿಸುತ್ತಾ ಆನಂದಬಾಷ್ಪಗಳನ್ನು ಸುರಿಸುತ್ತವೆ. ಹಸುಗಳ ಮೊಲೆಯುಣ್ಣುತ್ತಿರುವ ಎಳೆಗರುಗಳೂ ಕೂಡ ಶ್ರೀಕೃಷ್ಣನ ವೇಣು ಗಾನವನ್ನು ಕೇಳಿ ಬಾಯಲ್ಲಿರುವ ನೊರೆಹಾಲನ್ನು ಗುಟುಕಿಸದೆ ಸ್ತಬ್ಧವಾಗಿ ನಿಂತುಬಿಡುತ್ತವೆ. ಅವುಗಳ ಸೌಭಾಗ್ಯವು ಎಂತಹದು! ॥ ೧೩ ॥ ಮತ್ತೊಬ್ಬಳು ಹೇಳಿದಳು – ಸಖಿಯರೇ! ಹಸುಗಳು-ಕರುಗಳಾದರೋ ನಮ್ಮ ಮನೆಯವೇ ಆಗಿವೆ. ಅವರ ಮಾತನ್ನು ಬಿಟ್ಟು ಬಿಡಿ. ಆದರೆ ವೃಂದಾವನದಲ್ಲಿರುವ ಪಕ್ಷಿಗಳನ್ನು ನೋಡಿರಿ. ನಿಜಹೇಳಬೇಕಾದರೆ ಅವು ಪಕ್ಷಿಗಳಲ್ಲ. ಪಕ್ಷಿಗಳ ರೂಪದಲ್ಲಿ ಋಷಿ-ಮುನಿಗಳೇ ಆಗಿದ್ದಾರೆ. ಸುಂದರವಾದ ಚಿಗುರೆಲೆಗಳಿಂದ ಕೂಡಿದ ವೃಕ್ಷಗಳ ರೆಂಬೆಗಳ ಮೇಲೆ ಕುಳಿತು – ವೃಂದಾವನದಲ್ಲಿ ಕೊಳಲನ್ನುನುಡಿಸಿಕೊಂಡು ಆಟವಾಡುವ ಸೌಂದರ್ಯದ ಖನಿಯಾದ ಶ್ರೀಕೃಷ್ಣನನ್ನೇ ಎವೆಯಿಕ್ಕದೆ

ಪ್ರಾಯೋ ಬತಾಂಬ ವಿಹಗಾ ಮುನಯೋ ವನೇಽಸ್ಮಿನ್
ಕೃಷ್ಣೇಕ್ಷಿತಂ ತದುದಿತಂ ಕಲವೇಣುಗೀತಮ್ ।
ಆರುಹ್ಯ ಯೇ ದ್ರುಮಭುಜಾನ್ರುಚಿರಪ್ರವಾಲಾನ್
ಶೃಣ್ವಂತ್ಯ ಮೀಲಿತದೃಶೋ ವಿಗತಾನ್ಯವಾಚಃ ॥ ೧೪ ॥

ನೋಡುತ್ತಿರುತ್ತವೆ. ಅವು ಮುನಿಗಳೇ ಆಗಿರುವುದರಿಂದ ಬೇರೆ ಯಾವುದೇ ವಿಧವಾದ ಶಬ್ದವನ್ನು ಕೇಳದೆ ಶ್ರೀಕೃಷ್ಣನ ಸುಮಧುರವಾದ ವಾಣಿಯನ್ನು ತ್ರಿಭುವನ ಮೋಹಕವಾದ ವೇಣುಗಾನವನ್ನು ಮಾತ್ರವೇ ಕೇಳುತ್ತಿರುತ್ತವೆ. ಇಂತಹ ಪಕ್ಷಿಗಳಿಗಿಂತ ಧನ್ಯರಾದವರು ಬೇರೆ ಯಾರಿದ್ದಾರೆ? ॥ ೧೪ ॥

ನದ್ಯಸ್ತದಾ ತದುಪಧಾರ್ಯ ಮುಕುಂದಗೀತ-
ಮಾವರ್ತಲಕ್ಷಿತಮನೋಭವಭಗ್ನವೇಗಾಃ ।
ಆಲಿಂಗನಸ್ಥಗಿತಮೂರ್ಮಿಭುಜೈರ್ಮುರಾರೇ-
ರ್ಗೃಹ್ಣಂತಿ ಪಾದಯುಗಲಂ ಕಮಲೋಪಹಾರಾಃ ॥ ೧೫ ॥

ಮತ್ತೊಬ್ಬಳು ಹೇಳುತ್ತಾರೆ – ಎಲೈ ಸಖಿಯರೇ! ಇಷ್ಟರವರೆಗೆ ನೀವೆಲ್ಲ ಗೋವುಗಳು, ಪಕ್ಷಿಗಳು, ಇವರ ಕುರಿತು ಮಾತನಾಡುತ್ತಿರುವಿರಿ. ಅವುಗಳಾದರೋ ಚೇತನವಾಗಿವೆ. ಈ ಜಡವಾದ ನದಿಗಳನ್ನಾದರೋ ನೋಡಿರಿ. ಇವುಗಳಲ್ಲಿ ಕಂಡುಬರುವ ಸುಳಿಗಳ ನೆಪದಿಂದ ಶ್ರೀಕೃಷ್ಣನನ್ನು ಸೇರಬೇಕೆಂಬ ತೀವ್ರವಾದ ಆಕಾಂಕ್ಷೆಯನ್ನು ವ್ಯಕ್ತಪಡಿಸುತ್ತಿವೆ. ಆದುದರಿಂದಲೇ ಪ್ರವಾಹದ ವೇಗವೂ ಕಡಿಮೆಯಾಗಿದೆ. ಇವುಗಳೂ ಕೂಡ ಪ್ರೇಮಸ್ವರೂಪನಾದ ಶ್ರೀಕೃಷ್ಣನ ವೇಣುಗಾನವನ್ನು ಕೇಳುತ್ತಿರುವುವು. ನೋಡಿ! ನೋಡಿ! ಇವುಗಳು ತಮ್ಮ ತರಂಗಗಳೆಂಬ ಕೈಗಳಿಂದ ಶ್ರೀಕೃಷ್ಣನ ಪಾದಾರವಿಂದಗಳಿಗೆ ಕಮಲದ ಪುಷ್ಪಗಳನ್ನು ಸಮರ್ಪಿಸುತ್ತಾ ಆತನ ಚರಣಕಮಲಗಳನ್ನೇ ಆಲಿಂಗನಮಾಡಿಕೊಳ್ಳುತ್ತಿವೆ. ॥ ೧೫ ॥ ಮತ್ತೊಬ್ಬ ಗೋಪಿಕೆಯು ಹೇಳುತ್ತಾರೆ – ಸಖಿಯರೇ! ಈ ನದಿಗಳು ನಮ್ಮದೇ ಭೂಮಿಯ, ನಮ್ಮ ವೃಂದಾವನದೇ ವಸ್ತುಗಳಾಗಿವೆ. ಅವುಗಳಿಗೆ ಶ್ರೀಕೃಷ್ಣನ ಮೇಲೆ ಪ್ರೇಮವಿರುವುದು ಸಹಜವೇ ; ಆದರೆ ಈ ಮೋಡಗಳನ್ನು ಸ್ವಲ್ಪ ನೋಡಿರಲ್ಲ! ಕೃಷ್ಣ-ಬಲರಾಮರು ಗೋಪಾಲಕರೊಡನೆ ಬಿಸಿಲಿನಲ್ಲಿ ಹಸುಗಳನ್ನು ಮೇಯಿಸುತ್ತಿರುವುದನ್ನು ಕಂಡು, ಹೃದಯಾನಂದಕರವಾಗಿ ಕೊಳಲು ನುಡಿಸುತ್ತಿರುವುದನ್ನು ಕೇಳಿ, ಮೋಡಗಳ ಹೃದಯವು ಪ್ರೇಮರಸದಿಂದ ತುಂಬಿಹೋಗುತ್ತದೆ. ಶ್ರೀಕೃಷ್ಣನು ಮೇಘಶ್ಯಾಮನಾದುದರಿಂದ ತಮ್ಮ ಆಪ್ತಮಿತ್ರನೆಂದೇ ಭಾವಿಸಿರುವ ಮೇಘಗಳು ಶ್ರೀಕೃಷ್ಣನ ಮತ್ತು ಅವನ ಪರಿವಾರದ ಮೇಲೆ ಹರಡಿಕೊಂಡು ಅವರ ತಾಪವನ್ನು ನಿವಾರಿಸುತ್ತವೆ. ಹಾಗೆಯೇ ಶ್ರೀಕೃಷ್ಣನ ಮೇಲೆ ತುಂತುರುಗಳ ರೂಪವಾದ ಬಿಳಿಯ ಹೂವುಗಳನ್ನು ಸುರಿಸುತ್ತಾ ಶ್ರೀಕೃಷ್ಣನನ್ನು ಪೂಜಿಸುತ್ತಿವೆಯೋ ಎಂಬಂತಿದೆ. ॥ ೧೬ ॥

ದೃಷ್ಟ್ವಾಽಽತಪೇ ವ್ರಜಪಶೂನ್ಸಹ ರಾಮಗೋಪೈಃ
ಸಂಚಾರಯಂತಮನು ವೇಣುಮುದೀರಯಂತಮ್ ।
ಪ್ರೇಮಪ್ರವೃದ್ಧ ಉದಿತಃ ಕುಸುಮಾವಲೀಭಿಃ
ಸಖ್ಯುರ್ವ್ಯಧಾತ್ ಸ್ವವಪುಷಾಂಬುದ ಆತಪತ್ರಮ್ ॥ ೧೬ ॥

ಮತ್ತೊಬ್ಬಳು ಹೇಳಿದಳು – ಗೆಳತಿಯರೇ! ಈ ವೃಂದಾವನದಲ್ಲಿ ಸಂಚರಿಸುವ ಬೇಡತಿಯರೂ ಕೃತಕೃತ್ಯರಾಗಿರುವರೆಂದು ನಾನು ಭಾವಿಸುತ್ತೇನೆ. ನಮ್ಮ ಪ್ರಿಯತಮನಾದ ಶ್ರೀಕೃಷ್ಣನನ್ನು ನೋಡಿದಾಗ ಈ ಬೇಡತಿಯರಿಗೂ ಅವನೊಡನೆ ಸೇರಬೇಕೆಂಬ ಆಕಾಂಕ್ಷೆಯುಂಟಾಗುತ್ತದೆ. ಅವರು ಕಾಮಜ್ವರದಿಂದ ಪೀಡಿತರಾಗುತ್ತಾರೆ. ಆದರಿಂದ ಪಾರಾಗಲು ಅವರು ಕಂಡುಕೊಂಡ ಉಪಾಯವನ್ನು ಹೇಳುವೆನು, ಕೇಳಿರಿ. ನಮ್ಮ ಇನಿಯನ ಪ್ರೇಯಸಿಯರು ತಮ್ಮ ವಕ್ಷಸ್ಥಳಗಳನ್ನು ಶ್ರೀಕುಂಕುಮದಿಂದ ಅಲಂಕರಿಸಿಕೊಂಡಿರುತ್ತಾರೆ. ಕ್ರೀಡೆಗಳನ್ನಾಡುವಾಗ ವಕ್ಷಸ್ಥಳದ ಶ್ರೀಕುಂಕುಮವು ನಮ್ಮ ಇನಿಯನ ಚರಣಾರವಿಂದಗಳಿಗೆ ಅಂಟಿಕೊಳ್ಳುತ್ತದೆ. ಹಾಗೆ ಅಂಟಿಕೊಂಡ ಶ್ರೀಕುಂಕುಮವು ನಮ್ಮ ಕೃಷ್ಣನು ವೃಂದಾವನದಲ್ಲಿ ಸಂಚರಿಸುವಾಗ ಗರಿಕೆಹುಲ್ಲಿನ ಮೇಲೆ

ಪೂರ್ಣಾಃ ಪುಲಿಂದ್ಯ ಉರುಗಾಯಪದಾಬ್ಜರಾಗ-
ಶ್ರೀಕುಂಕುಮೇನ ದಯಿತಾಸ್ತನಮಂಡಿತೇನ ।
ತದ್ದರ್ಶನಸ್ಮರರುಜಸ್ತೃಣರೂಷಿತೇನ
ಲಿಂಪಂತ್ಯ ಆನನಕುಚೇಷು ಜಹುಸ್ತದಾಧಿಮ್ ॥ ೧೭ ॥

ಅಂಟಿಕೊಂಡಿರುತ್ತದೆ. ಅದನ್ನು ಅಲ್ಲಲ್ಲಿ ಹುಡುಕಿ ಈ ಬೇಡತಿಯರು ಪವಿತ್ರವಾದ ಆ ಶ್ರೀಕುಂಕುಮವನ್ನು ತಮ್ಮ ಹಣೆಗೂ ಮತ್ತು ಕುಚಗಳಿಗೂ ಹಚ್ಚಿಕೊಂಡು ಕಾಮಜ್ವರವನ್ನು ನಿವಾರಣೆ ಮಾಡಿಕೊಳ್ಳುತ್ತಾರೆ. ॥ ೧೭ ॥

ಹಂತಾಯಮದ್ರಿರಬಲಾ ಹರಿದಾಸವರ್ಯೋ
ಯದ್ರಾಮಕೃಷ್ಣಚರಣಸ್ಪರ್ಶಪ್ರಮೋದಃ ।
ಮಾನಂ ತನೋತಿ ಸಹಗೋಗಣಯೋಸ್ತಯೋರ್ಯತ್
ಪಾನೀಯಸೂಯವಸಕಂದರಕಂದಮೂಲೈಃ ॥ ೧೮ ॥

ಇನ್ನೊಬ್ಬಳು ಹೇಳುವಳು – ಓ ಸಖಿಯರೇ! ಈ ಗೋವರ್ಧನ ಪರ್ವತವು ಎಲ್ಲರಿಗಿಂತಲೂ ಮಿಗಿಲಾಗಿ ಶ್ರೀಕೃಷ್ಣನ ಸೇವೆ ಮಾಡುತ್ತಿದೆ. ಈ ಪರ್ವತವು ಭಗವಂತನ ಭಕ್ತರಲ್ಲಿ ಶ್ರೇಷ್ಠವಾದ ಭಕ್ತನೆಂದೇ ನಾನು ಭಾವಿಸುತ್ತೇನೆ. ನಮ್ಮ ಪ್ರಾಣವಲ್ಲಭನಾದ ಶ್ರೀಕೃಷ್ಣನ ಮತ್ತು ನಯನಾಭಿರಾಮ ಬಲರಾಮನ ಪಾದಸ್ಪರ್ಶದಿಂದ ಇದು ಮಹದಾನಂದವನ್ನು ಅನುಭವಿಸುತ್ತಿದೆ. ಆನಂದದಿಂದ ಪುಳಕಿತವಾದ ಈ ಗಿರಿಯು ರಾಮ-ಕೃಷ್ಣರಿಗೂ, ಗೋ-ಗೋಪಾಲಕರಿಗೂ ಸದಾಕಾಲ ಸತ್ಕಾರ ಮಾಡುತ್ತದೆ. ಸ್ನಾನ-ಪಾನಾದಿಗಳಿಗೆ ಗಿರಿನದಿಗಳಿಂದ ನಿರ್ಮಲವಾದ ನೀರನ್ನು ಒದಗಿಸುತ್ತದೆ. ಹಸುಗಳಿಗೆ ಮೇಯಲು ಹಚ್ಚ-ಹಸಿರು ಹುಲ್ಲನ್ನು ನೀಡುತ್ತದೆ. ರಾಮ-ಕೃಷ್ಣರು ಮತ್ತು ಗೋಪಾಲಕರು ವಿಶ್ರಮಿಸಿಕೊಳ್ಳಲು ಸುಂದರವಾದ ಗುಹೆಗಳನ್ನು ಒದಗಿಸುತ್ತದೆ. ಆಹಾರಕ್ಕಾಗಿ ಕಂದ-ಮೂಲ-ಫಲಗಳನ್ನು ಯಥೇಚ್ಛವಾಗಿ ಅರ್ಪಿಸುತ್ತಿದೆ. ಈ ಗೋವರ್ಧನ ಪರ್ವತದಂತೆ ಶ್ರೀಹರಿಗೆ ನಿರಂತರ ಸತ್ಕಾರಮಾಡುವವರು ಬೇರೆಯಾರಿದ್ದಾರೆ? ನಿಶ್ಚಯವಾಗಿಯೂ ಈ ಗೋವರ್ಧನಗಿರಿಯೇ ಪರಮ ಧನ್ಯವಾದುದು. ॥ ೧೮ ॥

ಗಾ ಗೋಪಕೈರನುವನಂ ನಯತೋರುದಾರ-
ವೇಣುಸ್ವನೈಃ ಕಲಪದೈಸ್ತನುಭೃತ್ಸು ಸಖ್ಯಃ ।
ಅಸ್ಪಂದನಂ ಗತಿಮತಾಂ ಪುಲಕಸ್ತರೂಣಾಂ
ನಿರ್ಯೋಗಪಾಶಕೃತಲಕ್ಷಣಯೋರ್ವಿಚಿತ್ರಮ್ ॥ ೧೯ ॥

ಮತ್ತೊಬ್ಬಳು ಹೇಳಿದಳು – ಸಖಿಯರೇ! ನಾನು ಮತ್ತೊಂದು ವಿಚಿತ್ರವಾದ ಸಂಗತಿಯನ್ನು ಹೇಳುವೆನು, ಲಾಲಿಸಿರಿ. ರಾಮ-ಕೃಷ್ಣರು ಪುಟ್ಟ ಹಸುಗಳನ್ನು, ಎತ್ತುಗಳನ್ನು ಕಟ್ಟಿಹಾಕುವುದಕ್ಕಾಗಿ ಹುರಿಹಗ್ಗಗಳ ಸಿಂಬೆಯನ್ನು ತಲೆಯ ಮೇಲೂ, ಹೆಗಲಮೇಲೂ ಹೊತ್ತುಕೊಂಡು ಗೊಲ್ಲರೊಡನೆ ಹಸುಗಳನ್ನು ಮೇಯಿಸುತ್ತಾ ಕೊಳಲು ನುಡಿಸುತ್ತಾ ಹೋಗುತ್ತಿರುತ್ತಾರೆ. ಇವರ ಕರ್ಣಾನಂದಕರವಾದ ವೇಣುಗಾನವನ್ನು ಕೇಳಿದೊಡನೆಯೇ ಜಂಗಮಗಳು (ಹಸುಗಳು) ಸ್ಥಾವರಗಳಾಗುತ್ತವೆ; ಸ್ತಬ್ಧವಾಗಿ ನಿಂತುಬಿಡುತ್ತವೆ. ಸ್ಥಾವರ ಜಂಗಮಗಳಾಗುತ್ತವೆ. ಸ್ಥಾವರಗಳಾದ ಗಿಡ-ಮರ-ಬಳ್ಳಿಗಳು ಪುಷ್ಪೋದ್ಗಮಾದಿಗಳ ರೂಪದಲ್ಲಿ ವೇಣುಗಾನದ ಆಸ್ವಾದನೆಯಿಂದ ಪುಳಕಿತವಾಗುವುದನ್ನು ವ್ಯಕ್ತಪಡಿಸುತ್ತವೆ. ॥ ೧೯ ॥

ಏವಂವಿಧಾ ಭಗವತೋ ಯಾ
ವೃಂದಾವನಚಾರಿಣಃ ।
ವರ್ಣಯಂತ್ಯೋ ಮಿಥೋ ಗೋಪ್ಯಃ
ಕ್ರೀಡಾಸ್ತನ್ಮಯತಾಂ ಯಯುಃ ॥ ೨೦ ॥

ಪರೀಕ್ಷಿತನೇ! ವೃಂದಾವನ ವಿಹಾರಿ ಶ್ರೀಕೃಷ್ಣನ ಇಂತಹ ಒಂದಲ್ಲ ಅನೇಕ ಲೀಲೆಗಳಿವೆ. ಗೋಪಿಯರು ಪ್ರತಿದಿನವೂ ಪರಸ್ಪರವನ್ನು ವರ್ಣಿಸುತ್ತಾ ತನ್ಮಯರಾಗುತ್ತಾರೆ. ಭಗವಂತನ ಲೀಲೆಗಳು ಅವರ ಹೃದಯದಲ್ಲಿ ಸ್ಫುರಣೆಗೊಳ್ಳತೊಡಗುತ್ತವೆ. ॥ ೨೦ ॥

ಇಪ್ಪತ್ತೊಂದನೆಯ ಅಧ್ಯಾಯವು ಮುಗಿಯಿತು. ॥ ೨೧ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮ ಸ್ಕಂಧೇ ಪೂರ್ವಾರ್ಧೇ
ವೇಣುಗೀತಂ ನಾಮೈಕವಿಂಶೋಽಧ್ಯಾಯಃ ॥ ೨೧ ॥

ಇಪ್ಪತ್ತೆರಡನೆಯ ಅಧ್ಯಾಯ

ಚೀರಹರಣ

ಶ್ರೀಶುಕ ಉವಾಚ

**ಹೇಮಂತೇ ಪ್ರಥಮೇ ಮಾಸಿ ನಂದವ್ರಜಕುಮಾರಿಕಾಃ ।
ಚೇರುರ್ಹವಿಷ್ಯಂ ಭುಂಜಾನಾಃ ಕಾತ್ಯಾಯನ್ಯರ್ಚನವ್ರತಮ್ ॥ ೧ ॥**

**ಆಪ್ಲುತ್ಯಾಂಭಸಿ ಕಾಲಿಂದ್ಯಾ ಜಲಾಂತೇ ಚೋದಿತೇಽರುಣೇ ।
ಕೃತ್ವಾ ಪ್ರತಿಕೃತಿಂ ದೇವೀಮಾನರ್ಚುರ್ನೃಪ ಸೈಕತೀಮ್ ॥ ೨ ॥**

**ಗಂಧೈರ್ಮಾಲ್ಯೈಃ ಸುರಭಿಭಿರ್ಬಲಿಭಿರ್ಧೂಪದೀಪಕೈಃ ।
ಉಚ್ಚಾವಚೈಶ್ಚೋಪಹಾರೈಃ ಪ್ರವಾಲಫಲತಂಡುಲೈಃ ॥ ೩ ॥**

**ಕಾತ್ಯಾಯನಿ ಮಹಾಮಾಯೇ ಮಹಾಯೋಗಿನ್ಯಧೀಶ್ವರಿ ।
ನಂದಗೋಪಸುತಂ ದೇವಿ ಪತಿಂ ಮೇ ಕುರು ತೇ ನಮಃ ।
ಇತಿ ಮಂತ್ರಂ ಜಪಂತ್ಯಸ್ತಾಃ ಪೂಜಾಂ ಚಕ್ರುಃ ಕುಮಾರಿಕಾಃ ॥ ೪ ॥**

**ಏವಂ ಮಾಸಂ ವ್ರತಂ ಚೇರುಃ ಕುಮಾರ್ಯಃ ಕೃಷ್ಣಚೇತಸಃ ।
ಭದ್ರಕಾಲೀಂ ಸಮಾನರ್ಚುರ್ಭೂಯಾನ್ನಂದಸುತಃ ಪತಿಃ ॥ ೫ ॥**

**ಉಷಸ್ಯುತ್ಥಾಯ ಗೋತ್ರೈಃ ಸ್ವೈರನ್ಯೋನ್ಯಾಬದ್ಧಬಾಹವಃ ।
ಕೃಷ್ಣಮುಚ್ಚೈರ್ಜಗುರ್ಯಾಂತ್ಯಃ ಕಾಲಿಂದ್ಯಾಂ ಸ್ನಾತುಮನ್ವಹಮ್ ॥ ೬ ॥**

**ನದ್ಯಾಂ ಕದಾಚಿದಾಗತ್ಯ ತೀರೇ ನಿಕ್ಷಿಪ್ಯ ಪೂರ್ವವತ್ ।
ವಾಸಾಂಸಿ ಕೃಷ್ಣಂ ಗಾಯಂತ್ಯೋ ವಿಜಹ್ರುಃ ಸಲಿಲೇ ಮುದಾ ॥ ೭ ॥**

**ಭಗವಾಂಸ್ತದಭಿಪ್ರೇತ್ಯ ಕೃಷ್ಣೋ ಯೋಗೇಶ್ವರೇಶ್ವರಃ ।
ವಯಸ್ಯೈರಾವೃತಸ್ತತ್ರ ಗತಸ್ತತ್ಕರ್ಮಸಿದ್ಧಯೇ ॥ ೮ ॥**

**ತಾಸಾಂ ವಾಸಾಂಸ್ಯುಪಾದಾಯ ನೀಪಮಾರುಹ್ಯ ಸತ್ವರಃ ।
ಹಸದ್ಭಿಃ ಪ್ರಹಸನ್ಬಾಲೈಃ ಪರಿಹಾಸಮುವಾಚ ಹ ॥ ೯ ॥**

ಶ್ರೀಶುಕಮಹಾಮುನಿಗಳು ಹೇಳುತ್ತಾರೆ - ಎಲೈ ಪರೀಕ್ಷಿತನೇ ! ಈಗ ಹೇಮಂತ ಋತುವು ಪ್ರಾರಂಭವಾಯಿತು. ಇದರ ಮೊದಲ ತಿಂಗಳಲ್ಲಿ ಅಂದರೆ - ಮಾರ್ಗಶಿರ ಮಾಸದಲ್ಲಿ ನಂದಗೋಪನ ಹಳ್ಳಿಯಲ್ಲಿದ್ದ ಕುಮಾರಿಯರು ಕಾತ್ಯಾಯಿನೀದೇವಿಯ ಪೂಜೆಯನ್ನು ಮತ್ತು ವ್ರತವನ್ನು ಮಾಡತೊಡಗಿದರು. ವ್ರತದ ನಿಯಮದಂತೆ ಅವರು ಹವಿಷ್ಯಾನ್ನವನ್ನೇ ಊಟ ಮಾಡುತ್ತಿದ್ದರು. ॥ ೧ ॥ ಮಹಾರಾಜ ! ಆ ಕನ್ಯೆಯರು ಅರುಣೋದಯವಾಗುತ್ತಲೇ ಯಮುನಾ ನದಿಯ ತೀರ್ಥದಲ್ಲಿ ಸ್ನಾನಮಾಡಿ, ತೀರದಲ್ಲಿರುವ ಮರಳಿನಿಂದಲೇ ಕಾತ್ಯಾಯನಿಯ ಮೂರ್ತಿಯನ್ನು ಕಲ್ಪಿಸಿಕೊಂಡು, ಸುಗಂಧಿತವಾದ ಗಂಧ, ಪುಷ್ಪಗಳಿಂದಲೂ, ಹಾರಗಳಿಂದಲೂ, ಬಗೆ ಬಗೆಯ ನೈವೇದ್ಯಗಳಿಂದಲೂ ಧೂಪ-ದೀಪ ಮುಂತಾದ ಸಣ್ಣ-ದೊಡ್ಡ ಪೂಜಾಸಾಮಗ್ರಿಗಳಿಂದಲೂ, ಚಿಗುರೆಲೆಗಳಿಂದಲೂ, ಅಕ್ಷತೆಗಳಿಂದಲೂ ದೇವಿಯ ಪೂಜೆಯನ್ನು ಮಾಡುತ್ತಿದ್ದರು. ॥ ೨-೩ ॥ "ಹೇ ಕಾತ್ಯಾಯನಿ ಮಹಾಮಾಯಾ ದೇವಿಯೇ ! ಮಹಾಯೋಗಿನಿಯೇ ! ಸಮಸ್ತರಿಗೂ ಏಕಮಾತ್ರ ಸ್ವಾಮಿನಿಯೇ ! ನಂದಗೋಪನ ಮಗನಾದ ಶ್ರೀಕೃಷ್ಣನು ನಮಗೆ ಪತಿಯಾಗುವಂತೆ ಅನುಗ್ರಹಿಸು. ನಿನ್ನ ಪಾದಾರವಿಂದಗಳಲ್ಲಿ ನಮಸ್ಕರಿಸುತ್ತೇವೆ"- ಎಂಬ ಈ ಮಹಾಮಂತ್ರವನ್ನು ಎಲ್ಲ ಕುಮಾರಿಯರೂ ಜಪಿಸುತ್ತಾ ದೇವಿಯ ಆರಾಧನೆ ಮಾಡುತ್ತಿದ್ದರು. ॥ ೪ ॥ ಹೀಗೆ ಶ್ರೀಕೃಷ್ಣನಲ್ಲಿಯೇ ನೆಟ್ಟು ಹೋಗಿದ್ದ ಮನಸ್ಸುಳ್ಳ ಆ ಕುಮಾರಿಯರು ಒಂದು ತಿಂಗಳಕಾಲ ವ್ರತಾನುಷ್ಠಾನ ಮಾಡುತ್ತಾ ನಂದಗೋಪನ ಮಗನೇ ನಮಗೆ ಪತಿಯಾಗಬೇಕೆಂದು ಭದ್ರಕಾಳಿಯನ್ನು ಶ್ರದ್ಧೆಯಿಂದ ಪೂಜಿಸಿದರು. ॥ ೫ ॥ ಆ ಕನ್ನೆಯರು ಪ್ರತಿದಿನವೂ ಉಷಃಕಾಲದಲ್ಲೇ ಎದ್ದು ಒಬ್ಬರು ಮತ್ತೊಬ್ಬರ ಹೆಸರಿಡಿದು ಕೂಗಿಕೊಳ್ಳುತ್ತಾ ಪರಸ್ಪರ ಕೈ-ಕೈಹಿಡಿದುಕೊಂಡು ಗಟ್ಟಿಯಾಗಿ ಭಗವಾನ್ ಶ್ರೀಕೃಷ್ಣನ ಲೀಲೆಗಳನ್ನು ಅವನ ನಾಮಗಳನ್ನು ಹಾಡುತ್ತಾ ಯಮುನಾ ಜಲದಲ್ಲಿ ಸ್ನಾನಮಾಡಲು ಹೋಗುತ್ತಿದ್ದರು. ॥ ೬ ॥

ಒಂದು ದಿನ ಕುಮಾರಿಯರೆಲ್ಲರೂ ಪ್ರತಿದಿನದಂತೆ ಯಮುನಾ ತೀರಕ್ಕೆ ಹೋಗಿ ತಮ್ಮ-ತಮ್ಮ ಬಟ್ಟೆಗಳನ್ನು ಬಿಚ್ಚಿಟ್ಟು ಭಗವಾನ್ ಶ್ರೀಕೃಷ್ಣನ ಗುಣಗಳನ್ನು ಹಾಡುತ್ತಾ ಆನಂದವಾಗಿ ಜಲಕ್ರೀಡೆಯಾಡತೊಡಗಿದರು. ॥ ೭ ॥ ಪರೀಕ್ಷಿತನೇ ! ಯೋಗೇಶ್ವರರಿಗೂ ಈಶ್ವರನಾದ ಶ್ರೀಕೃಷ್ಣನಿಗೆ ಗೋಪಕನ್ನೆಯರ ಆಶಯವು ತಿಳಿದು ಹೋಯಿತು. ಅವನು ಅವರ ಆಶಯವನ್ನು ಪೂರೈಸಿಕೊಡುವ ಸಲುವಾಗಿ ತನ್ನ ಗೆಳೆಯರಾದ ಗೋಪಬಾಲಕರೊಡನೆ ಸಮಾವೃತನಾಗಿ ಆ ಕುಮಾರಿಯರ ಸಾಧನೆಯನ್ನು ಸಫಲಗೊಳಿಸಲಿಕ್ಕಾಗಿ ಯಮುನಾನದಿಯ ತೀರಕ್ಕೆ ಆಗಮಿಸಿದನು. ॥ ೮ ॥ ಅವನು ಆ ಗೋಪಿಯರ ಎಲ್ಲ ವಸ್ತ್ರಗಳನ್ನು ಎತ್ತಿಕೊಂಡು ಲಗುಬಗೆಯಿಂದ ಒಂದು ಕದಂಬ ವೃಕ್ಷವನ್ನು ಹತ್ತಿ ಕುಳಿತನು. ಜೊತೆಗಿನ ಗೋಪಬಾಲಕರೆಲ್ಲರೂ ಕಿಲ-ಕಿಲನೆ ನಗತೊಡಗಿದರು. ಶ್ರೀಕೃಷ್ಣನು ಅವರೊಂದಿಗೆ ನಗುತ್ತಾ ಗೋಪಕುಮಾರಿಯರಿಗೆ ಹೇಳುತ್ತಾನೆ. ॥ ೯ ॥

ಅತ್ರಾಗತ್ಯಾಬಲಾಃ ಕಾಮಂ ಸ್ವಂ ಸ್ವಂ ವಾಸಃ ಪ್ರಗೃಹ್ಯತಾಮ್ ।
ಸತ್ಯಂ ಬ್ರವಾಣಿ ನೋ ನರ್ಮ ಯದ್ಯೂಯಂ ವ್ರತಕರ್ಶಿತಾಃ ॥ ೧೦ ॥

ನ ಮಯೋದಿತಪೂರ್ವಂ ವಾ ಅನೃತಂ ತದಿಮೇ ವಿದುಃ ।
ಏಕೈಕಶಃ ಪ್ರತೀಚ್ಛಧ್ವಂ ಸಹೈವೋತ ಸುಮಧ್ಯಮಾಃ ॥ ೧೧ ॥

ತಸ್ಯ ತತ್ ಕ್ಷ್ವೇಲಿತಂ ದೃಷ್ಟ್ವಾ ಗೋಪ್ಯಃ ಪ್ರೇಮಪರಿಪ್ಲುತಾಃ ।
ವ್ರೀಡಿತಾಃ ಪ್ರೇಕ್ಷ್ಯ ಚಾನ್ಯೋನ್ಯಂ ಜಾತಹಾಸಾ ನ ನಿರ್ಯಯುಃ ॥ ೧೨ ॥

ಏವಂ ಬ್ರುವತಿ ಗೋವಿಂದೇ ನರ್ಮಣಾಽಽಕ್ಷಿಪ್ತಚೇತಸಃ ।
ಆಕಂಠಮಗ್ನಾಃ ಶೀತೋದೇ ವೇಪಮಾನಾಸ್ತಮಬ್ರುವನ್ ॥ ೧೩ ॥

ಮಾನಯಂ ಭೋಃ ಕೃಥಾಸ್ತ್ವಾಂ ತು ನಂದಗೋಪಸುತಂ ಪ್ರಿಯಮ್ ।
ಜಾನೀಮೋಽಂಗ ವ್ರಜಶ್ಲಾಘ್ಯಂ ದೇಹಿ ವಾಸಾಂಸಿ ವೇಪಿತಾಃ ॥ ೧೪ ॥

ಶ್ಯಾಮಸುಂದರ ತೇ ದಾಸ್ಯಃ ಕರವಾಮ ತವೋದಿತಮ್ ।
ದೇಹಿ ವಾಸಾಂಸಿ ಧರ್ಮಜ್ಞ ನೋ ಚೇದ್ರಾಜ್ಞೇ ಬ್ರುವಾಮಹೇ ॥ ೧೫ ॥

ಶ್ರೀಭಗವಾನುವಾಚ

ಭವತ್ಯೋ ಯದಿ ಮೇ ದಾಸ್ಯೋ ಮಯೋಕ್ತಂ ವಾ ಕರಿಷ್ಯಥ ।
ಅತ್ರಾಗತ್ಯ ಸ್ವವಾಸಾಂಸಿ ಪ್ರತೀಚ್ಛಂತು ಶುಚಿಸ್ಮಿತಾಃ ॥ ೧೬ ॥

ತತೋ ಜಲಾಶಯಾತ್ಸರ್ವಾ ದಾರಿಕಾಃ ಶೀತವೇಪಿತಾಃ ।
ಪಾಣಿಭ್ಯಾಂ ಯೋನಿಮಾಚ್ಛಾದ್ಯ ಪ್ರೋತ್ತೇರುಃ ಶೀತಕರ್ಶಿತಾಃ ॥ ೧೭ ॥

ಭಗವಾನಾಹತಾ ವೀಕ್ಷ್ಯ ಶುದ್ಧಭಾವಪ್ರಸಾದಿತಃ ।
ಸ್ಕಂಧೇ ನಿಧಾಯ ವಾಸಾಂಸಿ ಪ್ರೀತಃ ಪ್ರೋವಾಚ ಸಸ್ಮಿತಮ್ ॥ ೧೮ ॥

ಎಲೈ ಕುಮಾರಿಯರೇ! ನಿಮಗೆ ನಿಮ್ಮ ವಸ್ತ್ರಗಳು ಬೇಕಿದ್ದರೆ ಇಲ್ಲಿಗೆ ಬಂದು ತೆಗೆದುಕೊಂಡು ಹೋಗಿರಿ. ನಾನು ನಿಮ್ಮಲ್ಲಿ ನಿಜವನ್ನೇ ಹೇಳುತ್ತಿದ್ದೇನೆ. ಖಂಡಿತವಾಗಿ ಪರಿಹಾಸ್ಯಕ್ಕಾಗಿ ಅಲ್ಲ. ನೀವೆಲ್ಲರೂ ವ್ರತಾನುಷ್ಠಾನದಿಂದ ದುರ್ಬಲೆಯರಾಗಿರುವಿರಿ. ॥ ೧೦ ॥ ನಾನು ಎಂದೂ ಸುಳ್ಳು ಹೇಳಲಿಲ್ಲ – ಇದನ್ನು ನನ್ನ ಮಿತ್ರರಾದ ಈ ಗೋಪಬಾಲಕರು ಬಲ್ಲರು. ಸುಂದರಿಯರೇ! ನೀವು ಬಯಸುವಿರಾದರೆ ಬೇರೆ-ಬೇರೆಯಾಗಿ ಬಂದು ನಿಮ್ಮ-ನಿಮ್ಮ ವಸ್ತ್ರಗಳನ್ನು ಕೊಂಡುಹೋಗಿರಿ. ಇಲ್ಲವೇ ಒಟ್ಟಿಗೆ ಬಂದು ಕೊಂಡೊಯ್ಯಿರಿ. ನನಗೆ ಇದರಲ್ಲಿ ಯಾವ ಅಭ್ಯಂತರವೂ ಇಲ್ಲ. ॥ ೧೧ ॥ ಭಗವಂತನ ಈ ಪರಿಹಾಸ್ಯದ ಮಾತನ್ನು ಕೇಳಿ ಗೋಪಿಕೆಯರ ಹೃದಯ ಪ್ರೇಮದಿಂದ ತುಂಬಿಹೋಯಿತು. ಅವರು ಸ್ವಲ್ಪ ನಾಚಿಕೊಂಡು ಪರಸ್ಪರ ನೋಡಿಕೊಂಡು ಮುಗುಳ್ನಗುತ್ತಿದ್ದರು. ನೀರಿನಿಂದ ಹೊರಗೆ ಬರಲಿಲ್ಲ. ॥ ೧೨ ॥ ಭಗವಂತನು ಪರಿಹಾಸ್ಯದ ಮಾತುಗಳನ್ನಾಡಿದಾಗ ಅವನ ವಿನೋದದಿಂದ ಕುಮಾರಿಯರ ಚಿತ್ತವು ಇನ್ನೂ ಹೆಚ್ಚಾಗಿ ಅವನೆಡೆಗೆ ಸೆಳೆಯಲ್ಪಟ್ಟಿತು. ಅವರು ಕತ್ತಿನವರೆಗೆ ನೀರಿನಲ್ಲಿ ಮುಳುಗಿ ನಿಂತಿದ್ದರು. ಅವರ ಶರೀರಗಳು ಚಳಿಯಿಂದ ಗಡ-ಗಡನೆ ನಡುಗುತ್ತಿದ್ದವು. ಅವರು ಕೃಷ್ಣನಲ್ಲಿ ಹೇಳತೊಡಗಿದರು. ॥ ೧೩ ॥ ಸಮಸ್ತರಿಗೂ ಪ್ರಿಯನಾದ ಓ ಕೃಷ್ಣನೇ! ಇಂತಹ ಅನ್ಯಾಯವನ್ನು ನೀನು ಮಾಡಬಾರದು. ನೀನು ನಂದರಾಜನ ಮುದ್ದು ಮಗನೆಂಬುದನ್ನು ನಾವು ಬಲ್ಲೆವು. ಸಮಸ್ತ ವ್ರಜವಾಸಿಗಳಿಂದ ಶ್ಲಾಘಿಸಲ್ಪಡುವವನೆಂಬುದನ್ನೂ ನಾವು ಬಲ್ಲೆವು. ಆದುದರಿಂದ ನಮಗೂ ಪ್ರಿಯತಮನಾಗಿರುವೆ. ನೋಡು ನಾವು ಚಳಿಯಿಂದ ನಡುಗುತ್ತಿದ್ದೇವೆ. ನೀನು ನಮ್ಮ ವಸ್ತ್ರಗಳನ್ನು ಕೊಟ್ಟುಬಿಡು. ॥ ೧೪ ॥ ಪ್ರಿಯ ಶ್ಯಾಮಸುಂದರನೇ! ನಾವು ನಿನ್ನ ದಾಸಿಯರಾಗಿದ್ದೇವೆ. ನೀನು ಹೇಳಿದಂತೆ ಮಾಡಲು ಸಿದ್ಧರಾಗಿದ್ದೇವೆ. ನೀನಾದರೋ ಧರ್ಮದ ಮರ್ಮವನ್ನು ಚೆನ್ನಾಗಿ ತಿಳಿಯುತ್ತಿರುವೆ. ನಮಗೆ ಕಷ್ಟಕೊಡಬೇಡ. ನಮ್ಮ ಬಟ್ಟೆ ನಮಗೆ ಕೊಟ್ಟುಬಿಡು. ಇಲ್ಲದಿದ್ದರೆ ನಾವು ಹೋಗಿ ನಂದರಾಜನಿಗೆ ಹೇಳಿಬಿಡುತ್ತೇವೆ. ॥ ೧೫ ॥

ಭಗವಾನ್ ಶ್ರೀಕೃಷ್ಣನು ಹೇಳಿದನು – ಶುಭ್ರವಾದ ಮಂದಹಾಸವುಳ್ಳ ಕುಮಾರಿಯರೇ! ನನಗೆ ದಾಸಿಯರಾಗಲು ನೀವು ಸಿದ್ಧರಿದ್ದರೆ ನಾನು ಹೇಳಿದಂತೆ ಮಾಡಿರಿ. ಇಲ್ಲಿಗೆ ಬಂದು ನಿಮ್ಮ-ನಿಮ್ಮ ವಸ್ತ್ರಗಳನ್ನು ತೆಗೆದುಕೊಂಡು ಹೋಗಿರಿ. ॥ ೧೬ ॥ ಪರೀಕ್ಷಿತನೇ! ಆ ಕುಮಾರಿಯರು ಚಳಿಯಿಂದ ನಡುಗುತ್ತಿದ್ದರು. ಭಗವಂತನ ಇಂತಹ ಮಾತನ್ನು ಕೇಳಿ ಅವರ ತಮ್ಮ ಎರಡೂ ಕೈಗಳಿಂದ ಗುಪ್ತಾಂಗಗಳನ್ನು ಮುಚ್ಚಿಕೊಂಡು ಯಮುನೆಯಿಂದ ಮೇಲಕ್ಕೆ ಬಂದರು. ಆಗ ಚಳಿಯು ಅವರೆಲ್ಲರನ್ನು ತುಂಬಾ ಬಾಧಿಸುತ್ತಿತ್ತು. ॥ ೧೭ ॥ ಅವರ ಈ ಶುದ್ಧಭಾವದಿಂದ ಭಗವಂತನು ಅತ್ಯಂತ ಪ್ರಸನ್ನನಾದನು. ತನ್ನ ಬಳಿಗೆ ಬಂದ ಅವರನ್ನು ನೋಡಿ ಅವನು ಗೋಪಿಯರ ಬಟ್ಟೆಗಳನ್ನು ತನ್ನ ಹೆಗಲಮೇಲಿಟ್ಟುಕೊಂಡು, ಮುಗುಳ್ನಗುತ್ತಾ ಹೇಳಿದನು. ॥ ೧೮ ॥

ಯೂಯಂ ವಿವಸ್ತ್ರಾ ಯದಪೋ ಧೃತವ್ರತಾ
ವ್ಯಗಾಹತೈತತ್ತದು ದೇವಹೇಲನಮ್ ।
ಬದ್ಧ್ವಾಂಜಲಿಂ ಮೂರ್ಧ್ನ್ಯಪನುತ್ತಯೇಂಽಹಸಃ
ಕೃತ್ವಾ ನಮೋಽಧೋ ವಸನಂ ಪ್ರಗೃಹ್ಯತಾಮ್ ॥ ೧೯ ॥

ಇತ್ಯಚ್ಯುತೇನಾಭಿಹಿತಾ ವ್ರಜಾಬಲಾ
ಮತ್ವಾ ವಿವಸ್ತ್ರಾಪ್ಲವನಂ ವ್ರತಚ್ಯುತಿಮ್ ।
ತತ್ಪೂರ್ತಿಕಾಮಾಸ್ತದಶೇಷಕರ್ಮಣಾಂ
ಸಾಕ್ಷಾತ್ಕೃತಂ ನೇಮುರವದ್ಯಮೃಗ್ಯತಃ ॥ ೨೦ ॥

ತಾಸ್ತಥಾವನತಾ ದೃಷ್ಟ್ವಾ ಭಗವಾನ್ ದೇವಕೀಸುತಃ ।
ವಾಸಾಂಸಿ ತಾಭ್ಯಃ ಪ್ರಾಯಚ್ಛತ್ಕರುಣಸ್ತೇನ ತೋಷಿತಃ ॥ ೨೧ ॥

ದೃಢಂ ಪ್ರಲಬ್ಧಾಸ್ತ್ರಪಯಾ ಚ ಹಾಪಿತಾಃ
ಪ್ರಸ್ತೋಭಿತಾಃ ಕ್ರೀಡನವಚ್ಚ ಕಾರಿತಾಃ ।
ವಸ್ತ್ರಾಣಿ ಚೈವಾಪಹೃತಾನ್ಯಥಾಪ್ಯಮುಂ
ತಾ ನಾಭ್ಯಸೂಯನ್ ಪ್ರಿಯಸಂಗನಿರ್ವೃತಾಃ ॥ ೨೨ ॥

ಪರಿಧಾಯ ಸ್ವವಾಸಾಂಸಿ ಪ್ರೇಷ್ಠಸಂಗಮಸಜ್ಜಿತಾಃ ।
ಗೃಹೀತಚಿತ್ತಾ ನೋ ಚೇಲುಸ್ತಸ್ಮಿಂಲ್ಲಜ್ಜಾಯಿತೇಕ್ಷಣಾಃ ॥ ೨೩ ॥

ತಾಸಾಂ ವಿಜ್ಞಾಯ ಭಗವಾನ್ ಸ್ವಪಾದಸ್ಪರ್ಶಕಾಮ್ಯಯಾ ।
ಧೃತವ್ರತಾನಾಂ ಸಂಕಲ್ಪಮಾಹ ದಾಮೋದರೋಽಬಲಾಃ ॥ ೨೪ ॥

ಸಂಕಲ್ಪೋ ವಿದಿತಃ ಸಾಧ್ವ್ಯೋ ಭವತೀನಾಂ ಮದರ್ಚನಮ್ ।
ಮಯಾನುಮೋದಿತಃ ಸೋಽಸೌ ಸತ್ಯೋ ಭವಿತುಮರ್ಹತಿ ॥ ೨೫ ॥

ಎಲೈ ಗೋಪಿಯರೇ! ನೀವು ಕೈಗೊಂಡ ವ್ರತವನ್ನು ಚೆನ್ನಾಗಿ ನೆರವೇರಿಸಿರುವಿರಿ, ಇದರಲ್ಲಿ ಸಂದೇಹವೇ ಇಲ್ಲ. ಆದರೆ ನೀವು ವಸ್ತ್ರಹೀನರಾಗಿ ನದಿಯಲ್ಲಿ ಸ್ನಾನಮಾಡಿದುದು ಜಲಾಧಿಷ್ಠಾತೃ ದೇವನಾದ ವರುಣನಿಗೂ ಮತ್ತು ಯಮುನಾದೇವಿಗೂ ಅಪರಾಧ ಮಾಡಿದಂತಾಗಿದೆ. ಈ ದೋಷದ ಶಾಂತಿಗಾಗಿ ನೀವು ನಿಮ್ಮೆರಡೂ ಕೈಗಳನ್ನು ಜೋಡಿಸಿ (ಬದ್ಧಾಂಜಲಿಯಾಗಿ) ತಲೆಯ ಮೇಲಿಟ್ಟುಕೊಂಡು ಬಗ್ಗಿ ನಮಸ್ಕಾರ ಮಾಡಿರಿ. ಅನಂತರ ನಿಮ್ಮ-ನಿಮ್ಮ ವಸ್ತ್ರಗಳನ್ನು ಕೊಂಡುಹೋಗಿರಿ. ॥ ೧೯ ॥ ಭಗವಾನ್ ಶ್ರೀಕೃಷ್ಣನ ಮಾತನ್ನು ಕೇಳಿದ ಆ ವ್ರಜದ ಕುಮಾರಿಯರು – ನಿಜವಾಗಿ ನಾವು ವಸ್ತ್ರಹೀನರಾಗಿ ಸ್ನಾನಮಾಡಿದ್ದರಿಂದ ನಮ್ಮ ವ್ರತದಲ್ಲಿ ಕೊರತೆ ಉಂಟಾಯಿತೆಂದೇ ತಿಳಿದರು. ಆದ್ದರಿಂದ ಅದು ನಿರ್ವಿಘ್ನವಾಗಿ ನೆರವೇರಲು ಅವರು ಸಮಸ್ತ ಕರ್ಮಗಳ ಸಾಕ್ಷಿಯಾದ ಶ್ರೀಕೃಷ್ಣನಿಗೆ ನಮಸ್ಕರಿಸಿದರು. ಏಕೆಂದರೆ, ಅವನಿಗೆ ನಮಸ್ಕಾರ ಮಾಡುವುದರಿಂದ ಎಲ್ಲ ನ್ಯೂನಾತಿರಿಕ್ತಗಳು ಮತ್ತು ಅಪರಾಧಗಳು ತೊಳೆದು ಹೋಗುವುವು. ॥ ೨೦ ॥ ಯಶೋದಾನಂದನ ಭಗವಾನ್ ಶ್ರೀಕೃಷ್ಣನು – ಎಲ್ಲ ಕುಮಾರಿಯರು ನನ್ನ ಆಜ್ಞೆಗನುಸಾರವಾಗಿ ನಮಸ್ಕರಿಸುತ್ತಿದ್ದಾರೆ ಎಂದು ನೋಡಿ ಅತ್ಯಂತ ಪ್ರಸನ್ನನಾದನು. ಅವನ ಹೃದಯದಲ್ಲಿ ಕರುಣೆ ಉಕ್ಕಿಬಂತು ಹಾಗೂ ಅವನು ಅವರ ವಸ್ತ್ರಗಳನ್ನು ಕೊಟ್ಟುಬಿಟ್ಟನು. ॥ ೨೧ ॥

ಪರೀಕ್ಷಿತನೇ! ಶ್ರೀಕೃಷ್ಣನಿಂದ ಗೋಪಕುಮಾರಿಯರು ಲಜ್ಜೆ ಸಂಕೋಚಪಡಬೇಕಾಗಿ ಬಂದು, ಅಪಹಾಸ್ಯಕ್ಕೀಡಾದರು. ಆಟದ ಬೊಂಬೆಯಂತೆ ಶ್ರೀಕೃಷ್ಣನು ಗೋಪಕುಮಾರಿಯರನ್ನು ಮನಬಂದಂತೆ ಆಟವಾಡಿಸಿದನು. ಅವರ ವಸ್ತ್ರಗಳನ್ನು ಅಪಹರಿಸಿದನು. ಆದರೂ ಅವರು ಅವನ ಮೇಲೆ ಕೋಪಗೊಳ್ಳಲಿಲ್ಲ, ಅವನ ಕಾರ್ಯಗಳಲ್ಲಿ ದೋಷವೆಣಿಸಲಿಲ್ಲ, ಬದಲಿಗೆ ತಮ್ಮ ಪ್ರಿಯತಮನ ಪ್ರೀತಿಯಿಂದ ಅವರು ಇನ್ನೂ ಆನಂದಿಸಿದರು. ॥ ೨೨ ॥ ಪರೀಕ್ಷಿತನೇ! ಬಳಿಕ ಗೋಪಿಯರೆಲ್ಲರೂ ಶ್ರೀಕೃಷ್ಣನು ಇತ್ತ ಪವಿತ್ರವಾದ ತಮ್ಮ-ತಮ್ಮ ವಸ್ತ್ರಗಳನ್ನು ಧರಿಸಿಕೊಂಡರು. ಆದರೆ ಅವರು ಒಂದು ಹೆಜ್ಜೆಯನ್ನೂ ಮುಂದಿಡಲಾರದಷ್ಟು ಅವರ ಮನಸ್ಸನ್ನು ಶ್ರೀಕೃಷ್ಣನು ಆಕರ್ಷಿಸಿಬಿಟ್ಟಿದ್ದನು. ತಮ್ಮ ಪ್ರಿಯತಮನ ಸಮಾಗಮನಕ್ಕಾಗಿ ಅವರು ಸಿಂಗರಿಸಿಕೊಂಡು, ನಾಚಿಕೆಯಿಂದ ಕುಡಿನೋಟದಿಂದ ಶ್ರೀಕೃಷ್ಣನನ್ನು ನೋಡುತ್ತಾ ಅಲ್ಲೇ ನಿಂತುಬಿಟ್ಟರು. ॥ ೨೩ ॥

ಆ ಕುಮಾರಿಯರು ತನ್ನ ಚರಣಕಮಲಗಳನ್ನು ಸ್ಪರ್ಶಿಸುವ ಇಚ್ಛೆಯಿಂದ ಕಾತುರರಾಗಿಯೇ ವ್ರತವನ್ನು ಕೈಗೊಂಡಿದ್ದರು ಹಾಗೂ ಅವರ ಜೀವನದ ಇದೊಂದೇ ಸಂಕಲ್ಪವಿದ್ದುದನ್ನು ನೋಡಿದ ಭಗವಾನ್ ದಾಮೋದರನು ಅವರ ಪ್ರೇಮಕ್ಕೆ ಮನಸೋತು ಇಂತೆಂದನು. ॥ ೨೪ ॥ ಪ್ರೇಯಸಿಯರಾದ ಕುಮಾರಿಯರೇ! ಸಾಧ್ವಿಯರೇ! ನನ್ನ ಸೇವೆ ಮಾಡಬೇಕೆನ್ನುವ ನಿಮ್ಮ ಸಂಕಲ್ಪವನ್ನು ನಾನು ತಿಳಿದಿರುತ್ತೇನೆ. ನಿಮ್ಮ ಈ ಅಭಿಲಾಷೆಯನ್ನು ಅನುಮೋದಿಸುತ್ತೇನೆ. ನಿಮ್ಮ ಸಂಕಲ್ಪವು ಸತ್ಯವಾಗಿ ಪರಿಣಮಿಸುವುದು. ನೀವು ನನ್ನನ್ನು ಮನತುಂಬಿ ಪೂಜಿಸುವಿರಿ. ॥ ೨೫ ॥

ನ ಮಯ್ಯಾವೇಶಿತಧಿಯಾಂ ಕಾಮಃ ಕಾಮಾಯ ಕಲ್ಪತೇ ।
ಭರ್ಜಿತಾ ಕ್ವಥಿತಾ ಧಾನಾ ಪ್ರಾಯೋ ಬೀಜಾಯ ನೇಷ್ಯತೇ ॥ ೨೬ ॥

ಯಾತಾಬಲಾ ವ್ರಜಂ ಸಿದ್ಧಾ ಮಯೇಮಾ ರಂಸ್ಯಥ ಕ್ಷಪಾಃ ।
ಯದುದ್ದಿಶ್ಯ ವ್ರತಮಿದಂ ಚೇರುರಾರ್ಯಾರ್ಚನಂ ಸತೀಃ ॥ ೨೭ ॥

ಶ್ರೀಶುಕ ಉವಾಚ

ಇತ್ಯಾದಿಷ್ಟಾ ಭಗವತಾ ಲಬ್ಧಕಾಮಾಃ ಕುಮಾರಿಕಾಃ ।
ಧ್ಯಾಯಂತ್ಯಸ್ತತ್ಪದಾಂಭೋಜಂ ಕೃಚ್ಛ್ರಾನ್ನಿರ್ವಿವಿಶುರ್ವ್ರಜಮ್ ॥ ೨೮ ॥

ಅಥ ಗೋಪೈಃ ಪರಿವೃತೋ ಭಗವಾನ್ ದೇವಕೀಸುತಃ ।
ವೃಂದಾವನಾದ್ಗತೋ ದೂರಂ ಚಾರಯನ್ಗಾಃ ಸಹಾಗ್ರಜಃ ॥ ೨೯ ॥

ನಿದಾಘಾರ್ಕಾತಪೇ ತಿಗ್ಮೇ ಛಾಯಾಭಿಃ ಸ್ವಾಭಿರಾತ್ಮನಃ ।
ಆತಪತ್ರಾಯಿತಾನ್ವೀಕ್ಷ್ಯ ದ್ರುಮಾನಾಹ ವ್ರಜೌಕಸಃ ॥ ೩೦ ॥

ಹೇ ಸ್ತೋಕಕೃಷ್ಣ ಹೇ ಅಂಶೋ ಶ್ರೀದಾಮನ್ಸುಬಲಾರ್ಜುನ ।
ವಿಶಾಲರ್ಷಭ ತೇಜಸ್ವಿನ್ ದೇವಪ್ರಸ್ಥ ವರೂಥಪ ॥ ೩೧ ॥

ಪಶ್ಯತೈತಾನ್ಮಹಾಭಾಗಾನ್ ಪರಾರ್ಥೈಕಾಂತಜೀವಿತಾನ್ ।
ವಾತವರ್ಷಾತಪಹಿಮಾನ್ ಸಹಂತೋ ವಾರಯಂತಿ ನಃ ॥ ೩೨ ॥

ಅಹೋ ಏಷಾಂ ವರಂ ಜನ್ಮ ಸರ್ವಪ್ರಾಣ್ಯುಪಜೀವನಮ್ ।
ಸುಜನಸ್ಯೇವ ಯೇಷಾಂ ವೈ ವಿಮುಖಾ ಯಾಂತಿ ನಾರ್ಥಿನಃ ॥ ೩೩ ॥

ಪತ್ರಪುಷ್ಪಫಲಚ್ಛಾಯಾಮೂಲವಲ್ಕಲದಾರುಭಿಃ ।
ಗಂಧನಿರ್ಯಾಸಭಸ್ಮಾಸ್ಥಿತೋಕ್ಮೈಃ ಕಾಮಾನ್ ವಿತನ್ವತೇ ॥ ೩೪ ॥

ಏತಾವಜ್ಜನ್ಮಸಾಫಲ್ಯಂ ದೇಹಿನಾಮಿಹ ದೇಹಿಷು ।
ಪ್ರಾಣೈರರ್ಥೈರ್ಧಿಯಾ ವಾಚಾ ಶ್ರೇಯ ಏವಾಚರೇತ್ ಸದಾ ॥ ೩೫ ॥

ಹುರಿದು ಬತ್ತಿದ ಬೀಜವು ಹೇಗೆ ಮೊಳೆಯುವುದಿಲ್ಲವೋ ಹಾಗೆಯೇ ತಮ್ಮ ಮನಸ್ಸು ಪ್ರಾಣಗಳನ್ನು ನನ್ನಲ್ಲಿ ಅರ್ಪಿಸುವವರ ಕಾಮನೆಗಳು ಸಾಂಸಾರಿಕ ಭೋಗಗಳ ಕಡೆಗೆ ಕೊಂಡುಹೋಗಲು ಸಮರ್ಥವಾಗುವುದಿಲ್ಲ. ಆ ಕಾಮನೆಗಳು ಕಾಮನೆಗಳೇ ಅಲ್ಲ ॥ ೨೬ ॥ ಕುಮಾರಿಯರೇ! ಈಗ ನೀವು ನಿಮ್ಮ-ನಿಮ್ಮ ಮನೆಗಳಿಗೆ ಹೊರಟುಹೋಗಿರಿ. ನಿಮ್ಮ ಸಾಧನೆಯು ಸಿದ್ಧಿಸಿದೆ. ಮುಂದೆ ಬರಲಿರುವ ಶರದೃತುವಿನ ರಾತ್ರಿಯಲ್ಲಿ ನನ್ನೊಡನೆ ನೀವು ವಿಹರಿಸುವಿರಂತೆ. ಈ ಕಾರಣಕ್ಕಾಗಿಯೇ ಅಲ್ಲವೇ ನೀವು ವ್ರತನಿಷ್ಠರಾಗಿ ಕಾತ್ಯಾಯಿನೀ ದೇವಿಯನ್ನು ಪೂಜಿಸಿದ್ದು? ॥ ೨೭ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ - ಪರೀಕ್ಷಿತನೇ! ಭಗವಂತನ ಈ ಅಪ್ಪಣೆಯನ್ನು ಪಡೆದು ಆ ಗೋಪಿಕೆಯರು ಭಗವಾನ್ ಶ್ರೀಕೃಷ್ಣನ ಚರಣಕಮಲಗಳನ್ನು ಧ್ಯಾನಿಸುತ್ತಾ ಅವನನ್ನು ಬಿಟ್ಟುಹೋಗಲು ಮನಸ್ಸಿಲ್ಲದ ಮನಸ್ಸಿನಿಂದ ಬಹಳ ಕಷ್ಟದಿಂದ ವ್ರಜಕ್ಕೆ ಮರಳಿದರು. ಈಗ ಅವರ ಸಮಸ್ತ ಕಾಮನೆಗಳು ಪೂರ್ಣವಾಗಿ ಹೋಗಿದ್ದವು. ॥ ೨೮ ॥

ಪ್ರಿಯ ಪರೀಕ್ಷಿತನೇ! ಒಂದು ದಿನ ಭಗವಾನ್ ಶ್ರೀಕೃಷ್ಣನು ಬಲರಾಮ ಮತ್ತು ಗೋಪಬಾಲಕರೊಂದಿಗೆ ಗೋವುಗಳನ್ನು ಮೇಯಿಸುತ್ತಾ ವೃಂದಾವನದಿಂದ ಬಹಳದೂರ ಹೋಗಿ ಬಿಟ್ಟಿದ್ದನು. ॥ ೨೯ ॥ ಅದು ಗ್ರೀಷ್ಮಋತುವಾಗಿದ್ದು ಸೂರ್ಯನ ಕಿರಣಗಳು ತೀಕ್ಷ್ಣವಾಗಿದ್ದುವು. ಆದರೆ ದಟ್ಟವಾದ ವೃಕ್ಷಗಳು ಶ್ರೀಕೃಷ್ಣನಿಗೆ ಛತ್ರಿಯಂತೆ ನೆರಳನ್ನು ಕೊಡುತ್ತಿದ್ದವು. ಕೊಡೆಗಳಂತೆ ನೆರಳನ್ನು ನೀಡುತ್ತಿದ್ದ ವೃಕ್ಷಗಳನ್ನು ನೋಡಿ ಭಗವಂತನು ಸ್ತೋಕಕೃಷ್ಣ, ಅಂಶು, ಶ್ರೀದಾಮ, ಸುಬಲ, ಅರ್ಜುನ, ವಿಶಾಲ, ಋಷಭ, ತೇಜಸ್ವೀ, ದೇವಪ್ರಸ್ಥ, ವರೂಥಪ ಮೊದಲಾದ ಗೋಪಬಾಲಕರನ್ನು ಸಂಬೋಧಿಸಿ ಇಂತೆಂದನು. ॥ ೩೦-೩೧ ॥ ನನ್ನ ಪ್ರಿಯ ಮಿತ್ರರೇ! ಇದೋ ನೋಡಿರಿ. ಈ ವೃಕ್ಷಗಳು ಎಷ್ಟು ಭಾಗ್ಯಶಾಲಿಗಳಾಗಿವೆ! ಇವುಗಳ ಜೀವನವು ಕೇವಲ ಬೇರೆಯವರ ಒಳಿತಿಗಾಗಿಯೇ ಇದೆ. ಇವುಗಳು ತಮ್ಮ ಮೇಲೆ ಬೀಳುವ ಬಿಸಿಲನ್ನೂ, ಮಳೆಯನ್ನೂ, ಹಿಮವನ್ನೂ, ಗಾಳಿಯನ್ನೂ ಸಹಿಸಿಕೊಂಡು ನಮ್ಮನ್ನು ಅವುಗಳಿಂದ ರಕ್ಷಿಸುತ್ತವೆ. ॥ ೩೨ ॥ ಇವುಗಳ ಜೀವನವೇ ಸರ್ವಶ್ರೇಷ್ಠವಾಗಿದೆ ಎಂದು ನಾನು ಹೇಳುತ್ತೇನೆ. ಏಕೆಂದರೆ, ಇವುಗಳ ಮೂಲಕ ಎಲ್ಲರಿಗೂ ಆಸರೆ ಸಿಗುತ್ತದೆ, ಅವರ ಜೀವನ ನಿರ್ವಾಹವೂ ಆಗುತ್ತದೆ. ಸಜ್ಜನರ ಮನೆಯಿಂದ ಯಾರೇ ಯಾಚಕನು ಬರಿಗೈಯಿಂದ ಮರಳುವುದಿಲ್ಲವೋ ಹಾಗೆಯೇ ಈ ವೃಕ್ಷಗಳಿಂದಲೂ ಕೂಡ ಎಲ್ಲರಿಗೆ ಏನಾದರೂ ಸಿಕ್ಕಿಯೇ ಸಿಗುತ್ತದೆ. ॥ ೩೩ ॥ ಇವುಗಳು ತನ್ನ ಎಲೆ, ಹೂವು, ಹಣ್ಣು, ನೆರಳು, ಬೇರು, ನಾರು, ಸಿಪ್ಪೆ, ಸೌದೆ, ಗಂಧ, ಹಾಲು, ಬೂದಿ, ಇದ್ದಿಲು, ಚಿಗುರು, ರೆಂಬೆಗಳು ಇವುಗಳಿಂದ ಜನರ ಕಾಮನೆಗಳನ್ನು ಪೂರ್ಣಗೊಳಿಸುತ್ತವೆ. ॥ ೩೪ ॥ ನನ್ನ ಪ್ರಿಯ ಗೆಳೆಯರೇ! ಜಗತ್ತಿನಲ್ಲಿ ಬಹಳಷ್ಟು ಪ್ರಾಣಿಗಳಿದ್ದಾರೆ. ಆದರೆ ಸಾಧ್ಯವಿದ್ದಷ್ಟು ತಮ್ಮ ಧನದಿಂದ, ವಿವೇಕದಿಂದ, ವಿಚಾರದಿಂದ, ಮಾತಿನಿಂದ ಮತ್ತು ಪ್ರಾಣಗಳಿಂದ ಬೇರೆಯವರ ಒಳಿತನ್ನು ಮಾಡಿದಾಗಲೇ ಅವರ ಜೀವನ ಸಫಲವಾಗುತ್ತದೆ. ॥ ೩೫ ॥

ಇತಿ ಪ್ರವಾಲಸ್ತಬಕಫಲಪುಷ್ಪದಲೋತ್ಕರೈಃ ।
ತರೂಣಾಂ ನಮ್ರಶಾಖಾನಾಂ ಮಧ್ಯೇನ ಯಮುನಾಂ ಗತಃ
॥ ೩೬ ॥

ಪರೀಕ್ಷಿತನೇ! ಇತ್ತಲಾಗಳಲ್ಲಿಯೂ ವೃಕ್ಷಗಳು ನವಪಲ್ಲವಗಳಿಂದಲೂ, ಹೂ-ಹಣ್ಣುಗಳಿಂದ, ನಿಬಿಡವಾದ ಎಲೆಗಳಿಂದಲೂ, ರೆಂಬೆ-ಕೊಂಬೆಗಳಿಂದ ನಳನಳಿಸುತ್ತಿದ್ದುವು. ಅವುಗಳ ಕೊಂಬೆಗಳು ಭೂಮಿಯವರೆಗೆ ಬಾಗಿದ್ದುವು. ಭಗವಾನ್ ಶ್ರೀಕೃಷ್ಣನು ಹೀಗೆ ಮಾತನಾಡುತ್ತಾ ಅವುಗಳ ನಡುವಿನಿಂದ ಯಮುನಾ ತೀರಕ್ಕೆ ಬಂದನು. ॥ ೩೬ ॥

ತತ್ರ ಗಾಃ ಪಾಯಯಿತ್ವಾಪಃ ಸುಮೃಷ್ಟಾಃ ಶೀತಲಾಃ ಶಿವಾಃ ।
ತತೋ ನೃಪ ಸ್ವಯಂ ಗೋಪಾಃ ಕಾಮಂ ಸ್ವಾದು ಪಪುರ್ಜಲಮ್
॥ ೩೭ ॥

ರಾಜನೇ! ಯಮುನೆಯ ನೀರು ಅತ್ಯಂತ ಮಧುರವೂ, ಶೀತಲವೂ, ಸ್ವಚ್ಛವೂ ಆಗಿತ್ತು. ಅವರೆಲ್ಲರೂ ಮೊದಲು ಗೋವುಗಳಿಗೆ ನೀರನ್ನು ಕುಡಿಸಿ, ಅನಂತರ ತಾವು ಯಥೇಚ್ಛವಾಗಿ ನೀರನ್ನು ಕುಡಿದರು. ॥ ೩೭ ॥

ತಸ್ಯಾ ಉಪವನೇ ಕಾಮಂ ಚಾರಯಂತಃ ಪಶೂನ್ನೃಪ ।
ಕೃಷ್ಣರಾಮಾವುಪಾಗಮ್ಯ ಕ್ಷುಧಾರ್ತಾ ಇದಮಬ್ರುವನ್
॥ ೩೮ ॥

ಪರೀಕ್ಷಿತನೇ! ಅವರೆಲ್ಲರೂ ಯಮುನಾನದಿಯ ತೀರದ ಹಚ್ಚ-ಹಸಿರಾದ ಉಪವನದಲ್ಲಿ ಸ್ವಚ್ಛಂದವಾಗಿ ತಮ್ಮ ಪಶುಗಳನ್ನು ಮೇಯಿಸುತ್ತಿರುವ ಸಮಯ ಕೆಲವು ಹಸಿದಿರುವ ಗೊಲ್ಲಬಾಲಕರು ಕೃಷ್ಣ-ಬಲರಾಮರ ಬಳಿಗೆ ಹೋಗಿ ಹೀಗೆಂದರು - ॥ ೩೮ ॥

ಇಪ್ಪತ್ತೆರಡನೆಯ ಅಧ್ಯಾಯವು ಮುಗಿಯಿತು. ॥ ೨೨ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮಸ್ಕಂಧೇ ಪೂರ್ವಾರ್ಧೇ
ಗೋಪೀವಸ್ತ್ರಾಪಹಾರೋ ನಾಮ ದ್ವಾವಿಂಶೋಽಧ್ಯಾಯಃ ॥ ೨೨ ॥

ಇಪ್ಪತ್ತಮೂರನೆಯ ಅಧ್ಯಾಯ

ಯಜ್ಞಪತ್ನಿಯರ ಮೇಲೆ ಕೃಪೆ

ಗೋಪಾ ಊಚುಃ

ರಾಮ ರಾಮ ಮಹಾವೀರ್ಯ ಕೃಷ್ಣ ದುಷ್ಟನಿಬರ್ಹಣ ।
ಏಷಾ ವೈ ಬಾಧತೇ ಕ್ಷುನ್ನಸ್ತಚ್ಛಾಂತಿಂ ಕರ್ತುಮರ್ಹಥಃ
॥ ೧ ॥

ಗೋಪಾಲಕರು ಹೇಳುತ್ತಾರೆ - ನಯನಾಭಿರಾಮ ಬಲರಾಮನೇ! ನೀನು ಮಹಾಪರಾಕ್ರಮಿಯಾಗಿರುವೆ. ಚಿತ್ತಚೋರನಾದ ಶ್ಯಾಮಸುಂದರನೇ! ನೀನು ಹಲವಾರು ದುಷ್ಟರನ್ನು ಸಂಹರಿಸಿರುವೆ. ಈಗ ಈ ಹಸಿವೂ ಕೂಡ ನಮ್ಮನ್ನು ಕಾಡುತ್ತಿದೆ. ಆದ್ದರಿಂದ ನೀವಿಬ್ಬರೂ ಈ ಹಸಿವನ್ನು ಶಾಂತಗೊಳಿಸಲು ಏನಾದರೂ ಉಪಾಯಮಾಡಿರಿ. ॥ ೧ ॥

ಶ್ರೀಶುಕ ಉವಾಚ

ಇತಿ ವಿಜ್ಞಾಪಿತೋ ಗೋಪೈರ್ಭಗವಾನ್ ದೇವಕೀಸುತಃ ।
ಭಕ್ತಾಯಾ ವಿಪ್ರಭಾರ್ಯಾಯಾಃ ಪ್ರಸೀದನ್ನಿದಮಬ್ರವೀತ್
॥ ೨ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ - ಓ ಪರೀಕ್ಷಿತನೇ! ದೇವಕೀನಂದನ ಶ್ರೀಕೃಷ್ಣನಲ್ಲಿ ಗೋಪಾಲಕರು ಹೀಗೆ ಪ್ರಾರ್ಥಿಸಿದಾಗ ಅವನು ಮಥುರೆಯ ತನ್ನ ಭಕ್ತರಾದ ಬ್ರಾಹ್ಮಣಪತ್ನಿಯರ ಮೇಲೆ ಅನುಗ್ರಹವನ್ನು ತೋರಲಿಕ್ಕಾಗಿ ಹೀಗೆಂದನು - ॥ ೨ ॥

ಪ್ರಯಾತ ದೇವಯಜನಂ ಬ್ರಾಹ್ಮಣಾ ಬ್ರಹ್ಮವಾದಿನಃ ।
ಸತ್ರಮಾಂಗಿರಸಂ ನಾಮ ಹ್ಯಾಸತೇ ಸ್ವರ್ಗಕಾಮ್ಯಯಾ
॥ ೩ ॥

ತತ್ರ ಗತ್ವೌದನಂ ಗೋಪಾ ಯಾಚತಾಸ್ಮದ್ವಿಸರ್ಜಿತಾಃ ।
ಕೀರ್ತಯಂತೋ ಭಗವತ ಆರ್ಯಸ್ಯ ಮಮ ಚಾಭಿಧಾಮ್
॥ ೪ ॥

ಇತ್ಯಾದಿಷ್ಟಾ ಭಗವತಾ ಗತ್ವಾಯಾಚಂತ ತೇ ತಥಾ ।
ಕೃತಾಂಜಲಿಪುಟಾ ವಿಪ್ರಾನ್ ದಂಡವತ್ಪತಿತಾ ಭುವಿ
॥ ೫ ॥

ಪ್ರಿಯ ಮಿತ್ರರೇ! ಇಲ್ಲಿಂದ ಸ್ವಲ್ಪ ದೂರದಲ್ಲೇ ವೇದವಾದಿಗಳಾದ ಬ್ರಾಹ್ಮಣರು ಸ್ವರ್ಗದ ಕಾಮನೆಯಿಂದ ಆಂಗಿರಸವೆಂಬ ಯಜ್ಞವನ್ನು ಮಾಡುತ್ತಿದ್ದಾರೆ. ನೀವು ಅವರ ಯಜ್ಞಶಾಲೆಗೆ ಹೋಗಿರಿ. ॥ ೩ ॥ ಗೋಪಾಲಕರೇ! ನಾನು ಕಳಿಸಿದ್ದರಿಂದ ನೀವು ಅಲ್ಲಿಗೆ ಹೋಗಿ ನನ್ನ ಅಣ್ಣ ಬಲರಾಮನ ಮತ್ತು ನನ್ನ ಹೆಸರನ್ನು ಹೇಳಿ ಸ್ವಲ್ಪ ಅನ್ನ ಭೋಜನ ಸಾಮಗ್ರಿಗಳನ್ನು ಅವರಿಂದ ಕೇಳಿ ತನ್ನಿರಿ. ॥ ೪ ॥ ಭಗವಂತನು ಹೀಗೆ ಆಜ್ಞಾಪಿಸಿದಾಗ ಗೊಲ್ಲಬಾಲಕರು ಆ ಬ್ರಾಹ್ಮಣರ ಯಜ್ಞಶಾಲೆಗೆ ಹೋಗಿ ಅವರಲ್ಲಿ ಭಗವಂತನ ಆಜ್ಞೆಯಂತೆ ಅನ್ನವನ್ನು ಯಾಚಿಸಿದರು. ಮೊದಲಿಗೆ ಅವರು ಸಾಷ್ಟಾಂಗ ನಮಸ್ಕಾರಮಾಡಿ ಮತ್ತೆ ಕೈಜೋಡಿಸಿಕೊಂಡು ಅವರಲ್ಲಿ ಕೇಳಿಕೊಂಡರು. ॥ ೫ ॥

ಹೇ ಭೂಮಿದೇವಾಃ ಶೃಣುತ
ಕೃಷ್ಣಸ್ಯಾದೇಶಕಾರಿಣಃ ।
ಪ್ರಾಪ್ತಾನ್ ಜಾನೀತ ಭದ್ರಂ ವೋ
ಗೋಪಾನ್ನೋ ರಾಮಚೋದಿತಾನ್ ॥ ೬ ॥

ಗಾಶ್ಚಾರಯಂತಾವವಿದೂರ ಓದನಂ
ರಾಮಾಚ್ಯುತೌ ವೋ ಲಷತೋ ಬುಭುಕ್ಷಿತೌ ।
ತಯೋರ್ದ್ವಿಜಾ ಓದನಮರ್ಥಿನೋರ್ಯದಿ
ಶ್ರದ್ಧಾ ಚ ವೋ ಯಚ್ಛತ ಧರ್ಮವಿತ್ತಮಾಃ ॥ ೭ ॥

ದೀಕ್ಷಾಯಾಃ ಪಶುಸಂಸ್ಥಾಯಾಃ ಸೌತ್ರಾಮಣ್ಯಾಶ್ಚ ಸತ್ತಮಾಃ ।
ಅನ್ಯತ್ರ ದೀಕ್ಷಿತಸ್ಯಾಪಿ ನಾನ್ನಮಶ್ನನ್ಹಿ ದುಷ್ಯತಿ ॥ ೮ ॥

ಇತಿ ತೇ ಭಗವದ್ಯಾಚ್ಞಾಂ ಶೃಣ್ವಂತೋಽಪಿ ನ ಶುಶ್ರುವುಃ ।
ಕ್ಷುದ್ರಾಶಾ ಭೂರಿಕರ್ಮಾಣೋ ಬಾಲಿಶಾ ವೃದ್ಧಮಾನಿನಃ ॥ ೯ ॥

ದೇಶಃ ಕಾಲಃ ಪೃಥಗ್ದ್ರವ್ಯಂ ಮಂತ್ರತಂತ್ರರ್ತ್ವಿಜೋಽಗ್ನಯಃ ।
ದೇವತಾ ಯಜಮಾನಶ್ಚ ಕ್ರತುರ್ಧರ್ಮಶ್ಚ ಯನ್ಮಯಃ ॥ ೧೦ ॥

ತಂ ಬ್ರಹ್ಮ ಪರಮಂ ಸಾಕ್ಷಾದ್ಭಗವಂತಮಧೋಕ್ಷಜಮ್ ।
ಮನುಷ್ಯದೃಷ್ಟ್ಯಾ ದುಷ್ಪ್ರಜ್ಞಾ ಮರ್ತ್ಯಾತ್ಮಾನೋ ನ ಮೇನಿರೇ ॥ ೧೧ ॥

ನ ತೇ ಯದೋಮಿತಿ ಪ್ರೋಚುರ್ನ ನೇತಿ ಚ ಪರಂತಪ ।
ಗೋಪಾ ನಿರಾಶಾಃ ಪ್ರತ್ಯೇತ್ಯ ತಥೋಚುಃ ಕೃಷ್ಣರಾಮಯೋಃ ॥ ೧೨ ॥

ತಮುಪಾಕರ್ಣ್ಯ ಭಗವಾನ್ ಪ್ರಹಸ್ಯ ಜಗದೀಶ್ವರಃ ।
ವ್ಯಾಜಹಾರ ಪುನರ್ಗೋಪಾನ್ ದರ್ಶಯನ್ ಲೌಕಿಕೀಂ ಗತಿಮ್ ॥ ೧೩ ॥

ಮಾಂ ಜ್ಞಾಪಯತ ಪತ್ನೀಭ್ಯಃ ಸಸಂಕರ್ಷಣಮಾಗತಮ್ ।
ದಾಸ್ಯಂತಿ ಕಾಮಮನ್ನಂ ವಃ ಸ್ನಿಗ್ಧಾ ಮಯ್ಯುಷಿತಾ ಧಿಯಾ ॥ ೧೪ ॥

ಭೂಸುರೋತ್ತಮರೇ! ನಿಮಗೆ ಮಂಗಳವಾಗಲಿ! ವ್ರಜದ ಗೊಲ್ಲರಾದ ನಾವು ನಿಮ್ಮಲ್ಲಿ ಬೇಡಿಕೊಳ್ಳುವೆವು. ಭಗವಾನ್ ಶ್ರೀಕೃಷ್ಣನು ಮತ್ತು ಬಲರಾಮರು ಇವರ ಅಪ್ಪಣೆಯಂತೆ ನಾವು ನಿಮ್ಮಲ್ಲಿಗೆ ಬಂದಿರುವೆವು. ತಾವು ನಮ್ಮ ಮಾತನ್ನು ಆಲಿಸಿರಿ. ॥ ೬ ॥ ಭಗವಾನ್ ಶ್ರೀಕೃಷ್ಣ ಬಲರಾಮರು ಪಶುಗಳನ್ನು ಮೇಯಿಸುತ್ತಾ ಇಲ್ಲಿಂದ ಸ್ವಲ್ಪವೇ ಅಂತರದಲ್ಲಿ ಬಂದಿರುವರು. ಅವರಿಗೆ ಹಸಿವಾಗಿದೆ ಹಾಗೂ ನೀವು ಅವರಿಗೆ ಸ್ವಲ್ಪ ಅನ್ನವನ್ನು ನೀಡಬೇಕೆಂದು ಅವರು ಬಯಸುತ್ತಿದ್ದಾರೆ. ವಿಪ್ರೋತ್ತಮರೇ! ನೀವು ಧರ್ಮದ ಮರ್ಮವನ್ನು ಬಲ್ಲವರಾಗಿರುವಿರಿ. ನಿಮಗೆ ಶ್ರದ್ಧೆ ಇದ್ದರೆ ಆ ಭೋಜನಾರ್ಥಿಗಳಿಗೆ ಸ್ವಲ್ಪ ಅನ್ನವನ್ನು ಕೊಡಿರಿ. ॥ ೭ ॥ ಸಜ್ಜನರೇ! ಪಶುಬಲಿ ಇರುವ ಯಜ್ಞದಲ್ಲಿ ಮತ್ತು ಸೌತ್ರಾಮಣೀ ಯಜ್ಞದಲ್ಲಿ ದೀಕ್ಷಿತನ ಅನ್ನವನ್ನು ತಿನ್ನಬಾರದು. ಇವಲ್ಲದ ಬೇರೆ ಯಾವುದೇ ಸಮಯದಲ್ಲಿಯೂ ಯಜ್ಞದ ದೀಕ್ಷಿತನ ಅನ್ನವನ್ನು ತಿನ್ನುವುದರಲ್ಲಿ ದೋಷವಿರುವುದಿಲ್ಲ. ॥ ೮ ॥ ಪರೀಕ್ಷಿತನೇ! ಹೀಗೆ ಭಗವಂತನು ಅನ್ನವನ್ನು ಕೇಳಿದ ಮಾತಿನ ಕಡೆಗೆ ಆ ಬ್ರಾಹ್ಮಣರು ಯಾವುದೇ ಗಮನಕೊಡಲಿಲ್ಲ. ಅವರು ಸ್ವರ್ಗದ ತುಚ್ಛ ಫಲವನ್ನೇ ಬಯಸುತ್ತಿದ್ದರು. ಅದಕ್ಕಾಗಿ ಶ್ರಮಸಾಧ್ಯವಾದ ಮಹಾಯಜ್ಞದಲ್ಲಿ ತೊಡಗಿದ್ದರು. ನಿಜ ಹೇಳಬೇಕೆಂದರೆ, ಆ ಬ್ರಾಹ್ಮಣರು ಜ್ಞಾನದ ದೃಷ್ಟಿಯಿಂದ ಬಾಲಕರೇ ಆಗಿದ್ದರೂ ತಮ್ಮನ್ನು ಜ್ಞಾನವೃದ್ಧರೆಂದೇ ತಿಳಿಯುತ್ತಿದ್ದರು. ॥ ೯ ॥ ಪರೀಕ್ಷಿತನೇ! ದೇಶ, ಕಾಲ, ಅನೇಕ ರೀತಿಯ ಸಾಮಗ್ರಿಗಳು, ಬೇರೆ-ಬೇರೆ ಕರ್ಮಗಳಲ್ಲಿ ವಿನಿಯುಕ್ತ ಮಂತ್ರಗಳು, ಅನುಷ್ಠಾನ ಪದ್ಧತಿ, ಋತ್ವಿಜ, ಬ್ರಹ್ಮನೇ ಆದಿ ಯಜ್ಞಮಾಡುವವರು, ಅಗ್ನಿ ದೇವತೆ, ಯಜಮಾನ, ಯಜ್ಞ ಮತ್ತು ಧರ್ಮ - ಇವೆಲ್ಲದರ ರೂಪದಲ್ಲಿ ಏಕಮಾತ್ರ ಭಗವಂತನೇ ಪ್ರಕಟನಾಗುತ್ತಿದ್ದಾನೆ. ॥ ೧೦ ॥ ಅಂತಹವನೇ ಇಂದ್ರಿಯಾತೀತ ಪರಬ್ರಹ್ಮ ಸಾಕ್ಷಾತ್ ಭಗವಾನ್ ಶ್ರೀಕೃಷ್ಣನೇ ಗೋಪಾಲಕರ ಮೂಲಕ ಅನ್ನವನ್ನು ಬೇಡುತ್ತಿರುವನು. ಆದರೆ ತಮ್ಮನ್ನು ಶರೀರವೆಂದೇ ತಿಳಿದಿರುವ ಈ ಮೂರ್ಖರು ಭಗವಂತನನ್ನು ಸಾಮಾನ್ಯ ಮನುಷ್ಯನೆಂದೇ ತಿಳಿದು ಅವನನ್ನು ಸಮ್ಮಾನಿಸಲಿಲ್ಲ. ॥ ೧೧ ॥ ಪರೀಕ್ಷಿತನೇ! ಆ ಬ್ರಾಹ್ಮಣರು ಆಗಲಿ ಅಥವಾ ಇಲ್ಲ ಎಂದು ಏನನ್ನೂ ಹೇಳದಿದ್ದಾಗ ಗೋಪಾಲಕರಿಗೆ ನಿರಾಶೆ ಉಂಟಾಯಿತು. ಅವರು ಮರಳಿ ಬಂದು ಅಲ್ಲಿಯ ಎಲ್ಲ ವೃತ್ತಾಂತವನ್ನು ಬಲರಾಮ-ಕೃಷ್ಣರಿಗೆ ತಿಳಿಸಿದರು. ॥ ೧೨ ॥ ಸಕಲ ಜಗತ್ತಿನ ಸ್ವಾಮಿ ಭಗವಾನ್ ಶ್ರೀಕೃಷ್ಣನು ಅವರ ಮಾತನ್ನು ಕೇಳಿ ನಗತೊಡಗಿದನು. ಜಗತ್ತಿನಲ್ಲಿ ಅಸಫಲತೆ ಪದೇ-ಪದೇ ಉಂಟಾಗುತ್ತದೆ. ಆದರೆ ಅದರಿಂದ ನಿರಾಶರಾಗಬಾರದು. ಪುನಃ ಪುನಃ ಪ್ರಯತ್ನ ಮಾಡುವುದರಿಂದ ಖಂಡಿತವಾಗಿ ಸಫಲತೆ ಉಂಟಾಗುತ್ತದೆ ಎಂದು ಗೋಪಾಲಕರ ಬಳಿ ಅವನು ಹೇಳಿ ಮತ್ತೆ ಇಂತೆಂದನು. ॥ ೧೩ ॥ ಪ್ರಿಯರಾದ ಗೋಪಾಲಕರೇ! ಈ ಬಾರಿ ನೀವುಗಳು ಆ ಬ್ರಾಹ್ಮಣರ ಪತ್ನಿಯರ ಬಳಿಗೆ ಹೋಗಿ ಅವರಲ್ಲಿ ರಾಮ-ಶ್ಯಾಮರು ಇಲ್ಲಿಗೆ ಬಂದಿರುವರು ಎಂದು ಹೇಳಿರಿ. ನೀವು ಬಯಸಿದಷ್ಟು ಭೋಜನವನ್ನು ಅವರು ನಿಮಗೆ ಕೊಡುವರು. ಅವರು ನನ್ನನ್ನು ಬಹಳವಾಗಿ ಪ್ರೀತಿಸುತ್ತಾರೆ. ಅವರ ಮನಸ್ಸು ಸದಾಕಾಲ ನನ್ನಲ್ಲೇ ತೊಡಗಿರುತ್ತದೆ. ॥ ೧೪ ॥

ಗತ್ವಾಥ ಪತ್ನೀಶಾಲಾಯಾಂ ದೃಷ್ಟ್ವಾಽಽಸೀನಾಃ ಸ್ವಲಂಕೃತಾಃ ।
ನತ್ವಾ ದ್ವಿಜಸತೀರ್ಗೋಪಾಃ ಪ್ರಶ್ರಿತಾ ಇದಮಬ್ರುವನ್ ॥ ೧೫ ॥

ನಮೋ ವೋ ವಿಪ್ರಪತ್ನೀಭ್ಯೋ ನಿಬೋಧತ ವಚಾಂಸಿ ನಃ ।
ಇತೋಽವಿದೂರೇ ಚರತಾ ಕೃಷ್ಣೇನೇಹೇಷಿತಾ ವಯಮ್ ॥ ೧೬ ॥

ಗಾಶ್ಚಾರಯನ್ಸ ಗೋಪಾಲೈಃ ಸರಾಮೋ ದೂರಮಾಗತಃ ।
ಬುಭುಕ್ಷಿತಸ್ಯ ತಸ್ಯಾನ್ನಂ ಸಾನುಗಸ್ಯ ಪ್ರದೀಯತಾಮ್ ॥ ೧೭ ॥

ಶ್ರುತ್ವಾಚ್ಯುತಮುಪಾಯಾತಂ ನಿತ್ಯಂ ತದ್ದರ್ಶನೋತ್ಸುಕಾಃ ।
ತತ್ಕಥಾಕ್ಷಿಪ್ತಮನಸೋ ಬಭೂವುರ್ಜಾತಸಂಭ್ರಮಾಃ ॥ ೧೮ ॥

ಚತುರ್ವಿಧಂ ಬಹುಗುಣಮನ್ನಮಾದಾಯ ಭಾಜನೈಃ ।
ಅಭಿಸಸ್ರುಃ ಪ್ರಿಯಂ ಸರ್ವಾಃ ಸಮುದ್ರಮಿವ ನಿಮ್ನಗಾಃ ॥ ೧೯ ॥

ನಿಷಿಧ್ಯಮಾನಾಃ ಪತಿಭಿರ್ಭ್ರಾತೃಭಿರ್ಬಂಧುಭಿಃ ಸುತೈಃ ।
ಭಗವತ್ಯುತ್ತಮಶ್ಲೋಕೇ ದೀರ್ಘಶ್ರುತಧೃತಾಶಯಾಃ ॥ ೨೦ ॥

ಯಮುನೋಪವನೇಽಶೋಕನವಪಲ್ಲವಮಂಡಿತೇ ।
ವಿಚರಂತಂ ವೃತಂ ಗೋಪೈಃ ಸಾಗ್ರಜಂ ದದೃಶುಃ ಸ್ತ್ರಿಯಃ ॥ ೨೧ ॥

ಶ್ಯಾಮಂ ಹಿರಣ್ಯಪರಿಧಿಂ ವನಮಾಲ್ಯಬರ್ಹ-
ಧಾತುಪ್ರವಾಲನಟವೇಷಮನುವ್ರತಾಂಸೇ ।
ವಿನ್ಯಸ್ತಹಸ್ತಮಿತರೇಣ ಧುನಾನಮಬ್ಜಂ
ಕರ್ಣೋತ್ಪಲಾಲಕಕಪೋಲಮುಖಾಬ್ಜಹಾಸಮ್ ॥ ೨೨ ॥

ಶ್ರೀಕೃಷ್ಣನ ಅಪ್ಪಣೆಯಂತೆ ಗೋಪಾಲಕರು ಪತ್ನೀಶಾಲೆಗೆ ಹೋದರು. ಅಲ್ಲಿ ಬ್ರಾಹ್ಮಣಪತ್ನಿಯರು ಸುಂದರವಾದ ವಸ್ತ್ರಗಳನ್ನುಟ್ಟು ಸರ್ವಾಲಂಕಾರಗಳಿಂದ ಭೂಷಿತೆಯರಾಗಿ ಕುಳಿತಿದ್ದರು. ಗೋಪಾಲಕರು ದ್ವಿಜಪತ್ನಿಯರಿಗೆ ನಮಸ್ಕರಿಸಿ ವಿನೀತರಾಗಿ ಹೀಗೆ ಹೇಳಿದರು. ॥ ೧೫ ॥ ವಿಪ್ರಪತ್ನಿಯರಾದ ನಿಮಗೆ ನಾವು ನಮಸ್ಕರಿಸುತ್ತಿದ್ದೇವೆ. ನೀವು ದಯಮಾಡಿ ನಮ್ಮ ಮಾತನ್ನು ಆಲಿಸಬೇಕು. ಭಗವಾನ್ ಶ್ರೀಕೃಷ್ಣನು ಇಲ್ಲಿಂದ ಸ್ವಲ್ಪ ದೂರದಲ್ಲೇ ಬಂದಿರುವನು ಹಾಗೂ ಅವನೇ ನಮ್ಮನ್ನು ನಿಮ್ಮಲ್ಲಿಗೆ ಕಳಿಸಿರುವನು. ॥ ೧೬ ॥ ಅವನು ಗೋಪಬಾಲಕರೊಂದಿಗೆ ಮತ್ತು ಬಲರಾಮನೊಂದಿಗೆ ಹಸುಗಳನ್ನು ಮೇಯಿಸುತ್ತಾ ಈ ಕಡೆ ಬಹಳ ದೂರಕ್ಕೆ ಬಂದಿರುವನು. ಈಗ ಅವನಿಗೆ ಮತ್ತು ಅವನ ಜೊತೆಯವರಿಗೆ ತುಂಬಾ ಹಸಿವಾಗಿದೆ. ನೀವು ಅವನಿಗಾಗಿ ಏನಾದರು ಭೋಜನವನ್ನು ನೀಡಿರಿ. ॥ ೧೭ ॥ ಪರೀಕ್ಷಿತನೇ! ಆ ಬ್ರಾಹ್ಮಣಪತ್ನಿಯರು ಅನೇಕ ದಿನಗಳಿಂದ ಭಗವಂತನ ಮನೋಹರವಾದ ಲೀಲೆಗಳನ್ನು ಕೇಳುತ್ತಾ ಇದ್ದರು. ಅವರ ಮನಸ್ಸು ಶ್ರೀಕೃಷ್ಣನಲ್ಲೇ ನೆಟ್ಟುಹೋಗಿತ್ತು. ಯಾವ ರೀತಿಯಿಂದಲಾದರೂ ಶ್ರೀಕೃಷ್ಣನ ದರ್ಶನವಾಗಬೇಕೆಂದು ಸದಾಕಾಲ ಉತ್ಸುಕರಾಗಿದ್ದರು. ಅಚ್ಯುತನು ನಮ್ಮ ಸಮೀಪಕ್ಕೆ ಬಂದಿರುವನೆಂದು ಕೇಳಿದೊಡನೆಯೇ ಅವರಿಗೆ ಸಂಭ್ರಮವೋ ಸಂಭ್ರಮ. ॥ ೧೮ ॥ ಅವರು ಪರಿಶುದ್ಧವಾದ ಪಾತ್ರೆಗಳಲ್ಲಿ ರುಚಿಕರವಾದ, ಹಿತಕರವಾದ ಭಕ್ಷ್ಯ, ಭೋಜ್ಯ, ಲೇಹ್ಯ, ಚೋಷ್ಯಗಳೆಂಬ ನಾಲ್ಕುವಿಧವಾದ ಭೋಜನ ಪದಾರ್ಥಗಳನ್ನು ತೆಗೆದುಕೊಂಡು ಅಣ್ಣ-ತಮ್ಮಂದಿರು, ಪತಿ-ಪುತ್ರರು ತಡೆಯುತ್ತಿದ್ದರೂ ಅದನ್ನು ಲೆಕ್ಕಿಸದೆ ನದಿಗಳು ಸಮುದ್ರದ ಕಡೆಗೆ ಸರ-ಸರನೆ ಹರಿದು ಹೋಗುವಂತೆ ತಮ್ಮ ಪ್ರಿಯತಮನಾದ ಭಗವಾನ್ ಶ್ರೀಕೃಷ್ಣನ ಬಳಿಗೆ ಹೋಗಲು ಹೊರಟರು. ಹಲವಾರು ದಿನಗಳಿಂದ ಶ್ರೀಕೃಷ್ಣನ ಲೀಲೆಗಳು, ಸೌಂದರ್ಯ, ಗುಣ, ಮಾಧುರ್ಯ - ಇವುಗಳನ್ನು ಕೇಳುತ್ತಲೇ ಇದ್ದ ದ್ವಿಜಪತ್ನಿಯರು ತಮ್ಮನ್ನು ಶ್ರೀಕೃಷ್ಣನಿಗೆ ಅರ್ಪಿಸಿಕೊಂಡು ಬಿಟ್ಟಿದ್ದರು. ॥ ೧೯-೨೦ ॥ ಯಮುನಾ ನದಿಯ ತೀರದಲ್ಲಿ ಚಿಗುರುಗಳಿಂದ ಸಮಲಂಕೃತವಾದ ವೃಕ್ಷರಾಜಿಯಿಂದ ಕೂಡಿದ್ದ ಅಶೋಕವನದಲ್ಲಿ ಗೋಪರಿಂದ ಸುತ್ತುವರಿಯಲ್ಪಟ್ಟು ಅಣ್ಣನಾದ ಬಲರಾಮನೊಂದಿಗೆ ಸಂಚರಿಸುತ್ತಿದ್ದ ಮನಮೋಹಕನಾದ ಶ್ರೀಕೃಷ್ಣನನ್ನು ದ್ವಿಜಪತ್ನಿಯರು ನೋಡಿದರು. ॥ ೨೧ ॥ ಅವನ ಶ್ಯಾಮಲ ಶರೀರದ ಮೇಲೆ ಬಂಗಾರದಂತಹ ಪೀತಾಂಬರವನ್ನು ಧರಿಸಿದ್ದನು. ಕೊರಳಲ್ಲಿ ವನಮಾಲೆಯು ವಿರಾಜಿಸುತ್ತಿತ್ತು. ತಲೆಯ ಮೇಲೆ ನವಿಲು ಗರಿಯ ಕಿರೀಟವಿತ್ತು. ಮಣಿಶಿಲೆಯೇ ಮೊದಲಾದ ಧಾತುಗಳಿಂದ ಶರೀರದಲ್ಲಿ ಚಿತ್ರಿಸಿಕೊಂಡು, ಚಿಗುರೆಲೆಯ ಗುಚ್ಛಗಳಿಂದ ಶರೀರವನ್ನು ಸಿಂಗರಿಸಿಕೊಂಡು ನಾಟಕದ ನಟನಂತೆ ಅವನು ಕಾಣುತ್ತಿದ್ದನು. ಒಂದು ಕೈಯನ್ನು ಗೋಪಬಾಲಕನ ಹೆಗಲಮೇಲಿಟ್ಟುಕೊಂಡು, ಇನ್ನೊಂದು ಕೈಯಲ್ಲಿ ಕಮಲದ ಪುಷ್ಪವನ್ನು ಹಿಡಿದುಕೊಂಡು ಕುಣಿಸುತ್ತಿದ್ದನು. ಕಿವಿಗಳಲ್ಲಿ ಕಮಲದ ಕುಂಡಲಗಳಿದ್ದು, ಕೆನ್ನೆಗಳ ಮೇಲೆ ಮುಂಗುರುಳುಗಳು ನಲಿದಾಡುತ್ತಿದ್ದವು. ಮುಖಕಮಲವು ಮಂದವಾದ ಮುಗುಳ್ನಗೆಯಿಂದ ಪ್ರಫುಲ್ಲಿತವಾಗಿತ್ತು. ॥ ೨೨ ॥

ಪ್ರಾಯಃ ಶ್ರುತಪ್ರಿಯತಮೋದಯಕರ್ಣಪೂರೈ-
ರ್ಯಸ್ಮಿನ್ನಿಮಗ್ನಮನಸಸ್ತಮಥಾಕ್ಷಿರಂಧ್ರೈಃ ।
ಅಂತಃ ಪ್ರವೇಶ್ಯ ಸುಚಿರಂ ಪರಿರಭ್ಯ ತಾಪಂ
ಪ್ರಾಜ್ಞಂ ಯಥಾಭಿಮತಯೋ ವಿಜಹುರ್ನರೇಂದ್ರ ॥ ೨೩ ॥

ಪರೀಕ್ಷಿತನೇ! ಈ ಮೊದಲು ಬ್ರಾಹ್ಮಣಪತ್ನಿಯರು ಶ್ಯಾಮಸುಂದರನ ಸುಮನೋಹರವಾದ ಲೀಲಾ ಪ್ರಸಂಗಗಳನ್ನು ಕಿವಿಗಳಿಂದ ಕೇಳಿ ತಮ್ಮ-ತಮ್ಮ ಮನಸ್ಸನ್ನು ಅವನಲ್ಲಿಯೇ ಮುಳುಗಿಸಿಬಿಟ್ಟಿದ್ದರು. ಈಗಲಾದರೋ ಅವರು ತಮ್ಮ ವಿಶಾಲವಾದ ಕಣ್ಣುಗಳೆಂಬ ಹೆಬ್ಬಾಗಿಲುಗಳ ಮೂಲಕ ಪ್ರೇಮಮೂರ್ತಿಯನ್ನು ಹೃತ್ಕಮಲದಲ್ಲಿ ನೆಲೆಸಿಕೊಂಡು ಮನಸ್ಸು ತಣಿಯುವವರೆಗೂ ಅವನನ್ನು ಗಾಢವಾಗಿ ಆಲಿಂಗಿಸಿಕೊಂಡು ತಮ್ಮ ಹೃದಯದ ವಿರಹತಾಪವನ್ನು ನೀಗಿಕೊಂಡರು. ಜಾಗ್ರತ್-ಸ್ವಪ್ನಗಳಲ್ಲಿ ಇರುವ 'ನಾನು-ನನ್ನದು' ಎಂಬ ಮನೋವೃತ್ತಿಗಳೆಲ್ಲವೂ ಸುಷುಪ್ತಿಗೆ ಸಾಕ್ಷಿಯಾದ ಪ್ರಾಜ್ಞನಲ್ಲಿ ಲಯವಾಗುವಂತೆಯೇ ಬ್ರಾಹ್ಮಣ ಪತ್ನಿಯರು ಶ್ರೀಕೃಷ್ಣನಲ್ಲಿಯೇ ಲೀನರಾಗಿ ಸಂಸಾರ ತಾಪವನ್ನು ಕಳೆದುಕೊಂಡರು. ॥ ೨೩ ॥

ತಾಸ್ತಥಾ ತ್ಯಕ್ತಸರ್ವಾಶಾಃ ಪ್ರಾಪ್ತಾ ಆತ್ಮದಿದೃಕ್ಷಯಾ ।
ವಿಜ್ಞಾಯಾಖಿಲದೃಗ್ದ್ರಷ್ಟಾ ಪ್ರಾಹ ಪ್ರಹಸಿತಾನನಃ ॥ ೨೪ ॥

ಪ್ರಿಯ ಪರೀಕ್ಷಿತನೇ! ಭಗವಂತನು ಸಮಸ್ತರ ಮನಸ್ಸಿನಲ್ಲಿ ಇರುವುದನ್ನು ತಿಳಿಯುವವನೂ, ಎಲ್ಲರ ಬುದ್ಧಿಗೆ ಸಾಕ್ಷಿಯೂ ಆಗಿರುವನು. ಬ್ರಾಹ್ಮಣ ಪತ್ನಿಯರು ತಮ್ಮ ಪತಿ-ಪುತ್ರರನ್ನು, ಸಹೋದರರನ್ನು, ಬಂಧುಗಳನ್ನು ತೊರೆದು ವಿಷಯಸುಖಗಳನ್ನು ಪರಿತ್ಯಜಿಸಿ, ಕೇವಲ ನನ್ನ ದರ್ಶನಕ್ಕಾಗಿ ಬಂದಿರುವರೆಂಬುದನ್ನು ತಿಳಿದು ಶ್ರೀಕೃಷ್ಣಪರಮಾತ್ಮನು ನಗುಮೊಗದಿಂದ ಬ್ರಾಹ್ಮಣಪತ್ನಿಯರಿಗೆ ಹೇಳಿದನು. ॥ ೨೪ ॥

ಶ್ರೀಭಗವಾನುವಾಚ

ಸ್ವಾಗತಂ ವೋ ಮಹಾಭಾಗಾ ಆಸ್ಯತಾಂ ಕರವಾಮ ಕಿಮ್ ।
ಯನ್ನೋ ದಿದೃಕ್ಷಯಾ ಪ್ರಾಪ್ತಾ ಉಪಪನ್ನಮಿದಂ ಹಿ ವಃ ॥ ೨೫ ॥

ಮಹಾಭಾಗ್ಯವತಿಯರೇ! ನಿಮಗೆ ಸ್ವಾಗತ ಬಯಸುತ್ತೇನೆ. ಇತ್ತ ಬನ್ನಿರಿ. ಹಾಯಾಗಿ ಎಲ್ಲರೂ ಕುಳಿತುಕೊಳ್ಳಿರಿ. ನಾನು ನಿಮಗೆ ಯಾವ ಕಾರ್ಯವನ್ನು ಮಾಡಲಿ? ನೀವೆಲ್ಲರೂ ನನ್ನ ದರ್ಶನದ ಇಚ್ಛೆಯಿಂದ ಇಲ್ಲಿಗೆ ಬಂದಿರುವಿರಿ. ಪ್ರೇಮಪೂರ್ಣವಾದ ಹೃದಯವುಳ್ಳವರಾಗಿರುವ ನಿಮಗೆ ಇದು ಅನುರೂಪವೇ ಆಗಿದೆ. ॥ ೨೫ ॥

ನನ್ವದ್ಧಾ ಮಯಿ ಕುರ್ವಂತಿ ಕುಶಲಾಃ ಸ್ವಾರ್ಥದರ್ಶಿನಃ ।
ಅಹೈತುಕ್ಯವ್ಯವಹಿತಾಂ ಭಕ್ತಿಮಾತ್ಮಪ್ರಿಯೇ ಯಥಾ ॥ ೨೬ ॥

ಜಗತ್ತಿನಲ್ಲಿ ತಮ್ಮ ಆತ್ಮೋನ್ನತಿಯನ್ನು ತಿಳಿದಿರುವ ಬುದ್ಧಿವಂತರಾದವರು ತಮ್ಮ ಪ್ರಿಯತಮನಂತೆ ನನ್ನಲ್ಲಿ ಪ್ರೇಮವನ್ನಿಡುವರು. ಆ ಪ್ರೇಮದಲ್ಲಿ ಯಾವ ರೀತಿಯ ಕಾಮನೆಯೂ ಇರುವುದಿಲ್ಲ. ಅದರಲ್ಲಿ ಯಾವ ವಿಧವಾದ ವ್ಯವಧಾನ, ಸಂಕೋಚ, ಮರೆ, ಇವಾವುವೂ ದ್ವೈತ ಇರುವುದಿಲ್ಲ. ॥ ೨೬ ॥

ಪ್ರಾಣಬುದ್ಧಿಮನಃಸ್ವಾತ್ಮದಾರಾಪತ್ಯಧನಾದಯಃ ।
ಯತ್ಸಂಪರ್ಕಾತ್ ಪ್ರಿಯಾ ಆಸಂಸ್ತತಃ ಕೋ ನ್ವಪರಃ ಪ್ರಿಯಃ ॥ ೨೭ ॥

ಪ್ರಾಣ, ಬುದ್ಧಿ, ಮನಸ್ಸು, ಶರೀರ, ಸ್ವಜನ, ಸ್ತ್ರೀ, ಪುತ್ರ, ಧನ ಸಂಪತ್ತು - ಇವೆಲ್ಲವೂ ಯಾವ ಸಂಪರ್ಕದಿಂದ ಪ್ರಿಯವಾಗುವವೋ ಅಂತಹ ಆತ್ಮನಿಗಿಂತಲೂ, ಪರಮಾತ್ಮನಿಗಿಂತಲೂ, ಆತ್ಮ-ಪರಮಾತ್ಮ ಸ್ವರೂಪ ಕೃಷ್ಣನಾದ ನನಗಿಂತಲೂ ಪ್ರಿಯತಮರು ಬೇರೆಯಾರಿದ್ದಾರೆ? ॥ ೨೭ ॥

ತದ್ಯಾತ ದೇವಯಜನಂ ಪತಯೋ ವೋ ದ್ವಿಜಾತಯಃ ।
ಸ್ವಸತ್ರಂ ಪಾರಯಿಷ್ಯಂತಿ ಯುಷ್ಮಾಭಿರ್ಗೃಹಮೇಧಿನಃ ॥ ೨೮ ॥

ಆದುದರಿಂದ ನೀವು ಬಂದಿರುವುದು ಉಚಿತವೇ ಆಗಿದೆ. ನಾನು ನಿಮ್ಮ ಪ್ರೇಮವನ್ನು ಅಭಿನಂದಿಸುತ್ತೇನೆ. ನೀವು ನನ್ನನ್ನು ಮನಃಪೂರ್ವಕವಾಗಿ ಸಂದರ್ಶಿಸಿದಿರಿ. ಇನ್ನು ನೀವು ಯಜ್ಞಶಾಲೆಗೆ ಹೋಗಿರಿ. ನಿಮ್ಮ ಪತಿಗಳು ಗೃಹಸ್ಥರಾಗಿದ್ದಾರೆ. ಅವರು ನಿಮ್ಮನ್ನು ಬಿಟ್ಟು ಯಜ್ಞವನ್ನು ಪೂರ್ಣಗೊಳಿಸಲಾರರು. ॥ ೨೮ ॥

ಪತ್ನ್ಯ ಊಚುಃ

ಮೈವಂ ವಿಭೋಽರ್ಹತಿ ಭವಾನ್ಗದಿತುಂ ನೃಶಂಸಂ
ಸತ್ಯಂ ಕುರುಷ್ವ ನಿಗಮಂ ತವ ಪಾದಮೂಲಮ್ ।
ಪ್ರಾಪ್ತಾ ವಯಂ ತುಲಸಿದಾಮ ಪದಾವಸೃಷ್ಟಂ
ಕೇಶೈರ್ನಿವೋಢುಮತಿಲಂಘ್ಯ ಸಮಸ್ತಬಂಧೂನ್ ॥ ೨೯ ॥

ಬ್ರಾಹ್ಮಣ ಪತ್ನಿಯರು ಹೇಳಿದರು – ಶ್ಯಾಮಸುಂದರನೇ! ವಿಭುವೇ! ಇಷ್ಟು ನಿಷ್ಠುರವಾಗಿ ಮಾತಾಡುವುದು ನಿನಗೆ ಯೋಗ್ಯವಾಗಿ ಕಾಣುವುದಿಲ್ಲ. ಒಮ್ಮೆ ಭಗವಂತನನ್ನು ಪಡೆದುಕೊಂಡವನು ಮತ್ತೆ ಸಂಸಾರಕ್ಕೆ ಮರಳುವುದಿಲ್ಲವೆಂದು ಶ್ರುತಿಗಳು ಹೇಳುತ್ತವೆ. ಆ ಶ್ರುತಿವಾಣಿಯನ್ನು ಸತ್ಯವನ್ನಾಗಿ ಮಾಡು. ನಾವು ನಮ್ಮ ಸಮಸ್ತ ಸಂಬಂಧಿಗಳ ಆಜ್ಞೆಯನ್ನು ಮೀರಿ – ನಿನ್ನ ಚರಣಗಳಿಂದ ಬಿದ್ದಿರುವ ತುಳಸಿಯ ಮಾಲೆಯನ್ನು ನಮ್ಮ ಮುಡಿಯಲ್ಲಿ ಧರಿಸಿಕೊಳ್ಳಬೇಕೆಂದು ಇಲ್ಲಿಗೆ ಬಂದಿರುವೆವು. ॥ ೨೯ ॥ ಸ್ವಾಮಿಯೇ! ಈಗ ನಮ್ಮ ಪತಿ-ಪುತ್ರರು, ತಂದೆ-ತಾಯಿ, ಅಣ್ಣ-ತಮ್ಮಂದಿರು, ಸ್ವಜನ-ಬಂಧುಗಳು ನಮ್ಮನ್ನು ಸ್ವೀಕರಿಸಲಾರರು. ಹಾಗಿರುವಾಗ ಬೇರೆಯವರ ವಿಷಯವಾಗಿ ಹೇಳುವುದೇನಿದೆ? ವೀರಶಿರೋಮಣಿಯೇ! ಈಗ ನಾವು ನಿನ್ನ ಚರಣಗಳನ್ನೇ ಪರಮಾಶ್ರಯವೆಂದು ತಿಳಿದಿರುವೆವು. ನಮಗೆ ಬೇರೆಯಾರ ಆಸರೆಯೂ ಇಲ್ಲ. ಆದ್ದರಿಂದ ನಾವು ಬೇರೆಯವರಲ್ಲಿ ಶರಣಾಗದ ಹಾಗೇ ನೀನೇ ವ್ಯವಸ್ಥೆ ಮಾಡು. ॥ ೩೦ ॥

ಗೃಹ್ಣಂತಿ ನೋ ನ ಪತಯಃ ಪಿತರೌ ಸುತಾ ವಾ
ನ ಭ್ರಾತೃಬಂಧುಸುಹೃದಃ ಕುತ ಏವ ಚಾನ್ಯೇ ।
ತಸ್ಮಾದ್ಭವತ್ಪ್ರಪದಯೋಃ ಪತಿತಾತ್ಮನಾಂ ನೋ
ನಾನ್ಯಾ ಭವೇದ್ಗತಿರರಿಂದಮ ತದ್ವಿಧೇಹಿ ॥ ೩೦ ॥

ಶ್ರೀಭಗವಾನುವಾಚ

ಪತಯೋ ನಾಭ್ಯಸೂಯೇರನ್ಪಿತೃಭ್ರಾತೃಸುತಾದಯಃ ।
ಲೋಕಾಶ್ಚ ವೋ ಮಯೋಪೇತಾ ದೇವಾ ಅಪ್ಯನುಮನ್ವತೇ ॥ ೩೧ ॥

ಭಗವಾನ್ ಶ್ರೀಕೃಷ್ಣನು ಹೇಳಿದನು – ದೇವಿಯರೇ! ನಿಮ್ಮ ಪತಿ-ಪುತ್ರರಾಗಲೀ, ತಂದೆ-ತಾಯಿಯರಾಗಲೀ, ಬಂಧು-ಬಾಂಧವರಾಗಲೀ ಯಾರೂ ನಿಮ್ಮನ್ನು ತಿರಸ್ಕರಿಸಲಾರರು. ಅವರುಗಳ ಮಾತೇನು, ಇಡೀ ಜಗತ್ತೆ ನಿಮ್ಮನ್ನು ಸಮ್ಮಾನಿಸುವುದು. ಇದಕ್ಕೆ ಕಾರಣವಿಷ್ಟೇ, ಈಗ ನೀವು ನನ್ನವರಾಗಿದ್ದೀರಿ. ದೇವತೆಗಳೂ ನನ್ನ ಈ ಮಾತನ್ನು ಅನುಮೋದಿಸುತ್ತಿದ್ದಾರೆ. ॥ ೩೧ ॥ ದೇವಿಯರೇ! ಈ ಪ್ರಪಂಚದ ಮನುಷ್ಯರಲ್ಲಿ ಪರಸ್ಪರವಾದ ಪ್ರೀತಿ-ಅನುರಾಗಗಳಿಗೆ ಕೇವಲ ಅಂಗಸಂಗವೇ ಕಾರಣವಾಗುವುದಿಲ್ಲ. ಆದುದರಿಂದ ನೀವು ಈಗಲೇ ಯಜ್ಞಶಾಲೆಗೆ ಹೋಗಿರಿ. ನಿಮ್ಮ ಮನಸ್ಸನ್ನು ನನ್ನಲ್ಲಿ ನೆಲೆಗೊಳಿಸಿರಿ. ನಿಮಗೆ ಬಹುಬೇಗನೇ ನನ್ನ ಪ್ರಾಪ್ತಿಯುಂಟಾಗುವುದು. ॥ ೩೨ ॥

ನ ಪ್ರೀತಯೇಽನುರಾಗಾಯ ಹ್ಯಂಗಸಂಗೋ ನೃಣಾಮಿಹ ।
ತನ್ಮನೋ ಮಯಿ ಯುಂಜಾನಾ ಅಚಿರಾನ್ಮಾಮವಾಪ್ಸ್ಯಥ ॥ ೩೨ ॥

ಶ್ರೀಶುಕ ಉವಾಚ

ಇತ್ಯುಕ್ತಾ ದ್ವಿಜಪತ್ನ್ಯಸ್ತಾ ಯಜ್ಞವಾಟಂ ಪುನರ್ಗತಾಃ ।
ತೇ ಚಾನಸೂಯವಃ ಸ್ವಾಭಿಃ ಸ್ತ್ರೀಭಿಃ ಸತ್ರಮಪಾರಯನ್ ॥ ೩೩ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ! ಭಗವಂತನು ಹೀಗೆ ಹೇಳಲು ಭಾಗವತ್ತರಾದ ಬ್ರಾಹ್ಮಣಪತ್ನಿಯರು ಯಜ್ಞಶಾಲೆಗೆ ಹಿಂದಿರುಗಿದರು. ಶ್ರೀಕೃಷ್ಣನು ಹೇಳಿದ್ದಂತೆ ಆ ಬ್ರಾಹ್ಮಣರು ತಮ್ಮ ಪತ್ನಿಯರಲ್ಲಿ ಯಾವ ವಿಧವಾದ ದೋಷವನ್ನು ಎಣಿಸಲಿಲ್ಲ. ಅವರೊಡನೆ ಸೇರಿಕೊಂಡು ತಮ್ಮ ಯಜ್ಞವನ್ನು ಪೂರ್ಣಗೊಳಿಸಿದರು. ॥ ೩೩ ॥ ಆ ಸ್ತ್ರೀಯರಲ್ಲಿ ಒಬ್ಬಳಿಗೆ ಹೊರಡುವಾಗಲೇ ಅವಳ ಪತಿಯು ಬಲವಂತವಾಗಿ ತಡೆದು ಬಿಟ್ಟಿದ್ದನು. ಆ ಬ್ರಾಹ್ಮಣಪತ್ನಿಯು ಅನೇಕ ದಿನಗಳಿಂದ ಕೇಳಿದ ಭಗವಂತನ ಸ್ವರೂಪವನ್ನು ಹೃದಯದಲ್ಲಿರಿಸಿಕೊಂಡು, ಅವನ ಧ್ಯಾನವನ್ನೇ ಮಾಡುತ್ತಾ, ಮನಸ್ಸಿನಲ್ಲೇ ಭಗವಂತನನ್ನು ಆಲಿಂಗಿಸಿಕೊಂಡು ಕರ್ಮದಿಂದ ಉಂಟಾದ ತನ್ನ ಶರೀರವನ್ನು ತ್ಯಜಿಸಿದಳು. ಶುದ್ಧ ಸತ್ತ್ವಮಯ ದಿವ್ಯ ದೇಹವನ್ನು ಧರಿಸಿ ಭಗವಂತನಲ್ಲಿ ವಿಲೀನಳಾದಳು. ॥ ೩೪ ॥ ಇತ್ತ ಭಗವಾನ್ ಶ್ರೀಕೃಷ್ಣನು ಬ್ರಾಹ್ಮಣಪತ್ನಿಯರು ತಂದಿರುವ ನಾಲ್ಕು ವಿಧವಾದ ಅನ್ನವನ್ನು ಮೊದಲಿಗೆ ಗೋಪಬಾಲಕರಿಗೆ ಭೋಜನ ಮಾಡಿಸಿ ಮತ್ತೆ ಸ್ವತಃ ಭೋಜನ ಮಾಡಿದನು. ॥ ೩೫ ॥

ತತ್ರೈಕಾ ವಿಧೃತಾ ಭರ್ತ್ರಾ ಭಗವಂತಂ ಯಥಾಶ್ರುತಮ್ ।
ಹೃದೋಪಗುಹ್ಯ ವಿಜಹೌ ದೇಹಂ ಕರ್ಮಾನುಬಂಧನಮ್ ॥ ೩೪ ॥

ಭಗವಾನಪಿ ಗೋವಿಂದಸ್ತೇನೈವಾನ್ನೇನ ಗೋಪಕಾನ್ ।
ಚತುರ್ವಿಧೇನಾಶಯಿತ್ವಾ ಸ್ವಯಂ ಚ ಬುಭುಜೇ ಪ್ರಭುಃ ॥ ೩೫ ॥

ಏವಂ ಲೀಲಾನರವಪುರ್ನೃಲೋಕಮನುಶೀಲಯನ್ ।
ರೇಮೇ ಗೋಗೋಪಗೋಪೀನಾಂ ರಮಯನ್ರೂಪವಾಕ್ಕೃತೈಃ ॥ ೩೬ ॥

ಅಥಾನುಸ್ಮೃತ್ಯ ವಿಪ್ರಾಸ್ತೇ ಅನ್ವತಪ್ಯನ್ಕೃತಾಗಸಃ ।
ಯದ್ವಿಶ್ವೇಶ್ವರಯೋರ್ಯಾಚ್ಞಾಮಹನ್ಮ ನೃವಿಡಂಬಯೋಃ ॥ ೩೭ ॥

ದೃಷ್ಟ್ವಾ ಸ್ತ್ರೀಣಾಂ ಭಗವತಿ ಕೃಷ್ಣೇ ಭಕ್ತಿಮಲೌಕಿಕೀಮ್ ।
ಆತ್ಮಾನಂ ಚ ತಯಾ ಹೀನಮನುತಪ್ತಾ ವ್ಯಗರ್ಹಯನ್ ॥ ೩೮ ॥

ಧಿಗ್ಜನ್ಮ ನಸ್ತ್ರಿವೃದ್ವಿದ್ಯಾಂ ಧಿಗ್ವ್ರತಂ ಧಿಗ್ಬಹುಜ್ಞತಾಮ್ ।
ಧಿಕ್ಕುಲಂ ಧಿಕ್ಕ್ರಿಯಾದಾಕ್ಷ್ಯಂ ವಿಮುಖಾ ಯೇ ತ್ವಧೋಕ್ಷಜೇ ॥ ೩೯ ॥

ನೂನಂ ಭಗವತೋ ಮಾಯಾ ಯೋಗಿನಾಮಪಿ ಮೋಹಿನೀ ।
ಯದ್ವಯಂ ಗುರವೋ ನೃಣಾಂ ಸ್ವಾರ್ಥೇ ಮುಹ್ಯಾಮಹೇ ದ್ವಿಜಾಃ ॥ ೪೦ ॥

ಅಹೋ ಪಶ್ಯತ ನಾರೀಣಾಮಪಿ ಕೃಷ್ಣೇ ಜಗದ್ಗುರೌ ।
ದುರಂತಭಾವಂ ಯೋಽವಿಧ್ಯನ್ಮೃತ್ಯುಪಾಶಾನ್ಗೃಹಾಭಿಧಾನ್ ॥ ೪೧ ॥

ನಾಸಾಂ ದ್ವಿಜಾತಿಸಂಸ್ಕಾರೋ ನ ನಿವಾಸೋ ಗುರಾವಪಿ ।
ನ ತಪೋ ನಾತ್ಮಮೀಮಾಂಸಾ ನ ಶೌಚಂ ನ ಕ್ರಿಯಾಃ ಶುಭಾಃ ॥ ೪೨ ॥

ಪರೀಕ್ಷಿತನೇ! ಲೀಲಾಮಾನುಷ ವಿಗ್ರಹನಾದ ಶ್ರೀಕೃಷ್ಣನು ಈ ವಿಧವಾಗಿ ಮನುಷ್ಯರಂತೆ ಲೀಲೆಯನ್ನಾಡುತ್ತಾ ತನ್ನ ಸೌಂದರ್ಯ, ಮಾಧುರ್ಯ, ವಾಣಿ ಮತ್ತು ಕರ್ಮಗಳಿಂದ ಗೋವುಗಳನ್ನು ಗೋಪಬಾಲಕರನ್ನು ಗೋಪಿಯರನ್ನು ಆನಂದಗೊಳಿಸಿದನು ಹಾಗೂ ತಾನೂ ಕೂಡ ಅವರ ಅಲೌಕಿಕ ಪ್ರೇಮರಸವನ್ನು ಆಸ್ವಾದಿಸುತ್ತಾ ಆನಂದಿತನಾದನು. ॥ ೩೬ ॥

ಪರೀಕ್ಷಿತನೇ! ಇತ್ತ ಬ್ರಾಹ್ಮಣರಿಗೆ ಶ್ರೀಕೃಷ್ಣನಾದರೋ ಸಾಕ್ಷಾತ್ ಭಗವಂತನಾಗಿರುವನು ಎಂದು ತಿಳಿದಾಗ ಅವರಿಗೆ ಬಹಳವಾಗಿ ಪಶ್ಚಾತ್ತಾಪವುಂಟಾಯಿತು. ಜಗದೀಶ್ವರರಾದ ಭಗವಾನ್ ಶ್ರೀಕೃಷ್ಣ ಮತ್ತು ಬಲರಾಮರ ಆಜ್ಞೆಯನ್ನು ಉಲ್ಲಂಘಿಸಿ ನಾವು ಬಹು ದೊಡ್ಡ ಅಪರಾಧವನ್ನು ಮಾಡಿರುವೆವು ಎಂದು ಯೋಚಿಸಿದರು. ಅವರಾದರೋ ಮಾನವಲೀಲೆಗಳನ್ನು ಮಾಡುತ್ತಿದ್ದರೂ ಕೂಡ ಪರಮೇಶ್ವರರೇ ಆಗಿದ್ದಾರೆ. ॥ ೩೭ ॥ ನಮ್ಮ ಪತ್ನಿಯರ ಹೃದಯದಲ್ಲಿ ಭಗವಂತನ ಅಲೌಕಿಕವಾದ ಪ್ರೇಮವು ತುಂಬಿದೆ. ನಾವು ಅದರಿಂದ ಪೂರ್ಣವಾಗಿ ಬರಿದಾಗಿರುವೆವು ಎಂದು ತಿಳಿದಾಗ, ಅವರು ಪಶ್ಚಾತ್ತಾಪ ಪಟ್ಟು ತಮ್ಮನ್ನು ತಾವೇ ನಿಂದಿಸಿಕೊಂಡರು. ॥ ೩೮ ॥ ಅಧೋಕ್ಷಜನಿಂದ ವಿಮುಖರಾಗಿರುವ ನಮಗೆ ಧಿಕ್ಕಾರವಿರಲಿ, ಶ್ರೇಷ್ಠಕುಲದಲ್ಲಿ ನಾವು ಹುಟ್ಟಿದೆವು, ಗಾಯತ್ರಿಯನ್ನು ಗ್ರಹಣಮಾಡಿ ದ್ವಿಜರಾದೆವು, ವೇದಾಧ್ಯಯನ ಮಾಡಿ ನಾವು ದೊಡ್ಡ-ದೊಡ್ಡ ಯಜ್ಞಗಳನ್ನು ಮಾಡಿದೆವು. ಆದರೆ ಇವೆಲ್ಲವೂ ಉಪಯೋಗಕ್ಕೆ ಬಂದಿಲ್ಲವಲ್ಲ! ನಮಗೆ ಧಿಕ್ಕಾರವಿರಲಿ, ಧಿಕ್ಕಾರವಿರಲಿ. ನಮ್ಮ ವಿದ್ಯೆ, ವ್ರತಗಳು ವ್ಯರ್ಥವಾದುವು. ನಮ್ಮ ಈ ಬಹುಜ್ಞತೆಗೆ ಧಿಕ್ಕಾರವಿರಲಿ. ಶ್ರೇಷ್ಠವಂಶದಲ್ಲಿ ಹುಟ್ಟಿದ್ದು, ಕರ್ಮಕಾಂಡದಲ್ಲಿ ನಿಪುಣರಾಗುವುದು ಏನು ಪ್ರಯೋಜನ? ಇವುಗಳಿಗೆ ಧಿಕ್ಕಾರವಿರಲಿ. ॥ ೩೯ ॥ ನಿಶ್ಚಯವಾಗಿಯೂ ಭಗವಂತನ ಮಾಯೆಯು ಮಹಾ-ಮಹಾಯೋಗಿಗಳನ್ನೂ ಮೋಹಿತರಾಗಿಸುತ್ತದೆ. ಹಾಗಿರುವಾಗ ನಾವು ಮನುಷ್ಯರ ಗುರುಗಳು ಮತ್ತು ಬ್ರಾಹ್ಮಣರೆಂದು ಹೇಳಿಕೊಳ್ಳುವೆವು. ಆದರೆ ನಿಜವಾದ ಸ್ವಾರ್ಥ ಮತ್ತು ಪರಮಾರ್ಥದ ವಿಷಯದಲ್ಲಿ ನಾವು ಖಂಡಿತವಾಗಿ ಅಜ್ಞರಾಗಿದ್ದೇವೆ. ॥ ೪೦ ॥ ನೋಡಿರಲ್ಲ! ಇವರು ಸ್ತ್ರೀಯರಾಗಿದ್ದರೂ ಜಗದ್ಗುರು ಭಗವಾನ್ ಶ್ರೀಕೃಷ್ಣನಲ್ಲಿ ಇವರಿಗೆ ಎಷ್ಟೊಂದು ಅಗಾಧವಾದ ಪ್ರೇಮವಿದೆ, ಅಖಂಡ ಅನುರಾಗವಿದೆ. ಅದರಿಂದಲೇ ಇವರು ಸಾವಿನೊಂದಿಗೂ ಕಡಿದು ಹೋಗದಿರುವ ಗೃಹವೆಂಬ ಹೆಸರುಳ್ಳ ಬಲಿಷ್ಠವಾದ ಪಾಶವನ್ನೂ ಕತ್ತರಿಸಿ ಬಿಟ್ಟಿರುವರು. ಇದೆಂತಹ ಆಶ್ಚರ್ಯ! ॥ ೪೧ ॥ ಇವರಿಗೆ ದ್ವಿಜಾತಿಗಳ ಉಪನಯನಾದಿ ಸಂಸ್ಕಾರಗಳು ಆಗಲಿಲ್ಲ, ಇವರು ಗುರುಕುಲದಲ್ಲಿ ವಾಸಿಸಲಿಲ್ಲ, ಇವರು ತಪಸ್ಸು ಮಾಡಿಲ್ಲ, ಆತ್ಮನ ಸಂಬಂಧವಾಗಿ ವಿವೇಕ-ವಿಚಾರ ಮಾಡಲಿಲ್ಲ, ಇವುಗಳ ಮಾತಾದರೋ ದೂರವುಳಿಯಿತು, ಇವರಲ್ಲಿ ಪೂರ್ಣ ಪವಿತ್ರತೆಯೂ ಇಲ್ಲ, ಶುಭಕರ್ಮಗಳೂ ಇಲ್ಲ. ॥ ೪೨ ॥

ಅಥಾಪಿ ಹ್ಯುತ್ತಮಶ್ಲೋಕೇ ಕೃಷ್ಣೇ ಯೋಗೇಶ್ವರೇಶ್ವರೇ ।
ಭಕ್ತಿರ್ದೃಢಾ ನ ಚಾಸ್ಮಾಕಂ ಸಂಸ್ಕಾರಾದಿಮತಾಮಪಿ ॥ ೪೩ ॥

ನನು ಸ್ವಾರ್ಥವಿಮೂಢಾನಾಂ ಪ್ರಮತ್ತಾನಾಂ ಗೃಹೇಹಯಾ ।
ಅಹೋ ನಃ ಸ್ಮಾರಯಾಮಾಸ ಗೋಪವಾಕ್ಯೈಃ ಸತಾಂ ಗತಿಃ ॥ ೪೪ ॥

ಅನ್ಯಥಾ ಪೂರ್ಣಕಾಮಸ್ಯ ಕೈವಲ್ಯಾದ್ಯಾಶಿಷಾಂ ಪತೇಃ ।
ಈಶಿತವ್ಯೈಃ ಕಿಮಸ್ಮಾಭಿರೀಶಸ್ಯೈತದ್ವಿಡಂಬನಮ್ ॥ ೪೫ ॥

ಹಿತ್ವಾನ್ಯಾನ್ಭಜತೇ ಯಂ ಶ್ರೀಃ ಪಾದಸ್ಪರ್ಶಾಶಯಾಸಕೃತ್ ।
ಆತ್ಮದೋಷಾಪವರ್ಗೇಣ ತದ್ಯಾಚ್ಞಾ ಜನಮೋಹಿನೀ ॥ ೪೬ ॥

ದೇಶಃ ಕಾಲಃ ಪೃಥಗ್ದ್ರವ್ಯಂ ಮಂತ್ರತಂತ್ರರ್ತ್ವಿಜೋಽಗ್ನಯಃ ।
ದೇವತಾ ಯಜಮಾನಶ್ಚ ಕ್ರತುರ್ಧರ್ಮಶ್ಚ ಯನ್ಮಯಃ ॥ ೪೭ ॥

ಸ ಏಷ ಭಗವಾನ್ಸಾಕ್ಷಾದ್ವಿಷ್ಣುರ್ಯೋಗೇಶ್ವರೇಶ್ವರಃ ।
ಜಾತೋ ಯದುಷ್ವಿತ್ಯಶೃಣ್ಮ ಹ್ಯಪಿ ಮೂಢಾ ನ ವಿದ್ಮಹೇ ॥ ೪೮ ॥

ಅಹೋ ವಯಂ ಧನ್ಯತಮಾ ಯೇಷಾಂ ನಸ್ತಾದೃಶೀಃ ಸ್ತ್ರಿಯಃ ।
ಭಕ್ತ್ಯಾ ಯಾಸಾಂ ಮತಿರ್ಜಾತಾ ಅಸ್ಮಾಕಂ ನಿಶ್ಚಲಾ ಹರೌ ॥ ೪೯ ॥

ನಮಸ್ತುಭ್ಯಂ ಭಗವತೇ ಕೃಷ್ಣಾಯಾಕುಂಠಮೇಧಸೇ ।
ಯನ್ಮಾಯಾಮೋಹಿತಧಿಯೋ ಭ್ರಮಾಮಃ ಕರ್ಮವರ್ತ್ಮಸು ॥ ೫೦ ॥

ಹೀಗಿದ್ದರೂ ಸಮಸ್ತ ಯೋಗೇಶ್ವರರಿಗೂ ಈಶ್ವರನಾದ, ಪುಣ್ಯಶ್ಲೋಕನಾದ ಭಗವಾನ್ ಶ್ರೀಕೃಷ್ಣನ ಚರಣಗಳಲ್ಲಿ ಇವರಿಗೆ ದೃಢವಾದ ಭಕ್ತಿ ಉಂಟಾಗಿದೆ. ನಾವು ನಮ್ಮ ಸಂಸ್ಕಾರಗಳನ್ನು ಮಾಡಿಕೊಂಡಿರುವೆವು. ಗುರುಕುಲದಲ್ಲಿ ವಾಸಿಸಿದ್ದೇವೆ. ತಪಸ್ಸು ಮಾಡಿದ್ದೇವೆ. ಆತ್ಮಾನುಸಂಧಾನ ಮಾಡಿದ್ದೇವೆ. ಪವಿತ್ರತೆಯನ್ನು ಪಾಲಿಸಿದ್ದೇವೆ. ಉತ್ತಮೋತ್ತಮ ಕರ್ಮಗಳನ್ನು ಮಾಡಿದ್ದೇವೆ. ಆದರೂ ಭಗವಂತನ ಚರಣಗಳಲ್ಲಿ ನಮಗೆ ಭಕ್ತಿಯುಂಟಾಗಲಿಲ್ಲವಲ್ಲ! ॥ ೪೩ ॥ ನಾವುಗಳು ಗೃಹಕೃತ್ಯದಲ್ಲಿ ಉನ್ಮತ್ತರಾಗಿದ್ದವು. ನಮ್ಮ ಒಳಿತು-ಕೆಡುಕುಗಳನ್ನು ಪೂರ್ಣವಾಗಿ ಮರೆತು ಹೋಗಿದ್ದೆವು ಎಂಬುದು ನಿಜವಾದುದು. ಆಹಾ! ಭಗವಂತನ ಎಷ್ಟೊಂದು ದಯೆ ಇದೆ. ಭಕ್ತವತ್ಸಲ ಪ್ರಭುವು ಗೊಲ್ಲಬಾಲಕರನ್ನು ಕಳಿಸಿ ಅವರ ಮಾತಿನಿಂದ ನಮ್ಮನ್ನು ಎಚ್ಚರಿಸಿದನು. ತನ್ನ ನೆನಪನ್ನು ಮಾಡಿಸಿದನು. ॥ ೪೪ ॥ ಭಗವಂತನು ಸ್ವತಃ ಪೂರ್ಣಕಾಮನಾಗಿರುವನು. ಕೈವಲ್ಯ ಮೋಕ್ಷದವರೆಗಿನ ಉಂಟಾಗುವ ಕಾಮನೆಗಳನ್ನು ಪೂರ್ಣ ಮಾಡುವವನು. ನಮ್ಮನ್ನು ಎಚ್ಚರಿಸುವುದೇ ಪ್ರಯೋಜನವಲ್ಲದಿದ್ದರೆ ನಮ್ಮಂತಹ ಕ್ಷುದ್ರ ಜೀವರಿಂದ ಅವನಿಗೇನು ಪ್ರಯೋಜನವಿತ್ತು? ಖಂಡಿತವಾಗಿಯೂ ಅವನು ಇದೇ ಉದ್ದೇಶದಿಂದ ಬೇಡುವ ನಟನವನ್ನು ಮಾಡಿರುವನು. ಹಾಗಿಲ್ಲದಿದ್ದರೆ ಅವನಿಗೆ ಬೇಡುವ ಆವಶ್ಯಕತೆ ಏನಿತ್ತು? ॥ ೪೫ ॥ ಸಾಕ್ಷಾತ್ ಲಕ್ಷ್ಮೀದೇವಿಯೂ ಬೇರೆ ದೇವತೆಗಳೆಲ್ಲರನ್ನು ಬಿಟ್ಟು ತನ್ನ ಚಂಚಲತೆ, ಗರ್ವ ಮೊದಲಾದ ದೋಷಗಳನ್ನು ಪರಿತ್ಯಾಗ ಮಾಡಿ ನಿರಂತರವಾಗಿ ಅವನ ಚರಣಕಮಲಗಳನ್ನು ಸ್ಪರ್ಶಿಸಲಿಕ್ಕಾಗಿ ಸೇವೆ ಮಾಡುತ್ತಾ ಇರುವಳು. ಅಂತಹ ಪ್ರಭುವು ಇತರರಲ್ಲಿ ಭೋಜನವನ್ನು ಯಾಚಿಸುವುದು ಜನರನ್ನು ವಿಮೋಹಗೊಳಿಸಲಿಕ್ಕಾಗಿಯಲ್ಲದೆ ಬೇರೇನಿದೆ? ॥ ೪೬ ॥ ದೇಶ, ಕಾಲ, ಬೇರೆ-ಬೇರೆ ಸಾಮಗ್ರಿಗಳು, ಆಯಾಯ ಕರ್ಮಗಳಲ್ಲಿ ವಿನಿಯೋಗಿಸುವ ಮಂತ್ರಗಳು, ಅನುಷ್ಠಾನ ಪದ್ಧತಿ, ಋತ್ವಿಜರು, ಅಗ್ನಿ, ದೇವತೆಗಳು, ಯಜಮಾನ, ಯಜ್ಞ ಮತ್ತು ಧರ್ಮ - ಇವೆಲ್ಲವೂ ಭಗವಂತನ ಸ್ವರೂಪವೇ ಆಗಿವೆ. ॥ ೪೭ ॥ ಯೋಗೇಶ್ವರರಿಗೂ ಈಶ್ವರನಾದ ಭಗವಾನ್ ವಿಷ್ಣುವೇ ಸಾಕ್ಷಾತ್ ಶ್ರೀಕೃಷ್ಣರೂಪದಿಂದ ಯದುವಂಶದಲ್ಲಿ ಅವತರಿಸಿರುವನು. ಈ ಮಾತನ್ನು ನಾವು ಕೇಳಿದ್ದೆವು. ಆದರೆ ನಾವು ಅವನನ್ನು ಗುರುತಿಸಲಾರದಷ್ಟು ಮೂಢರಾಗಿದ್ದೇವೆ. ॥ ೪೮ ॥ ಇಷ್ಟೆಲ್ಲ ಆಗಿದ್ದರೂ ಕೂಡ ನಾವು ಧನ್ಯಾತಿಧನ್ಯರಾಗಿದ್ದೇವೆ. ನಮ್ಮ ಸೌಭಾಗ್ಯವೇ ಸರಿ! ಆದರಿಂದಲೇ ಇಂತಹ ಪತ್ನಿಯರು ನಮಗೆ ದೊರೆತಿರುವರು. ಅವರ ಭಕ್ತಿಯಿಂದಲೇ ನಮ್ಮ ಬುದ್ಧಿಯೂ ಶ್ರೀಹರಿಯಲ್ಲಿ ಅಚಲವಾಗಿ ಸೇರಿಹೋಗಿದೆ. ॥ ೪೯ ॥ ಪ್ರಭೋ! ನೀನು ಅಚಿಂತ್ಯ ಮತ್ತು ಅನಂತ ಐಶ್ವರ್ಯಗಳ ಒಡೆಯನಾಗಿರುವೆ. ಶ್ರೀಕೃಷ್ಣನೇ! ನಿನ್ನ ಜ್ಞಾನವು ಅಬಾಧಿತವಾಗಿದೆ. ನಿನ್ನ ಮಾಯೆಯಿಂದಲೇ ನಮ್ಮ ಬುದ್ಧಿಯು ಮೋಹಿತವಾಗಿದೆ ಹಾಗೂ ನಾವು ಕರ್ಮಗಳ ಜಂಜಾಟದಲ್ಲಿ ಅಲೆಯುತ್ತಿರುವೆವು. ನಾವು ನಿನಗೆ ನಮಸ್ಕರಿಸುತ್ತಿದ್ದೇವೆ. ॥ ೫೦ ॥

ಸ ವೈ ನ ಆದ್ಯಃ ಪುರುಷಃ ಸ್ವಮಾಯಾಮೋಹಿತಾತ್ಮನಾಮ್ ।
ಅವಿಜ್ಞಾತಾನುಭಾವಾನಾಂ ಕ್ಷಂತುಮರ್ಹತ್ಯತಿಕ್ರಮಮ್ ॥ ೫೧ ॥

ಆದಿಪುರುಷನಾದ, ಪುರುಷೋತ್ತಮನಾದ ಭಗವಾನ್ ಶ್ರೀಕೃಷ್ಣನು ನಮ್ಮ ಈ ಅಪರಾಧವನ್ನು ಕ್ಷಮಿಸಲಿ. ನಮ್ಮ ಬುದ್ಧಿಯು ಅವನ ಮಾಯೆಯಿಂದಲೇ ಮೋಹಿತವಾಗಿದೆ. ನಾವು ಅವನ ಅಪಾರವಾದ ಪ್ರಭಾವವನ್ನು ತಿಳಿಯದ ಅಜ್ಞಾನಿಗಳಾಗಿ ಇದ್ದೇವೆ. ॥ ೫೧ ॥

ಇತಿ ಸ್ವಾಘಮನುಸ್ಮೃತ್ಯ ಕೃಷ್ಣೇ ತೇ ಕೃತಹೇಲನಾಃ ।
ದಿದೃಕ್ಷವೋಽಪ್ಯಚ್ಯುತಯೋಃ ಕಂಸಾದ್ಭೀತಾ ನ ಚಾಚಲನ್ ॥ ೫೨ ॥

ಪರೀಕ್ಷಿತನೇ! ಆ ಬ್ರಾಹ್ಮಣರು ಶ್ರೀಕೃಷ್ಣನನ್ನು ತಿರಸ್ಕರಿಸಿದ್ದರು. ಆದ್ದರಿಂದ ಅವರಿಗೆ ತಮ್ಮ ಅಪರಾಧದ ಸ್ಮೃತಿಯಿಂದ ಬಹಳ ಪಶ್ಚಾತ್ತಾಪ ಉಂಟಾಯಿತು. ಅವರ ಹೃದಯದಲ್ಲಿ ಶ್ರೀಕೃಷ್ಣ ಬಲರಾಮರ ದರ್ಶನದ ತೀವ್ರ ಇಚ್ಛೆ ಉಂಟಾಯಿತು. ಆದರೆ ಕಂಸನ ಭಯದಿಂದ ಅವರು ದರ್ಶನಕ್ಕೆ ಹೋಗಲಿಲ್ಲ. ॥ ೫೨ ॥

ಇಪ್ಪತ್ತಮೂರನೆಯ ಅಧ್ಯಾಯವು ಮುಗಿಯಿತು. ॥ ೨೩ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮ ಸ್ಕಂಧೇ ಪೂರ್ವಾರ್ಧೇ
ಯಜ್ಞಪತ್ನ್ಯುದ್ಧರಣಂ ನಾಮ ತ್ರಯೋವಿಂಶೋಽಧ್ಯಾಯಃ ॥ ೨೩ ॥

ಇಪ್ಪತ್ತನಾಲ್ಕನೆಯ ಅಧ್ಯಾಯ

ಇಂದ್ರನ ಯಜ್ಞ ನಿವಾರಣೆ

ಶ್ರೀಶುಕ ಉವಾಚ

ಭಗವಾನಪಿ ತತ್ರೈವ ಬಲದೇವೇನ ಸಂಯುತಃ ।
ಅಪಶ್ಯನ್ನಿವಸನ್ಗೋಪಾನಿಂದ್ರಯಾಗಕೃತೋದ್ಯಮಾನ್ ॥ ೧ ॥

ತದಭಿಜ್ಞೋಽಪಿ ಭಗವಾನ್ ಸರ್ವಾತ್ಮಾ ಸರ್ವದರ್ಶನಃ ।
ಪ್ರಶ್ರಯಾವನತೋಽಪೃಚ್ಛದ್ವೃದ್ಧಾನ್ನಂದಪುರೋಗಮಾನ್ ॥ ೨ ॥

ಕಥ್ಯತಾಂ ಮೇ ಪಿತಃ ಕೋಽಯಂ ಸಂಭ್ರಮೋ ವ ಉಪಾಗತಃ ।
ಕಿಂ ಫಲಂ ಕಸ್ಯ ಚೋದ್ದೇಶಃ ಕೇನ ವಾ ಸಾಧ್ಯತೇ ಮಖಃ ॥ ೩ ॥

ಏತದ್ಬ್ರೂಹಿ ಮಹಾನ್ಕಾಮೋ ಮಹ್ಯಂ ಶುಶ್ರೂಷವೇ ಪಿತಃ ।
ನ ಹಿ ಗೋಪ್ಯಂ ಹಿ ಸಾಧೂನಾಂ ಕೃತ್ಯಂ ಸರ್ವಾತ್ಮನಾಮಿಹ ॥ ೪ ॥

ಅಸ್ತ್ಯಸ್ವಪರದೃಷ್ಟೀನಾಮಮಿತ್ರೋದಾಸ್ತವಿದ್ವಿಷಾಮ್ ।
ಉದಾಸೀನೋಽರಿವದ್ವರ್ಜ್ಯ ಆತ್ಮವತ್ಸುಹೃದುಚ್ಯತೇ ॥ ೫ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ - ಪರೀಕ್ಷಿತ ಮಹಾರಾಜನೇ! ಭಗವಾನ್ ಶ್ರೀಕೃಷ್ಣನು ಬಲರಾಮನೊಂದಿಗೆ ವೃಂದಾವನದಲ್ಲಿದ್ದು ಅನೇಕ ಪ್ರಕಾರವಾದ ಲೀಲೆಗಳನ್ನು ಪ್ರಕಟಪಡಿಸುತ್ತಿದ್ದನು. ಒಂದು ದಿನ ಅಲ್ಲಿಯ ಗೋಪಾಲಕರು ಇಂದ್ರಯಜ್ಞವನ್ನು ಮಾಡಲು ಸಿದ್ಧತೆ ಮಾಡುತ್ತಿರುವುದನ್ನು ನೋಡಿದನು. ॥ ೧ ॥ ಶ್ರೀಕೃಷ್ಣನು ಸರ್ವಾಂತರ್ಯಾಮಿಯೂ, ಸರ್ವಜ್ಞನೂ ಆಗಿದ್ದುದರಿಂದ ಎಲ್ಲವನ್ನೂ ಅವನು ತಿಳಿದಿರುತ್ತಿದ್ದನು. ಹೀಗಿದ್ದರೂ ವಿನಯದಿಂದ ಕೂಡಿ ನಂದನೇ ಮೊದಲಾದ ಹಿರಿಯ ಗೋಪರನ್ನು ಕೇಳಿದನು. ॥ ೨ ॥ ತಂದೆಯವರೇ! ನಿಮ್ಮ ಮುಂದೆ ಎಂತಹ ಮಹಾಕಾರ್ಯವು ಇದಿರಾಗಿದೆ? ಯಾವ ಉತ್ಸವವು ನಡೆಯಲಿದೆ? ಇದರ ಫಲವು ಏನು? ಯಾವ ಉದ್ದೇಶದಿಂದ ಯಾವ ಯಾವ ಸಾಮಗ್ರಿಗಳಿಂದ ಈ ಯಜ್ಞವನ್ನು ಮಾಡಲಾಗುತ್ತದೆ? ಇದೆಲ್ಲವನ್ನು ನನಗೆ ತಿಳಿಸಿರಿ. ॥ ೩ ॥ ನೀವು ನನಗೆ ತಂದೆಯಾಗಿದ್ದು, ನಾನು ನಿಮ್ಮ ಮಗನಲ್ಲವೇ! ಅಪ್ಪಾ! ಇದನ್ನು ತಿಳಿದುಕೊಳ್ಳಬೇಕೆಂಬ ಉತ್ಕಂಠತೆಯೂ ಇದೆ. ಜಗತ್ತಿನಲ್ಲಿ ಸಮಸ್ತರನ್ನು ತಮ್ಮಂತೆಯೇ ಕಾಣುವ, 'ಇವರು ತಮ್ಮವರು, ಇವರು ಪರರು' ಎಂಬ ಭೇದ ಭಾವವೇ ಇಲ್ಲದಿರುವ ಸಾಧುಗಳಿಗೆ ಇತರರಿಂದ ಮುಚ್ಚಿಡಬೇಕಾದುದು ಯಾವುದೂ ಇರುವುದಿಲ್ಲ. ಇವರಿಗೆ ಮಿತ್ರ ಶತ್ರು ಉದಾಸೀನ ಇವರಲ್ಲಿ ಯಾವ ಭೇದವೂ ಇರುವುದಿಲ್ಲ. ಆದರೆ ಇಂತಹ ಸ್ಥಿತಿಯುಳ್ಳವರಲ್ಲದಿದ್ದರೆ ರಹಸ್ಯದ ಮಾತನ್ನು ಶತ್ರುವಿನಂತೆ ಉದಾಸೀನನಲ್ಲಿಯೂ ಹೇಳಬಾರದು. ಮಿತ್ರನಾದರೋ ತನ್ನಂತೆಯೇ ಎಂದು ಹೇಳಲಾಗಿದೆ. ಆದ್ದರಿಂದ ಅವನಲ್ಲಿ ಯಾವ ಮಾತನ್ನು ಮರೆಮಾಚಲಾಗುವುದಿಲ್ಲ. ॥ ೪-೫ ॥

ಜ್ಞಾತ್ವಾಜ್ಞಾತ್ವಾ ಚ ಕರ್ಮಾಣಿ ಜನೋಽಯಮನುತಿಷ್ಠತಿ ।
ವಿದುಷಃ ಕರ್ಮಸಿದ್ಧಿಃ ಸ್ಯಾತ್ತಥಾ ನಾವಿದುಷೋ ಭವೇತ್ ॥ ೬ ॥

ತತ್ರ ತಾವತ್ಕ್ರಿಯಾಯೋಗೋ ಭವತಾಂ ಕಿಂ ವಿಚಾರಿತಃ ।
ಅಥವಾ ಲೌಕಿಕಸ್ತನ್ಮೇ ಪೃಚ್ಛತಃ ಸಾಧು ಭಣ್ಯತಾಮ್ ॥ ೭ ॥

ನಂದಗೋಪ ಉವಾಚ

ಪರ್ಜನ್ಯೋ ಭಗವಾನಿಂದ್ರೋ ಮೇಘಾಸ್ತಸ್ಯಾತ್ಮಮೂರ್ತಯಃ ।
ತೇಽಭಿವರ್ಷಂತಿ ಭೂತಾನಾಂ ಪ್ರೀಣನಂ ಜೀವನಂ ಪಯಃ ॥ ೮ ॥

ತಂ ತಾತ ವಯಮನ್ಯೇ ಚ ವಾರ್ಮುಚಾಂ ಪತಿಮೀಶ್ವರಮ್ ।
ದ್ರವ್ಯೈಸ್ತದ್ರೇತಸಾ ಸಿದ್ಧೈರ್ಯಜಂತೇ ಕ್ರತುಭಿರ್ನರಾಃ ॥ ೯ ॥

ತಚ್ಛೇಷೇಣೋಪಜೀವಂತಿ ತ್ರಿವರ್ಗಫಲಹೇತವೇ ।
ಪುಂಸಾಂ ಪುರುಷಕಾರಾಣಾಂ ಪರ್ಜನ್ಯಃ ಫಲಭಾವನಃ ॥ ೧೦ ॥

ಯ ಏನಂ ವಿಸೃಜೇದ್ಧರ್ಮಂ ಪಾರಂಪರ್ಯಾಗತಂ ನರಃ ।
ಕಾಮಾಲ್ಲೋಭಾದ್ಭಯಾದ್ದ್ವೇಷಾತ್ಸ ವೈ ನಾಪ್ನೋತಿ ಶೋಭನಮ್ ॥ ೧೧ ॥

ಶ್ರೀಶುಕ ಉವಾಚ

ವಚೋ ನಿಶಮ್ಯ ನಂದಸ್ಯ ತಥಾನ್ಯೇಷಾಂ ವ್ರಜೌಕಸಾಮ್ ।
ಇಂದ್ರಾಯ ಮನ್ಯುಂ ಜನಯನ್ಪಿತರಂ ಪ್ರಾಹ ಕೇಶವಃ ॥ ೧೨ ॥

ಶ್ರೀಭಗವಾನುವಾಚ

ಕರ್ಮಣಾ ಜಾಯತೇ ಜಂತುಃ ಕರ್ಮಣೈವ ವಿಲೀಯತೇ ।
ಸುಖಂ ದುಃಖಂ ಭಯಂ ಕ್ಷೇಮಂ ಕರ್ಮಣೈವಾಭಿಪದ್ಯತೇ ॥ ೧೩ ॥

ಅಸ್ತಿ ಚೇದೀಶ್ವರಃ ಕಶ್ಚಿತ್ಫಲರೂಪ್ಯನ್ಯಕರ್ಮಣಾಮ್ ।
ಕರ್ತಾರಂ ಭಜತೇ ಸೋಽಪಿ ನ ಹ್ಯಕರ್ತುಃ ಪ್ರಭುರ್ಹಿ ಸಃ ॥ ೧೪ ॥

ಕಿಮಿಂದ್ರೇಣೇಹ ಭೂತಾನಾಂ ಸ್ವಸ್ವಕರ್ಮಾನುವರ್ತಿನಾಮ್ ।
ಅನೀಶೇನಾನ್ಯಥಾ ಕರ್ತುಂ ಸ್ವಭಾವವಿಹಿತಂ ನೃಣಾಮ್ ॥ ೧೫ ॥

ಈ ಸಂಸಾರಿ ಮನುಷ್ಯನು ತಿಳಿದೂ-ತಿಳಿಯದೆಯೋ ಅನೇಕ ವಿಧದ ಕರ್ಮಗಳ ಅನುಷ್ಠಾನವನ್ನು ಮಾಡುತ್ತಾನೆ. ಅದರಲ್ಲಿ ತಿಳಿದು-ತಿಳಿದು ಮಾಡಿದ ಕರ್ಮಗಳು ಫಲಕೊಡುವಂತೆ ತಿಳಿಯದೇ ಮಾಡಿದ ಕರ್ಮಗಳ ಫಲದೊರೆಯುವುದಿಲ್ಲ. ॥ ೬ ॥ ಆದ್ದರಿಂದ ಈಗ ನೀವೆಲ್ಲರೂ ಮಾಡಲು ಹೊರಟಿರುವ ಕ್ರಿಯಾಯೋಗವು ಸುಹೃದಯರೊಂದಿಗೆ ವಿಚಾರ ವಿಮರ್ಶೆಮಾಡಿ, ಶಾಸ್ತ್ರಸಮ್ಮತವೂ ಅಥವಾ ಲೌಕಿಕವೇ ಇರಬಹುದು. ಇವೆಲ್ಲವನ್ನು ನಾನು ತಿಳಿಯಲು ಬಯಸುತ್ತೇನೆ. ದಯಮಾಡಿ ಸ್ಪಷ್ಟವಾಗಿ ಹೇಳುವವರಾಗಿರಿ. ॥ ೭ ॥

ನಂದಗೋಪನು ಹೇಳಿದನು – ಮಗು! ಭಗವಾನ್ ಇಂದ್ರನು ಮಳೆಗರೆಯುವ ಮೇಘಗಳ ಅಧಿಪತಿಯಾಗಿರುವನು. ಈ ಮೇಘಗಳು ಅವನದೇ ರೂಪಗಳಾಗಿವೆ. ಅವು ಸಮಸ್ತ ಪ್ರಾಣಿಗಳನ್ನು ತೃಪ್ತಿಪಡಿಸುವಂತಹ ಜೀವನ ದಾತೃವಾದ ನೀರನ್ನು ಸುರಿಸುವುವು. ॥ ೮ ॥ ನನ್ನ ಮುದ್ದುಕಂದ! ನಾವು ಮತ್ತು ಇತರರು ಅದೇ ಮೇಘಪತಿಯಾದ ಭಗವಾನ್ ಇಂದ್ರನನ್ನು ಯಜ್ಞಗಳ ಮೂಲಕ ಪೂಜಿಸುತ್ತೇವೆ. ಯಜ್ಞಮಾಡುವ ಸಾಮಗ್ರಿಗಳೂ ಕೂಡ ಅವನು ಸುರಿಸಿದ ಶಕ್ತಿಯುತವಾದ ನೀರಿನಿಂದಲೇ ಉತ್ಪನ್ನವಾಗಿವೆ. ॥ ೯ ॥ ಅವನ ಯಜ್ಞವನ್ನು ಮಾಡಿದ ಬಳಿಕ ಉಳಿದಿರುವ ಅನ್ನದಿಂದಲೇ ನಾವೆಲ್ಲರೂ ಅರ್ಥ, ಧರ್ಮ ಮತ್ತು ಕಾಮರೂಪವಾದ ತ್ರಿವರ್ಗಗಳ ಸಿದ್ಧಿಗಾಗಿ ಜೀವನನಿರ್ವಾಹ ಮಾಡುತ್ತೇವೆ. ಮನುಷ್ಯರ ಬೇಸಾಯವೇ ಮುಂತಾದ ಪ್ರಯತ್ನಗಳಿಗೆ ಫಲವನ್ನು ಕೊಡುವವನು ಇಂದ್ರನೇ ಆಗಿರುವನು. ॥ ೧೦ ॥ ಈ ಧರ್ಮವು (ಸಂಪ್ರದಾಯ) ನಮ್ಮ ಕುಲಪರಂಪರೆಯಿಂದ ನಡೆದು ಬಂದಿದೆ. ಇಂತಹ ಪರಂಪರಾಗತ ಧರ್ಮವನ್ನು ಕಾಮ, ಲೋಭ, ಭಯ ಅಥವಾ ದ್ವೇಷದಿಂದ ಬಿಟ್ಟು ಬಿಡುವವನಿಗೆ ಎಂದಿಗೂ ಒಳ್ಳೆಯದಾಗುವುದಿಲ್ಲ. ॥ ೧೧ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ! ಭಗವಾನ್ ಕೇಶವನು ತಂದೆಯ ಮತ್ತು ಇತರ ವ್ರಜವಾಸಿಗಳ ಮಾತನ್ನು ಕೇಳಿ ಇಂದ್ರನಿಗೆ ಕೋಪವನ್ನುಂಟುಮಾಡುವ ಈ ಮಾತುಗಳನ್ನು ನಂದಗೋಪನ ಬಳಿ ಹೇಳಿದನು. ॥ ೧೨ ॥

ಶ್ರೀಭಗವಂತನು ಹೇಳಿದನು – ತಂದೆಯವರೇ! ಪ್ರಾಣಿಯು ತನ್ನ ಕರ್ಮಕ್ಕನುಸಾರವಾಗಿಯೇ ಹುಟ್ಟುತ್ತಾನೆ ಮತ್ತು ಕರ್ಮಾನುಸಾರವೇ ಸಾಯುತ್ತಾನೆ. ಅವನಿಗೆ ಅವನ ಕರ್ಮಕ್ಕೆ ಅನುಸಾರವೇ ಸುಖ-ದುಃಖ, ಭಯ ಕ್ಷೇಮಗಳು ಪ್ರಾಪ್ತವಾಗುತ್ತವೆ. ॥ ೧೩ ॥ ಜಡವಾದ ಕರ್ಮವೇ ಕರ್ಮ ಮಾಡಿದವನಿಗೆ ಫಲ ನೀಡದೆಂದೂ, ಫಲವನ್ನು ಕೊಡುವ ಬೇರೊಬ್ಬ ಈಶ್ವರನಿದ್ದಾನೆಂದು ಭಾವಿಸಿದರೂ, ಆ ಈಶ್ವರನೂ ಕೂಡ ಕರ್ಮಮಾಡಿದವನಿಗೇ ಫಲನೀಡಬಲ್ಲನೇ ಹೊರತು ಕರ್ಮಮಾಡದವನ ಮೇಲೆ ಅವನ ಪ್ರಭಾವವೇನೂ ನಡೆಯುವುದಿಲ್ಲ. ॥ ೧೪ ॥ ಸಮಸ್ತ ಪ್ರಾಣಿಗಳೂ ತಮ್ಮ-ತಮ್ಮ ಕರ್ಮಗಳ ಫಲಗಳನ್ನೇ ಅನುಭವಿಸುತ್ತಿರುವಾಗ ನಮಗೆ ಇಂದ್ರನ ಆವಶ್ಯಕತೆ ಏನಿದೆ? ಅಪ್ಪಾಜೀ! ಪೂರ್ವಸಂಸ್ಕಾರಕ್ಕೆ ಅನುಸಾರ ಪ್ರಾಪ್ತವಾಗುವ ಮನುಷ್ಯರ ಕರ್ಮಗಳನ್ನು ಅವನು ಬದಲಿಸಲಾರನೆಂದಾಗ ಅವನಿಂದ ಏನು ಪ್ರಯೋಜನ? ॥ ೧೫ ॥

ಸ್ವಭಾವತಂತ್ರೋ ಹಿ ಜನಃ ಸ್ವಭಾವಮನುವರ್ತತೇ ।
ಸ್ವಭಾವಸ್ಥಮಿದಂ ಸರ್ವಂ ಸದೇವಾಸುರಮಾನುಷಮ್ ॥ ೧೬ ॥

ದೇಹಾನುಚ್ಚಾವಚಾನ್‌ಜಂತುಃ ಪ್ರಾಪ್ಯೋತ್ಸೃಜತಿ ಕರ್ಮಣಾ ।
ಶತ್ರುರ್ಮಿತ್ರಮುದಾಸೀನಃ ಕರ್ಮೈವ ಗುರುರೀಶ್ವರಃ ॥ ೧೭ ॥

ತಸ್ಮಾತ್ಸಂಪೂಜಯೇತ್ಕರ್ಮ ಸ್ವಭಾವಸ್ಥಃ ಸ್ವಕರ್ಮಕೃತ್ ।
ಅಂಜಸಾ ಯೇನ ವರ್ತೇತ ತದೇವಾಸ್ಯ ಹಿ ದೈವತಮ್ ॥ ೧೮ ॥

ಆಜೀವ್ಯೈಕತರಂ ಭಾವಂ ಯಸ್ತ್ವನ್ಯಮುಪಜೀವತಿ ।
ನ ತಸ್ಮಾದ್ವಿಂದತೇ ಕ್ಷೇಮಂ ಜಾರಂ ನಾರ್ಯಸತೀ ಯಥಾ ॥ ೧೯ ॥

ವರ್ತೇತ ಬ್ರಹ್ಮಣಾ ವಿಪ್ರೋ ರಾಜನ್ಯೋ ರಕ್ಷಯಾ ಭುವಃ ।
ವೈಶ್ಯಸ್ತು ವಾರ್ತಯಾ ಜೀವೇಚ್ಛೂದ್ರಸ್ತು ದ್ವಿಜಸೇವಯಾ ॥ ೨೦ ॥

ಕೃಷಿವಾಣಿಜ್ಯಗೋರಕ್ಷಾ ಕುಸೀದಂ ತುರ್ಯಮುಚ್ಯತೇ ।
ವಾರ್ತಾ ಚತುರ್ವಿಧಾ ತತ್ರ ವಯಂ ಗೋವೃತ್ತಯೋಽನಿಶಮ್ ॥ ೨೧ ॥

ಸತ್ತ್ವಂ ರಜಸ್ತಮ ಇತಿ ಸ್ಥಿತ್ಯುತ್ಪತ್ತ್ಯಂತಹೇತವಃ ।
ರಜಸೋತ್ಪದ್ಯತೇ ವಿಶ್ವಮನ್ಯೋನ್ಯಂ ವಿವಿಧಂ ಜಗತ್ ॥ ೨೨ ॥

ರಜಸಾ ಚೋದಿತಾ ಮೇಘಾ ವರ್ಷಂತ್ಯಂಬೂನಿ ಸರ್ವತಃ ।
ಪ್ರಜಾಸ್ತೈರೇವ ಸಿಧ್ಯಂತಿ ಮಹೇಂದ್ರಃ ಕಿಂ ಕರಿಷ್ಯತಿ ॥ ೨೩ ॥

ನ ನಃ ಪುರೋ ಜನಪದಾ ನ ಗ್ರಾಮಾ ನ ಗೃಹಾ ವಯಮ್ ।
ನಿತ್ಯಂ ವನೌಕಸಸ್ತಾತ ವನಶೈಲನಿವಾಸಿನಃ ॥ ೨೪ ॥

ತಸ್ಮಾದ್ಗವಾಂ ಬ್ರಾಹ್ಮಣಾನಾಮದ್ರೇಶ್ಚಾರಭ್ಯತಾಂ ಮಖಃ ।
ಯ ಇಂದ್ರಯಾಗಸಂಭಾರಾಸ್ತೈರಯಂ ಸಾಧ್ಯತಾಂ ಮಖಃ ॥ ೨೫ ॥

ಪಚ್ಯಂತಾಂ ವಿವಿಧಾಃ ಪಾಕಾಃ ಸೂಪಾಂತಾಃ ಪಾಯಸಾದಯಃ ।
ಸಂಯಾವಾಪೂಪಶಷ್ಕುಲ್ಯಃ ಸರ್ವದೋಹಶ್ಚ ಗೃಹ್ಯತಾಮ್ ॥ ೨೬ ॥

ಮನುಷ್ಯರೆಲ್ಲರೂ ತಮ್ಮ ಸ್ವಭಾವಕ್ಕೆ (ಹಿಂದಿನ ಸಂಸ್ಕಾರಕ್ಕೆ) ಅಧೀನರಾಗಿದ್ದಾರೆ. ಅವರು ಅದನ್ನೇ ಅನುಸರಿಸುತ್ತಾರೆ. ಇಷ್ಟೇ ಅಲ್ಲ, ದೇವತೆಗಳು, ಅಸುರರು, ಮನುಷ್ಯರು - ಇವರಿಂದ ಕೂಡಿದ ಈ ಜಗತ್ತೆಲ್ಲವೂ ಸ್ವಭಾವದಲ್ಲೇ ನೆಲೆನಿಂತಿದೆ. ॥ ೧೬ ॥ ಜೀವನು ತನ್ನ ಕರ್ಮಕ್ಕೆ ಅನುಸಾರವೇ ಉತ್ತಮ ಅಥವಾ ಅಧಮ ಶರೀರಗಳನ್ನು ಪಡೆಯುತ್ತಾನೆ ಹಾಗೂ ತೊರೆಯುತ್ತಾನೆ. ತನ್ನ ಕರ್ಮಕ್ಕನುಸಾರವೇ ಇವನು ಶತ್ರು, ಇವನು ಮಿತ್ರ, ಇವನು ಉದಾಸೀನ ಎಂದು ವ್ಯವಹರಿಸುತ್ತಾನೆ. ಕರ್ಮವೇ ಗುರು. ಕರ್ಮವೇ ಈಶ್ವರನು. ॥ ೧೭ ॥ ಆದ್ದರಿಂದ ತಂದೆಯವರೇ! ಮನುಷ್ಯನು ತನ್ನ ಪೂರ್ವಸಂಸ್ಕಾರಕ್ಕನುಸಾರ ಹೊಂದಿರುವ ವರ್ಣ ಮತ್ತು ಆಶ್ರಮಕ್ಕೆ ಅನುಕೂಲವಾದ ಧರ್ಮಗಳನ್ನೇ ಪಾಲಿಸುತ್ತಾ ಕರ್ಮವನ್ನೇ ಆದರಿಸಬೇಕು. ಯಾವುದರಿಂದ ಮನುಷ್ಯನ ಜೀವನ ನಿರ್ವಾಹವು ಸುಗಮವಾಗಿ ನಡೆಯುವುದೋ ಅದೇ ಅವನಿಗೆ ಇಷ್ಟದೇವತೆಯಾಗಿರುತ್ತದೆ. ॥ ೧೮ ॥ ತನ್ನ ವಿವಾಹಿತ ಪತಿಯನ್ನು ತೊರೆದು ಜಾರನನ್ನು ಸೇವಿಸುವ ವ್ಯಭಿಚಾರಿಣಿ ಸ್ತ್ರೀಯು ಎಂದಿಗೂ ಶಾಂತಿಯನ್ನು ಪಡೆಯಲಾರಳು. ಹಾಗೆಯೇ ತನ್ನ ಜೀವನ ನಿರ್ವಾಹ ನಡೆಸುವ ಒಂದು ದೇವತೆಯನ್ನು ಬಿಟ್ಟು ಬೇರೆ ದೇವರನ್ನು ಉಪಾಸಿಸುವ ಮನುಷ್ಯನಿಗೆ ಎಂದಿಗೂ ಸುಖವು ಸಿಗಲಾರದು. ॥ ೧೯ ॥ ಬ್ರಾಹ್ಮಣನು ಅಧ್ಯಯನ-ಅಧ್ಯಾಪನದಿಂದ, ಕ್ಷತ್ರಿಯನು ಪ್ರಜಾಪಾಲನೆಯಿಂದ, ವೈಶ್ಯನು ವಾರ್ತೆಯಿಂದ ಮತ್ತು ಶೂದ್ರನು ತ್ರಿವರ್ಣದವರ ಸೇವೆಯಿಂದ ಜೀವನವನ್ನು ನಿರ್ವಹಿಸಬೇಕು. ॥ ೨೦ ॥ ವೈಶ್ಯರ ವಾರ್ತೆಯು - ಕೃಷಿ, ವ್ಯಾಪಾರ, ಗೋರಕ್ಷಣೆ ಮತ್ತು ಬಡ್ಡಿ ಪಡೆಯುವುದು ಎಂಬ ನಾಲ್ಕು ವಿಧವಾಗಿದೆ. ನಾವುಗಳು ಆ ನಾಲ್ಕರಲ್ಲಿ ಕೇವಲ ಗೋರಕ್ಷಣೆಯನ್ನೇ ಹಿಂದಿನಿಂದಲೂ ಮಾಡುತ್ತಾ ಬಂದಿರುವೆವು. ॥ ೨೧ ॥ ಅಪ್ಪಾ! ಈ ಪ್ರಪಂಚದ ಸ್ಥಿತಿ-ಉತ್ಪತ್ತಿ ಲಯಗಳು ಕ್ರಮವಾಗಿ ಸತ್ತ್ವಗುಣ, ರಜೋಗುಣ ಮತ್ತು ತಮೋಗುಣಗಳಿಂದ ಆಗುತ್ತವೆ. ವಿವಿಧ ರೀತಿಯ ಈ ಜಗತ್ತು ಸ್ತ್ರೀ-ಪುರುಷರ ಸಂಯೋಗದಿಂದ ರಜೋಗುಣದ ಮೂಲಕ ಹುಟ್ಟುತ್ತದೆ. ॥ ೨೨ ॥ ಅದೇ ರಜೋಗುಣದ ಪ್ರೇರಣೆಯಿಂದ ಮೇಘಗಳು ಎಲ್ಲೆಡೆ ನೀರು ಸುರಿಸುತ್ತವೆ. ಅದರಿಂದ ಅನ್ನವೂ ಮತ್ತು ಅನ್ನದಿಂದ ಸಮಸ್ತ ಜೀವರ ಜೀವನ ನಡೆಯುತ್ತದೆ. ಇದರಲ್ಲಿ ಇಂದ್ರನ ಸಂಬಂಧವೇನಿದೆ? ಅವನೇನು ಮಾಡಬಲ್ಲನು? ॥ ೨೩ ॥ ತಂದೆಯವರೇ! ನಮ್ಮ ಅಧೀನದಲ್ಲಿ ಯಾವುದೇ ರಾಜ್ಯವಾಗಲೀ, ಪಟ್ಟಣವಾಗಲೀ, ಊರಾಗಲೀ, ಹಳ್ಳಿಯಾಗಲೀ ಇರುವುದಿಲ್ಲ. ನಮಗೆ ಮನೆ-ಮಠಗಳೂ ಇಲ್ಲ. ನಾವಾದರೋ ವನವಾಸಿಗಳು. ವನ ಮತ್ತು ಪರ್ವತವೇ ನಮ್ಮ ಮನೆಯಾಗಿದೆ. ॥ ೨೪ ॥ ಆದುದರಿಂದ ನಾವುಗಳು ಗೋವುಗಳ ಬ್ರಾಹ್ಮಣರ ಮತ್ತು ಗಿರಿರಾಜನಾದ ಗೋವರ್ಧನದ ಕುರಿತು ಯಜ್ಞವನ್ನು ಪ್ರಾರಂಭಿಸೋಣ. ಇಂದ್ರಯಜ್ಞಕ್ಕಾಗಿ ಸಂಗ್ರಹಿಸಿದ ಸಾಮಗ್ರಿಗಳಿಂದಲೇ ಈ ಯಜ್ಞಾನುಷ್ಠಾನ ನೆರವೇರಲಿ. ॥ ೨೫ ॥ ಈ ಯಜ್ಞಕ್ಕಾಗಿ ಅನೇಕ ಪ್ರಕಾರದ ಪಕ್ವಾನ್ನಗಳೂ, ಪಾಯಸ, ಕಜ್ಜಾಯಗಳೂ, ಚಕ್ಕುಲಿಗಳೂ ಮೊದಲ್ಗೊಂಡು ತೊವ್ವೆಯವರೆಗಿನ ಬಗೆ-ಬಗೆಯ ಅಡಿಗೆಗಳನ್ನು ಸಿದ್ಧಪಡಿಸಿರಿ. ಇಂದು ಕರೆದ ಹಸುಗಳ ಎಲ್ಲ ಹಾಲನ್ನು ಕೂಡಿಹಾಕಿರಿ. ॥ ೨೬ ॥

ಹೂಯಂತಾಮಗ್ನಯಃ ಸಮ್ಯಗ್ಬ್ರಾಹ್ಮಣೈರ್ಬ್ರಹ್ಮವಾದಿಭಿಃ ।
ಅನ್ನಂ ಬಹುವಿಧಂ ತೇಭ್ಯೋ ದೇಯಂ ವೋ ಧೇನುದಕ್ಷಿಣಾಃ ॥ ೨೭ ॥

ಅನ್ಯೇಭ್ಯಶ್ಚಾಶ್ವಚಾಂಡಾಲಪತಿತೇಭ್ಯೋ ಯಥಾರ್ಹತಃ ।
ಯವಸಂ ಚ ಗವಾಂ ದತ್ತ್ವಾ ಗಿರಯೇ ದೀಯತಾಂ ಬಲಿಃ ॥ ೨೮ ॥

ಸ್ವಲಂಕೃತಾ ಭುಕ್ತವಂತಃ ಸ್ವನುಲಿಪ್ತಾಃ ಸುವಾಸಸಃ ।
ಪ್ರದಕ್ಷಿಣಂ ಚ ಕುರುತ ಗೋವಿಪ್ರಾನಲಪರ್ವತಾನ್ ॥ ೨೯ ॥

ಏತನ್ಮಮ ಮತಂ ತಾತ ಕ್ರಿಯತಾಂ ಯದಿ ರೋಚತೇ ।
ಅಯಂ ಗೋಬ್ರಾಹ್ಮಣಾದ್ರೀಣಾಂ ಮಹ್ಯಂ ಚ ದಯಿತೋ ಮಖಃ ॥ ೩೦ ॥

ಶ್ರೀಶುಕ ಉವಾಚ

ಕಾಲಾತ್ಮನಾ ಭಗವತಾ ಶಕ್ರದರ್ಪಂ ಜಿಘಾಂಸತಾ ।
ಪ್ರೋಕ್ತಂ ನಿಶಮ್ಯ ನಂದಾದ್ಯಾಃ ಸಾಧ್ವಗೃಹ್ಣಂತ ತದ್ವಚಃ ॥ ೩೧ ॥

ತಥಾ ಚ ವ್ಯದಧುಃ ಸರ್ವಂ ಯಥಾಽಽಹ ಮಧುಸೂದನಃ ।
ವಾಚಯಿತ್ವಾ ಸ್ವಸ್ತ್ಯಯನಂ ತದ್ದ್ರವ್ಯೇಣ ಗಿರಿದ್ವಿಜಾನ್ ॥ ೩೨ ॥

ಉಪಹೃತ್ಯ ಬಲೀನ್ ಸರ್ವಾನಾದೃತಾ ಯವಸಂ ಗವಾಮ್ ।
ಗೋಧನಾನಿ ಪುರಸ್ಕೃತ್ಯ ಗಿರಿಂ ಚಕ್ರುಃ ಪ್ರದಕ್ಷಿಣಮ್ ॥ ೩೩ ॥

ಅನಾಂಸ್ಯನಡುದ್ಯುಕ್ತಾನಿ ತೇ ಚಾರುಹ್ಯ ಸ್ವಲಂಕೃತಾಃ ।
ಗೋಪ್ಯಶ್ಚ ಕೃಷ್ಣವೀರ್ಯಾಣಿ ಗಾಯಂತ್ಯಃ ಸದ್ವಿಜಾಶಿಷಃ ॥ ೩೪ ॥

ಕೃಷ್ಣಸ್ತ್ವನ್ಯತಮಂ ರೂಪಂ ಗೋಪವಿಶ್ರಂಭಣಂ ಗತಃ ।
ಶೈಲೋಽಸ್ಮೀತಿ ಬ್ರುವನ್ ಭೂರಿ ಬಲಿಮಾದದ್ಬೃಹದ್ವಪುಃ ॥ ೩೫ ॥

ತಸ್ಮೈ ನಮೋ ವ್ರಜಜನೈಃ ಸಹ ಚಕ್ರೇಽಽತ್ಮನಾಽಽತ್ಮನೇ ।
ಅಹೋ ಪಶ್ಯತ ಶೈಲೋಽಸೌ ರೂಪೀ ನೋಽನುಗ್ರಹಂ ವ್ಯಧಾತ್ ॥ ೩೬ ॥

ಏಷೋಽವಜಾನತೋ ಮರ್ತ್ಯಾನ್ಕಾಮರೂಪೀ ವನೌಕಸಃ ।
ಹಂತಿ ಹ್ಯಸ್ಮೈ ನಮಸ್ಯಾಮಃ ಶರ್ಮಣೇ ಆತ್ಮನೋ ಗವಾಮ್ ॥ ೩೭ ॥

ಬ್ರಹ್ಮವಾದಿಗಳಾದ ಬ್ರಾಹ್ಮಣರು ಅಗ್ನಿಯಲ್ಲಿ ಚೆನ್ನಾಗಿ ಹವನ ಮಾಡಲಿ. ಅವರಿಗೆ ಅನೇಕ ವಿಧದ ಭಕ್ಷ್ಯಗಳಿಂದ ಕೂಡಿದ ಊಟ ಮಾಡಿಸಿ, ಗೋವುಗಳನ್ನೂ, ದಕ್ಷಿಣೆಯನ್ನೂ ದಾನ ಮಾಡಿರಿ. ॥ ೨೭ ॥ ಬಳಿಕ ಇತರ ವರ್ಣದವರಿಗೂ, ಶುನಕ-ಚಾಂಡಾಲ ಪತಿತರಿಗೂ ಯಥಾಯೋಗ್ಯವಾಗಿ ಭೋಜನವನ್ನು ಮಾಡಿಸಿ, ಗೋವುಗಳಿಗೆ ಹುಲ್ಲು ತಿನ್ನಿಸಿ, ಗೋವರ್ಧನ ಗಿರಿಯನ್ನು ಪೂಜಿಸಿರಿ. ॥ ೨೮ ॥ ಬಳಿಕ ನೀವು ಭೋಜನವನ್ನು ಮಾಡಿ, ಹೊಸಬಟ್ಟೆಗಳನ್ನು ಧರಿಸಿ, ಗಂಧವನ್ನು ಪೂಸಿಕೊಂಡು ಅಲಂಕೃತರಾಗಿ ಅಗ್ನಿಗೆ, ಗೋವುಗಳಿಗೆ, ಬ್ರಾಹ್ಮಣರಿಗೆ, ಪರ್ವತರಾಜನಿಗೂ ಪ್ರದಕ್ಷಿಣೆ ಮಾಡಿರಿ. ॥ ೨೯ ॥ ಅಪ್ಪಾ! ಇದು ನಿಮಗೆಲ್ಲರಿಗೆ ಉಚಿತವೆನಿಸಿದಲ್ಲಿ ನಾನು ಹೇಳಿದಂತೆ ಮಾಡಬಹುದು. ಈ ಯಜ್ಞವು ಗೋ-ಬ್ರಾಹ್ಮಣ-ಗಿರಿರಾಜನಾದ ಗೋವರ್ಧನನಿಗೆ ಪ್ರಿಯವಾಗಿದೆ. ನನಗೂ ಈ ಯಜ್ಞವೇ ಅತ್ಯಂತ ಪ್ರಿಯವಾಗಿದೆ. ॥ ೩೦ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ! ಕಾಲಾತ್ಮಕನಾದ ಭಗವಂತನಿಗೆ ಇಂದ್ರನ ಅಹಂಕಾರ ಮುರಿಯುವುದೇ ಆಶಯವಾಗಿತ್ತು. ನಂದಗೋಪನೇ ಮೊದಲಾದವರು, ಅವನ ಮಾತನ್ನು ಕೇಳಿ ಸಾಧು! ಸಾಧು! ಬಹಳ ಒಳ್ಳೆಯದೆಂದು ಹೇಳುತ್ತಾ ಸಂತೋಷದಿಂದ ಅಂಗೀಕರಿಸಿದರು. ॥ ೩೧ ॥ ಭಗವಾನ್ ಶ್ರೀಕೃಷ್ಣನು ಹೇಳಿದಂತೆಯೇ ಯಜ್ಞವನ್ನು ಪ್ರಾರಂಭಿಸಿದರು. ಮೊದಲಿಗೆ ಬ್ರಾಹ್ಮಣರಿಂದ ಸ್ವಸ್ತಿವಾಚನ ಮಾಡಿಸಿ, ಅವರಿಂದ ಹೋಮ ಹವನಾದಿಗಳನ್ನು ಮಾಡಿಸಿ ಅವರಿಗೆ ಭೂರಿದಕ್ಷಿಣೆಯನ್ನಿತ್ತರು. ಗಿರಿರಾಜನನ್ನು ಅನೇಕ ವಿಧದಿಂದ ಪೂಜಿಸಿದರು. ಗೋವುಗಳಿಗೆ ಹುಲ್ಲನ್ನು ತಿನ್ನಿಸಿದ ಬಳಿಕ ನಂದಗೋಪನೇ ಮೊದಲಾದ ಗೋಪರು ಗೋವುಗಳನ್ನು ಮುಂದಿಟ್ಟುಕೊಂಡು ಗಿರಿರಾಜನ ಪ್ರದಕ್ಷಿಣೆ ಮಾಡಿದರು. ॥ ೩೨-೩೩ ॥ ಬ್ರಾಹ್ಮಣರ ಆಶೀರ್ವಾದಗಳನ್ನು ಪಡೆದು ಗೋಪ-ಗೋಪಿಯರು ಚೆನ್ನಾಗಿ ಸಿಂಗರಿಸಿಕೊಂಡು ಎತ್ತುಗಳು ಹೂಡಿದ ಬಂಡಿಗಳಲ್ಲಿ ಕುಳಿತುಕೊಂಡು ಭಗವಾನ್ ಶ್ರೀಕೃಷ್ಣನ ಲೀಲೆಗಳನ್ನು ಹಾಡುತ್ತಾ ಗೋವರ್ಧನ ಗಿರಿಯ ಪ್ರದಕ್ಷಿಣೆ ಮಾಡತೊಡಗಿದರು. ॥ ೩೪ ॥ ಶ್ರೀಕೃಷ್ಣನು ಗೋಪಾಲಕರಿಗೆ ವಿಶ್ವಾಸವನ್ನುಂಟುಮಾಡಲಿಕ್ಕಾಗಿ ಗೋವರ್ಧನ ಗಿರಿಯಮೇಲೆ ಇನ್ನೊಂದು ವಿಶಾಲದೇಹವನ್ನು ಧರಿಸಿ ಪ್ರಕಟನಾದನು. 'ನಾನು ಗಿರಿರಾಜನಾಗಿರುವೆ' ಹೀಗೆ ಹೇಳುತ್ತಾ ಅವರು ಅರ್ಪಿಸಿದ ಪೂಜೆಯನ್ನು ಸ್ವೀಕರಿಸಿ, ಭಕ್ಷ್ಯ ಭೋಜ್ಯಗಳನ್ನು ಸಾಕ್ಷಾತ್ತಾಗಿ ಭುಂಜಿಸಿದನು. ॥ ೩೫ ॥ ಭಗವಾನ್ ಶ್ರೀಕೃಷ್ಣನು ತನ್ನದೇ ಆದ ಆ ಸ್ವರೂಪಕ್ಕೆ ಇತರ ವ್ರಜವಾಸಿಗಳೊಂದಿಗೆ ನಮಸ್ಕರಿಸಿದನು ಮತ್ತು ಹೇಳಿದನು – 'ನೋಡಿ, ನೋಡಿ! ಎಂತಹ ಆಶ್ಚರ್ಯವಾಗಿದೆ! ಗಿರಿರಾಜನೇ ಸಾಕ್ಷಾತ್ತಾಗಿ ಪ್ರಕಟವಾಗಿ ನಮ್ಮ ಮೇಲೆ ಕೃಪೆಯನ್ನು ತೋರಿರುವನು. ॥ ೩೬ ॥ ಬಂಧುಗಳೇ! ಈ ಪರ್ವತವು ಯಾವುದೇ ರೂಪವನ್ನು ಧರಿಸಬಲ್ಲದು. ಇದನ್ನು ತಿರಸ್ಕರಿಸುವ ವನವಾಸಿಗಳನ್ನು ಈ ಪರ್ವತವು ಕೊಂದೇಬಿಡುತ್ತದೆ. ಬನ್ನಿರಿ, ನಮ್ಮ ಮತ್ತು ಗೋವುಗಳ ಕ್ಷೇಮಕ್ಕಾಗಿ ಈ ಗಿರಿರಾಜನಿಗೆ ನಮಸ್ಕರಿಸೋಣ.' ॥ ೩೭ ॥

ಇತ್ಯದ್ರಿಗೋದ್ವಿಜಮಖಂ ವಾಸುದೇವಪ್ರಚೋದಿತಾಃ ।
ಯಥಾ ವಿಧಾಯ ತೇ ಗೋಪಾಃ ಸಹಕೃಷ್ಣಾ ವ್ರಜಂ ಯಯುಃ ॥ ೩೮ ॥

ಹೀಗೆ ಭಗವಾನ್ ಶ್ರೀಕೃಷ್ಣನ ಪ್ರೇರಣೆಯಿಂದ ನಂದಗೋಪನೇ ಮೊದಲಾದ ಹಿರಿಯ-ಕಿರಿಯ ಗೋಪಾಲಕರು ಗಿರಿರಾಜನನ್ನು ಗೋವುಗಳನ್ನು ಬ್ರಾಹ್ಮಣರನ್ನು ವಿಧಿವತ್ತಾಗಿ ಪೂಜಿಸಿ ಮತ್ತೆ ಶ್ರೀಕೃಷ್ಣನೊಂದಿಗೆ ಎಲ್ಲರೂ ವ್ರಜಕ್ಕೆ ಮರಳಿ ಬಂದರು. ॥ ೩೮ ॥

ಇಪ್ಪತ್ತನಾಲ್ಕನೆಯ ಅಧ್ಯಾಯವು ಮುಗಿಯಿತು. ॥ ೨೪ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮ ಸ್ಕಂಧೇ ಪೂರ್ವಾರ್ಧೇ
ಚತುರ್ವಿಂಶೋಽಧ್ಯಾಯಃ ॥ ೨೪ ॥

ಇಪ್ಪತ್ತೈದನೆಯ ಅಧ್ಯಾಯ

ಶ್ರೀಕೃಷ್ಣನು ಗೋವರ್ಧನ ಪರ್ವತವನ್ನು ಎತ್ತಿದುದು

ಶ್ರೀಶುಕ ಉವಾಚ

ಇಂದ್ರಸ್ತದಾಽಽತ್ಮನಃ ಪೂಜಾಂ ವಿಜ್ಞಾಯ ವಿಹತಾಂ ನೃಪ ।
ಗೋಪೇಭ್ಯಃ ಕೃಷ್ಣನಾಥೇಭ್ಯೋ ನಂದಾದಿಭ್ಯಶ್ಚುಕೋಪ ಹ ॥ ೧ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ - ಪರೀಕ್ಷಿತನೇ! ಗೊಲ್ಲರು ತನ್ನ ಪೂಜೆಯನ್ನು ನಿಲ್ಲಿಸಿಬಿಟ್ಟರೆಂಬುದನ್ನು ತಿಳಿದ ಇಂದ್ರನು ಶ್ರೀಕೃಷ್ಣನನ್ನೇ ರಕ್ಷಕನನ್ನಾಗಿ ಹೊಂದಿದ್ದ ನಂದಗೋಪನೇ ಮೊದಲಾದ ಗೋಪಾಲಕರ ಮೇಲೆ ಅತ್ಯಂತ ಕ್ರೋಧಗೊಂಡನು. ॥ ೧ ॥ ತಾನು ಮೂರು ಲೋಕಗಳಿಗೂ ಒಡೆಯನಾಗಿ ಇರುವೆನೆಂಬ ಅಹಂಕಾರವು ಆತನಲ್ಲಿ ಬಹಳವಾಗಿತ್ತು. ಈ ಕಾರಣದಿಂದ ಅವನು ಸಿಟ್ಟಿನಿಂದ ಉರಿಯುತ್ತಾ ಪ್ರಳಯವನ್ನುಂಟುಮಾಡುವ ಸಂವರ್ತಕಗಳೆಂಬ ಮೇಘಗಳನ್ನು ಕರೆದು ವ್ರಜದ ಮೇಲೆ ಆಕ್ರಮಣ ಮಾಡಿರೆಂದು ಅಪ್ಪಣೆ ಕೊಡುತ್ತಾ ಇಂತೆಂದನು - ॥ ೨ ॥

ಗಣಂ ಸಾಂವರ್ತಕಂ ನಾಮ ಮೇಘಾನಾಂ ಚಾಂತಕಾರಿಣಾಮ್ ।
ಇಂದ್ರಃ ಪ್ರಾಚೋದಯತ್ಕ್ರುದ್ಧೋ ವಾಕ್ಯಂ ಚಾಹೇಶಮಾನ್ಯುತ ॥ ೨ ॥

ಅಹೋ ಶ್ರೀಮದಮಾಹಾತ್ಮ್ಯಂ ಗೋಪಾನಾಂ ಕಾನನೌಕಸಾಮ್ ।
ಕೃಷ್ಣಂ ಮರ್ತ್ಯಮುಪಾಶ್ರಿತ್ಯ ಯೇ ಚಕ್ರುರ್ದೇವಹೇಲನಮ್ ॥ ೩ ॥

ಕಾಡು ಮನುಷ್ಯರಾದ ಈ ಗೊಲ್ಲರು ಧನಮದದಿಂದ ಎಷ್ಟೊಂದು ಉದ್ಧಟರಾಗಿದ್ದಾರೆ. ಸಾಮಾನ್ಯ ಮನುಷ್ಯನಾದ ಶ್ರೀಕೃಷ್ಣನನ್ನು ಅವಲಂಬಿಸಿರುವ ಇವರು ದೇವರಾಜನಾದ ನನ್ನನ್ನೇ ಅವಮಾನಿಸುತ್ತಿದ್ದಾರಲ್ಲ! ॥ ೩ ॥ ಅಧ್ಯಾತ್ಮವಿದ್ಯೆಯನ್ನು ಬಿಟ್ಟಿರುವ ಅನೇಕ ಮಂದಬುದ್ಧಿಯ ಜನರು ಶಿಥಿಲವಾದ ಕರ್ಮಮಯವಾದ ನಾಮಮಾತ್ರಕ್ಕೆ ನಾವೆಗಳಂತೆ ತೋರುವ ಯಜ್ಞಗಳಿಂದ ಭವಸಾಗರವನ್ನು ದಾಟಲು ಇಚ್ಛಿಸುವಂತೆ, ಇವರು ಸರ್ವಸಂಪತ್ಸಮೃದ್ಧಿಯನ್ನು ಕೊಡುವ ಇಂದ್ರನ ಯಾಗವನ್ನು ಬಿಟ್ಟು ಗೋ-ಗೋವರ್ಧನಗಳ ಪೂಜೆಯನ್ನು ಆರಂಭಿಸಿದ್ದಾರಲ್ಲ! ॥ ೪ ॥

ಯಥಾದೃಢೈಃ ಕರ್ಮಮಯೈಃ ಕ್ರತುಭಿರ್ನಾಮನೌನಿಭೈಃ ।
ವಿದ್ಯಾಮಾನ್ವೀಕ್ಷಿಕೀಂ ಹಿತ್ವಾ ತಿತೀರ್ಷಂತಿ ಭವಾರ್ಣವಮ್ ॥ ೪ ॥

ವಾಚಾಲಂ ಬಾಲಿಶಂ ಸ್ತಬ್ಧಮಜ್ಞಂ ಪಂಡಿತಮಾನಿನಮ್ ।
ಕೃಷ್ಣಂ ಮರ್ತ್ಯಮುಪಾಶ್ರಿತ್ಯ ಗೋಪಾ ಮೇ ಚಕ್ರುರಪ್ರಿಯಮ್ ॥ ೫ ॥

ಬಾಯಿಬಡುಕನಾದ, ಮೂರ್ಖನಾದ, ಸ್ತಬ್ಧನಾದ, ಅಜ್ಞನಾದ ಮತ್ತು ತನ್ನನ್ನು ಮಹಾಪಂಡಿತನೆಂದು ತಿಳಿದುಕೊಂಡಿರುವ ಮನುಷ್ಯಮಾತ್ರನಾದ ಕೃಷ್ಣನನ್ನು ಆಶ್ರಯಿಸಿ ಈ ಮೂರ್ಖ ಗೋಪಾಲಕರು ನನಗೆ ಬಹಳ ಅಪ್ರಿಯವಾದ ಕಾರ್ಯವನ್ನು ಮಾಡಿಬಿಟ್ಟರು. ॥ ೫ ॥ ಮೊದಲೇ ಇವರು ಧನಮದದಿಂದ ಉನ್ಮತ್ತರಾಗಿದ್ದರು. ಈಗ ಕೃಷ್ಣನೂ ಇವರನ್ನು ಪ್ರೋತ್ಸಾಹಿಸಿದನು. ಈಗ ನೀವು ಹೋಗಿ ಇವರ ಧನಮದವನ್ನು, ಉದ್ಧಟತನವನ್ನು ವಿನಾಶಗೊಳಿಸಿರಿ. ಇವರ ಗೋಸಂಪತ್ತನ್ನು ಧ್ವಂಸಮಾಡಿಬಿಡಿ. ॥ ೬ ॥

ಏಷಾಂ ಶ್ರಿಯಾವಲಿಪ್ತಾನಾಂ ಕೃಷ್ಣೇನಾಧ್ಮಾಪಿತಾತ್ಮನಾಮ್ ।
ಧುನುತ ಶ್ರೀಮದಸ್ತಂಭಂ ಪಶೂನ್ನಯತ ಸಂಕ್ಷಯಮ್ ॥ ೬ ॥

ಅಹಂ ಚೈರಾವತಂ ನಾಗಮಾರುಹ್ಯಾನುವ್ರಜೇ ವ್ರಜಮ್ ।
ಮರುದ್ಗಣೈರ್ಮಹಾವೀರ್ಯೈರ್ನಂದಗೋಷ್ಠಜಿಘಾಂಸಯಾ
॥ ೭ ॥

ಸಾಂವರ್ತಕ ಮೇಘಗಳೇ! ನಾನೂ ಕೂಡ ನಿಮ್ಮ ಹಿಂದೆಯೇ ಐರಾವತನ್ನೇರಿ ನಂದನ ಹಳ್ಳಿಯನ್ನು ವಿನಾಶಗೊಳಿಸಲಿಕ್ಕಾಗಿ ಮಹಾಪರಾಕ್ರಮಿ ಮರುದ್ಗಣಗಳೊಂದಿಗೆ ಬರುತ್ತೇನೆ. ॥ ೭ ॥

ಶ್ರೀಶುಕ ಉವಾಚ

ಇತ್ಥಂ ಮಘವತಾಽಽಜ್ಞಪ್ತಾ ಮೇಘಾ ನಿರ್ಮುಕ್ತಬಂಧನಾಃ ।
ನಂದಗೋಕುಲಮಾಸಾರೈಃ ಪೀಡಯಾಮಾಸುರೋಜಸಾ
॥ ೮ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ - ಪರೀಕ್ಷಿತನೇ! ಹೀಗೆ ಇಂದ್ರನು ಪ್ರಳಯಕಾಲದ ಮೇಘಗಳಿಗೆ ಆಜ್ಞೆಯನ್ನಿತ್ತು ಅವುಗಳ ಬಂಧನವನ್ನು ಬಿಚ್ಚಿ ಕಳಿಸಿದನು. ಅವುಗಳು ಅತ್ಯಂತ ವೇಗದಿಂದ ನಂದಗೋಕುಲಕ್ಕೆ ಧಾವಿಸಿ ಒನಕೆಯಷ್ಟು ದಪ್ಪವಾಗಿ ಮಳೆಗರೆದು ವ್ರಜವಾಸಿಗಳನ್ನು ಪೀಡಿಸತೊಡಗಿದವು. ॥ ೮ ॥

ವಿದ್ಯೋತಮಾನಾ ವಿದ್ಯುದ್ಭಿಃ ಸ್ತನಂತಃ ಸ್ತನಯಿತ್ನುಭಿಃ ।
ತೀವ್ರೈರ್ಮರುದ್ಗಣೈರ್ನುನ್ನಾ ವವೃಷುರ್ಜಲಶರ್ಕರಾಃ
॥ ೯ ॥

ನಾಲ್ಕೂ ದಿಕ್ಕುಗಳು ಮಿಂಚಿನಿಂದ ಪ್ರಕಾಶಿಸಿದುವು. ಮೇಘಗಳು ಪರಸ್ಪರ ಅಪ್ಪಳಿಸುತ್ತಾ ಗುಡುಗಿದವು. ಪ್ರಚಂಡವಾದ ಬಿರುಗಾಳಿಯು ಬೀಸತೊಡಗಿ ದೊಡ್ಡ-ದೊಡ್ಡ ಆಲಿಕಲ್ಲಿನ ಮಳೆ ಸುರಿಯತೊಡಗಿತು. ॥ ೯ ॥

ಸ್ಥೂಣಾಸ್ಥೂಲಾ ವರ್ಷಧಾರಾ ಮುಂಚತ್ಸ್ವಭ್ರೇಷ್ವಭೀಕ್ಷ್ಣಶಃ ।
ಜಲೌಘೈಃ ಪ್ಲಾವ್ಯಮಾನಾ ಭೂರ್ನಾದೃಶ್ಯತ ನತೋನ್ನತಮ್
॥ ೧೦ ॥

ಹೀಗೆ ಮೇಘಗಳು ಕಂಬಗಾತ್ರದ ಜಲಧಾರೆಗಳಿಂದ ಕ್ಷಣ-ಕ್ಷಣಕ್ಕೂ ಮಳೆಯನ್ನು ಸುರಿಸಲು ಅಗಾಧವಾದ ನೀರಿನ ಪ್ರವಾಹದಿಂದ ವ್ರಜಭೂಮಿಯ ಹಳ್ಳ-ತಿಟ್ಟುಗಳೆಲ್ಲ ಮುಳುಗಿ ಕಾಣದಂತಾದುವು. ॥ ೧೦ ॥

ಅತ್ಯಾಸಾರಾತಿವಾತೇನ ಪಶವೋ ಜಾತವೇಪನಾಃ ।
ಗೋಪಾ ಗೋಪ್ಯಶ್ಚ ಶೀತಾರ್ತಾ ಗೋವಿಂದಂ ಶರಣಂ ಯಯುಃ
॥ ೧೧ ॥

ಹೀಗೆ ನಿರಂತರವಾಗಿ ಸುರಿಯುತ್ತಿದ್ದ ಜಲಧಾರೆಗೆ ಸಿಕ್ಕಿ ಹಸು-ಕರುಗಳು ನಡುಗತೊಡಗಿದವು. ಗೋಪ-ಗೋಪಿಯರು ಮಳೆಯಿಂದ ತೊಯ್ದು ಹೋಗಿ ಶೀತದಿಂದ ಪೀಡಿತರಾಗಿ, ಅನನ್ಯಗತಿಕರಾದ ಅವರು ಗೋವಿಂದನನ್ನೇ ಶರಣು ಹೋದರು. ॥ ೧೧ ॥

ಶಿರಃ ಸುತಾಂಶ್ಚ ಕಾಯೇನ ಪ್ರಚ್ಛಾದ್ಯಾಸಾರಪೀಡಿತಾಃ ।
ವೇಪಮಾನಾ ಭಗವತಃ ಪಾದಮೂಲಮುಪಾಯಯುಃ
॥ ೧೨ ॥

ಅತಿವೃಷ್ಟಿಯಿಂದ ಪೀಡಿತರಾದ ಗೋಪ-ಗೋಪಿಯರು ತಮ್ಮ ತಲೆಗಳನ್ನು ಮತ್ತು ಶಿಶುಗಳನ್ನು ಬಗ್ಗಿ ತಮ್ಮ ಮಡಿಲಲ್ಲಿ ಅಡಗಿಸಿಕೊಂಡರು. ಕಡೆಗೆ ಅವರೆಲ್ಲರೂ ರಕ್ಷಣೆಗಾಗಿ ಶ್ರೀಕೃಷ್ಣನ ಪಾದಮೂಲವನ್ನೇ ಆಶ್ರಯಿಸಿದರು. ಮತ್ತು ಪ್ರಾರ್ಥಿಸುತ್ತಾರೆ- ॥ ೧೨ ॥

ಕೃಷ್ಣ ಕೃಷ್ಣ ಮಹಾಭಾಗ ತ್ವನ್ನಾಥಂ ಗೋಕುಲಂ ಪ್ರಭೋ ।
ತ್ರಾತುಮರ್ಹಸಿ ದೇವಾನ್ನಃ ಕುಪಿತಾದ್ಭಕ್ತವತ್ಸಲ
॥ ೧೩ ॥

ಮಹಾಭಾಗ್ಯಶಾಲಿಯೇ! ಶ್ರೀಕೃಷ್ಣಪ್ರಭುವೇ! ಗೋಕುಲಕ್ಕೆ ನೀನೇ ಒಡೆಯನು. ಗೊಲ್ಲರಿಗೆ ನೀನೇ ಪರಮಾಶ್ರಯನು. ಭಕ್ತವತ್ಸಲನೇ! ಕುಪಿತನಾಗಿರುವ ಇಂದ್ರದೇವನಿಂದ ನಮ್ಮನ್ನು ರಕ್ಷಿಸು. ॥ ೧೩ ॥

ಶಿಲಾವರ್ಷನಿಪಾತೇನ ಹನ್ಯಮಾನಮಚೇತನಮ್ ।
ನಿರೀಕ್ಷ್ಯ ಭಗವಾನ್ಮೇನೇ ಕುಪಿತೇಂದ್ರಕೃತಂ ಹರಿಃ
॥ ೧೪ ॥

ಆಲಿಕಲ್ಲುಗಳಿಂದಲೂ ಮತ್ತು ಮಳೆಯಿಂದಲೂ ಹಿಂಸಿಸಲ್ಪಡುತ್ತಿದ್ದ ಗೋವುಗಳನ್ನು, ಗೋಪಾಲಕರನ್ನು ಶ್ರೀಕೃಷ್ಣನು ನೋಡಿದನು. ಕುಪಿತನಾದ ಇಂದ್ರನೇ ಈ ಕಾರ್ಯವನ್ನು ಮಾಡಿರುವನೆಂದು ಭಗವಂತನು ತಿಳಿದುಕೊಂಡನು. ॥ ೧೪ ॥

ಅಪರ್ತ್ವತ್ಯುಲ್ಬಣಂ ವರ್ಷಮತಿವಾತಂ ಶಿಲಾಮಯಮ್ ।
ಸ್ವಯಾಗೇ ವಿಹತೇಽಸ್ಮಾಭಿರಿಂದ್ರೋ ನಾಶಾಯ ವರ್ಷತಿ
॥ ೧೫ ॥

ಬಳಿಕ ಶ್ರೀಕೃಷ್ಣನು ಮನಸ್ಸಿನಲ್ಲೇ ಹೀಗೆಂದು ಯೋಚಿಸಿದನು - 'ನಾವು ಇಂದ್ರನ ಯಜ್ಞವನ್ನು ನಿಲ್ಲಿಸಿದ್ದರಿಂದ ಮಳೆಗಾಲವಲ್ಲದ ಕಾಲದಲ್ಲಿ ಪ್ರಚಂಡವಾದ ವಾಯುವಿನೊಂದಿಗೆ ಆಲಿಕಲ್ಲುಗಳಿಂದ ಕೂಡಿದ ಘನಘೋರ ಮಳೆಯನ್ನು ಸುರಿಸುತ್ತಿದ್ದಾನೆ. ॥ ೧೫ ॥

ತತ್ರ ಪ್ರತಿವಿಧಿಂ ಸಮ್ಯಗಾತ್ಮಯೋಗೇನ ಸಾಧಯೇ ।
ಲೋಕೇಶಮಾನಿನಾಂ ಮೌಢ್ಯಾದ್ಧನಿಷ್ಯೇ ಶ್ರೀಮದಂ ತಮಃ
॥ ೧೬ ॥

ಇರಲಿ, ನಾನು ನನ್ನ ಯೋಗಮಾಯೆಯಿಂದ ಇವನಿಗೆ ಸರಿಯಾಗಿ ಪಾಠಕಲಿಸುತ್ತೇನೆ. ಇವನು ಮೂರ್ಖತೆಯಿಂದ ತನ್ನನ್ನೇ ಲೋಕಪಾಲನೆಂದು ತಿಳಿದಿರುವನು. ಇವನ ಐಶ್ವರ್ಯದ ಮತ್ತು ಧನದ ಸೊಕ್ಕನ್ನೂ, ಅಜ್ಞಾನವನ್ನೂ ತೊಲಗಿಸುತ್ತೇನೆ. ॥ ೧೬ ॥

ನ ಹಿ ಸದ್ಭಾವಯುಕ್ತಾನಾಂ ಸುರಾಣಾಮೀಶವಿಸ್ಮಯಃ ।
ಮತ್ತೋಽಸತಾಂ ಮಾನಭಂಗಃ ಪ್ರಶಮಾಯೋಪಕಲ್ಪತೇ
॥ ೧೭ ॥

ದೇವತೆಗಳಾದರೋ ಸತ್ತ್ವಪ್ರಧಾನರಾಗಿರುತ್ತಾರೆ. ಇವರಲ್ಲಿ ತಮ್ಮ ಐಶ್ವರ್ಯ, ಪದವಿಗಳ ಅಹಂಕಾರ ಇರಬಾರದು. ಆದುದರಿಂದ ಈ ಸತ್ತ್ವಗುಣದಿಂದ ಚ್ಯುತರಾದ ದುಷ್ಟ ದೇವತೆಗಳ ಮಾನಭಂಗ ಮಾಡುತ್ತೇನೆ. ಇದರಿಂದ ಕೊನೆಗೆ ಅವರಿಗೆ ಶಾಂತಿಯೇ ಸಿಗುತ್ತದೆ. ॥ ೧೭ ॥

ತಸ್ಮಾನ್ಮಚ್ಛರಣಂ ಗೋಷ್ಠಂ ಮನ್ನಾಥಂ ಮತ್ಪರಿಗ್ರಹಮ್ ।
ಗೋಪಾಯೇ ಸ್ವಾತ್ಮಯೋಗೇನ ಸೋಽಯಂ ಮೇ ವ್ರತ ಆಹಿತಃ ॥ ೧೮ ॥

ಇತ್ಯುಕ್ತ್ವೈಕೇನ ಹಸ್ತೇನ ಕೃತ್ವಾ ಗೋವರ್ಧನಾಚಲಮ್ ।
ದಧಾರ ಲೀಲಯಾ ಕೃಷ್ಣಶ್ಛತ್ರಾಕಮಿವ ಬಾಲಕಃ ॥ ೧೯ ॥

ಅಥಾಹ ಭಗವಾನ್ ಗೋಪಾನ್ ಹೇಽಮ್ಬ ತಾತ ವ್ರಜೌಕಸಃ ।
ಯಥೋಪಜೋಷಂ ವಿಶತ ಗಿರಿಗರ್ತಂ ಸಗೋಧನಾಃ ॥ ೨೦ ॥

ನ ತ್ರಾಸ ಇಹ ವಃ ಕಾರ್ಯೋ ಮದ್ಧಸ್ತಾದ್ರಿನಿಪಾತನೇ ।
ವಾತವರ್ಷಭಯೇನಾಲಂ ತತ್ತ್ರಾಣಂ ವಿಹಿತಂ ಹಿ ವಃ ॥ ೨೧ ॥

ತಥಾ ನಿರ್ವಿವಿಶುರ್ಗರ್ತಂ ಕೃಷ್ಣಾಶ್ವಾಸಿತಮಾನಸಾಃ ।
ಯಥಾವಕಾಶಂ ಸಧನಾಃ ಸವ್ರಜಾಃ ಸೋಪಜೀವಿನಃ ॥ ೨೨ ॥

ಕ್ಷುತ್ತೃಡ್ವ್ಯಥಾಂ ಸುಖಾಪೇಕ್ಷಾಂ ಹಿತ್ವಾ ತೈರ್ವ್ರಜವಾಸಿಭಿಃ ।
ವೀಕ್ಷ್ಯಮಾಣೋ ದಧಾರಾದ್ರಿಂ ಸಪ್ತಾಹಂ ನಾಚಲತ್ಪದಾತ್ ॥ ೨೩ ॥

ಕೃಷ್ಣಯೋಗಾನುಭಾವಂ ತಂ ನಿಶಾಮ್ಯೇಂದ್ರೋಽತಿವಿಸ್ಮಿತಃ ।
ನಿಸ್ತಂಭೋ ಭ್ರಷ್ಟಸಂಕಲ್ಪಃ ಸ್ವಾನ್ಮೇಘಾನ್ ಸಂನ್ಯವಾರಯತ್ ॥ ೨೪ ॥

ಖಂ ವ್ಯಭ್ರಮುದಿತಾದಿತ್ಯಂ ವಾತವರ್ಷಂ ಚ ದಾರುಣಮ್ ।
ನಿಶಾಮ್ಯೋಪರತಂ ಗೋಪಾನ್ ಗೋವರ್ಧನಧರೋಽಬ್ರವೀತ್ ॥ ೨೫ ॥

ನಿರ್ಯಾತ ತ್ಯಜತ ತ್ರಾಸಂ ಗೋಪಾಃ ಸಸ್ತ್ರೀಧನಾರ್ಭಕಾಃ ।
ಉಪಾರತಂ ವಾತವರ್ಷಂ ವ್ಯುದಪ್ರಾಯಾಶ್ಚ ನಿಮ್ನಗಾಃ ॥ ೨೬ ॥

ತತಸ್ತೇ ನಿರ್ಯಯುರ್ಗೋಪಾಃ ಸ್ವಂ ಸ್ವಮಾದಾಯ ಗೋಧನಮ್ ।
ಶಕಟೋಢೋಪಕರಣಂ ಸ್ತ್ರೀಬಾಲಸ್ಥವಿರಾಃ ಶನೈಃ ॥ ೨೭ ॥

ಈ ಇಡೀ ವ್ರಜವೇ ನನಗೆ ಆಶ್ರಿತವಾಗಿದೆ. ನನ್ನನ್ನೇ ಏಕೈಕನಾಥನನ್ನಾಗಿ ಭಾವಿಸಿಕೊಂಡಿದ್ದಾರೆ. ನನ್ನಿಂದ ಸ್ವೀಕೃತರಾಗಿದ್ದಾರೆ. ಆದ್ದರಿಂದ ನಾನು ನನ್ನ ಯೋಗಮಾಯೆಯಿಂದ ಇವರನ್ನು ರಕ್ಷಿಸುವೆನು. ಶರಣಾಗತರನ್ನು ರಕ್ಷಿಸುವುದೇ ನನ್ನ ವ್ರತವಾಗಿದೆ. ಈಗ ಅದನ್ನು ಪಾಲಿಸುವ ಅವಕಾಶ ಸನ್ನಿಹಿತವಾಗಿದೆ. ॥ ೧೮ ॥

ಪರೀಕ್ಷಿತನೇ! ಶ್ರೀಕೃಷ್ಣನು ಹೀಗೆ ಹೇಳಿ, ಹುಡುಗರು ನಾಯಿಕೊಡೆಯನ್ನೆತ್ತಿ ಹಿಡಿದುಕೊಳ್ಳುವಂತೆ ಲೀಲಾಜಾಲವಾಗಿ ಗೋವರ್ಧನ ಪರ್ವತವನ್ನು ಒಂದೇ ಕೈಯಿಂದ ಎತ್ತಿ ಹಿಡಿದುಕೊಂಡನು. ॥ ೧೯ ॥ ಅನಂತರ ಭಗವಂತನು ಗೋಪರಲ್ಲಿ ಹೇಳಿದನು - ಅಪ್ಪ! ಅಮ್ಮ! ವ್ರಜವಾಸಿಗಳೇ! ನೀವೆಲ್ಲರೂ ನಿಮ್ಮ ಗೋವುಗಳೊಂದಿಗೆ ಹಾಗೂ ಸಮಸ್ತ ಸಾಮಗ್ರಿಗಳೊಡನೆ ಕೂಡಿಕೊಂಡು ಈ ಪರ್ವತದ ಕೆಳಭಾಗದಲ್ಲಿ ಬಂದು ನಿಶ್ಚಿಂತರಾಗಿ ಕುಳಿತುಕೊಳ್ಳಿರಿ. ॥ ೨೦ ॥ ಈ ಪರ್ವತವು ನನ್ನ ಕೈಯಿಂದ ಜಾರಿ ಬೀಳಬಹುದೆಂದು ನೀವು ಶಂಕಿಸಬೇಡಿರಿ. ನೀವೆಲ್ಲರೂ ಸ್ವಲ್ಪವೂ ಹೆದರಿಕೊಳ್ಳಬೇಡಿ. ಈ ಬಿರುಗಾಳಿ, ಮಳೆಯ ಭಯದಿಂದ ನಿಮ್ಮನ್ನು ರಕ್ಷಿಸಲಿಕ್ಕಾಗಿಯೇ ನಾನು ಈ ಯುಕ್ತಿಯನ್ನು ಮಾಡಿರುವೆನು. ॥ ೨೧ ॥ ಭಗವಾನ್ ಶ್ರೀಕೃಷ್ಣನು ಹೀಗೆ ಎಲ್ಲರಿಗೆ ಆಶ್ವಾಸನೆಯನ್ನು ಕೊಟ್ಟು ಧೈರ್ಯತುಂಬಿದಾಗ ಗೋಪರೆಲ್ಲರೂ ತಮ್ಮ ಗೋಸಂಪತ್ತನ್ನು, ಕರುಗಳನ್ನು, ಆಶ್ರಿತರನ್ನು, ಪುರೋಹಿತರನ್ನು, ಭೃತ್ಯರನ್ನು, ಮಕ್ಕಳು-ಮರಿಗಳೊಂದಿಗೆ ಜೊತೆಯಲ್ಲೇ ಕರೆದುಕೊಂಡು ಗೋವರ್ಧನ ಪರ್ವತದ ತಗ್ಗಿನಲ್ಲಿ ಸೇರಿಕೊಂಡರು. ॥ ೨೨ ॥ ಭಗವಾನ್ ಶ್ರೀಕೃಷ್ಣನನ್ನು ನೋಡುತ್ತಿರುವಾಗಲೇ ವ್ರಜವಾಸಿಗಳು ಏಳು ದಿವಸಗಳ ಕಾಲ ಹಸಿವು, ಬಾಯಾರಿಕೆಗಳನ್ನು ಸುಖಾಪೇಕ್ಷೆಯನ್ನು ಮರೆತುಬಿಟ್ಟರು. ಶ್ರೀಕೃಷ್ಣನು ಒಂದು ಹೆಜ್ಜೆಯಷ್ಟಾದರೂ ಕದಲದೆ ಗೋವರ್ಧನ ಗಿರಿಯನ್ನೆತ್ತಿಕೊಂಡು ಸ್ಥಿರವಾಗಿ ನಿಂತಿದ್ದನು. ॥ ೨೩ ॥ ಶ್ರೀಕೃಷ್ಣನ ಇಂತಹ ಯೋಗಮಾಯೆಯನ್ನು ಕಂಡು ಇಂದ್ರನಿಗೆ ಆಶ್ಚರ್ಯವಾಯಿತು. ಅವನ ಗರ್ವವೂ ಕುಗ್ಗಿತು. ಉದ್ದೇಶವು ನಿಷ್ಫಲವಾಯಿತು. ಬಳಿಕ ಅವನು ತಾನಾಗಿಯೇ ಮೇಘಗಳನ್ನು ಹಿಂದಕ್ಕೆ ಕರೆಸಿಕೊಂಡು ಮಳೆಯನ್ನು ನಿಲ್ಲಿಸಿದನು. ॥ ೨೪ ॥ ಗೋವರ್ಧನಧಾರಿಯಾದ ಶ್ರೀಕೃಷ್ಣನು ನೋಡಿದನು - ಭಯಂಕರವಾದ ಬಿರುಗಾಳಿ ಮತ್ತು ಮಳೆಯು ನಿಂತು ಹೋಗಿ ಆಕಾಶವು ಸ್ವಚ್ಛವಾಗಿ ಸೂರ್ಯನು ಪ್ರಕಾಶಿಸುತ್ತಿರುವನು. ಆಗ ಅವನು ಗೋಪಾಲಕರಲ್ಲಿ ಹೇಳಿದನು. ॥ ೨೫ ॥ ಪ್ರಿಯರಾದ ಗೋಪಾಲಕರೇ! ಈಗ ನೀವು ಯಾವುದೇ ಭಯವಿಲ್ಲದೆ ನಿಮ್ಮ-ನಿಮ್ಮ ಗೋವುಗಳೊಡನೆ, ಹೆಂಡಿರು ಮಕ್ಕಳೊಡನೆ, ಹೊರಗೆ ಹೊರಡಿರಿ. ನೀವು ನೋಡಿರಿ - ಬಿರುಗಾಳಿ, ಮಳೆ ನಿಂತು ಹೋಗಿ ನದಿಗಳ ನೀರೂ ಕೂಡ ಇಳಿಮುಖವಾಗಿದೆ. ॥ ೨೬ ॥ ಭಗವಂತನ ಈ ಆಜ್ಞೆಯನ್ನು ಪಡೆದು ಗೋಪರು ತಮ್ಮ-ತಮ್ಮ ಗೋಧನ, ಸ್ತ್ರೀ-ಪುತ್ರರೊಂದಿಗೆ, ಮುದುಕರೊಂದಿಗೆ ಜೊತೆಗೆ ಕರೆದುಕೊಂಡು, ತಮ್ಮ ಸಾಮಗ್ರಿಯನ್ನು ಗಾಡಿಗಳಲ್ಲಿ ತುಂಬಿಕೊಂಡು ಎಲ್ಲ ಜನರೂ ಹೊರಗೆ ಬಂದರು. ॥ ೨೭ ॥

ಭಗವಾನಪಿ ತಂ ಶೈಲಂ ಸ್ವಸ್ಥಾನೇ ಪೂರ್ವವತ್ಪ್ರಭುಃ ।
ಪಶ್ಯತಾಂ ಸರ್ವಭೂತಾನಾಂ ಸ್ಥಾಪಯಾಮಾಸ ಲೀಲಯಾ ॥ ೨೮ ॥

ಸರ್ವಶಕ್ತನಾದ ಭಗವಾನ್ ಶ್ರೀಕೃಷ್ಣನೂ ಕೂಡ ಎಲ್ಲರೂ ನೋಡುತ್ತಿರುವಂತೆ ಲೀಲಾಜಾಲವಾಗಿಯೇ ಗೋವರ್ಧನಗಿರಿಯನ್ನು ಹಿಂದಿನಂತೆಯೇ ಅದರ ಸ್ಥಾನದಲ್ಲಿ ಇರಿಸಿದನು. ॥ ೨೮ ॥

ತಂ ಪ್ರೇಮವೇಗಾನ್ನಿರ್ಭೃತಾ ವ್ರಜೌಕಸೋ
ಯಥಾ ಸಮೀಯುಃ ಪರಿರಂಭಣಾದಿಭಿಃ ।
ಗೋಪ್ಯಶ್ಚ ಸಸ್ನೇಹಮಪೂಜಯನ್ಮುದಾ
ದಧ್ಯಕ್ಷತಾದ್ಭಿರ್ಯುಯುಜುಃ ಸದಾಶಿಷಃ ॥ ೨೯ ॥

ಯಶೋದಾ ರೋಹಿಣೀ ನಂದೋ ರಾಮಶ್ಚ ಬಲಿನಾಂ ವರಃ ।
ಕೃಷ್ಣಮಾಲಿಂಗ್ಯ ಯುಯುಜುರಾಶಿಷಃ ಸ್ನೇಹಕಾತರಾಃ ॥ ೩೦ ॥

ದಿವಿ ದೇವಗಣಾಃ ಸಾಧ್ಯಾಃ ಸಿದ್ಧಗಂಧರ್ವಚಾರಣಾಃ ।
ತುಷ್ಟುವುರ್ಮುಮುಚುಸ್ತುಷ್ಟಾಃ ಪುಷ್ಪವರ್ಷಾಣಿ ಪಾರ್ಥಿವ ॥ ೩೧ ॥

ಶಂಖದುಂದುಭಯೋ ನೇದುರ್ದಿವಿ ದೇವಪ್ರಚೋದಿತಾಃ ।
ಜಗುರ್ಗಂಧರ್ವಪತಯಸ್ತುಂಬುರುಪ್ರಮುಖಾ ನೃಪ ॥ ೩೨ ॥

ತತೋಽನುರಕ್ತೈಃ ಪಶುಪೈಃ ಪರಿಶ್ರಿತೋ
ರಾಜನ್ಸ್ವಗೋಷ್ಠಂ ಸಬಲೋಽವ್ರಜದ್ಧರಿಃ ।
ತಥಾವಿಧಾನ್ಯಸ್ಯ ಕೃತಾನಿ ಗೋಪಿಕಾ
ಗಾಯಂತ್ಯ ಈಯುರ್ಮುದಿತಾ ಹೃದಿಸ್ಪೃಶಃ ॥ ೩೩ ॥

ಪರ್ವತವನ್ನು ಕೆಳಗೆ ಇರಿಸಿದಾಕ್ಷಣ-ವ್ರಜವಾಸಿಗಳ ಹೃದಯಗಳು ಪ್ರೇಮರಸದಿಂದ ತುಂಬಿ ಭಗವಾನ್ ಶ್ರೀಕೃಷ್ಣನ ಬಳಿಗೆ ಬಂದು ಕೆಲವರು ಅವನನ್ನು ಅಪ್ಪಿಕೊಂಡರೆ, ಕೆಲವರು ಮುತ್ತಿಟ್ಟರು. ಎಲ್ಲರೂ ಅವನನ್ನು ಸತ್ಕರಿಸಿದರು. ವೃದ್ಧೆಯರಾದ ಗೋಪಿಯರು ಮಹದಾನಂದದಿಂದ, ಸ್ನೇಹದಿಂದ ಶ್ರೀಕೃಷ್ಣನಿಗೆ ಮೊಸರು, ಅಕ್ಷತೆ, ನೀರು ಇವುಗಳಿಂದ ಮಂಗಲ ತಿಲಕವನ್ನಿಟ್ಟು ತುಂಬು ಹೃದಯದಿಂದ ಆಶೀರ್ವದಿಸಿದರು. ॥ ೨೯ ॥ ಯಶೋದಾದೇವಿ, ರೋಹಿಣಿ, ನಂದಗೋಪ ಮತ್ತು ಬಲಿಷ್ಠರಲ್ಲಿ ಶ್ರೇಷ್ಠನಾದ ಬಲರಾಮ ಮುಂತಾದವರು ಸ್ನೇಹಪರವಶರಾಗಿ ಶ್ರೀಕೃಷ್ಣನನ್ನು ಗಾಢವಾಗಿ ಆಲಿಂಗಿಸಿಕೊಂಡು ಆಶೀರ್ವದಿಸಿದರು. ॥ ೩೦ ॥ ಪರೀಕ್ಷಿತನೇ! ಆ ಸಮಯದಲ್ಲಿ ಆಕಾಶದಲ್ಲಿ ಸ್ಥಿತರಾದ ದೇವತೆಗಳು ಸಾಧ್ಯರು, ಸಿದ್ಧರು, ಗಂಧರ್ವರು, ಚಾರಣರು ಮೊದಲಾದವರು ಪರಮ ಸಂತುಷ್ಟರಾಗಿ ಭಗವಂತನನ್ನು ಸ್ತುತಿಸುತ್ತಾ ಅವನ ಮೇಲೆ ಹೂವಿನ ಮಳೆಗರೆಯತೊಡಗಿದರು. ॥ ೩೧ ॥ ರಾಜನೇ! ಸ್ವರ್ಗದಲ್ಲಿ ದೇವತೆಗಳು ಶಂಖ, ದುಂದುಭಿಗಳನ್ನು ನುಡಿಸತೊಡಗಿದರು. ತುಂಬುರು, ಗಂಧರ್ವರು ಭಗವಂತನ ಮಧುರ ಲೀಲೆಗಳನ್ನು ಹಾಡತೊಡಗಿದರು. ॥ ೩೨ ॥ ಇದಾದ ಬಳಿಕ ಭಗವಾನ್ ಶ್ರೀಕೃಷ್ಣನು ಗೊಲ್ಲಬಾಲಕರಿಂದೊಡಗೂಡಿ ಬಲರಾಮನೊಂದಿಗೆ ವ್ರಜಕ್ಕೆ ಹೊರಟನು. ಅವನೊಂದಿಗೆ ಆನಂದಭರಿತರಾಗಿದ್ದ ಗೋಪಿಯರೂ ಶ್ರೀಕೃಷ್ಣನ ಚೇತೋಹಾರಿಗಳಾದ ಗೋವರ್ಧನೋದ್ಧರಣವೇ ಮುಂತಾದ ಲೀಲಾ ಪ್ರಸಂಗಗಳನ್ನು ಹೃದಯಂಗಮವಾಗಿ ಹಾಡುತ್ತಾ ವ್ರಜಕ್ಕೆ ತೆರಳಿದರು. ॥ ೩೩ ॥

ಇಪ್ಪತ್ತೈದನೆಯ ಅಧ್ಯಾಯವು ಮುಗಿಯಿತು. ॥ ೨೫ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮ ಸ್ಕಂಧೇ ಪೂರ್ವಾರ್ಧೇ
ಪಂಚವಿಂಶೋಽಧ್ಯಾಯಃ ॥ ೨೫ ॥

ಇಪ್ಪತ್ತಾರನೆಯ ಅಧ್ಯಾಯ

ಶ್ರೀಕೃಷ್ಣನ ಪ್ರಭಾವದ ವಿಷಯವಾಗಿ ನಂದಗೋಪನೇ ಮೊದಲಾದವರ ಜಿಜ್ಞಾಸೆ

ಶ್ರೀಶುಕ ಉವಾಚ

ಏವಂವಿಧಾನಿ ಕರ್ಮಾಣಿ ಗೋಪಾಃ ಕೃಷ್ಣಸ್ಯ ವೀಕ್ಷ್ಯ ತೇ ।
ಅತದ್ವೀರ್ಯವಿದಃ ಪ್ರೋಚುಃ ಸಮಭ್ಯೇತ್ಯ ಸುವಿಸ್ಮಿತಾಃ ॥ ೧ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ! ವ್ರಜದ ಗೋಪಾಲಕರು ಭಗವಾನ್ ಶ್ರೀಕೃಷ್ಣನ ಗೋವರ್ಧನೋದ್ಧರಣದಂತಹ ಅಲೌಕಿಕ ಕರ್ಮಗಳನ್ನು ನೋಡಿ ಅತ್ಯಂತ ಆಶ್ಚರ್ಯಚಕಿತರಾದರು. ಅವರಿಗೆ ಭಗವಂತನ ಅನಂತ ಶಕ್ತಿಯ ಪರಿಚಯವೇ ಇರಲಿಲ್ಲ. ಅವರೆಲ್ಲರೂ ಒಂದೆಡೆ ಸೇರಿ ಪರಸ್ಪರವಾಗಿ ಹೀಗೆ ಮಾತನಾಡಿಕೊಂಡರು. ॥ ೧ ॥

ಬಾಲಕಸ್ಯ ಯದೇತಾನಿ ಕರ್ಮಾಣ್ಯತ್ಯದ್ಭುತಾನಿ ವೈ ।
ಕಥಮರ್ಹತ್ಯಸೌ ಜನ್ಮ ಗ್ರಾಮ್ಯೇಷ್ವಾತ್ಮಜುಗುಪ್ಸಿತಮ್ ॥ ೨ ॥

ಯಃ ಸಪ್ತಹಾಯನೋ ಬಾಲಃ ಕರೇಣೈಕೇನ ಲೀಲಯಾ ।
ಕಥಂ ಬಿಭ್ರದ್ಗಿರಿವರಂ ಪುಷ್ಕರಂ ಗಜರಾಡಿವ ॥ ೩ ॥

ತೋಕೇನಾಮೀಲಿತಾಕ್ಷೇಣ ಪೂತನಾಯಾ ಮಹೌಜಸಃ ।
ಪೀತಃ ಸ್ತನಃ ಸಹ ಪ್ರಾಣೈಃ ಕಾಲೇನೇವ ವಯಸ್ತನೋಃ ॥ ೪ ॥

ಹಿನ್ವತೋಽಧಃ ಶಯಾನಸ್ಯ ಮಾಸ್ಯಸ್ಯ ಚರಣಾವುದಕ್ ।
ಅನೋಽಪತದ್ವಿಪರ್ಯಸ್ತಂ ರುದತಃ ಪ್ರಪದಾಹತಮ್ ॥ ೫ ॥

ಏಕಹಾಯನ ಆಸೀನೋ ಹ್ರಿಯಮಾಣೋ ವಿಹಾಯಸಾ ।
ದೈತ್ಯೇನ ಯಸ್ತೃಣಾವರ್ತಮಹನ್ಕಂಠಗ್ರಹಾತುರಮ್ ॥ ೬ ॥

ಕ್ವಚಿದ್ ಹೈಯಂಗವಸ್ತೈನ್ಯೇ ಮಾತ್ರಾ ಬದ್ಧಉಲೂಖಲೇ ।
ಗಚ್ಛನ್ನರ್ಜುನಯೋರ್ಮಧ್ಯೇ ಬಾಹುಭ್ಯಾಂ ತಾವಪಾತಯತ್ ॥ ೭ ॥

ವನೇ ಸಂಚಾರಯನ್ ವತ್ಸಾನ್
ಸರಾಮೋ ಬಾಲಕೈರ್ವೃತಃ ।
ಹಂತುಕಾಮಂ ಬಕಂ ದೋರ್ಭ್ಯಾಂ
ಮುಖತೋಽರಿಮಪಾಟಯತ್ ॥ ೮ ॥

ವತ್ಸೇಷು ವತ್ಸರೂಪೇಣ ಪ್ರವಿಶಂತಂ ಜಿಘಾಂಸಯಾ ।
ಹತ್ವಾ ನ್ಯಪಾತಯತ್ತೇನ ಕಪಿತ್ಥಾನಿ ಚ ಲೀಲಯಾ ॥ ೯ ॥

ಹತ್ವಾ ರಾಸಭದೈತೇಯಂ ತದ್ಬಂಧೂಂಶ್ಚ ಬಲಾನ್ವಿತಃ ।
ಚಕ್ರೇ ತಾಲವನಂ ಕ್ಷೇಮಂ ಪರಿಪಕ್ವಫಲಾನ್ವಿತಮ್ ॥ ೧೦ ॥

ಈ ಬಾಲಕನ ಕರ್ಮಗಳೆಲ್ಲವೂ ಅತ್ಯದ್ಭುತವಾದವುಗಳು. ಇಂತಹ ಪರಮಾದ್ಭುತ ಬಾಲಕನು ನಮ್ಮಂತಹ ಹಳ್ಳಿಗರ ಮಧ್ಯದಲ್ಲಿ ಜನ್ಮತಾಳಿದ್ದು ಇವನಿಗಾದರೋ ನಿಂದನೀಯವಾದುದು. ಇದು ಹೇಗೆ ಉಚಿತವಾಗಬಲ್ಲದು? ॥ ೨ ॥ ಗಜರಾಜನು ಸರೋವರದಲ್ಲಿರುವ ಕಮಲವನ್ನು ಕಿತ್ತು ಮೇಲೆತ್ತಿ ಹಿಡಿಯುವಂತೆ ಏಳು ವರ್ಷದ ಈ ಬಾಲಕನು ಗೋವರ್ಧನಗಿರಿಯನ್ನು ಏಳುದಿನಗಳವರೆಗೆ ನಿರಾಯಾಸವಾಗಿ ಒಂದೇ ಕೈಯಿಂದ ಮೇಲೆತ್ತಿ ಹಿಡಿದು ನಿಂತಿದ್ದನು. ಇದು ಇವನಿಂದ ಹೇಗೆ ಸಾಧ್ಯವಾಯಿತು? ॥ ೩ ॥ ಇವನು ಹಸುಳೆಯಾಗಿದ್ದಾಗಲೇ ಭಯಂಕರಳಾದ ಪೂತನೆಯು ವಿಷದ ಹಾಲನ್ನುಣಿಸಲು ಬಂದಿದ್ದಳು. ಕಣ್ಣು ಮುಚ್ಚಿಕೊಂಡು ಸ್ತನ್ಯಪಾನ ಮಾಡಿದ ಇವನು ಸ್ತನ್ಯದೊಡನೆ ಕಾಲನು ಶರೀರದಿಂದ ಆಯುಸ್ಸನ್ನು ಅಪಹರಿಸುವಂತೆ ಪೂತನೆಯ ಪ್ರಾಣಗಳನ್ನೇ ಅಪಹರಿಸಿಬಿಟ್ಟನು. ಎಂತಹ ಅದ್ಭುತವಿದು? ॥ ೪ ॥ ಇವನು ಮೂರುತಿಂಗಳ ಮಗುವಿದ್ದಾಗ ಗಾಡಿಯ ಕೆಳಗೆ ಅಳುತ್ತಾ ಮಲಗಿದ್ದನು. ಅಳುತ್ತಳುತ್ತಾ ಕೈ-ಕಾಲುಗಳನ್ನು ಬಡಿಯುತ್ತಿದ್ದಾಗ ಒಮ್ಮೆ ಅವನ ಪುಟ್ಟ ಕಾಲುಗಾಡಿಗೆ ತಗುಲಿ ಸಾಮಗ್ರಿಗಳಿಂದ ಕೂಡಿದ ಆ ಗಾಡಿಯು ತಲೆಕೆಳಗಾಗಿ ಬಿಟ್ಟಿತು. ಇದು ಹೇಗಾಯಿತು ಎಂಬುದು ನಮ್ಮಿಂದ ಯೋಚಿಸಲೂ ಸಾಧ್ಯವಾಗುತ್ತಿಲ್ಲ. ॥ ೫ ॥ ಈ ನಮ್ಮ ಮುದ್ದು ಕೃಷ್ಣನಿಗೆ ಆಗ ಒಂದು ವರ್ಷ ತುಂಬಿತ್ತು. ತೃಣಾವರ್ತನೆಂಬ ದೈತ್ಯನು ಬಿರುಗಾಳಿಯ ರೂಪದಿಂದ ಬಂದು ಇವನನ್ನು ಆಕಾಶಕ್ಕೆ ಹಾರಿಸಿಕೊಂಡು ಹೋದನು. ಆದರೆ ಈ ಅದ್ಭುತಬಾಲಕನು ರಾಕ್ಷಸನ ಕುತ್ತಿಗೆಯನ್ನು ಬಲವಾಗಿ ಹಿಡಿದು ಸಂಹರಿಸಿಬಿಟ್ಟನು. ॥ ೬ ॥ ಈ ಕಳ್ಳ ಕೃಷ್ಣನು ಬೆಣ್ಣೆಯನ್ನು ಕದಿಯುತ್ತಿದ್ದಾಗ ಇವನ ತಾಯಿ ಯಶೋದೆಯು ಇವನನ್ನು ಒರಳಿಗೆ ಕಟ್ಟಿಹಾಕಿದಳು. ಇವನು ಅಂಬೆಗಾಲು ಹಾಕುತ್ತಾ ಒರಳಿನೊಡನೆಯೇ ಮತ್ತಿಮರಗಳ ಮಧ್ಯದಲ್ಲಿ ಹೋಗಿ ಅನಾಯಾಸವಾಗಿ ಆ ವೃಕ್ಷಗಳನ್ನೇ ಬುಡಮೇಲಾಗಿಸಿದನು. ಇದೇನು ಸಾಮಾನ್ಯ ಸಾಧ್ಯವಾದ ಪ್ರಸಂಗವೇ? ॥ ೭ ॥ ಮತ್ತೊಂದು ಪ್ರಸಂಗದಲ್ಲಿ ಶ್ರೀಕೃಷ್ಣನು ಬಲರಾಮನೊಂದಿಗೂ, ಗೋಪಾಲ ಬಾಲಕರೊಂದಿಗೂ ಕರುಗಳನ್ನು ಮೇಯಿಸುತ್ತಿದ್ದಾಗ ಇವನನ್ನು ಕೊಲ್ಲುವ ಸಲುವಾಗಿಯೇ ದೈತ್ಯನೊಬ್ಬನು ಬಕಪಕ್ಷಿಯ ರೂಪದಲ್ಲಿ ಬಂದಿದ್ದನು. ಅದು ರಾಕ್ಷಸನೆಂದರಿತ ಇವನು ಅವನ ಕೊಕ್ಕನ್ನು ಹಿಡಿದು ಹುಲ್ಲಿನ ಕಡ್ಡಿಯನ್ನು ಸೀಳುವಂತೆ ಅವನನ್ನು ಸೀಳಿಹಾಕಿದನು. ॥ ೮ ॥ ಇನ್ನೊಮ್ಮೆ ಶ್ರೀಕೃಷ್ಣನನ್ನು ಸಂಹರಿಸುವ ಆಸೆಯಿಂದ ಮತ್ತೊಬ್ಬ ದೈತ್ಯನು ಕರುವಿನ ವೇಷವನ್ನು ಧರಿಸಿ ಕರುಗಳ ನಡುವೆಯೇ ಸೇರಿಕೊಂಡನು. ಆಗಲೇ ಶ್ರೀಕೃಷ್ಣನು ಆ ವತ್ಸಾಸುರನನ್ನು ಆಡುತ್ತಾಡುತ್ತಲೇ ಕೊಂದು ಅವನನ್ನು ಬೇಲದ ಮರದ ಮೇಲಕ್ಕೆಸೆದು ನೂರಾರು ಹಣ್ಣುಗಳನ್ನು ಉದುರಿಸಿದನು. ॥ ೯ ॥ ಇವನು ಬಲರಾಮನೊಂದಿಗೆ ಸೇರಿ ಕತ್ತೆಯ ರೂಪದಲ್ಲಿ ಇದ್ದ ಧೇನುಕಾಸುರನನ್ನು ಹಾಗೂ ಅವನ ಸಹೋದರರೆಲ್ಲರನ್ನು ಕೊಂದುಹಾಕಿದನು. ಪಕ್ವವಾದ ತಾಳೆಹಣ್ಣುಗಳಿಂದ ಕೂಡಿದ ತಾಲವನವನ್ನು ಎಲ್ಲರ ಉಪಯೋಗಕ್ಕಾಗಿ ಮಂಗಳಮಯವಾಗಿಸಿದನು. ॥ ೧೦ ॥

ಪ್ರಲಂಬಂ ಘಾತಯಿತ್ವೋಗ್ರಂ ಬಲೇನ ಬಲಶಾಲಿನಾ ।
ಅಮೋಚಯದ್ವ್ರಜಪಶೂನ್ಗೋಪಾಂಶ್ಚಾರಣ್ಯವಹ್ನಿತಃ ॥ ೧೧ ॥

ಆಶೀವಿಷತಮಾಹೀಂದ್ರಂ ದಮಿತ್ವಾ ವಿಮದಂ ಹ್ರದಾತ್ ।
ಪ್ರಸಹ್ಯೋದ್ವಾಸ್ಯ ಯಮುನಾಂ ಚಕ್ರೇಽಸೌ ನಿರ್ವಿಷೋದಕಾಮ್ ॥ ೧೨ ॥

ದುಸ್ತ್ಯಜಶ್ಚಾನುರಾಗೋಽಸ್ಮಿನ್ಸರ್ವೇಷಾಂ ನೋ ವ್ರಜೌಕಸಾಮ್ ।
ನಂದ ತೇ ತನಯೇಽಸ್ಮಾಸು ತಸ್ಯಾಪ್ಯೌತ್ಪತ್ತಿಕಃ ಕಥಮ್ ॥ ೧೩ ॥

ಕ್ವ ಸಪ್ತಹಾಯನೋ ಬಾಲಃ ಕ್ವ ಮಹಾದ್ರಿವಿಧಾರಣಮ್ ।
ತತೋ ನೋ ಜಾಯತೇ ಶಂಕಾ ವ್ರಜನಾಥ ತವಾತ್ಮಜೇ ॥ ೧೪ ॥

ಇನ್ನೊಂದು ಪ್ರಸಂಗದಲ್ಲಿ ಇವನು ಬಲಶಾಲಿಯಾದ ಬಲರಾಮನ ಮೂಲಕ ಕ್ರೂರನಾದ ಪ್ರಲಂಬಾಸುರನನ್ನು ಸಂಹಾರ ಮಾಡಿಸಿದನು. ಮತ್ತೊಮ್ಮೆ ಗೋವುಗಳನ್ನು ಗೋಪಾಲರನ್ನು ಕಾಡುಗಿಚ್ಚಿನಿಂದ ರಕ್ಷಿಸಿದನು. ॥ ೧೧ ॥ ಯಮುನಾ ನದಿಯಲ್ಲಿದ್ದ ವಿಷದ ಬಲ ಮದದಿಂದ ಉನ್ಮತ್ತನಾಗಿದ್ದ ಕಾಳಿಯನ ಗರ್ವವನ್ನು ಮುರಿದು ಬಲವಂತವಾಗಿ ಅವನನ್ನು ಮಡುವಿನಿಂದ ಹೊರದೂಡಿ ಯಮುನೆಯ ನೀರನ್ನು ವಿಷರಹಿತವನ್ನಾಗಿಸಿ, ಅಮೃತಮಯವಾಗಿಸಿದನು. ॥ ೧೨ ॥ ನಂದರಾಜನೇ! ಈ ವ್ರಜದಲ್ಲಿ ವಾಸಿಸುವ ನಮಗೆ ನಿನ್ನ ಮಗನಲ್ಲಿ ಅನಿವಾರ್ಯವಾದ ಪ್ರೀತಿಯಿರುವುದು ನಿಶ್ಚಯ. ಈ ಬಾಲಕನಿಗೂ ನಮ್ಮ ಮೇಲೆ ಅಷ್ಟೇ ಸ್ವಾಭಾವಿಕವಾದ ಪ್ರೀತಿಯಿದೆ. ಇದರ ಕಾರಣವೇನಿರಬಹುದು? ನೀವು ಹೇಳಬಲ್ಲಿರಾ? ॥ ೧೩ ॥ ಏಳುವರ್ಷಗಳ ಬಾಲಕನೆಂದರೇನು? ಮಹಾಪರ್ವತವನ್ನು ಧರಿಸುವುದೆಂದರೇನು? ಇದು ನಡೆದದ್ದೂ ನಿಜ. ವ್ರಜನಾಥನೇ! ನಿನ್ನ ಮಗನು ಯಾರಾಗಿರಬಹುದೆಂಬ ವಿಷಯದಲ್ಲಿ ನಮಗೆ ಸಂದೇಹವುಂಟಾಗಿದೆ. ॥ ೧೪ ॥

ನಂದ ಉವಾಚ

ಶ್ರೂಯತಾಂ ಮೇ ವಚೋ ಗೋಪಾ
ವ್ಯೇತು ಶಂಕಾ ಚ ವೋಽರ್ಭಕೇ ।
ಏನಂ ಕುಮಾರಮುದ್ದಿಶ್ಯ
ಗರ್ಗೋ ಮೇ ಯದುವಾಚ ಹ ॥ ೧೫ ॥

ವರ್ಣಾಸ್ತ್ರಯಃ ಕಿಲಾಸ್ಯಾಸನ್ಗೃಹ್ಣತೋಽನುಯುಗಂ ತನೂಃ ।
ಶುಕ್ಲೋ ರಕ್ತಸ್ತಥಾ ಪೀತ ಇದಾನೀಂ ಕೃಷ್ಣತಾಂ ಗತಃ ॥ ೧೬ ॥

ಪ್ರಾಗಯಂ ವಸುದೇವಸ್ಯ ಕ್ವಚಿಜ್ಜಾತಸ್ತವಾತ್ಮಜಃ ।
ವಾಸುದೇವ ಇತಿ ಶ್ರೀಮಾನಭಿಜ್ಞಾಃ ಸಂಪ್ರಚಕ್ಷತೇ ॥ ೧೭ ॥

ಬಹೂನಿ ಸಂತಿ ನಾಮಾನಿ ರೂಪಾಣಿ ಚ ಸುತಸ್ಯ ತೇ ।
ಗುಣಕರ್ಮಾನುರೂಪಾಣಿ ತಾನ್ಯಹಂ ವೇದ ನೋ ಜನಾಃ ॥ ೧೮ ॥

ಏಷ ವಃ ಶ್ರೇಯ ಆಧಾಸ್ಯದ್ಗೋಪಗೋಕುಲನಂದನಃ ।
ಅನೇನ ಸರ್ವದುರ್ಗಾಣಿ ಯೂಯಮಂಜಸ್ತರಿಷ್ಯಥ ॥ ೧೯ ॥

ಪುರಾನೇನ ವ್ರಜಪತೇ ಸಾಧವೋ ದಸ್ಯುಪೀಡಿತಾಃ ।
ಅರಾಜಕೇ ರಕ್ಷ್ಯಮಾಣಾ ಜಿಗ್ಯುರ್ದಸ್ಯೂನ್ ಸಮೇಧಿತಾಃ ॥ ೨೦ ॥

ನಂದಗೋಪನು ಹೇಳಿದನು – ಗೋಪಾಲಕರೇ! ನೀವು ನನ್ನ ಮಾತನ್ನು ಸಾವಧಾನವಾಗಿ ಕೇಳಿರಿ. ಇದರಿಂದ ನನ್ನ ಮಗನ ವಿಷಯದಲ್ಲಿದ್ದ ನಿಮ್ಮ ಸಂದೇಹವು ನಿವಾರಣೆಯಾದೀತು. ಮಹರ್ಷಿಗಳಾದ ಗರ್ಗರು ನಾಮಕರಣೋತ್ಸವದ ಸಂದರ್ಭದಲ್ಲಿ ಈ ಬಾಲಕನನ್ನು ನೋಡಿ ಇವನ ಕುರಿತು ಹೀಗೆ ಹೇಳಿದ್ದರು – ॥ ೧೫ ॥ "ನಂದಗೋಪನೇ! ನಿನ್ನ ಈ ಬಾಲಕನು ಪ್ರತಿಯೊಂದು ಯುಗದಲ್ಲಿಯೂ ಶರೀರವನ್ನು ಧರಿಸುವನು. ಬೇರೆ-ಬೇರೆ ಯುಗಗಳಲ್ಲಿ ಇವನಿಗೆ ಶ್ವೇತ, ರಕ್ತ, ಪೀತ ಮುಂತಾದ ಬೇರೆ-ಬೇರೆ ಬಣ್ಣಗಳನ್ನು ಇವನು ಸ್ವೀಕರಿಸಿದ್ದನು. ಈ ಸಲ ಇವನು ಕೃಷ್ಣವರ್ಣದವನಾಗಿರುವನು. ॥ ೧೬ ॥ ನಂದನೇ! ನಿನ್ನ ಪುತ್ರನಾದ ಇವನು ಮೊದಲು ಎಲ್ಲೋ ವಸುದೇವನ ಮನೆಯಲ್ಲಿ ಹುಟ್ಟಿದ್ದನು. ಅದಕ್ಕಾಗಿ ಈ ರಹಸ್ಯವನ್ನು ಅರಿತಿರುವವರು ಇವನ ಹೆಸರು 'ಶ್ರೀಮಾನ್ ವಾಸುದೇವ' ಎಂದು ಹೇಳುತ್ತಾರೆ. ॥ ೧೭ ॥ ನಿನ್ನ ಪುತ್ರನಿಗೆ ಗುಣ ಮತ್ತು ಕರ್ಮಗಳನುಸಾರವಾಗಿ ಬಹಳಷ್ಟು ಹೆಸರುಗಳಿವೆ ಹಾಗೂ ಅನೇಕ ರೂಪಗಳೂ ಇವೆ. ನಾನಾದರೋ ಆ ನಾಮಗಳನ್ನು ಬಲ್ಲೆನು. ಆದರೆ ಪ್ರಪಂಚದ ಸಾಮಾನ್ಯ ಜನರು ತಿಳಿಯಲಾರರು. ॥ ೧೮ ॥ ಸಮಸ್ತ ಗೋಪಾಲಕರಿಗೂ, ಗೋವುಗಳಿಗೂ ಆನಂದವನ್ನುಂಟುಮಾಡುವ ಈ ನಿನ್ನ ಮಗನು ನಿಮಗೆ ಪರಮಕಲ್ಯಾಣಕರನಾಗುತ್ತಾನೆ. ಇವನ ಸಹಾಯದಿಂದ ನೀವು ದೊಡ್ಡ-ದೊಡ್ಡ ವಿಪತ್ತುಗಳಿಂದ ಬಹಳ ಸುಲಭವಾಗಿ ಪಾರಾಗುವಿರಿ. ॥ ೧೯ ॥ ವ್ರಜರಾಜನೇ! ಹಿಂದೊಮ್ಮೆ ಭೂಮಂಡಲದಲ್ಲಿ ಯಾವ ರಾಜನು ಇರಲಿಲ್ಲ. ದರೋಡೆಕೋರರ ಉಪಟಳವು ಎಲ್ಲೆಡೆ ಹೆಚ್ಚಾಗಿತ್ತು. ಸತ್ಪುರುಷರನ್ನು ಬಹಳವಾಗಿ ಪೀಡಿಸುತ್ತಿದ್ದರು. ಆಗ ನಿನ್ನ ಈ ಪುತ್ರನೇ ಸಜ್ಜನರನ್ನು ಕಾಪಾಡಿದನು ಮತ್ತು ಇವನಿಂದ ಬಲವನ್ನು ಪಡೆದು ಜನರು ದರೋಡೆಕೋರರ ಮೇಲೆ ವಿಜಯವನ್ನು ಪಡೆದರು. ॥ ೨೦ ॥

ಯ ಏತಸ್ಮಿನ್ಮಹಾಭಾಗಾಃ ಪ್ರೀತಿಂ ಕುರ್ವಂತಿ ಮಾನವಾಃ ।
ನಾರಯೋಽಭಿಭವಂತ್ಯೇತಾನ್ ವಿಷ್ಣುಪಕ್ಷಾನಿವಾಸುರಾಃ ॥ ೨೦ ॥

ತಸ್ಮಾನ್ನಂದ ಕುಮಾರೋಽಯಂ ನಾರಾಯಣಸಮೋ ಗುಣೈಃ ।
ಶ್ರಿಯಾ ಕೀರ್ತ್ಯಾನುಭಾವೇನ ತತ್ಕರ್ಮಸು ನ ವಿಸ್ಮಯಃ ॥ ೨೨ ॥

ನಂದರಾಜನೇ! ನಿನ್ನ ಈ ಶ್ಯಾಮಲ ಮುದ್ದುಮಗನನ್ನು ಪ್ರೇಮಿಸುವವರು ಮಹಾಭಾಗ್ಯಶಾಲಿಗಳೇ ಸರಿ. ಭಗವಾನ್ ಮಹಾವಿಷ್ಣುವಿನ ಕರಕಮಲಗಳ ಛತ್ರಛಾಯೆಯಲ್ಲಿರುವ ದೇವತೆಗಳನ್ನು ಅಸುರರು ಗೆಲ್ಲಲಾರದೆ ಹೋದರು. ಹಾಗೆಯೇ ಇವನನ್ನು ಪ್ರೇಮಿಸುವವರನ್ನು ಒಳಗಿನ-ಹೊರಗಿನ ಯಾವ ಶತ್ರುಗಳು ಗೆಲ್ಲಲಾರವು. ॥ ೨೦ ॥ ನಂದಗೋಪನೇ! ಯಾವುದೇ ದೃಷ್ಟಿಯಿಂದ ನೋಡಿದರೂ ನಿಮ್ಮ ಮಗನು ಗುಣಗಳಿಂದ, ಐಶ್ವರ್ಯದಿಂದ, ಸೌಂದರ್ಯದಿಂದ, ಕೀರ್ತಿ ಮತ್ತು ಪ್ರಭಾವದಿಂದ ಸಾಕ್ಷಾತ್ ನಾರಾಯಣನಿಗೇ ಸಮನಾಗಿದ್ದಾನೆ. ಆದ್ದರಿಂದ ಈ ಬಾಲಕನ ಅಲೌಕಿಕ ಕಾರ್ಯಗಳನ್ನು ನೋಡಿ ಆಶ್ಚರ್ಯ ಪಡಬಾರದು." ॥ ೨೨ ॥

ಇತ್ಯದ್ಧಾ ಮಾಂ ಸಮಾದಿಶ್ಯ ಗರ್ಗೇ ಚ ಸ್ವಗೃಹಂ ಗತೇ ।
ಮನ್ಯೇ ನಾರಾಯಣಸ್ಯಾಂಶಂ ಕೃಷ್ಣಮಕ್ಲಿಷ್ಟಕಾರಿಣಮ್ ॥ ೨೩ ॥

ಇತಿ ನಂದವಚಃ ಶ್ರುತ್ವಾ ಗರ್ಗಗೀತಂ ವ್ರಜೌಕಸಃ ।
ದೃಷ್ಟಶ್ರುತಾನುಭಾವಾಸ್ತೇ ಕೃಷ್ಣಸ್ಯಾಮಿತತೇಜಸಃ ।
ಮುದಿತಾ ನಂದಮಾನರ್ಚುಃ ಕೃಷ್ಣಂ ಚ ಗತವಿಸ್ಮಯಾಃ ॥ ೨೪ ॥

ಗೋಪಾಲಕರೇ! ಸ್ವತಃ ಗರ್ಗಾಚಾರ್ಯರೇ ನನಗೆ ಹೀಗೆ ಆದೇಶವನ್ನಿತ್ತು ಹೊರಟು ಹೋದರು. ಅಂದಿನಿಂದ ನಾನು ಅಲೌಕಿಕ ಮತ್ತು ಪರಮ ಸುಖಮಯ ಕರ್ಮಗಳನ್ನು ಮಾಡುವ ಈ ಬಾಲಕನನ್ನು ಭಗವಾನ್ ನಾರಾಯಣನ ಅಂಶವೆಂದೇ ಭಾವಿಸುತ್ತಿರುವೆನು. ॥ ೨೩ ॥ ವ್ರಜವಾಸಿಗಳು ನಂದಗೋಪನ ಬಾಯಿಂದ ಗರ್ಗಾಚಾರ್ಯರ ಮಾತನ್ನು ಕೇಳಿದಾಗ ಅವರ ವಿಸ್ಮಯವು ಉಳಿಯಲಿಲ್ಲ. ಏಕೆಂದರೆ, ಈಗ ಅವರು ಅಮಿತ ತೇಜಸ್ವಿಯಾದ ಶ್ರೀಕೃಷ್ಣನ ಪ್ರಭಾವವನ್ನು ನೋಡಿ, ಕೇಳಿಬಿಟ್ಟಿದ್ದರು. ಆನಂದ ತುಂದಿಲರಾಗಿ ಅವರು ನಂದಗೋಪನನ್ನು ಮತ್ತು ಶ್ರೀಕೃಷ್ಣನನ್ನು ಬಹಳವಾಗಿ ಪ್ರಶಂಸಿಸಿದರು. ॥ ೨೪ ॥

ದೇವೇ ವರ್ಷತಿ ಯಜ್ಞವಿಪ್ಲವರುಷಾ
ವಜ್ರಾಶ್ಮಪರ್ಷಾನಿಲೈಃ
ಸೀದತ್ಪಾಲಪಶುಸ್ತ್ರಿ ಆತ್ಮಶರಣಂ
ದೃಷ್ಟ್ವಾನುಕಂಪ್ಯುತ್ಸ್ಮಯನ್ ।
ಉತ್ಪಾಟ್ಯೈಕಕರೇಣ ಶೈಲಮಬಲೋ
ಲೀಲೋಚ್ಛಿಲೀಂಧ್ರಂ ಯಥಾ
ಬಿಭ್ರದ್ಗೋಷ್ಠಮಪಾನ್ಮಹೇಂದ್ರಮದಭಿತ್
ಪ್ರೀಯಾನ್ನ ಇಂದ್ರೋ ಗವಾಮ್ ॥ ೨೫ ॥

ತನ್ನ ಸಲುವಾಗಿ ಮಾಡಬೇಕಾಗಿದ್ದ ಯಜ್ಞವು ಭಂಗವಾಯಿತು ಎಂದು ತಿಳಿದೊಡನೆಯೇ ಇಂದ್ರನು ಕೋಪದಿಂದ ಕಿಡಿ-ಕಿಡಿಯಾದನು. ಆ ಗೋವಳರಿಗೆ ಪ್ರತೀಕಾರವನ್ನು ಮಾಡಬೇಕೆಂದು ಒನಕೆ ಗಾತ್ರದ ಧಾರೆಯಿಂದ ಮಳೆಯನ್ನು ಸುರಿಸತೊಡಗಿದನು. ಜೊತೆಯಲ್ಲಿ ಬಿರುಗಾಳಿಯೂ, ಕಲ್ಲು ಮಳೆಯೂ, ಸಿಡಿಲು ಗುಡುಗುಗಳೂ ಬಂದು ವ್ರಜವಾಸಿಗಳನ್ನು ಪೀಡಿಸತೊಡಗಿದವು. ಆಗ ಶರಣಾಗತರಾಗಿ ಬಂದ ಗೋಪ-ಗೋಪಿಯರನ್ನು ನೋಡಿ ಶ್ರೀಕೃಷ್ಣನ ಹೃದಯವು ಕರುಣಾರಸದಿಂದ ತುಂಬಿಹೋಯಿತು. ಆತನು ನೂತನವಾದೊಂದು ಲೀಲೆಯನ್ನು ತೋರಿಸಲು ನಿಶ್ಚಯಿಸಿ ನಸುನಕ್ಕನು. ಬಲಹೀನನಾದ ಬಾಲಕನೊಬ್ಬನು ನಾಯಿಕೊಡೆಯನ್ನು ಎತ್ತಿಹಿಡಿಯುವಷ್ಟು ಸುಲಭವಾಗಿ ಭಗವಾನ್ ಶ್ರೀಕೃಷ್ಣನು ಗೋವರ್ಧನ ಗಿರಿಯನ್ನೆತ್ತಿ ಹಿಡಿದು ಗೋಕುಲವನ್ನು ಕಾಪಾಡಿದನು. ಜೊತೆಯಲ್ಲೇ ಇಂದ್ರನ ಗರ್ವಭಂಗವೂ ಆಯಿತು. ಅಂತಹ ಮಹಾತ್ಮನಾದ, ಕರುಣಾಮಯನಾದ, ಗೋವಿಂದನು ಸುಪ್ರೀತನಾಗಲೀ. ॥ ೨೫ ॥

ಇಪ್ಪತ್ತಾರನೆಯ ಅಧ್ಯಾಯವು ಮುಗಿಯಿತು. ॥ ೨೬ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮ ಸ್ಕಂಧೇ ಪೂರ್ವಾರ್ಧೇ
ಷಡ್ವಿಂಶೋಽಧ್ಯಾಯಃ ॥ ೨೬ ॥

ಇಪ್ಪತ್ತೇಳನೆಯ ಅಧ್ಯಾಯ

ಗೋವಿಂದ ಅಭಿಷೇಕ

ಶ್ರೀಶುಕ ಉವಾಚ

ಗೋವರ್ಧನೇ ಧೃತೇ ಶೈಲ ಆಸಾರಾದ್ರಕ್ಷಿತೇ ವ್ರಜೇ ।
ಗೋಲೋಕಾದಾವ್ರಜತ್ ಕೃಷ್ಣಂ ಸುರಭಿಃ ಶಕ್ರ ಏವ ಚ ॥ ೧ ॥

ವಿವಿಕ್ತ ಉಪಸಂಗಮ್ಯ ವ್ರೀಡಿತಃ ಕೃತಹೇಲನಃ ।
ಪಸ್ಪರ್ಶ ಪಾದಯೋರೇನಂ ಕಿರೀಟೇನಾರ್ಕವರ್ಚಸಾ ॥ ೨ ॥

ದೃಷ್ಟಶ್ರುತಾನುಭಾವೋಽಸ್ಯ ಕೃಷ್ಣಸ್ಯಾಮಿತತೇಜಸಃ ।
ನಷ್ಟತ್ರಿಲೋಕೇಶಮದ ಇಂದ್ರ ಆಹ ಕೃತಾಂಜಲಿಃ ॥ ೩ ॥

ಇಂದ್ರ ಉವಾಚ

ವಿಶುದ್ಧಸತ್ತ್ವಂ ತವ ಧಾಮ ಶಾಂತಂ
ತಪೋಮಯಂ ಧ್ವಸ್ತರಜಸ್ತಮಸ್ಕಮ್ ।
ಮಾಯಾಮಯೋಽಯಂ ಗುಣಸಂಪ್ರವಾಹೋ
ನ ವಿದ್ಯತೇ ತೇಽಗ್ರಹಣಾನುಬಂಧಃ ॥ ೪ ॥

ಕುತೋ ನು ತದ್ಧೇತವ ಈಶ ತತ್ಕೃತಾ
ಲೋಭಾದಯೋ ಯೇಽಬುಧಲಿಂಗಭಾವಾಃ ।
ತಥಾಪಿ ದಂಡಂ ಭಗವಾನ್ ಬಿಭರ್ತಿ
ಧರ್ಮಸ್ಯ ಗುಪ್ತ್ಯೈ ಖಲನಿಗ್ರಹಾಯ ॥ ೫ ॥

ಪಿತಾ ಗುರುಸ್ತ್ವಂ ಜಗತಾಮಧೀಶೋ
ದುರತ್ಯಯಃ ಕಾಲ ಉಪಾತ್ತದಂಡಃ ।
ಹಿತಾಯ ಸ್ವೇಚ್ಛಾತನುಭಿಃ ಸಮೀಹಸೇ
ಮಾನಂ ವಿಧುನ್ವನ್ ಜಗದೀಶಮಾನಿನಾಮ್ ॥ ೬ ॥

ಯೇ ಮದ್ವಿಧಾಜ್ಞಾ ಜಗದೀಶಮಾನಿನ-
ಸ್ತ್ವಾಂ ವೀಕ್ಷ್ಯ ಕಾಲೇಽಭಯಮಾಶು ತನ್ಮದಮ್ ।
ಹಿತ್ವಾಽಽರ್ಯಮಾರ್ಗಂ ಪ್ರಭಜಂತ್ಯಪಸ್ಮಯಾ
ಈಹಾ ಖಲಾನಾಮಪಿ ತೇಽನುಶಾಸನಮ್ ॥ ೭ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಎಲೈ ಪರೀಕ್ಷಿತನೇ ! ಭಗವಾನ್ ಶ್ರೀಕೃಷ್ಣನು ಗಿರಿರಾಜ ಗೋವರ್ಧನವನ್ನು ಎತ್ತಿ ಹಿಡಿದು ಮುಸಲಧಾರಾವರ್ಷದಿಂದ ವ್ರಜವನ್ನು ಕಾಪಾಡಿದಾಗ ಗೋಲೋಕದಿಂದ ಕಾಮಧೇನುವು ಅವನನ್ನು ಅಭಿನಂದಿಸಲಿಕ್ಕಾಗಿ ಮತ್ತು ಸ್ವರ್ಗಲೋಕದಿಂದ ದೇವೇಂದ್ರನು ಕ್ಷಮಾಪಣೆಯನ್ನು ಯಾಚಿಸಲು ಶ್ರೀಕೃಷ್ಣನ ಬಳಿಗೆ ಬಂದರು. ॥ ೧ ॥ ಭಗವಂತನನ್ನು ತಿರಸ್ಕರಿಸಿದ್ದರಿಂದ ಇಂದ್ರನು ಬಹಳ ಲಜ್ಜಿತನಾಗಿದ್ದನು. ಅದಕ್ಕಾಗಿ ಅವನು ಏಕಾಂತದಲ್ಲಿ ಭಗವಂತನ ಬಳಿಗೆ ಹೋಗಿ, ಸೂರ್ಯನಂತೆ ತೇಜಸ್ವಿಯಾದ ತನ್ನ ಮುಕುಟದಿಂದ ಅವನ ಚರಣಗಳನ್ನು ಸ್ಪರ್ಶಿಸಿದನು. ॥ ೨ ॥ ಪರಮ ತೇಜಸ್ವೀ ಭಗವಾನ್ ಶ್ರೀಕೃಷ್ಣನ ಪ್ರಭಾವವನ್ನು ನೋಡಿ-ಕೇಳಿ 'ನಾನು ಮೂರು ಲೋಕಗಳಿಗೆ ಒಡೆಯನಾಗಿದ್ದೇನೆ' ಎಂಬ ಇಂದ್ರನ ಗರ್ವವು ಉಡುಗಿ ಹೋಯಿತು. ಈಗ ಅವನು ಕೈಜೋಡಿಸಿಕೊಂಡು ಅವನನ್ನು ಸ್ತುತಿಸತೊಡಗಿದನು. ॥ ೩ ॥

ಇಂದ್ರನು ಹೇಳಿದನು – 'ಓ ಭಗವಂತಾ ! ನಿನ್ನ ಸ್ವರೂಪವು ಪರಮಶಾಂತವೂ, ಜ್ಞಾನಮಯವೂ, ರಜೋಗುಣ-ತಮೋಗುಣಗಳಿಂದ ರಹಿತವೂ, ವಿಶುದ್ಧವೂ, ಅಪ್ರಾಕೃತವೂ, ಸತ್ತ್ವಮಯವೂ ಆಗಿದೆ. ಗುಣಗಳ ಪ್ರವಾಹರೂಪವಾಗಿ ಕಂಡುಬರುವ ಈ ಪ್ರಪಂಚವು ಕೇವಲ ಮಾಯಾಮಯವಾಗಿದೆ. ಏಕೆಂದರೆ, ನಿನ್ನ ಸ್ವರೂಪವನ್ನು ತಿಳಿಯದ ಕಾರಣದಿಂದಲೇ ನಿನ್ನಲ್ಲಿ ಇದು ಕಂಡುಬರುತ್ತಿದೆ. ॥ ೪ ॥ ಅವಿದ್ಯಾ ಪ್ರಚುರವಾದ ಮಾಯಾಮಯ ಸಂಸಾರವೇ ನಿನಗಿಲ್ಲವೆಂದ ಮೇಲೆ ದೇಹಸಂಬಂಧದಿಂದ ಉಂಟಾಗುವ ಜನ್ಮಾಂತರಗಳು ಹೇಗೆ ತಾನೇ ನಿನಗೆ ಉಂಟಾಗಬಲ್ಲವು ? ಹಾಗೆಯೇ ಅಜ್ಞಾನಿಗಳ ಲಕ್ಷಣವಾದ ಲೋಭ-ಮೋಹಗಳೂ ನಿನಗಿಲ್ಲ. ಆದರೂ ಮಹಾಮಹಿಮನಾದ ನೀನು ಅವತಾರಗಳನ್ನು ಮಾಡಿ ಧರ್ಮದ ರಕ್ಷಣೆಗಾಗಿಯೂ, ದುಷ್ಟನಿಗ್ರಹಕ್ಕಾಗಿಯೂ ದಂಡವನ್ನು ಧರಿಸುವೆ. ॥ ೫ ॥ ನೀನು ಜಗತ್ತಿಗೆ ತಂದೆಯೂ, ಗುರುವೂ, ಒಡೆಯನೂ ಆಗಿರುವೆ. ನೀನು ಜಗತ್ತನ್ನು ನಿಯಂತ್ರಿಸಲು ದಂಡವನ್ನು ಧರಿಸಿದ ದುಸ್ತರವಾದ ಕಾಲರೂಪಿಯೂ ಆಗಿರುವೆ. ನೀನು ನಿನ್ನ ಭಕ್ತರ ಬಯಕೆಗಳನ್ನು ಈಡೇರಿಸಲು ಸ್ವೇಚ್ಛೆಯಿಂದ ಲೀಲಾ ಶರೀರವನ್ನು ಪ್ರಕಟಗೊಳಿಸುವೆ. ತ್ರೈಲೋಕ್ಯಾಧಿಪತಿಯೆಂಬ ಅಹಂಕಾರದಿಂದ ಕೂಡಿರುವ ನನ್ನಂಥವರ ಅಭಿಮಾನವನ್ನು ಮುರಿದು ನಮ್ಮಗಳಿಗೆ ಹಿತವನ್ನೇ ಉಂಟು ಮಾಡುವೆ. ॥ ೬ ॥ ನನ್ನಂತಹವರು ಮತ್ತು ತನ್ನನ್ನೇ ಜಗತ್ತಿನ ಸ್ವಾಮಿಯೆಂದು ಭಾವಿಸುವವರನ್ನು ನೋಡಿಯೂ, ಮಹಾಭಯದ ಅವಕಾಶದಲ್ಲಿಯೂ ನೀನು ನಿರ್ಭಯನಾಗಿರುವೆ. ಆಗ ಅವರು ಉದ್ಧಟತನವನ್ನು ಬಿಟ್ಟು ಗರ್ವರಹಿತರಾಗಿ ಸತ್ಪುರುಷರಿಂದ ಸೇವಿಸಲ್ಪಟ್ಟ ಭಕ್ತಿಮಾರ್ಗವನ್ನು ಆಶ್ರಯಿಸಿ ನಿನ್ನನ್ನು ಭಜಿಸುತ್ತಾರೆ. ಪ್ರಭೋ ! ನಿನ್ನ ಒಂದೊಂದು ಚೇಷ್ಟೆಯೂ ದುಷ್ಟರ ದಂಡವಾಗಿಯೇ ಇದೆ. ॥ ೭ ॥

ಸ ತ್ವಂ ಮಮೈಶ್ವರ್ಯಮದಪ್ಲುತಸ್ಯ
ಕೃತಾಗಸಸ್ತೇಽವಿದುಷಃ ಪ್ರಭಾವಮ್ ।
ಕ್ಷಂತುಂ ಪ್ರಭೋಽಥಾರ್ಹಸಿ ಮೂಢಚೇತಸೋ
ಮೈವಂ ಪುನರ್ಭೂನ್ಮತಿರೀಶ ಮೇಽಸತೀ ॥ ೮ ॥

ಸ್ವಾಮಿ! ನಾನು ಐಶ್ವರ್ಯಮದದಿಂದ ಉನ್ಮತ್ತನಾಗಿ ನಿನಗೆ ಅಪರಾಧವನ್ನು ಎಸಗಿರುವೆನು. ಏಕೆಂದರೆ, ನಾನು ನಿನ್ನ ಶಕ್ತಿ ಮತ್ತು ಪ್ರಭಾವದ ಕುರಿತು ಪೂರ್ಣವಾಗಿ ಅಜ್ಞಾನಿಯಾಗಿದ್ದೆ. ಪರಮ ಈಶ್ವರನೇ! ನೀನು ದಯಮಾಡಿ ಮೂರ್ಖನಾದ ನನ್ನ ಅಪರಾಧವನ್ನು ಕ್ಷಮಿಸಿ, ಮುಂದೆ ನಾನು ಎಂದೆಂದಿಗೂ ಅಜ್ಞಾನಕ್ಕೆ ವಶನಾಗದಂತೆ ಕೃಪೆ ಮಾಡು. ॥ ೮ ॥

ತವಾವತಾರೋಽಯಮಧೋಕ್ಷಜೇಹ
ಸ್ವಯಂಭರಾಣಾಮುರುಭಾರಜನ್ಮನಾಮ್ ।
ಚಮೂಪತೀನಾಮಭವಾಯ ದೇವ
ಭವಾಯ ಯುಷ್ಮಚ್ಚರಣಾನುವರ್ತಿನಾಮ್ ॥ ೯ ॥

ಸ್ವಯಂ ಪ್ರಕಾಶನಾದ ಇಂದ್ರಿಯಾತೀತ ಪರಮಾತ್ಮನೇ! ಅಸುರರಾದ ಸೇನಾಪತಿಗಳು ಕೇವಲ ತಮ್ಮ ಹೊಟ್ಟೆಯನ್ನು ಹೊರೆಯುವುದರಲ್ಲೇ ಮಗ್ನರಾಗಿ ಇರುತ್ತಾರೆ. ಭೂ ಭಾರಕ್ಕೆ ಕಾರಣರಾದವರನ್ನು ವಧಿಸಿ ಅವರಿಗೆ ಮೋಕ್ಷವನ್ನು ದಯಪಾಲಿಸುವೆ. ನಿನ್ನ ಚರಣ ಸೇವಕರಾಗಿ ನಿನ್ನ ಆಜ್ಞೆಯನ್ನು ಪಾಲಿಸುವ ಭಕ್ತಜನರಿಗೆ ಅಭ್ಯುದಯವನ್ನು ಕರುಣಿಸಲು, ಅವರನ್ನು ರಕ್ಷಿಸಲಿಕ್ಕಾಗಿಯೇ ನಿನ್ನ ಈ ಅವತಾರವಾಗಿದೆ. ॥ ೯ ॥

ನಮಸ್ತುಭ್ಯಂ ಭಗವತೇ ಪುರುಷಾಯ ಮಹಾತ್ಮನೇ ।
ವಾಸುದೇವಾಯ ಕೃಷ್ಣಾಯ ಸಾತ್ವತಾಂ ಪತಯೇ ನಮಃ ॥ ೧೦ ॥

ಭಗವಂತನೇ! ನಾನು ನಿನಗೆ ನಮಸ್ಕರಿಸುತ್ತೇನೆ. ನೀನು ಸರ್ವಾಂತರ್ಯಾಮಿ ಪುರುಷೋತ್ತಮನೂ, ಸರ್ವಾತ್ಮಾ ವಾಸುದೇವನೂ ಆಗಿರುವೆ. ನೀನು ಯದುವಂಶಿಯರ ಏಕಮಾತ್ರ ಸ್ವಾಮಿಯಾಗಿರುವೆ. ಭಕ್ತವತ್ಸಲನೂ, ಸರ್ವರ ಚಿತ್ತಗಳನ್ನು ಆಕರ್ಷಿಸುವವನಾಗಿರುವೆ. ಅಂತಹ ನಿನಗೆ ನಾನು ಪದೇ ಪದೇ ವಂದಿಸುತ್ತೇನೆ. ॥ ೧೦ ॥

ಸ್ವಚ್ಛಂದೋಪಾತ್ತದೇಹಾಯ ವಿಶುದ್ಧಜ್ಞಾನಮೂರ್ತಯೇ ।
ಸರ್ವಸ್ಮೈ ಸರ್ವಬೀಜಾಯ ಸರ್ವಭೂತಾತ್ಮನೇ ನಮಃ ॥ ೧೧ ॥

ಜೀವರಂತೆ ನೀನು ಕರ್ಮವಶನಲ್ಲದಿದ್ದರೂ ಭಕ್ತರ ಹಾಗೂ ನಿನ್ನ ಇಚ್ಛೆಯಿಂದ ಬೇರೆ-ಬೇರೆ ಶರೀರಗಳನ್ನು ಧರಿಸುವೆ. ನಿನ್ನ ಈ ಶರೀರವು ವಿಶುದ್ಧ ಜ್ಞಾನಸ್ವರೂಪವಾಗಿದೆ. ಸರ್ವಸ್ವವೂ ನೀನೇ. ಸಮಸ್ತಕ್ಕೂ ಕಾರಣನೂ, ಎಲ್ಲರ ಆತ್ಮಸ್ವರೂಪನೂ ಆಗಿರುವೆ. ಅಂತಹ ನಿನಗೆ ನಮಸ್ಕರಿಸುತ್ತೇನೆ. ॥ ೧೧ ॥

ಮಯೇದಂ ಭಗವನ್ ಗೋಷ್ಠನಾಶಾಯಾಸಾರವಾಯುಭಿಃ ।
ಚೇಷ್ಟಿತಂ ವಿಹತೇ ಯಜ್ಞೇ ಮಾನಿನಾ ತೀವ್ರಮನ್ಯುನಾ ॥ ೧೨ ॥

ಭಗವಂತನೇ! ನಾನು ಮಹಾಮಾನಿಯು, ಅತ್ಯಂತ ಕೋಪಿಷ್ಠನು. ನನ್ನ ಸಲುವಾಗಿ ಮಾಡುತ್ತಿದ್ದ ಯಜ್ಞವು ನಿಂತು ಹೋಯಿತೆಂದು ತಿಳಿದಾಗ ನಾನು ಮುಸಲಧಾರೆಯಿಂದ ಕೂಡಿದ ಮಳೆಯಿಂದಲೂ, ಬಿರುಗಾಳಿಯಿಂದಲೂ ವ್ರಜಭೂಮಿಯನ್ನೇ ಪೂರ್ಣವಾಗಿ ನಾಶಮಾಡಲು ಪ್ರಯತ್ನಿಸಿದೆ. ॥ ೧೨ ॥

ತ್ವಯೇಶಾನುಗೃಹೀತೋಽಸ್ಮಿ ಧ್ವಸ್ತಸ್ತಂಭೋ ವೃಥೋದ್ಯಮಃ ।
ಈಶ್ವರಂ ಗುರುಮಾತ್ಮಾನಂ ತ್ವಾಮಹಂ ಶರಣಂ ಗತಃ ॥ ೧೩ ॥

ಸ್ವಾಮಿಯೇ! ನೀನು ನನ್ನ ಮೇಲೆ ಪರಮಾನುಗ್ರಹವನ್ನು ತೋರಿಸಿರುವೆ. ನನ್ನ ಕಾರ್ಯವನ್ನು ವ್ಯರ್ಥಗೊಳಿಸಿ ನನ್ನ ಅಹಂಕಾರವನ್ನು ಮುರಿದಿರುವೆ. ನನ್ನ ಅಜ್ಞಾನವನ್ನು ಹೋಗಲಾಡಿಸಿರುವೆ. ಆದುದರಿಂದ ನೀನೇ ಸ್ವಾಮಿಯೂ, ಗುರುವೂ, ಆತ್ಮನೂ ಆಗಿರುವೆ. ನಿನಗೆ ನಾನು ಶರಣಾಗಿದ್ದೇನೆ." ॥ ೧೩ ॥

ಶ್ರೀಶುಕ ಉವಾಚ

ಏವಂ ಸಂಕೀರ್ತಿತಃ ಕೃಷ್ಣೋ ಮಘೋನಾ ಭಗವಾನಮುಮ್ ।
ಮೇಘಗಂಭೀರಯಾ ವಾಚಾ ಪ್ರಹಸನ್ನಿದಮಬ್ರವೀತ್ ॥ ೧೪ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ! ದೇವೇಂದ್ರನು ಭಗವಾನ್ ಶ್ರೀಕೃಷ್ಣನನ್ನು ಹೀಗೆ ಸ್ತುತಿಸಿದಾಗ ಅವನು ಮುಗುಳ್ನಕ್ಕು ಮೇಘ ಗಂಭೀರ ಧ್ವನಿಯಿಂದ ಇಂದ್ರನನ್ನು ಸಂಬೋಧಿಸಿ ಇಂತೆಂದನು – ॥ ೧೪ ॥

ಶ್ರೀಭಗವಾನುವಾಚ

ಮಯಾ ತೇಽಕಾರಿ ಮಘವನ್ ಮಖಭಂಗೋಽನುಗೃಹ್ಣತಾ ।
ಮದನುಸ್ಮೃತಯೇ ನಿತ್ಯಂ ಮತ್ತಸ್ಯೇಂದ್ರಶ್ರಿಯಾ ಭೃಶಮ್ ॥ ೧೫ ॥

ಶ್ರೀಭಗವಂತನು ಹೇಳಿದನು - ಇಂದ್ರನೇ! ನೀನು ಐಶ್ವರ್ಯ-ಧನಸಂಪತ್ತಿನ ಮದದಿಂದ ಉನ್ಮತ್ತನಾಗಿದ್ದೆ. ಅದಕ್ಕಾಗಿಯೇ ನಿನ್ನ ಮೇಲೆ ಅನುಗ್ರಹವನ್ನು ಮಾಡಲೆಂದೇ ನಿನ್ನ ಯಜ್ಞವನ್ನು ಭಂಗಗೊಳಿಸಿದೆ. ಏಕೆಂದರೆ, ಇನ್ನು ನೀನು ನನ್ನನ್ನು ನಿತ್ಯ ನಿರಂತರ ಸ್ಮರಿಸುವಂತಾಗಲಿ. ॥ ೧೫ ॥

ಮಾಮೈಶ್ವರ್ಯಶ್ರೀಮದಾಂಧೋ ದಂಡಪಾಣಿಂ ನ ಪಶ್ಯತಿ ।
ತಂ ಭ್ರಂಶಯಾಮಿ ಸಂಪದ್ಭ್ಯೋ ಯಸ್ಯ ಚೇಚ್ಛಾಮ್ಯನುಗ್ರಹಮ್ ॥ ೧೬ ॥

ಗಮ್ಯತಾಂ ಶಕ್ರ ಭದ್ರಂ ವಃ ಕ್ರಿಯತಾಂ ಮೇಽನುಶಾಸನಮ್ ।
ಸ್ಥೀಯತಾಂ ಸ್ವಾಧಿಕಾರೇಷು ಯುಕ್ತೈರ್ವಃ ಸ್ತಂಭವರ್ಜಿತೈಃ ॥ ೧೭ ॥

ಅಥಾಹ ಸುರಭಿಃ ಕೃಷ್ಣಮಭಿವಂದ್ಯ ಮನಸ್ವಿನೀ ।
ಸ್ವಸಂತಾನೈರುಪಾಮಂತ್ರ್ಯ ಗೋಪರೂಪಿಣಮೀಶ್ವರಮ್ ॥ ೧೮ ॥

ಸುರಭಿರುವಾಚ

ಕೃಷ್ಣ ಕೃಷ್ಣ ಮಹಾಯೋಗಿನ್ ವಿಶ್ವಾತ್ಮನ್ ವಿಶ್ವಸಂಭವ ।
ಭವತಾ ಲೋಕನಾಥೇನ ಸನಾಥಾ ವಯಮಚ್ಯುತ ॥ ೧೯ ॥

ತ್ವಂ ನಃ ಪರಮಕಂ ದೈವಂ ತ್ವಂ ನ ಇಂದ್ರೋ ಜಗತ್ಪತೇ ।
ಭವಾಯ ಭವ ಗೋವಿಪ್ರದೇವಾನಾಂ ಯೇ ಚ ಸಾಧವಃ ॥ ೨೦ ॥

ಇಂದ್ರಂ ನಸ್ತ್ವಾಭಿಷೇಕ್ಷ್ಯಾಮೋ ಬ್ರಹ್ಮಣಾ ಚೋದಿತಾ ವಯಮ್ ।
ಅವತೀರ್ಣೋಽಸಿ ವಿಶ್ವಾತ್ಮನ್ ಭೂಮೇರ್ಭಾರಾಪನುತ್ತಯೇ ॥ ೨೧ ॥

ಶ್ರೀಶುಕ ಉವಾಚ

ಏವಂ ಕೃಷ್ಣಮುಪಾಮಂತ್ರ್ಯ ಸುರಭಿಃ ಪಯಸಾಽಽತ್ಮನಃ ।
ಜಲೈರಾಕಾಶಗಂಗಾಯಾ ಐರಾವತಕರೋದ್ಧೃತೈಃ ॥ ೨೨ ॥

ಇಂದ್ರಃ ಸುರರ್ಷಿಭಿಃ ಸಾಕಂ ಚೋದಿತೋ ದೇವಮಾತೃಭಿಃ ।
ಅಭ್ಯಷಿಂಚತ ದಾಶಾರ್ಹಂ ಗೋವಿಂದ ಇತಿ ಚಾಭ್ಯಧಾತ್ ॥ ೨೩ ॥

ತತ್ರಾಗತಾಸ್ತುಂಬುರುನಾರದಾದಯೋ
ಗಂಧರ್ವವಿದ್ಯಾಧರಸಿದ್ಧಚಾರಣಾಃ ।
ಜಗುರ್ಯಶೋ ಲೋಕಮಲಾಪಹಂ ಹರೇಃ
ಸುರಾಂಗನಾಃ ಸನ್ನನೃತುರ್ಮುದಾನ್ವಿತಾಃ ॥ ೨೪ ॥

ಐಶ್ವರ್ಯ ಮತ್ತು ಧನ ಮದದಿಂದ ಕುರುಡಾದವನು – ಕಾಲ ರೂಪಿಯಾದ ಪರಮೇಶ್ವರನಾದ ನಾನು ಕೈಯಲ್ಲಿ ದಂಡವನ್ನು ಧರಿಸಿ ಅವನ ತಲೆಯ ಮೇಲೆ ಕುಳಿತಿರುವೆನೆಂಬುದನ್ನು ತಿಳಿಯುವುದಿಲ್ಲ. ನಾನು ಯಾರ ಮೇಲೆ ಅನುಗ್ರಹ ತೋರ ಬೇಕೆಂದು ಬಯಸುವೆನೋ ಅವನನ್ನು ಐಶ್ವರ್ಯ ಭ್ರಷ್ಟನನ್ನಾಗಿ ಮಾಡಿಬಿಡುತ್ತೇನೆ. ॥ ೧೬ ॥ ಇಂದ್ರನೇ! ನಿನಗೆ ಮಂಗಳವಾಗಲಿ. ಇನ್ನು ನೀನು ನಿನ್ನ ರಾಜಧಾನಿ ಅಮರಾವತಿಗೆ ಹೋಗಿ ನನ್ನ ಆಜ್ಞೆಯನ್ನು ಪಾಲಿಸುತ್ತಾ ಇರು. ಮುಂದೆ ಎಂದೂ ಗರ್ವಪಡಬೇಡ. ನಿನ್ನ ಅಧಿಕಾರಕ್ಕೆ ಅನುಸಾರವಾಗಿ ಉಚಿತವಾದ ರೀತಿಯಲ್ಲಿ ಮರ್ಯಾದೆಯನ್ನು ಮೀರದೇ, ನನ್ನ ಸನ್ನಿಧಿಯನ್ನು ನನ್ನ ಸಂಯೋಗವನ್ನು ಅನುಭವಿಸುತ್ತಾ ಮೂರು ಲೋಕಗಳನ್ನು ಪಾಲಿಸುತ್ತಾ ಇರು. ॥ ೧೭ ॥

ಪರೀಕ್ಷಿತನೇ! ಭಗವಂತನು ಹೀಗೆ ಆಜ್ಞೆಕೊಡುತ್ತಿರುವಾಗಲೇ ಪ್ರಶಸ್ತವಾದ ಮನಸ್ಸುಳ್ಳ ಕಾಮಧೇನುವು ತನ್ನ ಸಂತಾನದೊಡನೆ ಗೋಪವೇಷಧಾರಿಯಾದ ಪರಮೇಶ್ವರ ಶ್ರೀಕೃಷ್ಣನ ಬಳಿಗೆ ಬಂದು ಅವನಿಗೆ ತಲೆಬಾಗಿ ನಮಸ್ಕರಿಸಿ ಹೇಳಿದಳು. ॥ ೧೮ ॥

ಕಾಮಧೇನುವು ಹೇಳಿತು – ಸಚ್ಚಿದಾನಂದ ಸ್ವರೂಪನಾದ ಶ್ರೀಕೃಷ್ಣನೇ! ನೀನು ಮಹಾಯೋಗೇಶ್ವರನಾಗಿರುವೆ. ಸಾಕ್ಷಾತ್ ವಿಶ್ವವೇ ಆಗಿರುವೆ. ವಿಶ್ವದ ಪರಮ ಕಾರಣನೂ, ಅಚ್ಯುತನೂ ಆಗಿರುವೆ. ಸಮಸ್ತ ವಿಶ್ವಕ್ಕೆ ಸ್ವಾಮಿಯಾಗಿರುವ ನಿನ್ನನ್ನು ನಾಥನನ್ನಾಗಿ ಪಡೆದು ನಾವು ಸನಾಥರಾಗಿದ್ದೇವೆ. ॥ ೧೯ ॥ ನೀನು ಜಗತ್ತಿನ ಸ್ವಾಮಿಯಾಗಿರುವೆ. ಆದರೆ ನಮಗಾದರೋ ಪರಮಪೂಜ್ಯ ಆರಾಧ್ಯಸ್ವಾಮಿಯಾಗಿರುವೆ. ಪ್ರಭೋ! ದೇವೇಂದ್ರನು ಮೂರು ಲೋಕಗಳಿಗೆ ಇಂದ್ರನಿರಬಹುದು, ಆದರೆ ನಮಗೆ ಇಂದ್ರನು ನೀನೇ ಆಗಿರುವೆ. ಆದ್ದರಿಂದ ನೀನೇ ಗೋವು, ಬ್ರಾಹ್ಮಣರು, ದೇವತೆಗಳು, ಸಾಧುಜನರು – ಇವರ ರಕ್ಷಣೆಗಾಗಿ ನಮ್ಮ ಇಂದ್ರನಾಗು. ॥ ೨೦ ॥ ಗೋವುಗಳಾದ ನಾವು ಬ್ರಹ್ಮದೇವರ ಪ್ರೇರಣೆಯಿಂದ ನಿನ್ನನ್ನು ನಮ್ಮ ಇಂದ್ರನೆಂದು ಭಾವಿಸಿ ಅಭಿಷೇಕ ಮಾಡುವೆವು. ವಿಶ್ವಾತ್ಮನೇ! ನೀನು ಭೂ ಭಾರವನ್ನು ಇಳುಹಲೆಂದೇ ಅವತರಿಸಿರುವೆ. ॥ ೨೧ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ! ಭಗವಾನ್ ಶ್ರೀಕೃಷ್ಣನಲ್ಲಿ ಹೀಗೆ ಹೇಳಿ ಕಾಮಧೇನುವು ತನ್ನ ಹಾಲಿನಿಂದಲೆ ಅವನಿಗೆ ಅಭಿಷೇಕ ಮಾಡಿತು. ದೇವತೆಗಳ ಪ್ರೇರಣೆಯಿಂದ ದೇವೇಂದ್ರನು ಐರಾವತವು ತನ್ನ ಸೊಂಡಿಲಿನಿಂದ ತಂದಿರುವ ಆಕಾಶಗಂಗೆಯ ಜಲದಿಂದ ದೇವರ್ಷಿಗಳೊಡನೆ ಯದುನಾಥನಾದ ಶ್ರೀಕೃಷ್ಣನಿಗೆ ಅಭಿಷೇಕ ಮಾಡಿ, ಅವನನ್ನು 'ಗೋವಿಂದ'ನೆಂದು ಸಂಬೋಧಿಸಿದನು. ॥ ೨೨-೨೩ ॥ ಆ ಸಮಯದಲ್ಲಿ ನಾರದ, ತುಂಬುರು ಮೊದಲಾದ ಗಂಧರ್ವರು, ವಿದ್ಯಾಧರರು, ಸಿದ್ಧರು, ಚಾರಣರು ಮೊದಲೇ ಅಲ್ಲಿಗೆ ಬಂದಿದ್ದರು. ಅವರೆಲ್ಲರೂ ಪ್ರಪಂಚದ ತಾಪ-ಪಾಪಗಳನ್ನು ಹೋಗಲಾಡಿಸುವ ಶ್ರೀಕೃಷ್ಣನ ಯಶಸ್ಸನ್ನು ಕೀರ್ತಿಸತೊಡಗಿದರು. ಅಪ್ಸರೆಯರು ಆನಂದತುಂಬಿ ನೃತ್ಯಮಾಡತೊಡಗಿದರು. ॥ ೨೪ ॥

ತಂ ತುಷ್ಟುವುರ್ದೇವನಿಕಾಯಕೇತವೋ
ಹ್ಯವಾಕಿರಂಶ್ಚಾದ್ಭುತಪುಷ್ಪವೃಷ್ಟಿಭಿಃ ।
ಲೋಕಾಃ ಪರಾಂ ನಿರ್ವೃತಿಮಾಪ್ನುವಂಸ್ತ್ರಯೋ
ಗಾವಸ್ತದಾ ಗಾಮನಯನ್ ಪಯೋದ್ರುತಾಮ್ ॥ ೨೫ ॥

ನಾನಾರಸೌಘಾಃ ಸರಿತೋ ವೃಕ್ಷಾ ಆಸನ್ ಮಧುಸ್ರವಾಃ ।
ಅಕೃಷ್ಟಪಚ್ಯೌಷಧಯೋ ಗಿರಯೋಽಬಿಭ್ರದುನ್ಮಣೀನ್ ॥ ೨೬ ॥

ಕೃಷ್ಣೇಽಭಿಷಿಕ್ತ ಏತಾನಿ ಸತ್ತ್ವಾನಿ ಕುರುನಂದನ ।
ನಿರ್ವೈರಾಣ್ಯಭವಂಸ್ತಾತ ಕ್ರೂರಾಣ್ಯಪಿ ನಿಸರ್ಗತಃ ॥ ೨೭ ॥

ಇತಿ ಗೋಗೋಕುಲಪತಿಂ ಗೋವಿಂದಮಭಿಷಿಚ್ಯ ಸಃ ।
ಅನುಜ್ಞಾತೋ ಯಯೌ ಶಕ್ರೋ ವೃತೋ ದೇವಾದಿಭಿರ್ದಿವಮ್ ॥ ೨೮ ॥

ಪ್ರಧಾನ ದೇವತೆಗಳು ಭಗವಂತನನ್ನು ಸ್ತುತಿಸುತ್ತಾ ಅವನ ಮೇಲೆ ನಂದನವನದ ದಿವ್ಯ ಪುಷ್ಪಗಳ ಮಳೆಗರೆಯ ತೊಡಗಿದರು. ಮೂರು ಲೋಕಗಳೂ ಪರಮಾನಂದದಲ್ಲಿ ಮುಳುಗಿ ಹೋದುವು. ಗೋವುಗಳ ಕೆಚ್ಚಲುಗಳಿಂದ ತಾನಾಗಿಯೇ ಹಾಲು ಸುರಿದು ಪೃಥ್ವಿಯು ನೆನೆದು ಹೋಯಿತು. ॥ ೨೫ ॥ ನದಿಗಳು ನಾನಾ ವಿಧದ ರಸಗಳಿಂದ ತುಂಬಿ ಹರಿಯತೊಡಗಿದವು. ಮರ ಗಿಡ-ಬಳ್ಳಿಗಳಿಂದ, ಪುಷ್ಪಗಳಿಂದ ಮಧುವು ಸುರಿಯುತ್ತಿತ್ತು. ಉಳದೆಯೇ ಪೃಥ್ವಿಯು ಅನೇಕ ವಿಧವಾದ ಔಷಧಿಗಳನ್ನು ಅನ್ನವನ್ನು ನೀಡುತ್ತಿತ್ತು. ಪರ್ವತಗಳಲ್ಲಿ ಅಡಗಿದ್ದ ನವರತ್ನಗಳು ತಾವಾಗಿ ಹೊರಗೆ ಕಾಣಿಸಿಕೊಂಡವು. ॥ ೨೬ ॥ ಪರೀಕ್ಷಿತನೇ! ಭಗವಾನ್ ಶ್ರೀಕೃಷ್ಣನ ಅಭಿಷೇಕವಾದ ಮೇಲೆ ಸ್ವಭಾವತಃ ಕ್ರೂರವಾಗಿದ್ದ ಜೀವಿಗಳೂ ಕೂಡ ವೈರಹೀನವಾದುವು. ಅವುಗಳು ಪರಸ್ಪರ ಮೈತ್ರಿಯಿಂದ ಇರತೊಡಗಿದವು. ॥ ೨೭ ॥ ಇಂದ್ರನು ಈ ಪ್ರಕಾರವಾಗಿ ಗೋವುಗಳ ಮತ್ತು ಗೋಕುಲದ ಸ್ವಾಮಿಯಾದ ಗೋವಿಂದನಿಗೆ ಅಭಿಷೇಕ ಮಾಡಿ, ಅವನಿಂದ ಬೀಳ್ಕೊಂಡು ಗಂಧರ್ವರು, ದೇವತೆಗಳೊಂದಿಗೆ ಅಮರಾವತಿಗೆ ತೆರಳಿದನು. ॥ ೨೮ ॥

ಇಪ್ಪತ್ತೇಳನೆಯ ಅಧ್ಯಾಯವು ಮುಗಿಯಿತು. ॥ ೨೭ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮ ಸ್ಕಂಧೇ ಪೂರ್ವಾರ್ಧೇ
ಇಂದ್ರಸ್ತುತಿರ್ನಾಮ ಸಪ್ತವಿಂಶೋಽಧ್ಯಾಯಃ ॥ ೨೭ ॥

ಇಪ್ಪತ್ತೆಂಟನೆಯ ಅಧ್ಯಾಯ

ಶ್ರೀಕೃಷ್ಣನು ವರುಣಲೋಕದಿಂದ ನಂದಗೋಪನನ್ನು ಬಿಡಿಸಿ ತಂದುದು

ಶ್ರೀಶುಕ ಉವಾಚ

ಏಕಾದಶ್ಯಾಂ ನಿರಾಹಾರಃ ಸಮಭ್ಯರ್ಚ್ಯ ಜನಾರ್ದನಮ್ ।
ಸ್ನಾತುಂ ನಂದಸ್ತು ಕಾಲಿಂದ್ಯಾ ದ್ವಾದಶ್ಯಾಂ ಜಲಮಾವಿಶತ್ ॥ ೧ ॥

ತಂ ಗೃಹೀತ್ವಾನಯದ್ಭೃತ್ಯೋ ವರುಣಸ್ಯಾಸುರೋಽಂತಿಕಮ್ ।
ಅವಿಜ್ಞಾಯಾಸುರೀಂ ವೇಲಾಂ ಪ್ರವಿಷ್ಟಮುದಕಂ ನಿಶಿ ॥ ೨ ॥

ಚುಕ್ರುಶುಸ್ತಮಪಶ್ಯಂತಃ ಕೃಷ್ಣ ರಾಮೇತಿ ಗೋಪಕಾಃ ।
ಭಗವಾಂಸ್ತದುಪಶ್ರುತ್ಯ ಪಿತರಂ ವರುಣಾಹೃತಮ್ ।
ತದಂತಿಕಂ ಗತೋ ರಾಜನ್ ಸ್ವಾನಾಮಭಯದೋ ವಿಭುಃ ॥ ೩ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಎಲೈ ಪರೀಕ್ಷಿತನೇ! ನಂದಗೋಪನು ಕಾರ್ತಿಕ ಶುಕ್ಲ ಏಕಾದಶಿಯ ದಿನ ಉಪವಾಸ ಮಾಡಿ ಭಗವಂತನಾದ ಜನಾರ್ದನನನ್ನು ಪೂಜಿಸಿ, ರಾತ್ರಿಯಲ್ಲಿ ದ್ವಾದಶಿಯು ಪ್ರಾರಂಭವಾಗುತ್ತಲೇ ಸ್ನಾನಮಾಡಲು ಯಮುನಾ ನದಿಯಲ್ಲಿ ಪ್ರವೇಶಿಸಿದನು. ॥ ೧ ॥ ಇದು ಅಸುರರ ಕಾಲವೆಂದು ನಂದಗೋಪನಿಗೆ ತಿಳಿದಿರಲಿಲ್ಲ. ಅದಕ್ಕಾಗಿ ಅವನು ರಾತ್ರಿಯೇ ಯಮುನಾನದಿಗೆ ಇಳಿದಿದ್ದನು. ಆಗ ವರುಣನ ಸೇವಕನಾದ ಓರ್ವ ಅಸುರನು ನಂದಗೋಪನನ್ನು ಹಿಡಿದುಕೊಂಡು ತನ್ನ ಒಡೆಯನ ಬಳಿಗೆ ಒಯ್ದನು. ॥ ೨ ॥ ನಂದಗೋಪನನ್ನು ಕಾಣದೆ ಗೋಪಾಲರೆಲ್ಲರೂ ಗಟ್ಟಿಯಾಗಿ ಕೂಗಿಕೊಂಡರು. ಕೃಷ್ಣ! ಬಲರಾಮ! ನಮ್ಮ ರಾಜನಾದ ನಂದಗೋಪನೇ ಕಾಣೆಯಾಗಿದ್ದಾನೆ. ನೀವೇ ನಮಗೆ ಪರಮಾಶ್ರಯರು. ನಂದಗೋಪನನ್ನು ಬೇಗನೇ ಹುಡುಕಿ ತನ್ನಿರಿ, ಎಂದು ಗೋಳಾಡಿದರು. ಗೋಪಾಲಕರ ಮಾತನ್ನು ಕೇಳಿದ ಭಕ್ತಭಯಾಪಹನಾದ, ಸರ್ವಜ್ಞನಾದ ನಂದಕುಮಾರನು ತನ್ನ ತಂದೆಯನ್ನು ವರುಣನ ಸೇವಕನಾರೋ ಕರೆದೊಯ್ದಿರಬಹುದೆಂದು ತಿಳಿದು ಒಡನೆಯೇ ವರುಣನ ಬಳಿಗೆ ಹೋದನು. ॥ ೩ ॥

ಪ್ರಾಪ್ತಂ ವೀಕ್ಷ್ಯ ಹೃಷೀಕೇಶಂ ಲೋಕಪಾಲಃ ಸಪರ್ಯಯಾ ।
ಮಹತ್ಯಾ ಪೂಜಯಿತ್ವಾಽಽಹ ತದ್ದರ್ಶನಮಹೋತ್ಸವಃ ॥ ೪ ॥

ವರುಣ ಉವಾಚ

ಅದ್ಯ ಮೇ ನಿಭೃತೋ ದೇಹೋಽದ್ಯೈವಾರ್ಥೋಽಧಿಗತಃ ಪ್ರಭೋ ।
ತ್ವತ್ಪಾದಭಾಜೋ ಭಗವನ್ನವಾಪುಃ ಪಾರಮಧ್ವನಃ ॥ ೫ ॥

ನಮಸ್ತುಭ್ಯಂ ಭಗವತೇ ಬ್ರಹ್ಮಣೇ ಪರಮಾತ್ಮನೇ ।
ನ ಯತ್ರ ಶ್ರೂಯತೇ ಮಾಯಾ ಲೋಕಸೃಷ್ಟಿವಿಕಲ್ಪನಾ ॥ ೬ ॥

ಅಜಾನತಾ ಮಾಮಕೇನ ಮೂಢೇನಾಕಾರ್ಯವೇದಿನಾ ।
ಆನೀತೋಽಯಂ ತವ ಪಿತಾ ತದ್ಭವಾನ್ ಕ್ಷಂತುಮರ್ಹತಿ ॥ ೭ ॥

ಮಮಾಪ್ಯನುಗ್ರಹಂ ಕೃಷ್ಣ ಕರ್ತುಮರ್ಹಸ್ಯಶೇಷದೃಕ್ ।
ಗೋವಿಂದ ನೀಯತಾಮೇಷ ಪಿತಾ ತೇ ಪಿತೃವತ್ಸಲ ॥ ೮ ॥

ಶ್ರೀಶುಕ ಉವಾಚ

ಏವಂ ಪ್ರಸಾದಿತಃ ಕೃಷ್ಣೋ ಭಗವಾನೀಶ್ವರೇಶ್ವರಃ ।
ಆದಾಯಾಗಾತ್ಸ್ವಪಿತರಂ ಬಂಧೂನಾಂ ಚಾವಹನ್ಮುದಮ್ ॥ ೯ ॥

ನಂದಸ್ತ್ವತೀಂದ್ರಿಯಂ ದೃಷ್ಟ್ವಾ ಲೋಕಪಾಲಮಹೋದಯಮ್ ।
ಕೃಷ್ಣೇ ಚ ಸನ್ನತಿಂ ತೇಷಾಂ ಜ್ಞಾತಿಭ್ಯೋ ವಿಸ್ಮಿತೋಽಬ್ರವೀತ್ ॥ ೧೦ ॥

ತೇ ತ್ವೌತ್ಸುಕ್ಯಧಿಯೋ ರಾಜನ್ಮತ್ವಾ ಗೋಪಾಸ್ತಮೀಶ್ವರಮ್ ।
ಅಪಿ ನಃ ಸ್ವಗತಿಂ ಸೂಕ್ಷ್ಮಾಮುಪಾಧಾಸ್ಯದಧೀಶ್ವರಃ ॥ ೧೧ ॥

ಇತಿ ಸ್ವಾನಾಂ ಸ ಭಗವಾನ್ವಿಜ್ಞಾಯಾಖಿಲದೃಕ್ ಸ್ವಯಮ್ ।
ಸಂಕಲ್ಪಸಿದ್ಧಯೇ ತೇಷಾಂ ಕೃಪಯೈತದಚಿಂತಯತ್ ॥ ೧೨ ॥

ಅಂತರಿಂದ್ರಿಯ-ಬಹಿರಿಂದ್ರಿಯಗಳ ಪ್ರವರ್ತಕನಾದ ಭಗವಾನ್ ಶ್ರೀಕೃಷ್ಣನೇ ತನ್ನ ಲೋಕಕ್ಕೆ ಬಂದಿರುವನೆಂದು ನೋಡಿ ವರುಣನು ಶ್ರೀಕೃಷ್ಣನಿಗೆ ಮಹಾಪೂಜೆಯನ್ನು ಸಲ್ಲಿಸಿದನು. ಭಗವಂತನ ದರ್ಶನದಿಂದ ಆನಂದ ಭರಿತನಾಗಿ ಕೈಗಳನ್ನು ಜೋಡಿಸಿಕೊಂಡು ಭಗವಂತನಲ್ಲಿ ನಿವೇದಿಸಿಕೊಂಡನು. ॥ ೪ ॥

ವರುಣನು ಹೇಳಿದನು – ಪ್ರಭು! ನಿನ್ನ ದಿವ್ಯದರ್ಶನದಿಂದ ನನ್ನ ಜನ್ಮವು ಸಾರ್ಥಕವಾಯಿತು. ಪುರುಷಾರ್ಥವು ಕೈಸೇರಿತು. ಇಂದು ನನಗೆ ನಿನ್ನ ಚರಣಕಮಲಗಳ ಸೇವೆ ಮಾಡುವ ಶುಭಾವಕಾಶವು ದೊರೆಯಿತು. ನಿನ್ನ ಚರಣಕಮಲಗಳನ್ನು ಆಶ್ರಯಿಸಿದವರು ಭವಸಾಗರದಿಂದ ಪಾರಾಗಿಹೋಗುತ್ತಾರೆ. ॥ ೫ ॥ ನೀನು ಭಕ್ತರಿಗೆ ಭಗವಂತನೂ, ವೇದಾಂತಿಗಳ ಬ್ರಹ್ಮನೂ, ಯೋಗಿಗಳ ಪರಮಾತ್ಮನೂ ಆಗಿರುವೆ. ವಿಭಿನ್ನ ಲೋಕಗಳನ್ನು ಸೃಷ್ಟಿಸುವ ಮಾಯೆಯು ನಿನ್ನ ಸ್ವರೂಪದಲ್ಲಿ ಇಲ್ಲವೆಂದು ಶ್ರುತಿಗಳು ಹೇಳುತ್ತವೆ. ಅಂತಹ ನಿನಗೆ ನಾನು ನಮಸ್ಕರಿಸುತ್ತಿದ್ದೇನೆ. ॥ ೬ ॥ ಸ್ವಾಮಿ! ನನ್ನ ಈ ಮೂರ್ಖನಾದ ಸೇವಕನು ತನ್ನ ಕರ್ತವ್ಯವೇನೆಂಬುದನ್ನು ಅರಿಯದೆ ನಿನ್ನ ತಂದೆಯನ್ನು ಇಲ್ಲಿಗೆ ಕರೆತಂದಿರುವನು. ಅವನ ಈ ಅಪರಾಧವನ್ನು ದಯಮಾಡಿ ಕ್ಷಮಿಸಿಬಿಡು. ॥ ೭ ॥ ಗೋವಿಂದ! ನೀನು ನಿನ್ನ ತಂದೆಯನ್ನು ಬಹಳವಾಗಿ ಪ್ರೀತಿಸುತ್ತಿರುವೆ ಎಂಬುದನ್ನು ನಾನು ಬಲ್ಲೆನು. ಇದೋ ನಿನ್ನ ತಂದೆಯು ಇಲ್ಲಿರುವನು. ಇವನನ್ನು ನೀನು ಕೊಂಡುಹೋಗು. ಭಗವಂತ! ನೀನು ಸರ್ವಾಂತರ್ಯಾಮಿಯೂ, ಸರ್ವಸಾಕ್ಷಿಯೂ ಆಗಿರುವೆ. ವಿಶ್ವಮೋಹನ ಕೃಷ್ಣಾ! ಆದ್ದರಿಂದ ನೀನು ದಾಸನಾದ ನನ್ನ ಮೇಲೆ ಕೃಪೆದೋರು. ॥ ೮ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ! ಬ್ರಹ್ಮಾದಿಗಳಿಗೂ ಈಶ್ವರನಾದ ಭಗವಾನ್ ಶ್ರೀಕೃಷ್ಣನನ್ನು ಲೋಕಪಾಲ ವರುಣನು ಹೀಗೆ ಸ್ತುತಿಸಿ ಪ್ರಸನ್ನಗೊಳಿಸಿದನು. ಅನಂತರ ಭಗವಂತನು ತನ್ನ ತಂದೆಯಾದ ನಂದರಾಜನನ್ನು ಕರೆದುಕೊಂಡು ವ್ರಜಕ್ಕೆ ಬಂದು ಬಂಧುಗಳೆಲ್ಲರನ್ನು ಆನಂದಗೊಳಿಸಿದನು. ॥ ೯ ॥ ಲೋಕಪಾಲಕನಾದ ವರುಣನ ಇಂದ್ರಿಯಾತೀತವಾದ ಐಶ್ವರ್ಯವನ್ನೂ, ಸುಖಸಂಪತ್ತುಗಳನ್ನೂ, ತನ್ನ ಮಗನಾದ ಶ್ರೀಕೃಷ್ಣನಿಗೆ ಅಲ್ಲಿಯ ನಿವಾಸಿಗಳು ನಮಸ್ಕರಿಸಿದ್ದನ್ನೂ ಕಂಡ ನಂದಗೋಪನು ಆಶ್ಚರ್ಯಚಕಿತನಾಗಿ, ತನ್ನ ಬಂಧುಗಳಿಗೆ ತಾನು ಕಂಡದ್ದನ್ನು ವಿವರಿಸಿ ಹೇಳಿದನು. ॥ ೧೦ ॥ ಪರೀಕ್ಷಿತನೇ! ಇದನ್ನು ಕೇಳಿದ ಗೋಪರು ಶ್ರೀಕೃಷ್ಣನನ್ನು ಸರ್ವೇಶ್ವರನೆಂದೇ ನಿಶ್ಚಯಿಸಿದರು. ತಮಗೂ ಕೂಡ ಭಕ್ತಿಪ್ರೇಮಿಯಾದ, ಜಗದೀಶ್ವರನಾದ ಶ್ರೀಕೃಷ್ಣನು ಅವನ ಅನನ್ಯ ಭಕ್ತರಿಗೆ ಮಾತ್ರವೇ ಪ್ರವೇಶಿಸಲು ಸಾಧ್ಯವಾದ ಮಾಯಾತೀತವಾದ ತನ್ನ ಪರಮಧಾಮವನ್ನು ತೋರಿಸಿಯಾನೆಂಬ ಉತ್ಸುಕತೆ ಉಂಟಾಯಿತು. ॥ ೧೧ ॥ ಪರೀಕ್ಷಿತನೇ! ಸರ್ವದರ್ಶಿಯಾದ ಭಗವಾನ್ ಶ್ರೀಕೃಷ್ಣನಿಗೆ ಗೋಪಾಲಕರ ಆಶಯವು ತಿಳಿದು ಹೋಯಿತು. ದಯಾಮಯನಾದ ಶ್ರೀಕೃಷ್ಣನು ತನ್ನ ಪ್ರಿಯಭಕ್ತರ ಸಂಕಲ್ಪವನ್ನು ಹೇಗೆ ಈಡೇರಿಸುವುದೆಂದು ಯೋಚಿಸತೊಡಗಿದನು. ॥ ೧೨ ॥

ಜನೋ ವೈ ಲೋಕ ಏತಸ್ಮಿನ್ನವಿದ್ಯಾಕಾಮಕರ್ಮಭಿಃ ।
ಉಚ್ಚಾವಚಾಸು ಗತಿಷು ನ ವೇದ ಸ್ವಾಂ ಗತಿಂ ಭ್ರಮನ್ ॥ ೧೩ ॥

ಇತಿ ಸಂಚಿಂತ್ಯ ಭಗವಾನ್ಮಹಾಕಾರುಣಿಕೋ ಹರಿಃ ।
ದರ್ಶಯಾಮಾಸ ಲೋಕಂ ಸ್ವಂ ಗೋಪಾನಾಂ ತಮಸಃ ಪರಮ್ ॥ ೧೪ ॥

ಸತ್ಯಂ ಜ್ಞಾನಮನಂತಂ ಯದ್ಬ್ರಹ್ಮ ಜ್ಯೋತಿಃ ಸನಾತನಮ್ ।
ಯದ್ಧಿ ಪಶ್ಯಂತಿ ಮುನಯೋ ಗುಣಾಪಾಯೇ ಸಮಾಹಿತಾಃ ॥ ೧೫ ॥

ತೇ ತು ಬ್ರಹ್ಮಹ್ರದಂ ನೀತಾ ಮಗ್ನಾಃ ಕೃಷ್ಣೇನ ಚೋದ್ಧೃತಾಃ ।
ದದೃಶುರ್ಬ್ರಹ್ಮಣೋ ಲೋಕಂ ಯತ್ರಾಕ್ರೂರೋಽಧ್ಯಗಾತ್ಪುರಾ ॥ ೧೬ ॥

ನಂದಾದಯಸ್ತು ತಂ ದೃಷ್ಟ್ವಾ ಪರಮಾನಂದನಿರ್ವೃತಾಃ ।
ಕೃಷ್ಣಂ ಚ ತತ್ರ ಚ್ಛಂದೋಭಿಃ ಸ್ತೂಯಮಾನಂ ಸುವಿಸ್ಮಿತಾಃ ॥ ೧೭ ॥

ಈ ಪ್ರಪಂಚದಲ್ಲಿ ಜೀವರು ಅಜ್ಞಾನವಶದಿಂದ ದೇಹವನ್ನೇ ಆತ್ಮನೆಂದು ಭಾವಿಸಿಕೊಂಡು ಬಗೆ-ಬಗೆಯ ಕಾಮನೆಗಳನ್ನಿಟ್ಟುಕೊಂಡು ಅವುಗಳ ಪ್ರಾಪ್ತಿಗಾಗಿ ನಾನಾ ವಿಧವಾದ ಕರ್ಮಗಳನ್ನು ಮಾಡುತ್ತಾ ಇರುತ್ತಾರೆ. ಆ ಕರ್ಮಗಳ ಫಲರೂಪವಾಗಿ ದೇವ ಮನುಷ್ಯ-ಪಶು-ಪಕ್ಷಿ ಮೊದಲಾದ ಉಚ್ಚ-ನೀಚ ಯೋನಿಗಳಲ್ಲಿ ಅಲೆಯುತ್ತಾ, ತಮ್ಮ ನಿಜವಾದ ಆತ್ಮಸ್ವರೂಪದ ಗತಿಯನ್ನು ತಿಳಿಯುವುದೇ ಇಲ್ಲ. ॥ ೧೩ ॥ ಹೀಗೆ ಯೋಚಿಸಿದ ಪರಮ ಕಾರುಣಿಕನಾದ ಶ್ರೀಹರಿಯು ತನ್ನ ಪ್ರಿಯಭಕ್ತರಾದ ಗೋಪರಿಗೆ ಮಾಯಾಂಧಕಾರದಿಂದ ಅತೀತವಾದ ತನ್ನ ದಿವ್ಯ ಪರಂಧಾಮವನ್ನು ತೋರಿಸಿದನು. ॥ ೧೪ ॥ ಭಗವಂತನು ಮೊಟ್ಟಮೊದಲಿಗೆ ಸಮಾಧಿನಿಷ್ಠರಾದ, ಗುಣಾತೀತರಾದ ಮಹಾಯೋಗಿಗಳು ತಮ್ಮ ಹೃತ್ಕಮಲದಲ್ಲಿ ಸತ್ಯಸ್ವರೂಪನೂ, ಜ್ಞಾನಸ್ವರೂಪನೂ, ಅನಂತನೂ, ಸನಾತನನೂ ಆದ ಪರಂಜ್ಯೋತಿಯನ್ನು ಕಂಡುಕೊಳ್ಳುವರೋ, ಅಂತಹ ದಿವ್ಯ ಜ್ಯೋತಿಸ್ವರೂಪನಾದ ಬ್ರಹ್ಮನ ಸಾಕ್ಷಾತ್ಕಾರವನ್ನು ಗೋಪರಿಗೆ ಮಾಡಿಸಿದನು. ॥ ೧೫ ॥ ತಾನು ಮುಂದೆ ಅಕ್ರೂರನಿಗೆ ತನ್ನ ನಿಜರೂಪವನ್ನು ತೋರಿಸಲಿರುವ ಬ್ರಹ್ಮಹ್ರದವೆಂಬ ದಿವ್ಯ ಜಲಾಶಯಕ್ಕೆ ಶ್ರೀಕೃಷ್ಣನು ಗೋಪಾಲಕರನ್ನು ಕರೆದೊಯ್ದು ಅವರೆಲ್ಲರನ್ನೂ ಅಲ್ಲಿ ಮುಳುಗಿಸಿ, ಅವರೆಲ್ಲರೂ ಬ್ರಹ್ಮಾನಂದದಲ್ಲಿ ಮೈಮರೆತು ಹೋದರು. ಅವರನ್ನು ಹೊರಕ್ಕೆ ತಂದು ಎಚ್ಚರಿಸಿ ಭಗವಂತನು ತನ್ನ ಪರಮಧಾಮದ ದರ್ಶನವನ್ನು ಮಾಡಿಸಿದನು. ॥ ೧೬ ॥ ಭಗವತ್ಸ್ವರೂಪ ಆ ದಿವ್ಯಲೋಕವನ್ನು ನೋಡಿ ನಂದಗೋಪನೇ ಮುಂತಾದ ಗೋಪರು ಪರಮಾನಂದ ಭರಿತರಾದರು. ಅಲ್ಲಿ ಸಕಲ ವೇದಗಳು ಮೂರ್ತಿಮಂತರಾಗಿ ಭಗವಾನ್ ಶ್ರೀಕೃಷ್ಣನನ್ನು ಸ್ತುತಿಸುತ್ತಿರುವುದನ್ನು ನೋಡಿ ಅವರೆಲ್ಲರೂ ಪರಮವಿಸ್ಮಿತರಾದರು. ॥ ೧೭ ॥

ಇಪ್ಪತ್ತೆಂಟನೆಯ ಅಧ್ಯಾಯವು ಮುಗಿಯಿತು. ॥ ೨೮ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮಸ್ಕಂಧೇ
ಪೂರ್ವಾರ್ಧೇಽಷ್ಟಾವಿಂಶೋಽಧ್ಯಾಯಃ ॥ ೨೮ ॥

ಇಪ್ಪತ್ತೊಂಭತ್ತನೆಯ ಅಧ್ಯಾಯ

ರಾಸಲೀಲೆಯ ಪ್ರಾರಂಭ

ಶ್ರೀಶುಕ ಉವಾಚ

ಭಗವಾನಪಿ ತಾ ರಾತ್ರೀಃ ಶರದೋತ್ಫುಲ್ಲಮಲ್ಲಿಕಾಃ ।
ವೀಕ್ಷ್ಯ ರಂತುಂ ಮನಶ್ಚಕ್ರೇ ಯೋಗಮಾಯಾಮುಪಾಶ್ರಿತಃ ॥ ೧ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಎಲೈ ಪರೀಕ್ಷಿತನೇ! ಶ್ರೀಕೃಷ್ಣನು ಭಗವಂತನೇ ಆಗಿದ್ದರೂ ಅರಳಿದ ಮಲ್ಲಿಗೆಯ ಹೂವುಗಳಿಂದ ಘಮ-ಘಮಿಸುತ್ತಿದ್ದ ಶರತ್ಕಾಲದ ರಾತ್ರಿಯನ್ನು ಕಂಡು ಯೋಗಮಾಯೆಯನ್ನು ಆಶ್ರಯಿಸಿ ಗೋಪಿಕೆಯರೊಡನೆ ರಮಣೀಯ ರಾಸಕ್ರೀಡೆಯನ್ನಾಡಲು ಬಯಸಿದನು. ॥ ೧ ॥

ತದೋಡುರಾಜಃ ಕಕುಭಃ ಕರೈರ್ಮುಖಂ
ಪ್ರಾಚ್ಯಾ ವಿಲಿಂಪನ್ನರುಣೇನ ಶಂತಮೈಃ ।
ಸ ಚರ್ಷಣೀನಾಮುದಗಾಚ್ಛುಚೋ ಮೃಜನ್
ಪ್ರಿಯಃ ಪ್ರಿಯಾಯಾ ಇವ ದೀರ್ಘದರ್ಶನಃ ॥ ೨ ॥

ಬಹು ಕಾಲಾನಂತರ ಆಗಮಿಸಿದ ಪತಿಯು ತನ್ನ ಪತ್ನಿಯ ಸುಂದರವಾದ ಮುಖವನ್ನು ಕುಂಕುಮ ಕೇಸರಿಯಿಂದ ಅಲಂಕರಿಸುವಂತೆ - ಶ್ರೀಕೃಷ್ಣನು ರಾಸಕ್ರೀಡೆಯನ್ನು ಆಡಬೇಕೆಂದು ಸಂಕಲ್ಪಿಸಿದೊಡನೆಯೇ, ಚಂದ್ರನು ತನ್ನ ಸುಖಕರವಾದ ಕಿರಣಗಳ ರೂಪವಾದ ಕೈಗಳಿಂದ ಪೂರ್ವದಿಕ್ಕೆಂಬ ಪ್ರೇಯಸಿಯ ಮುಖಮಂಡಲವನ್ನು ಕೆಂಪುಬಣ್ಣವೆಂಬ ಕುಂಕುಮಕೇಸರಿಯಿಂದ ಲೇಪಿಸುತ್ತಾ ಹಗಲಿನ ಬಿಸಿಲಿನಿಂದ ಸೊರಗಿಹೋಗಿದ್ದ ಸಮಸ್ತ ಚರಾಚರ ಪ್ರಾಣಿಗಳ ಸಂತಾಪವನ್ನು ದೂರಗೊಳಿಸಿದನು. ॥ ೨ ॥

ದೃಷ್ಟ್ವಾ ಕುಮುದ್ವಂತಮಖಂಡಮಂಡಲಂ
ರಮಾನನಾಭಂ ನವಕುಂಕುಮಾರುಣಮ್ ।
ವನಂ ಚ ತತ್ಕೋಮಲಗೋಭಿರಂಜಿತಂ
ಜಗೌ ಕಲಂ ವಾಮದೃಶಾಂ ಮನೋಹರಮ್ ॥ ೩ ॥

ಮನಸ್ಸಿಗೆ ಆಹ್ಲಾದವನ್ನುಂಟುಮಾಡುವ ಚಂದ್ರನು ಮೂಡಲ ದಿಕ್ಕಿನಲ್ಲಿ ಮೂಡಿಬಂದ ನಂತರ ಕುಂಕುಮ ಕೇಸರಿಯ ಲೇಪನದಿಂದ ಕೆಂಪಾದ ರಮಾದೇವಿಯ ಮುಖಮಂಡಲದಂತೆ ಎಳೆಗೆಂಪಾಗಿದ್ದ ಚಂದ್ರಮಂಡಲವನ್ನೂ, ಆ ಶರಚ್ಚಂದ್ರನ ಕಿರಣಗಳಿಂದ ನಯನಾಭಿರಾಮವಾಗಿ ಬೆಳಗುತ್ತಿದ್ದ ವೃಂದಾವನವನ್ನು ನೋಡಿದ ಶ್ರೀಕೃಷ್ಣನು ಗೋಪಿಯರ ಮನಸ್ಸನ್ನು ಅಪಹರಿಸುವ ಸುಮಧುರವಾದ ವೇಣುಗಾನವನ್ನು ನುಡಿಸಿದನು. ॥ ೩ ॥

ನಿಶಮ್ಯ ಗೀತಂ ತದನಂಗವರ್ಧನಂ
ವ್ರಜಸ್ತ್ರಿಯಃ ಕೃಷ್ಣಗೃಹೀತಮಾನಸಾಃ ।
ಆಜಗ್ಮುರನ್ಯೋನ್ಯಮಲಕ್ಷಿತೋದ್ಯಮಾಃ
ಸ ಯತ್ರ ಕಾಂತೋ ಜವಲೋಲಕುಂಡಲಾಃ ॥ ೪ ॥

ಭಗವಂತನ ಈ ವೇಣುಗಾನವು ಭಗವತ್ ಪ್ರೇಮವನ್ನು, ಅವನನ್ನು ಸೇರುವ ಅಭಿಲಾಷೆಯನ್ನು ಅತ್ಯಂತ ಹೆಚ್ಚಿಸುವುದಾಗಿದೆ. ಶ್ಯಾಮಸುಂದರನು ಮೊದಲಿಂದಲೇ ಗೋಪಿಯರ ಮನಸ್ಸನ್ನು ತನ್ನ ವಶವಾಗಿಸಿಕೊಂಡಿದ್ದನು. ಈಗಲಾದರೋ ಅವರ ಮನಸ್ಸಿನ ಸಮಸ್ತ ವಸ್ತುಗಳನ್ನು - ಭಯ, ಸಂಕೋಚ, ಧೈರ್ಯ, ಮರ್ಯಾದೆ ಮುಂತಾದ ವೃತ್ತಿಗಳನ್ನು ಕಸಿದುಕೊಂಡಿದ್ದನು. ವೇಣುಗಾನವನ್ನು ಕೇಳುತ್ತಲೇ ಅವರ ಸ್ಥಿತಿ ವಿಚಿತ್ರವಾಗಿತ್ತು. ಶ್ರೀಕೃಷ್ಣನನ್ನು ಪತಿರೂಪದಿಂದ ಪಡೆಯಲು ಎಲ್ಲರೂ ಸೇರಿ ಸಾಧನೆ ಮಾಡಿದ್ದ ಗೋಪಿಯರು ಈಗ ಒಬ್ಬರು ಮತ್ತೊಬ್ಬರಿಗೆ ತಿಳಿಸದೆಯೇ, ಶ್ರೀಕೃಷ್ಣನ ಬಳಿಗೆ ಧಾವಿಸಿದರು. ಪರೀಕ್ಷಿತನೇ! ಅವರು ಆತುರತೆಯಿಂದ ಹೋಗುವಾಗ ಅವರು ಧರಿಸಿದ್ದ ಕರ್ಣಕುಂಡಲಗಳು ತಕ-ತಕನೆ ಕುಣಿಯುತ್ತಿದ್ದವು. ॥ ೪ ॥

ದುಹಂತ್ಯೋಽಭಿಯಯುಃ ಕಾಶ್ಚಿದ್
ದೋಹಂ ಹಿತ್ವಾ ಸಮುತ್ಸುಕಾಃ ।
ಪಯೋಽಧಿಶ್ರಿತ್ಯ ಸಂಯಾವ-
ಮನುದ್ವಾಸ್ಯಾಪರಾ ಯಯುಃ ॥ ೫ ॥

ಶ್ರೀಕೃಷ್ಣನ ಮನೋಹರವಾದ ವಂಶೀಧ್ವನಿಯನ್ನು ಕೇಳಿದ ಗೋಪಿಯರು ತಮ್ಮನ್ನು ತಾವೇ ಮರೆತುಬಿಟ್ಟರು. ಹಾಲು ಕರೆಯುತ್ತಿದ್ದವಳು ಅದನ್ನು ಬಿಟ್ಟು ಉತ್ಸುಕತೆಯಿಂದ ಹೊರಟುಬಿಟ್ಟಳು. ಒಲೆಯಮೇಲೆ ಹಾಲು ಕಾಯಿಸುತ್ತಿದ್ದವಳು ಹಾಲು ಉಕ್ಕಿ ಬಂದರೂ ಹಾಗೆಯೇ ಬಿಟ್ಟು ಹೊರಟಳು. ಅನ್ನಮಾಡುತ್ತಿದ್ದವಳು ಅದನ್ನು ಒಲೆಯಿಂದ ಇಳಿಸದೆಯೇ ಕೃಷ್ಣನ ಬಳಿಗೆ ಓಡಿದಳು. ॥ ೫ ॥

ಪರಿವೇಷಯಂತ್ಯಸ್ತದ್ಧಿತ್ವಾ ಪಾಯಯಂತ್ಯಃ ಶಿಶೂನ್ಪಯಃ ।
ಶುಶ್ರೂಷಂತ್ಯಃ ಪತೀನ್ಕಾಶ್ಚಿದಶ್ನಂತ್ಯೋಽಪಾಸ್ಯ ಭೋಜನಮ್ ॥ ೬ ॥

ಊಟ ಬಡಿಸುತ್ತಿದ್ದವಳು ಅದನ್ನು ಅಲ್ಲೆ ಬಿಟ್ಟು ಹೊರಟಳು. ಮಗುವಿಗೆ ಹಾಲು ಕುಡಿಸುತ್ತಿದ್ದವಳು ಮಗುವನ್ನು ಅಲ್ಲೇ ಬಿಟ್ಟು, ಪತಿಸೇವೆಯಲ್ಲಿ ತತ್ಪರಳಾಗಿದ್ದವಳು ಪತಿಯನ್ನು ಬಿಟ್ಟು, ಕೆಲವರು ಊಟಮಾಡುತ್ತಿದ್ದವರು ಊಟವನ್ನು ಬಿಟ್ಟು ಪ್ರಿಯತಮನಾದ ಶ್ರೀಕೃಷ್ಣನ ಬಳಿಗೆ ಧಾವಿಸಿದರು. ॥ ೬ ॥

ಲಿಂಪಂತ್ಯಃ ಪ್ರಮೃಜಂತ್ಯೋಽನ್ಯಾ ಅಂಜಂತ್ಯಃ ಕಾಶ್ಚ ಲೋಚನೇ ।
ವ್ಯತ್ಯಸ್ತವಸ್ತ್ರಾಭರಣಾಃ ಕಾಶ್ಚಿತ್ ಕೃಷ್ಣಾಂತಿಕಂ ಯಯುಃ ॥ ೭ ॥

ಕೆಲವರು ಅಂಗರಾಗವನ್ನು ಶರೀರಕ್ಕೆ ಪೂಸಿಕೊಳ್ಳುತ್ತಿದ್ದರು, ಕೆಲವರು ಕಣ್ಣಿಗೆ ಕಾಡಿಗೆ ಹಚ್ಚಿಕೊಳ್ಳುತ್ತಿದ್ದರು. ಕೆಲವರು ಅವಸರದಲ್ಲಿ ಸೀರೆಗಳನ್ನು, ಆಭರಣಗಳನ್ನು ತಲೆಕೆಳಗಾಗಿ ಧರಿಸಿಕೊಂಡು ಹಾಗೆಯೇ ಶ್ರೀಕೃಷ್ಣನ ಬಳಿಗೆ ಓಡಿದರು. ॥ ೭ ॥

ತಾ ವಾರ್ಯಮಾಣಾಃ ಪತಿಭಿಃ ಪಿತೃಭಿರ್ಭ್ರಾತೃಬಂಧುಭಿಃ ।
ಗೋವಿಂದಾಪಹೃತಾತ್ಮಾನೋ ನ ನ್ಯವರ್ತಂತ ಮೋಹಿತಾಃ ॥ ೮ ॥

ಅಂತರ್ಗೃಹಗತಾಃ ಕಾಶ್ಚಿದ್ಗೋಪ್ಯೋಽಲಬ್ಧವಿನಿರ್ಗಮಾಃ ।
ಕೃಷ್ಣಂ ತದ್ಭಾವನಾಯುಕ್ತಾ ದಧ್ಯುರ್ಮೀಲಿತಲೋಚನಾಃ ॥ ೯ ॥

ದುಃಸಹಪ್ರೇಷ್ಠವಿರಹತೀವ್ರತಾಪಧುತಾಶುಭಾಃ ।
ಧ್ಯಾನಪ್ರಾಪ್ತಾಚ್ಯುತಾಶ್ಲೇಷನಿರ್ವೃತ್ಯಾ ಕ್ಷೀಣಮಂಗಲಾಃ ॥ ೧೦ ॥

ತಮೇವ ಪರಮಾತ್ಮಾನಂ ಜಾರಬುದ್ಧ್ಯಾಪಿ ಸಂಗತಾಃ ।
ಜಹುರ್ಗುಣಮಯಂ ದೇಹಂ ಸದ್ಯಃ ಪ್ರಕ್ಷೀಣಬಂಧನಾಃ ॥ ೧೧ ॥

ರಾಜೋವಾಚ

ಕೃಷ್ಣಂ ವಿದುಃ ಪರಂ ಕಾಂತಂ ನ ತು ಬ್ರಹ್ಮತಯಾ ಮುನೇ ।
ಗುಣಪ್ರವಾಹೋಪರಮಸ್ತಾಸಾಂ ಗುಣಧಿಯಾಂ ಕಥಮ್ ॥ ೧೨ ॥

ಶ್ರೀಶುಕ ಉವಾಚ

ಉಕ್ತಂ ಪುರಸ್ತಾದೇತತ್ತೇ ಚೈದ್ಯಃ ಸಿದ್ಧಿಂ ಯಥಾ ಗತಃ ।
ದ್ವಿಷನ್ನಪಿ ಹೃಷೀಕೇಶಂ ಕಿಮುತಾಧೋಕ್ಷಜಪ್ರಿಯಾಃ ॥ ೧೩ ॥

ನೃಣಾಂ ನಿಃಶ್ರೇಯಸಾರ್ಥಾಯ ವ್ಯಕ್ತಿರ್ಭಗವತೋ ನೃಪ ।
ಅವ್ಯಯಸ್ಯಾಪ್ರಮೇಯಸ್ಯ ನಿರ್ಗುಣಸ್ಯ ಗುಣಾತ್ಮನಃ ॥ ೧೪ ॥

ಹೀಗೆ ಮನೆಯಿಂದ ಹೊರಟ ಗೋಪಿಯರನ್ನು ತಂದೆಯಂದಿರು, ಪತಿಗಳು, ಮೈದುನರು, ಬಂಧುಗಳು ತಡೆದೂ ಪ್ರಯೋಜನವಾಗಲಿಲ್ಲ. ಅವರ ಮಂಗಲಮಯ ಪ್ರೇಮಯಾತ್ರೆಯಲ್ಲಿ, ವಿಘ್ನವನ್ನೊಡ್ಡಿದರೂ ಅವರು ಅದನ್ನು ಲಕ್ಷಿಸಲೇ ಇಲ್ಲ. ಏಕೆಂದರೆ, ವಿಶ್ವವಿಮೋಹನ ಶ್ರೀಕೃಷ್ಣನು ಅವರ ಮನಸ್ಸು, ಪ್ರಾಣ, ಆತ್ಮ ಎಲ್ಲವನ್ನು ಅಪಹರಿಸಿ ಬಿಟ್ಟಿದ್ದನು. ॥ ೮ ॥ ಪರೀಕ್ಷಿತನೇ! ಆ ಸಮಯದಲ್ಲಿ ಕೆಲವು ಗೋಪಿಯರು ಮನೆಯೊಳಗೆ ಇದ್ದು ಹೊರಗೆ ಹೋಗಲು ಸಾಧ್ಯವಾಗದವರು ತಮ್ಮ ಕಂಗಳನ್ನು ಮುಚ್ಚಿ ಅತ್ಯಂತ ತನ್ಮಯತೆಯಿಂದ ಶ್ರೀಕೃಷ್ಣನ ಸೌಂದರ್ಯ, ಮಾಧುರ್ಯ ಹಾಗೂ ಅವನ ಲೀಲೆಗಳನ್ನು ಚಿಂತಿಸುತ್ತಾ ಧ್ಯಾನಮಗ್ನರಾದರು. ॥ ೯ ॥ ದುಃಸಹವಾದ, ತೀವ್ರವಾದ ವಿರಹವೇದನೆಯ ಅನುಭವದಿಂದಾಗಿ ಆ ಗೋಪಿಕೆಯರಲ್ಲಿದ್ದ ಪಾಪವು ನಿರಸನವಾಯಿತು. ಅನವರತವಾದ ಧ್ಯಾನದಿಂದಾಗಿ ಹೃತ್ಕಮಲದಲ್ಲಿ ಕಾಣಿಸಿಕೊಂಡ ಮನೋಹರವಾದ ಶ್ರೀಕೃಷ್ಣನ ಗಾಢಾಲಿಂಗನದ ಸುಖದಿಂದಾಗಿ ಅವರಲ್ಲಿದ್ದ ಪುಣ್ಯವೂ ಕೂಡ ಕ್ಷೀಣಿಸಿತು. ॥ ೧೦ ॥ ಪರೀಕ್ಷಿತನೇ! ಆ ಸಮಯದಲ್ಲಿ ಅವರಲ್ಲಿ ಜಾರಭಾವವಿದ್ದರೂ ಅವರು ದೇವ ದೇವನಾದ ನಿರ್ವಿಕಾರನಾದ ಪರಮಾತ್ಮನನ್ನೇ ಆಲಿಂಗಿಸಿಕೊಂಡ ಕಾರಣ, ಪಾಪ-ಪುಣ್ಯಗಳ ಪರಿಣಾಮದಿಂದ ಪ್ರಾಪ್ತವಾದ ಗುಣಮಯ ದೇಹವನ್ನು ತೊರೆದು ಅಪ್ರಾಕೃತವಾದ ಶರೀರಗಳನ್ನು ಪಡೆದುಕೊಂಡರು. ಅಥವಾ ಶ್ರೀಕೃಷ್ಣನಲ್ಲೇ ಸೇರಿ ಹೋದರು. ಭಗವಂತನ ದಿವ್ಯಾಲಿಂಗನವನ್ನು ಪಡೆದುಕೊಂಡೊಡನೇ ಅವರ ಕರ್ಮಬಂಧನಗಳೆಲ್ಲವೂ ಕಳಚಿ ಬಿದ್ದು ಹೋಗಿದ್ದುವು. ॥ ೧೧ ॥

ಪರೀಕ್ಷಿದ್ರಾಜನು ಕೇಳಿದನು - ಶುಕಮುನಿಗಳೇ! ಗೋಪಿಕೆಯರಾದರೋ ಭಗವಾನ್ ಶ್ರೀಕೃಷ್ಣನನ್ನು ಕೇವಲ ತಮ್ಮ ಪರಮ ಪ್ರಿಯತಮನೆಂದೇ ಭಾವಿಸಿದ್ದರು. ಅವನಲ್ಲಿ ಅವರಿಗೆ ಬ್ರಹ್ಮಭಾವವೇನೋ ಇರಲಿಲ್ಲ. ಹೀಗೆ ಅವರ ದೃಷ್ಟಿಯು ಪ್ರಾಕೃತ ಗುಣಗಳಲ್ಲಿಯೇ ಆಸಕ್ತವಾದಂತೆ ಕಾಣುತ್ತಿತ್ತು. ಇಂತಹ ಸ್ಥಿತಿಯಲ್ಲಿ ಅವರಿಗೆ ಗುಣ ಪ್ರವಾಹರೂಪವಾದ ಈ ಸಂಸಾರದ ನಿವೃತ್ತಿ ಹೇಗೆ ಸಂಭವಿಸಿತು? ॥ ೧೨ ॥

ಶ್ರೀಶುಕಮಹಾಮುನಿಗಳು ಹೇಳಿದರು - ಪರೀಕ್ಷಿತನೇ! ಚೇದಿರಾಜನಾದ ಶಿಶುಪಾಲನು ಹೃಷೀಕೇಶನನ್ನು ದ್ವೇಷಿಸುತ್ತಿದ್ದರೂ ದ್ವೇಷರೂಪವಾದ ಶ್ರೀಕೃಷ್ಣತಾದಾತ್ಮ್ಯದಿಂದ ಅವನು ಪ್ರಾಕೃತ ಶರೀರವನ್ನು ತೊರೆದು ಅಪ್ರಾಕೃತ ಶರೀರವನ್ನು ಪಡೆದು ಭಗವಂತನ ಪಾರ್ಷದನಾದನೆಂದು ನಾನು ಮೊದಲೇ ನಿನಗೆ ಹೇಳಿಬಿಟ್ಟಿದ್ದೇನೆ. ಹೀಗಿರುವಾಗ ನಿರಂತರವಾಗಿ ಅನಿರ್ವಾಚ್ಯವಾದ ಪ್ರೇಮದಿಂದ ಶ್ರೀಕೃಷ್ಣನನ್ನು ಆರಾಧಿಸುತ್ತಿದ್ದ ಗೋಪಿಯರ ಕುರಿತು ಹೇಳುವುದೇನಿದೆ? ॥ ೧೩ ॥ ವಾಸ್ತವವಾಗಿ ಭಗವಂತನು ವೃದ್ಧಿ-ವಿನಾಶ, ಪ್ರಮಾಣ-ಪ್ರಮೇಯ, ಗುಣ-ಗುಣಿ ಮುಂತಾದ ಪ್ರಕೃತಿ ಸಂಬಂಧೀ ಭಾವಗಳಿಂದ ರಹಿತನಾಗಿದ್ದಾನೆ. ಅವನು ಅಚಿಂತ್ಯನೂ, ಅನಂತನೂ, ಅಪ್ರಾಕೃತನೂ, ಪರಮಕಲ್ಯಾಣ ಸ್ವರೂಪನೂ, ತ್ರಿಗುಣಾತೀತನೂ ಆಗಿದ್ದು ಕಲ್ಯಾಣಗುಣಗಳಿಗೆ ಏಕಮಾತ್ರ ಆಶ್ರಯನಾಗಿದ್ದಾನೆ. ಭಗವಂತನ ಅವತಾರವೂ ಕೇವಲ ಮನುಷ್ಯರ ಕಲ್ಯಾಣ ಸಾಧನೆಗಾಗಿಯೇ ಆಗಿದೆ. ॥ ೧೪ ॥

ಕಾಮಂ ಕ್ರೋಧಂ ಭಯಂ ಸ್ನೇಹಮೈಕ್ಯಂ ಸೌಹೃದಮೇವ ಚ ।
ನಿತ್ಯಂ ಹರೌ ವಿದಧತೋ ಯಾಂತಿ ತನ್ಮಯತಾಂ ಹಿ ತೇ
॥ ೧೫ ॥

ನ ಚೈವಂ ವಿಸ್ಮಯಃ ಕಾರ್ಯೋ ಭವತಾ ಭಗವತ್ಯಜೇ ।
ಯೋಗೇಶ್ವರೇಶ್ವರೇ ಕೃಷ್ಣೇ ಯತ ಏತದ್ವಿಮುಚ್ಯತೇ
॥ ೧೬ ॥

ತಾ ದೃಷ್ಟ್ವಾಂತಿಕಮಾಯಾತಾ ಭಗವಾನ್ ವ್ರಜಯೋಷಿತಃ ।
ಅವದದ್ವದತಾಂ ಶ್ರೇಷ್ಠೋ ವಾಚಃ ಪೇಶೈರ್ವಿಮೋಹಯನ್
॥ ೧೭ ॥

ಶ್ರೀಭಗವಾನುವಾಚ

ಸ್ವಾಗತಂ ವೋ ಮಹಾಭಾಗಾಃ ಪ್ರಿಯಂ ಕಿಂ ಕರವಾಣಿ ವಃ ।
ವ್ರಜಸ್ಯಾನಾಮಯಂ ಕಚ್ಚಿದ್ ಬ್ರೂತಾಗಮನಕಾರಣಮ್
॥ ೧೮ ॥

ರಜನ್ಯೇಷಾ ಘೋರರೂಪಾ ಘೋರಸತ್ತ್ವನಿಷೇವಿತಾ ।
ಪ್ರತಿಯಾತ ವ್ರಜಂ ನೇಹ ಸ್ಥೇಯಂ ಸ್ತ್ರೀಭಿಃ ಸುಮಧ್ಯಮಾಃ
॥ ೧೯ ॥

ಮಾತರಃ ಪಿತರಃ ಪುತ್ರಾ ಭ್ರಾತರಃ ಪತಯಶ್ಚ ವಃ ।
ವಿಚಿನ್ವಂತಿ ಹ್ಯಪಶ್ಯಂತೋ ಮಾ ಕೃಢ್ವಂ ಬಂಧುಸಾಧ್ವಸಮ್
॥ ೨೦ ॥

ದೃಷ್ಟಂ ವನಂ ಕುಸುಮಿತಂ ರಾಕೇಶಕರರಂಜಿತಮ್ ।
ಯಮುನಾನಿಲಲೀಲೈಜತ್ತರುಪಲ್ಲವಶೋಭಿತಮ್
॥ ೨೧ ॥

ತದ್ಯಾತ ಮಾ ಚಿರಂ ಗೋಷ್ಠಂ ಶುಶ್ರೂಷಧ್ವಂ ಪತೀನ್ ಸತೀಃ ।
ಕ್ರಂದಂತಿ ವತ್ಸಾ ಬಾಲಾಶ್ಚ ತಾನ್ಪಾಯಯತ ದುಹ್ಯತ
॥ ೨೨ ॥

ಅದಕ್ಕಾಗಿ ಭಗವಂತನೊಂದಿಗೆ ಕೇವಲ ಸಂಬಂಧ ಉಂಟಾಗಬೇಕು. ಆ ಸಂಬಂಧವು ಬೇಕಾದರೆ ಕಾಮದಿಂದಾಗಲೀ, ಕ್ರೋಧದಿಂದಾಗಲೀ, ಭಯದಿಂದಾಗಲೀ, ಸ್ನೇಹದಿಂದಾಗಲಿ, ಸೌಹಾರ್ದದಿಂದಾಗಲಿ ಬಯಸಿದ ಯಾವುದೇ ಭಾವದಿಂದ ಭಗವಂತನಲ್ಲಿ ನಿತ್ಯ ನಿರಂತರ ತಮ್ಮ ವೃತ್ತಿಗಳನ್ನು ನೆಲೆಗೊಳಿಸಿದಾಗ ಅವರು ಭಗವಂತನಲ್ಲಿ ಒಂದಾಗುತ್ತಾರೆ. ಇದರಿಂದ ವೃತ್ತಿಗಳು ಭಗವನ್ಮಯವಾಗಿ ಹೋಗುತ್ತವೆ ಮತ್ತು ಆ ಜೀವನಿಗೆ ಭಗವಂತನು ದೊರೆಯುತ್ತಾನೆ. ॥ ೧೫ ॥ ಪರೀಕ್ಷಿತನೇ! ಪರಮಭಾಗವತನಾದ, ಭಗವದ್ರಹಸ್ಯವನ್ನು ಸಂಪೂರ್ಣವಾಗಿ ತಿಳಿದಿರುವ ಭಕ್ತಶ್ರೇಷ್ಠನಾದ ನಿನ್ನಂತಹವನು ಶ್ರೀಕೃಷ್ಣನ ಸಂಬಂಧವಾಗಿ ಹೀಗೆ ಸಂದೇಹ ಪಡಬಾರದು. ಯೋಗೇಶ್ವರರಿಗೂ ಈಶ್ವರನಾದ, ಅಜನ್ಮಾ ಭಗವಂತನಿಗೆ ಇದು ಆಶ್ಚರ್ಯದ ಮಾತಾಗಿದೆಯೇ? ಅಯ್ಯಾ! ಅವನ ಸಂಕಲ್ಪಮಾತ್ರದಿಂದ, ಇಡೀ ಜಗತ್ತಿನ ಪರಮಕಲ್ಯಾಣವಾಗಬಲ್ಲದು. ॥ ೧೬ ॥ ವ್ರಜದ ಅನುಪಮ ವಿಭೂತಿಗಳಾದ ಗೋಪಿಯರು ತನ್ನ ಬಳಿಗೆ ಬಂದಿರುವರೆಂದು ಶ್ರೀಕೃಷ್ಣನು ನೋಡಿದಾಗ, ಅವನು ವಿನೋದದಿಂದ ತುಂಬಿದ ವಾಕ್ಚಾತುರ್ಯದಿಂದ ಅವರನ್ನು ವಿಮೋಹಗೊಳಿಸುತ್ತಾ ಇಂತೆಂದನು. ॥ ೧೭ ॥

ಭಗವಾನ್ ಶ್ರೀಕೃಷ್ಣನು ಹೇಳಿದನು – ಮಹಾ ಭಾಗ್ಯಶಾಲಿಯರಾದ ಗೋಪಿಯರೇ! ನಿಮಗೆ ಸ್ವಾಗತ ಬಯಸುತ್ತೇನೆ. ನಿಮಗೆ ಪ್ರಿಯವಾದ ಯಾವ ಕೆಲಸವನ್ನು ಮಾಡಿಕೊಡಲಿ? ವ್ರಜದಲ್ಲಿ ಎಲ್ಲರೂ ಕುಶಲಿಗಳಾಗಿದ್ದಾರಲ್ಲ? ನಿಮ್ಮ ಆಗಮನದ ಕಾರಣವೇನು? ಹೇಳಿರಿ. ॥ ೧೮ ॥ ಸುಂದರಿಯರಾದ ಗೋಪಿಯರೇ! ಇದು ಭಯಾನಕ ರಾತ್ರಿಯಾಗಿದೆ. ಭಯಂಕರವಾದ ಪ್ರಾಣಿಗಳು ಈ ಅರಣ್ಯದಲ್ಲಿ ಸಂಚರಿಸುತ್ತವೆ. ಹೀಗಿರುವಾಗ ಹೆಂಗಸರಾದ ನೀವು ಇಲ್ಲಿರುವುದು ಸರಿಯಲ್ಲ. ನೀವೆಲ್ಲರೂ ಈಗಲೇ ವ್ರಜಕ್ಕೆ ಹಿಂದಿರುಗಿರಿ. ॥ ೧೯ ॥ ನಿಮ್ಮನ್ನು ಕಾಣದೆ ನಿಮ್ಮ ತಂದೆ-ತಾಯಿಯರು, ಸಹೋದರರು, ಪತಿಗಳು, ಪುತ್ರರು ಎಲ್ಲರೂ ನಿಮ್ಮನ್ನು ಹುಡುಕುತ್ತಿರಬಹುದು. ಅವರಿಗೆ ಭಯವುಂಟಾಗುವಂತೆ ಮಾಡಿಸಬೇಡಿ. ॥ ೨೦ ॥ ನೀವು ಇಲ್ಲಿಗೆ ಬಂದು ಚಂದ್ರನ ಬೆಳದಿಂಗಳಿಂದ ಪ್ರಕಾಶಮಾನವಾಗಿ ಕಾಣುತ್ತಿರುವ ವಿಕಸಿತವಾದ ಘಮ-ಘಮಿಸುವ ಪುಷ್ಪಗಳಿಂದ ಕೂಡಿದ ವೃಂದಾವನನ್ನು ನೋಡಿದಿರಿ. ಯಮುನೆಯ ಮೇಲಿನಿಂದ ಬೀಸಿ ಬರುವ ತಂಗಾಳಿಯಿಂದ ಅಲುಗಾಡುವ ವೃಕ್ಷಗಳ ಚಿಗುರುಗಳಿಂದ ಈ ವೃಂದಾವನದ ವನಸಿರಿಯನ್ನು ನೋಡಿ ಆನಂದಿಸಿದಿರಿ. ನಿಮ್ಮ ಆಗಮನವೇನೂ ವ್ಯರ್ಥವಾಗಲಿಲ್ಲ, ನೀವಿನ್ನು ಹೋಗಬಹುದು. ॥ ೨೧ ॥ ನೀವೀಗಲೇ ತಡಮಾಡದೆ ವ್ರಜಕ್ಕೆ ಹೊರಡಿರಿ. ಸತೀಧರ್ಮವನ್ನು ಅನುಸರಿಸಿ ನಿಮ್ಮ ಪತಿಗಳ ಸೇವೆ-ಶುಶ್ರೂಷೆ ಮಾಡಿರಿ. ಮನೆಯಲ್ಲಿ ಮಕ್ಕಳು ಹಾಲಿಗಾಗಿ ಅಳುತ್ತಿರುವರು. ಕರುಗಳೂ ಕೂಡ 'ಹಂಬಾ' ಎಂದು ಕೂಗಿಕೊಳ್ಳುತ್ತಿವೆ. ಕರುಗಳನ್ನು ಹಾಲುಣಲು ಬಿಟ್ಟು ಹಸುಗಳನ್ನು ಕರೆಯಿರಿ. ನಿಮ್ಮ ಮಕ್ಕಳಿಗೆ ಹಾಲುಣಿಸಿ ಮಲಗಿಸಿರಿ. ॥ ೨೨ ॥

ಅಥವಾ ಮದಭಿಸ್ನೇಹಾದ್ಭವತ್ಯೋ ಯಂತ್ರಿತಾಶಯಾಃ ।
ಆಗತಾ ಹ್ಯುಪಪನ್ನಂ ವಃ ಪ್ರೀಯಂತೇ ಮಯಿ ಜಂತವಃ ॥ ೨೩ ॥

ಭರ್ತುಃ ಶುಶ್ರೂಷಣಂ ಸ್ತ್ರೀಣಾಂ
ಪರೋ ಧರ್ಮೋ ಹ್ಯಮಾಯಯಾ ।
ತದ್ಬಂಧೂನಾಂ ಚ ಕಲ್ಯಾಣ್ಯಃ
ಪ್ರಜಾನಾಂ ಚಾನುಪೋಷಣಮ್ ॥ ೨೪ ॥

ದುಃಶೀಲೋ ದುರ್ಭಗೋ ವೃದ್ಧೋ
ಜಡೋ ರೋಗ್ಯಧನೋಽಪಿ ವಾ ।
ಪತಿಃ ಸ್ತ್ರೀಭಿರ್ನ ಹಾತವ್ಯೋ
ಲೋಕೇಪ್ಸುಭಿರಪಾತಕೀ ॥ ೨೫ ॥

ಅಸ್ವರ್ಗ್ಯಮಯಶಸ್ಯಂ ಚ ಫಲ್ಗು ಕೃಚ್ಛ್ರಂ ಭಯಾವಹಮ್ ।
ಜುಗುಪ್ಸಿತಂ ಚ ಸರ್ವತ್ರ ಔಪಪತ್ಯಂ ಕುಲಸ್ತ್ರಿಯಾಃ ॥ ೨೬ ॥

ಶ್ರವಣಾದ್ದರ್ಶನಾದ್ಧ್ಯಾನಾನ್ಮಯಿ ಭಾವೋಽನುಕೀರ್ತನಾತ್ ।
ನ ತಥಾ ಸನ್ನಿಕರ್ಷೇಣ ಪ್ರತಿಯಾತ ತತೋ ಗೃಹಾನ್ ॥ ೨೭ ॥

ಶ್ರೀಶುಕ ಉವಾಚ

ಇತಿ ವಿಪ್ರಿಯಮಾಕರ್ಣ್ಯ ಗೋಪ್ಯೋ ಗೋವಿಂದಭಾಷಿತಮ್ ।
ವಿಷಣ್ಣಾ ಭಗ್ನಸಂಕಲ್ಪಾಶ್ಚಿಂತಾಮಾಪುರ್ದುರತ್ಯಯಾಮ್ ॥ ೨೮ ॥

ಕೃತ್ವಾ ಮುಖಾನ್ಯವ ಶುಚಃ ಶ್ವಸನೇನ ಶುಷ್ಯದ್-
ಬಿಂಬಾಧರಾಣಿ ಚರಣೇನ ಭುವಂ ಲಿಖಂತ್ಯಃ ।
ಅಸ್ರೈರುಪಾತ್ತಮಷಿಭಿಃ ಕುಚಕುಂಕುಮಾನಿ
ತಸ್ಥುರ್ಮೃಜಂತ್ಯ ಉರುದುಃಖಭರಾಃ ಸ್ಮ ತೂಷ್ಣೀಮ್ ॥ ೨೯ ॥

ನನ್ನ ಮೇಲಿನ ಪ್ರೇಮದಿಂದ ಆಕರ್ಷಿಸಲ್ಪಟ್ಟವರಾಗಿ ನೀವೇನಾದರೂ ಇಲ್ಲಿಗೆ ಬಂದಿದ್ದರೆ ಅದೂ ಕೂಡ ಸಮಂಜಸವೇ ಆಗಿದೆ. ಏಕೆಂದರೆ, ಎಲ್ಲರಿಗೆ ಆತ್ಮಸ್ವರೂಪನಾದ ನನ್ನನ್ನು ಎಲ್ಲ ಪ್ರಾಣಿಗಳೂ ಸ್ವಾಭಾವಿಕವಾಗಿಯೇ ಪ್ರೀತಿಸುತ್ತವೆ. ನನ್ನನ್ನು ನೋಡಿ ಪ್ರಸನ್ನರಾಗುತ್ತವೆ. ॥ ೨೩ ॥ ಮಂಗಳಾಂಗಿಯರೇ! ನಿರ್ವಂಚನೆಯಿಂದ ಪತಿಸೇವೆ ಮಾಡುವುದು, ಬಂಧುಗಳನ್ನು ಸಮಾಧಾನಿಸುವುದು, ಸಂತಾನದ ಪಾಲನೆ-ಪೋಷಣೆ ಮಾಡುವುದು ಸ್ತ್ರೀಯರ ಪರಮ ಧರ್ಮವಾಗಿದೆ. ॥ ೨೪ ॥ ಉತ್ತಮ ಲೋಕವನ್ನು ಪಡೆಯುವ ಅಭಿಲಾಷೆಯುಳ್ಳ ಸಾಧ್ವಿಯು ಪಾತಕಿಯಾದವನನ್ನು ಬಿಟ್ಟು ಬೇರೆ ಯಾವುದೇ ರೀತಿಯ ಪತಿಯನ್ನು ಪರಿತ್ಯಾಗಮಾಡಬಾರದು. ಅವನು ಬೇಕಾದರೆ ಕೆಟ್ಟಸ್ವಭಾವದವನಾಗಿರಲೀ, ದುರ್ಭಾಗ್ಯನಾಗಿರಲಿ, ಮುದುಕನಾಗಿರಲೀ, ಜಡನಾಗಿರಲೀ, ದರಿದ್ರನಾಗಿರಲಿ, ರೋಗಿಯಾಗಿರಲಿ ಅವನನ್ನು ತ್ಯಜಿಸಬಾರದು. ॥ ೨೫ ॥ ಕುಲೀನ ಸ್ತ್ರೀಯರಿಗೆ ಜಾರಪುರುಷನ ಸಮಾಗಮವು ಸರ್ವವಿಧದಿಂದಲೂ ನಿಂದನೀಯವಾಗಿದೆ. ಇದರಿಂದ ಅವರ ಪರಲೋಕವು ಕೆಡುವುದು, ಸ್ವರ್ಗವೂ ಸಿಗುವುದಿಲ್ಲ, ಈ ಲೋಕದಲ್ಲಿಯೂ ಅಪಕೀರ್ತಿಯುಂಟಾಗುತ್ತದೆ. ಈ ಕೆಟ್ಟಕೆಲಸವಂತೂ ಅತ್ಯಂತ ತುಚ್ಛವೂ, ನಿಂದನೀಯವೂ ಆಗಿದೆ. ಇದರಿಂದ ವರ್ತಮಾನದಲ್ಲಿ ಕಷ್ಟಗಳೇ ಇದ್ದು, ಎಲ್ಲರಿಗೆ ಭಯಪಡಬೇಕಾಗುತ್ತದೆ. ಕುಲೀನ ಸ್ತ್ರೀಯರಿಗೆ ಇದು ಅತ್ಯಂತ ನೀಚಕಾರ್ಯವಾಗಿದೆ. ನರಕಕ್ಕೆ ಕಾರಣವಾಗಿದೆ. ॥ ೨೬ ॥ ಗೋಪಿಯರೇ! ನನ್ನ ಲೀಲಾ-ಗುಣಗಳ ಶ್ರವಣದಿಂದ ಕೀರ್ತನದಿಂದ, ನನ್ನ ದರ್ಶನದಿಂದ ಮತ್ತು ನನ್ನ ಶ್ರೀವಿಗ್ರಹದ ಧ್ಯಾನದಿಂದ ಉಂಟಾಗುವ ಅನನ್ಯ ಪ್ರೇಮವು, ಬಳಿಯಲ್ಲಿ ಇರುವುದರಿಂದ ದೊರೆಯುವುದಿಲ್ಲ. ಅದಕ್ಕಾಗಿ ನೀವೆಲ್ಲರೂ ಶೀಘ್ರವಾಗಿ ನಿಮ್ಮ-ನಿಮ್ಮ ಮನೆಗಳಿಗೆ ಮರಳಿ ಹೋಗಿರಿ. ॥ ೨೭ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ - ಪರೀಕ್ಷಿತನೇ! ಭಗವಾನ್ ಶ್ರೀಕೃಷ್ಣನ ಇಂತಹ ಅಪ್ರಿಯವಾದ ಮಾತನ್ನು ಕೇಳಿದ ಗೋಪಿಯರಿಗೆ ಅಪಾರವೇ ಖೇದ ಉಂಟಾಯಿತು. ಅವರ ಆಸೆ-ಆಕಾಂಕ್ಷೆಗಳೆಲ್ಲ ನುಚ್ಚು ನೂರಾದವು. ಅವರು ದುಃಖಿತರಾದರು. ದಾಟಲಶಕ್ಯವಾದ ಚಿಂತಾಸಮುದ್ರದಲ್ಲಿ ಮುಳುಗಿಹೋದರು. ॥ ೨೮ ॥ ವಿರಹ ದುಃಖದಿಂದಾಗಿ ಗೋಪಿಯರು ತಲೆತಗ್ಗಿಸಿಕೊಂಡು ನಿಟ್ಟುಸಿರು ಬಿಡುತ್ತಿದ್ದರು. ಆ ನಿಟ್ಟುಸಿರಿನ ಬಿಸಿಯಿಂದಾಗಿ ತೊಂಡೆಯಂತೆ ಇದ್ದ ಅವರ ಕೆಂದುಟಿಗಳು ಒಣಗಿಹೋದುವು. ಮುಂದುಗಾಣದೆ ಕಾಲುಗುರುಗಳಿಂದ ಭೂಮಿಯನ್ನು ಕೆರೆಯುತ್ತಿದ್ದರು. ಕಂಗಳಿಂದ ದುಃಖಾಶ್ರುಗಳು ಹರಿದು ಕಾಡಿಗೆಯೊಂದಿಗೆ ಕುಚಮಂಡಲದಲ್ಲಿ ಲೇಪಿತವಾಗಿದ್ದ ಕುಂಕುಮ ಕೇಸರಿಯು ತೊಳೆದುಹೋಯಿತು. ದುಃಖ ಆವೇಗದಿಂದ ಗಂಟಲು ಕಟ್ಟಿ ಯಾವ ಮಾತನ್ನು ಆಡಲಾಗದೆ ಮೌನವಾಗಿ ನಿಂತುಬಿಟ್ಟರು. ॥ ೨೯ ॥ ಗೋಪಿಯರು ತಮ್ಮ ಪ್ರಿಯ ಶ್ಯಾಮಸುಂದರನಿಗಾಗಿ ಸಮಸ್ತ ಕಾಮನೆಗಳನ್ನು, ಭೋಗಗಳನ್ನು ಬಿಟ್ಟುಬಿಟ್ಟಿದ್ದರು. ಶ್ರೀಕೃಷ್ಣನಲ್ಲಿ ಅವರಿಗೆ ಅತ್ಯಂತ ಅನುರಾಗ, ಪರಮಪ್ರೇಮವಿತ್ತು. ತಮ್ಮ ಪ್ರಿಯತಮನಾದ

ಪ್ರೇಷ್ಠಂ ಪ್ರಿಯೇತರಮಿವ ಪ್ರತಿಭಾಷಮಾಣಂ
ಕೃಷ್ಣಂ ತದರ್ಥವಿನಿವರ್ತಿತಸರ್ವಕಾಮಾಃ ।
ನೇತ್ರೇ ವಿಮೃಜ್ಯ ರುದಿತೋಪಹತೇ ಸ್ಮ ಕಿಂಚಿತ್-
ಸಂರಂಭಗದ್ಗದಗಿರೋಽಬ್ರುವತಾನುರಕ್ತಾಃ ॥ ೩೦ ॥

ಗೋಪ್ಯ ಊಚುಃ

ಮೈವಂ ವಿಭೋಽರ್ಹತಿ ಭವಾನ್ಗದಿತುಂ ನೃಶಂಸಂ
ಸಂತ್ಯಜ್ಯ ಸರ್ವವಿಷಯಾಂಸ್ತವ ಪಾದಮೂಲಮ್ ।
ಭಕ್ತಾ ಭಜಸ್ವ ದುರವಗ್ರಹ ಮಾ ತ್ಯಜಾಸ್ಮಾನ್
ದೇವೋ ಯಥಾಽಽದಿಪುರುಷೋ ಭಜತೇ ಮುಮುಕ್ಷೂನ್ ॥ ೩೧ ॥

ಯತ್ಪತ್ಯಪತ್ಯಸುಹೃದಾಮನುವೃತ್ತಿರಂಗ
ಸ್ತ್ರೀಣಾಂ ಸ್ವಧರ್ಮ ಇತಿ ಧರ್ಮವಿದಾ ತ್ವಯೋಕ್ತಮ್ ।
ಅಸ್ತ್ವೇವಮೇತದುಪದೇಶಪದೇ ತ್ವಯೀಶೇ
ಪ್ರೇಷ್ಠೋ ಭವಾಂಸ್ತನುಭೃತಾಂ ಕಿಲ ಬಂಧುರಾತ್ಮಾ ॥ ೩೨ ॥

ಕುರ್ವಂತಿ ಹಿ ತ್ವಯಿ ರತಿಂ ಕುಶಲಾಃ ಸ್ವ ಆತ್ಮನ್
ನಿತ್ಯಪ್ರಿಯೇ ಪತಿಸುತಾದಿಭಿರಾರ್ತಿದೈಃ ಕಿಮ್ ।
ತನ್ನಃ ಪ್ರಸೀದ ಪರಮೇಶ್ವರ ಮಾ ಸ್ಮ ಛಿಂದ್ಯಾ
ಆಶಾಂ ಭೃತಾಂ ತ್ವಯಿ ಚಿರಾದರವಿಂದನೇತ್ರ ॥ ೩೩ ॥

ಚಿತ್ತಂ ಸುಖೇನ ಭವತಾಪಹೃತಂ ಗೃಹೇಷು
ಯನ್ನಿರ್ವಿಶತ್ಯುತ ಕರಾವಪಿ ಗೃಹ್ಯಕೃತ್ಯೇ ।
ಪಾದೌ ಪದಂ ನ ಚಲತಸ್ತವ ಪಾದಮೂಲಾದ್
ಯಾಮಃ ಕಥಂ ವ್ರಜಮಥೋ ಕರವಾಮ ಕಿಂ ವಾ ॥ ೩೪ ॥

ಶ್ರೀಕೃಷ್ಣನ ಇಂತಹ ನಿಷ್ಠುರವಾದ, ಅಪ್ರಿಯವಾಗಿರುವ ಮಾತನ್ನು ಕೇಳಿದಾಗ ಅವರಿಗೆ ಅತ್ಯಂತ ದುಃಖವಾಯಿತು. ಅಳುತ್ತಾ-ಅಳುತ್ತಾ ಕಣ್ಣುಗಳು ಕೆಂಪಾದವು ನೀರು ತುಂಬಿ ಮಂಜಾದವು. ಕೊನೆಗೆ ಅವರು ಧೈರ್ಯತಂದುಕೊಂಡು ಕಣ್ಣೀರನ್ನು ಒರೆಸಿಕೊಂಡು, ಪ್ರಣಯಕೋಪದಿಂದ ಗದ್ಗದ ಧ್ವನಿಯಿಂದ ಹೇಳತೊಡಗಿದರು. ॥ ೩೦ ॥

ಗೋಪಿಯರು ಹೇಳಿದರು - ಪ್ರಾಣವಲ್ಲಭನೇ! ಇಂತಹ ನಿಷ್ಠುರವಾದ ಮಾತುಗಳನ್ನಾಡುವುದು ನಿನಗೆ ಉಚಿತವಾಗಿ ಕಾಣುವುದಿಲ್ಲ. ನಮ್ಮದೆಂದು ಭಾವಿಸುವ ಸರ್ವಸ್ವವನ್ನು ಪರಿತ್ಯಜಿಸಿ ನಿನ್ನ ಪಾದಮೂಲವನ್ನು ಸೇರಿದ್ದೇವೆ. ಸರ್ವತಂತ್ರ ಸ್ವತಂತ್ರನೇ! ನಮ್ಮನ್ನು ತ್ಯಜಿಸಬೇಡ. ಆದಿ ಪುರುಷನಾದ ನಾರಾಯಣನು ಮೋಕ್ಷಾಪೇಕ್ಷಿಗಳಾದ ಭಕ್ತರನ್ನು ಪರಿಪಾಲಿಸುವಂತೆ ಭಕ್ತರಾದ ನಮ್ಮನ್ನು ಪರಿಗ್ರಹಿಸಿ ಪಾಲಿಸು. ॥ ೩೧॥ ಪ್ರಾಣಪ್ರಿಯನೇ! ನೀನು ಸಮಸ್ತ ಧರ್ಮಗಳ ರಹಸ್ಯವನ್ನು ಬಲ್ಲವನಾಗಿರುವೆ. 'ತನ್ನ ಪತಿ-ಪುತ್ರ, ಬಂಧು-ಬಾಂಧವರ ಸೇವೆ ಮಾಡುವುದೇ ಸ್ತ್ರೀಯರ ಸ್ವಧರ್ಮವಾಗಿದೆ' ಎಂದು ನೀನು ಹೇಳಿರುವುದು ಅಕ್ಷರಶಃ ಸರಿಯಾಗಿದೆ. ಆದರೆ ಈ ಉಪದೇಶಕ್ಕೆ ಅನುಸಾರ ನಮಗೆ ನಿನ್ನ ಸೇವೆಮಾಡುವುದೇ ಸೂಕ್ತವಾಗಿದೆ. ಏಕೆಂದರೆ, ನೀನೇ ಎಲ್ಲ ಉಪದೇಶಗಳ ಪರಮ ಲಕ್ಷ್ಯವಾಗಿರುವೆ, ಸಾಕ್ಷಾತ್ ಭಗವಂತನೇ ಆಗಿರುವೆ. ನೀನೇ ಸಮಸ್ತ ಶರೀರಧಾರಿಗಳ ಸುಹೃದನೂ, ಆತ್ಮನೂ ಆಗಿರುವೆ ಮತ್ತು ಪರಮ ಪ್ರಿಯತಮನೂ ಆಗಿರುವೆ. ॥ ೩೨ ॥ ಆತ್ಮಜ್ಞಾನದಲ್ಲಿ ನಿಪುಣರಾದ ಮಹಾಪುರುಷರು ನಿನ್ನನ್ನೇ ಪ್ರೇಮಿಸುತ್ತಿರುವರು. ಏಕೆಂದರೆ, ನೀನು ನಿತ್ಯ ಪ್ರಿಯನೂ, ತಮ್ಮ ಆತ್ಮನೇ ಆಗಿರುವೆ. ಅನಿತ್ಯವಾದ, ದುಃಖಕೊಡುವಂತಹ ಪತಿ-ಪುತ್ರರಿಂದ ಏನು ಪ್ರಯೋಜನ? ಪರಮೇಶ್ವರನೇ! ನಮ್ಮ ಮೇಲೆ ಪ್ರಸನ್ನನಾಗು, ಕೃಪೆ ದೋರು. ಕಮಲನಯನಾ! ಬಹಳ ಕಾಲದಿಂದಲೂ ನಿನ್ನಲ್ಲಿಟ್ಟಿರುವ ಸುಕೋಮಲವಾದ ಆಶಾಲತೆಯನ್ನು ಕತ್ತರಿಸಿ ಹಾಕಬೇಡ. ॥ ೩೩ ॥ ಮನಮೋಹನ! ಇದುವರೆಗೂ ನಮ್ಮ ಚಿತ್ತವು ಗೃಹಕೃತ್ಯದಲ್ಲೇ ತೊಡಗಿತ್ತು. ಆದರಿಂದ ನಮ್ಮ ಕೈಗಳು ಅದರಲ್ಲೇ ತೊಡಗಿತ್ತು. ಆದರೆ ನಾವು ನೋಡು-ನೋಡುತ್ತಾ ನಮ್ಮ ಚಿತ್ತವನ್ನು ಸುಖ ಸ್ವರೂಪನಾದ ನೀನು ಅಪಹರಿಸಿ ಬಿಟ್ಟಿರುವೆ. ಇದರಲ್ಲಿ ನಿನಗೆ ಯಾವುದೇ ಕಷ್ಟವಾಗಲಿಲ್ಲ. ಆದರೆ ಈಗಲಾದರೋ ನಮ್ಮ ಗತಿ-ಮತಿ ಬೇರೆಯೇ ಆಗಿಬಿಟ್ಟಿದೆ. ನಮ್ಮ ಈ ಕಾಲುಗಳು ನಿನ್ನ ಚರಣಕಮಲಗಳನ್ನು ಬಿಟ್ಟು ಒಂದು ಹೆಜ್ಜೆಯೂ ಮುಂದಿಡಲು ಸಿದ್ಧವಿಲ್ಲ. ಹಾಗಿರುವಾಗ ನಾವು ವ್ರಜಕ್ಕೆ ಹೋಗುವುದೆಂತು? ಅಲ್ಲಿಗೆ ಹೋಗಿ ಮಾಡುವುದಾದರೂ ಏನು? ॥ ೩೪ ॥ ಪ್ರಾಣವಲ್ಲಭ, ಪ್ರಾಣಸಖನೇ! ನಿನ್ನ ಕಿರುನಗೆಯಿಂದಲೂ, ಕುಡಿನೋಟದಿಂದಲೂ, ಮನೋಹರವಾದ, ಮಧುರವಾದ ವೇಣುಗಾನದಿಂದಲೂ ನಮ್ಮ ಹೃದಯದಲ್ಲಿ ಉರಿಯುತ್ತಿರುವ ಪ್ರೇಮ ಮತ್ತು ಮಿಲನದ ಅಗ್ನಿಯನ್ನು ನಿನ್ನ ಅಧರಾಮೃತವನ್ನು ಕೆಂದುಟಗಳ ಮೂಲಕ ಸುರಿದು ಆರಿಸಿಬಿಡು. ನೀನೇನಾದರೂ ಹಾಗೆ

ಸಿಂಚಾಂಗ ನಸ್ತ್ವದಧರಾಮೃತಪೂರಕೇಣ
ಹಾಸಾವಲೋಕಕಲಗೀತಜಹೃಚ್ಛಯಾಗ್ನಿಮ್ ।
ನೋ ಚೇದ್ವಯಂ ವಿರಹಜಾಗ್ನ್ಯುಪಯುಕ್ತದೇಹಾ
ಧ್ಯಾನೇನ ಯಾಮ ಪದಯೋಃ ಪದವೀಂ ಸಖೇ ತೇ ॥ ೩೫ ॥

ಯರ್ಹ್ಯಂಬುಜಾಕ್ಷ ತವ ಪಾದತಲಂ ರಮಾಯಾ
ದತ್ತಕ್ಷಣಂ ಕ್ವಚಿದರಣ್ಯಜನಪ್ರಿಯಸ್ಯ ।
ಅಸ್ಪ್ರಾಕ್ಷ್ಮ ತತ್ಪ್ರಭೃತಿ ನಾನ್ಯಸಮಕ್ಷಮಂಗ
ಸ್ಥಾತುಂ ತ್ವಯಾಭಿರಮಿತಾ ಬತ ಪಾರಯಾಮಃ ॥ ೩೬ ॥

ಶ್ರೀರ್ಯತ್ಪದಾಂಬುಜರಜಶ್ಚಕಮೇ ತುಲಸ್ಯಾ
ಲಬ್ಧ್ವಾಪಿ ವಕ್ಷಸಿ ಪದಂ ಕಿಲ ಭೃತ್ಯಜುಷ್ಟಮ್ ।
ಯಸ್ಯಾಃ ಸ್ವವೀಕ್ಷಣಕೃತೇಽನ್ಯಸುರಪ್ರಯಾಸ-
ಸ್ತದ್ವದ್ವಯಂ ಚ ತವ ಪಾದರಜಃ ಪ್ರಪನ್ನಾಃ ॥ ೩೭ ॥

ತನ್ನಃ ಪ್ರಸೀದ ವೃಜಿನಾರ್ದನ ತೇಽಂಘ್ರಿಮೂಲಂ
ಪ್ರಾಪ್ತಾ ವಿಸೃಜ್ಯ ವಸತೀಸ್ತ್ವದುಪಾಸನಾಶಾಃ ।
ತ್ವತ್ಸುಂದರಸ್ಮಿತನಿರೀಕ್ಷಣತೀವ್ರಕಾಮ-
ತಪ್ತಾತ್ಮನಾಂ ಪುರುಷಭೂಷಣ ದೇಹಿ ದಾಸ್ಯಮ್ ॥ ೩೮ ॥

ವೀಕ್ಷ್ಯಾಲಕಾವೃತಮುಖಂ ತವ ಕುಂಡಲಶ್ರೀ-
ಗಂಡಸ್ಥಲಾಧರಸುಧಂ ಹಸಿತಾವಲೋಕಮ್ ।
ದತ್ತಾಭಯಂ ಚ ಭುಜದಂಡಯುಗಂ ವಿಲೋಕ್ಯ
ವಕ್ಷಃ ಶ್ರಿಯೈಕರಮಣಂ ಚ ಭವಾಮ ದಾಸ್ಯಃ ॥ ೩೯ ॥

ಮಾಡದಿದ್ದರೆ ವಿರಹಾಗ್ನಿಗೆ ನಮ್ಮ ಶರೀರವನ್ನು ಬಲಿಗೊಟ್ಟು ಧ್ಯಾನದ ಮೂಲಕ ನಿನ್ನ ಚರಣಕಮಲಗಳಲ್ಲಿ ಸೇರಿ ಬಿಡುವೆವು. ॥ ೩೫ ॥

ಕಮಲಾಕ್ಷನೇ! ನೀನು ವನವಾಸಿಗಳನ್ನು ಪ್ರೀತಿಸುವೆ. ವನವಾಸಿಗಳಾದ ನಾವೂ ನಿನ್ನನ್ನು ಬಹಳವಾಗಿ ಪ್ರೀತಿಸುತ್ತೇವೆ. ಆದುದರಿಂದಲೇ ನೀನು ಅವರ ಮಧ್ಯದಲ್ಲಿ ವಾಸಿಸುತ್ತಿರುವೆ. ಯಾರ ಪಾದಸೇವೆಯು ಲಕ್ಷ್ಮೀದೇವಿಗೂ ಯಾವಾಗಲೊಮ್ಮೆ ಪ್ರಾಪ್ತವಾಗುವುದೋ, ಅಂತಹ ಪಾದತಲವನ್ನು ಸ್ಪರ್ಶಿಸುವ ಸೌಭಾಗ್ಯವು ನಮಗೂ ಸಿಕ್ಕಿತು. ಅಂದು ನೀನು ನಮ್ಮನ್ನು ದಾಸಿಯರನ್ನಾಗಿ ಸ್ವೀಕರಿಸಿ ಆನಂದವನ್ನುಂಟುಮಾಡಿದೆ. ಅಂದಿನಿಂದ ನಾವು ಬೇರೆಯವರ ಮುಂದೆ ಒಂದು ಕ್ಷಣವಾದರೂ ನಿಲ್ಲಲು ಅಸಮರ್ಥರಾಗಿದ್ದೇವೆ. ಹಾಗಿರುವಾಗ ಪತಿ-ಪುತ್ರರ ಸೇವೆಯಾದರೋ ದೂರವೇ ಉಳಿಯಿತು. ॥ ೩೬ ॥ ನಮ್ಮ ಸ್ವಾಮಿಯೇ! ಯಾವ ಮಹಾಲಕ್ಷ್ಮಿಯ ಕಡೆಗಣ್ಣ ನೋಟದ ಅನುಗ್ರಹಕ್ಕಾಗಿ ಇತರ ದೇವತೆಗಳು ತಪಸ್ಸಿನ ಮೂಲಕವಾಗಿ ಪ್ರಯಾಸಪಡುವರೋ ಅಂತಹ ಲಕ್ಷ್ಮೀದೇವಿಯೂ ನಿನ್ನ ಹೃತ್ಕಮಲದಲ್ಲಿ ನೆಲೆಸಿದ್ದರೂ ಅಲ್ಲಿರುವುದು ಅವಳಿಗೆ ತೃಪ್ತಿಯನ್ನುಂಟುಮಾಡಲಿಲ್ಲ. ನಿನ್ನ ಸೇವಕರಿಂದ ಸೇವಿಸಲ್ಪಟ್ಟ ನಿನ್ನ ಪಾದಧೂಳಿಯನ್ನು ತನ್ನ ಸವತಿಯಾದ ತುಳಸೀದೇವಿಯೊಂದಿಗೆ ಸೇವಿಸಬೇಕೆಂದು ಆಸೆಪಡುತ್ತಿರುವಳು. ಅವಳಂತೆ ನಾವೂ ಕೂಡ ನಿನ್ನ ಆ ಚರಣರಜಕ್ಕೆ ಶರಣು ಹೊಂದಿದ್ದೇವೆ. ॥ ೩೭ ॥ ಪಾಪಹರನೇ! ಪರಮೇಶ್ವರನೇ! ನಿನ್ನ ಸೇವೆಮಾಡಬೇಕೆಂಬ ಆಸೆಯಿಂದ ನಾವು ಮನೆ-ಮಠಗಳನ್ನು, ಪತಿ-ಸುತರನ್ನು, ಬಂಧುಗಳನ್ನು, ಸಕಲ ಸರ್ವಸ್ವವನ್ನೂ ಪರಿತ್ಯಜಿಸಿ ನಿನ್ನ ದಿವ್ಯಪಾದಗಳ ಮೂಲಕ್ಕೆ ಬಂದು ಸೇರಿಕೊಂಡು ಬಿಟ್ಟಿದ್ದೇವೆ. ಪುರುಷಭೂಷಣನೇ! ನಿನ್ನ ಅಂದವಾದ ಕಿರುನಗೆಯಿಂದಲೂ, ಚೇತೋಹಾರಿಯಾದ ಕಡೆಗಣ್ಣಿನ ನೋಟದಿಂದಲೂ ನಮ್ಮ ಹೃದಯದಲ್ಲಿ ಕಾಮಾಗ್ನಿಯು ಹೊತ್ತಿಕೊಂಡು ಉರಿಯುತ್ತಿದೆ. ಇದರಿಂದ ದಹಿಸುತ್ತಿರುವ ನಮಗೆ ನಿನ್ನ ದಾಸ್ಯವನ್ನು ಅನುಗ್ರಹಿಸಿ ಕಾಪಾಡು. ॥ ೩೮ ॥ ಪ್ರಿಯತಮನೇ! ನಿನ್ನ ಗುಂಗುರು ಕೂದಲಗಳಿಂದ ಸಮಲಂಕೃತವಾದ ಮುಖಕಮಲವನ್ನೂ, ಥಳ-ಥಳಿಸುವ ಕುಂಡಲಗಳಿಂದ ಬೆಳಗುತ್ತಿರುವ ಕಪೋಲಗಳನ್ನು, ಅಮೃತಕ್ಕೆ ಸಮಾನವಾದ ಅಧರಾಮೃತವನ್ನು ಸುರಿಸುವ ಕೆಂದುಟಿಯನ್ನು, ನಯನಮನೋಹರವಾದ ಕಡೆಗಣ್ಣನ್ನೂ, ಚಿತ್ತಾಪಹಾರಕವಾದ ಕಿರುನಗೆಯನ್ನು ಶರಣಾಗತರಿಗೆ ಅಭಯದಾನಮಾಡುವ ಎರಡು ದುಂಡಾದ ಭುಜಗಳನ್ನೂ, ಅನುಪಮವಾದ ಸೌಂದರ್ಯದಿಂದ ಬೆಳಗುತ್ತಾ ಲಕ್ಷ್ಮಿಗೆ ನಿರಂತರ ಕ್ರೀಡಾಸ್ಥಳವಾದ ನಿನ್ನ ವಕ್ಷಃಸ್ಥಳವನ್ನೂ ನೋಡಿ ನಾವು ದಾಸಿಯರಾಗಿಬಿಟ್ಟಿದ್ದೇವೆ. ॥ ೩೯ ॥ ಪ್ರಿಯ ಶ್ಯಾಮಸುಂದರನೇ! ಮೂರು ಲೋಕಗಳಲ್ಲಿಯೂ - ಮಧುರ ಮಧುರ ಪದ-ಸ್ವರಪ್ರಸ್ತಾರದ ವಿವಿಧ ರೀತಿಯ ಮೂರ್ಛನೆಗಳಿಂದ ಕೂಡಿದ ನಿನ್ನ ವಂಶೀಧ್ವನಿಯನ್ನು ಕೇಳಿ, ನಿನ್ನ ಒಂದು ಬಿಂದುವಿನ ಸೌಂದರ್ಯದಿಂದ ಮೂರು ಲೋಕಗಳಿಗೂ

ಕಾ ಸ್ತ್ರ್ಯಂಗ ತೇ ಕಲಪದಾಯತಮೂರ್ಛಿತೇನ
ಸಮ್ಮೋಹಿತಾಽಽರ್ಯಚರಿತಾನ್ನ ಚಲೇತ್ತ್ರಿಲೋಕ್ಯಾಮ್ ।
ತ್ರೈಲೋಕ್ಯಸೌಭಗಮಿದಂ ಚ ನಿರೀಕ್ಷ್ಯ ರೂಪಂ
ಯದ್ಗೋದ್ವಿಜದ್ರುಮಮೃಗಾಃ ಪುಲಕಾನ್ಯಬಿಭ್ರನ್ ॥ ೪೦ ॥

ವ್ಯಕ್ತಂ ಭವಾನ್ ವ್ರಜಭಯಾರ್ತಿಹರೋಽಭಿಜಾತೋ
ದೇವೋ ಯಥಾಽಽದಿಪುರುಷಃ ಸುರಲೋಕಗೋಪ್ತಾ ।
ತನ್ನೋ ನಿಧೇಹಿ ಕರಪಂಕಜಮಾರ್ತಬಂಧೋ
ತಪ್ತಸ್ತನೇಷು ಚ ಶಿರಸ್ಸು ಚ ಕಿಂಕರೀಣಾಮ್ ॥ ೪೧ ॥

ಶ್ರೀಶುಕ ಉವಾಚ

ಇತಿ ವಿಕ್ಲವಿತಂ ತಾಸಾಂ ಶ್ರುತ್ವಾ ಯೋಗೇಶ್ವರೇಶ್ವರಃ ।
ಪ್ರಹಸ್ಯ ಸದಯಂ ಗೋಪೀರಾತ್ಮಾರಾಮೋಽಪ್ಯರೀರಮತ್ ॥ ೪೨ ॥

ತಾಭಿಃ ಸಮೇತಾಭಿರುದಾರಚೇಷ್ಟಿತಃ
ಪ್ರಿಯೇಕ್ಷಣೋತ್ಫುಲ್ಲಮುಖೀಭಿರಚ್ಯುತಃ ।
ಉದಾರಹಾಸದ್ವಿಜಕುಂದದೀಧಿತಿ-
ರ್ವ್ಯರೋಚತೈಣಾಂಕ ಇವೋಡುಭಿರ್ವೃತಃ ॥ ೪೩ ॥

ಉಪಗೀಯಮಾನ ಉದ್ಗಾಯನ್ವನಿತಾಶತಯೂಥಪಃ ।
ಮಾಲಾಂ ಬಿಭ್ರದ್ವೈಜಯಂತೀಂ ವ್ಯಚರನ್ಮಂಡಯನ್ವನಮ್ ॥ ೪೪ ॥

ನದ್ಯಾಃ ಪುಲಿನಮಾವಿಶ್ಯ ಗೋಪೀಭಿರ್ಹಿಮವಾಲುಕಮ್ ।
ರೇಮೇ ತತ್ತರಲಾನಂದ ಕುಮುದಾಮೋದವಾಯುನಾ ॥ ೪೫ ॥

ಸೌಂದರ್ಯವನ್ನು ದಾನಮಾಡುವ ನಿನ್ನ ಮನಮೋಹಕ ಸೌಂದರ್ಯದ ಗಣಿಯಾದ ಮೂರ್ತಿಯನ್ನು ನೋಡಿ ಗೋವು, ಪಕ್ಷಿಗಳು, ವೃಕ್ಷಗಳೂ ಹಾಗೂ ಜಿಂಕೆಗಳೂ ರೋಮಾಂಚಿತವಾಗುತ್ತವೋ, ಅಂತಹ ನಿನ್ನನ್ನು ನೋಡಿ, ಯಾವ ಸ್ತ್ರೀಯು ತಾನೆ ಲೋಕಲಜ್ಜೆಯನ್ನು ತ್ಯಜಿಸಿ ನಿನ್ನಲ್ಲಿ ಅನುರಕ್ತಳಾಗದೆ ಇರಬಲ್ಲಳು ? । ೪೦॥ ಭಗವಾನ್ ನಾರಾಯಣನು ದೇವತೆಗಳನ್ನು ರಕ್ಷಿಸುವಂತೆಯೇ ನೀನೇ ವ್ರಜಮಂಡಲದ ಭಯ, ದುಃಖಗಳನ್ನು ಇಲ್ಲವಾಗಿಸಲಿಕ್ಕಾಗಿಯೇ ಪ್ರಕಟನಾಗಿರುವೆ, ಎಂಬ ಮಾತು ನಮ್ಮಿಂದ ಮರೆಯಾಗಿಲ್ಲ. ದೀನ, ದುಃಖಿತರ ಮೇಲೆ ನಿನಗೆ ಬಹಳ ಪ್ರೇಮವಿದೆ, ಕೃಪೆಯಿದೆ ಎಂಬುದು ಸ್ಪಷ್ಟವೇ ಆಗಿದೆ. ಪ್ರಿಯತಮನೇ! ನಾವೂ ಕೂಡ ಬಹಳ ದುಃಖಿತರಾಗಿದ್ದೇವೆ. ನಿನ್ನನ್ನು ಸೇರಬೇಕೆಂಬ ಆಕಾಂಕ್ಷೆಯ ಅಗ್ನಿಯು ನಮ್ಮ ವಕ್ಷಃಸ್ಥಳವನ್ನು ಸುಡುತ್ತಿದೆ. ನೀನು ಈ ದಾಸಿಯರ ವಕ್ಷಃಸ್ಥಳ ಮತ್ತು ತಲೆಯ ಮೇಲೆ ನಿನ್ನ ಕೋಮಲವಾದ ಕರಕಮಲವನ್ನಿರಿಸಿ ಆ ಅಗ್ನಿಯನ್ನು ಆರಿಸಿಬಿಡು. ನಮ್ಮನ್ನು ತನ್ನವರಾಗಿಸಿಕೊಂಡು ನಮಗೆ ಜೀವನದಾನವನ್ನು ಕರುಣಿಸು ॥ ೪೧ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ - ಪರೀಕ್ಷಿತನೇ! ಭಗವಾನ್ ಶ್ರೀಕೃಷ್ಣನು ಸನಕಾದಿ ಯೋಗಿಗಳಿಗೂ, ಶಿವನೇ ಮೊದಲಾದ ಯೋಗೇಶ್ವರರಿಗೂ ಈಶ್ವರನು. ಗೋಪಿಕಾಸ್ತ್ರೀಯರ ದುಃಖದಿಂದ ಕೂಡಿದ ಮಾತುಗಳನ್ನು ಕೇಳುತ್ತಲೇ ಅವನ ಹೃದಯ ದಯಾರಸದಿಂದ ತುಂಬಿಹೋಯಿತು. ಅವನು ಆತ್ಮಾರಾಮನಾಗಿ ಇದ್ದರೂ, ಇತರರ ಅಪೇಕ್ಷೆಯಿಲ್ಲದೆ ಆನಂದಪಡುವವನಾಗಿದ್ದರೂ ನಗುನಗುತ್ತಾ ಗೋಪಿಕೆಯರೊಡನೆ ರಾಸಕ್ರೀಡೆಯಾಡಲು ಪ್ರಾರಂಭಿಸಿದನು. ॥ ೪೨ ॥ ಭಗವಾನ್ ಶ್ರೀಕೃಷ್ಣನು ತನ್ನೊಡನಿದ್ದ ಗೋಪಿಯರೊಡನೆ ಉದಾರವಾಗಿ ವರ್ತಿಸಲು ತೊಡಗಿದನು. ಅವನು ಮಂದಹಾಸವನ್ನು ಬೀರಿದಾಗ ಮಲ್ಲಿಗೆಯ ಮೊಗ್ಗಿನಂತಹ ಶುಭ್ರವಾದ ಹಲ್ಲುಗಳು ಕಾಣುತ್ತಿದ್ದವು. ಅವನ ಕಟಾಕ್ಷವೀಕ್ಷಣದಿಂದ ಗೋಪಿಕೆಯರ ಮುಖಗಳು ವಿಕಸಿತವಾಗುತ್ತಿದ್ದವು. ನಕ್ಷತ್ರಗಳಿಂದ ಚಂದ್ರನು ಪರಿವೃತನಾಗಿರುವಂತೆ - ಹಿರಿ ಹಿರಿಹಿಗ್ಗುತ್ತಿದ್ದ ಗೋಪಿಕೆಯರಿಂದ ಪರಿವೃತನಾದ ಶ್ರೀಕೃಷ್ಣನು ವಿರಾಜಿಸುತ್ತಿದ್ದನು. ॥ ೪೩ ॥ ನೂರಾರು ಗೋಪಿಕೆಯರ ಗುಂಪಿಗೆ ಸ್ವಾಮಿಯಾದ ಶ್ರೀಕೃಷ್ಣನು ವೈಜಯಂತೀ ವನಮಾಲೆಯನ್ನು ಧರಿಸಿ ವೃಂದಾವನದ ಶೋಭೆಯನ್ನು ಹೆಚ್ಚಿಸುತ್ತಾ ಅಲ್ಲಿ ಗೋಪಿಯರೊಡನೆ ಸಂಚರಿಸುತ್ತಿದ್ದನು. ಕೆಲವು ವೇಳೆ ಗೋಪಿಯರು ತಮ್ಮ ಪ್ರಿಯತಮನಾದ ಶ್ರೀಕೃಷ್ಣನ ಲೀಲಾಪ್ರಸಂಗಗಳನ್ನು ಹಾಡುತ್ತಿದ್ದರು. ಕೆಲವು ವೇಳೆ ಶ್ರೀಕೃಷ್ಣನು ಗೋಪಿಕೆಯರ ಪ್ರೇಮ-ಸೌಂದರ್ಯ ಗೀತೆಗಳನ್ನು ಹಾಡುತ್ತಿದ್ದನು. ॥ ೪೪ ॥ ಇದಾದ ಬಳಿಕ ಭಗವಾನ್ ಶ್ರೀಕೃಷ್ಣನು ಗೋಪಿಕೆಯರೊಂದಿಗೆ ಸ್ಫಟಿಕದಂತೆ ಹೊಳೆಯುತ್ತಿದ್ದ ಯಮುನೆಯ ಪಾವನ ಮರಳಿನಲ್ಲಿ ಪದಾರ್ಪಣ ಮಾಡಿದನು. ಅದು ಯಮುನೆಯ ತಣ್ಣನೆಯ ತರಂಗಗಳ ಸ್ಪರ್ಶದಿಂದ ಅಲುಗಾಡುತ್ತಿದ್ದ ಕಮಲ-ಕನ್ನೈದಿಲೆಗಳ ಪರಿಮಳದ ಗಾಳಿಯಿಂದ ಕೂಡಿತ್ತು. ಅಂತಹ ಆನಂದಪ್ರದ ಮರಳಿನಲ್ಲಿ ಭಗವಂತನು ಗೋಪಿಯರೊಡನೆ ರಾಸಲೀಲೆಯನ್ನು ಮಾಡಿದನು. ॥ ೪೫ ॥

ಬಾಹುಪ್ರಸಾರಪರಿರಂಭಕರಾಲಕೋರು-
ನೀವೀಸ್ತನಾಲಭನನರ್ಮನಖಾಗ್ರಪಾತೈಃ ।
ಕ್ಷ್ವೇಲ್ಯಾವಲೋಕಹಸಿತೈರ್ವ್ರಜಸುಂದರೀಣಾ-
ಮುತ್ತಂಭಯನ್ರತಿಪತಿಂ ರಮಯಾಂಚಕಾರ ॥ ೪೬ ॥

ತೋಳುಗಳನ್ನು ಅಗಲವಾಗಿ ಚಾಚಿ ಅಪ್ಪಿಕೊಳ್ಳುವುದರಿಂದಲೂ, ಕೈಗಳಿಂದ ಮುಂಗುರುಳುಗಳನ್ನು ನೇವರಿಸುವುದರಿಂದಲೂ, ಗೋಪಿಕಾ ಸ್ತ್ರೀಯರ ದಿವ್ಯ ಪ್ರೇಮಭಾವವನ್ನು ಕೆರಳಿಸುತ್ತಾ ಶ್ರೀಕೃಷ್ಣನು ಅವರೊಡನೆ ಕ್ರೀಡೆಯಾಡುತ್ತಿದ್ದನು. ॥ ೪೬ ॥

ಏವಂ ಭಗವತಃ ಕೃಷ್ಣಾಲ್ಲಬ್ಧಮಾನಾ ಮಹಾತ್ಮನಃ ।
ಆತ್ಮಾನಂ ಮೇನಿರೇ ಸ್ತ್ರೀಣಾಂ ಮಾನಿನ್ಯೋಽಭ್ಯಧಿಕಂ ಭುವಿ ॥ ೪೭ ॥

ಉದಾರ ಶಿರೋಮಣಿ ಭಗವಾನ್ ಶ್ರೀಕೃಷ್ಣನು ಹೀಗೆ ಗೋಪಿಕೆಯರನ್ನು ಸಮ್ಮಾನಿಸಿದಾಗ ಗೋಪಿಕೆಯರ ಮನಸ್ಸಿನಲ್ಲಿ ಜಗತ್ತಿನ ಸಮಸ್ತ ಸ್ತ್ರೀಯರಲ್ಲಿ ನಾವೇ ಸರ್ವಶ್ರೇಷ್ಠರಾಗಿದ್ದೇವೆ, ನಮ್ಮಂತೆಯ ಬೇರೆ ಯಾರು ಇಲ್ಲವೆಂಬ ಭಾವ ಉದಿಸಿತು. ॥ ೪೭ ॥

ತಾಸಾಂ ತತ್ಸೌಭಗಮದಂ ವೀಕ್ಷ್ಯ ಮಾನಂ ಚ ಕೇಶವಃ ।
ಪ್ರಶಮಾಯ ಪ್ರಸಾದಾಯ ತತ್ರೈವಾಂತರಧೀಯತ ॥ ೪೮ ॥

ಆಗ ಶ್ರೀಕೃಷ್ಣನು ಗೋಪಿಯರ ಸೌಂದರ್ಯಮದವನ್ನೂ ಮತ್ತು ತಾವೇ ಅಧಿಕರೆಂದು ಭಾವಿಸಿ ಗರ್ವಪಡುತ್ತಿರುವುದನ್ನು ಗಮನಿಸಿ, ಅವರ ಮದವನ್ನೂ, ಗರ್ವವನ್ನೂ ಹೋಗಲಾಡಿಸಿ ಅವರನ್ನು ಅನುಗ್ರಹಿಸುವುದಕ್ಕಾಗಿ ಒಡನೆಯೇ ಅವರ ನಡುವಿನಿಂದ ಅಂತರ್ಧಾನನಾದನು. ॥ ೪೮ ॥

ಇಪ್ಪತ್ತೊಂಭತ್ತನೆಯ ಅಧ್ಯಾಯವು ಮುಗಿಯಿತು. ॥ ೨೯ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮ ಸ್ಕಂಧೇ ಪೂರ್ವಾರ್ಧೇ
ಭಗವತೋ ರಾಸಕ್ರೀಡಾವರ್ಣನಂ ನಾಮೈಕೋನತ್ರಿಂಶೋಽಧ್ಯಾಯಃ ॥ ೨೯ ॥

ಮೂವತ್ತನೆಯ ಅಧ್ಯಾಯ

ಗೋಪಿಯರ ವಿರಹವೇದನೆ

ಶ್ರೀಶುಕ ಉವಾಚ

ಅಂತರ್ಹಿತೇ ಭಗವತಿ ಸಹಸೈವ ವ್ರಜಾಂಗನಾಃ ।
ಅತಪ್ಯಂಸ್ತಮಚಕ್ಷಾಣಾಃ ಕರಿಣ್ಯ ಇವ ಯೂಥಪಮ್ ॥ ೧ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತ್ರಾಜನೇ! ಇದ್ದಕ್ಕಿದ್ದಂತೆ ಶ್ರೀಕೃಷ್ಣನು ಅಂತರ್ಧಾನನಾದನು. ಅವನನ್ನು ಕಾಣದೆ ವ್ರಜಯುವತಿಯರು ಸಲಗವನ್ನಗಲಿದ ಹೆಣ್ಣಾನೆಗಳಂತೆ ವಿರಹಯಾತನೆಯಿಂದ ಪರಿತಪಿಸತೊಡಗಿದರು. ॥ ೧ ॥

ಗತ್ಯಾನುರಾಗಸ್ಮಿತವಿಭ್ರಮೇಕ್ಷಿತೈ-
ರ್ಮನೋರಮಾಲಾಪವಿಹಾರವಿಭ್ರಮೈಃ ।
ಆಕ್ಷಿಪ್ತಚಿತ್ತಾಃ ಪ್ರಮದಾ ರಮಾಪತೇ-
ಸ್ತಾಸ್ತಾ ವಿಚೇಷ್ಟಾ ಜಗೃಹುಸ್ತದಾತ್ಮಿಕಾಃ ॥ ೨ ॥

ರಮಾಪತಿಯಾದ ಶ್ರೀಕೃಷ್ಣನ ಮದೋನ್ಮತ್ತ ಗಜರಾಜನ ನಡಿಗೆಯಂತಹ ಗಂಭೀರವಾದ ನಡಿಗೆಯಿಂದಲೂ, ಪ್ರೇಮಪೂರಿತವಾದ ಕಿರುನಗೆಯಿಂದಲೂ, ಚಿತ್ತಾಪಹಾರಿಯಾದ ಕಡೆಗಣ್ಣ ನೋಟದಿಂದಲೂ, ಮನೋಹರವಾದ ಸರಸ ಸಲ್ಲಾಪಗಳಿಂದಲೂ, ಭಿನ್ನ-ಭಿನ್ನವಾದ ಲೀಲಾವಿನೋದಗಳಿಂದಲೂ, ಶೃಂಗಾರ ರಸಭಾವ ಭಂಗಿಗಳಿಂದಲೂ ಆಕರ್ಷಿತರಾದ ಗೋಪಿಕಾಸ್ತ್ರೀಯರು ಅವನನ್ನೇ ನಿರಂತರವಾಗಿ ಚಿಂತಿಸುತ್ತಾ ತನ್ಮಯರಾಗಿ ಬಿಟ್ಟರು. ತಾವೇ ಕೃಷ್ಣನೆಂದು ಭಾವಿಸಿಕೊಂಡು ಕೃಷ್ಣನಾಡಿದಂತೆಯೇ ಕ್ರೀಡೆಗಳನ್ನಾಡತೊಡಗಿದರು. ॥ ೨ ॥

ಗತಿಸ್ಮಿತಪ್ರೇಕ್ಷಣಭಾಷಣಾದಿಷು
ಪ್ರಿಯಾಃ ಪ್ರಿಯಸ್ಯ ಪ್ರತಿರೂಢಮೂರ್ತಯಃ ।
ಅಸಾವಹಂ ತ್ವಿತ್ಯಬಲಾಸ್ತದಾತ್ಮಿಕಾ
ನ್ಯವೇದಿಷುಃ ಕೃಷ್ಣವಿಹಾರವಿಭ್ರಮಾಃ ॥ ೩ ॥

ತಮ್ಮ ಪ್ರಿಯತಮನಾದ ಶ್ರೀಕೃಷ್ಣನ ನಡೆ-ನುಡಿ, ಹಾಸ್ಯ-ವಿನೋದ, ಕಿರುನಗೆ-ಮಂದಹಾಸ, ಭಾವ-ಭಂಗಿಗಳು, ಸರಸ-ಸಲ್ಲಾಪಗಳು, ಪ್ರೇಮಾಲಾಪಗಳು ಎಲ್ಲವೂ ಕೃಷ್ಣನ ಭಾವ-ಭಂಗಿಗಳಂತೆ ಗೋಪಿಯರು ಆಗಿಬಿಟ್ಟವು. ಅವರ ಶರೀರದಲ್ಲಿ ಅದೇ ಗತಿ-ಮತಿ ಸಾಕಾರಗೊಂಡಿತು. ಅವರು ತಮ್ಮನ್ನು ಪೂರ್ಣವಾಗಿ ಮರೆತು ಶ್ರೀಕೃಷ್ಣಸ್ವರೂಪರೇ ಆಗಿ, ಅವನ ಲೀಲಾ-ವಿಲಾಸವನ್ನು ಅನುಕರಣ ಮಾಡುತ್ತಾ 'ನಾನೇ ಕೃಷ್ಣನಾಗಿದ್ದೇನೆ' ಹೀಗೆ ಹೇಳತೊಡಗಿದರು. ॥ ೩ ॥

ಗಾಯಂತ್ಯ ಉಚ್ಚೈರಮುಮೇವ ಸಂಹತಾ
ವಿಚಿಕ್ಯುರುನ್ಮತ್ತಕವದ್ ವನಾದ್ ವನಮ್ ।
ಪಪ್ರಚ್ಛುರಾಕಾಶವದಂತರಂ ಬಹಿ-
ರ್ಭೂತೇಷು ಸಂತಂ ಪುರುಷಂ ವನಸ್ಪತೀನ್ ॥ ೪ ॥

ಅವರೆಲ್ಲರೂ ಪರಸ್ಪರ ಸೇರಿ ಗುಂಪಾಗಿ ಶ್ರೀಕೃಷ್ಣನ ಗುಣಗಾನವನ್ನು ಮಾಡತೊಡಗಿದರು ಮತ್ತು ಉನ್ಮತ್ತರಾಗಿ ಒಂದು ವನದಿಂದ ಇನ್ನೊಂದು ವನಕ್ಕೆ ಹೋಗುತ್ತಾ ಶ್ರೀಕೃಷ್ಣನನ್ನು ಹುಡುಕಲಾರಂಭಿಸಿದರು. ಪರೀಕ್ಷಿತನೇ! ಭಗವಾನ್ ಶ್ರೀಕೃಷ್ಣನು ದೂರ ಎಲ್ಲಿಗೆ ಹೋಗಿದ್ದನು? ಅವನಾದರೋ ಸಮಸ್ತ ಜಡ-ಚೇತನ ಪದಾರ್ಥಗಳಲ್ಲಿ ಹಾಗೂ ಅವುಗಳ ಹೊರಗೂ ಆಕಾಶದಂತೆ ಏಕರಸನಾಗಿ ನೆಲೆಸಿಯೇ ಇದ್ದಾನೆ. ಅವನು ಅಲ್ಲೇ ಇದ್ದನು, ಅವರಲ್ಲೇ ಇದ್ದನು; ಆದರೆ ಅವನನ್ನು ನೋಡದೆ ಗೋಪಿಯರು ವನಸ್ಪತಿಗಳಲ್ಲಿ, ಗಿಡ-ಮರಗಳಲ್ಲಿ ಅವನೆಲ್ಲಿರುವನೆಂದು ಪ್ರಶ್ನಿಸತೊಡಗಿದರು. ॥ ೪॥

ದೃಷ್ಟೋ ವಃ ಕಚ್ಚಿದಶ್ವತ್ಥ ಪ್ಲಕ್ಷ ನ್ಯಗ್ರೋಧ ನೋ ಮನಃ ।
ನಂದಸೂನುರ್ಗತೋ ಹೃತ್ವಾ ಪ್ರೇಮಹಾಸಾವಲೋಕನೈಃ ॥ ೫ ॥

(ಗೋಪಿಯರು ಮೊದಲಿಗೆ ದೊಡ್ಡ-ದೊಡ್ಡ ಮರಗಳ ಬಳಿಗೆ ಹೋಗಿ ವಿಚಾರಿಸಿದರು.) ಎಲೈ ಅರಳೀ ಮರವೇ! ಬಸರಿ ಮರವೇ! ಆಲದ ಮರವೇ! ನಂದನಂದನ ಶ್ಯಾಮಸುಂದರನು ತನ್ನ ಪ್ರೇಮಪೂರ್ಣ ಮುಗುಳ್ನಗೆಯಿಂದ ಮತ್ತು ಕಡೆಗಣ್ಣನೋಟದಿಂದ ನಮ್ಮ ಮನಸ್ಸನ್ನು ಅಪಹರಿಸಿರುವನು. ಅಂತಹ ಶ್ರೀಕೃಷ್ಣನನ್ನು ನೀವು ನೋಡಿರುವಿರಾ? ॥ ೫॥

ಕಚ್ಚಿತ್ ಕುರಬಕಾಶೋಕನಾಗಪುನ್ನಾಗಚಂಪಕಾಃ ।
ರಾಮಾನುಜೋ ಮಾನಿನೀನಾಮಿತೋ ದರ್ಪಹರಸ್ಮಿತಃ ॥ ೬ ॥

ಕುರವಕ ವೃಕ್ಷವೇ! ಅಶೋಕ ವೃಕ್ಷವೇ! ನಾಗ-ಪುನ್ನಾಗ ವೃಕ್ಷಗಳೇ! ಚಂಪಕ ವೃಕ್ಷಗಳೇ! ನೀವಾದರೂ ಹೇಳಿರಿ. ಕೇವಲ ಕಿರುನಗೆಯಿಂದಲೇ ಮಾನಿನಿಯರ ಸೊಕ್ಕನ್ನು ಮುರಿಯುವ ಬಲರಾಮನ ತಮ್ಮನಾದ ಶ್ರೀಕೃಷ್ಣನನ್ನು ನೀವೇನಾದರೂ ನೋಡಿರುವಿರಾ? ಅವನೆಲ್ಲಿಗೆ ಹೋದನು? ॥ ೬॥

ಕಚ್ಚಿತ್ತುಲಸಿ ಕಲ್ಯಾಣಿ ಗೋವಿಂದಚರಣಪ್ರಿಯೇ ।
ಸಹ ತ್ವಾಲಿಕುಲೈರ್ಬಿಭ್ರದ್ ದೃಷ್ಟಸ್ತೇಽತಿಪ್ರಿಯೋಽಚ್ಯುತಃ ॥ ೭ ॥

(ಈಗ ಅವರು ಹೆಣ್ಣು ಜಾತಿಯ ಗಿಡಗಳ ಬಳಿಯಲ್ಲಿ ಕೇಳುತ್ತಾರೆ) ತುಳಸೀದೇವಿ! ನಿನ್ನ ಹೃದಯವಾದರೋ ಬಹಳ ಕೋಮಲವಾಗಿದೆ. ನೀನು ಎಲ್ಲ ಜನರ ಮಂಗಲವನ್ನು ಉಂಟುಮಾಡುವೆ. ಭಗವಂತನ ಚರಣಗಳನ್ನು ನೀನು ಬಹಳವಾಗಿ ಪ್ರೀತಿಸುವೆ. ಈ ಕಾರಣದಿಂದಲೇ ದುಂಬಿಗಳು ಗುಂಪು-ಗುಂಪಾಗಿ ನಿನ್ನನ್ನು ಅನುಸರಿಸಿ ಬರುತ್ತಿದ್ದರೂ ನಮ್ಮ ಇನಿಯನು ನಿನ್ನನ್ನು ಧರಿಸಿಯೇ ಇರುತ್ತಾನೆ. ನಿನಗೆ ಅತಿಪ್ರಿಯನಾಗಿರುವ ಶ್ರೀಕೃಷ್ಣನನ್ನು ನೀನೇನಾದರೂ ಕಂಡೆಯಾ? ॥ ೭॥

ಮಾಲತ್ಯದರ್ಶಿ ವಃ ಕಚ್ಚಿನ್ಮಲ್ಲಿಕೇ ಜಾತಿ ಯೂಥಿಕೇ ।
ಪ್ರೀತಿಂ ವೋ ಜನಯನ್ ಯಾತಃ ಕರಸ್ಪರ್ಶೇನ ಮಾಧವಃ ॥ ೮ ॥

ಜಾಜಿಗಿಡವೇ! ಮಲ್ಲಿಗೆ ಗಿಡವೇ! ಜಾಜಿ ಸೇವಂತಿಗೆಗಳಿರಾ! ತನ್ನ ಕರಸ್ಪರ್ಶದಿಂದ ನಿಮಗೆ ಆನಂದವನ್ನುಂಟುಮಾಡುತ್ತಾ ಪ್ರಿಯತಮನಾದ ಮಾಧವನೇನಾದರೂ ಇತ್ತಕಡೆಯಿಂದ ಹೋದುದನ್ನು ನೀವೇನಾದರೂ ಕಂಡಿರಾ? ॥ ೮॥

ಚೂತಪ್ರಿಯಾಲಪನಸಾಸನಕೋವಿದಾರ-
ಜಂಬ್ವರ್ಕಬಿಲ್ವಬಕುಲಾಮ್ರಕದಂಬನೀಪಾಃ ।
ಯೇಽನ್ಯೇ ಪರಾರ್ಥಭವಕಾ ಯಮುನೋಪಕೂಲಾಃ
ಶಂಸಂತು ಕೃಷ್ಣಪದವೀಂ ರಹಿತಾತ್ಮನಾಂ ನಃ ॥ ೯ ॥

ಪರೋಪಕಾರಕ್ಕಾಗಿಯೇ ಯಮುನಾನದಿಯ ತೀರದಲ್ಲಿ ಹುಟ್ಟಿರುವ ಮಾವು, ಪ್ರಿಯಾಳು, ಹಲಸು, ಅಸನ, ಕಂಚವಾಳ, ನೇರಳೆ, ಎಕ್ಕ, ಬಿಲ್ವ, ಬಕುಳ, ಹುಳಿಮಾವು, ಕದಂಬ, ನೀರಂಜಿ - ಇದೇ ಮುಂತಾದ ವೃಕ್ಷಗಳ ಅಧಿದೇವತೆಗಳಿರಾ! ನಮ್ಮ ಪ್ರಿಯತಮನನ್ನು ಕಾಣದೆ ಬುದ್ಧಿಶೂನ್ಯರಾಗಿರುವ ನಮಗೆ ಅವನು ಹೋದ ಮಾರ್ಗವನ್ನು ದಯಮಾಡಿ ತಿಳಿಸಿರಿ. ॥ ೯॥ ಭಗವಂತನ ಪ್ರೇಯಸಿಯಾದ ಭೂದೇವಿಯೇ! ಶ್ರೀಕೃಷ್ಣ ಚರಣಕಮಲಗಳ ಸ್ಪರ್ಶವನ್ನು ಪಡೆದು ಆನಂದಭರಿತಳಾಗಿ, ತೃಣಲತಾದಿರೂಪದಲ್ಲಿ ನಿನಗುಂಟಾದ ರೋಮಾಂಚನವನ್ನು ಪ್ರಕಟಪಡಿಸುತ್ತಿರುವೆಯಲ್ಲ! ಇದಕ್ಕಾಗಿ ನೀನು ಎಂತಹ ತಪಸ್ಸನ್ನು ಆಚರಿಸಿದೆ? ನಿನ್ನ ಈ ಉಲ್ಲಾಸ-ವಿಲಾಸವು ಶ್ರೀಕೃಷ್ಣನ

ಕಿಂ ತೇ ಕೃತಂ ಕ್ಷಿತಿ ತಪೋ ಬತ ಕೇಶವಾಂಘ್ರಿ-
ಸ್ಪರ್ಶೋತ್ಸವೋತ್ಪುಲಕಿತಾಂಗರುಹೈರ್ವಿಭಾಸಿ ।
ಅಪ್ಯಂಘ್ರಿಸಂಭವ ಉರುಕ್ರಮವಿಕ್ರಮಾದ್ ವಾ
ಆಹೋ ವರಾಹವಪುಷಃ ಪರಿರಂಭಣೇನ ॥ ೧೦ ॥

ಅಪ್ಯೇಣಪತ್ನ್ಯುಪಗತಃ ಪ್ರಿಯಯೇಹ ಗಾತ್ರೈ-
ಸ್ತನ್ವನ್ ದೃಶಾಂ ಸಖಿ ಸುನಿರ್ವೃತಿಮಚ್ಯುತೋ ವಃ ।
ಕಾಂತಾಂಗಸಂಗಕುಚಕುಂಕುಮರಂಜಿತಾಯಾಃ
ಕುಂದಸ್ರಜಃ ಕುಲಪತೇರಿಹ ವಾತಿ ಗಂಧಃ ॥ ೧೧ ॥

ಬಾಹುಂ ಪ್ರಿಯಾಂಸ ಉಪಧಾಯ ಗೃಹೀತಪದ್ಮೋ
ರಾಮಾನುಜಸ್ತುಲಸಿಕಾಲಿಕುಲೈರ್ಮದಾಂಧೈಃ ।
ಅನ್ವೀಯಮಾನ ಇಹ ವಸ್ತರವಃ ಪ್ರಣಾಮಂ
ಕಿಂ ವಾಭಿನಂದತಿ ಚರನ್ ಪ್ರಣಯಾವಲೋಕೈಃ ॥ ೧೨ ॥

ಪೃಚ್ಛತೇಮಾ ಲತಾ ಬಾಹೂನಪ್ಯಾಶ್ಲಿಷ್ಟಾ ವನಸ್ಪತೇಃ ।
ನೂನಂ ತತ್ಕರಜಸ್ಪೃಷ್ಟಾ ಬಿಭ್ರತ್ಯುತ್ಪುಲಕಾನ್ಯಹೋ ॥ ೧೩ ॥

ಇತ್ಯುನ್ಮತ್ತವಚೋ ಗೋಪ್ಯಃ ಕೃಷ್ಣಾನ್ವೇಷಣಕಾತರಾಃ ।
ಲೀಲಾ ಭಗವತಸ್ತಾಸ್ತಾ ಹ್ಯನುಚಕ್ರುಸ್ತದಾತ್ಮಿಕಾಃ ॥ ೧೪ ॥

ಕಸ್ಯಾಶ್ಚಿತ್ಪೂತನಾಯಂತ್ಯಾಃ ಕೃಷ್ಣಾಯಂತ್ಯಪಿಬತ್ ಸ್ತನಮ್ ।
ತೋಕಾಯಿತ್ವಾ ರುದತ್ಯನ್ಯಾ ಪದಾಹಂಛಕಟಾಯತೀಮ್ ॥ ೧೫ ॥

ದೈತ್ಯಾಯಿತ್ವಾ ಜಹಾರಾನ್ಯಾಮೇಕಾ ಕೃಷ್ಣಾರ್ಭಭಾವನಾಮ್ ।
ರಿಂಗಯಾಮಾಸ ಕಾಪ್ಯಂಘ್ರೀ ಕರ್ಷಂತೀ ಘೋಷನಿಃಸ್ವನೈಃ ॥ ೧೬ ॥

ಚರಣಸ್ಪರ್ಶದಿಂದ ಉಂಟಾಯಿತೇ? ಅಥವಾ ವಾಮನಾವತಾರದಲ್ಲಿ ವಿಶ್ವರೂಪವನ್ನು ಧರಿಸಿ ನಿನ್ನನ್ನು ಅಳೆದ ಕಾರಣದಿಂದಾಯಿತೇ? ಅದಕ್ಕಿಂತಲೂ ಮೊದಲು ಭಗವಾನ್ ವರಾಹನ ಅಂಗ-ಸಂಗದ ಕಾರಣದಿಂದ ಈ ಸ್ಥಿತಿ ಉಂಟಾಯಿತೇ? ದಯಮಾಡಿ ನಮ್ಮ ಇನಿಯನು ಎಲ್ಲಿರುವನೆಂದು ತಿಳಿಸಿ ನಮ್ಮನ್ನು ಕಾಪಾಡು. ॥ ೧೦ ॥ ಗೆಳತಿಯಾದ ಹುಲ್ಲೆಯೇ! ನಮ್ಮ ಪ್ರಿಯತಮನು ತನ್ನ ಬೇರೆಯ ಪ್ರಿಯತಮೆಯೊಂದಿಗೆ ಕೂಡಿಕೊಂಡು ತನ್ನ ಸುಂದರವಾದ ಅಂಗಾಂಗಗಳಿಂದ ನಿಮ್ಮ ಕಣ್ಣುಗಳಿಗೆ ಹಬ್ಬವನ್ನು ಉಂಟುಮಾಡುತ್ತಾ ಇತ್ತಕಡೆ ಏನಾದರೂ ಬಂದನೇ? ಸಂಭ್ರಮದ ಆಲಿಂಗನದಿಂದ ಪ್ರೇಯಸಿಯ ಕುಚಗಳಲ್ಲಿದ್ದ ಕುಂಕುಮಕೇಸರಿಯಿಂದ ಕೆಂಪೇರಿದ ಗೋಕುಲಪತಿಯಾದ ಶ್ರೀಕೃಷ್ಣನು ವಕ್ಷಸ್ಥಳದಲ್ಲಿ ಶೋಭಿಸುವ ಮಲ್ಲಿಗೆ ಮಾಲೆಯ ಸುಗಂಧವು ಸರ್ವತ್ರ ವ್ಯಾಪಿಸಿದೆ. ಇದರಿಂದ ನಮ್ಮ ಪ್ರಾಣಕಾಂತನು ಇಲ್ಲಿಯೇ ಎಲ್ಲೋ ಇರಬೇಕು. ಸಖಿಯೇ! ಎಲ್ಲಿರುವನೆಂದು ಹೇಳು. ॥ ೧೧ ॥ ವೃಕ್ಷಾಧಿದೇವತೆಗಳಿರಾ! ಬಲರಾಮನ ಸೋದರನಾದ ನಮ್ಮ ಪ್ರಿಯತಮನು ಧರಿಸಿದ ತುಳಸಿಮಾಲೆಯ ಸುಗಂಧದಿಂದ ಆಕರ್ಷಿತವಾದ ದುಂಬಿಗಳ ಗುಂಪು ಅವನನ್ನು ಅನುಸರಿಸಿಯೇ ಹೋಗುತ್ತಾ ಇರುತ್ತದೆ. ನಮ್ಮ ಪ್ರಾಣಕಾಂತನು ತನ್ನ ಒಂದು ತೋಳನ್ನು ಪ್ರೇಯಸಿಯ ಹೆಗಲಮೇಲಿಟ್ಟು ಮತ್ತೊಂದು ಕೈಯಿಂದ ಕಮಲಪುಷ್ಪವನ್ನು ತಿರುಗಿಸುತ್ತಾ ಇತ್ತಕಡೆ ಬಂದನೇ? ಅವನಿಗೆ ಪ್ರಣಾಮಮಾಡಲೆಂದೇ ನೀವು ಬಗ್ಗಿರುವಂತೆ ತೋರುತ್ತದೆ. ಪ್ರೇಮಪೂರ್ವಕವಾದ ಕುಡಿನೋಟದಿಂದ ಅವನೂ ನಿಮ್ಮನ್ನು ಅಭಿನಂದಿಸಿರಬೇಕು. ॥ ೧೨ ॥ ಸಖಿಯರೇ! ಈ ಲತೆಗಳಲ್ಲಿ ಕೇಳಿರಿ. ಇವುಗಳು ತಮ್ಮ ಪತಿಯಾದ ವೃಕ್ಷದ ರೆಂಬೆಗಳೆಂಬ ತೋಳುಗಳಿಂದ ಆಲಿಂಗಿಸಲ್ಪಟ್ಟರೂ ನಮ್ಮ ಪ್ರಿಯತಮನಾದ ಶ್ರೀಕೃಷ್ಣನ ನಖಸ್ಪರ್ಶದಿಂದಲೇ ರೋಮಾಂಚಿತವಾಗಿವೆ. ಆಹಾ! ಇವರ ಸೌಭಾಗ್ಯವೆಂತಹುದು? ॥ ೧೩ ॥

ಪರೀಕ್ಷಿತನೇ! ಹೀಗೆ ಉನ್ಮತ್ತರಾದ ಗೋಪಿಯರು ಪ್ರಲಾಪಿಸುತ್ತಾ ಭಗವಾನ್ ಶ್ರೀಕೃಷ್ಣನನ್ನು ಹುಡುಕುತ್ತಾ - ಹುಡುಕುತ್ತಾ ಕಾತರರಾಗಿದ್ದರು. ಹಾಗೇ ಹುಡುಕುತ್ತಿದ್ದ ಗೋಪಿಯರಿಗೆ ಪುನಃ ತನ್ಮಯತೆ ಉಂಟಾಯಿತು. ತಾವೇ ಕೃಷ್ಣನೆಂದು ಭಾವಿಸಿಕೊಂಡು ಭಗವಂತನ ಬೇರೆ-ಬೇರೆ ಲೀಲೆಗಳನ್ನು ಅನುಕರಣೆ ಮಾಡತೊಡಗಿದರು. ॥ ೧೪ ॥ ಒಬ್ಬಳು ಪೂತನೆಯಾದರೆ ಮತ್ತೊಬ್ಬಳು ಶ್ರೀಕೃಷ್ಣನಾಗಿ ಅವಳ ಸ್ತನ್ಯಪಾನ ಮಾಡತೊಡಗಿದಳು. ಒಬ್ಬಳು ಬಂಡಿಯಾದರೆ ಮತ್ತೊಬ್ಬಳು ಬಾಲಕೃಷ್ಣನಾಗಿ ಅಳುತ್ತಾ ಆಕೆಯನ್ನು ಕಾಲಿನಿಂದ ಒದ್ದುಬಿಟ್ಟಳು. ॥ ೧೫ ॥ ಓರ್ವಗೋಪಿಯು ಬಾಲಕೃಷ್ಣನ ಭಾವವನ್ನು ಹೊಂದಿ ಕುಳಿತಿದ್ದಾಗ ತೃಣಾವರ್ತನ ಭಾವವನ್ನು ಹೊಂದಿದ್ದ ಗೋಪಿಯು ಆಕೆಯನ್ನು ಅಪಹರಿಸಿಕೊಂಡು ಹೋಗುವಳು. ಕೆಲವು ಗೋಪಿಯರು ಬಾಲಮುಕುಂದನಂತೆ ಅಂಬೆಗಾಲಿಕ್ಕುತ್ತಾ ನಡೆಯತೊಡಗಿದ್ದಾಗ ಅವರ ಕಾಲಂದುಗೆಗಳು ಝಣ-ಝಣ ಶಬ್ದಮಾಡುತ್ತಿದ್ದವು. ॥ ೧೬ ॥

ಕೃಷ್ಣರಾಮಾಯಿತೇ ದ್ವೇ ತು ಗೋಪಾಯಂತ್ಯಶ್ಚ ಕಾಶ್ಚನ ।
ವತ್ಸಾಯತೀಂ ಹಂತಿ ಚಾನ್ಯಾ ತತ್ರೈಕಾ ತು ಬಕಾಯತೀಮ್ ॥ ೧೭ ॥

ಆಹೂಯ ದೂರಗಾ ಯದ್ವತ್ಕೃಷ್ಣಸ್ತಮನುಕುರ್ವತೀಮ್ ।
ವೇಣುಂ ಕ್ವಣಂತೀಂ ಕ್ರೀಡಂತೀಮನ್ಯಾಃ ಶಂಸಂತಿ ಸಾಧ್ವಿತಿ ॥ ೧೮ ॥

ಕಸ್ಯಾಂಚಿತ್ಸ್ವಭುಜಂ ನ್ಯಸ್ಯ ಚಲಂತ್ಯಾಹಾಪರಾ ನನು ।
ಕೃಷ್ಣೋಽಹಂ ಪಶ್ಯತ ಗತಿಂ ಲಲಿತಾಮಿತಿ ತನ್ಮನಾಃ ॥ ೧೯ ॥

ಮಾ ಭೈಷ್ಟ ವಾತವರ್ಷಾಭ್ಯಾಂ ತತ್ತ್ರಾಣಂ ವಿಹಿತಂ ಮಯಾ ।
ಇತ್ಯುಕ್ತ್ವೈಕೇನ ಹಸ್ತೇನ ಯತಂತ್ಯುನ್ನಿದಧೇಽಂಬರಮ್ ॥ ೨೦ ॥

ಆರುಹ್ಯೈಕಾ ಪದಾಽಽಕ್ರಮ್ಯ ಶಿರಸ್ಯಾಹಾಪರಾಂ ನೃಪ ।
ದುಷ್ಟಾಹೇ ಗಚ್ಛ ಜಾತೋಽಹಂ ಖಲಾನಾಂ ನನು ದಂಡಕೃತ್ ॥ ೨೧ ॥

ತತ್ರೈಕೋವಾಚ ಹೇ ಗೋಪಾ ದಾವಾಗ್ನಿಂ ಪಶ್ಯತೋಲ್ಬಣಮ್ ।
ಚಕ್ಷೂಂಷ್ಯಾಶ್ವಪಿದಧ್ವಂ ವೋ ವಿಧಾಸ್ಯೇ ಕ್ಷೇಮಮಂಜಸಾ ॥ ೨೨ ॥

ಬದ್ಧಾನ್ಯಯಾ ಸ್ರಜಾ ಕಾಚಿತ್ತನ್ವೀ ತತ್ರ ಉಲೂಖಲೇ ।
ಭೀತಾ ಸುದೃಕ್ಪಿಧಾಯಾಸ್ಯಂ ಭೇಜೇ ಭೀತಿವಿಡಂಬನಮ್ ॥ ೨೩ ॥

ಏವಂ ಕೃಷ್ಣಂ ಪೃಚ್ಛಮಾನಾ ವೃಂದಾವನಲತಾಸ್ತರೂನ್ ।
ವ್ಯಚಕ್ಷತ ವನೋದ್ದೇಶೇ ಪದಾನಿ ಪರಮಾತ್ಮನಃ ॥ ೨೪ ॥

ಪದಾನಿ ವ್ಯಕ್ತಮೇತಾನಿ ನಂದಸೂನೋರ್ಮಹಾತ್ಮನಃ ।
ಲಕ್ಷ್ಯಂತೇ ಹಿ ಧ್ವಜಾಂಭೋಜವಜ್ರಾಂಕುಶಯವಾದಿಭಿಃ ॥ ೨೫ ॥

ಒಬ್ಬಳು ಕೃಷ್ಣನಾದರೆ, ಇನ್ನೊಬ್ಬಳು ಬಲರಾಮನಾದಳು. ಉಳಿದ ಗೋಪಿಯರು ಗೊಲ್ಲಬಾಲಕರಾದರು. ಒಬ್ಬಳು ವತ್ಸಾಸುರನಾದರೆ ಮತ್ತೊಬ್ಬಳು ಬಕಾಸುರಳಾದಳು. ಆಗ ಗೋಪಿಯರು ಬೇರೆ-ಬೇರೆಯಾಗಿ ಕೃಷ್ಣಭಾವವನ್ನು ಹೊಂದಿ ವತ್ಸಾಸುರ ಮತ್ತು ಬಕಾಸುರರಾದ ಗೋಪಿಯರನ್ನು ಕೊಲ್ಲುವ ಲೀಲೆಯನ್ನು ಮಾಡಿದರು. ॥ ೧೭ ॥ ಶ್ರೀಕೃಷ್ಣನು ವನದಲ್ಲಿ ಕೊಳಲನ್ನೂದಿ ದೂರಕ್ಕೆ ಹೋದ ಹಸುಗಳನ್ನು ಕರೆಯುವಂತೆ ಓರ್ವಗೋಪಿಯು ನಟಿಸತೊಡಗಿದಳು. ಆಗ ಉಳಿದ ಗೋಪಿಯರು ಗೊಲ್ಲಬಾಲಕರಂತೆ ಭಲೇ! ಭಲೇ ಕೃಷ್ಣ! ಎಂದು ಪ್ರಶಂಸಿಸತೊಡಗಿದರು. ॥ ೧೮ ॥ ಓರ್ವ ಗೋಪಿಯು ತನ್ನನ್ನು ಕೃಷ್ಣನೆಂದೆ ಭಾವಿಸಿಕೊಂಡು ಇನ್ನೊಬ್ಬ ಸಖಿಯ ಹೆಗಲಮೇಲೆ ಕೈಯನ್ನಿಟ್ಟು ನಡೆಯುತ್ತಾ ಉಳಿದ ಗೋಪಿಯರಿಗೆ ಹೇಳುತ್ತಾಳೆ – 'ಮಿತ್ರರೇ! ನಾನು ಕೃಷ್ಣನಾಗಿದ್ದೇನೆ. ನೀವೆಲ್ಲ ನನ್ನ ಮನೋಹರವಾದ ನಡಿಗೆಯನ್ನು ನೋಡಿರಿ'. ॥ ೧೯ ॥ ಯಾರೋ ಓರ್ವ ಗೋಪಿಯು ಶ್ರೀಕೃಷ್ಣನಾಗಿ 'ಎಲೈ ವ್ರಜವಾಸಿಗಳೇ! ನೀವೆಲ್ಲ ಬಿರುಗಾಳಿ – ಮಳೆಯಿಂದ ಹೆದರಬೇಡಿರಿ. ಅದರಿಂದ ರಕ್ಷಿಸಿಕೊಳ್ಳುವ ಉಪಾಯವನ್ನು ನಾನು ಯೋಚಿಸಿದ್ದೇನೆ'. ಹೀಗೆ ಹೇಳುತ್ತಾ – ಗೋವರ್ಧನೋದ್ಧರಣವನ್ನು ಅನುಕರಣೆ ಮಾಡುತ್ತಾ ತನ್ನ ಮೇಲ್ಹೊದಿಕೆಯನ್ನೇ ಎತ್ತಿ ಹಿಡಿಯುವಳು. ॥ ೨೦ ॥ ಪರೀಕ್ಷಿತನೇ! ಒಬ್ಬಳು ಕಾಲಿಯ ನಾಗನಾದರೆ ಮತ್ತೊಬ್ಬಳು ಶ್ರೀಕೃಷ್ಣನಾಗಿ ಆಕೆಯ ತಲೆಯ ಮೇಲೆ ಕಾಲನ್ನಿಟ್ಟು ಹತ್ತಿಕೊಂಡು – 'ಎಲೈ ದುಷ್ಟ ಸರ್ಪವೇ! ನೀನು ಇಲ್ಲಿಂದ ಹೊರಟುಹೋಗು. ನಾನು ದುಷ್ಟರ ದಮನಕ್ಕಾಗಿ ಹುಟ್ಟಿರುವವನು' ಎಂದು ಹೇಳತೊಡಗಿದಳು. ॥ ೨೧ ॥ ಇಷ್ಟರಲ್ಲೇ ಓರ್ವಗೋಪಿಯು ಹೇಳಿದಳು – ಎಲೈ ಗೋಪರೇ! ನೋಡಿ, ಕಾಡಿಗೆ ಭಯಂಕರವಾದ ಕಾಡ್ಗಿಚ್ಚು ಹತ್ತಿಕೊಂಡಿದೆ. ನೀವೆಲ್ಲ ಬೇಗ-ಬೇಗನೇ ನಿಮ್ಮ ಕಣ್ಣುಗಳನ್ನು ಮುಚ್ಚಿಕೊಳ್ಳಿ, ನಾನು ನಿರಾಯಾಸವಾಗಿ ನಿಮ್ಮನ್ನು ರಕ್ಷಿಸುವೆನು. ॥ ೨೨ ॥ ಓರ್ವ ಗೋಪಿಯು ಯಶೋದೆಯಾದರೆ ಮತ್ತೊಬ್ಬಳು ಶ್ರೀಕೃಷ್ಣಳಾದಳು. ಯಶೋದೆಯಾದ ಗೋಪಿಯು ಹೂವಿನ ಹಾರದಿಂದ ಕೃಷ್ಣನನ್ನು ಒರಳಿಗೆ ಕಟ್ಟಿದ ಲೀಲೆಯನ್ನು ನಟಿಸಿದರೆ, ಶ್ರೀಕೃಷ್ಣನಾದ ಗೋಪಿಯು ಮುಖವನ್ನು ಮುಚ್ಚಿಕೊಂಡು ಭಯಗೊಂಡವಳಂತೆ ಅಣಕವಾಡಿದಳು. ॥ ೨೩ ॥

ಪರೀಕ್ಷಿತನೇ! ಹೀಗೆ ಗೋಪಿಯರು ನಾನಾ ಭಾವಗಳನ್ನು ಹೊಂದಿ ಶ್ರೀಕೃಷ್ಣನ ಲೀಲಾವಿನೋದಗಳನ್ನು ಅನುಕರಿಸಿದ ನಂತರ ಪುನಃ ಮರ – ಗಿಡ – ಬಳ್ಳಿಗಳಲ್ಲಿ – ಶ್ರೀಕೃಷ್ಣನೆಲ್ಲಿರುವನು ? ಪ್ರಿಯ ಕೃಷ್ಣನನ್ನು ಕಂಡಿರಾ ? ಎಂದು ಪ್ರಶ್ನಿಸತೊಡಗಿದರು. ಹೀಗೆ ಹುಡುಕುತ್ತಿರುವಾಗಲೇ ಒಂದೆಡೆಯಲ್ಲಿ ಭಗವಂತನ ಚರಣ ಚಿಹ್ನೆಯನ್ನು ಕಂಡರು. ॥ ೨೪ ॥ ಅವರೆಲ್ಲರೂ ಪರಸ್ಪರ ಮಾತನಾಡಿಕೊಂಡರು – ಸಖಿಯರೇ! ಈ ಚರಣ ಚಿಹ್ನೆಯು ಖಂಡಿತವಾಗಿ ಉದಾರಶಿರೋಮಣಿ ನಂದನಂದನ ಶ್ಯಾಮಸುಂದರನದೇ ಆಗಿದೆ. ಏಕೆಂದರೆ, ಇದರಲ್ಲಿ ಧ್ವಜ, ಕಮಲ, ವಜ್ರ, ಅಂಕುಶ ಮತ್ತು ಯವಾದಿಗಳ ಚಿಹ್ನೆಗಳು ಸ್ಪಷ್ಟವಾಗಿ ಕಂಡುಬರುತ್ತವೆ. ॥ ೨೫ ॥

ತೈಸ್ತೈಃ ಪದೈಸ್ತತ್ಪದವೀಮನ್ವಿಚ್ಛಂತ್ಯೋಽಗ್ರತೋಽಬಲಾಃ ।
ಬಧ್ವಾಃ ಪದೈಃ ಸುಪೃಕ್ತಾನಿ ವಿಲೋಕ್ಯಾರ್ತಾಃ ಸಮಬ್ರುವನ್ ॥ ೨೬ ॥

ಆ ಚರಣಚಿಹ್ನೆಗಳ ಜಾಡನ್ನೇ ಹಿಡಿದುಕೊಂಡು ಗೋಕುಲನಾಥ ಭಗವಂತನನ್ನು ಹುಡುಕುತ್ತಾ ಗೋಪಿಯರು ಮುಂದುವರಿದರು. ಆಗ ಅವರಿಗೆ ಶ್ರೀಕೃಷ್ಣನ ಚರಣ ಚಿಹ್ನೆಯ ಜೊತೆಯಲ್ಲೇ ಯಾರೋ ಓರ್ವ ವ್ರಜಯುವತಿಯ ಹೆಜ್ಜೆಯ ಗುರುತೂ ಗೋಚರಿಸಿತು.* ಅದನ್ನು ನೋಡಿ ಅವರೆಲ್ಲರೂ ದುಃಖಿತರಾದರು ಹಾಗೂ ಪರಸ್ಪರ ಮಾತನಾಡಿಕೊಂಡರು ॥ ೨೬ ॥

ಕಸ್ಯಾಃ ಪದಾನಿ ಚೈತಾನಿ ಯಾತಾಯಾ ನಂದಸೂನುನಾ ।
ಅಂಸನ್ಯಸ್ತಪ್ರಕೋಷ್ಠಾಯಾಃ ಕರೇಣೋಃ ಕರಿಣಾ ಯಥಾ ॥ ೨೭ ॥

ಹೆಣ್ಣಾನೆಯು ಗಂಡಾನೆಯೊಂದಿಗೆ ಹೋಗುವಂತೆಯೇ ನಂದನಂದನ ಶ್ಯಾಮಸುಂದರನೊಡನೆ ಅವನ ಹೆಗಲಮೇಲೆ ಕೈಯಿಟ್ಟು ನಡೆದುಕೊಂಡು ಹೋದ ಯಾರೋ ಭಾಗ್ಯಶಾಲಿಯ ಚರಣಚಿಹ್ನೆಗಳೇ ಇದಾಗಿವೆಯಲ್ಲ! ॥ ೨೭ ॥

ಅನಯಾಽಽರಾಧಿತೋ ನೂನಂ ಭಗವಾನ್ ಹರಿರೀಶ್ವರಃ ।
ಯನ್ನೋ ವಿಹಾಯ ಗೋವಿಂದಃ ಪ್ರೀತೋ ಯಾಮನಯದ್ರಹಃ ॥ ೨೮ ॥

ಆಕೆಯು ಸರ್ವಶಕ್ತನಾದ ಭಗವಾನ್ ಶ್ರೀಕೃಷ್ಣನ ಆರಾಧಿಕೆಯೇ ಆಗಿರಬೇಕು. ಅದಕ್ಕಾಗಿ ಅವಳ ಮೇಲೆ ಪ್ರಸನ್ನನಾದ ನಮ್ಮ ಪ್ರಾಣಪ್ರಿಯ ಶ್ಯಾಮಸುಂದರನು ನಮ್ಮನ್ನು ಅಗಲಿ ಆಕೆಯನ್ನು ಏಕಾಂತಕ್ಕೆ ಕರೆದುಕೊಂಡು ಹೋಗಿರುವನು ॥ ೨೮ ॥

ಧನ್ಯಾ ಅಹೋ ಅಮೀ ಆಲ್ಯೋ ಗೋವಿಂದಾಂಘ್ರ್ಯಬ್ಜರೇಣವಃ ।
ಯಾನ್ಬ್ರಹ್ಮೇಶೋ ರಮಾ ದೇವೀ ದಧುರ್ಮೂರ್ಧ್ನ್ಯಘನುತ್ತಯೇ ॥ ೨೯ ॥

ಪ್ರಿಯ ಸಖಿಯರೇ! ಭಗವಾನ್ ಶ್ರೀಕೃಷ್ಣನ ಚರಣಕಮಲಕ್ಕೆ ಸೋಂಕಿದ ರಜವು ಧನ್ಯವಾಗಿದೆ. ಅದರ ಸೌಭಾಗ್ಯ ಎಂತಹುದು! ಏಕೆಂದರೆ, ತಮ್ಮ ಅಮಂಗಳವನ್ನು ಕಳೆದುಕೊಳ್ಳಲು ಬ್ರಹ್ಮರುದ್ರರೇ ಆದಿಯಾಗಿ ಲಕ್ಷ್ಮೀದೇವಿಯೂ ಕೂಡ ಆ ರಜವನ್ನು ತಮ್ಮ ಶಿರದಲ್ಲಿ ಧರಿಸಿಕೊಳ್ಳುವರು. ॥ ೨೯ ॥

ತಸ್ಯಾ ಅಮೂನಿ ನಃ ಕ್ಷೋಭಂ ಕುರ್ವಂತ್ಯುಚ್ಚೈಃ ಪದಾನಿ ಯತ್ ।
ಯೈಕಾಪಹೃತ್ಯ ಗೋಪೀನಾಂ ರಹೋ ಭುಂಕ್ತೇಽಚ್ಯುತಾಧರಮ್ ॥ ೩೦ ॥

ಸಖಿಯರೇ! ಗೋಪಿಯರೆಲ್ಲರಿಗೂ ಸೇರಬೇಕಾಗಿದ್ದ ನಮ್ಮ ಇನಿಯನ ಅಧರಾಮೃತವನ್ನು ಅಪಹರಿಸಿ ಇವಳೊಬ್ಬಳೇ ಪಾನಮಾಡುತ್ತಿರುವಳಲ್ಲ! ಅಂತಹವಳ ಈ ಪದಚಿಹ್ನೆಗಳನ್ನು ನೋಡುತ್ತಲೇ ನಮ್ಮ ಮನಸ್ಸು ಬಹಳವಾಗಿ ತಳಮಳಿಸುತ್ತಿದೆ. ॥ ೩೦ ॥

ನ ಲಕ್ಷ್ಯಂತೇ ಪದಾನ್ಯತ್ರ ತಸ್ಯಾ ನೂನಂ ತೃಣಾಂಕುರೈಃ ।
ಖಿದ್ಯತ್ಸುಜಾತಾಂಘ್ರಿತಲಾಮುನ್ನಿನ್ಯೇ ಪ್ರೇಯಸೀಂ ಪ್ರಿಯಃ ॥ ೩೧ ॥

ಸಂಗಾತಿಗಳೇ! ಇತ್ತ ನೋಡಿ, ಇಲ್ಲಿಂದ ಮುಂದಕ್ಕೆ ನಮ್ಮ ಇನಿಯನ ಪ್ರೇಯಸಿಯ ಹೆಜ್ಜೆಗಳು ಕಾಣುತ್ತಿಲ್ಲ. ಬಹುಶಃ ನಮ್ಮ ಪ್ರಾಣಕಾಂತನು ತನ್ನ [illegible] ಪ್ರೇಯಸಿಯ ಕೋಮಲವಾದ ಕಾಲುಗಳಿಗೆ ಹುಲ್ಲಿನ ಕುಡಿಗಳಿಂದ ನೋವುಂಟಾದೀತೆಂದು ಭಾವಿಸಿ ಹೆಗಲಮೇಲೆ ಹೊತ್ತುಕೊಂಡೇ ಹೋಗಿರಬಹುದು! ॥ ೩೧ ॥

ಇಮಾನ್ಯಧಿಕಮಗ್ನಾನಿ ಪದಾನಿ ವಹತೋ ವಧೂಮ್ ।
ಗೋಪ್ಯಃ ಪಶ್ಯತ ಕೃಷ್ಣಸ್ಯ ಭಾರಾಕ್ರಾಂತಸ್ಯ ಕಾಮಿನಃ ॥ ೩೨ ॥

ಗೆಳತಿ! ನೀವು ಕೇಳಿರಿ. ಇಲ್ಲಿ ನೋಡಿರಿ. ನಮ್ಮ ಪ್ರಾಣಕಾಂತನ ಹೆಜ್ಜೆಯ ಗುರುತುಗಳು ಇಲ್ಲಿ ಬಹಳವಾಗಿ ಊರಿರುವಂತೆ ಕಾಣುತ್ತಿವೆ. ಪ್ರೇಮಿಯಾದ ಶ್ರೀಕೃಷ್ಣನು ವಧುವಿನ ಭಾರದಿಂದ ಆಕ್ರಾಂತನಾಗಿ ಹೆಜ್ಜೆಯಿಡುತ್ತಿದ್ದುದರಿಂದಲೇ ಆ ಹೆಜ್ಜೆಗಳು ಆಳವಾಗಿ ನೆಲದಮೇಲೆ ಮೂಡಿವೆ. ॥ ೩೨ ॥

ಅತ್ರಾವರೋಪಿತಾ ಕಾಂತಾ ಪುಷ್ಪಹೇತೋರ್ಮಹಾತ್ಮನಾ ।
ಅತ್ರ ಪ್ರಸೂನಾವಚಯಃ ಪ್ರಿಯಾರ್ಥೇ ಪ್ರೇಯಸಾ ಕೃತಃ ।
ಪ್ರಪದಾಕ್ರಮಣೇ ಏತೇ ಪಶ್ಯತಾಸಕಲೇ ಪದೇ ॥ ೩೩ ॥

ಗೆಳತಿಯರೇ! ಇಲ್ಲಿ ನೋಡಿರಿ. ಇಲ್ಲಿಂದ ಮುಂದಕ್ಕೆ ನಮ್ಮ ಪ್ರಾಣಕಾಂತನ ದಟ್ಟವಾದ ಹೆಜ್ಜೆಯ ಗುರುತು ಕಾಣುತ್ತಿಲ್ಲ. ಆದುದರಿಂದ ಅವನು ತನ್ನ ಪ್ರೇಯಸಿಗೆ ಹೂವುಗಳನ್ನು ಬಿಡಿಸಿಕೊಡಲು ಇಲ್ಲಿ ಅವಳನ್ನು ಹೆಗಲಿನಿಂದ ಇಳಿಸಿರಬಹುದು. ನೋಡಿ, ಈ ಹೂಗಿಡದ ಬಳಿ ನೋಡಿರಿ. ಈ ಹೂಗಿಡದ ಕೆಳಗೆ ನಮ್ಮ ಪ್ರಾಣಕಾಂತನ ತುದಿಕಾಲುಗಳ ಚಿಹ್ನೆಗಳು ಮಾತ್ರ ಕಾಣುತ್ತಿವೆ. ಹಿಮ್ಮಡಿಗಳ ಗುರುತು ಕಾಣುವುದಿಲ್ಲವಲ್ಲ. ಬಹುಶಃ ಮೆಟ್ಟುಗಾಲಿನ ಮೇಲೆ ನಿಂತು ಗಿಡದ ತುದಿಯಲ್ಲಿರುವ ಹೂವುಗಳನ್ನು ಬಿಡಿಸಿ ತನ್ನ ಇನಿಯಳಿಗೆ ಕೊಟ್ಟಿರಬಹುದು. ॥ ೩೩ ॥

* ಇವಳೇ ರಾಧಾದೇವಿಯೆಂದು ಕೆಲವು ವಿದ್ವಾಂಸರ ಅಭಿಪ್ರಾಯವಾಗಿದೆ.

ಕೇಶಪ್ರಸಾಧನಂ ತ್ವತ್ರ ಕಾಮಿನ್ಯಾಃ ಕಾಮಿನಾ ಕೃತಮ್ ।
ತಾನಿ ಚೂಡಯತಾ ಕಾಂತಾಮುಪವಿಷ್ಟಮಿಹ ಧ್ರುವಮ್
॥ ೩೪ ॥

ರೇಮೇ ತಯಾ ಚಾತ್ಮರತ ಆತ್ಮಾರಾಮೋಽಪ್ಯಖಂಡಿತಃ ।
ಕಾಮಿನಾಂ ದರ್ಶಯನ್ ದೈನ್ಯಂ ಸ್ತ್ರೀಣಾಂ ಚೈವ ದುರಾತ್ಮತಾಮ್
॥ ೩೫ ॥

ಇತ್ಯೇವಂ ದರ್ಶಯಂತ್ಯಸ್ತಾಶ್ಚೇರುರ್ಗೋಪ್ಯೋ ವಿಚೇತಸಃ ।
ಯಾಂ ಗೋಪೀಮನಯತ್ಕೃಷ್ಣೋ ವಿಹಾಯಾನ್ಯಾಃ ಸ್ತ್ರಿಯೋ ವನೇ
॥ ೩೬ ॥

ಸಾ ಚ ಮೇನೇ ತದಾಽಽತ್ಮಾನಂ ವರಿಷ್ಠಂ ಸರ್ವಯೋಷಿತಾಮ್ ।
ಹಿತ್ವಾ ಗೋಪೀಃ ಕಾಮಯಾನಾ ಮಾಮಸೌ ಭಜತೇ ಪ್ರಿಯಃ
॥ ೩೭ ॥

ತತೋ ಗತ್ವಾ ವನೋದ್ದೇಶಂ ದೃಪ್ತಾ ಕೇಶವಮಬ್ರವೀತ್ ।
ನ ಪಾರಯೇಽಹಂ ಚಲಿತುಂ ನಯ ಮಾಂ ಯತ್ರ ತೇ ಮನಃ
॥ ೩೮ ॥

ಏವಮುಕ್ತಃ ಪ್ರಿಯಾಮಾಹ ಸ್ಕಂಧ ಆರುಹ್ಯತಾಮಿತಿ ।
ತತಶ್ಚಾಂತರ್ದಧೇ ಕೃಷ್ಣಃ ಸಾ ವಧೂರನ್ವತಪ್ಯತ
॥ ೩೯ ॥

ಹಾ ನಾಥ ರಮಣ ಪ್ರೇಷ್ಠ ಕ್ವಾಸಿ ಕ್ವಾಸಿ ಮಹಾಭುಜ ।
ದಾಸ್ಯಾಸ್ತೇ ಕೃಪಣಾಯಾ ಮೇ ಸಖೇ ದರ್ಶಯ ಸನ್ನಿಧಿಮ್
॥ ೪೦ ॥

ಅನ್ವಿಚ್ಛಂತ್ಯೋ ಭಗವತೋ ಮಾರ್ಗಂ ಗೋಪ್ಯೋಽವಿದೂರತಃ ।
ದದೃಶುಃ ಪ್ರಿಯವಿಶ್ಲೇಷಮೋಹಿತಾಂ ದುಃಖಿತಾಂ ಸಖೀಮ್
॥ ೪೧ ॥

ಗೆಳತಿಯರೇ! ಇಲ್ಲಿ ನೋಡಿರಿ. ನಮ್ಮ ಪ್ರಾಣಕಾಂತನು ತನ್ನ ಪ್ರೇಯಸಿಯೊಡನೆ ಕುಳಿತಿರುವ ಗುರುತುಗಳು ಕಾಣುತ್ತಿವೆ. ಬಹುಶಃ ಕಾಮುಕನಾದ ಶ್ರೀಕೃಷ್ಣನು ಇಲ್ಲಿಯೇ ಕುಳಿತು ಪ್ರೇಮಿಯಾದ ತನ್ನ ಪ್ರೇಯಸಿಯ ತಲೆಯನ್ನು ಬಾಚಿ ಹೆರಳನ್ನು ಹಾಕಿ ಹೂವನ್ನು ಮುಡಿಸಿರಬೇಕು. ॥ ೩೪ ॥ ಪರೀಕ್ಷಿತ ಮಹಾರಾಜಾ! ಆತ್ಮತೃಪ್ತನೂ, ಆತ್ಮಾರಾಮನೂ, ಅಖಂಡನೂ ಆದ ಭಗವಾನ್ ಶ್ರೀಕೃಷ್ಣನಲ್ಲಿ ಕಾಮದ ಕಲ್ಪನೆಯಾದರೂ ಹೇಗಿದ್ದೀತು? ಆದರೂ ಸ್ತ್ರೀಯರಿಗೆ ವಶನೋ ಎಂಬಂತೆ ಶ್ರೀಕೃಷ್ಣನು ಆ ಗೋಪಿಯೊಡನೆ ಒಂದು ಲೀಲೆಯನ್ನು ರಚಿಸಿದ್ದನು. ॥ ೩೫ ॥

ಈ ಪ್ರಕಾರವಾಗಿ ಗೋಪಿಯರು ಉನ್ಮತ್ತರಂತಾಗಿ, ದೇಹಭಾವನ್ನು ಮರೆತು ಭಗವಂತನ ಚರಣ ಚಿಹ್ನೆಗಳನ್ನು ಒಬ್ಬರು ಮತ್ತೊಬ್ಬರಿಗೆ ತೋರಿಸುತ್ತಾ ಕಾಡಿಂದ-ಕಾಡಿಗೆ ಅಲೆಯುತ್ತಿದ್ದರು. ಇತ್ತ ಭಗವಾನ್ ಶ್ರೀಕೃಷ್ಣನು ಬೇರೆ ಗೋಪಿಯರನ್ನು ವನದಲ್ಲಿ ಬಿಟ್ಟು ಏಕಾಂತಕ್ಕೆ ಕೊಂಡುಹೋದ ಭಾಗ್ಯವತಿಯಾದ ಗೋಪಿಯು "ನಾನೇ ಸಮಸ್ತ ಗೋಪಿಯರಲ್ಲಿ ಶ್ರೇಷ್ಠಳಾಗಿದ್ದೇನೆ. ಆದ್ದರಿಂದಲೇ ನಮ್ಮ ಪ್ರಿಯ ಶ್ರೀಕೃಷ್ಣನು ನನ್ನನ್ನು ಬಯಸುತ್ತಿದ್ದು, ಇತರ ಗೋಪಿಯರನ್ನೆಲ್ಲ ಬಿಟ್ಟು, ಕೇವಲ ನನ್ನನ್ನೇ ಆದರಿಸುತ್ತಿದ್ದಾನೆ.॥೩೬-೩೭॥ ಆ ಗೋಪಿಯ ಅಹಂಕಾರವು ಭಾವನೆಗೆ ಮಾತ್ರವೇ ಸೀಮಿತವಾಗಿರದೆ ಬ್ರಹ್ಮ-ರುದ್ರಾದಿಗಳಿಗೂ ಶಾಸಕನಾದ ಭಗವಾನ್ ಶ್ರೀಕೃಷ್ಣನನ್ನೇ ಶಾಸನ ಮಾಡತೊಡಗಿತು. ಒಮ್ಮೆ ಅರಣ್ಯದಲ್ಲಿ ಸಂಚರಿಸುತ್ತಿದ್ದಾಗ ತಾನೇ ಸರ್ವಶ್ರೇಷ್ಠಳೆಂಬ ಸೊಕ್ಕಿನಿಂದ ಮದಿಸಿದ ಗೋಪಿಯು ಕೇಶವನಿಗೆ ಹೇಳಿದಳು – ಪ್ರಿಯನೇ! ನನಗೆ ಇನ್ನು ಮುಂದೆ ನಡೆಯಲು ಸಾಧ್ಯವೇ ಇಲ್ಲ, ಬಳಲಿರುವೆನು. ನಿನಗೆ ಬೇರೆಲ್ಲಿಗಾದರೂ ವಿಹರಿಸಲು ಹೋಗಬೇಕೆಂದಿದ್ದರೆ ನನ್ನನ್ನು ಎತ್ತಿಕೊಂಡೇ ಹೋಗಬೇಕು. ॥ ೩೮ ॥ ತನ್ನ ಪ್ರಿಯತಮೆಯ ಇಂತಹ ಮಾತನ್ನು ಕೇಳಿದ ಶ್ಯಾಮಸುಂದರನು ಹೇಳಿದನು – ಪ್ರಿಯೆ! ಸರಿ, ಹಾಗಾದರೆ ಈಗ ನನ್ನ ಹೆಗಲೇರು. ಇದನ್ನು ಕೇಳಿದ ಗೋಪಿಯು ಶ್ರೀಕೃಷ್ಣನ ಹೆಗಲಮೇಲೆ ಏರತೊಡಗುತ್ತಲೇ ಅವನು ಅಂತರ್ಧಾನನಾದನು. ಗರ್ವಿಷ್ಠಳಾದ ಗೋಪಿಯು ಕುಸಿದು ಬಿದ್ದು ಪರಿತಪಿಸತೊಡಗಿದಳು. ॥ ೩೯ ॥ ಅಯ್ಯೋ! ನಾಥನೇ! ಎಲ್ಲಿರುವೆ? ಪ್ರಾಣನಾಥನೇ! ಮನೋರಮಣನೇ! ಮಹಾಭುಜನೇ! ನನ್ನನ್ನು ಬಿಟ್ಟು ಎಲ್ಲಿಗೆ ಹೋದೆ? ಗೆಳೆಯನೇ! ನಾನು ನಿನ್ನ ದಾಸಿ. ದೀನಳಾಗಿದ್ದೇನೆ. ದರ್ಶನವನ್ನಿತ್ತು ನಿನ್ನ ಸಾನ್ನಿಧ್ಯವನ್ನು ದಯಮಾಡಿ ತೋರಿ ಕಾಪಾಡು. ॥ ೪೦ ॥ ಪರೀಕ್ಷಿತ ರಾಜನೇ! ಭಗವಂತನ ಪಾದಕಮಲಗಳ ಗುರುತನ್ನೇ ಅನುಸರಿಸಿ ಅವನನ್ನು ಹುಡುಕುತ್ತಾ ಗೋಪಿಯರು ಸ್ವಲ್ಪ ದೂರದಲ್ಲಿಯೇ ತಮ್ಮ ಸಖಿಯೊಬ್ಬಳು ಪ್ರಿಯತಮನ ವಿಯೋಗದುಃಖದಿಂದ ವಿಮೋಹಿತಳಾಗಿ ಅಳುತ್ತಿರುವುದನ್ನು ನೋಡಿದರು. ॥ ೪೧ ॥ ಒಡನೆಯೇ ಗೋಪಿಯರೆಲ್ಲರೂ ಅವಳ ಬಳಿಗೆ ಸಾರಿ ಆಕೆಯ ದುಃಖವನ್ನು ವಿಚಾರಿಸಿದರು. ಆಗ ಆಕೆಯು – ಮಾಧವನು ತನ್ನೊಬ್ಬಳನ್ನೇ ಪ್ರೀತಿಸಿ, ಗೌರವಿಸುತ್ತ ಇದ್ದುದರಿಂದ ತಾನು ಗರ್ವಿಷ್ಠಳಾಗಿ ಅವನನ್ನು ಅವಮಾನಿಸಿದ ಪ್ರಸಂಗವನ್ನೂ, ಪ್ರಾಣಪ್ರಿಯನಾದ ಮಾಧವನು ತನ್ನನ್ನು ಪರಿತ್ಯಜಿಸಿ

ತಯಾ ಕಥಿತಮಾಕರ್ಣ್ಯ ಮಾನಪ್ರಾಪ್ತಿಂ ಚ ಮಾಧವಾತ್ ।
ಅವಮಾನಂ ಚ ದೌರಾತ್ಮ್ಯಾದ್ವಿಸ್ಮಯಂ ಪರಮಂ ಯಯುಃ ॥ ೪೨ ॥

ತತೋಽವಿಶನ್ವನಂ ಚಂದ್ರಜ್ಯೋತ್ಸ್ನಾ ಯಾವದ್ವಿಭಾವ್ಯತೇ ।
ತಮಃ ಪ್ರವಿಷ್ಟಮಾಲಕ್ಷ್ಯ ತತೋ ನಿವವೃತುಃ ಸ್ತ್ರಿಯಃ ॥ ೪೩ ॥

ತನ್ಮನಸ್ಕಾಸ್ತದಾಲಾಪಾಸ್ತದ್ವಿಚೇಷ್ಟಾಸ್ತದಾತ್ಮಿಕಾಃ ।
ತದ್ಗುಣಾನೇವ ಗಾಯಂತ್ಯೋ ನಾತ್ಮಾಗಾರಾಣಿ ಸಸ್ಮರುಃ ॥ ೪೪ ॥

ಪುನಃ ಪುಲಿನಮಾಗತ್ಯ ಕಾಲಿಂದ್ಯಾಃ ಕೃಷ್ಣಭಾವನಾಃ ।
ಸಮವೇತಾ ಜಗುಃ ಕೃಷ್ಣಂ ತದಾಗಮನಕಾಂಕ್ಷಿತಾಃ ॥ ೪೫ ॥

ಮಾಯವಾದುದನ್ನು ವಿವರಿಸಿ ಹೇಳಿದಳು. ಆಕೆಯ ಮಾತನ್ನು ಕೇಳಿದ ಗೋಪಿಯರೆಲ್ಲರೂ ಪರಮಾಶ್ಚರ್ಯಚಕಿತರಾದರು.॥೪೨॥

ಚಂದ್ರನ ಬೆಳದಿಂಗಳು ಇರುವವರೆಗೂ ಗೋಪಿಕೆಯರು ಕಾಡಿನಲ್ಲಿ ತಮ್ಮ ಪ್ರಿಯತಮನಾದ ಶ್ರೀಕೃಷ್ಣನನ್ನು ಹುಡುಕುತ್ತಲೇ ಇದ್ದರು. ಆದರೆ ಮುಂದೆ ದಟ್ಟವಾದ ವನದಲ್ಲಿ ಘೋರವಾದ ಅಂಧಕಾರವು ಕವಿದಿತ್ತು. ಮುಂದೆ ದಾರಿಗಾಣದೆ ಕೃಷ್ಣನೂ ಕತ್ತಲೆಯಲ್ಲಿ ಅವಿತುಕೊಳ್ಳಬಹುದೆಂದು ಎಣಿಸಿ ಅವರೆಲ್ಲರೂ ಹಿಂದಿರುಗಿದರು. ॥ ೪೩ ॥ ಪರೀಕ್ಷಿತನೇ! ಗೋಪಿಯರ ಮನಸ್ಸು ಶ್ರೀಕೃಷ್ಣಮಯವೇ ಆಗಿತ್ತು. ಅವರ ಬಾಯಿಂದ ಶ್ರೀಕೃಷ್ಣನ ಹೊರತಾದ ಯಾವ ಮಾತೂ ಹೊರಡುತ್ತಿರಲಿಲ್ಲ, ಅವರ ಶರೀರದಿಂದ ಕೇವಲ ಶ್ರೀಕೃಷ್ಣನಿಗಾಗಿ ಮತ್ತು ಕೇವಲ ಶ್ರೀಕೃಷ್ಣನ ಚೇಷ್ಟೆಗಳೇ ನಡೆಯುತ್ತಿದ್ದವು. ಅವರ ರೋಮ-ರೋಮ, ಅವರ ಆತ್ಮಾ ಶ್ರೀಕೃಷ್ಣಮಯವಾಗಿ ಹೋಗಿತ್ತು. ಅವರು ಕೇವಲ ಅವನ ಗುಣ-ಲೀಲೆಗಳನ್ನೇ ಹಾಡುತ್ತಿದ್ದರು. ಆದರಲ್ಲೇ ತನ್ಮಯರಾಗಿ ತಮ್ಮ ದೇಹಸ್ಮರಣೆಯೇ ಇಲ್ಲದಿರುವಾಗ ಮನೆಯ ನೆನಪು ಎಲ್ಲಿಂದ ಬರಬೇಕು? ॥ ೪೪ ॥ ಗೋಪಿಯರ ಇಂದ್ರಿಯಗಳೆಲ್ಲವೂ ಶ್ರೀಕೃಷ್ಣನ ಶುಭಾಗಮನಕ್ಕಾಗಿಯೇ ತವಕಿಸುತ್ತಿದ್ದವು. ಕಾಡಿನಿಂದ ಹಿಂದಿರುಗಿದ ಶ್ರೀಕೃಷ್ಣನನ್ನೇ ಸದಾಕಾಲದಲ್ಲಿಯೂ ಚಿಂತಿಸುತ್ತಿದ್ದ ಗೋಪಿಯರು ಪುನಃ ಯಮುನಾನದಿಯ ಮರಳು ದಿಣ್ಣೆಯ ಬಳಿಗೆ ಬಂದು ಸಾಂಘಿಕವಾಗಿ ಶ್ರೀಕೃಷ್ಣನ ಗುಣಗಾನವನ್ನು ಮಾಡತೊಡಗಿದರು. ॥ ೪೫ ॥

ಮೂವತ್ತನೆಯ ಅಧ್ಯಾಯವು ಮುಗಿಯಿತು. ॥ ೩೦ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮ ಸ್ಕಂಧೇ ಪೂರ್ವಾರ್ಧೇ
ರಾಸಕ್ರೀಡಾಯಾಂ ಕೃಷ್ಣಾನ್ವೇಷಣಂ ನಾಮ ತ್ರಿಂಶೋಽಧ್ಯಾಯಃ ॥ ೩೦ ॥

ಮೂವತ್ತೊಂದನೆಯ ಅಧ್ಯಾಯ

ಗೋಪಿಕಾಗೀತೆ

ಗೋಪ್ಯ ಊಚುಃ

ಜಯತಿ ತೇಽಧಿಕಂ ಜನ್ಮನಾ ವ್ರಜಃ
ಶ್ರಯತ ಇಂದಿರಾ ಶಶ್ವದತ್ರ ಹಿ ।
ದಯಿತ ದೃಶ್ಯತಾಂ ದಿಕ್ಷು ತಾವಕಾ-
ಸ್ತ್ವಯಿ ಧೃತಾಸವಸ್ತ್ವಾಂ ವಿಚಿನ್ವತೇ ॥ ೧ ॥

ಶರದುದಾಶಯೇ ಸಾಧುಜಾತಸತ್-
ಸರಸಿಜೋದರಶ್ರೀಮುಷಾ ದೃಶಾ ।
ಸುರತನಾಥ ತೇಽಶುಲ್ಕದಾಸಿಕಾ
ವರದ ನಿಘ್ನತೋ ನೇಹ ಕಿಂ ವಧಃ ॥ ೨ ॥

ಗೋಪಿಯರು ವಿರಹದಿಂದ ಹಾಡುತ್ತಾರೆ - ಪ್ರಿಯಕರನೇ! ಕೃಷ್ಣ! ಮಾಧವ! ನೀನು ಇಲ್ಲಿ ಹುಟ್ಟಿದ ಕಾರಣದಿಂದಲೇ ವೈಕುಂಠಾದಿ ಉತ್ತಮ ಲೋಕಗಳಿಗಿಂತಲೂ ಈ ವ್ರಜದ ಮಹಿಮೆ ಹೆಚ್ಚಾಗಿದೆ. ಆದರಿಂದಲೇ ಸೌಂದರ್ಯದ ನಿಧಿಯಾದ ಸಂಪದ್ಭರಿತಳಾದ ಲಕ್ಷ್ಮೀದೇವಿಯು ವೈಕುಂಠವನ್ನು ಬಿಟ್ಟು ನಿತ್ಯ ನಿರಂತರವಾಗಿ ಇಲ್ಲಿ ವಾಸಮಾಡುತ್ತಿದ್ದಾಳೆ ಪ್ರಿಯನೇ! ನಿನ್ನ ದಿವ್ಯ ಚರಣಾರವಿಂದಗಳಲ್ಲೇ ಪ್ರಾಣಾರ್ಪಣೆ ಮಾಡಿರುವ ಗೋಪಿಯರಾದ ನಾವು ನಿನ್ನನ್ನು ವನ-ವನಗಳಲ್ಲಿಯೂ ಹುಡುಕುತ್ತಿದ್ದೇವೆ. ದರ್ಶನವಿತ್ತು ಕಾಪಾಡು ಸ್ವಾಮಿ! ॥ ೧ ॥ ನಮ್ಮ ಪ್ರೇಮಪೂರ್ಣ ಹೃದಯದ ಸ್ವಾಮಿಯೇ! ನಾವು ನಿನ್ನ ನಿಃಶುಲ್ಕದಾಸಿಯರಾಗಿದ್ದೇವೆ. ಶರತ್ಕಾಲದಲ್ಲಿ ಸರೋವರಗಳಲ್ಲಿ ಸೊಂಪಾಗಿ ಬೆಳೆದಿರುವ ಕಮಲ ಪುಷ್ಪಗಳ ಕಾಂತಿಯನ್ನು ಅಪಹರಿಸುವ

ವಿಷಜಲಾಪ್ಯಯಾದ್ವ್ಯಾಲರಾಕ್ಷಸಾದ್
ವರ್ಷಮಾರುತಾದ್ವೈದ್ಯುತಾನಲಾತ್ ।
ವೃಷಮಯಾತ್ಮಜಾದ್ವಿಶ್ವತೋಭಯಾದ್
ಋಷಭ ತೇ ವಯಂ ರಕ್ಷಿತಾ ಮುಹುಃ ॥ ೩ ॥

ನ ಖಲು ಗೋಪಿಕಾನಂದನೋ ಭವಾ-
ನಖಿಲದೇಹಿನಾಮಂತರಾತ್ಮದೃಕ್ ।
ವಿಖನಸಾರ್ಥಿತೋ ವಿಶ್ವಗುಪ್ತಯೇ
ಸಖ ಉದೇಯಿವಾನ್ ಸಾತ್ವತಾಂ ಕುಲೇ ॥ ೪ ॥

ವಿರಚಿತಾಭಯಂ ವೃಷ್ಣಿಧುರ್ಯ ತೇ
ಚರಣಮೀಯುಷಾಂ ಸಂಸೃತೇರ್ಭಯಾತ್ ।
ಕರಸರೋರುಹಂ ಕಾಂತ ಕಾಮದಂ
ಶಿರಸಿ ಧೇಹಿ ನಃ ಶ್ರೀಕರಗ್ರಹಮ್ ॥ ೫ ॥

ವ್ರಜಜನಾರ್ತಿಹನ್ ವೀರ ಯೋಷಿತಾಂ
ನಿಜಜನಸ್ಮಯಧ್ವಂಸನಸ್ಮಿತ ।
ಭಜ ಸಖೇ ಭವತ್ಕಿಂಕರೀಃ ಸ್ಮ ನೋ
ಜಲರುಹಾನನಂ ಚಾರು ದರ್ಶಯ ॥ ೬ ॥

ಪ್ರಣತದೇಹಿನಾಂ ಪಾಪಕರ್ಶನಂ
ತೃಣಚರಾನುಗಂ ಶ್ರೀನಿಕೇತನಮ್ ।
ಫಣಿಫಣಾರ್ಪಿತಂ ತೇ ಪದಾಂಬುಜಂ
ಕೃಣು ಕುಚೇಷು ನಃ ಕೃಂಧಿ ಹೃಚ್ಛಯಮ್ ॥ ೭ ॥

ಮಧುರಯಾ ಗಿರಾ ವಲ್ಗುವಾಕ್ಯಯಾ
ಬುಧಮನೋಜ್ಞಯಾ ಪುಷ್ಕರೇಕ್ಷಣ ।
ವಿಧಿಕರೀರಿಮಾ ವೀರ ಮುಹ್ಯತೀ-
ರಧರಸೀಧುನಾಪ್ಯಾಯಯಸ್ವ ನಃ ॥ ೮ ॥

ತವ ಕಥಾಮೃತಂ ತಪ್ತಜೀವನಂ
ಕವಿಭಿರೀಡಿತಂ ಕಲ್ಮಷಾಪಹಮ್ ।

ಕಣ್ಣುಗಳಿಂದ ನೀನು ನಮ್ಮನ್ನು ಕೊಲ್ಲುತ್ತಿರುವೆ. ಓ ವರದನೇ! ನಿನ್ನ ನೋಟದಿಂದಲೇ ಕೊಲ್ಲುವುದು ವಧೆಯಲ್ಲವೇ? ಅಸ್ತ್ರಗಳಿಂದ ಕೊಲ್ಲುವುದು ಮಾತ್ರ ವಧೆಯೇ? ॥ ೨ ॥ ಪುರುಷಶ್ರೇಷ್ಠನೇ! ಯಮುನೆಯ ವಿಷಮಿಶ್ರಿತ ಜಲದಿಂದಾದ ಮೃತ್ಯುವಿನಿಂದಲೂ, ಹೆಬ್ಬಾವಿನ ರೂಪದಿಂದ ಬಂದ ಅಘಾಸುರನಿಂದಲೂ, ಇಂದ್ರನು ಕಳುಹಿಸಿದ್ದ ಪ್ರಚಂಡವಾದ ಗಾಳಿ-ಮಳೆ ಸಿಡಿಲುಗಳಿಂದಲೂ, ದಾವಾನಲದಿಂದಲೂ, ವೃಷಭಾಸುರನಿಂದಲೂ, ಮಾಯಾಸುರನ ಮಗನಾದ ತೃಣಾವರ್ತನಿಂದಲೂ ನಮ್ಮನ್ನು ಪದೇ-ಪದೇ ರಕ್ಷಿಸುವ ನೀನು ನಮ್ಮ ಮೇಲೆ ಏಕೆ ದಯೆ ತೋರುತ್ತಿಲ್ಲ! ॥ ೩ ॥ ನೀನು ಕೇವಲ ಯಶೋದಾನಂದನನೇ ಅಲ್ಲ. ಸಮಸ್ತ ದೇಹಧಾರಿಗಳ ಹೃದಯದಲ್ಲಿ ನೆಲೆಸಿರುವ ಅಂತರ್ಯಾಮಿಯಾಗಿದ್ದು ಸಾಕ್ಷಿಯಾಗಿರುವೆ. ಓ ಸಖನೇ! ಬ್ರಹ್ಮದೇವರ ಪ್ರಾರ್ಥನೆಯಂತೆ ವಿಶ್ವವನ್ನು ರಕ್ಷಿಸಲಿಕ್ಕಾಗಿ ಸಾತ್ವತವಂಶದಲ್ಲಿ ಅವತರಿಸಿರುವೆ. ॥ ೪ ॥ ಪ್ರಾಣಕಾಂತನೇ! ವೃಷ್ಣಿಶ್ರೇಷ್ಠನೇ! ಜನನ-ಮರಣರೂಪವಾದ ಸಂಸಾರಭಯದಿಂದ ಪೀಡಿತರಾದವರು ಸಂಸಾರದಿಂದ ಮುಕ್ತರಾಗಲು ನಿನ್ನ ಚರಣಕಮಲಗಳನ್ನು ಆಶ್ರಯಿಸುತ್ತಾರೆ. ಅಂತಹವರಿಗೆ ನೀನು ಅಭಯಹಸ್ತವನ್ನು ನೀಡುವೆ. ಸಮಸ್ತ ಭಕ್ತರ ಅಭಿಲಾಷೆಗಳನ್ನು ಪೂರ್ಣಗೊಳಿಸಿಕೊಡುವ ಲಕ್ಷ್ಮೀದೇವಿಯ ಪಾಣಿಗ್ರಹಣಮಾಡಿದ ಮತ್ತು ಭಕ್ತರ ವಿಷಯದಲ್ಲಿ ಅಭಯಮುದ್ರೆಯನ್ನು ತೋರುವ ನಿನ್ನ ದಿವ್ಯವಾದ ಕರಕಮಲವನ್ನು ನಮ್ಮ ತಲೆಯ ಮೇಲಿರಿಸು. ॥ ೫ ॥ ವ್ರಜವಾಸಿಗಳ ದುಃಖಗಳನ್ನು ದೂರಮಾಡುವ ವೀರ ಶಿರೋಮಣಿ ಶ್ಯಾಮಸುಂದರನೇ! ನಿನ್ನವರಾದ ಗೋಪಿಯರ ಗರ್ವವನ್ನು ಕ್ಷಣಮಾತ್ರದಲ್ಲಿ ಧ್ವಂಸಮಾಡುವ ಕಿರುನಗೆಯುಳ್ಳವನೇ! ಸೇವಕಿಯರಾದ ನಮ್ಮನ್ನು ಅಂಗೀಕರಿಸು. ದೂರೀಕರಿಸಬೇಡ. ಅಬಲೆಯರಾದ ನಮಗೆ ನಿನ್ನ ಮುಖಾರವಿಂದವನ್ನು ತೋರಿಸು. ॥ ೬ ॥ ಪ್ರಿಯತಮನೇ! ಶರಣಾಗತರಾದವರ ಪಾಪವನ್ನು ಹೋಗಲಾಡಿಸುವಂತಹ, ಹುಲ್ಲನ್ನು ಹಸುಗಳನ್ನು ಅನುಸರಿಸಿ ಹೋಗುವ, ಶ್ರೀಲಕ್ಷ್ಮೀದೇವಿಗೆ ನಿವಾಸಸ್ಥಾನವಾದ, ಸೌಂದರ್ಯ ಮಾಧುರ್ಯಗಳಿಗೆ ಆವಾಸವಾಗಿರುವ, ಕಾಳಿಯನ ಹೆಡೆಗಳನ್ನು ಮೆಟ್ಟಿ ಅನುಗ್ರಹಿಸಿದ ದಿವ್ಯವಾದ ನಿನ್ನ ಪಾದಪಂಕಜಗಳನ್ನು ನಮ್ಮ ವಕ್ಷಸ್ಥಳದ ಮೇಲಿರಿಸಿ ನಮ್ಮ ಹೃದಯತಾಪವನ್ನು ಶಾಂತಗೊಳಿಸು. ॥ ೭ ॥ ಕಮಲನಯನ! ನಿನ್ನ ಮಾತು ಅದೆಷ್ಟು ಮಧುರವಾಗಿದೆ. ಮಾತಿನಲ್ಲಿರುವ ಒಂದೊಂದು ಶಬ್ದವೂ, ಒಂದೊಂದು ಅಕ್ಷರವೂ, ಒಂದೊಂದು ವಾಕ್ಯವೂ ಮಧುರಾತಿ ಮಧುರವಾಗಿದೆ. ದೊಡ್ಡ-ದೊಡ್ಡ ವಿದ್ವಾಂಸರಿಗೂ ಕೂಡ ಅವು ಮನೋಜ್ಞವಾಗಿವೆ. ಅಂತಹ ನಿನ್ನ ಸುಮಧುರವಾದ ಚೆನ್ನುಡಿಗಳ ರಸಾಸ್ವಾದನೆಯಿಂದ ಮೋಹಗೊಂಡ ನಿನ್ನ ಸೇವಕಿಯರಾದ ನಮಗೆ ನಿನ್ನ ಅಮೃತಕ್ಕಿಂತಲೂ ಮಧುರವಾದ ಅಧರಾಮೃತವನ್ನು ಪಾನಮಾಡಿಸಿ ನಮ್ಮನ್ನು ತೃಪ್ತಿಗೊಳಿಸು. ॥ ೮ ॥

ಪ್ರಭುವೇ! ನಿನ್ನ ಲೀಲೆಯ ಕಥಾಪ್ರಸಂಗಗಳೂ ಅಮೃತಸ್ವರೂಪವೇ ಆಗಿವೆ. ವಿರಹದಿಂದ ಪರಿತಪಿಸುತ್ತಿರುವವರಿಗೆ ಅವು ಜೀವನ ಸರ್ವಸ್ವವೇ ಆಗಿವೆ. ದೊಡ್ಡ-ದೊಡ್ಡ ಜ್ಞಾನಿಗಳೂ ಮಹಾ

ಶ್ರವಣಮಂಗಲಂ ಶ್ರೀಮದಾತತಂ
ಭುವಿ ಗೃಣಂತಿ ತೇ ಭೂರಿದಾ ಜನಾಃ ॥ ೯ ॥

ಪ್ರಹಸಿತಂ ಪ್ರಿಯ ಪ್ರೇಮವೀಕ್ಷಣಂ
ವಿಹರಣಂ ಚ ತೇ ಧ್ಯಾನಮಂಗಲಮ್ ।
ರಹಸಿ ಸಂವಿದೋ ಯಾ ಹೃದಿಸ್ಪೃಶಃ
ಕುಹಕ ನೋ ಮನಃ ಕ್ಷೋಭಯಂತಿ ಹಿ ॥ ೧೦ ॥

ಚಲಸಿ ಯದ್ವ್ರಜಾಚ್ಚಾರಯನ್ಪಶೂನ್
ನಲಿನಸುಂದರಂ ನಾಥ ತೇ ಪದಮ್ ।
ಶಿಲತೃಣಾಂಕುರೈಃ ಸೀದತೀತಿ ನಃ
ಕಲಿಲತಾಂ ಮನಃ ಕಾಂತ ಗಚ್ಛತಿ ॥ ೧೧ ॥

ದಿನಪರಿಕ್ಷಯೇ ನೀಲಕುಂತಲೈ-
ರ್ವನರುಹಾನನಂ ಬಿಭ್ರದಾವೃತಮ್ ।
ಘನರಜಸ್ವಲಂ ದರ್ಶಯನ್ಮುಹು-
ರ್ಮನಸಿ ನಃ ಸ್ಮರಂ ವೀರ ಯಚ್ಛಸಿ ॥ ೧೨ ॥

ಪ್ರಣತಕಾಮದಂ ಪದ್ಮಜಾರ್ಚಿತಂ
ಧರಣಿಮಂಡನಂ ಧ್ಯೇಯಮಾಪದಿ ।
ಚರಣಪಂಕಜಂ ಶಂತಮಂ ಚ ತೇ
ರಮಣ ನಃ ಸ್ತನೇಷ್ವರ್ಪಯಾಧಿಹನ್ ॥ ೧೩ ॥

ಸುರತವರ್ಧನಂ ಶೋಕನಾಶನಂ
ಸ್ವರಿತವೇಣುನಾ ಸುಷ್ಠು ಚುಂಬಿತಮ್ ।
ಇತರರಾಗವಿಸ್ಮಾರಣಂ ನೃಣಾಂ
ವಿತರ ವೀರ ನಸ್ತೇಽಧರಾಮೃತಮ್ ॥ ೧೪ ॥

ಭಕ್ತ ಕವಿಗಳು ನಿನ್ನ ಚರಿತಾಮೃತವನ್ನು ಹಾಡಿ ಹೊಗಳಿದ್ದಾರೆ. ಚರಿತಾಮೃತದ ಶ್ರವಣಮಾತ್ರದಿಂದಲೇ ಪಾಪವು ಪರಿಹಾರವಾಗುತ್ತದೆ. ಸುಖ-ಸಂಪತ್ತುಗಳು ಪ್ರಾಪ್ತವಾಗುತ್ತವೆ. ನಿನ್ನ ಕಥಾಮೃತವನ್ನು ಲೋಕದಲ್ಲಿ ಪಾನಮಾಡುವಂತಹವರು ಹಿಂದಿನ ಜನ್ಮದಲ್ಲಿ ಬಹಳ ದಾನಗಳನ್ನು ಮಾಡಿದವರಾಗಿರುತ್ತಾರೆ. ಆ ಪುಣ್ಯದಿಂದ ಅವರಿಗೆ ನಿನ್ನ ಕಥಾಮೃತವನ್ನು ಈಗ ಸವಿಯುವ ಯೋಗವುಂಟಾಗಿದೆ. ॥ ೯ ॥ ಮಾಯಾಪತಿಯೇ! ಪ್ರಾಣ ಪ್ರಿಯನೇ! ನಿನ್ನ ಪ್ರೇಮಪೂರ್ಣವಾದ ನಗು, ಪ್ರೇಮಪೂರ್ಣವಾದ ನೋಟ, ನಾನಾ ಬಗೆಯ ಕ್ರೀಡೆಗಳು - ಇವೆಲ್ಲವನ್ನು ಸ್ಮರಿಸಿಕೊಂಡು ನಾವು ಆನಂದಪಡುತ್ತಿದ್ದೆವು. ನಿನ್ನನ್ನು ಧ್ಯಾನಿಸುವುದೇ ಮಂಗಳದಾಯಕವಾದುದು. ಅದರ ಫಲವಾಗಿ ನೀನೇ ನಮ್ಮ ಬಳಿಗೆ ಬಂದೆ. ಏಕಾಂತದಲ್ಲಿ ನಮ್ಮೊಡನೆ ಹೃದಯಸ್ಪರ್ಶಿಯಾದ ವಿನೋದದ ಮಾತುಗಳನ್ನಾಡಿದೆ. ಅದೆಲ್ಲವನ್ನು ಈಗ ನೆನೆಸಿಕೊಂಡರೆ ನಮ್ಮ ಮನಸ್ಸು ಕ್ಷೋಭೆಗೊಳ್ಳುತ್ತದೆ. ॥ ೧೦ ॥

ಪ್ರಾಣನಾಥನೇ! ನಿನ್ನ ಚರಣಕಮಲಗಳು ಕಮಲಕ್ಕಿಂತಲೂ ಸುಂದರವಾಗಿಯೂ, ಸುಕೋಮಲವಾಗಿಯೂ ಇವೆ. ನೀನು ಹಸುಗಳನ್ನು ಹೊಡೆದುಕೊಂಡು ವ್ರಜದಿಂದ ಹೊರಟಾಗಲೆಲ್ಲ ನಮಗೆ ನಿನ್ನ ಮೃದುವಾದ ಕಾಲುಗಳದೇ ಯೋಚನೆ. ಹಾದಿಯಲ್ಲಿರುವ ಕೊರಡುಕಲ್ಲುಗಳಿಂದಲೂ, ಹುಲ್ಲಿನ ಕೊನೆಗಳಿಂದಲೂ ನಿನ್ನ ಮೃದುವಾದ ಕಾಲುಗಳಿಗೆ ಎಷ್ಟು ನೋವಾಗುವುದೋ ಎಂದು ನಾವು ಪರಿತಪಿಸುತ್ತೇವೆ. ನಮ್ಮ ಮನಸ್ಸು ಬಹಳವಾಗಿ ನೊಂದಿರುತ್ತದೆ. ॥ ೧೧ ॥ ವೀರಪ್ರಿಯತಮನೇ! ಸಾಯಂಕಾಲವಾಗುತ್ತಲೇ ನೀನು ಹಸುಗಳೊಡನೆ ವ್ರಜಕ್ಕೆ ಹಿಂದಿರುಗುವಾಗ ನಿನ್ನ ಸುಂದರವಾದ ಮುಖಕಮಲವು ಕಪ್ಪಾದ ಗುಂಗುರು ಕೂದಲುಗಳಿಂದಲೂ, ಗೋಧೂಳಿಯಿಂದಲೂ ವ್ಯಾಪ್ತವಾಗಿ ಅತ್ಯಂತ ಶೋಭಾಯಮಾನವಾಗಿ ಕಾಣುತ್ತದೆ. ಅಂತಹ ಸುಂದರವಾದ ಮುಖಾರವಿಂದವನ್ನು ತೋರುತ್ತಾ ನೀನು ನಮ್ಮ ಹೃದಯದಲ್ಲಿ - ನಿನ್ನನ್ನು ಸೇರಬೇಕೆಂಬ ಆಕಾಂಕ್ಷೆಯನ್ನು ಉಂಟು ಮಾಡುತ್ತಿರುವೆ. ॥ ೧೨ ॥

ಪ್ರಿಯತಮನೇ! ನೀನೊಬ್ಬನೇ ನಮ್ಮ ಸಮಸ್ತವಾದ ಪೀಡೆಗಳನ್ನೂ ಪರಿಹರಿಸಲು ಸಮರ್ಥನಾಗಿರುವೆ. ನಿನ್ನ ಚರಣಕಮಲಗಳು ಶರಣಾಗತ ಭಕ್ತರ ಸಮಸ್ತ ಅಭಿಲಾಷೆಗಳನ್ನು ಈಡೇರಿಸುವಂತಹವುಗಳು. ಸಾಕ್ಷಾತ್ ಲಕ್ಷ್ಮಿಯೇ ಅವುಗಳನ್ನು ಸೇವಿಸುತ್ತಾಳೆ ಮತ್ತು ಭೂಮಂಡಲಕ್ಕೆ ಅಲಂಕಾರ ಪ್ರಾಯವಾಗಿವೆ. ಆಪತ್ತಿನ ಸಮಯದಲ್ಲಿ ನಿನ್ನ ಪಾದಾರವಿಂದಗಳನ್ನು ಧ್ಯಾನಿಸಿದರೆ ಸಮಸ್ತವಾದ ಆಪತ್ತುಗಳೂ ದೂರವಾಗುತ್ತವೆ. ಇಂತಹ ಕಲ್ಯಾಣಸ್ವರೂಪವಾದ ನಿನ್ನ ಚರಣಕಮಲಗಳನ್ನು ನಮ್ಮ ವಕ್ಷಸ್ಥಳದಲ್ಲಿರಿಸಿ ಹೃದಯದ ವ್ಯಥೆಯನ್ನು ಶಾಂತಗೊಳಿಸು. ॥ ೧೩ ॥

ವೀರಶಿರೋಮಣಿಯೇ! ನಿನ್ನ ಅಧರಾಮೃತವು ನಿನ್ನನ್ನು ಸೇರುವ ಆಕಾಂಕ್ಷೆಯನ್ನು ಹೆಚ್ಚಿಸುವಂತಹುದು. ಅದು ವಿರಹಜನ್ಯ ಸಮಸ್ತ ಶೋಕ-ಸಂತಾಪಗಳನ್ನು ನಾಶಮಾಡಿಬಿಡುತ್ತದೆ. ಆ ಮುರಳಿಯು ಅದನ್ನು ಚೆನ್ನಾಗಿ ಪಾನಮಾಡುತ್ತಾ ಇರುತ್ತದೆ. ಒಮ್ಮೆ ಅದನ್ನು ಕುಡಿದ ಜನರಿಗೆ ಬೇರಾವ ಆಸಕ್ತಿಯೂ ನೆನಪೇ ಇರುವುದಿಲ್ಲ. ಅಂತಹ ನಿನ್ನ ಅಧರಾಮೃತವನ್ನು ನಮಗೆ ದಯಪಾಲಿಸು. ॥ ೧೪ ॥

ಅಟತಿ ಯದ್ಭವಾನಹ್ನಿ ಕಾನನಂ
ತ್ರುಟಿರ್ಯುಗಾಯತೇ ತ್ವಾಮಪಶ್ಯತಾಮ್ ।
ಕುಟಿಲಕುಂತಲಂ ಶ್ರೀಮುಖಂ ಚ ತೇ
ಜಡ ಉದೀಕ್ಷತಾಂ ಪಕ್ಷ್ಮಕೃದ್ದೃಶಾಮ್ ॥ ೧೫ ॥

ಪತಿಸುತಾನ್ವಯಭ್ರಾತೃಬಾಂಧವಾ-
ನತಿವಿಲಂಘ್ಯ ತೇऽಂತ್ಯಚ್ಯುತಾಗತಾಃ ।
ಗತಿವಿದಸ್ತವೋದ್ಗೀತಮೋಹಿತಾಃ
ಕಿತವ ಯೋಷಿತಃ ಕಸ್ತ್ಯಜೇನ್ನಿಶಿ ॥ ೧೬ ॥

ರಹಸಿ ಸಂವಿದಂ ಹೃಚ್ಛಯೋದಯಂ
ಪ್ರಹಸಿತಾನನಂ ಪ್ರೇಮವೀಕ್ಷಣಮ್ ।
ಬೃಹದುರಃ ಶ್ರಿಯೋ ವೀಕ್ಷ್ಯ ಧಾಮ ತೇ
ಮುಹುರತಿಸ್ಪೃಹಾ ಮುಹ್ಯತೇ ಮನಃ ॥ ೧೭ ॥

ವ್ರಜವನೌಕಸಾಂ ವ್ಯಕ್ತಿರಂಗ ತೇ
ವೃಜಿನಹಂತ್ರ್ಯಲಂ ವಿಶ್ವಮಂಗಲಮ್ ।
ತ್ಯಜ ಮನಾಕ್ ಚ ನಸ್ತ್ವತ್ಸ್ಪೃಹಾತ್ಮನಾಂ
ಸ್ವಜನಹೃದ್ರುಜಾಂ ಯನ್ನಿಷೂದನಮ್ ॥ ೧೮ ॥

ಯತ್ತೇ ಸುಜಾತಚರಣಾಂಬುರುಹಂ ಸ್ತನೇಷು
ಭೀತಾಃ ಶನೈಃ ಪ್ರಿಯ ದಧೀಮಹಿ ಕರ್ಕಶೇಷು ।
ತೇನಾಟವೀಮಟಸಿ ತದ್ವ್ಯಥತೇ ನ ಕಿಂಸ್ವಿತ್
ಕೂರ್ಪಾದಿಭಿರ್ಭ್ರಮತಿ ಧೀರ್ಭವದಾಯುಷಾಂ ನಃ ॥ ೧೯ ॥

ಪ್ರಾಣಪ್ರಿಯನೇ! ಹಗಲಿನಲ್ಲಿ ನೀನು ಹಸುಗಳನ್ನು ಮೇಯಿಸಲು ವನಕ್ಕೆ ಹೋದಾಗ, ನಿನ್ನನ್ನು ನೋಡದೆ ನಮಗೆ ಒಂದೊಂದು ಕ್ಷಣವು ಯುಗದಂತೆ ಕಾಣುತ್ತದೆ. ಸಾಯಂಕಾಲವಾಗುತ್ತಲೇ ಮರಳಿದಾಗ, ಗುಂಗುರು ಕೂದಲುಗಳಿಂದ ಕೂಡಿದ ನಿನ್ನ ಪರಮ ಸುಂದರ ಮುಖಾರವಿಂದವನ್ನು ನೋಡುತ್ತಾ ಇರುವಾಗ ರೆಪ್ಪೆಗಳು ಮುಚ್ಚಿಕೊಳ್ಳುವುದು ನಮಗೆ ತುಂಬಾ ಮುಜುಗರವಾಗುತ್ತದೆ. ಈ ಕಣ್ಣುಗಳ ರೆಪ್ಪೆಗಳನ್ನು ನಿರ್ಮಿಸಿದ ಬ್ರಹ್ಮನು ಮೂರ್ಖನೇ ಆಗಿದ್ದಾನೆ ಎಂದೆನಿಸುತ್ತದೆ. ॥ ೧೫ ॥ ಕಪಟಿಯಾದ ಅಚ್ಯುತನೇ! ಕಪಟನಾಟಕ ಸೂತ್ರಧಾರಿಯೇ! ನಾವು ನಮ್ಮ ಪತಿ-ಪುತ್ರರನ್ನೂ, ಸಹೋದರರನ್ನು, ಬಂಧುಗಳನ್ನು, ಕುಲ ಪರಿವಾರವನ್ನು ತ್ಯಜಿಸಿ, ಅವರ ಆಜ್ಞೆಯನ್ನು ಉಲ್ಲಂಘಿಸಿ ನಿನ್ನ ವೇಣುಗಾನದಿಂದ ಆಕರ್ಷಿಸಲ್ಪಟ್ಟವರಾಗಿ, ಕೊಳಲಿನ ಧ್ವನಿಯಿಂದಲೇ ನೀನೆಲ್ಲಿರುವೆ ಎಂಬುದನ್ನು ತಿಳಿದುಕೊಂಡು ಆ ಧ್ವನಿಯನ್ನೇ ಅನುಸರಿಸಿ ನಿನ್ನ ಬಳಿಗೆ ಬಂದೆವು. ಹೀಗೆ ರಾತ್ರಿಯ ಸಮಯದಲ್ಲಿ ಬಂದಿರುವ ಯುವತಿಯರನ್ನು ನೀನಲ್ಲದೆ ಬೇರೆ ಯಾರು ತ್ಯಜಿಸಿಹೋಗುತ್ತಾರೆ? ॥ ೧೬ ॥ ಪ್ರಿಯಕರನೇ! ನೀನು ಏಕಾಂತದಲ್ಲಿ ನಮ್ಮೊಡನೆ ಆಡುತ್ತಿದ್ದ ಪ್ರೇಮಪ್ರಚೋದಕವಾದ ಸರಸ-ಸಲ್ಲಾಪದ ಮಾತುಗಳನ್ನು, ಪ್ರೇಮಪೂರ್ವಕವಾದ ನಿನ್ನ ವೀಕ್ಷಣವನ್ನು, ಮಂದಹಾಸದಿಂದ ಕೂಡಿದ ನಿನ್ನ ಸುಂದರವಾದ ಮುಖಾರವಿಂದವನ್ನು, ಲಕ್ಷ್ಮಿಗೆ ನಿವಾಸಸ್ಥಾನವಾದ ನಿನ್ನ ವಿಶಾಲವಾದ ವಕ್ಷಃಸ್ಥಳವನ್ನು ಸ್ಮರಿಸಿಕೊಂಡು ಮುಗ್ಧವಾದ ನಮ್ಮ ಮನಸ್ಸು ನಿನ್ನನ್ನು ಪುನಃ ಸೇರಲೇಬೇಕೆಂದು ಬಹಳವಾಗಿ ಹಂಬಲಿಸುತ್ತಿದೆ. ॥ ೧೭ ॥ ಪ್ರಿಯಕರನೇ! ನಿನ್ನ ಈ ಅವತಾರವು ಗೋಕುಲವಾಸಿಗಳ ದುಃಖವನ್ನೂ, ತಾಪವನ್ನೂ ವಿನಾಶಗೊಳಿಸಲು ಮತ್ತು ವಿಶ್ವಕ್ಕೆ ಮಂಗಳವನ್ನುಂಟು ಮಾಡುವುದಕ್ಕಾಗಿಯೇ ಆಗಿದೆ. ನಮ್ಮ ಹೃದಯವು ನಿನ್ನ ಕುರಿತಾದ ಲಾಲಸೆಯಿಂದ ತುಂಬಿ ಹೋಗಿದೆ. ನಿನ್ನ ಸ್ವಜನರಾದ ನಮ್ಮುಗಳ ಹೃದ್ರೋಗವನ್ನು ಪೂರ್ಣವಾಗಿ ನಾಶ ಮಾಡುವಂತಹ ಯಾವುದಾದರೂ ಔಷಧವನ್ನು ಕೊಟ್ಟು ಕಾಪಾಡು. ॥ ೧೮ ॥ ಪ್ರಾಣಕಾಂತನೇ! ನಿನ್ನ ಚರಣಗಳು ಕಮಲಕ್ಕಿಂತಲೂ ಕೋಮಲವಾದುವು. ಅವನ್ನು ನಮ್ಮ ಕಠೋರವಾದ ಸ್ತನಗಳ ಮೇಲಿರಿಸಿಕೊಳ್ಳುವಾಗಲೂ ಎಲ್ಲಿಯಾದರೂ ಅವಕ್ಕೆ ನೋವಾಗಬಹುದೆಂದು ಹೆದರಿಕೊಂಡೇ ಇಟ್ಟುಕೊಳ್ಳುವೆವು. ಅಂತಹ ಚರಣಗಳಿಂದ ನೀನು ರಾತ್ರಿಯಲ್ಲಿ ಘೋರವಾದ ಅರಣ್ಯದಲ್ಲಿ ಅಡಗಿಕೊಂಡೇ ಅಲೆಯುತ್ತಿರುವೆಯಲ್ಲ! ಕಲ್ಲು ಮುಳ್ಳುಗಳಿಂದ ನಿನ್ನ ಸುಕೋಮಲವಾದ ಪಾದಗಳಿಗೆ ನೋವಾಗುತ್ತಿಲ್ಲವೆ? ಇದನ್ನು ನೆನೆದಾಗಲೇ ನಿನ್ನಲ್ಲಿಯೇ ಪ್ರಾಣಗಳನ್ನಿಟ್ಟುಕೊಂಡಿರುವ ನಮಗೆ ಬುದ್ಧಿಭ್ರಮಣೆಯುಂಟಾಗುತ್ತದೆ. ಶ್ಯಾಮಸುಂದರ ಶ್ರೀಕೃಷ್ಣ! ನಮ್ಮ ಜೀವನವು ನಿನಗಾಗಿಯೇ ಮುಡುಪಾಗಿಟ್ಟಿದೆ. ನಿನ್ನ ಸೇವೆಗಾಗಿಯೇ ನಮ್ಮನ್ನು ಅರ್ಪಿಸಿಕೊಂಡುಬಿಟ್ಟಿದ್ದೇವೆ. ದರ್ಶನವಿತ್ತು ಕಾಪಾಡು. ॥ ೧೯ ॥

ಮೂವತ್ತೊಂದನೆಯ ಅಧ್ಯಾಯವು ಮುಗಿಯಿತು. ॥ ೩೧ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮಸ್ಕಂಧೇ ಪೂರ್ವಾರ್ಧೇ
ರಾಸಕ್ರೀಡಾಯಾಂ ಗೋಪಿಕಾಗೀತಂ ನಾಮೈಕತ್ರಿಂಶೋऽಧ್ಯಾಯಃ ॥ ೩೧ ॥

ಮೂವತ್ತೆರಡನೆಯ ಅಧ್ಯಾಯ

ಭಗವಂತನು ಪ್ರಕಟನಾಗಿ ಗೋಪಿಯರನ್ನು ಸಂತೈಸಿದುದು

ಶ್ರೀಶುಕ ಉವಾಚ

**ಇತಿ ಗೋಪ್ಯಃ ಪ್ರಗಾಯಂತ್ಯಃ ಪ್ರಲಪಂತ್ಯಶ್ಚ ಚಿತ್ರಧಾ ।
ರುರುದುಃ ಸುಸ್ವರಂ ರಾಜನ್ ಕೃಷ್ಣದರ್ಶನಲಾಲಸಾಃ ॥ ೧ ॥**

ಶ್ರೀಶುಕಮಹಾಮುನಿಗಳು ಹೇಳುತ್ತಾರೆ - ಎಲೈ ಪರೀಕ್ಷಿತನೇ! ಹೀಗೆ ಶ್ರೀಕೃಷ್ಣನ ದರ್ಶನಾಕಾಂಕ್ಷಿಗಳಾದ ಗೋಪಿಯರು ಕೆಲವು ವೇಳೆ ಅವನ ಲೀಲಾಪ್ರಸಂಗಗಳನ್ನು ಹಾಡುತ್ತಾ ಪ್ರಲಾಪಿಸುತ್ತಿದ್ದರೆ, ಕೆಲವು ವೇಳೆ ವಿರಹವೇದನೆಯನ್ನು ತಾಳಲಾರದೆ ಕರುಣಾಜನಕವಾಗಿ ಸುಸ್ವರದಿಂದ ಬಗೆ-ಬಗೆಯಾಗಿ ವಿಲಪಿಸುತ್ತಿದ್ದರು. ॥ ೧ ॥

**ತಾಸಾಮಾವಿರಭೂಚ್ಛೌರಿಃ ಸ್ಮಯಮಾನಮುಖಾಂಬುಜಃ ।
ಪೀತಾಂಬರಧರಃ ಸ್ರಗ್ವೀ ಸಾಕ್ಷಾನ್ಮನ್ಮಥಮನ್ಮಥಃ ॥ ೨ ॥**

ಒಡನೆಯೇ ಅವರ ಮಧ್ಯದಲ್ಲೇ ಭಗವಾನ್ ಶ್ರೀಕೃಷ್ಣನು ಪ್ರಕಟನಾದನು. ಅವನ ಮುಖಾರವಿಂದವು ಮಂದಹಾಸದಿಂದ ಪ್ರಫುಲ್ಲವಾಗಿತ್ತು. ವನಮಾಲೆಯನ್ನು, ಪೀತಾಂಬರವನ್ನು ಧರಿಸಿದ್ದ ಶ್ರೀಹರಿಯು ಸಾಕ್ಷಾತ್ ಮನ್ಮಥನ ಮನಸ್ಸನ್ನು ಸೂರೆಗೊಳ್ಳುವಂತಹ ಸುಂದರ ರೂಪದಿಂದ ಬೆಳಗಿದನು. ॥ ೨ ॥

**ತಂ ವಿಲೋಕ್ಯಾಗತಂ ಪ್ರೇಷ್ಠಂ ಪ್ರೀತ್ಯುತ್ಫುಲ್ಲದೃಶೋಽಬಲಾಃ ।
ಉತ್ತಸ್ಥುರ್ಯುಗಪತ್ ಸರ್ವಾಸ್ತನ್ವಃ ಪ್ರಾಣಮಿವಾಗತಮ್ ॥ ೩ ॥**

ಕೋಟಿ-ಕೋಟಿ ಮನ್ಮಥರಿಗಿಂತಲೂ ಪರಮಮನೋಹರನಾದ ಪ್ರಾಣಪ್ರಿಯ ಶ್ಯಾಮಸುಂದರನನ್ನು ನೋಡಿದ ಗೋಪಿಯರ ಕಣ್ಣುಗಳು ಕಮಲದಂತೆ ಅರಳಿದವು. ಗತಪ್ರಾಣವಾದ ಶರೀರದಲ್ಲಿ ಪುನಃ ದಿವ್ಯ ಪ್ರಾಣವು ಸಂಚಾರವಾದಾಗ ಇಂದ್ರಿಯಗಳೆಲ್ಲವೂ ಒಮ್ಮೆಗೆ ಕಾರ್ಯೋನ್ಮುಖವಾಗುವಂತೆ ಗೋಪಿಯರೆಲ್ಲರೂ ಒಮ್ಮೆಗೆ ಎದ್ದು ನಿಂತರು. ರೋಮಾಂಚಿತರಾಗಿ ನವಸ್ಫೂರ್ತಿಯಿಂದ ಒಡಗೊಂಡರು. ॥ ೩ ॥

**ಕಾಚಿತ್ ಕರಾಂಬುಜಂ ಶೌರೇರ್ಜಗೃಹೇಽಂಜಲಿನಾ ಮುದಾ ।
ಕಾಚಿದ್ದಧಾರ ತದ್ಬಾಹುಮಂಸೇ ಚಂದನಭೂಷಿತಮ್ ॥ ೪ ॥**

ಒಬ್ಬ ಗೋಪಿಯು ಅತ್ಯಂತ ಪ್ರೇಮಾನಂದದಿಂದ ಶ್ರೀಕೃಷ್ಣನ ಕರಕಮಲವನ್ನು ತನ್ನೆರಡೂ ಕೈಗಳಿಂದ ಹಿಡಿದುಕೊಂಡಳು. ಮತ್ತೊಬ್ಬಳು ಚಂದನಲಿಪ್ತವಾದ ಅವನ ಬಾಹುವನ್ನು ತನ್ನ ಹೆಗಲಮೇಲೆ ಇರಿಸಿಕೊಂಡಳು. ॥ ೪ ॥

**ಕಾಚಿದಂಜಲಿನಾಗೃಹ್ಣಾತ್ತನ್ವೀ ತಾಂಬೂಲಚರ್ವಿತಮ್ ।
ಏಕಾ ತದಂಘ್ರಿಕಮಲಂ ಸಂತಪ್ತಾ ಸ್ತನಯೋರಧಾತ್ ॥ ೫ ॥**

ಒಬ್ಬಳು ಶ್ರೀಕೃಷ್ಣನು ಅಗಿದಿದ್ದ ತಾಂಬೂಲವನ್ನು ಪ್ರಸಾದರೂಪವಾಗಿ ಬೊಗಸೆಯಲ್ಲಿ ಗ್ರಹಿಸಿದಳು. ಮತ್ತೊಬ್ಬ ಗೋಪಿಯು ಕುಳಿತುಕೊಂಡು ಶ್ರೀಕೃಷ್ಣನ ಪಾದಕಮಲವನ್ನು ವಿರಹವ್ಯಥೆಯಿಂದ ಉರಿಯುತ್ತಿದ್ದ ತನ್ನ ಎದೆಯ ಮೇಲೆ ಇರಿಸಿಕೊಂಡಳು. ॥ ೫ ॥

**ಏಕಾ ಭ್ರುಕುಟಿಮಾಬಧ್ಯ ಪ್ರೇಮಸಂರಂಭವಿಹ್ವಲಾ ।
ಘ್ನತೀವೈಕ್ಷತ್ ಕಟಾಕ್ಷೇಪೈಃ ಸಂದಷ್ಟದಶನಚ್ಛದಾ ॥ ೬ ॥**

ಇನ್ನೊಬ್ಬ ಗೋಪಿಯು ಪ್ರಣಯಕೋಪದಿಂದ ವಿಹ್ವಲಳಾಗಿ ಹುಬ್ಬುಗಳನ್ನು ಗಂಟಿಕ್ಕಿ, ಹಲ್ಲುಗಳಿಂದ ತುಟಿಯನ್ನು ಕಚ್ಚುತ್ತಾ, ಕಟಾಕ್ಷಬಾಣಗಳಿಂದ ಶ್ರೀಕೃಷ್ಣನನ್ನು ಪ್ರಹರಿಸುವಳೋ ಎಂಬಂತೆ ದುರುಗುಟ್ಟಿಕೊಂಡು ನೋಡುತ್ತಿದ್ದಳು. ॥ ೬ ॥

**ಅಪರಾನಿಮಿಷದ್ದೃಗ್ಭ್ಯಾಂ ಜುಷಾಣಾ ತನ್ಮುಖಾಂಬುಜಮ್ ।
ಆಪೀತಮಪಿ ನಾತೃಪ್ಯತ್ಸಂತಸ್ತಚ್ಚರಣಂ ಯಥಾ ॥ ೭ ॥**

ಒಬ್ಬಳು ಎವೆಯಿಕ್ಕದ ನೋಟದಿಂದ ಶ್ರೀಕೃಷ್ಣನ ಮುಖಾರವಿಂದದ ಮಧುವನ್ನು ಪಾನಮಾಡುತ್ತಲೇ ಇದ್ದಳು. ಸತ್ಪುರುಷರು ಭಗವಂತನ ದಿವ್ಯ ಚರಣಾರವಿಂದಗಳನ್ನು ಎಷ್ಟು ನೋಡಿದರೂ ತೃಪ್ತರಾಗದಿರುವಂತೆ ಆ ಗೋಪಿಯು ನಿರಂತರವಾಗಿ ಮುಖಕಮಲದ ಮಧುವನ್ನು ಪಾನಮಾಡುತ್ತಿದ್ದರೂ ತೃಪ್ತಳಾಗಲೇ ಇಲ್ಲ. ॥ ೭ ॥

**ತಂ ಕಾಚಿನ್ನೇತ್ರರಂಧ್ರೇಣ ಹೃದಿಕೃತ್ಯ ನಿಮೀಲ್ಯ ಚ ।
ಪುಲಕಾಂಗ್ಯುಪಗುಹ್ಯಾಸ್ತೇ ಯೋಗೀವಾನಂದಸಂಪ್ಲುತಾ ॥ ೮ ॥**

ಇನ್ನೊರ್ವ ಗೋಪಿಯು ಕಂಗಳೆಂಬ ಮಾರ್ಗದಿಂದ ಭಗವಂತನನ್ನು ಹೃದಯಕಮಲಕ್ಕೊಯ್ದು ದ್ವಾರರೂಪದಿಂದಿದ್ದ ರೆಪ್ಪೆಗಳನ್ನು ಮುಚ್ಚಿಕೊಂಡಳು. ಹೃದಯಗಹ್ವರದಲ್ಲಿ ಪ್ರಕಾಶಮಾನವಾದ ಶ್ರೀಕೃಷ್ಣನನ್ನು ಆಲಿಂಗಿಸಿಕೊಂಡು ರೋಮಾಂಚಿತಳಾಗಿ ಪರಮಾನಂದದಲ್ಲಿ ಮುಳುಗಿಹೋದಳು. ॥ ೮ ॥

ಸರ್ವಾಸ್ತಾಃ ಕೇಶವಾಲೋಕಪರಮೋತ್ಸವನಿರ್ವೃತಾಃ ।
ಜಹುರ್ವಿರಹಜಂ ತಾಪಂ ಪ್ರಾಜ್ಞಂ ಪ್ರಾಪ್ಯ ಯಥಾ ಜನಾಃ ॥ ೯ ॥

ತಾಭಿರ್ವಿಧೂತಶೋಕಾಭಿರ್ಭಗವಾನಚ್ಯುತೋ ವೃತಃ ।
ವ್ಯರೋಚತಾಧಿಕಂ ತಾತ ಪುರುಷಃ ಶಕ್ತಿಭಿರ್ಯಥಾ ॥ ೧೦ ॥

ತಾಃ ಸಮಾದಾಯ ಕಾಲಿಂದ್ಯಾ ನಿರ್ವಿಶ್ಯ ಪುಲಿನಂ ವಿಭುಃ ।
ವಿಕಸತ್ಕುಂದಮಂದಾರಸುರಭ್ಯನಿಲಷಟ್ಪದಮ್ ॥ ೧೧ ॥

ಶರಚ್ಚಂದ್ರಾಂಶುಸಂದೋಹಧ್ವಸ್ತದೋಷಾತಮಃ ಶಿವಮ್ ।
ಕೃಷ್ಣಾಯಾ ಹಸ್ತತರಲಾಚಿತಕೋಮಲವಾಲುಕಮ್ ॥ ೧೨ ॥

ತದ್ದರ್ಶನಾಹ್ಲಾದವಿಧೂತಹೃದ್ರುಜೋ
ಮನೋರಥಾಂತಂ ಶ್ರುತಯೋ ಯಥಾ ಯಯುಃ ।
ಸ್ವೈರುತ್ತರೀಯೈಃ ಕುಚಕುಂಕುಮಾಂಕಿತೈ-
ರಚೀಕ್ಲೃಪನ್ನಾಸನಮಾತ್ಮಬಂಧವೇ ॥ ೧೩ ॥

ತತ್ರೋಪವಿಷ್ಟೋ ಭಗವಾನ್ ಸ ಈಶ್ವರೋ
ಯೋಗೇಶ್ವರಾಂತರ್ಹೃದಿ ಕಲ್ಪಿತಾಸನಃ ।
ಚಕಾಸ ಗೋಪೀಪರಿಷದ್ಗತೋಽರ್ಚಿತ-
ಸ್ತ್ರೈಲೋಕ್ಯಲಕ್ಷ್ಮ್ಯೇಕಪದಂ ವಪುರ್ದಧತ್ ॥ ೧೪ ॥

ಪರೀಕ್ಷಿತನೇ! ಮುಮುಕ್ಷುಗಳಾದ ಜನರು ಪ್ರಾಜ್ಞಪುರುಷನನ್ನು ಸಂದರ್ಶಿಸಿ ಸಂಸಾರದ ಜಂಜಾಟದಿಂದ ಮುಕ್ತರಾಗುವಂತೆಯೇ ಗೋಪಿಯರೆಲ್ಲರೂ ಭಗವಾನ್ ಶ್ರೀಕೃಷ್ಣನ ದರ್ಶನೋತ್ಸವದಿಂದ ಆನಂದಭರಿತರಾಗಿ ವಿರಹತಾಪದಿಂದ ಮುಕ್ತರಾದರು. ॥ ೯ ॥ ಭಗವಂತನಾದ ಅಚ್ಯುತನು ವಿರಹಶೋಕದಿಂದ ಮುಕ್ತರಾದ ಗೋಪಿಯರೊಡನೆ ಸುತ್ತುವರಿಯಲ್ಪಟ್ಟು ಜ್ಞಾನ, ಬಲ ಮೊದಲಾದ ಶಕ್ತಿಗಳಿಂದ ಪರಿಪೂರ್ಣನಾದ ಈಶ್ವರನಂತೆಯೇ ಅತ್ಯಂತ ಶೋಭಾಯಮಾನನಾಗಿ ಪ್ರಕಾಶಿಸಿದನು. ॥ ೧೦ ॥

ಬಳಿಕ ಭಗವಾನ್ ಶ್ರೀಕೃಷ್ಣನು ಆ ವ್ರಜದ ಗೋಪಿಯರನ್ನು ಕರೆದುಕೊಂಡು ಯಮುನಾನದಿಯ ಮರಳು ಗುಡ್ಡೆಗಳ ಬಳಿಗೆ ಹೋದನು. ಆ ಸಮಯದಲ್ಲಿ ಅರಳಿದ ಮಲ್ಲಿಗೆ, ಮಂದಾರ ಮುಂತಾದ ಪುಷ್ಪಗಳಿಂದ ಸುಗಂಧವನ್ನು ಹೊತ್ತು ಶೀತಲವಾದ ಮಂದಾನಿಲವು ಬೀಸುತ್ತಿತ್ತು. ಸುಗಂಧದಿಂದ ಆಕರ್ಷಿತವಾದ ಮತ್ತ ಭೃಂಗಗಳು ಅತ್ತಲಿತ್ತ ಹಾರಾಡುತ್ತಿದ್ದವು. ಶರತ್ಕಾಲದ ಹುಣ್ಣಿಮೆಯ ಚಂದ್ರನು ಕಿರಣಗಳಿಂದ ಮೂಡಿಬಂದ ಹೃದಯಾನಂದಕರವಾದ ಬೆಳದಿಂಗಳಿನಿಂದ ರಾತ್ರಿಯ ಕತ್ತಲೆಯು ತೊಲಗಿಹೋದದ್ದಲ್ಲದೆ ಗೋಪಿಯರಿಗೆ ಆ ರಾತ್ರಿಯು ಅತ್ಯಂತ ಮಂಗಳಕರವೂ ಆಯಿತು. ಯಮುನೆಯ ಚಂಚಲವಾದ ತೆರೆಗಳ ರೂಪವಾದ ಕೈಗಳಿಂದ ಎರಚಲ್ಪಟ್ಟ ಕೋಮಲ ಮರಳಿನಿಂದ ಭಗವಂತನ ಲೀಲೆಗಳಿಗಾಗಿ ದಿವ್ಯವೇದಿಕೆಯನ್ನೇ ನಿರ್ಮಿಸಿತ್ತು. ॥ ೧೨ ॥ ಶ್ರುತಿಗಳು ಕರ್ಮಕಾಂಡದ ಮೂಲಕ ಪಾಪವನ್ನು ಪರಿಹರಿಸಿ, ಜ್ಞಾನಕಾಂಡದ ಮೂಲಕ ಆತ್ಮಸಾಕ್ಷಾತ್ಕಾರದ ಮನೋರಥವನ್ನು ಈಡೇರಿಸಿಕೊಂಡು ವಂತೆ ಶ್ರೀಕೃಷ್ಣನ ದರ್ಶನದಿಂದ ಗೋಪಿಯರು ತಮ್ಮ ಮನಸ್ಸಿನ ಆಧಿ-ವ್ಯಾಧಿಗಳನ್ನು ಕಳಕೊಂಡು ಆನಂದ ಸಾಗರದಲ್ಲಿ ಮುಳುಗಿ ಹೋದರು. ಮರಳದಿಣ್ಣೆಗೆ ಬಂದ ಗೋಪಿಯರು ವಕ್ಷಸ್ಥಳದಲ್ಲಿದ್ದ ಕುಂಕುಮ ಕೇಸರಿಯಿಂದ ಅಂಕಿತವಾಗಿದ್ದ ತಮ್ಮ ಉತ್ತರೀಗಳನ್ನು ಹಾಸಿ ಆತ್ಮಬಂಧುವಾದ ಶ್ರೀಕೃಷ್ಣನಿಗೆ ಆಸನವನ್ನು ಕಲ್ಪಿಸಿಕೊಟ್ಟರು. ॥ ೧೩ ॥ ಮಹಾ-ಮಹಾಯೋಗಿಗಳು ತಮ್ಮ-ತಮ್ಮ ಹೃನ್ಮಂದಿರಗಳಲ್ಲಿ ಕಲ್ಪಿಸಿಕೊಂಡ ಆಸನಗಳಲ್ಲಿ ಕುಳಿತು ವಿರಾಜಿಸುವ ಸರ್ವೇಶ್ವರನಾದ ಭಗವಂತನು ತನ್ನ ಪರಮಭಕ್ತೆಯರಾದ ಗೋಪಿಯರು ಕಲ್ಪಿಸಿಕೊಟ್ಟ ಚೇಲಾಸನದಲ್ಲಿ ಕುಳಿತನು. ಮೂರು ಲೋಕಗಳ ಲಾವಣ್ಯಕ್ಕೂ ಸಾರಭೂತವಾದ, ಅತ್ಯಂತ ಸೌಂದರ್ಯದಿಂದ ಕೂಡಿದ ಶರೀರವನ್ನು ಧರಿಸಿದ ಶ್ರೀಕೃಷ್ಣನು ಗೋಪಿಕಾ ಸ್ತ್ರೀಯರ ಸಮೂಹದಿಂದ ಅರ್ಚಿಸಲ್ಪಡುತ್ತಾ ಪ್ರಕಾಶಿಸಿದನು. ॥ ೧೪ ॥ ಭಗವಾನ್ ಶ್ರೀಕೃಷ್ಣನು ತನ್ನ ಅಲೌಕಿಕವಾದ ಸೌಂದರ್ಯದಿಂದ ಗೋಪಿಯರ ಮನಸ್ಸನ್ನು ಸೆಳೆಯುತ್ತಿದ್ದನು. ಅವನನ್ನು ಸೇರಬೇಕೆಂಬ, ಅವನೊಡನೆ ಕ್ರೀಡಿಸಬೇಕೆಂಬ ಆಕಾಂಕ್ಷೆಯು ಅವರಲ್ಲಿ ಕ್ಷಣ-ಕ್ಷಣಕ್ಕೂ ವರ್ಧಿಸುತ್ತಿತ್ತು. ಅವರು ಮಂದ ಹಾಸದ ಮೂಲಕವಾಗಿ, ಕಡೆಗಣ್ಣ ನೋಟಗಳ ಮೂಲಕವಾಗಿ, ಹುಬ್ಬು ಹಾರಿಸುವುದರ ಮೂಲಕವಾಗಿ ಅವನನ್ನು ಸೇವಿಸುತ್ತಿದ್ದರು. ಮತ್ತೆ ಕೆಲವರು ಅವನ ಪಾದಾರವಿಂದಗಳನ್ನು ತೊಡೆಯಲ್ಲಿಟ್ಟುಕೊಂಡು ಒತ್ತುತ್ತಿದ್ದರು. ಕೆಲವರು ಅವನ ದುಂಡಾದ ತೋಳುಗಳನ್ನು ಹಿಡಿದು

ಸಭಾಜಯಿತ್ವಾ ತಮನಂಗದೀಪನಂ
ಸಹಾಸಲೀಲೇಕ್ಷಣವಿಭ್ರಮಭ್ರುವಾ ।
ಸಂಸ್ಪರ್ಶನೇನಾಂಕಕೃತಾಂಘ್ರಿಹಸ್ತಯೋಃ
ಸಂಸ್ತುತ್ಯ ಈಷತ್ಕುಪಿತಾ ಬಭಾಷಿರೇ ॥ ೧೫ ॥

ಗೋಪ್ಯ ಊಚುಃ

ಭಜತೋಽನುಭಜಂತ್ಯೇಕ ಏಕ ಏತದ್ವಿಪರ್ಯಯಮ್ ।
ನೋಭಯಾಂಶ್ಚ ಭಜಂತ್ಯೇಕ ಏತನ್ನೋ ಬ್ರೂಹಿ ಸಾಧು ಭೋಃ ॥ ೧೬ ॥

ಶ್ರೀಭಗವಾನುವಾಚ

ಮಿಥೋ ಭಜಂತಿ ಯೇ ಸಖ್ಯಃ ಸ್ವಾರ್ಥೈಕಾಂತೋದ್ಯಮಾ ಹಿ ತೇ ।
ನ ತತ್ರ ಸೌಹೃದಂ ಧರ್ಮಃ ಸ್ವಾರ್ಥಾರ್ಥಂ ತದ್ಧಿ ನಾನ್ಯಥಾ ॥ ೧೭ ॥

ಭಜಂತ್ಯಭಜತೋ ಯೇ ವೈ ಕರುಣಾಃ ಪಿತರೋ ಯಥಾ ।
ಧರ್ಮೋ ನಿರಪವಾದೋಽತ್ರ ಸೌಹೃದಂ ಚ ಸುಮಧ್ಯಮಾಃ ॥ ೧೮ ॥

ಭಜತೋಽಪಿ ನ ವೈ ಕೇಚಿದ್ಭಜಂತ್ಯಭಜತಃ ಕುತಃ ।
ಆತ್ಮಾರಾಮಾ ಹ್ಯಾಪ್ತಕಾಮಾ ಅಕೃತಜ್ಞಾ ಗುರುದ್ರುಹಃ ॥ ೧೯ ॥

ನಾಹಂ ತು ಸಖ್ಯೋ ಭಜತೋಽಪಿ ಜಂತೂನ್
ಭಜಾಮ್ಯಮೀಷಾಮನುವೃತ್ತಿವೃತ್ತಯೇ ।
ಯಥಾಧನೋ ಲಬ್ಧಧನೇ ವಿನಷ್ಟೇ
ತಚ್ಚಿಂತಯಾನ್ಯನ್ನಿಭೃತೋ ನ ವೇದ ॥ ೨೦ ॥

ಏವಂ ಮದರ್ಥೋಜ್ಝಿತಲೋಕವೇದ-
ಸ್ವಾನಾಂ ಹಿ ವೋ ಮಯ್ಯನುವೃತ್ತಯೇಽಬಲಾಃ ।
ಮಯಾ ಪರೋಕ್ಷಂ ಭಜತಾ ತಿರೋಹಿತಂ
ಮಾಸೂಯಿತುಂ ಮಾರ್ಹಥ ತತ್ಪ್ರಿಯಂ ಪ್ರಿಯಾಃ ॥ ೨೧ ॥

ಒತ್ತುವರು. ಅವರ ಸೇವೆಗೆ ಅವನು ಪ್ರತಿಕ್ರಿಯೆಯನ್ನು ತೋರದಿರಲು ಸ್ವಲ್ಪ ಕೋಪಗೊಂಡು ಗೋಪಿಯರು ತಮ್ಮ ಪ್ರಿಯತಮನಿಗೆ ಹೇಳಿದರು. ॥ ೧೫ ॥

ಗೋಪಿಯರು ಹೇಳುತ್ತಾರೆ - ಪ್ರಾಣನಾಥನೇ ! ಲೋಕದಲ್ಲಿ ಕೆಲವರು ತಮ್ಮನ್ನು ಪ್ರೀತಿಸುವವರನ್ನು ಪ್ರೀತಿಸುವರು. ಮತ್ತೆ ಕೆಲವರು ತಮ್ಮನ್ನು ಪ್ರೀತಿಸದವರನ್ನೂ ಪ್ರೀತಿಸುತ್ತಾರೆ. ಮತ್ತೆ ಕೆಲವರು ಇಬ್ಬರನ್ನೂ ಪ್ರೀತಿಸುವುದಿಲ್ಲ. ಈ ಮೂವರಲ್ಲಿ ನಿನಗೆ ಯಾರು ಒಳ್ಳೆಯವರಾಗಿ ಕಾಣುತ್ತಾರೆ ? ॥ ೧೬ ॥

ಭಗವಾನ್ ಶ್ರೀಕೃಷ್ಣನು ಹೇಳಿದನು - ನನ್ನ ಪ್ರಿಯ ಗೆಳತಿಯರೇ ! ತಮ್ಮನ್ನು ಪ್ರೀತಿಸುವವರನ್ನು ಪ್ರೀತಿಸುವವರ ಉದ್ಯೋಗವು ಕೇವಲ ಸ್ವಾರ್ಥ ಸಾಧನೆಯಾಗಿದೆ. ಕೊಟ್ಟು-ಕೊಳ್ಳುವ ವ್ಯವಹಾರವಾಗಿದೆ. ಅದರಲ್ಲಿ ಸೌಹಾರ್ದವಾಗಲೀ, ಧರ್ಮವಾಗಲೀ ಇರುವುದಿಲ್ಲ. ಅವರ ಪ್ರೀತಿ ಕೇವಲ ಸ್ವಾರ್ಥಕ್ಕಾಗಿಯೇ ಇದೆ ; ಇದಲ್ಲದೆ ಬೇರೆ ಏನೂ ಇಲ್ಲ ॥ ೧೭ ॥ ಸುಂದರಿಯರೇ ! ಪ್ರೀತಿಸದೆ ಇರುವವನ್ನು ಪ್ರೀತಿಸುವವರು ಕರುಣಾಳುಗಳು. ತಂದೆ-ತಾಯಿಗಳಂತಿರುವವರು. ಅವರ ಪ್ರೇಮವು ನಿರ್ದೋಷವೂ ನಿಷ್ಕಳಂಕವೂ ಆಗಿದೆ. ಅವರ ಪ್ರೇಮದಲ್ಲಿ ಪುಣ್ಯವೂ, ಧರ್ಮವೂ, ಸೌಹಾರ್ದವೂ ಇರುತ್ತದೆ. ॥ ೧೮ ॥ ಪ್ರೀತಿಸುವವರನ್ನೇ ಪ್ರೀತಿಸುವುದಿಲ್ಲವೆಂದ ಮೇಲೆ ಪ್ರೀತಿಸದವರ ವಿಷಯದಲ್ಲಿ ಹೇಳಬೇಕಾಗಿಯೇ ಇಲ್ಲ. ಪ್ರೀತಿಸಿದವರನ್ನು ಪ್ರೀತಿಸದವರು ನಾಲ್ಕು ಬಗೆಯವರಾಗಿದ್ದಾರೆ. ೧) ಆತ್ಮಾರಾಮರು - ಬ್ರಹ್ಮಜ್ಞಾನಕ್ಕಾಗಿ ಧ್ಯಾನಾಸಕ್ತರಾದ ಯೋಗಿಗಳು ಅಥವಾ ಬ್ರಹ್ಮಭಾವದಿಂದ ಆನಂದಪಡುತ್ತಿರುವವರು. ೨) ಆಪ್ತಕಾಮರು - ಪ್ರಾಪಂಚಿಕ ಸೌಖ್ಯವನ್ನು ತ್ಯಜಿಸಿದ, ಪ್ರಪಂಚದ ಸಂಬಂಧವನ್ನು ಬಿಟ್ಟಿರುವ, ಇಷ್ಟಾರ್ಥಗಳನ್ನು ಪಡೆದ ಜೀವನ್ಮುಕ್ತರು. ೩) ಅಕೃತಜ್ಞಾಃ - ಮಾಡಿದ ಉಪಕಾರವನ್ನು ಸ್ಮರಿಸದ ಕೃತಘ್ನರು. ೪) ಗುರುದ್ರುಹಃ - ಗುರು ಹಿರಿಯರಿಗೂ ದ್ರೋಹಮಾಡುವವರು. ಈ ನಾಲ್ಕು ಬಗೆಯ ಮನುಷ್ಯರು ಪ್ರೀತಿಸಿದವರನ್ನು ಪ್ರೀತಿಸುವುದಿಲ್ಲ ॥ ೧೯ ॥ ಗೋಪಿಯರೇ ! ನಾನಾದರೋ ಪ್ರೇಮಿಸುವವರೊಂದಿಗೆ ಹೇಗೆ ವ್ಯವಹರಿಸಬೇಕೋ ಹಾಗೆ ಮಾಡುವುದಿಲ್ಲ. ಇದಕ್ಕೆ ಕಾರಣ ವೇನೆಂದರೆ ಅವರ ಚಿತ್ತವೃತ್ತಿಯು ನಿರಂತರವಾಗಿ ನನ್ನಲ್ಲೇ ತೊಡಗಿರಬೇಕೆಂಬುದೇ ನನ್ನ ಇಷ್ಟವಾಗಿದೆ. ದರಿದ್ರನಾದವನಿಗೆ ಎಂದೋ ಬಹಳಷ್ಟು ಹಣ ದೊರೆಯಿತು. ಮತ್ತೆ ಕಳೆದು ಹೋದರೆ ಅವನು ಕಳೆದುಹೋದ ಧನವನ್ನೇ ಚಿಂತಿಸುತ್ತಾ ಇರುತ್ತಾನೆ. ಹಾಗೆಯೇ ನಾನು ಸಿಕ್ಕಿಯೂ ಸಿಕ್ಕದವನಂತೆ ಇರುತ್ತೇನೆ. ॥ ೨೦ ॥ ಗೋಪಿಯರೇ ! ನೀವೆಲ್ಲ ನನಗಾಗಿ ಲೋಕಮರ್ಯಾದೆಯನ್ನು, ಶಾಸ್ತ್ರಮರ್ಯಾದೆಯನ್ನು ಸ್ವಜನರನ್ನು ಪರಿತ್ಯಜಿಸಿ, ನನ್ನಲ್ಲೇ ಅನುರಕ್ತರಾಗಿ ನನ್ನ ಬಳಿಗೆ ಬಂದಿರಿ. ನಿಮಗೆ ನನ್ನಲ್ಲಿ ಇನ್ನೂ ಹೆಚ್ಚಿನ ಪ್ರೇಮವುಂಟಾಗಲು ಮತ್ತು ನನ್ನನ್ನೇ ಅನುವರ್ತಿಸುವಂತೆ ಮಾಡಲು ನಿಮಗೆ ಕಾಣದಂತೆ ಮರೆಯಾಗಿದ್ದುಕೊಂಡು ನಿಮ್ಮನ್ನೇ ಪರೋಕ್ಷವಾಗಿ ಧ್ಯಾನಿಸುತ್ತಿದ್ದೆ. ಆದುದರಿಂದ ಪ್ರಿಯತಮೆಯರಾದ ನೀವು ನನ್ನಲ್ಲಿ ದೋಷವೆಣಿಸಬೇಡಿರಿ. ನೀವೆಲ್ಲರೂ ನನಗೆ ಪ್ರಿಯರಾಗಿರುವಿರಿ ಮತ್ತು ನಾನು ನಿಮಗೆ ಪ್ರಿಯನಾಗಿದ್ದೇನೆ ॥ ೨೧ ॥

ನ ಪಾರಯೇಽಹಂ ನಿರವದ್ಯಸಂಯುಜಾಂ
ಸ್ವಸಾಧುಕೃತ್ಯಂ ವಿಬುಧಾಯುಷಾಪಿ ವಃ ।
ಯಾ ಮಾಭಜನ್ ದುರ್ಜರಗೇಹಶೃಂಖಲಾಃ
ಸಂವೃಶ್ಚ್ಯ ತದ್ವಃ ಪ್ರತಿಯಾತು ಸಾಧುನಾ ॥ ೨೨ ॥

ಪ್ರಿಯಗೋಪಿಯರೇ! ಋಷಿ-ಮುನಿಗಳಿಂದಲೂ ಪರಿತ್ಯಜಿಸಲು ಸಾಧ್ಯವಾಗದ ನಾನು-ನನ್ನದೆಂಬ ಸಂಸಾರದ ಸಂಕೋಲೆಗಳನ್ನು ಕಿತ್ತೊಗೆದು ನನ್ನ ಬಳಿಗೆ ಬಂದಿರುವಿರಿ. ನನ್ನೊಡನೆ ನಿರ್ದುಷ್ಟವಾದ ಭಕ್ತಿಯ ಸಂಬಂಧವನ್ನು ಹೊಂದಿರುವ ನಿಮಗೆ ಸರಿಯಾದ ಪ್ರತ್ಯುಪಕಾರವನ್ನು ಮಾಡಲು ದೇವತೆಗಳ ಆಯುರ್ಮಾನವನ್ನು ಹೊಂದಿದರೂ ನನ್ನಿಂದ ಸಾಧ್ಯವಾಗಲಾರದು. ಅರ್ಥಾತ್ ನಾನು ನಿಮಗೆ ಜನ್ಮ ಜನ್ಮಾಂತರದಲ್ಲಿ ಋಣಿಯಾಗಿರುವೆ. ಆದುದರಿಂದ ನೀವು ಮಾಡುವ ಸತ್ಕಾರವನ್ನು ಸ್ವೀಕರಿಸುವುದೇ ನಿಮಗೆ ನಾನು ಮಾಡುವ ಪ್ರತ್ಯುಪಕಾರವೆಂದು ಭಾವಿಸಿರಿ. ಇದರಿಂದ ನಿಮ್ಮ ಮನೋರಥವು ಈಡೇರಲಿ. ॥ ೨೨ ॥

ಮೂವತ್ತೆರಡನೆಯ ಅಧ್ಯಾಯವು ಮುಗಿಯಿತು. ॥ ೩೨ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮಸ್ಕಂಧೇ ಪೂರ್ವಾರ್ಧೇ
ರಾಸಕ್ರೀಡಾಯಾಂ ಗೋಪೀಸಾಂತ್ವನಂ ನಾಮ ದ್ವಾತ್ರಿಂಶೋಽಧ್ಯಾಯಃ ॥ ೩೨ ॥

ಮೂವತ್ತಮೂರನೆಯ ಅಧ್ಯಾಯ

ಮಹಾರಾಸ ಕ್ರೀಡೆ

ಶ್ರೀಶುಕ ಉವಾಚ

ಇತ್ಥಂ ಭಗವತೋ ಗೋಪ್ಯಃ ಶ್ರುತ್ವಾ ವಾಚಃ ಸುಪೇಶಲಾಃ ।
ಜಹುರ್ವಿರಹಜಂ ತಾಪಂ ತದಂಗೋಪಚಿತಾಶಿಷಃ ॥ ೧ ॥

ತತ್ರಾರಭತ ಗೋವಿಂದೋ ರಾಸಕ್ರೀಡಾಮನುವ್ರತೈಃ ।
ಸ್ತ್ರೀರತ್ನೈರನ್ವಿತಃ ಪ್ರೀತೈರನ್ಯೋನ್ಯಾಬದ್ಧಬಾಹುಭಿಃ ॥ ೨ ॥

ರಾಸೋತ್ಸವಃ ಸಂಪ್ರವೃತ್ತೋ ಗೋಪೀಮಂಡಲಮಂಡಿತಃ ।
ಯೋಗೇಶ್ವರೇಣ ಕೃಷ್ಣೇನ ತಾಸಾಂ ಮಧ್ಯೇ ದ್ವಯೋರ್ದ್ವಯೋಃ ।
ಪ್ರವಿಷ್ಟೇನ ಗೃಹೀತಾನಾಂ ಕಂಠೇ ಸ್ವನಿಕಟಂ ಸ್ತ್ರಿಯಃ ॥ ೩ ॥

ಯಂ ಮನ್ಯೇರನ್ನಭಸ್ತಾವದ್ವಿಮಾನಶತಸಂಕುಲಮ್ ।
ದಿವೌಕಸಾಂ ಸದಾರಾಣಾಮೌತ್ಸುಕ್ಯಾಪಹೃತಾತ್ಮನಾಮ್ ॥ ೪ ॥

ತತೋ ದುಂದುಭಯೋ ನೇದುರ್ನಿಪೇತುಃ ಪುಷ್ಪವೃಷ್ಟಯಃ ।
ಜಗುರ್ಗಂಧರ್ವಪತಯಃ ಸಸ್ತ್ರೀಕಾಸ್ತದ್ಯಶೋಽಮಲಮ್ ॥ ೫ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ - ಪರೀಕ್ಷಿದ್ರಾಜನೇ! ಗೋಪಿಯರು ಭಗವಂತನ ಪ್ರೇಮಪೂರ್ಣವಾದ, ಸುಮಧುರವಾದ ಈ ಮಾತನ್ನು ಕೇಳಿ ವಿರಹತಾಪದಿಂದ ಮುಕ್ತರಾದರು. ಸೌಂದರ್ಯನಿಧಿಯಾದ, ಪ್ರಾಣಪ್ರಿಯನಾದ ಶ್ರೀಕೃಷ್ಣನ ಅಂಗಸಂಗದಿಂದ ಸಫಲ ಮನೋರಥರಾದರು. ॥ ೧ ॥ ಆನಂದತುಂದಿಲರಾಗಿ ಪರಸ್ಪರ ತೋಳುಗಳನ್ನು ಹಿಡಿದುಕೊಂಡು ತನ್ನನ್ನು ಅನುಸರಿಸಿ ನಿಂತಿರುವ ಸ್ತ್ರೀರತ್ನಗಳೊಡನೆ ಯಮುನಾ ನದಿಯ ಮರಳುದಿಣ್ಣೆಯಲ್ಲಿ ಭಗವಾನ್ ಶ್ರೀಕೃಷ್ಣನು ರಾಸಕ್ರೀಡೆಯನ್ನು ಆಡಲು ಪ್ರಾರಂಭಿಸಿದನು. ॥ ೨ ॥ ಯೋಗೇಶ್ವರನಾದ ಶ್ರೀಕೃಷ್ಣನು ಇಬ್ಬಿಬ್ಬರು ಗೋಪಿಯರ ಮಧ್ಯದಲ್ಲಿ ಒಬ್ಬೊಬ್ಬ ಶ್ರೀಕೃಷ್ಣನಿರುವಂತೆ ಪ್ರಕಟನಾಗಿ ಆ ಇಬ್ಬರೂ ಗೋಪಿಯರ ಹೆಗಲಮೇಲೆ ತನ್ನ ತೋಳುಗಳನ್ನು ಹಾಕಿಕೊಂಡಿದ್ದನು. ಇದರಿಂದ ಪ್ರತಿಯೊಬ್ಬ ಗೋಪಿಯು ಶ್ರೀಕೃಷ್ಣನು ತನ್ನ ಪಕ್ಕದಲ್ಲೇ ಇರುವನೆಂದು ಭಾವಿಸಿಕೊಂಡರು. ॥ ೩ ॥ ಹೀಗೆ ಸಾವಿರ-ಸಾವಿರ ಗೋಪಿಯರಿಂದ ಶೋಭಾಯಮಾನನಾದ ಭಗವಾನ್ ಶ್ರೀಕೃಷ್ಣನ ದಿವ್ಯ ರಾಸೋತ್ಸವವು ಪ್ರಾರಂಭವಾಯಿತು. ಆ ಸಮಯದಲ್ಲಿ ಆಕಾಶದಲ್ಲಿ ನೂರಾರು ವಿಮಾನಗಳು ನೆರೆದವು. ರಾಸಕ್ರೀಡೆಯನ್ನು ನೋಡಬೇಕೆಂಬ ತವಕದಿಂದ ಸಕಲದೇವತೆಗಳೂ ತಮ್ಮ-ತಮ್ಮ ಪತ್ನಿಯರೊಡನೆ ವಿಮಾನಗಳಲ್ಲಿ ಆಗಮಿಸಿದ್ದರು. ॥ ೪ ॥ ಆಗ ದೇವದುಂದುಭಿಗಳು ಮೊಳಗಿದವು. ರಾಸಮಂಡಲದ ಮೇಲೆ ಪುಷ್ಪವೃಷ್ಟಿಗಳಾದವು. ಗಂಧರ್ವಶ್ರೇಷ್ಠರು ತಮ್ಮ-ತಮ್ಮ ಪತ್ನಿಯರೊಂದಿಗೆ ಭಗವಂತನ ನಿರ್ಮಲವಾದ ಯಶಸ್ಸನ್ನು ಗಾನಮಾಡಿದರು. ॥ ೫ ॥

ವಲಯಾನಾಂ ನೂಪುರಾಣಾಂ ಕಿಂಕಿಣೀನಾಂ ಚ ಯೋಷಿತಾಮ್ ।
ಸಪ್ರಿಯಾಣಾಮಭೂಚ್ಛಬ್ದಸ್ತುಮುಲೋ ರಾಸಮಂಡಲೇ ॥ ೬ ॥

ತತ್ರಾತಿಶುಶುಭೇ ತಾಭಿರ್ಭಗವಾನ್ ದೇವಕೀಸುತಃ ।
ಮಧ್ಯೇ ಮಣೀನಾಂ ಹೈಮಾನಾಂ ಮಹಾಮರಕತೋ ಯಥಾ ॥ ೭ ॥

ಪಾದನ್ಯಾಸೈರ್ಭುಜವಿಧುತಿಭಿಃ ಸಸ್ಮಿತೈರ್ಭ್ರೂವಿಲಾಸೈ-
ರ್ಭಜ್ಯನ್ಮಧ್ಯೈಶ್ಚಲಕುಚಪಟೈಃ ಕುಂಡಲೈರ್ಗಂಡಲೋಲೈಃ ।
ಸ್ವಿದ್ಯನ್ಮುಖ್ಯಃ ಕಬರರಶನಾಗ್ರಂಥಯಃ ಕೃಷ್ಣವಧ್ವೋ
ಗಾಯಂತ್ಯಸ್ತಂ ತಡಿತ ಇವ ತಾ ಮೇಘಚಕ್ರೇ ವಿರೇಜುಃ ॥ ೮ ॥

ಉಚ್ಚೈರ್ಜಗುರ್ನೃತ್ಯಮಾನಾ ರಕ್ತಕಂಠ್ಯೋ ರತಿಪ್ರಿಯಾಃ ।
ಕೃಷ್ಣಾಭಿಮರ್ಶಮುದಿತಾ ಯದ್ಗೀತೇನೇದಮಾವೃತಮ್ ॥ ೯ ॥

ಕಾಚಿತ್ಸಮಂ ಮುಕುಂದೇನ ಸ್ವರಜಾತೀರಮಿಶ್ರಿತಾಃ ।
ಉನ್ನಿನ್ಯೇ ಪೂಜಿತಾ ತೇನ ಪ್ರೀಯತಾ ಸಾಧು ಸಾಧ್ವಿತಿ ।
ತದೇವ ಧ್ರುವಮುನ್ನಿನ್ಯೇ ತಸ್ಯೈ ಮಾನಂ ಚ ಬಹ್ವದಾತ್ ॥ ೧೦ ॥

ಕಾಚಿದ್ರಾಸಪರಿಶ್ರಾಂತಾ ಪಾರ್ಶ್ವಸ್ಥಸ್ಯ ಗದಾಭೃತಃ ।
ಜಗ್ರಾಹ ಬಾಹುನಾ ಸ್ಕಂಧಂ ಶ್ಲಥದ್ವಲಯಮಲ್ಲಿಕಾ ॥ ೧೧ ॥

ರಾಸಮಂಡಲದಲ್ಲಿದ್ದ ಸಮಸ್ತ ಗೋಪಿಯರು ತಮ್ಮ ಪ್ರಿಯತಮ ಶ್ಯಾಮಸುಂದರನೊಂದಿಗೆ ನೃತ್ಯಮಾಡತೊಡಗಿದರು. ಅವರ ಕೈಗಡಗಗಳು, ಕಾಲಂದುಗೆಗಳು, ಓಡ್ಯಾಣದ ಕಿರುಗೆಜ್ಜೆಗಳು ಒಟ್ಟಿಗೆ ಉಲಿಯತೊಡಗಿದವು. ಅಸಂಖ್ಯಗೋಪಿಯರಿದ್ದ ಕಾರಣ ಆ ಮಧುರ ಧ್ವನಿಯು ಸರ್ವತ್ರ ಕೇಳಿ ಬರುತ್ತಿತ್ತು. ॥ ೬ ॥ ಸುವರ್ಣಮಯವಾದ ಮಣಿಗಳ ಮಧ್ಯದಲ್ಲಿ ಜ್ಯೋತಿರ್ಮಯ ಮಹಾಮರಕತಮಣಿಯು ವಿರಾಜಿಸುವಂತೆಯೇ ಕಡು ಚೆಲುವೆಯರಾದ ಗೋಪಿಯರ ನಡುವೆ ನೀಲಮೇಘಶ್ಯಾಮನಾದ ದೇವಕೀನಂದನಾದ ಶ್ರೀಕೃಷ್ಣನು ರಾರಾಜಿಸಿದನು. ॥ ೭ ॥ ರಾಸನೃತ್ಯವನ್ನು ಆಡುವಾಗ ಗೋಪಿಕೆಯರು ತಾಳಕ್ಕೆ ಸರಿಯಾಗಿ ಹೆಜ್ಜೆಗಳನ್ನು ಹಾಕುತ್ತಾ, ಪಾದವಿನ್ಯಾಸಕ್ಕೆ ಅನುಗುಣವಾಗಿ ಕೈಗಳಲ್ಲಿ ಮುದ್ರೆಗಳನ್ನು ತೋರಿಸುತ್ತಾ ಎರಡೂ ಕೈಗಳನ್ನು ಎಡ-ಬಲಕ್ಕೂ ಹಿಂದೆ-ಮುಂದೆಯೂ ಆಡಿಸುತ್ತಿದ್ದರು. ತಾಳಕ್ಕನುಸಾರವಾಗಿ ಕೆಲವು ವೇಳೆ ನಿಧಾನವಾಗಿಯೂ, ಕೆಲವು ವೇಳೆ ವೇಗವಾಗಿಯೂ ಹೆಜ್ಜೆಗಳನ್ನು ಹಾಕುತ್ತಾ ತಲೆಗಳನ್ನು, ಕಣ್ಣುಗಳನ್ನು ಆಡಿಸುವರು. ಕೆಲವು ವೇಳೆ ಭಾವಪೂರ್ಣವಾಗಿ ನಗುವರು, ಹುಬ್ಬುಹಾರಿಸುವರು, ಕಡೆಗಣ್ಣಿನ ನೋಟದಿಂದ ನೋಡುವರು. ಕೆಲವೊಮ್ಮೆ ಕಿಲಕಿಲನೆ ನಗುವರು. ಸೊಂಟವನ್ನು ಬಳುಕಿಸುವರು. ನರ್ತನಮಾಡುತ್ತಾ ಕುಣಿದಾಗ, ಎದ್ದಾಗ, ಬಾಗಿದಾಗ ಅವರ ಸ್ತನಗಳು ಕುಲುಕಾಡುತ್ತಿದ್ದವು. ಕುಂಡಲಗಳು ಕಪೋಲಗಳಲ್ಲಿ ತೂಗಾಡುತ್ತಿದ್ದವು. ಮುಖವು ಬೆವರಿತ್ತು. ತುರುಬುಗಳು ಬಿಚ್ಚಿಹೋಗಿದ್ದವು. ಓಡ್ಯಾಣಗಳು ಸಡಿಲವಾಗಿದ್ದವು. ಹೀಗೆ ಶ್ರೀಕೃಷ್ಣನ ಪ್ರಿಯೆಯರಾದ ಗೋಪಿಕೆಯರು ಶ್ರೀಕೃಷ್ಣನಿಗೆ ಉಲ್ಲಾಸವಾಗುವಂತೆ ನಾನಾಭಂಗಿಗಳಲ್ಲಿ ನೃತ್ಯಮಾಡುತ್ತಾ ಅವನ ಲೀಲಾಪ್ರಸಂಗಗಳನ್ನು ಕರ್ಣಾನಂದಕರವಾಗಿ ಹಾಡುತ್ತಾ ಮೇಘಗಳ ಮಧ್ಯದಲ್ಲಿ ಕಾಣಿಸಿಕೊಳ್ಳುವ ಮಿಂಚುಗಳಂತೆ ಪ್ರಕಾಶಿಸಿದರು. ॥ ೮ ॥ ರತಿಪ್ರಿಯರಾದ ಗೋಪಿಯರು ಶ್ರೀಕೃಷ್ಣನ ಸ್ಪರ್ಶಮಾತ್ರದಿಂದ ಆನಂದ ಸಾಗರದಲ್ಲಿ ಮುಳುಗಿ, ಅತನೊಡನೆ ರಾಸನೃತ್ಯವನ್ನು ಆಡುತ್ತಾ ತಮ್ಮ ಸುಮಧುರ ಕಂಠಮಾಧುರ್ಯದಿಂದ ವಿಶ್ವವನ್ನೇ ವ್ಯಾಪಿಸುವಷ್ಟು ಗಟ್ಟಿಯಾಗಿ ಹಾಡತೊಡಗಿದರು. ಅದು ವಿಶ್ವದಲ್ಲೆಲ್ಲ ಈಗಲೂ ಪ್ರತಿಧ್ವನಿಸುತ್ತಿದೆ. ॥ ೯ ॥ ಓರ್ವ ಗೋಪಿಯು ಶ್ರೀಕೃಷ್ಣನೊಡನೆ ಧ್ವನಿಗೂಡಿಸಿ ಹಾಡುತ್ತಿದ್ದಳು. ಆಕೆಯ ಧ್ವನಿಯು ಶ್ರೀಕೃಷ್ಣನ ಸ್ವರಕ್ಕಿಂತ ತಾರಕದಲ್ಲಿತ್ತು. ಅದನ್ನೇ ಕೃಷ್ಣನು ಭಲೇ! ಭಲೇ! ಕರ್ಣಾನಂದಕರವಾಗಿದೆ ಎಂದು ಹೇಳುತ್ತಾ ಅವಳ ಹಾಡಿಗೆ ಅನುಗುಣವಾಗಿ ಧ್ರುವವೆಂಬ ತಾಳವನ್ನು ಹಾಕುತ್ತಾ ಆಕೆಯನ್ನು ಪ್ರೋತ್ಸಾಹಿಸಿದನು. ॥ ೧೦ ॥ ಒಬ್ಬ ಗೋಪಿಯು ರಾಸನೃತ್ಯದಿಂದ ಬಹಳವಾಗಿ ಬಳಲಿದಳು. ಮುಂಗೈಗಳಿಗೂ, ತೋಳುಗಳಿಗೂ ಕಟ್ಟಿಕೊಂಡ ಮಲ್ಲಿಗೆಯ ದಂಡೆಗಳು ಕಳಚಿಬೀಳುತ್ತಿದ್ದವು. ತತ್ತರಿಸಿ ಬೀಳುವುದರಲ್ಲಿದ್ದ ಆಕೆಯು ಪಕ್ಕದಲ್ಲಿದ್ದ ಶ್ರೀಕೃಷ್ಣನ ಭುಜವನ್ನು ಹಿಡಿದುಕೊಂಡು ಹಾಗೆಯೇ ನಿಂತುಕೊಂಡಳು. ॥ ೧೧ ॥

ತತ್ರೈಕಾಂಸಗತಂ ಬಾಹುಂ ಕೃಷ್ಣಸ್ಯೋತ್ಪಲಸೌರಭಮ್ ।
ಚಂದನಾಲಿಪ್ತಮಾಘ್ರಾಯ ಹೃಷ್ಟರೋಮಾ ಚುಚುಂಬ ಹ ॥ ೧೨ ॥

ಕಸ್ಯಾಶ್ಚಿನ್ನಾಟ್ಯವಿಕ್ಷಿಪ್ತಕುಂಡಲತ್ವಿಷಮಂಡಿತಮ್ ।
ಗಂಡಂ ಗಂಡೇ ಸಂದಧತ್ಯಾ ಅದಾತ್ತಾಂಬೂಲಚರ್ವಿತಮ್ ॥ ೧೩ ॥

ನೃತ್ಯಂತೀ ಗಾಯತೀ ಕಾಚಿತ್ಕೂಜನ್ನೂಪುರಮೇಖಲಾ ।
ಪಾರ್ಶ್ವಸ್ಥಾಚ್ಯುತಹಸ್ತಾಬ್ಜಂ ಶ್ರಾಂತಾಧಾತ್ಸ್ತನಯೋಃ ಶಿವಮ್ ॥ ೧೪ ॥

ಗೋಪ್ಯೋ ಲಬ್ಧ್ವಾಚ್ಯುತಂ ಕಾಂತಂ ಶ್ರಿಯ ಏಕಾಂತವಲ್ಲಭಮ್ ।
ಗೃಹೀತಕಂಠ್ಯಸ್ತದ್ದೋರ್ಭ್ಯಾಂ ಗಾಯಂತ್ಯಸ್ತಂ ವಿಜಹ್ರಿರೇ ॥ ೧೫ ॥

ಕರ್ಣೋತ್ಪಲಾಲಕವಿಟಂಕಕಪೋಲಘರ್ಮ-
ವಕ್ತ್ರಶ್ರಿಯೋ ವಲಯನೂಪುರಘೋಷವಾದ್ಯೈಃ ।
ಗೋಪ್ಯಃ ಸಮಂ ಭಗವತಾ ನನೃತುಃ ಸ್ವಕೇಶ-
ಸ್ರಸ್ತಸ್ರಜೋ ಭ್ರಮರಗಾಯಕರಾಸಗೋಷ್ಠ್ಯಾಮ್ ॥ ೧೬ ॥

ಏವಂ ಪರಿಷ್ವಂಗಕರಾಭಿಮರ್ಶ-
ಸ್ನಿಗ್ಧೇಕ್ಷಣೋದ್ದಾಮವಿಲಾಸಹಾಸೈಃ ।
ರೇಮೇ ರಮೇಶೋ ವ್ರಜಸುಂದರೀಭಿ-
ರ್ಯಥಾರ್ಭಕಃ ಸ್ವಪ್ರತಿಬಿಂಬವಿಭ್ರಮಃ ॥ ೧೭ ॥

ತದಂಗಸಂಗಪ್ರಮುದಾಕುಲೇಂದ್ರಿಯಾಃ
ಕೇಶಾನ್ ದುಕೂಲಂ ಕುಚಪಟ್ಟಿಕಾಂ ವಾ ।
ನಾಂಜಃ ಪ್ರತಿವ್ಯೋಢುಮಲಂ ವ್ರಜಸ್ತ್ರಿಯೋ
ವಿಸ್ರಸ್ತಮಾಲಾಭರಣಾಃ ಕುರೂದ್ವಹ ॥ ೧೮ ॥

ಕೃಷ್ಣವಿಕ್ರೀಡಿತಂ ವೀಕ್ಷ್ಯ ಮುಮುಹುಃ ಖೇಚರಸ್ತ್ರಿಯಃ ।
ಕಾಮಾರ್ದಿತಾಃ ಶಶಾಂಕಶ್ಚ ಸಗಣೋ ವಿಸ್ಮಿತೋಽಭವತ್ ॥ ೧೯ ॥

ಭಗವಾನ್ ಶ್ರೀಕೃಷ್ಣನು ತನ್ನ ಒಂದು ತೋಳನ್ನು ಒಬ್ಬ ಗೋಪಿಯ ಹೆಗಲಮೇಲಿಟ್ಟಿದ್ದನು. ಸ್ವಾಭಾವಿಕವಾಗಿಯೇ ಶ್ರೀಕೃಷ್ಣನ ತೋಳು ಕಮಲದ ಸುಗಂಧದಿಂದ ಕೂಡಿತ್ತು. ಅದಕ್ಕೆ ಪರಿಮಳದ ಗಂಧವು ಲೇಪಿತವಾಗಿತ್ತು. ಅದನ್ನು ಮೂಸಿ ನೋಡಿದ ಆ ಗೋಪಿಯು ರೋಮಾಂಚಿತಳಾಗಿ ಆ ತೋಳನ್ನು ಮುತ್ತಿಟ್ಟಳು. ॥ ೧೨ ॥ ಮತ್ತೊಬ್ಬ ಗೋಪಿಯು ನಾಟ್ಯವಾಡುತ್ತಿರುವಾಗ ಕುಂಡಲದಿಂದ ಸಮಲಂಕೃತವಾಗಿದ್ದ ತನ್ನ ಕಪೋಲವನ್ನು ಶ್ರೀಕೃಷ್ಣನ ಕಪೋಲದ ಮೇಲಿಡಲು ಆಕೆಯ ಆಶಯವನ್ನು ತಿಳಿದ ಶ್ರೀಕೃಷ್ಣನು ಆಕೆಗೆ ತಾಂಬೂಲವನ್ನು ನೀಡಿದನು. ॥ ೧೩ ॥ ಶ್ರೀಕೃಷ್ಣನ ಪಕ್ಕದಲ್ಲಿದ್ದ ಮತ್ತೊಬ್ಬ ಗೋಪಿಯು ಕಾಲಂದುಗೆ-ಡಾಬುಗಳ ಶಬ್ದದೊಡನೆ ನರ್ತಿಸುತ್ತಾ, ಹಾಡುತ್ತಾ ಬಹಳವಾಗಿ ಬಳಲಿ ಪಕ್ಕದಲ್ಲಿದ್ದ ಶ್ರೀಕೃಷ್ಣನ ಮಂಗಳಕರವಾದ ಕರಕಮಲವನ್ನು ತನ್ನ ವಕ್ಷಸ್ಥಳದ ಮೇಲೆ ಇರಿಸಿಕೊಂಡಳು. ॥ ೧೪ ॥

ಪರೀಕ್ಷಿತನೇ! ಗೋಪಿಯರ ಸೌಭಾಗ್ಯವು ಲಕ್ಷ್ಮೀದೇವಿಯ ಸೌಭಾಗ್ಯಕ್ಕಿಂತಲೂ ಮಿಗಿಲಾದುದು. ಲಕ್ಷ್ಮೀದೇವಿಗೆ ಪರಮಪ್ರಿಯನಾದ, ಏಕಾಂತಭಕ್ತರಿಗೆ ಪ್ರಿಯನಾದ ಶ್ರೀಕೃಷ್ಣನನ್ನು ತಮ್ಮ ಪ್ರಿಯತಮನನ್ನಾಗಿಸಿಕೊಂಡು, ಅವನಿಂದ ಆಲಿಂಗಿಸಲ್ಪಟ್ಟವರಾಗಿ, ಅವನ ಲೀಲಾ ಪ್ರಸಂಗಗಳನ್ನು ಸುಮಧುರವಾಗಿ ಗಾನಮಾಡುತ್ತಾ ಆ ಗೋಪಿಯರು ರಾರಾಜಿಸಿದರು. ॥ ೧೫ ॥ ಅವರ ಕಿವಿಗಳಲ್ಲಿ ಕಮಲದ ಕುಂಡಲಗಳು ಶೋಭಿಸುತ್ತಿದ್ದವು. ಗುಂಗುರು ಕೂದಲುಗಳು ಕೆನ್ನೆಗಳ ಮೇಲೆ ಹಾರಾಡುತ್ತಿದ್ದವು. ಮುತ್ತಿನಂತಹ ಬೆವರಿನ ಹನಿಗಳಿಂದ ಮುಖವು ಅಲಂಕೃತವಾಗಿತ್ತು. ಅವರು ರಾಸಮಂಡಲದಲ್ಲಿ ಶ್ರೀಕೃಷ್ಣನೊಡನೆ ನರ್ತನಮಾಡುವಾಗ ಅವರ ಕಡಗ, ಕಂಕಣಗಳು ಧ್ವನಿಮಾಡುತ್ತಿದ್ದವು. ಅವರ ಸ್ವರ-ತಾಳಕ್ಕೆ ಸರಿಯಾಗಿ ದುಂಬಿಗಳು ಝೇಂಕರಿಸುತ್ತಿದ್ದವು. ಅವರ ಮುಡಿಗಳಿಂದ ಹೂವುಗಳು ಉದುರುತ್ತಿದ್ದವು. ॥ ೧೬ ॥ ಪರೀಕ್ಷಿತನೇ! ಬಾಲಕನು ಕನ್ನಡಿಯಲ್ಲಿ ಕಾಣುವ ತನ್ನ ಪ್ರತಿಬಿಂಬದೊಡನೆ ನಿರ್ವಿಕಾರ ಭಾವದಿಂದ ಆಡುವಂತೆ ರಮಾರಮಣ ಭಗವಾನ್ ಶ್ರೀಕೃಷ್ಣನು ತನ್ನ ಪ್ರತಿಬಿಂಬರೂಪರಾದ ಗೋಪಿಯರೊಡನೆ ನಿರ್ವಿಕಾರಭಾವದಿಂದ ಆಲಿಂಗನ, ಹಸ್ತಸ್ಪರ್ಶ, ಪ್ರೇಮಾವಲೋಕನ, ಕಿರುನಗೆ, ಕುಡಿನೋಟ ಇತ್ಯಾದಿಗಳಿಂದ ಕ್ರೀಡಿಸುತ್ತಿದ್ದನು. ॥ ೧೭ ॥ ಪರೀಕ್ಷಿತ ರಾಜನೇ! ಭಗವಾನ್ ಶ್ರೀಕೃಷ್ಣನ ಅಂಗಸ್ಪರ್ಶವನ್ನು ಪಡೆದ ಗೋಪಿಕೆಯರು ಪ್ರೇಮಾನಂದದಿಂದ ವಿಹ್ವಲರಾಗಿದ್ದರು. ಕೂದಲು ಕೆದರಿದ್ದವು. ಹೂವಿನ ಹಾರಗಳು ಹರಿದಿದ್ದವು. ಒಡವೆಗಳು ಅಸ್ತ-ವ್ಯಸ್ತವಾಗಿದ್ದವು. ಇವುಗಳನ್ನು ಸರಿಪಡಿಸಿಕೊಳ್ಳಲೂ ಕೂಡ ಅವರಿಂದ ಸಾಧ್ಯವಾಗಲಿಲ್ಲ. ॥ ೧೮ ॥ ಭಗವಾನ್ ಶ್ರೀಕೃಷ್ಣನ ಈ ರಾಸಕ್ರೀಡೆಯನ್ನು ನೋಡಿದ ದೇವತಾಸ್ತ್ರೀಯರೂ ಈ ಗೋಪಿಯರಂತೆ ಭಗವಂತನಲ್ಲಿ ಸೇರಬೇಕೆಂಬ ಆಕಾಂಕ್ಷೆಯಿಂದ ಮೋಹಿತರಾದರು. ಹಾಗೆಯೇ ಗ್ರಹ-ನಕ್ಷತ್ರ ತಾರೆಗಳಿಂದ ಕೂಡಿದ ಚಂದ್ರನೂ ಆಶ್ಚರ್ಯಗೊಂಡನು. ॥ ೧೯ ॥

ಕೃತ್ವಾ ತಾವಂತಮಾತ್ಮಾನಂ ಯಾವತೀರ್ಗೋಪಯೋಷಿತಃ ।
ರೇಮೇ ಸ ಭಗವಾಂಸ್ತಾಭಿರಾತ್ಮಾರಾಮೋಽಪಿ ಲೀಲಯಾ ॥ ೨೦ ॥

ತಾಸಾಮತಿವಿಹಾರೇಣ ಶ್ರಾಂತಾನಾಂ ವದನಾನಿ ಸಃ ।
ಪ್ರಾಮೃಜತ್ಕರುಣಃ ಪ್ರೇಮ್ಣಾ ಶಂತಮೇನಾಂಗಪಾಣಿನಾ ॥ ೨೧ ॥

ಗೋಪ್ಯಃ ಸ್ಫುರತ್ಪುರಟಕುಂಡಲಕುಂತಲತ್ವಿಡ್
ಗಂಡಶ್ರಿಯಾ ಸುಧಿತಹಾಸನಿರೀಕ್ಷಣೇನ ।
ಮಾನಂ ದಧತ್ಯ ಋಷಭಸ್ಯ ಜಗುಃ ಕೃತಾನಿ
ಪುಣ್ಯಾನಿ ತತ್ಕರರುಹಸ್ಪರ್ಶಪ್ರಮೋದಾಃ ॥ ೨೨ ॥

ತಾಭಿರ್ಯುತಃ ಶ್ರಮಮಪೋಹಿತುಮಂಗಸಂಗ-
ಘೃಷ್ಟಸ್ರಜಃ ಸ ಕುಚಕುಂಕುಮರಂಜಿತಾಯಾಃ ।
ಗಂಧರ್ವಪಾಲಿಭಿರನುದ್ರುತ ಆವಿಶದ್ವಾಃ
ಶ್ರಾಂತೋ ಗಜೀಭಿರಿಭರಾಡಿವ ಭಿನ್ನಸೇತುಃ ॥ ೨೩ ॥

ಸೋಽಂಭಸ್ಯಲಂ ಯುವತಿಭಿಃ ಪರಿಷಿಚ್ಯಮಾನಃ
ಪ್ರೇಮ್ಣೇಕ್ಷಿತಃ ಪ್ರಹಸತೀಭಿರಿತಸ್ತತೋಽಂಗ ।
ವೈಮಾನಿಕೈಃ ಕುಸುಮವರ್ಷಿಭಿರೀಡ್ಯಮಾನೋ
ರೇಮೇ ಸ್ವಯಂ ಸ್ವರತಿರತ್ರ ಗಜೇಂದ್ರಲೀಲಃ ॥ ೨೪ ॥

ತತಶ್ಚ ಕೃಷ್ಣೋಪವನೇ ಜಲಸ್ಥಲ-
ಪ್ರಸೂನಗಂಧಾನಿಲಜುಷ್ಟದಿಕ್ತಟೇ ।
ಚಚಾರ ಭೃಂಗ ಪ್ರಮದಾಗಣಾವೃತೋ
ಯಥಾ ಮದಚ್ಯುದ್ದ್ವಿರದಃ ಕರೇಣುಭಿಃ ॥ ೨೫ ॥

ಪರೀಕ್ಷಿತನೇ! ಭಗವಾನ್ ಶ್ರೀಕೃಷ್ಣನು ಆತ್ಮಾರಾಮನಾಗಿದ್ದರೂ ಅಲ್ಲಿ ಎಷ್ಟು ಮಂದಿ ಗೋಪಿಯರಿದ್ದರೋ ಅಷ್ಟೆ ಸಂಖ್ಯೆಯಲ್ಲಿ ತನ್ನ ಪ್ರತಿರೂಪಗಳನ್ನು ಸೃಷ್ಟಿಸಿ ಪ್ರತಿಯೊಬ್ಬರೊಡನೆಯೂ ಲೀಲಾ ವಿನೋದದಿಂದ ವಿಹರಿಸಿದನು. ॥ ೨೦ ॥ ಬಹಳ ಹೊತ್ತಿನವರೆಗೆ ನೃತ್ಯ-ಗಾನ-ವಿಹಾರದಿಂದ ಬಳಲಿದ ಗೋಪಿಯರ ಮುಖ ಕಮಲಗಳನ್ನು ಕರುಣಾಮಯನಾದ ಭಗವಾನ್ ಶ್ರೀಕೃಷ್ಣನು ಅತ್ಯಂತ ಪ್ರೀತಿಯಿಂದ ತನ್ನ ಸುಖಕರ ಕರಕಮಲದಿಂದ ಸವರಿಸಿದನು. ॥ ೨೧ ॥ ಪರೀಕ್ಷಿತನೇ! ಭಗವಂತನ ಕರಸ್ಪರ್ಶದಿಂದ ಗೋಪಿಕೆಯರಿಗೆ ಪರಮಾನಂದವಾಯಿತು. ಅವರು ಸ್ವರ್ಣ ಕುಂಡಲಗಳಿಂದಲೂ, ಮುಂಗುರುಳುಗಳಿಂದಲೂ ಕೂಡಿದ ಕಪೋಲಗಳಿಂದಲೂ, ಮುಖಾರವಿಂದದಿಂದಲೂ ಕಡೆಗಣ್ಣ ನೋಟದಿಂದಲೂ, ಅಮೃತಪ್ರಾಯವಾದ ಮಂದಹಾಸದಿಂದಲೂ ಭಗವಾನ್ ಶ್ರೀಕೃಷ್ಣನಿಗೆ ಸೇವೆ ಸಲ್ಲಿಸಿ ಪರಮ ಪವಿತ್ರವಾದ ಅವನ ಲೀಲಾಪ್ರಸಂಗಗಳನ್ನು ಹಾಡತೊಡಗಿದರು. ॥ ೨೨ ॥ ಅನಂತರ ಆಯಾಸಗೊಂಡಿರುವ ಸಲಗವು ಹೆಣ್ಣಾನೆಗಳೊಡನೆ ಆಣೆಕಟ್ಟನ್ನು ಭೇದಿಸಿಕೊಂಡು ನೀರಿನೊಳಗೆ ನುಗ್ಗುವಂತೆ ಶ್ರೀಕೃಷ್ಣನು ರಾಸ ಕ್ರೀಡೆಯ ಆಯಾಸವನ್ನು ಪರಿಹರಿಸಿಕೊಳ್ಳುವ ಸಲುವಾಗಿ ಗೋಪಿಯರೊಡನೆ ಜಲಕ್ರೀಡೆಯಾಡಲು ಯಮುನೆಯ ನೀರನ್ನು ಪ್ರವೇಶಿಸಿದನು. ಆಗ ಶ್ರೀಕೃಷ್ಣನು ಧರಿಸಿದ್ದ ವನಮಾಲೆಯು ಗೋಪಿಯರ ಅಂಗಸಂಗದಿಂದ ಬಾಡಿಹೋಗಿದ್ದರೂ ಅವರ ವಕ್ಷಸ್ಥಳದಲ್ಲಿ ಲೇಪಿತವಾಗಿದ್ದ ಕುಂಕುಮ ಕೇಸರಿಯಿಂದ ರಂಜಿತವಾಗಿತ್ತು. ವನಮಾಲೆಯ ಸುಗಂಧದಿಂದ ಆಕರ್ಷಿತವಾದ ದುಂಬಿಗಳು ಝೇಂಕರಿಸುತ್ತಾ ಶ್ರೀಕೃಷ್ಣನನ್ನು ಅನುಸರಿಸಿ ಹೋಗುವುದನ್ನು ನೋಡಿದರೆ ಗಂಧರ್ವರಾಜನೇನಾದರೂ ಶ್ರೀಕೃಷ್ಣನ ಗುಣಗಾನ ಮಾಡುತ್ತಾ ಅವನ ಹಿಂದೆಯೇ ಹೋಗುತ್ತಿರುವನೋ ಎಂಬಂತೆ ಇತ್ತು. ॥ ೨೩ ॥ ಪರೀಕ್ಷಿತನೇ! ಯಮುನಾನದಿಯ ಶುಭಜಲದಲ್ಲಿ ಜಲಕ್ರೀಡೆಯನ್ನಾಡುವಾಗ ಗೋಪಿಯರು ಪ್ರೇಮಪೂರ್ಣ ನೋಟದಿಂದ ಶ್ರೀಕೃಷ್ಣನನ್ನು ನೋಡುತ್ತಾ, ನಗು-ನಗುತ್ತಾ ಅವನ ಮೇಲೆ ನೀರನ್ನೆರಚುತ್ತಿದ್ದರು. ಪ್ರತಿಯಾಗಿ ಅವನೂ ನೀರನ್ನೆರಚುತ್ತಿದ್ದನು. ಹೀಗೆ ಆನಂದಪರವಶರಾಗಿ ಜಲಕ್ರೀಡೆಯಾಡುವುದನ್ನು ನೋಡಿದ ದೇವತೆಗಳು ಅವರ ಮೇಲೆ ಪುಷ್ಪವೃಷ್ಟಿ ಮಾಡುತ್ತಾ ಕೃಷ್ಣನನ್ನು ಪರಿ-ಪರಿಯಾಗಿ ಸ್ತುತಿಸಿದರು. ಹೀಗೆ ಸಾಕ್ಷಾತ್ ಆತ್ಮಾರಾಮನಾದ ಶ್ರೀಕೃಷ್ಣನು ಗಜರಾಜನಂತೆ ಯಮುನೆಯಲ್ಲಿ ನೀರಾಟವನ್ನು ಆಡಿದನು. ॥ ೨೪ ॥ ಇದಾದ ಬಳಿಕ ಶ್ರೀಕೃಷ್ಣನು ಗೋಪಿಯರೊಡನೆ ಯಮುನೆಯ ತೀರದ ಉಪವನಕ್ಕೆ ಹೋದನು. ಆ ಉಪವನವು ರಮಣೀಯವಾಗಿದ್ದು, ಎಲ್ಲೆಡೆಗಳಲ್ಲಿಯೂ ನೆಲ ಜಲಗಳಲ್ಲಿ ಅತ್ಯಂತ ಸುಂದರ-ಸುಗಂಧಿತ ಹೂವುಗಳು ಅರಳಿದ್ದವು. ಅದರ ಸುಗಂಧವನ್ನು ಹೊತ್ತುಕೊಂಡು ಮಂದ ಮಾರುತವು ಬೀಸುತ್ತಿತ್ತು. ಮತ್ತ ಗಜವು ಹೆಣ್ಣಾನೆಗಳೊಂದಿಗೆ ವಿಹರಿಸುವಂತೆ ಶ್ರೀಕೃಷ್ಣನು ದುಂಬಿಗಳಿಂದಲೂ ಪ್ರಮದೆಯರಿಂದಲೂ ಸಮಾವೃತನಾಗಿ ಆ ಉದ್ಯಾನದಲ್ಲಿ ವಿಹರಿಸುತ್ತಿದ್ದನು. ॥ ೨೫ ॥

ಏವಂ ಶಶಾಂಕಾಂಶುವಿರಾಜಿತಾ ನಿಶಾಃ
ಸ ಸತ್ಯಕಾಮೋಽನುರತಾಬಲಾಗಣಃ ।
ಸಿಷೇವ ಆತ್ಮನ್ಯವರುದ್ಧಸೌರತಃ
ಸರ್ವಾಃ ಶರತ್ಕಾವ್ಯಕಥಾರಸಾಶ್ರಯಾಃ ॥ ೨೬ ॥

ಪರೀಕ್ಷಿದ್ರಾಜನೇ! ಅನೇಕ ಶರದ್ರಾತ್ರಿಗಳು ಕೂಡಿಕೊಂಡಿವೆಯೋ ಎಂಬಂತೆ ಆ ರಾತ್ರಿಯು ಅತ್ಯಂತ ಶೋಭಾಯಮಾನವಾಗಿತ್ತು. ಎಲ್ಲೆಡೆಗಳಲ್ಲಿಯೂ ಚಂದ್ರನ ಬೆಳದಿಂಗಳು ಹಾಲು ಚೆಲ್ಲಿದಂತೆ ಪ್ರಕಾಶಮಾನವಾಗಿತ್ತು. ಕಾವ್ಯಗಳಲ್ಲಿ ಶರದೃತುವಿನ ಎಷ್ಟು ಬಗೆಯಾದ ವರ್ಣನೆ ಇದೆಯೋ ಆ ಎಲ್ಲ ಲಕ್ಷಣಗಳಿಂದ ಅದು ಕೂಡಿಕೊಂಡಿತ್ತು, ಅಂತಹ ಮಂಗಳಮಯ ರಾತ್ರಿಯಲ್ಲಿ ಭಗವಾನ್ ಶ್ರೀಕೃಷ್ಣನು ತನ್ನ ಪ್ರೇಯಸಿಯರಾದ ಗೋಪಿಯರೊಡನೆ ಯಮುನೆಯ ಮಳಲದಿಣ್ಣೆಯಲ್ಲಿ, ಯಮುನೆಯಲ್ಲಿ ಹಾಗೂ ತೀರದ ಉಪವನಗಳಲ್ಲಿಯೂ ಯಥೇಚ್ಛವಾಗಿ ವಿಹರಿಸಿದನು. ಸತ್ಯಸಂಕಲ್ಪನಾದ ಭಗವಾನ್ ಶ್ರೀಕೃಷ್ಣನು ತೋರಿದ ಈ ಲೀಲೆಯು ಚಿನ್ಮಯವಾದುದು. ॥ ೨೬ ॥

ರಾಜೋವಾಚ

ಸಂಸ್ಥಾಪನಾಯ ಧರ್ಮಸ್ಯ ಪ್ರಶಮಾಯೇತರಸ್ಯ ಚ ।
ಅವತೀರ್ಣೋ ಹಿ ಭಗವಾನಂಶೇನ ಜಗದೀಶ್ವರಃ ॥ ೨೭ ॥

ಸ ಕಥಂ ಧರ್ಮಸೇತೂನಾಂ ವಕ್ತಾ ಕರ್ತಾಭಿರಕ್ಷಿತಾ ।
ಪ್ರತೀಪಮಾಚರದ್ಬ್ರಹ್ಮನ್ಪರದಾರಾಭಿಮರ್ಶನಮ್ ॥ ೨೮ ॥

ಆಪ್ತಕಾಮೋ ಯದುಪತಿಃ ಕೃತವಾನ್ ವೈ ಜುಗುಪ್ಸಿತಮ್ ।
ಕಿಮಭಿಪ್ರಾಯ ಏತಂ ನಃ ಸಂಶಯಂ ಛಿಂಧಿ ಸುವ್ರತ ॥ ೨೯ ॥

ಪರೀಕ್ಷಿದ್ರಾಜನು ಕೇಳಿದನು - ಪೂಜ್ಯರೇ! ಭಗವಾನ್ ಶ್ರೀಕೃಷ್ಣನು ಸಮಸ್ತ ಜಗತ್ತಿಗೆ ಏಕಮಾತ್ರ ಸ್ವಾಮಿಯು. ಅವನು ತನ್ನ ಅಂಶನಾದ ಬಲರಾಮನೊಂದಿಗೆ ಪೂರ್ಣರೂಪದಿಂದ ಅವತರಿಸಿದ್ದನು. ಅವನ ಅವತಾರದ ಉದ್ದೇಶವು ಧರ್ಮದ ಸ್ಥಾಪನೆ ಮತ್ತು ಅಧರ್ಮದನಾಶಕ್ಕಾಗಿಯೇ ಆಗಿತ್ತು. ॥ ೨೭ ॥ ಬ್ರಾಹ್ಮಣೋತ್ತಮರೇ! ಅವನು ಧರ್ಮದ ಮರ್ಯಾದೆಯನ್ನು ಉಪದೇಶಿಸುವವನೂ, ರಕ್ಷಿಸುವವನೂ, ಪಾಲಿಸುವವನೂ ಆಗಿದ್ದನು. ಹಾಗಿರುವಾಗ ಅವನು ಧರ್ಮಕ್ಕೆ ವಿರೋಧವಾದ ಪರಸ್ತ್ರೀಯರನ್ನು ಹೇಗೆ ಸ್ಪರ್ಶಿಸಿದನು? ॥ ೨೮ ॥ ಭಗವಾನ್ ಶ್ರೀಕೃಷ್ಣನು ಪೂರ್ಣಕಾಮನಾಗಿದ್ದು ಅವನಿಗೆ ಯಾವುದೇ ವಸ್ತುವಿನ ಕಾಮನೆ ಇರಲಿಲ್ಲವೆಂಬುದು ನಾನು ಬಲ್ಲೆನು. ಹೀಗಿರುವಾಗಲೂ ಅವನು ಯಾವ ಅಭಿಪ್ರಾಯದಿಂದ ಈ ನಿಂದನೀಯವಾದ ಕಾರ್ಯವನ್ನು ಮಾಡಿದನು? ಸುವ್ರತರೇ! ಈ ನನ್ನ ಸಂದೇಹವನ್ನು ದಯಮಾಡಿ ಪರಿಹರಿಸಿರಿ. ॥ ೨೯ ॥

ಶ್ರೀಶುಕ ಉವಾಚ

ಧರ್ಮವ್ಯತಿಕ್ರಮೋ ದೃಷ್ಟ ಈಶ್ವರಾಣಾಂ ಚ ಸಾಹಸಮ್ ।
ತೇಜೀಯಸಾಂ ನ ದೋಷಾಯ ವಹ್ನೇಃ ಸರ್ವಭುಜೋ ಯಥಾ ॥ ೩೦ ॥

ನೈತತ್ಸಮಾಚರೇಜ್ಜಾತು ಮನಸಾಪಿ ಹ್ಯನೀಶ್ವರಃ ।
ವಿನಶ್ಯತ್ಯಾಚರನ್ಮೌಢ್ಯಾದ್ಯಥಾರುದ್ರೋಽಬ್ಧಿಜಂ ವಿಷಮ್ ॥ ೩೦ ॥

ಶ್ರೀಶುಕಮಹಾಮುನಿಗಳು ಹೇಳಿದರು - ಸೂರ್ಯ, ಅಗ್ನಿ ಮೊದಲಾದ ಮಹಾಪ್ರಭಾವವುಳ್ಳವರು ಕೆಲವೊಮ್ಮೆ ಧರ್ಮದ ಉಲ್ಲಂಘನೆ ಮತ್ತು ಸಾಹಸದ ಕಾರ್ಯವನ್ನು ಮಾಡುವುದನ್ನು ನೋಡುತ್ತೇವೆ. ಆದರೆ ಆ ಕರ್ಮಗಳಿಂದ ಅಂತಹ ತೇಜಸ್ವಿ ಪುರುಷರಿಗೆ ಯಾವುದೇ ದೋಷವೂ ಉಂಟಾಗುವುದಿಲ್ಲ. ಅಗ್ನಿಯು ಸರ್ವಭಕ್ಷಕನಾಗಿದ್ದರೂ ಆ ಪದಾರ್ಥಗಳ ದೋಷಗಳಿಂದ ಲಿಪ್ತನಾಗುವುದಿಲ್ಲ. ॥ ೩೦ ॥ ಇಂತಹ ಸಾಮರ್ಥ್ಯವಿಲ್ಲದವರು ಅಂತಹ ಧರ್ಮೋಲ್ಲಂಘನೆಯ ಮಾತನ್ನು ಮನಸ್ಸಿನಲ್ಲಿಯೂ ಯೋಚಿಸಬಾರದು; ಶರೀರದಿಂದ ಮಾಡುವುದು ದೂರವುಳಿಯಿತು. ಮೂರ್ಖತೆಯಿಂದ ಹಾಗೇನಾದರೂ ಮಾಡಿಬಿಟ್ಟರೆ ಅವರ ನಾಶವು ನಿಶ್ಚಯವು. ಭಗವಾನ್ ಶಂಕರನು ಹಾಲಾಹಲವನ್ನು ಕುಡಿದಿದ್ದನು ಎಂದು ಬೇರೆಯಾರಾದರೂ ಕುಡಿದರೆ ಸುಟ್ಟು ಭಸ್ಮವಾಗಿ ಹೋದಾರು. ॥ ೩೦ ॥

ಈಶ್ವರಾಣಾಂ ವಚಃ ಸತ್ಯಂ ತಥೈವಾಚರಿತಂ ಕ್ವಚಿತ್ ।
ತೇಷಾಂ ಯತ್ಸ್ವವಚೋಯುಕ್ತಂ ಬುದ್ಧಿಮಾಂಸ್ತತ್ಸಮಾಚರೇತ್ ॥ ೩೨ ॥

ಕುಶಲಾಚರಿತೇನೈಷಾಮಿಹ ಸ್ವಾರ್ಥೋ ನ ವಿದ್ಯತೇ ।
ವಿಪರ್ಯಯೇಣ ವಾನರ್ಥೋ ನಿರಹಂಕಾರಿಣಾಂ ಪ್ರಭೋ ॥ ೩೩ ॥

ಕಿಮುತಾಖಿಲಸತ್ತ್ವಾನಾಂ ತಿರ್ಯಙ್ಮರ್ತ್ಯದಿವೌಕಸಾಮ್ ।
ಈಶಿತುಶ್ಚೇಶಿತವ್ಯಾನಾಂ ಕುಶಲಾಕುಶಲಾನ್ವಯಃ ॥ ೩೪ ॥

ಯತ್ಪಾದಪಂಕಜಪರಾಗನಿಷೇವತೃಪ್ತಾ
ಯೋಗಪ್ರಭಾವವಿಧುತಾಖಿಲಕರ್ಮಬಂಧಾಃ ।
ಸ್ವೈರಂ ಚರಂತಿ ಮುನಯೋಽಪಿ ನ ನಹ್ಯಮಾನಾ-
ಸ್ತಸ್ಯೇಚ್ಛಯಾಽಽತ್ತವಪುಷಃ ಕುತ ಏವ ಬಂಧಃ ॥ ೩೫ ॥

ಗೋಪೀನಾಂ ತತ್ಪತೀನಾಂ ಚ ಸರ್ವೇಷಾಮೇವ ದೇಹಿನಾಮ್ ।
ಯೋಽಂತಶ್ಚರತಿ ಸೋಽಧ್ಯಕ್ಷಃ ಕ್ರೀಡನೇನೇಹ ದೇಹಭಾಕ್ ॥ ೩೬ ॥

ಅನುಗ್ರಹಾಯ ಭೂತಾನಾಂ ಮಾನುಷಂ ದೇಹಮಾಸ್ಥಿತಃ ।
ಭಜತೇ ತಾದೃಶೀಃ ಕ್ರೀಡಾ ಯಾಃ ಶ್ರುತ್ವಾ ತತ್ಪರೋ ಭವೇತ್ ॥ ೩೭ ॥

ನಾಸೂಯನ್ಖಲು ಕೃಷ್ಣಾಯ ಮೋಹಿತಾಸ್ತಸ್ಯ ಮಾಯಯಾ ।
ಮನ್ಯಮಾನಾಃ ಸ್ವಪಾರ್ಶ್ವಸ್ಥಾನ್ ಸ್ವಾನ್ ಸ್ವಾನ್ ದಾರಾನ್ ವ್ರಜೌಕಸಃ ॥ ೩೮ ॥

ಬ್ರಹ್ಮರಾತ್ರ ಉಪಾವೃತ್ತೇ ವಾಸುದೇವಾನುಮೋದಿತಾಃ ।
ಅನಿಚ್ಛಂತ್ಯೋ ಯಯುರ್ಗೋಪ್ಯಃ ಸ್ವಗೃಹಾನ್ ಭಗವತ್ಪ್ರಿಯಾಃ ॥ ೩೯ ॥

ಅದಕ್ಕಾಗಿ ಶಂಕರರಂತಹ ಜಗದೀಶ್ವರರ ವಚನಗಳನ್ನು ಸತ್ಯವೆಂದು ತಿಳಿದು ಅದಕ್ಕನುಸಾರವಾಗಿ ಆಚರಿಸಬೇಕು. ಅವರ ಆಚರಣೆಗಳ ಅನುಕರಣೆಗಳನ್ನು ಕೆಲವೊಮ್ಮೆ ಮಾತ್ರ ಮಾಡಲಾಗುತ್ತದೆ. ಆದುದರಿಂದ ಬುದ್ಧಿವಂತರಾದವರು ಅವರ ಆಚರಣೆಯು ಅವರ ಉಪದೇಶಕ್ಕನುಕೂಲವಾಗಿದ್ದರೆ ಅದನ್ನು ಜೀವನದಲ್ಲಿ ಅನುಷ್ಠಾನಕ್ಕೆ ತರಬೇಕು. ॥ ೩೨ ॥

ಪರೀಕ್ಷಿತನೇ! ಅಂತಹ ಸರ್ವಸಮರ್ಥ ಪುರುಷರು ಅಹಂಕಾರರಹಿತರಾಗಿರುತ್ತಾರೆ. ಶುಭಕರ್ಮಮಾಡುವುದರಲ್ಲಿ ಅವರಿಗೆ ಯಾವುದೇ ಪ್ರಾಪಂಚಿಕ ಸ್ವಾರ್ಥ ಇರುವುದಿಲ್ಲ ಹಾಗೂ ಅಶುಭಕರ್ಮಮಾಡುವುದರಲ್ಲಿ ಅನರ್ಥವುಂಟಾಗುವುದಿಲ್ಲ. ಅವರು ಸ್ವಾರ್ಥ ಮತ್ತು ಅನರ್ಥಗಳನ್ನು ಮೀರಿ ಇರುತ್ತಾರೆ. ॥ ೩೩ ॥ ಇಂತಹವರ ಸಂಬಂಧದಲ್ಲೇ ಹೀಗಿದ್ದರೆ ಪಶು, ಪಕ್ಷಿ, ಮನುಷ್ಯರು, ದೇವತೆಗಳು ಮುಂತಾದ ಸಮಸ್ತ ಚರಾಚರ ಜೀವರ ಏಕಮಾತ್ರ ಸ್ವಾಮಿಯಾದ ಸರ್ವೇಶ್ವರ ಭಗವಂತನ ವಿಷಯದಲ್ಲಿ ಮಾನವೀಯ ಶುಭ-ಅಶುಭಗಳ ಸಂಬಂಧವನ್ನು ಹೇಗೆ ಜೋಡಿಸಲಾಗುತ್ತದೆ? ॥ ೩೪ ॥ ಭಕ್ತ ಜನರು ಪರಮಾತ್ಮನ ಪಾದಪಂಕಜಗಳ ಧೂಳಿನ ಸೇವನೆಯಿಂದ ತೃಪ್ತರಾಗುತ್ತಾರೆ. ಯೋಗಿಗಳು ಅವನನ್ನೇ ಧ್ಯಾನಿಸುತ್ತಾ ಯೋಗದ ಪ್ರಭಾವದಿಂದ ಸಮಸ್ತವಾದ ಕರ್ಮಬಂಧನಗಳಿಂದಲೂ ಮುಕ್ತರಾಗುತ್ತಾರೆ. ಜ್ಞಾನಿಗಳಾದ ಮುನಿಗಳೂ ಕೂಡ ಪರಬ್ರಹ್ಮತತ್ತ್ವವನ್ನೇ ವಿಚಾರಮಾಡುತ್ತಾ ತಾದಾತ್ಮ್ಯವನ್ನು ಹೊಂದಿ ಸಮಸ್ತ ಕರ್ಮ ಬಂಧನಗಳಿಂದಲೂ ಮುಕ್ತರಾಗಿ ಸ್ವೇಚ್ಛೆಯಿಂದ ಸಂಚರಿಸುತ್ತಾರೆ. ಅಂತಹ ಭಗವಂತನೇ ತನ್ನ ಭಕ್ತರ ಇಚ್ಛೆಯಿಂದ ತನ್ನ ಚಿನ್ಮಯ ಶ್ರೀವಿಗ್ರಹವನ್ನು ಪ್ರಕಟಿಸುವನು. ಅಂತಹ ಪರಬ್ರಹ್ಮ ಪರಮಾತ್ಮನಿಗೆ ಕರ್ಮ ಬಂಧನದ ಕಲ್ಪನೆಯಾದರೂ ಹೇಗಿದ್ದೀತು? ॥ ೩೫ ॥ ಗೋಪಿಯರ ಗಂಡಂದಿರಲ್ಲಿ ಮತ್ತು ಸಮಸ್ತ ಶರೀರಧಾರಿಗಳಲ್ಲಿಯೂ ಅಂತರ್ಯಾಮಿಯಾಗಿರುವ ಪರಮಾತ್ಮನೇ ಸರ್ವ ಸಾಕ್ಷಿಯೂ, ಪರಮಪತಿಯೂ ಆಗಿದ್ದಾನೆ. ಅವನೇ ಶ್ರೀಕೃಷ್ಣ ರೂಪದಲ್ಲಿ ದಿವ್ಯ ಮಂಗಳರೂಪವನ್ನು ಧರಿಸಿ ತನ್ನ ದಿವ್ಯವಾದ ಲೀಲೆಗಳನ್ನು ತೋರಿಸುತ್ತಿದ್ದಾನೆ. ॥ ೩೬ ॥ ಭಗವಂತನು ಜೀವರ ಮೇಲೆ ಕೃಪೆದೋರಲೆಂದೇ ತಾನು ಮನುಷ್ಯರೂಪದಿಂದ ಪ್ರಕಟನಾಗಿ ಇಂತಹ ಲೀಲೆಗಳನ್ನು ನಡೆಸುತ್ತಾನೆ. ಇವುಗಳನ್ನು ಶ್ರವಣಿಸಿ ಮನುಷ್ಯನು ಭಗವತ್ಪರಾಯಣನಾಗಲೆಂದೇ ಲೀಲೆಗಳನ್ನು ತೋರುವನು. ॥ ೩೭ ॥ ವ್ರಜವಾಸಿಗಳಾದ ಗೋಪರು ಭಗವಾನ್ ಶ್ರೀಕೃಷ್ಣನಲ್ಲಿ ಸ್ವಲ್ಪವೂ ದೋಷಬುದ್ಧಿ ತಳೆದಿರಲಿಲ್ಲ. ಅವರೆಲ್ಲರೂ ಅವನ ಯೋಗಮಾಯೆಯಿಂದ ಮೋಹಿತರಾಗಿ ತಮ್ಮ ಪತ್ನಿಯರು ತಮ್ಮ ಬಳಿಯಲ್ಲೇ ಇದ್ದರೆಂದು ಭಾವಿಸಿಕೊಂಡಿದ್ದರು. ॥ ೩೮ ॥ ಹೀಗೆ ರಾಸಕ್ರೀಡೆ ಜಲಕ್ರೀಡೆಗಳಿಂದ ರಾತ್ರಿಯೆಲ್ಲವೂ ಕಳೆದು ಬ್ರಾಹ್ಮಮುಹೂರ್ತವು ಉದಯಿಸಿತು. ಗೋಪಿಯರಿಗೆ ತಮ್ಮ ಮನೆಗೆ ಮರಳಲು ಇಚ್ಛೆ ಇಲ್ಲದಿದ್ದರೂ ಭಗವಾನ್ ಶ್ರೀಕೃಷ್ಣನ ಆಜ್ಞೆಯಿಂದ ಅವರು ತಮ್ಮ ತಮ್ಮ ಮನೆಗಳಿಗೆ ತೆರಳಿದರು. ಏಕೆಂದರೆ, ತಮ್ಮ ಪ್ರತಿಯೊಂದು ವರ್ತನೆಯಿಂದ ಸಂಕಲ್ಪದಿಂದ ಕೇವಲ ಭಗವಂತನನ್ನು ಸಂತೋಷಪಡಿಸುವುದನ್ನೇ ಬಯಸುತ್ತಿದ್ದರು. ॥ ೩೯ ॥

ವಿಕ್ರೀಡಿತಂ ವ್ರಜವಧೂಭಿರಿದಂ ಚ ವಿಷ್ಣೋಃ
ಶ್ರದ್ಧಾನ್ವಿತೋಽನುಶೃಣುಯಾದಥ ವರ್ಣಯೇದ್ಯಃ ।

ಭಕ್ತಿಂ ಪರಾಂ ಭಗವತಿ ಪ್ರತಿಲಭ್ಯ ಕಾಮಂ
ಹೃದ್ರೋಗಮಾಶ್ವಪಹಿನೋತ್ಯಚಿರೇಣ ಧೀರಃ ॥ ೪೦ ॥

ಪರೀಕ್ಷಿತನೇ! ಯಾವ ಧೀರರು ವ್ರಜಯುವತಿಯರೊಂದಿಗೆ ಭಗವಾನ್ ಶ್ರೀಕೃಷ್ಣನು ನಡೆಸಿದ ಈ ಚಿನ್ಮಯ ರಾಸ-ವಿಲಾಸವನ್ನು ಶ್ರದ್ಧೆಯಿಂದ ಪದೇ-ಪದೇ ಕೇಳುವನೋ, ಕೀರ್ತಿಸುವನೋ ಅವರಿಗೆ ಭಗವಂತನ ಚರಣಗಳಲ್ಲಿ ಪರಾಭಕ್ತಿಯು ಉಂಟಾಗಿ, ಅವರು ಅತ್ಯಂತ ಶೀಘ್ರವಾಗಿ ತಮ್ಮ ಹೃದಯದ ರೋಗದಿಂದ, ಕಾಮವಿಕಾರದಿಂದ ಬಿಡುಗಡೆ ಹೊಂದುವರು. । ೪೦ ।

ಮೂವತ್ತಮೂರನೆಯ ಅಧ್ಯಾಯವು ಮುಗಿಯಿತು. ॥ ೩೩ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮಸ್ಕಂಧೇ ಪೂರ್ವಾರ್ಧೇ
ರಾಸಕ್ರೀಡಾವರ್ಣನಂ ನಾಮ ತ್ರಯಸ್ತ್ರಿಂಶೋಽಧ್ಯಾಯಃ ॥ ೩೩ ॥

ಮೂವತ್ತನಾಲ್ಕನೆಯ ಅಧ್ಯಾಯ

ಸುದರ್ಶನ ಮತ್ತು ಶಂಖಚೂಡರ ಉದ್ಧಾರ

ಶ್ರೀಶುಕ ಉವಾಚ

ಏಕದಾ ದೇವಯಾತ್ರಾಯಾಂ ಗೋಪಾಲಾ ಜಾತಕೌತುಕಾಃ ।
ಅನೋಭಿರನಡುದ್ಯುಕ್ತೈಃ ಪ್ರಯಯುಸ್ತೇಽಂಬಿಕಾವನಮ್ ॥ ೧ ॥

ತತ್ರ ಸ್ನಾತ್ವಾ ಸರಸ್ವತ್ಯಾಂ ದೇವಂ ಪಶುಪತಿಂ ವಿಭುಮ್ ।
ಆನರ್ಚುರರ್ಹಣೈರ್ಭಕ್ತ್ಯಾ ದೇವೀಂ ಚ ನೃಪತೇಽಂಬಿಕಾಮ್ ॥ ೨ ॥

ಗಾವೋ ಹಿರಣ್ಯಂ ವಾಸಾಂಸಿ ಮಧು ಮಧ್ವನ್ನಮಾದೃತಾಃ ।
ಬ್ರಾಹ್ಮಣೇಭ್ಯೋ ದದುಃ ಸರ್ವೇ ದೇವೋ ನಃ ಪ್ರೀಯತಾಮಿತಿ ॥ ೩ ॥

ಊಷುಃ ಸರಸ್ವತೀತೀರೇ ಜಲಂ ಪ್ರಾಶ್ಯ ಧೃತವ್ರತಾಃ ।
ರಜನೀಂ ತಾಂ ಮಹಾಭಾಗಾ ನಂದಸುನಂದಕಾದಯಃ ॥ ೪ ॥

ಕಶ್ಚಿನ್ಮಹಾನಹಿಸ್ತಸ್ಮಿನ್ ವಿಪಿನೇಽತಿಬುಭುಕ್ಷಿತಃ ।
ಯದೃಚ್ಛಯಾಽಽಗತೋ ನಂದಂ ಶಯಾನಮುರಗೋಽಗ್ರಸೀತ್ ॥ ೫ ॥

ಸ ಚುಕ್ರೋಶಾಹಿನಾ ಗ್ರಸ್ತಃ ಕೃಷ್ಣ ಕೃಷ್ಣ ಮಹಾನಯಮ್ ।
ಸರ್ಪೋ ಮಾಂ ಗ್ರಸತೇ ತಾತ ಪ್ರಪನ್ನಂ ಪರಿಮೋಚಯ ॥ ೬ ॥

ತಸ್ಯ ಚಾಕ್ರಂದಿತಂ ಶ್ರುತ್ವಾ ಗೋಪಾಲಾಃ ಸಹಸೋತ್ಥಿತಾಃ ।
ಗ್ರಸ್ತಂ ಚ ದೃಷ್ಟ್ವಾ ವಿಭ್ರಾಂತಾಃ ಸರ್ಪಂ ವಿವ್ಯಧುರುಲ್ಮುಕೈಃ ॥ ೭ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ! ಒಮ್ಮೆ ನಂದಗೋಪನೇ ಮೊದಲಾದ ಗೋಪಾಲಕರು ಶಿವರಾತ್ರಿಯ ಸಮಯದಲ್ಲಿ ಅತ್ಯುತ್ಸಾಹದಿಂದ, ಆನಂದಭರಿತರಾಗಿ ಎತ್ತಿನ ಗಾಡಿಗಳಲ್ಲಿ ಕುಳಿತು ಅಂಬಿಕಾವನಕ್ಕೆ ಯಾತ್ರೆಗೆ ಹೋದರು. ॥ ೧ ॥ ರಾಜನೇ! ಅಲ್ಲಿ ಅವರೆಲ್ಲರೂ ಸರಸ್ವತೀ ನದಿಯಲ್ಲಿ ಸ್ನಾನ ಮಾಡಿ ಪಶುಪತಿಯಾದ ಪರಮೇಶ್ವರನನ್ನೂ, ಭಗವತಿ ಅಂಬಿಕೆಯನ್ನು ಅನೇಕ ಪೂಜಾಸಾಮಗ್ರಿಗಳಿಂದ ಭಕ್ತಿಪೂರ್ವಕವಾಗಿ ಪೂಜಿಸಿದರು. ॥ ೨ ॥ ದೇವಾಧಿದೇವ ಭಗವಾನ್ ಶಂಕರನು ನಮ್ಮ ಮೇಲೆ ಸುಪ್ರೀತನಾಗಲೆಂದು ಅವರು ಬ್ರಾಹ್ಮಣರಿಗೆ ಗೋವುಗಳನ್ನು, ವಸ್ತ್ರಗಳನ್ನು, ಸುವರ್ಣವನ್ನು, ಜೇನು ತುಪ್ಪವನ್ನು ಆದರದಿಂದ ದಾನವಾಗಿ ಕೊಟ್ಟು ಮೃಷ್ಟಾನ್ನವನ್ನು ಭೋಜನ ಮಾಡಿಸಿದರು. ॥ ೩ । ಅಂದು ಮಹಾಭಾಗ್ಯಶಾಲಿಗಳಾದ ನಂದ-ಸುನಂದರೇ ಮೊದಲಾದ ಗೋಪರು ಉಪವಾಸ ವ್ರತವನ್ನು ಕೈಗೊಂಡು ಕೇವಲ ಜಲಾಹಾರದಲ್ಲೇ ಇದ್ದು ಆ ರಾತ್ರಿಯಲ್ಲಿ ಸರಸ್ವತೀನದಿಯ ತೀರದಲ್ಲಿ ನಿಶ್ಚಿಂತರಾಗಿ ಮಲಗಿದರು. ॥ ೪ ॥

ಆ ಅಂಬಿಕಾವನದಲ್ಲಿ ದೊಡ್ಡದಾದೊಂದು ಹೆಬ್ಬಾವಿದ್ದಿತು. ಆ ಸಮಯದಲ್ಲಿ ಅದು ಬಹಳವಾಗಿ ಹಸಿದಿತ್ತು. ಸ್ವೇಚ್ಛೆಯಿಂದ ಸಂಚರಿಸುತ್ತಿದ್ದ ಆ ಸರ್ಪವು ಮಲಗಿದ್ದ ನಂದಗೋಪನನ್ನು ನುಂಗತೊಡಗಿತು. ॥ ೫ ॥ ಅಜಗರನಿಂದ ನುಂಗಲ್ಪಡುತ್ತಿರುವ ನಂದಗೋಪನು 'ಮಗು! –ಕೃಷ್ಣಾ! ಕೃಷ್ಣಾ! ಬೇಗ ಓಡಿ ಬಾ. ನೋಡು, ಈ ಹೆಬ್ಬಾವು ನನ್ನನ್ನು ನುಂಗುತ್ತಿದೆ. ಶರಣಾಗತನಾಗಿರುವ ನನ್ನನ್ನು ಈ ಸರ್ಪದಿಂದ ಬಿಡಿಸು' ಎಂದು ಗಟ್ಟಿಯಾಗಿ ಕೂಗಿಕೊಂಡನು. ॥ ೬ ॥ ನಂದಗೋಪನ ಕೂಗನ್ನು ಕೇಳಿ ಗೋಪರೆಲ್ಲರೂ ಗಡಿಬಿಡಿಯಿಂದ ಎದ್ದು ನೋಡುತ್ತಾರೆ – ನಂದರಾಜನು ಹೆಬ್ಬಾವಿನ ಬಾಯಿಗೆ ಸಿಲುಕಿಕೊಂಡಿರುವನು. ಇದರಿಂದ ಭ್ರಾಂತರಾದ ಅವರು ಕೊಳ್ಳಿಗಳಿಂದ ಆ ಸರ್ಪವನ್ನು ಹೊಡೆಯತೊಡಗಿದರು. ॥ ೭ ॥

ಅಲಾತೈರ್ದಹ್ಯಮಾನೋಽಪಿ ನಾಮುಂಚತ್ತಮುರಂಗಮಃ ।
ತಮಸ್ಪೃಶತ್ಪದಾಭ್ಯೇತ್ಯ ಭಗವಾನ್ ಸಾತ್ವತಾಂ ಪತಿಃ ॥ ೮ ॥

ಸ ವೈ ಭಗವತಃ ಶ್ರೀಮತ್ಪಾದಸ್ಪರ್ಶಹತಾಶುಭಃ ।
ಭೇಜೇ ಸರ್ಪವಪುರ್ಹಿತ್ವಾ ರೂಪಂ ವಿದ್ಯಾಧರಾರ್ಚಿತಮ್ ॥ ೯ ॥

ತಮಪೃಚ್ಛದ್ಧೃಷೀಕೇಶಃ ಪ್ರಣತಂ ಸಮವಸ್ಥಿತಮ್ ।
ದೀಪ್ಯಮಾನೇನ ವಪುಷಾ ಪುರುಷಂ ಹೇಮಮಾಲಿನಮ್ ॥ ೧೦ ॥

ಕೋ ಭವಾನ್ ಪರಯಾ ಲಕ್ಷ್ಮ್ಯಾ ರೋಚತೇಽದ್ಭುತದರ್ಶನಃ ।
ಕಥಂ ಜುಗುಪ್ಸಿತಾಮೇತಾಂ ಗತಿಂ ವಾ ಪ್ರಾಪಿತೋಽವಶಃ ॥ ೧೧ ॥

ಸರ್ಪ ಉವಾಚ

ಅಹಂ ವಿದ್ಯಾಧರಃ ಕಶ್ಚಿತ್ ಸುದರ್ಶನ ಇತಿ ಶ್ರುತಃ ।
ಶ್ರಿಯಾ ಸ್ವರೂಪಸಂಪತ್ತ್ಯಾ ವಿಮಾನೇನಾಚರಂ ದಿಶಃ ॥ ೧೨ ॥

ಋಷೀನ್ವಿರೂಪಾನಂಗಿರಸಃ ಪ್ರಾಹಸಂ ರೂಪದರ್ಪಿತಃ ।
ತೈರಿಮಾಂ ಪ್ರಾಪಿತೋ ಯೋನಿಂ ಪ್ರಲಬ್ಧೈಃ ಸ್ವೇನ ಪಾಪ್ಮನಾ ॥ ೧೩ ॥

ಶಾಪೋ ಮೇಽನುಗ್ರಹಾಯೈವ ಕೃತಸ್ತೈಃ ಕರುಣಾತ್ಮಭಿಃ ।
ಯದಹಂ ಲೋಕಗುರುಣಾ ಪದಾ ಸ್ಪೃಷ್ಟೋ ಹತಾಶುಭಃ ॥ ೧೪ ॥

ತಂ ತ್ವಾಹಂ ಭವಭೀತಾನಾಂ ಪ್ರಪನ್ನಾನಾಂ ಭಯಾಪಹಮ್ ।
ಆಪೃಚ್ಛೇ ಶಾಪನಿರ್ಮುಕ್ತಃ ಪಾದಸ್ಪರ್ಶಾದಮೀವಹನ್ ॥ ೧೫ ॥

ಪ್ರಪನ್ನೋಽಸ್ಮಿ ಮಹಾಯೋಗಿನ್ ಮಹಾಪುರುಷ ಸತ್ಪತೇ ।
ಅನುಜಾನೀಹಿ ಮಾಂ ದೇವ ಸರ್ವಲೋಕೇಶ್ವರೇಶ್ವರ ॥ ೧೬ ॥

ಆದರೆ ಕೊಳ್ಳಿಗಳಿಂದ ಹೊಡೆಯುತ್ತಿದ್ದರೂ, ಬೆಂಕಿಯಿಂದ ಸುಡುತ್ತಿದ್ದರೂ ಆ ಅಜಗರವು ನಂದನನ್ನು ಬಿಡಲೇ ಇಲ್ಲ. ಆಗ ಭಕ್ತವತ್ಸಲನಾದ ಭಗವಾನ್ ಶ್ರೀಕೃಷ್ಣನು ಮುಂದೆ ಬಂದು ತನ್ನ ಕಾಲಿನಿಂದ ಅದನ್ನು ಸ್ಪರ್ಶಿಸಿದನು. ॥ ೮ ॥ ಭಗವಂತನ ಶ್ರೀ ಚರಣಸ್ಪರ್ಶ ವಾಗುತ್ತಲೇ ಸರ್ಪದ ಸಮಸ್ತ ಪಾಪಗಳು ಸುಟ್ಟು ಬೂದಿ ಯಾದುವು. ಆ ಕ್ಷಣದಲ್ಲೇ ಅದಕ್ಕೆ ಸರ್ಪರೂಪವು ಹೋಗಿ ವಿದ್ಯಾಧರರಿಂದ ಅರ್ಚಿಸಲ್ಪಡುವ ಸರ್ವಾಂಗಸುಂದರವಾದ ರೂಪವುಂಟಾಯಿತು. ॥ ೯ ॥ ಸುಂದರವಾದ ಶರೀರದಿಂದ ದೇದೀಪ್ಯನಾಗಿ ಕಾಣುತ್ತಿದ್ದ, ಸುವರ್ಣಮಯವಾದ ಹಾರಗಳನ್ನು ಧರಿಸಿದ್ದ ಅವನು ಶ್ರೀಕೃಷ್ಣನಿಗೆ ದೀರ್ಘದಂಡ ನಮಸ್ಕಾರ ಮಾಡಿ ಕೈಮುಗಿದುಕೊಂಡು ನಿಂತನು. ಆ ದಿವ್ಯಪುರುಷನನ್ನು ಹೃಷೀಕೇಶನು ಪ್ರಶ್ನಿಸಿದನು. ॥ ೧೦ ॥ ದಿವ್ಯಪುರುಷನೇ! ನೀನಾರು? ಶ್ರೇಷ್ಠವಾದ ಕಾಂತಿಯಿಂದ ಅದ್ಭುತರೂಪನಾಗಿ ಕಾಣುತ್ತಿರುವೆ. ನಿನಗೆ ಈ ಅತ್ಯಂತ ನಿಂದನೀಯವಾದ ಅಜಗರಯೋನಿಯು ಹೇಗೆ ದೊರೆ ಯಿತು? ಅನಿವಾರ್ಯವಾಗಿ ಈ ಜನ್ಮವನ್ನು ನೀನು ಹೊಂದಿರ ಬೇಕು. ॥ ೧೧ ॥

ಸರ್ಪಶರೀರದಿಂದ ಹೊರಬಂದ ದಿವ್ಯಪುರುಷನು ಹೇಳುತ್ತಾನೆ ಭಗವಂತ! ಹಿಂದೆ ನಾನು ಸುದರ್ಶನನೆಂಬ ವಿಖ್ಯಾತ ವಿದ್ಯಾಧರ ನಾಗಿದ್ದೆ. ನನ್ನಲ್ಲಿ ರೂಪಸಂಪತ್ತೂ, ಧನಸಂಪತ್ತೂ ಅಪಾರವಾಗಿತ್ತು. ಇದರಿಂದ ನಾನು ವಿಮಾನದಲ್ಲಿ ಕುಳಿತು ಎಲ್ಲ ದಿಕ್ಕುಗಳಲ್ಲಿಯೂ ಸ್ವೇಚ್ಛೆಯಿಂದ ಸಂಚರಿಸುತ್ತಿದ್ದೆ. ॥ ೧೨ ॥ ಹೀಗೆ ಸಂಚರಿಸುತ್ತಿದ್ದಾಗ ಒಮ್ಮೆ ನಾನು ಅಂಗಿರಸ ಗೋತ್ರದ ಅತ್ಯಂತ ಕುರೂಪಿಗಳಾದ ಋಷಿಗಳನ್ನು ನೋಡಿದೆನು. ಸೌಂದರ್ಯಮದದಿಂದ ನಾನು ಆ ಮಹರ್ಷಿಗಳನ್ನು ನೋಡಿ ಅಪಹಾಸ್ಯಮಾಡಿದೆ. ನನ್ನ ಈ ಅಪರಾಧದಿಂದ ಕುಪಿತರಾದ ಮಹರ್ಷಿಗಳು ಅಜಗರ ಸರ್ಪದ ಯೋನಿಯಲ್ಲಿ ಹುಟ್ಟುವಂತೆ ಶಪಿಸಿದರು. ಅದು ನನ್ನ ಪಾಪದ ಫಲವೇ ಆಗಿತ್ತು. ॥ ೧೩ ॥ ನಿಜವಾಗಿ ಹೇಳುವುದಾದರೆ ದಯಾಳು ಗಳಾದ ಆ ಋಷಿಗಳು ನನ್ನನ್ನು ಅನುಗ್ರಹಿಸಲೆಂದೇ ಆ ಶಾಪ ಹಿತ್ತರು. ಆದರಿಂದ ಇಂದು ನಾನು ಲೋಕಗುರುವಾದ ನಿನ್ನ ದಿವ್ಯ ಪಾದಸ್ಪರ್ಶವನ್ನು ಪಡೆದು ಸಮಸ್ತ ಪಾಪಗಳಿಂದ ಮುಕ್ತನಾದೆನಲ್ಲ! ॥ ೧೪ ॥ ಸಮಸ್ತ ಪಾಪಗಳನ್ನು ನಾಶಮಾಡುವಂತಹ ಸ್ವಾಮಿಯೇ! ಹುಟ್ಟು ಸಾವುಗಳ ರೂಪವಾದ ಸಂಸಾರಕ್ಕೆ ಭಯಗೊಂಡು ನಿನ್ನಲ್ಲಿ ಶರಣಾಗತರಾದವರ ನೀನು ಎಲ್ಲ ಭಯಗಳಿಂದ ಪಾರುಮಾಡುವೆ. ಈಗ ನಾನು ನಿನ್ನ ಚರಣಸ್ಪರ್ಶದಿಂದಲೇ ಶಾಪಮುಕ್ತನಾಗಿರು ವೆನು. ॥ ೧೫ ॥ ಭಕ್ತವತ್ಸಲನೇ! ಮಹಾಯೋಗೇಶ್ವರ ಪುರುಷೋ ತ್ತಮನೇ! ನಾನು ನಿನಗೆ ಶರಣಾಗಿದ್ದೇನೆ. ಇಂದ್ರಾದಿ ಸಮಸ್ತ ಲೋಕೇಶ್ವರರಿಗೂ ಪರಮೇಶ್ವರನಾದವನೇ! ಸ್ವಯಂ ಪ್ರಕಾಶ ನಾದ ಪರಮಾತ್ಮನೇ! ನನಗೆ ನನ್ನ ಲೋಕಕ್ಕೆ ಹೋಗಲು ಅನುಮತಿ ಯನ್ನು ದಯಪಾಲಿಸು. ॥ ೧೬ ॥ ಅಚ್ಯುತನೇ! ನಿನ್ನ ದರ್ಶನ ಮಾತ್ರದಿಂದಲೇ ನಾನು ಬ್ರಾಹ್ಮಣರ ಶಾಪದಿಂದ ಮುಕ್ತನಾದೆನು. ಇದು ಆಶ್ಚರ್ಯದ ಸಂಗತಿಯೇನಲ್ಲ. ಏಕೆಂದರೆ, ನಿನ್ನ ನಾಮೋ ಚ್ಚಾರಣೆಗೈದವನು ತನ್ನನ್ನು ಮತ್ತು ಶ್ರೋತೃಗಳನ್ನು ಪವಿತ್ರರಾಗಿಸುತ್ತಾನೆ.

ಬ್ರಹ್ಮದಂಡಾದ್ವಿಮುಕ್ತೋಽಹಂ ಸದ್ಯಸ್ತೇಽಚ್ಯುತ ದರ್ಶನಾತ್ ।
ಯನ್ನಾಮ ಗೃಹ್ಣನ್ನಖಿಲಾನ್ ಶ್ರೋತೄನಾತ್ಮಾನಮೇವ ಚ ।
ಸದ್ಯಃ ಪುನಾತಿ ಕಿಂ ಭೂಯಸ್ತಸ್ಯ ಸ್ಪೃಷ್ಟಃ ಪದಾ ಹಿ ತೇ ॥ ೧೭ ॥

ಇತ್ಯನುಜ್ಞಾಪ್ಯ ದಾಶಾರ್ಹಂ ಪರಿಕ್ರಮ್ಯಾಭಿವಂದ್ಯ ಚ ।
ಸುದರ್ಶನೋ ದಿವಂ ಯಾತಃ ಕೃಚ್ಛ್ರಾನ್ನಂದಶ್ಚ ಮೋಚಿತಃ ॥ ೧೮ ॥

ನಿಶಾಮ್ಯ ಕೃಷ್ಣಸ್ಯ ತದಾತ್ಮವೈಭವಂ
ವ್ರಜೌಕಸೋ ವಿಸ್ಮಿತಚೇತಸಸ್ತತಃ ।
ಸಮಾಪ್ಯ ತಸ್ಮಿನ್ನಿಯಮಂ ಪುನರ್ವ್ರಜಂ
ನೃಪಾಯಯುಸ್ತತ್ಕಥಯಂತ ಆದೃತಾಃ ॥ ೧೯ ॥

ಕದಾಚಿದಥ ಗೋವಿಂದೋ ರಾಮಶ್ಚಾದ್ಭುತವಿಕ್ರಮಃ ।
ವಿಜಹ್ರತುರ್ವನೇ ರಾತ್ರ್ಯಾಂ ಮಧ್ಯಗೌ ವ್ರಜಯೋಷಿತಾಮ್ ॥ ೨೦ ॥

ಉಪಗೀಯಮಾನೌ ಲಲಿತಂ ಸ್ತ್ರೀಜನೈರ್ಬದ್ಧಸೌಹೃದೈಃ ।
ಸ್ವಲಂಕೃತಾನುಲಿಪ್ತಾಂಗೌ ಸ್ರಗ್ವಿಣೌ ವಿರಜೋಽಂಬರೌ ॥ ೨೧ ॥

ನಿಶಾಮುಖಂ ಮಾನಯಂತಾವುದಿತೋಡುಪತಾರಕಮ್ ।
ಮಲ್ಲಿಕಾಗಂಧಮತ್ತಾಲಿಜುಷ್ಟಂ ಕುಮುದವಾಯುನಾ ॥ ೨೨ ॥

ಜಗತುಃ ಸರ್ವಭೂತಾನಾಂ ಮನಃಶ್ರವಣಮಂಗಲಮ್ ।
ತೌ ಕಲ್ಪಯಂತೌ ಯುಗಪತ್ ಸ್ವರಮಂಡಲಮೂರ್ಛಿತಮ್ ॥ ೨೩ ॥

ಗೋಪ್ಯಸ್ತದ್ಗೀತಮಾಕರ್ಣ್ಯ ಮೂರ್ಛಿತಾ ನಾವಿದನ್ನೃಪ ।
ಸ್ರಂಸದ್ದುಕೂಲಮಾತ್ಮಾನಂ ಸ್ರಸ್ತಕೇಶಸ್ರಜಂ ತತಃ ॥ ೨೪ ॥

ಏವಂ ವಿಕ್ರೀಡತೋಃ ಸ್ವೈರಂ ಗಾಯತೋಃ ಸಂಪ್ರಮತ್ತವತ್ ।
ಶಂಖಚೂಡ ಇತಿ ಖ್ಯಾತೋ ಧನದಾನುಚರೋಽಭ್ಯಗಾತ್ ॥ ೨೫ ॥

ಹಾಗಿರುವಾಗ ನನಗಾದರೋ ನೀನು ಸಾಕ್ಷಾತ್ ನಿನ್ನ ಚರಣ ಕಮಲಗಳಿಂದ ಸ್ಪರ್ಶಿಸಿರುವೆ. ಎಂದಾಗ ನನ್ನ ಮುಕ್ತಿಯಲ್ಲಿ ಸಂದೇಹವಿದೆಯೇ ? ॥ ೧೭ ॥ ಹೀಗೆ ಸುದರ್ಶನನು ಭಗವಾನ್ ಶ್ರೀಕೃಷ್ಣನನ್ನು ಸ್ತುತಿಸುತ್ತಾ, ಪ್ರದಕ್ಷಿಣೆ ಬಂದು ಸಾಷ್ಟಾಂಗ ನಮಸ್ಕಾರ ಮಾಡಿದನು. ಮತ್ತೆ ಅವನಿಂದ ಬೀಳ್ಕೊಂಡು ತನ್ನ ಲೋಕಕ್ಕೆ ಹೊರಟು ಹೋದನು. ಇತ್ತ ನಂದಗೋಪನೂ ದೊಡ್ಡದಾದ ಆಪತ್ತಿನಿಂದ ಪಾರಾದನು. ॥ ೧೮ ॥ ರಾಜೇಂದ್ರ! ವ್ರಜವಾಸಿಗಳೆಲ್ಲರೂ ಭಗವಾನ್ ಶ್ರೀಕೃಷ್ಣನ ಇಂತಹ ಅದ್ಭುತ ಮಹಿಮೆಯನ್ನು ನೋಡಿದಾಗ ಅವರು ಭಾರೀ ವಿಸ್ಮಯಗೊಂಡರು. ಆ ಕ್ಷೇತ್ರದಲ್ಲಿ ಕೈಗೊಂಡ ವ್ರತ-ನಿಯಮವನ್ನು ಪೂರ್ಣಗೊಳಿಸಿ ಅವರೆಲ್ಲರೂ ಪ್ರೇಮಾದರಗಳಿಂದ ಶ್ರೀಕೃಷ್ಣನ ಆ ಲೀಲೆಯನ್ನು ಕೊಂಡಾಡುತ್ತಾ ಮತ್ತೆ ವ್ರಜಕ್ಕೆ ಮರಳಿದರು. ॥ ೧೯ ॥

ಪರೀಕ್ಷಿತ ಮಹಾರಾಜ! ಒಂದು ದಿನ ಅದ್ಭುತ ವಿಕ್ರಮನಾದ ಭಗವಾನ್ ಶ್ರೀಕೃಷ್ಣನೂ, ಬಲರಾಮನೂ ಸೇರಿ ರಾತ್ರಿಯಲ್ಲಿ ಗೋಪಿಕೆಯರೊಂದಿಗೆ ವೃಂದಾವನದಲ್ಲಿ ವಿಹರಿಸುತ್ತಿದ್ದರು.॥೨೦॥ ಭಗವಾನ್ ಶ್ರೀಕೃಷ್ಣನು ನಿರ್ಮಲವಾದ ಪೀತಾಂಬರವನ್ನೂ, ಬಲರಾಮನು ನೀಲಾಂಬರವನ್ನು ಧರಿಸಿದ್ದರು. ಇಬ್ಬರ ಕೊರಳಲ್ಲಿಯೂ ಹೂವುಗಳ ಸುಂದರ ಮಾಲೆಗಳಿದ್ದು, ಶರೀರಕ್ಕೆ ಅಂಗರಾಗವನ್ನು ಸುಗಂಧಿತ ಚಂದನವನ್ನೂ ಹಚ್ಚಿಕೊಂಡು, ಅಂದವಾದ ಆಭರಣಗಳನ್ನು ತೊಟ್ಟಿದ್ದರು. ಗೋಪಿಯರು ಪ್ರೇಮಾನಂದದಿಂದ ಮಧುರವಾದ ಸ್ವರಗಳಿಂದ ಬಲರಾಮ-ಶ್ರೀಕೃಷ್ಣರ ಗುಣಗಳನ್ನು ಗಾನಮಾಡುತ್ತಿದ್ದರು. ॥ ೨೧ ॥ ಆಗತಾನೇ ಸಾಯಂಕಾಲವಾಗಿತ್ತು. ಆಕಾಶದಲ್ಲಿ ಚಂದ್ರ-ತಾರೆಗಳು ಪ್ರಕಾಶಿಸತೊಡಗಿದವು. ಮಲ್ಲಿಗೆಯ ಸುಗಂಧದಿಂದ ಮದಿಸಿದ ದುಂಬಿಗಳು ಝೇಂಕರಿಸುತ್ತಿದ್ದವು. ಜಲಾಶಯಗಳಲ್ಲಿದ್ದ ಕುಮುದಪುಷ್ಪಗಳ ಸುಗಂಧವನ್ನು ಹೊತ್ತುಕೊಂಡು ತಂಗಾಳಿಯು ಮಂದಮಂದವಾಗಿ ಬೀಸುತ್ತಾ ಇದೆ. ಅಂತಹ ವಾತಾವರಣವನ್ನು ಪ್ರಶಂಸಿಸುತ್ತಾ ಶ್ರೀಕೃಷ್ಣ-ಬಲರಾಮರು ಜೊತೆಗೂಡಿ ಆರೋಹಣ ಅವರೋಹಣ ಕ್ರಮದಲ್ಲಿ ರಾಗಾಲಾಪನೆ ಮಾಡತೊಡಗಿದರು. ಅವರ ದೈವಗಾನವು ಜಗತ್ತಿನ ಸಮಸ್ತ ಪ್ರಜೆಗಳಿಗೂ ಆನಂದದಾಯಕವಾಗಿತ್ತು. ॥ ೨೨-೨೩ ॥ ಅವರ ದಿವ್ಯಗಾನವನ್ನು ಕೇಳಿ ಗೋಪಿಕೆಯರು ಮೈಮರೆತು ಹೋದರು. ಅವರಿಗೆ ಉಟ್ಟ ಸೀರೆಯು ಜಾರಿ ಹೋಗುತ್ತಿರುವುದರ ಕಡೆಗೆ, ಮುಡಿಯು ಬಿಚ್ಚಿಹೋಗಿ, ಪುಷ್ಪಮಾಲೆಗಳು ಹರಿದು ಬೀಳುವುದರ ಕಡೆಗೆ ಪರಿವೆಯೇ ಇರಲಿಲ್ಲ. ॥ ೨೪ ॥

ಹೀಗೆ ಬಲರಾಮ-ಶ್ರೀಕೃಷ್ಣರು ಸ್ವೇಚ್ಛೆಯಿಂದ ಉನ್ಮತ್ತರಂತೆ ಕರ್ಣಾನಂದಕರವಾಗಿ ಹಾಡುತ್ತಿದ್ದಾಗ ಶಂಖಚೂಡನೆಂಬ ಹೆಸರಿನ ಕುಬೇರನ ಅನುಚರನಾದ ಯಕ್ಷನೊಬ್ಬನು ಅಲ್ಲಿಗೆ ಬಂದನು.॥ ೨೫ ॥ ಪರೀಕ್ಷಿತನೇ! ರಾಮ-ಕೃಷ್ಣರಿಬ್ಬರೂ ನೋಡುತ್ತಿರುವಂತೆಯೇ ಆ ಶಂಖಚೂಡ ಯಕ್ಷನು – ಶ್ರೀಕೃಷ್ಣನನ್ನೇ ಏಕಮಾತ್ರ ಸ್ವಾಮಿಯೆಂದು ಭಾವಿಸಿದ್ದ ಗೋಪಿಯರನ್ನು ಎತ್ತಿಕೊಂಡು ನಿಃಶಂಕನಾಗಿ ಉತ್ತರ

ತಯೋರ್ನಿರೀಕ್ಷತೋ ರಾಜಂಸ್ತನ್ನಾಥಂ ಪ್ರಮದಾಜನಮ್ ।
ಕ್ರೋಶಂತಂ ಕಾಲಯಾಮಾಸ ದಿಶ್ಯುದೀಚ್ಯಾಮಶಂಕಿತಃ ॥ ೨೬ ॥

ಕ್ರೋಶಂತಂ ಕೃಷ್ಣ ರಾಮೇತಿ ವಿಲೋಕ್ಯ ಸ್ವಪರಿಗ್ರಹಮ್ ।
ಯಥಾ ಗಾ ದಸ್ಯುನಾ ಗ್ರಸ್ತಾ ಭ್ರಾತರಾವನ್ವಧಾವತಾಮ್ ॥ ೨೭ ॥

ಮಾ ಭೈಷ್ಟೇತ್ಯಭಯಾರಾವೌ ಶಾಲಹಸ್ತೌ ತರಸ್ವಿನೌ ।
ಆಸೇದತುಸ್ತಂ ತರಸಾ ತ್ವರಿತಂ ಗುಹ್ಯಕಾಧಮಮ್ ॥ ೨೮ ॥

ಸ ವೀಕ್ಷ್ಯ ತಾವನುಪ್ರಾಪ್ತೌ ಕಾಲಮೃತ್ಯೂ ಇವೋದ್ವಿಜನ್ ।
ವಿಸೃಜ್ಯ ಸ್ತ್ರೀಜನಂ ಮೂಢಃ ಪ್ರಾದ್ರವಜ್ಜೀವಿತೇಚ್ಛಯಾ ॥ ೨೯ ॥

ತಮನ್ವಧಾವದ್ಗೋವಿಂದೋ ಯತ್ರ ಯತ್ರ ಸ ಧಾವತಿ ।
ಜಿಹೀರ್ಷುಸ್ತಚ್ಛಿರೋರತ್ನಂ ತಸ್ಥೌ ರಕ್ಷನ್ ಸ್ತ್ರಿಯೋ ಬಲಃ ॥ ೩೦ ॥

ಅವಿದೂರ ಇವಾಭ್ಯೇತ್ಯ ಶಿರಸ್ತಸ್ಯ ದುರಾತ್ಮನಃ ।
ಜಹಾರ ಮುಷ್ಟಿನೈವಾಂಗ ಸಹಚೂಡಾಮಣಿಂ ವಿಭುಃ ॥ ೩೧ ॥

ಶಂಖಚೂಡಂ ನಿಹತ್ಯೈವಂ ಮಣಿಮಾದಾಯ ಭಾಸ್ವರಮ್ ।
ಅಗ್ರಜಾಯಾದದಾತ್ ಪ್ರೀತ್ಯಾ ಪಶ್ಯಂತೀನಾಂ ಚ ಯೋಷಿತಾಮ್ ॥ ೩೨ ॥

ದಿಕ್ಕಿನ ಕಡೆಗೆ ಓಡಿಹೋದನು. ಆ ಗೋಪಿಯರು ಅಳುತ್ತಾ ಕೂಗುತ್ತಿದ್ದರು. ॥ ೨೬ ॥ ಗೋವುಗಳನ್ನು ಕಳ್ಳರು ಅಪಹರಿಸಿಕೊಂಡು ಹೋಗುವಂತೆಯೇ ಆ ಯಕ್ಷನು ತಮ್ಮ ಪ್ರೇಯಸಿಯರನ್ನು ಕದ್ದುಕೊಂಡು ಹೋಗುತ್ತಿದ್ದಾನೆ ಮತ್ತು ಅವರು ಹಾ ಕೃಷ್ಣ! ಬಲರಾಮ! ರಕ್ಷಿಸು, ರಕ್ಷಿಸು ಎಂದು ಕೂಗುತ್ತಿರುವುದನ್ನು ನೋಡಿದ ಸಹೋದರರಿಬ್ಬರೂ ಅವನೆಡೆಗೆ ಓಡಿದರು. ॥ ೨೭ ॥ ಹೆದರ ಬೇಡಿರಿ, ಹೆದರ ಬೇಡಿರಿ ಎಂದು ಅಭಯ ಮಾತನ್ನು ಹೇಳುತ್ತಾ ಕೈಯಲ್ಲಿ ಸಾಲವೃಕ್ಷಗಳನ್ನೆತ್ತಿಕೊಂಡು ವೇಗವಾಗಿ ಕ್ಷಣಾರ್ಧದಲ್ಲಿ ಆ ನೀಚನಾದ ಯಕ್ಷನ ಬಳಿಗೆ ತಲುಪಿದರು. ॥ ೨೮ ॥ ರಾಮ-ಕೃಷ್ಣರಿಬ್ಬರೂ ಕಾಲ ಮತ್ತು ಮೃತ್ಯುವಿನಂತೆ ತನ್ನ ಬಳಿಗೆ ಬಂದಿರುವುದನ್ನು ನೋಡಿದ ಮೂಢನಾದ ಶಂಖಚೂಡನು ಭಯಗೊಂಡನು. ಅವನು ಗೋಪಿಯರನ್ನು ಅಲ್ಲೇ ಬಿಟ್ಟು ಪ್ರಾಣಗಳನ್ನು ಉಳಿಸಿಕೊಳ್ಳಲು ಅಲ್ಲಿಂದ ಓಡಿಹೋದನು. ॥ ೨೯ ॥ ಆಗ ಗೋಪಿಕಾಸ್ತ್ರೀಯರನ್ನು ರಕ್ಷಿಸಲಿಕ್ಕಾಗಿ ಬಲರಾಮನು ಅಲ್ಲೇ ನಿಂತನು. ಆದರೆ ಭಗವಾನ್ ಶ್ರೀಕೃಷ್ಣನು ಶಂಖಚೂಡನು ಓಡಿದಲ್ಲಿಗೆ ಓಡುತ್ತಾ ಹೋಗಿ ಅವನ ಶಿರದಲ್ಲಿದ್ದ ಚೂಡಾಮಣಿಯನ್ನು ಕಿತ್ತುಕೊಳ್ಳಲು ಬಯಸಿದನು. ॥ ೩೦ ॥ ಸ್ವಲ್ಪ ದೂರಹೋಗುತ್ತಲೇ ಭಗವಂತನು ಅವನನ್ನು ಹಿಡಿದುಕೊಂಡು ಆ ದುಷ್ಟನ ಶಿರದ ಮೇಲೆ ಬಲವಾಗಿ ಒಂದು ಗುದ್ದಿದನು ಮತ್ತು ಚೂಡಾಮಣಿಯೊಂದಿಗೆ ಅವನ ರುಂಡ-ಮುಂಡಗಳನ್ನು ಬೇರ್ಪಡಿಸಿದನು. ॥ ೩೧ ॥ ಹೀಗೆ ಭಗವಾನ್ ಶ್ರೀಕೃಷ್ಣನು ಶಂಖಚೂಡನನ್ನು ಕೊಂದು, ಆ ಹೊಳೆಯುವ ಚೂಡಾಮಣಿಯನ್ನು ಎತ್ತಿಕೊಂಡು ಮರಳಿದನು. ಎಲ್ಲ ಗೋಪಿಕೆಯರೂ ನೋಡುತ್ತಿರುವಂತೆಯೇ ಆ ಮಣಿಯನ್ನು ಅಣ್ಣನಾದ ಬಲರಾಮನಿಗೆ ಒಪ್ಪಿಸಿದನು. ॥ ೩೨ ॥

ಮೂವತ್ತನಾಲ್ಕನೆಯ ಅಧ್ಯಾಯವು ಮುಗಿಯಿತು. ॥ ೩೪ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮ ಸ್ಕಂಧೇ ಪೂರ್ವಾರ್ಧೇ
ಶಂಖಚೂಡವಧೋ ನಾಮ ಚತುಸ್ತ್ರಿಂಶೋಽಧ್ಯಾಯಃ ॥ ೩೪ ॥

ಮೂವತ್ತೈದನೆಯ ಅಧ್ಯಾಯ

ಯುಗಳ ಗೀತೆ

ಶ್ರೀಶುಕ ಉವಾಚ

ಗೋಪ್ಯಃ ಕೃಷ್ಣೇ ವನಂ ಯಾತೇ ತಮನುದ್ರುತಚೇತಸಃ ।
ಕೃಷ್ಣಲೀಲಾಃ ಪ್ರಗಾಯಂತ್ಯೋ ನಿನ್ಯುರ್ದುಃಖೇನ ವಾಸರಾನ್ ॥ ೧ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಎಲೈ ಪರೀಕ್ಷಿತನೇ! ಭಗವಾನ್ ಶ್ರೀಕೃಷ್ಣನು ಅನುದಿನವೂ ಹಸುಗಳನ್ನು ಮೇಯಿಸಲು ಬೆಳಗಾದೊಡನೆಯೇ ವನಕ್ಕೆ ಹೊರಟು ಹೋಗುತ್ತಿದ್ದನು. ವ್ರಜದಲ್ಲಿದ್ದ ಗೋಪಿಯರ ಮನಸ್ಸೂ ಅವನೊಂದಿಗೇ ಹೊರಟು ಹೋಗುತ್ತಿತ್ತು. ಅವರ ಮನಸ್ಸು ಶ್ರೀಕೃಷ್ಣನನ್ನು ಚಿಂತಿಸುತ್ತಾ, ಅವನ ಲೀಲಾಪ್ರಸಂಗಗಳನ್ನು ಯಾವಾಗಲೂ ಹಾಡುತ್ತಾ ಇದ್ದರು. ಹೀಗೆ ಅವರು ಹಗಲನ್ನು ಬಹಳ ಕಷ್ಟದಿಂದ ಕಳೆಯುತ್ತಿದ್ದರು. ॥ ೧ ॥

ಗೋಪ್ಯ ಊಚುಃ

ವಾಮಬಾಹುಕೃತವಾಮಕಪೋಲೋ
ವಲ್ಗಿತಭ್ರೂರಧರಾರ್ಪಿತವೇಣುಮ್ ।
ಕೋಮಲಾಂಗುಲಿಭಿರಾಶ್ರಿತಮಾರ್ಗಂ
ಗೋಪ್ಯ ಈರಯತಿ ಯತ್ರ ಮುಕುಂದಃ ॥ ೨ ॥

ವ್ಯೋಮಯಾನವನಿತಾಃ ಸಹ ಸಿದ್ಧೈ-
ರ್ವಿಸ್ಮಿತಾಸ್ತದುಪಧಾರ್ಯ ಸಲಜ್ಜಾಃ ।
ಕಾಮಮಾರ್ಗಣಸಮರ್ಪಿತಚಿತ್ತಾಃ
ಕಶ್ಮಲಂ ಯಯುರಪಸ್ಮೃತನೀವ್ಯಃ ॥ ೩ ॥

ಗೋಪಿಯರು ಪರಸ್ಪರ ಹೇಳುತ್ತಾರೆ - ಎಲೈ ಸಖಿಯೇ! ನಮ್ಮ ಮುಕುಂದನು ಕೊಳಲನ್ನು ಹಿಡಿದು, ಎಡತೋಳನ್ನು ಎಡಕೆನ್ನೆಗೆ ತಾಗಿಸಿ, ಕೊಳಲನ್ನು ತುಟಿಗೆ ತಗುಲಿಸಿ ಆರೋಹಣ ಅವರೋಹಣ ಮಾರ್ಗವನ್ನು ಅನುಸರಿಸಿ ಹುಬ್ಬನ್ನು ಹಾರಿಸುತ್ತಾ ಮೃದುವಾದ ಬೆರಳುಗಳ ಚಾಲನೆಯಿಂದ ಕೊಳಲನ್ನು ನುಡಿಸುವನು. ವಿಮಾನ ಸಂಚಾರಿಗಳಾದ ಸಿದ್ಧಸ್ತ್ರೀಯರು ತಮ್ಮ ಪತಿಗಳೊಡನೆ ಕರ್ಣಾನಂದಕರವಾದ ಆ ವೇಣುಗಾನವನ್ನು ಕೇಳಿ ಆಶ್ಚರ್ಯಗೊಳ್ಳುವರು. ವೇಣುಗಾನವನ್ನು ಕೇಳಿ ಮನ್ಮಥನ ಬಾಣಗಳ ಲಕ್ಷ್ಯಕ್ಕೆ ಮನಸೊಪ್ಪಿಸಿದ ಅವರು ಲಜ್ಜೆಗೊಳ್ಳುವರು. ವೇಣುಗಾನ ಶ್ರವಣದಿಂದ ಮೈಮರೆತ ಅವರಿಗೆ ಸೀರೆಯ ಉಡಿಗಂಟು ಬಿಚ್ಚಿ ಹೋಗಿರುವುದೂ ತಿಳಿಯುವುದಿಲ್ಲ. ಹೀಗೆ ನಮ್ಮ ಇನಿಯನ ವೇಣುಗಾನವು ನಮ್ಮನ್ನು ಮಾತ್ರವೇ ಅಲ್ಲದೆ ಆಕಾಶಸಂಚಾರಿಗಳಾದ ದೇವತೆಗಳನ್ನೂ ವಿಮೋಹಗೊಳಿಸುವುದಾಗಿದೆ. ॥ ೨-೩ ॥

ಹಂತ ಚಿತ್ರಮಬಲಾಃ ಶೃಣುತೇದಂ
ಹಾರಹಾಸ ಉರಸಿ ಸ್ಥಿರವಿದ್ಯುತ್ ।
ನಂದಸೂನುರಯಮಾರ್ತಜನಾನಾಂ
ನರ್ಮದೋ ಯರ್ಹಿ ಕೂಜಿತವೇಣುಃ ॥ ೪ ॥

ವೃಂದಶೋ ವ್ರಜವೃಷಾ ಮೃಗಗಾವೋ
ವೇಣುವಾದ್ಯಹೃತಚೇತಸ ಆರಾತ್ ।
ದಂತದಷ್ಟಕವಲಾ ಧೃತಕರ್ಣಾ
ನಿದ್ರಿತಾ ಲಿಖಿತಚಿತ್ರಮಿವಾಸನ್ ॥ ೫ ॥

ಮತ್ತೊಬ್ಬ ಗೋಪಿಯು ಹೇಳುತ್ತಾಳೆ - ಸಖಿಯರೇ! ನಾನು ಮತ್ತೊಂದು ಆಶ್ಚರ್ಯಕರವಾದ ವಿಚಾರವನ್ನು ಹೇಳುವೆನು, ಕೇಳಿರಿ. ಮುತ್ತಿನಹಾರದಂತೆ ಶುಭ್ರವಾದ ನಗೆಯುಳ್ಳ, ವಕ್ಷಸ್ಥಲದಲ್ಲಿ ಮಿಂಚಿನಂತೆ ಹೊಳೆಯುವ ಲಕ್ಷ್ಮೀದೇವಿಯನ್ನು ಹೊಂದಿರುವ, ಆರ್ತರಾದ ಭಕ್ತರಿಗೆ ಸುಖವನ್ನುಂಟುಮಾಡುವ, ನಂದಗೋಪನ ಮಗನಾದ ಶ್ರೀಕೃಷ್ಣನು ಕೊಳಲನ್ನು ನುಡಿಸಲು ಪ್ರಾರಂಭಿಸಿದರೆ, ಗುಂಪು-ಗುಂಪಾಗಿ ಮೇಯುತ್ತಿದ್ದ ವ್ರಜದ ಎತ್ತುಗಳು, ಮೃಗಗಳೂ, ಹಸುಗಳು ಆ ವೇಣುಗಾನದಿಂದ ಮೈಮರೆತು ಮೇಯುವುದನ್ನು ಹಾಗೆಯೇ ನಿಲ್ಲಿಸಿಬಿಡುತ್ತಿದ್ದವು. ಹಲ್ಲುಗಳಲ್ಲಿ ಕಚ್ಚಿಕೊಂಡ ಹುಲ್ಲನ್ನು ಅಗಿಯದೆ, ನುಂಗದೆ ಹಾಗೇ ನಿಂತಿರುತ್ತಿದ್ದವು. ಕಿವಿಗಳನ್ನು ನಿಮಿರಿಸಿಕೊಂಡು ಗಾನಸುಧೆಯನ್ನು ಪಾನಮಾಡುತ್ತಿವೆಯೋ ಎಂಬಂತೆ ಚಿತ್ತಾರದಂತೆ ಸ್ಥಿರವಾಗಿ ನಿಲ್ಲುತ್ತವೆ. ಅವರ ಈ ಸ್ಥಿತಿಯು ಸ್ವಾಭಾವಿಕವೇ ಆಗಿದೆ. ಏಕೆಂದರೆ, ಈ ಮುರಲೀಗಾನವು ಅವರ ಚಿತ್ತವನ್ನು ಅಪಹರಿಸುತ್ತದೆ. ॥ ೪-೫ ॥

ಬರ್ಹಿಣಸ್ತಬಕಧಾತುಪಲಾಶೈ-
ರ್ಬದ್ಧಮಲ್ಲಪರಿಬರ್ಹವಿಡಂಬಃ ।
ಕರ್ಹಿಚಿತ್ ಸಬಲ ಆಲಿ ಸ ಗೋಪೈ-
ರ್ಗಾಃ ಸಮಾಹ್ವಯತಿ ಯತ್ರ ಮುಕುಂದಃ ॥ ೬ ॥

ತರ್ಹಿ ಭಗ್ನಗತಯಃ ಸರಿತೋ ವೈ
ತತ್ಪದಾಂಬುಜರಜೋಽನಿಲನೀತಮ್ ।
ಸ್ಪೃಹಯತೀರ್ವಯಮಿವಾಬಹುಪುಣ್ಯಾಃ
ಪ್ರೇಮವೇಪಿತಭುಜಾಃ ಸ್ತಿಮಿತಾಪಃ ॥ ೭ ॥

ಮತ್ತೊಬ್ಬ ಗೋಪಿಯು ಹೇಳುತ್ತಾಳೆ - ಗೆಳತಿಯರೇ! ಕೆಲವೊಮ್ಮೆ ನಮ್ಮ ಮುದ್ದು ಇನಿಯನು ನವಿಲಗರಿಗಳಿಂದಲೂ, ಹೂವಿನ ಗೊಂಚಲುಗಳಿಂದಲೂ, ಹರಿದಳವೇ ಮುಂತಾದ ಬಣ್ಣಗಳಿಂದಲೂ, ಚಿಗುರೆಲೆಗಳಿಂದಲೂ ಶರೀರವನ್ನು ಸಿಂಗರಿಸಿಕೊಂಡು ಜಟ್ಟಿಯಂತೆ ಕಾಣುತ್ತಾ, ಬಲರಾಮನೊಂದಿಗೆ ಕೊಳಲನ್ನೂದುತ್ತಾ ಗೋಪಾಲಕರೊಡನೆ ಆಕಳುಗಳನ್ನು ಅವುಗಳ ಹೆಸರೆತ್ತಿ ಕರೆಯುತ್ತಾನೆ. ಆ ಸಮಯದಲ್ಲಿ ವೇಣುಗಾನದ ಮಾಧುರ್ಯವನ್ನು ಕೇಳಿದ ನದಿಗಳು ಸ್ತಬ್ಧವಾಗುತ್ತವೆ. ಮುಂದಕ್ಕೆ ಹರಿಯುವುದೇ ಇಲ್ಲ. ವಾಯುವು ನಮ್ಮ ಇನಿಯನ ಪಾದಧೂಳಿಯನ್ನು ತಂದು ತಮ್ಮ ಮೇಲೆ ಹಾಕುವನೆಂದು ಭಾವಿಸಿ ಸ್ಥಿರವಾಗಿ ನಿಲ್ಲುತ್ತವೆ. ಆದರೆ ಆ ನದಿಗಳು ನಮ್ಮಂತೆಯೇ ಭಾಗ್ಯಹೀನರು. ತೆರೆಗಳೆಂಬ ತೋಳುಗಳನ್ನು ಚಾಚಿದರೂ ಅವುಗಳಿಗೆ ಭಗವಂತನ ಪಾದಧೂಳಿಯು ಸಿಗದೆ ಕೊನೆಗೆ ಪ್ರೇಮಾವೇಶದಿಂದ ತಟಸ್ಥರಾಗಿ ನಿಂತು ಬಿಡುತ್ತವೆ. ॥ ೬-೭ ॥

ಅನುಚರೈಃ ಸಮನುವರ್ಣಿತವೀರ್ಯ
ಆದಿಪೂರುಷ ಇವಾಚಲಭೂತಿಃ ।
ವನಚರೋ ಗಿರಿತಟೇಷು ಚರಂತೀ-
ರ್ವೇಣುನಾಽಽಹ್ವಯತಿ ಗಾಃ ಸ ಯದಾ ಹಿ ॥ ೮ ॥

ವನಲತಾಸ್ತರವ ಆತ್ಮನಿ ವಿಷ್ಣುಂ
ವ್ಯಂಜಯಂತ್ಯ ಇವ ಪುಷ್ಪ ಫಲಾಢ್ಯಾಃ ।
ಪ್ರಣತಭಾರವಿಟಪಾ ಮಧುಧಾರಾಃ
ಪ್ರೇಮಹೃಷ್ಟ ತನವಃ ಸಸೃಜುಃ ಸ್ಮ ॥ ೯ ॥

ದರ್ಶನೀಯತಿಲಕೋ ವನಮಾಲಾ-
ದಿವ್ಯಗಂಧತುಲಸೀಮಧುಮತ್ತೈಃ ।
ಅಲಿಕುಲೈರಲಘುಗೀತಮಭೀಷ್ಟ-
ಮಾದ್ರಿಯನ್ ಯರ್ಹಿ ಸಂಧಿತವೇಣುಃ ॥ ೧೦ ॥

ಸರಸಿ ಸಾರಸಹಂಸವಿಹಂಗಾ-
ಶ್ಚಾರುಗೀತಹೃತಚೇತಸ ಏತ್ಯ ।
ಹರಿಮುಪಾಸತ ತೇ ಯತಚಿತ್ತಾ
ಹಂತ ಮೀಲಿತದೃಶೋ ಧೃತಮೌನಾಃ ॥ ೧೧ ॥

ಸಹಬಲಃ ಸ್ರಗವತಂಸವಿಲಾಸಃ
ಸಾನುಷು ಕ್ಷಿತಿಭೃತೋ ವ್ರಜದೇವ್ಯಃ ।
ಹರ್ಷಯನ್ ಯರ್ಹಿ ವೇಣುರವೇಣ
ಜಾತಹರ್ಷ ಉಪರಂಭತಿ ವಿಶ್ವಮ್ ॥ ೧೨ ॥

ಮಹದತಿಕ್ರಮಣಶಂಕಿತಚೇತಾ
ಮಂದಮಂದಮನುಗರ್ಜತಿ ಮೇಘಃ ।
ಸುಹೃದಮಭ್ಯವರ್ಷತ್ಸುಮನೋಭಿ-
ಶ್ಛಾಯಯಾ ಚ ವಿದಧತ್ ಪ್ರತಪತ್ರಮ್ ॥ ೧೩ ॥

ಇನ್ನೊಬ್ಬ ಗೋಪಿಯು ಹೇಳುತ್ತಾಳೆ - ಸಖಿಯೇ! ಅನಂತವಾದ ಮತ್ತು ಅಚಿಂತ್ಯವಾದ ಐಶ್ವರ್ಯಕ್ಕೆ ಸ್ವಾಮಿಯಾದ ಶ್ರೀಮನ್ನಾರಾಯಣನ ಅಪಾರಶಕ್ತಿಗಳನ್ನು ದೇವತೆಗಳು ಗಾನ ಮಾಡುತ್ತಾ ಇರುವಂತೆಯೇ ಗೊಲ್ಲಬಾಲಕರು ಕಡುಚೆಲುವನಾದ ಶ್ರೀಕೃಷ್ಣನಲೀಲಾ ಪ್ರಸಂಗಗಳನ್ನು ಗಾನಮಾಡುತ್ತಾ ಇರುತ್ತಾರೆ. ಅಂತಹ ಅಚಿಂತ್ಯ ಐಶ್ವರ್ಯಸಂಪನ್ನನಾದ ಶ್ರೀಕೃಷ್ಣನು ವೃಂದಾವನದಲ್ಲಿ ವಿಹರಿಸುವಾಗ, ಕೊಳಲನ್ನೂದುತ್ತಾ ಗೋವರ್ಧನದ ತಪ್ಪಲಲ್ಲಿ ಮೇಯುತ್ತಿದ್ದ ಹಸುಗಳ ಹೆಸರಿಡಿದು ಕರೆಯುತ್ತಿರುವನು. ಆ ವನದ ಮರ-ಗಿಡ-ಬಳ್ಳಿಗಳು ಹೂವು-ಹಣ್ಣುಗಳಿಂದ ಸಮೃದ್ಧವಾಗಿದ್ದು, ಅವುಗಳ ಕೊಂಬೆಗಳು ಫಲಭಾರದಿಂದ ನೆಲದವರೆಗೂ ಬಗ್ಗಿ ಶ್ರೀಕೃಷ್ಣನಿಗೆ ನಮಸ್ಕರಿಸುವಂತಿವೆ. ಆ ಲತಾ-ವೃಕ್ಷಗಳು ತಮ್ಮೊಳಗೆ ಭಗವಾನ್ ವಿಷ್ಣುವು ಇರುವನೆಂಬುದನ್ನು ಸೂಚಿಸುತ್ತವೋ ಎಂಬಂತೆ ಉಲ್ಲಸಿತವಾಗುತ್ತವೆ. ಆ ವೃಕ್ಷಗಳು ಪ್ರಹೃಷ್ಟವಾದ ಶರೀರವನ್ನು ಹೊಂದಿ ರೋಮಾಂಚನವಾದಂತೆ ಮಕರಂದದ ಧಾರೆಯನ್ನು ಸುರಿಸುತ್ತವೆ. ॥ ೮-೯ ॥

ಮತ್ತೊಬ್ಬ ಗೋಪಿಯು ಹೇಳುತ್ತಾಳೆ - ಸಖಿಯರೇ! ನಮ್ಮ ಇನಿಯನ ಹಣೆಯಲ್ಲಿ ದರ್ಶನೀಯವಾದ ಕಸ್ತೂರಿ ತಿಲಕವಿದೆ. ಕಂಠದಲ್ಲಿ ತುಲಸೀದಳಗಳಿಂದ ಕೂಡಿದ ವನಮಾಲೆಯಿದೆ. ಇದರ ಸುಗಂಧವನ್ನು ಆಘ್ರಾಣಿಸಿದ ದುಂಬಿಗಳು ಮತ್ತರಾಗಿ ಝೇಂಕರಿಸುತ್ತಿವೆ. ಶ್ರೀಕೃಷ್ಣನು ದುಂಬಿಗಳ ಧ್ವನಿಯನ್ನು ಅನುಸರಿಸಿ ವೇಣುವನ್ನು ನುಡಿಸುತ್ತಾನೆ. ಆ ಮುನಿಜನ ಮೋಹನ ವೇಣುಗಾನವನ್ನು ಕೇಳಿದ ಸರೋವರದಲ್ಲಿದ್ದ ಹಂಸ, ಕಾರಂಡವ ಮೊದಲಾದ ಜಲಪಕ್ಷಿಗಳ ಮನಸ್ಸೂ ಕೂಡ ಪರವಶವಾಗುತ್ತದೆ. ಅವುಗಳು ವಿವಶರಾಗಿ ಪ್ರಿಯ ಶ್ಯಾಮಸುಂದರನ ಬಳಿಗೆ ಬಂದು ಮೌನವಾಗಿ ಕುಳಿತು ಕಣ್ಣುಗಳನ್ನು ಮುಚ್ಚಿಕೊಂಡು, ಏಕಾಗ್ರಚಿತ್ತದಿಂದ ಅವನನ್ನು ಆರಾಧಿಸುವವೋ ಎಂಬಂತಿರುತ್ತದೆ. ಎಂತಹ ಆಶ್ಚರ್ಯದ ಮಾತಾಗಿದೆ! ॥ ೧೦-೧೧ ॥

ಇನ್ನೊಬ್ಬ ಗೋಪಿಯು ಹೇಳಿದಳು - ಗೆಳತಿಯರೇ! ನಮ್ಮ ಶ್ಯಾಮಸುಂದರನು ಹೂಗಳ ಕರ್ಣಕುಂಡಲಗಳಿಂದ ಅಲಂಕರಿಸಿಕೊಂಡು ಬಲರಾಮನೊಂದಿಗೆ ಗೋವರ್ಧನದ ತಪ್ಪಲಿನಲ್ಲಿ ನಿಂತು ಸಮಸ್ತ ಜಗತ್ತನ್ನು ಹರ್ಷಗೊಳಿಸುತ್ತಾ ಕೊಳಲನ್ನು ನುಡಿಸುತ್ತಿರುತ್ತಾನೆ. ಕೇವಲ ನುಡಿಸುವುದು ಮಾತ್ರವಲ್ಲ, ಆನಂದತುಂದಿಲನಾಗಿ ವೇಣುಗಾನದ ಮೂಲಕ ವಿಶ್ವವನ್ನೇ ಆಲಿಂಗಿಸಿಕೊಳ್ಳುತ್ತಾನೆ. ಆ ಸಮಯದಲ್ಲಿ ಮೇಘವು ಕೊಳಲಿನ ಧ್ವನಿಯೊಂದಿಗೆ ಮೆಲ್ಲ ಮೆಲ್ಲನೆ ಗರ್ಜಿಸುತ್ತದೆ. ಶ್ರೀಕೃಷ್ಣನ ವೇಣುನಾದವು ಕೇಳದಂತೆ ನಾವು ಜೋರಾಗಿ ಗುಡುಗಿದರೆ ಶ್ರೀಕೃಷ್ಣನಿಗೆ ಅಪರಾಧವೆಸಗಿದಂತಾದೀತೆಂದು ಶಂಕಿಸಿ ಮೆಲ್ಲನೆ ಗುಡುಗುತ್ತವೆ. ಕೆಲವು ವೇಳೆ ನಮ್ಮ ಪ್ರಿಯಕರನ ಮೇಲೆ ಹೂಮಳೆಗರೆಯುತ್ತವೆ. ಕೆಲವು ಸಲ ಬಿಸಿಲಿನಿಂದ ಉಂಟಾದ ಬೇಗೆಯನ್ನು ಹೋಗಲಾಡಿಸಲು ಛತ್ರಿಯಂತೆ ಅವನ ಮೇಲೆ ಆವರಿಸಿ ಬಿಡುತ್ತವೆ. ॥ ೧೨-೧೩ ॥

ವಿವಿಧಗೋಪಚರಣೇಷು ವಿದಗ್ಧೋ
ವೇಣುವಾದ್ಯ ಉರುಧಾ ನಿಜಶಿಕ್ಷಾಃ ।
ತವ ಸುತಃ ಸತಿ ಯದಾಧರಬಿಂಬೇ
ದತ್ತವೇಣುರನಯತ್ ಸ್ವರಜಾತೀಃ ॥ ೧೪ ॥

ಸವನಶಸ್ತದುಪಧಾರ್ಯ ಸುರೇಶಾಃ
ಶಕ್ರಶರ್ವಪರಮೇಷ್ಠಿ ಪುರೋಗಾಃ ।
ಕವಯ ಆನತಕಂಧರಚಿತ್ತಾಃ
ಕಶ್ಮಲಂ ಯಯುರನಿಶ್ಚಿತತತ್ತ್ವಾಃ ॥ ೧೫ ॥

ನಿಜಪದಾಬ್ಜದಲೈರ್ಧ್ವಜವಜ್ರ-
ನೀರಜಾಂಕುಶವಿಚಿತ್ರಲಲಾಮೈಃ ।
ವ್ರಜಭುವಃ ಶಮಯನ್ ಖುರತೋದಂ
ವರ್ಷ್ಮಧುರ್ಯಗತಿರೀಡಿತವೇಣುಃ ॥ ೧೬ ॥

ವ್ರಜತಿ ತೇನ ವಯಂ ಸವಿಲಾಸ-
ವೀಕ್ಷಣಾರ್ಪಿತಮನೋಭವವೇಗಾಃ ।
ಕುಜಗತಿಂ ಗಮಿತಾ ನ ವಿದಾಮಃ
ಕಶ್ಮಲೇನ ಕಬರಂ ವಸನಂ ವಾ ॥ ೧೭ ॥

ಮಣಿಧರಃ ಕ್ವಚಿದಾಗಣಯನ್ ಗಾ
ಮಾಲಯಾ ದಯಿತಗಂಧತುಲಸ್ಯಾಃ ।
ಪ್ರಣಯಿನೋಽನುಚರಸ್ಯ ಕದಾಂಸೇ
ಪ್ರಕ್ಷಿಪನ್ಭುಜಮಗಾಯತ ಯತ್ರ ॥ ೧೮ ॥

ಕ್ವಣಿತವೇಣುರವವಂಚಿತಚಿತ್ತಾಃ
ಕೃಷ್ಣಮನ್ವಸತ ಕೃಷ್ಣಗೃಹಿಣ್ಯಃ ।
ಗುಣಗಣಾರ್ಣಮನುಗತ್ಯ ಹರಿಣ್ಯೋ
ಗೋಪಿಕಾ ಇವ ವಿಮುಕ್ತಗೃಹಾಶಾಃ ॥ ೧೯ ॥

ಮತ್ತೊಬ್ಬ ಗೋಪಿಯು ಶ್ರೀಕೃಷ್ಣನ ಕೊಳಲಿನ ಮಹಿಮೆಯನ್ನು ಹೇಳುತ್ತಾಳೆ – ಯಶೋದಾಮಾತೆಯೇ ! ನಿನ್ನ ಮನಮೋಹಕನಾದ ಮಗನು ಗೋಪಬಾಲಕರೊಂದಿಗೆ ಆಟವಾಡುವುದರಲ್ಲಿ ಬಹಳ ನಿಪುಣನು. ಅವನು ಎಲ್ಲರ ಪ್ರೀತಿಗೆ ಪಾತ್ರನಾಗಿದ್ದು ಅತ್ಯಂತ ಚತುರನೂ ಆಗಿದ್ದಾನೆ. ಅವನು ಕೊಳಲನ್ನು ನುಡಿಸುವುದನ್ನು ಯಾರಿಂದಲೂ ಕಲಿಯಲಿಲ್ಲ. ಅವನು ತೊಂಡೆಹಣ್ಣಿನಂತಿರುವ ಸುಂದರವಾದ ತನ್ನ ತುಟಿಯ ಮೇಲೆ ಕೊಳಲನ್ನು ಇಡುತ್ತಲೇ ಹಲವಾರು ರಾಗ-ರಾಗಿಣಿಯರು ತಾವಾಗಿಯೇ ಪ್ರಕಟಗೊಳ್ಳುವುವು. ಕರ್ಣಾನಂದಕರವಾದ ಆ ವೇಣುಗಾನವನ್ನು ಕೇಳಿದ ಇಂದ್ರ-ರುದ್ರ-ಬ್ರಹ್ಮರೇ ಮೊದಲಾದ ದೇವತೆಗಳ ಮತ್ತು ವಿದ್ವಾಂಸರ ಕತ್ತೂ ಹಾಗೂ ಮನಸ್ಸು ಶ್ರೀಕೃಷ್ಣನ ಕಡೆಗೆ ವಾಲುತ್ತದೆ. ಅವರಷ್ಟೇ ಕೇಳಿದರೂ ಆನಂದಪಡುವುದು ಬಿಟ್ಟು ಶ್ರೀಕೃಷ್ಣನು ನುಡಿಸುತ್ತಿರುವ ರಾಗವಾಗಲೀ, ರಾಗದ ಭೇದವಾಗಲೀ ಅವರಿಗೆ ತಿಳಿಯುವುದಿಲ್ಲ. ವೇಣುಗಾನದ ರಹಸ್ಯವನ್ನು ತಿಳಿಯಲಾಗದೆ ಅವರು ವಿಮೋಹಿತರಾಗುತ್ತಾರೆ. ॥ ೧೪-೧೫ ॥

ಇನ್ನೋರ್ವಳು ಹೇಳುವಳು – ಸಖಿಯೇ ! ನಮ್ಮ ಪ್ರಾಣಸಖನಾದ ಶ್ರೀಕೃಷ್ಣನ ಪಾದಾರವಿಂದಗಳಲ್ಲಿ ಧ್ವಜ, ವಜ್ರ, ಕಮಲ, ಅಂಕುಶ ಇವೇ ಮೊದಲಾದ ವಿಚಿತ್ರವಾದ, ಸುಂದರವಾದ ಚಿಹ್ನೆಗಳಿವೆ. ವ್ರಜಭೂಮಿಯು ಗೋವುಗಳ ಗೊರಸುಗಳಿಂದ ಪೀಡಿಸಲ್ಪಟ್ಟಾಗ ಶ್ರೀಕೃಷ್ಣನು ಅದರ ನೋವನ್ನು ಹೋಗಲಾಡಿಸಲು ಮದಗಜದಂತೆ ನಿಧಾನವಾಗಿ ನಡೆಯುತ್ತಾ, ಕೊಳಲನ್ನು ನುಡಿಸುತ್ತಾ ಹೋಗುತ್ತಿರುತ್ತಾನೆ. ಅವನ ಚಿತ್ತಾಕರ್ಷಕವಾದ ವೇಣುಗಾನ, ಅವನ ನಡಿಗೆ ಮತ್ತು ಮಂದಹಾಸಗಳು ನಮ್ಮ ಹೃದಯದಲ್ಲಿ ಪ್ರೇಮವನ್ನು ಹಾಗೂ ಅವನನ್ನು ಸೇರಬೇಕೆಂಬ ಆಕಾಂಕ್ಷೆಯನ್ನು ಹೆಚ್ಚಿಸುತ್ತದೆ. ವಿಲಾಸದಿಂದ ಕೂಡಿದ ಅವನ ಕುಡಿನೋಟದಿಂದ ಪ್ರೇಮ ವಿಹ್ವಲರಾದ ನಾವು ವೃಕ್ಷಗಳಂತೆ ಜಡರಾಗಿಬಿಡುತ್ತೇವೆ. ಅವನಲ್ಲಿ ವಿಮೋಹಿತರಾದ ನಾವು ತುರುಬು ಬಿಚ್ಚಿಹೋಗುವುದೂ, ಸೀರೆ ಜಾರಿ ಹೋಗುವುದೂ ತಿಳಿಯದಷ್ಟು ತನ್ಮಯರಾಗುತ್ತೇವೆ. ॥ ೧೬-೧೭ ॥

ಇನ್ನೊಬ್ಬ ಗೋಪಿಯು ಹೇಳುತ್ತಾಳೆ – ಗೆಳತಿಯರೇ ! ಮಣಿಗಳ ಸರವು ನಮ್ಮ ಶ್ಯಾಮಸುಂದರನ ಕೊರಳಿನಲ್ಲಿ ಸದಾ ವಿರಾಜಿಸುತ್ತವೆ. ತುಳಸಿಯ ಪರಿಮಳವು ಅವನಿಗೆ ಅತಿಪ್ರಿಯವಾಗಿದೆ. ಆದುದರಿಂದ ಶ್ರೀಕೃಷ್ಣನು ತುಳಸೀಮಾಲೆಯನ್ನು ನಿರಂತರವಾಗಿ ಧರಿಸಿಯೇ ಇರುತ್ತಾನೆ. ಅವನು ಮಣಿಗಳ ಮಾಲೆಯಿಂದ ಹಸುಗಳನ್ನು ಎಣಿಸುತ್ತಾ, ಮತ್ತೊಂದು ತೋಳನ್ನು ತನ್ನ ಪ್ರಿಯಸಖನ ಹೆಗಲ ಮೇಲಿಟ್ಟು ಹಾಡುತ್ತಿರುತ್ತಾನೆ. ಕೆಲವು ವೇಳೆ ಕೊಳಲನ್ನು ನುಡಿಸುತ್ತಿರುತ್ತಾನೆ. ಆ ಕರ್ಣಾನಂದಕರವಾದ ವೇಣುಗಾನದಿಂದ ಆಕರ್ಷಿತರಾದ ಹೆಣ್ಣು ಜಿಂಕೆಗಳು ಗೋಪಿಕೆಯರಾದ ನಾವು ಮನೆ-ಮಠ, ಪತಿ-ಸುತರನ್ನೂ, ಬಂಧು-ಬಾಂಧವರನ್ನು ಪರಿತ್ಯಜಿಸಿ ಶ್ರೀಕೃಷ್ಣನನ್ನು ಹಿಂಬಾಲಿಸುವಂತೆ – ಸಕಲವನ್ನು ತ್ಯಜಿಸಿ ಮೇಯುವುದನ್ನು ಬಿಟ್ಟು ಗುಣಗಳ ಸಮುದ್ರಪ್ರಾಯನಾದ ಶ್ರೀಕೃಷ್ಣನನ್ನು ಹಿಂಬಾಲಿಸಿ ಹೋಗುತ್ತವೆ. ॥ ೧೮-೧೯ ॥

ಕುಂದದಾಮಕೃತಕೌತುಕವೇಷೋ
ಗೋಪಗೋಧನವೃತೋ ಯಮುನಾಯಾಮ್ ।
ನಂದಸೂನುರನಘೇ ತವ ವತ್ಸೋ
ನರ್ಮದಃ ಪ್ರಣಯಿಣಾಂ ವಿಜಹಾರ ॥ ೨೦ ॥

ಮಂದವಾಯುರುಪವಾತ್ಯನುಕೂಲಂ
ಮಾನಯನ್ ಮಲಯಜಸ್ಪರ್ಶೇನ ।
ವಂದಿನಸ್ತಮುಪದೇವಗಣಾ ಯೇ
ವಾದ್ಯಗೀತಬಲಿಭಿಃ ಪರಿವವ್ರುಃ ॥ ೨೧ ॥

ಮತ್ತೊಬ್ಬ ಗೋಪಿಕೆಯು ಹೇಳಿದಳು - ಯಶೋದಾ ರಾಣಿಯೇ! ಅಂತಹ ಜಗದಾನಂದಕಂದನನ್ನು ಮಗನನ್ನಾಗಿ ಪಡೆದಿರುವ ನೀನೇ ಪುಣ್ಯವತಿಯು. ಅವನ ಮನಸ್ಸು ಬಹಳ ಕೋಮಲವಾದುದು. ಅವನು ಬಗೆ-ಬಗೆಯ ಹಾಸ-ಪರಿಹಾಸಗಳ ಮೂಲಕವಾಗಿ ತನ್ನ ಗೆಳೆಯರಿಗೆ ಆನಂದವನ್ನುಂಟುಮಾಡುತ್ತಾ ಇರುತ್ತಾನೆ. ಗೋಪ-ಗೋಪಿಯರಿಗೆ ಕೌತುಕವನ್ನುಂಟುಮಾಡುವ ನಿನ್ನ ಮಗನು ವಿಚಿತ್ರವಾದ ವೇಷಗಳನ್ನು ಧರಿಸಿ, ಮಲ್ಲಿಗೆಯ ಹೂವಿನ ಹಾರವನ್ನು ಹಾಕಿಕೊಂಡು ಗೋ-ಗೋಪಾಲಕರೊಡನೆ ಯಮುನಾ ನದಿಯ ತೀರದಲ್ಲಿ ಆಟವಾಡುವಾಗ ಮಲಯಾಚಲ ಚಂದನದಂತೆ ಸುಗಂಧಿತವಾಯುವು ಮಂದ-ಮಂದವಾಗಿ ಅನುಕೂಲಕರವಾಗಿ ಬೀಸುತ್ತಾ ನಿನ್ನ ಮಗನ ಸೇವೆ ಮಾಡುತ್ತಾ ಇರುತ್ತದೆ. ಗಂಧರ್ವಾದಿ ಉಪದೇವತೆಗಳು ವಂದೀಜನರಂತೆ ಅವನ ಗುಣಗಾನವನ್ನು ಮಾಡುತ್ತಾ ಅವನನ್ನು ಸಂತೋಷಪಡಿಸುತ್ತಾ, ಅನೇಕ ಉಪಹಾರಾದಿಗಳನ್ನು ನೀಡಿ ಸುತ್ತಲೂ ನಿಂತು ಸೇವೆ ಮಾಡುತ್ತಾ ಇರುತ್ತಾರೆ. ॥ ೨೦-೨೧ ॥

ವತ್ಸಲೋ ವ್ರಜಗವಾಂ ಯದಗಧ್ರೋ
ವಂದ್ಯಮಾನಚರಣಃ ಪಥಿ ವೃದ್ಧೈಃ ।
ಕೃತ್ಸ್ನಗೋಧನಮುಪೋಹ್ಯ ದಿನಾಂತೇ
ಗೀತವೇಣುರನುಗೇಡಿತಕೀರ್ತಿಃ ॥ ೨೨ ॥

ಉತ್ಸವಂ ಶ್ರಮರುಚಾಪಿ ದೃಶೀನಾ-
ಮುನ್ನಯನ್ ಖುರರಜಶ್ಛುರಿತಸ್ರಕ್ ।
ದಿತ್ಸಯೈತಿ ಸುಹೃದಾಶಿಷ ಏಷ
ದೇವಕೀಜಠರಭೂರುಡುರಾಜಃ ॥ ೨೩ ॥

ಇನ್ನೋರ್ವಳು ಹೇಳುತ್ತಾಳೆ - ಸಖಿಯರೇ! ನಮ್ಮ ಶ್ಯಾಮಸುಂದರನು ಗೋಕುಲದ ಗೋವುಗಳನ್ನು ಬಹಳವಾಗಿ ಪ್ರೀತಿಸುತ್ತಾನೆ. ಹಸುಗಳನ್ನು ರಕ್ಷಿಸುವುದಕ್ಕಾಗಿಯೇ ಅವನು ಗೋವರ್ಧನವನ್ನು ಎತ್ತಿದುದು. ಈ ವೇಳೆಗಾಗಲೇ ನಮ್ಮ ಪ್ರೇಮಮೂರ್ತಿಯು ಗೋವುಗಳನ್ನು ಅಟ್ಟಿಕೊಂಡು ಗೋಕುಲದ ಕಡೆಗೆ ಬರುತ್ತಿರಬಹುದು. ಆದರೂ ಏಕಿಷ್ಟು ತಡವಾಗುತ್ತಿದೆ? ವಯೋವೃದ್ಧರೂ, ಜ್ಞಾನವೃದ್ಧರೂ, ತಪೋವೃದ್ಧರೂ ಅವನ ಚರಣಗಳಿಗೆ ವಂದಿಸುತ್ತಿರಬಹುದು. ಈಗ ಅವನು ಕೊಳಲನ್ನೂದುತ್ತಾ ಗೋವುಗಳ ಹಿಂದೆ ಹಿಂದೆಯೇ ಬರುತ್ತಿರಬಹುದು. ಹಸುಗಳ ಗೊರಸುಗಳಿಂದ ಎದ್ದ ಧೂಳಿಯು ಶ್ರೀಕೃಷ್ಣನ ವನಮಾಲೆಯನ್ನು ಮುಚ್ಚಿಕೊಂಡಿದೆ. ಅವನು ದಿನವೆಲ್ಲ ತಿರುಗಿ-ತಿರುಗಿ ಬಹಳವಾಗಿ ದಣಿದಿದ್ದಾನೆ. ಆ ಬಳಲಿಕೆಯಿಂದ ಸೌಂದರ್ಯವೇ ಅಡಗಿದೆ. ಅವನ ಅಲೌಕಿಕವಾದ ಶೋಭೆಯಿಂದಲೇ - ನಮ್ಮ ಕಣ್ಣುಗಳಿಗೆ ಆನಂದವನ್ನುಂಟುಮಾಡುತ್ತಾನೆ. ಯಶೋದಾದೇವಿಯ ಗರ್ಭಾಂಬುಧಿಯಲ್ಲಿ ಹುಟ್ಟಿ ಸಮಸ್ತರಿಗೂ ಆಹ್ಲಾದವನ್ನು ಉಂಟುಮಾಡುವ ಶ್ರೀಕೃಷ್ಣಚಂದ್ರನು ಭಕ್ತಜನರಿಗೆ ಒಳ್ಳೆಯದನ್ನು ಮಾಡಲಿಕ್ಕಾಗಿ, ನಮ್ಮ ಆಸೆ-ಆಕಾಂಕ್ಷೆಗಳನ್ನು ಪೂರ್ಣಗೊಳಿಸಲಿಕ್ಕಾಗಿಯೇ ನಮ್ಮ ಬಳಿಗೆ ಈಗ ಬರುತ್ತಿದ್ದಾನೆ. ॥ ೨೨-೨೩ ॥

ಮದವಿಘೂರ್ಣಿತಲೋಚನ ಈಷನ್-
ಮಾನದಃ ಸ್ವಸುಹೃದಾಂ ವನಮಾಲೀ ।
ಬದರಪಾಂಡುವದನೋ ಮೃದುಗಂಡಂ
ಮಂಡಯನ್ ಕನಕಕುಂಡಲಲಕ್ಷ್ಮ್ಯಾ ॥ ೨೪ ॥

ಸಖಿಯರೇ! ಇನಿಯನ ಸೌಂದರ್ಯವೆಷ್ಟೆಂಬುದನ್ನು ನೋಡಿ. ಅವನ ಕಣ್ಣುಗಳು ಮದದಿಂದ ಸೊಕ್ಕಿರುವಂತೆ ಕಾಣುತ್ತಿವೆ. ಅವನು ಕೊರಳಲ್ಲಿ ಸುಂದರವಾದ ವನಮಾಲೆಯನ್ನು ಧರಿಸಿದ್ದಾನೆ. ಚಿನ್ನದ ಕರ್ಣಾಭರಣಗಳಿಂದ ಅವನ ಕೆನ್ನೆಗಳು ಅಲಂಕೃತವಾಗಿವೆ. ಸ್ವಲ್ಪ ಪಕ್ವವಾದ ಬೋರೆ ಹಣ್ಣಿನಂತೆ ಕಿರುಹಳದಿಯಾದ ಮುಖಾರವಿಂದದಿಂದ ರಾರಾಜಿಸುತ್ತಿದ್ದಾನೆ. ರೋಮ-ರೋಮಗಳಲ್ಲಿ ವಿಶೇಷವಾಗಿ ಮುಖಕಮಲದಲ್ಲಿ ಪ್ರಸನ್ನತೆಯು ಮೂಡಿದೆ. ಅದೋ ನೋಡು, ನೋಡು! ಈಗ ಅವನು ಸ್ನೇಹಿತರಾದ ಗೊಲ್ಲಬಾಲಕರನ್ನು ಸಂತೈಸಿ ಬೀಳ್ಕೊಳ್ಳುತ್ತಿರುವನು. ವ್ರಜವಿಭೂಷಣ ಶ್ರೀಕೃಷ್ಣನು ಮದಭರಿತ ಗಜರಾಜನ ನಡಿಗೆಯಂತೆ ನಡೆಯುತ್ತಾ ಈ

ಯದುಪತಿರ್ದ್ವಿರದರಾಜವಿಹಾರೋ
ಯಾಮಿನೀಪತಿರಿವೈಷ ದಿನಾಂತೇ ।
ಮುದಿತವಕ್ತ್ರ ಉಪಯಾತಿ ದುರಂತಂ
ಮೋಚಯನ್ ವ್ರಜಗವಾಂ ದಿನತಾಪಮ್ ॥ ೨೫ ॥

ಸಂಧ್ಯಾಕಾಲದಲ್ಲಿ ನಮ್ಮ ಬಳಿಗೆ ಬರುತ್ತಿರುವನು. ವ್ರಜದಲ್ಲಿರುವ ಗೋವುಗಳ ಮತ್ತು ನಮ್ಮಗಳ ಹಗಲಿನ ಅಸಹನೀಯವಾದ ವಿರಹತಾಪವನ್ನು ಹೋಗಲಾಡಿಸಲು ಉದಯಿಸುವ ಚಂದ್ರನಂತೆ ಪ್ರಿಯ ಶ್ಯಾಮಸುಂದರನು ನಮ್ಮ ಬಳಿಗೆ ಬರುತ್ತಿದ್ದಾನೆ. ॥೨೪-೨೫ ॥

ಶ್ರೀಶುಕ ಉವಾಚ

ಏವಂ ವ್ರಜಸ್ತ್ರಿಯೋ ರಾಜನ್ ಕೃಷ್ಣಲೀಲಾ ನು ಗಾಯತೀಃ ।
ರೇಮಿರೇಽಹಃಸು ತಚ್ಚಿತ್ತಾಸ್ತನ್ಮನಸ್ಕಾ ಮಹೋದಯಾಃ ॥ ೨೬ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ - ಪರೀಕ್ಷಿತನೇ! ಶ್ರೇಷ್ಠರಾದ ಗೋಪಿಯರ ಮನಸ್ಸು ಶ್ರೀಕೃಷ್ಣನಲ್ಲೇ ಲೀನವಾಗಿ ಹೋಗಿತ್ತು. ಅವರೆಲ್ಲರೂ ಕೃಷ್ಣಮಯರೇ ಆಗಿದ್ದರು. ಭಗವಾನ್ ಶ್ರೀಕೃಷ್ಣನು ಬೆಳಗ್ಗೆ ಗೋವುಗಳನ್ನು ಮೇಯಿಸಲು ವೃಂದಾವನಕ್ಕೆ ಹೊರಟು ಹೋದಾಗ, ಸಖಿಯರೆಲ್ಲರೂ ಸೇರಿ ಅವನನ್ನೇ ಚಿಂತಿಸುತ್ತಾ ಅವನ ಲೀಲೆಗಳನ್ನು ಹಾಡುತ್ತಾ ಅದರಲ್ಲೇ ರಮಿಸಿ ಹೋಗುತ್ತಾರೆ. ಹೀಗೆ ತಮ್ಮ ದಿನಗಳನ್ನು ಅವರು ಕಳೆಯುತ್ತಾರೆ. ॥ ೨೬ ॥

ಮೂವತ್ತೈದನೆಯ ಅಧ್ಯಾಯವು ಮುಗಿಯಿತು. ॥ ೩೫ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮ ಸ್ಕಂಧೇ ಪೂರ್ವಾರ್ಧೇ ವೃಂದಾವನಕ್ರೀಡಾಯಾಂ ಗೋಪಿಕಾ ಯುಗಲಗೀತಂ ನಾಮ ಪಂಚತ್ರಿಂಶೋಽಧ್ಯಾಯಃ ॥ ೩೫ ॥

ಮೂವತ್ತಾರನೆಯ ಅಧ್ಯಾಯ

ಅರಿಷ್ಟಾಸುರನ ಉದ್ಧಾರ, ಕಂಸನು ಅಕ್ರೂರನನ್ನು ವ್ರಜಕ್ಕೆ ಕಳುಹಿಸಿಕೊಟ್ಟದ್ದು

ಶ್ರೀಶುಕ ಉವಾಚ

ಅಥ ತರ್ಹ್ಯಾಗತೋ ಗೋಷ್ಠಮರಿಷ್ಟೋ ವೃಷಭಾಸುರಃ ।
ಮಹೀಂ ಮಹಾಕಕುತ್ಕಾಯಃ ಕಂಪಯನ್ ಖುರವಿಕ್ಷತಾಮ್ ॥ ೧ ॥

ರಂಭಮಾಣಃ ಖರತರಂ ಪದಾ ಚ ವಿಲಿಖನ್ಮಹೀಮ್ ।
ಉದ್ಯಮ್ಯ ಪುಚ್ಛಂ ವಪ್ರಾಣಿ ವಿಷಾಣಾಗ್ರೇಣ ಚೋದ್ಧರನ್ ॥ ೨ ॥

ಕಿಂಚಿತ್ಕಿಂಚಿಚ್ಛಕೃನ್ಮುಂಚನ್ ಮೂತ್ರಯನ್ ಸ್ತಬ್ಧಲೋಚನಃ ।
ಯಸ್ಯ ನಿರ್ಹ್ರಾದಿತೇನಾಂಗ ನಿಷ್ಠುರೇಣ ಗವಾಂ ನೃಣಾಮ್ ॥ ೩ ॥

ಪತಂತ್ಯಕಾಲತೋ ಗರ್ಭಾಃ ಸ್ರವಂತಿ ಸ್ಮ ಭಯೇನ ವೈ ।
ನಿರ್ವಿಶಂತಿ ಘನಾ ಯಸ್ಯ ಕಕುದ್ಯಚಲಶಂಕಯಾ ॥ ೪ ॥

ತಂ ತೀಕ್ಷ್ಣಶೃಂಗಮುದ್ವೀಕ್ಷ್ಯ ಗೋಪ್ಯೋ ಗೋಪಾಶ್ಚ ತತ್ರಸುಃ ।
ಪಶವೋ ದುದ್ರುವುರ್ಭೀತಾ ರಾಜನ್ ಸಂತ್ಯಜ್ಯ ಗೋಕುಲಮ್ ॥ ೫ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ - ಎಲೈ ಪರೀಕ್ಷಿತನೇ! ಭಗವಾನ್ ಶ್ರೀಕೃಷ್ಣನು ಗೋ-ಗೋಪಾಲಕರೊಂದಿಗೆ ವ್ರಜಕ್ಕೆ ಹಿಂದಿರುಗುತ್ತಿರುವಾಗ ಮಹಾಕಾಯನಾದ ಅರಿಷ್ಟಾಸುರನೆಂಬ ದೈತ್ಯನು ಎತ್ತರವಾದ ಹಿಳಲುಗಳುಳ್ಳ ಗೂಳಿಯ ರೂಪವನ್ನು ಧರಿಸಿ ತನ್ನ ಗೊರಸುಗಳಿಂದ ಭೂಮಿಯನ್ನು ಕೆದಕುತ್ತಾ, ನಡುಗಿಸುತ್ತಾ ಗೋಕುಲಕ್ಕೆ ನುಗ್ಗಿದನು. ॥ ೧ ॥ ಅವನು ಗಟ್ಟಿಯಾಗಿ ಗರ್ಜಿಸುತ್ತಾ, ಕಾಲುಗಳಿಂದ ಧೂಳನ್ನು ಹಾರಿಸುತ್ತಿದ್ದನು. ಬಾಲವನ್ನೆತ್ತಿಕೊಂಡು, ಕೋಡುಗಳಿಂದ ಹೊಲಗಳ ಬದುಗಳನ್ನು, ಆವಾರದ ಗೋಡೆಗಳನ್ನು ಕೆಡಹುತ್ತಾ ಹೋಗುತ್ತಿದ್ದನು. ॥ ೨ ॥ ಆ ಗೂಳಿಯ ರೂಪದ ರಾಕ್ಷಸನು ಬಾರಿ-ಬಾರಿಗೂ ಸ್ವಲ್ಪ-ಸ್ವಲ್ಪ ಪುರೀಷ-ಮೂತ್ರೋತ್ಸರ್ಜನ ಮಾಡುತ್ತಿದ್ದನು. ಎವೆಯಿಕ್ಕದೆ ಕಣ್ಣುಗಳಿಂದ ದುರುಗುಟ್ಟಿಕೊಂಡು ನೋಡುತ್ತಿದ್ದನು. ಅವನ ನಿಷ್ಠುರವಾದ ಗುಟುರಿನಿಂದ ಸ್ತ್ರೀಯರ ಮತ್ತು ಹಸುಗಳ ಗರ್ಭಗಳು ಅಕಾಲದಲ್ಲಿ ಕಳಚಿ ಬೀಳುತ್ತಿದ್ದವು. ಕೆಲವರಿಗೆ ಭಯದಿಂದಲೇ ಗರ್ಭಸ್ರಾವವಾಗುತ್ತಿತ್ತು. ಅರಿಷ್ಟಾಸುರನ ಹಿಳಲಿನ ಮೇಲೆ ಅದು ಪರ್ವತವಾಗಿರಬಹುದೆಂದು ಭ್ರಮಿಸಿ ಮೋಡಗಳು ಕುಳಿತುಕೊಳ್ಳುತ್ತಿದ್ದವು. ॥ ೩-೪ ॥ ಪರೀಕ್ಷಿತನೇ! ತೀಕ್ಷ್ಣವಾದ ಕೊಂಬುಗಳುಳ್ಳ ಆ ಗೂಳಿಯನ್ನು ನೋಡಿ ಗೋಪಿಯರು, ಗೋಪಾಲಕರೆಲ್ಲರೂ ಭಯಗೊಂಡರು. ಪಶುಗಳಾದರೋ ಅತ್ಯಂತ ಭಯದಿಂದ ಗೋಕುಲವನ್ನೇ ತೊರೆದು ಓಡಿಹೋದವು. ॥ ೫ ॥

ಕೃಷ್ಣ ಕೃಷ್ಣೇತಿ ತೇ ಸರ್ವೇ ಗೋವಿಂದಂ ಶರಣಂ ಯಯುಃ ।
ಭಗವಾನಪಿ ತದ್ವೀಕ್ಷ್ಯ ಗೋಕುಲಂ ಭಯವಿದ್ರುತಮ್
॥ ೬ ॥

ಮಾ ಭೈಷ್ಟೇತಿ ಗಿರಾಽಽಶ್ವಾಸ್ಯ ವೃಷಾಸುರಮುಪಾಹ್ವಯತ್ ।
ಗೋಪಾಲೈಃ ಪಶುಭಿರ್ಮಂದ ತ್ರಾಸಿತೈಃ ಕಿಮಸತ್ತಮ
॥ ೭ ॥

ಬಲದರ್ಪಹಾಹಂ ದುಷ್ಟಾನಾಂ ತ್ವದ್ವಿಧಾನಾಂ ದುರಾತ್ಮನಾಮ್ ।
ಇತ್ಯಾಸ್ಫೋಟ್ಯಾಚ್ಯುತೋಽರಿಷ್ಟಂ ತಲಶಬ್ದೇನ ಕೋಪಯನ್
॥ ೮ ॥

ಸಖ್ಯುರಂಸೇ ಭುಜಾಭೋಗಂ ಪ್ರಸಾರ್ಯಾವಸ್ಥಿತೋ ಹರಿಃ ।
ಸೋಽಪ್ಯೇವಂ ಕೋಪಿತೋಽರಿಷ್ಟಃ ಖುರೇಣಾವನಿಮುಲ್ಲಿಖನ್ ।
ಉದ್ಯತ್ಪುಚ್ಛಭ್ರಮನ್ಮೇಘಃ ಕ್ರುದ್ಧಃ ಕೃಷ್ಣಮುಪಾದ್ರವತ್
॥ ೯ ॥

ಅಗ್ರನ್ಯಸ್ತವಿಷಾಣಾಗ್ರಃ ಸ್ತಬ್ಧಾಸೃಗ್ಲೋಚನೋಽಚ್ಯುತಮ್ ।
ಕಟಾಕ್ಷಿಪ್ಯಾದ್ರವತ್ತೂರ್ಣಮಿಂದ್ರಮುಕ್ತೋಽಶನಿರ್ಯಥಾ
॥ ೧೦ ॥

ಗೃಹೀತ್ವಾ ಶೃಂಗಯೋಸ್ತಂ ವಾ ಅಷ್ಟಾದಶ ಪದಾನಿ ಸಃ ।
ಪ್ರತ್ಯಪೋವಾಹ ಭಗವಾನ್ ಗಜಃ ಪ್ರತಿಗಜಂ ಯಥಾ
॥ ೧೧ ॥

ಸೋಽಪವಿದ್ಧೋ ಭಗವತಾ ಪುನರುತ್ಥಾಯ ಸತ್ವರಃ ।
ಆಪತತ್ಸ್ವಿನ್ನಸರ್ವಾಂಗೋ ನಿಶ್ವಸನ್ ಕ್ರೋಧಮೂರ್ಛಿತಃ
॥ ೧೨ ॥

ತಮಾಪತಂತಂ ಸ ನಿಗೃಹ್ಯ ಶೃಂಗಯೋಃ
ಪದಾ ಸಮಾಕ್ರಮ್ಯ ನಿಪಾತ್ಯ ಭೂತಲೇ ।
ನಿಷ್ಪೀಡಯಾಮಾಸ ಯಥಾಽಽರ್ದ್ರಮಂಬರಂ
ಕೃತ್ವಾ ವಿಷಾಣೇನ ಜಘಾನ ಸೋಽಪತತ್ ॥ ೧೩ ॥

ಅಸೃಗ್ ವಮನ್ಮೂತ್ರಶಕೃತ್ ಸಮುತ್ಸೃಜನ್
ಕ್ಷಿಪಂಶ್ಚ ಪಾದಾನನವಸ್ಥಿತೇಕ್ಷಣಃ ।
ಜಗಾಮ ಕೃಚ್ಛ್ರಂ ನಿರ್ಋತೇರಥ ಕ್ಷಯಂ
ಪುಷ್ಪೈಃ ಕಿರಂತೋ ಹರಿಮೀಡಿರೇ ಸುರಾಃ ॥ ೧೪ ॥

ಏವಂ ಕಕುದ್ಮಿನಂ ಹತ್ವಾ ಸ್ತೂಯಮಾನಃ ಸ್ವಜಾತಿಭಿಃ ।
ವಿವೇಶ ಗೋಷ್ಠಂ ಸಬಲೋ ಗೋಪೀನಾಂ ನಯನೋತ್ಸವಃ
॥ ೧೫ ॥

ಆ ಸಮಯದಲ್ಲಿ ವ್ರಜವಾಸಿಗಳೆಲ್ಲರೂ 'ಶ್ರೀಕೃಷ್ಣ! ಕೃಷ್ಣಾ! ನಮ್ಮನ್ನು ಕಾಪಾಡು, ಕಾಪಾಡು' ಎಂದು ಕೂಗುತ್ತಾ ಭಗವಾನ್ ಶ್ರೀಕೃಷ್ಣನಿಗೆ ಶರಣಾದರು. ಗೋಕುಲವು ಅತ್ಯಂತ ಭಯಾತುರವಾಗಿ ಇರುವುದನ್ನು ಭಗವಂತನು ನೋಡಿದನು. ॥ ೬ ॥ ಆಗ ಅವನು 'ಹೆದರ ಬೇಡಿರಿ, ಭಯಪಡಬೇಡಿ' ಎಂದು ಹೇಳುತ್ತಾ ಅವರಲ್ಲಿ ಧೈರ್ಯವನ್ನು ತುಂಬಿ, ಮತ್ತೆ ವೃಷಾಸುರನನ್ನು ಸಂಬೋಧಿಸುತ್ತಾ 'ಎಲೈ ಮೂರ್ಖನೇ! ಮಹಾದುಷ್ಟನೇ! ನೀನು ಈ ಗೋವು ಗಳನ್ನು ಗೋಪಾಲಕರನ್ನು ಏಕೆ ಹೆದರಿಸುತ್ತಿರುವೆ? ॥ ೭ ॥ ನೋಡು, ನಿನ್ನಂತಹ ದುರಾತ್ಮರಾದ ದುಷ್ಟರ ಬಲವನ್ನು ಮುರಿಯು ವಂತಹ ಕಾಲನೇ ಆಗಿದ್ದೇನೆ ನಾನು.' ಈ ಪ್ರಕಾರವಾಗಿ ಕೆಣಕುತ್ತಾ ಅವನನ್ನು ಚಪ್ಪಾಳೆತಟ್ಟಿ ಕೋಪವನ್ನು ಕೆರಳಿಸುತ್ತಾ ಅವನು ಓರ್ವ ಸ್ನೇಹಿತನ ಹೆಗಲ ಮೇಲೆ ಕೈಯನ್ನಿಡುತ್ತಾ ನಿಂತುಕೊಂಡನು. ಭಗವಾನ್ ಶ್ರೀಕೃಷ್ಣನ ಈ ಮಾತಿನಿಂದ ಆ ದುಷ್ಟನು ಕ್ರೋಧಾ ವಿಷ್ಟನಾಗಿ ತನ್ನ ಗೊರಸುಗಳಿಂದ ಭೂಮಿಯನ್ನು ಕೆರೆಯುತ್ತಾ ಶ್ರೀಕೃಷ್ಣನ ಕಡೆಗೆ ನುಗ್ಗಿದನು. ಆಗ ಅವನು ಬಾಲದಿಂದ ಆಕಾಶ ದಲ್ಲಿನ ಮೋಡಗಳನ್ನು ಚದುರಿಸುತ್ತಿದ್ದನು. ॥ ೮-೯ ॥ ಅವನು ತೀಕ್ಷ್ಣವಾದ ಕೋಡುಗಳನ್ನು ಮುಂದೆ ಚಾಚಿಕೊಂಡು, ಕೆಂಡ ದಂತಹ ಕಣ್ಣುಗಳಿಂದ ಶ್ರೀಕೃಷ್ಣನನ್ನು ದುರುಗುಟ್ಟಿ ನೋಡುತ್ತಾ ಇಂದ್ರನಿಂದ ಬಿಡಲ್ಪಟ್ಟ ವಜ್ರಾಯುಧದಂತೆ ಅತ್ಯಂತ ವೇಗವಾಗಿ ಅವನ ಮೇಲೆ ಎರಗಿದನು. ॥ ೧೦ ॥ ಭಗವಾನ್ ಶ್ರೀಕೃಷ್ಣನು ತನ್ನ ಕೈಗಳಿಂದ ಅವನ ಎರಡು ಕೋಡುಗಳನ್ನು ಹಿಡಿದು-ಆನೆಯು ಎದುರಾಳಿಯಾದ ಆನೆಯನ್ನು ಹಿಂದಕ್ಕೆ ತಳ್ಳುವಂತೆ ಅಸುರನನ್ನು ಹಿಂದಕ್ಕೆ ತಳ್ಳಿ ಬೀಳಿಸಿ ಬಿಟ್ಟನು. ॥ ೧೧ ॥ ಹೀಗೆ ಭಗವಂತನಿಂದ ತಳ್ಳಲ್ಪಟ್ಟು ಕೆಳಕ್ಕೆ ಬಿದ್ದರೂ ಅವನು ಶೀಘ್ರವಾಗಿ ಎದ್ದು ನಿಂತನು. ಅವನ ಶರೀರವು ಬೆವರುತ್ತಿತ್ತು. ಅವನು ಬಿರುಸಾಗಿ ನಿಟ್ಟುಸಿರು ಬಿಡುತ್ತಾ, ಅತ್ಯಂತ ಕ್ರುದ್ಧನಾಗಿ ಪುನಃ ಶ್ರೀಕೃಷ್ಣನ ಮೇಲೆ ಎರಗಿದನು. ॥ ೧೨ ॥ ದೈತ್ಯನು ತನ್ನ ಮೇಲೆ ಪ್ರಹರಿಸುತ್ತಿರುವ ನೆಂದು ನೋಡಿದ ಶ್ರೀಕೃಷ್ಣನು ಅವನ ಕೊಂಬುಗಳನ್ನು ಹಿಡಿದು, ಕಾಲಿನಿಂದ ಒದ್ದು ನೆಲಕ್ಕೆ ಬೀಳಿಸಿದನು. ಕಾಲಿನಿಂದ ಒತ್ತಿಹಿಡಿದು ಬಟ್ಟೆಯನ್ನು ಹಿಂಡುವಂತೆ ಅದರ ಕೊಂಬುಗಳನ್ನು ಹಿಗ್ಗಾ-ಮುಗ್ಗಾ ತಿರುಗಿಸುತ್ತಾ, ಆ ಕೊಂಬುಗಳನ್ನು ಕಿತ್ತು ಅದರಿಂದಲೇ ಅರಿಷ್ಟಾಸುರ ನನ್ನು ಪ್ರಹರಿಸಿದನು. ॥ ೧೩ ॥ ಪರೀಕ್ಷಿತನೇ! ಹೀಗೆ ಆ ದೈತ್ಯನು ಬಾಯಿಂದ ರಕ್ತವನ್ನು ಕಾರುತ್ತಾ ಮೂತ್ರ-ಪುರೀಷಗಳನ್ನು ವಿಸರ್ಜಿಸುತ್ತಾ, ಕಾಲನ್ನು ಬಡಿಯುತ್ತಾ, ಕಣ್ಣುಗಳನ್ನು ತಿರುಗಿಸುತ್ತಾ ಬಹಳ ಕಷ್ಟದಿಂದ ಪ್ರಾಣಗಳನ್ನು ತ್ಯಜಿಸಿದನು. ಆಗ ದೇವತೆಗಳು ಭಗವಂತನ ಮೇಲೆ ಹೂವಿನ ಮಳೆ ಸುರಿಸುತ್ತಾ ಅವನನ್ನು ಸ್ತುತಿಸತೊಡಗಿದರು. ॥ ೧೪ ॥ ಭಗವಾನ್ ಶ್ರೀಕೃಷ್ಣನು ಹೀಗೆ ಗೂಳಿಯ ರೂಪದಲ್ಲಿ ಬಂದ ಅರಿಷ್ಟಾಸುರನನ್ನು ಕೊಂದು ಹಾಕಿ ದಾಗ ಎಲ್ಲ ಗೋಪಾಲಕರು ಅವನನ್ನು ಪ್ರಶಂಸಿಸಿದರು. ಅವನು ಬಲರಾಮನೊಂದಿಗೆ ಗೋಕುಲವನ್ನು ಪ್ರವೇಶಿಸಿದುದನ್ನು ನೋಡಿದ ಗೋಪಿಯರ ಕಣ್ಣುಗಳು ಆನಂದದಿಂದ ತುಂಬಿ ಬಂದುವು. ॥ ೧೫ ॥

ಅರಿಷ್ಟೇ ನಿಹತೇ ದೈತ್ಯೇ ಕೃಷ್ಣೇನಾದ್ಭುತಕರ್ಮಣಾ ।
ಕಂಸಾಯಾಥಾಹ ಭಗವಾನ್ ನಾರದೋ ದೇವದರ್ಶನಃ
॥ ೧೬ ॥

ಯಶೋದಾಯಾಃ ಸುತಾಂ ಕನ್ಯಾಂ ದೇವಕ್ಯಾಃ ಕೃಷ್ಣಮೇವ ಚ ।
ರಾಮಂ ಚ ರೋಹಿಣೀಪುತ್ರಂ ವಸುದೇವೇನ ಬಿಭ್ಯತಾ
॥ ೧೭ ॥

ನ್ಯಸ್ತೌ ಸ್ವಮಿತ್ರೇ ನಂದೇ ವೈ ಯಾಭ್ಯಾಂ ತೇ ಪುರುಷಾ ಹತಾಃ ।
ನಿಶಮ್ಯ ತದ್ಭೋಜಪತಿಃ ಕೋಪಾತ್ ಪ್ರಚಲಿತೇಂದ್ರಿಯಃ
॥ ೧೮ ॥

ನಿಶಾತಮಸಿಮಾದತ್ತ ವಸುದೇವಜಿಘಾಂಸಯಾ ।
ನಿವಾರಿತೋ ನಾರದೇನ ತತ್ಸುತೌ ಮೃತ್ಯುಮಾತ್ಮನಃ
॥ ೧೯ ॥

ಜ್ಞಾತ್ವಾ ಲೋಹಮಯೈಃ ಪಾಶೈರ್ಬಬಂಧ ಸಹ ಭಾರ್ಯಯಾ ।
ಪ್ರತಿಯಾತೇ ತು ದೇವರ್ಷೌ ಕಂಸ ಆಭಾಷ್ಯ ಕೇಶಿನಮ್
॥ ೨೦ ॥

ಪ್ರೇಷಯಾಮಾಸ ಹನ್ಯೇತಾಂ ಭವತಾ ರಾಮಕೇಶವೌ ।
ತತೋ ಮುಷ್ಟಿಕಚಾಣೂರಶಲತೋಶಲಕಾದಿಕಾನ್
॥ ೨೧ ॥

ಅಮಾತ್ಯಾನ್ ಹಸ್ತಿಪಾಂಶ್ಚೈವ ಸಮಾಹೂಯಾಹ ಭೋಜರಾಟ್ ।
ಭೋ ಭೋ ನಿಶಮ್ಯ ತಾಮೇತದ್ವೀರಚಾಣೂರಮುಷ್ಟಿಕೌ
॥ ೨೨ ॥

ನಂದವ್ರಜೇ ಕಿಲಾಸಾತೇ ಸುತಾವಾನಕದುಂದುಭೇಃ ।
ರಾಮಕೃಷ್ಣೌ ತತೋ ಮಹ್ಯಂ ಮೃತ್ಯುಃ ಕಿಲ ನಿದರ್ಶಿತಃ
॥ ೨೩ ॥

ಭವದ್ಭ್ಯಾಮಿಹ ಸಂಪ್ರಾಪ್ತೌ ಹನ್ಯೇತಾಂ ಮಲ್ಲಲೀಲಯಾ ।
ಮಂಚಾಃ ಕ್ರಿಯಂತಾಂ ವಿವಿಧಾ ಮಲ್ಲರಂಗ ಪರಿಶ್ರಿತಾಃ ।
ಪೌರಾ ಜಾನಪದಾಃ ಸರ್ವೇ ಪಶ್ಯಂತು ಸ್ವೈರಸಂಯುಗಮ್
॥ ೨೪ ॥

ಮಹಾಮಾತ್ರ ತ್ವಯಾ ಭದ್ರರಂಗದ್ವಾರ್ಯುಪನೀಯತಾಮ್ ।
ದ್ವಿಪಃ ಕುವಲಯಾಪೀಡೋ ಜಹಿ ತೇನ ಮಮಾಹಿತೌ
॥ ೨೫ ॥

ಆರಭ್ಯತಾಂ ಧನುರ್ಯಾಗಶ್ಚತುರ್ದಶ್ಯಾಂ ಯಥಾವಿಧಿ ।
ವಿಶಸಂತು ಪಶೂನ್ ಮೇಧ್ಯಾನ್ ಭೂತರಾಜಾಯ ಮೀಢುಷೇ
॥ ೨೬ ॥

ಪರೀಕ್ಷಿತ ಮಹಾರಾಜನೇ! ಭಗವಂತನ ಲೀಲೆಯು ಪರಮಾದ್ಭುತವಾದುದು. ಇತ್ತ ಅದ್ಭುತಕರ್ಮನಾದ ಶ್ರೀಕೃಷ್ಣನು ಅರಿಷ್ಟಾಸುರನನ್ನು ಶೀಘ್ರಾತಿಶೀಘ್ರವಾಗಿ ಸಂಹರಿಸಿದಾಗ, ಅತ್ತ ಮಥುರೆಯಲ್ಲಿ ಜನರಿಗೆ ಭಗವದ್ದರ್ಶನ ಮಾಡಿಸುವಂತಹ ಭಗವನ್ಮಯ ನಾರದರು ಕಂಸನ ಬಳಿಗೆ ಬಂದು ಇಂತೆಂದರು. ॥ ೧೬ ॥ ಎಲೈ ಕಂಸನೇ! ನಿನ್ನ ಕೈಯಿಂದ ತಪ್ಪಿಸಿಕೊಂಡು ಆಕಾಶಕ್ಕೆ ನೆಗೆದು ಹೋದ ಕನ್ಯೆಯು ಯಶೋದೆಯ ಪುತ್ರಿಯಾಗಿದ್ದಳು. ವ್ರಜದಲ್ಲಿರುವ ಶ್ರೀಕೃಷ್ಣನು ದೇವಕಿಯ ಪುತ್ರನಾಗಿದ್ದಾನೆ. ಬಲರಾಮನು ರೋಹಿಣಿ ಪುತ್ರನು. ವಸುದೇವನು ನಿನಗೆ ಹೆದರಿ ತನ್ನ ಮಿತ್ರನಾದ ನಂದಗೋಪನ ಬಳಿಯಲ್ಲಿ ಇವರಿಬ್ಬರನ್ನು ಇರಿಸಿರುವನು. ದೇವಕಿಯ ಪುತ್ರನಾದ ಶ್ರೀಕೃಷ್ಣನೇ ನಿನ್ನ ಅನುಚರರಾದ ದೈತ್ಯರನ್ನು ವಧಿಸಿದವನು. ನಾರದರ ಈ ಮಾತನ್ನು ಕೇಳಿದ ಕಂಸನ ಇಂದ್ರಿಯಗಳು ಕ್ರೋಧದಿಂದ ನಡುಗತೊಡಗಿದವು. ॥ ೧೭-೧೮ ॥ ಅವನು ವಸುದೇವನನ್ನು ಕೊಂದು ಹಾಕಲು ಖಡ್ಗವನ್ನು ಹಿರಿದನು. ಆದರೆ ನಾರದರು ಅವನನ್ನು ತಡೆದು ನಿಲ್ಲಿಸುತ್ತಾ, ಅವನ ಮಕ್ಕಳು ಮಾತ್ರವೇ ನಿನಗೆ ಮೃತ್ಯುರೂಪರಾಗಿರುವರು. ವಸುದೇವನಲ್ಲವಲ್ಲ. ಆಗ ಕಂಸನು ವಸುದೇವ-ದೇವಕಿಯರಿಬ್ಬರಿಗೂ ಕೈಗಳಿಗೆ ಕೋಳವನ್ನು ತೊಡಿಸಿ ಕಾರಾಗೃಹದಲ್ಲಿರಿಸಿದನು. ನಾರದ ಮಹರ್ಷಿಗಳು ಹೊರಟು ಹೋದ ಬಳಿಕ ಕಂಸನು ಕೇಶಿಯೆಂಬ ರಾಕ್ಷಸನನ್ನು ಕರೆದು ಹೇಳಿದನು - 'ನೀನು ಗೋಕುಲಕ್ಕೆ ಹೋಗಿ ಅಲ್ಲಿರುವ ಬಲರಾಮ-ಕೃಷ್ಣರನ್ನು ಕೊಂದುಬಿಡು. 'ಕೇಶಿಯು ಹಾಗೆಯೇ ಆಗಲೆಂದು ಹೇಳಿ ಹೊರಟುಹೋದನು. ಕೇಶಿಯು ಹೊರಟು ಹೋಗುತ್ತಲೇ ಕಂಸನು ಮುಷ್ಟಿಕ, ಚಾಣೂರ, ಶಲ, ತೋಶಲ ಮೊದಲಾದ ಜಟ್ಟಿಗಳನ್ನು ಮಂತ್ರಿಗಳನ್ನೂ ಮತ್ತು ಮಾವಟಿಗರನ್ನು ಕರೆಸಿ ಹೇಳಿದನು - ವೀರರಾದ ಚಾಣೂರ-ಮುಷ್ಟಿಕರೇ! ನೀವೆಲ್ಲರೂ ನನ್ನ ಮಾತನ್ನು ಗಮನವಿಟ್ಟು ಕೇಳಿರಿ. ॥ ೧೯-೨೨ ॥ ವಸುದೇವನ ಇಬ್ಬರು ಪುತ್ರರು ನಂದಗೋಪನ ವ್ರಜದಲ್ಲಿ ಇರುತ್ತಾರೆ. ಅವರ ಕೈಯಿಂದಲೇ ನನ್ನ ಮೃತ್ಯುವೆಂದು ಹಿಂದೆಯೇ ತಿಳಿಸಲಾಗಿದೆ. ॥ ೨೩ ॥ ಆದ್ದರಿಂದ ಅವರು ಇಲ್ಲಿಗೆ ಬಂದಾಗ ನೀವುಗಳು ಮಲ್ಲಯುದ್ಧದ ಮೂಲಕವಾಗಿ ನಾನಾ ಪ್ರಕಾರದ ವರಸೆಗಳನ್ನು ತೋರುತ್ತಾ ಅವರನ್ನು ಕೊಂದು ಹಾಕಿರಿ. ಮಲ್ಲಯುದ್ಧಕ್ಕಾಗಿ ರಂಗವನ್ನು ಕಲ್ಪಿಸಿರಿ. ರಂಗದ ಸುತ್ತಲೂ ಬಗೆ-ಬಗೆಯಾದ ಎತ್ತರದ ಆಸನಗಳನ್ನು ಕಲ್ಪಿಸಿರಿ. ಪಟ್ಟಣಿಗರೂ ದೇಶೀಯ ಜನರೂ ಸ್ವೇಚ್ಛೆಯಿಂದ ಮಲ್ಲಯುದ್ಧವನ್ನು ನೋಡಲಿ. ॥ ೨೪ ॥ ಮಾವಟಿಗನೇ! ನೀನು ತುಂಬಾ ಚತುರನಾಗಿರುವೆ. ನೋಡು, ನೀನು ರಂಗಸ್ಥಳದ ಮಹಾದ್ವಾರದಲ್ಲೇ ನಮ್ಮ ಕುವಲಯಾಪೀಡ ಸಲಗವನ್ನು ನಿಲ್ಲಿಸಿಕೊಂಡಿರಬೇಕು. ನನ್ನ ಶತ್ರುಗಳು ಆ ದಾರಿಯಿಂದ ಬರುತ್ತಲೇ ಆ ಆನೆಯಿಂದ ಅವರನ್ನು ಕೊಲ್ಲಿಸಿಬಿಡು. ॥ ೨೫ ॥ ಇದೇ ಚತುರ್ದಶಿಗೆ ವಿಧಿವತ್ತಾಗಿ ಧನುರ್ಯಜ್ಞವನ್ನು ಪ್ರಾರಂಭಿಸಿರಿ. ಅದರ ಸಫಲತೆಗಾಗಿ ವರದನಾದ ಭೂತಪತಿಯಾದ ರುದ್ರನ ಪ್ರೀತ್ಯರ್ಥವಾಗಿ ಪರಿಶುದ್ಧ ಪಶುಗಳನ್ನು ಬಲಿಕೊಡಿರಿ. ॥ ೨೬ ॥

ಇತ್ಯಾಜ್ಞಾಪ್ಯಾರ್ಥತಂತ್ರಜ್ಞ ಆಹೂಯ ಯದುಪುಂಗವಮ್ ।
ಗೃಹೀತ್ವಾ ಪಾಣಿನಾ ಪಾಣಿಂ ತತೋಽಕ್ರೂರಮುವಾಚ ಹ ॥ ೨೭ ॥

ಭೋ ಭೋ ದಾನಪತೇ ಮಹ್ಯಂ ಕ್ರಿಯತಾಂ ಮೈತ್ರಮಾದೃತಃ ।
ನಾನ್ಯಸ್ತ್ವತ್ತೋ ಹಿತತಮೋ ವಿದ್ಯತೇ ಭೋಜವೃಷ್ಣಿಷು ॥ ೨೮ ॥

ಅತಸ್ತ್ವಾಮಾಶ್ರಿತಃ ಸೌಮ್ಯ ಕಾರ್ಯಗೌರವಸಾಧನಮ್ ।
ಯಥೇಂದ್ರೋ ವಿಷ್ಣುಮಾಶ್ರಿತ್ಯ ಸ್ವಾರ್ಥಮಧ್ಯಗಮದ್ವಿಭುಃ ॥ ೨೯ ॥

ಗಚ್ಛ ನಂದವ್ರಜಂ ತತ್ರ ಸುತಾವಾನಕದುಂದುಭೇಃ ।
ಆಸಾತೇ ತಾವಿಹಾನೇನ ರಥೇನಾನಯ ಮಾ ಚಿರಮ್ ॥ ೩೦ ॥

ನಿಸೃಷ್ಟಃ ಕಿಲ ಮೇ ಮೃತ್ಯುರ್ದೇವೈರ್ವೈಕುಂಠಸಂಶ್ರಯೈಃ ।
ತಾವಾನಯ ಸಮಂ ಗೋಪೈರ್ನಂದಾದ್ಯೈಃ ಸಾಭ್ಯುಪಾಯನೈಃ ॥ ೩೧ ॥

ಘಾತಯಿಷ್ಯ ಇಹಾನೀತೌ ಕಾಲಕಲ್ಪೇನ ಹಸ್ತಿನಾ ।
ಯದಿ ಮುಕ್ತೌ ತತೋ ಮಲ್ಲೈರ್ಘಾತಯೇ ವೈದ್ಯುತೋಪಮೈಃ ॥ ೩೨ ॥

ತಯೋರ್ನಿಹತಯೋಸ್ತಪ್ತಾನ್ ವಸುದೇವಪುರೋಗಮಾನ್ ।
ತದ್ಬಂಧೂನ್ ನಿಹನಿಷ್ಯಾಮಿ ವೃಷ್ಣಿಭೋಜದಶಾರ್ಹಕಾನ್ ॥ ೩೩ ॥

ಉಗ್ರಸೇನಂ ಚ ಪಿತರಂ ಸ್ಥವಿರಂ ರಾಜ್ಯಕಾಮುಕಮ್ ।
ತದ್ಭ್ರಾತರಂ ದೇವಕಂ ಚ ಯೇ ಚಾನ್ಯೇ ವಿದ್ವಿಷೋ ಮಮ ॥ ೩೪ ॥

ತತಶ್ಚೈಷಾ ಮಹೀ ಮಿತ್ರ ಭವಿತ್ರೀ ನಷ್ಟಕಂಟಕಾ ।
ಜರಾಸಂಧೋ ಮಮ ಗುರುರ್ದ್ವಿವಿದೋ ದಯಿತಃ ಸಖಾ ॥ ೩೫ ॥

ಶಂಬರೋ ನರಕೋ ಬಾಣೋ ಮಯ್ಯೇವ ಕೃತಸೌಹೃದಾಃ ।
ತೈರಹಂ ಸುರಪಕ್ಷೀಯಾನ್ ಹತ್ವಾ ಭೋಕ್ಷ್ಯೇ ಮಹೀಂ ನೃಪಾನ್ ॥ ೩೬ ॥

ಪರೀಕ್ಷಿತನೇ! ಹೀಗೆ ಮಂತ್ರಿಗಳಿಗೆ, ಜಟ್ಟಿಗಳಿಗೆ, ಮಾವಟಿಗನಿಗೆ ಆಜ್ಞಾಪಿಸಿ ತಂತ್ರಜ್ಞನಾದ ಆ ಕಂಸನು ಯದುಶ್ರೇಷ್ಠನಾದ ಅಕ್ರೂರನನ್ನು ಕರೆಸಿ, ಅವನ ಕೈಗಳನ್ನು ಹಿಡಿದುಕೊಂಡು ಅವನಿಗೆ ಹೇಳಿದನು. ॥ ೨೭ ॥ ಅಕ್ರೂರನೇ! ನೀನು ಉದಾರನಾದ ಮಹಾದಾನಿಯಾಗಿರುವೆ. ಎಲ್ಲ ರೀತಿಯಿಂದಲೂ ನೀನು ನನಗೆ ಆದರಣೀಯನಾಗಿರುವೆ. ಇಂದು ನೀನು ನನಗೆ ಮಿತ್ರೋಚಿತವಾದ ಒಂದು ಕಾರ್ಯವನ್ನು ನಡೆಸಿಕೊಡಬೇಕಾಗಿದೆ. ಏಕೆಂದರೆ, ಭೋಜವಂಶೀಯರಲ್ಲಿ, ವೃಷ್ಣಿವಂಶೀಯರಲ್ಲಿ, ಯಾದವರಲ್ಲಿ ನಿನಗಿಂತ ಹೆಚ್ಚಾಗಿ ನನ್ನ ಹಿತವನ್ನು ಮಾಡುವವರು ಬೇರೆ ಯಾರು ಇಲ್ಲ. ॥ ೨೮ ॥ ನಾನು ಹೇಳಲಿರುವ ಕಾರ್ಯವು ಅತ್ಯಂತ ಮಹತ್ವಪೂರ್ಣವಾಗಿದೆ. ದೇವೇಂದ್ರನು ಸ್ವತಃ ಸಮರ್ಥನಾಗಿದ್ದರೂ ಮಹಾವಿಷ್ಣುವನ್ನು ಆಶ್ರಯಿಸಿ ತನ್ನ ಕಾರ್ಯವನ್ನು ಸಾಧಿಸಿಕೊಳ್ಳುವಂತೆ ನಾನು ನಿನ್ನನ್ನು ಆಶ್ರಯಿಸಿದ್ದೇನೆ. ॥ ೨೯ ॥ ಅಕ್ರೂರನೇ! ನೀನು ನಂದಗೋಪನ ವ್ರಜಕ್ಕೆ ಹೋಗಬೇಕು. ಅಲ್ಲಿ ವಸುದೇವನ ಇಬ್ಬರು ಪುತ್ರರಿದ್ದಾರೆ. ಅವರನ್ನು ಇದೇ ರಥದಲ್ಲಿ ಕುಳ್ಳಿರಿಸಿಕೊಂಡು ಇಲ್ಲಿಗೆ ಕರೆಕೊಂಡು ಬರಬೇಕು. ಇನ್ನು ಇದರಲ್ಲಿ ತಡಮಾಡಬಾರದು. ॥ ೩೦ ॥ ವಿಷ್ಣುವಿನ ಮೇಲೆ ಭರವಸೆಯನ್ನಿಟ್ಟಿರುವ ದೇವತೆಗಳು ಇವರಿಬ್ಬರನ್ನು ನನ್ನ ಮೃತ್ಯುವಿಗೆ ಕಾರಣವೆಂದು ನಿಶ್ಚಯಿಸಿರುವರೆಂದು ಕೇಳಿದ್ದೇನೆ. ಅದಕ್ಕಾಗಿ ಅವರಿಬ್ಬರನ್ನು ಕರೆದುಕೊಂಡು ಬಾ. ಜೊತೆಗೆ ನಂದಗೋಪನೇ ಮೊದಲಾದ ಗೋಪಾಲಕರು ಅಪಾರವಾದ ಕಾಣಿಕೆಗಳೊಂದಿಗೆ ಇಲ್ಲಿಗೆ ಬರುವಂತೆ ಮಾಡು. ॥ ೩೧ ॥ ಇಲ್ಲಿಗೆ ಬರುತ್ತಲೇ ನಾನು ಅವರನ್ನು ಕಾಲಸದೃಶವಾದ ಕುವಲಯಾಪೀಡವೆಂಬ ಆನೆಯಿಂದ ಕೊಲ್ಲಿಸಿ ಬಿಡುವೆನು. ಒಂದು ವೇಳೆ ಆ ಆನೆಯಿಂದ ಅವರು ಬದುಕುಳಿದರೆ, ವಜ್ರದಂತಿರುವ ಮಹಾಬಲಿಷ್ಠರಾದ ಮುಷ್ಟಿಕ, ಚಾಣೂರರೇ ಮೊದಲಾದ ಮಲ್ಲರಿಂದ ಕೊಲ್ಲಿಸಿ ಬಿಡುವೆನು. ॥ ೩೨ ॥ ಬಲರಾಮ-ಕೃಷ್ಣರು ಸತ್ತುಹೋದ ಮೇಲೆ ವಸುದೇವನೇ ಮೊದಲಾದ ವೃಷ್ಣಿವಂಶೀಯರು, ಭೋಜ ಮತ್ತು ದಾಶಾರ್ಹವಂಶೀಯರಾದ ಅವರ ಬಂಧುಗಳು ಶೋಕಾಕುಲರಾಗುವರು. ಮತ್ತೆ ನಾನೇ ಅವರೆಲ್ಲರನ್ನೂ ನನ್ನ ಕೈಯ್ಯಾರೆ ಕೊಂದು ಬಿಡುವೆನು. ॥ ೩೩ ॥ ನನ್ನ ತಂದೆಯಾದರೋ ಮುದುಕನಾಗಿದ್ದಾನೆ. ಆದರೂ ಅವನಿಗೆ ರಾಜ್ಯಲೋಭ ಇನ್ನೂ ಇದೆ. ಇದೆಲ್ಲ ಮಾಡಿದ ಮೇಲೆ ಅವನನ್ನೂ, ಅವನ ತಮ್ಮನಾದ ದೇವಕನನ್ನು ಹಾಗೂ ನನ್ನನ್ನು ದ್ವೇಷಿಸುವವರೆಲ್ಲರನ್ನು ಖಡ್ಗದಿಂದ ನಾನೇ ಸಾಯಿಸಿ ಬಿಡುವೆನು. ॥ ೩೪ ॥ ಪ್ರಾಣಸಖನೇ! ಅನಂತರವೇ ಈ ಭೂಮಂಡಲವು ನನಗೆ ಕಂಟಕರಹಿತವಾಗುತ್ತದೆ. ಜರಾಸಂಧನೇ ನನಗೆ ಪರಮಗುರು ಮತ್ತು ಮಾವನಾಗಿದ್ದಾನೆ. ವಾನರರಾಜ ದ್ವಿವಿದನೇ ನನ್ನ ಪ್ರಿಯಸಖನು. ॥ ೩೫ ॥ ಶಂಬರಾಸುರ, ನರಕಾಸುರ, ಬಾಣಾಸುರ ಇವರು ನನ್ನೊಡನೆ ಮೈತ್ರಿಯನ್ನು ಬೆಳೆಸಿದ್ದಾರೆ. ಇವರೆಲ್ಲರ ಸಹಾಯದಿಂದ ದೇವಪಕ್ಷಪಾತಿಯಾದ ರಾಜರೆಲ್ಲರನ್ನೂ ಕೊಂದು ಪೃಥ್ವಿಯ ನಿಷ್ಕಂಟಕವಾದ ರಾಜ್ಯವನ್ನು ನಾನು ಅನುಭವಿಸುತ್ತೇನೆ. ॥ ೩೬ ॥

ಏತಜ್ಜ್ಞಾತ್ವಾಽಽನಯ ಕ್ಷಿಪ್ರಂ ರಾಮಕೃಷ್ಣಾವಿಹಾರ್ಭಕೌ ।
ಧನುರ್ಮಖನಿರೀಕ್ಷಾರ್ಥಂ ದ್ರಷ್ಟುಂ ಯದುಪುರಶ್ರಿಯಮ್
॥ ೩೭ ॥

ಅಕ್ರೂರ! ಇದೆಲ್ಲ ರಹಸ್ಯದ ಮಾತುಗಳನ್ನು ನಾನು ನಿನಗೆ ಹೇಳಿರುವೆನು. ಈಗ ನೀನು ಅತಿಶೀಘ್ರವಾಗಿ ಬಲರಾಮ-ಕೃಷ್ಣರನ್ನು ಇಲ್ಲಿಗೆ ಕರೆದುಕೊಂಡು ಬಾ. ಅವರಿನ್ನೂ ಮಕ್ಕಳಾಗಿರುವುದರಿಂದ ಸುಲಭವಾಗಿ ಅವರನ್ನು ಮುಗಿಸಿಬಿಡಬಹುದು. ಧನುರ್ಯಾಗವನ್ನು ಸಂದರ್ಶಿಸಲು ಮತ್ತು ರಾಜಧಾನಿಯಾದ ಮಥುರಾ ಪಟ್ಟಣದ ಸೊಬಗನ್ನು ವೀಕ್ಷಿಸಲು ಬರಬೇಕೆಂದು ಅವರಿಗೆ ತಿಳಿಸಬೇಕು. ॥ ೩೭ ॥

ಅಕ್ರೂರ ಉವಾಚ

ರಾಜನ್ಮನೀಷಿತಂ ಸಮ್ಯಕ್ ತವ ಸ್ವಾವದ್ಯಮಾರ್ಜನಮ್ ।
ಸಿದ್ಧ್ಯಸಿದ್ಧ್ಯೋಃ ಸಮಂ ಕುರ್ಯಾದ್ದೈವಂ ಹಿ ಫಲಸಾಧನಮ್
॥ ೩೮ ॥

ಅಕ್ರೂರನು ಹೇಳಿದನು - ಮಹಾರಾಜ! ನೀನು ನಿನ್ನ ಮೃತ್ಯುವನ್ನು, ಅರಿಷ್ಟವನ್ನು ತೊಡೆದು ಹಾಕುವುದಕ್ಕಾಗಿ ಹೀಗೆ ಯೋಚಿಸುವುದು ಸಾಧುವೇ ಆಗಿದೆ. ಕಾರ್ಯವು ಸಿದ್ಧಿಸಲಿ, ಸಿದ್ಧಿಸದೆ ಹೋಗಲಿ ಎರಡರಲ್ಲಿಯೂ ಸಮಭಾವವನ್ನಿಟ್ಟುಕೊಂಡು ಕಾರ್ಯ ಮಾಡುವುದು ಯುಕ್ತವಾಗಿದೆ. ಮನುಷ್ಯನಿಗೆ ಫಲವಾದರೋ ಪ್ರಯತ್ನದಿಂದ ದೊರೆಯದೆ ದೈವಪ್ರೇರಣೆಯಿಂದ ದೊರೆಯುತ್ತದೆ. ॥ ೩೮ ॥ ಮನುಷ್ಯನು ದೊಡ್ಡ-ದೊಡ್ಡ ಮನೋರಥಗಳನ್ನು ಕಟ್ಟಿಕೊಳ್ಳುತ್ತಾನೆ. ಆದರೆ ಅವನ್ನು ದೈವವು, ಪ್ರಾರಬ್ಧವು ಮೊದಲೇ ನಾಶಮಾಡಿಬಿಟ್ಟಿದೆ ಎಂಬುದನ್ನು ಅವನು ತಿಳಿಯುವುದಿಲ್ಲ. ಇದೇ ಕಾರಣದಿಂದ ಕೆಲವೊಮ್ಮೆ ಪ್ರಾರಬ್ಧಾನುಕೂಲವಾಗಿ ಪ್ರಯತ್ನವು ಸಫಲವಾದರೆ ಹರ್ಷದಿಂದ ಹಿಗ್ಗುವನು. ಪ್ರತಿಕೂಲವಾಗಿ ವಿಫಲವಾದರೆ ಶೋಕಗ್ರಸ್ತನಾಗುತ್ತಾನೆ. ಹೀಗಿದ್ದರೂ ನಾನು ನಿನ್ನ ಆಜ್ಞೆಯನ್ನು ಪಾಲಿಸಿಯೇ ತೀರುತ್ತೇನೆ. ॥ ೩೯ ॥

ಮನೋರಥಾನ್ಕರೋತ್ಯುಚ್ಚೈರ್ಜನೋ ದೈವಹತಾನಪಿ ।
ಯುಜ್ಯತೇ ಹರ್ಷಶೋಕಾಭ್ಯಾಂ ತಥಾಪ್ಯಾಜ್ಞಾಂ ಕರೋಮಿ ತೇ
॥ ೩೯ ॥

ಶ್ರೀಶುಕ ಉವಾಚ

ಏವಮಾದಿಶ್ಯ ಚಾಕ್ರೂರಂ ಮಂತ್ರಿಣಶ್ಚ ವಿಸೃಜ್ಯ ಸಃ ।
ಪ್ರವಿವೇಶ ಗೃಹಂ ಕಂಸಸ್ತಥಾಕ್ರೂರಃ ಸ್ವಮಾಲಯಮ್
॥ ೪೦ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ - ಕಂಸನು ಮಂತ್ರಿಗಳಿಗೆ ಮತ್ತು ಅಕ್ರೂರನಿಗೆ ಹೀಗೆ ಅಪ್ಪಣೆಯನ್ನು ಕೊಟ್ಟು ಎಲ್ಲರನ್ನು ಬೀಳ್ಕೊಟ್ಟನು. ಬಳಿಕ ಅವನು ತನ್ನರಮನೆಗೆ ಹೊರಟು ಹೋದನು. ಅಕ್ರೂರನು ತನ್ನ ಮನೆಗೆ ಮರಳಿದನು. ॥ ೪೦ ॥

ಮೂವತ್ತಾರನೆಯ ಅಧ್ಯಾಯವು ಮುಗಿಯಿತು. ॥ ೩೬ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮ ಸ್ಕಂಧೇ ಪೂರ್ವಾರ್ಧೇ
ಅಕ್ರೂರ ಪ್ರೇಷಣಂ ನಾಮ ಷಟ್ತ್ರಿಂಶೋಽಧ್ಯಾಯಃ ॥ ೩೬ ॥

ಮೂವತ್ತೇಳನೆಯ ಅಧ್ಯಾಯ

ಕೇಶಿ-ವ್ಯೋಮಾಸುರರ ಉದ್ಧಾರ, ನಾರದರಿಂದ ಭಗವಂತನ ಸ್ತುತಿ

ಶ್ರೀಶುಕ ಉವಾಚ

ಕೇಶೀ ತು ಕಂಸಪ್ರಹಿತಃ ಖುರೈರ್ಮಹೀಂ
ಮಹಾಹಯೋ ನಿರ್ಜರಯನ್ಮನೋಜವಃ ।
ಸಟಾವಧೂತಾಭ್ರವಿಮಾನಸಂಕುಲಂ
ಕುರ್ವನ್ನಭೋ ಹೇಷಿತಭೀಷಿತಾಖಿಲಃ ॥ ೧ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ - ಎಲೈ ಪರೀಕ್ಷಿತನೇ! ಕಂಸನು ಕಳಿಸಿದ ಕೇಶಿಯೆಂಬ ದೈತ್ಯನು ಕುದುರೆಯ ರೂಪವನ್ನು ಧರಿಸಿ ದೊಡ್ಡದಾದ ಶರೀರವನ್ನು ಹೊಂದಿ, ಗೊರಸುಗಳಿಂದ ಭೂಮಿಯನ್ನು ಕೆದಕುತ್ತಾ ಮನೋವೇಗದಂತೆ ಓಡುತ್ತಾ ಗೋಕುಲಕ್ಕೆ ಬಂದನು. ಅವನ ಕತ್ತುಮೇಲಿನ ಕೂದಲುಗಳಿಂದ ಆಕಾಶದಲ್ಲಿ ಮೋಡಗಳು, ವಿಮಾನಗಳು ಚದುರಿ ಹೋದುವು. ಅವನ ಭಯಂಕರ ಕೆನೆತದಿಂದ ಸಮಸ್ತರೂ ಭಯಗೊಂಡರು. ಅವನಿಗೆ ದೊಡ್ಡದಾದ ಕಣ್ಣುಗಳಿದ್ದು, ಬಾಯಿ ಯಾದರೋ

ವಿಶಾಲನೇತ್ರೋ ವಿಕಟಾಸ್ಯಕೋಟರೋ
ಬೃಹದ್ಗಲೋ ನೀಲಮಹಾಂಬುದೋಪಮಃ ।
ದುರಾಶಯಃ ಕಂಸಹಿತಂ ಚಿಕೀರ್ಷು-
ರ್ವ್ರಜಂ ಸ ನಂದಸ್ಯ ಜಗಾಮ ಕಂಪಯನ್ ॥ ೨ ॥

ತಂ ತ್ರಾಸಯಂತಂ ಭಗವಾನ್ ಸ್ವಗೋಕುಲಂ
ತದ್ಧೇಷಿತೈರ್ವಾಲವಿಘೂರ್ಣಿತಾಂಬುದಮ್ ।
ಆತ್ಮಾನಮಾಜೌ ಮೃಗಯಂತಮಗ್ರಣೀ-
ರುಪಾಹ್ವಯತ್ಸ ವ್ಯನದನ್ಮೃಗೇಂದ್ರವತ್ ॥ ೩ ॥

ಸ ತಂ ನಿಶಾಮ್ಯಾಭಿಮುಖೋ ಮುಖೇನ ಖಂ
ಪಿಬನ್ನಿವಾಭ್ಯದ್ರವದತ್ಯಮರ್ಷಣಃ ।
ಜಘಾನ ಪದ್ಭ್ಯಾಮರವಿಂದಲೋಚನಂ
ದುರಾಸದಶ್ಚಂಡಜವೋ ದುರತ್ಯಯಃ ॥ ೪ ॥

ತದ್ವಂಚಯಿತ್ವಾ ತಮಧೋಕ್ಷಜೋ ರುಷಾ
ಪ್ರಗೃಹ್ಯ ದೋರ್ಭ್ಯಾಂ ಪರಿವಿಧ್ಯ ಪಾದಯೋಃ ।
ಸಾವಜ್ಞಮುತ್ಸೃಜ್ಯ ಧನುಃಶತಾಂತರೇ
ಯಥೋರಗಂ ತಾರ್ಕ್ಷ್ಯಸುತೋ ವ್ಯವಸ್ಥಿತಃ ॥ ೫ ॥

ಸ ಲಬ್ಧಸಂಜ್ಞಃ ಪುನರುತ್ಥಿತೋ ರುಷಾ
ವ್ಯಾದಾಯ ಕೇಶೀ ತರಸಾಽಽಪತದ್ಧರಿಮ್ ।
ಸೋಽಪ್ಯಸ್ಯ ವಕ್ತ್ರೇ ಭುಜಮುತ್ತರಂ ಸ್ಮಯನ್
ಪ್ರವೇಶಯಾಮಾಸ ಯಥೋರಗಂ ಬಿಲೇ ॥ ೬ ॥

ದಂತಾ ನಿಪೇತುರ್ಭಗವದ್ಭುಜಸ್ಪೃಶ-
ಸ್ತೇ ಕೇಶಿನಸ್ತಪ್ತಮಯಸ್ಪೃಶೋ ಯಥಾ ।
ಬಾಹುಶ್ಚ ತದ್ದೇಹಗತೋ ಮಹಾತ್ಮನೋ
ಯಥಾಽಽಮಯಃ ಸಂವವೃಧೇ ಉಪೇಕ್ಷಿತಃ ॥ ೭ ॥

ಸಮೇಧಮಾನೇನ ಸ ಕೃಷ್ಣಬಾಹುನಾ
ನಿರುದ್ಧವಾಯುಶ್ಚರಣಾಂಶ್ಚ ವಿಕ್ಷಿಪನ್ ।
ಪ್ರಸ್ವಿನ್ನಗಾತ್ರಃ ಪರಿವೃತ್ತಲೋಚನಃ
ಪಪಾತ ಲೇಂಡಂ ವಿಸೃಜನ್ ಕ್ಷಿತೌ ವ್ಯಸುಃ ॥ ೮ ॥

ತದ್ದೇಹತಃ ಕರ್ಕಟಿಕಾಫಲೋಪಮಾದ್
ವ್ಯಸೋರಪಾಕೃಷ್ಯ ಭುಜಂ ಮಹಾಭುಜಃ ।
ಅವಿಸ್ಮಿತೋಽಯತ್ನಹತಾರಿರುತ್ಸ್ಮಯೈಃ
ಪ್ರಸೂನವರ್ಷೈರ್ದಿವಿಷದ್ಭಿರೀಡಿತಃ ॥ ೯ ॥

ಮರದ ಪೊಟರೆಯಂತಿತ್ತು. ಅವನನ್ನು ನೋಡುತ್ತಲೇ ಭಯವುಂಟಾಗುತ್ತಿತ್ತು. ಅವನಿಗೆ ದಪ್ಪವಾದ ಕುತ್ತಿಗೆಯಿತ್ತು. ಕಪ್ಪುಬಣ್ಣದ ವಿಶಾಲವಾದ ಅವನ ದೇಹವು ನೀಲಾಚಲದಂತಿತ್ತು. ಕೃಷ್ಣನನ್ನು ಸಂಹರಿಸಿ ಕಂಸನಿಗೆ ಹಿತವನ್ನುಂಟು ಮಾಡುವುದೇ ಅವನ ಆಶಯವಾಗಿತ್ತು. ಅವನು ನಡೆದಾಗ ಭೂಕಂಪವೇ ಆಗುತ್ತಿತ್ತು. ॥ ೧-೨ ॥ ಕೆನೆತಗಳಿಂದ ತನ್ನ ಗೋಕುಲವನ್ನೇ ಭಯಪಡಿಸುತ್ತಿದ್ದ, ಬಾಲದ ಕೂದಲುಗಳಿಂದ ಮೋಡಗಳನ್ನೇ ಚದುರಿಸುತ್ತಿದ್ದ, ಯುದ್ಧಕ್ಕಾಗಿ ತನ್ನನ್ನು ಗೋಕುಲದಲ್ಲಿ ಹುಡುಕುತ್ತಿದ್ದ ಕೇಶಿಯನ್ನು ನೋಡಿ ವೀರಾಗ್ರಣಿಯಾದ ಶ್ರೀಕೃಷ್ಣನು ಸಿಂಹದಂತೆ ಗರ್ಜಿಸುತ್ತಾ ರಾಕ್ಷಸನನ್ನು ಯುದ್ಧಕ್ಕಾಗಿ ಆಹ್ವಾನಿಸಿದನು. ॥ ೩ ॥ ಬಳಿಕ ಕೇಶಿಯು ತನಗೆದುರಾಗಿ ಬಂದ ಶ್ರೀಕೃಷ್ಣನನ್ನು ನೋಡಿ ಆಕಾಶವನ್ನೇ ನುಂಗಿಬಿಡುವನೋ ಎಂಬಂತೆ ಬಾಯನ್ನು ಅಗಲಿಸಿಕೊಂಡು ಮುನ್ನುಗ್ಗಿ ಹೋದನು. ಅತ್ಯಂತ ಕ್ರುದ್ಧನಾಗಿದ್ದ ದುರಾಸದನಾದ, ಭಯಂಕರವಾಗಿ ಶಬ್ದಮಾಡುತ್ತಿದ್ದ ಎದುರಿಸಲು ಅಸಾಧ್ಯನಾಗಿದ್ದ ಆ ರಾಕ್ಷಸನು ತನ್ನೆರಡು ಹಿಂದಿನ ಕಾಲುಗಳಿಂದ ಅರವಿಂದಾಕ್ಷನಾದ ಶ್ರೀಕೃಷ್ಣನನ್ನು ಒದೆದನು. ॥ ೪ ॥ ಆದರೆ ಭಗವಂತನು ಉಪಾಯದಿಂದ ಆ ಒದೆಯನ್ನು ತಪ್ಪಿಸಿಕೊಂಡು, ಅತ್ಯಂತ ಕ್ರುದ್ಧನಾಗಿ ಗರುಡನು ಸರ್ಪವನ್ನು ಹಿಡಿಯುವಂತೆ ಅದೇ ಕಾಲುಗಳನ್ನು ಹಿಡಿದು ಗರಗರನೆ ತಿರುಗಿಸುತ್ತಾ ಅನಾಯಾಸವಾಗಿ ನೂರು ಮಾರುಗಳ ದೂರಕ್ಕೆ ಬಿಸಾಡಿ ಸ್ವಸ್ಥವಾಗಿ ನಿಂತುಕೊಂಡನು. ॥ ೫ ॥ ಕೇಶಿಯು ಸ್ವಲ್ಪ ಹೊತ್ತಿನಲ್ಲೇ ಚೇತರಿಸಿಕೊಂಡು ಮೇಲೆದ್ದು ಕ್ರುದ್ಧವಾಗಿ ಬಾಯನ್ನು ಅಗಲವಾಗಿ ತೆರೆದುಕೊಂಡು ರಭಸದಿಂದ ಭಗವಂತನೆಡೆಗೆ ನುಗ್ಗಿದನು. ಶ್ರೀಕೃಷ್ಣನು ನಸುನಗುತ್ತಾ - ಸರ್ಪವು ತನ್ನ ಬಿಲದೊಳಗೆ ನುಸುಳಿಹೋಗುವಂತೆ ತನ್ನ ಎಡತೋಳನ್ನು ಕೇಶಿಯು ಅಗಲವಾಗಿದ್ದ ಬಾಯೊಳಗೆ ರಭಸದಿಂದ ತೂರಿಸಿದನು. ॥ ೬ ॥ ಪರೀಕ್ಷಿತನೇ! ಭಗವಂತನ ಅತ್ಯಂತ ಕೋಮಲವಾದ ಬಾಹುವು ಆ ಸಮಯದಲ್ಲಿ ಕಾದ ಕಬ್ಬಿಣದಂತಾಗಿ ಅದರ ಸ್ಪರ್ಶಮಾತ್ರದಿಂದ ಕೇಶಿಯ ಹಲ್ಲುಗಳೆಲ್ಲವೂ ಉದುರಿಹೋದುವು. ಚಿಕಿತ್ಸೆಯನ್ನು ಹೊಂದದ ಮಹೋದರ ರೋಗವು ಉಲ್ಬಣಿಸುವಂತೆ ಶ್ರೀಕೃಷ್ಣನ ತೋಳು ಕ್ಷಣ-ಕ್ಷಣಕ್ಕೂ ಅಸುರನ ಬಾಯೊಳಗೆ ವರ್ಧಿಸುತ್ತಿತ್ತು. ॥ ೭ ॥ ಅಚಿಂತ್ಯ ಶಕ್ತಿ ಸಂಪನ್ನನಾದ ಭಗವಾನ್ ಶ್ರೀಕೃಷ್ಣನ ತೋಳು ಕ್ಷಣ-ಕ್ಷಣಕ್ಕೂ ದಪ್ಪವಾಗುತ್ತಾ ಕೇಶಿಯ ಕುತ್ತಿಗೆಗೆ ಹಾಕಿದ ಬಿರಟೆಯಂತಾಗಿ ರಾಕ್ಷಸನ ಉಸಿರುನಿಂತು ಹೋಯಿತು. ಕಾಲುಗಳು ಒದರ ತೊಡಗಿದವು. ಶರೀರವು ಬೆವರಿನಿಂದ ಒದ್ದೆಯಾಯಿತು. ಕಣ್ಣುಗುಡ್ಡೆಗಳು ಹೊರ ಬಂದುವು. ಕೇಶಿಯು ಮಲ-ಮೂತ್ರಗಳನ್ನು ಸುರಿಸುತ್ತಾ, ನೆಲದ ಮೇಲೆ ಬಿದ್ದು ಸ್ವಲ್ಪ ಹೊತ್ತಿನಲ್ಲಿ ಪ್ರಾಣಗಳನ್ನು ತೊರೆದನು. ॥ ೮ ॥ ಪಕ್ವವಾದ ಕಕ್ಕರಿಕೆ ಹಣ್ಣು ಬಿರಿಯುವಂತೆ ಬಿರಿದು ಹೋದ ರಾಕ್ಷಸನ ಬಾಯಿಂದ ಮಹಾಬಾಹುವಾದ ಶ್ರೀಕೃಷ್ಣನು ತನ್ನ ಎಡದ ಕೈಯನ್ನು ಸೆಳೆದುಕೊಂಡನು. ಇದರಿಂದ ಶ್ರೀಕೃಷ್ಣನಿಗೆ ಆಶ್ಚರ್ಯವುಂಟಾಗಲಿಲ್ಲ, ಹೆಚ್ಚಿನ ಪ್ರಯತ್ನವಿಲ್ಲದೆಯೇ ಶತ್ರುವಿನ ನಾಶವಾಯಿತು. ದೇವತೆಗಳಿಗೆ ಇದನ್ನು ಕಂಡು ಆಶ್ಚರ್ಯವಾಯಿತು. ಅವರೆಲ್ಲರೂ ಅತ್ಯಂತ ಪ್ರಸನ್ನರಾಗಿ ಭಗವಂತನ ಮೇಲೆ ಹೂಮಳೆಗರೆದು, ಅವನನ್ನು ನಾನಾ ರೀತಿಯಿಂದ ಸ್ತೋತ್ರಮಾಡಿದರು. ॥ ೯ ॥

ದೇವರ್ಷಿರುಪಸಂಗಮ್ಯ ಭಾಗವತಪ್ರವರೋ ನೃಪ ।
ಕೃಷ್ಣಮಕ್ಲಿಷ್ಟಕರ್ಮಾಣಂ ರಹಸ್ಯೇತದಭಾಷತ ॥ ೧೦ ॥

ಕೃಷ್ಣ ಕೃಷ್ಣಾಪ್ರಮೇಯಾತ್ಮನ್ ಯೋಗೇಶ ಜಗದೀಶ್ವರ ।
ವಾಸುದೇವಾಖಿಲಾವಾಸ ಸಾತ್ವತಾಂ ಪ್ರವರ ಪ್ರಭೋ ॥ ೧೧ ॥

ತ್ವಮಾತ್ಮಾ ಸರ್ವಭೂತಾನಾಮೇಕೋ ಜ್ಯೋತಿರಿವೈಧಸಾಮ್ ।
ಗೂಢೋ ಗುಹಾಶಯಃ ಸಾಕ್ಷೀ ಮಹಾಪುರುಷ ಈಶ್ವರಃ ॥ ೧೨ ॥

ಆತ್ಮನಾಽಽತ್ಮಾಶ್ರಯಃ ಪೂರ್ವಂ ಮಾಯಯಾ ಸಸೃಜೇ ಗುಣಾನ್ ।
ತೈರಿದಂ ಸತ್ಯಸಂಕಲ್ಪಃ ಸೃಜಸ್ಯತ್ಸ್ಯವಸೀಶ್ವರಃ ॥ ೧೩ ॥

ಸ ತ್ವಂ ಭೂಧರಭೂತಾನಾಂ ದೈತ್ಯಪ್ರಮಥರಕ್ಷಸಾಮ್ ।
ಅವತೀರ್ಣೋ ವಿನಾಶಾಯ ಸೇತೂನಾಂ ರಕ್ಷಣಾಯ ಚ ॥ ೧೪ ॥

ದಿಷ್ಟ್ಯಾ ತೇ ನಿಹತೋ ದೈತ್ಯೋ ಲೀಲಯಾಯಂ ಹಯಾಕೃತಿಃ ।
ಯಸ್ಯ ಹೇಷಿತಸಂತ್ರಸ್ತಾಸ್ತ್ಯಜಂತ್ಯನಿಮಿಷಾ ದಿವಮ್ ॥ ೧೫ ॥

ಚಾಣೂರಂ ಮುಷ್ಟಿಕಂ ಚೈವ ಮಲ್ಲಾನನ್ಯಾಂಶ್ಚ ಹಸ್ತಿನಮ್ ।
ಕಂಸಂ ಚ ನಿಹತಂ ದ್ರಕ್ಷ್ಯೇ ಪರಶ್ವೋಽಹನಿ ತೇ ವಿಭೋ ॥ ೧೬ ॥

ತಸ್ಯಾನು ಶಂಖಯವನಮುರಾಣಾಂ ನರಕಸ್ಯ ಚ ।
ಪಾರಿಜಾತಾಪಹರಣಮಿಂದ್ರಸ್ಯ ಚ ಪರಾಜಯಮ್ ॥ ೧೭ ॥

ಉದ್ವಾಹಂ ವೀರಕನ್ಯಾನಾಂ ವೀರ್ಯಶುಲ್ಕಾದಿಲಕ್ಷಣಮ್ ।
ನೃಗಸ್ಯ ಮೋಕ್ಷಣಂ ಶಾಪಾದ್ದ್ವಾರಕಾಯಾಂ ಜಗತ್ಪತೇ ॥ ೧೮ ॥

ಸ್ಯಮಂತಕಸ್ಯ ಚ ಮಣೇರಾದಾನಂ ಸಹ ಭಾರ್ಯಯಾ ।
ಮೃತಪುತ್ರಪ್ರದಾನಂ ಚ ಬ್ರಾಹ್ಮಣಸ್ಯ ಸ್ವಧಾಮತಃ ॥ ೧೯ ॥

ಪರೀಕ್ಷಿತನೇ! ಭಾಗವತರಲ್ಲಿ ಶ್ರೇಷ್ಠರಾದ ನಾರದ ಮುನಿಗಳು ಕಂಸನಲ್ಲಿಂದ ಮರಳಿ ಅದ್ಭುತ ಕರ್ಮಿಯಾದ ಭಗವಾನ್ ಶ್ರೀಕೃಷ್ಣನಲ್ಲಿಗೆ ಬಂದು ಏಕಾಂತದಲ್ಲಿ ಅವನನ್ನು ಸಂಧಿಸಿ ಹೀಗೆ ಹೇಳತೊಡಗಿದರು. ॥ ೧೦ ॥ ಸಚ್ಚಿದಾನಂದ ಸ್ವರೂಪನಾದ ಕೃಷ್ಣನೇ! ನಿನ್ನ ಸ್ವರೂಪವು ಮನ-ವಚನಗಳಿಗೆ ನಿಲುಕುವುದಿಲ್ಲ. ನೀನು ಯೋಗೇಶ್ವರನಾಗಿರುವೆ. ಜಗದೀಶ್ವರನೇ! ವಾಸುದೇವನೇ! ಸಮಸ್ತ ಪ್ರಾಣಿಗಳ ಹೃದಯದಲ್ಲಿ ವಾಸಿಸುವವನೇ! ಸಾತ್ವತ ಶ್ರೇಷ್ಠನೇ! ಪ್ರಭುವೇ! ನಿನಗೆ ನಮಸ್ಕಾರವು. ॥ ೧೧ ॥ ದೇವದೇವನೇ! ಒಂದೇ ಅಗ್ನಿಯು ಎಲ್ಲ ಕಟ್ಟಿಗೆಗಳಲ್ಲಿಯೂ ವ್ಯಾಪಿಸಿರುವಂತೆ ನೀನೊಬ್ಬನೇ ಸಕಲ ಪ್ರಾಣಿಗಳ ಹೃದಯದಲ್ಲಿ ಆತ್ಮರೂಪದಿಂದ ವ್ಯಾಪಿಸಿಕೊಂಡಿರುವೆ. ಆತ್ಮರೂಪದಲ್ಲಿದ್ದರೂ ನೀನು ನಿಗೂಢನಾಗಿರುವೆ. ಪಂಚಕೋಶಾತ್ಮಕವಾದ ಗುಹೆಯಲ್ಲಿ ಅಡಗಿಕೊಂಡಿರುವೆ. ಈಶ್ವರನೂ, ಸರ್ವಸಾಕ್ಷಿಯೂ, ಪುರುಷೋತ್ತಮನೂ, ಸರ್ವನಿಯಾಮಕನೂ ನೀನೇ ಆಗಿರುವೆ. ಅಂತಹ ನಿನಗೆ ನಮಸ್ಕಾರವು. ॥ ೧೨ ॥ ಪ್ರಭುವೇ! ಆತ್ಮಸ್ವರೂಪನಾದ ನೀನು ಸರ್ವಕ್ಕೂ ಆಶ್ರಯನಾಗಿರುವೆ. ನೀನು ಯಾರನ್ನೂ ಆಶ್ರಯಿಸತಕ್ಕವನಲ್ಲ. ಸೃಷ್ಟಿಯ ಪ್ರಾರಂಭದಲ್ಲಿ ನಿನ್ನ ಮಾಯೆಯಿಂದ ಗುಣಗಳನ್ನು ಸೃಷ್ಟಿಸಿ, ಆ ಗುಣಗಳನ್ನೇ ಸ್ವೀಕರಿಸಿಕೊಂಡು ನೀನು ಜಗತ್ತಿನ ಸೃಷ್ಟಿ, ಸ್ಥಿತಿ, ಪ್ರಳಯಗಳನ್ನು ಮಾಡುತ್ತಿರುವೆ. ಸರ್ವಶಕ್ತಿಸಂಪನ್ನನೂ, ಸತ್ಯಸಂಕಲ್ಪನೂ ಆದ ನಿನಗೆ ವಂದಿಸುತ್ತೇನೆ. ॥ ೧೩ ॥ ಅಂತಹ ಸಚ್ಚಿದಾನಂದ ಸ್ವರೂಪನಾದ ನೀನು ಈ ಸಮಯದಲ್ಲಿ ರಾಜರಾಗಿ ಹುಟ್ಟಿರುವ ದೈತ್ಯ-ಪ್ರಮಥ-ರಾಕ್ಷಸರ ವಿನಾಶಕ್ಕಾಗಿ ಮತ್ತು ಧರ್ಮದ ಮರ್ಯಾದೆಯನ್ನು ರಕ್ಷಿಸಲಿಕ್ಕಾಗಿಯೇ ಯದುವಂಶದಲ್ಲಿ ಅವತರಿಸಿರುವೆ. ॥ ೧೪ ॥ ಮಹಾನುಭಾವನೇ! ಕುದುರೆಯ ರೂಪದಲ್ಲಿದ್ದ ಕೇಶಿರಾಕ್ಷಸನನ್ನು ಲೀಲಾಜಾಲವಾಗಿ ಸಂಹರಿಸಿದೆ. ಇದು ಸಂತೋಷದ ಸಂಗತಿಯೇ ಆಗಿದೆ. ಆ ರಾಕ್ಷಸನ ಕೆನೆಯುವಿಕೆಯನ್ನು ಕೇಳುತ್ತಲೇ ದೇವತೆಗಳು ಸ್ವರ್ಗದಿಂದ ಓಡಿಹೋಗುತ್ತಿದ್ದರು. ॥ ೧೫ ॥

ಪ್ರಭುವೇ! ಮುಂದಿನ ಎರಡು ದಿವಸಗಳಲ್ಲಿಯೇ ಚಾಣೂರ ಮುಷ್ಟಿಕರನ್ನೂ, ಕುವಲಯಾಪೀಡವೆಂಬ ಮತ್ತಗಜವನ್ನೂ, ಇತರ ಹಲವಾರು ಜಟ್ಟಿಗಳನ್ನೂ, ಕಂಸನನ್ನೂ ನೀನು ಸಂಹರಿಸುವ ಅದ್ಭುತ ದೃಶ್ಯವನ್ನು ನಾನು ಕಾಣಲಿದ್ದೇನೆ. ॥ ೧೬ ॥ ಅನಂತರ ಶಂಖಾಸುರ, ಕಾಲಯವನ, ಮುರ, ನರಕಾಸುರರ ವಧೆಯನ್ನು ನೋಡುವೆ. ಇಂದ್ರನ ಪರಾಜಯವನ್ನು ಸ್ವರ್ಗದಿಂದ ಪಾರಿಜಾತಾಪಹರಣವನ್ನು ನಾನು ಕಾಣಲಿರುವೆನು. ॥ ೧೭ ॥ ವೀರ್ಯ ಪರಾಕ್ರಮಗಳೇ ಕನ್ಯಾಶುಲ್ಕವಾಗಿ ಉಳ್ಳ ವೀರಕನ್ಯೆಯರೊಡನೆ ನಿನ್ನ ಶುಭವಿವಾಹಗಳಾಗುವುದನ್ನು ನಾನು ನೋಡುವೆನು. ಜಗತ್ಪತಿಯೇ! ನೀನು ದ್ವಾರಕೆಯಲ್ಲಿಯೇ ಇರುತ್ತಾ ನೃಗರಾಜನನ್ನು ಶಾಪದಿಂದ ಮುಕ್ತಗೊಳಿಸುವೆ. ॥ ೧೮ ॥ ಸ್ಯಮಂತಕ ಮಣಿಯನ್ನು ಜಾಂಬವತಿಯನ್ನು ಜಾಂಬವಂತನಿಂದ ಪಡೆದು ಕೊಳ್ಳುವೆ. ಬ್ರಾಹ್ಮಣನ ಮೃತಪುತ್ರನನ್ನು ತನ್ನ ಧಾಮದಿಂದ ತಂದು ಕೊಡುವೆ. ॥ ೧೯ ॥

ಪೌಂಡ್ರಕಸ್ಯ ವಧಂ ಪಶ್ಚಾತ್ ಕಾಶೀಪುರ್ಯಾಶ್ಚ ದೀಪನಮ್ ।
ದಂತವಕ್ರಸ್ಯ ನಿಧನಂ ಚೈದ್ಯಸ್ಯ ಚ ಮಹಾಕ್ರತೌ ॥ ೨೦ ॥

ಯಾನಿ ಚಾನ್ಯಾನಿ ವೀರ್ಯಾಣಿ ದ್ವಾರಕಾಮಾವಸನ್ ಭವಾನ್ ।
ಕರ್ತಾ ದ್ರಕ್ಷ್ಯಾಮ್ಯಹಂ ತಾನಿ ಗೇಯಾನಿ ಕವಿಭಿರ್ಭುವಿ ॥ ೨೧ ॥

ಅಥ ತೇ ಕಾಲರೂಪಸ್ಯ ಕ್ಷಪಯಿಷ್ಣೋರಮುಷ್ಯ ವೈ ।
ಅಕ್ಷೌಹಿಣೀನಾಂ ನಿಧನಂ ದ್ರಕ್ಷ್ಯಾಮ್ಯರ್ಜುನಸಾರಥೇಃ ॥ ೨೨ ॥

ವಿಶುದ್ಧವಿಜ್ಞಾನಘನಂ ಸ್ವಸಂಸ್ಥಯಾ
ಸಮಾಪ್ತ ಸರ್ವಾರ್ಥಮಮೋಘವಾಂಛಿತಮ್ ।
ಸ್ವತೇಜಸಾ ನಿತ್ಯನಿವೃತ್ತಮಾಯಾ
ಗುಣಪ್ರವಾಹಂ ಭಗವಂತಮೀಮಹಿ ॥ ೨೩ ॥

ತ್ವಾಮೀಶ್ವರಂ ಸ್ವಾಶ್ರಯಮಾತ್ಮಮಾಯಯಾ
ವಿನಿರ್ಮಿತಾಶೇಷವಿಶೇಷಕಲ್ಪನಮ್ ।
ಕ್ರೀಡಾರ್ಥಮದ್ಯಾತ್ತಮನುಷ್ಯವಿಗ್ರಹಂ
ನತೋಽಸ್ಮಿ ಧುರ್ಯಂ ಯದುವೃಷ್ಣಿಸಾತ್ವತಾಮ್ ॥ ೨೪ ॥

ಶ್ರೀಶುಕ ಉವಾಚ

ಏವಂ ಯದುಪತಿಂ ಕೃಷ್ಣಂ ಭಾಗವತಪ್ರವರೋ ಮುನಿಃ ।
ಪ್ರಣಿಪತ್ಯಾಭ್ಯನುಜ್ಞಾತೋ ಯಯೌ ತದ್ದರ್ಶನೋತ್ಸವಃ ॥ ೨೫ ॥

ಭಗವಾನಪಿ ಗೋವಿಂದೋ ಹತ್ವಾ ಕೇಶಿನಮಾಹವೇ ।
ಪಶೂನಪಾಲಯತ್ಪಾಲೈಃ ಪ್ರೀತೈರ್ವ್ರಜಸುಖಾವಹಃ ॥ ೨೬ ॥

ಏಕದಾ ತೇ ಪಶೂನ್ ಪಾಲಾಶ್ಚಾರಯಂತೋಽದ್ರಿಸಾನುಷು ।
ಚಕ್ರುರ್ನಿಲಾಯನಕ್ರೀಡಾಶ್ಚೋರಪಾಲಾಪದೇಶತಃ ॥ ೨೭ ॥

ತತ್ರಾಸನ್ಕತಿಚಿಚ್ಚೋರಾಃ ಪಾಲಾಶ್ಚ ಕತಿಚಿನ್ನೃಪ ।
ಮೇಷಾಯಿತಾಶ್ಚ ತತ್ರೈಕೇ ವಿಜಹ್ರುರಕುತೋಭಯಾಃ ॥ ೨೮ ॥

ಇದಾದ ಬಳಿಕ ನೀನು ಪೌಂಡ್ರಕ ವಾಸುದೇವನನ್ನು ಸಂಹರಿಸುವೆ. ಕಾಶೀಪುರಿಯನ್ನು ಸುಟ್ಟುಹಾಕುವೆ. ಯುಧಿಷ್ಠಿರನ ರಾಜಸೂಯ ಯಾಗದಲ್ಲಿ ಚೇದಿರಾಜನಾದ ಶಿಶುಪಾಲನನ್ನು ಸಂಹರಿಸುವೆ. ಅಲ್ಲಿಂದ ಹಿಂದಿರುಗುವಾಗ ಅವನ ತಮ್ಮನಾದ ದಂತವಕ್ತ್ರನನ್ನೂ ನಾಶಮಾಡುವೆ. ॥ ೨೦ ॥ ಪ್ರಭುವೇ! ದ್ವಾರಕೆಯಲ್ಲಿ ವಾಸಿಸುತ್ತಿರುವಾಗ ನೀನು ಪ್ರಕಟಿಸಲಿರುವ ಇನ್ನೂ ಹಲವಾರು ಪ್ರಸಂಗಗಳನ್ನು ಪ್ರಭಾವಶಾಲಿಗಳಾದ ಜ್ಞಾನೀ ಕವಿಗಳು ಭೂಲೋಕದಲ್ಲಿ ಹಾಡುವರು. ಇವೆಲ್ಲವನ್ನು ನಾನು ಪ್ರತ್ಯಕ್ಷವಾಗಿ ಕಾಣಲಿದ್ದೇನೆ. ॥ ೨೧ ॥ ಅನಂತರ ಭೂಭಾರಹರಣಕ್ಕಾಗಿ ಕಾಲಸ್ವರೂಪನಾದ ನೀನು ಅರ್ಜುನನಿಗೆ ಸಾರಥಿಯಾಗಿ ಅನೇಕ ಅಕ್ಷೌಹಿಣೀ ಸೈನ್ಯವನ್ನು ಸಂಹರಿಸುವೆ.ಇವೆಲ್ಲವನ್ನೂ ನಾನು ಕಣ್ಣಾರೆ ಕಾಣಲಿದ್ದೇನೆ. ॥ ೨೨ ॥

ಸ್ವಾಮಿಯೇ! ನೀನು ವಿಶುದ್ಧವಿಜ್ಞಾನ ಘನಸ್ವರೂಪನು. ಕೇವಲ ಜ್ಞಾನಮೂರ್ತಿಯು. ಬ್ರಹ್ಮಾನಂದವೆಂಬ ನಿಜಸ್ವರೂಪದ ಸ್ಥಿತಿಯಿಂದ ಸರ್ವಾರ್ಥಗಳನ್ನು ಪಡೆದುಕೊಂಡಿರುವವನು. ಆಪ್ತಕಾಮನು, ಸಫಲವಾದ ಇಷ್ಟಾರ್ಥವುಳ್ಳವನು. ಸತ್ಯಸಂಕಲ್ಪನು, ಚಿನ್ಮಯಶಕ್ತಿಯ ತೇಜಸ್ಸಿನಿಂದ ಸತ್ತ್ವಾದಿಮಾಯಾಗುಣಗಳ ಪ್ರವಾಹವನ್ನು ನಿತ್ಯನಿರಂತರವಾಗಿ ನಿರಾಕರಿಸತಕ್ಕವನು. ಅಂತಹ ಸರ್ವಶಕ್ತನಾದ ಭಗವಂತನನ್ನು ಶರಣು ಹೊಂದುತ್ತೇನೆ. ॥ ೨೩ ॥ ನೀನು ಸಮಸ್ತರ ಅಂತರ್ಯಾಮಿಯಾಗಿದ್ದು ಎಲ್ಲರನ್ನೂ ನಿಯಂತ್ರಿಸುವೆ. ತಾನೇ-ತನ್ನಲ್ಲಿ ಸ್ಥಿತನಾದ ಪರಮ ಸ್ವತಂತ್ರನು. ಜಗತ್ತು ಮತ್ತು ಅದರ ಅಶೇಷ ವಿಶೇಷಗಳನ್ನು - ಭಾವ - ಅಭಾವ ರೂಪವಾದ ಎಲ್ಲ ಭೇದ ವಿಭೇದಗಳ ಕಲ್ಪನೆ ಕೇವಲ ನಿನ್ನ ಮಾಯೆಯಿಂದಲೇ ಉಂಟಾಗಿದೆ. ಈ ಸಮಯದಲ್ಲಿ ನೀನು ನಿನ್ನ ಲೀಲೆಗಳನ್ನು ಪ್ರಕಟಿಸಲಿಕ್ಕಾಗಿ ಮನುಷ್ಯನಂತೆ ಶ್ರೀವಿಗ್ರಹದಿಂದ ಪ್ರಕಟನಾಗಿರುವೆ. ನೀನು ಯದು, ವೃಷ್ಣಿ, ಸಾತ್ವತ ವಂಶೀಯರ ಶಿರೋಮಣಿಯಾಗಿರುವೆ. ಪ್ರಭೋ! ನಾನು ನಿನಗೆ ನಮಸ್ಕರಿಸುತ್ತಿದ್ದೇನೆ. ॥ ೨೪ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ - ಭಾಗವತ ಶ್ರೇಷ್ಠರಾದ ನಾರದ ಮಹರ್ಷಿಗಳು ಹೀಗೆ ಭಗವಂತನನ್ನು ಸ್ತುತಿಸಿ, ನಮಸ್ಕರಿಸಿದರು. ಭಗವಂತನ ದರ್ಶನದಿಂದ ಉತ್ಸಾಹಗೊಂಡು ಶ್ರೀಕೃಷ್ಣನ ಅನುಮತಿಯನ್ನು ಪಡೆದು ಹೊರಟುಹೋದರು. ॥ ೨೫ ॥ ಇತ್ತ ಭಗವಾನ್ ಶ್ರೀಕೃಷ್ಣನು ಯುದ್ಧದಲ್ಲಿ ಕೇಶಿಯನ್ನು ಕೊಂದು ಮತ್ತೆ ತನ್ನ ಪ್ರಿಯರಾದ ಮತ್ತು ಪ್ರಸನ್ನಚಿತ್ತರಾದ ಗೋಪಾಲಕರೊಡನೆ ಮೊದಲಿನಂತೆ ಪಶುಪಾಲನೆಯಲ್ಲಿ ತೊಡಗಿ ವ್ರಜವಾಸಿಗಳಿಗೆ ಪರಮಾನಂದವನ್ನು ಉಂಟುಮಾಡುತ್ತಿದ್ದನು. ॥ ೨೬ ॥ ಒಮ್ಮೆ ಗೋಪಾಲಕರು ಪರ್ವತದ ತಪ್ಪಲಿನಲ್ಲಿ ಹಸುವೇ ಮೊದಲಾದ ಪಶುಗಳನ್ನು ಮೇಯಿಸುತ್ತಾ ಕೆಲವರು ಕಳ್ಳರೂ, ಕೆಲವರು ಕುರುಬರೂ, ಕೆಲವರು ಕುರಿಗಳೂ ಆಗಿ ಆಟವಾಡತೊಡಗಿದರು.॥೨೭॥ ರಾಜೇಂದ್ರ! ಅವರಲ್ಲಿ ಕೆಲವರು ಕಳ್ಳರು, ಕೆಲವರು ರಕ್ಷಕರು, ಕೆಲವರು ಕುರಿಗಳೂ ಆಗಿದ್ದರು. ಹೀಗೆ ನಿರ್ಭಯರಾಗಿ ಆಟದಲ್ಲಿ ತನ್ಮಯರಾದರು. ॥ ೨೮ ॥

ಮಯಪುತ್ರೋ ಮಹಾಮಾಯೋ
ವ್ಯೋಮೋ ಗೋಪಾಲವೇಷಧೃಕ್ ।
ಮೇಷಾಯಿತಾನಪೋವಾಹ
ಪ್ರಾಯಶ್ಚೋರಾಯಿತೋ ಬಹೂನ್ ॥ ೨೯ ॥

ಅದೇ ಸಮಯದಲ್ಲಿ ಗೊಲ್ಲನ ವೇಷವನ್ನು ಧರಿಸಿ ವ್ಯೋಮಾಸುರನೆಂಬ ರಕ್ಕಸನು ಅಲ್ಲಿಗೆ ಬಂದನು. ಅವನು ಮಾಯಾವಿಗಳ ಆಚಾರ್ಯ ಮಯಾಸುರನ ಪುತ್ರನಾಗಿದ್ದನು ಹಾಗೂ ಸ್ವತಃ ಮಹಾ ಮಾಯಾವಿಯಾಗಿದ್ದನು. ಅವನು ಆಟದಲ್ಲಿ ಕಳ್ಳನಾಗಿ ಕುರಿಗಳಾಗಿದ್ದ ಹುಡುಗರನ್ನು ಕದ್ದುಕೊಂಡು ಹೋಗಿ ಅಡಗಿಸುತ್ತಿದ್ದನು. ॥ ೨೯ ॥

ಗಿರಿದರ್ಯಾಂ ವಿನಿಕ್ಷಿಪ್ಯ ನೀತಂ ನೀತಂ ಮಹಾಸುರಃ ।
ಶಿಲಯಾ ಪಿದಧೇ ದ್ವಾರಂ ಚತುಃಪಂಚಾವಶೇಷಿತಾಃ ॥ ೩೦ ॥

ತಸ್ಯ ತತ್ಕರ್ಮ ವಿಜ್ಞಾಯ ಕೃಷ್ಣಃ ಶರಣದಃ ಸತಾಮ್ ।
ಗೋಪಾನ್ ನಯಂತಂ ಜಗ್ರಾಹ ವೃಕಂ ಹರಿರಿವೌಜಸಾ ॥ ೩೧ ॥

ಸ ನಿಜಂ ರೂಪಮಾಸ್ಥಾಯ ಗಿರೀಂದ್ರಸದೃಶಂ ಬಲೀ ।
ಇಚ್ಛನ್ವಿಮೋಕ್ತುಮಾತ್ಮಾನಂ ನಾಶಕ್ನೋದ್ಗ್ರಹಣಾತುರಃ ॥ ೩೨ ॥

ತಂ ನಿಗೃಹ್ಯಾಚ್ಯುತೋ ದೋರ್ಭ್ಯಾಂ ಪಾತಯಿತ್ವಾ ಮಹೀತಲೇ ।
ಪಶ್ಯತಾಂ ದಿವಿ ದೇವಾನಾಂ ಪಶುಮಾರಮಮಾರಯತ್ ॥ ೩೩ ॥

ಗುಹಾಪಿಧಾನಂ ನಿರ್ಭಿದ್ಯ ಗೋಪಾನ್ನಿಃಸಾರ್ಯ ಕೃಚ್ಛ್ರತಃ ।
ಸ್ತೂಯಮಾನಃ ಸುರೈರ್ಗೋಪೈಃ ಪ್ರವಿವೇಶ ಸ್ವಗೋಕುಲಮ್ ॥ ೩೪ ॥

ಆ ಮಹಾಸುರನು ಪದೇ-ಪದೇ ಹುಡುಗರನ್ನು ಎತ್ತಿಕೊಂಡು ಹೋಗಿ ಪರ್ವತದ ಗುಹೆಯೊಂದರಲ್ಲಿ ಇಟ್ಟು ಬಾಗಿಲಿಗೆ ಒಂದು ದೊಡ್ಡ ಬಂಡೆಯನ್ನು ಮುಚ್ಚಿಡುತ್ತಿದ್ದನು. ಹೀಗೆ ಆಡುತ್ತಿದ್ದ ಗೊಲ್ಲಬಾಲಕರಲ್ಲಿ ಕೇವಲ ನಾಲ್ಕೈದು ಬಾಲಕರು ಮಾತ್ರ ಉಳಿದರು. ॥ ೩೦ ॥ ಭಕ್ತವತ್ಸಲನಾದ ಭಗವಂತನು ಆ ರಾಕ್ಷಸನ ದುಷ್ಕಾರ್ಯವನ್ನು ಅರಿತುಕೊಂಡು, ಅವನು ಬಾಲಕನನ್ನು ಎತ್ತಿಕೊಂಡು ಹೋಗುತ್ತಿರುವಾಗ ತೋಳವನ್ನು ಸಿಂಹವು ಹಿಡಿಯುವಂತೆ ಅವನನ್ನು ಹಿಡಿದುಕೊಂಡನು. ॥ ೩೧ ॥ ಮಹಾಬಲಿಯಾದ ವ್ಯೋಮಾಸುರನು ಪರ್ವತದಂತಿರುವ ತನ್ನ ನಿಜರೂಪವನ್ನು ಪ್ರಕಟಿಸಿ ಶ್ರೀಕೃಷ್ಣನಿಂದ ತನ್ನನ್ನು ಬಿಡಿಸಿಕೊಳ್ಳಲು ಪ್ರಯತ್ನಿಸಿದನು. ಆದರೆ ಶ್ರೀಕೃಷ್ಣನ ಹಿಡಿತದಲ್ಲಿ ಸಿಲುಕಿದ ಅವನಿಂದ ಬಿಡಿಸಿಕೊಳ್ಳಲಾಗಲಿಲ್ಲ. ॥ ೩೨ ॥ ಆಗ ಭಗವಾನ್ ಶ್ರೀಕೃಷ್ಣನು ತನ್ನೆರಡೂ ಕೈಗಳಿಂದ ಅದುಮಿ ಹಿಡಿದು ಯಜ್ಞಪಶುವನ್ನು ಕೊಲ್ಲುವಂತೆ ಕತ್ತು ಹಿಸುಕಿ ಕೊಂದುಬಿಟ್ಟನು. ಆಗ ದೇವತೆಗಳು, ಗೊಲ್ಲಬಾಲಕರು ಭಗವಂತನನ್ನು ಸ್ತುತಿಸಿದರು. ಅನಂತರ ಪರಮದಯಾಳುವಾದ ಶ್ರೀಕೃಷ್ಣನು ಗುಹೆಯ ದ್ವಾರಕ್ಕೆ ಮುಚ್ಚಿದ್ದ ಬಂಡೆಯನ್ನು ಜರುಗಿಸಿ ಒಳಗೆ ಕೂಡಿಹಾಕಿದ್ದ ಗೊಲ್ಲಬಾಲಕರೊಂದಿಗೆ ವ್ರಜವನ್ನು ಪ್ರವೇಶಿಸಿದನು. ॥ ೩೩-೩೪ ॥

ಮೂವತ್ತೇಳನೆಯ ಅಧ್ಯಾಯವು ಮುಗಿಯಿತು. ॥ ೩೭ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮಸ್ಕಂಧೇ ಪೂರ್ವಾರ್ಧೇ
ವ್ಯೋಮಾಸುರವಧೋ ನಾಮ ಸಪ್ತತ್ರಿಂಶೋಽಧ್ಯಾಯಃ ॥ ೩೭ ॥

ಮೂವತ್ತೆಂಟನೆಯ ಅಧ್ಯಾಯ

ಅಕ್ರೂರನ ವ್ರಜಯಾತ್ರೆ

ಶ್ರೀಶುಕ ಉವಾಚ

ಅಕ್ರೂರೋಽಪಿ ಚ ತಾಂ ರಾತ್ರಿಂ ಮಧುಪುರ್ಯಾಂ ಮಹಾಮತಿಃ ।
ಉಷಿತ್ವಾ ರಥಮಾಸ್ಥಾಯ ಪ್ರಯಯೌ ನಂದಗೋಕುಲಮ್ ॥ ೧ ॥

ಗಚ್ಛನ್ಪಥಿ ಮಹಾಭಾಗೋ ಭಗವತ್ಯಂಬುಜೇಕ್ಷಣೇ ।
ಭಕ್ತಿಂ ಪರಾಮುಪಗತ ಏವಮೇತದಚಿಂತಯತ್ ॥ ೨ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ - ಎಲೈ ಪರೀಕ್ಷಿತನೇ! ಮಹಾಮತಿಯಾದ ಅಕ್ರೂರನು ಆ ರಾತ್ರಿಯನ್ನು ಮಥುರಾಪುರಿಯಲ್ಲೇ ಕಳೆದು ಪ್ರಾತಃಕಾಲವಾಗುತ್ತಲೇ ರಥವನ್ನು ಹತ್ತಿಕೊಂಡು ನಂದಗೋಪನ ಗೋಕುಲಕ್ಕೆ ಪ್ರಯಾಣ ಮಾಡಿದನು. ॥ ೧ ॥ ಪರಮ ಭಾಗ್ಯವಂತನಾದ ಅಕ್ರೂರನು ವ್ರಜದ ಯಾತ್ರೆಮಾಡುತ್ತಿದ್ದಾಗ ದಾರಿಯಲ್ಲಿ ಕಮಲನಯನ ಭಗವಾನ್ ಶ್ರೀಕೃಷ್ಣನ ಪರಮ ಪ್ರೇಮಮಯ ಭಕ್ತಿಯಿಂದ ಪರಿಪೂರ್ಣನಾಗಿ ಹೀಗೆ ಯೋಚಿಸುತ್ತಿದ್ದನು. ॥ ೨ ॥

ಕಿಂ ಮಯಾಽಽಚರಿತಂ ಭದ್ರಂ ಕಿಂ ತಪ್ತಂ ಪರಮಂ ತಪಃ ।
ಕಿಂ ವಾಥಾಪ್ಯರ್ಹತೇ ದತ್ತಂ ಯದ್ದ್ರಕ್ಷ್ಯಾಮ್ಯದ್ಯ ಕೇಶವಮ್ ॥ ೩ ॥

ಮಮೈತದ್ದುರ್ಲಭಂ ಮನ್ಯ ಉತ್ತಮಶ್ಲೋಕದರ್ಶನಮ್ ।
ವಿಷಯಾತ್ಮನೋ ಯಥಾ ಬ್ರಹ್ಮಕೀರ್ತನಂ ಶೂದ್ರಜನ್ಮನಃ ॥ ೪ ॥

ಮೈವಂ ಮಮಾಧಮಸ್ಯಾಪಿ ಸ್ಯಾದೇವಾಚ್ಯುತದರ್ಶನಮ್ ।
ಹ್ರಿಯಮಾಣಃ ಕಾಲನದ್ಯಾ ಕ್ವಚಿತ್ತರತಿ ಕಶ್ಚನ ॥ ೫ ॥

ಮಮಾದ್ಯಾಮಂಗಲಂ ನಷ್ಟಂ ಫಲವಾಂಶ್ಚೈವ ಮೇ ಭವಃ ।
ಯನ್ನಮಸ್ಯೇ ಭಗವತೋ ಯೋಗಿಧ್ಯೇಯಾಂಘ್ರಿಪಂಕಜಮ್ ॥ ೬ ॥

ಕಂಸೋ ಬತಾದ್ಯಾಕೃತ ಮೇಽತ್ಯನುಗ್ರಹಂ
ದ್ರಕ್ಷ್ಯೇಽಂಘ್ರಿಪದ್ಮಂ ಪ್ರಹಿತೋಽಮುನಾ ಹರೇಃ ।
ಕೃತಾವತಾರಸ್ಯ ದುರತ್ಯಯಂ ತಮಃ
ಪೂರ್ವೇಽತರನ್ ಯನ್ನಖಮಂಡಲತ್ವಿಷಾ ॥ ೭ ॥

ಯದರ್ಚಿತಂ ಬ್ರಹ್ಮಭವಾದಿಭಿಃ ಸುರೈಃ
ಶ್ರಿಯಾ ಚ ದೇವ್ಯಾ ಮುನಿಭಿಃ ಸಸಾತ್ವತೈಃ ।
ಗೋಚಾರಣಾಯಾನುಚರೈಶ್ಚರದ್ವನೇ
ಯದ್ಗೋಪಿಕಾನಾಂ ಕುಚಕುಂಕುಮಾಂಕಿತಮ್ ॥ ೮ ॥

ದ್ರಕ್ಷ್ಯಾಮಿ ನೂನಂ ಸುಕಪೋಲನಾಸಿಕಂ
ಸ್ಮಿತಾವಲೋಕಾರುಣಕಂಜಲೋಚನಮ್ ।
ಮುಖಂ ಮುಕುಂದಸ್ಯ ಗುಡಾಲಕಾವೃತಂ
ಪ್ರದಕ್ಷಿಣಂ ಮೇ ಪ್ರಚರಂತಿ ವೈ ಮೃಗಾಃ ॥ ೯ ॥

ಇಂದು ನಾನು ಭಗವಾನ್ ಶ್ರೀಕೃಷ್ಣನನ್ನು ದರ್ಶಿಸುತ್ತಿರುವೆನಲ್ಲ! ಇದಕ್ಕಾಗಿ ಹಿಂದೆ ನಾನು ಎಂತಹ ಶುಭಕರ್ಮಗಳನ್ನು, ಎಂತಹ ಶ್ರೇಷ್ಠವಾದ ತಪಸ್ಸನ್ನು ಮಾಡಿರುವೆನೋ! ಅಥವಾ ಯಾವ ಸತ್ಪಾತ್ರಕ್ಕೆ ಎಂತಹ ಮಹತ್ವಪೂರ್ಣವಾದ ದಾನ ಮಾಡಿರುವೆನೋ? ॥ ೩ ॥ ಶೂದ್ರಜನ್ಮವನ್ನು ಪಡೆದವನಿಗೆ ವೇದಾಧ್ಯಯನದ ಅಧಿಕಾರವಿರದಂತೆ, ವಿಷಯಾಸಕ್ತನಾದ ನನಗೆ ಉತ್ತಮಶ್ಲೋಕನಾದ ಶ್ರೀಕೃಷ್ಣನ ದರ್ಶನವು ದುರ್ಲಭವೆಂದೇ ಭಾವಿಸುತ್ತೇನೆ. ॥ ೪ ॥ ಆದರೆ ಹಾಗೇನಿಲ್ಲ, ಅಧಮನಾದ ನನಗೂ ಕೂಡ ಭಗವಾನ್ ಶ್ರೀಕೃಷ್ಣನ ದರ್ಶನವು ಖಂಡಿತವಾಗಿ ಆಗುವುದು. ಏಕೆಂದರೆ, ನದಿಯಲ್ಲಿ ಹರಿಯುತ್ತಿರುವ ಕಡ್ಡಿಗಳು ಕೆಲವೊಮ್ಮೆ ಈ ದಡದಿಂದ ಆ ದಡಮುಟ್ಟುವುದಿದೆ. ಹಾಗೆಯೇ ಸಮಯದ ಪ್ರವಾಹದಿಂದ ಎಲ್ಲಾದರೂ ಯಾರಾದರೂ ಸಂಸಾರ ಸಾಗರವನ್ನು ದಾಟ ಬಲ್ಲರು. ॥ ೫ ॥ ನಿಶ್ಚಯವಾಗಿಯೂ ಇಂದು ನನ್ನ ಸಮಸ್ತ ಅಶುಭಗಳು ನಾಶಹೊಂದಿದವು. ಇಂದು ನನ್ನ ಜನ್ಮವು ಸಫಲವಾಯಿತು. ಏಕೆಂದರೆ, ಇಂದು ನಾನು ಮಹಾಯೋಗಿ-ಯತಿಗಳಿಗೂ ಕೂಡ ಧ್ಯಾನಕ್ಕೆ ವಿಷಯವಾದ ಭಗವಂತನ ಚರಣಕಮಲಗಳನ್ನು ಸಾಕ್ಷಾತ್ತಾಗಿ ನೋಡಿ ನಮಸ್ಕರಿಸುವೆನು. ॥ ೬ ॥ ಆಹಾ! ಕಂಸನು ಇಂದು ನನ್ನ ಮೇಲೆ ಮಹತ್ಕೃಪೆಯನ್ನೇ ಮಾಡಿರುವನು. ಅಂತಹ ಕಂಸನಿಂದ ಕಳುಹಲ್ಪಟ್ಟ ನಾನು ಈ ಭೂತಳದಲ್ಲಿ ಅವತರಿಸಿದ ಸಾಕ್ಷಾತ್ ಭಗವಂತನ ಚರಣಕಮಲಗಳ ದರ್ಶನವನ್ನು ಪಡೆಯುವೆನು. ಯಾರ ನಖಮಂಡಲದ ಕಾಂತಿಯನ್ನು ಧ್ಯಾನಿಸುತ್ತಾ ಹಿಂದಿನ ಯುಗದ ಋಷಿ-ಮಹರ್ಷಿಗಳು ಈ ಅಜ್ಞಾನರೂಪವಾದ ಅಪಾರ ತಮಸ್ಸನ್ನು ದಾಟಿಹೋಗಿರುವರೋ, ಅಂತಹ ಸಾಕ್ಷಾತ್ ಭಗವಂತನೇ ಮನುಷ್ಯನಾಗಿ ಈಗ ಅವತರಿಸಿರುವನು. ॥ ೭ ॥ ಬ್ರಹ್ಮರುದ್ರೇಂದ್ರಾದಿ ದೇವತೆಗಳು ಯಾವ ಚರಣಕಮಲಗಳನ್ನು ಉಪಾಸನೆ ಮಾಡುತ್ತಾ ಇರುತ್ತಾರೋ, ಸಾಕ್ಷಾತ್ ಲಕ್ಷ್ಮೀದೇವಿಯೂ ಒಂದು ಕ್ಷಣವಾದರೂ ಯಾರ ಸೇವೆಯನ್ನು ತೊರೆಯುವುದಿಲ್ಲವೋ, ಪ್ರೇಮೀ ಭಕ್ತರೊಡನೆ ಮಹಾಜ್ಞಾನಿಗಳು ಯಾರ ಆರಾಧನೆಯಲ್ಲಿ ಸಂಲಗ್ನರಾಗಿರುತ್ತಾರೋ ಅಂತಹ ಭಗವಂತನ ಆ ಚರಣಕಮಲಗಳು ಹಸುಗಳನ್ನು ಮೇಯಿಸಲಿಕ್ಕಾಗಿ ಗೋಪಬಾಲಕರೊಂದಿಗೆ ವನದಲ್ಲಿ ಸಂಚರಿಸುತ್ತವೆ. ಸುರ-ಮುನಿ-ವಂದಿತ ಆ ಚರಣಗಳೇ ಗೋಪಿಯರ ವಕ್ಷಸ್ಥಳದಲ್ಲಿನ ಕುಂಕುಮ ಕೇಸರಿಯಿಂದ ಲೇಪಿತ ವಾಗಿರುತ್ತವೆ. ॥ ೮ ॥ ನಿಶ್ಚಯವಾಗಿಯೂ ನಾನು ಅವನ್ನು ದರ್ಶಿಸುವೆನು. ಇದೋ! ಈ ಮೃಗಗಳು ನನ್ನನ್ನು ಬಲಕ್ಕೆ ಹಾಕಿ ಪ್ರದಕ್ಷಿಣಾಕಾರವಾಗಿ ಹೋಗುತ್ತಾ ಶುಭವನ್ನೇ ಸೂಚಿಸುತ್ತಿವೆ. ಆದುದರಿಂದ ನಾನಿಂದು ಮನೋಹರವಾದ ಕಪೋಲಗಳಿಂದಲೂ, ಸುಂದರವಾದ ಮೂಗಿನಿಂದಲೂ, ಕಿರುನಗೆಯಿಂದ ಕೂಡಿದ ನೋಟದಿಂದಲೂ, ಕೆಂದಾವರೆಯಂತಿರುವ ಕಣ್ಣುಗಳಿಂದಲೂ, ಗುಂಗುರು ಕೂದಲುಗಳಿಂದಲೂ ಸಮಲಂಕೃತವಾದ ಮುಖಕಮಲದಿಂದ ಶೋಭಿಸುವ ಮುಕುಂದನನ್ನು ನೋಡಿಯೇ ನೋಡುವೆನು. ॥ ೯ ॥

ಅಪ್ಯದ್ಯ ವಿಷ್ಣೋರ್ಮನುಜತ್ವಮೀಯುಷೋ
ಭಾರಾವತಾರಾಯ ಭುವೋ ನಿಜೇಚ್ಛಯಾ ।
ಲಾವಣ್ಯಧಾಮ್ನೋ ಭವಿತೋಪಲಂಭನಂ
ಮಹ್ಯಂ ನ ನ ಸ್ಯಾತ್ಫಲಮಂಜಸಾ ದೃಶಃ ॥ ೧೦ ॥

ಯ ಈಕ್ಷಿತಾಹಂರಹಿತೋಽಪ್ಯಸತ್ಸತೋಃ
ಸ್ವತೇಜಸಾಪಾಸ್ತತಮೋಭಿದಾಭ್ರಮಃ ।
ಸ್ವಮಾಯಯಾಽಽತ್ಮನ್ ರಚಿತೈಸ್ತದೀಕ್ಷಯಾ
ಪ್ರಾಣಾಕ್ಷಧೀಭಿಃ ಸದನೇಷ್ವಭೀಯತೇ ॥ ೧೧ ॥

ಯಸ್ಯಾಖಿಲಾಮೀವಹಭಿಃ ಸುಮಂಗಲೈ-
ರ್ವಾಚೋ ವಿಮಿಶ್ರಾ ಗುಣಕರ್ಮಜನ್ಮಭಿಃ ।
ಪ್ರಾಣಂತಿ ಶುಂಭಂತಿ ಪುನಂತಿ ವೈ ಜಗದ್
ಯಾಸ್ತದ್ವಿರಕ್ತಾಃ ಶವಶೋಭನಾ ಮತಾಃ ॥ ೧೨ ॥

ಸ ಚಾವತೀರ್ಣಃ ಕಿಲ ಸಾತ್ವತಾನ್ವಯೇ
ಸ್ವಸೇತುಪಾಲಾಮರವರ್ಯಶರ್ಮಕೃತ್ ।
ಯಶೋ ವಿತನ್ವನ್ ವ್ರಜ ಆಸ್ತ ಈಶ್ವರೋ
ಗಾಯಂತಿ ದೇವಾ ಯದಶೇಷಮಂಗಲಮ್ ॥ ೧೩ ॥

ತಂ ತ್ವದ್ಯ ನೂನಂ ಮಹತಾಂ ಗತಿಂ ಗುರುಂ
ತ್ರೈಲೋಕ್ಯಕಾಂತಂ ದೃಶಿಮನ್ಮಹೋತ್ಸವಮ್ ।
ರೂಪಂ ದಧಾನಂ ಶ್ರಿಯ ಈಪ್ಸಿತಾಸ್ಪದಂ
ದ್ರಕ್ಷ್ಯೇ ಮಮಾಸನ್ನುಷಸಃ ಸುದರ್ಶನಾಃ ॥ ೧೪ ॥

ಭಗವಾನ್ ವಿಷ್ಣುವು ಭೂಭಾರಹರಣಕ್ಕಾಗಿ ಸ್ವೇಚ್ಛೆಯಿಂದ ಮನುಷ್ಯನಾಗಿ ಅವತರಿಸಿದ್ದಾನೆ. ಅವನು ಸೌಂದರ್ಯಕ್ಕೆ ನೆಲೆಯಾಗಿದ್ದಾನೆ. ಸೌಂದರ್ಯದ ಮೂರ್ತಿಮಂತ ನಿಧಿಯಾಗಿದ್ದಾನೆ. ಇಂದು ನನಗೆ ಅವನ ದರ್ಶನವು ಆಗಿಯೇ ತೀರುತ್ತದೆ. ಇಂದು ನನ್ನ ಕಣ್ಣುಗಳು ಸಫಲವಾಗುವುವು. ॥ ೧೦ ॥ ಭಗವಂತನು ಈ ಕಾರ್ಯ-ಕಾರಣರೂಪವಾದ ಜಗತ್ತಿಗೆ ದ್ರಷ್ಟಾಮಾತ್ರನಾಗಿದ್ದರೂ ಅಹಂಕಾರ ರಹಿತನಾಗಿದ್ದಾನೆ. ಅಜ್ಞಾನದಿಂದ ಉಂಟಾದ ಭೇದ ಭ್ರಮೆಯು ಅವನ ಚಿನ್ಮಯಶಕ್ತಿಯಿಂದ ಅಜ್ಞಾನ ಸಹಿತವಾಗಿ ನಾಶವಾಗಿ ಹೋಗುತ್ತದೆ. ಅವನು ತನ್ನ ಯೋಗಮಾಯೆಯನ್ನು ಆಶ್ರಯಿಸಿ ಕೇವಲ ವೀಕ್ಷಣಮಾತ್ರದಿಂದ ಸ್ವಪ್ರಕೃತಿಯಿಂದಲೇ ನಿರ್ಮಿತವಾದ ಪ್ರಾಣೇಂದ್ರಿಯಗಳ ಬುದ್ಧಿಗಳಲ್ಲಿ ಪ್ರವೇಶಿಸಿ, ಗೋಪಿಯರ ಮನೆಗಳಲ್ಲಿಯೂ, ವೃಂದಾವನದಲ್ಲಿಯೂ ವಿಹರಿಸುವನೋ ಅಂತಹ ಪರಬ್ರಹ್ಮ ಪರಮಾತ್ಮ ಸ್ವರೂಪನಾದ ಶ್ರೀಕೃಷ್ಣನನ್ನು ನಾನಿಂದು ಸಂದರ್ಶಿಸುವೆನು. ॥ ೧೧ ॥ ಸಮಸ್ತ ಪಾಪಗಳನ್ನು ಹೋಗಲಾಡಿಸಿ ಮಂಗಳವನ್ನುಂಟುಮಾಡುವ ಶ್ರೀಕೃಷ್ಣನ ಭಕ್ತವಾತ್ಸಲ್ಯಾದಿ ಕಲ್ಯಾಣಗುಣಗಳಿಂದಲೂ, ದುಷ್ಟನಿಗ್ರಹ ಶಿಷ್ಟಪರಿಪಾಲನೆ ಮೊದಲಾದ ಕರ್ಮಗಳಿಂದಲೂ ರಾಮ-ಕೃಷ್ಣಾದ್ಯವತಾರಗಳಿಂದಲೂ ಕೂಡಿದ ಮಾತುಗಳು (ಕೀರ್ತನೆಗಳು) ಪ್ರಪಂಚವನ್ನು ಉದ್ಧರಿಸುತ್ತವೆ; ಪಾವನಗೊಳಿಸುತ್ತವೆ. ಆದರೆ ಶ್ರೀಕೃಷ್ಣನ ಲೀಲಾಪ್ರಸಂಗಗಳಿಂದ ರಹಿತವಾದ ಮಾತುಗಳು ಹೆಣದಂತೆ ವ್ಯರ್ಥವಾಗಿದೆ. ॥ ೧೨ ॥ ಯಾರ ಗುಣಗಾನಕ್ಕೆ ಇಂತಹ ಮಹಾತ್ಮ್ಯವಿರುವುದೋ ಅಂತಹ ಭಗವಂತನು ಸಾಕ್ಷಾತ್ತಾಗಿ ಯದುವಂಶದಲ್ಲಿ ಅವತರಿಸಿರುವನು. ತನ್ನಿಂದಲೇ ಕಲ್ಪಿತವಾದ ಲೋಕಮರ್ಯಾದೆಗಳನ್ನು ಪಾಲಿಸುತ್ತಿರುವ ಶ್ರೇಷ್ಠರಾದ ದೇವತೆಗಳ ಕಲ್ಯಾಣಕ್ಕೋಸ್ಕರವೇ ಅವನ ಅವತಾರವಾಗಿದೆ. ಐಶ್ವರ್ಯಶಾಲಿಯಾದ ಆ ಭಗವಂತನು ತನ್ನ ಮಂಗಳಮಯ ಯಶಸ್ಸನ್ನು ವಿಸ್ತಾರಗೊಳಿಸುತ್ತಾ ಗೋಕುಲದಲ್ಲಿ ವಾಸಿಸುತ್ತಿರುವನು. ದೇವತೆಗಳೂ ಕೂಡ ಅವನ ಮಂಗಳಮಯವಾದ ಯಶಸ್ಸನ್ನು ಯಾವಾಗಲೂ ಗಾನಮಾಡುತ್ತಿರುತ್ತಾರೆ. ॥ ೧೩ ॥ ಇಂದು ನಾನು ಖಂಡಿತವಾಗಿ ಅವನನ್ನು ನೋಡುವೆನು, ಇದರಲ್ಲಿ ಸಂದೇಹವೇ ಇಲ್ಲ. ಅವನು ದೊಡ್ಡ-ದೊಡ್ಡ ಸಂತರಿಗೂ, ಲೋಕಪಾಲರಿಗೂ ಏಕಮಾತ್ರ ಆಶ್ರಯನಾಗಿದ್ದಾನೆ. ಎಲ್ಲರಿಗೂ ಪರಮಗುರುವಾಗಿ ಇದ್ದಾನೆ. ಅವನ ರೂಪ-ಸೌಂದರ್ಯಗಳು ಮೂರು ಲೋಕಗಳನ್ನು ವಿಮೋಹಗೊಳಿಸುವಂತಹುದು. ಕಣ್ಣುಳ್ಳವರಿಗೆ ಅವನನ್ನು ನೋಡುವುದೇ ಹಬ್ಬವಾಗಿದೆ. ಇದರಿಂದ ಸೌಂದರ್ಯದ ಅಧಿಷ್ಠಾತ್ರಿಯಾದ ಸಾಕ್ಷಾತ್ ಲಕ್ಷ್ಮೀದೇವಿಯೂ ಕೂಡ ಅವನನ್ನು ಪಡೆಯಲು ಕಾತರಳಾಗಿದ್ದಾಳೆ. ಅಂತಹ ಸುಂದರಮೂರ್ತಿಯನ್ನು ನಾನಿಂದು ನೋಡಿಯೇ ನೋಡುವೆನು. ಬೆಳಗಿನಿಂದಲೂ ನನಗೆ ಶುಭ ಶಕುನಗಳೇ ಕಾಣಿಸಿಕೊಳ್ಳುತ್ತವೆ. ॥ ೧೪ ॥

ಅಥಾವರೂಢಃ ಸಪದೀಶಯೋೞ ರಥಾತ್
ಪ್ರಧಾನಪುಂಸೋಶ್ಚರಣಂ ಸ್ವಲಬ್ಧಯೇ ।
ಧಿಯಾ ಧೃತಂ ಯೋಗಿಭಿರಪ್ಯಹಂ ಧ್ರುವಂ
ನಮಸ್ಯ ಆಭ್ಯಾಂ ಚ ಸಖೀನ್ ವನೌಕಸಃ ॥ ೧೫ ॥

ಅಪ್ಯಂಘ್ರಿಮೂಲೇ ಪತಿತಸ್ಯ ಮೇ ವಿಭುಃ
ಶಿರಸ್ಯಧಾಸ್ಯನ್ನಿಜಹಸ್ತಪಂಕಜಮ್ ।
ದತ್ತಾಭಯಂ ಕಾಲಭುಜಂಗರಂಹಸಾ
ಪ್ರೋದ್ವೇಜಿತಾನಾಂ ಶರಣೈಷಿಣಾಂ ನೃಣಾಮ್ ॥ ೧೬ ॥

ಸಮರ್ಹಣಂ ಯತ್ರ ನಿಧಾಯ ಕೌಶಿಕ-
ಸ್ತಥಾ ಬಲಿಶ್ಚಾಪ ಜಗತ್ತ್ರಯೇಂದ್ರತಾಮ್ ।
ಯದ್ವಾ ವಿಹಾರೇ ವ್ರಜಯೋಷಿತಾಂ ಶ್ರಮಂ
ಸ್ಪರ್ಶೇನ ಸೌಗಂಧಿಕಗಂಧ್ಯಪಾನುದತ್ ॥ ೧೭ ॥

ನ ಮಯ್ಯುಪೈಷ್ಯತ್ಯರಿಬುದ್ಧಿಮಚ್ಯುತಃ
ಕಂಸಸ್ಯ ದೂತಃ ಪ್ರಹಿತೋಽಪಿ ವಿಶ್ವದೃಕ್ ।
ಯೋಽಂತರ್ಬಹಿಶ್ಚೇತಸ ಏತದೀಹಿತಂ
ಕ್ಷೇತ್ರಜ್ಞ ಈಕ್ಷತ್ಯಮಲೇನ ಚಕ್ಷುಷಾ ॥ ೧೮ ॥

ಅಪ್ಯಂಘ್ರಿಮೂಲೇಽವಹಿತಂ ಕೃತಾಂಜಲಿಂ
ಮಾಮೀಕ್ಷಿತಾ ಸಸ್ಮಿತಮಾರ್ದ್ರಯಾ ದೃಶಾ ।
ಸಪದ್ಯಪಧ್ವಸ್ತಸಮಸ್ತಕಿಲ್ಬಿಷೋ
ವೋಢಾ ಮುದಂ ವೀತವಿಶಂಕ ಊರ್ಜಿತಾಮ್ ॥ ೧೯ ॥

ಸರ್ವಶ್ರೇಷ್ಠರಾದ ಬಲರಾಮ-ಕೃಷ್ಣರನ್ನು ನಾನು ನೋಡುತ್ತಲೇ ಅವರ ಚರಣಾರವಿಂದಗಳಲ್ಲಿ ನಮಸ್ಕರಿಸಲು ರಥದಿಂದ ಇಳಿಯುವೆನು. ಅವರ ಪಾದಪದ್ಮಗಳನ್ನು ಗಟ್ಟಿಯಾಗಿ ಹಿಡಿದುಕೊಳ್ಳುವೆನು. ಅವರ ಚರಣಗಳು ಅತ್ಯಂತ ದುರ್ಲಭವಾದವುಗಳು. ಮಹಾ-ಮಹಾ ಯೋಗಿಗಳು ಆತ್ಮಸಾಕ್ಷಾತ್ಕಾರಕ್ಕಾಗಿ ಧ್ಯಾನದ ಮೂಲಕ ಭಗವಂತನ ಚರಣ-ಕಮಲಗಳನ್ನು ತಮ್ಮ ಹೃದಯದಲ್ಲಿರಿಸಿಕೊಳ್ಳುತ್ತಾರೆ. ನಾನಾದರೋ ಅಂತಹ ಪರಮ ಪವಿತ್ರವಾದ ಚರಣಕಮಲಗಳನ್ನು ಪ್ರತ್ಯಕ್ಷವಾಗಿ ನೋಡಿ ಅವುಗಳ ಮೇಲೆ ಹೊರಳಾಡುವೆನು. ಅವರಿಬ್ಬರೊಡನೆ ಅವರ ವನವಾಸಿ ಮಿತ್ರರಾದ ಗೋಪಾಲಕರ ಪಾದಗಳಿಗೆ ಪ್ರತ್ಯೇಕ-ಪ್ರತ್ಯೇಕವಾಗಿ ವಂದಿಸುವೆನು. ॥ ೧೫ ॥ ಹಾಗೆ ಚರಣಾರವಿಂದಗಳಿಗೆ ನಮಸ್ಕರಿಸಿದ ನನ್ನ ತಲೆಯ ಮೇಲೆ ತನ್ನ ಕರಕಮಲವನ್ನು ಭಗವಂತನು ಇಡುವನಲ್ಲವೇ! ನಿಶ್ಚಯವಾಗಿಯೂ ಅದು ನನ್ನ ಸೌಭಾಗ್ಯವೇ ಸರಿ. ಕಾಲರೂಪವಾದ ಸರ್ಪಕ್ಕೆ ಭಯಗೊಂಡು ಭಗವಂತನ ಚರಣಾರವಿಂದಗಳನ್ನು ಆಶ್ರಯಿಸುವವರಿಗೆ, ಶರಣಾಗತರಾದವರಿಗೆ ಅವನ ಕರಕಮಲವು ಅಭಯದಾನ ಕೊಟ್ಟಿದೆ. ॥ ೧೬ ॥ ಆ ಭಗವಂತನ ಕರಕಮಲಗಳಲ್ಲಿ ಪೂಜಾಂಗವಾದ ಅರ್ಘ್ಯಪ್ರದಾನ ಮಾಡಿದ ಮಾತ್ರದಿಂದಲೇ ಇಂದ್ರ ಮತ್ತು ಬಲಿ ಇವರು ತ್ರೈಲೋಕ್ಯಾಧಿಪತ್ಯವನ್ನು ಪಡೆದುಕೊಂಡರು. ಕಮಲದ ಪರಿಮಳವನ್ನು ಹೊಂದಿದ ಆ ದಿವ್ಯ ಕರಕಮಲಗಳ ಸ್ಪರ್ಶಮಾತ್ರದಿಂದಲೇ ರಾಸಲೀಲೆಯ ಸಮಯದಲ್ಲಿ ವ್ರಜಯುವತಿಯರ ಆಯಾಸವೆಲ್ಲವೂ ಪರಿಹಾರವಾಯಿತು. ॥ ೧೭ ॥ ನಾನು ಈಗ ಕಂಸನದೂತನಾಗಿ ಅವನು ಕಳುಹಿದ್ದರಿಂದಲೆ ಶ್ರೀಕೃಷ್ಣನ ಬಳಿಗೆ ಹೋಗುತ್ತಿದ್ದೇನೆ. ಇದರಿಂದ ಶ್ರೀಕೃಷ್ಣನೇನಾದರೂ ನನ್ನನ್ನು ಶತ್ರುವೆಂದು ಭಾವಿಸಿಯಾನೇ? ಇಲ್ಲ, ಆತನೆಂದಿಗೂ ಹೀಗೆ ತಿಳಿಯಲಾರನು. ಏಕೆಂದರೆ, ಅವನು ನಿರ್ವಿಕಾರನೂ, ಸರ್ವಸಮನೂ, ಅಚ್ಯುತನೂ ಆಗಿರುವನು. ಸಮಸ್ತ ವಿಶ್ವಕ್ಕೆ ಸಾಕ್ಷಿಯೂ, ಸರ್ವಜ್ಞನೂ, ಚಿತ್ತದ ಒಳಗೂ-ಹೊರಗೂ ಇರತಕ್ಕವನು. ಅವನು ಸಮಸ್ತ ಪ್ರಾಣಿಗಳಲ್ಲಿಯೂ ಕ್ಷೇತ್ರಜ್ಞರೂಪದಿಂದ ನೆಲಸಿ ಅಂತಃಕರಣದ ಪ್ರತಿಯೊಂದು ಚೇಷ್ಟೆಯನ್ನು ತನ್ನ ನಿರ್ಮಲ ಜ್ಞಾನದೃಷ್ಟಿಯಿಂದ ನೋಡುತ್ತಾ ಇರುತ್ತಾನೆ. ॥ ೧೮ ॥ ಹಾಗಿರುವಾಗ ನನ್ನ ಶಂಕೆಯು ವ್ಯರ್ಥವಾದುದು. ನಾನಾದರೋ ಅವನ ಚರಣಗಳಲ್ಲಿ ಕೈಮುಗಿದುಕೊಂಡು ವಿನೀತನಾಗಿ ನಿಂತುಕೊಳ್ಳುವೆನು. ಅವನು ನಸುನಗುತ್ತಾ ದಯಾಪೂರ್ಣವಾದ ಸ್ನೇಹದೃಷ್ಟಿಯಿಂದ ನನ್ನ ಕಡೆಗೆ ನೋಡುವನು. ಆ ಸಮಯದಲ್ಲಿ ನನ್ನ ಜನ್ಮ-ಜನ್ಮಾಂತರಗಳ ಸಮಸ್ತ ಪಾಪಗಳು ನಾಶವಾಗಿ ಹೋಗುವುವು. ಆಗ ನಾನು ಯಾವ ಸಂದೇಹವೂ ಇಲ್ಲದೆ ನಿತ್ಯನಿರಂತರವಾಗಿ ಪರಮಾನಂದದಲ್ಲಿ ಮುಳುಗಿ ಹೋಗುವೆನು. ॥ ೧೯ ॥ ನಾನು ಅವನ ಕುಟುಂಬಿಯೇ ಅಲ್ಲವೇ! ಯಾವಾಗಲೂ ಅವನ ಹಿತವನ್ನೇ ಬಯಸುವವನು. ಅವನಲ್ಲದೆ ಬೇರೆ ಯಾರೂ ನನಗೆ ಆರಾಧ್ಯದೇವರಿಲ್ಲ. ಇಂತಹ ಸ್ಥಿತಿಯಲ್ಲಿ ಅವನು ತನ್ನ ದೀರ್ಘವಾದ ಬಾಹುಗಳಿಂದ ಬಳಸಿದು ನನ್ನನ್ನು ನಿಶ್ಚಯವಾಗಿ ಆಲಿಂಗಿಸಿಕೊಳ್ಳುವನು. ಆಹಾ! ಆ ಸಮಯ

ಸುಹೃತ್ತಮಂ ಜ್ಞಾತಿಮನನ್ಯದೈವತಂ
ದೋರ್ಭ್ಯಾಂ ಬೃಹದ್ಭ್ಯಾಂ ಪರಿರಪ್ಸ್ಯತೇಽಥ ಮಾಮ್ ।
ಆತ್ಮಾ ಹಿ ತೀರ್ಥೀಕ್ರಿಯತೇ ತದೈವ ಮೇ
ಬಂಧಶ್ಚ ಕರ್ಮಾತ್ಮಕ ಉಚ್ಛ್ವಸಿತ್ಯತಃ ॥ ೨೦ ॥

ಲಬ್ಧಾಂಗಸಂಗಂ ಪ್ರಣತಂ ಕೃತಾಂಜಲಿಂ
ಮಾಂ ವಕ್ಷ್ಯತೇಽಕ್ರೂರ ತತೇತ್ಯುರುಶ್ರವಾಃ ।
ತದಾ ವಯಂ ಜನ್ಮಭೃತೋ ಮಹೀಯಸಾ
ನೈವಾದೃತೋ ಯೋ ಧಿಗಮುಷ್ಯ ಜನ್ಮ ತತ್ ॥ ೨೧ ॥

ನ ತಸ್ಯ ಕಶ್ಚಿದ್ದಯಿತಃ ಸುಹೃತ್ತಮೋ
ನ ಚಾಪ್ರಿಯೋ ದ್ವೇಷ್ಯ ಉಪೇಕ್ಷ್ಯ ಏವ ವಾ ।
ತಥಾಪಿ ಭಕ್ತಾನ್ಭಜತೇ ಯಥಾ ತಥಾ
ಸುರದ್ರುಮೋ ಯದ್ವದುಪಾಶ್ರಿತೋಽರ್ಥದಃ ॥ ೨೨ ॥

ಕಿಂಚಾಗ್ರಜೋ ಮಾವನತಂ ಯದೂತ್ತಮಃ
ಸ್ಮಯನ್ಪರಿಷ್ವಜ್ಯ ಗೃಹೀತಮಂಜಲೌ ।
ಗೃಹಂ ಪ್ರವೇಶ್ಯಾಪ್ತಸಮಸ್ತಸತ್ಕೃತಂ
ಸಂಪ್ರಕ್ಷ್ಯತೇ ಕಂಸಕೃತಂ ಸ್ವಬಂಧುಷು ॥ ೨೩ ॥

ಶ್ರೀಶುಕ ಉವಾಚ

ಇತಿ ಸಂಚಿಂತಯನ್ ಕೃಷ್ಣಂ ಶ್ವಫಲ್ಕತನಯೋಽಧ್ವನಿ ।
ರಥೇನ ಗೋಕುಲಂ ಪ್ರಾಪ್ತಃ ಸೂರ್ಯಶ್ಚಾಸ್ತಗಿರಿಂ ನೃಪ ॥ ೨೪ ॥

ಪದಾನಿ ತಸ್ಯಾಖಿಲಲೋಕಪಾಲ-
ಕಿರೀಟಜುಷ್ಟಾಮಲಪಾದರೇಣೋಃ ।
ದದರ್ಶ ಗೋಷ್ಠೇ ಕ್ಷಿತಿಕೌತುಕಾನಿ
ವಿಲಕ್ಷಿತಾನ್ಯಬ್ಜಯವಾಂಕುಶಾದ್ಯೈಃ ॥ ೨೫ ॥

ತದ್ದರ್ಶನಾಹ್ಲಾದವಿವೃದ್ಧಸಂಭ್ರಮಃ
ಪ್ರೇಮ್ಣೋರ್ಧ್ವರೋಮಾಶ್ರುಕಲಾಕುಲೇಕ್ಷಣಃ ।
ರಥಾದವಸ್ಕಂದ್ಯ ಸ ತೇಷ್ವಚೇಷ್ಟತ
ಪ್ರಭೋರಮೂನ್ಯಂಘ್ರಿರಜಾಂಸ್ಯಹೋ ಇತಿ ॥ ೨೬ ॥

ದಲ್ಲಿ ನನ್ನ ದೇಹವು ಪವಿತ್ರವಾಗುವುದಲ್ಲದೆ ಬೇರೆಯವರನ್ನು ಪವಿತ್ರವಾಗಿಸುವಂತಹುದಾಗಬಹುದು. ಅವನ ಆಲಿಂಗನವು ದೊರೆತಾಕ್ಷಣವೇ ಅನಾದಿಕಾಲದಿಂದ ಅಲೆಯುತ್ತಿರಲು ಕಾರಣವಾದ ನನ್ನ ಕರ್ಮಬಂಧನಗಳು ಕಡಿದು ಹೋಗುವವು. ॥ ೨೦ ॥ ಶ್ರೀಕೃಷ್ಣನು ನನ್ನನ್ನು ಅಪ್ಪಿಕೊಂಡಾಗ ನಾನು ಕೈಜೋಡಿಸಿಕೊಂಡು ತಲೆಯನ್ನು ತಗ್ಗಿಸಿ ನಿಂತುಕೊಂಡಾಗ ಅವನು ನನ್ನನ್ನು – ಅಕ್ರೂರ ಚಿಕ್ಕಪ್ಪ! ಎಂದು ಸಂಬೋಧಿಸುವನು. ಪವಿತ್ರ ಹಾಗೂ ಮಧುರ ಕೀರ್ತಿಯನ್ನು ವಿಸ್ತಾರಮಾಡಲಿಕ್ಕಾಗಿಯೇ ಅವನು ಲೀಲೆಯನ್ನು ಮಾಡುತ್ತಿದ್ದಾನಲ್ಲ! ಆಗ ನನ್ನ ಜೀವನವು ಸಫಲವಾಗಿ ಹೋಗುವುದು. ಶ್ರೀಕೃಷ್ಣನು ತನ್ನವರನ್ನಾಗಿ ಕೊಳ್ಳದವರ ಜನ್ಮವು ವ್ಯರ್ಥ. ಅವರ ಜೀವನಕ್ಕೆ ಧಿಕ್ಕಾರವಿರಲಿ. ॥ ೨೧ ॥ ಆದರೆ ಭಗವಂತನಿಗೆ ಪ್ರಿಯರಾದವರಿರಲೀ, ಅಪ್ರಿಯರಾದವರಿರಲಿ ಯಾರೂ ಇಲ್ಲ. ಆತ್ಮೀಯ ಮಿತ್ರನೂ ಇಲ್ಲ. ಶತ್ರುವೂ ಇಲ್ಲ. ಅವನು ಯಾರನ್ನೂ ಉಪೇಕ್ಷಿಸುವುದೂ ಇಲ್ಲ. ಕಲ್ಪವೃಕ್ಷವು ತನ್ನನ್ನು ಆಶ್ರಯಿಸಿ ಬೇಡಿದವರಿಗೆ ಬೇಕಾದ ವಸ್ತುಗಳನ್ನು ನೀಡುವಂತೆಯೇ ಭಗವಾನ್ ಶ್ರೀಕೃಷ್ಣನೂ ಯಾರು ಅವನನ್ನು ಹೇಗೆ ಭಜಿಸುತ್ತಾನೋ ಹಾಗೆಯೇ ಅವನನ್ನು ಪ್ರೀತಿಸುತ್ತಾನೆ ॥ ೨೨ ॥ ನಾನು ಅವರ ಮುಂದೆ ವಿನೀತಭಾವದಿಂದ ಕೈಜೋಡಿಸಿಕೊಂಡು ನಿಂತುಕೊಂಡಾಗ ಬಲರಾಮನು ನಸುನಗುತ್ತಾ ನನ್ನನ್ನು ಅಪ್ಪಿಕೊಳ್ಳುವನು ಹಾಗೂ ನನ್ನ ಎರಡೂ ಕೈಗಳನ್ನೂ ಹಿಡಿದುಕೊಂಡು ಮನೆಯೊಳಗೆ ಕರೆಕೊಂಡು ಹೋಗುವನು. ಅಲ್ಲಿ ಎಲ್ಲ ರೀತಿಯಿಂದ ನನ್ನ ಸತ್ಕಾರವಾಗುವುದು. ಅದಾದ ಬಳಿಕ 'ಅಕ್ರೂರ! ಕಂಸನು ನಮ್ಮ ಬಂಧುಗಳೊಡನೆ ಹೇಗೆ ವ್ಯವಹರಿಸುವನು?' ಎಂದು ಪ್ರಶ್ನಿಸುವನು. ॥ ೨೩ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿದ್ರಾಜನೇ! ಶ್ವಫಲ್ಕನಂದನ ಅಕ್ರೂರನು ದಾರಿಯಲ್ಲಿ ಹೀಗೆ ಯೋಚಿಸುತ್ತಾ ಇರುವಾಗಲೇ ಅವನ ರಥವು ನಂದಗೋಕುಲಕ್ಕೆ ತಲುಪಿತು. ಆಗ ಸೂರ್ಯನು ಅಸ್ತಾಚಲವನ್ನು ಸೇರಿದ್ದನು. ॥ ೨೪ ॥ ಯಾವ ಚರಣಕಮಲಗಳ ಧೂಳಿಯನ್ನು ಲೋಕಪಾಲರೆಲ್ಲರೂ ತಮ್ಮ ಕಿರೀಟಗಳಲ್ಲಿ ಧರಿಸಿಕೊಳ್ಳುವರೋ (ತಲೆಯಲ್ಲಿ ಧರಿಸುವರೋ) ಅಂತಹ ಭಗವಂತನ ಚರಣ ಚಿಹ್ನೆಗಳನ್ನು ಅಕ್ರೂರನು ಆ ವ್ರಜದಲ್ಲಿ ದರ್ಶಿಸಿದನು. ಕಮಲ, ಯವ, ಅಂಕುಶ ಮೊದಲಾದ ಅಸಾಧಾರಣ ಚಿಹ್ನೆಗಳಿಂದ ಭೂದೇವಿಯ ಶೋಭೆಯನ್ನು ಹೆಚ್ಚಿಸುತ್ತಿದ್ದ ಭಗವಂತನ ಪಾದ ಚಿಹ್ನೆಗಳಿಂದೇ ಅರಿವಾಗುತ್ತಿತ್ತು. ॥ ೨೫ ॥ ಆ ಚರಣಚಿಹ್ನೆಗಳನ್ನು ಕಂಡೊಡನೆಯೇ ಅಕ್ರೂರನ ಹೃದಯ ಆನಂದದಿಂದ ತುಂಬಿಹೋಯಿತು. ಶ್ರೀಕೃಷ್ಣನನ್ನು ನೋಡಿದಷ್ಟೇ ಸಂಭ್ರಮಗೊಂಡಿತು. ಪ್ರೇಮಾಧಿಕ್ಯದಿಂದ ರೋಮರಾಜಿಗಳು ನಿಮಿರಿ ನಿಂತವು. ಕಣ್ಣುಗಳಲ್ಲಿ ಆನಂದಾಶ್ರುಗಳು ತುಂಬಿ ಬಂದುವು. ಅವನು ರಥದಿಂದ ಧುಮ್ಮಿಕ್ಕಿ ಆ ಪ್ರಭುವಿನ ಪಾದ ಧೂಳಿನಲ್ಲಿ ಹೊರಳಾಡಿದನು. ನನ್ನ ಪ್ರಭುವಿನ ಪವಿತ್ರವಾದ ಚರಣಧೂಳಿಯು ಇದಾಗಿದೆ ಎಂದು ಉದ್ಗರಿಸಿದನು. ॥ ೨೬ ॥

ದೇಹಂಭೃತಾಮಿಯಾನರ್ಥೋ ಹಿತ್ವಾ ದಂಭಂ ಭಿಯಂ ಶುಚಮ್ ।
ಸಂದೇಶಾದ್ಯೋ ಹರೇರ್ಲಿಂಗದರ್ಶನಶ್ರವಣಾದಿಭಿಃ ॥ ೨೭ ॥

ದದರ್ಶ ಕೃಷ್ಣಂ ರಾಮಂ ಚ ವ್ರಜೇ ಗೋದೋಹನಂ ಗತೌ ।
ಪೀತನೀಲಾಂಬರಧರೌ ಶರದಂಬುರುಹೇಕ್ಷಣೌ ॥ ೨೮ ॥

ಕಿಶೋರೌ ಶ್ಯಾಮಲಶ್ವೇತೌ ಶ್ರೀನಿಕೇತೌ ಬೃಹದ್ಭುಜೌ ।
ಸುಮುಖೌ ಸುಂದರವರೌ ಬಾಲದ್ವಿರದವಿಕ್ರಮೌ ॥ ೨೯ ॥

ಧ್ವಜವಜ್ರಾಂಕುಶಾಂಭೋಜೈಶ್ಚಿಹ್ನಿತೈರಂಘ್ರಿಭಿರ್ವ್ರಜಮ್ ।
ಶೋಭಯಂತೌ ಮಹಾತ್ಮಾನಾವನುಕ್ರೋಶಸ್ಮಿತೇಕ್ಷಣೌ ॥ ೩೦ ॥

ಉದಾರರುಚಿರಕ್ರೀಡೌ ಸ್ರಗ್ವಿಣೌ ವನಮಾಲಿನೌ ।
ಪುಣ್ಯಗಂಧಾನುಲಿಪ್ತಾಂಗೌ ಸ್ನಾತೌ ವಿರಜವಾಸಸೌ ॥ ೩೧ ॥

ಪ್ರಧಾನಪುರುಷಾವಾದ್ಯೌ ಜಗದ್ಧೇತೂ ಜಗತ್ಪತೀ ।
ಅವತೀರ್ಣೌ ಜಗತ್ಯರ್ಥೇ ಸ್ವಾಂಶೇನ ಬಲಕೇಶವೌ ॥ ೩೨ ॥

ದಿಶೋ ವಿತಿಮಿರಾ ರಾಜನ್ ಕುರ್ವಾಣೌ ಪ್ರಭಯಾ ಸ್ವಯಾ ।
ಯಥಾ ಮಾರಕತಃ ಶೈಲೋ ರೌಪ್ಯಶ್ಚ ಕನಕಾಚಿತೌ ॥ ೩೩ ॥

ರಥಾತ್ತೂರ್ಣಮವಪ್ಲುತ್ಯ ಸೋಽಕ್ರೂರಃ ಸ್ನೇಹವಿಹ್ವಲಃ ।
ಪಪಾತ ಚರಣೋಪಾಂತೇ ದಂಡವದ್ರಾಮಕೃಷ್ಣಯೋಃ ॥ ೩೪ ॥

ಭಗವದ್ದರ್ಶನಾಹ್ಲಾದಬಾಷ್ಪಪರ್ಯಾಕುಲೇಕ್ಷಣಃ ।
ಪುಲಕಾಚಿತಾಂಗ ಔತ್ಕಂಠ್ಯಾತ್ ಸ್ವಾಖ್ಯಾನೇ ನಾಶಕನ್ನೃಪ ॥ ೩೫ ॥

ಪರೀಕ್ಷಿತನೇ! ಕಂಸನ ಸಂದೇಶವನ್ನು ಹೊತ್ತು ತಂದ ಅಕ್ರೂರನ ಇಷ್ಟರವರೆಗಿನ ಭಾವ-ಸ್ಥಿತಿಯೇ ಜೀವಿಗಳು ದೇಹವನ್ನು ಧರಿಸಿದುದಕ್ಕೆ ಪರಮ ಲಾಭವು. ಅದಕ್ಕಾಗಿ ದಂಭ, ಭಯ, ಶೋಕ ಇವುಗಳನ್ನು ತ್ಯಜಿಸಿ ಭಗವಂತನ ಮೂರ್ತಿ ಚಿಹ್ನೆ ಲೀಲೆ, ಸ್ಥಾನ ಮತ್ತು ಗುಣಗಳನ್ನು ದರ್ಶನ-ಶ್ರವಣದ ಮೂಲಕ ಇಂತಹ ಭಾವವನ್ನು ಸಂಪಾದಿಸುವುದೇ ಜೀವಮಾತ್ರರ ಪರಮ ಕರ್ತವ್ಯವಾಗಿದೆ. ॥ ೨೭ ॥

ವ್ರಜದಲ್ಲಿ ತಲುಪುತ್ತಲೇ ಅಕ್ರೂರನು ಬಲರಾಮ-ಶ್ರೀಕೃಷ್ಣರಿಬ್ಬರೂ ಹಸುಗಳ ಹಾಲುಕರೆಯುವಲ್ಲಿ ವಿರಾಜಿಸುತ್ತಿರುವುದನ್ನು ನೋಡಿದನು. ಶ್ಯಾಮಸುಂದರ ಶ್ರೀಕೃಷ್ಣನು ಪೀತಾಂಬರವನ್ನು ಮತ್ತು ಗೌರಾಂಗನಾದ ಬಲರಾಮನು ನೀಲಾಂಬರವನ್ನು ಉಟ್ಟಿದ್ದರು. ಶರತ್ಕಾಲದ ಕಮಲದಂತೆ ಅವರ ಕಣ್ಣುಗಳು ಅರಳಿದ್ದವು. ॥ ೨೮ ॥ ಈಗ ತಾನೇ ಅವರು ಕಿಶೋರಾವಸ್ಥೆಯನ್ನು ಪ್ರವೇಶಿಸಿದ್ದರು. ಗೌರ ಶ್ಯಾಮಲ ವರ್ಣದಿಂದ ಶೋಭಿಸುತ್ತಿದ್ದ ಅವರಿಬ್ಬರೂ ಸೌಂದರ್ಯ ಗಣಗಳಂತಿದ್ದರು. ಆಜಾನು ಬಾಹುಗಳಾಗಿದ್ದರು. ಸುಂದರವಾದ ಮುಖಾರವಿಂದದಿಂದ ಕೂಡಿದ್ದು ಅತ್ಯಂತ ಮನೋಹರರಾಗಿ ಇದ್ದರು. ಮರಿಯಾನೆಯಂತೆ ಅವರ ನಡಿಗೆ ಗಂಭೀರವಾಗಿ ಇತ್ತು. ॥ ೨೯ ॥ ಅವರ ಚರಣಗಳಲ್ಲಿ ಧ್ವಜ, ವಜ್ರ, ಅಂಕುಶ, ಕಮಲ ಇವುಗಳ ಚಿಹ್ನೆಯಿದ್ದಿತು. ಅವರು ನಡೆವಾಗ ಪೃಥಿವಿಯು ಈ ಚಿಹ್ನೆಗಳಿಂದ ಅಂಕಿತವಾಗಿ ಶೋಭಾಯಮಾನವಾಗುತ್ತಿತ್ತು. ದಯಾರಸವೇ ಒಸರುತ್ತಿದೆಯೋ ಎಂಬಂತೆ ಅವರ ಮುಗುಳ್ನಗು ಇತ್ತು. ಅವರು ಉದಾರತೆಯ ಮೂರ್ತಿಮಂತ ಸ್ವರೂಪರೇ ಆಗಿದ್ದರು. ॥ ೩೦ ॥ ಅವರ ಒಂದೊಂದು ಲೀಲೆಯೂ ಉದಾರತೆಯಿಂದಲೂ, ಸುಂದರ ಕಲೆಯಿಂದಲೂ ಕೂಡಿತ್ತು. ಕೊರಳಿನಲ್ಲಿ ವನಮಾಲೆಯನ್ನು ಮಣಿಮಾಲೆಗಳನ್ನು ಧರಿಸಿದ್ದರು. ಅವರು ಆಗತಾನೇ ಸ್ನಾನಮಾಡಿ ನಿರ್ಮಲವಾದ ವಸ್ತ್ರಗಳನ್ನುಟ್ಟಿದ್ದರು. ಶರೀರಕ್ಕೆ ಪವಿತ್ರವಾದ ಸುಗಂಧಿತ ಅಂಗರಾಗವನ್ನು ಚಂದನವನ್ನು ಹಚ್ಚಿಕೊಂಡಿದ್ದರು. ॥ ೩೧ ॥ ಪರೀಕ್ಷಿತನೇ! ಜಗತ್ತಿನ ಆದಿ ಕಾರಣನೂ, ಜಗತ್ಪತಿಯೂ ಆದ ಪುರುಷೋತ್ತಮನೇ ಪ್ರಪಂಚದ ರಕ್ಷಣೆಗಾಗಿ ತನ್ನ ಪೂರ್ಣಾಂಶದಿಂದ ಬಲರಾಮ-ಶ್ರೀಕೃಷ್ಣರಾಗಿ ಅವತರಿಸಿ, ತಮ್ಮ ಅಂಗಕಾಂತಿಯಿಂದ ಹತ್ತು ದಿಕ್ಕುಗಳ ಅಂಧಕಾರವನ್ನೂ ಹೊಡೆದು ಹಾಕುತ್ತಿರುವುದನ್ನು ಅಕ್ರೂರನು ನೋಡಿದನು. ಬಂಗಾರದ ಮೆರಗು ಕೊಟ್ಟ ಬೆಳ್ಳಿಯ ಮತ್ತು ಮರಕತ ಪರ್ವತಗಳಂತೆ ಕಂಗೊಳಿಸುತ್ತಿದ್ದರು. ॥ ೩೨-೩೩ ॥ ಅವರನ್ನು ನೋಡುತ್ತಲೇ ಅಕ್ರೂರನು ಪ್ರೇಮಾಧಿಕ್ಯದಿಂದ ವಿಹ್ವಲನಾಗಿ ರಥದಿಂದ ಕೆಳಗೆ ಧುಮುಕಿ ಭಗವಾನ್ ಶ್ರೀಕೃಷ್ಣ ಬಲರಾಮರ ಚರಣಗಳ ಬಳಿಸಾರಿ ಸಾಷ್ಟಾಂಗ ನಮಸ್ಕಾರ ಮಾಡಿದನು. ॥ ೩೪ ॥ ಪರೀಕ್ಷಿತನೇ! ಭಗವಂತನ ದರ್ಶನದಿಂದ ಅವನ ಕಣ್ಣುಗಳಲ್ಲಿ ಆನಂದಬಾಷ್ಪಗಳು ತುಂಬಿಹೋದವು. ಶರೀರವೆಲ್ಲವೂ ಪುಳಕಗೊಂಡಿತು. ಉತ್ಕಂಠತೆಯಿಂದ ಕೊರಳು ಬಿಗಿದು ತನ್ನ ಹೆಸರನ್ನು ಉಚ್ಚರಿಸಲಾರದಷ್ಟು ಆಹ್ಲಾದಿತನಾದನು. ॥ ೩೫ ॥

ಭಗವಾಂಸ್ತಮಭಿಪ್ರೇತ್ಯ ರಥಾಂಗಾಂಕಿತಪಾಣಿನಾ ।
ಪರಿರೇಭೇಽಭ್ಯುಪಾಕೃಷ್ಯ ಪ್ರೀತಃ ಪ್ರಣತವತ್ಸಲಃ ॥ ೩೬ ॥

ಸಂಕರ್ಷಣಶ್ಚ ಪ್ರಣತಮುಪಗುಹ್ಯ ಮಹಾಮನಾಃ ।
ಗೃಹೀತ್ವಾ ಪಾಣಿನಾ ಪಾಣೀ ಅನಯತ್ಸಾನುಜೋ ಗೃಹಮ್ ॥ ೩೭ ॥

ಪೃಷ್ಟ್ವಾಥ ಸ್ವಾಗತಂ ತಸ್ಮೈ ನಿವೇದ್ಯ ಚ ವರಾಸನಮ್ ।
ಪ್ರಕ್ಷಾಲ್ಯ ವಿಧಿವತ್ಪಾದೌ ಮಧುಪರ್ಕಾರ್ಹಣಮಾಹರತ್ ॥ ೩೮ ॥

ನಿವೇದ್ಯ ಗಾಂ ಚಾತಿಥಯೇ ಸಂವಾಹ್ಯ ಶ್ರಾಂತಮಾದೃತಃ ।
ಅನ್ನಂ ಬಹುಗುಣಂ ಮೇಧ್ಯಂ ಶ್ರದ್ಧಯೋಪಾಹರದ್ವಿಭುಃ ॥ ೩೯ ॥

ತಸ್ಮೈ ಭುಕ್ತವತೇ ಪ್ರೀತ್ಯಾ ರಾಮಃ ಪರಮಧರ್ಮವಿತ್ ।
ಮುಖವಾಸೈರ್ಗಂಧಮಾಲ್ಯೈಃ ಪರಾಂ ಪ್ರೀತಿಂ ವ್ಯಧಾತ್ಪುನಃ ॥ ೪೦ ॥

ಪಪ್ರಚ್ಛ ಸತ್ಕೃತಂ ನಂದಃ ಕಥಂ ಸ್ಥ ನಿರನುಗ್ರಹೇ ।
ಕಂಸೇ ಜೀವತಿ ದಾಶಾರ್ಹ ಸೌನಪಾಲಾ ಇವಾವಯಃ ॥ ೪೧ ॥

ಯೋಽವಧೀತ್ಸ್ವಸ್ವಸುಸ್ತೋಕಾನ್ ಕ್ರೋಶಂತ್ಯಾ ಅಸುತೃಪ್ಖಲಃ ।
ಕಿಂ ನು ಸ್ವಿತ್ತತ್ಪ್ರಜಾನಾಂ ವಃ ಕುಶಲಂ ವಿಮೃಶಾಮಹೇ ॥ ೪೨ ॥

ಇತ್ಥಂ ಸೂನೃತಯಾ ವಾಚಾ ನಂದೇನ ಸುಸಭಾಜಿತಃ ।
ಅಕ್ರೂರಃ ಪರಿಪೃಷ್ಟೇನ ಜಹಾವಧ್ವಪರಿಶ್ರಮಮ್ ॥ ೪೩ ॥

ಶರಣಾಗತವತ್ಸಲ ಶ್ರೀಕೃಷ್ಣನು ಅವನ ಮನಸ್ಸಿನ ಭಾವವನ್ನರಿತು ಅತ್ಯಂತ ಪ್ರಸನ್ನತೆಯಿಂದ ತನ್ನ ಚಕ್ರಾಂಕಿತ ಕೈಗಳಿಂದ ಅವನನ್ನು ಬರಸೆಳೆದು ಆಲಿಂಗಿಸಿಕೊಂಡನು. ॥ ೩೬ ॥ ಅನಂತರ ಕೈ ಜೋಡಿಸಿಕೊಂಡು ವಿನೀತನಾಗಿ ಮಹಾತ್ಮನಾದ ಬಲರಾಮನ ಮುಂದೆ ನಿಂತುಕೊಂಡಾಗ ಅವನೂ ಅಕ್ರೂರನನ್ನು ಅಪ್ಪಿಕೊಂಡನು. ಅವನ ಒಂದು ಕೈಯನ್ನು ಶ್ರೀಕೃಷ್ಣನೂ, ಮತ್ತೊಂದನ್ನು ಬಲರಾಮನು ಹಿಡಿದುಕೊಂಡು ಮನೆಯೊಳಗೆ ಕರೆದೊಯ್ದರು. ॥ ೩೭ ॥

ಮನೆಯೊಳಗೆ ಕರೆತಂದು ಭಗವಂತನು ಅಕ್ರೂರನ ಸ್ವಾಗತ ಸತ್ಕಾರವನ್ನು ಮಾಡಿ, ಕುಶಲ ಪ್ರಶ್ನೆಗಳಾದ ಬಳಿಕ, ಆಸನದಲ್ಲಿ ಕುಳ್ಳಿರಿಸಿ ವಿಧಿವತ್ತಾಗಿ ಅವನ ಕಾಲುಗಳನ್ನು ತೊಳೆದು ಮಧುಪರ್ಕಾದಿ ಉಪಚಾರಗಳನ್ನು ಅರ್ಪಿಸಿದನು. ॥ ೩೮ ॥ ಅನಂತರ ಶ್ರೀಕೃಷ್ಣನು ಅತಿಥಿಯಾದ ಅಕ್ರೂರನಿಗೆ ಹಸುವೊಂದನ್ನು ಕೊಟ್ಟು ಅವನ ಕಾಲನ್ನೊತ್ತಿ ಮಾರ್ಗಾಯಾಸವನ್ನು ಪರಿಹರಿಸಿದನು. ಬಳಿಕ ಶ್ರದ್ಧಾದರಗಳಿಂದ ಅವನಿಗೆ ಪವಿತ್ರವೂ, ಅನೇಕಗುಣಗಳಿಂದ ಕೂಡಿದ ಮೃಷ್ಟಾನ್ನವನ್ನು ಭೋಜನ ಮಾಡಿಸಿದನು. ॥ ೩೯ ॥ ಅಕ್ರೂರನು ಭೋಜನವನ್ನು ಪೂರೈಸಿದ ಬಳಿಕ ಧರ್ಮದ ಮರ್ಮಜ್ಞನಾದ ಭಗವಾನ್ ಬಲರಾಮನೂ ಅತ್ಯಂತ ಪ್ರೇಮದಿಂದ ಸುವಾಸನೆಯನ್ನುಂಟುಮಾಡುವ ತಾಂಬೂಲವನ್ನೂ, ಸುಗಂಧಿತ ಪುಷ್ಪಹಾರವನ್ನೂ ಕೊಟ್ಟು ಅಕ್ರೂರನನ್ನು ಆನಂದಗೊಳಿಸಿದನು. ॥ ೪೦ ॥ ಹೀಗೆ ಆತಿಥ್ಯ-ಸತ್ಕಾರಗಳಾದ ಬಳಿಕ ನಂದಗೋಪನು ಅಕ್ರೂರನ ಬಳಿಗೆ ಬಂದು ಕೇಳಿದನು - ಅಕ್ರೂರ ಮಹಾಶಯನೇ! ನಿರ್ದಯಿಯಾದ ಕಂಸನು ಬದುಕಿರುವಾಗ ಕಟುಕನ ಬಳಿಯಲ್ಲಿರುವ ಕುರಿಗಳಂತೆ ನೀವೆಲ್ಲರೂ ಹೇಗೆ ತಾನೇ ಜೀವಿಸಿರುವಿರಿ? ॥ ೪೧ ॥ ಪ್ರಾಣಘಾತಕನಾದ, ನೀಚನಾದ ಕಂಸನು ಗೋಳಾಡುತ್ತಿದ್ದ ತನ್ನ ತಂಗಿಯ ಹಸುಗೂಸುಗಳನ್ನು ಕೊಂದು ಬಿಟ್ಟನು. ಅಂತಹವನ ಅಧೀನಕ್ಕೆ ಒಳಪಟ್ಟಿರುವ ಪ್ರಜೆಗಳ ಕುಶಲವನ್ನು ವಿಚಾರಿಸುವುದರಲ್ಲಿ ಪ್ರಯೋಜನವೇನಿದೆ? ॥ ೪೨ ॥ ಅಕ್ರೂರನೂ ನಂದಗೋಪನಲ್ಲಿ ಮೊದಲೇ ಕುಶಲವನ್ನು ಕೇಳಿದ್ದನು. ಈಗ ಹೀಗೆ ನಂದರಾಜನು ಮಧುರವಾಗಿ ಅಕ್ರೂರನಲ್ಲಿ ಕುಶಲವನ್ನು ಕೇಳಿ ಅವನನ್ನು ಸಮ್ಮಾನಿಸಿದಾಗ ಅವನ ಮಾರ್ಗಾಯಾಸವೆಲ್ಲ ದೂರವಾಯಿತು. ॥ ೪೩ ॥

ಮೂವತ್ತೆಂಟನೆಯ ಅಧ್ಯಾಯವು ಮುಗಿಯಿತು. ॥ ೩೮ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮಸ್ಕಂಧೇ ಪೂರ್ವಾರ್ಧೇ
ಅಕ್ರೂರಾಗಮನಂ ನಾಮ ಅಷ್ಟತ್ರಿಂಶೋಽಧ್ಯಾಯಃ ॥ ೩೮ ॥

ಮೂವತ್ತೊಂಭತ್ತನೆಯ ಅಧ್ಯಾಯ

ಶ್ರೀಕೃಷ್ಣ-ಬಲರಾಮರು ಮಥುರಾಗಮನ

ಶ್ರೀಶುಕ ಉವಾಚ

ಸುಖೋಪವಿಷ್ಟಃ ಪರ್ಯಂಕೇ ರಾಮಕೃಷ್ಣೋರುಮಾನಿತಃ ।
ಲೇಭೇ ಮನೋರಥಾನ್ಸರ್ವಾನ್ ಪಥಿ ಯಾನ್ಸ ಚಕಾರ ಹ ॥ ೧ ॥

ಕಿಮಲಭ್ಯಂ ಭಗವತಿ ಪ್ರಸನ್ನೇ ಶ್ರೀನಿಕೇತನೇ ।
ತಥಾಪಿ ತತ್ಪರಾ ರಾಜನ್ ನಹಿ ವಾಂಛಂತಿ ಕಿಂಚನ ॥ ೨ ॥

ಸಾಯಂತನಾಶನಂ ಕೃತ್ವಾ ಭಗವಾನ್ ದೇವಕೀಸುತಃ ।
ಸುಹೃತ್ಸು ವೃತ್ತಂ ಕಂಸಸ್ಯ ಪಪ್ರಚ್ಛಾನ್ಯಚ್ಚಿಕೀರ್ಷಿತಮ್ ॥ ೩ ॥

ಶ್ರೀಭಗವಾನುವಾಚ

ತಾತ ಸೌಮ್ಯಾಗತಃ ಕಚ್ಚಿತ್ ಸ್ವಾಗತಂ ಭದ್ರಮಸ್ತು ವಃ ।
ಅಪಿ ಸ್ವಜ್ಞಾತಿಬಂಧೂನಾಮನಮೀವಮನಾಮಯಮ್ ॥ ೪ ॥

ಕಿಂ ನು ನಃ ಕುಶಲಂ ಪೃಚ್ಛೇ ಏಧಮಾನೇ ಕುಲಾಮಯೇ ।
ಕಂಸೇ ಮಾತುಲನಾಮ್ನಾಂಗ ಸ್ವಾನಾಂ ನಸ್ತತ್ಪ್ರಜಾಸು ಚ ॥ ೫ ॥

ಅಹೋ ಅಸ್ಮದಭೂದ್ಭೂರಿ ಪಿತ್ರೋರ್ವೃಜಿನಮಾರ್ಯಯೋಃ ।
ಯದ್ಧೇತೋಃ ಪುತ್ರಮರಣಂ ಯದ್ಧೇತೋರ್ಬಂಧನಂ ತಯೋಃ ॥ ೬ ॥

ದಿಷ್ಟ್ಯಾದ್ಯ ದರ್ಶನಂ ಸ್ವಾನಾಂ ಮಹ್ಯಂ ವಃ ಸೌಮ್ಯ ಕಾಂಕ್ಷಿತಮ್ ।
ಸಂಜಾತಂ ವರ್ಣ್ಯತಾಂ ತಾತ ತವಾಗಮನಕಾರಣಮ್ ॥ ೭ ॥

ಶ್ರೀಶುಕ ಉವಾಚ

ಪೃಷ್ಟೋ ಭಗವತಾ ಸರ್ವಂ ವರ್ಣಯಾಮಾಸ ಮಾಧವಃ ।
ವೈರಾನುಬಂಧಂ ಯದುಷು ವಸುದೇವವಧೋದ್ಯಮಮ್ ॥ ೮ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ! ಬಲರಾಮ-ಶ್ರೀಕೃಷ್ಣರಿಂದ ಚೆನ್ನಾಗಿ ಆದರಿಸಲ್ಪಟ್ಟ ಅಕ್ರೂರನು ಮಂಚದ ಮೇಲೆ ಸುಖವಾಗಿ ಕುಳಿತಿದ್ದನು. ಅವನು ಬರುವಾಗ ದಾರಿಯಲ್ಲಿ ಏನೇನನ್ನು ಬಯಸಿದ್ದನೋ ಅದೆಲ್ಲವನ್ನೂ ಪಡೆದುಕೊಂಡನು. ಮನೋರಥಗಳೆಲ್ಲವೂ ಈಡೇರಿದವು. ॥ ೧ ॥ ರಾಜನೇ! ಮಹಾಲಕ್ಷ್ಮಿಗೆ ನಿವಾಸಸ್ಥಾನವಾದ ಭಗವಾನ್ ಶ್ರೀಕೃಷ್ಣನೇ ಪ್ರಸನ್ನನಾದನೆಂದರೆ ಲಭಿಸದ ವಸ್ತುವು ಯಾವುದು ತಾನೇ ಇದ್ದೀತು? ಹೀಗಿದ್ದರೂ ಭಗವಂತನಲ್ಲಿಯೇ ಪರಮಭಕ್ತಿಯುಳ್ಳ ಭಕ್ತೋತ್ತಮರು ಯಾವುದೇ ವಸ್ತುವನ್ನು ಬಯಸುವುದಿಲ್ಲ. ॥ ೨ ॥ ದೇವಕೀನಂದನ ಶ್ರೀಕೃಷ್ಣನು ಸಾಯಂಕಾಲದ ಭೋಜನಾನಂತರ ಅಕ್ರೂರನ ಬಳಿಗೆ ಬಂದು – ತನ್ನ ಸ್ವಜನ – ಸಂಬಂಧಿಗಳ ಜೊತೆಗೆ ಕಂಸನು ಹೇಗೆ ವ್ಯವಹರಿಸುವನು. ಹಾಗೂ ಮುಂದಿನ ಕಾರ್ಯಕ್ರಮದ ಕುರಿತು ಕೇಳಿದನು. ॥ ೩ ॥

ಭಗವಾನ್ ಶ್ರೀಕೃಷ್ಣನು ಕೇಳಿದನು – ಸೌಮ್ಯನಾದ ಅಕ್ರೂರನೇ! ಪ್ರಯಾಣದಲ್ಲಿ ಯಾವ ತೊಂದರೆಯೂ ಆಗಲಿಲ್ಲವಲ್ಲ? ನಿನಗೆ ಸ್ವಾಗತ ಬಯಸುತ್ತೇನೆ. ನಿನಗೆ ಮಂಗಳವಾಗಲಿ. ಮಥುರೆಯಲ್ಲಿ ನಮ್ಮ ಆತ್ಮೀಯ ಬಂಧುಗಳೂ, ಸುಹೃದರೂ ಹಾಗೂ ಇತರ ಬಾಂಧವರೆಲ್ಲರೂ ಕುಶಲರಾಗಿದ್ದು ಸ್ವಸ್ಥರಾಗಿರುವರೇ? ॥ ೪ ॥ ಹೆಸರಿಗೆ ಮಾತ್ರ ಮಾವನಾದ ಕಂಸನಾದರೋ ನಮ್ಮ ಕುಲಕ್ಕೆ ಒಂದು ಭಯಂಕರ ವ್ಯಾಧಿರೂಪನೇ ಆಗಿರುವನು. ಅವನು ವೃದ್ಧಿ ಹೊಂದುತ್ತಿರುವವರೆಗೆ ನಾವು ನಮ್ಮ ವಂಶಿಯರ, ಸಂತಾನದ ಮತ್ತು ಪ್ರಜೆಗಳ ಕುಶಲವನ್ನು ಕೇಳುವುದೇನಿದೆ? ॥ ೫ ॥ ಸೌಮ್ಯನೇ! ಇದೊಂದು ನಮಗೆ ಅತ್ಯಂತ ದುಃಖದ ಸಂಗತಿಯಾಗಿದೆ. ನನ್ನ ಸಲುವಾಗಿಯೇ ನಿರಪರಾಧಿಗಳಾದ, ಸದಾಚಾರಸಂಪನ್ನರಾದ ನನ್ನ ತಂದೆ-ತಾಯಿಗಳು ಪಡಬಾರದ ಕಷ್ಟಗಳನ್ನು ಅನುಭವಿಸುತ್ತಿದ್ದಾರೆ. ನನ್ನ ಕಾರಣದಿಂದಲೇ ಅವರ ಕಾಲುಗಳಿಗೆ ಸಂಕೋಲೆಗಳನ್ನು ತೊಡಿಸಿ ಸೆರೆಮನೆಯಲ್ಲಿಡಲಾಗಿದೆ. ನನ್ನ ಕಾರಣದಿಂದಲೇ ಅವರ ಮಕ್ಕಳೂ ಕೊಲ್ಲಲ್ಪಟ್ಟರು. ॥ ೬ ॥ ನಿಮ್ಮನ್ನೆಲ್ಲ ನೋಡಬೇಕೆಂದು ನಾನು ಬಹಳ ದಿನಗಳಿಂದ ಬಯಸುತ್ತಿದ್ದೆ. ನನ್ನ ಸೌಭಾಗ್ಯದಿಂದ ಆ ಅಭಿಲಾಷೆಯು ಇಂದು ಪೂರ್ಣವಾಯಿತು. ಸೌಮ್ಯಸ್ವಭಾವದ ಚಿಕ್ಕಪ್ಪನವರೇ! ತಮ್ಮ ಶುಭಾಗಮನವು ಯಾವ ನಿಮಿತ್ತದಿಂದ ಆಯಿತು ಎಂಬುದನ್ನು ದಯಮಾಡಿ ತಿಳಿಸಿ. ॥ ೭ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ! ಭಗವಾನ್ ಶ್ರೀಕೃಷ್ಣನು ಹೀಗೆ ಪ್ರಶ್ನಿಸಿದಾಗ ಅಕ್ರೂರನು ಹೇಳಿದನು – ಕಂಸನಾದರೋ ಯದುವಂಶೀಯರೊಡನೆ ವೈರವನ್ನು ಕಟ್ಟಿಕೊಂಡಿರುವನು. ಅವನು ವಸುದೇವನನ್ನು ಕೂಡ ವಧಿಸಲು ಪ್ರಯತ್ನಶೀಲನಾಗಿರುವನು. ॥ ೮ ॥

ಯತ್ಸಂದೇಶೋ ಯದರ್ಥಂ ವಾ ದೂತಃ ಸಂಪ್ರೇಷಿತಃ ಸ್ವಯಮ್ ।
ಯದುಕ್ತಂ ನಾರದೇನಾಸ್ಯ ಸ್ವಜನ್ಮಾನಕದುಂದುಭೇಃ ॥ ೯ ॥

ಶ್ರುತ್ವಾಕ್ರೂರವಚಃ ಕೃಷ್ಣೋ ಬಲಶ್ಚ ಪರವೀರಹಾ ।
ಪ್ರಹಸ್ಯ ನಂದಂ ಪಿತರಂ ರಾಜ್ಞಾಽಽದಿಷ್ಟಂ ವಿಜಜ್ಞತುಃ ॥ ೧೦ ॥

ಗೋಪಾನ್ ಸಮಾದಿಶತ್ಸೋಽಪಿ ಗೃಹ್ಯತಾಂ ಸರ್ವಗೋರಸಃ ।
ಉಪಾಯನಾನಿ ಗೃಹ್ಣೀಧ್ವಂ ಯುಜ್ಯಂತಾಂ ಶಕಟಾನಿ ಚ ॥ ೧೧ ॥

ಯಾಸ್ಯಾಮಃ ಶ್ವೋ ಮಧುಪುರೀಂ ದಾಸ್ಯಾಮೋ ನೃಪತೇ ರಸಾನ್ ।
ದ್ರಕ್ಷ್ಯಾಮಃ ಸುಮಹತ್ಪರ್ವ ಯಾಂತಿ ಜಾನಪದಾಃ ಕಿಲ ।
ಏವಮಾಘೋಷಯತ್ ಕ್ಷತ್ರಾ ನಂದಗೋಪಃ ಸ್ವಗೋಕುಲೇ ॥ ೧೨ ॥

ಗೋಪ್ಯಸ್ತಾಸ್ತದುಪಶ್ರುತ್ಯ ಬಭೂವುರ್ವ್ಯಥಿತಾ ಭೃಶಮ್ ।
ರಾಮಕೃಷ್ಣೌ ಪುರೀಂ ನೇತುಮಕ್ರೂರಂ ವ್ರಜಮಾಗತಮ್ ॥ ೧೩ ॥

ಕಾಶ್ಚಿತ್ತತ್ಕೃತಹೃತ್ತಾಪಶ್ವಾಸಮ್ಲಾನಮುಖಶ್ರಿಯಃ ।
ಸ್ರಂಸದ್ದುಕೂಲವಲಯಕೇಶಗ್ರಂಥ್ಯಶ್ಚ ಕಾಶ್ಚನ ॥ ೧೪ ॥

ಅನ್ಯಾಶ್ಚ ತದನುಧ್ಯಾನನಿವೃತ್ತಾಶೇಷವೃತ್ತಯಃ ।
ನಾಭ್ಯಜಾನನ್ನಿಮಂ ಲೋಕಮಾತ್ಮಲೋಕಂ ಗತಾ ಇವ ॥ ೧೫ ॥

ಸ್ಮರಂತ್ಯಶ್ಚಾಪರಾಃ ಶೌರೇರನುರಾಗಸ್ಮಿತೇರಿತಾಃ ।
ಹೃದಿಸ್ಪೃಶಶ್ಚಿತ್ರಪದಾ ಗಿರಃ ಸಂಮುಮುಹುಃ ಸ್ತ್ರಿಯಃ ॥ ೧೬ ॥

ಗತಿಂ ಸುಲಲಿತಾಂ ಚೇಷ್ಟಾಂ ಸ್ನಿಗ್ಧಹಾಸಾವಲೋಕನಮ್ ।
ಶೋಕಾಪಹಾನಿ ನರ್ಮಾಣಿ ಪ್ರೋದ್ದಾಮಚರಿತಾನಿ ಚ ॥ ೧೭ ॥

ಚಿಂತಯಂತ್ಯೋ ಮುಕುಂದಸ್ಯ ಭೀತಾ ವಿರಹಕಾತರಾಃ ।
ಸಮೇತಾಃ ಸಂಘಶಃ ಪ್ರೋಚುರಶ್ರುಮುಖ್ಯೋಽಚ್ಯುತಾಶಯಾಃ ॥ ೧೮ ॥

ಅಕ್ರೂರನು ಕಂಸನ ಸಂದೇಶವನ್ನೂ, ಯಾವ ಉದ್ದೇಶದಿಂದ ತನ್ನನ್ನು ದೂತನಾಗಿ ಕಳಿಸಿರುವನೆಂಬುದನ್ನು ತಿಳಿಸಿದನು. ವಸುದೇವನ ಮನೆಯಲ್ಲಿ ಶ್ರೀಕೃಷ್ಣನು ಹುಟ್ಟಿರುವ ವೃತ್ತಾಂತವನ್ನು ನಾರದರು ಕಂಸನಿಗೆ ತಿಳಿಸಿರುವುದೆಲ್ಲವನ್ನು ಹೇಳಿದನು. ॥ ೯ ॥ ಅಕ್ರೂರನು ಹೇಳಿದುದೆಲ್ಲವನ್ನೂ ಕೇಳಿ ಶತ್ರುವಿನಾಶಕರಾದ ಶ್ರೀಕೃಷ್ಣ ಬಲರಾಮರು ನಗತೊಡಗಿದರು ಮತ್ತು ಶ್ರೀಕೃಷ್ಣನು ತಂದೆಯಾದ ನಂದಗೋಪನಿಗೆ ಕಂಸನ ಆದೇಶವನ್ನು ತಿಳಿಸಿದನು. ॥ ೧೦ ॥ ಕಂಸನ ಆಜ್ಞೆಯನ್ನು ಕೇಳುತ್ತಲೇ ನಂದಗೋಪನು ಗೋಪಾಲರಿಗೆ ಅಪ್ಪಣೆ ಮಾಡಿದನು - ಗೋಪಾಲರೇ! ಹಾಲು-ಮೊಸರು ಮುಂತಾದ ಗೋರಸವನ್ನು ಸಂಗ್ರಹಿಸಿ ಸಿದ್ಧಪಡಿಸಿರಿ. ರಾಜನಿಗೆ ಕೊಡಬೇಕಾದ ಕಪ್ಪ-ಕಾಣಿಕೆಗಳನ್ನು ಎತ್ತಿಕೊಂಡು ಪ್ರಯಾಣಕ್ಕೆ ಎತ್ತಿನ ಗಾಡಿಗಳು ಸಿದ್ಧವಾಗಲಿ. ॥ ೧೧ ॥ ನಾಳೆ ಪ್ರಾತಃಕಾಲವೇ ನಾವು ಮಥುರಾಪಟ್ಟಣಕ್ಕೆ ಪ್ರಯಾಣ ಮಾಡಬೇಕಾಗಿದೆ. ಅಲ್ಲಿಗೆ ಹೋಗಿ ಕಂಸರಾಜನಿಗೆ ಗೋರಸವನ್ನು ಕೊಡುವಾ. ಅಲ್ಲಿ ಒಂದು ಅದ್ಭುತವಾದ ಉತ್ಸವ ನಡೆಯುವುದು. ಅದನ್ನು ನೋಡಲು ದೇಶದ ಎಲ್ಲ ಪ್ರಜೆಗಳು ಆಗಮಿಸುವರು. ನಾವೂ ಅದನ್ನು ನೋಡುವಾ, ಹೀಗೆ ನಂದಗೋಪನು ತಳವಾರನ ಮೂಲಕವಾಗಿ ನಂದಗೋಕುಲದಲ್ಲೆಲ್ಲಾ ಡಂಗುರ ಸಾರಿದನು. ॥ ೧೨ ॥

ಪರೀಕ್ಷಿತನೇ! ರಾಮ-ಕೃಷ್ಣರನ್ನು ಮಥುರಾ ಪಟ್ಟಣಕ್ಕೆ ಕರೆದೊಯ್ಯಲು ಅಕ್ರೂರನು ವ್ರಜಕ್ಕೆ ಬಂದಿರುವನೆಂದು ಗೋಪಿಯರು ಕೇಳಿದಾಗ ಅವರು ಬಹಳ ದುಃಖಿತರಾಗಿ ವ್ಯಾಕುಲರಾದರು. ॥ ೧೩ ॥ ಭಗವಾನ್ ಶ್ರೀಕೃಷ್ಣನು ಮಥುರೆಗೆ ಹೋಗುವನೆಂಬ ಮಾತನ್ನು ಕೇಳುತ್ತಲೇ ಗೋಪಿಯರು ಪರಿತಾಪದಿಂದ ನಿಟ್ಟುಸಿರು ಬಿಟ್ಟರು. ಎಲ್ಲ ಗೋಪಿಯರ ಮುಖಕಮಲಗಳು ಬಾಡಿದವು. ಉಟ್ಟ ಸೀರೆಗಳು ಜಾರಿಹೋಗುತ್ತಿದ್ದರೂ, ಕೈಕಡಗಗಳು ಕಳಚಿ ಬೀಳುತ್ತಿದ್ದರೂ, ತುರುಬುಗಳು ಬಿಚ್ಚಿಹೋಗುತ್ತಿದ್ದರೂ ತಿಳಿಯದಷ್ಟು ಪರವಶರಾದರು. ॥ ೧೪ ॥ ಭಗವಂತನಲ್ಲೇ ನೆಟ್ಟ ಮನಸ್ಸುಳ್ಳವರಾಗಿ ಅವನ ಶ್ರೀವಿಗ್ರಹವನ್ನು ಧ್ಯಾನಿಸುತ್ತಾ ಕೆಲವು ಗೋಪಿಯರಿಗೆ ಚಿತ್ತವೃತ್ತಿಯೇ ನಿಂತು ಹೋಗಿ ಸಮಾಧಿಸ್ಥರಾದರು. ಆತ್ಮನಲ್ಲೇ ಸ್ಥಿತರಾದ ಅವರಿಗೆ ತಮ್ಮ ಶರೀರದ ಕುರಿತಾಗಲೀ, ಸಂಸಾರದ ಕುರಿತಾಗಲೀ ಎಚ್ಚರವೇ ಇರಲಿಲ್ಲ. ॥ ೧೫ ॥ ಮತ್ತೆ ಕೆಲವು ಗೋಪಿಯರು ಶೌರಿಯ ಮಂದಹಾಸದಿಂದ ಕೂಡಿದ ಅನುರಾಗವನ್ನು ಸ್ಮರಿಸಿಕೊಂಡರು. ಕೆಲವರು ವಿಚಿತ್ರ ಪದಸಮೂಹದಿಂದ ಮನಮುಟ್ಟುವ ಶ್ರೀಕೃಷ್ಣನ ಸುಮಧುರವಾದ ಮಾತುಗಳನ್ನು ಸ್ಮರಿಸಿ ವಿಮೋಹಿತರಾದರು. ॥ ೧೬ ॥ ಗೋಪಿಯರು ಮನಸ್ಸಿನಲ್ಲೇ ಭಗವಂತನ ಮನಮೋಹಕವಾದ ನಡಿಗೆಯನ್ನು, ಭಾವ-ಭಂಗಿಗಳನ್ನು, ಪ್ರೇಮಪೂರ್ಣವಾದ ಕಿರುನಗೆಯನ್ನು, ಕುಡಿನೋಟವನ್ನು, ಸಕಲ ಶೋಕಗಳನ್ನು ಇಲ್ಲವಾಗಿಸುವ ವಿನೋದ ಮಾತುಗಳನ್ನು, ಲೀಲೆಗಳನ್ನು ಚಿಂತಿಸುತ್ತಾ ವಿರಹದ ಭಯದಿಂದ ಕಾತರರಾದರು. ಅವರ ಹೃದಯ-ಜೀವನ ಎಲ್ಲವೂ ಭಗವಂತನಲ್ಲಿ ಸಮರ್ಪಿತವಾಗಿತ್ತು. ಅವರ ಕಣ್ಣುಗಳಿಂದ ನೀರು ಧಾರಾಕಾರವಾಗಿ ಹರಿಯತೊಡಗಿತು. ಅವರೆಲ್ಲರೂ ಗುಂಪು-ಗುಂಪಾಗಿ ಒಟ್ಟಾಗಿ ಸೇರಿ ಹೀಗೆ ಮಾತನಾಡಿಕೊಂಡರು. ॥ ೧೭-೧೮ ॥

ಗೋಪ್ಯ ಊಚುಃ

ಅಹೋ ವಿಧಾತಸ್ತವ ನ ಕ್ವಚಿದ್ದಯಾ
ಸಂಯೋಜ್ಯ ಮೈತ್ರ್ಯಾ ಪ್ರಣಯೇನ ದೇಹಿನಃ ।
ತಾಂಶ್ಚಾಕೃತಾರ್ಥಾನ್ ವಿಯುನಂಕ್ಷ್ಯಪಾರ್ಥಕಂ
ವಿಕ್ರೀಡಿತಂ ತೇಽರ್ಭಕಚೇಷ್ಟಿತಂ ಯಥಾ ॥ ೧೯ ॥

ಯಸ್ತ್ವಂ ಪ್ರದರ್ಶ್ಯಾಸಿತಕುಂತಲಾವೃತಂ
ಮುಕುಂದವಕ್ತ್ರಂ ಸುಕಪೋಲಮುನ್ನಸಮ್ ।
ಶೋಕಾಪನೋದಸ್ಮಿತಲೇಶಸುಂದರಂ
ಕರೋಷಿ ಪಾರೋಕ್ಷ್ಯಮಸಾಧು ತೇ ಕೃತಮ್ ॥ ೨೦ ॥

ಕ್ರೂರಸ್ತ್ವಮಕ್ರೂರಸಮಾಖ್ಯಯಾ ಸ್ಮ ನ-
ಶ್ಚಕ್ಷುರ್ಹಿ ದತ್ತಂ ಹರಸೇ ಬತಾಜ್ಞವತ್ ।
ಯೇನೈಕದೇಶೇಽಖಿಲಸರ್ಗಸೌಷ್ಠವಂ
ತ್ವದೀಯಮದ್ರಾಕ್ಷ್ಮ ವಯಂ ಮಧುದ್ವಿಷಃ ॥ ೨೧ ॥

ನ ನಂದಸೂನುಃ ಕ್ಷಣಭಂಗಸೌಹೃದಃ
ಸಮೀಕ್ಷತೇ ನಃ ಸ್ವಕೃತಾತುರಾ ಬತ ।
ವಿಹಾಯ ಗೇಹಾನ್ ಸ್ವಜನಾನ್ ಸುತಾನ್ ಪತೀಂ-
ಸ್ತದ್ದಾಸ್ಯಮದ್ಧೋಪಗತಾ ನವಪ್ರಿಯಃ ॥ ೨೨ ॥

ಸುಖಂ ಪ್ರಭಾತಾ ರಜನೀಯಮಾಶಿಷಃ
ಸತ್ಯಾ ಬಭೂವುಃ ಪುರಯೋಷಿತಾಂ ಧ್ರುವಮ್ ।
ಯಾಃ ಸಂಪ್ರವಿಷ್ಟಸ್ಯ ಮುಖಂ ವ್ರಜಸ್ಪತೇಃ
ಪಾಸ್ಯಂತ್ಯಪಾಂಗೋತ್ಕಲಿತಸ್ಮಿತಾಸವಮ್ ॥ ೨೩ ॥

ಗೋಪಿಯರು ಹೇಳುತ್ತಾರೆ – ಓ ಬ್ರಹ್ಮದೇವನೇ! ನಿನ್ನ ಹೃದಯದಲ್ಲಿ ದಯೆಯೆಂಬುದು ಲೇಶಮಾತ್ರವೂ ಇಲ್ಲವಲ್ಲ! ಮೊದಲು ನೀನು ಸೌಹಾರ್ದದಿಂದಲೂ, ಪ್ರೇಮದಿಂದಲೂ ಪ್ರಪಂಚದಲ್ಲಿರುವ ಪ್ರಾಣಿಗಳನ್ನು ಪರಸ್ಪರವಾಗಿ ಸೇರಿಸುವೆ, ಆದರೆ ಅವರ ಆಶಯವು ಪೂರ್ಣವಾಗುವುದರೊಳಗಾಗಿಯೇ ಅವರು ಪೂರ್ಣತೃಪ್ತಿಯನ್ನು ಹೊಂದುವ ಮೊದಲೇ ಅವರನ್ನು ಬೇರ್ಪಡಿಸುವೆ. ನಿಶ್ಚಯವಾಗಿಯೂ ಈ ನಿನ್ನ ಕಾರ್ಯವು ಮಕ್ಕಳ ಆಟಿಕೆಯಂತೆ ವ್ಯರ್ಥವಾದುದೇ ಸರಿ. ॥ ೧೯ ॥ ಓ ವಿಧಾತನೇ! ಇದೆಂತಹ ದುಃಖದ ವಿಷಯವಾಗಿದೆ ನೋಡು! ಮೊದಲು ನೀನು ಪ್ರೇಮವನ್ನು ಉಮ್ಮಳಿಸುವ ಶ್ಯಾಮಸುಂದರನ ದಿವ್ಯವಾದ ಮುಖಕಮಲವನ್ನು ನಮಗೆ ತೋರಿಸಿಕೊಟ್ಟೆ. ಅದೆಷ್ಟು ಚೆಲುವಿನ ಮುಖಕಮಲ! ಕಪ್ಪಾದ ಮುಂಗುರುಳಿನಿಂದ ಅಲಂಕೃತವಾಗಿದೆ. ಸುಂದರವಾದ ಕಪೋಲಗಳಿಂದಲೂ, ನೀಳವಾದ ಮೂಗಿನಿಂದಲೂ ಕೂಡಿ ಬೆಳಗುತ್ತಿರುವುದು. ದುಃಖವನ್ನು ಕಳೆದು ಆನಂದವನ್ನುಂಟು ಮಾಡುವ ಚೇತೋಹಾರಿಯಾದ ಕಿರುನಗೆಯಿಂದ ಶೋಭಿಸುತ್ತಿರುವುದು. ಅಂತಹ ಕಡುಚೆಲುವಿನ ಮುಖಕಮಲವನ್ನು ನಮಗೆ ತೋರಿಸಿ ಈಗ ಅದನ್ನು ನಮ್ಮಿಂದ ಮರೆಮಾಡಲು ಹವಣಿಸುತ್ತಿರುವೆ. ಹೀಗೆ ಮಾಡುವುದು ಖಂಡಿತವಾಗಿಯೂ ನಿನಗೆ ಯೋಗ್ಯವೆನಿಸುವುದಿಲ್ಲ. ॥ ೨೦ ॥ ವಿಧಾತನೇ! ಅತ್ಯಂತ ಕ್ರೂರಿಯಾದ ನೀನು 'ಅಕ್ರೂರ'ನೆಂಬ ಹೆಸರಿನಿಂದ ಕರೆಯಲ್ಪಡುತ್ತಾ ನಮ್ಮ ಕಣ್ಣುಗಳನ್ನು ಮೂಢನಂತೆ ಅಪಹರಿಸುತ್ತಿರುವೆಯಲ್ಲ! ಮಧುಹಂತಕನಾದ ಶ್ರೀಕೃಷ್ಣನ ಒಂದೊಂದು ಅವಯವಗಳಲ್ಲಿಯೂ ನಿನ್ನ ಸೃಷ್ಟಿಯ ಚಾತುರ್ಯವನ್ನು ಯಾವ ಕಣ್ಣುಗಳಿಂದ ಕಂಡು ನಾವು ಬೆರಗಾಗಿ ನಿನ್ನನ್ನು ಕೊಂಡಾಡುತ್ತಿದ್ದೆವೋ ಅಂತಹ ನಮ್ಮ ಕಣ್ಣುಗಳನ್ನೇ ನೀನು ಅಪಹರಿಸುತ್ತಿರುವೆ. ನಮ್ಮ ಕೃಷ್ಣನನ್ನು ಕಾಣದ ನಾವು ಕಣ್ಣಿಲ್ಲದ ಕುರುಡರಂತೆಯೇ ಸರಿ ॥ ೨೧ ॥

ಅಯ್ಯೋ! ನಂದನಂದನ ಶ್ಯಾಮಸುಂದರನು ಹೊಸ-ಹೊಸ ಜನರಲ್ಲಿ ಸ್ನೇಹ ಮಾಡಲು ಬಯಸಿದ್ದಾನೆ. ಇವನ ಸ್ನೇಹವೆಂಬುದು ಕ್ಷಣಭಂಗುರವಾದುದು. ಅವನ ಕಿರುನಗೆ, ಸವಿಮಾತು, ಕುಡಿನೋಟ ಇವುಗಳಿಂದ ಆಕರ್ಷಿತರಾದ ನಾವು ಮನೆ-ಮಠಗಳನ್ನು, ಮಾತಾ-ಪಿತೃಗಳನ್ನು, ಪತಿ-ಸುತರನ್ನು, ಅಣ್ಣ-ತಮ್ಮಂದಿರನ್ನು ತೊರೆದು ಇವನಿಗೆ ದಾಸಿಯರಾದೆವು. ಇವನಿಗಾಗಿಯೇ ಇಂದು ನಮ್ಮ ಹೃದಯ ಶೋಕಾತುರವಾಗುತ್ತಿದೆ. ಆದರೆ ಇವನು ನಮ್ಮ ಕಡೆಗೆ ನೋಡುವುದೇ ಇಲ್ಲವಲ್ಲ! ॥ ೨೨ ॥ ಇಂದಿನ ರಾತ್ರಿಯು ಕಳೆದು ಆಗುವ ಸುಪ್ರಭಾತವು ಮಥುರೆಯ ಸ್ತ್ರೀಯರಿಗೆ ಮಂಗಳದಾಯಕವಾಗುತ್ತದೆ. ಅವರ ಅನೇಕ ದಿನಗಳ ಅಭಿಲಾಷೆಯು ನಿಶ್ಚಯವಾಗಿ ಪೂರ್ಣಗೊಳ್ಳುವುದು. ನಮ್ಮ ವ್ರಜರಾಜನಾದ ಶ್ಯಾಮಸುಂದರ ಓರೆನೋಟವನ್ನು ಬೀರುತ್ತಾ, ಮಂದ-ಮಂದವಾದ ಮುಗುಳ್ನಗೆಯಿಂದ ಕೂಡಿದ ಮುಖಾರವಿಂದದ ಮಾದಕತೆಯನ್ನು ಚೆಲ್ಲುತ್ತಾ ಮಥುರೆಯನ್ನು ಪ್ರವೇಶಿಸಿದಾಗ ಅವರು ಅದನ್ನು ಸವಿಯುತ್ತಾ ಧನ್ಯರಾಗಿ ಹೋಗುವರು. ॥ ೨೩ ॥

ತಾಸಾಂ ಮುಕುಂದೋ ಮಧುಮಂಜುಭಾಷಿತೈ-
ರ್ಗೃಹೀತಚಿತ್ತಃ ಪರವಾನ್ ಮನಸ್ವ್ಯಪಿ ।
ಕಥಂ ಪುನರ್ನಃ ಪ್ರತಿಯಾಸ್ಯತೇಽಬಲಾ
ಗ್ರಾಮ್ಯಾಃ ಸಲಜ್ಜಸ್ಮಿತವಿಭ್ರಮೈರ್ಭ್ರಮನ್ ॥ ೨೪ ॥

ನಮ್ಮ ಶ್ಯಾಮಸುಂದರನು ಧೈರ್ಯಶಾಲಿಯಾಗಿದ್ದರೂ ಜೊತೆಗೆ ನಂದಗೋಪನೇ ಮೊದಲಾದ ಹಿರಿಯರ ಆಜ್ಞಾನುಸಾರವೇ ಇರುತ್ತಾನೆ. ಆದರೂ ಮಥುರೆಯ ಯುವತಿಯರು ತಮ್ಮ ಮಧುವಿನಂತಿರುವ ಮಾತುಗಳಿಂದ ಇವನ ಚಿತ್ತವನ್ನು ತಮ್ಮತ್ತ ಸೆಳೆದುಕೊಳ್ಳುವರು. ಇವನು ಅವರ ನಾಚಿಕೆಯಿಂದ ಕೂಡಿ ಕಿರುನಗೆ ಹಾಗೂ ವಿಲಾಸಪೂರ್ಣವಾದ ಭಾವಭಂಗಿಗೆ ಮನಸೋತು ಅಲ್ಲೇ ಇರುವನು. ಮತ್ತೆ ಹಳ್ಳಿಗಾಡಿನ ಗೊಲ್ಲತಿಯರ ಬಳಿಗೆ ಇವನು ಮರಳಿ ಹೇಗೆ ತಾನೆ ಬರುವನು ? ॥ ೨೪ ॥

ಅದ್ಯ ಧ್ರುವಂ ತತ್ರ ದೃಶೋ ಭವಿಷ್ಯತೇ
ದಾಶಾರ್ಹಭೋಜಾಂಧಕವೃಷ್ಣಿಸಾತ್ವತಾಮ್ ।
ಮಹೋತ್ಸವಃ ಶ್ರೀರಮಣಂ ಗುಣಾಸ್ಪದಂ
ದ್ರಕ್ಷ್ಯಂತಿ ಯೇ ಚಾಧ್ವನಿ ದೇವಕೀಸುತಮ್ ॥ ೨೫ ॥

ನಿಶ್ಚಯವಾಗಿಯೂ ಇಂದು ಮಥುರಾಪಟ್ಟಣದಲ್ಲಿ ಶ್ಯಾಮಸುಂದರನನ್ನು ಸಂದರ್ಶಿಸಲಿರುವ ದಾಶಾರ್ಹ, ಭೋಜ, ಅಂಧಕ, ವೃಷ್ಣಿ, ಸಾತ್ವತ ವಂಶೀಯರಿಗೆ ನೇತ್ರಾನಂದೋತ್ಸವವೇ ಆಗುತ್ತದೆ. ಜೊತೆಗೆ ಮಾರ್ಗದಲ್ಲಿ ರಮಾರಮಣನಾದ, ಗುಣಸಾಗರನಾದ, ದೇವಕಿಯ ಮಗನಾದ ನಮ್ಮ ಪ್ರಿಯತಮನನ್ನು ನೋಡುವ ದಾರಿಹೋಕರ ಕಣ್ಣುಗಳಿಗೂ ದೊಡ್ಡ ಹಬ್ಬವೇ ಆಗುತ್ತದೆ. ॥ ೨೫ ॥

ಮೈತದ್ವಿಧಸ್ಯಾಕರುಣಸ್ಯ ನಾಮ ಭೂ-
ದಕ್ರೂರ ಇತ್ಯೇತದತೀವ ದಾರುಣಃ ।
ಯೋಽಸಾವನಾಶ್ವಾಸ್ಯ ಸುದುಃಖಿತಂ ಜನಂ
ಪ್ರಿಯಾತ್ಪ್ರಿಯಂ ನೇಷ್ಯತಿ ಪಾರಮಧ್ವನಃ ॥ ೨೬ ॥

ನೋಡಿ ಸಖಿಯರೇ! ಈ ಅಕ್ರೂರನಾದರೋ ತನ್ನ ಹೆಸರಿಗೆ ವಿರುದ್ಧವಾಗಿ ಅತಿಕ್ರೂರನಾಗಿದ್ದಾನೆ. ಶ್ರೀಕೃಷ್ಣನ ವಿರಹದಿಂದ ಅತಿಯಾಗಿ ದುಃಖಿಸುತ್ತಿರುವ ನಮ್ಮನ್ನು ಸಿಹಿಮಾತುಗಳಿಂದ ಸಂತೈಸುತ್ತಲೂ ಇಲ್ಲ, ನಮಗೆ ಅತ್ಯಂತ ಪ್ರಿಯವಾದ ಏಕಮಾತ್ರ ಸ್ವಾಮಿಯಾದ ಶ್ರೀಕೃಷ್ಣನನ್ನು ದೂರ ಕರೆದುಕೊಂಡು ಹೋಗುತ್ತಿದ್ದಾನೆ. ಛೀ! ಇಂತಹ ಕ್ರೂರಿಗೆ ಅಕ್ರೂರನೆಂಬ ಹೆಸರು ಖಂಡಿತವಾಗಿಯೂ ಇರಬಾರದು. ॥ ೨೬ ॥

ಅನಾರ್ದ್ರಧೀರೇಷ ಸಮಾಸ್ಥಿತೋ ರಥಂ
ತಮನ್ವಮೀ ಚ ತ್ವರಯಂತಿ ದುರ್ಮದಾಃ ।
ಗೋಪಾ ಅನೋಭಿಃ ಸ್ಥವಿರೈರುಪೇಕ್ಷಿತಂ
ದೈವಂ ಚ ನೋಽದ್ಯ ಪ್ರತಿಕೂಲಮೀಹತೇ ॥ ೨೭ ॥

ಸಖೀ! ನಮ್ಮ ಈ ಶ್ಯಾಮಸುಂದರನೂ ಕಡಿಮೆ ನಿಷ್ಠುರನಲ್ಲ, ನೋಡು, ನೋಡು! ಅವನು ರಥದಲ್ಲಿ ಕುಳಿತುಕೊಂಡನು. ಉತ್ಸಾಹಿಗಳಾದ ಗೋಪಾಲಕರೂ ಎತ್ತಿನ ಬಂಡಿಗಳಲ್ಲಿ ಅವನೊಂದಿಗೆ ಹೋಗಲು ಎಷ್ಟು ಅವಸರಪಡಿಸುತ್ತಿದ್ದಾರೆ. ನಿಜವಾಗಿ ಇವರು ಮೂರ್ಖರೇ ಆಗಿದ್ದಾರೆ. ಇನ್ನು ನಮ್ಮ ಹಿರಿಯ–ವೃದ್ಧರೂ ಇವರ ಅವಸರವನ್ನು ನೋಡಿ – 'ಹೋಗಿ ಮನಸ್ಸಿಗೆ ಬಂದ ಹಾಗೆ ಮಾಡಿರಿ' ಎಂದು ಉಪೇಕ್ಷಿಸಿ ಬಿಟ್ಟಿದ್ದಾರೆ. ಈಗ ನಾವೇನು ಮಾಡಬಹುದು ? ಇಂದು ವಿಧಿಯು ಪೂರ್ಣವಾಗಿ ನಮಗೆ ಪ್ರತಿಕೂಲವಾಗಿದೆ. ॥ ೨೭ ॥

ನಿವಾರಯಾಮಃ ಸಮುಪೇತ್ಯ ಮಾಧವಂ
ಕಿಂ ನೋಽಕರಿಷ್ಯನ್ ಕುಲವೃದ್ಧಬಾಂಧವಾಃ ।
ಮುಕುಂದಸಂಗಾನ್ನಿಮಿಷಾರ್ಧದುಸ್ತ್ಯಜಾದ್
ದೈವೇನ ವಿಧ್ವಂಸಿತದೀನಚೇತಸಾಮ್ ॥ ೨೮ ॥

ಸಖಿಯರೇ! ನಾವೆಲ್ಲರೂ ಮುಂದೆ ಹೋಗಿ ನಮ್ಮ ಪ್ರಾಣಪ್ರಿಯನಾದ ಶ್ಯಾಮಸುಂದರನನ್ನು ತಡೆದು ಬಿಡುವಾ. ಕುಲದ ವೃದ್ಧರಾಗಲೀ, ನೆಂಟರಿಷ್ಟರಾಗಲೀ ನಮಗೇನು ಮಾಡಬಲ್ಲರು ? ನಮಗಂತೂ ಅರ್ಧನಿಮಿಷವಾದರೂ ಮುಕುಂದನನ್ನು ಬಿಟ್ಟಿರಲು ಸಾಧ್ಯವೇ ಇಲ್ಲ. ದೈವವಾದರೋ ನಮ್ಮ ಪ್ರಿಯತಮನೊಡನೆ ವಿರಹವನ್ನು ಕಲ್ಪಿಸಿ ಬಡಪಾಯಿಗಳಾದ ನಮ್ಮ ಬುದ್ಧಿಯನ್ನು ಹಾಳು ಮಾಡಿಬಿಟ್ಟಿದೆ. ॥ ೨೮ ॥

ಯಸ್ಯಾನುರಾಗಲಲಿತಸ್ಮಿತವಲ್ಗುಮಂತ್ರ-
ಲೀಲಾವಲೋಕಪರಿರಂಭಣರಾಸಗೋಷ್ಠ್ಯಾಮ್ ।
ನೀತಾಃ ಸ್ಮ ನಃ ಕ್ಷಣಮಿವ ಕ್ಷಣದಾ ವಿನಾ ತಂ
ಗೋಪ್ಯಃ ಕಥಂ ನ್ವತಿತರೇಮ ತಮೋ ದುರಂತಮ್ ॥ ೨೯ ॥

ಗೋಪಿಯರೇ! ನಾವು ನಮ್ಮ ಪ್ರಾಣ ಪ್ರಿಯನಾದ ಶ್ರೀಕೃಷ್ಣನ ಪ್ರೇಮಪೂರ್ಣವಾದ ಮತ್ತು ಚೇತೋಹಾರಿಯಾದ ಕಿರುನಗೆ, ರಹಸ್ಯದಲ್ಲಿ ಅವನಾಡುತ್ತಿದ್ದ ಪ್ರೇಮಾಲಾಪಗಳು, ವಿಲಾಸಪೂರ್ಣ ಕಡೆಗಣ್ಣ ನೋಟ, ಪ್ರೇಮಾಲಿಂಗನ ಇತ್ಯಾದಿಗಳಿಂದ ರಾಸಕ್ರೀಡೆಯಲ್ಲಿ ಸುದೀರ್ಘವಾದ ರಾತ್ರಿಯನ್ನು ಕ್ಷಣದಂತೆ ಕಳೆಯುತ್ತಿದ್ದೆವು. ಆದರೆ ಈಗ ಅವನಿಲ್ಲದ ದುರಂತರೂಪವಾದ ವಿರಹವೆಂಬ ಅಂಧಕಾರವನ್ನು ಹೇಗೆ ತಾನೇ ದಾಟಿಹೋಗುವೆವು ? ॥ ೨೯ ॥

ಯೋಽಹ್ನಃ ಕ್ಷಯೇ ವ್ರಜಮನಂತಸಖಃ ಪರೀತೋ
ಗೋಪೈರ್ವಿಶನ್ ಖುರರಜಶ್ಛುರಿತಾಲಕಸ್ರಕ್ ।
ವೇಣುಂ ಕ್ವಣನ್ ಸ್ಮಿತಕಟಾಕ್ಷನಿರೀಕ್ಷಣೇನ
ಚಿತ್ತಂ ಕ್ಷಿಣೋತ್ಯಮುಮೃತೇ ನು ಕಥಂ ಭವೇಮ ॥ ೩೦ ॥

ನಮ್ಮ ಪ್ರಿಯತಮನು ಅನುದಿನವೂ ಸಾಯಂಕಾಲವಾಗುತ್ತಲೇ ಬಲರಾಮನೊಡನೆ ಗೋಪಾಲಕರಿಂದ ಪರಿವೃತನಾಗಿ ಬರುತ್ತಿರುವಾಗ ಅವನ ಕಪ್ಪಾದ ಗುಂಗುರು ಕೂದಲು, ವನಮಾಲೆಯು ಹಸುಗಳ ಗೊರಸುಗಳಿಂದ ಎದ್ದ ಧೂಳಿನಿಂದ ಮುಚ್ಚಿಹೋಗುತ್ತಿತ್ತು. ಅವನು ಕೊಳಲನ್ನೂದುತ್ತಾ, ಮುಗುಳ್ನಗೆಯಿಂದಲೂ, ಕಡೆಗಣ್ಣ ನೋಟದಿಂದಲೂ ನಮ್ಮ ಮನಸ್ಸನ್ನು ಸೂರೆ ಮಾಡುತ್ತಿದ್ದನು. ಅಂತಹವನನ್ನು ಬಿಟ್ಟು ನಾವು ಬದುಕಿರುವುದಾದರೂ ಹೇಗೆ? ॥ ೩೦ ॥

ಶ್ರೀಶುಕ ಉವಾಚ

ಏವಂ ಬ್ರುವಾಣಾ ವಿರಹಾತುರಾ ಭೃಶಂ
ವ್ರಜಸ್ತ್ರಿಯಃ ಕೃಷ್ಣವಿಷಕ್ತಮಾನಸಾಃ ।
ವಿಸೃಜ್ಯ ಲಜ್ಜಾಂ ರುರುದುಃ ಸ್ಮ ಸುಸ್ವರಂ
ಗೋವಿಂದ ದಾಮೋದರ ಮಾಧವೇತಿ ॥ ೩೧ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ - ಪರೀಕ್ಷಿತನೇ! ವಿರಹಪೀಡಿತರಾಗಿ ಗೋಪಿಕೆಯರು ಬಾಯಿಂದ ಹೀಗೆ ಹೇಳುತ್ತಿದ್ದರೂ ಅವರ ಮನಸ್ಸುಗಳೆಲ್ಲವೂ ಪ್ರಿಯತಮನಾದ ಶ್ರೀಕೃಷ್ಣನ ಅಂಗಸ್ಪರ್ಶ, ಆಲಿಂಗನದಲ್ಲಿಯೇ ಲೀನವಾಗಿ ಬಿಟ್ಟಿತ್ತು. ಅವರೆಲ್ಲರೂ ಲಜ್ಜೆಯನ್ನು ಪರಿತ್ಯಜಿಸಿ 'ಗೋವಿಂದ! ದಾಮೋದರ! ಮಾಧವ! ನಮ್ಮನ್ನು ಬಿಟ್ಟು ಹೋಗಬೇಡ. ನೀನಿಲ್ಲದೆ ನಾವು ಬದುಕಿರಲಾರೆವು' ಎಂದು ಹೇಳುತ್ತಾ ಗಟ್ಟಿಯಾಗಿ ಸುಸ್ವರವಾಗಿ ಅಳತೊಡಗಿದರು. ॥ ೩೧ ॥

ಸ್ತ್ರೀಣಾಮೇವಂ ರುದಂತೀನಾಮುದಿತೇ ಸವಿತರ್ಯಥ ।
ಅಕ್ರೂರಶ್ಚೋದಯಾಮಾಸ ಕೃತಮೈತ್ರಾದಿಕೋ ರಥಮ್ ॥ ೩೨ ॥

ಗೋಪಿಯರು ಹೀಗೆ ಅಳುತ್ತಾ ಇದ್ದರು. ಅಳುತ್ತಾ-ಅಳುತ್ತಾ ಬೆಳಗು ಹರಿಯಿತು. ಅಕ್ರೂರನು ಸಂಧ್ಯಾವಂದನೆ ಮುಂತಾದ ನಿತ್ಯಕರ್ಮಗಳನ್ನು ಪೂರೈಸಿ ಬಲರಾಮ-ಶ್ರೀಕೃಷ್ಣರೊಂದಿಗೆ ರಥವನ್ನು ಹತ್ತಿದನು ಹಾಗೂ ಅದನ್ನು ಮುನ್ನಡೆಸಿದನು. ॥ ೩೨ ॥

ಗೋಪಾಸ್ತಮನ್ವಸಜ್ಜಂತ ನಂದಾದ್ಯಾಃ ಶಕಟೈಸ್ತತಃ ।
ಆದಾಯೋಪಾಯನಂ ಭೂರಿ ಕುಂಭಾನ್ ಗೋರಸಸಂಭೃತಾನ್ ॥ ೩೩ ॥

ನಂದಗೋಪನೇ ಮೊದಲಾದ ಗೋಪರು ಹಾಲು, ಮೊಸರು, ತುಪ್ಪ ಬೆಣ್ಣೆ ಮುಂತಾದವುಗಳು ತುಂಬಿದ ಗಡಿಗೆಗಳನ್ನು ಹಾಗೂ ಕಾಣಿಕೆಯಾಗಿ ಕೊಡಲು ಇತರ ವಸ್ತುಗಳನ್ನು ಎತ್ತಿಕೊಂಡು ಎತ್ತಿನ ಗಾಡಿಗಳಲ್ಲಿ ಕುಳಿತುಕೊಂಡು ಅವರ ಹಿಂದೆ-ಹಿಂದೆಯೇ ಹೊರಟರು. ॥ ೩೩ ॥

ಗೋಪ್ಯಶ್ಚ ದಯಿತಂ ಕೃಷ್ಣಮನುವ್ರಜ್ಯಾನುರಂಜಿತಾಃ ।
ಪ್ರತ್ಯಾದೇಶಂ ಭಗವತಃ ಕಾಂಕ್ಷಂತ್ಯಶ್ಚಾವತಸ್ಥಿರೇ ॥ ೩೪ ॥

ಪ್ರಿಯತಮನಾದ ಶ್ರೀಕೃಷ್ಣನ ರಥವನ್ನೇ ಅನುಸರಿಸಿ ಹೋಗುತ್ತಿದ್ದ ಗೋಪಿಯರು ಶ್ರೀಕೃಷ್ಣನ ಮುಗುಳ್ನಗೆ, ಕುಡಿನೋಟ, ಇವುಗಳಿಂದ, ಪ್ರೇಮಪೂರ್ಣವಾದ ಭಾವ-ಭಂಗಿಗಳಿಂದ ಸಂತೋಷಗೊಂಡಿದ್ದರೂ ಭಗವಂತನ ಆದೇಶವನ್ನು ಪಡೆಯುವ ಇಚ್ಛೆಯಿಂದ ಅಲ್ಲೆ ನಿಂತುಬಿಟ್ಟರು. ॥ ೩೪ ॥

ತಾಸ್ತಥಾ ತಪ್ಯತೀರ್ವೀಕ್ಷ್ಯ ಸ್ವಪ್ರಸ್ಥಾನೇ ಯದೂತ್ತಮಃ ।
ಸಾಂತ್ವಯಾಮಾಸ ಸಪ್ರೇಮೈರಾಯಾಸ್ಯ ಇತಿ ದೌತ್ಯಕೈಃ ॥ ೩೫ ॥

ತಾನು ಮಥುರೆಗೆ ಹೋಗುವುದರಿಂದ ಈ ಗೋಪಿಯರ ಹೃದಯದಲ್ಲಿ ವಿರಹವೇದನೆ ಉಂಟಾಗಿದೆ ಎಂದು ಯದುವಂಶ ಶಿರೋಮಣಿ ಭಗವಾನ್ ಶ್ರೀಕೃಷ್ಣನು ನೋಡಿದನು. ಆಗ ದೂತನ ಮೂಲಕ - 'ನಾನು ಪುನಃ ಬರುತ್ತೇನೆ. ನಿಮ್ಮನ್ನು ಬಿಟ್ಟುಹೋಗುವುದಿಲ್ಲ' ಎಂಬ ಪ್ರೇಮಸಂದೇಶವನ್ನು ಕಳಿಸಿ ಧೈರ್ಯತುಂಬಿದನು. ॥ ೩೫ ॥

ಯಾವದಾಲಕ್ಷ್ಯತೇ ಕೇತುರ್ಯಾವದ್ರೇಣೂ ರಥಸ್ಯ ಚ ।
ಅನುಪ್ರಸ್ಥಾಪಿತಾತ್ಮಾನೋ ಲೇಖ್ಯಾನೀವೋಪಲಕ್ಷಿತಾಃ ॥ ೩೬ ॥

ರಥದ ಧ್ವಜ ಮತ್ತು ಗಾಲಿಗಳಿಂದೆದ್ದ ಧೂಳು ಕಾಣಿಸುವವರೆಗೆ ಆ ಗೋಪಿಯರು ಚಿತ್ರಾರ್ಪಿತರಂತೆ ಸ್ತಬ್ಧರಾಗಿ ನಿಂತಿದ್ದರು. ಆದರೆ ಅವರ ಚಿತ್ತವು ಪ್ರಾಣವಲ್ಲಭನಾದ ಶ್ರೀಕೃಷ್ಣನೊಂದಿಗೇ ಹೊರಟುಹೋಗಿತ್ತು. ॥ ೩೬ ॥

ತಾ ನಿರಾಶಾ ನಿವವೃತುರ್ಗೋವಿಂದವಿನಿವರ್ತನೇ ।
ವಿಶೋಕಾ ಅಹನೀ ನಿನ್ಯುರ್ಗಾಯಂತ್ಯಃ ಪ್ರಿಯಚೇಷ್ಟಿತಮ್ ॥ ೩೭ ॥

ಬಹುಶಃ ಶ್ರೀಕೃಷ್ಣನು ಸ್ವಲ್ಪದೂರ ಹೋಗಿ ಮರಳಿಬರುವನೆಂಬ ಆಸೆ ಅವರ ಮನಸ್ಸಿನಲ್ಲಿತ್ತು. ಆದರೆ ಅವನು ಹಿಂದಿರುಗಿ ಬಾರದಿದ್ದಾಗ ಅವರು ನಿರಾಶರಾಗಿ ತಮ್ಮ-ತಮ್ಮ ಮನೆಗಳಿಗೆ ಹಿಂದಿರುಗಿದರು. ಪರೀಕ್ಷಿತನೇ! ಗೋಪಿಯರು ಹಗಲು-ರಾತ್ರಿಗಳನ್ನದೆ ತಮ್ಮ ಪ್ರಿಯಕರ ಶ್ಯಾಮಸುಂದರನ ಲೀಲೆಗಳನ್ನು ಹಾಡಿಕೊಳ್ಳುತ್ತಾ ತಮ್ಮ ವಿರಹತಾಪವನ್ನು ತಗ್ಗಿಸಿಕೊಳ್ಳುತ್ತಿದ್ದರು. ॥ ೩೭ ॥

ಭಗವಾನಪಿ ಸಂಪ್ರಾಪ್ತೋ ರಾಮಾಕ್ರೂರಯುತೋ ನೃಪ ।
ರಥೇನ ವಾಯುವೇಗೇನ ಕಾಲಿಂದೀಮಘನಾಶಿನೀಮ್ ॥ ೩೮ ॥

ತತ್ರೋಪಸ್ಪೃಶ್ಯ ಪಾನೀಯಂ ಪೀತ್ವಾ ಮೃಷ್ಟಂ ಮಣಿಪ್ರಭಮ್ ।
ವೃಕ್ಷಷಂಡಮುಪವ್ರಜ್ಯ ಸರಾಮೋ ರಥಮಾವಿಶತ್ ॥ ೩೯ ॥

ಅಕ್ರೂರಸ್ತಾವುಪಾಮಂತ್ರ್ಯ ನಿವೇಶ್ಯ ಚ ರಥೋಪರಿ ।
ಕಾಲಿಂದ್ಯಾ ಹ್ರದಮಾಗತ್ಯ ಸ್ನಾನಂ ವಿಧಿವದಾಚರತ್ ॥ ೪೦ ॥

ನಿಮಜ್ಜ್ಯ ತಸ್ಮಿನ್ ಸಲಿಲೇ ಜಪನ್ ಬ್ರಹ್ಮ ಸನಾತನಮ್ ।
ತಾವೇವ ದದೃಶೇಽಕ್ರೂರೋ ರಾಮಕೃಷ್ಣೌ ಸಮನ್ವಿತೌ ॥ ೪೧ ॥

ತೌ ರಥಸ್ಥೌ ಕಥಮಿಹ ಸುತಾವಾನಕದುಂದುಭೇಃ ।
ತರ್ಹಿ ಸ್ವಿತ್ ಸ್ಯಂದನೇ ನ ಸ್ತ ಇತ್ಯುನ್ಮಜ್ಜ್ಯ ವ್ಯಚಷ್ಟ ಸಃ ॥ ೪೨ ॥

ತತ್ರಾಪಿ ಚ ಯಥಾಪೂರ್ವಮಾಸೀನೌ ಪುನರೇವ ಸಃ ।
ನ್ಯಮಜ್ಜದ್ದರ್ಶನಂ ಯನ್ಮೇ ಮೃಷಾ ಕಿಂ ಸಲಿಲೇ ತಯೋಃ ॥ ೪೩ ॥

ಭೂಯಸ್ತತ್ರಾಪಿ ಸೋಽದ್ರಾಕ್ಷೀತ್ ಸ್ತೂಯಮಾನಮಹೀಶ್ವರಮ್ ।
ಸಿದ್ಧಚಾರಣಗಂಧರ್ವೈರಸುರೈರ್ನತಕಂಧರೈಃ ॥ ೪೪ ॥

ಸಹಸ್ರಶಿರಸಂ ದೇವಂ ಸಹಸ್ರಫಣಮೌಲಿನಮ್ ।
ನೀಲಾಂಬರಂ ಬಿಸಶ್ವೇತಂ ಶೃಂಗೈಃ ಶ್ವೇತಮಿವ ಸ್ಥಿತಮ್ ॥ ೪೫ ॥

ತಸ್ಯೋತ್ಸಂಗೇ ಘನಶ್ಯಾಮಂ ಪೀತಕೌಶೇಯವಾಸಸಮ್ ।
ಪುರುಷಂ ಚತುರ್ಭುಜಂ ಶಾಂತಂ ಪದ್ಮಪತ್ರಾರುಣೇಕ್ಷಣಮ್ ॥ ೪೬ ॥

ಚಾರುಪ್ರಸನ್ನವದನಂ ಚಾರುಹಾಸನಿರೀಕ್ಷಣಮ್ ।
ಸುಭ್ರೂನ್ನಸಂ ಚಾರುಕರ್ಣಂ ಸುಕಪೋಲಾರುಣಾಧರಮ್ ॥ ೪೭ ॥

ಪರೀಕ್ಷಿತನೇ! ಇತ್ತ ಭಗವಾನ್ ಶ್ರೀಕೃಷ್ಣನು ಬಲರಾಮ ಮತ್ತು ಅಕ್ರೂರನೊಂದಿಗೆ ವಾಯುವೇಗಕ್ಕೆ ಸಮಾನವಾದ ರಥದಲ್ಲಿ ಕುಳಿತು ಪಾಪನಾಶಿನಿಯಾದ ಯಮುನಾನದಿಯ ತೀರವನ್ನು ತಲುಪಿದನು. ॥ ೩೮ ॥ ಅಲ್ಲಿ ಅವರು ಕೈ-ಕಾಲು-ಮುಖ ತೊಳೆದು ಮರಕತ ಮಣಿಯಂತಿರುವ ಹಾಗೂ ಅಮೃತದಂತೆ ಸಿಹಿಯಾದ ಯಮುನೆಯ ನೀರನ್ನು ಕುಡಿದರು. ಅನಂತರ ಬಲರಾಮನೊಂದಿಗೆ ಶ್ರೀಕೃಷ್ಣನು ವೃಕ್ಷಗಳ ನೆರಳಲ್ಲಿ ನಿಲ್ಲಿಸಿದ್ದ ರಥವನ್ನು ಏರಿದನು. ॥ ೩೯ ॥ ಅಕ್ರೂರನು ಸಹೋದರರಿಬ್ಬರನ್ನು ರಥದಲ್ಲಿ ಕುಳ್ಳಿರಿಸಿ, ಅವರಿಂದ ಅಪ್ಪಣೆಯನ್ನು ಪಡೆದು, ಯಮುನೆಯ ಮಡುವಿಗೆ (ಅನಂತ ತೀರ್ಥ ಅಥವಾ ಬ್ರಹ್ಮಹ್ರದ) ಹೋಗಿ ವಿಧಿವತ್ತಾಗಿ ಸ್ನಾನಮಾಡತೊಡಗಿದನು. ॥ ೪೦ ॥ ಸನಾತನವಾದ ಬ್ರಹ್ಮಮಂತ್ರ (ಗಾಯತ್ರಿ)ವನ್ನು ಜಪಿಸುತ್ತಾ ಅಕ್ರೂರನು ನೀರಿನಲ್ಲಿ ಮುಳುಗಿದಾಗ ಅಲ್ಲಿಯೇ ಶ್ರೀಕೃಷ್ಣ-ಬಲರಾಮರು ಕುಳಿತಿರುವುದನ್ನು ನೋಡಿದನು. ॥ ೪೧ ॥ ವಸುದೇವನ ಪುತ್ರರಿಬ್ಬರನ್ನೂ ನಾನು ರಥದಲ್ಲಿ ಕುಳ್ಳಿರಿಸಿ ಬಂದಿದ್ದೇನೆ. ಈಗ ಅವರು ಇಲ್ಲಿಗೆ ಹೇಗೆ ಬಂದರು? ಎಂಬ ಸಂದೇಹವು ಅಕ್ರೂರನ ಮನಸ್ಸಿಗೆ ಬಂತು. ಹಾಗಾದರೆ ಅವರು ರಥದಲ್ಲಿ ಇರಲಾರರು ಎಂದೆನಿಸಿ ಅವನು ನೀರಿನಿಂದ ತಲೆಯನ್ನು ಮೇಲೆತ್ತಿ ನೋಡಿದನು. ॥ ೪೨ ॥ ಬಲರಾಮ-ಶ್ರೀಕೃಷ್ಣರಿಬ್ಬರೂ ಹಿಂದಿನಂತೆಯೇ ರಥದಲ್ಲಿ ಕುಳಿತಿರುವರು. ಹಾಗಾದರೆ ನಾನು ನೀರಿನಲ್ಲಿ ನೋಡಿದುದು ನನ್ನ ಭ್ರಮೆಯಾಗಿರಬಹುದು ಎಂದು ಯೋಚಿಸಿ ಪುನಃ ನೀರಿನಲ್ಲಿ ಮುಳುಗಿದನು. ॥ ೪೩ ॥ ಆದರೆ ಪುನಃ ಅಲ್ಲಿ ನೋಡುತ್ತಾನೆ – ಸಾಕ್ಷಾತ್ ಅನಂತನಾದ ಆದಿಶೇಷನು ವಿರಾಜಮಾನನಾಗಿದ್ದಾನೆ. ಸಿದ್ಧರು, ಚಾರಣರು, ಗಂಧರ್ವರು ಮತ್ತು ಅಸುರರು ತಮ್ಮ ತಲೆಬಗ್ಗಿಸಿಕೊಂಡು ಅವನನ್ನು ಸ್ತುತಿಸುತ್ತಿದ್ದಾರೆ. ॥ ೪೪ ॥ ಆ ಆದಿಶೇಷನಿಗೆ ಸಾವಿರ ತಲೆ (ಹೆಡೆ)ಗಳಿದ್ದು ಪ್ರತಿಯೊಂದು ಹೆಡೆಯ ಮೇಲೆ ಕಿರೀಟಗಳು ಶೋಭಿಸುತ್ತವೆ. ಕಮಲ ನಾಳದಂತಿರುವ ಉಜ್ವಲವಾದ ಶರೀರದ ಮೇಲೆ ನೀಲಾಂಬರವನ್ನು ಧರಿಸಿರುವನು. ಸಾವಿರ ಶಿಖರಗಳಿಂದ ಕೂಡಿದ ಶ್ವೇತಪರ್ವತದಂತೆ ಶೋಭಾಯಮಾನನಾಗಿದ್ದಾನೆ. ॥ ೪೫ ॥ ಅಂತಹ ಆದಿಶೇಷನ ಮೇಲೆ ದಟ್ಟವಾದ ಮೇಘದಂತಿರುವ ಶ್ರೀಕೃಷ್ಣನು ವಿರಾಜಮಾನನಾಗಿದ್ದು ಅವನು ರೇಷ್ಮೆಯ ಪೀತಾಂಬರವನ್ನು ಧರಿಸಿದ್ದು, ಚತುರ್ಭುಜನಾಗಿದ್ದು ಶಾಂತವಾದ ಮುಖಮುದ್ರೆಯನ್ನು ಹೊಂದಿದ್ದು, ಕಮಲದ ಎಸಳಿನಂತೆ ನಸುಗೆಂಪಾದ ಕಣ್ಣುಗಳಿಂದ ಕೂಡಿದ ದಿವ್ಯಮೂರ್ತಿಯನ್ನು ಅಕ್ರೂರನು ನೋಡಿದನು. ॥ ೪೬ ॥ ಅವನ ವದನವು ಅತ್ಯಂತ ಮನೋಹರವಾಗಿದ್ದು ಪ್ರಸನ್ನವಾಗಿತ್ತು. ಅವನ ಮಧುರ ಹಾಸ್ಯ ಮತ್ತು ಕಟಾಕ್ಷವೀಕ್ಷಣವು ಮನಸ್ಸನ್ನು ಸೂರೆಗೊಳ್ಳುತ್ತಿದ್ದವು. ಅಂದವಾದ ಹುಬ್ಬು, ನೀಳವಾದ ಮೂಗು, ಸುಂದರವಾದ ಕಿವಿಗಳು, ಹೊಳೆಯುವ ಕಪೋಲಗಳಿಂದ ಕೂಡಿದ್ದು, ತೊಂಡೆ ಹಣ್ಣಿನಂತೆ ತುಟಿಗಳು ಕೆಂಪಾಗಿದ್ದವು. ॥ ೪೭ ॥

ಪ್ರಲಂಬಪೀವರಭುಜಂ ತುಂಗಾಂಸೋರಃಸ್ಥಲಶ್ರಿಯಮ್ ।
ಕಂಬುಕಂಠಂ ನಿಮ್ನನಾಭಿಂ ವಲಿಮತ್ಪಲ್ಲವೋದರಮ್ ॥ ೪೮ ॥

ಬೃಹತ್ಕಟಿತಟಶ್ರೋಣಿಕರಭೋರುದ್ವಯಾನ್ವಿತಮ್ ।
ಚಾರುಜಾನುಯುಗಂ ಚಾರುಜಂಘಾಯುಗಲಸಂಯುತಮ್ ॥ ೪೯ ॥

ತುಂಗಗುಲ್ಫಾರುಣನಖವ್ರಾತದೀಧಿತಿಭಿರ್ವೃತಮ್ ।
ನವಾಂಗುಲ್ಯಂಗುಷ್ಠದಲೈರ್ವಿಲಸತ್ಪಾದಪಂಕಜಮ್ ॥ ೫೦ ॥

ಸುಮಹಾರ್ಹಮಣಿವ್ರಾತಕಿರೀಟಕಟಕಾಂಗದೈಃ ।
ಕಟಿಸೂತ್ರಬ್ರಹ್ಮಸೂತ್ರಹಾರನೂಪುರಕುಂಡಲೈಃ ॥ ೫೧ ॥

ಭ್ರಾಜಮಾನಂ ಪದ್ಮಕರಂ ಶಂಖಚಕ್ರಗದಾಧರಮ್ ।
ಶ್ರೀವತ್ಸವಕ್ಷಸಂ ಭ್ರಾಜತ್ಕೌಸ್ತುಭಂ ವನಮಾಲಿನಮ್ ॥ ೫೨ ॥

ಸುನಂದನಂದಪ್ರಮುಖೈಃ ಪಾರ್ಷದೈಃ ಸನಕಾದಿಭಿಃ ।
ಸುರೇಶೈರ್ಬ್ರಹ್ಮರುದ್ರಾದ್ಯೈರ್ನವಭಿಶ್ಚ ದ್ವಿಜೋತ್ತಮೈಃ ॥ ೫೩ ॥

ಪ್ರಹ್ಲಾದನಾರದವಸುಪ್ರಮುಖೈರ್ಭಾಗವತೋತ್ತಮೈಃ ।
ಸ್ತೂಯಮಾನಂ ಪೃಥಗ್ಭಾವೈರ್ವಚೋಭಿರಮಲಾತ್ಮಭಿಃ ॥ ೫೪ ॥

ಶ್ರಿಯಾ ಪುಷ್ಟ್ಯಾ ಗಿರಾ ಕಾಂತ್ಯಾ ಕೀರ್ತ್ಯಾ ತುಷ್ಟ್ಯೇಲಯೋರ್ಜಯಾ ।
ವಿದ್ಯಯಾವಿದ್ಯಯಾ ಶಕ್ತ್ಯಾ ಮಾಯಯಾ ಚ ನಿಷೇವಿತಮ್ ॥ ೫೫ ॥

ವಿಲೋಕ್ಯ ಸುಭೃಶಂ ಪ್ರೀತೋ ಭಕ್ತ್ಯಾ ಪರಮಯಾ ಯುತಃ ।
ಹೃಷ್ಯತ್ತನೂರುಹೋ ಭಾವಪರಿಕ್ಲಿನ್ನಾತ್ಮಲೋಚನಃ ॥ ೫೬ ॥

ಗಿರಾ ಗದ್ಗದಯಾಸ್ತೌಷೀತ್ ಸತ್ತ್ವಮಾಲಂಬ್ಯ ಸಾತ್ವತಃ ।
ಪ್ರಣಮ್ಯ ಮೂರ್ಧ್ನಾವಹಿತಃ ಕೃತಾಂಜಲಿಪುಟಃ ಶನೈಃ ॥ ೫೭ ॥

ತೋಳುಗಳು ನೀಳವಾಗಿದ್ದು ದಪ್ಪವಾಗಿದ್ದವು. ಉಬ್ಬಿದ ವಕ್ಷಃಸ್ಥಳವಿದ್ದು ಅದು ಲಕ್ಷ್ಮೀದೇವಿಗೆ ನಿವಾಸಸ್ಥಾನವಾಗಿತ್ತು. ಕುತ್ತಿಗೆಯು ಸುಳಿಶಂಖದಂತೆ ಕಂಗೊಳಿಸುತ್ತಿತ್ತು. ಆಳವಾದ ನಾಭಿಕಮಲವಿದ್ದು, ತ್ರಿವಳಿಗಳಿಂದ ಕೂಡಿದ ಉದರವು ಅರಳಿಯ ಎಲೆಯಂತೆ ಶೋಭಿಸುತ್ತಿತ್ತು. ॥ ೪೮ ॥ ಕೃಶವಾದ ಸೊಂಟವಿದ್ದು ನಿತಂಬಗಳು ಸ್ಥೂಲವಾಗಿದ್ದವು. ಆನೆಯ ಸೊಂಡಿಲಿನಂತಿರುವ ತೊಡೆಗಳು, ಸುಂದರವಾದ ಮೊಣಕಾಲು-ಮೊಣಕಾಲುಗಳಿದ್ದವು. ಪಾದಗಳ ಹರಡುಗಳು ಎತ್ತರವಾಗಿದ್ದವು. ಕೆಂಪಾದ ಕಾಲುಗುರುಗಳಿಂದ ಜ್ಯೋತಿರ್ಮಯ ಕಿರಣಗಳು ಚಿಮ್ಮುತ್ತಿದ್ದವು. ಚರಣಕಮಲಗಳ ಹೆಬ್ಬೆರಳು ಮತ್ತು ಬೆರಳುಗಳು ಕಮಲದ ಹೊಚ್ಚ ಹೊಸ ಎಸಳುಗಳಂತೆ ಶೋಭಿತವಾಗಿದ್ದವು. ॥ ೪೯-೫೦ ॥ ಬಹುಮೂಲ್ಯವಾದ ರತ್ನಖಚಿತವಾದ ಕಿರೀಟವಿದ್ದಿತು. ಕಡಗ, ಕಂಕಣ, ತೋಳ್ಬಳೆಗಳೂ, ಸುವರ್ಣಮಯವಾದ ಉಡಿದಾರವಿತ್ತು, ಹಾರ, ನೂಪುರ, ಕುಂಡಲ ಹಾಗೂ ಯಜ್ಞೋಪವೀತದಿಂದ ಆ ದಿವ್ಯ ಮೂರ್ತಿಯು ಅಲಂಕೃತವಾಗಿದೆ. ಒಂದು ಕೈಯಲ್ಲಿ ಪದ್ಮವಿದ್ದು ಉಳಿದ ಮೂರು ಕೈಗಳಲ್ಲಿ ಶಂಖ, ಚಕ್ರ, ಗದೆ ಶೋಭಿಸುತ್ತಿದ್ದವು. ವಕ್ಷಸ್ಥಳದಲ್ಲಿ ಶ್ರೀವತ್ಸದ ಚಿಹ್ನೆ, ಕೊರಳಲ್ಲಿ ಕೌಸ್ತುಭ ಮಣಿಯೂ, ವನಮಾಲೆಯು ಬೆಳಗುತ್ತಿದ್ದವು. ॥ ೫೧-೫೨ ॥ ನಂದ-ಸುನಂದರೇ ಮೊದಲಾದ ಪಾರ್ಷದರು ತಮ್ಮ ಒಡೆಯನೆಂದೂ, ಸನಕಾದಿ ಮಹರ್ಷಿಗಳು ಪರಬ್ರಹ್ಮನೆಂದೂ, ಬ್ರಹ್ಮ-ರುದ್ರಾದಿ ದೇವತೆಗಳು ಸರ್ವೇಶ್ವರನೆಂದೂ, ಮರೀಚ್ಯಾದಿ ಒಂಭತ್ತು ಬ್ರಾಹ್ಮಣರು ಪ್ರಜಾಪತಿಯೆಂದೂ, ಪ್ರಹ್ಲಾದ-ನಾರದಾದಿ ಭಗವದ್ಭಕ್ತರು ಹಾಗೂ ಅಷ್ಟವಸುಗಳು ಪರಮಪ್ರಿಯತಮ ಭಗವಂತನೆಂದೂ ತಿಳಿದು ಭಿನ್ನ-ಭಿನ್ನ ಭಾವಗಳಿಂದ ನಿರ್ದೋಷವಾದ ವೇದವಾಣಿಗಳಿಂದ ಭಗವಂತನನ್ನು ಸ್ತುತಿಸುತ್ತಿದ್ದಾರೆ. ॥ ೫೩-೫೪ ॥ ಜೊತೆಗೇ ಲಕ್ಷ್ಮೀ, ಪುಷ್ಟಿ, ಸರಸ್ವತಿ, ಕಾಂತಿ, ಕೀರ್ತಿ, ತುಷ್ಟಿ (ಅರ್ಥಾತ್ – ಐಶ್ವರ್ಯ, ಬಲ, ಜ್ಞಾನ, ಶ್ರೀ, ಯಶ ಮತ್ತು ವೈರಾಗ್ಯ – ಈ ಷಡೈಶ್ವರ್ಯ ಶಕ್ತಿಗಳು), ಇಳಾ, ಊರ್ಜಾ, ವಿದ್ಯಾ-ಅವಿದ್ಯಾ, ಹ್ಲಾದಿನೀ, ಸಂವಿತ್ ಮತ್ತು ಮಾಯೆ ಮೊದಲಾದ ಶಕ್ತಿಗಳು ಮೂರ್ತಿಮತ್ತಾಗಿ ನಿಂತು ಅವನ ಸೇವೆ ಮಾಡುತ್ತಿದ್ದರು. ॥ ೫೫ ॥

ಭಗವಂತನ ದಿವ್ಯವಾದ ಸ್ವರೂಪವನ್ನು ನೋಡಿದ ಅಕ್ರೂರನಿಗೆ ಜಂಘಾಬಲವೇ ಉಡುಗಿಹೋಗಿತ್ತು. ಬಾಯಿಂದ ಮಾತೇ ಹೊರಡಲಿಲ್ಲ. ಶರೀರವೆಲ್ಲವೂ ಹರ್ಷಾತಿರೇಕದಿಂದ ಪುಳಕಗೊಂಡಿತು. ಪ್ರೇಮೋದ್ರೇಕದಿಂದ ಅವನ ಕಣ್ಣುಗಳು ಆನಂದ ಬಾಷ್ಪಗಳನ್ನು ಸುರಿಸಿದುವು. ॥ ೫೬ ॥ ಕೆಲವು ಕ್ಷಣಗಳು ಹೀಗೆಯೇ ಇದ್ದು ಮತ್ತೆ ಅವನು ಚೇತರಿಸಿಕೊಂಡು ಭಗವಂತನ ಚರಣಗಳಲ್ಲಿ ಶಿರಸ್ಸನ್ನಿಟ್ಟು ನಮಸ್ಕರಿಸಿದನು. ಅನಂತರ ಕೈಜೋಡಿಸಿಕೊಂಡು ಗದ್ಗದ ಧ್ವನಿಯಿಂದ ನಿಧಾನವಾಗಿ ಭಗವಂತನನ್ನು ಸ್ತುತಿಸತೊಡಗಿದನು. ॥ ೫೭ ॥

ಮೂವತ್ತೊಂಭತ್ತನೆಯ ಅಧ್ಯಾಯವು ಮುಗಿಯಿತು. ॥ ೩೯ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮ ಸ್ಕಂಧೇ ಪೂರ್ವಾರ್ಧೇಽಕ್ರೂರಪ್ರತಿಯಾನೇ ಏಕೋನಚತ್ವಾರಿಂಶೋಽಧ್ಯಾಯಃ ॥ ೩೯ ॥

ನಲವತ್ತನೆಯ ಅಧ್ಯಾಯ

ಅಕ್ರೂರನು ಮಾಡಿದ ಭಗವಾನ್ ಶ್ರೀಕೃಷ್ಣನ ಸ್ತುತಿ

ಅಕ್ರೂರ ಉವಾಚ

ನತೋಽಸ್ಮ್ಯಹಂ ತ್ವಾಖಿಲಹೇತುಹೇತುಂ
ನಾರಾಯಣಂ ಪೂರುಷಮಾದ್ಯಮವ್ಯಯಮ್ ।
ಯನ್ನಾಭಿಜಾತಾದರವಿಂದ ಕೋಶಾದ್
ಬ್ರಹ್ಮಾಽಽವಿರಾಸೀದ್ಯತ ಏಷ ಲೋಕಃ ॥ ೧ ॥

ಭೂಸ್ತೋಯಮಗ್ನಿಃ ಪವನಃ ಖಮಾದಿ-
ರ್ಮಹಾನಜಾದಿರ್ಮನ ಇಂದ್ರಿಯಾಣಿ ।
ಸರ್ವೇಂದ್ರಿಯಾರ್ಥಾ ವಿಬುಧಾಶ್ಚ ಸರ್ವೇ
ಯೇ ಹೇತವಸ್ತೇ ಜಗತೋಽಂಗಭೂತಾಃ ॥ ೨ ॥

ನೈತೇ ಸ್ವರೂಪಂ ವಿದುರಾತ್ಮನಸ್ತೇ
ಹ್ಯಜಾದಯೋಽನಾತ್ಮತಯಾ ಗೃಹೀತಾಃ ।
ಅಜೋಽನುಬದ್ಧಃ ಸ ಗುಣೈರಜಾಯಾ
ಗುಣಾತ್ಪರಂ ವೇದ ನ ತೇ ಸ್ವರೂಪಮ್ ॥ ೩ ॥

ತ್ವಾಂ ಯೋಗಿನೋ ಯಜಂತ್ಯದ್ಧಾ ಮಹಾಪುರುಷಮೀಶ್ವರಮ್ ।
ಸಾಧ್ಯಾತ್ಮಂ ಸಾಧಿಭೂತಂ ಚ ಸಾಧಿದೈವಂ ಚ ಸಾಧವಃ ॥ ೪ ॥

ತ್ರಯ್ಯಾ ಚ ವಿದ್ಯಯಾ ಕೇಚಿತ್ ತ್ವಾಂ ವೈ ವೈತಾನಿಕಾ ದ್ವಿಜಾಃ ।
ಯಜಂತೇ ವಿತತೈರ್ಯಜ್ಞೈರ್ನಾನಾರೂಪಾಮರಾಖ್ಯಯಾ ॥ ೫ ॥

ಏಕೇ ತ್ವಾಖಿಲಕರ್ಮಾಣಿ ಸಂನ್ಯಸ್ಯೋಪಶಮಂ ಗತಾಃ ।
ಜ್ಞಾನಿನೋ ಜ್ಞಾನಯಜ್ಞೇನ ಯಜಂತಿ ಜ್ಞಾನವಿಗ್ರಹಮ್ ॥ ೬ ॥

ಅನ್ಯೇ ಚ ಸಂಸ್ಕೃತಾತ್ಮಾನೋ ವಿಧಿನಾಭಿಹಿತೇನ ತೇ ।
ಯಜಂತಿ ತ್ವನ್ಮಯಾಸ್ತ್ವಾಂ ವೈ ಬಹುಮೂರ್ತ್ಯೇಕಮೂರ್ತಿಕಮ್ ॥ ೭ ॥

ತ್ವಾಮೇವಾನ್ಯೇ ಶಿವೋಕ್ತೇನ ಮಾರ್ಗೇಣ ಶಿವರೂಪಿಣಮ್ ।
ಬಹ್ವಾಚಾರ್ಯವಿಭೇದೇನ ಭಗವನ್ ಸಮುಪಾಸತೇ ॥ ೮ ॥

ಅಕ್ರೂರನು ಹೇಳಿದನು - ಪ್ರಭುವೇ! ನೀನು ಪ್ರಕೃತಿಯೇ ಮೊದಲಾದ ಸಮಸ್ತ ಕಾರಣಗಳಿಗೆ ಪರಮಕಾರಣನಾಗಿರುವೆ. ನೀನೇ ಅವಿನಾಶಿಯಾದ ಪುರುಷೋತ್ತಮ ನಾರಾಯಣನಾಗಿರುವೆ. ನಿನ್ನ ನಾಭಿಕಮಲದಿಂದ ಈ ಚರಾಚರ ಜಗತ್ತನ್ನು ಸೃಷ್ಟಿಸಿದ ಆ ಬ್ರಹ್ಮದೇವರ ಆವಿರ್ಭಾವವಾಗಿರುವುದು. ಅಂತಹ ನಿನ್ನ ಚರಣಗಳಿಗೆ ನಾನು ವಂದಿಸುತ್ತೇನೆ. ॥ ೧ ॥ ಜಗದೀಶ್ವರನೇ! ಪೃಥ್ವಿ, ಜಲ, ಅಗ್ನಿ, ವಾಯು, ಆಕಾಶ, ಅಹಂಕಾರ, ಮಹತ್ತತ್ತ್ವ, ಪ್ರಕೃತಿ, ಪುರುಷ, ಮನಸ್ಸು, ಇಂದ್ರಿಯಗಳು, ಇಂದ್ರಿಯಗಳ ವಿಷಯಗಳು, ಇಂದ್ರಿಯಗಳ ಅಧಿಷ್ಠಾತೃ ದೇವತೆಗಳು, ಸಮಸ್ತವಾದ ಚರಾಚರಜಗತ್ತು, ಅದರಲ್ಲಿ ನಡೆಯುವ ವ್ಯವಹಾರಗಳು ಇವೆಲ್ಲವೂ ನಿನ್ನ ಅವಯವಗಳೇ ಆಗಿವೆ. ॥ ೨ ॥ ಇವೆಲ್ಲವೂ ನಿನ್ನ ಅವಯವಗಳೇ ಆಗಿದ್ದರೂ ನಿನ್ನ ಆತ್ಮಸ್ವರೂಪವನ್ನು ಅವು ತಿಳಿಯುವುದಿಲ್ಲ. ಪ್ರತ್ಯಕ್ಷಾದಿ ಪ್ರಮಾಣಗಳಿಗೆ ಒಳಗಾಗುವುದರಿಂದ ಪ್ರಕೃತಿ ಮತ್ತು ಪ್ರಕೃತಿಯಿಂದ ಉಂಟಾದ ಸಮಸ್ತ ಪದಾರ್ಥಗಳು ಜಡಾತ್ಮವೇ ಆಗಿವೆ. ಬ್ರಹ್ಮದೇವರು ನಿನ್ನ ಸ್ವರೂಪವೇ ಆಗಿದ್ದರೂ ಪ್ರಕೃತಿಯ ಗುಣವಾದ ರಜಸ್ಸಿನಿಂದ ಆವಿರ್ಭೂತನಾಗಿದ್ದಾನೆ. ಆದುದರಿಂದಾಗಿ ಅವನೂ ಕೂಡ ಗುಣಾತೀತನಾದ ನಿನ್ನ ಆತ್ಮಸ್ವರೂಪವನ್ನು ತಿಳಿದವನಲ್ಲ. ॥ ೩ ॥ ಸಾಧುಸತ್ಪುರುಷರೂ, ಯೋಗಿಗಳೂ ತಮ್ಮ ಅಂತಃಕರಣದಲ್ಲಿ ನೆಲೆಸಿದ ಅಂತರ್ಯಾಮಿಯ ರೂಪದಲ್ಲಿಯೂ, ಸಮಸ್ತ ಭೂತ-ಭೌತಿಕ ಪದಾರ್ಥಗಳಲ್ಲಿಯೂ ವ್ಯಾಪ್ತನಾದ ಪರಮಾತ್ಮನ ರೂಪದಲ್ಲಿಯೂ, ಸೂರ್ಯ, ಚಂದ್ರ, ಅಗ್ನಿ ಮೊದಲಾದ ದೇವತೆಗಳಲ್ಲಿ ಇಷ್ಟದೇವತೆಯ ರೂಪದಲ್ಲಿಯೂ, ಅವರ ಸಾಕ್ಷಿಯಾದ ಮಹಾಪುರುಷ ಹಾಗೂ ನಿಯಾಮಕ ಈಶ್ವರನ ರೂಪದಲ್ಲಿಯೂ ಸಾಕ್ಷಾತ್ತಾಗಿ ನಿನ್ನನ್ನೇ ಉಪಾಸನೆ ಮಾಡುತ್ತಾರೆ. ॥ ೪ ॥ ಯಾಜ್ಞಿಕರಾದ ಕೆಲವು ಬ್ರಾಹ್ಮಣರು ಕರ್ಮಕಾಂಡವನ್ನು ಪ್ರತಿಪಾದಿಸುವ ವೇದತ್ರಯಗಳ ಮೂಲಕವಾಗಿ ವಿಸ್ತಾರವಾದ ಯಜ್ಞಗಳಿಂದ ನಾನಾರೂಪಗಳುಳ್ಳ ದೇವತೆಗಳ ಹೆಸರಿನಿಂದ ನಿನ್ನನ್ನೇ ಪೂಜಿಸುತ್ತಾರೆ. ॥ ೫ ॥ ಅನೇಕ ಜ್ಞಾನಿಗಳು ತಮ್ಮ ಸಮಸ್ತ ಕರ್ಮಗಳನ್ನು ಸನ್ಯಸ್ತವಾಗಿಸಿ, ಶಾಂತಭಾವದಲ್ಲಿ ಸ್ಥಿತರಾಗುತ್ತಾರೆ. ಅವರು ಹೀಗೆ ಜ್ಞಾನಯಜ್ಞದ ಮೂಲಕವಾಗಿ ಜ್ಞಾನಸ್ವರೂಪವಾದ ನಿನ್ನನ್ನೇ ಆರಾಧಿಸುತ್ತಾರೆ.॥ ೬ ॥ ಇನ್ನೂ ಅನೇಕರು ಸಂಸ್ಕಾರಗಳಿಂದ ಶುದ್ಧಚಿತ್ತವುಳ್ಳ ವೈಷ್ಣವ ಭಕ್ತರು ನಿನ್ನಿಂದ ಉಪದಿಷ್ಟವಾದ ಪಾಂಚರಾತ್ರ ಮೊದಲಾದ ವಿಧಿಗಳಿಂದ ತನ್ಮಯರಾಗಿ ನಿನ್ನ ಚತುರ್ವ್ಯೂಹಾದಿ ಅನೇಕ ರೂಪಗಳನ್ನು ಮತ್ತು ನಾರಾಯಣ ಸ್ವರೂಪವಾದ ಒಂದೇ ಸ್ವರೂಪವನ್ನು ಪೂಜಿಸುತ್ತಾರೆ. ॥ ೭ ॥ ಭಗವಂತನೇ! ಮತ್ತೆ ಕೆಲವರು ಶಿವನಿಂದ ಹೇಳಲ್ಪಟ್ಟಿರುವ ಶೈವಾಗಮದ ವಿಧಾನದಿಂದ ಹಲವಾರು ಭೇದಗಳುಳ್ಳ ಶೈವಪಾಶುಪತಾದಿ ಶಿವಸ್ವರೂಪವಾದ ನಿನ್ನನ್ನೇ ಪೂಜಿಸುತ್ತಾರೆ. ॥ ೮ ॥

ಸರ್ವ ಏವ ಯಜಂತಿ ತ್ವಾಂ ಸರ್ವದೇವಮಯೇಶ್ವರಮ್ ।
ಯೇಽಪ್ಯನ್ಯದೇವತಾಭಕ್ತಾ ಯದ್ಯಪ್ಯನ್ಯಧಿಯಃ ಪ್ರಭೋ ॥ ೯ ॥

ಯಥಾದ್ರಿಪ್ರಭವಾ ನದ್ಯಃ ಪರ್ಜನ್ಯಾಪೂರಿತಾಃ ಪ್ರಭೋ ।
ವಿಶಂತಿ ಸರ್ವತಃ ಸಿಂಧುಂ ತದ್ವತ್ತ್ವಾಂ ಗತಯೋಽಂತತಃ ॥ ೧೦ ॥

ಸತ್ತ್ವಂ ರಜಸ್ತಮ ಇತಿ ಭವತಃ ಪ್ರಕೃತೇರ್ಗುಣಾಃ ।
ತೇಷು ಹಿ ಪ್ರಾಕೃತಾಃ ಪ್ರೋತಾ ಆಬ್ರಹ್ಮಸ್ಥಾವರಾದಯಃ ॥ ೧೧ ॥

ತುಭ್ಯಂ ನಮಸ್ತೇಽಸ್ತ್ವವಿಷಕ್ತದೃಷ್ಟಯೇ
ಸರ್ವಾತ್ಮನೇ ಸರ್ವಧಿಯಾಂ ಚ ಸಾಕ್ಷಿಣೇ ।
ಗುಣಪ್ರವಾಹೋಽಯಮವಿದ್ಯಯಾ ಕೃತಃ
ಪ್ರವರ್ತತೇ ದೇವನೃತಿರ್ಯಗಾತ್ಮಸು ॥ ೧೨ ॥

ಅಗ್ನಿರ್ಮುಖಂ ತೇಽವನಿರಂಘ್ರಿರೀಕ್ಷಣಂ
ಸೂರ್ಯೋ ನಭೋ ನಾಭಿರಥೋ ದಿಶಃ ಶ್ರುತಿಃ ।
ದ್ಯೌಃ ಕಂ ಸುರೇಂದ್ರಾಸ್ತವ ಬಾಹವೋಽರ್ಣವಾಃ
ಕುಕ್ಷಿರ್ಮರುತ್ ಪ್ರಾಣಬಲಂ ಪ್ರಕಲ್ಪಿತಮ್ ॥ ೧೩ ॥

ರೋಮಾಣಿ ವೃಕ್ಷೌಷಧಯಃ ಶಿರೋರುಹಾ
ಮೇಘಾಃ ಪರಸ್ಯಾಸ್ಥಿನಖಾನಿ ತೇಽದ್ರಯಃ ।
ನಿಮೇಷಣಂ ರಾತ್ರ್ಯಹನೀ ಪ್ರಜಾಪತಿ-
ರ್ಮೇಢ್ರಸ್ತು ವೃಷ್ಟಿಸ್ತವ ವೀರ್ಯಮಿಷ್ಯತೇ ॥ ೧೪ ॥

ತ್ವಯ್ಯವ್ಯಯಾತ್ಮನ್ ಪುರುಷೇ ಪ್ರಕಲ್ಪಿತಾ
ಲೋಕಾಃ ಸಪಾಲಾ ಬಹುಜೀವಸಂಕುಲಾಃ ।
ಯಥಾ ಜಲೇ ಸಂಜಿಹತೇ ಜಲೌಕಸೋಽ-
ಪ್ಯುದುಂಬರೇ ವಾ ಮಶಕಾ ಮನೋಮಯೇ ॥ ೧೫ ॥

ಯಾನಿ ಯಾನೀಹ ರೂಪಾಣಿ ಕ್ರೀಡನಾರ್ಥಂ ಬಿಭರ್ಷಿ ಹಿ ।
ತೈರಾಮೃಷ್ಟಶುಚೋ ಲೋಕಾ ಮುದಾ ಗಾಯಂತಿ ತೇ ಯಶಃ ॥ ೧೬ ॥

ನಮಃ ಕಾರಣಮತ್ಸ್ಯಾಯ ಪ್ರಲಯಾಬ್ಧಿಚರಾಯ ಚ ।
ಹಯಶೀರ್ಷ್ಣೇ ನಮಸ್ತುಭ್ಯಂ ಮಧುಕೈಟಭಮೃತ್ಯವೇ ॥ ೧೭ ॥

ಸ್ವಾಮಿ! ನಿನ್ನಿಂದ ಭಿನ್ನರೆಂದು ಭಾವಿಸಿ ಹಲವಾರು ದೇವತೆಗಳನ್ನು ಪೂಜಿಸುವ ಅನ್ಯದೇವತಾ ಭಕ್ತರೂ ಕೂಡ ವಾಸ್ತವವಾಗಿ ನಿನ್ನನ್ನೇ ಆರಾಧಿಸುತ್ತಾರೆ. ಏಕೆಂದರೆ, ನೀನೇ ಸಮಸ್ತ ದೇವತೆಗಳ ರೂಪದಲ್ಲಿರುವ ಸರ್ವೇಶ್ವರನಾಗಿರುವೆ. ॥ ೯ ॥ ಪ್ರಭುವೇ! ಪರ್ವತದಲ್ಲಿ ಹುಟ್ಟಿದ ನದಿಗಳು ಮಳೆಯ ನೀರಿನಿಂದ ತುಂಬಿ ಹರಿಯುತ್ತಾ ಕೊನೆಗೆ ಸಮುದ್ರವನ್ನೇ ಸೇರುವಂತೆಯೇ ಶ್ರುತಿ ಸ್ಮೃತಿ-ಪುರಾಣಗಳಲ್ಲಿ ಹೇಳಿರುವ ಎಲ್ಲ ಉಪಾಸನಾ ಮಾರ್ಗಗಳು ನಿನ್ನಲ್ಲಿಯೇ ಬಂದು ಸೇರುವುವು. ॥ ೧೦ ॥ ದೇವದೇವನೇ! ಸತ್ತ್ವ-ರಜಸ್ತಮಗಳೆಂಬುವು ನಿನ್ನ ಪ್ರಕೃತಿಯ ಗುಣಗಳಾಗಿವೆ. ಬ್ರಹ್ಮನಿಂದ ಹಿಡಿದು ಸಕಲ ಚರಾಚರ ಪ್ರಾಣಿಗಳೂ ಕೂಡ ಬಟ್ಟೆಯಲ್ಲಿ ನೂಲು ಹಾಸುಹೊಕ್ಕಾಗಿರುವಂತೆ ತ್ರಿಗುಣಗಳಲ್ಲಿ ಓತಪ್ರೋತವಾಗಿವೆ. ॥ ೧೧ ॥ ನೀನು ಸರ್ವಸ್ವರೂಪನಾಗಿದ್ದರೂ ಅವುಗಳಲ್ಲಿ ಲಿಪ್ತನಾಗಿಲ್ಲ. ನೀನು ನಿರ್ಲಿಪ್ತನು. ನೀನು ಸಮಸ್ತರ ಬುದ್ಧಿಗಳಲ್ಲಿಯೂ ಸಾಕ್ಷಿ-ಸ್ವರೂಪನಾಗಿರುವೆ. ಗುಣಗಳ ಪ್ರವಾಹದಿಂದ ಉಂಟಾದ ಈ ಸೃಷ್ಟಿಯು ಅಜ್ಞಾನಮೂಲಕವೇ ಆಗಿದೆ ಮತ್ತು ದೇವ-ಮನುಷ್ಯ-ತಿರ್ಯಕ್ ಪ್ರಾಣಿಗಳಲ್ಲಿಯೂ ವ್ಯಾಪ್ತವಾಗಿದೆ. ಆದರೆ ನೀನು ಮಾತ್ರ ಇವೆಲ್ಲದರಿಂದ ಬೇರೆಯೇ ಆಗಿರುವೆ. ಗುಣಾತೀತನಾಗಿರುವೆ. ಅಂತಹ ನಿನಗೆ ನಮಸ್ಕರಿಸುತ್ತೇನೆ. ॥ ೧೨ ॥ ಅಗ್ನಿಯು ನಿನ್ನ ಮುಖವಾಗಿದೆ. ಪೃಥ್ವಿಯು ಚರಣವಾಗಿದೆ. ಸೂರ್ಯ-ಚಂದ್ರರು ಕಣ್ಣುಗಳಾಗಿವೆ. ಆಕಾಶವೇ ನಾಭಿಯಾಗಿದೆ. ದಿಕ್ಕುಗಳು ಕಿವಿಗಳಾಗಿವೆ. ಸ್ವರ್ಗವೇ ಶಿರವಾಗಿದೆ. ದೇವೇಂದ್ರ ಗಣಗಳು ನಿನ್ನ ಭುಜಗಳಾಗಿವೆ. ಸಮುದ್ರವು ಹೊಟ್ಟೆಯಾಗಿದೆ. ವಾಯುವು ನಿನ್ನ ಪ್ರಾಣಶಕ್ತಿಯ ರೂಪದಲ್ಲಿ ಉಪಾಸನೆಗಾಗಿ ಕಲ್ಪಿತವಾಗಿದೆ. ॥ ೧೩ ॥ ವೃಕ್ಷಗಳು ಮತ್ತು ಔಷಧಿಗಳು ನಿನ್ನ ರೋಮಗಳಾಗಿವೆ. ಮೇಘಗಳು ತಲೆಕೂದಲುಗಳಾಗಿವೆ. ಪರ್ವತಗಳು ನಿನ್ನ ಮೂಳೆಗಳೂ, ಉಗುರುಗಳೂ ಆಗಿವೆ. ಹಗಲು-ರಾತ್ರಿಗಳು ರೆಪ್ಪೆಗಳನ್ನು ಮುಚ್ಚಿ ತೆರೆಯುವುದಾಗಿದೆ. ಪ್ರಜಾಪತಿಯು ಜನನೇಂದ್ರಿಯವಾಗಿದ್ದು ಮಳೆಯೇ ವೀರ್ಯವಾಗಿದೆ. ॥ ೧೪ ॥ ಅವಿನಾಶಿಯಾದ ಪರಮಾತ್ಮನೇ! ನೀರಿನಲ್ಲಿ ಕೋಟಿ-ಕೋಟಿ ಜಲಚರಗಳಿರುವಂತೆ, ಅತ್ತಿಯ ಹಣ್ಣಿನಲ್ಲಿ ನೂರಾರು ಸಣ್ಣ ಸಣ್ಣ ಜೀವಿಗಳಿರುವಂತೆ ಉಪಾಸನೆಗಾಗಿ ಸ್ವೀಕರಿಸಿಕೊಂಡ ನಿನ್ನ ಮನೋಮಯ ಪುರುಷರೂಪದಲ್ಲಿ ಅನೇಕ ಪ್ರಕಾರದ ಜೀವ-ಜಂತುಗಳಿಂದ ತುಂಬಿದ ಲೋಕಗಳು ಮತ್ತು ಲೋಕಪಾಲಕರು ಕಲ್ಪಿತವಾಗಿವೆ. ॥ ೧೫ ॥ ನೀನು ಲೀಲೆಗಾಗಿ ಈ ಲೋಕದಲ್ಲಿ ಯಾವ ಯಾವ ರೂಪಗಳನ್ನು ಧರಿಸುವೆಯೋ, ಆ ಅವತಾರಗಳಿಂದ ಜನರ ಶೋಕ-ಮೋಹಗಳನ್ನು ನಾಶವಾಗುವುವು. ಅವರೆಲ್ಲರೂ ಅತಿ ಆನಂದದಿಂದ ನಿನ್ನ ನಿರ್ಮಲ ಕೀರ್ತಿಯನ್ನು ಕೊಂಡಾಡುವರು. ॥ ೧೬ ॥ ಪ್ರಭುವೇ! ಪ್ರಳಯಕಾಲದಲ್ಲಿ ಏಕಾರ್ಣವವಾಗಿದ್ದ ಸಮುದ್ರದಲ್ಲಿ ಓಡುತ್ತಿದ್ದ ಜಗತ್ಕಾರಣವಾದ ಮತ್ಸ್ಯಮೂರ್ತಿಗೆ ನಮಸ್ಕರಿಸುತ್ತೇನೆ. ಹಯಗ್ರೀವರೂಪಿಯಾಗಿ ಮಧುಕೈಟಭರಿಗೆ ಮೃತ್ಯುವಾದ ನಿನಗೆ ನಮಸ್ಕರಿಸುತ್ತೇನೆ. ॥ ೧೭ ॥

ಅಕೂಪಾರಾಯ ಬೃಹತೇ ನಮೋ ಮಂದರಧಾರಿಣೇ ।
ಕ್ಷಿತ್ಯುದ್ಧಾರವಿಹಾರಾಯ ನಮಃ ಸೂಕರಮೂರ್ತಯೇ ॥ ೧೮ ॥

ನಮಸ್ತೇಽದ್ಭುತಸಿಂಹಾಯ ಸಾಧುಲೋಕಭಯಾಪಹ ।
ವಾಮನಾಯ ನಮಸ್ತುಭ್ಯಂ ಕ್ರಾಂತತ್ರಿಭುವನಾಯ ಚ ॥ ೧೯ ॥

ನಮೋ ಭೃಗೂಣಾಂ ಪತಯೇ ದೃಪ್ತಕ್ಷತ್ರವನಚ್ಛಿದೇ ।
ನಮಸ್ತೇ ರಘುವರ್ಯಾಯ ರಾವಣಾಂತಕರಾಯ ಚ ॥ ೨೦ ॥

ನಮಸ್ತೇ ವಾಸುದೇವಾಯ ನಮಃ ಸಂಕರ್ಷಣಾಯ ಚ ।
ಪ್ರದ್ಯುಮ್ನಾಯಾನಿರುದ್ಧಾಯ ಸಾತ್ವತಾಂ ಪತಯೇ ನಮಃ ॥ ೨೦ ॥

ನಮೋ ಬುದ್ಧಾಯ ಶುದ್ಧಾಯ ದೈತ್ಯದಾನವಮೋಹಿನೇ ।
ಮ್ಲೇಚ್ಛಪ್ರಾಯಕ್ಷತ್ರಹಂತ್ರೇ ನಮಸ್ತೇ ಕಲ್ಕಿರೂಪಿಣೇ ॥ ೨೨ ॥

ಭಗವನ್ ಜೀವಲೋಕೋಽಯಂ ಮೋಹಿತಸ್ತವ ಮಾಯಯಾ ।
ಅಹಂಮಮೇತ್ಯಸದ್ಗ್ರಾಹೋ ಭ್ರಾಮ್ಯತೇ ಕರ್ಮವರ್ತ್ಮಸು ॥ ೨೩ ॥

ಅಹಂ ಚಾತ್ಮಾತ್ಮಜಾಗಾರದಾರಾರ್ಥಸ್ವಜನಾದಿಷು ।
ಭ್ರಮಾಮಿ ಸ್ವಪ್ನಕಲ್ಪೇಷು ಮೂಢಃ ಸತ್ಯಧಿಯಾ ವಿಭೋ ॥ ೨೪ ॥

ಅನಿತ್ಯಾನಾತ್ಮದುಃಖೇಷು ವಿಪರ್ಯಯಮತಿರ್ಹ್ಯಹಮ್ ।
ದ್ವಂದ್ವಾರಾಮಸ್ತಮೋವಿಷ್ಟೋ ನ ಜಾನೇ ತ್ವಾಽಽತ್ಮನಃ ಪ್ರಿಯಮ್ ॥ ೨೫ ॥

ಯಥಾಽಬುಧೋ ಜಲಂ ಹಿತ್ವಾ ಪ್ರತಿಚ್ಛನ್ನಂ ತದುದ್ಭವೈಃ ।
ಅಭ್ಯೇತಿ ಮೃಗತೃಷ್ಣಾಂ ವೈ ತದ್ವತ್ತ್ವಾಹಂ ಪರಾಙ್ಮುಖಃ ॥ ೨೬ ॥

ನೋತ್ಸಹೇಽಹಂ ಕೃಪಣಧೀಃ ಕಾಮಕರ್ಮಹತಂ ಮನಃ ।
ರೋದ್ಧುಂ ಪ್ರಮಾಥಿಭಿಶ್ಚಾಕ್ಷೈರ್ಹ್ರಿಯಮಾಣಮಿತಸ್ತತಃ ॥ ೨೭ ॥

ಭಗವಂತನೇ! ನೀನೇ ವಿಶಾಲವಾದ ಕೂರ್ಮರೂಪವನ್ನು ಧರಿಸಿ ಮಂದರ ಪರ್ವತವನ್ನು ಬೆನ್ನ ಮೇಲೆ ಹೊತ್ತಿರುವ ನಿನಗೆ ನಮಸ್ಕರಿಸುತ್ತೇನೆ. ನೀನೇ ಭೂದೇವಿಯನ್ನು ಉದ್ಧರಿಸಲು ವರಾಹನಾಗಿ ಅವತರಿಸಿದ ನಿನಗೆ ನಮಸ್ಕರಿಸುತ್ತೇನೆ. ॥ ೧೮ ॥ ಸತ್ಪುರುಷರ ಭಯವನ್ನು ಹೋಗಲಾಡಿಸುವ ಪ್ರಭುವೇ! ನಿನ್ನ ಆ ಅಲೌಕಿಕ ನರಸಿಂಹರೂಪಕ್ಕೆ ನಮೋ ನಮಃ. ವಾಮನರೂಪವನ್ನು ಧರಿಸಿ ಮೂರು ಹೆಜ್ಜೆಗಳಿಂದ ಮೂರು ಲೋಕಗಳನ್ನು ಅಳೆದಂತಹ ನಿನಗೆ ನಮಸ್ಕಾರವು. ॥ ೧೯ ॥ ದುರಹಂಕಾರಿಗಳಾದ ಕ್ಷತ್ರಿಯರೆಂಬ ಅರಣ್ಯವನ್ನೇ ಕತ್ತರಿಸಿ ಹಾಕಿದ ಭೃಗುಶ್ರೇಷ್ಠನಾದ ಪರಶುರಾಮನಿಗೆ ನಮಸ್ಕರಿಸುತ್ತೇನೆ. ರಘುವಂಶದಲ್ಲಿ ಶ್ರೀರಾಮನಾಗಿ ಅವತರಿಸಿದ ನಿನಗೆ ನಮಸ್ಕರಿಸುತ್ತೇನೆ. ॥ ೨೦ ॥ ವಾಸುದೇವ, ಸಂಕರ್ಷಣ, ಪ್ರದ್ಯುಮ್ನ, ಅನಿರುದ್ಧರೆಂಬ ಚತುರ್ವ್ಯೂಹ ಸ್ವರೂಪನಾಗಿರುವ ಹಾಗೂ ಯದುವಂಶೀಯರಿಗೆ ಒಡೆಯನಾದ ನಿನಗೆ ನಮಸ್ಕರಿಸುತ್ತೇನೆ. ॥ ೨೦ ॥ ದೈತ್ಯ-ದಾನವರನ್ನು ವಿಮೋಹಗೊಳಿಸಲು ನೀನು ಶುದ್ಧ ಅಹಿಂಸಾಮಾರ್ಗದ ಪ್ರವರ್ತಕನಾದ ಬುದ್ಧ ರೂಪವನ್ನು ಸ್ವೀಕರಿಸುವೆ. ಅಂತಹ ನಿನಗೆ ನಮಸ್ಕಾರವು. ಪೃಥ್ವಿಯಲ್ಲಿ ಕ್ಷತ್ರಿಯರು ಮ್ಲೇಚ್ಛಪ್ರಾಯರಾದಾಗ ಅವರನ್ನು ನಾಶಪಡಿಸಲು ನೀನೇ ಕಲ್ಕಿಯ ರೂಪದಿಂದ ಅವತರಿಸುವೆ. ಅಂತಹ ನಿನಗೆ ನಾನು ನಮಸ್ಕರಿಸುತ್ತೇನೆ. ॥ ೨೨ ॥

ಭಗವಂತನೇ! ಈ ಸಮಸ್ತ ಜೀವಿಗಳು ನಿನ್ನ ಮಾಯೆಯಿಂದ ಮೋಹಿತರಾಗಿದ್ದಾರೆ. ಈ ಮೋಹದಿಂದಲೇ ನಾನು-ನನ್ನದೆಂಬ ದುರಾಗ್ರಹಕ್ಕೆ ಒಳಗಾಗಿ ಕರ್ಮಮಾರ್ಗದಲ್ಲಿ ಅಲೆಯುತ್ತಿದ್ದಾರೆ. ॥ ೨೩ ॥ ವಿಭುವೇ! ಸ್ವಪ್ನದಲ್ಲಿ ಕಾಣುವ ಪದಾರ್ಥಗಳಂತಿರುವ ದೇಹ-ಗೇಹ, ಪತ್ನೀ-ಪುತ್ರರು, ಧನ-ಸ್ವಜನ ಇವೆಲ್ಲವನ್ನು ಮೂಢನಾದ ನಾನೂ ಕೂಡ ಸತ್ಯವೆಂದೇ ತಿಳಿದು ಭ್ರಮಿಸಿ ವಿಮೋಹಿತನಾಗಿದ್ದೇನೆ. ॥ ೨೪ ॥ ನನ್ನ ಮೂರ್ಖತೆಯನ್ನಾದರೂ ನೋಡು ಪ್ರಭುವೇ! ಅನಿತ್ಯ ವಸ್ತುಗಳನ್ನು ನಿತ್ಯವೆಂದೂ, ಅನಾತ್ಮವನ್ನು ಆತ್ಮನೆಂದೂ, ದುಃಖವನ್ನು ಸುಖವೆಂದೂ ನಾನು ಭಾವಿಸಿದ್ದೇನೆ. ಅಜ್ಞಾನವಶದಿಂದ ಸಾಂಸಾರಿಕ ಸುಖ-ದುಃಖಗಳೇ ಮೊದಲಾದ ದ್ವಂದ್ವಗಳಲ್ಲಿ ಬಿದ್ದ ನಾನು ನಿಜವಾಗಿ ಪ್ರಿಯನಾಗಿರುವ ನಿನ್ನನ್ನೇ ಮರೆತಿದ್ದೇನೆ. ॥ ೨೫ ॥ ಅಜ್ಞಾನಿಯಾದವನೊಬ್ಬನು ಸರೋವರದಲ್ಲಿ ನೀರಿನಿಂದಲೇ ಹುಟ್ಟಿದ ಪಾಚಿಯಿಂದ ಮರೆಯಾದ ನೀರನ್ನು ಗುರುತಿಸಲಾರದೆ, ಬಿಸಿಲ್ಗುದುರೆಯಿಂದ ದೂರದಲ್ಲಿ ನೀರಿನಂತೆ ಕಾಣುವ ಮರೀಚಿಕೆಯನ್ನು ಅರಸಿ ಹೋಗುವಂತೆಯೇ, ನಾನು ನಿನ್ನ ಮಾಯೆಯಿಂದ ಆವೃತನಾಗಿ ಹತ್ತಿರದಲ್ಲಿರುವ ಆನಂದಕಂದನಾದ ನಿನ್ನನ್ನು ಗುರುತಿಸಲಾರದೆ ನಿನ್ನಿಂದ ಪರಾಙ್ಮುಖನಾಗಿದ್ದೇನೆ. ॥ ೨೬ ॥ ಅತ್ಯಂತ ದುರ್ಬಲವಾದ ಬುದ್ಧಿಯುಳ್ಳ ನಾನು ಅತ್ಯಂತ ಬಲವತ್ತರವಾದ ಇಂದ್ರಿಯಗಳಿಂದ ಯದ್ವಾ-ತದ್ವಾ ಸೆಳೆಯಲ್ಪಡುತ್ತಿರುವ, ಕಾಮ ಕರ್ಮಗಳಿಂದ ಕೆಡಿಸಲ್ಪಟ್ಟಿರುವ ಮನಸ್ಸನ್ನು ತಡೆಗಟ್ಟಲು ಅಸಮರ್ಥನಾಗಿದ್ದೇನೆ. ॥ ೨೭ ॥

ಸೋಽಹಂ ತವಾಂಘ್ರ್ಯುಪಗತೋಽಸ್ಮ್ಯಸತಾಂ ದುರಾಪಂ
ತಚ್ಚಾಪ್ಯಹಂ ಭವದನುಗ್ರಹ ಈಶ ಮನ್ಯೇ ।
ಪುಂಸೋ ಭವೇದ್ಯರ್ಹಿ ಸಂಸರಣಾಪವರ್ಗ-
ಸ್ತ್ವಯ್ಯಬ್ಜನಾಭ ಸದುಪಾಸನಯಾ ಮತಿಃ ಸ್ಯಾತ್ ॥ ೨೮ ॥

ಹೀಗೆ ಅಲೆಯುತ್ತಿರುವ ನಾನು – ದುಷ್ಟರಿಗೆ ದುರ್ಲಭವಾದ ನಿನ್ನ ಚರಣಕಮಲಗಳ ಛತ್ರಛಾಯೆಯನ್ನು ಪಡೆದಿದ್ದೇನೆ. ಸ್ವಾಮಿಯೇ! ಇದನ್ನು ನಿನ್ನ ಕೃಪಾಪ್ರಸಾದವೆಂದೇ ತಿಳಿಯುತ್ತೇನೆ. ಏಕೆಂದರೆ, ಪದ್ಮನಾಭನೇ! ಜೀವನಿಗೆ ಸಂಸಾರದಿಂದ ಮುಕ್ತನಾಗುವ ಸಮಯ ಒದಗಿದಾಗ ಸತ್ಪುರುಷರ ಉಪಾಸನೆಯಿಂದ ಚಿತ್ತವೃತ್ತಿಯು ನಿನ್ನಲ್ಲಿ ತೊಡಗುವುದು. ॥ ೨೮ ॥

ನಮೋ ವಿಜ್ಞಾನಮಾತ್ರಾಯ ಸರ್ವಪ್ರತ್ಯಯಹೇತವೇ ।
ಪುರುಷೇಶಪ್ರಧಾನಾಯ ಬ್ರಹ್ಮಣೇಽನಂತಶಕ್ತಯೇ ॥ ೨೯ ॥

ಪ್ರಭೋ! ನೀನು ಕೇವಲ ವಿಜ್ಞಾನ ಸ್ವರೂಪನೂ, ವಿಜ್ಞಾನಘನನೂ ಆಗಿರುವೆ. ಕಂಡು ಬರುವ ವೃತ್ತಿಗಳಿಗೆಲ್ಲ ನೀನೆ ಕಾರಣನೂ, ಅಧಿಷ್ಠಾನನೂ ಆಗಿರುವೆ. ಜೀವಿಯ ಸ್ವರೂಪದಲ್ಲಿ ಮತ್ತು ಜೀವಿಗಳ ಸುಖ-ದುಃಖಾದಿಗಳ ನಿಮಿತ್ತ, ಕಾಲ, ಕರ್ಮ, ಸ್ವಭಾವ ಹಾಗೂ ಪ್ರಕೃತಿಯ ರೂಪದಲ್ಲಿಯೂ ನೀನೇ ಇರುವೆ. ಅವುಗಳ ನಿಯಾಮಕನೂ ನೀನೇ ಆಗಿರುವೆ. ಅನಂತ ಶಕ್ತಿಯುಳ್ಳ ನೀನು ಸಾಕ್ಷಾತ್ ಬ್ರಹ್ಮವೇ ಆಗಿರುವೆ. ಅಂತಹ ನಿನಗೆ ನಾನು ನಮಸ್ಕರಿಸುತ್ತೇನೆ. ॥ ೨೯ ॥

ನಮಸ್ತೇ ವಾಸುದೇವಾಯ ಸರ್ವಭೂತಕ್ಷಯಾಯ ಚ ।
ಹೃಷೀಕೇಶ ನಮಸ್ತುಭ್ಯಂ ಪ್ರಪನ್ನಂ ಪಾಹಿ ಮಾಂ ಪ್ರಭೋ ॥ ೩೦ ॥

ಪ್ರಭೋ! ನೀನೇ ವಾಸುದೇವನು. ಸಮಸ್ತ ಜೀವರ ಆಶ್ರಯನಾದ ಸಂಕರ್ಷಣನು ನೀನೇ. ಬುದ್ಧಿ ಮತ್ತು ಮನಸ್ಸಿನ ಅಧಿಷ್ಠಾತೃ ದೇವತೆ ಹೃಷೀಕೇಶನೂ (ಪ್ರದ್ಯುಮ್ನ ಮತ್ತು ಅನಿರುದ್ಧ) ನೀನೇ. ನಾನು ಬಾರಿ-ಬಾರಿಗೂ ನಿನಗೆ ನಮಸ್ಕರಿಸುತ್ತೇನೆ. ಪ್ರಭುವೇ! ಶರಣಾಗತನಾದ ನನ್ನನ್ನು ರಕ್ಷಿಸು. ॥ ೩೦ ॥

ನಲವತ್ತನೆಯ ಅಧ್ಯಾಯವು ಮುಗಿಯಿತು. ॥ ೪೦ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮಸ್ಕಂಧೇ
ಪೂರ್ವಾರ್ಧೇ ಅಕ್ರೂರಸ್ತುತಿರ್ನಾಮ ಚತ್ವಾರಿಂಶೋಽಧ್ಯಾಯಃ ॥ ೪೦ ॥

ನಲವತ್ತೊಂದನೆಯ ಅಧ್ಯಾಯ

ಮಥುರೆಗೆ ಶ್ರೀಕೃಷ್ಣನ ಪ್ರವೇಶ

ಶ್ರೀಶುಕ ಉವಾಚ

ಸ್ತುವತಸ್ತಸ್ಯ ಭಗವಾನ್ ದರ್ಶಯಿತ್ವಾ ಜಲೇ ವಪುಃ ।
ಭೂಯಃ ಸಮಾಹರತ್ ಕೃಷ್ಣೋ ನಟೋ ನಾಟ್ಯಮಿವಾತ್ಮನಃ ॥ ೧ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ! ಹೀಗೆ ಅನನ್ಯ ಭಕ್ತಿಯಿಂದ ಸ್ತೋತ್ರಮಾಡುತ್ತಿದ್ದ ಅಕ್ರೂರನಿಗೆ ನೀರಿನಲ್ಲಿ ತನ್ನ ದಿವ್ಯವಾದ ಸ್ವರೂಪವನ್ನು ತೋರಿಸಿ, ಮರುಕ್ಷಣದಲ್ಲೇ ನಟನು ನಾಟಕವಾಡಿ ತೆರೆಯ ಹಿಂದೆ ಸರಿಯುವಂತೆ ಭಗವಂತನು ಪುನಃ ಶ್ರೀಕೃಷ್ಣನಾಗಿಯೇ ಅಕ್ರೂರನಿಗೆ ಕಾಣಿಸಿಕೊಂಡನು. ॥ ೧ ॥

ಸೋಽಪಿ ಚಾಂತರ್ಹಿತಂ ವೀಕ್ಷ್ಯ ಜಲಾದುನ್ಮಜ್ಜ್ಯ ಸತ್ವರಃ ।
ಕೃತ್ವಾ ಚಾವಶ್ಯಕಂ ಸರ್ವಂ ವಿಸ್ಮಿತೋ ರಥಮಾಗಮತ್ ॥ ೨ ॥

ಭಗವಂತನ ಆ ದಿವ್ಯರೂಪವು ಅಂತರ್ಧಾನವಾದುದನ್ನು ಕಂಡ ಅಕ್ರೂರನು ನೀರಿನಿಂದ ಹೊರಬಂದು. ಆವಶ್ಯಕವಾದ ನಿತ್ಯಕರ್ಮಗಳನ್ನು ಬೇಗ-ಬೇಗನೆ ಪೂರೈಸಿಕೊಂಡು ಶೀಘ್ರವಾಗಿ ರಥದಲ್ಲಿ ಬಂದು ಕುಳಿತನು. ಆಗ ಅವನು ಅತ್ಯಂತ ವಿಸ್ಮಿತನಾಗಿದ್ದನು. ॥ ೨ ॥

ತಮಪೃಚ್ಛದ್ಧೃಷೀಕೇಶಃ ಕಿಂ ತೇ ದೃಷ್ಟಮಿಹಾದ್ಭುತಮ್ ।
ಭೂಮೌ ವಿಯತಿ ತೋಯೇ ವಾ ತಥಾ ತ್ವಾಂ ಲಕ್ಷಯಾಮಹೇ ॥ ೩ ॥

ಭಗವಾನ್ ಶ್ರೀಕೃಷ್ಣನು ಅವನಲ್ಲಿ ಕೇಳಿದನು – ಚಿಕ್ಕಪ್ಪ! ನೀನು ಭೂಮಿಯಲ್ಲಾಗಲೀ, ಆಕಾಶದಲ್ಲಾಗಲೀ, ನೀರಿನಲ್ಲಾಗಲೀ ಏನಾದರೂ ಅದ್ಭುತವಾದ ವಸ್ತುವನ್ನು ಕಂಡೆಯಾ? ಏಕೆಂದರೆ, ನಿನ್ನ ಮುಖಾವಲೋಕನದಿಂದ ಹಾಗೆ ತಿಳಿಯುತ್ತಾ ಇದೆ. ॥ ೩ ॥

ಅಕ್ರೂರ ಉವಾಚ

ಅದ್ಭುತಾನೀಹ ಯಾವಂತಿ ಭೂಮೌ ವಿಯತಿ ವಾ ಜಲೇ ।
ತ್ವಯಿ ವಿಶ್ವಾತ್ಮಕೇ ತಾನಿ ಕಿಂ ಮೇಽದೃಷ್ಟಂ ವಿಪಶ್ಯತಃ ॥ ೪ ॥

ಯತ್ರಾದ್ಭುತಾನಿ ಸರ್ವಾಣಿ ಭೂಮೌ ವಿಯತಿ ವಾ ಜಲೇ ।
ತಂ ತ್ವಾನುಪಶ್ಯತೋ ಬ್ರಹ್ಮನ್ ಕಿಂ ಮೇ ದೃಷ್ಟಮಿಹಾದ್ಭುತಮ್ ॥ ೫ ॥

ಇತ್ಯುಕ್ತ್ವಾ ಚೋದಯಾಮಾಸ ಸ್ಯಂದನಂ ಗಾಂದಿನೀಸುತಃ ।
ಮಥುರಾಮನಯದ್ರಾಮಂ ಕೃಷ್ಣಂ ಚೈವ ದಿನಾತ್ಯಯೇ ॥ ೬ ॥

ಮಾರ್ಗೇ ಗ್ರಾಮಜನಾ ರಾಜಂಸ್ತತ್ರ ತತ್ರೋಪಸಂಗತಾಃ ।
ವಸುದೇವಸುತೌ ವೀಕ್ಷ್ಯ ಪ್ರೀತಾ ದೃಷ್ಟಿಂ ನ ಚಾದದುಃ ॥ ೭ ॥

ತಾವದ್ವ್ರಜೌಕಸಸ್ತತ್ರ ನಂದಗೋಪಾದಯೋಽಗ್ರತಃ ।
ಪುರೋಪವನಮಾಸಾದ್ಯ ಪ್ರತೀಕ್ಷಂತೋಽವತಸ್ಥಿರೇ ॥ ೮ ॥

ತಾನ್ ಸಮೇತ್ಯಾಹ ಭಗವಾನಕ್ರೂರಂ ಜಗದೀಶ್ವರಃ ।
ಗೃಹೀತ್ವಾ ಪಾಣಿನಾ ಪಾಣಿಂ ಪ್ರಶ್ರಿತಂ ಪ್ರಹಸನ್ನಿವ ॥ ೯ ॥

ಭವಾನ್ ಪ್ರವಿಶತಾಮಗ್ರೇ ಸಹಯಾನಃ ಪುರೀಂ ಗೃಹಮ್ ।
ವಯಂ ತ್ವಿಹಾವಮುಚ್ಯಾಥ ತತೋ ದ್ರಕ್ಷ್ಯಾಮಹೇ ಪುರೀಮ್ ॥ ೧೦ ॥

ಅಕ್ರೂರ ಉವಾಚ

ನಾಹಂ ಭವದ್ಭ್ಯಾಂ ರಹಿತಃ ಪ್ರವೇಕ್ಷ್ಯೇ ಮಥುರಾಂ ಪ್ರಭೋ ।
ತ್ಯಕ್ತುಂ ನಾರ್ಹಸಿ ಮಾಂ ನಾಥ ಭಕ್ತಂ ತೇ ಭಕ್ತವತ್ಸಲ ॥ ೧೧ ॥

ಆಗಚ್ಛ ಯಾಮ ಗೇಹಾನ್ನಃ ಸನಾಥಾನ್ ಕುರ್ವಧೋಕ್ಷಜ ।
ಸಹಾಗ್ರಜಃ ಸಗೋಪಾಲೈಃ ಸುಹೃದ್ಭಿಶ್ಚ ಸುಹೃತ್ತಮ ॥ ೧೨ ॥

ಪುನೀಹಿ ಪಾದರಜಸಾ ಗೃಹಾನ್ನೋ ಗೃಹಮೇಧಿನಾಮ್ ।
ಯಚ್ಛೌಚೇನಾನುತೃಪ್ಯಂತಿ ಪಿತರಃ ಸಾಗ್ನಯಃ ಸುರಾಃ ॥ ೧೩ ॥

ಅವನಿಜ್ಯಾಂಘ್ರಿಯುಗಲಮಾಸೀಚ್ಛ್ಲೋಕ್ಯೋ ಬಲಿರ್ಮಹಾನ್ ।
ಐಶ್ವರ್ಯಮತುಲಂ ಲೇಭೇ ಗತಿಂ ಚೈಕಾಂತಿನಾಂ ತು ಯಾ ॥ ೧೪ ॥

ಅಕ್ರೂರನು ಹೇಳಿದನು – ಸ್ವಾಮಿಯೇ! ಪೃಥಿವಿ, ಆಕಾಶ, ನೀರು ಇವುಗಳಲ್ಲಿ ಮತ್ತು ಇಡೀ ಜಗತ್ತಿನಲ್ಲಿ ಇರುವ ಅದ್ಭುತ ವಸ್ತುಗಳೆಲ್ಲವೂ ನಿನ್ನಲ್ಲಿಯೇ ಇವೆ. ಏಕೆಂದರೆ, ನೀನು ವಿಶ್ವರೂಪನಾಗಿರುವೆ. ನಾನು ನಿನ್ನನ್ನು ನೋಡುತ್ತಿರುವಾಗ ನಾನು ನೋಡದಿರುವ ಯಾವ ಅದ್ಭುತವಸ್ತು ತಾನೇ ಉಳಿದೀತು? ॥ ೪ ॥ ಭಗವಂತಾ! ಪೃಥಿವಿಯಲ್ಲಾಗಲೀ, ನೀರಿನಲ್ಲಾಗಲೀ, ಆಕಾಶದಲ್ಲಾಗಲೀ ಇರುವ ಅದ್ಭುತ ವಸ್ತುಗಳೆಲ್ಲವೂ ನೆಲೆಸಿರುವ ನಿನ್ನನ್ನೇ ನಾನು ನೋಡುತ್ತಿದ್ದೇನೆ. ಹಾಗಿರುವಾಗ ನಾನು ಬೇರೆಯಾದ ಅದ್ಭುತವಸ್ತುವನ್ನು ನೋಡಬೇಕಾಗಿದೆಯೇ? ॥ ೫ ॥ ಗಾಂದಿನೀನಂದನನಾದ ಅಕ್ರೂರನು ಹೀಗೆ ಹೇಳಿ ರಥವನ್ನು ನಡೆಸುತ್ತಾ ಭಗವಾನ್ ಶ್ರೀಕೃಷ್ಣನನ್ನು ಮತ್ತು ಬಲರಾಮನನ್ನು ಕರೆದುಕೊಂಡು ಸಾಯಂಕಾಲವಾಗುತ್ತಿದ್ದಂತೆ ಮಥುರೆಗೆ ತಲುಪಿದನು. ॥ ೬ ॥ ಪರೀಕ್ಷಿತನೇ! ದಾರಿಯಲ್ಲಿ ಅಲ್ಲಲ್ಲಿ ಹಳ್ಳಿಯ ಜನರು ಭಗವಾನ್ ಶ್ರೀಕೃಷ್ಣ-ಬಲರಾಮರನ್ನು ನೋಡಲು ಗುಂಪು-ಗುಂಪಾಗಿ ಬಂದು ಅವರನ್ನು ನೋಡಿ ಆನಂದಿತರಾಗುತ್ತಿದ್ದರು. ಅವರು ನೆಟ್ಟ ನೋಟದಿಂದ ಅವರನ್ನೇ ನೋಡುತ್ತಾ ಧನ್ಯತೆಯನ್ನು ಪಡೆಯುತ್ತಿದ್ದರು. ಶ್ರೀಕೃಷ್ಣನನ್ನು ನೋಡುತ್ತಾ ಅವರು ತಮ್ಮ ದೃಷ್ಟಿಯನ್ನು ಬೇರೆಡೆಗೆ ಕದಲಿಸದೇ ಹೋದರು. ॥ ೭ ॥ ನಂದಗೋಪನೇ ಮೊದಲಾದ ವ್ರಜವಾಸಿಗಳು ಮೊದಲೇ ಮಥುರೆಗೆ ತಲುಪಿ ಊರಿನ ಹೊರಗಿನ ಉದ್ಯಾನದಲ್ಲಿ ಬೀಡುಬಿಟ್ಟು ರಾಮ-ಕೃಷ್ಣರ ಪ್ರತೀಕ್ಷೆ ಮಾಡುತ್ತಿದ್ದರು. ॥ ೮ ॥ ಅವರ ಬಳಿಗೆ ತಲುಪುತ್ತಲೇ ಜಗದೀಶ್ವರನಾದ ಶ್ರೀಕೃಷ್ಣನು ರಥದಿಂದಿಳಿದು, ನಿಂತಿರುವ ಅಕ್ರೂರನ ಕೈಯನ್ನು ಹಿಡಿದುಕೊಂಡು ಮುಗುಳ್ನಗುತ್ತಾ ಇಂತೆಂದನು. ॥ ೯ ॥ ಚಿಕ್ಕಪ್ಪನವರೇ! ನೀವು ರಥದೊಂದಿಗೆ ಮುಂದಾಗಿ ಮಥುರೆಯನ್ನು ಪ್ರವೇಶಿಸಿ ತಮ್ಮ ಮನೆಗೆ ಹೋಗಿರಿ. ನಾವು ಮೊದಲಿಗೆ ಇಲ್ಲಿ ತಂಗಿ, ಮತ್ತೆ ನಗರವನ್ನು ನೋಡಲು ಬರುವೆವು. ॥ ೧೦ ॥

ಅಕ್ರೂರನು ಹೇಳಿದನು – ಪ್ರಭುವೇ! ನಿಮ್ಮಿಬ್ಬರನ್ನು ಬಿಟ್ಟು ನಾನು ಮಥುರೆಯನ್ನು ಪ್ರವೇಶಿಸಲಾರೆನು. ಸ್ವಾಮಿ! ನಾನು ನಿನ್ನ ಭಕ್ತನಾಗಿರುವೆನು. ಭಕ್ತವತ್ಸಲನಾದ ನೀನು ನನ್ನ ಕೈ ಬಿಡಬೇಡ. ॥ ೧೧ ॥ ಭಗವಂತ! ಅಧೋಕ್ಷಜನೇ! ಸುಹೃತ್ತಮನೇ! ನೀನು ನಿನ್ನಣ್ಣ ಬಲರಾಮನೊಡಗೂಡಿ, ನಂದಗೋಪನೇ ಮೊದಲಾದ ಗೋಪಾಲಕರೊಂದಿಗೆ ನನ್ನ ಮನೆಗೆ ಬನ್ನಿರಿ. ॥ ೧೨ ॥ ನಾವು ಗೃಹಸ್ಥರು. ನಿನ್ನ ಚರಣಕಮಲಗಳ ಧೂಳಿನಿಂದ ನಮ್ಮ ಮನೆಯನ್ನು ಪವಿತ್ರಗೊಳಿಸು. ನಿನ್ನ ದಿವ್ಯವಾದ ಚರಣಗಳನ್ನು ತೊಳೆಯುವುದರಿಂದ ಅಗ್ನಿಗಳೂ, ದೇವತೆಗಳೂ, ಪಿತೃಗಳೂ, ತೃಪ್ತರಾಗುತ್ತಾರೆ. ॥ ೧೩ ॥ ಪ್ರಭೋ! ಸತ್ಪುರುಷರು ಸದಾಕಾಲ ಕೊಂಡಾಡುತ್ತಿರುವ ನಿನ್ನ ಚರಣಯುಗಳಗಳನ್ನು ತೊಳೆಯುವುದರಿಂದ ಬಲಿಯು ಪುಣ್ಯಶ್ಲೋಕನೆಂಬ ಕೀರ್ತಿಯನ್ನು ಪಡೆದನು. ಕೀರ್ತಿಯೇ ಅಲ್ಲ – ಅನನ್ಯ ಪ್ರೇಮಿ ಭಕ್ತರಿಗೆ ದೊರೆಯುವಂತಹ ಅತುಲನೀಯ ಐಶ್ವರ್ಯವೂ, ಸದ್ಗತಿಯೂ ದೊರೆಯಿತು. ॥ ೧೪ ॥

ಆಪಸ್ತೇಽಙ್ಘ್ರ್ಯವನೇಜನ್ಯಸ್ತ್ರೀನ್
ಲೋಕಾನ್ ಶುಚಯೋಽಧುನಾ ।
ಶಿರಸಾಧತ್ತ ಯಾಃ ಶರ್ವಃ
ಸ್ವರ್ಯಾತಾಃ ಸಗರಾತ್ಮಜಾಃ ॥ ೧೫ ॥

ದೇವದೇವ ಜಗನ್ನಾಥ ಪುಣ್ಯಶ್ರವಣಕೀರ್ತನ ।
ಯದೂತ್ತಮೋತ್ತಮಶ್ಲೋಕ ನಾರಾಯಣ ನಮೋಽಸ್ತು ತೇ
॥ ೧೬ ॥

ಶ್ರೀಭಗವಾನುವಾಚ

ಆಯಾಸ್ಯೇ ಭವತೋ ಗೇಹಮಹಮಾರ್ಯಸಮನ್ವಿತಃ ।
ಯದುಚಕ್ರದ್ರುಹಂ ಹತ್ವಾ ವಿತರಿಷ್ಯೇ ಸುಹೃತ್ಪ್ರಿಯಮ್
॥ ೧೭ ॥

ಶ್ರೀಶುಕ ಉವಾಚ

ಏವಮುಕ್ತೋ ಭಗವತಾ ಸೋಽಕ್ರೂರೋ ವಿಮನಾ ಇವ ।
ಪುರೀಂ ಪ್ರವಿಷ್ಟಃ ಕಂಸಾಯ ಕರ್ಮಾವೇದ್ಯ ಗೃಹಂ ಯಯೌ
॥ ೧೮ ॥

ಅಥಾಪರಾಹ್ಣೇ ಭಗವಾನ್ ಕೃಷ್ಣಃ ಸಂಕರ್ಷಣಾನ್ವಿತಃ ।
ಮಥುರಾಂ ಪ್ರಾವಿಶದ್ಗೋಪೈರ್ದಿದೃಕ್ಷುಃ ಪರಿವಾರಿತಃ
॥ ೧೯ ॥

ದದರ್ಶ ತಾಂ ಸ್ಫಾಟಿಕತುಂಗಗೋಪುರ-
ದ್ವಾರಾಂ ಬೃಹದ್ಧೇಮಕಪಾಟತೋರಣಾಮ್ ।
ತಾಮ್ರಾರಕೋಷ್ಠಾಂ ಪರಿಖಾದುರಾಸದಾ-
ಮುದ್ಯಾನರಮ್ಯೋಪವನೋಪಶೋಭಿತಾಮ್ ॥ ೨೦ ॥

ಸೌವರ್ಣಶೃಂಗಾಟಕಹರ್ಮ್ಯನಿಷ್ಕುಟೈಃ
ಶ್ರೇಣೀಸಭಾಭಿರ್ಭವನೈರುಪಸ್ಕೃತಾಮ್ ।
ವೈದೂರ್ಯವಜ್ರಾಮಲನೀಲವಿದ್ರುಮೈ-
ರ್ಮುಕ್ತಾಹರಿದ್ಭಿರ್ವಲಭೀಷು ವೇದಿಷು ॥ ೨೧ ॥

ಜುಷ್ಟೇಷು ಜಾಲಾಮುಖರಂಧ್ರಕುಟ್ಟಿಮೇ-
ಷ್ವಾವಿಷ್ಟಪಾರಾವತಬರ್ಹಿನಾದಿತಾಮ್ ।
ಸಂಸಿಕ್ತರಥ್ಯಾಪಣಮಾರ್ಗಚತ್ವರಾಂ
ಪ್ರಕೀರ್ಣಮಾಲ್ಯಾಂಕುರಲಾಜತಂಡುಲಾಮ್ ॥ ೨೨ ॥

ನಿನ್ನ ಚರಣೋದಕವಾದ ಗಂಗೆಯು ಮೂರು ಲೋಕಗಳನ್ನೇ ಪವಿತ್ರಗೊಳಿಸಿರುವಳು. ನಿಜವಾಗಿಯೂ ಅದು ಪವಿತ್ರತೆಯ ಮೂರ್ತಿಮಂತ ಸ್ವರೂಪನೇ ಆಗಿದೆ. ಅದರ ಸ್ಪರ್ಶದಿಂದಲೇ ಸಗರನ ಪುತ್ರರಿಗೆ ಸದ್ಗತಿ ಪ್ರಾಪ್ತವಾಯಿತು. ಅದೇ ಜಲವನ್ನು ಸಾಕ್ಷಾತ್ ಶಂಕರನು ತನ್ನ ಶಿರದಲ್ಲಿ ಧರಿಸಿರುವನು. ॥ ೧೫ ॥ ಜಗನ್ನಾಥನೇ! ದೇವದೇವನೇ! ನಿನ್ನ ಗುಣ-ಲೀಲೆಗಳ ಶ್ರವಣ-ಕೀರ್ತನೆಯು ಪರಮ ಮಂಗಳಪ್ರದವಾಗಿದೆ. ಸತ್ಪುರುಷರು ನಿನ್ನ ಗುಣಗಳನ್ನು ಕೀರ್ತಿಸುತ್ತಾ ಇರುತ್ತಾರೆ. ನಾರಾಯಣನೇ! ನಾನು ನಿನಗೆ ನಮಸ್ಕರಿಸುತ್ತೇನೆ. ॥ ೧೬ ॥

ಶ್ರೀಭಗವಂತನು ಹೇಳಿದನು – ಅಕ್ರೂರನೇ! ಮೊದಲಿಗೆ ಯದುವಂಶೀಯರಿಗೆ ದ್ರೋಹವೆಸಗಿರುವ ಕಂಸನನ್ನು ಸಂಹರಿಸಿ ಸುಹೃದ್-ಜನರೆಲ್ಲರಿಗೆ ಸಂತೋಷವನ್ನುಂಟುಮಾಡಿದ ಬಳಿಕ ಬಲರಾಮ, ನಂದರಾಜರೇ ಮೊದಲಾದವರೊಡನೆ ನಿನ್ನ ಮನೆಗೆ ಬರುತ್ತೇನೆ. ನೀನು ನಿರಾತಂಕವಾಗಿ ಮಥುರೆಯನ್ನು ಪ್ರವೇಶಿಸು. ॥ ೧೭ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ! ಭಗವಂತನು ಹೀಗೆ ಹೇಳಿದಾಗ ಅಕ್ರೂರನು ಮನಸ್ಸಿಲ್ಲದ ಮನಸ್ಸಿನಿಂದ ಮಥುರೆಯನ್ನು ಪ್ರವೇಶಿಸಿ, ಕಂಸನಲ್ಲಿ ಬಲರಾಮ-ಕೃಷ್ಣರು ಬಂದಿರುವ ಸಮಾಚಾರವನ್ನು ತಿಳಿಸಿ, ತನ್ನ ಮನೆಗೆ ತೆರಳಿದನು. ॥ ೧೮ ॥ ಮರುದಿನ ಅಪರಾಹ್ಣ ಸಮಯದಲ್ಲಿ ಶ್ರೀಕೃಷ್ಣನು ಬಲರಾಮ ಮತ್ತು ಗೋಪಬಾಲಕರೊಂದಿಗೆ ಮಥುರಾ ಪಟ್ಟಣವನ್ನು ನೋಡಲು ನಗರವನ್ನು ಪ್ರವೇಶಿಸಿದನು. ॥ ೧೯ ॥ ಭಗವಾನ್ ಶ್ರೀಕೃಷ್ಣನು ನೋಡುತ್ತಾನೆ-ಸ್ಫಟಿಕಶಿಲಾಮಯವಾದ ಹೆಬ್ಬಾಗಿಲಿನಿಂದಲೂ, ಎತ್ತರವಾದ ಗೋಪುರಗಳಿಂದಲೂ, ದೊಡ್ಡದಾದ ಬಾಗಿಲುಗಳಿಂದಲೂ ಕೂಡಿತ್ತು ಆ ನಗರವು. ಅಲ್ಲಿಯ ಕಿಡಕಿಗಳು ಚಿನ್ನದಿಂದ ಮಾಡಿದ್ದು, ಹೆಬ್ಬಾಗಿಲುಗಳಿಗೆ ಚಿನ್ನದ ತೋರಣಗಳಿದ್ದವು. ನಗರದ ಸುತ್ತಲೂ ತಾಮ್ರ ಮತ್ತು ಹಿತ್ತಾಳೆಯ ಪ್ರಾಕಾರಗಳಿದ್ದು, ಸುತ್ತಲಿದ್ದ ಕಂದಕಗಳಿಂದಾಗಿ ನಗರವನ್ನು ಸುಲಭವಾಗಿ ಪ್ರವೇಶಿಸಲಾಗುತ್ತಿರಲಿಲ್ಲ. ಅಲ್ಲಲ್ಲಿ ಸುಂದರವಾದ ಉದ್ಯಾನವನಗಳು, ರಮಣೀಯ ಉಪವನಗಳೂ ಶೋಭಿಸುತ್ತಿದ್ದವು. ॥ ೨೦ ॥ ಅಲ್ಲಿ ಸುವರ್ಣದಿಂದ ಅಲಂಕೃತವಾದ ಚೌಕಗಳಿದ್ದು, ಧನಿಕರ ಸೌಧಗಳು ಇದ್ದವು. ಜೊತೆಗೆ ಹೂದೋಟಗಳೂ, ಪ್ರಜಾವರ್ಗದ ಸಭಾಭವನಗಳೂ, ಸಾಮಾನ್ಯ ಜನರು ವಾಸಿಸುವ ಭವನಗಳಿಂದಲೂ ಸಮಲಂಕೃತವಾಗಿತ್ತು. ವಜ್ರ, ವೈಡೂರ್ಯ, ನೀಲ, ಹವಳ, ಪಚ್ಚೆ ಮುಂತಾದವುಗಳಿಂದ ಸಮಲಂಕೃತವಾದ ಚಾವಣಿಗಳೂ, ಜಗುಲಿಗಳೂ ಇದ್ದವು. ರತ್ನ ಖಚಿತವಾದ ಕಿಟಕಿಗಳಲ್ಲಿಯೂ ಜಗುಲಿಗಳಲ್ಲಿಯೂ ಕುಳಿತು ಕಪೋತ ಪಾರಿವಾಳ ಪಕ್ಷಿಗಳೂ, ನವಿಲುಗಳೂ ಧ್ವನಿಮಾಡುತ್ತಿದ್ದವು. ರಸ್ತೆಗಳನ್ನೂ, ಅಂಗಡಿ ಬೀದಿಗಳನ್ನು, ರಾಜಮಾರ್ಗಗಳನ್ನು ಚೌಕಗಳನ್ನು ಚೆನ್ನಾಗಿ ಗುಡಿಸಿ ಸಾರಿಸಿದ್ದರು. ಅಲ್ಲಲ್ಲಿ ಹೂವಿನ ಹಾರಗಳಿಂದಲೂ ಮೊಳಕೆ ಧಾನ್ಯಗಳಿಂದಲೂ, ಅರಳು-ಅಕ್ಷತೆಗಳಿಂದಲೂ ಅಲಂಕರಿಸಿದ್ದರು. ॥ ೨೦-೨೨ ॥

ಆಪೂರ್ಣಕುಂಭೈರ್ದಧಿಚಂದನೋಕ್ಷಿತೈಃ
ಪ್ರಸೂನದೀಪಾವಲಿಭಿಃ ಸಪಲ್ಲವೈಃ ।
ಸವೃಂದರಂಭಾಕ್ರಮುಕೈಃ ಸಕೇತುಭಿಃ
ಸ್ವಲಂಕೃತದ್ವಾರಗೃಹಾಂ ಸಪಟ್ಟಿಕೈಃ ॥ ೨೩ ॥

ಮನೆಗಳ ಬಾಗಿಲಲ್ಲಿ ಮೊಸರು, ಚಂದನಾದಿಗಳಿಂದ ಅಲಂಕರಿಸಿದ ನೀರಿನ ಕಲಶಗಳನ್ನು ಇಟ್ಟಿದ್ದರು. ಅವನ್ನು ಹೂವುಗಳಿಂದ, ದೀಪ, ಚಿಗುರುಗಳಿಂದ, ಗೊನೆಸಹಿತ ಬಾಳೆಯ ಕಂಬಗಳಿಂದ, ಅಡಿಕೆ ಮರಗಳ ಹೊಂಬಾಳೆಗಳಿಂದಲೂ, ಗಿಡಗಳಿಂದಲೂ, ರೇಷ್ಮೆ ವಸ್ತ್ರಗಳಿಂದಲೂ ಚೆನ್ನಾಗಿ ಅಲಂಕರಿಸಿದ್ದರು. ॥ ೨೩ ॥

ತಾಂ ಸಂಪ್ರವಿಷ್ಟೌ ವಸುದೇವನಂದನೌ
ವೃತೌ ವಯಸ್ಯೈರ್ನರದೇವವರ್ತ್ಮನಾ ।
ದ್ರಷ್ಟುಂ ಸಮೀಯುಸ್ತ್ವರಿತಾಃ ಪುರಸ್ತ್ರಿಯೋ
ಹರ್ಮ್ಯಾಣಿ ಚೈವಾರುರುಹುರ್ನೃಪೋತ್ಸುಕಾಃ ॥ ೨೪ ॥

ಪರೀಕ್ಷಿತನೇ! ವಸುದೇವನಂದನ ಭಗವಾನ್ ಶ್ರೀಕೃಷ್ಣನು ಬಲರಾಮ ಗೋಪಬಾಲಕರೊಂದಿಗೆ ಮಥುರೆಯ ರಾಜಬೀದಿಯ ಮೂಲಕ ನಗರವನ್ನು ಪ್ರವೇಶಿಸಿದನು. ಆ ಸಮಯದಲ್ಲಿ ನಗರದ ನಾರಿಯರು ಅತ್ಯಂತ ಉತ್ಸುಕತೆಯಿಂದ ಅವಸರ-ಅವಸರವಾಗಿ ಮಹಡಿಯನ್ನೇರಿ ನೋಡುತ್ತಾ ನಿಂತರು. ॥ ೨೪ ॥

ಕಾಶ್ಚಿದ್ವಿಪರ್ಯಗ್ಧೃತವಸ್ತ್ರಭೂಷಣಾ
ವಿಸ್ಮೃತ್ಯ ಚೈಕಂ ಯುಗಲೇಷ್ವಥಾಪರಾಃ ।
ಕೃತೈಕಪತ್ರಶ್ರವಣೈಕನೂಪುರಾ
ನಾಂಕ್ತ್ವಾ ದ್ವಿತೀಯಂ ತ್ವಪರಾಶ್ಚ ಲೋಚನಮ್ ॥ ೨೫ ॥

ಕೃಷ್ಣ-ಬಲರಾಮರನ್ನು ನೋಡಬೇಕೆಂದು ಧಾವಿಸಿ ಬಂದವರಲ್ಲಿ ಕೆಲವರು ಅವಸರದಿಂದಾಗಿ ವಸ್ತ್ರಗಳನ್ನು, ಆಭರಣಗಳನ್ನು ಹಿಂದು ಮುಂದಾಗಿ ಧರಿಸಿದ್ದರು. ಕೆಲವರು ಜೋಡಿಯಾಗಿ ತೊಡಬೇಕಾದ ಕಂಕಣ ಕುಂಡಲಗಳನ್ನು ಒಂಟಿಯಾಗಿಯೇ ತೊಟ್ಟಿದ್ದರು. ಯಾರೋ ಒಬ್ಬಳು ಕಿವಿಗೆ ಕರ್ಣಪುಷ್ಪವನ್ನು ಧರಿಸಿದರೆ, ಮತ್ತೊಬ್ಬಳು ಒಂದೇ ಕಾಲಿಗೆ ನೂಪುರವನ್ನು ಧರಿಸಿದ್ದಳು. ಕೆಲವರು ಒಂದೆ ಕಣ್ಣಿಗೆ ಕಾಡಿಗೆ ಹಚ್ಚಿಕೊಂಡಿದ್ದರೆ, ಮತ್ತೊಬ್ಬಳು ಕಾಡಿಗೆ ಹಚ್ಚಿಕೊಳ್ಳಲೇ ಇಲ್ಲ. ॥ ೨೫ ॥

ಅಶ್ನಂತ್ಯ ಏಕಾಸ್ತದಪಾಸ್ಯ ಸೋತ್ಸವಾ
ಅಭ್ಯಜ್ಯಮಾನಾ ಅಕೃತೋಪಮಜ್ಜನಾಃ ।
ಸ್ವಪಂತ್ಯ ಉತ್ಥಾಯ ನಿಶಮ್ಯ ನಿಃಸ್ವನಂ
ಪ್ರಪಾಯಯಂತ್ಯೋಽರ್ಭಮಪೋಹ್ಯ ಮಾತರಃ ॥ ೨೬ ॥

ಕೆಲವು ಹೆಂಗಳೆಯರು ಊಟಮಾಡುತ್ತಿದ್ದರು. ಸುದ್ದಿ ತಿಳಿದಾಗ ಊಟವನ್ನು ಹಾಗೇ ಬಿಟ್ಟು ಕೈತೊಳೆಯದೆಯೇ ಓಡಿ ಬಂದಿದ್ದರು. ಎಲ್ಲರ ಮನಸ್ಸು ಆನಂದೋತ್ಸಾಹದಿಂದ ತುಂಬಿ ಹೋಗಿತ್ತು. ಕೆಲವರು ಅಂಗರಾಗವನ್ನು ಹಚ್ಚಿಕೊಳ್ಳುತ್ತಿದ್ದವರು ಸ್ನಾನ ಮಾಡದೇ ಹಾಗೇ ಬಂದಿದ್ದರು. ಮಲಗಿದ್ದ ಕೆಲವರು ಗದ್ದಲವನ್ನು ಕೇಳಿ ಹಾಗೆಯೇ ಬಂದಿದ್ದರು. ಮಕ್ಕಳಿಗೆ ಹಾಲು ಕುಡಿಸುತ್ತಿದ್ದ ಕೆಲವರು ಮಗುವನ್ನು ಅಲ್ಲೇ ಬಿಟ್ಟು ಶ್ರೀಕೃಷ್ಣನನ್ನು ನೋಡಲು ಆಗಮಿಸಿದ್ದರು. ॥ ೨೬ ॥

ಮನಾಂಸಿ ತಾಸಾಮರವಿಂದಲೋಚನಃ
ಪ್ರಗಲ್ಭಲೀಲಾಹಸಿತಾವಲೋಕನೈಃ ।
ಜಹಾರ ಮತ್ತದ್ವಿರದೇಂದ್ರವಿಕ್ರಮೋ
ದೃಶಾಂ ದದಚ್ಛ್ರೀರಮಣಾತ್ಮನೋತ್ಸವಮ್ ॥ ೨೭ ॥

ಕಮಲನಯನ ಶ್ರೀಕೃಷ್ಣನು ಮತ್ತಗಜದಂತೆ ಠೀವಿಯಿಂದ ನಡೆದು ಬರುತ್ತಿದ್ದನು. ಮಹಾಲಕ್ಷ್ಮಿಗೂ ಆನಂದವನ್ನುಂಟು ಮಾಡುವ ತನ್ನ ವಿಗ್ರಹದಿಂದ ಮಥುರೆಯ ಸ್ತ್ರೀಯರ ಕಣ್ಣುಗಳಿಗೆ ಆನಂದೋತ್ಸವವನ್ನು ಉಂಟುಮಾಡುತ್ತಿದ್ದನು. ಪ್ರೌಢವಾದ ಹಾವ-ಭಾವಗಳಿಂದಲೂ, ಮುಗುಳ್ನಗೆಯಿಂದಲೂ, ಚೇತೋಹಾರಿಯಾದ ಕಡೆಗಣ್ಣ ನೋಟದಿಂದಲೂ ಅವರ ಮನಸ್ಸನ್ನು ಅಪಹರಿಸಿ ಬಿಟ್ಟಿದ್ದನು. ॥ ೨೭ ॥

ದೃಷ್ಟ್ವಾ ಮುಹುಃಶ್ರುತಮನುದ್ರುತಚೇತಸಸ್ತಂ
ತತ್ಪ್ರೇಕ್ಷಣೋತ್ಸ್ಮಿತಸುಧೋಕ್ಷಣಲಬ್ಧಮಾನಾಃ ।
ಆನಂದಮೂರ್ತಿಮುಪಗುಹ್ಯ ದೃಶಾಽಽತ್ಮಲಬ್ಧಂ
ಹೃಷ್ಯತ್ತ್ವಚೋ ಜಹುರನಂತಮರಿಂದಮಾಧಿಮ್ ॥ ೨೮ ॥

ಮಥುರಾ ನಗರದ ಸ್ತ್ರೀಯರು ಅನೇಕ ದಿನಗಳಿಂದ ಭಗವಾನ್ ಶ್ರೀಕೃಷ್ಣನ ಅದ್ಭುತ ಲೀಲೆಗಳನ್ನು ಕೇಳುತ್ತಾ ಬಂದಿದ್ದರು. ಅವರ ಚಿತ್ತವು ಬಹಳ ಕಾಲದಿಂದ ಶ್ರೀಕೃಷ್ಣದರ್ಶನಕ್ಕಾಗಿ ಚಂಚಲವಾಗಿದ್ದು ವ್ಯಾಕುಲವಾಗಿತ್ತು. ಇಂದು ಅವನನ್ನು ನೋಡಿದರು. ಶ್ರೀಕೃಷ್ಣನೂ ಕೂಡ ತನ್ನ ಪ್ರೇಮಪೂರ್ಣ ಓರೆನೋಟದಿಂದ ಮುಸುನಗೆಯ ಅಮೃತ ಸಿಂಚನದಿಂದ ಅವರನ್ನು ಸಮ್ಮಾನಿಸಿದನು. ಪರೀಕ್ಷಿತನೇ! ಆ ಸ್ತ್ರೀಯರು ಕಣ್ಣುಗಳ ಮೂಲಕ ಭಗವಂತನನ್ನು ತಮ್ಮ ಹೃದಯದಲ್ಲಿ ಇಟ್ಟುಕೊಂಡು ಆನಂದಮಯ ಸ್ವರೂಪವನ್ನು ಆಲಿಂಗಿಸಿಕೊಂಡರು. ಅವರೆಲ್ಲರ ಶರೀರ ಪುಳಕಗೊಂಡಿತು ಹಾಗೂ ಬಹಳ ದಿನಗಳಿಂದಿದ್ದ ವಿರಹ ವ್ಯಥೆಯು ಶಾಂತವಾಯಿತು. ॥ ೨೮ ॥

ಪ್ರಾಸಾದಶಿಖರಾರೂಢಾಃ ಪ್ರೀತ್ಯುತ್ಫುಲ್ಲಮುಖಾಂಬುಜಾಃ ।
ಅಭ್ಯವರ್ಷನ್ ಸೌಮನಸ್ಯೈಃ ಪ್ರಮದಾ ಬಲಕೇಶವೌ ॥ ೨೯ ॥

ದಧ್ಯಕ್ಷತೈಃ ಸೋದಪಾತ್ರೈಃ ಸ್ರಗ್ಗಂಧೈರಭ್ಯುಪಾಯನೈಃ ।
ತಾವಾನರ್ಚುಃ ಪ್ರಮುದಿತಾಸ್ತತ್ರ ತತ್ರ ದ್ವಿಜಾತಯಃ ॥ ೩೦ ॥

ಊಚುಃ ಪೌರಾ ಅಹೋ ಗೋಪ್ಯಸ್ತಪಃ ಕಿಮಚರನ್ ಮಹತ್ ।
ಯಾ ಹ್ಯೇತಾವನುಪಶ್ಯಂತಿ ನರಲೋಕಮಹೋತ್ಸವೌ ॥ ೩೧ ॥

ರಜಕಂ ಕಂಚಿದಾಯಾಂತಂ ರಂಗಕಾರಂ ಗದಾಗ್ರಜಃ ।
ದೃಷ್ಟ್ವಾಯಾಚತ ವಾಸಾಂಸಿ ಧೌತಾನ್ಯತ್ಯುತ್ತಮಾನಿ ಚ ॥ ೩೨ ॥

ದೇಹ್ಯಾವಯೋಃ ಸಮುಚಿತಾನ್ಯಂಗ ವಾಸಾಂಸಿ ಚಾರ್ಹತೋಃ ।
ಭವಿಷ್ಯತಿ ಪರಂ ಶ್ರೇಯೋ ದಾತುಸ್ತೇ ನಾತ್ರ ಸಂಶಯಃ ॥ ೩೩ ॥

ಸ ಯಾಚಿತೋ ಭಗವತಾ ಪರಿಪೂರ್ಣೇನ ಸರ್ವತಃ ।
ಸಾಕ್ಷೇಪಂ ರುಷಿತಃ ಪ್ರಾಹ ಭೃತ್ಯೋ ರಾಜ್ಞಃ ಸುದುರ್ಮದಃ ॥ ೩೪ ॥

ಈದೃಶಾನ್ಯೇವ ವಾಸಾಂಸಿ ನಿತ್ಯಂ ಗಿರಿವನೇಚರಾಃ ।
ಪರಿಧತ್ತ ಕಿಮುದ್ವೃತ್ತಾ ರಾಜದ್ರವ್ಯಾಣ್ಯಭೀಪ್ಸಥ ॥ ೩೫ ॥

ಯಾತಾಶು ಬಾಲಿಶಾ ಮೈವಂ ಪ್ರಾರ್ಥ್ಯಂ ಯದಿ ಜಿಜೀವಿಷಾ ।
ಬಧ್ನಂತಿ ಘ್ನಂತಿ ಲುಂಪಂತಿ ದೃಪ್ತಂ ರಾಜಕುಲಾನಿ ವೈ ॥ ೩೬ ॥

ಏವಂ ವಿಕತ್ಥಮಾನಸ್ಯ ಕುಪಿತೋ ದೇವಕೀಸುತಃ ।
ರಜಕಸ್ಯ ಕರಾಗ್ರೇಣ ಶಿರಃ ಕಾಯಾದಪಾತಯತ್ ॥ ೩೭ ॥

ತಸ್ಯಾನುಜೀವಿನಃ ಸರ್ವೇ ವಾಸಃಕೋಶಾನ್ ವಿಸೃಜ್ಯ ವೈ ।
ದುದ್ರುವುಃ ಸರ್ವತೋ ಮಾರ್ಗಂ ವಾಸಾಂಸಿ ಜಗೃಹೇಽಚ್ಯುತಃ ॥ ೩೮ ॥

ವಸಿತ್ವಾತ್ಮಪ್ರಿಯೇ ವಸ್ತ್ರೇ ಕೃಷ್ಣಃ ಸಂಕರ್ಷಣಸ್ತಥಾ ।
ಶೇಷಾಣ್ಯಾದತ್ತ ಗೋಪೇಭ್ಯೋ ವಿಸೃಜ್ಯ ಭುವಿ ಕಾನಿಚಿತ್ ॥ ೩೯ ॥

ಮಥುರೆಯ ನಾರಿಯರು ತಮ್ಮ-ತಮ್ಮ ಮನೆಗಳ ಮಹಡಿಗಳನ್ನು ಹತ್ತಿ ಬಲರಾಮ-ಶ್ರೀಕೃಷ್ಣರ ಮೇಲೆ ಹೂವಿನ ಮಳೆಗರೆದರು. ಆಗ ಆ ಸ್ತ್ರೀಯರ ಮುಖಕಮಲಗಳು ಪ್ರೇಮಾವೇಗದಿಂದ ಅರಳಿದ್ದವು. ॥ ೨೯ ॥ ಬ್ರಾಹ್ಮಣ, ಕ್ಷತ್ರಿಯ, ವೈಶ್ಯರೆಲ್ಲರೂ ಅಲ್ಲಲ್ಲಿ ಮೊಸರು, ಅಕ್ಷತೆ, ನೀರುತುಂಬಿದ ಕಲಶಗಳಿಂದ ಪುಷ್ಪಹಾರಗಳಿಂದ, ಚಂದನಾದಿ ಕಾಣಿಕೆ ಸಾಮಗ್ರಿಗಳಿಂದ ಭಗವಾನ್ ಶ್ರೀಕೃಷ್ಣ ಬಲರಾಮರನ್ನು ಆನಂದಮಗ್ನರಾಗಿ ಪೂಜಿಸಿದರು. ॥ ೩೦ ॥ ಭಗವಂತನನ್ನು ನೋಡಿದ ಪುರವಾಸಿಗಳೆಲ್ಲರೂ - 'ಧನ್ಯ ! ಧನ್ಯ !! ಸಕಲ ಮನುಷ್ಯರಿಗೆ ಪರಮಾನಂದವನ್ನೀಯುವ ಇವರಿಬ್ಬರನ್ನು ನೋಡುತ್ತಿದ್ದ ಗೋಪಿಯರು ಯಾವ ಮಹಾನ್ ತಪಸ್ಸು ಮಾಡಿದ್ದರೋ !' ಎಂದು ಪರಸ್ಪರ ಮಾತನಾಡಿಕೊಂಡರು. ॥ ೩೧ ॥

ಅದೇ ಸಮಯದಲ್ಲಿ ಬಟ್ಟೆಗಳಿಗೆ ಬಣ್ಣ ಹಾಕುವ ಕೆಲಸವನ್ನು ಮಾಡುತ್ತಿದ್ದ ಒಬ್ಬ ಅಗಸರವನು ತಮ್ಮ ಕಡೆಗೆ ಬರುತ್ತಿರುವುದನ್ನು ಭಗವಾನ್ ಶ್ರೀಕೃಷ್ಣನು ನೋಡಿದನು. ಕೃಷ್ಣನು ಅವನ ಬಳಿ ಮಡಿ ಮಾಡಿದ ಒಳ್ಳೆಯ ಬಟ್ಟೆಗಳನ್ನು ಉಡಲು ಕೇಳಿದನು. ॥ ೩೨ ॥ ಅಯ್ಯಾ ! ನಮ್ಮಿಬ್ಬರಿಗೂ ತೊಡಲು ಯೋಗ್ಯವಾದ ಬಟ್ಟೆಗಳನ್ನು ಕೊಡು. ರಾಜಯೋಗ್ಯವಾದ ಈ ಬಟ್ಟೆಗಳನ್ನು ತೊಟ್ಟುಕೊಳ್ಳಲು ನಾವು ಅರ್ಹರಾಗಿದ್ದೇವೆ. ನೀನು ನಮಗೆ ಈ ವಸ್ತ್ರಗಳನ್ನು ಕೊಟ್ಟರೆ ನಿನಗೆ ಬಹಳ ಶ್ರೇಯಸ್ಸು ಉಂಟಾದೀತು. ಇದರಲ್ಲಿ ಸಂಶಯವೇ ಇಲ್ಲ. ॥ ೩೩ ॥ ಪರೀಕ್ಷಿತನೇ ! ಭಗವಂತನು ಸರ್ವತ್ರ ಪರಿಪೂರ್ಣನಾಗಿದ್ದಾನೆ. ಎಲ್ಲವೂ ಅವನದ್ದೇ ಆಗಿದೆ. ಹೀಗಿದ್ದರೂ ಅವನು ಹೀಗೆ ಯಾಚಿಸುವ ಲೀಲೆಯನ್ನು ತೋರಿದನು. ಆದರೆ ಅವನು ಮೂರ್ಖರಾಜನಾದ ಕಂಸನ ಸೇವಕನಾಗಿದ್ದು, ಸೊಕ್ಕಿ ಹೋಗಿದ್ದನು. ಭಗವಂತನಿಗೆ ಕೊಡುವುದು ಹಾಗಿರಲಿ. ಅವನು ಸಿಟ್ಟಿನಿಂದ ಆಕ್ಷೇಪಿಸುತ್ತಾ ಹೇಳುತ್ತಾನೆ ॥ ೩೪ ॥ ಕಾಡು-ಮೇಡುಗಳಲ್ಲಿ ಸದಾ ಸಂಚರಿಸುವ ನೀವುಗಳು ಪ್ರತಿದಿನವೂ ಇಂತಹ ಬಟ್ಟೆಗಳನ್ನು ಉಡುವಿರಾ ? ಉದ್ಧಟರಾಗಿರುವ ನೀವು ಈ ರೀತಿ ಬಾಯಿಗೆ ಬಂದ ಹಾಗೆ ಗಳಹುತ್ತಿರುವಿ. ರಾಜನ ವಸ್ತ್ರಗಳನ್ನು ಅಪಹರಿಸುವ ಅಪೇಕ್ಷೆಯೇ ? ॥ ೩೫ ॥ ಎಲೈ ಮೂರ್ಖರೇ ! ಹೋಗಿ, ಓಡಿಹೋಗಿ ! ಕೆಲವು ದಿನ ಬದುಕಬೇಕೆಂದಿದ್ದರೆ ಹೀಗೆ ಕೇಳಬೇಡಿರಿ. ರಾಜಭಟರು ನಿಮ್ಮಂತಹ ಸೊಕ್ಕಿನವರನ್ನು ಬಂಧಿಸುತ್ತಾರೆ, ಕೊಂದು ಹಾಕುತ್ತಾರೆ. ಅವರಲ್ಲಿರುವ ಸರ್ವಸ್ವವನ್ನು ಕಿತ್ತುಕೊಳ್ಳುವರು. ॥ ೩೬ ॥ ಆ ಮಡಿವಾಳನ ಮಿತಿಮೀರಿದ ತಲೆಹರಟೆಯ ಮಾತನ್ನು ಕೇಳಿದಾಗ ಭಗವಾನ್ ಶ್ರೀಕೃಷ್ಣನು ಕೊಂಚ ಕುಪಿತನಾಗಿ ಕೈಯಿಂದ ಒಂದು ಏಟು ಹೊಡೆದು ತಲೆಯನ್ನು ದೇಹದಿಂದ ಬೇರ್ಪಡಿಸಿದನು. ॥ ೩೭ ॥ ಇದನ್ನು ನೋಡಿದ ಆ ಅಗಸನ ಅನುಯಾಯಿಗಳು ಬಟ್ಟೆಗಳ ಮೂಟೆಯನ್ನು ಅಲ್ಲೇ ಬಿಸುಟು ದಿಕ್ಕಾಪಾಲಾಗಿ ಓಡಿಹೋದರು. ಭಗವಂತನು ಆ ವಸ್ತ್ರಗಳನ್ನು ಎತ್ತಿಕೊಂಡನು. ॥ ೩೮ ॥ ಶ್ರೀಕೃಷ್ಣ-ಬಲರಾಮರು ತಮಗೆ ಪ್ರಿಯವೆನಿಸಿದ ವಸ್ತ್ರಗಳನ್ನು ಉಟ್ಟುಕೊಂಡರು. ಉಳಿದ ಬಟ್ಟೆಗಳನ್ನು ಜೊತೆಯವರಾದ ಗೋಪಬಾಲಕರಿಗೆ ಹಂಚಿದರು ಹಾಗೂ ಉಳಿದವುಗಳನ್ನು ಅಲ್ಲೇ ಬಿಟ್ಟು ಮುಂದಕ್ಕೆ ನಡೆದರು. ॥ ೩೯ ॥

ತತಸ್ತು ವಾಯಕಃ ಪ್ರೀತಸ್ತಯೋರ್ವೇಷಮಕಲ್ಪಯತ್ ।
ವಿಚಿತ್ರವರ್ಣೈಶ್ಚೈಲೇಯೈರಾಕಲ್ಪೈರನುರೂಪತಃ ॥ ೪೦ ॥

ಭಗವಾನ್ ಶ್ರೀಕೃಷ್ಣನು ಮತ್ತು ಬಲರಾಮರು ರಾಜಬೀದಿಯಲ್ಲಿ ಸ್ವಲ್ಪ ದೂರ ಹೋಗುತ್ತಲೇ ಅವರಿಗೆ ಓರ್ವ ದರ್ಜಿ ಭೆಟ್ಟಿಯಾದನು. ಭಗವಂತನ ಅನುಪಮ ಸೌಂದರ್ಯವನ್ನು ನೋಡಿ ಅವನಿಗೆ ತುಂಬಾ ಸಂತೋಷವಾಯಿತು. ಅವನು ಆ ಬಣ್ಣ-ಬಣ್ಣದ ಸುಂದರ ವಸ್ತ್ರಗಳನ್ನು ಅವರವರ ಶರೀರಕ್ಕೆ ಹೊಂದುವಂತೆ ಸರಿಪಡಿಸಿ, ಸಿಂಗರಿಸಿದನು. ॥ ೪೦ ॥

ನಾನಾಲಕ್ಷಣವೇಷಾಭ್ಯಾಂ ಕೃಷ್ಣರಾಮೌ ವಿರೇಜತುಃ ।
ಸ್ವಲಂಕೃತೌ ಬಾಲಗಜೌ ಪರ್ವಣೀವ ಸಿತೇತರೌ ॥ ೪೧ ॥

ವಿಧ-ವಿಧವಾದ ವಸ್ತ್ರಗಳಿಂದ ವಿಭೂಷಿತರಾದ ಸಹೋದರರಿಬ್ಬರೂ ಇನ್ನೂ ಹೆಚ್ಚು ಶೋಭಿಸತೊಡಗಿದರು. ಉತ್ಸವದ ಸಮಯದಲ್ಲಿ ಸಿಂಗರಿಸಲ್ಪಟ್ಟ ಕರಿಯ ಮತ್ತು ಬಿಳಿಯ ಆನೆಯ ಮರಿಗಳಂತೆ ಅವರು ಕಂಡುಬರುತ್ತಿದ್ದರು. ॥ ೪೧ ॥

ತಸ್ಯ ಪ್ರಸನ್ನೋ ಭಗವಾನ್ ಪ್ರಾದಾತ್ ಸಾರೂಪ್ಯಮಾತ್ಮನಃ ।
ಶ್ರಿಯಂ ಚ ಪರಮಾಂ ಲೋಕೇ ಬಲೈಶ್ವರ್ಯಸ್ಮೃತೀಂದ್ರಿಯಮ್ ॥ ೪೨ ॥

ಭಗವಾನ್ ಶ್ರೀಕೃಷ್ಣನು ಆ ದರ್ಜಿಯ ಮೇಲೆ ಅತ್ಯಂತ ಪ್ರಸನ್ನನಾದನು. ಅವನು ಅವನಿಗೆ ಇಹದಲ್ಲಿ ಐಶ್ವರ್ಯವನ್ನು, ಬಲವನ್ನೂ, ಅಧಿಕಾರವನ್ನೂ, ಸ್ಮರಣಶಕ್ತಿಯನ್ನೂ, ಇಂದ್ರಿಯ ಪಟುತ್ವವನ್ನು ಅನುಗ್ರಹಿಸಿ, ಅವಸಾನ ನಂತರ ತನ್ನ ಸಾರೂಪ್ಯಮುಕ್ತಿಯನ್ನು ಕರುಣಿಸಿದನು. ॥ ೪೨ ॥

ತತಃ ಸುದಾಮ್ನೋ ಭವನಂ ಮಾಲಾಕಾರಸ್ಯ ಜಗ್ಮತುಃ ।
ತೌ ದೃಷ್ಟ್ವಾ ಸ ಸಮುತ್ಥಾಯ ನನಾಮ ಶಿರಸಾ ಭುವಿ ॥ ೪೩ ॥

ಬಳಿಕ ಭಗವಾನ್ ಶ್ರೀಕೃಷ್ಣನು ಸುದಾಮನೆಂಬ ಹೂವಾಡಿಗನ ಮನೆಗೆ ಹೋದನು. ಜಗದಾನಂದಕರರಾದ ಸಹೋದರರಿಬ್ಬರನ್ನು ನೋಡುತ್ತಲೇ ಸುದಾಮನು ಎದ್ದುನಿಂತು ತಲೆಬಾಗಿ ಸಾಷ್ಟಾಂಗ ನಮಸ್ಕಾರ ಮಾಡಿದನು. ॥ ೪೩ ॥

ತಯೋರಾಸನಮಾನೀಯ ಪಾದ್ಯಂ ಚಾರ್ಘ್ಯಾರ್ಹಣಾದಿಭಿಃ ।
ಪೂಜಾಂ ಸಾನುಗಯೋಶ್ಚಕ್ರೇ ಸ್ರಕ್ತಾಂಬೂಲಾನುಲೇಪನೈಃ ॥ ೪೪ ॥

ಮತ್ತೆ ಅವರನ್ನು ಆಸನದಲ್ಲಿ ಕುಳ್ಳಿರಿಸಿ ಅವರ ಕೈ-ಕಾಲು ತೊಳೆದು ಗೋಪಬಾಲಕರು ಸೇರಿ ಎಲ್ಲರನ್ನು ಹೂವಿನಹಾರ, ತಾಂಬೂಲ-ಚಂದನಾದಿಗಳಿಂದ ಯಥೋಚಿತವಾಗಿ ಪೂಜಿಸಿದನು. ॥ ೪೪ ॥

ಪ್ರಾಹ ನಃ ಸಾರ್ಥಕಂ ಜನ್ಮ ಪಾವಿತಂ ಚ ಕುಲಂ ಪ್ರಭೋ ।
ಪಿತೃದೇವರ್ಷಯೋ ಮಹ್ಯಂ ತುಷ್ಟಾ ಹ್ಯಾಗಮನೇನ ವಾಮ್ ॥ ೪೫ ॥

ಬಳಿಕ ಎರಡೂ ಕೈಗಳನ್ನು ಜೋಡಿಸಿಕೊಂಡು ಪ್ರಾರ್ಥಿಸಿದನು - ಸ್ವಾಮಿ! ನಿಮ್ಮಿಬ್ಬರ ಶುಭಾಗಮನದಿಂದ ನಮ್ಮ ಜನ್ಮ ಪಾವನವಾಯಿತು. ನಮ್ಮ ಕುಲಪವಿತ್ರವಾಯಿತು. ಇಂದು ನಾನು ದೇವ-ಋಷಿ-ಪಿತೃ ಇವರ ಋಣದಿಂದ ಮುಕ್ತನಾದೆನು. ಅವರು ನನ್ನ ಮೇಲೆ ಸಂತುಷ್ಟರಾದರು. ॥ ೪೫ ॥

ಭವಂತೌ ಕಿಲ ವಿಶ್ವಸ್ಯ ಜಗತಃ ಕಾರಣಂ ಪರಮ್ ।
ಅವತೀರ್ಣಾವಿಹಾಂಶೇನ ಕ್ಷೇಮಾಯ ಚ ಭವಾಯ ಚ ॥ ೪೬ ॥

ನೀವಿಬ್ಬರೂ ಜಗತ್ತಿನ ಪರಮಕಾರಣರಾಗಿದ್ದೀರಿ. ನೀವು ಪ್ರಪಂಚದ ಅಭ್ಯುದಯ (ಉನ್ನತಿ) ಮತ್ತು ನಿಃಶ್ರೇಯಸ (ಮೋಕ್ಷ)ಗಳಿಗೆ ಈ ಭೂಮಿಯಲ್ಲಿ ತಮ್ಮ ಜ್ಞಾನ, ಬಲ ಮೊದಲಾದ ಅಂಶಗಳಿಂದ ಅವತರಿಸಿರುವಿರಿ. ॥ ೪೬ ॥

ನ ಹಿ ವಾಂ ವಿಷಮಾ ದೃಷ್ಟಿಃ ಸುಹೃದೋರ್ಜಗದಾತ್ಮನೋಃ ।
ಸಮಯೋಃ ಸರ್ವಭೂತೇಷು ಭಜಂತಂ ಭಜತೋರಪಿ ॥ ೪೭ ॥

ನೀವು ಪ್ರೇಮಿಸುವವರನ್ನು ಪ್ರೇಮಿಸುವವರೂ, ಭಜಿಸುವವರನ್ನು ಭಜಿಸುವವರೂ ಆಗಿದ್ದರೂ ನಿಮ್ಮ ದೃಷ್ಟಿಯಲ್ಲಿ ವಿಷಮತೆ ಇಲ್ಲ. ಏಕೆಂದರೆ, ನೀವು ಸಮಸ್ತ ಜಗತ್ತಿನ ಪರಮ ಸುಹೃದರೂ, ಆತ್ಮರೂ ಆಗಿರುವಿರಿ. ನೀವು ಸಮಸ್ತ ಪ್ರಾಣಿ-ಪದಾರ್ಥಗಳಲ್ಲಿ ಸಮರೂಪದಿಂದ ನೆಲೆಸಿರುವಿರಿ. ॥ ೪೭ ॥

ತಾವಾಜ್ಞಾಪಯತಂ ಭೃತ್ಯಂ ಕಿಮಹಂ ಕರವಾಣಿ ವಾಮ್ ।
ಪುಂಸೋಽತ್ಯನುಗ್ರಹೋ ಹ್ಯೇಷ ಭವದ್ಭಿರ್ಯನ್ನಿಯುಜ್ಯತೇ ॥ ೪೮ ॥

ನಾನು ನಿಮ್ಮ ದಾಸನಾಗಿದ್ದೇನೆ. ನಾನು ನಿಮ್ಮಗಳ ಯಾವ ಸೇವೆಮಾಡಲಿ ಎಂಬುದನ್ನು ಆಜ್ಞಾಪಿಸಿರಿ. ಭಗವಂತ! ನೀನು ಜೀವಿಗಳಿಗೆ ಆಜ್ಞೆಯನ್ನಿತ್ತು, ಕಾರ್ಯದಲ್ಲಿ ತೊಡಗಿಸುವುದು ನಿನ್ನ ಮಹದನುಗ್ರಹವಾಗಿದೆ, ಪೂರ್ಣ ಕೃಪಾಪ್ರಸಾದವಾಗಿದೆ. ॥ ೪೮ ॥

ಇತ್ಯಭಿಪ್ರೇತ್ಯ ರಾಜೇಂದ್ರ ಸುದಾಮಾ ಪ್ರೀತಮಾನಸಃ ।
ಶಸ್ತೈಃ ಸುಗಂಧೈಃ ಕುಸುಮೈರ್ಮಾಲಾ ವಿರಚಿತಾ ದದೌ ॥ ೪೯ ॥

ರಾಜೇಂದ್ರ! ಸುದಾಮ ಹೂವಾಡಿಗನು ಹೀಗೆ ಪ್ರಾರ್ಥನೆಗೈದು ಭಗವಂತನ ಅಭಿಪ್ರಾಯವನ್ನು ತಿಳಿದು, ಅತ್ಯಂತ ಪ್ರೇಮಾನಂದದಿಂದ ಸುಂದರವಾದ ಹಾಗೂ ಸುಗಂಧಿತವಾದ ಪುಷ್ಪಗಳ ಹಾರಗಳನ್ನು ಅವರಿಗೆ ತೊಡಿಸಿದನು. ॥ ೪೯ ॥

ತಾಭಿಃ ಸ್ವಲಂಕೃತೌ ಪ್ರೀತೌ ಕೃಷ್ಣರಾಮೌ ಸಹಾನುಗೌ ।
ಪ್ರಣತಾಯ ಪ್ರಪನ್ನಾಯ ದದತುರ್ವರದೌ ವರಾನ್ ॥ ೫೦ ॥

ಗೋಪಾಲಬಾಲಕರು ಹಾಗೂ ಬಲರಾಮನೊಂದಿಗೆ ಭಗವಾನ್ ಶ್ರೀಕೃಷ್ಣನು ಆ ಸುಂದರವಾದ ಮಾಲೆಗಳಿಂದ ಅಲಂಕೃತನಾಗಿ, ವರದಾಯಕನಾದ ಪ್ರಭುವು ಪ್ರಸನ್ನನಾಗಿ ಶರಣಾಗತನೂ, ವಿನೀತನೂ ಆದ ಸುದಾಮನಿಗೆ ಶ್ರೇಷ್ಠವಾದ ವರವನ್ನು ಕರುಣಿಸಿದನು. ॥ ೫೦ ॥

ಸೋಽಪಿ ವವ್ರೇಽಚಲಾಂ ಭಕ್ತಿಂ ತಸ್ಮಿನ್ನೇವಾಖಿಲಾತ್ಮನಿ ।
ತದ್ಭಕ್ತೇಷು ಚ ಸೌಹಾರ್ದಂ ಭೂತೇಷು ಚ ದಯಾಂ ಪರಾಮ್ ॥ ೫೧ ॥

ಸುದಾಮ ಹೂವಾಡಿಗನು 'ನನಗೆ ಅವಿಚಲ ಭಕ್ತಿಯುಂಟಾಗಲಿ. ನಿನ್ನ ಭಕ್ತರೊಂದಿಗೆ ನನಗೆ ಸೌಹಾರ್ದ್ರ ಮಿತ್ರತೆಯ ಸಂಬಂಧ ಉಂಟಾಗಲಿ ಮತ್ತು ಸಮಸ್ತ ಪ್ರಾಣಿಗಳ ಕುರಿತು ಅಹೈತುಕವಾದ ದಯಾಭಾವವು ಇರಲಿ' ಎಂಬ ವರವನ್ನು ಬೇಡಿದನು. ॥ ೫೧ ॥

ಇತಿ ತಸ್ಮೈ ವರಂ ದತ್ತ್ವಾ ಶ್ರಿಯಂ ಚಾನ್ವಯವರ್ಧಿನೀಮ್ ।
ಬಲಮಾಯುರ್ಯಶಃ ಕಾಂತಿಂ ನಿರ್ಜಗಾಮ ಸಹಾಗ್ರಜಃ ॥ ೫೨ ॥

ಭಗವಾನ್ ಶ್ರೀಕೃಷ್ಣನು ಸುದಾಮನು ಬೇಡಿದ ವರವನ್ನು ಕೊಡುವುದರ ಜೊತೆಗೆ ವಂಶ ಪಾರಂಪರ್ಯದೊಂದಿಗೆ ಹೆಚ್ಚುತ್ತಿರುವ ಅತುಲ ಸಂಪತ್ತನ್ನೂ ಹಾಗೂ ಬಲ, ಆಯುಸ್ಸು ಕೀರ್ತಿ, ಕಾಂತಿ ಇವುಗಳನ್ನು ಕರುಣಿಸಿದನು. ಬಳಿಕ ಭಗವಾನ್ ಶ್ರೀಕೃಷ್ಣನು ಬಲರಾಮನೊಂದಿಗೆ ಅಲ್ಲಿಂದ ಬೀಳ್ಕೊಂಡನು. ॥ ೫೨ ॥

ನಲವತ್ತೊಂದನೆಯ ಅಧ್ಯಾಯವು ಮುಗಿಯಿತು. ॥ ೪೧ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮಸ್ಕಂಧೇ
ಪೂರ್ವಾರ್ಧೇ ಪುರಪ್ರವೇಶೋ ನಾಮ ಏಕಚತ್ವಾರಿಂಶೋಽಧ್ಯಾಯಃ ॥ ೪೧ ॥

ನಲವತ್ತೆರಡನೆಯ ಅಧ್ಯಾಯ

ಕುಬ್ಜೆಯ ಮೇಲೆ ಕೃಪೆ, ಧನುರ್ಭಂಗ, ಕಂಸನ ತಳಮಳ

ಶ್ರೀಶುಕ ಉವಾಚ

ಅಥ ವ್ರಜನ್ ರಾಜಪಥೇನ ಮಾಧವಃ
ಸ್ತ್ರಿಯಂ ಗೃಹೀತಾಂಗವಿಲೇಪಭಾಜನಾಮ್ ।
ವಿಲೋಕ್ಯ ಕುಬ್ಜಾಂ ಯುವತೀಂ ವರಾನನಾಂ
ಪಪ್ರಚ್ಛ ಯಾಂತೀಂ ಪ್ರಹಸನ್ ರಸಪ್ರದಃ ॥ ೧ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ - ಪರೀಕ್ಷಿತನೇ! ಅನಂತರ ಭಗವಾನ್ ಶ್ರೀಕೃಷ್ಣನು ತನ್ನ ಸಂಗಡಿಗರೊಂದಿಗೆ ರಾಜಬೀದಿಯಲ್ಲಿ ಬರುತ್ತಿರುವಾಗ ಓರ್ವ ಯುವತಿಯನ್ನು ನೋಡಿದನು. ಆಕೆಯ ಮುಖವು ಸುಂದರವಾಗಿದ್ದರೂ ಶರೀರದಿಂದ ಕುಳ್ಳಾಗಿದ್ದಳು. ಇದರಿಂದ ಅವಳನ್ನು ಕುಬ್ಜೆ ಎಂದೇ ಕರೆಯುತ್ತಿದ್ದರು. ಆಕೆಯು ಕೈಯಲ್ಲಿ ಗಂಧದ ಪಾತ್ರೆಯನ್ನು ಹಿಡಿದುಕೊಂಡಿದ್ದಳು. ಪ್ರೇಮರಸವನ್ನು ದಾನಮಾಡುವುದಕ್ಕಾಗಿ ಭಗವಾನ್ ಶ್ರೀಕೃಷ್ಣನು ಕುಬ್ಜೆಯ ಮೇಲೆ ಕೃಪೆ ತೋರಲು ನಗುತ್ತಾ ಆಕೆಯನ್ನು ಪ್ರಶ್ನಿಸಿದನು. ॥ ೧ ॥

ಕಾ ತ್ವಂ ವರೋರ್ವೇತದು ಹಾನುಲೇಪನಂ
ಕಸ್ಯಾಂಗನೇ ವಾ ಕಥಯಸ್ವ ಸಾಧು ನಃ ।
ದೇಹ್ಯಾವಯೋರಂಗವಿಲೇಪಮುತ್ತಮಂ
ಶ್ರೇಯಸ್ತತಸ್ತೇ ನಚಿರಾದ್ಭವಿಷ್ಯತಿ ॥ ೨ ॥

ಎಲೈ ಸುಂದರಿಯೇ! ನೀನು ಯಾರು? ಈ ಗಂಧವನ್ನು ಯಾರಿಗಾಗಿ ಕೊಂಡುಹೋಗುತ್ತಿರುವೆ? ಕಲ್ಯಾಣಿ! ಎಲ್ಲವನ್ನು ಯಥಾವತ್ತಾಗಿ ಹೇಳು. ಈ ಉತ್ತಮವಾದ ಗಂಧವನ್ನೂ, ಅಂಗರಾಗವನ್ನು ನಮಗೆ ಕೊಟ್ಟುಬಿಡು. ಇದರಿಂದ ಶೀಘ್ರವಾಗಿ ನಿನಗೆ ಪರಮ ಶ್ರೇಯಸ್ಸು ಉಂಟಾದೀತು. ॥ ೨ ॥

ಸೈರಂಧ್ರ್ಯುವಾಚ

ದಾಸ್ಯಸ್ಮ್ಯಹಂ ಸುಂದರ ಕಂಸಸಮ್ಮತಾ
ತ್ರಿವಕ್ರನಾಮಾ ಹ್ಯನುಲೇಪಕರ್ಮಣಿ ।
ಮದ್ಭಾವಿತಂ ಭೋಜಪತೇರತಿಪ್ರಿಯಂ
ವಿನಾ ಯುವಾಂ ಕೋಽನ್ಯತಮಸ್ತದರ್ಹತಿ ॥ ೩ ॥

ಸೈರಂಧ್ರಿಯಾದ ಕುಬ್ಜೆಯು ಹೇಳಿದಳು - ಸುಂದರಾಂಗನೇ! ನಾನು ಕಂಸನಿಗೆ ಪ್ರಿಯಳಾದ ದಾಸಿಯು. ಮಹಾರಾಜನು ನನ್ನನ್ನು ಬಹಳವಾಗಿ ಸಮ್ಮಾನಿಸುತ್ತಾನೆ. ತ್ರಿವಕ್ರಾ (ಕುಬ್ಜೆ) ಎಂಬುದು ನನ್ನ ಹೆಸರು. ನಾನು ರಾಜನಲ್ಲಿ ಗಂಧ, ಅಂಗರಾಗವನ್ನು ಹಚ್ಚುವ ಕೆಲಸ ಮಾಡುತ್ತಿದ್ದೇನೆ. ನಾನು ತಯಾರಿಸಿದ ಗಂಧ ಮತ್ತು ಅಂಗರಾಗವು

ರೂಪಪೇಶಲಮಾಧುರ್ಯಹಸಿತಾಲಾಪವೀಕ್ಷಿತೈಃ ।
ಧರ್ಷಿತಾತ್ಮಾ ದದೌ ಸಾಂದ್ರಮುಭಯೋರನುಲೇಪನಮ್ ॥ ೪ ॥

ತತಸ್ತಾವಂಗರಾಗೇಣ ಸ್ವವರ್ಣೇತರಶೋಭಿನಾ ।
ಸಂಪ್ರಾಪ್ತಪರಭಾಗೇನ ಶುಶುಭಾತೇಽನುರಂಜಿತೌ ॥ ೫ ॥

ಪ್ರಸನ್ನೋ ಭಗವಾನ್ ಕುಬ್ಜಾಂ ತ್ರಿವಕ್ರಾಂ ರುಚಿರಾನನಾಮ್ ।
ಋಜ್ವೀಂ ಕರ್ತುಂ ಮನಶ್ಚಕ್ರೇ ದರ್ಶಯನ್ ದರ್ಶನೇ ಫಲಮ್ ॥ ೬ ॥

ಪದ್ಭ್ಯಾಮಾಕ್ರಮ್ಯ ಪ್ರಪದೇ ದ್ವ್ಯಂಗುಲ್ಯುತ್ತಾನಪಾಣಿನಾ ।
ಪ್ರಗೃಹ್ಯ ಚುಬುಕೇಽಧ್ಯಾತ್ಮಮುದನೀನಮದಚ್ಯುತಃ ॥ ೭ ॥

ಸಾ ತದರ್ಜುಸಮಾನಾಂಗೀ ಬೃಹಚ್ಛ್ರೋಣಿಪಯೋಧರಾ ।
ಮುಕುಂದಸ್ಪರ್ಶನಾತ್ಸದ್ಯೋ ಬಭೂವ ಪ್ರಮದೋತ್ತಮಾ ॥ ೮ ॥

ತತೋ ರೂಪಗುಣೌದಾರ್ಯಸಂಪನ್ನಾ ಪ್ರಾಹ ಕೇಶವಮ್ ।
ಉತ್ತರೀಯಾಂತಮಾಕೃಷ್ಯ ಸ್ಮಯಂತೀ ಜಾತಹೃಚ್ಛಯಾ ॥ ೯ ॥

ಏಹಿ ವೀರ ಗೃಹಂ ಯಾಮೋ ನ ತ್ವಾಂ ತ್ಯಕ್ತುಮಿಹೋತ್ಸಹೇ ।
ತ್ವಯೋನ್ಮಥಿತಚಿತ್ತಾಯಾಃ ಪ್ರಸೀದ ಪುರುಷರ್ಷಭ ॥ ೧೦ ॥

ಏವಂ ಸ್ತ್ರಿಯಾ ಯಾಚ್ಯಮಾನಃ ಕೃಷ್ಣೋ ರಾಮಸ್ಯ ಪಶ್ಯತಃ ।
ಮುಖಂ ವೀಕ್ಷ್ಯಾನುಗಾನಾಂ ಚ ಪ್ರಹಸಂಸ್ತಾಮುವಾಚ ಹ ॥ ೧೧ ॥

ಏಷ್ಯಾಮಿ ತೇ ಗೃಹಂ ಸುಭ್ರೂಃ ಪುಂಸಾಮಾಧಿವಿಕರ್ಶನಮ್ ।
ಸಾಧಿತಾರ್ಥೋಽಗೃಹಾಣಾಂ ನಃ ಪಾಂಥಾನಾಂ ತ್ವಂ ಪರಾಯಣಮ್ ॥ ೧೨ ॥

ವಿಸೃಜ್ಯ ಮಾಧ್ವ್ಯಾ ವಾಣ್ಯಾ ತಾಂ ವ್ರಜನ್ ಮಾರ್ಗೇ ವಣಿಕ್ಪಥೈಃ ।
ನಾನೋಪಾಯನತಾಂಬೂಲಸ್ರಗ್ಗಂಧೈಃ ಸಾಗ್ರಜೋಽರ್ಚಿತಃ ॥ ೧೩ ॥

ಭೋಜರಾಜ ಕಂಸನಿಗೆ ಅತ್ಯಂತ ಪ್ರಿಯವಾಗಿರುತ್ತದೆ. ಆದರೆ ಇಂತಹ ಅಮೋಘವಾದ ಚಂದನವನ್ನು ಲೇಪಿಸಿಕೊಳ್ಳಲು ಅರ್ಹರಾದವರು ನಿಮ್ಮಿಬ್ಬರನ್ನುಳಿದು ಬೇರೆ ಯಾರೂ ಇರುವುದಿಲ್ಲ. ॥ ೩ ॥ ಭಗವಂತನ ಸೌಂದರ್ಯ, ಸೌಕುಮಾರ್ಯ, ರಸಿಕತೆ, ಮಂದಹಾಸ, ಪ್ರೇಮಾಲಾಪ ಮತ್ತು ಕುಡಿನೋಟದಿಂದ ಕದಡಿಹೋದ ಮನಸ್ಸಿನಿಂದ ಕೂಡಿದ್ದ ಕುಬ್ಜೆಯು ರಾಮ-ಕೃಷ್ಣರಿಗೆ ತಾನು ರಾಜನಿಗಾಗಿ ಸಿದ್ಧಪಡಿಸಿದ ಘಮ-ಘಮಿಸುತ್ತಿದ್ದ ಅಂಗರಾಗವನ್ನು ಸಮರ್ಪಿಸಿದಳು. ॥ ೪ ॥ ಅದನ್ನು ಸ್ವೀಕರಿಸಿದ ಶ್ರೀಕೃಷ್ಣನು ತನ್ನ ಶ್ಯಾಮಲ ಶರೀರಕ್ಕೆ ಹಳದಿ ಬಣ್ಣದ ಮತ್ತು ಬಲರಾಮನು ಕೆಂಪು ಬಣ್ಣದ ಅಂಗರಾಗವನ್ನು ಹಚ್ಚಿಕೊಂಡರು. ಹೊಕ್ಕುಳಿನಿಂದ ಮೇಲ್ಭಾಗದ ಶರೀರವನ್ನು ಅಲಂಕರಿಸಿಕೊಂಡು ಅತ್ಯಂತ ಶೋಭಾಯಮಾನರಾಗಿ ರಾರಾಜಿಸಿದರು. ॥ ೫ ॥ ಭಗವಾನ್ ಶ್ರೀಕೃಷ್ಣನು ಆ ಕುಬ್ಜೆಯ ಮೇಲೆ ಪ್ರಸನ್ನನಾಗಿ ತನ್ನ ದರ್ಶನದ ಪ್ರತ್ಯಕ್ಷ ಫಲವನ್ನು ತೋರಿಸಲಿಕ್ಕಾಗಿ ಶರೀರದಲ್ಲಿ ಮೂರುಕಡೆ ಡೊಂಕಾದ ಸುಂದರ ಮುಖವುಳ್ಳ ಆಕೆಯನ್ನು ನೇರವಾಗಿಸಲು ಯೋಚಿಸಿದನು. ॥ ೬ ॥ ಭಗವಂತನು ತನ್ನ ಕಾಲುಗಳಿಂದ ಕುಬ್ಜೆಯ ಕಾಲುಗಳನ್ನು ಒತ್ತಿ ಹಿಡಿದು, ತನ್ನ ಬಲಗೈಯ್ಯ ಎರಡು ಬೆರಳುಗಳಿಂದ ಆಕೆಯ ಗಲ್ಲವನ್ನು ಹಿಡಿದು ಸ್ವಲ್ಪ ಮೇಲಕ್ಕೆ ಎತ್ತಿದನು. ॥ ೭ ॥ ಕ್ಷಣಮಾತ್ರದಲ್ಲಿ ಆಕೆಯ ಶರೀರವು ನೆಟ್ಟಗಾಗಿ ಬಿಟ್ಟಿತು. ಕುಬ್ಜೆಯಾಗಿದ್ದ ಆಕೆಯು ಭಗವಂತನ ಸ್ಪರ್ಶಮಾತ್ರದಿಂದಲೇ ವಿಶಾಲವಾದ ನಿತಂಬದಿಂದ ಕೂಡಿದವಳೂ, ಪುಷ್ಟಸ್ತನಿಯೂ ಆಗಿ ರೂಪಲಾವಣ್ಯಗಳಿಂದ ಕಂಗೊಳಿಸುವ ಪ್ರಮದೋತ್ತಮೆಯಾದಳು. ॥ ೮ ॥

ಆ ಕ್ಷಣದಿಂದಲೇ ಕುಬ್ಜೆಯು ರೂಪ, ಗುಣ, ಔದಾರ್ಯಗಳಿಂದ ಸಂಪನ್ನಳಾಗಿ ಆಕೆಯ ಮನಸ್ಸಿನಲ್ಲಿ ಭಗವಂತನನ್ನು ಸೇರುವ ಕಾಮನೆ ಉಂಟಾಯಿತು. ಆಕೆಯು ಶ್ರೀಕೃಷ್ಣನ ಉತ್ತರೀಯವನ್ನು ಹಿಡಿದುಕೊಂಡು ಮುಗುಳ್ನಗುತ್ತಾ ಇಂತೆಂದಳು. ॥ ೯ ॥ ವೀರಶಿರೋಮಣಿಯೇ! ಬಾ, ನಮ್ಮ ಮನೆಗೆ ಹೋಗೋಣ, ಈಗ ನಾನು ನಿನ್ನನ್ನು ಇಲ್ಲಿ ಬಿಟ್ಟಿರಲಾರೆ. ಏಕೆಂದರೆ, ನನ್ನ ಚಿತ್ತವನ್ನು ನೀನು ಕದಡಿಬಿಟ್ಟಿರುವೆ. ಪುರುಷೋತ್ತಮನೇ! ದಾಸಿಯಾದ ನನ್ನ ಮೇಲೆ ಪ್ರಸನ್ನನಾಗು. ॥ ೧೦ ॥ ಬಲರಾಮನ ಎದುರಿಗೆ ಕುಬ್ಜೆಯು ಹೀಗೆ ಪ್ರಾರ್ಥಿಸಿದಾಗ ಭಗವಾನ್ ಶ್ರೀಕೃಷ್ಣನು ತನ್ನ ಸಂಗಾತಿಗಳಾದ ಗೋಪಬಾಲಕರ ಕಡೆಗೆ ನೋಡಿ ನಸುನಗುತ್ತಾ ಆಕೆಯಲ್ಲಿ ಹೀಗೆಂದನು. ॥ ೧೧ ॥ ಸುಂದರೀ! ನಿನ್ನ ಮನೆಯು ಸಂಸಾರೀ ಜನರಿಗೆ ತಮ್ಮ ಮಾನಸಿಕ ವ್ಯಾಧಿಯನ್ನು ಕಳೆದುಕೊಳ್ಳುವ ಸಾಧನೆಯಾಗಿದೆ. ನಾನು ನನ್ನ ಕಾರ್ಯವನ್ನು ಪೂರ್ಣಗೊಳಿಸಿದ ಬಳಿಕ ಅವಶ್ಯಕವಾಗಿ ನಿನ್ನಲ್ಲಿಗೆ ಬರುವೆನು. ಮನೆ-ಮಠಗಳಿಲ್ಲದ ನಮ್ಮಂತಹ ದಾರಿಹೋಕರಿಗೆ ನಿಮ್ಮಂತಹವರ ಮನೆಯೇ ಆಸರೆಯಾಗಿದೆ. ॥ ೧೨ ॥ ಹೀಗೆ ಸವಿಯಾದ ಮಾತುಗಳನ್ನಾಡಿ ಶ್ರೀಕೃಷ್ಣನು ಆಕೆಯನ್ನು ಬೀಳ್ಕೊಟ್ಟನು. ಬಳಿಕ ಅವರು ಸಂತೆಬೀದಿಯಲ್ಲಿ ಬರುತ್ತಿರುವಾಗ ಅಲ್ಲಿಯ ವ್ಯಾಪಾರಿಗಳೆಲ್ಲರೂ ಒಟ್ಟಿಗೆ ಬಂದು ಬಲರಾಮ-ಕೃಷ್ಣರನ್ನು ಹೂವಿನಹಾರ, ತಾಂಬೂಲ, ಚಂದನಾದಿಗಳಿಂದ ಪೂಜಿಸಿ, ಬಗೆ-ಬಗೆಯ ಕಾಣಿಕೆಗಳನ್ನು ಅರ್ಪಿಸಿದರು. ॥ ೧೩ ॥

ತದ್ದರ್ಶನಸ್ಮರಕ್ಷೋಭಾದಾತ್ಮಾನಂ ನಾವಿದನ್ ಸ್ತ್ರಿಯಃ ।
ವಿಸ್ರಸ್ತವಾಸಃಕಬರವಲಯಾಲೇಖ್ಯಮೂರ್ತಯಃ ॥ ೧೪ ॥

ತತಃ ಪೌರಾನ್ ಪೃಚ್ಛಮಾನೋ ಧನುಷಃ ಸ್ಥಾನಮಚ್ಯುತಃ ।
ತಸ್ಮಿನ್ ಪ್ರವಿಷ್ಟೋ ದದೃಶೇ ಧನುರೈಂದ್ರಮಿವಾದ್ಭುತಮ್ ॥ ೧೫ ॥

ಪುರುಷೈರ್ಬಹುಭಿರ್ಗುಪ್ತಮರ್ಚಿತಂ ಪರಮರ್ದ್ಧಿಮತ್ ।
ವಾರ್ಯಮಾಣೋ ನೃಭಿಃ ಕೃಷ್ಣಃ ಪ್ರಸಹ್ಯ ಧನುರಾದದೇ ॥ ೧೬ ॥

ಕರೇಣ ವಾಮೇನ ಸಲೀಲಮುದ್ಧೃತಂ
ಸಜ್ಯಂ ಚ ಕೃತ್ವಾ ನಿಮಿಷೇಣ ಪಶ್ಯತಾಮ್ ।
ನೃಣಾಂ ವಿಕೃಷ್ಯ ಪ್ರಬಭಂಜ ಮಧ್ಯತೋ
ಯಥೇಕ್ಷುದಂಡಂ ಮದಕರ್ಯುರುಕ್ರಮಃ ॥ ೧೭ ॥

ಧನುಷೋ ಭಜ್ಯಮಾನಸ್ಯ ಶಬ್ದಃ ಖಂ ರೋದಸೀ ದಿಶಃ ।
ಪೂರಯಾಮಾಸ ಯಂ ಶ್ರುತ್ವಾ ಕಂಸಸ್ತ್ರಾಸಮುಪಾಗಮತ್ ॥ ೧೮ ॥

ತದ್ರಕ್ಷಿಣಃ ಸಾನುಚರಾಃ ಕುಪಿತಾ ಆತತಾಯಿನಃ ।
ಗೃಹೀತುಕಾಮಾ ಆವವ್ರುರ್ಗೃಹ್ಯತಾಂ ಬಧ್ಯತಾಮಿತಿ ॥ ೧೯ ॥

ಅಥ ತಾನ್ ದುರಭಿಪ್ರಾಯಾನ್ ವಿಲೋಕ್ಯ ಬಲಕೇಶವೌ ।
ಕ್ರುದ್ಧೌ ಧನ್ವನ ಆದಾಯ ಶಕಲೇ ತಾಂಶ್ಚ ಜಘ್ನತುಃ ॥ ೨೦ ॥

ಬಲಂ ಚ ಕಂಸಪ್ರಹಿತಂ ಹತ್ವಾ ಶಾಲಾಮುಖಾತ್ತತಃ ।
ನಿಷ್ಕ್ರಮ್ಯ ಚೇರತುರ್ಹೃಷ್ಟೌ ನಿರೀಕ್ಷ್ಯ ಪುರಸಂಪದಃ ॥ ೨೧ ॥

ತಯೋಸ್ತದದ್ಭುತಂ ವೀರ್ಯಂ ನಿಶಾಮ್ಯ ಪುರವಾಸಿನಃ ।
ತೇಜಃ ಪ್ರಾಗಲ್ಭ್ಯಂ ರೂಪಂ ಚ ಮೇನಿರೇ ವಿಬುಧೋತ್ತಮೌ ॥ ೨೨ ॥

ತಯೋರ್ವಿಚರತೋಃ ಸ್ವೈರಮಾದಿತ್ಯೋಽಸ್ತಮುಪೇಯಿವಾನ್ ।
ಕೃಷ್ಣರಾಮೌ ವೃತೌ ಗೋಪೈಃ ಪುರಾಚ್ಛಕಟಮೀಯತುಃ ॥ ೨೩ ॥

ಅವರಿಬ್ಬರ ದರ್ಶನದಿಂದ ಸ್ತ್ರೀಯರ ಹೃದಯದಲ್ಲಿ ಪ್ರೇಮಾವೇಗ ಮತ್ತು ಸೇರುವ ಬಯಕೆ ಜಾಗ್ರತವಾಗುತ್ತಿತ್ತು. ಇದರಿಂದ ಅವರಿಗೆ ಶರೀರದ ಜ್ಞಾನವೇ ಇರುತ್ತಿರಲಿಲ್ಲ. ಅವರಿಗೆ ವಸ್ತ್ರ, ಮುಡಿ, ಬಳೆ ಇವುಗಳು ಜಾರಿಹೋಗುತ್ತಿದ್ದರೂ ಅದರ ಪರಿವೆಯೇ ಇಲ್ಲದೆ ಚಿತ್ತಾರದಂತೆ ನಿಂತು ಬಿಡುತ್ತಿದ್ದರು. ॥ ೧೪ ॥

ಅನಂತರ ಭಗವಾನ್ ಶ್ರೀಕೃಷ್ಣನು ಬಲರಾಮನೊಂದಿಗೆ ಮುಂದೆ ಹೋಗುತ್ತಾ ಧನುರ್ಯಜ್ಞವು ನಡೆಯುವ ಸ್ಥಳವನ್ನು ಕೇಳುತ್ತಾ ರಂಗಶಾಲೆಗೆ ಬಂದು ತಲುಪಿದನು. ಅಲ್ಲಿ ಇಂದ್ರನ ಧನುಸ್ಸಿಗೆ ಸಮಾನವಾದ ಒಂದು ಅದ್ಭುತವಾದ ಬಿಲ್ಲನ್ನು ನೋಡಿದನು. ॥ ೧೫ ॥ ಪರಮ ವೈಭವದಿಂದ ಪ್ರತಿಷ್ಠಾಪಿತವಾದ ಅನುದಿನವೂ ಪೂಜಿಸಲ್ಪಟ್ಟು ಹಲವಾರು ಸೈನಿಕರಿಂದ ರಕ್ಷಿತವಾದ ಆ ಮಹಾಧನುಸ್ಸನ್ನೆತ್ತಿಕೊಳ್ಳಲು ಮುಂದಾದಾಗ ರಕ್ಷಕರು ತಡೆಯುತ್ತಿದ್ದರೂ ಶ್ರೀಕೃಷ್ಣನು ರಕ್ಷಕರನ್ನು ಲೆಕ್ಕಿಸದೆ ಆ ಬಿಲ್ಲನ್ನು ಬಲವಂತವಾಗಿ ಎತ್ತಿಕೊಂಡನು. ॥ ೧೬ ॥ ಎಲ್ಲರೂ ನೋಡುತ್ತಿರುವಂತೆಯೇ ಆ ಬಿಲ್ಲನ್ನು ಎಡಗೈಯಿಂದ ಮೇಲೆತ್ತಿ, ಅದಕ್ಕೆ ನಾಣನ್ನು ಬಿಗಿದು ಮದಿಸಿದ ಆನೆಯು ಕಬ್ಬಿನ ಜಲ್ಲೆಯನ್ನು ಮುರಿದು ಬಿಡುವಂತೆ ಕ್ಷಣಾರ್ಧದಲ್ಲಿ ಶ್ರೀಕೃಷ್ಣನು ಅದನ್ನು ಮಧ್ಯದಲ್ಲಿ ಮುರಿದು ಹಾಕಿದನು. ॥ ೧೭ ॥ ಧನುಸ್ಸು ಮುರಿದಾಗ ಅದರ ಶಬ್ದವು ಭೂಮ್ಯಾಕಾಶಗಳಲ್ಲಿಯೂ, ದಶದಿಕ್ಕುಗಳಲ್ಲಿಯೂ ತುಂಬಿ ಹೋಯಿತು. ಅದನ್ನು ಕೇಳಿದ ಕಂಸನು ಭಯದಿಂದ ನಡುಗಿ ಹೋದನು. ॥ ೧೮ ॥ ಧನುಸ್ಸನ್ನು ರಕ್ಷಿಸುತ್ತಿದ್ದ ಆತತಾಯಿಗಳಾದ ಅಸುರರು ಅತ್ಯಂತ ಕುಪಿತರಾದರು. ಶ್ರೀಕೃಷ್ಣನನ್ನು ಹಿಡಿಯುವ ಇಚ್ಛೆಯಿಂದ ಅವನ ಸುತ್ತಲೂ ನಿಂತು 'ಹಿಡಿಯಿರಿ, ಬಂಧಿಸಿರಿ, ಕಟ್ಟಿಕೊಂಡು ಹೋಗಲು ಬಿಡಬೇಡಿರಿ' ಎಂದು ಕೂಗಾಡತೊಡಗಿದರು. ॥ ೧೯ ॥ ಆ ರಕ್ಷಕರ ದುರಭಿಪ್ರಾಯವನ್ನು ತಿಳಿದು ಬಲರಾಮ-ಶ್ರೀಕೃಷ್ಣರು ಕ್ರುದ್ಧರಾಗಿ ಮುರಿದು ಬಿದ್ದ ಧನುಸ್ಸಿನ ತುಂಡುಗಳನ್ನೆತ್ತಿಕೊಂಡು ಅದರಿಂದಲೇ ರಕ್ಷಕರೆಲ್ಲರನ್ನು ಧ್ವಂಸಮಾಡಿಬಿಟ್ಟರು. ॥ ೨೦ ॥ ಅವರ ಸಹಾಯಕ್ಕೆ ಬಂದ ಕಂಸನ ಸೈನಿಕರೆಲ್ಲರನ್ನೂ ಅದೇ ತುಂಡುಗಳಿಂದ ಕ್ಷಣಮಾತ್ರದಲ್ಲಿ ಸಂಹರಿಸಿಬಿಟ್ಟರು. ಬಳಿಕ ಅವರು ಯಜ್ಞಮಂಟಪದ ಮುಖ್ಯದ್ವಾರದಿಂದ ಹೊರಬಿದ್ದು ಮಥುರಾಪಟ್ಟಣದ ಸೊಬಗನ್ನು ನೋಡುತ್ತಾ ಆನಂದವಾಗಿ ಸಂಚರಿಸುತ್ತಿದ್ದರು. ॥ ೨೧ ॥ ನಗರವಾಸಿಗಳು ರಾಮ-ಕೃಷ್ಣರ ಅದ್ಭುತವಾದ ವೀರ್ಯಪರಾಕ್ರಮಗಳನ್ನು, ಅವರ ತೇಜಸ್ಸನ್ನು, ಪ್ರೌಢಿಮೆಯನ್ನೂ ರೂಪವನ್ನೂ ನೋಡಿ ಇವರಿಬ್ಬರು ಶ್ರೇಷ್ಠರಾದ ದೇವತೆಗಳೇ ಇರಬಹುದೆಂದು ನಿಶ್ಚಯಿಸಿಕೊಂಡರು. ॥ ೨೨ ॥ ಹೀಗೆ ಭಗವಾನ್ ಶ್ರೀಕೃಷ್ಣ-ಬಲರಾಮರು ಮಥುರೆಯಲ್ಲಿ ಸ್ವೇಚ್ಛೆಯಿಂದ ಸಂಚರಿಸುತ್ತಿರುವಾಗ ಸೂರ್ಯಾಸ್ತವಾಯಿತು. ಆಗ ಅವರಿಬ್ಬರೂ ತಮ್ಮ ಸಂಗಡಿಗರೊಡನೆ ನಗರದ ಹೊರಭಾಗದಲ್ಲಿ ಬಂಡಿಗಳನ್ನು ನಿಲ್ಲಿಸಿದ್ದ ತಮ್ಮ ಬಿಡದಿಗೆ ಮರಳಿದರು. ॥ ೨೩ ॥ ಗೋಕುಲದಲ್ಲಿದ್ದ ಗೋಪಿಕೆಯರು ಶ್ರೀಕೃಷ್ಣನ ಅಗಲುವಿಕೆಯ ಸಮಯದಲ್ಲಿ ವಿರಹವೇದನೆಯಿಂದ ಹಳಿದಂತೆಯೇ ಇಲ್ಲಿ ಮಥುರೆಯಲ್ಲಿ ಅಕ್ಷರಶಃ ಪರಿಣಮಿಸಿತು. ಗೋಪಿಯರಂತೆಯೇ ಮಥುರೆಯ ಸ್ತ್ರೀಯರೂ ಕೂಡ ಶ್ರೀಕೃಷ್ಣನ ಅತುಲ ಸೌಂದರ್ಯ

ಗೋಪ್ಯೋ ಮುಕುಂದವಿಗಮೇ ವಿರಹಾತುರಾ ಯಾ
ಆಶಾಸತಾಶಿಷ ಋತಾ ಮಧುಪುರ್ಯಭೂವನ್ ।
ಸಂಪಶ್ಯತಾಂ ಪುರುಷಭೂಷಣಗಾತ್ರಲಕ್ಷ್ಮೀಂ
ಹಿತ್ವೇತರಾನ್ ನು ಭಜತಶ್ಚಕಮೇಽಯನಂ ಶ್ರೀಃ ॥ ೨೪ ॥

ಅವನಿಕ್ತಾಂಘ್ರಿಯುಗಲೌ ಭುಕ್ತ್ವಾ ಕ್ಷೀರೋಪಸೇಚನಮ್ ।
ಊಷತುಸ್ತಾಂ ಸುಖಂ ರಾತ್ರಿಂ ಜ್ಞಾತ್ವಾ ಕಂಸಚಿಕೀರ್ಷಿತಮ್ ॥ ೨೫ ॥

ಕಂಸಸ್ತು ಧನುಷೋ ಭಂಗಂ ರಕ್ಷಿಣಾಂ ಸ್ವಬಲಸ್ಯ ಚ ।
ವಧಂ ನಿಶಮ್ಯ ಗೋವಿಂದರಾಮವಿಕ್ರೀಡಿತಂ ಪರಮ್ ॥ ೨೬ ॥

ದೀರ್ಘಪ್ರಜಾಗರೋ ಭೀತೋ ದುರ್ನಿಮಿತ್ತಾನಿ ದುರ್ಮತಿಃ ।
ಬಹೂನ್ಯಚಷ್ಟೋಭಯಥಾ ಮೃತ್ಯೋರ್ದೌತ್ಯಕರಾಣಿ ಚ ॥ ೨೭ ॥

ಅದರ್ಶನಂ ಸ್ವಶಿರಸಃ ಪ್ರತಿರೂಪೇ ಚ ಸತ್ಯಪಿ ।
ಅಸತ್ಯಪಿ ದ್ವಿತೀಯೇ ಚ ದ್ವೈರೂಪ್ಯಂ ಜ್ಯೋತಿಷಾಂ ತಥಾ ॥ ೨೮ ॥

ಛಿದ್ರಪ್ರತೀತಿಶ್ಛಾಯಾಯಾಂ ಪ್ರಾಣಘೋಷಾನುಪಶ್ರುತಿಃ ।
ಸ್ವರ್ಣಪ್ರತೀತಿರ್ವೃಕ್ಷೇಷು ಸ್ವಪದಾನಾಮದರ್ಶನಮ್ ॥ ೨೯ ॥

ಸ್ವಪ್ನೇ ಪ್ರೇತಪರಿಷ್ವಂಗಃ ಖರಯಾನಂ ವಿಷಾದನಮ್ ।
ಯಾಯಾನ್ನಲದಮಾಲ್ಯೇಕಸ್ತೈಲಾಭ್ಯಕ್ತೋ ದಿಗಂಬರಃ ॥ ೩೦ ॥

ಅನ್ಯಾನಿ ಚೇತ್ಥಂಭೂತಾನಿ ಸ್ವಪ್ನಜಾಗರಿತಾನಿ ಚ ।
ಪಶ್ಯನ್ ಮರಣಸಂತ್ರಸ್ತೋ ನಿದ್ರಾಂ ಲೇಭೇ ನ ಚಿಂತಯಾ ॥ ೩೦ ॥

ವ್ಯುಷ್ಟಾಯಾಂ ನಿಶಿ ಕೌರವ್ಯ ಸೂರ್ಯೇ ಚಾದ್ಭ್ಯಃ ಸಮುತ್ಥಿತೇ ।
ಕಾರಯಾಮಾಸ ವೈ ಕಂಸೋ ಮಲ್ಲಕ್ರೀಡಾಮಹೋತ್ಸವಮ್ ॥ ೩೨ ॥

ಆನರ್ಚುಃ ಪುರುಷಾ ರಂಗಂ ತೂರ್ಯಭೇರ್ಯಶ್ಚ ಜಘ್ನಿರೇ ।
ಮಂಚಾಶ್ಚಾಲಂಕೃತಾಃ ಸ್ರಗ್ಭಿಃ ಪತಾಕಾಚೈಲತೋರಣೈಃ ॥ ೩೩ ॥

ವನ್ನು ನೋಡಿ ಮೈಮರೆತು ಹೋದರು. ಲಕ್ಷ್ಮಿಯನ್ನು ಅನೇಕರು ಬಯಸುತ್ತಾ ಅವಳನ್ನು ಪಡೆಯಲು ದೊಡ್ಡ-ದೊಡ್ಡ ದೇವತೆಗಳೂ ಕಾತರರಾಗಿದ್ದರು. ಆದರೆ ಆಕೆಯು ತನ್ನನ್ನು ಬಯಸದೇ ಇರುವ ಭಗವಂತನನ್ನು ವರಿಸಿಕೊಂಡು, ಅವನ ವಕ್ಷಃಸ್ಥಳವನ್ನೇ ತನ್ನ ನಿವಾಸ ಸ್ಥಾನವನ್ನಾಗಿಸಿಕೊಂಡಳು. ಅಂತಹ ಪುರುಷೋತ್ತಮನ ಶರೀರದ ದಿವ್ಯ ಕಾಂತಿಯನ್ನು ನೋಡುತ್ತಾ ಮಥುರೆಯ ಸ್ತ್ರೀಯರು ಆನಂದ ತುಂದಿಲರಾದರು. ॥ ೨೪ ॥ ಬಲರಾಮ ಶ್ರೀಕೃಷ್ಣರು ತಮ್ಮ ಸಂಗಡಿಗರೊಂದಿಗೆ ಬಿಡದಿಗೆ ಬಂದು, ಕೈ-ಕಾಲು ತೊಳೆದು ಹಾಲಿನಿಂದ ಮಾಡಿದ ಪಾಯಸ ಮುಂತಾದ ಪದಾರ್ಥಗಳನ್ನು ಭುಂಜಿಸಿ, ಕಂಸನು ಮುಂದೆ ಏನು ಮಾಡಲಿರುವನು ಎಂಬುದನ್ನು ಅರಿತುಕೊಂಡು ಆ ರಾತ್ರಿಯನ್ನು ಸುಖವಾಗಿ ಅಲ್ಲೇ ಕಳೆದರು. ॥ ೨೫ ॥

ಶ್ರೀಕೃಷ್ಣ-ಬಲರಾಮರು ಮಕ್ಕಳ ಆಟದಂತೆ, ಯಾವ ಶ್ರಮವೂ ಇಲ್ಲದೆ ಧನುಸ್ಸನ್ನು ಮುರಿದುದನ್ನು ಕಾವಲುಗಾರರನ್ನೂ ಅವರ ಸಹಾಯಕ್ಕೆ ಕಳಿಸಿದ ಸೈನ್ಯವನ್ನು ಸಂಹರಿಸಿದುದನ್ನು ಕಂಸನು ಕೇಳಿದನು. ॥ ೨೬ ॥ ಇದನ್ನು ಕೇಳಿದಾಗ ಅವನು ಬಹಳವಾಗಿ ಗಾಬರಿಗೊಂಡನು. ಆ ದುರ್ಬುದ್ಧಿಗೆ ಬಹಳ ಹೊತ್ತು ನಿದ್ದೆಯೇ ಬರಲಿಲ್ಲ, ಜಾಗ್ರದವಸ್ಥೆಯಲ್ಲೂ, ಸ್ವಪ್ನದಲ್ಲಿಯೂ ಕಂಸನು ಮೃತ್ಯು ಸೂಚಕವಾದ ಅನೇಕ ದೃಶ್ಯಗಳನ್ನು ನೋಡಿದನು. ॥ ೨೭ । ಜಾಗ್ರದವಸ್ಥೆಯಲ್ಲಿ ಅವನಿಗೆ ನೀರಿನಲ್ಲಿ ಕನ್ನಡಿಯಲ್ಲಿ ಶರೀರದ ಪ್ರತಿಬಿಂಬ ಕಂಡರೂ ತಲೆಯೇ ಕಾಣುತ್ತಿರಲಿಲ್ಲ, ಬೆರಳುಗಳೇ ಆದಿ ಕಣ್ಣಿಗೆ ಅಡ್ಡವಾಗದಿದ್ದರೂ ಸೂರ್ಯ-ನಕ್ಷತ್ರಗಳು, ದೀಪ ಹೀಗೆ ಎರಡೆರಡಾಗಿ ಕಂಡುಬರುತ್ತಿತ್ತು. ॥ ೨೮ ॥ ತನ್ನ ನೆರಳಿನಲ್ಲೇ ರಂಧ್ರಗಳಿರುವಂತೆ ಕಾಣುತ್ತಿತ್ತು. ಕಿವಿಗಳನ್ನು ಮುಚ್ಚಿಕೊಂಡರೆ ಪ್ರಾಣಧ್ವನಿಯು ಕೇಳಿ ಬರುತ್ತಿರಲಿಲ್ಲ. ವೃಕ್ಷಗಳು ಸ್ವರ್ಣಮಯವಾಗಿ ಕಾಣುತ್ತಿದ್ದವು. ನಡೆಯುವಾಗ ಹೆಜ್ಜೆಗಳ ಗುರುತುಗಳು ಕಾಣುತ್ತಿರಲಿಲ್ಲ. ॥ ೨೯ ॥ ಸ್ವಪ್ನಾವಸ್ಥೆಯಲ್ಲಿ ಕಂಸನು ಪ್ರೇತಗಳನ್ನು ತಬ್ಬಿಕೊಂಡಂತೆ ಕಂಡನು. ಕತ್ತೆಯನ್ನೇರಿ ಹೋಗುತ್ತಾ ವಿಷತಿಂದಂತೆ ಕಂಡನು. ಇಡೀ ಶರೀರಕ್ಕೆ ಎಣ್ಣೆಯನ್ನು ಮೆತ್ತಿಕೊಂಡು, ದಾಸವಾಳ ಹೂವಿನ ಮಾಲೆಯನ್ನು ಧರಿಸಿ ದಿಗಂಬರನಾಗಿ ಎಲ್ಲಿಗೋ ಹೋಗುತ್ತಿರುವಂತೆ ಕಂಡನು. ॥ ೩೦ ॥ ಸ್ವಪ್ನ ಮತ್ತು ಎಚ್ಚರದಲ್ಲಿ ಅವನು ಇಂತಹುದೇ ಅನೇಕ ಅಪಶಕುನಗಳನ್ನು ನೋಡುತ್ತಿದ್ದನು. ಇದರಿಂದ ಅತೀವ ಚಿಂತಿತನಾಗಿ, ಮೃತ್ಯುವು ಸಮೀಪಿಸಿದೆ ಎಂದು ಹೆದರಿ ಅವನಿಗೆ ನಿದ್ದೆಯೇ ಬರಲಿಲ್ಲ. ॥ ೩೧ ॥

ಪರೀಕ್ಷಿತನೇ! ರಾತ್ರಿಯು ಕಳೆದು ಸೂರ್ಯನಾರಾಯಣನು ಪೂರ್ವಸಮುದ್ರದಿಂದ ಮೇಲೆದ್ದಾಗ ಕಂಸನು ಮಲ್ಲಕ್ರೀಡಾ ಮಹೋತ್ಸವವನ್ನು ಉದ್ಘಾಟಿಸಿದನು. ॥ ೩೨ ॥ ರಾಜಭಟರು ರಂಗಮಂಟಪವನ್ನು ಚೆನ್ನಾಗಿ ಅಲಂಕರಿಸಿದ್ದರು. ಭೇರಿ, ತುತ್ತೂರಿ, ಢಕ್ಕೆ-ಮೃದಂಗ ಮುಂತಾದ ವಾದ್ಯಗಳು ಮೊಳಗತೊಡಗಿದವು. ಪ್ರೇಕ್ಷಕರು ಕುಳಿತುಕೊಳ್ಳುವ ಮಂಚಗಳು, ಹೂವಿನ ಮಾಲೆಗಳಿಂದಲೂ, ಬಾವುಟಗಳಿಂದಲೂ, ಮೇಲ್ಕಟ್ಟುಗಳಿಂದಲೂ, ತೋರಣಗಳಿಂದಲೂ ಸಿಂಗರಿಸಲ್ಪಟ್ಟಿತ್ತು. ॥ ೩೩ ॥

ತೇಷು ಪೌರಾ ಜಾನಪದಾ ಬ್ರಹ್ಮಕ್ಷತ್ರಪುರೋಗಮಾಃ ।
ಯಥೋಪಜೋಷಂ ವಿವಿಶೂ ರಾಜಾನಶ್ಚ ಕೃತಾಸನಾಃ ॥ ೩೪ ॥

ಕಂಸಃ ಪರಿವೃತೋಽಮಾತ್ಯೈ ರಾಜಮಂಚ ಉಪಾವಿಶತ್ ।
ಮಂಡಲೇಶ್ವರಮಧ್ಯಸ್ಥೋ ಹೃದಯೇನ ವಿದೂಯತಾ ॥ ೩೫ ॥

ವಾದ್ಯಮಾನೇಷು ತೂರ್ಯೇಷು ಮಲ್ಲತಾಲೋತ್ತರೇಷು ಚ ।
ಮಲ್ಲಾಃ ಸ್ವಲಂಕೃತಾ ದೃಪ್ತಾಃ ಸೋಪಾಧ್ಯಾಯಾಃ ಸಮಾವಿಶನ್ ॥ ೩೬ ॥

ಚಾಣೂರೋ ಮುಷ್ಟಿಕಃ ಕೂಟಃ ಶಲಸ್ತೋಶಲ ಏವ ಚ ।
ತ ಆಸೇದುರುಪಸ್ಥಾನಂ ವಲ್ಗುವಾದ್ಯಪ್ರಹರ್ಷಿತಾಃ ॥ ೩೭ ॥

ನಂದಗೋಪಾದಯೋ ಗೋಪಾ ಭೋಜರಾಜಸಮಾಹುತಾಃ ।
ನಿವೇದಿತೋಪಾಯನಾಸ್ತೇ ಏಕಸ್ಮಿನ್ ಮಂಚ ಆವಿಶನ್ ॥ ೩೮ ॥

ಆ ಮಂಚಗಳಲ್ಲಿ ಬ್ರಾಹ್ಮಣ, ಕ್ಷತ್ರಿಯರೇ ಮೊದಲಾದ ನಾಗರೀಕರೂ, ಗ್ರಾಮವಾಸಿಗಳೂ, ಎಲ್ಲರೂ ಯಥಾಸ್ಥಾನದಲ್ಲಿ ಕುಳಿತು. ರಾಜ ಮಹಾರಾಜರೂ ತಮ-ತಮಗೆ ನಿಶ್ಚಿತವಾದ ಆಸನಗಳಲ್ಲಿ ಕುಳಿತಿದ್ದರು. ॥ ೩೪ ॥ ಕಂಸರಾಜನು ಅಮಾತ್ಯರಿಂದ ಪರಿವೃತನಾಗಿ ಮಾಂಡಲಿಕರ ಮಧ್ಯಭಾಗದಲ್ಲಿ ಸರ್ವಶ್ರೇಷ್ಠವಾದ ಸಿಂಹಾಸನದಲ್ಲಿ ಕುಳಿತನು. ಆದರೆ ಅವನ ಮನಸ್ಸು ಅಪಶಕುನಗಳಿಂದಾಗಿ ತಳಮಳಿಸುತ್ತಿತ್ತು. ॥ ೩೫ ॥ ನಾನಾ ಬಗೆಯ ವಾದ್ಯಗಳು ಮೊಳಗುತ್ತಿರಲು, ಜಟ್ಟಿಗಳ ಕೈಚಪ್ಪಾಳೆಯ ಶಬ್ದಗಳೂ ಕೇಳಿ ಬರುತ್ತಿದ್ದುವು. ಗರ್ವಿಷ್ಠರಾದ ಮಲ್ಲರು ಯಥೋಚಿತವಾಗಿ ಅಲಂಕರಿಸಿಕೊಂಡು ತಮ್ಮ ಗುರುಗಳೊಡನೆ ರಂಗಸ್ಥಳಕ್ಕೆ ಇಳಿದರು. ॥ ೩೬ ॥ ಚಾಣೂರ, ಮುಷ್ಟಿಕ, ಕೂಟ, ಶಲ, ತೋಶಲ ಮುಂತಾದ ಮುಖ್ಯ-ಮುಖ್ಯ ಜಟ್ಟಿಗಳು ವಾದ್ಯಗಳ ಸುಮಧುರವಾದ ಧ್ವನಿಯಿಂದ ಉತ್ಸಾಹಗೊಂಡು ರಂಗಮಂಟಪದಲ್ಲಿ ಬಂದು ಕುಳಿತರು. ॥ ೩೭ ॥ ಆ ಸಮಯದಲ್ಲಿ ಭೋಜರಾಜನಿಂದ ಆಹ್ವಾನಿತರಾಗಿದ್ದ ನಂದಗೋಪನೇ ಮೊದಲಾದ ಗೋಪಾಲಕರು ತಾವು ತಂದಿದ್ದ ಕಪ್ಪ-ಕಾಣಿಕೆಗಳನ್ನು ಕಂಸನಿಗೆ ಅರ್ಪಿಸಿ, ಅವನ ಅನುಮತಿಯನ್ನು ಪಡೆದು ಒಂದು ಕಡೆ ಮಂಚವೊಂದರಲ್ಲಿ ಕುಳಿತುಕೊಂಡರು. ॥ ೩೮ ॥

ನಲವತ್ತೆರಡನೆಯ ಅಧ್ಯಾಯವು ಮುಗಿಯಿತು. ॥ ೪೨ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮ ಸ್ಕಂಧೇ ಪೂರ್ವಾರ್ಧೇ
ಮಲ್ಲರಂಗೋಪವರ್ಣನಂ ನಾಮ ದ್ವಿಚತ್ವಾರಿಂಶೋಽಧ್ಯಾಯಃ ॥ ೪೨ ॥

ನಲವತ್ತಮೂರನೆಯ ಅಧ್ಯಾಯ

ಕುವಲಯಾಪೀಡ ಆನೆಯ ಉದ್ಧಾರ - ರಂಗಮಂಟಪ ಪ್ರವೇಶ

ಶ್ರೀಶುಕ ಉವಾಚ

ಅಥ ಕೃಷ್ಣಶ್ಚ ರಾಮಶ್ಚ ಕೃತಶೌಚೌ ಪರಂತಪ ।
ಮಲ್ಲದುಂದುಭಿನಿರ್ಘೋಷಂ ಶ್ರುತ್ವಾ ದ್ರಷ್ಟುಮುಪೇಯತುಃ ॥ ೧ ॥

ರಂಗದ್ವಾರಂ ಸಮಾಸಾದ್ಯ ತಸ್ಮಿನ್ ನಾಗಮವಸ್ಥಿತಮ್ ।
ಅಪಶ್ಯತ್ಕುವಲಯಾಪೀಡಂ ಕೃಷ್ಣೋಽಂಬಷ್ಠಪ್ರಚೋದಿತಮ್ ॥ ೨ ॥

ಬದ್ಧ್ವಾ ಪರಿಕರಂ ಶೌರಿಃ ಸಮುಹ್ಯ ಕುಟಿಲಾಲಕಾನ್ ।
ಉವಾಚ ಹಸ್ತಿಪಂ ವಾಚಾ ಮೇಘನಾದಗಭೀರಯಾ ॥ ೩ ॥

ಅಂಬಷ್ಠಾಂಬಷ್ಠ ಮಾರ್ಗಂ ನೌ ದೇಹ್ಯಪಕ್ರಾಮ ಮಾಚಿರಮ್ ।
ನೋ ಚೇತ್ ಸಕುಂಜರಂ ತ್ವಾದ್ಯ ನಯಾಮಿ ಯಮಸಾದನಮ್ ॥ ೪ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ - ಪರೀಕ್ಷಿತನೇ! ಬಳಿಕ ಶ್ರೀಕೃಷ್ಣ-ಬಲರಾಮರಿಬ್ಬರೂ ಸ್ನಾನಾದಿ ನಿತ್ಯ ಕರ್ಮಗಳನ್ನು ಮುಗಿಸಿಕೊಂಡು, ಮಲ್ಲರು ಮಾಡಿದ ತೂರ್ಯ ದುಂದುಭಿಗಳ ಘೋಷವನ್ನು ಕೇಳಿ ರಂಗಭೂಮಿಯನ್ನು ನೋಡಲು ಹೊರಟರು. ॥ ೧ ॥ ಭಗವಾನ್ ಶ್ರೀಕೃಷ್ಣನು ರಂಗಭೂಮಿಯ ಮಹಾದ್ವಾರಕ್ಕೆ ಬಂದಾಗ ಅಲ್ಲಿ ಮಾವುತನ ಪ್ರೇರಣೆಯಂತೆ ಕುವಲಯಾಪೀಡ ಎಂಬ ಆನೆಯು ನಿಂತಿರುವುದನ್ನು ನೋಡಿದನು. ॥ ೨ ॥ ಆಗ ಭಗವಾನ್ ಶ್ರೀಕೃಷ್ಣನು ನಡುಕಟ್ಟನ್ನು ಸರಿಯಾಗಿ ಬಿಗಿದು, ಗುಂಗುರು ಗುಂಗುರಾದ ಕೂದಲುಗಳನ್ನು ಸರಿಪಡಿಸಿಕೊಂಡು ಮೇಘಗಂಭೀರ ಧ್ವನಿಯಿಂದ ಮಾವುತನಿಗೆ ಹೇಳಿದನು. ॥ ೩ ॥ ಎಲವೋ ಮಾವಟಿಗನೇ! ನಮ್ಮಿಬ್ಬರಿಗೂ ಹೋಗಲು ದಾರಿ ಬಿಡು. ದಾರಿಯನ್ನು ಬಿಟ್ಟು ಅತ್ತಕಡೆ ಹೊರಟು ಹೋಗು. ನೀನು ಆನೆಯನ್ನು ನಿಲ್ಲಿಸಿಕೊಂಡು ಹೀಗೆ ನಿಂತಿದ್ದರೆ ಆನೆಯೊಡನೆ ನಿನ್ನನ್ನೂ ಯಮಸದನಕ್ಕೆ ಅಟ್ಟಿಬಿಡುವೆನು. ॥ ೪ ॥

ಏವಂ ನಿರ್ಭರ್ತ್ಸಿತೋಽಂಬಷ್ಠಃ ಕುಪಿತಃ ಕೋಪಿತಂ ಗಜಮ್ ।
ಚೋದಯಾಮಾಸ ಕೃಷ್ಣಾಯ ಕಾಲಾಂತಕಯಮೋಪಮಮ್
॥ ೫ ॥

ಕರೀಂದ್ರಸ್ತಮಭಿದ್ರುತ್ಯ ಕರೇಣ ತರಸಾಗ್ರಹೀತ್ ।
ಕರಾದ್ವಿಗಲಿತಃ ಸೋಽಮುಂ ನಿಹತ್ಯಾಂಘ್ರಿಷ್ವಲೀಯತ
॥ ೬ ॥

ಸಂಕ್ರುದ್ಧಸ್ತಮಚಕ್ಷಾಣೋ ಘ್ರಾಣದೃಷ್ಟಿಃ ಸ ಕೇಶವಮ್ ।
ಪರಾಮೃಶತ್ಪುಷ್ಕರೇಣ ಸ ಪ್ರಸಹ್ಯ ವಿನಿರ್ಗತಃ
॥ ೭ ॥

ಪುಚ್ಛೇ ಪ್ರಗೃಹ್ಯಾತಿಬಲಂ ಧನುಷಃ ಪಂಚವಿಂಶತಿಮ್ ।
ವಿಚಕರ್ಷ ಯಥಾ ನಾಗಂ ಸುಪರ್ಣ ಇವ ಲೀಲಯಾ
॥ ೮ ॥

ಸ ಪರ್ಯಾವರ್ತಮಾನೇನ ಸವ್ಯದಕ್ಷಿಣತೋಽಚ್ಯುತಃ ।
ಬಭ್ರಾಮ ಭ್ರಾಮ್ಯಮಾಣೇನ ಗೋವತ್ಸೇನೇವ ಬಾಲಕಃ
॥ ೯ ॥

ತತೋಽಭಿಮುಖಮಭ್ಯೇತ್ಯ ಪಾಣಿನಾಽಽಹತ್ಯ ವಾರಣಮ್ ।
ಪ್ರಾದ್ರವನ್ ಪಾತಯಾಮಾಸ ಸ್ಪೃಶ್ಯಮಾನಃ ಪದೇ ಪದೇ
॥ ೧೦ ॥

ಸ ಧಾವನ್ ಕ್ರೀಡಯಾ ಭೂಮೌ ಪತಿತ್ವಾ ಸಹಸೋತ್ಥಿತಃ ।
ತಂ ಮತ್ವಾ ಪತಿತಂ ಕ್ರುದ್ಧೋ ದಂತಾಭ್ಯಾಂ ಸೋಽಹನತ್ಕ್ಷಿತಿಮ್
॥ ೧೧ ॥

ಸ್ವವಿಕ್ರಮೇ ಪ್ರತಿಹತೇ ಕುಂಜರೇಂದ್ರೋಽತ್ಯಮರ್ಷಿತಃ ।
ಚೋದ್ಯಮಾನೋ ಮಹಾಮಾತ್ರೈಃ ಕೃಷ್ಣಮಭ್ಯದ್ರವದ್ರುಷಾ
॥ ೧೨ ॥

ತಮಾಪತಂತಮಾಸಾದ್ಯ ಭಗವಾನ್ ಮಧುಸೂದನಃ ।
ನಿಗೃಹ್ಯ ಪಾಣಿನಾ ಹಸ್ತಂ ಪಾತಯಾಮಾಸ ಭೂತಲೇ
॥ ೧೩ ॥

ಪತಿತಸ್ಯ ಪದಾಽಽಕ್ರಮ್ಯ ಮೃಗೇಂದ್ರ ಇವ ಲೀಲಯಾ ।
ದಂತಮುತ್ಪಾಟ್ಯ ತೇನೇಭಂ ಹಸ್ತಿಪಾಂಶ್ಚಾಹನದ್ಧರಿಃ
॥ ೧೪ ॥

ಭಗವಾನ್ ಶ್ರೀಕೃಷ್ಣನು ಮಾವಟಿಗನಿಗೆ ಹೀಗೆ ಗದರಿಸಿದಾಗ ಅವನು ಕೋಪದಿಂದ ಕಿಡಿ-ಕಿಡಿಯಾದನು. ಅವನು ಪ್ರಳಯ ಕಾಲದ ಯಮನಂತಿದ್ದ ಕುವಲಯಾಪೀಡ ಆನೆಯನ್ನು ಅಂಕುಶದಿಂದ ತಿವಿದು ಕೆರಳಿಸಿ ಶ್ರೀಕೃಷ್ಣನ ಕಡೆಗೆ ನುಗ್ಗಿಸಿದನು. ॥ ೫ ॥ ಕುವಲಯಾಪೀಡವು ನುಗ್ಗಿ ಹೋಗಿ ಶ್ರೀಕೃಷ್ಣನನ್ನು ಸೊಂಡಿಲಿನಿಂದ ಹಿಡಿದುಕೊಂಡಿತು. ಆದರೆ ಭಗವಂತನು ಸೊಂಡಿಲಿನಿಂದ ನುಣುಚಿಕೊಂಡು ಅದಕ್ಕೆ ಬಲವಾದ ಒಂದು ಏಟನ್ನು ಕೊಟ್ಟು ಅದರ ಕಾಲುಗಳ ನಡುವೆ ಸೇರಿಕೊಂಡನು. ॥ ೬ ॥ ಶ್ರೀಕೃಷ್ಣನನ್ನು ತನ್ನೆದುರಿಗೆ ಕಾಣದೆ ಕುವಲಯಾಪೀಡವು ಕೋಪಗೊಂಡು, ವಾಸನೆಯಿಂದಲೇ ಅರಿತು ತನ್ನ ಸೊಂಡಿಲಿನಿಂದ ಕೃಷ್ಣನನ್ನು ಪುನಃ ಹಿಡಿದುಕೊಂಡಿತು. ಆದರೆ ಭಗವಂತನು ತನ್ನನ್ನು ಬಿಡಿಸಿಕೊಂಡನು. ॥ ೭ ॥ ಬಳಿಕ ಭಗವಂತನು ಆ ಮಹಾ ಬಲಿಷ್ಠವಾದ ಆನೆಯ ಬಾಲವನ್ನು ಹಿಡಿದುಕೊಂಡು-ಗರುಡನು ಸರ್ಪವನ್ನು ಎಳೆದೊಯ್ಯುವಂತೆ ಇಪ್ಪತ್ತೈದು ಮಾರು ಲೀಲಾಜಾಲವಾಗಿ ಹಿಂದಕ್ಕೆ ಸರಸರನೆ ಸೆಳೆದುಕೊಂಡು ಹೋದನು. ॥ ೮ ॥ ಕರುವಿನ ಬಾಲಹಿಡಿದುಕೊಂಡು ಆಡುವ ಹುಡುಗನಂತೆ ಶ್ರೀಕೃಷ್ಣನು ಅದರ ಬಾಲವನ್ನು ಹಿಡಿದುಕೊಂಡು ಎಡಕ್ಕೂ ಬಲಕ್ಕೂ ಎಳೆದಾಡುತ್ತಾ, ತಿರುಗಿಸುತ್ತಾ ಆಟವಾಡತೊಡಗಿದನು. ಅದು ಎಡಕ್ಕೆ ತಿರುಗಿ ಕೃಷ್ಣನನ್ನು ಹಿಡಿಯಲು ಮುಂದಾದಾಗ ಅವನು ಬಲಕ್ಕೆ ಹೋಗುತ್ತಾ, ಬಲಕ್ಕೆ ಹಿಡಿಯಲು ಹೋದಾಗ ಎಡಕ್ಕೂ ಹೋಗುತ್ತಿದ್ದನು. ॥ ೯ ॥ ಅನಂತರ ಶ್ರೀಕೃಷ್ಣನು ಆನೆಯ ಮುಂದೆ ಬಂದು ಅದಕ್ಕೆ ಒಂದು ಜೋರಾಗಿ ಗುದ್ದಿದನು ಮತ್ತು ಅದನ್ನು ಬೀಳಿಸಲೆಂದೇ ಅದು ಈಗಲೇ ಆಗಲೋ ಮುಟ್ಟಿಬಿಡುವುದೋ ಎಂಬಂತೆ ಓಡತೊಡಗಿದನು. ಒಮ್ಮೆ ಜೋರಾಗಿ ಓಡುತ್ತಾ ಗಕ್ಕನೆ ನಿಂತುಬಿಡುವನು. ಆನೆಯು ಇನ್ನೇನೋ ಹಿಡಿದು ಬಿಡುವುದೋ ಎಂದಾಗ ದೂರಕ್ಕೆ ಓಡಿದನು. ॥ ೧೦ ॥ ಭಗವಾನ್ ಶ್ರೀಕೃಷ್ಣನು ಓಡುತ್ತಾ-ಓಡುತ್ತಾ ಒಮ್ಮೆ ಲೀಲೆಯಿಂದ ನೆಲದಲ್ಲಿ ಬಿದ್ದವನಂತೆ ನಟಿಸಿದನು ಹಾಗೂ ತಕ್ಷಣ ಎದ್ದು ಓಡುವನು. ಆಗ ಆ ಕುವಲಯಾಪೀಡವು ಸಿಟ್ಟಿನಿಂದ ಕೆರಳಿತ್ತು, ಕೃಷ್ಣನು ಬಿದ್ದಿರುವನೆಂದು ತಿಳಿದು ಜೋರಾಗಿ ತನ್ನ ದಂತಗಳಿಂದ ನೆಲಕ್ಕೆ ತಿವಿಯಿತು. ॥ ೧೧ ॥ ಆದರೆ ಆನೆಯ ಆಕ್ರಮಣವು ವ್ಯರ್ಥವಾಯಿತು. ಆಗ ಅದು ಇನ್ನೂ ಕೆರಳಿತು. ಮಾವಟಿಗನು ಅಂಕುಶದಿಂದ ತಿವಿಯುತ್ತಿರುವಾಗ ಕ್ರೋಧಗೊಂಡು ಶ್ರೀಕೃಷ್ಣನ ಮೇಲೆ ಮುಗಿದುಬಿತ್ತು. ॥ ೧೨ ॥ ಭಗವಾನ್ ಮಧುಸೂದನನು ಆನೆಯು ತನ್ನ ಕಡೆಗೆ ಮುನ್ನುಗ್ಗುತ್ತಿರುವುದನ್ನು ನೋಡಿ, ಅದರ ಬಳಿಗೆ ಹೋಗಿ ತನ್ನ ಒಂದೇ ಕೈಯಿಂದ ಅದರ ಸೊಂಡಿಲನ್ನು ಹಿಡಿದು ನೆಲದ ಮೇಲೆ ಕೆಡವಿದನು. ॥ ೧೩ ॥ ಅದು ನೆಲಕ್ಕೆ ಉರುಳಿದೊಡನೆಯೇ ಭಗವಂತನು ಲೀಲಾಜಾಲವಾಗಿ ಸಿಂಹದಂತೆ ಆನೆಯನ್ನು ಕಾಲಿನಿಂದ ತುಳಿದು ಅದರ ದಂತಗಳನ್ನು ಕಿತ್ತು ಆ ದಂತದಿಂದಲೇ ಆ ಆನೆಯನ್ನು ಮತ್ತು ಮಾವುತನನ್ನು ಸಂಹರಿಸಿದನು. ॥ ೧೪ ॥

ಮೃತಕಂ ದ್ವಿಪಮುತ್ಸೃಜ್ಯ ದಂತಪಾಣಿಃ ಸಮಾವಿಶತ್ ।
ಅಂಸನ್ಯಸ್ತವಿಷಾಣೋಽಸೃಙ್ಮದಬಿಂದುಭಿರಂಕಿತಃ ।
ವಿರೂಢಸ್ವೇದಕಣಿಕಾವದನಾಂಬುರುಹೋ ಬಭೌ
॥ ೧೫ ॥

ವೃತೌ ಗೋಪೈಃ ಕತಿಪಯೈರ್ಬಲದೇವಜನಾರ್ದನೌ ।
ರಂಗಂ ವಿವಿಶತೂ ರಾಜನ್ ಗಜದಂತವರಾಯುಧೌ
॥ ೧೬ ॥

ಮಲ್ಲಾನಾಮಶನಿರ್ನೃಣಾಂ ನರವರಃ
ಸ್ತ್ರೀಣಾಂ ಸ್ಮರೋ ಮೂರ್ತಿಮಾನ್
ಗೋಪಾನಾಂ ಸ್ವಜನೋಽಸತಾಂ ಕ್ಷಿತಿಭುಜಾಂ
ಶಾಸ್ತಾ ಸ್ವಪಿತ್ರೋಃ ಶಿಶುಃ ।
ಮೃತ್ಯುರ್ಭೋಜಪತೇರ್ವಿರಾಡವಿದುಷಾಂ
ತತ್ತ್ವಂ ಪರಂ ಯೋಗಿನಾಂ
ವೃಷ್ಣೀನಾಂ ಪರದೇವತೇತಿ ವಿದಿತೋ
ರಂಗಂ ಗತಃ ಸಾಗ್ರಜಃ ॥ ೧೭ ॥

ಹತಂ ಕುವಲಯಾಪೀಡಂ ದೃಷ್ಟ್ವಾ ತಾವಪಿ ದುರ್ಜಯೌ ।
ಕಂಸೋ ಮನಸ್ವ್ಯಪಿ ತದಾ ಭೃಶಮುದ್ವಿವಿಜೇ ನೃಪ
॥ ೧೮ ॥

ತೌ ರೇಜತೂ ರಂಗಗತೌ ಮಹಾಭುಜೌ
ವಿಚಿತ್ರವೇಷಾಭರಣಸ್ರಗಂಬರೌ ।
ಯಥಾ ನಟಾವುತ್ತಮವೇಷಧಾರಿಣೌ
ಮನಃ ಕ್ಷಿಪಂತೌ ಪ್ರಭಯಾ ನಿರೀಕ್ಷತಾಮ್ ॥ ೧೯ ॥

ನಿರೀಕ್ಷ್ಯ ತಾವುತ್ತಮಪೂರುಷೌ ಜನಾ
ಮಂಚಸ್ಥಿತಾ ನಾಗರರಾಷ್ಟ್ರಕಾ ನೃಪ ।
ಪ್ರಹರ್ಷವೇಗೋತ್ಕಲಿತೇಕ್ಷಣಾನನಾಃ
ಪಪುರ್ನ ತೃಪ್ತಾ ನಯನೈಸ್ತದಾನನಮ್ ॥ ೨೦ ॥

ಪರೀಕ್ಷಿತನೇ! ಬಳಿಕ ಭಗವಾನ್ ಶ್ರೀಕೃಷ್ಣನು ಸತ್ತುಹೋದ ಆನೆಯನ್ನು ಅಲ್ಲಿಯೇ ಬಿಟ್ಟು ಅದರ ದಂತವನ್ನು ಕೈಯಲ್ಲಿ ಹಿಡಿದುಕೊಂಡೇ ರಂಗಮಂಟಪವನ್ನು ಪ್ರವೇಶಿಸಿದನು. ಆ ಸಮಯದಲ್ಲಿ ಶ್ರೀಕೃಷ್ಣನು ಆನೆಯ ದಂತವನ್ನು ಹೆಗಲಮೇಲೆ ಇಟ್ಟುಕೊಂಡಿದ್ದನು. ಅವನ ಶರೀರವು ಮದೋದಕದ ಮತ್ತು ರಕ್ತದ ಬಿಂದುಗಳಿಂದ ಸುಶೋಭಿತವಾಗಿತ್ತು. ಶ್ರೀಕೃಷ್ಣನ ಮುಖಾರವಿಂದವು ಮುತ್ತಿನಂತಹ ಬೆವರಿನ ಹನಿಗಳಿಂದ ಸಮಲಂಕೃತವಾಗಿತ್ತು. ॥ ೧೫ ॥ ಪರೀಕ್ಷಿತನೇ! ಭಗವಾನ್ ಶ್ರೀಕೃಷ್ಣ ಮತ್ತು ಬಲರಾಮರಿಬ್ಬರ ಕೈಗಳಲ್ಲಿಯೂ ಕುವಲಯಾಪೀಡದ ದೊಡ್ಡ ದೊಡ್ಡದಾದ ದಂತಗಳು ಶಸ್ತ್ರಗಳಂತೆ ಸುಶೋಭಿತವಾಗಿದ್ದವು. ಜೊತೆಗೆ ಕೆಲವು ಗೋಪಬಾಲಕರು ಅವರೊಂದಿಗೆ ನಡೆದು ಬರುತ್ತಿದ್ದರು. ಹೀಗೆ ಅವರು ರಂಗಭೂಮಿಯನ್ನು ಪ್ರವೇಶಿಸಿದರು. ॥ ೧೬ ॥ ಭಗವಾನ್ ಶ್ರೀಕೃಷ್ಣನು ಬಲರಾಮನೊಂದಿಗೆ ರಂಗಸ್ಥಳವನ್ನು ಪ್ರವೇಶಿಸುವಾಗ ಅವರು - ಜಟ್ಟಿಗಳಿಗೆ ಸಿಡಿಲಿನ ಸ್ವರೂಪದಿಂದಲೂ, ಸಾಧಾರಣ ಮನುಷ್ಯರಿಗೆ ನರಶ್ರೇಷ್ಠನಂತೆಯೂ, ಸ್ತ್ರೀಯರಿಗೆ ಮೂರ್ತಿವೆತ್ತ ಮನ್ಮಥನಂತೆಯೂ, ಗೋಪಾಲಕರಿಗೆ ಸ್ವಜನನಂತೆಯೂ, ದುಷ್ಟರಾಜರಿಗೆ ಶಿಕ್ಷಕನಂತೆಯೂ, ತಂದೆ ತಾಯಿಯರಂತಿದ್ದವರಿಗೆ ಮಗನಂತೆಯೂ, ಕಂಸನಿಗೆ ಮೃತ್ಯುವಿನಂತೆಯೂ, ಅಜ್ಞಾನಿಗಳಿಗೆ ವಿರಾಟಪುರುಷನಾಗಿಯೂ, ಯೋಗಿಗಳಿಗೆ ಪರತತ್ತ್ವವಾಗಿಯೂ, ಭಕ್ತಶಿರೋಮಣಿಗಳಾದ ವೃಷ್ಣಿವಂಶೀಯರಿಗೆ ತಮ್ಮ ಇಷ್ಟದೇವರಂತೆಯೂ ಕಂಡುಬಂದರು. (ಎಲ್ಲರೂ ತಮ್ಮ-ತಮ್ಮ ಭಾವಕ್ಕನುಸಾರ ಕ್ರಮವಾಗಿ ರೌದ್ರ, ಅದ್ಭುತ, ಶೃಂಗಾರ, ಹಾಸ್ಯ, ವೀರ, ವಾತ್ಸಲ್ಯ, ಭಯಾನಕ, ಬೀಭತ್ಸ, ಶಾಂತ ಮತ್ತು ಪ್ರೇಮಭಕ್ತಿ ರಸಗಳನ್ನು ಅನುಭವಿಸಿದರು.) ॥ ೧೭ ॥ ರಾಜೇಂದ್ರ! ಕಂಸನಾದರೋ ಅತ್ಯಂತ ವೀರನೂ, ಧೀರನೂ ಆಗಿದ್ದರೂ ಇವರಿಬ್ಬರೂ ಕುವಲಯಾಪೀಡವನ್ನು ಕೊಂದುದನ್ನು ನೋಡಿದಾಗ, ಇವರನ್ನು ಗೆಲ್ಲುವುದು ಬಹಳ ಕಷ್ಟಕರವಾಗಿದೆ ಎಂಬುದು ಮನಸ್ಸಿಗೆ ಅನಿಸಿತು. ಇದರಿಂದ ಅವನು ಬಹಳವಾಗಿ ಗಾಬರಿಗೊಂಡನು. ॥ ೧೮ ॥ ಶ್ರೀಕೃಷ್ಣ-ಬಲರಾಮರು ದೀರ್ಘಬಾಹುಗಳಾಗಿದ್ದರು. ಪುಷ್ಪಗಳ ಹಾರಗಳಿಂದ, ವಸ್ತ್ರ, ಆಭೂಷಣಗಳಿಂದ ಅವರ ವೇಷವು ವಿಚಿತ್ರವಾಗಿತ್ತು. ಉತ್ತಮವಾದ ವೇಷವನ್ನು ಧರಿಸಿ ಇಬ್ಬರು ನಟರು ಅಭಿನಯಿಸಲು ಬಂದಿರುವರೋ ಎಂದೆನಿಸುತ್ತಿತ್ತು. ನೋಡುಗರ ಕಣ್ಣುಗಳು ಅವರಲ್ಲೇ ನೆಟ್ಟು ಬಿಡುತ್ತಿದ್ದವು. ಅವರೂ ಕೂಡ ತಮ್ಮ ಪ್ರಭೆಯಿಂದ ಅವರ ಮನಸ್ಸನ್ನು ಅಪಹರಿಸಿಬಿಡುತ್ತಿದ್ದರು. ಹೀಗೆ ಅವರಿಬ್ಬರೂ ರಂಗಸ್ಥಳದಲ್ಲಿ ಶೋಭಾಯಮಾನರಾದರು. ॥ ೧೯ ॥ ಪರೀಕ್ಷಿತನೇ! ಮಂಚಗಳಲ್ಲಿ ಕುಳಿತಿದ್ದ ಮಥುರೆಯ ನಾಗರಿಕರೂ, ರಾಷ್ಟ್ರದ ಜನಸಮುದಾಯವೂ ಪುರುಷಶ್ರೇಷ್ಠರಾದ ಬಲರಾಮ-ಶ್ರೀಕೃಷ್ಣರನ್ನು ನೋಡಿ ಅತ್ಯಂತ ಪ್ರಸನ್ನರಾದರು. ಹರ್ಷೋತ್ಕರ್ಷದಿಂದಾಗಿ ಅವರ ಮುಖಗಳೂ, ಕಣ್ಣುಗಳೂ, ಕಮಲದಂತೆ ಅರಳಿದವು. ದುಂಬಿಗಳಂತಿದ್ದ ಕಣ್ಣುಗಳಿಂದ ರಾಮ-ಕೃಷ್ಣರ ಮುಖಮಧುವನ್ನು ಕುಡಿದರೂ ಅವರಿಗೆ ತೃಪ್ತಿಯಾಗುತ್ತಿರಲಿಲ್ಲ. ॥ ೨೦ ॥

ಪ್ರಿಯಂ ರಾಜ್ಞಃ ಪ್ರಕುರ್ವಂತ್ಯಃ ಶ್ರೇಯೋ ವಿಂದಂತಿ ವೈ ಪ್ರಜಾಃ ।
ಮನಸಾ ಕರ್ಮಣಾ ವಾಚಾ ವಿಪರೀತಮತೋಽನ್ಯಥಾ ॥ ೩೩ ॥

ನಿತ್ಯಂ ಪ್ರಮುದಿತಾ ಗೋಪಾ ವತ್ಸಪಾಲಾ ಯಥಾ ಸ್ಫುಟಮ್ ।
ವನೇಷು ಮಲ್ಲಯುದ್ಧೇನ ಕ್ರೀಡಂತಶ್ಚಾರಯಂತಿ ಗಾಃ ॥ ೩೪ ॥

ತಸ್ಮಾದ್ರಾಜ್ಞಃ ಪ್ರಿಯಂ ಯೂಯಂ ವಯಂ ಚ ಕರವಾಮ ಹೇ ।
ಭೂತಾನಿ ನಃ ಪ್ರಸೀದಂತಿ ಸರ್ವಭೂತಮಯೋ ನೃಪಃ ॥ ೩೫ ॥

ತನ್ನಿಶಮ್ಯಾಬ್ರವೀತ್ ಕೃಷ್ಣೋ ದೇಶಕಾಲೋಚಿತಂ ವಚಃ ।
ನಿಯುದ್ಧಮಾತ್ಮನೋಽಭೀಷ್ಟಂ ಮನ್ಯಮಾನೋಽಭಿನಂದ್ಯ ಚ ॥ ೩೬ ॥

ಪ್ರಜಾ ಭೋಜಪತೇರಸ್ಯ ವಯಂ ಚಾಪಿ ವನೇಚರಾಃ ।
ಕರವಾಮ ಪ್ರಿಯಂ ನಿತ್ಯಂ ತನ್ನಃ ಪರಮನುಗ್ರಹಃ ॥ ೩೭ ॥

ಬಾಲಾ ವಯಂ ತುಲ್ಯಬಲೈಃ ಕ್ರೀಡಿಷ್ಯಾಮೋ ಯಥೋಚಿತಮ್ ।
ಭವೇನ್ನಿಯುದ್ಧಂ ಮಾಧರ್ಮಃ ಸ್ಪೃಶೇನ್ಮಲ್ಲ ಸಭಾಸದಃ ॥ ೩೮ ॥

ಚಾಣೂರ ಉವಾಚ

ನ ಬಾಲೋ ನ ಕಿಶೋರಸ್ತ್ವಂ ಬಲಶ್ಚ ಬಲಿನಾಂ ವರಃ ।
ಲೀಲಯೇಭೋ ಹತೋ ಯೇನ ಸಹಸ್ರದ್ವಿಪಸತ್ತ್ವಭೃತ್ ॥ ೩೯ ॥

ತಸ್ಮಾದ್ಭವದ್ಭ್ಯಾಂ ಬಲಿಭಿರ್ಯೋದ್ಧವ್ಯಂ ನಾನಯೋಽತ್ರ ವೈ ।
ಮಯಿ ವಿಕ್ರಮ ವಾರ್ಷ್ಣೇಯ ಬಲೇನ ಸಹ ಮುಷ್ಟಿಕಃ ॥ ೪೦ ॥

ನೋಡಿರಪ್ಪಾ! ಮನಸ್ಸು, ವಚನ, ಕರ್ಮದಿಂದ ರಾಜನಿಗೆ ಪ್ರಿಯವನ್ನುಂಟುಮಾಡುವ ಪ್ರಜೆಗಳು ಶ್ರೇಯಸ್ಸನ್ನು ಪಡೆಯುತ್ತಾರೆ. ರಾಜನ ಇಚ್ಛೆಗೆ ವಿರುದ್ಧವಾಗಿ ನಡೆಯುವವರು ಶಿಕ್ಷೆಗೆ ಗುರಿಯಾಗುತ್ತಾರೆ. ॥ ೩೩ ॥ ಹಸುಗಳನ್ನು ಮತ್ತು ಕರುಗಳನ್ನು ಮೇಯಿಸುವ ಗೊಲ್ಲರು ದಿನಾಲೂ ಆನಂದದಿಂದ ಕಾಡಿನಲ್ಲಿ ಕುಸ್ತಿಗಳನ್ನಾಡುತ್ತಾ ಹಸುಗಳನ್ನು ಮೇಯಿಸುತ್ತಾ ಇರುತ್ತಾರೆ ಎಂಬುದನ್ನು ಎಲ್ಲರೂ ಬಲ್ಲರು. ॥ ೩೪ ॥ ಆದ್ದರಿಂದ ಬನ್ನಿರಿ, ನಾವು-ನೀವು ಸೇರಿ ಮಹಾರಾಜರನ್ನು ಸಂತೋಷಪಡಿಸಲಿಕ್ಕಾಗಿ ಕುಸ್ತಿಯನ್ನಾಡುವಾ. ಹೀಗೆ ಮಾಡುವುದರಿಂದ ಎಲ್ಲ ಪ್ರಾಣಿಗಳು ನಮ್ಮ ಮೇಲೆ ಪ್ರಸನ್ನರಾಗುವರು. ಏಕೆಂದರೆ, ರಾಜನು ಸಮಸ್ತ ಪ್ರಜೆಯ ಪ್ರತೀಕನಾಗಿದ್ದಾನೆ. ॥ ೩೫ ॥

ಪರೀಕ್ಷಿತನೇ! ಭಗವಾನ್ ಶ್ರೀಕೃಷ್ಣನಾದರೋ ಇವರೊಂದಿಗೆ ದ್ವಂದ್ವಯುದ್ಧವನ್ನೇ ಬಯಸುತ್ತಿದ್ದನು. ಅದಕ್ಕಾಗಿ ಅವನು ಚಾಣೂರನ ಮಾತನ್ನು ಕೇಳಿ ಅನುಮೋದಿಸುತ್ತಾ ದೇಶ-ಕಾಲಕ್ಕೆ ಅನುಸಾರವಾಗಿ ಇಂತೆಂದನು. ॥ ೩೬ ॥ ಎಲೈ ಚಾಣೂರನೇ! ನಾವೂ ಕೂಡ ಈ ಭೋಜರಾಜ ಕಂಸನ ವನವಾಸೀ ಪ್ರಜೆಗಳಾಗಿ ಇದ್ದೇವೆ. ನಾವು ಇವನನ್ನು ಸಂತೋಷಪಡಿಸಲು ಪ್ರಯತ್ನಿಸುವುದು ಆವಶ್ಯಕವಾಗಿದೆ. ಇದರಿಂದ ನಮಗೂ ಶ್ರೇಯಸ್ಸೂ ಇದೆ. ॥ ೩೭ ॥ ಆದರೆ ಚಾಣೂರನೇ! ನಾವುಗಳು ಇನ್ನೂ ಬಾಲಕರಾಗಿದ್ದೇವೆ. ಅದಕ್ಕಾಗಿ ನಾವು ನಮ್ಮ ಸಮಾನರಾದ ಬಲವುಳ್ಳ ಬಾಲಕರೊಂದಿಗೆ ಕುಸ್ತಿಯಾಡುವೆವು. ಕುಸ್ತಿಯು ಸಮಾನ ಬಲಿಷ್ಠರೊಂದಿಗೆ ನಡೆಯಬೇಕು. ಇದರಿಂದ ನೋಡುವ ಸಭಾಸದರಿಗೆ ಅನ್ಯಾಯವನ್ನು ಸಮರ್ಥಿಸುವ ಪಾಪವು ತಟ್ಟಲಾರದು. ॥ ೩೮ ॥

ಚಾಣೂರನು ಹೇಳಿದನು - ಅಯ್ಯಾ! ನೀನು ಮತ್ತು ಈ ಬಲರಾಮನು ಬಾಲಕರೂ ಅಲ್ಲ, ಕಿಶೋರರೂ ಅಲ್ಲ. ನೀವಿಬ್ಬರೂ ಬಲಿಷ್ಠರಲ್ಲಿ ಶ್ರೇಷ್ಠರಾಗಿರುವಿರಿ. ನೀವು ಇದೀಗಲೇ ಸಾವಿರ ಆನೆಗಳ ಬಲವುಳ್ಳ ಕುವಲಯಾಪೀಡವನ್ನು ಲೀಲಾಜಾಲವಾಗಿ ಕೊಂದು ಹಾಕಿರುವಿರಿ. ॥ ೩೯ ॥ ಅದಕ್ಕಾಗಿ ನೀವಿಬ್ಬರೂ ನಮ್ಮಂತಹ ಬಲಿಷ್ಠರೊಂದಿಗೆ ಕಾದಾಡಬೇಕು. ಇದರಲ್ಲಿ ಅನ್ಯಾಯದ ಯಾವ ಮಾತೂ ಇಲ್ಲ. ಆದುದರಿಂದ ಎಲೈ ಕೃಷ್ಣನೇ! ನೀನು ನನ್ನೊಂದಿಗೆ ನಿನ್ನ ಪರಾಕ್ರಮವನ್ನು ತೋರಬೇಕು. ಬಲರಾಮನು ಮುಷ್ಟಿಕನೊಂದಿಗೆ ಕಾದಾಡಲಿ. ॥ ೪೦ ॥

ನಲವತ್ತಮೂರನೆಯ ಅಧ್ಯಾಯವು ಮುಗಿಯಿತು. ॥ ೪೩ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮ ಸ್ಕಂಧೇ ಪೂರ್ವಾರ್ಧೇ
ಕುವಲಯಾಪೀಡವಧೋ ನಾಮ ತ್ರಿಚತ್ವಾರಿಂಶೋಽಧ್ಯಾಯಃ ॥ ೪೩ ॥

ಪಿಬಂತ ಇವ ಚಕ್ಷುರ್ಭ್ಯಾಂ ಲಿಹಂತ ಇವ ಜಿಹ್ವಯಾ ।
ಜಿಘ್ರಂತ ಇವ ನಾಸಾಭ್ಯಾಂ ಶ್ಲಿಷ್ಯಂತ ಇವ ಬಾಹುಭಿಃ
॥ ೨೧ ॥

ಊಚುಃ ಪರಸ್ಪರಂ ತೇ ವೈ ಯಥಾದೃಷ್ಟಂ ಯಥಾಶ್ರುತಮ್ ।
ತದ್ರೂಪಗುಣಮಾಧುರ್ಯಪ್ರಾಗಲ್ಭ್ಯಸ್ಮಾರಿತಾ ಇವ
॥ ೨೨ ॥

ಏತೌ ಭಗವತಃ ಸಾಕ್ಷಾದ್ಧರೇರ್ನಾರಾಯಣಸ್ಯ ಹಿ ।
ಅವತೀರ್ಣಾವಿಹಾಂಶೇನ ವಸುದೇವಸ್ಯ ವೇಶ್ಮನಿ
॥ ೨೩ ॥

ಏಷ ವೈ ಕಿಲ ದೇವಕ್ಯಾಂ ಜಾತೋ ನೀತಶ್ಚ ಗೋಕುಲಮ್ ।
ಕಾಲಮೇತಂ ವಸನ್ ಗೂಢೋ ವವೃಧೇ ನಂದವೇಶ್ಮನಿ
॥ ೨೪ ॥

ಪೂತನಾನೇನ ನೀತಾಂತಂ ಚಕ್ರವಾತಶ್ಚ ದಾನವಃ ।
ಅರ್ಜುನೌ ಗುಹ್ಯಕಃ ಕೇಶೀ ಧೇನುಕೋಽನ್ಯೇ ಚ ತದ್ವಿಧಾಃ
॥ ೨೫ ॥

ಗಾವಃ ಸಪಾಲಾ ಏತೇನ ದಾವಾಗ್ನೇಃ ಪರಿಮೋಚಿತಾಃ ।
ಕಾಲಿಯೋ ದಮಿತಃ ಸರ್ಪ ಇಂದ್ರಶ್ಚ ವಿಮದಃ ಕೃತಃ
॥ ೨೬ ॥

ಸಪ್ತಾಹಮೇಕಹಸ್ತೇನ ಧೃತೋಽದ್ರಿಪ್ರವರೋಽಮುನಾ ।
ವರ್ಷವಾತಾಶನಿಭ್ಯಶ್ಚ ಪರಿತ್ರಾತಂ ಚ ಗೋಕುಲಮ್
॥ ೨೭ ॥

ಗೋಪ್ಯೋಽಸ್ಯ ನಿತ್ಯಮುದಿತಹಸಿತಪ್ರೇಕ್ಷಣಂ ಮುಖಮ್ ।
ಪಶ್ಯಂತ್ಯೋ ವಿವಿಧಾಂಸ್ತಾಪಾಂಸ್ತರಂತಿ ಸ್ಮಾಶ್ರಮಂ ಮುದಾ
॥ ೨೮ ॥

ವದಂತ್ಯನೇನ ವಂಶೋಽಯಂ ಯದೋಃ ಸುಬಹುವಿಶ್ರುತಃ ।
ಶ್ರಿಯಂ ಯಶೋ ಮಹತ್ತ್ವಂ ಚ ಲಪ್ಸ್ಯತೇ ಪರಿರಕ್ಷಿತಃ
॥ ೨೯ ॥

ಅಯಂ ಚಾಸ್ಯಾಗ್ರಜಃ ಶ್ರೀಮಾನ್ ರಾಮಃ ಕಮಲಲೋಚನಃ ।
ಪ್ರಲಂಬೋ ನಿಹತೋ ಯೇನ ವತ್ಸಕೋ ಯೇ ಬಕಾದಯಃ
॥ ೩೦ ॥

ಜನೇಷ್ವೇವಂ ಬ್ರುವಾಣೇಷು ತೂರ್ಯೇಷು ನಿನದತ್ಸು ಚ ।
ಕೃಷ್ಣರಾಮೌ ಸಮಾಭಾಷ್ಯ ಚಾಣೂರೋ ವಾಕ್ಯಮಬ್ರವೀತ್
॥ ೩೧ ॥

ಹೇ ನಂದಸೂನೋ ಹೇ ರಾಮ ಭವಂತೌ ವೀರಸಮ್ಮತೌ ।
ನಿಯುದ್ಧಕುಶಲೌ ಶ್ರುತ್ವಾ ರಾಜ್ಞಾಽಽಹೂತೌ ದಿದೃಕ್ಷುಣಾ
॥ ೩೨ ॥

ಅವರೆಲ್ಲರೂ ಇವರಿಬ್ಬರನ್ನೂ ಕಣ್ಣುಗಳಿಂದಲೇ ಕುಡಿದುಬಿಡುವರೋ, ನಾಲಿಗೆಯಿಂದ ನೆಕ್ಕುತ್ತಿರುವರೋ, ಮೂಗಿನಿಂದ ಮೂಸುತ್ತಿರುವರೋ, ಬಾಹುಗಳಿಂದ ಅಪ್ಪಿಕೊಳ್ಳುವರೋ ಎಂದೆನಿಸುತ್ತಿತ್ತು. ॥ ೨೧ ॥ ಅವರ ಸೌಂದರ್ಯ, ಗುಣ, ಮಾಧುರ್ಯ ಮತ್ತು ನಿರ್ಭಯತೆಯಿಂದ ದರ್ಶಕರಿಗೆ ಅವರ ಲೀಲೆಗಳು ಸ್ಮರಣೆಗೆ ಬಂದವು ಹಾಗೂ ಅವರೆಲ್ಲರೂ ಪರಸ್ಪರವಾಗಿ ಕೇಳಿದ-ನೋಡಿದ ಮಾತುಗಳನ್ನು ಆಡಿಕೊಳ್ಳತೊಡಗಿದರು. ॥ ೨೨ ॥ ಒಬ್ಬನು ಹೇಳಿದನು - ಗೆಳೆಯರೇ ! ಇವರಿಬ್ಬರೂ ಸಾಕ್ಷಾತ್ ಭಗವಾನ್ ನಾರಾಯಣನ ಅಂಶರೇ ಆಗಿದ್ದಾರೆ. ಈ ಭೂಮಿಯಲ್ಲಿ ವಸುದೇವನ ಮನೆಯಲ್ಲಿ ಅವತರಿಸಿರುವರು. ॥ ೨೩ ॥ ಮತ್ತೊಬ್ಬನು ಬೆರಳಿಂದ ಅವರನ್ನು ತೋರುತ್ತಾ ಹೇಳುತ್ತಾನೆ - ಈ ಶ್ಯಾಮಸುಂದರ ದೇವಕಿದೇವಿಯ ಗರ್ಭದಿಂದ ಹುಟ್ಟಿದವನು. ಹುಟ್ಟಿದೊಡನೆಯೇ ವಸುದೇವನು ಇವನನ್ನು ನಂದಗೋಕುಲಕ್ಕೆ ತಲುಪಿಸಿದನು. ಇಷ್ಟು ದಿವಸಗಳವರೆಗೆ ಇವನು ಅಡಗಿದ್ದು ನಂದಗೋಪನ ಮನೆಯಲ್ಲಿ ಬೆಳೆದು ಇಷ್ಟು ದೊಡ್ಡವನಾಗಿರುವನು. ॥ ೨೪ ॥ ಪೂತನೆ, ತೃಣಾವರ್ತ, ಶಂಖಚೂಡ, ಕೇಶಿ ಮತ್ತು ಧೇನುಕ ಮುಂತಾದವರನ್ನು ಹಾಗೂ ಇತರ ದುಷ್ಟರಾಕ್ಷಸರನ್ನು ವಧಿಸಿದುದೂ, ಯಮಳಾರ್ಜುನರ ಉದ್ಧಾರವನ್ನು ಮಾಡಿದುದೂ ಇವನೇ. ॥ ೨೫ ॥ ಗೋವುಗಳನ್ನು ಮತ್ತು ಗೋಪಬಾಲಕರನ್ನು ದಾವಾನಲದ ಜ್ವಾಲೆಯಿಂದ ಇವನೇ ಕಾಪಾಡಿದ್ದನು. ಕಾಲಿಯ ಸರ್ಪವನ್ನು ದಮನ ಮಾಡಿ, ಇಂದ್ರನ ಗರ್ವವನ್ನು ಮುರಿದವನೂ ಇವನೇ. ॥ ೨೬ ॥ ಮತ್ತೊಬ್ಬನು ಹೇಳಿದನು - ಏಳು ದಿನಗಳವರೆಗೆ ಒಂದೇ ಕೈಯ್ಯಮೇಲೆ ಗಿರಿರಾಜ ಗೋವರ್ಧನವನ್ನು ಎತ್ತಿ ಹಿಡಿದು, ಬಿರುಗಾಳಿ, ಮಳೆ, ಸಿಡಿಲುಗಳಿಂದ ಗೋಕುಲದ ಜನರನ್ನು ಕಾಪಾಡಿದವನು ಇವನೇ. ॥ ೨೭ ॥ ವ್ರಜದ ಗೋಪಿಯರು ಇವನ ಮಂದ ಮಧುರ ಮುಗುಳ್ನಗೆಯಿಂದ, ಕುಡಿನೋಟದಿಂದ, ಸದಾಕಾಲ ಏಕರಸವಾಗಿರುವ ಪ್ರಸನ್ನ ಮುಖಾರವಿಂದದ ದರ್ಶನದಿಂದ ಆನಂದಿತರಾಗುತ್ತಿದ್ದರು ಮತ್ತು ಸುಲಭವಾಗಿ ಎಲ್ಲ ಬಗೆಯ ತಾಪಗಳಿಂದ ಮುಕ್ತರಾಗಿಬಿಡುತ್ತಿದ್ದರು ॥ ೨೮ ॥ ಇವನು ಯದುವಂಶವನ್ನು ರಕ್ಷಿಸುವನೆಂದು, ಈ ವಿಖ್ಯಾತವಾದ ವಂಶವು ಇವನಿಂದ ಸಂಪತ್ತು, ಸಮೃದ್ಧಿಯನ್ನು, ಯಶಸ್ಸನ್ನೂ, ಗೌರವವನ್ನು ಪಡೆದುಕೊಳ್ಳುವುದೆಂದೂ ವಿದ್ವಾಂಸರು ಹೇಳಿದ್ದಾರಂತೆ. ॥ ೨೯ ॥ ಇನ್ನೊಬ್ಬನು ಹೇಳಿದನು - ಈ ಶ್ಯಾಮಸುಂದರನ ಬಳಿಯಲ್ಲಿ ನಿಂತಿರುವವನು ಇವನಣ್ಣನಾದ ಕಮಲನಯನ ಬಲರಾಮದೇವನಾಗಿದ್ದಾನೆ. ಇವನೇ ಪ್ರಲಂಬಾಸುರ, ವತ್ಸಾಸುರ, ಬಕಾಸುರ ಮುಂತಾದವರನ್ನು ಕೊಂದಿರುವನೆಂದು ಯಾರದೋ ಬಾಯಿಂದ ಕೇಳಿದ್ದೇವೆ. ॥ ೩೦ ॥

ದರ್ಶಕರಲ್ಲಿ ಹೀಗೆ ಚರ್ಚೆ ನಡೆಯುತ್ತಿದ್ದಾಗ, ರಂಗಸ್ಥಳದಲ್ಲಿ ತುತ್ತೂರಿ, ಭೇರಿಗಳೂ ಮೊಳಗುತ್ತಿರುವಾಗ ಚಾಣೂರನು ಶ್ರೀಕೃಷ್ಣ ಬಲರಾಮರನ್ನು ಸಂಬೋಧಿಸುತ್ತಾ ಹೀಗೆ ಹೇಳಿದನು. ॥ ೩೧ ॥ ನಂದನಂದನರಾದ ಬಲರಾಮ- ಶ್ರೀಕೃಷ್ಣರೇ ! ನೀವಿಬ್ಬರೂ ವೀರರಿಗೆ ಆದರಣೀಯರಾಗಿರುವಿರಿ. ನೀವುಗಳು ಕುಸ್ತಿಯಾಡುವುದರಲ್ಲಿ ಅತ್ಯಂತ ನಿಪುಣರಾಗಿರುವಿರೆಂದು ಕೇಳಿ ನಿಮ್ಮ ಮಲ್ಲಯುದ್ಧ ಕೌಶಲ್ಯವನ್ನು ನೋಡುವ ಸಲುವಾಗಿ ನಮ್ಮ ರಾಜನಾದ ಕಂಸನು ನಿಮ್ಮನ್ನು ಕರೆಸಿರುವನು. ॥ ೩೨ ॥

ನಲವತ್ತನಾಲ್ಕನೆಯ ಅಧ್ಯಾಯ

ಚಾಣೂರ, ಮುಷ್ಟಿಕ ಮುಂತಾದ ಮಲ್ಲರ ಹಾಗೂ ಕಂಸನ ವಧೆ

ಶ್ರೀಶುಕ ಉವಾಚ

ಏವಂ ಚರ್ಚಿತಸಂಕಲ್ಪೋ ಭಗವಾನ್ ಮಧುಸೂದನಃ ।
ಆಸಸಾದಾಥ ಚಾಣೂರಂ ಮುಷ್ಟಿಕಂ ರೋಹಿಣೀಸುತಃ ॥ ೧ ॥

ಹಸ್ತಾಭ್ಯಾಂ ಹಸ್ತಯೋರ್ಬದ್ಧ್ವಾ ಪದ್ಭ್ಯಾಮೇವ ಚ ಪಾದಯೋಃ ।
ವಿಚಕರ್ಷತುರನ್ಯೋನ್ಯಂ ಪ್ರಸಹ್ಯ ವಿಜಿಗೀಷಯಾ ॥ ೨ ॥

ಅರತ್ನೀ ದ್ವೇ ಅರತ್ನಿಭ್ಯಾಂ ಜಾನುಭ್ಯಾಂ ಚೈವ ಜಾನುನೀ ।
ಶಿರಃ ಶೀರ್ಷ್ಣೋರಸೋರಸ್ತಾವನ್ಯೋನ್ಯಮಭಿಜಘ್ನತುಃ ॥ ೩ ॥

ಪರಿಭ್ರಾಮಣವಿಕ್ಷೇಪಪರಿರಂಭಾವಪಾತನೈಃ ।
ಉತ್ಸರ್ಪಣಾಪಸರ್ಪಣೈಶ್ಚಾನ್ಯೋನ್ಯಂ ಪ್ರತ್ಯರುಂಧತಾಮ್ ॥ ೪ ॥

ಉತ್ಥಾಪನೈರುನ್ನಯನೈಶ್ಚಾಲನೈಃ ಸ್ಥಾಪನೈರಪಿ ।
ಪರಸ್ಪರಂ ಜಿಗೀಷಂತಾವಪಚಕ್ರತುರಾತ್ಮನಃ ॥ ೫ ॥

ತದ್ಬಲಾಬಲವದ್ಯುದ್ಧಂ ಸಮೇತಾಃ ಸರ್ವಯೋಷಿತಃ ।
ಊಚುಃ ಪರಸ್ಪರಂ ರಾಜನ್ ಸಾನುಕಂಪಾ ವರೂಥಶಃ ॥ ೬ ॥

ಮಹಾನಯಂ ಬತಾಧರ್ಮ ಏಷಾಂ ರಾಜಸಭಾಸದಾಮ್ ।
ಯೇ ಬಲಾಬಲವದ್ಯುದ್ಧಂ ರಾಜ್ಞೋಽನ್ವಿಚ್ಛಂತಿ ಪಶ್ಯತಃ ॥ ೭ ॥

ಕ್ವ ವಜ್ರಸಾರಸರ್ವಾಂಗೌ ಮಲ್ಲೌ ಶೈಲೇಂದ್ರಸನ್ನಿಭೌ ।
ಕ್ವ ಚಾತಿಸುಕುಮಾರಾಂಗೌ ಕಿಶೋರೌ ನಾಪ್ತಯೌವನೌ ॥ ೮ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ - ಎಲೈ ಪರೀಕ್ಷಿತನೇ! ಭಗವಾನ್ ಶ್ರೀಕೃಷ್ಣನು ಚಾಣೂರನೇ ಮೊದಲಾದವರನ್ನು ಸಂಹರಿಸಲು ನಿಶ್ಚಿತವಾದ ಸಂಕಲ್ಪವನ್ನು ಮಾಡಿದನು. ಶ್ರೀಕೃಷ್ಣನು ಚಾಣೂರನೊಡನೆಯೂ ಬಲರಾಮನು ಮುಷ್ಟಿಕನೊಡನೆಯೂ ಮಲ್ಲಯುದ್ಧವನ್ನು ಪ್ರಾರಂಭಿಸಿದನು. ॥ ೧ ॥ ಒಬ್ಬರು ಮತ್ತೊಬ್ಬರನ್ನು ಗೆಲ್ಲಬೇಕೆಂಬ ಛಲದಿಂದ ಪರಸ್ಪರವಾಗಿ ಒಬ್ಬರ ಕೈಯನ್ನು ಮತ್ತೊಬ್ಬರು ಹಿಡಿದುಕೊಂಡು ತೊಡರುಗಾಲು ಕೊಟ್ಟುಕೊಂಡು ಅಲ್ಲಿಂದಿಲ್ಲಿಗೂ, ಇಲ್ಲಿಂದಲ್ಲಿಗೂ ಎಳೆದಾಡಿದರು. ॥ ೨ ॥ ಅವರು ಕೈಯಿಂದ ಕೈಯನ್ನೂ, ಮೊಣಕಾಲಿನಿಂದ ಮೊಣಕಾಲನ್ನೂ, ತಲೆಯಿಂದ ತಲೆಯನ್ನೂ, ಉಬ್ಬಿದ ಎದೆಯಿಂದ ಎದೆಯನ್ನು ಪರಸ್ಪರ ಪ್ರಹರಿಸುತ್ತಿದ್ದರು. ॥ ೩ ॥ ಹೀಗೆ ಅನೇಕ ಪಟ್ಟುಗಳನ್ನು ಪ್ರಯೋಗಿಸುತ್ತಾ ಎದುರಾಳಿಯನ್ನು ಹಿಡಿದು ಗರ-ಗರನೆ ತಿರುಗಿಸುತ್ತಾ ದೂರಕ್ಕೆ ತಳ್ಳಿಬಿಡುತ್ತಿದ್ದರು. ತೋಳಿನ ಸಂದಿಯಲ್ಲಿ ಅಮುಕುತ್ತಿದ್ದರು. ನೆಲದ ಮೇಲೆ ಬೀಳಿಸಿ ಉರುಳಿಸುತ್ತಿದ್ದರು. ವೇಗದಿಂದ ಮುನ್ನುಗ್ಗಿಬಂದು ಒಬ್ಬರು ಮತ್ತೊಬ್ಬರ ಮೇಲೆ ಬೀಳುತ್ತಿದ್ದರು. ಸಮಯವರಿತು ಹಿಂದಕ್ಕೂ ಸರಿಯುತ್ತಿದ್ದರು. ಕೆಳಕ್ಕೆ ಬಿದ್ದವನ ಕೈ-ಕಾಲುಗಳನ್ನು ಹಿಡಿದು ದರದರನೆ ಎಳೆದಾಡುತ್ತಿದ್ದರು. ಮುದುರಿ ಮುಟ್ಟೆಗಟ್ಟಿ ಎತ್ತಿ ಹಾಕುವರು. ಹೆಕ್ಕತ್ತಿನ ಮೇಲೆ ತೋಳನಿಟ್ಟು ಬಗ್ಗಿಸುತ್ತಿದ್ದರು. ಎದುರಾಳಿಯು ಹಾಕಿದ ಪಟ್ಟುಗಳಿಂದ ಬಿಡಿಸಿಕೊಳ್ಳಲು ಪ್ರಯತ್ನಿಸುತ್ತಿದ್ದರು. ಹೀಗೆ ವಿಜಯಾಕಾಂಕ್ಷಿಗಳಾದ ಅವರು ಸೆಣಸಾಡುತ್ತಿದ್ದರು. ॥ ೪-೫ ॥

ಪರೀಕ್ಷಿತನೇ! ಆ ಮಲ್ಲಯುದ್ಧವನ್ನು ನೋಡಲು ಹಲವಾರು ಸ್ತ್ರೀಯರೂ ಬಂದಿದ್ದರು. ದೊಡ್ಡ-ದೊಡ್ಡ ಜಟ್ಟಿಗಳೊಡನೆ ಬಾಲಕರಾದ ರಾಮ-ಕೃಷ್ಣರು ಸೆಣಸಾಡುತ್ತಿರುವುದನ್ನು ಅವರು ನೋಡಿದರು. ಅವರ ಅನುಕಂಪವು ಸ್ವಾಭಾವಿಕವಾಗಿ ಶ್ರೀಕೃಷ್ಣ-ಬಲರಾಮರ ಮೇಲಿತ್ತು. ಗುಂಪು-ಗುಂಪಾಗಿ ಸೇರಿ ಹೀಗೆ ಮಾತನಾಡಿಕೊಂಡರು. ॥ ೬ ॥ ನೋಡಿ, ಇಲ್ಲಿ ಕಂಸರಾಜನ ಸಭಾಸದರು ದೊಡ್ಡ ಅನ್ಯಾಯವನ್ನು, ಅಧರ್ಮವನ್ನು ಮಾಡುತ್ತಿದ್ದಾರೆ. ರಾಜನ ಎದುರಿನಲ್ಲೇ ಬಲಿಷ್ಠರಾದ ಜಟ್ಟಿಗಳಿಗೂ, ನಿರ್ಬಲರಾದ ಬಾಲಕರಿಗೂ ಕಾಳಗವಾಗುವುದನ್ನು ಅನುಮೋದಿಸುತ್ತಿದ್ದಾರಲ್ಲ! ಇದು ಎಂತಹ ಖೇದದ ವಿಷಯವಾಗಿದೆ? ॥ ೭ ॥ ಗೆಳತಿಯರೇ! ಈ ಜಟ್ಟಿಗಳ ಪ್ರತಿಯೊಂದು ಅಂಗಾಂಗಗಳು ವಜ್ರದಂತೆ ಕಠೋರವಾಗಿವೆ. ನೋಡಲು ಇವರು ಪರ್ವತಗಳಂತೆಯೇ ಇದ್ದಾರೆ. ಆದರೆ ಶ್ರೀಕೃಷ್ಣ ಬಲರಾಮರು ಇನ್ನೂ ಯೌವನಾವಸ್ಥೆಯನ್ನು ಹೊಂದಿರುವುದಿಲ್ಲ. ಕಿಶೋರಾವಸ್ಥೆಯಲ್ಲೇ ಇದ್ದಾರೆ. ಇವರ ಒಂದೊಂದು ಅಂಗಾಂಗಗಳು ಸುಕೋಮಲವಾಗಿವೆ. ಆ ಬಲಿಷ್ಠರೆಲ್ಲಿ? ಈ ಸುಕೋಮಲರಾದ ಬಾಲಕರೆಲ್ಲಿ? ॥ ೮ ॥

ಧರ್ಮವ್ಯತಿಕ್ರಮೋ ಹ್ಯಸ್ಯ ಸಮಾಜಸ್ಯ ಧ್ರುವಂ ಭವೇತ್ ।
ಯತ್ರಾಧರ್ಮಃ ಸಮುತ್ತಿಷ್ಠೇನ್ನ ಸ್ಥೇಯಂ ತತ್ರ ಕರ್ಹಿಚಿತ್ ॥ ೯ ॥

ನ ಸಭಾಂ ಪ್ರವಿಶೇತ್ ಪ್ರಾಜ್ಞಃ ಸಭ್ಯದೋಷಾನನುಸ್ಮರನ್ ।
ಅಬ್ರುವನ್ವಿಬ್ರುವನ್ನಜ್ಞೋ ನರಃ ಕಿಲ್ಬಿಷಮಶ್ನುತೇ ॥ ೧೦ ॥

ವಲ್ಗತಃ ಶತ್ರುಮಭಿತಃ ಕೃಷ್ಣಸ್ಯ ವದನಾಂಬುಜಮ್ ।
ವೀಕ್ಷ್ಯತಾಂ ಶ್ರಮವಾರ್ಯುಪ್ತಂ ಪದ್ಮಕೋಶಮಿವಾಂಬುಭಿಃ ॥ ೧೧ ॥

ಕಿಂ ನ ಪಶ್ಯತ ರಾಮಸ್ಯ ಮುಖಮಾತಾಮ್ರಲೋಚನಮ್ ।
ಮುಷ್ಟಿಕಂ ಪ್ರತಿ ಸಾಮರ್ಷಂ ಹಾಸಸಂರಂಭಶೋಭಿತಮ್ ॥ ೧೨ ॥

ಪುಣ್ಯಾ ಬತ ವ್ರಜಭುವೋ ಯದಯಂ ನೃಲಿಂಗ-
ಗೂಢಃ ಪುರಾಣಪುರುಷೋ ವನಚಿತ್ರಮಾಲ್ಯಃ ।
ಗಾಃ ಪಾಲಯನ್ ಸಹಬಲಃ ಕ್ವಣಯಂಶ್ಚ ವೇಣುಂ
ವಿಕ್ರೀಡಯಾಂಚತಿ ಗಿರಿತ್ರರಮಾರ್ಚಿತಾಂಘ್ರಿಃ ॥ ೧೩ ॥

ಗೋಪ್ಯಸ್ತಪಃ ಕಿಮಚರನ್ ಯದಮುಷ್ಯ ರೂಪಂ
ಲಾವಣ್ಯಸಾರಮಸಮೋರ್ಧ್ವಮನನ್ಯಸಿದ್ಧಮ್ ।
ದೃಗ್ಭಿಃ ಪಿಬಂತ್ಯನುಸವಾಭಿನವಂ ದುರಾಪ-
ಮೇಕಾಂತಧಾಮ ಯಶಸಃ ಶ್ರಿಯ ಐಶ್ವರಸ್ಯ ॥ ೧೪ ॥

ಇಲ್ಲಿ ಸೇರಿದ ಎಲ್ಲರಿಗೂ, ನೋಡಿದವರೆಲ್ಲರಿಗೂ ಧರ್ಮೋಲ್ಲಂಘನೆಯ ಪಾಪ ತಟ್ಟುವುದು ಖಂಡಿತ. ಸಖಿಯರೇ! ಈಗ ನಾವು ಇಲ್ಲಿಂದ ಹೋಗುವುದೇ ಯುಕ್ತವಾಗಿದೆ. ಅಧರ್ಮದ ಪ್ರಧಾನತೆ ಇರುವಲ್ಲಿ ಎಂದೂ ಇರಬಾರದೆಂಬುದು ಶಾಸ್ತ್ರದ ನಿಯಮವಾಗಿದೆ. ॥ ೯ ॥ ನೋಡಿ, ಬುದ್ಧಿವಂತರಾದವರು ಸಭಾಸದರ ದೋಷಗಳನ್ನು ತಿಳಿದು-ತಿಳಿದು ಆ ಸಭೆಯಲ್ಲಿ ಹೋಗಿ ಕುಳಿತಿರಬಾರದು ಎಂದು ಶಾಸ್ತ್ರ ಹೇಳುತ್ತದೆ. ಏಕೆಂದರೆ, ಅಲ್ಲಿಗೆ ಹೋಗಿ ಆ ಅವಗುಣಗಳನ್ನು ಹೇಳುವುದು, ಸುಮ್ಮನೆ ಇರುವುದು, ಅಥವಾ ನಾನು ಬಲ್ಲವನಲ್ಲ ಎಂದು ಹೇಳುವುದು. ಈ ಮೂರು ವಿಷಯಗಳು ಮನುಷ್ಯನನ್ನು ದೋಷಭಾಗಿಯಾಗಿಸುತ್ತವೆ. ॥ ೧೦ ॥ ಸಖಿಯರೇ! ಶತ್ರುವಿನ ಸುತ್ತಲೂ ಸುತ್ತುತ್ತಿರುವ ಶ್ರೀಕೃಷ್ಣನ ಮುಖಕಮಲವನ್ನಾದರೂ ನೋಡಿರಿ. ಕಾಳಗದ ಆಯಾಸದಿಂದಾಗಿ ತಾವರೆಯ ಎಲೆಯ ಮೇಲಿನ ನೀರಿನ ಬಿಂದುಗಳಂತೆ ಬೆವರಿನ ಬಿಂದುಗಳು ಅವರ ಮುಖದ ಮೇಲೆ ಕಂಗೊಳಿಸುತ್ತಿವೆ. ॥ ೧೧ ॥ ಸಖಿಯರೇ! ಬಲರಾಮನ ಮುಖವನ್ನಾದರೂ ನೋಡುತ್ತಿರುವೆಯಲ್ಲ! ಮುಷ್ಟಿಕನ ಮೇಲಿನ ಕೋಪದಿಂದಾಗಿ ಅವನ ಕಣ್ಣುಗಳು ತಾಮ್ರದಂತೆ ಕೆಂಪಾಗಿವೆ. ಹೀಗಿದ್ದರೂ ಅವನ ಹುಸಿನಗೆಯಿಂದಾಗಿ ಅವನ ಮುಖವು ಅತ್ಯಂತ ಶೋಭಾಯಮಾನವಾಗಿ ಕಾಣುತ್ತದೆ. ॥ ೧೨ ॥ ಗೆಳತಿಯರೇ! ನಿಜವಾಗಿ ಹೇಳುವುದಾದರೆ ವ್ರಜಭೂಮಿಯು ಪರಮಪವಿತ್ರವೂ, ಧನ್ಯತಮವೂ ಆಗಿದೆ. ಏಕೆಂದರೆ, ಅಲ್ಲಿಯೇ ಈ ಪುರುಷೋತ್ತಮರು ಮನುಷ್ಯ ವೇಷದಲ್ಲಿ ಅಡಗಿಕೊಂಡಿರುವರು. ಸಾಕ್ಷಾತ್ ಭಗವಾನ್ ಶಂಕರ ಮತ್ತು ಲಕ್ಷ್ಮೀದೇವಿಯೂ ಯಾರ ಚರಣಗಳನ್ನು ಪೂಜಿಸುತ್ತಿರುವರೋ ಆ ಪ್ರಭುವೇ ಅಲ್ಲಿ ಚಿತ್ರವಿಚಿತ್ರವಾದ ಕಾಡು ಪುಷ್ಪಗಳ ಮಾಲೆಯನ್ನು ಧರಿಸಿಕೊಂಡು ಬಲರಾಮನೊಂದಿಗೆ ಕೊಳಲನ್ನೂದುತ್ತಾ ಹಸುಗಳನ್ನು ಮೇಯಿಸುತ್ತಾ ಬಗೆ-ಬಗೆಯ ಆಟಗಳನ್ನಾಡುತ್ತಾ ಆನಂದದಿಂದ ವಿಹರಿಸುತ್ತಿದ್ದಾನೆ. ॥ ೧೩ ॥ ಸಖೀಯರೇ! ಎರಡು ಕಣ್ಣುಗಳಿಂದಲೂ ನಿತ್ಯನಿರಂತರವಾಗಿ ಶ್ರೀಕೃಷ್ಣನ ರೂಪವೆಂಬ ಮಧುವನ್ನು ಪಾನಮಾಡುತ್ತಿರುವ ಆ ಗೋಪಿಯರು ಎಂತಹ ತಪಸ್ಸನ್ನು ಮಾಡಿದ್ದರೋ ತಿಳಿಯದು. ಅವನ ರೂಪವೆಂಬುದು ಲಾವಣ್ಯದ ಸಾರವಾಗಿದೆ. ಪ್ರಪಂಚದಲ್ಲಿ ಅಥವಾ ಇದರ ಹೊರಗೆ ಯಾರ ರೂಪವೂ ಇವನಿಗೆ ಸಮಾನವಾಗಲಾರದು. ಹೀಗಿರುವಾಗ ಹೆಚ್ಚಿಗೆ ಹೇಗಿದ್ದೀತು? ಅವನ ದಿವ್ಯ ರೂಪವು ವಸ್ತ್ರಾಭರಣಗಳಿಂದಾಗಲೀ, ಅಂಗರಾಗಗಳಿಂದಾಗಲೀ ಸಿದ್ಧವಾದುದಲ್ಲ, ಸ್ವಯಂ ಸಿದ್ಧವಾದುದು. ಅಂತಹ ಚಿತ್ತಚೋರನಾದ ರೂಪವನ್ನು ನೋಡುತ್ತಿದ್ದರೆ ಎಂದಿಗೂ ತೃಪ್ತಿಯೇ ಉಂಟಾಗುವುದಿಲ್ಲ. ಏಕೆಂದರೆ, ಇದು ಪ್ರತಿಕ್ಷಣವೂ ಹೊಸದಾಗಿಯೇ ಇರುತ್ತದೆ, ನಿತ್ಯ ನೂತನವಾಗಿದೆ. ಸಮಗ್ರ ಯಶ, ಸೌಂದರ್ಯ ಮತ್ತು ಐಶ್ವರ್ಯ ಇವುಗಳು ಇವನನ್ನೇ ಆಶ್ರಿತವಾಗಿರುತ್ತವೆ. ಆದರೆ ಇವನ ದರ್ಶನವಾದರೋ ಇತರರಿಗೆ ದುರ್ಲಭವೇ ಆಗಿದೆ. ಗೋಪಿಯರ ಭಾಗ್ಯದಿಂದಲೇ ಅವರಿಗೆ ಸರ್ವದಾ ಲಭ್ಯವಾಗಿದೆ. ॥ ೧೪ ॥

ಯಾ ದೋಹನೇಽವಹನನೇ ಮಥನೋಪಲೇಪ-
ಪ್ರೇಂಖೇಂಖನಾರ್ಭರುದಿತೋಕ್ಷಣಮಾರ್ಜನಾದೌ ।
ಗಾಯಂತಿ ಚೈನಮನುರಕ್ತಧಿಯೋಽಶ್ರುಕಂಠ್ಯೋ
ಧನ್ಯಾ ವ್ರಜಸ್ತ್ರಿಯ ಉರುಕ್ರಮಚಿತ್ತಯಾನಾಃ ॥ ೧೫ ॥

ಪ್ರಾತರ್ವ್ರಜಾದ್ವ್ರಜತ ಆವಿಶತಶ್ಚ ಸಾಯಂ
ಗೋಭಿಃ ಸಮಂ ಕ್ವಣಯತೋಽಸ್ಯ ನಿಶಮ್ಯ ವೇಣುಮ್ ।
ನಿರ್ಗಮ್ಯ ತೂರ್ಣಮಬಲಾಃ ಪಥಿ ಭೂರಿಪುಣ್ಯಾಃ
ಪಶ್ಯಂತಿ ಸಸ್ಮಿತಮುಖಂ ಸದಯಾವಲೋಕಮ್ ॥ ೧೬ ॥

ಏವಂ ಪ್ರಭಾಷಮಾಣಾಸು ಸ್ತ್ರೀಷು ಯೋಗೇಶ್ವರೋ ಹರಿಃ ।
ಶತ್ರುಂ ಹಂತುಂ ಮನಶ್ಚಕ್ರೇ ಭಗವಾನ್ ಭರತರ್ಷಭ ॥ ೧೭ ॥

ಸಭಯಾಃ ಸ್ತ್ರೀಗಿರಃ ಶ್ರುತ್ವಾ ಪುತ್ರಸ್ನೇಹಶುಚಾತುರೌ ।
ಪಿತರಾವನ್ವತಪ್ಯೇತಾಂ ಪುತ್ರಯೋರಬುಧೌ ಬಲಮ್ ॥ ೧೮ ॥

ತೈಸ್ತೈರ್ನಿಯುದ್ಧವಿಧಿಭಿರ್ವಿವಿಧೈರಚ್ಯುತೇತರೌ ।
ಯುಯುಧಾತೇ ಯಥಾನ್ಯೋನ್ಯಂ ತಥೈವ ಬಲಮುಷ್ಟಿಕೌ ॥ ೧೯ ॥

ಭಗವದ್ಗಾತ್ರನಿಷ್ಪಾತೈರ್ವಜ್ರನಿಷ್ಪೇಷನಿಷ್ಠುರೈಃ ।
ಚಾಣೂರೋ ಭಜ್ಯಮಾನಾಂಗೋ ಮುಹುರ್ಗ್ಲಾನಿಮವಾಪ ಹ ॥ ೨೦ ॥

ಸ ಶ್ಯೇನವೇಗ ಉತ್ಪತ್ಯ ಮುಷ್ಟೀಕೃತ್ಯ ಕರಾವುಭೌ ।
ಭಗವಂತಂ ವಾಸುದೇವಂ ಕ್ರುದ್ಧೋ ವಕ್ಷಸ್ಯಬಾಧತ ॥ ೨೧ ॥

ಸಖಿಯರೇ! ವ್ರಜದ ಗೋಪಿಯರು ಎಂತಹ ಧನ್ಯರು! ನಿರಂತರವಾಗಿ ಶ್ರೀಕೃಷ್ಣನಲ್ಲಿಯೇ ಚಿತ್ತವು ನೆಟ್ಟುಹೋದ ಕಾರಣ – ಹಸುಗಳನ್ನು ಕರೆಯುವಾಗ, ಭತ್ತವನ್ನು ಕುಟ್ಟುವಾಗ, ಮೊಸರು ಕಡೆಯುವಾಗ, ಮನೆಯನ್ನು ಸಾರಿಸುವಾಗ, ತೊಟ್ಟಿಲನ್ನು ತೂಗುವಾಗ, ಅಳುತ್ತಿರುವ ಮಕ್ಕಳನ್ನು ಸಮಾಧಾನಪಡಿಸುವಾಗ, ಮಕ್ಕಳಿಗೆ ನೀರೆರೆಯುವಾಗ, ನೀರನ್ನು ಚುಮುಕಿಸಿ ಗುಡಿಸುವಾಗ – ಹೀಗೆ ಯಾವುದೇ ಕೆಲಸ ಮಾಡುತ್ತಿದ್ದರೂ ಶ್ರೀಕೃಷ್ಣನನ್ನೇ ಹೃತ್ಕಮಲದಲ್ಲಿ ನೆಲೆಗೊಳಿಸಿಕೊಂಡು ಆನಂದಾಶ್ರುವನ್ನು ಸುರಿಸುತ್ತಾ ಅವನ ಲೀಲಾ ಗುಣಗಳನ್ನು ಗಾನ ಮಾಡುತ್ತಾ ಮೈಮರೆಯುವರು. ॥ ೧೫ ॥ ಸಖಿಯರೇ! ಶ್ರೀಕೃಷ್ಣನು ಬೆಳಗಾಗುತ್ತಲೇ ಹಸುಗಳನ್ನು ಹೊಡೆದುಕೊಂಡು ಕಾಡಿಗೆ ಹೋಗುವಾಗ, ಸಾಯಂಕಾಲ ವ್ರಜಕ್ಕೆ ಹಿಂದಿರುಗುವಾಗ ಕೊಳಲನ್ನು ನುಡಿಸುತ್ತಾ ಇರುತ್ತಾನೆ. ಶ್ರೀಕೃಷ್ಣನ ಮುರಳಿಯ ಧ್ವನಿಯನ್ನು ಕೇಳುತ್ತಲೇ ಮೈಮರೆಯುವ ಗೋಪಿಯರು ಮಾಡುತ್ತಿದ್ದ ಕೆಲಸವನ್ನು ಅಷ್ಟಕ್ಕೆ ನಿಲ್ಲಿಸಿ, ಮುರಳೀಧರನ ಕಿರುನಗೆಯನ್ನೂ, ಕುಡಿನೋಟವನ್ನೂ ನೋಡುವುದಕ್ಕಾಗಿ ಬೀದಿಗೆ ಓಡಿಬರುವರು. ಹಾದಿಯ ಇಕ್ಕೆಡೆಯಲ್ಲೂ ನಿಂತು ಜಗದಾನಂದ ಕಂದನ ಮುಖಾರವಿಂದವನ್ನು ನೋಡಿ ಆನಂದತುಂದಿಲರಾಗುತ್ತಾರೆ. ನಿಶ್ಚಯವಾಗಿಯೂ ಗೋಪಿಯರು ಮಹಾಪುಣ್ಯವತಿಯರೇ ಆಗಿದ್ದಾರೆ. ॥ ೧೬ ॥

ಭರತವಂಶ ಶಿರೋಮಣಿಯೇ! ಮಥುರಾಪಟ್ಟಣದ ಸ್ತ್ರೀಯರು ಗುಂಪು-ಗುಂಪಾಗಿ ಹೀಗೆ ಮಾತನಾಡಿಕೊಳ್ಳುತ್ತಿದ್ದಾಗ ಯೋಗೇಶ್ವರನಾದ ಭಗವಾನ್ ಶ್ರೀಕೃಷ್ಣನು ಶತ್ರುವನ್ನು ಸಂಹರಿಸಲು ಮನಮಾಡಿದನು. ॥ ೧೭ ॥ ಸ್ತ್ರೀಯರ ಭಯದಿಂದ ಕೂಡಿದ ಈ ಮಾತುಗಳನ್ನು ಪಕ್ಕದಲ್ಲಿಯೇ ಸೆರೆಮನೆಯಲ್ಲಿದ್ದ ದೇವಕೀ-ವಸುದೇವರೂ ಕೇಳಿಸಿಕೊಂಡರು. ಪುತ್ರಸ್ನೇಹದಿಂದ ಅವರು ಶೋಕದಿಂದ ವಿಹ್ವಲರಾದರು. ಅವರ ಹೃದಯದಲ್ಲಿ ಅತ್ಯಂತ ಪೀಡೆಯುಂಟಾಯಿತು. ಏಕೆಂದರೆ, ಅವರು ತಮ್ಮ ಮಕ್ಕಳಾದ ಬಲರಾಮ-ಶ್ರೀಕೃಷ್ಣರ ಬಲ ಪರಾಕ್ರಮವನ್ನು ತಿಳಿದವರಾಗಿರಲಿಲ್ಲ. ॥ ೧೮ ॥ ಭಗವಾನ್ ಶ್ರೀಕೃಷ್ಣ ಮತ್ತು ಚಾಣೂರ ಇಬ್ಬರೂ ಯಾವ ರೀತಿಯಿಂದ ಮಲ್ಲಯುದ್ಧದ ನಿಯಮಗಳನ್ನು ಅನುಸರಿಸಿ ಕಾದಾಡುತ್ತಿದ್ದರೋ, ಹಾಗೆಯೇ ಬಲರಾಮ ಮುಷ್ಟಿಕರೂ ಕಾಳಗವಾಡುತ್ತಿದ್ದರು. ॥ ೧೯ ॥ ಶ್ರೀಕೃಷ್ಣನ ಅಂಗಾಂಗಗಳೆಲ್ಲವೂ ವಜ್ರಕ್ಕಿಂತಲೂ ಕಠಿಣವಾಗಿದ್ದವು. ಅವುಗಳ ಪ್ರಹಾರದಿಂದ ಚಾಣೂರನ ನರಗಳೆಲ್ಲ ಸಡಿಲವಾದುವು. ಯಾತನೆಯನ್ನು ಸಹಿಸಲಾರದೆ ಶರೀರದ ಸಂದುಗಳೆಲ್ಲ ಕಳಚಿ ಹೋಗುವಂತೆ ಅವನಿಗೆ ಅನಿಸಿತು. ಅವನು ಆಯಾಸಗೊಂಡಿದ್ದನು. ॥ ೨೦ ॥ ಆಗ ಅವನು ಅತ್ಯಂತ ಕ್ರುದ್ಧನಾಗಿ ಗಿಡುಗಪಕ್ಷಿಯಂತೆ ಎಗರಿ ಎರಡೂ ಮುಷ್ಟಿಗಳನ್ನು ಬಿಗಿದು ಭಗವಾನ್ ಶ್ರೀಕೃಷ್ಣನ ವಕ್ಷಸ್ಥಳದಲ್ಲಿ ಬಲವಾಗಿ ಪ್ರಹರಿಸಿದನು. ॥ ೨೧ ॥ ಆದರೆ ಆ ಪ್ರಹಾರದಿಂದ ಭಗವಂತನು ಸ್ವಲ್ಪವೂ ವಿಚಲಿತನಾಗಲಿಲ್ಲ. ಹೂವಿನ ಹಾರದಿಂದ ಆನೆಯನ್ನು ಹೊಡೆದಂತೆ ಆಯಿತು. ಅವನು ಚಾಣೂರನ ಎರಡೂ ಭುಜಗಳನ್ನು ಹಿಡಿದು, ಅವನನ್ನು ಅಂತರಿಕ್ಷದಲ್ಲಿ ವೇಗವಾಗಿ

ನಾಚಲತ್ತತ್ಪ್ರಹಾರೇಣ ಮಾಲಾಹತ ಇವ ದ್ವಿಪಃ ।
ಬಾಹ್ವೋರ್ನಿಗೃಹ್ಯ ಚಾಣೂರಂ ಬಹುಶೋ ಭ್ರಾಮಯನ್ ಹರಿಃ
॥ ೨೨ ॥

ಭೂಪೃಷ್ಠೇ ಪೋಥಯಾಮಾಸ ತರಸಾ ಕ್ಷೀಣಜೀವಿತಮ್ ।
ವಿಸ್ರಸ್ತಾಕಲ್ಪಕೇಶಸ್ರಗಿಂದ್ರಧ್ವಜ ಇವಾಪತತ್
॥ ೨೩ ॥

ತಥೈವ ಮುಷ್ಟಿಕಃ ಪೂರ್ವಂ ಸ್ವಮುಷ್ಟ್ಯಾಭಿಹತೇನ ವೈ ।
ಬಲಭದ್ರೇಣ ಬಲಿನಾ ತಲೇನಾಭಿಹತೋ ಭೃಶಮ್
॥ ೨೪ ॥

ಪ್ರವೇಪಿತಃ ಸ ರುಧಿರಮುದ್ವಮನ್ ಮುಖತೋಽರ್ದಿತಃ ।
ವ್ಯಸುಃ ಪಪಾತೋರ್ವ್ಯುಪಸ್ಥೇ ವಾತಾಹತ ಇವಾಂಘ್ರಿಪಃ
॥ ೨೫ ॥

ತತಃ ಕೂಟಮನುಪ್ರಾಪ್ತಂ ರಾಮಃ ಪ್ರಹರತಾಂ ವರಃ ।
ಅವಧೀಲ್ಲೀಲಯಾ ರಾಜನ್ ಸಾವಜ್ಞಂ ವಾಮಮುಷ್ಟಿನಾ
॥ ೨೬ ॥

ತರ್ಹ್ಯೇವ ಹಿ ಶಲಃ ಕೃಷ್ಣಪದಾಪಹತಶೀರ್ಷಕಃ ।
ದ್ವಿಧಾ ವಿದೀರ್ಣಸ್ತೋಶಲಕ ಉಭಾವಪಿ ನಿಪೇತತುಃ
॥ ೨೭ ॥

ಚಾಣೂರೇ ಮುಷ್ಟಿಕೇ ಕೂಟೇ ಶಲೇ ತೋಶಲಕೇ ಹತೇ ।
ಶೇಷಾಃ ಪ್ರದುದ್ರುವುರ್ಮಲ್ಲಾಃ ಸರ್ವೇ ಪ್ರಾಣಪರೀಪ್ಸವಃ
॥ ೨೮ ॥

ಗೋಪಾನ್ ವಯಸ್ಯಾನಾಕೃಷ್ಯ ತೈಃ ಸಂಸೃಜ್ಯ ವಿಜಹ್ರತುಃ ।
ವಾದ್ಯಮಾನೇಷು ತೂರ್ಯೇಷು ವಲ್ಗಂತೌ ರುತನೂಪುರೌ
॥ ೨೯ ॥

ಜನಾಃ ಪ್ರಜಹೃಷುಃ ಸರ್ವೇ ಕರ್ಮಣಾ ರಾಮಕೃಷ್ಣಯೋಃ ।
ಋತೇ ಕಂಸಂ ವಿಪ್ರಮುಖ್ಯಾಃ ಸಾಧವಃ ಸಾಧು ಸಾಧ್ವಿತಿ
॥ ೩೦ ॥

ಹತೇಷು ಮಲ್ಲವರ್ಯೇಷು ವಿದ್ರುತೇಷು ಚ ಭೋಜರಾಟ್ ।
ನ್ಯವಾರಯತ್ಸ್ವತೂರ್ಯಾಣಿ ವಾಕ್ಯಂ ಚೇದಮುವಾಚ ಹ
॥ ೩೧ ॥

ನಿಃಸಾರಯತ ದುರ್ವೃತ್ತೌ ವಸುದೇವಾತ್ಮಜೌ ಪುರಾತ್ ।
ಧನಂ ಹರತ ಗೋಪಾನಾಂ ನಂದಂ ಬಧ್ನೀತ ದುರ್ಮತಿಮ್
॥ ೩೨ ॥

ಗಿರಿ-ಗಿರನೆ ತಿರುಗಿಸಿ ನೆಲಕ್ಕೆ ಅಪ್ಪಳಿಸಿಬಿಟ್ಟನು. ಪರೀಕ್ಷಿತನೇ! ಚಾಣೂರನ ಪ್ರಾಣಗಳಾದರೋ ತಿರುಗಿಸುವಾಗಲೇ ಹೊರಟು ಹೋಗಿದ್ದವು. ಅವನ ವೇಷಭೂಷಣಗಳೆಲ್ಲ ಅಸ್ತವ್ಯಸ್ತವಾಗಿ, ಕೆದರಿದ ಕೂದಲುಗಳಿಂದ ಇಂದ್ರಧ್ವಜ (ಇಂದ್ರನ ಪೂಜೆಗಾಗಿ ನಿಲ್ಲಿಸಿದ್ದ ದೊಡ್ಡ ಬಾವುಟ)ದಂತೆ ಭೂಮಿಗೆ ಬಿದ್ದನು.॥೨೨-೨೩॥ ಹೀಗೆಯೇ ಮುಷ್ಟಿಕನೂ ಬಲರಾಮನಿಗೆ ಒಂದು ಗುದ್ದು ಗುದ್ದಿದನು. ಆಗ ಮಹಾಬಲಿಯಾದ ಬಲರಾಮನು ಅವನಿಗೆ ಜೋರಾಗಿ ಒಂದು ಏಟನ್ನು ಕೊಟ್ಟನು ॥ ೨೪ ॥ ಆ ಏಟಿನಿಂದ ಮುಷ್ಟಿಕನು ನಡುಗುತ್ತಾ ಬಿರುಗಾಳಿಗೆ ಉರುಳುವ ಮರದಂತೆ ಅತ್ಯಂತ ಪೀಡಿತನಾಗಿ ರಕ್ತವನ್ನು ಕಾರುತ್ತಾ, ಪ್ರಾಣಹೀನನಾಗಿ ನೆಲಕ್ಕೆ ಕುಸಿದು ಬಿದ್ದನು. ॥ ೨೫ ॥ ಎಲೈ ರಾಜನೇ! ಅನಂತರ ಕೂಟನೆಂಬ ಜಟ್ಟಿಯು ಯೋಧರಲ್ಲಿ ಶ್ರೇಷ್ಠನಾದ ಭಗವಾನ್ ಬಲರಾಮನನ್ನು ಇದಿರಿಸಲೋಸುಗ ಬರುತ್ತಲೇ ಕೇವಲ ವಿನೋದದಿಂದಲೇ ಬಲರಾಮನು ನಿರ್ಲಕ್ಷ್ಯಪೂರ್ವಕವಾಗಿ ಎಡಗೈಯ ಮುಷ್ಟಿಯಿಂದ ಅವನನ್ನು ಕೊಂದು ಹಾಕಿದನು. ॥ ೨೬ ॥ ಅದೇ ಸಮಯದಲ್ಲಿ ಭಗವಾನ್ ಶ್ರೀಕೃಷ್ಣನು ಕಾಲಿನ ಒದೆಯಿಂದಲೇ ಶಲನೆಂಬ ಜಟ್ಟಿಯ ರುಂಡ-ಮುಂಡಗಳನ್ನು ಬೇರ್ಪಡಿಸಿದನು. ತೋಶಲನೆಂಬ ಜಟ್ಟಿಯನ್ನು ಹುಲ್ಲನ್ನು ಸಿಗಿದು ಹಾಕುವಂತೆ ಸೀಳಿ ಎರಡು ತುಂಡುಗಳಾಗಿಸಿದನು. ಹೀಗೆ ಇಬ್ಬರೂ ಮಡಿದು ಧರಾಶಾಯಿಯಾದರು. ॥ ೨೭ ॥ ಚಾಣೂರ, ಮುಷ್ಟಿಕ, ಕೂಟ, ಶಲ, ತೋಶಲ ಎಂಬ ಐದುಮಂದಿ ಜಟ್ಟಿಗಳು ಸತ್ತುಹೋದಾಗ ಉಳಿದ ಜಟ್ಟಿಗಳು ಪ್ರಾಣಗಳನ್ನು ಉಳಿಸಿಕೊಳ್ಳಲೋಸುಗ ಹಾಗೆ ಓಡಿ ಹೋದರು. ॥ ೨೮ ॥ ಅವರೆಲ್ಲರೂ ಓಡಿಹೋದ ಬಳಿಕ ಭಗವಾನ್ ಶ್ರೀಕೃಷ್ಣ ಮತ್ತು ಬಲರಾಮರು ತಮ್ಮ ಸಮವಯಸ್ಕ ಗೋಪಬಾಲಕರನ್ನು ಎಳೆದೆಳೆದು ತಂದು ಅವರೊಂದಿಗೆ ಕುಣಿಯುತ್ತಾ, ಕುಣಿ-ಕುಣಿದು ಭೇರಿ-ನಗಾರಿಗಳ ಧ್ವನಿಯೊಂದಿಗೆ ನೂಪುರಗಳ ನಿನಾದವನ್ನು ಸೇರಿಸುತ್ತಾ ಮಲ್ಲ ಕ್ರೀಡೆಯನ್ನಾಡತೊಡಗಿದರು. ॥ ೨೯ ॥

ಭಗವಾನ್ ಶ್ರೀಕೃಷ್ಣ ಮತ್ತು ಬಲರಾಮರ ಈ ಅದ್ಭುತ ಲೀಲೆಯನ್ನು ನೋಡಿದ ಪ್ರೇಕ್ಷಕರಿಗೆಲ್ಲ ಅತ್ಯಂತ ಆನಂದವಾಯಿತು. ಶ್ರೇಷ್ಠ ಬ್ರಾಹ್ಮಣರೂ, ಸತ್ಪುರುಷರೂ ಸಾಧು! ಸಾಧು! ಭಲೇ! ಎಂದು ಹೇಳುತ್ತಾ ಪ್ರಶಂಸಿಸತೊಡಗಿದರು. ಆದರೆ ಕಂಸನಿಗೆ ಮಾತ್ರ ಇದರಿಂದ ಅತೀವ ದುಃಖವಾಗಿ ಕೆರಳಿ ಹೋದನು. ॥೩೦॥ ಅವನ ಮುಖ್ಯ-ಮುಖ್ಯರಾದ ಮಲ್ಲರು ಸತ್ತುಹೋಗಿ, ಉಳಿದವರೆಲ್ಲರೂ ಓಡಿಹೋದಾಗ ಭೋಜರಾಜನಾದ ಕಂಸನು ವಾದ್ಯವಾದನಗಳನ್ನು ನಿಲ್ಲಿಸಿಬಿಟ್ಟನು. ಕೋಪೋದ್ರಿಕ್ತನಾಗಿ ತನ್ನ ಸೇವಕರಿಗೆ ಹೀಗೆ ಆಜ್ಞಾಪಿಸಿದನು. ॥ ೩೧ ॥ ಕೆಟ್ಟನಡತೆಯುಳ್ಳ ವಸುದೇವನ ಈ ಇಬ್ಬರೂ ಮಕ್ಕಳನ್ನು ನಗರದಿಂದ ಹೊರಗಟ್ಟಿರಿ. ಈ ಗೋಪರಲ್ಲಿ ಇರುವ ಹಣವೆಲ್ಲವನ್ನೂ ಕಸಿದುಕೊಳ್ಳಿರಿ. ದುರ್ಬುದ್ಧಿಯಾದ ನಂದನನ್ನು ಸೆರೆಹಿಡಿಯಿರಿ. ॥ ೩೨ ॥

ವಸುದೇವಸ್ತು ದುರ್ಮೇಧಾ ಹನ್ಯತಾಮಾಶ್ವಸತ್ತಮಃ ।
ಉಗ್ರಸೇನಃ ಪಿತಾ ಚಾಪಿ ಸಾನುಗಃ ಪರಪಕ್ಷಗಃ
॥ ೩೩ ॥

ಏವಂ ವಿಕತ್ಥಮಾನೇ ವೈ ಕಂಸೇ ಪ್ರಕುಪಿತೋಽವ್ಯಯಃ ।
ಲಘಿಮ್ನೋತ್ಪತ್ಯ ತರಸಾ ಮಂಚಮುತ್ತುಂಗಮಾರುಹತ್
॥ ೩೪ ॥

ತಮಾವಿಶಂತಮಾಲೋಕ್ಯ ಮೃತ್ಯುಮಾತ್ಮನ ಆಸನಾತ್ ।
ಮನಸ್ವೀ ಸಹಸೋತ್ಥಾಯ ಜಗೃಹೇ ಸೋಽಸಿಚರ್ಮಣೀ
॥ ೩೫ ॥

ತಂ ಖಡ್ಗಪಾಣಿಂ ವಿಚರಂತಮಾಶು
ಶ್ಯೇನಂ ಯಥಾ ದಕ್ಷಿಣಸವ್ಯಮಂಬರೇ ।
ಸಮಗ್ರಹೀದ್ದುರ್ವಿಷಹೋಗ್ರತೇಜಾ
ಯಥೋರಗಂ ತಾರ್ಕ್ಷ್ಯಸುತಃ ಪ್ರಸಹ್ಯ ॥ ೩೬ ॥

ಪ್ರಗೃಹ್ಯ ಕೇಶೇಷು ಚಲತ್ಕಿರೀಟಂ
ನಿಪಾತ್ಯ ರಂಗೋಪರಿ ತುಂಗಮಂಚಾತ್ ।
ತಸ್ಯೋಪರಿಷ್ಟಾತ್ ಸ್ವಯಮಬ್ಜನಾಭಃ
ಪಪಾತ ವಿಶ್ವಾಶ್ರಯ ಆತ್ಮತಂತ್ರಃ ॥ ೩೭ ॥

ತಂ ಸಂಪರೇತಂ ವಿಚಕರ್ಷ ಭೂಮೌ
ಹರಿರ್ಯಥೇಭಂ ಜಗತೋ ವಿಪಶ್ಯತಃ ।
ಹಾಹೇತಿ ಶಬ್ದಃ ಸುಮಹಾಂಸ್ತದಾಭೂ-
ದುದೀರಿತಃ ಸರ್ವಜನೈರ್ನರೇಂದ್ರ ॥ ೩೮ ॥

ಸ ನಿತ್ಯದೋದ್ವಿಗ್ನಧಿಯಾ ತಮೀಶ್ವರಂ
ಪಿಬನ್ ವದನ್ ವಾ ವಿಚರನ್ ಸ್ವಪನ್ ಶ್ವಸನ್ ।
ದದರ್ಶ ಚಕ್ರಾಯುಧಮಗ್ರತೋ ಯ-
ಸ್ತದೇವ ರೂಪಂ ದುರವಾಪಮಾಪ ॥ ೩೯ ॥

ತಸ್ಯಾನುಜಾ ಭ್ರಾತರೋಽಷ್ಟೌ ಕಂಕನ್ಯಗ್ರೋಧಕಾದಯಃ ।
ಅಭ್ಯಧಾವನ್ನಭಿಕ್ರುದ್ಧಾ ಭ್ರಾತುರ್ನಿರ್ವೇಶಕಾರಿಣಃ
॥ ೪೦ ॥

ತಥಾತಿರಭಸಾಂಸ್ತಾಂಸ್ತು ಸಂಯತ್ತಾನ್ ರೋಹಿಣೀಸುತಃ ।
ಅಹನ್ ಪರಿಘಮುದ್ಯಮ್ಯ ಪಶೂನಿವ ಮೃಗಾಧಿಪಃ
॥ ೪೧ ॥

ಬಹಳ ಅಯೋಗ್ಯನಾದ ಕೆಟ್ಟಬುದ್ಧಿಯುಳ್ಳ ವಸುದೇವನನ್ನು ಈಗಲೇ ಶೀಘ್ರವಾಗಿ ಕೊಂದುಹಾಕಿರಿ. ನನ್ನ ತಂದೆಯಾದರೂ ಶತ್ರುಪಕ್ಷ ಸೇರಿದವನಾದ್ದರಿಂದ ಅನುಯಾಯಿಗಳ ಸಹಿತ ಉಗ್ರಸೇನನನ್ನು ಮುಗಿಸಿಬಿಡಿರಿ. ॥ ೩೩ ॥ ಕಂಸನು ಹೀಗೆ ಬಡ-ಬಡಿಸುತ್ತಿರುವಾಗ ಅವಿನಾಶಿಯಾದ ಶ್ರೀಕೃಷ್ಣನು ಕುಪಿತನಾಗಿ ಅತ್ಯಂತ ವೇಗದಿಂದ ಛಂಗನೆ ಹಾರಿ ಕಂಸನು ಕುಳಿತಿದ್ದ ಎತ್ತರವಾದ ವೇದಿಕೆಯ ಮೇಲೆ ನಿಂತುಕೊಂಡನು. ॥ ೩೪ ॥ ತನ್ನ ಮೃತ್ಯುರೂಪನಾದ ಶ್ರೀಕೃಷ್ಣನು ತನ್ನ ಬಳಿಗೆ ಬಂದಿರುವುದನ್ನು ನೋಡಿದ ಮನಸ್ವೀಯಾದ ಕಂಸನು ಥಟ್ಟನೇ ಸಿಂಹಾಸನದಿಂದ ಎದ್ದು ಕತ್ತಿಗುರಾಣಿಗಳನ್ನು ಎತ್ತಿಕೊಂಡನು. ॥ ೩೫ ॥ ಕತ್ತಿಗುರಾಣಿಗಳನ್ನು ಹಿಡಿದಿದ್ದ ಕಂಸನು ಶ್ರೀಕೃಷ್ಣನನ್ನು ಪ್ರಹರಿಸಲು ವರಸೆಗಳಿಂದ ಖಡ್ಗವನ್ನು ಝಳಪಿಸುತ್ತಾ ಆಕಾಶದಲ್ಲಿ ಹಾರುವ ಗಿಡುಗನಂತೆ ಎಡಕ್ಕೂ ಬಲಕ್ಕೂ ನೆಗೆಯುತ್ತಿದ್ದನು. ಆದರೆ ಯಾರಿಂದಲೂ ಸಹಿಸಲಶಕ್ಯವಾದ ಭಯಂಕರವಾದ ತೇಜಸ್ಸಿನಿಂದ ಪ್ರಜ್ವಲಿಸುತ್ತಿದ್ದ ಶ್ರೀಕೃಷ್ಣನು ಗರುಡನು ಹಾವನ್ನು ಹಿಡಿಯುವಂತೆ ಖಡ್ಗಪಾಣಿಯಾದ ಕಂಸನನ್ನು ಬಲಪೂರ್ವಕವಾಗಿ ಹಿಡಿದುಕೊಂಡನು. ॥ ೩೬ ॥ ಹಿಡಿದಾಗಲೇ ಕಂಸನ ಕಿರೀಟವು ಬಿದ್ದುಹೋಯಿತು. ಶ್ರೀಕೃಷ್ಣನು ಅವನ ಮುಡಿಯನ್ನು ಹಿಡಿದೆಳೆದು ಎತ್ತರವಾದ ಮಂಚದಿಂದ ರಂಗಭೂಮಿಯ ಮೇಲೆ ಬೀಳಿಸಿದನು. ಮರುಕ್ಷಣದಲ್ಲೇ ವಿಶ್ವಕ್ಕೆ ಪರಮಾಶ್ರಯನಾದ, ಸರ್ವತಂತ್ರ ಸ್ವತಂತ್ರನಾದ ಭಗವಾನ್ ಶ್ರೀಕೃಷ್ಣನು ಅವನ ಮೇಲೆ ಛಂಗನೆ ಹಾರಿದನು. ॥ ೩೭ ॥ ಶ್ರೀಕೃಷ್ಣನು ಕಂಸನ ಮೇಲೆ ಬೀಳುತ್ತಲೇ ಅವನ ಪ್ರಾಣಪಕ್ಷಿಯು ಹಾರಿಹೋಯಿತು. ಸಿಂಹವು ಆನೆಯನ್ನು ಸೆಳೆದಾಡುವಂತೆ ಎಲ್ಲರೂ ನೋಡುತ್ತಿರುವಂತೆ ಶ್ರೀಕೃಷ್ಣನು ಕಂಸನ ಮೃತ ಶರೀರವನ್ನು ಸೆಳೆದಾಡಿದನು. ರಾಜೇಂದ್ರ! ಆ ಸಮಯದಲ್ಲಿ ಎಲ್ಲರ ಬಾಯಿಂದ ಅಯ್ಯೋ! ಅಯ್ಯೋ! ಎಂಬ ಗಟ್ಟಿಯಾದ ಧ್ವನಿಗಳು ಕೇಳಿಬರುತ್ತಿದ್ದವು. ॥ ೩೮ ॥ ಕಂಸನು ನಿರಂತರವಾಗಿ ಉದ್ವಿಗ್ನನಾಗಿ ಭಯದಿಂದ ಶ್ರೀಕೃಷ್ಣನನ್ನೇ ಚಿಂತಿಸುತ್ತಿದ್ದನು. ಅವನು ಉಂಡಾಗ ತಿಂದಾಗ, ನಡೆದಾಡುವಾಗ, ಮಾತನಾಡುವಾಗ, ಉಸಿರಾಡುವಾಗಲೂ ತನ್ನೆದುರಿಗೆ ಚಕ್ರಧಾರಿಯಾದ ಶ್ರೀಕೃಷ್ಣನನ್ನೇ ನೋಡುತ್ತಿದ್ದನು. ಈ ನಿತ್ಯನಿರಂತರ ಚಿಂತನೆಯ ಫಲವಾಗಿ ದೊಡ್ಡ-ದೊಡ್ಡ ತಪಸ್ವಿಗಳಾದ ಯೋಗಿಗಳಿಗೂ ಕಠಿಣವಾದ ಭಗವಂತನ ಸಾರೂಪ್ಯ ಮುಕ್ತಿಯು ಅವನಿಗೆ ಲಭಿಸಿತು. ॥ ೩೯ ॥

ಕಂಸನು ಅಸುನೀಗುತ್ತಲೇ ಅವನ ತಮ್ಮಂದಿರಾದ ಕಂಕ, ನ್ಯಗ್ರೋಧ ಮೊದಲಾದ ಎಂಟು ಜನರು ತಮ್ಮ ಅಣ್ಣನನ್ನು ಕೊಂದ ಸೇಡು ತೀರಿಸಿಕೊಳ್ಳಲು ಕ್ರೋಧೋನ್ಮತ್ತರಾಗಿ ಶ್ರೀಕೃಷ್ಣ ಬಲರಾಮರ ಕಡೆಗೆ ನುಗ್ಗಿ ಬಂದರು. ॥ ೪೦ ॥ ಕಂಸನ ಸೋದರರು ಅತ್ಯಂತ ವೇಗವಾಗಿ ಯುದ್ಧಕ್ಕೆ ಸಿದ್ಧರಾಗಿ ಓಡಿ ಬರುತ್ತಿರುವುದನ್ನು ನೋಡಿದ ಬಲರಾಮನು ಪರಿಘವನ್ನೆತ್ತಿಕೊಂಡು ಸಿಂಹವು ಪಶುಗಳನ್ನು ಕೊಂದು ಹಾಕುವಂತೆ ಕ್ಷಣಮಾತ್ರದಲ್ಲಿ ಅವರನ್ನು ಸಂಹರಿಸಿ ಬಿಟ್ಟನು. ॥ ೪೧ ॥

ನೇದುರ್ದುಂದುಭಯೋ ವ್ಯೋಮ್ನಿ ಬ್ರಹ್ಮೇಶಾದ್ಯಾ ವಿಭೂತಯಃ ।
ಪುಷ್ಪೈಃ ಕಿರಂತಸ್ತಂ ಪ್ರೀತಾಃ ಶಶಂಸುರ್ನನೃತುಃ ಸ್ತ್ರಿಯಃ ॥ ೪೨ ॥

ತೇಷಾಂ ಸ್ತ್ರಿಯೋ ಮಹಾರಾಜ ಸುಹೃನ್ಮರಣದುಃಖಿತಾಃ ।
ತತ್ರಾಭೀಯುರ್ವಿನಿಘ್ನಂತ್ಯಃ ಶೀರ್ಷಾಣ್ಯಶ್ರುವಿಲೋಚನಾಃ ॥ ೪೩ ॥

ಶಯಾನಾನ್ ವೀರಶಯ್ಯಾಯಾಂ ಪತೀನಾಲಿಂಗ್ಯ ಶೋಚತೀಃ ।
ವಿಲೇಪುಃ ಸುಸ್ವರಂ ನಾರ್ಯೋ ವಿಸೃಜಂತ್ಯೋ ಮುಹುಃ ಶುಚಃ ॥ ೪೪ ॥

ಹಾ ನಾಥ ಪ್ರಿಯ ಧರ್ಮಜ್ಞ ಕರುಣಾನಾಥವತ್ಸಲ ।
ತ್ವಯಾ ಹತೇನ ನಿಹತಾ ವಯಂ ತೇ ಸಗೃಹಪ್ರಜಾಃ ॥ ೪೫ ॥

ತ್ವಯಾ ವಿರಹಿತಾ ಪತ್ಯಾ ಪುರೀಯಂ ಪುರುಷರ್ಷಭ ।
ನ ಶೋಭತೇ ವಯಮಿವ ನಿವೃತ್ತೋತ್ಸವಮಂಗಲಾ ॥ ೪೬ ॥

ಅನಾಗಸಾಂ ತ್ವಂ ಭೂತಾನಾಂ ಕೃತವಾನ್ ದ್ರೋಹಮುಲ್ಬಣಮ್ ।
ತೇನೇಮಾಂ ಭೋ ದಶಾಂ ನೀತೋ ಭೂತಧ್ರುಕ್ ಕೋ ಲಭೇತ ಶಮ್ ॥ ೪೭ ॥

ಸರ್ವೇಷಾಮಿಹ ಭೂತಾನಾಮೇಷ ಹಿ ಪ್ರಭವಾಪ್ಯಯಃ ।
ಗೋಪ್ತಾ ಚ ತದವಧ್ಯಾಯೀ ನ ಕ್ವಚಿತ್ ಸುಖಮೇಧತೇ ॥ ೪೮ ॥

ಶ್ರೀಶುಕ ಉವಾಚ

ರಾಜಯೋಷಿತ ಆಶ್ವಾಸ್ಯ ಭಗವಾನ್ಲೋಕಭಾವನಃ ।
ಯಾಮಾಹುರ್ಲೌಕಿಕೀಂ ಸಂಸ್ಥಾಂ ಹತಾನಾಂ ಸಮಕಾರಯತ್ ॥ ೪೯ ॥

ಮಾತರಂ ಪಿತರಂ ಚೈವ ಮೋಚಯಿತ್ವಾಥ ಬಂಧನಾತ್ ।
ಕೃಷ್ಣರಾಮೌ ವವಂದಾತೇ ಶಿರಸಾಽಸ್ಪೃಶ್ಯ ಪಾದಯೋಃ ॥ ೫೦ ॥

ದೇವಕೀ ವಸುದೇವಶ್ಚ ವಿಜ್ಞಾಯ ಜಗದೀಶ್ವರೌ ।
ಕೃತಸಂವಂದನೌ ಪುತ್ರೌ ಸಸ್ವಜಾತೇ ನ ಶಂಕಿತೌ ॥ ೫೧ ॥

ಆ ಸಮಯದಲ್ಲಿ ಆಕಾಶದಲ್ಲಿ ದುಂದುಭಿಗಳು ಮೊಳಗಿದವು. ಭಗವದ್ವಿಭೂತಿಗಳಾದ ಬ್ರಹ್ಮ ರುದ್ರರೇ ಮೊದಲಾದ ದೇವತೆಗಳು ಆನಂದತುಂದಿಲರಾಗಿ ರಾಮ-ಕೃಷ್ಣರ ಮೇಲೆ ಹೂಗಳ ಮಳೆಯನ್ನು ಗರೆಯುತ್ತಾ ಸ್ತುತಿಸತೊಡಗಿದರು. ಅಪ್ಸರೆಯರು ನೃತ್ಯಮಾಡತೊಡಗಿದರು. ॥ ೪೨ ॥

ಪರೀಕ್ಷಿತಮಹಾರಾಜ! ಕಂಸನ ಮತ್ತು ಅವನ ಸಹೋದರರ ಮಡದಿಯರು ಮತ್ತು ಅವರ ನಿಕಟ ಸಂಬಂಧಿಗಳು ಕಂಸನ ಹಾಗೂ ಅವನ ಸಹೋದರರ ಮೃತ್ಯುವಿನಿಂದಾಗಿ ಅತ್ಯಂತ ದುಃಖಿತರಾದರು. ಅವರೆಲ್ಲರೂ ತಲೆಗಳನ್ನು ಚಚ್ಚಿಕೊಂಡು, ಕಣ್ಣೀರು ಸುರಿಸುತ್ತಾ ಅಲ್ಲಿಗೆ ಬಂದರು. ॥ ೪೩ ॥ ವೀರಶಯ್ಯೆಯಲ್ಲಿ ಮಲಗಿದ್ದ ತಮ್ಮ ಪತಿಗಳನ್ನು ಅಪ್ಪಿಕೊಂಡು ಅವರು ಶೋಕಗ್ರಸ್ತರಾಗಿ ಪದೇ-ಪದೇ ಕಣ್ಣೀರು ಸುರಿಸುತ್ತಾ, ಗಟ್ಟಿಯಾಗಿ ವಿಲಾಪಿಸತೊಡಗಿದರು. ॥ ೪೪ ॥ ಹೇ ನಾಥನೇ! ಪ್ರಿಯನೇ! ಧರ್ಮಜ್ಞನೇ! ಕರುಣಾಮಯನೇ! ಅನಾಥವತ್ಸಲನೇ! ನಿನ್ನ ಮೃತ್ಯುವಿನಿಂದಾಗಿ ನಾವೆಲ್ಲರೂ ಸತ್ತಂತೆಯೇ ಆದೆವು. ನಮ್ಮ ಮನೆಗಳು ಹಾಳಾಗಿ ಹೋದುವು. ನಮ್ಮ ಸಂತಾನಗಳು ಅನಾಥವಾದುವು. ॥ ೪೫ ॥ ಪುರುಷಶ್ರೇಷ್ಠನೇ! ಈ ಪಟ್ಟಣಕ್ಕೆ ನೀನೇ ಒಡೆಯನಾಗಿದ್ದೆ. ನಿನ್ನ ಅಗಲುವಿಕೆಯಿಂದ ನಮ್ಮಂತೆಯೇ ಈ ಪಟ್ಟಣವು ಶೋಭಿಸುತ್ತಿಲ್ಲ. ಇಲ್ಲಿ ಉತ್ಸವಗಳೂ, ಮಂಗಳಕಾರ್ಯಗಳೂ ನಿಂತು ಹೋಗಿವೆ. ॥ ೪೬ ॥ ಸ್ವಾಮಿಯೇ! ನೀನು ನಿರಪರಾಧಿಯಾದ ಪ್ರಾಣಿಗಳಿಗೆ ಘೋರವಾದ ದ್ರೋಹವನ್ನೆಸಗಿದೆ. ಅದರಿಂದಲೇ ನಿನಗೆ ಈ ದುರವಸ್ಥೆಯು ಪ್ರಾಪ್ತವಾಯಿತು. ಪ್ರಾಣಿಗಳಿಗೆ ದ್ರೋಹವನ್ನೆಸಗಿದ ಯಾರು ತಾನೇ ಸುಖವನ್ನು ಹೊಂದುವನು? ॥ ೪೭ ॥ ಈ ಭಗವಾನ್ ಶ್ರೀಕೃಷ್ಣನು ಜಗತ್ತಿನ ಸಮಸ್ತ ಪ್ರಾಣಿಗಳ ಉತ್ಪತ್ತಿ-ಪ್ರಳಯಕ್ಕೆ ಆಧಾರನಾಗಿದ್ದಾನೆ. ರಕ್ಷಕನೂ ಆಗಿದ್ದಾನೆ. ಇವನಿಗೆ ಕೆಡುಕನ್ನು ಬಯಸುವವನು, ತಿರಸ್ಕರಿಸುವವನು ಎಂದಿಗೂ ಸುಖಿಯಾಗಿರಲಾರನು. ॥ ೪೮ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ - ಪರೀಕ್ಷಿತನೇ! ಸಮಸ್ತ ಲೋಕಗಳಿಗೂ ಜೀವನದಾತೃವಾದ ಭಗವಂತನು ರಾಜಮಹಿಷಿಯರಿಗೆ ಧೈರ್ಯತುಂಬಿ, ಶಾಸ್ತ್ರೀಯ ನೀತಿಯಿಂದ ಮತ್ತೆ ಲೋಕರೀತಿಯಂತೆ ಮರಣಹೊಂದಿದವರ ಸಾಂಪರಾಯಿಕ ಕ್ರಿಯಾ-ಕರ್ಮಗಳನ್ನು ಮಾಡಿಸಿದನು. ॥ ೪೯ ॥ ಅನಂತರ ಭಗವಾನ್ ಶ್ರೀಕೃಷ್ಣ-ಬಲರಾಮರು ಸೆರೆಮನೆಗೆ ಹೋಗಿ ತಮ್ಮ ತಂದೆ-ತಾಯಿಯರನ್ನು ಬಂಧನದಿಂದ ಬಿಡುಗಡೆ ಮಾಡಿದರು ಹಾಗೂ ಅವರ ಪಾದಗಳಿಗೆ ಶಿರಸಾಷ್ಟಾಂಗ ನಮಸ್ಕಾರ ಮಾಡಿದರು. ॥ ೫೦ ॥ ಆದರೆ ತಮ್ಮ ಪುತ್ರರು ನಮಸ್ಕರಿಸಿದಾಗ ವಸುದೇವ-ದೇವಕಿಯರು ಅವರನ್ನು ಜಗದೀಶ್ವರರೆಂದು ತಿಳಿದು ಅವರನ್ನು ಆಲಿಂಗಿಸಿಕೊಳ್ಳಲಿಲ್ಲ. ಈ ಜಗದೀಶ್ವರರನ್ನು ನಾವು ಪುತ್ರರೆಂದು ಹೇಗೆ ತಿಳಿಯಲಿ ಎಂಬ ಸಂದೇಹ ಉಂಟಾಯಿತು. ॥ ೫೧ ॥

ನಲವತ್ತನಾಲ್ಕನೆಯ ಅಧ್ಯಾಯವು ಮುಗಿಯಿತು. ॥ ೪೪ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮಸ್ಕಂಧೇ ಪೂರ್ವಾರ್ಧೇ ಕಂಸವಧೋ ನಾಮ ಚತುಶ್ಚತ್ವಾರಿಂಶೋಽಧ್ಯಾಯಃ ॥ ೪೪ ॥

ನಲವತ್ತೈದನೆಯ ಅಧ್ಯಾಯ

ಬಲರಾಮ-ಕೃಷ್ಣರ ಉಪನಯನ ಮತ್ತು ಗುರುಕುಲ ಪ್ರವೇಶ

ಶ್ರೀಶುಕ ಉವಾಚ

ಪಿತರಾವುಪಲಬ್ಧಾರ್ಥೌ ವಿದಿತ್ವಾ ಪುರುಷೋತ್ತಮಃ ।
ಮಾ ಭೂದಿತಿ ನಿಜಾಂ ಮಾಯಾಂ ತತಾನ ಜನಮೋಹಿನೀಮ್ ॥ ೧ ॥

ಉವಾಚ ಪಿತರಾವೇತ್ಯ ಸಾಗ್ರಜಃ ಸಾತ್ವತರ್ಷಭಃ ।
ಪ್ರಶ್ರಯಾವನತಃ ಪ್ರೀಣನ್ನಂಬ ತಾತೇತಿ ಸಾದರಮ್ ॥ ೨ ॥

ನಾಸ್ಮತ್ತೋ ಯುವಯೋಸ್ತಾತ ನಿತ್ಯೋತ್ಕಂಠಿತಯೋರಪಿ ।
ಬಾಲ್ಯಪೌಗಂಡಕೈಶೋರಾಃ ಪುತ್ರಾಭ್ಯಾಮಭವನ್ ಕ್ವಚಿತ್ ॥ ೩ ॥

ನ ಲಬ್ಧೋ ದೈವಹತಯೋರ್ವಾಸೋ ನೌ ಭವದಂತಿಕೇ ।
ಯಾಂ ಬಾಲಾಃ ಪಿತೃಗೇಹಸ್ಥಾ ವಿಂದಂತೇ ಲಾಲಿತಾ ಮುದಮ್ ॥ ೪ ॥

ಸರ್ವಾರ್ಥಸಂಭವೋ ದೇಹೋ ಜನಿತಃ ಪೋಷಿತೋ ಯತಃ ।
ನ ತಯೋರ್ಯಾತಿ ನಿರ್ವೇಶಂ ಪಿತ್ರೋರ್ಮರ್ತ್ಯಃ ಶತಾಯುಷಾ ॥ ೫ ॥

ಯಸ್ತಯೋರಾತ್ಮಜಃ ಕಲ್ಪ ಆತ್ಮನಾ ಚ ಧನೇನ ಚ ।
ವೃತ್ತಿಂ ನ ದದ್ಯಾತ್ತಂ ಪ್ರೇತ್ಯ ಸ್ವಮಾಂಸಂ ಖಾದಯಂತಿ ಹಿ ॥ ೬ ॥

ಮಾತರಂ ಪಿತರಂ ವೃದ್ಧಂ ಭಾರ್ಯಾಂ ಸಾಧ್ವೀಂ ಸುತಂ ಶಿಶುಮ್ ।
ಗುರುಂ ವಿಪ್ರಂ ಪ್ರಪನ್ನಂ ಚ ಕಲ್ಪೋಽಬಿಭ್ರಚ್ಛ್ವಸನ್ ಮೃತಃ ॥ ೭ ॥

ತನ್ನಾವಕಲ್ಪಯೋಃ ಕಂಸಾನ್ನಿತ್ಯಮುದ್ವಿಗ್ನಚೇತಸೋಃ ।
ಮೋಘಮೇತೇ ವ್ಯತಿಕ್ರಾಂತಾ ದಿವಸಾ ವಾಮನರ್ಚತೋಃ ॥ ೮ ॥

ತತ್ ಕ್ಷಂತುಮರ್ಹಥಸ್ತಾತ ಮಾತರ್ನೌ ಪರತಂತ್ರಯೋಃ ।
ಅಕುರ್ವತೋರ್ವಾಂ ಶುಶ್ರೂಷಾಂ ಕ್ಲಿಷ್ಟಯೋರ್ದುರ್ಹೃದಾ ಭೃಶಮ್ ॥ ೯ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಎಲೈ ಪರೀಕ್ಷಿತನೇ! ತಂದೆ-ತಾಯಿಯರಿಗೆ ನನ್ನ ಐಶ್ವರ್ಯದ, ಭಗವದ್ಭಾವದ ಜ್ಞಾನವುಂಟಾಗಿದೆ ಎಂದು ತಿಳಿದ ಭಗವಾನ್ ಶ್ರೀಕೃಷ್ಣನು ಹೀಗಾಗಬಾರದು, ಇದರಿಂದ ಪುತ್ರ ಸ್ನೇಹವನ್ನು ಪಡೆಯಲಾರರೆಂದು ಯೋಚಿಸಿ ಜನರನ್ನು ವಿಮೋಹಗೊಳಿಸುವ ತನ್ನ ಮಾಯೆಯನ್ನು ಅವರ ಮೇಲೆ ಬೀರಿದನು. ॥ ೧ ॥ ಸಾತ್ವತ ಶ್ರೇಷ್ಠನಾದ ಶ್ರೀಕೃಷ್ಣನು ಬಲರಾಮನೊಡನೆ ತನ್ನ ತಂದೆ-ತಾಯಿಗಳ ಬಳಿಗೆ ಹೋಗಿ ಆದರದಿಂದ ವಿನಯಪೂರ್ವಕವಾಗಿ ಅವರಿಗೆ ತಲೆಬಾಗಿ ಅಮ್ಮಾ! ಅಪ್ಪಾ! ಎಂದು ಕರೆಯುತ್ತಾ, ಅವರನ್ನು ಸಂತೋಷಪಡಿಸಿ ಹೀಗೆ ಹೇಳತೊಡಗಿದನು. ॥ ೨ ॥ ಅಮ್ಮಾ! ಅಪ್ಪಾ! ನಾವಿಬ್ಬರೂ ನಿಮ್ಮ ಮಕ್ಕಳಾಗಿದ್ದೇವೆ. ನೀವು ನಮ್ಮನ್ನು ನೋಡಲು ಸದಾ ಉತ್ಸುಕರಾಗಿದ್ದರೂ ನಮ್ಮ ಬಾಲ್ಯ, ಪೌಗಂಡ, ಕಿಶೋರ ಅವಸ್ಥೆಗಳ ದರ್ಶನಸುಖವನ್ನು ನಾವು ನಿಮಗೆ ಕೊಡಲಾಗಲಿಲ್ಲ. ॥ ೩ ॥ ದುರ್ದೈವವಶದಿಂದ ನಿಮ್ಮ ಜೊತೆಯಲ್ಲಿರುವ ಸೌಭಾಗ್ಯವು ನಮಗೆ ದೊರೆಯಲಿಲ್ಲ. ಈ ಕಾರಣದಿಂದಾಗಿ ಬಾಲಕರು ತಂದೆ-ತಾಯಿಯರ ಬಳಿ ಇರುತ್ತಾ ಅನುಭವಿಸುವ ಲಾಲನೆ-ಪಾಲನೆಯ ಸುಖವು ನಮಗಿಲ್ಲವಾಯಿತು. ॥ ೪ ॥ ಧರ್ಮಾರ್ಥ-ಕಾಮ ಮೋಕ್ಷಗಳೆಂಬ ಸಕಲ ಪುರುಷಾರ್ಥಗಳಿಗೂ ಸಾಧನಭೂತವಾದ ಈ ದೇಹವು ಯಾರಿಂದ ಹುಟ್ಟಿತೋ ಹಾಗೂ ಪೋಷಿಸಲ್ಪಟ್ಟಿತೋ ಅಂತಹ ತಂದೆ-ತಾಯಿಗಳಿಬ್ಬರ ಋಣವನ್ನು ನೂರು ವರ್ಷಗಳ ಸೇವೆಯಿಂದಲೂ ಮನುಷ್ಯನಾದವನು ತೀರಿಸಲಾರನು. ॥ ೫ ॥ ಯಾವ ಪುತ್ರನು ಸಮರ್ಥನಾಗಿದ್ದರೂ ತನ್ನ ತಂದೆ-ತಾಯಿಗಳ ಸೇವೆಯನ್ನು ಶರೀರದಿಂದಾಗಲೀ, ಧನದಿಂದಾಗಲೀ ಮಾಡುವುದಿಲ್ಲವೋ ಅವನು ಸತ್ತಮೇಲೆ ಯಮದೂತರು ಅವನ ಶರೀರದ ಮಾಂಸವನ್ನೇ ಅವನಿಗೆ ತಿನ್ನಿಸುವರು. ॥ ೬ ॥ ಸಮರ್ಥನಾಗಿದ್ದರೂ ವೃದ್ಧರಾದ ತಂದೆ-ತಾಯಿಯರನ್ನು, ಸಾಧ್ವಿಯಾದ ಪತ್ನಿಯನ್ನು, ಬಾಲಕರನ್ನು, ಎಳೆ ಮಕ್ಕಳನ್ನು ಗುರುಗಳನ್ನು ಬ್ರಾಹ್ಮಣರು ಮತ್ತು ಶರಣಾಗತರನ್ನು ರಕ್ಷಿಸಿ-ಪೋಷಿಸದವನು ಬದುಕಿದ್ದರೂ ಸತ್ತಂತೆಯೇ ಸರಿ. ॥ ೭ ॥ ಅಪ್ಪಾ! ಕಂಸನ ಭಯದಿಂದ ಉದ್ವಿಗ್ನವಾದ ಮನಸ್ಸಿನಿಂದ ಕೂಡಿದ್ದ ನಾವು ನಿಮ್ಮ ಸೇವೆ ಮಾಡಲು ಸಮರ್ಥರಾಗಲಿಲ್ಲ. ಈ ಕಾರಣದಿಂದಲೇ ಇಷ್ಟು ದಿವಸಗಳೂ ತಮ್ಮ ಸೇವೆಮಾಡದೆ ವ್ಯರ್ಥವಾಗಿ ಕಳೆದುಹೋದುವು. ॥ ೮ ॥ ಜನನಿ-ಜನಕರೇ! ನೀವಿಬ್ಬರೂ ನಮ್ಮನ್ನು ಕ್ಷಮಿಸಿ ಬಿಡಿರಿ. ಅಯ್ಯೋ! ದುಷ್ಟನಾದ ಕಂಸನು ನಿಮಗೆ ಎಷ್ಟೊಂದು ಕಷ್ಟ ಕೊಟ್ಟನು. ಆದರೆ ಪರತಂತ್ರರಾಗಿದ್ದ ಕಾರಣ ತಮ್ಮ ಸೇವೆಯನ್ನು ನಮ್ಮಿಂದ ಮಾಡಲಾಗಲಿಲ್ಲ. ॥ ೯ ॥

ಶ್ರೀಶುಕ ಉವಾಚ

ಇತಿ ಮಾಯಾಮನುಷ್ಯಸ್ಯ ಹರೇರ್ವಿಶ್ವಾತ್ಮನೋ ಗಿರಾ ।
ಮೋಹಿತಾವಂಕಮಾರೋಪ್ಯ ಪರಿಷ್ವಜ್ಯಾಪತುರ್ಮುದಮ್ ॥ ೧೦ ॥

ಸಿಂಚಂತಾವಶ್ರುಧಾರಾಭಿಃ ಸ್ನೇಹಪಾಶೇನ ಚಾವೃತೌ ।
ನ ಕಿಂಚಿದೂಚತೂ ರಾಜನ್ ಬಾಷ್ಪಕಂಠೌ ವಿಮೋಹಿತೌ ॥ ೧೧ ॥

ಏವಮಾಶ್ವಾಸ್ಯ ಪಿತರೌ ಭಗವಾನ್ ದೇವಕೀಸುತಃ ।
ಮಾತಾಮಹಂ ತೂಗ್ರಸೇನಂ ಯದೂನಾಮಕರೋನ್ನೃಪಮ್ ॥ ೧೨ ॥

ಆಹ ಚಾಸ್ಮಾನ್ ಮಹಾರಾಜ ಪ್ರಜಾಶ್ಚಾಜ್ಞಪ್ತುಮರ್ಹಸಿ ।
ಯಯಾತಿಶಾಪಾದ್ಯದುಭಿರ್ನಾಸಿತವ್ಯಂ ನೃಪಾಸನೇ ॥ ೧೩ ॥

ಮಯಿ ಭೃತ್ಯ ಉಪಾಸೀನೇ ಭವತೋ ವಿಬುಧಾದಯಃ ।
ಬಲಿಂ ಹರಂತ್ಯವನತಾಃ ಕಿಮುತಾನ್ಯೇ ನರಾಧಿಪಾಃ ॥ ೧೪ ॥

ಸರ್ವಾನ್ ಸ್ವಾನ್ ಜ್ಞಾತಿಸಂಬಂಧಾನ್
ದಿಗ್ಭ್ಯಃ ಕಂಸಭಯಾಕುಲಾನ್ ।
ಯದುವೃಷ್ಣ್ಯಂಧಕಮಧು-
ದಾಶಾರ್ಹಕುಕುರಾದಿಕಾನ್ ॥ ೧೫ ॥

ಸಭಾಜಿತಾನ್ ಸಮಾಶ್ವಾಸ್ಯ ವಿದೇಶಾವಾಸಕರ್ಶಿತಾನ್ ।
ನ್ಯವಾಸಯತ್ಸ್ವಗೇಹೇಷು ವಿತ್ತೈಃ ಸಂತರ್ಪ್ಯ ವಿಶ್ವಕೃತ್ ॥ ೧೬ ॥

ಕೃಷ್ಣಸಂಕರ್ಷಣಭುಜೈರ್ಗುಪ್ತಾ ಲಬ್ಧಮನೋರಥಾಃ ।
ಗೃಹೇಷು ರೇಮಿರೇ ಸಿದ್ಧಾಃ ಕೃಷ್ಣರಾಮಗತಜ್ವರಾಃ ॥ ೧೭ ॥

ವೀಕ್ಷಂತೋಽಹರಹಃ ಪ್ರೀತಾ ಮುಕುಂದವದನಾಂಬುಜಮ್ ।
ನಿತ್ಯಂ ಪ್ರಮುದಿತಂ ಶ್ರೀಮತ್ಸದಯಸ್ಮಿತವೀಕ್ಷಣಮ್ ॥ ೧೮ ॥

ತತ್ರ ಪ್ರವಯಸೋಽಪ್ಯಾಸನ್
ಯುವಾನೋಽತಿಬಲೌಜಸಃ ।
ಪಿಬಂತೋಽಕ್ಷೈರ್ಮುಕುಂದಸ್ಯ
ಮುಖಾಂಬುಜಸುಧಾಂ ಮುಹುಃ ॥ ೧೯ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿದ್ರಾಜನೇ! ತನ್ನ ಲೀಲೆಯಿಂದ ಮನುಷ್ಯನಾಗಿದ್ದ ವಿಶ್ವಾತ್ಮಾ ಶ್ರೀಹರಿಯ ಈ ಮಾತುಗಳಿಂದ ಮೋಹಿತರಾದ ವಸುದೇವ-ದೇವಕಿಯರು ಅವರನ್ನು ತೊಡೆಯಲ್ಲಿರಿಸಿಕೊಂಡು ಗಾಢವಾಗಿ ಆಲಿಂಗಿಸಿ ಪರಮಾನಂದವನ್ನು ಪಡೆದರು. ॥ ೧೦ ॥ ರಾಜನೇ! ಸ್ನೇಹಪಾಶದಲ್ಲಿ ಬಂಧಿತರಾದ ವಸುದೇವ-ದೇವಕಿಯರು ಮೋಹಿತರಾಗಿ ಆನಂದ ಬಾಷ್ಪಗಳಿಂದ ಅವರಿಗೆ ಅಭಿಷೇಕ ಮಾಡಿದರು. ಕಣ್ಣೀರು ಸುರಿಯುತ್ತಿದ್ದ ಕಂಠವು ಉಮ್ಮಳಿಸಿ ಏನೂ ಮಾತನಾಡಲು ಸಾಧ್ಯವಾಗಲಿಲ್ಲ. ॥ ೧೧ ॥

ದೇವಕೀನಂದನನಾದ ಭಗವಾನ್ ಶ್ರೀಕೃಷ್ಣನು ಹೀಗೆ ತಂದೆ ತಾಯಿಯರನ್ನು ಸಂತೈಸಿ, ತನ್ನ ತಾತನಾದ ಉಗ್ರಸೇನನನ್ನು ಯಾದವರಿಗೆ ರಾಜನನ್ನಾಗಿ ಮಾಡಿದನು. ॥ ೧೨ ॥ ಮತ್ತೆ ಹೇಳಿದನು – ಮಹಾರಾಜ! ನಾವು ನಿಮ್ಮ ಪ್ರಜೆಯಾಗಿದ್ದೇವೆ. ನೀನು ನಮಗೆ ಯಾವ ಕಾರ್ಯಮಾಡಬೇಕೆಂಬುದನ್ನು ಆಜ್ಞಾಪಿಸು. ಯಯಾತಿಯ ಶಾಪದ ಕಾರಣದಿಂದ ಯದುವಂಶೀಯರು ರಾಜಸಿಂಹಾಸನದಲ್ಲಿ ಕುಳಿತುಕೊಳ್ಳಬಾರದು. (ಆದರೆ ನನ್ನ ಇಚ್ಛೆಯಂತೆ ನಿಮ್ಮನ್ನು ರಾಜನನ್ನಾಗಿಸಿದ್ದೇನೆ. ಇದರಿಂದ ನಿಮಗೆ ಯಾವ ದೋಷವೂ ಉಂಟಾಗಲಾರದು). ॥ ೧೩ ॥ ನಾನು ಸೇವಕನಾಗಿ ನಿಮ್ಮ ಸೇವೆ ಮಾಡುತ್ತಿರುವವರೆಗೆ ದೊಡ್ಡ-ದೊಡ್ಡ ದೇವತೆಗಳೂ ತಲೆತಗ್ಗಿಸಿ ನಿಮಗೆ ಕಪ್ಪ-ಕಾಣಿಕೆಯನ್ನು ಕೊಡುವರು. ಹಾಗಿರುವಾಗ ಬೇರೆ ರಾಜರ ಬಗ್ಗೆ ಹೇಳುವುದೇನಿದೆ? ॥ ೧೪ ॥ ಸಮಸ್ತ ವಿಶ್ವದ ವಿಧಾತನಾದ ಭಗವಾನ್ ಶ್ರೀಕೃಷ್ಣನು ಕಂಸನ ಭಯದಿಂದ ವ್ಯಾಕುಲರಾಗಿ ಎಲ್ಲೆಲ್ಲೋ ಓಡಿಹೋಗಿದ್ದ ಯದು, ವೃಷ್ಣಿ, ಅಂಧಕ, ಮಧು, ದಾಶಾರ್ಹ ಮತ್ತು ಕುಕುರ ಮುಂತಾದ ವಂಶೀಯರಾದ ಸಮಸ್ತ ಸ್ವಜಾತೀಯ ಬಾಂಧವರನ್ನು ಹುಡುಕಿ-ಹುಡುಕಿ ಕರೆತಂದನು. ಭಗವಂತನು ಅವರೆಲ್ಲರನ್ನು ಸಾಂತ್ವನನೀಡಿ, ಸತ್ಕಾರಮಾಡಿ, ಅವರಿಗೆ ಹೇರಳ ಧನ-ಸಂಪತ್ತನ್ನು ಕೊಟ್ಟು ತೃಪ್ತಿಪಡಿಸಿ ತಮ್ಮ-ತಮ್ಮ ಮನೆಗಳಲ್ಲಿ ನೆಲೆಗೊಳ್ಳುವಂತೆ ಮಾಡಿದನು. ॥ ೧೫-೧೬ ॥ ಭಗವಾನ್ ಶ್ರೀಕೃಷ್ಣ ಮತ್ತು ಬಲರಾಮರ ಭುಜಬಲದಿಂದ ಸಮಸ್ತ ಯದುವಂಶೀಯರು ಸುರಕ್ಷಿತರಾಗಿದ್ದರು. ಅವರ ಕೃಪೆಯಿಂದ ಅವರಿಗೆ ಯಾವುದೇ ವಿಧದ ವ್ಯಥೆಯಿರಲಿಲ್ಲ, ದುಃಖವಿರಲಿಲ್ಲ. ಅವರೆಲ್ಲರೂ ಕೃತಾರ್ಥರಾಗಿ ತಮ್ಮ ಮನೆಗಳಲ್ಲಿ ಆನಂದದಿಂದ ಇರುತ್ತಿದ್ದರು. ॥ ೧೭ ॥ ಭಗವಾನ್ ಶ್ರೀಕೃಷ್ಣನ ವದನಾರವಿಂದವು ಆನಂದದ ಸದನವಾಗಿತ್ತು. ಅದು ನಿತ್ಯವೂ ಪ್ರಫುಲ್ಲಿತವಾಗಿದ್ದು, ಎಂದೂ ಬಾಡದಿರುವ ಕಮಲವಾಗಿದೆ. ಅದರ ಸೌಂದರ್ಯವು ಅಪಾರವಾಗಿದೆ. ಮಂದಹಾಸ ಮತ್ತು ಕುಡಿನೋಟಗಳು ಮುಕುಂದನ ವದನದಲ್ಲಿ ಸದಾಕಾಲ ಕುಣಿಯುತ್ತಿದ್ದವು. ಯದುವಂಶೀಯರು ಪ್ರತಿದಿನವೂ ಅದರ ದರ್ಶನ ಮಾಡುತ್ತಾ ಆನಂದಮಗ್ನರಾಗಿ ಇರುತ್ತಿದ್ದರು. ॥ ೧೮ ॥ ಮಥುರೆಯ ವೃದ್ಧರೂ ಕೂಡ ಯುವಕರಂತೆ ಅತ್ಯಂತ ಬಲಿಷ್ಠರಾಗಿ ಉತ್ಸಾಹಿಗಳಾಗಿದ್ದರು. ಏಕೆಂದರೆ, ಅವರು ತಮ್ಮ ಕಣ್ಣುಗಳೆಂಬ ದೊನ್ನೆಗಳಿಂದ ಪದೇ ಪದೇ ಭಗವಂತನ ಮುಖಾರವಿಂದದ ಅಮೃತಮಯ ಮಕರಂದವನ್ನು ಪಾನಮಾಡುತ್ತಾ ಇದ್ದರು. ॥ ೧೯ ॥

ಅಥ ನಂದಂ ಸಮಾಸಾದ್ಯ ಭಗವಾನ್ ದೇವಕೀಸುತಃ ।
ಸಂಕರ್ಷಣಶ್ಚ ರಾಜೇಂದ್ರ ಪರಿಷ್ವಜ್ಯೇದಮೂಚತುಃ ॥ ೨೦ ॥

ಪಿತರ್ಯುವಾಭ್ಯಾಂ ಸ್ನಿಗ್ಧಾಭ್ಯಾಂ ಪೋಷಿತೌ ಲಾಲಿತೌ ಭೃಶಮ್ ।
ಪಿತ್ರೋರಭ್ಯಧಿಕಾ ಪ್ರೀತಿರಾತ್ಮಜೇಷ್ವಾತ್ಮನೋಽಪಿ ಹಿ ॥ ೨೧ ॥

ಸ ಪಿತಾ ಸಾ ಚ ಜನನೀ ಯೌ ಪುಷ್ಣೀತಾಂ ಸ್ವಪುತ್ರವತ್ ।
ಶಿಶೂನ್ ಬಂಧುಭಿರುತ್ಸೃಷ್ಟಾನಕಲ್ಪೈಃ ಪೋಷರಕ್ಷಣೇ ॥ ೨೨ ॥

ಯಾತ ಯೂಯಂ ವ್ರಜಂ ತಾತ
ವಯಂ ಚ ಸ್ನೇಹದುಃಖಿತಾನ್ ।
ಜ್ಞಾತೀನ್ ವೋ ದ್ರಷ್ಟುಮೇಷ್ಯಾಮೋ
ವಿಧಾಯ ಸುಹೃದಾಂ ಸುಖಮ್ ॥ ೨೩ ॥

ಏವಂ ಸಾಂತ್ವಯ್ಯ ಭಗವಾನ್ ನಂದಂ ಸವ್ರಜಮಚ್ಯುತಃ ।
ವಾಸೋಽಲಂಕಾರಕುಪ್ಯಾದ್ಯೈರರ್ಹಯಾಮಾಸ ಸಾದರಮ್ ॥ ೨೪ ॥

ಇತ್ಯುಕ್ತಸ್ತೌ ಪರಿಷ್ವಜ್ಯ ನಂದಃ ಪ್ರಣಯವಿಹ್ವಲಃ ।
ಪೂರಯನ್ನಶ್ರುಭಿರ್ನೇತ್ರೇ ಸಹ ಗೋಪೈರ್ವ್ರಜಂ ಯಯೌ ॥ ೨೫ ॥

ಅಥ ಶೂರಸುತೋ ರಾಜನ್ ಪುತ್ರಯೋಃ ಸಮಕಾರಯತ್ ।
ಪುರೋಧಸಾ ಬ್ರಾಹ್ಮಣೈಶ್ಚ ಯಥಾವದ್ದ್ವಿಜಸಂಸ್ಕೃತಿಮ್ ॥ ೨೬ ॥

ತೇಭ್ಯೋಽದಾದ್ದಕ್ಷಿಣಾ ಗಾವೋ ರುಕ್ಮಮಾಲಾಃ ಸ್ವಲಂಕೃತಾಃ ।
ಸ್ವಲಂಕೃತೇಭ್ಯಃ ಸಂಪೂಜ್ಯ ಸವತ್ಸಾಃ ಕ್ಷೌಮಮಾಲಿನೀಃ ॥ ೨೭ ॥

ಯಾಃ ಕೃಷ್ಣರಾಮಜನ್ಮರ್ಕ್ಷೇ ಮನೋದತ್ತಾ ಮಹಾಮತಿಃ ।
ತಾಶ್ಚಾದದಾದನುಸ್ಮೃತ್ಯ ಕಂಸೇನಾಧರ್ಮತೋ ಹೃತಾಃ ॥ ೨೮ ॥

ತತಶ್ಚ ಲಬ್ಧಸಂಸ್ಕಾರೌ ದ್ವಿಜತ್ವಂ ಪ್ರಾಪ್ಯ ಸುವ್ರತೌ ।
ಗರ್ಗಾದ್ಯದುಕುಲಾಚಾರ್ಯಾದ್ಗಾಯತ್ರಂ ವ್ರತಮಾಸ್ಥಿತೌ ॥ ೨೯ ॥

ಪ್ರಭವೌ ಸರ್ವವಿದ್ಯಾನಾಂ ಸರ್ವಜ್ಞೌ ಜಗದೀಶ್ವರೌ ।
ನಾನ್ಯಸಿದ್ಧಾಮಲಜ್ಞಾನಂ ಗೂಹಮಾನೌ ನರೇಹಿತೈಃ ॥ ೩೦ ॥

ಪರೀಕ್ಷಿದ್ರಾಜನೇ! ದೇವಕೀನಂದನ ಭಗವಾನ್ ಶ್ರೀಕೃಷ್ಣನು ಮತ್ತು ಬಲರಾಮರಿಬ್ಬರೂ ನಂದರಾಜನ ಬಳಿಗೆ ಬಂದು ಅವರನ್ನು ಅಪ್ಪಿಕೊಂಡು ಅವರಲ್ಲಿ ಹೀಗೆಂದರು. ॥ ೨೦ ॥ ಪೂಜ್ಯ ಪಿತೃಗಳೇ! ಪ್ರೇಮಪೂರ್ಣಹೃದಯರಾದ ನೀವಿಬ್ಬರೂ ನಮ್ಮನ್ನು ಅಕ್ಕರೆಯಿಂದ ಲಾಲಿಸಿ ಪೋಷಿಸಿರುವಿರಿ. ತಂದೆ-ತಾಯಿಗಳಿಗೆ ತಮ್ಮ ಪ್ರಾಣಗಳಿಗಿಂತಲೂ ಅಧಿಕವಾಗಿ ತಮ್ಮ ಮಕ್ಕಳಲ್ಲಿ ಪ್ರೀತಿ ಇರುತ್ತದೆ. ॥ ೨೧ ॥ ಪಾಲನೆ ರಕ್ಷಣೆಗಳಲ್ಲಿ ಅಸಮರ್ಥರಾದ ಬಂಧುಗಳಿಂದ ಪರಿತ್ಯಜಿಸಲ್ಪಟ್ಟ ಮಕ್ಕಳನ್ನು ತಮ್ಮ ಮಕ್ಕಳಂತೆಯೇ ಭಾವಿಸಿ ರಕ್ಷಿಸುವವರೇ ನಿಜವಾದ ತಾಯಿ-ತಂದೆಯರು. ॥ ೨೨ ॥ ಅಪ್ಪಾ! ಈಗ ನೀವೆಲ್ಲರೂ ಗೋಕುಲಕ್ಕೆ ಹೋಗಿರಿ. ನಾವಿಲ್ಲದೆ ವಾತ್ಸಲ್ಯದಿಂದಾಗಿ ನಿಮಗೆ ಬಹಳ ದುಃಖವಾಗುವುದರಲ್ಲಿ ಸಂದೇಹವೇ ಇಲ್ಲ. ಇಲ್ಲಿಯ ಸುಹೃದ್-ಸಂಬಂಧಿಗಳನ್ನು ಸುಖಿಯಾಗಿರುವಂತೆ ಮಾಡಿ, ನಾವು ನಿಮ್ಮನ್ನು ಭೆಟ್ಟಿಯಾಗಲು ಆದಷ್ಟು ಬೇಗನೇ ಬರುವೆವು. ॥ ೨೩ ॥ ಭಗವಾನ್ ಶ್ರೀಕೃಷ್ಣನು ನಂದಗೋಪನೇ ಮೊದಲಾದ ವ್ರಜವಾಸಿಗಳನ್ನು ಹೀಗೆ ಸಾಂತ್ವನಗೊಳಿಸಿ, ಬಹಳ ಆದರದಿಂದ ವಸ್ತ್ರಾಭೂಷಣಗಳನ್ನು, ಅನೇಕ ಪಾತ್ರೆ-ಪಗಡಗಳನ್ನು ಕೊಟ್ಟು ಅವರನ್ನು ಸತ್ಕರಿಸಿದನು. ॥ ೨೪ ॥ ಭಗವಂತನ ಮಾತನ್ನು ಕೇಳಿ ನಂದರಾಜನು ಪ್ರೇಮದಿಂದ ವಿಹ್ವಲನಾಗಿ ಇಬ್ಬರೂ ಸಹೋದರರನ್ನು ಅಪ್ಪಿಕೊಂಡು, ಕಣ್ಣುಗಳಿಂದ ನೀರನ್ನು ಸುರಿಸುತ್ತಾ ಗೋಪಾಲಕರೊಂದಿಗೆ ವ್ರಜಕ್ಕೆ ಪ್ರಯಾಣಮಾಡಿದನು. ॥ ೨೫ ॥

ಎಲೈ ರಾಜೇಂದ್ರನೇ! ಇದಾದ ಬಳಿಕ ವಸುದೇವನು ಕುಲಪುರೋಹಿತರಾದ ಗರ್ಗಾಚಾರ್ಯರಿಂದ ಹಾಗೂ ಇತರ ಬ್ರಾಹ್ಮಣರಿಂದ ಇಬ್ಬರೂ ಪುತ್ರರಿಗೆ ವಿಧಿವತ್ತಾಗಿ ದ್ವಿಜಾತಿಗೆ ಸಮುಚಿತವಾದ ಉಪನಯನ ಸಂಸ್ಕಾರವನ್ನು ಮಾಡಿಸಿದನು. ॥ ೨೬ ॥ ವಸುದೇವನು ವಿವಿಧ ಪ್ರಕಾರವಾಗಿ ವಸ್ತ್ರಾಭೂಷಣಗಳಿಂದ ಬ್ರಾಹ್ಮಣರನ್ನು ಸತ್ಕರಿಸಿ, ಅವರಿಗೆ ಬಹಳ ದಕ್ಷಿಣೆಯೊಂದಿಗೆ ಸುವರ್ಣಮಾಲೆಗಳಿಂದ ಸಮಲಂಕೃತವಾದ, ಅನೇಕ ಭೂಷಣಗಳಿಂದ ಮತ್ತು ರೇಷ್ಮೆವಸ್ತ್ರಗಳಿಂದ ಅಲಂಕರಿಸಿದ ಅನೇಕ ಸವತ್ಸಗೋವುಗಳನ್ನು ದಾನಮಾಡಿದನು. ॥ ೨೭ ॥ ಮಹಾಮತಿಯಾದ ವಸುದೇವನು ಭಗವಾನ್ ಶ್ರೀಕೃಷ್ಣ-ಬಲರಾಮರ ಜನ್ಮನಕ್ಷತ್ರದಂದು - ಮೊದಲು ಕಂಸನಿಂದ ಅನ್ಯಾಯದಿಂದ ಕಸಿದುಕೊಳ್ಳಲ್ಪಟ್ಟ ಮೊದಲೇ ಮಾನಸಿಕವಾಗಿ ದಾನಮಾಡಿದ್ದ ಗೋವುಗಳನ್ನು ಈಗ ಬ್ರಾಹ್ಮಣರಿಗೆ ಪ್ರತ್ಯಕ್ಷವಾಗಿ ದಾನ ಮಾಡಿದನು. ॥ ೨೮ ॥ ಈ ಪ್ರಕಾರ ಯದುವಂಶದ ಪುರೋಹಿತರಾದ ಗರ್ಗಾಚಾರ್ಯರು ಸಂಸ್ಕಾರವನ್ನು ಮಾಡಿಸಿ ಬಲರಾಮ ಶ್ರೀಕೃಷ್ಣರು ದ್ವಿಜರಾದರು. ಅವರ ಬ್ರಹ್ಮಚರ್ಯವ್ರತವಾದರೋ ಅಖಂಡವಾಗಿಯೇ ಇತ್ತು. ಈಗ ಅವರು ಗಾಯತ್ರಿ ಪೂರ್ವಕ ಅಧ್ಯಯನ ಮಾಡಲು ಅದನ್ನು ನಿಯಮಿತವಾಗಿ ಸ್ವೀಕರಿಸಿದರು. ॥ ೨೯ ॥ ಜಗತ್ತಿನ ಏಕಮಾತ್ರ ಸ್ವಾಮಿಗಳೂ, ಸರ್ವಜ್ಞರೂ ಆದ ಶ್ರೀಕೃಷ್ಣ-ಬಲರಾಮರಿಂದಲೇ ಎಲ್ಲ ವಿದ್ಯೆಗಳು ಉದ್ಭವಿಸಿವೆ. ಅವರ ನಿರ್ಮಲಜ್ಞಾನವು ಸ್ವತಃಸಿದ್ಧವಾದುದು. ಹೀಗಿದ್ದರೂ ಅವರು ಮನುಷ್ಯರಂತೆ ಲೀಲೆಯನ್ನು ತೋರಿ ಅದನ್ನು ಅಡಗಿಸಿಟ್ಟಿದ್ದರು. ॥ ೩೦ ॥

ಅಥೋ ಗುರುಕುಲೇ ವಾಸಮಿಚ್ಛಂತಾವುಪಜಗ್ಮತುಃ ।
ಕಾಶ್ಯಂ ಸಾಂದೀಪನಿಂ ನಾಮ ಹ್ಯವಂತೀಪುರವಾಸಿನಮ್ ॥ ೩೧ ॥

ಯಥೋಪಸಾದ್ಯ ತೌ ದಾಂತೌ ಗುರೌ ವೃತ್ತಿಮನಿಂದಿತಾಮ್ ।
ಗ್ರಾಹಯಂತಾವುಪೇತೌ ಸ್ಮ ಭಕ್ತ್ಯಾ ದೇವಮಿವಾದೃತೌ ॥ ೩೨ ॥

ತಯೋರ್ದ್ವಿಜವರಸ್ತುಷ್ಟಃ ಶುದ್ಧಭಾವಾನುವೃತ್ತಿಭಿಃ ।
ಪ್ರೋವಾಚ ವೇದಾನಖಿಲಾನ್ ಸಾಂಗೋಪನಿಷದೋ ಗುರುಃ ॥ ೩೩ ॥

ಸರಹಸ್ಯಂ ಧನುರ್ವೇದಂ ಧರ್ಮಾನ್ ನ್ಯಾಯಪಥಾಂಸ್ತಥಾ ।
ತಥಾ ಚಾನ್ವೀಕ್ಷಿಕೀಂ ವಿದ್ಯಾಂ ರಾಜನೀತಿಂ ಚ ಷಡ್ವಿಧಾಮ್ ॥ ೩೪ ॥

ಸರ್ವಂ ನರವರಶ್ರೇಷ್ಠೌ ಸರ್ವವಿದ್ಯಾಪ್ರವರ್ತಕೌ ।
ಸಕೃನ್ನಿಗದಮಾತ್ರೇಣ ತೌ ಸಂಜಗೃಹತುರ್ನೃಪ ॥ ೩೫ ॥

ಅಹೋರಾತ್ರೈಶ್ಚತುಃಷಷ್ಟ್ಯಾ ಸಂಯತ್ತೌ ತಾವತೀಃ ಕಲಾಃ ।
ಗುರುದಕ್ಷಿಣಯಾಽಽಚಾರ್ಯಂ ಛಂದಯಾಮಾಸತುರ್ನೃಪ ॥ ೩೬ ॥

ದ್ವಿಜಸ್ತಯೋಸ್ತಂ ಮಹಿಮಾನಮದ್ಭುತಂ
ಸಂಲಕ್ಷ್ಯ ರಾಜನ್ನತಿಮಾನುಷೀಂ ಮತಿಮ್ ।
ಸಮ್ಮಂತ್ರ್ಯ ಪತ್ನ್ಯಾ ಸ ಮಹಾರ್ಣವೇ ಮೃತಂ
ಬಾಲಂ ಪ್ರಭಾಸೇ ವರಯಾಂಬಭೂವ ಹ ॥ ೩೭ ॥

ತಥೇತ್ಯಥಾರುಹ್ಯ ಮಹಾರಥೌ ರಥಂ
ಪ್ರಭಾಸಮಾಸಾದ್ಯ ದುರಂತವಿಕ್ರಮೌ ।
ವೇಲಾಮುಪವ್ರಜ್ಯ ನಿಷೀದತುಃ ಕ್ಷಣಂ
ಸಿಂಧುರ್ವಿದಿತ್ವಾರ್ಹಣಮಾಹರತ್ತಯೋಃ ॥ ೩೮ ॥

ಈಗ ಅವರಿಬ್ಬರೂ ಗುರುಕುಲದಲ್ಲಿ ವಿದ್ಯಾಭ್ಯಾಸ ಮಾಡ ಬೇಕೆಂಬ ಇಚ್ಛೆಯಿಂದ ಅವಂತೀಪುರ (ಉಜ್ಜಯಿನಿ)ದಲ್ಲಿ ವಾಸಿಸುತ್ತಿದ್ದ ಕಾಶ್ಯಪಗೋತ್ರಿಯನಾದ ಸಾಂದೀಪನೀ ಮುನಿಯ ಬಳಿಗೆ ಹೋದರು. ॥ ೩೧ ॥ ಸೋದರರಿಬ್ಬರೂ ವಿಧಿಪೂರ್ವಕವಾಗಿ ಗುರುಗಳ ಬಳಿಯಲ್ಲಿ ವಾಸಿಸತೊಡಗಿದರು. ಆಗ ಅವರು ಬಹಿರಿಂದ್ರಿಯಗಳನ್ನು ನಿಗ್ರಹಿಸಿದ್ದರು. ಗುರುಗಳ ಎದುರಿನಲ್ಲಿ ನಿರ್ದುಷ್ಟವಾದ ವ್ಯವಹಾರವುಳ್ಳವರಾಗಿದ್ದರು. ಭಗವಾನ್ ಶ್ರೀಕೃಷ್ಣ ಬಲರಾಮರು ಗುರುಗಳ ಸೇವೆ ಹೇಗೆ ಮಾಡಬೇಕೆಂಬ ಆದರ್ಶವನ್ನು ಜನರ ಮುಂದಿಡುತ್ತಾ ಅತ್ಯಂತ ಭಕ್ತಿಯಿಂದ ಇಷ್ಟದೇವರಂತೆ ಗುರುಗಳ ಸೇವೆ ಮಾಡತೊಡಗಿದರು. ॥ ೩೨ ॥ ಶಿಷ್ಯರ ಶುದ್ಧ ಭಾವದಿಂದ ಕೂಡಿದ ಸೇವೆಯಿಂದ ಸಂತುಷ್ಟರಾದ ಬ್ರಾಹ್ಮಣ ಶ್ರೇಷ್ಠರಾದ ಸಾಂದೀಪನೀ ಗುರುಗಳು ಇಬ್ಬರೂ ಶಿಷ್ಯರಿಗೆ ಶಿಕ್ಷಾ, ವ್ಯಾಕರಣಾದಿ ಆರು ಅಂಗಗಳು ಉಪನಿಷತ್ತು ಸಹಿತ ನಾಲ್ಕೂ ವೇದಗಳನ್ನು ಉಪದೇಶಿಸಿದರು. ॥ ೩೩ ॥ ಇಷ್ಟು ಮಾತ್ರವಲ್ಲದೆ ಮಂತ್ರಗಳ ರಹಸ್ಯದಿಂದ ಕೂಡಿದ ಧನುರ್ವೇದವನ್ನೂ, ಮನುಸ್ಮೃತಿಯೇ ಮೊದಲಾದ ಧರ್ಮಶಾಸ್ತ್ರಗಳನ್ನೂ, ವೇದಾರ್ಥಗಳನ್ನು ನಿರೂಪಿಸುವ ಮೀಮಾಂಸಾದೀ ಮೊದಲಾದ ಶಾಸ್ತ್ರಗಳನ್ನು, ನ್ಯಾಯ (ತರ್ಕ) ಶಾಸ್ತ್ರವನ್ನು ಉಪದೇಶಿಸಿದರು. ಸಂಧಿ, ವಿಗ್ರಹ, ಯಾನ, ಆಸನ, ದ್ವೈಧ ಮತ್ತು ಆಶ್ರಯಗಳೆಂಬ ಆರು ವಿಧವಾದ ರಾಜನೀತಿಯನ್ನು ಕಲಿಸಿಕೊಟ್ಟರು. ॥ ೩೪ ॥ ಪರೀಕ್ಷಿತನೇ ! ಭಗವಾನ್ ಶ್ರೀಕೃಷ್ಣ-ಬಲರಾಮರೇ ಸಮಸ್ತ ವಿದ್ಯೆಗಳ ಪ್ರವರ್ತಕರು. ಆದ್ದರಿಂದ ಅವರು ಬೇರೆಯವರಿಂದ ಕಲಿಯ ಬೇಕಾದುದೇನೂ ಇರಲಿಲ್ಲ. ಆದರೂ ಮಾನುಷ್ಯರಂತೆ ನಟನೆ ಮಾಡುತ್ತಿದ್ದ ಅವರು ಏಕಸಂಧಿಗ್ರಾಹಿಗಳಾಗಿ ಸಮಸ್ತ ವಿದ್ಯೆಗಳನ್ನು ಕಲಿತುಕೊಂಡರು. ॥ ೩೫ ॥ ಪ್ರಯತ್ನಶೀಲರಾದ ರಾಮಕೃಷ್ಣರು ಅರವತ್ತುನಾಲ್ಕು ಕಲೆಗಳನ್ನು ಕೇವಲ ಅರವತ್ತನಾಲ್ಕು ದಿನಗಳಲ್ಲಿ ಕಲಿತುಕೊಂಡರು. ಹೀಗೆ ಅಧ್ಯಯನವು ಮುಗಿದಾಗ ಅವರು ಸಾಂದೀಪನೀ ಗುರುಗಳಲ್ಲಿ - 'ತಾವು ಇಷ್ಟವಾದ ಗುರುದಕ್ಷಿಣೆಯನ್ನು ನಮ್ಮಿಂದ ಪಡೆಯಿರಿ' ಎಂದು ಪ್ರಾರ್ಥಿಸಿ ಕೊಂಡರು. ॥ ೩೬ ॥

ಪರೀಕ್ಷಿತನೇ ! ಸಾಂದೀಪನೀ ಮುನಿಗಳು ಶ್ರೀಕೃಷ್ಣ-ಬಲರಾಮರ ಅದ್ಭುತ ಮಹಿಮೆಯನ್ನು, ಅಲೌಕಿಕ ಬುದ್ಧಿಮತ್ತೆಯನ್ನು ಆಗಲೇ ತಿಳಿದುಕೊಂಡಿದ್ದರು. ಅವರು ತಮ್ಮ ಪತ್ನಿಯಲ್ಲಿ ಸಮಾಲೋಚನೆಮಾಡಿ, ಶಿಷ್ಯರಲ್ಲಿ - 'ಪ್ರಭಾಸ ಕ್ಷೇತ್ರದಲ್ಲಿ ನಮ್ಮ ಏಕಮಾತ್ರ ಪುತ್ರನು ಸಮುದ್ರದಲ್ಲಿ ಮುಳುಗಿ ಸತ್ತುಹೋಗಿದ್ದನು. ಅವನನ್ನು ನೀವು ತಂದುಕೊಡಬೇಕು' ಅದೇ ಗುರುದಕ್ಷಿಣೆಯಾಗುವುದು ಎಂದು ನುಡಿದರು. ॥ ೩೭ ॥ ಅನಂತ ಪರಾಕ್ರಮ ಶಾಲಿಗಳು, ಮಹಾರಥಿಕರೂ ಆದ ಶ್ರೀಕೃಷ್ಣ-ಬಲರಾಮರು 'ಹಾಗೆಯೇ ಆಗಲಿ' ಎಂದು ಗುರುಗಳ ಆಜ್ಞೆಯನ್ನು ಶಿರಸಾವಹಿಸಿ ರಥವನ್ನು ಹತ್ತಿ ಪ್ರಭಾಸಕ್ಷೇತ್ರಕ್ಕೆ ಹೋದರು. ಅವರು ಸಮುದ್ರ ತೀರಕ್ಕೆ ಹೋಗಿ ಕ್ಷಣಕಾಲ ಕುಳಿತುಕೊಂಡರು. ಇವರು ಸಾಕ್ಷಾತ್ ಪರಮೇಶ್ವರರಾಗಿದ್ದಾರೆ ಎಂದು ಅರಿತ ಸಮುದ್ರರಾಜನು ಅನೇಕ ವಿಧದ ಪೂಜಾಸಾಮಗ್ರಿಗಳನ್ನೆತ್ತಿಕೊಂಡು ಮನುಷ್ಯರೂಪದಿಂದ ಅವರ ಬಳಿಗೆ ಆಗಮಿಸಿದನು. ॥ ೩೮ ॥

ತಮಾಹ ಭಗವಾನಾಶು ಗುರುಪುತ್ರಃ ಪ್ರದೀಯತಾಮ್ ।
ಯೋಽಸಾವಿಹ ತ್ವಯಾ ಗ್ರಸ್ತೋ ಬಾಲಕೋ ಮಹತೋರ್ಮಿಣಾ ॥ ೩೯ ॥

ಸಮುದ್ರ ಉವಾಚ

ನೈವಾಹಾರ್ಷಮಹಂ ದೇವ ದೈತ್ಯಃ ಪಂಚಜನೋ ಮಹಾನ್ ।
ಅಂತರ್ಜಲಚರಃ ಕೃಷ್ಣ ಶಂಖರೂಪಧರೋಽಸುರಃ ॥ ೪೦ ॥

ಆಸ್ತೇ ತೇನಾಹೃತೋ ನೂನಂ ತಚ್ಛ್ರುತ್ವಾ ಸತ್ವರಂ ಪ್ರಭುಃ ।
ಜಲಮಾವಿಶ್ಯ ತಂ ಹತ್ವಾ ನಾಪಶ್ಯದುದರೇಽರ್ಭಕಮ್ ॥ ೪೧ ॥

ತದಂಗಪ್ರಭವಂ ಶಂಖಮಾದಾಯ ರಥಮಾಗಮತ್ ।
ತತಃ ಸಂಯಮನೀಂ ನಾಮ ಯಮಸ್ಯ ದಯಿತಾಂ ಪುರೀಮ್ ॥ ೪೨ ॥

ಗತ್ವಾ ಜನಾರ್ದನಃ ಶಂಖಂ ಪ್ರದಧ್ಮೌ ಸಹಲಾಯುಧಃ ।
ಶಂಖನಿರ್ಹ್ರಾದಮಾಕರ್ಣ್ಯ ಪ್ರಜಾಸಂಯಮನೋ ಯಮಃ ॥ ೪೩ ॥

ತಯೋಃ ಸಪರ್ಯಾಂ ಮಹತೀಂ ಚಕ್ರೇ ಭಕ್ತ್ಯುಪಬೃಂಹಿತಾಮ್ ।
ಉವಾಚಾವನತಃ ಕೃಷ್ಣಂ ಸರ್ವಭೂತಾಶಯಾಲಯಮ್ ।
ಲೀಲಾಮನುಷ್ಯ ಹೇ ವಿಷ್ಣೋ ಯುವಯೋಃ ಕರವಾಮ ಕಿಮ್ ॥ ೪೪ ॥

ಶ್ರೀಭಗವಾನುವಾಚ

ಗುರುಪುತ್ರಮಿಹಾನೀತಂ ನಿಜಕರ್ಮನಿಬಂಧನಮ್ ।
ಆನಯಸ್ವ ಮಹಾರಾಜ ಮಚ್ಛಾಸನಪುರಸ್ಕೃತಃ ॥ ೪೫ ॥

ತಥೇತಿ ತೇನೋಪಾನೀತಂ ಗುರುಪುತ್ರಂ ಯದೂತ್ತಮೌ ।
ದತ್ತ್ವಾ ಸ್ವಗುರವೇ ಭೂಯೋ ವೃಣೀಷ್ವೇತಿ ತಮೂಚತುಃ ॥ ೪೬ ॥

ಗುರುರುವಾಚ

ಸಮ್ಯಕ್ ಸಂಪಾದಿತೋ ವತ್ಸ ಭವದ್ಭ್ಯಾಂ ಗುರುನಿಷ್ಕ್ರಯಃ ।
ಕೋ ನು ಯುಷ್ಮದ್ವಿಧಗುರೋಃ ಕಾಮಾನಾಮವಶಿಷ್ಯತೇ ॥ ೪೭ ॥

ಗಚ್ಛತಂ ಸ್ವಗೃಹಂ ವೀರೌ ಕೀರ್ತಿರ್ವಾಮಸ್ತು ಪಾವನೀ ।
ಛಂದಾಂಸ್ಯಯಾತಯಾಮಾನಿ ಭವಂತ್ವಿಹ ಪರತ್ರ ಚ ॥ ೪೮ ॥

ಭಗವಂತನು ಸಮುದ್ರದ ಬಳಿ ಇಂತೆಂದನು - ಓ ಸಮುದ್ರರಾಜನೇ! ಈ ಹಿಂದೆ ನೀನು ನಿನ್ನ ದೊಡ್ಡ-ದೊಡ್ಡ ತೆರೆಗಳ ಮೂಲಕ ನುಂಗಿಬಿಟ್ಟಿರುವ ನಮ್ಮ ಗುರುಪುತ್ರನನ್ನು ಶೀಘ್ರವಾಗಿ ತಂದೊಪ್ಪಿಸಿಬಿಡು. ॥ ೩೯ ॥

ಸಮುದ್ರರಾಜನು ಹೇಳುತ್ತಾನೆ - ದೇವಾಧಿದೇವನಾದ ಶ್ರೀಕೃಷ್ಣಸ್ವಾಮಿಯೇ! ನಾನು ಆ ಬಾಲಕನನ್ನು ಸೆಳೆದುಕೊಂಡು ಹೋಗಿಲ್ಲ. ನನ್ನ ಜಲದಲ್ಲಿ ಪಂಚಜನನೆಂಬ ಒಬ್ಬ ದೈತ್ಯಜಾತಿಯ ಮಹಾಸುರನು ಶಂಖರೂಪದಿಂದ ಇರುವನು. ಖಂಡಿತವಾಗಿ ಅವನೇ ಆ ಬಾಲಕನನ್ನು ಕದ್ದುಕೊಂಡು ಹೋಗಿರಬೇಕು. ॥ ೪೦ ॥ ಸಮುದ್ರರಾಜನ ಮಾತನ್ನು ಕೇಳುತ್ತಲೇ ಭಗವಂತನು ಸಮುದ್ರವನ್ನು ಹೊಕ್ಕು ಶಂಖಾಸುರನನ್ನು ಸಂಹರಿಸಿದನು. ಆದರೆ ಗುರುಪುತ್ರನು ಅವನ ಹೊಟ್ಟೆಯಲ್ಲಿ ಇರಲೇ ಇಲ್ಲ. ॥ ೪೧ ॥ ಆಗ ಅವನ ಶರೀರದಲ್ಲಿದ್ದ ಶಂಖವನ್ನು ಎತ್ತಿಕೊಂಡು ಬಂದು ಭಗವಂತನು ಬಲರಾಮನೊಡನೆ ಯಮರಾಜನ ಪರಮಪ್ರಿಯವಾದ ಸಂಯಮನೀಪುರಕ್ಕೆ ಹೋಗಿ ತನ್ನ ಶಂಖವನ್ನು ಊದಿದನು. ಶಂಖಧ್ವನಿಯನ್ನು ಕೇಳುತ್ತಲೇ ಸಮಸ್ತ ಪ್ರಜೆಗಳ ಶಾಸಕನಾದ ಯಮಧರ್ಮನು ಅವರನ್ನು ಆದರದಿಂದ ಸ್ವಾಗತಿಸಿ, ಭಕ್ತಿಭಾವದಿಂದ ವಿಧಿವತ್ತಾಗಿ ಅವರ ಮಹಾಪೂಜೆಯನ್ನು ಮಾಡಿದನು. ಅವನು ವಿನಮ್ರನಾಗಿ ತಲೆಯನ್ನು ತಗ್ಗಿಸಿ ಸಮಸ್ತ ಪ್ರಾಣಿಗಳ ಹೃದಯಗಳಲ್ಲಿ ವಿರಾಜಿಸುತ್ತಿರುವ ಸಚ್ಚಿದಾನಂದ ಸ್ವರೂಪನಾದ ಭಗವಾನ್ ಶ್ರೀಕೃಷ್ಣನಲ್ಲಿ ಪ್ರಾರ್ಥಿಸಿಕೊಂಡನು - ಲೀಲಾಮಾನುಷವಿಗ್ರಹನಾದ ಸರ್ವವ್ಯಾಪಕ ಪರಮೇಶ್ವರರೇ! ನಾನು ನಿಮ್ಮಿಬ್ಬರ ಯಾವ ಸೇವೆಯನ್ನು ಮಾಡಲಿ? ॥ ೪೨-೪೪ ॥

ಶ್ರೀಭಗವಂತನು ಹೇಳಿದನು - ಯಮಧರ್ಮನೇ! ಅವನ ಕರ್ಮಬಂಧಕ್ಕೆ ಅನುಸಾರವಾಗಿ ನಮ್ಮ ಗುರುಪುತ್ರನು ಇಲ್ಲಿಗೆ ತರಲ್ಪಟ್ಟಿದ್ದಾನೆ. ಈಗ ನೀನು ಅವನ ಕರ್ಮದ ಕಡೆಗೆ ಲಕ್ಷ್ಯಕೊಡದೆ ನನ್ನ ಆಜ್ಞೆಯನ್ನು ಪುರಸ್ಕರಿಸಿ ಅವನನ್ನು ನನ್ನ ಬಳಿಗೆ ಕರೆದುಕೊಂಡು ಬಾ. ॥ ೪೫ ॥ ಯಮರಾಜನು 'ಹಾಗೆಯೇ ಆಗಲಿ' ಎಂದು ಹೇಳಿ ಭಗವಂತನ ಆದೇಶದಂತೆ ಅವನ ಗುರುಪುತ್ರನನ್ನು ತಂದು ಕೊಟ್ಟನು. ಆಗ ಯದುವಂಶ ಶಿರೋಮಣಿ ಶ್ರೀಕೃಷ್ಣನು ಮತ್ತು ಬಲರಾಮನು ಆ ಬಾಲಕನನ್ನು ಕರೆದುಕೊಂಡು ಉಜ್ಜಯಿನಿಗೆ ಹಿಂದಿರುಗಿ ತಮ್ಮ ಗುರುಗಳಿಗೆ ಅವನನ್ನು ಒಪ್ಪಿಸಿ - 'ಇನ್ನೇನಾದರೂ ತಾವು ಬಯಸುವಿರಾದರೆ ಕೇಳಿಕೊಳ್ಳಿರಿ' ಎಂದು ವಿನಂತಿಸಿಕೊಂಡರು. ॥ ೪೬ ॥

ಗುರುಗಳೆಂದರು - ವತ್ಸರಿರಾ! ನೀವಿಬ್ಬರೂ ಅನುಪಮವಾದ ಗುರುದಕ್ಷಿಣೆಯನ್ನೇ ಕೊಟ್ಟಿರುವಿರಿ. ಮತ್ತೇನನ್ನು ನಾನು ಕೇಳಲಿ? ನಿಮ್ಮಂತಹ ಪುರುಷೋತ್ತಮರನ್ನು ಶಿಷ್ಯರಾಗಿ ಹೊಂದಿರುವಾಗ ಈಡೇರಲಾಗದ ಮನೋರಥವು ಯಾವುದು ತಾನೇ ಉಳಿದೀತು? ॥ ೪೭ ॥ ವೀರರೇ! ಈಗ ನೀವಿಬ್ಬರೂ ಮನೆಗೆ ಹೋಗಿರಿ. ಲೋಕಗಳನ್ನೇ ಪಾವನಗೊಳಿಸುವ ಕೀರ್ತಿಯು ನಿಮಗುಂಟಾಗಲಿ. ನೀವು ಇಲ್ಲಿ ಕಲಿತಿರುವ ವಿದ್ಯೆಯು ಇಹಲೋಕದಲ್ಲಿಯೂ, ಪರಲೋಕದಲ್ಲಿಯೂ ನಿತ್ಯನೂತನವಾಗಿದ್ದು ಎಂದಿಗೂ ವಿಸ್ಮೃತಿಯಾಗದಿರಲಿ. ॥ ೪೮ ॥

ಗುರುಣೈವಮನುಜ್ಞಾತೌ ರಥೇನಾನಿಲರಂಹಸಾ ।
ಆಯಾತೌ ಸ್ವಪುರಂ ತಾತ ಪರ್ಜನ್ಯನಿನದೇನ ವೈ ॥ ೪೯ ॥

ಸಮನಂದನ್ ಪ್ರಜಾಃ ಸರ್ವಾ ದೃಷ್ಟ್ವಾ ರಾಮಜನಾರ್ದನೌ ।
ಅಪಶ್ಯಂತ್ಯೋ ಬಹ್ವಹಾನಿ ನಷ್ಟಲಬ್ಧಧನಾ ಇವ ॥ ೫೦ ॥

ಪ್ರಿಯ ಪರೀಕ್ಷಿತ! ಮತ್ತೆ ಗುರುಗಳಿಂದ ಅನುಮತಿಯನ್ನು ಪಡೆದು, ವಾಯುವೇಗದಿಂದ ಚಲಿಸುವ, ಮೇಘದಂತಹ ಶಬ್ದವುಳ್ಳ ರಥದಲ್ಲಿ ಕುಳಿತುಕೊಂಡು ಸೋದರರಿಬ್ಬರೂ ಮಥುರೆಗೆ ಮರಳಿದರು. ॥ ೪೯ ॥ ಶ್ರೀಕೃಷ್ಣ-ಬಲರಾಮರನ್ನು ಅನೇಕ ದಿವಸಗಳಿಂದ ಕಾಣದೇ ಇರುವ ಮಥುರಾಪಟ್ಟಣದ ಪ್ರಜೆಗಳು ಅತ್ಯಂತ ದುಃಖಿತರಾಗಿದ್ದರು. ಬಲರಾಮ-ಶ್ರೀಕೃಷ್ಣರು ಬಂದಿರುವುದನ್ನು ನೋಡಿದ ಅವರೆಲ್ಲರೂ ಕಳೆದುಹೋದ ಧನವು ಮರಳಿ ದೊರೆತಂತೆ ಪರಮಾನಂದದಲ್ಲಿ ಮುಳುಗಿ ಹೋದರು. ॥ ೫೦ ॥

ನಲವತ್ತೈದನೆಯ ಅಧ್ಯಾಯವು ಮುಗಿಯಿತು. ॥ ೪೫ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮಸ್ಕಂಧೇ ಪೂರ್ವಾರ್ಧೇ
ಗುರುಪುತ್ರಾನಯನಂ ನಾಮ ಪಂಚಚತ್ವಾರಿಂಶೋಽಧ್ಯಾಯಃ ॥ ೪೫ ॥

ನಲವತ್ತಾರನೆಯ ಅಧ್ಯಾಯ

ಉದ್ಧವನ ವ್ರಜಯಾತ್ರೆ

ಶ್ರೀಶುಕ ಉವಾಚ

ವೃಷ್ಣೀನಾಂ ಪ್ರವರೋ ಮಂತ್ರೀ ಕೃಷ್ಣಸ್ಯ ದಯಿತಃ ಸಖಾ ।
ಶಿಷ್ಯೋ ಬೃಹಸ್ಪತೇಃ ಸಾಕ್ಷಾದುದ್ಧವೋ ಬುದ್ಧಿಸತ್ತಮಃ ॥ ೧ ॥

ತಮಾಹ ಭಗವಾನ್ ಪ್ರೇಷ್ಠಂ ಭಕ್ತಮೇಕಾಂತಿನಂ ಕ್ವಚಿತ್ ।
ಗೃಹೀತ್ವಾ ಪಾಣಿನಾ ಪಾಣಿಂ ಪ್ರಪನ್ನಾರ್ತಿಹರೋ ಹರಿಃ ॥ ೨ ॥

ಗಚ್ಛೋದ್ಧವ ವ್ರಜಂ ಸೌಮ್ಯ ಪಿತ್ರೋರ್ನೌ ಪ್ರೀತಿಮಾವಹ ।
ಗೋಪೀನಾಂ ಮದ್ವಿಯೋಗಾಧಿಂ ಮತ್ಸಂದೇಶೈರ್ವಿಮೋಚಯ ॥ ೩ ॥

ತಾ ಮನ್ಮನಸ್ಕಾ ಮತ್ಪ್ರಾಣಾ ಮದರ್ಥೇ ತ್ಯಕ್ತದೈಹಿಕಾಃ ।
ಮಾಮೇವ ದಯಿತಂ ಪ್ರೇಷ್ಠಮಾತ್ಮಾನಂ ಮನಸಾ ಗತಾಃ ।
ಯೇ ತ್ಯಕ್ತಲೋಕಧರ್ಮಾಶ್ಚ ಮದರ್ಥೇ ತಾನ್ ಬಿಭರ್ಮ್ಯಹಮ್ ॥ ೪ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ! ಉದ್ಧವನು ವೃಷ್ಣಿವಂಶೀಯರಲ್ಲಿ ಪ್ರಧಾನ ಪುರುಷನಾಗಿದ್ದನು. ಬೃಹಸ್ಪತಿಯ ಸಾಕ್ಷಾತ್ ಶಿಷ್ಯನಾಗಿದ್ದ ಅವನು ಪರಮ ಬುದ್ಧಿಶಾಲಿಯಾಗಿದ್ದನು. ಮಿಗಿಲಾಗಿ ಶ್ರೀಕೃಷ್ಣನ ಮಂತ್ರಿಯೂ ಪ್ರಿಯಸಖನೂ ಆಗಿದ್ದನು. ॥ ೧ ॥ ಒಂದು ದಿನ ಶರಣಾಗತರ ಸಮಸ್ತ ದುಃಖಗಳನ್ನು ಪರಿಹರಿಸುವ ಶ್ರೀಕೃಷ್ಣನು ತನ್ನ ಪ್ರಿಯಭಕ್ತನೂ, ಏಕಾಂತ ಪ್ರೇಮಿಯೂ ಆದ ಉದ್ಧವನ ಕೈಯನ್ನು ಹಿಡಿದುಕೊಂಡು ಈ ಮಾತನ್ನು ಹೇಳಿದನು. ॥ ೨ ॥ ಸೌಮ್ಯಸ್ವಭಾವದ ಉದ್ಧವನೇ! ನೀನೀಗಲೇ ಗೋಕುಲಕ್ಕೆ ಹೋಗು. ಅಲ್ಲಿರುವ ನನ್ನ ತಂದೆ-ತಾಯಿಗಳಾದ ನಂದ-ಯಶೋದೆಯರನ್ನು ನನ್ನ ಸಂಬಂಧವಾದ ಮಾತುಗಳಿಂದ ಆನಂದಗೊಳಿಸು. ಗೋಪಿಯರು ನನ್ನ ವಿರಹವ್ಯಾಧಿಯಿಂದ ದುಃಖಿತರಾಗಿರುವರು. ಅವರಿಗೆ ನನ್ನ ಸಂದೇಶವನ್ನು ಹೇಳಿ ಆ ವೇದನೆಯಿಂದ ಮುಕ್ತಗೊಳಿಸು. ॥ ೩ ॥ ಪ್ರಿಯ ಉದ್ಧವನೇ! ಗೋಪಿಕೆಯರ ಮನಸ್ಸು ನಿತ್ಯ-ನಿರಂತರವಾಗಿ ನನ್ನಲ್ಲೇ ತೊಡಗಿರುತ್ತದೆ. ಅವರ ಪ್ರಾಣ, ಜೀವನ, ಸರ್ವಸ್ವವೂ ನಾನೇ ಆಗಿರುವೆನು. ನನಗಾಗಿ ಅವರು ತಮ್ಮ ಪತಿ-ಪುತ್ರರೇ ಮೊದಲಾದ ಜ್ಞಾತಿ-ಬಂಧುಗಳನ್ನು ತೊರೆದು ಬಿಟ್ಟಿದ್ದಾರೆ. ನನ್ನನ್ನೇ ಅವರು ಪ್ರಿಯತಮನೆಂದೂ, ಸರ್ವಶ್ರೇಷ್ಠನಾದ ತಮ್ಮ ಆತ್ಮಸ್ವರೂಪನೆಂದೇ ತಮ್ಮ ಸಂಪೂರ್ಣ ಮನಸ್ಸಿನಿಂದ ಭಾವಿಸಿಕೊಂಡು ಬಿಟ್ಟಿದ್ದಾರೆ. ಯಾರು ನನ್ನ ಸಲುವಾಗಿ ಲೌಕಿಕ ಮತ್ತು ಪಾರಲೌಕಿಕ ಧರ್ಮವನ್ನು ಬಿಟ್ಟುಬಿಟ್ಟಿರುವರೋ ಅವರ ಭರಣ-ಪೋಷಣೆಗಳನ್ನು ನಾನೇ ಮಾಡುತ್ತೇನೆ. ಇದು ನನ್ನ ವ್ರತವಾಗಿದೆ. ॥ ೪ ॥

ಮಯಿ ತಾಃ ಪ್ರೇಯಸಾಂ ಪ್ರೇಷ್ಠೇ ದೂರಸ್ಥೇ ಗೋಕುಲಸ್ತ್ರಿಯಃ ।
ಸ್ಮರಂತ್ಯೋಽಂಗ ವಿಮುಹ್ಯಂತಿ ವಿರಹೌತ್ಕಂಠ್ಯವಿಹ್ವಲಾಃ
॥ ೫ ॥

ಧಾರಯಂತ್ಯತಿಕೃಚ್ಛ್ರೇಣ ಪ್ರಾಯಃ ಪ್ರಾಣಾನ್ ಕಥಂಚನ ।
ಪ್ರತ್ಯಾಗಮನಸಂದೇಶೈರ್ಬಲ್ಲವ್ಯೋ ಮೇ ಮದಾತ್ಮಿಕಾಃ
॥ ೬ ॥

ಶ್ರೀಶುಕ ಉವಾಚ

ಇತ್ಯುಕ್ತ ಉದ್ಧವೋ ರಾಜನ್ ಸಂದೇಶಂ ಭರ್ತುರಾದೃತಃ ।
ಆದಾಯ ರಥಮಾರುಹ್ಯ ಪ್ರಯಯೌ ನಂದಗೋಕುಲಮ್
॥ ೭ ॥

ಪ್ರಾಪ್ತೋ ನಂದವ್ರಜಂ ಶ್ರೀಮಾನ್ ನಿಮ್ಲೋಚತಿ ವಿಭಾವಸೌ ।
ಛನ್ನಯಾನಃ ಪ್ರವಿಶತಾಂ ಪಶೂನಾಂ ಖುರರೇಣುಭಿಃ
॥ ೮ ॥

ವಾಸಿತಾರ್ಥೇಽಭಿಯುಧ್ಯದ್ಭಿರ್ನಾದಿತಂ ಶುಷ್ಮಿಭಿರ್ವೃಷೈಃ ।
ಧಾವಂತೀಭಿಶ್ಚ ವಾಸ್ರಾಭಿರೂಧೋಭಾರೈಃ ಸ್ವವತ್ಸಕಾನ್
॥ ೯ ॥

ಇತಸ್ತತೋ ವಿಲಂಘದ್ಭಿರ್ಗೋವತ್ಸೈರ್ಮಂಡಿತಂ ಸಿತೈಃ ।
ಗೋದೋಹಶಬ್ದಾಭಿರವಂ ವೇಣೂನಾಂ ನಿಃಸ್ವನೇನ ಚ
॥ ೧೦ ॥

ಗಾಯಂತೀಭಿಶ್ಚ ಕರ್ಮಾಣಿ ಶುಭಾನಿ ಬಲಕೃಷ್ಣಯೋಃ ।
ಸ್ವಲಂಕೃತಾಭಿರ್ಗೋಪೀಭಿರ್ಗೋಪೈಶ್ಚ ಸುವಿರಾಜಿತಮ್
॥ ೧೧ ॥

ಅಗ್ನ್ಯರ್ಕಾತಿಥಿಗೋವಿಪ್ರಪಿತೃದೇವಾರ್ಚನಾನ್ವಿತೈಃ ।
ಧೂಪದೀಪೈಶ್ಚ ಮಾಲ್ಯೈಶ್ಚ ಗೋಪಾವಾಸೈರ್ಮನೋರಮಮ್
॥ ೧೨ ॥

ಉದ್ಧವನೇ! ನಾನು ಆ ಗೋಪಿಯರ ಪರಮ ಪ್ರಿಯತಮನಾಗಿರುವೆನು. ನಾನು ಇಲ್ಲಿಗೆ ಬಂದನಂತರ ಅವರು ನನ್ನನ್ನು ಬಹಳ ದೂರದಲ್ಲಿರುವನೆಂದು ಭಾವಿಸಿ, ನನ್ನನ್ನು ಯಾವಾಗಲೂ ಸ್ಮರಿಸುತ್ತಾ ವಿಮೋಹಗೊಳ್ಳುತ್ತಾರೆ. ಕೆಲವೊಮ್ಮೆ ಮೂರ್ಛಿತರೂ ಆಗುತ್ತಾರೆ. ವಿರಹವೇದನೆಯಿಂದ ದುಃಖಿತೆಯರಾದ ಅವರು ತಮಗೆ ಇಷ್ಟನಾದ ನನ್ನನ್ನು ಹೊಂದಲು ತವಕಪಡುತ್ತಿರುವರು. ॥ ೫ ॥ ನನ್ನ ಪ್ರೇಯಸಿಯರಾದ ಗೋಪಿಯರು ಇದುವರೆಗೆ ಬಹಳ ಕಷ್ಟದಿಂದ ಮತ್ತು ಪ್ರಯತ್ನದಿಂದ ತಮ್ಮ ಪ್ರಾಣಗಳನ್ನು ಉಳಿಸಿಕೊಂಡಿರುವರು. 'ನಾನು ಪುನಃ ನಿಮ್ಮಲ್ಲಿಗೆ ಬರುವೆನು' ಎಂಬ ನನ್ನ ಇದೊಂದು ಸಂದೇಶವೇ ಅವರಿಗೆ ಜೀವನಾಧಾರವಾಗಿದೆ. ಉದ್ಧವನೇ! ಇನ್ನೇನು ಹೇಳಲಿ? ನಾನು ನಾನೇ ಅವರ ಆತ್ಮನಾಗಿರುವೆನು. ಅವರು ನಿತ್ಯ-ನಿರಂತರ ನನ್ನಲ್ಲಿಯೇ ತನ್ಮಯರಾಗಿ ಇರುತ್ತಾರೆ. ॥ ೬ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಎಲೈ ಪರೀಕ್ಷಿತನೇ! ಭಗವಾನ್ ಶ್ರೀಕೃಷ್ಣನ ಈ ಮಾತನ್ನು ಕೇಳಿದಾಗ ಉದ್ಧವನು ಅತ್ಯಂತ ಆದರದಿಂದ ತನ್ನ ಸ್ವಾಮಿಯ ಸಂದೇಶವನ್ನು ಹೊತ್ತುಕೊಂಡು ರಥದಲ್ಲಿ ಕುಳಿತು ನಂದಗೋಕುಲದ ಕಡೆಗೆ ಹೊರಟನು. ॥ ೭ ॥ ಭಾಗ್ಯಶಾಲಿಯಾದ ಉದ್ಧವನು ಸೂರ್ಯಾಸ್ತಕ್ಕೆ ಸರಿಯಾಗಿ ನಂದಗೋಕುಲಕ್ಕೆ ತಲುಪಿದನು. ಆ ಸಮಯದಲ್ಲಿ ಹಸುಗಳು ಕಾಡಿನಿಂದ ಮರಳುತ್ತಿದ್ದವು. ಅವರ ಗೊರಸುಗಳಿಂದ ಎದ್ದ ಧೂಳಿಯು ಉದ್ಧವನ ರಥವನ್ನು ಮುಚ್ಚಿಬಿಟ್ಟಿತು. ॥ ೮ ॥ ಗೋವುಗಳನ್ನು ಸಂಪರ್ಕಿಸಲು ಕೊಬ್ಬಿದ ಹೋರಿಗಳು ತಮ್ಮ-ತಮ್ಮಲ್ಲಿಯೇ ಸ್ಪರ್ಧಿಸುತ್ತಿದ್ದವು. ಅವುಗಳ ಗರ್ಜನೆಯು ವ್ರಜದಲ್ಲೆಲ್ಲ ಪ್ರತಿಧ್ವನಿಸುತ್ತಿತ್ತು. ಸ್ವಲ್ಪ ದಿವಸಗಳ ಹಿಂದೆ ಈಯ್ದ ಹಸುಗಳು ತಮ್ಮ ಕೆಚ್ಚಲುಗಳು ಭಾರವಾಗಿದ್ದರೂ ಲೆಕ್ಕಿಸದೆ ತಮ್ಮ-ತಮ್ಮ ಕರುಗಳ ಕಡೆಗೆ ನಾಗಾಲೋಟದಿಂದ ಓಡಿಹೋಗುತ್ತಿದ್ದವು. ॥ ೯ ॥ ಅತ್ತಿತ್ತ ನೆಗೆ-ನೆಗೆದುಕೊಂಡು ಓಡಾಡುತ್ತಿದ್ದ ಬಿಳಿಯ ಕರುಗಳಿಂದ ಗೋಕುಲವು ಸಮಲಂಕೃತವಾಗಿತ್ತು. ವೇಣುನಾದದೊಡನೆ ಹಸುಗಳು ಹಾಲನ್ನು ಕರೆಯುವ 'ಘರ್-ಘರ್' ಶಬ್ದವು ಕೇಳಿ ಬರುತ್ತಿದ್ದು ಕಿವಿಗಳಿಗೆ ಆಪ್ಯಾಯಮಾನವಾಗಿದ್ದಿತು. ॥ ೧೦ ॥ ವಸ್ತ್ರಾಭರಣಗಳಿಂದ ಸಮಲಂಕೃತರಾಗಿ ಬಲರಾಮ-ಶ್ರೀಕೃಷ್ಣರ ಮಂಗಲಮಯ ಚರಿತ್ರೆಗಳನ್ನು ಹಾಡುತ್ತಿದ್ದ ಗೋಪಿಯರಿಂದ ಮತ್ತು ಗೋಪಾಲಕರಿಂದಲೂ ಗೋಕುಲದ ಶೋಭೆಯು ಇನ್ನೂ ಹೆಚ್ಚಿತ್ತು. ॥ ೧೧ ॥ ಗೋಪಾಲರ ಮನೆಗಳಲ್ಲಿ ಅಗ್ನಿ, ಸೂರ್ಯ, ಅತಿಥಿ, ಗೋವು, ಬ್ರಾಹ್ಮಣ ಮತ್ತು ದೇವತೆ-ಪಿತೃಗಳ ಪೂಜೆಗಳು ಯಥಾವಿಧಿಯಾಗಿ ನಡೆದಿತ್ತು. ಧೂಪಗಳ ಸುವಾಸನೆಯು ಸರ್ವತ್ರ ಹರಡಿತ್ತು. ದೀಪಗಳು ಬೆಳಗುತ್ತಿದ್ದವು. ಅವರ ಮನೆಗಳನ್ನು ಪುಷ್ಪಗಳಿಂದ ಅಲಂಕರಿಸಿದ್ದರು. ಇಂತಹ ಮನೋಹರವಾದ ಮನೆಗಳಿಂದ ಇಡೀ ಗೋಕುಲವು ಇನ್ನೂ ಹೆಚ್ಚಾಗಿಯೇ ಶೋಭಿಸುತ್ತಿತ್ತು. ॥ ೧೨ ॥

ಸರ್ವತಃ ಪುಷ್ಪಿತವನಂ ದ್ವಿಜಾಲಿಕುಲನಾದಿತಮ್ ।
ಹಂಸಕಾರಂಡವಾಕೀರ್ಣೈಃ ಪದ್ಮಷಂಡೈಶ್ಚ ಮಂಡಿತಮ್ ॥ ೧೩ ॥

ತಮಾಗತಂ ಸಮಾಗಮ್ಯ ಕೃಷ್ಣಸ್ಯಾನುಚರಂ ಪ್ರಿಯಮ್ ।
ನಂದಃ ಪ್ರೀತಃ ಪರಿಷ್ವಜ್ಯ ವಾಸುದೇವಧಿಯಾರ್ಚಯತ್ ॥ ೧೪ ॥

ಭೋಜಿತಂ ಪರಮಾನ್ನೇನ ಸಂವಿಷ್ಟಂ ಕಶಿಪೌ ಸುಖಮ್ ।
ಗತಶ್ರಮಂ ಪರ್ಯಪೃಚ್ಛತ್ ಪಾದಸಂವಾಹನಾದಿಭಿಃ ॥ ೧೫ ॥

ಕಚ್ಚಿದಂಗ ಮಹಾಭಾಗ ಸಖಾ ನಃ ಶೂರನಂದನಃ ।
ಆಸ್ತೇ ಕುಶಲ್ಯಪತ್ಯಾದ್ಯೈರ್ಯುಕ್ತೋ ಮುಕ್ತಃ ಸುಹೃದ್ವೃತಃ ॥ ೧೬ ॥

ದಿಷ್ಟ್ಯಾ ಕಂಸೋ ಹತಃ ಪಾಪಃ ಸಾನುಗಃ ಸ್ವೇನ ಪಾಪ್ಮನಾ ।
ಸಾಧೂನಾಂ ಧರ್ಮಶೀಲಾನಾಂ ಯದೂನಾಂ ದ್ವೇಷ್ಟಿ ಯಃ ಸದಾ ॥ ೧೭ ॥

ಅಪಿ ಸ್ಮರತಿ ನಃ ಕೃಷ್ಣೋ ಮಾತರಂ ಸುಹೃದಃ ಸಖೀನ್ ।
ಗೋಪಾನ್ ವ್ರಜಂ ಚಾತ್ಮನಾಥಂ ಗಾವೋ ವೃಂದಾವನಂ ಗಿರಿಮ್ ॥ ೧೮ ॥

ಅಪ್ಯಾಯಾಸ್ಯತಿ ಗೋವಿಂದಃ ಸ್ವಜನಾನ್ ಸಕೃದೀಕ್ಷಿತುಮ್ ।
ತರ್ಹಿ ದ್ರಕ್ಷ್ಯಾಮ ತದ್ವಕ್ತ್ರಂ ಸುನಸಂ ಸುಸ್ಮಿತೇಕ್ಷಣಮ್ ॥ ೧೯ ॥

ದಾವಾಗ್ನೇರ್ವಾತವರ್ಷಾಚ್ಚ ವೃಷಸರ್ಪಾಚ್ಚ ರಕ್ಷಿತಾಃ ।
ದುರತ್ಯಯೇಭ್ಯೋ ಮೃತ್ಯುಭ್ಯಃ ಕೃಷ್ಣೇನ ಸುಮಹಾತ್ಮನಾ ॥ ೨೦ ॥

ಸ್ಮರತಾಂ ಕೃಷ್ಣವೀರ್ಯಾಣಿ ಲೀಲಾಪಾಂಗನಿರೀಕ್ಷಿತಮ್ ।
ಹಸಿತಂ ಭಾಷಿತಂ ಚಾಂಗ ಸರ್ವಾ ನಃ ಶಿಥಿಲಾಃ ಕ್ರಿಯಾಃ ॥ ೨೧ ॥

ಗೋಕುಲದ ನಾಲ್ಕು ಕಡೆಗಳಲ್ಲಿಯೂ ದುಂಬಿಗಳಿಂದ ಝೇಂಕರಿಸಲ್ಪಟ್ಟ ಹೂದೋಟಗಳಿದ್ದು, ಅಲ್ಲಿ ಹಕ್ಕಿಗಳು ಚಿಲಿಪಿಲಿ ಗುಟ್ಟುತ್ತಿದ್ದವು. ಕಮಲದ ದಂಟುಗಳಿಂದ ಸಮಲಂಕೃತವಾದ ಹಾಗೂ ಹಂಸ-ಕಾರಂಡವ ಪಕ್ಷಿಗಳಿಂದ ವ್ಯಾಪ್ತವಾದ ಸುಂದರ ಸರೋವರಗಳಿಂದಲೂ ಕೂಡಿದ್ದು ಗೋಕುಲವು ಅತ್ಯಂತ ಶೋಭಾಯಮಾನವಾಗಿತ್ತು. ॥ ೧೩ ॥

ಶ್ರೀಕೃಷ್ಣನ ಅನುಚರನೂ, ಅವನಿಗೆ ಅತ್ಯಂತ ಪ್ರಿಯನೂ ಆದ ಉದ್ಧವನು ಗೋಕುಲಕ್ಕೆ ಬಂದೊಡನೆ ನಂದಗೋಪನು ಮುಂದಾಗಿ ಹೋಗಿ ಅವನನ್ನು ವಾಸುದೇವನೇ ಬಂದಿರುವನೆಂದು ಭಾವಿಸಿ ಅತ್ಯಂತ ಪ್ರೀತಿಯಿಂದ ಆಲಿಂಗಿಸಿಕೊಂಡು ಸನ್ಮಾನಿಸಿದನು. ॥ ೧೪ ॥ ಪಾಯಸಾದಿಗಳಿಂದ ಕೂಡಿದ ಭೋಜನವನ್ನು ಮಾಡಿಸಿದನು. ಬಳಿಕ ಉದ್ಧವನು ಮೆತ್ತೆಯಮೇಲೆ ಕುಳಿತುಕೊಂಡಾಗ ಸೇವಕರು ಕೈಕಾಲುಗಳನ್ನು ಒತ್ತಿ, ಗಾಳಿಯನ್ನು ಬೀಸಿ ಆಯಾಸವನ್ನು ಪರಿಹರಿಸಿದರು. ॥ ೧೫ ॥ ಆಗ ನಂದಗೋಪನು ಅವನನ್ನು ಪ್ರಶ್ನಿಸಿದನು – ಪರಮಭಾಗ್ಯಶಾಲಿಯಾದ ಉದ್ಧವನೇ! ನನಗೆ ಗೆಳೆಯನಾದ ವಸುದೇವನು ಸೆರೆಮನೆಯಿಂದ ಬಿಡುಗಡೆ ಹೊಂದಿ, ತನ್ನ ಆತ್ಮೀಯರಾದ ಸ್ವಜನರಿಂದಲೂ ಭಾರ್ಯಾಪುತ್ರರಿಂದಲೂ ಕೂಡಿ ಕುಶಲಿಯಾಗಿರುವನಲ್ಲವೇ? ॥ ೧೬ ॥ ಪಾಪಿಯಾದ ಕಂಸನು ತನ್ನ ಪಾಪದ ಫಲಸ್ವರೂಪವಾಗಿ ಅನುಯಾಯಿಗಳೊಂದಿಗೆ ಮರಣ ಹೊಂದಿದನು. ಇದು ಮಹಾಸೌಭಾಗ್ಯದ ವಿಷಯವೇ ಆಗಿದೆ. ಏಕೆಂದರೆ, ಸ್ವಭಾವದಿಂದಲೇ ಧಾರ್ಮಿಕರೂ ಸಾಧುಗಳೂ ಆದ ಯದುವಂಶಿಯರನ್ನು ಅವನು ಸದಾ ದ್ವೇಷಿಸುತ್ತಿದ್ದನು. ॥ ೧೭ ॥ ಅದಿರಲಿ, ಉದ್ಧವನೇ! ಶ್ರೀಕೃಷ್ಣನು ಎಂದಾದರೂ ನಮ್ಮುಗಳನ್ನು ನೆನೆದುಕೊಳ್ಳುವನೇ? ಇವಳು ಅವನ ತಾಯಿಯಾಗಿದ್ದಾಳೆ. ಇವರು ಸ್ವಜನ-ಸಂಬಂಧಿಗಳು. ಸ್ನೇಹಿತರಾದ ಗೋಪರಿದ್ದಾರೆ. ಅವನನ್ನೇ ತಮ್ಮ ಸ್ವಾಮಿಯೆಂದೂ, ಸರ್ವಸ್ವವೆಂದೂ ಭಾವಿಸುವ ಈ ವ್ರಜವಿದೆ. ಅವನು ಪ್ರೀತಿಸುತ್ತಿದ್ದ ಗೋವುಗಳಿವೆ. ಅವನು ವಿಹರಿಸಿದ ವೃಂದಾವನ ಮತ್ತು ಈ ಗೋವರ್ಧನವಿದೆ. ಇವುಗಳನ್ನು ಎಂದಾದರೂ ಸ್ಮರಿಸುತ್ತಿರುವನೇ? ॥ ೧೮ ॥ ಉದ್ಧವಾ! ತನ್ನ ಸುಹೃದ್-ಬಂಧುಗಳನ್ನು ನೋಡಲು ನಮ್ಮ ಗೋವಿಂದನು ಒಮ್ಮೆಯಾದರೂ ಬರುವನೇ? ಎಂಬುದನ್ನಾದರೂ ಹೇಳು. ಅವನು ಇಲ್ಲಿಗೆ ಬಂದರೆ ನಾವು ಅವನ ನೀಳವಾದ ಮೂಗು, ಮಧುರವಾದ ಹಾಸ್ಯ ಮತ್ತು ಕುಡಿನೋಟದಿಂದ ಕೂಡಿದ ಮುಖಕಮಲವನ್ನಾದರೂ ನೋಡಬಹುದು. ॥ ೧೯ ॥ ಉದ್ಧವನೇ! ಶ್ರೀಕೃಷ್ಣನ ಹೃದಯವು ಉದಾರವಾಗಿದೆ. ಅವನ ಶಕ್ತಿ ಅನಂತವಾಗಿದೆ. ಅವನು ದಾವಾಗ್ನಿಯಿಂದ, ಬಿರುಗಾಳಿ-ಮಳೆಯಿಂದ, ವೃಷಾಸುರ ಮತ್ತು ಅಜಗರಾದಿ ನಿವಾರಿಸಲು ಸಾಧ್ಯವಲ್ಲದ ಮೃತ್ಯುವಿನ ನಿಮಿತ್ತಗಳಿಂದ ನಮ್ಮನ್ನು ಒಮ್ಮೆಯಲ್ಲ, ಅನೇಕ ಬಾರಿ ರಕ್ಷಿಸಿರುವನು. ॥ ೨೦ ॥ ಉದ್ಧವಾ! ನಾವು ಶ್ರೀಕೃಷ್ಣನ ವಿಚಿತ್ರ ಚರಿತ್ರೆಗಳನ್ನು, ಅವನ ಲೀಲಾಪೂರ್ಣವಾದ ಕುಡಿನೋಟವನ್ನು, ಉನ್ಮುಕ್ತವಾದ ನಗುವನ್ನು, ಮಧುರವಾದ ಮಾತುಗಳನ್ನು ಸ್ಮರಿಸುತ್ತಾ ಇರುತ್ತೇವೆ. ಈಗ ನಮ್ಮಿಂದ ಯಾವುದೇ ಕೆಲಸ ಕಾರ್ಯಗಳು ನಡೆಯದಷ್ಟು ಅವನ ಸ್ಮರಣೆಯಲ್ಲೇ ತನ್ಮಯರಾಗಿರುತ್ತೇವೆ. ॥ ೨೧ ॥

ಸರಿಚ್ಛೈಲವನೋದ್ದೇಶಾನ್ ಮುಕುಂದಪದಭೂಷಿತಾನ್ ।
ಆಕ್ರೀಡಾನೀಕ್ಷಮಾಣಾನಾಂ ಮನೋ ಯಾತಿ ತದಾತ್ಮತಾಮ್
॥ ೨೨ ॥

ಮನ್ಯೇ ಕೃಷ್ಣಂ ಚ ರಾಮಂ ಚ ಪ್ರಾಪ್ತಾವಿಹ ಸುರೋತ್ತಮೌ ।
ಸುರಾಣಾಂ ಮಹದರ್ಥಾಯ ಗರ್ಗಸ್ಯ ವಚನಂ ಯಥಾ
॥ ೨೩ ॥

ಕಂಸಂ ನಾಗಾಯುತಪ್ರಾಣಂ ಮಲ್ಲೌ ಗಜಪತಿಂ ತಥಾ ।
ಅವಧಿಷ್ಟಾಂ ಲೀಲಯೈವ ಪಶೂನಿವ ಮೃಗಾಧಿಪಃ
॥ ೨೪ ॥

ತಾಲತ್ರಯಂ ಮಹಾಸಾರಂ ಧನುರ್ಯಷ್ಟಿಮಿವೇಭರಾಟ್ ।
ಬಭಂಜೈಕೇನ ಹಸ್ತೇನ ಸಪ್ತಾಹಮದಧಾದ್ಗಿರಿಮ್
॥ ೨೫ ॥

ಪ್ರಲಂಬೋ ಧೇನುಕೋಽರಿಷ್ಟಸ್ತೃಣಾವರ್ತೋ ಬಕಾದಯಃ ।
ದೈತ್ಯಾಃ ಸುರಾಸುರಜಿತೋ ಹತಾ ಯೇನೇಹ ಲೀಲಯಾ
॥ ೨೬ ॥

ಶ್ರೀಶುಕ ಉವಾಚ

ಇತಿ ಸಂಸ್ಮೃತ್ಯ ಸಂಸ್ಮೃತ್ಯ ನಂದಃ ಕೃಷ್ಣಾನುರಕ್ತಧೀಃ ।
ಅತ್ಯುತ್ಕಂಠೋಽಭವತ್ತೂಷ್ಣೀಂ ಪ್ರೇಮಪ್ರಸರವಿಹ್ವಲಃ
॥ ೨೭ ॥

ಯಶೋದಾ ವರ್ಣ್ಯಮಾನಾನಿ ಪುತ್ರಸ್ಯ ಚರಿತಾನಿ ಚ ।
ಶೃಣ್ವನ್ತ್ಯಶ್ರೂಣ್ಯವಾಸ್ರಾಕ್ಷೀತ್ಸ್ನೇಹಸ್ನುತಪಯೋಧರಾ
॥ ೨೮ ॥

ತಯೋರಿತ್ಥಂ ಭಗವತಿ ಕೃಷ್ಣೇ ನಂದಯಶೋದಯೋಃ ।
ವೀಕ್ಷ್ಯಾನುರಾಗಂ ಪರಮಂ ನಂದಮಾಹೋದ್ಧವೋ ಮುದಾ
॥ ೨೯ ॥

ಉದ್ಧವ ಉವಾಚ

ಯುವಾಂ ಶ್ಲಾಘ್ಯತಮೌ ನೂನಂ ದೇಹಿನಾಮಿಹ ಮಾನದ ।
ನಾರಾಯಣೇಽಖಿಲಗುರೌ ಯತ್ಕೃತಾ ಮತಿರೀದೃಶೀ
॥ ೩೦ ॥

ಶ್ರೀಕೃಷ್ಣನು ಜಲಕ್ರೀಡೆಯಾಡಿದ ಈ ನದಿಯನ್ನು ನೋಡುವಾಗ, ತನ್ನ ಒಂದೇ ಕೈಯಿಂದ ಎತ್ತಿದ ಗಿರಿರಾಜ ಗೋವರ್ಧನವನ್ನೂ ಅವನು ಗೋವುಗಳನ್ನು ಮೇಯಿಸುತ್ತಾ, ಕೊಳಲನ್ನು ನುಡಿಸುತ್ತಾ ವಿಹರಿಸಿದ ಈ ವೃಂದಾವನವನ್ನು ಅವನು ತನ್ನ ಸ್ನೇಹಿತರೊಂದಿಗೆ ಅನೇಕ ವಿಧದ ಆಟವಾಡುತ್ತಿದ್ದ ಸ್ಥಳಗಳನ್ನು ನೋಡುವಾಗ, ಇನ್ನೂ ಅಳಿಯದೇ ಇರುವ ಅವನ ಪದಚಿಹ್ನೆಯನ್ನು ನೋಡಿದಾಗ ನಮ್ಮ ಮನಸ್ಸು ಶ್ರೀಕೃಷ್ಣಮಯವಾಗಿ ಹೋಗುತ್ತದೆ. ॥ ೨೨ ॥ ದೇವಶ್ರೇಷ್ಠರಾದ ಶ್ರೀಕೃಷ್ಣ-ಬಲರಾಮರು ದೇವತೆಗಳ ಪ್ರಯೋಜನ ಸಿದ್ಧಿಗಾಗಿ ಇಲ್ಲಿ ಅವತರಿಸಿರುವರೆಂದು ನಾನು ಭಾವಿಸುತ್ತೇನೆ. ಗರ್ಗಾಚಾರ್ಯರೂ ಇದನ್ನು ನಮಗೆ ಹೀಗೆಯೇ ಹೇಳಿದ್ದರು. ॥ ೨೩ ॥ ಹತ್ತು ಸಾವಿರ ಆನೆಗಳ ಬಲವುಳ್ಳ ಕಂಸನನ್ನು, ಅಜೇಯರೆನಿಸಿದ್ದ ಮುಷ್ಟಿಕ-ಚಾಣೂರ ಮಲ್ಲರನ್ನು, ಕುವಲಯಾಪೀಡಗಜವನ್ನು ಇವರಿಬ್ಬರೂ ಸೇರಿ ಸಿಂಹವು ಕ್ಷುದ್ರಪಶುಗಳನ್ನು ಕೊಲ್ಲುವಂತೆ ಆಟವಾಡುತ್ತಲೇ ಸಂಹರಿಸಿದರು. ॥ ೨೪ ॥ ಮೂರು ತಾಳೆಮರಗಳಷ್ಟು ಉದ್ದವಾದ, ಅತ್ಯಂತ ದೃಢವಾಗಿದ್ದ ಮಹಾಧನುಸ್ಸನ್ನು ಗಜರಾಜನು ಕೋಲನ್ನು ಅಥವಾ ಕಬ್ಬಿನ ಜಲ್ಲೆಯನ್ನು ಮುರಿದು ಹಾಕುವಂತೆ ಶ್ರೀಕೃಷ್ಣನು ಮುರಿದು ಹಾಕಿದನು. ಒಂದೇ ಕೈಯಲ್ಲಿ ಗೋವರ್ಧನ ಪರ್ವತವನ್ನು ಏಳು ದಿವಸಗಳವರೆಗೆ ಹಿಡಿದೆತ್ತಿ ನಿಂತಿದ್ದನು. ॥ ೨೫ ॥ ಸಮಸ್ತ ದೇವತೆಗಳನ್ನೂ, ಅಸುರರನ್ನೂ ಜಯಿಸಿದ ಪ್ರಲಂಬ, ಧೇನುಕ, ಅರಿಷ್ಟಾಸುರ, ತೃಣಾವರ್ತ, ಬಕ ಮುಂತಾದ ದೊಡ್ಡ ದೊಡ್ಡ ದೈತ್ಯರನ್ನು ನಮ್ಮೆಲ್ಲರ ಸಮಕ್ಷಮದಲ್ಲಿ ಆಡುತ್ತಾಡುತ್ತಲೇ ಶ್ರೀಕೃಷ್ಣನು ಸಂಹರಿಸಿಬಿಟ್ಟಿದ್ದನು. ॥ ೨೬ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿದ್ರಾಜನೇ! ಶ್ರೀಕೃಷ್ಣನಲ್ಲಿಯೇ ಅನುರಕ್ತವಾದ ಮನಸ್ಸಿನಿಂದ ಕೂಡಿದ್ದ ನಂದಗೋಪನು ಹೀಗೆ ಶ್ರೀಕೃಷ್ಣನ ಬಾಲಲೀಲೆಗಳೆಲ್ಲವನ್ನು ಒಂದಾದ ಮೇಲೊಂದರಂತೆ ಸ್ಮರಿಸುತ್ತಾ ಪ್ರೇಮಾವೇಶದಿಂದ ಗದ್ಗದನಾಗಿ ಮುಂದೆ ಮಾತನಾಡಲಾಗದೆ ಸುಮ್ಮನಾದನು. ಆವಾಗ ಶ್ರೀಕೃಷ್ಣನನ್ನು ನೋಡಬೇಕೆಂಬ ಕಾತುರವು ಹೆಚ್ಚಾಗಿ ಬಿಟ್ಟಿತು. ॥ ೨೭ ॥ ಯಶೋದಾದೇವಿಯೂ ನಂದನು ವರ್ಣಿಸುತ್ತಿದ್ದ ತನ್ನ ಬಾಲಮುಕುಂದನ ಚರಿತ್ರೆಗಳನ್ನು ಕೇಳುತ್ತಾ ಆನಂದಬಾಷ್ಪಗಳನ್ನು ಧಾರಾಕಾರವಾಗಿ ಸುರಿಸುತ್ತಿದ್ದಳು. ಪುತ್ರ ಸ್ನೇಹದ ಸ್ಮರಣೆಯಿಂದಾಗಿ ಅವಳ ಸ್ತನಗಳಿಂದ ಹಾಲು ಸ್ರವಿಸತೊಡಗಿತು. ॥ ೨೮ ॥ ನಂದ-ಯಶೋದೆಯರ ಹೃದಯದಲ್ಲಿ ಶ್ರೀಕೃಷ್ಣನ ಕುರಿತಾದ ಇರುವ ಅಗಾಧ ಅನುರಾಗವನ್ನು ನೋಡಿ ಉದ್ಧವನು ಆನಂದ ಮಗ್ನನಾದನು ಹಾಗೂ ಅವರಲ್ಲಿ ಹೇಳತೊಡಗಿದನು. ॥ ೨೯ ॥

ಉದ್ಧವನು ಹೇಳುತ್ತಾನೆ – ಸನ್ಮಾನ್ಯ ನಂದಗೋಪನೇ! ನೀವಿಬ್ಬರೂ ದೇಹಧಾರಿಗಳಲ್ಲಿ ಅತ್ಯಂತ ಶ್ಲಾಘ್ಯತಮರಾಗಿರುವಿರಿ. ಅಖಿಲಲೋಕಗುರುವಾದ ಶ್ರೀಮನ್ನಾರಾಯಣನಲ್ಲಿ ನಿಮಗೆ ಈ ವಿಧವಾದ ಪುತ್ರವಾತ್ಸಲ್ಯವಿರುವುದಲ್ಲವೇ? ॥ ೩೦ ॥

ಏತೌ ಹಿ ವಿಶ್ವಸ್ಯ ಚ ಬೀಜಯೋನೀ
ರಾಮೋ ಮುಕುಂದಃ ಪುರುಷಃ ಪ್ರಧಾನಮ್ ।
ಅನ್ವೀಯ ಭೂತೇಷು ವಿಲಕ್ಷಣಸ್ಯ
ಜ್ಞಾನಸ್ಯ ಚೇಶಾತ ಇಮೌ ಪುರಾಣೌ ॥ ೩೧ ॥

ಯಸ್ಮಿಂಜನಃ ಪ್ರಾಣವಿಯೋಗಕಾಲೇ
ಕ್ಷಣಂ ಸಮಾವೇಶ್ಯ ಮನೋವಿಶುದ್ಧಮ್ ।
ನಿರ್ಹೃತ್ಯ ಕರ್ಮಾಶಯಮಾಶು ಯಾತಿ
ಪರಾಂ ಗತಿಂ ಬ್ರಹ್ಮಮಯೋಽರ್ಕವರ್ಣಃ ॥ ೩೨ ॥

ತಸ್ಮಿನ್ ಭವಂತಾವಖಿಲಾತ್ಮಹೇತೌ
ನಾರಾಯಣೇ ಕಾರಣಮರ್ತ್ಯಮೂರ್ತೌ ।
ಭಾವಂ ವಿಧತ್ತಾಂ ನಿತರಾಂ ಮಹಾತ್ಮನ್
ಕಿಂ ವಾವಶಿಷ್ಟಂ ಯುವಯೋಃ ಸುಕೃತ್ಯಮ್ ॥ ೩೩ ॥

ಆಗಮಿಷ್ಯತ್ಯದೀರ್ಘೇಣ ಕಾಲೇನ ವ್ರಜಮಚ್ಯುತಃ ।
ಪ್ರಿಯಂ ವಿಧಾಸ್ಯತೇ ಪಿತ್ರೋರ್ಭಗವಾನ್ ಸಾತ್ವತಾಂ ಪತಿಃ ॥ ೩೪ ॥

ಹತ್ವಾ ಕಂಸಂ ರಂಗಮಧ್ಯೇ ಪ್ರತೀಪಂ ಸರ್ವಸಾತ್ವತಾಮ್ ।
ಯದಾಹ ವಃ ಸಮಾಗತ್ಯ ಕೃಷ್ಣಃ ಸತ್ಯಂ ಕರೋತಿ ತತ್ ॥ ೩೫ ॥

ಮಾ ಖಿದ್ಯತಂ ಮಹಾಭಾಗೌ ದ್ರಕ್ಷ್ಯಥಃ ಕೃಷ್ಣಮಂತಿಕೇ ।
ಅಂತರ್ಹೃದಿ ಸ ಭೂತಾನಾಮಾಸ್ತೇ ಜ್ಯೋತಿರಿವೈಧಸಿ ॥ ೩೬ ॥

ನ ಹ್ಯಸ್ಯಾಸ್ತಿ ಪ್ರಿಯಃ ಕಶ್ಚಿನ್ನಾಪ್ರಿಯೋ ವಾಸ್ತ್ಯಮಾನಿನಃ ।
ನೋತ್ತಮೋ ನಾಧಮೋ ನಾಪಿ ಸಮಾನಸ್ಯಾಸಮೋಽಪಿ ವಾ ॥ ೩೭ ॥

ನ ಮಾತಾ ನ ಪಿತಾ ತಸ್ಯ ನ ಭಾರ್ಯಾ ನ ಸುತಾದಯಃ ।
ನಾತ್ಮೀಯೋ ನ ಪರಶ್ಚಾಪಿ ನ ದೇಹೋ ಜನ್ಮ ಏವ ಚ ॥ ೩೮ ॥

ನ ಚಾಸ್ಯ ಕರ್ಮ ವಾ ಲೋಕೇ ಸದಸನ್ಮಿಶ್ರಯೋನಿಷು ।
ಕ್ರೀಡಾರ್ಥಃ ಸೋಽಪಿ ಸಾಧೂನಾಂ ಪರಿತ್ರಾಣಾಯ ಕಲ್ಪತೇ ॥ ೩೯ ॥

ನಂದರಾಜಾ! ನಿನ್ನ ಮಕ್ಕಳಾದ ಬಲರಾಮ-ಶ್ರೀಕೃಷ್ಣರು ಸಾಮಾನ್ಯರಲ್ಲ, ಪುರಾಣ ಪುರುಷರು. ಅವರು ಈ ಅಖಂಡ ವಿಶ್ವಕ್ಕೆ ಉಪಾದಾನ ಕಾರಣರೂ, ನಿಮಿತ್ತಕಾರಣರೂ ಆಗಿರುತ್ತಾರೆ. ಭಗವಾನ್ ಶ್ರೀಕೃಷ್ಣನು ಪುರುಷನಾದರೆ ಬಲರಾಮನು ಪ್ರಧಾನ (ಪ್ರಕೃತಿ)ನಾಗಿದ್ದಾನೆ. ಇವರಿಬ್ಬರೇ ಸಮಸ್ತ ಪ್ರಾಣಿಗಳಲ್ಲಿ ಪ್ರವೇಶಿಸಿ ಅವರಿಗೆ ಜೀವನದಾನವನ್ನು ಕೊಟ್ಟು, ಅವರಲ್ಲಿರುವ ಅತ್ಯಂತ ವಿಲಕ್ಷಣವಾದ ಜ್ಞಾನಸ್ವರೂಪ ಜೀವನನ್ನು ನಿಯಂತ್ರಿಸುತ್ತಾರೆ. ॥ ೩೧ ॥ ಮರಣಕಾಲದಲ್ಲಿ ತನ್ನ ಶುದ್ಧ ಮನಸ್ಸನ್ನು ಒಂದು ಕ್ಷಣವಾದರೂ ಭಗವಂತನಲ್ಲಿ ತೊಡಗಿಸುವ ಜೀವನು ಸಮಸ್ತ ಕರ್ಮವಾಸನೆಗಳನ್ನು ಕಳೆದುಕೊಂಡು ಸೂರ್ಯನಂತೆ ತೇಜಸ್ವಿಯಾಗಿ, ಬ್ರಹ್ಮಮಯನೂ ಆಗಿ ಪರಮಗತಿಯನ್ನು ಹೊಂದುತ್ತಾನೆ. ॥ ೩೨ ॥ ಭಗವಾನ್ ಶ್ರೀಕೃಷ್ಣನು ಎಲ್ಲರ ಆತ್ಮನೂ, ಪರಮ ಕಾರಣನೂ ಆಗಿದ್ದಾನೆ. ಭಕ್ತರ ಅಭಿಲಾಷೆಗಳನ್ನು ಪೂರ್ಣಗೊಳಿಸಲಿಕ್ಕಾಗಿಯೂ, ಭೂಭಾರವನ್ನು ಇಳಿಸುವುದಕ್ಕಾಗಿಯೂ ಮನುಷ್ಯ ಶರೀರದಿಂದ ಅವತರಿಸಿರುವನು. ಮಹಾತ್ಮರಾದ ದಂಪತಿಗಳೇ! ಆ ಪರಮಾತ್ಮನಲ್ಲಿ ನೀವು ನಿರತಿಶಯವಾದ ಪುತ್ರವಾತ್ಸಲ್ಯವನ್ನು ಹೊಂದಿರುವಿರಿ. ಕೃತ-ಕೃತ್ಯರಾದ ನಿಮ್ಮಿಬ್ಬರಿಗೆ ಇದಲ್ಲದೆ ಬೇರೆಯಾದ ಶುಭಕರ್ಮವು ಯಾವುದು ಬಾಕಿ ಉಳಿದಿರುವುದು? ॥ ೩೩ ॥ ಭಕ್ತವತ್ಸಲನಾದ ಯದುವಂಶ ಶಿರೋಮಣಿ ಭಗವಾನ್ ಶ್ರೀಕೃಷ್ಣನು ಕೆಲವೇ ದಿವಸಗಳಲ್ಲಿ ವ್ರಜಕ್ಕೆ ಬಂದು, ಮಾತಾ-ಪಿತೃಗಳಾದ ನಿಮ್ಮಿಬ್ಬರನ್ನು ಆನಂದಗೊಳಿಸುವನು. ॥ ೩೪ ॥ ಸಮಸ್ತ ಯದುವಂಶೀಯರ ದ್ರೋಹಿಯಾದ ಕಂಸನನ್ನು ರಂಗಸ್ಥಳದಲ್ಲಿ ಕೊಂದು ನಿಮ್ಮ ಬಳಿಗೆ ಬಂದು – 'ನಾನು ವ್ರಜಕ್ಕೆ ಬರುವೆನು' ಎಂದು ಹೇಳಿದುದನ್ನು ಶ್ರೀಕೃಷ್ಣನು ಸತ್ಯವಾಗಿಸುವನು. ॥ ೩೫ ॥ ಮಹಾಭಾಗ್ಯಶಾಲಿಗಳಾದ ನಂದ ಯಶೋದೆಯರೇ! ದುಃಖಿಸಬೇಡಿರಿ. ಕಟ್ಟಿಗೆಯೊಳಗೆ ಬೆಂಕಿಯಿರುವಂತೆ ಸಮಸ್ತ ಪ್ರಾಣಿಗಳ ಹೃದಯದಲ್ಲಿಯೂ ಇರುವ ಜಗದಾನಂದಕರನಾದ ಶ್ರೀಕೃಷ್ಣನನ್ನು ನೀವು ನಿಮ್ಮ ಸಮೀಪದಲ್ಲಿಯೇ ಕಾಣುವಿರಿ. ॥ ೩೬ ॥ ಅಹಂಕಾರಾದಿ ಮಾಯಾಗುಣಗಳಿಲ್ಲದ ಅವನಿಗೆ ಈ ಲೋಕದಲ್ಲಿ ಪ್ರಿಯನಾದವನೂ, ಅಪ್ರಿಯನಾದವನೂ ಯಾರೂ ಇಲ್ಲ. ಸರ್ವರಲ್ಲಿ ಸಮದೃಷ್ಟಿಯುಳ್ಳ ಅವನಿಗೆ (ಅವನ ದೃಷ್ಟಿಯಲ್ಲಿ) ಉತ್ತಮನೆಂಬುವವನೂ ಇಲ್ಲ, ಅಧಮನೆಂಬುವವನೂ ಇಲ್ಲ; ಅಸಮಾನನೆಂಬುವವನೂ ಇಲ್ಲ. ॥ ೩೭ ॥ ಪರಮ ಪುರುಷನಾದ ಶ್ರೀಕೃಷ್ಣನಿಗೆ ತಂದೆ-ತಾಯಿಯಾಗಲೀ, ಪತ್ನೀ-ಪುತ್ರರಾಗಲೀ, ಆತ್ಮೀಯ-ಪರಕೀಯರಾಗಲೀ ಯಾರೂ ಇಲ್ಲ. ಅಷ್ಟೇ ಅಲ್ಲ ಅವನಿಗೆ ದೇಹವೂ ಇಲ್ಲ, ಜನ್ಮವೂ ಇಲ್ಲ. ॥ ೩೮ ॥ ಅವನಿಗೆ ಈ ಲೋಕದಲ್ಲಿ ಮಾಡಬೇಕಾದ ಯಾವುದೇ ಕರ್ಮವೂ ಇಲ್ಲ. ಹೀಗಿದ್ದರೂ ಅವನು ಸಾಧುಗಳ ರಕ್ಷಣೆಗಾಗಿಯೂ, ಲೀಲಾವಿನೋದಗಳನ್ನು ಭಕ್ತರಿಗೆ ತೋರಿಸುವ ಸಲುವಾಗಿಯೂ, ದೇವತೆಯೇ ಮೊದಲಾದ ಸಾತ್ತ್ವಿಕ, ಮತ್ಸ್ಯಾದಿ ತಾಮಸ, ಮನುಷ್ಯರೇ ಆದಿ ಮಿಶ್ರಯೋನಿಗಳಲ್ಲಿ ಅವತರಿಸುತ್ತಾನೆ. ॥ ೩೯ ॥

ಸತ್ತ್ವಂ ರಜಸ್ತಮ ಇತಿ ಭಜತೇ ನಿರ್ಗುಣೋ ಗುಣಾನ್ ।
ಕ್ರೀಡನ್ನತೀತೋಽತ್ರ ಗುಣೈಃ ಸೃಜತ್ಯವತಿ ಹಂತ್ಯಜಃ ॥ ೪೦ ॥

ಯಥಾ ಭ್ರಮರಿಕಾದೃಷ್ಟ್ಯಾ ಭ್ರಾಮ್ಯತೀವ ಮಹೀಯತೇ ।
ಚಿತ್ತೇ ಕರ್ತರಿ ತತ್ರಾತ್ಮಾ ಕರ್ತೇವಾಹಂಧಿಯಾ ಸ್ಮೃತಃ ॥ ೪೧ ॥

ಯುವಯೋರೇವ ನೈವಾಯಮಾತ್ಮಜೋ ಭಗವಾನ್ ಹರಿಃ ।
ಸರ್ವೇಷಾಮಾತ್ಮಜೋ ಹ್ಯಾತ್ಮಾ ಪಿತಾ ಮಾತಾ ಸ ಈಶ್ವರಃ ॥ ೪೨ ॥

ದೃಷ್ಟಂ ಶ್ರುತಂ ಭೂತಭವದ್ಭವಿಷ್ಯತ್
ಸ್ಥಾಸ್ನುಶ್ಚರಿಷ್ಣುರ್ಮಹದಲ್ಪಕಂ ಚ ।
ವಿನಾಚ್ಯುತಾದ್ವಸ್ತು ತರಾಂ ನ ವಾಚ್ಯಂ
ಸ ಏವ ಸರ್ವಂ ಪರಮಾರ್ಥಭೂತಃ ॥ ೪೩ ॥

ಏವಂ ನಿಶಾ ಸಾ ಬ್ರುವತೋರ್ವ್ಯತೀತಾ
ನಂದಸ್ಯ ಕೃಷ್ಣಾನುಚರಸ್ಯ ರಾಜನ್ ।
ಗೋಪ್ಯಃ ಸಮುತ್ಥಾಯ ನಿರೂಪ್ಯ ದೀಪಾನ್
ವಾಸ್ತೂನ್ ಸಮಭ್ಯರ್ಚ್ಯ ದಧೀನ್ಯಮಂಥನ್ ॥ ೪೪ ॥

ತಾ ದೀಪದೀಪ್ತೈರ್ಮಣಿಭಿರ್ವಿರೇಜೂ
ರಜ್ಜೂರ್ವಿಕರ್ಷದ್ಭುಜಕಂಕಣಸ್ರಜಃ ।
ಚಲನ್ನಿತಂಬಸ್ತನಹಾರಕುಂಡಲ-
ತ್ವಿಷತ್ಕಪೋಲಾರುಣಕುಂಕುಮಾನನಾಃ ॥ ೪೫ ॥

ಉದ್ಗಾಯತೀನಾಮರವಿಂದಲೋಚನಂ
ವ್ರಜಾಂಗನಾನಾಂ ದಿವಮಸ್ಪೃಶದ್ಧ್ವನಿಃ ।
ದಧ್ನಶ್ಚ ನಿರ್ಮಂಥನಶಬ್ದಮಿಶ್ರಿತೋ
ನಿರಸ್ಯತೇ ಯೇನ ದಿಶಾಮಮಂಗಲಮ್ ॥ ೪೬ ॥

ಭಗವತ್ಯುದಿತೇ ಸೂರ್ಯೇ ನಂದದ್ವಾರಿ ವ್ರಜೌಕಸಃ ।
ದೃಷ್ಟ್ವಾ ರಥಂ ಶಾತಕೌಂಭಂ ಕಸ್ಯಾಯಮಿತಿ ಚಾಬ್ರುವನ್ ॥ ೪೭ ॥

ನಂದರಾಜಾ! ಭಗವಂತನು ಅಪ್ರಾಕೃತನು. ಅವನಲ್ಲಿ ಸತ್ತ್ವ, ರಜ, ತಮಗಳೆಂಬ ಪ್ರಾಕೃತ ಒಂದು ಗುಣವೂ ಇಲ್ಲ. ಹೀಗೆ ಪ್ರಾಕೃತಗುಣರಹಿತನಾಗಿದ್ದರೂ ಕೂಡ ಲೀಲೆಗಾಗಿ ಕ್ರೀಡೆಯನ್ನಾಡುತ್ತಾ, ಸತ್ತ್ವ, ರಜ, ತಮಗಳೆಂಬ ಮೂರು ಗುಣಗಳನ್ನು ಸ್ವೀಕರಿಸಿ ಈ ಜಗತ್ತಿನ ಸೃಷ್ಟಿ, ಸ್ಥಿತಿ, ಲಯಗಳನ್ನು ಮಾಡುತ್ತಾ ಇರುತ್ತಾನೆ. ॥ ೪೦ ॥ ಹುಡುಗರು ಅಪ್ಪಾಲೆ-ತಿಪ್ಪಾಲೆಯಾಡುವಾಗ ಅವರ ಸುತ್ತಲೂ ಇರುವ ಪದಾರ್ಥಗಳು ತಿರುಗುತ್ತಿರುವಂತೆ ಕಂಡು ಬರುತ್ತದೆ. ಆದರೆ ಆ ವಸ್ತುಗಳು ತಿರುಗುತ್ತಿರುವುದಿಲ್ಲ. ಅಂತೆಯೇ ಚಿತ್ತವೇ ಎಲ್ಲವನ್ನೂ ಮಾಡುತ್ತಿರುತ್ತದೆ. ಆದರೆ ಆ ಶುದ್ಧ ಚೈತನ್ಯದಲ್ಲಿ ಅಹಂಬುದ್ಧಿಯು ಉಂಟಾದ ಕಾರಣ ಭ್ರಮೆಯಿಂದ ಆತ್ಮನು ಕರ್ತೃವಿನಂತೆ ತಿಳಿದುಕೊಳ್ಳುತ್ತಾನೆ. ॥ ೪೧ ॥ ನಂದ! ಭಗವಾನ್ ಶ್ರೀಕೃಷ್ಣನು ಕೇವಲ ನಿಮ್ಮಿಬ್ಬರಿಗೆ ಮಾತ್ರವೇ ಪುತ್ರನಾಗಿಲ್ಲ. ಸಮಸ್ತ ಪ್ರಾಣಿಗಳಿಗೂ ಆತ್ಮಸ್ವರೂಪನೂ, ಪುತ್ರನೂ, ತಂದೆ-ತಾಯಿ ಹೀಗೆ ಎಲ್ಲವೂ ಆಗಿದ್ದಾನೆ. ॥ ೪೨ ॥ ನಂದಗೋಪನೇ! ಲೋಕದಲ್ಲಿ ನೋಡುವ, ಕೇಳುವ ವಸ್ತುಗಳಲ್ಲಿ ಭೂತ, ಭವಿಷ್ಯ, ವರ್ತಮಾನಕ್ಕೆ ಸಂಬಂಧಿಸಿರಲಿ, ಸ್ಥಾವರ-ಜಂಗಮವಾಗಿರಲಿ, ಅಲ್ಪವಾಗಿರಲೀ, ಮಹತ್ತಾಗಿರಲೀ, ಅದೆಲ್ಲ ವಸ್ತುಗಳು ಭಗವಾನ್ ಶ್ರೀಕೃಷ್ಣನಿಂದ ಬೇರೆಯಾಗಿವೆ ಎಂದು ಹೇಳಬಾರದು. ನಂದರಾಜ! ಎಲ್ಲ ವಸ್ತುಗಳಲ್ಲಿಯೂ ಅಚ್ಯುತನಿದ್ದಾನೆ. ಪರಮಾರ್ಥದಲ್ಲಿ ಸರ್ವಸ್ವವೂ ಅವನೇ ಆಗಿದ್ದಾನೆ. ॥ ೪೩ ॥

ಪರೀಕ್ಷಿತನೇ! ಭಗವಾನ್ ಶ್ರೀಕೃಷ್ಣನ ಸಖನಾದ ಉದ್ಧವನೂ ನಂದಗೋಪನೂ ಹೀಗೆ ಪರಸ್ಪರ ಮಾತನಾಡಿಕೊಳ್ಳುತ್ತಾ ರಾತ್ರಿಯೇ ಕಳೆದುಹೋಯಿತು. ರಾತ್ರಿಯು ಕಳೆದು ಹೋಗುತ್ತಿರುವಾಗಲೇ ಗೋಪಿಯರು ಎದ್ದು ದೀಪವನ್ನು ಹಚ್ಚಿ ವಾಸ್ತುಪುರುಷನನ್ನು ಪೂಜಿಸಿ, ಮನೆಯನ್ನು ಗುಡಿಸಿ, ಸಾರಿಸಿ ಶುದ್ಧಗೊಳಿಸಿ ಮತ್ತೆ ಮೊಸರು ಕಡೆಯಲು ಪ್ರಾರಂಭಿಸಿದರು. ॥ ೪೪ ॥ ಗೋಪಿಕೆಯರು ಧರಿಸಿದ್ದ ಬಳೆಗಳು ಮೊಸರು ಕಡೆಯುವಾಗ ಮೇಲೆ-ಕೆಳಗೆ ಸರಿಯುತ್ತಾ ಸುಂದರವಾಗಿ ಕಾಣುತ್ತಿದ್ದವು. ಅವರ ನಿತಂಬ, ಸ್ತನಗಳು ಮತ್ತು ಕೊರಳಲ್ಲಿನ ಹಾರಗಳು ಕಂಪಿಸುತ್ತಿದ್ದವು. ಕಿವಿಗಳ ಕುಂಡಲಗಳು ಓಲಾಡುತ್ತಾ ಕುಂಕುಮಲೇಪಿತ ಕಪೋಲಗಳ ನಸುಗೆಂಪು ಹೆಚ್ಚಿಸಿದ್ದವು. ಅವರು ಧರಿಸಿದ್ದ ಆಭೂಷಣಗಳ ರತ್ನಗಳು ದೀಪದ ಬೆಳಕಿನಲ್ಲಿ ಹೊಳೆಯುತ್ತಿದ್ದವು. ಹೀಗೆ ಅತ್ಯಂತ ಶೋಭಿತರಾದ ಗೋಪಿಯರು ಮೊಸರನ್ನು ಕಡೆಯುತ್ತಿದ್ದರು. ॥ ೪೫ ॥ ಆ ಸಮಯದಲ್ಲಿ ಗೋಪಿಯರು ಕಮಲನಯನ ಶ್ರೀಕೃಷ್ಣನ ಮಂಗಲಮಯ ಚರಿತ್ರೆಗಳನ್ನು ಹಾಡುತ್ತಿದ್ದರು. ಅವರ ಆ ಸಂಗೀತವು ಕಡೆಯುವ ಘರ್-ಘರ್ ಶಬ್ದದೊಡನೆ ಬೆರೆತು ಇನ್ನೂ ಅದ್ಭುತವಾಗಿ ಸ್ವರ್ಗಲೋಕದವರೆಗೆ ಮುಟ್ಟಿತು. ಅವರ ಗಾಯನವು ದಶದಿಕ್ಕುಗಳಲ್ಲಿಯೂ ಹರಡಿಕೊಂಡು ಎಲ್ಲ ಅಮಂಗಳಗಳೂ ತೊಡೆದುಹಾಕುತ್ತಿತ್ತು. ॥ ೪೬ ॥

ಭಗವಾನ್ ಸೂರ್ಯನಾರಾಯಣನು ಉದಯಾಚಲಕ್ಕೆ ಬಂದಾಗ ಮನೆಯಿಂದ ಹೊರಗೆ ಬಂದ ವ್ರಜಾಂಗನೆಯರು ನಂದಗೋಪನ ಮನೆಯ ಬಾಗಿಲಲ್ಲಿ ನಿಂತಿದ್ದ ಒಂದು ಸ್ವರ್ಣರಥವನ್ನು ನೋಡಿದರು. 'ಇದು ಯಾರ ರಥವಾಗಿರಬಹುದು?' ಎಂದು ತಮ್ಮ-ತಮ್ಮಲ್ಲಿಯೇ ಪ್ರಶ್ನಿಸತೊಡಗಿದರು. ॥ ೪೭ ॥

ಅಕ್ರೂರ ಆಗತಃ ಕಿಂ ವಾ ಯಃ ಕಂಸಸ್ಯಾರ್ಥಸಾಧಕಃ ।
ಯೇನ ನೀತೋ ಮಧುಪುರೀಂ ಕೃಷ್ಣಃ ಕಮಲಲೋಚನಃ ॥ ೪೮ ॥

ಒಬ್ಬಳು ಕೇಳಿದಳು - ಕಮಲಲೋಚನನಾದ ಶ್ಯಾಮಸುಂದರನನ್ನು ಮಧುರೆಗೆ ಕರೆದುಕೊಂಡು ಹೋಗಿದ್ದ ಕಂಸನ ಕಾರ್ಯಸಾಧಕನಾದ ಅಕ್ರೂರನೇನಾದರೂ ಪುನಃ ಬಂದಿರುವನೇ ! ॥ ೪೮ ॥

ಕಿಂ ಸಾಧಯಿಷ್ಯತ್ಯಸ್ಮಾಭಿರ್ಭರ್ತುಃ ಪ್ರೇತಸ್ಯ ನಿಷ್ಕೃತಿಮ್ ।
ಇತಿ ಸ್ತ್ರೀಣಾಂ ವದಂತೀನಾಮುದ್ಧವೋಽಗಾತ್ ಕೃತಾಹ್ನಿಕಃ ॥ ೪೯ ॥

ಇನ್ನೊಬ್ಬಳು ಕೇಳಿದಳು - ತನ್ನ ಒಡೆಯನಾದ ಕಂಸನ ಪ್ರೇತಕ್ಕೆ ನಮ್ಮಿಂದ ಪಿಂಡಹಾಕಿಸಲೇನಾದರೂ ಬಂದಿರುವನೇ ? ಇದಲ್ಲದೆ ಬೇರೆ ಪ್ರಯೋಜನ ಏನಿದ್ದೀತು ? ಹೀಗೆ ವ್ರಜವಾಸಿಯರಾದ ಸ್ತ್ರೀಯರು ಮಾತನಾಡಿಕೊಂಡಿರುವಾಗ ಉದ್ಧವನು ತನ್ನ ನಿತ್ಯಕರ್ಮಗಳನ್ನು ಮುಗಿಸಿ ಅಲ್ಲಿಗೆ ಆಗಮಿಸಿದನು. ॥ ೪೯ ॥

ನಲವತ್ತಾರನೆಯ ಅಧ್ಯಾಯವು ಮುಗಿಯಿತು. ॥ ೪೬ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮಸ್ಕಂಧೇ ಪೂರ್ವಾರ್ಧೇ
ನಂದಶೋಕಾಪನಯನಂ ನಾಮ ಷಟ್ ಚತ್ವಾರಿಂಶೋಽಧ್ಯಾಯಃ ॥ ೪೬ ॥

ನಲವತ್ತೇಳನೆಯ ಅಧ್ಯಾಯ

ಉದ್ಧವ-ಗೋಪಿಯರ ಮಾತುಕತೆ-ಭ್ರಮರಗೀತೆ

ಶ್ರೀಶುಕ ಉವಾಚ

ತಂ ವೀಕ್ಷ್ಯ ಕೃಷ್ಣಾನುಚರಂ ವ್ರಜಸ್ತ್ರಿಯಃ
ಪ್ರಲಂಬಬಾಹುಂ ನವಕಂಜಲೋಚನಮ್ ।
ಪೀತಾಂಬರಂ ಪುಷ್ಕರಮಾಲಿನಂ ಲಸ-
ನ್ಮುಖಾರವಿಂದಂ ಮಣಿಮೃಷ್ಟಕುಂಡಲಮ್ ॥ ೧ ॥

ಶುಚಿಸ್ಮಿತಾಃ ಕೋಽಯಮಪೀವ್ಯದರ್ಶನಃ
ಕುತಶ್ಚ ಕಸ್ಯಾಚ್ಯುತವೇಷಭೂಷಣಃ ।
ಇತಿ ಸ್ಮ ಸರ್ವಾಃ ಪರಿವವ್ರುರುತ್ಸುಕಾ-
ಸ್ತಮುತ್ತಮಶ್ಲೋಕಪದಾಂಬುಜಾಶ್ರಯಮ್ ॥ ೨ ॥

ತಂ ಪ್ರಶ್ರಯೇಣಾವನತಾಃ ಸುಸತ್ಕೃತಂ
ಸವ್ರೀಡಹಾಸೇಕ್ಷಣಸೂನೃತಾದಿಭಿಃ ।
ರಹಸ್ಯಪೃಚ್ಛನ್ನುಪವಿಷ್ಟಮಾಸನೇ
ವಿಜ್ಞಾಯ ಸಂದೇಶಹರಂ ರಮಾಪತೇಃ ॥ ೩ ॥

ಜಾನೀಮಸ್ತ್ವಾಂ ಯದುಪತೇಃ ಪಾರ್ಷದಂ ಸಮುಪಾಗತಮ್ ।
ಭರ್ತ್ರೇಹ ಪ್ರೇಷಿತಃ ಪಿತ್ರೋರ್ಭವಾನ್ ಪ್ರಿಯಚಿಕೀರ್ಷಯಾ ॥ ೪ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ - ಪರೀಕ್ಷಿತನೇ ! ಶ್ರೀಕೃಷ್ಣಾನುಚರನಾದ ಉದ್ಧವನ ಆಕೃತಿ, ವೇಷ-ಭೂಷಣಗಳಿಂದ ಶ್ರೀಕೃಷ್ಣನಂತೆಯೇ ಇರುವುದನ್ನು ಗೋಪಿಯರು ನೋಡಿದರು. ಅವನಿಗೆ ದೀರ್ಘಬಾಹುಗಳಿದ್ದವು. ನೂತನ ಕಮಲದ ಎಸಳಿನಂತೆ ಕೋಮಲ ನೇತ್ರಗಳಿದ್ದವು. ಶರೀರದಲ್ಲಿ ಪೀತಾಂಬರವನ್ನು ಧರಿಸಿದ್ದನು. ಕೊರಳಲ್ಲಿ ಕಮಲಪುಷ್ಪಗಳ ಮಾಲೆಯಿತ್ತು. ಕಿವಿಗಳಲ್ಲಿ ಮಣಿಮಯ ಕುಂಡಲಗಳಿದ್ದು ಮುಖಾರವಿಂದವು ಪ್ರಫುಲ್ಲಿತವಾಗಿತ್ತು. ॥ ೧ ॥ ಮುಗುಳ್ನಗೆಯುಳ್ಳ ಗೋಪಿಯರು ಪರಸ್ಪರ ಮಾತನಾಡಿಕೊಂಡರು. ಈ ಮಹಾಪುರುಷನು ನೋಡಲು ಸುಂದರನಾಗಿದ್ದಾನೆ. ಆದರೆ ಇವನಾರು ? ಎಲ್ಲಿಂದ ಬಂದಿರುವನು ? ಯಾರ ದೂತನಾಗಿರುವನು ? ಇವನು ಶ್ರೀಕೃಷ್ಣನಂತೆಯೇ ವೇಷ-ಭೂಷಣಗಳನ್ನು ಏಕೆ ಧರಿಸಿರುವನು ? ಗೋಪಿಯರೆಲ್ಲರೂ ಅವನ ಪರಿಚಯವನ್ನು ಪಡೆಯಲು ಅತ್ಯಂತ ಉತ್ಸುಕರಾಗಿದ್ದರು. ಉತ್ತಮ ಶ್ಲೋಕನಾದ ಶ್ರೀಕೃಷ್ಣನ ಚರಣಕಮಲಗಳನ್ನೇ ಪರಮಾಶ್ರಯವನ್ನಾಗಿ ಹೊಂದಿದ್ದ ಉದ್ಧವನನ್ನು ಸುತ್ತುವರಿದು ನಿಂತುಕೊಂಡರು. ॥ ೨ ॥ ಇವನು ರಮಾರಮಣ ಭಗವಾನ್ ಶ್ರೀಕೃಷ್ಣನ ಸಂದೇಶವನ್ನೆತ್ತಿಕೊಂಡು ಬಂದಿರುವನೆಂದು ತಿಳಿದಾಗ, ಅವರು ವಿನಯದಿಂದ ಬಾಗಿ ಲಜ್ಜೆಯಿಂದ ಕೂಡಿದ ಮಂದಹಾಸದಿಂದ, ಕುಡಿನೋಟದಿಂದ ಹಾಗೂ ಸುಮಧುರವಾದ ಮಾತುಗಳಿಂದ ಉದ್ಧವನನ್ನು ಸತ್ಕರಿಸಿ, ಸುಖಾಸನದಲ್ಲಿ ಕುಳ್ಳಿರಿಸಿ ಏಕಾಂತದಲ್ಲಿ ಅವನ ಬಳಿ ಕೇಳಿದರು. ॥ ೩ ॥ ಉದ್ಧವನೇ ! ನೀನು ಯದುನಾಥನ ಪಾರ್ಷದನೆಂದು ನಾವು ತಿಳಿಯುತ್ತೇವೆ. ಅವನ ಸಂದೇಶವನ್ನೇ ಹೊತ್ತು ನೀನು ಇಲ್ಲಿಗೆ ಆಗಮಿಸಿರುವೆ. ನಿನ್ನ ಸ್ವಾಮಿಯಾದ ಶ್ಯಾಮಸುಂದರನು ತನ್ನ ತಂದೆ-ತಾಯಿಯರನ್ನು ಸಂತೋಷಪಡಿಸಲೆಂದು ನಿಮ್ಮನ್ನು ಕಳಿಸಿರುವನಲ್ಲ ? ॥ ೪ ॥

ಅನ್ಯಥಾ ಗೋವ್ರಜೇ ತಸ್ಯ ಸ್ಮರಣೀಯಂ ನ ಚಕ್ಷ್ಮಹೇ ।
ಸ್ನೇಹಾನುಬಂಧೋ ಬಂಧೂನಾಂ ಮುನೇರಪಿ ಸುದುಸ್ತ್ಯಜಃ
॥ ೫ ॥

ಅನ್ಯೇಷ್ವರ್ಥಕೃತಾ ಮೈತ್ರೀ ಯಾವದರ್ಥವಿಡಂಬನಮ್ ।
ಪುಂಭಿಃ ಸ್ತ್ರೀಷು ಕೃತಾ ಯದ್ವತ್ಸುಮನಃಸ್ವಿವ ಷಟ್ಪದೈಃ
॥ ೬ ॥

ನಿಃಸ್ವಂ ತ್ಯಜಂತಿ ಗಣಿಕಾ ಅಕಲ್ಪಂ ನೃಪತಿಂ ಪ್ರಜಾಃ ।
ಅಧೀತವಿದ್ಯಾ ಆಚಾರ್ಯಮೃತ್ವಿಜೋ ದತ್ತದಕ್ಷಿಣಮ್
॥ ೭ ॥

ಖಗಾ ವೀತಫಲಂ ವೃಕ್ಷಂ ಭುಕ್ತ್ವಾ ಚಾತಿಥಯೋ ಗೃಹಮ್ ।
ದಗ್ಧಂ ಮೃಗಾಸ್ತಥಾರಣ್ಯಂ ಜಾರೋ ಭುಕ್ತ್ವಾ ರತಾಂ ಸ್ತ್ರಿಯಮ್
॥ ೮ ॥

ಇತಿ ಗೋಪ್ಯೋ ಹಿ ಗೋವಿಂದೇ ಗತವಾಕ್ಕಾಯಮಾನಸಾಃ ।
ಕೃಷ್ಣದೂತೇ ವ್ರಜಂ ಯಾತೇ ಉದ್ಧವೇ ತ್ಯಕ್ತಲೌಕಿಕಾಃ
॥ ೯ ॥

ಗಾಯಂತ್ಯಃ ಪ್ರಿಯಕರ್ಮಾಣಿ ರುದಂತ್ಯಶ್ಚ ಗತಹ್ರಿಯಃ ।
ತಸ್ಯ ಸಂಸ್ಮೃತ್ಯ ಸಂಸ್ಮೃತ್ಯ ಯಾನಿ ಕೈಶೋರಬಾಲ್ಯಯೋಃ
॥ ೧೦ ॥

ಕಾಚಿನ್ಮಧುಕರಂ ದೃಷ್ಟ್ವಾ ಧ್ಯಾಯಂತೀ ಕೃಷ್ಣಸಂಗಮಮ್ ।
ಪ್ರಿಯಪ್ರಸ್ಥಾಪಿತಂ ದೂತಂ ಕಲ್ಪಯಿತ್ವೇದಮಬ್ರವೀತ್
॥ ೧೧ ॥

ಗೋಪ್ಯುವಾಚ

ಮಧುಪ ಕಿತವಬಂಧೋ ಮಾ ಸ್ಪೃಶಾಂಘ್ರಿಂ ಸಪತ್ನ್ಯಾಃ
ಕುಚವಿಲುಲಿತಮಾಲಾಕುಂಕುಮಶ್ಮಶ್ರುಭಿರ್ನಃ ।
ವಹತು ಮಧುಪತಿಸ್ತನ್ಮಾನಿನೀನಾಂ ಪ್ರಸಾದಂ
ಯದುಸದಸಿ ವಿಡಂಬ್ಯಂ ಯಸ್ಯ ದೂತಸ್ತ್ವಮೀದೃಕ್ ॥ ೧೨ ॥

ಅದರ ಹೊರತಾಗಿ ಈ ಗೊಲ್ಲರಹಳ್ಳಿಯಲ್ಲಿ ಅವನು ಸ್ಮರಿಸಬೇಕಾದ ಬೇರೆಯಾವ ವಸ್ತುವೂ ಕಾಣುವುದಿಲ್ಲ. ತಂದೆ-ತಾಯಿಯರು, ನೆಂಟರಿಷ್ಟರ ಸ್ನೇಹಸಂಬಂಧವನ್ನು ಕಡಿದು ಹಾಕುವುದು ಮಹಾ-ಮಹಾಮುನಿಗಳಿಗೂ ಬಹಳ ಕಷ್ಟವೇ ಸರಿ. ॥ ೫ ॥ ಇತರರೊಡನೆ ಮಾಡುವ ಪ್ರೇಮ-ಸಂಬಂಧದ ನಾಟಕವು ಯಾವುದಾದರೂ ಸ್ವಾರ್ಥಕ್ಕಾಗಿಯೇ ಇರುತ್ತದೆ. ಹೂವುಗಳೊಡನೆ ಭ್ರಮರಗಳ ಮತ್ತು ಸ್ತ್ರೀಯರೊಡನೆ ಪುರುಷರ ಪ್ರೇಮ ಸಂಬಂಧವು ಸ್ವಾರ್ಥದಿಂದಲೇ ಇರುತ್ತದೆ. ॥ ೬ ॥ ತನ್ನ ಬಳಿಗೆ ಬರುವ ವಿಟಪುರುಷರಲ್ಲಿ ಹಣವಿಲ್ಲವೆಂದು ತಿಳಿದಾಗ ವೇಶ್ಯೆಯು ಅವರನ್ನು ತ್ಯಜಿಸಿಬಿಡುತ್ತಾಳೆ. ರಾಜನು ತಮ್ಮನ್ನು ರಕ್ಷಿಸಲಾರನೆಂದು ತಿಳಿದಾಗ - ಪ್ರಜೆಗಳು ಅವನನ್ನು ತ್ಯಜಿಸುತ್ತಾರೆ. ಅಧ್ಯಯನ ಮುಗಿದಾದ ಬಳಿಕ ಎಷ್ಟು ಜನ ಶಿಷ್ಯರು ಗುರುವಿನ ಸೇವೆ ಮಾಡುತ್ತಾರೆ? ಯಜ್ಞದ ದಕ್ಷಿಣೆ ದೊರೆತೊಡನೆ ಋತ್ವಿಜರು ಹೊರಟು ಹೋಗುತ್ತಾರೆ. ॥ ೭ ॥ ವೃಕ್ಷದಲ್ಲಿ ಫಲಗಳು ತೀರಿ ಹೋದಾಗ ಪಕ್ಷಿಗಳು ಹೇಳದೆ ಕೇಳದೆ ಹಾರಿಹೋಗುತ್ತವೆ. ಊಟ ಮಾಡಿದ ಬಳಿಕ ಅತಿಥಿಯು ಗೃಹಸ್ಥನ ಕಡೆಗೆ ನೋಡುತ್ತಾನೆಯೇ? ಕಾಡಿಗೆ ಬೆಂಕಿಬಿದ್ದಾಗ ಮೃಗಗಳು ಓಡಿ ಹೋಗುತ್ತವೆ. ನವಯುವತಿಯಲ್ಲಿ ಎಷ್ಟೇ ಅನುರಾಗವನ್ನು ಹೊಂದಿದ್ದರೂ ಜಾರಪುರುಷರು ಅವಳನ್ನು ಉಪಭೋಗಿಸಿದ ಬಳಿಕ ತಿರುಗಿಯೂ ಅವಳತ್ತ ನೋಡುವುದಿಲ್ಲ. ॥ ೮ ॥ ಪರೀಕ್ಷಿತನೇ! ಹೀಗೆ ಗೋಪಿಯರು ಕೃಷ್ಣದೂತನಾದ ಉದ್ಧವನು ವ್ರಜಕ್ಕೆ ಬಂದಾಗ, ಕೃಷ್ಣನು ತಮ್ಮನ್ನು ಸ್ಮರಿಸಲಿಲ್ಲವೆಂದೇ ಭಾವಿಸಿ ಹೀಗೆಲ್ಲ ಉದ್ಧವನಲ್ಲಿ ದೂರಿದರು. ಆ ಸಮಯದಲ್ಲಿ ಅವರ ಮಾತು, ಮನಸ್ಸು, ಶರೀರಗಳು ಗೋವಿಂದನಲ್ಲೇ ಲೀನವಾಗಿಬಿಟ್ಟಿದ್ದವು. ಬಾಲಮುಕುಂದನ ಬಾಲ್ಯ ಕಿಶೋರಾವಸ್ಥೆಗಳನ್ನು ಅಡಿಗಡಿಗೆ ಸ್ಮರಿಸುತ್ತಾ, ಅವನ ಅತಿಪ್ರಿಯವಾದ ಲೀಲಾಪ್ರಸಂಗಗಳನ್ನು ಹಾಡುತ್ತಾ, ಯಾವ ವಿಧವಾದ ನಾಚಿಕೆಯೂ ಇಲ್ಲದೆ ಅವರೆಲ್ಲರೂ ಉದ್ಧವನ ಮುಂದ ಗೊಳ-ಗೊಳನೆ ಅತ್ತುಬಿಟ್ಟರು. ॥ ೯-೧೦ ॥ ಆ ಸಮಯದಲ್ಲಿ ಶ್ರೀಕೃಷ್ಣನೊಡನೆ ಸೇರುವಿಕೆಯನ್ನೇ ಬಹಳವಾಗಿ ಚಿಂತಿಸುತ್ತಿದ್ದ ಗೋಪಿಯೊಬ್ಬಳು ತನ್ನ ಬಳಿಗೆ ಹಾರಿಕೊಂಡು ಬಂದ ದುಂಬಿಯನ್ನೇ ಕೃಷ್ಣದೂತನೆಂದು ಭಾವಿಸಿಕೊಂಡು ಆ ದುಂಬಿಯೊಡನೆ ಹೇಳತೊಡಗಿದಳು. ॥ ೧೧ ॥

ಗೋಪಿಯು ಹೇಳಿದಳು - ಎಲೈ ಮಧುಪನೇ! ನೀನು ಮಹಾ ಕಪಟಿಯಾದ ಮುಕುಂದನ ಸ್ನೇಹಿತನಾದ್ದರಿಂದ ನೀನೂ ಕಪಟಿಯೇ ಆಗಿರುವೆ. ನೀನು ನಮ್ಮ ಕಾಲುಗಳನ್ನು ಮುಟ್ಟಬೇಡ. ನಿನ್ನ ಕೋರಿಕೆಯ ವಿನಯವನ್ನು ತೋರಬೇಡ. ನಮ್ಮ ಸವತಿಯರ ಕುಚಗಳ ಸ್ಪರ್ಶದಿಂದ ಕೆಂಪಾದ ನಮ್ಮ ಇನಿಯನ ವನಮಾಲೆಯಿಂದ ನಿನ್ನ ಮೀಸೆಗಳೂ ಕೆಂಪಾಗಿವೆ. ನೀನೂ ಕೂಡ ಯಾವುದೇ ಹೂವಿನೊಂದಿಗೆ ಪ್ರೇಮವಿರಿಸಿಕೊಳ್ಳುವುದಿಲ್ಲ. ಇಲ್ಲಿಂದ ಅಲ್ಲಿಗೆ ಹಾರಾಡುತ್ತಾ ಇರುವೆ. ನಿನ್ನ ಸ್ವಾಮಿಯಂತೆ ನೀನೂ ಆಗಿದ್ದೀಯೆ. ಯಾದವರ ಸಭೆಯಲ್ಲಿ ಪರಿಹಾಸಕ್ಕೆ ಕಾರಣವಾಗುವ, ಮಥುರೆಯ ಮಾನಿನಿಯರ ಕುಂಕುಮಪ್ರಸಾದವನ್ನು ಅವನೇ ಇಟ್ಟುಕೊಳ್ಳಲಿ. ಅದು ನಮಗೆ ಬೇಡ. ನಿನ್ನ ಮೂಲಕವಾಗಿ ಆ ಪ್ರಸಾದವನ್ನು ನಮಗೆ ಕಳಿಸುವುದುಬೇಡ. ॥ ೧೨ ॥

ಸಕೃದಧರಸುಧಾಂ ಸ್ವಾಂ ಮೋಹಿನೀಂ ಪಾಯಯಿತ್ವಾ
ಸುಮನಸ ಇವ ಸದ್ಯಸ್ತತ್ಯಜೇಽಸ್ಮಾನ್ ಭವಾದೃಕ್ ।
ಪರಿಚರತಿ ಕಥಂ ತತ್ಪಾದಪದ್ಮಂ ತು ಪದ್ಮಾ
ಹ್ಯಪಿ ಬತ ಹೃತಚೇತಾ ಉತ್ತಮಶ್ಲೋಕಜಲ್ಪೈಃ ॥ ೧೩ ॥

ಭ್ರಮರವೇ! ನಿನ್ನಂತೆಯೇ ನಿನ್ನ ಆ ಪ್ರಭುವೂ ಶ್ಯಾಮಲ ವರ್ಣನು. ಪುಷ್ಪರಸವನ್ನು ಹೀರಿಕೊಂಡನಂತರ ನೀನು ಮತ್ತೊಂದು ಪುಷ್ಪಕ್ಕೆ ಹಾರಿ ಹೋಗುವಂತೆ ನಿನ್ನ ಸ್ವಾಮಿಯೂ ಮಾಡುತ್ತಾನೆ. ನಿನ್ನ ಆ ಸ್ವಾಮಿಯೂ ನಮಗೆ ಒಂದೇ ಒಂದು ಬಾರಿಗೆ, ನಿಜವಾಗಿ ಒಂದೇ ಒಂದು ಬಾರಿಗೆ ತನ್ನ ಮನಮೋಹಕವಾದ ಮತ್ತುಬರಿಸುವ ಅಧರಾಮೃತವನ್ನು ಕುಡಿಸಿ, ನಿನ್ನ ಹಾಗೆಯೇ ಹಳ್ಳಿಗರಾದ ನಮ್ಮನ್ನು ಪರಿತ್ಯಜಿಸಿ ಪಟ್ಟಣಕ್ಕೆ ಹೊರಟುಹೋದನು. ಇಂತಹವನ ಪಾದ ಕಮಲಗಳ ಸೇವೆಯನ್ನು ಆ ಲಕ್ಷ್ಮೀದೇವಿಯು ಹೇಗೆ ಮಾಡು ವಳೋ ತಿಳಿಯದಾಗಿದೆ. ಅವನ ಕೀರ್ತಿ, ಯಶಸ್ಸು ಚಾಟು ನುಡಿಗಳಿಗೆ ಮನಸೋತು ಅವಳು ಆ ಧೂರ್ತನ ಸೇವೆಯನ್ನು ಮಾಡುತ್ತಿರಬಹುದು ॥ ೧೩ ॥ ಎಲೈ ಷಟ್ಪದವೇ! ನಾವು ವನವಾಸಿಗಳು. ನಮಗೆ ಮನೆಮಠಗಳೂ ಇಲ್ಲ, ಅಂತಹ ನಮ್ಮ ಮುಂದೆ ನೀನು ಯದುಕುಲ ಶಿರೋಮಣಿಯಾದ ಶ್ರೀಕೃಷ್ಣನ ಗುಣಗಾನವನ್ನೇಕೆ ಮಾಡುತ್ತಿರುವೆ? ಇದು ನಮಗೆಲ್ಲ ಹಳೆಯ ದಾಗಿ ಹೋಗಿದೆ. ಅವನ ಗುಣ-ಗೊಂಗಳೆಲ್ಲವನ್ನೂ ನಾವು ಬಲ್ಲೆವು. ನಿನ್ನ ಕುತಂತ್ರವು ನಮ್ಮ ಬಳಿ ನಡೆಯದು. ನೀನು ಇಲ್ಲಿಂದ ಹೊರಟುಹೋಗು. ವಿಜಯನು ಸದಾ ಜೊತೆಯಿರುವ ಶ್ರೀಕೃಷ್ಣನ ಗುಣಗಾನವನ್ನು ಮಧುರಾಪುರವಾಸಿನಿಯರಾದ ಸಖಿಯರ ಮುಂದೆ ಹಾಡು. ಅವರು ಹೊಸಬರು. ಅವರಿಗೆ ಅವನ ಲೀಲೆಗಳು ಇನ್ನೂ ಅಷ್ಟಾಗಿ ತಿಳಿಯವು. ಈ ಸಮಯದಲ್ಲಿ ಅವರು ಅವನಿಗೆ ಪ್ರಿಯರಾಗಿದ್ದಾರೆ. ಅವರ ಹೃದಯದ ಪೀಡೆಯನ್ನು ಅವನು ಪರಿಹರಿಸಿರುವನು. ಅವರು ನಿನ್ನ ಪ್ರಾರ್ಥನೆಯನ್ನು ಸ್ವೀಕರಿಸುವರು. ನಿನ್ನ ಚಾತುರ್ಯದಿಂದ ಸಂತೋಷಗೊಂಡು ಅವರು ನಿನಗೆ ಬೇಕಾದ್ದನ್ನು ಕೊಡುವರು. ॥ ೧೪ ॥

ಕಿಮಿಹ ಬಹು ಷಡಂಘ್ರೇ ಗಾಯಸಿ ತ್ವಂ ಯದೂನಾ-
ಮಧಿಪತಿಮಗೃಹಾಣಾಮಗ್ರತೋ ನಃ ಪುರಾಣಮ್ ।
ವಿಜಯಸಖಸಖೀನಾಂ ಗೀಯತಾಂ ತತ್ಪ್ರಸಂಗಃ
ಕ್ಷಪಿತಕುಚರುಜಸ್ತೇ ಕಲ್ಪಯಂತೀಷ್ಟಮಿಷ್ಟಾಃ ॥ ೧೪ ॥

ಎಲೈ ಕಪಟಿಯಾದ ದುಂಬಿಯೇ! ಸ್ವರ್ಗದಲ್ಲಾಗಲೀ, ಪಾತಾಳಲೋಕ ದಲ್ಲಾಗಲೀ, ಮನೋಹರವಾದ ನಗೆ, ಹುಬ್ಬು-ಹಾರಿಸುವುದು, ಕಡೆಗಣ್ಣನೋಟ ಇತ್ಯಾದಿಗಳುಳ್ಳ ಮುಕುಂದನಿಗೆ ವಶವಾಗದಿರುವ ಸ್ತ್ರೀಯರು ಯಾರು ತಾನೇ ಇದ್ದಾರೆ? ಮಹಾಲಕ್ಷ್ಮಿಯೇ ಯಾರ ಚರಣಕಮಲಗಳನ್ನು ಸದಾ ಸೇವಿಸುವಳೋ ಅಂತಹ ಶ್ಯಾಮ ಸುಂದರನಿಗೆ ನಾವು ಎಷ್ಟು ಮಾತ್ರದವರು. ಆದರೆ ದೀನರ ವಿಷಯ ದಲ್ಲಿ ಅವನಿಗಿರುವ ಪುಣ್ಯಕೀರ್ತಿ ಎಂಬರ್ಥದ ಉತ್ತಮಶ್ಲೋಕ ಶಬ್ದವು ಅನ್ವರ್ಥವಾಗುವುದೇನು? ॥ ೧೫ ॥ ಭ್ರಮರವೇ! ತಲೆಯಮೇಲಿಟ್ಟಿರುವ ನಿನ್ನ ಪಾದವನ್ನು ತೆಗಿ; ದೂರಸರಿ. ಚಮತ್ಕಾರದ ಮಾತುಗಳನ್ನಾಡಿ ಸಂಧಾನಮಾಡುವುದರಲ್ಲಿ ನೀನು ನಿಪುಣನೆಂದು ನಾವು ಬಲ್ಲೆವು. ಚಮತ್ಕಾರವಾಗಿ ಮಾತನಾಡು ವುದನ್ನು ನೀನು ಶ್ರೀಕೃಷ್ಣನಿಂದಲೇ ಕಲಿತಿರುವೆ ಎಂದೆನಿಸುತ್ತದೆ. ಆದರೆ ನಿನ್ನ ಮಾತುಗಳು ನಮ್ಮಲ್ಲಿ ಪರಿಣಾಮ ಬೀರಲಾರವು. ಏಕೆಂದರೆ, ನಿನ್ನ ಪ್ರಭುವಿಗಾಗಿಯೇ ನಾವು ಪತಿ-ಪುತ್ರರನ್ನು ಬಂಧುಗಳನ್ನು, ಪರಲೋಕಕ್ಕೆ ಸಾಧನವಾದ ಸಮಸ್ತ ಧರ್ಮಗಳನ್ನು ತ್ಯಜಿಸಿದೆವು. ಆದರೆ ಕೃತಜ್ಞತೆಯಿಲ್ಲದ ಅವನು ನಮ್ಮನ್ನು ಬಿಟ್ಟು ಹೊರಟುಹೋದ. ಅಂತಹವನ ವಿಷಯದಲ್ಲಿ ಮೈತ್ರಿಮಾಡಿ ಕೊಳ್ಳುವುದೇನಿದೆ? ॥ ೧೬ ॥

ದಿವಿ ಭುವಿ ಚ ರಸಾಯಾಂ ಕಾಃ ಸ್ತ್ರಿಯಸ್ತದ್ದುರಾಪಾಃ
ಕಪಟರುಚಿರಹಾಸಭ್ರೂವಿಜೃಂಭಸ್ಯ ಯಾಃ ಸ್ಯುಃ ।
ಚರಣರಜ ಉಪಾಸ್ತೇ ಯಸ್ಯ ಭೂತಿರ್ವಯಂ ಕಾ
ಅಪಿ ಚ ಕೃಪಣಪಕ್ಷೇ ಹ್ಯುತ್ತಮಶ್ಲೋಕಶಬ್ದಃ ॥ ೧೫ ॥

ವಿಸೃಜ ಶಿರಸಿ ಪಾದಂ ವೇದ್ಮ್ಯಹಂ ಚಾಟುಕಾರೈ-
ರನುನಯವಿದುಷಸ್ತೇಽಭ್ಯೇತ್ಯ ದೌತ್ಯೈರ್ಮುಕುಂದಾತ್ ।
ಸ್ವಕೃತ ಇಹ ವಿಸೃಷ್ಟಾಪತ್ಯಪತ್ಯನ್ಯಲೋಕಾ
ವ್ಯಸೃಜದಕೃತಚೇತಾಃ ಕಿಂ ನು ಸಂಧೇಯಮಸ್ಮಿನ್ ॥ ೧೬ ॥

ಮೃಗಯುರಿವ ಕಪೀಂದ್ರಂ ವಿವ್ಯಧೇ ಲುಬ್ಧಧರ್ಮಾ
ಸ್ತ್ರಿಯಮಕೃತ ವಿರೂಪಾಂ ಸ್ತ್ರೀಜಿತಃ ಕಾಮಯಾನಾಮ್ ।
ಬಲಿಮಪಿ ಬಲಿಮತ್ತ್ವಾವೇಷ್ಟಯದ್ಧ್ವಾಂಕ್ಷವದ್ಯ-
ಸ್ತದಲಮಸಿತಸಖ್ಯೈರ್ದುಸ್ತ್ಯಜಸ್ತತ್ಕಥಾರ್ಥಃ ॥ ೧೭ ॥

ಭ್ರಮರವೇ! ನನ್ನ ಪ್ರಭುವಿನ ನಿರ್ದಯತೆಯನ್ನು ಎಷ್ಟೊಂದು ವರ್ಣಿಸೋಣ. ಇವನು ಶ್ರೀರಾಮನಾಗಿದ್ದಾಗ ಕಪಿರಾಜನಾದ ವಾಲಿಯನ್ನು ವ್ಯಾಧನಂತೆ ಅಡಗಿಕೊಂಡು ನಿರ್ದಯತೆಯಿಂದ ಕೊಂದುಬಿಟ್ಟಿದ್ದನು. ಅದೇ ಅವತಾರದಲ್ಲಿ ಸ್ತ್ರೀಜಿತನಾದ ಇವನು ಕಾಮಿಸಿಬಂದ ಶೂರ್ಪಣಖಿಯ ಕಿವಿ-ಮೂಗುಗಳನ್ನು ಕತ್ತರಿಸಿ ಅವಳನ್ನು ವಿರೂಪಗೊಳಿಸಿದ್ದನು. ವಾಮನಾವತಾರದಲ್ಲಿ ತಾನೇ ಮಾಡಿದ್ದೇನು? ವಟುವಿನ ವೇಷದಿಂದ ಬಂದ ಇವನನ್ನು ಬಲಿಚಕ್ರವರ್ತಿಯು ಯಥೋಚಿತವಾಗಿ ಸತ್ಕರಿಸಿದನು. ಬೇಡಿದ್ದನ್ನು ಕೊಟ್ಟುಬಿಟ್ಟನು. ಆದರೆ ಇವನು ಆ ಬಲಿಯನ್ನು ವರುಣಪಾಶದಿಂದ ಬಂಧಿಸಿ ಪಾತಾಳಕ್ಕಟ್ಟಿದನು. ಬಲಿಯನ್ನು ಭಕ್ಷಿಸಿದ ಕಾಗೆಯು ಬಲಿಯಿತ್ತವನನ್ನೇ ಪರಿವಾರದೊಂದಿಗೆ ಮುತ್ತುವಂತೆ ಅಲ್ಲವೇ ಇದು. ಹೋಗಲಿ ಬಿಡು. ಈ ಕರಿಯನೊಡನೆ ಸ್ನೇಹವೇ ಸಾಕೆನಿಸಿದೆ. ಆದರೂ ಏನು ಮಾಡುವುದು? ಅವನ ಲೀಲಾ ಪ್ರಸಂಗಗಳನ್ನು ಗಾನಮಾಡದೇ ಇರಲಾಗುವುದಿಲ್ಲ ॥ ೧೭ ॥

ಯದನುಚರಿತಲೀಲಾಕರ್ಣಪೀಯೂಷವಿಪ್ರುಟ್-
ಸಕೃದದನವಿಧೂತದ್ವಂದ್ವಧರ್ಮಾ ವಿನಷ್ಟಾಃ ।
ಸಪದಿ ಗೃಹಕುಟುಂಬಂ ದೀನಮುತ್ಸೃಜ್ಯ ದೀನಾ
ಬಹವ ಇಹ ವಿಹಂಗಾ ಭಿಕ್ಷುಚರ್ಯಾಂ ಚರಂತಿ ॥ ೧೮ ॥

ಶ್ರೀಕೃಷ್ಣನ ಲೀಲಾರೂಪವಾದ ಕರ್ಣಾಮೃತದ ಒಂದು ತೊಟ್ಟನ್ನು ಪಾನ ಮಾಡಿದವರೂ ಕೂಡ ರಾಗ, ದ್ವೇಷ, ಸುಖ-ದುಃಖವೇ ಮೊದಲಾದ ದ್ವಂದ್ವಗಳಿಂದ ಬಿಡುಗಡೆ ಹೊಂದುವರು. ದಯನೀಯವಾದ ಸಂಸಾರವನ್ನೂ ಮನೆ-ಮಠಗಳನ್ನು ತೊರೆದು ಅತ್ಯಂತ ದೀನರಾಗಿ ಸಂಗ್ರಹ-ಪರಿಗ್ರಹಗಳನ್ನು ಮಾಡದೆ ಪ್ರಾಣಧಾರಣೆಗೆ ಬೇಕಾದಷ್ಟು ಮಾತ್ರವೇ ಆಹಾರವನ್ನು ಸೇವಿಸುವ ಪಕ್ಷಿಗಳಂತೆ – ಈ ವೃಂದಾವನದಲ್ಲಿ ಬಹುಮಂದಿ ಭಿಕ್ಷಾಟನೆಯಿಂದ ಜೀವಿಸುತ್ತಿದ್ದಾರೆ. ಹೀಗಿದ್ದರೂ ಶ್ರೀಕೃಷ್ಣನ ಲೀಲಾಕಥೆಗಳನ್ನು ಬಿಡಲಿಕ್ಕಾಗುವುದಿಲ್ಲ. ನಮ್ಮ ಅವಸ್ಥೆಯೂ ಹೀಗೆ ಆಗಿದೆ ॥ ೧೮ ॥

ವಯಮೃತಮಿವ ಜಿಹ್ಮವ್ಯಾಹೃತಂ ಶ್ರದ್ದಧಾನಾಃ
ಕುಲಿಕರುತಮಿವಾಜ್ಞಾಃ ಕೃಷ್ಣವಧ್ವೋ ಹರಿಣ್ಯಃ ।
ದದೃಶುರಸಕೃದೇತತ್ತನ್ನಖಸ್ಪರ್ಶತೀವ್ರ-
ಸ್ಮರರುಜ ಉಪಮಂತ್ರಿನ್ ಭಣ್ಯತಾಮನ್ಯವಾರ್ತಾ ॥ ೧೯ ॥

ಶ್ರೀಕೃಷ್ಣನ ಉಪಮಂತ್ರಿಯೇ! ಕೃಷ್ಣಸಾರಮೃಗದ ಪತ್ನಿಯರಾದ ಹೆಣ್ಣು ಜಿಂಕೆಗಳು ವ್ಯಾಧನ ಸುಮಧುರ ಸಂಗೀತಕ್ಕೆ ಮರುಳಾಗಿ ಅವನು ಬೀಸಿದ ಬಲೆಯಲ್ಲಿ ಬಿದ್ದು ಪ್ರಾಣನೀಗುವಂತೆ ಶ್ರೀಕೃಷ್ಣನ ಪತ್ನಿಯರಾದ ನಾವೂ (ಗೋಪಿಯರೂ) ಕುಟಿಲನಾದ ಕೃಷ್ಣನ ಅಮೃತಮಯವಾದ ಮಾತನ್ನು ಸತ್ಯವೆಂದೇ ಬಗೆದು ಆ ಕೃಷ್ಣನ ನಖಸ್ಪರ್ಶದಿಂದ ಉಂಟಾದ ಕಾಮಬಾಧೆಯನ್ನು ಹಲವಾರು ಬಾರಿ ಅನುಭವಿಸಿದೆವು. ಆದುದರಿಂದ ಅವನ ವಿಷಯದಲ್ಲಿ ಬೇರೆ ಯಾವ ಮಾತನ್ನೂ ಆಡಬೇಡ. ಬೇರೇನಾದರೂ ವಾರ್ತೆಯಿದ್ದರೆ ತಿಳಿಸು ॥ ೧೯ ॥

ಪ್ರಿಯಸಖ ಪುನರಾಗಾಃ ಪ್ರೇಯಸಾ ಪ್ರೇಷಿತಃ ಕಿಂ
ವರಯ ಕಿಮನುರುಂಧೇ ಮಾನನೀಯೋಽಸಿ ಮೇಽಂಗ ।
ನಯಸಿ ಕಥಮಿಹಾಸ್ಮಾನ್ ದುಸ್ತ್ಯಜದ್ವಂದ್ವಪಾರ್ಶ್ವಂ
ಸತತಮುರಸಿ ಸೌಮ್ಯ ಶ್ರೀರ್ವಧೂಃ ಸಾಕಮಾಸ್ತೇ ॥ ೨೦ ॥

ನಮ್ಮ ಪ್ರಿಯತಮನ ಪ್ರಿಯಸಖನೇ! ನೀನು ನಿನ್ನ ಸ್ವಾಮಿಯ ಬಳಿಗೆ ಹೋಗಿ ಪುನಃ ಆಗಮಿಸಿದಂತೆ ಕಾಣುತ್ತದೆ. ನಮ್ಮನ್ನಲ್ಲಿಗೆ ಕರೆದುಕೊಂಡು ಹೋಗಲು ನಮ್ಮ ಪ್ರಿಯತಮನು ಪುನಃ ನಿನ್ನನ್ನು ಕಳಿಸಿರಬೇಕಲ್ಲ? ಪ್ರಿಯಭ್ರಮರವೇ! ನೀನು ನಮಗೆ ಮಾನನೀಯನಾಗಿರುವೆ. ನಿನ್ನ ಇಚ್ಛೆ ಏನೆಂಬುದನ್ನು ಹೇಳು. ನೀನು ಹೇಳಿದಂತೆ ಮಾಡುತ್ತೇವೆ. ನಾವಲ್ಲಿಗೆ ಬರಲು ನೀನು ಅಪೇಕ್ಷಿಸುವೆಯಾ? ಆದರೆ ಅವನ ಬಳಿಗೆ ಹೋದರೂ ಮರಳಬೇಕಾಗುವುದು. ನಾವೂ ಅವನ ಬಳಿಗೆ ಹೋಗಿದ್ದೆವು. ಆದರೆ ನೀನು ನಮ್ಮನ್ನಲ್ಲಿಗೆ ಕರೆದುಕೊಂಡು ಹೋಗಿ ಏನು ಮಾಡುವೆ? ಸೌಮ್ಯನೇ! ಅವನ ವಕ್ಷಃಸ್ಥಳದಲ್ಲಾದರೋ ಅವನ ಪ್ರಿಯಪತ್ನೀ ಲಕ್ಷ್ಮಿಯು ಸದಾಕಾಲ ಇರುವಳಲ್ಲ! ಹಾಗಿರುವಾಗ ಅಲ್ಲಿ ನಮ್ಮದೇನು ನಡೆದೀತು? ॥ ೨೦ ॥

ಅಪಿ ಬತ ಮಧುಪುರ್ಯಾಮಾರ್ಯಪುತ್ರೋಽಧುನಾಸ್ತೇ
ಸ್ಮರತಿ ಸ ಪಿತೃಗೇಹಾನ್ ಸೌಮ್ಯ ಬಂಧೂಂಶ್ಚ ಗೋಪಾನ್ ।
ಕ್ವಚಿದಪಿ ಸ ಕಥಾ ನಃ ಕಿಂಕರೀಣಾಂ ಗೃಣೀತೇ
ಭುಜಮಗುರುಸುಗಂಧಂ ಮೂರ್ಧ್ನ್ಯಧಾಸ್ಯತ್ ಕದಾ ನು ॥ ೨೧ ॥

ನಮ್ಮ ಪ್ರಿಯತಮನ ಪ್ರಿಯಸಖನಾದ ಮಧುಕರನೇ! ಆರ್ಯಪುತ್ರನಾದ ಭಗವಾನ್ ಶ್ರೀಕೃಷ್ಣನು ಗುರುಕುಲದಿಂದ ಮರಳಿ ಬಂದು ಈಗ ಮಥುರೆಯಲ್ಲಿ ಸುಖದಿಂದ ಇರುವನಲ್ಲ? ಅವನು ಎಂದಾದರೂ ನಂದ-ಯಶೋದೆಯರನ್ನು ಇಲ್ಲಿಯ ಮನೆಯನ್ನು ಸಂಬಂಧಿಗಳನ್ನು ಗೊಲ್ಲಬಾಲಕರನ್ನು ಸ್ಮರಿಸಿಕೊಳ್ಳುವನೇ? ದಾಸಿಯರಾದ ನಮ್ಮ ಸಂಬಂಧವಾಗಿಯೂ ಯಾವಾಗಲಾದರೂ ಮಾತುಗಳನ್ನು ಆಡುತ್ತಿರುವನೇ? ಮುಂದೆ ಎಂದಾದರೂ ಅಗರು ಸುಗಂಧಯುಕ್ತವಾದ ತನ್ನ ತೋಳನ್ನು ನಮ್ಮ ತಲೆಯ ಮೇಲೆ ಇರಿಸುವನೇ? ಹೇಳು? ಭ್ರಮರವೇ! ॥ ೨೧ ॥

ಶ್ರೀಶುಕ ಉವಾಚ

ಅಥೋದ್ಧವೋ ನಿಶಮ್ಯೈವಂ ಕೃಷ್ಣದರ್ಶನಲಾಲಸಾಃ ।
ಸಾಂತ್ವಯನ್ ಪ್ರಿಯಸಂದೇಶೈರ್ಗೋಪೀರಿದಮಭಾಷತ ॥ ೨೨ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತ್ರಾಜನೇ! ಶ್ರೀಕೃಷ್ಣನನ್ನು ಸಂದರ್ಶಿಸಲು ಅತ್ಯಂತ ಉತ್ಸುಕರಾಗಿದ್ದ ಗೋಪಿಯರ ಮಾತನ್ನು ಕೇಳಿದ ಉದ್ಧವನು ಶ್ರೀಕೃಷ್ಣನ ಪ್ರಿಯಸಂದೇಶಗಳಿಂದ ಸಂತೈಸುತ್ತಾ ಅವರಲ್ಲಿ ಹೀಗೆ ಹೇಳಿದನು. ॥ ೨೨ ॥

ಉದ್ಧವ ಉವಾಚ

ಅಹೋ ಯೂಯಂ ಸ್ಮ ಪೂರ್ಣಾರ್ಥಾ ಭವತ್ಯೋ ಲೋಕಪೂಜಿತಾಃ ।
ವಾಸುದೇವೇ ಭಗವತಿ ಯಾಸಾಮಿತ್ಯರ್ಪಿತಂ ಮನಃ ॥ ೨೩ ॥

ದಾನವ್ರತತಪೋಹೋಮಜಪಸ್ವಾಧ್ಯಾಯಸಂಯಮೈಃ ।
ಶ್ರೇಯೋಭಿರ್ವಿವಿಧೈಶ್ಚಾನ್ಯೈಃ ಕೃಷ್ಣೇ ಭಕ್ತಿರ್ಹಿ ಸಾಧ್ಯತೇ ॥ ೨೪ ॥

ಭಗವತ್ಯುತ್ತಮಶ್ಲೋಕೇ ಭವತೀಭಿರನುತ್ತಮಾ ।
ಭಕ್ತಿಃ ಪ್ರವರ್ತಿತಾ ದಿಷ್ಟ್ಯಾ ಮುನೀನಾಮಪಿ ದುರ್ಲಭಾ ॥ ೨೫ ॥

ದಿಷ್ಟ್ಯಾ ಪುತ್ರಾನ್ ಪತೀನ್ ದೇಹಾನ್
ಸ್ವಜನಾನ್ ಭವನಾನಿ ಚ ।
ಹಿತ್ವಾವೃಣೀತ ಯೂಯಂ ಯತ್
ಕೃಷ್ಣಾಖ್ಯಂ ಪುರುಷಂ ಪರಮ್ ॥ ೨೬ ॥

ಸರ್ವಾತ್ಮಭಾವೋಽಧಿಕೃತೋ ಭವತೀನಾಮಧೋಕ್ಷಜೇ ।
ವಿರಹೇಣ ಮಹಾಭಾಗಾ ಮಹಾನ್ ಮೇಽನುಗ್ರಹಃ ಕೃತಃ ॥ ೨೭ ॥

ಶ್ರೂಯತಾಂ ಪ್ರಿಯಸಂದೇಶೋ ಭವತೀನಾಂ ಸುಖಾವಹಃ ।
ಯಮಾದಾಯಾಗತೋ ಭದ್ರಾ ಅಹಂ ಭರ್ತೂ ರಹಸ್ಕರಃ ॥ ೨೮ ॥

ಉದ್ಧವನು ಹೇಳುತ್ತಾನೆ – ಗೋಪಿಯರೇ! ನೀವು ಕೃತಕೃತ್ಯರು. ನಿಮ್ಮ ಜೀವನವು ಸಫಲವಾಗಿದೆ. ನೀವು ಮೂರು ಲೋಕಗಳಲ್ಲಿಯೂ ಪೂಜ್ಯರಾಗಿರುವಿರಿ. ನೀವು ನಿಮ್ಮ ಸರ್ವಸ್ವವನ್ನು ಭಗವಾನ್ ಶ್ರೀಕೃಷ್ಣನಿಗೆ ಅರ್ಪಿಸಿಕೊಂಡು ಬಿಟ್ಟಿರುವಿರಿ. ನೀವೇ ಧನ್ಯರು. ॥ ೨೩ ॥ ದಾನ, ವ್ರತ, ತಪ, ಹೋಮ, ಜಪ, ವೇದಾಧ್ಯಯನ, ಧ್ಯಾನ, ಧಾರಣ, ಸಮಾಧಿ ಮತ್ತು ಶ್ರೇಯಸ್ಕರವಾದ ವಿಧ-ವಿಧವಾದ ಇತರ ಸಾಧನೆಗಳ ಮೂಲಕ ಭಗವಂತನಲ್ಲಿ ಭಕ್ತಿಯು ಹುಟ್ಟಲು ಸಾಧ್ಯವಾಗುತ್ತದೆ. ॥ ೨೪ ॥ ಆದರೆ ಉತ್ತಮಕೀರ್ತಿಯುಳ್ಳ ಭಗವಂತನ ಸರ್ವೋತ್ತಮವಾದ ಪ್ರೇಮಭಕ್ತಿಯನ್ನು ನೀವೆಲ್ಲರೂ ಪಡೆದುಕೊಂಡು ಅದರ ಆದರ್ಶವನ್ನು ಸ್ಥಾಪಿಸಿರುವಿರಿ. ಇದು ನಿಶ್ಚಯವಾಗಿಯೂ ಸೌಭಾಗ್ಯದ ಮಾತು. ಆ ಭಕ್ತಿಯು ಮಹಾ-ಮಹಾ ಋಷಿ-ಮುನಿಗಳಿಗೂ ಅತ್ಯಂತ ದುರ್ಲಭವಾದುದು. ॥ ೨೫ ॥ ನೀವುಗಳು ನಿಮ್ಮ ಪತಿ-ಪುತ್ರರನ್ನು, ದೇಹ ಸ್ವಜನರನ್ನೂ, ಮನೆ-ಮಠಗಳನ್ನು ಬಿಟ್ಟು ಸರ್ವಸ್ವರ ಪರಮಪತಿಯಾದ ಪುರುಷೋತ್ತಮ ಭಗವಾನ್ ಶ್ರೀಕೃಷ್ಣನನ್ನು ಪತಿಯನ್ನಾಗಿ ವರಿಸಿರುವಿರಿ. ನಿಜವಾಗಿಯೂ ಇದು ಸೌಭಾಗ್ಯದ ಮಾತೇ ಸರಿ. ॥ ೨೬ ॥ ಮಹಾಭಾಗ್ಯವತಿಯರಾದ ಗೋಪಿಯರೇ! ಭಗವಾನ್ ಶ್ರೀಕೃಷ್ಣನ ವಿಯೋಗದಿಂದ ನೀವು-ಸಮಸ್ತ ವಸ್ತುಗಳ ರೂಪದಲ್ಲಿ ಅವನ ದರ್ಶನವಾಗುವಂತಹ ಇಂದ್ರಿಯಾತೀತ ಪರಮಾತ್ಮನ ಕುರಿತು ಆ ಭಾವವನ್ನು ಪಡೆದುಕೊಂಡಿರುವಿರಿ. ನೀವೆಲ್ಲರೂ ಆ ಭಾವವನ್ನು ನನ್ನ ಮುಂದೆಯೇ ಪ್ರಕಟಿಸಿರುವಿರಿ. ಇದು ನನ್ನ ಮೇಲೆ ದಯೆಯಿರುವ ನೀವು ತೋರಿದ ಮಹತ್ಕೃಪೆಯೇ ಆಗಿದೆ. ॥ ೨೭ ॥ ನಾನು ನನ್ನ ಸ್ವಾಮಿಯ ರಹಸ್ಯವಾದ ಕಾರ್ಯಮಾಡುವಂತಹ ದೂತನಾಗಿದ್ದೇನೆ. ನಿಮ್ಮ ಪ್ರಿಯತಮನಾದ ಶ್ರೀಕೃಷ್ಣನು ಪರಮ ಸುಖದಾಯಕವಾದ ಸಂದೇಶವನ್ನು ನಿಮಗೆ ಕಳಿಸಿಕೊಟ್ಟಿರುವನು. ಮಂಗಳಾಂಗಿಯರೇ! ಅದನ್ನು ಹೊತ್ತುಕೊಂಡು ನಾನು ನಿಮ್ಮ ಬಳಿಗೆ ಬಂದಿರುವೆನು. ಈಗ ಅದನ್ನು ಆಲಿಸಿರಿ. ॥ ೨೮ ॥

ಶ್ರೀಭಗವಾನುವಾಚ

ಭವತೀನಾಂ ವಿಯೋಗೋ ಮೇ ನ ಹಿ ಸರ್ವಾತ್ಮನಾ ಕ್ವಚಿತ್ ।
ಯಥಾ ಭೂತಾನಿ ಭೂತೇಷು ಖಂ ವಾಯ್ವಗ್ನಿರ್ಜಲಂ ಮಹೀ ।
ತಥಾಹಂ ಚ ಮನಃಪ್ರಾಣಭೂತೇಂದ್ರಿಯಗುಣಾಶ್ರಯಃ ॥ ೨೯ ॥

ಆತ್ಮನ್ಯೇವಾತ್ಮನಾಽಽತ್ಮಾನಂ ಸೃಜೇ ಹನ್ಮ್ಯನುಪಾಲಯೇ ।
ಆತ್ಮಮಾಯಾನುಭಾವೇನ ಭೂತೇಂದ್ರಿಯಗುಣಾತ್ಮನಾ ॥ ೩೦ ॥

ಆತ್ಮಾ ಜ್ಞಾನಮಯಃ ಶುದ್ಧೋ ವ್ಯತಿರಿಕ್ತೋಽಗುಣಾನ್ವಯಃ ।
ಸುಷುಪ್ತಿಸ್ವಪ್ನಜಾಗ್ರದ್ಭಿರ್ಮಾಯಾವೃತ್ತಿಭಿರೀಯತೇ ॥ ೩೧ ॥

ಯೇನೇಂದ್ರಿಯಾರ್ಥಾನ್ ಧ್ಯಾಯೇತ ಮೃಷಾ ಸ್ವಪ್ನವದುತ್ಥಿತಃ ।
ತನ್ನಿರುಂಧ್ಯಾದಿಂದ್ರಿಯಾಣಿ ವಿನಿದ್ರಃ ಪ್ರತ್ಯಪದ್ಯತ ॥ ೩೨ ॥

ಏತದಂತಃ ಸಮಾಮ್ನಾಯೋ ಯೋಗಃ ಸಾಂಖ್ಯಂ ಮನೀಷಿಣಾಮ್ ।
ತ್ಯಾಗಸ್ತಪೋ ದಮಃ ಸತ್ಯಂ ಸಮುದ್ರಾಂತಾ ಇವಾಪಗಾಃ ॥ ೩೩ ॥

ಯತ್ತ್ವಹಂ ಭವತೀನಾಂ ವೈ ದೂರೇ ವರ್ತೇ ಪ್ರಿಯೋ ದೃಶಾಮ್ ।
ಮನಸಃ ಸನ್ನಿಕರ್ಷಾರ್ಥಂ ಮದನುಧ್ಯಾನಕಾಮ್ಯಯಾ ॥ ೩೪ ॥

ಭಗವಾನ್ ಶ್ರೀಕೃಷ್ಣನು ಹೇಳುವನು - ನಾನು ಎಲ್ಲಕ್ಕೂ ಮೂಲಕಾರಣನಾದ್ದರಿಂದ ಸರ್ವರಿಗೂ ಆತ್ಮಸ್ವರೂಪನಾಗಿದ್ದೇನೆ. ಎಲ್ಲದರಲ್ಲಿಯೂ ನಾನೇ ಇದ್ದೇನೆ. ಆದುದರಿಂದ ನನಗೆ ನಿಮ್ಮೊಡನೆ ವಿಯೋಗವು ಎಂದಿಗೂ ಉಂಟಾಗಲಾರದು. ಪ್ರಪಂಚದ ಎಲ್ಲ ಭೌತಿಕ ಪದಾರ್ಥಗಳಲ್ಲಿ ಆಕಾಶ, ವಾಯು, ಅಗ್ನಿ, ಜಲ, ಪೃಥಿವಿ ಎಂಬ ಪಂಚಭೂತಗಳೂ ಸೇರಿಕೊಂಡೇ ಇರುತ್ತವೆ. ಇವುಗಳಿಂದಲೇ ಸಮಸ್ತ ವಸ್ತುಗಳು ಉಂಟಾಗಿವೆ. ಇವೇ ಆ ವಸ್ತುಗಳ ರೂಪದಲ್ಲಿವೆ. ಹಾಗೆಯೇ ಮನಸ್ಸು, ಪಂಚಭೂತ ಇಂದ್ರಿಯಗಳು ಮತ್ತು ಅವುಗಳ ವಿಷಯಗಳು - ಇವುಗಳ ಆಶ್ರಯ ನಾನೇ ಆಗಿದ್ದೇನೆ. ಅವು ನನ್ನಲ್ಲಿವೆ, ನಾನು ಅವುಗಳಲ್ಲಿದ್ದೇನೆ. ನಿಜವಾಗಿ ಹೇಳಬೇಕಾದರೆ ನಾನೇ ಅವುಗಳ ರೂಪದಲ್ಲಿ ಪ್ರಕಟನಾಗಿದ್ದೇನೆ. ॥ ೨೯ ॥ ನಾನೇ ನನ್ನ ಮಾಯೆಯ ಮೂಲಕ ಪ್ರಾಣಗಳು, ಇಂದ್ರಿಯಗಳು ಮತ್ತು ಅವುಗಳ ವಿಷಯಗಳ ರೂಪನಾಗಿ ಅವುಗಳ ಆಶ್ರಯನಾಗುತ್ತೇನೆ. ಸ್ವಯಂ ನಿಮಿತ್ತನಾಗಿಯೂ ನಾನೇ ನನ್ನನ್ನು ರಚಿಸಿ, ಪಾಲಿಸಿ, ತಿರೋಧಾನನಾಗುತ್ತೇನೆ. ॥ ೩೦ ॥ ಆತ್ಮನು ಮಾಯೆ ಮತ್ತು ಮಾಯೆಯ ಕಾರ್ಯಗಳಿಂದ ಪೃಥಕ್ಕಾಗಿರುವನು. ಅವನು ವಿಶುದ್ಧ ಜ್ಞಾನಸ್ವರೂಪನಾಗಿದ್ದು ಜಡ ಪ್ರಕೃತಿ, ಅನಂತ ಜೀವರು ಹಾಗೂ ತನ್ನದೇ ಅವಾಂತರ ಭೇದಗಳಿಂದ ರಹಿತನಾಗಿ ಶುದ್ಧನಾಗಿದ್ದಾನೆ. ಯಾವುದೇ ಗುಣವು ಅವನನ್ನು ಸ್ಪರ್ಶಿಸಲಾರದು. ಸುಷುಪ್ತಿ, ಸ್ವಪ್ನ ಜಾಗ್ರತ್ ಎಂಬ ಮಾಯೆಯ ಮೂರು ವೃತ್ತಿಗಳಿಂದ ಅತೀತನಾದ ಅಖಂಡ, ಅನಂತ, ಬೋಧಸ್ವರೂಪನಾದ ಆತ್ಮನು ಕೆಲವೊಮ್ಮೆ ಪ್ರಾಜ್ಞನಾಗಿಯೂ, ಕೆಲವೊಮ್ಮೆ ತೈಜಸನಾಗಿಯೂ, ಕೆಲವೊಮ್ಮೆ ವಿಶ್ವನಾಗಿಯೂ ಕಂಡುಬರುತ್ತಾನೆ. ॥ ೩೧ ॥ ಸ್ವಪ್ನದಲ್ಲಿ ಕಂಡುಬರುವ ಪದಾರ್ಥಗಳಂತೆ ಜಾಗ್ರದವಸ್ಥೆಯಲ್ಲಿ ಕಂಡುಬರುವ ಇಂದ್ರಿಯ ವಿಷಯಗಳೂ ಮಿಥ್ಯೆಯೇ ಆಗಿವೆ ಎಂದು ಭಾವಿಸಿಕೊಂಡು ವಿಷಯಗಳ ಕಡೆಗೆ ಹರಿದುಹೋಗುವ ಮನಸ್ಸನ್ನು ಮತ್ತು ಇಂದ್ರಿಯಗಳನ್ನು ತಡೆಗಟ್ಟಬೇಕು. ಸ್ವಪ್ನದಿಂದ ಎಚ್ಚತ್ತ ಬಳಿಕ ಕಂಡ ಸ್ವಪ್ನವು ಸುಳ್ಳೆಂದು ಭಾಸವಾಗುವಂತೆಯೇ ಜಗತ್ತಿನ ವಿಷಯಗಳೂ ಮಿಥ್ಯೆಯೆಂದು ತ್ಯಜಿಸಿ ನನ್ನ ಸಾಕ್ಷಾತ್ಕಾರವನ್ನು ಪಡೆಯಬೇಕು. ॥ ೩೨ ॥ ಎಲ್ಲ ನದಿಗಳೂ ಹರಿದುಕೊಂಡು ಕೊನೆಗೆ ಸಮುದ್ರವನ್ನೇ ಸೇರುವಂತೆಯೇ ಮಹಾತ್ಮರು ಮಾಡುವ ವೇದಾಭ್ಯಾಸ, ಯೋಗ-ಸಾಧನೆ, ಆತ್ಮಾನಾತ್ಮ ವಿವೇಕ, ತ್ಯಾಗ, ತಪಸ್ಸು, ಇಂದ್ರಿಯ ಸಂಯಮ, ಸತ್ಯ ಮುಂತಾದ ಸಮಸ್ತ ಧರ್ಮಗಳು ನನ್ನ ಪ್ರಾಪ್ತಿಯಲ್ಲೇ ಪರಿಸಮಾಪ್ತವಾಗುತ್ತವೆ. ಎಲ್ಲದರ ನಿಜವಾದ ಫಲವು ನನ್ನ ಸಾಕ್ಷಾತ್ಕಾರವೇ ಆಗಿದೆ. ಏಕೆಂದರೆ, ಅವೆಲ್ಲವೂ ಮನಸ್ಸನ್ನು ನಿಗ್ರಹಿಸಿ ನನ್ನ ಕಡೆಗೆ ಒಯ್ಯುತ್ತವೆ. ॥ ೩೩ ॥

ಗೋಪಿಯರೇ! ನಾನು ನಿಮ್ಮ ಕಣ್ಣುಗಳ ಧ್ರುವತಾರೆಯಾಗಿದ್ದೇನೆ. ನಿಮ್ಮ ಜೀವನ ಸರ್ವಸ್ವನಾಗಿರುವೆನು ಎಂಬುದರಲ್ಲಿ ಸಂದೇಹವೇ ಇಲ್ಲ. ನಾನು ಇಷ್ಟು ದೂರವಿದ್ದರೂ ನೀವು ನಿರಂತರವಾಗಿ ನನ್ನ ಧ್ಯಾನವನ್ನು ಮಾಡುತ್ತಿರುವಿರಿ. ನೀವು ಶರೀರದಿಂದ ದೂರವಿದ್ದರೂ ಮನಸ್ಸಿನಿಂದ ನನ್ನ ಸನ್ನಿಧಾನವನ್ನು ಅನುಭವಿಸುತ್ತಿರಿ. ನಿಮ್ಮ ಮನಸ್ಸನ್ನು ನನ್ನ ಬಳಿಯೇ ಇರಿಸಿರುವಿರಿ - ಇದೇ ನನ್ನ ಆಶಯವೂ ಆಗಿದೆ. ॥ ೩೪ ॥

ಯಥಾ ದೂರಚರೇ ಪ್ರೇಷ್ಠೇ ಮನ ಆವಿಶ್ಯ ವರ್ತತೇ ।
ಸ್ತ್ರೀಣಾಂ ಚ ನ ತಥಾ ಚೇತಃ ಸನ್ನಿಕೃಷ್ಟೇಽಕ್ಷಿಗೋಚರೇ ॥ ೩೪ ॥

ಮಯ್ಯಾವೇಶ್ಯ ಮನಃ ಕೃತ್ಸ್ನಂ ವಿಮುಕ್ತಾಶೇಷವೃತ್ತಿ ಯತ್ ।
ಅನುಸ್ಮರಂತ್ಯೋ ಮಾಂ ನಿತ್ಯಮಚಿರಾನ್ಮಾಮುಪೈಷ್ಯಥ ॥ ೩೬ ॥

ಯಾ ಮಯಾ ಕ್ರೀಡತಾ ರಾತ್ರ್ಯಾಂ ವನೇಽಸ್ಮಿನ್ ವ್ರಜ ಆಸ್ಥಿತಾಃ ।
ಅಲಬ್ಧರಾಸಾಃ ಕಲ್ಯಾಣ್ಯೋ ಮಾಽಽಪುರ್ಮದ್ವೀರ್ಯಚಿಂತಯಾ ॥ ೩೭ ॥

ಸ್ತ್ರೀಯರ ಮತ್ತು ಬೇರೆ ಪ್ರೇಮಿಯರ ಮನಸ್ಸು ದೂರದಲ್ಲಿ ಇರುವ ಪ್ರಿಯತಮನ ಮೇಲೆ ನೆಲೆಸಿರುವಂತೆ, ಹತ್ತಿರವೇ ಯಾವಾಗಲೂ ಕಣ್ಣಮುಂದೆ ಇರುವ ಪ್ರಿಯತಮನಲ್ಲಿ ನೆಲೆಸಿರುವುದಿಲ್ಲ ॥ ೩೪ ॥ ನನ್ನಲ್ಲಿಯೇ ಮನಸ್ಸನ್ನು ನೆಲೆಗೊಳಿಸಿ, ಇತರ ಸಮಸ್ತ ವ್ಯವಹಾರಗಳಿಂದ ನಿವೃತ್ತರಾಗಿ ನಿತ್ಯನಿರಂತರವಾಗಿ ನನ್ನನ್ನು ಧ್ಯಾನಿಸುತ್ತಿದ್ದರೆ ಬಹಳ ಬೇಗನೇ ನನ್ನನ್ನು ಹೊಂದುವಿರಿ. ॥ ೩೬ ॥ ಕಲ್ಯಾಣಿಯರೇ! ಶರತ್ಕಾಲದ ಹುಣ್ಣಿಮೆಯ ರಾತ್ರಿಯಲ್ಲಿ ನಾನು ನಿಮ್ಮೊಡನೆ ರಾಸಕ್ರೀಡೆಯನ್ನಾಡಿದೆನು. ಆ ಸಮಯದಲ್ಲಿ ಸ್ವಜನರಿಂದ ತಡೆಯಲ್ಪಟ್ಟು ನನ್ನೊಡನೆ ರಾಸ-ವಿಹಾರದಲ್ಲಿ ಸಮ್ಮಿಳಿತವಾಗಲು ಸಾಧ್ಯವಾಗದಿರುವ ಗೋಪಿಯರು ಮನೆಯಲ್ಲೇ ಉಳಿದು ನನ್ನ ಲೀಲೆಗಳನ್ನು ಸ್ಮರಿಸುತ್ತಾ ನನ್ನನ್ನೇ ಸೇರಿ ಹೋದರು. ನಿಮಗೂ ನಾನು ಅವಶ್ಯವಾಗಿ ದೊರೆಯುವೆನು. ನಿರಾಶರಾಗುವ ಮಾತೇ ಇಲ್ಲ ॥ ೩೭ ॥

ಶ್ರೀಶುಕ ಉವಾಚ

ಏವಂ ಪ್ರಿಯತಮಾದಿಷ್ಟಮಾಕರ್ಣ್ಯ ವ್ರಜಯೋಷಿತಃ ।
ತಾ ಊಚುರುದ್ಧವಂ ಪ್ರೀತಾಸ್ತತ್ಸಂದೇಶಾಗತಸ್ಮೃತೀಃ ॥ ೩೮ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ! ತಮ್ಮ ಪ್ರಿಯತಮನಾದ ಶ್ರೀಕೃಷ್ಣನ ಈ ಸಂದೇಶವನ್ನು ಕೇಳಿ ಗೋಪಿಯರಿಗೆ ಮಹದಾನಂದವಾಯಿತು. ಅವನ ಸಂದೇಶದಿಂದ ಅವರು ಶ್ರೀಕೃಷ್ಣನ ಸ್ವರೂಪವನ್ನು ಮತ್ತು ಒಂದೊಂದೇ ಲೀಲೆಗಳನ್ನು ಸ್ಮರಿಸಿಕೊಂಡು ಪ್ರೇಮಮಗ್ನರಾಗಿ ಉದ್ಧವನಲ್ಲಿ ಇಂತೆಂದರು. ॥ ೩೮ ॥

ಗೋಪ್ಯ ಊಚುಃ

ದಿಷ್ಟ್ಯಾಹಿತೋ ಹತಃ ಕಂಸೋ ಯದೂನಾಂ ಸಾನುಗೋಽಘಕೃತ್ ।
ದಿಷ್ಟ್ಯಾಽಽಪ್ತೈರ್ಲಬ್ಧಸರ್ವಾರ್ಥೈಃ ಕುಶಲ್ಯಾಸ್ತೇಽಚ್ಯುತೋಽಧುನಾ ॥ ೩೯ ॥

ಕಚ್ಚಿದ್ಗದಾಗ್ರಜಃ ಸೌಮ್ಯ ಕರೋತಿ ಪುರಯೋಷಿತಾಮ್ ।
ಪ್ರೀತಿಂ ನಃ ಸ್ನಿಗ್ಧಸವ್ರೀಡಹಾಸೋದಾರೇಕ್ಷಣಾರ್ಚಿತಃ ॥ ೪೦ ॥

ಕಥಂ ರತಿವಿಶೇಷಜ್ಞಃ ಪ್ರಿಯಶ್ಚ ವರಯೋಷಿತಾಮ್ ।
ನಾನುಬಧ್ಯೇತ ತದ್ವಾಕ್ಯೈರ್ವಿಭ್ರಮೈಶ್ಚಾನುಭಾಜಿತಃ ॥ ೪೧ ॥

ಗೋಪಿಯರು ಹೇಳುತ್ತಾರೆ – ಓ ಉದ್ಧವನೇ! ಯದುವಂಶೀಯರಿಗೆ ಉಪಟಳವನ್ನು ಕೊಡುತ್ತಿದ್ದ ಪಾಪಿಯಾದ ಕಂಸನು ತನ್ನ ಅನುಯಾಯಿಗಳೊಂದಿಗೆ ಸತ್ತು ಹೋದುದು ಸೌಭಾಗ್ಯದ ಮತ್ತು ಆನಂದದ ವಿಷಯವಾಗಿದೆ. ಶ್ರೀಕೃಷ್ಣನ ಸಂಬಂಧಿಕರು ಗುರುಹಿರಿಯರ ಮನೋರಥಗಳೆಲ್ಲ ಪೂರ್ಣಗೊಂಡವು. ನಮ್ಮ ಪ್ರಿಯತಮ ಶ್ಯಾಮಸುಂದರನು ಅವರೊಂದಿಗೆ ಕುಶಲವಾಗಿದ್ದಾನೆ ಎಂಬುದನ್ನು ಕೇಳಿ ನಾವು ಸಂತೋಷಗೊಂಡಿದ್ದೇವೆ. ॥ ೩೯ ॥ ಆದರೆ ಉದ್ಧವನೇ! ಅವನ ಕುರಿತಾದ ಒಂದು ಮಾತನ್ನು ಕೇಳಬಯಸುತ್ತೇವೆ. ನಾವು ಸ್ನೇಹಪೂರ್ಣವಾದ ನಾಚಿಕೆಯಿಂದ ಕೂಡಿದ ಮಂದಹಾಸದಿಂದಲೂ, ಉದಾರವಾದ ನೋಟದಿಂದಲೂ ಅವನ ಸೇವೆಯನ್ನು ಮಾಡುತ್ತಿದ್ದೆವು. ಅವನೂ ನಮ್ಮನ್ನು ಹಾಗೆಯೇ ಪ್ರೇಮಿಸುತ್ತಿದ್ದನು. ಇದೇ ರೀತಿಯಾಗಿ ಮಥುರೆಯ ಸ್ತ್ರೀಯರನ್ನು ಅವನು ಪ್ರೇಮಿಸುತ್ತಿರುವನೋ, ಇಲ್ಲವೋ? ॥ ೪೦ ॥ ಮತ್ತೊಬ್ಬ ಗೋಪಿಯು ಹೇಳುತ್ತಾಳೆ – ಗೆಳತಿಯರೇ! ನಮ್ಮ ಪ್ರಿಯತಮನಾದ ಶ್ಯಾಮಸುಂದರನು ಪ್ರೇಮದ ಕಲೆಯಲ್ಲಿ ವಿಶೇಷಜ್ಞನಾಗಿದ್ದಾನೆ. ಶ್ರೇಷ್ಠರಾದ ಸ್ತ್ರೀಯರೆಲ್ಲರೂ ಅವನನ್ನು ಪ್ರೀತಿಸುತ್ತಾರೆ. ಹೀಗಿರುವಾಗ ನಗರದ ಸ್ತ್ರೀಯರಾಡುವ ಮಧುಮಧುರವಾದ ಮಾತುಗಳಿಂದಲೂ, ಹಾವ-ಭಾವಗಳಿಂದಲೂ ಅವನ ಕಡೆಗೆ ನೋಡುವಾಗ ಅವನು ಪ್ರೇಮಪಾಶದಲ್ಲಿ ಬಂಧಿಸದೆ ಇರುವನೇ? ॥ ೪೧ ॥

ಅಪಿ ಸ್ಮರತಿ ನಃ ಸಾಧೋ ಗೋವಿಂದಃ ಪ್ರಸ್ತುತೇ ಕ್ವಚಿತ್ ।
ಗೋಷ್ಠಿಮಧ್ಯೇ ಪುರಸ್ತ್ರೀಣಾಂ ಗ್ರಾಮ್ಯಾಃ ಸ್ವೈರಕಥಾಂತರೇ ॥ ೪೨ ॥

ಇನ್ನೊಬ್ಬ ಗೋಪಿಯು ಹೇಳಿದಳು–ಸಾಧು ಪುರುಷನೇ! ನಗರದ ನಾರಿಯರು ಗುಂಪು ಕಟ್ಟಿಕೊಂಡು ಮಾತನಾಡಿಕೊಂಡಿರುವಾಗ ನಮ್ಮ ಪ್ರಿಯತಮನು ಸ್ವಚ್ಛಂದವಾಗಿ ಕಾಮಿನಿಯರ ಮನಸ್ಸನ್ನು ಸೆಳೆಯುವ ಮಾತನ್ನಾಡುವಾಗ ಗೋಕುಲದ ಗೊಲ್ಲತಿಯರಾದ ನಮ್ಮನ್ನು ಎಂದಾದರೂ ಸ್ಮರಿಸುವನೇ? ॥ ೪೨ ॥

ತಾಃ ಕಿಂ ನಿಶಾಃ ಸ್ಮರತಿ ಯಾಸು ತದಾ ಪ್ರಿಯಾಭಿ-
ರ್ವೃಂದಾವನೇ ಕುಮುದಕುಂದ ಶಶಾಂಕರಮ್ಯೇ ।
ರೇಮೇ ಕ್ವಣಚ್ಚರಣನೂಪುರರಾಸಗೋಷ್ಠ್ಯಾ-
ಮಸ್ಮಾಭಿರೀಡಿತಮನೋಜ್ಞಕಥಃ ಕದಾಚಿತ್ ॥ ೪೩ ॥

ಮಗದೊಬ್ಬ ಗೋಪಿಯು ಕೇಳುತ್ತಾಳೆ – ಉದ್ಧವನೇ! ಶ್ರೀಕೃಷ್ಣನು ಎಂದಾದರೂ ಆ ದಿವ್ಯರಾತ್ರಿಗಳನ್ನು ಸ್ಮರಿಸುವನೋ? ವಿಕಸಿತವಾದ ಬಿಳಿಯ ನೈದಿಲೆಗಳಿಂದಲೂ, ಮಲ್ಲಿಗೆ ಹೂವುಗಳಿಂದಲೂ, ಶರತ್ಕಾಲದ ಬೆಳದಿಂಗಳಿಂದಲೂ ವ್ಯಾಪ್ತವಾದ ವೃಂದಾವನದಲ್ಲಿ ಆ ರಾತ್ರಿಗಳಲ್ಲಿ ನಮ್ಮ ಪ್ರಿಯತಮನು ರಾಸಮಂಡಲದಲ್ಲಿ ನಮ್ಮೊಡನೆ ನೃತ್ಯವಾಡುತ್ತಿದ್ದನು. ನಿಶ್ಚಯವಾಗಿಯೂ ಎಷ್ಟು ಸುಂದರವಾದದ್ದು ಆ ರಾಸಲೀಲೆ! ನಂದಕಿಶೋರನ ಜೊತೆಯಲ್ಲಿ ನಾವು ನೃತ್ಯವಾಡುವಾಗ ನಮ್ಮ ಕಾಲಂದುಗೆಗಳು ಝಣ-ಝಣಿಸುತ್ತಿದ್ದವು. ನಾವೆಲ್ಲರೂ ಸೇರಿ ಅವನ ಲೀಲಾ ಪ್ರಸಂಗಗಳನ್ನು ಹಾಡುತ್ತಿದ್ದೆವು. ಹೀಗೆ ಅವನು ನಮ್ಮೊಡನೆ ನಾನಾ ಪ್ರಕಾರದಿಂದ ವಿಹರಿಸುತ್ತಿದ್ದನು. ಅಂತಹ ರಾತ್ರಿಗಳನ್ನು ನಾವು ಮರೆಯಲಾರೆವು. ಅವನಿಗೆ ಅದರ ಸ್ಮರಣೆ ಇದೆಯೇ? ॥ ೪೩ ॥

ಅಪ್ಯೇಷ್ಯತೀಹ ದಾಶಾರ್ಹಸ್ತಪ್ತಾಃ ಸ್ವಕೃತಯಾ ಶುಚಾ ।
ಸಂಜೀವಯನ್ನು ನೋ ಗಾತ್ರೈರ್ಯಥೇಂದ್ರೋ ವನಮಂಬುದೈಃ ॥ ೪೪ ॥

ಇನ್ನೊಬ್ಬ ಗೋಪಿಯು ಕೇಳಿದಳು – ಉದ್ಧವನೇ! ನಾವೆಲ್ಲರೂ ಅವನ ವಿರಹಾಗ್ನಿಯಿಂದ ಬೇಯುತ್ತಿದ್ದೇವೆ. ದೇವೇಂದ್ರನು ಮಳೆಯನ್ನು ಸುರಿಸಿ ವನವನ್ನು ಹಚ್ಚ-ಹಸುರಾಗಿಸುವಂತೆ ಶ್ರೀಕೃಷ್ಣನು ಎಂದಾದರೂ ತನ್ನ ಕರಸ್ಪರ್ಶಾದಿಗಳಿಂದ ನಮಗೂ ಜೀವನ ದಾನ ಮಾಡಲು ಇಲ್ಲಿಗೆ ಬರುವನೇ? ॥ ೪೪ ॥

ಕಸ್ಮಾತ್ ಕೃಷ್ಣ ಇಹಾಯಾತಿ ಪ್ರಾಪ್ತರಾಜ್ಯೋ ಹತಾಹಿತಃ ।
ನರೇಂದ್ರಕನ್ಯಾ ಉದ್ವಾಹ್ಯ ಪ್ರೀತಃ ಸರ್ವಸುಹೃದ್ವೃತಃ ॥ ೪೫ ॥

ಅಷ್ಟೊತ್ತಿಗೆ ಓರ್ವ ಗೋಪಿಯು ಹೇಳಿದಳು – ಎಲೈ ಸಖಿಯರೇ! ಈಗಲಾದರೋ ಅವನು ಶತ್ರುಗಳನ್ನು ಸಂಹರಿಸಿ ರಾಜ್ಯವನ್ನು ಪಡೆದಿರುವನು. ರಾಜಕುಮಾರಿಯರನ್ನು ವಿವಾಹವಾಗಿ, ಸಮಸ್ತ ಸುಹೃದಯರಿಂದಲೂ ಪರಿವೃತನಾಗಿ ನಮ್ಮ ಪ್ರಿಯತಮನು ಆನಂದದಿಂದ ಇರುವನು. ನಮ್ಮಂತಹ ಗೊಲ್ಲತಿಯರ ಬಳಿಗೆ ಅವನೇಕೆ ಬರುವನು? ॥ ೪೫ ॥

ಕಿಮಸ್ಮಾಭಿರ್ವನೌಕೋಭಿರನ್ಯಾಭಿರ್ವಾ ಮಹಾತ್ಮನಃ ।
ಶ್ರೀಪತೇರಾಪ್ತಕಾಮಸ್ಯ ಕ್ರಿಯೇತಾರ್ಥಃ ಕೃತಾತ್ಮನಃ ॥ ೪೬ ॥

ಮತ್ತೊಬ್ಬಳು ಹೇಳಿದಳು – ಸಖಿಯರೇ! ಹಾಗೇನಿಲ್ಲ, ಮಹಾತ್ಮನಾದ ಶ್ರೀಕೃಷ್ಣನು ಸಾಕ್ಷಾತ್ ಲಕ್ಷ್ಮೀಪತಿಯಾಗಿದ್ದಾನೆ. ಆಪ್ತಕಾಮನವನು. ಕೃತಕೃತ್ಯನು. ಗೋಕುಲದ ಗೊಲ್ಲತಿಯರಾದ ನಮ್ಮಿಂದ ಅಥವಾ ಇತರ ರಾಜಕುಮಾರಿಯರಿಂದ ಅವನಿಗೇನು ಆಗಬೇಕು? ನಾವಿಲ್ಲದೆ ಅವನ ಯಾವ ಕಾರ್ಯ ಉಳಿದಿದೆ? ॥ ೪೬ ॥

ಪರಂ ಸೌಖ್ಯಂ ಹಿ ನೈರಾಶ್ಯಂ ಸ್ವೈರಿಣ್ಯಪ್ಯಾಹ ಪಿಂಗಲಾ ।
ತಜ್ಜಾನತೀನಾಂ ನಃ ಕೃಷ್ಣೇ ತಥಾಪ್ಯಾಶಾ ದುರತ್ಯಯಾ ॥ ೪೭ ॥

ನೋಡಿರಿ! ಪಿಂಗಳೆ ಎಂಬ ವೇಶ್ಯೆಯು – 'ಪ್ರಪಂಚದಲ್ಲಿ ಯಾವುದರ ಮೇಲೆಯೂ ಆಶೆಯನ್ನು ಇಟ್ಟುಕೊಳ್ಳದಿರುವುದೇ ಪರಮ ಸುಖವಾದುದು ಎಂದು ಎಷ್ಟು ಸರಿಯಾಗಿ ಹೇಳಿರುವಳು. ಇದನ್ನು ನಾವು ತಿಳಿದಿದ್ದರೂ ಭಗವಾನ್ ಶ್ರೀಕೃಷ್ಣನು ಮರಳಿ ಬರುವ ಆಸೆಯನ್ನು ಬಿಡುವುದರಲ್ಲಿ ಅಸಮರ್ಥರಾಗಿದ್ದೇವೆ. ಅವನ ಶುಭಾಗಮನದ ಆಸೆಯಿಂದಲೇ ನಾವು ಬದುಕಿದ್ದೇವಲ್ಲ ॥ ೪೭ ॥

ಕ ಉತ್ಸಹೇತ ಸಂತ್ಯಕ್ತುಮುತ್ತಮಶ್ಲೋಕಸಂವಿದಮ್ ।
ಅನಿಚ್ಛತೋಽಪಿ ಯಸ್ಯ ಶ್ರೀರಂಗಾನ್ನ ಚ್ಯವತೇ ಕ್ವಚಿತ್ ॥ ೪೮ ॥

ಸರಿಚ್ಛೈಲವನೋದ್ದೇಶಾ ಗಾವೋ ವೇಣುರವಾ ಇಮೇ ।
ಸಂಕರ್ಷಣಸಹಾಯೇನ ಕೃಷ್ಣೇನಾಚರಿತಾಃ ಪ್ರಭೋ ॥ ೪೯ ॥

ಪುನಃ ಪುನಃ ಸ್ಮಾರಯಂತಿ ನಂದಗೋಪಸುತಂ ಬತ ।
ಶ್ರೀನಿಕೇತೈಸ್ತತ್ಪದಕೈರ್ವಿಸ್ಮರ್ತುಂ ನೈವ ಶಕ್ನುಮಃ ॥ ೫೦ ॥

ಗತ್ಯಾ ಲಲಿತಯೋದಾರಹಾಸಲೀಲಾವಲೋಕನೈಃ ।
ಮಾಧ್ವ್ಯಾ ಗಿರಾ ಹೃತಧಿಯಃ ಕಥಂ ತಂ ವಿಸ್ಮರಾಮಹೇ ॥ ೫೧ ॥

ಹೇ ನಾಥ ಹೇ ರಮಾನಾಥ ವ್ರಜನಾಥಾರ್ತಿನಾಶನ ।
ಮಗ್ನಮುದ್ಧರ ಗೋವಿಂದ ಗೋಕುಲಂ ವೃಜಿನಾರ್ಣವಾತ್ ॥ ೫೨ ॥

ಶ್ರೀಶುಕ ಉವಾಚ

ತತಸ್ತಾಃ ಕೃಷ್ಣಸಂದೇಶೈರ್ವ್ಯಪೇತವಿರಹಜ್ವರಾಃ ।
ಉದ್ಧವಂ ಪೂಜಯಾಂಚಕ್ರುರ್ಜ್ಞಾತ್ವಾಽತ್ಮಾನಮಧೋಕ್ಷಜಮ್ ॥ ೫೩ ॥

ದೊಡ್ಡ-ದೊಡ್ಡ ಮಹಾತ್ಮರು ಸದಾಕಾಲ ಕೀರ್ತಿಸುವಂತಹ ನಮ್ಮ ಪ್ರಿಯತಮ ಶ್ಯಾಮಸುಂದರನು ನಮ್ಮೊಂದಿಗೆ ಏಕಾಂತದಲ್ಲಿ ಎಂತೆಂತಹ ಮಧುರವಾದ ಪ್ರೇಮದ ಮಾತುಗಳನ್ನಾಡಿರುವನು. ಅವನ್ನು ಹೇಗೆ ತಾನೆ ಮರೆಯಲು ಸಾಧ್ಯ? ಅವನಿಗೆ ಇಚ್ಛೆಯಿಲ್ಲದಿದ್ದರೂ ಲಕ್ಷ್ಮೀದೇವಿಯು ಸದಾಕಾಲ ಅವನ ಚರಣಕಮಲಗಳಿಗೆ ಅಂಟಿಕೊಂಡಂತೆ ಇರುತ್ತಾಳೆ. ಅವನ ವಕ್ಷಃಸ್ಥಳವನ್ನು ಕ್ಷಣಕಾಲವೂ ಬಿಟ್ಟಗಲುವುದೇ ಇಲ್ಲ. ॥ ೪೮ ॥ ಉದ್ಧವನೇ! ಅವನು ಜಲಕ್ರೀಡೆಯಾಡಿದ ಅದೋ ಈ ಯಮುನೆಯನ್ನು ನೋಡು. ಈ ಪರ್ವತವನ್ನು ನೋಡು, ಅದರ ಶಿಖರವನ್ನೇರಿ ಅವನು ಕೊಳಲನ್ನು ನುಡಿಸುತ್ತಿದ್ದನು. ಇದೇ ವನದಲ್ಲಿ ಅವನು ರಾತ್ರಿಯಲ್ಲಿ ರಾಸಕ್ರೀಡೆಯಾಡಿದುದು. ಅವನು ಮೇಯಿಸುತ್ತಿದ್ದ ಬೆಳಿಗ್ಗೆ ಸಾಯಂಕಾಲ ನಾವು ನೋಡುತ್ತಾ ಇರುವ ಈ ಗೋವುಗಳನ್ನು ನೋಡು. ಅವನು ತನ್ನ ಅಧರಕ್ಕೆ ಅಂಟಿಸಿಕೊಂಡು ನುಡಿಸುತ್ತಿದ್ದ ಆ ಮುರಳಿಯ ಮಧುರ ಗಾನವು ಇನ್ನೂ ನಮ್ಮ ಕಿವಿಗಳಲ್ಲಿ ಪ್ರತಿಧ್ವನಿಸುತ್ತಿದೆ. ಬಲರಾಮನೊಂದಿಗೆ ಇವೆಲ್ಲವನ್ನು ಅವನು ಸೇವಿಸುತ್ತಿದ್ದನು. ॥ ೪೯ ॥ ಉದ್ಧವನೇ! ಏನೆಂದು ಹೇಳಲಿ? ಇಲ್ಲಿಯ ಪ್ರತಿಯೊಂದು ಪ್ರದೇಶವೂ, ಪ್ರತಿಯೊಂದು ಧೂಳಿನ ಕಣವೂ ಲಕ್ಷ್ಮೀದೇವಿಗೆ ನೆಲೆಮನೆಯಾದ ಅವನ ಪರಮ ಸುಂದರ ಚರಣ ಚಿಹ್ನೆಗಳಿಂದ ಅಂಕಿತವಾಗಿವೆ. ಇವನ್ನು ನೋಡಿದಾಗಲಲ್ಲ, ಕೇಳಿದಾಗಲೆಲ್ಲ ಇವು ನಮ್ಮ ಪ್ರಿಯತಮ ಶ್ಯಾಮಸುಂದರ ನಂದನಂದನನನ್ನು ನಮ್ಮ ಕಣ್ಮುಂದೆ ತಂದು ನಿಲ್ಲಿಸುತ್ತವೆ. ಉದ್ಧವಾ! ನಾವು ಇದನ್ನು ಹೇಗೆ ಮರೆಯಬಲ್ಲೆವು? ನಾವೆಂದೂ ಮರೆಯಲಾರೆವು. ॥ ೫೦ ॥ ಉದ್ಧವನೇ! ನಮ್ಮ ಕಣ್ಣುಗಳು ಹಂಸದ ನಡಿಗೆಯಂತಹ ಸುಂದರ ನಡಿಗೆ, ಮನೋಹರವಾದ ಕಿರುನಗೆ, ಚಿತ್ತಾಪಹಾರಿಯಾದ ಕುಡಿನೋಟ, ಮಧುರವಾದ ಮಾತುಗಳು, ಎಲ್ಲಕ್ಕಿಂತ ಹೆಚ್ಚಾಗಿ ಕೊಳಲಿನ ಕರೆ - ಇವುಗಳಿಂದ ನಮ್ಮ ಮನಸ್ಸನ್ನೇ ಅಪಹರಿಸಿಬಿಟ್ಟಿರುವನು. ನಮ್ಮ ಮನಸ್ಸು ನಮ್ಮವಶದಲ್ಲಿಲ್ಲ, ಅವನಲ್ಲೇ ಸೇರಿಹೋಗಿದೆ. ಹಾಗಿರುವಾಗ ಅವನನ್ನು ಮರೆಯಲು ಸಾಧ್ಯವೇ? ॥ ೫೧ ॥ ನಮ್ಮೆಲ್ಲರಿಗೂ ವಿಶ್ವೇಶಸ್ವಾಮಿಯಾಗಿರತಕ್ಕವನೇ! ಪ್ರಾಣನಾಥನೇ! ಲಕ್ಷ್ಮೀರಮಣನೇ! ಗೋಕುಲನಾಥನೇ! ತಂದೆ-ತಾಯಿ ಮುಂತಾದವರೂ, ಸುಹೃದಯರಿಂದಲೂ, ನಮ್ಮಂತಹ ಗೋಪಿಯರಿಂದಲೂ ನಿನಗೆ ಅತಿ ಪ್ರಿಯವಾದ ಗೋವುಗಳಿಂದಲೂ ಕೂಡಿದ ಗೋಕುಲವು ಈಗ ನಿನ್ನನ್ನು ಕಾಣದೆ ದುಃಖಸಾಗರದಲ್ಲಿ ಮುಳುಗಿದೆ. ಅದನ್ನು ರಕ್ಷಿಸು. ನಮ್ಮನ್ನು ಕಾಪಾಡು. ॥ ೫೨ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ - ಪರೀಕ್ಷಿದ್ರಾಜನೇ! ಭಗವಾನ್ ಶ್ರೀಕೃಷ್ಣನ ಪ್ರಿಯ ಸಂದೇಶವನ್ನು ಕೇಳಿದ ಗೋಪಿಯರ ವಿರಹವ್ಯಥೆಯು ಶಾಂತವಾಯಿತು. ಅವರು ಇಂದ್ರಿಯಾತೀತ ಭಗವಾನ್ ಶ್ರೀಕೃಷ್ಣನನ್ನು ತಮ್ಮ ಆತ್ಮಸ್ವರೂಪನೆಂದು ತಿಳಿದುಕೊಂಡರು. ಅತ್ಯಂತ ಪ್ರೇಮಾದರಗಳಿಂದ ಉದ್ಧವನನ್ನು ಸತ್ಕರಿಸತೊಡಗಿದರು. ॥ ೫೩ ॥

ಉವಾಸ ಕತಿಚಿನ್ಮಾಸಾನ್ ಗೋಪೀನಾಂ ವಿನುದನ್ ಶುಚಃ ।
ಕೃಷ್ಣಲೀಲಾಕಥಾಂ ಗಾಯನ್ ರಮಯಾಮಾಸ ಗೋಕುಲಮ್ ॥ ೫೭ ॥

ಯಾವಂತ್ಯಹಾನಿ ನಂದಸ್ಯ ವ್ರಜೇಽವಾತ್ಸೀತ್ಸ ಉದ್ಧವಃ ।
ವ್ರಜೌಕಸಾಂ ಕ್ಷಣಪ್ರಾಯಾಣ್ಯಾಸನ್ ಕೃಷ್ಣಸ್ಯ ವಾರ್ತಯಾ ॥ ೫೮ ॥

ಸರಿದ್ವನಗಿರಿದ್ರೋಣೀರ್ವೀಕ್ಷನ್ ಕುಸುಮಿತಾನ್ ದ್ರುಮಾನ್ ।
ಕೃಷ್ಣಂ ಸಂಸ್ಮಾರಯನ್ ರೇಮೇ ಹರಿದಾಸೋ ವ್ರಜೌಕಸಾಮ್ ॥ ೫೯ ॥

ದೃಷ್ಟ್ವೈವಮಾದಿ ಗೋಪೀನಾಂ ಕೃಷ್ಣಾವೇಶಾತ್ಮವಿಕ್ಲವಮ್ ।
ಉದ್ಧವಃ ಪರಮಪ್ರೀತಸ್ತಾ ನಮಸ್ಯನ್ನಿದಂ ಜಗೌ ॥ ೬೦ ॥

ಏತಾಃ ಪರಂ ತನುಭೃತೋ ಭುವಿ ಗೋಪವಧ್ವೋ
ಗೋವಿಂದ ಏವ ನಿಖಿಲಾತ್ಮನಿ ರೂಢಭಾವಾಃ ।
ವಾಂಛಂತಿ ಯದ್ಭವಭಿಯೋ ಮುನಯೋ ವಯಂ ಚ
ಕಿಂ ಬ್ರಹ್ಮಜನ್ಮಭಿರನಂತ ಕಥಾರಸಸ್ಯ ॥ ೬೧ ॥

ಕ್ವೇಮಾಃ ಸ್ತ್ರಿಯೋ ವನಚರೀರ್ವ್ಯಭಿಚಾರದುಷ್ಟಾಃ
ಕೃಷ್ಣೇ ಕ್ವ ಚೈಷ ಪರಮಾತ್ಮನಿ ರೂಢಭಾವಃ ।
ನನ್ವೀಶ್ವರೋಽನುಭಜತೋಽವಿದುಷೋಽಪಿ ಸಾಕ್ಷಾ-
ಚ್ಛ್ರೇಯಸ್ತನೋತ್ಯಗದರಾಜ ಇವೋಪಯುಕ್ತಃ ॥ ೬೨ ॥

ನಾಯಂ ಶ್ರಿಯೋಽಂಗ ಉ ನಿತಾಂತರತೇಃ ಪ್ರಸಾದಃ
ಸ್ವರ್ಯೋಷಿತಾಂ ನಲಿನಗಂಧರುಚಾಂ ಕುತೋಽನ್ಯಾಃ ।

ಉದ್ಧವನು ಗೋಪಿಯರ ವಿರಹ ವ್ಯಥೆಯನ್ನು ಕಳೆಯಲು ಕೆಲವು ತಿಂಗಳು ಗೋಕುಲದಲ್ಲೇ ಇದ್ದುಬಿಟ್ಟನು. ಅವನು ಭಗವಂತನ ಅನಂತ ಲೀಲೆಗಳನ್ನು ಮತ್ತು ಅವನ ಮಾತುಗಳನ್ನು ತಿಳಿಸುತ್ತಾ ವ್ರಜವಾಸಿಗಳನ್ನು ಆನಂದಪಡಿಸುತ್ತಿದ್ದನು. ॥ ೫೭ ॥ ನಂದಗೋಕುಲದಲ್ಲಿ ಉದ್ಧವನು ಇರುವಷ್ಟು ದಿನವೂ ಭಗವಾನ್ ಶ್ರೀಕೃಷ್ಣನ ಲೀಲಾವಿನೋದದ ಚರ್ಚೆಯೇ ನಡೆಯುತ್ತಿದ್ದು ವ್ರಜವಾಸಿಗಳಿಗೆ ತಿಂಗಳುಗಳು ಒಂದು ಕ್ಷಣದಂತೆ ಭಾಸವಾಯಿತು. ॥ ೫೮ ॥ ಭಗವಂತನ ಪರಮ ಪ್ರೇಮಿ ಉದ್ಧವನು ಕೆಲವೊಮ್ಮೆ ಯಮುನಾತೀರಕ್ಕೆ ಹೋಗುತ್ತಾನೆ, ಕೆಲವೊಮ್ಮೆ ವೃಂದಾವನದಲ್ಲಿ ಸಂಚರಿಸುತ್ತಾನೆ, ಕೆಲವೊಮ್ಮೆ ಗೋವರ್ಧನದ ತಪ್ಪಲಿನಲ್ಲಿ ಓಡಾಡುವನು. ಕೆಲವೊಮ್ಮೆ ಬಣ್ಣ-ಬಣ್ಣದ ಹೂವುಗಳಿಂದ ಕಂಗೊಳಿಸುವ ವೃಕ್ಷಗಳನ್ನು ನೋಡಿ ಮೈಮರೆಯುವನು. ಆಯಾ ಸ್ಥಳಗಳನ್ನು ತೋರಿಸುತ್ತಾ ಇಲ್ಲಿ ಶ್ರೀಕೃಷ್ಣನು ಯಾವ ಲೀಲೆಯನ್ನಾಡಿದನು? ಎಂದು ವ್ರಜವಾಸಿಗಳಲ್ಲಿ ಕೇಳುತ್ತಾ ಭಗವಂತನ ಲೀಲೆಗಳಲ್ಲಿ ಅವರನ್ನು ತನ್ಮಯಗೊಳಿಸಿ ಬಿಡುತ್ತಿದ್ದನು. ॥ ೫೯ ॥

ಉದ್ಧವನು ವ್ರಜದಲ್ಲಿ ಇರುತ್ತಾ ಗೋಪಿಯರ ಇಂತಹ ಪ್ರೇಮ ವಿಹ್ವಲತೆಯನ್ನು ಹಾಗೂ ಬಹಳಷ್ಟು ಪ್ರೇಮ ಚೇಷ್ಟೆಗಳನ್ನು ನೋಡಿದನು. ಅವರಿಗೆ ಶ್ರೀಕೃಷ್ಣನಲ್ಲಿ ಇರುವ ಈ ಪ್ರಕಾರದ ತನ್ಮಯತೆಯನ್ನು ನೋಡಿ ಅವನು ಪ್ರೇಮಾನಂದದಲ್ಲಿ ಮುಳುಗಿಹೋಗಿ ಪ್ರೇಮಮೂರ್ತಿಗಳಾದ ಗೋಪಿಯರನ್ನು ನಮಸ್ಕರಿಸಿ ಈ ಪ್ರಕಾರ ಹಾಡತೊಡಗಿದನು. ॥ ೬೦ ॥ ಆಹಾ! "ಈ ಭೂಮಿಯಲ್ಲಿ ಕೇವಲ ಈ ಗೋಪಿಯರ ಶರೀರಧಾರಣೆಯೇ ಸಾರ್ಥಕ್ಯವನ್ನು ಹೊಂದಿದೆ. ಏಕೆಂದರೆ ಇವರು ಸರ್ವಾತ್ಮನಾದ ಭಗವಾನ್ ಶ್ರೀಕೃಷ್ಣನ ಪರಮಪ್ರೇಮಮಯ ದಿವ್ಯಭಾವದಲ್ಲಿ ನೆಲೆಸಿದ್ದಾರೆ. ಸಂಸಾರಕ್ಕೆ ಭಯಪಡುವ ಮುನಿಗಳು ಹಾಗೂ ಭಕ್ತರಾದ ನಾವು ಇದೇ ಸ್ಥಿತಿಯನ್ನು ಬಯಸುತ್ತೇವೆ. ಆದರೆ ಅಂತಹ ಅನುಪಮವಾದ ಮತ್ತು ರೂಢಮೂಲವಾದ ಪ್ರೇಮವು ಭಗವಂತನಲ್ಲಿ ನಮಗಿನ್ನೂ ಉಂಟಾಗಲಿಲ್ಲ. ಅನಂತನ ಕಥಾರಸವನ್ನು ನಿರಂತರವಾಗಿ ಪಾನಮಾಡುವ ಪ್ರೇಮಿಭಕ್ತರಿಗೆ ಬ್ರಾಹ್ಮಣರ ಜನ್ಮದಿಂದಾಗಲೀ, ಬ್ರಹ್ಮನ ಜನ್ಮದಿಂದಾಗಲೀ, ಏನಾಗಬೇಕಾಗಿದೆ? ॥ ೬೧ ॥ ವನಚರಿಯರೂ, ಆಚಾರ, ಜ್ಞಾನಹೀನರೂ ಮತ್ತು ಜಾತಿಯಿಂದ ಹೀನರೂ ಆದ ಈ ಗೊಲ್ಲತಿಯರೆಲ್ಲಿ! ಪರಮಾತ್ಮನಾದ ಶ್ರೀಕೃಷ್ಣನಲ್ಲಿ ಇವರಿಗಿರುವ ಗಾಢವಾದ ಪ್ರೇಮಭಾವವೆಲ್ಲಿ! ಆಹಾ! ಧನ್ಯ! ಧನ್ಯ! ಅಮೃತವನ್ನು ತಿಳಿಯದೆ ಕುಡಿದರೂ ಅದು ಅಮರನನ್ನಾಗಿಸುವಂತೆ, ದಯಾಮಯನಾದ ಭಗವಂತನು ತನ್ನನ್ನೇ ಅನನ್ಯ ಶರಣಾಗಿ ಭಜಿಸುವ ಮೂಢಜನರಿಗೂ ಶ್ರೇಯಸ್ಸನ್ನುಂಟು ಮಾಡುವನು. ॥ ೬೨ ॥ ಭಗವಾನ್ ಶ್ರೀಕೃಷ್ಣನು ರಾಸೋತ್ಸವದ ಸಂದರ್ಭದಲ್ಲಿ ಗೋಕುಲದ ಗೊಲ್ಲತಿಯರ ಕಂಬುಕಂಠವನ್ನು ನೀಳವಾದ ತೋಳುಗಳಿಂದ ಅಪ್ಪಿಕೊಂಡು ಗೋಪಿಯರಿಗೆ ಪರಮಾನುಗ್ರಹವನ್ನು ಕರುಣಿಸಿದ ಭಗವಂತನ ಇಂತಹ ದಿವ್ಯಾಲಿಂಗನದ ವರಪ್ರಸಾದವು ಅವನ ವಕ್ಷಸ್ಥಳದಲ್ಲಿಯೇ ನಿರಂತರವಾಗಿ ವಾಸಿಸುತ್ತಿರುವ ಏಕಾಂತ ಪ್ರೇಮಿಯಾದ

ರಾಸೋತ್ಸವೇಽಸ್ಯ ಭುಜದಂಡಗೃಹೀತಕಂಠ-
ಲಬ್ಧಾಶಿಷಾಂ ಯ ಉದಗಾದ್ವ್ರಜವಲ್ಲವೀನಾಮ್ ॥ ೬೦ ॥

ಆಸಾಮಹೋ ಚರಣರೇಣುಜುಷಾಮಹಂ ಸ್ಯಾಂ
ವೃಂದಾವನೇ ಕಿಮಪಿ ಗುಲ್ಮಲತೌಷಧೀನಾಮ್ ।
ಯಾ ದುಸ್ತ್ಯಜಂ ಸ್ವಜನಮಾರ್ಯಪಥಂ ಚ ಹಿತ್ವಾ
ಭೇಜುರ್ಮುಕುಂದಪದವೀಂ ಶ್ರುತಿಭಿರ್ವಿಮೃಗ್ಯಾಮ್ ॥ ೬೧ ॥

ಯಾ ವೈ ಶ್ರಿಯಾರ್ಚಿತಮಜಾದಿಭಿರಾಪ್ತಕಾಮೈ-
ರ್ಯೋಗೇಶ್ವರೈರಪಿ ಯದಾತ್ಮನಿ ರಾಸಗೋಷ್ಠ್ಯಾಮ್ ।
ಕೃಷ್ಣಸ್ಯ ತದ್ಭಗವತಶ್ಚರಣಾರವಿಂದಂ
ನ್ಯಸ್ತಂ ಸ್ತನೇಷು ವಿಜಹುಃ ಪರಿರಭ್ಯ ತಾಪಮ್ ॥ ೬೨ ॥

ವಂದೇ ನಂದವ್ರಜಸ್ತ್ರೀಣಾಂ ಪಾದರೇಣುಮಭೀಕ್ಷ್ಣಶಃ ।
ಯಾಸಾಂ ಹರಿಕಥೋದ್ಗೀತಂ ಪುನಾತಿ ಭುವನತ್ರಯಮ್ ॥ ೬೩ ॥

ಶ್ರೀಶುಕ ಉವಾಚ

ಅಥ ಗೋಪೀರನುಜ್ಞಾಪ್ಯ ಯಶೋದಾಂ ನಂದಮೇವ ಚ ।
ಗೋಪಾನಾಮಂತ್ರ್ಯ ದಾಶಾರ್ಹೋ ಯಾಸ್ಯನ್ನಾರುರುಹೇ ರಥಮ್ ॥ ೬೪ ॥

ತಂ ನಿರ್ಗತಂ ಸಮಾಸಾದ್ಯ ನಾನೋಪಾಯನಪಾಣಯಃ ।
ನಂದಾದಯೋಽನುರಾಗೇಣ ಪ್ರಾವೋಚನ್ನಶ್ರುಲೋಚನಾಃ ॥ ೬೫ ॥

ಮನಸೋ ವೃತ್ತಯೋ ನಃ ಸ್ಯುಃ ಕೃಷ್ಣಪಾದಾಂಬುಜಾಶ್ರಯಾಃ ।
ವಾಚೋಽಭಿಧಾಯಿನೀರ್ನಾಮ್ನಾಂ ಕಾಯಸ್ತತ್ಪ್ರಹ್ವಣಾದಿಷು ॥ ೬೬ ॥

ಕರ್ಮಭಿರ್ಭ್ರಾಮ್ಯಮಾಣಾನಾಂ ಯತ್ರ ಕ್ವಾಪೀಶ್ವರೇಚ್ಛಯಾ ।
ಮಂಗಲಾಚರಿತೈರ್ದಾನೈ ರತಿರ್ನಃ ಕೃಷ್ಣ ಈಶ್ವರೇ ॥ ೬೭ ॥

ಲಕ್ಷ್ಮೀದೇವಿಗಾಗಲೀ, ಪದ್ಮಗಂಧೆಯರಾ, ಪದ್ಮವರ್ಣೆಯರೂ ಆದ ದೇವಾಂಗನೆಯರಿಗೂ ಲಭಿಸಲಿಲ್ಲ. ಹೀಗಿರುವಾಗ ಉಳಿದ ಸಾಧಾರಣ ಸ್ತ್ರೀಯರಿಗೆ ಇಂತಹ ಪರಮಾನುಗ್ರಹವು ಹೇಗೆ ತಾನೇ ಲಭಿಸೀತು ? ॥ ೬೦ ॥ ಪರಿತ್ಯಜಿಸಲಾಗದ ಪತಿ - ಸುತ ಬಂಧುಗಳನ್ನು, ಪಾತಿವ್ರತ್ಯವೇ ಮೊದಲಾದ ಆರ್ಯಧರ್ಮಗಳನ್ನು ಪರಿತ್ಯಜಿಸಿ, ಶ್ರುತಿ-ಸ್ಮೃತಿಗಳಿಂದ ಹುಡುಕಲ್ಪಡುವ ಮುಕುಂದನ ಪರಮಪದವನ್ನು ಸೇರಿಬಿಟ್ಟಿರುವ ಗೋಪಿಯರ ಪಾದಧೂಳಿಯನ್ನು ಸತತವಾಗಿ ಸೇವಿಸುವ ವೃಂದಾವನದ ಯಾವುದಾದರೂ ಪೊದೆಗಳ ಅಥವಾ ಮರ-ಗಿಡ-ಬಳ್ಳಿಗಳ ರೂಪದಲ್ಲಿ ನಾನು ಹುಟ್ಟುವಂತಾಗಲೀ. ಭಗವಂತನ ಪರಮಭಕ್ತೆಯರಾದ ಗೋಪಿಯರ ಪಾದಧೂಳಿಯ ಸತತ ಸೇವನೆಯಿಂದಲಾದರೂ ನಾನು ಧನ್ಯನಾಗಿ ಹೋಗುವೆನು. ॥ ೬೧ ॥ ಭಗವತಿಯಾದ ಲಕ್ಷ್ಮಿಯಿಂದ ಅರ್ಚಿಸಲ್ಪಡುವ ಯಾವ ಪಾದಾರವಿಂದಗಳನ್ನು ಪೂರ್ಣಕಾಮರಾದ ಬ್ರಹ್ಮಾದಿಗಳೂ ಮತ್ತು ಯೋಗೇಶ್ವರರೂ ಕೇವಲ ತಮ್ಮ ಹೃದಯದಲ್ಲಿ ಧ್ಯಾನಮಾಡುವರೋ - ಅಂತಹ ದಿವ್ಯವಾದ ಚರಣಾರವಿಂದಗಳನ್ನು ರಾಸಕ್ರೀಡೆಯ ಸಮಯದಲ್ಲಿ ಗೋಪಿಯರು ತಮ್ಮ ವಕ್ಷಸ್ಥಳದಲ್ಲಿರಿಸಿಕೊಂಡು, ಅದನ್ನೇ ಆಲಿಂಗಿಸಿಕೊಂಡು ವಿರಹತಾಪವನ್ನು ಕಳೆದುಕೊಂಡರು. ॥ ೬೨ ॥ ನಂದಗೋಕುಲದಲ್ಲಿರುವ ಗೋಪಿಯರ ಪಾದಧೂಳಿಗೆ ನಾನು ಪುನಃ ಪುನಃ ನಮಸ್ಕರಿಸುತ್ತೇನೆ. ಅದನ್ನು ಶಿರದಲ್ಲಿ ಧರಿಸಿಕೊಳ್ಳುತ್ತೇನೆ. ಆ ಗೋಪಿಯರು ತನ್ಮಯರಾಗಿ ಹಾಡುವ ಶ್ರೀಕೃಷ್ಣನ ಲೀಲಾ ಪ್ರಸಂಗದ ಗೀತೆಗಳು ಮೂರು ಲೋಕಗಳನ್ನು ಪಾವನಗೊಳಿಸುವಂತಹುದು. ॥ ೬೩ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ - ಪರೀಕ್ಷಿತನೇ! ಹೀಗೆ ಉದ್ಧವನು ನಂದಗೋಕುಲದಲ್ಲಿ ಅನೇಕ ತಿಂಗಳಿದ್ದು ಮಥುರೆಗೆ ಹೋಗಲು ನಂದ-ಯಶೋದೆಯರ, ಗೋಪಿಯರ, ಗೋಪಾಲಕರ ಅನುಜ್ಞೆಯನ್ನು ಪಡೆದು ರಥವನ್ನೇರಿದನು.। ೬೪ ॥ ಪ್ರಯಾಣ ಹೊರಟ ಉದ್ಧವನ ರಥದ ಬಳಿಗೆ ನಂದಗೋಪನೇ ಮೊದಲಾದ ಗೋಪಾಲರು ಹಲವಾರು ಬಗೆಯ ಉಪಾಯನಗಳನ್ನು (ಕಾಣಿಕೆಗಳನ್ನು) ತೆಗೆದುಕೊಂಡು ಬಂದರು. ಕಣ್ಣುಗಳಲ್ಲಿ ಆನಂದ ಬಾಷ್ಪಗಳನ್ನು ತುಂಬಿಕೊಂಡು ಪ್ರೇಮಪುರಸ್ಸರವಾಗಿ ಹೀಗೆ ಹೇಳಿದರು. ॥ ೬೫ ॥ ಉದ್ಧವನೇ! ನಮ್ಮ ಮನಸ್ಸಿನ ಸಕಲ ವೃತ್ತಿಗಳು, ಪ್ರತಿಯೊಂದು ಸಂಕಲ್ಪವೂ ಶ್ರೀಕೃಷ್ಣನ ಚರಣಗಳನ್ನೇ ಆಶ್ರಯಿಸಿರಲಿ. ನಮ್ಮ ವಾಣಿಯು ನಿತ್ಯ ನಿರಂತರವಾಗಿ ಅವನ ಶುಭನಾಮಗಳನ್ನು ಹಾಡುತ್ತಿರಲಿ. ನಮ್ಮ ಶರೀರವು ಅವನಿಗೆ ನಮಸ್ಕರಿಸಲು ಮತ್ತು ಅವನ ಸೇವೆ ಮಾಡುವುದಕ್ಕೆ ಮೀಸಲಾಗಿ ಇರಲಿ. ॥ ೬೬ ॥ ಪಾಪ-ಪುಣ್ಯಗಳ ಫಲವಾಗಿ ಪರಮಾತ್ಮನ ಇಚ್ಛೆಯಿಂದ ನಾವು ಯಾವುದೇ ಯೋನಿಯಲ್ಲಿ ಜನಿಸಿದ್ದರೂ ನಾವು ಶುಭ ಆಚರಣೆಯನ್ನೇ ಮಾಡುತ್ತಾ, ದಾನಾದಿಗಳನ್ನು ಮಾಡುತ್ತಾ ಇರುವಂತಾಗಲಿ. ಅದರ ಫಲವಾಗಿ ಸರ್ವೇಶ್ವರನಾದ ಶ್ರೀಕೃಷ್ಣನಲ್ಲಿಯೇ ನಮಗೆ ಅಚಲವಾದ ಭಕ್ತಿಯುಂಟಾಗಲಿ. ॥ ೬೭ ॥

ಏವಂ ಸಭಾಜಿತೋ ಗೋಪೈಃ ಕೃಷ್ಣಭಕ್ತ್ಯಾ ನರಾಧಿಪ ।
ಉದ್ಧವಃ ಪುನರಾಗಚ್ಛನ್ಮಥುರಾಂ ಕೃಷ್ಣಪಾಲಿತಾಮ್ ॥ ೬೮ ॥

ಕೃಷ್ಣಾಯ ಪ್ರಣಿಪತ್ಯಾಹ ಭಕ್ತ್ಯುದ್ರೇಕಂ ವ್ರಜೌಕಸಾಮ್ ।
ವಸುದೇವಾಯ ರಾಮಾಯ ರಾಜ್ಞೇ ಚೋಪಾಯನಾನ್ಯದಾತ್ ॥ ೬೯ ॥

ಪರೀಕ್ಷಿತನೇ! ಹೀಗೆ ಉದ್ಧವನು ಶ್ರೀಕೃಷ್ಣನ ಪರಮಭಕ್ತನೆಂಬ ಕಾರಣದಿಂದ ನಂದನಿಂದಲೂ, ಗೋಪಾಲರಿಂದಲೂ ಸಮ್ಮಾನಿತನಾಗಿ ಶ್ರೀಕೃಷ್ಣನಿಂದ ಪರಿಪಾಲಿಸುತ್ತಿರುವ ಮಥುರಾಪಟ್ಟಣಕ್ಕೆ ಹಿಂದಿರುಗಿದನು. ॥ ೬೮ ॥ ಮಥುರೆಗೆ ಸೇರಿದ ಬಳಿಕ ಅವನು ಭಗವಾನ್ ಶ್ರೀಕೃಷ್ಣನನ್ನು ಕಂಡು, ನಮಸ್ಕರಿಸಿಕೊಂಡು ಗೋಕುಲವಾಸಿಗಳ ಅತಿಶಯವಾದ ಭಕ್ತಿಯನ್ನು ತಾನು ನೋಡಿದಂತೆ ವಿವರಿಸಿ ಹೇಳಿದನು. ನಂದರಾಜನೂ, ಗೋಪಾಲಕರೂ ಕಳಿಸಿದ ಕಾಣಿಕೆಗಳನ್ನು ವಸುದೇವನಿಗೂ, ಶ್ರೀಕೃಷ್ಣ-ಬಲರಾಮರಿಗೂ ಮತ್ತು ರಾಜನಾದ ಉಗ್ರಸೇನನಿಗೂ ಸಮರ್ಪಿಸಿದನು. ॥ ೬೯ ॥

ನಲವತ್ತೇಳನೆಯ ಅಧ್ಯಾಯವು ಮುಗಿಯಿತು. ॥ ೪೭ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮಸ್ಕಂಧೇ ಪೂರ್ವಾರ್ಧೇ ಉದ್ಧವಪ್ರತಿಯಾನೇ ಸಪ್ತಚತ್ವಾರಿಂಶೋಽಧ್ಯಾಯಃ ॥ ೪೭ ॥

ನಲವತ್ತೆಂಟನೆಯ ಅಧ್ಯಾಯ

ಭಗವಂತನು ಕುಬ್ಜೆಯ ಮತ್ತು ಅಕ್ರೂರನ ಮನೆಗಳಿಗೆ ಹೋದುದು

ಶ್ರೀಶುಕ ಉವಾಚ

ಅಥ ವಿಜ್ಞಾಯ ಭಗವಾನ್ ಸರ್ವಾತ್ಮಾ ಸರ್ವದರ್ಶನಃ ।
ಸೈರಂಧ್ರ್ಯಾಃ ಕಾಮತಪ್ತಾಯಾಃ ಪ್ರಿಯಮಿಚ್ಛನ್ ಗೃಹಂ ಯಯೌ ॥ ೧ ॥

ಮಹಾರ್ಹೋಪಸ್ಕರೈರಾಢ್ಯಂ ಕಾಮೋಪಾಯೋಪಬೃಂಹಿತಮ್ ।
ಮುಕ್ತಾದಾಮಪತಾಕಾಭಿರ್ವಿತಾನಶಯನಾಸನೈಃ ।
ಧೂಪೈಃ ಸುರಭಿಭಿರ್ದೀಪೈಃ ಸ್ರಗ್ಗಂಧೈರಪಿ ಮಂಡಿತಮ್ ॥ ೨ ॥

ಗೃಹಂ ತಮಾಯಾಂತಮವೇಕ್ಷ್ಯ ಸಾಽಽಸನಾತ್
ಸದ್ಯಃ ಸಮುತ್ಥಾಯ ಹಿ ಜಾತಸಂಭ್ರಮಾ ।
ಯಥೋಪಸಂಗಮ್ಯ ಸಖೀಭಿರಚ್ಯುತಂ
ಸಭಾಜಯಾಮಾಸ ಸದಾಸನಾದಿಭಿಃ ॥ ೩ ॥

ತಥೋದ್ಧವಃ ಸಾಧು ತಯಾಭಿಪೂಜಿತೋ
ನ್ಯಷೀದದುರ್ವ್ಯಾಮಭಿಮೃಶ್ಯ ಚಾಸನಮ್ ।
ಕೃಷ್ಣೋಽಪಿ ತೂರ್ಣಂ ಶಯನಂ ಮಹಾಧನಂ
ವಿವೇಶ ಲೋಕಾಚರಿತಾನ್ಯನುವ್ರತಃ ॥ ೪ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿದ್ರಾಜನೇ! ಅನಂತರ ಸಮಸ್ತರ ಆತ್ಮವಾಗಿರುವ ಹಾಗೂ ಸರ್ವದ್ರಷ್ಟಾರನಾದ ಭಗವಾನ್ ಶ್ರೀಕೃಷ್ಣನು ತನ್ನನ್ನು ಸೇರಬೇಕೆಂಬ ಆಸೆಯನ್ನಿಟ್ಟುಕೊಂಡು ಪರಿತಪಿಸುತ್ತಿದ್ದ ಕುಬ್ಜೆಯ ಮೇಲೆ ಅನುಗ್ರಹ ತೋರಲು ಅವಳ ಮನೆಗೆ ಹೋದನು. ॥ ೧ ॥ ಕುಬ್ಜೆಯ ಮನೆಯು ಸರ್ವಸಂಪತ್ಸಮೃದ್ಧವಾಗಿತ್ತು. ಆ ಮನೆಯು ಶೃಂಗಾರ ರಸವನ್ನು ಉದ್ದೀಪನಗೊಳಿಸುವಂತಹ ಬಹಳಷ್ಟು ಸಾಧನ-ಸಾಮಗ್ರಿಗಳಿಂದ ತುಂಬಿತ್ತು. ಆಕೆಯ ಆ ಭವನವು ಮುತ್ತಿನ ಹಾರಗಳಿಂದಲೂ, ಪತಾಕೆಗಳಿಂದಲೂ, ಮೇಲ್ಕಟ್ಟುಗಳಿಂದಲೂ, ಹಂಸತೂಲಿಕಾತಲ್ಪಗಳಿಂದಲೂ, ಸುವರ್ಣಮಯ ಆಸನಗಳಿಂದಲೂ ಸುಗಂಧ ಯುಕ್ತವಾದ ಧೂಪಗಳಿಂದಲೂ, ದೀಪಗಳಿಂದಲೂ, ಮಾಲೆಗಳಿಂದಲೂ, ಸುಗಂಧ ಚಂದನಗಳಿಂದಲೂ ಸಮಲಂಕೃತವಾಗಿತ್ತು. ॥ ೨ ॥ ತನ್ನ ಸ್ವಾಮಿಯು ಮನೆಯೊಳಗೆ ಬಂದುದನ್ನು ನೋಡಿ ಕುಬ್ಜೆಯು ಆಸನದಿಂದ ಮೇಲೆದ್ದು ಅತ್ಯಂತ ಸಂಭ್ರಮದಿಂದ ತನ್ನ ಸಖಿಯರೊಡನೆ ಶ್ರೀಕೃಷ್ಣನನ್ನು ಆದರದಿಂದ ಸ್ವಾಗತಿಸಿ, ಸುಖಾಸನವನ್ನಿತ್ತು, ಯಥಾವಿಧಿಯಾಗಿ ಪೂಜಿಸಿದಳು. ॥ ೩ ॥ ಶ್ರೀಕೃಷ್ಣನನ್ನು ಸತ್ಕರಿಸಿದಂತೆಯೇ ಅವನ ಭಕ್ತನಾದ ಉದ್ಧವನನ್ನು ಸತ್ಕರಿಸಿ, ಕುಳಿತುಕೊಳ್ಳಲು ದಿವ್ಯಾಸನವನ್ನಿತ್ತಳು. ಆದರೆ ಉದ್ಧವನು ಸ್ವಾಮಿಯ ಜೊತೆಯಲ್ಲಿ ಕುಳಿತುಕೊಳ್ಳಲು ಇಷ್ಟಪಡದೆ ಆಕೆಯಿತ್ತ ಆಸನವನ್ನು ಕೈಯಿಂದ ಮುಟ್ಟಿ ನೆಲದ ಮೇಲೆ ಕುಳಿತನು. ಲೋಕಾಚಾರಗಳನ್ನು ಅನುಸರಿಸುವ ಶ್ರೀಕೃಷ್ಣನು ಬಹುಮೂಲ್ಯವಾದ ಹಾಸಿಗೆಯ ಮೇಲೆ ಕುಳಿತನು. ॥ ೪ ॥

ಸಾ ಮಜ್ಜನಾಲೇಪದುಕೂಲಭೂಷಣ-
ಸ್ರಗ್ಗಂಧತಾಂಬೂಲಸುಧಾಸವಾದಿಭಿಃ ।
ಪ್ರಸಾಧಿತಾತ್ಮೋಪಸಸಾರ ಮಾಧವಂ
ಸವ್ರೀಡಲೀಲೋತ್ಸ್ಮಿತವಿಭ್ರಮೇಕ್ಷಿತೈಃ ॥ ೫ ॥

ಅನಂತರ ಕುಬ್ಜೆಯು ಮಂಗಳಸ್ನಾನವನ್ನು ಮಾಡಿ, ಅಂಗರಾಗವನ್ನು ಲೇಪಿಸಿಕೊಂಡು, ದಿವ್ಯವಾದ ವಸ್ತ್ರಾಭೂಷಣಗಳಿಂದ ಸಮಲಂಕೃತೆಯಾಗಿ, ಗಂಧವನ್ನು ಪೂಸಿಕೊಂಡು, ಹೂಮುಡಿದುಕೊಂಡು, ಆಸವವನ್ನು ಕುಡಿದು, ತಾಂಬೂಲವನ್ನು ಸೇವಿಸಿ ಸೌಂದರ್ಯದ ಖನಿಯಂತಾಗಿ ನಾಚಿಕೆಯಿಂದ ಕೂಡಿದ ಮಂದಹಾಸದಿಂದಲೂ, ಹಾವ-ಭಾವಗಳಿಂದಲೂ ಭಗವಂತನನ್ನು ಕಡೆಗಣ್ಣನೋಟದಿಂದ ನೋಡುತ್ತಾ ಅವನ ಬಳಿಗೆ ಸಾರಿದಳು. ॥ ೫ ॥

ಆಹೂಯ ಕಾಂತಾಂ ನವಸಂಗಮಹ್ರಿಯಾ
ವಿಶಂಕಿತಾಂ ಕಂಕಣಭೂಷಿತೇ ಕರೇ ।
ಪ್ರಗೃಹ್ಯ ಶಯ್ಯಾಮಧಿವೇಶ್ಯ ರಾಮಯಾ
ರೇಮೇಽನುಲೇಪಾರ್ಪಣಪುಣ್ಯಲೇಶಯಾ ॥ ೬ ॥

ಕುಬ್ಜೆಯು ಹೊಸದಾಗಿ ಸೇರುವಿಕೆಯಿಂದ ನಾಚಿಕೊಂಡಳು. ಸಂಕೋಚದಿಂದ ಹಿಂಜರಿಯುತ್ತಿದ್ದ ಆಕೆಯನ್ನು ಶ್ರೀಕೃಷ್ಣನು ಬಳಿಗೆ ಕರೆದು ಬಳೆಗಳಿಂದ ಭೂಷಿತವಾದ ಅವಳ ಕೈಗಳನ್ನು ಹಿಡಿದುಕೊಂಡು ತನ್ನ ಪಕ್ಕದಲ್ಲಿ ಕುಳ್ಳಿರಿಸಿಕೊಂಡನು. ಪರೀಕ್ಷಿತನೇ! ಕುಬ್ಜೆಯು ಈ ಜನ್ಮದಲ್ಲಿ ಭಗವಂತನಿಗೆ ಕೇವಲ ಅಂಗರಾಗವನ್ನು ಅರ್ಪಿಸಿದ್ದಳು. ಆ ಒಂದೇ ಶುಭಕರ್ಮದಿಂದ ಆಕೆಗೆ ಇಂತಹ ಅನುಪಮವಾದ ಅವಕಾಶದೊರೆಯಿತು. ॥ ೬ ॥

ಸಾನಂಗತಪ್ತಕುಚಯೋರುರಸಸ್ತಥಾಕ್ಷ್ಣೋ-
ರ್ಜಿಘ್ರಂತ್ಯನಂತಚರಣೇನ ರುಜೋ ಮೃಜಂತೀ ।
ದೋರ್ಭ್ಯಾಂ ಸ್ತನಾಂತರಗತಂ ಪರಿರಭ್ಯ ಕಾಂತ-
ಮಾನಂದಮೂರ್ತಿಮಜಹಾದತಿದೀರ್ಘತಾಪಮ್ ॥ ೭ ॥

ಕುಬ್ಜೆಯು ಭಗವಾನ್ ಶ್ರೀಕೃಷ್ಣನ ಚರಣಾರವಿಂದಗಳನ್ನು ಕಾಮತಪ್ತವಾಗಿದ್ದ ವಕ್ಷಸ್ಥಳದ ಮೇಲೆ ಇಟ್ಟುಗೊಂಡು ಕಣ್ಣಿಗೊತ್ತಿಕೊಂಡು ಆ ದಿವ್ಯ ಚರಣಗಳ ಸುಗಂಧವನ್ನು ಆಘ್ರಾಣಿಸುತ್ತಾ ಹೃದಯದ ಆಧಿ-ವ್ಯಾಧಿಗಳೆಲ್ಲವನ್ನು ನಿವಾರಿಸಿಕೊಂಡಳು. ಹೀಗೆ ಭಗವಂತನ ಸಾನ್ನಿಧ್ಯವನ್ನು ಪಡೆದು ಆನಂದಸಾಗರದಲ್ಲಿ ಮುಳುಗಿ ಹೋದಳು. ॥೭॥

ಸೈವಂ ಕೈವಲ್ಯನಾಥಂ ತಂ ಪ್ರಾಪ್ಯ ದುಷ್ಪ್ರಾಪಮೀಶ್ವರಮ್ ।
ಅಂಗರಾಗಾರ್ಪಣೇನಾಹೋ ದುರ್ಭಗೇದಮಯಾಚತ ॥ ೮ ॥

ಶ್ರೀಕೃಷ್ಣನು ಮೋಕ್ಷಕ್ಕೆ ಸ್ವಾಮಿಯು. ಭಗವಾನ್ ಮೋಕ್ಷವನ್ನೀಯಲು ಸಮರ್ಥನು. ಸುಲಭವಾಗಿ ಸಿಕ್ಕಲಾರನು. ಅಂತಹವನನ್ನು ಕೇವಲ ಅಂಗರಾಗ ಸಮರ್ಪಣದಿಂದ ಕುಬ್ಜೆಯು ಪಡೆದುಕೊಂಡಿದ್ದಳು. ಆದರೆ ಆ ದುರ್ಭಾಗ್ಯಳಾದ ಕೈಂಕರ್ಯದಿಂದ ಪ್ರಭುವಿನ ಗೋಪಿಕೆಯರಂತೆ ಸೇವೆಯನ್ನು ಬೇಡಿಕೊಳ್ಳದೆ ಹೀಗೆ ಬೇಡಿದಳು. ॥ ೮ ॥

ಆಹೋಷ್ಯತಾಮಿಹ ಪ್ರೇಷ್ಠ ದಿನಾನಿ ಕತಿಚಿನ್ಮಯಾ ।
ರಮಸ್ವ ನೋತ್ಸಹೇ ತ್ಯಕ್ತುಂ ಸಂಗಂ ತೇಽಂಬುರುಹೇಕ್ಷಣ ॥ ೯ ॥

ಪ್ರಿಯತಮನೇ! ನೀನು ಕೆಲವು ದಿನ ಇಲ್ಲೇ ಇದ್ದು ನನ್ನೊಡನೆ ರಮಿಸುತ್ತಿರು. ಕಮಲಾಕ್ಷನೇ! ನಿನ್ನ ಸಂಗವನ್ನು ನನ್ನಿಂದ ಬಿಟ್ಟಿರಲಾಗುವುದಿಲ್ಲ. ॥ ೯ ॥

ತಸ್ಯೈ ಕಾಮವರಂ ದತ್ತ್ವಾ ಮಾನಯಿತ್ವಾ ಚ ಮಾನದಃ ।
ಸಹೋದ್ಧವೇನ ಸರ್ವೇಶಃ ಸ್ವಧಾಮಾಗಮದರ್ಚಿತಮ್ ॥ ೧೦ ॥

ಪರೀಕ್ಷಿತನೇ! ಭಗವಾನ್ ಶ್ರೀಕೃಷ್ಣನು ಸಮಸ್ತರಿಗೂ ಮಾನದಾತನು. ಸರ್ವೇಶ್ವರನೂ ಆಗಿರುವವನು ಆಕೆಯು ಅಪೇಕ್ಷಿಸಿದ ವರವನ್ನಿತ್ತು ಆಕೆಯಿಂದ ಪೂಜೆಯನ್ನು ಕೈಗೊಂಡು ತನ್ನ ಪ್ರಿಯಭಕ್ತನಾದ ಉದ್ಧವನೊಂದಿಗೆ ತನ್ನ ಅರಮನೆಗೆ ಹಿಂದಿರುಗಿದನು. ॥ ೧೦ ॥

ದುರಾರಾಧ್ಯಂ ಸಮಾರಾಧ್ಯ ವಿಷ್ಣುಂ ಸರ್ವೇಶ್ವರೇಶ್ವರಮ್ ।
ಯೋ ವೃಣೀತೇ ಮನೋಗ್ರಾಹ್ಯಮಸತ್ತ್ವಾತ್ ಕುಮನೀಷ್ಯಸೌ ॥ ೧೧ ॥

ರಾಜನೇ! ಭಗವಂತನು ಬ್ರಹ್ಮೇಂದ್ರಾದಿ ಸಮಸ್ತ ಈಶ್ವರರಿಗೂ ಈಶ್ವರನಾಗಿರುವನು. ಅವನನ್ನು ಒಲಿಸಿಕೊಳ್ಳುವುದು ಜೀವಿಗಳಿಗೆ ಸುಲಭವಲ್ಲ. ಅವನನ್ನು ಒಲಿಸಿಕೊಂಡು ಅವನಲ್ಲಿ ವಿಷಯ-ಸುಖವನ್ನು ಬೇಡಿದರೆ ಅವನು ನಿಶ್ಚಯವಾಗಿಯೂ ದುರ್ಬುದ್ಧಿಯುಳ್ಳವನೇ ಸರಿ. ಏಕೆಂದರೆ, ವಾಸ್ತವವಾಗಿ ವಿಷಯ-ಸುಖಗಳು ಅತ್ಯಂತ ತುಚ್ಛವಾಗಿವೆ. ಅದಕ್ಕೆ ಯಾವ ಬೆಲೆಯೂ ಇಲ್ಲ. ॥ ೧೧ ॥

ಅಕ್ರೂರಭವನಂ ಕೃಷ್ಣಃ ಸಹರಾಮೋದ್ಧವಃ ಪ್ರಭುಃ ।
ಕಿಂಚಿಚ್ಚಿಕೀರ್ಷಯನ್ ಪ್ರಾಗಾದಕ್ರೂರಪ್ರಿಯಕಾಮ್ಯಯಾ ॥ ೧೨ ॥

ಕೆಲವು ದಿನ ಕಳೆದ ಬಳಿಕ ಒಂದು ದಿನ ಪ್ರಭುವಾದ ಶ್ರೀಕೃಷ್ಣನು ಬಲರಾಮ ಮತ್ತು ಉದ್ಧವರೊಂದಿಗೆ ಅಕ್ರೂರನ ಅಭಿಲಾಷೆಯನ್ನು ಪೂರ್ಣಗೊಳಿಸಲು ಹಾಗೂ ಅವನಿಂದ ಒಂದು ಕಾರ್ಯವನ್ನು ಮಾಡಿಸಿಕೊಳ್ಳಲು ಅವನ ಮನೆಗೆ ಹೋದನು. ॥ ೧೨ ॥

ಸ ತಾನ್ ನರವರಶ್ರೇಷ್ಠಾನಾರಾದ್ವೀಕ್ಷ್ಯ ಸ್ವಬಾಂಧವಾನ್ ।
ಪ್ರತ್ಯುತ್ಥಾಯ ಪ್ರಮುದಿತಃ ಪರಿಷ್ವಜ್ಯಾಭ್ಯನಂದತ ॥ ೧೩ ॥

ನನಾಮ ಕೃಷ್ಣಂ ರಾಮಂ ಚ ಸ ತೈರಪ್ಯಭಿವಾದಿತಃ ।
ಪೂಜಯಾಮಾಸ ವಿಧಿವತ್ ಕೃತಾಸನಪರಿಗ್ರಹಾನ್ ॥ ೧೪ ॥

ಪಾದಾವನೇಜನೀರಾಪೋ ಧಾರಯನ್ ಶಿರಸಾ ನೃಪ ।
ಅರ್ಹಣೇನಾಂಬರೈರ್ದಿವ್ಯೈರ್ಗಂಧಸ್ರಗ್ಭೂಷಣೋತ್ತಮೈಃ ॥ ೧೫ ॥

ಅರ್ಚಿತ್ವಾ ಶಿರಸಾಽಽನಮ್ಯ ಪಾದಾವಂಕಗತೌ ಮೃಜನ್ ।
ಪ್ರಶ್ರಯಾವನತೋಽಕ್ರೂರಃ ಕೃಷ್ಣರಾಮಾವಭಾಷತ ॥ ೧೬ ॥

ದಿಷ್ಟ್ಯಾ ಪಾಪೋ ಹತಃ ಕಂಸಃ ಸಾನುಗೋ ವಾಮಿದಂ ಕುಲಮ್ ।
ಭವದ್ಭ್ಯಾಮುದ್ಧೃತಂ ಕೃಚ್ಛ್ರಾದ್ದುರಂತಾಚ್ಚ ಸಮೇಧಿತಮ್ ॥ ೧೭ ॥

ಯುವಾಂ ಪ್ರಧಾನಪುರುಷೌ ಜಗದ್ಧೇತೂ ಜಗನ್ಮಯೌ ।
ಭವದ್ಭ್ಯಾಂ ನ ವಿನಾ ಕಿಂಚಿತ್ ಪರಮಸ್ತಿ ನ ಚಾಪರಮ್ ॥ ೧೮ ॥

ಆತ್ಮಸೃಷ್ಟಮಿದಂ ವಿಶ್ವಮನ್ವಾವಿಶ್ಯ ಸ್ವಶಕ್ತಿಭಿಃ ।
ಈಯತೇ ಬಹುಧಾ ಬ್ರಹ್ಮನ್ ಶ್ರುತಪ್ರತ್ಯಕ್ಷಗೋಚರಮ್ ॥ ೧೯ ॥

ಯಥಾ ಹಿ ಭೂತೇಷು ಚರಾಚರೇಷು
ಮಹ್ಯಾದಯೋ ಯೋನಿಷು ಭಾಂತಿ ನಾನಾ ।
ಏವಂ ಭವಾನ್ ಕೇವಲ ಆತ್ಮಯೋನಿ-
ಷ್ವಾತ್ಮಾಽಽತ್ಮತಂತ್ರೋ ಬಹುಧಾ ವಿಭಾತಿ ॥ ೨೦ ॥

ಸೃಜಸ್ಯಥೋ ಲುಂಪಸಿ ಪಾಸಿ ವಿಶ್ವಂ
ರಜಸ್ತಮಃಸತ್ತ್ವಗುಣೈಃ ಸ್ವಶಕ್ತಿಭಿಃ ।
ನ ಬಧ್ಯಸೇ ತದ್ಗುಣಕರ್ಮಭಿರ್ವಾ
ಜ್ಞಾನಾತ್ಮನಸ್ತೇ ಕ್ವ ಚ ಬಂಧಹೇತುಃ ॥ ೨೧ ॥

ತನ್ನ ಬಂಧುಗಳಾದ ಮನುಷ್ಯಶ್ರೇಷ್ಠರಾದ ಬಲರಾಮ ಶ್ರೀಕೃಷ್ಣರು ಉದ್ಧವನೊಂದಿಗೆ ಬರುತ್ತಿರುವುದನ್ನು ದೂರದಿಂದಲೇ ನೋಡಿದ ಅಕ್ರೂರನು ತತ್‌ಕ್ಷಣ ಎದ್ದು ಮುಂದೆ ಬಂದು ಆನಂದ ತುಂದಿಲನಾಗಿ ಅಭಿನಂದಿಸುತ್ತಾ ಒಬ್ಬೊಬ್ಬರನ್ನು ಆಲಿಂಗಿಸಿಕೊಂಡನು. ॥ ೧೩ ॥ ಅಕ್ರೂರನು ಭಗವಾನ್ ಶ್ರೀಕೃಷ್ಣ-ಬಲರಾಮರಿಗೆ ನಮಸ್ಕರಿಸಿದನು. ಉದ್ಧವನೊಂದಿಗೆ ಬಲರಾಮ-ಶ್ರೀಕೃಷ್ಣರೂ ಅಕ್ರೂರನಿಗೆ ವಂದಿಸಿದರು. ಎಲ್ಲರೂ ಸುಖಾಸೀನರಾದಾಗ ಅಕ್ರೂರನು ಎಲ್ಲರನ್ನೂ ವಿಧಿವತ್ತಾಗಿ ಪೂಜಿಸಿದನು. ॥ ೧೪ ॥ ಪರೀಕ್ಷಿತನೇ! ಅವನು ಭಗವಂತನ ಚರಣಗಳನ್ನು ತೊಳೆದು ಪಾದೋದಕವನ್ನು ಶಿರದಲ್ಲಿ ಧರಿಸಿದನು. ಬಳಿಕ ಅನೇಕ ವಿಧದ ದಿವ್ಯ ವಸ್ತ್ರ, ಗಂಧ, ಮಾಲೆ, ಆಭೂಷಣಗಳೇ ಮುಂತಾದ ಪೂಜಾ ಸಾಮಗ್ರಿಗಳಿಂದ ಅವನನ್ನು ಅರ್ಚಿಸ ತೊಡಗಿದನು. ಶಿರಬಾಗಿ ನಮಸ್ಕರಿಸಿ, ಭಗವಂತನ ಚರಣಗಳನ್ನು ತನ್ನ ತೊಡೆಯಲ್ಲಿಟ್ಟುಕೊಂಡು ಒತ್ತತೊಡಗಿದನು. ಆಗ ವಿನಯದಿಂದ ಶ್ರೀಕೃಷ್ಣ-ಬಲರಾಮರಲ್ಲಿ ಹೇಳಿದನು. ॥ ೧೫-೧೬ ॥ ಪ್ರಭುಗಳೇ! ಪಾಪಿಯಾದ ಕಂಸನು ತನ್ನ ಅನುಯಾಯಿಗಳೊಂದಿಗೆ ಸತ್ತುಹೋದುದು ಅತ್ಯಂತ ಆನಂದದ ಮತ್ತು ಸೌಭಾಗ್ಯದ ಮಾತಾಗಿದೆ. ಅವನನ್ನು ಕೊಂದು ನೀವಿಬ್ಬರೂ ಯದುವಂಶವನ್ನು ಭಾರೀ ದೊಡ್ಡ ಸಂಕಟದಿಂದ ಪಾರುಮಾಡಿದಿರಿ ಮತ್ತು ಅದನ್ನು ಸಮೃದ್ಧಗೊಳಿಸಿ ಉನ್ನತಕ್ಕೇರಿಸಿದಿರಿ. ॥ ೧೭ ॥ ನೀವಿಬ್ಬರೂ ಜಗತ್ತಿಗೆ ಕಾರಣಭೂತರೂ, ಜಗದ್ರೂಪರೂ, ಆದಿಪುರುಷರೂ ಆಗಿರುವಿರಿ. ನಿಮಗಿಂತ ಬೇರೆಯಾದ ಯಾವ ವಸ್ತುವೂ ಇಲ್ಲ, ಕಾರ್ಯವೂ ಇಲ್ಲ, ಕಾರಣವೂ ಇಲ್ಲ. ॥ ೧೮ ॥ ಪರಮಾತ್ಮಾ! ನೀನೇ ನಿನ್ನ ಶಕ್ತಿಯಿಂದ ಈ ವಿಶ್ವವನ್ನು ಸೃಷ್ಟಿಸಿರುವೆ. ಕಾಲ-ಮಾಯೆ ಮುಂತಾದ ಶಕ್ತಿಗಳೊಡನೆ ನೀನೇ ಸೃಷ್ಟಿಸಿದ ಜಗತ್ತಿನಲ್ಲಿ ಪ್ರವಿಷ್ಟನಾಗಿ, ಕಂಡುಬರುವ, ಕೇಳಿಬರುವ ಎಲ್ಲ ವಸ್ತುಗಳ ರೂಪದಲ್ಲಿ ಕಂಡುಬರುತ್ತಿರುವೆ. ॥ ೧೯ ॥ ಪೃಥಿವಿಯೇ ಮೊದಲಾದ ಪಂಚಭೂತಗಳು ಅವುಗಳಿಂದಲೇ ಉಂಟಾದ ಚರಾಚರ ಜಗತ್ತಿನಲ್ಲಿ ನಾನಾ ರೂಪವಾಗಿ ಸೇರಿಕೊಂಡಿರುವಂತೆಯೇ, ಸರ್ವತಂತ್ರ ಸ್ವತಂತ್ರನಾದ ನೀನೂ ಕೂಡ ಆತ್ಮಾವಿರ್ಭೂತವಾದ ಕಾರ್ಯರೂಪವಾದ ಈ ಬ್ರಹ್ಮಾಂಡದಲ್ಲಿ ಅಂತರಾತ್ಮನಾಗಿ ಬಹುರೂಪದಿಂದ ತೋರುತ್ತಿರುವೆ. ಇದೂ ಒಂದು ನಿನ್ನ ಲೀಲೆಯೇ ಆಗಿದೆ. ॥ ೨೦ ॥ ಪ್ರಭುವೇ! ನೀನು ರಜೋಗುಣ-ಸತ್ತ್ವಗುಣ-ತಮೋಗುಣಗಳ ರೂಪವಾದ ನಿನ್ನ ಮಾಯಾಶಕ್ತಿಯಿಂದ ಕ್ರಮವಾಗಿ ಜಗತ್ತನ್ನು ಸೃಷ್ಟಿಸುವೆ, ಪಾಲಿಸುವೆ ಮತ್ತು ಸಂಹರಿಸುವೆ. ಆದರೆ ನೀನು ಆ ಗುಣಗಳಿಂದಾಗಲೀ, ಗುಣಗಳಿಂದಾಗುವ ಕರ್ಮಗಳಿಂದಾಗಲೀ ಬಂಧಿತನಾಗುವುದಿಲ್ಲ, ಏಕೆಂದರೆ, ಶುದ್ಧಜ್ಞಾನ ಸ್ವರೂಪನಾದ ನಿನಗೆ ಬಂಧನದ ಕಾರಣವಾದರೂ ಏನಿರಬಲ್ಲುದು? ॥ ೨೧ ॥ ಪ್ರಭುವೇ! ಸ್ವಯಂ ಆತ್ಮವಸ್ತುವಿಗೆ ಸ್ಥೂಲ-ಸೂಕ್ಷ್ಮದೇಹಗಳೇ ಮುಂತಾದ ಉಪಾಧಿಗಳು ಇಲ್ಲದ ಕಾರಣ ಅದಕ್ಕೆ ಹುಟ್ಟು-ಸಾವುಗಳಿಲ್ಲ. ಅದರಲ್ಲಿ ಯಾವ ವಿಧವಾದ ಭೇದ-ಭಾವಗಳೂ ಇಲ್ಲ. ಈ ಕಾರಣದಿಂದಲೇ ನಿನಗೆ ಬಂಧನವಾಗಲೀ, ಮೋಕ್ಷವಾಗಲೀ

ದೇಹಾದ್ಯುಪಾಧೇರನಿರೂಪಿತತ್ವಾದ್
ಭವೋ ನ ಸಾಕ್ಷಾನ್ನ ಭಿದಾಽಽತ್ಮನಃ ಸ್ಯಾತ್ ।
ಅತೋ ನ ಬಂಧಸ್ತವ ನೈವ ಮೋಕ್ಷಃ
ಸ್ಯಾತಾಂ ನಿಕಾಮಸ್ತ್ವಯಿ ನೋಽವಿವೇಕಃ ॥ ೨೨ ॥

ತ್ವಯೋದಿತೋಽಯಂ ಜಗತೋ ಹಿತಾಯ
ಯದಾ ಯದಾ ವೇದಪಥಃ ಪುರಾಣಃ ।
ಬಾಧ್ಯೇತ ಪಾಷಂಡಪಥೈರಸದ್ಭಿ-
ಸ್ತದಾ ಭವಾನ್ ಸತ್ತ್ವಗುಣಂ ಬಿಭರ್ತಿ ॥ ೨೩ ॥

ಸ ತ್ವಂ ಪ್ರಭೋಽದ್ಯ ವಸುದೇವಗೃಹೇಽವತೀರ್ಣಃ
ಸ್ವಾಂಶೇನ ಭಾರಮಪನೇತುಮಿಹಾಸಿ ಭೂಮೇಃ ।
ಅಕ್ಷೌಹಿಣೀಶತವಧೇನ ಸುರೇತರಾಂಶ-
ರಾಜ್ಞಾಮಮುಷ್ಯ ಚ ಕುಲಸ್ಯ ಯಶೋ ವಿತನ್ವನ್ ॥ ೨೪ ॥

ಅದ್ಯೇಶ ನೋ ವಸತಯಃ ಖಲು ಭೂರಿಭಾಗಾ
ಯಃ ಸರ್ವದೇವಪಿತೃಭೂತನೃದೇವಮೂರ್ತಿಃ ।
ಯತ್ಪಾದಶೌಚಸಲಿಲಂ ತ್ರಿಜಗತ್ಪುನಾತಿ
ಸ ತ್ವಂ ಜಗದ್ಗುರುರಧೋಕ್ಷಜ ಯಾಃ ಪ್ರವಿಷ್ಟಃ ॥ ೨೫ ॥

ಕಃ ಪಂಡಿತಸ್ತ್ವದಪರಂ ಶರಣಂ ಸಮೀಯಾದ್
ಭಕ್ತಪ್ರಿಯಾದೃತಗಿರಃ ಸುಹೃದಃ ಕೃತಜ್ಞಾತ್ ।
ಸರ್ವಾಂದದಾತಿ ಸುಹೃದೋ ಭಜತೋಽಭಿಕಾಮಾ-
ನಾತ್ಮಾನಮಪ್ಯುಪಚಯಾಪಚಯೌ ನ ಯಸ್ಯ ॥ ೨೬ ॥

ದಿಷ್ಟ್ಯಾ ಜನಾರ್ದನ ಭವಾನಿಹ ನಃ ಪ್ರತೀತೋ
ಯೋಗೇಶ್ವರೈರಪಿ ದುರಾಪಗತಿಃ ಸುರೇಶೈಃ ।
ಛಿಂಧ್ಯಾಶು ನಃ ಸುತಕಲತ್ರಧನಾಪ್ತಗೇಹ-
ದೇಹಾದಿಮೋಹರಶನಾಂ ಭವದೀಯಮಾಯಾಮ್ ॥ ೨೭ ॥

ಶ್ರೀಶುಕ ಉವಾಚ

ಇತ್ಯರ್ಚಿತಃ ಸಂಸ್ತುತಶ್ಚ ಭಕ್ತೇನ ಭಗವಾನ್ ಹರಿಃ ।
ಅಕ್ರೂರಂ ಸಸ್ಮಿತಂ ಪ್ರಾಹ ಗೀರ್ಭಿಃ ಸಂಮೋಹಯನ್ನಿವ ॥ ೨೮ ॥

ಇರುವುದಿಲ್ಲ. ನಿನ್ನ ತತ್ತ್ವವನ್ನರಿಯದ ಅವಿವೇಕಿಗಳಾದ ನಾವು ನಿನ್ನಲ್ಲಿ ಬಂಧ-ಮೋಕ್ಷವನ್ನು ಆರೋಪಿಸುವುದೇ ಹೊರತಾಗಿ, ವಾಸ್ತವವಾಗಿ ನಿನಗೆ ಬಂಧನವೂ ಇಲ್ಲ; ಮೋಕ್ಷವೂ ಇಲ್ಲ. ॥ ೨೨ ॥ ನೀನೇ ಜಗತ್ತಿನ ಕಲ್ಯಾಣಕ್ಕಾಗಿ ಸನಾತನವಾದ ವೇದಮಾರ್ಗವನ್ನು ಪ್ರಕಟಿಸಿರುವೆ. ಪಾಖಂಡ ಮತಾವಲಂಬಿಗಳಾದ ದುಷ್ಟರಿಂದ ಪ್ರಪಂಚವು ಬಾಧಿಸಲ್ಪಟ್ಟಾಗ ನೀನು ಶುದ್ಧ ಸತ್ತ್ವಮಯವಾದ ಶರೀರದೊಡನೆ ಅವತರಿಸುವೆ. ॥ ೨೩ ॥ ಸ್ವಾಮಿಯೇ! ಈ ಸಮಯದಲ್ಲಿ ನೀನು ನಿನ್ನ ಅಂಶಸಂಭೂತನಾದ ಬಲರಾಮನೊಡನೆ ಭೂಭಾರವನ್ನು ಕಳೆಯುವ ಸಲುವಾಗಿ ವಸುದೇವನ ಮನೆಯಲ್ಲಿ ಅವತರಿಸಿರುವೆ. ರಾಕ್ಷಸಾಂಶಸಂಭೂತರಾದ ರಾಜರ ನೂರಾರು ಅಕ್ಷೌಹಿಣೀ ಸೈನಿಕರನ್ನು ಸಂಹರಿಸಿ ಭೂಭಾರವನ್ನು ಕಳೆಯುವೆ ಮತ್ತು ನಿನ್ನ ವಂಶದ ಕೀರ್ತಿಯನ್ನು ವಿಸ್ತರಿಸುವೆ. ॥ ೨೪ ॥ ಇಂದ್ರಿಯಾತೀತನಾದ ಪರಮಾತ್ಮನೇ! ಸಮಸ್ತ ದೇವತೆಗಳೂ, ಪಿತೃಗಳೂ, ಭೂತಗಣಗಳೂ, ರಾಜರೂ ನಿನ್ನ ಸ್ವರೂಪರೇ ಆಗಿದ್ದಾರೆ. ನಿನ್ನ ದಿವ್ಯ ಚರಣಾರವಿಂದಗಳನ್ನು ತೊಳೆದ ಗಂಗೆಯು ಮೂರು ಲೋಕಗಳನ್ನು ಪವಿತ್ರಗೊಳಿಸುತ್ತಾಳೆ. ಸಮಸ್ತ ಜಗತ್ತಿಗೂ ಸದ್ಗುರುವಾದ ನೀನು ಅದೃಷ್ಟವಶದಿಂದ ನಮ್ಮ ಮನೆಗೆ ಆಗಮಿಸಿರುವೆ. ನಿಶ್ಚಯವಾಗಿಯೂ ಇಂದು ನಮ್ಮ ಮನೆಗಳು ಧನ್ಯವಾದುವು. ಅವುಗಳ ಸೌಭಾಗ್ಯದ ಸೀಮೆಯೇ ಉಳಿಯಲಿಲ್ಲ. ॥ ೨೫ ॥ ಪ್ರಭೋ! ನೀನು ಪ್ರೇಮೀಭಕ್ತರ ಪರಮ ಪ್ರಿಯತಮನೂ, ಸತ್ಯವಾದಿಯೂ, ಅಕಾರಣ ಹಿತೈಷಿಯೂ, ಕೃತಜ್ಞನೂ ಆಗಿರುವೆ. ಮಾಡಿದ ಅಲ್ಪ ಉಪಕಾರವನ್ನು ಸ್ಮರಿಸುತ್ತಿರುವೆ. ನೀನು ನಿನ್ನನ್ನು ಭಜಿಸುವ ಪ್ರೇಮೀಭಕ್ತರ ಸಮಸ್ತ ಅಭಿಲಾಷೆಗಳನ್ನು ಪೂರ್ಣಗೊಳಿಸುವೆ. ನಿನ್ನಲ್ಲಿ ಏನಾಗಿ ಪ್ರಾರ್ಥಿಸದ ಏಕಾಂತ ಭಕ್ತರಿಗೆ ನಿನ್ನನ್ನೇ ಕೊಟ್ಟುಕೊಳ್ಳುವೆ. ಕ್ಷಯ-ವೃದ್ಧಿ ರಹಿತನಾದ ಪರಮಪುರುಷ ಪರಮಾತ್ಮನಾದ ನಿನ್ನನ್ನು ಬಿಟ್ಟು ಪಂಡಿತನಾದವನು ಯಾರು ತಾನೇ ಇತರರನ್ನು ಆಶ್ರಯಿಸುವನು? ॥ ೨೬ ॥ ಜನಾರ್ದನನೇ! ಯೋಗೇಶ್ವರರಿಂದಲೂ, ಸುರೇಶ್ವರರಿಂದಲೂ ತಿಳಿಯಲು ಅಶಕ್ಯವಾದ ಮಹಿಮೆಯುಳ್ಳ ನೀನು ಅದೃಷ್ಟವಶದಿಂದ ನಮಗೆ ಪ್ರತ್ಯಕ್ಷವಾಗಿ ನಮ್ಮ ಮನೆಯಲ್ಲೇ ದರ್ಶನವಿತ್ತಿಹೆ. ಸ್ವಾಮಿ! ನಾವು ಪತ್ನೀ-ಪುತ್ರ-ಸ್ವಜನ-ಧನ-ಮನೆ ಮಠಗಳು ಇವೇ ಮುಂತಾದ ಮೋಹಕವಾದ ಪಾಶಗಳಿಂದ ಬಂಧಿಸಲ್ಪಟ್ಟಿರುವೆವು. ನಿನ್ನ ಅನುಗ್ರಹ ರೂಪವಾಗಿ ನಿನ್ನದೇ ಆಗಿರುವ ಈ ಮಾಯಾಜಾಲವನ್ನು ಕತ್ತರಿಸಿ ನಮ್ಮನ್ನು ಉದ್ಧರಿಸು. ॥ ೨೭ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ - ಪರೀಕ್ಷಿತನೇ! ಹೀಗೆ ಭಕ್ತನಾದ ಅಕ್ರೂರನು ಭಗವಾನ್ ಶ್ರೀಕೃಷ್ಣನನ್ನು ಪೂಜಿಸಿ, ಸ್ತುತಿಸಿದನು. ಅನಂತರ ಶ್ರೀಕೃಷ್ಣನು ಮುಗುಳ್ನಗುತ್ತಾ ಮೃದು ಮಧುರವಾಣಿಯಿಂದ ಅಕ್ರೂರನನ್ನು ವಿಮೋಹಗೊಳಿಸುತ್ತಾ ಇಂತೆಂದನು. ॥ ೨೮ ॥

ಶ್ರೀಭಗವಾನುವಾಚ

ತ್ವಂ ನೋ ಗುರುಃ ಪಿತೃವ್ಯಶ್ಚ ಶ್ಲಾಘ್ಯೋ ಬಂಧುಶ್ಚ ನಿತ್ಯದಾ ।
ವಯಂ ತು ರಕ್ಷ್ಯಾಃ ಪೋಷ್ಯಾಶ್ಚ ಅನುಕಂಪ್ಯಾಃ ಪ್ರಜಾ ಹಿ ವಃ ॥ ೨೯ ॥

ಭಗವಾನ್ ಶ್ರೀಕೃಷ್ಣನು ಹೇಳಿದನು – ಅಯ್ಯಾ! ನೀನು ನಮ್ಮ ಗುರುವೂ ಹಿತೋಪದೇಶಕನೂ, ಚಿಕ್ಕಪ್ಪನೂ ಆಗಿರುವೆ. ನಮ್ಮ ವಂಶದಲ್ಲಿ ಅತ್ಯಂತ ಪ್ರಶಂಸನೀಯನೂ, ಹಿತೈಷಿಯೂ ಆಗಿರುವೆ. ನಾವಾದರೋ ನಿಮ್ಮ ಬಾಲಕರೇ ಆಗಿದ್ದೇವೆ. ಸದಾಕಾಲವೂ ನಿಮ್ಮಿಂದ ರಕ್ಷಿಸಲ್ಪಡುವವರೂ, ಕೃಪಾಪಾತ್ರರೂ ಆಗಿದ್ದೇವೆ. ॥ ೨೯ ॥

ಭವದ್ವಿಧಾ ಮಹಾಭಾಗಾ ನಿಷೇವ್ಯಾ ಅರ್ಹಸತ್ತಮಾಃ ।
ಶ್ರೇಯಸ್ಕಾಮೈರ್ನೃಭಿರ್ನಿತ್ಯಂ ದೇವಾಃ ಸ್ವಾರ್ಥಾ ನ ಸಾಧವಃ ॥ ೩೦ ॥

ತನ್ನ ಪರಮಶ್ರೇಯಸ್ಸನ್ನು ಬಯಸುವವನು ನಿಮ್ಮಂತಹ ಪರಮ ಪೂಜನೀಯರೂ, ಭಾಗ್ಯವಂತರೂ ಆದ ಸಂತರನ್ನು ಸದಾ ಸೇವಿಸಬೇಕು. ನಿಮ್ಮಂತಹ ಸಂತರು ದೇವತೆಗಳಿಗಿಂತಲೂ ಹೆಚ್ಚಿನವರು. ಏಕೆಂದರೆ, ದೇವತೆಗಳಲ್ಲಿಯೂ ಸ್ವಾರ್ಥವಿರುತ್ತದೆ. ಆದರೆ ಸಂತರಲ್ಲಿ ಇರುವುದಿಲ್ಲ. ॥ ೩೦ ॥

ನ ಹ್ಯಮ್ಮಯಾನಿ ತೀರ್ಥಾನಿ ನ ದೇವಾ ಮೃಚ್ಛಿಲಾಮಯಾಃ ।
ತೇ ಪುನಂತ್ಯುರುಕಾಲೇನ ದರ್ಶನಾದೇವ ಸಾಧವಃ ॥ ೩೧ ॥

ಕೇವಲ ನೀರಿನ ಸರೋವರ, ನದಿಗಳು ತೀರ್ಥವಾಗುವುದಿಲ್ಲ, ಕೇವಲ ಮೃತ್ತಿಕೆ, ಶಿಲೆ ಮುಂತಾದವುಗಳಿಂದಾದ ವಿಗ್ರಹಗಳು ದೇವರಾಗುವುದಿಲ್ಲ. ಚಿಕ್ಕಪ್ಪ! ಬಹಳ ದಿನಗಳವರೆಗೆ ಶ್ರದ್ಧೆಯಿಂದ ಸೇವೆಮಾಡಿದಾಗಲೇ ಅವುಗಳು ಪವಿತ್ರವಾಗಿಸಬಲ್ಲವು. ಆದರೆ ಸತ್ಪುರುಷರು ತಮ್ಮ ದರ್ಶನಮಾತ್ರದಿಂದಲೇ ಪವಿತ್ರರಾಗಿಸಿ ಬಿಡುತ್ತಾರೆ. ॥ ೩೧ ॥

ಸ ಭವಾನ್ ಸುಹೃದಾಂ ವೈ ನಃ ಶ್ರೇಯಾನ್ಶ್ರೇಯಶ್ಚಿಕೀರ್ಷಯಾ ।
ಜಿಜ್ಞಾಸಾರ್ಥಂ ಪಾಂಡವಾನಾಂ ಗಚ್ಛಸ್ವ ತ್ವಂ ಗಜಾಹ್ವಯಮ್ ॥ ೩೨ ॥

ಅಕ್ರೂರನೇ! ನೀವು ನಮ್ಮ ಹಿತೈಷಿ, ಸುಹೃದರಲ್ಲಿ ಸರ್ವಶ್ರೇಷ್ಠರಾಗಿರುವಿರಿ. ಆದುದರಿಂದ ಪಾಂಡವರ ಹಿತವನ್ನು ಮಾಡಲು, ಅವರ ಕ್ಷೇಮ-ಸಮಾಚಾರವನ್ನು ತಿಳಿಯಲು ನೀವು ಹಸ್ತಿನಾಪುರಕ್ಕೆ ಹೋಗಬೇಕಾಗಿದೆ. ॥ ೩೨ ॥

ಪಿತರ್ಯುಪರತೇ ಬಾಲಾಃ ಸಹ ಮಾತ್ರಾ ಸುದುಃಖಿತಾಃ ।
ಆನೀತಾಃ ಸ್ವಪುರಂ ರಾಜ್ಞಾ ವಸಂತ ಇತಿ ಶುಶ್ರುಮ ॥ ೩೩ ॥

ಪಾಂಡುರಾಜನು ಸತ್ತುಹೋದ ಬಳಿಕ ತಾಯಿ ಕುಂತೀದೇವಿಯರೊಂದಿಗೆ ಯುಧಿಷ್ಠಿರಾದಿ ಪಾಂಡವರು ಬಹಳ ದುಃಖಿತರಾಗಿದ್ದರೆಂದೂ, ಈಗ ಧೃತರಾಷ್ಟ್ರರಾಜನು ಅವರನ್ನು ಹಸ್ತಿನಾಪುರಕ್ಕೆ ಕರೆತಂದು, ಅವರು ಅಲ್ಲೇ ಇರುವರೆಂದೂ ಕೇಳಿದ್ದೇವೆ. ॥ ೩೩ ॥

ತೇಷು ರಾಜಾಂಬಿಕಾಪುತ್ರೋ ಭ್ರಾತೃಪುತ್ರೇಷು ದೀನಧೀಃ ।
ಸಮೋ ನ ವರ್ತತೇ ನೂನಂ ದುಷ್ಪುತ್ರವಶಗೋಽಂಧದೃಕ್ ॥ ೩೪ ॥

ರಾಜಾ ಧೃತರಾಷ್ಟ್ರನು ಕುರುಡನಾಗಿದ್ದು ದುರ್ಬಲ ಬುದ್ಧಿಯವನೆಂದು ನೀನು ತಿಳಿದೇ ಇರುವೆ. ಪುತ್ರನಾದ ದುಷ್ಟ ದುರ್ಯೋಧನನ ಅಧೀನನಾಗಿ ಅವನು ಪಾಂಡವರೊಡನೆ ತನ್ನ ಪುತ್ರರಂತೆ ಸಮಾನವಾಗಿ ವ್ಯವಹರಿಸುತ್ತಿಲ್ಲ. ॥ ೩೪ ॥

ಗಚ್ಛ ಜಾನೀಹಿ ತದ್ವೃತ್ತಮಧುನಾ ಸಾಧ್ವಸಾಧು ವಾ ।
ವಿಜ್ಞಾಯ ತದ್ವಿಧಾಸ್ಯಾಮೋ ಯಥಾ ಶಂ ಸುಹೃದಾಂ ಭವೇತ್ ॥ ೩೫ ॥

ಅದಕ್ಕಾಗಿ ನೀವು ಅಲ್ಲಿಗೆ ಹೋಗಿ ಪಾಂಡವರ ಸ್ಥಿತಿ-ಗತಿಯನ್ನು ತಿಳಿದುಕೊಂಡು ಬನ್ನಿರಿ. ಅವರ ಸಮಾಚಾರ ನಿಮ್ಮಿಂದ ತಿಳಿದ ಬಳಿಕ ಆ ಸುಹೃದರಿಗೆ ಸುಖವಾಗುವಂತೆ ನಾನು ಉಪಾಯವನ್ನು ಮಾಡುವೆನು. ॥ ೩೫ ॥

ಇತ್ಯಕ್ರೂರಂ ಸಮಾದಿಶ್ಯ ಭಗವಾನ್ ಹರಿರೀಶ್ವರಃ ।
ಸಂಕರ್ಷಣೋದ್ಧವಾಭ್ಯಾಂ ವೈ ತತಃ ಸ್ವಭವನಂ ಯಯೌ ॥ ೩೬ ॥

ಸರ್ವಶಕ್ತನಾದ ಭಗವಾನ್ ಶ್ರೀಕೃಷ್ಣನು ಅಕ್ರೂರನಿಗೆ ಹೀಗೆ ಆದೇಶವನ್ನಿತ್ತು ಬಲರಾಮ-ಉದ್ಧವರೊಂದಿಗೆ ಅಲ್ಲಿಂದ ಹೊರಟು ತಮ್ಮ ಅರಮನೆಗೆ ಮರಳಿದನು. ॥ ೩೬ ॥

ನಲವತ್ತೆಂಟನೆಯ ಅಧ್ಯಾಯವು ಮುಗಿಯಿತು. ॥ ೪೮ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮಸ್ಕಂಧೇ ಪೂರ್ವಾರ್ಧೇ
ಅಷ್ಟಚತ್ವಾರಿಂಶೋಽಧ್ಯಾಯಃ ॥ ೪೮ ॥

ನಲವತ್ತೊಂಭತ್ತನೆಯ ಅಧ್ಯಾಯ

ಹಸ್ತಿನಾಪುರಕ್ಕೆ ಅಕ್ರೂರನ ಪ್ರಯಾಣ

ಶ್ರೀಶುಕ ಉವಾಚ

ಸ ಗತ್ವಾ ಹಾಸ್ತಿನಪುರಂ ಪೌರವೇಂದ್ರಯಶೋಽಂಕಿತಮ್ ।
ದದರ್ಶ ತತ್ರಾಂಬಿಕೇಯಂ ಸಭೀಷ್ಮಂ ವಿದುರಂ ಪೃಥಾಮ್ ॥ ೧ ॥

ಸಹಪುತ್ರಂ ಚ ಬಾಹ್ಲೀಕಂ ಭಾರದ್ವಾಜಂ ಸಗೌತಮಮ್ ।
ಕರ್ಣಂ ಸುಯೋಧನಂ ದ್ರೌಣಿಂ ಪಾಂಡವಾನ್ ಸುಹೃದೋಽಪರಾನ್ ॥ ೨ ॥

ಯಥಾವದುಪಸಂಗಮ್ಯ ಬಂಧುಭಿರ್ಗಾಂದಿನೀಸುತಃ ।
ಸಂಪೃಷ್ಟಸ್ತೈಃ ಸುಹೃದ್ವಾರ್ತಾಂ ಸ್ವಯಂ ಚಾಪೃಚ್ಛದವ್ಯಯಮ್ ॥ ೩ ॥

ಉವಾಸ ಕತಿಚಿನ್ಮಾಸಾನ್ ರಾಜ್ಞೋ ವೃತ್ತವಿವಿತ್ಸಯಾ ।
ದುಷ್ಪ್ರಜಸ್ಯಾಲ್ಪಸಾರಸ್ಯ ಖಲಚ್ಛಂದಾನುವರ್ತಿನಃ ॥ ೪ ॥

ತೇಜ ಓಜೋ ಬಲಂ ವೀರ್ಯಂ ಪ್ರಶ್ರಯಾದೀಂಶ್ಚ ಸದ್ಗುಣಾನ್ ।
ಪ್ರಜಾನುರಾಗಂ ಪಾರ್ಥೇಷು ನ ಸಹದ್ಭಿಶ್ಚಿಕೀರ್ಷಿತಮ್ ॥ ೫ ॥

ಕೃತಂ ಚ ಧಾರ್ತರಾಷ್ಟ್ರೈರ್ಯದ್ಗರದಾನಾದ್ಯಪೇಶಲಮ್ ।
ಆಚಖ್ಯೌ ಸರ್ವಮೇವಾಸ್ಮೈ ಪೃಥಾ ವಿದುರ ಏವ ಚ ॥ ೬ ॥

ಪೃಥಾ ತು ಭ್ರಾತರಂ ಪ್ರಾಪ್ತಮಕ್ರೂರಮುಪಸೃತ್ಯ ತಮ್ ।
ಉವಾಚ ಜನ್ಮನಿಲಯಂ ಸ್ಮರಂತ್ಯಶ್ರುಕಲೇಕ್ಷಣಾ ॥ ೭ ॥

ಅಪಿ ಸ್ಮರಂತಿ ನಃ ಸೌಮ್ಯ ಪಿತರೌ ಭ್ರಾತರಶ್ಚ ಮೇ ।
ಭಗಿನ್ಯೌ ಭ್ರಾತೃಪುತ್ರಾಶ್ಚ ಜಾಮಯಃ ಸಖ್ಯ ಏವ ಚ ॥ ೮ ॥

ಭ್ರಾತ್ರೇಯೋ ಭಗವಾನ್ ಕೃಷ್ಣಃ ಶರಣ್ಯೋ ಭಕ್ತವತ್ಸಲಃ ।
ಪೈತೃಷ್ವಸ್ರೇಯಾನ್ ಸ್ಮರತಿ ರಾಮಶ್ಚಾಂಬುರುಹೇಕ್ಷಣಃ ॥ ೯ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ - ಎಲೈ ಪರೀಕ್ಷಿತನೇ! ಭಗವಾನ್ ಶ್ರೀಕೃಷ್ಣನ ಆಜ್ಞಾನುಸಾರವಾಗಿ ಅಕ್ರೂರನು ಕುರುವಂಶೀಯರಾದವರ ಯಶಸ್ಸಿನಿಂದ ಅಂಕಿತವಾದ ಹಸ್ತಿನಾವತಿಗೆ ಪ್ರಯಾಣಮಾಡಿ, ಅಲ್ಲಿ ರಾಜನಾದ ಧೃತರಾಷ್ಟ್ರ, ಭೀಷ್ಮ, ವಿದುರ, ಕುಂತೀ, ಬಾಹ್ಲೀಕ ಮತ್ತು ಅವನ ಮಗ ಸೋಮದತ್ತ, ದ್ರೋಣಾಚಾರ್ಯರು, ಕೃಪಾಚಾರ್ಯರು, ಕರ್ಣ ದುರ್ಯೋಧನ, ದ್ರೋಣಪುತ್ರ ಅಶ್ವತ್ಥಾಮ, ಯುಧಿಷ್ಠಿರಾದಿ ಪಾಂಡವರು ಇವರನ್ನು ಹಾಗೂ ಇತರ ಇಷ್ಟ-ಮಿತ್ರರನ್ನು ನೋಡಿದನು. ॥೧-೨॥ ಗಾಂದಿನೀನಂದನನಾದ ಅಕ್ರೂರನು ಎಲ್ಲ ಇಷ್ಟ-ಮಿತ್ರರನ್ನು ಮತ್ತು ಸಂಬಂಧಿಗಳನ್ನು ಭೇಟಿಯಾದಾಗ ಧೃತರಾಷ್ಟ್ರನೇ ಮೊದಲಾದವರೂ ತಮ್ಮ ಮಥುರಾವಾಸಿಗಳಾದ ಸ್ವಜನ-ಸಂಬಂಧಿಗಳ ಕ್ಷೇಮಸಮಾಚಾರವನ್ನು ಕೇಳಿದರು. ಅಂತೆಯೇ ಅಕ್ರೂರನೂ ಹಸ್ತಿನಾಪುರವಾಸಿಗಳ ಕ್ಷೇಮ-ಸಮಾಚಾರಗಳನ್ನು ಕೇಳಿದನು.॥೩॥ ಪರೀಕ್ಷಿತನೇ! ಧೃತರಾಷ್ಟ್ರನು ಪಾಂಡವರೊಂದಿಗೆ ಹೇಗೆ ವ್ಯವಹರಿಸುತ್ತಾನೆಂದು ತಿಳಿಯಲು ಅಕ್ರೂರನು ಕೆಲವು ತಿಂಗಳು ಅಲ್ಲೇ ಉಳಿದುಕೊಂಡನು. ನಿಜ ಹೇಳಬೇಕಾದರೆ - ದುಷ್ಟಪುತ್ರರ ಇಚ್ಛೆಯ ವಿರುದ್ಧವಾಗಿ ಯಾವುದನ್ನೂ ಮಾಡುವ ಧೈರ್ಯ ಧೃತರಾಷ್ಟ್ರನಲ್ಲಿರಲಿಲ್ಲ. ಅವನು ಶಕುನಿ ಮೊದಲಾದ ದುಷ್ಟರ ಸಲಹೆಯಂತೆ ಕಾರ್ಯಮಾಡುತ್ತಿದ್ದನು. ॥೪॥ ಕುಂತೀ ಮತ್ತು ವಿದುರನು ಅಕ್ರೂರನಿಗೆ ತಿಳಿಯ ಹೇಳಿದರು - ಧೃತರಾಷ್ಟ್ರನ ಮಕ್ಕಳಾದ ದುರ್ಯೋಧನಾದಿಗಳು ಪಾಂಡವರ ಪ್ರಭಾವ, ಶಸ್ತ್ರಕೌಶಲ್ಯ, ಬಲ, ಪರಾಕ್ರಮ, ವಿನಯ ಮೊದಲಾದ ಸದ್ಗುಣಗಳನ್ನು ನೋಡಿ ಉರಿಯುತ್ತಿರುತ್ತಾರೆ. ಪ್ರಜೆಗಳು ಪಾಂಡವರನ್ನು ವಿಶೇಷವಾಗಿ ಪ್ರೀತಿಸಿದಾಗ ಅವರು ತುಂಬಾ ಹೊಟ್ಟೆಕಿಚ್ಚು ಪಟ್ಟುಕೊಂಡು ಪಾಂಡವರಿಗೆ ಅನಿಷ್ಟವನ್ನು ಮಾಡಲು ತೊಡಗುತ್ತಾರೆ. ಇಂದಿನ ತನಕ ದುರ್ಯೋಧನಾದಿ ಧೃತರಾಷ್ಟ್ರನ ಪುತ್ರರು ಪಾಂಡವರಿಗೆ ವಿಷ ಉಣಿಸುವುದೇ ಮುಂತಾದ ಬಹಳ ಅತ್ಯಾಚಾರವನ್ನು ಮಾಡಿರುವರು ಮತ್ತು ಮುಂದೆಯೂ ಕೂಡ ಬಹಳಷ್ಟು ಮಾಡಲು ಯೋಚಿಸುತ್ತಿದ್ದಾರೆ. ॥೫-೬॥

ಅಕ್ರೂರನು ಕುಂತಿಯ ಮನೆಗೆ ಬಂದಾಗ ಕುಂತಿಯು ಅವನ ಬಳಿಗೆ ಹೋಗಿ ಕುಳಿತಳು. ಅಕ್ರೂರನನ್ನು ನೋಡಿ ಆಕೆಗೆ ತನ್ನ ತವರುಮನೆಯ ನೆನಪಾಗಿ ಕಣ್ಣುಗಳಿಂದ ನೀರನ್ನು ಸುರಿಸುತ್ತಾ ಅವನಲ್ಲಿ ಹೇಳಿದಳು. ॥೭॥ ಪ್ರಿಯ ಸಹೋದರನೇ! ನನ್ನ ತಂದೆ-ತಾಯಿಯರು, ಅಕ್ಕ-ತಂಗಿಯರು, ಅಣ್ಣನಮಕ್ಕಳು, ಕುಟುಂಬದ ಸ್ತ್ರೀಯರು, ಗೆಳತಿಯರು ಎಂದಾದರೂ ನನ್ನನ್ನು ಸ್ಮರಿಸುವರೇ? ॥೮॥ ನನ್ನ ಅಳಿಯಂದಿರಾದ ಭಗವಾನ್ ಶ್ರೀಕೃಷ್ಣ ಮತ್ತು ಕಮಲನಯನ ಬಲರಾಮ ಇವರಿಬ್ಬರೂ ಭಕ್ತವತ್ಸಲರೂ, ಶರಣಾಗತ ರಕ್ಷಕರೂ ಆಗಿದ್ದಾರೆ ಎಂದು ಕೇಳಿದ್ದೆ. ಅವರು ಎಂದಾದರೂ ತಮ್ಮ ಸೋದರತ್ತೆಯನ್ನು ಹಾಗೂ ಆಕೆಯ ಮಕ್ಕಳನ್ನು ನೆನೆಸಿಕೊಳ್ಳುವರೇನು?॥೯॥

ಸಾಪತ್ನಮಧ್ಯೇ ಶೋಚಂತೀಂ ವೃಕಾಣಾಂ ಹರಿಣೀಮಿವ ।
ಸಾಂತ್ವಯಿಷ್ಯತಿ ಮಾಂ ವಾಕ್ಯೈಃ ಪಿತೃಹೀನಾಂಶ್ಚ ಬಾಲಕಾನ್
॥ ೧೦ ॥

'ತೋಳಗಳ ನಡುವೆ ಸಿಕ್ಕಿಕೊಂಡ ಜಿಂಕೆಯಂತೆ' ನಾನು ಶತ್ರುಗಳ ಮಧ್ಯದಲ್ಲಿ ಸುತ್ತುವರಿದು ಶೋಕಾಕುಲಳಾಗಿದ್ದೇನೆ. ನನ್ನ ಮಕ್ಕಳು ತಂದೆಯನ್ನು ಕಳೆದುಕೊಂಡಿರುವರು. ನಮ್ಮ ಶ್ರೀಕೃಷ್ಣನು ಎಂದಾದರು ಇಲ್ಲಿಗೆ ಬಂದು ನನ್ನನ್ನು ಮತ್ತು ಈ ಅನಾಥ ಮಕ್ಕಳನ್ನು ಸಂತೈಸುವನೇ ? ॥ ೧೦ ॥ (ಶ್ರೀಕೃಷ್ಣನು ತನ್ನ ಮುಂದೆಯೇ ಇರುವಂತೆ ಭಾವಿಸಿ ಕುಂತಿಯು ಗದ್ಗದಿತಳಾಗಿ ಹೇಳತೊಡಗಿದಳು)

ಕೃಷ್ಣ ಕೃಷ್ಣ ಮಹಾಯೋಗಿನ್ ವಿಶ್ವಾತ್ಮನ್ ವಿಶ್ವಭಾವನ ।
ಪ್ರಪನ್ನಾಂ ಪಾಹಿ ಗೋವಿಂದ ಶಿಶುಭಿಶ್ಚಾವಸೀದತೀಮ್
॥ ೧೧ ॥

ಓ ಸಚ್ಚಿದಾನಂದ ಸ್ವರೂಪನಾದ ಶ್ರೀಕೃಷ್ಣ! ನೀನು ಮಹಾಯೋಗಿಯೂ, ವಿಶ್ವಾತ್ಮನೂ, ಸಮಸ್ತ ವಿಶ್ವಕ್ಕೆ ಆತ್ಮನಾಗಿಯೂ, ಜಗದ್ರಕ್ಷಕನೂ ಆಗಿರುವೆ. ಗೋವಿಂದ ! ನಾನು ನನ್ನ ಮಕ್ಕಳೊಂದಿಗೆ ದುಃಖದ ಮೇಲೆ ದುಃಖಗಳನ್ನೇ ಅನುಭವಿಸುತ್ತಿದ್ದೇನೆ. ನಿನಗೆ ಶರಣು ಬಂದಿರುವ ನನ್ನನ್ನು ರಕ್ಷಿಸು. ನನ್ನ ಮಕ್ಕಳನ್ನು ಕಾಪಾಡು. ॥ ೧೧ ॥

ನಾನ್ಯತ್ತವ ಪದಾಂಭೋಜಾತ್ ಪಶ್ಯಾಮಿ ಶರಣಂ ನೃಣಾಮ್ ।
ಬಿಭ್ಯತಾಂ ಮೃತ್ಯುಸಂಸಾರಾದೀಶ್ವರಸ್ಯಾಪವರ್ಗಿಕಾತ್
॥ ೧೨ ॥

ಶ್ರೀಕೃಷ್ಣ! ಈ ಪ್ರಪಂಚವು ಮೃತ್ಯುಮಯವಾಗಿದ್ದು, ನಿನ್ನ ಚರಣಗಳು ಮೋಕ್ಷವನ್ನು ಕರುಣಿಸುವಂತಹುದು. ಈ ಸಂಸಾರಕ್ಕೆ ಹೆದರಿ ಶರಣಾದವರಿಗೆ ನಿನ್ನ ಚರಣಕಮಲಗಳಲ್ಲದೆ ಬೇರೆ ಯಾವುದೇ ಆಶ್ರಯವನ್ನು ನಾನು ನೋಡುತ್ತಿಲ್ಲ. ॥ ೧೨ ॥

ನಮಃ ಕೃಷ್ಣಾಯ ಶುದ್ಧಾಯ ಬ್ರಹ್ಮಣೇ ಪರಮಾತ್ಮನೇ ।
ಯೋಗೇಶ್ವರಾಯ ಯೋಗಾಯ ತ್ವಾಮಹಂ ಶರಣಂ ಗತಾ
॥ ೧೩ ॥

ಶ್ರೀಕೃಷ್ಣನೇ ! ನೀನು ಮಾಯಾಲೇಶದಿಂದ ರಹಿತನಾದ ಪರಮ ಶುದ್ಧನಾಗಿರುವೆ. ಸಾಕ್ಷಾತ್ ಪರಬ್ರಹ್ಮ ಪರಮಾತ್ಮನಾಗಿರುವೆ. ಸಮಸ್ತ ಸಾಧನೆಗಳ, ಯೋಗಗಳ ಮತ್ತು ಉಪಾಯಗಳ ಸ್ವಾಮಿಯಾಗಿದ್ದು ಸಾಕ್ಷಾತ್ ಯೋಗವೂ ಆಗಿರುವೆ. ನಾನು ನಿನಗೆ ಶರಣಾಗಿದ್ದೇನೆ. ನೀನು ನನ್ನನ್ನು ರಕ್ಷಿಸು. ॥ ೧೩ ॥

ಶ್ರೀಶುಕ ಉವಾಚ

ಇತ್ಯನುಸ್ಮೃತ್ಯ ಸ್ವಜನಂ ಕೃಷ್ಣಂ ಚ ಜಗದೀಶ್ವರಮ್ ।
ಪ್ರಾರುದದ್ದುಃಖಿತಾ ರಾಜನ್ ಭವತಾಂ ಪ್ರಪಿತಾಮಹೀ
॥ ೧೪ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿದ್ರಾಜನೇ ! ನಿನ್ನ ಮುತ್ತಜ್ಜಿಯಾದ ಕುಂತೀದೇವಿಯು ಹೀಗೆ ತಮ್ಮ ಸಂಬಂಧಿಗಳನ್ನೂ, ಕೊನೆಗೆ ಜಗದೀಶ್ವರನಾದ ಶ್ರೀಕೃಷ್ಣನನ್ನು ಸ್ಮರಿಸಿಕೊಂಡು ಕೊನೆಗೆ ಅತ್ಯಂತ ದುಃಖಿತಳಾಗಿ ಬಿಕ್ಕಿ-ಬಿಕ್ಕಿ ಅಳತೊಡಗಿದಳು. ॥ ೧೪ ॥

ಸಮದುಃಖಸುಖೋಽಕ್ರೂರೋ ವಿದುರಶ್ಚ ಮಹಾಯಶಾಃ ।
ಸಾಂತ್ವಯಾಮಾಸತುಃ ಕುಂತೀಂ ತತ್ಪುತ್ರೋತ್ಪತ್ತಿಹೇತುಭಿಃ
॥ ೧೫ ॥

ಅಕ್ರೂರನು ಮತ್ತು ವಿದುರರು ಇಬ್ಬರೂ ಸುಖ ದುಃಖಗಳನ್ನು ಸಮಾನವಾಗಿ ನೋಡುತ್ತಿದ್ದರು. ಯಶಸ್ವಿಯಾದ ಈ ಮಹಾತ್ಮರಿಬ್ಬರೂ ಕುಂತಿಗೆ ಅವಳ ಪುತ್ರರ ಜನ್ಮದಾತರಾದ ಧರ್ಮ, ವಾಯು ಮೊದಲಾದ ದೇವತೆಗಳ ನೆನಪನ್ನು ತಂದುಕೊಟ್ಟು, ನಿನ್ನ ಮಕ್ಕಳು ಅಧರ್ಮವನ್ನು ನಾಶಗೊಳಿಸಲೆಂದೇ ಹುಟ್ಟಿರುವರು ಎಂದು ಬಹಳವಾಗಿ ತಿಳಿಯ ಹೇಳಿ ಸಾಂತ್ವನ ನೀಡಿದರು. ॥ ೧೫ ॥

ಯಾಸ್ಯನ್ ರಾಜಾನಮಭ್ಯೇತ್ಯ ವಿಷಮಂ ಪುತ್ರಲಾಲಸಮ್ ।
ಅವದತ್ ಸುಹೃದಾಂ ಮಧ್ಯೇ ಬಂಧುಭಿಃ ಸೌಹೃದೋದಿತಮ್
॥ ೧೬ ॥

ಧೃತರಾಷ್ಟ್ರನು ತನ್ನ ತಮ್ಮನ ಮಕ್ಕಳೊಂದಿಗೆ ಪಕ್ಷಪಾತವನ್ನು ಮಾಡುತ್ತಿದ್ದಾನೆ ಮತ್ತು ಅವರೊಂದಿಗೆ ತನ್ನ ಪುತ್ರರಂತೆ ವ್ಯವಹರಿಸುತ್ತಿಲ್ಲ ಎಂಬುದು ಸ್ಪಷ್ಟವಾಗಿಯೇ ಇತ್ತು. ಮಥುರೆಗೆ ಹೊರಡುವಾಗ ಅಕ್ರೂರನು ಧೃತರಾಷ್ಟ್ರನ ಬಳಿಗೆ ಬಂದು ಕೌರವರಿಂದ ತುಂಬಿದ ಸಭೆಯಲ್ಲಿ ಶ್ರೀಕೃಷ್ಣ ಮತ್ತು ಬಲರಾಮಾದಿ ಹಿತೈಷಿಗಳ ಸಂದೇಶವನ್ನು ತಿಳಿಸಿದನು. ॥ ೧೬ ॥

ಅಕ್ರೂರ ಉವಾಚ

ಭೋ ಭೋ ವೈಚಿತ್ರವೀರ್ಯ ತ್ವಂ ಕುರೂಣಾಂ ಕೀರ್ತಿವರ್ಧನ ।
ಭ್ರಾತರ್ಯುಪರತೇ ಪಾಂಡಾವಧುನಾಽಽಸನಮಾಸ್ಥಿತಃ
॥ ೧೭ ॥

ಅಕ್ರೂರನು ಹೇಳಿದನು – ಕುರುವಂಶೀಯರ ಕೀರ್ತಿಯನ್ನು ಹೆಚ್ಚಿಸುವ ವಿಚಿತ್ರವೀರ್ಯನ ಮಗನಾದ ಧೃತರಾಷ್ಟ್ರನೇ ! ನಿನ್ನ ತಮ್ಮನಾದ ಪಾಂಡುಮಹಾರಾಜನು ಅವಸಾನ ಹೊಂದಿದ ಬಳಿಕ ಈಗಲಾದರೆ ನೀನು ರಾಜ್ಯ ಸಿಂಹಾಸನವನ್ನು ಏರಿರುವೆ. ॥ ೧೭ ॥

ಧರ್ಮೇಣ ಪಾಲಯನ್ನುರ್ವೀಂ ಪ್ರಜಾಃ ಶೀಲೇನ ರಂಜಯನ್ ।
ವರ್ತಮಾನಃ ಸಮಃ ಸ್ವೇಷು ಶ್ರೇಯಃ ಕೀರ್ತಿಮವಾಪ್ಸ್ಯಸಿ ॥ ೧೮ ॥

ಅನ್ಯಥಾ ತ್ವಾಚರನ್ ಲೋಕೇ ಗರ್ಹಿತೋ ಯಾಸ್ಯಸೇ ತಮಃ ।
ತಸ್ಮಾತ್ಸಮತ್ವೇ ವರ್ತಸ್ವ ಪಾಂಡವೇಷ್ವಾತ್ಮಜೇಷು ಚ ॥ ೧೯ ॥

ನೇಹ ಚಾತ್ಯಂತಸಂವಾಸಃ ಕರ್ಹಿಚಿತ್ ಕೇನಚಿತ್ಸಹ ।
ರಾಜನ್ ಸ್ವೇನಾಪಿ ದೇಹೇನ ಕಿಮು ಜಾಯಾತ್ಮಜಾದಿಭಿಃ ॥ ೨೦ ॥

ಏಕಃ ಪ್ರಸೂಯತೇ ಜಂತುರೇಕ ಏವ ಪ್ರಲೀಯತೇ ।
ಏಕೋಽನುಭುಂಕ್ತೇ ಸುಕೃತಮೇಕ ಏವ ಚ ದುಷ್ಕೃತಮ್ ॥ ೨೧ ॥

ಅಧರ್ಮೋಪಚಿತಂ ವಿತ್ತಂ ಹರಂತ್ಯನ್ಯೇಽಲ್ಪಮೇಧಸಃ ।
ಸಂಭೋಜನೀಯಾಪದೇಶೈರ್ಜಲಾನೀವ ಜಲೌಕಸಃ ॥ ೨೨ ॥

ಪುಷ್ಣಾತಿ ಯಾನಧರ್ಮೇಣ ಸ್ವಬುದ್ಧ್ಯಾ ತಮಪಂಡಿತಮ್ ।
ತೇಽಕೃತಾರ್ಥಂ ಪ್ರಹಿಣ್ವಂತಿ ಪ್ರಾಣಾ ರಾಯಃ ಸುತಾದಯಃ ॥ ೨೩ ॥

ಸ್ವಯಂ ಕಿಲ್ಬಿಷಮಾದಾಯ ತೈಸ್ತ್ಯಕ್ತೋ ನಾರ್ಥಕೋವಿದಃ ।
ಅಸಿದ್ಧಾರ್ಥೋ ವಿಶತ್ಯಂಧಂ ಸ್ವಧರ್ಮವಿಮುಖಸ್ತಮಃ ॥ ೨೪ ॥

ತಸ್ಮಾಲ್ಲೋಕಮಿಮಂ ರಾಜನ್ ಸ್ವಪ್ನಮಾಯಾಮನೋರಥಮ್ ।
ವೀಕ್ಷ್ಯಾಯಮ್ಯಾತ್ಮನಾಽಽತ್ಮಾನಂ ಸಮಃ ಶಾಂತೋ ಭವ ಪ್ರಭೋ ॥ ೨೫ ॥

ಧೃತರಾಷ್ಟ್ರ ಉವಾಚ

ಯಥಾ ವದತಿ ಕಲ್ಯಾಣೀಂ ವಾಚಂ ದಾನಪತೇ ಭವಾನ್ ।
ತಥಾನಯಾ ನ ತೃಪ್ಯಾಮಿ ಮರ್ತ್ಯಃ ಪ್ರಾಪ್ಯ ಯಥಾಮೃತಮ್ ॥ ೨೬ ॥

ತಥಾಪಿ ಸೂನೃತಾ ಸೌಮ್ಯ ಹೃದಿ ನ ಸ್ಥೀಯತೇ ಚಲೇ ।
ಪುತ್ರಾನುರಾಗವಿಷಮೇ ವಿದ್ಯುತ್ ಸೌದಾಮನೀ ಯಥಾ ॥ ೨೭ ॥

ಧರ್ಮದಿಂದ ರಾಜ್ಯಭಾರವನ್ನು ಮಾಡುತ್ತಾ, ಸದ್ವ್ಯವಹಾರಗಳಿಂದ ಪ್ರಜೆಗಳನ್ನು ಸಂತೋಷಪಡಿಸುತ್ತಾ, ಸ್ವಜನರಲ್ಲಿ ಪಕ್ಷಪಾತವಿಲ್ಲದೆ ಸಮನಾಗಿ ವ್ಯವಹರಿಸುತ್ತಿದ್ದರೆ ಶ್ರೇಯಸ್ಸನ್ನೂ ಕೀರ್ತಿಯನ್ನೂ ಪಡೆಯುವೆ. ॥ ೧೮ ॥ ಇದಕ್ಕೆ ವಿಪರೀತವಾಗಿ ಆಚರಿಸಿದರೆ ಈ ಲೋಕದಲ್ಲಿ ನೀನು ನಿಂದೆಗೆ ಗುರಿಯಾಗುವೆ. ಸತ್ತ ಬಳಿಕ ನರಕಕ್ಕೆ ಹೋಗಬೇಕಾದೀತು. ಆದ್ದರಿಂದ ನಿನ್ನ ಪುತ್ರರಲ್ಲಿಯೂ ಮತ್ತು ಪಾಂಡವರಲ್ಲಿಯೂ ಸಮಾನತೆಯಿಂದ ವರ್ತಿಸು. ॥ ೧೯ ॥ ಮಹಾರಾಜ! ಯಾರು ಯಾವಾಗಲೂ ಯಾರೊಡನೆಯೂ ಹೆಚ್ಚು ಕಾಲ ಸೇರಿಕೊಂಡು ಇರುವುದಿಲ್ಲ. ತನ್ನದೆಂದು ತಿಳಿದಿರುವ ಈ ಶರೀರದಲ್ಲಿಯೂ ಹೆಚ್ಚು ಕಾಲ ಇರಲಾಗುವುದಿಲ್ಲ. ಹೀಗಿರುವಾಗ ಪತ್ನೀ-ಪುತ್ರರ ವಿಷಯವಾಗಿ ಹೇಳುವುದೇನಿದೆ? ॥ ೨೦ ॥ ಜೀವಿಯು ಒಬ್ಬನೇ ಹುಟ್ಟುತ್ತಾನೆ, ಒಬ್ಬನೇ ಸತ್ತುಹೋಗುತ್ತಾನೆ. ತಾನು ಮಾಡಿದ ಪಾಪ-ಪುಣ್ಯಗಳ ಫಲಗಳನ್ನೂ ಒಬ್ಬನೇ ಅನುಭವಿಸುತ್ತಾನೆ. ॥ ೨೧ ॥ ಸತಿ-ಸುತ ಬಂಧುಗಳು 'ನಾವು ನಿನ್ನವರು, ನಮ್ಮ ಭರಣ-ಪೋಷಣೆಗಳನ್ನು ನೀನು ಮಾಡಬೇಕು' ಎಂದು ಹೇಳಿಕೊಂಡು - ಅಲ್ಪಬುದ್ಧಿಯವನು ಅಧರ್ಮದಿಂದ ಸಂಪಾದಿಸಿದ ಹಣವನ್ನು ಜಲಚರ ಪ್ರಾಣಿಗಳು ನೀರನ್ನು ಕುಡಿದುಬಿಡುವಂತೆ ತಿಂದುಹಾಕುತ್ತಾರೆ. ॥ ೨೨ ॥ ಈ ಮೂರ್ಖ ಜೀವನು ಯಾರನ್ನು ತನ್ನವರೆಂದು ತಿಳಿದು ಅಧರ್ಮದಿಂದಲಾದರೂ ಪಾಲಿಸಿ-ಪೋಷಿಸುತ್ತಾನೋ, ಅವರೇ ಪ್ರಾಣ, ಧನ, ಪುತ್ರಾದಿಗಳು ಈ ಜೀವನನ್ನು ಅಸಂತುಷ್ಟನಿರುವಾಗಲೇ ಬಿಟ್ಟು ಹೊರಟುಹೋಗುತ್ತಾರೆ. ॥ ೨೩ ॥ ನಿಜವಾಗಿ ಹೇಳಬೇಕಾದರೆ - ತನ್ನ ಧರ್ಮದಿಂದ ವಿಮುಖನಾದವನು ತನ್ನ ಲೌಕಿಕ ಸ್ವಾರ್ಥವನ್ನು ತಿಳಿಯುವುದಿಲ್ಲ. ಯಾರಿಗಾಗಿ ಅವನು ಅಧರ್ಮವನ್ನು ಮಾಡುವನೋ, ಅವರು ಅವನನ್ನು ಬಿಟ್ಟೇ ಬಿಡುವರು. ಅವನಿಗೆ ಎಂದಿಗೂ ಸಂತೋಷವಾಗಲಾರದು ಹಾಗೂ ತನ್ನ ಪಾಪದ ಮೂಟೆಯನ್ನು ತಲೆಯಲ್ಲಿ ಹೊತ್ತುಕೊಂಡು ಘೋರವಾದ ನರಕಕ್ಕೆ ಹೋಗುವನು. ॥ ೨೪ ॥ ಅದಕ್ಕಾಗಿ ಮಹಾರಾಜ! ಈ ಪ್ರಪಂಚವನ್ನು ಕನಸೆಂದೂ, ಇಂದ್ರಜಾಲವೆಂದೂ, ಕೇವಲ ಮನಸ್ಸಿನ ಮಂಡಿಗೆಯೆಂದೂ, ಅಸ್ಥಿರವಾದುದೆಂದೂ ಭಾವಿಸಿ, ಬುದ್ಧಿಯಿಂದ ಮನಸ್ಸನ್ನು ಸಮಾಧಾನಪಡಿಸಿಕೊಂಡು ಮಕ್ಕಳೆಲ್ಲರನ್ನೂ ಸಮತ್ವದಿಂದ ಕಾಣುತ್ತಾ ಶಾಂತನಾಗಿರು. ॥ ೨೫ ॥

ಧೃತರಾಷ್ಟ್ರನು ಹೇಳಿದನು - ದಾನಪತಿಯಾದ ಅಕ್ರೂರ! ನೀನು ನಿಶ್ಚಯವಾಗಿಯೂ ನನಗೆ ಶ್ರೇಯಸ್ಕರವಾದ ಮಾತನ್ನೇ ಹೇಳಿರುವೆ. ಮನುಷ್ಯನು ಅಮೃತವನ್ನು ಎಷ್ಟು ಕುಡಿದರೂ ತೃಪ್ತನಾಗದಿರುವಂತೆ, ಅಮೃತಸ್ವರೂಪವಾದ ನಿನ್ನ ಮಾತುಗಳಿಂದ ನಾನು ತೃಪ್ತನಾಗಲಿಲ್ಲ. ಇನ್ನೂ ಕೇಳಬೇಕೆನಿಸುತ್ತದೆ. ॥ ೨೬ ॥ ಅಕ್ರೂರನೇ! ಹೀಗಿದ್ದರೂ ನಿನ್ನ ಹಿತಕರವಾದ ಒಳ್ಳೆಯ ಮಾತುಗಳು ಚಂಚಲವಾದ ನನ್ನ ಮನಸ್ಸಿನಲ್ಲಿ ಸ್ವಲ್ಪವೂ ಉಳಿಯಲಿಲ್ಲ. ಏಕೆಂದರೆ, ನನ್ನ ಹೃದಯವು ಪುತ್ರರ ವ್ಯಾಮೋಹದಿಂದ ಅತ್ಯಂತ ವಿಷಮಯವಾಗಿದೆ. ಸ್ಫಟಿಕ ಪರ್ವತದ ಮೇಲೆ ಮಿಂಚು ಒಮ್ಮೆ ಹೊಳೆದು ಮಾಯವಾಗುವಂತೆ ನಿನ್ನ ಉಪದೇಶಗಳ ಸ್ಥಿತಿಯೂ ಹಾಗೆಯೇ ಆಗಿದೆ. ॥ ೨೭ ॥

ಈಶ್ವರಸ್ಯ ವಿಧಿಂ ಕೋ ನು ವಿಧುನೋತ್ಯನ್ಯಥಾ ಪುಮಾನ್ ।
ಭೂಮೇರ್ಭಾರಾವತಾರಾಯ ಯೋಽವತೀರ್ಣೋ ಯದೋಃ ಕುಲೇ ॥ ೨೮ ॥

ಯೋ ದುರ್ವಿಮರ್ಶಪಥಯಾ ನಿಜಮಾಯಯೇದಂ
ಸೃಷ್ಟ್ವಾ ಗುಣಾನ್ ವಿಭಜತೇ ತದನುಪ್ರವಿಷ್ಟಃ ।
ತಸ್ಮೈ ನಮೋ ದುರವಬೋಧವಿಹಾರತಂತ್ರ-
ಸಂಸಾರಚಕ್ರಗತಯೇ ಪರಮೇಶ್ವರಾಯ ॥ ೨೯ ॥

ಶ್ರೀಶುಕ ಉವಾಚ

ಇತ್ಯಭಿಪ್ರೇತ್ಯ ನೃಪತೇರಭಿಪ್ರಾಯಂ ಸ ಯಾದವಃ ।
ಸುಹೃದ್ಭಿಃ ಸಮನುಜ್ಞಾತಃ ಪುನರ್ಯದುಪುರೀಮಗಾತ್ ॥ ೩೦ ॥

ಶಶಂಸ ರಾಮಕೃಷ್ಣಾಭ್ಯಾಂ ಧೃತರಾಷ್ಟ್ರವಿಚೇಷ್ಟಿತಮ್ ।
ಪಾಂಡವಾನ್ ಪ್ರತಿ ಕೌರವ್ಯ ಯದರ್ಥಂ ಪ್ರೇಷಿತಃ ಸ್ವಯಮ್ ॥ ೩೧ ॥

ಅಕ್ರೂರನೇ! ಸರ್ವಶಕ್ತನಾದ ಭಗವಂತನು ಪೃಥಿವಿಯ ಭಾರವನ್ನಿಳುಹಲೆಂದೇ ಯದುಕುಲದಲ್ಲಿ ಅವತರಿಸಿರುವನೆಂದು ನಾನು ಕೇಳಿದ್ದೇನೆ. ಅವನ ವಿಧಾನದಲ್ಲಿ ವ್ಯತ್ಯಾಸಮಾಡಬಲ್ಲ ಯಾವ ಮನುಷ್ಯನು ತಾನೇ ಸಮರ್ಥನು? ಅವನ ಇಚ್ಛೆಯಂತೆಯೇ ನಡೆಯುವುದು. ॥ ೨೮ ॥ ಭಗವಂತನ ಮಾಯೆಯು ಅಚಿಂತ್ಯವಾದುದು. ಆ ಮಾಯೆಯಿಂದಲೇ ಈ ಜಗತ್ತನ್ನು ಸೃಷ್ಟಿಸಿ ತಾನೂ ಅದರಲ್ಲಿಯೇ ಸೇರಿಕೊಂಡು ಗುಣ-ಕರ್ಮಗಳನ್ನು ಪ್ರಪಂಚಕ್ಕೆ ವಿಭಾಗಿಸಿ ಕೊಡುತ್ತಾನೆ. ಈ ಜಗಚ್ಚಕ್ರದ ಅವಿಚ್ಛಿನ್ನ ಗತಿಯಲ್ಲಿ ಅವನ ಅಚಿಂತ್ಯ ಲೀಲಾಶಕ್ತಿಯ ಹೊರತು ಬೇರೆ ಯಾವ ಕಾರಣವೂ ಇಲ್ಲ. ಅಂತಹ ಪರಮೈಶ್ವರ್ಯಶಾಲಿಯಾದ ಪ್ರಭುವಿಗೆ ನಾನು ನಮಸ್ಕರಿಸುತ್ತೇನೆ. ॥ ೨೯ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ - ಮಹಾರಾಜ! ಹೀಗೆ ಅಕ್ರೂರನು ಧೃತರಾಷ್ಟ್ರನ ಅಭಿಪ್ರಾಯವನ್ನು ತಿಳಿದುಕೊಂಡು, ಕುರುವಂಶೀಯರಾದ ಸ್ವಜನರಿಂದ ಅನುಮತಿಯನ್ನು ಪಡೆದು ಮಥುರೆಗೆ ಮರಳಿದನು. ॥ ೩೦ ॥ ಪರೀಕ್ಷಿತನೇ! ಅಕ್ರೂರನು ಅಲ್ಲಿ ಭಗವಾನ್ ಶ್ರೀಕೃಷ್ಣ ಮತ್ತು ಬಲರಾಮರಲ್ಲಿ ಧೃತರಾಷ್ಟ್ರನು ಪಾಂಡವರೊಡನೆ ವ್ಯವಹರಿಸುತ್ತಿದ್ದ ಎಲ್ಲ ವೃತ್ತಾಂತವನ್ನು ತಿಳಿಸಿದನು. ಏಕೆಂದರೆ ಅವನನ್ನು ಹಸ್ತಿನಾಪುರಕ್ಕೆ ಕಳಿಸಿದ ಉದ್ದೇಶವೇ ಅದಾಗಿತ್ತು. ॥ ೩೧ ॥

ನಲವತ್ತೊಂಭತ್ತನೆಯ ಅಧ್ಯಾಯವು ಮುಗಿಯಿತು. ॥ ೪೯ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮಸ್ಕಂಧೇ ಪೂರ್ವಾರ್ಧೇ ಏಕೋನಪಂಚಾಶತ್ತಮೋಽಧ್ಯಾಯಃ ॥ ೪೯ ॥

ಹತ್ತನೆಯ ಸ್ಕಂಧದ ಪೂರ್ವಾರ್ಧವು ಸಂಪೂರ್ಣವಾಯಿತು.

ಹರಿಃ ಓಂ ತತ್ಸತ್ - ಹರಿಃ ಓಂ ತತ್ಸತ್

॥ ಓಂ ನಮೋ ಭಗವತೇ ವಾಸುದೇವಾಯ ॥

ಶ್ರೀಮದ್ಭಾಗವತಮಹಾಪುರಾಣಮ್

ದಶಮಃ ಸ್ಕಂಧಃ (ಉತ್ತರಾರ್ಧ)

ಐವತ್ತನೆಯ ಅಧ್ಯಾಯ

ಜರಾಸಂಧನೊಡನೆ ಯುದ್ಧ - ದ್ವಾರಕಾಪಟ್ಟಣ ನಿರ್ಮಾಣ

ಶ್ರೀಶುಕ ಉವಾಚ

ಅಸ್ತಿಃ ಪ್ರಾಪ್ತಿಶ್ಚ ಕಂಸಸ್ಯ ಮಹಿಷ್ಯೌ ಭರತರ್ಷಭ ।
ಮೃತೇ ಭರ್ತರಿ ದುಃಖಾರ್ತೇ ಈಯತುಃ ಸ್ಮ ಪಿತುರ್ಗೃಹಾನ್ ॥ ೧ ॥

ಪಿತ್ರೇ ಮಗಧರಾಜಾಯ ಜರಾಸಂಧಾಯ ದುಃಖಿತೇ ।
ವೇದಯಾಂಚಕ್ರತುಃ ಸರ್ವಮಾತ್ಮವೈಧವ್ಯಕಾರಣಮ್ ॥ ೨ ॥

ಸ ತದಪ್ರಿಯಮಾಕರ್ಣ್ಯ ಶೋಕಾಮರ್ಷಯುತೋ ನೃಪ ।
ಅಯಾದವೀಂ ಮಹೀಂ ಕರ್ತುಂ ಚಕ್ರೇ ಪರಮಮುದ್ಯಮಮ್ ॥ ೩ ॥

ಅಕ್ಷೌಹಿಣೀಭಿರ್ವಿಂಶತ್ಯಾ ತಿಸೃಭಿಶ್ಚಾಪಿ ಸಂವೃತಃ ।
ಯದುರಾಜಧಾನೀಂ ಮಥುರಾಂ ನ್ಯರುಧತ್ ಸರ್ವತೋದಿಶಮ್ ॥ ೪ ॥

ನಿರೀಕ್ಷ್ಯ ತದ್ಬಲಂ ಕೃಷ್ಣ ಉದ್ವೇಲಮಿವ ಸಾಗರಮ್ ।
ಸ್ವಪುರಂ ತೇನ ಸಂರುದ್ಧಂ ಸ್ವಜನಂ ಚ ಭಯಾಕುಲಮ್ ॥ ೫ ॥

ಚಿಂತಯಾಮಾಸ ಭಗವಾನ್ ಹರಿಃ ಕಾರಣಮಾನುಷಃ ।
ತದ್ದೇಶಕಾಲಾನುಗುಣಂ ಸ್ವಾವತಾರಪ್ರಯೋಜನಮ್ ॥ ೬ ॥

ಹನಿಷ್ಯಾಮಿ ಬಲಂ ಹ್ಯೇತದ್ಭುವಿ ಭಾರಂ ಸಮಾಹಿತಮ್ ।
ಮಾಗಧೇನ ಸಮಾನೀತಂ ವಶ್ಯಾನಾಂ ಸರ್ವಭೂಭುಜಾಮ್ ॥ ೭ ॥

ಅಕ್ಷೌಹಿಣೀಭಿಃ ಸಂಖ್ಯಾತಂ ಭಟಾಶ್ವರಥಕುಂಜರೈಃ ।
ಮಾಗಧಸ್ತು ನ ಹಂತವ್ಯೋ ಭೂಯಃ ಕರ್ತಾ ಬಲೋದ್ಯಮಮ್ ॥ ೮ ॥

ಏತದರ್ಥೋಽವತಾರೋಽಯಂ ಭೂಭಾರಹರಣಾಯ ಮೇ ।
ಸಂರಕ್ಷಣಾಯ ಸಾಧೂನಾಂ ಕೃತೋಽನ್ಯೇಷಾಂ ವಧಾಯ ಚ ॥ ೯ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ - ಭರತವಂಶ ಶಿರೋಮಣಿಯೇ! ಕಂಸನಿಗೆ ಅಸ್ತಿ ಮತ್ತು ಪ್ರಾಪ್ತಿ ಎಂಬ ಇಬ್ಬರು ಮಡದಿಯರಿದ್ದರು. ಪತಿಯ ಮರಣದಿಂದಾಗಿ ದುಃಖಿತರಾದ ಅವರು ತಮ್ಮ ತಂದೆಯ ಮನೆಗೆ ಹೊರಟುಹೋದರು. ॥ ೧ ॥ ದುಃಖತಪ್ತೆಯರಾಗಿದ್ದ ಅವರಿಬ್ಬರೂ ತಮ್ಮ ತಂದೆಯಾದ ಮಗಧ ರಾಜನಾದ ಜರಾಸಂಧನಲ್ಲಿ ತಮಗೆ ವೈಧವ್ಯವು ಬಂದ ಕಾರಣವನ್ನು ವಿವರಿಸಿ ಹೇಳಿದರು. ॥ ೨ ॥ ರಾಜನೇ! ಅಪ್ರಿಯವಾದ ಈ ಸಮಾಚಾರವನ್ನು ಕೇಳಿ ಜರಾಸಂಧನು ಬಹಳವಾಗಿ ಶೋಕಿಸಿದನು. ಆದರೆ ಒಡನೆಯೇ ಕೋಪದಿಂದ ಕಿಡಿ-ಕಿಡಿಯಾಗಿ, ಪೃಥಿವಿಯನ್ನೇ ಯಾದವರಿಂದ ರಹಿತವನ್ನಾಗಿ ಮಾಡಲು ನಿಶ್ಚಯಿಸಿ ಯುದ್ಧಕ್ಕೆ ಕಾರ್ಯೋದ್ಯುಕ್ತನಾದನು. ॥ ೩ ॥ ಇಪ್ಪತ್ತಮೂರು ಅಕ್ಷೌಹಿಣೀ ಸೈನ್ಯ ಸಮೇತನಾಗಿ ಯಾದವರ ರಾಜಧಾನಿಯಾದ ಮಥುರೆಗೆ ಬಂದು ನಾಲ್ಕು ಕಡೆಗಳಿಂದಲೂ ಮುತ್ತಿಗೆ ಹಾಕಿದನು. ॥ ೪ ॥

ಭಗವಾನ್ ಶ್ರೀಕೃಷ್ಣನು ನೋಡಿದನು - ಜರಾಸಂಧನ ಆ ಮಹಾಸೈನ್ಯವು ಉಕ್ಕೇರುವ ಸಮುದ್ರದಂತೆ ಇತ್ತು. ಅವನು ನಾಲ್ಕು ಕಡೆಗಳಿಂದಲೂ ತನ್ನ ರಾಜಧಾನಿಯನ್ನು ಘೇರಾಯಿಸಿದ್ದು, ತನ್ನ ಸ್ವಜನರೂ, ಪುರವಾಸಿಗಳೂ ಭಯಗೊಂಡಿರುವುದನ್ನು ಗಮನಿಸಿದನು. ॥ ೫ ॥ ಭಗವಾನ್ ಶ್ರೀಕೃಷ್ಣನು ಭೂಭಾರಹರಣಕ್ಕಾಗಿಯೇ ಮನುಷ್ಯನಾಗಿ ಅವತರಿಸಿ ಬಂದಿದ್ದನು. ತನ್ನ ಅವತಾರದ ಪ್ರಯೋಜನವನ್ನೂ, ಈ ಸಮಯದಲ್ಲಿ ದೇಶಕಾಲಕ್ಕೆ ತಕ್ಕಂತೆ ಏನು ಮಾಡಬೇಕೆಂಬುದನ್ನು ಯೋಚಿಸಿ ನಿರ್ಧಾರಕ್ಕೆ ಬಂದನು. ॥ ೬ ॥ ಮಗಧರಾಜನಾದ ಜರಾಸಂಧನು ತನ್ನ ಅಧೀನದಲ್ಲಿರುವ ಸಾಮಂತರಿಂದ ಇಪ್ಪತ್ತಮೂರು ಅಕ್ಷೌಹಿಣೀ ಚತುರಂಗ ಸೈನ್ಯವನ್ನು ಸಂಗ್ರಹಿಸಿ ಇಲ್ಲಿಗೆ ತಂದಿರುವನು. ಭೂಮಿಯ ಭಾರವೆಲ್ಲವೂ ಒಂದೆಡೆಯಲ್ಲೇ ಕೇಂದ್ರೀಕೃತವಾಗಿದೆ. ಈ ಸೈನ್ಯವನ್ನು ನಾನೀಗಲೇ ನಾಶಮಾಡಿಬಿಡುತ್ತೇನೆ. ಆದರೆ ಜರಾಸಂಧನನ್ನು ಮಾತ್ರ ಕೊಲ್ಲಬೇಕಿಲ್ಲ, ಏಕೆಂದರೆ, ಅವನು ಬದುಕಿದ್ದರೆ ಪುನಃ ಅಸುರರ ದೊಡ್ಡ ಸೈನ್ಯವನ್ನು ಸೇರಿಸಿ ಇಲ್ಲಿಗೆ ಕರೆತರುವನು. ಇದರಿಂದ ನನ್ನ ಭೂಭಾರಹರಣ ಕಾರ್ಯವು ಸುಗಮವಾದೀತೆಂದು ಯೋಚಿಸಿದನು. ॥ ೭-೮ ॥ ಭೂಭಾರವನ್ನು ಹರಣಮಾಡಿ, ಸಾಧುಗಳ ರಕ್ಷಣೆ - ದುಷ್ಟ ಜನರ ಸಂಹಾರ ಇವೇ ನನ್ನ ಅವತಾರದ ಪ್ರಯೋಜನವಲ್ಲವೇ! ॥ ೯ ॥

ಅನ್ಯೋಽಪಿ ಧರ್ಮರಕ್ಷಾಯೈ ದೇಹಃ ಸಂಭ್ರಿಯತೇ ಮಯಾ ।
ವಿರಾಮಾಯಾಪ್ಯಧರ್ಮಸ್ಯ ಕಾಲೇ ಪ್ರಭವತಃ ಕ್ವಚಿತ್ ॥ ೧೦ ॥

ಏವಂ ಧ್ಯಾಯತಿ ಗೋವಿಂದ ಆಕಾಶಾತ್ ಸೂರ್ಯವರ್ಚಸೌ ।
ರಥಾವುಪಸ್ಥಿತೌ ಸದ್ಯಃ ಸಸೂತೌ ಸಪರಿಚ್ಛದೌ ॥ ೧೧ ॥

ಆಯುಧಾನಿ ಚ ದಿವ್ಯಾನಿ ಪುರಾಣಾನಿ ಯದೃಚ್ಛಯಾ ।
ದೃಷ್ಟ್ವಾ ತಾನಿ ಹೃಷೀಕೇಶಃ ಸಂಕರ್ಷಣಮಥಾಬ್ರವೀತ್ ॥ ೧೨ ॥

ಪಶ್ಯಾರ್ಯ ವ್ಯಸನಂ ಪ್ರಾಪ್ತಂ ಯದೂನಾಂ ತ್ವಾವತಾಂ ಪ್ರಭೋ ।
ಏಷ ತೇ ರಥ ಆಯಾತೋ ದಯಿತಾನ್ಯಾಯುಧಾನಿ ಚ ॥ ೧೩ ॥

ಯಾನಮಾಸ್ಥಾಯ ಜಹ್ಯೇತದ್ವ್ಯಸನಾತ್ ಸ್ವಾನ್ ಸಮುದ್ಧರ ।
ಏತದರ್ಥಂ ಹಿ ನೌ ಜನ್ಮ ಸಾಧೂನಾಮೀಶ ಶರ್ಮಕೃತ್ ॥ ೧೪ ॥

ತ್ರಯೋವಿಂಶತ್ಯನೀಕಾಖ್ಯಂ ಭೂಮೇರ್ಭಾರಮಪಾಕುರು ।
ಏವಂ ಸಮ್ಮಂತ್ರ್ಯ ದಾಶಾರ್ಹೌ ದಂಶಿತೌ ರಥಿನೌ ಪುರಾತ್ ॥ ೧೫ ॥

ನಿರ್ಜಗ್ಮತುಃ ಸ್ವಾಯುಧಾಢ್ಯೌ ಬಲೇನಾಲ್ಪೀಯಸಾಽಽವೃತೌ ।
ಶಂಖಂ ದಧ್ಮೌ ವಿನಿರ್ಗತ್ಯ ಹರಿರ್ದಾರುಕಸಾರಥಿಃ ॥ ೧೬ ॥

ತತೋಽಭೂತ್ ಪರಸೈನ್ಯಾನಾಂ ಹೃದಿ ವಿತ್ರಾಸವೇಪಥುಃ ।
ತಾವಾಹ ಮಾಗಧೋ ವೀಕ್ಷ್ಯ ಹೇ ಕೃಷ್ಣ ಪುರುಷಾಧಮ ॥ ೧೭ ॥

ನ ತ್ವಯಾ ಯೋದ್ಧುಮಿಚ್ಛಾಮಿ ಬಾಲೇನೈಕೇನ ಲಜ್ಜಯಾ ।
ಗುಪ್ತೇನ ಹಿ ತ್ವಯಾ ಮಂದ ನ ಯೋತ್ಸ್ಯೇ ಯಾಹಿ ಬಂಧುಹನ್ ॥ ೧೮ ॥

ತವ ರಾಮ ಯದಿ ಶ್ರದ್ಧಾ ಯುಧ್ಯಸ್ವ ಧೈರ್ಯಮುದ್ವಹ ।
ಹಿತ್ವಾ ವಾ ಮಚ್ಛರೈಶ್ಛಿನ್ನಂ ದೇಹಂ ಸ್ವರ್ಯಾಹಿ ಮಾಂ ಜಹಿ ॥ ೧೯ ॥

ಧರ್ಮದ ರಕ್ಷಣೆಗಾಗಿಯೂ, ಬೆಳೆಯುತ್ತಿರುವ ಅಧರ್ಮವನ್ನು ತಡೆಗಟ್ಟಲು ಕೆಲವು ಸಮಯದಲ್ಲಿ ನಾನು ಅನೇಕ ದೇಹಗಳಲ್ಲಿಯೂ ಅವತರಿಸುತ್ತೇನೆ. ॥ ೧೦ ॥

ಪರೀಕ್ಷಿತ ಮಹಾರಾಜ! ಭಗವಾನ್ ಶ್ರೀಕೃಷ್ಣನು ಹೀಗೆ ಯೋಚಿಸುತ್ತಿರುವಾಗಲೇ ಆಕಾಶದಿಂದ ಸೂರ್ಯಸದೃಶ ಹೊಳೆಯುತ್ತಿರುವ ಎರಡು ರಥಗಳು ಅವನ ಬಳಿಗೆ ಬಂದುವು. ಅವುಗಳು ಸಾರಥಿಗಳಿಂದ ಕೂಡಿದ್ದು ಸಮಸ್ತ ಯುದ್ಧ ಸಾಮಗ್ರಿಗಳಿಂದ ಸುಸಜ್ಜಿತವಾಗಿದ್ದುವು. ॥ ೧೧ ॥ ಇದೇ ಸಮಯದಲ್ಲಿ ಭಗವಂತನ ಸನಾತನವಾದ ದಿವ್ಯ ಆಯುಧಗಳೂ ಅಲ್ಲಿಗೆ ಬಂದು ಉಪಸ್ಥಿತವಾದುವು. ಅವೆಲ್ಲವನ್ನು ನೋಡಿ ಭಗವಾನ್ ಶ್ರೀಕೃಷ್ಣನು ಬಲರಾಮನಲ್ಲಿ ಇಂತೆಂದನು. ॥ ೧೨ ॥ ಮಹಾಶಕ್ತಿಶಾಲಿಯಾದ ಅಣ್ಣನೇ! ನಿನ್ನಿಂದ ರಕ್ಷಿತವಾದ ಯಾದವರಿಗೆ ಇಂದು ಮಹಾಸಂಕಟವು ಪ್ರಾಪ್ತವಾಗಿದೆ. ಈ ಸಮಯದಲ್ಲಿ ಅವರ ಸಂಕಟವನ್ನು ನಿವಾರಿಸುವುದು ನಮ್ಮ ಕರ್ತವ್ಯವಾಗಿದೆ. ನಮ್ಮ ಕಾರ್ಯಕ್ಕೆ ಬೆಂಬಲವಾಗಿ ಆಕಾಶದಿಂದ ರಥಗಳೂ ಬಂದಿವೆ. ನಮಗೆ ಪ್ರಿಯವಾದ ಆಯುಧಗಳೂ ತಾವಾಗಿಯೇ ಬಂದಿವೆ. ॥ ೧೩ ॥ ಅಣ್ಣಾ! ನೀನು ರಥವನ್ನು ಹತ್ತಿ ಕುಳಿತು ಶತ್ರುಸೈನ್ಯವನ್ನು ಸಂಹಾರಮಾಡಿ ನಮ್ಮ ಸ್ವಜನರನ್ನು ಈ ವಿಪತ್ತಿನಿಂದ ಪಾರುಮಾಡು. ಸಾಧುಗಳಿಗೆ ಸುಖವನ್ನುಂಟು ಮಾಡಲೆಂದೇ ನಾವಿಬ್ಬರೂ ಅವತರಿಸಿದ್ದೇವಲ್ಲ! ॥ ೧೪ ॥ ಆದ್ದರಿಂದ ಈಗ ಈ ಇಪ್ಪತ್ತಮೂರು ಅಕ್ಷೌಹಿಣೀ ಸೇನೆಯ ರೂಪದಲ್ಲಿರುವ ವಿಪುಲವಾದ ಭೂಭಾರವನ್ನು ಕಡಿಮೆ ಮಾಡು. ಭಗವಾನ್ ಶ್ರೀಕೃಷ್ಣ ಮತ್ತು ಬಲರಾಮನು ಹೀಗೆ ಸಮಾಲೋಚಿಸಿ ಕವಚಗಳನ್ನು ಧರಿಸಿ, ರಥಾರೂಢರಾಗಿ ಮಥುರೆಯಿಂದ ಹೊರಟರು. ಆಗ ಅವರು ದಿವ್ಯಾಯುಧಗಳಿಂದ ಸಂಪನ್ನರಾಗಿದ್ದರು ಮತ್ತು ಅತ್ಯಲ್ಪವಾದ ಸೇನೆಯೂ ಅವರೊಂದಿಗೆ ಹಿಂಬಾಲಿಸಿತು. ಶ್ರೀಕೃಷ್ಣನ ರಥವನ್ನು ದಾರುಕನು ನಡೆಸುತ್ತಿದ್ದನು. ಪುರದಿಂದ ಹೊರಗೆ ಬಂದು ಅವನು ತನ್ನ ಪಾಂಚಜನ್ಯ ಶಂಖವನ್ನು ಊದಿದನು. ॥ ೧೫-೧೬ ॥ ಭಯಂಕರವಾದ ಆ ಶಂಖಧ್ವನಿಯನ್ನು ಕೇಳಿ ಶತ್ರು ಸೈನಿಕರ ಹೃದಯಗಳು ಭಯದಿಂದ ನಡುಗಿಹೋದುವು. ರಥದಲ್ಲಿ ಕುಳಿತು ಬಂದಿರುವ ಬಲರಾಮ-ಕೃಷ್ಣರನ್ನು ನೋಡಿ ಜರಾಸಂಧನು ಹೇಳಿದನು - ಎಲೈ ಪುರುಷಾಧಮನೇ! ನಿನ್ನಂತಹ ಬಾಲಕನೊಬ್ಬನೊಡನೆ ಯುದ್ಧಮಾಡಲು ನನಗೆ ನಾಚಿಕೆಯಾಗುತ್ತದೆ. ಇಷ್ಟು ದಿವಸಗಳವರೆಗೆ ಎಲ್ಲೆಲ್ಲೋ ಬಚ್ಚಿಕೊಂಡೇ ತಿರುಗುತ್ತಿದ್ದ ಎಲೈ ಮೂರ್ಖನೇ! ನೀನು ನಿನ್ನ ಸೋದರ ಮಾವನನ್ನೇ ಕೊಂದವನು. ಅದಕ್ಕಾಗಿ ನಾನು ನಿನ್ನೊಡನೆ ಯುದ್ಧ ಮಾಡುವುದಿಲ್ಲ. ಹೊರಟು ಹೋಗು. ನನ್ನ ಮುಂದೆ ಇರಬೇಡ. ॥ ೧೭-೧೮ ॥ ಬಲರಾಮ! ಯುದ್ಧದಲ್ಲಿ ಮಡಿದರೆ ಸ್ವರ್ಗಪ್ರಾಪ್ತಿಯಾಗುತ್ತದೆ ಎಂಬ ಶ್ರದ್ಧೆ ನಿನಗಿದ್ದರೆ ಧೈರ್ಯದಿಂದ ನನ್ನೊಡನೆ ಯುದ್ಧಮಾಡು. ನನ್ನ ಬಾಣಗಳಿಂದ ಛಿನ್ನ-ಭಿನ್ನವಾದ ಶರೀರವನ್ನು ಇಲ್ಲೇ ಬಿಟ್ಟು ಸ್ವರ್ಗಕ್ಕೆ ಹೋಗು. ಇಲ್ಲವೇ ನಿನ್ನಲ್ಲಿ ಶಕ್ತಿಯಿದ್ದರೆ ನನ್ನನ್ನೇ ಕೊಂದುಹಾಕು. ॥ ೧೯ ॥

ಶ್ರೀಭಗವಾನುವಾಚ

ನ ವೈ ಶೂರಾ ವಿಕತ್ಥಂತೇ ದರ್ಶಯಂತ್ಯೇವ ಪೌರುಷಮ್ ।
ನ ಗೃಹ್ಣೀಮೋ ವಚೋ ರಾಜನ್ನಾತುರಸ್ಯ ಮುಮೂರ್ಷತಃ ॥ ೨೦ ॥

ಶ್ರೀಶುಕ ಉವಾಚ

ಜರಾಸುತಸ್ತಾವಭಿಸೃತ್ಯ ಮಾಧವೌ
ಮಹಾಬಲೌಘೇನ ಬಲೀಯಸಾಽಽವೃಣೋತ್ ।
ಸಸೈನ್ಯಯಾನಧ್ವಜವಾಜಿಸಾರಥೀ
ಸೂರ್ಯಾನಲೌ ವಾಯುರಿವಾಭ್ರರೇಣುಭಿಃ ॥ ೨೧ ॥

ಸುಪರ್ಣತಾಲಧ್ವಜಚಿಹ್ನಿತೌ ರಥಾ-
ವಲಕ್ಷಯಂತ್ಯೋ ಹರಿರಾಮಯೋರ್ಮೃಧೇ ।
ಸ್ತ್ರಿಯಃ ಪುರಾಟ್ಟಾಲಕಹರ್ಮ್ಯಗೋಪುರಂ
ಸಮಾಶ್ರಿತಾಃ ಸಂಮುಮುಹುಃ ಶುಚಾರ್ದಿತಾಃ ॥ ೨೨ ॥

ಹರಿಃ ಪರಾನೀಕಪಯೋಮುಚಾಂ ಮುಹುಃ
ಶಿಲೀಮುಖಾತ್ಯುಲ್ಬಣವರ್ಷಪೀಡಿತಮ್ ।
ಸ್ವಸೈನ್ಯಮಾಲೋಕ್ಯ ಸುರಾಸುರಾರ್ಚಿತಂ
ವ್ಯಸ್ಫೂರ್ಜಯಚ್ಛಾರ್ಙ್ಗಶರಾಸನೋತ್ತಮಮ್ ॥ ೨೩ ॥

ಗೃಹ್ಣನ್ ನಿಷಂಗಾದಥ ಸಂದಧಚ್ಛರಾನ್
ವಿಕೃಷ್ಯ ಮುಂಚನ್ ಶಿತಬಾಣಪೂಗಾನ್ ।
ನಿಘ್ನನ್ ರಥಾನ್ ಕುಂಜರವಾಜಿಪತ್ತೀನ್
ನಿರಂತರಂ ಯದ್ವದಲಾತಚಕ್ರಮ್ ॥ ೨೪ ॥

ನಿರ್ಭಿನ್ನಕುಂಭಾಃ ಕರಿಣೋ ನಿಪೇತು-
ರನೇಕಶೋಽಶ್ವಾಃ ಶರವೃಕ್ಣಕಂಧರಾಃ ।
ರಥಾ ಹತಾಶ್ವಧ್ವಜಸೂತನಾಯಕಾಃ
ಪದಾತಯಶ್ಛಿನ್ನಭುಜೋರುಕಂಧರಾಃ ॥ ೨೫ ॥

ಸಂಛಿದ್ಯಮಾನದ್ವಿಪದೇಭವಾಜಿನಾ-
ಮಂಗಪ್ರಸೂತಾಃ ಶತಶೋಽಸೃಗಾಪಗಾಃ ।
ಭುಜಾಹಯಃ ಪೂರುಷಶೀರ್ಷಕಚ್ಛಪಾ
ಹತದ್ವಿಪದ್ವೀಪಹಯಗ್ರಹಾಕುಲಾಃ ॥ ೨೬ ॥

ಭಗವಾನ್ ಶ್ರೀಕೃಷ್ಣನು ಹೇಳಿದನು - ಜರಾಸಂಧನೇ! ಶೂರರಾದವರು ನಿನ್ನಂತೆ ಯಾರೂ ಜಂಬ ಕೊಚ್ಚಿಕೊಳ್ಳುವುದಿಲ್ಲ, ಪರಾಕ್ರಮವನ್ನೇ ತೋರಿಸುತ್ತಾರೆ. ಸಾಯಲು ಹೊರಟಿರುವ ಸನ್ನಿಪಾತದ ರೋಗಿಯು ಗಳಹುತ್ತಿರುವಂತೆ ನಿನ್ನ ಮಾತುಗಳನ್ನು ನಾನು ಗಣನೆಗೆ ತೆಗೆದುಕೊಳ್ಳುವುದಿಲ್ಲ. ॥ ೨೦ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ - ಪರೀಕ್ಷಿತನೇ! ವಾಯುವು ಮೋಡಗಳಿಂದ ಸೂರ್ಯನನ್ನು, ಅಗ್ನಿಯನ್ನು ಧೂಳಿನಿಂದಲೂ ಮುಚ್ಚಿಬಿಡುವಂತೆ ಜರೆಯ ಮಗನಾದ ಜರಾಸಂಧನು ಬಲರಾಮ-ಶ್ರೀಕೃಷ್ಣರನ್ನು ಬಲಿಷ್ಠವಾದ ಮಹಾಸೈನ್ಯದಿಂದ ಸುತ್ತುವರಿದು ಮುತ್ತಿಗೆ ಹಾಕಿದನು. ಇದರಿಂದ ಅವರ ಸೈನ್ಯ, ರಥ, ಧ್ವಜ, ಸಾರಥಿ, ಕುದುರೆಗಳು ಕಾಣದಾದರು. ॥ ೨೧ ॥ ಯುದ್ಧವನ್ನು ನೋಡಲು ಹೆಬ್ಬಾಗಿಲುಗಳಲ್ಲಿಯೂ, ಉಪ್ಪರಿಗೆಗಳಲ್ಲಿಯೂ ನಿಂತಿದ್ದ ಮಥುರಾನಗರದ ಸ್ತ್ರೀಯರು ಗರುಡ-ತಾಲಧ್ವಜಗಳನ್ನು ಹೊಂದಿದ್ದ ಶ್ರೀಕೃಷ್ಣ-ಬಲರಾಮರ ರಥಗಳನ್ನು ಕಾಣದೆ ಶೋಕಾತುರರಾಗಿ ಮೂರ್ಛೆ ಹೊಂದಿದರು. ॥ ೨೨ ॥ ಶತ್ರುಸೈನ್ಯಗಳೆಂಬ ಮೋಡಗಳ ಮೂಲಕ ಬಾಣಗಳೆಂಬ ಅತಿವೃಷ್ಟಿಯಿಂದ ಪೀಡಿತವಾದ ತನ್ನ ಕಡೆಯ ಸೈನ್ಯವನ್ನು ನೋಡಿ ಶ್ರೀಹರಿಯು ದೇವಾಸುರರಿಂದ ಅರ್ಚಿಸಲ್ಪಡುತ್ತಿದ್ದ ಶಾರ್ಙ್ಗಧನುಸ್ಸನ್ನು ಟಂಕಾರ ಮಾಡಿದನು. ॥ ೨೩ ॥ ಬಳಿಕ ಶ್ರೀಕೃಷ್ಣನು ಬತ್ತಳಿಕೆಯಿಂದ ತೀಕ್ಷ್ಣವಾದ ಬಾಣಗಳನ್ನು ತೆಗೆದು, ಧನುಸ್ಸಿಗೆ ಹೂಡಿ, ಬಾಣವನ್ನು ಆಕರ್ಣಾಂತವಾಗಿ ಸೆಳೆದು ಪುಂಖಾನು-ಪುಂಖವಾಗಿ ಪ್ರಯೋಗಿಸಿ, ಜರಾಸಂಧನ ಚತುರಂಗ ಸೈನ್ಯವನ್ನು ಸಂಹರಿಸುತ್ತಿದ್ದನು. ಆ ಸಮಯದಲ್ಲಿ ಅವನ ಧನುಸ್ಸು ನಿರಂತರವಾಗಿ ತಿರುಗುವ ಕೊಳ್ಳಿಯ ಚಕ್ರದಂತೆ ಕಾಣುತ್ತಿತ್ತು. ॥ ೨೪ ॥ ಸತತವಾದ ಬಾಣಗಳ ಪ್ರಹಾರದಿಂದ ಅನೇಕ ಆನೆಗಳ ಶಿರಸ್ಸುಗಳು ಕತ್ತರಿಸಲ್ಪಟ್ಟು ಸತ್ತು ಬೀಳುತ್ತಿದ್ದವು. ಬಾಣಗಳ ಮಳೆಯಿಂದ ಅನೇಕ ಕುದುರೆಗಳ ತಲೆಗಳು ತುಂಡಾಗಿ ಬೀಳುತ್ತಿದ್ದವು. ಕುದುರೆಗಳೂ, ಧ್ವಜಗಳೂ ಸಾರಥಿಗಳೂ, ರಥಿಕರೂ ಹತರಾಗಿ ಹೋಗುತ್ತಿದ್ದರು. ಪದಾತಿಗಳು ಶ್ರೀಕೃಷ್ಣನ ಚೂಪಾದ ಬಾಣಗಳಿಂದ ಕತ್ತರಿಸಲ್ಪಟ್ಟ ತೋಳು, ತೊಡೆ, ಕುತ್ತಿಗೆಗಳಿಂದ ಅಸುನೀಗಿ ಕೆಳಕ್ಕೆ ಬೀಳುತ್ತಿದ್ದರು. ॥ ೨೫ ॥ ಶ್ರೀಕೃಷ್ಣನು ಪ್ರಯೋಗಿಸುತ್ತಿದ್ದ ಬಾಣಗಳಿಂದ ಕತ್ತರಿಸಲ್ಪಟ್ಟ ಪದಾತಿಗಳ, ಕುದುರೆ-ಆನೆಗಳ ಶರೀರದಿಂದ ರಕ್ತವು ಧಾರಾಕಾರವಾಗಿ ಹರಿದು ಅದರಿಂದ ನೂರಾರು ರುಧಿರನದಿಗಳು ಹುಟ್ಟಿಕೊಂಡು ಹರಿಯತೊಡಗಿದವು. ಭಯಂಕರವಾಗಿ ಕಾಣುತ್ತಿದ್ದ ಆ ರಣನದಿಗಳಲ್ಲಿ ಸೈನಿಕರ ತೋಳುಗಳು ನೀರುಹಾವುಗಳಂತೆ ಕಾಣುತ್ತಿದ್ದವು. ಸೈನಿಕರ ತಲೆಗಳು ಆಮೆಗಳಂತಿದ್ದವು. ಸತ್ತು ಬಿದ್ದಿದ್ದ ಮಹಾಗಜಗಳ ಶರೀರಗಳೇ ಆ ರಕ್ತನದಿಯ ದ್ವೀಪಗಳು. ಕುದುರೆಗಳು ಮೊಸಳೆಯಂತಿದ್ದರೆ, ಸೈನಿಕರ ಕತ್ತರಿಸಿ ಬಿದ್ದಿದ್ದ ಕೈ-ಕಾಲುಗಳು ಅದರಲ್ಲಿನ ಮೀನುಗಳಂತೆ ಕಾಣುತ್ತಿದ್ದವು. ಸೈನಿಕರ ತಲೆಕೂದಲುಗಳು ಆ ನದಿಯ ಪಾಚಿಯಂತಿದ್ದರೆ, ತುಂಡು ತುಂಡಾಗಿ ಬಿದ್ದಿದ್ದ ಧನುಸ್ಸುಗಳೇ ನದಿಯ ಅಲೆಗಳಂತೆ ಕಾಣುತ್ತಿದ್ದವು. ರಾಶಿ-ರಾಶಿಯಾಗಿ ಬಿದ್ದಿದ್ದ ಆಯುಧಗಳು ನದಿಯ ದಡದಲ್ಲಿರುವ ಪೊದೆಗಳಂತಿದ್ದರೆ, ಗುರಾಣಿಗಳು ರಕ್ತನದಿಯ

ಕರೋರುಮೀನಾ ನರಕೇಶಶೈವಲಾ
ಧನುಸ್ತರಂಗಾಯುಧಗುಲ್ಮಸಂಕುಲಾಃ ।
ಅಚ್ಛೂರಿಕಾವರ್ತಭಯಾನಕಾ ಮಹಾ-
ಮಣಿಪ್ರವೇಕಾಭರಣಾಶ್ಮಶರ್ಕರಾಃ ॥ ೨೭ ॥

ಪ್ರವರ್ತಿತಾ ಭೀರುಭಯಾವಹಾ ಮೃಧೇ
ಮನಸ್ವಿನಾಂ ಹರ್ಷಕರೀಃ ಪರಸ್ಪರಮ್ ।
ವಿನಿಘ್ನತಾರೀನ್ ಮುಸಲೇನ ದುರ್ಮದಾನ್
ಸಂಕರ್ಷಣೇನಾಪರಿಮೇಯತೇಜಸಾ ॥ ೨೮ ॥

ಬಲಂ ತದಂಗಾರ್ಣವದುರ್ಗಭೈರವಂ
ದುರಂತಪಾರಂ ಮಗಧೇಂದ್ರಪಾಲಿತಮ್ ।
ಕ್ಷಯಂ ಪ್ರಣೀತಂ ವಸುದೇವಪುತ್ರಯೋ-
ರ್ವಿಕ್ರೀಡಿತಂ ತಜ್ಜಗದೀಶಯೋಃ ಪರಮ್ ॥ ೨೯ ॥

ಸ್ಥಿತ್ಯುದ್ಭವಾಂತಂ ಭುವನತ್ರಯಸ್ಯ ಯಃ
ಸಮೀಹಿತೇಽನಂತಗುಣಃ ಸ್ವಲೀಲಯಾ ।
ನ ತಸ್ಯ ಚಿತ್ರಂ ಪರಪಕ್ಷನಿಗ್ರಹಃ
ತಥಾಪಿ ಮರ್ತ್ಯಾನುವಿಧಸ್ಯ ವರ್ಣ್ಯತೇ ॥ ೩೦ ॥

ಜಗ್ರಾಹ ವಿರಥಂ ರಾಮೋ ಜರಾಸಂಧಂ ಮಹಾಬಲಮ್ ।
ಹತಾನೀಕಾವಶಿಷ್ಟಾಸುಂ ಸಿಂಹಃ ಸಿಂಹಮಿವೌಜಸಾ
॥ ೩೧ ॥

ಬಧ್ಯಮಾನಂ ಹತಾರಾತಿಂ ಪಾಶೈರ್ವಾರುಣಮಾನುಷೈಃ ।
ವಾರಯಾಮಾಸ ಗೋವಿಂದಸ್ತೇನ ಕಾರ್ಯಚಿಕೀರ್ಷಯಾ
॥ ೩೨ ॥

ಸ ಮುಕ್ತೋ ಲೋಕನಾಥಾಭ್ಯಾಂ ವ್ರೀಡಿತೋ ವೀರಸಮ್ಮತಃ ।
ತಪಸೇ ಕೃತಸಂಕಲ್ಪೋ ವಾರಿತಃ ಪಥಿ ರಾಜಭಿಃ
॥ ೩೩ ॥

ವಾಕ್ಯೈಃ ಪವಿತ್ರಾರ್ಥಪದೈರ್ನಯನೈಃ ಪ್ರಾಕೃತೈರಪಿ ।
ಸ್ವಕರ್ಮಬಂಧಪ್ರಾಪ್ತೋಽಯಂ ಯದುಭಿಸ್ತೇ ಪರಾಭವಃ
॥ ೩೪ ॥

ಸುಳಿಗಳಂತೆ ಕಾಣುತ್ತಿದ್ದವು. ಬಹುಮೂಲ್ಯ ಮಣಿಗಳೂ, ಆಭೂಷಣಗಳೂ ನದಿಯಲ್ಲಿದ್ದ ಬಂಡೆಗಳಂತೆಯೂ, ಮರಳಿನಂತೆಯೂ ಇದ್ದವು. ॥ ೨೬-೨೭ ॥ ಊಹಿಸಲು ಅಸಾಧ್ಯವಾದ ಶಕ್ತಿ ಪರಾಕ್ರಮಗಳಿಂದ ಕೂಡಿದ್ದ ಬಲರಾಮನು ದುರ್ಮದರಾದ ಜರಾಸಂಧನ ಸೈನಿಕರನ್ನು ಮುಸಲಾಯುಧದಿಂದ ಸಂಹರಿಸುತ್ತಾ ಹೇಡಿಗಳಿಗೆ ಭಯವನ್ನೂ, ವೀರರಿಗೆ ಸಂತೋಷವನ್ನು ಉಂಟು ಮಾಡುವ ಅಂತಹ ನೂರಾರು ನದಿಗಳನ್ನು ರಣರಂಗದಲ್ಲಿ ಹರಿಸಿಬಿಟ್ಟನು. ॥ ೨೮ ॥ ಪರೀಕ್ಷಿತನೇ! ಜರಾಸಂಧನ ಆ ಸೈನ್ಯವು ಸಮುದ್ರದಂತೆ ಅತಿದುರ್ಗಮವಾಗಿತ್ತು. ಭಯಂಕರವಾಗಿತ್ತು. ಸಾಮಾನ್ಯರಿಂದ ಜಯಿಸಲು ಅಸಾಧ್ಯವಾಗಿತ್ತು. ಆದರೆ ಜಗದೀಶ್ವರರಾದ ಭಗವಾನ್ ಶ್ರೀಕೃಷ್ಣನು ಮತ್ತು ಬಲರಾಮನು ಅತ್ಯಂತ ಪ್ರಬಲವಾದ ಆ ಸೈನ್ಯವನ್ನು ನಾಶಮಾಡಿಬಿಟ್ಟರು. ಅವರಿಗೆ ಇದೊಂದು ಆಟವೇ ಆಗಿತ್ತು. ॥ ೨೯ ॥ ರಾಜೇಂದ್ರ! ಭಗವಂತನು ಅನಂತವಾದ ಗುಣಗಳುಳ್ಳವನು. ಮಹಾ-ಮಹಿಮನಾದ ಅವನು ಆಡುತ್ತಾಡುತ್ತಲೇ ಮೂರು ಲೋಕಗಳ ಸೃಷ್ಟಿ ಸ್ಥಿತಿ ಸಂಹಾರಗಳನ್ನು ಮಾಡುತ್ತಾನೆ. ಅಂತಹವನಿಗೆ ಈ ಶತ್ರುಪಕ್ಷದ ವಿಜಯವು ಹೆಚ್ಚಿನದೇನಲ್ಲ. ಆದರೂ ಮನುಷ್ಯನಾಗಿ ಅವತರಿಸಿದಾಗ, ಮನುಷ್ಯರಂತೆ ಲೀಲೆಯನ್ನು ತೋರಿದಾಗ ಅವುಗಳೂ ಯಥಾವತ್ತಾಗಿ ವರ್ಣಿಸಲ್ಪಡುತ್ತವೆ. ॥ ೩೦ ॥

ಹೀಗೆ ಜರಾಸಂಧನ ಸೈನ್ಯವೆಲ್ಲವೂ ನಿರ್ನಾಮವಾಗಿ ಹೋಯಿತು. ರಥವೂ ಮುರಿದು ಹೋಯಿತು. ಶರೀರದಲ್ಲಿ ಪ್ರಾಣಮಾತ್ರ ಉಳಿದಿತ್ತು. ಆಗ ಭಗವಾನ್ ಬಲರಾಮನು ಒಂದು ಸಿಂಹವು ಮತ್ತೊಂದು ಸಿಂಹವನ್ನು ಹಿಡಿಯುವಂತೆ ಜರಾಸಂಧನನ್ನು ಬಲಪೂರ್ವಕವಾಗಿ ಹಿಡಿದುಕೊಂಡನು. ॥ ೩೧ ॥ ಹಲವಾರು ಶತ್ರುಗಳನ್ನು ಸಂಹರಿಸಿದ್ದ ಜರಾಸಂಧನನ್ನು ಮಾನುಷ ಪಾಶದಿಂದಲೂ, ವರುಣಪಾಶಗಳಿಂದಲೂ ಬಂಧಿಸುತ್ತಿದ್ದನು. ಇವನನ್ನು ಬಿಟ್ಟುಬಿಟ್ಟರೆ ಇನ್ನೂ ಅನೇಕ ಸೈನ್ಯವನ್ನು ಜೊತೆ ಸೇರಿಸಿಕೊಂಡು ಬರುವನು. ಆಗ ಭೂಭಾರಹರಣದ ಕಾರ್ಯವು ಸುಲಭವಾದೀತೆಂದು ಭಗವಾನ್ ಶ್ರೀಕೃಷ್ಣನು ಯೋಚಿಸಿ ಬಲರಾಮನಿಗೆ ಜರಾಸಂಧನನ್ನು ಬಂಧಿಸದಂತೆ ತಡೆದನು. ॥ ೩೨ ॥ ದೊಡ್ಡ-ದೊಡ್ಡ ಪರಾಕ್ರಮಶಾಲಿಗಳೂ ಜರಾಸಂಧನನ್ನು ಸಮ್ಮಾನಿಸುತ್ತಿದ್ದರು. ಬಲರಾಮ-ಕೃಷ್ಣರು ತನ್ನ ಮೇಲೆ ದಯತೋರಿ ದೀನನಂತೆ ಬಿಟ್ಟು ಬಿಟ್ಟರು. ಇದರಿಂದ ಅವನಿಗೆ ಅತಿಯಾದ ನಾಚಿಕೆ ಯಾಯಿತು. ಆಗ ಅವನು ಯಾರಿಗೂ ಮುಖತೋರದೆ ತಪಸ್ಸಿಗೆ ಹೋಗಲು ನಿಶ್ಚಯಿಸಿದನು. ಆದರೆ ದಾರಿಯಲ್ಲಿ ಅವನ ಸಂಗಡಿಗರಾದ ರಾಜರು ಅನೇಕ ವಿಧದಿಂದ ಸಮಾಧಾನ ಗೊಳಿಸುತ್ತಾ - ರಾಜನೇ! ಅಲ್ಪಬಲರಾದ ಯಾದವರೆಲ್ಲಿ? ಮಹಾಬಲಶಾಲಿಯಾದ ನೀನೆಲ್ಲಿ? ಅವರು ನಿನ್ನನ್ನು ಖಂಡಿತವಾಗಿ ಸೋಲಿಸಲಾರರು. ನಿನ್ನ ಪ್ರಾರಬ್ಧವಶದಿಂದ ಈ ಸೋಲು ಉಂಟಾಗಿದೆ. ಇದು ದೈವೇಚ್ಛೆಯೇ ಹೊರತು ಬೇರೇನಲ್ಲ. ಅವರು ಪುನಃ ವಿಜಯವನ್ನು ಸಂಪಾದಿಸುವ ಆಸೆಯನ್ನು ತೋರಿಸಿ, ಲೌಕಿಕವಾದ ದೃಷ್ಟಾಂತಗಳನ್ನೂ, ಯುಕ್ತಿಗಳನ್ನೂ ಮುಂದಿಟ್ಟು ಅವನು ತಪಸ್ಸಿಗೆ ಹೋಗಬಾರದೆಂದು ಜರಾಸಂಧನನ್ನು ತಡೆದರು. ॥ ೩೩-೩೪ ॥

ಹತೇಷು ಸರ್ವಾನೀಕೇಷು ನೃಪೋ ಬಾರ್ಹದ್ರಥಸ್ತದಾ ।
ಉಪೇಕ್ಷಿತೋ ಭಗವತಾ ಮಗಧಾನ್ ದುರ್ಮನಾ ಯಯೌ ॥ ೩೫ ॥

ಮುಕುಂದೋಽಪ್ಯಕ್ಷತಬಲೋ ನಿಸ್ತೀರ್ಣಾರಿಬಲಾರ್ಣವಃ ।
ವಿಕೀರ್ಯಮಾಣಃ ಕುಸುಮೈಸ್ತ್ರಿದಶೈರನುಮೋದಿತಃ ॥ ೩೬ ॥

ಮಾಥುರೈರುಪಸಂಗಮ್ಯ ವಿಜ್ವರೈರ್ಮುದಿತಾತ್ಮಭಿಃ ।
ಉಪಗೀಯಮಾನವಿಜಯಃ ಸೂತಮಾಗಧವಂದಿಭಿಃ ॥ ೩೭ ॥

ಶಂಖದುಂದುಭಯೋ ನೇದುರ್ಭೇರೀತೂರ್ಯಾಣ್ಯನೇಕಶಃ ।
ವೀಣಾವೇಣುಮೃದಂಗಾನಿ ಪುರಂ ಪ್ರವಿಶತಿ ಪ್ರಭೌ ॥ ೩೮ ॥

ಸಿಕ್ತಮಾರ್ಗಾಂ ಹೃಷ್ಟಜನಾಂ ಪತಾಕಾಭಿರಲಂಕೃತಾಮ್ ।
ನಿರ್ಘುಷ್ಟಾಂ ಬ್ರಹ್ಮಘೋಷೇಣ ಕೌತುಕಾಬದ್ಧತೋರಣಾಮ್ ॥ ೩೯ ॥

ನಿಚೀಯಮಾನೋ ನಾರೀಭಿರ್ಮಾಲ್ಯದಧ್ಯಕ್ಷತಾಂಕುರೈಃ ।
ನಿರೀಕ್ಷ್ಯಮಾಣಃ ಸಸ್ನೇಹಂ ಪ್ರೀತ್ಯುತ್ಕಲಿತಲೋಚನೈಃ ॥ ೪೦ ॥

ಆಯೋಧನಗತಂ ವಿತ್ತಮನಂತಂ ವೀರಭೂಷಣಮ್ ।
ಯದುರಾಜಾಯ ತತ್ ಸರ್ವಮಾಹೃತಂ ಪ್ರಾದಿಶತ್ಪ್ರಭುಃ ॥ ೪೧ ॥

ಏವಂ ಸಪ್ತದಶಕೃತ್ವಸ್ತಾವತ್ಯಕ್ಷೌಹಿಣೀಬಲಃ ।
ಯುಯುಧೇ ಮಾಗಧೋ ರಾಜಾ ಯದುಭಿಃ ಕೃಷ್ಣಪಾಲಿತೈಃ ॥ ೪೨ ॥

ಅಕ್ಷಿಣ್ವಂಸ್ತದ್ಬಲಂ ಸರ್ವಂ ವೃಷ್ಣಯಃ ಕೃಷ್ಣತೇಜಸಾ ।
ಹತೇಷು ಸ್ವೇಷ್ವನೀಕೇಷು ತ್ಯಕ್ತೋಽಯಾದರಿಭಿರ್ನೃಪಃ ॥ ೪೩ ॥

ಅಷ್ಟಾದಶಮಸಂಗ್ರಾಮೇ ಆಗಾಮಿನಿ ತದಂತರಾ ।
ನಾರದಪ್ರೇಷಿತೋ ವೀರೋ ಯವನಃ ಪ್ರತ್ಯದೃಶ್ಯತ ॥ ೪೪ ॥

ಪರೀಕ್ಷಿತನೇ! ಆಗ ಜರಾಸಂಧನ ಎಲ್ಲ ಸೈನ್ಯವೂ ಸತ್ತುಹೋಗಿತ್ತು. ಭಗವಾನ್ ಬಲರಾಮನು ಅವನನ್ನು ಉಪೇಕ್ಷೆಯಿಂದಲೇ ಬಿಟ್ಟುಬಿಟ್ಟನು. ಇದರಿಂದ ಅವನು ಬಹಳ ದುಃಖಿತನಾಗಿಯೇ ಮಗಧ ದೇಶಕ್ಕೆ ಮರಳಿದನು. ॥ ೩೫ ॥

ಪರೀಕ್ಷಿದ್ರಾಜನೇ! ಭಗವಾನ್ ಶ್ರೀಕೃಷ್ಣನ ಅಲ್ಪವಾದ ಸೈನ್ಯದಲ್ಲಿ ಯಾವ ಕೂದಲೂ ಕೊಂಕಿರಲಿಲ್ಲ. ಜರಾಸಂಧನ ಸಮುದ್ರದಂತೆ ಇದ್ದ ಇಪ್ಪತ್ತಮೂರು ಅಕ್ಷೌಹಿಣೀ ಸೇನೆಯ ಮೇಲೆ ಸಹಜವಾಗಿ ವಿಜಯವನ್ನು ಪಡೆದರು. ಆಗ ದೇವತೆಗಳೂ ವಿಜಯಿಯಾದ ಶ್ರೀಕೃಷ್ಣನ ಮೇಲೆ ಪುಷ್ಪವೃಷ್ಟಿಯನ್ನು ಸುರಿಸಿ, ಅವನ ಕಾರ್ಯವನ್ನು ಅನುಮೋದಿಸಿದರು. ॥ ೩೬ ॥ ಜರಾಸಂಧನ ಪರಾಜಯದಿಂದ ಮಥುರಾನಿವಾಸಿಗಳು ಭಯರಹಿತರಾಗಿದ್ದರು ಹಾಗೂ ಶ್ರೀಕೃಷ್ಣನ ವಿಜಯದಿಂದ ಅವರ ಹೃದಯ ಆನಂದದಿಂದ ತುಂಬಿಹೋಗಿತ್ತು. ಶ್ರೀಕೃಷ್ಣನು ಬಂದು ಅವರೊಡನೆ ಸೇರಿಕೊಂಡಾಗ ಸೂತ, ಮಾಗಧ, ವಂದೀ ಜನರು ಅವನ ವಿಜಯೋತ್ಸವದ ವೀರಗೀತೆಗಳನ್ನು ಹಾಡುತ್ತಿದ್ದರು. ॥ ೩೭ ॥ ಭಗವಾನ್ ಶ್ರೀಕೃಷ್ಣನು ನಗರವನ್ನು ಪ್ರವೇಶಿಸಿದಾಗ ಅಲ್ಲಿ ಶಂಖ, ಭೇರಿ, ದುಂದುಭಿ, ವೀಣೆ, ವೇಣು, ಮೃದಂಗವೇ ಮೊದಲಾದ ಮಂಗಳ ವಾದ್ಯಗಳು ಮೊಳಗುತ್ತಿದ್ದವು. ॥ ೩೮ ॥ ಮಥುರೆಯ ಪ್ರತಿಯೊಂದು ಬೀದಿಯನ್ನೂ ಗುಡಿಸಿ-ಸಾರಿಸಿದ್ದರು. ಎಲ್ಲೆಲ್ಲೂ ಅತ್ಯುತ್ಸಾಹದಿಂದ ಪ್ರಜಾಜನರು ಓಡಾಡುತ್ತಿದ್ದರು. ಇಡೀ ನಗರವು ಸಣ್ಣ-ಸಣ್ಣ ಬಾವುಟಗಳಿಂದಲೂ, ದೊಡ್ಡ-ದೊಡ್ಡ ವಿಜಯ ಪತಾಕೆಗಳಿಂದಲೂ ಅಲಂಕರಿಸಲ್ಪಟ್ಟಿತ್ತು. ಬ್ರಾಹ್ಮಣರ ವೇದ ಧ್ವನಿಗಳು ನಿನಾದಿತವಾಗುತ್ತಿದ್ದವು. ಆನಂದೋತ್ಸವದ ಸೂಚಕವಾಗಿ ಎಲ್ಲೆಡೆ ತೋರಣಗಳನ್ನು ಕಟ್ಟಿದ್ದರು. ॥ ೩೯ ॥ ಶ್ರೀಕೃಷ್ಣನು ನಗರವನ್ನು ಪ್ರವೇಶಿಸುತ್ತಿರುವಾಗ ನಗರದ ನಾರಿಯರು ಪ್ರೇಮೋತ್ಕಂಠಿತೆಯರಾಗಿ, ಸ್ನೇಹಪೂರ್ವಕವಾದ ಕಣ್ಣುಗಳಿಂದ ಅವನನ್ನು ದಿಟ್ಟಿಸುತ್ತಾ, ಹೂವಿನ ಹಾರಗಳನ್ನು, ಮೊಸರು ಬೆರೆಸಿದ ಅಕ್ಷತೆಗಳನ್ನು, ಧಾನ್ಯದ ಮೊಳಕೆಗಳನ್ನು ಶ್ರೀಕೃಷ್ಣನ ಮೇಲೆ ಎರಚುತ್ತಿದ್ದರು. ॥ ೪೦ ॥ ಭಗವಾನ್ ಶ್ರೀಕೃಷ್ಣನು ರಣಭೂಮಿಯಿಂದ ಅಪಾರ ಧನವನ್ನು ಮತ್ತು ವೀರರ ಆಭೂಷಣಗಳನ್ನು ತಂದಿದ್ದನು. ಅದೆಲ್ಲವನ್ನೂ ಯದುವಂಶೀಯ ರಾಜನಾದ ಉಗ್ರಸೇನನಿಗೆ ಒಪ್ಪಿಸಿದನು. ॥ ೪೧ ॥

ಪರೀಕ್ಷಿತನೇ! ಹೀಗೆ ಮಗಧರಾಜ ಜರಾಸಂಧನು ಹದಿನೇಳು ಬಾರಿ ಇಪ್ಪತ್ತಮೂರು-ಇಪ್ಪತ್ತಮೂರು ಅಕ್ಷೌಹಿಣೀ ಸೈನ್ಯವನ್ನು ಸೇರಿಸಿ, ಭಗವಾನ್ ಶ್ರೀಕೃಷ್ಣನಿಂದ ರಕ್ಷಿತವಾದ ಯದುವಂಶೀಯರೊಡನೆ ಯುದ್ಧಮಾಡಿದನು. ॥ ೪೨ ॥ ಆದರೆ ಯಾದವರು ಶ್ರೀಕೃಷ್ಣನ ಶಕ್ತಿಯಿಂದ ಪ್ರತಿಬಾರಿಯೂ ಅವನ ಸೈನ್ಯವನ್ನು ನಾಶಮಾಡಿದರು. ಸೈನ್ಯವೆಲ್ಲವೂ ನಾಶವಾದಾಗ ಯದುವಂಶೀಯರು ಉಪೇಕ್ಷೆಯಿಂದ ಬಿಟ್ಟುಬಿಟ್ಟಾಗ ಜರಾಸಂಧನು ತನ್ನ ರಾಜಧಾನಿಗೆ ಮರಳುತ್ತಿದ್ದನು. ॥ ೪೩ ॥ ಮಾಗಧನು ಹದಿನೆಂಟನೆಯ ಬಾರಿಯೂ ಸಂಗ್ರಾಮದ ಸಿದ್ಧತೆ ಮಾಡಿಕೊಂಡಾಗಲೇ ನಾರದರಿಂದ ಕಳುಹಲ್ಪಟ್ಟ ವೀರಕಾಲಯವನನು ಕಾಣಿಸಿಕೊಂಡನು. ॥ ೪೪ ॥

ರುರೋಧ ಮಥುರಾಮೇತ್ಯ ತಿಸೃಭಿರ್ಮ್ಲೇಚ್ಛಕೋಟಿಭಿಃ ।
ನೃಲೋಕೇ ಚಾಪ್ರತಿದ್ವಂದ್ವೋ ವೃಷ್ಣೀನ್ ಶ್ರುತ್ವಾಽಽತ್ಮಸಮ್ಮಿತಾನ್ ॥ ೪೫ ॥

ತಂ ದೃಷ್ಟ್ವಾಚಿಂತಯತ್ ಕೃಷ್ಣಃ ಸಂಕರ್ಷಣಸಹಾಯವಾನ್ ।
ಅಹೋ ಯದೂನಾಂ ವೃಜಿನಂ ಪ್ರಾಪ್ತಂ ಹ್ಯುಭಯತೋ ಮಹತ್ ॥ ೪೬ ॥

ಯವನೋಽಯಂ ನಿರುಂಧೇಽಸ್ಮಾನದ್ಯ ತಾವನ್ಮಹಾಬಲಃ ।
ಮಾಗಧೋಽಪ್ಯದ್ಯ ವಾ ಶ್ವೋ ವಾ ಪರಶ್ವೋ ವಾಽಽಗಮಿಷ್ಯತಿ ॥ ೪೭ ॥

ಆವಯೋರ್ಯುಧ್ಯತೋರಸ್ಯ ಯದ್ಯಾಗಂತಾ ಜರಾಸುತಃ ।
ಬಂಧೂನ್ ವಧಿಷ್ಯತ್ಯಥವಾ ನೇಷ್ಯತೇ ಸ್ವಪುರಂ ಬಲೀ ॥ ೪೮ ॥

ತಸ್ಮಾದದ್ಯ ವಿಧಾಸ್ಯಾಮೋ ದುರ್ಗಂ ದ್ವಿಪದದುರ್ಗಮಮ್ ।
ತತ್ರ ಜ್ಞಾತೀನ್ ಸಮಾಧಾಯ ಯವನಂ ಘಾತಯಾಮಹೇ ॥ ೪೯ ॥

ಇತಿ ಸಮ್ಮಂತ್ರ್ಯ ಭಗವಾನ್ ದುರ್ಗಂ ದ್ವಾದಶಯೋಜನಮ್ ।
ಅಂತಃ ಸಮುದ್ರೇ ನಗರಂ ಕೃತ್ಸ್ನಾದ್ಭುತಮಚೀಕರತ್ ॥ ೫೦ ॥

ದೃಶ್ಯತೇ ಯತ್ರ ಹಿ ತ್ವಾಷ್ಟ್ರಂ ವಿಜ್ಞಾನಂ ಶಿಲ್ಪನೈಪುಣಮ್ ।
ರಥ್ಯಾಚತ್ವರವೀಥೀಭಿರ್ಯಥಾವಾಸ್ತು ವಿನಿರ್ಮಿತಮ್ ॥ ೫೧ ॥

ಸುರದ್ರುಮಲತೋದ್ಯಾನವಿಚಿತ್ರೋಪವನಾನ್ವಿತಮ್ ।
ಹೇಮಶೃಂಗೈರ್ದಿವಿಸ್ಪೃಗ್ಭಿಃ ಸ್ಫಾಟಿಕಾಟ್ಟಾಲಗೋಪುರೈಃ ॥ ೫೨ ॥

ರಾಜತಾರಕುಟೈಃ ಕೋಷ್ಠೈರ್ಹೇಮಕುಂಭೈರಲಂಕೃತೈಃ ।
ರತ್ನಕೂಟೈಃ ಗೃಹೈಃ ಹೈಮ್ಯೈಃ ಮಹಾಮರಕತಸ್ಥಲೈಃ ॥ ೫೩ ॥

ವಾಸ್ತೋಷ್ಪತೀನಾಂ ಚ ಗೃಹೈರ್ವಲ್ಲಭೀಭಿಶ್ಚ ನಿರ್ಮಿತಮ್ ।
ಚಾತುರ್ವರ್ಣ್ಯಜನಾಕೀರ್ಣಂ ಯದುದೇವಗೃಹೋಲ್ಲಸತ್ ॥ ೫೪ ॥

ಯುದ್ಧದಲ್ಲಿ ಕಾಲಯವನ ಮುಂದೆ ನಿಲ್ಲಬಲ್ಲ ವೀರನು ಪ್ರಪಂಚದಲ್ಲೇ ಇನ್ನೂ ಹುಟ್ಟಿರಲಿಲ್ಲ. ಯದುವಂಶೀಯರು ನನ್ನಂತೆಯೇ ಬಲಶಾಲಿಗಳಾಗಿದ್ದಾರೆ ಮತ್ತು ನನ್ನೊಡನೆ ಯುದ್ಧಮಾಡಬಲ್ಲರು ಎಂದು ಕೇಳಿದಾಗ ಅವನು ಮೂರು ಕೋಟಿ ಮ್ಲೇಚ್ಛರ ಸೇನೆಯೊಂದಿಗೆ ಬಂದು ಮಥುರೆಯನ್ನು ಮುತ್ತಿದನು. ॥ ೪೫ ॥ ಕಾಲಯವನನು ಮಥುರಾ ಪಟ್ಟಣವನ್ನು ಆಕ್ರಮಿಸಿದುದನ್ನು ಕಂಡು ಸಂಕರ್ಷಣನಿಗೆ ಸಹಾಯಕನಾದ ಶ್ರೀಕೃಷ್ಣನು ಅವನೊಡನೆ ಯೋಚಿಸಿದನು – ಅಯ್ಯೋ! ಈ ಸಮಯದಲ್ಲಿ ಜರಾಸಂಧ ಮತ್ತು ಕಾಲಯವನ ಈ ಇಬ್ಬರೂ ಬಂದಿರುತ್ತಾರೆ. ಇದರಿಂದ ಯಾದವರ ಮೇಲೆ ಎರಡು ಆಪತ್ತುಗಳು ಏಕಕಾಲದಲ್ಲಿ ಸಂಭವಿಸಿವೆ. ॥ ೪೬ ॥ ಇಂದು ಕಾಲಯವನನು ಮೂರುಕೋಟಿ ಮ್ಲೇಚ್ಛ ಸೈನ್ಯಸಮೇತನಾಗಿ ಬಂದು ಆಕ್ರಮಿಸಿರುವನು. ಇಂದೋ ನಾಳೆಯೋ ಜರಾಸಂಧನೂ ಬರಬಹುದು ॥ ೪೭ ॥ ನಾವಿಬ್ಬರೂ ಇವನೊಡನೆ ಯುದ್ಧದಲ್ಲಿ ತೊಡಗಿದಾಗಲೇ ಜರಾಸಂಧನು ಬಂದು ತಲುಪಿದರೆ ಮಹಾಬಲಿಷ್ಠನಾದ ಅವನು ನಮ್ಮ ಬಂಧುಗಳನ್ನೆಲ್ಲ ಕೊಂದು ಹಾಕಬಹುದು ಅಥವಾ ಸೆರೆಹಿಡಿದುಕೊಂಡು ತನ್ನ ನಗರಕ್ಕೆ ಕೊಂಡು ಹೋಗಬಹುದು. ॥ ೪೮ ॥ ಅದಕ್ಕಾಗಿ ಇಂದು ನಾವು ಯಾವುದೇ ಮನುಷ್ಯನಿಗೆ ಪ್ರವೇಶಿಸಲು ಅತ್ಯಂತ ಕಠಿಣವಾದ ಒಂದು ದುರ್ಗವನ್ನು ನಿರ್ಮಾಣಮಾಡೋಣ. ನಮ್ಮ ಸ್ವಜನ-ಸಂಬಂಧಿಗಳನ್ನು ಆ ಕೋಟೆಯಲ್ಲಿ ಇರಿಸಿ ಮತ್ತೆ ಈ ಕಾಲಯವನ ವಧೆ ಮಾಡಿಸೋಣ. ॥ ೪೯ ॥ ಬಲರಾಮನೊಂದಿಗೆ ಹೀಗೆ ವಿಚಾರ ವಿನಿಮಯ ಮಾಡಿ ಭಗವಾನ್ ಶ್ರೀಕೃಷ್ಣನು ಸಮುದ್ರದ ಮಧ್ಯದಲ್ಲಿ ಒಂದು ದುರ್ಗಮವಾದ ನಗರವನ್ನು ನಿರ್ಮಿಸಿದನು. ಅದರಲ್ಲಿ ಎಲ್ಲ ವಸ್ತುಗಳೂ ಅದ್ಭುತವಾಗಿದ್ದವು. ಆ ನಗರದ ಉದ್ದಗಲವು ಹನ್ನೆರಡು ಯೋಜನಗಳಷ್ಟಿತ್ತು. ॥ ೫೦ ॥ ಆ ನಗರದ ಒಂದೊಂದು ವಸ್ತುಗಳಲ್ಲೂ ವಿಶ್ವಕರ್ಮನ ವಾಸ್ತುವಿಜ್ಞಾನವು ಹಾಗೂ ಶಿಲ್ಪಕಲೆಯ ನೈಪುಣ್ಯವು ಪ್ರಕಟವಾಗಿತ್ತು. ಅದರಲ್ಲಿ ವಾಸ್ತುಶಾಸ್ತ್ರಾನುಸಾರವಾಗಿ ದೊಡ್ಡ-ದೊಡ್ಡ ರಾಜಬೀದಿಗಳೂ, ವೃತ್ತಗಳೂ, ಇತರ ಮಾರ್ಗಗಳೂ ಯಥಾಸ್ಥಾನಗಳಲ್ಲಿ ವಿಭಾಜಿಸಲ್ಪಟ್ಟಿತ್ತು. ॥ ೫೧ ॥ ಆ ನಗರದಲ್ಲಿ ಪಾರಿಜಾತವೇ ಮೊದಲಾದ ದೇವತಾವೃಕ್ಷಗಳಿಂದಲೂ, ಲತೆಗಳಿಂದಲೂ ಸಂಪನ್ನವಾಗಿದ್ದ ಸುಂದರವಾದ ಉದ್ಯಾನವನಗಳೂ ಮತ್ತು ಚಿತ್ರ-ವಿಚಿತ್ರವಾದ ಉಪವನಗಳೂ ಇದ್ದವು. ಅಲ್ಲಿ ಆಕಾಶವನ್ನು ಮುಟ್ಟುತ್ತಿದ್ದ ಸ್ವರ್ಣಗೋಪುರಗಳಿಂದಲೂ, ಸ್ಫಟಿಕಮಯವಾದ ಉಪ್ಪರಿಗೆಗಳಿಂದಲೂ, ಮಹಾದ್ವಾರಗಳಿಂದಲೂ ಅತ್ಯಂತ ಸುಂದರವಾಗಿ ಕಾಣುತ್ತಿತ್ತು. ॥೫೨॥ ಬೆಳ್ಳಿ ಮತ್ತು ಹಿತ್ತಾಳೆಗಳಿಂದ ನಿರ್ಮಿಸಿದ ಅನೇಕ ಧಾನ್ಯಭಂಡಾರಗಳಿದ್ದವು. ಕುಸುರಿ ಕೆಲಸಗಳಿಂದ ಕೂಡಿದ ಚಿನ್ನದ ಕಲಶಗಳಿಂದ ಅಲಂಕೃತವಾದ ಮಹಾ-ಮಹಾ ಸೌಧಗಳಿದ್ದು, ಮರಕತಮಯವಾಗಿದ್ದ ಅದರ ನೆಲಗಳಿಂದ ಆ ದ್ವಾರಕಾ ಪಟ್ಟಣವು ಸುಂದರವಾಗಿ ಶೋಭಿಸುತ್ತಿತ್ತು. ॥ ೫೩ ॥ ಚಂದ್ರಶಾಲೆಗಳೊಡನೆ ನಿರ್ಮಿಸಿದ ವಾಸ್ತುದೇವತೆಯ ಮಂದಿರಗಳು ನಿರ್ಮಾಣಗೊಂಡಿದ್ದವು. ಅದರಲ್ಲಿ ನಾಲ್ಕು ವರ್ಣದವರೂ ವಾಸಿಸುತ್ತಿದ್ದು, ನಗರದ ಮಧ್ಯದಲ್ಲಿ ಯದುವಂಶ ಪ್ರಧಾನರಾದ ಉಗ್ರಸೇನ, ವಸುದೇವ, ಬಲರಾಮ, ಶ್ರೀಕೃಷ್ಣರೇ ಮೊದಲಾದವರ ಅರಮನೆಗಳು ಪ್ರಕಾಶಿಸುತ್ತಿದ್ದವು. ॥ ೫೪ ॥

ಸುಧರ್ಮಾಂ ಪಾರಿಜಾತಂ ಚ ಮಹೇಂದ್ರಃ ಪ್ರಾಹಿಣೋದ್ಧರೇ ।
ಯತ್ರ ಚಾವಸ್ಥಿತೋ ಮರ್ತ್ಯೋ ಮರ್ತ್ಯಧರ್ಮೈರ್ನ ಯುಜ್ಯತೇ ॥ ೫೫ ॥

ಪರೀಕ್ಷಿತನೇ! ಆ ಸಮಯದಲ್ಲಿ ದೇವೇಂದ್ರನು ಭಗವಾನ್ ಶ್ರೀಕೃಷ್ಣನಿಗಾಗಿ ಪಾರಿಜಾತವೃಕ್ಷ ಮತ್ತು ಸುಧರ್ಮಾ ಎಂಬ ಸಭೆಯನ್ನು ಕಳುಹಿಸಿಕೊಟ್ಟನು. ಆ ದಿವ್ಯವಾದ ಸಭೆಯಲ್ಲಿ ಕುಳಿತವನಿಗೆ ಹಸಿವು-ಬಾಯಾರಿಕೆ ಮುಂತಾದ ಮರ್ತ್ಯಧರ್ಮವಿರುತ್ತಿರಲಿಲ್ಲ. ॥ ೫೫ ॥

ಶ್ಯಾಮೈಕವರ್ಣಾನ್ ವರುಣೋ
ಹಯಾನ್ ಶುಕ್ಲಾನ್ ಮನೋಜವಾನ್ ।
ಅಷ್ಟೌ ನಿಧಿಪತಿಃ ಕೋಶಾನ್
ಲೋಕಪಾಲೋ ನಿಜೋದಯಾನ್ ॥ ೫೬ ॥

ಒಂದು ಕಿವಿಮಾತ್ರ ಕಪ್ಪಾಗಿದ್ದು ಬಳಿಯ ಬಣ್ಣದಿಂದ ಪ್ರಕಾಶಿಸುತ್ತಿದ್ದ ಮನೋವೇಗಕ್ಕೆ ಸಮಾನ ವೇಗವುಳ್ಳ ಹಲವಾರು ಕುದುರೆಗಳನ್ನೂ ವರುಣನು ಕಳಿಸಿಕೊಟ್ಟನು. ಧನಪತಿಯಾದ ಕುಬೇರನು ತನ್ನ ಎಂಟು ನಿಧಿಗಳನ್ನೂ ಕಳಿಸಿಕೊಟ್ಟನು. ಲೋಕಪಾಲರೂ ಕೂಡ ತಮ್ಮ-ತಮ್ಮ ವಿಭೂತಿಗಳನ್ನು ಭಗವಂತನ ಬಳಿಗೆ ಕಳಿಸಿಕೊಟ್ಟರು. ॥ ೫೬ ॥

ಯದ್ಯದ್ಭಗವತಾ ದತ್ತಮಾಧಿಪತ್ಯಂ ಸ್ವಸಿದ್ಧಯೇ ।
ಸರ್ವಂ ಪ್ರತ್ಯರ್ಪಯಾಮಾಸುರ್ಹರೌ ಭೂಮಿಗತೇ ನೃಪ ॥ ೫೭ ॥

ಪರೀಕ್ಷಿತನೇ! ಸಮಸ್ತ ಲೋಕಪಾಲರಿಗೂ ಭಗವಾನ್ ಶ್ರೀಕೃಷ್ಣನು ಅವರವರ ಕಾರ್ಯ ನಿರ್ವಹಿಸಲೆಂದು ಶಕ್ತಿಗಳನ್ನೂ, ಸಿದ್ಧಿಗಳನ್ನೂ ದಯಪಾಲಿಸಿದ್ದನು. ಶ್ರೀಕೃಷ್ಣನು ಪೃಥಿವಿಯಲ್ಲಿ ಅವತರಿಸಿ, ಲೀಲೆಗಳನ್ನು ತೋರಿಸುವ ಪ್ರಾರಂಭದಲ್ಲಿ ಲೋಕಪಾಲರೆಲ್ಲರೂ ತಮ್ಮಲ್ಲಿದ್ದ ಸಿದ್ಧಿಗಳನ್ನು ಶ್ರೀಕೃಷ್ಣನಿಗೆ ಸಮರ್ಪಿಸಿದರು. ॥ ೫೭ ॥

ತತ್ರ ಯೋಗಪ್ರಭಾವೇಣ ನೀತ್ವಾ ಸರ್ವಜನಂ ಹರಿಃ ।
ಪ್ರಜಾಪಾಲೇನ ರಾಮೇಣ ಕೃಷ್ಣಃ ಸಮನುಮಂತ್ರಿತಃ ।
ನಿರ್ಜಗಾಮ ಪುರದ್ವಾರಾತ್ ಪದ್ಮಮಾಲೀ ನಿರಾಯುಧಃ ॥ ೫೮ ॥

ಭಗವಾನ್ ಶ್ರೀಕೃಷ್ಣನು ತನ್ನ ಸಮಸ್ತ ಸ್ವಜನ ಸಂಬಂಧಿಗಳನ್ನು ತನ್ನ ಅಚಿಂತ್ಯವಾದ ಮಹಾಶಕ್ತಿಯಾದ ಯೋಗಮಾಯೆಯಿಂದ ದ್ವಾರಕೆಗೆ ತಲುಪಿಸಿದನು. ಉಳಿದ ಪ್ರಜೆಗಳ ರಕ್ಷಣೆಯನ್ನು ಬಲರಾಮನಿಗೆ ಒಪ್ಪಿಸಿ, ಅವನಿಂದ ಅನುಮತಿಯನ್ನು ಪಡೆದು ಭಗವಂತನು ಕಮಲದ ಮಾಲೆಯನ್ನು ಧರಿಸಿ ನಿರಾಯುಧನಾಗಿ ಪಟ್ಟಣದ ಮಹಾದ್ವಾರದಿಂದ ಹೊರಬಿದ್ದನು. ॥ ೫೮ ॥

ಐವತ್ತನೆಯ ಅಧ್ಯಾಯವು ಮುಗಿಯಿತು. ॥ ೫೦ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮ ಸ್ಕಂಧೇ ಉತ್ತರಾರ್ಧೇ
ದುರ್ಗನಿವೇಶನಂ ನಾಮ ಪಂಚಾಶತ್ತಮೋಽಧ್ಯಾಯಃ ॥ ೫೦ ॥

ಐವತ್ತೊಂದನೆಯ ಅಧ್ಯಾಯ

ಕಾಲಯವನನು ಭಸ್ಮವಾದುದು - ಮುಚುಕುಂದನ ಕಥೆ

ಶ್ರೀಶುಕ ಉವಾಚ

ತಂ ವಿಲೋಕ್ಯ ವಿನಿಷ್ಕ್ರಾಂತಮುಜ್ಜಿಹಾನಮಿವೋಡುಪಮ್ ।
ದರ್ಶನೀಯತಮಂ ಶ್ಯಾಮಂ ಪೀತಕೌಶೇಯವಾಸಸಮ್ ॥ ೧ ॥

ಶ್ರೀವತ್ಸವಕ್ಷಸಂ ಭ್ರಾಜತ್ಕೌಸ್ತುಭಾಮುಕ್ತಕಂಧರಮ್ ।
ಪೃಥುದೀರ್ಘಚತುರ್ಬಾಹುಂ ನವಕಂಜಾರುಣೇಕ್ಷಣಮ್ ॥ ೨ ॥

ನಿತ್ಯಪ್ರಮುದಿತಂ ಶ್ರೀಮತ್ಸುಕಪೋಲಂ ಶುಚಿಸ್ಮಿತಮ್ ।
ಮುಖಾರವಿಂದಂ ಬಿಭ್ರಾಣಂ ಸ್ಫುರನ್ಮಕರಕುಂಡಲಮ್ ॥ ೩ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ - ಪರೀಕ್ಷಿತ ಮಹಾರಾಜ! ಮಥುರಾಪಟ್ಟಣದ ಮಹಾದ್ವಾರದಿಂದ ಹೊರಬಂದ ಶ್ರೀಕೃಷ್ಣನು ಆಗತಾನೆ ಉದಯಿಸಿದ ಪೂರ್ಣಚಂದ್ರನಂತೆ ಅತ್ಯಂತ ಸುಂದರನಾಗಿ ಕಾಣುತ್ತಿದ್ದನು. ಶ್ಯಾಮಲವರ್ಣನಾದ ಅವನು ದಿವ್ಯವಾದ ಪೀತಾಂಬರವನ್ನು ಉಟ್ಟಿದ್ದನು. ಅವನ ವಕ್ಷಃಸ್ಥಳದಲ್ಲಿ ಶ್ರೀವತ್ಸದ ಚಿಹ್ನೆಯಿತ್ತು. ಕೊರಳಲ್ಲಿ ಕೌಸ್ತುಭಮಣಿಯು ಹೊಳೆಯುತ್ತಿತ್ತು. ಅವನಿಗೆ ದಪ್ಪವಾಗಿಯೂ, ನೀಳವಾಗಿಯೂ ಇದ್ದ ನಾಲ್ಕು ಭುಜಗಳಿದ್ದುವು. ಆಗ ತಾನೇ ಅರಳಿದ ಕಮಲದಂತಹ ಕಣ್ಣುಗಳನ್ನು ಹೊಂದಿದ್ದನು. ಮುಖಕಮಲದಲ್ಲಿ ರಾಶಿ-ರಾಶಿಯಾಗಿ ಆನಂದವು ಮಿನುಗುತ್ತಿತ್ತು. ಅವನ ಮಂದ-ಮಂದ ಮುಗುಳು ನಗೆಯು ನೋಡುವವರ ಮನಸ್ಸನ್ನು ಅಪಹರಿಸುತ್ತಿತ್ತು. ಕಿವಿಗಳಲ್ಲಿ ಮಕರಾಕೃತಿಯ ಕುಂಡಲಗಳು ಓಲಾಡುತ್ತಿದ್ದುವು. ಅವನನ್ನು ನೋಡಿದ ಕಾಲಯವನನು - ಇವನೇ ವಾಸುದೇವನೂ ಮತ್ತು ನಾರದರು

ವಾಸುದೇವೋ ಹ್ಯಯಮಿತಿ ಪುಮಾನ್ ಶ್ರೀವತ್ಸಲಾಂಛನಃ ।
ಚತುರ್ಭುಜೋಽರವಿಂದಾಕ್ಷೋ ವನಮಾಲ್ಯತಿಸುಂದರಃ
॥ ೪ ॥

ಲಕ್ಷಣೈರ್ನಾರದಪ್ರೋಕ್ತೈರ್ನಾನ್ಯೋ ಭವಿತುಮರ್ಹತಿ ।
ನಿರಾಯುಧಶ್ಚಲನ್ ಪದ್ಭ್ಯಾಂ ಯೋತ್ಸ್ಯೇಽನೇನ ನಿರಾಯುಧಃ
॥ ೫ ॥

ಇತಿ ನಿಶ್ಚಿತ್ಯ ಯವನಃ ಪ್ರಾದ್ರವಂತಂ ಪರಾಙ್ಮುಖಮ್ ।
ಅನ್ವಧಾವಜ್ಜಿಘೃಕ್ಷುಸ್ತಂ ದುರಾಪಮಪಿ ಯೋಗಿನಾಮ್
॥ ೬ ॥

ಹಸ್ತಪ್ರಾಪ್ತಮಿವಾತ್ಮಾನಂ ಹರಿಣಾ ಸ ಪದೇ ಪದೇ ।
ನೀತೋ ದರ್ಶಯತಾ ದೂರಂ ಯವನೇಶೋಽದ್ರಿಕಂದರಮ್
॥ ೭ ॥

ಪಲಾಯನಂ ಯದುಕುಲೇ ಜಾತಸ್ಯ ತವ ನೋಚಿತಮ್ ।
ಇತಿ ಕ್ಷಿಪನ್ನನುಗತೋ ನೈನಂ ಪ್ರಾಪಾಹತಾಶುಭಃ
॥ ೮ ॥

ಏವಂ ಕ್ಷಿಪ್ತೋಽಪಿ ಭಗವಾನ್ ಪ್ರಾವಿಶದ್ಗಿರಿಕಂದರಮ್ ।
ಸೋಽಪಿ ಪ್ರವಿಷ್ಟಸ್ತತ್ರಾನ್ಯಂ ಶಯಾನಂ ದದೃಶೇ ನರಮ್
॥ ೯ ॥

ನನ್ವಸೌ ದೂರಮಾನೀಯ ಶೇತೇ ಮಾಮಿಹ ಸಾಧುವತ್ ।
ಇತಿ ಮತ್ವಾಚ್ಯುತಂ ಮೂಢಸ್ತಂ ಪದಾ ಸಮತಾಡಯತ್
॥ ೧೦ ॥

ಸ ಉತ್ಥಾಯ ಚಿರಂ ಸುಪ್ತಃ ಶನೈರುನ್ಮೀಲ್ಯ ಲೋಚನೇ ।
ದಿಶೋ ವಿಲೋಕಯನ್ ಪಾರ್ಶ್ವೇ ತಮದ್ರಾಕ್ಷೀದವಸ್ಥಿತಮ್
॥ ೧೧ ॥

ಸ ತಾವತ್ತಸ್ಯ ರುಷ್ಟಸ್ಯ ದೃಷ್ಟಿಪಾತೇನ ಭಾರತ ।
ದೇಹಜೇನಾಗ್ನಿನಾ ದಗ್ಧೋ ಭಸ್ಮಸಾದಭವತ್ ಕ್ಷಣಾತ್
॥ ೧೨ ॥

ರಾಜೋವಾಚ

ಕೋ ನಾಮ ಸ ಪುಮಾನ್ ಬ್ರಹ್ಮನ್ ಕಸ್ಯ ಕಿಂವೀರ್ಯ ಏವ ಚ ।
ಕಸ್ಮಾದ್ಗುಹಾಂ ಗತಃ ಶಿಶ್ಯೇ ಕಿನ್ತೇಜೋ ಯವನಾರ್ದನಃ
॥ ೧೩ ॥

ಹೇಳಿದ್ದಂತೆ ಅವನು ಶ್ರೀವತ್ಸಲಾಂಛನನಾಗಿದ್ದನು. ಚತುರ್ಭುಜನಾಗಿದ್ದನು. ಕಮಲಾಕ್ಷನಾಗಿದ್ದನು. ವನಮಾಲಿಯಾಗಿದ್ದನು. ಕಡು ಚೆಲುವನೂ ಆಗಿದ್ದನು. ಇವನು ಶ್ರೀಕೃಷ್ಣನಲ್ಲದೆ ಬೇರೆಯವನಲ್ಲವೆಂದು ನಿಶ್ಚಯಿಸಿದನು. ಅವನು ಆಯುಧ ರಹಿತನಾಗಿ ಕಾಲ್ನಡಿಗೆಯಲ್ಲೇ ಹೋಗುತ್ತಿರುವುದರಿಂದ ತಾನೂ ನಿರಾಯುಧನಾಗಿಯೇ ಇವನೊಂದಿಗೆ ಯುದ್ಧಮಾಡುವೆನೆಂದು ಕಾಲಯವನನು ನಿಶ್ಚಯಿಸಿದನು. ॥ ೧–೫ ॥

ಹೀಗೆ ನಿಶ್ಚಯಿಸಿದ ಕಾಲಯವನನು ತನಗೆ ಬೆನ್ನುತೋರಿ ಓಡಿ ಹೋಗುತ್ತಿದ್ದ ಯೋಗಿಗಳಿಂದಲೂ ಹೊಂದಲು ಅಸಾಧ್ಯನಾಗಿದ್ದ ಶ್ರೀಕೃಷ್ಣನನ್ನು ಹಿಡಿಯಲಿಕ್ಕಾಗಿ ಅವನನ್ನು ಬೆನ್ನಟ್ಟಿಕೊಂಡು ಹೋದನು. ॥ ೬ ॥ ಶ್ರೀಕೃಷ್ಣನು ಪ್ರತಿಯೊಂದು ಹೆಜ್ಜೆಯಲ್ಲೂ ಸಿಕ್ಕಿಬಿದ್ದನೆಂದೇ ಕಾಲಯವನಗೆ ಭಾಸವಾಗುತ್ತಿತ್ತು. ಆದರೆ ಲೀಲಾ ಮಾನುಷ ವಿಗ್ರಹನಾದ ಶ್ರೀಕೃಷ್ಣನು ಮಾತ್ರ ಅವನ ಕೈಗೆ ಸಿಗುತ್ತಿರಲಿಲ್ಲ. ಹೀಗೆ ಕಾಲಯವನನ್ನು ದೂರದ ಪರ್ವತ ಗುಹೆಯ ಬಳಿಗೆ ಕರೆದೊಯ್ದನು. ॥ ೭ ॥ ಶ್ರೀಕೃಷ್ಣನನ್ನು ಹಿಡಿದು ಬಿಡಬೇಕೆಂದು ಅವನ ಹಿಂದೆಯೇ ಓಡುತ್ತಿದ್ದ ಕಾಲಯವನನು ಗಟ್ಟಿಯಾಗಿ ಕೂಗಿ ಶ್ರೀಕೃಷ್ಣನಿಗೆ ಹೇಳಿದನು – ಶ್ರೇಷ್ಠವಾದ ಯದುವಂಶದಲ್ಲಿ ಹುಟ್ಟಿರುವ ನಿನಗೆ ಯುದ್ಧದಿಂದ ಪಲಾಯನ ಮಾಡುವುದು ಉಚಿತವಲ್ಲ. ಹೀಗೆ ಆಕ್ಷೇಪಿಸುತ್ತಾ ಮುಂದೆ-ಮುಂದೆ ಹೋಗುತ್ತಿದ್ದರೂ ಕಾಲಯವನನಿಗೆ ಪಾಪ ಶೇಷವು ಇನ್ನೂ ಇದ್ದುದರಿಂದ ಭಗವಂತನು ಅವನ ಕೈಗೆ ಸಿಗಲಿಲ್ಲ. ॥ ೮ ॥ ಹೀಗೆ ಅವನು ಆಕ್ಷೇಪಿಸುತ್ತಿದ್ದರೂ ಅದನ್ನು ಲಕ್ಷಿಸದೆ ಭಗವಂತನು ಆ ಪರ್ವತದ ಗುಹೆಯೊಳಗೆ ಹೊಕ್ಕನು. ಅವನ ಹಿಂದೆಯೇ ಕಾಲಯವನನೂ ಗುಹೆಯೊಳಗೆ ಹೋದನು. ಆದರೆ ಅಲ್ಲಿ ಶ್ರೀಕೃಷ್ಣನನ್ನು ಕಾಣದೆ ಬೇರೊಬ್ಬ ಪುರುಷನು ಮಲಗಿರುವುದನ್ನು ನೋಡಿದನು. ॥ ೯ ॥ ನನ್ನನ್ನು ಇಷ್ಟು ದೂರಕ್ಕೆ ಕರೆತಂದು ಸಾಧುವಿನಂತೆ ಮಾಯಾವಿಯಾದ ಕೃಷ್ಣನು ಮಲಗಿರುವನಲ್ಲ? ಹೀಗೆ ಹೇಳುತ್ತಾ ಮೂಢನಾದ ಕಾಲಯವನನು ಮಲಗಿರುವವನು ಅಚ್ಯುತನೆಂದೇ ಭಾವಿಸಿ ಕಾಲಿನಿಂದ ಅವನನ್ನು ಒದೆದನು. ॥ ೧೦ ॥ ಆ ಪುರುಷನು ಬಹಳ ದಿನಗಳಿಂದ ಅಲ್ಲಿ ಮಲಗಿದ್ದನು. ಕಾಲಿನ ಒದೆತವು ತಾಕಿದಾಕ್ಷಣ ಅವನು ಎಚ್ಚರಗೊಂಡು ನಿಧಾನವಾಗಿ ಕಣ್ಣುಗಳನ್ನು ಬಿಡುತ್ತಾ ಎಲ್ಲ ದಿಕ್ಕುಗಳನ್ನು ನೋಡುತ್ತಾ, ಕಡೆಗೆ ತನ್ನ ಪಕ್ಕದಲ್ಲಿಯೇ ನಿಂತಿದ್ದ ಕಾಲಯವನನ್ನು ನೋಡಿದನು. ॥ ೧೧ ॥ ಪರೀಕ್ಷಿತನೇ! ಕೋಪಿಷ್ಠನಾದ ಆ ಪುರುಷನ ದೃಷ್ಟಿಯು ಬಿದ್ದೊಡನೆಯೇ ಕಾಲಯವನನು ತನ್ನ ದೇಹದಿಂದಲೇ ಹುಟ್ಟಿದ ಅಗ್ನಿಯಿಂದ ಸುಟ್ಟು ಕ್ಷಣಾರ್ಧದಲ್ಲಿ ಬೂದಿಯಾದನು. ॥ ೧೨ ॥

ಪರೀಕ್ಷಿದ್ರಾಜನು ಕೇಳಿದನು – ಪೂಜ್ಯರೇ! ಕೇವಲ ದೃಷ್ಟಿಪಾತದಿಂದಲೇ ಕಾಲಯವನನು ಭಸ್ಮವಾಗಿ ಹೋದನಲ್ಲ ಆ ಮಹಾಪುರುಷನು ಯಾರು? ಯಾವ ವಂಶದವನು? ಯಾರ ಮಗನು? ಅವನಲ್ಲಿ ಅಂತಹ ಶಕ್ತಿಯು ಹೇಗಿತ್ತು? ಅವನು ಪರ್ವತದ ಗುಹೆಯಲ್ಲಿ ಹೋಗಿ ಏಕೆ ಮಲಗಿದ್ದನು? ದಯಮಾಡಿ ಇವೆಲ್ಲವನ್ನೂ ಹೇಳಿರಿ. ॥ ೧೩ ॥

ಶ್ರೀಶುಕ ಉವಾಚ

ಸ ಇಕ್ಷ್ವಾಕುಕುಲೇ ಜಾತೋ ಮಾಂಧಾತೃತನಯೋ ಮಹಾನ್ ।
ಮುಚುಕುಂದ ಇತಿ ಖ್ಯಾತೋ ಬ್ರಹ್ಮಣ್ಯಃ ಸತ್ಯಸಂಗರಃ ॥ ೧೪ ॥

ಸ ಯಾಚಿತಃ ಸುರಗಣೈರಿಂದ್ರಾದ್ಯೈರಾತ್ಮರಕ್ಷಣೇ ।
ಅಸುರೇಭ್ಯಃ ಪರಿತ್ರಸ್ತೈಸ್ತದ್ರಕ್ಷಾಂ ಸೋಽಕರೋಚ್ಚಿರಮ್ ॥ ೧೫ ॥

ಲಬ್ಧ್ವಾ ಗುಹಂ ತೇ ಸ್ವಃಪಾಲಂ ಮುಚುಕುಂದಮಥಾಬ್ರುವನ್ ।
ರಾಜನ್ ವಿರಮತಾಂ ಕೃಚ್ಛ್ರಾದ್ಭವಾನ್ ನಃ ಪರಿಪಾಲನಾತ್ ॥ ೧೬ ॥

ನರಲೋಕೇ ಪರಿತ್ಯಜ್ಯ ರಾಜ್ಯಂ ನಿಹತಕಂಟಕಮ್ ।
ಅಸ್ಮಾನ್ ಪಾಲಯತೋ ವೀರ ಕಾಮಾಸ್ತೇ ಸರ್ವ ಉಜ್ಝಿತಾಃ ॥ ೧೭ ॥

ಸುತಾ ಮಹಿಷ್ಯೋ ಭವತೋ ಜ್ಞಾತಯೋಽಮಾತ್ಯಮಂತ್ರಿಣಃ ।
ಪ್ರಜಾಶ್ಚ ತುಲ್ಯಕಾಲೀಯಾ ನಾಧುನಾ ಸಂತಿ ಕಾಲಿತಾಃ ॥ ೧೮ ॥

ಕಾಲೋ ಬಲೀಯಾನ್ ಬಲಿನಾಂ ಭಗವಾನೀಶ್ವರೋಽವ್ಯಯಃ ।
ಪ್ರಜಾಃ ಕಾಲಯತೇ ಕ್ರೀಡನ್ ಪಶುಪಾಲೋ ಯಥಾ ಪಶೂನ್ ॥ ೧೯ ॥

ವರಂ ವೃಣೀಷ್ವ ಭದ್ರಂ ತೇ ಋತೇ ಕೈವಲ್ಯಮದ್ಯ ನಃ ।
ಏಕ ಏವೇಶ್ವರಸ್ತಸ್ಯ ಭಗವಾನ್ ವಿಷ್ಣುರವ್ಯಯಃ ॥ ೨೦ ॥

ಏವಮುಕ್ತಃ ಸ ವೈ ದೇವಾನಭಿವಂದ್ಯ ಮಹಾಯಶಾಃ ।
ಅಶಯಿಷ್ಟ ಗುಹಾವಿಷ್ಟೋ ನಿದ್ರಯಾ ದೇವದತ್ತಯಾ ॥ ೨೧ ॥

ಸ್ವಾಪಂ ಯಾತಂ ಯಸ್ತು ಮಧ್ಯೇ ಬೋಧಯೇತ್ತ್ವಾಮಚೇತನಃ ।
ಸ ತ್ವಯಾ ದೃಷ್ಟಮಾತ್ರಸ್ತು ಭಸ್ಮೀಭವತು ತತ್ಕ್ಷಣಾತ್ ॥ ೨೨ ॥

ಯವನೇ ಭಸ್ಮಸಾನ್ನೀತೇ ಭಗವಾನ್ ಸಾತ್ವತರ್ಷಭಃ ।
ಆತ್ಮಾನಂ ದರ್ಶಯಾಮಾಸ ಮುಚುಕುಂದಾಯ ಧೀಮತೇ ॥ ೨೩ ॥

ತಮಾಲೋಕ್ಯ ಘನಶ್ಯಾಮಂ ಪೀತಕೌಶೇಯವಾಸಸಮ್ ।
ಶ್ರೀವತ್ಸವಕ್ಷಸಂ ಭ್ರಾಜತ್ಕೌಸ್ತುಭೇನ ವಿರಾಜಿತಮ್ ॥ ೨೪ ॥

ಚತುರ್ಭುಜಂ ರೋಚಮಾನಂ ವೈಜಯಂತ್ಯಾ ಚ ಮಾಲಯಾ ।
ಚಾರುಪ್ರಸನ್ನವದನಂ ಸ್ಫುರನ್ಮಕರಕುಂಡಲಮ್ ॥ ೨೫ ॥

ಶ್ರೀಶುಕಮಹಾಮುನಿಗಳು ಹೇಳಿದರು – ಎಲೈ ಪರೀಕ್ಷಿತನೇ! ಅವನು ಇಕ್ಷ್ವಾಕುವಂಶದ ಮಾಂಧಾತ ಮಹಾರಾಜನ ಪುತ್ರನಾದ ಮುಚುಕುಂದ ರಾಜನಾಗಿದ್ದನು. ಅವನು ಬ್ರಾಹ್ಮಣಭಕ್ತನೂ, ಸತ್ಯನಿಷ್ಠನೂ, ಸಂಗ್ರಾಮ ವಿಜಯಿಯೂ ಆಗಿದ್ದನು. ॥ ೧೪ ॥ ಇಂದ್ರಾದಿ ದೇವತೆಗಳು ಒಮ್ಮೆ ಅಸುರರಿಂದ ಭಯಗೊಂಡಿದ್ದಾಗ ಅವರು ತಮ್ಮ ರಕ್ಷಣೆಗಾಗಿ ಮುಚುಕುಂದ ರಾಜನನ್ನು ಪ್ರಾರ್ಥಿಸಿಕೊಂಡರು. ಅವನು ಬಹಳ ದಿನಗಳವರೆಗೆ ದೇವತೆಗಳನ್ನು ಅಸುರರಿಂದ ರಕ್ಷಿಸಿದನು. ॥ ೧೫ ॥ ಬಹಳ ದಿವಸಗಳ ತರುವಾಯ ದೇವತೆಗಳ ಸೇನಾಪತಿಯಾಗಿ ಕಾರ್ತಿಕೇಯನು ದೊರೆತಾಗ ದೇವತೆಗಳು ಮುಚುಕುಂದನಿಗೆ ಹೇಳಿದರು – ಮಹಾರಾಜಾ! ನಮ್ಮನ್ನು ರಕ್ಷಿಸಲಿಕ್ಕಾಗಿ ನೀವು ಬಹಳ ಶ್ರಮಪಟ್ಟಿರುವಿರಿ. ಆದ್ದರಿಂದ ಈಗ ನೀವು ವಿಶ್ರಾಂತಿ ಪಡೆಯಿರಿ. ॥ ೧೬ ॥ ವೀರಶಿರೋಮಣಿಯೇ! ನೀನು ನಮ್ಮ ರಕ್ಷಣೆಗಾಗಿ ಮರ್ತ್ಯಲೋಕದ ನಿಷ್ಕಂಟಕವಾದ ರಾಜ್ಯವನ್ನು ಜೀವನದ ಅಭಿಲಾಷೆಗಳನ್ನು, ಭೋಗಗಳನ್ನು ಪರಿತ್ಯಾಗ ಮಾಡಿರುವೆ. ॥ ೧೭ ॥ ಈಗ ನಿನ್ನ ಪುತ್ರರಾಗಲೀ, ಪತ್ನಿಯಾಗಲೀ, ಬಂಧು-ಬಾಂಧವರಾಗಲೀ, ಅಮಾತ್ಯ-ಮಂತ್ರಿಗಳಾಗಲೀ ನೀನಿದ್ದಾಗ ಇದ್ದ ಪ್ರಜಾವರ್ಗವಾಗಲೀ ಯಾರೂ ಉಳಿಯಲಿಲ್ಲ, ಎಲ್ಲರೂ ಕಾಲವಶರಾಗಿ ಹೋಗಿದ್ದಾರೆ. ॥ ೧೮ ॥ ಕಾಲನೆಂಬುವನು ಸಮಸ್ತ ಬಲಿಷ್ಠರಿಗಿಂತಲೂ ಅತ್ಯಂತ ಬಲಿಷ್ಠನಾಗಿ ಇರುವನು. ಅವನು ಸಾಕ್ಷಾತ್ ಅವಿನಾಶಿಯಾದ ಭಗವತ್ಸ್ವರೂಪನಾಗಿರುವನು. ದನಗಾಯಿಗಳು ಪಶುಗಳನ್ನು ತಮ್ಮ ಅಧೀನದಲ್ಲಿ ಇಟ್ಟುಕೊಳ್ಳುವಂತೆ ಕಾಲನು ಆಡುತ್ತಾ-ಆಡುತ್ತಲೇ ಸಮಸ್ತ ಪ್ರಜೆಗಳನ್ನು ತನ್ನ ಅಧೀನದಲ್ಲಿಟ್ಟುಕೊಳ್ಳುತ್ತಾನೆ. ॥ ೧೯ ॥ ಮುಚುಕುಂದ ಮಹಾರಾಜ! ನಿನಗೆ ಮಂಗಳವಾಗಲಿ. ಮೋಕ್ಷವನ್ನು ಬಿಟ್ಟು ಬೇರೆ ಯಾವುದೇ ವರವನ್ನಾದರೂ ನೀನು ನಮ್ಮಿಂದ ಕೇಳಿ ಪಡೆದುಕೋ. ಏಕೆಂದರೆ, ಕೈವಲ್ಯ ಪದವಿಯನ್ನು ಕೊಡುವಂತಹ ಸಾಮರ್ಥ್ಯವು ಕೇವಲ ಅವಿನಾಶಿಯಾದ ಭಗವಾನ್ ವಿಷ್ಣುವಿನಲ್ಲೇ ಇರುವುದು. ॥ ೨೦ ॥ ದೇವತೆಗಳು ಹೀಗೆ ಹೇಳಿದಾಗ ಪರಮಯಶಸ್ವಿಯಾದ ಮುಚುಕುಂದನು ಅವರಿಗೆ ವಂದಿಸಿ, ಬಹಳ ದಣಿದಿದ್ದರಿಂದ ನಿದ್ರೆಯನ್ನು ವರವಾಗಿ ಬೇಡಿಕೊಂಡನು. ಹೀಗೆ ದೇವತೆಗಳಿಂದ ವರವನ್ನು ಪಡೆದುಕೊಂಡು ನಿದ್ರೆಯಿಂದ ತುಂಬಿದವನಾಗಿ ಈ ಪರ್ವತದ ಗುಹೆಯಲ್ಲಿ ಬಂದು ಮಲಗಿದನು. ॥ ೨೧ ॥ ಆ ಸಮಯದಲ್ಲಿ ದೇವತೆಗಳು ಹೇಳಿದರು – ನೀನು ಮಲಗಿದ್ದಾಗ ನಿನ್ನನ್ನು ಯಾವನಾದರು ಮೂರ್ಖನು ಎಬ್ಬಿಸಿದರೆ ಅವನು ನಿನ್ನ ದೃಷ್ಟಿಬೀಳುತ್ತಲೇ ಭಸ್ಮವಾಗಿ ಹೋಗುವನು. ॥ ೨೨ ॥

ಪರೀಕ್ಷಿತನೇ! ಕಾಲಯವನನು ಭಸ್ಮವಾಗಿ ಹೋದಾಗ ಯದುವಂಶ ಶಿರೋಮಣಿಯಾದ ಭಗವಾನ್ ಶ್ರೀಕೃಷ್ಣನು ಬುದ್ಧಿವಂತನಾದ ಮುಚುಕುಂದನಿಗೆ ಕಾಣಿಸಿಕೊಂಡನು. ಭಗವಾನ್ ಶ್ರೀಕೃಷ್ಣನ ಶ್ರೀವಿಗ್ರಹವು ವರ್ಷಾಕಾಲದ ಮೇಘದಂತೆ ಶ್ಯಾಮಲವಾಗಿತ್ತು. ರೇಷ್ಮೆಯ ಪೀತಾಂಬರವನ್ನು ಧರಿಸಿದ್ದನು. ವಕ್ಷಃಸ್ಥಳದಲ್ಲಿ ಶ್ರೀವತ್ಸವೂ, ಕೊರಳಲ್ಲಿ ಕೌಸ್ತುಭಮಣಿಯೂ ಬೆಳಗುತ್ತಿತ್ತು. ಚತುರ್ಭುಜನಾಗಿದ್ದು ವೈಜಯಂತಿಮಾಲೆಯು ಮಂಡಿಗಳವರೆಗೆ ತೂಗಾಡುತ್ತಿತ್ತು. ಮುಖಕಮಲವು ಅತ್ಯಂತ ಸುಂದರವಾಗಿದ್ದು, ಪ್ರಸನ್ನತೆಯಿಂದ ಅರಳಿತ್ತು. ಕಿವಿಗಳಲ್ಲಿ ಮಕರಾಕೃತಿಯ ಕುಂಡಲಗಳು

ಪ್ರೇಕ್ಷಣೀಯಂ ನೃಲೋಕಸ್ಯ ಸಾನುರಾಗಸ್ಮಿತೇಕ್ಷಣಮ್ ।
ಅಪೀಚ್ಯವಯಸಂ ಮತ್ತಮೃಗೇಂದ್ರೋದಾರವಿಕ್ರಮಮ್ ॥ ೨೬ ॥

ಪರ್ಯಪೃಚ್ಛನ್ಮಹಾಬುದ್ಧಿಸ್ತೇಜಸಾ ತಸ್ಯ ಧರ್ಷಿತಃ ।
ಶಂಕಿತಃ ಶನಕೈ ರಾಜಾ ದುರ್ಧರ್ಷಮಿವ ತೇಜಸಾ ॥ ೨೭ ॥

ಮುಚುಕುಂದ ಉವಾಚ

ಕೋ ಭವಾನಿಹ ಸಂಪ್ರಾಪ್ತೋ ವಿಪಿನೇ ಗಿರಿಗಹ್ವರೇ ।
ಪದ್ಭ್ಯಾಂ ಪದ್ಮಪಲಾಶಾಭ್ಯಾಂ ವಿಚರಸ್ಯುರುಕಂಟಕೇ ॥ ೨೮ ॥

ಕಿಂಸ್ವಿತ್ತೇಜಸ್ವಿನಾಂ ತೇಜೋ ಭಗವಾನ್ ವಾ ವಿಭಾವಸುಃ ।
ಸೂರ್ಯಃ ಸೋಮೋ ಮಹೇಂದ್ರೋ ವಾ ಲೋಕಪಾಲೋಽಪರೋಽಪಿ ವಾ ॥ ೨೯ ॥

ಮನ್ಯೇ ತ್ವಾಂ ದೇವದೇವಾನಾಂ ತ್ರಯಾಣಾಂ ಪುರುಷರ್ಷಭಮ್ ।
ಯದ್ಬಾಧಸೇ ಗುಹಾಧ್ವಾಂತಂ ಪ್ರದೀಪಃ ಪ್ರಭಯಾ ಯಥಾ ॥ ೩೦ ॥

ಶುಶ್ರೂಷತಾಮವ್ಯಲೀಕಮಸ್ಮಾಕಂ ನರಪುಂಗವ ।
ಸ್ವಜನ್ಮ ಕರ್ಮ ಗೋತ್ರಂ ವಾ ಕಥ್ಯತಾಂ ಯದಿ ರೋಚತೇ ॥ ೩೧ ॥

ವಯಂ ತು ಪುರುಷವ್ಯಾಘ್ರ ಐಕ್ಷ್ವಾಕಾಃ ಕ್ಷತ್ರಬಂಧವಃ ।
ಮುಚುಕುಂದ ಇತಿ ಪ್ರೋಕ್ತೋ ಯೌವನಾಶ್ವಾತ್ಮಜಃ ಪ್ರಭೋ ॥ ೩೨ ॥

ಚಿರಪ್ರಜಾಗರಶ್ರಾಂತೋ ನಿದ್ರಯೋಪಹತೇಂದ್ರಿಯಃ ।
ಶಯೇಽಸ್ಮಿನ್ ವಿಜನೇ ಕಾಮಂ ಕೇನಾಪ್ಯುತ್ಥಾಪಿತೋಽಧುನಾ ॥ ೩೩ ॥

ಸೋಽಪಿ ಭಸ್ಮೀಕೃತೋ ನೂನಮಾತ್ಮೀಯೇನೈವ ಪಾಪ್ಮನಾ ।
ಅನಂತರಂ ಭವಾನ್ ಶ್ರೀಮಾನ್ ಲಕ್ಷಿತೋಽಮಿತ್ರಶಾಸನಃ ॥ ೩೪ ॥

ತೇಜಸಾ ತೇಽವಿಷಹ್ಯೇಣ ಭೂರಿ ದ್ರಷ್ಟುಂ ನ ಶಕ್ನುಮಃ ।
ಹತೌಜಸೋ ಮಹಾಭಾಗ ಮಾನನೀಯೋಽಸಿ ದೇಹಿನಾಮ್ ॥ ೩೫ ॥

ಏವಂ ಸಂಭಾಷಿತೋ ರಾಜ್ಞಾ ಭಗವಾನ್ ಭೂತಭಾವನಃ ।
ಪ್ರತ್ಯಾಹ ಪ್ರಹಸನ್ ವಾಣ್ಯಾ ಮೇಘನಾದಗಭೀರಯಾ ॥ ೩೬ ॥

ಹೊಳೆಯುತ್ತಿದ್ದವು. ತುಟಿಗಳಲ್ಲಿ ಪ್ರೇಮಪೂರ್ಣವಾದ ಮಂದಹಾಸವಿತ್ತು. ಕಟಾಕ್ಷವೀಕ್ಷಣೆಯಿಂದ ಅನುರಾಗದ ಮಳೆಯನ್ನೇ ಸುರಿಯುವಂತಿತ್ತು. ಅತ್ಯಂತ ದರ್ಶನೀಯವಾದ ತರುಣಾವಸ್ಥೆಯಿದ್ದು ಮದಿಸಿದ ಸಿಂಹದಂತೆ ಗಂಭೀರವಾದ ನಡಿಗೆಯುಳ್ಳವನಾಗಿದ್ದನು. ಮುಚುಕುಂದರಾಜನು ಬಹಳ ಬುದ್ಧಿವಂತನೂ, ಧೀರನೂ ಆಗಿದ್ದರೂ ಭಗವಂತನ ಇಂತಹ ದಿವ್ಯಜ್ಯೋತಿರ್ಮಯ ಮೂರ್ತಿಯನ್ನು ನೋಡಿ ಚಕಿತನಾಗಿ ಆತನ ತೇಜಸ್ಸಿನಿಂದ ಹತಪ್ರಭನಾದನು. ಭಗವಂತನು ತನ್ನ ತೇಜಸ್ಸಿನಿಂದ ದುರ್ಧರ್ಷನಾಗಿ ಕಾಣುತ್ತಿದ್ದನು. ರಾಜನು ಸ್ವಲ್ಪ ಸಂಕೋಚದಿಂದಲೇ ಮೆಲ್ಲ-ಮೆಲ್ಲನೆ ಕೇಳಿದನು ॥ ೨೩-೨೭ ॥

ಮುಚುಕುಂದ ರಾಜನು ಕೇಳಿದನು - ಸ್ವಾಮಿ! ನೀನು ಯಾರು? ಕಲ್ಲು-ಮುಳ್ಳುಗಳಿಂದ ಕೂಡಿದ ಈ ಘೋರ ಅರಣ್ಯದಲ್ಲಿ ತಾವರೆಯಂತಿರುವ ಕೋಮಲ ಚರಣಗಳಿಂದ ಏಕೆ ವಿಚರಿಸುತ್ತಿರುವೆ? ಈ ಪರ್ವತದ ಗುಹೆಯೊಳಗೆ ಬರುವ ಪ್ರಯೋಜನವಾದರೂ ಏನಿತ್ತು? ॥ ೨೮ ॥ ಮೂರ್ತಿಮತ್ತಾಗಿ ಬಂದಿರುವ ತೇಜಸ್ಸುಗಳ ತೇಜಸ್ಸೇ ನೀನಾಗಿರುವೆಯಾ? ಅಥವಾ ಭಗವಾನ್ ಅಗ್ನಿದೇವನಲ್ಲವಲ್ಲ! ನೀನು ಸೂರ್ಯ, ಚಂದ್ರ, ದೇವರಾಜ ಇಂದ್ರ, ಅಥವಾ ಬೇರೆ ಯಾವನಾದರೂ ಲೋಕಪಾಲನಾಗಿರುವೆಯಾ? ॥ ೨೯ ॥ ದೇವತೆಗಳ ಆರಾಧ್ಯರಾದ ಬ್ರಹ್ಮ, ವಿಷ್ಣು, ಶಿವ - ಇವರಲ್ಲಿ ಪುರುಷೋತ್ತಮನಾದ ಭಗವಾನ್ ನಾರಾಯಣನೇ ಆಗಿರುವೆ ಎಂದು ನಾನು ತಿಳಿಯುತ್ತೇನೆ. ಏಕೆಂದರೆ, ದೀಪವು ಕತ್ತಲೆಯನ್ನು ಓಡಿಸುವಂತೆ ನೀನು ನಿನ್ನ ಅಂಗಕಾಂತಿಯಿಂದ ಈ ಗುಹೆಯ ಅಂಧಕಾರವನ್ನು ದೂರ ಮಾಡುತ್ತಿರುವೆ. ॥ ೩೦ ॥ ಪುರುಷ ಶ್ರೇಷ್ಠನೇ! ನಿನಗೆ ಉಚಿತವೆನಿಸಿದರೆ ನಿನ್ನ ಜನ್ಮ ಕರ್ಮ ಮತ್ತು ಗೋತ್ರಗಳನ್ನು ನನಗೆ ಹೇಳು. ಏಕೆಂದರೆ, ನಾನು ಶುದ್ಧವಾದ ಹೃದಯದಿಂದ ಅದನ್ನು ಕೇಳಲು ಬಯಸುತ್ತೇನೆ. ॥ ೩೧ ॥ ಪುರುಷೋತ್ತಮನೇ! ನನ್ನ ವಿಷಯದಲ್ಲಿ ಕೇಳುವುದಾದರೆ, ನಾನು ಇಕ್ಷ್ವಾಕುವಂಶೀಯ ಕ್ಷತ್ರಿಯನು. ಮುಚುಕುಂದನೆಂದು ನನ್ನ ಹೆಸರು. ಯುವನಾಶ್ವನ ಮಗನಾದ ಮಾಂಧಾತನ ಮಗನಾಗಿದ್ದೇನೆ. ॥ ೩೨ ॥ ಪ್ರಭುವೇ! ನಾನು ಹಲವಾರು ವರ್ಷಗಳು ನಿದ್ರೆಯೇ ಇಲ್ಲದೆ ಬಹಳ ಆಯಾಸಗೊಂಡಿದ್ದೆ. ನಿದ್ರೆಯಿಂದ ನನ್ನ ಇಂದ್ರಿಯಗಳೆಲ್ಲವೂ ಶಕ್ತಿಹೀನವಾಗಿದ್ದವು. ಅದರಿಂದಾಗಿ ನಾನು ನಿರ್ಜನವಾಗಿದ್ದ ಈ ಗುಹೆಯಲ್ಲಿ ಮಲಗಿದ್ದೆ. ಈಗ ತಾನೇ ನನ್ನನ್ನು ಯಾರೋ ಎಚ್ಚರಿಸಿಬಿಟ್ಟರು. ॥ ೩೩ ॥ ತಾನು ಮಾಡಿದ್ದ ಪಾಪದ ಫಲವಾಗಿಯೇ ಆ ವ್ಯಕ್ತಿಯು ಭಸ್ಮವಾಗಿಹೋದನು. ಅನಂತರ ಶತ್ರುನಾಶಕನಾದ ಪರಮ ಸುಂದರನಾದ ನೀನು ನನಗೆ ಕಾಣಿಸಿಕೊಂಡೆ. ॥ ೩೪ ॥ ಮಹಾನುಭಾವಾ! ನೀನು ಸಮಸ್ತ ಪ್ರಾಣಿಗಳಿಗೂ ಪೂಜ್ಯನಾಗಿರುವೆ. ನಿನ್ನ ಸಹಿಸಲಶಕ್ಯವಾದ ದಿವ್ಯ ತೇಜಸ್ಸಿನಿಂದಾಗಿ ನಿನ್ನನ್ನು ದಿಟ್ಟಿಸಿ ನೋಡಲೂ ನನಗೆ ಸಾಧ್ಯವಾಗುತ್ತಿಲ್ಲ. ನಿನ್ನ ತೇಜಸ್ಸಿನ ಮುಂದೆ ನನ್ನ ತೇಜಸ್ಸು ಉಡುಗಿಹೋಗಿ ಬಿಟ್ಟಿದೆ. ॥ ೩೫ ॥ ಮುಚುಕುಂದ ಮಹಾರಾಜನು ಹೀಗೆ ಹೇಳಲು ಸಮಸ್ತ ಪ್ರಾಣಿಗಳ ನಿಯಾಮಕನಾದ ಭಗವಾನ್ ಶ್ರೀಕೃಷ್ಣನು ನಗುತ್ತಾ ಮೇಘಗಂಭೀರವಾದ ಧ್ವನಿಯಿಂದ ಹೀಗೆಂದನು. ॥ ೩೬ ॥

ಶ್ರೀಭಗವಾನುವಾಚ

ಜನ್ಮಕರ್ಮಾಭಿಧಾನಾನಿ ಸಂತಿ ಮೇಽಂಗ ಸಹಸ್ರಶಃ ।
ನ ಶಕ್ಯಂತೇಽನುಸಂಖ್ಯಾತುಮನಂತತ್ವಾನ್ಮಯಾಪಿ ಹಿ ॥ ೩೭ ॥

ಕ್ವಚಿದ್ರಜಾಂಸಿ ವಿಮಮೇ ಪಾರ್ಥಿವಾನ್ಯುರುಜನ್ಮಭಿಃ ।
ಗುಣಕರ್ಮಾಭಿಧಾನಾನಿ ನ ಮೇ ಜನ್ಮಾನಿ ಕರ್ಹಿಚಿತ್ ॥ ೩೮ ॥

ಕಾಲತ್ರಯೋಪಪನ್ನಾನಿ ಜನ್ಮಕರ್ಮಾಣಿ ಮೇ ನೃಪ ।
ಅನುಕ್ರಮಂತೋ ನೈವಾಂತಂ ಗಚ್ಛಂತಿ ಪರಮರ್ಷಯಃ ॥ ೩೯ ॥

ತಥಾಪ್ಯದ್ಯತನಾನ್ಯಂಗ ಶೃಣುಷ್ವ ಗದತೋ ಮಮ ।
ವಿಜ್ಞಾಪಿತೋ ವಿರಿಂಚೇನ ಪುರಾಹಂ ಧರ್ಮಗುಪ್ತಯೇ ।
ಭೂಮೇರ್ಭಾರಾಯಮಾಣಾನಾಮಸುರಾಣಾಂ ಕ್ಷಯಾಯ ಚ ॥ ೪೦ ॥

ಅವತೀರ್ಣೋ ಯದುಕುಲೇ ಗೃಹ ಆನಕದುಂದುಭೇಃ ।
ವದಂತಿ ವಾಸುದೇವೇತಿ ವಸುದೇವಸುತಂ ಹಿ ಮಾಮ್ ॥ ೪೧ ॥

ಕಾಲನೇಮಿರ್ಹತಃ ಕಂಸಃ ಪ್ರಲಂಬಾದ್ಯಾಶ್ಚ ಸದ್ದ್ವಿಷಃ ।
ಅಯಂ ಚ ಯವನೋ ದಗ್ಧೋ ರಾಜಂಸ್ತೇ ತಿಗ್ಮಚಕ್ಷುಷಾ ॥ ೪೨ ॥

ಸೋಽಹಂ ತವಾನುಗ್ರಹಾರ್ಥಂ ಗುಹಾಮೇತಾಮುಪಾಗತಃ ।
ಪ್ರಾರ್ಥಿತಃ ಪ್ರಚುರಂ ಪೂರ್ವಂ ತ್ವಯಾಹಂ ಭಕ್ತವತ್ಸಲಃ ॥ ೪೩ ॥

ವರಾನ್ ವೃಣೀಷ್ವ ರಾಜರ್ಷೇ ಸರ್ವಾನ್ ಕಾಮಾನ್ ದದಾಮಿ ತೇ ।
ಮಾಂ ಪ್ರಪನ್ನೋ ಜನಃ ಕಶ್ಚಿನ್ ನಭೂಯೋಽರ್ಹತಿ ಶೋಚಿತುಮ್ ॥ ೪೪ ॥

ಶ್ರೀಶುಕ ಉವಾಚ

ಇತ್ಯುಕ್ತಸ್ತಂ ಪ್ರಣಮ್ಯಾಹ ಮುಚುಕುಂದೋ ಮುದಾನ್ವಿತಃ ।
ಜ್ಞಾತ್ವಾ ನಾರಾಯಣಂ ದೇವಂ ಗರ್ಗವಾಕ್ಯಮನುಸ್ಮರನ್ ॥ ೪೫ ॥

ಭಗವಾನ್ ಶ್ರೀಕೃಷ್ಣನು ಹೇಳಿದನು – ಪ್ರಿಯ ಮುಚುಕುಂದನೇ! ನನ್ನ ಜನ್ಮ, ಕರ್ಮ ಮತ್ತು ನಾಮಧೇಯಗಳು ಸಾವಿರಾರು ಸಂಖ್ಯೆಯಲ್ಲಿವೆ. ಅವು ಅನಂತವಾಗಿವೆ; ಆದ್ದರಿಂದ ಅವುಗಳನ್ನು ವಿವರಿಸಿ ಹೇಳಲು ನನಗೂ ಶಕ್ಯವಿಲ್ಲ. ॥ ೩೭ ॥ ಯಾವನಾದರೂ ಮನುಷ್ಯನು ಹಲವಾರು ಜನ್ಮಗಳಲ್ಲಿ ಭೂಮಿಯಲ್ಲಿರುವ ಧೂಳಿನ ಕಣಗಳನ್ನು ಎಣಿಸಬಲ್ಲನು. ಆದರೆ ನನ್ನ ಜನ್ಮ, ಗುಣ, ಕರ್ಮ, ನಾಮಗಳನ್ನು ಯಾರೇ ಆದರೂ ಎಂದಿಗೂ ಎಣಿಕೆ ಮಾಡುವ ಅಥವಾ ತಿಳಿಯುವ ಸಾಧ್ಯತೆಯೇ ಇಲ್ಲ. ॥ ೩೮ ॥ ಮಹಾರಾಜ! ಸನಕ, ಸನಂದನರೇ ಮೊದಲಾದ ಮಹರ್ಷಿಗಳು ನನ್ನ ತ್ರಿಕಾಲ ಸಿದ್ಧವಾದ ಜನ್ಮ-ಕರ್ಮಗಳನ್ನು ವರ್ಣಿಸುತ್ತಲೇ ಇರುತ್ತಾರೆ. ಆದರೆ ಅದರ ಕೊನೆಯನ್ನು ಅವರೆಂದಿಗೂ ಮುಟ್ಟುವುದಿಲ್ಲ. ನನ್ನ ಜನ್ಮ ಕರ್ಮಗಳಿಗೆ ಅಂತ್ಯವೆಂಬುದೇ ಇಲ್ಲ. ॥ ೩೯ ॥ ಪ್ರಿಯ ಮುಚುಕುಂದನೇ! ಹೀಗಿದ್ದರೂ ನಾನು ನನ್ನ ವರ್ತಮಾನ ಜನ್ಮ, ಕರ್ಮ ಮತ್ತು ನಾಮಗಳನ್ನು ವರ್ಣಿಸುವೆನು ಕೇಳು. ಹಿಂದೆ ಬ್ರಹ್ಮನು 'ಅಸುರರನ್ನು ಸಂಹರಿಸಿ ಭೂಭಾರವನ್ನು ಇಳಿಸಬೇಕೆಂದು ನನ್ನನ್ನು ಪ್ರಾರ್ಥಿಸಿದ್ದನು. ॥ ೪೦ ॥ ಚತುರ್ಮುಖನ ಪ್ರಾರ್ಥನೆಯಂತೆ ನಾನು ಯದುವಂಶದಲ್ಲಿ ವಸುದೇವನ ಮನೆಯಲ್ಲಿ ಅವತರಿಸಿರುವೆನು. ಈಗ ನಾನು ವಸುದೇವನ ಪುತ್ರನಾದ್ದರಿಂದ ಜನರು ನನ್ನನ್ನು ವಾಸುದೇವನೆಂದು ಕರೆಯುತ್ತಾರೆ. ॥ ೪೧ ॥ ಇದುವರೆಗೆ ಸತ್ಪುರುಷರನ್ನು ದ್ವೇಷಿಸುತ್ತಿದ್ದ ಕಂಸನಾಗಿ ಹುಟ್ಟಿದ್ದ ಕಾಲನೇಮಿ ಎಂಬ ಅಸುರನನ್ನೂ ಪ್ರಲಂಬನೇ ಮೊದಲಾದ ಕಂಸನ ಅನುಯಾಯಿಗಳಾದ ಹಲವಾರು ರಾಕ್ಷಸರನ್ನು ಸಂಹಾರ ಮಾಡಿದ್ದೇನೆ. ರಾಜನೇ! ಈ ಕಾಲಯವನನೂ ಕೂಡ ನನ್ನ ಪ್ರೇರಣೆಯಿಂದಲೇ ನಿನ್ನ ತೀಕ್ಷ್ಣದೃಷ್ಟಿಯಿಂದಾಕ್ಷಣ ಭಸ್ಮನಾಗಿ ಹೋದನು. ॥ ೪೨ ॥ ಅದೇ ನಾನು ನಿನ್ನ ಮೇಲೆ ಕೃಪೆದೋರಲು ಈ ಗುಹೆಗೆ ಬಂದಿರುವೆನು. ಭಕ್ತವತ್ಸಲನಾದ ನನ್ನನ್ನು ಹಿಂದೆ ನೀನು ಬಹಳವಾಗಿ ಆರಾಧಿಸಿದ್ದೆ. ॥ ೪೩ ॥ ಅದಕ್ಕಾಗಿ ರಾಜರ್ಷಿಯೇ! ನಿನಗೆ ಅಭೀಷ್ಟವಾದ ವರವನ್ನು ಬೇಡು. ನಾನು ನಿನ್ನ ಯಾವುದೇ ಕಾಮನೆಯನ್ನಾದರೂ ಪೂರ್ಣಗೊಳಿಸುವೆನು. ನನಗೆ ಶರಣಾಗತನಾದ ಯಾರೇ ಆಗಲಿ ಪುನಃ ಶೋಕಪಡಬಾರದು; ಇದು ನನ್ನ ಆಶಯವಾಗಿದೆ. ॥ ೪೪ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ! ಭಗವಾನ್ ಶ್ರೀಕೃಷ್ಣನು ಹೀಗೆ ಹೇಳಿದಾಗ ಮುಚುಕುಂದನಿಗೆ – 'ಯದುವಂಶದಲ್ಲಿ ಭಗವಂತನು ಅವತರಿಸಲಿದ್ದಾನೆ' ಎಂಬ ವೃದ್ಧರಾದ ಗರ್ಗರ ಮಾತು ನೆನಪಿಗೆ ಬಂತು. ಇವನು ಸಾಕ್ಷಾತ್ ಭಗವಾನ್ ನಾರಾಯಣನೇ ಆಗಿರುವನೆಂದು ಅವನು ತಿಳಿದು ಆನಂದತುಂದಿಲನಾಗಿ ಭಗವಂತನ ಚರಣಗಳಲ್ಲಿ ವಂದಿಸಿಕೊಂಡು ಇಂತೆಂದನು. ॥ ೪೫ ॥

ಮುಚುಕುಂದ ಉವಾಚ

ವಿಮೋಹಿತೋಽಯಂ ಜನ ಈಶ ಮಾಯಯಾ
ತ್ವದೀಯಯಾ ತ್ವಾಂ ನ ಭಜತ್ಯನರ್ಥದೃಕ್ ।
ಸುಖಾಯ ದುಃಖಪ್ರಭವೇಷು ಸಜ್ಜತೇ
ಗೃಹೇಷು ಯೋಷಿತ್ಪುರುಷಶ್ಚ ವಂಚಿತಃ ॥ ೪೬ ॥

ಲಬ್ಧ್ವಾ ಜನೋ ದುರ್ಲಭಮತ್ರ ಮಾನುಷಂ
ಕಥಂಚಿದವ್ಯಂಗ ಮಯತ್ನತೋಽನಘ ।
ಪಾದಾರವಿಂದಂ ನ ಭಜತ್ಯಸನ್ಮತಿ-
ರ್ಗೃಹಾಂಧಕೂಪೇ ಪತಿತೋ ಯಥಾ ಪಶುಃ ॥ ೪೭ ॥

ಮಮೈಷ ಕಾಲೋಽಜಿತ ನಿಷ್ಫಲೋ ಗತೋ
ರಾಜ್ಯಶ್ರಿಯೋನ್ನದ್ಧಮದಸ್ಯ ಭೂಪತೇಃ ।
ಮರ್ತ್ಯಾತ್ಮಬುದ್ಧೇಃ ಸುತದಾರಕೋಶಭೂ-
ಷ್ವಾಸಜ್ಜಮಾನಸ್ಯ ದುರಂತಚಿಂತಯಾ ॥ ೪೮ ॥

ಕಲೇವರೇಽಸ್ಮಿನ್ ಘಟಕುಡ್ಯಸಂನಿಭೇ
ನಿರೂಢಮಾನೋ ನರದೇವ ಇತ್ಯಹಮ್ ।
ವೃತೋ ರಥೇಭಾಶ್ವಪದಾತ್ಯನೀಕಪೈ-
ರ್ಗಾಂ ಪರ್ಯಟಂಸ್ತ್ವಾಗಣಯನ್ ಸುದುರ್ಮದಃ ॥ ೪೯ ॥

ಪ್ರಮತ್ತಮುಚ್ಚೈರಿತಿಕೃತ್ಯಚಿಂತಯಾ
ಪ್ರವೃದ್ಧಲೋಭಂ ವಿಷಯೇಷು ಲಾಲಸಮ್ ।
ತ್ವಮಪ್ರಮತ್ತಃ ಸಹಸಾಭಿಪದ್ಯಸೇ
ಕ್ಷುಲ್ಲೇಲಿಹಾನೋಽಹಿರಿವಾಖುಮಂತಕಃ ॥ ೫೦ ॥

ಪುರಾ ರಥೈರ್ಹೇಮಪರಿಷ್ಕೃತೈಶ್ಚರನ್
ಮತಂಗಜೈರ್ವಾ ನರದೇವಸಂಜ್ಞಿತಃ ।
ಸ ಏವ ಕಾಲೇನ ದುರತ್ಯಯೇನ ತೇ
ಕಲೇವರೋ ವಿಟ್ಕೃಮಿಭಸ್ಮಸಂಜ್ಞಿತಃ ॥ ೫೦ ॥

ಮುಚುಕುಂದನು ಹೇಳಿದನು – ಪ್ರಭೋ! ಈ ಜನರು ನಿನ್ನ ಮಾಯೆಯಿಂದ ಅತ್ಯಂತ ವಿಮೋಹಿತರಾಗಿದ್ದಾರೆ. ನಿನ್ನಿಂದ ವಿಮುಖರಾದ ಇವರು ಅನರ್ಥಕಾರಿ ಸಂಸಾರದಲ್ಲೇ ಸಿಕ್ಕಿ ಹಾಕಿಕೊಂಡು ನಿನ್ನನ್ನು ಭಜಿಸುತ್ತಿಲ್ಲ. ನಿನ್ನ ಮಾಯೆಯಿಂದ ವಂಚಿತರಾದ ಸ್ತ್ರೀ-ಪುರುಷರು ಸುಖವನ್ನು ಬಯಸಿ ದುಃಖಕ್ಕೆ ಮೂಲ ಕಾರಣವಾದ ಮನೆ-ಮಠಗಳೆಂಬ ಮಮಕಾರದಿಂದ ಸಂಸಾರದಲ್ಲಿ ಆಸಕ್ತರಾಗಿರುತ್ತಾರೆ. ॥ ೪೬ ॥ ಪಾಪರೂಪವಾದ ಸಂಸಾರದಿಂದ ಸರ್ವಥಾ ರಹಿತವಾದ ಪ್ರಭುವೇ! ಈ ಭೂಮಿಯು ಅತ್ಯಂತ ಪವಿತ್ರವಾದ ಕರ್ಮಭೂಮಿಯಾಗಿದೆ. ಇಲ್ಲಿ ಮನುಷ್ಯ ಜನ್ಮವು ಲಭಿಸುವುದು ಅತ್ಯಂತ ದುರ್ಲಭವೇ ಸರಿ. ಸರ್ವಾಂಗ ಪರಿಪೂರ್ಣವಾದ ಮನುಷ್ಯ ಶರೀರವನ್ನು ಪ್ರಯತ್ನವಿಲ್ಲದೆ ಹೇಗೋ ಹೊಂದಿಯೂ ಸದ್ಬುದ್ಧಿಯಿಲ್ಲದ ಜನರು ನಿನ್ನ ಪಾದಾರವಿಂದವನ್ನು ಭಜಿಸುವುದಿಲ್ಲ. ಹುಲ್ಲಿನ ಆಸೆಯಿಂದ ಪಶುವು ಪಾಳುಬಾವಿಯಲ್ಲಿ ಬೀಳುವಂತೆ ಮನುಷ್ಯನು ಸುಖಮಯವಾಗಿ ಕಾಣುವ ಸಂಸಾರವೆಂಬ ಕಗ್ಗತ್ತಲೆಯ ಬಾವಿಯಲ್ಲಿ ಬೀಳುತ್ತಾನೆ. ॥ ೪೭ ॥ ಓ ಅಜಿತ ಪ್ರಭುವೇ? ನಾನೊಬ್ಬ ರಾಜನಾಗಿದ್ದು ಸಂಪತ್ಸಮೃದ್ಧವಾದ ರಾಜ್ಯ ಲಕ್ಷ್ಮಿಯನ್ನು ಪಡೆದು ಉನ್ಮತ್ತನಾಗಿದ್ದೆನು. ದೇಹಾತ್ಮ ಬುದ್ಧಿಯುಳ್ಳ ನಾನು ಪತ್ನೀ-ಪುತ್ರರು-ಭಂಡಾರ-ರಾಜ್ಯ -ಐಶ್ವರ್ಯ - ಇತ್ಯಾದಿಗಳಲ್ಲಿಯೇ ಸದಾಕಾಲ ಆಸಕ್ತನಾಗಿದ್ದೆ. ಹಗಲು-ರಾತ್ರಿಗಳಲ್ಲಿಯೂ ನನಗೆ ಅವುಗಳದ್ದೇ ಚಿಂತೆಯಾಗಿತ್ತು. ಹೀಗಾಗಿ ಇದುವರೆಗಿನ ನನ್ನ ಜೀವನವು ವ್ಯರ್ಥವಾಗಿ ಹೋಯಿತು. ॥ ೪೮ ॥ ದೇವದೇವನೇ! ಮಡಕೆಗೂ, ಗೋಡೆಗೂ ಸಮಾನವಾದ, ನನ್ನಿಂದ ಬೇರೆಯಾದ ಈ ದೇಹವನ್ನೇ ನನ್ನ ಸ್ವರೂಪವೆಂದು ತಿಳಿದುಕೊಂಡಿದ್ದ ಮಾನವರೆಲ್ಲರೂ ನಾನು ರಾಜನಾಗಿರುವೆನೆಂದು ಭಾವಿಸಿಕೊಂಡು ರಥ-ಗಜಾಶ್ವ- ಪದಾತಿಗಳೆಂಬ ಚತುರಂಗ ಬಲದಿಂದ ಸಮಾವೃತನಾಗಿ ದುರಭಿಮಾನದಿಂದ ಭೂಮಿಯಲ್ಲಿ ಅಲೆದಾಡುತ್ತಿದ್ದ. ಹೀಗೆ ಮದಾಂಧನಾಗಿ ನಾನು ನಿನ್ನ ವಿಷಯದಲ್ಲಿ ಯೋಚಿಸಲೇ ಇಲ್ಲ. ॥ ೪೯ ॥ 'ಆ ರಾಜ್ಯವನ್ನು ಗೆಲ್ಲಬೇಕು, ಅವನ ಬೊಕ್ಕಸವನ್ನು ಅಪಹರಿಸಬೇಕು' ಮುಂತಾದ ಆಲೋಚನೆಗಳಿಂದ ಕೆಟ್ಟದ ಆಸೆಯುಳ್ಳವನಾಗಿ, ವಿಷಯಸುಖದಲ್ಲೇ ಆಸಕ್ತನಾದ, ಅತಿಯಾದ ಪ್ರಮಾದಕ್ಕೆ ವಶನಾಗಿರುವ ಮನುಷ್ಯನನ್ನು ನೀನು, ಅಪ್ರಮತ್ತನಾದ ಅಂತಕನಾಗಿ – ಹಸಿವಿನಿಂದ ಕಟವಾಯಿಗಳನ್ನು ಸವರಿಕೊಳ್ಳುತ್ತಾ ಇಲಿಯನ್ನು ಹಿಡಿಯುವ ಹಾವಿನಂತೆ – ಬೇಗನೇ ಹಿಡಿದು ಬಿಡುವೆ. ॥ ೫೦ ॥ ಹೀಗೆ ಸುವರ್ಣಾಭರಣಗಳಿಂದ ಸಮಲಂಕೃತವಾದ ರಥಗಳಲ್ಲಿ ಅಥವಾ ಚಿನ್ನದ ಅಂಬಾರಿಯಿಂದ ಮುದಿಸಿದ ಆನೆಯ ಮೇಲೆ ಕುಳಿತು ನರದೇವನೆಂಬ ಅಭಿಧಾನವನ್ನು ಪಡೆದು ಪ್ರಪಂಚವೆಲ್ಲಾ ಪರ್ಯಟನೆ ಮಾಡುತ್ತಿದ್ದ ಶರೀರವು ನಾಶವಾಗಿ ಹೋಗಲು, ಅಶಕ್ಯವಾದ ನಿನ್ನ ಕಾಲಕ್ಕೆ ವಶವಾಗಿ, ಪಕ್ಷಿಗಳ, ವಿಷ್ಠೆಯೋ, ಹುಳುವೋ ಅಥವಾ ಭಸ್ಮವೋ ಆಗಿಬಿಡುತ್ತದೆ. ॥ ೫೧ ॥ ಪ್ರಭುವೇ! ಒಬ್ಬ ಚಕ್ರವರ್ತಿಯು ಎಲ್ಲ ದಿಕ್ಕುಗಳಲ್ಲಿಯೂ ವಿಜಯವನ್ನು ಸಂಪಾದಿಸಿ, ತನ್ನೆದುರಿಗೆ ಯುದ್ಧಮಾಡುವವರೇ ಪ್ರಪಂಚದಲ್ಲಿ ಯಾರೂ ಇಲ್ಲವೆಂದು ಎಣಿಸಿ ಸಿಂಹಾಸನದ ಮೇಲೆ ಕುಳಿತಾಗ ಅವನಿಗೆ ಸಮಾನರಾದ ಮತ್ತು ಸಾಮಂತ ರಾಜರು ನತ

ನಿರ್ಜಿತ್ಯ ದಿಕ್ಚಕ್ರಮಭೂತವಿಗ್ರಹೋ
ವರಾಸನಸ್ಥಃ ಸಮರಾಜವಂದಿತಃ ।
ಗೃಹೇಷು ಮೈಥುನ್ಯಸುಖೇಷು ಯೋಷಿತಾಂ
ಕ್ರೀಡಾಮೃಗಃ ಪೂರುಷ ಈಶ ನೀಯತೇ ॥ ೫೨ ॥

ಕರೋತಿ ಕರ್ಮಾಣಿ ತಪಃಸುನಿಷ್ಠಿತೋ
ನಿವೃತ್ತಭೋಗಸ್ತದಪೇಕ್ಷಯಾ ದದತ್ ।
ಪುನಶ್ಚ ಭೂಯಾಸೇಯಮಹಂ ಸ್ವರಾಡಿತಿ
ಪ್ರವೃದ್ಧತರ್ಷೋ ನ ಸುಖಾಯ ಕಲ್ಪತೇ ॥ ೫೩ ॥

ಭವಾಪವರ್ಗೋ ಭ್ರಮತೋ ಯದಾ ಭವೇ-
ಜ್ಜನಸ್ಯ ತರ್ಹ್ಯಚ್ಯುತ ಸತ್ಸಮಾಗಮಃ ।
ಸತ್ಸಂಗಮೋ ಯರ್ಹಿ ತದೈವ ಸದ್ಗತೌ
ಪರಾವರೇಶೇ ತ್ವಯಿ ಜಾಯತೇ ಮತಿಃ ॥ ೫೪ ॥

ಮನ್ಯೇ ಮಮಾನುಗ್ರಹ ಈಶ ತೇ ಕೃತೋ
ರಾಜ್ಯಾನುಬಂಧಾಪಗಮೋ ಯದೃಚ್ಛಯಾ ।
ಯಃ ಪ್ರಾರ್ಥ್ಯತೇ ಸಾಧುಭಿರೇಕಚರ್ಯಯಾ
ವನಂ ವಿವಿಕ್ಷದ್ಭಿರಖಂಡಭೂಮಿಪೈಃ ॥ ೫೫ ॥

ನ ಕಾಮಯೇಽನ್ಯಂ ತವ ಪಾದಸೇವನಾ-
ದಕಿಂಚನಪ್ರಾರ್ಥ್ಯತಮಾದ್ವರಂ ವಿಭೋ ।
ಆರಾಧ್ಯ ಕಸ್ತ್ವಾಂ ಹ್ಯಪವರ್ಗದಂ ಹರೇ
ವೃಣೀತ ಆರ್ಯೋ ವರಮಾತ್ಮಬಂಧನಮ್ ॥ ೫೬ ॥

ತಸ್ಮಾದ್ವಿಸೃಜ್ಯಾಶಿಷ ಈಶ ಸರ್ವತೋ
ರಜಸ್ತಮಃಸತ್ತ್ವಗುಣಾನುಬಂಧನಾಃ ।
ನಿರಂಜನಂ ನಿರ್ಗುಣಮದ್ವಯಂ ಪರಂ
ತ್ವಾಂ ಜ್ಞಪ್ತಿಮಾತ್ರಂ ಪುರುಷಂ ವ್ರಜಾಮ್ಯಹಮ್ ॥ ೫೭ ॥

ಚಿರಮಿಹ ವೃಜಿನಾರ್ತಸ್ತಪ್ಯಮಾನೋಽನುತಾಪೈ-
ರವಿತೃಷಷಡಮಿತ್ರೋಽಲಬ್ಧಶಾಂತಿಃ ಕಥಂಚಿತ್ ।
ಶರಣದ ಸಮುಪೇತಸ್ತ್ವತ್ಪದಾಬ್ಜಂ ಪರಾತ್ಮ-
ನ್ನಭಯಮೃತಮಶೋಕಂ ಪಾಹಿ ಮಾಽಽಪನ್ನಮೀಶ ॥ ೫೮ ॥

ಮಸ್ತಕರಾಗುತ್ತಾರೋ, ಅಂತಹ ರಾಜಾಧಿರಾಜನು ಸ್ತ್ರೀಯರುಗಳಿಗೆ ನೆಲೆಯಾಗಿರುವ ಮನೆಯಲ್ಲಿ ಹೆಂಗಸರ ಆಟದ ಪಶುವಾಗಿ ಬಿಡುತ್ತಾನೆ. ॥ ೫೨ ॥ ಬಹಳಷ್ಟು ಜನರು ವಿಷಯಭೋಗಗಳನ್ನು ತ್ಯಜಿಸಿ ತಪೋನಿಷ್ಠರಾಗಿ ಹಲವಾರು ದಾನಧರ್ಮಗಳನ್ನು, ಯಜ್ಞ ಕರ್ಮಗಳನ್ನೂ ಮಾಡುತ್ತಾರೆ. ಆದರೆ ಅವರ ಆ ತಪಸ್ಸು ನಾನು ಪುನಃ ಚಕ್ರವರ್ತಿಯಾಗಬೇಕೆಂಬುದೇ ಆಗಿರುತ್ತದೆ. ಹೀಗೆ ವೃದ್ಧಿ ಹೊಂದಿದ ತೃಷ್ಣೆಯುಳ್ಳವರು ಎಂದಿಗೂ ಸುಖಿಗಳಾಗಲಾರರು. ॥ ೫೩ ॥ ಅಚ್ಯುತನೇ! ಜೀವನು ಅನಾದಿಕಾಲದಿಂದಲೂ ಹುಟ್ಟು-ಸಾವುಗಳೆಂಬ ಸಂಸಾರ ಚಕ್ರದಲ್ಲಿ ಸಿಕ್ಕಿ ಸುತ್ತುತ್ತಲೇ ಇರುವನು. ಸಂಸಾರ ಚಕ್ರದಿಂದ ಪಾರಾಗುವ ಸಮಯವು ಬಂದಾಗ ಅವನಿಗೆ ಸತ್ಸಂಗವು ದೊರೆಯುತ್ತದೆ. ಸತ್ಸಂಗವಾದೊಡನೆಯೇ ಕಾರ್ಯ-ಕಾರಣರೂಪನಾದ, ಜಗತ್ತಿಗೆ ಏಕಮಾತ್ರಸ್ವಾಮಿಯಾದ, ಸತ್ಪುರುಷರಿಗೆ ಪರಮಾಶ್ರಯನಾದ ನಿನ್ನಲ್ಲಿ ಜೀವಿಯ ಬುದ್ಧಿಯು ಅತ್ಯಂತ ದೃಢತೆಯಿಂದ ತೊಡಗುತ್ತದೆ; ಇದು ನಿಶ್ಚಯವಾದುದು. ॥ ೫೪ ॥ ಸ್ವಾಮಿಯೇ! ನೀನು ನನ್ನ ಮೇಲೆ ಪರಮಾನುಗ್ರಹವನ್ನು ಮಾಡಿರುವೆಯೆಂದೇ ನಾನು ಭಾವಿಸುತ್ತೇನೆ. ನಿನ್ನ ಅನುಗ್ರಹದಿಂದ ಯಾವ ಪರಿಶ್ರಮವೂ ಇಲ್ಲದೆ ನನಗೆ ರಾಜ್ಯದ ಸಂಬಂಧ ಕಡಿದುಹೋಯಿತು. ಸಾಧುಸ್ವಭಾವದ ಚಕ್ರವರ್ತಿಗಳೂ ಕೂಡ ರಾಜ್ಯವನ್ನು ಬಿಟ್ಟು ಏಕಾಂತದಲ್ಲಿ ಭಜನ-ಸಾಧನೆ ಮಾಡಬೇಕೆಂದು ಕಾಡಿಗೆ ಹೋಗಲು ಅಪೇಕ್ಷಿಸಿದಾಗ ಅಹಂಕಾರ-ಮಮಕಾರಗಳಿಂದ ಮುಕ್ತರಾಗಲು ನಿನ್ನನ್ನು ಬಹಳವಾಗಿ ಪ್ರಾರ್ಥಿಸುತ್ತಾರೆ. ॥ ೫೫ ॥ ಅಂತರ್ಯಾಮಿಯೇ! ಯಾರ ಬಳಿಯಲ್ಲಿ ಯಾವುದೇ ಸಂಗ್ರಹ-ಪರಿಗ್ರಹವಿಲ್ಲವೋ ಅಥವಾ ಅದರ ಅಭಿಮಾನದಿಂದ ರಹಿತರಾದ ಅಕಿಂಚನರೂ ಕೂಡ ನಿನ್ನ ಚರಣಸೇವೆಯಲ್ಲದೆ ಬೇರೆ ಏನನ್ನೂ ಬೇಡುವುದಿಲ್ಲ. ಹಾಗಿರುವಾಗ ಮೋಕ್ಷವನ್ನು ಕರುಣಿಸುವ ನಿನ್ನ ಆರಾಧನೆ ಮಾಡಿ - ತನ್ನನ್ನು ಬಂಧಿಸುವಂತಹ ಸಾಂಸಾರಿಕ ವಿಷಯಗಳನ್ನು ಯಾವ ಶ್ರೇಷ್ಠ ಪುರುಷನು ತಾನೇ ಬೇಡಿಕೊಳ್ಳುವನು? ॥ ೫೬ ॥ ಆದ್ದರಿಂದ ಪ್ರಭುವೇ! ನಾನು ಸತ್ತ್ವ-ರಜ-ತಮೋಗುಣಗಳಿಗೆ ಸಂಬಂಧಿಸಿದ ಸಮಸ್ತ ಕಾಮನೆಗಳನ್ನು ಬಿಟ್ಟು ಮಾಯೆಯ ಲೇಶಮಾತ್ರ ಸಂಬಂಧವೂ ಇಲ್ಲದ, ಗುಣಾತೀತನಾದ, ಅದ್ವಿತೀಯನಾದ, ಚಿತ್ಸ್ವರೂಪನಾದ, ಪರಮಪುರುಷನಾದ ನಿನಗೆ ಶರಣಾಗುತ್ತೇನೆ. ॥ ೫೭ ॥ ಪರಮೇಶ್ವರನೇ! ಅನಾದಿಕಾಲದಿಂದಲೂ ನನ್ನ ಕರ್ಮಫಲಗಳನ್ನು ಅನುಭವಿಸುತ್ತಾ ನಾನು ಆರ್ತನಾಗಿದ್ದೆ. ಆ ದುಃಖದ ಜ್ವಾಲೆಯು ನನ್ನನ್ನು ಹಗಲು-ರಾತ್ರಿಯೆನ್ನದೆ ದಹಿಸುತ್ತಲೇ ಇತ್ತು. ನನ್ನ ಆಂತರಿಕ ಆರು ಶತ್ರುಗಳು (ಐದು ಇಂದ್ರಿಯಗಳು ಒಂದು ಮನಸ್ಸು) ಎಂದೂ ಶಾಂತರಾಗುವುದೇ ಇಲ್ಲ. ಅವರ ವಿಷಯ ತೃಷ್ಣೆಯು ದಿನ-ದಿನಕ್ಕೆ ವೃದ್ಧಿಸುತ್ತಲೇ ಇದೆ. ಈಗ ನಾನು ಭಯ, ಶೋಕ, ಮೃತ್ಯು ಇವುಗಳಿಂದ ರಹಿತವಾದ ನಿನ್ನ ಪಾದಕಮಲಗಳಲ್ಲಿ ಶರಣಾಗತನಾಗಿದ್ದೇನೆ. ಪರಮಾತ್ಮನೇ! ಶರಣಾಗತನಾದ ನನ್ನನ್ನು ರಕ್ಷಿಸು. ॥ ೫೮ ॥

ಶ್ರೀಭಗವಾನುವಾಚ

ಸಾರ್ವಭೌಮ ಮಹಾರಾಜ ಮತಿಸ್ತೇ ವಿಮಲೋರ್ಜಿತಾ ।
ವರೈಃ ಪ್ರಲೋಭಿತಸ್ಯಾಪಿ ನ ಕಾಮೈರ್ವಿಹತಾ ಯತಃ ॥ ೫೯ ॥

ಪ್ರಲೋಭಿತೋ ವರೈರ್ಯತ್ತ್ವಮಪ್ರಮಾದಾಯ ವಿದ್ಧಿ ತತ್ ।
ನ ಧೀರ್ಮಯ್ಯೇಕಭಕ್ತಾನಾಮಾಶೀರ್ಭಿರ್ಭಿದ್ಯತೇ ಕ್ವಚಿತ್ ॥ ೬೦ ॥

ಯುಂಜಾನಾನಾಮಭಕ್ತಾನಾಂ ಪ್ರಾಣಾಯಾಮಾದಿಭಿರ್ಮನಃ ।
ಅಕ್ಷೀಣವಾಸನಂ ರಾಜನ್ ದೃಶ್ಯತೇ ಪುನರುತ್ಥಿತಮ್ ॥ ೬೧ ॥

ವಿಚರಸ್ವ ಮಹೀಂ ಕಾಮಂ ಮಯ್ಯಾವೇಶಿತಮಾನಸಃ ।
ಅಸ್ತ್ವೇವ ನಿತ್ಯದಾ ತುಭ್ಯಂ ಭಕ್ತಿರ್ಮಯ್ಯನಪಾಯಿನೀ ॥ ೬೨ ॥

ಕ್ಷಾತ್ರಧರ್ಮಸ್ಥಿತೋ ಜಂತೂನ್ ನ್ಯವಧೀರ್ಮೃಗಯಾದಿಭಿಃ ।
ಸಮಾಹಿತಸ್ತತ್ತಪಸಾ ಜಹ್ಯಘಂ ಮದುಪಾಶ್ರಿತಃ ॥ ೬೩ ॥

ಜನ್ಮನ್ಯನಂತರೇ ರಾಜನ್ ಸರ್ವಭೂತಸುಹೃತ್ತಮಃ ।
ಭೂತ್ವಾ ದ್ವಿಜವರಸ್ತ್ವಂ ವೈ ಮಾಮುಪೈಷ್ಯಸಿ ಕೇವಲಮ್ ॥ ೬೪ ॥

ಭಗವಾನ್ ಶ್ರೀಕೃಷ್ಣನು ಹೇಳಿದನು — ಸಾರ್ವಭೌಮ ಮಹಾರಾಜ! ನಿನ್ನ ಬುದ್ಧಿಯು ಪರಿಶುದ್ಧವಾಗಿಯೂ, ಉನ್ನತಮಟ್ಟದಲ್ಲಿಯೂ ಇದೆ. ನಾನು ಪುನಃ ಪುನಃ ನಿನಗೆ ವರದ ಲೋಭವನ್ನು ತೋರುತ್ತಿದ್ದರೂ ನಿನ್ನ ಬುದ್ಧಿಯು ಕಾಮನೆಗಳಿಗೆ ವಶವಾಗಲಿಲ್ಲ. ॥ ೫೯ ॥ ನಾನು ವರವನ್ನು ಕೊಡಲು ನಿನ್ನನ್ನು ಪ್ರಲೋಭಿಸಿದುದು ನಿನ್ನ ಬುದ್ಧಿಯು ಪ್ರಮತ್ತವಾಗಿದೆಯೋ, ಅಪ್ರಮತ್ತವಾಗಿದೆಯೋ ಎಂಬುದನ್ನು ಪರೀಕ್ಷಿಸಲಿಕ್ಕಾಗಿ. ನನ್ನ ಅನನ್ಯಭಕ್ತರಾದವರ ಬುದ್ಧಿಯು ಎಂದಿಗೂ ಕಾಮನೆಗಳಿಗಾಗಿ ಅತ್ತ-ಇತ್ತ ಅಲೆಯುವುದಿಲ್ಲ. ॥ ೬೦ ॥ ನನ್ನ ಭಕ್ತರಲ್ಲದವರು ಪ್ರಾಣಾಯಾಮಾದಿಗಳಿಂದ ತಮ್ಮ ಮನಸ್ಸನ್ನು ವಶಪಡಿಸಿಕೊಳ್ಳಲು ಎಷ್ಟೇ ಪ್ರಯತ್ನಮಾಡಿದರೂ ಅವರ ವಾಸನೆಗಳು ಕ್ಷೀಣಿಸುವುದಿಲ್ಲ. ರಾಜನೇ! ಅವರ ಮನಸ್ಸು ಪುನಃ ವಿಷಯಗಳಿಗಾಗಿ ತವಕಿಸುತ್ತದೆ. ॥ ೬೧ ॥ ರಾಜಾ! ನೀನು ನಿನ್ನ ಮನಸ್ಸನ್ನು ಮತ್ತು ಮನೋಭಾವಗಳನ್ನು ನನ್ನಲ್ಲಿ ಅರ್ಪಿಸಿಬಿಡು. ನನ್ನಲ್ಲಿ ತೊಡಗಿಸು ಮತ್ತೆ ಸ್ವೇಚ್ಛೆಯಿಂದ ಭೂಮಂಡಲದಲ್ಲಿ ಸಂಚರಿಸುತ್ತಿರು. ನನ್ನಲ್ಲಿ ನಿನಗೆ ಸ್ಥಿರವಾದ ಭಕ್ತಿಯು ನಿತ್ಯ-ನಿರಂತರವಾಗಿ ಇದ್ದೇ ಇರುವುದು. ॥ ೬೨ ॥ ನೀನು ಕ್ಷತ್ರಿಯ ಧರ್ಮವನ್ನು ಆಚರಿಸುತ್ತಿರುವಾಗ ಬೇಟೆಯೇ ಮೊದಲಾದ ಸಂದರ್ಭಗಳಲ್ಲಿ ಬಹಳಷ್ಟು ಪಶುಗಳನ್ನು ಕೊಂದಿರುವೆ. ಈಗ ಏಕಾಗ್ರಚಿತ್ತದಿಂದ ನನ್ನನ್ನು ಉಪಾಸಿಸುತ್ತಾ, ತಪಸ್ಸಿನ ಮೂಲಕ ಆ ಪಾಪಗಳನ್ನು ಕಳೆದುಕೋ. ॥ ೬೩ ॥ ರಾಜನೇ! ಮುಂದಿನ ಜನ್ಮದಲ್ಲಿ ನೀನು ಬ್ರಾಹ್ಮಣನಾಗಿ ಹುಟ್ಟಿ ಸಮಸ್ತ ಪ್ರಾಣಿಗಳ ನಿಜವಾದ ಹಿತೈಷಿಯೂ, ಪರಮಸುಹೃದನೂ ಆಗುವೆ. ಮತ್ತೆ ವಿಶುದ್ಧ ವಿಜ್ಞಾನಘನ ಪರಮಾತ್ಮನಾದ ನನ್ನನ್ನು ಪಡೆಯುವೆ. ॥ ೬೪ ॥

ಐವತ್ತೊಂದನೆಯ ಅಧ್ಯಾಯವು ಮುಗಿಯಿತು. ॥ ೫೧ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮ ಸ್ಕಂಧೇ ಉತ್ತರಾರ್ಧೇ
ಮುಚುಕುಂದಸ್ತುತಿರ್ನಾಮೈಕಪಂಚಾಶತ್ತಮೋಽಧ್ಯಾಯಃ ॥ ೫೧ ॥

ಐವತ್ತೆರಡನೆಯ ಅಧ್ಯಾಯ

ದ್ವಾರಕಾಗಮನ, ಬಲರಾಮನ ವಿವಾಹ, ರುಕ್ಮಿಣಿಯ ಸಂದೇಶವನ್ನು ಹೊತ್ತು ತಂದ ಬ್ರಾಹ್ಮಣನ ಆಗಮನ

ಶ್ರೀಶುಕ ಉವಾಚ

ಇತ್ಥಂ ಸೋಽನುಗೃಹೀತೋಽಂಗ ಕೃಷ್ಣೇನೇಕ್ಷ್ವಾಕುನಂದನಃ ।
ತಂ ಪರಿಕ್ರಮ್ಯ ಸನ್ನಮ್ಯ ನಿಶ್ಚಕ್ರಾಮ ಗುಹಾಮುಖಾತ್ ॥ ೧ ॥

ಸ ವೀಕ್ಷ್ಯ ಕ್ಷುಲ್ಲಕಾನ್ ಮರ್ತ್ಯಾನ್ ಪಶೂನ್ ವೀರುದ್ವನಸ್ಪತೀನ್ ।
ಮತ್ವಾ ಕಲಿಯುಗಂ ಪ್ರಾಪ್ತಂ ಜಗಾಮ ದಿಶಮುತ್ತರಾಮ್ ॥ ೨ ॥

ಶ್ರೀಶುಕಮುನಿಗಳು ಹೇಳುತ್ತಾರೆ — ಪರೀಕ್ಷಿತ ಮಹಾರಾಜ! ಭಗವಾನ್ ಶ್ರೀಕೃಷ್ಣನು ಹೀಗೆ ಇಕ್ಷ್ವಾಕುಕುಲ ನಂದನನಾದ ಮುಚುಕುಂದನಿಗೆ ಅನುಗ್ರಹಿಸಿದನು. ಆಗ ಅವನು ಭಗವಂತನಿಗೆ ಪ್ರದಕ್ಷಿಣೆ ಬಂದು, ನಮಸ್ಕರಿಸಿ ಗುಹೆಯಿಂದ ಹೊರಗೆ ಹೊರಟನು. ॥ ೧ ॥ ಗುಹೆಯಿಂದ ಹೊರಗೆ ಬಂದು ಮುಚುಕುಂದನು ನೋಡುತ್ತಾನೆ - ಎಲ್ಲ ಮನುಷ್ಯರು, ಪಶುಗಳು, ಲತಾ-ವೃಕ್ಷಾದಿಗಳು ಮೊದಲಿಗಿಂತ ಬಹಳ ಸಣ್ಣ-ಸಣ್ಣದಾಗಿವೆ. ಓಹೋ! ಈಗ ಕಲಿಯುಗವು ಬಂದುಬಿಟ್ಟಿದೆ ಎಂದು ತಿಳಿದು ಅವನು ಉತ್ತರದ ಕಡೆಗೆ ಪ್ರಯಾಣ ಮಾಡಿದನು. ॥ ೨ ॥

ತಪಃಶ್ರದ್ಧಾಯುತೋ ಧೀರೋ ನಿಃಸಂಗೋ ಮುಕ್ತಸಂಶಯಃ ।
ಸಮಾಧಾಯ ಮನಃ ಕೃಷ್ಣೇ ಪ್ರಾವಿಶದ್ಗಂಧಮಾದನಮ್
॥ ೩ ॥

ಬದರ್ಯಾಶ್ರಮಮಾಸಾದ್ಯ ನರನಾರಾಯಣಾಲಯಮ್ ।
ಸರ್ವದ್ವಂದ್ವಸಹಃ ಶಾಂತಸ್ತಪಸಾಽಽರಾಧಯದ್ಧರಿಮ್
॥ ೪ ॥

ಭಗವಾನ್ ಪುನರಾವ್ರಜ್ಯ ಪುರೀಂ ಯವನವೇಷ್ಟಿತಾಮ್ ।
ಹತ್ವಾ ಮ್ಲೇಚ್ಛಬಲಂ ನಿನ್ಯೇ ತದೀಯಂ ದ್ವಾರಕಾಂ ಧನಮ್
॥ ೫ ॥

ನೀಯಮಾನೇ ಧನೇ ಗೋಭಿರ್ನೃಭಿಶ್ಚಾಚ್ಯುತಚೋದಿತೈಃ ।
ಆಜಗಾಮ ಜರಾಸಂಧಸ್ತ್ರಯೋವಿಂಶತ್ಯನೀಕಪಃ
॥ ೬ ॥

ವಿಲೋಕ್ಯ ವೇಗರಭಸಂ ರಿಪುಸೈನ್ಯಸ್ಯ ಮಾಧವೌ ।
ಮನುಷ್ಯಚೇಷ್ಟಾಮಾಪನ್ನೌ ರಾಜನ್ ದುದ್ರುವತುರ್ದ್ರುತಮ್
॥ ೭ ॥

ವಿಹಾಯ ವಿತ್ತಂ ಪ್ರಚುರಮಭೀತೌ ಭೀರುಭೀತವತ್ ।
ಪದ್ಭ್ಯಾಂ ಪದ್ಮಪಲಾಶಾಭ್ಯಾಂ ಚೇಲತುರ್ಬಹುಯೋಜನಮ್
॥ ೮ ॥

ಪಲಾಯಮಾನೌ ತೌ ದೃಷ್ಟ್ವಾ ಮಾಗಧಃ ಪ್ರಹಸನ್ ಬಲೀ ।
ಅನ್ವಧಾವದ್ರಥಾನೀಕೈರೀಶಯೋರಪ್ರಮಾಣವಿತ್
॥ ೯ ॥

ಪ್ರದ್ರುತ್ಯ ದೂರಂ ಸಂಶ್ರಾಂತೌ ತುಂಗಮಾರುಹತಾಂ ಗಿರಿಮ್ ।
ಪ್ರವರ್ಷಣಾಖ್ಯಂ ಭಗವಾನ್ ನಿತ್ಯದಾ ಯತ್ರ ವರ್ಷತಿ
॥ ೧೦ ॥

ಗಿರೌ ನಿಲೀನಾವಾಜ್ಞಾಯ ನಾಧಿಗಮ್ಯ ಪದಂ ನೃಪ ।
ದದಾಹ ಗಿರಿಮೇಧೋಭಿಃ ಸಮಂತಾದಗ್ನಿಮುತ್ಸೃಜನ್
॥ ೧೧ ॥

ತತ ಉತ್ಪತ್ಯ ತರಸಾ ದಹ್ಯಮಾನತಟಾದುಭೌ ।
ದಶೈಕಯೋಜನೋತ್ತುಂಗಾನ್ನಿಪೇತತುರಧೋ ಭುವಿ
॥ ೧೨ ॥

ಅಲಕ್ಷ್ಯಮಾಣೌ ರಿಪುಣಾ ಸಾನುಗೇನ ಯದೂತ್ತಮೌ ।
ಸ್ವಪುರಂ ಪುನರಾಯಾತೌ ಸಮುದ್ರಪರಿಖಾಂ ನೃಪ
॥ ೧೩ ॥

ಸೋಽಪಿ ದಗ್ಧಾವಿತಿ ಮೃಷಾ ಮನ್ವಾನೋ ಬಲಕೇಶವೌ ।
ಬಲಮಾಕೃಷ್ಯ ಸುಮಹನ್ಮಗಧಾನ್ ಮಾಗಧೋ ಯಯೌ
॥ ೧೪ ॥

ಮುಚುಕುಂದ ರಾಜನು ತಪಸ್ಸು ಶ್ರದ್ಧೆ ಧೈರ್ಯ, ಅನಾಸಕ್ತಿ ಇವುಗಳಿಂದ ಕೂಡಿದ್ದು ಸಂದೇಹ ರಹಿತನಾಗಿದ್ದನು. ಅವನು ತನ್ನ ಚಿತ್ತವನ್ನು ಭಗವಂತನಲ್ಲಿ ತೊಡಗಿಸಿ ಗಂಧಮಾದನ ಪರ್ವತಕ್ಕೆ ಹೋದನು. ॥ ೩॥ ಅಲ್ಲಿಂದ ಭಗವಾನ್ ನರ-ನಾರಾಯಣರ ನಿತ್ಯನಿವಾಸ ಸ್ಥಾನವಾದ ಬದರಿಕಾಶ್ರಮಕ್ಕೆ ತಲುಪಿ ಬಹಳ ಶಾಂತ ಭಾವದಿಂದ ಶೀತೋಷ್ಣ ಸುಖ-ದುಃಖಾದಿ ದ್ವಂದ್ವಗಳನ್ನು ಸಹಿಸುತ್ತಾ ತಪಸ್ಸಿನಿಂದ ಭಗವಂತನ ಆರಾಧನೆಯಲ್ಲಿ ತೊಡಗಿದನು. ॥ ೪ ॥

ಇತ್ತಲಾಗಿ ಭಗವಾನ್ ಶ್ರೀಕೃಷ್ಣನು ಮಥುರೆಗೆ ಮರಳಿದನು. ಆದುವರೆಗೂ ಕಾಲಯವನನ ಸೈನಿಕರು ಮಥುರೆಯನ್ನು ಆಕ್ರಮಿಸಿಕೊಂಡೇ ಇದ್ದರು. ಶ್ರೀಕೃಷ್ಣನು ಆ ಮ್ಲೇಚ್ಛರ ಸೈನ್ಯವನ್ನು ಸಂಹರಿಸಿ, ಅವರ ಎಲ್ಲ ಧನವನ್ನು ಕಸಿದುಕೊಂಡು ದ್ವಾರಕೆಗೆ ತೆರಳಿದನು. ॥ ೫ ॥ ಶ್ರೀಕೃಷ್ಣನ ಅಪ್ಪಣೆಯಂತೆ ಆ ಧನವನ್ನು ಮನುಷ್ಯರ, ಎತ್ತುಗಳ ಮೂಲಕ ತೆಗೆದುಕೊಂಡು ಹೋಗುತ್ತಿದ್ದಾಗ ಜರಾಸಂಧನು ಪುನಃ ಹದಿನೆಂಟನೆಯ ಬಾರಿಗೆ ಇಪ್ಪತ್ತಮೂರು ಅಕ್ಷೌಹಿಣಿ ಸೈನ್ಯದೊಂದಿಗೆ ಆಗಮಿಸಿದನು. ॥ ೬ ॥ ಪರೀಕ್ಷಿತನೇ! ಶತ್ರು ಸೈನ್ಯವು ರಭಸದಿಂದ ಒದುತ್ತಿರುವುದನ್ನು ನೋಡಿದ ಭಗವಾನ್ ಶ್ರೀಕೃಷ್ಣ ಬಲರಾಮರು ಮನುಷ್ಯರಂತೆ ಲೀಲೆಯನ್ನು ತೋರುತ್ತಾ ಅವನ ಇದಿರಿಗೆ ಪಲಾಯನ ಮಾಡಿದರು. ॥ ೭ ॥ ನಿಜವಾಗಿಯೂ ಅವರ ಮನಸ್ಸಿನಲ್ಲಿ ಸ್ವಲ್ಪವೂ ಭಯವಿರಲಿಲ್ಲ. ಆದರೂ ಅತ್ಯಂತ ಭಯಗೊಂಡವರಂತೆ ನಟಿಸುತ್ತಾ, ಆ ಎಲ್ಲ ಧನವನ್ನು ಅಲ್ಲೇ ಬಿಟ್ಟು ಅವರು ಅನೇಕ ಯೋಜನಗಳಷ್ಟು ತಮ್ಮ ಕಮಲದಳದಂತೆ ಇರುವ ಸುಕೋಮಲ ಚರಣಗಳಿಂದ ಓಡುತ್ತಾ ಹೋದರು. ॥ ೮ ॥ ಶ್ರೀಕೃಷ್ಣ-ಬಲರಾಮರು ಓಡುತ್ತಿರುವುದನ್ನು ಮಹಾಬಲಿಷ್ಠನಾದ ಮಾಗಧನು ನೋಡಿ ಗಹಗಹಿಸಿ ನಗುತ್ತಾ ತನ್ನ ರಥ ಸೇನೆಯೊಂದಿಗೆ ಅವರನ್ನು ಹಿಂಬಾಲಿಸಿದನು. ಅವನು ಬಲರಾಮ-ಕೃಷ್ಣರ ಪ್ರಭಾವವನ್ನು ತಿಳಿದವನಾಗಿರಲಿಲ್ಲ. ॥ ೯ ॥ ಬಹಳ ದೂರದವರೆಗೆ ಓಡಿದ್ದರಿಂದ ಸಹೋದರರಿಬ್ಬರೂ ಬಳಲಿ ದಂತಾಗಿ ಎತ್ತರವಾದ ಪ್ರವರ್ಷಣವೆಂಬ ಪರ್ವತವನ್ನು ಹತ್ತಿದರು. ಮೇಘಗಳು ಆ ಪರ್ವತದ ಮೇಲೆ ಸದಾಕಾಲವೂ ಮಳೆಗಳೆ ಯುತ್ತಿದ್ದರಿಂದ ಅದು 'ಪ್ರವರ್ಷಣ'ವೆಂಬ ಹೆಸರನ್ನು ಪಡೆದಿತ್ತು. ॥ ೧೦ ॥ ಪರೀಕ್ಷಿತನೇ ಅವರಿಬ್ಬರೂ ಬೆಟ್ಟದಲ್ಲಿ ಅವಿತು ಕೊಂಡಿದ್ದು ಎಷ್ಟು ಹುಡುಕಿದರೂ ಅವರು ಕಾಣದಿದ್ದಾಗ ಜರಾಸಂಧನು ಪರ್ವತದ ಸುತ್ತಲೂ ಬೆಂಕಿಯಿಟ್ಟು ಅದನ್ನು ಸುಟ್ಟುಬಿಟ್ಟನು. ॥ ೧೧ ॥ ಪರ್ವತದ ತಪ್ಪಲು ಸುತ್ತಲೂ ಉರಿಯುತ್ತಿರುವುದನ್ನು ಭಗವಂತನು ನೋಡಿದನು. ಆಗ ಸೋದರರಿಬ್ಬರೂ ಜರಾಸಂಧನ ಸೈನ್ಯದಿಂದ ಸುತ್ತುವರಿಯಲ್ಪಟ್ಟ ಹನ್ನೊಂದು ಯೋಜನ ಎತ್ತರವಾಗಿದ್ದ ಆ ಪರ್ವತದಿಂದ ವೇಗವಾಗಿ ಕೆಳಗೆ ಭೂಮಿಗೆ ನೆಗೆದರು. ॥ ೧೨ ॥ ರಾಜೇಂದ್ರ! ಜರಾಸಂಧನಾಗಲೀ, ಅವನ ಸೈನಿಕರಾಗಲೀ ಯಾರಿಗೂ ಅವರು ಕಾಣಿಸಲಿಲ್ಲ. ಅವರಿಬ್ಬರೂ ಅಲ್ಲಿಂದ ಹೊರಟು ಸಮುದ್ರದಿಂದ ಸುತ್ತುವರಿಯಲ್ಪಟ್ಟ ತಮ್ಮ ದ್ವಾರಕೆಗೆ ಹೋಗಿಬಿಟ್ಟರು. ॥ ೧೩ ॥ ಜರಾಸಂಧನು ಶ್ರೀಕೃಷ್ಣ ಬಲರಾಮರನ್ನು ಕಾಣದೆ ಅವರು ಬೆಂಕಿಯಲ್ಲಿ ಸುಟ್ಟು ಹೋಗಿದ್ದಾರೆ ಎಂದು ತಪ್ಪಾಗಿ ತಿಳಿದುಕೊಂಡನು. ಮತ್ತೆ ಸೈನ್ಯದೊಂದಿಗೆ ಹಿಂದಿರುಗಿ ಮಗಧ ದೇಶಕ್ಕೆ ಹೊರಟು ಹೋದನು. ॥ ೧೪ ॥

ಆನರ್ತಾಧಿಪತಿಃ ಶ್ರೀಮಾನ್ ರೈವತೋ ರೇವತೀಂ ಸುತಾಮ್ ।
ಬ್ರಹ್ಮಣಾ ಚೋದಿತಃ ಪ್ರಾದಾದ್ಬಲಾಯೇತಿ ಪುರೋದಿತಮ್ ॥ ೧೫ ॥

ಭಗವಾನಪಿ ಗೋವಿಂದ ಉಪಯೇಮೇ ಕುರೂದ್ವಹ ।
ವೈದರ್ಭೀಂ ಭೀಷ್ಮಕಸುತಾಂ ಶ್ರಿಯೋ ಮಾತ್ರಾಂ ಸ್ವಯಂವರೇ ॥ ೧೬ ॥

ಪ್ರಮಥ್ಯ ತರಸಾ ರಾಜ್ಞಃ ಶಾಲ್ವಾದೀಂಶ್ಚೈದ್ಯಪಕ್ಷಗಾನ್ ।
ಪಶ್ಯತಾಂ ಸರ್ವಲೋಕಾನಾಂ ತಾರ್ಕ್ಷ್ಯಪುತ್ರಃ ಸುಧಾಮಿವ ॥ ೧೭ ॥

ರಾಜೋವಾಚ

ಭಗವಾನ್ ಭೀಷ್ಮಕಸುತಾಂ ರುಕ್ಮಿಣೀಂ ರುಚಿರಾನನಾಮ್ ।
ರಾಕ್ಷಸೇನ ವಿಧಾನೇನ ಉಪಯೇಮ ಇತಿ ಶ್ರುತಮ್ ॥ ೧೮ ॥

ಭಗವನ್ ಶ್ರೋತುಮಿಚ್ಛಾಮಿ ಕೃಷ್ಣಸ್ಯಾಮಿತತೇಜಸಃ ।
ಯಥಾ ಮಾಗಧಶಾಲ್ವಾದೀನ್ ಜಿತ್ವಾಕನ್ಯಾಮುಪಾಹರತ್ ॥ ೧೯ ॥

ಬ್ರಹ್ಮನ್ ಕೃಷ್ಣಕಥಾಃ ಪುಣ್ಯಾ ಮಾಧ್ವೀರ್ಲೋಕಮಲಾಪಹಾಃ ।
ಕೋ ನು ತೃಪ್ಯೇತ ಶೃಣ್ವಾನಃ ಶ್ರುತಜ್ಞೋ ನಿತ್ಯನೂತನಾಃ ॥ ೨೦ ॥

ಶ್ರೀಶುಕ ಉವಾಚ

ರಾಜಾಽಽಸೀದ್ಭೀಷ್ಮಕೋ ನಾಮ ವಿದರ್ಭಾಧಿಪತಿರ್ಮಹಾನ್ ।
ತಸ್ಯ ಪಂಚಾಭವನ್ ಪುತ್ರಾಃ ಕನ್ಯೈಕಾ ಚ ವರಾನನಾ ॥ ೨೧ ॥

ರುಕ್ಮ್ಯಗ್ರಜೋ ರುಕ್ಮರಥೋ ರುಕ್ಮಬಾಹುರನಂತರಃ ।
ರುಕ್ಮಕೇಶೋ ರುಕ್ಮಮಾಲೀ ರುಕ್ಮಿಣ್ಯೇಷಾಂ ಸ್ವಸಾ ಸತೀ ॥ ೨೨ ॥

ಸೋಪಶ್ರುತ್ಯ ಮುಕುಂದಸ್ಯ ರೂಪವೀರ್ಯಗುಣಶ್ರಿಯಃ ।
ಗೃಹಾಗತೈರ್ಗೀಯಮಾನಾಸ್ತಂ ಮೇನೇ ಸದೃಶಂ ಪತಿಮ್ ॥ ೨೩ ॥

ತಾಂ ಬುದ್ಧಿಲಕ್ಷಣೌದಾರ್ಯರೂಪಶೀಲಗುಣಾಶ್ರಯಾಮ್ ।
ಕೃಷ್ಣಶ್ಚ ಸದೃಶೀಂ ಭಾರ್ಯಾಂ ಸಮುದ್ವೋಢುಂ ಮನೋ ದಧೇ ॥ ೨೪ ॥

ಬಂಧೂನಾಮಿಚ್ಛತಾಂ ದಾತುಂ ಕೃಷ್ಣಾಯ ಭಗಿನೀಂ ನೃಪ ।
ತತೋ ನಿವಾರ್ಯ ಕೃಷ್ಣದ್ವಿಡ್ರುಕ್ಮೀ ಚೈದ್ಯಮಮನ್ಯತ ॥ ೨೫ ॥

ಪರೀಕ್ಷಿತ ಮಹಾರಾಜ! ನಾನು ಹಿಂದೆ (ಒಂಭತ್ತನೆಯ ಸ್ಕಂಧದಲ್ಲಿ) ಆನರ್ತ ದೇಶದ ರಾಜನಾದ ರೈವತನು ತನ್ನ ಮಗಳಾದ ರೇವತಿಯನ್ನು ಬ್ರಹ್ಮದೇವರ ಪ್ರೇರಣೆಯಂತೆ ಬಲರಾಮನಿಗೆ ಕೊಟ್ಟು ವಿವಾಹಮಾಡಿದನೆಂಬ ಸಂಗತಿಯನ್ನು ಹೇಳಿದ್ದೆನು. ॥೧೫॥ ರಾಜನೇ! ಭಗವಾನ್ ಶ್ರೀಕೃಷ್ಣನೂ ಕೂಡ ಸ್ವಯಂವರಕ್ಕೆ ಬಂದ ಶಿಶುಪಾಲ ಮತ್ತು ಅವನ ಪಕ್ಷಪಾತಿಗಳು ಶಾಲ್ವರೇ ಮೊದಲಾದ ರಾಜರನ್ನು ಬಲಪೂರ್ವಕವಾಗಿ ಪರಾಜಯಗೊಳಿಸಿ, ಎಲ್ಲರೂ ನೋಡುತ್ತಿರುವಂತೆಯೇ ಗರುಡನು ಅಮೃತವನ್ನು ಅಪಹರಿಸಿದಂತೆಯೇ ವಿದರ್ಭದೇಶದ ರಾಜಕುಮಾರಿಯಾದ ರುಕ್ಮಿಣಿಯನ್ನು ಅಪಹರಿಸಿ ತಂದು ಅವಳೊಡನೆ ವಿವಾಹವಾದನು. ರುಕ್ಮಿಣಿಯು ಭೀಷ್ಮಕನ ಕನ್ಯೆಯಾಗಿದ್ದು ಸಾಕ್ಷಾತ್ ಲಕ್ಷ್ಮಿಯ ಅವತಾರವಾಗಿದ್ದಳು. ॥ ೧೬-೧೭ ॥

ಪರೀಕ್ಷಿತ ರಾಜನು ಕೇಳಿದನು - ಪೂಜ್ಯರೇ! ಭಗವಾನ್ ಶ್ರೀಕೃಷ್ಣನು ಭೀಷ್ಮಕನ ಮಗಳಾದ ಪರಮ ಸುಂದರಿ ರುಕ್ಮಿಣೀದೇವಿಯನ್ನು ಬಲವಂತವಾಗಿ ಕರೆತಂದು ರಾಕ್ಷಸ ವಿಧಿಯಂತೆ ಅವಳೊಂದಿಗೆ ವಿವಾಹವಾದನು ಎಂದು ನಾವು ಕೇಳಿದ್ದೇವೆ. ॥ ೧೮ ॥ ಮಹಾತ್ಮರೇ! ಪರಮತೇಜಸ್ವಿಯಾದ ಶ್ರೀಕೃಷ್ಣನು ಜರಾಸಂಧ, ಶಾಲ್ವ ಮೊದಲಾದ ರಾಜರನ್ನು ಗೆದ್ದು ಯಾವ ವಿಧಿಯಿಂದ ರುಕ್ಮಿಣಿಯನ್ನು ಅಪಹರಿಸಿದನು? ಇದನ್ನು ಕೇಳಲು ನಾನು ಇಚ್ಛಿಸುತ್ತೇನೆ. ॥ ೧೯ ॥ ಬ್ರಹ್ಮರ್ಷಿಗಳೇ! ನಿಶ್ಚಯವಾಗಿಯೂ ಭಗವಾನ್ ಶ್ರೀಕೃಷ್ಣನ ಲೀಲಾ ಪ್ರಸಂಗಗಳು ಪುಣ್ಯತಮವಾದವುಗಳು. ಜಗತ್ತಿನ ಪಾಪಗಳನ್ನು ಹೋಗಲಾಡಿಸಿ, ಪವಿತ್ರಮಾಡುವಂತಹುದು. ಇಂತಹ ನಿತ್ಯನೂತನವಾದ ಆ ಲೀಲೆಗಳನ್ನು ಶ್ರವಣಿಸಿ ಯಾವ ರಸಿಕನು ತಾನೇ ತೃಪ್ತಿಹೊಂದಬಲ್ಲನು? ॥ ೨೦ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ - ಪರೀಕ್ಷಿತನೇ! ವಿದರ್ಭದೇಶಕ್ಕೆ ಭೀಷ್ಮಕ ಮಹಾರಾಜನು ಅಧಿಪತಿಯಾಗಿದ್ದನು. ಅವನಿಗೆ ಐವರು ಪುತ್ರರೂ, ಓರ್ವ ಸುಂದರಿಯಾದ ಕನ್ಯೆ ಇದ್ದಳು. ॥ ೨೧ ॥ ಹಿರಿಯ ಪುತ್ರನ ಹೆಸರು ರುಕ್ಮಿ ಎಂದಿದ್ದು ರುಕ್ಮರಥ, ರುಕ್ಮಬಾಹು, ರುಕ್ಮಕೇಶ ಮತ್ತು ರುಕ್ಮಮಾಲಿ ಎಂಬ ನಾಲ್ವರು ಸಹೋದರ ಹೆಸರುಗಳು. ಸತೀ ರುಕ್ಮಿಣಿಯು ಇವರಿಗೆ ಸಹೋದರಿಯಾಗಿದ್ದಳು. ॥ ೨೨ ॥ ಭೀಷ್ಮಕನ ಅರಮನೆಗೆ ಬರುತ್ತಿದ್ದ ಹರಿದಾಸರಿಂದ ಪ್ರಶಂಸಿಸಲ್ಪಟ್ಟ ಭಗವಾನ್ ಶ್ರೀಕೃಷ್ಣನ ಸೌಂದರ್ಯ, ಪರಾಕ್ರಮ, ಗುಣ-ವೈಭವಗಳನ್ನು ರುಕ್ಮಿಣಿಯು ಕೇಳಿದಳು. ಆಗ ಆಕೆಯು ಶ್ರೀಕೃಷ್ಣನೇ ನನಗೆ ಅನುರೂಪವಾದ ಪತಿಯೆಂದು ನಿಶ್ಚಯಿಸಿದಳು. ॥ ೨೩ ॥ ಅತ್ತ ಭಗವಾನ್ ಶ್ರೀಕೃಷ್ಣನೂ ರುಕ್ಮಿಣಿಯು ಅತ್ಯಂತ ಸುಂದರಳೂ, ಪರಮಬುದ್ಧಿವಂತೆಯೂ, ಉದಾರಳೂ, ಸೌಂದರ್ಯ-ಶೀಲಸ್ವಭಾವ ಗುಣಗಳಿಂದ ಅದ್ವಿತೀಯಳೂ ಆಗಿರುವಳೆಂದು ತಿಳಿದುಕೊಂಡು ರುಕ್ಮಿಣಿಯೇ ತನಗೆ ಅನುರೂಪ ಪತ್ನಿಯೆಂದೇ ಭಾವಿಸಿ ಅವಳೊಂದಿಗೆ ವಿವಾಹವಾಗುವುದಾಗಿ ನಿಶ್ಚಯಿಸಿದನು. ॥ ೨೪ ॥ ರುಕ್ಮಿಣಿಯ ವಿವಾಹವು ಶ್ರೀಕೃಷ್ಣನೊಂದಿಗೆ ಆಗಬೇಕೆಂದು ಬಂಧು-ಬಾಂಧವರು ಬಯಸುತ್ತಿದ್ದರು. ಆದರೆ ರುಕ್ಮಿಯು ಶ್ರೀಕೃಷ್ಣನನ್ನು ಬಹಳವಾಗಿ ದ್ವೇಷಿಸುತ್ತಿದ್ದನು. ಅವನು ಆಕೆಯನ್ನು ವಿವಾಹಮಾಡಿಕೊಡಲು ತಡೆದು, ತನ್ನ ಮಿತ್ರನಾದ ಶಿಶುಪಾಲನೇ ನಮ್ಮ ತಂಗಿಗೆ ಯೋಗ್ಯವರನೆಂದು ತಿಳಿಯುತ್ತಿದ್ದನು. ॥ ೨೫ ॥

ತದವೇತ್ಯಾಸಿತಾಪಾಂಗೀ ವೈದರ್ಭೀ ದುರ್ಮನಾ ಭೃಶಮ್ ।
ವಿಚಿಂತ್ಯಾಪ್ತಂ ದ್ವಿಜಂ ಕಂಚಿತ್ ಕೃಷ್ಣಾಯ ಪ್ರಾಹಿಣೋದ್ದ್ರುತಮ್
॥ ೨೬ ॥

ದ್ವಾರಕಾಂ ಸ ಸಮಭ್ಯೇತ್ಯ ಪ್ರತೀಹಾರೈಃ ಪ್ರವೇಶಿತಃ ।
ಅಪಶ್ಯದಾದ್ಯಂ ಪುರುಷಮಾಸೀನಂ ಕಾಂಚನಾಸನೇ
॥ ೨೭ ॥

ದೃಷ್ಟ್ವಾ ಬ್ರಹ್ಮಣ್ಯದೇವಸ್ತಮವರುಹ್ಯ ನಿಜಾಸನಾತ್ ।
ಉಪವೇಶ್ಯಾರ್ಹಯಾಂಚಕ್ರೇ ಯಥಾಽಽತ್ಮಾನಂ ದಿವೌಕಸಃ
॥ ೨೮ ॥

ತಂ ಭುಕ್ತವಂತಂ ವಿಶ್ರಾಂತಮುಪಗಮ್ಯ ಸತಾಂ ಗತಿಃ ।
ಪಾಣಿನಾಭಿಮೃಶನ್ ಪಾದಾವವ್ಯಗ್ರಸ್ತಮಪೃಚ್ಛತ
॥ ೨೯ ॥

ಕಚ್ಚಿದ್ದ್ವಿಜವರಶ್ರೇಷ್ಠ ಧರ್ಮಸ್ತೇ ವೃದ್ಧಸಮ್ಮತಃ ।
ವರ್ತತೇ ನಾತಿಕೃಚ್ಛ್ರೇಣ ಸಂತುಷ್ಟಮನಸಃ ಸದಾ
॥ ೩೦ ॥

ಸಂತುಷ್ಟೋ ಯರ್ಹಿ ವರ್ತೇತ ಬ್ರಾಹ್ಮಣೋ ಯೇನ ಕೇನಚಿತ್ ।
ಅಹೀಯಮಾನಃ ಸ್ವಾದ್ಧರ್ಮಾತ್ ಸ ಹ್ಯಸ್ಯಾಖಿಲಕಾಮಧುಕ್
॥ ೩೧ ॥

ಅಸಂತುಷ್ಟೋಽಸಕೃಲ್ಲೋಕಾನಾಪ್ನೋತ್ಯಪಿ ಸುರೇಶ್ವರಃ ।
ಅಕಿಂಚನೋಽಪಿ ಸಂತುಷ್ಟಃ ಶೇತೇ ಸರ್ವಾಂಗವಿಜ್ವರಃ
॥ ೩೨ ॥

ವಿಪ್ರಾನ್ ಸ್ವಲಾಭಸಂತುಷ್ಟಾನ್ ಸಾಧೂನ್ ಭೂತಸುಹೃತ್ತಮಾನ್ ।
ನಿರಹಂಕಾರಿಣಃ ಶಾಂತಾನ್ ನಮಸ್ಯೇ ಶಿರಸಾಸಕೃತ್
॥ ೩೩ ॥

ಕಚ್ಚಿದ್ವಃ ಕುಶಲಂ ಬ್ರಹ್ಮನ್ ರಾಜತೋ ಯಸ್ಯ ಹಿ ಪ್ರಜಾಃ ।
ಸುಖಂ ವಸಂತಿ ವಿಷಯೇ ಪಾಲ್ಯಮಾನಾಃ ಸ ಮೇ ಪ್ರಿಯಃ
॥ ೩೪ ॥

ಯತಸ್ತ್ವಮಾಗತೋ ದುರ್ಗಂ ನಿಸ್ತೀರ್ಯೇಹ ಯದಿಚ್ಛಯಾ ।
ಸರ್ವಂ ನೋ ಬ್ರೂಹ್ಯಗುಹ್ಯಂ ಚೇತ್ ಕಿಂ ಕಾರ್ಯಂ ಕರವಾಮ ತೇ
॥ ೩೫ ॥

ತನ್ನ ಹಿರಿಯಣ್ಣನಾದ ರುಕ್ಮಿಯು ಶಿಶುಪಾಲನೊಂದಿಗೆ ನನ್ನ ವಿವಾಹ ಮಾಡಲಿದ್ದಾನೆಂದು ತಿಳಿದ ಪರಮಸುಂದರಳಾದ ರುಕ್ಮಿಣಿಯು ಅತ್ಯಂತ ದುಃಖಿತಳಾಗಿ ಬಹಳವಾಗಿ ಯೋಚಿಸಿ ಕೊನೆಗೆ ತನ್ನ ವಿಶ್ವಾಸಪಾತ್ರನಾದ ಓರ್ವ ಬ್ರಾಹ್ಮಣನ ಮೂಲಕ ಕೂಡಲೇ ಶ್ರೀಕೃಷ್ಣನಿಗೆ ಸಂದೇಶವನ್ನು ಕಳಿಸಿದಳು. ॥ ೨೬ ॥ ಆ ಬ್ರಾಹ್ಮಣನು ದ್ವಾರಕಾಪಟ್ಟಣಕ್ಕೆ ತಲುಪಿದಾಗ ದ್ವಾರಪಾಲಕರು ಕೃಷ್ಣನ ಅರಮನೆಯೊಳಗೆ ಕರೆದುಕೊಂಡು ಹೋದರು. ಅಲ್ಲಿ ಅವನು ಆದಿಪುರುಷನಾದ ಭಗವಾನ್ ಶ್ರೀಕೃಷ್ಣನು ಸ್ವರ್ಣ ಸಿಂಹಾಸನದ ಮೇಲೆ ವಿರಾಜಮಾನನಾಗಿ ಇರುವುದನ್ನು ನೋಡಿದನು. ॥ ೨೭ ॥ ಬ್ರಾಹ್ಮಣರ ಪರಮಭಕ್ತನಾದ ಭಗವಾನ್ ಶ್ರೀಕೃಷ್ಣನು ಆ ಭೂಸುರೋತ್ತಮನನ್ನು ನೋಡುತ್ತಲೇ ತನ್ನ ಆಸನದಿಂದ ಇಳಿದು, ಅವನನ್ನು ತನ್ನ ಸಿಂಹಾಸನದಲ್ಲಿ ಕುಳ್ಳಿರಿಸಿ ದೇವತೆಗಳು ತನ್ನನ್ನು ಪೂಜಿಸುವಂತೆಯೇ ಅವನನ್ನು ಪೂಜಿಸಿದನು. ॥ ೨೮ ॥ ಆದರ-ಸತ್ಕಾರವಾದ ಬಳಿಕ, ಕುಶಲ ಪ್ರಶ್ನೆಗಳಾದವು. ಬ್ರಾಹ್ಮಣನು ಉಂಡು-ತಿಂದು ವಿಶ್ರಾಂತಿ ಪಡೆಯುತ್ತಿದ್ದಾಗ ಸತ್ಪುರುಷರ ಗತಿಯಾದ ಶ್ರೀಕೃಷ್ಣನು ಅವನ ಬಳಿಯಲ್ಲಿ ಕುಳಿತು ತನ್ನ ಕೋಮಲವಾದ ಕೈಗಳಿಂದ ಅವನ ಪಾದಸೇವೆಯನ್ನು ಮಾಡುತ್ತಾ, ಶಾಂತಭಾವದಿಂದ ಕೇಳಿದನು – ॥ ೨೯ ॥ ದ್ವಿಜಶ್ರೇಷ್ಠನೇ! ನಿನ್ನ ಮನಸ್ಸು ಸದಾ ಸರ್ವದಾ ಸಂತುಷ್ಟವಾಗಿದೆಯಲ್ಲ? ಹಿರಿಯರಿಗೆ ಒಪ್ಪಿಗೆಯಾದ ಧರ್ಮವನ್ನು ಆಚರಿಸಲು ನಿನಗೆ ಕಷ್ಟವೇನೂ ಆಗುತ್ತಿಲ್ಲವಲ್ಲ! ॥ ೩೦ ॥ ಬ್ರಾಹ್ಮಣನು ದೊರೆತುದರಲ್ಲಿ ಸಂತುಷ್ಟನಾಗಿದ್ದು ಸ್ವಧರ್ಮವನ್ನು ಪಾಲಿಸುತ್ತಾ ಅದರಿಂದ ಚ್ಯುತನಾಗದಿದ್ದರೆ ಆ ಸಂತೋಷವೇ ಅವನ ಸಮಸ್ತ ಕಾಮನೆಗಳನ್ನು ಪೂರ್ಣಗೊಳಿಸುತ್ತದೆ. ॥ ೩೧ ॥ ಇಂದ್ರಪದವಿಯನ್ನು ದೊರೆತರೂ ಸಂತೋಷವಾಗದಿರುವವನು ಸುಖಕ್ಕಾಗಿ ಒಂದು ಲೋಕದಿಂದ ಮತ್ತೊಂದು ಲೋಕಗಳಿಗೆ ಪದೇ-ಪದೇ ಅಲೆಯುತ್ತಾ ಎಂದಿಗೂ ಶಾಂತಿಯಿಂದ ಕುಳ್ಳಿರಲಾಗುವುದಿಲ್ಲ. ಆದರೆ ಯಾವನಲ್ಲಿ ಸ್ವಲ್ಪವೂ ಸಂಗ್ರಹ-ಪರಿಗ್ರಹವಿಲ್ಲದಿರುವವನು ಅದೇ ಸ್ಥಿತಿಯಲ್ಲಿ ಸಂತುಷ್ಟನಾಗಿದ್ದರೆ, ಅವನಿಗೆ ಎಲ್ಲ ರೀತಿಯ ಸಂತಾಪರಹಿತವಾದ ಸುಖ-ನಿದ್ದೆಯು ಬರುತ್ತದೆ. ॥ ೩೨ ॥ ತಮಗಾಗಿ ದೊರೆತಿರುವ ವಸ್ತುವಿನಲ್ಲಿ ಸಂತೋಷಪಡುವ, ಸ್ವಭಾವವು ಅತ್ಯಂತ ಮೃದು ಮಧುರವಾಗಿದ್ದು ಸಮಸ್ತ ಪ್ರಾಣಿಗಳ ಹಿತೈಷಿಯಾದ, ಅಹಂಕಾರ ರಹಿತರಾಗಿ ಶಾಂತರಾದ ಬ್ರಾಹ್ಮಣರನ್ನು ನಾನು ಸದಾಕಾಲ ತಲೆಬಾಗಿ ನಮಸ್ಕರಿಸುತ್ತೇನೆ. ॥ ೩೩ ॥ ಬ್ರಾಹ್ಮಣೋತ್ತಮನೇ! ರಾಜನು ನಿಮ್ಮ ಯೋಗ-ಕ್ಷೇಮವನ್ನು ಚೆನ್ನಾಗಿ ನೋಡಿಕೊಳ್ಳುತ್ತಿರುವನಲ್ಲ? ಯಾರ ರಾಜ್ಯದಲ್ಲಿ ಪ್ರಜೆಗಳು ರಾಜನಿಂದ ಪಾಲಿಸಲ್ಪಡುತ್ತಾ, ಸುಖದಿಂದ ಇರುವರೋ, ಅಂತಹ ರಾಜನು ನನಗೆ ಅತ್ಯಂತ ಪ್ರಿಯನು. ॥ ೩೪ ॥ ಭೂಸುರ ಶ್ರೇಷ್ಠರೇ! ನೀವು ಎಲ್ಲಿಂದ, ಯಾವ ಕಾರ್ಯಾರ್ಥವಾಗಿ, ಯಾವ ಅಭಿಲಾಷೆಯಿಂದ ಇಷ್ಟೊಂದು ಕಠಿಣವಾದ ಮಾರ್ಗವನ್ನು ಕ್ರಮಿಸಿ ಇಲ್ಲಿಗೆ ಆಗಮಿಸಿರುವಿರಿ. ಅಂತಹ ವಿಶೇಷವಾದ ಗೋಪ್ಯವಲ್ಲವಾಗಿದ್ದರೆ ನನಗೆ ಹೇಳಿರಿ. ನಾನು ನಿಮಗೆ ಯಾವ ಸೇವೆ ಮಾಡಲಿ? ಅಪ್ಪಣೆ ಕೊಡಿರಿ. ॥ ೩೫ ॥

ಏವಂ ಸಂಪೃಷ್ಟಸಂಪ್ರಶ್ನೋ ಬ್ರಾಹ್ಮಣಃ ಪರಮೇಷ್ಠಿನಾ ।
ಲೀಲಾಗೃಹೀತದೇಹೇನ ತಸ್ಮೈ ಸರ್ವಮವರ್ಣಯತ್ ॥ ೩೬ ॥

ರುಕ್ಮಿಣ್ಯುವಾಚ

ಶ್ರುತ್ವಾ ಗುಣಾನ್ ಭುವನಸುಂದರ ಶೃಣ್ವತಾಂ ತೇ
ನಿರ್ವಿಶ್ಯ ಕರ್ಣವಿವರೈರ್ಹರತೋಽಂಗತಾಪಮ್ ।
ರೂಪಂ ದೃಶಾಂ ದೃಶಿಮತಾಮಖಿಲಾರ್ಥಲಾಭಂ
ತ್ವಯ್ಯಚ್ಯುತಾವಿಶತಿ ಚಿತ್ತಮಪತ್ರಪಂ ಮೇ ॥ ೩೭ ॥

ಕಾ ತ್ವಾ ಮುಕುಂದ ಮಹತೀ ಕುಲಶೀಲರೂಪ-
ವಿದ್ಯಾವಯೋದ್ರವಿಣಧಾಮಭಿರಾತ್ಮತುಲ್ಯಮ್ ।
ಧೀರಾ ಪತಿಂ ಕುಲವತೀ ನ ವೃಣೀತ ಕನ್ಯಾ
ಕಾಲೇ ನೃಸಿಂಹ ನರಲೋಕಮನೋಽಭಿರಾಮಮ್ ॥ ೩೮ ॥

ತನ್ಮೇ ಭವಾನ್ ಖಲು ವೃತಃ ಪತಿರಂಗ ಜಾಯಾ-
ಮಾತ್ಮಾರ್ಪಿತಶ್ಚ ಭವತೋಽತ್ರ ವಿಭೋ ವಿಧೇಹಿ ।
ಮಾ ವೀರಭಾಗಮಭಿಮರ್ಶತು ಚೈದ್ಯ ಆರಾದ್
ಗೋಮಾಯುವನ್ಮೃಗಪತೇರ್ಬಲಿಮಂಬುಜಾಕ್ಷ ॥ ೩೯ ॥

ಪೂರ್ತೇಷ್ಟದತ್ತನಿಯಮವ್ರತದೇವವಿಪ್ರ-
ಗುರ್ವರ್ಚನಾದಿಭಿರಲಂ ಭಗವಾನ್ ಪರೇಶಃ ।
ಆರಾಧಿತೋ ಯದಿ ಗದಾಗ್ರಜ ಏತ್ಯ ಪಾಣಿಂ
ಗೃಹ್ಣಾತು ಮೇ ನ ದಮಘೋಷಸುತಾದಯೋಽನ್ಯೇ ॥ ೪೦ ॥

ಶ್ವೋಭಾವಿನಿ ತ್ವಮಜಿತೋದ್ವಹನೇ ವಿದರ್ಭಾನ್
ಗುಪ್ತಃ ಸಮೇತ್ಯ ಪೃತನಾಪತಿಭಿಃ ಪರೀತಃ ।
ನಿರ್ಮಥ್ಯ ಚೈದ್ಯಮಗಧೇಂದ್ರಬಲಂ ಪ್ರಸಹ್ಯ
ಮಾಂ ರಾಕ್ಷಸೇನ ವಿಧಿನೋದ್ವಹ ವೀರ್ಯಶುಲ್ಕಾಮ್ ॥ ೪೧ ॥

ಪರೀಕ್ಷಿತನೇ! ಲೀಲಾಮಾನುಷ ವಿಗ್ರಹನಾದ ಭಗವಾನ್ ಶ್ರೀಕೃಷ್ಣನು ಹೀಗೆ ಬ್ರಾಹ್ಮಣನಲ್ಲಿ ವಿಚಾರಿಸಿದಾಗ, ಅವನು ಎಲ್ಲವನ್ನೂ ಅರುಹಿದ ಬಳಿಕ ರುಕ್ಮಿಣೀದೇವಿಯ ಸಂದೇಶವನ್ನು ಭಗವಂತನಲ್ಲಿ ನಿವೇದಿಸಿಕೊಂಡನು. ॥ ೩೬ ॥

ರುಕ್ಮಿಣೀದೇವಿಯು ಹೇಳಿರುವಳು – ಓ ತ್ರಿಭುವನ ಸುಂದರನೇ! ನಿನ್ನ ಗುಣಗಳು ಶ್ರವಣಿಸುವವರ ಕಿವಿಗಳ ಮೂಲಕ ಹೃದಯವನ್ನು ಪ್ರವೇಶಿಸಿ ಸರ್ವಾಂಗಗಳ ತಾಪವನ್ನು, ಜನ್ಮ-ಜನ್ಮಾಂತರದ ಉರಿಯನ್ನು ಕಳೆಯುತ್ತವೆ. ನಿನ್ನ ರೂಪ-ಸೌಂದರ್ಯವಾದರೋ ಕಣ್ಣುಗಳಿಗೆ ಧರ್ಮಾರ್ಥಕಾಮ - ಮೋಕ್ಷಗಳೆಂಬ ನಾಲ್ಕು ಪುರುಷಾರ್ಥಗಳನ್ನೂ ಕೊಡುತ್ತದೆ. ನಿನ್ನ ದಿವ್ಯರೂಪವನ್ನು ಸಂದರ್ಶಿಸಿದವರಿಗೆ ಸಕಲ ಸಿದ್ಧಿಗಳೂ ದೊರಕುತ್ತವೆ. ಅಂತಹ ಗುಣಸಾಗರನಾದ ಅಚ್ಯುತನೇ! ನಿನ್ನಲ್ಲಿ ನನ್ನ ಮನಸ್ಸು ಯಾವುದೇ ನಾಚಿಕೆಯಿಲ್ಲದೆ ನೆಟ್ಟಿದೆ. ॥ ೩೭ ॥ ಪ್ರೇಮಸ್ವರೂಪನಾದ ಶ್ಯಾಮಸುಂದರನೇ! ಯಾವ ದೃಷ್ಟಿಯಿಂದ ನೋಡಿದರೂ, ಕುಲ, ಶೀಲ, ಸ್ವಭಾವ, ಸೌಂದರ್ಯ, ವಿದ್ಯೆ, ವಯಸ್ಸು, ಧನ-ಧಾಮ - ಹೀಗೆ ಎಲ್ಲದರಲ್ಲಿಯೂ ನೀನು ಅದ್ವಿತೀಯನಾಗಿರುವೆ. ನಿನ್ನಂತೆ ನೀನೇ ಆಗಿರುವೆ. ನರಶ್ರೇಷ್ಠನೇ! ನೀನೇ ಹೇಳು. ಸತ್ಕುಲ ಪ್ರಸೂತೆಯಾದ, ಧೈರ್ಯಶಾಲಿಯಾದ, ಯಾವ ಕನ್ಯೆಯು ತಾನೇ ಕಾಲಪ್ರಾಪ್ತಳಾದಾಗ ಸಕಲ ಸದ್ಗುಣ ಸಂಪನ್ನನಾದ, ನರಲೋಕದ ಪ್ರಾಣಿಗಳ ಮನಸ್ಸನ್ನು ಆನಂದಗೊಳಿಸುವ ಸುಂದರನಾದ ನಿನ್ನನ್ನು ಪತಿಯನ್ನಾಗಿ ವರಿಸದೇ ಇರುವಳು? ॥ ೩೮ ॥ ಪ್ರಿಯತಮನೇ! ನಾನು ನಿನ್ನನ್ನು ಪತಿಯನ್ನಾಗಿ ವರಿಸಿಬಿಟ್ಟಿದ್ದೇನೆ. ನಾನು ನಿನಗೆ ಆತ್ಮಸಮರ್ಪಣೆ ಮಾಡಿರುವೆನು. ನೀನು ಅಂತರ್ಯಾಮಿಯಾಗಿರುವೆ. ನನ್ನ ಹೃದಯದಲ್ಲಿರುವುದನ್ನು ನೀನು ತಿಳಿದೇ ಇರುವೆ. ನೀನು ಇಲ್ಲಿಗೆ ಬಂದು ನನ್ನನ್ನು ಪತ್ನಿಯನ್ನಾಗಿ ಸ್ವೀಕರಿಸು. ಕಮಲನಯನ! ಪ್ರಾಣವಲ್ಲಭ! ನಾನು ನಿನ್ನಂತಹ ವೀರನಿಗೆ ಸಮರ್ಪಿತಳಾಗಿರುವೆನು; ನಿನ್ನವಳಾಗಿರುವೆನು. ಸಿಂಹನಿಗೆ ಸಿಗಬೇಕಾದ ಭಾಗವನ್ನು ನರಿಯು ಮುಟ್ಟುವ ಆ ಶಿಶುಪಾಲನು ಎಲ್ಲಾದರೂ ಹತ್ತಿರಕ್ಕೆ ಬಂದು ನನ್ನನ್ನು ಸ್ಪರ್ಶಿಸದಿರಲಿ. ॥ ೩೯ ॥ ನಾನು ಈ ಹಿಂದೆ ಮಾಡಿದ ಇಷ್ಟಾ-ಪೂರ್ತಾದಿಗಳಿಂದಲೂ, ದಾನಗಳಿಂದಲೂ, ವ್ರತನಿಯಮಾದಿಗಳಿಂದಲೂ, ದೇವ-ಬ್ರಾಹ್ಮಣ ಗುರು ಜನರನ್ನು ಪೂಜಿಸುವುದರಿಂದಲೂ ಭಗವಾನ ಪರಮೇಶ್ವರನ ಆರಾಧನೆಯಿಂದ ಅವನು ಪ್ರಸನ್ನನಾಗಿದ್ದರೆ ಭಗವಾನ್ ಶ್ರೀಕೃಷ್ಣನು ಆಗಮಿಸಿ ನನ್ನ ಪಾಣಿಗ್ರಹಣಮಾಡಲಿ. ಶಿಶುಪಾಲನೇ ಆಗಲೀ, ಬೇರೆ ಯಾರೇ ಆಗಲಿ ನನ್ನ ಕೈ ಹಿಡಿಯುವುದು ಬೇಡ. ॥ ೪೦ ॥ ಪ್ರಭೋ! ನೀನು ಅಜಿತನಾಗಿರುವೆ. ನನ್ನ ವಿವಾಹವು ನಡೆಯುವ ಒಂದು ದಿನ ಮುಂಚಿತವಾಗಿ ನೀನು ನಮ್ಮ ರಾಜಧಾನಿಗೆ ಗುಪ್ತರೂಪದಿಂದ ಬಂದುಬಿಡು. ಮತ್ತೆ ಶಿಶುಪಾಲ ಹಾಗೂ ಜರಾಸಂಧರ ಸೇನೆಗಳನ್ನು ಧ್ವಂಸಮಾಡಿ ವೀರ್ಯಶುಲ್ಕಳಾದ ನನ್ನನ್ನು ಬಲವಂತವಾಗಿ ಸೆಳೆದೊಯ್ದು ರಾಕ್ಷಸವಿಧಿಯಂತೆ ಪಾಣಿಗ್ರಹಣ ಮಾಡಿಕೋ. ॥ ೪೧ ॥

ಅಂತಃಪುರಾಂತರಚರೀಮನಿಹತ್ಯ ಬಂಧೂಂ-
ಸ್ತ್ವಾಮುದ್ವಹೇ ಕಥಮಿತಿ ಪ್ರವದಾಮ್ಯುಪಾಯಮ್ ।
ಪೂರ್ವೇದ್ಯುರಸ್ತಿ ಮಹತೀ ಕುಲದೇವಿಯಾತ್ರಾ
ಯಸ್ಯಾಂ ಬಹಿರ್ನವವಧೂರ್ಗಿರಿಜಾಮುಪೇಯಾತ್ ॥ ೪೨ ॥

ಅಂತಃಪುರದ ರಾಣೀವಾಸದಲ್ಲಿರುವ ನನ್ನನ್ನು ಅಪಹರಿಸಿಕೊಂಡು ಬರಬೇಕಾದರೆ ತಡೆಯಲು ಬರುವ ರಾಜಭಟರನ್ನು ಬಂಧುಗಳನ್ನು ಕೊಲ್ಲದೆ ಹೇಗೆ ತರಲಿ? ಎಂದು ನೀನು ಯೋಚಿಸುವೆಯಾದರೆ, ಇದಕ್ಕೊಂದು ಉಪಾಯವನ್ನು ನಾನು ತಿಳಿಸುತ್ತೇನೆ. ನಮ್ಮ ಕುಲಾಚಾರದಂತೆ ವಿವಾಹದ ಹಿಂದಿನ ದಿವಸ ಕುಲದೇವಿಯದರ್ಶನ ಮಾಡಲು ದೊಡ್ಡದೊಂದು ಯಾತ್ರೆಯೇ ಹೊರಡುತ್ತದೆ. ಅದರಲ್ಲಿ ವಿವಾಹವಾಗುವ ನವವಧುವು ಗಿರಿಜಾದೇವಿಯ ಮಂದಿರಕ್ಕೆ ಹೋಗಬೇಕು. ಆ ಸಮಯದಲ್ಲಿ ನೀನು ನನ್ನನು ಅಪಹರಿಸಿಕೊಂಡು ಹೋಗಬಹುದು. ॥ ೪೨ ॥

ಯಸ್ಯಾಂಘ್ರಿಪಂಕಜರಜಸ್ನಪನಂ ಮಹಾಂತೋ
ವಾಂಛಂತ್ಯುಮಾಪತಿರಿವಾತ್ಮತಮೋಽಪಹತ್ಯೈ ।
ಯರ್ಹ್ಯಂಬುಜಾಕ್ಷ ನ ಲಭೇಯ ಭವತ್ಪ್ರಸಾದಂ
ಜಹ್ಯಾಮಸೂನ್ ವ್ರತಕೃಶಾನ್ ಶತಜನ್ಮಭಿಃ ಸ್ಯಾತ್ ॥ ೪೩ ॥

ಕಮಲಾಕ್ಷನೇ! ಉಮಾಪತಿಯಾದ ಭಗವಾನ್ ಶಂಕರನಿಗೆ ಸಮಾನರಾದ ದೊಡ್ಡ-ದೊಡ್ಡ ಮಹಾಪುರುಷರೂ ಕೂಡ ಆತ್ಮಶುದ್ಧಿಗಾಗಿ ನಿನ್ನ ಚರಣಕಮಲಗಳ ಧೂಳಿಯಲ್ಲಿ ಸ್ನಾನಮಾಡಲು ಬಯಸುತ್ತಾರೆ. ನನಗೇನಾದರೂ ನಿನ್ನ ಪ್ರಸಾದವು, ಚರಣರಜವು ಪಡೆಯಲಾಗದಿದ್ದರೆ ವ್ರತೋಪವಾಸಾದಿಗಳಿಂದ ಶರೀರವನ್ನು ಶೋಷಿಸಿ ಪ್ರಾಣತ್ಯಾಗಮಾಡುತ್ತೇನೆ. ಬೇಕಾದರೆ ನೂರಾರು ಜನ್ಮಗಳು ಕಳೆದಾದರೂ ನಿನ್ನ ಆ ಪ್ರಸಾದವನ್ನು ಅವಶ್ಯಕವಾಗಿ ಪಡೆಯುತ್ತೇನೆ. ॥ ೪೩ ॥

ಬ್ರಾಹ್ಮಣ ಉವಾಚ

ಇತ್ಯೇತೇ ಗುಹ್ಯಸಂದೇಶಾ ಯದುದೇವ ಮಯಾಽಽಹೃತಾಃ ।
ವಿಮೃಶ್ಯ ಕರ್ತುಂ ಯಚ್ಚಾತ್ರ ಕ್ರಿಯತಾಂ ತದನಂತರಮ್ ॥ ೪೪ ॥

ಬ್ರಾಹ್ಮಣನು ಹೇಳುತ್ತಾನೆ - ಯದುವಂಶ ಶಿರೋಮಣಿಯೇ! ಇದೇ ರುಕ್ಮಿಣಿಯು ಕಳಿಸಿದ ಗುಹ್ಯವಾದ ಸಂದೇಶವಾಗಿದೆ. ಅದನ್ನು ಎತ್ತಿಕೊಂಡು ನಾನು ನಿನ್ನ ಬಳಿಗೆ ಬಂದಿರುವೆನು. ಈ ಸಂಬಂಧದಲ್ಲಿ ಏನು ಮಾಡಬೇಕೋ ಅದನ್ನು ಪರ್ಯಾಲೋಚಿಸಿ, ಅದಕ್ಕನುಸಾರವಾಗಿ ಅತಿ ತ್ವರೆಯಿಂದ ಕಾರ್ಯವನ್ನು ಮಾಡು. ॥ ೪೪ ॥

ಐವತ್ತೆರಡನೆಯ ಅಧ್ಯಾಯವು ಮುಗಿಯಿತು. ॥ ೫೨ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮ ಸ್ಕಂಧೇ ಉತ್ತರಾರ್ಧೇ
ರುಕ್ಮಿಣ್ಯುದ್ವಾಹಪ್ರಸ್ತಾವೇ ದ್ವಿಪಂಚಾಶತ್ತಮೋಽಧ್ಯಾಯಃ ॥ ೫೨ ॥

ಐವತ್ತಮೂರನೆಯ ಅಧ್ಯಾಯ

ರುಕ್ಮಿಣೀ ಕಲ್ಯಾಣ

ಶ್ರೀಶುಕ ಉವಾಚ

ವೈದರ್ಭ್ಯಾಃ ಸ ತು ಸಂದೇಶಂ ನಿಶಮ್ಯ ಯದುನಂದನಃ ।
ಪ್ರಗೃಹ್ಯ ಪಾಣಿನಾ ಪಾಣಿಂ ಪ್ರಹಸನ್ನಿದಮಬ್ರವೀತ್ ॥ ೧ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ - ಪರೀಕ್ಷಿತನೇ! ವಿದರ್ಭ ರಾಜಪುತ್ರಿಯಾದ ರುಕ್ಮಿಣಿಯ ಈ ಸಂದೇಶವನ್ನು ಕೇಳಿ ಯದುವಂಶಜನಾದ ಶ್ರೀಕೃಷ್ಣನು ತನ್ನ ಕೈಯಿಂದ ಬ್ರಾಹ್ಮಣನ ಕೈಯನ್ನು ಹಿಡಿದುಕೊಂಡು ನಗುತ್ತಾ ಇಂತೆಂದನು. ॥ ೧ ॥

ಶ್ರೀಭಗವಾನುವಾಚ

ತಥಾಹಮಪಿ ತಚ್ಚಿತ್ತೋ ನಿದ್ರಾಂ ಚ ನ ಲಭೇ ನಿಶಿ ।
ವೇದಾಹಂ ರುಕ್ಮಿಣಾ ದ್ವೇಷಾನ್ಮಮೋದ್ವಾಹೋ ನಿವಾರಿತಃ ॥ ೨ ॥

ಭಗವಾನ್ ಶ್ರೀಕೃಷ್ಣನು ಹೇಳಿದನು - ಬ್ರಾಹ್ಮಣೋತ್ತಮರೇ! ವಿದರ್ಭರಾಜಕುಮಾರಿಯು ನನ್ನನ್ನು ಬಯಸುವಂತೆಯೇ ನಾನು ಆಕೆಯನ್ನು ಬಯಸುತ್ತಿರುವೆನು. ನನ್ನ ಮನಸ್ಸು ಅವಳಲ್ಲೇ ನೆಲೆಸಿಬಿಟ್ಟಿದೆ. ರಾತ್ರಿಯಲ್ಲಿ ನನಗೆ ನಿದ್ದೆಯೇ ಬರುವುದಿಲ್ಲ. ರುಕ್ಮಿಯು ದ್ವೇಷದಿಂದ ನನ್ನ ವಿವಾಹವನ್ನು ತಡೆಯುತ್ತಿದ್ದಾನೆ ಎಂಬುದನ್ನು ನಾನು ಬಲ್ಲೆನು. ॥ ೨ ॥

ತಾಮಾನಯಿಷ್ಯ ಉನ್ಮಥ್ಯ ರಾಜನ್ಯಾಪಸದಾನ್ ಮೃಧೇ ।
ಮತ್ಪರಾಮನವದ್ಯಾಂಗೀಮೇಧಸೋಽಗ್ನಿಶಿಖಾಮಿವ ॥ ೩ ॥

ಶ್ರೀಶುಕ ಉವಾಚ

ಉದ್ವಾಹರ್ಕ್ಷಂ ಚ ವಿಜ್ಞಾಯ ರುಕ್ಮಿಣ್ಯಾ ಮಧುಸೂದನಃ ।
ರಥಃ ಸಂಯುಜ್ಯತಾಮಾಶು ದಾರುಕೇತ್ಯಾಹ ಸಾರಥಿಮ್ ॥ ೪ ॥

ಸ ಚಾಶ್ವೈಃ ಶೈಬ್ಯಸುಗ್ರೀವಮೇಘಪುಷ್ಪಬಲಾಹಕೈಃ ।
ಯುಕ್ತಂ ರಥಮುಪಾನೀಯ ತಸ್ಥೌ ಪ್ರಾಂಜಲಿರಗ್ರತಃ ॥ ೫ ॥

ಆರುಹ್ಯ ಸ್ಯಂದನಂ ಶೌರಿರ್ದ್ವಿಜಮಾರೋಪ್ಯ ತೂರ್ಣಗೈಃ ।
ಆನರ್ತಾದೇಕರಾತ್ರೇಣ ವಿದರ್ಭಾನಗಮದ್ಧಯೈಃ ॥ ೬ ॥

ರಾಜಾ ಸ ಕುಂಡಿನಪತಿಃ ಪುತ್ರಸ್ನೇಹವಶಂ ಗತಃ ।
ಶಿಶುಪಾಲಾಯ ಸ್ವಾಂ ಕನ್ಯಾಂ ದಾಸ್ಯನ್ ಕರ್ಮಾಣ್ಯಕಾರಯತ್ ॥ ೭ ॥

ಪುರಂ ಸಮ್ಮೃಷ್ಟಸಂಸಿಕ್ತಮಾರ್ಗರಥ್ಯಾಚತುಷ್ಪಥಮ್ ।
ಚಿತ್ರಧ್ವಜಪತಾಕಾಭಿಸ್ತೋರಣೈಃ ಸಮಲಂಕೃತಮ್ ॥ ೮ ॥

ಸ್ರಗ್ಗಂಧಮಾಲ್ಯಾಭರಣೈರ್ವಿರಜೋಽಂಬರಭೂಷಿತೈಃ ।
ಜುಷ್ಟಂ ಸ್ತ್ರೀಪುರುಷೈಃ ಶ್ರೀಮದ್ಗೃಹೈರಗುರುಧೂಪಿತೈಃ ॥ ೯ ॥

ಪಿತೄನ್ ದೇವಾನ್ ಸಮಭ್ಯರ್ಚ್ಯ ವಿಪ್ರಾಂಶ್ಚ ವಿಧಿವನ್ನೃಪ ।
ಭೋಜಯಿತ್ವಾ ಯಥಾನ್ಯಾಯಂ ವಾಚಯಾಮಾಸ ಮಂಗಲಮ್ ॥ ೧೦ ॥

ಸುಸ್ನಾತಾಂ ಸುದತೀಂ ಕನ್ಯಾಂ ಕೃತಕೌತುಕಮಂಗಲಾಮ್ ।
ಅಹತಾಂಶುಕಯುಗ್ಮೇನ ಭೂಷಿತಾಂ ಭೂಷಣೋತ್ತಮೈಃ ॥ ೧೧ ॥

ಚಕ್ರುಃ ಸಾಮರ್ಗ್ಯಜುರ್ಮಂತ್ರೈರ್ವಧ್ವಾ ರಕ್ಷಾಂ ದ್ವಿಜೋತ್ತಮಾಃ ।
ಪುರೋಹಿತೋಽಥರ್ವವಿದ್ವೈ ಜುಹಾವ ಗ್ರಹಶಾಂತಯೇ ॥ ೧೨ ॥

ಹಿರಣ್ಯರೂಪ್ಯವಾಸಾಂಸಿ ತಿಲಾಂಶ್ಚ ಗುಡಮಿಶ್ರಿತಾನ್ ।
ಪ್ರಾದಾದ್ಧೇನೂಂಶ್ಚ ವಿಪ್ರೇಭ್ಯೋ ರಾಜಾ ವಿಧಿವಿದಾಂ ವರಃ ॥ ೧೩ ॥

ಆದರೆ ವಿಪ್ರೋತ್ತಮರೇ! ಎರಡು ಅರಣಿಗಳನ್ನು ಮಥಿಸಿ ಅಗ್ನಿಯನ್ನು ಹೊರತರುವಂತೆಯೇ ಯುದ್ಧದಲ್ಲಿ ಹಾರಾಂತ ಕ್ಷತ್ರಿಯ ಕುಲಕಲಂಕರಾದ ಶಿಶುಪಾಲ, ಜರಾಸಂಧರೇ ಮೊದಲಾದವರನ್ನು ಮಥಿಸಿ ನನ್ನಲ್ಲಿಯೇ ಆಸಕ್ತಳಾಗಿರುವ ಪರಮ ಸುಂದರಿಯಾದ ರುಕ್ಮಿಣಿಯನ್ನು ಕರೆತರುತ್ತೇನೆ. ॥ ೩ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಮಧುಸೂದನ ಶ್ರೀಕೃಷ್ಣನು ಬ್ರಾಹ್ಮಣನಿಗೆ ಹೀಗೆ ಹೇಳಿ ರುಕ್ಮಿಣಿಯ ವಿವಾಹದ ಮುಹೂರ್ತವನ್ನು ಅವನಿಂದ ತಿಳಿದುಕೊಂಡು ಪ್ರಯಾಣಕ್ಕಾಗಿ ರಥವನ್ನು ಬೇಗನೇ ಸಿದ್ಧಗೊಳಿಸುವಂತೆ ಸಾರಥಿಯಾದ ದಾರುಕನಿಗೆ ಹೇಳಿದನು. ॥ ೪ ॥ ದಾರುಕನು ಭಗವಂತನ ರಥಕ್ಕೆ ಶೈಬ್ಯ-ಸುಗ್ರೀವ-ಮೇಘಪುಷ್ಪ ಮತ್ತು ಬಲಾಹಕಗಳೆಂಬ ದಿವ್ಯ ಕುದುರೆಗಳನ್ನು ಹೂಡಿ, ಸಜ್ಜುಗೊಳಿಸಿ ಕೈ ಜೋಡಿಸಿಕೊಂಡು ಶ್ರೀಕೃಷ್ಣನ ಮುಂದೆ ನಿಂತುಕೊಂಡನು.॥ ೫ ॥ ಶೌರಿಯು ಮೊದಲು ಬ್ರಾಹ್ಮಣನನ್ನು ರಥದಲ್ಲಿ ಹತ್ತಿಸಿ, ತಾನೂ ರಥಾರೂಢನಾಗಿ ಶೀಘ್ರಗಾಮಿಗಳಾದ ಕುದುರೆಗಳ ಮೂಲಕ ಒಂದೇ ರಾತ್ರಿಯಲ್ಲಿ ಆನರ್ತದೇಶದಿಂದ ವಿದರ್ಭದೇಶಕ್ಕೆ ಬಂದು ತಲುಪಿದನು. ॥ ೬ ॥ ಕುಂಡಿನನರೇಶನಾದ ಭೀಷ್ಮಕನು ತನ್ನ ಮಗನಾದ ರುಕ್ಮಿಯ ಮೇಲಿನ ವ್ಯಾಮೋಹದಿಂದ ಅವನ ಮಾತಿನಂತೆ ತನ್ನ ಕನ್ಯೆಯಾದ ರುಕ್ಮಿಣಿಯನ್ನು ಶಿಶುಪಾಲನಿಗೆ ಕೊಟ್ಟು ಮದುವೆಮಾಡಲು ವಿವಾಹೋತ್ಸವದ ಸಿದ್ಧತೆಗಳನ್ನು ಮಾಡತೊಡಗಿದನು. ॥ ೭ ॥

ಕುಂಡಿನ ನಗರದ ರಾಜಬೀದಿಗಳನ್ನು, ನಾಲ್ಕು ಬೀದಿಗಳು ಸೇರುವ ಚೌಕಗಳನ್ನು, ಗುಡಿಸಿ ಸಾರಿಸಿ, ಗಂಧೋದಕವನ್ನು ಎರಚಲಾಗಿತ್ತು. ಚಿತ್ರ-ವಿಚಿತ್ರವಾದ ಧ್ವಜಗಳಿಂದಲೂ, ಪತಾಕೆಗಳಿಂದಲೂ, ತೋರಣಗಳಿಂದಲೂ ಸಿಂಗರಿಸಿತ್ತು. ॥ ೮ ॥ ಅಲ್ಲಿಯ ಸ್ತ್ರೀ-ಪುರುಷರೆಲ್ಲರೂ ಪುಷ್ಪಹಾರಗಳಿಂದಲೂ, ಸುಗಂಧಯುಕ್ತವಾದ ಮಾಲೆಗಳಿಂದಲೂ, ನಾನಾ ವಿಧವಾದ ಸ್ವರ್ಣಾಭರಣಗಳಿಂದಲೂ, ನವೀನ ವಸ್ತ್ರಗಳಿಂದಲೂ ಭೂಷಿತರಾಗಿದ್ದರು. ಅಂದವಾದ ಮನೆಗಳಿಂದ ಅಗರು - ಚಂದನದ ಸುಗಂಧವು ಹೊರಸೂಸುತ್ತಿತ್ತು. ॥ ೯ ॥ ಪರೀಕ್ಷಿತನೇ! ಮಹಾರಾಜನಾದ ಭೀಷ್ಮಕನು ದೇವ-ಪಿತೃಗಳನ್ನು ಯಥಾವಿಧಿಯಾಗಿ ಪೂಜಿಸಿ ಬ್ರಾಹ್ಮಣರಿಗೆ ಭೋಜನವನ್ನು ಮಾಡಿಸಿ, ನಿಯಮಾನುಸಾರ ಸ್ವಸ್ತಿವಾಚನವನ್ನು ಮಾಡಿಸಿದನು. ॥ ೧೦ ॥ ಸುಂದರವಾದ ಹಲ್ಲುಗಳಿಂದ ಶೋಭಿಸುತ್ತಿದ್ದ ಪರಮಸುಂದರಿಯಾದ ರುಕ್ಮಿಣೀದೇವಿಗೆ ಮಂಗಳಸ್ನಾನವನ್ನು ಮಾಡಿಸಿ, ನೂತನವಸ್ತ್ರಗಳನ್ನುಡಿಸಿ, ದಿವ್ಯಾಭರಣಗಳನ್ನು ತೊಡಿಸಿ, ಕೈಗಳಿಗೆ ಮಂಗಳಕರವಾದ ಕಂಕಣವನ್ನು ಕಟ್ಟಿದರು. ॥ ೧೧ ॥ ದ್ವಿಜಶ್ರೇಷ್ಠರು ಋಗ್ಯಜುಃ ಸಾಮ ಮಂತ್ರಗಳಿಂದ ನವವಧುವಿಗೆ ರಕ್ಷಾಬಂಧನವನ್ನು ಮಾಡಿದರು. ಅಥರ್ವವೇದದ ವಿದ್ವಾಂಸರಾದ ಪುರೋಹಿತರು ಗ್ರಹಶಾಂತಿಗಾಗಿ ಹೋಮವನ್ನು ಮಾಡಿದರು. ॥ ೧೨ ॥ ವಿಧಿನಿಯಮಗಳನ್ನು ಬಲ್ಲವರಲ್ಲಿ ಶ್ರೇಷ್ಠನಾದ ಭೀಷ್ಮಕಮಹಾರಾಜನು ಬ್ರಾಹ್ಮಣರಿಗೆ ಚಿನ್ನವನ್ನು ಬೆಳ್ಳಿಯನ್ನು ವಸ್ತ್ರಗಳನ್ನು ಬೆಲ್ಲದೊಡನೆ ಸೇರಿಸಿದ ಎಳ್ಳನ್ನು ಗೋವುಗಳನ್ನು ದಾನಮಾಡಿದನು. ॥ ೧೩ ॥

ಏವಂ ಚೇದಿಪತೀ ರಾಜಾ ದಮಘೋಷಃ ಸುತಾಯ ವೈ ।
ಕಾರಯಾಮಾಸ ಮಂತ್ರಜ್ಞೈಃ ಸರ್ವಮಭ್ಯುದಯೋಚಿತಮ್
॥ ೧೪ ॥

ಮದಚ್ಯುದ್ಭಿರ್ಗಜಾನೀಕೈಃ ಸ್ಯಂದನೈರ್ಹೇಮಮಾಲಿಭಿಃ ।
ಪತ್ತ್ಯಶ್ವಸಂಕುಲೈಃ ಸೈನ್ಯೈಃ ಪರೀತಃ ಕುಂಡಿನಂ ಯಯೌ
॥ ೧೫ ॥

ತಂ ವೈ ವಿದರ್ಭಾಧಿಪತಿಃ ಸಮಭ್ಯೇತ್ಯಾಭಿಪೂಜ್ಯ ಚ ।
ನಿವೇಶಯಾಮಾಸ ಮುದಾ ಕಲ್ಪಿತಾನ್ಯನಿವೇಶನೇ
॥ ೧೬ ॥

ತತ್ರ ಶಾಲ್ವೋ ಜರಾಸಂಧೋ ದಂತವಕ್ತ್ರೋ ವಿದೂರಥಃ ।
ಆಜಗ್ಮುಶ್ಚೈದ್ಯಪಕ್ಷೀಯಾಃ ಪೌಂಡ್ರಕಾದ್ಯಾಃ ಸಹಸ್ರಶಃ
॥ ೧೭ ॥

ಕೃಷ್ಣರಾಮದ್ವಿಷೋ ಯತ್ತಾಃ ಕನ್ಯಾಂ ಚೈದ್ಯಾಯ ಸಾಧಿತುಮ್ ।
ಯದ್ಯಾಗತ್ಯ ಹರೇತ್ ಕೃಷ್ಣೋ ರಾಮಾದ್ಯೈರ್ಯದುಭಿರ್ವೃತಃ
॥ ೧೮ ॥

ಯೋತ್ಸ್ಯಾಮಃ ಸಂಹತಾಸ್ತೇನ ಇತಿ ನಿಶ್ಚಿತಮಾನಸಾಃ ।
ಆಜಗ್ಮುರ್ಭೂಭುಜಃ ಸರ್ವೇ ಸಮಗ್ರಬಲವಾಹನಾಃ
॥ ೧೯ ॥

ಶ್ರುತ್ವೈತದ್ಭಗವಾನ್ ರಾಮೋ ವಿಪಕ್ಷೀಯನೃಪೋದ್ಯಮಮ್ ।
ಕೃಷ್ಣಂ ಚೈಕಂ ಗತಂ ಹರ್ತುಂ ಕನ್ಯಾಂ ಕಲಹಶಂಕಿತಃ
॥ ೨೦ ॥

ಬಲೇನ ಮಹತಾ ಸಾರ್ಧಂ ಭ್ರಾತೃಸ್ನೇಹಪರಿಪ್ಲುತಃ ।
ತ್ವರಿತಃ ಕುಂಡಿನಂ ಪ್ರಾಗಾದ್ಗಜಾಶ್ವರಥಪತ್ತಿಭಿಃ
॥ ೨೧ ॥

ಭೀಷ್ಮಕನ್ಯಾ ವರಾರೋಹಾ ಕಾಂಕ್ಷಂತ್ಯಾಗಮನಂ ಹರೇಃ ।
ಪ್ರತ್ಯಾಪತ್ತಿಮಪಶ್ಯಂತೀ ದ್ವಿಜಸ್ಯಾಚಿಂತಯತ್ತದಾ
॥ ೨೨ ॥

ಅಹೋ ತ್ರಿಯಾಮಾಂತರಿತ ಉದ್ವಾಹೋ ಮೇಽಲ್ಪರಾಧಸಃ ।
ನಾಗಚ್ಛತ್ಯರವಿಂದಾಕ್ಷೋ ನಾಹಂ ವೇದ್ಮ್ಯತ್ರ ಕಾರಣಮ್ ।
ಸೋಽಪಿ ನಾವರ್ತತೇಽದ್ಯಾಪಿ ಮತ್ಸಂದೇಶಹರೋ ದ್ವಿಜಃ
॥ ೨೩ ॥

ಇದೇ ರೀತಿಯಲ್ಲಿ ಚೇದಿರಾಜನಾದ ದಮಘೋಷನೂ ತನ್ನ ಮಗನಾದ ಶಿಶುಪಾಲನ ವಿವಾಹದ ಸಂಬಂಧವಾಗಿ ಮಂತ್ರಜ್ಞರಾದ ಬ್ರಾಹ್ಮಣರಿಂದ ಮಾಂಗಲಿಕ ಕರ್ಮಗಳನ್ನು ಮಾಡಿಸಿದನು. ॥ ೧೪ ॥ ಅನಂತರ ಮದೋದಕವನ್ನು ಸುರಿಸುತ್ತಿದ್ದ ಗಜಸೈನ್ಯದಿಂದಲೂ, ಸುವರ್ಣಮಾಲೆಗಳಿಂದ ವಿಭೂಷಿತವಾಗಿದ್ದ ರಥಸೈನ್ಯದಿಂದಲೂ, ಪದಾತಿ, ಅಶ್ವಸೈನ್ಯದಿಂದಲೂ ಕೂಡಿಕೊಂಡು ಕುಂಡಿನ ನಗರಕ್ಕೆ ಬಂದು ತಲುಪಿದನು. ॥ ೧೫ ॥ ದಿಬ್ಬಣವು ಬಂದಿತೆಂದು ತಿಳಿದ ವಿದರ್ಭಾಧಿಪತಿ ಭೀಷ್ಮಕನು ಮುಂದೆ ಹೋಗಿ ಅವರನ್ನು ಸ್ವಾಗತ-ಸತ್ಕಾರಗಳಿಂದ ಪದ್ಧತಿಯಂತೆ ಪೂಜಿಸಿದನು. ಬಳಿಕ ಅವರಿಗಾಗಿ ಹಿಂದೆಯೇ ನಿಶ್ಚಯಿಸಿದ ರಾಜಭವನದಲ್ಲಿ ಬೀಗರನ್ನು ಇಳಿಸಿದನು. ॥ ೧೬ ॥ ಶಿಶುಪಾಲನ ಕಡೆಯವರಾಗಿ ಶಾಲ್ವ, ಜರಾಸಂಧ, ದಂತವಕ್ತ್ರ, ವಿದೂರಥ, ಪೌಂಡ್ರಕ ಮೊದಲಾದ ಸಾವಿರಾರು ರಾಜರು ಆಗಮಿಸಿದ್ದರು. ॥ ೧೭ ॥ ಆ ರಾಜರೆಲ್ಲರೂ ಶ್ರೀಕೃಷ್ಣ ಮತ್ತು ಬಲರಾಮರ ವಿರೋಧಿಗಳೇ ಆಗಿದ್ದರು. ರಾಜಕುಮಾರಿ ರುಕ್ಮಿಣಿಯು ಶಿಶುಪಾಲನಿಗೇ ಸಿಗಬೇಕೆಂಬ ಆಶೆಯಿಂದ ಬಂದಿದ್ದರು. ಶ್ರೀಕೃಷ್ಣನು ಬಲರಾಮರೇ ಮೊದಲಾದ ಯದುವಂಶೀಯರೊಂದಿಗೆ ಬಂದು ರುಕ್ಮಿಣಿಯನ್ನು ಅಪಹರಿಸಲು ಪ್ರಯತ್ನಿಸಿದರೆ ನಾವೆಲ್ಲರೂ ಸೇರಿ ಯುದ್ಧಮಾಡಬೇಕೆಂದೇ ಅವರೆಲ್ಲರೂ ಮನಸ್ಸಿನಲ್ಲಿ ಮೊದಲೇ ನಿಶ್ಚಯಿಸಿದ್ದರು. ಆದರಿಂದಲೇ ಆ ರಾಜರುಗಳು ತಮ್ಮ-ತಮ್ಮ ಚತುರಂಗ ಸೈನ್ಯದೊಂದಿಗೆ ಬಂದಿದ್ದರು. ॥ ೧೮-೧೯ ॥

ಶತ್ರುಪಕ್ಷದ ಈ ಸನ್ನಾಹವು ಬಲರಾಮನಿಗೆ ತಿಳಿದು ಹೋಯಿತು. ತಮ್ಮನಾದ ಶ್ರೀಕೃಷ್ಣನು ಒಬ್ಬಂಟಿಗನಾಗಿಯೇ ರಾಜಕುಮಾರಿಯನ್ನು ಅಪಹರಿಸಿಕೊಂಡುಬರಲು ಹೋಗಿರುವನೆಂದು ತಿಳಿದಾಗ, ಕನ್ಯೆಯಸಲುವಾಗಿ ಎರಡೂ ಪಕ್ಷದಲ್ಲಿ ಯುದ್ಧವು ಸಂಭವಿಸಬಹು ದೆಂದು ಅವನಿಗೆ ಅನಿಸಿತು. ॥ ೨೦ ॥ ಶ್ರೀಕೃಷ್ಣನ ಬಲ-ಪರಾಕ್ರಮ ಗಳನ್ನು ಬಲರಾಮನು ತಿಳಿದಿದ್ದರೂ ಭ್ರಾತೃಸ್ನೇಹದಿಂದ ಹೃದಯ ತುಂಬಿಬಂದು, ಕೂಡಲೇ ಗಜರಥಾಶ್ವಪದಾತಿಗಳಿಂದ ಕೂಡಿದ ಚತುರಂಗಿಣಿ ಸೈನ್ಯದೊಂದಿಗೆ ಕುಂಡಿನನಗರಕ್ಕೆ ಪ್ರಯಾಣ ಮಾಡಿದನು. ॥ ೨೧ ॥

ಇತ್ತ ಪರಮಸುಂದರಿಯಾದ ರುಕ್ಮಿಣಿಯು ಭಗವಾನ್ ಶ್ರೀಕೃಷ್ಣನ ಶುಭಾಗಮನದ ಪ್ರತೀಕ್ಷೆ ಮಾಡುತ್ತಿದ್ದಳು. ಶ್ರೀಕೃಷ್ಣನ ಸಮಾಚಾರವನ್ನು ನನಗೆ ಯಾರು ತಿಳಿಸುವರು ? ಸಂದೇಶವನ್ನು ಕೊಂಡುಹೋದ ಬ್ರಾಹ್ಮಣನು ಇನ್ನೂ ಬಂದಿಲ್ಲ! ಹೀಗೆ ಯೋಚಿಸುತ್ತಾ ಚಿಂತಾತುರಳಾದಳು. ॥ ೨೨ ॥ ಅಯ್ಯೋ! ನಿರ್ಭಾಗ್ಯಳಾದ ನನ್ನ ವಿವಾಹಕ್ಕೆ ಕೇವಲ ಒಂದು ರಾತ್ರಿಮಾತ್ರ ಉಳಿದಿದೆ. ಆದರೆ ನನ್ನ ಜೀವನಸರ್ವಸ್ವನಾದ ಕಮಲನಯನ ಭಗವಂತನು ಇನ್ನೂ ಆಗಮಿಸಲಿಲ್ಲವಲ್ಲ! ಇದರ ಕಾರಣ ವೇನಿರಬಹುದು ? ತಿಳಿಯದಾಗಿದೆ. ಇಷ್ಟೇ ಅಲ್ಲ; ನನ್ನ ಸಂದೇಶವನ್ನು ಕೊಂಡುಹೋದ ವಿಪ್ರೋತ್ತಮನು ಇನ್ನೂ ಬಂದಿಲ್ಲವಲ್ಲ! ॥ ೨೩ ॥

ಅಪಿ ಮಯ್ಯನವದ್ಯಾತ್ಮಾ ದೃಷ್ಟ್ವಾ ಕಿಂಚಿಜ್ಜುಗುಪ್ಸಿತಮ್ ।
ಮತ್ಪಾಣಿಗ್ರಹಣೇ ನೂನಂ ನಾಯಾತಿ ಹಿ ಕೃತೋದ್ಯಮಃ ॥ ೨೪ ॥

ದುರ್ಭಗಾಯಾ ನ ಮೇ ಧಾತಾ ನಾನುಕೂಲೋ ಮಹೇಶ್ವರಃ ।
ದೇವೀ ವಾ ವಿಮುಖಾ ಗೌರೀ ರುದ್ರಾಣೀ ಗಿರಿಜಾ ಸತೀ ॥ ೨೫ ॥

ಏವಂ ಚಿಂತಯತೀ ಬಾಲಾ ಗೋವಿಂದಹೃತಮಾನಸಾ ।
ನ್ಯಮೀಲಯತ ಕಾಲಜ್ಞಾ ನೇತ್ರೇ ಚಾಶ್ರುಕಲಾಕುಲೇ ॥ ೨೬ ॥

ಏವಂ ವಧ್ವಾಃ ಪ್ರತೀಕ್ಷಂತ್ಯಾ ಗೋವಿಂದಾಗಮನಂ ನೃಪ ।
ವಾಮ ಊರುರ್ಭುಜೋ ನೇತ್ರಮಸ್ಫುರನ್ ಪ್ರಿಯಭಾಷಿಣಃ ॥ ೨೭ ॥

ಅಥ ಕೃಷ್ಣವಿನಿರ್ದಿಷ್ಟಃ ಸ ಏವ ದ್ವಿಜಸತ್ತಮಃ ।
ಅಂತಃಪುರಚರೀಂ ದೇವೀಂ ರಾಜಪುತ್ರೀಂ ದದರ್ಶ ಹ ॥ ೨೮ ॥

ಸಾ ತಂ ಪ್ರಹೃಷ್ಟವದನಮವ್ಯಗ್ರಾತ್ಮಗತಿಂ ಸತೀ ।
ಆಲಕ್ಷ್ಯ ಲಕ್ಷಣಾಭಿಜ್ಞಾ ಸಮಪೃಚ್ಛಚ್ಛುಚಿಸ್ಮಿತಾ ॥ ೨೯ ॥

ತಸ್ಯಾ ಆವೇದಯತ್ ಪ್ರಾಪ್ತಂ ಶಶಂಸ ಯದುನಂದನಮ್ ।
ಉಕ್ತಂ ಚ ಸತ್ಯವಚನಮಾತ್ಮೋಪನಯನಂ ಪ್ರತಿ ॥ ೩೦ ॥

ತಮಾಗತಂ ಸಮಾಜ್ಞಾಯ ವೈದರ್ಭೀ ಹೃಷ್ಟಮಾನಸಾ ।
ನ ಪಶ್ಯಂತೀ ಬ್ರಾಹ್ಮಣಾಯ ಪ್ರಿಯಮನ್ಯನ್ನನಾಮ ಸಾ ॥ ೩೧ ॥

ಪ್ರಾಪ್ತೌ ಶ್ರುತ್ವಾ ಸ್ವದುಹಿತುರುದ್ವಾಹಪ್ರೇಕ್ಷಣೋತ್ಸುಕೌ ।
ಅಭ್ಯಯಾತ್ತೂರ್ಯಘೋಷೇಣ ರಾಮಕೃಷ್ಣೌ ಸಮರ್ಹಣೈಃ ॥ ೩೨ ॥

ಮಧುಪರ್ಕಮುಪಾನೀಯ ವಾಸಾಂಸಿ ವಿರಜಾಂಸಿ ಸಃ ।
ಉಪಾಯನಾನ್ಯಭೀಷ್ಟಾನಿ ವಿಧಿವತ್ ಸಮಪೂಜಯತ್ ॥ ೩೩ ॥

ತಯೋರ್ನಿವೇಶನಂ ಶ್ರೀಮದುಪಾಕಲ್ಪ್ಯ ಮಹಾಮತಿಃ ।
ಸಸೈನ್ಯಯೋಃ ಸಾನುಗಯೋರಾತಿಥ್ಯಂ ವಿದಧೇ ಯಥಾ ॥ ೩೪ ॥

ಪರಿಶುದ್ಧ ಹೃದಯನಾದ ಭಗವಾನ್ ಶ್ರೀಕೃಷ್ಣನೇನಾದರೂ ನನ್ನಲ್ಲಿ ಯಾವುದಾದರೂ ಜುಗುಪ್ಸಿತವಾದ ವ್ಯವಹಾರವನ್ನು ಕಂಡು ನನ್ನ ಪಾಣಿಗ್ರಹಣಕ್ಕೆ ಪ್ರಯತ್ನಿಸದೆ ಇರುವುದು ಅವನು ಇಲ್ಲಿಗೆ ಬಾರದಿರುವ ಕಾರಣವಾಗಿರಬಹುದೇ ? ॥ ೨೪ ॥ ನಿಶ್ಚಯವಾಗಿಯೂ ನಾನು ದುರ್ಭಾಗ್ಯಳೇ ಸರಿ. ಬ್ರಹ್ಮನಾಗಲೀ, ಪರಶಿವನಾಗಲೀ ನನಗೆ ಅನುಕೂಲರಾಗಿಲ್ಲ, ರುದ್ರಪತ್ನಿಯಾದ ಗಿರಿರಾಜಕುಮಾರಿಯಾದ ಪಾರ್ವತಿಯೂ ನನ್ನ ವಿಷಯದಲ್ಲಿ ವಿಮುಖಳಾಗಿದ್ದಾಳೆಯೋ ಏನೋ ? ॥ ೨೫ ॥ ಪರೀಕ್ಷಿತನೇ ! ಗೋವಿಂದನಿಂದ ಅಪಹರಿಸಲ್ಪಟ್ಟ ಮನಸ್ಸುಳ್ಳ ರುಕ್ಮಿಣೀ ದೇವಿಯು ಹೀಗೆ ಚಿಂತಿಸುತ್ತಾ, 'ಇನ್ನೂ ಸಮಯವಿದೆಯಲ್ಲ!' ಎಂದು ತಿಳಿದು ಕಣ್ಣೀರಿನಿಂದ ತುಂಬಿದ ತನ್ನ ಕಂಗಳನ್ನು ಹಾಗೆಯೇ ಮುಚ್ಚಿಕೊಂಡಳು. ॥ ೨೬ ॥ ಪರೀಕ್ಷಿತನೇ ! ಹೀಗೆ ರುಕ್ಮಿಣಿಯು ಭಗವಾನ್ ಶ್ರೀಕೃಷ್ಣನ ಶುಭಾಗಮನವನ್ನು ಪ್ರತೀಕ್ಷೆ ಮಾಡುತ್ತಿದ್ದಾಗಲೇ ಆಕೆಯ ಎಡ ತೊಡೆ, ಭುಜ, ಕಣ್ಣುಗಳು ಅದುರತೊಡಗಿದವು. ಅವು ಪ್ರಿಯತಮನ ಆಗಮನದ ಪ್ರಿಯವಾರ್ತೆಯನ್ನು ಸೂಚಿಸುತ್ತಿದ್ದವು. ॥ ೨೭ ॥ ಅಷ್ಟರಲ್ಲಿಯೇ ಭಗವಾನ್ ಶ್ರೀಕೃಷ್ಣನು ಕಳಿಸಿರುವ ಆ ಬ್ರಾಹ್ಮಣನು ಬಂದು ಅಂತಃಪುರದಲ್ಲಿದ್ದ ರಾಜಕುಮಾರಿ ರುಕ್ಮಿಣಿಯನ್ನು ಧ್ಯಾನಮಗ್ನಳಾದ ಯಾರೋ ದೇವಿಯೇ ಆಗಿರುವಳೋ ಎಂಬಂತೆ ನೋಡಿದನು. ॥ ೨೮ ॥ ಸಾಧ್ವಿಯಾದ ರುಕ್ಮಿಣಿಯು - ಬ್ರಾಹ್ಮಣನ ಮುಖವು ಪ್ರಫುಲ್ಲಿತವಾಗಿದೆ. ಮುಖದಲ್ಲಿ, ಮನಸ್ಸಿನಲ್ಲಿ ಯಾವುದೇ ಆತುರ ಇಲ್ಲದ ಅವನನ್ನು ನೋಡಿ ಲಕ್ಷಣಶಾಸ್ತ್ರವನ್ನು ತಿಳಿದಿದ್ದ ಆಕೆಯು ತನ್ನ ಕಾರ್ಯವು ಸಿದ್ಧಿಯಾಗಿರುವುದೆಂದು ನಿಶ್ಚಯಿಸಿ, ಪ್ರಸನ್ನವದನೆಯಾಗಿ ಬ್ರಾಹ್ಮಣೋತ್ತಮನಲ್ಲಿ ಹೋದ ಕಾರ್ಯವೇನಾಯಿತೆಂದು ಕೇಳಿದಳು. ॥ ೨೯ ॥ ಆಗ ಭೂಸುರೋತ್ತಮನು – 'ಭಗವಾನ್ ಶ್ರೀಕೃಷ್ಣನು ಇಲ್ಲಿಗೆ ದಯಮಾಡಿಸಿರುವನು' ಎಂದು ನಿವೇದಿಸಿಕೊಂಡು ಶ್ರೀಕೃಷ್ಣನನ್ನು ಬಹಳವಾಗಿ ಪ್ರಶಂಸಿಸಿದನು. ರಾಜಕುಮಾರಿಯೇ ! ನಿನ್ನನ್ನು ಕೊಂಡು ಹೋಗುವುದಾಗಿ ಸತ್ಯಪ್ರತಿಜ್ಞೆಯನ್ನು ಮಾಡಿರುವನೆಂದೂ ತಿಳಿಸಿದನು. ॥ ೩೦ ॥ ಭಗವಂತನ ಶುಭಾಗಮನದ ವಾರ್ತೆಯನ್ನು ಕೇಳಿ ರುಕ್ಮಿಣೀದೇವಿಯ ಹೃದಯ ಆನಂದತುಂದಿಲವಾಯಿತು. ಆಕೆಯು ಇದಕ್ಕೆ ಬದಲಾಗಿ ಬ್ರಾಹ್ಮಣನಿಗೆ ಭಗವಂತನಲ್ಲದೆ ಬೇರೆ ಯಾವುದೂ ಪ್ರಿಯವಲ್ಲದ ಕಾರಣದಿಂದ ಅವನಿಗೆ ಕೇವಲ ಭಕ್ತಿಯಿಂದ ನಮಸ್ಕಾರವನ್ನು ಮಾಡಿದಳು. ॥ ೩೧ ॥

ಭಗವಾನ್ ಶ್ರೀಕೃಷ್ಣ ಮತ್ತು ಬಲರಾಮರು ತನ್ನ ಮಗಳ ವಿವಾಹವನ್ನು ನೋಡುವ ಉತ್ಸುಕತೆಯಿಂದ ಕುಂಡಿನ ನಗರಕ್ಕೆ ಆಗಮಿಸಿರುವರೆಂದು ಕೇಳಿದ ಭೀಷ್ಮಕನು ಮಂಗಳವಾದ್ಯಗಳ ಪುರಸ್ಸರವಾಗಿ ಅವರನ್ನು ಇದಿರ್ಗೊಂಡನು. ॥ ೩೨ ॥ ಮತ್ತೆ ಮಧುಪರ್ಕದಿಂದಲೂ, ಶುಭ್ರವಸ್ತ್ರಗಳಿಂದಲೂ, ಅಭೀಷ್ಟವಾದ ಕಾಣಿಕೆಗಳಿಂದಲೂ ಅವರನ್ನು ವಿಧಿಪೂರ್ವಕವಾಗಿ ಪೂಜಿಸಿದನು. ॥ ೩೩ ॥ ಮೇಧಾವಿಯಾದ ಭೀಷ್ಮಕನು ಶ್ರೀಕೃಷ್ಣ-ಬಲರಾಮರಿಗೂ ಮತ್ತು ಅವರೊಡನೆ ಬಂದಿದ್ದ ಸೈನಿಕರಿಗೂ ಸಮಸ್ತ ಸಾಮಗ್ರಿಗಳಿಂದ ಕೂಡಿದ ಸುಂದರವಾದ ಬಿಡಾರಗಳನ್ನು ಕಲ್ಪಿಸಿಕೊಟ್ಟು ಯೋಗ್ಯ ರೀತಿಯಿಂದ ಆತಿಥ್ಯ-ಸತ್ಕಾರ ಮಾಡಿದನು. ॥ ೩೪ ॥

ಏವಂ ರಾಜ್ಞಾಂ ಸಮೇತಾನಾಂ ಯಥಾವೀರ್ಯಂ ಯಥಾವಯಃ ।
ಯಥಾಬಲಂ ಯಥಾವಿತ್ತಂ ಸರ್ವೈಃ ಕಾಮೈಃ ಸಮರ್ಹಯತ್
॥ ೩೫ ॥

ಕೃಷ್ಣಮಾಗತಮಾಕರ್ಣ್ಯ ವಿದರ್ಭಪುರವಾಸಿನಃ ।
ಆಗತ್ಯ ನೇತ್ರಾಂಜಲಿಭಿಃ ಪಪುಸ್ತನ್ಮುಖಪಂಕಜಮ್
॥ ೩೬ ॥

ಅಸ್ಯೈವ ಭಾರ್ಯಾ ಭವಿತುಂ ರುಕ್ಮಿಣ್ಯರ್ಹತಿ ನಾಪರಾ ।
ಅಸಾವಪ್ಯನವದ್ಯಾತ್ಮಾ ಭೈಷ್ಮ್ಯಾಃ ಸಮುಚಿತಃ ಪತಿಃ
॥ ೩೭ ॥

ಕಿಂಚಿತ್ಸುಚರಿತಂ ಯನ್ನಸ್ತೇನ ತುಷ್ಟಸ್ತ್ರಿಲೋಕಕೃತ್ ।
ಅನುಗೃಹ್ಣಾತು ಗೃಹ್ಣಾತು ವೈದರ್ಭ್ಯಾಃ ಪಾಣಿಮಚ್ಯುತಃ
॥ ೩೮ ॥

ಏವಂ ಪ್ರೇಮಕಲಾಬದ್ಧಾ ವದಂತಿ ಸ್ಮ ಪೌರಕಾಃ ।
ಕನ್ಯಾ ಚಾಂತಃಪುರಾತ್ ಪ್ರಾಗಾದ್ಭಟೈರ್ಗುಪ್ತಾಂಬಿಕಾಲಯಮ್
॥ ೩೯ ॥

ಪದ್ಭ್ಯಾಂ ವಿನಿರ್ಯಯೌ ದ್ರಷ್ಟುಂ ಭವಾನ್ಯಾಃ ಪಾದಪಲ್ಲವಮ್ ।
ಸಾ ಚಾನುಧ್ಯಾಯತೀ ಸಮ್ಯಙ್ ಮುಕುಂದಚರಣಾಂಬುಜಮ್
॥ ೪೦ ॥

ಯತವಾಙ್ಮಾತೃಭಿಃ ಸಾರ್ಧಂ ಸಖೀಭಿಃ ಪರಿವಾರಿತಾ ।
ಗುಪ್ತಾ ರಾಜಭಟೈಃ ಶೂರೈಃ ಸನ್ನದ್ಧೈರುದ್ಯತಾಯುಧೈಃ ।
ಮೃದಂಗಶಂಖಪಣವಾಸ್ತೂರ್ಯಭೇರ್ಯಶ್ಚ ಜಘ್ನಿರೇ
॥ ೪೧ ॥

ನಾನೋಪಹಾರಬಲಿಭಿರ್ವಾರಮುಖ್ಯಾಃ ಸಹಸ್ರಶಃ ।
ಸ್ರಗ್ಗಂಧವಸ್ತ್ರಾಭರಣೈರ್ದ್ವಿಜಪತ್ನ್ಯಃ ಸ್ವಲಂಕೃತಾಃ
॥ ೪೨ ॥

ಗಾಯಂತ್ಯಶ್ಚ ಸ್ತುವಂತಶ್ಚ ಗಾಯಕಾ ವಾದ್ಯವಾದಕಾಃ ।
ಪರಿವಾರ್ಯ ವಧೂಂ ಜಗ್ಮುಃ ಸೂತಮಾಗಧವಂದಿನಃ
॥ ೪೩ ॥

ಆಸಾದ್ಯ ದೇವೀಸದನಂ ಧೌತಪಾದಕರಾಂಬುಜಾ ।
ಉಪಸ್ಪೃಶ್ಯ ಶುಚಿಃ ಶಾಂತಾ ಪ್ರವಿವೇಶಾಂಬಿಕಾಂತಿಕಮ್
॥ ೪೪ ॥

ತಾಂ ವೈ ಪ್ರವಯಸೋ ಬಾಲಾಂ ವಿಧಿಜ್ಞಾ ವಿಪ್ರಯೋಷಿತಃ ।
ಭವಾನೀಂ ವಂದಯಾಂಚಕ್ರುರ್ಭವಪತ್ನೀಂ ಭವಾನ್ವಿತಾಮ್
॥ ೪೫ ॥

ಹೀಗೆ ಭೀಷ್ಮಕ ಮಹಾರಾಜನು ತನ್ನ ಆಹ್ವಾನದಂತೆ ಬಂದಿರುವ ರಾಜರೆಲ್ಲರನ್ನೂ ಅವರವರ ಪರಾಕ್ರಮ, ವಯಸ್ಸು, ಬಲ, ಧನ ಇವುಗಳಿಗನುಸಾರವಾಗಿ ಅವರು ಬಯಸಿದ ವಸ್ತುಗಳೆಲ್ಲವನ್ನು ಕೊಟ್ಟು ಬಹಳವಾಗಿ ಸತ್ಕರಿಸಿದನು. ॥ ೩೫॥ ಭಗವಾನ್ ಶ್ರೀಕೃಷ್ಣನು ತಮ್ಮ ನಗರಕ್ಕೆ ಬಂದಿರುವನೆಂದು ಕೇಳಿದಾಗ ನಗರವಾಸಿಗಳು ಭಗವಂತನ ನಿವಾಸಸ್ಥಾನಕ್ಕೆ ಬಂದು ತಮ್ಮ ಕಣ್ಣುಗಳೆಂಬ ಬೊಗಸೆಗಳಿಂದ ಶ್ರೀಕೃಷ್ಣನ ಮುಖಾರವಿಂದದ ಮಧುರ ಮಕರಂದರಸವನ್ನು ಪಾನಮಾಡತೊಡಗಿದರು. ॥ ೩೬ ॥ ಅವರು ಪರಸ್ಪರ ಹೀಗೆ ಮಾತನಾಡಿಕೊಳ್ಳುತ್ತಿದ್ದರು - ನಮ್ಮ ರುಕ್ಮಿಣಿಯು ಇವನ ಅರ್ಧಾಂಗಿಯಾಗಲು ಯೋಗ್ಯಳೇ ಆಗಿದ್ದಾಳೆ. ಈ ಪರಮ ಪವಿತ್ರಮೂರ್ತಿಯಾದ ಶ್ಯಾಮಸುಂದರನೇ ರುಕ್ಮಿಣಿಗೆ ಯೋಗ್ಯಪತಿಯಾಗಿದ್ದಾನೆ. ॥ ೩೭ ॥ ನಾವೇನಾದರೂ ಹಿಂದಿನ ಜನ್ಮದಲ್ಲಿ ಅಥವಾ ಈ ಜನ್ಮದಲ್ಲಿ ಏನಾದರೂ ಸತ್ಕರ್ಮಮಾಡಿದ್ದರೆ, ತ್ರೈಲೋಕ್ಯ ವಿಧಾತನಾದ ಭಗವಂತನು ನಮ್ಮ ಮೇಲೆ ಪ್ರಸನ್ನನಾಗಿ ಶ್ಯಾಮಸುಂದರ ಶ್ರೀಕೃಷ್ಣನೇ ವಿದರ್ಭರಾಜಕುಮಾರಿ ರುಕ್ಮಿಣಿಯ ಪಾಣಿಗ್ರಹಣ ಮಾಡಿ ಅನುಗ್ರಹಿಸಲಿ. ॥ ೩೮ ॥

ಪರೀಕ್ಷಿತನೇ! ಕುಂಡಿನಪುರ ನಿವಾಸಿಗಳೆಲ್ಲರೂ ಪ್ರೇಮಪರವಶರಾಗಿ ಮಾತನಾಡಿಕೊಳ್ಳುತ್ತಿರುವಾಗಲೇ ರಾಜಭಟರಿಂದ ರಕ್ಷಿಸಲ್ಪಡುತ್ತಿದ್ದ ಮದುಮಗಳಾಗಿತ್ತಿಯು ಅಂತಃಪುರದಿಂದ ಹೊರಟು ಅಂಬಿಕಾಲಯಕ್ಕೆ ದೇವಿಯ ಪೂಜೆಗಾಗಿ ಹೊರಟಳು. ॥ ೩೯ ॥ ರುಕ್ಮಿಣಿಯಾದರೋ ಶ್ರೀಕೃಷ್ಣನ ಚರಣಕಮಲಗಳನ್ನೇ ಧ್ಯಾನಿಸುತ್ತಾ, ಭಗವತಿ ಭವಾನಿಯ ಪದ ಪಲ್ಲವಗಳನ್ನು ಸಂದರ್ಶಿಸಲು ಕಾಲ್ನಡಿಗೆಯಿಂದಲೇ ದೇವಾಲಯಕ್ಕೆ ಹೋದಳು. ॥ ೪೦ ॥ ಮೌನವಾಗಿದ್ದ ಆಕೆಯು ಮಾತೃವರ್ಗದವರಿಂದ ಪರಿವೃತಳಾಗಿದ್ದಳು. ಆಯುಧಗಳನ್ನು ಧರಿಸಿ ಸನ್ನದ್ಧರಾದ ಶೂರ ರಾಜಭಟರು ಸುತ್ತಲೂ ಆಕೆಯನ್ನು ರಕ್ಷಿಸುತ್ತಿದ್ದರು. ಭೇರಿ, ಮೃದಂಗ, ಶಂಖ, ಪಣವ, ತೂರ್ಯ - ಮೊದಲಾದ ಮಂಗಳವಾದ್ಯಗಳು ಮೊಳಗುತ್ತಿದ್ದವು. ॥ ೪೧ ॥ ಹಲವಾರು ಬ್ರಾಹ್ಮಣಪತ್ನಿಯರು ಪುಷ್ಪಮಾಲೆಗಳಿಂದಲೂ, ಚಂದನಾದಿ ಸುಗಂಧ ದ್ರವ್ಯಗಳಿಂದಲೂ, ವಸ್ತ್ರಾಭರಣಗಳಿಂದಲೂ ಅಲಂಕರಿಸಿಕೊಂಡು ಜೊತೆ-ಜೊತೆಯಲ್ಲೇ ಹೋಗುತ್ತಿದ್ದರು. ಅನೇಕ ಪ್ರಕಾರದ ಕಾಣಿಕೆಗಳನ್ನು, ಪೂಜಾ ಸಾಮಗ್ರಿಗಳನ್ನು ಎತ್ತಿಕೊಂಡು ಸಾವಿರಾರು ವಾರಾಂಗನೆಯರು ವಧುವನ್ನು ಹಿಂಬಾಲಿಸುತ್ತಿದ್ದರು. ॥ ೪೨ ॥ ಗಾಯಕರು ಗಾನ ಮಾಡುತ್ತಿದ್ದರು. ವಾದ್ಯಗಾರರು ವಾದ್ಯಗಳನ್ನು ನುಡಿಸುತ್ತಾ ಸಾಗಿದ್ದರು. ಸೂತ-ಮಾಗಧ-ವಂದೀಜನರು ವಧುವಿನ ಸುತ್ತಲೂ ಜಯಕಾರ ಮಾಡುತ್ತಾ ಬಿರುದಾವಳಿಗಳನ್ನು ಉಚ್ಚರಿಸುತ್ತಿದ್ದರು. ॥ ೪೩ ॥ ದೇವಿಯ ಮಂದಿರವನ್ನು ತಲುಪಿದ ರುಕ್ಮಿಣಿಯು ಕಮಲದಂತಿರುವ ಸುಕೋಮಲವಾದ ಕೈ-ಕಾಲುಗಳನ್ನು ತೊಳೆದು, ಆಚಮನ ಮಾಡಿ, ಅಂತರ್ಬಾಹ್ಯಶುದ್ಧಳಾಗಿ, ಶಾಂತಭಾವದಿಂದ ಕೂಡಿಕೊಂಡು ಅಂಬಿಕೆಯ ಮಂದಿರವನ್ನು ಪ್ರವೇಶಿಸಿದಳು. ॥ ೪೪ ॥ ಜೊತೆಗಿದ್ದ ಅನೇಕ ವಿಧಿ-ವಿಧಾನಗಳನ್ನು ಬಲ್ಲ ಹಿರಿಯ ಬ್ರಾಹ್ಮಣ ಮುತ್ತೈದೆಯರು ಭಗವಾನ್ ಶಂಕರನ ಅರ್ಧಾಂಗಿನಿಯಾದ ಭವಾನಿಗೆ ಮತ್ತು ಭಗವಾನ್ ಪರಶಿವನಿಗೆ ರುಕ್ಮಿಣಿಯಿಂದ ನಮಸ್ಕಾರವನ್ನು ಮಾಡಿಸಿದರು. ॥ ೪೫ ॥

ನಮಸ್ಯೇ ತ್ವಾಂಬಿಕೇಽಭೀಕ್ಷ್ಣಂ ಸ್ವಸಂತಾನಯುತಾಂ ಶಿವಾಮ್ ।
ಭೂಯಾತ್ ಪತಿರ್ಮೇ ಭಗವಾನ್ ಕೃಷ್ಣಸ್ತದನುಮೋದತಾಮ್ ॥ ೪೬ ॥

ಅದ್ಭಿರ್ಗಂಧಾಕ್ಷತೈರ್ಧೂಪೈರ್ವಾಸಃಸ್ರಙ್ಮಾಲ್ಯಭೂಷಣೈಃ ।
ನಾನೋಪಹಾರಬಲಿಭಿಃ ಪ್ರದೀಪಾವಲಿಭಿಃ ಪೃಥಕ್ ॥ ೪೭ ॥

ವಿಪ್ರಸ್ತ್ರಿಯಃ ಪತಿಮತೀಸ್ತಥಾ ತೈಃ ಸಮಪೂಜಯತ್ ।
ಲವಣಾಪೂಪತಾಂಬೂಲಕಂಠಸೂತ್ರಫಲೇಕ್ಷುಭಿಃ ॥ ೪೮ ॥

ತಸ್ಯೈ ಸ್ತ್ರಿಯಸ್ತಾಃ ಪ್ರದದುಃ ಶೇಷಾಂ ಯುಯುಜುರಾಶಿಷಃ ।
ತಾಭ್ಯೋ ದೇವ್ಯೈ ನಮಶ್ಚಕ್ರೇ ಶೇಷಾಂ ಚ ಜಗೃಹೇ ವಧೂಃ ॥ ೪೯ ॥

ಮುನಿವ್ರತಮಥ ತ್ಯಕ್ತ್ವಾ ನಿಶ್ಚಕ್ರಾಮಾಂಬಿಕಾಗೃಹಾತ್ ।
ಪ್ರಗೃಹ್ಯ ಪಾಣಿನಾ ಭೃತ್ಯಾಂ ರತ್ನಮುದ್ರೋಪಶೋಭಿನಾ ॥ ೫೦ ॥

ತಾಂ ದೇವಮಾಯಾಮಿವ ವೀರಮೋಹಿನೀಂ
ಸುಮಧ್ಯಮಾಂ ಕುಂಡಲಮಂಡಿತಾನನಾಮ್ ।
ಶ್ಯಾಮಾಂ ನಿತಂಬಾರ್ಪಿತರತ್ನಮೇಖಲಾಂ
ವ್ಯಂಜತ್ಸ್ತನೀಂ ಕುಂತಲಶಂಕಿತೇಕ್ಷಣಾಮ್ ॥ ೫೧ ॥

ಶುಚಿಸ್ಮಿತಾಂ ಬಿಂಬಫಲಾಧರದ್ಯುತಿ-
ಶೋಣಾಯಮಾನದ್ವಿಜಕುಂದಕುಡ್ಮಲಾಮ್ ।
ಪದಾ ಚಲಂತೀಂ ಕಲಹಂಸಗಾಮಿನೀಂ
ಶಿಂಜತ್ಕಲಾನೂಪುರಧಾಮಶೋಭಿನಾ ।
ವಿಲೋಕ್ಯ ವೀರಾ ಮುಮುಹುಃ ಸಮಾಗತಾ
ಯಶಸ್ವಿನಸ್ತತ್ಕೃತಹೃಚ್ಛಯಾರ್ದಿತಾಃ ॥ ೫೨ ॥

ಯಾಂ ವೀಕ್ಷ್ಯ ತೇ ನೃಪತಯಸ್ತದುದಾರಹಾಸ-
ವ್ರೀಡಾವಲೋಕಹೃತಚೇತಸ ಉಜ್ಝಿತಾಸ್ತ್ರಾಃ ।
ಪೇತುಃ ಕ್ಷಿತೌ ಗಜರಥಾಶ್ವಗತಾ ವಿಮೂಢಾ
ಯಾತ್ರಾಚ್ಛಲೇನ ಹರಯೇಽರ್ಪಯತೀಂ ಸ್ವಶೋಭಾಮ್ ॥ ೫೩ ॥

ರುಕ್ಮಿಣಿಯು ಭಗವತಿಯಲ್ಲಿ ಪ್ರಾರ್ಥಿಸುತ್ತಾಳೆ - ಜಗದಂಬೇ! ನಿನ್ನ ಮಡಿಲಲ್ಲಿ ಕುಳಿತಿರುವ ಗಣಪತಿಗೆ ಮತ್ತು ನಿನಗೆ ನಾನು ಪದೇ-ಪದೇ ನಮಸ್ಕರಿಸುತ್ತೇನೆ. ತಾಯೆ! ಭಗವಾನ್ ಶ್ರೀಕೃಷ್ಣನೇ ನನ್ನ ಪತಿಯಾಗುವಂತೆ ಅನುಗ್ರಹಿಸಿ ಆಶೀರ್ವದಿಸು. ॥ ೪೬ ॥ ಬಳಿಕ ರುಕ್ಮಿಣಿಯು ಜಲ ಗಂಧ, ಅಕ್ಷತೆ, ವಸ್ತ್ರ, ಪುಷ್ಪಹಾರ, ಆಭೂಷಣಗಳು, ಧೂಪ, ದೀಪಾದಿಗಳಿಂದಲೂ, ನಾನಾ ವಿಧವಾದ ನೈವೇದ್ಯಗಳಿಂದಲೂ, ಕಾಣಿಕೆಗಳಿಂದಲೂ, ಮಂಗಳ ಆರತಿಗಳಿಂದಲೂ ಅಂಬಿಕೆಯನ್ನು ಪೂಜಿಸಿದಳು. ॥ ೪೭ ॥ ಅನಂತರ ಸುಮಂಗಲಿಯರಾದ ಬ್ರಾಹ್ಮಣ ಸ್ತ್ರೀಯರಿಗೆ ಮೇಲೆ ಹೇಳಿದ ಪೂಜಾ-ಸಾಮಗ್ರಿಗಳಿಂದಲೂ, ಉಪ್ಪು, ಅಪೂಪ, ತಾಂಬೂಲ, ಕಂಠಸೂತ್ರ, ಹಣ್ಣುಗಳು, ಕಬ್ಬು ಇತ್ಯಾದಿಗಳಿಂದಲೂ ವಿಧಿವತ್ತಾಗಿ ಪೂಜೆಯನ್ನು ಸಲ್ಲಿಸಿದಳು. ॥ ೪೮ ॥ ಬ್ರಾಹ್ಮಣ ಸ್ತ್ರೀಯರು ರಾಜಕುಮಾರಿಗೆ ಪ್ರಸಾದವನ್ನಿತ್ತು ಆಶೀರ್ವದಿಸಿದರು. ಮದುಮಗಳು ಬ್ರಾಹ್ಮಣಿಯರಿಗೂ, ಜಗದಂಬೆಗೂ ನಮಸ್ಕರಿಸಿ ಪ್ರಸಾದವನ್ನು ಸ್ವೀಕರಿಸಿದಳು. ॥ ೪೯ ॥ ಬಳಿಕ ರಾಜಕುಮಾರಿಯು ಮೌನವನ್ನು ಮುರಿದು ರತ್ನಖಚಿತವಾದ ಉಂಗುರದಿಂದ ಶೋಭಾಯಮಾನವಾದ ತನ್ನ ಕೈಯಿಂದ ಸೇವಕಿಯೊಬ್ಬಳ ಕೈಯನ್ನು ಹಿಡಿದುಕೊಂಡು ಅಂಬಿಕಾಗುಡಿಯಿಂದ ಹೊರಬಿದ್ದಳು. ॥ ೫೦ ॥

ಪರೀಕ್ಷಿತನೇ! ರುಕ್ಮಿಣಿಯು ಭಗವಂತನ ಮಾಯೆಯಂತೆಯೇ ವೀರಾಧಿವೀರರನ್ನು ವಿಮೋಹಗೊಳಿಸುತ್ತಿದ್ದಳು. ಆಕೆಯ ಕಟಿ ಪ್ರದೇಶವು ಸುಂದರವಾಗಿಯೂ, ಕೃಶವಾಗಿಯೂ ಇತ್ತು. ಥಳ ಥಳಿಸುವ ಕುಂಡಲಗಳಿಂದ ಮುಖಕಮಲವು ಸಮಲಂಕೃತವಾಗಿತ್ತು. ಯೌವನದ ಹೊಸ್ತಿಲನ್ನು ಆಗತಾನೇ ಮೆಟ್ಟಿದ್ದಳು. ನಿತಂಬವು ರತ್ನಮಯವಾದ ಸೊಂಟಪಟ್ಟಿಯಿಂದ ಅಲಂಕೃತವಾಗಿತ್ತು. ವಕ್ಷಸ್ಥಳವು ಆಗತಾನೇ ಎದ್ದು ಕಾಣುತ್ತಿತ್ತು. ಮುಂಗುರುಳುಗಳು ಮುಂದೆ ಬಾಚಿಕೊಂಡು ಇದ್ದುದರಿಂದ ನೋಟವು ಚಂಚಲವಾಗಿತ್ತು. ॥ ೫೧ ॥ ಆಕೆಯ ತುಟಿಗಳಲ್ಲಿ ಮನೋಹರವಾದ ಮುಗುಳ್ನಗೆ ಇತ್ತು. ತೊಂಡೆಹಣ್ಣಿನಂತಿದ್ದ ಅವಳ ತುಟಿಯ ಕೆಂಪಿನಿಂದ ಮಲ್ಲಿಗೆ ಮೊಗ್ಗುಗಳಂತಿದ್ದ ಆಕೆಯ ಹಲ್ಲುಗಳು ಸ್ವಲ್ಪ ಕೆಂಪಾಗಿ ಕಾಣುತ್ತಿದ್ದವು. ಝಣ-ಝಣಿಸುತ್ತಿದ್ದ ಕಾಲಂದುಗೆಗಳ ಕಾಂತಿಯಿಂದ ಮನೋಹರವಾಗಿ ಕಾಣುತ್ತಿದ್ದ ಕೋಮಲವಾದ ಕಾಲುಗಳಿಂದ ರಾಜಹಂಸದಂತೆ ನಡೆಯುತ್ತಿದ್ದಳು. ರುಕ್ಮಿಣಿಯ ಅಂತಹ ಅನುಪಮವಾದ ಅಂಗಕಾಂತಿಯನ್ನು ನೋಡಿ ಅಲ್ಲಿಗೆ ಬಂದ ದೊಡ್ಡ-ದೊಡ್ಡ ಯಶಸ್ವೀ ವೀರರೆಲ್ಲರೂ ಮೋಹಿತರಾದರು. ಮನ್ಮಥನೂ ಭಗವಂತನ ಕಾರ್ಯವನ್ನು ಸಾಧಿಸಿಕೊಡಲು ತನ್ನ ಹೂಬಾಣಗಳಿಂದ ಅವರ ಹೃದಯಗಳನ್ನು ಜರ್ಜರಿತವಾಗಿಸಿದ್ದನು. ॥ ೫೨ ॥ ರುಕ್ಮಿಣಿಯು ಹೀಗೆ ಯಾತ್ರೆಯ ವ್ಯಾಜದಿಂದ ಮಂದಗತಿಯಿಂದ ನಡೆಯುತ್ತಾ ಭಗವಾನ್ ಶ್ರೀಕೃಷ್ಣನಿಗೆ ತನ್ನ ಸೌಂದರ್ಯವನ್ನು ಅರ್ಪಿಸುತ್ತಿದ್ದಳು. ಆಕೆಯ ಲೋಕೋತ್ತರವಾದ ಮುಗ್ಧಮಂದಹಾಸವನ್ನು ಹಾಗೂ ಕುಡಿನೋಟವನ್ನು ಕಂಡು ಬುದ್ಧಿಗೆಟ್ಟ ನರಪತಿಗಳು ತಾವು ಹಿಡಿದಿದ್ದ ಆಯುಧಗಳನ್ನು ಬಿಸಾಡಿ ತಾವು ಕುಳಿತಿದ್ದ ರಥಾಶ್ವ-ಗಜಗಳ ಮೇಲಿಂದ ಕೆಳಕ್ಕೆ ಬಿದ್ದು ಹೋದರು. ॥ ೫೩ ॥

ಸೈವಂ ಶನೈಶ್ಚಲಯತೀ ಚಲಪದ್ಮಕೋಶೌ
ಪ್ರಾಪ್ತಿಂ ತದಾ ಭಗವತಃ ಪ್ರಸಮೀಕ್ಷಮಾಣಾ ।
ಉತ್ಸಾರ್ಯ ವಾಮಕರಜೈರಲಕಾನಪಾಂಗೈಃ
ಪ್ರಾಪ್ತಾನ್ ಹ್ರಿಯೈಕ್ಷತ ನೃಪಾನ್ ದದೃಶೇಽಚ್ಯುತಂ ಸಾ ॥ ೫೪ ॥

ಹೀಗೆ ರುಕ್ಮಿಣಿಯು ಭಗವಾನ್ ಶ್ರೀಕೃಷ್ಣನ ಶುಭಾಗಮನವನ್ನು ಪ್ರತೀಕ್ಷೆ ಮಾಡುತ್ತಾ ಕಮಲದಂತಹ ಸುಕೋಮಲವಾದ ಪಾದಪದ್ಮಗಳಿಂದ ಮೆಲ್ಲ-ಮೆಲ್ಲನೆ ನಡೆದುಕೊಂಡು ಹೋಗುತ್ತಿದ್ದಳು. ಮುಖವನ್ನು ಮುಚ್ಚುತ್ತಿದ್ದ ಮುಂಗುರುಳುಗಳನ್ನು ಎಡಗೈ ಬೆರಳುಗಳಿಂದ ಹಿಂದಕ್ಕೆ ಸರಿಸಿ, ಅಲ್ಲಿ ಬಂದಿರುವ ರಾಜರನ್ನು ಲಜ್ಜೆಯಿಂದ ಕೂಡಿದ ಕಡೆಗಣ್ಣಿನಿಂದ ನೋಡುತ್ತಿದ್ದಳು. ಹಾಗೆಯೇ ಆಕೆಗೆ ಶ್ಯಾಮಸುಂದರನಾದ ಶ್ರೀಕೃಷ್ಣನ ದರ್ಶನವಾಯಿತು. ॥ ೫೪ ॥

ತಾಂ ರಾಜಕನ್ಯಾಂ ರಥಮಾರುರುಕ್ಷತೀಂ
ಜಹಾರ ಕೃಷ್ಣೋ ದ್ವಿಷತಾಂ ಸಮೀಕ್ಷತಾಮ್ ।
ರಥಂ ಸಮಾರೋಪ್ಯ ಸುಪರ್ಣಲಕ್ಷಣಂ
ರಾಜನ್ಯಚಕ್ರಂ ಪರಿಭೂಯ ಮಾಧವಃ ॥ ೫೫ ॥

ರಾಜಕುಮಾರಿ ರುಕ್ಮಿಣಿಯು ರಥದಲ್ಲಿ ಹತ್ತಲು ಅಪೇಕ್ಷಿಸುತ್ತಿದ್ದಾಗಲೇ ಭಗವಾನ್ ಶ್ರೀಕೃಷ್ಣನು ಸಮಸ್ತ ಶತ್ರುಗಳು ನೋಡುನೋಡುತ್ತಿರುವಂತೆ ರುಕ್ಮಿಣಿಯನ್ನು ಎತ್ತಿಕೊಂಡು, ನೂರಾರು ರಾಜರ ತಲೆಯನ್ನು ಮೆಟ್ಟಿ, ಗರುಡಧ್ವಜದಿಂದ ಶೋಭಿಸುವ ತನ್ನ ರಥದಲ್ಲಿ ಕುಳ್ಳಿರಿಸಿಕೊಂಡನು. ॥ ೫೫ ॥ ಬಳಿಕ ನರಿಗಳ ಮಧ್ಯದಲ್ಲಿದ್ದ ತನ್ನ ಬೇಟೆಯನ್ನು ಸಿಂಹವು ಎತ್ತಿಕೊಂಡು ಹೋಗುವಂತೆ ನರಿಗಳಂತಿದ್ದ ರಾಜರ ಮಧ್ಯದಿಂದ ರುಕ್ಮಿಣಿಯನ್ನು ಎತ್ತಿಕೊಂಡು ಶ್ರೀಕೃಷ್ಣನು ಬಲರಾಮಾದಿ ಯದುವಂಶೀಯ ಯೋಧರೊಡನೆ ಅಲ್ಲಿಂದ ಹೊರಟನು. ॥ ೫೬ ॥ ಆ ಸಮಯದಲ್ಲಿ ಜರಾಸಂಧನ ವಶವರ್ತಿಗಳಾದ ದುರಭಿಮಾನಿ ರಾಜರುಗಳಿಗೆ ಯಶಃಕೀರ್ತಿ ನಾಶಕವಾದ ಇಂತಹ ತಿರಸ್ಕಾರವನ್ನು ಸಹಿಸಿಕೊಳ್ಳಲಾಗಲಿಲ್ಲ. ಅವರೆಲ್ಲರೂ ಕಿರಿಚಿ ಕೂಗಾಡತೊಡಗಿದರು - ಆಹಾ! ಆಯುಧಗಳನ್ನು ಹಿಡಿದು ನಿಂತಿರುವ ನಮಗೆ ಧಿಕ್ಕಾರವಿರಲಿ. ಸಿಂಹಗಳಿಗೆ ಸೇರಬೇಕಾದ ಭಾಗವನ್ನು ನರಿಗಳು ಅಪಹರಿಸುವಂತೆ ನಮ್ಮ ಯಶಸ್ಸನ್ನು ಸಾಧಾರಣರಾದ ಗೊಲ್ಲರು ಇಂದು ಅಪಹರಿಸಿಬಿಟ್ಟರಲ್ಲ! ॥ ೫೭ ॥

ತತೋ ಯಯೌ ರಾಮಪುರೋಗಮೈಃ ಶನೈಃ
ಸೃಗಾಲಮಧ್ಯಾದಿವ ಭಾಗಹೃದ್ಧರಿಃ ॥ ೫೬ ॥

ತಂ ಮಾನಿನಃ ಸ್ವಾಭಿಭವಂ ಯಶಃಕ್ಷಯಂ
ಪರೇ ಜರಾಸಂಧವಶಾ ನ ಸೇಹಿರೇ ।
ಅಹೋ ಧಿಗಸ್ಮಾನ್ ಯಶ ಆತ್ತಧನ್ವನಾಂ
ಗೋಪೈರ್ಹೃತಂ ಕೇಸರಿಣಾಂ ಮೃಗೈರಿವ ॥ ೫೭ ॥

ಐವತ್ತಮೂರನೆಯ ಅಧ್ಯಾಯವು ಮುಗಿಯಿತು. ॥ ೫೩ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮ ಸ್ಕಂಧೇ ಉತ್ತರಾರ್ಧೇ
ರುಕ್ಮಿಣೀಹರಣಂ ನಾಮ ತ್ರಿಪಂಚಾಶತ್ತಮೋಽಧ್ಯಾಯಃ ॥ ೫೩ ॥

ಐವತ್ತನಾಲ್ಕನೆಯ ಅಧ್ಯಾಯ

ಶಿಶುಪಾಲನ ಅನುಯಾಯಿಗಳ ಮತ್ತು ರುಕ್ಮಿಯ ಪರಾಜಯ - ಶ್ರೀಕೃಷ್ಣ ರುಕ್ಮಿಣಿಯರ ವಿವಾಹ

ಶ್ರೀಶುಕ ಉವಾಚ

ಇತಿ ಸರ್ವೇ ಸುಸಂರಬ್ಧಾ ವಾಹಾನಾರುಹ್ಯ ದಂಶಿತಾಃ ।
ಸ್ವೈಃ ಸ್ವೈರ್ಬಲೈಃ ಪರಿಕ್ರಾಂತಾ ಅನ್ವೀಯುರ್ಧೃತಕಾರ್ಮುಕಾಃ
॥ ೧ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ - ಎಲೈ ಪರೀಕ್ಷಿತನೇ! ಹೀಗೆ ಹೇಳಿ-ಹೇಳಿ ಎಲ್ಲ ರಾಜರೂ ಕೋಪದಿಂದ ಕಿಡಿ-ಕಿಡಿಯಾದರು. ಕವಚಗಳನ್ನು ಧರಿಸಿ ವಾಹನಗಳನ್ನೇರಿದರು. ತಮ್ಮ ತಮ್ಮ ಸೈನ್ಯದೊಂದಿಗೆ ಧನಸ್ಸನ್ನೆತ್ತಿಕೊಂಡು ಶ್ರೀಕೃಷ್ಣನನ್ನು ಹಿಂಬಾಲಿಸಿದರು. ॥ ೧ ॥ ರಾಜೇಂದ್ರನೇ! ಶತ್ರುಗಳು ತಮ್ಮ ಮೇಲೆ ಆಕ್ರಮಿಸಿ ಬರುತ್ತಿರುವುದನ್ನು ನೋಡಿದ ಯದುವಂಶೀಯರಾದ ಸೇನಾಪತಿಗಳು ಹಿಂದಕ್ಕೆ ತಿರುಗಿ ಧನಸ್ಸುಗಳನ್ನು ಟಂಕರಿಸುತ್ತಾ ಶತ್ರುಸೈನ್ಯದ ಇದಿರಾಗಿ ಸಿದ್ಧರಾಗಿ ನಿಂತರು. ॥ ೨ ॥

ತಾನಾಪತತ ಆಲೋಕ್ಯ ಯಾದವಾನೀಕಯೂಥಪಾಃ ।
ತಸ್ಥುಸ್ತತ್ಸಮ್ಮುಖಾ ರಾಜನ್ವಿಸ್ಫೂರ್ಜ್ಯ ಸ್ವಧನೂಂಷಿ ತೇ
॥ ೨ ॥

ಅಶ್ವಪೃಷ್ಠೇ ಗಜಸ್ಕಂಧೇ ರಥೋಪಸ್ಥೇ ಚ ಕೋವಿದಾಃ ।
ಮುಮುಚುಃ ಶರವರ್ಷಾಣಿ ಮೇಘಾ ಅದ್ರಿಷ್ವಪೋ ಯಥಾ
॥ ೩ ॥

ಪತ್ಯುರ್ಬಲಂ ಶರಾಸಾರೈಶ್ಛನ್ನಂ ವೀಕ್ಷ್ಯ ಸುಮಧ್ಯಮಾ ।
ಸವ್ರೀಡಮೈಕ್ಷತ್ತದ್ವಕ್ತ್ರಂ ಭಯವಿಹ್ವಲಲೋಚನಾ
॥ ೪ ॥

ಪ್ರಹಸ್ಯ ಭಗವಾನಾಹ ಮಾ ಸ್ಮ ಭೈರ್ವಾಮಲೋಚನೇ ।
ವಿನಂಕ್ಷ್ಯತ್ಯಧುನೈವೈತತ್ತಾವಕೈಃ ಶಾತ್ರವಂ ಬಲಮ್
॥ ೫ ॥

ತೇಷಾಂ ತದ್ವಿಕ್ರಮಂ ವೀರಾ ಗದಸಂಕರ್ಷಣಾದಯಃ ।
ಅಮೃಷ್ಯಮಾಣಾ ನಾರಾಚೈರ್ಜಘ್ನುರ್ಹಯಗಜಾನ್ ರಥಾನ್
॥ ೬ ॥

ಪೇತುಃ ಶಿರಾಂಸಿ ರಥಿನಾಮಶ್ವಿನಾಂ ಗಜಿನಾಂ ಭುವಿ ।
ಸಕುಂಡಲಕಿರೀಟಾನಿ ಸೋಷ್ಣೀಷಾಣಿ ಚ ಕೋಟಿಶಃ
॥ ೭ ॥

ಹಸ್ತಾಃ ಸಾಸಿಗದೇಷ್ವಾಸಾಃ ಕರಭಾ ಊರವೋಽಂಘ್ರಯಃ ।
ಅಶ್ವಾಶ್ವತರನಾಗೋಷ್ಟ್ರಖರಮರ್ತ್ಯಶಿರಾಂಸಿ ಚ
॥ ೮ ॥

ಹನ್ಯಮಾನಬಲಾನೀಕಾ ವೃಷ್ಣಿಭಿರ್ಜಯಕಾಂಕ್ಷಿಭಿಃ ।
ರಾಜಾನೋ ವಿಮುಖಾ ಜಗ್ಮುರ್ಜರಾಸಂಧಪುರಸ್ಸರಾಃ
॥ ೯ ॥

ಶಿಶುಪಾಲಂ ಸಮಭ್ಯೇತ್ಯ ಹೃತದಾರಮಿವಾತುರಮ್ ।
ನಷ್ಟತ್ವಿಷಂ ಗತೋತ್ಸಾಹಂ ಶುಷ್ಯದ್ವದನಮಬ್ರುವನ್
॥ ೧೦ ॥

ಭೋ ಭೋಃ ಪುರುಷಶಾರ್ದೂಲ ದೌರ್ಮನಸ್ಯಮಿದಂ ತ್ಯಜ ।
ನ ಪ್ರಿಯಾಪ್ರಿಯಯೋ ರಾಜನ್ ನಿಷ್ಠಾ ದೇಹಿಷು ದೃಶ್ಯತೇ
॥ ೧೧ ॥

ಯಥಾ ದಾರುಮಯೀ ಯೋಷಿನ್ನೃತ್ಯತೇ ಕುಹಕೇಚ್ಛಯಾ ।
ಏವಮೀಶ್ವರತಂತ್ರೋಽಯಮೀಹತೇ ಸುಖದುಃಖಯೋಃ
॥ ೧೨ ॥

ಶೌರೇಃ ಸಪ್ತದಶಾಹಂ ವೈ ಸಂಯುಗಾನಿ ಪರಾಜಿತಃ ।
ತ್ರಯೋವಿಂಶತಿಭಿಃ ಸೈನ್ಯೈರ್ಜಿಗ್ಯೆ ಏಕಮಹಂ ಪರಮ್
॥ ೧೩ ॥

ಜರಾಸಂಧನ ಸೇನೆಯಲ್ಲಿ ಕೆಲವರು ಕುದುರೆಗಳ ಮೇಲೆ, ಕೆಲವರು ಆನೆಗಳ ಮೇಲೆ, ಕೆಲವರು ರಥದಲ್ಲಿ ಹತ್ತಿಕುಳಿತಿದ್ದರು. ಅವರೆಲ್ಲರೂ ಧನುರ್ವೇದದ ಮರ್ಮಜ್ಞರಾಗಿದ್ದರು. ಅವರು ಯದುವಂಶೀಯರ ಮೇಲೆ – ಮೇಘಗಳು ಪರ್ವತಗಳ ಮೇಲೆ ಮಳೆಗರೆಯುವಂತೆ ಬಾಣಗಳ ವೃಷ್ಟಿಯನ್ನೇ ಸುರಿಸಿಬಿಟ್ಟರು.॥ ೩ ॥ ಪರಮ ಸುಂದರಿಯಾದ ರುಕ್ಮಿಣಿಯು ತನ್ನ ಪತಿಯಾದ ಶ್ರೀಕೃಷ್ಣನ ಸೇನೆಯು ಶತ್ರುಪಕ್ಷದವರ ಬಾಣಗಳ ವರ್ಷದಿಂದ ಮುಚ್ಚಿ ಹೋದುದನ್ನು ಕಂಡು ಲಜ್ಜೆಯೊಂದಿಗೆ ಭಯಗೊಂಡ ಕಣ್ಣುಗಳಿಂದ ಭಗವಾನ್ ಶ್ರೀಕೃಷ್ಣನ ಮುಖವನ್ನು ನೋಡಿದಳು. ॥ ೪ ॥ ಭಗವಂತನು ನಗುತ್ತಾ ಹೇಳಿದನು – ಸುಂದರೀ ! ಭಯಪಡಬೇಡ. ನಮ್ಮ ಕಡೆಯ ಸೈನ್ಯವು ಶತ್ರುಸೈನ್ಯವನ್ನು ಈಗಿಂದೀಗಲೇ ಧ್ವಂಸ ಮಾಡಿಬಿಡುತ್ತದೆ. ॥ ೫ ॥ ಇತ್ತ ಗದ-ಸಂಕರ್ಷಣರೇ ಮೊದಲಾದ ಯದುವಂಶೀಯ ವೀರರು ಶತ್ರುಗಳ ಪರಾಕ್ರಮವನ್ನು ನೋಡಿ ಸಹಿಸದೆ ತಮ್ಮ ಬಾಣಗಳಿಂದ ಶತ್ರುಗಳ ಗಜಾಶ್ವರಥಗಳನ್ನು ತುಂಡರಿಸ ತೊಡಗಿದರು. ॥ ೬ ॥ ಇವರ ಬಾಣಗಳಿಂದ ರಥ, ಕುದುರೆಗಳ ಮತ್ತು ಆನೆಗಳ ಮೇಲೆ ಕುಳಿತ ಪ್ರತಿಪಕ್ಷದ ವೀರರ ಕುಂಡಲ, ಕಿರೀಟ, ರುಮಾಲುಗಳಿಂದ ಸಮಲಂಕೃತವಾದ ಕೋಟಿ ಕೋಟಿ ತಲೆಗಳೂ, ಖಡ್ಗ, ಗದೆ, ಧನುಸ್ಸುಗಳಿಂದ ಕೂಡಿದ ಕೈಗಳೂ, ತೊಡೆಗಳೂ, ಕಾಲುಗಳೂ ಕತ್ತರಿಸಲ್ಪಟ್ಟು ಭೂಮಿಗೆ ಬೀಳತೊಡಗಿದವು. ಹೀಗೆಯೇ ಕುದುರೆಗಳೂ, ಹೇಸರಕತ್ತೆಗಳೂ, ಒಂಟೆಗಳೂ, ಆನೆಗಳೂ, ಕತ್ತೆಗಳೂ ಮತ್ತು ಮನುಷ್ಯರ ತಲೆಗಳೂ ಲಕ್ಷ-ಲಕ್ಷ ಸಂಖ್ಯೆಯಲ್ಲಿ ನೆಲಕ್ಕುರುಳಿದವು. ॥ ೭-೮ ॥ ವಿಜಯಾಕಾಂಕ್ಷಿಗಳಾದ ಯಾದವರು ಶತ್ರುಸೈನ್ಯವೆಲ್ಲವನ್ನೂ ಧ್ವಂಸಮಾಡಿಬಿಟ್ಟರು. ಜರಾಸಂಧನೇ ಮೊದಲಾದ ರಾಜರೆಲ್ಲರೂ ಯುದ್ಧದಿಂದ ಪರಾಙ್ಮುಖರಾಗಿ ಪಲಾಯನ ಮಾಡಿದರು. ॥ ೯ ॥

ಅತ್ತ ಶಿಶುಪಾಲನು ತನ್ನನ್ನು ವಿವಾಹವಾಗಬೇಕಾಗಿದ್ದ ಭಾವೀ ಪತ್ನಿಯು ಕೈತಪ್ಪಿಹೋದ ಕಾರಣ ಅತೀವ ದುಃಖಿತನಾಗಿದ್ದನು. ಅವನ ಶರೀರದಲ್ಲಿ ಕಾಂತಿಯೂ, ಉತ್ಸಾಹವೂ ಉಡುಗಿ ಹೋಗಿತ್ತು. ಮುಖ ಬಾಡಿತ್ತು. ಜರಾಸಂಧನು ಅವನ ಬಳಿಗೆ ಹೋಗಿ ಸಮಾಧಾನ ಪಡಿಸುತ್ತಾ ಹೇಳಿದನು. ॥ ೧೦ ॥ ಶಿಶುಪಾಲನೇ ! ನೀನಾದರೋ ಶ್ರೇಷ್ಠ ಪುರುಷನಾಗಿರುವೆ. ಈ ದುಃಖದ ಮನೋಭಾವವನ್ನು ತ್ಯಜಿಸು. ತನ್ನ ಮನಸ್ಸಿಗೆ ಅನುಕೂಲವಾಗಿರಲೀ, ಪ್ರತಿಕೂಲವಾಗಿರಲೀ ಯಾವುದೇ ಮಾತು ಸ್ಥಿರವಾಗಿ ಇರುವುದನ್ನು ಪ್ರಾಣಿಗಳ ಜೀವನದಲ್ಲಿ ಕಂಡುಬರುವುದಿಲ್ಲ. ॥ ೧೧ ॥ ಸೂತ್ರದ ಬೊಂಬೆಯು ಆಡಿಸುವವನ ಇಚ್ಛೆಗನುಸಾರವಾಗಿಯೇ ಕುಣಿಯುವಂತೆ, ಈ ಜೀವನೂ ಕೂಡ ಭಗವದಿಚ್ಛೆಗೆ ಅಧೀನನಾಗಿ ಸುಖ-ದುಃಖಗಳ ನಡುವೆ ಸಿಕ್ಕಿಕೊಂಡು ಪರಮಾತ್ಮನು ಕುಣಿಸಿದಂತೆ ಕುಣಿಯುತ್ತಾ ಇರುತ್ತಾನೆ. ॥ ೧೨ ॥ ಇಪ್ಪತ್ತಮೂರು ಅಕ್ಷೌಹಿಣೀ ಸೈನ್ಯಸಮೇತನಾದ ನನ್ನನ್ನು ಶ್ರೀಕೃಷ್ಣನು ಹದಿನೇಳು ಬಾರಿ ಪರಾಜಯಗೊಳಿಸಿದನು. ಆದರೆ ನಾನು ಧೈರ್ಯಗೆಡಲಿಲ್ಲ, ಹದಿನೆಂಟನೆಯ ಬಾರಿ ನಾನು ಅವನನ್ನು ಸೋಲಿಸಲಿಲ್ಲವೇ ! ॥ ೧೩ ॥

ತಥಾಪ್ಯಹಂ ನ ಶೋಚಾಮಿ ನ ಪ್ರಹೃಷ್ಯಾಮಿ ಕರ್ಹಿಚಿತ್ ।
ಕಾಲೇನ ದೈವಯುಕ್ತೇನ ಜಾನನ್ ವಿದ್ರಾವಿತಂ ಜಗತ್ ॥ ೧೪ ॥

ಅಧುನಾಪಿ ವಯಂ ಸರ್ವೇ ವೀರಯೂಥಪಯೂಥಪಾಃ ।
ಪರಾಜಿತಾಃ ಫಲ್ಗುತಂತ್ರೈರ್ಯದುಭಿಃ ಕೃಷ್ಣಪಾಲಿತೈಃ ॥ ೧೫ ॥

ರಿಪವೋ ಜಿಗ್ಯುರಧುನಾ ಕಾಲ ಆತ್ಮಾನುಸಾರಿಣಿ ।
ತದಾ ವಯಂ ವಿಜೇಷ್ಯಾಮೋ ಯದಾ ಕಾಲಃ ಪ್ರದಕ್ಷಿಣಃ ॥ ೧೬ ॥

ಏವಂ ಪ್ರಬೋಧಿತೋ ಮಿತ್ರೈಶ್ಚೈದ್ಯೋಽಗಾತ್ ಸಾನುಗಃ ಪುರಮ್ ।
ಹತಶೇಷಾಃ ಪುನಸ್ತೇಽಪಿ ಯಯುಃ ಸ್ವಂ ಸ್ವಂ ಪುರಂ ನೃಪಾಃ ॥ ೧೭ ॥

ರುಕ್ಮೀ ತು ರಾಕ್ಷಸೋದ್ವಾಹಂ ಕೃಷ್ಣದ್ವಿಡಸಹನ್ ಸ್ವಸುಃ ।
ಪೃಷ್ಠತೋಽನ್ವಗಮತ್ ಕೃಷ್ಣಮಕ್ಷೌಹಿಣ್ಯಾ ವೃತೋ ಬಲೀ ॥ ೧೮ ॥

ರುಕ್ಮ್ಯಮರ್ಷೀ ಸುಸಂರಬ್ಧಃ ಶೃಣ್ವತಾಂ ಸರ್ವಭೂಭುಜಾಮ್ ।
ಪ್ರತಿಜಜ್ಞೇ ಮಹಾಬಾಹುರ್ದಂಶಿತಃ ಸಶರಾಸನಃ ॥ ೧೯ ॥

ಅಹತ್ವಾ ಸಮರೇ ಕೃಷ್ಣಮಪ್ರತ್ಯೂಹ್ಯ ಚ ರುಕ್ಮಿಣೀಮ್ ।
ಕುಂಡಿನಂ ನ ಪ್ರವೇಕ್ಷ್ಯಾಮಿ ಸತ್ಯಮೇತದ್ಬ್ರವೀಮಿ ವಃ ॥ ೨೦ ॥

ಇತ್ಯುಕ್ತ್ವಾ ರಥಮಾರುಹ್ಯ ಸಾರಥಿಂ ಪ್ರಾಹ ಸತ್ವರಃ ।
ಚೋದಯಾಶ್ವಾನ್ ಯತಃ ಕೃಷ್ಣಸ್ತಸ್ಯ ಮೇ ಸಂಯುಗಂ ಭವೇತ್ ॥ ೨೦ ॥

ಅದ್ಯಾಹಂ ನಿಶಿತೈರ್ಬಾಣೈರ್ಗೋಪಾಲಸ್ಯ ಸುದುರ್ಮತೇಃ ।
ನೇಷ್ಯೇ ವೀರ್ಯಮದಂ ಯೇನ ಸ್ವಸಾ ಮೇ ಪ್ರಸಭಂ ಹೃತಾ ॥ ೨೨ ॥

ವಿಕತ್ಥಮಾನಃ ಕುಮತಿರೀಶ್ವರಸ್ಯಾಪ್ರಮಾಣವಿತ್ ।
ರಥೇನೈಕೇನ ಗೋವಿಂದಂ ತಿಷ್ಠ ತಿಷ್ಠೇತ್ಯಥಾಹ್ವಯತ್ ॥ ೨೩ ॥

ಧನುರ್ವಿಕೃಷ್ಯ ಸುದೃಢಂ ಜಘ್ನೇ ಕೃಷ್ಣಂ ತ್ರಿಭಿಃ ಶರೈಃ ।
ಆಹ ಚಾತ್ರ ಕ್ಷಣಂ ತಿಷ್ಠ ಯದೂನಾಂ ಕುಲಪಾಂಸನ ॥ ೨೪ ॥

ಕುತ್ರ ಯಾಸಿ ಸ್ವಸಾರಂ ಮೇ ಮುಷಿತ್ವಾ ಧ್ವಾಂಕ್ಷವದ್ಧವಿಃ ।
ಹರಿಷ್ಯೇಽದ್ಯ ಮದಂ ಮಂದ ಮಾಯಿನಃ ಕೂಟಯೋಧಿನಃ ॥ ೨೫ ॥

ಹೀಗಿದ್ದರೂ ಇದಕ್ಕಾಗಿ ನಾನು ಎಂದೂ ಶೋಕಿಸುವುದಿಲ್ಲ, ಹರ್ಷಿತನಾಗುವುದಿಲ್ಲ. ಏಕೆಂದರೆ, ದೈವಕ್ಕೆ ವಶವಾದ ಕಾಲನಿಂದ ಈ ಜಗತ್ತು ನಡೆಸಲ್ಪಡುತ್ತದೆ ಎಂಬುದನ್ನು ನಾನು ಅರಿತಿದ್ದೇನೆ. ॥ ೧೪ ॥ ನಾವುಗಳು ಮಹಾ-ಮಹಾ ವೀರ ಸೇನಾಪತಿಗಳಿಗೂ ಒಡೆಯರಾಗಿದ್ದೇವೆ. ಇದರಲ್ಲಿ ಸಂದೇಹವೇ ಇಲ್ಲ. ಹೀಗಿದ್ದರೂ ಈಗ ಶ್ರೀಕೃಷ್ಣನಿಂದ ಸುರಕ್ಷಿತವಾದ ಯಾದವರ ಅಲ್ಪ ಸೇನೆಯೂ ನಮ್ಮನ್ನು ಸೋಲಿಸಿಬಿಟ್ಟಿದೆ. ॥ ೧೫ ॥ ಈ ಸಲ ನಮ್ಮ ಶತ್ರುಗಳ ವಿಜಯವಾಗಿದೆ. ಏಕೆಂದರೆ, ಕಾಲವು ಅವರಿಗೆ ಅನುಕೂಲವಾಗಿತ್ತು. ಕಾಲವು ನಮಗೆ ಅನುಕೂಲವಾದಾಗ ನಾವುಗಳೂ ಕೂಡ ಅವರನ್ನು ಗೆಲ್ಲಬಲ್ಲೆವು. ॥ ೧೬ ॥ ಪರೀಕ್ಷಿತನೇ! ಜರಾಸಂಧನೇ ಮೊದಲಾದ ಮಿತ್ರರು ಹೀಗೆ ಸಮಾಧಾನ ಹೇಳಿದಾಗ ಚೇದಿರಾಜ ಶಿಶುಪಾಲನು ತನ್ನ ಅನುಯಾಯಿಗಳೊಂದಿಗೆ ತನ್ನ ರಾಜಧಾನಿಗೆ ಮರಳಿದನು. ಸಾಯದೇ ಉಳಿದಿರುವ ಇತರ ಅವರ ಮಿತ್ರರಾಜರೂ ತಮ್ಮ-ತಮ್ಮ ನಗರಗಳಿಗೆ ಹಿಂದಿರುಗಿದರು. ॥ ೧೭ ॥

ರುಕ್ಮಿಣಿಯ ಹಿರಿಯಣ್ಣನಾದ ರುಕ್ಮಿಯು ಶ್ರೀಕೃಷ್ಣನನ್ನು ಬಹಳವಾಗಿ ದ್ವೇಷಿಸುತ್ತಿದ್ದನು. ತನ್ನ ತಂಗಿಯನ್ನು ಶ್ರೀಕೃಷ್ಣನು ಕದ್ದುಕೊಂಡು ಹೋಗಿ ರಾಕ್ಷಸವಿಧಿಯಿಂದ ವಿವಾಹವಾಗುವುದನ್ನು ಅವನಿಂದ ಸಹಿಸಲಾಗಲಿಲ್ಲ. ಪರಾಕ್ರಮಿಯಾದ ರುಕ್ಮಿಯು ಒಂದು ಅಕ್ಷೌಹಿಣಿ ಸೈನ್ಯದೊಂದಿಗೆ ಶ್ರೀಕೃಷ್ಣನನ್ನು ಹಿಂಬಾಲಿಸಿದನು. ॥ ೧೮ ॥ ಮಹಾಬಾಹುವಾದ ರುಕ್ಮಿಯು ಕ್ರೋಧದಿಂದ ಉರಿಯುತ್ತಾ, ಕವಚವನ್ನು ಧರಿಸಿ, ಧನುಸ್ಸನ್ನೆತ್ತಿಕೊಂಡು ಸಮಸ್ತ ರಾಜರ ಮುಂದೆ ಹೀಗೆ ಪ್ರತಿಜ್ಞೆ ಮಾಡಿದನು. ॥ ೧೯ ॥ 'ಕೃಷ್ಣನನ್ನು ಯುದ್ಧದಲ್ಲಿ ಕೊಲ್ಲದೆ, ನನ್ನ ತಂಗಿಯಾದ ರುಕ್ಮಿಣಿಯನ್ನು ಹಿಂದಕ್ಕೆ ಕರೆತರದೆ ನಾನು ಕುಂಡಿನಪುರವನ್ನು ಪ್ರವೇಶಿಸುವುದಿಲ್ಲ'. ಸತ್ಯವಾಗಿ ಈ ಮಾತನ್ನು ಪ್ರತಿಜ್ಞಾಪೂರ್ವಕ ನಿಮಗೆ ಹೇಳುತ್ತಿದ್ದೇನೆ. ॥ ೨೦ ॥ ಪರೀಕ್ಷಿತನೇ! ಹೀಗೆ ಹೇಳಿ ಅವನು ರಥವನ್ನು ಹತ್ತಿ, ಸಾರಥಿಗೆ ಹೇಳಿದನು - 'ಕೃಷ್ಣನಿರುವಲ್ಲಿಗೆ ನನ್ನ ರಥವನ್ನು ಬೇಗನೇ ಓಡಿಸು. ಇಂದು ನಾನು ಅವನೊಡನೆ ಯುದ್ಧಮಾಡಬೇಕಾಗಿದೆ. ॥ ೨೧ ॥ ನನ್ನ ತಂಗಿಯನ್ನು ಬಲಾತ್ಕಾರವಾಗಿ ಸೆಳೆದುಕೊಂಡು ಹೋದ ಆ ದುರ್ಬುದ್ಧಿಯಾದ ಗೋಪಾಲನ ಪರಾಕ್ರಮ ಮದವನ್ನು ತೀಕ್ಷ್ಣವಾದ ಬಾಣಗಳಿಂದ ತೊಡೆದುಹಾಕುತ್ತೇನೆ.' ॥ ೨೨ ॥ ಪರೀಕ್ಷಿತ ಮಹಾರಾಜ! ಕುಬುದ್ಧಿಯವನಾಗಿದ್ದ ರುಕ್ಮಿಯು ಸರ್ವೇಶ್ವರನಾದ ಶ್ರೀಕೃಷ್ಣನ ಪ್ರಭಾವವೆಷ್ಟೆಂಬುದನ್ನು ತಿಳಿದವನಾಗಿರಲಿಲ್ಲ. ಅವನು ಮನಬಂದಂತೆ ಬಡಬಡಿಸುತ್ತಾ ರಥೈಕ ಸಹಾಯಕನಾಗಿ ಶ್ರೀಕೃಷ್ಣನ ರಥದ ಇದಿರಿಗೆ ಹೋಗಿ ನಿಲ್ಲು! ನಿಲ್ಲು! ಎಂದು ಹೇಳುತ್ತಾ ಅವನನ್ನು ಯುದ್ಧಕ್ಕೆ ಆಹ್ವಾನಿಸಿದನು. ॥ ೨೩ ॥ ಅವನು ಸುದೃಢವಾದ ಧನುಸ್ಸನ್ನು ಬಲವಾಗಿ ಸೆಳೆದು ಶ್ರೀಕೃಷ್ಣನ ಮೇಲೆ ಮೂರು ಬಾಣಗಳನ್ನು ಪ್ರಯೋಗಿಸಿ, ಹೇಳಿದನು - ಯದುಕುಲಕಲಂಕನೇ! ಕ್ಷಣಕಾಲ ನಿಲ್ಲು. ಕಾಗೆಯು ಮಂತ್ರಪೂತವಾದ ಹವಿಸ್ಸನ್ನು ಎತ್ತಿಕೊಂಡು ಹೋಗುವಂತೆ, ನನ್ನ ತಂಗಿಯನ್ನು ಕದ್ದುಕೊಂಡು ಎಲ್ಲಿಗೆ ಹೋಗುತ್ತಿರುವೆ? ಕೂಟ ಯುದ್ಧ ಮಾಡುವುದರಲ್ಲಿ ನಿಷ್ಣಾತನಾದ, ಮಾಯಾವಿಯಾದ, ಮಂದಬುದ್ಧಿಯವನಾದ ನಿನ್ನ ಮದವನ್ನು ಕ್ಷಣಮಾತ್ರದಲ್ಲಿ ಅಡಗಿಸಿಬಿಡುತ್ತೇನೆ. ॥ ೨೪-೨೫ ॥

ಯಾವನ್ನ ಮೇ ಹತೋ ಬಾಣೈಃ
ಶಯೀಥಾ ಮುಂಚ ದಾರಿಕಾಮ್ ।
ಸ್ಮಯನ್ ಕೃಷ್ಣೋ ಧನುಶ್ಛಿತ್ತ್ವಾ
ಷಡ್ಭಿರ್ವಿವ್ಯಾಧ ರುಕ್ಮಿಣಮ್ ॥ ೨೬ ॥

ಅಷ್ಟಭಿಶ್ಚತುರೋ ವಾಹಾನ್ ದ್ವಾಭ್ಯಾಂ ಸೂತಂ ಧ್ವಜಂ ತ್ರಿಭಿಃ ।
ಸ ಚಾನ್ಯದ್ಧನುರಾಧಾಯ ಕೃಷ್ಣಂ ವಿವ್ಯಾಧ ಪಂಚಭಿಃ ॥ ೨೭ ॥

ತೈಸ್ತಾಡಿತಃ ಶರೌಘೈಸ್ತು ಚಿಚ್ಛೇದ ಧನುರಚ್ಯುತಃ ।
ಪುನರನ್ಯದುಪಾದತ್ತ ತದಪ್ಯಚ್ಛಿನದವ್ಯಯಃ ॥ ೨೮ ॥

ಪರಿಘಂ ಪಟ್ಟಿಶಂ ಶೂಲಂ ಚರ್ಮಾಸೀ ಶಕ್ತಿತೋಮರೌ ।
ಯದ್ಯದಾಯುಧಮಾದತ್ತ ತತ್ ಸರ್ವಂ ಸೋಽಚ್ಛಿನದ್ಧರಿಃ ॥ ೨೯ ॥

ತತೋ ರಥಾದವಪ್ಲುತ್ಯ ಖಡ್ಗಪಾಣಿರ್ಜಿಘಾಂಸಯಾ ।
ಕೃಷ್ಣಮಭ್ಯದ್ರವತ್ ಕ್ರುದ್ಧಃ ಪತಂಗ ಇವ ಪಾವಕಮ್ ॥ ೩೦ ॥

ತಸ್ಯ ಚಾಪತತಃ ಖಡ್ಗಂ ತಿಲಶಶ್ಚರ್ಮ ಚೇಷುಭಿಃ ।
ಛಿತ್ತ್ವಾಸಿಮಾದದೇ ತಿಗ್ಮಂ ರುಕ್ಮಿಣಂ ಹಂತುಮುದ್ಯತಃ ॥ ೩೧ ॥

ದೃಷ್ಟ್ವಾ ಭ್ರಾತೃವಧೋದ್ಯೋಗಂ ರುಕ್ಮಿಣೀ ಭಯವಿಹ್ವಲಾ ।
ಪತಿತ್ವಾ ಪಾದಯೋರ್ಭರ್ತುರುವಾಚ ಕರುಣಂ ಸತೀ ॥ ೩೨ ॥

ಯೋಗೇಶ್ವರಾಪ್ರಮೇಯಾತ್ಮನ್ ದೇವದೇವ ಜಗತ್ಪತೇ ।
ಹಂತುಂ ನಾರ್ಹಸಿ ಕಲ್ಯಾಣ ಭ್ರಾತರಂ ಮೇ ಮಹಾಭುಜ ॥ ೩೩ ॥

ಶ್ರೀಶುಕ ಉವಾಚ

ತಯಾ ಪರಿತ್ರಾಸವಿಕಂಪಿತಾಂಗಯಾ
ಶುಚಾವಶುಷ್ಯನ್ಮುಖರುದ್ಧಕಂಠಯಾ ।
ಕಾತರ್ಯವಿಸ್ರಂಸಿತಹೇಮಮಾಲಯಾ
ಗೃಹೀತಪಾದಃ ಕರುಣೋ ನ್ಯವರ್ತತ ॥ ೩೪ ॥

ಚೈಲೇನ ಬದ್ಧ್ವಾ ತಮಸಾಧುಕಾರಿಣಂ
ಸಶ್ಮಶ್ರುಕೇಶಂ ಪ್ರವಪನ್ ವ್ಯರೂಪಯತ್ ।
ತಾವನ್ಮಮರ್ದುಃ ಪರಸೈನ್ಯಮದ್ಭುತಂ
ಯದುಪ್ರವೀರಾ ನಲಿನೀಂ ಯಥಾ ಗಜಾಃ ॥ ೩೫ ॥

ನೋಡು, ನನ್ನ ಬಾಣಗಳಿಂದ ಹತನಾಗಿ ಭೂಮಿಯ ಮೇಲೆ ಮಲಗುವ ಮೊದಲೇ ನನ್ನ ತಂಗಿಯನ್ನು ಬಿಟ್ಟು ಹೋಗು. ರುಕ್ಮಿಯ ಮಾತನ್ನು ಕೇಳಿ ಭಗವಾನ್ ಶ್ರೀಕೃಷ್ಣನು ನಗುನಗುತ್ತಲೇ ಅವನ ಧನುಸ್ಸನ್ನು ತುಂಡರಿಸಿ, ಅವನ ಮೇಲೆ ಆರು ಬಾಣಗಳನ್ನು ಎಸೆದನು. ॥ ೨೬ ॥ ಹಾಗೆಯೇ ಶ್ರೀಕೃಷ್ಣನು ಎಂಟು ಬಾಣಗಳನ್ನು ಕುದುರೆಗಳ ಮೇಲೆ, ಎರಡು ಬಾಣಗಳನ್ನು ಸಾರಥಿಗೆ ಹೊಡೆದು, ಮೂರು ಬಾಣಗಳಿಂದ ಅವನ ರಥದ ಧ್ವಜವನ್ನು ಕೆಡಹಿದನು. ಆಗ ರುಕ್ಮಿಯು ಮತ್ತೊಂದು ಧನುಸ್ಸನ್ನೆತ್ತಿಕೊಂಡು ಶ್ರೀಕೃಷ್ಣನಿಗೆ ಐದು ಬಾಣಗಳನ್ನು ಪ್ರಯೋಗಿಸಿದನು. ॥ ೨೭ ॥ ಆ ಬಾಣಗಳು ಬರುತ್ತಿರುವಂತೆ ಶ್ರೀಕೃಷ್ಣನು ಅವನ್ನು ತುಂಡರಿಸಿ, ರುಕ್ಮಿಯ ಧನುಷ್ಯವನ್ನೂ ಕತ್ತರಿಸಿ ಬಿಟ್ಟನು. ಅವನು ಮತ್ತೊಂದು ಧನುಸ್ಸನ್ನು ಎತ್ತಿಕೊಂಡು ಹೆದೆಯೇರಿಸುವ ಮೊದಲೇ ಅದನ್ನೂ ತುಂಡರಿಸಿ ಬಿಟ್ಟನು. ॥ ೨೮ ॥ ಹೀಗೆ ರುಕ್ಮಿಯು ಪರಿಘ, ಪಟ್ಟಿಶ, ಶೂಲ, ಕತ್ತಿ-ಗುರಾಣಿ, ಶಕ್ತಿ ತೋಮರ ಮೊದಲಾದ ಶಸ್ತ್ರಗಳನ್ನು ಎತ್ತಿಕೊಳ್ಳುತ್ತಿದ್ದಂತೆಯೇ ಅವೆಲ್ಲವನ್ನೂ ಪ್ರಹರಿಸುವ ಮೊದಲೇ ಭಗವಂತನು ಕತ್ತರಿಸಿಹಾಕಿದನು. ॥ ೨೯ ॥ ಆಗ ರುಕ್ಮಿಯು ಅತ್ಯಂತ ಕ್ರುದ್ಧನಾಗಿ ಕೈಯಲ್ಲಿ ಖಡ್ಗವನ್ನು ಹಿಡಿದುಕೊಂಡು ರಥದಿಂದ ಧುಮುಕಿ ಕೃಷ್ಣನನ್ನು ಕೊಂದುಬಿಡಬೇಕೆಂಬ ಛಲದಿಂದ ಪತಂಗದ ಹುಳುವು ಬೆಂಕಿಯ ಕಡೆಗೆ ರಭಸದಿಂದ ಧಾವಿಸುವಂತೆ ಶ್ರೀಕೃಷ್ಣನ ಕಡೆಗೆ ನುಗ್ಗಿದನು. ॥ ೩೦ ॥ ರುಕ್ಮಿಯು ತನ್ನ ಮೇಲೆ ಬೀಳಲು ರಭಸದಿಂದ ಮುನ್ನುಗ್ಗುತ್ತಿರುವುದನ್ನು ನೋಡಿದ ಭಗವಂತನು ತನ್ನ ಬಾಣಗಳಿಂದ ಕತ್ತಿ-ಗುರಾಣಿಗಳನ್ನು ನುಚ್ಚುನೂರಾಗಿಸಿದನು ಹಾಗೂ ಅವನನ್ನು ಕೊಂದೇ ಬಿಡಲು ಕೈಯಲ್ಲಿ ಖಡ್ಗವನ್ನೆತ್ತಿಕೊಂಡನು. ॥ ೩೧ ॥ ಭಗವಂತನು ತನ್ನ ಅಣ್ಣನಾದ ರುಕ್ಮಿಯನ್ನು ಕೊಂದೇ ಬಿಡುವನೆಂದು ನೋಡಿದ ರುಕ್ಮಿಣಿಯು ಭಯದಿಂದ ಕಳವಳಗೊಂಡು ಪ್ರಿಯತಮನಾದ ಭಗವಾನ್ ಶ್ರೀಕೃಷ್ಣನ ಚರಣಗಳಲ್ಲಿ ಬಿದ್ದು ಕರುಣಾಸ್ವರದಿಂದ ಇಂತೆಂದಳು. ॥ ೩೨ ॥ "ದೇವದೇವನೇ! ಜಗತ್ಪತಿಯೇ! ಯಾರಿಂದಲೂ ತಿಳಿಯಲಾಗದ ಆತ್ಮಸ್ವರೂಪವುಳ್ಳವನೇ! ಮಹಾಭುಜನೇ! ಕಲ್ಯಾಣಸ್ವರೂಪನೇ! ಪ್ರಭುವೇ! ನನ್ನ ಅಣ್ಣನನ್ನು ಸಂಹರಿಸುವುದು ನಿನಗೆ ಯೋಗ್ಯವಲ್ಲ." ॥ ೩೩ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ - ಪರೀಕ್ಷಿತನೇ! ಆ ಸಮಯದಲ್ಲಿ ರುಕ್ಮಿಣಿಯ ಒಂದೊಂದು ಅವಯವಗಳೂ ಭಯದಿಂದ ನಡುಗುತ್ತಿದ್ದವು. ಶೋಕ ಹೆಚ್ಚಳದಿಂದ ಮುಖವು ಬಾಡಿ, ಗಂಟಲು ಒಣಗಿಹೋಗಿತ್ತು. ಕಾತುರಳಾದ ಆಕೆಯ ಕೊರಳಿನ ಸ್ವರ್ಣಹಾರವು ಕೆಳಗೆ ಬಿದ್ದುಬಿಟ್ಟಿತು. ಇದೇ ಸ್ಥಿತಿಯಲ್ಲಿ ಭಗವಂತನ ಚರಣಗಳನ್ನು ಹಿಡಿದುಕೊಂಡಿದ್ದಳು. ಪರಮ ದಯಾಳುವಾದ ಭಗವಂತನು ಭಯಗೊಂಡಿರುವ ಆಕೆಯನ್ನು ನೋಡಿ ರುಕ್ಮಿಯನ್ನು ಕೊಲ್ಲುವ ವಿಚಾರವನ್ನು ಬಿಟ್ಟು ಬಿಟ್ಟನು. ॥ ೩೪ ॥ ಹೀಗಿದ್ದರೂ ರುಕ್ಮಿಯು ಕೃಷ್ಣನ ಕುರಿತು ಪ್ರತೀಕಾರ ಮಾಡುವುದನ್ನು ಬಿಡಲಿಲ್ಲ. ಆಗ ಭಗವಾನ್ ಶ್ರೀಕೃಷ್ಣನು ಅವನ ವಲ್ಲಿಯಿಂದಲೇ ಅವನನ್ನು ಕಟ್ಟಿ ಗಡ್ಡ-ಮೀಸೆ-ತಲೆಗೂದಲು ಅಲ್ಲಲ್ಲಿ ಬೋಳಿಸಿ ಕುರೂಪಗೊಳಿಸಿದನು. ಅಷ್ಟರಲ್ಲಿ ಯಾದವವೀರರು ಶತ್ರು ಸೈನ್ಯವೆಲ್ಲವನ್ನೂ ಆನೆಯು ಕಮಲ ವನವನ್ನು ಧ್ವಂಸಮಾಡುವಂತೆ ನಿರ್ನಾಮಮಾಡಿದರು. ॥ ೩೫ ॥

ಕೃಷ್ಣಾಂತಿಕಮುಪವ್ರಜ್ಯ ದದೃಶುಸ್ತತ್ರ ರುಕ್ಮಿಣಮ್ ।
ತಥಾಭೂತಂ ಹತಪ್ರಾಯಂ ದೃಷ್ಟ್ವಾ ಸಂಕರ್ಷಣೋ ವಿಭುಃ ।
ವಿಮುಚ್ಯ ಬದ್ಧಂ ಕರುಣೋ ಭಗವಾನ್ ಕೃಷ್ಣಮಬ್ರವೀತ್
॥ ೩೬ ॥

ಅಸಾಧ್ವಿದಂ ತ್ವಯಾ ಕೃಷ್ಣ ಕೃತಮಸ್ಮಜ್ಜುಗುಪ್ಸಿತಮ್ ।
ವಪನಂ ಶ್ಮಶ್ರುಕೇಶಾನಾಂ ವೈರೂಪ್ಯಂ ಸುಹೃದೋ ವಧಃ
॥ ೩೭ ॥

ಮೈವಾಸ್ಮಾನ್ ಸಾಧ್ವ್ಯಸೂಯೇಥಾ
ಭ್ರಾತುರ್ವೈರೂಪ್ಯಚಿಂತಯಾ ।
ಸುಖದುಃಖದೋ ನ ಚಾನ್ಯೋಽಸ್ತಿ
ಯತಃ ಸ್ವಕೃತಭುಕ್ ಪುಮಾನ್ ॥ ೩೮ ॥

ಬಂಧುರ್ವಧಾರ್ಹದೋಷೋಽಪಿ ನ ಬಂಧೋರ್ವಧಮರ್ಹತಿ ।
ತ್ಯಾಜ್ಯಃ ಸ್ವೇನೈವ ದೋಷೇಣ ಹತಃ ಕಿಂ ಹನ್ಯತೇ ಪುನಃ
॥ ೩೯ ॥

ಕ್ಷತ್ರಿಯಾಣಾಮಯಂ ಧರ್ಮಃ ಪ್ರಜಾಪತಿವಿನಿರ್ಮಿತಃ ।
ಭ್ರಾತಾಪಿ ಭ್ರಾತರಂ ಹನ್ಯಾದ್ಯೇನ ಘೋರತರಸ್ತತಃ
॥ ೪೦ ॥

ರಾಜ್ಯಸ್ಯ ಭೂಮೇರ್ವಿತ್ತಸ್ಯ ಸ್ತ್ರಿಯೋ ಮಾನಸ್ಯ ತೇಜಸಃ ।
ಮಾನಿನೋಽನ್ಯಸ್ಯ ವಾ ಹೇತೋಃ ಶ್ರೀಮದಾಂಧಾಃ ಕ್ಷಿಪಂತಿ ಹಿ
॥ ೪೧ ॥

ತವೇಯಂ ವಿಷಮಾ ಬುದ್ಧಿಃ ಸರ್ವಭೂತೇಷು ದುರ್ಹೃದಾಮ್ ।
ಯನ್ಮನ್ಯಸೇ ಸದಾಭದ್ರಂ ಸುಹೃದಾಂ ಭದ್ರಮಜ್ಞವತ್
॥ ೪೨ ॥

ಆತ್ಮಮೋಹೋ ನೃಣಾಮೇವ ಕಲ್ಪತೇ ದೇವಮಾಯಯಾ ।
ಸುಹೃದ್ದುರ್ಹೃದುದಾಸೀನ ಇತಿ ದೇಹಾತ್ಮಮಾನಿನಾಮ್
॥ ೪೩ ॥

ಏಕ ಏವ ಪರೋ ಹ್ಯಾತ್ಮಾ ಸರ್ವೇಷಾಮಪಿ ದೇಹಿನಾಮ್ ।
ನಾನೇವ ಗೃಹ್ಯತೇ ಮೂಢೈರ್ಯಥಾ ಜ್ಯೋತಿರ್ಯಥಾ ನಭಃ
॥ ೪೪ ॥

ಮತ್ತೆ ಅವರು ಮರಳಿ ಶ್ರೀಕೃಷ್ಣನ ಬಳಿಗೆ ಬಂದು ನೋಡುತ್ತಾರೆ ರುಕ್ಮಿಯು ಬಟ್ಟೆಯಿಂದ ಕಟ್ಟಲ್ಪಟ್ಟು ಹತಪ್ರಾಯನಾಗಿಬಿದ್ದಿದ್ದನು. ಅವನನ್ನು ನೋಡಿದ ಭಗವಾನ್ ಬಲರಾಮನಿಗೆ ದಯೆ ಉಂಟಾಗಿ, ಅವನ ಬಂಧವನ್ನು ಬಿಡಿಸಿ ಶ್ರೀಕೃಷ್ಣನಲ್ಲಿ ಹೇಳಿದನು - ॥ ೩೬ ॥ ಕೃಷ್ಣ! ನೀನು ಮಾಡಿದುದು ಸರಿಯಲ್ಲ. ಇಂತಹ ನಿಂದಿತ ಕಾರ್ಯವು ನಮ್ಮಂತಹವರಿಗೆ ಯೋಗ್ಯವಲ್ಲ. ತಮ್ಮ ಸಂಬಂಧಿಕರ ಗಡ್ಡ-ಮೀಸೆ ಬೋಳಿಸಿ ವಿರೂಪಗೊಳಿಸುವುದು ಒಂದು ರೀತಿಯಿಂದ ವಧೆಯೆ ಆಗಿದೆ. ॥ ೩೭ ॥ ಬಳಿಕ ಬಲರಾಮನು ರುಕ್ಮಿಣಿಯನ್ನು ಸಂಬೋಧಿಸಿ ಹೇಳಿದನು - ಸಾಧ್ವಿಯೇ! ಶ್ರೀಕೃಷ್ಣನು ನಿನ್ನಣ್ಣನನ್ನು ವಿರೂಪಗೊಳಿಸಿದನೆಂದು ನಮ್ಮ ಕುರಿತು ನೀನು ದೋಷವೆಣಿಸಬೇಡ. ಏಕೆಂದರೆ, ಜೀವನಿಗೆ ಸುಖ-ದುಃಖಗಳನ್ನು ಕೊಡುವವನು ಬೇರೆಯಾರೂ ಆಗಿರದೆ ತನ್ನ ಕರ್ಮಗಳನ್ನೇ ಭೋಗಿಸಬೇಕಾಗುತ್ತದೆ. ॥ ೩೮ ॥ ಈಗ ಶ್ರೀಕೃಷ್ಣನನ್ನು ಸಂಬೋಧಿಸಿ ಹೇಳುತ್ತಾನೆ - ಕೃಷ್ಣಾ! ನಮ್ಮ ಸಂಬಂಧಿಯು ವಧಾರ್ಹವಾದ ಅಪರಾಧವನ್ನೇ ಮಾಡಿದ್ದರೂ ನಾವು ಅವನನ್ನು ವಧಿಸಬಾರದು. ಅವನನ್ನು ಬಿಟ್ಟುಬಿಡಬೇಕು. ಅವನಾದರೋ ತನ್ನ ದೋಷದಿಂದಲೇ ಸತ್ತುಹೋಗಿರುವನು. ಅಂತಹವನನ್ನು ಪುನಃ ಸಾಯಿಸಲು ಹೋಗುವುದೇ? ॥ ೩೯ ॥ ಮತ್ತೆ ರುಕ್ಮಿಣಿಗೆ ಹೇಳುತ್ತಾನೆ ಸಾಧ್ವಿಮಣಿಯೇ! ಧರ್ಮರಕ್ಷಣೆಗಾಗಿ ಕ್ಷತ್ರಿಯನಾದವನು ತನ್ನ ಸೋದರನನ್ನೇ ಕೊಲ್ಲಬೇಕಾಗುತ್ತದೆ. ಬ್ರಹ್ಮನೇ ಕ್ಷತ್ರಿಯರಿಗೆ ಈ ಧರ್ಮವನ್ನು ವಿಧಿಸಿದ್ದಾನೆ. ಅದಕ್ಕಾಗಿ ಈ ಕ್ಷತ್ರಿಯಧರ್ಮವು ಅತ್ಯಂತ ಘೋರವಾಗಿದೆ. ॥ ೪೦ ॥ ಪುನಃ ಶ್ರೀಕೃಷ್ಣನಲ್ಲಿ ಹೇಳಿದನು ತಮ್ಮ! ಧನಮದದಿಂದ ಅಂಧರಾದ ಅಹಂಕಾರಿಗಳು ರಾಜ್ಯ, ಭೂಮಿ, ಧನ, ಸ್ತ್ರೀ, ಮಾನ, ತೇಜಸ್ಸು ಇವುಗಳಿಂದಲೋ ಅಥವಾ ಬೇರೆ ಯಾವುದೇ ಕಾರಣದಿಂದ ತನ್ನ ಬಂಧುಗಳನ್ನೇ ತಿರಸ್ಕರಿಸುತ್ತಾರೆ. ॥ ೪೧ ॥ ರುಕ್ಮಿಣಿಯ ಬಳಿ ಹೇಳುತ್ತಾನೆ - ಸಾಧ್ವಿ! ನಿನ್ನ ಬಂಧುಗಳು ಸಮಸ್ತ ಪ್ರಾಣಿಗಳ ವಿಷಯದಲ್ಲಿ ದುರ್ಭಾವನೆಯನ್ನಿಟ್ಟುಕೊಂಡಿರುವವರು. ನಾವು ಅವರಿಗೆ ಒಳ್ಳೆಯದಾಗಲೆಂದೇ ಈ ಶಿಕ್ಷೆಯನ್ನು ವಿಧಿಸಿದ್ದೇವೆ. ಅದನ್ನು ನೀನು ಅಜ್ಞಾನಿಗಳಂತೆ ಅಮಂಗಳವೆಂದು ಭಾವಿಸಬೇಡ. ॥ ೪೨ ॥ ದೇವಿ! ಭಗವಂತನ ಮಾಯೆಯಿಂದ ಮೋಹಿತರಾಗಿ ದೇಹವನ್ನೇ ಆತ್ಮನೆಂದು ತಿಳಿದವರಿಗೆ ಇವನು ಮಿತ್ರನು, ಇವನು ಶತ್ರುವು, ಇವನು ಉದಾಸೀನ ಇಂತಹ ಆತ್ಮಮೋಹ ಉಂಟಾಗುತ್ತದೆ. ॥ ೪೩ ॥ ಸಮಸ್ತ ದೇಹಧಾರಿಗಳ ಆತ್ಮವು ಒಂದೇ ಆಗಿದೆ. ಅದಕ್ಕೆ ಮಾಯೆಯ ಯಾವ ಸಂಬಂಧವೂ ಇಲ್ಲ. ನೀರು, ಘಟ ಮುಂತಾದವುಗಳ ಭೇದದಿಂದ ಒಂದೇಯಾಗಿರುವ ಸೂರ್ಯ, ಚಂದ್ರರೇ ಮೊದಲಾದ ಪ್ರಕಾಶಮಾನ ಪದಾರ್ಥಗಳು ಮತ್ತು ಆಕಾಶವು ಭಿನ್ನ-ಭಿನ್ನವಾಗಿ ಕಂಡುಬರುವಂತೆ ಮೂರ್ಖಜನರು ಶರೀರ ಭೇದದಿಂದ ಆತ್ಮನಲ್ಲಿ ಭೇದವನ್ನು ಭಾವಿಸುತ್ತಾರೆ. ॥ ೪೪ ॥

ದೇಹ ಆದ್ಯಂತವಾನೇಷ ದ್ರವ್ಯಪ್ರಾಣಗುಣಾತ್ಮಕಃ ।
ಆತ್ಮನ್ಯವಿದ್ಯಯಾ ಕ್ಲೃಪ್ತಃ ಸಂಸಾರಯತಿ ದೇಹಿನಮ್ ॥ ೪೫ ॥

ನಾತ್ಮನೋಽನ್ಯೇನ ಸಂಯೋಗೋ ವಿಯೋಗಶ್ಚಾಸತಃ ಸತಿ ।
ತದ್ಧೇತುತ್ವಾತ್ತತ್ಪ್ರಸಿದ್ಧೇರ್ದೃಗ್ರೂಪಾಭ್ಯಾಂ ಯಥಾ ರವೇಃ ॥ ೪೬ ॥

ಜನ್ಮಾದಯಸ್ತು ದೇಹಸ್ಯ ವಿಕ್ರಿಯಾ ನಾತ್ಮನಃ ಕ್ವಚಿತ್ ।
ಕಲಾನಾಮಿವ ನೈವೇಂದೋರ್ಮೃತಿರ್ಹ್ಯಸ್ಯ ಕುಹೂರಿವ ॥ ೪೭ ॥

ಯಥಾ ಶಯಾನ ಆತ್ಮಾನಂ ವಿಷಯಾನ್ ಫಲಮೇವ ಚ ।
ಅನುಭುಂಕ್ತೇಽಪ್ಯಸತ್ಯರ್ಥೇ ತಥಾಽಽಪ್ನೋತ್ಯಬುಧೋ ಭವಮ್ ॥ ೪೮ ॥

ತಸ್ಮಾದಜ್ಞಾನಜಂ ಶೋಕಮಾತ್ಮಶೋಷವಿಮೋಹನಮ್ ।
ತತ್ತ್ವಜ್ಞಾನೇನ ನಿರ್ಹೃತ್ಯ ಸ್ವಸ್ಥಾ ಭವ ಶುಚಿಸ್ಮಿತೇ ॥ ೪೯ ॥

ಶ್ರೀಶುಕ ಉವಾಚ

ಏವಂ ಭಗವತಾ ತನ್ವೀ ರಾಮೇಣ ಪ್ರತಿಬೋಧಿತಾ ।
ವೈಮನಸ್ಯಂ ಪರಿತ್ಯಜ್ಯ ಮನೋ ಬುದ್ಧ್ಯಾ ಸಮಾದಧೇ ॥ ೫೦ ॥

ಪ್ರಾಣಾವಶೇಷ ಉತ್ಸೃಷ್ಟೋ ದ್ವಿಡ್ಭಿರ್ಹತಬಲಪ್ರಭಃ ।
ಸ್ಮರನ್ ವಿರೂಪಕರಣಂ ವಿತಥಾತ್ಮಮನೋರಥಃ ॥ ೫೧ ॥

ಚಕ್ರೇ ಭೋಜಕಟಂ ನಾಮ ನಿವಾಸಾಯ ಮಹತ್ ಪುರಮ್ ।
ಅಹತ್ವಾ ದುರ್ಮತಿಂ ಕೃಷ್ಣಮಪ್ರತ್ಯೂಹ್ಯ ಯವೀಯಸೀಮ್ ।
ಕುಂಡಿನಂ ನ ಪ್ರವೇಕ್ಷ್ಯಾಮೀತ್ಯುಕ್ತ್ವಾ ತತ್ರಾವಸದ್ರುಷಾ ॥ ೫೨ ॥

ಈ ಶರೀರವು ಆದಿ-ಅಂತ್ಯವುಳ್ಳದ್ದು. ಪಂಚಭೂತಗಳು, ಪಂಚ ಪ್ರಾಣಗಳು, ಪಂಚತನ್ಮಾತ್ರೆಗಳು, ಮತ್ತು ತ್ರಿಗುಣಗಳೇ ಇದರ ಸ್ವರೂಪವಾಗಿದೆ. ಆತ್ಮನಲ್ಲಿರುವ ಅಜ್ಞಾನದಿಂದಲೇ ಈ ಶರೀರ ಕಲ್ಪಿತವಾಗಿದೆ. ಅದನ್ನೇ 'ನಾನು-ನನ್ನದು' ಎಂದು ತಿಳಿದು ಹುಟ್ಟು-ಸಾವಿನ ಸಂಸಾರ ಚಕ್ರದಲ್ಲಿ ಬೀಳುತ್ತಾನೆ. ॥ ೪೫ ॥ ಸಾಧ್ವಿ! ನೇತ್ರ ಮತ್ತು ರೂಪ ಎರಡೂ ಸೂರ್ಯನಿಂದ ಪ್ರಕಾಶಿಸುತ್ತವೆ. ಸೂರ್ಯನೇ ಅವುಗಳ ಕಾರಣನಾಗಿದ್ದಾನೆ. ಆದರಿಂದ ಸೂರ್ಯನೊಂದಿಗೆ ನೇತ್ರ ಮತ್ತು ರೂಪ ಇವುಗಳ ಸಂಯೋಗ-ವಿಯೋಗ ಎಂದೂ ಆಗುವುದಿಲ್ಲ. ಹೀಗೆಯೇ ಸಮಸ್ತ ಪ್ರಪಂಚದ ಅಸ್ತಿತ್ವವು ಆತ್ಮನ ಅಸ್ತಿತ್ವದ ಕಾರಣದಿಂದಲೇ ಕಂಡುಬರುತ್ತದೆ. ಸಮಸ್ತ ಪ್ರಪಂಚದ ಪ್ರಕಾಶವು ಆತ್ಮವೇ ಆಗಿದೆ. ಹಾಗಿರುವಾಗ ಆತ್ಮನೊಂದಿಗೆ ಬೇರೆ ಅಸತ್ ಪದಾರ್ಥಗಳ ಸಂಯೋಗ-ವಿಯೋಗ ಹೇಗಾಗಬಲ್ಲದು? ॥ ೪೬ ॥ ಹುಟ್ಟು ವುದು, ಇರುವುದು, ಬೆಳೆಯುವುದು, ಬದಲಾಗುವುದು, ಕುಗ್ಗು ವುದು, ಸಾಯುವುದು - ಈ ವಿಕಾರಗಳೆಲ್ಲವೂ ಶರೀರದ್ದಾಗಿರುತ್ತವೆ, ಆತ್ಮನದಲ್ಲ. ಕೃಷ್ಣಪಕ್ಷದಲ್ಲಿ ಚಂದ್ರನ ಕಲೆಗಳದ್ದೇ ಕ್ಷಯವಾಗುತ್ತದೆ, ಚಂದ್ರನದ್ದಲ್ಲ. ಆದರೆ ಅಮಾವಾಸ್ಯೆಯದಿನ ಜನರು ವ್ಯವಹಾರದಲ್ಲಿ ಚಂದ್ರನದೇ ಕ್ಷಯವಾಯಿತೆಂದು ಹೇಳುತ್ತಾ-ಕೇಳುತ್ತಾ ಇರುತ್ತಾರೆ. ಹಾಗೆಯೇ ಹುಟ್ಟು-ಸಾವು ಮುಂತಾದ ವಿಕಾರಗಳೆಲ್ಲವೂ ಶರೀರದ್ದೇ ಆಗಿರುತ್ತವೆ. ಆದರೆ ಜನರು ಭ್ರಮೆಯಿಂದ ಆತ್ಮನದೇ ಎಂದು ಭಾವಿಸುತ್ತಾರೆ. ॥ ೪೭ ॥ ಮಲಗಿರುವ ವ್ಯಕ್ತಿಯು ಯಾವುದೇ ಪದಾರ್ಥಗಳು ಇಲ್ಲದೆಯೇ ಸ್ವಪ್ನದಲ್ಲಿ ಭೋಕ್ತಾ, ಭೋಗ್ಯ ಮತ್ತು ಭೋಗರೂಪವಾದ ಫಲಗಳನ್ನು ಅನುಭವಿಸುತ್ತಾನೆ. ಹಾಗೆಯೇ ಅಜ್ಞಾನೀ ಜನರು ಮಿಥ್ಯೆಯೇ ಆದ ಸಂಸಾರ ಚಕ್ರವನ್ನು ಅನುಭವಿಸುತ್ತಾರೆ. ॥ ೪೮ ॥ ಆದಕ್ಕಾಗಿ ಸಾಧ್ವಿಯೇ! ಅಜ್ಞಾನ ದಿಂದ ಉಂಟಾದ ಈ ಶೋಕವನ್ನು ತ್ಯಜಿಸು. ಅದು ಅಂತಃಕರಣ ವನ್ನು ಶೋಷಿಸುತ್ತದೆ; ಮೋಹಿತಗೊಳಿಸುತ್ತದೆ. ಆದುದ ರಿಂದ ಈ ಶೋಕವನ್ನು ಬಿಟ್ಟು ನೀನು ನಿನ್ನ ಸ್ವರೂಪದಲ್ಲಿ ಸ್ಥಿತಳಾಗು. ॥ ೪೯ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ - ಪರೀಕ್ಷಿತನೇ! ಬಲರಾಮನು ಈ ಪ್ರಕಾರವಾಗಿ ಸಮಾಧಾನಪಡಿಸಿದಾಗ ಪರಮ ಸುಂದರಿಯಾದ ರುಕ್ಮಿಣಿಯು ತನ್ನ ಮನಸ್ಸನ್ನು ಸಾಂತ್ವನಗೊಳಿಸಿ ವಿವೇಕ ಬುದ್ಧಿಯಿಂದ ಅದನ್ನು ಸಮಾಧಾನಗೊಳಿಸಿದಳು. ॥ ೫೦ ॥ ರುಕ್ಮಿಯ ಸೈನ್ಯ ಮತ್ತು ತೇಜವು ನಾಶವಾಗಿ ಹೋಗಿತ್ತು. ಕೇವಲ ಪ್ರಾಣಗಳು ಉಳಿದಿದ್ದವು. ಅವನ ಮನಸ್ಸಿನ ಎಲ್ಲ ಆಸೆ ಆಕಾಂಕ್ಷೆ ಗಳು ವ್ಯರ್ಥವಾಗಿ ಹೋಗಿದ್ದವು. ಶತ್ರುಗಳು ಅವನನ್ನು ಅವಮಾನಿತ ಗೊಳಿಸಿ ಬಿಟ್ಟುಬಿಟ್ಟಿದ್ದರು. ತನ್ನನ್ನು ವಿರೂಪಗೊಳಿಸಿದ ಕಷ್ಟದಾಯಕ ಸ್ಮೃತಿಯನ್ನು ಅವನಿಂದ ಮರೆಯಲಾಗಲಿಲ್ಲ. ॥ ೫೧ ॥ 'ದುರ್ಬುದ್ಧಿಯಾದ ಕೃಷ್ಣನನ್ನು ಕೊಲ್ಲದೆ, ತಂಗಿಯನ್ನು ಮರಳಿ ತರದೆ ಕುಂಡಿನ ಪುರವನ್ನು ಪ್ರವೇಶಿಸುವುದಿಲ್ಲ' ಎಂದು ಅವನು ಹಿಂದೆಯೇ ಪ್ರತಿಜ್ಞೆ ಮಾಡಿದ್ದನು. ಆದ್ದರಿಂದ ಅವನು ಭೋಜಕಟ ಎಂಬ ನಗರವನ್ನು ನಿರ್ಮಿಸಿಕೊಂಡು, ಅಲ್ಲಿಯೇ ಕ್ರುದ್ಧನಾಗಿ ಇರತೊಡಗಿದನು. ॥ ೫೨ ॥

ಭಗವಾನ್ ಭೀಷ್ಮಕಸುತಾಮೇವಂ ನಿರ್ಜಿತ್ಯ ಭೂಮಿಪಾನ್ ।
ಪುರಮಾನೀಯ ವಿಧಿವದುಪಯೇಮೇ ಕುರೂದ್ವಹ ॥ ೫೩ ॥

ತದಾ ಮಹೋತ್ಸವೋ ನೄಣಾಂ ಯದುಪುರ್ಯಾಂ ಗೃಹೇ ಗೃಹೇ ।
ಅಭೂದನನ್ಯಭಾವಾನಾಂ ಕೃಷ್ಣೇ ಯದುಪತೌ ನೃಪ ॥ ೫೪ ॥

ನರಾ ನಾರ್ಯಶ್ಚ ಮುದಿತಾಃ ಪ್ರಮೃಷ್ಟಮಣಿಕುಂಡಲಾಃ ।
ಪಾರಿಬರ್ಹಮುಪಾಜಹ್ರುರ್ವರಯೋಶ್ಚಿತ್ರವಾಸಸೋಃ ॥ ೫೫ ॥

ಸಾ ವೃಷ್ಣಿಪುರ್ಯುತ್ತಭಿತೇಂದ್ರಕೇತುಭಿ-
ರ್ವಿಚಿತ್ರಮಾಲ್ಯಾಂಬರರತ್ನತೋರಣೈಃ ।
ಬಭೌ ಪ್ರತಿದ್ವಾರ್ಯುಪಕ್ಲೃಪ್ತಮಂಗಲೈ-
ರಾಪೂರ್ಣಕುಂಭಾಗುರುಧೂಪದೀಪಕೈಃ ॥ ೫೬ ॥

ಸಿಕ್ತಮಾರ್ಗಾ ಮದಚ್ಯುದ್ಭಿರಾಹೂತಪ್ರೇಷ್ಠಭೂಭುಜಾಮ್ ।
ಗಜೈರ್ದ್ವಾಃಸು ಪರಾಮೃಷ್ಟರಂಭಾಪೂಗೋಪಶೋಭಿತಾ ॥ ೫೭ ॥

ಕುರುಸೃಂಜಯಕೈಕೇಯವಿದರ್ಭಯದುಕುಂತಯಃ ।
ಮಿಥೋ ಮುಮುದಿರೇ ತಸ್ಮಿನ್ಸಂಭ್ರಮಾತ್ ಪರಿಧಾವತಾಮ್ ॥ ೫೮ ॥

ರುಕ್ಮಿಣ್ಯಾ ಹರಣಂ ಶ್ರುತ್ವಾ ಗೀಯಮಾನಂ ತತಸ್ತತಃ ।
ರಾಜಾನೋ ರಾಜಕನ್ಯಾಶ್ಚ ಬಭೂವುರ್ಭೃಶವಿಸ್ಮಿತಾಃ ॥ ೫೯ ॥

ದ್ವಾರಕಾಯಾಮಭೂದ್ ರಾಜನ್
ಮಹಾಮೋದಃ ಪುರೌಕಸಾಮ್ ।
ರುಕ್ಮಿಣ್ಯಾ ರಮಯೋಪೇತಂ
ದೃಷ್ಟ್ವಾ ಕೃಷ್ಣಂ ಶ್ರಿಯಃಪತಿಮ್ ॥ ೬೦ ॥

ಪರೀಕ್ಷಿತನೇ! ಭಗವಾನ್ ಶ್ರೀಕೃಷ್ಣನು ಹೀಗೆ ಎಲ್ಲ ರಾಜರನ್ನು ಗೆದ್ದುಕೊಂಡು ರುಕ್ಮಿಣಿಯನ್ನು ದ್ವಾರಕೆಗೆ ಕರೆತಂದು ಆಕೆಯನ್ನು ವಿಧಿಪೂರ್ವಕವಾಗಿ ವಿವಾಹವಾದನು. ॥ ೫೩ ॥ ರಾಜೇಂದ್ರನೇ! ಯದುಪತಿಯಾದ ಶ್ರೀಕೃಷ್ಣನಲ್ಲಿ ಅನನ್ಯವಾದ ಪ್ರೇಮವನ್ನು ಇರಿಸಿ ಕೊಂಡಿದ್ದ ದ್ವಾರಕಾನಗರದ ನಿವಾಸಿಗಳ ಮನೆ-ಮನೆಗಳಲ್ಲಿ ಶ್ರೀಕೃಷ್ಣನ ವಿವಾಹೋತ್ಸವವನ್ನು ಆಚರಿಸಿದರು. ॥ ೫೪ ॥ ಜಗ ಜಗಿಸುವ ರತ್ನದ ಕುಂಡಲಗಳನ್ನು ಧರಿಸಿದ್ದ ಅಲ್ಲಿಯ ನರ-ನಾರಿಯರು ಶ್ರೀಕೃಷ್ಣ-ರುಕ್ಮಿಣಿಯರ ವಿವಾಹ ಮಹೋತ್ಸವದಿಂದ ಆನಂದಭರಿತರಾಗಿ ಚಿತ್ರ-ವಿಚಿತ್ರವಾದ ವಸ್ತ್ರಗಳನ್ನು ಧರಿಸಿದ್ದ ವಧೂ-ವರರಿಗೆ ನಾನಾ ವಿಧವಾದ ಕಾಣಿಕೆ - ಉಡುಗೊರೆಗಳನ್ನು ತಂದೊಪ್ಪಿಸಿದರು. ॥ ೫೫ ॥ ಆ ಸಮಯದಲ್ಲಿ ದ್ವಾರಕಾಪಟ್ಟಣವು ಅಪೂರ್ವವಾದ ಶೋಭೆಯಿಂದ ಬೆಳಗುತ್ತಿದ್ದಿತು. ಎತ್ತರವಾದ ಇಂದ್ರಧ್ವಜಗಳು ಎಲ್ಲೆಡೆಯಲ್ಲಿಯೂ ಹಾರಾಡುತ್ತಿದ್ದವು. ಹಲವು ಬಣ್ಣದ ಪುಷ್ಪಹಾರಗಳ, ವಸ್ತ್ರಗಳ ಮತ್ತು ಮಣಿಗಳ ತೋರಣಗಳಿಂದ ಪಟ್ಟಣವು ಸಮಲಂಕೃತವಾಗಿತ್ತು. ಪ್ರತಿ ಮನೆಯ ಬಾಗಿಲುಗಳಲ್ಲಿಯೂ ಅರಳು, ಗರಿಕೆ, ಹೂವು ಮೊದಲಾದ ಮಂಗಳ ದ್ರವ್ಯಗಳನ್ನು ಪೂರ್ಣಕುಂಭಗಳನ್ನು ಇರಿಸಿದ್ದರು. ಅಗರು-ಧೂಪಗಳಿಂದಲೂ, ನಾಲುದೀಪಗಳಿಂದಲೂ ಅಲ್ಲಿಯ ಶೋಭೆಯು ವಿಲಕ್ಷಣವಾಗಿತ್ತು. ॥ ೫೬ ॥ ವಿವಾಹಕ್ಕೆ ಆಹ್ವಾನಿಸಲ್ಪಟ್ಟ ಮಿತ್ರ ರಾಜರ ಮತ್ತಗಜಗಳ ಮದೋದಕದಿಂದ ಅಲ್ಲಿಯ ಬೀದಿಗಳು ತೊಯ್ದು ಹೋಗಿದ್ದವು. ಬಾಗಿಲುಗಳು ಸಾರಿಸಲ್ಪಟ್ಟು ಬಾಳೆಯ ಕಂಬಗಳಿಂದಲೂ, ಹೊಂಬಾಳೆಗಳಿಂದಲೂ, ಅಲಂಕರಿಸಲ್ಪಟ್ಟು ಅತ್ಯಂತ ಶೋಭಾಯಮಾನವಾಗಿ ಕಾಣುತ್ತಿದ್ದವು. ॥ ೫೭ ॥ ಆ ವಿವಾಹಮಹೋತ್ಸವ ಸಂದರ್ಭದಲ್ಲಿ ಸಂಭ್ರಮದಿಂದ ಓಡಾಡುತ್ತಿದ್ದವರಲ್ಲಿ ಕುರು-ಸೃಂಜಯ-ಕೇಕಯ-ವಿದರ್ಭ-ಯದು ಮತ್ತು ಕುಂತೀದೇಶದ ಅರಸರೂ ಪ್ರಜೆಗಳೂ ಪರಸ್ಪರವಾಗಿ ಮಾತನಾಡಿಕೊಳ್ಳುತ್ತಾ ಆನಂದತುಂದಿಲರಾಗಿದ್ದರು. ॥ ೫೮ ॥ ಅಲ್ಲಲ್ಲಿ ಗಾಯಕರು ರುಕ್ಮಿಣೀಹರಣ ಪ್ರಸಂಗವನ್ನು ಮಧುರವಾಗಿ ಗಾಯನಮಾಡುತ್ತಿದ್ದರು. ಇದನ್ನು ಕೇಳಿದ ರಾಜರೂ ಮತ್ತು ರಾಜಕನ್ಯೆಯರೂ ಅತ್ಯಂತ ವಿಸ್ಮಿತರಾದರು. ॥ ೫೯ ॥ ರಾಜೇಂದ್ರನೇ! ಲಕ್ಷ್ಮೀದೇವಿಯು ರುಕ್ಮಿಣೀರೂಪದಲ್ಲಿದ್ದು ಸಾಕ್ಷಾತ್ ಲಕ್ಷ್ಮೀಪತಿಯಾದ ಶ್ರೀಕೃಷ್ಣನೊಡನೆ ಸೇರಿರುವುದನ್ನು ನೋಡಿ ದ್ವಾರಕಾವಾಸಿಗಳಾದ ನರ-ನಾರಿಯರೆಲ್ಲರೂ ಆನಂದ ಸಾಗರದಲ್ಲಿ ಮುಳುಗಿ ಹೋದರು. ॥ ೬೦ ॥

ಐವತ್ತನಾಲ್ಕನೆಯ ಅಧ್ಯಾಯವು ಮುಗಿಯಿತು. ॥ ೫೪ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮ ಸ್ಕಂಧೇ ಉತ್ತರಾರ್ಧೇ
ರುಕ್ಮಿಣ್ಯುದ್ವಾಹೋತ್ಸವೋ ನಾಮ ಚತುಃಪಂಚಾಶತ್ತಮೋಽಧ್ಯಾಯಃ ॥ ೫೪ ॥

ಐವತ್ತೈದನೆಯ ಅಧ್ಯಾಯ

ಪ್ರದ್ಯುಮ್ನನ ಜನ್ಮ - ಶಂಬರಾಸುರನ ವಧೆ

ಶ್ರೀಶುಕ ಉವಾಚ

ಕಾಮಸ್ತು ವಾಸುದೇವಾಂಶೋ ದಗ್ಧಃ ಪ್ರಾಗ್ರುದ್ರಮನ್ಯುನಾ ।
ದೇಹೋಪಪತ್ತಯೇ ಭೂಯಸ್ತಮೇವ ಪ್ರತ್ಯಪದ್ಯತ
॥ ೧ ॥

ಸ ಏವ ಜಾತೋ ವೈದರ್ಭ್ಯಾಂ ಕೃಷ್ಣವೀರ್ಯಸಮುದ್ಭವಃ ।
ಪ್ರದ್ಯುಮ್ನ ಇತಿ ವಿಖ್ಯಾತಃ ಸರ್ವತೋಽನವಮಃ ಪಿತುಃ
॥ ೨ ॥

ತಂ ಶಂಬರಃ ಕಾಮರೂಪೀ ಹೃತ್ವಾ ತೋಕಮನಿರ್ದಶಮ್ ।
ಸ ವಿದಿತ್ವಾತ್ಮನಃ ಶತ್ರುಂ ಪ್ರಾಸ್ಯೋದನ್ವತ್ಯಗಾದ್ಗೃಹಮ್
॥ ೩ ॥

ತಂ ನಿರ್ಜಗಾರ ಬಲವಾನ್ ಮೀನಃ ಸೋಽಪ್ಯಪರೈಃ ಸಹ ।
ವೃತೋ ಜಾಲೇನ ಮಹತಾ ಗೃಹೀತೋ ಮತ್ಸ್ಯಜೀವಿಭಿಃ
॥ ೪ ॥

ತಂ ಶಂಬರಾಯ ಕೈವರ್ತಾ ಉಪಾಜಹ್ರುರುಪಾಯನಮ್ ।
ಸೂದಾ ಮಹಾನಸಂ ನೀತ್ವಾವದ್ಯನ್ ಸ್ವಧಿತಿನಾದ್ಭುತಮ್
॥ ೫ ॥

ದೃಷ್ಟ್ವಾ ತದುದರೇ ಬಾಲಂ ಮಾಯಾವತ್ಯೈ ನ್ಯವೇದಯನ್ ।
ನಾರದೋಽಕಥಯತ್ ಸರ್ವಂ ತಸ್ಯಾಃ ಶಂಕಿತಚೇತಸಃ ।
ಬಾಲಸ್ಯ ತತ್ತ್ವಮುತ್ಪತ್ತಿಂ ಮತ್ಸ್ಯೋದರನಿವೇಶನಮ್
॥ ೬ ॥

ಸಾ ಚ ಕಾಮಸ್ಯ ವೈ ಪತ್ನೀ ರತಿರ್ನಾಮ ಯಶಸ್ವಿನೀ ।
ಪತ್ಯುರ್ನಿರ್ದಗ್ಧದೇಹಸ್ಯ ದೇಹೋತ್ಪತ್ತಿಂ ಪ್ರತೀಕ್ಷತೀ
॥ ೭ ॥

ನಿರೂಪಿತಾ ಶಂಬರೇಣ ಸಾ ಸೂಪೌದನಸಾಧನೇ ।
ಕಾಮದೇವಂ ಶಿಶುಂ ಬುದ್ಧ್ವಾ ಚಕ್ರೇ ಸ್ನೇಹಂ ತದಾರ್ಭಕೇ
॥ ೮ ॥

ನಾತಿದೀರ್ಘೇಣ ಕಾಲೇನ ಸ ಕಾರ್ಷ್ಣಿ ರೂಢಯೌವನಃ ।
ಜನಯಾಮಾಸ ನಾರೀಣಾಂ ವೀಕ್ಷಂತೀನಾಂ ಚ ವಿಭ್ರಮಮ್
॥ ೯ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ - ಪರೀಕ್ಷಿತನೇ! ರುದ್ರನಕ್ರೋಧಾಗ್ನಿಯಿಂದ ದಗ್ಧನಾಗಿ ಹೋಗಿದ್ದ ಕಾಮದೇವನು ಪುನಃ ಶರೀರವನ್ನು ಹೊಂದುವುದಕ್ಕಾಗಿ, ವಾಸುದೇವನ ಅಂಶನಾದ ಅವನು ತನ್ನ ಅಂಶೀ ವಾಸುದೇವನನ್ನೇ ಆಶ್ರಯಿಸಿದನು. ॥ ೧ ॥ ಅದೇ ಕಾಮದೇವನು ಈ ಬಾರಿ ಶ್ರೀಕೃಷ್ಣನಿಂದ ರುಕ್ಮಿಣೀದೇವಿಯಲ್ಲಿ ಹುಟ್ಟಿ ಪ್ರದ್ಯುಮ್ನನೆಂಬ ಹೆಸರಿನಿಂದ ಪ್ರಸಿದ್ಧನಾದನು. ಸೌಂದರ್ಯದಿಂದಾಗಲೀ, ವೀರ್ಯ-ಪರಾಕ್ರಮದಿಂದಾಗಲೀ, ಸೌಶೀಲ್ಯಾದಿ ಗುಣಗಳಿಂದಾಗಲೀ ಅವನು ಶ್ರೀಕೃಷ್ಣನಿಂದ ಯಾವ ವಿಧದಿಂದಲೂ ಕಡಿಮೆಯಾಗಿರಲಿಲ್ಲ. ॥ ೨ ॥ ಬಾಲಕ ಪ್ರದ್ಯುಮ್ನನಿಗೆ ಇನ್ನೂ ಹತ್ತು ದಿನಗಳಾದಾಗಲೇ ಇವನೇ ತನ್ನ ಭಾವೀ ಶತ್ರುವೆಂದು ತಿಳಿದಿದ್ದ ಕಾಮರೂಪಿಯಾದ ಶಂಬರಾಸುರನು ವೇಷವನ್ನು ಮರೆಸಿ ಸೂತಿಕಾಗೃಹದಿಂದ ಅವನನ್ನು ಕದ್ದುಕೊಂಡು ಹೋಗಿ ಸಮುದ್ರಕ್ಕೆಸೆದು ತನ್ನ ಮನೆಗೆ ಹೊರಟುಹೋದನು. ॥ ೩ ॥ ಬಾಲಕ ಪ್ರದ್ಯುಮ್ನನನ್ನು ಸಮುದ್ರದಲ್ಲಿ ಒಂದು ದೊಡ್ಡ ಮೀನು ನುಂಗಿಬಿಟ್ಟಿತು. ಮೀನು ಹಿಡಿಯುವ ಬೆಸ್ತರು ದೊಡ್ಡದೊಂದು ಬಲೆಯನ್ನು ಬೀಸಿ ಇತರ ಮೀನುಗಳ ಜೊತೆಗೆ ಈ ಮೀನನ್ನು ಹಿಡಿದರು. ॥ ೪ ॥ ಪ್ರದ್ಯುಮ್ನನನ್ನು ನುಂಗಿದ ಆ ದೊಡ್ಡ ಮೀನನ್ನು ಬೆಸ್ತರು ಶಂಬರಾಸುರನಿಗೆ ಕಾಣಿಕೆಯಾಗಿ ಒಪ್ಪಿಸಿದರು. ಶಂಬರಾಸುರನ ಪಾಚಕರು ಆ ಅದ್ಭುತವಾದ ಮೀನನ್ನು ಅಡಿಗೆ ಮನೆಗೆ ಕೊಂಡುಹೋಗಿ ಕತ್ತಿಯಿಂದ ಕತ್ತರಿಸ ತೊಡಗಿದರು. ॥ ೫ ॥ ಅಡಿಗೆಯವರು ಆ ಮೀನಿನ ಹೊಟ್ಟೆಯಲ್ಲಿ ಸುಂದರವಾದ ಬಾಲಕನನ್ನು ನೋಡಿ ಆಶ್ಚರ್ಯದಿಂದ ಮಾಯಾವತಿ ಎಂಬ ದಾಸಿಗೆ ಅದನ್ನು ಒಪ್ಪಿಸಿದರು. ಆಕೆಗೆ ಈ ಮಗುವು ಯಾರದ್ದಾಗಿರಬಹುದು? ಎಂಬ ಜಿಜ್ಞಾಸೆ ಉಂಟಾಯಿತು. ಆಗ ನಾರದ ಮಹರ್ಷಿಗಳು ಬಂದು ಆ ಮಾಯಾವತಿಗೆ ಈ ಬಾಲಕನು ಸಾಕ್ಷಾತ್ ಕಾಮದೇವನೇ ಆಗಿರುವನು. ಶ್ರೀಕೃಷ್ಣನ ಪತ್ನೀ ರುಕ್ಮಿಣಿಯ ಗರ್ಭದಿಂದ ಜನಿಸಿದವನು. ಬಳಿಕ ಮೀನಿನ ಹೊಟ್ಟೆಗೆ ಸೇರಿದುದನ್ನು ಹೀಗೆ ಎಲ್ಲವನ್ನು ತಿಳಿಸಿದರು. ॥ ೬ ॥ ಪರೀಕ್ಷಿತನೇ! ಆ ಮಾಯಾವತಿಯು ಕಾಮದೇವನ ಪತ್ನಿಯಾದ ಯಶಸ್ವಿನೀ ರತಿದೇವಿಯೇ ಆಗಿದ್ದಳು. ರುದ್ರನ ಕ್ರೋಧಾಗ್ನಿಯಿಂದ ಕಾಮದೇವನು ಭಸ್ಮವಾದಾಗಿನಿಂದ ಆಕೆಯು ಅನಂಗನಾದ ಅವನು ಸಶರೀರನಾಗಿ ಪುನಃ ಹುಟ್ಟುವುದನ್ನೇ ನಿರೀಕ್ಷಿಸುತ್ತಿದ್ದಳು. ॥ ೭ ॥ ಶಂಬರಾಸುರನು ಆಕೆಯನ್ನು ಅನ್ನ-ತೊವ್ವೆ ಮಾಡುವ ಅಡಿಗೆಯವಳಾಗಿ ನಿಯಮಿಸಿಕೊಂಡಿದ್ದನು. ಶಿಶುರೂಪದಿಂದ ಇರುವ ಈ ಮಗುವು ತನ್ನ ಪತಿಯೇ ಎಂದು ಭಾವಿಸಿ ಅವನನ್ನು ಬಹುವಾಗಿ ಪ್ರೀತಿಸ ತೊಡಗಿದಳು. ॥ ೮ ॥ ಸ್ವಲ್ಪ ದಿವಸಗಳಲ್ಲಿಯೇ ಶ್ರೀಕೃಷ್ಣಕುಮಾರನಾದ ಪ್ರದ್ಯುಮ್ನನು ಯುವಕನಾದನು. ಅವನ ಅದ್ಭುತವಾದ ರೂಪ-ಲಾವಣ್ಯಗಳು ಅವನನ್ನು ನೋಡಿದ ಸ್ತ್ರೀಯರ ಮನಸ್ಸಿನಲ್ಲಿ ಶೃಂಗಾರರಸವು ಉಕ್ಕೇರುತ್ತಿತ್ತು. ॥ ೯ ॥

ಸಾ ತಂ ಪತಿಂ ಪದ್ಮದಲಾಯತೇಕ್ಷಣಂ
ಪ್ರಲಂಬ ಬಾಹುಂ ನರಲೋಕಸುಂದರಮ್ ।
ಸವ್ರೀಡಹಾಸೋತ್ತಭಿತಭ್ರುವೇಕ್ಷತೀ
ಪ್ರೀತ್ಯೋಪತಸ್ಥೇ ರತಿರಂಗ ಸೌರತೈಃ ॥ ೧೦ ॥

ತಾಮಾಹ ಭಗವಾನ್ ಕಾರ್ಷ್ಣಿರ್ಮಾತಸ್ತೇ ಮತಿರನ್ಯಥಾ ।
ಮಾತೃಭಾವಮತಿಕ್ರಮ್ಯ ವರ್ತಸೇ ಕಾಮಿನೀ ಯಥಾ ॥ ೧೧ ॥

ರತಿರುವಾಚ

ಭವಾನ್ ನಾರಾಯಣಸುತಃ ಶಂಬರೇಣಾಹೃತೋ ಗೃಹಾತ್ ।
ಅಹಂ ತೇಽಧಿಕೃತಾ ಪತ್ನೀ ರತಿಃ ಕಾಮೋ ಭವಾನ್ ಪ್ರಭೋ ॥ ೧೨ ॥

ಏಷ ತ್ವಾನಿರ್ದಶಂ ಸಿಂಧಾವಕ್ಷಿಪಚ್ಛಂಬರೋಽಸುರಃ ।
ಮತ್ಸ್ಯೋಽಗ್ರಸೀತ್ತದುದರಾದಿಹ ಪ್ರಾಪ್ತೋ ಭವಾನ್ ಪ್ರಭೋ ॥ ೧೩ ॥

ತಮಿಮಂ ಜಹಿ ದುರ್ಧರ್ಷಂ ದುರ್ಜಯಂ ಶತ್ರುಮಾತ್ಮನಃ ।
ಮಾಯಾಶತವಿದಂ ತ್ವಂ ಚ ಮಾಯಾಭಿರ್ಮೋಹನಾದಿಭಿಃ ॥ ೧೪ ॥

ಪರಿಶೋಚತಿ ತೇ ಮಾತಾ ಕುರರೀವ ಗತಪ್ರಜಾ ।
ಪುತ್ರಸ್ನೇಹಾಕುಲಾ ದೀನಾ ವಿವತ್ಸಾ ಗೌರಿವಾತುರಾ ॥ ೧೫ ॥

ಪ್ರಭಾಷ್ಯೈವಂ ದದೌ ವಿದ್ಯಾಂ
ಪ್ರದ್ಯುಮ್ನಾಯ ಮಹಾತ್ಮನೇ ।
ಮಾಯಾವತೀ ಮಹಾಮಾಯಾಂ
ಸರ್ವಮಾಯಾವಿನಾಶಿನೀಮ್ ॥ ೧೬ ॥

ಸ ಚ ಶಂಬರಮಭ್ಯೇತ್ಯ ಸಂಯುಗಾಯ ಸಮಾಹ್ವಯತ್ ।
ಅವಿಷಹ್ಯೈಸ್ತಮಾಕ್ಷೇಪೈಃ ಕ್ಷಿಪನ್ ಸಂಜನಯನ್ ಕಲಿಮ್ ॥ ೧೭ ॥

ಸೋಽಧಿಕ್ಷಿಪ್ತೋ ದುರ್ವಚೋಭಿಃ ಪದಾಹತ ಇವೋರಗಃ ।
ನಿಶ್ಚಕ್ರಾಮ ಗದಾಪಾಣಿರಮರ್ಷಾತ್ತಾಮ್ರಲೋಚನಃ ॥ ೧೮ ॥

ಗದಾಮಾವಿಧ್ಯ ತರಸಾ ಪ್ರದ್ಯುಮ್ನಾಯ ಮಹಾತ್ಮನೇ ।
ಪ್ರಕ್ಷಿಪ್ಯ ವ್ಯನದನ್ನಾದಂ ವಜ್ರನಿಷ್ಪೇಷನಿಷ್ಠುರಮ್ ॥ ೧೯ ॥

ಕಮಲದಳದಂತೆ ಕೋಮಲವಾದ ಮತ್ತು ವಿಶಾಲವಾದ ಕಣ್ಣುಗಳು ಉಳ್ಳವನಾಗಿಯೂ, ಆಜಾನುಬಾಹುವಾಗಿಯೂ, ಮನುಷ್ಯಲೋಕದಲ್ಲೇ ಅತ್ಯಂತ ಸುಂದರನೂ ಆಗಿದ್ದ ಪ್ರದ್ಯುಮ್ನನನ್ನು ರತಿದೇವಿಯು ತನ್ನ ಪತಿಯಾಗಿ ಭಾವಿಸಿ, ಕಟಾಕ್ಷವೀಕ್ಷಣ, ನಾಚಿಕೆಯಿಂದ ಕೂಡಿದ ಮಂದಹಾಸ, ಹುಬ್ಬು ಹಾರಿಸುವುದು ಮುಂತಾದ ಸುರತಕ್ರೀಡಾ ಲಕ್ಷಣಗಳಿಂದ ಪ್ರೇಮದಿಂದ ಅವನನ್ನು ಮೋಹಿಸಿದಳು. ॥ ೧೦ ॥ ಶ್ರೀಕೃಷ್ಣನಂದನ ಭಗವಾನ್ ಪ್ರದ್ಯುಮ್ನನು ಆಕೆಯ ಭಾವನೆಗಳಲ್ಲಿ ಆದ ಪರಿವರ್ತನೆಗಳನ್ನು ಗಮನಿಸಿ ದೇವಿ! ನೀನಾದರೋ ನನಗೆ ತಾಯಿಯಂತೆಯೇ ಇರುವೆ. ನಿನ್ನ ಬುದ್ಧಿಯು ಹೀಗೆ ವಿಪರೀತವೇಕೆ ಆಯಿತು? ಮಾತೃಭಾವವನ್ನು ಬಿಟ್ಟು ಕಾಮಿನಿಯಂತಹ ಹಾವ ಭಾವಗಳನ್ನು ನೀನು ತೋರಿಸುತ್ತಿರುವೆ. ಹೀಗೇಕೆ? ॥ ೧೧ ॥

ರತಿಯು ಹೇಳಿದಳು – ಸ್ವಾಮಿಯೇ! ನೀವು ಸಾಕ್ಷಾತ್ ನಾರಾಯಣನ ಪುತ್ರರಾಗಿರುವಿರಿ. ಶಂಬರಾಸುರನು ನಿಮ್ಮನ್ನು ಸೂತಿಕಾಗೃಹದಿಂದ ಕದ್ದು ತಂದಿದ್ದನು. ನೀವು ನನ್ನ ಪತಿ ಸಾಕ್ಷಾತ್ ಕಾಮದೇವರೇ ಆಗಿರುವಿರಿ. ನಾನು ನಿಮ್ಮ ಧರ್ಮಪತ್ನಿಯಾದ ರತಿಯಾಗಿರುವೆನು. ॥ ೧೨ ॥ ನನ್ನ ಸ್ವಾಮಿಯೇ! ನೀವಿನ್ನೂ ಹತ್ತು ದಿವಸಗಳು ತುಂಬುವುದರೊಳಗೆ ಈ ಶಂಬರಾಸುರನು ನಿಮ್ಮನ್ನು ಅಪಹರಿಸಿ ಸಮುದ್ರಕ್ಕೆ ಎಸೆದು ಬಿಟ್ಟಿದ್ದನು. ಅಲ್ಲಿ ಒಂದು ಮೀನು ನಿಮ್ಮನ್ನು ನುಂಗಿಬಿಟ್ಟಿತು. ಅದರ ಹೊಟ್ಟೆಯಿಂದ ನೀವು ಇಲ್ಲಿ ನನಗೆ ದೊರೆತಿರುವಿರಿ. ॥ ೧೩ ॥ ಈ ಶಂಬರಾಸುರನು ನೂರಾರು ಪ್ರಕಾರದ ಮಾಯಾವಿದ್ಯೆಗಳನ್ನು ಬಲ್ಲವನು. ಇವನನ್ನು ವಶಪಡಿಸಿಕೊಳ್ಳುವುದು ಅಥವಾ ಗೆಲ್ಲುವುದು ಬಹಳ ಕಠಿಣವಾಗಿದೆ. ನೀವು ಈ ನಿಮ್ಮ ಶತ್ರುವನ್ನು ಮೋಹನವೇ ಮೊದಲಾದ ಮಾಯೆಗಳ ಮೂಲಕವಾಗಿ ನಾಶಮಾಡಿಬಿಡಿರಿ. ॥ ೧೪ ॥ ಸ್ವಾಮಿಯೇ! ಮಗುವನ್ನು ಕಳೆದುಕೊಂಡ ನಿಮ್ಮ ತಾಯಿಯು – ಮರಿಯನ್ನು ಕಳೆದುಕೊಂಡ ಕುರರಿಪಕ್ಷಿಯಂತೆ ಅಥವಾ ಕರುವನ್ನು ಕಳೆದುಕೊಂಡ ಹಸುವಿನಂತೆ ಪುತ್ರಸ್ನೇಹದಿಂದ ವ್ಯಾಕುಲಳಾಗಿ, ದುಃಖಾತುರಳಾಗಿ ಹಗಲೂ ರಾತ್ರಿ ಚಿಂತಿಸುತ್ತಿರುವಳು. ॥ ೧೫ ॥ ಹೀಗೆ ಹೇಳಿ ಮಾಯಾವತಿಯಾಗಿದ್ದ ರತಿಯು ಪರಮಶಕ್ತಿಶಾಲಿಯಾದ ಪ್ರದ್ಯುಮ್ನನಿಗೆ 'ಮಹಾಮಾಯಾ' ಎಂಬ ವಿದ್ಯೆಯನ್ನು ಕಲಿಸಿಕೊಟ್ಟಳು. ಇದು ಎಲ್ಲ ಪ್ರಕಾರದ ಮಾಯೆಗಳನ್ನು ನಾಶಮಾಡುವಂತಹ ವಿದ್ಯೆಯಾಗಿದೆ. ॥ ೧೬ ॥ ಈಗ ಪ್ರದ್ಯುಮ್ನನು ಶಂಬರಾಸುರನ ಬಳಿಗೆ ಹೋಗಿ ಅವನೊಡನೆ ಜಗಳವಾಡುವ ಉದ್ದೇಶದಿಂದ ಸಹಿಸಲಾಗದ ಕಟು ಮಾತುಗಳಿಂದ ಅವನನ್ನು ಆಕ್ಷೇಪಿಸಿದನು. ಇಷ್ಟೆ ಅಲ್ಲ ಕೊನೆಗೆ ಅವನನ್ನು ಯುದ್ಧಕ್ಕಾಗಿ ಆಹ್ವಾನಿಸಿಯೇ ಬಿಟ್ಟನು. ॥ ೧೭ ॥

ಪ್ರದ್ಯುಮ್ನನ ಕಟುವಚನಗಳಿಂದ ಶಂಬರಾಸುರನು ಕಾಲಿನಿಂದ ಮೆಟ್ಟಿದ ಸರ್ಪದಂತೆ ಕೋಪದಿಂದ ಕಿಡಿ-ಕಿಡಿಯಾದನು. ಅವನ ಕಣ್ಣುಗಳು ಕ್ರೋಧಾಗ್ನಿಯಿಂದ ಕೆಂಪಾಗಿ, ಕೈಯಲ್ಲಿ ಗದೆಯನ್ನು ಹಿಡಿದುಕೊಂಡು ಯುದ್ಧಕ್ಕಾಗಿ ಹೊರಟೇ ಬಿಟ್ಟನು. ॥ ೧೮ ॥ ಅವನು ತನ್ನ ಗದೆಯನ್ನು ಗಿರ-ಗಿರನೆ ತಿರುಗಿಸುತ್ತಾ ವಜ್ರಾಘಾತದಂತೆ ಕರ್ಕಶವಾಗಿ ಸಿಂಹನಾದವನ್ನು ಮಾಡುತ್ತಾ ಪ್ರದ್ಯುಮ್ನನ ಮೇಲೆ ಆ ಗದೆಯನ್ನು ಪ್ರಯೋಗಿಸಿದನು. ॥ ೧೯ ॥

ತಾಮಾಪತಂತೀಂ ಭಗವಾನ್ ಪ್ರದ್ಯುಮ್ನೋ ಗದಯಾ ಗದಾಮ್ ।
ಅಪಾಸ್ಯ ಶತ್ರವೇ ಕ್ರುದ್ಧಃ ಪ್ರಾಹಿಣೋತ್ ಸ್ವಗದಾಂ ನೃಪ ॥ ೨೦ ॥

ಸ ಚ ಮಾಯಾಂ ಸಮಾಶ್ರಿತ್ಯ ದೈತೇಯೀಂ ಮಯದರ್ಶಿತಾಮ್ ।
ಮುಮುಚೇಽಸ್ತ್ರಮಯಂ ವರ್ಷಂ ಕಾರ್ಷ್ಣೌ ವೈಹಾಯಸೋಽಸುರಃ ॥ ೨೧ ॥

ಬಾಧ್ಯಮಾನೋಽಸ್ತ್ರವರ್ಷೇಣ ರೌಕ್ಮಿಣೇಯೋ ಮಹಾರಥಃ ।
ಸತ್ತ್ವಾತ್ಮಿಕಾಂ ಮಹಾವಿದ್ಯಾಂ ಸರ್ವಮಾಯೋಪಮರ್ದಿನೀಮ್ ॥ ೨೨ ॥

ತತೋ ಗೌಹ್ಯಕಗಾಂಧರ್ವಪೈಶಾಚೋರಗರಾಕ್ಷಸೀಃ ।
ಪ್ರಾಯುಂಕ್ತ ಶತಶೋ ದೈತ್ಯಃ ಕಾರ್ಷ್ಣಿರ್ವ್ಯಧಮಯತ್ ಸ ತಾಃ ॥ ೨೩ ॥

ನಿಶಾತಮಸಿಮುದ್ಯಮ್ಯ ಸ ಕಿರೀಟಂ ಸಕುಂಡಲಮ್ ।
ಶಂಬರಸ್ಯ ಶಿರಃ ಕಾಯಾತ್ ತಾಮ್ರಶ್ಮಶ್ರ್ವೋಜಸಾಹರತ್ ॥ ೨೪ ॥

ಆಕೀರ್ಯಮಾಣೋ ದಿವಿಜೈಃ ಸ್ತುವದ್ಭಿಃ ಕುಸುಮೋತ್ಕರೈಃ ।
ಭಾರ್ಯಯಾಂಬರಚಾರಿಣ್ಯಾ ಪುರಂ ನೀತೋ ವಿಹಾಯಸಾ ॥ ೨೫ ॥

ಅಂತಃಪುರವರಂ ರಾಜನ್ ಲಲನಾಶತಸಂಕುಲಮ್ ।
ವಿವೇಶ ಪತ್ನ್ಯಾ ಗಗನಾದ್ವಿದ್ಯುತೇವ ಬಲಾಹಕಃ ॥ ೨೬ ॥

ತಂ ದೃಷ್ಟ್ವಾ ಜಲದಶ್ಯಾಮಂ ಪೀತಕೌಶೇಯವಾಸಸಮ್ ।
ಪ್ರಲಂಬಬಾಹುಂ ತಾಮ್ರಾಕ್ಷಂ ಸುಸ್ಮಿತಂ ರುಚಿರಾನನಮ್ ॥ ೨೭ ॥

ಸ್ವಲಂಕೃತಮುಖಾಂಭೋಜಂ ನೀಲವಕ್ರಾಲಕಾಲಿಭಿಃ ।
ಕೃಷ್ಣಂ ಮತ್ವಾ ಸ್ತ್ರಿಯೋ ಹ್ರೀತಾ ನಿಲಿಲ್ಯುಸ್ತತ್ರ ತತ್ರ ಹ ॥ ೨೮ ॥

ಅವಧಾರ್ಯ ಶನೈರೀಷದ್ವೈಲಕ್ಷಣ್ಯೇನ ಯೋಷಿತಃ ।
ಉಪಜಗ್ಮುಃ ಪ್ರಮುದಿತಾಃ ಸಸ್ತ್ರೀರತ್ನಂ ಸುವಿಸ್ಮಿತಾಃ ॥ ೨೯ ॥

ಅಥ ತತ್ರಾಸಿತಾಪಾಂಗೀ ವೈದರ್ಭೀ ವಲ್ಗುಭಾಷಿಣೀ ।
ಅಸ್ಮರತ್ ಸ್ವಸುತಂ ನಷ್ಟಂ ಸ್ನೇಹಸ್ನುತಪಯೋಧರಾ ॥ ೩೦ ॥

ಪರೀಕ್ಷಿತನೇ! ಶಂಬರಾಸುರನ ಗದೆಯು ಅತಿವೇಗವಾಗಿ ತನ್ನಕಡೆಗೆ ಬರುತ್ತಿರುವುದನ್ನು ನೋಡಿದ ಪ್ರದ್ಯುಮ್ನನು ತನ್ನ ಗದೆಯಿಂದ ಹೊಡೆದು ಅವನ ಗದೆಯನ್ನು ಬೀಳಿಸಿ, ಕ್ರೋಧಗೊಂಡು ಅವನ ಮೇಲೆ ಗದಾಪ್ರಹಾರ ಮಾಡಿದನು. ॥ ೨೦ ॥ ಆಗ ಆ ದೈತ್ಯನು ಮಯಾಸುರನು ಕಲಿಸಿಕೊಟ್ಟ ಆಸುರೀಮಾಯೆಯನ್ನು ಆಶ್ರಯಿಸಿ ಆಕಾಶಕ್ಕೆ ಹೋಗಿ ಅಲ್ಲಿಂದಲೇ ಪ್ರದ್ಯುಮ್ನನ ಮೇಲೆ ಅಸ್ತ್ರ-ಶಸ್ತ್ರಗಳನ್ನು ಪ್ರಯೋಗಿಸತೊಡಗಿದನು. ॥ ೨೧ ॥ ಮಹಾರಥನಾದ ಪ್ರದ್ಯುಮ್ನನು ಶಂಬರಾಸುರನ ಮಾಯಾಮಯವಾದ ಶಸ್ತ್ರಾಸ್ತ್ರಗಳಿಂದ ಪೀಡಿತನಾದಾಗ ಸಮಸ್ತ ಮಾಯೆಯನ್ನು ಶಾಂತಗೊಳಿಸುವಂತಹ ಸತ್ತ್ವಮಯಿಯಾದ ಮಹಾವಿದ್ಯೆಯನ್ನು ಪ್ರಯೋಗಿಸಿದನು. ॥ ೨೨ ॥ ಅನಂತರ ಶಂಬರಾಸುರನು ಯಕ್ಷ, ಗಂಧರ್ವ, ಪಿಶಾಚ, ನಾಗ ಮತ್ತು ರಾಕ್ಷಸರ ನೂರಾರು ಮಾಯೆಗಳನ್ನು ಪ್ರಯೋಗಿಸಿದನು. ಆದರೆ ಶ್ರೀಕೃಷ್ಣಕುಮಾರ ಪ್ರದ್ಯುಮ್ನನು ತನ್ನ ಮಹಾವಿದ್ಯೆಯಿಂದ ಅದೆಲ್ಲವನ್ನೂ ನಾಶಮಾಡಿಬಿಟ್ಟನು. ॥ ೨೩ ॥ ಬಳಿಕ ಅವನು ಒಂದು ಹರಿತವಾದ ಖಡ್ಗವನ್ನೆತ್ತಿಕೊಂಡು ಕಿರೀಟ ಕುಂಡಲಗಳಿಂದ ಸುಶೋಭಿತವಾದ, ಕೆಂಪಾದ ಗಡ್ಡ-ಮೀಸೆಗಳಿಂದ ಭಯಂಕರವಾಗಿದ್ದ ಶಂಬರಾಸುರನ ತಲೆಯನ್ನು ಕತ್ತರಿಸಿ ಹಾಕಿದನು. ॥ ೨೪ ॥ ದೇವತೆಗಳು ಪ್ರದ್ಯುಮ್ನನ ಮೇಲೆ ಪುಷ್ಪವೃಷ್ಟಿ ಮಾಡುತ್ತಾ ಸ್ತೋತ್ರ ಮಾಡತೊಡಗಿದರು. ಬಳಿಕ ಆಕಾಶಸಂಚಾರವನ್ನು ತಿಳಿದಿದ್ದ ರತಿದೇವಿಯು ಪ್ರದ್ಯುಮ್ನನನ್ನು ಆಕಾಶಮಾರ್ಗದಿಂದ ದ್ವಾರಕೆಗೆ ಕೊಂಡುಹೋದಳು. ॥ ೨೫ ॥

ಪರೀಕ್ಷಿತನೇ! ಮೇಘದೊಡನಿರುವ ಮಿಂಚಿನಂತೆ ಪ್ರದ್ಯುಮ್ನನು ಪತ್ನೀ ಸಮೇತನಾಗಿ ಆಕಾಶದಿಂದ ಕೆಳಗಿಳಿದು ನೂರಾರು ಲಲನೆಯರಿಂದ ಸಮಾಕುಲವಾಗಿದ್ದ ಶ್ರೇಷ್ಠವಾದ ಅಂತಃಪುರವನ್ನು ಪ್ರವೇಶಿಸಿದನು. ॥ ೨೬ ॥ ನೀಲಮೇಘಶ್ಯಾಮನಾಗಿಯೂ, ರೇಷ್ಮೆಯ ಪೀತಾಂಬರವನ್ನುಟ್ಟಿದ್ದ ಆಜಾನುಬಾಹುವಾದ, ಎಳ್ಗೆಂಪಾದ ಕಣ್ಣುಗಳಿಂದ ಕೂಡಿದ್ದ, ಮಂದಹಾಸವನ್ನು ಬೀರುತ್ತಿದ್ದ ಸುಂದರ ಮುಖಾರವಿಂದವಾಗಿದ್ದ ಕಪ್ಪಾದ ಗುಂಗುರು ಕೂದಲುಗಳಿಂದ ಸಮಲಂಕೃತವಾದ ಮುಖಕಮಲದಿಂದ ಬೆಳಗುತ್ತಿದ್ದ ಪ್ರದ್ಯುಮ್ನನನ್ನು ಕಂಡು ಅಂತಃಪುರದ ನಾರಿಯರು ಕೃಷ್ಣನೇ ಬಂದನೆಂಬ ಭ್ರಾಂತಿಯಿಂದ ನಾಚಿಕೆಗೊಂಡು ಅಲ್ಲಲ್ಲಿಯೇ ಅಡಗಿಕೊಂಡರು. ॥ ೨೭-೨೮ ॥ ಸ್ವಲ್ಪ ಹೊತ್ತಾದ ಬಳಿಕ ಶ್ರೀಕೃಷ್ಣನಿಗಿಂತಲೂ ಇವನಲ್ಲಿ ಸ್ವಲ್ಪ ವೈಲಕ್ಷಣ್ಯವಿದ್ದುದರಿಂದ ಇವನು ಕೃಷ್ಣನಲ್ಲವೆಂದು ತಿಳಿದು ಆನಂದ-ವಿಸ್ಮಯದಿಂದ ಶ್ರೇಷ್ಠರಾದ ನೂತನ ದಂಪತಿಗಳ ಬಳಿಗೆ ಹೋದರು. ॥ ೨೯ ॥ ಅದೇ ಸಮಯಕ್ಕೆ ಸರಿಯಾಗಿ, ಕಪ್ಪಾದ ಕಣ್ಣುಗಳುಳ್ಳ, ಮಧುರಭಾಷಿಣಿಯಾದ ರುಕ್ಮಿಣೀದೇವಿಯು ಅಲ್ಲಿಗೆ ಬಂದಳು. ನೂತನ ದಂಪತಿಗಳನ್ನು ನೋಡಿದೊಡನೆಯೇ ಆಕೆಗೆ ಕಳೆದು ಹೋಗಿದ್ದ ಪುತ್ರನ ಸ್ಮರಣೆಯಾಗಿ, ವಾತ್ಸಲ್ಯಾಧಿಕ್ಯದಿಂದ ಅವಳ ಸ್ತನಗಳಲ್ಲಿ ಹಾಲು ಸ್ರವಿಸತೊಡಗಿತು. ॥ ೩೦ ॥ ರುಕ್ಮಿಣಿಯು ಹಾಗೆಯೇ ಯೋಚಿಸತೊಡಗಿದಳು. ಈ ರತ್ನ ಪ್ರಾಯನಾದ ತರುಣನು ಯಾರು? ಕಮಲನಯನನಾದ ಇವನು ಯಾರ ಪುತ್ರನಾಗಿರಬಹುದು? ಯಾವ ಮಹಾಸೌಭಾಗ್ಯವತಿಯು ಇವನನ್ನು

ಕೋ ನ್ವಯಂ ನರವೈದೂರ್ಯಃ ಕಸ್ಯ ವಾ ಕಮಲೇಕ್ಷಣಃ ।
ಧೃತಃ ಕಯಾ ವಾ ಜಠರೇ ಕೇಯಂ ಲಬ್ಧಾ ತ್ವನೇನ ವಾ ॥ ೩೧ ॥

ಮಮ ಚಾಪ್ಯಾತ್ಮಜೋ ನಷ್ಟೋ ನೀತೋ ಯಃ ಸೂತಿಕಾಗೃಹಾತ್ ।
ಏತತ್ತುಲ್ಯವಯೋರೂಪೋ ಯದಿ ಜೀವತಿ ಕುತ್ರಚಿತ್ ॥ ೩೨ ॥

ಕಥಂ ತ್ವನೇನ ಸಂಪ್ರಾಪ್ತಂ ಸಾರೂಪ್ಯಂ ಶಾರ್ಙ್ಗಧನ್ವನಃ ।
ಆಕೃತ್ಯಾವಯವೈರ್ಗತ್ಯಾ ಸ್ವರಹಾಸಾವಲೋಕನೈಃ ॥ ೩೩ ॥

ಸ ಏವ ವಾ ಭವೇನ್ನೂನಂ ಯೋ ಮೇ ಗರ್ಭೇ ಧೃತೋಽರ್ಭಕಃ ।
ಅಮುಷ್ಮಿನ್ ಪ್ರೀತಿರಧಿಕಾ ವಾಮಃ ಸ್ಫುರತಿ ಮೇ ಭುಜಃ ॥ ೩೪ ॥

ಏವಂ ಮೀಮಾಂಸಮಾನಾಯಾಂ ವೈದರ್ಭ್ಯಾಂ ದೇವಕೀಸುತಃ ।
ದೇವಕ್ಯಾನಕದುಂದುಭ್ಯಾಮುತ್ತಮಶ್ಲೋಕ ಆಗಮತ್ ॥ ೩೫ ॥

ವಿಜ್ಞಾತಾರ್ಥೋಽಪಿ ಭಗವಾಂಸ್ತೂಷ್ಣೀಮಾಸ ಜನಾರ್ದನಃ ।
ನಾರದೋಽಕಥಯತ್ ಸರ್ವಂ ಶಂಬರಾಹರಣಾದಿಕಮ್ ॥ ೩೬ ॥

ತಚ್ಛ್ರುತ್ವಾ ಮಹದಾಶ್ಚರ್ಯಂ ಕೃಷ್ಣಾಂತಃಪುರಯೋಷಿತಃ ।
ಅಭ್ಯನಂದನ್ ಬಹೂನಬ್ದಾನ್ನಷ್ಟಂ ಮೃತಮಿವಾಗತಮ್ ॥ ೩೭ ॥

ದೇವಕೀ ವಸುದೇವಶ್ಚ ಕೃಷ್ಣರಾಮೌ ತಥಾ ಸ್ತ್ರಿಯಃ ।
ದಂಪತೀ ತೌ ಪರಿಷ್ವಜ್ಯ ರುಕ್ಮಿಣೀ ಚ ಯಯುರ್ಮುದಮ್ ॥ ೩೮ ॥

ನಷ್ಟಂ ಪ್ರದ್ಯುಮ್ನಮಾಯಾತ-
ಮಾಕರ್ಣ್ಯ ದ್ವಾರಕೌಕಸಃ ।
ಅಹೋ ಮೃತ ಇವಾಯಾತೋ
ಬಾಲೋ ದಿಷ್ಟ್ಯೇತಿ ಹಾಬ್ರುವನ್ ॥ ೩೯ ॥

ಯಂ ವೈ ಮುಹುಃ ಪಿತೃಸರೂಪನಿಜೇಶಭಾವಾಃ
ತನ್ಮಾತರೋ ಯದಭಜನ್ ರಹರೂಢಭಾವಾಃ ।
ಚಿತ್ರಂ ನ ತತ್ ಖಲು ರಮಾಸ್ಪದಬಿಂಬಬಿಂಬೇ
ಕಾಮೇ ಸ್ಮರೇಽಕ್ಷವಿಷಯೇ ಕಿಮುತಾನ್ಯನಾರ್ಯಃ ॥ ೪೦ ॥

ಗರ್ಭದಲ್ಲಿ ಧರಿಸಿದ್ದಿರಬಹುದು? ಯಾವ ಸೌಭಾಗ್ಯವತಿಯು ಇವನನ್ನು ಪತಿಯನ್ನಾಗಿಪಡೆದಿರಬಹುದು? ॥ ೩೧ ॥ ನನ್ನದೊಂದು ಎಳೆ ಗಂಡುಮಗು ಕಳೆದುಹೋಗಿತ್ತು. ಸೂತಿಕಾಗೃಹದಿಂದ ಯಾರು ಅಪಹರಿಸಿಕೊಂಡು ಹೋದರೋ ತಿಳಿಯದು. ಅವನೇನಾದರೂ ಬದುಕಿದ್ದರೆ ಇವನಂತೆಯೇ ನವ ಯುವಕನೂ, ರೂಪವಂತನೂ ಆಗಿರುತ್ತಿದ್ದನು. ॥ ೩೨ ॥ ಶಾರ್ಙ್ಗಧನ್ವನಾದ ಶ್ರೀಕೃಷ್ಣನ ಸಾರೂಪ್ಯವು ಇವನಿಗೆ ಹೇಗೆ ಪ್ರಾಪ್ತವಾಯಿತು? ಆಕೃತಿಯಲ್ಲಿ, ಅವಯವಗಳಲ್ಲಿ, ನಡಿಗೆಯಲ್ಲಿ, ಸ್ವರದಲ್ಲಿ, ಮಂದಹಾಸಯುಕ್ತವಾದ ನೋಟದಲ್ಲಿ ಇವನು ಶ್ರೀಕೃಷ್ಣನಂತೆಯೇ ಇದ್ದಾನಲ್ಲ? ಇದು ಹೇಗೆ ಸಾಧ್ಯವಾಯಿತು? ॥ ೩೩ ॥ ಹಾಗೇ ಇರಲಿ, ನಾನು ಗರ್ಭದಲ್ಲಿ ಧರಿಸಿದ್ದ ಶಿಶುವು ನಿಶ್ಚಯವಾಗಿಯೂ ಇವನೇ ಆಗಿರಬೇಕು! ಇವನನ್ನು ನೋಡುತ್ತಿದ್ದಂತೆ ನನಗೆ ಇವನ ಮೇಲೆ ವಾತ್ಸಲ್ಯವು ಹುಟ್ಟುತ್ತಿದ್ದು ಶುಭಸೂಚಕವಾಗಿ ನನ್ನ ಎಡತೋಳೂ ಅದುರುತ್ತಿದೆ. ॥ ೩೪ ॥

ಪರೀಕ್ಷಿತನೇ! ಹೀಗೆ ರುಕ್ಮಿಣಿಯು ತನ್ನ ಮನಸ್ಸಿನಲ್ಲಿಯೇ ತರ್ಕಿಸುತ್ತಿರಲಾಗಿ ದೇವಕಿಯ ಮಗನಾದ ಪವಿತ್ರಕೀರ್ತಿಯುಳ್ಳ ಶ್ರೀಕೃಷ್ಣನು ವಸುದೇವ-ದೇವಕಿಯರೊಡನೆ ಅಲ್ಲಿಗೆ ಆಗಮಿಸಿದನು. ॥ ೩೫ ॥ ಭಗವಾನ್ ಶ್ರೀಕೃಷ್ಣನು ಎಲ್ಲವನ್ನೂ ಬಲ್ಲವನಾಗಿದ್ದರೂ ಸುಮ್ಮನೆ ನಿಂತುಕೊಂಡಿದ್ದನು. ಅಷ್ಟರಲ್ಲಿ ದೇವರ್ಷಿಗಳಾದ ನಾರದರು ಅಲ್ಲಿಗೆ ಬಂದು - ಪ್ರದ್ಯುಮ್ನನನ್ನು ಶಂಬರಾಸುರನು ಅಪಹರಿಸಿದುದು, ಸಮುದ್ರಕ್ಕೆ ಎಸೆದುದು ಮುಂತಾದ ನಡೆದ ಎಲ್ಲ ಘಟನೆಗಳನ್ನು ವಿಸ್ತಾರವಾಗಿ ತಿಳಿಸಿದನು. ॥ ೩೬ ॥ ನಾರದರಿಂದ ಈ ಆಶ್ಚರ್ಯಕರ ಘಟನೆಯನ್ನು ಕೇಳಿದ ಶ್ರೀಕೃಷ್ಣನ ಅಂತಃಪುರದ ನಾರಿಯರು ಆಶ್ಚರ್ಯಚಕಿತರಾಗಿ ಅನೇಕ ವರ್ಷಗಳಿಂದ ಕಳೆದುಹೋಗಿ ಮರಳಿ ಬಂದಿರುವ ಪ್ರದ್ಯುಮ್ನನನ್ನು ನೋಡಿ ಸತ್ತುಹೋದವನು ಮರಳಿ ಬಂದಂತೆ ಅಭಿನಂದಿಸತೊಡಗಿದರು. ॥ ೩೭ ॥ ವಸುದೇವ-ದೇವಕಿಯರು, ಶ್ರೀಕೃಷ್ಣ-ಬಲರಾಮರು, ರುಕ್ಮಿಣೀದೇವಿಯೂ ಹಾಗೆ ಇತರ ಸ್ತ್ರೀಯರೆಲ್ಲರೂ ನವದಂಪತಿಗಳನ್ನು ಆಲಿಂಗಿಸಿಕೊಂಡು ಆನಂದಿತರಾದರು. ॥ ೩೮ ॥ ಕಳೆದುಹೋದ ಪ್ರದ್ಯುಮ್ನನು ಮರಳಿ ಬಂದಿರುವನೆಂದು ತಿಳಿದಾಗ ದ್ವಾರಕೆಯ ನರ-ನಾರಿಯರು ಪರಸ್ಪರವಾಗಿ ಮಾತನಾಡಿಕೊಂಡರು; ಆಹಾ! ಈ ಬಾಲಕನು ಸತ್ತು ಮರಳಿ ಬಂದಂತೆಯೇ ಎಂತಹ ಸೌಭಾಗ್ಯವಾಗಿದೆ. ॥ ೩೯ ॥ ಪರೀಕ್ಷಿತನೇ! ಪ್ರದ್ಯುಮ್ನನ ರೂಪ-ಸೌಂದರ್ಯಗಳು ಶ್ರೀಕೃಷ್ಣನ ರೂಪ-ಸೌಂದರ್ಯಗಳಿಗೆ ಎಷ್ಟು ಅನುರೂಪವಾಗಿತ್ತೆಂದರೆ, ಪ್ರದ್ಯುಮ್ನನನ್ನು ನೋಡಿದ ಶ್ರೀಕೃಷ್ಣನ ಪತ್ನಿಯರು ಕೆಲವೊಮ್ಮೆ ಶ್ರೀಕೃಷ್ಣನೇ ಬಂದಿರುವನೆಂದು ಭ್ರಮಿಸುತ್ತಿದ್ದರು. ಹೀಗಿರುವಾಗ ಲಕ್ಷ್ಮೀದೇವಿಗೆ ಆಶ್ರಯನಾದ ಶ್ರೀಕೃಷ್ಣನ ಪ್ರತಿಬಿಂಬ ಸ್ವರೂಪನಾದ ಕಾಮಾವತಾರನಾದ ಪ್ರದ್ಯುಮ್ನನನ್ನು ನೋಡಿದ ಇತರ ಸ್ತ್ರೀಯರ ಸ್ಥಿತಿಯು ವಿಚಿತ್ರವಾಗುತ್ತಿತ್ತು, ಎಂಬುದರಲ್ಲಿ ಹೇಳುವುದೇನಿದೆ? ॥ ೪೦ ॥

ಐವತ್ತೈದನೆಯ ಅಧ್ಯಾಯವು ಮುಗಿಯಿತು. ॥ ೫೫ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮ ಸ್ಕಂಧೇ ಉತ್ತರಾರ್ಧೇ
ಪ್ರದ್ಯುಮ್ನೋತ್ಪತ್ತಿನಿರೂಪಣಂ ನಾಮ ಪಂಚಪಂಚಾಶತ್ತಮೋಽಧ್ಯಾಯಃ ॥ ೫೫ ॥

ಐವತ್ತಾರನೆಯ ಅಧ್ಯಾಯ

ಸ್ಯಮಂತಕಮಣಿಯ ಕಥೆ

ಜಾಂಬವತಿ ಮತ್ತು ಸತ್ಯಭಾಮೆಯರೊಡನೆ ಶ್ರೀಕೃಷ್ಣನ ವಿವಾಹ

ಶ್ರೀಶುಕ ಉವಾಚ

ಸತ್ರಾಜಿತಃ ಸ್ವತನಯಾಂ ಕೃಷ್ಣಾಯ ಕೃತಕಿಲ್ಬಿಷಃ ।
ಸ್ಯಮಂತಕೇನ ಮಣಿನಾ ಸ್ವಯಮುದ್ಯಮ್ಯ ದತ್ತವಾನ್ ॥ ೧ ॥

ರಾಜೋವಾಚ

ಸತ್ರಾಜಿತಃ ಕಿಮಕರೋದ್ಬ್ರಹ್ಮನ್ ಕೃಷ್ಣಸ್ಯ ಕಿಲ್ಬಿಷಮ್ ।
ಸ್ಯಮಂತಕಃ ಕುತಸ್ತಸ್ಯ ಕಸ್ಮಾದ್ದತ್ತಾ ಸುತಾ ಹರೇಃ ॥ ೨ ॥

ಶ್ರೀಶುಕ ಉವಾಚ

ಆಸೀತ್ಸತ್ರಾಜಿತಃ ಸೂರ್ಯೋ ಭಕ್ತಸ್ಯ ಪರಮಃ ಸಖಾ ।
ಪ್ರೀತಸ್ತಸ್ಮೈ ಮಣಿಂ ಪ್ರಾದಾತ್ ಸೂರ್ಯಸ್ತುಷ್ಟಃ ಸ್ಯಮಂತಕಮ್ ॥ ೩ ॥

ಸ ತಂ ಬಿಭ್ರನ್ಮಣಿಂ ಕಂಠೇ ಭ್ರಾಜಮಾನೋ ಯಥಾ ರವಿಃ ।
ಪ್ರವಿಷ್ಟೋ ದ್ವಾರಕಾಂ ರಾಜಂಸ್ತೇಜಸಾ ನೋಪಲಕ್ಷಿತಃ ॥ ೪ ॥

ತಂ ವಿಲೋಕ್ಯ ಜನಾ ದೂರಾತ್ತೇಜಸಾ ಮುಷ್ಟದೃಷ್ಟಯಃ ।
ದೀವ್ಯತೇಽಕ್ಷೈರ್ಭಗವತೇ ಶಶಂಸುಃ ಸೂರ್ಯಶಂಕಿತಾಃ ॥ ೫ ॥

ನಾರಾಯಣ ನಮಸ್ತೇಽಸ್ತು ಶಂಖಚಕ್ರಗದಾಧರ ।
ದಾಮೋದರಾರವಿಂದಾಕ್ಷ ಗೋವಿಂದ ಯದುನಂದನ ॥ ೬ ॥

ಏಷ ಆಯಾತಿ ಸವಿತಾ ತ್ವಾಂ ದಿದೃಕ್ಷುರ್ಜಗತ್ಪತೇ ।
ಮುಷ್ಣನ್ಗಭಸ್ತಿಚಕ್ರೇಣ ನೃಣಾಂ ಚಕ್ಷೂಂಷಿ ತಿಗ್ಮಗುಃ ॥ ೭ ॥

ನನ್ವನ್ವಿಚ್ಛಂತಿ ತೇ ಮಾರ್ಗಂ ತ್ರಿಲೋಕ್ಯಾಂ ವಿಬುಧರ್ಷಭಾಃ ।
ಜ್ಞಾತ್ವಾದ್ಯ ಗೂಢಂ ಯದುಷು ದ್ರಷ್ಟುಂ ತ್ವಾಂ ಯಾತ್ಯಜಃ ಪ್ರಭೋ ॥ ೮ ॥

ಶ್ರೀಶುಕ ಉವಾಚ

ನಿಶಮ್ಯ ಬಾಲವಚನಂ ಪ್ರಹಸ್ಯಾಂಬುಜಲೋಚನಃ ।
ಪ್ರಾಹ ನಾಸೌ ರವಿರ್ದೇವಃ ಸತ್ರಾಜಿನ್ಮಣಿನಾ ಜ್ವಲನ್ ॥ ೯ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ - ಎಲೈ ಪರೀಕ್ಷಿತನೇ ಸತ್ರಾಜಿತನು ಶ್ರೀಕೃಷ್ಣನ ಮೇಲೆ ಮಿಥ್ಯಾಪವಾದವನ್ನು ಹೊರಿಸಿದ್ದನು. ಮತ್ತೆ ಆ ಅಪರಾಧದಿಂದ ಮುಕ್ತನಾಗಲು ಅವನು ತಾನಾಗಿಯೇ ಸ್ಯಮಂತಕ ಮಣಿಯೊಡನೆ ತನ್ನ ಮಗಳಾದ ಸತ್ಯಭಾಮೆಯನ್ನು ಶ್ರೀಕೃಷ್ಣನಿಗೆ ವಿವಾಹಮಾಡಿಕೊಟ್ಟನು. ॥ ೧ ॥

ಪರೀಕ್ಷಿದ್ರಾಜನು ಕೇಳಿದನು - ಪೂಜ್ಯರೇ! ಸತ್ರಾಜಿತನು ಶ್ರೀಕೃಷ್ಣನಿಗೆ ಯಾವ ಅಪರಾಧವನ್ನು ಮಾಡಿದ್ದನು? ಅವನಿಗೆ ಸ್ಯಮಂತಕಮಣಿಯು ಹೇಗೆ ದೊರಕಿತ್ತು. ತನ್ನ ಕನ್ಯೆಯನ್ನು ಶ್ರೀಕೃಷ್ಣನಿಗೆ ಏಕೆ ಮದುವೆ ಮಾಡಿಕೊಟ್ಟನು? ॥ ೨ ॥

ಶ್ರೀಶುಕಮಹಾಮುನಿಗಳು ಹೇಳಿದರು – ಪರೀಕ್ಷಿತ ಮಹಾರಾಜ! ಸತ್ರಾಜಿತನು ಸೂರ್ಯನ ಪರಮಭಕ್ತನಾಗಿದ್ದನು. ಸೂರ್ಯದೇವನು ಅವನ ಭಕ್ತಿಗೆ ಒಲಿದು ಅವನ ಪರಮ ಮಿತ್ರನೂ ಆದನು. ಸೂರ್ಯನಾರಾಯಣನೇ ಪ್ರಸನ್ನನಾಗಿ ಪ್ರೀತಿಯಿಂದ ಅವನಿಗೆ ಸ್ಯಮಂತಕಮಣಿಯನ್ನು ಅನುಗ್ರಹಿಸಿದ್ದನು. ॥ ೩ ॥ ಸತ್ರಾಜಿತನು ಆ ಮಣಿಯನ್ನು ಕೊರಳಿನಲ್ಲಿ ಧರಿಸಿ ಸೂರ್ಯನಂತೆಯೇ ಪ್ರಕಾಶಿಸುತ್ತಿದ್ದನು. ಪರೀಕ್ಷಿತನೇ! ಸತ್ರಾಜಿತನು ದ್ವಾರಕೆಗೆ ಬಂದಾಗ ಅತ್ಯಂತ ತೇಜಸ್ಸಿನಿಂದಾಗಿ ಅವನನ್ನು ಗುರುತಿಸದೆ ಹೋದರು. ॥ ೪ ॥ ದೂರದಿಂದಲೇ ಅವನನ್ನು ನೋಡಿ ಜನರಿಗೆ ಕಣ್ಣು ಕತ್ತಲೆಬಂತು. ಸಾಕ್ಷಾತ್ ಸೂರ್ಯನಾರಾಯಣನೇ ಬಂದಿರಬಹುದೇ? ಎಂದು ಜನರು ತಿಳಿದರು. ಅವರೆಲ್ಲರೂ ಈ ವಿಷಯವನ್ನು ಪಗಡೆಯಾಡುತ್ತಿದ್ದ ಶ್ರೀಕೃಷ್ಣನಿಗೆ ಹೇಳಿದರು. ॥ ೫ ॥ ಶಂಖ-ಚಕ್ರ ಗದಾಧರನಾದ ನಾರಾಯಣನೇ! ಕಮಲಾಕ್ಷನೇ! ದಾಮೋದರನೇ! ಯದುವಂಶ ಶಿರೋಮಣಿಯಾದ ಗೋವಿಂದನೇ! ನಿನಗೆ ನಮಸ್ಕಾರ ಮಾಡುತ್ತೇವೆ. ॥ ೬ ॥ ಜಗದೀಶ್ವರನೇ! ಇದೋ ನೋಡು. ಕೋರೈಸುವ ತನ್ನ ಕಿರಣಗಳಿಂದ ಮನುಷ್ಯರ ದೃಷ್ಟಿಗಳನ್ನು ಅಪಹರಿಸುತ್ತಾ ಪ್ರಚಂಡರಶ್ಮಿಯಾದ ಭಗವಾನ್ ಸೂರ್ಯನಾರಾಯಣನು ನಿನ್ನನ್ನು ಸಂದರ್ಶಿಸಲು ಆಗಮಿಸಿದ್ದಾನೆ. ॥ ೭ ॥ ಸಮಸ್ತ ಶ್ರೇಷ್ಠದೇವತೆಗಳು ಮೂರು ಲೋಕಗಳಲ್ಲಿಯೂ ನಿನ್ನನ್ನು ಹೊಂದುವ ಮಾರ್ಗವನ್ನು ಹುಡುಕುತ್ತಲೇ ಇದ್ದಾರೆ. ಆದರೆ ನೀನು ಅವರಿಗೆ ಸಿಗುವುದಿಲ್ಲ. ನೀನು ಯಾದವರಲ್ಲಿ ನಿಗೂಢನಾಗಿರುವೆನೆಂದು ತಿಳಿದು ಸೂರ್ಯನಾರಾಯಣನೇ ನಿನ್ನ ದರ್ಶನಕ್ಕಾಗಿ ಬರುತ್ತಿದ್ದಾನೆ. ॥ ೮ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ - ಪರೀಕ್ಷಿತನೇ! ತಿಳುವಳಿಕೆಯಿಲ್ಲದ ಜನರ ಈ ಮಾತನ್ನು ಕೇಳಿ ನಸುನಗುತ್ತಾ ಕಮಲಾಕ್ಷನಾದ ಶ್ರೀಕೃಷ್ಣನು ಹೇಳಿದನು - ಬಂಧುಗಳೇ! ಇವನು ಸೂರ್ಯದೇವನಲ್ಲ, ಸೂರ್ಯಮಣಿಯನ್ನು ಧರಿಸಿದ್ದರಿಂದ ಸತ್ರಾಜಿತನು ಹೀಗೆ ಪ್ರಕಾಶಮಾನನಾಗಿದ್ದಾನೆ. ॥ ೯ ॥

ಸತ್ರಾಜಿತ್ ಸ್ವಗೃಹಂ ಶ್ರೀಮತ್ ಕೃತಕೌತುಕಮಂಗಲಮ್ ।
ಪ್ರವಿಶ್ಯ ದೇವಸದನೇ ಮಣಿಂ ವಿಪ್ರೈರ್ನ್ಯವೇಶಯತ್ ॥ ೧೦ ॥

ದಿನೇ ದಿನೇ ಸ್ವರ್ಣಭಾರಾನಷ್ಟೌ ಸ ಸೃಜತಿ ಪ್ರಭೋ ।
ದುರ್ಭಿಕ್ಷಮಾರ್ಯರಿಷ್ಟಾನಿ ಸರ್ಪಾಧಿವ್ಯಾಧಯೋಽಶುಭಾಃ ।
ನ ಸಂತಿ ಮಾಯಿನಸ್ತತ್ರ ಯತ್ರಾಸ್ತೇಽಭ್ಯರ್ಚಿತೋ ಮಣಿಃ ॥ ೧೧ ॥

ಸ ಯಾಚಿತೋ ಮಣಿಂ ಕ್ವಾಪಿ ಯದುರಾಜಾಯ ಶೌರಿಣಾ ।
ನೈವಾರ್ಥಕಾಮುಕಃ ಪ್ರಾದಾದ್ಯಾಚ್ಞಾಭಂಗಮತರ್ಕಯನ್ ॥ ೧೨ ॥

ತಮೇಕದಾ ಮಣಿಂ ಕಂಠೇ ಪ್ರತಿಮುಚ್ಯ ಮಹಾಪ್ರಭಮ್ ।
ಪ್ರಸೇನೋ ಹಯಮಾರುಹ್ಯ ಮೃಗಯಾಂ ವ್ಯಚರದ್ವನೇ ॥ ೧೩ ॥

ಪ್ರಸೇನಂ ಸಹಯಂ ಹತ್ವಾ ಮಣಿಮಾಚ್ಛಿದ್ಯ ಕೇಸರೀ ।
ಗಿರಿಂ ವಿಶನ್ ಜಾಂಬವತಾ ನಿಹತೋ ಮಣಿಮಿಚ್ಛತಾ ॥ ೧೪ ॥

ಸೋಽಪಿ ಚಕ್ರೇ ಕುಮಾರಸ್ಯ ಮಣಿಂ ಕ್ರೀಡನಕಂ ಬಿಲೇ ।
ಅಪಶ್ಯನ್ ಭ್ರಾತರಂ ಭ್ರಾತಾ ಸತ್ರಾಜಿತ್ ಪರ್ಯತಪ್ಯತ ॥ ೧೫ ॥

ಪ್ರಾಯಃ ಕೃಷ್ಣೇನ ನಿಹತೋ ಮಣಿಗ್ರೀವೋ ವನಂ ಗತಃ ।
ಭ್ರಾತಾ ಮಮೇತಿ ತಚ್ಛ್ರುತ್ವಾ ಕರ್ಣೇ ಕರ್ಣೇಽಜಪನ್ ಜನಾಃ ॥ ೧೬ ॥

ಭಗವಾಂಸ್ತದುಪಶ್ರುತ್ಯ ದುರ್ಯಶೋ ಲಿಪ್ತಮಾತ್ಮನಿ ।
ಮಾರ್ಷ್ಟುಂ ಪ್ರಸೇನಪದವೀಮನ್ವಪದ್ಯತ ನಾಗರೈಃ ॥ ೧೭ ॥

ಹತಂ ಪ್ರಸೇನಮಶ್ವಂ ಚ ವೀಕ್ಷ್ಯ ಕೇಸರಿಣಾ ವನೇ ।
ತಂ ಚಾದ್ರಿಪೃಷ್ಠೇ ನಿಹತಮೃಕ್ಷೇಣ ದದೃಶುರ್ಜನಾಃ ॥ ೧೮ ॥

ಋಕ್ಷರಾಜಬಿಲಂ ಭೀಮಮಂಧೇನ ತಮಸಾಽಽವೃತಮ್ ।
ಏಕೋ ವಿವೇಶ ಭಗವಾನವಸ್ಥಾಪ್ಯ ಬಹಿಃ ಪ್ರಜಾಃ ॥ ೧೯ ॥

ಬಳಿಕ ಸತ್ರಾಜಿತನು ಸಮೃದ್ಧವಾದ ತನ್ನ ಮನೆಯೊಳಗೆ ಪ್ರವೇಶಿಸಿದನು. ಅವನ ಶುಭಾಗಮನಕ್ಕಾಗಿ ಮನೆಯಲ್ಲಿ ಮಂಗಳೋತ್ಸವವನ್ನು ಆಚರಿಸಿದರು. ಅವನು ಬ್ರಾಹ್ಮಣರ ಮೂಲಕ ಸ್ಯಮಂತಕಮಣಿಯನ್ನು ದೇವರ ಮನೆಯಲ್ಲಿ ಪ್ರತಿಷ್ಠಾಪಿಸಿದನು. ॥ ೧೦ ॥ ರಾಜೇಂದ್ರನೇ! ಆ ಮಣಿಯು ಅನುದಿನವೂ ಎಂಟು ಭಾರಗಳಷ್ಟು ಚಿನ್ನವನ್ನು ಕೊಡುತ್ತಿತ್ತು. ಆ ಮಣಿಯು ಪೂಜಿಸಲ್ಪಡುತ್ತಿದ್ದ ಪ್ರದೇಶದಲ್ಲಿ ದುರ್ಭಿಕ್ಷ, ಮಹಾಮಾರಿ, ಗ್ರಹಪೀಡೆ, ಸರ್ಪಭಯ, ಮಾನಸಿಕ ಮತ್ತು ಶಾರೀರಿಕವಾದ ರೋಗಗಳು, ಮಾಟ–ಮಂತ್ರಗಳ ಉಪದ್ರವ ಇಂತಹ ಅಶುಭ ಪ್ರಸಂಗಗಳು ಯಾವುವೂ ಇರುತ್ತಿರಲಿಲ್ಲ. ॥ ೧೧ ॥ ಒಮ್ಮೆ ಭಗವಾನ್ ಶ್ರೀಕೃಷ್ಣನು ಪ್ರಸಂಗವಶಾತ್ ಸತ್ರಾಜಿತನಿಗೆ ಹೇಳಿದನು – 'ನೀನು ನಿನ್ನ ಈ ಮಣಿಯನ್ನು ರಕ್ಷಣೆಯ ದೃಷ್ಟಿಯಿಂದ ಉಗ್ರಸೇನಮಹಾರಾಜನಿಗೆ ಕೊಟ್ಟು ಬಿಡು.' ಆದರೆ ಅರ್ಥಲುಬ್ಧನಾಗಿದ್ದ ಸತ್ರಾಜಿತನು ಭಗವಂತನ ಆಜ್ಞೆಯ ಉಲ್ಲಂಘನೆಯಾದೀತೆಂಬ ಯಾವ ವಿಚಾರವನ್ನು ಮಾಡದೆ ಮಣಿಯನ್ನು ಮಹಾರಾಜನಿಗೆ ಕೊಡಲಿಲ್ಲ. ॥ ೧೨ ॥

ಒಂದು ದಿನ ಸತ್ರಾಜಿತನ ತಮ್ಮನಾದ ಪ್ರಸೇನನು ಆ ಪರಮ ಪ್ರಕಾಶಮಯ ಮಣಿಯನ್ನು ಕೊರಳಲ್ಲಿ ಧರಿಸಿಕೊಂಡು ಕುದುರೆಯನ್ನೇರಿ ಬೇಟೆಯಾಡುತ್ತಾ ಕಾಡಿನಲ್ಲಿ ಸಂಚರಿಸುತ್ತಿದ್ದನು. ॥ ೧೩ ॥ ಅಲ್ಲಿ ಒಂದು ಸಿಂಹವು ಕುದುರೆ ಸಹಿತವಾಗಿ ಪ್ರಸೇನನನ್ನು ಕೊಂದು ಆ ಮಣಿಯನ್ನು ಕಿತ್ತುಕೊಂಡಿತು. ಅದು ಇನ್ನೇನು ಮಣಿಯೊಡನೆ ಗುಹೆಯನ್ನು ಪ್ರವೇಶಿಸಬೇಕೆನ್ನುವಷ್ಟರಲ್ಲಿ ಋಕ್ಷರಾಜನಾದ ಜಾಂಬವಂತನು ಮಣಿಗಾಗಿ ಆ ಸಿಂಹವನ್ನು ಕೊಂದುಹಾಕಿದನು. ॥ ೧೪ ॥ ಜಾಂಬವಂತನು ಆ ಮಣಿಯನ್ನು ತನ್ನ ಗುಹೆಗೆ ಕೊಂಡುಹೋಗಿ ಮಗುವಿಗೆ ಆಡುವುದಕ್ಕಾಗಿ ಕೊಟ್ಟನು. ಬೇಟೆಯಾಡಲು ಹೋಗಿದ್ದ ಪ್ರಸೇನನು ಬಾರದಿರಲು ಅಣ್ಣನಾದ ಸತ್ರಾಜಿತನು ಬಹುದುಃಖಿತನಾದನು. ॥ ೧೫ ॥ ಅವನು ಹೇಳತೊಡಗಿದನು. 'ಪ್ರಾಯಶಃ ಮಣಿಯ ಆಸೆಯಿಂದ ಶ್ರೀಕೃಷ್ಣನೇ ನನ್ನ ತಮ್ಮನನ್ನು ಕೊಂದಿರಬೇಕು. ಏಕೆಂದರೆ ಅವನು ಮಣಿಯನ್ನು ಧರಿಸಿ ಕಾಡಿಗೆ ಹೋಗಿದ್ದನು. ಸತ್ರಾಜಿತನ ಈ ಮಾತನ್ನು ಕೇಳಿದ ಜನರು ಪರಸ್ಪರ ಪಿಸುಗುಟ್ಟುತ್ತಿದ್ದರು. ॥ ೧೬ ॥ ಇದು (ಕರ್ಣಾಕರ್ಣಿಕೆಯಾಗಿ) ಶ್ರೀಕೃಷ್ಣನ ಕಿವಿಗೂ ಬಿತ್ತು. ಸುಳ್ಳು ಅಪವಾದವು ತನ್ನ ಮೇಲೆ ಬಂದಿರುವುದನ್ನು ತಿಳಿದಾಗ ಶ್ರೀಕೃಷ್ಣನು ಅಪವಾದದಿಂದ ಪಾರಾಗಲು ಹಲವಾರು ನಾಗರಿಕರೊಡನೆ ಪ್ರಸೇನನನ್ನು ಹುಡುಕಲು ವನಕ್ಕೆ ಹೊರಟನು. ॥ ೧೭ ॥ ಅಲ್ಲಿ ಜನರೆಲ್ಲರೂ ಹುಡುಕುತ್ತಾ–ಹುಡುಕುತ್ತಾ ಘೋರವಾದ ಅರಣ್ಯದಲ್ಲಿ ಸಿಂಹವು ಪ್ರಸೇನನನ್ನೂ, ಅವನ ಕುದುರೆಯನ್ನೂ ಕೊಂದು ಹಾಕಿರುವುದನ್ನು ನೋಡಿದರು. ಅವರು ಸಿಂಹದ ಹೆಜ್ಜೆಯ ಗುರುತನ್ನೇ ಹಿಡಿದುಕೊಂಡು ಮುಂದುವರಿದಾಗ ಪರ್ವತದಲ್ಲಿ ಒಂದು ಕರಡಿಯು ಸಿಂಹವನ್ನು ಕೊಂದು ಹಾಕಿರುವುದನ್ನು ನೋಡಿದರು. ॥ ೧೮ ॥ ಆ ಕರಡಿಯ ಕಾಲುಗಳ ಗುರುತನ್ನು ಅನುಸರಿಸಿ ಒಂದು ಗುಹಾದ್ವಾರಕ್ಕೆ ಬಂದಾಗ ಶ್ರೀಕೃಷ್ಣನು ಜನರೆಲ್ಲರನ್ನು ಅಲ್ಲೇ ನಿಲ್ಲಿಸಿ ಒಬ್ಬಂಟಿಗನಾಗಿ ಆ ಘೋರ ಅಂಧಕಾರದಿಂದ ತುಂಬಿದ ಋಕ್ಷರಾಜನ ಭಯಂಕರ ಗುಹೆಯನ್ನು ಪ್ರವೇಶಿಸಿದನು. ॥ ೧೯ ॥

ತತ್ರ ದೃಷ್ಟ್ವಾ ಮಣಿಶ್ರೇಷ್ಠಂ ಬಾಲಕ್ರೀಡನಕಂ ಕೃತಮ್ ।
ಹರ್ತುಂ ಕೃತಮತಿಸ್ತಸ್ಮಿನ್ನವತಸ್ಥೇಽರ್ಭಕಾಂತಿಕೇ ॥ ೨೦ ॥

ತಮಪೂರ್ವಂ ನರಂ ದೃಷ್ಟ್ವಾ ಧಾತ್ರೀ ಚುಕ್ರೋಶ ಭೀತವತ್ ।
ತಚ್ಛ್ರುತ್ವಾಭ್ಯದ್ರವತ್ಕ್ರುದ್ಧೋ ಜಾಂಬವಾನ್ ಬಲಿನಾಂ ವರಃ ॥ ೨೧ ॥

ಸ ವೈ ಭಗವತಾ ತೇನ ಯುಯುಧೇ ಸ್ವಾಮಿನಾಽಽತ್ಮನಃ ।
ಪುರುಷಂ ಪ್ರಾಕೃತಂ ಮತ್ವಾ ಕುಪಿತೋ ನಾನುಭಾವವಿತ್ ॥ ೨೨ ॥

ದ್ವಂದ್ವಯುದ್ಧಂ ಸುತುಮುಲಮುಭಯೋರ್ವಿಜಿಗೀಷತೋಃ ।
ಆಯುಧಾಶ್ಮದ್ರುಮೈರ್ದೋರ್ಭಿಃ ಕ್ರವ್ಯಾರ್ಥೇ ಶ್ಯೇನಯೋರಿವ ॥ ೨೩ ॥

ಆಸೀತ್ತದಷ್ಟಾವಿಂಶಾಹಮಿತರೇತರಮುಷ್ಟಿಭಿಃ ।
ವಜ್ರನಿಷ್ಪೇಷಪರುಷೈರವಿಶ್ರಮಮಹರ್ನಿಶಮ್ ॥ ೨೪ ॥

ಕೃಷ್ಣಮುಷ್ಟಿವಿನಿಷ್ಪಾತನಿಷ್ಪಿಷ್ಟಾಂಗೋರುಬಂಧನಃ ।
ಕ್ಷೀಣಸತ್ತ್ವಃ ಸ್ವಿನ್ನಗಾತ್ರಸ್ತಮಾಹಾತೀವ ವಿಸ್ಮಿತಃ ॥ ೨೫ ॥

ಜಾನೇ ತ್ವಾಂ ಸರ್ವಭೂತಾನಾಂ ಪ್ರಾಣ ಓಜಃ ಸಹೋ ಬಲಮ್ ।
ವಿಷ್ಣುಂ ಪುರಾಣಪುರುಷಂ ಪ್ರಭವಿಷ್ಣುಮಧೀಶ್ವರಮ್ ॥ ೨೬ ॥

ತ್ವಂ ಹಿ ವಿಶ್ವಸೃಜಾಂ ಸ್ರಷ್ಟಾ ಸೃಷ್ಟಾನಾಮಪಿ ಯಚ್ಚ ಸತ್ ।
ಕಾಲಃ ಕಲಯತಾಮೀಶಃ ಪರ ಆತ್ಮಾ ತಥಾಽಽತ್ಮನಾಮ್ ॥ ೨೭ ॥

ಯಸ್ಯೇಷದುತ್ಕಲಿತರೋಷಕಟಾಕ್ಷಮೋಕ್ಷೈ-
ರ್ವರ್ತ್ಮಾದಿಶತ್ ಕ್ಷುಭಿತನಕ್ರತಿಮಿಂಗಿಲೋಽಬ್ಧಿಃ ।
ಸೇತುಃ ಕೃತಃ ಸ್ವಯಶ ಉಜ್ಜ್ವಲಿತಾ ಚ ಲಂಕಾ
ರಕ್ಷಃಶಿರಾಂಸಿ ಭುವಿ ಪೇತುರಿಷುಕ್ಷತಾನಿ ॥ ೨೮ ॥

ಅಲ್ಲಿ ಆ ಶ್ರೇಷ್ಠವಾದ ಮಣಿಯು ಮಗುವಿನ ಆಟಿಕೆಯಾಗಿರುವುದನ್ನು ನೋಡಿದ ಭಗವಂತನು ಅದನ್ನು ತೆಗೆದುಕೊಂಡು ಹೋಗುವ ಇಚ್ಛೆಯಿಂದ ಆ ಮಗುವಿನ ಹತ್ತಿರ ಹೋಗಿ ನಿಂತನು. ॥ ೨೦ ॥ ಆ ಗುಹೆಯಲ್ಲಿ ಅಪರಿಚಿತನಾದ ಮನುಷ್ಯನೊಬ್ಬನನ್ನು ಕಂಡು ಆ ಮಗುವಿನ ಸಾಕುತಾಯಿಯು ಭಯಗೊಂಡು ಗಟ್ಟಿಯಾಗಿ ಕಿರುಚಿಕೊಂಡಳು. ಆಕೆಯ ಕೂಗನ್ನು ಕೇಳಿ ಮಹಾಬಲಿಷ್ಠನಾದ ಋಕ್ಷರಾಜ ಜಾಂಬವಂತನು ಕೋಪಗೊಂಡು ಅಲ್ಲಿಗೆ ಧಾವಿಸಿ ಬಂದನು. ॥ ೨೧ ॥ ಪರೀಕ್ಷಿತನೇ! ಅತ್ಯಂತ ಕ್ರುದ್ಧನಾಗಿದ್ದ ಜಾಂಬವಂತನು ಆಗ ಭಗವಂತನ ಮಹಿಮೆ, ಪ್ರಭಾವ ಇವುಗಳನ್ನು ತಿಳಿಯದೇ ಹೋದನು. ಅವನನ್ನು ಒಬ್ಬ ಸಾಧಾರಣನೆಂದು ತಿಳಿದು ಜಾಂಬವಂತನು ತನ್ನ ಸ್ವಾಮಿಯಾದ ಶ್ರೀಕೃಷ್ಣನೊಡನೆ ಯುದ್ಧಮಾಡತೊಡಗಿದನು. ॥ ೨೨ ॥ ಮಾಂಸದ ಆಸೆಯಿಂದ ಎರಡು ಗಿಡುಗ ಪಕ್ಷಿಗಳು ಕಾದಾಡುವಂತೆಯೇ ವಿಜಯಾಭಿಲಾಷಿಗಳಾಗಿ ಶ್ರೀಕೃಷ್ಣನು ಮತ್ತು ಜಾಂಬವಂತನು ಪರಸ್ಪರ ಘೋರವಾದ ಯುದ್ಧದಲ್ಲಿ ತೊಡಗಿದರು. ಮೊದಲಿಗೆ ಅವರು ಅಸ್ತ್ರ-ಶಸ್ತ್ರಗಳಿಂದ ಪ್ರಹರಿಸಿದರೆ, ಮತ್ತೆ ಶಿಲೆಗಳಿಂದ, ಬಳಿಕ ವೃಕ್ಷಗಳಿಂದ ಕಾದಾಡುತ್ತಿದ್ದರು. ಕೊನೆಗೆ ಅವರಲ್ಲಿ ಬಾಹುಯುದ್ಧ ಪ್ರಾರಂಭವಾಯಿತು. ॥ ೨೩ ॥ ಪರೀಕ್ಷಿತನೇ! ವಜ್ರಾಘಾತದಂತೆ ಕಠೋರ ಮುಷ್ಟಿಗಳಿಂದ ಪರಸ್ಪರವಾಗಿ ಹೊಡೆಯುತ್ತಾ ಇಪ್ಪತ್ತೆಂಟು ದಿನಗಳವರೆಗೆ ಅವಿಶ್ರಾಂತವಾಗಿ ಹಗಲು-ರಾತ್ರಿ ಯುದ್ಧಮಾಡಿದರು. ॥ ೨೪ ॥ ಕೊನೆಗೆ ಭಗವಾನ್ ಶ್ರೀಕೃಷ್ಣನ ವಜ್ರಮುಷ್ಟಿಯ ಏಟುಗಳಿಂದ ಜಾಂಬವಂತನ ಶರೀರದ ಮೂಳೆಗಳು ಸಡಿಲಗೊಂಡವು. ಅಂಗಾಂಗಗಳೆಲ್ಲವೂ ಶಿಥಿಲವಾಯಿತು. ಉತ್ಸಾಹವು ಉಡುಗಿತು. ಮೈ ಬೆವರುಕೊಂಡಿತು. ಆಗ ಅವನು ಅತ್ಯಂತ ವಿಸ್ಮಿತನಾಗಿ ಶ್ರೀಕೃಷ್ಣನಲ್ಲಿ ಹೇಳಿದನು. ॥ ೨೫ ॥ ಪ್ರಭೋ! ನೀನೇ ಸಮಸ್ತ ಪ್ರಾಣಿಗಳ ಸ್ವಾಮಿಯೂ, ರಕ್ಷಕನೂ, ಪುರಾಣ ಪುರುಷ ಭಗವಾನ್ ಶ್ರೀವಿಷ್ಣುವೇ ಆಗಿರುವೆ ಎಂಬುದನ್ನು ನಾನು ತಿಳಿದುಕೊಂಡೆ. ನೀನೇ ಎಲ್ಲರ ಪ್ರಾಣ, ಇಂದ್ರಿಯಬಲ, ಮನೋಬಲ ಮತ್ತು ಶರೀರ ಬಲವೂ ಆಗಿರುವೆ. ॥ ೨೬ ॥ ವಿಶ್ವವನ್ನು ರಚಿಸಿದ ಬ್ರಹ್ಮಾದಿಗಳಿಗೂ ನೀನು ಸೃಷ್ಟಿಕರ್ತನಾಗಿರುವೆ. ಸೃಷ್ಟಿಸಲ್ಪಟ್ಟ ಪದಾರ್ಥಗಳಲ್ಲಿಯೂ ಸತ್ತಾರೂಪದಿಂದ ನೀನೇ ವಿರಾಜಿಸುತ್ತಿರುವೆ. ಕಾಲದ ಅವಯವಗಳೆಲ್ಲದರ ನಿಯಾಮಕನಾದ ಪರಮಕಾಲನೂ ನೀನೇ ಆಗಿರುವೆ. ಶರೀರ ಭೇದದಿಂದ ಭಿನ್ನ-ಭಿನ್ನವಾಗಿ ಕಂಡುಬರುವ ಅಂತರಾತ್ಮಗಳ ಪರಮ ಆತ್ಮನೂ ನೀನೇ ಆಗಿರುವೆ. ॥ ೨೭ ॥ ಪ್ರಭೋ! ನೀನು ನಿನ್ನ ಕಣ್ಣುಗಳ ಸ್ವಲ್ಪವೇ ಕ್ರೋಧಭಾವದಿಂದ ಸಮುದ್ರದ ಕಡೆಗೆ ನೋಡಿದಾಗ ಸಮುದ್ರದೊಳಗೆ ವಾಸಿಸುವ ತಿಮಿಂಗಿಲಗಳೂ, ಮೊಸಳೆಗಳೂ, ದೊಡ್ಡ-ದೊಡ್ಡ ಮೀನುಗಳೂ ತಲ್ಲಣಿಸಿ ಹೋದವು ಮತ್ತು ಸಮುದ್ರರಾಜನು ನಿನಗೆ ದಾರಿಕೊಟ್ಟನು. ಆಗ ನೀನು ಅದರ ಮೇಲೆ ಸೇತುವನ್ನು ನಿರ್ಮಿಸಿ ಸುಂದರ ಯಶಸ್ಸನ್ನು ಸ್ಥಾಪಿಸಿ ಲಂಕೆಯನ್ನು ಧ್ವಂಸಗೊಳಿಸುತ್ತಾ ನಿನ್ನ ಬಾಣಗಳು ರಾಕ್ಷಸರ ತಲೆಗಳನ್ನು ಕಡಿ-ಕಡಿದು ಭೂಮಿಗೆ ಉರುಳಿಸುತ್ತಿದ್ದುದು ನನ್ನ ಸ್ಮರಣೆಗೆ ಬರುತ್ತಾ ಇದೆ. (ಖಂಡಿತವಾಗಿಯೂ ನೀನು ನನ್ನ ಸ್ವಾಮಿಯಾದ ಶ್ರೀರಾಮನೇ ಈಗ ಶ್ರೀಕೃಷ್ಣನಾಗಿ ಅವತರಿಸಿರುವೆ.) ॥ ೨೮ ॥

ಇತಿ ವಿಜ್ಞಾತವಿಜ್ಞಾನಮೃಕ್ಷರಾಜಾನಮಚ್ಯುತಃ ।
ವ್ಯಾಜಹಾರ ಮಹಾರಾಜ ಭಗವಾನ್ ದೇವಕೀಸುತಃ ॥ ೨೯ ॥

ಅಭಿಮೃಶ್ಯಾರವಿಂದಾಕ್ಷಃ ಪಾಣಿನಾ ಶಂಕರೇಣ ತಮ್ ।
ಕೃಪಯಾ ಪರಯಾ ಭಕ್ತಂ ಪ್ರೇಮಗಂಭೀರಯಾ ಗಿರಾ ॥ ೩೦ ॥

ಮಣಿಹೇತೋರಿಹ ಪ್ರಾಪ್ತಾ ವಯಮೃಕ್ಷಪತೇ ಬಿಲಮ್ ।
ಮಿಥ್ಯಾಭಿಶಾಪಂ ಪ್ರಮೃಜನ್ನಾತ್ಮನೋ ಮಣಿನಾಮುನಾ ॥ ೩೧ ॥

ಇತ್ಯುಕ್ತಃ ಸ್ವಾಂ ದುಹಿತರಂ ಕನ್ಯಾಂ ಜಾಂಬವತೀಂ ಮುದಾ ।
ಅರ್ಹಣಾರ್ಥಂ ಸ ಮಣಿನಾ ಕೃಷ್ಣಾಯೋಪಜಹಾರ ಹ ॥ ೩೨ ॥

ಅದೃಷ್ಟ್ವಾ ನಿರ್ಗಮಂ ಶೌರೇಃ ಪ್ರವಿಷ್ಟಸ್ಯ ಬಿಲಂ ಜನಾಃ ।
ಪ್ರತೀಕ್ಷ್ಯ ದ್ವಾದಶಾಹಾನಿ ದುಃಖಿತಾಃ ಸ್ವಪುರಂ ಯಯುಃ ॥ ೩೩ ॥

ನಿಶಮ್ಯ ದೇವಕೀ ದೇವೀ ರುಕ್ಮಿಣ್ಯಾನಕದುಂದುಭಿಃ ।
ಸುಹೃದೋ ಜ್ಞಾತಯೋಽಶೋಚನ್ ಬಿಲಾತ್ ಕೃಷ್ಣಮನಿರ್ಗತಮ್ ॥ ೩೪ ॥

ಸತ್ರಾಜಿತಂ ಶಪಂತಸ್ತೇ ದುಃಖಿತಾ ದ್ವಾರಕೌಕಸಃ ।
ಉಪತಸ್ಥುರ್ಮಹಾಮಾಯಾಂ ದುರ್ಗಾಂ ಕೃಷ್ಣೋಪಲಬ್ಧಯೇ ॥ ೩೫ ॥

ತೇಷಾಂ ತು ದೇವ್ಯುಪಸ್ಥಾನಾತ್ ಪ್ರತ್ಯಾದಿಷ್ಟಾಶಿಷಾ ಸ ಚ ।
ಪ್ರಾದುರ್ಬಭೂವ ಸಿದ್ಧಾರ್ಥಃ ಸದಾರೋ ಹರ್ಷಯನ್ ಹರಿಃ ॥ ೩೬ ॥

ಉಪಲಭ್ಯ ಹೃಷೀಕೇಶಂ ಮೃತಂ ಪುನರಿವಾಗತಮ್ ।
ಸಹ ಪತ್ನ್ಯಾ ಮಣಿಗ್ರೀವಂ ಸರ್ವೇ ಜಾತಮಹೋತ್ಸವಾಃ ॥ ೩೭ ॥

ಸತ್ರಾಜಿತಂ ಸಮಾಹೂಯ ಸಭಾಯಾಂ ರಾಜಸನ್ನಿಧೌ ।
ಪ್ರಾಪ್ತಿಂ ಚಾಖ್ಯಾಯ ಭಗವಾನ್ ಮಣಿಂ ತಸ್ಮೈ ನ್ಯವೇದಯತ್ ॥ ೩೮ ॥

ಸ ಚಾತಿವ್ರೀಡಿತೋ ರತ್ನಂ ಗೃಹೀತ್ವಾವಾಙ್ಮುಖಸ್ತತಃ ।
ಅನುತಪ್ಯಮಾನೋ ಭವನಮಗಮತ್ ಸ್ವೇನ ಪಾಪ್ಮನಾ ॥ ೩೯ ॥

ಪರೀಕ್ಷಿತನೇ! ಋಕ್ಷರಾಜನಾದ ಜಾಂಬವಂತನು ಭಗವಂತನನ್ನು ಗುರುತಿಸಿಕೊಂಡಾಗ ಕಮಲನಯನ ಶ್ರೀಕೃಷ್ಣನು ತನ್ನ ಪರಮ ಕಲ್ಯಾಣಕಾರವಾದ, ಶೀತಲವಾದ ಕರಕಮಲಗಳಿಂದ ಅವನ ಶರೀರವನ್ನು ನೇವರಿಸಿದನು. ಬಳಿಕ ಶ್ರೀಕೃಷ್ಣನು ಭಕ್ತನ ವಿಷಯದಲ್ಲಿ ಪರಮಕೃಪೆಯನ್ನು ತೋರುತ್ತಾ, ಪ್ರೇಮಪೂರ್ಣವಾದ ಗಂಭೀರ ವಾಣಿಯಿಂದ ಭಕ್ತನಾದ ಜಾಂಬವಂತನಲ್ಲಿ ಹೇಳಿದನು. ॥ ೨೯-೩೦ ॥ ಋಕ್ಷರಾಜನಾದ ಜಾಂಬವಂತನೇ! ನಾವು ಮಣಿಗಾಗಿಯೇ ನಿನ್ನ ಈ ಗುಹೆಗೆ ಬಂದಿರುವೆವು. ಈ ಮಣಿಯಿಂದಾಗಿ ನನ್ನ ಮೇಲೆ ಬಂದಿರುವ ಸುಳ್ಳು ಅಪವಾದವನ್ನು ಹೋಗಲಾಡಿಸಲು ಬಯಸುತ್ತೇನೆ. ॥ ೩೧ ॥ ಭಗವಂತನು ಹೀಗೆ ಹೇಳಿದಾಗ ಜಾಂಬವಂತನು ಅತ್ಯಂತ ಆನಂದದಿಂದ ಆತನನ್ನು ಪೂಜಿಸಿ, ತನ್ನ ಕನ್ಯೆಯಾದ ಜಾಂಬವತಿಯನ್ನು ಮಣಿಯೊಂದಿಗೆ ಶ್ರೀಕೃಷ್ಣನ ಚರಣಗಳಲ್ಲಿ ಸಮರ್ಪಿಸಿದನು. ॥ ೩೨ ॥

ಗುಹೆಯ ಬಾಗಿಲಲ್ಲಿ ಶ್ರೀಕೃಷ್ಣನು ಬರುವುದನ್ನೇ ನಿರೀಕ್ಷಿಸುತ್ತಾ ನಿಂತಿದ್ದ ಪುರಜನರು ಹನ್ನೆರಡು ದಿವಸಗಳವರೆಗೆ ಕಾದಿದ್ದರು. ಒಳಹೋದ ಶೌರಿಯು ಗುಹೆಯಿಂದ ಹೊರಗೆ ಬಾರದಿರಲು ಅತಿದುಃಖಿತರಾಗಿ ದ್ವಾರಕೆಗೆ ಹಿಂದಿರುಗಿದರು. ॥ ೩೩ ॥ ಹನ್ನೆರಡು ದಿವಸಗಳು ಕಳೆದರೂ ಶ್ರೀಕೃಷ್ಣನು ಗುಹೆಯಿಂದ ಹೊರಕ್ಕೆ ಬಾರದಿರುವುದನ್ನು ತಿಳಿದ ತಾಯಿಯಾದ ದೇವಕೀದೇವಿ, ತಂದೆಯಾದ ವಸುದೇವ, ರುಕ್ಮಿಣೀ, ಸುಹೃದರು, ಜ್ಞಾತಿ ಬಾಂಧವರು – ಎಲ್ಲರೂ ಬಹಳವಾಗಿ ದುಃಖಿಸಿದರು. ॥ ೩೪ ॥ ದ್ವಾರಕಾವಾಸಿಗಳೆಲ್ಲರೂ ಅತ್ಯಂತ ದುಃಖಿತರಾಗಿ ಸತ್ರಾಜಿತನನ್ನು ಶಪಿಸತೊಡಗಿದರು. ಭಗವಾನ್ ಶ್ರೀಕೃಷ್ಣನು ಕ್ಷೇಮದಿಂದ ಬೇಗಬರಲೆಂದು ಮಹಾಮಾಯೆಯಾದ ದುರ್ಗಾದೇವಿಯನ್ನು ಪ್ರಾರ್ಥಿಸುತ್ತಾ, ಉಪಾಸನೆ ಮಾಡಿದರು. ॥ ೩೫ ॥ ಅವರ ಉಪಾಸನೆಯಿಂದ ದುರ್ಗಾದೇವಿಯು ಪ್ರಸನ್ನಳಾಗಿ ಅವರಿಗೆ ಆಶೀರ್ವಾದವನ್ನು ಕೊಟ್ಟಳು. ಅದೇ ಸಮಯದಲ್ಲಿ ಅವರ ನಡುವೆಯೇ ಸ್ಯಮಂತಕಮಣಿ ಮತ್ತು ನವವಧು ಜಾಂಬವತಿಯೊಂದಿಗೆ ಸಫಲ ಮನೋರಥನಾದ ಶ್ರೀಕೃಷ್ಣನು ಪ್ರಕಟನಾಗಿ ಎಲ್ಲರನ್ನು ಸಂತೋಷಗೊಳಿಸಿದನು. ॥ ೩೬ ॥ ಸ್ಯಮಂತಕ ಮಣಿಯನ್ನು ಕೊರಳಿನಲ್ಲಿ ಧರಿಸಿಕೊಂಡ ಭಗವಾನ್ ಶ್ರೀಕೃಷ್ಣನು ಪತ್ನಿಯೊಂದಿಗೆ ಬಂದಿರುವುದನ್ನು ಕಂಡು ಸತ್ತವನು ಮರಳಿ ಬದುಕಿ ಬಂದಂತೆ ದ್ವಾರಕಾವಾಸಿಗಳೆಲ್ಲರೂ ಪರಮಾನಂದದಲ್ಲಿ ಮುಳುಗಿ ಹೋದರು. ॥ ೩೭ ॥

ಭಗವಾನ್ ಶ್ರೀಕೃಷ್ಣನು ಸತ್ರಾಜಿತನನ್ನು ಉಗ್ರಸೇನ ಮಹಾರಾಜರ ರಾಜಸಭೆಗೆ ಕರೆದನು ಹಾಗೂ ಮಣಿಯು ಹೇಗೆ ಪ್ರಾಪ್ತವಾಯಿತೆಂಬ ಎಲ್ಲ ಕಥೆಯನ್ನೂ ಎಲ್ಲರೆದುರಿಗೆ ಹೇಳಿ ಆ ಮಣಿಯನ್ನು ಸತ್ರಾಜಿತನಿಗೆ ಒಪ್ಪಿಸಿದನು. ॥ ೩೮ ॥ ಇದರಿಂದ ಸತ್ರಾಜಿತನು ಅತ್ಯಂತ ಲಜ್ಜಿತನಾಗಿ ಮಣಿಯನ್ನೇನೋ ತೆಗೆದುಕೊಂಡನು; ಆದರೆ ಅವನ ಕತ್ತು ಎಲ್ಲರೆದುರಿಗೆ ಬಾಗಿ ಹೋಯಿತು. ತನ್ನ ಅಪರಾಧದಿಂದ ಅವನಿಗೆ ಪಶ್ಚಾತ್ತಾಪ ಉಂಟಾಗಿ ಹೇಗೋ ಮನೆಯನ್ನು ಸೇರಿಕೊಂಡನು. ॥ ೩೯ ॥

ಸೋಽನುಧ್ಯಾಯಂಸ್ತದೇವಾಘಂ ಬಲವದ್ವಿಗ್ರಹಾಕುಲಃ ।
ಕಥಂ ಮೃಜಾಮ್ಯಾತ್ಮರಜಃ ಪ್ರಸೀದೇದ್ವಾಚ್ಯುತಃ ಕಥಮ್ ॥ ೪೦ ॥

ಅವನ ಮನಸ್ಸಿನಲ್ಲಿ ನಿರಂತರವಾಗಿ ತನ್ನ ಅಪರಾಧವು ಕೊರೆಯುತ್ತಿತ್ತು. ಜೊತೆಗೆ ಬಲಿಷ್ಠರೊಂದಿಗೆ ಉಂಟಾದ ವಿರೋಧದಿಂದಾಗಿ ಭಯ-ಭೀತನೂ ಆದನು. 'ನಾನು ನನ್ನ ಅಪರಾಧವನ್ನು ಹೇಗೆ ತೊಳೆದುಕೊಳ್ಳಲಿ? ಭಗವಾನ್ ಶ್ರೀಕೃಷ್ಣನು ನನ್ನ ಮೇಲೆ ಹೇಗೆ ಪ್ರಸನ್ನನಾಗುವನು?' ಎಂಬುದಾಗಿ ಸದಾ ಯೋಚಿಸುತ್ತಾ ಇದ್ದನು. ॥ ೪೦ ॥

ಕಿಂ ಕೃತ್ವಾ ಸಾಧು ಮಹ್ಯಂ ಸ್ಯಾನ್ನ ಶಪೇದ್ವಾ ಜನೋ ಯಥಾ ।
ಅದೀರ್ಘದರ್ಶನಂ ಕ್ಷುದ್ರಂ ಮೂಢಂ ದ್ರವಿಣಲೋಲುಪಮ್ ॥ ೪೧ ॥

ನನ್ನ ಶ್ರೇಯಸ್ಸು ಉಂಟಾಗಿ, ಜನರು ನನ್ನನ್ನು ನಿಂದಿಸದೇ ಇರುವಂತಹ ಯಾವ ಕಾರ್ಯವನ್ನು ಮಾಡಲಿ? ನಿಜವಾಗಿ ನಾನು ಮುಂದಾಲೋಚನೆಯಿಲ್ಲದೆ ಕ್ಷುದ್ರನಾಗಿದ್ದೇನೆ. ಧನಲೋಭದಿಂದ ನಾನು ಬಹುದೊಡ್ಡ ಮೂಢತನದ ಕಾರ್ಯವನ್ನು ಮಾಡಿಬಿಟ್ಟೆನಲ್ಲ! ॥ ೪೧ ॥

ದಾಸ್ಯೇ ದುಹಿತರಂ ತಸ್ಮೈ ಸ್ತ್ರೀರತ್ನಂ ರತ್ನಮೇವ ಚ ।
ಉಪಾಯೋಽಯಂ ಸಮೀಚೀನಸ್ತಸ್ಯ ಶಾಂತಿರ್ನ ಚಾನ್ಯಥಾ ॥ ೪೨ ॥

ಈಗ ನಾನು ರಮಣಿಯರ ರತ್ನದಂತಿರುವ ನನ್ನ ಕನ್ಯೆಯಾದ ಸತ್ಯಭಾಮೆಯನ್ನು ಸ್ಯಮಂತಕ ಮಣಿಯೊಂದಿಗೆ ಶ್ರೀಕೃಷ್ಣನಿಗೆ ಕೊಟ್ಟುಬಿಡುತ್ತೇನೆ. ಸಮೀಚೀನವಾದ ಈ ಉಪಾಯದಿಂದ ನನ್ನ ಅಪರಾಧವು ಪರಿಹಾರವಾಗುತ್ತದೆ. ಇದಲ್ಲದೆ ಬೇರೆ ಉಪಾಯವೇ ಇಲ್ಲ. ॥ ೪೨ ॥

ಏವಂ ವ್ಯವಸಿತೋ ಬುದ್ಧ್ಯಾ ಸತ್ರಾಜಿತ್ ಸ್ವಸುತಾಂ ಶುಭಾಮ್ ।
ಮಣಿಂ ಚ ಸ್ವಯಮುದ್ಯಮ್ಯ ಕೃಷ್ಣಾಯೋಪಜಹಾರ ಹ ॥ ೪೩ ॥

ಸತ್ರಾಜಿತನು ತನ್ನ ವಿವೇಕ ಬುದ್ಧಿಯಿಂದ ಹೀಗೆ ನಿಶ್ಚಯಿಸಿ ಕಾರ್ಯಪ್ರವೃತ್ತನಾದನು. ತನ್ನ ಕನ್ಯಾಮಣಿಯನ್ನು ಮತ್ತು ಸ್ಯಮಂತಕ ಮಣಿಯನ್ನು ಕೊಂಡುಹೋಗಿ ಶ್ರೀಕೃಷ್ಣನಿಗೆ ಅರ್ಪಿಸಿಬಿಟ್ಟನು. ॥ ೪೩ ॥

ತಾಂ ಸತ್ಯಭಾಮಾಂ ಭಗವಾನ್ ಉಪಯೇಮೇ ಯಥಾವಿಧಿ ।
ಬಹುಭಿರ್ಯಾಚಿತಾಂ ಶೀಲರೂಪೌದಾರ್ಯಗುಣಾನ್ವಿತಾಮ್ ॥ ೪೪ ॥

ಶೀಲ-ಸ್ವಭಾವ, ಸೌಂದರ್ಯ, ಔದಾರ್ಯ ಮೊದಲಾದ ಸದ್ಗುಣಗಳಿಂದ ಸಂಪನ್ನಳಾಗಿದ್ದ ಸತ್ಯಭಾಮೆಯು ನಮಗೆ ಸಿಗಲಿ ಎಂದು ಬಹಳಷ್ಟು ಜನರು ಅಪೇಕ್ಷಿಸುತ್ತಿದ್ದರು ಹಾಗೂ ಬೇಡಿಕೆಯನ್ನೂ ಮುಂದಿಟ್ಟಿದ್ದರು. ಆದರೆ ಈಗ ಭಗವಾನ್ ಶ್ರೀಕೃಷ್ಣನು ವಿಧಿಪೂರ್ವಕವಾಗಿ ಆಕೆಯ ಪಾಣಿಗ್ರಹಣ ಮಾಡಿದನು. ॥ ೪೪ ॥

ಭಗವಾನಾಹ ನ ಮಣಿಂ ಪ್ರತೀಚ್ಛಾಮೋ ವಯಂ ನೃಪ ।
ತವಾಸ್ತಾಂ ದೇವಭಕ್ತಸ್ಯ ವಯಂ ಚ ಫಲಭಾಗಿನಃ ॥ ೪೫ ॥

ಪರೀಕ್ಷಿತನೇ! ಭಗವಾನ್ ಶ್ರೀಕೃಷ್ಣನು ಸತ್ರಾಜಿತನಿಗೆ ಹೇಳಿದನು- 'ನಾವು ಈ ಸ್ಯಮಂತಕಮಣಿಯನ್ನು ತೆಗೆದುಕೊಳ್ಳುವುದಿಲ್ಲ. ನೀನು ಸೂರ್ಯಭಗವಂತನ ಭಕ್ತನಾಗಿರುವೆ. ಆದ್ದರಿಂದ ಅದು ನಿನ್ನ ಬಳಿಯಲ್ಲೇ ಇರಲಿ. ನಾವಾದರೋ ಅದರ ಫಲಕ್ಕೆ ಅರ್ಥಾತ್ ಅದರಿಂದ ದೊರಕುವ ಚಿನ್ನಕ್ಕೆ ಅಧಿಕಾರಿಗಳಾಗಿದ್ದೇವೆ. ಅದನ್ನಷ್ಟು ನಮಗೆ ಕೊಡುತ್ತಾ ಬಾ. ॥ ೪೫ ॥

ಐವತ್ತಾರನೆಯ ಅಧ್ಯಾಯವು ಮುಗಿಯಿತು. ॥ ೫೬ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮಸ್ಕಂಧೇ ಉತ್ತರಾರ್ಧೇ
ಸ್ಯಮಂತಕೋಪಾಖ್ಯಾನೇ ಷಟ್‌ಪಂಚಾಶತ್ತಮೋಽಧ್ಯಾಯಃ ॥ ೫೬ ॥

ಐವತ್ತೇಳನೆಯ ಅಧ್ಯಾಯ

ಶ್ಯಮಂತಕಮಣಿಯ ಹರಣ - ಶತಧನ್ವನ ವಧೆ - ಅಕ್ರೂರನನ್ನು ದ್ವಾರಕೆಗೆ ಕರೆಸಿಕೊಂಡುದು

ಶ್ರೀಶುಕ ಉವಾಚ

ವಿಜ್ಞಾತಾರ್ಥೋಽಪಿ ಗೋವಿಂದೋ ದಗ್ಧಾನಾಕರ್ಣ್ಯ ಪಾಂಡವಾನ್ ।
ಕುಂತೀಂ ಚ ಕುಲ್ಯಕರಣೇ ಸಹರಾಮೋ ಯಯೌ ಕುರೂನ್ ॥ ೧ ॥

ಭೀಷ್ಮಂ ಕೃಪಂ ಸವಿದುರಂ ಗಾಂಧಾರೀಂ ದ್ರೋಣಮೇವ ಚ ।
ತುಲ್ಯದುಃಖೌ ಚ ಸಂಗಮ್ಯ ಹಾ ಕಷ್ಟಮಿತಿ ಹೋಚತುಃ ॥ ೨ ॥

ಲಬ್ಧ್ವೈತದಂತರಂ ರಾಜನ್ ಶತಧನ್ವಾನಮೂಚತುಃ ।
ಅಕ್ರೂರಕೃತವರ್ಮಾಣೌ ಮಣಿಃ ಕಸ್ಮಾನ್ನ ಗೃಹ್ಯತೇ ॥ ೩ ॥

ಯೋಽಸ್ಮಭ್ಯಂ ಸಂಪ್ರತಿಶ್ರುತ್ಯ ಕನ್ಯಾರತ್ನಂ ವಿಗರ್ಹ್ಯ ನಃ ।
ಕೃಷ್ಣಾಯಾದಾನ್ನ ಸತ್ರಾಜಿತ್ ಕಸ್ಮಾದ್ಭ್ರಾತರಮನ್ವಿಯಾತ್ ॥ ೪ ॥

ಏವಂ ಭಿನ್ನಮತಿಸ್ತಾಭ್ಯಾಂ ಸತ್ರಾಜಿತಮಸತ್ತಮಃ ।
ಶಯಾನಮವಧೀಲ್ಲೋಭಾತ್ ಸ ಪಾಪಃ ಕ್ಷೀಣಜೀವಿತಃ ॥ ೫ ॥

ಸ್ತ್ರೀಣಾಂ ವಿಕ್ರೋಶಮಾನಾನಾಂ ಕ್ರಂದಂತೀನಾಮನಾಥವತ್ ।
ಹತ್ವಾ ಪಶೂನ್ ಸೌನಿಕವನ್ಮಣಿಮಾದಾಯ ಜಗ್ಮಿವಾನ್ ॥ ೬ ॥

ಸತ್ಯಭಾಮಾ ಚ ಪಿತರಂ ಹತಂ ವೀಕ್ಷ್ಯ ಶುಚಾರ್ಪಿತಾ ।
ವ್ಯಲಪತ್ತಾತ ತಾತೇತಿ ಹಾ ಹತಾಸ್ಮೀತಿ ಮುಹ್ಯತೀ ॥ ೭ ॥

ತೈಲದ್ರೋಣ್ಯಾಂ ಮೃತಂ ಪ್ರಾಸ್ಯ ಜಗಾಮ ಗಜಸಾಹ್ವಯಮ್ ।
ಕೃಷ್ಣಾಯ ವಿದಿತಾರ್ಥಾಯ ತಪ್ತಾಽಽಚಖ್ಯೌ ಪಿತುರ್ವಧಮ್ ॥ ೮ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ - ಪರೀಕ್ಷಿತನೇ! ಲಾಕ್ಷಾಗೃಹದಲ್ಲಿ ಪಾಂಡವರು ಸುಟ್ಟುಹೋಗಿಲ್ಲವೆಂಬುದಾಗಿ ಭಗವಾನ್ ಶ್ರೀಕೃಷ್ಣನು ತಿಳಿದಿದ್ದರೂ ಕುಂತೀಸಹಿತ ಪಾಂಡವರು ಅರಗಿನಾಲಯದಲ್ಲಿ ಭಸ್ಮವಾಗಿ ಸತ್ತುಹೋದರೆಂದು ಕೇಳಿ ಬಂದಾಗ ಕುಲಪರಂಪರೆಯಿಂದ ನಡೆದು ಬಂದಿರುವ ಕರ್ತವ್ಯವನ್ನು ನಡೆಸಲು ಶ್ರೀಕೃಷ್ಣನು ಬಲರಾಮನೊಡನೆ ಹಸ್ತಿನಾಪುರಕ್ಕೆ ಹೋದನು. ॥ ೧ ॥ ಅಲ್ಲಿಗೆ ಹೋಗಿ ಭೀಷ್ಮ, ಕೃಪ, ವಿದುರ, ಗಾಂಧಾರೀ, ದ್ರೋಣಾಚಾರ್ಯ ಮುಂತಾದವರನ್ನು ಭೇಟಿಯಾಗಿ, ಅವರೊಂದಿಗೆ ಸಮಾನ ದುಃಖ ಸಹಾನುಭೂತಿ ಪ್ರಕಟಿಸುತ್ತಾ 'ಅಯ್ಯೋ! ಇದು ಅತ್ಯಂತ ದುಃಖದ ಪ್ರಸಂಗವಾಗಿದೆ' ಎಂದು ಮರುಗಿದನು. ॥ ೨ ॥

ಭಗವಾನ್ ಶ್ರೀಕೃಷ್ಣನು ಹಸ್ತಿನಾಪುರಕ್ಕೆ ತೆರಳಿ ಹೋಗಿದ್ದರಿಂದ ದ್ವಾರಕೆಯಲ್ಲಿ ಅಕ್ರೂರ ಮತ್ತು ಕೃತವರ್ಮರಿಗೆ ಅವಕಾಶ ದೊರೆಯಿತು. ಅವರು ಶತಧನ್ವನ ಬಳಿಗೆ ಬಂದು 'ನೀನು ಸತ್ರಾಜಿತನಲ್ಲಿರುವ ಮಣಿಯನ್ನು ಏಕೆ ಅಪಹರಿಸಬಾರದು?' ಎಂದು ಹೇಳಿದರು. ॥ ೩ ॥ ಸತ್ರಾಜಿತನು ತನ್ನ ಪುತ್ರಿಯನ್ನು ನನಗೆ ಕೊಡುವ ಮಾತು ಕೊಟ್ಟಿದ್ದನು. ಈಗ ಅವನು ನಮ್ಮನ್ನು ತಿರಸ್ಕರಿಸಿ ಶ್ರೀಕೃಷ್ಣನಿಗೆ ವಿವಾಹಮಾಡಿಕೊಟ್ಟಿರುವನು. ಈಗ ಸತ್ರಾಜಿತನು ತಮ್ಮನಾದ ಪ್ರಸೇನನಂತೆ ಯಮಪುರಿಗೆ ಏಕೆ ಹೋಗಬಾರದು? ॥ ೪ ॥ ಮಹಾಪಾಪಿಷ್ಠನಾದ ಶತಧನ್ವನ ಆಯುಸ್ಸು ತೀರಿಹೋಗಿತ್ತು. ಅಕ್ರೂರ-ಕೃತವರ್ಮರ ಪ್ರಚೋದನೆಯಿಂದಾಗಿ ಆ ಮಹಾ ದುಷ್ಟನು ಮಣಿಯ ಲೋಭದಿಂದ ಮಲಗಿದ್ದ ಸತ್ರಾಜಿತನನ್ನು ಕೊಂದು ಹಾಕಿದನು. ॥ ೫ ॥ ಆ ಸಮಯದಲ್ಲಿ ಸತ್ರಾಜಿತನ ಮನೆಯಲ್ಲಿದ್ದ ಸ್ತ್ರೀಯರು ಅನಾಥರಂತೆ ಗಟ್ಟಿಯಾಗಿ ಕೂಗಿಕೊಳ್ಳುತ್ತಿದ್ದರೂ ಶತಧನ್ವನು ಅವರ ಕಡೆಗೆ ಗಮನವನ್ನೇ ಕೊಡಲಿಲ್ಲ. ಕಟುಕನು ಪಶುಗಳನ್ನು ನಿರ್ದಯವಾಗಿ ಕೊಲ್ಲುವಂತೆಯೇ ಅವನು ಸತ್ರಾಜಿತನನ್ನು ಕೊಂದುಹಾಕಿ ಮಣಿಯನ್ನೆತ್ತಿಕೊಂಡು ಅಲ್ಲಿಂದ ಪರಾರಿಯಾದನು. ॥ ೬ ॥

ತಂದೆಯು ಹತನಾಗಿ ಬಿದ್ದಿರುವುದನ್ನು ನೋಡಿದ ಸತ್ಯಭಾಮೆಯು ಅತ್ಯಂತ ದುಃಖಿತಳಾಗಿ - 'ಅಪ್ಪಾ! ತಂದೆಯೇ! ನಿನಗೆಂತಹ ಸ್ಥಿತಿಯು ಒದಗಿತು? ನಾನು ಸತ್ತಂತೆಯೇ ಸರಿ.' ಹೀಗೆ ಹೇಳಿಕೊಂಡು ಗೋಳಾಡುತ್ತಾ ಮೂರ್ಛೆ ಹೋದಳು. ಎಚ್ಚರಗೊಂಡು ಪುನಃ ವಿಲಪಿಸತೊಡಗಿದಳು. ॥ ೭ ॥ ಅನಂತರ ಸತ್ಯಭಾಮೆಯು ತನ್ನ ತಂದೆಯ ಶವವನ್ನು ಎಣ್ಣೆಯ ಕೊಪ್ಪರಿಗೆಯಲ್ಲಿರಿಸಿ, ತಾನು ಹಸ್ತಿನಾಪುರಕ್ಕೆ ಹೋದಳು. ಅವಳು ಅತ್ಯಂತ ದುಃಖದಿಂದ ಭಗವಾನ್ ಶ್ರೀಕೃಷ್ಣನಲ್ಲಿ ತಂದೆಯ ಹತ್ಯೆಯ ವೃತ್ತಾಂತವನ್ನು ತಿಳಿಸಿದಳು. ಸರ್ವಾಂತರ್ಯಾಮಿಯಾದ ಶ್ರೀಕೃಷ್ಣನಾದರೋ ಇದನ್ನು ಮೊದಲೇ ತಿಳಿದಿದ್ದನು. ॥ ೮ ॥

ತದಾಕರ್ಣ್ಯೇಶ್ವರೌ ರಾಜನ್ನನುಸೃತ್ಯ ನೃಲೋಕತಾಮ್ ।
ಅಹೋ ನಃ ಪರಮಂ ಕಷ್ಟಮಿತ್ಯಸ್ರಾಕ್ಷೌ ವಿಲೇಪತುಃ ॥ ೯ ॥

ಆಗತ್ಯ ಭಗವಾಂಸ್ತಸ್ಮಾತ್ ಸಭಾರ್ಯಃ ಸಾಗ್ರಜಃ ಪುರಮ್ ।
ಶತಧನ್ವಾನಮಾರೇಭೇ ಹಂತುಂ ಹರ್ತುಂ ಮಣಿಂ ತತಃ ॥ ೧೦ ॥

ಸೋಽಪಿ ಕೃತೋದ್ಯಮಂ ಜ್ಞಾತ್ವಾ ಭೀತಃ ಪ್ರಾಣಪರೀಪ್ಸಯಾ ।
ಸಾಹಾಯ್ಯೇ ಕೃತವರ್ಮಾಣಮಯಾಚತ ಸ ಚಾಬ್ರವೀತ್ ॥ ೧೧ ॥

ನಾಹಮೀಶ್ವರಯೋಃ ಕುರ್ಯಾಂ ಹೇಲನಂ ರಾಮಕೃಷ್ಣಯೋಃ ।
ಕೋ ನು ಕ್ಷೇಮಾಯ ಕಲ್ಪೇತ ತಯೋರ್ವೃಜಿನಮಾಚರನ್ ॥ ೧೨ ॥

ಕಂಸಃ ಸಹಾನುಗೋಽಪೀತೋ ಯದ್ದ್ವೇಷಾತ್ತ್ಯಾಜಿತಃ ಶ್ರಿಯಾ ।
ಜರಾಸಂಧಃ ಸಪ್ತದಶ ಸಂಯುಗಾನ್ ವಿರಥೋ ಗತಃ ॥ ೧೩ ॥

ಪ್ರತ್ಯಾಖ್ಯಾತಃ ಸ ಚಾಕ್ರೂರಂ ಪಾರ್ಷ್ಣಿಗ್ರಾಹಮಯಾಚತ ।
ಸೋಽಪ್ಯಾಹ ಕೋ ವಿರುಧ್ಯೇತ ವಿದ್ವಾನೀಶ್ವರಯೋರ್ಬಲಮ್ ॥ ೧೪ ॥

ಯ ಇದಂ ಲೀಲಯಾ ವಿಶ್ವಂ ಸೃಜತ್ಯವತಿ ಹಂತಿ ಚ ।
ಚೇಷ್ಟಾಂ ವಿಶ್ವಸೃಜೋ ಯಸ್ಯ ನ ವಿದುರ್ಮೋಹಿತಾಜಯಾ ॥ ೧೫ ॥

ಯಃ ಸಪ್ತಹಾಯನಃ ಶೈಲಮುತ್ಪಾಟ್ಯೈಕೇನ ಪಾಣಿನಾ ।
ದಧಾರ ಲೀಲಯಾ ಬಾಲ ಉಚ್ಛಿಲೀಂಧ್ರಮಿವಾರ್ಭಕಃ ॥ ೧೬ ॥

ನಮಸ್ತಸ್ಮೈ ಭಗವತೇ ಕೃಷ್ಣಾಯಾದ್ಭುತಕರ್ಮಣೇ ।
ಅನಂತಾಯಾದಿಭೂತಾಯ ಕೂಟಸ್ಥಾಯಾತ್ಮನೇ ನಮಃ ॥ ೧೭ ॥

ಪ್ರತ್ಯಾಖ್ಯಾತಃ ಸ ತೇನಾಪಿ ಶತಧನ್ವಾ ಮಹಾಮಣಿಮ್ ।
ತಸ್ಮಿನ್ನ್ಯಸ್ಯಾಶ್ವಮಾರುಹ್ಯ ಶತಯೋಜನಗಂ ಯಯೌ ॥ ೧೮ ॥

ಗರುಡಧ್ವಜಮಾರುಹ್ಯ ರಥಂ ರಾಮಜನಾರ್ದನೌ ।
ಅನ್ವಯಾತಾಂ ಮಹಾವೇಗೈರಶ್ವೈ ರಾಜನ್ ಗುರುದ್ರುಹಮ್ ॥ ೧೯ ॥

ಪರೀಕ್ಷಿತನೇ! ಸರ್ವಶಕ್ತನಾದ ಶ್ರೀಕೃಷ್ಣನು ಮತ್ತು ಬಲರಾಮರು ಎಲ್ಲವನ್ನು ಕೇಳಿ ಮನುಷ್ಯರಂತೆ ಲೀಲೆಯಾಡುತ್ತಾ ಕಣ್ಣುಗಳಲ್ಲಿ ನೀರನ್ನು ತುಂಬಿಕೊಂಡು ಅಯ್ಯೋ! ನಮ್ಮಗಳ ಮೇಲೆ ಇದೆಂತಹ ವಿಪತ್ತು ಒದಗಿಬಂತಲ್ಲ! ಎಂದು ವಿಲಾಪಿಸತೊಡಗಿದರು. ॥ ೯ ॥ ಅನಂತರ ಶ್ರೀಕೃಷ್ಣನು ಸತ್ಯಭಾಮೆ ಮತ್ತು ಬಲರಾಮರೊಂದಿಗೆ ಹಸ್ತಿನಾಪುರದಿಂದ ಹೊರಟು ದ್ವಾರಕೆಗೆ ಮರಳಿದರು. ಸತ್ರಾಜಿತನನ್ನು ಕೊಂದಿರುವ ಶತಧನ್ವನನ್ನು ಸಂಹರಿಸಿ ಅವನಿಂದ ಮಣಿಯನ್ನು ಪಡೆಯಲು ಪ್ರಯತ್ನಿಸತೊಡಗಿದರು. ॥ ೧೦ ॥ ಭಗವಾನ್ ಶ್ರೀಕೃಷ್ಣನು ತನ್ನನ್ನು ಕೊಲ್ಲಲು ಹೊಂಚುಹಾಕುತ್ತಿರುವನೆಂದು ತಿಳಿದ ಶತಧನ್ವನು ಬಹಳವಾಗಿ ಹೆದರಿ ಹೋದನು. ತನ್ನ ಪ್ರಾಣವನ್ನು ಉಳಿಸಿಕೊಳ್ಳಲು ಅವನು ಕೃತವರ್ಮನ ಸಹಾಯವನ್ನು ಬೇಡಿದನು. ಆಗ ಕೃತವರ್ಮನು ಹೇಳಿದನು. ॥ ೧೧ ॥ ಭಗವಾನ್ ಶ್ರೀಕೃಷ್ಣ ಮತ್ತು ಬಲರಾಮರು ಸರ್ವಶಕ್ತರಾದ ಈಶ್ವರರಾಗಿದ್ದಾರೆ. ನಾನು ಅವರನ್ನು ಎದುರಿಸಲಾರೆ. ಅವರೊಂದಿಗೆ ವೈರವನ್ನು ಕಟ್ಟಿಕೊಂಡು ಕ್ಷೇಮದಿಂದಿರಲು ಯಾರಿಗೆ ತಾನೇ ಸಾಧ್ಯವಾದೀತು? ॥ ೧೨ ॥ ಕಂಸನು ಅವರಲ್ಲಿನ ದ್ವೇಷದಿಂದಲೇ ರಾಜ್ಯಲಕ್ಷ್ಮಿಯನ್ನು ಕಳೆಕೊಂಡು, ಅನುಯಾಯಿಗಳೊಂದಿಗೆ ಅವಸಾನ ಹೊಂದಿದನು. ಜರಾಸಂಧನಂತಹ ಪರಾಕ್ರಮಿಯೂ ಹದಿನೇಳು ಬಾರಿ ಸೋತು ರಥಹೀನನಾಗಿ ರಣರಂಗದಿಂದ ಓಡಬೇಕಾಯಿತು. ಇವೆಲ್ಲವನ್ನು ನೀನು ತಿಳಿದೇ ಇರುವೆ. ॥ ೧೩ ॥ ಕೊಲೆಗೆ ಪ್ರಚೋದಿಸಿದ ಕೃತವರ್ಮನು ಹೀಗೆ ಹೇಳಿ ಜಾರಿಕೊಳ್ಳಲು, ಶತಧನ್ವನು ಸಹಾಯಕ್ಕಾಗಿ ಅಕ್ರೂರನನ್ನು ಪ್ರಾರ್ಥಿಸಿದನು. ಅವನೆಂದನು - ಅಯ್ಯಾ! ಸರ್ವಶಕ್ತನಾದ ಭಗವಂತನ ಬಲ-ಪರಾಕ್ರಮಗಳನ್ನು ತಿಳಿದು ತಿಳಿದು ಅವನೊಂದಿಗೆ ಯಾರು ತಾನೇ ವೈರವನ್ನು ಕಟ್ಟಿಕೊಳ್ಳುವನು? ಭಗವಂತನೇ ಲೀಲಾವಿನೋದಕ್ಕಾಗಿಯೇ ಈ ವಿಶ್ವವನ್ನು ರಚಿಸಿ, ರಕ್ಷಿಸಿ, ಸಂಹರಿಸುತ್ತಾನೆ. ಅವನು ಎಂದು ಏನನ್ನು ಮಾಡ ಬಯಸುವನೋ ಇದನ್ನು ಮಾಯೆಯಿಂದ ಮೋಹಿತರಾದ ಬ್ರಹ್ಮಾದಿಗಳೂ ತಿಳಿಯಲಾರರು. ಇವನು ಬಾಲಕನಾಗಿದ್ದಾಗ ಏಳನೇ ವಯಸ್ಸಿನಲ್ಲೇ ಒಂದೇ ಕೈಯಿಂದ ಗೋವರ್ಧನವನ್ನು ಕಿತ್ತು ಮಗುವೊಂದು ನಾಯಿಕೊಡೆಯನ್ನು ಮೇಲೆತ್ತಿಹಿಡಿಯುವಂತೆ, ಲೀಲಾಜಾಲವಾಗಿ ಏಳು ದಿವಸಗಳ ತನಕ ಎತ್ತಿಹಿಡಿದಿದ್ದನು. ಅದ್ಭುತಕರ್ಮಿಯಾದ ಭಗವಾನ್ ಶ್ರೀಕೃಷ್ಣನಿಗೆ ನಾನಾದರೋ ನಮಸ್ಕಾರ ಮಾಡುತ್ತೇನೆ. ಅವನು ಅನಂತನೂ, ಅನಾದಿಯೂ, ಕೂಟಸ್ಥನೂ, ಆತ್ಮಸ್ವರೂಪನೂ ಆಗಿರುವನು. ಅಂತಹವನಿಗೆ ನಾನು ನಮಸ್ಕರಿಸುತ್ತೇನೆ. ॥ ೧೪-೧೭ ॥ ಹೀಗೆ ಶತಧನ್ವನು ಅಕ್ರೂರನಿಂದಲೂ ತಿರಸ್ಕರಿಸಲ್ಪಟ್ಟವನಾಗಿ ತನ್ನಲ್ಲಿದ್ದ ಮಣಿಯನ್ನು ಅಕ್ರೂರನಲ್ಲಿಯೇ ನ್ಯಾಸವಾಗಿಟ್ಟು, ದಿನಕ್ಕೆ ನೂರು ಯೋಜನಗಳಷ್ಟು ಪ್ರಯಾಣಮಾಡುವಂತಹ ಕುದುರೆಯನ್ನೇರಿ ಅಲ್ಲಿಂದ ಹೊರಟುಬಿಟ್ಟನು. ॥ ೧೮ ॥ ಪರೀಕ್ಷಿತನೇ! ಭಗವಾನ್ ಶ್ರೀಕೃಷ್ಣ-ಬಲರಾಮರು ಶತಧನ್ವನು ದ್ವಾರಕೆಯಿಂದ ಹೊರಟುಹೋದ ವಾರ್ತೆಯನ್ನು ಕೇಳಿ ಗರುಡ ಧ್ವಜವಿರುವ ಹಾಗೂ ಮಹಾವೇಗವಾಗಿ ಚಲಿಸುವ ಕುದುರೆಗಳನ್ನು ಹೂಡಿದ ರಥದಲ್ಲಿ ಕುಳಿತುಕೊಂಡು ಅವರು ತಮ್ಮ ಮಾವನನ್ನು ಕೊಂದಿರುವ ಶತಧನ್ವನನ್ನು ಬೆನ್ನಟ್ಟಿದರು. ॥ ೧೯ ॥

ಮಿಥಿಲಾಯಾಮುಪವನೇ ವಿಸೃಜ್ಯ ಪತಿತಂ ಹಯಮ್ ।
ಪದ್ಭ್ಯಾಮಧಾವತ್ ಸಂತ್ರಸ್ತಃ ಕೃಷ್ಣೋಽಪ್ಯನ್ವದ್ರವದ್ರುಷಾ ॥ ೨೦ ॥

ಪದಾತೇರ್ಭಗವಾಂಸ್ತಸ್ಯ ಪದಾತಿಸ್ತಿಗ್ಮನೇಮಿನಾ ।
ಚಕ್ರೇಣ ಶಿರ ಉತ್ಕೃತ್ಯ ವಾಸಸೋರ್ವ್ಯಚಿನೋನ್ಮಣಿಮ್ ॥ ೨೧ ॥

ಅಲಬ್ಧಮಣಿರಾಗತ್ಯ ಕೃಷ್ಣ ಆಹಾಗ್ರಜಾಂತಿಕಮ್ ।
ವೃಥಾ ಹತಃ ಶತಧನುರ್ಮಣಿಸ್ತತ್ರ ನ ವಿದ್ಯತೇ ॥ ೨೨ ॥

ತತ ಆಹ ಬಲೋ ನೂನಂ ಸ ಮಣಿಃ ಶತಧನ್ವನಾ ।
ಕಸ್ಮಿಂಶ್ಚಿತ್ ಪುರುಷೇ ನ್ಯಸ್ತಸ್ತಮನ್ವೇಷ ಪುರಂ ವ್ರಜ ॥ ೨೩ ॥

ಅಹಂ ವಿದೇಹಮಿಚ್ಛಾಮಿ ದ್ರಷ್ಟುಂ ಪ್ರಿಯತಮಂ ಮಮ ।
ಇತ್ಯುಕ್ತ್ವಾ ಮಿಥಿಲಾಂ ರಾಜನ್ ವಿವೇಶ ಯದುನಂದನಃ ॥ ೨೪ ॥

ತಂ ದೃಷ್ಟ್ವಾ ಸಹಸೋತ್ಥಾಯ ಮೈಥಿಲಃ ಪ್ರೀತಮಾನಸಃ ।
ಅರ್ಹಯಾಮಾಸ ವಿಧಿವದರ್ಹಣೀಯಂ ಸಮರ್ಹಣೈಃ ॥ ೨೫ ॥

ಉವಾಸ ತಸ್ಯಾಂ ಕತಿಚನ್ಮಿಥಿಲಾಯಾಂ ಸಮಾ ವಿಭುಃ ।
ಮಾನಿತಃ ಪ್ರೀತಿಯುಕ್ತೇನ ಜನಕೇನ ಮಹಾತ್ಮನಾ ।
ತತೋಽಶಿಕ್ಷದ್ಗದಾಂ ಕಾಲೇ ಧಾರ್ತರಾಷ್ಟ್ರಃ ಸುಯೋಧನಃ ॥ ೨೬ ॥

ಕೇಶವೋ ದ್ವಾರಕಾಮೇತ್ಯ ನಿಧನಂ ಶತಧನ್ವನಃ ।
ಅಪ್ರಾಪ್ತಿಂ ಚ ಮಣೇಃ ಪ್ರಾಹ ಪ್ರಿಯಾಯಾಃ ಪ್ರಿಯಕೃದ್ವಿಭುಃ ॥ ೨೭ ॥

ತತಃ ಸ ಕಾರಯಾಮಾಸ ಕ್ರಿಯಾ ಬಂಧೋರ್ಹತಸ್ಯ ವೈ ।
ಸಾಕಂ ಸುಹೃದ್ಭಿರ್ಭಗವಾನ್ ಯಾ ಯಾಃ ಸ್ಯುಃ ಸಾಂಪರಾಯಿಕಾಃ ॥ ೨೮ ॥

ಅಕ್ರೂರಃ ಕೃತವರ್ಮಾ ಚ ಶ್ರುತ್ವಾ ಶತಧನೋರ್ವಧಮ್ ।
ವ್ಯೂಷತುರ್ಭಯವಿತ್ರಸ್ತೌ ದ್ವಾರಕಾಯಾಃ ಪ್ರಯೋಜಕೌ ॥ ೨೯ ॥

ಅಕ್ರೂರೇ ಪ್ರೋಷಿತೇಽರಿಷ್ಟಾನ್ಯಾಸನ್ ವೈ ದ್ವಾರಕೌಕಸಾಮ್ ।
ಶಾರೀರಾ ಮಾನಸಾಸ್ತಾಪಾ ಮುಹುರ್ದೈವಿಕಭೌತಿಕಾಃ ॥ ೩೦ ॥

ಮಿಥಿಲಾಪಟ್ಟಣದ ಉಪವನವೊಂದರಲ್ಲಿ ಶತಧನ್ವನ ಕುದುರೆಯು ಬಿದ್ದು ಹೋಯಿತು. ಆಗ ಅವನು ಅದನ್ನು ಬಿಟ್ಟು ಅಲ್ಲೇ ಬಹಳವಾಗಿ ಭಯಗೊಂಡು ಓಡಲಾರಂಭಿಸಿದನು. ಭಗವಾನ್ ಶ್ರೀಕೃಷ್ಣನೂ ಕ್ರುದ್ಧನಾಗಿ ಅವನನ್ನು ಹಿಂಬಾಲಿಸಿದನು. ॥ ೨೦ ॥ ಶತಧನ್ವನು ಪದಾತಿಯಾಗಿಯೇ ಓಡುತ್ತಿದ್ದುದರಿಂದ ಭಗವಂತನು ಹಾಗೆಯೇ ರಥವನ್ನು ಬಿಟ್ಟು ಪದಾತಿಯಾಗಿಯೇ ಓಡಿ ಹೋಗಿ ಹರಿತವಾದ ತನ್ನ ಸುದರ್ಶನದಿಂದ ಅವನ ತಲೆಯನ್ನು ಕಡಿದು ಅವನು ಉಟ್ಟಿದ್ದ ಬಟ್ಟೆಯಲ್ಲಿ ಸ್ಯಮಂತಕ ಮಣಿಯನ್ನು ಹುಡುಕಿದನು. ॥ ೨೧ ॥ ಆದರೆ ಮಣಿಯು ಸಿಗದಿದ್ದಾಗ ಶ್ರೀಕೃಷ್ಣನು ಅಣ್ಣನಾದ ಬಲರಾಮನ ಬಳಿಗೆ ಬಂದು - ಶತಧನ್ವನನ್ನು ವ್ಯರ್ಥವಾಗಿ ಕೊಂದಂತಾಯಿತು. ಏಕೆಂದರೆ, ಅವನ ಬಳಿಯಲ್ಲಿ ಸ್ಯಮಂತಕ ಮಣಿಯು ಇರಲೇ ಇಲ್ಲ ಎಂದು ಹೇಳಿದನು. ॥ ೨೨ ॥ ಬಲರಾಮನು ಹೇಳಿದನು - ಕೃಷ್ಣ! ಶತಧನ್ವನು ಸ್ಯಮಂತಕ ಮಣಿಯನ್ನು ಬೇರೆ ಯಾರಲ್ಲಾದರೂ ಇಟ್ಟಿರಬೇಕು. ನೀನು ದ್ವಾರಕೆಗೆ ಹೋಗಿ ಅದು ಯಾರಲ್ಲಿದೆ ಎಂಬುದನ್ನು ತಿಳಿದುಕೋ. ॥ ೨೩ ॥ ನನ್ನ ಪ್ರಿಯಮಿತ್ರನಾದ ವಿದೇಹರಾಜನನ್ನು ಕಾಣಲು ನಾನು ಬಯಸುತ್ತೇನೆ. ಪರೀಕ್ಷಿತನೇ! ಹೀಗೆ ಹೇಳಿ ಯದುವಂಶ ಶಿರೋಮಣಿಯಾದ ಬಲರಾಮನು ಮಿಥಿಲಾ ನಗರಕ್ಕೆ ಹೋದನು. ॥ ೨೪ ॥ ಪರಮಪೂಜನೀಯನಾದ ಬಲರಾಮನು ಆಗಮಿಸಿರುವನೆಂದು ತಿಳಿದ ಮಿಥಿಲಾ ನರೇಶನ ಹೃದಯವು ಆನಂದದಿಂದ ತುಂಬಿಹೋಯಿತು. ಅವನು ಲಗುಬಗೆಯಿಂದ ಆಸನದಿಂದ ಎದ್ದು ಅನೇಕ ಪೂಜಾಸಾಮಗ್ರಿಗಳಿಂದ ಬಲರಾಮನನ್ನು ಪೂಜಿಸಿದನು. ॥ ೨೫ ॥ ಇದಾದ ಬಳಿಕ ಭಗವಾನ್ ಬಲರಾಮನು ಕೆಲವು ವರ್ಷಗಳವರೆಗೆ ಮಿಥಿಲೆಯಲ್ಲೇ ಇದ್ದುಬಿಟ್ಟನು. ಮಹಾತ್ಮಾ ಜನಕನು ಅತ್ಯಂತ ಪ್ರೇಮಾದರಗಳಿಂದ ಅವನನ್ನು ಇರಿಸಿಕೊಂಡನು. ಅದೇ ಸಮಯದಲ್ಲಿ ಧೃತರಾಷ್ಟ್ರನ ಮಗನಾದ ದುರ್ಯೋಧನನು ಮಿಥಿಲೆಗೆ ಬಂದು ಬಲರಾಮನಿಂದ ಗದಾಯುದ್ಧವನ್ನು ಕಲಿತುಕೊಂಡನು. ॥ ೨೬ ॥ ಇತ್ತ ಪ್ರಿಯೆಯಾದ ಸತ್ಯಭಾಮೆಯ ಪ್ರಿಯಕಾರ್ಯವನ್ನು ಮಾಡಿ ಭಗವಾನ್ ಶ್ರೀಕೃಷ್ಣನು ದ್ವಾರಕೆಗೆ ಮರಳಿ ಬಂದು ಆಕೆಯ ಬಳಿ ಶತಧನ್ವನನ್ನು ಕೊಂದುಹಾಕಿದರೂ ಸ್ಯಮಂತಕಮಣಿಯು ಅವನ ಬಳಿ ದೊರಕಲಿಲ್ಲವೆಂದು ತಿಳಿಸಿದನು. ॥ ೨೭ ॥ ಅನಂತರ ಶ್ರೀಕೃಷ್ಣನು ಮಾವನಾದ ಸತ್ರಾಜಿತನಿಗೆ ಪರಲೋಕಸಾಧನವಾದ ಔರ್ಧ್ವದೇಹಿಕಕ್ರಿಯೆಗಳನ್ನು ಸುಹೃದರೊಡನೆ ಸೇರಿ ಮಾಡಿದನು. ॥ ೨೮ ॥

ಸತ್ರಾಜಿತನನ್ನು ಕೊಲ್ಲಲು ಶತಧನ್ವನನ್ನು ಅಕ್ರೂರ ಮತ್ತು ಕೃತವರ್ಮರೇ ಪ್ರೇರೇಪಿಸಿದ್ದರು. ಭಗವಾನ್ ಶ್ರೀಕೃಷ್ಣನು ಶತಧನ್ವನನ್ನು ಕೊಂದಿರುವ ವಾರ್ತೆಯನ್ನು ಕೇಳಿದಾಗ ಅವರು ಬಹಳವಾಗಿ ಭಯಗೊಂಡು ದ್ವಾರಕೆಯಿಂದ ಓಡಿಹೋದರು. ॥ ೨೯ ॥ ಪರೀಕ್ಷಿತನೇ! ಅಕ್ರೂರನು ದ್ವಾರಕೆಯಿಂದ ಹೊರಟುಹೋದ ಬಳಿಕ ದ್ವಾರಕಾನಿವಾಸಿಗಳಿಗೆ ಅನೇಕ ವಿಧವಾದ ಅನಿಷ್ಟಗಳನ್ನು ಅರಿಷ್ಟಗಳನ್ನು ಇದಿರಿಸಬೇಕಾಯಿತು ಎಂದು ಕೆಲವರು ಭಾವಿಸಿದರು. ಇವರೆಲ್ಲರೂ ಹಿಂದೆ ನಡೆದ ಶ್ರೀಕೃಷ್ಣನ ಮಹಾತ್ಮ್ಯ-ಮಹಿಮೆಯನ್ನು ಮರೆತೇ ಬಿಟ್ಟಿದ್ದರು. ಮಹರ್ಷಿಗಳ ಮನೋವೃತ್ತಿಗೆ

ಇತ್ಥಂಗೋಪದಿಶಂತ್ಯೇಕೇ ವಿಸ್ಮೃತ್ಯ ಪ್ರಾಗುದಾಹೃತಮ್ ।
ಮುನಿವಾಸನಿವಾಸೇ ಕಿಂ ಘಟೇತಾರಿಷ್ಟದರ್ಶನಮ್ ॥ ೩೧ ॥

ದೇವೇಽವರ್ಷತಿ ಕಾಶೀಶಃ ಶ್ವಫಲ್ಕಾಯಾಗತಾಯ ವೈ ।
ಸ್ವಸುತಾಂ ಗಾಂದಿನೀಂ ಪ್ರಾದಾತ್ತತೋಽವರ್ಷತ್ಸ್ಮ ಕಾಶಿಷು ॥ ೩೨ ॥

ತತ್ಸುತಸ್ತತ್ಪ್ರಭಾವೋಽಸಾವಕ್ರೂರೋ ಯತ್ರ ಯತ್ರ ಹ ।
ದೇವೋಽಭಿವರ್ಷತೇ ತತ್ರ ನೋಪತಾಪಾ ನ ಮಾರಿಕಾಃ ॥ ೩೩ ॥

ಇತಿ ವೃದ್ಧವಚಃ ಶ್ರುತ್ವಾ ನೈತಾವದಿಹ ಕಾರಣಮ್ ।
ಇತಿ ಮತ್ವಾ ಸಮಾನಾಯ್ಯ ಪ್ರಾಹಾಕ್ರೂರಂ ಜನಾರ್ದನಃ ॥ ೩೪ ॥

ಪೂಜಯಿತ್ವಾಭಿಭಾಷ್ಯೈನಂ ಕಥಯಿತ್ವಾ ಪ್ರಿಯಾಃ ಕಥಾಃ ।
ವಿಜ್ಞಾತಾಖಿಲಚಿತ್ತಜ್ಞಃ ಸ್ಮಯಮಾನ ಉವಾಚ ಹ ॥ ೩೫ ॥

ನನು ದಾನಪತೇ ನ್ಯಸ್ತಸ್ತ್ವಯ್ಯಾಸ್ತೇ ಶತಧನ್ವನಾ ।
ಸ್ಯಮಂತಕೋ ಮಣಿಃ ಶ್ರೀಮಾನ್ ವಿದಿತಃ ಪೂರ್ವಮೇವ ನಃ ॥ ೩೬ ॥

ಸತ್ರಾಜಿತೋಽನಪತ್ಯತ್ವಾದ್ಗೃಹ್ಣೀಯುರ್ದುಹಿತುಃ ಸುತಾಃ ।
ದಾಯಂ ನಿನೀಯಾಪಃ ಪಿಂಡಾನ್ವಿಮುಚ್ಯರ್ಣಂ ಚ ಶೇಷಿತಮ್ ॥ ೩೭ ॥

ತಥಾಪಿ ದುರ್ಧರಸ್ತ್ವನ್ಯೈಸ್ತ್ವಯ್ಯಾಸ್ತಾಂ ಸುವ್ರತೇ ಮಣಿಃ ।
ಕಿಂತು ಮಾಮಗ್ರಜಃ ಸಮ್ಯಙ್ನ ಪ್ರತ್ಯೇತಿ ಮಣಿಂ ಪ್ರತಿ ॥ ೩೮ ॥

ದರ್ಶಯಸ್ವ ಮಹಾಭಾಗ ಬಂಧೂನಾಂ ಶಾಂತಿಮಾವಹ ।
ಅವ್ಯುಚ್ಛಿನ್ನಾ ಮಖಾಸ್ತೇಽದ್ಯ ವರ್ತಂತೇ ರುಕ್ಮವೇದಯಃ ॥ ೩೯ ॥

ನೆಲೆಯಾಗಿರುವ ಭಗವಂತನಿಗೆ ನಿವಾಸಸ್ಥಾನವಾದ ದ್ವಾರಕೆಯಲ್ಲಿ ಅನಿಷ್ಟಗಳು ಹೇಗೆ ತಾನೆ ಉಂಟಾಗಬಲ್ಲವು? ಎಂದು ಮತ್ತೆ ಕೆಲವರು ಹೇಳಿಕೊಳ್ಳುತಿದ್ದರು. ॥ ೩೦-೩೧ ॥ "ಒಮ್ಮೆ ಕಾಶೀರಾಜ್ಯದಲ್ಲಿ ಮಳೆಯೇ ಇಲ್ಲದೆ ಕ್ಷಾಮ ತಲೆದೋರಿತ್ತಂತೆ. ಆ ಸಮಯದಲ್ಲಿ ಕಾಶೀರಾಜನು ತನ್ನ ರಾಜ್ಯಕ್ಕೆ ಬಂದಿರುವ ಅಕ್ರೂರನ ತಂದೆಯಾದ ಶ್ವಫಲ್ಕನಿಗೆ ತನ್ನ ಮಗಳಾದ ಗಾಂದಿನಿಯನ್ನು ಕೊಟ್ಟು ಮದುವೆಮಾಡಿದೊಡನೆಯೇ ಮಳೆಯಾಯಿತಂತೆ. ಶ್ವಫಲ್ಕನ ಮಗನಾದ ಅಕ್ರೂರನಲ್ಲಿಯೂ ಇಂತಹುದೇ ಮಹಿಮೆಯಿರುವುದಂತೆ. ಅವನೆಲ್ಲಿಗೆ ಹೋದರೂ ಅಲ್ಲಿ ಮಳೆ-ಬೆಳೆಗಳು ಸಮೃದ್ಧವಾಗಿ, ಯಾವುದೇ ವಿಧವಾದ ಕಷ್ಟವಾಗಲೀ, ಮಹಾಮಾರಿಯೇ ಮುಂತಾದ ಉಪದ್ರವಗಳಾಗಲೀ ಇರುವುದಿಲ್ಲವಂತೆ.' ಹೀಗೆ ಕೆಲವು ಹಿರಿಯರು ಮಾತನಾಡಿಕೊಳ್ಳುತ್ತಿದ್ದರು. ಪರೀಕ್ಷಿತನೇ! ಅವರ ಮಾತನ್ನು ಕೇಳಿದ ಭಗವಂತನು - ಈಗ ತಲೆದೋರಿದ ಉಪದ್ರವಗಳಿಗೆ ಈ ಕಾರಣವಿರಲಾರದು ಎಂದು ಯೋಚಿಸಿ ಶ್ರೀಕೃಷ್ಣನು ದೂತನನ್ನು ಕಳುಹಿಸಿ ಅಕ್ರೂರನನ್ನು ಹುಡುಕಿಸಿ, ಕರೆತಂದು ಅವನೊಡನೆ ಮಾತನಾಡಿದನು. ॥ ೩೨-೩೪ ॥ ಭಗವಂತನು ಅವನನ್ನು ಬಹಳವಾಗಿ ಸ್ವಾಗತ-ಸತ್ಕಾರಮಾಡಿ, ಸವಿಮಾತುಗಳನ್ನಾಡಿದನು. ಪರೀಕ್ಷಿತನೇ! ಎಲ್ಲರ ಮನಸ್ಸಿನ ಪ್ರತಿಯೊಂದು ಸಂಕಲ್ಪವನ್ನು ಬಲ್ಲವನಾದ ಶ್ರೀಕೃಷ್ಣನು ಮುಗುಳುನಗುತ್ತಾ ಅಕ್ರೂರನಿಗೆ ಹೇಳಿದನು. ॥ ೩೫ ॥ ದಾನಪತಿಯಾದ ಚಿಕ್ಕಪ್ಪನೇ! ಶತಧನ್ವನು ಪ್ರಕಾಶಮಾನವಾದ ಮತ್ತು ಸಂಪತ್ತನ್ನು ಕೊಡುವ ಸ್ಯಮಂತಕಮಣಿಯನ್ನು ನಿನ್ನಲ್ಲಿ ನ್ಯಾಸವಾಗಿ ಇಟ್ಟಿರುವನೆಂಬುದು ನನಗೆ ಮೊದಲೇ ತಿಳಿದಿತ್ತು. ॥ ೩೬ ॥ ಸತ್ರಾಜಿತನಿಗೆ ಗಂಡು ಮಕ್ಕಳಿಲ್ಲದುದು ನೀನು ತಿಳಿದೇ ಇರುವೆ. ಅದಕ್ಕಾಗಿ ಅವನ ಮಗಳ ಮಕ್ಕಳು ಅವನಿಗೆ ಮಾಡಬೇಕಾದ ಪಿಂಡಪ್ರದಾನ, ತಿಲಾಂಜಲಿಯೇ ಮೊದಲಾದ ಕರ್ಮಾಂತರಗಳನ್ನು ಮಾಡಿರುವರು. ಅವನ ಋಣವನ್ನು ತೀರಿಸಿರುವರು. ಆದ್ದರಿಂದ ಅವನಲ್ಲಿರಬಹುದಾದ ಆಸ್ತಿಗೆ ಅವರೇ ಹಕ್ಕುದಾರರಾಗುತ್ತಾರೆ. ॥ ೩೭ ॥ ಹೀಗೆ ಶಾಸ್ತ್ರ ಸಂಪ್ರದಾಯದಂತೆ ಆ ಸ್ಯಮಂತಕ ಮಣಿಯು ನನ್ನ ಪುತ್ರರಿಗೆ ಲಭಿಸಬೇಕಾಗಿದೆ. ಆದರೆ ಆ ದಿವ್ಯಮಣಿಯು ನಿನ್ನಲ್ಲಿಯೇ ಇರಲಿ. ಏಕೆಂದರೆ, ನೀನು ವ್ರತನಿಷ್ಠನೂ, ಪವಿತ್ರಾತ್ಮನೂ ಆಗಿರುವೆ. ಇತರರಿಗೆ ಆ ಮಣಿಯನ್ನು ಇರಿಸಿಕೊಳ್ಳುವುದು ಕಷ್ಟವೇ ಸರಿ. ಆದರೆ ನಮ್ಮಣ್ಣ ಬಲರಾಮನು ಮಣಿಯ ವಿಷಯದಲ್ಲಿ ನನ್ನ ಮಾತಿನಲ್ಲಿ ವಿಶ್ವಾಸವಿಡುವುದಿಲ್ಲ. ಇದೇ ನಮ್ಮ ಮುಂದೆ ಬಂದಿರುವ ದೊಡ್ಡ ಸಮಸ್ಯೆಯಾಗಿದೆ. ॥ ೩೮ ॥ ಆದ್ದರಿಂದ ಭಾಗ್ಯಶಾಲಿಯಾದ ಅಕ್ರೂರನೇ! ನೀನು ಆ ಮಣಿಯನ್ನು ತೋರಿಸಿ ನಮ್ಮ ಇಷ್ಟ-ಮಿತ್ರರ, ಬಲರಾಮನ, ಸತ್ಯಭಾಮೆಯ ಮತ್ತು ಜಾಂಬವತಿಯ ಸಂದೇಹವನ್ನು ದೂರಗೊಳಿಸು ಹಾಗೂ ಅವರ ಹೃದಯಕ್ಕೆ ಶಾಂತಿಯನ್ನು ನೀಡು. ಆ ಮಣಿಯ ಪ್ರಭಾವದಿಂದಲೇ ಇತ್ತೀಚೆಗೆ ನೀನು ಸ್ವರ್ಣವೇದಿಗಳಿಂದೊಡಗೂಡಿದ ಮಹಾಯಜ್ಞಗಳನ್ನು ನಿರಂತರವಾಗಿ ಮಾಡುತ್ತಿರುವೆ ಎಂಬುದೂ ನನಗೆ ತಿಳಿದಿದೆ. ॥ ೩೯ ॥

ಏವಂ ಸಾಮಭಿರಾಲಬ್ಧಃ ಶ್ವಫಲ್ಕತನಯೋ ಮಣಿಮ್ ।
ಆದಾಯ ವಾಸಸಾಚ್ಛನ್ನಂ ದದೌ ಸೂರ್ಯಸಮಪ್ರಭಮ್ ॥ ೪೦ ॥

ಸ್ಯಮಂತಕಂ ದರ್ಶಯಿತ್ವಾ ಜ್ಞಾತಿಭ್ಯೋ ರಜ ಆತ್ಮನಃ ।
ವಿಮೃಜ್ಯ ಮಣಿನಾ ಭೂಯಸ್ತಸ್ಮೈ ಪ್ರತ್ಯರ್ಪಯತ್ ಪ್ರಭುಃ ॥ ೪೧ ॥

ಯಸ್ತ್ವೇತದ್ಭಗವತ ಈಶ್ವರಸ್ಯ ವಿಷ್ಣೋ-
ರ್ವೀರ್ಯಾಢ್ಯಂ ವೃಜಿನಹರಂ ಸುಮಂಗಲಂ ಚ ।
ಆಖ್ಯಾನಂ ಪಠತಿ ಶೃಣೋತ್ಯನುಸ್ಮರೇದ್ವಾ
ದುಷ್ಕೀರ್ತಿಂ ದುರಿತಮಪೋಹ್ಯ ಯಾತಿ ಶಾಂತಿಮ್ ॥ ೪೨ ॥

ಪರೀಕ್ಷಿತನೇ! ಭಗವಾನ್ ಶ್ರೀಕೃಷ್ಣನು ಹೇಳಿದ ಈ ಪ್ರಕಾರದ ಸಾಂತ್ವನದ ಮಾತುಗಳಿಂದ ಪ್ರೇರಿತನಾದ ಅಕ್ರೂರನು ವಸ್ತ್ರದಲ್ಲಿ ಸುತ್ತಿಟ್ಟ ಸ್ಯಮಂತಕಮಣಿಯನ್ನು ಹೊರ ತೆಗೆದು ಭಗವಂತನಿಗೆ ಅರ್ಪಿಸಿಬಿಟ್ಟನು. ॥ ೪೦ ॥ ಭಗವಾನ್ ಶ್ರೀಕೃಷ್ಣನು ಆ ಸ್ಯಮಂತಕ ಮಣಿಯನ್ನು ತನ್ನ ಜ್ಞಾತಿಬಾಂಧವರೆಲ್ಲರಿಗೂ ತೋರಿಸಿ ತನಗೆ ಬಂದ ಅಪವಾದವನ್ನು ಕಳೆದುಕೊಂಡನು. ಅದನ್ನು ಇಟ್ಟುಕೊಳ್ಳಲು ತಾನು ಸಮರ್ಥನಾಗಿದ್ದರೂ ಪುನಃ ಅಕ್ರೂರನಿಗೆ ಆ ಮಣಿಯನ್ನು ಕೊಟ್ಟನು. ॥ ೪೧ ॥ ಸರ್ವಶಕ್ತನಾದ, ಸರ್ವವ್ಯಾಪಕನಾದ ಭಗವಾನ್ ಶ್ರೀಕೃಷ್ಣನ ಪರಾಕ್ರಮಗಳಿಂದ ಕೂಡಿದ ಮಂಗಲಮಯವಾದ ಈ ಆಖ್ಯಾನವು ಸಮಸ್ತ ಪಾಪಗಳನ್ನೂ, ಅಪವಾದಗಳನ್ನೂ, ಕಳಂಕಗಳನ್ನೂ ತೊಡೆದು ಹಾಕುತ್ತದೆ. ಇದನ್ನು ಪಠಿಸುವವನು, ಶ್ರವಣಿಸುವವನು, ಅಥವಾ ಸ್ಮರಿಸುವವನೂ ಎಲ್ಲ ವಿಧವಾದ ದುಷ್ಕೀರ್ತಿಗಳಿಂದ, ಪಾಪಗಳಿಂದ ಬಿಡುಗಡೆಹೊಂದಿ ಪರಮ ಶಾಂತಿಯನ್ನು ಹೊಂದುತ್ತಾನೆ. ॥ ೪೨ ॥

ಐವತ್ತೇಳನೆಯ ಅಧ್ಯಾಯವು ಮುಗಿಯಿತು. ॥ ೫೭ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮ ಸ್ಕಂಧೇ ಉತ್ತರಾರ್ಧೇ ಸ್ಯಮಂತಕೋಪಾಖ್ಯಾನೇ ಸಪ್ತಪಂಚಾಶತ್ತಮೋಽಧ್ಯಾಯಃ ॥ ೫೭ ॥

ಐವತ್ತೆಂಟನೆಯ ಅಧ್ಯಾಯ

ಶ್ರೀಕೃಷ್ಣನ ಇತರ ವಿವಾಹ ಮಹೋತ್ಸವಗಳು

ಶ್ರೀಶುಕ ಉವಾಚ

ಏಕದಾ ಪಾಂಡವಾನ್ ದ್ರಷ್ಟುಂ ಪ್ರತೀತಾನ್ ಪುರುಷೋತ್ತಮಃ ।
ಇಂದ್ರಪ್ರಸ್ಥಂ ಗತಃ ಶ್ರೀಮಾನ್ ಯುಯುಧಾನಾದಿಭಿರ್ವೃತಃ ॥ ೧ ॥

ದೃಷ್ಟ್ವಾ ತಮಾಗತಂ ಪಾರ್ಥಾ ಮುಕುಂದಮಖಿಲೇಶ್ವರಮ್ ।
ಉತ್ತಸ್ಥುರ್ಯುಗಪದ್ವೀರಾಃ ಪ್ರಾಣಾ ಮುಖ್ಯಮಿವಾಗತಮ್ ॥ ೨ ॥

ಪರಿಷ್ವಜ್ಯಾಚ್ಯುತಂ ವೀರಾ ಅಂಗಸಂಗಹತೈನಸಃ ।
ಸಾನುರಾಗಸ್ಮಿತಂ ವಕ್ತ್ರಂ ವೀಕ್ಷ್ಯ ತಸ್ಯ ಮುದಂ ಯಯುಃ ॥ ೩ ॥

ಯುಧಿಷ್ಠಿರಸ್ಯ ಭೀಮಸ್ಯ ಕೃತ್ವಾ ಪಾದಾಭಿವಂದನಮ್ ।
ಫಾಲ್ಗುನಂ ಪರಿರಭ್ಯಾಥ ಯಮಾಭ್ಯಾಂ ಚಾಭಿವಂದಿತಃ ॥ ೪ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ - ಪರೀಕ್ಷಿತನೇ! ಪಾಂಡವರು ಲಾಕ್ಷಾಗೃಹದಲ್ಲಿ ಸುಟ್ಟುಹೋಗದೆ ಜೀವಂತವಾಗಿರುವರೆಂಬುದು ಈಗ ತಿಳಿದಿತ್ತು. ಒಂದು ದಿನ ಭಗವಾನ್ ಶ್ರೀಕೃಷ್ಣನು ಅವರನ್ನು ಭೆಟ್ಟಿಯಾಗಲು ಸಾತ್ಯಕಿಯೇ ಮೊದಲಾದ ಸುಹೃದರೊಡನೆ ಇಂದ್ರಪ್ರಸ್ಥಕ್ಕೆ ಪ್ರಯಾಣಮಾಡಿದನು. ॥ ೧ ॥ ಸರ್ವೇಶ್ವರನಾದ ಭಗವಾನ್ ಶ್ರೀಕೃಷ್ಣನು ದಯಮಾಡಿಸಿರುವನೆಂದು ನೋಡಿ ಪ್ರಾಣಸಂಚಾರವಾದೊಡನೆ ಇಂದ್ರಿಯಗಳೆಲ್ಲವೂ ಸಚೇತನವಾಗುವಂತೆಯೇ ವೀರವರರಾದ ಪಾಂಡವರೆಲ್ಲರೂ ಒಂದೇ ಬಾರಿಗೆ ಎದ್ದು ನಿಂತರು. ॥ ೨ ॥ ವೀರರಾದ ಪಾಂಡವರು ಭಗವಂತನಾದ ಶ್ರೀಕೃಷ್ಣನನ್ನು ಗಾಢವಾಗಿ ಆಲಿಂಗಿಸಿಕೊಂಡರು. ಪರಮಾತ್ಮನ ಅಂಗಸ್ಪರ್ಶದಿಂದ ಅವರ ಪಾಪಗಳೆಲ್ಲವೂ ಪರಿಹಾರವಾದುವು. ಭಗವಂತನ ಪ್ರೀತಿಯ ಮಂದಹಾಸದಿಂದ ಕೂಡಿದ ಮುಖಾರವಿಂದವನ್ನು ನೋಡಿ ಅವರೆಲ್ಲರೂ ಆನಂದ ತುಂದಿಲರಾದರು. ॥ ೩ ॥ ಭಗವಾನ್ ಶ್ರೀಕೃಷ್ಣನು ಯುಧಿಷ್ಠಿರನಿಗೆ ಮತ್ತು ಭೀಮಸೇನನಿಗೆ ಪಾದಾಭಿವಂದನೆಯನ್ನು ಮಾಡಿದನು. ಅರ್ಜುನನನ್ನು ಆಲಿಂಗಿಸಿಕೊಂಡನು. ನಕುಲ-ಸಹದೇವರು ಭಗವಂತನ ಪಾದಗಳಿಗೆರಗಿದರು. ॥ ೪ ॥

ಪರಮಾಸನ ಆಸೀನಂ ಕೃಷ್ಣಾ ಕೃಷ್ಣಮನಿಂದಿತಾ ।
ನವೋಢಾ ವ್ರೀಡಿತಾ ಕಿಂಚಿಚ್ಛನೈರೇತ್ಯಾಭ್ಯವಂದತ ॥ ೫ ॥

ತಥೈವ ಸಾತ್ಯಕಿಃ ಪಾರ್ಥೈಃ ಪೂಜಿತಶ್ಚಾಭಿವಂದಿತಃ ।
ನಿಷಸಾದಾಸನೇಽನ್ಯೇ ಚ ಪೂಜಿತಾಃ ಪರ್ಯುಪಾಸತ ॥ ೬ ॥

ಪೃಥಾಂ ಸಮಾಗತ್ಯ ಕೃತಾಭಿವಾದನ-
ಸ್ತಯಾತಿಹಾರ್ದಾರ್ದ್ರದೃಶಾಭಿರಂಭಿತಃ ।
ಆಪೃಷ್ಟವಾಂಸ್ತಾಂ ಕುಶಲಂ ಸಹಸ್ನುಷಾಂ
ಪಿತೃಷ್ವಸಾರಂ ಪರಿಪೃಷ್ಟಬಾಂಧವಃ ॥ ೭ ॥

ತಮಾಹ ಪ್ರೇಮವೈಕ್ಲವ್ಯರುದ್ಧಕಂಠಾಶ್ರುಲೋಚನಾ ।
ಸ್ಮರಂತೀ ತಾನ್ಬಹೂನ್ ಕ್ಲೇಶಾನ್ ಕ್ಲೇಶಾಪಾಯಾತ್ಮದರ್ಶನಮ್ ॥ ೮ ॥

ತದೈವ ಕುಶಲಂ ನೋಽಭೂತ್ ಸನಾಥಾಸ್ತೇ ಕೃತಾ ವಯಮ್ ।
ಜ್ಞಾತೀನ್ನಃ ಸ್ಮರತಾ ಕೃಷ್ಣ ಭ್ರಾತಾ ಮೇ ಪ್ರೇಷಿತಸ್ತ್ವಯಾ ॥ ೯ ॥

ನ ತೇಽಸ್ತಿ ಸ್ವಪರಭ್ರಾಂತಿರ್ವಿಶ್ವಸ್ಯ ಸುಹೃದಾತ್ಮನಃ ।
ತಥಾಪಿ ಸ್ಮರತಾಂ ಶಶ್ವತ್ ಕ್ಲೇಶಾನ್ ಹಂಸಿ ಹೃದಿ ಸ್ಥಿತಃ ॥ ೧೦ ॥

ಯುಧಿಷ್ಠಿರ ಉವಾಚ

ಕಿಂ ನ ಆಚರಿತಂ ಶ್ರೇಯೋ
ನ ವೇದಾಹಮಧೀಶ್ವರ ।
ಯೋಗೇಶ್ವರಾಣಾಂ ದುರ್ದರ್ಶೋ
ಯನ್ನೋ ದೃಷ್ಟಃ ಕುಮೇಧಸಾಮ್ ॥ ೧೧ ॥

ಇತಿ ವೈ ವಾರ್ಷಿಕಾನ್ಮಾಸಾನ್ರಾಜ್ಞಾ ಸೋಽಭ್ಯರ್ಥಿತಃ ಸುಖಮ್ ।
ಜನಯನ್ ನಯನಾನಂದಮಿಂದ್ರಪ್ರಸ್ಥೌಕಸಾಂ ವಿಭುಃ ॥ ೧೨ ॥

ಭಗವಾನ್ ಶ್ರೀಕೃಷ್ಣನು ಶ್ರೇಷ್ಠಸಿಂಹಾಸನದಲ್ಲಿ ವಿರಾಜಮಾನನಾದಾಗ ಆಗ ತಾನೇ ಪಾಂಡವರನ್ನು ವಿವಾಹವಾಗಿದ್ದ ಪರಮ ಸುಂದರಿಯಾದ ಕೃಷ್ಣೆಯು ನಾಚಿಕೆಯಿಂದಾಗಿ ನಿಧಾನವಾಗಿ ನಡೆದುಕೊಂಡುಬಂದು ಶ್ರೀಕೃಷ್ಣನಿಗೆ ನಮಸ್ಕರಿಸಿದಳು. ॥ ೫ ॥ ಪಾಂಡವರು ಶ್ರೀಕೃಷ್ಣನಂತೆಯೇ ವೀರ ಸಾತ್ಯಕಿಗೂ ಸ್ವಾಗತ-ಸತ್ಕಾರಗಳನ್ನು ಮಾಡಿ ಅಭಿನಂದಿಸಿ ಒಂದು ಆಸನದಲ್ಲಿ ಕುಳ್ಳಿರಿಸಿದರು. ಶ್ರೀಕೃಷ್ಣನೊಂದಿಗೆ ಬಂದಿರುವ ಇತರ ಯದುವಂಶೀಯರನ್ನೂ ಯಥಾಯೋಗ್ಯವಾಗಿ ಸತ್ಕರಿಸಿದರು. ಅವರೆಲ್ಲರೂ ಕೃಷ್ಣನ ಸುತ್ತಲೂ ಕುಳಿತುಕೊಂಡರು. ॥ ೬ ॥ ಬಳಿಕ ಶ್ರೀಕೃಷ್ಣನು ತನ್ನ ಸೋದರತ್ತೆಯಾದ ಕುಂತೀದೇವಿಯ ಬಳಿಗೆ ಹೋಗಿ ಅವಳ ಚರಣಗಳಲ್ಲಿ ನಮಸ್ಕರಿಸಿದನು. ಕುಂತಿಯೂ ಅತ್ಯಂತ ಸ್ನೇಹದಿಂದ ಕೃಷ್ಣನನ್ನು ಅಪ್ಪಿಕೊಂಡಳು. ಆಕೆಯ ಕಣ್ಣುಗಳಲ್ಲಿ ಆನಂದಾಶ್ರುಗಳು ಸುರಿಯುತ್ತಿರುವಂತೆ ಶ್ರೀಕೃಷ್ಣನಲ್ಲಿ ತನ್ನ ತವರಿನ ಬಂಧುಗಳ ಕ್ಷೇಮಸಮಾಚಾರವನ್ನು ಕೇಳಿದಳು. ಭಗವಂತನು ಯಥೋಚಿತವಾಗಿ ಉತ್ತರಿಸಿ ಕುಂತಿಯಲ್ಲಿ ಆಕೆಯ ಮತ್ತು ಸೊಸೆಯಾದ ದ್ರೌಪದಿಯ ಕುಶಲವನ್ನು ವಿಚಾರಿಸಿದನು. ॥ ೭ ॥ ಆ ಸಮಯದಲ್ಲಿ ಪ್ರೇಮವಿಹ್ವಲಳಾದ ಕುಂತಿಯ ಕಂಠವು ಉಮ್ಮಳಿಸಿ, ಕಣ್ಣುಗಳಿಂದ ಅಶ್ರುಗಳು ಹರಿಯುತ್ತಿದ್ದವು. ಭಗವಂತನು ಆಕೆಯಲ್ಲಿ ವಿಚಾರಿಸಿದಾಗ ಅವಳಿಗೆ ತನ್ನ ಹಿಂದಿನ ಅನಂತಕ್ಲೇಶಗಳು ನೆನಪಾದುವು. ಅವಳು ಸಾವರಿಸಿಕೊಂಡು-ದರ್ಶನಮಾತ್ರದಿಂದಲೇ ಸಮಸ್ತ ಕಷ್ಟಗಳನ್ನು ನಿವಾರಿಸುವ ಶ್ರೀಕೃಷ್ಣ ಪರಮಾತ್ಮನಲ್ಲಿ ಹೇಳತೊಡಗಿದಳು. ॥ ೮ ॥ ಶ್ರೀಕೃಷ್ಣಾ! ನೀನು ನಮ್ಮನ್ನು ತನ್ನವರೆಂದು, ತನ್ನ ಕುಟುಂಬದವರೆಂದು ಭಾವಿಸಿ ನಮ್ಮ ಯೋಗಕ್ಷೇಮವನ್ನು ವಿಚಾರಿಸಲು ನನ್ನ ಸೋದರನಾದ ಅಕ್ರೂರನನ್ನು ಕಳಿಸಿದಾಗಲೇ ನಮ್ಮ ಕಲ್ಯಾಣವಾಗಿ ಹೋಯಿತು. ನಮ್ಮಂತಹ ಅನಾಥರನ್ನು ನೀನು ಸನಾಥರನ್ನಾಗಿಸಿದೆ. ॥ ೯ ॥ ಸಮಸ್ತ ಜಗತ್ತಿನ ಪರಮಸುಹೃದನೂ, ಹಿತೈಷಿಯೂ, ಆತ್ಮಸ್ವರೂಪನೂ ಆಗಿರುವೆ ಎಂಬುದನ್ನು ನಾನು ಬಲ್ಲೆನು. ಇವನು ನನ್ನವನು, ಇವನು ಪರನು ಎಂಬ ಭ್ರಾಂತಿಯೂ ನಿನ್ನಲ್ಲಿಲ್ಲ. ಹೀಗಿದ್ದರೂ ಕೃಷ್ಣಾ! ಸದಾಕಾಲ ನಿನ್ನನ್ನು ಸ್ಮರಿಸುವವನ ಹೃದಯದಲ್ಲಿ ಬಂದು ನೀನು ನೆಲೆಸಿರುವೆ ಮತ್ತು ಅವನ ಕ್ಲೇಶ ಪರಂಪರೆಯನ್ನು ಎಂದೆಂದಿಗೂ ಇಲ್ಲವಾಗಿಸುವೆ. ॥ ೧೦ ॥

ಯುಧಿಷ್ಠಿರನು ಹೇಳಿದನು - ಸರ್ವೇಶ್ವರನಾದ ಶ್ರೀಕೃಷ್ಣ! ನಾವು ಪೂರ್ವಜನ್ಮದಲ್ಲಾಗಲೀ, ಈ ಜನ್ಮದಲ್ಲಾಗಲೀ ಯಾವ ಶ್ರೇಯಸ್ಕರ ಸಾಧನೆಯನ್ನು ಮಾಡಿರುವೆವೋ ನಮಗೆ ತಿಳಿಯದು. ನಿನ್ನ ದರ್ಶನವು ಮಹಾ-ಮಹಾ ಯೋಗೇಶ್ವರರಿಗೂ ದುರ್ಲಭವೆನಿಸಿರುವಾಗ ದುರ್ಬುದ್ಧಿಯವರಾದ ನಮಗೆ ಮನೆಯಲ್ಲಿ ಕುಳಿತಿರುವಾಗಲೇ ನಿನ್ನ ದರ್ಶನವಾಗುತ್ತಿದೆ. ॥ ೧೧ ॥ ಯುಧಿಷ್ಠಿರನು ಭಗವಂತನನ್ನು ಹೀಗೆ ಸ್ತುತಿಸುತ್ತಾ ಹಲವಾರು ದಿವಸಗಳಾದರೂ ಇಂದ್ರಪ್ರಸ್ಥದಲ್ಲೇ ಇರುವಂತೆ ಪ್ರಾರ್ಥಿಸಿಕೊಂಡನು. ಶ್ರೀಕೃಷ್ಣನು ಇದಕ್ಕೆ ಸಮ್ಮತಿಸಿ ಇಂದ್ರಪ್ರಸ್ಥದಲ್ಲಿನ ನರ-ನಾರಿಯರ ಕಣ್ಣುಗಳಿಗೆ ಆನಂದೋತ್ಸವವನ್ನು ಕಲ್ಪಿಸುತ್ತಾ ಮಳೆಗಾಲದ ನಾಲ್ಕು ತಿಂಗಳುಗಳನ್ನು ಅಲ್ಲಿಯೇ ಕಳೆದನು. ॥ ೧೨ ॥

ಏಕದಾ ರಥಮಾರುಹ್ಯ ವಿಜಯೋ ವಾನರಧ್ವಜಮ್ ।
ಗಾಂಡೀವಂ ಧನುರಾದಾಯ ತೂಣೌ ಚಾಕ್ಷಯಸಾಯಕೌ ॥ ೧೩ ॥

ಸಾಕಂ ಕೃಷ್ಣೇನ ಸನ್ನದ್ಧೋ ವಿಹರ್ತುಂ ವಿಪಿನಂ ಮಹತ್ ।
ಬಹುವ್ಯಾಲಮೃಗಾಕೀರ್ಣಂ ಪ್ರಾವಿಶತ್ ಪರವೀರಹಾ ॥ ೧೪ ॥

ತತ್ರಾವಿಧ್ಯಚ್ಛರೈರ್ವ್ಯಾಘ್ರಾನ್ಸೂಕರಾನ್ ಮಹಿಷಾನ್ರುರೂನ್ ।
ಶರಭಾನ್ಗವಯಾನ್ಖಡ್ಗಾನ್ ಹರಿಣಾಂಛಶಶಲ್ಲಕಾನ್ ॥ ೧೫ ॥

ತಾನ್ನಿನ್ಯುಃ ಕಿಂಕರಾ ರಾಜ್ಞೇ ಮೇಧ್ಯಾನ್ಪರ್ವಣ್ಯುಪಾಗತೇ ।
ತೃಟ್ಪರೀತಃ ಪರಿಶ್ರಾಂತೋ ಬೀಭತ್ಸುರ್ಯಮುನಾಮಗಾತ್ ॥ ೧೬ ॥

ತತ್ರೋಪಸ್ಪೃಶ್ಯ ವಿಶದಂ ಪೀತ್ವಾ ವಾರಿ ಮಹಾರಥೌ ।
ಕೃಷ್ಣೌ ದದೃಶತುಃ ಕನ್ಯಾಂ ಚರಂತೀಂ ಚಾರುದರ್ಶನಾಮ್ ॥ ೧೭ ॥

ತಾಮಾಸಾದ್ಯ ವರಾರೋಹಾಂ ಸುದ್ವಿಜಾಂ ರುಚಿರಾನನಾಮ್ ।
ಪಪ್ರಚ್ಛ ಪ್ರೇಷಿತಃ ಸಖ್ಯಾ ಫಾಲ್ಗುನಃ ಪ್ರಮದೋತ್ತಮಾಮ್ ॥ ೧೮ ॥

ಕಾ ತ್ವಂ ಕಸ್ಯಾಸಿ ಸುಶ್ರೋಣಿ ಕುತೋಽಸಿ ಕಿಂ ಚಿಕೀರ್ಷಸಿ ।
ಮನ್ಯೇ ತ್ವಾಂ ಪತಿಮಿಚ್ಛಂತೀಂ ಸರ್ವಂ ಕಥಯ ಶೋಭನೇ ॥ ೧೯ ॥

ಕಾಲಿಂದ್ಯುವಾಚ

ಅಹಂ ದೇವಸ್ಯ ಸವಿತುರ್ದುಹಿತಾ ಪತಿಮಿಚ್ಛತೀ ।
ವಿಷ್ಣುಂ ವರೇಣ್ಯಂ ವರದಂ ತಪಃ ಪರಮಮಾಸ್ಥಿತಾ ॥ ೨೦ ॥

ನಾನ್ಯಂ ಪತಿಂ ವೃಣೇ ವೀರ ತಮೃತೇ ಶ್ರೀನಿಕೇತನಮ್ ।
ತುಷ್ಯತಾಂ ಮೇ ಸ ಭಗವಾನ್ ಮುಕುಂದೋಽನಾಥಸಂಶ್ರಯಃ ॥ ೨೧ ॥

ಕಾಲಿಂದೀತಿ ಸಮಾಖ್ಯಾತಾ ವಸಾಮಿ ಯಮುನಾಜಲೇ ।
ನಿರ್ಮಿತೇ ಭವನೇ ಪಿತ್ರಾ ಯಾವದಚ್ಯುತದರ್ಶನಮ್ ॥ ೨೨ ॥

ತಥಾವದದ್ಗುಡಾಕೇಶೋ ವಾಸುದೇವಾಯ ಸೋಽಪಿ ತಾಮ್ ।
ರಥಮಾರೋಪ್ಯ ತದ್ವಿದ್ವಾನ್ ಧರ್ಮರಾಜಮುಪಾಗಮತ್ ॥ ೨೩ ॥

ಯದೈವ ಕೃಷ್ಣ ಸಂದಿಷ್ಟ ಪಾರ್ಥಾನಾಂ ಪರಮಾದ್ಭುತಮ್ ।
ಕಾರಯಾಮಾಸ ನಗರಂ ವಿಚಿತ್ರಂ ವಿಶ್ವಕರ್ಮಣಾ ॥ ೨೪ ॥

ಒಮ್ಮೆ ವೀರನಾದ ಅರ್ಜುನನು ಗಾಂಡೀವಧನುಸ್ಸನ್ನೂ, ಅಕ್ಷಯ ಬತ್ತಳಿಕೆಗಳನ್ನು ತೆಗೆದುಕೊಂಡು ಕವಚವನ್ನು ತೊಟ್ಟು ಶ್ರೀಕೃಷ್ಣನೊಡನೆ ವಾನರಧ್ವಜವುಳ್ಳ ರಥದಲ್ಲಿ ಕುಳಿತು ಬೇಟೆಯಾಡುವ ಸಲುವಾಗಿ ಸರ್ಪಗಳಿಂದಲೂ, ಸಿಂಹಗಳಿಂದಲೂ, ವ್ಯಾಘ್ರಗಳಿಂದಲೂ, ಕೂಡಿದ ಅತ್ಯಂತ ಭಯಂಕರವಾದ ಅರಣ್ಯವನ್ನು ಪ್ರವೇಶಿಸಿದನು. ॥೧೩-೧೪॥ ಆ ಮಹಾರಣ್ಯದಲ್ಲವನು ತನ್ನ ತೀಕ್ಷ್ಣವಾದ ಬಾಣಗಳಿಂದ ಋಷಿಗಳಿಗೆ ತೊಂದರೆ ಕೊಡುತ್ತಿದ್ದ ದುಷ್ಟ ಕಾಡುಮೃಗಗಳನ್ನು ಸಂಹರಿಸಿದನು. ॥ ೧೫ ॥ ಪರ್ವಕಾಲವು ಸನ್ನಿಹಿತವಾಗಿರಲಾಗಿ ಯಜ್ಞಕ್ಕೆ ಯೋಗ್ಯವಾದ ಹಲವಾರು ಸಾಮಗ್ರಿಗಳನ್ನು ಸೇವಕರು ಮಹಾರಾಜ ಯುಧಿಷ್ಠಿರನಿಗಾಗಿ ಒಯ್ದರು. ಅರ್ಜುನ-ಶ್ರೀಕೃಷ್ಣರಿಗೆ ಬಾಯಾರಿಕೆ ಉಂಟಾದ್ದರಿಂದ ಅವರಿಬ್ಬರೂ ಯಮುನಾತೀರಕ್ಕೆ ಹೋದರು. ॥ ೧೬ ॥ ಮಹಾರಥರಾದ ಕೃಷ್ಣಾರ್ಜುನರು ಯಮುನಾನದಿಗೆ ಹೋಗಿ ಕೈ-ಕಾಲುಗಳನ್ನು ತೊಳೆದುಕೊಂಡು ನಿರ್ಮಲವಾದ ನೀರನ್ನು ಕುಡಿದು, ಅಲ್ಲಿಯೇ ತಪಸ್ಸು ಮಾಡುತ್ತಿದ್ದ ಪರಮಸುಂದರಳಾದ ಕನ್ನೆಯೋರ್ವಳನ್ನು ನೋಡಿದರು. ॥ ೧೭ ॥ ಆ ಸುಂದರಿಯ ತೊಡೆ, ಹಲ್ಲು ಮತ್ತು ಮುಖಗಳು ಅತ್ಯಂತ ಸುಂದರವಾಗಿತ್ತು. ಪ್ರಿಯಮಿತ್ರನಾದ ಶ್ರೀಕೃಷ್ಣನಿಂದ ಕಳುಹಲ್ಪಟ್ಟ ಅರ್ಜುನನು ಆಕೆಯ ಬಳಿಗೆ ಹೋಗಿ ವಿಚಾರಿಸಿದನು. ॥ ೧೮ ॥ ಎಲೈ ಸುಂದರಿಯೇ! ನೀನು ಯಾರಾಗಿರುವೆ? ಯಾರ ಪುತ್ರಿಯಾಗಿರುವೆ? ಎಲ್ಲಿಂದ ಬಂದಿರುವೆ? ಏನು ಮಾಡಬೇಕೆಂದಿರುವೆ? ನೀನು ನಿನಗೆ ಯೋಗ್ಯನಾದ ಪತಿಯನ್ನು ಬಯಸುತ್ತಿರುವೆ ಎಂದು ನಾನು ತಿಳಿಯುತ್ತೇನೆ. ಓ ಕಲ್ಯಾಣಿಯೇ! ನೀನು ನಿನ್ನ ಎಲ್ಲ ವೃತ್ತಾಂತವನ್ನು ತಿಳಿಸು. ॥ ೧೯ ॥

ಕಾಲಿಂದಿಯು ಹೇಳಿದಳು – ನಾನು ಭಗವಾನ್ ಸೂರ್ಯನಾರಾಯಣನ ಪುತ್ರಿಯಾಗಿದ್ದೇನೆ. ಸರ್ವಶ್ರೇಷ್ಠ ವರದಾಯಕನಾದ ಭಗವಾನ್ ವಿಷ್ಣುವನ್ನು ಪತಿಯನ್ನಾಗಿ ಪಡೆಯಲು ಬಯಸುತ್ತಿರುವೆನು. ಅದಕ್ಕಾಗಿ ಇಂತಹ ಕಠೋರ ತಪಸ್ಸನ್ನು ಮಾಡುತ್ತಿದ್ದೇನೆ. ॥ ೨೦ ॥ ವೀರವರನಾದ ಅರ್ಜುನ! ಲಕ್ಷ್ಮೀದೇವಿಗೆ ಪರಮಾಶ್ರಯನಾದ ಭಗವಂತನನ್ನು ಬಿಟ್ಟು ಬೇರೆ ಯಾರನ್ನೂ ಪತಿಯಾಗಿ ನಾನು ಸ್ವೀಕರಿಸುವುದಿಲ್ಲ. ಅನಾಥರಿಗೆ ಏಕಮಾತ್ರ ಆಸರೆಯಾದ ಭಗವಾನ್ ಶ್ರೀಕೃಷ್ಣನು ನನ್ನ ಮೇಲೆ ಪ್ರಸನ್ನನಾಗಲಿ. ॥ ೨೧ ॥ ನನ್ನ ಹೆಸರು ಕಾಲಿಂದೀ ಎಂದಾಗಿದೆ. ಯಮುನಾಜಲದಲ್ಲಿ ನನ್ನ ತಂದೆಯಾದ ಸೂರ್ಯನು ನನಗಾಗಿ ಒಂದು ಭವನವನ್ನು ನಿರ್ಮಿಸಿ ಕೊಟ್ಟಿರುವನು. ಅದರಲ್ಲೇ ನಾನಿರುವುದು. ಭಗವಂತನ ದರ್ಶನವಾಗುವವರೆಗೆ ನಾನು ಇಲ್ಲೇ ಇರುವೆನು. ॥ ೨೨ ॥ ಅರ್ಜುನನು ಶ್ರೀಕೃಷ್ಣನ ಬಳಿಗೆ ಹೋಗಿ ಎಲ್ಲ ವಿಷಯಗಳನ್ನು ಹೇಳಿದನು. ಶ್ರೀಕೃಷ್ಣನಾದರೋ ಈ ವಿಷಯಗಳೆಲ್ಲವನ್ನೂ ಮೊದಲೇ ತಿಳಿದಿದ್ದನು. ಕೃಷ್ಣಾರ್ಜುನರಿಬ್ಬರೂ ಕಾಳಿಂದಿಯನ್ನು ರಥದಲ್ಲಿ ಕುಳ್ಳಿರಿಸಿಕೊಂಡು ಧರ್ಮರಾಜನ ಬಳಿಗೆ ಹೋದರು. ॥೨೩॥ ಪಾಂಡವರ ಪ್ರಾರ್ಥನೆಯಂತೆ ಶ್ರೀಕೃಷ್ಣನು ಪಾಂಡವರ ವಾಸಕ್ಕಾಗಿ ಪರಮಾದ್ಭುತವಾದ ಮತ್ತು ವಿಚಿತ್ರವಾದ ನಗರವೊಂದನ್ನು ವಿಶ್ವಕರ್ಮನಿಂದ ನಿರ್ಮಾಣ ಮಾಡಿಸಿಕೊಟ್ಟನು. ॥ ೨೪ ॥

ಭಗವಾಂಸ್ತತ್ರ ನಿವಸನ್ ಸ್ವಾನಾಂ ಪ್ರಿಯಚಿಕೀರ್ಷಯಾ ।
ಅಗ್ನಯೇ ಖಾಂಡವಂ ದಾತುಮರ್ಜುನಸ್ಯಾಸ ಸಾರಥಿಃ ॥ ೨೫ ॥

ಸೋಽಗ್ನಿಸ್ತುಷ್ಟೋ ಧನುರದಾದ್ಧಯಾನ್ ಶ್ವೇತಾನ್ರಥಂ ನೃಪ ।
ಅರ್ಜುನಾಯಾಕ್ಷಯೌ ತೂಣೌ ವರ್ಮ ಚಾಭೇದ್ಯಮಸ್ತ್ರಿಭಿಃ ॥ ೨೬ ॥

ಮಯಶ್ಚ ಮೋಚಿತೋ ವಹ್ನೇಃ ಸಭಾಂ ಸಖ್ಯ ಉಪಾಹರತ್ ।
ಯಸ್ಮಿನ್ ದುರ್ಯೋಧನಸ್ಯಾಸೀಜ್ಜಲಸ್ಥಲದೃಶಿಭ್ರಮಃ ॥ ೨೭ ॥

ಸ ತೇನ ಸಮನುಜ್ಞಾತಃ ಸುಹೃದ್ಭಿಶ್ಚಾನುಮೋದಿತಃ ।
ಆಯಯೌ ದ್ವಾರಕಾಂ ಭೂಯಃ ಸಾತ್ಯಕಿಪ್ರಮುಖೈರ್ವೃತಃ ॥ ೨೮ ॥

ಅಥೋಪಯೇಮೇ ಕಾಲಿಂದೀಂ ಸುಪುಣ್ಯರ್ತ್ವೃಕ್ಷ ಊರ್ಜಿತೇ ।
ವಿತನ್ವನ್ ಪರಮಾನಂದಂ ಸ್ವಾನಾಂ ಪರಮಮಂಗಲಮ್ ॥ ೨೯ ॥

ವಿಂದಾನುವಿಂದಾವಾವಂತ್ಯೌ ದುರ್ಯೋಧನವಶಾನುಗೌ ।
ಸ್ವಯಂವರೇ ಸ್ವಭಗಿನೀಂ ಕೃಷ್ಣೇ ಸಕ್ತಾಂ ನ್ಯಷೇಧತಾಮ್ ॥ ೩೦ ॥

ರಾಜಾಧಿದೇವ್ಯಾಸ್ತನಯಾಂ ಮಿತ್ರವಿಂದಾಂ ಪಿತೃಷ್ವಸುಃ ।
ಪ್ರಸಹ್ಯ ಹೃತವಾನ್ ಕೃಷ್ಣೋ ರಾಜನ್ ರಾಜ್ಞಾಂ ಪ್ರಪಶ್ಯತಾಮ್ ॥ ೩೧ ॥

ನಗ್ನಜಿನ್ನಾಮ ಕೌಸಲ್ಯ ಆಸೀದ್ರಾಜಾತಿಧಾರ್ಮಿಕಃ ।
ತಸ್ಯ ಸತ್ಯಾಭವತ್ ಕನ್ಯಾ ದೇವೀ ನಾಗ್ನಜಿತೀ ನೃಪ ॥ ೩೨ ॥

ನ ತಾಂ ಶೇಕುರ್ನೃಪಾ ವೋಢು-
ಮಜಿತ್ವಾ ಸಪ್ತ ಗೋವೃಷಾನ್ ।
ತೀಕ್ಷ್ಣಶೃಂಗಾನ್ ಸುದುರ್ಧರ್ಷಾನ್
ವೀರಗಂಧಾಸಹಾನ್ಖಲಾನ್ ॥ ೩೩ ॥

ಪಾಂಡವರಿಗೆ ಅನುಕೂಲಗಳನ್ನು ಕಲ್ಪಿಸಿಕೊಡಬೇಕೆಂಬ ಆಶೆಯಿಂದಲೇ ಶ್ರೀಕೃಷ್ಣನು ಕೆಲವುಕಾಲ ಅಲ್ಲೇ ವಾಸವಾಗಿದ್ದನು. ಈ ಮಧ್ಯದಲ್ಲೇ ಖಾಂಡವವನವನ್ನು ಅಗ್ನಿಗೆ ಅರ್ಪಿಸುವ ಸಲುವಾಗಿ ಶ್ರೀಕೃಷ್ಣನು ಅರ್ಜುನನಿಗೆ ಸಾರಥಿಯೂ ಆದನು. ॥ ೨೫ ॥ ಖಾಂಡವವನದ ಭೋಜನದಿಂದ ಸಂತೃಪ್ತನಾದ ಅಗ್ನಿದೇವನು ಅರ್ಜುನನಿಗೆ ಗಾಂಡೀವವೆಂಬ ಧನುಸ್ಸನ್ನೂ, ನಾಲ್ಕು ಬಿಳಿಯ ಕುದುರೆಗಳನ್ನು ಒಂದು ರಥವನ್ನು ಎರಡು ಅಕ್ಷಯವಾದ ಬತ್ತಳಿಕೆಗಳನ್ನು ಶಸ್ತ್ರಗಳಿಂದ ಅಭೇದ್ಯವಾದ ಕವಚವನ್ನು ಅನುಗ್ರಹಿಸಿ ಕೊಟ್ಟನು. ॥ ೨೬ ॥ ಖಾಂಡವ ದಾಹದ ಸಮಯದಲ್ಲಿ ಅರ್ಜುನನು ಮಯನೆಂಬ ದಾನವನನ್ನು ಅಗ್ನಿಯಿಂದ ಪಾರಾಗಿಸಿದ್ದನು. ಆದ್ದರಿಂದ ಅವನು ಅರ್ಜುನನೊಂದಿಗೆ ಮೈತ್ರಿಯನ್ನು ಬೆಳೆಸಿ ಪಾಂಡವರ ಸಲುವಾಗಿ ಒಂದು ಅದ್ಭುತವಾದ ಸಭಾಭವನವನ್ನು ನಿರ್ಮಿಸಿಕೊಟ್ಟನು. ಅದೇ ಸಭಾಭವನದಲ್ಲಿ ದುರ್ಯೋಧನನು ನೆಲ-ಜಲದ ಭ್ರಮೆಯಿಂದಾಗಿ ಅವಮಾನಿತ ನಾಗಿದ್ದನು. ॥ ೨೭ ॥

ಕೆಲವು ದಿವಸಗಳ ಬಳಿಕ ಭಗವಾನ್ ಶ್ರೀಕೃಷ್ಣನು ಅರ್ಜುನನಿಂದ ಹಾಗೂ ಇತರ ಸಂಬಂಧಿಕರಿಂದ ಅನುಮತಿಯನ್ನು ಪಡೆದುಕೊಂಡು, ಸಾತ್ಯಕಿಯೇ ಮೊದಲಾದವರೊಂದಿಗೆ ದ್ವಾರಕೆಗೆ ಹಿಂದಿರುಗಿದನು. ॥ ೨೮ ॥ ಅಲ್ಲಿಗೆ ಬಂದು ಶ್ರೀಕೃಷ್ಣನು ಪ್ರಶಸ್ತವಾದ ಋತು-ನಕ್ಷತ್ರ-ಮುಹೂರ್ತದಲ್ಲಿ ಸ್ವಜನರಿಗೆ ಆನಂದವನ್ನೂ, ಶುಭವನ್ನೂ, ಮಂಗಳವನ್ನೂ ಉಂಟುಮಾಡುತ್ತಾ ಕಾಳಿಂದಿಯನ್ನು ವಿಧಿಪೂರ್ವಕವಾಗಿ ವಿವಾಹವಾದನು. ॥ ೨೯ ॥ ಅವಂತಿ ದೇಶಕ್ಕೆ (ಉಜ್ಜೈನಿ) ರಾಜನಾಗಿದ್ದ ವಿಂದಾನುವಿಂದರು ದುರ್ಯೋಧನನಿಗೆ ಸಾಮಂತರಾಗಿದ್ದರು. ಅವರಿಗೆ ಮಿತ್ರವಿಂದಾ ಎಂಬ ತಂಗಿಯಿದ್ದಳು. ಆಕೆಯು ಸ್ವಯಂವರದಲ್ಲಿ ಶ್ರೀಕೃಷ್ಣನನ್ನೇ ತನ್ನ ಪತಿಯಾಗಿ ಆರಿಸಿ ಕೊಳ್ಳಲು ಬಯಸಿದ್ದಳು. ಆದರೆ ವಿಂದ-ಅನುವಿಂದರು ತಂಗಿಯನ್ನು ತಡೆದರು. ॥ ೩೦ ॥ ಪರೀಕ್ಷಿತನೇ! ಮಿತ್ರವಿಂದೆಯು ಶ್ರೀಕೃಷ್ಣನ ಸೋದರತ್ತೆಯಾದ ರಾಜಾಧಿದೇವಿಯ ಮಗಳಾಗಿದ್ದಳು. ಶ್ರೀಕೃಷ್ಣನು ರಾಜರಿಂದ ತುಂಬಿದ ಸಭೆಯಲ್ಲಿ ಸಮಸ್ತರಾಜರು ನೋಡುತ್ತಿರುವಂತೆ ಆಕೆಯನ್ನು ಬಲವಂತವಾಗಿ ಅಪಹರಿಸಿ ಕೊಂಡು ಹೋದನು. ॥ ೩೧ ॥

ಪರೀಕ್ಷಿತನೇ! ಕೋಸಲದೇಶದಲ್ಲಿ ನಗ್ನಜಿತನೆಂಬ ಧಾರ್ಮಿಕನಾದ ರಾಜನಿದ್ದನು. ಅವನಿಗೆ ಕಡುಚೆಲುವೆಯಾದ ಸತ್ಯಾ ಎಂಬ ಹೆಸರಿನ ಕನ್ಯೆಯಿದ್ದಳು. ನಗ್ನಜಿತನ ಮಗಳಾದ್ದರಿಂದ ಅವಳಿಗೆ ನಾಗ್ನಜಿತಿ ಎಂಬ ಇನ್ನೊಂದು ಹೆಸರಿತ್ತು. ಪರೀಕ್ಷಿತನೇ! ರಾಜನ ವೀರ್ಯಶುಲ್ಕ ಪ್ರತಿಜ್ಞೆಗೆ ಅನುಸಾರವಾಗಿ ಅವನಲ್ಲಿದ್ದ ಬಲಿಷ್ಠವಾದ ಏಳುಗೂಳಿಗಳನ್ನು ಯಾವ ರಾಜಕುಮಾರನೂ ಜಯಿಸಲಿಲ್ಲವಾದ ಕಾರಣ ರಾಜಕುಮಾರರು ಆಕೆಯೊಂದಿಗೆ ಮದುವೆಯಾಗದೇ ಹೋದರು. ಏಕೆಂದರೆ, ಆ ಗೂಳಿಗಳ ಕೊಂಬುಗಳು ಅತ್ಯಂತ ಚೂಪಾಗಿದ್ದುವು. ಯಾರಿಂದಲೂ ಎದುರಿಸಲು ಅವು ಅಸಾಧ್ಯವಾಗಿದ್ದುವು. ವೀರಪುರುಷರ ವಾಸನೆಯನ್ನು ಅವು ಸಹಿಸುತ್ತಿರಲಿಲ್ಲ. ॥ ೩೨-೩೩ ॥

ತಾಂ ಶ್ರುತ್ವಾ ವೃಷಜಿಲ್ಲಭ್ಯಾಂ ಭಗವಾನ್ ಸಾತ್ವತಾಂ ಪತಿಃ ।
ಜಗಾಮ ಕೌಸಲ್ಯಪುರಂ ಸೈನ್ಯೇನ ಮಹತಾ ವೃತಃ ॥ ೩೪ ॥

ಸ ಕೋಸಲಪತಿಃ ಪ್ರೀತಃ ಪ್ರತ್ಯುತ್ಥಾನಾಸನಾದಿಭಿಃ ।
ಅರ್ಹಣೇನಾಪಿ ಗುರುಣಾ ಪೂಜಯನ್ ಪ್ರತಿನಂದಿತಃ ॥ ೩೫ ॥

ವರಂ ವಿಲೋಕ್ಯಾಭಿಮತಂ ಸಮಾಗತಂ
ನರೇಂದ್ರಕನ್ಯಾ ಚಕಮೇ ರಮಾಪತಿಮ್ ।
ಭೂಯಾದಯಂ ಮೇ ಪತಿರಾಶಿಷೋಽಮಲಾಃ
ಕರೋತು ಸತ್ಯಾ ಯದಿ ಮೇ ಧೃತೋ ವ್ರತಃ ॥ ೩೬ ॥

ಯತ್ಪಾದಪಂಕಜರಜಃ ಶಿರಸಾ ಬಿಭರ್ತಿ
ಶ್ರೀರಬ್ಜಜಃ ಸಗಿರಿಶಃ ಸಹಲೋಕಪಾಲೈಃ ।
ಲೀಲಾತನೂಃ ಸ್ವಕೃತಸೇತುಪರೀಪ್ಸಯೇಶಃ
ಕಾಲೇ ದಧತ್ ಸ ಭಗವಾನ್ ಮಮ ಕೇನ ತುಷ್ಯೇತ್ ॥ ೩೭ ॥

ಅರ್ಚಿತಂ ಪುನರಿತ್ಯಾಹ ನಾರಾಯಣ ಜಗತ್ಪತೇ ।
ಆತ್ಮಾನಂದೇನ ಪೂರ್ಣಸ್ಯ ಕರವಾಣಿ ಕಿಮಲ್ಪಕಃ ॥ ೩೮ ॥

ಶ್ರೀಶುಕ ಉವಾಚ

ತಮಾಹ ಭಗವಾನ್ ಹೃಷ್ಟಃ ಕೃತಾಸನಪರಿಗ್ರಹಃ ।
ಮೇಘಗಂಭೀರಯಾ ವಾಚಾ ಸಸ್ಮಿತಂ ಕುರುನಂದನ ॥ ೩೯ ॥

ಶ್ರೀಭಗವಾನುವಾಚ

ನರೇಂದ್ರಯಾಂಚಾ ಕವಿಭಿರ್ವಿಗರ್ಹಿತಾ
ರಾಜನ್ಯಬಂಧೋರ್ನಿಜಧರ್ಮವರ್ತಿನಃ ।
ತಥಾಪಿ ಯಾಚೇ ತವ ಸೌಹೃದೇಚ್ಛಯಾ
ಕನ್ಯಾಂ ತ್ವದೀಯಾಂ ನ ಹಿ ಶುಲ್ಕದಾ ವಯಮ್ ॥ ೪೦ ॥

ರಾಜೋವಾಚ

ಕೋಽನ್ಯಸ್ತೇಽಭ್ಯಧಿಕೋ ನಾಥ ಕನ್ಯಾವರ ಇಹೇಪ್ಸಿತಃ ।
ಗುಣೈಕಧಾಮ್ನೋ ಯಸ್ಯಾಂಗೇ ಶ್ರೀರ್ವಸತ್ಯನಪಾಯಿನೀ ॥ ೪೧ ॥

'ಅಂತಹ ಕೊಬ್ಬಿದ ಗೂಳಿಗಳನ್ನು ಗೆದ್ದವನಿಗೇ ರಾಜಕನ್ಯೆ ದೊರೆಯುವಳು' ಎಂಬುದನ್ನು ಕೇಳಿ ಯದುವಂಶಶಿರೋಮಣಿಯಾದ ಶ್ರೀಕೃಷ್ಣನು ಅಪಾರವಾದ ಸೈನ್ಯದೊಡನೆ ಕೋಸಲಪುರಕ್ಕೆ ಪ್ರಯಾಣಮಾಡಿದನು. ॥ ೩೪ ॥ ಕೋಸಲರಾಜನಾದ ನಗ್ನಜಿತನು ಶ್ರೀಕೃಷ್ಣನನ್ನು ನೋಡಿ ಸುಪ್ರೀತನಾಗಿ ಅವನನ್ನು ಆದರದಿಂದ ಸ್ವಾಗತಿಸಿ ಸತ್ಕರಿಸಿದನು. ಭಗವಾನ್ ಶ್ರೀಕೃಷ್ಣನೂ ಕೂಡ ರಾಜನನ್ನು ಯಥಾಯೋಗ್ಯವಾಗಿ ಅಭಿನಂದಿಸಿದನು. ॥ ೩೫ ॥ ಬಹಳ ದಿವಸಗಳಿಂದಲೂ ತಾನು ಬಯಸುತ್ತಿದ್ದ ರಮಾರಮಣನಾದ ಶ್ರೀಕೃಷ್ಣನೇ ಆಗಮಿಸಿರುವುದನ್ನು ನೋಡಿ ಆನಂದತುಂದಿಲಳಾದ ಸತ್ಯೆಯು ಅವನನ್ನೇ ತನ್ನ ಪತಿಯಾಗಬೇಕೆಂದು ಅಪೇಕ್ಷಿಸಿದಳು. 'ನಾನು ವ್ರತನಿಯಮಾದಿಗಳನ್ನು ಆಚರಿಸುತ್ತಾ ಇವನನ್ನೇ ಸದಾಕಾಲ ಚಿಂತಿಸುತ್ತಿದ್ದುದು ಸತ್ಯವಾದರೆ ಇವನೇ ನನಗೆ ಪತಿಯಾಗಲಿ ಮತ್ತು ನನ್ನ ಶುದ್ಧವಾದ ಲಾಲಸೆಗಳು ಪೂರ್ಣಗೊಳ್ಳಲಿ' ಎಂದು ಹರಸಿಕೊಂಡಳು. ॥ ೩೬ ॥ ನಾಗ್ನಜಿತೀ ಸತ್ಯೆಯು ಮನಸ್ಸಿನಲ್ಲೇ ಯೋಚಿಸತೊಡಗಿದಳು – ಯಾರ ಪಾದಧೂಳಿಯನ್ನು ಲಕ್ಷ್ಮೀದೇವಿ, ಬ್ರಹ್ಮ-ರುದ್ರರು, ಸಮಸ್ತ ಲೋಕಪಾಲರು ಮತ್ತು ದೇವಾಧಿದೇವತೆಗಳು ತಮ್ಮ ತಲೆಯಲ್ಲಿ ಭಕ್ತಿಯಿಂದ ಧರಿಸುವರೋ, ಯಾವನು ತಾನೇ ಕಲ್ಪಿಸಿದ ಲೋಕಮರ್ಯಾದೆಯನ್ನು ಸಂಪನ್ನಗೊಳಿಸುವ ಸಲುವಾಗಿ ಆಗಾಗ ಅನೇಕ ಲೀಲಾವತಾರಗಳನ್ನು ತಾಳುವನೋ, ಅಂತಹ ಪ್ರಭುವು ನನ್ನ ಯಾವ ವ್ರತ ನಿಯಮಗಳಿಂದ ತಾನೇ ಪ್ರಸನ್ನನಾದಾನು ? ಕೇವಲ ಅವನ ಕೃಪೆಯಿಂದಲೇ ನನ್ನನ್ನು ವರಿಸಬೇಕಾಗಿದೆ. ॥ ೩೭ ॥ ಪರೀಕ್ಷಿತನೇ! ನಗ್ನಜಿತರಾಜನು ಭಗವಾನ್ ಶ್ರೀಕೃಷ್ಣನನ್ನು ವಿಧಿಪೂರ್ವಕವಾಗಿ ಪೂಜಿಸಿ ಹೀಗೆ ಪ್ರಾರ್ಥಿಸಿದನು – 'ನಾರಾಯಣ! ಜಗತ್ಪತಿಯೇ! ನೀನು ಆತ್ಮಾನಂದದಿಂದ ಪರಿಪೂರ್ಣನಾಗಿರುವೆ. ನಾನಾದರೋ ಅಲ್ಪಮನುಷ್ಯನು. ನಾನು ನಿನ್ನ ಯಾವ ಸೇವೆ ಮಾಡಲಿ ?' ॥ ೩೮ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ! ನಗ್ನಜಿತ ಮಹಾರಾಜನು ಇತ್ತ ಆಸನ, ಪೂಜಾದಿಗಳನ್ನು ಸ್ವೀಕರಿಸಿ ಭಗವಾನ್ ಶ್ರೀಕೃಷ್ಣನು ಅತ್ಯಂತ ಸಂತುಷ್ಟನಾದನು. ಅವನು ಮುಗುಳ್ನಗುತ್ತಾ ಮೇಘಗಂಭೀರವಾಣಿಯಿಂದ ಇಂತೆಂದನು. ॥ ೩೯ ॥

ಭಗವಾನ್ ಶ್ರೀಕೃಷ್ಣನು ಹೇಳಿದನು – ರಾಜನೇ! ತನ್ನ ಧರ್ಮದಲ್ಲಿ ನೆಲೆಯಾಗಿ ನಿಂತ ಕ್ಷತ್ರಿಯನು ಏನನ್ನೂ ಬೇಡುವುದು ಉಚಿತವಲ್ಲ. ಧರ್ಮಜ್ಞರಾದ ವಿದ್ವಾಂಸರು ಅವನ ಈ ಕರ್ಮವನ್ನು ನಿಂದಿಸಿರುವರು. ಹೀಗಿದ್ದರೂ ನಾನು ನಿನ್ನಲ್ಲಿ ಪ್ರೇಮ ಸೌಹಾರ್ದದ ಸಂಬಂಧವನ್ನು ಬೆಳೆಸುವ ಇಚ್ಛೆಯಿಂದ ನಿನ್ನ ಕನ್ಯೆಯನ್ನು ಬಯಸುತ್ತಿದ್ದೇನೆ. ಆದರೆ ನಾವು ಕನ್ಯಾಶುಲ್ಕವನ್ನು ಕೊಡತಕ್ಕವರಲ್ಲ. ॥ ೪೦ ॥

ನಗ್ನಜಿತರಾಜನು ಹೇಳಿದನು – "ಪ್ರಭುವೇ! ನೀನು ಸಮಸ್ತ ಗುಣಗಳಿಗೆ ಪರಮಾಶ್ರಯನಾಗಿರುವೆ. ಸಾಕ್ಷಾತ್ ಮಹಾಲಕ್ಷ್ಮಿಯೇ ನಿನ್ನ ವಕ್ಷಃಸ್ಥಳದಲ್ಲಿ ವಾಸಮಾಡುತ್ತಾಳೆ. ನನ್ನ ಮಗಳಿಗೆ ನಿನಗಿಂತಲೂ ಶ್ರೇಷ್ಠನಾದ ವರನು ಬೇರೆ ಯಾರು ತಾನೇ ಇರಬಲ್ಲನು ? ॥ ೪೧ ॥

ಕಿಂ ತ್ವಸ್ಮಾಭಿಃ ಕೃತಃ ಪೂರ್ವಂ ಸಮಯಃ ಸಾತ್ವತರ್ಷಭ।
ಪುಂಸಾಂ ವೀರ್ಯಪರೀಕ್ಷಾರ್ಥಂ ಕನ್ಯಾವರಪರೀಪ್ಸಯಾ
॥ ೪೨ ॥

ಸಪ್ತೈತೇ ಗೋವೃಷಾ ವೀರ ದುರ್ದಾಂತಾ ದುರವಗ್ರಹಾಃ।
ಏತೈರ್ಭಗ್ನಾಃ ಸುಬಹವೋ ಭಿನ್ನಗಾತ್ರಾ ನೃಪಾತ್ಮಜಾಃ
॥ ೪೩ ॥

ಯದಿಮೇ ನಿಗೃಹೀತಾಃ ಸ್ಯುಸ್ತ್ವಯೈವ ಯದುನಂದನ।
ವರೋ ಭವಾನಭಿಮತೋ ದುಹಿತುರ್ಮೇ ಶ್ರಿಯಃ ಪತೇ
॥ ೪೪ ॥

ಏವಂ ಸಮಯಮಾಕರ್ಣ್ಯ ಬದ್ಧ್ವಾ ಪರಿಕರಂ ಪ್ರಭುಃ।
ಆತ್ಮಾನಂ ಸಪ್ತಧಾ ಕೃತ್ವಾ ನ್ಯಗೃಹ್ಣಾಲ್ಲೀಲಯೈವ ತಾನ್
॥ ೪೫ ॥

ಬದ್ಧ್ವಾ ತಾನ್ ದಾಮಭಿಃ ಶೌರಿ-
ರ್ಭಗ್ನದರ್ಪಾನ್ ಹತೌಜಸಃ।
ವ್ಯಕರ್ಷಲ್ಲೀಲಯಾ ಬದ್ಧಾನ್-
ಬಾಲೋ ದಾರುಮಯಾನ್ ಯಥಾ ॥ ೪೬ ॥

ತತಃ ಪ್ರೀತಃ ಸುತಾಂ ರಾಜಾ ದದೌ ಕೃಷ್ಣಾಯ ವಿಸ್ಮಿತಃ।
ತಾಂ ಪ್ರತ್ಯಗೃಹ್ಣಾದ್ಭಗವಾನ್ ವಿಧಿವತ್ಸದೃಶೀಂ ಪ್ರಭುಃ
॥ ೪೭ ॥

ರಾಜಪತ್ನ್ಯಶ್ಚ ದುಹಿತುಃ ಕೃಷ್ಣಂ ಲಬ್ಧ್ವಾ ಪ್ರಿಯಂ ಪತಿಮ್।
ಲೇಭಿರೇ ಪರಮಾನಂದಂ ಜಾತಶ್ಚ ಪರಮೋತ್ಸವಃ
॥ ೪೮ ॥

ಶಂಖಭೇರ್ಯಾನಕಾ ನೇದುರ್ಗೀತವಾದ್ಯದ್ವಿಜಾಶಿಷಃ।
ನರಾ ನಾರ್ಯಃ ಪ್ರಮುದಿತಾಃ ಸುವಾಸಃ ಸ್ರಗಲಂಕೃತಾಃ
॥ ೪೯ ॥

ದಶಧೇನುಸಹಸ್ರಾಣಿ ಪಾರಿಬರ್ಹಮದಾದ್ವಿಭುಃ।
ಯುವತೀನಾಂ ತ್ರಿಸಾಹಸ್ರಂ ನಿಷ್ಕಗ್ರೀವಸುವಾಸಸಾಮ್
॥ ೫೦ ॥

ನವನಾಗಸಹಸ್ರಾಣಿ ನಾಗಾಚ್ಛತಗುಣಾನ್ರಥಾನ್।
ರಥಾಚ್ಛತಗುಣಾನಶ್ವಾನಶ್ವಾಚ್ಛತಗುಣಾನ್ ನರಾನ್
॥ ೫೧ ॥

ದಂಪತೀ ರಥಮಾರೋಪ್ಯ ಮಹತ್ಯಾ ಸೇನಯಾ ವೃತೌ।
ಸ್ನೇಹಪ್ರಕ್ಲಿನ್ನಹೃದಯೋ ಯಾಪಯಾಮಾಸ ಕೋಸಲಃ
॥ ೫೨ ॥

ಆದರೆ ಯದುವಂಶ ಶಿರೋಮಣಿಯೇ! ಕನ್ಯೆಗೆ ಅನುರೂಪನಾದ ವರನು ಯಾರೆಂಬುದನ್ನು ತಿಳಿಯಲು ಮತ್ತು ವರನ ಶೌರ್ಯ-ಸಾಮರ್ಥ್ಯಗಳನ್ನು ಪರೀಕ್ಷಿಸಲಿಕ್ಕಾಗಿ ಹಿಂದಿನಿಂದಲೂ ಒಂದು ನಿಯಮವನ್ನು ಪಾಲಿಸುತ್ತಾ ಬಂದಿದ್ದೇವೆ. ॥ ೪೨ ॥ ವೀರಶ್ರೇಷ್ಠನಾದ ಶ್ರೀಕೃಷ್ಣ! ನಮ್ಮಲ್ಲಿ ಎದುರಿಸಲು ಅಸಾಧ್ಯವಾದ ಮತ್ತು ಹಿಡಿಯಲು ದುಸ್ಸಾಧ್ಯವಾದ ಏಳು ಕೊಬ್ಬಿದ ಗೂಳಿಗಳಿವೆ. ಅವುಗಳನ್ನು ಬಗ್ಗಿಸಲು ಹೋಗಿ ಹಲವಾರು ರಾಜಕುಮಾರರು ಕೈ-ಕಾಲುಗಳನ್ನು ಮುರಿದುಕೊಂಡಿದ್ದಾರೆ. ॥ ೪೩ ॥ ಯದುನಂದನನೇ! ಶ್ರೀಯಃಪತಿಯೇ! ನಿನ್ನಿಂದೇನಾದರೂ ಈ ಏಳು ಗೂಳಿಗಳೂ ನಿಗ್ರಹಿಸಲ್ಪಟ್ಟರೆ ಆಗ ನೀನು ನನ್ನ ಮಗಳಿಗೆ ಅನುರೂಪನಾದ, ಅಭೀಷ್ಟನಾದ ವರನಾಗುವೆ" ॥ ೪೪ ॥ ಸರ್ವಶಕ್ತನಾದ ಶ್ರೀಕೃಷ್ಣನು ನಗ್ನಜಿತನ ಈ ಪಣವನ್ನು ಕೇಳಿ ತನ್ನನ್ನು ಏಳು ರೂಪವಾಗಿ ಕಲ್ಪಿಸಿಕೊಂಡು ನಡುಕಟ್ಟನ್ನು ಬಿಗಿದು ಲೀಲಾಜಾಲವಾಗಿ ಆ ಏಳು ಗೂಳಿಗಳನ್ನು ನಿಗ್ರಹಿಸಿದನು. ॥ ೪೫ ॥ ಅವುಗಳಿಗೆ ಮೂಗುದಾರವನ್ನು ಹಾಕಿ, ಹಗ್ಗದಿಂದ ಬಿಗಿದು, ದರ್ಪವನ್ನು ಕಳೆದುಕೊಂಡಿದ್ದ ಮತ್ತು ಶಕ್ತಿಗುಂದಿದ್ದ ಆ ಗೂಳಿಗಳನ್ನು ಬಾಲಕರು ಮರದ ಬಸವನ್ನು ಅತ್ತಲಿತ್ತ ಎಳೆದಾಡುವಂತೆಯೇ ಎಳೆದಾಡಿದನು. ॥ ೪೬ ॥ ವಿಸ್ಮಿತನಾದ ನಗ್ನಜಿತ ಮಹಾರಾಜನು ಶ್ರೀಕೃಷ್ಣನ ವೀರ್ಯ-ಸಾಹಸವನ್ನು ನೋಡಿ ಸುಪ್ರೀತನಾಗಿ ತನ್ನ ಮಗಳನ್ನು ಶ್ರೀಕೃಷ್ಣನಿಗೆ ಒಪ್ಪಿಸಿಕೊಟ್ಟನು. ಭಗವಂತನು ತನಗೆ ಅನುರೂಪಳಾಗಿದ್ದ ಸತ್ಯೆಯನ್ನು ವಿಧಿಪೂರ್ವಕವಾಗಿ ಪಾಣಿಗ್ರಹಣಮಾಡಿಕೊಂಡನು. ॥ ೪೭ ॥ ತಮ್ಮ ಮಗಳಿಗೆ ಅತ್ಯಂತ ಪ್ರಿಯನಾಗಿದ್ದ ಶ್ರೀಕೃಷ್ಣನು ಪತಿಯಾಗಿ ದೊರೆತಿರುವುದನ್ನು ನೋಡಿದ ರಾಜಪತ್ನಿಯರು ಪರಮಾನಂದವನ್ನು ಹೊಂದಿದರು. ಕಲ್ಯಾಣಮಹೋತ್ಸವವು ಸಂಭ್ರಮದಿಂದ ಜರುಗಿತು. ॥ ೪೮ ॥ ಶಂಖ, ಡೋಲು, ಭೇರಿ, ನಗಾರಿಗಳು ಮೊಳಗಿದವು. ಎಲ್ಲೆಡೆ ಗಾಯನ, ವಾದ್ಯ ಘೋಷಗಳು ನಡೆದವು. ಬ್ರಾಹ್ಮಣರು ಆಶೀರ್ವದಿಸುತ್ತಿದ್ದರು. ಸುಂದರವಾದ ವಸ್ತ್ರಾಭರಣಗಳಿಂದ, ಹೂವಿನ ಹಾರಗಳಿಂದ ಅಲಂಕರಿಸಿಕೊಂಡು ನಗರದ ನರ-ನಾರಿಯರು ಆನಂದ ಸಾಗರದಲ್ಲಿ ಮುಳುಗಿಹೋದರು. ॥ ೪೯ ॥ ನಗ್ನಜಿತರಾಜನು ಹತ್ತುಸಾವಿರ ಗೋವುಗಳನ್ನು, ಸುಂದರವಾದ ವಸ್ತ್ರಗಳನ್ನೂ, ಸ್ವರ್ಣ ಹಾರಗಳನ್ನೂ ಧರಿಸಿದ ಮೂರುಸಾವಿರ ನವಯುವತಿಯರಾದ ದಾಸಿಯರನ್ನು ಬಳುವಳಿಯಾಗಿ ಕೊಟ್ಟನು. ಜೊತೆಗೆ ಒಂಭತ್ತು ಸಾವಿರ ಆನೆಗಳು, ಒಂಭತ್ತು ಲಕ್ಷ ರಥಗಳು, ಒಂಭತ್ತು ಕೋಟಿ ಕುದುರೆಗಳನ್ನು ಒಂಭತ್ತು ಅರ್ಬುದ ಸೇವಕರನ್ನು ಬಳುವಳಿಯಾಗಿ ನೀಡಿದನು. ॥ ೫೦-೫೧ ॥ ಕೋಸಲದ ರಾಜನಾದ ನಗ್ನಜಿತನು ಮಗಳು-ಅಳಿಯನನ್ನು ರಥದಲ್ಲಿ ಕುಳ್ಳಿರಿಸಿ ಒಂದು ಬೃಹತ್ತಾದ ಸೇನೆಯೊಂದಿಗೆ ಬೀಳ್ಕೊಟ್ಟನು. ಆಗ ಅವನ ಹೃದಯವು ಸ್ನೇಹ-ವಾತ್ಸಲ್ಯದ ಉದ್ರೇಕದಿಂದ ಆರ್ದ್ರವಾಯಿತು. ॥ ೫೨ ॥

ಶ್ರುತ್ವೈತದ್ರುರುಧುರ್ಭೂಪಾ ನಯಂತಂ ಪಥಿ ಕನ್ಯಕಾಮ್ ।
ಭಗ್ನವೀರ್ಯಾಃ ಸುದುರ್ಮರ್ಷಾ ಯದುಭಿರ್ಗೋವೃಷೈಃ ಪುರಾ ॥ ೫೩ ॥

ತಾನಸ್ಯತಃ ಶರವ್ರಾತಾನ್ ಬಂಧುಪ್ರಿಯಕೃದರ್ಜುನಃ ।
ಗಾಂಡೀವೀ ಕಾಲಯಾಮಾಸ ಸಿಂಹಃ ಕ್ಷುದ್ರಮೃಗಾನಿವ ॥ ೫೪ ॥

ಪಾರಿಬರ್ಹಮುಪಾಗೃಹ್ಯ ದ್ವಾರಕಾಮೇತ್ಯ ಸತ್ಯಯಾ ।
ರೇಮೇ ಯದೂನಾಮೃಷಭೋ ಭಗವಾನ್ ದೇವಕೀಸುತಃ ॥ ೫೫ ॥

ಶ್ರುತಕೀರ್ತೇಃ ಸುತಾಂ ಭದ್ರಾಮುಪಯೇಮೇ ಪಿತೃಷ್ವಸುಃ ।
ಕೈಕೇಯೀಂ ಭ್ರಾತೃಭಿರ್ದತ್ತಾಂ ಕೃಷ್ಣಃ ಸಂತರ್ದನಾದಿಭಿಃ ॥ ೫೬ ॥

ಸುತಾಂ ಚ ಮದ್ರಾಧಿಪತೇರ್ಲಕ್ಷ್ಮಣಾಂ ಲಕ್ಷಣೈರ್ಯುತಾಮ್ ।
ಸ್ವಯಂವರೇ ಜಹಾರೈಕಃ ಸ ಸುಪರ್ಣಃ ಸುಧಾಮಿವ ॥ ೫೭ ॥

ಅನ್ಯಾಶ್ಚೈವಂವಿಧಾ ಭಾರ್ಯಾಃ ಕೃಷ್ಣಸ್ಯಾಸನ್ ಸಹಸ್ರಶಃ ।
ಭೌಮಂ ಹತ್ವಾ ತನ್ನಿರೋಧಾದಾಹೃತಾಶ್ಚಾರುದರ್ಶನಾಃ ॥ ೫೮ ॥

ಪರೀಕ್ಷಿತನೇ! ಯದುವಂಶೀಯರಿಂದಲೂ, ನಗ್ನಜಿತನ ಏಳು ಗೂಳಿಗಳಿಂದಲೂ ಭಗ್ನವೀರ್ಯರಾಗಿದ್ದ ರಾಜಕುಮಾರರು - ಶ್ರೀಕೃಷ್ಣನು ಸತ್ಯೆಯನ್ನು ಕರೆದುಕೊಂಡು ಹೋಗುತ್ತಿರುವನೆಂಬ ವಾರ್ತೆಯನ್ನು ಕೇಳಿ, ಅಸಹನಶೀಲರಾಗಿ ಶ್ರೀಕೃಷ್ಣನ ರಥವನ್ನು ಆಕ್ರಮಿಸಿದರು. ॥ ೫೩ ॥ ಅವರೆಲ್ಲರೂ ಶ್ರೀಕೃಷ್ಣನ ಮೇಲೆ ವೇಗವಾಗಿ ಬಾಣಗಳನ್ನು ಸುರಿಸತೊಡಗಿದರು. ಆಗ ಪಾಂಡವವೀರನಾದ ಅರ್ಜುನನು ಗೆಳೆಯನಾದ ಶ್ರೀಕೃಷ್ಣನಿಗೆ ಪ್ರಿಯವನ್ನುಂಟು ಮಾಡಲು ಗಾಂಡೀವ ಧನುಸ್ಸನ್ನು ಹಿಡಿದು, ಸಿಂಹವು ಕ್ಷುದ್ರ ಮೃಗಗಳನ್ನು ಧ್ವಂಸಮಾಡುವಂತೆ ಆ ರಾಜಕುಮಾರರನ್ನು ಧ್ವಂಸಮಾಡಿಬಿಟ್ಟನು. ॥ ೫೪ ॥ ಅನಂತರ ಯದುವಂಶ ಶಿರೋಮಣಿಯಾದ ದೇವಕೀನಂದನ ಶ್ರೀಕೃಷ್ಣನು ಆ ಬಳುವಳಿಯನ್ನು ಮತ್ತು ಸತ್ಯೆಯನ್ನು ಜೊತೆಸೇರಿ ದ್ವಾರಕೆಗೆ ಬಂದು, ಅಲ್ಲಿ ಗೃಹಸ್ಥೋಚಿತವಾಗಿ ವಿಹರಿಸತೊಡಗಿದನು. ॥ ೫೫ ॥

ಪರೀಕ್ಷಿತನೇ! ಭಗವಾನ್ ಶ್ರೀಕೃಷ್ಣನ ಸೋದರತ್ತೆಯಾದ ಶ್ರುತಕೀರ್ತಿಯನ್ನು ಕೇಕಯರಾಜನು ವಿವಾಹವಾಗಿದ್ದನು. ಅವಳಿಗೆ ಭದ್ರಾ ಎಂಬ ಮಗಳಿದ್ದಳು. ಆಕೆಯ ಸೋದರರಾದ ಸಂತರ್ದನರೇ ಮೊದಲಾದವರು ಭದ್ರೆಯನ್ನು ಶ್ರೀಕೃಷ್ಣನಿಗೆ ಅರ್ಪಿಸಿದರು. ಅವನು ಆಕೆಯ ಪಾಣಿಗ್ರಹಣ ಮಾಡಿದನು. ॥ ೫೬ ॥ ಮದ್ರದೇಶದ ರಾಜನಿಗೆ ಲಕ್ಷ್ಮಣಾ ಎಂಬ ಅತ್ಯಂತ ಸುಲಕ್ಷಣಳಾದ ಕನ್ಯೆಯೊಬ್ಬಳಿದ್ದಳು. ಗರುಡನು ಸ್ವರ್ಗದಿಂದ ಅಮೃತವನ್ನು ಹರಣಮಾಡಿದಂತೆಯೇ ಶ್ರೀಕೃಷ್ಣನು ಸ್ವಯಂವರದಲ್ಲಿ ಒಬ್ಬಂಟಿಗನಾಗಿ ಆಕೆಯನ್ನು ಅಪಹರಿಸಿ ತಂದನು. ॥ ೫೭ ॥

ಪರೀಕ್ಷಿತನೇ! ಹೀಗೆಯೇ ಭಗವಾನ್ ಶ್ರೀಕೃಷ್ಣನಿಗೆ ಇನ್ನೂ ಸಾವಿರಾರು ಪತ್ನಿಯರಿದ್ದರು. ಆ ಪರಮಸುಂದರಿಯರನ್ನು ಭೌಮಾಸುರನನ್ನು ಸಂಹರಿಸಿ ಅವನ ಕಾರಾಗೃಹದಿಂದ ಬಿಡಿಸಿ ತಂದಿದ್ದನು. ॥ ೫೮ ॥

ಐವತ್ತೆಂಟನೆಯ ಅಧ್ಯಾಯವು ಮುಗಿಯಿತು. ॥ ೫೮ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮಸ್ಕಂಧೇ ಉತ್ತರಾರ್ಧೇ
ಅಷ್ಟಮಹಿಷ್ಯುದ್ವಾಹೋ ನಾಮಾಷ್ಟಪಂಚಾಶತ್ತಮೋಽಧ್ಯಾಯಃ ॥ ೫೮ ॥

ಐವತ್ತೊಂಭತ್ತನೆಯ ಅಧ್ಯಾಯ

ನರಕಾಸುರನ ಸಂಹಾರ

ಹದಿನಾರು ಸಾವಿರದ ನೂರುಮಂದಿ ರಾಜಕನ್ಯೆಯರೊಡನೆ ಶ್ರೀಕೃಷ್ಣನ ವಿವಾಹ

ರಾಜೋವಾಚ

ಯಥಾ ಹತೋ ಭಗವತಾ ಭೌಮೋ ಯೇನ ಚ ತಾಃ ಸ್ತ್ರಿಯಃ ।
ನಿರುದ್ಧಾ ಏತದಾಚಕ್ಷ್ವ ವಿಕ್ರಮಂ ಶಾರ್ಙ್ಗಧನ್ವನಃ ॥ ೧ ॥

ಪರೀಕ್ಷಿದ್ರಾಜನು ಪ್ರಶ್ನಿಸುತ್ತಾನೆ - ಪೂಜ್ಯರೇ! ಸಾವಿರಾರು ಸ್ತ್ರೀಯರನ್ನು ಬಂಧನದಲ್ಲಿರಿಸಿದ ಭೌಮಾಸುರ (ನರಕಾಸುರ)ನನ್ನು ಶ್ರೀಕೃಷ್ಣನು ಹೇಗೆ ಸಂಹರಿಸಿದನು? ಶಾರ್ಙ್ಗಧನುಸ್ಸನ್ನು ಧರಿಸಿದ್ದ ಶ್ರೀಕೃಷ್ಣನ ಈ ವಿಚಿತ್ರ ಚರಿತ್ರವನ್ನು ವಿಸ್ತಾರವಾಗಿ ಹೇಳಿರಿ. ॥ ೧ ॥

ಶ್ರೀಶುಕ ಉವಾಚ

ಇಂದ್ರೇಣ ಹೃತಛತ್ರೇಣ ಹೃತಕುಂಡಲಬಂಧುನಾ ।
ಹೃತಾಮರಾದ್ರಿಸ್ಥಾನೇನ ಜ್ಞಾಪಿತೋ ಭೌಮಚೇಷ್ಟಿತಮ್ ।
ಸಭಾರ್ಯೋ ಗರುಡಾರೂಢಃ ಪ್ರಾಗ್ಜ್ಯೋತಿಷಪುರಂ ಯಯೌ
॥ ೨ ॥

ಗಿರಿದುರ್ಗೈಃ ಶಸ್ತ್ರದುರ್ಗೈರ್ಜಲಾಗ್ನ್ಯನಿಲದುರ್ಗಮಮ್ ।
ಮುರಪಾಶಾಯುತೈರ್ಘೋರೈರ್ದೃಢೈಃ ಸರ್ವತ ಆವೃತಮ್
॥ ೩ ॥

ಗದಯಾ ನಿರ್ಬಿಭೇದಾದ್ರೀನ್ ಶಸ್ತ್ರದುರ್ಗಾಣಿ ಸಾಯಕೈಃ ।
ಚಕ್ರೇಣಾಗ್ನಿಂ ಜಲಂ ವಾಯುಂ ಮುರಪಾಶಾಂಸ್ತಥಾಸಿನಾ
॥ ೪ ॥

ಶಂಖನಾದೇನ ಯಂತ್ರಾಣಿ ಹೃದಯಾನಿ ಮನಸ್ವಿನಾಮ್ ।
ಪ್ರಾಕಾರಂ ಗದಯಾ ಗುರ್ವ್ಯಾ ನಿರ್ಬಿಭೇದ ಗದಾಧರಃ
॥ ೫ ॥

ಪಾಂಚಜನ್ಯಧ್ವನಿಂ ಶ್ರುತ್ವಾ ಯುಗಾಂತಾಶನಿಭೀಷಣಮ್ ।
ಮುರಃ ಶಯಾನ ಉತ್ತಸ್ಥೌ ದೈತ್ಯಃ ಪಂಚಶಿರಾ ಜಲಾತ್
॥ ೬ ॥

ತ್ರಿಶೂಲಮುದ್ಯಮ್ಯ ಸುದುರ್ನಿರೀಕ್ಷಣೋ
ಯುಗಾಂತಸೂರ್ಯಾನಲರೋಚಿರುಲ್ಬಣಃ ।
ಗ್ರಸಂಸ್ತ್ರಿಲೋಕೀಮಿವ ಪಂಚಭಿರ್ಮುಖೈ-
ರಭ್ಯದ್ರವತ್ತಾರ್ಕ್ಷ್ಯಸುತಂ ಯಥೋರಗಃ ॥ ೭ ॥

ಆವಿಧ್ಯ ಶೂಲಂ ತರಸಾ ಗರುತ್ಮತೇ
ನಿರಸ್ಯ ವಕ್ತ್ರೈರ್ವ್ಯನದತ್ ಸ ಪಂಚಭಿಃ ।
ಸ ರೋದಸೀ ಸರ್ವದಿಶೋಽಂಬರಂ ಮಹಾ-
ನಾಪೂರಯನ್ನಂಡಕಟಾಹಮಾವೃಣೋತ್ ॥ ೮ ॥

ಶ್ರೀಶುಕಮಹಾಮುನಿಗಳು ಹೇಳಿದರು – ಎಲೈ ಪರೀಕ್ಷಿತನೇ! ಭೌಮಾಸುರನು ವರುಣನ ಛತ್ರವನ್ನೂ, ಅದಿತಿಯ ಕುಂಡಲಗಳನ್ನು, ಮೇರು ಪರ್ವತದಲ್ಲಿರುವ ದೇವತೆಗಳ ಮಣಿಪರ್ವತವೆಂಬ ಸ್ಥಾನವನ್ನು ಅಪಹರಿಸಿದ್ದನು. ಇದರಿಂದ ದೇವೇಂದ್ರನು ದ್ವಾರಕೆಗೆ ಬಂದು ಭಗವಾನ್ ಶ್ರೀಕೃಷ್ಣನಲ್ಲಿ ಭೌಮಾಸುರನ ಉಪಟಳವೆಲ್ಲವನ್ನು ನಿವೇದಿಸಿಕೊಂಡನು. ಆಗ ಶ್ರೀಕೃಷ್ಣನು ಸತ್ಯಭಾಮೆಯೊಡನೆ ಗರುಡನನ್ನೇರಿ ಭೌಮನ ರಾಜಧಾನಿಯಾದ ಪ್ರಾಗ್ಜ್ಯೋತಿಷಪುರಕ್ಕೆ ಹೋದನು. ।೨।, ಆ ಪುರವನ್ನು ಪ್ರವೇಶಿಸುವುದು ಅತ್ಯಂತ ಕಠಿಣವಾಗಿತ್ತು. ಮೊದಲನೆಯದಾಗಿ ಆ ಪಟ್ಟಣದ ಸುತ್ತಲೂ ಪರ್ವತಗಳದ್ದೇ ಕೋಟೆಯಿತ್ತು. ಕ್ರಮವಾಗಿ ಶಸ್ತ್ರದುರ್ಗದಿಂದಲೂ, ಜಲದುರ್ಗದಿಂದಲೂ, ಅಗ್ನಿದುರ್ಗದಿಂದಲೂ, ವಾಯುದುರ್ಗದಿಂದಲೂ ಸಮಾವೃತವಾಗಿತ್ತು. ಇದೆಲ್ಲ ಕಳೆದ ಬಳಿಕ ಮುರನೆಂಬ ರಾಕ್ಷಸನು ಹತ್ತುಸಾವಿರ ಕಬ್ಬಿಣದ ಸರಪಳಿಗಳ ದೃಢವಾದ ಜಾಲವನ್ನು ಹರಡಿಬಿಟ್ಟಿದ್ದನು. ॥ ೩ ॥ ಭಗವಾನ್ ಶ್ರೀಕೃಷ್ಣನು ತನ್ನ ಕೌಮೋದಕೀಗದೆಯಿಂದ ಪರ್ವತ ಪ್ರಾಕಾರಗಳನ್ನು ಭೇದಿಸಿದನು. ಬಾಣಗಳಿಂದ ಶಸ್ತ್ರದುರ್ಗವನ್ನು ಧ್ವಂಸಮಾಡಿದನು. ಸುದರ್ಶನ ಚಕ್ರದಿಂದ ಅಗ್ನಿ, ಜಲ, ವಾಯು ದುರ್ಗಗಳನ್ನು ನಾಶಮಾಡಿದನು. ನಂದಕವೆಂಬ ಖಡ್ಗದಿಂದ ಮುರಾಸುರನ ಪಾಶಗಳನ್ನು ಕತ್ತರಿಸಿ ಹಾಕಿದನು. ॥ ೪ ॥ ಪಾಂಚಜನ್ಯ ಶಂಖದ ಧ್ವನಿಯಿಂದ ಯಂತ್ರ-ತಂತ್ರ-ಮಂತ್ರಗಳನ್ನು, ಧೈರ್ಯಶಾಲಿಗಳಾದ ರಾಕ್ಷಸರ ಮನಸ್ಸನ್ನು ಭೇದಿಸಿದನು ಮತ್ತು ನಗರದ ಕೋಟೆಯನ್ನು ಗದಾಧರನಾದ ಭಗವಂತನು ತನ್ನ ಗದೆಯಿಂದ ಧ್ವಂಸಗೊಳಿಸಿದನು. ॥ ೫ ॥

ಭಗವಂತನ ಪಾಂಚಜನ್ಯದ ಧ್ವನಿಯು ಪ್ರಳಯಕಾಲದ ಸಿಡಿಲಿನಂತೆ ಮಹಾಭಯಂಕರವಾಗಿತ್ತು. ಅದನ್ನು ಕೇಳುತ್ತಲೇ ನೀರಿನಲ್ಲಿ ನಿದ್ರಿಸುತ್ತಿದ್ದ ಐದು ತಲೆಗಳಿಂದ ಕೂಡಿದ ಮುರನೆಂಬ ದೈತ್ಯನು ಎಚ್ಚರಗೊಂಡು ಎದ್ದು ಬಂದನು. ॥ ೬ ॥ ಆ ಮಹಾದೈತ್ಯನು ಪ್ರಳಯಕಾಲದ ಸೂರ್ಯಾಗ್ನಿಗಳಂತೆ ಪ್ರಚಂಡ ತೇಜಸ್ವಿಯಾಗಿದ್ದನು. ಅವನನ್ನು ಕಣ್ಣೆತ್ತಿ ದಿಟ್ಟಿಸಿ ನೋಡಲೂ ಯಾರಿಗೂ ಸಾಧ್ಯವಾಗುತ್ತಿರಲಿಲ್ಲ. ಪ್ರಾಣಬಿಡಲು ಇಚ್ಛಿಸಿದ ಸರ್ಪವು ಗರುಡನ ಬಳಿಗೆ ಧಾವಿಸುವಂತೆ ಮುರಾಸುರನು ತ್ರಿಶೂಲವನ್ನೆತ್ತಿಕೊಂಡು ಶ್ರೀಕೃಷ್ಣನ ಬಳಿಗೆ ಧಾವಿಸಿದನು. ಆ ಸಮಯದಲ್ಲಿ ತನ್ನ ಐದು ಮುಖಗಳಿಂದ ಮೂರು ಲೋಕಗಳನ್ನೂ ನುಂಗಿಬಿಡುವನೋ ಎಂಬಂತೆ ಕಾಣುತ್ತಿದ್ದನು. ॥ ೭ ॥ ಆ ಮಹಾಸುರನು ತನ್ನ ತ್ರಿಶೂಲವನ್ನು ರಭಸದಿಂದ ತಿರುಗಿಸಿ ಶ್ರೀಕೃಷ್ಣನ ವಾಹನವಾದ ಗರುಡನ ಮೇಲೆ ಪ್ರಯೋಗಿಸಿ ತನ್ನ ಐದು ಮುಖಗಳಿಂದಲೂ ಸಿಂಹನಾದವನ್ನು ಮಾಡಿದನು. ಆ ಸಿಂಹ ನಾದದ ಮಹಾಶಬ್ದವು ಪೃಥಿವಿ, ಆಕಾಶ, ಪಾತಾಳ ಮತ್ತು ಹತ್ತುದಿಕ್ಕುಗಳಲ್ಲಿಯೂ ತುಂಬಿ ಬ್ರಹ್ಮಾಂಡವನ್ನೇ ವ್ಯಾಪಿಸಿತು. ॥ ೮ ॥

ತದಾಪತದ್ವೈ ತ್ರಿಶಿಖಂ ಗರುತ್ಮತೇ
ಹರಿಃ ಶರಾಭ್ಯಾಮಭಿನತ್ತ್ರಿಧೌಜಸಾ ।
ಮುಖೇಷು ತಂ ಚಾಪಿ ಶರೈರತಾಡಯತ್
ತಸ್ಮೈ ಗದಾಂ ಸೋಽಪಿ ರುಷಾ ವ್ಯಮುಂಚತ ॥ ೯ ॥

ತಾಮಾಪತಂತೀಂ ಗದಯಾ ಗದಾಂ ಮೃಧೇ
ಗದಾಗ್ರಜೋ ನಿರ್ಬಿಭಿದೇ ಸಹಸ್ರಧಾ ।
ಉದ್ಯಮ್ಯ ಬಾಹೂನಭಿಧಾವತೋಽಜಿತಃ
ಶಿರಾಂಸಿ ಚಕ್ರೇಣ ಜಹಾರ ಲೀಲಯಾ ॥ ೧೦ ॥

ವ್ಯಸುಃ ಪಪಾತಾಂಭಸಿ ಕೃತ್ತಶೀರ್ಷೋ
ನಿಕೃತ್ತಶೃಂಗೋಽದ್ರಿರಿವೇಂದ್ರತೇಜಸಾ ।
ತಸ್ಯಾತ್ಮಜಾಃ ಸಪ್ತ ಪಿತುರ್ವಧಾತುರಾಃ
ಪ್ರತಿಕ್ರಿಯಾಮರ್ಷಜುಷಃ ಸಮುದ್ಯತಾಃ ॥ ೧೧ ॥

ತಾಮ್ರೋಽಂತರಿಕ್ಷಃ ಶ್ರವಣೋ ವಿಭಾವಸು-
ರ್ವಸುರ್ನಭಸ್ವಾನರುಣಶ್ಚ ಸಪ್ತಮಃ ।
ಪೀಠಂ ಪುರಸ್ಕೃತ್ಯ ಚಮೂಪತಿಂ ಮೃಧೇ
ಭೌಮಪ್ರಯುಕ್ತಾ ನಿರಗನ್ ಧೃತಾಯುಧಾಃ ॥ ೧೨ ॥

ಪ್ರಾಯುಂಜತಾಸಾದ್ಯ ಶರಾನಸೀನ್ ಗದಾಃ
ಶಕ್ತ್ಯೃಷ್ಟಿಶೂಲಾನ್ಯಜಿತೇ ರುಷೋಲ್ಬಣಾಃ ।
ತಚ್ಛಸ್ತ್ರಕೂಟಂ ಭಗವಾನ್ ಸ್ವಮಾರ್ಗಣೈ-
ರಮೋಘವೀರ್ಯಸ್ತಿಲಶಶ್ಚಕರ್ತ ಹ ॥ ೧೩ ॥

ತಾನ್ ಪೀಠಮುಖ್ಯಾನನಯದ್ಯಮಕ್ಷಯಂ
ನಿಕೃತ್ತಶೀರ್ಷೋರುಭುಜಾಂಘ್ರಿವರ್ಮಣಃ ।
ಸ್ವಾನೀಕಪಾನಚ್ಯುತಚಕ್ರಸಾಯಕೈ-
ಸ್ತಥಾ ನಿರಸ್ತಾನ್ ನರಕೋ ಧರಾಸುತಃ ॥ ೧೪ ॥

ನಿರೀಕ್ಷ್ಯ ದುರ್ಮರ್ಷಣ ಆಸ್ರವನ್ಮದೈ-
ರ್ಗಜೈಃ ಪಯೋಧಿಪ್ರಭವೈರ್ನಿರಾಕ್ರಮತ್ ।
ದೃಷ್ಟ್ವಾ ಸಭಾರ್ಯಂ ಗರುಡೋಪರಿ ಸ್ಥಿತಂ
ಸೂರ್ಯೋಪರಿಷ್ಟಾತ್ ಸತಡಿದ್ಘನಂ ಯಥಾ ।
ಕೃಷ್ಣಂ ಸ ತಸ್ಮೈ ವ್ಯಸೃಜಚ್ಛತಘ್ನೀಂ
ಯೋಧಾಶ್ಚ ಸರ್ವೇ ಯುಗಪತ್ ಸ್ಮ ವಿವ್ಯಧುಃ ॥ ೧೫ ॥

ಮುರಾಸುರನು ಪ್ರಯೋಗಿಸಿದ ತ್ರಿಶೂಲವು ವೇಗವಾಗಿ ಗರುಡನ ಕಡೆಗೆ ಬರುತ್ತಿರುವುದನ್ನು ಕಂಡು ಶ್ರೀಕೃಷ್ಣನು ತನ್ನ ಹಸ್ತಕೌಶಲ್ಯವನ್ನು ತೋರುತ್ತಾ, ಎರಡು ಬಾಣಗಳಿಂದ ಆ ತ್ರಿಶೂಲವನ್ನು ಮೂರು ತುಂಡಾಗಿ ಕತ್ತರಿಸಿ ಹಾಕಿದನು. ಮರುಕ್ಷಣದಲ್ಲೇ ಮುರಾಸುರನ ಐದು ಮುಖಗಳಲ್ಲಿಯೂ ಭಗವಂತನು ಬಾಣಗಳನ್ನು ಪ್ರಯೋಗಿಸಿದನು. ಇದರಿಂದ ಅತಿ ಕ್ರುದ್ಧನಾದ ಮುರಾಸುರನು ಶ್ರೀಕೃಷ್ಣನ ಮೇಲೆ ತನ್ನ ಗದೆಯನ್ನು ಪ್ರಯೋಗಿಸಿದನು. ॥ ೯ ॥ ಆದರೆ ಶ್ರೀಕೃಷ್ಣನು ತನ್ನ ಗದಾ ಪ್ರಹಾರದಿಂದ ಮುರಾಸುರನ ಗದೆಯನ್ನು ತನ್ನ ಬಳಿಗೆ ಬರುವ ಮೊದಲೇ ನುಚ್ಚುನೂರಾಗಿಸಿದನು. ಈಗ ಅವನು ನಿಶಸ್ತ್ರನಾದ್ದರಿಂದ ತನ್ನ ಭುಜಗಳನ್ನು ಚಾಚಿ ಶ್ರೀಕೃಷ್ಣನ ಕಡೆಗೆ ನುಗ್ಗಿದನು. ತತ್ಕ್ಷಣ ಅಜಿತನಾದ ಭಗವಂತನು ಚಕ್ರಾಯುಧದಿಂದ ರಾಕ್ಷಸನ ಐದು ತಲೆಗಳನ್ನು ಲೀಲಾಜಾಲವಾಗಿ ಕತ್ತರಿಸಿ ಹಾಕಿದನು ॥ ೧೦ ॥ ಇಂದ್ರನ ವಜ್ರಾಯುಧದಿಂದ ಕತ್ತರಿಸಲ್ಪಟ್ಟ ಪರ್ವತವು ಸಮುದ್ರದಲ್ಲಿ ಬೀಳುವಂತೆ ಶ್ರೀಕೃಷ್ಣನ ಚಕ್ರದಿಂದ ಕತ್ತರಿಸಲ್ಪಟ್ಟು ಶಿರಸ್ಸು ರಹಿತವಾಗಿದ್ದ ಮುರಾಸುರನ ಶರೀರವು ಪ್ರಾಣರಹಿತವಾಗಿ ನೀರಿನಲ್ಲಿ ಬಿದ್ದು ಹೋಯಿತು. ಮುರಾಸುರನಿಗೆ - ತಾಮ್ರ, ಅಂತರಿಕ್ಷ, ಶ್ರವಣ, ವಿಭಾವಸು, ವಸು, ನಭಸ್ವಾನ್ ಮತ್ತು ಅರುಣನೆಂಬ ಏಳು ಮಕ್ಕಳಿದ್ದರು. ಅವರು ತಮ್ಮ ತಂದೆಯ ಮೃತ್ಯುವಿನಿಂದಾಗಿ ಅತ್ಯಂತ ಶೋಕಾಕುಲರಾಗಿ, ಸೇಡು ತೀರಿಸಿಕೊಳ್ಳಲು ಅತ್ಯಂತ ಕ್ರುದ್ಧರಾಗಿ ಭೌಮಾಸುರನ ಆದೇಶದಿಂದ ಶಸ್ತ್ರಾಸ್ತ್ರಗಳಿಂದ ಸುಸಜ್ಜಿತರಾಗಿ ಪೀಠನೆಂಬ ದೈತ್ಯನನ್ನು ತಮ್ಮ ಸೇನಾಪತಿಯನ್ನಾಗಿಸಿಕೊಂಡು ಶ್ರೀಕೃಷ್ಣನ ಮೇಲೆ ಆಕ್ರಮಣ ಮಾಡಿದರು. ॥ ೧೧-೧೨ ॥ ಅವರು ಅಲ್ಲಿಗೆ ಬಂದು ಭಯಂಕರ ಸಿಟ್ಟಿನಿಂದ ಶ್ರೀಕೃಷ್ಣನ ಮೇಲೆ ಬಾಣ, ಖಡ್ಗ, ಗದೆ, ಶಕ್ತಿ, ಋಷ್ಟಿ, ತ್ರಿಶೂಲ ಮೊದಲಾದ ಪ್ರಚಂಡ ಶಸ್ತ್ರಗಳನ್ನು ಮಳೆಗರೆದರು. ಪರೀಕ್ಷಿತನೇ! ಭಗವಂತನ ಶಕ್ತಿಯು ಅಮೋಘವೂ, ಅನಂತವೂ ಆದುದು. ಶ್ರೀಕೃಷ್ಣನು ತನ್ನ ಹಲವಾರು ಬಾಣಗಳಿಂದ ಅವರ ಕೋಟಿ-ಕೋಟಿ ಶಸ್ತ್ರಾಸ್ತ್ರಗಳನ್ನು ನುಚ್ಚುನೂರಾಗಿಸಿದನು. ॥ ೧೩ ॥ ಭಗವಂತನು ಶಸ್ತ್ರಪ್ರಹಾರದಿಂದ ಸೇನಾಪತಿ ಪೀಠ ಮತ್ತು ಅವನ ಸೈನಿಕರ ತಲೆಗಳು, ತೊಡೆಗಳು, ಭುಜಗಳು, ಕಾಲುಗಳು, ಕವಚಗಳು ಹೀಗೆ ಎಲ್ಲವನ್ನು ತುಂಡು ತುಂಡಾಗಿ ಕತ್ತರಿಸಿ ಅವರೆಲ್ಲರನ್ನು ಯಮಸದನಕ್ಕೆ ಕಳಿಸಿದನು. ಭಗವಾನ್ ಶ್ರೀಕೃಷ್ಣನ ಚಕ್ರಾಯುಧದಿಂದಲೂ, ಬಾಣಗಳಿಂದಲೂ ತನ್ನ ಸೇನೆ ಮತ್ತು ಸೇನಾಪತಿಗಳ ಸಂಹಾರವನ್ನು ಕಂಡು ಭೂಮಿಪುತ್ರನಾದ ನರಕಾಸುರನು ಕ್ರುದ್ಧನಾದನು. ಸಮುದ್ರದಲ್ಲಿ ಹುಟ್ಟಿದ್ದ ಅನೇಕ ಮದಭರಿತ ಆನೆಗಳ ಸೈನ್ಯದೊಂದಿಗೆ ನಗರದಿಂದ ಹೊರಬಿದ್ದನು. ಸೂರ್ಯನ ಮೇಲ್ಭಾಗದಲ್ಲಿ ಮಿಂಚಿನಿಂದ ಕೂಡಿದ ವರ್ಷಾಕಾಲದ ಶ್ಯಾಮಲ ಮೇಘದಂತೆ ಪತ್ನಿಯೊಡನೆ ಗರುಡಾರೂಢನಾದ ಶ್ರೀಕೃಷ್ಣನನ್ನು ನರಕನು ನೋಡಿದನು. ಅವನನ್ನು ನೋಡುತ್ತಲೇ ಭೌಮಾಸುರನು ಭಗವಂತನ ಮೇಲೆ ಶತಘ್ನಿ ಎಂಬ ಶಕ್ತಿಯನ್ನು ಪ್ರಯೋಗಿಸಿದನು ಮತ್ತು ಅವನ ಸೈನಿಕರು ಒಟ್ಟಿಗೆ ಕೃಷ್ಣನ ಮೇಲೆ ತಮ್ಮ-ತಮ್ಮ ಅಸ್ತ್ರ-ಶಸ್ತ್ರಗಳನ್ನು ಪ್ರಯೋಗಿಸಿದರು. ॥ ೧೪-೧೫ ॥

ತದ್ಭೌಮಸೈನ್ಯಂ ಭಗವಾನ್ ಗದಾಗ್ರಜೋ
ವಿಚಿತ್ರವಾಜೈರ್ನಿಶಿತೈಃ ಶಿಲೀಮುಖೈಃ ।
ನಿಕೃತ್ತಬಾಹೂರುಶಿರೋಧ್ರವಿಗ್ರಹಂ
ಚಕಾರ ತರ್ಹ್ಯೇವ ಹತಾಶ್ವಕುಂಜರಮ್ ॥ ೧೬ ॥

ಯಾನಿ ಯೋಧೈಃ ಪ್ರಯುಕ್ತಾನಿ ಶಸ್ತ್ರಾಸ್ತ್ರಾಣಿ ಕುರೂದ್ವಹ ।
ಹರಿಸ್ತಾನ್ಯಚ್ಛಿನತ್ತೀಕ್ಷ್ಣೈಃ ಶರೈರೇಕೈಕಶಸ್ತ್ರಿಭಿಃ ॥ ೧೭ ॥

ಉಹ್ಯಮಾನಃ ಸುಪರ್ಣೇನ ಪಕ್ಷಾಭ್ಯಾಂ ನಿಘ್ನತಾ ಗಜಾನ್ ।
ಗರುತ್ಮತಾ ಹನ್ಯಮಾನಾಸ್ತುಂಡಪಕ್ಷನಖೈರ್ಗಜಾಃ ॥ ೧೮ ॥

ಪುರಮೇವಾವಿಶನ್ನಾರ್ತಾ ನರಕೋ ಯುಧ್ಯಯುಧ್ಯತ ।
ದೃಷ್ಟ್ವಾ ವಿದ್ರಾವಿತಂ ಸೈನ್ಯಂ ಗರುಡೇನಾರ್ದಿತಂ ಸ್ವಕಮ್ ॥ ೧೯ ॥

ತಂ ಭೌಮಃ ಪ್ರಾಹರಚ್ಛಕ್ತ್ಯಾ ವಜ್ರಃ ಪ್ರತಿಹತೋ ಯತಃ ।
ನಾಕಂಪತ ತಯಾ ವಿದ್ಧೋ ಮಾಲಾಹತ ಇವ ದ್ವಿಪಃ ॥ ೨೦ ॥

ಶೂಲಂ ಭೌಮೋಽಚ್ಯುತಂ ಹಂತುಮಾದದೇ ವಿತಥೋದ್ಯಮಃ ।
ತದ್ವಿಸರ್ಗಾತ್ ಪೂರ್ವಮೇವ ನರಕಸ್ಯ ಶಿರೋ ಹರಿಃ ।
ಅಪಾಹರದ್ಗಜಸ್ಥಸ್ಯ ಚಕ್ರೇಣ ಕ್ಷುರನೇಮಿನಾ ॥ ೨೧ ॥

ಸಕುಂಡಲಂ ಚಾರುಕಿರೀಟಭೂಷಣಂ
ಬಭೌ ಪೃಥಿವ್ಯಾಂ ಪತಿತಂ ಸಮುಜ್ಜ್ವಲತ್ ।
ಹಾ ಹೇತಿ ಸಾಧ್ವಿತ್ಯೃಷಯಃ ಸುರೇಶ್ವರಾ
ಮಾಲ್ಯೈರ್ಮುಕುಂದಂ ವಿಕಿರಂತ ಈಡಿರೇ ॥ ೨೨ ॥

ತತಶ್ಚ ಭೂಃ ಕೃಷ್ಣಮುಪೇತ್ಯ ಕುಂಡಲೇ
ಪ್ರತಪ್ತಜಾಂಬೂನದರತ್ನಭಾಸ್ವರೇ ।
ಸವೈಜಯಂತ್ಯಾ ವನಮಾಲಯಾರ್ಪಯತ್
ಪ್ರಾಚೇತಸಂ ಛತ್ರಮಥೋ ಮಹಾಮಣಿಮ್ ॥ ೨೩ ॥

ಅಸ್ತೌಷೀದಥ ವಿಶ್ವೇಶಂ ದೇವೀ ದೇವವರಾರ್ಚಿತಮ್ ।
ಪ್ರಾಂಜಲಿಃ ಪ್ರಣತಾ ರಾಜನ್ ಭಕ್ತಿಪ್ರವಣಯಾ ಧಿಯಾ ॥ ೨೪ ॥

ಇದಕ್ಕೆ ಪ್ರತಿಯಾಗಿ ಶ್ರೀಕೃಷ್ಣನೂ ಕೂಡ ಚಿತ್ರ-ವಿಚಿತ್ರವಾದ ಗರಿಕಟ್ಟಿದ ತೀಕ್ಷ್ಣವಾದ ಬಾಣಗಳನ್ನು ಪ್ರಯೋಗಿಸಿದನು. ಇವುಗಳಿಂದ ಆಗಲೇ ಭೌಮಾಸುರ ಸೈನಿಕರ ಭುಜಗಳು, ತೊಡೆಗಳು, ತಲೆಗಳು ಕತ್ತರಿಸಲ್ಪಟ್ಟು ತೊಪ-ತೊಪನೆ ನೆಲಕ್ಕುರುಳಿದವು ಮತ್ತು ಅಸಂಖ್ಯಾತವಾದ ಆನೆ, ಕುದುರೆಗಳೂ ಅಸುನೀಗಿದವು. ॥ ೧೬ ॥ ಪರೀಕ್ಷಿತನೇ! ನರಕಾಸುರನ ಸೈನಿಕರು ಭಗವಂತನ ಮೇಲೆ ಪ್ರಯೋಗಿಸಿದ ಅಸ್ತ್ರ-ಶಸ್ತ್ರಗಳೆಲ್ಲವನ್ನೂ ಶ್ರೀಕೃಷ್ಣನು ಮೂರು-ಮೂರು ಬಾಣಗಳಿಂದ ಕತ್ತರಿಸಿ ಹಾಕಿದನು. ॥ ೧೭ ॥ ಆ ಸಮಯದಲ್ಲಿ ಭಗವಾನ್ ಶ್ರೀಕೃಷ್ಣನು ಗರುಡಾರೂಢನಾಗಿದ್ದನು ಹಾಗೂ ಗರುಡನೂ ತನ್ನ ಬಲಿಷ್ಠವಾದ ರೆಕ್ಕೆಗಳಿಂದ ಗಜಸೈನ್ಯವನ್ನು ಬಡಿದು ಕೊಲ್ಲುತ್ತಿದ್ದನು. ಕೊಕ್ಕಿನಿಂದ ಕುಕ್ಕಿ, ಪಂಜಗಳಿಂದ, ರೆಕ್ಕೆಗಳಿಂದ ಪ್ರಹರಿಸುತ್ತಿದ್ದ ಏಟುಗಳನ್ನು ತಾಳಲಾರದೆ ಆನೆಗಳೆಲ್ಲವೂ ಸಂಕಟಪಡುತ್ತಾ, ಕಿರುಚಿಕೊಳ್ಳುತ್ತಾ ಯುದ್ಧಭೂಮಿಯಿಂದ ಓಡಿಹೋಗಿ ನಗರವನ್ನು ಹೊಕ್ಕವು. ಆಗ ಭೌಮಾಸುರನು ಒಬ್ಬಂಟಿಗನಾಗಿ ಕಾದಾಡುತ್ತಿದ್ದನು. ಗರುಡನ ಏಟುಗಳಿಂದ ಪೀಡಿತವಾಗಿ ತನ್ನ ಸೇನೆಯು ಓಡುತ್ತಿರುವುದನ್ನು ಕಂಡು ನರಕನು ವಜ್ರಾಯುಧವನ್ನೂ ವಿಫಲಗೊಳಿಸಿದ ಭಾರೀ ಶಕ್ತಿಯೊಂದನ್ನು ಗರುಡನ ಮೇಲೆ ಪ್ರಯೋಗಿಸಿದನು. ಆದರೆ ಆ ಶಕ್ತಿಯಿಂದ ಗರುಡನು ಸ್ವಲ್ಪವೂ ವಿಚಲಿತನಾಗದೆ ಯಾರಾದರೂ ಆನೆಯನ್ನು ಹೂವಿನ ಹಾರದಿಂದ ಹೊಡೆದಂತೆ ನಿಶ್ಚಲನಾಗಿದ್ದನು. ॥ ೧೮-೨೦ ॥ ತಾನು ಪ್ರಯೋಗಿಸಿದ ಆಯುಧಗಳೆಲ್ಲವೂ ವ್ಯರ್ಥವಾಗಿ ಹೋಗುತ್ತಿರಲು ಅತಿಕ್ರುದ್ಧನಾದ ನರಕಾಸುರನು ಶ್ರೀಕೃಷ್ಣನನ್ನು ಕೊಂದುಹಾಕಲು ಒಂದು ತ್ರಿಶೂಲವನ್ನು ಎತ್ತಿಕೊಂಡನು. ಆದರೆ ಅದನ್ನು ಪ್ರಯೋಗಿಸಬೇಕೆನ್ನುವಷ್ಟರಲ್ಲಿ ಭಗವಾನ್ ಶ್ರೀಕೃಷ್ಣನು ಖಡ್ಗದಂತೆ ಹರಿತವಾಗಿದ್ದ ಅಂಚುಳ್ಳ ಚಕ್ರಾಯುಧದಿಂದ ಗಜಾರೂಢನಾದ ಭೌಮಾಸುರನ ತಲೆಯನ್ನು ಕತ್ತರಿಸಿ ಹಾಕಿದನು. ॥ ೨೧ ॥ ಸುಂದರವಾದ ಕಿರೀಟ ಕುಂಡಲಗಳಿಂದ ಹೊಳೆಯುತ್ತಿದ್ದ ಅವನ ಶಿರಸ್ಸು ನೆಲಕ್ಕೆ ಉರುಳಿತು. ಅದನ್ನು ನೋಡಿದ ನರಕಾಸುರನ ಸಂಬಂಧಿಗಳು ಅಯ್ಯೋ! ನಮ್ಮ ಗತಿ ಏನು? ಎಂದು ಕಿರುಚಿಕೊಂಡರು. ಋಷಿ-ಮುನಿಗಳು ಸಾಧು! ಸಾಧು! ಎಂದು ಶ್ರೀಕೃಷ್ಣನನ್ನು ಪ್ರಶಂಸಿಸಿದರು. ದೇವತೆಗಳು ಅವನ ಮೇಲೆ ಪುಷ್ಪವೃಷ್ಟಿಯನ್ನು ಗರೆಯುತ್ತಾ ಸ್ತುತಿಸತೊಡಗಿದರು. ॥ ೨೨ ॥

ಬಳಿಕ ನರಕಾಸುರನ ತಾಯಿಯಾದ ಭೂದೇವಿಯು ಶ್ರೀಕೃಷ್ಣನ ಬಳಿಗೆ ಬಂದು ಅವನ ಕೊರಳಿಗೆ ವೈಜಯಂತಿ ಯೊಂದಿಗೆ ವನಮಾಲೆಯನ್ನು ತೊಡಿಸಿದಳು ಮತ್ತು ಪುಟಕ್ಕೆ ಹಾಕಿದ ಬಂಗಾರದಿಂದಲೂ ಶ್ರೇಷ್ಠವಾದ ರತ್ನಗಳಿಂದಲೂ ಹೊಳೆಯುತ್ತಿದ್ದ ಅದಿತಿಯ ಕುಂಡಲಗಳನ್ನು ಭಗವಂತನಿಗೆ ನೀಡಿದಳು. ಜೊತೆಗೆ ವರುಣನ ಛತ್ರವನ್ನೂ ಒಂದು ಮಹಾಮಣಿಯನ್ನು ಅರ್ಪಿಸಿದಳು. ॥ ೨೩ ॥ ರಾಜೇಂದ್ರನೇ! ಬಳಿಕ ಭೂದೇವಿಯು ದೇವಶ್ರೇಷ್ಠರಿಂದ ಅರ್ಚಿಸಲ್ಪಡುತ್ತಿದ್ದ ವಿಶ್ವೇಶನಾದ ಭಗವಾನ್ ಶ್ರೀಕೃಷ್ಣನಿಗೆ ಪ್ರಣಾಮಗೈದು, ಕೈಜೋಡಿಸಿಕೊಂಡು ಭಕ್ತಿಭಾವದಿಂದ ತುಂಬಿದ ಹೃದಯದಿಂದ ಸ್ತುತಿಸತೊಡಗಿದಳು. ॥ ೨೪ ॥

ಭೂಮಿರುವಾಚ

ನಮಸ್ತೇ ದೇವದೇವೇಶ ಶಂಖಚಕ್ರಗದಾಧರ ।
ಭಕ್ತೇಚ್ಛೋಪಾತ್ತರೂಪಾಯ ಪರಮಾತ್ಮನ್ ನಮೋಽಸ್ತು ತೇ ॥ ೨೫ ॥

ನಮಃ ಪಂಕಜನಾಭಾಯ ನಮಃ ಪಂಕಜಮಾಲಿನೇ ।
ನಮಃ ಪಂಕಜನೇತ್ರಾಯ ನಮಸ್ತೇ ಪಂಕಜಾಂಘ್ರಯೇ ॥ ೨೬ ॥

ನಮೋ ಭಗವತೇ ತುಭ್ಯಂ ವಾಸುದೇವಾಯ ವಿಷ್ಣವೇ ।
ಪುರುಷಾಯಾದಿಬೀಜಾಯ ಪೂರ್ಣಬೋಧಾಯ ತೇ ನಮಃ ॥ ೨೭ ॥

ಅಜಾಯ ಜನಯಿತ್ರೇಽಸ್ಯ ಬ್ರಹ್ಮಣೇಽನಂತಶಕ್ತಯೇ ।
ಪರಾವರಾತ್ಮನ್ ಭೂತಾತ್ಮನ್ ಪರಮಾತ್ಮನ್ ನಮೋಽಸ್ತು ತೇ ॥ ೨೮ ॥

ತ್ವಂ ವೈ ಸಿಸೃಕ್ಷೂ ರಜ ಉತ್ಕಟಂ ಪ್ರಭೋ
ತಮೋ ನಿರೋಧಾಯ ಬಿಭರ್ಷ್ಯಸಂವೃತಃ ।
ಸ್ಥಾನಾಯ ಸತ್ತ್ವಂ ಜಗತೋ ಜಗತ್ಪತೇ
ಕಾಲಃ ಪ್ರಧಾನಂ ಪುರುಷೋ ಭವಾನ್ಪರಃ ॥ ೨೯ ॥

ಅಹಂ ಪಯೋ ಜ್ಯೋತಿರಥಾನಿಲೋ ನಭೋ
ಮಾತ್ರಾಣಿ ದೇವಾ ಮನ ಇಂದ್ರಿಯಾಣಿ ।
ಕರ್ತಾ ಮಹಾನಿತ್ಯಖಿಲಂ ಚರಾಚರಂ
ತ್ವಯ್ಯದ್ವಿತೀಯೇ ಭಗವನ್ನಯಂ ಭ್ರಮಃ ॥ ೩೦ ॥

ತಸ್ಯಾತ್ಮಜೋಽಯಂ ತವ ಪಾದಪಂಕಜಂ
ಭೀತಃ ಪ್ರಪನ್ನಾರ್ತಿಹರೋಪಸಾದಿತಃ ।
ತತ್ಪಾಲಯೈನಂ ಕುರು ಹಸ್ತಪಂಕಜಂ
ಶಿರಸ್ಯಮುಷ್ಯಾಖಿಲಕಲ್ಮಷಾಪಹಮ್ ॥ ೩೧ ॥

ಪೃಥ್ವಿದೇವಿಯು ಹೇಳಿದಳು - ಶಂಖಚಕ್ರಗದಾಧರನೇ! ದೇವದೇವೇಶ್ವರನೇ! ನಾನು ನಿನಗೆ ನಮಸ್ಕರಿಸುತ್ತೇನೆ. ಪರಮಾತ್ಮನೇ! ನೀನು ನಿನ್ನ ಭಕ್ತರ ಇಚ್ಛೆಯನ್ನು ಪೂರ್ಣಗೊಳಿಸಲು ಅದಕ್ಕನುಸಾರವಾಗಿ ರೂಪಗಳನ್ನು ಹೊಂದುವಂತಹ ನಿನಗೆ ನಮಸ್ಕರಿಸುತ್ತೇನೆ. ॥ ೨೫ ॥ ಪ್ರಭುವೇ! ನಿನ್ನ ನಾಭಿಯಿಂದ ಕಮಲವು ಪ್ರಕಟವಾಗಿದೆ. ನೀನು ಕಮಲದ ಮಾಲೆಯನ್ನು ಧರಿಸಿರುವೆ. ನಿನ್ನ ನೇತ್ರಗಳು ಕಮಲದಂತೆ ಅರಳಿ ಶಾಂತಿದಾಯಕಗಳಾಗಿವೆ. ನಿನ್ನ ಚರಣಗಳು ಕಮಲದಂತೆ ಸುಕೋಮಲ ಮತ್ತು ಭಕ್ತರ ಹೃದಯಗಳನ್ನು ಶೀತಲಗೊಳಿಸುವಂತಹವುಗಳು. ಅಂತಹ ನಿನಗೆ ಪದೇ-ಪದೇ ನಮಸ್ಕರಿಸುತ್ತೇನೆ. ॥ ೨೬ ॥ ನೀನು ಸಮಗ್ರ ಐಶ್ವರ್ಯ, ಧರ್ಮ, ಯಶ, ಸಂಪತ್ತು, ಜ್ಞಾನ ಮತ್ತು ವೈರಾಗ್ಯ ಇವುಗಳಿಗೆ ಆಶ್ರಯನಾಗಿರುವೆ. ನೀನು ಸರ್ವವ್ಯಾಪಕನಾಗಿದ್ದರೂ ವಸುದೇವನ ನಂದನನಾಗಿ ಪ್ರಕಟನಾಗುವೆ. ನಾನು ನಿನಗೆ ನಮಸ್ಕರಿಸುತ್ತೇನೆ. ಪುರುಷೋತ್ತಮನಾಗಿರುವ, ಸಮಸ್ತ ಕಾರಣಗಳಿಗೂ ಪರಮಕಾರಣನಾದ, ಪೂರ್ಣಜ್ಞಾನಸ್ವರೂಪನಾದ ನಿನಗೆ ನಾನು ನಮಸ್ಕರಿಸುತ್ತೇನೆ. ॥ ೨೭ ॥ ನೀನು ಜನ್ಮರಹಿತನಾದರೂ ಈ ಜಗತ್ತಿಗೆ ಜನ್ಮದಾತನಾಗಿರುವೆ. ನೀನೇ ಅನಂತ ಶಕ್ತಿಗಳಿಗೆ ಆಶ್ರಯನಾದ ಪರಬ್ರಹ್ಮನಾಗಿರುವೆ. ಜಗತ್ತಿನಲ್ಲಿರುವ ಕಾರ್ಯ ಕಾರಣರೂಪಗಳೂ, ಚರಾಚರಗಳೆಲ್ಲವೂ ನಿನ್ನ ಸ್ವರೂಪವೇ ಆಗಿದೆ. ಪರಮಾತ್ಮನೇ! ನಿನಗೆ ಪುನಃ ಪುನಃ ನಮಸ್ಕಾರಗಳು. ॥ ೨೮ ॥ ಪ್ರಭುವೇ! ನೀನು ಜಗತ್ತನ್ನು ಸೃಷ್ಟಿಮಾಡಲು ಇಚ್ಛಿಸಿದಾಗ ಉತ್ಕಟವಾದ ರಜೋಗುಣವನ್ನು, ಅದನ್ನು ಪ್ರಳಯ ಮಾಡಲು ಬಯಸಿದಾಗ ತಮೋಗುಣವನ್ನು ಹಾಗೂ ಅದನ್ನು ಪಾಲಿಸಲು ಬಯಸಿದಾಗ ಸತ್ವಗುಣವನ್ನು ಸ್ವೀಕರಿಸುವೆ. ಆದರೆ ಇದೆಲ್ಲವನ್ನೂ ಮಾಡಿಯೂ ನೀನು ಗುಣಗಳಿಂದ ಲಿಪ್ತನಾಗುವುದಿಲ್ಲ. ಜಗತ್ಪತಿಯೇ! ನೀನು ಸಾಕ್ಷಾತ್ ಪ್ರಕೃತಿ, ಪುರುಷ ಮತ್ತು ಎರಡರ ಸಂಯೋಗ-ವಿಯೋಗಗಳಿಗೆ ಕಾರಣವಾದ ಕಾಲಸ್ವರೂಪನೂ ಆಗಿರುವೆ; ಅವುಗಳಿಂದ ಬೇರೆಯೂ ಆಗಿರುವೆ. ॥ ೨೯ ॥ ಭಗವಂತ! ಭೂಮಿಯಾದ ನಾನು, ಜಲ, ಅಗ್ನಿ, ವಾಯು, ಆಕಾಶ, ಪಂಚತನ್ಮಾತ್ರೆಗಳು, ಮನಸ್ಸು, ಇಂದ್ರಿಯಗಳು ಮತ್ತು ಇವುಗಳ ಅಧಿಷ್ಠಾತೃ ದೇವತೆಗಳು, ಅಹಂಕಾರ, ಮಹತ್ತತ್ತ್ವ, ಸಮಸ್ತ ಚರಾಚರ ಜಗತ್ತು - ಇವೆಲ್ಲವೂ ಅದ್ವಿತೀಯನಾದ ನಿನ್ನಲ್ಲಿ ಭ್ರಾಂತಿಯಿಂದಾಗಿ ಪ್ರತ್ಯೇಕವಾಗಿ ಕಾಣುತ್ತದೆ. ಆದರೆ ವಸ್ತುತಃ ಇವೆಲ್ಲವೂ ನಿನ್ನ ಸ್ವರೂಪವೇ ಆಗಿದೆ. ॥ ೩೦ ॥ ಶರಣಾಗತ ಭಯಭಂಜನನಾದ ಪ್ರಭುವೇ! ನನ್ನ ಪುತ್ರನಾದ ಭೌಮಾಸುರನ ಮಗ ಭಗದತ್ತನು ಅತ್ಯಂತ ಭಯಗೊಂಡಿರುವನು. ನಾನು ಇವನನ್ನು ನಿನ್ನ ಚರಣಾರವಿಂದಗಳ ಆಶ್ರಯವನ್ನು ಬೇಡಲು ಕರೆತಂದಿರುವೆನು. ಪ್ರಭೋ! ನೀನು ಇವನನ್ನು ರಕ್ಷಿಸು ಮತ್ತು ಸಮಸ್ತ ಜಗತ್ತಿನ ಪಾಪ-ತಾಪಗಳನ್ನು ನಾಶಗೊಳಿಸುವಂತಹ ನಿನ್ನ ಕರಕಮಲವನ್ನು ಇವನ ತಲೆಯ ಮೇಲೆ ಇರಿಸು. ॥ ೩೧ ॥

ಶ್ರೀಶುಕ ಉವಾಚ

ಇತಿ ಭೂಮ್ಯರ್ಥಿತೋ ವಾಗ್ಭಿರ್ಭಗವಾನ್ ಭಕ್ತಿನಮ್ರಯಾ ।
ದತ್ತ್ವಾಭಯಂ ಭೌಮಗೃಹಂ ಪ್ರಾವಿಶತ್ ಸಕಲರ್ದ್ಧಿಮತ್
॥ ೩೨ ॥

ತತ್ರ ರಾಜನ್ಯಕನ್ಯಾನಾಂ ಷಟ್ಸಹಸ್ರಾಧಿಕಾಯುತಮ್ ।
ಭೌಮಾಹೃತಾನಾಂ ವಿಕ್ರಮ್ಯ ರಾಜಭ್ಯೋ ದದೃಶೇ ಹರಿಃ
॥ ೩೩ ॥

ತಂ ಪ್ರವಿಷ್ಟಂ ಸ್ತ್ರಿಯೋ ವೀಕ್ಷ್ಯ ನರವೀರಂ ವಿಮೋಹಿತಾಃ ।
ಮನಸಾ ವವ್ರಿರೇಽಭೀಷ್ಟಂ ಪತಿಂ ದೈವೋಪಸಾದಿತಮ್
॥ ೩೪ ॥

ಭೂಯಾತ್ ಪತಿರಯಂ ಮಹ್ಯಂ ಧಾತಾ ತದನುಮೋದತಾಮ್ ।
ಇತಿ ಸರ್ವಾಃ ಪೃಥಕ್ ಕೃಷ್ಣೇ ಭಾವೇನ ಹೃದಯಂ ದಧುಃ
॥ ೩೫ ॥

ತಾಃ ಪ್ರಾಹಿಣೋದ್ದ್ವಾರವತೀಂ
ಸುಮೃಷ್ಟವಿರಜೋಽಂಬರಾಃ ।
ನರಯಾನೈರ್ಮಹಾಕೋಶಾನ್
ರಥಾಶ್ವಾನ್ ದ್ರವಿಣಂ ಮಹತ್ ॥ ೩೬ ॥

ಐರಾವತಕುಲೇಭಾಂಶ್ಚ ಚತುರ್ದಂತಾಂಸ್ತರಸ್ವಿನಃ ।
ಪಾಂಡುರಾಂಶ್ಚ ಚತುಃಷಷ್ಟಿಂ ಪ್ರೇಷಯಾಮಾಸ ಕೇಶವಃ
॥ ೩೭ ॥

ಗತ್ವಾ ಸುರೇಂದ್ರಭವನಂ ದತ್ತ್ವಾದಿತ್ಯೈ ಚ ಕುಂಡಲೇ ।
ಪೂಜಿತಸ್ತ್ರಿದಶೇಂದ್ರೇಣ ಸಹೇಂದ್ರಾಣ್ಯಾ ಚ ಸಪ್ರಿಯಃ
॥ ೩೮ ॥

ಚೋದಿತೋ ಭಾರ್ಯಯೋತ್ಪಾಟ್ಯ ಪಾರಿಜಾತಂ ಗರುತ್ಮತಿ ।
ಆರೋಪ್ಯ ಸೇಂದ್ರಾನ್ವಿಬುಧಾನ್ನಿರ್ಜಿತ್ಯೋಪಾನಯತ್ ಪುರಮ್
॥ ೩೯ ॥

ಸ್ಥಾಪಿತಃ ಸತ್ಯಭಾಮಾಯಾ ಗೃಹೋದ್ಯಾನೋಪಶೋಭನಃ ।
ಅನ್ವಗುರ್ಭ್ರಮರಾಃ ಸ್ವರ್ಗಾತ್ ತದ್ಗಂಧಾಸವಲಂಪಟಾಃ
॥ ೪೦ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ - ಪರೀಕ್ಷಿತನೇ! ಭೂದೇವಿಯು ಭಕ್ತಿಭಾವದಿಂದ, ವಿನಮ್ರಳಾಗಿ ಹೀಗೆ ಭಗವಾನ್ ಶ್ರೀಕೃಷ್ಣನನ್ನು ಪ್ರಾರ್ಥಿಸಿದಾಗ ಅವನು ಭಗದತ್ತನಿಗೆ ಅಭಯ ದಾನವನ್ನು ಇತ್ತು ಭೌಮಾಸುರನ ಸಮಸ್ತ ಸಂಪತ್ಸಮೃದ್ಧವಾದ ಅರಮನೆಯನ್ನು ಪ್ರವೇಶಿಸಿದನು. ॥ ೩೨ ॥ ಭಗವಂತನು ಅಲ್ಲಿಗೆ ಹೋಗಿ ನೋಡಿದನು - ಭೌಮಾಸುರನು ಬಲಾತ್ಕಾರವಾಗಿ ರಾಜರಿಂದ ಹದಿನಾರು ಸಾವಿರ ರಾಜಕುಮಾರಿಯರನ್ನು ಅಪಹರಿಸಿ ತನ್ನಲ್ಲಿ ಇಟ್ಟುಕೊಂಡಿದ್ದನು. ॥ ೩೩ ॥ ಅಂತಃಪುರವನ್ನು ಪ್ರವೇಶಿಸಿದ ನರಶ್ರೇಷ್ಠನಾದ ಭಗವಾನ್ ಶ್ರೀಕೃಷ್ಣನನ್ನು ನೋಡಿದಾಗ ಆ ರಾಜಕುಮಾರಿಯರು ಮೋಹಿತರಾಗಿ ಭಗವಂತನ ಅಹೈತುಕ ವಾದ ದಯೆ ಮತ್ತು ತಮ್ಮ ಸೌಭಾಗ್ಯವೆಂದೇ ಭಾವಿಸಿ ಮನಸ್ಸಿನಲ್ಲಿಯೇ ಅವನನ್ನು ಪರಮಪ್ರಿಯತಮ ಪತಿಯ ರೂಪದಲ್ಲಿ ವರಿಸಿದರು. ॥ ೩೪ ॥ ಆ ರಾಜಕುಮಾರಿಯರಲ್ಲಿ ಪ್ರತಿಯೊಬ್ಬಳೂ ಬೇರೆ-ಬೇರೆಯಾಗಿ - 'ಈ ಶ್ರೀಕೃಷ್ಣನೇ ನನಗೆ ಪತಿಯಾಗಲಿ ಹಾಗೂ ವಿಧಾತನು ನನ್ನ ಈ ಅಭಿಲಾಷೆಯನ್ನು ಪೂರ್ಣಗೊಳಿಸಲಿ' ಎಂದು ಮನಸ್ಸಿನಲ್ಲಿ ನಿಶ್ಚಯಿಸಿ, ಅವರು ಪ್ರೇಮಭಾವದಿಂದ ತಮ್ಮ ಹೃದಯಗಳನ್ನು ಭಗವಂತನಿಗೆ ಅರ್ಪಿಸಿಬಿಟ್ಟರು. ॥ ೩೫ ॥ ಶ್ರೀಕೃಷ್ಣನು ಅವರೆಲ್ಲರಿಗೆ ಅಭಯವನ್ನಿತ್ತನು. ಸುಂದರವಾದ ವಸ್ತ್ರಾಭರಣಗಳಿಂದ ಸಮಲಂಕೃತೆಯರಾಗಿದ್ದ ಆ ರಾಜಕುಮಾರಿಯರನ್ನು ಪಲ್ಲಕ್ಕಿಗಳಲ್ಲಿ ಕುಳ್ಳಿರಿಸಿ ದ್ವಾರಕೆಗೆ ಕಳಿಸಿಕೊಟ್ಟನು. ಜೊತೆಗೆ ನರಕಾಸುರನಲ್ಲಿದ್ದ ಅತುಲವಾದ ಭಂಡಾರವನ್ನು, ರಥಾಶ್ವಗಳನ್ನೂ, ಐಶ್ವರ್ಯವನ್ನೂ ದ್ವಾರಕೆಗೆ ಕಳಿಸಿದನು.॥ ೩೬ ॥ ಐರಾವತದ ವಂಶದಲ್ಲಿ ಹುಟ್ಟಿದ, ಅತ್ಯಂತ ವೇಗವುಳ್ಳ, ನಾಲ್ಕು ನಾಲ್ಕು ದಂತಗಳುಳ್ಳ ಬಿಳಿಯ ಬಣ್ಣದ ಅರವತ್ತನಾಲ್ಕು ಆನೆಗಳನ್ನು ಭಗವಂತನು ಅಲ್ಲಿಂದ ದ್ವಾರಕೆಗೆ ಕಳಿಸಿದನು. ॥ ೩೭ ॥

ಅನಂತರ ಭಗವಾನ್ ಶ್ರೀಕೃಷ್ಣನು ಸತ್ಯಭಾಮೆಯೊಂದಿಗೆ ಅಮರಾವತಿಯಲ್ಲಿದ್ದ ದೇವೇಂದ್ರನ ಅರಮನೆಗೆ ಹೋದನು. ಅಲ್ಲಿ ಇಂದ್ರನು ತನ್ನ ಪತ್ನಿಯಾದ ಶಚೀದೇವಿಯೊಡನೆ ಸತ್ಯಭಾಮೆಯನ್ನೂ, ಭಗವಾನ್ ಶ್ರೀಕೃಷ್ಣನನ್ನು ಯಥೋಚಿತವಾಗಿ ಪೂಜಿಸಿದನು. ಬಳಿಕ ಭಗವಂತನು ಅದಿತಿಯ ಕುಂಡಲಗಳನ್ನು ಅವಳಿಗೆ ಕೊಟ್ಟನು. ॥ ೩೮ ॥ ಅಲ್ಲಿಂದ ಮರಳುವಾಗ ಸತ್ಯಭಾಮೆಯ ಪ್ರೇರಣೆಯಂತೆ ಭಗವಾನ್ ಶ್ರೀಕೃಷ್ಣನು ನಂದನವನದ ಪಾರಿಜಾತವನ್ನು ಕಿತ್ತು ಗರುಡನ ಹೆಗಲೇರಿಸಿ, ದೇವೇಂದ್ರ ಹಾಗೂ ಸಮಸ್ತ ದೇವತೆಗಳನ್ನು ಜಯಿಸಿ ಅದನ್ನು ದ್ವಾರಕೆಗೆ ತೆಗೆದುಕೊಂಡು ಬಂದನು. ॥ ೩೯ ॥ ಭಗವಂತನು ಅದನ್ನು ಸತ್ಯಭಾಮೆಯ ಅರಮನೆಯ ಹೂದೋಟದಲ್ಲಿ ನೆಟ್ಟನು. ಇದರಿಂದ ಆ ಉದ್ಯಾನದ ಶೋಭೆಯು ಇನ್ನೂ ಹೆಚ್ಚಾಯಿತು. ಕಲ್ಪವೃಕ್ಷದೊಂದಿಗೆ ಅದರ ಹೂಗಳ ಮತ್ತು ಮಕರಂದದ ಲೋಭಿಗಳಾದ ದುಂಬಿಗಳು ಸ್ವರ್ಗದಿಂದ ದ್ವಾರಕೆಗೆ ಬಂದುಬಿಟ್ಟವು. ॥ ೪೦ ॥

ಪರೀಕ್ಷಿತನೇ! ಇಂದ್ರನು ಶ್ರೀಕೃಷ್ಣನಿಂದ ಯಾವುದಾದರೂ ಕೆಲಸವಾಗಬೇಕಾದಾಗ ಅವನು ತಲೆಯನ್ನು ತಗ್ಗಿಸಿ ಕಿರೀಟದ ತುದಿಯಿಂದ ಶ್ರೀಕೃಷ್ಣನ ಚರಣಗಳನ್ನು ಸ್ಪರ್ಶಿಸಿ ಅವನಲ್ಲಿ ಭಿಕ್ಷೆ

ಯಯಾಚ ಆನಮ್ಯ ಕಿರೀಟಕೋಟಿಭಿಃ
ಪಾದೌ ಸ್ಪೃಶನ್ನಚ್ಯುತಮರ್ಥಸಾಧನಮ್ ।
ಸಿದ್ಧಾರ್ಥ ಏತೇನ ವಿಗೃಹ್ಯತೇ ಮಹಾ-
ನಹೋ ಸುರಾಣಾಂ ಚ ತಮೋ ಧಿಗಾಢ್ಯತಾಮ್ ॥ ೪೧ ॥

ಅಥೋ ಮುಹೂರ್ತ ಏಕಸ್ಮಿನ್
ನಾನಾಗಾರೇಷು ತಾಃ ಸ್ತ್ರಿಯಃ ।
ಯಥೋಪಯೇಮೇ ಭಗವಾಂ-
ಸ್ತಾವದ್ರೂಪಧರೋಽವ್ಯಯಃ ॥ ೪೨ ॥

ಗೃಹೇಷು ತಾಸಾಮನಪಾಯ್ಯತರ್ಕಕೃ-
ನ್ನಿರಸ್ತಸಾಮ್ಯಾತಿಶಯೇಷ್ವವಸ್ಥಿತಃ ।
ರೇಮೇ ರಮಾಭಿರ್ನಿಜಕಾಮಸಂಪ್ಲುತೋ
ಯಥೇತರೋ ಗಾರ್ಹಕಮೇಧಿಕಾಂಶ್ಚರನ್ ॥ ೪೩ ॥

ಇತ್ಥಂ ರಮಾಪತಿಮವಾಪ್ಯ ಪತಿಂ ಸ್ತ್ರಿಯಸ್ತಾ
ಬ್ರಹ್ಮಾದಯೋಽಪಿ ನ ವಿದುಃ ಪದವೀಂ ಯದೀಯಾಮ್ ।
ಭೇಜುರ್ಮುದಾವಿರತಮೇಧಿತಯಾನುರಾಗ-
ಹಾಸಾವಲೋಕನವಸಂಗಮಜಲ್ಪಲಜ್ಜಾಃ ॥ ೪೪ ॥

ಪ್ರತ್ಯುದ್ಗಮಾಸನವರಾರ್ಹಣಪಾದಶೌಚ-
ತಾಂಬೂಲವಿಶ್ರಮಣವೀಜನಗಂಧಮಾಲ್ಯೈಃ ।
ಕೇಶಪ್ರಸಾರಶಯನಸ್ನಪನೋಪಹಾರ್ಯೈಃ-
ರ್ದಾಸೀಶತಾ ಅಪಿ ವಿಭೋರ್ವಿದಧುಃ ಸ್ಮ ದಾಸ್ಯಮ್ ॥ ೪೫ ॥

ಬೇಡಿದ್ದನು. ಆದರೆ ಕೆಲಸವಾದಮೇಲೆ ಅವನು ಅದೇ ಶ್ರೀಕೃಷ್ಣನಲ್ಲಿ ಯುದ್ಧವನ್ನು ಮಾಡಲು ಹಿಂದು ಮುಂದು ನೋಡಲಿಲ್ಲ. ನಿಜವಾಗಿ ನೋಡಿದರೆ ಈ ದೇವತೆಗಳೂ ಕೂಡ ಭಾರೀ ತಮೋಗುಣಗಳು ಸ್ವಾರ್ಥಿಗಳು ಮತ್ತು ಅವರಲ್ಲಿರುವ ದೊಡ್ಡ ದೋಷವೆಂದರೆ ಧನಾಢ್ಯತೆ. ಇಂತಹ ಧನಾಢ್ಯತೆಗೆ ಧಿಕ್ಕಾರವಿರಲಿ. ॥ ೪೧ ॥

ಅನಂತರ ಭಗವಾನ್ ಶ್ರೀಕೃಷ್ಣನು ಒಂದೇ ಮುಹೂರ್ತದಲ್ಲಿ ಪ್ರತ್ಯೇಕ-ಪ್ರತ್ಯೇಕ ಭವನಗಳಲ್ಲಿ ಬೇರೆ-ಬೇರೆಯ ರಾಜಕನ್ಯೆಯರಿಗೆ ಅಭೀಷ್ಟವಾದ ಅಷ್ಟು ರೂಪಗಳನ್ನು ಧರಿಸಿಕೊಂಡು ಒಂದೇ ಬಾರಿಗೆ ಹದಿನಾರುಸಾವಿರ ಕನ್ಯೆಯರ ಪಾಣಿಗ್ರಹಣ ಮಾಡಿದನು. ಸರ್ವಶಕ್ತನಾದ ಅವಿನಾಶಿ ಭಗವಂತನ ವಿಷಯದಲ್ಲಿ ಆಶ್ಚರ್ಯದ ಮಾತೇನಿದೆ? ॥ ೪೨ ॥ ಭಗವಂತನ ಪತ್ನಿಯರ ಬೇರೆ-ಬೇರೆ ಭವನಗಳಲ್ಲಿ ಜಗತ್ತಿನಲ್ಲಿ ಅದಕ್ಕೆ ಸಮಾನವಾದ ಯಾವುದೇ ಸಾಮಗ್ರಿಗಳೂ ಎಲ್ಲಿಯೂ ಇಲ್ಲದಿರುವಂತಹ ದಿವ್ಯ ಸಾಮಗ್ರಿಗಳು ತುಂಬಿದ್ದವು. ಆ ಅರಮನೆಗಳಲ್ಲಿ ಇದ್ದುಕೊಂಡು ಮತಿಗೆ ನಿಲುಕದ ಲೀಲೆಯನ್ನು ತೋರುವ ಅವಿನಾಶಿ ಭಗವಾನ್ ಶ್ರೀಕೃಷ್ಣನು ಆತ್ಮಾನಂದದಲ್ಲಿ ಮಗ್ನನಾಗಿರುತ್ತಾ ಲಕ್ಷ್ಮೀದೇವಿಯ ಅಂಶರೂಪರಾದ ಆ ಪತ್ನಿಯರೊಂದಿಗೆ - ಸಾಧಾರಣ ಗೃಹಸ್ಥನಂತೆ ಗೃಹಸ್ಥ ಧರ್ಮಕ್ಕನುಸಾರ ಆಚರಣೆಗಳನ್ನು ಮಾಡುತ್ತಾ ವಿಹರಿಸುತ್ತಿದ್ದನು. ॥ ೪೩ ॥ ಪರೀಕ್ಷಿತನೇ! ಬ್ರಹ್ಮಾದಿ ಶ್ರೇಷ್ಠದೇವತೆಗಳೂ ಕೂಡ ಭಗವಂತನ ವಾಸ್ತವಿಕವಾದ ಸ್ವರೂಪವನ್ನು ಮತ್ತು ಅವನ ಪ್ರಾಪ್ತಿಯ ಮಾರ್ಗವನ್ನೂ ತಿಳಿಯುತ್ತಿಲ್ಲ. ಅಂತಹ ರಮಾರಮಣನಾದ ಭಗವಾನ್ ಶ್ರೀಕೃಷ್ಣನನ್ನು ಆ ಪತ್ನಿಯರು ಪತಿಯಾಗಿ ಪಡೆದುಕೊಂಡಿದ್ದರು. ಈಗ ನಿತ್ಯ-ನಿರಂತರ ಅವರ ಪ್ರೇಮಾನಂದಗಳು ಅಭಿವೃದ್ಧಿಯಾಗುತ್ತಿತ್ತು. ಅವರು ಪ್ರೇಮದಿಂದ ಕೂಡಿದ ಮಂದಹಾಸದಿಂದಲೂ ಮಧುರವಾದ ನೋಟದಿಂದಲೂ, ನೂತನ ಸಮಾಗಮ ದಿಂದಲೂ, ಪ್ರೇಮಾಲಾಪ ಹಾಗೂ ಪ್ರೇಮಭಾವವನ್ನು ಹೆಚ್ಚಿಸುವ ಲಜ್ಜೆಯಿಂದ ಕೂಡಿಕೊಂಡು ಎಲ್ಲ ಪ್ರಕಾರದಿಂದ ಭಗವಂತನ ಸೇವೆ ಮಾಡುತ್ತಿದ್ದರು. ॥ ೪೪ ॥ ಅವರಲ್ಲಿ ಎಲ್ಲ ಪತ್ನಿಯರೊಂದಿಗೂ ಸೇವೆ ಮಾಡುವ ಸಾವಿರಾರು ದಾಸಿಯರು ಇರುತ್ತಿದ್ದರು. ಹೀಗಿದ್ದರೂ ಅವರ ಅರಮನೆಗೆ ಭಗವಂತನು ದಯಮಾಡಿಸಿದಾಗ ಅವರು ಸ್ವತಃ ಮುಂದೆ ಬಂದು ಆದರದಿಂದ ಬರಮಾಡಿಕೊಂಡು ಶ್ರೇಷ್ಠ ಆಸನದಲ್ಲಿ ಕುಳ್ಳಿರಿಸಿ, ಉತ್ತಮ ಸಾಮಗ್ರಿಗಳಿಂದ ಪೂಜಿಸುವರು. ಚರಣಕಮಲಗಳನ್ನು ತೊಳೆದು ಸುವಾಸಿತವಾದ ತಾಂಬೂಲವನ್ನು ನೀಡುವರು. ಕಾಲೊತ್ತುತ್ತಾ ಬಳಲಿಕೆಯನ್ನು ದೂರಮಾಡುವರು. ಗಾಳಿ ಬೀಸುವರು, ಚಂದನ ಮುಂತಾದ ಪರಿಮಳ ದ್ರವ್ಯಗಳನ್ನು ಪೂಸುವರು. ಹೂವಿನ ಹಾರಗಳನ್ನು ತೊಡಿಸಿ, ಕೂದಲು ಸರಿಪಡಿಸುವರು. ಸ್ನಾನಮಾಡಿಸುವರು, ಮಲಗಿಸುವರು, ಬಗೆ-ಬಗೆಯ ಭೋಜನ ಮಾಡಿಸುವರು - ಹೀಗೆ ತಮ್ಮ ಕೈಗಳಿಂದಲೇ ಭಗವಂತನ ಸೇವೆ ಮಾಡುತ್ತಿದ್ದರು. ॥ ೪೫ ॥

ಐವತ್ತೊಂಭತ್ತನೆಯ ಅಧ್ಯಾಯವು ಮುಗಿಯಿತು. ॥ ೫೯ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮ ಸ್ಕಂಧೇ ಉತ್ತರಾರ್ಧೇ
ಪಾರಿಜಾತಹರಣನರಕವಧೋ ನಾಮೈಕೋನಷಷ್ಟಿತಮೋಽಧ್ಯಾಯಃ ॥ ೫೯ ॥

ಅರವತ್ತನೆಯ ಅಧ್ಯಾಯ

ಶ್ರೀಕೃಷ್ಣ-ರುಕ್ಮಿಣೀ-ಸಂವಾದ

ಶ್ರೀಶುಕ ಉವಾಚ

ಕರ್ಹಿಚಿತ್ ಸುಖಮಾಸೀನಂ ಸ್ವತಲ್ಪಸ್ಥಂ ಜಗದ್ಗುರುಮ್ ।
ಪತಿಂ ಪರ್ಯಚರದ್ಭೈಷ್ಮೀ ವ್ಯಜನೇನ ಸಖೀಜನೈಃ ॥ ೧ ॥

ಯಸ್ತ್ವೇತಲ್ಲೀಲಯಾ ವಿಶ್ವಂ ಸೃಜತ್ಯತ್ತ್ಯವತೀಶ್ವರಃ ।
ಸ ಹಿ ಜಾತಃ ಸ್ವಸೇತೂನಾಂ ಗೋಪೀಥಾಯ ಯದುಷ್ವಜಃ ॥ ೨ ॥

ತಸ್ಮಿನ್ನಂತರ್ಗೃಹೇ ಭ್ರಾಜನ್ಮುಕ್ತಾದಾಮವಿಲಂಬಿನಾ ।
ವಿರಾಜಿತೇ ವಿತಾನೇನ ದೀಪೈರ್ಮಣಿಮಯೈರಪಿ ॥ ೩ ॥

ಮಲ್ಲಿಕಾದಾಮಭಿಃ ಪುಷ್ಪೈರ್ದ್ವಿರೇಫಕುಲನಾದಿತೈಃ ।
ಜಾಲರಂಧ್ರಪ್ರವಿಷ್ಟೈಶ್ಚ ಗೋಭಿಶ್ಚಂದ್ರಮಸೋಽಮಲೈಃ ॥ ೪ ॥

ಪಾರಿಜಾತವನಾಮೋದವಾಯುನೋದ್ಯಾನಶಾಲಿನಾ ।
ಧೂಪೈರಗುರುಜೈ ರಾಜನ್ ಜಾಲರಂಧ್ರವಿನಿರ್ಗತೈಃ ॥ ೫ ॥

ಪಯಃಫೇನನಿಭೇ ಶುಭ್ರೇ ಪರ್ಯಂಕೇ ಕಶಿಪೂತ್ತಮೇ ।
ಉಪತಸ್ಥೇ ಸುಖಾಸೀನಂ ಜಗತಾಮೀಶ್ವರಂ ಪತಿಮ್ ॥ ೬ ॥

ಬಾಲವ್ಯಜನಮಾದಾಯ ರತ್ನದಂಡಂ ಸಖೀಕರಾತ್ ।
ತೇನ ವೀಜಯತೀ ದೇವೀ ಉಪಾಸಾಂಚಕ್ರ ಈಶ್ವರಮ್ ॥ ೭ ॥

ಸೋಪಾಚ್ಯುತಂ ಕ್ವಣಯತೀ ಮಣಿನೂಪುರಾಭ್ಯಾಂ
ರೇಜೇಂಽಗುಲೀಯವಲಯವ್ಯಜನಾಗ್ರಹಸ್ತಾ ।
ವಸ್ತ್ರಾಂತಗೂಢಕುಚಕುಂಕುಮಶೋಣಹಾರ-
ಭಾಸಾ ನಿತಂಬಧೃತಯಾ ಚ ಪರಾರ್ಧ್ಯಕಾಂಚ್ಯಾ ॥ ೮ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ - ಎಲೈ ಪರೀಕ್ಷಿತನೇ ! ಹೀಗೆ ಇರುತ್ತಿರಲಾಗಿ ಒಂದು ದಿನ ಸಮಸ್ತ ಜಗತ್ತಿಗೂ ಗುರುವಾದ ಭಗವಾನ್ ಶ್ರೀಕೃಷ್ಣನು ರುಕ್ಮಿಣಿಯ ಮಂಚದಮೇಲೆ ಸುಖವಾಗಿ ಕುಳಿತಿದ್ದನು. ರುಕ್ಮಿಣೀದೇವಿಯು ತನ್ನ ಸಖಿಯರೊಂದಿಗೆ ಸ್ವಾಮಿಗೆ ಗಾಳಿ ಬೀಸುತ್ತಾ ಉಪಚರಿಸುತ್ತಿದ್ದಳು. ॥ ೧ ॥ ಸರ್ವಶಕ್ತನಾದ ಭಗವಂತನು ಲೀಲೆಯಿಂದ ಈ ವಿಶ್ವವನ್ನು ಸೃಜಿಸಿ, ರಕ್ಷಿಸಿ, ಕಡೆಯಲ್ಲಿ ಪ್ರಳಯವನ್ನೂ ಮಾಡುವವನು. ಅಂತಹ ಹುಟ್ಟು ಸಾವುಗಳಿಲ್ಲದ ಪ್ರಭುವು ತಾನೇ ಕಲ್ಪಿಸಿದ ಧರ್ಮಮರ್ಯಾದೆಗಳ ರಕ್ಷಣೆಗಾಗಿ ಯದುವಂಶದಲ್ಲಿ ಅವತರಿಸಿದ್ದನು. ॥ ೨ ॥ ಪರೀಕ್ಷಿತನೇ ! ರುಕ್ಮಿಣಿಯ ಆ ಅಂತಃಪುರವು ಬಹು ಸುಂದರವಾಗಿತ್ತು. ವಸ್ತ್ರಗಳಿಂದ ಕಲ್ಪಿಸಿದ್ದ ಮೇಲುಛಾವಣಿಯಲ್ಲಿ ಥಳ-ಥಳಿಸುವ ಮುತ್ತಿನ ಸರಗಳನ್ನು ತೂಗುಹಾಕಿದ್ದರು. ಮಣಿಮಯವಾದ ದೀಪಗಳು ಝಗ-ಝಗಿಸುತ್ತಿದ್ದವು. ॥ ೩ ॥ ದುಂಬಿಗಳ ನಿನಾದದಿಂದ ಕೂಡಿದ ಜಾಜಿ, ಮಲ್ಲಿಗೆ ಹೂವುಗಳ ಹಾರಗಳಿಂದಲೂ ಅಂತಃಪುರವು ಸಮಲಂಕೃತವಾಗಿತ್ತು. ಪೂರ್ಣಚಂದ್ರನ ಶುಭ್ರವಾದ ಕಿರಣಗಳು ಕಿಟಕಿಗಳ ಮೂಲಕವಾಗಿ ಅಂತಃಪುರದಲ್ಲಿ ಹರಡಿದ್ದವು. ॥ ೪ ॥ ಉದ್ಯಾನದಲ್ಲಿ ಪಾರಿಜಾತ ಪುಷ್ಪಗಳ ಮೇಲೆ ಬೀಸಿದ ಸುಗಂಧಮಯ ಮಂದಾನಿಲವು ಎಲ್ಲೆಡೆ ಪಸರಿಸಿತ್ತು. ಅಗರು ಧೂಪಗಳ ಪರಿಮಳವು ಕಿಟಕಿಯ ರಂಧ್ರಗಳಿಂದ ಹೊರಗೆ ಹೋಗಿ ಹರಡುತ್ತಿತ್ತು. ॥ ೫ ॥ ಅಂತಹ ಅಂತಃಪುರದಲ್ಲಿ ಹಾಲಿನ ನೊರೆಯಂತೆ ಶುಭ್ರವಾದ ಹಂಸತೂಲಿಕಾತಲ್ಪದಲ್ಲಿ ಆನಂದ ತುಂದಿಲನಾಗಿ ಶ್ರೀಕೃಷ್ಣನು ವಿರಾಜಿಸುತ್ತಿದ್ದನು. ರುಕ್ಮಿಣೀದೇವಿಯು ತ್ರಿಲೋಕಾಧೀಶನನ್ನು ತನ್ನ ಪತಿಯನ್ನಾಗಿ ಪಡೆದು ಅವನ ಸೇವೆ ಮಾಡುತ್ತಿದ್ದಳು. ॥ ೬ ॥ ಲಕ್ಷ್ಮೀಸ್ವರೂಪಿಣಿಯಾದ ರುಕ್ಮಿಣಿ ದೇವಿಯು ರತ್ನಖಚಿತವಾದ ಹಿಡಿಯುಳ್ಳ, ಮನೋಹರವಾದ ಚಾಮರವನ್ನು ಸಖಿಯ ಕೈಯಿಂದ ತೆಗೆದುಕೊಂಡು ತಾನೇ ಶ್ರೀಕೃಷ್ಣನಿಗೆ ಬೀಸುತ್ತಾ ಅವನ ಸೇವೆಯನ್ನು ಮಾಡುತ್ತಿದ್ದಳು. ॥ ೭ ॥ ಆಕೆಯ ಕರಕಮಲಗಳಲ್ಲಿ ಕೈಗಡಗಗಳೂ, ಉಂಗುರಗಳೂ, ರತ್ನ ಖಚಿತ ಬಳೆಗಳೂ, ಚಾಮರವೂ ಶೋಭಿಸುತ್ತಿದ್ದವು. ಚರಣಗಳಲ್ಲಿ ಮಣಿಖಚಿತ ನೂಪುರಗಳು ಝಣ-ಝಣಿಸುತ್ತಿದ್ದವು. ಸೆರಗಿನಲ್ಲಿ ಅಡಗಿದ್ದ ಸ್ತನಗಳ ಕುಂಕುಮಕೇಸರದ ಬಣ್ಣದಿಂದ ಕೊರಳ ಹಾರಗಳು ಕೆಂಪಾಗಿ ಕಾಣುತ್ತಾ, ಚಾಮರ ಬೀಸುವಾಗ ಸ್ಪಂದಿಸುತ್ತಿದ್ದವು. ಸೊಂಟದಲ್ಲಿ ಧರಿಸಿದ್ದ ರತ್ನಖಚಿತವಾದ ಡಾಬಿನ ಸರಗಳು ನಿತಂಬಗಳ ಮೇಲೆ ತೂಗಾಡುತ್ತಿದ್ದವು. ಹೀಗೆ ಆಕೆಯು ಭಗವಂತನ ಬಳಿಯಲ್ಲೇ ಇದ್ದು ಅವನ ಸೇವೆಯಲ್ಲಿ ತಲ್ಲೀನಳಾಗಿದ್ದಳು. ॥ ೮ ॥

ತಾಂ ರೂಪಿಣೀಂ ಶ್ರಿಯಮನನ್ಯಗತಿಂ ನಿರೀಕ್ಷ್ಯ
ಯಾ ಲೀಲಯಾ ಧೃತತನೋರನುರೂಪರೂಪಾ ।
ಪ್ರೀತಃ ಸ್ಮಯನ್ನಲಕಕುಂಡಲನಿಷ್ಕಕಂಠ-
ವಕ್ತ್ರೋಲ್ಲಸತ್ಸ್ಮಿತಸುಧಾಂ ಹರಿರಾಬಭಾಷೇ ॥ ೯ ॥

ಶ್ರೀಭಗವಾನುವಾಚ

ರಾಜಪುತ್ರೀಪ್ಸಿತಾ ಭೂಪೈರ್ಲೋಕಪಾಲವಿಭೂತಿಭಿಃ ।
ಮಹಾನುಭಾವೈಃ ಶ್ರೀಮದ್ಭೀ ರೂಪೌದಾರ್ಯಬಲೋರ್ಜಿತೈಃ ॥ ೧೦ ॥

ತಾನ್ ಪ್ರಾಪ್ತಾನರ್ಥಿನೋ ಹಿತ್ವಾ
ಚೈದ್ಯಾದೀನ್ಸ್ಮರದುರ್ಮದಾನ್ ।
ದತ್ತಾ ಭ್ರಾತ್ರಾ ಸ್ವಪಿತ್ರಾ ಚ
ಕಸ್ಮಾನ್ನೋ ವವೃಷೇಽಸಮಾನ್ ॥ ೧೧ ॥

ರಾಜಭ್ಯೋ ಬಿಭ್ಯತಃ ಸುಭ್ರು ಸಮುದ್ರಂ ಶರಣಂ ಗತಾನ್ ।
ಬಲವದ್ಭಿಃ ಕೃತದ್ವೇಷಾನ್ಪ್ರಾಯಸ್ತ್ಯಕ್ತನೃಪಾಸನಾನ್ ॥ ೧೨ ॥

ಅಸ್ಪಷ್ಟವರ್ತ್ಮನಾಂ ಪುಂಸಾಮಲೋಕಪಥಮೀಯುಷಾಮ್ ।
ಆಸ್ಥಿತಾಃ ಪದವೀಂ ಸುಭ್ರು ಪ್ರಾಯಃ ಸೀದಂತಿ ಯೋಷಿತಃ ॥ ೧೩ ॥

ನಿಷ್ಕಿಂಚನಾ ವಯಂ ಶಶ್ವನ್ನಿಷ್ಕಿಂಚನಜನಪ್ರಿಯಾಃ ।
ತಸ್ಮಾತ್ ಪ್ರಾಯೇಣ ನ ಹ್ಯಾಢ್ಯಾ ಮಾಂ ಭಜಂತಿ ಸುಮಧ್ಯಮೇ ॥ ೧೪ ॥

ಯಯೋರಾತ್ಮಸಮಂ ವಿತ್ತಂ ಜನ್ಮೈಶ್ವರ್ಯಾಕೃತಿರ್ಭವಃ ।
ತಯೋರ್ವಿವಾಹೋ ಮೈತ್ರೀ ಚ ನೋತ್ತಮಾಧಮಯೋಃ ಕ್ವಚಿತ್ ॥ ೧೫ ॥

ವೈದರ್ಭ್ಯೇತದವಿಜ್ಞಾಯ ತ್ವಯಾದೀರ್ಘಸಮೀಕ್ಷಯಾ ।
ವೃತಾ ವಯಂ ಗುಣೈರ್ಹೀನಾ ಭಿಕ್ಷುಭಿಃ ಶ್ಲಾಘಿತಾ ಮುಧಾ ॥ ೧೬ ॥

ಅಥಾತ್ಮನೋಽನುರೂಪಂ ವೈ ಭಜಸ್ವ ಕ್ಷತ್ರಿಯರ್ಷಭಮ್ ।
ಯೇನ ತ್ವಮಾಶಿಷಃ ಸತ್ಯಾ ಇಹಾಮುತ್ರ ಚ ಲಪ್ಸ್ಯಸೇ ॥ ೧೭ ॥

ಚೈದ್ಯಶಾಲ್ವಜರಾಸಂಧದಂತವಕ್ತ್ರಾದಯೋ ನೃಪಾಃ ।
ಮಮ ದ್ವಿಷಂತಿ ವಾಮೋರು ರುಕ್ಮೀ ಚಾಪಿ ತವಾಗ್ರಜಃ ॥ ೧೮ ॥

ಲೀಲೆಗಾಗಿ ಮನುಷ್ಯರೂಪವನ್ನು ಧರಿಸಿ ಬಂದಿರುವ ತನಗೆ ಅನುರೂಪಳಾಗಿರುವ, ಅನನ್ಯ ಶರಣಾಗಿರುವ, ಕಡು ಚೆಲುವೆಯಾದ, ಲಕ್ಷ್ಮಿಯ ಸ್ವರೂಪಳೇ ಆಗಿರುವ, ಮುಂಗುರುಳುಗಳಿಂದಲೂ, ಕುಂಡಲಗಳಿಂದಲೂ, ಕನಕಹಾರಗಳಿಂದಲೂ ವಿರಾಜಿಸುತ್ತಿದ್ದ ಮುಖದಲ್ಲಿ ಮಂದಹಾಸವೆಂಬ ಅಮೃತವನ್ನು ಸುರಿಸುತ್ತಿರುವ ರುಕ್ಮಿಣೀದೇವಿಯನ್ನು ನೋಡಿ ಸುಪ್ರೀತನಾದ ಶ್ರೀಹರಿಯು ಅವಳಲ್ಲಿ ಇಂತೆಂದನು - ॥ ೯ ॥

ಭಗವಾನ್ ಶ್ರೀಕೃಷ್ಣನು ಹೇಳಿದನು - ರಾಜಕುಮಾರಿ! ಐಶ್ವರ್ಯದಲ್ಲಿ ಲೋಕಪಾಲರಂತಿದ್ದ ಹೆಚ್ಚು ಪ್ರಭಾವಶಾಲಿಗಳಾಗಿದ್ದ ಶ್ರೀಮಂತರಾಗಿದ್ದ ರೂಪ-ಔದಾರ್ಯ-ಬಲದಲ್ಲಿ ಅಧಿಕರಾಗಿದ್ದ ಹಲವಾರು ರಾಜರು ನಿನ್ನನ್ನು ವಿವಾಹವಾಗಲು ಅಪೇಕ್ಷಿಸಿದ್ದರು. ॥ ೧೦ ॥ ನಿನ್ನ ತಂದೆ ಮತ್ತು ಅಣ್ಣಂದಿರು ಶಿಶುಪಾಲನೊಂದಿಗೆ ನಿನ್ನ ಮದುವೆಮಾಡುವುದಾಗಿ ವಾಗ್ದಾನವನ್ನೂ ಮಾಡಿದ್ದರು. ಕಾಮೋನ್ಮತ್ತರಾದ ಶಿಶುಪಾಲನೇ ಮೊದಲಾದವರು ನಿನ್ನನ್ನು ಯಾಚಿಸಲೂ ಬಂದಿದ್ದರು. ಅಂತಹವರೆಲ್ಲರನ್ನು ತ್ಯಜಿಸಿ, ನಿನಗೆ ಸರಿದೂಗದಿರುವ ನನ್ನನ್ನೇಕೆ ನೀನು ಮದುವೆಯಾದೆ? ಸುಂದರಿ! ನೋಡು, ಜರಾಸಂಧನೇ ಮೊದಲಾದ ಶತ್ರುರಾಜರಿಗೆ ಹೆದರಿ ನಾವು ಸಮುದ್ರದಲ್ಲಿ ಮನೆಮಾಡಿಕೊಂಡು ಇದ್ದೇವೆ. ಬಲಿಷ್ಠರೊಡನೆ ನಾವು ವೈರವನ್ನು ಕಟ್ಟಿಕೊಂಡಿದ್ದೇವೆ. ಮೇಲಾಗಿ ನಾವು ರಾಜಸಿಂಹಾಸನದ ಅಧಿಕಾರದಿಂದಲೂ ವಂಚಿತರಾಗಿದ್ದೇವೆ. ॥ ೧೨ ॥ ಸುಂದರಿಯೇ! ಅಸ್ಪಷ್ಟಮಾರ್ಗವುಳ್ಳ, ಲೋಕದ ಜನರ ಮಾರ್ಗವನ್ನು ಅನುಸರಿಸದೆ, ವಿಲಕ್ಷಣವಾದ ಮಾರ್ಗವನ್ನು ಹಿಡಿದಿರುವ ನಮ್ಮಂತಹ ಪುರುಷರ ಮಾರ್ಗವನ್ನು ಹಿಡಿದ ಸ್ತ್ರೀಯರು ಪ್ರಾಯಶಃ ಕಷ್ಟಕ್ಕೆ ಒಳಗಾಗುತ್ತಾರೆ. ॥ ೧೩ ॥ ಸುಂದರಳೇ! ನಾವು ಯಾವಾಗಲೂ ಯಾವುದೇ ಕಾಮನೆ ಇಲ್ಲದವರು ಆದುದರಿಂದ ನಮಗೆ ಅಂಥ ನಿಷ್ಕಿಂಚನರನ್ನು ಕಂಡರೆ ಬಹಳ ಪ್ರೀತಿ. ಈ ಕಾರಣದಿಂದಲೇ ಪ್ರಾಯಶಃ ಧನಿಕರಾದವರು ನನ್ನನ್ನು ಆಶ್ರಯಿಸುವುದಿಲ್ಲ. ॥ ೧೪ ॥ ಧನ, ಕುಲ, ಐಶ್ವರ್ಯ, ಸೌಂದರ್ಯ, ಆದಾಯ - ಇವುಗಳಲ್ಲಿ ತಮಗೆ ಸಮಾನರಾದವರೊಂದಿಗೆ ವಿವಾಹ ಮತ್ತು ಮೈತ್ರಿಯ ಸಂಬಂಧವನ್ನು ಬೆಳೆಸಬೇಕು. ತನ್ನಿಂದ ಶ್ರೇಷ್ಠ ಅಥವಾ ಕನಿಷ್ಠರೊಂದಿಗೆ ಸಂಬಂಧ ಬೆಳೆಸಬಾರದು. ॥ ೧೫ ॥ ವಿದರ್ಭರಾಜಕುಮಾರೀ! ನೀನು ದೂರದೃಷ್ಟಿಯಿಲ್ಲದೆ ಈ ವಿಷಯಗಳ ಕುರಿತು ವಿಚಾರಮಾಡಲಿಲ್ಲ. ಏನೂ ತಿಳಿಯದ ಭಿಕ್ಷುಕರಿಂದ ನನ್ನ ಪ್ರಶಂಸೆಯನ್ನು ಕೇಳಿ, ಗುಣಹೀನನಾದ ನನ್ನನ್ನು ವರಿಸಿದೆ. ॥ ೧೬ ॥ ದೇವಿ! ಈಗಲೂ ಕಾಲಮಿಂಚಿ ಹೋಗಿಲ್ಲ. ನೀನು ನಿನಗೆ ಅನುರೂಪನಾದ, ಶ್ರೇಷ್ಠನಾದ ಕ್ಷತ್ರಿಯ ಕುಮಾರನನ್ನು ಈಗಲೂ ವರಿಸಬಹುದು. ಇದರಿಂದ ಇಹಲೋಕ-ಪರಲೋಕಗಳ ಸಮಸ್ತ ಆಸೆ-ಆಕಾಂಕ್ಷೆಗಳು ಈಡೇರುತ್ತವೆ. ॥ ೧೭ ॥ ಸುಂದರೀ! ಶಿಶುಪಾಲ, ಶಾಲ್ವ, ಜರಾಸಂಧ, ದಂತವಕ್ತ್ರ ಮುಂತಾದ ರಾಜರು ಮತ್ತು ನಿಮ್ಮಣ್ಣ ರುಕ್ಮಿಯೂ ಸದಾಕಾಲ ನನ್ನನ್ನು ದ್ವೇಷಿಸುತ್ತಾರೆ - ಇದು ನಿನಗೆ ತಿಳಿದೇ ಇದೆ. ॥ ೧೮ ॥

ತೇಷಾಂ ವೀರ್ಯಮದಾಂಧಾನಾಂ ದೃಪ್ತಾನಾಂ ಸ್ಮಯನುತ್ತಯೇ ।
ಆನೀತಾಸಿ ಮಯಾ ಭದ್ರೇ ತೇಜೋಽಪಹರತಾ ಸತಾಮ್ ॥ ೧೯ ॥

ಉದಾಸೀನಾ ವಯಂ ನೂನಂ ನ ಸ್ತ್ರ್ಯಪತ್ಯಾರ್ಥಕಾಮುಕಾಃ ।
ಆತ್ಮಲಬ್ಧ್ಯಾಸ್ಮಹೇ ಪೂರ್ಣಾ ಗೇಹಯೋರ್ಜ್ಯೋತಿರಕ್ರಿಯಾಃ ॥ ೨೦ ॥

ಶ್ರೀಶುಕ ಉವಾಚ

ಏತಾವದುಕ್ತ್ವಾ ಭಗವಾನಾತ್ಮಾನಂ ವಲ್ಲಭಾಮಿವ ।
ಮನ್ಯಮಾನಾಮವಿಶ್ಲೇಷಾತ್ ತದ್ದರ್ಪಘ್ನ ಉಪಾರಮತ್ ॥ ೨೧ ॥

ಇತಿ ತ್ರಿಲೋಕೇಶಪತೇಸ್ತದಾಽಽತ್ಮನಃ
ಪ್ರಿಯಸ್ಯ ದೇವ್ಯಶ್ರುತಪೂರ್ವಮಪ್ರಿಯಮ್ ।
ಆಶ್ರುತ್ಯ ಭೀತಾ ಹೃದಿ ಜಾತವೇಪಥುಃ
ಚಿಂತಾಂ ದುರಂತಾಂ ರುದತೀ ಜಗಾಮ ಹ ॥ ೨೨ ॥

ಪದಾ ಸುಜಾತೇನ ನಖಾರುಣಶ್ರಿಯಾ
ಭುವಂ ಲಿಖಂತ್ಯಶ್ರುಭಿರಂಜನಾಸಿತೈಃ ।
ಆಸಿಂಚತೀ ಕುಂಕುಮರೂಷಿತೌ ಸ್ತನೌ
ತಸ್ಥಾವಧೋಮುಖ್ಯತಿದುಃಖರುದ್ಧವಾಕ್ ॥ ೨೩ ॥

ತಸ್ಯಾಃ ಸುದುಃಖಭಯಶೋಕವಿನಷ್ಟಬುದ್ಧೇ-
ರ್ಹಸ್ತಾಚ್ಛ್ಲಥದ್ವಲಯತೋ ವ್ಯಜನಂ ಪಪಾತ ।
ದೇಹಶ್ಚ ವಿಕ್ಲವಧಿಯಃ ಸಹಸೈವ ಮುಹ್ಯನ್
ರಂಭೇವ ವಾಯುವಿಹತಾ ಪ್ರವಿಕೀರ್ಯ ಕೇಶಾನ್ ॥ ೨೪ ॥

ತದ್ದೃಷ್ಟ್ವಾ ಭಗವಾನ್ ಕೃಷ್ಣಃ ಪ್ರಿಯಾಯಾಃ ಪ್ರೇಮಬಂಧನಮ್ ।
ಹಾಸ್ಯಪ್ರೌಢಿಮಜಾನಂತ್ಯಾಃ ಕರುಣಃ ಸೋಽನ್ವಕಂಪತ ॥ ೨೫ ॥

ಪರ್ಯಂಕಾದವರುಹ್ಯಾಶು ತಾಮುತ್ಥಾಪ್ಯ ಚತುರ್ಭುಜಃ ।
ಕೇಶಾನ್ ಸಮುಹ್ಯ ತದ್ವಕ್ತ್ರಂ ಪ್ರಾಮೃಜತ್ ಪದ್ಮಪಾಣಿನಾ ॥ ೨೬ ॥

ಕಲ್ಯಾಣೀ! ಅವರೆಲ್ಲರೂ ಬಲ-ಪರಾಕ್ರಮದ ಮದದಿಂದ ಕುರುಡರಾಗಿದ್ದರು. ತಮ್ಮ ಮುಂದೆ ಯಾರನ್ನೂ ಲೆಕ್ಕಿಸುತ್ತಿರಲಿಲ್ಲ. ಅಂತಹ ದುಷ್ಟರ ಗರ್ವವನ್ನು ಮುರಿಯಲಿಕ್ಕಾಗಿಯೇ ನಾನು ನಿನ್ನನ್ನು ಅಪಹರಿಸಿ ತಂದಿರುವೆನು. ಇದಲ್ಲದೆ ಬೇರೆ ಯಾವ ಕಾರಣವೂ ಇಲ್ಲ. ॥ ೧೯ ॥ ನಿಶ್ಚಯವಾಗಿಯೂ ನಾವು ಉದಾಸೀನರು. ನಮಗೆ ಪತ್ನೀ-ಪುತ್ರರಲ್ಲಾಗಲೀ, ಧನದಲ್ಲಾಗಲೀ ಲಾಲಸೆಯಿಲ್ಲ. ಪತ್ನೀ-ಪುತ್ರರನ್ನು ಪಡೆಯಬೇಕೆಂಬ ಕಾಮನೆಯೂ ಇಲ್ಲ. ಈ ಮನೆಯಲ್ಲಿಯೂ, ದೇಹದಲ್ಲಿಯೂ ದೀಪಶಿಖೆಯಂತೆ ಸಾಕ್ಷಿಭೂತರಾಗಿ ನಿಷ್ಕ್ರಿಯರಾಗಿ ಕುಳಿತಿದ್ದೇವೆ. ಆತ್ಮಸಾಕ್ಷಾತ್ಕಾರವನ್ನು ಪಡೆದು ಪೂರ್ಣಕಾಮರಾಗಿ ಕೃತಕೃತ್ಯರಾಗಿದ್ದೇವೆ. ॥ ೨೦ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ - ಪರೀಕ್ಷಿತನೇ! ಭಗವಾನ್ ಶ್ರೀಕೃಷ್ಣನನ್ನು ಅರೆಕ್ಷಣವೂ ಬಿಟ್ಟಿರಲಾರದೇ ಇರುವ ರುಕ್ಮಿಣಿಯಲ್ಲಿ - 'ನಾನು ಎಲ್ಲರಿಗಿಂತ ಹೆಚ್ಚು ನನ್ನ ಇನಿಯನಿಗೆ ಪ್ರಿಯಳಾಗಿದ್ದೇನೆ' ಎಂಬ ಅಭಿಮಾನ ಉಂಟಾಗಿತ್ತು. ಇಂತಹ ಗರ್ವವನ್ನು ಕಳೆಯಲಿಕ್ಕಾಗಿಯೇ ಭಗವಂತನು ಇಷ್ಟನ್ನು ಹೇಳಿ ಸುಮ್ಮನಾದನು. ॥ ೨೧ ॥ ರಾಜೇಂದ್ರನೇ! ರುಕ್ಮಿಣೀದೇವಿಯು ತನ್ನ ಪರಮ ಪ್ರಿಯತಮನೂ, ತ್ರೈಲೋಕ್ಯನಾಥನೂ ಆದ ಭಗವಂತನ ಇಂತಹ ಅಪ್ರಿಯವಾದ ಮಾತನ್ನು ಹಿಂದೆ ಎಂದೂ ಕೇಳಿರಲಿಲ್ಲ. ಇಂದು ಕೇಳಿದಾಗ ಅತ್ಯಂತ ಭಯಗೊಂಡಳು. ಹೃದಯವು ನಡುಗತೊಡಗಿತು. ಬಿಕ್ಕಿ-ಬಿಕ್ಕಿ ಅಳುತ್ತಾ ಅಗಾಧವಾದ ಚಿಂತಾಸಾಗರದಲ್ಲಿ ಮುಳುಗಿಹೋದಳು. ॥ ೨೨ ॥ ಆಕೆಯು ಕಮಲದಂತೆ ಕೋಮಲವಾದ ಹಾಗೂ ನಸುಗೆಂಪಾದ ಉಗುರುಗಳುಳ್ಳ ಪಾದದಿಂದ ನೆಲವನ್ನು ಕೆರೆಯುತ್ತಾ, ಕಾಡಿಗೆಯಿಂದ ಕಪ್ಪಾದ ಕಣ್ಣೀರಿನಿಂದ ಕುಂಕುಮಾಂಕಿತವಾದ ಸ್ತನಗಳನ್ನು ನೆನೆಸುತ್ತಾ, ತಲೆಯನ್ನು ತಗ್ಗಿಸಿ ನಿಂತಿದ್ದಳು. ಅತೀವ ದುಃಖದಿಂದಾಗಿ ಆಕೆಯ ಕಂಠವು ಬಿಗಿದು ಮಾತುನಿಂತು ಹೋಗಿತ್ತು. ॥ ೨೩ ॥ ಅತ್ಯಂತ ವ್ಯಥೆ, ಭಯ, ಶೋಕದ ಕಾರಣಗಳಿಂದಾಗಿ ವಿಚಾರಶಕ್ತಿಯು ಲುಪ್ತವಾಗಿತ್ತು. ಪತಿಯ ವಿಯೋಗವು ಸಂಭವಿಸಬಹುದೆಂಬ ಕಾರಣದಿಂದ ಕ್ಷಣಮಾತ್ರದಲ್ಲಿ ಕೃಶಳಾಗಿ, ಕೈಯ, ಕಂಕಣಗಳು ಉದುರಿಹೋದವು. ಹಿಡಿದಿದ್ದ ಚಾಮರವು ಕೈಯಿಂದ ಜಾರಿತು. ತಲೆಯು ಕೆದರಿತ್ತು. ಕಳವಳಗೊಂಡ ಬುದ್ಧಿಯಿಂದ ಕೂಡಿದ್ದ ದೇಹವು ಬಿರುಗಾಳಿಗೆ ಸಿಕ್ಕಿದ ಬಾಳೆಯಗಿಡವು ಬುಡಮೇಲಾಗಿ ಬೀಳುವಂತೆ ಪ್ರಜ್ಞಾಹೀನಳಾಗಿ ನೆಲಕ್ಕುರುಳಿದಳು. ॥ ೨೪ ॥ ಹಾಸ್ಯದ ಹಿರಿಮೆಯನ್ನರಿಯದ ಪ್ರೇಯಸಿಯ ಪ್ರೇಮಪಾಶದ ದಾರ್ಢ್ಯವನ್ನು ಕಂಡು ಪರಮ ಕಾರುಣಿಕನಾದ ಭಗವಾನ್ ಶ್ರೀಕೃಷ್ಣನ ಹೃದಯವು ರುಕ್ಮಿಣಿಯ ಕುರಿತು ಕರುಣೆಯಿಂದ ತುಂಬಿಹೋಯಿತು. ॥ ೨೫ ॥ ಮರುಕ್ಷಣದಲ್ಲೇ ಮಂಚದಿಂದ ಕೆಳಗಿಳಿದು ತನ್ನ ನಾಲ್ಕು ಕೈಗಳಿಂದಲೂ ಪ್ರೇಯಸಿಯನ್ನು ಹಿಡಿದೆತ್ತಿ ಕೆದರಿಹೋಗಿದ್ದ ಆಕೆಯ ಕೇಶಪಾಶಗಳನ್ನು ಸರಿಪಡಿಸಿ ತನ್ನ ಶೀತಲವಾದ ಕರಕಮಲಗಳಿಂದ ಆಕೆಯ ಮುಖವನ್ನು ನೇವರಿಸಿದನು. ॥ ೨೬ ॥

ಪ್ರಮೃಜ್ಯಾಶ್ರುಕಲೇ ನೇತ್ರೇ ಸ್ತನೌ ಚೋಪಹತೌ ಶುಚಾ ।
ಆಶ್ಲಿಷ್ಯ ಬಾಹುನಾ ರಾಜನ್ನನನ್ಯವಿಷಯಾಂ ಸತೀಮ್ ॥ ೨೭ ॥

ಸಾಂತ್ವಯಾಮಾಸ ಸಾಂತ್ವಜ್ಞಃ ಕೃಪಯಾ ಕೃಪಣಾಂ ಪ್ರಭುಃ ।
ಹಾಸ್ಯಪ್ರೌಢಿಭ್ರಮಚ್ಚಿತ್ತಾಮತದರ್ಹಾಂ ಸತಾಂ ಗತಿಃ ॥ ೨೮ ॥

ಭಗವಂತನು ರುಕ್ಮಿಣಿಯ ಕಣ್ಣುಗಳನ್ನು ಮತ್ತು ಕಣ್ಣೀರಿನಿಂದ ನೆನೆದಿದ್ದ ಸ್ತನಗಳನ್ನು ಒರೆಸಿ, ತನ್ನಲ್ಲಿ ಅನನ್ಯ ಪ್ರೇಮಭಾವವುಳ್ಳ ಆ ಸಾಧ್ವಿಯಾದ ರುಕ್ಮಿಣಿಯನ್ನು ಗಾಢವಾಗಿ ಆಲಿಂಗಿಸಿಕೊಂಡನು. ॥ ೨೭ ॥ ಭಗವಾನ್ ಶ್ರೀಕೃಷ್ಣನು ಸಾಂತ್ವನಗೊಳಿಸುವುದರಲ್ಲಿ ಅತ್ಯಂತ ಕುಶಲನಾಗಿದ್ದನು ಮತ್ತು ತನ್ನ ಪ್ರೇಮಿ ಭಕ್ತರಿಗೆ ಏಕಮಾತ್ರ ಆಶ್ರಯನಾಗಿದ್ದನು. ಹಾಸ್ಯದ ಗಂಭೀರತೆಯಿಂದಾಗಿ ರುಕ್ಮಿಣಿಯ ಬುದ್ಧಿಯು ಭ್ರಮಿಸಿ, ಅತ್ಯಂತ ದೀನಳಾಗಿರುವುದನ್ನು ಕಂಡು ಶ್ರೀಕೃಷ್ಣನು ತನ್ನ ಪ್ರೇಯಸಿಯನ್ನು ನಯದ ಮಾತುಗಳಿಂದ ಸಮಾಧಾನಗೊಳಿಸಿದನು. ॥ ೨೮ ॥

ಶ್ರೀಭಗವಾನುವಾಚ

ಮಾ ಮಾ ವೈದರ್ಭ್ಯಸೂಯೇಥಾ
ಜಾನೇ ತ್ವಾಂ ಮತ್ಪರಾಯಣಾಮ್ ।
ತ್ವದ್ವಚಃ ಶ್ರೋತುಕಾಮೇನ
ಕ್ಷ್ವೇಲ್ಯಾಽಽಚರಿತಮಂಗನೇ ॥ ೨೯ ॥

ಮುಖಂ ಚ ಪ್ರೇಮಸಂರಂಭಸ್ಫುರಿತಾಧರಮೀಕ್ಷಿತುಮ್ ।
ಕಟಾಕ್ಷೇಪಾರುಣಾಪಾಂಗಂ ಸುಂದರಭ್ರುಕುಟೀತಟಮ್ ॥ ೩೦ ॥

ಅಯಂ ಹಿ ಪರಮೋ ಲಾಭೋ
ಗೃಹೇಷು ಗೃಹಮೇಧಿನಾಮ್ ।
ಯನ್ನರ್ಮೈರೀಯತೇ ಯಾಮಃ
ಪ್ರಿಯಯಾ ಭೀರು ಭಾಮಿನಿ ॥ ೩೧ ॥

ಭಗವಾನ್ ಶ್ರೀಕೃಷ್ಣನು ಹೇಳಿದನು - ವಿದರ್ಭನಂದಿನಿಯೇ! ನನ್ನಲ್ಲಿ ನೀನು ದೋಷವೆಣಿಸಬೇಡ. ನೀನು ಏಕಮಾತ್ರ ನನ್ನಲ್ಲೇ ಪರಾಯಣಳಾಗಿರುವೆ ಎಂಬುದನ್ನು ನಾನು ಬಲ್ಲೆನು. ಪ್ರಿಯ ಸಹಚರಿಯೇ! ನಿನ್ನ ಪ್ರೇಮಪೂರ್ಣವಾದ ಮಾತನ್ನು ಕೇಳಲೆಂದೇ ನಾನು ವಿನೋದಕ್ಕಾಗಿ ಹೀಗೆ ಮಾತನಾಡಿದೆ. ॥ ೨೯ ॥ ಸುಂದರಿಯೇ! ಪ್ರಣಯಕೋಪದಿಂದ ನಿನ್ನ ಕೆಂಪಾದ ತುಟಿಗಳು ಅದುರುವುದನ್ನೂ, ನಸುಗೆಂಪಾದ ಕಡೆಗಣ್ಣ ನೋಟವನ್ನೂ, ಗಂಟಿಕ್ಕಿದ ಸುಂದರವಾದ ಹುಬ್ಬುಗಳನ್ನು, ಮುನಿಸಿನಿಂದ ಕೂಡಿದ ಮುದ್ದುಮುಖವನ್ನೂ ನೋಡಬೇಕೆಂದೇ ನಾನು ಹೀಗೆ ಹೇಳಿದೆ. ॥ ೩೦ ॥ ಪರಮಪ್ರಿಯಳಾದ ಭಾಮಿನಿಯೇ! ಮನೆಯ ಕೆಲಸ-ಕಾರ್ಯಗಳಲ್ಲಿ ಹಗಲು-ರಾತ್ರಿಯೂ ತೊಡಗಿರುವ ಗೃಹಸ್ಥರಿಗೆ ತನ್ನ ಪ್ರಿಯತಮೆಯಾದ ಅರ್ಧಾಂಗಿಯೊಡನೆ ಸ್ವಲ್ಪಕಾಲವಾದರೂ ಪರಿಹಾಸ-ವಿನೋದದಲ್ಲಿ ಕಳೆಯುವುದೇ ಮಹತ್ತರವಾದ ಒಂದು ಲಾಭವಲ್ಲವೇ? ॥ ೩೧ ॥

ಶ್ರೀಶುಕ ಉವಾಚ

ಸೈವಂ ಭಗವತಾ ರಾಜನ್ ವೈದರ್ಭೀ ಪರಿಸಾಂತ್ವಿತಾ ।
ಜ್ಞಾತ್ವಾ ತತ್ಪರಿಹಾಸೋಕ್ತಿಂ ಪ್ರಿಯತ್ಯಾಗಭಯಂ ಜಹೌ ॥ ೩೨ ॥

ಬಭಾಷ ಋಷಭಂ ಪುಂಸಾಂ ವೀಕ್ಷಂತೀ ಭಗವನ್ಮುಖಮ್ ।
ಸವ್ರೀಡಹಾಸರುಚಿರಸ್ನಿಗ್ಧಾಪಾಂಗೇನ ಭಾರತ ॥ ೩೩ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ - ರಾಜೇಂದ್ರನೇ! ಭಗವಾನ್ ಶ್ರೀಕೃಷ್ಣನು ತನ್ನ ಪ್ರೇಯಸಿಯನ್ನು ಹೀಗೆ ನಯವಿನಯವಾದ ಮಾತುಗಳಿಂದ ಸಮಾಧಾನಗೊಳಿಸಲು, ತನ್ನ ಪ್ರಿಯಕರನು ಹೇಳಿದುದು ಹಾಸ್ಯಕ್ಕಾಗಿ ಎಂದು ತಿಳಿದ ರುಕ್ಮಿಣಿಯು ತನ್ನನ್ನು ಪರಿತ್ಯಾಗ ಮಾಡಿಬಿಡುವನೋ ಎಂಬ ಭಯವನ್ನು ತ್ಯಜಿಸಿ ನಿಶ್ಚಿಂತಳಾದಳು. ॥ ೩೨ ॥ ಪರೀಕ್ಷಿತನೇ! ಈಗ ಆಕೆಯು ನಾಚಿಕೆಯಿಂದ ಕೂಡಿದ ಪ್ರೇಮಪೂರ್ಣವಾದ ಕಡೆಗಣ್ಣ ನೋಟದಿಂದ ಪುರುಷಶ್ರೇಷ್ಠನಾದ ಭಗವಾನ್ ಶ್ರೀಕೃಷ್ಣನನ್ನು ವೀಕ್ಷಿಸುತ್ತಾ ಮಧುರವಾದ ಮಾತಿನಿಂದ ಇಂತೆಂದಳು. ॥ ೩೩ ॥

ರುಕ್ಮಿಣ್ಯುವಾಚ

ನನ್ವೇವಮೇತದರವಿಂದವಿಲೋಚನಾಹ
ಯದ್ವೈ ಭವಾನ್ ಭಗವತೋಽಸದೃಶೀ ವಿಭೂಮ್ನಃ ।
ಕ್ವ ಸ್ವೇ ಮಹಿಮ್ನ್ಯಭಿರತೋ ಭಗವಾಂಸ್ತ್ರ್ಯಧೀಶಃ
ಕ್ವಾಹಂ ಗುಣಪ್ರಕೃತಿರಜ್ಞಗೃಹೀತಪಾದಾ ॥ ೩೪ ॥

ರುಕ್ಮಿಣೀದೇವಿಯು ಹೇಳಿದಳು - ಕಮಲಾಕ್ಷನೇ! ನೀನು ಹೇಳಿರುವುದು ಸರಿಯಾಗಿಯೇ ಇದೆ. ಬಹಳ ದೊಡ್ಡವನಾದ ನಿನಗೆ ನಾನು ಖಂಡಿತವಾಗಿಯೂ ಸಮಾನಳಲ್ಲ. ಅಪಾರವಾದ ಮಹಿಮೆಯುಳ್ಳ, ಸ್ವಸ್ವರೂಪದಲ್ಲಿ ಆನಂದವನ್ನು ಹೊಂದುವ, ತ್ರಿಗುಣಗಳಿಗೆ ಸ್ವಾಮಿಯಾದ, ಬ್ರಹ್ಮಾದಿ ದೇವತೆಗಳಿಂದ ಸೇವಿತನಾದ ಷಡ್ಗುಣೈಶ್ವರ್ಯ ಸಂಪನ್ನನಾದ ನೀನೆಲ್ಲಿ? ತ್ರಿಗುಣಾತ್ಮಕ ಪ್ರಕೃತಿಯಾಗಿ, ಫಲಾಪೇಕ್ಷಿಗಳಾದ ಮೂಢರಿಂದ ವಂದಿಸಲ್ಪಡುವ ಪಾದಗಳುಳ್ಳ ನಾನೆಲ್ಲಿ? ॥ ೩೪ ॥

ಸತ್ಯಂ ಭಯಾದಿವ ಗುಣೇಭ್ಯ ಉರುಕ್ರಮಾಂತಃ
ಶೇತೇ ಸಮುದ್ರ ಉಪಲಂಭನಮಾತ್ರ ಆತ್ಮಾ ।
ನಿತ್ಯಂ ಕದಿಂದ್ರಿಯಗಣೈಃ ಕೃತವಿಗ್ರಹಸ್ತ್ವಂ
ತ್ವತ್ಸೇವಕೈರ್ನೃಪಪದಂ ವಿಧುತಂ ತಮೋಽಂಧಮ್ ॥ ೩೫ ॥

ತ್ವತ್ಪಾದಪದ್ಮಮಕರಂದಜುಷಾಂ ಮುನೀನಾಂ
ವರ್ತ್ಮಾಸ್ಫುಟಂ ನೃಪಶುಭಿರ್ನನು ದುರ್ವಿಭಾವ್ಯಮ್ ।
ಯಸ್ಮಾದಲೌಕಿಕಮಿವೇಹಿತಮೀಶ್ವರಸ್ಯ
ಭೂಮಂಸ್ತವೇಹಿತಮಥೋ ಅನು ಯೇ ಭವಂತಮ್ ॥ ೩೬ ॥

ನಿಷ್ಕಿಂಚನೋ ನನು ಭವಾನ್ ನ ಯತೋಽಸ್ತಿ ಕಿಂಚಿದ್
ಯಸ್ಮೈ ಬಲಿಂ ಬಲಿಭುಜೋಽಪಿ ಹರಂತ್ಯಜಾದ್ಯಾಃ ।
ನ ತ್ವಾ ವಿದಂತ್ಯಸುತೃಪೋಽಂತಕಮಾಢ್ಯತಾಂಧಾಃ
ಪ್ರೇಷ್ಠೋ ಭವಾನ್ ಬಲಿಭುಜಾಮಪಿ ತೇಽಪಿ ತುಭ್ಯಮ್ ॥ ೩೭ ॥

ತ್ವಂ ವೈ ಸಮಸ್ತಪುರುಷಾರ್ಥಮಯಃ ಫಲಾತ್ಮಾ
ಯದ್ವಾಂಛಯಾ ಸುಮತಯೋ ವಿಸೃಜಂತಿ ಕೃತ್ಸ್ನಮ್ ।
ತೇಷಾಂ ವಿಭೋ ಸಮುಚಿತೋ ಭವತಃ ಸಮಾಜಃ
ಪುಂಸಃ ಸ್ತ್ರಿಯಾಶ್ಚ ರತಯೋಃ ಸುಖದುಃಖಿನೋರ್ನ ॥ ೩೮ ॥

ತ್ರಿವಿಕ್ರಮಸ್ವರೂಪನೇ! 'ರಾಜರಿಗೆ ಹೆದರಿ ಸಮುದ್ರವನ್ನು ಸೇರಿಕೊಂಡಿರುವವ' ಎಂದು ನೀನು ಹೇಳಿದುದು ಸರಿಯೇ. ಆದರೆ ರಾಜರೆಂದರೆ ಭೂಮಂಡಲದ ರಾಜರಲ್ಲ, ಸತ್ತ್ವ,ರಜಸ್ತಮಗಳೆಂಬ ಮೂವರು ರಾಜರು. ಅವರಿಗೆ ಹೆದರಿ ನೀನು ಅಂತಃಕರಣರೂಪವಾದ ಸಮುದ್ರದಲ್ಲಿ ಸಚ್ಚಿದಾನಂದಮಯವಾದ ಆತ್ಮಸ್ವರೂಪದಲ್ಲಿ ರಾರಾಜಿಸುತ್ತಿರುವೆ. 'ಬಲಿಷ್ಠರೊಡನೆ ದ್ವೇಷವನ್ನು ಕಟ್ಟಿಕೊಂಡವರು' ಎಂದು ಹೇಳಿಕೊಂಡೆ. ಇದೂ ನಿಜವೇ. ಮಹಾಬಲಿಷ್ಠವಾದುದು ಈ ಇಂದ್ರಿಯಗಳೇ. ಅವರೊಂದಿಗೆ ನಿನ್ನ ವೈರವಿದ್ದೇ ಇದೆ. 'ರಾಜಸಿಂಹಾಸನದಿಂದ ವಂಚಿತರಾದವರು' ಎಂದು ಹೇಳಿದುದೂ ಸರಿಯೇ. ನಿನ್ನ ಪಾದಸೇವಕರೂ ಕೂಡ ರಾಜಪದವಿಯನ್ನು ಅಜ್ಞಾನಾಂಧಕಾರಮಯವಾದುದೆಂದು ಧಿಕ್ಕರಿಸುವಾಗ, ನಿತ್ಯತೃಪ್ತನೂ ಆಪ್ತಕಾಮನೂ ಆದ ನಿನ್ನ ವಿಷಯದಲ್ಲಿ ಹೇಳುವುದೇನಿದೆ? ॥ ೩೫ ॥ ನಾವು ಸ್ಪಷ್ಟವಾದ ಮಾರ್ಗವಿಲ್ಲದವರೆಂದೂ, ಲೌಕಿಕ ವ್ಯವಹಾರಗಳನ್ನು ಪಾಲಿಸತಕ್ಕವರಲ್ಲವೆಂದೂ, ಹೇಳಿಕೊಂಡೆ , ಇದೂ ಯಥಾರ್ಥವೇ ಆಗಿದೆ. ಏಕೆಂದರೆ, ನಿನ್ನ ಪಾದಪದ್ಮಗಳ ಮಕರಂದವನ್ನು ಸೇವಿಸುವವರ ಮಾರ್ಗವೂ ಅಸ್ಪಷ್ಟವಾಗಿರುತ್ತದೆ ಮತ್ತು ವಿಷಯಗಳಲ್ಲಿ ಮೈಮರೆತ ನರಪಶುಗಳಿಂದ ಅದನ್ನು ಊಹಿಸಲು ಸಾಧ್ಯವಾಗುವುದಿಲ್ಲ. ಓ ಅನಂತನೇ! ನಿನ್ನ ಮಾರ್ಗದಲ್ಲಿ ನಡೆಯುವ ನಿನ್ನ ಭಕ್ತರ ಚೇಷ್ಟೆಗಳೂ ಪ್ರಾಯಶಃ ಅಲೌಕಿಕವಾಗಿರುವಾಗ ಸಮಸ್ತ ಶಕ್ತಿಗಳ ಮತ್ತು ಐಶ್ವರ್ಯಗಳ ಆಶ್ರಯನಾದ ನಿನ್ನ ಚೇಷ್ಟೆಗಳು ಅಲೌಕಿಕವಾಗಿರುವುದರಲ್ಲಿ ಹೇಳುವುದೇನಿದೆ? ॥ ೩೬ ॥ ನಾವು ಅಕಿಂಚನರು ಎಂದು ಹೇಳಿಕೊಂಡೆ. ಆದರೆ ನಿನ್ನ ಅಕಿಂಚನತೆ ದರಿದ್ರತೆಯಲ್ಲ. ನೀನಲ್ಲದೆ ಬೇರೆ ಯಾವ ವಸ್ತುವೂ ಇಲ್ಲದಿರುವುದರಿಂದ ಎಲ್ಲವೂ ನೀನೇ ಆಗಿರುವೆ ಎಂಬುದೇ ಅರ್ಥವಾಗಿದೆ. ನಿನ್ನ ಬಳಿಯಲ್ಲಿ ಇಟ್ಟುಕೊಳ್ಳಲಿಕ್ಕಾಗಿ ಏನೂ ಇಲ್ಲ, ಆದರೆ ಯಾರು ಬ್ರಹ್ಮಾದಿ ದೇವತೆಗಳನ್ನು ಪೂಜಿಸುವರೋ, ಕಾಣಿಕೆಗಳನ್ನು ಅರ್ಪಿಸುವರೋ ಆ ಜನರೇ ನಿನ್ನನ್ನೂ ಪೂಜಿಸುತ್ತಲೇ ಇರುತ್ತಾರೆ. ನೀನು ಅವರಿಗೆ ಪ್ರಿಯನಾಗಿರುವೆ. ಅವರು ನಿನಗೆ ಪ್ರಿಯರಾಗಿರುವರು. ಧನಾಢ್ಯರಾದವರು ನಿನ್ನನ್ನು ಭಜಿಸುವುದಿಲ್ಲ ಎಂದು ನೀನು ಹೇಳಿದುದೂ ಉಚಿತವೇ ಆಗಿದೆ. ತಮ್ಮ ಶ್ರೀಮಂತಿಕೆಯ ಅಭಿಮಾನದಿಂದ ಕುರುಡರಾಗಿ, ಇಂದ್ರಿಯಗಳನ್ನು ತೃಪ್ತಿಪಡಿಸುವುದರಲ್ಲೇ ತೊಡಗಿರುವವರು ನಿನ್ನನ್ನು ಭಜಿಸುವುದಿಲ್ಲ, ಸೇವಿಸುವುದಿಲ್ಲ, ನೀನೇ ಮೃತ್ಯು(ಕಾಲ)ರೂಪದಿಂದ ಅವರ ತಲೆಯ ಮೇಲೆ ಕುಳಿತಿರುವೆ ಎಂಬುದನ್ನೂ ಅವರು ತಿಳಿಯರು. ॥ ೩೭ ॥ ಜಗತ್ತಿನಲ್ಲಿ ಜೀವಿಯ ವಾಂಛನೀಯವಾದ ಧರ್ಮ, ಅರ್ಥ, ಕಾಮ, ಮೋಕ್ಷ - ಇವೆಲ್ಲದರ ರೂಪದಲ್ಲಿ ನೀನೇ ಪ್ರಕಟನಾಗಿರುವೆ. ಸಮಸ್ತ ವೃತ್ತಿ-ಪ್ರವೃತ್ತಿಗಳು, ಸಾಧನೆಗಳು, ಸಿದ್ಧಿಗಳು ಮತ್ತು ಸಾಧ್ಯಗಳು ಇವೆಲ್ಲದರ ಫಲಸ್ವರೂಪ ನೀನೇ ಆಗಿರುವೆ. ವಿಚಾರಶೀಲರಾದ ಜನರು ನಿನ್ನನ್ನು ಪಡೆಯಲಿಕ್ಕಾಗಿ, ಎಲ್ಲವನ್ನೂ ಬಿಟ್ಟುಬಿಡುತ್ತಾರೆ. ಭಗವಂತಾ! ಅಂತಹ ವಿವೇಕೀ ಜನರೊಂದಿಗೆ ನಿನ್ನ ಸಂಬಂಧವಾಗಬೇಕು. ಸ್ತ್ರೀ- ಪುರುಷರ ಸಹವಾಸದಿಂದ ದೊರಕುವ ಸುಖ ಅಥವಾ ದುಃಖಗಳಿಗೆ ವಶೀಭೂತರಾದ ಜನರು ಎಂದಿಗೂ ನಿನ್ನೊಂದಿಗೆ ಸಂಬಂಧ ಬೆಳೆಸಲು ಯೋಗ್ಯರಾಗಿರುವುದಿಲ್ಲ. ॥ ೩೮ ॥

ತ್ವಂ ನ್ಯಸ್ತದಂಡಮುನಿಭಿರ್ಗದಿತಾನುಭಾವ
ಆತ್ಮಾಽಽತ್ಮದಶ್ಚ ಜಗತಾಮಿತಿ ಮೇ ವೃತೋಽಸಿ ।
ಹಿತ್ವಾ ಭವದ್ಭ್ರುವ ಉದೀರಿತಕಾಲವೇಗ-
ಧ್ವಸ್ತಾಶಿಷೋಽಬ್ಜಭವನಾಕಪತೀನ್ ಕುತೋಽನ್ಯೇ ॥ ೩೯ ॥

ಜಾಡ್ಯಂ ವಚಸ್ತವ ಗದಾಗ್ರಜ ಯಸ್ತು ಭೂಪಾನ್
ವಿದ್ರಾವ್ಯ ಶಾರ್ಙ್ಗನಿನದೇನ ಜಹರ್ಥ ಮಾಂ ತ್ವಮ್ ।
ಸಿಂಹೋ ಯಥಾ ಸ್ವಬಲಿಮೀಶ ಪಶೂನ್ ಸ್ವಭಾಗಂ
ತೇಭ್ಯೋ ಭಯಾದ್ಯದುದಧಿಂ ಶರಣಂ ಪ್ರಪನ್ನಃ ॥ ೪೦ ॥

ಯದ್ವಾಂಛಯಾ ನೃಪಶಿಖಾಮಣಯೋಽಂಗವೈನ್ಯ-
ಜಾಯಂತನಾಹುಷಗಯಾದಯ ಐಕಪತ್ಯಮ್ ।
ರಾಜ್ಯಂ ವಿಸೃಜ್ಯ ವಿವಿಶುರ್ವನಮಂಬುಜಾಕ್ಷ
ಸೀದಂತಿ ತೇಽನುಪದವೀಂ ತ ಇಹಾಸ್ಥಿತಾಃ ಕಿಮ್ ॥ ೪೧ ॥

ಕಾನ್ಯಂ ಶ್ರಯೇತ ತವ ಪಾದಸರೋಜಗಂಧಮ್
ಆಘ್ರಾಯ ಸನ್ಮುಖರಿತಂ ಜನತಾಪವರ್ಗಮ್ ।
ಲಕ್ಷ್ಮ್ಯಾಲಯಂ ತ್ವವಿಗಣಯ್ಯ ಗುಣಾಲಯಸ್ಯ
ಮರ್ತ್ಯಾ ಸದೋರುಭಯಮರ್ಥವಿವಿಕ್ತದೃಷ್ಟಿಃ ॥ ೪೨ ॥

ತಂ ತ್ವಾನುರೂಪಮಭಜಂ ಜಗತಾಮಧೀಶ-
ಮಾತ್ಮಾನಮತ್ರ ಚ ಪರತ್ರ ಚ ಕಾಮಪೂರಮ್ ।
ಸ್ಯಾನ್ಮೇ ತವಾಂಘ್ರಿರರಣಂ ಸೃತಿಭಿರ್ಭ್ರಮಂತ್ಯಾ
ಯೋ ವೈ ಭಜಂತಮುಪಯಾತ್ಯನೃತಾಪವರ್ಗಃ ॥ ೪೩ ॥

ಭಿಕ್ಷುಕರಿಂದ ವ್ಯರ್ಥವಾಗಿ ಪ್ರಶಂಸಿಸಲ್ಪಡುವವನು ಎಂದು ಹೇಳಿಕೊಂಡಿರುವೆ. ಆದರೆ ಯಾವ ಭಿಕ್ಷುಕರು? ಪರಮ ಶಾಂತರೂ, ಸಂನ್ಯಾಸಿಗಳೂ, ಮಹಾಪರಾಧಿಯನ್ನು ಶಿಕ್ಷಿಸಬಾರದೆಂದು ನಿಶ್ಚಯಿಸಿಕೊಂಡವರೂ ಆದ ಮಹಾತ್ಮರು ನಿನ್ನ ಮಹಿಮೆಯನ್ನು ವರ್ಣಿಸಿರುವರು. ನಾನು ದೂರದರ್ಶಿತ್ವವಿಲ್ಲದೆ ನಿನ್ನನ್ನು ವರಿಸಲಿಲ್ಲ. ನೀನು ಸಮಸ್ತ ಜಗತ್ತಿನ ಆತ್ಮನಾಗಿರುವೆ. ನಿನ್ನ ಪ್ರೇಮಿಗಳಿಗೆ ನಿನ್ನನ್ನೇ ಕೊಟ್ಟುಕೊಳ್ಳುವೆ. ನೀನು ಕೇವಲ ಹುಬ್ಬನ್ನು ಹಾರಿಸಿದ ಮಾತ್ರದಿಂದ ಪ್ರೇರಿತವಾದ ಕಾಲವು ಬ್ರಹ್ಮೇಂದ್ರಾದಿಗಳ ಐಶ್ವರ್ಯವನ್ನೂ, ಆಕಾಂಕ್ಷೆಗಳನ್ನೂ ಧ್ವಂಸಮಾಡಿಬಿಡುತ್ತದೆ. ಇದನ್ನು ತಿಳಿದೇ ನಾನು ಅವರನ್ನು ತ್ಯಾಗಮಾಡಿರುವೆನು. ಹಾಗಿರುವಾಗ ಬೇರೆಯವರ ವಿಷಯದಲ್ಲಿ ಹೇಳುವುದೇನಿದೆ? ॥ ೩೯ ॥

ಗದಾಗ್ರಜನೇ! ಸಿಂಹವು ತನ್ನ ಗರ್ಜನೆಯಿಂದ ಕಾಡಿನ ಮೃಗಗಳನ್ನು ಓಡಿಸಿ, ಅದರ ಭಾಗವನ್ನು ಕಿತ್ತುಕೊಂಡು ಹೋಗುವಂತೆ ಕೇವಲ ಶಾರ್ಙ್ಗಧನುಸ್ಸಿನ ಟಂಕಾರದಿಂದಲೇ ಸಮಸ್ತ ರಾಜರನ್ನು ಓಡಿಸಿ, ನಿನ್ನ ದಾಸಿಯಾದ ನನ್ನನ್ನು ಅಪಹರಿಸಿಕೊಂಡು ಬಂದಿರುವೆ. ಇದಕ್ಕೆ ನಾನೇ ಸಾಕ್ಷಿಯಾಗಿದ್ದೇನೆ. ಹೀಗಿರುವಾಗ ರಾಜರಿಗೆ ಹೆದರಿ ಸಮುದ್ರವನ್ನು ಆಶ್ರಯಿಸಿರುವೆನು ಎಂಬ ನಿನ್ನ ಮಾತು ಯುಕ್ತಿಯುಕ್ತವಾಗಿ ಕಾಣುವುದಿಲ್ಲ. ॥ ೪೦ ॥ ಕಮಲನಯನ! 'ನನ್ನನ್ನು ಅನುಸರಿಸಿದವರು ಪ್ರಾಯಶಃ ಕಷ್ಟವನ್ನೇ ಪಡುತ್ತಾರೆ' ಎಂದು ನೀನು ಹೇಗೆ ಹೇಳಬಲ್ಲೆ? ಹಿಂದೆ ಅಂಗ, ಪೃಥು, ಭರತ, ಯಯಾತಿ, ಗಯ ಇವೇ ಮೊದಲಾದ ರಾಜಾಧಿರಾಜರು ತಮ್ಮ ಏಕಚ್ಛತ್ರ ಸಾಮ್ರಾಜ್ಯವನ್ನು ಪರಿತ್ಯಜಿಸಿ ಕೇವಲ ನಿನ್ನನ್ನು ಸೇರಬೇಕೆಂಬ ಮಹತ್ವಾಕಾಂಕ್ಷೆಯಿಂದ ತಪಸ್ಸು ಮಾಡಲು ಅರಣ್ಯಕ್ಕೆ ಹೋದರು. ನಿನ್ನನ್ನು ಅನುಸರಣೆ ಮಾಡಿದ ಅವರು ಏನಾದರೂ ಕಷ್ಟವನ್ನು ಅನುಭವಿಸುತ್ತಿರುವರೇ? ॥ ೪೧ ॥ ಬೇರೆ ಯಾರಾದರೂ ರಾಜಕುಮಾರನನ್ನು ವರಿಸೆಂದು ನೀನು ನನಗೆ ಸಲಹೆ ಮಾಡಿದೆ. ಭಗವಂತಾ! ನೀನು ಸಮಸ್ತ ಗುಣಗಳಿಗೆ ಏಕಮಾತ್ರ ಆಶ್ರಯನಾಗಿರುವೆ. ಸತ್ಪುರುಷರು ನಿನ್ನ ಚರಣಕಮಲಗಳ ಗಂಧವನ್ನು ಆಘ್ರಾಣಿಸಿ ಅದನ್ನು ಗಾನಮಾಡುತ್ತಲೇ ಇರುತ್ತಾರೆ. ದಿವ್ಯವಾದ ಆ ನಿನ್ನ ಚರಣಕಮಲಗಳ ಆಶ್ರಯವನ್ನು ಹೊಂದಿದೊಡನೆಯೇ ಸಂಸಾರದ ಪಾಪ-ತಾಪಗಳಿಂದ ಮುಕ್ತಿ ಸಿಗುತ್ತದೆ. ಲಕ್ಷ್ಮಿಯು ಸದಾಕಾಲ ಅವುಗಳಲ್ಲೇ ನಿವಾಸಮಾಡಿಕೊಂಡಿದ್ದಾಳೆ. ತನ್ನ ಸ್ವಾರ್ಥ ಪರಮಾರ್ಥಗಳನ್ನು ಚೆನ್ನಾಗಿ ತಿಳಿದಿರುವ ಯಾವ ಸ್ತ್ರೀಯು ತಾನೇ ಒಮ್ಮೆ ಅಂತಹ ಚರಣಕಮಲಗಳ ಗಂಧವನ್ನು ಆಘ್ರಾಣಿಸಿದ ಬಳಿಕ ಅದನ್ನು ತಿರಸ್ಕರಿಸಿ, ಹುಟ್ಟು-ಸಾವುಗಳ, ರೋಗ-ರುಜಿನಗಳ ಭಯದಿಂದ ಪೀಡಿತರಾದ ಮನುಷ್ಯರನ್ನು ವರಿಸಿಯಾಳು? ಬುದ್ಧಿವಂತೆಯಾದ ಯಾವ ಸ್ತ್ರೀಯೂ ಹಾಗೆ ಮಾಡಲಾರಳು. ॥ ೪೨ ॥ ಪ್ರಭುವೇ! ಸಮಸ್ತ ಜಗತ್ತಿಗೂ ನೀನೇ ಸ್ವಾಮಿಯಾಗಿರುವೆ. ನೀನು ಇಹ-ಪರಲೋಕಗಳಲ್ಲಿರುವ ಸಮಸ್ತ ಪ್ರಾಣಿಗಳ ಆಸೆ ಆಕಾಂಕ್ಷೆಗಳನ್ನು ಪೂರ್ಣಗೊಳಿಸುವವನೂ ಮತ್ತು ಆತ್ಮನೂ ಆಗಿರುವೆ. ಅಂತಹ ನಿನ್ನನ್ನು ಆತ್ಮರೂಪನೆಂದೇ ತಿಳಿದು ನಾನು ವರಿಸಿರುವೆನು. ನನ್ನ ಕರ್ಮಗಳಿಗೆ ಅನುಸಾರವಾಗಿ ಬೇರೆ-ಬೇರೆ

ತಸ್ಯಾಃ ಸ್ಯುರಚ್ಯುತ ನೃಪಾ ಭವತೋಪದಿಷ್ಟಾಃ
ಸ್ತ್ರೀಣಾಂ ಗೃಹೇಷು ಖರಗೋಶ್ವವಿಡಾಲಭೃತ್ಯಾಃ ।
ಯತ್ಕರ್ಣಮೂಲಮರಿಕರ್ಷಣ ನೋಪಯಾಯಾದ್
ಯುಷ್ಮತ್ಕಥಾ ಮೃಡವಿರಿಂಚಸಭಾಸು ಗೀತಾ ॥ ೪೪ ॥

ತ್ವಕ್ಶ್ಮಶ್ರುರೋಮನಖಕೇಶಪಿನದ್ಧಮಂತ-
ರ್ಮಾಂಸಾಸ್ಥಿರಕ್ತಕೃಮಿವಿಟ್ಕಫಪಿತ್ತವಾತಮ್ ।
ಜೀವಚ್ಛವಂ ಭಜತಿ ಕಾಂತಮತಿರ್ವಿಮೂಢಾ
ಯಾ ತೇ ಪದಾಬ್ಜಮಕರಂದಮಜಿಘ್ರತೀ ಸ್ತ್ರೀ ॥ ೪೫ ॥

ಅಸ್ತ್ವಂಬುಜಾಕ್ಷ ಮಮ ತೇ ಚರಣಾನುರಾಗ
ಆತ್ಮನ್ರತಸ್ಯ ಮಯಿ ಚಾನತಿರಿಕ್ತದೃಷ್ಟೇಃ ।
ಯರ್ಹ್ಯಸ್ಯ ವೃದ್ಧಯ ಉಪಾತ್ತರಜೋಽತಿಮಾತ್ರೋ
ಮಾಮೀಕ್ಷಸೇ ತದು ಹ ನಃ ಪರಮಾನುಕಂಪಾ ॥ ೪೬ ॥

ನೈವಾಲೀಕಮಹಂ ಮನ್ಯೇ ವಚಸ್ತೇ ಮಧುಸೂದನ ।
ಅಂಬಾಯಾ ಇವ ಹಿ ಪ್ರಾಯಃ ಕನ್ಯಾಯಾಃ ಸ್ಯಾದ್ರತಿಃ ಕ್ವಚಿತ್
॥ ೪೭ ॥

ವ್ಯೂಢಾಯಾಶ್ಚಾಪಿ ಪುಂಶ್ಚಲ್ಯಾ ಮನೋಽಭ್ಯೇತಿ ನವಂ ನವಮ್ ।
ಬುಧೋಽಸತೀಂ ನ ಬಿಭೃಯಾತ್ ತಾಂ ಬಿಭ್ರದುಭಯಚ್ಯುತಃ
॥ ೪೮ ॥

ಶ್ರೀಭಗವಾನುವಾಚ

ಸಾಧ್ವ್ಯೇತಚ್ಛ್ರೋತುಕಾಮೈಸ್ತ್ವಂ ರಾಜಪುತ್ರಿ ಪ್ರಲಂಭಿತಾ ।
ಮಯೋದಿತಂ ಯದನ್ವಾತ್ಥ ಸರ್ವಂ ತತ್ ಸತ್ಯಮೇವ ಹಿ
॥ ೪೯ ॥

ಯೋನಿಗಳಲ್ಲಿ ಹುಟ್ಟಬೇಕಾದರೂ ನಾನು ಆ ಬಗ್ಗೆ ಯೋಚಿಸುವುದಿಲ್ಲ. ನಿನ್ನನ್ನು ಸದಾ ಭಜಿಸುವವರ ಮಿಥ್ಯಾಸಂಸಾರವನ್ನು ನಾಶಗೊಳಿಸುವ ನಿನ್ನ ಚರಣಕಮಲಗಳೇ ನನಗೆ ಎಲ್ಲ ಜನ್ಮಗಳಲ್ಲಿಯೂ ಆಶ್ರಯವಾಗಿರಲೆಂಬ ಒಂದೇ ಅಭಿಲಾಷೆ ಇರುವುದು. ॥ ೪೩ ॥ ಅಚ್ಯುತನೇ! ಶತ್ರುಧ್ವಂಸನೇ! ಕತ್ತೆಗಳಂತೆ, ಎತ್ತುಗಳಂತೆ, ಕುದುರೆಗಳಂತೆ, ಬೆಕ್ಕುಗಳಂತೆ ಮತ್ತು ಭೃತ್ಯರಂತೆ ಅರಮನೆಯಲ್ಲಿ ಹೆಂಗಸರ ಸೇವೆ ಮಾಡಿಕೊಂಡಿರುವ ರಾಜರ ಕುರಿತು ವರಿಸಲು ನೀನು ಸಂಕೇತ ಮಾಡಿರುವೆ. ಆದರೆ ಶಂಕರ, ಬ್ರಹ್ಮಾದಿ ದೇವತೆಗಳ ಸಭೆಯಲ್ಲಿ ಗಾನಮಾಡಲ್ಪಡುವ ನಿನ್ನ ಲೀಲಾಕಥೆಗಳು ಯಾರ ಕಿವಿಗಳಲ್ಲಿ ಪ್ರವೇಶಮಾಡಲಿಲ್ಲವೋ ಅಂತಹ ದುರ್ಭಾಗ್ಯರಾದ ಸ್ತ್ರೀಯರೇ ಆ ರಾಜರನ್ನು ವರಿಸಲಿ. ॥ ೪೪ ॥ ಈ ಮನುಷ್ಯ ಶರೀರವು ಜೀವಿಸಿದ್ದರೂ ಹೆಣದಂತೆ ಇದೆ. ಮೇಲಿನಿಂದ ಚರ್ಮ, ಗಡ್ಡ-ಮೀಸೆ, ರೋಮ, ನಖ, ಕೂದಲುಗಳಿಂದ ಮುಚ್ಚಿರುತ್ತದೆ. ಆದರೆ ಇದರೊಳಗೆ ಮಾಂಸ, ಎಲುಬು, ರಕ್ತ, ಕ್ರಿಮಿ, ಮಲಮೂತ್ರ, ಕಫ-ಪಿತ್ತ ವಾತಗಳಿಂದ ತುಂಬಿದೆ. ಎಂದಿಗೂ ನಿನ್ನ ಚರಣಾರವಿಂದದ ಮಕರಂದವನ್ನು ಆಘ್ರಾಣಿಸದ ಮೂಢ ಸ್ತ್ರೀಯರೇ ಇಂತಹವರನ್ನು ತಮ್ಮ ಪ್ರಿಯತಮನೆಂದು ತಿಳಿದು ಸೇವಿಸುತ್ತಿರುವರು. ॥ ೪೫ ॥ ಕಮಲಾಕ್ಷನೇ! ನೀನು ಆತ್ಮಾರಾಮನಾಗಿರುವೆ. ನಾನು ಸುಂದರಳಾಗಿದ್ದೇನೆ, ಗುಣವತಿಯಾಗಿದ್ದೇನೆ ಇದರ ಕಡೆಗೆ ನಿನ್ನ ದೃಷ್ಟಿಯೇ ಹೋಗುವುದಿಲ್ಲ, ಆದ್ದರಿಂದ ನೀನು ಉದಾಸೀನನಾಗಿರುವುದು ಸ್ವಾಭಾವಿಕವೇ ಆಗಿದೆ. ಹೀಗಿದ್ದರೂ ನಿನ್ನ ಚರಣಕಮಲಗಳಲ್ಲಿ ನನ್ನ ಅನುರಾಗವು ಸುದೃಢವಾಗಿರಲೆಂದೇ ನನಗೆ ಅಭಿಲಾಷೆಯು. ನೀನು ಈ ಜಗತ್ತಿನ ಅಭಿವೃದ್ಧಿಗೆ ಉತ್ಕಟ ರಜೋಗುಣವನ್ನು ಸ್ವೀಕರಿಸಿ ನನ್ನ ಕಡೆಗೆ ನೋಡಿದಾಗಲೇ ನಿನ್ನ ಪರಮಾನುಗ್ರಹವಾಗಿದೆ. ॥ ೪೬ ॥ ಮಧುಸೂದನ! 'ನಿನಗೆ ಅನುರೂಪನಾದ ಕ್ಷತ್ರಿಯ ಶ್ರೇಷ್ಠನನ್ನು ನೀನು ಸೇವಿಸು' ಎಂದೂ ನೀನೇ ಹೇಳಿದೆ. ನಿನ್ನ ಮಾತು ಸುಳ್ಳೆಂದು ನಾನು ಭಾವಿಸುವುದಿಲ್ಲ. ಕೆಲವರ ವಿಷಯದಲ್ಲಿ ಇದು ನಿಜ. ಕಾಶೀರಾಜನ ಮಗಳಾದ ಅಂಬೆಯು ಮೊದಲು ಒಬ್ಬನನ್ನು ಪ್ರೀತಿಸಿ, ಅನಂತರ ಮತ್ತೊಬ್ಬನನ್ನು ಪ್ರೀತಿಸಿದಳು. ಹಾಗೆಯೇ ಕೆಲವು ಕನ್ಯೆಯರು ಮೊದಲು ಒಬ್ಬನನ್ನು ಪ್ರೀತಿಸಿದ್ದು ಬಳಿಕ ಬೇರೆಯವರನ್ನು ಪ್ರೀತಿಸಬಹುದು. ॥ ೪೭ ॥ ಕುಲಟೆಯಾದ ಸ್ತ್ರೀಯಳ ಮನಸ್ಸು ವಿವಾಹವಾದ ಬಳಿಕವೂ ಹೊಸ-ಹೊಸ ಪುರುಷರ ಕಡೆಗೆ ಸೆಳೆಯಲ್ಪಡುತ್ತದೆ. ಬುದ್ಧಿವಂತನಾದವನು ಇಂತಹ ಕುಲಟೆಯಾದ ಸ್ತ್ರೀಯನ್ನು ಇಟ್ಟುಕೊಳ್ಳಬಾರದು. ಅಂತಹವಳನ್ನು ಪತ್ನಿಯನ್ನಾಗಿಸಿಕೊಳ್ಳುವವರು ಇಹ-ಪರ ಎರಡೂ ಲೋಕಗಳನ್ನು ಕಳೆದುಕೊಳ್ಳುವರು. ಉಭಯ ಭ್ರಷ್ಟರಾಗುವರು. ॥ ೪೮ ॥

ಭಗವಾನ್ ಶ್ರೀಕೃಷ್ಣನು ಹೇಳಿದನು – ಸಾಧ್ವಿಯೇ! ರಾಜಕುಮಾರಿಯೇ! ನಿನ್ನ ಇಂತಹ ಮಾತುಗಳನ್ನು ಕೇಳಬೇಕೆಂದೇ ನಾನು ನಿನ್ನಲ್ಲಿ ಹೀಗೆ ಪರಿಹಾಸದ ಮಾತುಗಳನ್ನಾಡಿದೆ. ನಾನು ಹೇಳಿದುದಕ್ಕೆ ನಿನ್ನ ವ್ಯಾಖ್ಯಾನವು ಸಮಂಜಸವಾಗಿದೆ. ಸತ್ಯವಾಗಿಯೂ ಇದೆ. ॥ ೪೯ ॥

ಯಾನ್ ಯಾನ್ ಕಾಮಯಸೇ ಕಾಮಾನ್ಮಯ್ಯಕಾಮಾಯ ಭಾಮಿನಿ ।
ಸಂತಿ ಹ್ಯೇಕಾಂತಭಕ್ತಾಯಾಸ್ತವ ಕಲ್ಯಾಣಿ ನಿತ್ಯದಾ ॥ ೫೦ ॥

ಉಪಲಬ್ಧಂ ಪತಿಪ್ರೇಮ ಪಾತಿವ್ರತ್ಯಂ ಚ ತೇಽನಘೇ ।
ಯದ್ವಾಕ್ಯೈಶ್ಚಾಲ್ಯಮಾನಾಯಾ ನ ಧೀರ್ಮಯ್ಯಪಕರ್ಷಿತಾ ॥ ೫೧ ॥

ಯೇ ಮಾಂ ಭಜಂತಿ ದಾಂಪತ್ಯೇ ತಪಸಾ ವ್ರತಚರ್ಯಯಾ ।
ಕಾಮಾತ್ಮಾನೋಽಪವರ್ಗೇಶಂ ಮೋಹಿತಾ ಮಮ ಮಾಯಯಾ ॥ ೫೨ ॥

ಮಾಂ ಪ್ರಾಪ್ಯ ಮಾನಿನ್ಯಪವರ್ಗಸಂಪದಂ
ವಾಂಛಂತಿ ಯೇ ಸಂಪದ ಏವ ತತ್ಪತಿಮ್ ।
ತೇ ಮಂದಭಾಗ್ಯಾ ನಿರಯೇಽಪಿ ಯೇ ನೃಣಾಂ
ಮಾತ್ರಾತ್ಮಕತ್ವಾನ್ನಿರಯಃ ಸುಸಂಗಮಃ ॥ ೫೩ ॥

ದಿಷ್ಟ್ಯಾ ಗೃಹೇಶ್ವರ್ಯಸಕೃನ್ಮಯಿ ತ್ವಯಾ
ಕೃತಾನುವೃತ್ತಿರ್ಭವಮೋಚನೀ ಖಲೈಃ ।
ಸುದುಷ್ಕರಾಸೌ ಸುತರಾಂ ದುರಾಶಿಷೋ
ಹ್ಯಸುಂಭರಾಯಾ ನಿಕೃತಿಂಜುಷಃ ಸ್ತ್ರಿಯಾಃ ॥ ೫೪ ॥

ನ ತ್ವಾದೃಶೀಂ ಪ್ರಣಯಿನೀಂ ಗೃಹಿಣೀಂ ಗೃಹೇಷು
ಪಶ್ಯಾಮಿ ಮಾನಿನಿ ಯಯಾ ಸ್ವವಿವಾಹಕಾಲೇ ।
ಪ್ರಾಪ್ತಾನ್ನೃಪಾನ್ನ ವಿಗಣಯ್ಯ ರಹೋಹರೋ ಮೇ
ಪ್ರಸ್ಥಾಪಿತೋ ದ್ವಿಜ ಉಪಶ್ರುತಸತ್ಕಥಸ್ಯ ॥ ೫೫ ॥

ಭ್ರಾತುರ್ವಿರೂಪಕರಣಂ ಯುಧಿ ನಿರ್ಜಿತಸ್ಯ
ಪ್ರೋದ್ವಾಹಪರ್ವಣಿ ಚ ತದ್ವಧಮಕ್ಷಗೋಷ್ಠ್ಯಾಮ್ ।
ದುಃಖಂ ಸಮುತ್ಥಮಸಹೋಽಸ್ಮದಯೋಗಭೀತ್ಯಾ
ನೈವಾಬ್ರವೀಃ ಕಿಮಪಿ ತೇನ ವಯಂ ಜಿತಾಸ್ತೇ ॥ ೫೬ ॥

ಸುಂದರೀ! ನೀನು ನನ್ನ ಅನನ್ಯ ಪ್ರೇಯಸಿಯಾಗಿರುವೆ. ನಿನಗೆ ನನ್ನಲ್ಲಿಯೂ ಅನನ್ಯ ಪ್ರೀತಿಯಿದೆ. ನೀನು ನನ್ನಿಂದ ಬಯಸುವುದೆಲ್ಲವೂ ನಿನಗೆ ಸರ್ವದಾ ಸಿದ್ಧವಾಗಿಯೇ ಇದೆ. ನನ್ನಲ್ಲಿ ಮಾಡಿದ ಅಭಿಲಾಷೆಗಳು ಸಾಂಸಾರಿಕ ಕಾಮನೆಗಳಂತೆ ಬಂಧನಕ್ಕೆ ಕಾರಣವಾಗುವುದಿಲ್ಲ. ಏಕಾಂತ ಭಕ್ತೆಯಾದ ನಿನಗೆ ಇತರ ಎಲ್ಲ ಕಾಮನೆಗಳನ್ನು ನಿವೃತ್ತಿಗೊಳಿಸಿ ನನ್ನನ್ನೇ ಸೇರಲು ಅನುವು ಮಾಡಿ ಕೊಡುತ್ತದೆ. ॥ ೫೦ ॥ ಪುಣ್ಯಾತ್ಮಳೇ! ನಾನು ನಿನ್ನ ಪತಿಪ್ರೇಮವನ್ನೂ, ಪಾತಿವ್ರತ್ಯವನ್ನೂ ಚೆನ್ನಾಗಿ ಕಂಡುಕೊಂಡೆ. ಬುದ್ಧಿಯನ್ನು ಕದಲಿಸಬಹುದಾದ ನನ್ನ ಮಾತುಗಳಿಂದಲೂ ನಿನ್ನ ಬುದ್ಧಿಯು ನನ್ನಿಂದ ಸ್ವಲ್ಪವಾದರೂ ವಿಚಲಿತವಾಗಲಿಲ್ಲ. ॥ ೫೧ ॥ ಪ್ರಿಯೇ! ನಾನು ಮೋಕ್ಷಕ್ಕೆ ಸ್ವಾಮಿಯಾಗಿರುವೆನು. ಜನರನ್ನು ಸಂಸಾರ ಸಾಗರದಿಂದ ಪಾರುಮಾಡುತ್ತೇನೆ. ನಾನಾ ವಿಧದ ವ್ರತ, ತಪಸ್ಸು ಮಾಡುತ್ತಾ ದಾಂಪತ್ಯ ಜೀವನದ ವಿಷಯ-ಸುಖದ ಅಭಿಲಾಷೆಯಿಂದ ನನ್ನ ಭಜನೆ ಮಾಡುವ ಸಕಾಮ ಪುರುಷರು ನನ್ನ ಮಾಯೆಯಿಂದ ಮೋಹಿತರಾಗಿದ್ದಾರೆ. ॥ ೫೨ ॥ ಮಾನಿನಿಯೇ! ನಾನು ಮೋಕ್ಷಕ್ಕೂ ಮತ್ತು ಸಮಸ್ತ ಸಂಪತ್ತುಗಳಿಗೂ ಅಧೀಶ್ವರನಾಗಿದ್ದೇನೆ. ಪರಮಾತ್ಮನಾದ ನನ್ನನ್ನು ಪಡೆದ ಬಳಿಕವೂ, ಯಾರು ಕೇವಲ ವಿಷಯಸುಖದ ಸಾಧನವಾದ ಸಂಪತ್ತನ್ನೇ ಬಯಸುತ್ತಾರೋ, ನನ್ನ ಪರಾಭಕ್ತಿಯನ್ನು ಬಯಸುವುದಿಲ್ಲವೋ ಅವರು ಮಂದಭಾಗ್ಯರೇ ಸರಿ, ಏಕೆಂದರೆ, ವಿಷಯಸುಖವಾದರೋ ನರಕದಲ್ಲಿ ಮತ್ತು ನರಕಕ್ಕೆ ಸಮಾನವಾದ ಹಂದಿ, ನಾಯಿ ಮೊದಲಾದ ಯೋನಿಗಳಲ್ಲಿಯೂ ದೊರಕಬಲ್ಲದು. ಆದರೆ ಆ ಜನರ ಮನಸ್ಸು ವಿಷಯಗಳಲ್ಲೇ ತೊಡಗಿರುತ್ತದೆ ಅದಕ್ಕಾಗಿ ಅವರಿಗೆ ನರಕಕ್ಕೆ ಹೋಗುವುದೂ ಒಳ್ಳೆಯದೆನಿಸುತ್ತದೆ. ॥ ೫೩ ॥ ಗೃಹೇಶ್ವರಿಯೇ! ಪ್ರಾಣಪ್ರಿಯಳೇ! ನೀನು ಅದೃಷ್ಟವಶದಿಂದ ಸಂಸಾರಬಂಧನದಿಂದ ವಿಮುಕ್ತಗೊಳಿಸುವ ನನ್ನ ಸೇವೆಯನ್ನು ನಿರಂತರವಾಗಿ ಮಾಡುತ್ತಿರುವೆ. ದುಷ್ಟರಾದವರು ಹೀಗೆಂದೂ ಮಾಡಲಾರರು. ಅದರಲ್ಲಿಯೂ ದುಷ್ಟವಾದ ಕಾಮನೆಗಳಿಂದ ತುಂಬಿಹೋಗುವ ಮನಸ್ಸುಳ್ಳ ಇಂದ್ರಿಯಗಳ ತೃಪ್ತಿಗಾಗಿ ಅನೇಕ ವಂಚನೆಗಳನ್ನು ಮಾಡುವ ಹೆಂಗಸಿಗೆ ಇಂತಹ ನಿಷ್ಕಾಮ ಸೇವೆಯನ್ನಂತೂ ಮಾಡಲು ಸಾಧ್ಯವೇ ಆಗುವುದಿಲ್ಲ. ॥ ೫೪ ॥ ಮಾನಿನಿಯೇ! ನನಗೆ ನನ್ನ ಮನೆಗಳಲ್ಲಿ ನಿನ್ನಂತೆ ಪ್ರೇಮಿಸುವ ಭಾರ್ಯೆ ಬೇರೆಯಾರೂ ಕಂಡುಬರುವುದಿಲ್ಲ. ಏಕೆಂದರೆ, (ವಿವಾಹದ ಸಮಯದಲ್ಲಿ) ನೀನು ನನ್ನನ್ನು ನೋಡಿರಲಿಲ್ಲ, ಕೇವಲ ನನ್ನ ಪ್ರಶಂಸೆಯನ್ನು ಕೇಳಿದ್ದೆಯಷ್ಟೆ. ಆಗಲೂ ನಿನ್ನ ವಿವಾಹಕ್ಕೆ ಬಂದಿರುವ ರಾಜರನ್ನು ಉಪೇಕ್ಷೆಮಾಡಿ ಬ್ರಾಹ್ಮಣನ ಮೂಲಕ ನನ್ನ ಬಳಿಗೆ ಗುಪ್ತ ಸಂದೇಶವನ್ನು ಕಳಿಸಿದ್ದೆ. ॥ ೫೫ ॥ ನಿನ್ನನ್ನು ಅಪಹರಿಸಿಕೊಂಡು ಬರುವಾಗ ನಿನ್ನ ಅಣ್ಣನನ್ನು ಯುದ್ಧದಲ್ಲಿ ಗೆದ್ದು ವಿರೂಪಗೊಳಿಸಿದ್ದೆ ಹಾಗೂ ಅನಿರುದ್ಧನ ವಿವಾಹ ಮಹೋತ್ಸವದಲ್ಲಿ ಪಗಡೆಯಾಡುವಾಗ ಬಲರಾಮನು ರುಕ್ಮಿಯನ್ನು ಕೊಂದು ಹಾಕಿದನು. ಆದರೆ ನನ್ನಿಂದ ವಿಯೋಗವಾಗುವ ಭಯದಿಂದ ನೀನು ಮೌನವಾಗಿ ಎಲ್ಲ ದುಃಖವನ್ನು ನುಂಗಿಕೊಂಡೆ. ನನ್ನಲ್ಲಿ ಒಂದು ಮಾತೂ ಆಡಲಿಲ್ಲ. ನಿನ್ನ ಈ ಗುಣದಿಂದ ನಾನು ನಿನ್ನ ವಶನಾಗಿಬಿಟ್ಟಿದ್ದೇನೆ. ॥ ೫೬ ॥

ದೂತಸ್ತ್ವಯಾಽತ್ಮಲಭನೇ ಸುವಿವಿಕ್ತಮಂತ್ರಃ
ಪ್ರಸ್ಥಾಪಿತೋ ಮಯಿ ಚಿರಾಯತಿ ಶೂನ್ಯಮೇತತ್ ।
ಮತ್ವಾ ಜಿಹಾಸ ಇದಮಂಗಮನನ್ಯಯೋಗ್ಯಂ
ತಿಷ್ಠೇತ ತತ್ತ್ವಯಿ ವಯಂ ಪ್ರತಿನಂದಯಾಮಃ ॥ ೫೭ ॥

ನೀನು ನನ್ನ ಪ್ರಾಪ್ತಿಗಾಗಿ ಬ್ರಾಹ್ಮಣನ ಮೂಲಕ ಗುಪ್ತ ಸಂದೇಶವನ್ನು ಕಳಿಸಿದ್ದೆ. ಆದರೆ ನಾನು ತಲುಪಲು ಸ್ವಲ್ಪ ತಡವಾದಾಗ ನಿನಗೆ ಇಡೀ ಜಗತ್ತೇ ಶೂನ್ಯವಾದಂತಾಗಿತ್ತು. ಆ ಸಮಯದಲ್ಲಿ ನಿನ್ನ ಈ ಸರ್ವಾಂಗ ಸುಂದರ ಶರೀರವನ್ನು ಬೇರೆ ಯಾರಿಗೂ ಅರ್ಪಿಸುವುದು ಯೋಗ್ಯವಲ್ಲವೆಂದು ತಿಳಿದು ಅದನ್ನು ಬಿಟ್ಟು ಬಿಡುವ ಸಂಕಲ್ಪವನ್ನು ಮಾಡಿದೆ. ನಿನ್ನ ಈ ಪ್ರೇಮಭಾವವು ನಿನ್ನೊಳಗೆ ಇರಲಿ. ಇದಕ್ಕೆ ಬದಲಾಗಿ ನಾನು ಏನನ್ನೂ ಕೊಡಲಾರೆ. ಸರ್ವೋತ್ಕೃಷ್ಟವಾದ ನಿನ್ನ ಈ ಪ್ರೇಮಭಾವವನ್ನು ನಾನು ಅಭಿನಂದಿಸುತ್ತೇನೆ. ॥ ೫೭ ॥

ಶ್ರೀಶುಕ ಉವಾಚ

ಏವಂ ಸೌರತಸಂಲಾಪೈರ್ಭಗವಾನ್ ಜಗದೀಶ್ವರಃ ।
ಸ್ವರತೋ ರಮಯಾ ರೇಮೇ ನರಲೋಕಂ ವಿಡಂಬಯನ್ ॥ ೫೮ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ - ಪರೀಕ್ಷಿತನೇ! ಜಗದೀಶ್ವರನಾದ ಭಗವಾನ್ ಶ್ರೀಕೃಷ್ಣನು ಆತ್ಮಾರಾಮನಾಗಿದ್ದಾನೆ. ಅವನು ಮನುಷ್ಯರಂತೆ ಲೀಲೆ ಮಾಡುತ್ತಿರುವಾಗ ಅದರಲ್ಲಿ ದಾಂಪತ್ಯ ಪ್ರೇಮವನ್ನು ವೃದ್ಧಿಪಡಿಸುವ ವಿನೋದದಿಂದ ತುಂಬಿದ ಮಾತು-ಕತೆಯನ್ನು ಮಾಡುತ್ತಾ ಮತ್ತು ಹೀಗೆ ಲಕ್ಷ್ಮೀರೂಪಳಾದ ರುಕ್ಮಿಣಿಯೊಂದಿಗೆ ವಿಹರಿಸುತ್ತಿದ್ದನು. ॥ ೫೮ ॥

ತಥಾನ್ಯಾಸಾಮಪಿ ವಿಭುರ್ಗೃಹೇಷು ಗೃಹವಾನಿವ ।
ಆಸ್ಥಿತೋ ಗೃಹಮೇಧೀಯಾಂಧರ್ಮಾಂಲ್ಲೋಕಗುರುರ್ಹರಿಃ ॥ ೫೯ ॥

ಭಗವಾನ್ ಶ್ರೀಕೃಷ್ಣನು ಸಮಸ್ತ ಜಗತ್ತಿಗೆ ಶಿಕ್ಷಣವನ್ನು ಕೊಡುವ ಸರ್ವವ್ಯಾಪಕನಾಗಿದ್ದಾನೆ. ಅವನು ಹೀಗೆಯೇ ಇತರ ಪತ್ನಿಯರ ಅರಮನೆಗಳಲ್ಲಿಯೂ ಗೃಹಸ್ಥರಂತೆ ಇರುತ್ತಾ, ಗೃಹಸ್ಥೋಚಿತವಾದ ಧರ್ಮವನ್ನು ಪಾಲಿಸುತ್ತಿದ್ದನು. ॥ ೫೯ ॥

ಅರವತ್ತನೆಯ ಅಧ್ಯಾಯವು ಮುಗಿಯಿತು. ॥ ೬೦ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮಸ್ಕಂಧೇ ಉತ್ತರಾರ್ಧೇ
ಕೃಷ್ಣರುಕ್ಮಿಣೀಸಂವಾದೋ ನಾಮ ಷಷ್ಟಿತಮೋಽಧ್ಯಾಯಃ ॥ ೬೦ ॥

ಅರವತ್ತೊಂದನೆಯ ಅಧ್ಯಾಯ

ಭಗವಂತನ ಸಂತತಿಯ ವರ್ಣನೆ - ಅನಿರುದ್ಧನ ವಿವಾಹ - ರುಕ್ಮಿಯ ವಧೆ

ಶ್ರೀಶುಕ ಉವಾಚ

ಏಕೈಕಶಸ್ತಾಃ ಕೃಷ್ಣಸ್ಯ ಪುತ್ರಾನ್ ದಶ ದಶಾಬಲಾಃ ।
ಅಜೀಜನನ್ನನವಮಾನ್ಪಿತುಃ ಸರ್ವಾತ್ಮಸಂಪದಾ ॥ ೧ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ - ಎಲೈ ಪರೀಕ್ಷಿತನೇ! ಭಗವಾನ್ ಶ್ರೀಕೃಷ್ಣನ ಪ್ರತಿಯೊರ್ವ ಪತ್ನಿಯರಲ್ಲಿ ಹತ್ತು-ಹತ್ತು ಪುತ್ರರು ಹುಟ್ಟಿದರು. ಅವರೆಲ್ಲರೂ ರೂಪ, ಬಲಾದಿಗಳಲ್ಲಿ ತಂದೆಯಾದ ಶ್ರೀಕೃಷ್ಣನಿಗಿಂತ ಯಾವುದರಲ್ಲಿಯೂ ಕಡಿಮೆಯಾಗಿರಲಿಲ್ಲ. ॥ ೧ ॥

ಗೃಹಾದನಪಗಂ ವೀಕ್ಷ್ಯ ರಾಜಪುತ್ರ್ಯೋಽಚ್ಯುತಂ ಸ್ಥಿತಮ್ ।
ಪ್ರೇಷ್ಠಂ ನ್ಯಮಂಸತ ಸ್ವಂ ಸ್ವಂ ನ ತತ್ತತ್ತ್ವವಿದಃ ಸ್ತ್ರಿಯಃ ॥ ೨ ॥

ತಮ್ಮ ಭವನದಿಂದ ಯಾವಾಗಲೂ ಹೊರಕ್ಕೆ ಹೋಗದೆ ತಮ್ಮೊಡನೆಯೇ ಇರುತ್ತಿದ್ದ ಶ್ರೀಕೃಷ್ಣನನ್ನು ನೋಡಿ ಅವನ ಎಲ್ಲ ಪತ್ನಿಯರು ಶ್ರೀಕೃಷ್ಣನು ತನ್ನನ್ನೇ ಬಹಳವಾಗಿ ಪ್ರೀತಿಸುತ್ತಿರುವನೆಂದು ಭಾವಿಸುತ್ತಿದ್ದರು. ಪರೀಕ್ಷಿತನೇ! ನಿಜವಾಗಿ ಹೇಳಬೇಕಾದರೆ ಅವರು ತಮ್ಮ ಪತಿಯಾದ ಶ್ರೀಕೃಷ್ಣನ ತತ್ತ್ವವನ್ನು ಮಹಿಮೆಯನ್ನು ತಿಳಿದವರಾಗಿರಲಿಲ್ಲ. ॥ ೨ ॥

ಚಾರ್ವಬ್ಜಕೋಶವದನಾಯತಬಾಹುನೇತ್ರ-
ಸಪ್ರೇಮಹಾಸರಸವೀಕ್ಷಿತವಲ್ಗುಜಲ್ಪೈಃ ।
ಸಮ್ಮೋಹಿತಾ ಭಗವತೋ ನ ಮನೋ ವಿಜೇತುಂ
ಸ್ವೈರ್ವಿಭ್ರಮೈಃ ಸಮಶಕನ್ವನಿತಾ ವಿಭೂಮ್ನಃ ॥ ೩ ॥

ಸ್ಮಾಯಾವಲೋಕಲವದರ್ಶಿತಭಾವಹಾರಿ-
ಭ್ರೂಮಂಡಲಪ್ರಹಿತಸೌರತಮಂತ್ರಶೌಂಡೈಃ ।
ಪತ್ನ್ಯಸ್ತು ಷೋಡಶಸಹಸ್ರಮನಂಗಬಾಣೈ-
ರ್ಯಸ್ಯೇಂದ್ರಿಯಂ ವಿಮಥಿತುಂ ಕರಣೈರ್ನ ಶೇಕುಃ ॥ ೪ ॥

ಇತ್ಥಂ ರಮಾಪತಿಮವಾಪ್ಯ ಪತಿಂ ಸ್ತ್ರಿಯಸ್ತಾ
ಬ್ರಹ್ಮಾದಯೋಽಪಿ ನ ವಿದುಃ ಪದವೀಂ ಯದೀಯಾಮ್ ।
ಭೇಜುರ್ಮುದಾವಿರತಮೇಧಿತಯಾನುರಾಗ-
ಹಾಸಾವಲೋಕನವಸಂಗಮಲಾಲಸಾದ್ಯಮ್ ॥ ೫ ॥

ಪ್ರತ್ಯುದ್ಗಮಾಸನವರಾರ್ಹಣಪಾದಶೌಚ-
ತಾಂಬೂಲವಿಶ್ರಮಣವೀಜನಗಂಧಮಾಲ್ಯೈಃ ।
ಕೇಶಪ್ರಸಾರಶಯನಸ್ನಪನೋಪಹಾರ್ಯೈ-
ರ್ದಾಸೀಶತಾ ಅಪಿ ವಿಭೋರ್ವಿದಧುಃ ಸ್ಮ ದಾಸ್ಯಮ್ ॥ ೬ ॥

ತಾಸಾಂ ಯಾ ದಶಪುತ್ರಾಣಾಂ ಕೃಷ್ಣಸ್ತ್ರೀಣಾಂ ಪುರೋದಿತಾಃ ।
ಅಷ್ಟೌ ಮಹಿಷ್ಯಸ್ತತ್ಪುತ್ರಾನ್ ಪ್ರದ್ಯುಮ್ನಾದೀನ್ ಗೃಣಾಮಿ ತೇ ॥ ೭ ॥

ಚಾರುದೇಷ್ಣಃ ಸುದೇಷ್ಣಶ್ಚ ಚಾರುದೇಹಶ್ಚ ವೀರ್ಯವಾನ್ ।
ಸುಚಾರುಶ್ಚಾರುಗುಪ್ತಶ್ಚ ಭದ್ರಚಾರುಸ್ತಥಾಪರಃ ॥ ೮ ॥

ಚಾರುಚಂದ್ರೋ ವಿಚಾರುಶ್ಚ ಚಾರುಶ್ಚ ದಶಮೋ ಹರೇಃ ।
ಪ್ರದ್ಯುಮ್ನಪ್ರಮುಖಾ ಜಾತಾ ರುಕ್ಮಿಣ್ಯಾಂ ನಾವಮಾಃ ಪಿತುಃ ॥ ೯ ॥

ಆ ಸುಂದರಿಯರು – ತನ್ನ ಆತ್ಮಾನಂದದಲ್ಲೇ ನೆಲೆಸಿರುವ ಭಗವಾನ್ ಶ್ರೀಕೃಷ್ಣನ ಕಮಲದ ಮೊಗ್ಗಿನಂತಹ ಸುಂದರ ಮುಖ, ನೀಳವಾದ ಬಾಹುಗಳು, ಕಮಲದಂಥ ವಿಶಾಲನೇತ್ರಗಳು, ಪ್ರೇಮ ತುಂಬಿದ ಮಂದಹಾಸ, ರಸಮಯ ಕುಡಿನೋಟ, ಮಧುರವಾದ ಮಾತು – ಇವುಗಳಿಂದ ಸ್ವತಃ ಮೋಹಿತರಾಗುತ್ತಿದ್ದರು. ಅವರು ತಮ್ಮ ಶೃಂಗಾರ ಸಂಬಂಧವಾದ ಹಾವ-ಭಾವಗಳಿಂದ ಅವನ ಮನಸ್ಸನ್ನು ತನ್ನ ಕಡೆಗೆ ಸೆಳೆದುಕೊಳ್ಳಲು ಸಮರ್ಥರಾಗಲಿಲ್ಲ. ॥ ೩ ॥ ಅವರು ಹದಿನಾರು ಸಾವಿರಕ್ಕಿಂತಲೂ ಹೆಚ್ಚಿನ ಸಂಖ್ಯೆಯಲ್ಲಿದ್ದರು. ಅವರೆಲ್ಲರೂ ತಮ್ಮ ಮಂದವಾದ ಮುಗುಳ್ನಗೆಯಿಂದ, ಓರೆನೋಟದಿಂದ ಕೂಡಿದ ಹುಬ್ಬುಗಳ ಸಂಕೇತದಿಂದ, ಕಾಮ-ಕಲೆಯ ಭಾವಗಳಿಂದ ತುಂಬಿದ ಪ್ರೇಮಬಾಣಗಳನ್ನು ಪ್ರಯೋಗಿಸುತ್ತಿದ್ದರು. ಆದರೆ ಯಾವುದೇ ವಿಧದಿಂದ, ಯಾವುದೇ ಸಾಧನೆಯಿಂದ ಅವರು ಭಗವಂತನ ಮನ-ಇಂದ್ರಿಯಗಳಲ್ಲಿ ಚಂಚಲತೆಯನ್ನು ಉಂಟುಮಾಡಲು ಅಸಮರ್ಥರಾಗಿದ್ದರು. ॥ ೪ ॥ ಪರೀಕ್ಷಿತನೇ! ಬ್ರಹ್ಮಾದಿ ಮಹಾ-ಮಹಾ ದೇವತೆಗಳೂ ಕೂಡ ಭಗವಂತನ ವಾಸ್ತವಿಕ ಸ್ವರೂಪವನ್ನು ಅಥವಾ ಅವನನ್ನು ಪಡೆಯುವ ಮಾರ್ಗವನ್ನು ತಿಳಿಯುತ್ತಿರಲಿಲ್ಲ. ಅಂತಹ ರಮಾರಮಣ ಭಗವಾನ್ ಶ್ರೀಕೃಷ್ಣನು ಆ ಸ್ತ್ರೀಯರಿಗೆ ಪತಿಯಾಗಿ ದೊರಕಿದ್ದನು. ಈಗ ನಿತ್ಯ-ನಿರಂತರ ಅವರ ಪ್ರೇಮ-ಆನಂದದ ಅಭಿವೃದ್ಧಿಯಾಗುತ್ತಲೇ ಇತ್ತು. ಅವರು ಪ್ರೇಮತುಂಬಿದ ಮಂದಹಾಸದಿಂದ, ಕುಡಿನೋಟದಿಂದ, ನವ ಸಮಾಗಮದ ಲಾಲಸೆಗಳಿಂದ ಭಗವಂತನ ಸೇವೆ ಮಾಡುತ್ತಾ ಇದ್ದರು. ॥ ೫ ॥ ಅವರಲ್ಲಿ ಎಲ್ಲ ಪತ್ನಿಯರೊಂದಿಗೆ ಸೇವೆಮಾಡುವಂತಹ ನೂರಾರು ದಾಸಿಯರಿರುತ್ತಿದ್ದರು. ಹೀಗಿದ್ದರೂ ಅವರ ಅರಮನೆಗೆ ಭಗವಂತನು ದಯಮಾಡಿಸಿದಾಗ ಅವರು ಸ್ವತಃ ಮುಂದೆ ಬಂದು ಆದರದಿಂದ ಅವನನ್ನು ಸ್ವಾಗತಿಸಿ ಶ್ರೇಷ್ಠ ಆಸನದಲ್ಲಿ ಕುಳ್ಳಿರಿಸಿ, ಉತ್ತಮ ಸಾಮಗ್ರಿಗಳಿಂದ ಅವನನ್ನು ಪೂಜಿಸಿ, ಚರಣಕಮಲಗಳನ್ನು ತೊಳೆದು ತಾಂಬೂಲವನ್ನಿತ್ತು, ಕಾಲುಗಳನ್ನು ಒತ್ತಿ ಅವನ ಬಳಲಿಕೆಯನ್ನು ದೂರಗೊಳಿಸುತ್ತಿದ್ದರು. ಬೀಸಣಿಗೆಯಿಂದ ಗಾಳಿಹಾಕಿ, ಸುಗಂಧ ದ್ರವ್ಯ-ಚಂದನವನ್ನು ಪೂಸುವರು. ಹೂವಿನ ಹಾರವನ್ನು ತೊಡಿಸುವರು. ಕೂದಲನ್ನು ಸರಿಪಡಿಸುವರು. ಸ್ನಾನಮಾಡಿಸುವರು, ಮಲಗಿಸುವರು. ಷಡ್ರಸೋಪೇತವಾದ ಭೋಜನವನ್ನು ಮಾಡಿಸುವರು – ಹೀಗೆ ತಮ್ಮ ಕೈಗಳಿಂದ ಭಗವಂತನ ಸೇವೆ ಮಾಡುತ್ತಿದ್ದರು. ॥ ೬ ॥

ಪರೀಕ್ಷಿತನೇ! ಭಗವಾನ್ ಶ್ರೀಕೃಷ್ಣನ ಪ್ರತಿಯೊರ್ವ ಪತ್ನಿಯರಲ್ಲಿ ಹತ್ತತ್ತು ಪುತ್ರರು ಹುಟ್ಟಿದರೆಂದು ನಾನು ಹೇಳಿಬಿಟ್ಟಿದ್ದೆ. ಆ ರಾಣಿಯರಲ್ಲಿ ಎಂಟು ಮಂದಿ ಪಟ್ಟದರಸಿಯರಿದ್ದರು. ಅವರ ವಿವಾಹದ ಕಥೆಯನ್ನು ಮೊದಲೇ ವರ್ಣಿಸಿರುವೆನು. ಈಗ ಪ್ರದ್ಯುಮ್ನನೇ ಮುಂತಾದ ಅವನ ಪುತ್ರರನ್ನು ವರ್ಣಿಸುವೆನು. ॥ ೭ ॥ ಪ್ರದ್ಯುಮ್ನ, ಚಾರುದೇಷ್ಣ, ಸುದೇಷ್ಣ, ಪರಾಕ್ರಮಿ ಚಾರುದೇಹ, ಸುಚಾರು, ಚಾರುಗುಪ್ತ, ಭದ್ರಚಾರು, ಚಾರುಚಂದ್ರ, ವಿಚಾರು ಮತ್ತು ಚಾರು ಎಂಬ ಹತ್ತು ಪುತ್ರರು ರುಕ್ಮಿಣಿಯ ಗರ್ಭದಿಂದ ಹುಟ್ಟಿದ್ದರು. ಇವರೆಲ್ಲರೂ ತಂದೆಯಾದ ಭಗವಾನ್ ಶ್ರೀಕೃಷ್ಣನಿಗೆ ಯಾವುದರಲ್ಲಿಯೂ ಕಡಿಮೆಯಾಗಿರಲಿಲ್ಲ. ॥ ೮-೯ ॥

ಭಾನುಃ ಸುಭಾನುಃ ಸ್ವರ್ಭಾನುಃ ಪ್ರಭಾನುರ್ಭಾನುಮಾಂಸ್ತಥಾ ।
ಚಂದ್ರಭಾನುರ್ಬೃಹದ್ಭಾನುರತಿಭಾನುಸ್ತಥಾಷ್ಟಮಃ ॥ ೧೦ ॥

ಶ್ರೀಭಾನುಃ ಪ್ರತಿಭಾನುಶ್ಚ ಸತ್ಯಭಾಮಾತ್ಮಜಾ ದಶ ।
ಸಾಂಬಃ ಸುಮಿತ್ರಃ ಪುರುಜಿಚ್ಛತಜಿಚ್ಚ ಸಹಸ್ರಜಿತ್ ॥ ೧೧ ॥

ವಿಜಯಶ್ಚಿತ್ರಕೇತುಶ್ಚ ವಸುಮಾನ್ ದ್ರವಿಡಃ ಕ್ರತುಃ ।
ಜಾಂಬವತ್ಯಾಃ ಸುತಾ ಹ್ಯೇತೇ ಸಾಂಬಾದ್ಯಾಃ ಪಿತೃಸಮ್ಮತಾಃ ॥ ೧೨ ॥

ವೀರಶ್ಚಂದ್ರೋಽಶ್ವಸೇನಶ್ಚ ಚಿತ್ರಗುರ್ವೇಗವಾನ್ ವೃಷಃ ।
ಆಮಃ ಶಂಕುರ್ವಸುಃ ಶ್ರೀಮಾನ್ ಕುಂತಿರ್ನಾಗ್ನಜಿತೇಃ ಸುತಾಃ ॥ ೧೩ ॥

ಶ್ರುತಃ ಕವಿರ್ವೃಷೋ ವೀರಃ ಸುಬಾಹುರ್ಭದ್ರ ಏಕಲಃ ।
ಶಾಂತಿರ್ದರ್ಶಃ ಪೂರ್ಣಮಾಸಃ ಕಾಲಿಂದ್ಯಾಃ ಸೋಮಕೋಽವರಃ ॥ ೧೪ ॥

ಪ್ರಘೋಷೋ ಗಾತ್ರವಾನ್ಸಿಂಹೋ ಬಲಃ ಪ್ರಬಲ ಊರ್ಧ್ವಗಃ ।
ಮಾದ್ರ್ಯಾಃ ಪುತ್ರಾ ಮಹಾಶಕ್ತಿಃ ಸಹ ಓಜೋಽಪರಾಜಿತಃ ॥ ೧೫ ॥

ವೃಕೋ ಹರ್ಷೋಽನಿಲೋ ಗೃಧ್ರೋ ವರ್ಧನೋಽನ್ನಾದ ಏವ ಚ ।
ಮಹಾಶಃ ಪಾವನೋ ವಹ್ನಿರ್ಮಿತ್ರವಿಂದಾತ್ಮಜಾಃ ಕ್ಷುಧಿಃ ॥ ೧೬ ॥

ಸಂಗ್ರಾಮಜಿದ್ಬೃಹತ್ಸೇನಃ ಶೂರಃ ಪ್ರಹರಣೋಽರಿಜಿತ್ ।
ಜಯಃ ಸುಭದ್ರೋ ಭದ್ರಾಯಾ ವಾಮ ಆಯುಶ್ಚ ಸತ್ಯಕಃ ॥ ೧೭ ॥

ದೀಪ್ತಿಮಾಂಸ್ತಾಮ್ರತಪ್ತಾದ್ಯಾ ರೋಹಿಣ್ಯಾಸ್ತನಯಾ ಹರೇಃ ।
ಪ್ರದ್ಯುಮ್ನಾಚ್ಚಾನಿರುದ್ಧೋಽಭೂದ್ರುಕ್ಮವತ್ಯಾಂ ಮಹಾಬಲಃ ॥ ೧೮ ॥

ಪುತ್ರ್ಯಾಂ ತು ರುಕ್ಮಿಣೋ ರಾಜನ್ ನಾಮ್ನಾ ಭೋಜಕಟೇ ಪುರೇ ।
ಏತೇಷಾಂ ಪುತ್ರಪೌತ್ರಾಶ್ಚ ಬಭೂವುಃ ಕೋಟಿಶೋ ನೃಪ ।
ಮಾತರಃ ಕೃಷ್ಣಜಾತೀನಾಂ ಸಹಸ್ರಾಣಿ ಚ ಷೋಡಶ ॥ ೧೯ ॥

ರಾಜೋವಾಚ

ಕಥಂ ರುಕ್ಮ್ಯರಿಪುತ್ರಾಯ ಪ್ರಾದಾದ್ದುಹಿತರಂ ಯುಧಿ ।
ಕೃಷ್ಣೇನ ಪರಿಭೂತಸ್ತಂ ಹಂತುಂ ರಂಧ್ರಂ ಪ್ರತೀಕ್ಷತೇ ।
ಏತದಾಖ್ಯಾಹಿ ಮೇ ವಿದ್ವನ್ ದ್ವಿಷೋರ್ವೈವಾಹಿಕಂ ಮಿಥಃ ॥ ೨೦ ॥

ಅನಾಗತಮತೀತಂ ಚ ವರ್ತಮಾನಮತೀಂದ್ರಿಯಮ್ ।
ವಿಪ್ರಕೃಷ್ಟಂ ವ್ಯವಹಿತಂ ಸಮ್ಯಕ್ ಪಶ್ಯಂತಿ ಯೋಗಿನಃ ॥ ೨೧ ॥

ಸತ್ಯಭಾಮೆಯಲ್ಲಿಯೂ ಭಾನು, ಸುಭಾನು, ಸ್ವರ್ಭಾನು, ಪ್ರಭಾನು, ಭಾನುಮಂತ, ಚಂದ್ರಭಾನು, ಬೃಹದ್ಭಾನು, ಅತಿಭಾನು, ಶ್ರೀಭಾನು ಮತ್ತು ಪ್ರತಿಭಾನು ಎಂಬ ಹತ್ತು ಪುತ್ರರು ಹುಟ್ಟಿದರು. ಜಾಂಬವತಿಯಲ್ಲಿಯೂ - ಸಾಂಬ, ಸುಮಿತ್ರ, ಪುರುಜಿತ್, ಶತಜಿತ್, ಸಹಸ್ರಜಿತ್, ವಿಜಯ, ಚಿತ್ರಕೇತು, ವಸುಮಾನ್ ದ್ರವಿಡ ಮತ್ತು ಕ್ರತು ಎಂಬ ಹತ್ತು ಪುತ್ರರುದಿಸಿದರು. ಇವರೆಲ್ಲರೂ ಶ್ರೀಕೃಷ್ಣನಿಗೆ ಪ್ರಿಯರಾಗಿದ್ದರು. ॥ ೧೦-೧೨ ॥ ನಾಗ್ನಜಿತಿ ಸತ್ಯೆಯಲ್ಲಿಯೂ ವೀರ, ಚಂದ್ರ, ಅಶ್ವಸೇನ, ಚಿತ್ರಗು, ವೇಗವಾನ್, ವೃಷ, ಆಮ, ಶಂಕು, ವಸು ಮತ್ತು ಪರಮತೇಜಸ್ವಿಯಾದ ಕುಂತಿ ಎಂಬ ಹತ್ತು ಮಕ್ಕಳಾದರು. ॥ ೧೩ ॥ ಕಾಲಿಂದಿಗೆ ಶ್ರುತ, ಕವಿ, ವೃಷ ವೀರ, ಸುಬಾಹು, ಭದ್ರ, ಶಾಂತಿ, ದರ್ಶ, ಪೂರ್ಣಮಾಸ ಮತ್ತು ಸೋಮಕ ಎಂಬ ಪುತ್ರರಿದ್ದರು. ॥ ೧೪ ॥ ಮದ್ರದೇಶದ ರಾಜಕುಮಾರಿ ಲಕ್ಷ್ಮಣೆಯ ಗರ್ಭದಲ್ಲಿ- ಪ್ರಘೋಷ, ಗಾತ್ರವಾನ್, ಸಿಂಹ, ಬಲ, ಪ್ರಬಲ, ಊರ್ಧ್ವಗ, ಮಹಾಶಕ್ತಿ, ಸಹ, ಓಜ ಮತ್ತು ಅಪರಾಜಿತರೆಂಬ ಹತ್ತು ಮಕ್ಕಳು ಹುಟ್ಟಿದ್ದರು. ॥ ೧೫ ॥ ಮಿತ್ರವಿಂದೆಯಲ್ಲಿ ವೃಕ, ಹರ್ಷ, ಅನಿಲ, ಗೃಧ್ರ, ವರ್ಧನ, ಅನ್ನಾದ, ಮಹಾಶ, ಪಾವನ, ವಹ್ನಿ ಮತ್ತು ಕ್ಷುಧಿ ಎಂಬ ಹತ್ತು ಪುತ್ರರು ಹುಟ್ಟಿದ್ದರು. ॥ ೧೬ ॥ ಭದ್ರಾ ಎಂಬುವಳಲ್ಲಿ - ಸಂಗ್ರಾಮಜಿತ್, ಬೃಹತ್ಸೇನ, ಶೂರ, ಪ್ರಹರಣ, ಅರಿಜಿತ್, ಜಯ, ಸುಭದ್ರ, ವಾಮ, ಆಯು ಮತ್ತು ಸತ್ಯಕ ಎಂಬ ಹತ್ತು ಪುತ್ರರು ಹುಟ್ಟಿದರು. ॥ ೧೭ ॥ ಈ ಎಂಟು ಪಟ್ಟರಾಣಿಯರಲ್ಲದೆ ಭಗವಂತನಿಗೆ ರೋಹಿಣಿಯೇ ಮೊದಲಾದ ಹದಿನಾರು ಸಾವಿರದ ಒಂದು ನೂರು ಇನ್ನೂ ಪತ್ನಿಯರಿದ್ದರು. ರೋಹಿಣಿಯ ಗರ್ಭದಲ್ಲಿ ದೀಪ್ತಿಮಾನ್, ತಾಮ್ರತಪ್ತ ಮೊದಲಾದ ಹತ್ತು-ಹತ್ತು ಮಂದಿ ಪುತ್ರರು ಹುಟ್ಟಿದರು. ರುಕ್ಮಿಣೀ ನಂದನನಾದ ಪ್ರದ್ಯುಮ್ನನಿಗೆ ಮಾಯಾವತಿಯಲ್ಲದೆ ಭೋಜಕಟ ನಿವಾಸಿಯಾದ ರುಕ್ಮಿಯ ಮಗಳಾದ ರುಕ್ಮವತಿ ಯೊಡನೆಯೂ ವಿವಾಹವಾಗಿತ್ತು. ಪರೀಕ್ಷಿತನೇ! ಶ್ರೀಕೃಷ್ಣನ ಮಕ್ಕಳ ತಾಯಂದಿರೇ ಹದಿನಾರು ಸಾವಿರಕ್ಕಿಂತಲೂ ಹೆಚ್ಚಾಗಿದ್ದರು. ಅದರಿಂದ ಅವನ ಪುತ್ರರು-ಪೌತ್ರರು ಇವರ ಸಂಖ್ಯೆಯು ಕೋಟಿಯನ್ನೂ ಮೀರಿತ್ತು. ॥ ೧೮-೧೯ ॥

ಪರೀಕ್ಷಿದ್ರಾಜನು ಕೇಳಿದನು - ಮಹಾಮುನಿಗಳೇ! ನೀವೀಗ ರುಕ್ಮಿಯ ಮಗಳೊಡನೆ ಪ್ರದ್ಯುಮ್ನನ ವಿವಾಹವಾಯಿತೆಂದು ಹೇಳಿದಿರಿ. ಪರಮ ಶತ್ರುವಾದ ಶ್ರೀಕೃಷ್ಣನ ಮಗನಿಗೆ ಏಕೆ ರುಕ್ಮಿಯು ತನ್ನ ಮಗಳನ್ನು ಕೊಟ್ಟನು? ಶ್ರೀಕೃಷ್ಣನಿಂದ ಪರಾಜಿತನಾಗಿ ಅವಮಾನಿತನಾಗಿದ್ದ ಅವನು ಶ್ರೀಕೃಷ್ಣನನ್ನೇ ಸಂಹರಿಸಲು ಸಮಯ ಕಾಯುತ್ತಿದ್ದನು. ಇಬ್ಬರು ವೈರಿಗಳ ನಡುವೆ ವಿವಾಹ ಸಂಬಂಧವು ಹೇಗೆ ಏರ್ಪಟ್ಟಿತೆಂಬುದನ್ನು ದಯಮಾಡಿ ಹೇಳಿರಿ. ॥ ೨೦ ॥ ಬ್ರಾಹ್ಮಣ ಶ್ರೇಷ್ಠರೇ! ಯೋಗಿಗಳಾದವರು ಭೂತ-ಭವಿಷ್ಯದ್ವರ್ತಮಾನಗಳನ್ನು ತಿಳಿದವರಾಗಿರುತ್ತಾರೆ. ಇಂದ್ರಿಯಗಳಿಗೆ ಗೋಚರಿಸದೇ ಇರುವುದನ್ನು, ದೂರದಲ್ಲಿರುವುದನ್ನೂ, ಮರೆಯಾಗಿರುವುದನ್ನೂ ತಿಳಿಯಲು ಅವರು ಸಮರ್ಥರು. ತಮ್ಮಂತಹ ಯೋಗಿಗಳಿಗೆ ತಿಳಿಯದೇ ಇರುವ ವಿಷಯವೇ ಇಲ್ಲ. ಆದ್ದರಿಂದ ನಿಗೂಢವಾಗಿರುವ ಈ ವಿಷಯವನ್ನು ನನಗೆ ಹೇಳಿರಿ. ॥ ೨೧ ॥

ಶ್ರೀಶುಕ ಉವಾಚ

ವೃತಃ ಸ್ವಯಂವರೇ ಸಾಕ್ಷಾದನಂಗೋಽಂಗಯುತಸ್ತಯಾ ।
ರಾಜ್ಞಃ ಸಮೇತಾನ್ನಿರ್ಜಿತ್ಯ ಜಹಾರೈಕರಥೋ ಯುಧಿ ॥ ೨೨ ॥

ಯದ್ಯಪ್ಯನುಸ್ಮರನ್ ವೈರಂ ರುಕ್ಮೀ ಕೃಷ್ಣಾವಮಾನಿತಃ ।
ವ್ಯತರದ್ಭಾಗಿನೇಯಾಯ ಸುತಾಂ ಕುರ್ವನ್ ಸ್ವಸುಃ ಪ್ರಿಯಮ್ ॥ ೨೩ ॥

ರುಕ್ಮಿಣ್ಯಾಸ್ತನಯಾಂ ರಾಜನ್ ಕೃತವರ್ಮಸುತೋ ಬಲೀ ।
ಉಪಯೇಮೇ ವಿಶಾಲಾಕ್ಷೀಂ ಕನ್ಯಾಂ ಚಾರುಮತೀಂ ಕಿಲ ॥ ೨೪ ॥

ದೌಹಿತ್ರಾಯಾನಿರುದ್ಧಾಯ ಪೌತ್ರೀಂ ರುಕ್ಮ್ಯಾದದಾದ್ಧರೇಃ ।
ರೋಚನಾಂ ಬದ್ಧವೈರೋಽಪಿ ಸ್ವಸುಃ ಪ್ರಿಯಚಿಕೀರ್ಷಯಾ ।
ಜಾನನ್ನಧರ್ಮಂ ತದ್ಯೌನಂ ಸ್ನೇಹಪಾಶಾನುಬಂಧನಃ ॥ ೨೫ ॥

ತಸ್ಮಿನ್ನಭ್ಯುದಯೇ ರಾಜನ್ ರುಕ್ಮಿಣೀ ರಾಮಕೇಶವೌ ।
ಪುರಂ ಭೋಜಕಟಂ ಜಗ್ಮುಃ ಸಾಂಬಪ್ರದ್ಯುಮ್ನಕಾದಯಃ ॥ ೨೬ ॥

ತಸ್ಮಿನ್ ನಿವೃತ್ತ ಉದ್ವಾಹೇ ಕಾಲಿಂಗಪ್ರಮುಖಾ ನೃಪಾಃ ।
ದೃಪ್ತಾಸ್ತೇ ರುಕ್ಮಿಣಂ ಪ್ರೋಚುರ್ಬಲಮಕ್ಷೈರ್ವಿನಿರ್ಜಯ ॥ ೨೭ ॥

ಅನಕ್ಷಜ್ಞೋ ಹ್ಯಯಂ ರಾಜನ್ನಪಿ ತದ್ವ್ಯಸನಂ ಮಹತ್ ।
ಇತ್ಯುಕ್ತೋ ಬಲಮಾಹೂಯ ತೇನಾಕ್ಷೈ ರುಕ್ಮ್ಯದೀವ್ಯತ ॥ ೨೮ ॥

ಶತಂ ಸಹಸ್ರಮಯುತಂ ರಾಮಸ್ತತ್ರಾದದೇ ಪಣಮ್ ।
ತಂ ತು ರುಕ್ಮ್ಯಜಯತ್ತತ್ರ ಕಾಲಿಂಗಃ ಪ್ರಾಹಸದ್ಬಲಮ್ ।
ದಂತಾನ್ ಸಂದರ್ಶಯನ್ನುಚ್ಚೈರ್ನಾಮೃಷ್ಯತ್ತದ್ಧಲಾಯುಧಃ ॥ ೨೯ ॥

ತತೋ ಲಕ್ಷಂ ರುಕ್ಮ್ಯಗೃಹ್ಣಾದ್ ಗ್ಲಹಂ ತತ್ರಾಜಯದ್ಬಲಃ ।
ಜಿತವಾನಹಮಿತ್ಯಾಹ ರುಕ್ಮೀ ಕೈತವಮಾಶ್ರಿತಃ ॥ ೩೦ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ - ಪರೀಕ್ಷಿತನೇ! ಪ್ರದ್ಯುಮ್ನನು ಮೂರ್ತಿಮಂತನಾದ ಕಾಮದೇವನೇ ಆಗಿದ್ದನು. ಅವನ ಸೌಂದರ್ಯ ಮತ್ತು ಗುಣಗಳಿಗೆ ಮಾರುಹೋಗಿ ರುಕ್ಮವತಿಯು ಸ್ವಯಂವರದಲ್ಲಿ ಅವನಿಗೆ ವರಮಾಲೆಯನ್ನು ಹಾಕಿದಳು. ಪ್ರದ್ಯುಮ್ನನು ಒಬ್ಬಂಟಿಗನಾಗಿ ಯುದ್ಧದಲ್ಲಿ ಅಲ್ಲಿ ನೆರೆದ ರಾಜರನ್ನು ಗೆದ್ದು ರುಕ್ಮವತಿಯನ್ನು ಅಪಹರಿಸಿಕೊಂಡು ಬಂದನು. ॥ ೨೨ ॥ ಶ್ರೀಕೃಷ್ಣನಿಂದ ಅಪಮಾನಿತನಾದ ಕಾರಣ ರುಕ್ಮಿಯ ಹೃದಯದಲ್ಲಿ ಕ್ರೋಧಾಗ್ನಿಯು ಇನ್ನೂ ಆರಿರಲಿಲ್ಲ. ಇನ್ನೂ ಅವನೊಂದಿಗೆ ವೈರವನ್ನು ಸಾಧಿಸುತ್ತಲೇ ಇದ್ದನು. ಹೀಗಿದ್ದರೂ ತನ್ನ ತಂಗಿ ರುಕ್ಮಿಣಿಯನ್ನು ಸಂತೋಷಗೊಳಿಸಲಿಕ್ಕಾಗಿ ಅವನು ತನ್ನ ಸೋದರಳಿಯನಾದ ಪ್ರದ್ಯುಮ್ನನಿಗೆ ತನ್ನ ಮಗಳನ್ನು ವಿವಾಹ ಮಾಡಿಕೊಟ್ಟನು. ॥ ೨೩ ॥ ಪರೀಕ್ಷಿತನೇ! ಹತ್ತು ಪುತ್ರರಲ್ಲದೆ ರುಕ್ಮಿಣಿಗೆ ಪರಮ ಸುಂದರಿಯಾದ, ದೊಡ್ಡ-ದೊಡ್ಡ ಕಣ್ಣುಗಳುಳ್ಳ ಚಾರುಮತಿ ಎಂಬ ಕನ್ಯೆಯೊಬ್ಬಳಿದ್ದಳು. ಕೃತವರ್ಮನ ಪುತ್ರನಾದ ಬಲಿಯು ಆಕೆಯೊಂದಿಗೆ ವಿವಾಹವಾಗಿದ್ದನು. ॥ ೨೪ ॥

ಪರೀಕ್ಷಿತನೇ! ರುಕ್ಮಿಗೆ ಭಗವಾನ್ ಶ್ರೀಕೃಷ್ಣನೊಂದಿಗೆ ಹಳೆಯ ವೈರವಿದ್ದರೂ ತನ್ನ ತಂಗಿಗೆ ಸಂತೋಷವನ್ನುಂಟುಮಾಡಲು ಅವನು ತನ್ನ ಮೊಮ್ಮಗಳಾದ ರೋಚನೆಯ ವಿವಾಹವನ್ನು ರುಕ್ಮಿಣಿಯ ಮೊಮ್ಮಗನಾದ ಅನಿರುದ್ಧನೊಂದಿಗೆ ಮಾಡಿಬಿಟ್ಟನು. ಈ ಪ್ರಕಾರದ ವಿವಾಹವು ಧರ್ಮಕ್ಕೆ ಅನುಕೂಲವಿಲ್ಲದಿದ್ದರೂ ಸ್ನೇಹಸಂಬಂಧದಲ್ಲಿ ಬಂಧಿತನಾದ ರುಕ್ಮಿಯು ಹೀಗೆ ಮಾಡಿದ್ದನು. ॥ ೨೫ ॥ ರಾಜೇಂದ್ರನೇ! ಅನಿರುದ್ಧನ ವಿವಾಹ ಮಹೋತ್ಸವದಲ್ಲಿ ಪಾಲ್ಗೊಳ್ಳಲು ಭಗವಾನ್ ಶ್ರೀಕೃಷ್ಣ, ಬಲರಾಮ, ರುಕ್ಮಿಣೀ, ಪ್ರದ್ಯುಮ್ನ, ಸಾಂಬ ಮೊದಲಾದ ದ್ವಾರಕಾ ನಿವಾಸಿಗಳು ಭೋಜಕಟ ನಗರಕ್ಕೆ ಬಂದಿದ್ದರು. ॥ ೨೬ ॥ ವಿವಾಹ ಮಹೋತ್ಸವವು ಸಾಂಗವಾಗಿ ನೆರವೇರಿದ ನಂತರ ಗರ್ವಿಷ್ಠರಾಗಿದ್ದ ಕಲಿಂಗನೇ ಮೊದಲಾದ ರಾಜರು ಪಗಡೆಯಾಟದಲ್ಲಿ ಬಲರಾಮನನ್ನು ಸೋಲಿಸುವಂತೆ ರುಕ್ಮಿಯನ್ನು ಪ್ರಚೋದಿಸಿದರು. ॥ ೨೭ ॥

ಬಲರಾಮನು ಪಗಡೆಯಾಟದಲ್ಲಿ ಚತುರನಾಗಿರಲಿಲ್ಲ, ಆದರೆ ಅವನಿಗೆ ಆಟವಾಡುವುದರಲ್ಲಿ ಆಸಕ್ತಿ ಇತ್ತು. ಕಲಿಂಗರೇ ಮೊದಲಾದ ರಾಜರ ಪ್ರೇರಣೆಯಿಂದ ರುಕ್ಮಿಯು ಬಲರಾಮನನ್ನು ಆಟಕ್ಕೆ ಆಹ್ವಾನಿಸಿ ಬಲರಾಮನೊಂದಿಗೆ ಪಗಡೆಯಾಡತೊಡಗಿದನು. ॥ ೨೮ ॥ ಬಲರಾಮನು ಮೊದಲಿಗೆ ನೂರು, ಮತ್ತೆ ಸಾವಿರ, ಬಳಿಕ ಹತ್ತು ಸಾವಿರ ವರಹಗಳನ್ನು ಪಣಕ್ಕೊಡ್ಡಿದನು. ಅವನ್ನು ರುಕ್ಮಿಯು ಗೆದ್ದುಕೊಂಡನು. ರುಕ್ಮಿಯು ಗೆದ್ದಾಗ ಕಲಿಂಗನರೇಶನು ಹಲ್ಕಿರಿದು ಗಹ-ಗಹಿಸಿ ನಗುತ್ತಾ ಬಲರಾಮನ ಉಪಹಾಸ್ಯ ಮಾಡಿದನು. ಬಲರಾಮನಿಗೆ ಆ ನಗುವು ಸಹಿಸಲಾಗಲಿಲ್ಲ, ಅವನು ಸ್ವಲ್ಪ ಸಿಟ್ಟಾದನು. ॥ ೨೯ ॥ ಅನಂತರ ರುಕ್ಮಿಯು ಒಂದು ಲಕ್ಷ ವರಹ ಪಣಕ್ಕೊಡ್ಡಿದನು. ಅದನ್ನು ಬಲರಾಮನು ಗೆದ್ದುಕೊಂಡನು. ಆದರೆ ಧೂರ್ತನಾದ ರುಕ್ಮಿಯು 'ನಾನೇ ಗೆದ್ದೆ' ಎಂದು ಹೇಳತೊಡಗಿದ. ॥ ೩೦ ॥

ಮನ್ಯುನಾ ಕ್ಷುಭಿತಃ ಶ್ರೀಮಾನ್ ಸಮುದ್ರ ಇವ ಪರ್ವಣಿ ।
ಜಾತ್ಯಾರುಣಾಕ್ಷೋಽತಿರುಷಾ ನ್ಯರ್ಬುದಂ ಗ್ಲಹಮಾದದೇ
॥ ೩೧ ॥

ತಂ ಚಾಪಿ ಜಿತವಾನ್ ರಾಮೋ ಧರ್ಮೇಣ ಛಲಮಾಶ್ರಿತಃ ।
ರುಕ್ಮೀ ಜಿತಂ ಮಯಾತ್ರೇಮೇ ವದಂತು ಪ್ರಾಶ್ನಿಕಾ ಇತಿ
॥ ೩೨ ॥

ತದಾಬ್ರವೀನ್ನಭೋವಾಣೀ ಬಲೇನೈವ ಜಿತೋ ಗ್ಲಹಃ ।
ಧರ್ಮತೋ ವಚನೇನೈವ ರುಕ್ಮೀ ವದತಿ ವೈ ಮೃಷಾ
॥ ೩೩ ॥

ತಾಮನಾದೃತ್ಯ ವೈದರ್ಭೋ ದುಷ್ಟರಾಜನ್ಯಚೋದಿತಃ ।
ಸಂಕರ್ಷಣಂ ಪರಿಹಸನ್ ಬಭಾಷೇ ಕಾಲಚೋದಿತಃ
॥ ೩೪ ॥

ನೈವಾಕ್ಷಕೋವಿದಾ ಯೂಯಂ ಗೋಪಾಲಾ ವನಗೋಚರಾಃ ।
ಅಕ್ಷೈರ್ದೀವ್ಯಂತಿ ರಾಜಾನೋ ಬಾಣೈಶ್ಚ ನ ಭವಾದೃಶಾಃ
॥ ೩೫ ॥

ರುಕ್ಮಿಣೈವಮಧಿಕ್ಷಿಪ್ತೋ ರಾಜಭಿಶ್ಚೋಪಹಾಸಿತಃ ।
ಕ್ರುದ್ಧಃ ಪರಿಘಮುದ್ಯಮ್ಯ ಜಘ್ನೇ ತಂ ನೃಮ್ಣಸಂಸದಿ
॥ ೩೬ ॥

ಕಲಿಂಗರಾಜಂ ತರಸಾ ಗೃಹೀತ್ವಾ ದಶಮೇ ಪದೇ ।
ದಂತಾನಪಾತಯತ್ಕ್ರುದ್ಧೋ ಯೋಽಹಸದ್ವಿವೃತೈರ್ದ್ವಿಜೈಃ
॥ ೩೭ ॥

ಅನ್ಯೇ ನಿರ್ಭಿನ್ನಬಾಹೂರುಶಿರಸೋ ರುಧಿರೋಕ್ಷಿತಾಃ ।
ರಾಜಾನೋ ದುದ್ರುವುರ್ಭೀತಾ ಬಲೇನ ಪರಿಘಾರ್ದಿತಾಃ
॥ ೩೮ ॥

ನಿಹತೇ ರುಕ್ಮಿಣಿ ಶ್ಯಾಲೇ ನಾಬ್ರವೀತ್ ಸಾಧ್ವಸಾಧು ವಾ ।
ರುಕ್ಮಿಣೀಬಲಯೋ ರಾಜನ್ ಸ್ನೇಹಭಂಗಭಯಾದ್ಧರಿಃ
॥ ೩೯ ॥

ತತೋಽನಿರುದ್ಧಂ ಸಹ ಸೂರ್ಯಯಾ ವರಂ
ರಥಂ ಸಮಾರೋಪ್ಯ ಯಯುಃ ಕುಶಸ್ಥಲೀಮ್ ।
ರಾಮಾದಯೋ ಭೋಜಕಟಾದ್ದಶಾರ್ಹಾಃ
ಸಿದ್ಧಾಖಿಲಾರ್ಥಾ ಮಧುಸೂದನಾಶ್ರಯಾಃ ॥ ೪೦ ॥

ಇದರಿಂದ ಬಲರಾಮನು ಕೆಂಡಾಮಂಡಲನಾದನು. ಪೂರ್ಣಿಮೆಯ ದಿನ ಸಮುದ್ರಕ್ಕೆ ಭರ್ತಿಬರುವಂತೆ ಅವನು ಕ್ಷೋಭೆಗೊಂಡನು. ಸ್ವಾಭಾವಿಕವಾಗಿಯೇ ಕೆಂಪಾಗಿದ್ದ ಅವನ ಕಣ್ಣುಗಳು ಕ್ರೋಧದಿಂದ ಕಿಡಿಕಾರಿದವು. ಈಗ ಅವನು ಹತ್ತು ಕೋಟಿ ವರಹಗಳನ್ನು ಪಣಕ್ಕೆ ಒಡ್ಡಿದನು. ॥ ೩೧ ॥ ಈ ಬಾರಿಯೂ ದ್ಯೂತದ ನಿಯಮದಂತೆ ಬಲರಾಮನೇ ಗೆದ್ದನು. ಆದರೆ ರುಕ್ಮಿಯು 'ನಾನೇಗೆದ್ದೆ' ಎಂದು ಬೊಬ್ಬೆ ಹಾಕುತ್ತಾ ಈ ವಿಷಯದ ವಿಶೇಷಜ್ಞನಾದ ಕಳಿಂಗರಾಜನೇ ಇದನ್ನು ನಿರ್ಣಯಿಸಲಿ ಎಂದು ಹಟಹಿಡಿದನು. ॥ ೩೨ ॥ ಆ ಸಮಯದಲ್ಲಿ ಆಕಾಶವಾಣಿಯೊಂದು ಮೊಳಗಿತು - 'ಧರ್ಮಪೂರ್ವಕವಾಗಿ ಹೇಳಬೇಕಾದರೆ ಬಲರಾಮನೇ ಈ ಆಟವನ್ನು ಗೆದ್ದಿರುವನು. ನಾನು ಗೆದ್ದೆ ಎಂದು ಹೇಳುವ ರುಕ್ಮಿಯ ಮಾತು ಪೂರ್ಣವಾಗಿ ಸುಳ್ಳಾಗಿದೆ' ॥ ೩೩ ॥ ರುಕ್ಮಿಯ ತಲೆಯ ಮೇಲೆ ಮೃತ್ಯು ಕುಣಿಯುತ್ತಿತ್ತು. ಜೊತೆಗೆ ಸಂಗಡಿಗರಾದ ದುಷ್ಟರಾಜರು ಅವನನ್ನು ಎತ್ತಿಕಟ್ಟಿದರು. ಇದರಿಂದ ಅವನು ಆಕಾಶವಾಣಿಯನ್ನು ನಿರ್ಲಕ್ಷಿಸಿ ಬಲರಾಮನನ್ನು ಅಪಹಾಸ್ಯ ಮಾಡುತ್ತಾ ಹೀಗೆ ಹೇಳಿದನು. ॥ ೩೪ ॥ ಎಲೈ ಬಲರಾಮಾ! ಕಾಡಿನಲ್ಲಿ ಹಸುಗಳನ್ನು ಮೇಯಿಸುತ್ತಾ ಸಂಚರಿಸುವ ನೀವು ಅಕ್ಷವಿದ್ಯೆಯನ್ನು ಬಲ್ಲವರಲ್ಲ. ಪಗಡೆಕಾಯಿಗಳಿಂದ ಮತ್ತು ಬಾಣಗಳಿಂದ ನಮ್ಮಂಥ ರಾಜರೇ ಆಟವಾಡುತ್ತಾ ಇರುತ್ತೇವೆ. ನಿಮ್ಮಂಥ ಗೋಪಾಲಕರಲ್ಲ. ॥ ೩೫ ॥ ರುಕ್ಮಿಯು ಮಾಡಿದ ಆಕ್ಷೇಪದಿಂದ ಮತ್ತು ರಾಜರುಗಳ ಉಪಹಾಸದಿಂದ ಬಲರಾಮನು ಅತ್ಯಂತ ಕ್ರುದ್ಧನಾಗಿ ಒಂದು ಪರಿಘಾಯುಧವನ್ನೆತ್ತಿ ಆ ವಿವಾಹದ ಸಭೆಯಲ್ಲೇ ರುಕ್ಮಿಯನ್ನು ಕೊಂದು ಹಾಕಿದನು. ॥ ೩೬ ॥ ಕಳಿಂಗ ರಾಜನು ಮೊದಲು ಹಲ್ಕಿರಿದು ನಕ್ಕಿದ್ದನು. ಬಲರಾಮನ ಸಿಟ್ಟನ್ನು ನೋಡಿ ಅಲ್ಲಿಂದ ಓಡಿದನು, ಆದರೆ ಬಲರಾಮನು ಹತ್ತೇ ಹೆಜ್ಜೆಗಳಲ್ಲಿ ಅವನನ್ನು ಹಿಡಿದು ಕ್ರೋಧದಿಂದ ಅವನ ಹಲ್ಲುಗಳನ್ನು ಉದುರಿಸಿಬಿಟ್ಟನು. ॥ ೩೭ ॥ ಬಲರಾಮನು ತನ್ನ ಪರಿಘಾಯುಧದ ಪೆಟ್ಟುಗಳಿಂದ ಇತರ ರಾಜರ ಭುಜ, ತೊಡೆ, ತಲೆಗಳನ್ನು ಬಡಿದುಹಾಕಿದನು. ಅವರೆಲ್ಲರೂ ರಕ್ತದಿಂದ ತೊಯ್ದುಹೋಗಿ ಭಯದಿಂದ ಅಲ್ಲಿಂದ ಓಡಿಹೋದರು. ॥ ೩೮ ॥ ಪರೀಕ್ಷಿತನೇ! ಭಗವಾನ್ ಶ್ರೀಕೃಷ್ಣನು - ಬಲರಾಮನನ್ನು ಸಮರ್ಥಿಸಿದರೆ ರುಕ್ಮಿಣಿಗೆ ಅಸಮಾಧಾನವಾಗಬಹುದು. ರುಕ್ಮಿಯ ವಧೆಯು ಸರಿಯಲ್ಲವೆಂದು ಹೇಳಿದರೆ ಬಲರಾಮನು ಸಿಟ್ಟಾಗುವನು. ಎಂದು ಯೋಚಿಸಿ ಭಾವಮೈದುನನ ಮೃತ್ಯುವಿನ ವಿಷಯದಲ್ಲಿ ಏನನ್ನೂ ಹೇಳದೆ ಮೌನವಾಗಿದ್ದನು. ॥ ೩೯ ॥ ಹೀಗೆ ಅನಿರುದ್ಧನ ವಿವಾಹವೂ, ಶತ್ರುವಿನ ವಧೆಯೂ ಆದನಂತರ ಭಗವಂತನ ಆಶ್ರಿತನಾದ ಬಲರಾಮನೇ ಮೊದಲಾದ ಯದುವಂಶೀಯರು ನವವಧುವಾದ ರೋಚನೆಯೊಂದಿಗೆ ಅನಿರುದ್ಧನನ್ನು ರಥದಲ್ಲಿ ಕುಳ್ಳಿರಿಸಿಕೊಂಡು ಭೋಜಕಟ ನಗರದಿಂದ ದ್ವಾರಕಾಪುರಿಗೆ ಪ್ರಯಾಣ ಮಾಡಿದರು. ॥ ೪೦ ॥

ಅರವತ್ತೊಂದನೆಯ ಅಧ್ಯಾಯವು ಮುಗಿಯಿತು. ॥ ೬೧ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮಸ್ಕಂಧೇ ಉತ್ತರಾರ್ಧೇ
ಅನಿರುದ್ಧವಿವಾಹೇ ರುಕ್ಮಿವಧೋ ನಾಮೈಕಷಷ್ಟಿತಮೋಽಧ್ಯಾಯಃ ॥ ೬೧ ॥

ಅರವತ್ತೆರಡನೆಯ ಅಧ್ಯಾಯ

ಉಷಾ – ಅನಿರುದ್ಧರ ಮಿಲನ

ರಾಜೋವಾಚ

ಬಾಣಸ್ಯ ತನಯಾಮೂಷಾಮುಪಯೇಮೇ ಯದೂತ್ತಮಃ ।
ತತ್ರ ಯುದ್ಧಮಭೂದ್ಘೋರಂ ಹರಿಶಂಕರಯೋರ್ಮಹತ್ ।
ಏತತ್ಸರ್ವಂ ಮಹಾಯೋಗಿನ್ ಸಮಾಖ್ಯಾತುಂ ತ್ವಮರ್ಹಸಿ ॥ ೧ ॥

ಪರೀಕ್ಷಿದ್ರಾಜನು ಕೇಳಿದನು ಮಹಾಯೋಗಿಗಳಾದ ಶುಕಮಹರ್ಷಿಗಳೇ! ಯದುವಂಶ ಶಿರೋಮಣಿ ಅನಿರುದ್ಧನು ಬಾಣಾಸುರನ ಮಗಳಾದ ಉಷೆಯೊಂದಿಗೆ ವಿವಾಹವಾದನು ಮತ್ತು ಈ ಸಂದರ್ಭದಲ್ಲಿ ಭಗವಾನ್ ಶ್ರೀಕೃಷ್ಣನಿಗೂ ಹಾಗೂ ಶಂಕರನಿಗೂ ಘೋರವಾದ ಯುದ್ಧವು ನಡೆಯಿತೆಂದು ನಾನು ಕೇಳಿದ್ದೇನೆ. ತಾವು ದಯಮಾಡಿ ಈ ವೃತ್ತಾಂತವನ್ನು ವಿಸ್ತಾರವಾಗಿ ಹೇಳಿರಿ. ॥ ೧ ॥

ಶ್ರೀಶುಕ ಉವಾಚ

ಬಾಣಃ ಪುತ್ರಶತಜ್ಯೇಷ್ಠೋ ಬಲೇರಾಸೀನ್ಮಹಾತ್ಮನಃ ।
ಯೇನ ವಾಮನರೂಪಾಯ ಹರಯೇಽದಾಯಿ ಮೇದಿನೀ ॥ ೨ ॥

ತಸ್ಯೌರಸಃ ಸುತೋ ಬಾಣಃ ಶಿವಭಕ್ತಿರತಃ ಸದಾ ।
ಮಾನ್ಯೋ ವದಾನ್ಯೋ ಧೀಮಾಂಶ್ಚ ಸತ್ಯಸಂಧೋ ದೃಢವ್ರತಃ ॥ ೩ ॥

ಶೋಣಿತಾಖ್ಯೇ ಪುರೇ ರಮ್ಯೇ ಸ ರಾಜ್ಯಮಕರೋತ್ಪುರಾ ।
ತಸ್ಯ ಶಂಭೋಃ ಪ್ರಸಾದೇನ ಕಿಂಕರಾ ಇವ ತೇಽಮರಾಃ ।
ಸಹಸ್ರಬಾಹುರ್ವಾದ್ಯೇನ ತಾಂಡವೇಽತೋಷಯನ್ಮೃಡಮ್ ॥ ೪ ॥

ಭಗವಾನ್ ಸರ್ವಭೂತೇಶಃ ಶರಣ್ಯೋ ಭಕ್ತವತ್ಸಲಃ ।
ವರೇಣಚ್ಛಂದಯಾಮಾಸ ಸ ತಂ ವವ್ರೇ ಪುರಾಧಿಪಮ್ ॥ ೫ ॥

ಸ ಏಕದಾಽಽಹ ಗಿರಿಶಂ ಪಾರ್ಶ್ವಸ್ಥಂ ವೀರ್ಯದುರ್ಮದಃ ।
ಕಿರೀಟೇನಾರ್ಕವರ್ಣೇನ ಸಂಸ್ಪೃಶಂಸ್ತತ್ಪದಾಂಬುಜಮ್ ॥ ೬ ॥

ನಮಸ್ಯೇ ತ್ವಾಂ ಮಹಾದೇವ ಲೋಕಾನಾಂ ಗುರುಮೀಶ್ವರಮ್ ।
ಪುಂಸಾಮಪೂರ್ಣಕಾಮಾನಾಂ ಕಾಮಪೂರಾಮರಾಂಘ್ರಿಪಮ್ ॥ ೭ ॥

ಶ್ರೀಶುಕಮಹಾಮುನಿಗಳು ಹೇಳಿದರು – ಪರೀಕ್ಷಿತ ಮಹಾರಾಜ! ಮಹಾತ್ಮನಾದ ಬಲಿಯ ಕಥೆಯನ್ನು ನೀನು ಈಗಾಗಲೇ ಕೇಳಿರುವೆ. ಅವನು ವಾಮನರೂಪವಾದ ಭಗವಂತನಿಗೆ ಇಡೀ ಪೃಥಿವಿಯನ್ನೇ ದಾನಮಾಡಿದ್ದನು. ಬಲಿಚಕ್ರವರ್ತಿಗೆ ನೂರು ಮಂದಿ ಮಕ್ಕಳಿದ್ದರು. ಅವರಲ್ಲಿ ಹಿರಿಯವನೇ ಬಾಣಾಸುರ. ॥ ೨ ॥ ದೈತ್ಯರಾಜನಾದ ಬಲಿಯ ಹಿರಿಯ ಪುತ್ರನಾದ ಬಾಣಾಸುರನು ಶಿವಭಕ್ತಿಯಲ್ಲೇ ಸದಾಕಾಲ ನಿರತನಾಗಿರುತ್ತಿದ್ದನು. ಅವನು ಸಮಸ್ತರಿಗೂ ಮಾನ್ಯನಾಗಿದ್ದನು; ಉದಾರಿಯಾಗಿದ್ದನು. ಅವನು ಮಹಾಬುದ್ಧಿಶಾಲಿಯೂ, ಸತ್ಯಸಂಧನೂ, ದೃಢವಾದ ವ್ರತಾನುಷ್ಠಾನ ಉಳ್ಳವನೂ ಆಗಿದ್ದನು. ॥ ೩ ॥ ಆ ದಿನಗಳಲ್ಲಿ ಬಾಣಾಸುರನು ಪರಮರಮಣೀಯವಾದ ಶೋಣಿತಪುರದಲ್ಲಿ ರಾಜ್ಯವಾಳುತ್ತಿದ್ದನು. ಭಗವಾನ್ ಶಂಕರನ ವರಪ್ರಸಾದದಿಂದ ಇಂದ್ರಾದಿ ದೇವತೆಗಳು ಸೇವಕರಂತೆ ಅವನ ಸೇವೆ ಮಾಡುತ್ತಿದ್ದರು. ಅವನಿಗೆ ಸಾವಿರ ತೋಳುಗಳಿದ್ದುವು. ಒಂದು ದಿನ ಭಗವಾನ್ ಶಂಕರನು ತಾಂಡವನೃತ್ಯವನ್ನಾಡುತ್ತಿದ್ದಾಗ ಅವನು ತನ್ನ ಸಾವಿರ ಕೈಗಳಿಂದ ಅನೇಕ ವಿಧವಾದ ವಾದ್ಯಗಳನ್ನು ನುಡಿಸಿ ಮೃಡನನ್ನು ಪ್ರಸನ್ನಗೊಳಿಸಿದನು. ॥ ೪ ॥ ಭಗವಂತನಾದ ಶಂಕರನು ನಿಜವಾಗಿಯೂ ಭಕ್ತವತ್ಸಲನೂ, ಶರಣಾಗತ ರಕ್ಷಕನೂ ಆಗಿದ್ದಾನೆ. ಸಮಸ್ತ ಪ್ರಾಣಿಗಳ ಏಕಮಾತ್ರ ಈಶನಾದ ಪ್ರಭುವು ಬಾಣಾಸುರನಲ್ಲಿ ಹೇಳಿದನು – 'ನಿನಗೆ ಇಷ್ಟವಾದ ವರವನ್ನು ಬೇಡು'. ಆಗ ಬಾಣಾಸುರನು – 'ಭಗವಂತಾ! ನೀನು ನನ್ನ ನಗರವನ್ನು ರಕ್ಷಿಸುತ್ತಾ ಇಲ್ಲೇ ಇರಬೇಕೆಂಬುದು ನನ್ನ ಆಸೆ' ಎಂದು ಪ್ರಾರ್ಥಿಸಿಕೊಂಡನು. ॥ ೫ ॥

ಒಂದು ದಿನ ಬಲ-ಪರಾಕ್ರಮದಿಂದ ಕೊಬ್ಬಿಹೋದ ಬಾಣಾಸುರನು ಪಕ್ಕದಲ್ಲಿಯೇ ಇದ್ದ ಪರಮೇಶ್ವರನ ಪಾದಕಮಲಗಳನ್ನು ಸೂರ್ಯನಂತೆ ಹೊಳೆಯುತ್ತಿರುವ ಕಿರೀಟದಿಂದ ಸ್ಪರ್ಶಿಸಿ ನಮಸ್ಕಾರಗೈದು ಹೀಗೆ ಹೇಳಿದನು. ॥ ೬ ॥ ದೇವಾಧಿದೇವಾ! ನೀನು ಸಮಸ್ತ ಚರಾಚರ ಜಗತ್ತಿಗೆ ಗುರುವೂ, ಸ್ವಾಮಿಯೂ ಆಗಿರುವೆ. ನಾನು ನಿನಗೆ ನಮಸ್ಕರಿಸುತ್ತೇನೆ. ಯಾರ ಮನೋರಥಗಳು ಇದುವರೆಗೆ ಪೂರ್ಣಗೊಂಡಿಲ್ಲವೋ ಅಂತಹವರ ಮನೋರಥಗಳನ್ನು ಈಡೇರಿಸಿಕೊಡುವುದರಲ್ಲಿ ನೀನು ಕಲ್ಪವೃಕ್ಷದಂತೆ ಇರುವೆ. ॥ ೭ ॥

ದೋಃಸಹಸ್ರಂ ತ್ವಯಾ ದತ್ತಂ ಪರಂ ಭಾರಾಯ ಮೇಽಭವತ್ ।
ತ್ರಿಲೋಕ್ಯಾಂ ಪ್ರತಿಯೋದ್ಧಾರಂ ನ ಲಭೇ ತ್ವದೃತೇ ಸಮಮ್
॥ ೮ ॥

ಕಂಡೂತ್ಯಾ ನಿಭೃತೈರ್ದೋರ್ಭಿರ್ಯುಯುತ್ಸುರ್ದಿಗ್ಗಜಾನಹಮ್ ।
ಆದ್ಯಾಯಾಂ ಚೂರ್ಣಯನ್ನದ್ರೀನ್ ಭೀತಾಸ್ತೇಽಪಿ ಪ್ರದುದ್ರುವುಃ
॥ ೯ ॥

ತಚ್ಛ್ರುತ್ವಾ ಭಗವಾನ್ ಕ್ರುದ್ಧಃ ಕೇತುಸ್ತೇ ಭಜ್ಯತೇ ಯದಾ ।
ತ್ವದ್ದರ್ಪಘ್ನಂ ಭವೇನ್ಮೂಢ ಸಂಯುಗಂ ಮತ್ಸಮೇನ ತೇ
॥ ೧೦ ॥

ಇತ್ಯುಕ್ತಃ ಕುಮತಿರ್ಹೃಷ್ಟಃ ಸ್ವಗೃಹಂ ಪ್ರಾವಿಶನ್ನೃಪ ।
ಪ್ರತೀಕ್ಷನ್ ಗಿರಿಶಾದೇಶಂ ಸ್ವವೀರ್ಯನಶನಂ ಕುಧೀಃ
॥ ೧೧ ॥

ತಸ್ಯೋಷಾ ನಾಮ ದುಹಿತಾ ಸ್ವಪ್ನೇ ಪ್ರಾದ್ಯುಮ್ನಿನಾ ರತಿಮ್ ।
ಕನ್ಯಾಲಭತ ಕಾಂತೇನ ಪ್ರಾಗದೃಷ್ಟಶ್ರುತೇನ ಸಾ
॥ ೧೨ ॥

ಸಾ ತತ್ರ ತಮಪಶ್ಯಂತೀ ಕ್ವಾಸಿ ಕಾಂತೇತಿ ವಾದಿನೀ ।
ಸಖೀನಾಂ ಮಧ್ಯ ಉತ್ತಸ್ಥೌ ವಿಹ್ವಲಾ ವ್ರೀಡಿತಾ ಭೃಶಮ್
॥ ೧೩ ॥

ಬಾಣಸ್ಯ ಮಂತ್ರೀ ಕುಂಭಾಂಡಶ್ಚಿತ್ರಲೇಖಾ ಚ ತತ್ಸುತಾ ।
ಸಖ್ಯಪೃಚ್ಛತ್ಸಖೀಮೂಷಾಂ ಕೌತೂಹಲಸಮನ್ವಿತಾ
॥ ೧೪ ॥

ಕಂ ತ್ವಂ ಮೃಗಯಸೇ ಸುಭ್ರೂಃ ಕೀದೃಶಸ್ತೇ ಮನೋರಥಃ ।
ಹಸ್ತಗ್ರಾಹಂ ನ ತೇಽದ್ಯಾಪಿ ರಾಜಪುತ್ರ್ಯುಪಲಕ್ಷಯೇ
॥ ೧೫ ॥

ಉಷೋವಾಚ

ದೃಷ್ಟಃ ಕಶ್ಚಿನ್ನರಃ ಸ್ವಪ್ನೇ ಶ್ಯಾಮಃ ಕಮಲಲೋಚನಃ ।
ಪೀತವಾಸಾ ಬೃಹದ್ಬಾಹುರ್ಯೋಷಿತಾಂ ಹೃದಯಂಗಮಃ
॥ ೧೬ ॥

ತಮಹಂ ಮೃಗಯೇ ಕಾಂತಂ ಪಾಯಯಿತ್ವಾಧರಂ ಮಧು ।
ಕ್ವಾಪಿ ಯಾತಃ ಸ್ಪೃಹಯತೀಂ ಕ್ಷಿಪ್ತ್ವಾ ಮಾಂ ವೃಜಿನಾರ್ಣವೇ
॥ ೧೭ ॥

ಭಗವಂತಾ! ನೀನು ನನಗೆ ಸಾವಿರ ಬಾಹುಗಳನ್ನು ಕರುಣಿಸಿರುವೆ. ಆದರೆ ಅವು ನನಗೆ ಭಾರವೇ ಆಗುತ್ತಿವೆ. ಏಕೆಂದರೆ, ಮೂರು ಲೋಕಗಳಲ್ಲಿ ನಿನ್ನನ್ನು ಬಿಟ್ಟು ನನಗೆ ಸರಿಸಮಾನವಾಗಿ ನನ್ನೊಡನೆ ಯುದ್ಧಮಾಡುವಂತಹ ಯಾವ ಯೋಧನೂ ನನಗೆ ಸಿಕ್ಕಿಲ್ಲ ॥ ೮ ॥ ಆದಿದೇವಾ! ಒಮ್ಮೆ ನನ್ನ ಬಾಹುಗಳಲ್ಲಿ ಯುದ್ಧ ಮಾಡುವ ತೀಟೆಯುಂಟಾಗಿ ಅದನ್ನು ತಡೆಯಲಾರದೆ ದಿಗ್ಗಜರೊಂದಿಗೆ ಯುದ್ಧಮಾಡಲು ಹೊರಟೆ. ಆದರೆ ಅವುಗಳು ಭಯದಿಂದ ಓಡಿಹೋದವು. ಆ ಸಮಯದಲ್ಲಿ ನಾನು ಬಾಹುಗಳ ಆಘಾತದಿಂದ ಅನೇಕ ಪರ್ವತಗಳನ್ನು ಪುಡಿ-ಪುಡಿಮಾಡಿದನು. ॥ ೯ ॥ ಬಾಣಾಸುರನ ಈ ಪ್ರಾರ್ಥನೆಯನ್ನು ಕೇಳಿ ಶಿವನು ಸ್ವಲ್ಪ ಬೇಸರದಿಂದಲೇ ಹೇಳಿದನು - ಎಲೈ ಮೂರ್ಖ! ನಿನ್ನ ರಥದ ಧ್ವಜವು ಮುರಿದುಬಿದ್ದಾಗ ನನಗೆ ಸಮಾನನಾದ ಯೋಧನೊಂದಿಗೆ ನಿನ್ನ ಯುದ್ಧ ನಡೆಯುವುದು ಮತ್ತು ಆ ಯುದ್ಧವು ನಿನ್ನ ದರ್ಪವನ್ನು ನುಚ್ಚು ನೂರಾಗಿಸುವುದು. ॥ ೧೦ ॥ ಪರೀಕ್ಷಿತನೇ! ಭಗವಾನ್ ಶಂಕರನ ಮಾತುಕೇಳಿ ಬುದ್ಧಿಕೆಟ್ಟು ಹೋಗಿದ್ದ ಅವನಿಗೆ ಹರ್ಷವುಂಟಾಗಿ ಮನೆಗೆ ಮರಳಿದನು. ಈಗ ಆ ಮೂರ್ಖನು ಪರಶಿವನ ಆದೇಶದಂತೆ ಅವನ ಬಲ-ಪರಾಕ್ರಮಗಳ ನಾಶವಾಗುವಂತಹ ಯುದ್ಧವನ್ನು ಇದಿರುನೋಡುತ್ತಿದ್ದನು. ॥ ೧೧ ॥

ಪರೀಕ್ಷಿತ ಮಹಾರಾಜ! ಬಾಣಾಸುರನಿಗೆ ಉಷಾ ಎಂಬ ಕನ್ಯೆಯೋರ್ವಳಿದ್ದಳು. ಅವಳು ಇನ್ನೂ ಕುಮಾರಿಯೇ ಆಗಿದ್ದಾಗ ಒಂದು ದಿನ ಸ್ವಪ್ನದಲ್ಲಿ ಪರಮ ಸುಂದರ ಅನಿರುದ್ಧನೊಡನೆ ಅವಳ ಸಮಾಗಮವಾದಂತೆ ಕಂಡಳು. ಆಶ್ಚರ್ಯದ ವಿಷಯವೆಂದರೆ, ಅವಳು ಅದುವರೆಗೂ ಅನಿರುದ್ಧನನ್ನು ನೋಡಿರಲಿಲ್ಲ; ಅವನ ಹೆಸರೂ ಕೇಳಿರಲಿಲ್ಲ ॥ ೧೨ ॥ ಸ್ವಪ್ನದಲ್ಲಿ ಅನಿರುದ್ಧನನ್ನು ಕಂಡು ಬಳಿಕ ಕಾಣದಿರುವಾಗ 'ಪ್ರಾಣಪ್ರಿಯನೇ! ನೀನು ಎಲ್ಲಿರುವೆ ?' ಎಂದೆನ್ನುತ್ತಾ ಥಟ್ಟನೆ ಎದ್ದು ಕುಳಿತಳು. ತಾನು ಸಖಿಯರ ಮಧ್ಯದಲ್ಲಿರುವುದನ್ನು ತಿಳಿದು ಆಕೆಯು ಬಹಳವಾಗಿ ನಾಚಿಕೊಂಡಳು. ॥ ೧೩ ॥ ಪರೀಕ್ಷಿತನೇ! ಬಾಣಾಸುರನಿಗೆ ಕುಂಭಾಂಡನೆಂಬ ಮಂತ್ರಿಯಿದ್ದನು. ಅವನಿಗೆ ಚಿತ್ರಲೇಖಾ ಎಂಬ ಕನ್ಯೆಯೊಬ್ಬಳಿದ್ದಳು. ಉಷಾ ಮತ್ತು ಚಿತ್ರಲೇಖೆಯು ಪರಸ್ಪರ ಸಖಿಯರಾಗಿದ್ದರು. ಚಿತ್ರಲೇಖೆಯು ಕುತೂಹಲದಿಂದ ಉಷೆಯ ಬಳಿ ಕೇಳಿದಳು. ॥ ೧೪ ॥ ಸುಂದರಿಯೇ! ರಾಜಕುಮಾರಿಯೇ! ಇದುವರೆಗೂ ಯಾರೂ ನಿನ್ನ ಪಾಣಿಗ್ರಹಣವನ್ನೇ ಮಾಡಲಿಲ್ಲ. ನೀನು ಯಾರನ್ನು ಹುಡುಕುತ್ತಿರುವೆ ? ನಿನ್ನ ಮನೋರಥವೇನು ? ಎಲ್ಲವನ್ನೂ ಮರೆಮಾಚದೆ ನನಗೆ ಹೇಳು. ॥ ೧೫ ॥

ಉಷೆಯು ಹೇಳಿದಳು - ಚಿತ್ರಲೇಖೆ! ನಾನು ಸ್ವಪ್ನದಲ್ಲಿ ಒಬ್ಬ ಅತೀವ ಸುಂದರನಾದ ಪುರುಷನನ್ನು ಕಂಡೆನು. ಅವನು ಶ್ಯಾಮಲ ವರ್ಣದವನಾಗಿದ್ದು, ಕಮಲಾಕ್ಷನಾಗಿದ್ದನು. ಪೀತಾಂಬರವನ್ನು ಉಟ್ಟಿದ್ದನು. ಆಜಾನುಬಾಹುವಾಗಿದ್ದನು. ಸ್ತ್ರೀಯರ ಮನಸ್ಸನ್ನು ಅಪಹರಿಸುವಷ್ಟು ಚೆಲುವನಾಗಿದ್ದನು. ॥ ೧೬ ॥ ಅವನು ಮೊದಲಿಗೆ ಅಧರಗಳ ಮಧುವನ್ನು ನನಗೆ ಕುಡಿಸಿದನು. ನಾನೂ ಅವನ ಅಧರಗಳ ಮಧುವನ್ನು ಕುಡಿಯಬೇಕೆನ್ನುವಷ್ಟರಲ್ಲಿ ನನ್ನನ್ನು ದುಃಖಸಾಗರದಲ್ಲಿ ಮುಳುಗಿಸಿ ಮಾಯವಾಗಿಬಿಟ್ಟನು. ಆ ನನ್ನ ಪ್ರಾಣವಲ್ಲಭನನ್ನು ಆಗಿನಿಂದಲೂ ಹುಡುಕುತ್ತಿದ್ದೇನೆ ॥ ೧೭ ॥

ಚಿತ್ರಲೇಖೋವಾಚ

ವ್ಯಸನಂ ತೇಽಪಕರ್ಷಾಮಿ ತ್ರಿಲೋಕ್ಯಾಂ ಯದಿ ಭಾವ್ಯತೇ ।
ತಮಾನೇಷ್ಯೇ ವರಂ ಯಸ್ತೇ ಮನೋಹರ್ತಾ ತಮಾದಿಶ ॥ ೧೮ ॥

ಇತ್ಯುಕ್ತ್ವಾ ದೇವಗಂಧರ್ವಸಿದ್ಧಚಾರಣಪನ್ನಗಾನ್ ।
ದೈತ್ಯವಿದ್ಯಾಧರಾನ್ ಯಕ್ಷಾನ್ ಮನುಜಾಂಶ್ಚ ಯಥಾಲಿಖತ್ ॥ ೧೯ ॥

ಮನುಜೇಷು ಚ ಸಾ ವೃಷ್ಣೀನ್ ಶೂರಮಾನಕದುಂದುಭಿಮ್ ।
ವ್ಯಲಿಖದ್ರಾಮಕೃಷ್ಣೌ ಚ ಪ್ರದ್ಯುಮ್ನಂ ವೀಕ್ಷ್ಯ ಲಜ್ಜಿತಾ ॥ ೨೦ ॥

ಅನಿರುದ್ಧಂ ವಿಲಿಖಿತಂ ವೀಕ್ಷ್ಯೋಷಾವಾಙ್ಮುಖೀ ಹ್ರಿಯಾ ।
ಸೋಽಸಾವಸಾವಿತಿ ಪ್ರಾಹ ಸ್ಮಯಮಾನಾ ಮಹೀಪತೇ ॥ ೨೧ ॥

ಚಿತ್ರಲೇಖಾ ತಮಾಜ್ಞಾಯ ಪೌತ್ರಂ ಕೃಷ್ಣಸ್ಯ ಯೋಗಿನೀ ।
ಯಯೌ ವಿಹಾಯಸಾ ರಾಜನ್ ದ್ವಾರಕಾಂ ಕೃಷ್ಣಪಾಲಿತಾಮ್ ॥ ೨೨ ॥

ತತ್ರ ಸುಪ್ತಂ ಸುಪರ್ಯಂಕೇ ಪ್ರಾದ್ಯುಮ್ನಿಂ ಯೋಗಮಾಸ್ಥಿತಾ ।
ಗೃಹೀತ್ವಾ ಶೋಣಿತಪುರಂ ಸಖ್ಯೈ ಪ್ರಿಯಮದರ್ಶಯತ್ ॥ ೨೩ ॥

ಸಾ ಚ ತಂ ಸುಂದರವರಂ ವಿಲೋಕ್ಯ ಮುದಿತಾನನಾ ।
ದುಷ್ಪ್ರೇಕ್ಷ್ಯೇ ಸ್ವಗೃಹೇ ಪುಂಭೀ ರೇಮೇ ಪ್ರಾದ್ಯುಮ್ನಿನಾ ಸಮಮ್ ॥ ೨೪ ॥

ಪರಾರ್ಧ್ಯವಾಸಃ ಸ್ರಗ್ಗಂಧಧೂಪದೀಪಾಸನಾದಿಭಿಃ ।
ಪಾನಭೋಜನಭಕ್ಷ್ಯೈಶ್ಚ ವಾಕ್ಯೈಃ ಶುಶ್ರೂಷಯಾರ್ಚಿತಃ ॥ ೨೫ ॥

ಗೂಢಃ ಕನ್ಯಾಪುರೇ ಶಶ್ವತ್ಪ್ರವೃದ್ಧಸ್ನೇಹಯಾ ತಯಾ ।
ನಾಹರ್ಗಣಾನ್ ಸ ಬುಬುಧೇ ಊಷಯಾಪಹೃತೇಂದ್ರಿಯಃ ॥ ೨೬ ॥

ಚಿತ್ರಲೇಖೆಯು ಹೇಳಿದಳು - ಸಖಿಯೇ! ನಿನ್ನ ಚಿತ್ತವನ್ನು ಅಪಹರಿಸಿದವನು ಮೂರುಲೋಕಗಳಲ್ಲಿ ಎಲ್ಲೇ ಇದ್ದರೂ, ನೀನು ಗುರುತಿಸುವೆಯಾದರೆ ನಾನು ನಿನ್ನ ವಿರಹವ್ಯಥೆಯನ್ನು ಕಳೆಯ ಬಲ್ಲೆನು. ನಾನು ಚಿತ್ರಗಳನ್ನು ಬರೆಯುತ್ತಾ ಹೋಗುತ್ತೇನೆ. ನೀನು ನಿನ್ನ ಇನಿಯನನ್ನು ಗುರುತಿಸಬೇಕು. ಮತ್ತೆ ಅವನು ಎಲ್ಲೇ ಇದ್ದರೂ ನಾನು ಅವನನ್ನು ನಿನ್ನ ಬಳಿಗೆ ಕರೆತರುವೆನು. ॥ ೧೮ ॥ ಹೀಗೆ ಹೇಳಿ ಚಿತ್ರಲೇಖೆಯು ಮಾತು-ಮಾತಿನಲ್ಲೇ ಬಹಳಷ್ಟು ದೇವತೆಗಳ, ಗಂಧರ್ವರ, ಸಿದ್ಧರ, ಚಾರಣರ, ಪನ್ನಗರ, ದೈತ್ಯರ, ವಿದ್ಯಾಧರರ, ಯಕ್ಷರ ಮತ್ತು ಮನುಷ್ಯರ ಚಿತ್ರಗಳನ್ನು ಬರೆದು ತೋರಿಸಿದಳು. ॥ ೧೯ ॥ ಮನುಷ್ಯರಲ್ಲಿ ಆಕೆಯು ವೃಷ್ಣಿವಂಶದ ಶೂರಸೇನ, ವಸುದೇವ, ಬಲರಾಮ ಮತ್ತು ಭಗವಾನ್ ಶ್ರೀಕೃಷ್ಣ ಇವರ ಚಿತ್ರಗಳನ್ನು ರಚಿಸಿದಳು. ಪ್ರದ್ಯುಮ್ನನ ಚಿತ್ರವನ್ನು ನೋಡುತ್ತಲೇ ಉಷೆಯು ನಾಚಿಕೊಂಡಳು. ॥ ೨೦ ॥ ಪರೀಕ್ಷಿತನೇ! ಆಕೆಯು ಅನಿರುದ್ಧನ ಚಿತ್ರವನ್ನು ನೋಡುತ್ತಲೇ ಲಜ್ಜೆಯಿಂದ ತಲೆತಗ್ಗಿಸಿದಳು. ತಗ್ಗಿಸಿದ ತಲೆ ಎತ್ತಲೇ ಇಲ್ಲ, ಮತ್ತೆ ಮಂದಹಾಸವನ್ನು ಬೀರುತ್ತಾ ಮೆಲ್ಲನೆ ಹೇಳಿದಳು - 'ನನ್ನ ಪ್ರಿಯತಮನು ಇವನೇ ಆಗಿದ್ದಾನೆ, ಇವನೇ.' ॥ ೨೧ ॥

ಪರೀಕ್ಷಿದ್ರಾಜನೇ! ಯೋಗಿನಿಯಾದ ಚಿತ್ರಲೇಖೆಗೆ ಈ ಚಿತ್ರದಲ್ಲಿರುವವನು ಶ್ರೀಕೃಷ್ಣನ ಮೊಮ್ಮಗನೆಂದು ತಿಳಿದು ಹೋಯಿತು. ಆಕೆಯು ರಾತ್ರಿಯಲ್ಲೇ ಆಕಾಶಮಾರ್ಗದಿಂದ ಭಗವಾನ್ ಶ್ರೀಕೃಷ್ಣನಿಂದ ರಕ್ಷಿತವಾದ ದ್ವಾರಕೆಗೆ ಬಂದಳು. ॥ ೨೨ ॥ ಅಲ್ಲಿ ಅನಿರುದ್ಧನು ಅಂತಃಪುರದಲ್ಲಿ ಸುಂದರವಾದ ಮಂಚದಲ್ಲಿ ಪವಡಿಸಿದ್ದನು. ಯೋಗಸಿದ್ಧಿಯ ಪ್ರಭಾವದಿಂದ ಚಿತ್ರಲೇಖೆಯು ಅನಿರುದ್ಧನನ್ನು ಎತ್ತಿಕೊಂಡು ಶೋಣಿತಪುರಕ್ಕೆ ತಂದು ತನ್ನ ಗೆಳತಿಯಾದ ಉಷೆಗೆ ಆಕೆಯ ಪ್ರಿಯತಮನ ದರ್ಶನ ಮಾಡಿಸಿದಳು. ॥ ೨೩ ॥ ತನ್ನ ಪರಮ ಸುಂದರ ಪ್ರಾಣವಲ್ಲಭನನ್ನು ಪಡೆದು ಆನಂದದಿಂದ ಉಷೆಯ ಮುಖವರಳಿತು. ಆಕೆಯು ಅನಿರುದ್ಧನೊಂದಿಗೆ ತನ್ನ ಅಂತಃಪುರದಲ್ಲಿ ವಿಹರಿಸ ತೊಡಗಿದಳು. ಪರೀಕ್ಷಿತನೇ! ಆಕೆಯ ಅಂತಃಪುರವು ಯಾವನೇ ಪುರುಷನು ಇಣಿಕಿನೋಡಲೂ ಕೂಡ ಸಾಧ್ಯವಿಲ್ಲದಷ್ಟು ಸುರಕ್ಷಿತವಾಗಿತ್ತು. ॥ ೨೪ ॥

ಉಷಾ-ಅನಿರುದ್ಧರ ಪರಸ್ಪರ ಪ್ರೀತಿಯು ದಿನ-ದಿನಕ್ಕೂ ವೃದ್ಧಿಹೊಂದುತ್ತಿತ್ತು. ಉಷೆಯು ಬಹುಮೂಲ್ಯ ವಸ್ತ್ರಗಳಿಂದಲೂ, ಪುಷ್ಪಹಾರಗಳಿಂದಲೂ, ಗಂಧ-ಧೂಪ-ದೀಪ, ಆಸನಾದಿಗಳಿಂದಲೂ, ಸುಮಧುರ ಪಾನೀಯಗಳಿಂದಲೂ, ಭಕ್ಷ್ಯ-ಭೋಜ್ಯಗಳಿಂದಲೂ, ಮೃದು-ಮಧುರ ಮಾತಿನಿಂದಲೂ, ಸೇವಾಶುಶ್ರೂಷೆಗಳಿಂದಲೂ ಅನಿರುದ್ಧನನ್ನು ಬಹಳವಾಗಿ ಸತ್ಕರಿಸಿದಳು. ಆಕೆಯು ತನ್ನ ಪ್ರೇಮದಿಂದ ಅನಿರುದ್ಧನ ಮನಸ್ಸನ್ನು ವಶಪಡಿಸಿಕೊಂಡಿದ್ದಳು. ಆಕೆಯ ಅಂತಃಪುರದಲ್ಲಿ ನಿಗೂಢನಾಗಿದ್ದ ಅನಿರುದ್ಧನು ತನ್ನನ್ನೇ ತಾನು ಮರೆತು ಬಿಟ್ಟಿದ್ದನು. ನಾನು ಇಲ್ಲಿಗೆ ಬಂದು ಎಷ್ಟು ದಿನಗಳಾದವು ಎಂಬುದನ್ನು ತಿಳಿಯದೆ ಹೋದನು. ॥ ೨೫-೨೬ ॥

ತಾಂ ತಥಾ ಯದುವೀರೇಣ ಭುಜ್ಯಮಾನಾಂ ಹತವ್ರತಾಮ್ ।
ಹೇತುಭಿರ್ಲಕ್ಷಯಾಂಚಕ್ರುರಾಪ್ರೀತಾಂ ದುರವಚ್ಛದೈಃ ॥ ೨೭ ॥

ಭಟಾ ಆವೇದಯಾಂಚಕ್ರೂ ರಾಜಂಸ್ತೇ ದುಹಿತುರ್ವಯಮ್ ।
ವಿಚೇಷ್ಟಿತಂ ಲಕ್ಷಯಾಮಃ ಕನ್ಯಾಯಾಃ ಕುಲದೂಷಣಮ್ ॥ ೨೮ ॥

ಅನಪಾಯಿಭಿರಸ್ಮಾಭಿರ್ಗುಪ್ತಾಯಾಶ್ಚ ಗೃಹೇ ಪ್ರಭೋ ।
ಕನ್ಯಾಯಾ ದೂಷಣಂ ಪುಂಭಿರ್ದುಷ್ಪ್ರೇಕ್ಷ್ಯಾಯಾ ನ ವಿದ್ಮಹೇ ॥ ೨೯ ॥

ತತಃ ಪ್ರವ್ಯಥಿತೋ ಬಾಣೋ ದುಹಿತುಃ ಶ್ರುತದೂಷಣಃ ।
ತ್ವರಿತಃ ಕನ್ಯಕಾಗಾರಂ ಪ್ರಾಪ್ತೋಽದ್ರಾಕ್ಷೀದ್ಯದೂದ್ವಹಮ್ ॥ ೩೦ ॥

ಕಾಮಾತ್ಮಜಂ ತಂ ಭುವನೈಕಸುಂದರಂ
ಶ್ಯಾಮಂ ಪಿಶಂಗಾಂಬರಮಂಬುಜೇಕ್ಷಣಮ್ ।
ಬೃಹದ್ಭುಜಂ ಕುಂಡಲಕುಂತಲತ್ವಿಷಾ
ಸ್ಮಿತಾವಲೋಕೇನ ಚ ಮಂಡಿತಾನನಮ್ ॥ ೩೧ ॥

ದೀವ್ಯಂತಮಕ್ಷೈಃ ಪ್ರಿಯಯಾಭಿನೃಮ್ಣಯಾ
ತದಂಗಸಂಗಸ್ತನಕುಂಕುಮಸ್ರಜಮ್ ।
ಬಾಹ್ವೋರ್ದಧಾನಂ ಮಧುಮಲ್ಲಿಕಾಶ್ರಿತಾಂ
ತಸ್ಯಾಗ್ರ ಆಸೀನಮವೇಕ್ಷ್ಯ ವಿಸ್ಮಿತಃ ॥ ೩೨ ॥

ಸ ತಂ ಪ್ರವಿಷ್ಟಂ ವೃತಮಾತತಾಯಿಭಿ-
ರ್ಭಟೈರನೀಕೈರವಲೋಕ್ಯ ಮಾಧವಃ ।
ಉದ್ಯಮ್ಯ ಮೌರ್ವಂ ಪರಿಘಂ ವ್ಯವಸ್ಥಿತೋ
ಯಥಾಂತಕೋ ದಂಡಧರೋ ಜಿಘಾಂಸಯಾ ॥ ೩೩ ॥

ಪರೀಕ್ಷಿತನೇ! ಯದುಕುಮಾರ ಅನಿರುದ್ಧನ ಸಹವಾಸದಿಂದ ಉಷೆಯ ಕನ್ಯತ್ವವು ನಷ್ಟವಾಗಿ ಹೋಗಿತ್ತು. ಆಕೆಯ ಶರೀರದಲ್ಲಿ ಕಾಣುತ್ತಿದ್ದ ಚಿಹ್ನೆಗಳು ಯಾವ ರೀತಿಯಿಂದಲೂ ಅಡಗಿಸಲಾರದಷ್ಟು ಸ್ಪಷ್ಟವಾಗಿ ಎದ್ದು ಕಾಣುತ್ತಿದ್ದುವು. ಉಷೆಯು ಬಹಳವಾಗಿ ಪ್ರಸನ್ನವಾಗಿ ಇರುತ್ತಿದ್ದಳು. ಇವಳಿಗೆ ಯಾರೋ ಪುರುಷನೊಂದಿಗೆ ಸಂಬಂಧವು ನಿಂದಿತವಾಗಿ ಉಂಟಾಗಿದೆ ಎಂದು ಕಾವಲುಗಾರರು ತಿಳಿದುಕೊಂಡರು. ಅವರು ಬಾಣಾಸುರನ ಬಳಿಗೆ ಹೋಗಿ ನಿವೇದಿಸಿಕೊಂಡರು - ಮಹಾರಾಜರೇ! ಕುಲಕ್ಕೆ ಕಳಂಕ ತರುವಂತಹ ನಿಮ್ಮ ಅವಿವಾಹಿತಳಾದ ರಾಜಕುಮಾರಿಯ ಚೇಷ್ಟೆಗಳನ್ನು ನಾವು ನೋಡಿದೆವು. ॥ ೨೭-೨೮ ॥ ಪ್ರಭುಗಳೇ! ನಾವು ಕ್ರಮತಪ್ಪದೆ ಹಗಲೂ-ರಾತ್ರಿ ಕಾವಲು ಕಾಯುತ್ತಿದ್ದೇವೆ. ಇದರಲ್ಲಿ ಸಂದೇಹವೇ ಇಲ್ಲ. ನಿಮ್ಮ ಮಗಳನ್ನು ಹೊರಗಿನ ಮನುಷ್ಯರು ನೋಡಲೂ ಕೂಡ ಸಾಧ್ಯವಿಲ್ಲ. ಹೀಗಿದ್ದರೂ ಅವಳು ಕಳಂಕಿತೆ ಹೇಗಾದಳು? ಇದರ ಕಾರಣ ನಮಗೆ ತಿಳಿಯದಾಗಿದೆ. ॥ ೨೯ ॥

ಪರೀಕ್ಷಿದ್ರಾಜನೇ! ತನ್ನ ಕನ್ಯೆಯ ಚರಿತ್ರವು ದೂಷಿತವಾಗಿದೆ ಎಂಬ ಸಮಾಚಾರವನ್ನು ಕಾವಲುಗಾರರಿಂದ ತಿಳಿದ ಬಾಣಾಸುರನ ಹೃದಯದಲ್ಲಿ ಅತ್ಯಂತ ಪೀಡೆ ಉಂಟಾಯಿತು. ಅವನು ಲಗುಬಗೆಯಿಂದ ಆಕೆಯ ಅಂತಃಪುರಕ್ಕೆ ಹೋಗಿ ನೋಡಿದರೆ ಅಲ್ಲಿ ಅನಿರುದ್ಧನು ಕುಳಿತಿದ್ದನು. ॥ ೩೦ ॥ ಪ್ರಿಯ ಪರೀಕ್ಷಿತನೇ! ಅನಿರುದ್ಧನು ಸಾಕ್ಷಾತ್ ಕಾಮದೇವನ ಅವತಾರನಾಗಿದ್ದ ಪ್ರದ್ಯುಮ್ನನ ಪುತ್ರನಾಗಿದ್ದನು. ಮೂರು ಲೋಕಗಳಲ್ಲಿಯೂ ಅವನಂತಹ ಸುಂದರನು ಯಾರೂ ಇರಲಿಲ್ಲ. ಶ್ಯಾಮಲ ಶರೀರದ ಮೇಲೆ ಪೀತಾಂಬರವು ಹೊಳೆಯುತ್ತಿತ್ತು. ಕಮಲದ ಎಸಳಿನಂತಹ ವಿಶಾಲಕೋಮಲ ಕಣ್ಣುಗಳು. ಆಜಾನುಬಾಹುಗಳು. ಕಪೋಲಗಳ ಮೇಲೆ ಮುಂಗುರುಳು ಮತ್ತು ಕುಂಡಲಗಳು ಝಗ-ಝಗಿಸುವ ಜ್ಯೋತಿ. ತುಟಿಗಳಲ್ಲಿ ಮಂದವಾದ ಮಂದಹಾಸ. ಕಡೆಗಣ್ಣ ನೋಟದಿಂದ ಅವನ ಮುಖದ ಶೋಭೆಯು ವಿಲಕ್ಷಣವಾಗಿತ್ತು. ॥ ೩೧ ॥ ಆಗ ಅನಿರುದ್ಧನು ಸರ್ವಾಲಂಕಾರಗಳಿಂದ ಭೂಷಿತಳಾಗಿ ಕುಳಿತಿರುವ ಪ್ರಿಯತಮೆ ಉಷೆಯೊಂದಿಗೆ ಪಗಡೆಯಾಡುತ್ತಿದ್ದನು. ಆಕೆಯ ಕೊರಳಲ್ಲಿ ಸುಶೋಭಿತವಾದ ಮಲ್ಲಿಗೆಯ ಹೂವಿನ ಹಾರವು ಸ್ತನಮಂಡಲದ ಕುಂಕುಮದಿಂದ ಕೆಂಪಾಗಿ ಹೋಗಿತ್ತು. ಹೀಗೆ ಉಷೆಯ ಎದುರಿನಲ್ಲೇ ಕುಳಿತು ಆಟವಾಡುತ್ತಿದ್ದ ಅನಿರುದ್ಧನನ್ನು ಕಂಡು ಬಾಣಾಸುರನು ಚಕಿತನಾದನು. ॥ ೩೨ ॥ ತನ್ನನ್ನು ಕೊಲ್ಲುವುದಕ್ಕಾಗಿ ಆಯುಧಪಾಣಿಗಳಾದ ಸಾವಿರಾರು ರಾಜಭಟರೊಡನೆ ಬಾಣಾಸುರನು ಬಂದುದನ್ನು ನೋಡಿದ ಅನಿರುದ್ಧನು, ಒಡನೆಯೇ ಅವರೆಲ್ಲರನ್ನು ಸಂಹರಿಸುವ ಇಚ್ಛೆಯಿಂದ ಲೋಹಮಯವಾದ, ಅತಿಭಯಂಕರವಾಗಿದ್ದ ಪರಿಘಾಯುಧವನ್ನು ಹಿಡಿದು ಕಾಲದಂಡ ಹಸ್ತನಾದ ಯಮನೇ ನಿಂತಿರುವನೋ ಎಂಬಂತೆ ಯುದ್ಧಸನ್ನದ್ಧನಾಗಿ ನಿಂತನು. ॥ ೩೩ ॥

ಜಿಘೃಕ್ಷಯಾ ತಾನ್ಪತಿತಃ ಪ್ರಸರ್ಪತಃ
ಶುನೋ ಯಥಾ ಸೂಕರಯೂಥಪೋಽಹನತ್ ।
ತೇ ಹನ್ಯಮಾನಾ ಭವನಾದ್ವಿನಿರ್ಗತಾ
ನಿರ್ಭಿನ್ನಮೂರ್ಧೋರುಭುಜಾಃ ಪ್ರದುದ್ರುವುಃ ॥ ೩೪ ॥

ಬಳಿಕ ನಾಯಿಗಳ ಗುಂಪನ್ನು ಧ್ವಂಸಮಾಡುವ ಕಾಡುಹಂದಿಯಂತೆ ಅನಿರುದ್ಧನು ತನ್ನನ್ನು ಹಿಡಿಯಲು ಮುನ್ನುಗ್ಗಿ ಬರುತ್ತಿದ್ದ ಸೈನಿಕರೆಲ್ಲರನ್ನು ಪರಿಘಾಯುಧದಿಂದ ಧ್ವಂಸಮಾಡಿ ಬಿಟ್ಟನು. ಅನಿರುದ್ಧನ ಪ್ರಹಾರದಿಂದ ಹಲವಾರು ಸೈನಿಕರ ತಲೆಗಳು, ಭುಜಗಳು, ತೊಡೆಗಳು ಮುರಿದು, ಕಳಚಿ ಬೀಳುತ್ತಿದ್ದವು. ಕೆಲವರು ಪ್ರಾಣದ ಆಸೆಯಿಂದ ಅಲ್ಲಿಂದ ಓಡಿ ಹೋದರು. ॥ ೩೪ ॥

ತಂ ನಾಗಪಾಶೈರ್ಬಲಿನಂದನೋ ಬಲೀ
ಘ್ನಂತಂ ಸ್ವಸೈನ್ಯಂ ಕುಪಿತೋ ಬಬಂಧ ಹ ।
ಊಷಾ ಭೃಶಂ ಶೋಕವಿಷಾದವಿಹ್ವಲಾ
ಬದ್ಧಂ ನಿಶಮ್ಯಾಶ್ರುಕಲಾಕ್ಷ್ಯರೌದಿಷೀತ್ ॥ ೩೫ ॥

ಅನಿರುದ್ಧನು ತನ್ನ ಸೈನಿಕರೆಲ್ಲರನ್ನು ಸಂಹಾರ ಮಾಡುತ್ತಿರುವುದನ್ನು ನೋಡಿದ ಬಾಣಾಸುರನು ಕ್ರೋಧೋನ್ಮತ್ತನಾಗಿ ನಾಗಪಾಶದಿಂದ ಅನಿರುದ್ಧನನ್ನು ಬಂಧಿಸಿಬಿಟ್ಟನು. ತನ್ನ ಪ್ರಿಯತಮನನ್ನು ಬಂಧಿಸಿರುವುದನ್ನು ಕೇಳಿದ ಉಷೆಯು ಅತ್ಯಂತ ಶೋಕ, ವಿಷಾದಗಳಿಂದ ವಿಹ್ವಲಳಾದಳು. ಆಕೆಯು ಕಣ್ಣುಗಳಿಂದ ಧಾರಾಕಾರವಾಗಿ ನೀರು ಸುರಿಯುತ್ತಾ ಅಳುತ್ತಿದ್ದಳು. ॥ ೩೫ ॥

ಅರವತ್ತೆರಡನೆಯ ಅಧ್ಯಾಯವು ಮುಗಿಯಿತು. ॥ ೬೨ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮಸ್ಕಂಧೇ ಉತ್ತರಾರ್ಧೇ
ಅನಿರುದ್ಧಬಂಧೋ ನಾಮ ದ್ವಿಷಷ್ಟಿತಮೋಽಧ್ಯಾಯಃ ॥ ೬೨ ॥

ಅರವತ್ತಮೂರನೆಯ ಅಧ್ಯಾಯ

ಭಗವಾನ್ ಶ್ರೀಕೃಷ್ಣನೊಂದಿಗೆ ಬಾಣಾಸುರನ ಯುದ್ಧ

ಶ್ರೀಶುಕ ಉವಾಚ

ಅಪಶ್ಯತಾಂ ಚಾನಿರುದ್ಧಂ ತದ್ಬಂಧೂನಾಂ ಚ ಭಾರತ ।
ಚತ್ವಾರೋ ವಾರ್ಷಿಕಾ ಮಾಸಾ ವ್ಯತೀಯುರನುಶೋಚತಾಮ್ ॥ ೧ ॥

ನಾರದಾತ್ತದುಪಾಕರ್ಣ್ಯ ವಾರ್ತಾಂ ಬದ್ಧಸ್ಯ ಕರ್ಮ ಚ ।
ಪ್ರಯಯುಃ ಶೋಣಿತಪುರಂ ವೃಷ್ಣಯಃ ಕೃಷ್ಣದೇವತಾಃ ॥ ೨ ॥

ಪ್ರದ್ಯುಮ್ನೋ ಯುಯುಧಾನಶ್ಚ ಗದಃ ಸಾಂಬೋಽಥ ಸಾರಣಃ ।
ನಂದೋಪನಂದಭದ್ರಾದ್ಯಾ ರಾಮಕೃಷ್ಣಾನುವರ್ತಿನಃ ॥ ೩ ॥

ಅಕ್ಷೌಹಿಣೀಭಿರ್ದ್ವಾದಶಭಿಃ ಸಮೇತಾಃ ಸರ್ವತೋದಿಶಮ್ ।
ರುರುಧುರ್ಬಾಣನಗರಂ ಸಮಂತಾತ್ ಸಾತ್ವತರ್ಷಭಾಃ ॥ ೪ ॥

ಭಜ್ಯಮಾನಪುರೋದ್ಯಾನಪ್ರಾಕಾರಾಟ್ಟಾಲಗೋಪುರಮ್ ।
ಪ್ರೇಕ್ಷಮಾಣೋ ರುಷಾವಿಷ್ಟಸ್ತುಲ್ಯಸೈನ್ಯೋಽಭಿನಿರ್ಯಯೌ ॥ ೫ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ - ಪರೀಕ್ಷಿತ ಮಹಾರಾಜ ! ಮಳೆಗಾಲದ ನಾಲ್ಕು ತಿಂಗಳುಗಳು ಕಳೆದು ಹೋದುವು. ಅನಿರುದ್ಧನು ಎಲ್ಲಿಗೆ ಹೋದನು ? ಎಲ್ಲಿರುವನೆಂಬುದೇ ಯಾರಿಗೂ ತಿಳಿಯಲಿಲ್ಲ. ಅವನ ಬಂಧುಗಳು ಈ ಘಟನೆಯಿಂದ ಶೋಕಾಕುಲರಾದರು. ॥ ೧ ॥ ಒಂದು ದಿನ ನಾರದ ಮಹರ್ಷಿಗಳು ದ್ವಾರಕೆಗೆ ಬಂದು, ಯೋಗಿನಿಯು ಅನಿರುದ್ಧನನ್ನು ಶೋಣಿತಪುರಕ್ಕೆ ಕೊಂಡು ಹೋದುದು, ಬಾಣಾಸುರನ ಸೈನಿಕರನ್ನು ಧ್ವಂಸಮಾಡಿದುದು, ನಾಗಪಾಶದಿಂದ ಬಂಧಿತನಾದುದು ಎಲ್ಲ ವೃತ್ತಾಂತವನ್ನು ಶ್ರೀಕೃಷ್ಣನಲ್ಲಿ ತಿಳಿಸಿದರು. ಶ್ರೀಕೃಷ್ಣನನ್ನೇ ತಮ್ಮ ಆರಾಧ್ಯದೇವನೆಂದು ಭಾವಿಸಿದ್ದ ಯದುವಂಶೀಯರು ಶೋಣಿತಪುರಕ್ಕೆ ಪ್ರಯಾಣ ಮಾಡಿದರು. ॥ ೨ ॥ ಬಲರಾಮ-ಶ್ರೀಕೃಷ್ಣರ ಜೊತೆಗೆ ಅವರ ಅನುಯಾಯಿಗಳಾದ ಪ್ರದ್ಯುಮ್ನ, ಸಾತ್ಯಕಿ, ಗದ, ಸಾಂಬ, ಸಾರಣ, ನಂದ, ಉಪನಂದ ಮತ್ತು ಭದ್ರ ಮೊದಲಾದ ಯಾದವರು ಹನ್ನೆರಡು ಅಕ್ಷೌಹಿಣೀ ಸೈನ್ಯ ಸಮೇತರಾಗಿ ಶೋಣಿತಪುರಕ್ಕೆ ಹೋಗಿ, ಆ ಪಟ್ಟಣಕ್ಕೆ ನಾಲ್ಕು ಕಡೆಗಳಿಂದಲೂ ಮುತ್ತಿಗೆ ಹಾಕಿದರು. ॥ ೩-೪ ॥ ಪಟ್ಟಣದ ಉದ್ಯಾನವನಗಳನ್ನೂ, ಕೋಟೆ-ಕೊತ್ತಲುಗಳನ್ನು, ಮಹಾದ್ವಾರಗಳನ್ನು ಯಾದವ ಸೈನಿಕರು ಧ್ವಂಸಮಾಡುತ್ತಿರುವುದನ್ನು ನೋಡಿ ಕುಪಿತನಾದ ಬಾಣಾಸುರನು ಅಷ್ಟೇ ಸಂಖ್ಯೆಯ ಹನ್ನೆರಡು ಅಕ್ಷೌಹಿಣೀ ಸೈನ್ಯದೊಂದಿಗೆ ಪಟ್ಟಣದಿಂದ ಹೊರಬಂದನು. ॥ ೫ ॥

ಬಾಣಾರ್ಥೇ ಭಗವಾನ್ ರುದ್ರಃ ಸಸುತೈಃ ಪ್ರಮಥೈರ್ವೃತಃ ।
ಆರುಹ್ಯ ನಂದಿವೃಷಭಂ ಯುಯುಧೇ ರಾಮಕೃಷ್ಣಯೋಃ ॥ ೬ ॥

ಆಸೀತ್ ಸುತುಮುಲಂ ಯುದ್ಧಮದ್ಭುತಂ ಲೋಮಹರ್ಷಣಮ್ ।
ಕೃಷ್ಣಶಂಕರಯೋ ರಾಜನ್ ಪ್ರದ್ಯುಮ್ನಗುಹಯೋರಪಿ ॥ ೭ ॥

ಕುಂಭಾಂಡಕೂಪಕರ್ಣಾಭ್ಯಾಂ ಬಲೇನ ಸಹ ಸಂಯುಗಃ ।
ಸಾಂಬಸ್ಯ ಬಾಣಪುತ್ರೇಣ ಬಾಣೇನ ಸಹ ಸಾತ್ಯಕೇಃ ॥ ೮ ॥

ಬ್ರಹ್ಮಾದಯಃ ಸುರಾಧೀಶಾ ಮುನಯಃ ಸಿದ್ಧಚಾರಣಾಃ ।
ಗಂಧರ್ವಾಪ್ಸರಸೋ ಯಕ್ಷಾ ವಿಮಾನೈರ್ದ್ರಷ್ಟುಮಾಗಮನ್ ॥ ೯ ॥

ಶಂಕರಾನುಚರಾನ್ ಶೌರಿರ್ಭೂತಪ್ರಮಥಗುಹ್ಯಕಾನ್ ।
ಡಾಕಿನೀರ್ಯಾತುಧಾನಾಂಶ್ಚ ವೇತಾಲಾನ್ಸವಿನಾಯಕಾನ್ ॥ ೧೦ ॥

ಪ್ರೇತಮಾತೃಪಿಶಾಚಾಂಶ್ಚ ಕೂಷ್ಮಾಂಡಾನ್ ಬ್ರಹ್ಮರಾಕ್ಷಸಾನ್ ।
ದ್ರಾವಯಾಮಾಸ ತೀಕ್ಷ್ಣಾಗ್ರೈಃ ಶರೈಃ ಶಾರ್ಙ್ಗಧನುಶ್ಚ್ಯುತೈಃ ॥ ೧೧ ॥

ಪೃಥಗ್ವಿಧಾನಿ ಪ್ರಾಯುಂಕ್ತ ಪಿನಾಕ್ಯಸ್ತ್ರಾಣಿ ಶಾರ್ಙ್ಗಿಣೇ ।
ಪ್ರತ್ಯಸ್ತ್ರೈಃ ಶಮಯಾಮಾಸ ಶಾರ್ಙ್ಗಪಾಣಿರವಿಸ್ಮಿತಃ ॥ ೧೨ ॥

ಬ್ರಹ್ಮಾಸ್ತ್ರಸ್ಯ ಚ ಬ್ರಹ್ಮಾಸ್ತ್ರಂ ವಾಯವ್ಯಸ್ಯ ಚ ಪಾರ್ವತಮ್ ।
ಆಗ್ನೇಯಸ್ಯ ಚ ಪಾರ್ಜನ್ಯಂ ನೈಜಂ ಪಾಶುಪತಸ್ಯ ಚ ॥ ೧೩ ॥

ಮೋಹಯಿತ್ವಾ ತು ಗಿರಿಶಂ ಜೃಂಭಣಾಸ್ತ್ರೇಣ ಜೃಂಭಿತಮ್ ।
ಬಾಣಸ್ಯ ಪೃತನಾಂ ಶೌರಿರ್ಜಘಾನಾಸಿಗದೇಷುಭಿಃ ॥ ೧೪ ॥

ಸ್ಕಂದಃ ಪ್ರದ್ಯುಮ್ನಬಾಣೌಘೈರರ್ದ್ಯಮಾನಃ ಸಮಂತತಃ ।
ಅಸೃಗ್ವಿಮುಂಚನ್ ಗಾತ್ರೇಭ್ಯಃ ಶಿಖಿನಾಪಾಕ್ರಮದ್ರಣಾತ್ ॥ ೧೫ ॥

ಕುಂಭಾಂಡಃ ಕೂಪಕರ್ಣಶ್ಚ ಪೇತತುರ್ಮುಸಲಾರ್ದಿತೌ ।
ದುದ್ರುವುಸ್ತದನೀಕಾನಿ ಹತನಾಥಾನಿ ಸರ್ವತಃ ॥ ೧೬ ॥

ವಿಶೀರ್ಯಮಾಣಂ ಸ್ವಬಲಂ ದೃಷ್ಟ್ವಾ ಬಾಣೋಽತ್ಯಮರ್ಷಣಃ ।
ಕೃಷ್ಣಮಭ್ಯದ್ರವತ್ ಸಂಖ್ಯೇ ರಥೀ ಹಿತ್ವೈವ ಸಾತ್ಯಕಿಮ್ ॥ ೧೭ ॥

ಬಾಣಾಸುರನ ಸಹಾಯಾರ್ಥವಾಗಿ ಸಾಕ್ಷಾತ್ ರುದ್ರದೇವನೇ ವೃಷಭಾರೂಢನಾಗಿ ತನ್ನ ಮಗನಾದ ಕಾರ್ತಿಕೇಯನಿಂದಲೂ, ಪ್ರಮಥಗಣಗಳಿಂದಲೂ ಕೂಡಿಕೊಂಡು ರಣಭೂಮಿಗೆ ಬಂದು ಬಲರಾಮ-ಶ್ರೀಕೃಷ್ಣರೊಡನೆ ಯುದ್ಧದಲ್ಲಿ ತೊಡಗಿದನು. ॥ ೬ ॥ ಪರೀಕ್ಷಿತನೇ! ಶಂಕರನಿಗೂ ಮತ್ತು ಶ್ರೀಕೃಷ್ಣನಿಗೂ, ಕಾರ್ತಿಕೇಯ ಮತ್ತು ಪ್ರದ್ಯುಮ್ನರಿಗೂ, ಅತ್ಯಂತ ಭಯಂಕರವೂ, ಅತ್ಯದ್ಭುತವೂ, ರೋಮಾಂಚಕಾರಿಯೂ ಆದ ಯುದ್ಧವು ನಡೆಯಿತು. ॥ ೭ ॥ ಬಲರಾಮನೊಡನೆ ಕುಂಭಾಂಡ-ಕೂಪಕರ್ಣರು ಯುದ್ಧಮಾಡುತ್ತಿದ್ದರು. ಬಾಣಾಸುರನ ಮಗನೊಡನೆ ಸಾಂಬನೂ, ಬಾಣಾಸುರನೊಡನೆ ಸಾತ್ಯಕಿಯೂ ಯುದ್ಧಮಾಡುತ್ತಿದ್ದರು. ॥ ೮ ॥ ಬ್ರಹ್ಮನೇ ಮೊದಲಾದ ಸುರಾಧೀಶರೂ, ಋಷಿ-ಮುನಿಗಳೂ, ಸಿದ್ಧ-ಚಾರಣರೂ, ಗಂಧರ್ವಾಪ್ಸರೆಯರೂ, ಯಕ್ಷರೂ ಆ ಯುದ್ಧವನ್ನು ನೋಡುವುದಕ್ಕಾಗಿ ವಿಮಾನಗಳಲ್ಲಿ ಕುಳಿತು ಆಗಮಿಸಿದರು. ॥ ೯ ॥ ಭಗವಾನ್ ಶ್ರೀಕೃಷ್ಣನು ತನ್ನ ಶಾರ್ಙ್ಗ ಧನುಸ್ಸಿನಿಂದ ಹರಿತವಾದ ಬಾಣಗಳನ್ನು ಪ್ರಯೋಗಿಸುತ್ತಾ ಶಂಕರನ ಅನುಚರರಾದ ಭೂತ, ಪ್ರೇತ, ಪ್ರಮಥ, ಗುಹ್ಯಕ, ಡಾಕಿನೀ, ಯಾತುಧಾನ, ವೇತಾಲ, ವಿನಾಯಕ, ಪ್ರೇತಗಣ, ಮಾತೃಗಣ, ಪಿಶಾಚ, ಕೂಷ್ಮಾಂಡ ಮತ್ತು ಬ್ರಹ್ಮರಾಕ್ಷಸ – ಇವರೆಲ್ಲರನ್ನು ಓಡಿಸಿ ಬಿಟ್ಟನು. ॥ ೧೦-೧೧ ॥ ಪಿನಾಕಪಾಣಿಯಾದ ಶಂಕರನು ಭಗವಾನ್ ಶ್ರೀಕೃಷ್ಣನ ಮೇಲೆ ನಾನಾ ಪ್ರಕಾರದ ಅಸ್ತ್ರ-ಶಸ್ತ್ರಗಳನ್ನು ಪ್ರಯೋಗಿಸಿದನು. ಆದರೆ ಶ್ರೀಕೃಷ್ಣನು ಯಾವುದೇ ವಿಸ್ಮಯವಿಲ್ಲದೆ ಅವುಗಳನ್ನು ವಿರೋಧಿ ಶಸ್ತ್ರಾಸ್ತ್ರಗಳಿಂದ ಉಪಶಮನ ಮಾಡಿದನು. ॥ ೧೨ ॥ ಭಗವಾನ್ ಶ್ರೀಕೃಷ್ಣನು ಬ್ರಹ್ಮಾಸ್ತ್ರದ ಉಪಶಮನಕ್ಕೆ ಬ್ರಹ್ಮಾಸ್ತ್ರವನ್ನೂ, ವಾಯುವ್ಯಾಸ್ತ್ರಕ್ಕೆ ಪರ್ವತಾಸ್ತ್ರವನ್ನು, ಆಗ್ನೇಯಾಸ್ತ್ರಕ್ಕೆ ಪರ್ಜನ್ಯಾಸ್ತ್ರವನ್ನು, ಪಾಶುಪತಾಸ್ತ್ರಕ್ಕಾಗಿ ನಾರಾಯಣಾಸ್ತ್ರವನ್ನೂ ಪ್ರಯೋಗ ಮಾಡಿದನು. ॥ ೧೩ ॥ ಇದಾದ ನಂತರ ಭಗವಾನ್ ಶ್ರೀಕೃಷ್ಣನು ಜೃಂಭಣಾಸ್ತ್ರದಿಂದ ಮಹಾದೇವನನ್ನು ಮೋಹಿತಗೊಳಿಸಿದನು. ಅವನು ಯುದ್ಧದಿಂದ ವಿರಕ್ತನಾಗಿ ಆಕಳಿಸುತ್ತಲೇ ಇರಬೇಕಾಯಿತು. ಆಗ ಶ್ರೀಕೃಷ್ಣನು ಶಕ್ತಿ-ಗದೆ-ಬಾಣ ಇವೇ ಮುಂತಾದ ಆಯುಧಗಳಿಂದ ಬಾಣಾಸುರನ ಸೈನ್ಯವನ್ನು ಧ್ವಂಸಮಾಡಿ ಬಿಟ್ಟನು. ॥ ೧೪ ॥ ಇತ್ತ ಪ್ರದ್ಯುಮ್ನನು ಬಾಣಗಳ ಮಳೆಯನ್ನು ಸುರಿಸಿ ಕಾರ್ತಿಕೇಯ ಸ್ವಾಮಿಯನ್ನು ಘಾಸಿಗೊಳಿಸಿದನು. ಅವನು ರಣರಂಗವನ್ನು ಬಿಟ್ಟು ನವಿಲಿನ ಮೇಲೆ ಕುಳಿತು ಓಡಿ ಹೋದನು. ॥ ೧೫ ॥ ಬಲರಾಮನು ತನ್ನ ಹಲಾಯುಧದಿಂದ ಕುಂಭಾಂಡನನ್ನು ಮತ್ತು ಕೂಪಕರ್ಣನನ್ನು ಗಾಯಗೊಳಿಸಿ ರಣರಂಗದಲ್ಲಿ ಕೊಂದುರುಳಿಸಿ ಹಾಕಿದನು. ಹೀಗೆ ತನ್ನ ಸೇನಾಪತಿಗಳು ಹತರಾಗುವುದನ್ನು ಕಂಡ ಬಾಣಾಸುರನ ಸಮಸ್ತ ಸೇನೆಯೂ ಚೆಲ್ಲಾ-ಪಿಲ್ಲಿಯಾಗಿ ಹೋಯಿತು. ॥ ೧೬ ॥

ರಥಾರೂಢನಾದ ಬಾಣಾಸುರನು ಶ್ರೀಕೃಷ್ಣಾದಿಗಳ ಪ್ರಹಾರದಿಂದ ತನ್ನ ಸೇನೆಯು ಚೆಲ್ಲಾಪಿಲ್ಲಿಯಾಗಿ ನಾಶ ಹೊಂದಿರುವುದನ್ನು ನೋಡಿ ಅತ್ಯಂತ ಕ್ರೋಧಗೊಂಡನು. ಅವನು ಕೂಡಲೇ ಸಾತ್ಯಕಿಯನ್ನು ಬಿಟ್ಟು ಭಗವಾನ್ ಶ್ರೀಕೃಷ್ಣನನ್ನು ಆಕ್ರಮಿಸಲು ಅವನೆಡೆಗೆ ಧಾವಿಸಿದನು. ॥ ೧೭ ॥

ಧನೂಂಷ್ಯಾಕೃಷ್ಯ ಯುಗಪದ್ಬಾಣಃ ಪಂಚಶತಾನಿ ವೈ ।
ಏಕೈಕಸ್ಮಿನ್ ಶರೌ ದ್ವೌ ದ್ವೌ ಸಂದಧೇ ರಣದುರ್ಮದಃ ॥ ೧೮ ॥

ತಾನಿ ಚಿಚ್ಛೇದ ಭಗವಾನ್ ಧನೂಂಷಿ ಯುಗಪದ್ಧರಿಃ ।
ಸಾರಥಿಂ ರಥಮಶ್ವಾಂಶ್ಚ ಹತ್ವಾ ಶಂಖಮಪೂರಯತ್ ॥ ೧೯ ॥

ತನ್ಮಾತಾ ಕೋಟರಾ ನಾಮ ನಗ್ನಾ ಮುಕ್ತಶಿರೋರುಹಾ ।
ಪುರೋಽವತಸ್ಥೇ ಕೃಷ್ಣಸ್ಯ ಪುತ್ರಪ್ರಾಣರಿರಕ್ಷಯಾ ॥ ೨೦ ॥

ತತಸ್ತಿರ್ಯಙ್ಮುಖೋ ನಗ್ನಾಮನಿರೀಕ್ಷನ್ಗದಾಗ್ರಜಃ ।
ಬಾಣಶ್ಚ ತಾವದ್ವಿರಥಶ್ಛಿನ್ನಧನ್ವಾವಿಶತ್ಪುರಮ್ ॥ ೨೧ ॥

ವಿದ್ರಾವಿತೇ ಭೂತಗಣೇ ಜ್ವರಸ್ತು ತ್ರಿಶಿರಾಸ್ತ್ರಿಪಾತ್ ।
ಅಭ್ಯಧಾವತ ದಾಶಾರ್ಹಂ ದಹನ್ನಿವ ದಿಶೋ ದಶ ॥ ೨೨ ॥

ಅಥ ನಾರಾಯಣೋ ದೇವಸ್ತಂ ದೃಷ್ಟ್ವಾ ವ್ಯಸೃಜಜ್ಜ್ವರಮ್ ।
ಮಾಹೇಶ್ವರೋ ವೈಷ್ಣವಶ್ಚ ಯುಯುಧಾತೇ ಜ್ವರಾವುಭೌ ॥ ೨೩ ॥

ಮಾಹೇಶ್ವರಃ ಸಮಾಕ್ರಂದನ್ ವೈಷ್ಣವೇನ ಬಲಾರ್ದಿತಃ ।
ಅಲಬ್ಧ್ವಾಭಯಮನ್ಯತ್ರ ಭೀತೋ ಮಾಹೇಶ್ವರೋ ಜ್ವರಃ ।
ಶರಣಾರ್ಥೀ ಹೃಷೀಕೇಶಂ ತುಷ್ಟಾವ ಪ್ರಯತಾಂಜಲಿಃ ॥ ೨೪ ॥

ಜ್ವರ ಉವಾಚ

ನಮಾಮಿ ತ್ವಾನಂತಶಕ್ತಿಂ ಪರೇಶಂ
ಸರ್ವಾತ್ಮಾನಂ ಕೇವಲಂ ಜ್ಞಪ್ತಿಮಾತ್ರಮ್ ।
ವಿಶ್ವೋತ್ಪತ್ತಿಸ್ಥಾನಸಂರೋಧಹೇತುಂ
ಯತ್ತದ್ಬ್ರಹ್ಮ ಬ್ರಹ್ಮಲಿಂಗಂ ಪ್ರಶಾಂತಮ್ ॥ ೨೫ ॥

ಕಾಲೋ ದೈವಂ ಕರ್ಮ ಜೀವಃ ಸ್ವಭಾವೋ
ದ್ರವ್ಯಂ ಕ್ಷೇತ್ರಂ ಪ್ರಾಣ ಆತ್ಮಾ ವಿಕಾರಃ ।
ತತ್ಸಂಘಾತೋ ಬೀಜರೋಹಪ್ರವಾಹ-
ಸ್ತ್ವನ್ಮಾಯೈಷಾ ತನ್ನಿಷೇಧಂ ಪ್ರಪದ್ಯೇ ॥ ೨೬ ॥

ಪರೀಕ್ಷಿತನೇ! ರಣೋನ್ಮತ್ತನಾದ ಬಾಣಾಸುರನು ತನ್ನ ಒಂದು ಸಾವಿರ ಕೈಗಳಿಂದ ಒಂದೇ ಬಾರಿಗೆ ಐದುನೂರು ಧನಸ್ಸುಗಳಿಂದ ಪ್ರತಿಯೊಬ್ಬ ಸೈನಿಕರ ಮೇಲೂ ಎರಡೆರಡು ಬಾಣಗಳನ್ನು ಪ್ರಯೋಗಿಸಿದನು. ॥ ೧೮ ॥ ಆದರೆ ಭಗವಾನ್ ಶ್ರೀಕೃಷ್ಣನು ಒಂದೇ ಬಾರಿಗೆ ಬಾಣಾಸುರನ ಐದುನೂರು ಧನಸ್ಸುಗಳನ್ನು ಕತ್ತರಿಸಿ, ಸಾರಥಿ, ರಥ, ಕುದುರೆಗಳನ್ನು ನೆಲಸಮಾಡಿದನು ಹಾಗೂ ಪಾಂಚಜನ್ಯ ಶಂಖವನ್ನೂದಿದನು. ॥ ೧೯ ॥ ಕೋಟರಾ ಎಂಬ ಹೆಸರಿನ ದೇವತಾ ಸ್ತ್ರೀಯು ಬಾಣಾಸುರನಿಗೆ ಧರ್ಮಮಾತೆಯಾಗಿದ್ದಳು. ಅವಳು ತನ್ನ ಉಪಾಸಕ ಪುತ್ರನ ಪ್ರಾಣಗಳ ರಕ್ಷಣೆಗಾಗಿ ಕೂದಲು ಕೆದರಿಕೊಂಡು ಬೆತ್ತಲೆಯಾಗಿ ಶ್ರೀಕೃಷ್ಣನ ಮುಂದೆ ಬಂದು ನಿಂತಳು. ॥ ೨೦ ॥ ಆಗ ಗದಾಗ್ರಜನಾದ ಶ್ರೀಕೃಷ್ಣ ಬೆತ್ತಲೆಯಾದ ಆಕೆಯನ್ನು ನೋಡಬಾರದೆಂದು ಮುಖತಿರುಗಿಸಿ ನಿಂತನು. ಅಷ್ಟರಲ್ಲಿ ಧನಸ್ಸುಗಳನ್ನೂ, ರಥವನ್ನೂ ಕಳೆದುಕೊಂಡು ಬಾಣಾಸುರನು ಪಟ್ಟಣಕ್ಕೆ ಹಿಂದಿರುಗಿದನು. ॥ ೨೧ ॥

ಇತ್ತಲಾಗಿ ಶಂಕರನ ಭೂತಗಣಗಳೆಲ್ಲವೂ ಪಲಾಯನ ಮಾಡಿದ ನಂತರ ಮೂರು ತಲೆಗಳನ್ನೂ, ಮೂರು ಕಾಲುಗಳನ್ನು ಹೊಂದಿದ್ದ ಮಾಹೇಶ್ವರ ಜ್ವರವು ಹತ್ತು ದಿಕ್ಕುಗಳನ್ನು ದಹಿಸಿ ಬಿಡುವುದೋ ಎಂಬಂತೆ ಅರ್ಭಟಿಸುತ್ತಾ ಭಗವಾನ್ ಶ್ರೀಕೃಷ್ಣನ ಬಳಿಗೆ ಬಂದಿತು. ॥ ೨೨ ॥ ಭಗವಾನ್ ಶ್ರೀಕೃಷ್ಣನು ತನ್ನ ಕಡೆಗೆ ಧಾವಿಸಿ ಬರುತ್ತಿರುವ ಮಾಹೇಶ್ವರ ಜ್ವರವನ್ನು ನೋಡಿ ಅದನ್ನು ಎದುರಿಸಲಿಕ್ಕಾಗಿ ತನ್ನ ವೈಷ್ಣವಜ್ವರವನ್ನು ಬಿಟ್ಟನು. ಈಗ ವೈಷ್ಣವಜ್ವರ ಮತ್ತು ಮಾಹೇಶ್ವರ ಜ್ವರಗಳು ಪರಸ್ಪರ ಕಾದಾಡ ತೊಡಗಿದವು. ॥ ೨೩ ॥ ಕೊನೆಗೆ ವೈಷ್ಣವ ಜ್ವರದ ತೇಜಸ್ಸಿನಿಂದ ಮಾಹೇಶ್ವರ ಜ್ವರವು ಪೀಡಿಸಲ್ಪಟ್ಟು ಕೂಗಿಕೊಳ್ಳಲು ಪ್ರಾರಂಭಿಸಿತು. ಭಯಗೊಂಡಿದ್ದ ಅದಕ್ಕೆ ಎಲ್ಲಿಯೂ ಅಭಯ ದೊರೆಯಲಿಲ್ಲ. ಆಗ ಅದು ಕೈ ಜೋಡಿಸಿಕೊಂಡು ಶ್ರೀಕೃಷ್ಣನನ್ನೇ ಶರಣುಹೊಂದಿ ಪ್ರಾರ್ಥಿಸಿತು. ॥ ೨೪ ॥

ಮಾಹೇಶ್ವರ ಜ್ವರವು ಹೇಳಿತು – ಪ್ರಭುವೇ! ನಿನ್ನ ಶಕ್ತಿಯು ಅನಂತವಾಗಿದೆ. ನೀನು ಬ್ರಹ್ಮೇಶ್ವರರಿಗಿಂತಲೂ ಶ್ರೇಷ್ಠನಾದ ಈಶ್ವರನಾಗಿರುವೆ. ಸಮಸ್ತರ ಆತ್ಮನೂ ನೀನೇ. ಅದ್ವಿತೀಯನೂ ಕೇವಲ ಜ್ಞಾನಸ್ವರೂಪನೂ ನೀನೇ ಆಗಿರುವೆ. ಪ್ರಪಂಚದ ಸೃಷ್ಟಿ-ಸ್ಥಿತಿ-ಲಯಗಳಿಗೆ ಕಾರಣನು ನೀನೇ. ಶ್ರುತಿಗಳ ಮೂಲಕ ನಿನ್ನನ್ನು ಸ್ತುತಿಸಿ, ಅನುಮಾನಿಸಲಾಗುತ್ತದೆ. ಸಮಸ್ತ ವಿಕಾರಗಳಿಂದಲೂ ರಹಿತವಾದ ಶುದ್ಧಬ್ರಹ್ಮವೂ ನೀನೇ ಆಗಿರುವೆ. ಅಂತಹ ನಿನಗೆ ನಾನು ನಮಸ್ಕರಿಸುತ್ತೇನೆ. ॥ ೨೫ ॥ ಕಾಲ, ಅದೃಷ್ಟ ಕರ್ಮ, ಜೀವ, ಸ್ವಭಾವ, ಸೂಕ್ಷ್ಮಭೂತ, ಶರೀರ, ಸೂತ್ರಾತ್ಮಾ ಪ್ರಾಣ, ಅಹಂಕಾರ, ಏಕಾದಶ ಇಂದ್ರಿಯಗಳು ಮತ್ತು ಪಂಚಭೂತಗಳು ಇವುಗಳ ಸಂಘಾತದಿಂದ ಉಂಟಾದ ಲಿಂಗಶರೀರ, ಬೀಜಾಂಕುರ ನ್ಯಾಯದಂತೆ ಅದರ ಕರ್ಮ ಮತ್ತು ಕರ್ಮದಿಂದ ಪುನಃ ಲಿಂಗಶರೀರದ ಉತ್ಪತ್ತಿ – ಇವೆಲ್ಲವೂ ನಿನ್ನ ಮಾಯೆಯೇ ಆಗಿದೆ. ಈ ಮಾಯೆಗೆ ದೂರನಾಗಿ ಅದನ್ನು ನಿವಾರಣೆ ಮಾಡುವ ನಿನಗೆ ಶರಣಾಗಿದ್ದೇನೆ. ॥ ೨೬ ॥

ನಾನಾಭಾವೈರ್ಲೀಲಯೈವೋಪಪನ್ನೈ-
ರ್ದೇವಾನ್ಸಾಧೂನ್ ಲೋಕಸೇತೂನ್ಬಿಭರ್ಷಿ ।
ಹಂಸ್ಯುನ್ಮಾರ್ಗಾನ್ ಹಿಂಸಯಾ ವರ್ತಮಾನಾನ್
ಜನ್ಮೈತತ್ತೇ ಭಾರಹಾರಾಯ ಭೂಮೇಃ ॥ ೨೭ ॥

ತಪ್ತೋಽಹಂ ತೇ ತೇಜಸಾ ದುಃಸಹೇನ
ಶಾಂತೋಗ್ರೇಣಾತ್ಯುಲ್ಬಣೇನ ಜ್ವರೇಣ ।
ತಾವತ್ತಾಪೋ ದೇಹಿನಾಂ ತೇಽಂಘ್ರಿಮೂಲಂ
ನೋ ಸೇವೇರನ್ಯಾವದಾಶಾನುಬದ್ಧಾಃ ॥ ೨೮ ॥

ಶ್ರೀಭಗವಾನುವಾಚ

ತ್ರಿಶಿರಸ್ತೇ ಪ್ರಸನ್ನೋಽಸ್ಮಿ ವ್ಯೇತು ತೇ ಮಜ್ಜ್ವರಾದ್ಭಯಮ್ ।
ಯೋ ನೌ ಸ್ಮರತಿ ಸಂವಾದಂ ತಸ್ಯ ತ್ವನ್ನ ಭವೇದ್ಭಯಮ್ ॥ ೨೯ ॥

ಇತ್ಯುಕ್ತೋಽಚ್ಯುತಮಾನಮ್ಯ ಗತೋ ಮಾಹೇಶ್ವರೋ ಜ್ವರಃ ।
ಬಾಣಸ್ತು ರಥಮಾರೂಢಃ ಪ್ರಾಗಾದ್ಯೋತ್ಸ್ಯನ್ಜನಾರ್ದನಮ್ ॥ ೩೦ ॥

ತತೋ ಬಾಹುಸಹಸ್ರೇಣ ನಾನಾಯುಧಧರೋಽಸುರಃ ।
ಮುಮೋಚ ಪರಮಕ್ರುದ್ಧೋ ಬಾಣಾಂಶ್ಚಕ್ರಾಯುಧೇ ನೃಪ ॥ ೩೧ ॥

ತಸ್ಯಾಸ್ಯತೋಽಸ್ತ್ರಾಣ್ಯಸಕೃಚ್ಚಕ್ರೇಣ ಕ್ಷುರನೇಮಿನಾ ।
ಚಿಚ್ಛೇದ ಭಗವಾನ್ಬಾಹೂನ್ ಶಾಖಾ ಇವ ವನಸ್ಪತೇಃ ॥ ೩೨ ॥

ಬಾಹುಷು ಛಿದ್ಯಮಾನೇಷು ಬಾಣಸ್ಯ ಭಗವಾನ್ ಭವಃ ।
ಭಕ್ತಾನುಕಂಪ್ಯುಪವ್ರಜ್ಯ ಚಕ್ರಾಯುಧಮಭಾಷತ ॥ ೩೩ ॥

ಶ್ರೀರುದ್ರ ಉವಾಚ

ತ್ವಂ ಹಿ ಬ್ರಹ್ಮ ಪರಂ ಜ್ಯೋತಿರ್ಗೂಢಂ ಬ್ರಹ್ಮಣಿ ವಾಙ್ಮಯೇ ।
ಯಂ ಪಶ್ಯಂತ್ಯಮಲಾತ್ಮಾನ ಆಕಾಶಮಿವ ಕೇವಲಮ್ ॥ ೩೪ ॥

ನಾಭಿರ್ನಭೋಽಗ್ನಿರ್ಮುಖಮಂಬು ರೇತೋ
ದ್ಯೌಃ ಶೀರ್ಷಮಾಶಾಃ ಶ್ರುತಿರಂಘ್ರಿರುರ್ವೀ ।
ಚಂದ್ರೋ ಮನೋ ಯಸ್ಯ ದೃಗರ್ಕ ಆತ್ಮಾ
ಅಹಂ ಸಮುದ್ರೋ ಜಠರಂ ಭುಜೇಂದ್ರಃ ॥ ೩೫ ॥

ರೋಮಾಣಿ ಯಸ್ಯೌಷಧಯೋಽಂಬುವಾಹಾಃ
ಕೇಶಾ ವಿರಿಂಚೋ ಧಿಷಣಾ ವಿಸರ್ಗಃ ।
ಪ್ರಜಾಪತಿರ್ಹೃದಯಂ ಯಸ್ಯ ಧರ್ಮಃ
ಸ ವೈ ಭವಾನ್ಪುರುಷೋ ಲೋಕಕಲ್ಪಃ ॥ ೩೬ ॥

ಪ್ರಭೋ! ನೀನು ಲೀಲೆಯಿಂದಲೇ ಅನೇಕ ರೂಪಗಳನ್ನು ಧರಿಸಿ, ದೇವತೆಗಳ, ಸಾಧುಗಳ ಮತ್ತು ಲೋಕಮರ್ಯಾದೆಯ ಪಾಲನೆ-ಪೋಷಣೆ ಮಾಡುತ್ತಿರುವೆ. ಲೋಕಕಂಟಕರಾದ ದುರ್ಮಾರ್ಗಿಗಳನ್ನು ಸಂಹರಿಸುವೆ. ಆದುದರಿಂದ ನಿನ್ನ ಅವತಾರಗಳೆಲ್ಲವೂ ಭೂಭಾರಹರಣಕ್ಕಾಗಿ ಆಗಿವೆ. ॥ ೨೭ ॥ ಪ್ರಭುವೇ! ಶಾಂತವಾದಂತೆ ಕಂಡರೂ ಉಗ್ರವಾಗಿರುವ ನಿನ್ನ ಅತ್ಯಂತ ಭಯಾನಕವಾದ ಮತ್ತು ದುಸ್ಸಹವಾದ ಜ್ವರದಿಂದ ನಾನು ಪರಿತಪಿಸುತ್ತಿದ್ದೇನೆ. ದೇಹಧಾರಿಗಳಾದ ಜೀವರು ಆಸೆಯಿಂದ ಬಂಧಿತರಾಗಿ ನಿನ್ನ ಪಾದ ಕಮಲವನ್ನು ಸೇವಿಸುವವರೆಗೂ ತಾಪ-ಸಂತಾಪದಲ್ಲಿ ಬೇಯುತ್ತಿರುತ್ತಾರೆ. ॥ ೨೮ ॥

ಭಗವಾನ್ ಶ್ರೀಕೃಷ್ಣನು ಹೇಳಿದನು - ತ್ರಿಶಿರಸನೇ! ನಾನು ನಿನ್ನ ಮೇಲೆ ಪ್ರಸನ್ನನಾಗಿರುವೆನು. ಈಗ ನೀನು ನನ್ನ ಜ್ವರದಿಂದ ನಿರ್ಭಯನಾಗು. ಜಗತ್ತಿನಲ್ಲಿ ನಮ್ಮಿಬ್ಬರ ಈ ಸಂವಾದವನ್ನು ಸ್ಮರಿಸುವವರಿಗೆ ನಿನ್ನಿಂದ ಯಾವುದೇ ಭಯ ಇರಲಾರದು. ॥ ೨೯ ॥ ಭಗವಾನ್ ಶ್ರೀಕೃಷ್ಣನು ಹೀಗೆ ಹೇಳಿದಾಗ ಮಾಹೇಶ್ವರಜ್ವರವು ಅವನಿಗೆ ನಮಸ್ಕರಿಸಿ ಹೊರಟುಹೋಯಿತು. ಅಷ್ಟರಲ್ಲಿ ಬಾಣಾಸುರನು ರಥಾರೂಢನಾಗಿ ಶ್ರೀಕೃಷ್ಣನೊಡನೆ ಯುದ್ಧಮಾಡಲು ಆಗಮಿಸಿದನು. ॥ ೩೦ ॥ ಪರೀಕ್ಷಿತನೇ! ಬಾಣಾಸುರನು ತನ್ನ ಸಾವಿರ ಕೈಗಳಲ್ಲಿ ನಾನಾ ವಿಧವಾದ ಆಯುಧಗಳನ್ನು ಧರಿಸಿದ್ದನು. ಅತ್ಯಂತ ಕೋಪಾವಿಷ್ಟನಾದ ಅವನು ಚಕ್ರಪಾಣಿ ಭಗವಂತನ ಮೇಲೆ ಬಾಣಗಳ ಮಳೆಯನ್ನೇ ಸುರಿಸಿದನು. ॥ ೩೧ ॥ ಬಾಣಾಸುರನ ಬಾಣಗಳ ಮಳೆಯನ್ನು ನೋಡಿದಾಗ ಭಗವಾನ್ ಶ್ರೀಕೃಷ್ಣನು ವೃಕ್ಷಗಳ ಕೊಂಬೆಗಳನ್ನು ಕತ್ತರಿಸುವಂತೆ ಅತ್ಯಂತ ತೀಕ್ಷ್ಣವಾದ ಅಲಗಿನಿಂದ ಕೂಡಿದ ಸುದರ್ಶನ ಚಕ್ರದಿಂದ ಬಾಣಾಸುರನ ಬಾಹುಗಳು ಕತ್ತರಿಸಲ್ಪಡುವುದನ್ನು ಕಂಡು ಭಕ್ತವತ್ಸಲನಾದ ಭಗವಾನ್ ಶಂಕರನು ಚಕ್ರಧಾರಿ ಶ್ರೀಕೃಷ್ಣನ ಬಳಿಗೆ ಬಂದು ಅವನನ್ನು ಸ್ತುತಿಸ ತೊಡಗಿದನು. ॥ ೩೨-೩೩ ॥

ಭಗವಾನ್ ಶಂಕರನು ಹೇಳಿದನು - ಪ್ರಭೋ! ನೀನು ವೇದ ಮಂತ್ರಗಳಲ್ಲಿ ತಾತ್ಪರ್ಯರೂಪದಿಂದ ಅಡಗಿರುವ ಪರಮ ಜ್ಯೋತಿಸ್ಸ್ವರೂಪ ಪರಬ್ರಹ್ಮನಾಗಿರುವೆ. ಶುದ್ಧಹೃದಯಿಗಳ ಮಹಾತ್ಮರು ನಿನ್ನ ಆಕಾಶದಂತೆ ಸರ್ವವ್ಯಾಪಕ ಮತ್ತು ನಿರ್ವಿಕಾರ ಸ್ವರೂಪವನ್ನು ಸಾಕ್ಷಾತ್ಕರಿಸಿಕೊಳ್ಳುತ್ತಾರೆ. ॥ ೩೪ ॥ ಆಕಾಶವು ನಿನ್ನ ನಾಭಿಯಾಗಿದೆ. ಅಗ್ನಿಯು ಮುಖ ಮತ್ತು ಜಲವು ವೀರ್ಯವಾಗಿದೆ. ಸ್ವರ್ಗವು ತಲೆಯು, ದಿಕ್ಕುಗಳೇ ಕಿವಿಗಳು, ಪೃಥಿವಿಯೇ ಚರಣಗಳಾಗಿವೆ. ಚಂದ್ರನೇ ಮನಸ್ಸು ಸೂರ್ಯನೇ ಕಣ್ಣುಗಳು, ಶಿವನಾದ ನಾನು ನಿನ್ನ ಅಹಂಕಾರನಾಗಿರುವೆನು. ಸಮುದ್ರವೇ ನಿನ್ನ ಹೊಟ್ಟೆಯು ಮತ್ತು ಇಂದ್ರನು ನಿನ್ನ ಭುಜನಾಗಿದ್ದಾನೆ. ॥ ೩೫ ॥ ಧಾನ್ಯಾದಿ ಓಷಧಿಗಳು ನಿನ್ನ ರೋಮಗಳು, ಮೇಘಗಳೇ ತಲೆ ಕೂದಲು, ಬ್ರಹ್ಮನೇ ಬುದ್ಧಿಯಾಗಿದ್ದಾನೆ. ಪ್ರಜಾಪತಿಯೇ ನಿನ್ನ ಲಿಂಗವು, ಧರ್ಮವು ಹೃದಯವಾಗಿದೆ. ಹೀಗೆ ಸಮಸ್ತ ಲೋಕ-ಲೋಕಾಂತರಗಳ ಜೊತೆಗೆ ಯಾರ ಶರೀರದ ಹೋಲಿಕೆ ಮಾಡಲಾಗುತ್ತದೋ ಆ ಪರಮಪುರುಷನು ನೀನೇ ಆಗಿರುವೆ. ॥ ೩೬ ॥

ತವಾವತಾರೋಽಯಮಕುಂಠಧಾಮನ್
ಧರ್ಮಸ್ಯ ಗುಪ್ತ್ಯೈ ಜಗತೋ ಭವಾಯ ।
ವಯಂ ಚ ಸರ್ವೇ ಭವತಾನುಭಾವಿತಾ
ವಿಭಾವಯಾಮೋ ಭುವನಾನಿ ಸಪ್ತ ॥ ೩೭ ॥

ತ್ವಮೇಕ ಆದ್ಯಃ ಪುರುಷೋಽದ್ವಿತೀಯ-
ಸ್ತುರ್ಯಃ ಸ್ವದೃಗ್ಘೇತುರಹೇತುರೀಶಃ ।
ಪ್ರತೀಯಸೇಽಥಾಪಿ ಯಥಾವಿಕಾರಂ
ಸ್ವಮಾಯಯಾ ಸರ್ವಗುಣಪ್ರಸಿದ್ಧ್ಯೈ ॥ ೩೮ ॥

ಯಥೈವ ಸೂರ್ಯಃ ಪಿಹಿತಶ್ಛಾಯಯಾ ಸ್ವಯಾ
ಛಾಯಾಂ ಚ ರೂಪಾಣಿ ಚ ಸಂಚಕಾಸ್ತಿ ।
ಏವಂ ಗುಣೇನಾಪಿಹಿತೋ ಗುಣಾಂಸ್ತ್ವ-
ಮಾತ್ಮಪ್ರದೀಪೋ ಗುಣಿನಶ್ಚ ಭೂಮನ್ ॥ ೩೯ ॥

ಯನ್ಮಾಯಾಮೋಹಿತಧಿಯಃ ಪುತ್ರದಾರಗೃಹಾದಿಷು ।
ಉನ್ಮಜ್ಜಂತಿ ನಿಮಜ್ಜಂತಿ ಪ್ರಸಕ್ತಾ ವೃಜಿನಾರ್ಣವೇ ॥ ೪೦ ॥

ದೇವದತ್ತಮಿಮಂ ಲಬ್ಧ್ವಾ ನೃಲೋಕಮಜಿತೇಂದ್ರಿಯಃ ।
ಯೋ ನಾದ್ರಿಯೇತ ತ್ವತ್ಪಾದೌ ಸ ಶೋಚ್ಯೋ ಹ್ಯಾತ್ಮವಂಚಕಃ ॥ ೪೧ ॥

ಯಸ್ತ್ವಾಂ ವಿಸೃಜತೇ ಮರ್ತ್ಯ ಆತ್ಮಾನಂ ಪ್ರಿಯಮೀಶ್ವರಮ್ ।
ವಿಪರ್ಯಯೇಂದ್ರಿಯಾರ್ಥಾರ್ಥಂ ವಿಷಮತ್ತ್ಯಮೃತಂ ತ್ಯಜನ್ ॥ ೪೨ ॥

ಅಹಂ ಬ್ರಹ್ಮಾಥ ವಿಬುಧಾ ಮುನಯಶ್ಚಾಮಲಾಶಯಾಃ ।
ಸರ್ವಾತ್ಮನಾ ಪ್ರಪನ್ನಾಸ್ತ್ವಾಮಾತ್ಮಾನಂ ಪ್ರೇಷ್ಠಮೀಶ್ವರಮ್ ॥ ೪೩ ॥

ತಂ ತ್ವಾ ಜಗತ್ಸ್ಥಿತ್ಯುದಯಾಂತಹೇತುಂ
ಸಮಂ ಪ್ರಶಾಂತಂ ಸುಹೃದಾತ್ಮದೈವಮ್ ।
ಅನನ್ಯಮೇಕಂ ಜಗದಾತ್ಮಕೇತಂ
ಭವಾಪವರ್ಗಾಯ ಭಜಾಮ ದೇವಮ್ ॥ ೪೪ ॥

ಅಖಂಡ ಜ್ಯೋತಿಸ್ವರೂಪನಾದ ಪರಮಾತ್ಮನೇ! ನಿನ್ನ ಈ ಅವತಾರವು ಧರ್ಮರಕ್ಷಣೆಗಾಗಿ ಮತ್ತು ಪ್ರಪಂಚದ ಅಭ್ಯುದಯ ಅಭಿವೃದ್ಧಿಗಾಗಿಯೇ ಆಗಿರುವುದು. ನಾವೆಲ್ಲರೂ ನಿನ್ನ ಪ್ರಭಾವದಿಂದಲೇ ಪ್ರಭಾವಿತರಾಗಿ ಏಳು ಭುವನಗಳನ್ನು ಪಾಲಿಸುತ್ತಿದ್ದೇವೆ. ॥ ೩೭ ॥ ಪ್ರಭೋ! ನೀನು ಸಜಾತೀಯ, ವಿಜಾತೀಯ ಮತ್ತು ಸ್ವಗತಭೇದ ರಹಿತನಾದ ಅದ್ವಿತೀಯ - ಆದಿಪುರುಷನಾಗಿರುವೆ. ಮಾಯಾತ್ಮಕವಾದ ಜಾಗ್ರತ್, ಸ್ವಪ್ನ ಸುಷುಪ್ತಿ ಎಂಬ ಮೂರು ಅವಸ್ಥೆಗಳಲ್ಲಿ ಅನುಗತವಾದ ಮತ್ತು ಅವುಗಳಿಂದ ಅತೀತ ತುರೀಯ ತತ್ತ್ವವೂ ನೀನೇ ಆಗಿರುವೆ. ನೀನು ಬೇರೆ ಯಾವುದೇ ವಸ್ತುವಿನಿಂದ ಪ್ರಕಾಶಿತನಾಗದೆ ಸ್ವಯಂ ಪ್ರಕಾಶನಾಗಿರುವೆ. ನೀನು ಎಲ್ಲದರ ಕಾರಣನಾಗಿದ್ದರೂ ನಿನಗೆ ಯಾವ ಕಾರಣವೂ ಇಲ್ಲ. ಭಗವಂತನೇ! ಹೀಗಿದ್ದರೂ ಕೂಡ ತ್ರಿಗುಣಗಳ ವಿಭಿನ್ನ ವಿಷಮತೆಗಳನ್ನು ಪ್ರಕಾಶಗೊಳಿಸಲು ನಿನ್ನ ಮಾಯೆಯಿಂದಲೇ ದೇವತೆ, ಪಶು-ಪಕ್ಷಿ, ಮನುಷ್ಯ ಮುಂತಾದ ಶರೀರಗಳಿಗೆ ಅನುಸಾರವಾಗಿ ಬೇರೆ-ಬೇರೆ ರೂಪಗಳನ್ನು ಹೊಂದಿ ವಿಶ್ವರೂಪನಾಗಿ ಕಂಡು ಬರುವೆ. ॥ ೩೮ ॥ ಪ್ರಭುವೇ! ಸೂರ್ಯನು ತನ್ನ ನೆರಳಾದ ಮೇಘಗಳಿಂದ ಮುಚ್ಚಿಹೋಗುತ್ತಾನೆ ಮತ್ತು ಆ ಮೋಡಗಳನ್ನು ಹಾಗೂ ಬೇರೆ-ಬೇರೆ ರೂಪಗಳನ್ನು ಪ್ರಕಾಶಿಸುವಂತೆಯೇ ನೀನಾದರೋ ಸ್ವಯಂಪ್ರಕಾಶನಾಗಿದ್ದರೂ ಗುಣಗಳ ಮೂಲಕ ಮುಚ್ಚಿಹೋಗುವೆ ಮತ್ತು ಸಮಸ್ತ ಗುಣಗಳನ್ನು ಗುಣಾಭಿಮಾನಿಗಳಾದ ಜೀವರನ್ನು ಪ್ರಕಾಶಿಸುತ್ತಿರುವೆ. ವಾಸ್ತವದಲ್ಲಿ ನೀನು ಅನಂತನಾಗಿರುವೆ. ॥ ೩೯ ॥

ಭಗವಂತಾ! ನಿನ್ನ ಮಾಯೆಯಿಂದ ಮೋಹಿತರಾದ ಜನರು ಪತ್ನಿ-ಪುತ್ರ, ದೇಹ-ಗೇಹ ಮುಂತಾದವುಗಳಲ್ಲಿ ಆಸಕ್ತರಾಗಿ, ದುಃಖದ ಅಪಾರ ಸಮುದ್ರದಲ್ಲಿ ಮುಳುಗಿರುತ್ತಾರೆ. ॥ ೪೦ ॥ ಜಗತ್ತಿನ ಮಾನವರಿಗೆ ಈ ಮನುಷ್ಯ ಶರೀರವನ್ನು ನೀನು ಮಹತ್ತರ ಕೃಪೆಮಾಡಿಕೊಟ್ಟಿರುವೆ. ಇದನ್ನು ಪಡೆದರೂ ಕೂಡ ತನ್ನ ಇಂದ್ರಿಯಗಳನ್ನು ಯಾವನು ವಶಪಡಿಸಿಕೊಳ್ಳುವುದಿಲ್ಲವೋ, ನಿನ್ನ ಚರಣ ಕಮಲಗಳನ್ನು ಆಶ್ರಯಿಸುವುದಿಲ್ಲವೋ, ಅವನ್ನು ಸೇವಿಸುವುದಿಲ್ಲವೋ ಅಂತಹ ಮನುಷ್ಯನ ಜೀವನವು ಅತ್ಯಂತ ಶೋಚನೀಯವಾಗಿದೆ. ಅವನು ಸ್ವತಃ ತನ್ನನ್ನು ವಂಚಿಸಿ ಕೊಳ್ಳುತ್ತಿದ್ದಾನೆ. ।, ೪೧ ಪ್ರಭುವೇ! ನೀನು ಸಮಸ್ತ ಪ್ರಾಣಿಗಳ ಆತ್ಮನೂ, ಪ್ರಿಯತಮನೂ, ಈಶ್ವರನೂ ಆಗಿರುವೆ. ಮೃತ್ಯುಧರ್ಮವುಳ್ಳ ಮನುಷ್ಯನು ನಿನ್ನನ್ನು ಬಿಟ್ಟು, ಅನಾತ್ಮವೂ, ದುಃಖರೂಪವೂ, ತುಚ್ಛವೂ ಆದ ವಿಷಯಗಳಲ್ಲಿ ಬುದ್ಧಿಯುಳ್ಳ ಮೂರ್ಖನು ಅಮೃತವನ್ನು ಬಿಟ್ಟು ವಿಷವನ್ನು ಕುಡಿದಂತೆಯೇ ಆಗಿದೆ. ॥ ೪೨ ॥ ಸರ್ವೇಶ್ವರನೇ! ನಾನು, ಬ್ರಹ್ಮಾ ಸಮಸ್ತ ದೇವತೆಗಳು ಮತ್ತು ಶುದ್ಧಾತ್ಮರಾದ ಋಷಿ-ಮುನಿಗಳು ಸರ್ವಾತ್ಮಭಾವದಿಂದ ನಿನಗೆ ಶರಣಾಗಿದ್ದೇವೆ. ಏಕೆಂದರೆ, ನೀನೇ ನಮ್ಮೆಲ್ಲರ ಆತ್ಮನೂ, ಪ್ರಿಯತಮನೂ, ಈಶ್ವರನೂ ಆಗಿರುವೆ ॥೪೩। ನೀನು ಜಗತ್ತಿನ ಉತ್ಪತ್ತಿ-ಸ್ಥಿತಿ ಪ್ರಳಯಗಳಿಗೆ ಕಾರಣನಾಗಿರುವೆ. ನೀನು ಎಲ್ಲದರಲ್ಲಿ ಸಮನೂ, ಪರಮಶಾಂತನೂ, ಎಲ್ಲರ ಸುಹೃದನೂ, ಆತ್ಮನೂ, ಇಷ್ಟದೇವನೂ ಆಗಿರುವೆ. ನೀನು ಅನನ್ಯನೂ, ಅದ್ವಿತೀಯನೂ, ಜಗದಾಧಾರನೂ, ಅಧಿಷ್ಠಾನನೂ ಆಗಿರುವೆ. ಪ್ರಭೋ! ನಾವೆಲ್ಲರೂ ಪ್ರಪಂಚದಿಂದ ಮುಕ್ತರಾಗಲಿಕ್ಕಾಗಿ ನಿನ್ನನ್ನು ಭಜಿಸುತ್ತೇವೆ. ॥ ೪೪ ॥

ಅಯಂ ಮಮೇಷ್ಟೋ ದಯಿತೋಽನುವರ್ತೀ
ಮಯಾಭಯಂ ದತ್ತಮಮುಷ್ಯ ದೇವ ।
ಸಂಪಾದ್ಯತಾಂ ತದ್ಭವತಃ ಪ್ರಸಾದೋ
ಯಥಾ ಹಿ ತೇ ದೈತ್ಯಪತೌ ಪ್ರಸಾದಃ ॥ ೪೫ ॥

ಶ್ರೀಭಗವಾನುವಾಚ

ಯದಾತ್ಥ ಭಗವಂಸ್ತ್ವಂ ನಃ ಕರವಾಮ ಪ್ರಿಯಂ ತವ ।
ಭವತೋ ಯದ್ವ್ಯವಸಿತಂ ತನ್ಮೇ ಸಾಧ್ವನುಮೋದಿತಮ್ ॥ ೪೬ ॥

ಅವಧ್ಯೋಽಯಂ ಮಮಾಪ್ಯೇಷ
ವೈರೋಚನಿಸುತೋಽಸುರಃ ।
ಪ್ರಹ್ರಾದಾಯ ವರೋ ದತ್ತೋ
ನ ವಧ್ಯೋ ಮೇ ತವಾನ್ವಯಃ ॥ ೪೭ ॥

ದರ್ಪೋಪಶಮನಾಯಾಸ್ಯ ಪ್ರವೃಕ್ಣಾ ಬಾಹವೋ ಮಯಾ ।
ಸೂದಿತಂ ಚ ಬಲಂ ಭೂರಿ ಯಚ್ಚ ಭಾರಾಯಿತಂ ಭುವಃ ॥ ೪೮ ॥

ಚತ್ವಾರೋಽಸ್ಯ ಭುಜಾಃ ಶಿಷ್ಟಾ ಭವಿಷ್ಯಂತ್ಯಜರಾಮರಾಃ ।
ಪಾರ್ಷದಮುಖ್ಯೋ ಭವತೋ ನ ಕುತಶ್ಚಿದ್ಭಯೋಽಸುರಃ ॥ ೪೯ ॥

ಇತಿ ಲಬ್ಧ್ವಾಽಭಯಂ ಕೃಷ್ಣಂ ಪ್ರಣಮ್ಯ ಶಿರಸಾಸುರಃ ।
ಪ್ರಾದ್ಯುಮ್ನಿಂ ರಥಮಾರೋಪ್ಯ ಸವಧ್ವಾ ಸಮುಪಾನಯತ್ ॥ ೫೦ ॥

ಅಕ್ಷೌಹಿಣ್ಯಾ ಪರಿವೃತಂ ಸುವಾಸಸಮಲಂಕೃತಮ್ ।
ಸಪತ್ನೀಕಂ ಪುರಸ್ಕೃತ್ಯ ಯಯೌ ರುದ್ರಾನುಮೋದಿತಃ ॥ ೫೧ ॥

ಸ್ವರಾಜಧಾನೀಂ ಸಮಲಂಕೃತಾಂ ಧ್ವಜೈಃ
ಸತೋರಣೈರುಕ್ಷಿತಮಾರ್ಗಚತ್ವರಾಮ್ ।
ವಿವೇಶ ಶಂಖಾನಕದುಂದುಭಿಸ್ವನೈ-
ರಭ್ಯುದ್ಯತಃ ಪೌರಸುಹೃದ್ದ್ವಿಜಾತಿಭಿಃ ॥ ೫೨ ॥

ಯ ಏವಂ ಕೃಷ್ಣವಿಜಯಂ ಶಂಕರೇಣ ಚ ಸಂಯುಗಮ್ ।
ಸಂಸ್ಮರೇತ್ಪ್ರಾತರುತ್ಥಾಯ ನ ತಸ್ಯ ಸ್ಯಾತ್ ಪರಾಜಯಃ ॥ ೫೩ ॥

ದೇವಾ! ಈ ಬಾಣಾಸುರನು ನನಗೆ ಪರಮಪ್ರಿಯನೂ, ಕೃಪಾಪಾತ್ರನೂ, ಸೇವಕನೂ ಆಗಿರುವನು. ನಾನು ಇವನಿಗೆ ಅಭಯದಾನವನ್ನು ಕೊಟ್ಟಿರುವೆನು. ಪ್ರಭೋ! ಇವನ ಮುತ್ತಾತನಾದ ಪ್ರಹ್ಲಾದನ ಮೇಲೆ ಹೇಗೆ ನೀನು ಕೃಪೆಯನ್ನು ತೋರಿದೆಯೋ ಹಾಗೆಯೇ ಇವನ ಮೇಲೆಯೂ ನೀನು ಕೃಪೆಯನ್ನು ತೋರು. ॥ ೪೫ ॥

ಭಗವಾನ್ ಶ್ರೀಕೃಷ್ಣನು ಹೇಳಿದನು - ಭಗವಂತನಾದ ರುದ್ರನೇ! ನಿನ್ನ ಮಾತಿನಂತೆ ನಾನು ಇವನನ್ನು ನಿರ್ಭಯನನ್ನಾಗಿಸುತ್ತೇನೆ. ನೀನು ಹಿಂದೆ ಇವನ ವಿಷಯದಲ್ಲಿ ನಿಶ್ಚಯಿಸಿರುವುದನ್ನೇ ನಾನು ಇವನ ಭುಜಗಳನ್ನು ಕತ್ತರಿಸಿ ಅನುಮೋದಿಸಿದ್ದೇನೆ. ॥ ೪೬ ॥ ಬಾಣಾಸುರನು ದೈತ್ಯರಾಜ ಬಲಿಯ ಮಗನಾಗಿರುವುದನ್ನು ನಾನು ಬಲ್ಲೆನು. ಅದಕ್ಕಾಗಿ ನಾನು ಇವನನ್ನು ವಧಿಸಲಾರೆ; ಏಕೆಂದರೆ, ನಾನು ಪ್ರಹ್ಲಾದನಿಗೆ - 'ನಿನ್ನ ವಂಶದಲ್ಲಿ ಹುಟ್ಟಿದ ಯಾವ ದೈತ್ಯನನ್ನೂ ನಾನು ವಧಿಸುವುದಿಲ್ಲ' ಎಂಬ ವರವನ್ನು ಕೊಟ್ಟಿರುವೆನು. ॥ ೪೭ ॥ ಇವನ ದರ್ಪವನ್ನು ಮುರಿಯುವ ಸಲುವಾಗಿ ನಾನು ಇವನ ತೋಳುಗಳನ್ನು ಕತ್ತರಿಸಿ ಹಾಕಿದೆನು. ಇವನ ಬಹಳ ದೊಡ್ಡ ಸೈನ್ಯವು ಭೂಮಿಗೆ ಭಾರವಾಗಿತ್ತು. ಅದಕ್ಕಾಗಿ ನಾನು ಅದನ್ನು ಸಂಹರಿಸಿ ಬಿಟ್ಟಿರುವೆನು. ॥ ೪೮ ॥ ಈಗ ಇವನಿಗೆ ನಾಲ್ಕು ಭುಜಗಳು ಉಳಿದಿವೆ. ಅವು ಅಜರಾಮರವಾಗಿರುವುವು. ಈ ಬಾಣಾಸುರನು ನಿನ್ನ ಪಾರ್ಷದರಲ್ಲಿ ಮುಖ್ಯನಾಗಿರುವನು. ಇನ್ನು ಇವನಿಗೆ ಯಾರಿಂದಲೂ, ಯಾವುದೇ ರೀತಿಯ ಭಯವು ಇರುವುದಿಲ್ಲ. ॥ ೪೯ ॥

ಶ್ರೀಕೃಷ್ಣನಿಂದ ಹೀಗೆ ಅಭಯದಾನವನ್ನು ಪಡೆದು ಬಾಣಾಸುರನು ಅವನ ಬಳಿಗೆ ಬಂದು ಶಿರಸಾಷ್ಟಾಂಗ ನಮಸ್ಕಾರಮಾಡಿ, ಅನಿರುದ್ಧನನ್ನು, ತನ್ನ ಪುತ್ರಿಯಾದ ಉಷೆಯನ್ನು ರಥದಲ್ಲಿ ಕುಳ್ಳಿರಿಸಿಕೊಂಡು ಭಗವಂತನ ಬಳಿಗೆ ಕರೆದುಕೊಂಡು ಬಂದನು.॥೫೦॥ ಅನಂತರ ಭಗವಾನ್ ಶ್ರೀಕೃಷ್ಣನು ಮಹಾದೇವನಿಂದ ಅನುಮತಿಯನ್ನು ಪಡೆದು ಒಂದು ಅಕ್ಷೌಹಿಣಿ ಸೈನ್ಯದೊಂದಿಗೆ ವಸ್ತ್ರಾಲಂಕಾರ ಭೂಷಿತರಾದ ಉಷೆ - ಅನಿರುದ್ಧರನ್ನು ಮುಂದಿಟ್ಟುಕೊಂಡು ದ್ವಾರಕೆಗೆ ಪ್ರಯಾಣ ಮಾಡಿದನು. ॥ ೫೧ ॥ ಇತ್ತ ದ್ವಾರಕೆಯಲ್ಲಿ ಭಗವಾನ್ ಶ್ರೀಕೃಷ್ಣರೇ ಮೊದಲಾದವರ ಶುಭಾಗಮನದ ಸಮಾಚಾರವನ್ನು ಕೇಳಿ ನಗರವಾಸಿಗಳು ತಳಿರು-ತೋರಣಗಳಿಂದ ನಗರದ ಮೂಲೆ-ಮೂಲೆಗಳನ್ನು ಸಿಂಗರಿಸಿದರು. ರಾಜಬೀದಿಗಳನ್ನು ಚೌಕಗಳನ್ನೂ ಗುಡಿಸಿ-ಸಾರಿಸಿ ಸುಗಂಧಿತ ನೀರನ್ನು ಸಿಂಪಡಿಸಿದರು. ನಗರದ ನಾಗರೀಕರೂ, ಬಂಧು-ಬಾಂಧವರೂ, ಬ್ರಾಹ್ಮಣರೂ ಮುಂದೆ ಬಂದು ವೈಭವದಿಂದ ಸ್ವಾಗತಿಸಿದರು. ಆಗ ಶಂಖ, ಮೃದಂಗ, ನಗಾರಿ, ಕಹಳೆ ಮೊದಲಾದ ವಾದ್ಯಗಳು ಮೊಳಗುತ್ತಿರಲು ಶ್ರೀಕೃಷ್ಣನು ನಗರವನ್ನು ಪ್ರವೇಶಿಸಿದನು. ॥ ೫೨ ॥ ಪರೀಕ್ಷಿತನೇ! ಶ್ರೀಕೃಷ್ಣ - ಶಂಕರರ ಈ ಯುದ್ಧ ಪ್ರಸಂಗವನ್ನು ಮತ್ತು ಶ್ರೀಕೃಷ್ಣನ ವಿಜಯದ ಕಥೆಯನ್ನು ಬೆಳಗೆದ್ದೊಡನೆ ಸ್ಮರಿಸುವ ಮನುಷ್ಯನಿಗೆ ಯಾವ ಕಾರ್ಯದಲ್ಲೂ ಪರಾಜಯವಾಗುವುದಿಲ್ಲ. ॥ ೫೩ ॥

ಅರವತ್ತಮೂರನೆಯ ಅಧ್ಯಾಯವು ಮುಗಿಯಿತು. ॥ ೬೩ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮಸ್ಕಂಧೇ ಉತ್ತರಾರ್ಧೇ
ಅನಿರುದ್ಧಾನಯನಂ ನಾಮ ತ್ರಿಷಷ್ಟಿತಮೋಽಧ್ಯಾಯಃ ॥ ೬೩ ॥

ಅರವತ್ತನಾಲ್ಕನೆಯ ಅಧ್ಯಾಯ

ನೃಗರಾಜನ ಕಥೆ

ಶ್ರೀಶುಕ ಉವಾಚ

**ಏಕದೋಪವನಂ ರಾಜನ್ ಜಗ್ಮುರ್ಯದುಕುಮಾರಕಾಃ ।
ವಿಹರ್ತುಂ ಸಾಂಬಪ್ರದ್ಯುಮ್ನಚಾರುಭಾನುಗದಾದಯಃ ॥ ೧ ॥**

**ಕ್ರೀಡಿತ್ವಾ ಸುಚಿರಂ ತತ್ರ ವಿಚಿನ್ವಂತಃ ಪಿಪಾಸಿತಾಃ ।
ಜಲಂ ನಿರುದಕೇ ಕೂಪೇ ದದೃಶುಃ ಸತ್ತ್ವಮದ್ಭುತಮ್ ॥ ೨ ॥**

**ಕೃಕಲಾಸಂ ಗಿರಿನಿಭಂ ವೀಕ್ಷ್ಯ ವಿಸ್ಮಿತಮಾನಸಾಃ ।
ತಸ್ಯ ಚೋದ್ಧರಣೇ ಯತ್ನಂ ಚಕ್ರುಸ್ತೇ ಕೃಪಯಾನ್ವಿತಾಃ ॥ ೩ ॥**

**ಚರ್ಮಜೈಸ್ತಾಂತವೈಃ ಪಾಶೈರ್ಬದ್ಧ್ವಾ ಪತಿತಮರ್ಭಕಾಃ ।
ನಾಶಕ್ನುವನ್ ಸಮುದ್ಧರ್ತುಂ ಕೃಷ್ಣಾಯಾಚಖ್ಯುರುತ್ಸುಕಾಃ ॥ ೪ ॥**

**ತತ್ರಾಗತ್ಯಾರವಿಂದಾಕ್ಷೋ ಭಗವಾನ್ ವಿಶ್ವಭಾವನಃ ।
ವೀಕ್ಷ್ಯೋಜ್ಜಹಾರ ವಾಮೇನ ತಂ ಕರೇಣ ಸ ಲೀಲಯಾ ॥ ೫ ॥**

**ಸ ಉತ್ತಮಶ್ಲೋಕಕರಾಭಿಮೃಷ್ಟೋ
ವಿಹಾಯ ಸದ್ಯಃ ಕೃಕಲಾಸರೂಪಮ್ ।
ಸಂತಪ್ತಚಾಮೀಕರಚಾರುವರ್ಣಃ
ಸ್ವರ್ಗ್ಯದ್ಭುತಾಲಂಕರಣಾಂಬರಸ್ರಕ್ ॥ ೬ ॥**

**ಪಪ್ರಚ್ಛ ವಿದ್ವಾನಪಿ ತನ್ನಿದಾನಂ
ಜನೇಷು ವಿಖ್ಯಾಪಯಿತುಂ ಮುಕುಂದಃ ।
ಕಸ್ತ್ವಂ ಮಹಾಭಾಗ ವರೇಣ್ಯರೂಪೋ
ದೇವೋತ್ತಮಂ ತ್ವಾಂ ಗಣಯಾಮಿ ನೂನಮ್ ॥ ೭ ॥**

**ದಶಾಮಿಮಾಂ ವಾ ಕತಮೇನ ಕರ್ಮಣಾ
ಸಂಪ್ರಾಪಿತೋಽಸ್ಯತದರ್ಹಃ ಸುಭದ್ರ ।
ಆತ್ಮಾನಮಾಖ್ಯಾಹಿ ವಿವಿತ್ಸತಾಂ ನೋ
ಯನ್ಮನ್ಯಸೇ ನಃ ಕ್ಷಮಮತ್ರ ವಕ್ತುಮ್ ॥ ೮ ॥**

ಶ್ರೀಶುಕಮುನಿಗಳು ಹೇಳುತ್ತಾರೆ – ಪರೀಕ್ಷಿತ ಮಹಾರಾಜ! ಒಂದು ದಿನ ಸಾಂಬ, ಪ್ರದ್ಯುಮ್ನ, ಚಾರುಭಾನು ಮತ್ತು ಗದ ಮೊದಲಾದ ಯದುವಂಶೀಯ ರಾಜಕುಮಾರರು ವಿಹಾರಾರ್ಥವಾಗಿ ಉಪವನಕ್ಕೆ ಹೋದರು. ॥ ೧ ॥ ಅವರು ಅಲ್ಲಿ ಬಹಳ ಹೊತ್ತಿನವರೆಗೆ ಆಟವಾಡುತ್ತಾ ಬಳಲಿ, ಬಾಯಾರಿಕೆ ಉಂಟಾಗಿ, ನೀರನ್ನು ಹುಡುಕಿಕೊಂಡು ಹೊರಟರು. ಅವರು ಒಂದು ಬಾವಿಯ ಬಳಿಗೆ ಹೋಗಿ ನೋಡಿದಾಗ ಅದರಲ್ಲಿ ನೀರಿರಲಿಲ್ಲ, ಒಂದು ದೊಡ್ಡದಾದ ವಿಚಿತ್ರವಾದ ಜೀವವು ಕಂಡುಬಂತು. ॥ ೨ ॥ ಆ ಜೀವಿಯು ಪರ್ವತಾಕಾರದ ಒಂದು ಓತಿಕೇತವಾಗಿತ್ತು. ಅದನ್ನು ನೋಡಿ ಆಶ್ಚರ್ಯಚಕಿತರಾಗಿ ಮರುಕಗೊಂಡು ಅವರು ಆ ಪ್ರಾಣಿಯನ್ನು ಮೇಲಕ್ಕೆತ್ತಲು ಪ್ರಯತ್ನಿಸಿದರು. ॥ ೩ ॥ ರಾಜಕುಮಾರರು ತೊಗಲು ಮಿಣಿಗಳಿಂದ, ನೂಲು ಹಗ್ಗಗಳಿಂದ ಆ ಪ್ರಾಣಿಯನ್ನು ಕಟ್ಟಿ ಮೇಲಕ್ಕೆ ಎತ್ತಲಾರದೆ ಹೋದರು. ಆಗ ಕುತೂಹಲದಿಂದ ಅವರು ಈ ಆಶ್ಚರ್ಯಕರ ಸಂಗತಿಯನ್ನು ಶ್ರೀಕೃಷ್ಣನ ಬಳಿಗೆ ಬಂದು ನಿವೇದಿಸಿಕೊಂಡರು. ॥ ೪ ॥ ವಿಶ್ವಭಾವನನಾದ, ಕಮಲಾಕ್ಷನಾದ ಶ್ರೀಕೃಷ್ಣನು ಬಾವಿಯ ಬಳಿಗೆ ಬಂದು ಆ ಮಹಾಪ್ರಾಣಿಯನ್ನು ಎಡಗೈಯಿಂದ ಲೀಲಾಜಾಲವಾಗಿ ಮೇಲಕ್ಕೆತ್ತಿದನು. ॥ ೫ ॥ ಭಗವಾನ್ ಶ್ರೀಕೃಷ್ಣನ ಕರಕಮಲಗಳ ಸ್ಪರ್ಶವಾಗುತ್ತಲೇ ಅದರ ಓತಿಕ್ಯಾತದ ರೂಪವು ಹೊರಟುಹೋಗಿ ಒಬ್ಬ ಸ್ವರ್ಗೀಯ ದೇವತೆಯಂತೆ ರೂಪವಂತನಾದನು. ಅವನ ಶರೀರದ ಬಣ್ಣವು ಕಾದ ಚಿನ್ನದಂತೆ ಹೊಳೆಯುತ್ತಿತ್ತು. ಶರೀರದ ಮೇಲೆ ಅದ್ಭುತವಾದ ವಸ್ತ್ರಗಳು, ಆಭೂಷಣಗಳು ಮತ್ತು ಪುಷ್ಪಹಾರಗಳು ಶೋಭಿಸುತ್ತಿದ್ದವು. ॥ ೬ ॥ ಅಂತಹ ದಿವ್ಯಪುರುಷನಿಗೆ ಓತಿಕ್ಯಾತ ಜನ್ಮವು ಏಕೆ ಬಂತು ಎಂಬುದು ಭಗವಾನ್ ಶ್ರೀಕೃಷ್ಣನಿಗೆ ತಿಳಿದಿತ್ತಾದರೂ ಸಮಸ್ತರಿಗೂ ಈ ವಿಷಯವು ತಿಳಿಯಲೆಂಬ ಆಶಯದಿಂದ ಶ್ರೀಕೃಷ್ಣನು ಆ ದಿವ್ಯ ಪುರುಷನನ್ನು ಪ್ರಶ್ನಿಸಿದನು – ಮಹಾಭಾಗನೇ! ನೀನು ಯಾರು? ನಿನ್ನ ರೂಪವಾದರೋ ಬಹಳ ಸುಂದರವಾಗಿದೆ. ನೀನು ಶ್ರೇಷ್ಠದೇವತೆಯಾಗಿರಬಹುದೆಂದು ನಾನು ಭಾವಿಸುತ್ತೇನೆ. ॥ ೭ ॥ ಕಲ್ಯಾಣಮೂರ್ತಿಯೇ! ನೀನು ಯಾವ ಕರ್ಮವಿಪಾಕದಿಂದ ಇಂತಹ ಜನ್ಮವನ್ನು ಹೊಂದಿದೆ? ವಾಸ್ತವವಾಗಿ ನೀನು ಇಂತಹ ಯೋನಿಯಲ್ಲಿ ಹುಟ್ಟಬಾರದಿತ್ತು. ನಿನ್ನ ಜನ್ಮ ವೃತ್ತಾಂತವನ್ನು ತಿಳಿಸಲು ನಿನಗೆ ಉಚಿತವೆನಿಸಿದರೆ ನಮಗೆ ಅದನ್ನು ತಿಳಿಸು. ನಾವು ಅದನ್ನು ಕೇಳ ಬಯಸುತ್ತೇವೆ. ॥ ೮ ॥

ಶ್ರೀಶುಕ ಉವಾಚ

**ಇತಿ ಸ್ಮ ರಾಜಾ ಸಂಪೃಷ್ಟಃ ಕೃಷ್ಣೇನಾನಂತಮೂರ್ತಿನಾ ।
ಮಾಧವಂ ಪ್ರಣಿಪತ್ಯಾಹ ಕಿರೀಟೇನಾರ್ಕವರ್ಚಸಾ ॥ ೯ ॥**

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ! ಅನಂತಮೂರ್ತಿ ಭಗವಾನ್ ಶ್ರೀಕೃಷ್ಣನು ನೃಗನಲ್ಲಿ (ಏಕೆಂದರೆ ಅವನು ಅದೇ ರೂಪದಲ್ಲಿ ಪ್ರಕಟನಾಗಿದ್ದನು) ಹೀಗೆ ಪ್ರಶ್ನಿಸಿದಾಗ ಸೂರ್ಯತೇಜಸ್ಸಿನಂತೆ ಜಗ-ಜಗಿಸುತ್ತಿರುವ ಕಿರೀಟದೊಡನೆ ಶ್ರೀಕೃಷ್ಣನಿಗೆ ನಮಸ್ಕರಿಸಿ ದೇವಸದೃಶನಾದ ಅವನು ಇಂತೆಂದನು. ॥ ೯ ॥

ನೃಗ ಉವಾಚ

ನೃಗೋ ನಾಮ ನರೇಂದ್ರೋಽಹಮಿಕ್ಷ್ವಾಕುತನಯಃ ಪ್ರಭೋ ।
ದಾನಿಷ್ವಾಖ್ಯಾಯಮಾನೇಷು ಯದಿ ತೇ ಕರ್ಣಮಸ್ಪೃಶಮ್ ॥ ೧೦ ॥

ಕಿಂ ನು ತೇಽವಿದಿತಂ ನಾಥ ಸರ್ವಭೂತಾತ್ಮಸಾಕ್ಷಿಣಃ ।
ಕಾಲೇನಾವ್ಯಾಹತದೃಶೋ ವಕ್ಷ್ಯೇಽಥಾಪಿ ತವಾಜ್ಞಯಾ ॥ ೧೧ ॥

ಯಾವತ್ಯಃ ಸಿಕತಾ ಭೂಮೇರ್ಯಾವತ್ಯೋ ದಿವಿ ತಾರಕಾಃ ।
ಯಾವತ್ಯೋ ವರ್ಷಧಾರಾಶ್ಚ ತಾವತೀರದದಾಂ ಸ್ಮ ಗಾಃ ॥ ೧೨ ॥

ಪಯಸ್ವಿನೀಸ್ತರುಣೀಃ ಶೀಲರೂಪ-
ಗುಣೋಪಪನ್ನಾಃ ಕಪಿಲಾ ಹೇಮಶೃಂಗೀಃ ।
ನ್ಯಾಯಾರ್ಜಿತಾ ರೂಪ್ಯಖುರಾಃ ಸವತ್ಸಾ
ದುಕೂಲಮಾಲಾಭರಣಾ ದದಾವಹಮ್ ॥ ೧೩ ॥

ಸ್ವಲಂಕೃತೇಭ್ಯೋ ಗುಣಶೀಲವದ್ಭ್ಯಃ
ಸೀದತ್ಕುಟುಂಬೇಭ್ಯ ಋತವ್ರತೇಭ್ಯಃ ।
ತಪಃಶ್ರುತಬ್ರಹ್ಮವದಾನ್ಯಸದ್ಭ್ಯಃ
ಪ್ರಾದಾಂ ಯುವಭ್ಯೋ ದ್ವಿಜಪುಂಗವೇಭ್ಯಃ ॥ ೧೪ ॥

ಗೋಭೂಹಿರಣ್ಯಾಯತನಾಶ್ವಹಸ್ತಿನಃ
ಕನ್ಯಾಃ ಸದಾಸೀಸ್ತಿಲರೂಪ್ಯಶಯ್ಯಾಃ ।
ವಾಸಾಂಸಿ ರತ್ನಾನಿ ಪರಿಚ್ಛದಾನ್ರಥಾ-
ನಿಷ್ಟಂ ಚ ಯಜ್ಞೈಶ್ಚರಿತಂ ಚ ಪೂರ್ತಮ್ ॥ ೧೫ ॥

ಕಸ್ಯಚಿದ್ದ್ವಿಜಮುಖ್ಯಸ್ಯ ಭ್ರಷ್ಟಾ ಗೌರ್ಮಮ ಗೋಧನೇ ।
ಸಂಪೃಕ್ತಾಽವಿದುಷಾ ಸಾ ಚ ಮಯಾ ದತ್ತಾ ದ್ವಿಜಾತಯೇ ॥ ೧೬ ॥

ತಾಂ ನೀಯಮಾನಾಂ ತತ್ಸ್ವಾಮೀ
ದೃಷ್ಟ್ವೋವಾಚ ಮಮೇತಿ ತಮ್ ।
ಮಮೇತಿ ಪ್ರತಿಗ್ರಾಹ್ಯಾಹ
ನೃಗೋ ಮೇ ದತ್ತವಾನಿತಿ ॥ ೧೭ ॥

ವಿಪ್ರೌ ವಿವದಮಾನೌ ಮಾಮೂಚತುಃ ಸ್ವಾರ್ಥಸಾಧಕೌ ।
ಭವಾನ್ ದಾತಾಪಹರ್ತೇತಿ ತಚ್ಛ್ರುತ್ವಾ ಮೇಽಭವದ್ಭ್ರಮಃ ॥ ೧೮ ॥

ನೃಗರಾಜನು ಹೇಳಿದನು – ಪ್ರಭೋ! ನಾನು ಇಕ್ಷ್ವಾಕು ಮಹಾರಾಜನ ಪುತ್ರನಾದ ನೃಗನಾಗಿರುವೆನು. ವಿಶ್ವವಿಖ್ಯಾತರಾದ ದಾನಿಗಳ ಹೆಸರುಗಳನ್ನು ಹೇಳುವಾಗ ನನ್ನ ಹೆಸರನ್ನು ನೀನು ಕೇಳಿರಬಹುದು. ॥ ೧೦ ॥ ಪ್ರಭೋ! ಸಮಸ್ತ ಪ್ರಾಣಿಗಳಿಗೂ ಅಂತಃಸಾಕ್ಷಿಯಾಗಿರುವ ನಿನಗೆ ತಿಳಿಯದಿರುವ ವಿಷಯವು ಯಾವುದು ತಾನೇ ಇರುವುದು? ನಿನ್ನ ಜ್ಞಾನಕ್ಕೆ ಕಾಲದ ತಡೆಯಿಲ್ಲ. ಆದರೂ ನಿನ್ನ ಅಪ್ಪಣೆಯನುಸಾರವಾಗಿ ನನ್ನ ವೃತ್ತಾಂತವನ್ನು ಹೇಳುತ್ತೇನೆ. ॥ ೧೧ ॥ ಭಗವಂತಾ! ಪೃಥಿವಿಯಲ್ಲಿ ಇರುವ ಧೂಳಿನ ಕಣಗಳಷ್ಟು, ಆಕಾಶದಲ್ಲಿರುವ ತಾರೆಗಳಷ್ಟು, ಮಳೆಯಲ್ಲಿ ಬೀಳುವ ನೀರಧಾರೆಗಳಷ್ಟು ಸಂಖ್ಯೆಯ ಗೋವುಗಳನ್ನು ನಾನು ದಾನಮಾಡಿದ್ದೆನು. ॥ ೧೨ ॥ ಅವೆಲ್ಲ ಗೋವುಗಳೂ ಹಾಲು ಕರೆಯುತ್ತಿದ್ದು ಎಳೆಪ್ರಾಯದ, ಶೀಲ, ರೂಪ ಗುಣಗಳಿಂದ ಸಂಪನ್ನವಾದ ಕಪಿಲ ಗೋವುಗಳಾಗಿದ್ದವು. ಅವೆಲ್ಲವನ್ನು ನಾನು ನ್ಯಾಯದಿಂದಲೇ ಸಂಪಾದಿಸಿದ್ದೆನು. ಎಲ್ಲವೂ ಕರುಗಳಿಂದ ಕೂಡಿದ್ದವು. ಅವುಗಳ ಕೊಂಬುಗಳಿಗೆ ಚಿನ್ನದ ಕಲಶಗಳಿದ್ದು ಗೊರಸುಗಳಿಗೆ ಬೆಳ್ಳಿಯ ಕವಚಗಳಿರುತ್ತಿದ್ದವು. ಅವನ್ನು ವಸ್ತ್ರಾಭರಣಗಳಿಂದಲೂ, ಹೂವಿನ ಹಾರಗಳಿಂದಲೂ ಅಲಂಕರಿಸಲಾಗಿತ್ತು. ಅಂತಹ ಗೋವುಗಳನ್ನು ನಾನು ದಾನ ಮಾಡಿದ್ದೆನು. ॥ ೧೩ ॥ ಭಗವಂತಾ! ಯುವಕರಾದ, ಸದ್ಗುಣಿಗಳಾದ, ಶೀಲಸಂಪನ್ನರಾದ, ಸಂಸಾರವನ್ನು ನಿರ್ವಹಿಸಲಾರದೆ ಕಷ್ಟಪಡುತ್ತಿದ್ದ, ಅದಾಂಭಿಕರಾದ, ತಪಸ್ವಿಗಳಾದ, ವೇದಾಧ್ಯಯನಶೀಲರಾದ, ಶಿಷ್ಯರಿಗೆ ವಿದ್ಯಾದಾನವನ್ನು ಮಾಡುತ್ತಿದ್ದ ಸತ್ಪುರುಷರಿಗೆ ಅವರನ್ನು ವಸ್ತ್ರಾಭರಣ ಮೊದಲಾದವುಗಳಿಂದ ಅಲಂಕರಿಸಿ ದಾನಮಾಡುತ್ತಿದ್ದೆನು. ॥ ೧೪ ॥ ಗೋದಾನ ಮಾತ್ರವಲ್ಲದೆ ಭೂಮಿ, ಚಿನ್ನ, ಮನೆ, ಕುದುರೆ, ಆನೆ, ಕನ್ಯೆ, ಎಳ್ಳು, ಬೆಳ್ಳಿ, ಹಾಸಿಗೆ, ವಸ್ತ್ರ, ರತ್ನಗಳಿಂದ ಸಮಲಂಕೃತವಾದ ರಥ – ಇವೇ ಮೊದಲಾದುವನ್ನು ಆಯಾಯ ಕಾಲಗಳಲ್ಲಿ ದಾನಮಾಡುತ್ತಿದ್ದೆನು. ಯಜ್ಞಯಾಗಾದಿಗಳನ್ನು, ಇಷ್ಟಾಪೂರ್ತ ಕರ್ಮಗಳನ್ನು ಮಾಡುತ್ತಿದ್ದೆನು. ॥ ೧೫ ॥

ಒಂದು ದಿನ ಯಾರೋ ಬ್ರಾಹ್ಮಣ ಶ್ರೇಷ್ಠನೊಬ್ಬನ ಒಂದು ಹಸುವು ತಪ್ಪಿಸಿಕೊಂಡು ನನ್ನ ಹಸುಗಳಲ್ಲಿ ಬಂದು ಸೇರಿಕೊಂಡಿತು. ಇದನ್ನು ತಿಳಿಯದ ನಾನು ಆ ಗೋವನ್ನು ಮತ್ತೊಬ್ಬ ಬ್ರಾಹ್ಮಣನಿಗೆ ದಾನಮಾಡಿಬಿಟ್ಟೆ. ॥ ೧೬ ॥ ನನ್ನಿಂದ ದಾನ ಪಡೆದ ಆ ಬ್ರಾಹ್ಮಣನು ಹಸುವನ್ನು ಹೊಡೆದುಕೊಂಡು ಹೋಗುತ್ತಿದ್ದಾಗ, ಆ ಗೋವಿನ ಹಿಂದಿನ ಒಡೆಯನು 'ಇದು ನನ್ನ ಹಸು' ಎಂದು ಹೇಳಿದನು. ದಾನಪಡೆದವನು – ಇದು ನನ್ನದೇ ಹಸು ಆಗಿದೆ. ಏಕೆಂದರೆ, ನೃಗರಾಜನು ನನಗೆ ಇದನ್ನು ದಾನಮಾಡಿರುವನು. ॥ ೧೭ ॥ ಅವರು ಇಬ್ಬರೂ ಬ್ರಾಹ್ಮಣರು ಪರಸ್ಪರ ಜಗಳಾಡುತ್ತಾ ತಮ್ಮ-ತಮ್ಮ ವಾದವನ್ನು ಸಮರ್ಥಿಸಿಕೊಳ್ಳುತ್ತಾ ನನ್ನ ಬಳಿಗೆ ಬಂದರು. ನನ್ನಿಂದ ದಾನ ಪಡೆದ ಬ್ರಾಹ್ಮಣನು ತನ್ನ ವಾದವನ್ನು ಮುಂದಿಡುತ್ತಾ – ಈ ಹಸುವನ್ನು ಈಗಾಗಲೇ ನೀನು ದಾನ ಮಾಡಿರುವೆ. ಇದು ನನಗೆ ಸೇರಿದ್ದಾಗಿದೆ. ಇಷ್ಟೊಬ್ಬನು ಹೇಳಿದನು. – ಬ್ರಾಹ್ಮಣನು ಹೇಳುತ್ತಿರುವುದು ನಿಶ್ಚಯವಾದರೆ ನೀನು ನನ್ನ ಹಸುವನ್ನು ಕದ್ದಿರುವೆ. ಭಗವಂತಾ! ಆ ಬ್ರಾಹ್ಮಣರಿಬ್ಬರ ಮಾತು ಕೇಳಿ ನನ್ನ ಚಿತ್ತವು ಭ್ರಮಿಸಿಹೋಯಿತು. ॥ ೧೮ ॥

ಅನುನೀತಾವುಭೌ ವಿಪ್ರೌ ಧರ್ಮಕೃಚ್ಛ್ರಗತೇನ ವೈ ।
ಗವಾಂ ಲಕ್ಷಂ ಪ್ರಕೃಷ್ಟಾನಾಂ ದಾಸ್ಯಾಮ್ಯೇಷಾ ಪ್ರದೀಯತಾಮ್
॥ ೧೯ ॥

ಭವಂತಾವನುಗೃಹ್ಣೀತಾಂ ಕಿಂಕರಸ್ಯಾವಿಜಾನತಃ ।
ಸಮುದ್ಧರತ ಮಾಂ ಕೃಚ್ಛ್ರಾತ್ಪತಂತಂ ನಿರಯೇಽಶುಚೌ
॥ ೨೦ ॥

ನಾಹಂ ಪ್ರತೀಚ್ಛೇ ವೈ ರಾಜನ್ನಿತ್ಯುಕ್ತ್ವಾ ಸ್ವಾಮ್ಯಪಾಕ್ರಮತ್ ।
ನಾನ್ಯದ್ಗವಾಮಪ್ಯಯುತಮಿಚ್ಛಾಮೀತ್ಯಪರೋ ಯಯೌ
॥ ೨೧ ॥

ಏತಸ್ಮಿನ್ನಂತರೇ ಯಾಮ್ಯೈರ್ದೂತೈರ್ನೀತೋ ಯಮಕ್ಷಯಮ್ ।
ಯಮೇನ ಪೃಷ್ಟಸ್ತತ್ರಾಹಂ ದೇವದೇವ ಜಗತ್ಪತೇ
॥ ೨೨ ॥

ಪೂರ್ವಂ ತ್ವಮಶುಭಂ ಭುಂಕ್ಷ್ವ ಉತಾಹೋ ನೃಪತೇ ಶುಭಮ್ ।
ನಾಂತಂ ದಾನಸ್ಯ ಧರ್ಮಸ್ಯ ಪಶ್ಯೇ ಲೋಕಸ್ಯ ಭಾಸ್ವತಃ
॥ ೨೩ ॥

ಪೂರ್ವಂ ದೇವಾಶುಭಂ ಭುಂಜ ಇತಿ ಪ್ರಾಹ ಪತೇತಿ ಸಃ ।
ತಾವದದ್ರಾಕ್ಷಮಾತ್ಮಾನಂ ಕೃಕಲಾಸಂ ಪತನ್ಪ್ರಭೋ
॥ ೨೪ ॥

ಬ್ರಹ್ಮಣ್ಯಸ್ಯ ವದಾನ್ಯಸ್ಯ ತವ ದಾಸಸ್ಯ ಕೇಶವ ।
ಸ್ಮೃತಿರ್ನಾದ್ಯಾಪಿ ವಿಧ್ವಸ್ತಾ ಭವತ್ಸಂದರ್ಶನಾರ್ಥಿನಃ
॥ ೨೫ ॥

ಸ ತ್ವಂ ಕಥಂ ಮಮ ವಿಭೋಽಕ್ಷಿಪಥಃ ಪರಾತ್ಮಾ
ಯೋಗೇಶ್ವರೈಃ ಶ್ರುತಿದೃಶಾಮಲಹೃದ್ವಿಭಾವ್ಯಃ ।
ಸಾಕ್ಷಾದಧೋಕ್ಷಜ ಉರುವ್ಯಸನಾಂಧಬುದ್ಧೇಃ
ಸ್ಯಾನ್ಮೇಽನುದೃಶ್ಯ ಇಹ ಯಸ್ಯ ಭವಾಪವರ್ಗಃ ॥ ೨೬ ॥

ದೇವದೇವ ಜಗನ್ನಾಥ ಗೋವಿಂದ ಪುರುಷೋತ್ತಮ ।
ನಾರಾಯಣ ಹೃಷೀಕೇಶ ಪುಣ್ಯಶ್ಲೋಕಾಚ್ಯುತಾವ್ಯಯ
॥ ೨೭ ॥

ಅನುಜಾನೀಹಿ ಮಾಂ ಕೃಷ್ಣ ಯಾಂತಂ ದೇವಗತಿಂ ಪ್ರಭೋ ।
ಯತ್ರ ಕ್ವಾಪಿ ಸತಶ್ಚೇತೋ ಭೂಯಾನ್ಮೇ ತ್ವತ್ಪದಾಸ್ಪದಮ್
॥ ೨೮ ॥

ನಾನು ಧರ್ಮಸಂಕಟದಲ್ಲಿ ಬಿದ್ದು ಅವರಿಬ್ಬರಲ್ಲಿ ತುಂಬಾ ಅನುನಯಗಳಿಂದ ಬೇಡಿಕೊಂಡೆನು – 'ನಾನು ಇದರ ಬದಲಿಗೆ ಒಂದು ಲಕ್ಷ ಉತ್ತಮ ಗೋವುಗಳನ್ನು ಕೊಡುತ್ತೇನೆ. ತಾವು ಆ ಹಸುವನ್ನು ನನಗೆ ಕೊಟ್ಟುಬಿಡಿರಿ. ॥ ೧೯ ॥ ನಾನು ನಿಮ್ಮ ಸೇವಕನಾಗಿದ್ದೇನೆ. ಅಜ್ಞಾನದಿಂದ ಈ ಅಪರಾಧವು ನನ್ನಿಂದ ನಡೆದುಹೋಯಿತು. ನನ್ನ ಮೇಲೆ ಕೃಪೆದೋರಿ, ಈ ಘೋರ ಕಷ್ಟದಿಂದ ಮತ್ತು ನರಕದಿಂದ ನನ್ನನ್ನು ಕಾಪಾಡಿರಿ. ॥ ೨೦ ॥ ರಾಜನೇ! ನಾನು ಇದರ ಬದಲಿಗೆ ಬೇರೆ ಏನನ್ನೂ ತೆಗೆದುಕೊಳ್ಳುವುದಿಲ್ಲ ಎಂದು ಹಸುವಿನ ಒಡೆಯ ಹೊರಟುಹೋದ. ದಾನಪಡೆದ ಬ್ರಾಹ್ಮಣನೂ – 'ನೀನು ಇದರ ಬದಲಿಗೆ ಒಂದು ಲಕ್ಷವಲ್ಲ ಅದರ ಮೇಲೆ ಹತ್ತು ಸಾವಿರ ಗೋವುಗಳನ್ನು ಕೊಟ್ಟರೂ ನನಗೆ ಬೇಡ' ಎಂದು ಹೇಳಿ ಅವನೂ ಹೋಗಿಬಿಟ್ಟನು. ॥ ೨೧ ॥ ದೇವಾಧಿದೇವ! ಜಗದೀಶ್ವರನೇ! ಇದಾದ ಬಳಿಕ ನನ್ನ ಆಯುಸ್ಸು ಮುಗಿದಾಗ ಯಮದೂತರು ಬಂದು ನನ್ನನ್ನು ಯಮಪುರಿಗೆ ಕೊಂಡುಹೋದರು. ಅಲ್ಲಿ ಯಮನು ನನ್ನಲ್ಲಿ ಕೇಳಿದನು. ॥ ೨೨ ॥ ರಾಜನೇ! ನೀನು ಮೊದಲಿಗೆ ನಿನ್ನ ಪಾಪದ ಫಲವನ್ನು ಅನುಭವಿಸುವೆಯಾ? ಅಥವಾ ಪುಣ್ಯದ್ದೋ? ನೀನು ಮಾಡಿದ ದಾನಧರ್ಮದ ಫಲವಾಗಿ ನಿನಗೆ ಅಸೀಮವಾದ ತೇಜೋಮಯವಾದ ಲೋಕಗಳು ಪ್ರಾಪ್ತವಾಗುವವು. ॥ ೨೩ ॥ ಭಗವಂತಾ! ಅದಕ್ಕೆ ನಾನು ಮೊದಲಿಗೆ ಪಾಪದ ಫಲವನ್ನು ಅನುಭವಿಸುವೆ ಎಂದು ಯಮರಾಜನಿಗೆ ಹೇಳಿದೆನು. ಯಮರಾಜನು – ನಿನ್ನ ಪಾಪದ ಫಲವಾಗಿ 'ನೀನು ನೀಚ ಯೋನಿಯಲ್ಲಿ ಬೀಳು' ಎಂದು ಹೇಳಿದೊಡನೆಯೇ ನಾನು ಓತಿಕ್ಯಾತನಾಗಿ ಈ ಬಾವಿಯಲ್ಲಿ ಬಿದ್ದೆನು. ॥ ೨೪ ॥ ಪ್ರಭೋ! ನಾನು ಬ್ರಾಹ್ಮಣರ ಸೇವಕನೂ, ಉದಾರದಾನಿಯೂ, ನಿನ್ನ ಭಕ್ತನೂ ಆಗಿದ್ದೆ. ನಿನ್ನ ದರ್ಶನವಾಗಬೇಕೆಂಬ ಉತ್ಕಟ ಅಭಿಲಾಷೆಯಿತ್ತು. ಹೀಗೆ ನಿನ್ನ ಕೃಪೆಯಿಂದ ನನ್ನ ಹಿಂದಿನ ಜನ್ಮದ ಸ್ಮೃತಿಯು ನಾಶವಾಗಲಿಲ್ಲ. ॥ ೨೫ ॥ ಪ್ರಭುವೇ! ನೀನು ಪರಮಾತ್ಮನೇ ಆಗಿರುವೆ. ಶುದ್ಧ ಹೃದಯರಾದ ಮಹಾಯೋಗಿಗಳು ವೇದಾಂತಜ್ಞಾನವೆಂಬ ಕಣ್ಣಿನಿಂದ ತಮ್ಮ ಹೃದಯದಲ್ಲಿ ನಿನ್ನನ್ನು ಧ್ಯಾನಿಸುತ್ತಾ ಇರುತ್ತಾರೆ. ಇಂದ್ರಿಯಾತೀತನಾದ ಪರಮಾತ್ಮನೇ! ನೀನು ಸಾಕ್ಷಾತ್ತಾಗಿ ನನಗೆ ಹೇಗೆ ಕಾಣಿಸಿಕೊಂಡೆ? ನಾನಾದರೋ ಅನೇಕ ಪ್ರಕಾರದ ವ್ಯಸನಗಳಿಂದ ಕುರುಡನಾಗಿಬಿಟ್ಟಿದ್ದೆನು. ಸಂಸಾರಸಾಗರದಿಂದ ಬಿಡುಗಡೆಯ ಸಮಯವು ಸನ್ನಿಹಿತವಾದಾಗಲೇ ನಿನ್ನ ದರ್ಶನವಾಗುವುದು. ॥ ೨೬ ॥ ದೇವತೆಗಳ ಆರಾಧ್ಯನಾದ ದೇವಾ ದೇವನೇ! ಜಗನ್ನಾಥನೇ, ಗೋವಿಂದನೇ, ಪುರುಷೋತ್ತಮನೇ! ನಾರಾಯಣನೇ! ಹೃಷೀಕೇಶನೇ! ಪುಣ್ಯಶ್ಲೋಕನೇ! ಅಚ್ಯುತನೇ! ಅವ್ಯಯನೇ! ನೀನೇ ಸಮಸ್ತ ಇಂದ್ರಿಯಗಳಿಗೆ ಸ್ವಾಮಿಯಾಗಿರುವೆ. ॥ ೨೭ ॥ ಶ್ರೀಕೃಷ್ಣನೇ! ನಾನು ಈಗ ದೇವತೆಗಳ ಲೋಕಕ್ಕೆ ಹೋಗುತ್ತಿದ್ದೇನೆ. ನೀನು ಅನುಮತಿಯನ್ನು ನೀಡು. ನಾನು ಎಲ್ಲಿಯೇ ಇದ್ದರೂ, ಯಾವುದೇ ಯೋನಿಯಲ್ಲಿ ಇದ್ದರೂ ನನ್ನ ಮನಸ್ಸು ಸದಾಕಾಲವೂ ನಿನ್ನ ಚರಣಕಮಲಗಳಲ್ಲೇ ಲೀನವಾಗುವಂತೆ ಅನುಗ್ರಹಿಸು. ॥ ೨೮ ॥

ನಮಸ್ತೇ ಸರ್ವಭಾವಾಯ ಬ್ರಹ್ಮಣೇಽನಂತಶಕ್ತಯೇ ।
ಕೃಷ್ಣಾಯ ವಾಸುದೇವಾಯ ಯೋಗಾನಾಂ ಪತಯೇ ನಮಃ ॥ ೨೯ ॥

ಸರ್ವಸ್ವರೂಪನೇ! ಬ್ರಹ್ಮಸ್ವರೂಪನೇ! ಅನಂತವಾದ ಶಕ್ತಿಯುಳ್ಳವನೇ! ನಿನಗೆ ನಮಸ್ಕರಿಸುತ್ತೇನೆ. ಸಚ್ಚಿದಾನಂದ ಸ್ವರೂಪನಾದ ಸರ್ವಾಂತರ್ಯಾಮಿ ವಾಸುದೇವ ಶ್ರೀಕೃಷ್ಣನೇ! ಸಮಸ್ತ ಯೋಗಿಗಳಿಗೂ ಸ್ವಾಮಿಯಾದ ಯೋಗೇಶ್ವರನೇ! ನಾನು ನಿನಗೆ ಪುನಃ ಪುನಃ ನಮಸ್ಕರಿಸುತ್ತೇನೆ. ॥ ೨೯ ॥

ಇತ್ಯುಕ್ತ್ವಾ ತಂ ಪರಿಕ್ರಮ್ಯ ಪಾದೌ ಸ್ಪೃಷ್ಟ್ವಾ ಸ್ವಮೌಲಿನಾ ।
ಅನುಜ್ಞಾತೋ ವಿಮಾನಾಗ್ರ್ಯಮಾರುಹತ್ ಪಶ್ಯತಾಂ ನೃಣಾಮ್ ॥ ೩೦ ॥

ನೃಗರಾಜನು ಹೀಗೆ ಭಗವಂತನಿಗೆ ಪ್ರದಕ್ಷಿಣೆಮಾಡಿ ತನ್ನ ಕಿರೀಟದಿಂದ ಅವನ ಚರಣಗಳನ್ನು ಸ್ಪರ್ಶಿಸಿ ನಮಸ್ಕರಿಸಿದನು. ಮತ್ತೆ ಶ್ರೀಕೃಷ್ಣನಿಂದ ಅನುಮತಿಯನ್ನು ಪಡೆದು ಎಲ್ಲರೂ ನೋಡುತ್ತಿರುವಂತೆಯೇ ಶ್ರೇಷ್ಠವಾದ ವಿಮಾನದಲ್ಲಿ ಕುಳಿತು ದೇವಲೋಕಕ್ಕೆ ಹೊರಟು ಹೋದನು. ॥ ೩೦ ॥

ಕೃಷ್ಣಃ ಪರಿಜನಂ ಪ್ರಾಹ ಭಗವಾನ್ ದೇವಕೀಸುತಃ ।
ಬ್ರಹ್ಮಣ್ಯದೇವೋ ಧರ್ಮಾತ್ಮಾ ರಾಜನ್ಯಾನನುಶಿಕ್ಷಯನ್ ॥ ೩೧ ॥

ದುರ್ಜರಂ ಬತ ಬ್ರಹ್ಮಸ್ವಂ ಭುಕ್ತಮಗ್ನೇರ್ಮನಾಗಪಿ ।
ತೇಜೀಯಸೋಽಪಿ ಕಿಮುತ ರಾಜ್ಞಾಮೀಶ್ವರಮಾನಿನಾಮ್ ॥ ೩೨ ॥

ನಾಹಂ ಹಾಲಾಹಲಂ ಮನ್ಯೇ ವಿಷಂ ಯಸ್ಯ ಪ್ರತಿಕ್ರಿಯಾ ।
ಬ್ರಹ್ಮಸ್ವಂ ಹಿ ವಿಷಂ ಪ್ರೋಕ್ತಂ ನಾಸ್ಯ ಪ್ರತಿವಿಧಿರ್ಭುವಿ ॥ ೩೩ ॥

ಹಿನಸ್ತಿ ವಿಷಮತ್ತಾರಂ ವಹ್ನಿರದ್ಭಿಃ ಪ್ರಶಾಮ್ಯತಿ ।
ಕುಲಂ ಸಮೂಲಂ ದಹತಿ ಬ್ರಹ್ಮಸ್ವಾರಣಿಪಾವಕಃ ॥ ೩೪ ॥

ಬ್ರಹ್ಮಸ್ವಂ ದುರನುಜ್ಞಾತಂ ಭುಕ್ತಂ ಹಂತಿ ತ್ರಿಪೂರುಷಮ್ ।
ಪ್ರಸಹ್ಯ ತು ಬಲಾದ್ಭುಕ್ತಂ ದಶ ಪೂರ್ವಾನ್ ದಶಾಪರಾನ್ ॥ ೩೫ ॥

ರಾಜಾನೋ ರಾಜಲಕ್ಷ್ಮ್ಯಾಂಧಾ ನಾತ್ಮಪಾತಂ ವಿಚಕ್ಷತೇ ।
ನಿರಯಂ ಯೇಽಭಿಮನ್ಯಂತೇ ಬ್ರಹ್ಮಸ್ವಂ ಸಾಧು ಬಾಲಿಶಾಃ ॥ ೩೬ ॥

ಗೃಹ್ಣಂತಿ ಯಾವತಃ ಪಾಂಸೂನ್ಕ್ರಂದತಾಮಶ್ರುಬಿಂದವಃ ।
ವಿಪ್ರಾಣಾಂ ಹೃತವೃತ್ತೀನಾಂ ವದಾನ್ಯಾನಾಂ ಕುಟುಂಬಿನಾಮ್ ॥ ೩೭ ॥

ರಾಜಾನೋ ರಾಜಕುಲ್ಯಾಶ್ಚ ತಾವತೋಽಬ್ದಾನ್ನಿರಂಕುಶಾಃ ।
ಕುಂಭೀಪಾಕೇಷು ಪಚ್ಯಂತೇ ಬ್ರಹ್ಮದಾಯಾಪಹಾರಿಣಃ ॥ ೩೮ ॥

ಪರೀಕ್ಷಿತನೇ! ನೃಗರಾಜನು ಹೊರಟುಹೋದ ಬಳಿಕ ಬ್ರಾಹ್ಮಣರಿಗೆ ಪರಮಪ್ರಿಯನಾದ, ಧರ್ಮಜ್ಞನಾದ ದೇವಕೀನಂದನ ಭಗವಾನ್ ಶ್ರೀಕೃಷ್ಣನು ಕ್ಷತ್ರಿಯರಿಗೆ ಉಪದೇಶವನ್ನು ಕೊಡುವ ಸಲುವಾಗಿ ಅಲ್ಲಿ ನೆರೆದಿದ್ದ ತನ್ನ ಕುಟುಂಬ ವರ್ಗದ ಜನರಲ್ಲಿ ಹೇಳಿದನು. ॥ ೩೧ ॥ ಬಂಧುಗಳೇ! ಅಗ್ನಿಯಂತಹ ತೇಜಸ್ವಿಗಳೂ ಕೂಡ ಬ್ರಾಹ್ಮಣರ ಅತ್ಯಲ್ಪವಾದ ಧನವನ್ನೂ ಅರಗಿಸಿಕೊಳ್ಳಲಾರರು. ಹೀಗಿರುವಾಗ ತಾವೇ ಈಶ್ವರರೆಂದು ಭಾವಿಸಿಕೊಂಡಿರುವ ದುರಭಿಮಾನಿಗಳಾದ ರಾಜರೇ ಆಗಿದ್ದರೂ ಅವರ ವಿಷಯದಲ್ಲಿ ಹೇಳುವುದೇನಿದೆ? ॥ ೩೨ ॥ ನಾನು ಹಾಲಾಹಲ ವಿಷವನ್ನೂ ವಿಷವೆಂದು ಭಾವಿಸುವುದಿಲ್ಲ. ಏಕೆಂದರೆ, ಅದರ ಚಿಕಿತ್ಸೆಯೂ ಆಗುತ್ತದೆ. ವಾಸ್ತವವಾಗಿ ಬ್ರಾಹ್ಮಣರ ಧನವೇ ಪರಮ ವಿಷವಾಗಿದೆ. ಅದನ್ನು ಅರಗಿಸಿಕೊಳ್ಳುವಂತಹ ಯಾವುದೇ ಔಷಧವೂ, ಉಪಾಯವೂ ಭೂಮಿಯಲ್ಲಿಲ್ಲ. ॥ ೩೩ ॥ ಹಾಲಾಹಲ ವಿಷವು ಕೇವಲ ತಿಂದವನನ್ನೇ ಕೊಲ್ಲುತ್ತದೆ ಮತ್ತು ಬೆಂಕಿಯನ್ನು ನೀರಿನಿಂದ ಆರಿಸಲಾಗುತ್ತದೆ. ಆದರೆ ಬ್ರಾಹ್ಮಣ ಧನರೂಪವಾದ ಅರಣಿಯಿಂದ ಉಂಟಾದ ಅಗ್ನಿಯು ಇಡೀ ಕುಲವನ್ನೇ ಸಮೂಲವಾಗಿ ಸುಟ್ಟುಬಿಡುತ್ತದೆ. ॥ ೩೪ ॥ ಬ್ರಾಹ್ಮಣನ ಅನುಮತಿಯನ್ನು ಪಡೆಯದೆ ಅವನ ಧನವನ್ನು ಉಪಭೋಗಿಸಿದವರು ಮಕ್ಕಳು, ಮೊಮ್ಮಕ್ಕಳು ಹೀಗೆ ಮೂರು ತಲೆಮಾರುಗಳು ವಿನಾಶಹೊಂದುವರು. ಇನ್ನು ಬಲಾತ್ಕಾರವಾಗಿ ಕಿತ್ತುಕೊಂಡು ಅದನ್ನು ಭೋಗಿಸಿದರೆ ಹಿಂದಿನ ಹತ್ತು ತಲೆಮಾರಿನವರು, ಮುಂದಿನ ಹತ್ತು ತಲೆಮಾರಿನವರು ನರಕಕ್ಕೆ ಹೋಗುತ್ತಾರೆ. ॥ ೩೫ ॥ ಮೂರ್ಖನಾದ ರಾಜನು ತನ್ನ ರಾಜ್ಯಲಕ್ಷ್ಮಿಯ ಮದದಿಂದ ಕುರುಡನಾಗಿ ಬ್ರಾಹ್ಮಣರ ಧನವನ್ನು ಕಬಳಿಸಲು ಬಯಸುವವನು ನರಕದ ದಾರಿಯನ್ನು ಕಂಡುಕೊಂಡನೆಂದೇ ತಿಳಿಯಬೇಕು. ಅವರು ಎಂತಹ ಅಧಃಪತನದ ಹೊಂಡದಲ್ಲಿ ಬೀಳಲಿದ್ದೇವೆ ಎಂಬುದನ್ನೂ ನೋಡುವುದಿಲ್ಲ. ॥ ೩೬ ॥ ಉದಾರಹೃದಯರಾದ, ಕುಟುಂಬಿಗಳಾದ ಬ್ರಾಹ್ಮಣರ ವೃತ್ತಿಯನ್ನು ಕಿತ್ತುಕೊಂಡಾಗ, ಆ ಬ್ರಾಹ್ಮಣರು ಅಳುವಾಗ ಕಣ್ಣಿನಿಂದ ಬಿದ್ದ ಕಣ್ಣೀರಿನಿಂದ ಭೂಮಿಯ ಎಷ್ಟು ಕಣಗಳು ನೆನೆಯುವುವೋ ಅಷ್ಟು ವರ್ಷಗಳಕಾಲ ಬ್ರಾಹ್ಮಣನ ಸ್ವತ್ತನ್ನು ಅಪಹರಿಸಿದ ಉಚ್ಛೃಂಖಲ ರಾಜನು ಮತ್ತು ಅವನ ವಂಶಜರು ಕುಂಭೀಪಾಕ ನರಕದಲ್ಲಿ ದುಃಖವನ್ನು ಅನುಭವಿಸಬೇಕಾಗುತ್ತದೆ. ॥ ೩೭-೩೮ ॥

ಸ್ವದತ್ತಾಂ ಪರದತ್ತಾಂ ವಾ ಬ್ರಹ್ಮವೃತ್ತಿಂ ಹರೇಚ್ಚ ಯಃ ।
ಷಷ್ಟಿವರ್ಷಸಹಸ್ರಾಣಿ ವಿಷ್ಠಾಯಾಂ ಜಾಯತೇ ಕೃಮಿಃ ॥ ೩೯ ॥

ನ ಮೇ ಬ್ರಹ್ಮಧನಂ ಭೂಯಾ-
ದ್ಯದ್ಗೃಧ್ವಾಲ್ಪಾಯುಷೋ ನೃಪಾಃ ।
ಪರಾಜಿತಾಶ್ಚ್ಯುತಾ ರಾಜ್ಯಾದ್
ಭವಂತ್ಯುದ್ವೇಜಿನೋಽಹಯಃ ॥ ೪೦ ॥

ವಿಪ್ರಂ ಕೃತಾಗಸಮಪಿ ನೈವ ದ್ರುಹ್ಯತ ಮಾಮಕಾಃ ।
ಘ್ನಂತಂ ಬಹು ಶಪಂತಂ ವಾ ನಮಸ್ಕುರುತ ನಿತ್ಯಶಃ ॥ ೪೧ ॥

ಯಥಾಹಂ ಪ್ರಣಮೇ ವಿಪ್ರಾನನುಕಾಲಂ ಸಮಾಹಿತಃ ।
ತಥಾ ನಮತ ಯೂಯಂ ಚ ಯೋಽನ್ಯಥಾ ಮೇ ಸ ದಂಡಭಾಕ್ ॥ ೪೨ ॥

ಬ್ರಾಹ್ಮಣಾರ್ಥೋ ಹ್ಯಪಹೃತೋ ಹರ್ತಾರಂ ಪಾತಯತ್ಯಧಃ ।
ಅಜಾನಂತಮಪಿ ಹ್ಯೇನಂ ನೃಗಂ ಬ್ರಾಹ್ಮಣಗೌರಿವ ॥ ೪೩ ॥

ಏವಂ ವಿಶ್ರಾವ್ಯ ಭಗವಾನ್ ಮುಕುಂದೋ ದ್ವಾರಕೌಕಸಃ ।
ಪಾವನಃ ಸರ್ವಲೋಕಾನಾಂ ವಿವೇಶ ನಿಜಮಂದಿರಮ್ ॥ ೪೪ ॥

ಬ್ರಾಹ್ಮಣರಿಗೆ ತಾನು ಕೊಟ್ಟದ್ದಾಗಲೀ, ಬೇರೆಯವರು ಕೊಟ್ಟದ್ದಾಗಲೀ ಜೀವನಾಧಾರವಾದ ವೃತ್ತಿಯನ್ನು (ಧನವನ್ನು) ಕಿತ್ತುಕೊಳ್ಳುವ ರಾಜನು ಅರವತ್ತು ಸಾವಿರ ವರ್ಷಗಳವರೆಗೆ ಮಲದ ಕ್ರಿಮಿಯಾಗುತ್ತಾನೆ. ॥ ೩೯ ॥ ಬ್ರಾಹ್ಮಣನ ಸ್ವತ್ತಿಗೆ ಆಸೆಪಡುವುದರಿಂದಲೇ ರಾಜನು ಅಲ್ಪಾಯುವಾಗುತ್ತಾನೆ. ಶತ್ರುಗಳಿಂದ ಪರಾಜಿತನಾಗುತ್ತಾನೆ. ರಾಜ್ಯಭ್ರಷ್ಟನಾಗುತ್ತಾನೆ. ಸತ್ತನಂತರವೂ ಬೇರೆಯವರಿಗೆ ಕಷ್ಟಕೊಡುವಂತಹ ಹಾವಾಗುತ್ತಾನೆ. ಆದುದರಿಂದ ಯಾವುದೇ ಕಾರಣದಿಂದಲೂ ನನಗೆ ಬ್ರಾಹ್ಮಣರ ಸ್ವತ್ತು ಬೇಡ. ॥ ೪೦ ॥ ಆದ್ದರಿಂದ ನನ್ನ ಆತ್ಮೀಯರೇ! ಬ್ರಾಹ್ಮಣನು ಅಪರಾಧವನ್ನು ಮಾಡಿದರೂ ಅವನನ್ನು ದ್ವೇಷಿಸಬೇಡಿರಿ. ಅವನು ಹೊಡೆದರೂ, ಬಹಳವಾಗಿ ಬೈದರೂ, ಶಪಿಸಿದರೂ ನೀವು ಅವನಿಗೆ ನಮಸ್ಕಾರವನ್ನೇ ಮಾಡುತ್ತಾ ಇರಿ. ॥ ೪೧ ॥ ನಾನು ಬಹಳ ಎಚ್ಚರಿಕೆಯಿಂದ ಮೂರು ಹೊತ್ತು ಬ್ರಾಹ್ಮಣರನ್ನು ನಮಸ್ಕರಿಸುವಂತೆಯೇ ನೀವೂ ಮಾಡುತ್ತಾ ಇರಿ. ನನ್ನ ಈ ಆಜ್ಞೆಯನ್ನು ಉಲ್ಲಂಘಿಸುವವನನ್ನು ನಾನು ಕ್ಷಮಿಸದೆ ಶಿಕ್ಷಿಸಿಬಿಡುತ್ತೇನೆ. ॥ ೪೨ । ಅಪಹರಿಸಲ್ಪಟ್ಟ ಬ್ರಾಹ್ಮಣನ ಐಶ್ವರ್ಯವು ಅಪಹಾರಿಯನ್ನು ಬ್ರಾಹ್ಮಣನ ಸ್ವತ್ತೆಂಬುದನ್ನು ತಿಳಿಯದೆ ಅವನು ಆ ಅಪರಾಧವನ್ನು ಮಾಡಿದ್ದರೂ ಬ್ರಾಹ್ಮಣನ ಹಸುವು ನೃಗಮಹಾರಾಜನನ್ನು ನರಕಕ್ಕೆ ತಳ್ಳಿದಂತೆ ಅಧಃಪತನಗೊಳಿಸುತ್ತದೆ. ॥ ೪೩ ॥ ಪರೀಕ್ಷಿತನೇ! ಸಮಸ್ತ ಲೋಕಗಳನ್ನು ಪವಿತ್ರಗೊಳಿಸುವಂತಹ ಭಗವಾನ್ ಶ್ರೀಕೃಷ್ಣನು ದ್ವಾರಕಾವಾಸಿಗಳಿಗೆ ಹೀಗೆ ಉಪದೇಶಮಾಡಿ ತನ್ನ ಅರಮನೆಗೆ ಹೊರಟುಹೋದನು. ॥ ೪೪ ॥

ಅರವತ್ತನಾಲ್ಕನೆಯ ಅಧ್ಯಾಯವು ಮುಗಿಯಿತು. ॥ ೬೪ ॥
ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮಸ್ಕಂಧೇ ಉತ್ತರಾರ್ಧೇ
ನೃಗೋಪಾಖ್ಯಾನಂ ನಾಮ ಚತುಷ್ಷಷ್ಟಿತಮೋಽಧ್ಯಾಯಃ ॥ ೬೪ ॥

ಅರವತ್ತೈದನೆಯ ಅಧ್ಯಾಯ

ಬಲರಾಮನು ವ್ರಜಕ್ಕೆ ಆಗಮಿಸಿದುದು

ಶ್ರೀಶುಕ ಉವಾಚ

ಬಲಭದ್ರಃ ಕುರುಶ್ರೇಷ್ಠ ಭಗವಾನ್ ರಥಮಾಸ್ಥಿತಃ ।
ಸುಹೃದ್ದಿದೃಕ್ಷುರುತ್ಕಂಠಃ ಪ್ರಯಯೌ ನಂದಗೋಕುಲಮ್ ॥ ೧ ॥

ಪರಿಷ್ವಕ್ತಶ್ಚಿರೋತ್ಕಂಠೈರ್ಗೋಪೈರ್ಗೋಪೀಭಿರೇವ ಚ ।
ರಾಮೋಽಭಿವಾದ್ಯ ಪಿತರಾವಾಶೀರ್ಭಿರಭಿನಂದಿತಃ ॥ ೨ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಕುರುಶ್ರೇಷ್ಠನಾದ ಪರೀಕ್ಷಿತನೇ! ಭಗವಾನ್ ಬಲಭದ್ರನು ನಂದಗೋಪನೇ ಮೊದಲಾದ ಸುಹೃದರನ್ನು ನೋಡುವ ಹಂಬಲದಿಂದ ರಥದಲ್ಲಿ ಕುಳಿತು ದ್ವಾರಕೆಯಿಂದ ನಂದಗೋಕುಲಕ್ಕೆ ಪ್ರಯಾಣ ಮಾಡಿದನು. ॥ ೧ ॥ ಇತ್ತ ಬಲರಾಮ – ಶ್ರೀಕೃಷ್ಣನನ್ನು ನೋಡಬೇಕೆಂದು ವ್ರಜವಾಸಿಗಳಾದ ಗೋಪ-ಗೋಪಿಯರೂ ಬಹಳ ದಿವಸಗಳಿಂದ ಉತ್ಕಂಠಿತರಾಗಿದ್ದರು. ಅವರೆಲ್ಲರೂ ಬಲರಾಮನನ್ನು ನೋಡುತ್ತಲೇ ಆನಂದತುಂದಿಲರಾಗಿ ಬಲರಾಮನನ್ನು ಗಾಢವಾಗಿ ಆಲಿಂಗಿಸಿಕೊಂಡರು. ಬಲರಾಮನೂ ಕೂಡ ತಾಯಿಯಾದ ಯಶೋದೆಗೂ, ನಂದರಾಜನಿಗೂ ನಮಸ್ಕಾರಮಾಡಿದನು. ಅವರು ಆಶೀರ್ವದಿಸುತ್ತಾ ಅವನನ್ನು ಅಭಿನಂದಿಸಿದರು. ॥ ೨ ॥

ಚಿರಂ ನಃ ಪಾಹಿ ದಾಶಾರ್ಹ ಸಾನುಜೋ ಜಗದೀಶ್ವರಃ ।
ಇತ್ಯಾರೋಪ್ಯಾಂಕಮಾಲಿಂಗ್ಯ ನೇತ್ರೈಃ ಸಿಷಿಚುರ್ಜಲೈಃ ॥ ೩ ॥

ಗೋಪವೃದ್ಧಾಂಶ್ಚ ವಿಧಿವದ್ಯವಿಷ್ಠೈರಭಿವಂದಿತಃ ।
ಯಥಾವಯೋ ಯಥಾಸಖ್ಯಂ ಯಥಾಸಂಬಂಧಮಾತ್ಮನಃ ॥ ೪ ॥

ಸಮುಪೇತ್ಯಾಥ ಗೋಪಾಲಾನ್ಹಾಸ್ಯಹಸ್ತಗ್ರಹಾದಿಭಿಃ ।
ವಿಶ್ರಾಂತಂ ಸುಖಮಾಸೀನಂ ಪಪ್ರಚ್ಛುಃ ಪರ್ಯುಪಾಗತಾಃ ॥ ೫ ॥

ಪೃಷ್ಟಾಶ್ಚಾನಾಮಯಂ ಸ್ವೇಷು ಪ್ರೇಮಗದ್ಗದಯಾ ಗಿರಾ ।
ಕೃಷ್ಣೇ ಕಮಲಪತ್ರಾಕ್ಷೇ ಸಂನ್ಯಸ್ತಾಖಿಲರಾಧಸಃ ॥ ೬ ॥

ಕಚ್ಚಿನ್ನೋ ಬಾಂಧವಾ ರಾಮ ಸರ್ವೇ ಕುಶಲಮಾಸತೇ ।
ಕಚ್ಚಿತ್ಸ್ಮರಥ ನೋ ರಾಮ ಯೂಯಂ ದಾರಸುತಾನ್ವಿತಾಃ ॥ ೭ ॥

ದಿಷ್ಟ್ಯಾ ಕಂಸೋ ಹತಃ ಪಾಪೋ ದಿಷ್ಟ್ಯಾ ಮುಕ್ತಾಃ ಸುಹೃಜ್ಜನಾಃ ।
ನಿಹತ್ಯ ನಿರ್ಜಿತ್ಯ ರಿಪೂನ್ ದಿಷ್ಟ್ಯಾ ದುರ್ಗಂ ಸಮಾಶ್ರಿತಾಃ ॥ ೮ ॥

ಗೋಪ್ಯೋ ಹಸಂತ್ಯಃ ಪಪ್ರಚ್ಛೂ ರಾಮಸಂದರ್ಶನಾದೃತಾಃ ।
ಕಚ್ಚಿದಾಸ್ತೇ ಸುಖಂ ಕೃಷ್ಣಃ ಪುರಸ್ತ್ರೀಜನವಲ್ಲಭಃ ॥ ೯ ॥

ಕಚ್ಚಿತ್ಸ್ಮರತಿ ವಾ ಬಂಧೂನ್ಪಿತರಂ ಮಾತರಂ ಚ ಸಃ ।
ಅಪ್ಯಸೌ ಮಾತರಂ ದ್ರಷ್ಟುಂ ಸಕೃದಪ್ಯಾಗಮಿಷ್ಯತಿ ।
ಅಪಿ ವಾ ಸ್ಮರತೇಽಸ್ಮಾಕಮನುಸೇವಾಂ ಮಹಾಭುಜಃ ॥ ೧೦ ॥

'ದಾಶಾರ್ಹನೇ! ನೀನು ಜಗದೀಶ್ವರನಾಗಿರುವೆ. ನಿನ್ನ ತಮ್ಮನಾದ ಶ್ರೀಕೃಷ್ಣನೊಡನೆ ಸದಾ ನೀನು ನಮ್ಮನ್ನು ರಕ್ಷಿಸುತ್ತಿರು' ಎಂದು ಹೇಳುತ್ತಾ ಅವನನ್ನು ತೊಡೆಯಲ್ಲಿ ಕುಳ್ಳಿರಿಸಿಕೊಂಡು ಆನಂದ ಬಾಷ್ಪದಿಂದ ಅವನಿಗೆ ಅಭಿಷೇಕ ಮಾಡಿದರು. ॥ ೩ ॥ ಬಳಿಕ ಬಲರಾಮನು ಹಿರಿಯ ಗೋಪರಿಗೆ ನಮಸ್ಕರಿಸಿದನು. ಕಿರಿಯರು ಅವನಿಗೆ ನಮಸ್ಕಾರ ಮಾಡಿದರು. ಹೀಗೆ ಬಲರಾಮನು ಗೋಪಾಲಕರ ವಯಸ್ಸಿಗೆ ಅನುಸಾರವಾಗಿ, ಅವರೊಡನೆ ತನಗಿದ್ದ ಮೈತ್ರಿಗೆ ಅನುಸಾರವಾಗಿ ನೆಂಟಸ್ತಿಕೆಗೆ ತಕ್ಕಂತೆ ಎಲ್ಲರನ್ನು ಸಮಾದರಿಸಿದನು. ॥ ೪ ॥ ಬಲರಾಮನು ಗೋಪಾಲಕರ ಬಳಿಗೆ ಹೋಗಿ ಕೆಲವರನ್ನು ಕೈಕುಲುಕಿದನು. ಕೆಲವರಲ್ಲಿ ವಿನೋದದ ಮಾತುಗಳನ್ನಾಡಿದನು. ಕೆಲವರನ್ನು ನಗು-ನಗುತ್ತಾ ಅಪ್ಪಿಕೊಂಡನು. ಇದಾದ ಬಳಿಕ ಬಲರಾಮನು ಬಳಲಿಕೆಯನ್ನು ಕಳೆದುಕೊಂಡು ಸುಖಾಸನದಲ್ಲಿ ಕುಳಿತಿರುವಾಗ, ಕಮಲನಯನ ಭಗವಾನ್ ಶ್ರೀಕೃಷ್ಣನಿಗಾಗಿ ಸಮಸ್ತ ಭೋಗಗಳನ್ನೂ, ಸ್ವರ್ಗ, ಮೋಕ್ಷವನ್ನೂ ತ್ಯಜಿಸಿದ ಗೋಪಾಲಕರು ಬಲರಾಮನ ಬಳಿಗೆ ಬಂದರು. ಬಲರಾಮನು ಅವರ ಮನೆಯವರ ಕುರಿತು ಕುಶಲ ಪ್ರಶ್ನೆಗಳನ್ನು ಕೇಳಿದಾಗ ಅವರು ಪ್ರೇಮದಿಂದ ಉಕ್ಕಿಬರುತ್ತಿದ್ದ ಕಣ್ಣೀರಿನಿಂದಾಗಿ, ಗದ್ಗದವಾಗಿದ್ದ ಸ್ವರದಿಂದ ಅವನಲ್ಲಿ ಪ್ರಶ್ನಿಸಿದರು. ॥ ೫-೬ ॥ ಬಲರಾಮನೇ! ವಸುದೇವನೇ ಮೊದಲಾದ ನಮ್ಮ ಬಂಧುಗಳೆಲ್ಲರೂ ಕ್ಷೇಮವಾಗಿರುವರೇ ? ಈಗ ನೀವು ಪತ್ನೀ-ಪುತ್ರರೊಂದಿಗೆ ಆನಂದದಿಂದ ಸಂಸಾರವನ್ನು ನಿರ್ವಹಿಸುತ್ತಿರುವಿರಿ. ಎಂದಾದರೂ ನಿಮಗೆ ನಮ್ಮಗಳ ಸ್ಮರಣೆಯುಂಟಾಗುವುದೇ ? ॥ ೭ ॥ ಪಾಪಿಯಾದ ಕಂಸನನ್ನು ನೀವು ಸಂಹಾರಮಾಡಿದಿರಿ. ಇದು ದೊಡ್ಡ ಸೌಭಾಗ್ಯದ ಮಾತಾಗಿದೆ. ನಿಮ್ಮ ಸುಹೃದ್ - ಸಂಬಂಧಿಗಳನ್ನು ಕಷ್ಟ-ಕಾರ್ಪಣ್ಯಗಳಿಂದ ಕಾಪಾಡಿದಿರಿ. ನೀವು ಇನ್ನೂ ಅನೇಕ ಶತ್ರುಗಳನ್ನು ಕೊಂದು ಹಾಕಿದಿರಿ, ಗೆದ್ದುಕೊಂಡಿರಿ ಇದು ಬಹು ದೊಡ್ಡ ಆನಂದದ ವಿಷಯವೇ ಆಗಿದೆ. ಈಗ ನೀವುಗಳು ಅತ್ಯಂತ ಸುರಕ್ಷಿತವಾದ ಸಮುದ್ರ ಮಧ್ಯದ ದ್ವಾರಕೆಯಲ್ಲಿ ವಾಸಿಸುತ್ತಿರುವಿರಿ. ॥ ೮ ॥

ಪರೀಕ್ಷಿತನೇ! ಭಗವಾನ್ ಬಲರಾಮನ ದರ್ಶನದಿಂದ, ಅವನ ಪ್ರೇಮಪೂರ್ಣ ನೋಟದಿಂದ ಗೋಪಿಯರು ಮಾರುಹೋದರು. ಅವರು ನಗುತ್ತಾ ಕೇಳುತ್ತಾರೆ - ಬಲರಾಮನೇ! ನಗರದ ನಾರಿಯರಿಗೆ ಪ್ರಾಣವಲ್ಲಭನಾದ ಶ್ರೀಕೃಷ್ಣನು ಕುಶಲಿಯಾಗಿರುವನಲ್ಲ ? ॥ ೯ ॥ ಎಂದಾದರೂ ಅವನಿಗೆ ತನ್ನ ಬಂಧುಗಳ, ತಂದೆ-ತಾಯಿಯರ ನೆನಪು ಬರುತ್ತದೆಯೇ ? ಅವನು ತನ್ನ ತಾಯಿಯ ದರ್ಶನಕ್ಕಾಗಿ ಒಮ್ಮೆಯಾದರೂ ಇಲ್ಲಿಗೆ ಬರಬಲ್ಲನೇ ? ಮಹಾಬಾಹುವಾದ ಶ್ರೀಕೃಷ್ಣನು ಎಂದಾದರೂ ನಾವೆಲ್ಲರೂ ಮಾಡಿದ ಸೇವೆಯನ್ನು ಸ್ಮರಿಸುತ್ತಿರುವನೇ ? ॥ ೧೦ ॥ ಬಲಭದ್ರನೇ! ಸ್ವಜನರನ್ನು ಪರಿತ್ಯಜಿಸುವುದು ಎಷ್ಟು ದುಸ್ತರವಾದುದು ಎಂಬುದು ನಿನಗೆ ತಿಳಿದ ಇದೆ. ಆದರೂ ನಾವು ನಮ್ಮ ಪ್ರಿಯತಮನಾದ ಶ್ರೀಕೃಷ್ಣನಿಗಾಗಿ ತಂದೆ-ತಾಯಿಯರನ್ನೂ, ಅಣ್ಣ-ತಮ್ಮಂದಿರನ್ನೂ, ಪತಿ-ಪುತ್ರ ಮತ್ತು ಸಹೋದರಿಯರನ್ನು ಪುತ್ರಿ

ಮಾತರಂ ಪಿತರಂ ಭ್ರಾತೄನ್ಪತೀನ್ ಪುತ್ರಾನ್ ಸ್ವಸೄನಪಿ ।
ಯದರ್ಥೇ ಜಹಿಮ ದಾಶಾರ್ಹ ದುಸ್ತ್ಯಜಾನ್ಸ್ವಜನಾನ್ ಪ್ರಭೋ
॥ ೧೧ ॥

ತಾ ನಃ ಸದ್ಯಃ ಪರಿತ್ಯಜ್ಯ ಗತಃ ಸಂಛಿನ್ನಸೌಹೃದಃ ।
ಕಥಂ ನು ತಾದೃಶಂ ಸ್ತ್ರೀಭಿರ್ನ ಶ್ರದ್ಧೀಯೇತ ಭಾಷಿತಮ್
॥ ೧೨ ॥

ಕಥಂ ನು ಗೃಹ್ಣಂತ್ಯನವಸ್ಥಿತಾತ್ಮನೋ
ವಚಃ ಕೃತಘ್ನಸ್ಯ ಬುಧಾಃ ಪುರಸ್ತ್ರಿಯಃ ।
ಗೃಹ್ಣಂತಿ ವೈ ಚಿತ್ರಕಥಸ್ಯ ಸುಂದರ-
ಸ್ಮಿತಾವಲೋಕೋಚ್ಛ್ವಸಿತಸ್ಮರಾತುರಾಃ ॥ ೧೩ ॥

ಕಿಂ ನಸ್ತತ್ಕಥಯಾ ಗೋಪ್ಯಃ ಕಥಾಃ ಕಥಯತಾಪರಾಃ ।
ಯಾತ್ಯಸ್ಮಾಭಿರ್ವಿನಾ ಕಾಲೋ ಯದಿ ತಸ್ಯ ತಥೈವ ನಃ
॥ ೧೪ ॥

ಇತಿ ಪ್ರಹಸಿತಂ ಶೌರೇರ್ಜಲ್ಪಿತಂ ಚಾರುವೀಕ್ಷಿತಮ್ ।
ಗತಿಂ ಪ್ರೇಮಪರಿಷ್ವಂಗಂ ಸ್ಮರಂತ್ಯೋ ರುರುದುಃ ಸ್ತ್ರಿಯಃ
॥ ೧೫ ॥

ಸಂಕರ್ಷಣಸ್ತಾಃ ಕೃಷ್ಣಸ್ಯ ಸಂದೇಶೈರ್ಹೃದಯಂಗಮೈಃ ।
ಸಾಂತ್ವಯಾಮಾಸ ಭಗವಾನ್ ನಾನಾನುನಯಕೋವಿದಃ
॥ ೧೬ ॥

ದ್ವೌ ಮಾಸೌ ತತ್ರ ಚಾವಾತ್ಸೀನ್ಮಧುಂ ಮಾಧವಮೇವ ಚ ।
ರಾಮಃ ಕ್ಷಪಾಸು ಭಗವಾನ್ ಗೋಪೀನಾಂ ರತಿಮಾವಹನ್
॥ ೧೭ ॥

ಪೂರ್ಣಚಂದ್ರಕಲಾಮೃಷ್ಟೇ ಕೌಮುದೀಗಂಧವಾಯುನಾ ।
ಯಮುನೋಪವನೇ ರೇಮೇ ಸೇವಿತೇ ಸ್ತ್ರೀಗಣೈರ್ವೃತಃ
॥ ೧೮ ॥

ವರುಣಪ್ರೇಷಿತಾ ದೇವೀ ವಾರುಣೀ ವೃಕ್ಷಕೋಟರಾತ್ ।
ಪತಂತೀ ತದ್ವನಂ ಸರ್ವಂ ಸ್ವಗಂಧೇನಾಧ್ಯವಾಸಯತ್
॥ ೧೯ ॥

ಯರನ್ನು ತ್ಯಜಿಸಿ ಬಿಟ್ಟೆವು. ಆದರೆ ಪ್ರಭೋ! ಅವನು ನಮ್ಮೆಲ್ಲರನ್ನೂ ಕ್ಷಣಮಾತ್ರದಲ್ಲಿ ಪರಿತ್ಯಜಿಸಿ, ನಮ್ಮ ಸೌಹಾರ್ದವನ್ನೂ, ಪ್ರೇಮ ಬಂಧನವನ್ನೂ ಕತ್ತರಿಸಿಹಾಕಿ ಹೊರಟೇ ಹೋದನು. ಆ ಸಮಯದಲ್ಲಿ ನಾವು ಬಯಸಿದ್ದರೆ ತಡೆಯುತ್ತಿದ್ದೆವು. ಆದರೆ ಅವನು 'ನಾನು ನಿಮ್ಮ ಋಣಿಯಾಗಿದ್ದೇನೆ. ನಿಮ್ಮ ಉಪಕಾರವನ್ನು ಎಂದಿಗೂ ತೀರಿಸಲಾರೆನು. ಬೇಗನೇ ನಿಮ್ಮ ಬಳಿಗೆ ಬರುವೆನು' ಎಂದು ಹೇಳಿದ ಬಣ್ಣದ ಮಾತುಗಳನ್ನು ಕೇಳಿದ ಯಾವ ಸ್ತ್ರೀಯು ತಾನೇ ವಿಶ್ವಾಸವನ್ನಿಡದೇ ಇದ್ದಾಳು? ॥ ೧೧-೧೨ ॥ ಆಗ ಒಬ್ಬ ಗೋಪಿಯು ಹೇಳಿದಳು – ಬಲರಾಮನೇ ನಾವೇನೋ ಹಳ್ಳಿಗರು. ಏನೂ ತಿಳಿಯದವರು. ಅವನ ಮೃದು ಮಧುರವಾದ ಮಾತನ್ನು ನಂಬಬಹುದು. ಆದರೆ ಚತುರರಾದ ನಗರದ ಸ್ತ್ರೀಯರು ಚಂಚಲನೂ, ಕೃತಘ್ನನೂ ಆದ ಶ್ರೀಕೃಷ್ಣನ ಮಾತುಗಳನ್ನು ಏಕೆ ನಂಬುತ್ತಾರೆ? ಅವರನ್ನು ಇವನು ಮೋಸಗೊಳಿಸಲಾರನು. ಮತ್ತೊಬ್ಬ ಗೋಪಿಯು ಹೇಳಿದಳು – ಸಖಿಯರೇ! ಯಾರಾದರೇನು? ನಮ್ಮ ಪ್ರಿಯತಮನು ಕಿರುನಗೆಯನ್ನು ಬೀರುತ್ತಾ, ಕಡೆಗಣ್ಣನೋಟದಿಂದ ನೋಡಿದಾಕ್ಷಣ ನಗರದ ಸ್ತ್ರೀಯರೂ ಕೂಡ ಪ್ರೇಮವಶರಾಗಿ ವ್ಯಾಕುಲರಾಗುವರು. ಅವರು ಖಂಡಿತವಾಗಿ ಅವನ ಮಾತನ್ನು ನಂಬಿ ತಮ್ಮನ್ನು ಅರ್ಪಿಸಿಕೊಳ್ಳುವರು. । ೧೩ ॥ ಮೂರನೆಯ ಗೋಪಿಯು ಹೇಳಿದಳು – ಗೋಪಿಯರೇ! ಅವನ ಕಥೆಯಿಂದ ನಮಗೇನು ಆಗಬೇಕಾಗಿದೆ? ಬೇರೆ ಯಾವುದಾದರೂ ಪ್ರಸಂಗವಿದ್ದರೆ ಹೇಳಿರಿ. ನಾವಿಲ್ಲದೆ ಅವನು ಕಾಲವನ್ನು ಕಳೆಯಬಹುದಾದರೆ ಅವನಿಲ್ಲದೆ ನಾವೂ ಕಾಲವನ್ನು ಕಳೆಯೋಣ. ॥ ೧೪ ॥ ಹೀಗೆ ಹೇಳುತ್ತಿದ್ದ ಗೋಪಿಯರು ಪ್ರಿಯತಮನಾದ ಶ್ರೀಕೃಷ್ಣನ ನಗು, ಸವಿನುಡಿಗಳು, ಚೇತೋಹಾರಿಯಾದ ಸುಂದರನೋಟ, ಅಂದವಾದ ನಡಿಗೆ, ಪ್ರೇಮಾಲಿಂಗನ ಇವುಗಳನ್ನು ಸ್ಮರಿಸಿಕೊಂಡು ಬಿಕ್ಕಿ-ಬಿಕ್ಕಿ ಅತ್ತುಬಿಟ್ಟರು. ॥ ೧೫ ॥

ಪರೀಕ್ಷಿತನೇ! ಬಗೆ-ಬಗೆಯ ಸಾಂತ್ವನದ ಮಾತುಗಳನ್ನು ಹೇಳಿ ಸಮಾಧಾನಗೊಳಿಸುವುದರಲ್ಲಿ ಚತುರನಾದ ಬಲರಾಮನು ಶ್ರೀಕೃಷ್ಣನು ಕಳುಹಿಸಿದ್ದ ಹೃದಯಂಗಮವಾದ ಸಂದೇಶಗಳಿಂದ ಆ ಗೋಪಿಕೆಯರನ್ನು ಸಮಾಧಾನಪಡಿಸಿದನು. ॥ ೧೬ ॥ ಹೀಗೆ ವಸಂತ ಋತುವಿನ ಚೈತ್ರ-ವೈಶಾಖ ಈ ತಿಂಗಳು ಪೂರ್ತಿಯಾಗಿ ಬಲರಾಮನು ರಾತ್ರಿಯಲ್ಲಿ ಗೋಪಿಯರಿಗೆ ಸಂತೋಷವನ್ನುಂಟುಮಾಡುತ್ತಾ ಗೋಕುಲದಲ್ಲಿದ್ದನು. ॥ ೧೭ ॥ ಆಗ ಕುಮುದ ಪುಷ್ಪದ ಸುಗಂಧವನ್ನು ಹೊತ್ತು ತಂಗಾಳಿಯು ಮೆಲ್ಲ-ಮೆಲ್ಲನೆ ಬೀಸುತ್ತಿರಲಾಗಿ, ಪೂರ್ಣಚಂದ್ರನ ಬೆಳದಿಂಗಳಿನಿಂದ ಜಾಜ್ವಲ್ಯಮಾನಾಗಿ ಕಾಣುತ್ತಿದ್ದ ಯಮುನಾ ತಟದ ಉಪವನದಲ್ಲಿ ಭಗವಾನ್ ಬಲರಾಮನು ಗೋಪಿಯರೊಂದಿಗೆ ವಿಹರಿಸುತ್ತಿದ್ದನು. ॥ ೧೮ ॥ ವರುಣದೇವನು ಕಳಿಸಿದ ವಾರುಣಿಯು ಒಂದು ಮರದ ಪೊಟರೆಯಿಂದ ಹರಿದುಕೊಂಡು ಬರುತ್ತಾ ಆ ಉಪವನವೆಲ್ಲವನ್ನು ಸುಗಂಧದಿಂದ ಸುವಾಸಿತಗೊಳಿಸಿದಳು. ॥ ೧೯ ॥

ತಂ ಗಂಧಂ ಮಧುಧಾರಾಯಾ ವಾಯುನೋಪಹೃತಂ ಬಲಃ ।
ಆಘ್ರಾಯೋಪಗತಸ್ತತ್ರ ಲಲನಾಭಿಃ ಸಮಂ ಪಪೌ ॥ ೨೦ ॥

ಉಪಗೀಯಮಾನಚರಿತೋ ವನಿತಾಭಿರ್ಹಲಾಯುಧಃ ।
ವನೇಷು ವ್ಯಚರತ್ ಕ್ಷೀಬೋ ಮದವಿಹ್ವಲಲೋಚನಃ ॥ ೨೧ ॥

ಸ್ರಗ್ವ್ಯೇಕಕುಂಡಲೋ ಮತ್ತೋ ವೈಜಯಂತ್ಯಾ ಚ ಮಾಲಯಾ ।
ಬಿಭ್ರತ್ ಸ್ಮಿತಮುಖಾಂಭೋಜಂ ಸ್ವೇದಪ್ರಾಲೇಯಭೂಷಿತಮ್ ॥ ೨೨ ॥

ಸ ಆಜುಹಾವ ಯಮುನಾಂ ಜಲಕ್ರೀಡಾರ್ಥಮೀಶ್ವರಃ ।
ನಿಜಂ ವಾಕ್ಯಮನಾದೃತ್ಯ ಮತ್ತ ಇತ್ಯಾಪಗಾಂ ಬಲಃ ।
ಅನಾಗತಾಂ ಹಲಾಗ್ರೇಣ ಕುಪಿತೋ ವಿಚಕರ್ಷ ಹ ॥ ೨೩ ॥

ಪಾಪೇ ತ್ವಂ ಮಾಮವಜ್ಞಾಯ ಯನ್ನಾಯಾಸಿ ಮಯಾಽಽಹುತಾ ।
ನೇಷ್ಯೇ ತ್ವಾಂ ಲಾಂಗಲಾಗ್ರೇಣ ಶತಧಾ ಕಾಮಚಾರಿಣೀಮ್ ॥ ೨೪ ॥

ಏವಂ ನಿರ್ಭರ್ತ್ಸಿತಾ ಭೀತಾ ಯಮುನಾ ಯದುನಂದನಮ್ ।
ಉವಾಚ ಚಕಿತಾ ವಾಚಂ ಪತಿತಾ ಪಾದಯೋರ್ನೃಪ ॥ ೨೫ ॥

ಯಮುನೋವಾಚ

ರಾಮ ರಾಮ ಮಹಾಬಾಹೋ ನ ಜಾನೇ ತವ ವಿಕ್ರಮಮ್ ।
ಯಸ್ಯೈಕಾಂಶೇನ ವಿಧೃತಾ ಜಗತೀ ಜಗತಃ ಪತೇ ॥ ೨೬ ॥

ಪರಂ ಭಾವಂ ಭಗವತೋ ಭಗವನ್ ಮಾಮಜಾನತೀಮ್ ।
ಮೋಕ್ತುಮರ್ಹಸಿ ವಿಶ್ವಾತ್ಮನ್ ಪ್ರಪನ್ನಾಂ ಭಕ್ತವತ್ಸಲ ॥ ೨೭ ॥

ತತೋ ವ್ಯಮುಂಚದ್ಯಮುನಾಂ ಯಾಚಿತೋ ಭಗವಾನ್ಬಲಃ ।
ವಿಜಗಾಹ ಜಲಂ ಸ್ತ್ರೀಭಿಃ ಕರೇಣುಭಿರಿವೇಭರಾಟ್ ॥ ೨೮ ॥

ಕಾಮಂ ವಿಹೃತ್ಯ ಸಲಿಲಾದುತ್ತೀರ್ಣಾಯಾಸಿತಾಂಬರೇ ।
ಭೂಷಣಾನಿ ಮಹಾರ್ಹಾಣಿ ದದೌ ಕಾಂತಿಃ ಶುಭಾಂ ಸ್ರಜಮ್ ॥ ೨೯ ॥

ವಾಯುವಿನಿಂದ ತರಲ್ಪಟ್ಟ ಆ ಮಧುಧಾರೆಯ ವಾಸನೆಯನ್ನು ಬಲರಾಮನು ಆಘ್ರಾಣಿಸಿ ವಾರುಣಿಮಧುವು ಸುರಿಯುತ್ತಿದ್ದಲ್ಲಿಗೆ ಹೋಗಿ ಗೋಪಿಯರೊಂದಿಗೆ ಅದನ್ನು ಪಾನಮಾಡಿದನು. ॥ ೨೦ ॥ ಆ ಸಮಯದಲ್ಲಿ ಗೋಪಿಯರು ಬಲರಾಮನ ಸುತ್ತಲೂ ನೆರೆದು ಅವನ ಚರಿತ್ರವನ್ನು ಹಾಡುತ್ತಿದ್ದರು. ಮಧುಪಾನದಿಂದ ಅಮಲೇರಿ ಬಂದು ಬಲರಾಮನು ಆ ವನದಲ್ಲಿ ಸಂಚರಿಸುತ್ತಿದ್ದನು. ಅವನ ಕಣ್ಣುಗಳು ಆನಂದಮದದಿಂದ ವಿಹ್ವಲವಾಗಿದ್ದವು. ॥ ೨೧ ॥ ಮತ್ತನಾದ ಅವನು ಕೊರಳಲ್ಲಿ ವೈಜಯಂತಿ ಮಾಲೆಯನ್ನು ಧರಿಸಿದ್ದನು. ಅವನ ಒಂದೇ ಕಿವಿಯಲ್ಲಿ ಕುಂಡಲವಿತ್ತು. ಹಿಮದ ಹನಿಗಳಂತೆ ಕಾಣುತ್ತಿದ್ದ ಬೆವರಿನಿಂದ ವಿಭೂಷಿತನಾಗಿ, ಮಂದಹಾಸದಿಂದ ಕೂಡಿದ ಮುಖಕಮಲದಿಂದ ಬಲರಾಮನು ಅತ್ಯಂತ ಶೋಭಾಯಮಾನನಾಗಿ ಕಾಣುತ್ತಿದ್ದನು. ॥ ೨೨ ॥ ಸರ್ವಶಕ್ತಿಸಂಪನ್ನನಾದ ಬಲರಾಮನು ಜಲಕ್ರೀಡೆಗಾಗಿ ಯಮುನೆಯನ್ನು ಆಹ್ವಾನಿಸಿದನು. ಆದರೆ ಯಮುನೆಯು ಇವನು ಮದಮತ್ತನಾಗಿರುವನೆಂದು ತಿಳಿದು ಅವನ ಆಜ್ಞೆಯನ್ನು ಉಲ್ಲಂಘಿಸಿ ಅವನ ಬಳಿಗೆ ಬರಲಿಲ್ಲ. ಆಗ ಬಲರಾಮನು ಕ್ರೋಧಗೊಂಡು ತನ್ನ ಹಲಾಯುಧದಿಂದ ಆಕೆಯನ್ನು ತನ್ನತ್ತ ಸೆಳೆದುಕೊಂಡನು. ॥ ೨೩ ॥ ಹಾಗೂ ಹೇಳಿದನು - ಪಾಪಿಷ್ಠಳೇ! ನಾನು ಜಲಕ್ರೀಡೆಗಾಗಿ ಕರೆದರೂ ನೀನು ನನ್ನ ಆಜ್ಞೆಯನ್ನು ತಿರಸ್ಕರಿಸಿ ನನ್ನ ಬಳಿಗೆ ಬರಲಿಲ್ಲ. ಸ್ವೇಚ್ಛಾಚಾರಿಣಿಯಾದ ನಿನ್ನನ್ನು ಈಗಲೇ ಹಲಾಯುಧದ ಅಗ್ರಭಾಗದಿಂದ ನೂರಾರು ತುಂಡುಗಳಾಗಿ ಕತ್ತರಿಸಿಬಿಡುತ್ತೇನೆ. ॥ ೨೪ ॥ ಬಲರಾಮನು ಯಮುನೆಯನ್ನು ಹೀಗೆ ಗದರಿಸಿದಾಗ ಭಯಗೊಂಡು ಆಕೆಯು ಬಲಭದ್ರನ ಕಾಲಿಗೆ ಬಿದ್ದು ದೈನ್ಯದಿಂದ ಪ್ರಾರ್ಥಿಸಿದಳು. ॥ ೨೫ ॥

ಯಮುನೆಯು ಹೇಳಿದಳು - ಮಹಾಬಾಹುವಾದ ಬಲರಾಮನೇ! ನಾನು ನಿನ್ನ ಪರಾಕ್ರಮವನ್ನು ಮರೆತುಹೋಗಿದ್ದೆ. ಜಗತ್ಪತಿಯೇ! ನಿನ್ನ ಒಂದಂಶನಾದ ಶೇಷನು ಇಡೀ ಜಗತ್ತನ್ನೇ ಧರಿಸಿದ್ದಾನೆ. ಹಾಗಿರುವಾಗ ಪೂರ್ಣಾಂಶನಾದ ನಿನ್ನ ಸಾಮರ್ಥ್ಯಕ್ಕೆ ಮಿತಿಯುಂಟೇ? ॥ ೨೬ ॥ ಭಗವಂತಾ! ನೀನು ಪರಮ ಐಶ್ವರ್ಯಶಾಲಿಯಾಗಿರುವೆ. ನಿನ್ನ ನಿಜವಾದ ಸ್ವರೂಪವನ್ನು ತಿಳಿಯದ ಕಾರಣದಿಂದಲೇ ನನ್ನಿಂದ ಇಂತಹ ಅಪರಾಧ ನಡೆದುಹೋಯಿತು. ಸರ್ವಸ್ವರೂಪನಾದ ಭಕ್ತವತ್ಸಲನೇ! ನಾನು ನಿನ್ನಲ್ಲಿ ಶರಣಾಗಿದ್ದೇನೆ. ನೀನು ನನ್ನ ತಪ್ಪನ್ನು ಮನ್ನಿಸಿ, ಕ್ಷಮಿಸಿ ನನ್ನನ್ನು ಬಿಟ್ಟುಬಿಡು. ॥ ೨೭ ॥

ಯಮುನೆಯ ಪ್ರಾರ್ಥನೆಯನ್ನು ಮನ್ನಿಸಿ ಭಗವಾನ್ ಬಲರಾಮನು ಆಕೆಯನ್ನು ಕ್ಷಮಿಸಿ, ಗಜರಾಜನು ಹೆಣ್ಣಾನೆಗಳೊಂದಿಗೆ ಕ್ರೀಡಿಸುವಂತೆಯೇ ಅವನು ಗೋಪಿಕೆಯರೊಂದಿಗೆ ಜಲಕ್ರೀಡೆಯಾಡಿದನು. ॥ ೨೮ ॥ ಯಥೇಚ್ಛವಾಗಿ ಜಲಕ್ರೀಡೆಯಾಡಿ ಬಲರಾಮನು ನೀರಿನಿಂದ ಹೊರಗೆ ಬಂದಾಗ, ವರುಣನಿಂದ ಕಳುಹಲ್ಪಟ್ಟ ಕಾಂತಿದೇವಿಯು ಅವನಿಗೆ ನೀಲಾಂಬರವನ್ನು, ಬಹುಮೂಲ್ಯವಾದ ಆಭರಣಗಳನ್ನು, ಸುಂದರವಾದ ಚಿನ್ನದ ಹಾರವನ್ನು ಅರ್ಪಿಸಿದಳು. ॥ ೨೯ ॥

ವಸಿತ್ವಾ ವಾಸಸೀ ನೀಲೇ ಮಾಲಾಮಾಮುಚ್ಯ ಕಾಂಚನೀಮ್ ।
ರೇಜೇ ಸ್ವಲಂಕೃತೋ ಲಿಪ್ತೋ ಮಹೇಂದ್ರ ಇವ ವಾರಣಃ ॥ ೩೦ ॥

ಬಲರಾಮನು ನೀಲಾಂಬರವನ್ನುಟ್ಟು ಬಂಗಾರದ ಮಾಲೆಯನ್ನು ತೊಟ್ಟುಕೊಂಡನು. ಅಂಗರಾಗವನ್ನು ಮೈಗೆ ಪೂಸಿಕೊಂಡು, ಸುಂದರ ಭೂಷಣಗಳಿಂದ ಅಲಂಕರಿಸಿಕೊಂಡು ಇಂದ್ರನ ಬಿಳಿಯಾದ ಐರಾವತದಂತೆ ಶೋಭಿಸಿದನು. ॥ ೩೦ ॥

ಅದ್ಯಾಪಿ ದೃಶ್ಯತೇ ರಾಜನ್ ಯಮುನಾಽಽಕೃಷ್ಟವರ್ತ್ಮನಾ ।
ಬಲಸ್ಯಾನಂತವೀರ್ಯಸ್ಯ ವೀರ್ಯಂ ಸೂಚಯತೀವ ಹಿ ॥ ೩೧ ॥

ಪರೀಕ್ಷಿತನೇ! ಅನಂತವೀರ್ಯನಾದ ಬಲರಾಮನ ವೀರ್ಯ - ಪರಾಕ್ರಮವನ್ನು ಸೂಚಿಸುತ್ತಿದೆಯೋ ಎಂಬಂತೆ ಈಗಲೂ ಯಮುನಾನದಿಯು ನೇಗಿಲಿನಿಂದ ಸೆಳೆಯಲ್ಪಟ್ಟ ಮಾರ್ಗದಲ್ಲೇ ಹರಿಯುತ್ತಿದೆ. ॥ ೩೧ ॥

ಏವಂ ಸರ್ವಾ ನಿಶಾ ಯಾತಾ ಏಕೇವ ರಮತೋ ವ್ರಜೇ ।
ರಾಮಸ್ಯಾಕ್ಷಿಪ್ತಚಿತ್ತಸ್ಯ ಮಾಧುರ್ಯೈರ್ವ್ರಜಯೋಷಿತಾಮ್ ॥ ೩೨ ॥

ವ್ರಜವಾಸಿನಿಯರಾದ ಗೋಪಿಯರ ಮಾಧುರ್ಯ, ಬೆಡಗು ಬಿನ್ನಾಣಗಳಿಂದ ಬಲರಾಮನ ಮನಸ್ಸು ಅಪಹರಿಸಲ್ಪಟ್ಟಿತ್ತು. ಹಲವಾರು ರಾತ್ರಿಗಳು ಒಂದೇ ರಾತ್ರಿಯಂತೆ ಕಳೆದುಹೋದ ಸಮಯವು ಅವರ ಅರಿವಿಗೆ ಬರಲೇ ಇಲ್ಲ. ಹೀಗೆ ಬಲರಾಮನು ವ್ರಜದಲ್ಲಿ ವಿಹರಿಸುತ್ತಿದ್ದನು. ॥ ೩೨ ॥

ಅರವತ್ತೈದನೆಯ ಅಧ್ಯಾಯವು ಮುಗಿಯಿತು. ॥ ೬೫ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮ ಸ್ಕಂಧೇ ಉತ್ತರಾರ್ಧೇ ಬಲದೇವವಿಜಯೇ ಯಮುನಾಕರ್ಷಣಂ ನಾಮ ಪಂಚಷಷ್ಟಿತಮೋಽಧ್ಯಾಯಃ ॥ ೬೫ ॥

ಅರವತ್ತಾರನೆಯ ಅಧ್ಯಾಯ

ಪೌಂಡ್ರಕ ಮತ್ತು ಕಾಶಿರಾಜನ ಉದ್ಧಾರ

ಶ್ರೀಶುಕ ಉವಾಚ

ನಂದವ್ರಜಂ ಗತೇ ರಾಮೇ ಕರೂಷಾಧಿಪತಿರ್ನೃಪ ।
ವಾಸುದೇವೋಽಹಮಿತ್ಯಜ್ಞೋ ದೂತಂ ಕೃಷ್ಣಾಯ ಪ್ರಾಹಿಣೋತ್ ॥ ೧ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ - ಎಲೈ ಪರೀಕ್ಷಿತನೇ! ಬಲರಾಮನು ನಂದಗೋಕುಲಕ್ಕೆ ಹೋಗಿದ್ದ ಸಮಯದಲ್ಲಿ ಕರೂಷದೇಶದ ಮೂರ್ಖನಾದ ಪೌಂಡ್ರಕನೆಂಬ ರಾಜನು ತಾನೇ ವಾಸುದೇವನೆಂದು ಹೇಳಿಕೊಂಡು ಶ್ರೀಕೃಷ್ಣನ ಬಳಿಗೆ ದೂತನೊಬ್ಬನನ್ನು ಕಳುಹಿಸಿಕೊಟ್ಟನು. ॥ ೧ ॥

ತ್ವಂ ವಾಸುದೇವೋ ಭಗವಾನವತೀರ್ಣೋ ಜಗತ್ಪತಿಃ ।
ಇತಿ ಪ್ರಸ್ತೋಭಿತೋ ಬಾಲೈರ್ಮೇನ ಆತ್ಮಾನಮಚ್ಯುತಮ್ ॥ ೨ ॥

ಆ ದೇಶದ ಮೂರ್ಖಜನರು ರಾಜನನ್ನು ಸಂತೋಷಗೊಳಿಸಲು ಅವನನ್ನು ಕಂಡೊಡನೆ - 'ನೀನೇ ಭಗವಂತನಾದ ವಾಸುದೇವನಾಗಿರುವೆ. ಜಗತ್ತಿನ ರಕ್ಷಣೆಗಾಗಿ ನೀನಿಲ್ಲಿ ಅವತರಿಸಿರುವೆ' ಎಂದು ಹೊಗಳುತ್ತಿದ್ದರು. ಇದರಿಂದ ಆ ಮೂರ್ಖರಾಜನು ತಾನೇ ಭಗವಾನ್ ಅಚ್ಯುತನೆಂದು ಭಾವಿಸಿಕೊಂಡುಬಿಟ್ಟನು. ॥ ೨ ॥

ದೂತಂ ಚ ಪ್ರಾಹಿಣೋನ್ಮಂದಃ ಕೃಷ್ಣಾಯಾವ್ಯಕ್ತವರ್ತ್ಮನೇ ।
ದ್ವಾರಕಾಯಾಂ ಯಥಾ ಬಾಲೋ ನೃಪೋ ಬಾಲಕೃತೋಽಬುಧಃ ॥ ೩ ॥

ಹುಡುಗರು ಪರಸ್ಪರ ಆಟವಾಡುವಾಗ ಒಬ್ಬನನ್ನು ರಾಜನನ್ನಾಗಿಸಿಕೊಂಡು ತಾತ್ಕಾಲಿಕವಾಗಿ ಅವನನ್ನು ರಾಜನೆಂದೇ ಭಾವಿಸಿ ವ್ಯವಹರಿಸುವಂತೆ - ಪೌಂಡ್ರಕನ ಪ್ರಜೆಗಳೂ ಆಟಕ್ಕಾಗಿ ತಮ್ಮ ರಾಜನನ್ನು ವಾಸುದೇವನೆಂದೇ ಕರೆಯುತ್ತಿದ್ದರು. ಇದನ್ನು ಅರ್ಥವಿಸದೆ ಆ ಮಂದಮತಿ ಅಜ್ಞಾನಿಯಾದ ಪೌಂಡ್ರಕನು ಅಚಿಂತ್ಯಗತಿಯಾದ ಭಗವಾನ್ ಶ್ರೀಕೃಷ್ಣನ ಲೀಲಾ ರಹಸ್ಯಗಳನ್ನು ತಿಳಿಯದೆ, ಅವನ ಬಳಿಗೆ ದೂತನನ್ನು ಕಳಿಸಿಕೊಟ್ಟನು. ॥ ೩ ॥

ದೂತಸ್ತು ದ್ವಾರಕಾಮೇತ್ಯ ಸಭಾಯಾಮಾಸ್ಥಿತಂ ಪ್ರಭುಮ್ ।
ಕೃಷ್ಣಂ ಕಮಲಪತ್ರಾಕ್ಷಂ ರಾಜಸಂದೇಶಮಬ್ರವೀತ್ ॥ ೪ ॥

ಪೌಂಡ್ರಕನ ದೂತನು ದ್ವಾರಕೆಗೆ ಬಂದು, ರಾಜಸಭೆಯಲ್ಲಿ ಕುಳಿತಿರುವ ಕಮಲಾಕ್ಷನಾದ ಭಗವಾನ್ ಶ್ರೀಕೃಷ್ಣನಿಗೆ ತನ್ನ ರಾಜನ ಸಂದೇಶವನ್ನು ತಿಳಿಸಿದನು. ॥ ೪ ॥

ವಾಸುದೇವೋಽವತೀರ್ಣೋಽಹಮೇಕ ಏವ ನ ಚಾಪರಃ ।
ಭೂತಾನಾಮನುಕಂಪಾರ್ಥಂ ತ್ವಂ ತು ಮಿಥ್ಯಾಭಿಧಾಂ ತ್ಯಜ ॥ ೫ ॥

ವಾಸುದೇವನೆಂಬುವನು ನಾನೊಬ್ಬನೇ ಆಗಿದ್ದೇನೆ. ಬೇರೆ ಯಾವನೂ ಇಲ್ಲ. ಪ್ರಾಣಿಗಳ ಮೇಲೆ ಕೃಪೆದೋರಲು ನಾನೇ ಅವತರಿಸಿರುವೆನು. ನೀನು ಸುಳ್ಳು-ಸುಳ್ಳನೇ ನಿನ್ನ ಹೆಸರನ್ನು ವಾಸುದೇವನೆಂದು ಇಟ್ಟು ಕೊಂಡಿರುವೆ. ಈಗ ಅದನ್ನು ಬಿಟ್ಟುಬಿಡು. ॥ ೫ ॥

ಯಾನಿ ತ್ವಮಸ್ಮಚ್ಚಿಹ್ನಾನಿ ಮೌಢ್ಯಾದ್ಬಿಭರ್ಷಿ ಸಾತ್ವತ ।
ತ್ಯಕ್ತ್ವೈಹಿ ಮಾಂ ತ್ವಂ ಶರಣಂ ನೋ ಚೇದ್ದೇಹಿ ಮಮಾಹವಮ್ ॥ ೬ ॥

ಯದುವಂಶೀಯನೇ! ನೀನು ಮೂರ್ಖತೆಯಿಂದ ಶಂಖ ಚಕ್ರ ಮೊದಲಾದ ನನ್ನ ಚಿಹ್ನೆಗಳನ್ನು ಧರಿಸಿಕೊಂಡಿರುವೆ. ಅವುಗಳನ್ನು ಬಿಟ್ಟು ನನಗೆ ಶರಣುಬಾ. ನನ್ನ ಮಾತು ನಿನಗೆ ಒಪ್ಪಿಗೆಯಾಗಲಿಲ್ಲವಾದರೆ ನನ್ನೊಂದಿಗೆ ಯುದ್ಧಮಾಡು. ॥ ೬ ॥

ಶ್ರೀಶುಕ ಉವಾಚ

ಕತ್ಥನಂ ತದುಪಾಕರ್ಣ್ಯ ಪೌಂಡ್ರಕಸ್ಯಾಲ್ಪಮೇಧಸಃ ।
ಉಗ್ರಸೇನಾದಯಃ ಸಭ್ಯಾ ಉಚ್ಚಕೈರ್ಜಹಸುಸ್ತದಾ ॥ ೭ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ! ಮಂದಮತಿಯಾದ ಪೌಂಡ್ರಕನ ಈ ಮಾತನ್ನು ಕೇಳಿ ಉಗ್ರಸೇನರೇ ಮೊದಲಾದ ಸಭಾಸದರು ಗಹ-ಗಹಿಸಿ ನಗತೊಡಗಿದರು. ॥ ೭ ॥ ಅವರೆಲ್ಲರ ನಗುವು ನಿಂತ ಮೇಲೆ ಭಗವಾನ್ ಶ್ರೀಕೃಷ್ಣನು ದೂತನಲ್ಲಿ ಹೇಳಿದನು – ನೀನು ಹೋಗಿ ನಿಮ್ಮ ರಾಜನಲ್ಲಿ ಹೀಗೆ ಹೇಳು – 'ಎಲೈ ಮೂರ್ಖನೇ! ನಾನು ನನ್ನ ಚಿಹ್ನೆಗಳನ್ನು ನಿನ್ನ ಮೇಲೆ ಬಿಡುತ್ತೇನೆ ಮತ್ತು ನೀನು ಯಾರ ಪ್ರೇರಣೆಯಿಂದ ಈ ಪ್ರಕಾರ ಗಳಹುತ್ತಿರುವೆಯೋ ಅವರ ಮೇಲೆಯೂ ಪ್ರಯೋಗಿಸುವೆನು. ಎಲೈ ಮೂಢನೇ! ಆ ಸಮಯದಲ್ಲಿ ನೀನು ನನ್ನಿಂದ ಹತನಾಗಿ ಮುಖವನ್ನು ಮುಚ್ಚಿಕೊಂಡು ಹದ್ದು, ರಣಹದ್ದು ಮುಂತಾದ ಮಾಂಸವನ್ನು ತಿನ್ನುವ ಪಕ್ಷಿಗಳಿಂದ ಸುತ್ತುವರಿದು ಮಲಗಿಬಿಡುವೆ. ನೀನು ನನಗೆ ರಕ್ಷಕನಾಗುವುದಿರಲಿ, ನಾಯಿಗಳಿಗಂತೂ ರಕ್ಷಕನಾಗುವುದು ನಿಜ. ನಿನ್ನ ಮಾಂಸವನ್ನು ನಾಯಿಗಳು ತಿಂದು ತೇಗುವವು. ॥ ೮-೯ ॥ ಪರೀಕ್ಷಿತನೇ! ಭಗವಂತನ ಇಂತಹ ತಿರಸ್ಕಾರಪೂರ್ಣ ಸಂದೇಶವನ್ನು ಹೊತ್ತುಕೊಂಡು ಪೌಂಡ್ರಕನ ದೂತನು ತನ್ನ ಒಡೆಯನ ಬಳಿಗೆ ಹೋಗಿ ನಿವೇದಿಸಿಕೊಂಡನು. ಇತ್ತ ಭಗವಾನ್ ಶ್ರೀಕೃಷ್ಣನೂ ಕೂಡ ರಥದಲ್ಲಿ ಕುಳಿತು ಕಾಶಿಪಟ್ಟಣಕ್ಕೆ ಪ್ರಯಾಣ ಮಾಡಿದನು. ಏಕೆಂದರೆ, ಆ ಸಮಯದಲ್ಲಿ ಕರೂಷದ ರಾಜನು ತನ್ನ ಮಿತ್ರನಾದ ಕಾಶಿರಾಜನ ಜೊತೆಯಲ್ಲಿದ್ದನು. ॥ ೧೦ ।

ಉವಾಚ ದೂತಂ ಭಗವಾನ್ ಪರಿಹಾಸಕಥಾಮನು ।
ಉತ್ಸ್ರಕ್ಷ್ಯೇ ಮೂಢ ಚಿಹ್ನಾನಿ ಯೈಸ್ತ್ವಮೇವಂ ವಿಕತ್ಥಸೇ ॥ ೮ ॥

ಮುಖಂ ತದಪಿಧಾಯಾಜ್ಞ ಕಂಕಗೃಧ್ರವಟೈರ್ವೃತಃ ।
ಶಯಿಷ್ಯಸೇ ಹತಸ್ತತ್ರ ಭವಿತಾ ಶರಣಂ ಶುನಾಮ್ ॥ ೯ ॥

ಇತಿ ದೂತಸ್ತದಾಕ್ಷೇಪಂ ಸ್ವಾಮಿನೇ ಸರ್ವಮಾಹರತ್ ।
ಕೃಷ್ಣೋಽಪಿ ರಥಮಾಸ್ಥಾಯ ಕಾಶೀಮುಪಜಗಾಮ ಹ ॥ ೧೦ ॥

ಪೌಂಡ್ರಕೋಽಪಿ ತದುದ್ಯೋಗಮುಪಲಭ್ಯ ಮಹಾರಥಃ ।
ಅಕ್ಷೌಹಿಣೀಭ್ಯಾಂ ಸಂಯುಕ್ತೋ ನಿಶ್ಚಕ್ರಾಮ ಪುರಾದ್ದ್ರುತಮ್ ॥ ೧೧ ॥

ಭಗವಾನ್ ಶ್ರೀಕೃಷ್ಣನ ಆಕ್ರಮಣದ ಸಮಾಚಾರ ತಿಳಿದ ಮಹಾರಥಿ ಪೌಂಡ್ರಕನೂ ಕೂಡ ಎರಡು ಅಕ್ಷೌಹಿಣಿ ಸೈನ್ಯದೊಂದಿಗೆ ಶೀಘ್ರವಾಗಿ ನಗರದಿಂದ ಹೊರಬಿದ್ದನು. ॥ ೧೧ ॥ ಕಾಶಿರಾಜನು ಪೌಂಡ್ರಕನನ್ನು ಮಿತ್ರನಾಗಿದ್ದನು. ಆದ್ದರಿಂದ ಅವನೂ ಕೂಡ ಮಿತ್ರನಿಗೆ ಸಹಾಯಮಾಡಲು ಮೂರು ಅಕ್ಷೌಹಿಣಿ ಸೇನೆಯೊಡನೆ ಪೌಂಡ್ರಕನನ್ನ ಹಿಂಬಾಲಿಸುತ್ತಾ ಬಂದನು. ಪರೀಕ್ಷಿತನೇ! ಆಗ ಶ್ರೀಕೃಷ್ಣನು ಪೌಂಡ್ರಕನನ್ನು ನೋಡಿದನು. ॥ ೧೨ ॥ ಪೌಂಡ್ರಕನೂ ಶಂಖ, ಚಕ್ರ, ಖಡ್ಗ, ಗದೆ, ಶಾರ್ಙ್ಗಧನುಸ್ಸನ್ನು, ಶ್ರೀವತ್ಸ ಚಿಹ್ನೆ ಮೊದಲಾದುವನ್ನು ಧರಿಸಿದ್ದನು. ಅವನು ವಕ್ಷಃಸ್ಥಳದಲ್ಲಿ ಕೃತ್ರಿಮವಾದ ಕೌಸ್ತುಭ ಮಣಿಯಿಂದಲೂ ವನಮಾಲೆಯಿಂದಲೂ ವಿಭೂಷಿತನಾಗಿದ್ದನು. ॥ ೧೩ ॥ ಅವನು ಪೀತಾಂಬರವನ್ನು ಉಟ್ಟಿದ್ದನು. ರಥದ ಧ್ವಜದಲ್ಲಿಯೂ ಗರುಡನ ಚಿಹ್ನೆಯೇ ಇತ್ತು. ಅವನ ತಲೆಯ ಮೇಲೆ ಬಹುಮೂಲ್ಯ ಕಿರೀಟವೂ, ಕಿವಿಗಳಲ್ಲಿ ಮಕರಾಕೃತಿಯ ಕುಂಡಲಗಳೂ ಹೊಳೆಯುತ್ತಿತ್ತು. ॥ ೧೪ ॥

ತಸ್ಯ ಕಾಶಿಪತಿರ್ಮಿತ್ರಂ ಪಾರ್ಷ್ಣಿಗ್ರಾಹೋಽನ್ವಯಾನ್ನೃಪ ।
ಅಕ್ಷೌಹಿಣೀಭಿಸ್ತಿಸೃಭಿರಪಶ್ಯತ್ ಪೌಂಡ್ರಕಂ ಹರಿಃ ॥ ೧೨ ॥

ಶಂಖಾರ್ಯಸಿಗದಾಶಾರ್ಙ್ಗಶ್ರೀವತ್ಸಾದ್ಯುಪಲಕ್ಷಿತಮ್ ।
ಬಿಭ್ರಾಣಂ ಕೌಸ್ತುಭಮಣಿಂ ವನಮಾಲಾವಿಭೂಷಿತಮ್ ॥ ೧೩ ॥

ಕೌಶೇಯವಾಸಸೀ ಪೀತೇ ವಸಾನಂ ಗರುಡಧ್ವಜಮ್ ।
ಅಮೂಲ್ಯಮೌಲ್ಯಾಭರಣಂ ಸ್ಫುರನ್ಮಕರಕುಂಡಲಮ್ ॥ ೧೪ ॥

ದೃಷ್ಟ್ವಾ ತಮಾತ್ಮನಸ್ತುಲ್ಯವೇಷಂ ಕೃತ್ರಿಮಮಾಸ್ಥಿತಮ್ ।
ಯಥಾ ನಟಂ ರಂಗಗತಂ ವಿಜಹಾಸ ಭೃಶಂ ಹರಿಃ ॥ ೧೫ ॥

ಶೂಲೈರ್ಗದಾಭಿಃ ಪರಿಘೈಃ ಶಕ್ತ್ಯೃಷ್ಟಿಪ್ರಾಸತೋಮರೈಃ ।
ಅಸಿಭಿಃ ಪಟ್ಟಿಶೈರ್ಬಾಣೈಃ ಪ್ರಾಹರನ್ನರಯೋ ಹರಿಮ್ ॥ ೧೬ ॥

ಕೃಷ್ಣಸ್ತು ತತ್ಪೌಂಡ್ರಕಕಾಶಿರಾಜಯೋ-
ರ್ಬಲಂ ಗಜಸ್ಯಂದನವಾಜಿಪತ್ತಿಮತ್ ।
ಗದಾಸಿಚಕ್ರೇಷುಭಿರಾರ್ದಯದ್ ಭೃಶಂ
ಯಥಾ ಯುಗಾಂತೇ ಹುತಭುಕ್ ಪೃಥಕ್ ಪ್ರಜಾಃ ॥ ೧೭ ॥

ಆಯೋಧನಂ ತದ್ರಥವಾಜಿಕುಂಜರ-
ದ್ವಿಪತ್ಖರೋಷ್ಟ್ರೈರರಿಣಾವಖಂಡಿತೈಃ ।
ಬಭೌ ಚಿತಂ ಮೋದವಹಂ ಮನಸ್ವಿನಾ-
ಮಾಕ್ರೀಡನಂ ಭೂತಪತೇರಿವೋಲ್ಬಣಮ್ ॥ ೧೮ ॥

ಅಥಾಹ ಪೌಂಡ್ರಕಮ್ ಶೌರಿರ್ಭೋ ಭೋ ಪೌಂಡ್ರಕ ಯದ್ಭವಾನ್ ।
ದೂತವಾಕ್ಯೇನ ಮಾಮಾಹ ತಾನ್ಯಸ್ತ್ರಾಣ್ಯುತ್ಸೃಜಾಮಿ ತೇ ॥ ೧೯ ॥

ತ್ಯಾಜಯಿಷ್ಯೇಽಭಿಧಾನಂ ಮೇ ಯತ್ತ್ವಯಾಜ್ಞ ಮೃಷಾ ಧೃತಮ್ ।
ವ್ರಜಾಮಿ ಶರಣಂ ತೇಽದ್ಯ ಯದಿ ನೇಚ್ಛಾಮಿ ಸಂಯುಗಮ್ ॥ ೨೦ ॥

ಇತಿ ಕ್ಷಿಪ್ತ್ವಾ ಶಿತೈರ್ಬಾಣೈರ್ವಿರಥೀಕೃತ್ಯ ಪೌಂಡ್ರಕಮ್ ।
ಶಿರೋಽವೃಶ್ಚದ್ರಥಾಂಗೇನ ವಜ್ರೇಣೇಂದ್ರೋ ಯಥಾ ಗಿರೇಃ ॥ ೨೧ ॥

ತಥಾ ಕಾಶಿಪತೇಃ ಕಾಯಾಚ್ಛಿರ ಉತ್ಕೃತ್ಯ ಪತ್ರಿಭಿಃ ।
ನ್ಯಪಾತಯತ್ ಕಾಶಿಪುರ್ಯಾಂ ಪದ್ಮಕೋಶಮಿವಾನಿಲಃ ॥ ೨೨ ॥

ಏವಂ ಮತ್ಸರಿಣಂ ಹತ್ವಾ ಪೌಂಡ್ರಕಂ ಸಸಖಂ ಹರಿಃ ।
ದ್ವಾರಕಾಮಾವಿಶತ್ ಸಿದ್ಧೈರ್ಗೀಯಮಾನಕಥಾಮೃತಃ ॥ ೨೩ ॥

ಸ ನಿತ್ಯಂ ಭಗವದ್ಧ್ಯಾನಪ್ರಧ್ವಸ್ತಾಖಿಲಬಂಧನಃ ।
ಬಿಭ್ರಾಣಶ್ಚ ಹರೇ ರಾಜನ್ ಸ್ವರೂಪಂ ತನ್ಮಯೋಽಭವತ್ ॥ ೨೪ ॥

ಅವನ ಇದೆಲ್ಲ ವೇಷವೂ ಕೃತ್ರಿಮವಾದುದೇ ಆಗಿತ್ತು. ಯಾರೋ ನಟನು ರಂಗಸ್ಥಳದಲ್ಲಿ ಅಭಿನಯಿಸಲು ಸಿಂಗರಿಸಿಕೊಂಡು ಬಂದಂತಿತ್ತು. ಅವನ ವೇಷ-ಭೂಷಣಗಳನ್ನು ನೋಡಿ ಶ್ರೀಕೃಷ್ಣನು ಗಹ-ಗಹಿಸಿ ನಗತೊಡಗಿದನು. ॥ ೧೫ ॥ ಆಗ ಶತ್ರುಗಳು ಭಗವಾನ್ ಶ್ರೀಕೃಷ್ಣನ ಮೇಲೆ ತ್ರಿಶೂಲ, ಗದೆ, ಮುದ್ಗರ, ಶಕ್ತಿ, ಋಷ್ಟಿ, ಪ್ರಾಸ, ತೋಮರ, ಖಡ್ಗ, ಪಟ್ಟಿಶ, ಬಾಣ ಮುಂತಾದ ಅಸ್ತ್ರ-ಶಸ್ತ್ರಗಳಿಂದ ಪ್ರಹಾರಮಾಡಿದರು. ॥ ೧೬ ॥ ಪ್ರಳಯಕಾಲದಲ್ಲಿ ಅಗ್ನಿಯು ಎಲ್ಲ ರೀತಿಯ ಪ್ರಾಣಿಗಳನ್ನು ಸುಟ್ಟು ಹಾಕುವಂತೆಯೇ ಭಗವಾನ್ ಶ್ರೀಕೃಷ್ಣನೂ ಕೂಡ ಗದೆ, ಖಡ್ಗ, ಚಕ್ರ ಮತ್ತು ಬಾಣಗಳೇ ಮೊದಲಾದ ಶಸ್ತ್ರಾಸ್ತ್ರಗಳಿಂದ ಪೌಂಡ್ರಕ ಹಾಗೂ ಕಾಶೀರಾಜನ ಆನೆ, ಕುದುರೆ, ರಥ, ಪದಾತಿಗಳಿಂದ ಕೂಡಿದ ಚತುರಂಗ ಸೈನ್ಯವನ್ನು ಕ್ಷಣಮಾತ್ರದಲ್ಲಿ ಧ್ವಂಸಮಾಡಿ ಬಿಟ್ಟನು. ॥ ೧೭ ॥ ಭಗವಂತನ ಚಕ್ರದಿಂದ ತುಂಡು-ತುಂಡಾದ ರಥ, ಆನೆ, ಕುದುರೆ, ಮನುಷ್ಯರು, ಕತ್ತೆ, ಒಂಟೇ ಮುಂತಾದವುಗಳಿಂದ ರಣರಂಗವು ತುಂಬಿಹೋಯಿತು. ಅದು ಭೂತನಾಥನಾದ ಶಿವನ ಭಯಂಕರವಾದ ಆಡುಂಬೊಲದಂತೆ ಕಂಡುಬರುತ್ತಿತ್ತು. ಅದನ್ನು ನೋಡಿದ ಶೂರರ ಉತ್ಸಾಹವು ಇನ್ನೂ ಹೆಚ್ಚುತ್ತಿತ್ತು. ॥ ೧೮ ॥

ಬಳಿಕ ಭಗವಾನ್ ಶ್ರೀಕೃಷ್ಣನು ಪೌಂಡ್ರಕನಲ್ಲಿ ಹೇಳಿದನು ಎಲವೋ ಪೌಂಡ್ರಕನೇ! ನನ್ನ ಅಸ್ತ್ರ-ಶಸ್ತ್ರಾದಿಗಳನ್ನು ಬಿಟ್ಟುಬಿಡಲು ನೀನು ದೂತನ ಮೂಲಕ ಹೇಳಕಳಿಸಿದ್ದೆ. ಸರಿ ಈಗ ನಾನು ಅವನ್ನು ನಿನ್ನ ಮೇಲೆ ಬಿಡುತ್ತಿದ್ದೇನೆ. ॥ ೧೯ ॥ ನೀನು ಸುಳ್ಳು-ಸುಳ್ಳೆ ನನ್ನ ಹೆಸರನ್ನು ಇಟ್ಟುಕೊಂಡಿರುವೆ. ಆದ್ದರಿಂದ ಮೂರ್ಖನೇ! ಈಗ ನಾನು ನಿನ್ನಿಂದ ಆ ಹೆಸರುಗಳನ್ನು ಬಿಡಿಸಿಬಿಡುತ್ತೇನೆ. ಇನ್ನು ಉಳಿದಿರುವುದು ಶರಣಾಗುವ ಮಾತು - ನಾನು ನಿನ್ನೊಡನೆ ಯುದ್ಧಮಾಡಲಾಗದಿದ್ದಾಗ ನಿನಗೆ ಶರಣು ಬರುವೆನು. ॥ ೨೦ ॥ ಶ್ರೀಕೃಷ್ಣನು ಹೀಗೆ ಪೌಂಡ್ರಕನನ್ನು ತಿರಸ್ಕರಿಸುತ್ತಾ ತನ್ನ ತೀಕ್ಷ್ಣವಾದ ಬಾಣಗಳಿಂದ ಅವನ ರಥವನ್ನು ಮುರಿದು ಹಾಕಿ, ಇಂದ್ರನು ವಜ್ರಾಯುಧದಿಂದ ಪರ್ವತಗಳನ್ನು ಕತ್ತರಿಸಿ ಹಾಕುವಂತೆ ಸುದರ್ಶನ ಚಕ್ರದಿಂದ ಅವನ ತಲೆಯನ್ನು ಹಾರಿಸಿಬಿಟ್ಟನು. ॥ ೨೧ ॥ ಹಾಗೆಯೇ ಭಗವಂತನು ತನ್ನ ಬಾಣಗಳಿಂದ ಕಾಶೀನರೇಶನ ತಲೆಯನ್ನು ಹಾರಿಸಿ ಗಾಳಿಯು ಕಮಲದ ಹೂವನ್ನು ಹಾರಿಸಿಕೊಂಡು ಹೋಗುವಂತೆ ಕಾಶೀನಗರದಲ್ಲಿ ಬೀಳಿಸಿದನು. ॥ ೨೨ ॥ ಈ ಪ್ರಕಾರವಾಗಿ ತನ್ನೊಡನೆ ದ್ವೇಷವನ್ನು ಸಾಧಿಸುತ್ತಿದ್ದ ಪೌಂಡ್ರಕನನ್ನು ಮತ್ತು ಅವನ ಸ್ನೇಹಿತನಾದ ಕಾಶೀರಾಜನನ್ನು ಸಂಹರಿಸಿದ ಭಗವಾನ್ ಶ್ರೀಕೃಷ್ಣನು ತನ್ನ ರಾಜಧಾನಿಯಾದ ದ್ವಾರಕೆಗೆ ಹಿಂದಿರುಗಿದನು. ಆ ಸಮಯದಲ್ಲಿ ಸಿದ್ಧರು ಭಗವಂತನ ಕಥಾಮೃತವನ್ನು ಹಾಡುತ್ತಿದ್ದರು. ॥ ೨೩ ॥ ಪರೀಕ್ಷಿತನೇ! ಪೌಂಡ್ರಕನು ಭಗವಂತನ ರೂಪವನ್ನು ಯಾವುದೇ ಭಾವದಿಂದಲೂ ಸದಾಕಾಲ ಚಿಂತಿಸುತ್ತಲೇ ಇದ್ದನು. ಇದರಿಂದ ಅವನ ಎಲ್ಲ ಬಂಧನಗಳು ಹರಿದುಹೋಯಿತು. ಅವನು ಭಗವಂತನಂತೆಯೇ ವೇಷವನ್ನು ಧರಿಸುತ್ತಿದ್ದನು. ಇದರಿಂದ ಪದೇ-ಪದೇ ಅವನ ಸ್ಮರಣೆಯಾಗುವುದರಿಂದ ಅವನು ಭಗವಂತನ ಸಾರೂಪ್ಯಮುಕ್ತಿಯನ್ನು ಹೊಂದಿದನು. ॥ ೨೪ ॥

ಶಿರಃ ಪತಿತಮಾಲೋಕ್ಯ ರಾಜದ್ವಾರೇ ಸಕುಂಡಲಮ್ ।
ಕಿಮಿದಂ ಕಸ್ಯ ವಾ ವಕ್ತ್ರಮಿತಿ ಸಂಶಿಶ್ಯಿರೇ ಜನಾಃ ॥ ೨೫ ॥

ರಾಜ್ಞಃ ಕಾಶಿಪತೇರ್ಜ್ಞಾತ್ವಾ ಮಹಿಷ್ಯಃ ಪುತ್ರಬಾಂಧವಾಃ ।
ಪೌರಾಶ್ಚ ಹಾ ಹತಾ ರಾಜನ್ ನಾಥ ನಾಥೇತಿ ಪ್ರಾರುದನ್ ॥ ೨೬ ॥

ಸುದಕ್ಷಿಣಸ್ತಸ್ಯ ಸುತಃ ಕೃತ್ವಾ ಸಂಸ್ಥಾವಿಧಿಂ ಪಿತುಃ ।
ನಿಹತ್ಯ ಪಿತೃಹಂತಾರಂ ಯಾಸ್ಯಾಮ್ಯಪಚಿತಿಂ ಪಿತುಃ ॥ ೨೭ ॥

ಇತ್ಯಾತ್ಮನಾಭಿಸಂಧಾಯ ಸೋಪಾಧ್ಯಾಯೋ ಮಹೇಶ್ವರಮ್ ।
ಸುದಕ್ಷಿಣೋಽರ್ಚಯಾಮಾಸ ಪರಮೇಣ ಸಮಾಧಿನಾ ॥ ೨೮ ॥

ಪ್ರೀತೋಽವಿಮುಕ್ತೇ ಭಗವಾಂಸ್ತಸ್ಮೈ ವರಮದಾದ್ವಿಭುಃ ।
ಪಿತೃಹಂತೃವಧೋಪಾಯಂ ಸ ವವ್ರೇ ವರಮೀಪ್ಸಿತಮ್ ॥ ೨೯ ॥

ದಕ್ಷಿಣಾಗ್ನಿಂ ಪರಿಚರ ಬ್ರಾಹ್ಮಣೈಃ ಸಮಮೃತ್ವಿಜಮ್ ।
ಅಭಿಚಾರವಿಧಾನೇನ ಸ ಚಾಗ್ನಿಃ ಪ್ರಮಥೈರ್ವೃತಃ ॥ ೩೦ ॥

ಸಾಧಯಿಷ್ಯತಿ ಸಂಕಲ್ಪಮಬ್ರಹ್ಮಣ್ಯೇ ಪ್ರಯೋಜಿತಃ ।
ಇತ್ಯಾದಿಷ್ಟಸ್ತಥಾ ಚಕ್ರೇ ಕೃಷ್ಣಾಯಾಭಿಚರನ್ ವ್ರತೀ ॥ ೩೧ ॥

ತತೋಽಗ್ನಿರುತ್ಥಿತಃ ಕುಂಡಾನ್ಮೂರ್ತಿಮಾನತಿಭೀಷಣಃ ।
ತಪ್ತತಾಮ್ರಶಿಖಾಶ್ಮಶ್ರುರಂಗಾರೋದ್ಗಾರಿಲೋಚನಃ ॥ ೩೨ ॥

ದಂಷ್ಟ್ರೋಗ್ರಭ್ರುಕುಟೀದಂಡಕಠೋರಾಸ್ಯಃ ಸ್ವಜಿಹ್ವಯಾ ।
ಆಲಿಹನ್ಸೃಕ್ವಣೀ ನಗ್ನೋ ವಿಧುನ್ವಂಸ್ತ್ರಿಶಿಖಂ ಜ್ವಲನ್ ॥ ೩೩ ॥

ಪದ್ಭ್ಯಾಂ ತಾಲಪ್ರಮಾಣಾಭ್ಯಾಂ ಕಂಪಯನ್ನವನೀತಲಮ್ ।
ಸೋಽಭ್ಯಧಾವದ್ವೃತೋ ಭೂತೈರ್ದ್ವಾರಕಾಂ ಪ್ರದಹಂದಿಶಃ ॥ ೩೪ ॥

ತಮಾಭಿಚಾರದಹನಮಾಯಾಂತಂ ದ್ವಾರಕೌಕಸಃ ।
ವಿಲೋಕ್ಯ ತತ್ರಸುಃ ಸರ್ವೇ ವನದಾಹೇ ಮೃಗಾ ಯಥಾ ॥ ೩೫ ॥

ಇತ್ತ ಕಾಶಿಯ ಅರಮನೆಯ ಮಹಾದ್ವಾರದಲ್ಲಿ ಬಿದ್ದಿದ್ದ ಕುಂಡಲ ಮಂಡಿತವಾದ ಒಂದು ಮುಂಡವನ್ನು ನೋಡಿ ಜನರು 'ಇದು ಯಾರ ತಲೆಯಾಗಿರಬಹುದು ? ಎಂದು ನಾನಾ ರೀತಿಯಿಂದ ತರ್ಕಿಸತೊಡಗಿದರು. ॥ ೨೫ ॥ ಇದಾದರೋ ಕಾಶಿರಾಜನ ತಲೆ ಎಂದು ತಿಳಿದಾಗ ರಾಣಿಯರು, ರಾಜಕುಮಾರರು, ರಾಜಪರಿವಾರದ ಜನರು ಹಾಗೂ ನಾಗರಿಕರು ಅಳುತ್ತಾ ಅಯ್ಯೋ ! ಸ್ವಾಮಿ ! ನಮ್ಮ ಸರ್ವನಾಶವಾಯಿತೆಂದು ಗೋಳಾಡಿದರು. ॥ ೨೬ ॥ ಕಾಶಿರಾಜನ ಮಗನಾದ ಸುದಕ್ಷಿಣನು ತನ್ನ ತಂದೆಯ ಅಂತ್ಯೇಷ್ಟಿಯನ್ನು ನೆರವೇರಿಸಿ, ನನ್ನ ತಂದೆಯನ್ನು ಕೊಂದಿರುವವನನ್ನು ಕೊಂದೇ ತಂದೆಯ ಋಣದಿಂದ ಮುಕ್ತನಾಗುವೆನು ಎಂದು ಮನಸ್ಸಿನಲ್ಲೇ ನಿಶ್ಚಯಿಸಿಕೊಂಡನು. ಅದರಂತೆ ಅವನು ತನ್ನ ಕುಲ-ಪುರೋಹಿತ ಮತ್ತು ಆಚಾರ್ಯರೊಡನೆ ಅತ್ಯಂತ ಏಕಾಗ್ರತೆಯಿಂದ ಭಗವಂತನಾದ ಶಂಕರನನ್ನು ಆರಾಧಿಸತೊಡಗಿದನು. ॥ ೨೭-೨೮ ॥ ಕಾಶೀ ನಗರದಲ್ಲಿ ಅವನ ಆರಾಧನೆಯಿಂದ ಪ್ರಸನ್ನನಾದ ಭಗವಾನ್ ಶಂಕರನು ಅವನಲ್ಲಿ ವರವನ್ನು ಬೇಡಲು ಹೇಳಿದನು. ಸುದಕ್ಷಿಣನು – 'ನನಗೆ ನನ್ನ ಪಿತೃಘಾತಿಯ ವಧೆಯ ಉಪಾಯವನ್ನು ತಿಳಿಸಬೇಕೆಂಬ ವರವನ್ನು ಬೇಡಿದನು. ॥ ೨೯ ॥ ಪರಶಿವನು ಹೇಳಿದನು – 'ನೀನು ಬ್ರಾಹ್ಮಣರೊಂದಿಗೆ ಸೇರಿ ಯಜ್ಞದ ದೇವತೆಯಾದ ಋತ್ವಿಗ್ರೂಪವಾದ ದಕ್ಷಿಣಾಗ್ನಿಯನ್ನು ಅಭಿಚಾರವಿಧಿಯಿಂದ ಆರಾಧಿಸು. ಇದರಿಂದ ಆ ಅಗ್ನಿಯು ಪ್ರಮಥಗಣಗಳೊಂದಿಗೆ ಪ್ರಕಟವಾಗುತ್ತದೆ. ಬ್ರಾಹ್ಮಣಭಕ್ತರಲ್ಲದವರ ಮೇಲೆ ಅದನ್ನು ಪ್ರಯೋಗಿಸಿದರೆ ಅದು ನಿನ್ನ ಸಂಕಲ್ಪವನ್ನು ಸಿದ್ಧಿಸಿಕೊಡುವುದು. ಭಗವಾನ್ ಶಂಕರನ ಇಂತಹ ಆಜ್ಞೆಯನ್ನು ಪಡೆದುಕೊಂಡು ಸುದಕ್ಷಿಣನು ಅನುಷ್ಠಾನಕ್ಕೆ ಬೇಕಾದ ನಿಯಮಗಳನ್ನು ಸ್ವೀಕರಿಸಿ, ಭಗವಾನ್ ಶ್ರೀಕೃಷ್ಣನಿಗಾಗಿ ಅಭಿಚಾರ (ಮಾರಣದ ಪುರಶ್ಚರಣ)ವನ್ನು ಮಾಡತೊಡಗಿದನು.। ೩೦-೩೧॥ ಅಭಿಚಾರ ಹೋಮವು ಪೂರ್ಣವಾಗುತ್ತಿದ್ದಂತೆ ಯಜ್ಞಕುಂಡದಿಂದ ಅತಿ ಭೀಷಣವಾದ ಅಗ್ನಿಯು ಮೂರ್ತಿಮತ್ತಾಗಿ ಪ್ರಕಟನಾದನು. ಅವನ ಕೂದಲು, ಗಡ್ಡ-ಮೀಸೆಗಳು ಕಾಯಿಸಿದ ತಾಮ್ರದಂತೆ ಕೆಂಪಾಗಿದ್ದವು. ಕಣ್ಣುಗಳು ಕೆಂಡವನ್ನು ಉಗುಳುತ್ತಿವೆಯೋ ಎಂಬಂತೆ ಇತ್ತು. ॥ ೩೨ ॥ ಕೋರೆದಾಡೆಗಳಿದ್ದು ವಕ್ರವಾದ ಹುಬ್ಬುಗಳಿಂದಾಗಿ ಮುಖವು ಉಗ್ರವಾಗಿತ್ತು. ಅವನು ತನ್ನ ನಾಲಿಗೆಯಿಂದ ಕಟವಾಯಿಗಳನ್ನು ನೆಕ್ಕಿಕೊಳ್ಳುತ್ತಿದ್ದನು. ಬೆತ್ತಲಾಗಿದ್ದನು. ಕೈಯಲ್ಲಿ ಬೆಂಕಿಯ ಜ್ವಾಲೆಗಳು ಹೊರಹೊಮ್ಮುತ್ತಿದ್ದ ತ್ರಿಶೂಲವೊಂದನ್ನು ಹಿಡಿದುಕೊಂಡು ತಿರುಗಿಸುತ್ತಾ ಇದ್ದನು. ॥ ೩೩ ॥ ತಾಳೆಮರದಂತೆ ದೊಡ್ಡ-ದೊಡ್ಡ ಕಾಲುಗಳಿದ್ದವು. ಅವನು ನಡೆಯುವಾಗ ಭೂಮಿಯನ್ನು ನಡುಗಿಸುತ್ತಾ, ತನ್ನ ಜ್ವಾಲೆಗಳಿಂದ ಹತ್ತು ದಿಕ್ಕುಗಳನ್ನು ಸುಡುತ್ತಾ ದ್ವಾರಕೆಯ ಕಡೆಗೆ ಧಾವಿಸಿದನು. ಅವನೊಡನೆ ಅನೇಕ ಭೂತಗಳೂ ಇದ್ದವು. ॥ ೩೪ ॥ ಆ ಅಭಿಚಾರಕವಾದ ಅಗ್ನಿಯು ಬರುತ್ತಿರುವುದನ್ನು ನೋಡಿ ದ್ವಾರಕಾನಿವಾಸಿಗಳು ಕಾಡಿನಲ್ಲಿ ಬೆಂಕಿಯು ಹೊತ್ತಿಕೊಂಡಾಗ ಜಿಂಕೆಗಳು ಹೆದರುವಂತೆ ಹೆದರಿಹೋದರು. ॥ ೩೫ ॥

ಅಕ್ಷೈಃ ಸಭಾಯಾಂ ಕ್ರೀಡಂತಂ ಭಗವಂತಂ ಭಯಾತುರಾಃ ।
ತ್ರಾಹಿ ತ್ರಾಹಿ ತ್ರಿಲೋಕೇಶ ವಹ್ನೇಃ ಪ್ರದಹತಃ ಪುರಮ್
॥ ೩೬ ॥

ಶ್ರುತ್ವಾ ತಜ್ಜನವೈಕ್ಲವ್ಯಂ ದೃಷ್ಟ್ವಾ ಸ್ವಾನಾಂ ಚ ಸಾಧ್ವಸಮ್ ।
ಶರಣ್ಯಃ ಸಂಪ್ರಹಸ್ಯಾಹ ಮಾ ಭೈಷ್ಟೇತ್ಯವಿತಾಸ್ಮ್ಯಹಮ್
॥ ೩೭ ॥

ಸರ್ವಸ್ಯಾಂತರ್ಬಹಿಃಸಾಕ್ಷೀ ಕೃತ್ಯಾಂ ಮಾಹೇಶ್ವರೀಂ ವಿಭುಃ ।
ವಿಜ್ಞಾಯ ತದ್ವಿಘಾತಾರ್ಥಂ ಪಾರ್ಶ್ವಸ್ಥಂ ಚಕ್ರಮಾದಿಶತ್
॥ ೩೮ ॥

ತತ್ಸೂರ್ಯಕೋಟಿಪ್ರತಿಮಂ ಸುದರ್ಶನಂ
ಜಾಜ್ವಲ್ಯಮಾನಂ ಪ್ರಲಯಾನಲಪ್ರಭಮ್ ।
ಸ್ವತೇಜಸಾ ಖಂ ಕಕುಭೋಽಥ ರೋದಸೀ
ಚಕ್ರಂ ಮುಕುಂದಾಸ್ತ್ರಮಥಾಗ್ನಿಮಾರ್ದಯತ್ ॥ ೩೯ ॥

ಕೃತ್ಯಾನಲಃ ಪ್ರತಿಹತಃ ಸ ರಥಾಂಗಪಾಣೇ-
ರಸ್ತ್ರೌಜಸಾ ಸ ನೃಪ ಭಗ್ನಮುಖೋ ನಿವೃತ್ತಃ ।
ವಾರಾಣಸೀಂ ಪರಿಸಮೇತ್ಯ ಸುದಕ್ಷಿಣಂ ತಂ
ಸರ್ತ್ವಿಗ್ಜನಂ ಸಮದಹತ್ ಕೃತೋಽಭಿಚಾರಃ ॥ ೪೦ ॥

ಚಕ್ರಂ ಚ ವಿಷ್ಣೋಸ್ತದನುಪ್ರವಿಷ್ಟಂ
ವಾರಾಣಸೀಂ ಸಾಟ್ಟಸಭಾಲಯಾಪಣಾಮ್ ।
ಸಗೋಪುರಾಟ್ಟಾಲಕಕೋಷ್ಠಸಂಕುಲಾಂ
ಸಕೋಶಹಸ್ತ್ಯಶ್ವರಥಾನ್ನಶಾಲಾಮ್ ॥ ೪೧ ॥

ದಗ್ಧ್ವಾ ವಾರಾಣಸೀಂ ಸರ್ವಾಂ ವಿಷ್ಣೋಶ್ಚಕ್ರಂ ಸುದರ್ಶನಮ್ ।
ಭೂಯಃ ಪಾರ್ಶ್ವಮುಪಾತಿಷ್ಠತ್ ಕೃಷ್ಣಸ್ಯಾಕ್ಲಿಷ್ಟಕರ್ಮಣಃ
॥ ೪೨ ॥

ಯ ಏತಚ್ಛ್ರಾವಯೇನ್ಮರ್ತ್ಯ ಉತ್ತಮಶ್ಲೋಕವಿಕ್ರಮಮ್ ।
ಸಮಾಹಿತೋ ವಾ ಶೃಣುಯಾತ್ ಸರ್ವಪಾಪೈಃ ಪ್ರಮುಚ್ಯತೇ
॥ ೪೩ ॥

ಅವರೆಲ್ಲರೂ ಭಯಗೊಂಡು ಭಗವಂತನ ಬಳಿಗೆ ಓಡಿ ಬಂದರು. ಶ್ರೀಕೃಷ್ಣನು ಆಗ ಸಭೆಯಲ್ಲಿ ಕುಳಿತು ಪಗಡೆಯಾಡು ತ್ತಿದ್ದನು. ಅವರೆಲ್ಲರೂ ಪ್ರಾರ್ಥಿಸಿದರು -ತ್ರಿಲೋಕೇಶನೇ! ಭಯಂಕರ ವಾದ ಅಗ್ನಿಯಿಂದ ದ್ವಾರಕಾಪಟ್ಟಣವು ಸುಡುತ್ತಿದೆ. ಕಾಪಾಡು! ಕಾಪಾಡು! ॥ ೩೬ ॥ ದ್ವಾರಕಾವಾಸಿಗಳೂ ಸ್ವಜನರೂ ದುಃಖ ಪಡುತ್ತಿರುವುದನ್ನು ಭಯದಿಂದ ನಡುಗುತ್ತಾ ಕೂಗಿಕೊಳ್ಳುವು ದನ್ನು ನೋಡಿದ ಶರಣಾಗತವತ್ಸಲನಾದ ಭಗವಂತನು ನಗುತ್ತಾ ಹೇಳಿದನು - ಹೆದರಬೇಡಿರಿ. ನಾನು ನಿಮ್ಮೆಲ್ಲರನ್ನು ರಕ್ಷಿಸುತ್ತೇನೆ ॥ ೩೭॥

ಪರೀಕ್ಷಿತನೇ! ಭಗವಂತನು ಸಮಸ್ತರ ಹೊರಗಿನ-ಒಳಗಿನ ವ್ಯಾಪಾರಗಳಿಗೆ ಸಾಕ್ಷಿಯಾಗಿದ್ದಾನೆ. ಇದು ಕಾಶಿಯಿಂದ ಬಂದಿರುವ ಮಾಹೇಶ್ವರೀ ಕೃತ್ಯೆಯಾಗಿದೆ ಎಂದು ತಿಳಿದು ಅವನು ಅದರ ಪ್ರತೀಕಾರಕ್ಕಾಗಿ ಬಳಿಯಲ್ಲೇ ವಿರಾಜಮಾನವಾಗಿದ್ದ ಸುದರ್ಶನ ಚಕ್ರಕ್ಕೆ ಅಪ್ಪಣೆಯಿತ್ತನು. ॥ ೩೮ ॥ ಭಗವಾನ್ ಮುಕುಂದನ ಪ್ರಿಯವಾದ ಅಸ್ತ್ರ ಸುದರ್ಶನ ಚಕ್ರವು ಕೋಟಿ-ಕೋಟಿ ಸೂರ್ಯ ನಂತೆ ತೇಜಸ್ಸುಳ್ಳದ್ದು. ಪ್ರಳಯಕಾಲದ ಅಗ್ನಿಯಂತೆ ಜಾಜ್ವಲ್ಯ ಮಾನವಾಗಿತ್ತು. ಅದರ ತೇಜದಿಂದ ಆಕಾಶ, ದಿಕ್ಕುಗಳು ಮತ್ತು ಅಂತರಿಕ್ಷವು ಬೆಳಗುತ್ತಿದ್ದವು. ಶ್ರೀಕೃಷ್ಣನ ಅಪ್ಪಣೆಯಂತೆ ಅದು ಅಭಿಚಾರ ಅಗ್ನಿಯನ್ನು ಕ್ಷಣಮಾತ್ರದಲ್ಲಿ ಹಿಮ್ಮೆಟ್ಟಿಸಿದನು. । ೩೯ । ರಥಾಂಗಪಾಣಿಯಾದ ಶ್ರೀಕೃಷ್ಣನ ಅಸ್ತ್ರವಾದ ಸುದರ್ಶನ ಚಕ್ರದ ಶಕ್ತಿಯಿಂದ ಕೃತ್ಯಾಗ್ನಿಯು ಮುಖಭಂಗವಾಯಿತು. ಅದರ ತೇಜವು ನಷ್ಟವಾಗಿ, ಶಕ್ತಿಯು ಕುಂದಿಹೋಗಿ ಅದು ಅಲ್ಲಿಂದ ಹಿಂದಿರುಗಿ ಕಾಶಿಗೆ ಬಂದು ಋತ್ವಿಜ ಆಚಾರ್ಯರೊಂದಿಗೆ ಸುದಕ್ಷಿಣನನ್ನು ಸುಟ್ಟು ಬೂದಿಮಾಡಿತು. ಹೀಗೆ ಅಭಿಚಾರವು ಅವನಿಗೆ ಮುಳು ವಾಯಿತು. ॥ ೪೦। ಕೃತ್ಯಾಗ್ನಿಯ ಬೆನ್ನಿಗೇ ಸುದರ್ಶನವು ಕಾಶಿಗೆ ಬಂದು, ವಿಶಾಲವಾದ ಆ ನಗರದ ದೊಡ್ಡ - ದೊಡ್ಡ ಉಪ್ಪರಿಗೆ ಮನೆಗಳನ್ನೂ, ಸಭಾಭವನಗಳನ್ನು, ಅಂಗಡಿಮುಂಗಟ್ಟುಗಳನ್ನು, ನಗರದ್ವಾರಗಳನ್ನೂ, ಗೋಪುರಗಳನ್ನೂ, ಪ್ರಾಕಾರಗಳನ್ನೂ, ಭಂಡಾರಗಳನ್ನೂ, ಆನೆ, ಕುದುರೆ, ರಥಗಳನ್ನು, ಅನ್ನ ಶಾಲೆಗಳನ್ನೂ ಕ್ಷಣಾರ್ಧದಲ್ಲಿ ಬೂದಿಮಾಡಿ, ಮತ್ತೆ ಅದು ಪರಮಾನಂದ ಮಯವಾದ ಲೀಲೆಗಳನ್ನು ಮಾಡುವಂತಹ ಭಗವಾನ್ ಶ್ರೀಕೃಷ್ಣನ ಬಳಿಗೆ ಬಂದು ಸೇರಿಕೊಂಡಿತು. ॥ ೪೧-೪೨ ॥

ಪುಣ್ಯಕೀರ್ತಿಯಾದ ಭಗವಾನ್ ಶ್ರೀಕೃಷ್ಣನ ಈ ಚರಿತ್ರವನ್ನು ಏಕಾಗ್ರತೆಯಿಂದ ಹೇಳುವ, ಕೇಳುವ ಮನುಷ್ಯನು ಎಲ್ಲ ಪಾಪ ಗಳಿಂದ ಮುಕ್ತನಾಗಿ ಹೋಗುತ್ತಾನೆ. ॥ ೪೩ ॥

ಅರವತ್ತಾರನೆಯ ಅಧ್ಯಾಯವು ಮುಗಿಯಿತು. ॥ ೬೬ ॥
ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮ ಸ್ಕಂಧೇ ಉತ್ತರಾರ್ಧೇ
ಪೌಂಡ್ರಕಾದಿವಧೋ ನಾಮ ಷಟ್‌ಷಷ್ಟಿತಮೋಽಧ್ಯಾಯಃ ॥ ೬೬ ॥

ಅರವತ್ತೇಳನೆಯ ಅಧ್ಯಾಯ

ಬಲರಾಮನಿಂದ ದ್ವಿವಿದನ ಸಂಹಾರ

ರಾಜೋವಾಚ

ಭೂಯೋಽಹಂ ಶ್ರೋತುಮಿಚ್ಛಾಮಿ ರಾಮಸ್ಯಾದ್ಭುತಕರ್ಮಣಃ ।
ಅನಂತಸ್ಯಾಪ್ರಮೇಯಸ್ಯ ಯದನ್ಯತ್ಕೃತವಾನ್ ಪ್ರಭುಃ ॥ ೧ ॥

ಪರೀಕ್ಷಿತರಾಜನು ಕೇಳಿದನು - ಪೂಜ್ಯರೇ! ಭಗವಾನ್ ಬಲರಾಮನು ಅದ್ಭುತ ಕಾರ್ಯಗಳನ್ನು ಮಾಡುವವನೂ, ಅನಂತನೂ, ಅಪ್ರಮೇಯನೂ ಆಗಿರುವನು. ಅಂತಹ ಬಲಭದ್ರನು ಮಾಡಿದ ಇತರ ಸಾಹಸ ಕಾರ್ಯಗಳನ್ನು ಕೇಳಲು ಬಯಸುತ್ತೇನೆ. ದಯಮಾಡಿ ಹೇಳಿರಿ. ॥ ೧ ॥

ಶ್ರೀಶುಕ ಉವಾಚ

ನರಕಸ್ಯ ಸಖಾ ಕಶ್ಚಿದ್ದ್ವಿವಿದೋ ನಾಮ ವಾನರಃ ।
ಸುಗ್ರೀವಸಚಿವಃ ಸೋಽಥ ಭ್ರಾತಾ ಮೈಂದಸ್ಯ ವೀರ್ಯವಾನ್ ॥ ೨ ॥

ಸಖ್ಯುಃ ಸೋಽಪಚಿತಿಂ ಕುರ್ವನ್ವಾನರೋ ರಾಷ್ಟ್ರವಿಪ್ಲವಮ್ ।
ಪುರಗ್ರಾಮಾಕರಾನ್ಘೋಷಾನದಹದ್ವಹ್ನಿಮುತ್ಸೃಜನ್ ॥ ೩ ॥

ಕ್ವಚಿತ್ಸ ಶೈಲಾನುತ್ಪಾಟ್ಯ ತೈರ್ದೇಶಾನ್ಸಮಚೂರ್ಣಯತ್ ।
ಆನರ್ತಾನ್ಸುತರಾಮೇವ ಯತ್ರಾಸ್ತೇ ಮಿತ್ರಹಾ ಹರಿಃ ॥ ೪ ॥

ಕ್ವಚಿತ್ಸಮುದ್ರಮಧ್ಯಸ್ಥೋ ದೋರ್ಭ್ಯಾಮುತ್ಕ್ಷಿಪ್ಯ ತಜ್ಜಲಮ್ ।
ದೇಶಾನ್ನಾಗಾಯುತಪ್ರಾಣೋ ವೇಲಾಕೂಲಾನಮಜ್ಜಯತ್ ॥ ೫ ॥

ಆಶ್ರಮಾನೃಷಿಮುಖ್ಯಾನಾಂ ಕೃತ್ವಾ ಭಗ್ನವನಸ್ಪತೀನ್ ।
ಅದೂಷಯಚ್ಛಕೃನ್ಮೂತ್ರೈರಗ್ನೀನ್ವೈತಾನಿಕಾನ್ಖಲಃ ॥ ೬ ॥

ಪುರುಷಾನ್ಯೋಷಿತೋ ದೃಪ್ತಃ ಕ್ಷ್ಮಾಭೃದ್ದ್ರೋಣೀಗುಹಾಸು ಸಃ ।
ನಿಕ್ಷಿಪ್ಯ ಚಾಪ್ಯಧಾಚ್ಛೈಲೈಃ ಪೇಶಸ್ಕಾರೀವ ಕೀಟಕಮ್ ॥ ೭ ॥

ಏವಂ ದೇಶಾನ್ವಿಪ್ರಕುರ್ವನ್ ದೂಷಯಂಶ್ಚ ಕುಲಸ್ತ್ರಿಯಃ ।
ಶ್ರುತ್ವಾ ಸುಲಲಿತಂ ಗೀತಂ ಗಿರಿಂ ರೈವತಕಂ ಯಯೌ ॥ ೮ ॥

ತತ್ರಾಪಶ್ಯದ್ಯದುಪತಿಂ ರಾಮಂ ಪುಷ್ಕರಮಾಲಿನಮ್ ।
ಸುದರ್ಶನೀಯಸರ್ವಾಂಗಂ ಲಲನಾಯೂಥಮಧ್ಯಗಮ್ ॥ ೯ ॥

ಶ್ರೀಶುಕಮುನಿಗಳು ಹೇಳುತ್ತಾರೆ - ಪರೀಕ್ಷಿತ ಮಹಾರಾಜ! ದ್ವಿವಿದನೆಂಬ ಒಬ್ಬ ವಾನರನಿದ್ದನು. ಅವನು ಭೌಮಾಸುರನ ಮಿತ್ರನೂ, ಸುಗ್ರೀವನ ಮಂತ್ರಿಯೂ, ಶಕ್ತಿಶಾಲಿಯೂ, ಮೈಂದನಿಗೆ ಸಹೋದರನೂ ಆಗಿದ್ದನು. ॥ ೨ ॥ ತನ್ನ ಮಿತ್ರನಾದ ಭೌಮಾಸುರನನ್ನು ಶ್ರೀಕೃಷ್ಣನು ಸಂಹರಿಸಿದನೆಂಬ ವಾರ್ತೆಯನ್ನು ಕೇಳುತ್ತಲೇ ದ್ವಿವಿದನು ತನ್ನ ಮಿತ್ರನ ಮಿತ್ರಋಣವನ್ನು ತೀರಿಸಬೇಕೆಂದು ರಾಷ್ಟ್ರದಲ್ಲಿ ವಿಪ್ಲವವನ್ನುಂಟುಮಾಡಲು ತೊಡಗಿದನು. ಆ ವಾನರನು ನಗರಗಳನ್ನು, ಪಟ್ಟಣಗಳನ್ನೂ, ಹಳ್ಳಿಗಳನ್ನೂ, ಗೋಪಾಲಕರ ಹಟ್ಟಿಗಳನ್ನು ಸುಡಲು ಪ್ರಾರಂಭಿಸಿದನು. ॥ ೩ ॥ ಕೆಲವೊಮ್ಮೆ ಅವನು ದೊಡ್ಡ-ದೊಡ್ಡ ಪರ್ವತಗಳನ್ನು ಕಿತ್ತು ಊರುಗಳ ಮೇಲೆ, ಗ್ರಾಮಗಳ ಮೇಲೆ ಎಸೆದು ಪುಡಿ-ಪುಡಿ ಮಾಡಿಬಿಡುತ್ತಿದ್ದನು. ವಿಶೇಷವಾಗಿ ಅವನು ಆನರ್ತ ದೇಶದಲ್ಲಿಯೇ ಇಂತಹ ಉತ್ಪಾತಗಳನ್ನು ಮಾಡುತ್ತಿದ್ದನು. ಏಕೆಂದರೆ, ತನ್ನ ಮಿತ್ರಹಂತಕನಾದ ಶ್ರೀಕೃಷ್ಣನು ಅಲ್ಲೇ ವಾಸಿಸುತ್ತಿದ್ದನು. ॥ ೪ ॥ ದ್ವಿವಿದನಲ್ಲಿ ಹತ್ತು ಸಾವಿರ ಆನೆಗಳ ಬಲವಿತ್ತು. ಕೆಲವೊಮ್ಮೆ ಆ ದುಷ್ಟನು ಸಮುದ್ರದಲ್ಲಿ ನಿಂತು ಕೈಗಳಿಂದ ನೀರನ್ನು ಮೊಗೆದು ಸಮುದ್ರತಟದಲ್ಲಿದ್ದ ಊರುಗಳನ್ನೇ ಮುಳುಗಿಸಿ ಬಿಡುತ್ತಿದ್ದನು. ॥ ೫ ॥ ಆ ದುಷ್ಟನು ದೊಡ್ಡ ದೊಡ್ಡ ಋಷಿಮುನಿಗಳ ಆಶ್ರಮದ ಸುಂದರವಾದ ಲತಾ-ವನಸ್ಪತಿಗಳನ್ನು ಕಿತ್ತು ಹಾಕುತ್ತಿದ್ದನು. ಅವರ ಯಜ್ಞಕುಂಡಗಳಲ್ಲಿ ಮೂತ್ರ ಪುರೀಷಗಳನ್ನು ವಿಸರ್ಜಿಸಿ ಅಗ್ನಿಗಳನ್ನು ಕೆಡಿಸುತ್ತಿದ್ದನು. ॥ ೬ ॥ ಕೀಟದ ಹುಳುವು ಬೇರೊಂದು ಕ್ರಿಮಿಯನ್ನು ತಂದು ತನ್ನ ಗೂಡಿನಲ್ಲಿಟ್ಟು ಮುಚ್ಚಿಬಿಡುವಂತೆಯೇ ಆ ಮದೋನ್ಮತ್ತನಾದ ವಾನರನು ಸ್ತ್ರೀಯರನ್ನು, ಪುರುಷರನ್ನು ಎತ್ತಿಕೊಂಡು ಹೋಗಿ ಪರ್ವತಗಳ ಗುಹೆಗಳಲ್ಲಿ ಕೂಡಿಹಾಕಿ ಬಾಗಿಲಿಗೆ ಬಂಡೆಗಳನ್ನು ಮುಚ್ಚಿ ಬಿಡುತ್ತಿದ್ದನು. ॥ ೭ ॥ ಹೀಗೆ ಅವನು ದೇಶವಾಸಿಗಳನ್ನು ತಿರಸ್ಕರಿಸುತ್ತಾ ಕುಲೀನ ಸ್ತ್ರೀಯರನ್ನು ಕೆಡಿಸುತ್ತಿದ್ದನು. ಒಂದು ದಿನ ಆ ದುಷ್ಟನು ಕರ್ಣಾನಂದಕರವಾದ ಸಂಗೀತವನ್ನು ಕೇಳಿ ರೈವತಕ ಪರ್ವತಕ್ಕೆ ಹೋದನು. ॥ ೮ ॥

ಅಲ್ಲಿ ಯದುವಂಶ ಶಿರೋಮಣಿ ಬಲರಾಮನು ಸುಂದರವಾದ ಯುವತಿಯರೊಂದಿಗೆ ವಿಹರಿಸುತ್ತಿರುವುದನ್ನು ಅವನು ನೋಡಿದನು. ಬಲರಾಮನ ಪ್ರತಿಯೊಂದು ಅಂಗಾಂಗಗಳು ಸುಂದರವೂ, ದರ್ಶನೀಯವೂ ಆಗಿದ್ದು ಕೊರಳಲ್ಲಿ ಕಮಲ ಪುಷ್ಪಗಳ ಮಾಲೆಯು ಶೋಭಿಸುತ್ತಿತ್ತು. ॥ ೯ ॥

ಗಾಯಂತಂ ವಾರುಣೀಂ ಪೀತ್ವಾ ಮದವಿಹ್ವಲಲೋಚನಮ್ ।
ವಿಭ್ರಾಜಮಾನಂ ವಪುಷಾ ಪ್ರಭಿನ್ನಮಿವ ವಾರಣಮ್ ॥ ೧೦ ॥

ದುಷ್ಟಃ ಶಾಖಾಮೃಗಃ ಶಾಖಾ ಮಾರೂಢಃ ಕಂಪಯನ್ ದ್ರುಮಾನ್ ।
ಚಕ್ರೇ ಕಿಲಕಿಲಾಶಬ್ದ ಮಾತ್ಮಾನಂ ಸಂಪ್ರದರ್ಶಯನ್ ॥ ೧೧ ॥

ತಸ್ಯ ಧಾರ್ಷ್ಟ್ಯಂ ಕಪೇರ್ವೀಕ್ಷ್ಯ ತರುಣ್ಯೋ ಜಾತಿಚಾಪಲಾಃ ।
ಹಾಸ್ಯಪ್ರಿಯಾ ವಿಜಹಸುರ್ಬಲದೇವಪರಿಗ್ರಹಾಃ ॥ ೧೨ ॥

ತಾ ಹೇಲಯಾಮಾಸ ಕಪಿರ್ಭ್ರೂಕ್ಷೇಪೈಃ ಸಮ್ಮುಖಾದಿಭಿಃ ।
ದರ್ಶಯನ್ ಸ್ವಗುದಂ ತಾಸಾಂ ರಾಮಸ್ಯ ಚ ನಿರೀಕ್ಷತಃ ॥ ೧೩ ॥

ತಂ ಗ್ರಾವ್ಣಾ ಪ್ರಾಹರತ್ಕ್ರುದ್ಧೋ ಬಲಃ ಪ್ರಹರತಾಂ ವರಃ ।
ಸ ವಂಚಯಿತ್ವಾ ಗ್ರಾವಾಣಂ ಮದಿರಾಕಲಶಂ ಕಪಿಃ ॥ ೧೪ ॥

ಗೃಹೀತ್ವಾ ಹೇಲಯಾಮಾಸ ಧೂರ್ತಸ್ತಂ ಕೋಪಯನ್ಹಸನ್ ।
ನಿರ್ಭಿದ್ಯ ಕಲಶಂ ದುಷ್ಟೋ ವಾಸಾಂಸ್ಯಾಸ್ಫಾಲಯದ್ಬಲಮ್ ॥ ೧೫ ॥

ಕದರ್ಥೀಕೃತ್ಯ ಬಲವಾನ್ವಿಪ್ರಚಕ್ರೇ ಮದೋದ್ಧತಃ ।
ತಂ ತಸ್ಯಾವಿನಯಂ ದೃಷ್ಟ್ವಾ ದೇಶಾಂಶ್ಚ ತದುಪದ್ರುತಾನ್ ॥ ೧೬ ॥

ಕ್ರುದ್ಧೋ ಮುಸಲಮಾದತ್ತ ಹಲಂ ಚಾರಿಜಿಘಾಂಸಯಾ ।
ದ್ವಿವಿದೋಽಪಿ ಮಹಾವೀರ್ಯಃ ಶಾಲಮುದ್ಯಮ್ಯ ಪಾಣಿನಾ ॥ ೧೭ ॥

ಅಭ್ಯೇತ್ಯ ತರಸಾ ತೇನ ಬಲಂ ಮೂರ್ಧನ್ಯತಾಡಯತ್ ।
ತಂ ತು ಸಂಕರ್ಷಣೋ ಮೂರ್ಧ್ನಿ ಪತಂತಮಚಲೋ ಯಥಾ ॥ ೧೮ ॥

ಪ್ರತಿಜಗ್ರಾಹ ಬಲವಾನ್ಸುನಂದೇನಾಹನಚ್ಚ ತಮ್ ।
ಮುಸಲಾಹತಮಸ್ತಿಷ್ಕೋ ವಿರೇಜೇ ರಕ್ತಧಾರಯಾ ॥ ೧೯ ॥

ಗಿರಿರ್ಯಥಾ ಗೈರಿಕಯಾ ಪ್ರಹಾರಂ ನಾನುಚಿಂತಯನ್ ।
ಪುನರನ್ಯಂ ಸಮುತ್ಕ್ಷಿಪ್ಯ ಕೃತ್ವಾ ನಿಷ್ಪತ್ರಮೋಜಸಾ ॥ ೨೦ ॥

ತೇನಾಹನತ್ಸುಸಂಕ್ರುದ್ಧಸ್ತಂ ಬಲಃ ಶತಧಾಚ್ಛಿನತ್ ।
ತತೋಽನ್ಯೇನ ರುಷಾ ಜಘ್ನೇ ತಂ ಚಾಪಿ ಶತಧಾಚ್ಛಿನತ್ ॥ ೨೧ ॥

ಅವನು ಮಧುಪಾನ ಮಾಡಿ ಮಧುರವಾಗಿ ಸಂಗೀತವನ್ನು ಹಾಡುತ್ತಿದ್ದನು. ಅವನ ಕಣ್ಣುಗಳು ಆನಂದೋನ್ಮಾದದಿಂದ ವಿಹ್ವಲವಾಗಿದ್ದವು. ಅವನ ಶರೀರವು ಮತ್ತಗಜದಂತೆ ಶೋಭಾಯಮಾನವಾಗಿತ್ತು. ॥ ೧೦ ॥ ಆ ದುಷ್ಟವಾನರನು ಬಲರಾಮನಿದ್ದಲ್ಲಿಗೆ ಒಂದು ಮರದ ಮೇಲೆ ಹತ್ತಿ ಕೊಂಬೆಗಳನ್ನು ರಭಸದಿಂದ ಅಲ್ಲಾಡಿಸುತ್ತಿದ್ದನು. ಕೆಲವೊಮ್ಮೆ ಸ್ತ್ರೀಯರ ಮುಂದೆ ನಿಂತು ಕಿಲ-ಕಿಲಶಬ್ದ ಮಾಡುತ್ತಾ ತಾನಿರುವುದನ್ನು ತೋರಿಸಿಕೊಳ್ಳುವನು. ॥ ೧೧ ॥ ಯುವತಿಯರು ಸ್ವಾಭಾವಿಕವಾಗಿ ಚಂಚಲೆಯರೂ ಹಾಸ್ಯಪ್ರಿಯರೂ ಆಗಿರುತ್ತಾರೆ. ದ್ವಿವಿದನ ಕಪಿಚೇಷ್ಟೆಗಳನ್ನು ಕಂಡು ಬಲರಾಮನ ಪ್ರೇಯಸಿಯರು ಪಕ-ಪಕನೆ ನಗತೊಡಗಿದರು. ॥ ೧೨ ॥ ಈಗ ಆ ವಾನರನು ಬಲರಾಮನು ನೋಡುತ್ತಿರುವಂತೆಯೇ ಸ್ತ್ರೀಯರನ್ನು ಹುಬ್ಬುಕುಣಿಸುತ್ತಾ, ಗರ್ಜಿಸುತ್ತಾ, ಹುಬ್ಬುಗಳನ್ನು ಹಾರಿಸುತ್ತಾ, ಅಣಕಿಸುತ್ತಿದ್ದನು. ಕೆಲವೊಮ್ಮೆ ಅವರಿಗೆ ಗುದವನ್ನು ತೋರಿಸಿ ಅವಹೇಳನ ಮಾಡುತ್ತಿದ್ದನು. ॥ ೧೩ ॥ ವೀರಶಿರೋಮಣಿ ಬಲರಾಮನು ಅವನ ಇಂತಹ ಚೇಷ್ಟೆಗಳನ್ನು ನೋಡಿ ಕ್ರೋಧಿತನಾಗಿ ಅವನ ಮೇಲೆ ಒಂದು ಕಲ್ಲನ್ನು ಎಸೆದನು. ಆದರೆ ದ್ವಿವಿದನು ಅದನ್ನು ತಪ್ಪಿಸಿಕೊಂಡು, ಬಲರಾಮನ ಬಳಿಯಿದ್ದ ಮಧುಕಲಶವನ್ನೆತ್ತಿಕೊಂಡು ಹೋಗಿ ಬಲರಾಮನನ್ನು ಅಣಕಿಸಿದನು. ಆ ಧೂರ್ತನು ಮಧುಕಲಶವನ್ನು ಒಡೆದು ಹಾಕಿದನು ಮತ್ತು ಸ್ತ್ರೀಯರ ವಸ್ತ್ರಗಳನ್ನು ಹರಿದು ಹಾಕಿದನು. ಈಗ ಅವನು ಗಹ-ಗಹಿಸಿ ನಗುತ್ತಾ ಬಲರಾಮನನ್ನು ಕ್ರೋಧಿತಗೊಳಿಸತೊಡಗಿದನು. ॥ ೧೪ ೧೫ ॥ ಪರೀಕ್ಷಿತನೇ! ಈ ಪ್ರಕಾರವಾಗಿ ಬಲಿಷ್ಠನೂ, ಮದೋನ್ಮತ್ತನೂ ಆದ ದ್ವಿವಿದನು ಬಲರಾಮನನ್ನು ಅಣಕಿಸುತ್ತಾ, ತಿರಸ್ಕರಿಸತೊಡಗಿದಾಗ, ಬಲರಾಮನು ಅವನ ಉದ್ಧಟತನವನ್ನು ನೋಡಿ, ಅವನಿಂದ ಪೀಡಿಸಲ್ಪಟ್ಟ ದೇಶಗಳ ದುರ್ದಶೆಯ ಕುರಿತು ವಿಚಾರಮಾಡಿ ಆ ಶತ್ರುವನ್ನು ಕೊಂದು ಹಾಕುವುದೆಂದು ಕ್ರೋಧಗೊಂಡು ಹಲಾಯುಧವನ್ನು ಎತ್ತಿದನು. ಮಹಾವೀರ್ಯನಾದ ದ್ವಿವಿದನು ಸಾಲವೃಕ್ಷವೊಂದನ್ನು ಕಿತ್ತುಕೊಂಡು ರಭಸದಿಂದ ಬಲರಾಮನ ತಲೆಯಮೇಲೆ ಪ್ರಹರಿಸಿದನು. ಪರ್ವತದಂತೆ ಅಚಲನಾಗಿ ನಿಂತುಕೊಂಡಿದ್ದ ಬಲರಾಮನು ತನ್ನ ತಲೆಯ ಮೇಲೆ ಬೀಳಲಿದ್ದ ಮರವನ್ನು ಹಿಡಿದನು. ಬಳಿಕ ಸುನಂದವೆಂಬ ಮುಸಲಾಯುಧದಿಂದ ದ್ವಿವಿದನನ್ನು ಪ್ರಹರಿಸಿದನು. ಮುಸಲಾಯುಧದ ಪೆಟ್ಟಿನಿಂದ ದ್ವಿವಿದನ ತಲೆಯು ಒಡೆದು ರಕ್ತದ ಧಾರೆಯೇ ಹರಿಯಿತು. ಆಗ ಅವನು ಗೈರಿಕಾದಿ ಧಾತುಗಳಿಂದ ಕೂಡಿದ ಪರ್ವತದಂತೆ ಕಾಣುತ್ತಿದ್ದನು. ತಲೆಯೊಡೆದು ರಕ್ತವು ಹರಿಯುತ್ತಿದ್ದರೂ ಅದನ್ನು ಲೆಕ್ಕಿಸದೆ ಕೋಪಗೊಂಡು ಇನ್ನೊಂದು ಮರವನ್ನು ಕಿತ್ತು ತನ್ನ ಭುಜಬಲದಿಂದ ಅದನ್ನು ಪತ್ರರಹಿತವನ್ನಾಗಿ ಮಾಡಿ ಅದರಿಂದ ಬಲರಾಮನನ್ನು ಜೋರಾಗಿ ಪ್ರಹರಿಸಿದನು. ಬಲರಾಮನು ಆ ವೃಕ್ಷವನ್ನು ಮುಸಲಾಯುಧದಿಂದ ನೂರು ಚೂರುಗಳನ್ನಾಗಿ ಮಾಡಿದನು. ಮತ್ತೆ ದ್ವಿವಿದನು ಮತ್ತೊಂದು ವೃಕ್ಷವನ್ನೆತ್ತಿಕೊಂಡು ಸಿಟ್ಟಿನಿಂದ ಪ್ರಯೋಗಿಸಿದನು. ಅದನ್ನು ಬಲರಾಮನು ಚೂರು-ಚೂರು ಮಾಡಿದನು. ॥ ೧೬-೨೧ ॥

ಏವಂ ಯುಧ್ಯನ್ಭಗವತಾ ಭಗ್ನೇ ಭಗ್ನೇ ಪುನಃ ಪುನಃ ।
ಆಕೃಷ್ಯ ಸರ್ವತೋ ವೃಕ್ಷಾನ್ನಿರ್ವೃಕ್ಷಮಕರೋದ್ವನಮ್ ॥ ೨೨ ॥

ತತೋಽಮುಂಚಚ್ಛಿಲಾವರ್ಷಂ ಬಲಸ್ಯೋಪರ್ಯಮರ್ಷಿತಃ ।
ತತ್ಸರ್ವಂ ಚೂರ್ಣಯಾಮಾಸ ಲೀಲಯಾ ಮುಸಲಾಯುಧಃ ॥ ೨೩ ॥

ಸ ಬಾಹೂ ತಾಲಸಂಕಾಶೌ ಮುಷ್ಟೀಕೃತ್ಯ ಕಪೀಶ್ವರಃ ।
ಆಸಾದ್ಯ ರೋಹಿಣೀಪುತ್ರಂ ತಾಭ್ಯಾಂ ವಕ್ಷಸ್ಯರೂರುಜತ್ ॥ ೨೪ ॥

ಯಾದವೇಂದ್ರೋಽಪಿ ತಂ ದೋರ್ಭ್ಯಾಂ ತ್ಯಕ್ತ್ವಾ ಮುಸಲಲಾಂಗಲೇ ।
ಜತ್ರಾವಭ್ಯರ್ದಯತ್ಕ್ರುದ್ಧಃ ಸೋಽಪತದ್ರುಧಿರಂ ವಮನ್ ॥ ೨೫ ॥

ಚಕಂಪೇ ತೇನ ಪತತಾ ಸಟಂಕಃ ಸವನಸ್ಪತಿಃ ।
ಪರ್ವತಃ ಕುರುಶಾರ್ದೂಲ ವಾಯುನಾ ನೌರಿವಾಂಭಸಿ ॥ ೨೬ ॥

ಜಯಶಬ್ದೋ ನಮಃಶಬ್ದಃ ಸಾಧು ಸಾಧ್ವಿತಿ ಚಾಂಬರೇ ।
ಸುರಸಿದ್ಧಮುನೀಂದ್ರಾಣಾಮಾಸೀತ್ಕುಸುಮವರ್ಷಿಣಾಮ್ ॥ ೨೭ ॥

ಏವಂ ನಿಹತ್ಯ ದ್ವಿವಿದಂ ಜಗದ್ವ್ಯತಿಕರಾವಹಮ್ ।
ಸಂಸ್ತೂಯಮಾನೋ ಭಗವಾನ್ ಜನೈಃ ಸ್ವಪುರಮಾವಿಶತ್ ॥ ೨೮ ॥

ಹೀಗೆ ಯುದ್ಧಮಾಡುತ್ತಿದ್ದಾಗ ಒಂದು ಮರ ಪುಡಿ-ಪುಡಿಯಾಗಿ ಹೋದರೆ ಮತ್ತೊಂದು, ಇನ್ನೊಂದು ಹೀಗೆ ಮರಗಳ ಮೇಲೆ ಮರಗಳನ್ನು ಕಿತ್ತು ಪ್ರಹರಿಸುವನು. ಬಲರಾಮನು ಪುಡಿ ಮಾಡುವನು ಆಗ ಆ ಪರ್ವತವು ವೃಕ್ಷರಹಿತವಾಯಿತು. ॥ ೨೨ ॥ ಮರಗಳೇ ಸಿಗದಿದ್ದಾಗ ದ್ವಿವಿದನ ಕ್ರೋಧವು ಇನ್ನೂ ಹೆಚ್ಚಿತು. ಆಗ ಕೆರಳಿ ಆತನು ಬಲರಾಮನ ಮೇಲೆ ದೊಡ್ಡ-ದೊಡ್ಡ ಬಂಡೆಗಳ ಮಳೆಯನ್ನೇ ಸುರಿಸಿದನು. ಬಲಭದ್ರನು ಲೀಲಾಜಾಲವಾಗಿ ತನ್ನ ಮುಸಲಾಯುಧದಿಂದ ಅವೆಲ್ಲವನ್ನೂ ನುಚ್ಚು-ನೂರಾಗಿಸಿಬಿಟ್ಟನು. ॥ ೨೩ ॥ ಬಂಡೆಗಳೂ ಮುಗಿದು ಹೋದಾಗ ಕಪೀಶ್ವರನು ತಾಳೆಯ ಮರಕ್ಕಿಂತ ಉದ್ದವಾಗಿದ್ದ ತನ್ನ ಕೈಗಳ ಮುಷ್ಟಿ ಬಿಗಿದುಕೊಂಡು ಬಲರಾಮನ ಬಳಿಗೆ ಹೋಗಿ ಅವನ ಎದೆಗೆ ಪ್ರಹರಿಸಿದನು. ॥ ೨೪ ॥ ಇದರಿಂದ ಪರಮ ಕ್ರುದ್ಧನಾದ ಯದುವಂಶ ಶಿರೋಮಣಿ ಬಲರಾಮನು ಮುಸಲಾಯುಧ ಮತ್ತು ಹಲಾಯುಧಗಳಿಂದ ದ್ವಿವಿದನ ಹೆಗಲಿಗೆ ಬಲವಾಗಿ ಪ್ರಹರಿಸಿದನು. ಒಡನೆಯೇ ಕಪೀಶ್ವರನು ರಕ್ತವನ್ನು ಕಾರುತ್ತಾ ಕೆಳಗೆಬಿದ್ದನು. ॥ ೨೫ ॥ ಪರೀಕ್ಷಿತನೇ! ಬಿರುಗಾಳಿ ಬಂದಾಗ ಸಮುದ್ರದಲ್ಲಿರುವ ನಾವೆಯು ಅಲ್ಲಾಡುವಂತೆ ಅವನು ನೆಲಕ್ಕೆ ಬೀಳುತ್ತಲೇ ವೃಕ್ಷಗಳ ಸಹಿತವಾಗಿ ರೈವತಕ ಪರ್ವತವು ನಡುಗಿಹೋಯಿತು. ॥ ೨೬ ॥ ಆಕಾಶದಲ್ಲಿ ದೇವತೆಗಳು ಬಲರಾಮನಿಗೆ ಜಯವಾಗಲೀ, ಜಯವಾಗಲೀ ಎಂದು ಜಯಘೋಷ ಮಾಡಿದರು. ಸಿದ್ಧರು ನಮೋ ನಮಃ ಎಂದು ನಮಸ್ಕರಿಸಿದರು. ಋಷಿ-ಮುನಿಗಳು ಭಲೇ! ಬಲರಾಮ! ಭಲೇ! ಎಂದು ಪ್ರಶಂಸಿಸುತ್ತಾ ಅವನ ಮೇಲೆ ಹೂಮಳೆಗರೆದರು. ॥ ೨೭ ॥ ಪರೀಕ್ಷಿತನೇ! ಜಗತ್ತಿನಲ್ಲಿ ಭಾರೀ ಉಪದ್ರವನ್ನುಂಟುಮಾಡಿದ ದ್ವಿವಿದನನ್ನು ಭಗವಾನ್ ಬಲರಾಮನು ಸಂಹರಿಸಿ ದ್ವಾರಕೆಗೆ ಹಿಂದಿರುಗಿದನು. ಆ ಸಮಯದಲ್ಲಿ ಪುರಜನರು-ಪರಿಜನರು ಅವನನ್ನು ವಿಧ-ವಿಧವಾಗಿ ಕೊಂಡಾಡಿದರು. ॥ ೨೮ ॥

ಅರವತ್ತೇಳನೆಯ ಅಧ್ಯಾಯವು ಮುಗಿಯಿತು. ॥ ೬೭ ॥
ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮಸ್ಕಂಧೇ ಉತ್ತರಾರ್ಧೇ
ದ್ವಿವಿದವಧೋ ನಾಮ ಸಪ್ತಷಷ್ಟಿತಮೋಽಧ್ಯಾಯಃ ॥ ೬೭ ॥

ಅರವತ್ತೆಂಟನೆಯ ಅಧ್ಯಾಯ

ಕೌರವರ ಮೇಲೆ ಬಲರಾಮನ ಕೋಪ ಮತ್ತು ಸಾಂಬನ ವಿವಾಹ

ಶ್ರೀಶುಕ ಉವಾಚ

ದುರ್ಯೋಧನಸುತಾಂ ರಾಜನ್ ಲಕ್ಷ್ಮಣಾಂ ಸಮಿತಿಂಜಯಃ ।
ಸ್ವಯಂವರಸ್ಥಾಮಹರತ್ಸಾಂಬೋ ಜಾಂಬವತೀಸುತಃ ॥ ೧ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಎಲೈ ಪರೀಕ್ಷಿತನೇ! ಹಲವಾರು ವೀರರನ್ನು ಗೆದ್ದಿರುವ ಮಹಾಶೂರನಾದ ಜಾಂಬವತಿಯ ಮಗನಾದ ಸಾಂಬನು ಸ್ವಯಂವರ ಮಂಟಪದಿಂದ ಕೌರವನ ಮಗಳಾದ ಲಕ್ಷ್ಮಣಾ ಎಂಬುವಳನ್ನು ಅಪಹರಿಸಿಕೊಂಡು ಹೋದನು. ॥ ೧ ॥

ಕೌರವಾಃ ಕುಪಿತಾ ಊಚುರ್ದುರ್ವಿನೀತೋಽಯಮರ್ಭಕಃ ।
ಕದರ್ಥೀಕೃತ್ಯ ನಃ ಕನ್ಯಾಮಕಾಮಾಮಹರದ್ಬಲಾತ್
॥ ೨ ॥

ಬಧ್ನೀತೇಮಂ ದುರ್ವಿನೀತಂ ಕಿಂ ಕರಿಷ್ಯಂತಿ ವೃಷ್ಣಯಃ ।
ಯೇಽಸ್ಮತ್ಪ್ರಸಾದೋಪಚಿತಾಂ ದತ್ತಾಂ ನೋ ಭುಂಜತೇ ಮಹೀಮ್
॥ ೩ ॥

ನಿಗೃಹೀತಂ ಸುತಂ ಶ್ರುತ್ವಾ ಯದ್ಯೇಷ್ಯಂತೀಹ ವೃಷ್ಣಯಃ ।
ಭಗ್ನದರ್ಪಾಃ ಶಮಂ ಯಾಂತಿ ಪ್ರಾಣಾ ಇವ ಸುಸಂಯತಾಃ
॥ ೪ ॥

ಇತಿ ಕರ್ಣಃ ಶಲೋ ಭೂರಿರ್ಯಜ್ಞಕೇತುಃ ಸುಯೋಧನಃ ।
ಸಾಂಬಮಾರೇಭಿರೇ ಬದ್ಧುಂ ಕುರುವೃದ್ಧಾನುಮೋದಿತಾಃ
॥ ೫ ॥

ದೃಷ್ಟ್ವಾನುಧಾವತಃ ಸಾಂಬೋ ಧಾರ್ತರಾಷ್ಟ್ರಾನ್ಮಹಾರಥಃ ।
ಪ್ರಗೃಹ್ಯ ರುಚಿರಂ ಚಾಪಂ ತಸ್ಥೌ ಸಿಂಹ ಇವೈಕಲಃ
॥ ೬ ॥

ತಂ ತೇ ಜಿಘೃಕ್ಷವಃ ಕ್ರುದ್ಧಾಸ್ತಿಷ್ಠ ತಿಷ್ಠೇತಿ ಭಾಷಿಣಃ ।
ಆಸಾದ್ಯ ಧನ್ವಿನೋ ಬಾಣೈಃ ಕರ್ಣಾಗ್ರಣ್ಯಃ ಸಮಾಕಿರನ್
॥ ೭ ॥

ಸೋಽಪವಿದ್ಧಃ ಕುರುಶ್ರೇಷ್ಠ ಕುರುಭಿರ್ಯದುನಂದನಃ ।
ನಾಮೃಷ್ಯತ್ತದಚಿಂತ್ಯಾರ್ಭಃ ಸಿಂಹಃ ಕ್ಷುದ್ರಮೃಗೈರಿವ
॥ ೮ ॥

ವಿಸ್ಫೂರ್ಜ್ಯ ರುಚಿರಂ ಚಾಪಂ ಸರ್ವಾನ್ವಿವ್ಯಾಧ ಸಾಯಕೈಃ ।
ಕರ್ಣಾದೀನ್ ಷಡ್ರಥಾನ್ ವೀರಾಂಸ್ತಾವದ್ಭಿರ್ಯುಗಪತ್ಪೃಥಕ್
॥ ೯ ॥

ಚತುರ್ಭಿಶ್ಚತುರೋ ವಾಹಾನೇಕೈಕೇನ ಚ ಸಾರಥೀನ್ ।
ರಥಿನಶ್ಚ ಮಹೇಷ್ವಾಸಾಂಸ್ತಸ್ಯ ತತ್ತೇಽಭ್ಯಪೂಜಯನ್
॥ ೧೦ ॥

ತಂ ತು ತೇ ವಿರಥಂ ಚಕ್ರುಶ್ಚತ್ವಾರಶ್ಚತುರೋ ಹಯಾನ್ ।
ಏಕಸ್ತು ಸಾರಥಿಂ ಜಘ್ನೇ ಚಿಚ್ಛೇದಾನ್ಯಃ ಶರಾಸನಮ್
॥ ೧೧ ॥

ಇದರಿಂದ ಕುಪಿತರಾದ ಕೌರವರು ಮನಬಂದಂತೆ ಮಾತನಾಡುತ್ತಾ 'ಈ ಬಾಲಕನು ಎಷ್ಟು ಉದ್ಧಟನಾಗಿದ್ದಾನೆ; ನೋಡಿದಿರಾ? ನಮ್ಮನ್ನು ಲೆಕ್ಕಿಸದೆ ನಮ್ಮ ಕನ್ಯೆಯನ್ನು ಅಪಹರಿಸಿಕೊಂಡು ಹೋಗಿದ್ದಾನೆ. ಅಲ್ಲದೆ ನಮ್ಮ ಕನ್ಯೆಯೂ ಇವನನ್ನು ಪ್ರೀತಿಸುತ್ತಿರಲಿಲ್ಲ. ॥ ೨ ॥ ಆದ್ದರಿಂದ ದುರ್ವಿನೀತನಾದ ಇವನನ್ನು ಈಗಲೇ ಬಂಧಿಸಿರಿ. ವೃಷ್ಣಿವಂಶೀಯರಾದರೂ ಏನು ಮಾಡುವರು? ನೋಡೋಣ. ಅವರಾದರೋ ನಾವು ಕೊಟ್ಟಿರುವ ಧನ-ಧಾನ್ಯಗಳಿಂದ ಸಮೃದ್ಧವಾದ ರಾಜ್ಯವನ್ನು ನಮ್ಮ ಕೃಪೆಯಿಂದಲೇ ಆಳುತ್ತಿದ್ದಾರೆ. ॥ ೩ ॥ ತಮ್ಮ ಪುತ್ರನ ಬಂಧನವನ್ನು ಕೇಳಿ ವೃಷ್ಣಿಗಳೇನಾದರೂ ಇಲ್ಲಿಗೆ ಬಂದರೆ ನಾವುಗಳು ಅವರ ದರ್ಪವನ್ನು ಪುಡಿ-ಪುಡಿಮಾಡಿ ಬಿಡುವೆವು. ಸಂಯಮಿಗಳಾದ ಜನರ ಇಂದ್ರಿಯಗಳು ಪ್ರಾಣಾಯಾಮದಿಂದ ಶಾಂತವಾಗುವಂತೆ ಅವರ ಅಹಂಕಾರವು ಶಾಂತವಾಗುವುದು. ॥ ೪ ॥ ಕರ್ಣ, ಶಲ, ಭೂರಿಶ್ರವ, ಯಜ್ಞಕೇತು, ಸುಯೋಧನ ಮೊದಲಾದ ವೀರರು ಹೀಗೆ ಯೋಚಿಸಿ, ಕುರುವೃದ್ಧರ ಅನುಮತಿಯನ್ನು ಪಡೆದು ಸಾಂಬನನ್ನು ಬಂಧಿಸಲು ಅನುವಾದರು. ॥ ೫ ॥

ಧೃತರಾಷ್ಟ್ರನ ಪುತ್ರರು ತನ್ನನ್ನು ಹಿಂಬಾಲಿಸಿ ಬರುತ್ತಿದ್ದಾರೆಂದು ನೋಡಿದಾಗ ಮಹಾರಥಿಯಾದ ಸಾಂಬನು ಸುಂದರವಾದ ಧನುಸ್ಸನ್ನು ಸಿದ್ಧಪಡಿಸಿಕೊಂಡು ಸಿಂಹದಂತೆ ಏಕಾಕಿಯಾಗಿ ಕೌರವರನ್ನು ಎದುರಿಸಿ ನಿಂತನು. ॥ ೬ ॥ ಕರ್ಣನನ್ನು ಮುಂದಾಳಾಗಿಟ್ಟುಕೊಂಡು ಕೌರವವೀರರು ಧನುಸ್ಸನ್ನೆತ್ತಿಕೊಂಡು ಸಾಂಬನ ಬಳಿಗೆ ಬಂದು, ಅವನನ್ನು ಹಿಡಿಯಲಿಕ್ಕಾಗಿ ನಿಲ್ಲು! ನಿಲ್ಲು! ಎಂದು ಕೂಗುತ್ತಾ ಪರಮಕ್ರುದ್ಧರಾಗಿ ಅವನ ಮೇಲೆ ಬಾಣಗಳ ಮಳೆಯನ್ನೇ ಸುರಿಸಿದರು. ॥ ೭ ॥ ಪರೀಕ್ಷಿತನೇ! ಯದುನಂದನ ಸಾಂಬನು ಅಚಿಂತ್ಯಮಹಿಮೆಯುಳ್ಳ ಭಗವಾನ್ ಶ್ರೀಕೃಷ್ಣನ ಪುತ್ರನಾಗಿದ್ದನು. ಕೌರವರ ಪ್ರಹಾರಗಳಿಂದ ಅವನು ಕ್ಷುದ್ರಮೃಗಗಳಿಂದ ಆಕ್ರಮಿಸಲ್ಪಟ್ಟ ಸಿಂಹದಂತೆ ಕೆರಳಿ ಪರಮಕ್ರುದ್ಧನಾದನು. ॥ ೮ ॥ ಸಾಂಬನು ತನ್ನ ಸುಂದರವಾದ ಧನುಸ್ಸನ್ನು ಟಂಕಾರಮಾಡಿ ಬೇರೆ-ಬೇರೆ ರಥಗಳಲ್ಲಿದ್ದ ಕರ್ಣನೇ ಮೊದಲಾದ ಆರು ವೀರರ ಮೇಲೆ ಒಂದೇ ಬಾರಿಗೆ ಆರಾರು ಬಾಣಗಳನ್ನು ಪ್ರತ್ಯೇಕ-ಪ್ರತ್ಯೇಕವಾಗಿ ಪ್ರಯೋಗಿಸಿದನು. ॥ ೯ ॥ ಅವುಗಳಲ್ಲಿ ನಾಲ್ಕು-ನಾಲ್ಕು ಬಾಣಗಳು ಕುದುರೆಗಳ ಮೇಲೂ, ಒಂದೊಂದು ಬಾಣಗಳನ್ನು ಸಾರಥಿಗಳ ಮೇಲೂ, ಒಂದೊಂದು ಬಾಣವನ್ನು ಆ ಆರುಮಂದಿ ಧನುಷ್ಮಂತರಾದ ಮಹಾರಥಿಗಳ ಮೇಲೂ ಪ್ರಯೋಗಿಸಿದನು. ಸಾಂಬನ ಈ ಅದ್ಭುತವಾದ ಕರಕೌಶಲ್ಯವನ್ನು ಕಂಡು ವೀರರೂ ಕೂಡ ಮುಕ್ತಕಂಠದಿಂದ ಅವನನ್ನು ಪ್ರಶಂಸಿಸಿದರು. ॥ ೧೦ ॥ ಬಳಿಕ ಕುಪಿತರಾದ ಆ ಆರುಮಂದಿ ವೀರರು ಒಟ್ಟಿಗೆ ಸೇರಿ ಸಾಂಬನನ್ನು ರಥಹೀನನನ್ನಾಗಿಸಿದರು. ನಾಲ್ಕು ವೀರರು ಒಂದೊಂದು ಬಾಣದಿಂದ ಅವನ ಕುದುರೆಗಳನ್ನು ಕೊಂದು ಹಾಕಿದರು. ಒಬ್ಬನು ಸಾರಥಿಯನ್ನು ಕೊಂದು ಮತ್ತೊಬ್ಬನು ಸಾಂಬನ ಧನುಸ್ಸನ್ನು ತುಂಡರಿಸಿದನು. ॥ ೧೧ ॥

ತಂ ಬದ್ಧ್ವಾ ವಿರಥೀಕೃತ್ಯ ಕೃಚ್ಛ್ರೇಣ ಕುರವೋ ಯುಧಿ ।
ಕುಮಾರಂ ಸ್ವಸ್ಯ ಕನ್ಯಾಂ ಚ ಸ್ವಪುರಂ ಜಯಿನೋಽವಿಶನ್ ॥ ೧೨ ॥

ಈ ಪ್ರಕಾರವಾಗಿ ಕೌರವರು ಯುದ್ಧದಲ್ಲಿ ಬಹಳ ಕಷ್ಟಪಟ್ಟು ಸಾಂಬನನ್ನು ರಥವಿಹೀನನನ್ನಾಗಿಸಿ ಬಂಧಿಸಿದರು. ಅನಂತರ ಅವನನ್ನೂ ಹಾಗೂ ತಮ್ಮ ಮಗಳಾದ ಲಕ್ಷ್ಮಣೆಯನ್ನೂ ಕರಕೊಂಡು ಹಸ್ತಿನಾವತಿಗೆ ಮರಳಿದರು. ॥ ೧೨ ॥

ತಚ್ಛ್ರುತ್ವಾ ನಾರದೋಕ್ತೇನ ರಾಜನ್ ಸಂಜಾತಮನ್ಯವಃ ।
ಕುರೂನ್ ಪ್ರತ್ಯುದ್ಯಮಂ ಚಕ್ರುರುಗ್ರಸೇನಪ್ರಚೋದಿತಾಃ ॥ ೧೩ ॥

ಸಾಂತ್ವಯಿತ್ವಾ ತು ತಾನ್ ರಾಮಃ ಸಂನದ್ಧಾನ್ ವೃಷ್ಣಿಪುಂಗವಾನ್ ।
ನೈಚ್ಛತ್ಕುರೂಣಾಂ ವೃಷ್ಣೀನಾಂ ಕಲಿಂ ಕಲಿಮಲಾಪಹಃ ॥ ೧೪ ॥

ಜಗಾಮ ಹಾಸ್ತಿನಪುರಂ ರಥೇನಾದಿತ್ಯವರ್ಚಸಾ ।
ಬ್ರಾಹ್ಮಣೈಃ ಕುಲವೃದ್ಧೈಶ್ಚ ವೃತಶ್ಚಂದ್ರ ಇವ ಗ್ರಹೈಃ ॥ ೧೫ ॥

ಪರೀಕ್ಷಿತನೇ ! ನಾರದ ಮಹರ್ಷಿಗಳಿಂದ ಈ ಸಮಾಚಾರವನ್ನು ಕೇಳಿದ ಯಾದವವೀರರು ಪರಮಕ್ರುದ್ಧರಾದರು. ಅವರು ಉಗ್ರಸೇನ ಮಹಾರಾಜರ ಪ್ರೇರಣೆಯಂತೆ ಕೌರವರೊಡನೆ ಯುದ್ಧಮಾಡಲು ಸಿದ್ಧರಾದರು. ॥ ೧೩ ॥ ಕಲಹ ಪ್ರಧಾನವಾದ ಕಲಿಯುಗದ ಸಮಸ್ತ ಪಾಪಗಳನ್ನು ಹೋಗಲಾಡಿಸುವುದರಲ್ಲಿ ಅತ್ಯಂತ ಸಮರ್ಥನಾದ ಬಲರಾಮನಿಗೆ ವೃಷ್ಣಿ-ಕೌರವರೊಳಗೆ ಯುದ್ಧವಾಗುವುದು ಇಷ್ಟವಾಗಲಿಲ್ಲ. ಯದುವಂಶೀಯರು ಯುದ್ಧದ ಸಿದ್ಧತೆಮಾಡಿಕೊಂಡಿದ್ದರು. ಅವರನ್ನು ಸಮಾಧಾನ ಪಡಿಸಿ, ಸೂರ್ಯನ ತೇಜಸ್ಸಿಗೆ ಸಮಾನವಾದ ರಥದಲ್ಲಿ ಕುಳಿತು ಗ್ರಹಗಳಿಂದ ಪರಿವೃತನಾದ ಚಂದ್ರನಂತೆ ಬ್ರಾಹ್ಮಣರಿಂದಲೂ, ಕುಲವೃದ್ಧರಿಂದಲೂ ಕೂಡಿಕೊಂಡು ಹಸ್ತಿನಾವತಿಗೆ ಪ್ರಯಾಣ ಮಾಡಿದನು. ॥ ೧೪-೧೫ ॥

ಗತ್ವಾ ಗಜಾಹ್ವಯಂ ರಾಮೋ ಬಾಹ್ಯೋಪವನಮಾಸ್ಥಿತಃ ।
ಉದ್ಧವಂ ಪ್ರೇಷಯಾಮಾಸ ಧೃತರಾಷ್ಟ್ರಂ ಬುಭುತ್ಸಯಾ ॥ ೧೬ ॥

ಹಸ್ತಿನಾಪುರಕ್ಕೆ ತಲುಪಿ ನಗರದ ಹೊರ ಉದ್ಯಾನದಲ್ಲಿ ತಂಗಿದ ಬಲರಾಮನು ಕೌರವರ ಆಶಯ ವೇನೆಂಬುದನ್ನು ತಿಳಿಯಲು ಉದ್ಧವನನ್ನು ಧೃತರಾಷ್ಟ್ರನ ಬಳಿಗೆ ಕಳಿಸಿಕೊಟ್ಟನು. ॥ ೧೬ ॥

ಸೋಽಭಿವಂದ್ಯಾಂಬಿಕಾಪುತ್ರಂ
ಭೀಷ್ಮಂ ದ್ರೋಣಂ ಚ ಬಾಹ್ಲಿಕಮ್ ।
ದುರ್ಯೋಧನಂ ಚ ವಿಧಿವದ್ರಾ-
ಮಮಾಗತಮಬ್ರವೀತ್ ॥ ೧೭ ॥

ಉದ್ಧವನು ಕೌರವರ ರಾಜಸಭೆಗೆ ಹೋಗಿ ಧೃತರಾಷ್ಟ್ರ, ಭೀಷ್ಮ, ದ್ರೋಣ, ಬಾಹ್ಲೀಕ, ದುರ್ಯೋಧನ ಇವರನ್ನು ಯಥಾಯೋಗ್ಯವಾಗಿ ಅಭಿನಂದಿಸಿ ಬಲರಾಮನು ಬಂದಿರುವ ವಾರ್ತೆಯನ್ನು ತಿಳಿಸಿದನು. ॥ ೧೭ ॥ ತಮಗೆ ಪರಮ ಹಿತೈಷಿಯೂ, ಪ್ರಿಯತಮನೂ ಆದ ಬಲರಾಮನ ಬರವನ್ನು ಕೇಳಿ ಕೌರವರು ಆನಂದಗೊಂಡರು. ಅವರು ಉದ್ಧವನನ್ನು ಸತ್ಕರಿಸಿ, ಬಲರಾಮನನ್ನು ಸ್ವಾಗತಿಸಲು ಮಂಗಳ ದ್ರವ್ಯಗಳನ್ನೆತ್ತಿಕೊಂಡು ಅವನಿದ್ದಲ್ಲಿಗೆ ಬಂದರು. ॥ ೧೮ ॥ ಬಲರಾಮನನ್ನು ಕಂಡು ಕೌರವ ಪ್ರಮುಖರು ಅವನಿಗೆ ಯಥಾವಿಧಿಯಾಗಿ ಗೋವನ್ನು ಅರ್ಪಿಸಿ, ಅರ್ಘ್ಯ ಪಾದ್ಯಾದಿಗಳಿಂದ ಅವನನ್ನು ಸತ್ಕರಿಸಿದರು. ಅವನ ಪ್ರಭಾವವನ್ನು ಚೆನ್ನಾಗಿ ತಿಳಿದಿದ್ದ ಕೌರವ ಪ್ರಮುಖರು ಬಲರಾಮನಿಗೆ ತಲೆಬಾಗಿ ನಮಸ್ಕರಿಸಿದರು. ॥ ೧೯ ॥ ಅನಂತರ ಅವರೆಲ್ಲರೂ ಪರಸ್ಪರ ಕುಶಲಪ್ರಶ್ನೆಗಳನ್ನು ಮಾಡಿ ಜ್ಞಾತಿ-ಬಂಧುಗಳಲ್ಲಿ ಪ್ರತಿಯೊಬ್ಬರ ಯೋಗ-ಕ್ಷೇಮವನ್ನು ವಿಚಾರಿಸಿದ ಬಳಿಕ ಬಲರಾಮನು ಗಂಭೀರವಾಗಿ ದಿಟ್ಟತನದಿಂದಲೇ ಹೀಗೆ ನುಡಿದನು. ॥ ೨೦ ॥ ಸರ್ವಸಮರ್ಥನಾದ ಉಗ್ರಸೇನ ಮಹಾರಾಜನು ನಿಮಗೆ ಆಜ್ಞೆಯನ್ನು ಕಳಿಸಿರುವನು. ನೀವೆಲ್ಲರೂ ಏಕಾಗ್ರತೆಯಿಂದಲೂ ಸಾವಧಾನತೆಯಿಂದಲೂ ಕೇಳಿರಿ ಹಾಗೂ ವಿಳಂಬವಿಲ್ಲದೆ ಅದನ್ನು ಪಾಲಿಸಿರಿ. ॥ ೨೧ ॥ ಉಗ್ರಸೇನನು ಹೇಳಿರುವನು - ಹಲವಾರು ಮಂದಿ ಮಹಾರಥರು ಒಟ್ಟಿಗೆ ಸೇರಿ ಏಕಾಕಿಯಾಗಿದ್ದ ಧಾರ್ಮಿಕನಾದ ಸಾಂಬನನ್ನು ಅಧರ್ಮದಿಂದ ಪರಾಜಯಗೊಳಿಸಿ ಬಂಧಿಸಿದಿರಿ. ಬಂಧುಗಳಲ್ಲಿ ಪರಸ್ಪರ ಐಕ್ಯಮತ್ಯವಿರಬೇಕೆಂಬ ಆಶಯ

ತೇಽತಿಪ್ರೀತಾಸ್ತಮಾಕರ್ಣ್ಯ ಪ್ರಾಪ್ತಂ ರಾಮಂ ಸುಹೃತ್ತಮಮ್ ।
ತಮರ್ಚಯಿತ್ವಾಭಿಯಯುಃ ಸರ್ವೇ ಮಂಗಲಪಾಣಯಃ ॥ ೧೮ ॥

ತಂ ಸಂಗಮ್ಯ ಯಥಾನ್ಯಾಯಂ ಗಾಮರ್ಘ್ಯಂ ಚ ನ್ಯವೇದಯನ್ ।
ತೇಷಾಂ ಯೇ ತತ್ಪ್ರಭಾವಜ್ಞಾಃ ಪ್ರಣೇಮುಃ ಶಿರಸಾ ಬಲಮ್ ॥ ೧೯ ॥

ಬಂಧೂನ್ ಕುಶಲಿನಃ ಶ್ರುತ್ವಾ ಪೃಷ್ಟ್ವಾ ಶಿವಮನಾಮಯಮ್ ।
ಪರಸ್ಪರಮಥೋ ರಾಮೋ ಬಭಾಷೇಽವಿಕ್ಲವಂ ವಚಃ ॥ ೨೦ ॥

ಉಗ್ರಸೇನಃ ಕ್ಷಿತೀಶೇಶೋ ಯದ್ವ ಆಜ್ಞಾಪಯತ್ಪ್ರಭುಃ ।
ತದವ್ಯಗ್ರಧಿಯಃ ಶ್ರುತ್ವಾ ಕುರುಧ್ವಂ ಮಾವಿಲಂಬಿತಮ್ ॥ ೨೧ ॥

ಯದ್ಯೂಯಂ ಬಹವಸ್ತ್ವೇಕಂ ಜಿತ್ವಾಧರ್ಮೇಣ ಧಾರ್ಮಿಕಮ್ ।
ಅಬಧ್ನೀತಾಥ ತನ್ಮೃಷ್ಯೇ ಬಂಧೂನಾಮೈಕ್ಯಕಾಮ್ಯಯಾ ॥ ೨೨ ॥

ವೀರ್ಯಶೌರ್ಯಬಲೋನ್ನದ್ಧಮಾತ್ಮಶಕ್ತಿಸಮಂ ವಚಃ ।
ಕುರವೋ ಬಲದೇವಸ್ಯ ನಿಶಮ್ಯೋಚುಃ ಪ್ರಕೋಪಿತಾಃ ॥ ೨೩ ॥

ಅಹೋ ಮಹಚ್ಚಿತ್ರಮಿದಂ ಕಾಲಗತ್ಯಾ ದುರತ್ಯಯಾ ।
ಆರುರುಕ್ಷತ್ಯುಪಾನದ್ವೈ ಶಿರೋ ಮುಕುಟಸೇವಿತಮ್ ॥ ೨೪ ॥

ಏತೇ ಯೌನೇನ ಸಂಬದ್ಧಾಃ ಸಹಶಯ್ಯಾಸನಾಶನಾಃ ।
ವೃಷ್ಣಯಸ್ತುಲ್ಯತಾಂ ನೀತಾ ಅಸ್ಮದ್ದತ್ತನೃಪಾಸನಾಃ ॥ ೨೫ ॥

ಚಾಮರವ್ಯಜನೇ ಶಂಖಮಾತಪತ್ರಂ ಚ ಪಾಂಡುರಮ್ ।
ಕಿರೀಟಮಾಸನಂ ಶಯ್ಯಾಂ ಭುಂಜಂತ್ಯಸ್ಮದುಪೇಕ್ಷಯಾ ॥ ೨೬ ॥

ಅಲಂ ಯದೂನಾಂ ನರದೇವಲಾಂಛನೈ-
ರ್ದಾತುಃ ಪ್ರತೀಪೈಃ ಫಣಿನಾಮಿವಾಮೃತಮ್ ।
ಯೇಽಸ್ಮತ್ಪ್ರಸಾದೋಪಚಿತಾ ಹಿ ಯಾದವಾ
ಆಜ್ಞಾಪಯಂತ್ಯದ್ಯ ಗತತ್ರಪಾ ಬತ ॥ ೨೭ ॥

ಕಥಮಿಂದ್ರೋಽಪಿ ಕುರುಭಿರ್ಭೀಷ್ಮದ್ರೋಣಾರ್ಜುನಾದಿಭಿಃ ।
ಅದತ್ತಮವರುಂಧೀತ ಸಿಂಹಗ್ರಸ್ತಮಿವೋರಣಃ ॥ ೨೮ ॥

ಶ್ರೀಶುಕ ಉವಾಚ

ಜನ್ಮಬಂಧುಶ್ರಿಯೋನ್ನದ್ಧಮದಾಸ್ತೇ ಭರತರ್ಷಭ ।
ಆಶ್ರಾವ್ಯ ರಾಮಂ ದುರ್ವಾಚ್ಯಮಸಭ್ಯಾಃ ಪುರಮಾವಿಶನ್ ॥ ೨೯ ॥

ದಿಂದ ಈ ತಿರಸ್ಕಾರವನ್ನು ಇಷ್ಟರವರೆಗೆ ನಾವು ಸಹಿಸಿಕೊಂಡೆವು. ಸಾಂಬನನ್ನು ಕೂಡಲೇ ಬಿಡುಗಡೆ ಮಾಡಿ ನವವಧುವಿನೊಡನೆ ಅವನನ್ನು ಕಳಿಸಿಕೊಡದೆ ಇದ್ದರೆ ನಮ್ಮ ಸ್ಥಿರತೆಯು ಹೀಗೆಯೇ ಉಳಿಯಲಾರದು. ॥ ೨೨ ॥

ಪರೀಕ್ಷಿತನೇ! ಬಲರಾಮನ ವಾಣಿಯು ಆತನ ವೀರ್ಯ ಶೌರ್ಯ-ಬಲ-ಪೌರುಷ-ಉತ್ಸಾಹ ಮತ್ತು ಶಕ್ತಿಗಳಿಗೆ ಅನುರೂಪವಾಗಿತ್ತು. ಬಲರಾಮನ ನಿಷ್ಠುರವಾದ ಈ ಮಾತನ್ನು ಕೇಳಿ ಕುಪಿತರಾದ ಕೌರವರು ಆತನಲ್ಲಿ ಹೇಳಿದರು - ॥ ೨೩ ॥ ನಿಶ್ಚಯವಾಗಿಯೂ ಇದು ಎಂತಹ ಆಶ್ಚರ್ಯದ ಸಂಗತಿ! ಮೀರಿನಡೆಯಲು ಅಸಾಧ್ಯವಾದ ಕಾಲಗತಿಯಿಂದಾಗಿ ಕಾಲಿನಲ್ಲಿರಬೇಕಾದ ಪಾದರಕ್ಷೆಯು ಕಿರೀಟವಿರುವ ತಲೆಯನ್ನೇರಲು ಹವಣಿಸುತ್ತಿದೆಯಲ್ಲ! ॥ ೨೪ ॥ ಯದುವಂಶೀಯರು ರಾಜಮನೆತನಕ್ಕೆ ಸೇರಿದವರಲ್ಲವಾದರೂ ನಾವು ಇವರೊಡನೆ ವಿವಾಹ ಸಂಬಂಧವನ್ನು ಬೆಳೆಸಿದೆವು. ಇದರಿಂದ ಇವರು ನಮ್ಮೊಂದಿಗೆ ಮಲಗುವುದು-ಕುಳಿತುಕೊಳ್ಳುವುದು ಮತ್ತು ಸಹಪಂಕ್ತಿಭೋಜನವನ್ನು ಮಾಡತೊಡಗಿದರು. ಇವರಿಗೆ ನಾವೇ ರಾಜಸಿಂಹಾಸನವನ್ನಿತ್ತು ನಮಗೆ ಸಮಾನರನ್ನಾಗಿಸಿದೆವು. ॥ ೨೫ ॥ ಈ ಯದುವಂಶೀಯರು ರಾಜೋಚಿತವಾದ ಚಾಮರ, ವ್ಯಜನ, ಶಂಖ, ಶ್ವೇತಚ್ಛತ್ರ, ಕಿರೀಟ, ರಾಜಸಿಂಹಾಸನ, ರಾಜೋಚಿತವಾದ ಹಂಸತೂಲಿಕಾತಲ್ಪ - ಹೀಗೆ ಎಲ್ಲವನ್ನು ಉಪಭೋಗಿಸುತ್ತಿದ್ದಾರೆ. ನಾವುಗಳು ಬೇಕೆಂತಲೇ ಈ ವಿಷಯದಲ್ಲಿ ಉಪೇಕ್ಷೆಯಿಂದ ಇದ್ದೇವೆ. ॥ ೨೬ ॥ ಇನ್ನು ಸಾಕು! ಸಾಕು! ಯದುವಂಶೀಯರಲ್ಲಿ ರಾಜಚಿಹ್ನೆಗಳು ಇರುವುದು ಅವಶ್ಯಕತೆಯಿಲ್ಲ. ಅದನ್ನು ಕಿತ್ತುಕೊಳ್ಳಲೇಬೇಕು. ಹಾವಿಗೆ ಹಾಲುಣಿಸುವವನಿಗೇ ಘಾತಕವಾಗುವಂತೆಯೇ ನಾವು ಕೊಟ್ಟಿರುವ ರಾಜಚಿಹ್ನೆಗಳನ್ನು ಪಡೆದು ಈ ಯದುವಂಶೀಯರು ನಮಗೆ ಪ್ರತಿಕಾರ ಮಾಡುತ್ತಿದ್ದಾರಲ್ಲ! ಅಯ್ಯೋ! ನಮ್ಮ ಅನುಗ್ರಹದಿಂದಲೇ ಅಭಿವೃದ್ಧಿಯನ್ನು ಹೊಂದಿದ ಇವರು ನಿರ್ಲಜ್ಜರಾಗಿ ನಮಗೆ ಆಜ್ಞೆ ಮಾಡುವ ಮಟ್ಟಕ್ಕೆ ಬಂದಿರುವರಲ್ಲ! ॥ ೨೭ ॥ ಸಿಂಹದ ಪಾಲನ್ನು ಕುರಿಮರಿಯು ಹೇಗೆ ಕಿತ್ತುಕೊಳ್ಳಲಾರದೋ ಹಾಗೆಯೇ ಭೀಷ್ಮ ದ್ರೋಣಾರ್ಜುನರೇ ಮೊದಲಾದ ಕೌರವರು ಬಿಟ್ಟುಕೊಡದೇ ಇರುವ ವಸ್ತುವನ್ನು ದೇವೇಂದ್ರನಾದರೂ ಹೇಗೆ ತಾನೇ ಕಸಿದುಕೊಂಡು ಹೋದಾನು? ಹಾಗಿರುವಾಗ ಸಾಂಬನನ್ನು ಬಿಡಿಸಿಕೊಂಡು ಹೋಗುವುದು ಯಾದವರಿಗೆ ಹೇಗೆ ಸಾಧ್ಯವಾಗುವುದು? ॥ ೨೮ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿದ್ರಾಜನೇ! ಕೌರವರು ತಮ್ಮ ಕುಲೀನತೆಯಿಂದ, ತಮಗಿದ್ದ ಮಹಾಶೂರರಾದ ಬಂಧುವರ್ಗದವರಿಂದ, ಬಲದಿಂದ, ಸಂಪತ್ತಿನಿಂದ ಮದೋನ್ಮತ್ತರಾಗಿ ಬಿಟ್ಟಿರುವರು. ಅವರು ಸಾಧಾರಣ ಶಿಷ್ಟಾಚಾರವನ್ನು ಲಕ್ಷಿಸದೆ ಅಸಭ್ಯವರ್ತನೆಯಿಂದ ಕೂಡಿದವರಾಗಿ ಬಲರಾಮನೊಂದಿಗೆ ಇಂತಹ ದುರ್ವಚನಗಳನ್ನಾಡಿ ಹಸ್ತಿನಾಪುರಕ್ಕೆ ಹಿಂದಿರುಗಿದರು. ॥ ೨೯ ॥

ದೃಷ್ಟ್ವಾ ಕುರೂಣಾಂ ದೌಃಶೀಲ್ಯಂ ಶ್ರುತ್ವಾವಾಚ್ಯಾನಿ ಚಾಚ್ಯುತಃ ।
ಅವೋಚತ್ಕೋಪಸಂರಬ್ಧೋ ದುಷ್ಪ್ರೇಕ್ಷ್ಯಃ ಪ್ರಹಸನ್ಮುಹುಃ
॥ ೩೦ ॥

ನೂನಂ ನಾನಾಮದೋನ್ನದ್ಧಾಃ ಶಾಂತಿಂ ನೇಚ್ಛಂತ್ಯಸಾಧವಃ ।
ತೇಷಾಂ ಹಿ ಪ್ರಶಮೋ ದಂಡಃ ಪಶೂನಾಂ ಲಗುಡೋ ಯಥಾ
॥ ೩೧ ॥

ಅಹೋ ಯದೂನ್ಸುಸಂರಬ್ಧಾನ್ ಕೃಷ್ಣಂ ಚ ಕುಪಿತಂ ಶನೈಃ ।
ಸಾಂತ್ವಯಿತ್ವಾಹಮೇತೇಷಾಂ ಶಮಮಿಚ್ಛನ್ನಿಹಾಗತಃ
॥ ೩೨ ॥

ತ ಇಮೇ ಮಂದಮತಯಃ ಕಲಹಾಭಿರತಾಃ ಖಲಾಃ ।
ತಂ ಮಾಮವಜ್ಞಾಯ ಮುಹುರ್ದುರ್-
ಭಾಷಾನ್ ಮಾನಿನೋಽಬ್ರುವನ್
॥ ೩೩ ॥

ನೋಗ್ರಸೇನಃ ಕಿಲ ವಿಭುರ್ಭೋಜವೃಷ್ಣ್ಯಂಧಕೇಶ್ವರಃ ।
ಶಕ್ರಾದಯೋ ಲೋಕಪಾಲಾ ಯಸ್ಯಾದೇಶಾನುವರ್ತಿನಃ
॥ ೩೪ ॥

ಸುಧರ್ಮಾಽಽಕ್ರಮ್ಯತೇ ಯೇನ ಪಾರಿಜಾತೋಽಮರಾಂಘ್ರಿಪಃ ।
ಆನೀಯ ಭುಜ್ಯತೇ ಸೋಽಸೌ ನ ಕಿಲಾಧ್ಯಾಸನಾರ್ಹಣಃ
॥ ೩೫ ॥

ಯಸ್ಯ ಪಾದಯುಗಂ ಸಾಕ್ಷಾತ್ ಶ್ರೀರುಪಾಸ್ತೇಽಖಿಲೇಶ್ವರೀ ।
ಸ ನಾರ್ಹತಿ ಕಿಲ ಶ್ರೀಶೋ ನರದೇವಪರಿಚ್ಛದಾನ್
॥ ೩೬ ॥

ಯಸ್ಯಾಂಘ್ರಿಪಂಕಜರಜೋಽಖಿಲಲೋಕಪಾಲೈ-
ರ್ಮೌಲ್ಯುತ್ತಮೈರ್ಧೃತಮುಪಾಸಿತತೀರ್ಥತೀರ್ಥಮ್ ।
ಬ್ರಹ್ಮಾ ಭವೋಽಹಮಪಿ ಯಸ್ಯ ಕಲಾಃ ಕಲಾಯಾಃ
ಶ್ರೀಶ್ಚೋದ್ವಹೇಮ ಚಿರಮಸ್ಯ ನೃಪಾಸನಂ ಕ್ವ ॥ ೩೭ ॥

ಭುಂಜತೇ ಕುರುಭಿರ್ದತ್ತಂ ಭೂಖಂಡಂ ವೃಷ್ಣಯಃ ಕಿಲ ।
ಉಪಾನಹಃ ಕಿಲ ವಯಂ ಸ್ವಯಂ ತು ಕುರವಃ ಶಿರಃ
॥ ೩೮ ॥

ಬಲರಾಮನು ಕೌರವರ ದುಷ್ಟತೆಯನ್ನೂ ಅಶಿಷ್ಟತೆಯನ್ನು ನೋಡಿ, ದುರ್ವಚನಗಳನ್ನು ಕೇಳಿ ಅವನು ಕಿರಿ ಕೋಪದಿಂದ ಕಿಡಿ-ಕಿಡಿಯಾದನು. ಅವನನ್ನು ನೋಡಲೂ ಕೂಡ ಆಗುತ್ತಿರಲಿಲ್ಲ. ಪುನಃ ಪುನಃ ಗಟ್ಟಿಯಾಗಿ ನಗುತ್ತಾ ಹೇಳತೊಡಗಿದನು - ॥ ೩೦ ॥ ನಿಜ! ಅಸತ್ಪುರುಷರು ಕುಲಮದ, ಧನಮದ, ವೀರ್ಯಮದ ಮೊದಲಾದ ಮದಗಳಿಂದ ಕೊಬ್ಬಿದವರಾಗಿ ಶಾಂತಿಯನ್ನು ಬಯಸುವುದಿಲ್ಲ. ಪಶುಗಳನ್ನು ಹತೋಟಿಯಲ್ಲಿಡಲು ದೊಣ್ಣೆಯೇ ಆವಶ್ಯಕವಿರುವಂತೆ, ಇಂತಹ ದುಷ್ಟರನ್ನು ಹತೋಟಿಗೆ ತರಲು ದಂಡೋಪಾಯವೇ ಸೂಕ್ತವಾದುದು. ॥ ೩೧ ॥ ನೋಡಿರಲ್ಲ! ಎಲ್ಲ ಯದುವೀರರೂ ಮತ್ತು ಶ್ರೀಕೃಷ್ಣನೂ ಕೂಡ ಕೋಪಗೊಂಡು ಯುದ್ಧಕ್ಕೆ ಸಿದ್ಧರಾಗಿದ್ದರು. ನಾನು ಅವರೆಲ್ಲರನ್ನು ಸಮಾಧಾನಪಡಿಸಿ, ಶಾಂತಿಯನ್ನು ಬಯಸಿ ಇಲ್ಲಿಗೆ ಬಂದೆನು. ॥ ೩೨ ॥ ಆದರೆ ಈ ಕೌರವರು ಶಾಂತಿಪ್ರಿಯರಲ್ಲ, ಮಂದಬುದ್ಧಿಯವರು. ಕಲಹಪ್ರಿಯರು, ನೀಚರು, ದುರಭಿಮಾನಿಗಳು. ನನ್ನನ್ನು ತಿರಸ್ಕರಿಸುತ್ತಾ ಕೆಟ್ಟ-ಕೆಟ್ಟ ಮಾತುಗಳನ್ನೇ ಆಡಿದರು. ॥ ೩೩ ॥ ಇಂದ್ರನೇ ಮೊದಲಾದ ಲೋಕಪಾಲರು ಯಾರ ಆದೇಶವನ್ನು ಶಿರಸಾವಹಿಸಿಕೊಂಡು ಪಾಲಿಸುವರೋ ಅಂತಹ ಭೋಜ, ವೃಷ್ಣಿ, ಅಂಧಕವಂಶೀಯರಿಗೆ ರಾಜನಾದ ಉಗ್ರಸೇನ ಮಹಾರಾಜರು ರಾಜರಲ್ಲವಂತೆ! ಇದೆಂತಹ ಮಾತು! ॥ ೩೪ ॥ ಯಾರು ಸುಧರ್ಮಾ ಎಂಬ ದೇವಸಭೆಯನ್ನಾಕ್ರಮಿಸಿ, ದೇವವೃಕ್ಷವಾದ ಪಾರಿಜಾತವನ್ನು ಕಿತ್ತು ತಂದು ಅದರ ಫಲವನ್ನಲ್ಲಿ ಅನುಭವಿಸುತ್ತಿರುವನೋ ಅಂತಹ ಭಗವಾನ್ ಶ್ರೀಕೃಷ್ಣನು ರಾಜಸಿಂಹಾಸನಕ್ಕೆ ಅಧಿಕಾರಿಯಲ್ಲವಂತೆ! ಇರಲಿ. ॥ ೩೫ ॥ ಸಮಸ್ತ ಜಗತ್ತಿಗೂ ಒಡೆಯಳಾದ ಭಗವತಿ ಲಕ್ಷ್ಮೀದೇವಿಯೇ ಯಾರ ಚರಣಕಮಲಗಳನ್ನು ಉಪಾಸಿಸುತ್ತಿರುವಳೋ ಅಂತಹ ಲಕ್ಷ್ಮೀಪತಿಯಾದ ಭಗವಾನ್ ಶ್ರೀಕೃಷ್ಣನಿಗೆ ರಾಜೋಚಿತವಾದ ಛತ್ರ, ಚಾಮರಾದಿಗಳು ಸಲ್ಲಿಸುವುದಿಲ್ಲವಂತೆ! ॥ ೩೬ ॥ ಸರಿಯಪ್ಪಾ! ಸರಿ, ಯಾರ ಚರಣಕಮಲಗಳ ಧೂಳಿಯು ಸತ್ಪುರುಷರಿಂದ ಸೇವಿಸಲ್ಪಡುವ ಗಂಗೆಯೇ ಮೊದಲಾದ ತೀರ್ಥಗಳಿಗೂ ತೀರ್ಥರೂಪವಾಗಿರುವುದೋ ಅಂತಹ ಪಾದಧೂಳಿಯನ್ನು ಸಮಸ್ತ ಲೋಕಪಾಲರೂ ತಮ್ಮ-ತಮ್ಮ ಕಿರೀಟಗಳಲ್ಲಿ ಧರಿಸುವರೋ, ನಾನು, ಬ್ರಹ್ಮ, ಶಂಕರ, ಲಕ್ಷ್ಮೀದೇವಿ ಇವರೇ ಮೊದಲಾದ ವಿಭೂತಿಗಳು ಯಾರ ಅಂಶಾಂಶ ಭೂತರಾಗಿರುವವೋ ಹಾಗೂ ಯಾರ ಚರಣಧೂಳಿಯನ್ನು ಸದಾ ಶಿರದಲ್ಲಿ ಧರಿಸುವವೋ ಅಂತಹ ಶ್ರೀಕೃಷ್ಣನಿಗೆ ಸಿಂಹಾಸನದಲ್ಲಿ ಕುಳಿತುಕೊಳ್ಳುವ ಅರ್ಹತೆಯಿಲ್ಲವಂತೆ! ಎಂತಹ ಸೊಗಸಾದ ಮಾತು! ॥ ೩೭ ॥ ಕೌರವರು ಕೊಟ್ಟಿರುವ ಭೂಮಿಯ ತುಂಡನ್ನು ಬಡಪಾಯಿಗಳಾದ ಯಾದವರು ಉಪಭೋಗಿಸುತ್ತಿದ್ದಾರಂತೆ. ನಾವು ಪಾದರಕ್ಷೆಗಳಂತೆ! ಕುರುಗಳು ತಲೆಯಂತೆ! ಎಂತಹ ಹೋಲಿಕೆ! ॥ ೩೮ ॥

ಅಹೋ ಐಶ್ವರ್ಯಮತ್ತಾನಾಂ ಮತ್ತಾನಾಮಿವ ಮಾನಿನಾಮ್ ।
ಅಸಂಬದ್ಧಾ ಗಿರೋ ರೂಕ್ಷಾಃ ಕಃ ಸಹೇತಾನುಶಾಸಿತಾ ॥ ೩೯ ॥

ಅದ್ಯ ನಿಷ್ಕೌರವಾಂ ಪೃಥ್ವೀಂ ಕರಿಷ್ಯಾಮೀತ್ಯಮರ್ಷಿತಃ ।
ಗೃಹೀತ್ವಾ ಹಲಮುತ್ತಸ್ಥೌ ದಹನ್ನಿವ ಜಗತ್ತ್ರಯಮ್ ॥ ೪೦ ॥

ಲಾಂಗಲಾಗ್ರೇಣ ನಗರಮುದ್ವಿದಾರ್ಯ ಗಜಾಹ್ವಯಮ್ ।
ವಿಚಕರ್ಷ ಸ ಗಂಗಾಯಾಂ ಪ್ರಹರಿಷ್ಯನ್ನಮರ್ಷಿತಃ ॥ ೪೧ ॥

ಜಲಯಾನಮಿವಾಘೂರ್ಣಂ ಗಂಗಾಯಾಂ ನಗರಂ ಪತತ್ ।
ಆಕೃಷ್ಯಮಾಣಮಾಲೋಕ್ಯ ಕೌರವಾ ಜಾತಸಂಭ್ರಮಾಃ ॥ ೪೨ ॥

ತಮೇವ ಶರಣಂ ಜಗ್ಮುಃ ಸಕುಟುಂಬಾ ಜಿಜೀವಿಷವಃ ।
ಸಲಕ್ಷ್ಮಣಂ ಪುರಸ್ಕೃತ್ಯ ಸಾಂಬಂ ಪ್ರಾಂಜಲಯಃ ಪ್ರಭುಮ್ ॥ ೪೩ ॥

ರಾಮ ರಾಮಾಖಿಲಾಧಾರ ಪ್ರಭಾವಂ ನ ವಿದಾಮ ತೇ ।
ಮೂಢಾನಾಂ ನಃ ಕುಬುದ್ಧೀನಾಂ ಕ್ಷಂತುಮರ್ಹಸ್ಯತಿಕ್ರಮಮ್ ॥ ೪೪ ॥

ಸ್ಥಿತ್ಯುತ್ಪತ್ತ್ಯಪ್ಯಯಾನಾಂ ತ್ವಮೇಕೋ ಹೇತುರ್ನಿರಾಶ್ರಯಃ ।
ಲೋಕಾನ್ ಕ್ರೀಡನಕಾನೀಶ ಕ್ರೀಡತಸ್ತೇ ವದಂತಿ ಹಿ ॥ ೪೫ ॥

ತ್ವಮೇವ ಮೂರ್ಧ್ನೀದಮನಂತ ಲೀಲಯಾ
ಭೂಮಂಡಲಂ ಬಿಭರ್ಷಿ ಸಹಸ್ರಮೂರ್ಧನ್ ।
ಅಂತೇ ಚ ಯಃ ಸ್ವಾತ್ಮನಿ ರುದ್ಧವಿಶ್ವಃ
ಶೇಷೇಽದ್ವಿತೀಯಃ ಪರಿಶಿಷ್ಯಮಾಣಃ ॥ ೪೬ ॥

ಕೋಪಸ್ತೇಽಖಿಲಶಿಕ್ಷಾರ್ಥಂ ನ ದ್ವೇಷಾನ್ನ ಚ ಮತ್ಸರಾತ್ ।
ಬಿಭ್ರತೋ ಭಗವನ್ ಸತ್ತ್ವಂ ಸ್ಥಿತಿಪಾಲನತತ್ಪರಃ ॥ ೪೭ ॥

ನಮಸ್ತೇ ಸರ್ವಭೂತಾತ್ಮನ್ ಸರ್ವಶಕ್ತಿಧರಾವ್ಯಯ ।
ವಿಶ್ವಕರ್ಮನ್ ನಮಸ್ತೇಽಸ್ತು ತ್ವಾಂ ವಯಂ ಶರಣಂ ಗತಾಃ ॥ ೪೮ ॥

ಐಶ್ವರ್ಯಮದದಿಂದ ಉನ್ಮತ್ತರಾಗಿ ದುರ್ಮಿಷ್ಟರಾಗಿರುವ ಈ ಕೌರವರು ಹುಚ್ಚರಂತಾಗಿದ್ದಾರೆ. ಇವರ ಒಂದೊಂದು ಮಾತೂ ಕಠೋರವಾಗಿದೆ ಹಾಗೂ ತಲೆ-ಬುಡ ಇಲ್ಲದ್ದಾಗಿದೆ. ಇಂತಹವರನ್ನು ಶಿಕ್ಷಿಸಲು, ಇವರನ್ನು ದಂಡಿಸುವ ಸಾಮರ್ಥ್ಯವುಳ್ಳ ನನ್ನಂತಹವನು ಇಂತಹ ಮಾತುಗಳನ್ನು ಹೇಗೆ ತಾನೇ ಸಹಿಸಬಲ್ಲನು ? ॥ ೩೯ ॥ 'ಇಂದು ನಾನು ಭೂಮಂಡಲವನ್ನು ಕೌರವರಿಂದ ರಹಿತವನ್ನಾಗಿಬಿಡುತ್ತೇನೆ' ಎಂದೆನ್ನುತ್ತಾ ಅತ್ಯಂತ ಕ್ರುದ್ಧನಾದ ಬಲರಾಮನು ಮೂರು ಲೋಕಗಳನ್ನು ಸುಟ್ಟುಬಿಡುವವನೋ ಎಂಬಂತೆ ಹಲಾಯುಧವನ್ನು ಹಿಡಿದು ಮೇಲಕ್ಕೆದ್ದನು. ॥ ೪೦ ॥ ಬಳಿಕ ಆತನು ನೇಗಿಲತುದಿಯಿಂದ ಹಸ್ತಿನಾಪಟ್ಟಣವನ್ನು ಕಿತ್ತು ಅದನ್ನು ಮುಳುಗಿಸಿಬಿಡಬೇಕೆಂದು ಗಂಗೆಯ ಕಡೆಗೆ ಸೆಳೆಯ ತೊಡಗಿದನು. ॥ ೪೧ ॥

ಹಲಾಯುಧದಿಂದ ಸೆಳೆಯಲ್ಪಟ್ಟಾಗ ಹಸ್ತಿನಾವತಿಯು ನೀರಿನಲ್ಲಿರುವ ದೋಣಿಯು ಅಲ್ಲಾಡುವಂತೆ ನಡುಗತೊಡಗಿತು. ತಮ್ಮ ನಗರವಾದರೋ ಗಂಗೆಯಲ್ಲಿ ಮುಳುಗುತ್ತಾ ಇದೆ; ಎಂದು ನೋಡಿದ ಕೌರವರು ಗಾಬರಿಗೊಂಡರು. ॥ ೪೨ ॥ ಮತ್ತೆ ಕೌರವರು ಲಕ್ಷ್ಮಣೆಯ ಜೊತೆಗೆ ಸಾಂಬನನ್ನು ಮುಂದೆ ಮಾಡಿಕೊಂಡು ತಮ್ಮ ಪ್ರಾಣಗಳನ್ನು ರಕ್ಷಿಸಿಕೊಳ್ಳಲಿಕ್ಕಾಗಿ ಕುಟುಂಬ ಸಹಿತ ಕೈ ಜೋಡಿಸಿಕೊಂಡು ಸರ್ವಶಕ್ತನಾದ ಭಗವಾನ್ ಬಲರಾಮನಿಗೆ ಶರಣಾಗಿ ಪ್ರಾರ್ಥಿಸಿದರು. ॥ ೪೩ ॥ ಲೋಕಾಭಿರಾಮನಾದ ಬಲರಾಮನೇ! ನೀನು ಸಮಸ್ತ ಜಗತ್ತಿಗೂ ಆಧಾರಭೂತನಾದ ಶೇಷನೇ ಆಗಿರುವೆ. ನಾವು ನಿನ್ನ ಪ್ರಭಾವವನ್ನು ತಿಳಿದವರಲ್ಲ, ನಾವು ನಿಶ್ಚಯವಾಗಿಯೂ ಮೂರ್ಖರು. ಕುತ್ಸಿತವಾದ ಬುದ್ಧಿಯುಳ್ಳವರು. ನಾವು ಮಾಡಿದ ಅಪರಾಧವನ್ನು ಕ್ಷಮಿಸಬೇಕು. ॥ ೪೪ ॥ ಪ್ರಭುವೇ! ನೀನು ಜಗತ್ತಿನ ಉತ್ಪತ್ತಿ, ಸ್ಥಿತಿ, ಲಯಗಳಿಗೆ ಏಕಮಾತ್ರ ಕಾರಣನಾಗಿರುವೆ. ನೀನು ನಿರಾಧಾರನು. ಲೋಕಗಳನ್ನೇ ಆಟಿಕೆಗಳನ್ನಾಗಿಸಿಕೊಂಡು ನೀನು ಆಟವಾಡುವೆಯೆಂದು ಜ್ಞಾನಿಗಳಾದ ಋಷಿ-ಮುನಿಗಳು ಹೇಳುತ್ತಾರೆ. ॥ ೪೫ ॥ ಅನಂತನೇ! ನಿನಗೆ ಸಾವಿರ ತಲೆಗಳಿವೆ. ನೀನು ಆಟವಾಡುತ್ತಲೇ ಈ ಅಖಂಡ ಭೂಮಂಡಲವನ್ನು ನಿನ್ನ ತಲೆಯಲ್ಲಿ ಧರಿಸಿರುವೆ. ಪ್ರಳಯಕಾಲವು ಸನ್ನಿಹಿತವಾದಾಗ ಸಮಸ್ತ ಜಗತ್ತನ್ನು ನಿನ್ನಲ್ಲಿಯೇ ಲೀನಗೊಳಿಸಿಕೊಳ್ಳುವೆ. ಆ ಸಮಯದಲ್ಲಿ ಉಳಿದಿರುವ ನೀನೊಬ್ಬನೇ ಅದ್ವಿತೀಯ ರೂಪದಿಂದ ಶಯನಿಸುವೆ. ॥ ೪೬ ॥ ಭಗವಂತನೇ! ನೀನು ಜಗತ್ತಿನ ಸ್ಥಿತಿ ಮತ್ತು ಪಾಲನೆಗಾಗಿ ಶುದ್ಧಸತ್ತ್ವಮಯವಾದ ಶರೀರವನ್ನು ಗ್ರಹಣಮಾಡುವೆ. ನಿನ್ನ ಈ ಕ್ರೋಧವು ದ್ವೇಷ ಅಥವಾ ಮತ್ಸರದ ಕಾರಣದಿಂದ ಉಂಟಾದುದಲ್ಲ. ಇದಾದರೋ ಸಮಸ್ತ ಪ್ರಾಣಿಗಳ ಶಿಕ್ಷಣಾರ್ಥವಾಗಿಯೇ ಇದೆ. ॥ ೪೭ ॥ ಸಮಸ್ತ ಶಕ್ತಿಗಳನ್ನು ಧರಿಸತಕ್ಕವನೇ! ಸಮಸ್ತ ಪ್ರಾಣಿಗಳ ಆತ್ಮಸ್ವರೂಪನೇ ಅವಿನಾಶಿಯೇ! ಭಗವಂತನೇ! ನಾವು ನಿನಗೆ ನಮಸ್ಕರಿಸುತ್ತೇವೆ. ಸಮಸ್ತ ವಿಶ್ವವನ್ನೂ ಸೃಷ್ಟಿಸುವ ದೇವನೇ! ನಾವು ಪುನಃ ಪುನಃ ನಿನಗೆ ನಮಸ್ಕರಿಸುತ್ತೇವೆ. ನಾವು ನಿನಗೆ ಶರಣಾಗಿದ್ದೇವೆ. ನೀನು ದಯೆಮಾಡಿ ನಮ್ಮನ್ನು ರಕ್ಷಿಸು. ॥ ೪೮ ॥

ಶ್ರೀಶುಕ ಉವಾಚ

ಏವಂ ಪ್ರಪನ್ನೈಃ ಸಂವಿಗ್ನೈರ್ವೇಪಮಾನಾಯನೈರ್ಬಲಃ ।
ಪ್ರಸಾದಿತಃ ಸುಪ್ರಸನ್ನೋ ಮಾ ಭೈಷ್ಟೇತ್ಯಭಯಂ ದದೌ ॥ ೪೯ ॥

ದುರ್ಯೋಧನಃ ಪಾರಿಬರ್ಹಂ ಕುಂಜರಾನ್ ಷಷ್ಟಿಹಾಯನಾನ್ ।
ದದೌ ಚ ದ್ವಾದಶಶತಾನ್ಯಯುತಾನಿ ತುರಂಗಮಾನ್ ॥ ೫೦ ॥

ರಥಾನಾಂ ಷಟ್ಸಹಸ್ರಾಣಿ ರೌಕ್ಮಾಣಾಂ ಸೂರ್ಯವರ್ಚಸಾಮ್ ।
ದಾಸೀನಾಂ ನಿಷ್ಕಕಂಠೀನಾಂ ಸಹಸ್ರಂ ದುಹಿತೃವತ್ಸಲಃ ॥ ೫೧ ॥

ಪ್ರತಿಗೃಹ್ಯ ತು ತತ್ಸರ್ವಂ ಭಗವಾನ್ ಸಾತ್ವತರ್ಷಭಃ ।
ಸಸುತಃ ಸಸ್ನುಷಃ ಪ್ರಾಗಾತ್ಸುಹೃದ್ಭಿರಭಿನಂದಿತಃ ॥ ೫೨ ॥

ತತಃ ಪ್ರವಿಷ್ಟಃ ಸ್ವಪುರಂ ಹಲಾಯುಧಃ
ಸಮೇತ್ಯ ಬಂಧೂನನುರಕ್ತಚೇತಸಃ ।
ಶಶಂಸ ಸರ್ವಂ ಯದುಪುಂಗವಾನಾಂ
ಮಧ್ಯೇ ಸಭಾಯಾಂ ಕುರುಷು ಸ್ವಚೇಷ್ಟಿತಮ್ ॥ ೫೩ ॥

ಅದ್ಯಾಪಿ ಚ ಪುರಂ ಹ್ಯೇತತ್ಸೂಚಯದ್ರಾಮವಿಕ್ರಮಮ್ ।
ಸಮುನ್ನತಂ ದಕ್ಷಿಣತೋ ಗಂಗಾಯಾಮನುದೃಶ್ಯತೇ ॥ ೫೪ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ - ಪರೀಕ್ಷಿತನೇ! ಕೌರವರ ಗಜಪುರಿಯು ನಡುಗುತ್ತಾ ಇದ್ದು ಅವರು ಅತ್ಯಂತ ಗಾಬರಿಗೊಂಡಿದ್ದರು. ಸಮಸ್ತ ಕುರುವಂಶೀಯರು ಹೀಗೆ ಭಗವಾನ್ ಬಲರಾಮನಿಗೆ ಶರಣಾಗಿ, ಅವನನ್ನು ಪ್ರಾರ್ಥಿಸಿದಾಗ ಅವನು ಪ್ರಸನ್ನನಾಗಿ - 'ಹೆದರಬೇಡಿರಿ' ಎಂದು ಹೇಳಿ ಅವರಿಗೆ ಅಭಯವನ್ನು ನೀಡಿದನು. ॥ ೪೯ ॥ ಪರೀಕ್ಷಿತನೇ! ಅನಂತರ ಮಗಳನ್ನು ಬಹಳವಾಗಿ ಪ್ರೀತಿಸುತ್ತಿದ್ದ ದುರ್ಯೋಧನನು ಅರವತ್ತು ವರ್ಷವಯಸ್ಸಿನ ಹನ್ನೆರಡು ನೂರು ಆನೆಗಳನ್ನು, ಹತ್ತು ಸಾವಿರ ಕುದುರೆಗಳನ್ನು, ಸೂರ್ಯನಂತೆ ಹೊಳೆಯುವ ಚಿನ್ನದ ಆರು ಸಾವಿರ ರಥಗಳನ್ನು ಮತ್ತು ಸುವರ್ಣ ಹಾರಗಳಿಂದ ಸಮಲಂಕೃತೆಯರಾದ ಒಂದು ಸಾವಿರ ದಾಸಿಯರನ್ನು ಮಗಳಿಗೆ ಬಳುವಳಿಯಾಗಿ ಕೊಟ್ಟನು. ॥ ೫೦-೫೧ ॥ ಯದುವಂಶ ಶಿರೋಮಣಿಯಾದ ಬಲರಾಮನು ಸಮಸ್ತವಾದ ಬಳುವಳಿಯನ್ನು ಸ್ವೀಕರಿಸಿ ಲಕ್ಷ್ಮಣೆ ಮತ್ತು ಸಾಂಬರೊಂದಿಗೆ ಕೌರವರ ಅಭಿನಂದನೆಗಳನ್ನು ಸ್ವೀಕರಿಸಿ ದ್ವಾರಕೆಗೆ ಪ್ರಯಾಣ ಬೆಳೆಸಿದನು. ॥ ೫೨ ॥

ಬಲರಾಮನು ದ್ವಾರಕೆಗೆ ಹೋಗಿ ತನ್ನಲ್ಲಿಯೇ ಅನುರಕ್ತರಾಗಿದ್ದ ಹಾಗೂ ಸಮಾಚಾರವನ್ನು ತಿಳಿಯಲು ಉತ್ಸುಕರಾದ ಬಂಧುಗಳೊಡನೆ ಸೇರಿ, ಯದುಪುಂಗವರ ಸಭಾಮಧ್ಯದಲ್ಲಿ ತಾನು ಕೌರವರೊಂದಿಗೆ ವ್ಯವಹರಿಸಿದ ಸಕಲ ವೃತ್ತಾಂತವನ್ನು ಸವಿಸ್ತಾರವಾಗಿ ಹೇಳಿದನು. ॥ ೫೩ ॥ ಪರೀಕ್ಷಿತನೇ! ಹಸ್ತಿನಾಪುರವು ಈಗಲೂ ದಕ್ಷಿಣದಿಕ್ಕಿನಲ್ಲಿ ಸ್ವಲ್ಪ ಎತ್ತರವಾಗಿದ್ದು ಗಂಗಾನದಿಯ ಕಡೆಗೆ ಸ್ವಲ್ಪವಾಲಿಕೊಂಡಿದೆ. ಹೀಗೆ ಅದು ಭಗವಾನ್ ಬಲರಾಮನ ಅತುಲಪರಾಕ್ರಮವನ್ನು ಸೂಚಿಸುತ್ತದೆ. ॥ ೫೪ ॥

ಅರವತ್ತೆಂಟನೆಯ ಅಧ್ಯಾಯವು ಮುಗಿಯಿತು. ॥ ೬೮ ॥
ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮ ಸ್ಕಂಧೇ ಉತ್ತರಾರ್ಧೇ
ಹಸ್ತಿನಾಪುರಕರ್ಷಣರೂಪಸಂಕರ್ಷಣವಿಜಯೋ ನಾಮ ಅಷ್ಟಷಷ್ಟಿತಮೋಽಧ್ಯಾಯಃ ॥ ೬೮ ॥

ಅರವತ್ತೊಂಭತ್ತನೆಯ ಅಧ್ಯಾಯ

ದೇವರ್ಷಿ ನಾರದರು ಭಗವಂತನ ಗೃಹಸ್ಥ ವ್ಯವಹಾರಗಳನ್ನು ನೋಡಿದುದು

ಶ್ರೀಶುಕ ಉವಾಚ

ನರಕಂ ನಿಹತಂ ಶ್ರುತ್ವಾ ತಥೋದ್ವಾಹಂ ಚ ಯೋಷಿತಾಮ್ ।
ಕೃಷ್ಣೇನೈಕೇನ ಬಹ್ವೀನಾಂ ತದ್ದಿದೃಕ್ಷುಃ ಸ್ಮ ನಾರದಃ ॥ ೧ ॥

ಚಿತ್ರಂ ಬತೈತದೇಕೇನ ವಪುಷಾ ಯುಗಪತ್ ಪೃಥಕ್ ।
ಗೃಹೇಷು ದ್ವ್ಯಷ್ಟಸಾಹಸ್ರಂ ಸ್ತ್ರಿಯ ಏಕ ಉದಾವಹತ್ ॥ ೨ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ - ಎಲೈ ಪರೀಕ್ಷಿತನೇ! ಭಗವಾನ್ ಶ್ರೀಕೃಷ್ಣನು ನರಕಾಸುರನನ್ನು ಕೊಂದು ಒಬ್ಬನೇ ಸಾವಿರಾರು ರಾಜಕುಮಾರಿಯರೊಂದಿಗೆ ವಿವಾಹವಾದನೆಂದು ಕೇಳಿದ ನಾರದಮಹರ್ಷಿಗಳಿಗೆ ಭಗವಂತನು ಅವರೊಂದಿಗೆ ಗೃಹಚರ್ಯೆಯನ್ನು ಹೇಗೆ ನಡೆಸುವನೆಂದು ನೋಡುವ ಬಯಕೆ ಉಂಟಾಯಿತು. ॥ ೧ ॥ ಅವರು ಹೀಗೆ ಯೋಚಿಸತೊಡಗಿದರು ಭಗವಾನ್ ಶ್ರೀಕೃಷ್ಣನು ಒಂದೇ ಶರೀರದಲ್ಲಿ ಒಂದೇ ಸಮಯದಲ್ಲಿ ಹದಿನಾರು ಸಾವಿರ ಅರಮನೆಯಲ್ಲಿ ಬೇರೆ-ಬೇರೆಯಾಗಿ ಹದಿನಾರು ಸಾವಿರ ರಾಜಕುಮಾರಿಯರೊಂದಿಗೆ ಹೇಗೆ ಪಾಣಿಗ್ರಹಣ ಮಾಡಿದನು? ಇದು ಪರಮಾಶ್ಚರ್ಯವಾಗಿದೆ. ॥ ೨ ॥

ಇತ್ಯುತ್ಸುಕೋ ದ್ವಾರವತೀಂ ದೇವರ್ಷಿರ್ದ್ರಷ್ಟುಮಾಗಮತ್ ।
ಪುಷ್ಪಿತೋಪವನಾರಾಮದ್ವಿಜಾಲಿಕುಲನಾದಿತಾಮ್ ॥ ೩ ॥

ಉತ್ಫುಲ್ಲೇಂದೀವರಾಂಭೋಜಕಹ್ಲಾರಕುಮುದೋತ್ಪಲೈಃ ।
ಛುರಿತೇಷು ಸರಸ್ಸೂಚ್ಚೈಃ ಕೂಜಿತಾಂ ಹಂಸಸಾರಸೈಃ ॥ ೪ ॥

ಪ್ರಾಸಾದಲಕ್ಷೈರ್ನವಭಿರ್ಜುಷ್ಟಾಂ ಸ್ಫಾಟಿಕರಾಜತೈಃ ।
ಮಹಾಮರಕತಪ್ರಖ್ಯೈಃ ಸ್ವರ್ಣರತ್ನಪರಿಚ್ಛದೈಃ ॥ ೫ ॥

ವಿಭಕ್ತರಥ್ಯಾಪಥಚತ್ವರಾಪಣೈಃ
ಶಾಲಾಸಭಾಭೀ ರುಚಿರಾಂ ಸುರಾಲಯೈಃ ।
ಸಂಸಿಕ್ತಮಾರ್ಗಾಂಗಣವೀಥಿದೇಹಲೀಂ
ಪತತ್ಪತಾಕಧ್ವಜವಾರಿತಾತಪಾಮ್ ॥ ೬ ॥

ತಸ್ಯಾಮಂತಃಪುರಂ ಶ್ರೀಮದರ್ಚಿತಂ ಸರ್ವಧಿಷ್ಣ್ಯಪೈಃ ।
ಹರೇಃ ಸ್ವಕೌಶಲಂ ಯತ್ರ ತ್ವಷ್ಟ್ರಾ ಕಾರ್ತ್ಸ್ನ್ಯೇನ ದರ್ಶಿತಮ್ ॥ ೭ ॥

ತತ್ರ ಷೋಡಶಭಿಃ ಸದ್ಮಸಹಸ್ರೈಃ ಸಮಲಂಕೃತಮ್ ।
ವಿವೇಶೈಕತಮಂ ಶೌರೇಃ ಪತ್ನೀನಾಂ ಭವನಂ ಮಹತ್ ॥ ೮ ॥

ವಿಷ್ಟಬ್ಧಂ ವಿದ್ರುಮಸ್ತಂಭೈರ್ವೈದೂರ್ಯಫಲಕೋತ್ತಮೈಃ ।
ಇಂದ್ರನೀಲಮಯೈಃ ಕುಡ್ಯೈರ್ಜಗತ್ಯಾ ಚಾಹತತ್ವಿಷಾ ॥ ೯ ॥

ವಿತಾನೈರ್ನಿರ್ಮಿತೈಸ್ತ್ವಷ್ಟ್ರಾ ಮುಕ್ತಾದಾಮವಿಲಂಬಿಭಿಃ ।
ದಾಂತೈರಾಸನಪರ್ಯಂಕೈರ್ಮಣ್ಯುತ್ತಮಪರಿಷ್ಕೃತೈಃ ॥ ೧೦ ॥

ದಾಸೀಭಿರ್ನಿಷ್ಕಕಂಠೀಭಿಃ ಸುವಾಸೋಭಿರಲಂಕೃತಮ್ ।
ಪುಂಭಿಃ ಸಕಂಚುಕೋಷ್ಣೀಷಸುವಸ್ತ್ರಮಣಿಕುಂಡಲೈಃ ॥ ೧೧ ॥

ರತ್ನಪ್ರದೀಪನಿಕರದ್ಯುತಿಭಿರ್ನಿರಸ್ತ-
ಧ್ವಾಂತಂ ವಿಚಿತ್ರವಲಭೀಷು ಶಿಖಂಡಿನೋಽಂಗ ।
ನೃತ್ಯಂತಿ ಯತ್ರ ವಿಹಿತಾಗುರುಧೂಪಮಕ್ಷೈ-
ರ್ನಿರ್ಯಾಂತಮೀಕ್ಷ್ಯ ಘನಬುದ್ಧಯ ಉನ್ನದಂತಃ ॥ ೧೨ ॥

ದೇವಋಷಿ ನಾರದರು ಈ ಉತ್ಸುಕತೆಯಿಂದ ಪ್ರೇರಿತರಾಗಿ ಭಗವಂತನ ಲೀಲೆಗಳನ್ನು ನೋಡಲಿಕ್ಕಾಗಿ ದ್ವಾರಕೆಗೆ ಬಂದರು. ಅಲ್ಲಿನ ವನ-ಉಪವನಗಳಲ್ಲಿ ಬಣ್ಣ-ಬಣ್ಣದ ಅರಳಿದ ಪುಷ್ಪಗಳಿಂದ ತುಂಬಿದ ವೃಕ್ಷಗಳು ತುಂಬಿಕೊಂಡಿದ್ದವು. ಅವುಗಳಲ್ಲಿ ನಾನಾ ರೀತಿಯ ಪಕ್ಷಿಗಳು ಚಿಲಿ-ಪಿಲಿಗುಟ್ಟುತ್ತಿದ್ದವು. ದುಂಬಿಗಳು ಝೇಂಕರಿಸುತ್ತಿದ್ದವು. ॥ ೩ ॥ ನಿರ್ಮಲವಾದ ನೀರಿನಿಂದ ತುಂಬಿದ ಸರೋವರಗಳಲ್ಲಿ ನೀಲಿ, ಕೆಂಪು, ಬಿಳಿ ಬಣ್ಣಗಳ ಕಮಲ ನೈದಿಲೆ, ಕನ್ನೈದಿಲೆ ಮೊದಲಾದ ಸುಗಂಧಯುಕ್ತವಾದ ಪುಷ್ಪಗಳಿದ್ದವು. ಆ ಪುಷ್ಪಗಳ ಮಧ್ಯದಲ್ಲಿ ಹಂಸ-ಕಾರಂಡವ ಮೊದಲಾದ ಪಕ್ಷಿಗಳು ಕಲರವ ಮಾಡುತ್ತಿದ್ದವು ॥ ೪ ॥ ದ್ವಾರಕೆಯಲ್ಲಿ ಸ್ಫಟಿಕದ ಮತ್ತು ಬೆಳ್ಳಿಯಿಂದ ನಿರ್ಮಿಸಿದ ಒಂಭತ್ತು ಲಕ್ಷ ಅರಮನೆಗಳಿದ್ದವು. ಅವುಗಳ ನೆಲಗಳು ಮರಕತಮಣಿಗಳ ಪ್ರಭೆಯಿಂದ ಹೊಳೆಯುತ್ತಿದ್ದುವು ಮತ್ತು ಅವುಗಳಲ್ಲಿ ಚಿನ್ನ ಹಾಗೂ ವಜ್ರಗಳಿಂದ ಮಾಡಿದ ಪರಿಕರಗಳಿಂದ ಸಂಪನ್ನವಾಗಿದ್ದವು. ॥ ೫ ॥ ಅಲ್ಲಿಯ ರಾಜಬೀದಿಗಳು, ಗಲ್ಲಿಗಳು, ಚೌಕಗಳು, ಪೇಟೆಗಳು ಅತ್ಯಂತ ಸುಂದರವಾಗಿದ್ದವು. ಅಶ್ವಶಾಲೆಗಳು, ಗೋಶಾಲೆಗಳು, ಸಭಾಭವನಗಳು, ದೇವ ಮಂದಿರಗಳು ಇವುಗಳಿಂದಾಗಿ ಅದರ ಸೌಂದರ್ಯವು ಇನ್ನೂ ಬೆಳಗುತ್ತಿತ್ತು. ದ್ವಾರಕೆಯ ಬೀದಿಗಳಲ್ಲಿ, ಚೌಕಗಳಲ್ಲಿ, ಓಣಿಗಳಲ್ಲಿ, ಬಾಗಿಲುಗಳಲ್ಲಿ ಸುಗಂಧ ದ್ರವ್ಯಗಳನ್ನು ಸಿಂಪಡಿಸಿತ್ತು. ಹಾರಾಡುತ್ತಿದ್ದ ಧ್ವಜ-ಪತಾಕೆಗಳು ಬಿಸಿಲಿನ ತಾಪವನ್ನು ತಡೆಯುತ್ತಿದ್ದವು. ॥ ೬ ॥

ಆ ದ್ವಾರಕೆಯ ಮಧ್ಯಭಾಗದಲ್ಲಿ ಭಗವಾನ್ ಶ್ರೀಕೃಷ್ಣನ ವಿಶಾಲವಾದ ಸುಂದರವಾದ ಲೋಕಪಾಲರಿಂದ ಪೂಜಿಸಲ್ಪಡುತ್ತಿದ್ದ ಅಂತಃಪುರವಿತ್ತು. ಅದನ್ನು ನಿರ್ಮಿಸಲು ವಿಶ್ವಕರ್ಮನು ತನ್ನ ಎಲ್ಲ ಕಲಾ-ಕೌಶಲ್ಯವನ್ನು ಉಪಯೋಗಿಸಿದ್ದನು. ॥ ೭ ॥ ಅತ್ಯಂತ ದೊಡ್ಡದಾದ ಆ ಅಂತಃಪುರವು ಹದಿನಾರು ಸಾವಿರ ಉಪಾಂತಃಪುರಗಳಿಂದ ಸಮಲಂಕೃತವಾಗಿತ್ತು. ಶೌರಿಯ ಅಷ್ಟು ಅಂತಃಪುರಗಳಲ್ಲಿ ದೊಡ್ಡದಾದ ಭವನದಲ್ಲಿ ನಾರದರು ಪ್ರವೇಶಿಸಿದರು. ॥ ೮ ॥ ಆ ಭವನದಲ್ಲಿ ವೈಡೂರ್ಯದ ಬೋದಿಗೆಗಳಿಂದ ಕೂಡಿದ ಹವಳದ ಕಂಬಗಳು, ಇಂದ್ರನೀಲಮಣಿಯ ಗೋಡೆಗಳು ಮತ್ತು ನೆಲಗಳು ಥಳ-ಥಳಿಸುತ್ತಿದ್ದವು. ॥ ೯ ॥ ಮುತ್ತಿನ ಸರಗಳಿಂದ ಸಮಲಂಕೃತವಾದ ಅನೇಕ ಚಪ್ಪರಗಳು ವಿಶ್ವಕರ್ಮನಿಂದ ನಿರ್ಮಿಸಲ್ಪಟ್ಟಿತ್ತು. ಹಸ್ತಿದಂತದಿಂದ ಮಾಡಿದ ಆಸನಗಳೂ ಮತ್ತು ಮಂಚಗಳಿದ್ದು, ಅವುಗಳಲ್ಲಿ ಶ್ರೇಷ್ಠವಾದ ಮಣಿ-ರತ್ನಗಳನ್ನು ಜೋಡಿಸಿದ್ದರು. ॥ ೧೦ ॥ ಸುಂದರವಾದ ವಸ್ತ್ರಗಳನ್ನುಟ್ಟು ಚಿನ್ನದ ಸರಗಳನ್ನು ಧರಿಸಿದ್ದ ನೂರಾರು ದಾಸಿಯರಿಂದ ಆ ಭವನವು ಸಮಲಂಕೃತವಾಗಿತ್ತು. ಅಂಗಿ-ಪೇಟ-ಸುಂದರವಾದ ಸಮವಸ್ತ್ರ ಮತ್ತು ಮಣಿಕುಂಡಲಗಳನ್ನು ಧರಿಸಿದ್ದ ಸೇವಕರೂ ತಮ್ಮ-ತಮ್ಮ ಕೆಲಸದಲ್ಲಿ ವ್ಯಸ್ತರಾಗಿದ್ದು ಭವನದ ಶೋಭೆಯನ್ನು ಹೆಚ್ಚಿಸಿದ್ದರು. ॥ ೧೧ ॥ ಅನೇಕ ರತ್ನದೀಪಗಳು ತಮ್ಮ ಪ್ರಭೆಯಿಂದ ಕತ್ತಲನ್ನು ಓಡಿಸುತ್ತಿದ್ದವು. ಅಗರು ಧೂಪದ ಹೊಗೆಯು ಕಿಟಕಿಗಳಿಂದ ಹೊರಸೂಸುತ್ತಿತ್ತು. ಅದನ್ನು ನೋಡಿದ ನವಿಲುಗಳು ಮೋಡಗಳೆಂದು ಭ್ರಮಿಸಿ ಕೇಕೆಹಾಕಿ ಕುಣಿಯುತ್ತಿದ್ದವು. ॥ ೧೨ ॥

ತಸ್ಮಿನ್ ಸಮಾನಗುಣರೂಪವಯಸ್ಸುವೇಷ-
ದಾಸೀಸಹಸ್ರಯುತಯಾನುಸವಂ ಗೃಹಿಣ್ಯಾ ।
ವಿಪ್ರೋ ದದರ್ಶ ಚಮರವ್ಯಜನೇನ ರುಕ್ಮ-
ದಂಡೇನ ಸಾತ್ವತಪತಿಂ ಪರಿವೀಜಯಂತ್ಯಾ ॥ ೧೩ ॥

ಅಂತಹ ದಿವ್ಯವಾದ ಅಂತಃಪುರದಲ್ಲಿ ರೂಪ-ಗುಣ ವಯಸ್ಸು-ವೇಷ-ಇವುಗಳಲ್ಲಿ ತನಗೆ ಸಮಾನರಾಗಿದ್ದ ಸಾವಿರಾರು ದಾಸಿಯರಿಂದ ಪರಿವೃತಳಾದ ರುಕ್ಮಿಣೀದೇವಿಯು ಚಿನ್ನದ ಹಿಡಿಯುಳ್ಳ ಬೀಸಣಿಗೆಯನ್ನು ಹಿಡಿದು ಪರ್ಯಂಕದಲ್ಲಿ ಕುಳಿತ್ತಿದ್ದ ಶ್ರೀಕೃಷ್ಣನಿಗೆ ಗಾಳಿ ಬೀಸುತ್ತಿರುವುದನ್ನು ನಾರದರು ನೋಡಿದರು. ॥ ೧೩ ॥

ತಂ ಸನ್ನಿರೀಕ್ಷ್ಯ ಭಗವಾನ್ ಸಹಸೋತ್ಥಿತಃ ಶ್ರೀ-
ಪರ್ಯಂಕತಃ ಸಕಲಧರ್ಮಭೃತಾಂ ವರಿಷ್ಠಃ ।
ಆನಮ್ಯ ಪಾದಯುಗಲಂ ಶಿರಸಾ ಕಿರೀಟ-
ಜುಷ್ಟೇನ ಸಾಂಜಲಿರವೀವಿಶದಾಸನೇ ಸ್ವೇ ॥ ೧೪ ॥

ತಸ್ಯಾವನಿಜ್ಯ ಚರಣೌ ತದಪಃ ಸ್ವಮೂರ್ಧ್ನಾ
ಬಿಭ್ರಜ್ಜಗದ್ಗುರುತರೋಽಪಿ ಸತಾಂ ಪತಿರ್ಹಿ ।
ಬ್ರಹ್ಮಣ್ಯದೇವ ಇತಿ ಯದ್ಗುಣನಾಮ ಯುಕ್ತಂ
ತಸ್ಯೈವ ಯಚ್ಚರಣಶೌಚಮಶೇಷತೀರ್ಥಮ್ ॥ ೧೫ ॥

ನಾರದ ಮಹರ್ಷಿಗಳನ್ನು ಕಾಣುತ್ತಲೇ ಸಮಸ್ತ ಧಾರ್ಮಿಕರ ಮುಕುಟಮಣಿಯಾದ ಭಗವಾನ್ ಶ್ರೀಕೃಷ್ಣನು ರುಕ್ಮಿಣಿಯ ಪರ್ಯಂಕದಿಂದ ಮೇಲೆದ್ದು ಮುಂದೆ ಹೋಗಿ ಅವರ ಚರಣಕಮಲಗಳಿಗೆ ಕಿರೀಟದಿಂದ ಕೂಡಿದ ತಲೆಯಿಂದ ನಮಸ್ಕರಿಸಿ, ಕೈಜೋಡಿಸಿಕೊಂಡು ಅವರನ್ನು ತನ್ನ ಆಸನದಲ್ಲಿ ಕುಳ್ಳಿರಿಸಿದನು. ॥ ೧೪ ॥ ಪರೀಕ್ಷಿತನೇ! ಭಗವಾನ್ ಶ್ರೀಕೃಷ್ಣನು ಚರಾಚರ ಜಗತ್ತಿಗೆ ಪರಮಗುರುವಾಗಿದ್ದು, ಅವನ ಚರಣಕಮಲಗಳಿಂದ ಹುಟ್ಟಿದ ಗಂಗೆಯು ಮೂರು ಲೋಕಗಳನ್ನು ಪಾವನಗೊಳಿಸುವಂತಹುದು. ಹೀಗಿದ್ದರೂ ಅವನು ಪರಮಭಕ್ತವತ್ಸಲನೂ, ಸಂತರ ಪರಮ ಆದರ್ಶನೂ, ಸಂತರ ಸ್ವಾಮಿಯೂ ಆಗಿರುವನು. ಅವನಿಗೆ ಬ್ರಹ್ಮಣ್ಯದೇವ ಎಂಬುದೊಂದು ಅಸಾಧಾರಣ ಹೆಸರೂ ಕೂಡ ಇದೆ. ಅವನು ಬ್ರಾಹ್ಮಣರನ್ನೇ ತನ್ನ ಆರಾಧ್ಯರೆಂದು ಭಾವಿಸುವನು. ಬ್ರಹ್ಮಣ್ಯದೇವ ಎಂಬ ನಾಮವು ಅವನ ಗುಣಗಳಿಗೆ ಅನುರೂಪವೇ ಆಗಿದ್ದು ಉಚಿತವೂ ಆಗಿದೆ. ಆದುದರಿಂದಲೇ ಶ್ರೀಕೃಷ್ಣನು ನಾರದರ ಕಾಲನ್ನು ತೊಳೆದು ಆ ಚರಣೋದಕವನ್ನು ತನ್ನ ತಲೆಯಲ್ಲಿ ಧರಿಸಿಕೊಂಡನು. ॥ ೧೫ ॥

ಸಂಪೂಜ್ಯ ದೇವಋಷಿವರ್ಯಮೃಷಿಃ ಪುರಾಣೋ
ನಾರಾಯಣೋ ನರಸಖೋ ವಿಧಿನೋದಿತೇನ ।
ವಾಣ್ಯಾಭಿಭಾಷ್ಯ ಮಿತಯಾಮೃತಮಿಷ್ಟಯಾ ತಂ
ಪ್ರಾಹ ಪ್ರಭೋ ಭಗವತೇ ಕರವಾಮ ಹೇ ಕಿಮ್ ॥ ೧೬ ॥

ಹೀಗೆ ಅರ್ಜುನನ ಮಿತ್ರನೂ, ಸಮದರ್ಶಿಯೂ ಪುರಾಣಪುರುಷನೂ ಆದ ಭಗವಾನ್ ಶ್ರೀನಾರಾಯಣನು ಶಾಸ್ತ್ರೋಕ್ತವಿಧಿಯಿಂದ ದೇವರ್ಷಿಶ್ರೇಷ್ಠರಾದ ನಾರದರನ್ನು ಪೂಜಿಸಿದನು. ಅನಂತರ ಅಮೃತಕ್ಕಿಂತಲೂ ಮಧುರವಾದ, ಮಿತವಾದ ಮಾತುಗಳಿಂದ ಅವರನ್ನು ಸ್ವಾಗತಿಸಿ-ಸತ್ಕರಿಸಿ, ಕೇಳಿದನು – ಪ್ರಭುಗಳೇ! ಷಡ್ಗುಣೈಶ್ವರ್ಯಸಂಪನ್ನರಾದ ನಿಮಗೆ ನಾನು ಯಾವ ಸೇವೆ ಮಾಡಲಿ? ॥ ೧೬ ॥

ನಾರದ ಉವಾಚ

ನೈವಾದ್ಭುತಂ ತ್ವಯಿ ವಿಭೋಽಖಿಲಲೋಕನಾಥೇ
ಮೈತ್ರೀ ಜನೇಷು ಸಕಲೇಷು ದಮಃ ಖಲಾನಾಮ್ ।
ನಿಃಶ್ರೇಯಸಾಯ ಹಿ ಜಗತ್ಸ್ಥಿತಿರಕ್ಷಣಾಭ್ಯಾಂ
ಸ್ವೈರಾವತಾರ ಉರುಗಾಯ ವಿದಾಮ ಸುಷ್ಠು ॥ ೧೭ ॥

ದೇವರ್ಷಿ ನಾರದರು ಹೇಳಿದರು – ಭಗವಂತಾ! ನೀನು ಸಮಸ್ತ ಲೋಕಗಳಿಗೆ ಏಕಮಾತ್ರ ಸ್ವಾಮಿಯಾಗಿರುವೆ. ಭಕ್ತರಲ್ಲಿ ಪ್ರೇಮ, ದುಷ್ಟರಲ್ಲಿ ದಂಡವೆಂಬುದು ನಿನ್ನಲ್ಲಿ ಹೊಸದಾದ ವಿಷಯವೇನೂ ಅಲ್ಲ. ಪರಮಯಶಸ್ವಿಯಾದ ಪ್ರಭೋ! ನೀನು ಜಗತ್ತಿನ ಸ್ಥಿತಿ ಮತ್ತು ರಕ್ಷಣೆಯ ಮೂಲಕ ಸಮಸ್ತ ಪ್ರಾಣಿಗಳಿಗೂ ಕಲ್ಯಾಣವನ್ನುಂಟುಮಾಡುವ ಸಲುವಾಗಿಯೇ ಸ್ವೇಚ್ಛೆಯಿಂದ ಅವತಾರವೆತ್ತುವೆ. ಉರುಗಾಯನೇ! ನಾವು ಈ ವಿಷಯವನ್ನು ಚೆನ್ನಾಗಿ ತಿಳಿದಿರುತ್ತೇವೆ. ॥ ೧೭ ॥

ದೃಷ್ಟಂ ತವಾಂಘ್ರಿಯುಗಲಂ ಜನತಾಪವರ್ಗಂ
ಬ್ರಹ್ಮಾದಿಭಿರ್ಹೃದಿ ವಿಚಿಂತ್ಯಮಗಾಧಬೋಧೈಃ ।
ಸಂಸಾರಕೂಪಪತಿತೋತ್ತರಣಾವಲಂಬಂ
ಧ್ಯಾಯಂಶ್ಚರಾಮ್ಯನುಗೃಹಾಣ ಯಥಾ ಸ್ಮೃತಿಃ ಸ್ಯಾತ್ ॥ ೧೮ ॥

ಇಂದು ನನಗೆ ನಿನ್ನ ಚರಣಕಮಲಗಳ ದರ್ಶನವಾದುದು ದೊಡ್ಡ ಸೌಭಾಗ್ಯದ ಮಾತಾಗಿದೆ. ನಿನ್ನ ಈ ಚರಣಕಮಲಗಳು ಸಮಸ್ತ ಜನರಿಗೆ ಮೋಕ್ಷವನ್ನು ಕೊಡುವುದರಲ್ಲಿ ಸಮರ್ಥವಾಗಿವೆ. ಅಸೀಮವಾದ ಜ್ಞಾನವುಳ್ಳ ಬ್ರಹ್ಮಾ, ಶಂಕರರೇ ಮೊದಲಾದವರು ಸದಾಕಾಲ ತಮ್ಮ ಹೃದಯದಲ್ಲಿ ಅವುಗಳನ್ನು ಚಿಂತಿಸುತ್ತಾ ಇರುತ್ತಾರೆ. ವಾಸ್ತವವಾಗಿ ಆ ಶ್ರೀಚರಣಗಳೇ ಸಂಸಾರವೆಂಬ ಬಾವಿಯಲ್ಲಿ ಬಿದ್ದಿರುವ ಜನರನ್ನು ಮೇಲಕ್ಕೆತ್ತಲೂ ಆಧಾರಭೂತವಾಗಿವೆ. ನಿನ್ನ ಆ ಚರಣಕಮಲಗಳ ಸ್ಮರಣೆಯು ನನಗಿರಲಿ ಮತ್ತು ನಾನು ಎಲ್ಲೇ ಇದ್ದರೂ, ಹೇಗಿದ್ದರೂ ಅವುಗಳ ಧ್ಯಾನದಲ್ಲೇ ತನ್ಮಯನಾಗಿರುವಂತೆ ಅನುಗ್ರಹಿಸು. ॥ ೧೮ ॥

ತತೋಽನ್ಯದಾವಿಶದ್ಗೇಹಂ ಕೃಷ್ಣಪತ್ನ್ಯಾಃ ಸ ನಾರದಃ ।
ಯೋಗೇಶ್ವರೇಶ್ವರಸ್ಯಾಂಗ ಯೋಗಮಾಯಾವಿವಿತ್ಸಯಾ ॥ ೧೯ ॥

ದೀವ್ಯಂತಮಕ್ಷೈಸ್ತತ್ರಾಪಿ ಪ್ರಿಯಯಾ ಚೋದ್ಧವೇನ ಚ ।
ಪೂಜಿತಃ ಪರಯಾ ಭಕ್ತ್ಯಾ ಪ್ರತ್ಯುತ್ಥಾನಾಸನಾದಿಭಿಃ ॥ ೨೦ ॥

ಪೃಷ್ಟಶ್ಚಾವಿದುಷೇವಾಸೌ ಕದಾಽಽಯಾತೋ ಭವಾನಿತಿ ।
ಕ್ರಿಯತೇ ಕಿಂ ನು ಪೂರ್ಣಾನಾಮಪೂರ್ಣೈರಸ್ಮದಾದಿಭಿಃ ॥ ೨೧ ॥

ಅಥಾಪಿ ಬ್ರೂಹಿ ನೋ ಬ್ರಹ್ಮನ್ ಜನ್ಮೈತಚ್ಛೋಭನಂ ಕುರು ।
ಸ ತು ವಿಸ್ಮಿತ ಉತ್ಥಾಯ ತೂಷ್ಣೀಮನ್ಯದಗಾದ್ಗೃಹಮ್ ॥ ೨೨ ॥

ತತ್ರಾಪ್ಯಚಷ್ಟ ಗೋವಿಂದಂ ಲಾಲಯಂತಂ ಸುತಾನ್ ಶಿಶೂನ್ ।
ತತೋಽನ್ಯಸ್ಮಿನ್ ಗೃಹೇಽಪಶ್ಯನ್ಮಜ್ಜನಾಯ ಕೃತೋದ್ಯಮಮ್ ॥ ೨೩ ॥

ಜುಹ್ವಂತಂ ಚ ವಿತಾನಾಗ್ನೀನ್ ಯಜಂತಂ ಪಂಚಭಿರ್ಮಖೈಃ ।
ಭೋಜಯಂತಂ ದ್ವಿಜಾನ್ ಕ್ವಾಪಿ ಭುಂಜಾನಮವಶೇಷಿತಮ್ ॥ ೨೪ ॥

ಕ್ವಾಪಿ ಸಂಧ್ಯಾಮುಪಾಸೀನಂ ಜಪಂತಂ ಬ್ರಹ್ಮ ವಾಗ್ಯತಮ್ ।
ಏಕತ್ರ ಚಾಸಿಚರ್ಮಾಭ್ಯಾಂ ಚರಂತಮಸಿವರ್ತ್ಮಸು ॥ ೨೫ ॥

ಅಶ್ವೈರ್ಗಜೈ ರಥೈಃ ಕ್ವಾಪಿ ವಿಚರಂತಂ ಗದಾಗ್ರಜಮ್ ।
ಕ್ವಚಿಚ್ಛಯಾನಂ ಪರ್ಯಂಕೇ ಸ್ತೂಯಮಾನಂ ಚ ವಂದಿಭಿಃ ॥ ೨೬ ॥

ಮಂತ್ರಯಂತಂ ಚ ಕಸ್ಮಿಂಶ್ಚಿನ್ಮಂತ್ರಿಭಿಶ್ಚೋದ್ಧವಾದಿಭಿಃ ।
ಜಲಕ್ರೀಡಾರತಂ ಕ್ವಾಪಿ ವಾರಮುಖ್ಯಾಬಲಾವೃತಮ್ ॥ ೨೭ ॥

ಕುತ್ರಚಿದ್ದ್ವಿಜಮುಖ್ಯೇಭ್ಯೋ ದದತಂ ಗಾಃ ಸ್ವಲಂಕೃತಾಃ ।
ಇತಿಹಾಸಪುರಾಣಾನಿ ಶೃಣ್ವಂತಂ ಮಂಗಲಾನಿ ಚ ॥ ೨೮ ॥

ಹಸಂತಂ ಹಾಸ್ಯಕಥಯಾ ಕದಾಚಿತ್ ಪ್ರಿಯಯಾ ಗೃಹೇ ।
ಕ್ವಾಪಿ ಧರ್ಮಂ ಸೇವಮಾನಮರ್ಥಕಾಮೌ ಚ ಕುತ್ರಚಿತ್ ॥ ೨೯ ॥

ಪರೀಕ್ಷಿತನೇ ! ಅನಂತರ ನಾರದ ಮಹರ್ಷಿಗಳು ಯೋಗೇಶ್ವರರಿಗೂ ಈಶ್ವರನಾದ ಭಗವಾನ್ ಶ್ರೀಕೃಷ್ಣನ ಯೋಗಮಾಯೆಯ ರಹಸ್ಯವನ್ನು ತಿಳಿಯಲು ಮತ್ತೊಬ್ಬ ಪತ್ನಿಯ ಅಂತಃಪುರಕ್ಕೆ ಹೋದರು. ॥ ೧೯ ॥ ಅಲ್ಲಿ ಶ್ರೀಕೃಷ್ಣನು ತನ್ನ ಪ್ರಿಯೆಯೊಂದಿಗೆ ಮತ್ತು ಉದ್ಧವನೊಂದಿಗೆ ಪಗಡೆಯಾಡುತ್ತಿದ್ದುದನ್ನು ನೋಡಿದರು. ಅಲ್ಲಿಯೂ ಭಗವಂತನು ಎದ್ದುನಿಂತು, ನಾರದರನ್ನು ಸ್ವಾಗತಿಸಿ, ಆಸನದಲ್ಲಿ ಕುಳ್ಳಿರಿಸಿ ಬಗೆ-ಬಗೆಯ ಸಾಮಗ್ರಿಗಳಿಂದ ಭಕ್ತಿಯಿಂದ ಪೂಜಿಸಿದನು. ॥ ೨೦ ॥ ಬಳಿಕ ಭಗವಂತನು ಏನೂ ತಿಳಿಯದವನಂತೆ ಕೇಳಿದನು. ಮಹರ್ಷಿಗಳೇ ! ಯಾವಾಗ ತಾವು ದಯಮಾಡಿಸಿದಿರಿ ? ನೀವಾದರೋ ಪರಿಪೂರ್ಣ ಆತ್ಮಾರಾಮರಾಗಿರುವಿರಿ. ಅಪೂರ್ಣರಾದ ನಾವು ನಿಮ್ಮ ಯಾವ ಸೇವೆ ಮಾಡಬಲ್ಲೆವು ? ॥ ೨೧ ॥ ಹೀಗಿದ್ದರೂ ಬ್ರಹ್ಮಸ್ವರೂಪರಾದ ನಾರದರೇ ! ಯಾವ ಕಾರ್ಯವನ್ನು ಮಾಡಬೇಕೆಂದು ಅಪ್ಪಣೆಕೊಡಿರಿ. ತಮ್ಮ ಸೇವೆಗೆ ಅವಕಾಶ ಮಾಡಿಕೊಟ್ಟು ನಮ್ಮ ಜನ್ಮವನ್ನು ಸಾರ್ಥಕಗೊಳಿಸಿರಿ. ಇದನ್ನು ನೋಡಿದ ನಾರದರು ಆಶ್ಚರ್ಯಚಕಿತರಾದರು. ಅವರು ಅಲ್ಲಿಂದೆದ್ದು ಏನೂ ಮಾತನಾಡದೆ ಇನ್ನೊಂದು ಅಂತಃಪುರಕ್ಕೆ ಹೊರಟು ಹೋದರು. ॥ ೨೨ ॥ ಆ ಅಂತಃಪುರದಲ್ಲಿ ಭಗವಾನ್ ಶ್ರೀಕೃಷ್ಣನು ಎಳೆಯ ಮಕ್ಕಳನ್ನು ಆಡಿಸುತ್ತಾ ಕುಳಿತಿರುವುದನ್ನು ನೋಡಿದರು. ಅಲ್ಲಿಂದ ಮತ್ತೆ ಮತ್ತೊಂದು ಅಂತಃಪುರಕ್ಕೆ ಹೋದರೆ ಅಲ್ಲಿ ಶ್ರೀಕೃಷ್ಣನು ಸ್ನಾನದ ಸಿದ್ಧತೆ ಮಾಡುತ್ತಿರುವುದನ್ನು ನೋಡಿದರು. ॥ ೨೩ ॥ (ಹೀಗೆಯೇ ದೇವರ್ಷಿನಾರದರು ಬೇರೆ ಬೇರೆ ಅಂತಃಪುರಗಳಲ್ಲಿ ಭಗವಂತನು ಬೇರೆ-ಬೇರೆ ಕಾರ್ಯಗಳನ್ನು ಮಾಡುತ್ತಿರುವುದನ್ನು ನೋಡಿದರು) - ಕೆಲವು ಕಡೆ ಅವನು ಯಜ್ಞಕುಂಡದಲ್ಲಿ ಹೋಮಮಾಡುತ್ತಿದ್ದನು. ಕೆಲವೆಡೆ ಪಂಚಮಹಾಯಜ್ಞಗಳಿಂದ ದೇವತೆ ಮೊದಲಾದವರನ್ನು ಆರಾಧಿಸುತ್ತಿದ್ದನು. ಕೆಲವೆಡೆ ಬ್ರಾಹ್ಮಣರಿಗೆ ಭೋಜನಮಾಡಿಸುತ್ತಿದ್ದನು. ಕೆಲವೆಡೆ ಯಜ್ಞಶೇಷವನ್ನು ಭುಂಜಿಸುತ್ತಿದ್ದನು. ॥ ೨೪ ॥ ಕೆಲವೆಡೆ ಸಂಧ್ಯಾವಂದನೆ ಮಾಡುತ್ತಿದ್ದರೆ, ಕೆಲವೆಡೆ ಮೌನವಾಗಿ ಗಾಯತ್ರೀ ಜಪಮಾಡುತ್ತಿದ್ದನು. ಕೆಲವೆಡೆ ಕತ್ತಿ-ಗುರಾಣಿ ಹಿಡಿದು ಶಸ್ತ್ರಾಭ್ಯಾಸ ಮಾಡುತ್ತಿದ್ದನು. ॥ ೨೫ ॥ ಕೆಲವುಕಡೆ ಆನೆ, ಕುದುರೆ, ರಥಗಳಲ್ಲಿ ಕುಳಿತು ಶ್ರೀಕೃಷ್ಣನು ಸಂಚರಿಸುತ್ತಿದ್ದನು. ಕೆಲವೆಡೆ ಮಂಚದಲ್ಲಿ ಪವಡಿಸಿದ್ದರೆ, ಕೆಲವೆಡೆ ವಂದಿ-ಮಾಗಧರು ಸ್ತುತಿಸುತ್ತಾ ಇದ್ದಾರೆ. ॥ ೨೬ ॥ ಯಾವುದೋ ಅಂತಃಪುರದಲ್ಲಿ ಉದ್ಧವಾದಿ ಮಂತ್ರಿಗಳೊಡನೆ ಗಂಭೀರವಾದ ಮಂತ್ರಾಲೋಚನೆ ಮಾಡುತ್ತಿದ್ದರೆ, ಕೆಲವೆಡೆ ಉತ್ತಮೋತ್ತಮ ವಾರಾಂಗನೆಯರೊಡನೆ ಜಲಕ್ರೀಡೆಯಾಡುತ್ತಿದ್ದನು. ॥ ೨೭ ॥ ಕೆಲವೆಡೆ ಶ್ರೇಷ್ಠರಾದ ಬ್ರಾಹ್ಮಣರಿಗೆ ವಸ್ತ್ರಾಭೂಷಣಗಳಿಂದ ಅಲಂಕೃತವಾದ ಗೋವುಗಳನ್ನು ದಾನಮಾಡುತ್ತಿದ್ದ ಕೆಲವೆಡೆ ಮಂಗಲಮಯ ಇತಿಹಾಸ ಪುರಾಣಗಳನ್ನು ಶ್ರವಣಿಸುತ್ತಿದ್ದನು. ॥ ೨೮ ॥ ಕೆಲವು ಪತ್ನಿಯರ ಅಂತಃಪುರಗಳಲ್ಲಿ ತನ್ನ ಪ್ರೇಯಸಿಯರೊಡನೆ ಹಾಸ್ಯ ವಿನೋದದ ಮಾತುಗಳನ್ನಾಡುತ್ತಾ ನಗುತ್ತಿದ್ದನು. ಕೆಲವೆಡೆ ಧರ್ಮಕ್ಕೆ ಸಂಬಂಧಿಸಿದ ಕಾರ್ಯಗಳಲ್ಲಿ ನಿರತನಾಗಿದ್ದರೆ, ಕೆಲವೆಡೆ ಅರ್ಥಸಂಗ್ರಹದ ವಿಷಯವಾಗಿ ಮಂತ್ರಿಗಳೊಡನೆ ಸಮಾಲೋಚಿಸುತ್ತಿದ್ದನು. ಕೆಲವು ಕಡೆ ಧರ್ಮಾನುಕೂಲ ಗೃಹಸ್ಥೋಚಿತ ವಿಷಯಭೋಗಗಳನ್ನು ಅನುಭವಿಸುತ್ತಿದ್ದನು. ॥ ೨೯ ॥

ಧ್ಯಾಯಂತಮೇಕಮಾಸೀನಂ ಪುರುಷಂ ಪ್ರಕೃತೇಃ ಪರಮ್ ।
ಶುಶ್ರೂಷಂತಂ ಗುರೂನ್ ಕ್ವಾಪಿ ಕಾಮೈರ್ಭೋಗೈಃ ಸಪರ್ಯಯಾ ॥ ೩೦ ॥

ಕುರ್ವಂತಂ ವಿಗ್ರಹಂ ಕೈಶ್ಚಿತ್ಸಂಧಿಂ ಚಾನ್ಯತ್ರ ಕೇಶವಮ್ ।
ಕುತ್ರಾಪಿ ಸಹ ರಾಮೇಣ ಚಿಂತಯಂತಂ ಸತಾಂ ಶಿವಮ್ ॥ ೩೧ ॥

ಪುತ್ರಾಣಾಂ ದುಹಿತೄಣಾಂ ಚ ಕಾಲೇ ವಿಧ್ಯುಪಯಾಪನಮ್ ।
ದಾರೈರ್ವರೈಸ್ತತ್ಸದೃಶೈಃ ಕಲ್ಪಯಂತಂ ವಿಭೂತಿಭಿಃ ॥ ೩೨ ॥

ಪ್ರಸ್ಥಾಪನೋಪನಯನೈರಪತ್ಯಾನಾಂ ಮಹೋತ್ಸವಾನ್ ।
ವೀಕ್ಷ್ಯ ಯೋಗೇಶ್ವರೇಶಸ್ಯ ಯೇಷಾಂ ಲೋಕಾ ವಿಸಿಸ್ಮಿರೇ ॥ ೩೩ ॥

ಯಜಂತಂ ಸಕಲಾನ್‌ದೇವಾನ್ ಕ್ವಾಪಿ ಕ್ರತುಭಿರೂರ್ಜಿತೈಃ ।
ಪೂರ್ತಯಂತಂ ಕ್ವಚಿದ್ಧರ್ಮಂ ಕೂಪಾರಾಮಮಠಾದಿಭಿಃ ॥ ೩೪ ॥

ಚರಂತಂ ಮೃಗಯಾಂ ಕ್ವಾಪಿ ಹಯಮಾರುಹ್ಯ ಸೈಂಧವಮ್ ।
ಘ್ನಂತಂ ತತಃ ಪಶೂನ್ ಮೇಧ್ಯಾನ್ ಪರೀತಂ ಯದುಪುಂಗವೈಃ ॥ ೩೫ ॥

ಅವ್ಯಕ್ತಲಿಂಗಂ ಪ್ರಕೃತಿಷ್ವಂತಃಪುರಗೃಹಾದಿಷು ।
ಕ್ವಚಿಚ್ಚರಂತಂ ಯೋಗೇಶಂ ತತ್ತದ್ಭಾವಬುಭುತ್ಸಯಾ ॥ ೩೬ ॥

ಅಥೋವಾಚ ಹೃಷೀಕೇಶಂ ನಾರದಃ ಪ್ರಹಸನ್ನಿವ ।
ಯೋಗಮಾಯೋದಯಂ ವೀಕ್ಷ್ಯ ಮಾನುಷೀಮೀಯುಷೋ ಗತಿಮ್ ॥ ೩೭ ॥

ವಿದಾಮ ಯೋಗಮಾಯಾಸ್ತೇ ದುರ್ದರ್ಶಾ ಅಪಿ ಮಾಯಿನಾಮ್ ।
ಯೋಗೇಶ್ವರಾತ್ಮನ್ ನಿರ್ಭಾತಾ ಭವತ್ಪಾದನಿಷೇವಯಾ ॥ ೩೮ ॥

ಅನುಜಾನೀಹಿ ಮಾಂ ದೇವ ಲೋಕಾಂಸ್ತೇ ಯಶಸಾಽಽಪ್ಲುತಾನ್ ।
ಪರ್ಯಟಾಮಿ ತವೋದ್ಗಾಯನ್ ಲೀಲಾಂ ಭುವನಪಾವನೀಮ್ ॥ ೩೯ ॥

ಶ್ರೀಭಗವಾನುವಾಚ

ಬ್ರಹ್ಮನ್ ಧರ್ಮಸ್ಯ ವಕ್ತಾಹಂ ಕರ್ತಾ ತದನುಮೋದಿತಾ ।
ತಚ್ಛಿಕ್ಷಯನ್ಲೋಕಮಿಮಮಾಸ್ಥಿತಃ ಪುತ್ರ ಮಾ ಖಿದಃ ॥ ೪೦ ॥

ಕೆಲವೆಡೆ ಏಕಾಂತದಲ್ಲಿ ಕುಳಿತು ಪ್ರಕೃತಿಗೆ ಅತೀತನಾದ ಪುರಾಣ ಪುರುಷನನ್ನು ಧ್ಯಾನಿಸುತ್ತಿದ್ದನು. ಕೆಲವೆಡೆ ಗುರು-ಹಿರಿಯರಿಗೆ ಇಚ್ಛಿತ ಭೋಗ ಸಾಮಗ್ರಿಗಳನ್ನಿತ್ತು ಅವರ ಸೇವೆ-ಶುಶ್ರೂಷೆ ಮಾಡುತ್ತಿದ್ದನು. ॥ ೩೦ ॥ ದೇವಋಷಿ ನಾರದರು ನೋಡುತ್ತಾರೆ ಭಗವಾನ್ ಶ್ರೀಕೃಷ್ಣನು ಯಾರೊಂದಿಗೋ ಯುದ್ಧದ ಮಾತನ್ನಾಡುತ್ತಿದ್ದರೆ, ಯಾರೊಂದಿಗೋ ಸಂಧಿಯ ಪ್ರಸ್ತಾಪವನ್ನು ಮಾಡುತ್ತಿದ್ದನು. ಕೆಲವು ಕಡೆ ಬಲರಾಮನೊಂದಿಗೆ ಕುಳಿತುಕೊಂಡು ಸತ್ಪುರುಷರ ಕಲ್ಯಾಣದ ಕುರಿತು ಯೋಚಿಸುತ್ತಿದ್ದನು. ॥ ೩೧ ॥ ಕೆಲವೆಡೆ ಉಚಿತ ಸಮಯದಲ್ಲಿ ಪುತ್ರ-ಪುತ್ರಿಯರು ಅವರಿಗೆ ಅನುರೂಪರಾದ ವಧೂ-ವರರೊಂದಿಗೆ ಸಂಭ್ರಮದಿಂದ ವಿಧಿವತ್ತಾಗಿ ವಿವಾಹ ಮಾಡುತ್ತಿದ್ದನು. ॥ ೩೨ ॥ ಕೆಲವು ಕಡೆ ವಿವಾಹಿತ ಕನ್ಯೆಯನ್ನು ಅತ್ತೆ ಮನೆಗೆ ಕಳಿಸುತ್ತಿದ್ದರೆ, ಕೆಲವೆಡೆ ಕನ್ಯೆಯರನ್ನು ಕರೆಸುವ ಸಿದ್ಧತೆ ಮಾಡುತ್ತಿದ್ದನು. ಯೋಗೇಶ್ವರ ಭಗವಾನ್ ಶ್ರೀಕೃಷ್ಣನ ಈ ವಿರಾಟ್ ಉತ್ಸವವನ್ನು ನೋಡಿ ಎಲ್ಲ ಜನರು ಆಶ್ಚರ್ಯಚಕಿತರಾಗುತ್ತಿದ್ದರು. ॥ ೩೩ ॥ ಕೆಲವೆಡೆ ದೊಡ್ಡ-ದೊಡ್ಡ ಯಜ್ಞಗಳ ಮೂಲಕ ದೇವತೆಗಳನ್ನು ಪೂಜಿಸುತ್ತಿದ್ದರೆ, ಕೆಲವು ಕಡೆ ಬಾವಿ, ಉದ್ಯಾನ, ಅಗ್ರಹಾರ ಮುಂತಾದುವನ್ನು ಮಾಡಿ ಇಷ್ಟಾಪೂರ್ತ ಧರ್ಮವನ್ನು ಆಚರಿಸುತ್ತಿದ್ದನು. ॥ ೩೪ ॥ ಕೆಲವೆಡೆ ಶ್ರೇಷ್ಠ ಯಾದವರಿಂದ ಸುತ್ತುವರಿದು ಸಿಂಧುದೇಶದ ಕುದುರೆಯ ಮೇಲೆ ಕುಳಿತುಕೊಂಡು ಬೇಟೆಯಾಡುತ್ತಾ ಯಜ್ಞಕ್ಕಾಗಿ ವಸ್ತುಗಳನ್ನು ಸಂಗ್ರಹಿಸುತ್ತಾ ॥ ೩೫ ॥ ಕೆಲವೆಡೆ ಅಂತಃಪುರಗಳಲ್ಲಿ ಹಾಗೂ ಪ್ರಜೆಗಳ ಮಧ್ಯದಲ್ಲಿಯೂ ವೇಷವನ್ನು ಬದಲಿಸಿ ಅಡಗಿಕೊಂಡು ಎಲ್ಲರ ಅಭಿಪ್ರಾಯವನ್ನು ತಿಳಿಯಲು ಸಂಚರಿಸುತ್ತಿದ್ದ ಮಹಾಯೋಗಿಯಾದ ಶ್ರೀಕೃಷ್ಣನನ್ನು ನೋಡಿ ನಾರದರು ಮೋಹಿತರಾದರು. ॥ ೩೬ ॥

ಪರೀಕ್ಷಿತನೇ ! ಹೀಗೆ ಮನುಷ್ಯರಂತೆ ಲೀಲೆ ಮಾಡುವ ಹೃಷೀಕೇಶ ಭಗವಂತನ ಯೋಗಮಾಯೆಯ ವೈಭವವನ್ನು ನೋಡಿ ದೇವರ್ಷಿ ನಾರದರು ಮುಗುಳ್ನಗುತ್ತಾ ಹೇಳಿದರು – ॥ ೩೭ ॥ ಯೋಗೇಶ್ವರರಿಗೂ ಆತ್ಮಸ್ವರೂಪನಾದವನೇ ! ನಿನ್ನ ಯೋಗಮಾಯೆಯನ್ನು ಬ್ರಹ್ಮಾದಿ ಮಹಾ-ಮಹಾ ಮಾಯಾವಿಗಳಿಗೂ ತಿಳಿಯಲು ಅಗಮ್ಯವಾಗಿದೆ. ಆದರೆ ನಿನ್ನ ಚರಣಕಮಲಗಳ ಸೇವೆಯಿಂದ ನಾವು ಆ ಯೋಗಮಾಯೆಯನ್ನು ತಿಳಿದುಕೊಂಡೆವು. ॥ ೩೮ ॥ ದೇವದೇವನೇ! ನನಗೆ ಹೋಗಲು ಅನುಮತಿಯನ್ನು ದಯಪಾಲಿಸು. ನಿನ್ನ ಯಶಸ್ಸಿನಿಂದ ತುಂಬಿಹೋಗಿರುವ ಮೂರು ಲೋಕಗಳಲ್ಲಿಯೂ, ತ್ರಿಭುವನ ಪಾವನಿಯಾದ ನಿನ್ನ ಲೀಲೆಗಳನ್ನು ಹಾಡುತ್ತಾ ಸಂಚರಿಸುತ್ತೇನೆ. ॥ ೩೯ ॥

ಭಗವಾನ್ ಶ್ರೀಕೃಷ್ಣನು ಹೇಳಿದನು – ಬ್ರಾಹ್ಮಣ ಶ್ರೇಷ್ಠನೇ! ನಾನೇ ಧರ್ಮದ ಉಪದೇಶಕನೂ, ಪಾಲನೆ ಮಾಡುವವನೂ, ಅದನ್ನು ಅನುಷ್ಠಾನ ಮಾಡುವವರನ್ನು ಅನುಮೋದಿಸುವವನೂ ಆಗಿದ್ದೇನೆ. ಪ್ರಪಂಚಕ್ಕೆ ಧರ್ಮದ ಶಿಕ್ಷಣವನ್ನು ಕೊಡಬೇಕೆನ್ನುವ ಉದ್ದೇಶದಿಂದಲೇ ನಾನು ಈ ಪ್ರಕಾರ ಧರ್ಮವನ್ನು ಆಚರಿಸುತ್ತಿದ್ದೇನೆ. ಪ್ರಿಯ ಪುತ್ರನೇ ! ನೀನು ನನ್ನ ಈ ಯೋಗ ಮಾಯೆಯನ್ನು ನೋಡಿ ಮೋಹಿತನಾಗಬೇಡ. ॥ ೪೦ ॥

ಶ್ರೀಶುಕ ಉವಾಚ

ಇತ್ಯಾಚರಂತಂ ಸದ್ಧರ್ಮಾನ್ ಪಾವನಾನ್ ಗೃಹಮೇಧಿನಾಮ್ ।
ತಮೇವ ಸರ್ವಗೇಹೇಷು ಸಂತಮೇಕಂ ದದರ್ಶ ಹ ॥ ೪೧ ॥

ಕೃಷ್ಣಸ್ಯಾನಂತವೀರ್ಯಸ್ಯ ಯೋಗಮಾಯಾಮಹೋದಯಮ್ ।
ಮುಹುರ್ದೃಷ್ಟ್ವಾ ಋಷಿರಭೂದ್ವಿಸ್ಮಿತೋ ಜಾತಕೌತುಕಃ ॥ ೪೨ ॥

ಇತ್ಯರ್ಥಕಾಮಧರ್ಮೇಷು ಕೃಷ್ಣೇನ ಶ್ರದ್ಧಿತಾತ್ಮನಾ ।
ಸಮ್ಯಕ್ಸಭಾಜಿತಃ ಪ್ರೀತಸ್ತಮೇವಾನುಸ್ಮರನ್ ಯಯೌ ॥ ೪೩ ॥

ಏವಂ ಮನುಷ್ಯಪದವೀಮನುವರ್ತಮಾನೋ
ನಾರಾಯಣೋಽಖಿಲಭವಾಯ ಗೃಹೀತಶಕ್ತಿಃ ।
ರೇಮೇಂಗ ಷೋಡಶಸಹಸ್ರವರಾಂಗನಾನಾಂ
ಸವ್ರೀಡಸೌಹೃದನಿರೀಕ್ಷಣಹಾಸಜುಷ್ಟಃ ॥ ೪೪ ॥

ಯಾನೀಹ ವಿಶ್ವವಿಲಯೋದ್ಭವವೃತ್ತಿಹೇತುಃ
ಕರ್ಮಾಣ್ಯನನ್ಯವಿಷಯಾಣಿ ಹರಿಶ್ಚಕಾರ ।
ಯಸ್ತ್ವಂಗ ಗಾಯತಿ ಶೃಣೋತ್ಯನುಮೋದತೇ ವಾ
ಭಕ್ತಿರ್ಭವೇದ್ಭಗವತಿ ಹ್ಯಪವರ್ಗಮಾರ್ಗೇ ॥ ೪೫ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ - ಪರೀಕ್ಷಿತನೇ! ಹೀಗೆ ಭಗವಾನ್ ಶ್ರೀಕೃಷ್ಣನು ಗೃಹಸ್ಥಾಶ್ರಮಿಗಳನ್ನು ಪವಿತ್ರಗೊಳಿಸುವ ಶ್ರೇಷ್ಠವಾದ ಧರ್ಮಗಳನ್ನು ಆಚರಿಸುತ್ತಿದ್ದನು - ಅವನು ಒಬ್ಬನೇ ಆಗಿದ್ದರೂ ನಾರದ ಮಹರ್ಷಿಗಳು ಅವನನ್ನು ಅವನ ಪ್ರತಿಯೊಬ್ಬ ಪತ್ನಿಯರ ಅಂತಃಪುರಗಳಲ್ಲಿ ಬೇರೆ-ಬೇರೆಯಾಗಿ ನೋಡಿದರು. ॥ ೪೧ ॥ ಅನಂತಶಕ್ತಿಯುಳ್ಳ ಭಗವಾನ್ ಶ್ರೀಕೃಷ್ಣನ ಯೋಗಮಾಯೆಯ ಪರಮೈಶ್ವರ್ಯವನ್ನು ಪದೇ-ಪದೇ ನೋಡಿ ದೇವರ್ಷಿ ನಾರದರು ಕುತೂಹಲವಿಷ್ಟರಾಗಿ ವಿಸ್ಮಿತರಾದರು. ॥ ೪೨ ॥ ದ್ವಾರಕೆಯಲ್ಲಿ ಭಗವಾನ್ ಶ್ರೀಕೃಷ್ಣನು ಗೃಹಸ್ಥರಂತೆಯೇ ಧರ್ಮ, ಅರ್ಥ, ಕಾಮಗಳೆಂಬ ಪುರುಷಾರ್ಥಗಳನ್ನು ಅತ್ಯಂತ ಶ್ರದ್ಧೆಯಿಂದ ಆಚರಿಸುತ್ತಿದ್ದನು. ಅವನು ದೇವರ್ಷಿ ನಾರದರನ್ನು ಬಹಳವಾಗಿ ಸನ್ಮಾನಿಸಿದನು. ನಾರದರು ಸುಪ್ರೀತರಾಗಿ ಭಗವಂತನನ್ನು ಸ್ಮರಿಸುತ್ತಾ ಅಲ್ಲಿಂದ ಹೊರಟು ಹೋದರು. ॥ ೪೩ ॥

ಪರೀಕ್ಷಿತ ಮಹಾರಾಜ! ಭಗವಾನ್ ನಾರಾಯಣನು ಅಖಿಲ ಜಗತ್ತಿನ ಕಲ್ಯಾಣಕ್ಕಾಗಿ ತನ್ನ ಅಚಿಂತ್ಯ ಮಹಾಶಕ್ತಿಯಾದ ಯೋಗಮಾಯೆಯನ್ನು ಸ್ವೀಕರಿಸಿಕೊಂಡು ಮನುಷ್ಯರಂತೆ ಲೀಲೆ ಮಾಡುತ್ತಿದ್ದನು. ಹದಿನಾರು ಸಾವಿರಕ್ಕಿಂತಲೂ ಹೆಚ್ಚಾಗಿದ್ದ ಪತ್ನಿಯರು ಲಜ್ಜೆ, ಸೌಹಾರ್ದ, ಕಟಾಕ್ಷವೀಕ್ಷಣೆ, ಮಂದಹಾಸ ಇವುಗಳಿಂದ ಅವನ ಸೇವೆ ಮಾಡುತ್ತಿದ್ದರು. ಅಂತಹ ತನ್ನ ಪ್ರೇಯಸಿಯರೊಡನೆ ಶ್ರೀಕೃಷ್ಣನು ವಿಹರಿಸುತ್ತಿದ್ದನು. ॥ ೪೪ ॥ ಮಹಾರಾಜ! ಭಗವಾನ್ ಶ್ರೀಕೃಷ್ಣನು ಮಾಡಿತೋರಿದ ಲೀಲೆಗಳನ್ನು ಬೇರೆ ಯಾರೂ ಮಾಡಲಾರರು. ಅವನೇ ವಿಶ್ವದ ಉತ್ಪತ್ತಿ, ಸ್ಥಿತಿ, ಪ್ರಳಯಗಳಿಗೆ ಪರಮ ಕಾರಣನಾಗಿದ್ದಾನೆ. ಅವನ ಲೀಲೆಗಳನ್ನು ಹಾಡುವವನು, ಕೇಳುವವನು ಮತ್ತು ಗಾನಮಾಡಲು ಪ್ರೋತ್ಸಾಹಿಸುವವನು ಮೋಕ್ಷದ ಮಾರ್ಗಸ್ವರೂಪನಾದ ಶ್ರೀಕೃಷ್ಣನಲ್ಲಿ ಪರಮ ಭಕ್ತಿಯುಳ್ಳವನಾಗುವನು. ॥ ೪೫ ॥

ಅರವತ್ತೊಂಭತ್ತನೆಯ ಅಧ್ಯಾಯವು ಮುಗಿಯಿತು. ॥ ೬೯ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮಸ್ಕಂಧೇ ಉತ್ತರಾರ್ಧೇ
ಕೃಷ್ಣಗಾರ್ಹಸ್ಥ್ಯದರ್ಶನಂ ನಾಮೈಕೋನಸಪ್ತತಿತಮೋಽಧ್ಯಾಯಃ ॥ ೬೯ ॥

ಎಪ್ಪತ್ತನೆಯ ಅಧ್ಯಾಯ

ಶ್ರೀಕೃಷ್ಣನ ದಿನಚರ್ಯೆ ಮತ್ತು ಜರಾಸಂಧನ ಬಂದಿಗಳಾಗಿದ್ದ ರಾಜರ ದೂತನ ಆಗಮನ

ಶ್ರೀಶುಕ ಉವಾಚ

ಅಥೋಷಸ್ಯುಪವೃತ್ತಾಯಾಂ ಕುಕ್ಕುಟಾನ್ ಕೂಜತೋಽಶಪನ್ ।
ಗೃಹೀತಕಂಠ್ಯಃ ಪತಿಭಿರ್ಮಾಧವ್ಯೋ ವಿರಹಾತುರಾಃ ॥ ೧ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ - ಪರೀಕ್ಷಿದ್ರಾಜನೇ! ಬೆಳಗಾಗಿ ಕೋಳಿ ಕೂಗುತ್ತಲೇ ಶ್ರೀಕೃಷ್ಣನ ಬಾಹುಲತೆಗಳಿಂದ ಬಳಸಲ್ಪಟ್ಟ ಕಂಠಗಳುಳ್ಳ ಶ್ರೀಕೃಷ್ಣನ ಪತ್ನಿಯರು ಕಾಂತನು ನಮ್ಮನ್ನು ಅಗಲುವನೆಂಬ ಆಶಂಕೆಯಿಂದ ವ್ಯಾಕುಲರಾಗಿ ಕೋಳಿಗಳನ್ನು ಬೈಯ್ಯುತ್ತಿದ್ದರು. ॥ ೧ ॥

ವಯಾಂಸ್ಯರೂರುವನ್ ಕೃಷ್ಣಂ ಬೋಧಯಂತೀವ ವಂದಿನಃ ।
ಗಾಯತ್ಸ್ವಲಿಷ್ವನಿದ್ರಾಣಿ ಮಂದಾರವನವಾಯುಭಿಃ ॥ ೨ ॥

ಮುಹೂರ್ತಂ ತಂ ತು ವೈದರ್ಭೀ ನಾಮೃಷ್ಯದತಿಶೋಭನಮ್ ।
ಪರಿರಂಭಣವಿಶ್ಲೇಷಾತ್ ಪ್ರಿಯಬಾಹ್ವಂತರಂ ಗತಾ ॥ ೩ ॥

ಬ್ರಾಹ್ಮೇ ಮುಹೂರ್ತ ಉತ್ಥಾಯ ವಾರ್ಯುಪಸ್ಪೃಶ್ಯ ಮಾಧವಃ ।
ದಧ್ಯೌ ಪ್ರಸನ್ನಕರಣ ಆತ್ಮಾನಂ ತಮಸಃ ಪರಮ್ ॥ ೪ ॥

ಏಕಂ ಸ್ವಯಂಜ್ಯೋತಿರನನ್ಯಮವ್ಯಯಂ
ಸ್ವಸಂಸ್ಥಯಾ ನಿತ್ಯನಿರಸ್ತಕಲ್ಮಷಮ್ ।
ಬ್ರಹ್ಮಾಖ್ಯಮಸ್ಯೋದ್ಭವನಾಶಹೇತುಭಿಃ
ಸ್ವಶಕ್ತಿಭಿರ್ಲಕ್ಷಿತಭಾವನಿರ್ವೃತಿಮ್ ॥ ೫ ॥

ಅಥಾಪ್ಲುತೋಽಂಭಸ್ಯಮಲೇ ಯಥಾವಿಧಿ
ಕ್ರಿಯಾಕಲಾಪಂ ಪರಿಧಾಯ ವಾಸಸೀ ।
ಚಕಾರ ಸಂಧ್ಯೋಪಗಮಾದಿ ಸತ್ತಮೋ
ಹುತಾನಲೋ ಬ್ರಹ್ಮ ಜಜಾಪ ವಾಗ್ಯತಃ ॥ ೬ ॥

ಉಪಸ್ಥಾಯಾರ್ಕಮುದ್ಯಂತಂ ತರ್ಪಯಿತ್ವಾತ್ಮನಃ ಕಲಾಃ ।
ದೇವಾನೃಷೀನ್ ಪಿತೄನ್ ವೃದ್ಧಾನ್ ವಿಪ್ರಾನಭ್ಯರ್ಚ್ಯ ಚಾತ್ಮವಾನ್ ॥ ೭ ॥

ಧೇನೂನಾಂ ರುಕ್ಮಶೃಂಗೀಣಾಂ ಸಾಧ್ವೀನಾಂ ಮೌಕ್ತಿಕಸ್ರಜಾಮ್ ।
ಪಯಸ್ವಿನೀನಾಂ ಗೃಷ್ಟೀನಾಂ ಸವತ್ಸಾನಾಂ ಸುವಾಸಸಾಮ್ ॥ ೮ ॥

ಆ ಸಮಯದಲ್ಲಿ ಪಾರಿಜಾತಪುಷ್ಪದ ಸುಗಂಧಿತ ಗಾಳಿಯು ಮಂದ-ಮಂದವಾಗಿ ಬೀಸುತ್ತಿತ್ತು. ದುಂಬಿಗಳು ಝೇಂಕರಿಸುತ್ತಾ ಸುಪ್ರಭಾತವನ್ನು ಹಾಡುತ್ತಿದ್ದವು. ನಿದ್ದೆಯಿಂದ ಎಚ್ಚೆತ್ತ ಪಕ್ಷಿಗಳು ವಂದಿ-ಮಾಗಧರಂತೆ ಮಧುರ ಸ್ವರಗಳಿಂದ ಶ್ರೀಕೃಷ್ಣನನ್ನು ಎಚ್ಚರಿಸುತ್ತಿವೆಯೋ ಎಂಬಂತೆ ಚಿಲಿ-ಪಿಲಿಗುಟ್ಟುತ್ತಿದ್ದವು. ॥ ೨ ॥ ಪ್ರಿಯತಮನ ಬಾಹುಪಾಶಗಳ ಅಂತರ್ಗತಳಾಗಿದ್ದ ರುಕ್ಮಿಣೀ ದೇವಿಯು ಆಲಿಂಗನಕ್ಕೆ ವಿಚ್ಛಿತ್ತಿಯುಂಟಾಗುವುದೆಂಬ ಭಯದಿಂದ ಮಂಗಳಕರವಾದ ಬ್ರಾಹ್ಮಮುಹೂರ್ತವು ಬಂದುದನ್ನು ಸಹಿಸದೇ ಹೋದಳು. ॥ ೩ ॥ ಭಗವಾನ್ ಶ್ರೀಕೃಷ್ಣನು ಪ್ರತಿದಿನವೂ ಬ್ರಾಹ್ಮ ಮುಹೂರ್ತದಲ್ಲೇ ಎದ್ದು ಕೈ-ಕಾಲುಗಳನ್ನು ತೊಳೆದು ಕೊಂಡು, ಆಚಮನಮಾಡಿ, ಮಾಯಾತೀತವಾದ ಚಿದಾತ್ಮ ಸ್ವರೂಪವನ್ನು ಧ್ಯಾನಮಾಡಲು ತೊಡಗುವನು. ಆ ಸಮಯದಲ್ಲಿ ಅವನ ರೋಮ-ರೋಮಗಳು ಆನಂದದಿಂದ ಪ್ರಸನ್ನವಾಗಿ ಇರುತ್ತಿದ್ದವು. ॥ ೪ ॥ ಪರೀಕ್ಷಿದ್ರಾಜನೇ! ಭಗವಂತನ ಆ ಆತ್ಮ ಸ್ವರೂಪವು ಅದ್ವಿತೀಯವೂ, ಅಖಂಡವೂ, ಅವಿನಾಶಿಯೂ ಆದ ಸತ್ಯ ಸ್ವರೂಪವಾಗಿದೆ. ಚಂದ್ರಸೂರ್ಯರು ನೇತ್ರೇಂದ್ರಿಯದ ಮೂಲವಾಗಿಯೂ, ನೇತ್ರೇಂದ್ರಿಯವು ಚಂದ್ರ-ಸೂರ್ಯರ ಮೂಲಕವಾಗಿಯೂ ಪ್ರಕಾಶಗೊಳ್ಳುವಂತೆ ಆತ್ಮಸ್ವರೂಪವು ಬೇರೆ ಯಾವುದರಿಂದಲೂ ಪ್ರಕಾಶಿಸುವುದಿಲ್ಲ, ಸ್ವಯಂ ಪ್ರಕಾಶವಾಗಿದೆ. ಅದು ಸ್ವಸ್ವರೂಪದಲ್ಲಿ ಸದಾ-ಸರ್ವದಾ ಕಾಲಾತೀತವಾಗಿ ಏಕರಸವಾಗಿ ಇರುವುದರಿಂದ ಅವಿದ್ಯೆಯು ಅದನ್ನು ಸ್ಪರ್ಶಿಸಲೂ ಕೂಡ ಸಮರ್ಥವಾಗುವುದಿಲ್ಲ. ಜಗತ್ತಿನ ಉತ್ಪತ್ತಿ, ಸ್ಥಿತಿ ಮತ್ತು ನಾಶಕ್ಕೆ ಕಾರಣಭೂತರಾದ ಬ್ರಹ್ಮಶಕ್ತಿ, ವಿಷ್ಣುಶಕ್ತಿ, ರುದ್ರಶಕ್ತಿಗಳ ಮೂಲಕವಾಗಿ ಆ ಆತ್ಮಸ್ವರೂಪವು ಏಕರಸ ಸತ್ತ್ವರೂಪವಾಗಿ ಆನಂದ ಸ್ವರೂಪವಾಗಿರುವುದೆಂದು ಊಹಿಸಬಹುದು. ಅದನ್ನು ತಿಳಿಸುವುದಕ್ಕಾಗಿಯೇ 'ಬ್ರಹ್ಮ' ಎಂಬ ಹೆಸರಿನಿಂದ ಹೇಳಲಾಗಿದೆ. ಭಗವಾನ್ ಶ್ರೀಕೃಷ್ಣನು ತನ್ನ ಆ ಆತ್ಮಸ್ವರೂಪವನ್ನೇ ಧ್ಯಾನಮಾಡುತ್ತಾನೆ. ॥ ೫ ॥ ಅನಂತರ ಅವನು ವಿಧಿಪೂರ್ವಕವಾಗಿ ನಿರ್ಮಲವೂ ಪವಿತ್ರವೂ ಆದ ನೀರಿನಲ್ಲಿ ಮುಳುಗಿ ಸ್ನಾನಮಾಡುವನು. ಮತ್ತೆ ಶುದ್ಧವಾದ ಧೋತಿಯನ್ನುಟ್ಟು ಉತ್ತರೀಯವನ್ನು ಹೊದ್ದು ಸಂಧ್ಯಾ ವಂದನೆಯೇ ಮೊದಲಾದ ನಿತ್ಯಕರ್ಮಗಳನ್ನು ಮಾಡುತ್ತಾನೆ. ಬಳಿಕ ಹವನ ಮಾಡಿ, ಮೌನವಾಗಿ ಗಾಯತ್ರಿಯನ್ನು ಜಪಿಸುವನು. ॥ ೬ ॥ ಬಳಿಕ ಸೂರ್ಯನು ಉದಯಿಸುವವರೆಗೆ ಸೂರ್ಯೋಪಸ್ಥಾನವನ್ನು ಮಾಡಿ, ತನ್ನ ಕಲಾಸ್ವರೂಪರಾದ ದೇವತೆಗಳಿಗೆ, ಋಷಿಗಳಿಗೆ ಮತ್ತು ಪಿತೃಗಳಿಗೆ ತರ್ಪಣಗಳನ್ನು ಕೊಡುತ್ತಿದ್ದನು. ಮತ್ತೆ ಕುಲವೃದ್ಧರನ್ನು, ಬ್ರಾಹ್ಮಣರನ್ನು ಯಥಾವಿಧಿಯಾಗಿ ಪೂಜಿಸುವನು. ಅನಂತರ ಮನನಶೀಲನಾದ ಶ್ರೀಕೃಷ್ಣನು ಹಾಲು ಕೊಡುವ, ಸಾಧು ಸ್ವಭಾವದ ಸವತ್ಸಗೋವುಗಳನ್ನು ದಾನಮಾಡುತ್ತಿದ್ದನು. ಆಗ ಆ ಗೋವುಗಳನ್ನು ಸುಂದರವಾದ ವಸ್ತ್ರಗಳಿಂದ, ಮುತ್ತಿನಹಾರಗಳಿಂದ ಅಲಂಕರಿಸಿ, ಅವುಗಳ ಕೊಂಬುಗಳಿಗೆ ಚಿನ್ನವನ್ನು ಅಲಂಕರಿಸಿ, ಗೊರಸುಗಳಿಗೆ ಬೆಳ್ಳಿಯ ಕವಚ

ದದೌ ರೂಪ್ಯಖುರಾಗ್ರಾಣಾಂ ಕ್ಷೌಮಾಜಿನತಿಲೈಃ ಸಹ।
ಅಲಂಕೃತೇಭ್ಯೋ ವಿಪ್ರೇಭ್ಯೋ ಬದ್ವಂ ಬದ್ವಂ ದಿನೇ ದಿನೇ ॥ ೯ ॥

ಗೋವಿಪ್ರದೇವತಾವೃದ್ಧಗುರೂನ್ ಭೂತಾನಿ ಸರ್ವಶಃ।
ನಮಸ್ಕೃತ್ಯಾತ್ಮಸಂಭೂತೀರ್ಮಂಗಲಾನಿ ಸಮಸ್ಪೃಶತ್ ॥ ೧೦ ॥

ಆತ್ಮಾನಂ ಭೂಷಯಾಮಾಸ ನರಲೋಕವಿಭೂಷಣಮ್।
ವಾಸೋಭಿರ್ಭೂಷಣೈಃ ಸ್ವೀಯೈರ್ದಿವ್ಯಸ್ರಗನುಲೇಪನೈಃ ॥ ೧೧ ॥

ಅವೇಕ್ಷ್ಯಾಜ್ಯಂ ತಥಾಽಽದರ್ಶಂ ಗೋವೃಷದ್ವಿಜದೇವತಾಃ।
ಕಾಮಾಂಶ್ಚ ಸರ್ವವರ್ಣಾನಾಂ ಪೌರಾಂತಃಪುರಚಾರಿಣಾಮ್।
ಪ್ರದಾಪ್ಯ ಪ್ರಕೃತೀಃ ಕಾಮೈಃ ಪ್ರತೋಷ್ಯ ಪ್ರತ್ಯನಂದತ ॥ ೧೨ ॥

ಸಂವಿಭಜ್ಯಾಗ್ರತೋ ವಿಪ್ರಾನ್ ಸ್ರಕ್ತಾಂಬೂಲಾನುಲೇಪನೈಃ।
ಸುಹೃದಃ ಪ್ರಕೃತೀರ್ದಾರಾನುಪಾಯುಂಕ್ತ ತತಃ ಸ್ವಯಮ್ ॥ ೧೩ ॥

ತಾವತ್ಸೂತ ಉಪಾನೀಯ ಸ್ಯಂದನಂ ಪರಮಾದ್ಭುತಮ್।
ಸುಗ್ರೀವಾದ್ಯೈರ್ಹಯೈರ್ಯುಕ್ತಂ ಪ್ರಣಮ್ಯಾವಸ್ಥಿತೋಽಗ್ರತಃ ॥ ೧೪ ॥

ಗೃಹೀತ್ವಾ ಪಾಣಿನಾ ಪಾಣೀ ಸಾರಥೇಸ್ತಮಥಾರುಹತ್।
ಸಾತ್ಯಕ್ಯುದ್ಧವಸಂಯುಕ್ತಃ ಪೂರ್ವಾದ್ರಿಮಿವ ಭಾಸ್ಕರಃ ॥ ೧೫ ॥

ಈಕ್ಷಿತೋಽಂತಃಪುರಸ್ತ್ರೀಣಾಂ ಸವ್ರೀಡಪ್ರೇಮವೀಕ್ಷಿತೈಃ।
ಕೃಚ್ಛ್ರಾದ್ವಿಸೃಷ್ಟೋ ನಿರಗಾಜ್ಜಾತಹಾಸೋ ಹರನ್ ಮನಃ ॥ ೧೬ ॥

ಸುಧರ್ಮಾಖ್ಯಾಂ ಸಭಾಂ ಸರ್ವೈರ್ವೃಷ್ಣಿಭಿಃ ಪರಿವಾರಿತಃ।
ಪ್ರಾವಿಶದ್ಯನ್ನಿವಿಷ್ಟಾನಾಂ ನ ಸಂತ್ಯಂಗ ಷಡೂರ್ಮಯಃ ॥ ೧೭ ॥

ತತ್ರೋಪವಿಷ್ಟಃ ಪರಮಾಸನೇ ವಿಭು-
ರ್ಬಭೌ ಸ್ವಭಾಸಾ ಕಕುಭೋಽವಭಾಸಯನ್।
ವೃತೋ ನೃಸಿಂಹೈರ್ಯದುಭಿರ್ಯದೂತ್ತಮೋ
ಯಥೋಡುರಾಜೋ ದಿವಿ ತಾರಕಾಗಣೈಃ ॥ ೧೮ ॥

ಗಳನ್ನು ತೊಡಿಸಲಾಗುತ್ತಿತ್ತು. ಶ್ರೀಕೃಷ್ಣನು ಬ್ರಾಹ್ಮಣರನ್ನು ವಸ್ತ್ರ ಭೂಷಣಗಳಿಂದ ಸತ್ಕರಿಸಿ, ರೇಷ್ಮೆ ವಸ್ತ್ರ, ಮೃಗಚರ್ಮ ಮತ್ತು ಎಳ್ಳಿನೊಂದಿಗೆ ಪ್ರತಿದಿನವೂ ಹದಿಮೂರುಸಾವಿರದ ಎಂಭತ್ತನಾಲ್ಕು (ಒಂದು ಬದ್ವ) ಗೋವುಗಳನ್ನು ದಾನಮಾಡುತ್ತಿದ್ದನು. ॥ ೮-೯ ॥ ಬಳಿಕ ತನ್ನ ವಿಭೂತಿರೂಪವಾದ ಗೋವು, ಬ್ರಾಹ್ಮಣ, ದೇವತೆ, ಕುಲವೃದ್ಧರು, ಗುರುಗಳು ಮತ್ತು ಸಮಸ್ತ ಪ್ರಾಣಿಗಳನ್ನು ನಮಸ್ಕರಿಸಿ ಮಾಂಗಲಿಕ ವಸ್ತುಗಳನ್ನು ಸ್ಪರ್ಶಿಸುತ್ತಿದ್ದನು. ॥ ೧೦ ॥ ಪರೀಕ್ಷಿತನೇ! ಭಗವಂತನ ಶರೀರದ ಸಹಜ ಸೌಂದರ್ಯವೇ ಮನುಷ್ಯಲೋಕದ ಅಲಂಕಾರವಾಗಿದ್ದರೂ ಅವನು ಪೀತಾಂಬರವೇ ಮೊದಲಾದ ದಿವ್ಯ ವಸ್ತ್ರಗಳನ್ನು, ಕೌಸ್ತುಭಾದಿ ಆಭೂಷಣಗಳನ್ನು, ಪುಷ್ಪಹಾರಗಳನ್ನು ಧರಿಸಿಕೊಂಡು, ಚಂದನವೇ ಮುಂತಾದ ದಿವ್ಯ ಪರಿಮಳ ದ್ರವ್ಯಗಳಿಂದ ತನ್ನನ್ನು ಅಲಂಕರಿಸಿಕೊಳ್ಳುತ್ತಿದ್ದನು. ॥ ೧೧ ॥ ಮತ್ತೆ ಅವನು ತುಪ್ಪದಲ್ಲಿಯೂ, ದರ್ಪಣದಲ್ಲಿಯೂ ತನ್ನ ಮುಖಾರವಿಂದವನ್ನು ನೋಡಿಕೊಂಡು, ಗೋ, ವೃಷಭ, ಬ್ರಾಹ್ಮಣ, ದೇವತಾ ಪ್ರತಿಮೆಗಳನ್ನು ದರ್ಶಿಸುವನು. ಪುನಃ ಪುರವಾಸಿಗಳ ಮತ್ತು ಅಂತಃಪುರದಲ್ಲಿ ವಾಸಿಸುವ ನಾಲ್ಕು ವರ್ಣದ ಜನರುಗಳ ಅಭಿಲಾಷೆಯನ್ನು ಪೂರ್ಣಗೊಳಿಸಿ, ಅವರನ್ನು ಸಂತುಷ್ಟಗೊಳಿಸಿ. ಬೇರೆ ಗ್ರಾಮವಾಸಿ ಪ್ರಜೆಗಳ ಕಾಮನೆಗಳನ್ನು ಪೂರ್ಣಗೊಳಿಸಿ, ಹೀಗೆ ಎಲ್ಲರನ್ನು ಸಂತೋಷಪಡಿಸಿ, ಅವರನ್ನು ನೋಡಿ ತಾನು ಸಂತೋಷಗೊಳ್ಳುವನು. ॥ ೧೨ ॥ ಅವನು ಪುಷ್ಪಮಾಲೆ, ತಾಂಬೂಲ, ಚಂದನ ಮತ್ತು ಅಂಗರಾಗ ಮೊದಲಾದ ವಸ್ತುಗಳನ್ನು ಮೊದಲಿಗೆ ಬ್ರಾಹ್ಮಣರಿಗೆ, ಸ್ವಜನ-ಸಂಬಂಧಿಗಳಿಗೆ, ಮಂತ್ರಿ, ರಾಣಿಯರಿಗೆ ಹಂಚಿಕೊಟ್ಟು ಉಳಿದುದನ್ನು ತಾನು ಉಪಯೋಗಿಸುತ್ತಿದ್ದನು. ॥ ೧೩ ॥ ಭಗವಂತನು ಇಷ್ಟೆಲ್ಲ ಮಾಡುವಷ್ಟರಲ್ಲಿ ಸಾರಥಿಯಾದ ದಾರುಕನು ಸುಗ್ರೀವಾದಿ ಕುದುರೆಗಳನ್ನು ಹೂಡಿದ ಅತ್ಯಂತ ಅದ್ಭುತವಾದ ರಥವನ್ನು ತಂದು ನಿಲ್ಲಿಸಿ ಶ್ರೀಕೃಷ್ಣನಿಗೆ ವಂದಿಸಿ ಅವನ ಮುಂದೆ ನಿಲ್ಲುತ್ತಿದ್ದನು. ॥ ೧೪ ॥ ಅನಂತರ ಭಗವಾನ್ ಶ್ರೀಕೃಷ್ಣನು ಸಾತ್ಯಕಿ ಮತ್ತು ಉದ್ಧವರೊಂದಿಗೆ, ಸಾರಥಿಯ ಕೈಯನ್ನು ಹಿಡಿದುಕೊಂಡು ಭುವನ ಭಾಸ್ಕರ ಭಗವಾನ್ ಸೂರ್ಯನು ಉದಯಾಚಲದಲ್ಲಿ ಆರೂಢನಾಗುವಂತೆಯೇ ರಥಾರೂಢನಾಗುವನು. ॥ ೧೫ ॥ ಆ ಸಮಯದಲ್ಲಿ ರಾಣಿವಾಸದ ಸ್ತ್ರೀಯರು ನಾಚಿಕೆ ಮತ್ತು ಪ್ರೇಮಪೂರ್ಣವಾದ ನೋಟದಿಂದ ಅವನನ್ನು ನೋಡುತ್ತಾ ಬಹಳ ಕಷ್ಟದಿಂದ ಬೀಳ್ಕೊಡುತ್ತಿದ್ದರು. ಭಗವಂತನು ಅವರ ಚಿತ್ತವನ್ನು ಅಪಹರಿಸಿಕೊಂಡು ಅರಮನೆಯಿಂದ ಹೊರಡುತ್ತಿದ್ದನು. ॥ ೧೬ ॥

ಪರೀಕ್ಷಿತನೇ! ಅನಂತರ ಭಗವಾನ್ ಶ್ರೀಕೃಷ್ಣನು ಸಮಸ್ತ ಯದುವಂಶೀಯರೊಂದಿಗೆ ಸುಧರ್ಮಾ ಎಂಬ ಸಭೆಯನ್ನು ಪ್ರವೇಶಿಸುವನು. ಆ ಸಭೆಯ ಮಹಿಮೆ ಎಂದರೆ ಅದರಲ್ಲಿ ಕುಳಿತಿರುವವರಿಗೆ ಹಸಿವು-ಬಾಯಾರಿಕೆ, ಶೋಕ-ಮೋಹ, ಜರಾಮೃತ್ಯುವೆಂಬ ಆರು ಊರ್ಮಿಗಳು ಬಾಧಿಸುವುದಿಲ್ಲ. ॥ ೧೭ ॥ ಭಗವಾನ್ ಶ್ರೀಕೃಷ್ಣನು ತನ್ನ ಅಂಗಕಾಂತಿಯಿಂದ ದಶದಿಕ್ಕುಗಳನ್ನು ಬೆಳಗಿಸುತ್ತಾ ಶ್ರೇಷ್ಠ ಸಿಂಹಾಸನದಲ್ಲಿ ವಿರಾಜಿಸುವನು. ಆ ಸಮಯದಲ್ಲಿ ಯದುವಂಶೀಯ ವೀರರ ನಡುವೆ ಯದುವಂಶಶಿರೋಮಣಿ ಭಗವಾನ್ ಶ್ರೀಕೃಷ್ಣನು ಆಕಾಶದಲ್ಲಿ ತಾರೆಯರಿಂದ ಸುತ್ತುವರಿಯಲ್ಪಟ್ಟ ಚಂದ್ರನಂತೆ ಆ ಸಭೆಯಲ್ಲಿ ಶೋಭಿಸುತ್ತಿದ್ದನು. ॥ ೧೮ ॥

ತತ್ರೋಪಮಂತ್ರಿಣೋ ರಾಜನ್ ನಾನಾಹಾಸ್ಯರಸೈರ್ವಿಭುಮ್ ।
ಉಪತಸ್ಥುರ್ನಟಾಚಾರ್ಯಾ ನರ್ತಕ್ಯಸ್ತಾಂಡವೈಃ ಪೃಥಕ್ ॥ ೧೯ ॥

ಮೃದಂಗವೀಣಾಮುರಜವೇಣುತಾಲದರಸ್ವನೈಃ ।
ನನೃತುರ್ಜಗುಸ್ತುಷ್ಟುವುಶ್ಚ ಸೂತಮಾಗಧವಂದಿನಃ ॥ ೨೦ ॥

ತತ್ರಾಹುರ್ಬ್ರಾಹ್ಮಣಾಃ ಕೇಚಿದಾಸೀನಾ ಬ್ರಹ್ಮವಾದಿನಃ ।
ಪೂರ್ವೇಷಾಂ ಪುಣ್ಯಯಶಸಾಂ ರಾಜ್ಞಾಂ ಚಾಕಥಯನ್ಕಥಾಃ ॥ ೨೧ ॥

ತತ್ರೈಕಃ ಪುರುಷೋ ರಾಜನ್ನಾಗತೋಽಪೂರ್ವದರ್ಶನಃ ।
ವಿಜ್ಞಾಪಿತೋ ಭಗವತೇ ಪ್ರತೀಹಾರೈಃ ಪ್ರವೇಶಿತಃ ॥ ೨೨ ॥

ಸ ನಮಸ್ಕೃತ್ಯ ಕೃಷ್ಣಾಯ ಪರೇಶಾಯ ಕೃತಾಂಜಲಿಃ ।
ರಾಜ್ಞಾಮಾವೇದಯದ್ದುಃಖಂ ಜರಾಸಂಧನಿರೋಧಜಮ್ ॥ ೨೩ ॥

ಯೇ ಚ ದಿಗ್ವಿಜಯೇ ತಸ್ಯ ಸನ್ನತಿಂ ನ ಯಯುರ್ನೃಪಾಃ ।
ಪ್ರಸಹ್ಯ ರುದ್ಧಾಸ್ತೇನಾಸನ್ನಯುತೇ ದ್ವೇ ಗಿರಿವ್ರಜೇ ॥ ೨೪ ॥

ಕೃಷ್ಣ ಕೃಷ್ಣಾಪ್ರಮೇಯಾತ್ಮನ್ ಪ್ರಪನ್ನಭಯಭಂಜನ ।
ವಯಂ ತ್ವಾಂ ಶರಣಂ ಯಾಮೋ ಭವಭೀತಾಃ ಪೃಥಗ್ಧಿಯಃ ॥ ೨೫ ॥

ಲೋಕೋ ವಿಕರ್ಮನಿರತಃ ಕುಶಲೇ ಪ್ರಮತ್ತಃ
ಕರ್ಮಣ್ಯಯಂ ತ್ವದುದಿತೇ ಭವದರ್ಚನೇ ಸ್ವೇ ।
ಯಸ್ತಾವದಸ್ಯ ಬಲವಾನಿಹ ಜೀವಿತಾಶಾಂ
ಸದ್ಯಶ್ಛಿನತ್ತ್ಯನಿಮಿಷಾಯ ನಮೋಽಸ್ತು ತಸ್ಮೈ ॥ ೨೬ ॥

ಲೋಕೇ ಭವಾನ್ಜಗದಿನಃ ಕಲಯಾವತೀರ್ಣಃ
ಸದ್ರಕ್ಷಣಾಯ ಖಲನಿಗ್ರಹಣಾಯ ಚಾನ್ಯಃ ।
ಕಶ್ಚಿತ್ತ್ವದೀಯಮತಿಯಾತಿ ನಿದೇಶಮೀಶ
ಕಿಂ ವಾ ಜನಃ ಸ್ವಕೃತಮೃಚ್ಛತಿ ತನ್ನ ವಿದ್ಮಃ ॥ ೨೭ ॥

ಪರೀಕ್ಷಿತನೇ! ಆ ಸಭೆಯಲ್ಲಿ ವಿದೂಷಕರು ನಾನಾ ವಿಧದ ಹಾಸ್ಯಚಟಾಕಿಗಳಿಂದ, ನಾಟ್ಯಾಚಾರ್ಯರು ನಟನೆಯಿಂದ, ನರ್ತಕಿಯರು ಬೇರೆ-ಬೇರೆ ಗುಂಪು-ಗುಂಪಾಗಿ ಕಲಾಪೂರ್ಣ ನೃತ್ಯಗಳಿಂದ ಭಗವಂತನ ಸೇವೆ ಮಾಡುತ್ತಿದ್ದರು. ॥ ೧೯ ॥ ಆಗ ಮೃದಂಗ, ವೀಣೆ, ಪಖವಾಜ್, ಕೊಳಲು, ಕರತಾಳ, ಶಂಖ ಮೊದಲಾದ ವಾದ್ಯಗಳು ಮೊಳಗುತ್ತಿದ್ದವು. ಸೂತ-ಮಾಗಧ ವಂದೀಜನರು ಹಾಡುತ್ತಾ-ಕುಣಿಯುತ್ತಾ ಭಗವಂತನನ್ನು ಸ್ತುತಿಸುತ್ತಿದ್ದರು. ॥ ೨೦ ॥ ಕೆಲವು ವ್ಯಾಖ್ಯಾನ ಕುಶಲರಾದ ಬ್ರಾಹ್ಮಣರು ಅಲ್ಲಿ ಕುಳಿತು ಬ್ರಹ್ಮತತ್ತ್ವವನ್ನು ಪ್ರತಿಪಾದಿಸುತ್ತಿದ್ದರು. ಮತ್ತೆ ಕೆಲವರು ಪೂರ್ವಕಾಲದ ಪವಿತ್ರಕೀರ್ತಿಗಳಾದ ರಾಜರ ಕಥೆಗಳನ್ನು ಹೇಳುತ್ತಿದ್ದರು. ಹೀಗೆಯೇ ಶ್ರೀಕೃಷ್ಣನ ದಿನಚರಿಯು ಅನುದಿನವೂ ನಡೆಯುತ್ತಿತ್ತು. ॥ ೨೧ ॥

ಹೀಗೆಯೇ ಒಂದು ದಿನ ಭಗವಂತನು ಸುಧರ್ಮಾ ಸಭೆಯಲ್ಲಿ ಸಿಂಹಾಸನಾರೂಢನಾಗಿ ಕುಳಿತಿರುವಾಗ ಸಭಾದ್ವಾರಕ್ಕೆ ಒಬ್ಬ ಅಪರಿಚಿತ ವ್ಯಕ್ತಿಯು ಬಂದನು. ದ್ವಾರಪಾಲಕರು ಶ್ರೀಕೃಷ್ಣನಿಗೆ ಇದರ ಸೂಚನೆಯಿತ್ತು ಅವನನ್ನು ಸಭೆಗೆ ಕರೆತಂದರು. ॥ ೨೨ ॥ ಆ ಮನುಷ್ಯನು ಪರಮೇಶ್ವರನಾದ ಶ್ರೀಕೃಷ್ಣನಿಗೆ ಕೈಮುಗಿದು ನಮಸ್ಕರಿಸಿ ಜರಾಸಂಧನಿಂದ ಸೆರೆಹಿಡಿಯಲ್ಪಟ್ಟ ರಾಜರಿಗೆ ಉಂಟಾದ ದುಃಖವನ್ನು ವಿವರಿಸಿ ಹೇಳಿದನು. ಜರಾಸಂಧನು ದಿಗ್ವಿಜಯದ ಸಮಯದಲ್ಲಿ ಆತನಿಗೆ ತಲೆಬಾಗದಿದ್ದ ರಾಜರನ್ನು ಯುದ್ಧದಲ್ಲಿ ಪರಾಜಯಗೊಳಿಸಿ ಗಿರಿವ್ರಜದ ಸೆರೆಮನೆಯಲ್ಲಿಡುತ್ತಿದ್ದನು. ಅಂತಹವರ ಸಂಖ್ಯೆಯು ಇಪ್ಪತ್ತು ಸಾವಿರದಷ್ಟಿದೆ. ಅಂತಹ ರಾಜರು ತಮ್ಮ ಪ್ರಾರ್ಥನೆಯನ್ನು ಹೀಗೆ ಕಳಿಸಿದ್ದಾರೆ – ॥ ೨೩-೨೪ ॥ ಸಚ್ಚಿದಾನಂದ ಸ್ವರೂಪನಾದ ಶ್ರೀಕೃಷ್ಣನೇ! ಅಪ್ರಮೇಯಾತ್ಮನೇ! ಶರಣಾಗತರಾದವರ ಭಯವನ್ನು ಧ್ವಂಸಮಾಡುವವನೇ! ನಮ್ಮ ಭೇದ ಬುದ್ಧಿಯು ಅಳಿಸಿಹೋಗಿಲ್ಲ, ನಾವು ಜನ್ಮ-ಮೃತ್ಯುರೂಪವಾದ ಸಂಸಾರಚಕ್ರದಿಂದ ಭಯಗೊಂಡು ನಿನಗೆ ಶರಣು ಬಂದಿದ್ದೇವೆ. ॥ ೨೫ ॥ ಭಗವಂತಾ! ಲೋಕದಲ್ಲಿ ಅಧಿಕಾಂಶ ಜನರು ಸಕಾಮಕರ್ಮಗಳಲ್ಲಿ ಮತ್ತು ನಿಷಿದ್ಧಕರ್ಮಗಳಲ್ಲಿ ತೊಡಗಿದ್ದು ಕ್ಷೇಮಕರವಾದ ಸ್ವಧರ್ಮಗಳಲ್ಲಿ ವಿಸ್ಮರಣೆಯನ್ನು ಹೊಂದಿರುವರು. ನಿನ್ನಿಂದಲೇ ಹೇಳಲ್ಪಟ್ಟ ಪಾಂಚರಾತ್ರಾದ್ಯಾಗಮದ ಮೂಲಕ ನಿನ್ನ ಪೂಜಾದ್ಯುಪಚಾರಗಳನ್ನು ಮಾಡುವ ಮನಸ್ಸುಳ್ಳವರಾಗುವುದಿಲ್ಲ. ನೀನು ಮಹಾಬಲಿಷ್ಠನಾಗಿರುವೆ. ಕಾಲರೂಪದಿಂದ ನೀನು ಸದಾ-ಸರ್ವದಾ ಸಾವಧಾನದಿಂದಿರುತ್ತಾ ಅಂತಹವರ ಆಶಾಲತೆಯನ್ನು ಕ್ಷಣಮಾತ್ರದಲ್ಲಿ ಕತ್ತರಿಸಿ ಹಾಕುವೆ. ಅಂತಹ ಕಾಲರೂಪವಾದ ನಿನಗೆ ನಮಸ್ಕರಿಸುತ್ತೇವೆ. ॥ ೨೬ ॥ ಪ್ರಭುವೇ! ನೀನು ಜಗದೀಶ್ವರನೇ ಆಗಿರುವೆ. ಸತ್ಪುರುಷರ ರಕ್ಷಣೆಗಾಗಿಯೂ, ದುಷ್ಟರ ನಿಗ್ರಹಕ್ಕಾಗಿಯೂ ಜ್ಞಾನ-ಬಲ ಇವೇ ಮುಂತಾದ ಕಲೆಗಳೊಡನೆ ನೀನು ಅವತರಿಸಿರುವೆ. ಇಂತಹ ಸ್ಥಿತಿಯಲ್ಲಿ ಜರಾಸಂಧನಾಗಲೀ ಇತರ ರಾಜರಾಗಲೀ ನಿನ್ನ ಇಚ್ಛೆಗೆ ಮತ್ತು ಆಜ್ಞೆಗೆ ವಿರುದ್ಧವಾಗಿ ನಮ್ಮನ್ನು ಹೀಗೆ ತೊಂದರೆಪಡಿಸುತ್ತಿದ್ದಾರೆ? ಇದನ್ನು ನಾವು ಅರಿಯೆವು. ಒಂದು ವೇಳೆ 'ಜರಾಸಂಧನು ಕಷ್ಟವನ್ನು ಕೊಡುತ್ತಿಲ್ಲ, ಅವನ

ಸ್ವಪ್ನಾಯಿತಂ ನೃಪಸುಖಂ ಪರತಂತ್ರಮೀಶ
ಶಶ್ವದ್ಭಯೇನ ಮೃತಕೇನ ಧುರಂ ವಹಾಮಃ ।
ಹಿತ್ವಾ ತದಾತ್ಮನಿ ಸುಖಂ ತ್ವದನೀಹಲಭ್ಯಂ
ಕ್ಲಿಶ್ಯಾಮಹೇಽತಿಕೃಪಣಾಸ್ತವ ಮಾಯಯೇಹ ॥ ೨೮ ॥

ತನ್ನೋ ಭವಾನ್ಪ್ರಣತಶೋಕಹರಾಂಘ್ರಿಯುಗ್ಮೋ
ಬದ್ಧಾನ್ವಿಯುಂಕ್ಷ್ವ ಮಗಧಾಹ್ವಯಕರ್ಮಪಾಶಾತ್ ।
ಯೋ ಭೂಭುಜೋಽಯುತಮತಂಗಜವೀರ್ಯಮೇಕೋ
ಬಿಭ್ರದ್ರುರೋಧ ಭವನೇ ಮೃಗರಾಡಿವಾವೀಃ ॥ ೨೯ ॥

ಯೋ ವೈ ತ್ವಯಾ ದ್ವಿನವಕೃತ್ವ ಉದಾತ್ತಚಕ್ರ
ಭಗ್ನೋ ಮೃಧೇ ಖಲು ಭವಂತಮನಂತವೀರ್ಯಮ್ ।
ಜಿತ್ವಾ ನೃಲೋಕನಿರತಂ ಸಕೃದೂಢದರ್ಪೋ
ಯುಷ್ಮತ್ಪ್ರಜಾ ರುಜತಿ ನೋಽಜಿತ ತದ್ವಿಧೇಹಿ ॥ ೩೦ ॥

ದೂತ ಉವಾಚ

ಇತಿ ಮಾಗಧಸಂರುದ್ಧಾ ಭವದ್ದರ್ಶನಕಾಂಕ್ಷಿಣಃ ।
ಪ್ರಪನ್ನಾಃ ಪಾದಮೂಲಂ ತೇ ದೀನಾನಾಂ ಶಂ ವಿಧೀಯತಾಮ್ ॥ ೩೧ ॥

ಶ್ರೀಶುಕ ಉವಾಚ

ರಾಜದೂತೇ ಬ್ರುವತ್ಯೇವಂ ದೇವರ್ಷಿಃ ಪರಮದ್ಯುತಿಃ ।
ಬಿಭ್ರತ್ಪಿಂಗಜಟಾಭಾರಂ ಪ್ರಾದುರಾಸೀದ್ಯಥಾ ರವಿಃ ॥ ೩೨ ॥

ತಂ ದೃಷ್ಟ್ವಾ ಭಗವಾನ್ ಕೃಷ್ಣಃ ಸರ್ವಲೋಕೇಶ್ವರೇಶ್ವರಃ ।
ವವಂದ ಉತ್ಥಿತಃ ಶೀರ್ಷ್ಣಾ ಸಸಭ್ಯಃ ಸಾನುಗೋ ಮುದಾ ॥ ೩೩ ॥

ರೂಪದಿಂದ, ಅವನ್ನು ನಿಮಿತ್ತವಾಗಿಸಿಕೊಂಡು ನಮ್ಮ ಅಶುಭ ಕರ್ಮಗಳೇ ನಮಗೆ ದುಃಖಕೊಡುತ್ತಿವೆ ಎಂದು ಹೇಳಿದರೂ ಇದು ಸರಿಯಲ್ಲ. ಏಕೆಂದರೆ, ನಾವುಗಳು ನಿನ್ನವರಾದಾಗ ನಮ್ಮ ದುಷ್ಕರ್ಮಗಳು ನಮಗೆ ಫಲಕೊಡಲು ಹೇಗೆ ಸಮರ್ಥವಾದಾವು? ಆದ್ದರಿಂದ ನೀನು ದಯೆತೋರಿ ಅವಶ್ಯವಾಗಿ ನಮ್ಮನ್ನು ಈ ಕ್ಲೇಶಗಳಿಂದ ಬಿಡುಗಡೆಗೊಳಿಸು. ॥ ೨೭ ॥ ಪ್ರಭುವೇ! ರಾಜಸೌಖ್ಯವೆಂಬುದು ಸ್ವಪ್ನಪ್ರಾಯವಾದುದು ಮತ್ತು ಪರಾಧೀನವಾದುದು. ರಾಜಸುಖವನ್ನು ಉಪಭೋಗಿಸುವ ಈ ಶರೀರವು ಜೀವಚ್ಛವದಂತಿದೆ. ಸದಾ ಭಯಗೊಂಡೇ ಹೆಣದಂತಿರುವ ಈ ಶರೀರದಿಂದ ರಾಜ್ಯದ ಹೊರೆಯನ್ನು ಹೊರುತ್ತೇವೆ. ನಿನ್ನ ಕೃಪೆಯಿಂದ ನಿಷ್ಕಾಮಕರ್ಮಗಳಿಗೆ ಪ್ರಾಪ್ತವಾಗುವ ಸ್ವತಂತ್ರವಾದ ಆತ್ಮಸುಖವನ್ನು ತ್ಯಜಿಸಿದ್ದೇವೆ. ಅಜ್ಞಾನಿಗಳಾದ ನಾವು ನಿನ್ನ ಮಾಯೆಯಿಂದ ವಿಮೋಹಿತರಾಗಿ ಬಹಳವಾಗಿ ಕ್ಲೇಶಗಳನ್ನು ಅನುಭವಿಸುತ್ತಿದ್ದೇವೆ. ॥ ೨೮ ॥ ಭಗವಂತ! ನಿನ್ನ ಚರಣಕಮಲಗಳು ಶರಣಾಗತರಾದವರ ಸಮಸ್ತ ಶೋಕಗಳನ್ನೂ, ಮೋಹಗಳನ್ನೂ ನಾಶಗೊಳಿಸುತ್ತವೆ. ಆದುದರಿಂದ ಜರಾಸಂಧರೂಪವಾದ ಕರ್ಮಬಂಧನದಿಂದ ನಮ್ಮನ್ನು ಬಿಡುಗಡೆಗೊಳಿಸು. ಪ್ರಭೋ! ಈ ಜರಾಸಂಧನು ಹತ್ತು ಸಾವಿರ ಆನೆಗಳ ಬಲವನ್ನು ಒಬ್ಬನೇ ಹೊಂದಿದ್ದಾನೆ. ಸಿಂಹವು ಕುರಿಗಳನ್ನು ತಡೆಹಿಡಿದಿರುವಂತೆ ಇವನು ನಮ್ಮನ್ನು ಬಂಧನದಲ್ಲಿರಿಸಿದ್ದಾನೆ. ॥ ೨೯ ॥ ಚಕ್ರಪಾಣಿಯೇ! ಜರಾಸಂಧನು ಹದಿನೆಂಟು ಬಾರಿ ನಿನ್ನೊಡನೆ ಯುದ್ಧಮಾಡಿ ಹದಿನೇಳು ಬಾರಿ ಪರಾಜಿತನಾಗಿ ಓಡಿದ್ದಾನೆ. ಆದರೆ ಒಂದೇ ಸಲ ನಿನ್ನನ್ನು ಗೆದ್ದಿರುವನು. ನಿನ್ನ ಶಕ್ತಿ-ಬಲ-ಪೌರುಷಗಳು ಅನಂತವಾಗಿವೆ ಎಂಬುದನ್ನು ನಾವು ಬಲ್ಲೆವು. ಹೀಗಿದ್ದರೂ ಮನುಷ್ಯರಂತೆ ಆಚರಿಸಿ ನೀನೇ ಸೋತವನಂತೆ ಅಭಿನಯಿಸಿದೆ. ಆದರೆ ಇದರಿಂದ ಅವನ ಅಹಂಕಾರವು ಬೆಳೆದು ಹೋಯಿತು. ಓ ಅಜಿತನೇ! ನಾವೆಲ್ಲರೂ ನಿನ್ನ ಭಕ್ತರಾಗಿ ಇದ್ದೇವೆ, ನಿನ್ನ ಪ್ರಜೆಗಳಾಗಿದ್ದೇವೆ ಎಂದು ತಿಳಿದು ನಮಗೆಲ್ಲ ಇನ್ನೂ ಜಾಸ್ತಿ ಕಷ್ಟಗಳನ್ನು ಕೊಡುತ್ತಿದ್ದಾನೆ. ಈಗ ನಿನಗೆ ಉಚಿತವೆನಿಸಿದಂತೆ ಮಾಡು. ॥ ೩೦ ॥

ದೂತನು ಹೇಳಿದನು – ಭಗವಂತಾ! ಜರಾಸಂಧನಲ್ಲಿ ಬಂದಿಯಾದ ರಾಜರು ಹೀಗೆ ನಿನ್ನಲ್ಲಿ ಪ್ರಾರ್ಥಿಸಿದ್ದಾರೆ. ಅವರೆಲ್ಲರೂ ನಿನ್ನ ಚರಣಕಮಲಗಳಲ್ಲಿ ಶರಣಾಗಿದ್ದಾರೆ ಮತ್ತು ನಿನ್ನ ದರ್ಶನವನ್ನು ಅಪೇಕ್ಷಿಸುತ್ತಿದ್ದಾರೆ. ನೀನು ದಯತೋರಿ ಆ ದೀನರಿಗೆ ಸುಖವನ್ನು ಉಂಟುಮಾಡು. ॥ ೩೧ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ! ರಾಜದೂತನು ಹೀಗೆ ಹೇಳುತ್ತಿರುವಂತೆಯೇ ಪರಮ ತೇಜಸ್ವಿಗಳಾದ ನಾರದಮಹರ್ಷಿಗಳು ಹೊಂಬಣ್ಣದ ಜಟಾಭಾರವನ್ನು ಧರಿಸಿದ್ದು ಸೂರ್ಯನಂತೇ ತೇಜಃಪುಂಜರಾಗಿ ಶ್ರೀಕೃಷ್ಣನ ಸಭೆಗೆ ಆಗಮಿಸಿದರು. ॥ ೩೨ ॥ ಬ್ರಹ್ಮನೇ ಮೊದಲಾದ ಸಮಸ್ತ ಲೋಕಪಾಲರಿಗೂ ಏಕಮಾತ್ರಸ್ವಾಮಿಯಾದ ಶ್ರೀಕೃಷ್ಣನು ನಾರದರನ್ನು ನೋಡುತ್ತಲೇ ಹರ್ಷಗೊಂಡು ಸಭ್ಯರೊಡನೆಯೂ, ಸೇವಕರೊಡನೆಯೂ ಎದ್ದುನಿಂತು ತಲೆಬಾಗಿ ನಮಸ್ಕರಿಸಿದನು. ॥ ೩೩ ॥

ಸಭಾಜಯಿತ್ವಾ ವಿಧಿವತ್ ಕೃತಾಸನಪರಿಗ್ರಹಮ್ ।
ಬಭಾಷೇ ಸೂನೃತೈರ್ವಾಕ್ಯೈಃ ಶ್ರದ್ಧಯಾ ತರ್ಪಯನ್ ಮುನಿಮ್ ॥ ೩೪ ॥

ಅಪಿ ಸ್ವಿದದ್ಯ ಲೋಕಾನಾಂ ತ್ರಯಾಣಾಮಕುತೋಭಯಮ್ ।
ನನು ಭೂಯಾನ್ ಭಗವತೋ ಲೋಕಾನ್ಪರ್ಯಟತೋ ಗುಣಃ ॥ ೩೫ ॥

ನ ಹಿ ತೇಽವಿದಿತಂ ಕಿಂಚಿತ್ ಲೋಕೇಷ್ವೀಶ್ವರಕರ್ತೃಷು ।
ಅಥ ಪೃಚ್ಛಾಮಹೇ ಯುಷ್ಮಾನ್ ಪಾಂಡವಾನಾಂ ಚಿಕೀರ್ಷಿತಮ್ ॥ ೩೬ ॥

ಶ್ರೀನಾರದ ಉವಾಚ

ದೃಷ್ಟಾ ಮಯಾ ತೇ ಬಹುಶೋ ದುರತ್ಯಯಾ
ಮಾಯಾ ವಿಭೋ ವಿಶ್ವಸೃಜಶ್ಚ ಮಾಯಿನಃ ।
ಭೂತೇಷು ಭೂಮಂಶ್ಚರತಃ ಸ್ವಶಕ್ತಿಭಿ-
ರ್ವಹ್ನೇರಿವಚ್ಛನ್ನರುಚೋ ನ ಮೇಽದ್ಭುತಮ್ ॥ ೩೭ ॥

ತವೇಹಿತಂ ಕೋಽರ್ಹತಿ ಸಾಧು ವೇದಿತುಂ
ಸ್ವಮಾಯಯೇದಂ ಸೃಜತೋ ನಿಯಚ್ಛತಃ ।
ಯದ್ವಿದ್ಯಮಾನಾತ್ಮತಯಾವಭಾಸತೇ
ತಸ್ಮೈ ನಮಸ್ತೇ ಸ್ವವಿಲಕ್ಷಣಾತ್ಮನೇ ॥ ೩೮ ॥

ಜೀವಸ್ಯ ಯಃ ಸಂಸರತೋ ವಿಮೋಕ್ಷಣಂ
ನ ಜಾನತೋಽನರ್ಥವಹಾಚ್ಛರೀರತಃ ।
ಲೀಲಾವತಾರೈಃ ಸ್ವಯಶಃ ಪ್ರದೀಪಕಂ
ಪ್ರಾಜ್ವಾಲಯತ್ತ್ವಾ ತಮಹಂ ಪ್ರಪದ್ಯೇ ॥ ೩೯ ॥

ಅಥಾಪ್ಯಾಶ್ರಾವಯೇ ಬ್ರಹ್ಮ ನರಲೋಕವಿಡಂಬನಮ್ ।
ರಾಜ್ಞಃ ಪೈತೃಷ್ವಸೇಯಸ್ಯ ಭಕ್ತಸ್ಯ ಚ ಚಿಕೀರ್ಷಿತಮ್ ॥ ೪೦ ॥

ನಾರದಮಹರ್ಷಿಗಳು ಆಸನವನ್ನು ಪರಿಗ್ರಹಿಸಿ ಆಸೀನರಾದ ನಂತರ ಭಗವಂತನು ಅವರನ್ನು ಯಥಾವಿಧಿಯಾಗಿ ಪೂಜಿಸಿ ಸಂತುಷ್ಟಗೊಳಿಸಿ ಸವಿಯಾದ ಮಾತುಗಳಿಂದ ಹೀಗೆ ಹೇಳಿದನು – ॥ ೩೪ ॥ ದೇವರ್ಷಿಗಳೇ! ಈ ಸಮಯದಲ್ಲಿ ಮೂರು ಲೋಕಗಳೂ ನಿರ್ಭಯವಾಗಿ ಸಕುಶಲರಾಗಿರುವುದಲ್ಲವೇ? ನೀವು ತ್ರಿಲೋಕ ಸಂಚಾರಿಗಳು. ಇದರಿಂದ ನಮಗೆ ಮನೆಯಲ್ಲಿದ್ದೇ ಎಲ್ಲ ಸಮಾಚಾರಗಳು ತಿಳಿಯುತ್ತಿರುವುದು ದೊಡ್ಡಲಾಭವಾಗಿದೆ. ॥ ೩೫ ॥ ಈಶ್ವರನಿಂದ ರಚಿಸಲ್ಪಟ್ಟ ಮೂರು ಲೋಕಗಳಲ್ಲಿಯೂ ನಿಮಗೆ ತಿಳಿಯದಿರುವ ಯಾವುದೇ ವಿಷಯವಿಲ್ಲ. ಆದ್ದರಿಂದ ಯುಧಿಷ್ಠಿರಾದಿ ಪಾಂಡವರು ಈಗ ಏನು ಮಾಡಬೇಕೆಂದಿರುವರು? ಇದನ್ನು ನಿಮ್ಮಿಂದ ತಿಳಿಯಲು ನಾನು ಬಯಸುತ್ತೇನೆ. ॥ ೩೬ ॥

ದೇವರ್ಷಿಗಳಾದ ನಾರದರು ಹೇಳಿದರು – ಸರ್ವವ್ಯಾಪಕನಾದ ಅನಂತನೇ! ವಿಶ್ವಕರ್ತೃವಾದ ನೀನು ಮಹಾಮಾಯಾವಿಯು. ಬ್ರಹ್ಮನೇ ಮೊದಲಾದ ದೊಡ್ಡ-ದೊಡ್ಡ ಮಾಯಾವಿಗಳೂ ಕೂಡ ನಿನ್ನ ಮಾಯೆಯ ಕೊನೆಯನ್ನು ಕಾಣರು. ಕಟ್ಟಿಗೆಯಲ್ಲಿ ಅಗ್ನಿಯು ಅಡಗಿರುವಂತೆಯೇ ನೀನು ಸಮಸ್ತ ಪ್ರಾಣಿಗಳ ಶರೀರಗಳಲ್ಲಿ ಅಚಿಂತ್ಯ ಶಕ್ತಿಯಿಂದ ವ್ಯಾಪ್ತನಾಗಿರುವೆ. ಆದರೆ ಜನರ ದೃಷ್ಟಿಯು ಸತ್ತ್ವಾದಿಗುಣಗಳಲ್ಲಿ ಸಿಕ್ಕಿ ಹಾಕಿಕೊಂಡಿದ್ದರಿಂದ ತಮ್ಮೊಳಗೆ ಇರುವ ನಿನ್ನನ್ನು ಅವರು ಕಾಣಲಾರರು. ನಾನು ಒಂದಲ್ಲ ಅನೇಕ ಬಾರಿ ನಿನ್ನ ಮಾಯೆಯನ್ನು ಕಂಡಿರುವೆನು. ಆದರಿಂದ ನೀನು ಏನೂ ತಿಳಿಯದವನಂತೆ ಪಾಂಡವರ ಸಮಾಚಾರವನ್ನು ಕೇಳುವುದರಲ್ಲಿ ನನಗೆ ಅದ್ಭುತವೇನೂ ಕಾಣುತ್ತಿಲ್ಲ. ॥ ೩೭ ॥ ಭಗವಂತಾ! ನೀನು ನಿನ್ನ ಮಾಯೆಯಿಂದಲೇ ಈ ಜಗತ್ತನ್ನು ರಚಿಸಿ, ಸಂಹಾರಮಾಡುವೆ. ಇದು ಮಿಥ್ಯೆಯಾಗಿದ್ದರೂ ನಿನ್ನ ಮಾಯೆಯಿಂದಾಗಿ ಸತ್ಯವಾಗಿರುವಂತೆ ಕಂಡುಬರುತ್ತದೆ. ನೀನು ಯಾವಾಗ ಏನು ಮಾಡಬೇಕೆಂದಿರುವೆಯೋ ಇದನ್ನು ಸರಿಯಾಗಿ ಯಾರು ತಾನೇ ಬಲ್ಲರು? ನಿನ್ನ ಸ್ವರೂಪವು ಸರ್ವಥಾ ಅಚಿಂತ್ಯವಾಗಿದೆ. ಅಂತಹ ಸರ್ವವಿಲಕ್ಷಣನಾದ ನಿನ್ನನ್ನು ಪದೇ-ಪದೇ ನಮಸ್ಕರಿಸುತ್ತೇನೆ. ॥ ೩೮ ॥ ಶರೀರ ಮತ್ತು ಇದರೊಂದಿಗೆ ಸಂಬಂಧಿಸಿದ ವಾಸನೆಗಳಲ್ಲಿ ಸಿಕ್ಕಿಹಾಕಿಕೊಂಡ ಜೀವನು ಜನ್ಮ-ಮೃತ್ಯುರೂಪವಾದ ಸಂಸಾರಚಕ್ರದಲ್ಲಿ ಅಲೆಯುತ್ತಾ ಇದ್ದು, ಈ ಶರೀರದಿಂದ ಹೇಗೆ ಮುಕ್ತನಾಗುವೆ ಎಂಬುದು ತಿಳಿಯುತ್ತಿಲ್ಲ. ವಾಸ್ತವವಾಗಿ ಜೀವಿಗಳ ಹಿತಕ್ಕಾಗಿಯೇ ನೀನು ವಿವಿಧ ಲೀಲಾವತಾರಗಳನ್ನು ಎತ್ತಿ ನಿನ್ನ ಪವಿತ್ರಕೀರ್ತಿಯ ಉಜ್ಜ್ವಲವಾದ ದೀಪವನ್ನು ಪ್ರಜ್ವಲಿಸುವೆ. ಅಂತಹ ನಿನಗೆ ಸರ್ವಾತ್ಮನಾ ಶರಣಾಗಿದ್ದೇನೆ. ॥ ೩೯ ॥ ಪ್ರಭೋ! ನೀನು ಸಾಕ್ಷಾತ್ ಪರಬ್ರಹ್ಮನಾಗಿದ್ದರೂ ಮನುಷ್ಯರಂತಹ ಲೀಲಾನಾಟಕವನ್ನಾಡುತ್ತಾ ನನ್ನಲ್ಲಿ ಕೇಳುತ್ತಿರುವೆಯಲ್ಲ! ಆದಕ್ಕಾಗಿ ನಿನ್ನ ಸೋದರಳಿಯನೂ, ಪ್ರೇಮಿ ಭಕ್ತನೂ ಆದ ಯುಧಿಷ್ಠಿರನು ಏನು ಮಾಡಬೇಕೆಂದಿರುವನೋ ಅದನ್ನು ನಾನು ನಿನಗೆ ಹೇಳುತ್ತೇನೆ. ॥ ೪೦ ॥

ಯಕ್ಷ್ಯತಿ ತ್ವಾಂ ಮಖೇಂದ್ರೇಣ ರಾಜಸೂಯೇನ ಪಾಂಡವಃ ।
ಪಾರಮೇಷ್ಠ್ಯಕಾಮೋ ನೃಪತಿಸ್ತದ್ಭವಾನನುಮೋದತಾಮ್
॥ ೪೧ ॥

ತಸ್ಮಿನ್ ದೇವ ಕ್ರತುವರೇ ಭವಂತಂ ವೈ ಸುರಾದಯಃ ।
ದಿದೃಕ್ಷವಃ ಸಮೇಷ್ಯಂತಿ ರಾಜಾನಶ್ಚ ಯಶಸ್ವಿನಃ
॥ ೪೨ ॥

ಶ್ರವಣಾತ್ಕೀರ್ತನಾತ್ ಧ್ಯಾನಾತ್ ಪೂಯಂತೇಽಂತೇವಸಾಯಿನಃ ।
ತವ ಬ್ರಹ್ಮಮಯಸ್ಯೇಶ ಕಿಮುತೇಕ್ಷಾಭಿಮರ್ಶಿನಃ
॥ ೪೩ ॥

ಯಸ್ಯಾಮಲಂ ದಿವಿ ಯಶಃ ಪ್ರಥಿತಂ ರಸಾಯಾಂ
ಭೂಮೌ ಚ ತೇ ಭುವನಮಂಗಲ ದಿಗ್ವಿತಾನಮ್ ।
ಮಂದಾಕಿನೀತಿ ದಿವಿ ಭೋಗವತೀತಿ ಚಾಧೋ
ಗಂಗೇತಿ ಚೇಹ ಚರಣಾಂಬು ಪುನಾತಿ ವಿಶ್ವಮ್ ॥ ೪೪ ॥

ಶ್ರೀಶುಕ ಉವಾಚ

ತತ್ರ ತೇಷ್ವಾತ್ಮಪಕ್ಷೇಷ್ವಗೃಣತ್ಸು ವಿಜಿಗೀಷಯಾ ।
ವಾಚಃ ಪೇಶೈಃ ಸ್ಮಯನ್ಭೃತ್ಯಮುದ್ಧವಂ ಪ್ರಾಹ ಕೇಶವಃ
॥ ೪೫ ॥

ಶ್ರೀಭಗವಾನುವಾಚ

ತ್ವಂ ಹಿ ನಃ ಪರಮಂ ಚಕ್ಷುಃ ಸುಹೃನ್ಮಂತ್ರಾರ್ಥತತ್ತ್ವವಿತ್ ।
ಅಥಾತ್ರ ಬ್ರೂಹ್ಯನುಷ್ಠೇಯಂ ಶ್ರದ್ದಧ್ಮಃ ಕರವಾಮ ತತ್
॥ ೪೬ ॥

ಇತ್ಯುಪಾಮಂತ್ರಿತೋ ಭರ್ತ್ರಾ ಸರ್ವಜ್ಞೇನಾಪಿ ಮುಗ್ಧವತ್ ।
ನಿದೇಶಂ ಶಿರಸಾಽಽಧಾಯ ಉದ್ಧವಃ ಪ್ರತ್ಯಭಾಷತ
॥ ೪೭ ॥

ಬ್ರಹ್ಮಲೋಕದಲ್ಲಿ ಪ್ರಾಪ್ತವಾಗುವ ಭೋಗವು ಯುಧಿಷ್ಠಿರ ಮಹಾರಾಜನಿಗೆ ಇಲ್ಲೇ ದೊರೆತಿದೆ ; ಇದರಲ್ಲಿ ಸಂದೇಹವೇ ಇಲ್ಲ. ಆದರೂ ಅವನು ಶ್ರೇಷ್ಠವಾದ ರಾಜಸೂಯಯಜ್ಞದ ಮೂಲಕ ನಿನ್ನನ್ನು ಆರಾಧಿಸ ಬೇಕೆಂದಿರುವನು. ನೀನು ಕೃಪೆದೋರಿ ಅದನ್ನು ಅನುಮೋದಿಸುವವನಾಗು. ॥ ೪೧ ॥ ಭಗವಂತಾ ! ಆ ಶ್ರೇಷ್ಠವಾದ ಯಜ್ಞದಲ್ಲಿ ನಿನ್ನ ದರ್ಶನ ಪಡೆಯಲು ದೊಡ್ಡ ದೊಡ್ಡ ದೇವತೆಗಳೂ, ಯಶೋವಂತರಾದ ನರಪತಿಗಳೂ ಆಗಮಿಸುವರು. ॥ ೪೨ ॥ ಪ್ರಭೋ ! ನೀನು ಸಾಕ್ಷಾತ್ ವಿಜ್ಞಾನಾನಂದ ಘನಬ್ರಹ್ಮನೇ ಆಗಿರುವೆ. ನಿನ್ನ ನಾಮಶ್ರವಣ, ನಾಮ ಸಂಕೀರ್ತನ ಮತ್ತು ಧ್ಯಾನಮಾತ್ರದಿಂದ ಅಂತ್ಯಜರೂ ಕೂಡ ಪವಿತ್ರರಾಗಿ ಬಿಡುತ್ತಾರೆ. ಹೀಗಿರುವಾಗ ನಿನ್ನ ದರ್ಶನ, ಸ್ಪರ್ಶಮಾಡುವವರ ಕುರಿತು ಹೇಳುವುದೇನಿದೆ ? ॥ ೪೩ ॥ ತ್ರಿಭುವನ ಮಂಗಳನೇ ! ನಿನ್ನ ನಿರ್ಮಲ ಕೀರ್ತಿಯು ಸಮಸ್ತ ದಿಕ್ಕುಗಳಲ್ಲಿಯೂ, ಸ್ವರ್ಗ, ಮರ್ತ್ಯ, ಪಾತಾಳಲೋಕಗಳಲ್ಲಿಯೂ ಹರಡಿಕೊಂಡುಬಿಟ್ಟಿದೆ. ಹಾಗೆಯೇ ನಿನ್ನ ಚರಣಾಮೃತ ತೀರ್ಥವು ಸ್ವರ್ಗದಲ್ಲಿ ಮಂದಾಕಿನಿಯಾಗಿಯೂ, ಪಾತಾಳದಲ್ಲಿ ಭೋಗವತಿಯಾಗಿಯೂ, ಭೂಲೋಕದಲ್ಲಿ ಗಂಗೆ ಎಂಬ ಹೆಸರಿನಿಂದಲೂ ಪ್ರವಹಿಸಿ ಸಮಸ್ತ ವಿಶ್ವವನ್ನು ಪವಿತ್ರಗೊಳಿಸುತ್ತಿದೆ. ॥ ೪೪ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ ! ಸಭೆಯಲ್ಲಿ ಉಪಸ್ಥಿತರಾಗಿದ್ದ ಯದುವೀರರೆಲ್ಲರೂ ಮೊದಲು ಜರಾಸಂಧನೊಡನೆ ಯುದ್ಧಮಾಡಿ ಅವನನ್ನು ಗೆದ್ದುಕೊಳ್ಳಬೇಕೆಂದು ಅತ್ಯಂತ ಉತ್ಸುಕರಾಗಿದ್ದರು. ಆದ್ದರಿಂದ ನಾರದರ ಮಾತು ಅವರಿಗೆ ರುಚಿಸಲಿಲ್ಲ. ಆಗ ಬ್ರಹ್ಮಾದಿಗಳಿಗೆ ಶಾಸಕನಾದ ಭಗವಾನ್ ಶ್ರೀಕೃಷ್ಣನು ಮುಗುಳ್ನಗುತ್ತಾ ಸುಮಧುರವಾದ ಮಾತಿನಿಂದ ಉದ್ಧವನಲ್ಲಿ ಇಂತೆಂದನು – ॥ ೪೫ ॥

ಭಗವಾನ್ ಶ್ರೀಕೃಷ್ಣನು ಹೇಳಿದನು – ಉದ್ಧವನೇ ! ನೀನು ನಮ್ಮ ಹಿತೈಷಿಯೂ, ಸುಹೃದನೂ ಆಗಿರುವೆ. ಮಂತ್ರಾಲೋಚನೆಗಳ ರಹಸ್ಯವನ್ನು ತಿಳಿದಿರುವೆ. ಆದರಿಂದ ನೀನು ನಮಗೆ ಕಣ್ಣಿನಂತೆಯೇ ಇರುವೆ. ಈಗ ನಾವು ಏನು ಮಾಡಬೇಕೆಂಬುದನ್ನು ನೀನೇ ಹೇಳು. ನಿನ್ನ ಮಾತಿನಲ್ಲಿ ನಮಗೆ ವಿಶ್ವಾಸವಿದೆ. ಆದ್ದರಿಂದ ನಿನ್ನ ಸಲಹೆಯಂತೆಯೇ ನಾವು ನಡೆದುಕೊಳ್ಳುವೆವು. ॥ ೪೬ ॥ ಭಗವಾನ್ ಶ್ರೀಕೃಷ್ಣನು ಸರ್ವಜ್ಞನಾಗಿದ್ದರೂ ಏನೂ ತಿಳಿಯದವನಂತೆ ನನ್ನಲ್ಲಿ ಸಲಹೆ ಕೇಳುತ್ತಿರುವನಲ್ಲ ! ಇರಲಿ. ಅವನ ಆಜ್ಞೆಯನ್ನು ಶಿರಸಾವಹಿಸಿ ಆತನು ಉತ್ತರಿಸತೊಡಗಿದನು. ॥ ೪೭ ॥

ಎಪ್ಪತ್ತನೆಯ ಅಧ್ಯಾಯವು ಮುಗಿಯಿತು. ॥ ೭೦ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮಸ್ಕಂಧೇ ಉತ್ತರಾರ್ಧೇ
ಭಗವದ್ಯಾನವಿಹಾರೇ ಸಪ್ತತಿತಮೋಽಧ್ಯಾಯಃ ॥ ೭೦ ॥

ಎಪ್ಪತ್ತೊಂದನೆಯ ಅಧ್ಯಾಯ

ಶ್ರೀಕೃಷ್ಣನು ಇಂದ್ರಪ್ರಸ್ಥಕ್ಕೆ ದಯಮಾಡಿಸಿದುದು

ಶ್ರೀಶುಕ ಉವಾಚ

ಇತ್ಯುದೀರಿತಮಾಕರ್ಣ್ಯ ದೇವರ್ಷೇರುದ್ಧವೋಽಬ್ರವೀತ್ ।
ಸಭ್ಯಾನಾಂ ಮತಮಾಜ್ಞಾಯ ಕೃಷ್ಣಸ್ಯ ಚ ಮಹಾಮತಿಃ ॥ ೧ ॥

ಉದ್ಧವ ಉವಾಚ

ಯದುಕ್ತಮೃಷಿಣಾ ದೇವ ಸಾಚಿವ್ಯಂ ಯಕ್ಷ್ಯತಸ್ತ್ವಯಾ ।
ಕಾರ್ಯಂ ಪೈತೃಷ್ವಸೇಯಸ್ಯ ರಕ್ಷಾ ಚ ಶರಣೈಷಿಣಾಮ್ ॥ ೨ ॥

ಯಷ್ಟವ್ಯಂ ರಾಜಸೂಯೇನ ದಿಕ್ಚಕ್ರಜಯಿನಾ ವಿಭೋ ।
ಅತೋ ಜರಾಸುತಜಯ ಉಭಯಾರ್ಥೋ ಮತೋ ಮಮ ॥ ೩ ॥

ಅಸ್ಮಾಕಂ ಚ ಮಹಾನರ್ಥೋ ಹ್ಯೇತೇನೈವ ಭವಿಷ್ಯತಿ ।
ಯಶಶ್ಚ ತವ ಗೋವಿಂದ ರಾಜ್ಞೋ ಬದ್ಧಾನ್ವಿಮುಂಚತಃ ॥ ೪ ॥

ಸ ವೈ ದುರ್ವಿಷಹೋ ರಾಜಾ ನಾಗಾಯುತಸಮೋ ಬಲೇ ।
ಬಲಿನಾಮಪಿ ಚಾನ್ಯೇಷಾಂ ಭೀಮಂ ಸಮಬಲಂ ವಿನಾ ॥ ೫ ॥

ದ್ವೈರಥೇ ಸ ತು ಜೇತವ್ಯೋ ಮಾ ಶತಾಕ್ಷೌಹಿಣೀಯುತಃ ।
ಬ್ರಹ್ಮಣ್ಯೋಽಭ್ಯರ್ಥಿತೋ ವಿಪ್ರೈರ್ನ ಪ್ರತ್ಯಾಖ್ಯಾತಿ ಕರ್ಹಿಚಿತ್ ॥ ೬ ॥

ಬ್ರಹ್ಮವೇಷಧರೋ ಗತ್ವಾ ತಂ ಭಿಕ್ಷೇತ ವೃಕೋದರಃ ।
ಹನಿಷ್ಯತಿ ನ ಸಂದೇಹೋ ದ್ವೈರಥೇ ತವ ಸನ್ನಿಧೌ ॥ ೭ ॥

ನಿಮಿತ್ತಂ ಪರಮೀಶಸ್ಯ ವಿಶ್ವಸರ್ಗನಿರೋಧಯೋಃ ।
ಹಿರಣ್ಯಗರ್ಭಃ ಶರ್ವಶ್ಚ ಕಾಲಸ್ಯಾರೂಪಿಣಸ್ತವ ॥ ೮ ॥

ಶ್ರೀಶುಕಮುನಿಗಳು ಹೇಳುತ್ತಾರೆ - ಪರೀಕ್ಷಿತ ಮಹಾರಾಜ! ಮಹಾಮತಿಯಾದ ಉದ್ಧವನು ಶ್ರೀಕೃಷ್ಣನ ಮಾತನ್ನು ಕೇಳಿ, ದೇವರ್ಷಿಗಳಾದ ನಾರದರ, ಸಭಾಸದರ, ಬಂದಿರಾಜರುಗಳ ದೂತನ ನಿವೇದನೆಯ ಬಗೆಗೆ ಮತ್ತು ಶ್ರೀಕೃಷ್ಣನ ಅಭಿಪ್ರಾಯವೇನೆಂಬುದನ್ನು ವಿಚಾರಮಾಡಿ ಹೇಳತೊಡಗಿದನು. ॥ ೧ ॥

ಉದ್ಧವನು ಹೇಳಿದನು - ಭಗವಂತ! ನಿನ್ನ ಸೋದರಳಿಯರಾದ ಪಾಂಡವರು ರಾಜಸೂಯಯಜ್ಞದಲ್ಲಿ ಭಾಗವಹಿಸಿ ಅವರಿಗೆ ಸಹಾಯ ಮಾಡಬೇಕೆಂದು ನಾರದರು ಹೇಳಿದ ಮಾತು ಸರಿಯಾಗಿದೆ. ಜೊತೆಗೆ ಶರಣಾಗತರ ರಕ್ಷಣೆಯೂ ಅವಶ್ಯಕವಾದ ಕರ್ತವ್ಯವೇ ಆಗಿದೆ. ॥ ೨ ॥ ಪ್ರಭೋ! ಹತ್ತು ದಿಕ್ಕುಗಳನ್ನು ಜಯಿಸಿದವನೇ ರಾಜಸೂಯಯಜ್ಞವನ್ನು ಮಾಡಬಲ್ಲನು ಎಂಬ ದೃಷ್ಟಿಯಿಂದ ವಿಚಾರಮಾಡಿದಾಗ ಪಾಂಡವರ ಯಜ್ಞ ಮತ್ತು ಶರಣಾಗತರ ರಕ್ಷಣೆ ಎರಡೂ ಕಾರ್ಯಗಳಿಗಾಗಿ ಜರಾಸಂಧನನ್ನು ಜಯಿಸುವುದು ಅವಶ್ಯಕವಾಗಿದೆ ಎಂಬುದು ನಿರ್ವಿವಾದವಾಗಿದೆ. ॥ ೩ ॥ ಸ್ವಾಮಿ! ಕೇವಲ ಜರಾಸಂಧನನ್ನು ಜಯಿಸುವುದರಿಂದ ನಮ್ಮ ಉದ್ದೇಶವು ಸಫಲವಾಗುವುದು; ಜೊತೆಗೆ ಅದರಿಂದ ಬಂಧಿತರಾಜರ ಮುಕ್ತಿ ಮತ್ತು ಅವರ ಕಾರಣದಿಂದ ನಿನಗೆ ನಿರ್ಮಲವಾದ ಕೀರ್ತಿಯೂ ಪ್ರಾಪ್ತವಾಗುತ್ತದೆ. ॥ ೪ ॥ ಬಲದಲ್ಲಿ ಹತ್ತು ಸಾವಿರ ಆನೆಗಳ ಬಲವಿರುವ ಜರಾಸಂಧನನ್ನು ಇತರ ಬಲಿಷ್ಠರಾಜರು ಗೆಲ್ಲಲಾರರು. ಅವನಿಗೆ ಸಮಾನಬಲವಿರುವ ಭೀಮಸೇನನೊಬ್ಬನು ಮಾತ್ರ ಅವನನ್ನು ಜಯಿಸಬಲ್ಲನು. ॥ ೫ ॥ ಅವನೊಡನೆ ದ್ವಂದ್ವಯುದ್ಧವನ್ನೇ ಮಾಡಿ ಅವನನ್ನ ಗೆಲ್ಲಬೇಕು. ನೂರು ಅಕ್ಷೌಹಿಣಿ ಸೈನ್ಯದೊಂದಿಗೆ ಅವನನ್ನು ಯುದ್ಧಕ್ಕೆ ನಿಂತರೆ ಅವನನ್ನು ಗೆಲ್ಲುವುದು ಅಷ್ಟು ಸುಲಭವಲ್ಲ. ಜರಾಸಂಧನು ಬಹಳ ದೊಡ್ಡ ಬ್ರಾಹ್ಮಣಭಕ್ತನಾಗಿದ್ದಾನೆ. ಬ್ರಾಹ್ಮಣರು ಅವನಲ್ಲಿ ಏನೇ ಬೇಡಿದರೂ ಎಂದಿಗೂ ಅವನು ಇಲ್ಲವೆನ್ನುವುದಿಲ್ಲ. ॥ ೬ ॥ ಆದುದರಿಂದ ಭೀಮಸೇನನು ಬ್ರಾಹ್ಮಣವೇಷವನ್ನು ಧರಿಸಿ ಅವನ ಬಳಿಗೆ ಹೋಗಿ ಯುದ್ಧ ಭಿಕ್ಷೆಯನ್ನು ಬೇಡಬೇಕು. ಭಗವಂತಾ! ನಿನ್ನ ಉಪಸ್ಥಿತಿಯಲ್ಲಿ ಭೀಮಸೇನ ಮತ್ತು ಜರಾಸಂಧರ ದ್ವಂದ್ವ ಯುದ್ಧ ನಡೆದರೆ ಭೀಮಸೇನನು ಅವನನ್ನು ಕೊಲ್ಲುವುದರಲ್ಲಿ ಸಂದೇಹವೇ ಇಲ್ಲ. ॥ ೭ ॥ ಪ್ರಭೋ! ನೀನು ಸರ್ವಶಕ್ತಿವಂತನೂ, ರೂಪರಹಿತ ಕಾಲಸ್ವರೂಪನಾಗಿರುವೆ. ವಿಶ್ವದ ಸೃಷ್ಟಿ ಮತ್ತು ಪ್ರಳಯ ನಿನ್ನ ಶಕ್ತಿಯಿಂದಲೇ ನಡೆಯುತ್ತದೆ. ಬ್ರಹ್ಮ-ರುದ್ರರು ಅದರಲ್ಲಿ ಕೇವಲ ನಿಮಿತ್ತರಾಗಿದ್ದಾರೆ. ಹೀಗೆಯೇ ನಿನ್ನ ಶಕ್ತಿಯಿಂದಲೇ ಜರಾಸಂಧನ ವಧೆಯಾಗುವುದು; ಭೀಮಸೇನನು ನೆಪಮಾತ್ರಕ್ಕಿರುತ್ತಾನೆ. ॥ ೮ ॥

ಗಾಯಂತಿ ತೇ ವಿಶದಕರ್ಮ ಗೃಹೇಷು ದೇವ್ಯೋ
ರಾಜ್ಞಾಂ ಸ್ವಶತ್ರುವಧಮಾತ್ಮವಿಮೋಕ್ಷಣಂ ಚ ।
ಗೋಪ್ಯಶ್ಚ ಕುಂಜರಪತೇರ್ಜನಕಾತ್ಮಜಾಯಾಃ
ಪಿತ್ರೋಶ್ಚ ಲಬ್ಧಶರಣಾ ಮುನಯೋ ವಯಂ ಚ ॥ ೯ ॥

ಜರಾಸಂಧವಧಃ ಕೃಷ್ಣ ಭೂರ್ಯರ್ಥಾಯೋಪಕಲ್ಪತೇ ।
ಪ್ರಾಯಃ ಪಾಕವಿಪಾಕೇನ ತವ ಚಾಭಿಮತಃ ಕ್ರತುಃ ॥ ೧೦ ॥

ಶ್ರೀಶುಕ ಉವಾಚ

ಇತ್ಯುದ್ಧವವಚೋ ರಾಜನ್ ಸರ್ವತೋಭದ್ರಮಚ್ಯುತಮ್ ।
ದೇವರ್ಷಿರ್ಯದುವೃದ್ಧಾಶ್ಚ ಕೃಷ್ಣಶ್ಚ ಪ್ರತ್ಯಪೂಜಯನ್ ॥ ೧೧ ॥

ಅಥಾದಿಶತ್ಪ್ರಯಾಣಾಯ ಭಗವಾನ್ ದೇವಕೀಸುತಃ ।
ಭೃತ್ಯಾನ್ದಾರುಕಜೈತ್ರಾದೀನನುಜ್ಞಾಪ್ಯ ಗುರೂನ್ ವಿಭುಃ ॥ ೧೨ ॥

ನಿರ್ಗಮಯ್ಯಾವರೋಧಾನ್ ಸ್ವಾನ್ ಸಸುತಾನ್ ಸಪರಿಚ್ಛದಾನ್ ।
ಸಂಕರ್ಷಣಮನುಜ್ಞಾಪ್ಯ ಯದುರಾಜಂ ಚ ಶತ್ರುಹನ್ ।
ಸೂತೋಪನೀತಂ ಸ್ವರಥಮಾರುಹದ್ಗರುಡಧ್ವಜಮ್ ॥ ೧೩ ॥

ತತೋ ರಥದ್ವಿಪಭಟಸಾದಿನಾಯಕೈಃ
ಕರಾಲಯಾ ಪರಿವೃತ ಆತ್ಮಸೇನಯಾ ।
ಮೃದಂಗಭೇರ್ಯಾನಕಶಂಖಗೋಮುಖೈಃ
ಪ್ರಘೋಷಘೋಷಿತಕಕುಭೋ ನಿರಾಕ್ರಮತ್ ॥ ೧೪ ॥

ನೃವಾಜಿಕಾಂಚನಶಿಬಿಕಾಭಿರಚ್ಯುತಂ
ಸಹಾತ್ಮಜಾಃ ಪತಿಮನು ಸುವ್ರತಾ ಯಯುಃ ।
ವರಾಂಬರಾಭರಣವಿಲೇಪನಸ್ರಜಃ
ಸುಸಂವೃತಾ ನೃಭಿರಸಿಚರ್ಮಪಾಣಿಭಿಃ ॥ ೧೫ ॥

ಶಂಖಚೂಡನಿಂದ ಮುಕ್ತರಾದ ಗೋಪಿಯರು ನಿನ್ನ ಕೀರ್ತಿಯನ್ನು ಗಾನಮಾಡುವಂತೆ, ಮೊಸಳೆಯಿಂದ ಮುಕ್ತನಾದ ಗಜೇಂದ್ರನು, ನಿನಗೆ ಶರಣಾಗತರಾದ ಮುನಿಗಳು, ಸೀತೆಯನ್ನು ಉದ್ಧರಿಸಿದ ಲೀಲೆಯನ್ನು ನಿನ್ನ ತಂದೆ-ತಾಯಿಯರನ್ನು ಕಾರಾಗೃಹದಿಂದ ಬಂಧಮುಕ್ತಗೊಳಿಸಿದ ನಿನ್ನ ಲೀಲೆಯನ್ನು ನಾವು ಹಾಡುವಂತೆಯೇ ನೀನು ಜರಾಸಂಧನ ವಧೆ ಮಾಡಿದಾಗ ಬಂಧನದಿಂದ ಮುಕ್ತರಾದ ಆ ರಾಜರ ಪಟ್ಟಮಹಿಷಿಯರು ತಮ್ಮ ಅರಮನೆಗಳಲ್ಲಿ - ನೀನು ಅವರ ಶತ್ರುವನ್ನು ನಾಶಗೊಳಿಸಿ ತಮ್ಮ ಪ್ರಾಣಪತಿಗಳನ್ನು ಬಿಡಿಸಿದ ನಿನ್ನ ಅಲೌಕಿಕ ಲೀಲೆಯನ್ನು ಹಾಡುವರು. ॥ ೯ ॥ ಅದಕ್ಕಾಗಿ ಪ್ರಭೋ! ಜರಾಸಂಧನ ವಧೆಯು ಅನೇಕ ಪ್ರಯೋಜನಗಳನ್ನು ಸಿದ್ಧಗೊಳಿಸುವುದು. ಸೆರೆಯಾದ ರಾಜರ ಪುಣ್ಯದ ಪರಿಣಾಮದಿಂದಲೋ, ಜರಾಸಂಧನ ಪಾಪದ ಪರಿಣಾಮದಿಂದಲೋ ರಾಜಸೂಯಯಾಗ ಮಾಡಲು ನಿನ್ನ ಒಪ್ಪಿಗೆಯೂ ಲಭಿಸಿದೆ. ಆದುದರಿಂದ ನೀನು ಮೊದಲಿಗೆ ಇಂದ್ರಪ್ರಸ್ಥಕ್ಕೆ ಹೋಗುವುದೇ ಸೂಕ್ತವಾಗಿದೆ ಎಂದು ನನಗೆ ಅನಿಸುತ್ತದೆ. ॥ ೧೦ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ - ಪರೀಕ್ಷಿತನೇ! ಉದ್ಧವನ ಈ ಸಲಹೆಯು ಎಲ್ಲ ರೀತಿಯಿಂದ ಹಿತಕರವೂ, ನಿರ್ದೋಷವೂ ಆಗಿತ್ತು. ದೇವರ್ಷಿ ನಾರದರು, ಯದುವಂಶದ ಹಿರಿಯರು ಮತ್ತು ಸ್ವಯಂ ಭಗವಾನ್ ಶ್ರೀಕೃಷ್ಣನೂ ಅವನ ಮಾತನ್ನು ಸಮರ್ಥಿಸಿದರು. ॥ ೧೧ ॥ ಆಗ ಅಂತರ್ಯಾಮಿಯಾದ ಭಗವಾನ್ ಶ್ರೀಕೃಷ್ಣನು ವಸುದೇವನೇ ಮೊದಲಾದ ಹಿರಿಯರಿಂದ ಅನುಮತಿಯನ್ನು ಪಡೆದು ಸಾರಥಿಯಾದ ದಾರುಕನಿಗೆ ಮತ್ತು ಜೈತ್ರ ಮುಂತಾದ ಸೇವಕರಿಗೆ ಇಂದ್ರಪ್ರಸ್ಥಕ್ಕೆ ಹೋಗಲು ಸಿದ್ಧತೆಮಾಡಲು ಅಪ್ಪಣೆಮಾಡಿದನು. ॥ ೧೨ ॥ ಅನಂತರ ಶ್ರೀಕೃಷ್ಣನು ಯದುರಾಜ ಉಗ್ರಸೇನ ಮತ್ತು ಬಲರಾಮನಿಂದ ಅಪ್ಪಣೆಯನ್ನು ಪಡೆದು ಮಕ್ಕಳೊಂದಿಗೆ ರಾಣಿಯರನ್ನು ಮತ್ತು ಅವರ ಸಾಮಗ್ರಿಗಳನ್ನು ಮುಂದಾಗಿ ಕಳಿಸಿಕೊಟ್ಟು ಮತ್ತೆ ದಾರುಕನು ಸಿದ್ಧಪಡಿಸಿ ತಂದಿರುವ ಗರುಡಧ್ವಜ ರಥದಲ್ಲಿ ತಾನು ಕುಳಿತನು. ॥ ೧೩ ॥ ಬಳಿಕ ಶ್ರೀಕೃಷ್ಣನು ಗಜಾಶ್ವ-ರಥ-ಪದಾತಿಗಳಿಂದ ಕೂಡಿದ ಚತುರಂಗ ಸೇನಾಸಮೇತನಾಗಿ ಇಂದ್ರಪ್ರಸ್ಥಕ್ಕೆ ಪ್ರಸ್ಥಾನಮಾಡಿದನು. ಆಗ ಮೃದಂಗ, ಭೇರಿ, ಡೊಳ್ಳು, ಶಂಖ, ಗೋಮುಖ ಮುಂತಾದ ವಾದ್ಯಗಳ ಧ್ವನಿಯು ದಶದಿಕ್ಕುಗಳಲ್ಲಿಯೂ ಪ್ರತಿಧ್ವನಿಸಿತು. ॥ ೧೪ ॥ ಸತಿಶಿರೋಮಣಿ ರುಕ್ಮಿಣಿಯೇ ಮೊದಲಾದ ಸಾವಿರಾರು ಶ್ರೀಕೃಷ್ಣನ ಪತ್ನಿಯರು ತಮ್ಮ-ತಮ್ಮ ಸಂತಾನಗಳೊಂದಿಗೆ ಸುಂದರವಾದ ವಸ್ತ್ರಾಭೂಷಣಗಳಿಂದಲೂ, ಚಂದನ, ಅಂಗರಾಗ, ಪುಷ್ಪಹಾರಗಳಿಂದ ಅಲಂಕರಿಸಿಕೊಂಡು, ಸ್ವರ್ಣಪಲ್ಲಕ್ಕಿಗಳಲ್ಲಿ, ಡೋಲಿಗಳಲ್ಲಿ, ರಥಗಳಲ್ಲಿ ಕುಳಿತುಕೊಂಡು ಪತಿದೇವನಾದ ಶ್ರೀಕೃಷ್ಣನ ಹಿಂದೆಯೇ ಹೋಗುತ್ತಿದ್ದರು. ಕಾಲಾಳುಗಳು ಕೈಗಳಲ್ಲಿ ಕತ್ತಿ-ಗುರಾಣಿಗಳನ್ನು ಹಿಡಿದುಕೊಂಡು ಅವರನ್ನು ರಕ್ಷಿಸುತ್ತಾ ನಡೆಯುತ್ತಿದ್ದರು. ॥ ೧೫ ॥

ನರೋಷ್ಟ್ರಗೋಮಹಿಷಖರಾಶ್ವತರ್ಯನಃ-
ಕರೇಣುಭಿಃ ಪರಿಜನವಾರಯೋಷಿತಃ ।
ಸ್ವಲಂಕೃತಾಃ ಕಟಕುಟಿಕಂಬಲಾಂಬರಾ-
ದ್ಯುಪಸ್ಕರಾ ಯಯುರಧಿಯುಜ್ಯ ಸರ್ವತಃ ॥ ೧೬ ॥

ಬಲಂ ಬೃಹದ್ಧ್ವಜಪಟಛತ್ರಚಾಮರೈ-
ರ್ವರಾಯುಧಾಭರಣಕಿರೀಟವರ್ಮಭಿಃ ।
ದಿವಾಂಶುಭಿಸ್ತುಮುಲರವಂ ಬಭೌ ರವೇ-
ರ್ಯಥಾರ್ಣವಃ ಕ್ಷುಭಿತತಿಮಿಂಗಿಲೋರ್ಮಿಭಿಃ ॥ ೧೭ ॥

ಅಥೋ ಮುನಿರ್ಯದುಪತಿನಾ ಸಭಾಜಿತಃ
ಪ್ರಣಮ್ಯ ತಂ ಹೃದಿ ವಿದಧದ್ವಿಹಾಯಸಾ ।
ನಿಶಮ್ಯ ತದ್ವ್ಯವಸಿತಮಾಹೃತಾರ್ಹಣೋ
ಮುಕುಂದಸಂದರ್ಶನನಿರ್ವೃತೇಂದ್ರಿಯಃ ॥ ೧೮ ॥

ರಾಜದೂತಮುವಾಚೇದಂ ಭಗವಾನ್ ಪ್ರೀಣಯನ್ ಗಿರಾ ।
ಮಾ ಭೈಷ್ಟ ದೂತ ಭದ್ರಂ ವೋ ಘಾತಯಿಷ್ಯಾಮಿ ಮಾಗಧಮ್ ॥ ೧೯ ॥

ಇತ್ಯುಕ್ತಃ ಪ್ರಸ್ಥಿತೋ ದೂತೋ ಯಥಾವದವದನ್ನೃಪಾನ್ ।
ತೇಽಪಿ ಸಂದರ್ಶನಂ ಶೌರೇಃ ಪ್ರತ್ಯೈಕ್ಷನ್ ಯನ್ಮುಮುಕ್ಷವಃ ॥ ೨೦ ॥

ಆನರ್ತಸೌವೀರಮರೂಂಸ್ತೀರ್ತ್ವಾ ವಿನಶನಂ ಹರಿಃ ।
ಗಿರೀನ್ ನದೀರತೀಯಾಯ ಪುರಗ್ರಾಮವ್ರಜಾಕರಾನ್ ॥ ೨೧ ॥

ತತೋ ದೃಷದ್ವತೀಂ ತೀರ್ತ್ವಾ ಮುಕುಂದೋಽಥ ಸರಸ್ವತೀಮ್ ।
ಪಂಚಾಲಾನಥ ಮತ್ಸ್ಯಾಂಶ್ಚ ಶಕ್ರಪ್ರಸ್ಥಮಥಾಗಮತ್ ॥ ೨೨ ॥

ತಮುಪಾಗತಮಾಕರ್ಣ್ಯ ಪ್ರೀತೋ ದುರ್ದರ್ಶನಂ ನೃಣಾಮ್ ।
ಅಜಾತಶತ್ರುರ್ನಿರಗಾತ್ ಸೋಪಾಧ್ಯಾಯಃ ಸುಹೃದ್ವೃತಃ ॥ ೨೩ ॥

ಹಾಗೆಯೇ ದಾಸ-ದಾಸಿಯರೂ, ವೇಶ್ಯೆಯರೂ, ವಸ್ತ್ರಾಭರಣಗಳಿಂದ ಅಲಂಕೃತರಾಗಿ ಚಾಪೆಗಳೂ, ಗುಡಾರಗಳೂ, ಕಂಬಳಿಗಳೂ, ವಸ್ತ್ರಗಳೂ ಮೊದಲಾದ ಸಾಮಗ್ರಿಗಳನ್ನು ಆಳುಗಳ ಮೇಲೆಯೂ ಒಂಟೆ, ಎತ್ತು, ಕೋಣ, ಹೇಸರಗತ್ತೆ, ಆನೆ-ಬಂಡಿಗಳು, ಇವುಗಳ ಮೇಲೆ ಹೇರಿಕೊಂಡು, ತಾವು ಪಲ್ಲಕ್ಕಿ, ಒಂಟೆ, ಎತ್ತಿನಗಾಡಿ, ಆನೆಗಳು ಇವುಗಳ ಮೇಲೆ ಕುಳಿತು ಪ್ರಯಾಣ ಮಾಡಿದರು. ॥ ೧೬ ॥ ಮೊಸಳೆಗಳಿಂದಲೂ, ದೊಡ್ಡ-ದೊಡ್ಡ ಅಲೆಗಳಿಂದಲೂ ಭೋರ್ಗರೆಯುವ ಸಮುದ್ರವು ಶೋಭಿಸುವಂತೆಯೇ, ಭಯಂಕರ ಶಬ್ದಗಳಿಂದಲೂ ಹಾರಾಡುತ್ತಿದ್ದ ದೊಡ್ಡ-ದೊಡ್ಡ ಧ್ವಜ-ಪತಾಕೆಗಳಿಂದಲೂ, ಛತ್ರ-ಚಾಮರಗಳಿಂದಲೂ, ಶ್ರೇಷ್ಠವಾದ ಅಸ್ತ್ರ-ಶಸ್ತ್ರಗಳಿಂದಲೂ, ವಸ್ತ್ರಾಭೂಷಣಗಳಿಂದಲೂ, ಕಿರೀಟಗಳಿಂದಲೂ, ಕವಚಗಳಿಂದಲೂ ಕೂಡಿದ ಶ್ರೀಕೃಷ್ಣನ ಸೈನ್ಯದ ಮೇಲೆ ಬಿದ್ದ ಸೂರ್ಯಕಿರಣಗಳಿಂದ ಅದು ಅತ್ಯಂತ ಶೋಭಾಯಮಾನವಾಗಿ ಕಾಣುತ್ತಿತ್ತು. ॥ ೧೭ ॥ ಶ್ರೀಕೃಷ್ಣನಿಂದ ಸಮ್ಮಾನಿತರಾದ ನಾರದ ಮಹರ್ಷಿಗಳು ಅವನ ನಿಶ್ಚಯವನ್ನು ಕೇಳಿ ಅತ್ಯಂತ ಪ್ರಸನ್ನರಾದರು. ಭಗವಂತನ ದರ್ಶನದಿಂದ ಅವರ ಹೃನ್ಮನಗಳೂ, ಇಂದ್ರಿಯಗಳೂ ಪರಮಾನಂದ ಭರಿತವಾದುವು. ಬೀಳ್ಕೊಡುವಾಗ ಶ್ರೀಕೃಷ್ಣನು ಅವರನ್ನು ನಾನಾ ವಿಧವಾದ ಸಾಮಗ್ರಿಗಳಿಂದ ಪೂಜಿಸಿದನು. ದೇವಋಷಿ ನಾರದರು ಶ್ರೀಕೃಷ್ಣನನ್ನು ವಂದಿಸುತ್ತಾ ಅವನ ದಿವ್ಯಮೂರ್ತಿಯನ್ನು ಹೃದಯದಲ್ಲಿ ಧರಿಸಿಕೊಂಡು ಆಕಾಶಮಾರ್ಗದಿಂದ ಹೊರಟುಹೋದರು. ॥ ೧೮ ॥ ಬಳಿಕ ಭಗವಾನ್ ಶ್ರೀಕೃಷ್ಣನು ಜರಾಸಂಧನ ಬಂದಿಯಾದ ರಾಜರ ದೂತನಿಗೆ ಸುಮಧುರ ಮಾತಿನಿಂದ ಆಶ್ವಾಸನೆಯನ್ನೀಯುತ್ತಾ - ದೂತನೇ! ನೀನು ರಾಜರ ಬಳಿಗೆ ಹೋಗಿ - 'ಹೆದರಬೇಡಿರಿ. ನಿಮ್ಮೆಲ್ಲರಿಗೆ ಮಂಗಳವಾಗಲಿ. ನಾನು ಜರಾಸಂಧನನ್ನು ಕೊಲ್ಲಿಸುವೆನು.' ಎಂದು ಹೇಳು. ॥ ೧೯ ॥ ಹೀಗೆ ಭಗವಂತನ ಆಜ್ಞೆಯನ್ನು ಪಡೆದು ಆ ದೂತನು ಗಿರಿವ್ರಜಕ್ಕೆ ಹೊರಟು ಹೋದನು. ಅಲ್ಲಿ ರಾಜರಿಗೆ ಭಗವಾನ್ ಶ್ರೀಕೃಷ್ಣನ ಸಂದೇಶವನ್ನು ಯಥಾವತ್ತಾಗಿ ಮುಟ್ಟಿಸಿದನು. ಆ ರಾಜರೂ ಕೂಡ ಕಾರಾಗೃಹದಿಂದ ಬಿಡುಗಡೆ ಹೊಂದಲೂ, ಶೀಘ್ರವೇ ಭಗವಂತನ ಶುಭ ದರ್ಶನವನ್ನು ಪಡೆಯಲು ಕಾತರದಿಂದ ಪ್ರತೀಕ್ಷಿಸುತ್ತಿದ್ದರು. ॥ ೨೦ ॥

ಪರೀಕ್ಷಿತನೇ! ಭಗವಾನ್ ಶ್ರೀಕೃಷ್ಣನು ದ್ವಾರಕೆಯಿಂದ ಹೊರಟು ಆನರ್ತ, ಸೌವೀರ, ಮರು, ಕುರುಕ್ಷೇತ್ರ ಇವುಗಳ ನಡುವೆ ಸಿಕ್ಕುವ ಪರ್ವತ ನದಿ, ನಗರ, ಗ್ರಾಮ, ಹಳ್ಳಿ, ಗಣಿಗಳಿದ್ದ ಪ್ರದೇಶಗಳನ್ನು ದಾಟಿ ಮುಂದರಿಯುತ್ತಿದ್ದನು. ॥ ೨೧ ॥ ಭಗವಾನ್ ಮುಕುಂದನು ದಾರಿಯಲ್ಲಿ ದೃಷದ್ವತೀ ಹಾಗೂ ಸರಸ್ವತೀ ನದಿಗಳನ್ನು ದಾಟಿ ಪಾಂಚಾಲ, ಮತ್ಸ್ಯ ದೇಶಗಳ ಮೂಲಕವಾಗಿ ಇಂದ್ರಪ್ರಸ್ಥವನ್ನು ತಲುಪಿದನು. ॥ ೨೨ ॥ ಪರೀಕ್ಷಿತನೇ! ಮಾನವರಿಂದ ಸಂದರ್ಶಿಸಲು ದುರ್ಲಭನಾದ ಶ್ರೀಕೃಷ್ಣನು ಪರಿವಾರ ಸಹಿತವಾಗಿ ತನ್ನ ರಾಜಧಾನಿಗೆ ಬರುತ್ತಿದ್ದಾನೆಂಬ ವಾರ್ತೆಯನ್ನು ಕೇಳಿ ಅಜಾತಶತ್ರುವಾದ ಯುಧಿಷ್ಠಿರನು ಹಿರಿ-ಹಿರಿ ಹಿಗ್ಗಿದನು. ಅವನು ಆಚಾರ್ಯರೊಡನೆಯೂ, ಸ್ವಜನಬಂಧುಗಳೊಂದಿಗೂ ಭಗವಂತನನ್ನು ಇದಿರ್ಗೊಳ್ಳಲು ಊರ ಹೊರಬಾಗಿಲಿಗೆ ಬಂದನು. ॥ ೨೩ ॥

ಗೀತವಾದಿತ್ರಘೋಷೇಣ ಬ್ರಹ್ಮಘೋಷೇಣ ಭೂಯಸಾ ।
ಅಭ್ಯಯಾತ್ಸ ಹೃಷೀಕೇಶಂ ಪ್ರಾಣಾಃ ಪ್ರಾಣಮಿವಾದೃತಃ
॥ ೨೪ ॥

ದೃಷ್ಟ್ವಾ ವಿಕ್ಲಿನ್ನಹೃದಯಃ ಕೃಷ್ಣಂ ಸ್ನೇಹೇನ ಪಾಂಡವಃ ।
ಚಿರಾದ್ದೃಷ್ಟಂ ಪ್ರಿಯತಮಂ ಸಸ್ವಜೇಽಥ ಪುನಃ ಪುನಃ
॥ ೨೫ ॥

ದೋರ್ಭ್ಯಾಂ ಪರಿಷ್ವಜ್ಯ ರಮಾಮಲಾಲಯಂ
ಮುಕುಂದಗಾತ್ರಂ ನೃಪತಿರ್ಹತಾಶುಭಃ ।
ಲೇಭೇ ಪರಾಂ ನಿರ್ವೃತಿಮಶ್ರುಲೋಚನೋ
ಹೃಷ್ಯತ್ತನುರ್ವಿಸ್ಮೃತಲೋಕವಿಭ್ರಮಃ ॥ ೨೬ ॥

ತಂ ಮಾತುಲೇಯಂ ಪರಿರಭ್ಯ ನಿರ್ವೃತೋ
ಭೀಮಃ ಸ್ಮಯನ್ ಪ್ರೇಮಜಲಾಕುಲೇಂದ್ರಿಯಃ ।
ಯಮೌ ಕಿರೀಟೀ ಚ ಸುಹೃತ್ತಮಂ ಮುದಾ
ಪ್ರವೃದ್ಧಬಾಷ್ಪಾಃ ಪರಿರೇಭಿರೇಽಚ್ಯುತಮ್ ॥ ೨೭ ॥

ಅರ್ಜುನೇನ ಪರಿಷ್ವಕ್ತೋ ಯಮಾಭ್ಯಾಮಭಿವಾದಿತಃ ।
ಬ್ರಾಹ್ಮಣೇಭ್ಯೋ ನಮಸ್ಕೃತ್ಯ ವೃದ್ಧೇಭ್ಯಶ್ಚ ಯಥಾರ್ಹತಃ
॥ ೨೮ ॥

ಮಾನಿತೋ ಮಾನಯಾಮಾಸ ಕುರುಸೃಂಜಯಕೈಕಯಾನ್ ।
ಸೂತಮಾಗಧಗಂಧರ್ವಾ ವಂದಿನಶ್ಚೋಪಮಂತ್ರಿಣಃ
॥ ೨೯ ॥

ಮೃದಂಗಶಂಖಪಟಹವೀಣಾಪಣವಗೋಮುಖೈಃ ।
ಬ್ರಾಹ್ಮಣಾಶ್ಚಾರವಿಂದಾಕ್ಷಂ ತುಷ್ಟುವುರ್ನನೃತುರ್ಜಗುಃ
॥ ೩೦ ॥

ಏವಂ ಸುಹೃದ್ಭಿಃ ಪರ್ಯಸ್ತಃ ಪುಣ್ಯಶ್ಲೋಕಶಿಖಾಮಣಿಃ ।
ಸಂಸ್ತೂಯಮಾನೋ ಭಗವಾನ್ ವಿವೇಶಾಲಂಕೃತಂ ಪುರಮ್
॥ ೩೧ ॥

ಸಂಸಿಕ್ತವರ್ತ್ಮ ಕರಿಣಾಂ ಮದಗಂಧತೋಯೈ-
ಶ್ಚಿತ್ರಧ್ವಜೈಃ ಕನಕತೋರಣಪೂರ್ಣಕುಂಭೈಃ ।
ಮೃಷ್ಟಾತ್ಮಭಿರ್ನವದುಕೂಲವಿಭೂಷಣಸ್ರಗ್
ಗಂಧೈರ್ನೃಭಿರ್ಯುವತಿಭಿಶ್ಚ ವಿರಾಜಮಾನಮ್ ॥ ೩೨ ॥

ಮಂಗಳ ಗೀತೆಗಳು, ವಾದ್ಯಗಳು ಮೊಳಗಿದವು. ಅನೇಕ ಬ್ರಾಹ್ಮಣರು ಮಂತ್ರೋಚ್ಚಾರಣೆ ಮಾಡತೊಡಗಿದರು. ಇಂದ್ರಿಯಗಳು ಮುಖ್ಯ ಪ್ರಾಣದೊಡನೆ ಸೇರುವಂತೆ ಯುಧಿಷ್ಠಿರನು ಭಗವಾನ್ ಹೃಷೀಕೇಶನನ್ನು ಸ್ವಾಗತಿಸಲು ಮುಂದಾದನು. ॥ ೨೪ ॥ ಭಗವಾನ್ ಶ್ರೀಕೃಷ್ಣನನ್ನು ನೋಡಿದ ಯುಧಿಷ್ಠಿರನ ಹೃದಯವು ಸ್ನೇಹಾತಿರೇಕದಿಂದ ಗದ್ಗದವಾಯಿತು. ಬಹಳ ದಿವಸಗಳ ಬಳಿಕ ತನ್ನ ಪ್ರಿಯನಾದ ಭಗವಾನ್ ಶ್ರೀಕೃಷ್ಣನನ್ನು ನೋಡುವ ಸೌಭಾಗ್ಯವು ಒದಗಿತ್ತು. ಆದ್ದರಿಂದ ಅವನು ಕೃಷ್ಣನನ್ನು ಬಾರಿ-ಬಾರಿಗೂ ಆಲಿಂಗಿಸಿಕೊಂಡನು. ॥ ೨೫ ॥ ಭಗವಾನ್ ಶ್ರೀಕೃಷ್ಣನ ಶ್ರೀವಿಗ್ರಹವು ಲಕ್ಷ್ಮೀದೇವಿಗೆ ಪವಿತ್ರವೂ ವಾಸಸ್ಥಾನವೂ ಆಗಿದೆ. ಯುಧಿಷ್ಠಿರನು ತನ್ನೆರಡೂ ಭುಜಗಳಿಂದ ಅದನ್ನು ಆಲಿಂಗಿಸಿಕೊಂಡು ಸಮಸ್ತ ಪಾಪ-ತಾಪಗಳಿಂದ ಬಿಡುಗಡೆ ಹೊಂದಿದನು. ಅವನು ಪರಮಾನಂದದ ಸಾಗರದಲ್ಲಿ ಮುಳುಗಿ ಹೋದನು. ಕಣ್ಣುಗಳಿಂದ ಆನಂದಾಶ್ರುಗಳು ಸುರಿಯುತ್ತಿದ್ದು ಶರೀರ ಪುಳಕಗೊಂಡಿತು ಅವನು ಲೋಕವ್ಯವಹಾರವನ್ನೇ ಸಂಪೂರ್ಣವಾಗಿ ಮರೆತು ಬಿಟ್ಟನು. ॥ ೨೬ ॥ ಅನಂತರ ಭೀಮಸೇನನು ನಸುನಗುತ್ತಾ ಸೋದರ ಮಾವನ ಮಗನಾದ ಶ್ರೀಕೃಷ್ಣನನ್ನು ಗಾಢವಾಗಿ ಆಲಿಂಗಿಸಿಕೊಂಡು ಆನಂದಿಸಿದನು. ಪ್ರೇಮಾತಿಶಯದಿಂದ ಪರವಶನಾಗಿ ಬಾಹ್ಯಸ್ಮೃತಿಯೇ ಸ್ತಬ್ಧವಾಯಿತು ಅರ್ಜುನ-ನಕುಲ-ಸಹದೇವರೂ ಕೂಡ ತಮಗೆ ಅತ್ಯಂತ ಪ್ರಿಯನಾದ ಶ್ರೀಕೃಷ್ಣನನ್ನು ಆನಂದದಿಂದ ಆಲಿಂಗಿಸಿಕೊಂಡರು. ಆಗ ಅವರ ಕಣ್ಣುಗಳಿಂದ ಆನಂದಬಾಷ್ಪಗಳು ಸುರಿಯುತ್ತಿದ್ದವು. ॥ ೨೭ ॥ ಅರ್ಜುನನು ಪುನಃ ಭಗವಂತನನ್ನು ಆಲಿಂಗಿಸಿಕೊಂಡನು. ನಕುಲ-ಸಹದೇವರು ಅಭಿವಾದನ ಮಾಡಿದರು ಮತ್ತು ಭಗವಾನ್ ಶ್ರೀಕೃಷ್ಣನು ಬ್ರಾಹ್ಮಣರನ್ನೂ, ಕುರುವಂಶೀ ವೃದ್ಧರನ್ನೂ ಯಥಾಯೋಗ್ಯವಾಗಿ ನಮಸ್ಕಾರ ಮಾಡಿದನು. ॥ ೨೮ ॥ ಕುರು, ಸೃಂಜಯ, ಕೇಕಯ ದೇಶದ ರಾಜರೂ ಭಗವಾನ್ ಶ್ರೀಕೃಷ್ಣನನ್ನು ಸಮ್ಮಾನಿಸಿದರು. ಭಗವಂತನೂ ಅವರನ್ನು ಯಥೋಚಿತವಾಗಿ ಸತ್ಕರಿಸಿದನು ಸೂತ-ಮಾಗಧ-ವಂದೀಜನರು ಮತ್ತು ಬ್ರಾಹ್ಮಣರು ಭಗವಂತನನ್ನು ಸ್ತುತಿಸತೊಡಗಿದರು. ಗಂಧರ್ವರು, ನಟರು, ವಿದೂಷಕ ಮುಂತಾದವರು ಮೃದಂಗ, ಶಂಖ, ಡೋಲು, ವೀಣೆ, ಕೊಂಬು-ಕಹಳೆಗಳನ್ನು ನುಡಿಸುತ್ತಾ, ಹಾಡುತ್ತಾ, ನರ್ತನವಾಡಿದರು. ॥ ೨೯-೩೦ ॥ ಹೀಗೆ ಪುಣ್ಯಶ್ಲೋಕ ಶಿರೋಮಣಿಯಾದ ಶ್ರೀಕೃಷ್ಣನು ಸುಹೃದ್-ಸ್ವಜನರೊಂದಿಗೆ ಸರ್ವಾಲಂಕಾರ ಶೋಭಿತವಾದ ಇಂದ್ರಪ್ರಸ್ಥ ನಗರಿಯನ್ನು ಪ್ರವೇಶಿಸಿದನು. ಆ ಸಮಯದಲ್ಲಿ ಜನರು ಪರಸ್ಪರವಾಗಿ ಭಗವಾನ್ ಶ್ರೀಕೃಷ್ಣನನ್ನು ಪ್ರಶಂಸಿಸುತ್ತಾ ನಡೆಯುತ್ತಿದ್ದರು. ॥ ೩೧ ॥ ಇಂದ್ರಪ್ರಸ್ಥ ನಗರದ ಮಾರ್ಗಗಳು ಮದಿಸಿದ ಆನೆಗಳ ಸುಗಂಧಯುಕ್ತವಾದ ಮದೋದಕದಿಂದ ತೋಯಿಸಲ್ಪಟ್ಟಿದ್ದವು. ಅಲ್ಲಲ್ಲಿ ಬಣ್ಣ-ಬಣ್ಣದ ಧ್ವಜ-ಪತಾಕೆಗಳು ಹಾರಾಡುತ್ತಿದ್ದವು. ಚಿನ್ನದ ತೋರಣಗಳನ್ನು ಕಟ್ಟಿದ್ದರು. ನೀರು ತುಂಬಿದ ಚಿನ್ನದ ಕಲಶಗಳನ್ನು ಶ್ರೀಕೃಷ್ಣನ ಸ್ವಾಗತಕ್ಕಾಗಿ ಎಲ್ಲೆಡೆಗಳಲ್ಲಿ ಇಡಲ್ಪಟ್ಟಿದ್ದವು. ನಗರದ ನರ-ನಾರಿಯರು ನೂತನವಸ್ತ್ರಗಳನ್ನು, ಆಭರಣಗಳನ್ನು ತೊಟ್ಟು, ಪುಷ್ಪಮಾಲಿಕೆಗಳನ್ನು ಧರಿಸಿಕೊಂಡು, ಸುಗಂಧ ದ್ರವ್ಯಗಳನ್ನು ಪೂಸಿಕೊಂಡು ಸರ್ವಾಲಂಕಾರ ಭೂಷಿತರಾಗಿ ಓಡಾಡುತ್ತಿದ್ದರು. ॥ ೩೨ ॥

ಉದ್ದೀಪ್ತದೀಪಬಲಿಭಿಃ ಪ್ರತಿಸದ್ಮಜಾಲ-
ನಿರ್ಯಾತಧೂಪರುಚಿರಂ ವಿಲಸತ್ಪತಾಕಮ್ ।
ಮೂರ್ಧನ್ಯಹೇಮಕಲಶೈ ರಜತೋರುಶೃಂಗೈ-
ರ್ಜುಷ್ಟಂ ದದರ್ಶ ಭವನೈಃ ಕುರುರಾಜಧಾಮ ॥ ೩೩ ॥

ಮನೆ-ಮನೆ ಹೊಸ್ತಿಲುಗಳಲ್ಲಿ ದೀಪಗಳನ್ನು ಬೆಳಗಿಸಿದ್ದರು, ಅದನ್ನು ನೋಡಿದಾಗ ದೀಪಾವಳಿಯೇ ನೆನಪಾಗುತ್ತಿತ್ತು. ಪ್ರತಿಯೊಂದು ಮನೆಗಳ ಗವಾಕ್ಷಿಗಳಿಂದ ಅಗರುರೂಪದ ಹೊಗೆ ಹೊರಸೂಸುತ್ತಿತ್ತು. ಎಲ್ಲ ಮನೆಗಳ ಮೇಲೆಯೂ ಧ್ವಜಗಳು ಹಾರಾಡುತ್ತಿದ್ದು, ಬೆಳ್ಳಿಯ ಶಿಖರಗಳಿದ್ದು, ಚಿನ್ನದ ಕಲಶಗಳು ಹೊಳೆಯುತ್ತಿದ್ದುವು. ಇಂತಹ ಸೌಧಗಳಿಂದ ಕೂಡಿದ್ದ ಪಾಂಡವರ ರಾಜಧಾನಿ ಇಂದ್ರಪ್ರಸ್ಥವನ್ನು ನೋಡುತ್ತಾ ಭಗವಾನ್ ಶ್ರೀಕೃಷ್ಣನು ಮುಂದರಿಯುತ್ತಿದ್ದನು. ॥ ೩೩ ॥

ಪ್ರಾಪ್ತಂ ನಿಶಮ್ಯ ನರಲೋಚನಪಾನಪಾತ್ರ-
ಮೌತ್ಸುಕ್ಯವಿಶ್ಲಥಿತಕೇಶದುಕೂಲಬಂಧಾಃ ।
ಸದ್ಯೋ ವಿಸೃಜ್ಯ ಗೃಹಕರ್ಮ ಪತೀಂಶ್ಚ ತಲ್ಪೇ
ದ್ರಷ್ಟುಂ ಯಯುರ್ಯುವತಯಃ ಸ್ಮ ನರೇಂದ್ರಮಾರ್ಗೇ ॥ ೩೪ ॥

ಮನುಷ್ಯರ ಕಣ್ಣುಗಳ ಪಾನಪಾತ್ರೆ ಅರ್ಥಾತ್ ಅತ್ಯಂತ ದರ್ಶನೀಯನಾದ ಭಗವಾನ್ ಶ್ರೀಕೃಷ್ಣನು ರಾಜಮಾರ್ಗದಲ್ಲಿ ಬರುತ್ತಿರುವನೆಂದು ಕೇಳಿದ ನಗರದ ಯುವತಿಯರು ಅವನ ದರ್ಶನದ ಔತ್ಸುಕ್ಯದಿಂದ ಮನೆಯ ಕೆಲಸವನ್ನು ಅಷ್ಟಕ್ಕೆ ನಿಲ್ಲಿಸಿ, ತಮ್ಮ ಗಂಡಂದಿರನ್ನೂ ಬಿಟ್ಟು ಅವರಿಗೂ ಹೇಳದೆ ಓಡಿ ಹೋಗುತ್ತಿರುವಾಗ ಮುಡಿಯು ಬಿಚ್ಚಿಹೋಗಿರುವುದನ್ನು, ಉಟ್ಟಸೀರೆಯು ಸಡಿಲಿಯುವುದನ್ನು ಗಮನಿಸದೆ ಧಾವಿಸಿ ರಾಜಬೀದಿಗೆ ಬಂದರು. ॥ ೩೪ ॥

ತಸ್ಮಿನ್ ಸುಸಂಕುಲ ಇಭಾಶ್ವರಥದ್ವಿಪದ್ಭಿಃ
ಕೃಷ್ಣಂ ಸಭಾರ್ಯಮುಪಲಭ್ಯ ಗೃಹಾಧಿರೂಢಾಃ ।
ನಾರ್ಯೋ ವಿಕೀರ್ಯ ಕುಸುಮೈರ್ಮನಸೋಪಗುಹ್ಯ
ಸುಸ್ವಾಗತಂ ವಿದಧುರುತ್ಸ್ಮಯವೀಕ್ಷಿತೇನ ॥ ೩೫ ॥

ರಥಾಶ್ವ-ಗಜ-ಪದಾತಿ ಸೈನಿಕರಿಂದ ಸಮಾಕುಲವಾಗಿದ್ದ ರಾಜಪಥದಲ್ಲಿ ಪತ್ನಿಯರ ಸಮೇತನಾಗಿ ಬರುತ್ತಿದ್ದ ಭಗವಾನ್ ಶ್ರೀಕೃಷ್ಣನನ್ನು ಮನೆಗಳ ಉಪ್ಪರಿಗೆಗಳ ಮೇಲೆ ನಿಂತ ಸ್ತ್ರೀಯರು ದರ್ಶನಮಾಡಿ ಅವನ ಮೇಲೆ ಹೂವಿನ ಮಳೆಯನ್ನು ಸುರಿಸಿದರು. ಮನಸ್ಸಿನಿಂದಲೇ ಜಗದಾನಂದಕಂದನನ್ನು ಆಲಿಂಗಿಸಿಕೊಂಡು, ಪ್ರೇಮಪೂರ್ಣವಾದ ಮಂದಹಾಸದಿಂದಲೂ, ಕಡೆಗಣ್ಣ ನೋಟಗಳಿಂದಲೂ ಶ್ರೀಕೃಷ್ಣನನ್ನು ಸ್ವಾಗತಿಸಿದರು. ॥ ೩೫ ॥

ಊಚುಃ ಸ್ತ್ರಿಯಃ ಪಥಿ ನಿರೀಕ್ಷ್ಯ ಮುಕುಂದಪತ್ನೀ-
ಸ್ತಾರಾ ಯಥೋಡುಪಸಹಾಃ ಕಿಮಕಾರ್ಯಮೂಭಿಃ ।
ಯಚ್ಚಕ್ಷುಷಾಂ ಪುರುಷಮೌಲಿರುದಾರಹಾಸ-
ಲೀಲಾವಲೋಕಕಲಯೋತ್ಸವಮಾತನೋತಿ ॥ ೩೬ ॥

ನಗರದ ನಾರಿಯರು ರಾಜಪಥದಲ್ಲಿ ಚಂದ್ರನೊಡನೆ ಇರುವ ನಕ್ಷತ್ರ ದೇವತೆಗಳಂತಿದ್ದ ಶ್ರೀಕೃಷ್ಣನ ಪತ್ನಿಯರನ್ನು ನೋಡಿ ಹೀಗೆ ಮಾತಾಡಿಕೊಂಡರು - ಸಖಿಯರೇ! ಪುರುಷಶ್ರೇಷ್ಠನಾದ ಶ್ರೀಕೃಷ್ಣನು ಉದಾರವಾದ ಹಾಸ್ಯದಿಂದಲೂ, ವಿಲಾಸಪೂರ್ಣ ಕಟಾಕ್ಷವೀಕ್ಷಣದಿಂದಲೂ ತನ್ನ ಪತ್ನಿಯರ ಕಡೆಗೆ ನೋಡುತ್ತಾ ಅವರ ಕಣ್ಣುಗಳಿಗೆ ಪರಮಾನಂದಪ್ರದನಾಗಿದ್ದಾನೆ. ಇಂತಹ ಸೌಭಾಗ್ಯವನ್ನು ಪಡೆಯಲು ಇವರು ಎಂತಹ ಪುಣ್ಯಕಾರ್ಯಗಳನ್ನು ಮಾಡಿದ್ದರು ?॥೩೬॥

ತತ್ರ ತತ್ರೋಪಸಂಗಮ್ಯ ಪೌರಾ ಮಂಗಲಪಾಣಯಃ ।
ಚಕ್ರುಃ ಸಪರ್ಯಾಂ ಕೃಷ್ಣಾಯ ಶ್ರೇಣೀಮುಖ್ಯಾ ಹತೈನಸಃ ॥ ೩೭ ॥

ಹೀಗೆ ಭಗವಾನ್ ಶ್ರೀಕೃಷ್ಣನು ರಾಜಬೀದಿಯಲ್ಲಿ ಹೋಗುತ್ತಿದ್ದಾಗ ಅಲ್ಲಲ್ಲಿ ಪುಣ್ಯಾತ್ಮರಾದ ಶ್ರೀಮಂತರೂ, ವ್ಯಾಪಾರಿಗಳೂ, ಪರಜನರೂ ಅನೇಕ ಮಾಂಗಲಿಕ ದ್ರವ್ಯಗಳನ್ನು ತಂದು-ತಂದು ಶ್ರೀಕೃಷ್ಣನನ್ನು ಪೂಜಿಸಿ, ಸ್ವಾಗತಿಸಿ, ಸತ್ಕರಿಸುತ್ತಿದ್ದರು. ॥ ೩೭ ॥

ಅಂತಃಪುರಜನೈಃ ಪ್ರೀತ್ಯಾ ಮುಕುಂದಃ ಫುಲ್ಲಲೋಚನೈಃ ।
ಸಸಂಭ್ರಮೈರಭ್ಯುಪೇತಃ ಪ್ರಾವಿಶದ್ರಾಜಮಂದಿರಮ್ ॥ ೩೮ ॥

ಅಂತಃಪುರದ ಸ್ತ್ರೀಯರು ಭಗವಾನ್ ಶ್ರೀಕೃಷ್ಣನನ್ನು ನೋಡಿ ಪ್ರೇಮಾನಂದದಲ್ಲಿ ಮುಳುಗಿಹೋದರು. ಅವರು ಪ್ರೇಮವಿಹ್ವಲ ಮತ್ತು ಆನಂದದಿಂದ ಅರಳಿದ್ದ ತಮ್ಮ ಕಣ್ಣುಗಳಿಂದ ಭಗವಂತನನ್ನು ಸ್ವಾಗತಿಸಿ ಸತ್ಕರಿಸಿದರು. ಅವರ ಸ್ವಾಗತ-ಸತ್ಕಾರವನ್ನು ಸ್ವೀಕರಿಸುತ್ತಾ ಶ್ರೀಕೃಷ್ಣನು ಅರಮನೆಯನ್ನು ಪ್ರವೇಶಿಸಿದನು. ॥ ೩೮ ॥

ಪೃಥಾ ವಿಲೋಕ್ಯ ಭ್ರಾತ್ರೇಯಂ ಕೃಷ್ಣಂ ತ್ರಿಭುವನೇಶ್ವರಮ್ ।
ಪ್ರೀತಾತ್ಮೋತ್ಥಾಯ ಪರ್ಯಂಕಾತ್ಸಸ್ನುಷಾ ಪರಿಷಸ್ವಜೇ ॥ ೩೯ ॥

ಕುಂತಿಯು ತ್ರಿಭುವನೇಶ್ವರನಾದ ತನ್ನ ಅಣ್ಣನ ಮಗನಾದ ಶ್ರೀಕೃಷ್ಣನನ್ನು ನೋಡಿದಾಗ ಆಕೆಯ ಹೃದಯ ಪ್ರೇಮದಿಂದ ತುಂಬಿಬಂತು. ಅವಳು ಮಂಚದಿಂದೆದ್ದು ಸೊಸೆಯಾದ ದ್ರೌಪದಿಯೊಡನೆ ಮುಂದೆ ಬಂದು ಶ್ರೀಕೃಷ್ಣನನ್ನು ಗಾಢವಾಗಿ ಆಲಿಂಗಿಸಿಕೊಂಡಳು. ॥ ೩೯ ॥

ಗೋವಿಂದಂ ಗೃಹಮಾನೀಯ ದೇವದೇವೇಶಮಾದೃತಃ ।
ಪೂಜಾಯಾಂ ನಾವಿದತ್ ಕೃತ್ಯಂ ಪ್ರಮೋದೋಪಹತೋ ನೃಪಃ ॥ ೪೦ ॥

ಪಿತೃಷ್ವಸುರ್ಗುರುಸ್ತ್ರೀಣಾಂ ಕೃಷ್ಣಶ್ಚಕ್ರೇಽಭಿವಾದನಮ್ ।
ಸ್ವಯಂ ಚ ಕೃಷ್ಣಯಾ ರಾಜನ್ ಭಗಿನ್ಯಾ ಚಾಭಿವಂದಿತಃ ॥ ೪೧ ॥

ಶ್ವಶ್ರ್ವಾ ಸಂಚೋದಿತಾ ಕೃಷ್ಣಾ ಕೃಷ್ಣಪತ್ನೀಶ್ಚ ಸರ್ವಶಃ ।
ಆನರ್ಚ ರುಕ್ಮಿಣೀಂ ಸತ್ಯಾಂ ಭದ್ರಾಂ ಜಾಂಬವತೀಂ ತಥಾ ॥ ೪೨ ॥

ಕಾಲಿಂದೀಂ ಮಿತ್ರವಿಂದಾಂ ಚ ಶೈಬ್ಯಾಂ ನಾಗ್ನಜಿತೀಂ ಸತೀಮ್ ।
ಅನ್ಯಾಶ್ಚಾಭ್ಯಾಗತಾ ಯಾಸ್ತು ವಾಸಃಸ್ರಙ್ಮಂಡನಾದಿಭಿಃ ॥ ೪೩ ॥

ಸುಖಂ ನಿವಾಸಯಾಮಾಸ ಧರ್ಮರಾಜೋ ಜನಾರ್ದನಮ್ ।
ಸಸೈನ್ಯಂ ಸಾನುಗಾಮಾತ್ಯಂ ಸಭಾರ್ಯಂ ಚ ನವಂ ನವಮ್ ॥ ೪೪ ॥

ತರ್ಪಯಿತ್ವಾ ಖಾಂಡವೇನ ವಹ್ನಿಂ ಫಾಲ್ಗುನಸಂಯುತಃ ।
ಮೋಚಯಿತ್ವಾ ಮಯಂ ಯೇನ ರಾಜ್ಞೇ ದಿವ್ಯಾ ಸಭಾ ಕೃತಾ ॥ ೪೫ ॥

ಉವಾಸ ಕತಿಚಿನ್ಮಾಸಾನ್ ರಾಜ್ಞಃ ಪ್ರಿಯಚಿಕೀರ್ಷಯಾ ।
ವಿಹರನ್ರಥಮಾರುಹ್ಯ ಫಾಲ್ಗುನೇನ ಭಟೈರ್ವೃತಃ ॥ ೪೬ ॥

ದೇವದೇವೇಶ್ವರ ಭಗವಾನ್ ಶ್ರೀಕೃಷ್ಣನನ್ನು ಆದರಭಾವದಿಂದ ಅರಮನೆಯೊಳಗೆ ಕರೆತಂದಾಗ ಯುಧಿಷ್ಠಿರನು ಆನಂದೋದ್ರೇಕದಿಂದ ಮೈಮರೆತನು. ಭಗವಂತನನ್ನು ಯಾವ ವಿಧದಿಂದ ಪೂಜಿಸಬೇಕೆಂಬುದು ತಿಳಿಯದೆ ಹೋಯಿತು. ॥ ೪೦ ॥ ಭಗವಾನ್ ಶ್ರೀಕೃಷ್ಣನು ತನ್ನ ಅತ್ತೆ ಕುಂತಿಯನ್ನು ಹಾಗೂ ಗುರುಪತ್ನಿಯರಿಗೂ ನಮಸ್ಕರಿಸಿದನು. ಅವನ ತಂಗಿಯಾದ ಸುಭದ್ರೆ ಮತ್ತು ದ್ರೌಪದಿಯು ಭಗವಂತನಿಗೆ ನಮಸ್ಕರಿಸಿದರು. ॥ ೪೧ ॥ ಅತ್ತೆಯಾದ ಕುಂತೀದೇವಿಯ ಪ್ರೇರಣೆಯಂತೆ ದ್ರೌಪದಿಯು ರುಕ್ಮಿಣೀ, ಸತ್ಯಭಾಮೆ, ಭದ್ರಾ, ಜಾಂಬವತೀ, ಕಾಲಿಂದೀ, ಮಿತ್ರವಿಂದಾ, ಲಕ್ಷ್ಮಣಾ ಮತ್ತು ಸತ್ಯಾ ಮೊದಲಾದ ಶ್ರೀಕೃಷ್ಣನ ಪಟ್ಟದರಾಣಿಯರನ್ನು ಹಾಗೂ ಅಲ್ಲಿಗೆ ಬಂದ ಶ್ರೀಕೃಷ್ಣನ ಇತರ ರಾಣಿಯರನ್ನು ವಸ್ತ್ರಾಭರಣ, ಪುಷ್ಪಹಾರಗಳಿಂದ ಯಥಾಯೋಗ್ಯವಾಗಿ ಸತ್ಕರಿಸಿದಳು. ॥ ೪೨-೪೩ ॥ ಧರ್ಮರಾಜ ಯುಧಿಷ್ಠಿರನು ಶ್ರೀಕೃಷ್ಣನಿಗೆ ಅವನ ಸೈನ್ಯಕ್ಕೆ ಸೇವಕ-ಮಂತ್ರಿಗಳಿಗೆ ಹಾಗೂ ಪತ್ನಿಯರಿಗೆ ಯಥಾಯೋಗ್ಯವಾದ ಸುಖಕರ ವಸತಿಗಳನ್ನು ಏರ್ಪಡಿಸಿಕೊಟ್ಟು ಅನುದಿನವು ಹೊಸ-ಹೊಸ ಬಗೆಯ ಸತ್ಕಾರಗಳಿಂದ ಅವರೆಲ್ಲರನ್ನು ಉಪಚರಿಸುತ್ತಿದ್ದನು. ॥ ೪೪ ॥ ಭಗವಾನ್ ಶ್ರೀಕೃಷ್ಣನು ಅರ್ಜುನನೊಂದಿಗೆ ಇದ್ದು ಖಾಂಡವವನವನ್ನು ದಹಿಸಲು ಅಗ್ನಿಗೆ ಅನುವುಮಾಡಿಕೊಟ್ಟು ಅವನನ್ನು ತೃಪ್ತಪಡಿಸಿದನು. ಆ ಅಗ್ನಿಯಿಂದ ಬದುಕಿಸಿದ್ದ ಮಾಯಾಸುರನು ಭಗವಂತನ ಆಜ್ಞೆಯಂತೆ ಯುಧಿಷ್ಠಿರನಿಗೆ ದಿವ್ಯವಾದೊಂದು ಸಭಾಭವನವನ್ನು ನಿರ್ಮಿಸಿಕೊಟ್ಟನು. ॥ ೪೫ ॥ ಶ್ರೀಕೃಷ್ಣನು ಯುಧಿಷ್ಠಿರನನ್ನು ಸಂತೋಷಪಡಿಸಲೆಂದೇ ಕೆಲವು ತಿಂಗಳುಗಳ ಕಾಲ ಇಂದ್ರಪ್ರಸ್ಥದಲ್ಲೇ ಉಳಿದುಕೊಂಡನು. ಅವನು ಆಗಾಗ ಅರ್ಜುನನೊಡನೆ ರಥದಲ್ಲಿ ಕುಳಿತು ಅಲ್ಲಿ-ಇಲ್ಲಿ ಸಂಚರಿಸುತ್ತಿದ್ದನು. ಆಗ ಮಹಾ-ಮಹಾ ವೀರ ಸೈನಿಕರೂ ಕೂಡ ಅವರ ಸೇವೆಗೆ ಜೊತೆಯಲ್ಲೇ ಹೋಗುತ್ತಿದ್ದರು. ॥ ೪೬ ॥

ಎಪ್ಪತ್ತೊಂದನೆಯ ಅಧ್ಯಾಯವು ಮುಗಿಯಿತು. ॥ ೭೧ ॥
ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮ ಸ್ಕಂಧೇ ಉತ್ತರಾರ್ಧೇ
ಕೃಷ್ಣಸ್ಯೇಂದ್ರಪ್ರಸ್ಥಗಮನಂ ನಾಮೈಕಸಪ್ತತಿತಮೋಽಧ್ಯಾಯಃ ॥ ೭೧ ॥

ಎಪ್ಪತ್ತೆರಡನೆಯ ಅಧ್ಯಾಯ

ಪಾಂಡವರಿಂದ ರಾಜಸೂಯ ಯಜ್ಞದ ಉಪಕ್ರಮ ಮತ್ತು ಜರಾಸಂಧನ ಉದ್ಧಾರ

ಶ್ರೀಶುಕ ಉವಾಚ

ಏಕದಾ ತು ಸಭಾಮಧ್ಯೇ ಆಸ್ಥಿತೋ ಮುನಿಭಿರ್ವೃತಃ ।
ಬ್ರಾಹ್ಮಣೈಃ ಕ್ಷತ್ರಿಯೈರ್ವೈಶ್ಯೈರ್ಭ್ರಾತೃಭಿಶ್ಚ ಯುಧಿಷ್ಠಿರಃ ॥ ೧ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ - ಪರೀಕ್ಷಿತನೇ! ಒಂದು ದಿನ ಯುಧಿಷ್ಠಿರ ಮಹಾರಾಜನು ಹಲವಾರು ಮುನಿಗಳಿಂದಲೂ, ಬ್ರಾಹ್ಮಣರಿಂದಲೂ, ಕ್ಷತ್ರಿಯರಿಂದಲೂ, ವೈಶ್ಯರಿಂದಲೂ, ಭೀಮಸೇನನೇ ಮೊದಲಾದ ಸಹೋದರರಿಂದಲೂ, ಆಚಾರ್ಯರಿಂದಲೂ, ಕುರುಕುಲದ ಹಿರಿಯರಿಂದಲೂ, ಬಂಧು ಬಾಂಧವರಿಂದಲೂ ಕೂಡಿಕೊಂಡು ರಾಜಸಭೆಯಲ್ಲಿ ಕುಳಿತಿದ್ದನು.

ಆಚಾರ್ಯೈಃ ಕುಲವೃದ್ಧೈಶ್ಚ ಜ್ಞಾತಿಸಂಬಂಧಿ ಬಾಂಧವೈಃ ।
ಶೃಣ್ವತಾಮೇವ ಚೈತೇಷಾಮಾಭಾಷ್ಯೇದಮುವಾಚ ಹ ॥ ೨ ॥

ಯುಧಿಷ್ಠಿರ ಉವಾಚ

ಕ್ರತುರಾಜೇನ ಗೋವಿಂದ ರಾಜಸೂಯೇನ ಪಾವನೀಃ ।
ಯಕ್ಷ್ಯೇ ವಿಭೂತೀರ್ಭವತಸ್ತತ್ಸಂಪಾದಯ ನಃ ಪ್ರಭೋ ॥ ೩ ॥

ತ್ವತ್ಪಾದುಕೇ ಅವಿರತಂ ಪರಿ ಯೇ ಚರಂತಿ
ಧ್ಯಾಯಂತ್ಯಭದ್ರನಶನೇ ಶುಚಯೋ ಗೃಣಂತಿ ।
ವಿಂದಂತಿ ತೇ ಕಮಲನಾಭ ಭವಾಪವರ್ಗ-
ಮಾಶಾಸತೇ ಯದಿ ತ ಆಶಿಷ ಈಶ ನಾನ್ಯೇ ॥ ೪ ॥

ತದ್ದೇವದೇವ ಭವತಶ್ಚರಣಾರವಿಂದ-
ಸೇವಾನುಭಾವಮಿಹ ಪಶ್ಯತು ಲೋಕ ಏಷಃ ।
ಯೇ ತ್ವಾಂ ಭಜಂತಿ ನ ಭಜಂತ್ಯುತ ವೋಭಯೇಷಾಂ
ನಿಷ್ಠಾಂ ಪ್ರದರ್ಶಯ ವಿಭೋ ಕುರುಸೃಂಜಯಾನಾಮ್ ॥ ೫ ॥

ನ ಬ್ರಹ್ಮಣಃ ಸ್ವಪರಭೇದಮತಿಸ್ತವ ಸ್ಯಾತ್
ಸರ್ವಾತ್ಮನಃ ಸಮದೃಶಃ ಸ್ವಸುಖಾನುಭೂತೇಃ ।
ಸಂಸೇವತಾಂ ಸುರತರೋರಿವ ತೇ ಪ್ರಸಾದಃ
ಸೇವಾನುರೂಪಮುದಯೋ ನ ವಿಪರ್ಯಯೋಽತ್ರ ॥ ೬ ॥

ಶ್ರೀಭಗವಾನುವಾಚ

ಸಮ್ಯಗ್ವ್ಯವಸಿತಂ ರಾಜನ್ ಭವತಾ ಶತ್ರುಕರ್ಶನ ।
ಕಲ್ಯಾಣೀ ಯೇನ ತೇ ಕೀರ್ತಿರ್ಲೋಕಾನನುಭವಿಷ್ಯತಿ ॥ ೭ ॥

ಋಷೀಣಾಂ ಪಿತೃದೇವಾನಾಂ ಸುಹೃದಾಮಪಿ ನಃ ಪ್ರಭೋ ।
ಸರ್ವೇಷಾಮಪಿ ಭೂತಾನಾಮೀಪ್ಸಿತಃ ಕ್ರತುರಾಡಯಮ್ ॥ ೮ ॥

ವಿಜಿತ್ಯ ನೃಪತೀನ್ಸರ್ವಾನ್ಕೃತ್ವಾ ಚ ಜಗತೀಂ ವಶೇ ।
ಸಂಭೃತ್ಯ ಸರ್ವಸಂಭಾರಾನಾಹರಸ್ವ ಮಹಾಕ್ರತುಮ್ ॥ ೯ ॥

ಏತೇ ತೇ ಭ್ರಾತರೋ ರಾಜನ್ ಲೋಕಪಾಲಾಂಶಸಂಭವಾಃ ।
ಜಿತೋಽಸ್ಮ್ಯಾತ್ಮವತಾ ತೇಽಹಂ ದುರ್ಜಯೋ ಯೋಽಕೃತಾತ್ಮಭಿಃ ॥ ೧೦ ॥

ಆಗ ಭಗವಾನ್ ಶ್ರೀಕೃಷ್ಣನನ್ನು ಸಂಬೋಧಿಸುತ್ತಾ ಎಲ್ಲರೆದುರಿಗೆ ಇಂತೆಂದನು - ॥ ೧-೨ ॥

ಧರ್ಮರಾಜ ಯುಧಿಷ್ಠಿರನು ಹೇಳಿದನು - ಗೋವಿಂದ! ಸರ್ವಶ್ರೇಷ್ಠ ರಾಜಸೂಯಯಾಗದ ಮೂಲಕ ನಿನ್ನನ್ನು ಮತ್ತು ನಿನ್ನ ಪರಮಪಾವನ ವಿಭೂತಿಸ್ವರೂಪರಾದ ದೇವತೆಗಳನ್ನು ಪೂಜಿಸಲು ನಾನು ಬಯಸಿದ್ದೇನೆ. ಪ್ರಭೋ! ಕೃಪೆಮಾಡಿ ನನ್ನ ಈ ಸಂಕಲ್ಪವನ್ನು ನಡೆಸಿಕೊಡಬೇಕು. ॥ ೩ ॥ ಪದ್ಮನಾಭನೇ! ನಿನ್ನ ಚರಣಕಮಲಗಳ ಪಾದುಕೆಗಳು ಸಮಸ್ತ ಅಮಂಗಳಗಳನ್ನು ನಾಶಮಾಡುವಂತಹುಗಳು. ನಿರಂತರವಾಗಿ ಅವನ್ನು ಸೇವಿಸುವವರು, ಧ್ಯಾನಿಸುತ್ತಾ ಸ್ತುತಿಸುವವರೇ ನಿಜವಾದ ಪವಿತ್ರಾತ್ಮರು. ಅವರು ಜನ್ಮ-ಮೃತ್ಯುವಿನ ಚಕ್ರದಿಂದ ಬಿಡುಗಡೆ ಹೊಂದುವರು. ಅವರು ಒಂದು ವೇಳೆ ಸಾಂಸಾರಿಕ ವಿಷಯಗಳನ್ನು ಅಪೇಕ್ಷಿಸಿದರೂ ಅವರಿಗೆ ಅವು ದೊರೆಯುತ್ತವೆ. ಆದರೆ ನಿನ್ನ ಚರಣಕಮಲಗಳಲ್ಲಿ ಶರಣಾಗದವರಿಗೆ ಮುಕ್ತಿಯು ಸಿಗುವುದಿಲ್ಲ, ಸಾಂಸಾರಿಕ ಭೋಗಗಳೂ ಸಿಗುವುದಿಲ್ಲ. ॥ ೪ ॥ ದೇವತೆಗಳಿಗೂ ಆರಾಧ್ಯನಾದ ಶ್ರೀಕೃಷ್ಣನೇ! ಸಂಸಾರಿ ಜನರು ನಿನ್ನ ಚರಣಕಮಲಗಳ ಸೇವೆಯ ಮಹಿಮೆಯನ್ನು ಕಾಣಲೆಂದೇ ನಾನು ಬಯಸುತ್ತೇನೆ. ಪ್ರಭೋ! ಕುರುವಂಶೀಯ ರಾಜರಲ್ಲಿ ಮತ್ತು ಸೃಂಜಯವಂಶೀಯ ರಾಜರಲ್ಲಿ ನಿನ್ನನ್ನು ಭಜಿಸುವವರ ಮತ್ತು ಭಜಿಸದವರ ವ್ಯತ್ಯಾಸವನ್ನು ಜನತೆಗೆ ನೀನು ತೋರಿಸಿಕೊಡು. ॥ ೫ ॥ ಪ್ರಭುವೇ! ನೀನು ಎಲ್ಲರ ಆತ್ಮನೂ, ಸಮದರ್ಶಿಯೂ, ಆತ್ಮಾನಂದದ ಸಾಕ್ಷಾತ್ಕಾರನೂ, ಪರಬ್ರಹ್ಮನೂ ಆಗಿರುವೆ. 'ಇದು ನನ್ನದು, ಇದು ಪರರದ್ದು; ಇವನು ನನ್ನವನು ಇವನು ಪರಕೀಯನು' ಎಂಬ ಭೇದಭಾವವು ನಿನ್ನಲ್ಲಿಲ್ಲ. ಹೀಗಿದ್ದರೂ ಕಲ್ಪವೃಕ್ಷವನ್ನು ಸೇವಿಸುವವರಿಗೆ ತಮ್ಮ ಭಾವನೆಗೆ ಅನುಸಾರವಾಗಿ ಸಕಲ ವಸ್ತುಗಳು, ಫಲಗಳು ಸಿಗುವಂತೆ ದೊರೆಯುತ್ತವೆ. ಆ ಫಲದಲ್ಲಿ ಇರುವ ನ್ಯೂನಾಧಿಕ್ಯವು ಅವರವರ ಸೇವೆಗೆ ಅನುರೂಪವಾಗಿಯೇ ಇರುವುದು. ಇದರಿಂದ ನಿನ್ನಲ್ಲಿ ವಿಷಮತೆ, ನಿರ್ದಯತೆ ಮುಂತಾದ ದೋಷಗಳು ಉಂಟಾಗುವುದಿಲ್ಲ. ॥ ೬ ॥

ಭಗವಾನ್ ಶ್ರೀಕೃಷ್ಣನು ಹೇಳಿದನು - ಶತ್ರುವಿಜಯಿಯಾದ ಯುಧಿಷ್ಠಿರನೇ! ರಾಜಸೂಯಯಜ್ಞಮಾಡುವ ನಿನ್ನ ನಿರ್ಧಾರವು ಶ್ಲಾಘ್ಯವಾಗಿದೆ. ಇದರಿಂದ ನಿನ್ನ ಮಂಗಳಮಯ ಕೀರ್ತಿಯು ಎಲ್ಲ ಲೋಕಗಳಲ್ಲಿಯೂ ಹರಡುವುದು. ॥ ೭ ॥ ರಾಜನೇ! ನಿನ್ನ ಈ ಮಹಾಯಜ್ಞವು ಋಷಿಗಳಿಗೂ, ಪಿತೃಗಳಿಗೂ, ದೇವತೆಗಳಿಗೂ, ಸುಹೃದರಿಗೂ ನಮಗೂ ಮತ್ತು ಸಮಸ್ತ ಪ್ರಾಣಿಗಳಿಗೂ ಅಭೀಷ್ಟವೇ ಆಗಿದೆ. ॥ ೮ ॥ ಮಹಾರಾಜ! ಭೂಮಿಯ ಸಮಸ್ತ ರಾಜರನ್ನು ಗೆದ್ದುಕೊಂಡು, ಇಡೀ ಪೃಥಿವಿಯನ್ನು ವಶಪಡಿಸಿಕೊಂಡು, ಯಜ್ಞೋಚಿತವಾದ ಸಮಸ್ತ ಸಾಮಗ್ರಿಗಳನ್ನು ಒಟ್ಟುಗೂಡಿಸಿಕೊಂಡು ಮತ್ತೆ ಈ ಮಹಾ ಯಜ್ಞಾನುಷ್ಠಾನವನ್ನು ಮಾಡು. ॥ ೯ ॥ ಧರ್ಮರಾಯನೇ! ನಿನ್ನ ನಾಲ್ಕು ತಮ್ಮಂದಿರು ವಾಯು, ಇಂದ್ರರೇ ಮೊದಲಾದ ಲೋಕಪಾಲರ ಅಂಶದಿಂದ ಹುಟ್ಟಿದವರು. ಅವರೆಲ್ಲರೂ ಮಹಾವೀರರಾಗಿದ್ದಾರೆ. ನೀನಾದರೋ ಮಹಾಮನಸ್ವಿಯೂ, ಸಂಯಮಿಯೂ ಆಗಿರುವೆ. ನೀವೆಲ್ಲರೂ ನಿಮ್ಮ ಸದ್ಗುಣಗಳಿಂದ ನನ್ನನ್ನು ವಶಪಡಿಸಿಕೊಂಡಿರುವಿರಿ. ಇಂದ್ರಿಯಗಳನ್ನೂ ಮನವನ್ನು ಸಂಯಮಿಸಿಕೊಳ್ಳದವರು ನನ್ನನ್ನು ವಶಪಡಿಸಿಕೊಳ್ಳಲಾರರು. ॥ ೧೦ ॥

ನ ಕಶ್ಚಿನ್ಮತ್ಪರಂ ಲೋಕೇ ತೇಜಸಾ ಯಶಸಾ ಶ್ರಿಯಾ ।
ವಿಭೂತಿಭಿರ್ವಾಭಿಭವೇದ್ದೇವೋಽಪಿ ಕಿಮು ಪಾರ್ಥಿವಃ ॥ ೧೧ ॥

ಪ್ರಪಂಚದಲ್ಲಿ ದೊಡ್ಡ-ದೊಡ್ಡ ದೇವತೆಗಳೂ ಕೂಡ ತೇಜಸ್ಸು, ಯಶಸ್ಸು, ಲಕ್ಷ್ಮೀ, ಸೌಂದರ್ಯ, ಐಶ್ವರ್ಯ ಮುಂತಾದವುಗಳ ಮೂಲಕ ನನ್ನ ಭಕ್ತರನ್ನು ತಿರಸ್ಕರಿಸಲಾರರು. ಹಾಗಿರುವಾಗ ಯಾರೇ ರಾಜನು ಅವನ ತಿರಸ್ಕಾರವನ್ನು ಮಾಡಲು ಸಂಭವವೇ ಇಲ್ಲ. ॥ ೧೧ ॥

ಶ್ರೀಶುಕ ಉವಾಚ

ನಿಶಮ್ಯ ಭಗವದ್ಗೀತಂ ಪ್ರೀತಃ ಫುಲ್ಲಮುಖಾಂಬುಜಃ ।
ಭ್ರಾತೄನ್ ದಿಗ್ವಿಜಯೇಽಯುಂಕ್ತ ವಿಷ್ಣುತೇಜೋಪಬೃಂಹಿತಾನ್ ॥ ೧೨ ॥

ಸಹದೇವಂ ದಕ್ಷಿಣಸ್ಯಾಮಾದಿಶತ್ಸಹ ಸೃಂಜಯೈಃ ।
ದಿಶಿ ಪ್ರತೀಚ್ಯಾಂ ನಕುಲಮುದೀಚ್ಯಾಂ ಸವ್ಯಸಾಚಿನಮ್ ।
ಪ್ರಾಚ್ಯಾಂ ವೃಕೋದರಂ ಮತ್ಸ್ಯೈಃ ಕೇಕಯೈಃ ಸಹ ಮದ್ರಕೈಃ ॥ ೧೩ ॥

ತೇ ವಿಜಿತ್ಯ ನೃಪಾನ್ವೀರಾ ಆಜಹ್ರುರ್ದಿಗ್ಭ್ಯ ಓಜಸಾ ।
ಅಜಾತಶತ್ರವೇ ಭೂರಿ ದ್ರವಿಣಂ ನೃಪ ಯಕ್ಷ್ಯತೇ ॥ ೧೪ ॥

ಶ್ರುತ್ವಾಜಿತಂ ಜರಾಸಂಧಂ ನೃಪತೇರ್ಧ್ಯಾಯತೋ ಹರಿಃ ।
ಆಹೋಪಾಯಂ ತಮೇವಾದ್ಯ ಉದ್ಧವೋ ಯಮುವಾಚ ಹ ॥ ೧೫ ॥

ಭೀಮಸೇನೋಽರ್ಜುನಃ ಕೃಷ್ಣೋ ಬ್ರಹ್ಮಲಿಂಗಧರಾಸ್ತ್ರಯಃ ।
ಜಗ್ಮುರ್ಗಿರಿವ್ರಜಂ ತಾತ ಬೃಹದ್ರಥಸುತೋ ಯತಃ ॥ ೧೬ ॥

ತೇ ಗತ್ವಾಽತಿಥ್ಯವೇಲಾಯಾಂ ಗೃಹೇಷು ಗೃಹಮೇಧಿನಮ್ ।
ಬ್ರಹ್ಮಣ್ಯಂ ಸಮಯಾಚೇರನ್ರಾಜನ್ಯಾ ಬ್ರಹ್ಮಲಿಂಗಿನಃ ॥ ೧೭ ॥

ರಾಜನ್ವಿದ್ಧ್ಯತಿಥೀನ್ ಪ್ರಾಪ್ತಾನರ್ಥಿನೋ ದೂರಮಾಗತಾನ್ ।
ತನ್ನಃ ಪ್ರಯಚ್ಛ ಭದ್ರಂ ತೇ ಯದ್ವಯಂ ಕಾಮಯಾಮಹೇ ॥ ೧೮ ॥

ಕಿಂ ದುರ್ಮರ್ಷಂ ತಿತಿಕ್ಷೂಣಾಂ ಕಿಮಕಾರ್ಯಮಸಾಧುಭಿಃ ।
ಕಿಂ ನ ದೇಯಂ ವದಾನ್ಯಾನಾಂ ಕಃ ಪರಃ ಸಮದರ್ಶಿನಾಮ್ ॥ ೧೯ ॥

ಯೋಽನಿತ್ಯೇನ ಶರೀರೇಣ ಸತಾಂ ಗೇಯಂ ಯಶೋ ಧ್ರುವಮ್ ।
ನಾಚಿನೋತಿ ಸ್ವಯಂ ಕಲ್ಪಃ ಸ ವಾಚ್ಯಃ ಶೋಚ್ಯ ಏವ ಸಃ ॥ ೨೦ ॥

ಶ್ರೀಶುಕಮಹಾಮುನಿಗಳು **ಹೇಳುತ್ತಾರೆ** – ಪರೀಕ್ಷಿತನೇ! ಭಗವಂತನ ಮಾತನ್ನು ಕೇಳಿ ಮಹಾರಾಜ ಯುಧಿಷ್ಠಿರನ ಹೃದಯ ಆನಂದತುಂದಿಲವಾಯಿತು. ಅವನ ಮುಖವು ಪ್ರಫುಲ್ಲಿತವಾಯಿತು. ಆಗ ಅವನು ತನ್ನ ತಮ್ಮಂದಿರನ್ನು ದಿಗ್ವಿಜಯಕ್ಕಾಗಿ ಕಳಿಸಿದನು. ಭಗವಾನ್ ಶ್ರೀಕೃಷ್ಣನು ಪಾಂಡವರಲ್ಲಿ ತನ್ನ ಶಕ್ತಿಯನ್ನು ತುಂಬಿ ಅತ್ಯಂತ ಪ್ರಭಾವಿಯನ್ನಾಗಿಸಿದನು. ॥ ೧೨ ॥ ಧರ್ಮರಾಜ ಯುಧಿಷ್ಠಿರನು ಸೃಂಜಯವಂಶದ ವೀರರೊಂದಿಗೆ ಸಹದೇವನನ್ನು ದಕ್ಷಿಣ ದಿಕ್ಕಿಗೆ ದಿಗ್ವಿಜಯಕ್ಕಾಗಿ ಕಳಿಸಿದನು. ಮತ್ಸ್ಯದೇಶದವೀರರೊಂದಿಗೆ ನಕುಲನನ್ನು ಪಶ್ಚಿಮಕ್ಕೂ, ಕೇಕಯ ದೇಶದ ವೀರರೊಂದಿಗೆ ಅರ್ಜುನನನ್ನು ಉತ್ತರಕ್ಕೂ, ಮದ್ರದೇಶದ ವೀರರೊಂದಿಗೆ ಭೀಮಸೇನನನ್ನು ದಿಗ್ವಿಜಯಕ್ಕಾಗಿ ಪೂರ್ವದಿಕ್ಕಿಗೂ ಕಳಿಸಿಕೊಟ್ಟನು. ॥ ೧೩ ॥ ಪರೀಕ್ಷಿತನೇ! ಭೀಮಸೇನನೇ ಮೊದಲಾದ ಆ ವೀರರು ತಮ್ಮ ಬಲ-ಪೌರುಷದಿಂದ ಎಲ್ಲ ದಿಕ್ಕಿನ ರಾಜರನ್ನು ಗೆದ್ದುಕೊಂಡು, ಯಜ್ಞಮಾಡಲು ಉದ್ಯುಕ್ತನಾದ ಯುಧಿಷ್ಠಿರನಿಗೆ ಅತುಲವಾದ ಧನವನ್ನು ತಂದು ಒಪ್ಪಿಸಿದರು. ॥ ೧೪ ॥ ಇನ್ನೂ ಜರಾಸಂಧನನ್ನು ಗೆದ್ದುಕೊಂಡಿಲ್ಲ ಎಂಬುದನ್ನು ಕೇಳಿದ ಯುಧಿಷ್ಠಿರನು ಚಿಂತಾತುರನಾದನು. ಆ ಸಮಯದಲ್ಲಿ ಭಗವಾನ್ ಶ್ರೀಕೃಷ್ಣನು ಹಿಂದೆ ಉದ್ಧವನು ಹೇಳಿದ ಉಪಾಯವನ್ನು ಧರ್ಮರಾಯನಿಗೆ ತಿಳಿಸಿದನು. ॥ ೧೫ ॥ ಪರೀಕ್ಷಿತನೇ! ಅನಂತರ ಭೀಮಸೇನ, ಅರ್ಜುನ ಮತ್ತು ಭಗವಾನ್ ಶ್ರೀಕೃಷ್ಣ ಹೀಗೆ ಮೂವರೂ ಬ್ರಾಹ್ಮಣರ ವೇಷವನ್ನು ಧರಿಸಿ ಜರಾಸಂಧನ ರಾಜಧಾನಿಯಾದ ಗಿರಿವ್ರಜಕ್ಕೆ ಹೋದರು. ॥ ೧೬ ॥ ಜರಾಸಂಧನು ಬ್ರಾಹ್ಮಣರ ಭಕ್ತನಾಗಿದ್ದು, ಗೃಹಸ್ಥೋಚಿತವಾದ ಧರ್ಮಗಳನ್ನು ಪಾಲಿಸುವವನಾಗಿ ಇದ್ದನು. ಶ್ರೀಕೃಷ್ಣನೇ ಮೊದಲಾದ ಕ್ಷತ್ರಿಯ ವೀರರು ಬ್ರಾಹ್ಮಣರ ವೇಷಗಳನ್ನು ಧರಿಸಿ ಅತಿಥಿ-ಅಭ್ಯಾಗತರ ಸತ್ಕಾರ ಸಮಯದಲ್ಲಿ ಜರಾಸಂಧನ ಬಳಿಗೆ ಹೋಗಿ ಅವನಲ್ಲಿ ಹೀಗೆ ಯಾಚಿಸಿದರು. ॥ ೧೭ ॥ ಮಹಾರಾಜ! ನಿನಗೆ ಮಂಗಳವಾಗಲಿ. ನಾವು ಮೂವರೂ ನಿಮ್ಮ ಅತಿಥಿಗಳಾಗಿದ್ದು ಬಹಳ ದೂರದಿಂದ ಬಂದಿದ್ದೇವೆ. ನಿಶ್ಚಯವಾಗಿಯೂ ನಾವು ನಿನ್ನಿಂದ ಒಂದು ವಿಶೇಷ ಪ್ರಯೋಜನವನ್ನು ಪಡೆಯಲು ಇಲ್ಲಿಗೆ ಬಂದಿರುವೆವು. ಆದುದರಿಂದ ನಾವು ನಿನ್ನಿಂದ ಅಪೇಕ್ಷಿಸುವುದನ್ನು ನೀನು ಅವಶ್ಯವಾಗಿ ಕೊಡಬೇಕು. ॥ ೧೮ ॥ ಲೋಕದಲ್ಲಿ ತಿತಿಕ್ಷುಗಳಿಗೆ ಸ್ವೀಕರಿಸಲಾಗದಿರುವುದು ಯಾವುದಿದೆ? ದುಷ್ಟರು ಮಾಡದಿರುವ ಅಕಾರ್ಯ ಯಾವುದಿದೆ? ಉದಾರಿಗಳಿಗೆ ಕೊಡದಿರುವ ವಸ್ತುವು ಯಾವುದಿದೆ? ಸಮದರ್ಶಿಗಳಿಗೆ ಪರರೆಂಬುವವರು ಯಾರಿದ್ದಾರೆ? ॥ ೧೯ ॥ ಯಾವ ಮನುಷ್ಯನು ತಾನು ಸಮರ್ಥನಾಗಿದ್ದರೂ ಅನಿತ್ಯವಾದ ಈ ಶರೀರದಿಂದ ಸತ್ಪುರುಷರು ಹೊಗಳುವಂತಹ ಅವಿನಾಶಿಯಾದ ಶಾಶ್ವತವಾದ ಯಶಸ್ಸನ್ನು ಸಂಪಾದಿಸುವುದಿಲ್ಲವೋ ಅವನನ್ನು ಎಷ್ಟು ನಿಂದಿಸಿದರೂ ಕಡಿಮೆಯೇ. ಅವನ ಜೀವನವು ಅತ್ಯಂತ ಶೋಚನೀಯವಾಗಿದೆ. ॥ ೨೦ ॥

ಹರಿಶ್ಚಂದ್ರೋ ರಂತಿದೇವ ಉಂಛವೃತ್ತಿಃ ಶಿಬಿರ್ಬಲಿಃ ।
ವ್ಯಾಧಃ ಕಪೋತೋ ಬಹವೋ ಹ್ಯಧ್ರುವೇಣ ಧ್ರುವಂ ಗತಾಃ
॥ ೨೧ ॥

ಶ್ರೀಶುಕ ಉವಾಚ

ಸ್ವರೈರಾಕೃತಿಭಿಸ್ತಾಂಸ್ತು ಪ್ರಕೋಷ್ಠೈರ್ಜ್ಯಾಹತೈರಪಿ ।
ರಾಜನ್ಯಬಂಧೂನ್ ವಿಜ್ಞಾಯ ದೃಷ್ಟಪೂರ್ವಾನಚಿಂತಯತ್
॥ ೨೨ ॥

ರಾಜನ್ಯಬಂಧವೋ ಹ್ಯೇತೇ ಬ್ರಹ್ಮಲಿಂಗಾನಿ ಬಿಭ್ರತಿ ।
ದದಾಮಿ ಭಿಕ್ಷಿತಂ ತೇಭ್ಯ ಆತ್ಮಾನಮಪಿ ದುಸ್ತ್ಯಜಮ್
॥ ೨೩ ॥

ಬಲೇರ್ನು ಶ್ರೂಯತೇ ಕೀರ್ತಿರ್ವಿತತಾ ದಿಕ್ಷ್ವಕಲ್ಮಷಾ ।
ಐಶ್ವರ್ಯಾದ್ಭ್ರಂಶಿತಸ್ಯಾಪಿ ವಿಪ್ರವ್ಯಾಜೇನ ವಿಷ್ಣುನಾ
॥ ೨೪ ॥

ಶ್ರಿಯಂ ಜಿಹೀರ್ಷತೇಂದ್ರಸ್ಯ ವಿಷ್ಣವೇ ದ್ವಿಜರೂಪಿಣೇ ।
ಜಾನನ್ನಪಿ ಮಹೀಂ ಪ್ರಾದಾದ್ವಾರ್ಯಮಾಣೋಽಪಿ ದೈತ್ಯರಾಟ್
॥ ೨೫ ॥

ಜೀವತಾ ಬ್ರಾಹ್ಮಣಾರ್ಥಾಯ ಕೋ ನ್ವರ್ಥಃ ಕ್ಷತ್ರಬಂಧುನಾ ।
ದೇಹೇನ ಪತಮಾನೇನ ನೇಹತಾ ವಿಪುಲಂ ಯಶಃ
॥ ೨೬ ॥

ಇತ್ಯುದಾರಮತಿಃ ಪ್ರಾಹ ಕೃಷ್ಣಾರ್ಜುನವೃಕೋದರಾನ್ ।
ಹೇ ವಿಪ್ರಾ ವ್ರಿಯತಾಂ ಕಾಮೋ ದದಾಮ್ಯಾತ್ಮಶಿರೋಽಪಿ ವಃ
॥ ೨೭ ॥

ಶ್ರೀಭಗವಾನುವಾಚ

ಯುದ್ಧಂ ನೋ ದೇಹಿ ರಾಜೇಂದ್ರ ದ್ವಂದ್ವಶೋ ಯದಿ ಮನ್ಯಸೇ ।
ಯುದ್ಧಾರ್ಥಿನೋ ವಯಂ ಪ್ರಾಪ್ತಾ ರಾಜನ್ಯಾ ನಾನ್ಯಕಾಂಕ್ಷಿಣಃ
॥ ೨೮ ॥

ಅಸೌ ವೃಕೋದರಃ ಪಾರ್ಥ-
ಸ್ತಸ್ಯ ಭ್ರಾತಾರ್ಜುನೋ ಹ್ಯಯಮ್ ।
ಅನಯೋರ್ಮಾತುಲೇಯಂ ಮಾಂ
ಕೃಷ್ಣಂ ಜಾನೀಹಿ ತೇ ರಿಪುಮ್ ॥ ೨೯ ॥

ಜರಾಸಂಧನೇ! ನಿನಗೆ ತಿಳಿದಿರುವಂತೆ ಹರಿಶ್ಚಂದ್ರ, ರಂತಿದೇವ, ಉಂಛವೃತ್ತಿಯಿಂದ ಜೀವಿಸುತ್ತಿದ್ದ ಮುದ್ಗಲ, ಶಿಬಿ, ಬಲಿ, ವ್ಯಾಧ ಮತ್ತು ಕಪೋತ ಮುಂತಾದ ಬಹಳಷ್ಟು ಜನರು ಅತಿಥಿಗಳಿಗೆ ತಮ್ಮ ಸರ್ವಸ್ವವನ್ನು ಕೊಟ್ಟು ಈ ನಾಶಯುಕ್ತವಾದ ಶರೀರದ ಮೂಲಕ ಅವಿನಾಶೀ ಪದವನ್ನು ಪಡೆದುಕೊಂಡಿರುವರು. ಅದಕ್ಕಾಗಿ ನೀನೂ ನಮ್ಮನ್ನು ನಿರಾಶೆಗೊಳಿಸಬೇಡ. ॥ ೨೧ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ! ಜರಾಸಂಧನು ಅವರ ಮಾತಿನ ಧ್ವನಿಯನ್ನೂ, ದೇಹದ ಆಕೃತಿಯನ್ನೂ, ಬಿಲ್ಲಿನ ಹೆದೆಯನ್ನು ಬಾರಿ-ಬಾರಿಗೂ ಸೆಳೆದು ಜಡ್ಡು ಕಟ್ಟಿರುವ ಅಂಗೈಯನ್ನು ನೋಡಿ ಇವರು ಬ್ರಾಹ್ಮಣರಾಗಿರದೆ ಕ್ಷತ್ರಿಯರೇ ಆಗಿದ್ದಾರೆಂದೂ ನಿಶ್ಚಯಿಸಿಕೊಂಡನು. ಅವನು ಇವರನ್ನು ಎಲ್ಲಿಯೋ ನೋಡಿರುವುದಾಗಿ ಅಂದು ಕೊಂಡನು. ॥ ೨೨ ॥ ಇವರು ಕ್ಷತ್ರಿಯರೇ ಆಗಿದ್ದರೂ ನನ್ನ ಭಯದಿಂದ ಬ್ರಾಹ್ಮಣ ವೇಷವನ್ನು ಧರಿಸಿ ಬಂದಿರುವರು. ಆದ್ದರಿಂದ ಇವರು ಏನನ್ನು ಯಾಚಿಸಿದರೂ ನಾನು ಕೊಟ್ಟುಬಿಡುತ್ತೇನೆ. ಅತ್ಯಂತ ಪ್ರಿಯವಾದ ಮತ್ತು ತ್ಯಜಿಸಲು ದುಸ್ತರವಾದ ಈ ಶರೀರವನ್ನೇ ಕೇಳಿದರೂ ಕೊಟ್ಟು ಬಿಡುವೆನು ಎಂದು ಮನಸ್ಸಿನಲ್ಲೇ ಯೋಚಿಸಿದನು. ॥ ೨೩ ॥ ಭಗವಂತನಾದ ವಿಷ್ಣುವು ಬ್ರಾಹ್ಮಣನ ವೇಷವನ್ನು ಧರಿಸಿ ಬಲಿಚಕ್ರವರ್ತಿಯ ರಾಜ್ಯೈಶ್ವರ್ಯಗಳೆಲ್ಲವನ್ನೂ ಅಪಹರಿಸಿಬಿಟ್ಟಿದ್ದನು. ಆದರೆ ಬಲಿಯ ಧವಳ ಕೀರ್ತಿಯು ಈಗಲೂ ಎಲ್ಲ ಕಡೆಗಳಲ್ಲಿಯೂ ಹರಡಿಕೊಂಡಿದೆ. ಇಂದು ಕೂಡ ಜನರು ಆದರದಿಂದ ಅದನ್ನು ಕೊಂಡಾಡುತ್ತಾ ಇದ್ದಾರಲ್ಲ! ॥ ೨೪ ॥ ಭಗವಾನ್ ವಿಷ್ಣುವು ದೇವೇಂದ್ರನ ರಾಜ್ಯಲಕ್ಷ್ಮಿಯನ್ನು ಬಲಿಯಿಂದ ಕಸಿದುಕೊಂಡು ಅವನಿಗೆ ಕೊಡಲೆಂದೇ ಬ್ರಾಹ್ಮಣ ವೇಷವನ್ನು ಧರಿಸಿದ್ದನೆಂಬುದರಲ್ಲಿ ಸಂದೇಹವಿಲ್ಲ. ದೈತ್ಯರಾಜ ಬಲಿಗೂ ಇದು ತಿಳಿದಿತ್ತು. ಗುರುಗಳಾದ ಶುಕ್ರಾಚಾರ್ಯರೂ ಅವನನ್ನು ತಡೆದಿದ್ದರೂ ಅವನು ಭೂ ದಾನವನ್ನು ಮಾಡಿಯೇ ಬಿಟ್ಟನು. ॥ ೨೫ ॥ ಈ ಶರೀರವು ನಾಶವುಳ್ಳದ್ದು. ಈ ಶರೀರದಿಂದ ಯಾರು ವಿಪುಲವಾದ ಯಶಸ್ಸನ್ನು ಗಳಿಸುವುದಿಲ್ಲವೋ ಮತ್ತು ಯಾವ ಕ್ಷತ್ರಿಯನು ಬ್ರಾಹ್ಮಣರಿಗಾಗಿಯೇ ಜೀವಿಸುವುದಿಲ್ಲವೋ ಅವನು ಬದುಕಿರುವುದು ವ್ಯರ್ಥವಾದುದೆಂದೇ ನನ್ನ ನಿಶ್ಚಯವು. ॥ ೨೬ ॥ ಪರೀಕ್ಷಿತನೇ! ನಿಜವಾಗಿಯೂ ಜರಾಸಂಧನ ಬುದ್ಧಿಯು ಉದಾರವಾಗಿತ್ತು. ಮೇಲಿನಂತೆ ವಿಚಾರಮಾಡಿ ಅವನು ಬ್ರಾಹ್ಮಣ ವೇಷಧಾರಿ ಶ್ರೀಕೃಷ್ಣ ಅರ್ಜುನ ಮತ್ತು ಭೀಮಸೇನರಲ್ಲಿ ಹೇಳಿದನು – ಎಲೈ ಬ್ರಾಹ್ಮಣರೇ! ನಿಮಗೆ ಬೇಕಾದ್ದನ್ನು ಕೇಳಿರಿ. ನನ್ನ ತಲೆಯನ್ನೇ ಬಯಸಿದರೂ ನಿಮಗೆ ಕೊಟ್ಟು ಬಿಡುತ್ತೇನೆ. ॥ ೨೭ ॥

ಭಗವಾನ್ ಶ್ರೀಕೃಷ್ಣನು ಹೇಳಿದನು – ರಾಜೇಂದ್ರನೇ! ನಾವು ಅನ್ನಾಪೇಕ್ಷಿಗಳಾದ ಬ್ರಾಹ್ಮಣರಲ್ಲ. ನಾವು ನಿನ್ನೊಡನೆ ಯುದ್ಧವನ್ನು ಅಪೇಕ್ಷಿಸಿ ಬಂದಿರುವ ಕ್ಷತ್ರಿಯರು. ನಿನಗೆ ಉಚಿತವೆನಿಸಿದರೆ ದ್ವಂದ್ವ ಯುದ್ಧದ ಭಿಕ್ಷೆಯನ್ನು ಕೊಡು. ॥ ೨೮ ॥ ನೋಡು, ಇವನು ಪಾಂಡುಪುತ್ರನಾದ ಭೀಮಸೇನನು ಮತ್ತು ಇವನು ಅವನ ತಮ್ಮ ಅರ್ಜುನನು ಮತ್ತು ನಾನು ಇವರಿಬ್ಬರ ಸೋದರ ಮಾವನ ಮಗನಾದ ನಿನ್ನ ಹಳೆಯ ಶತ್ರುವಾದ ಕೃಷ್ಣನೆಂದೇ ತಿಳಿ. ॥ ೨೯ ॥

ಏವಮಾವೇದಿತೋ ರಾಜಾ ಜಹಾಸೋಚ್ಚೈಃ ಸ್ಮ ಮಾಗಧಃ ।
ಆಹ ಚಾಮರ್ಷಿತೋ ಮಂದಾ ಯುದ್ಧಂ ತರ್ಹಿ ದದಾಮಿ ವಃ ॥ ೩೦ ॥

ನ ತ್ವಯಾ ಭೀರುಣಾ ಯೋತ್ಸ್ಯೇ ಯುಧಿ ವಿಕ್ಲವಚೇತಸಾ ।
ಮಥುರಾಂ ಸ್ವಪುರೀಂ ತ್ಯಕ್ತ್ವಾ ಸಮುದ್ರಂ ಶರಣಂ ಗತಃ ॥ ೩೦ ॥

ಅಯಂ ತು ವಯಸಾತುಲ್ಯೋ ನಾತಿಸತ್ತ್ವೋ ನ ಮೇ ಸಮಃ ।
ಅರ್ಜುನೋ ನ ಭವೇದ್ಯೋದ್ಧಾ ಭೀಮಸ್ತುಲ್ಯಬಲೋ ಮಮ ॥ ೩೨ ॥

ಇತ್ಯುಕ್ತ್ವಾ ಭೀಮಸೇನಾಯ ಪ್ರಾದಾಯ ಮಹತೀಂ ಗದಾಮ್ ।
ದ್ವಿತೀಯಾಂ ಸ್ವಯಮಾದಾಯ ನಿರ್ಜಗಾಮ ಪುರಾದ್ಬಹಿಃ ॥ ೩೩ ॥

ತತಃ ಸಮೇ ಖಲೇ ವೀರೌ ಸಂಯುಕ್ತಾವಿತರೇತರೌ ।
ಜಘ್ನತುರ್ವಜ್ರಕಲ್ಪಾಭ್ಯಾಂ ಗದಾಭ್ಯಾಂ ರಣದುರ್ಮದೌ ॥ ೩೪ ॥

ಮಂಡಲಾನಿ ವಿಚಿತ್ರಾಣಿ ಸವ್ಯಂ ದಕ್ಷಿಣಮೇವ ಚ ।
ಚರತೋಃ ಶುಶುಭೇ ಯುದ್ಧಂ ನಟಯೋರಿವ ರಂಗಿಣೋಃ ॥ ೩೫ ॥

ತತಶ್ಚಟಚಟಾಶಬ್ದೋ ವಜ್ರನಿಷ್ಪೇಷಸನ್ನಿಭಃ ।
ಗದಯೋಃ ಕ್ಷಿಪ್ತಯೋ ರಾಜನ್ ದಂತಯೋರಿವ ದಂತಿನೋಃ ॥ ೩೬ ॥

ತೇ ವೈ ಗದೇ ಭುಜಜವೇನ ನಿಪಾತ್ಯ ಮಾನೇ
ಅನ್ಯೋನ್ಯತೋಽಂಸಕಟಿಪಾದಕರೋರುಜತ್ರುನ್ ।
ಚೂರ್ಣೀಬಭೂವತುರುಪೇತ್ಯ ಯಥಾರ್ಕಶಾಖೇ
ಸಂಯುದ್ಧ್ಯತೋರ್ದ್ವಿರದಯೋರಿವ ದೀಪ್ತಮನ್ವ್ಯೋಃ ॥ ೩೭ ॥

ಇತ್ಥಂ ತಯೋಃ ಪ್ರಹತಯೋರ್ಗದಯೋರ್ನೃವೀರೌ
ಕ್ರುದ್ಧೌ ಸ್ವಮುಷ್ಟಿಭಿರಯಃಸ್ಪರ್ಶೈರಪಿಷ್ಟಾಮ್ ।
ಶಬ್ದಸ್ತಯೋಃ ಪ್ರಹರತೋರಿಭಯೋರಿವಾಸೀ-
ನ್ನಿರ್ಘಾತವಜ್ರಪರುಷಸ್ತಲತಾಡನೋತ್ಥಃ ॥ ೩೮ ॥

ತಯೋರೇವಂ ಪ್ರಹರತೋಃ ಸಮಶಿಕ್ಷಾಬಲೌಜಸೋಃ ।
ನಿರ್ವಿಶೇಷಮಭೂದ್ಯುದ್ಧಮಕ್ಷೀಣಜವಯೋರ್ನೃಪ ॥ ೩೯ ॥

ಭಗವಾನ್ ಶ್ರೀಕೃಷ್ಣನು ಹೀಗೆ ತನ್ನನ್ನು ಪರಿಚಯಿಸಿದಾಗ ಜರಾಸಂಧನು ಗಹ-ಗಹಿಸಿ ನಗತೊಡಗಿದನು ಮತ್ತು ಕೆರಳಿ ನುಡಿದನು ಎಲೈ ಮೂರ್ಖರೇ! ನಿಮಗೆ ಯುದ್ಧದ ಇಚ್ಛೆಯಿದ್ದರೆ ತಗೊಳ್ಳಿ, ಕೊಟ್ಟಿದ್ದೇನೆ. ನಿಮ್ಮ ಪ್ರಾರ್ಥನೆಯನ್ನು ಸ್ವೀಕರಿಸುತ್ತೇನೆ. ॥ ೩೦ ॥ ಆದರೆ ಕೃಷ್ಣ! ಯುದ್ಧವೆಂದರೆ ಭಯಗೊಳ್ಳುವ, ಹೇಡಿಯಾದ ನೀನು, ನಾನು ಯುದ್ಧಕ್ಕೆ ಬಂದಾಗ ಮಥುರೆಯನ್ನೇ ಬಿಟ್ಟು ಓಡಿಹೋಗಿ ಸಮುದ್ರದ ಮಧ್ಯದಲ್ಲಿ ನೆಲೆಸಿರುವೆ. ನಿನ್ನೊಡನೆ ನಾನು ಯುದ್ಧಮಾಡುವುದಿಲ್ಲ. ॥ ೩೧ ॥ ಈ ಅರ್ಜುನನು ಒಬ್ಬ ಯೋಧನೇ ? ಒಂದೋ ವಯಸ್ಸಿನಲ್ಲಿ ನನ್ನಿಂದ ಬಹಳ ಚಿಕ್ಕವನು, ಇನ್ನೊಂದು ವಿಶೇಷ ಬಲವಂತನೂ ಅಲ್ಲ, ಆದ್ದರಿಂದ ಇವನು ನನಗೆ ಸರಿಸಮಾನನಾಗಲಾರನು. ಇವನೊಡನೆ ಯುದ್ಧಮಾಡುವುದಿಲ್ಲ, ಆದರೆ ಈ ಭೀಮಸೇನನು ನನ್ನಂತೆಯೇ ಬಲಿಷ್ಠನಾಗಿದ್ದು ನನಗೆ ಸರಿಸಮಾನನಾಗಿದ್ದಾನೆ. ॥ ೩೨ ॥ ಜರಾಸಂಧನು ಹೀಗೆ ಹೇಳಿ ಭೀಮಸೇನನಿಗೆ ದೊಡ್ಡದಾದ ಗದೆಯೊಂದನ್ನು ಕೊಟ್ಟನು. ತಾನು ಇನ್ನೊಂದು ಗದೆಯನ್ನು ಎತ್ತಿಕೊಂಡು ದ್ವಂದ್ವಯುದ್ಧಕ್ಕಾಗಿ ನಗರದಿಂದ ಹೊರಗೆ ಬಂದನು. ॥ ೩೩ ॥ ಬಳಿಕ ರಣೋನ್ಮತ್ತರಾದ ಭೀಮ-ಜರಾಸಂಧರು ರಣರಂಗಕ್ಕೆ ಬಂದು ವಜ್ರಕ್ಕೆ ಸಮಾನವಾಗಿದ್ದ ಗದೆಗಳಿಂದ ಪರಸ್ಪರ ಯುದ್ಧಮಾಡಲು ತೊಡಗಿದರು. ॥ ೩೪ ॥ ರಂಗಮಂಟಪದಲ್ಲಿ ಇಬ್ಬರು ನಟರು ಯುದ್ಧದ ಅಭಿನಯವನ್ನು ತೋರಿಸುವಂತೆ ಅವರಿಬ್ಬರೂ ಎಡಕ್ಕೂ, ಬಲಕ್ಕೂ ವಿಚಿತ್ರ ರೀತಿಯಲ್ಲಿ ಮಂಡಲಾಕಾರವಾಗಿ ಸುತ್ತುತ್ತಾ ಗದಾಯುದ್ಧದ ವರಸೆಗಳನ್ನು ತೋರಿಸುತ್ತಾ ರಾರಾಜಿಸಿದರು. ॥ ೩೫ ॥ ಪರೀಕ್ಷಿತನೇ! ಪರಸ್ಪರವಾಗಿ ಪ್ರಹರಿಸಿದ ಗದಾಘಾತದಿಂದ ಉಂಟಾಗುತ್ತಿದ್ದ ಶಬ್ದವು ಸಿಡಿಲು ಬಡಿದಂತೆಯೂ, ಎರಡು ಆನೆಗಳು ಪರಸ್ಪರವಾಗಿ ದಂತಗಳಿಂದ ತಿವಿಯುತ್ತಾ ಕಾದಾಡುವಾಗ ಉಂಟಾಗುವ ಚಟ-ಚಟಾ ಶಬ್ದದಂತೆಯೂ ಕೇಳಿಬರುತ್ತಿತ್ತು. ॥ ೩೬ ॥ ಭೀಮ ಜರಾಸಂಧರು ಭುಜಗಳಿಂದ ಗದೆಗಳನ್ನು ವೇಗವಾಗಿ ಅಪ್ಪಳಿಸಿದಾಗ ಆ ಗದೆಗಳು-ಪರಸ್ಪರವಾಗಿ ಅವರ ಹೆಗಲು, ಸೊಂಟ, ಕೈ-ಕಾಲುಗಳು, ತೊಡೆ, ಕಂಕುಳಗಳಲ್ಲಿ ಬಿದ್ದು ಕೋಪದಿಂದ ಹೋರಾಡುವ ಆನೆಗೆ ಹೊಡೆದ ಎಕ್ಕದ ಕೊಂಬೆಯಂತೆ ನುಚ್ಚು ನೂರಾದವು. ॥ ೩೭ ॥ ಪರೀಕ್ಷಿತನೇ! ಹೀಗೆ ಅವರ ಗದೆಗಳು ಪರಸ್ಪರ ಪ್ರಹಾರಗಳಿಂದ ಪುಡಿ-ಪುಡಿಯಾಗಲು, ಕ್ರುದ್ಧರಾಗಿದ್ದ ಅವರು ಉಕ್ಕಿಗೆ ಸಮಾನವಾದ ತಮ್ಮ ಮುಷ್ಟಿಗಳಿಂದಲೇ ಬಡಿದಾಡ ತೊಡಗಿದರು. ಮದಿಸಿದ ಎರಡು ಆನೆಗಳು ಕಾದಾಡುವಂತೆ ಮುಷ್ಟಿಯುದ್ಧವನ್ನು ಮಾಡುತ್ತಿದ್ದ ಭೀಮ-ಜರಾಸಂಧರ ಅಂಗೈಗಳ, ಮುಷ್ಟಿಗಳ ಹೊಡೆತದಿಂದ ಉಂಟಾದ ಶಬ್ದವು ಸಿಡಿಲಿನ ಅಬ್ಬರದಂತೆ ಕೇಳಿಬರುತ್ತಿತ್ತು. ॥ ೩೮ ॥ ಪರೀಕ್ಷಿತನೇ! ಜರಾಸಂಧ ಭೀಮಸೇನರಿಬ್ಬರ ದ್ವಂದ್ವಯುದ್ಧದಲ್ಲಿ ಕೌಶಲ್ಯ, ಬಲ ಮತ್ತು ಉತ್ಸಾಹಗಳು ಸಮಾನವಾಗಿದ್ದವು. ಅಷ್ಟು ಕಾಲ ಯುದ್ಧ ಮಾಡಿದರೂ ಅವರ ಬಲವು ಸ್ವಲ್ಪವಾದರೂ ಕುಂದಲಿಲ್ಲ. ಹೀಗೆ ಅವ್ಯಾಹತವಾಗಿ ಪ್ರಹರಿಸುತ್ತಿದ್ದರೂ ಯಾರಿಗೂ ಸೋಲು-ಗೆಲುವು ಉಂಟಾಗಲಿಲ್ಲ. ॥ ೩೯ ॥

ಏವಂ ತಯೋರ್ಮಹಾರಾಜ ಯುಧ್ಯತೋಃ ಸಪ್ತವಿಂಶತಿಃ ।
ದಿನಾನಿ ನಿರಗಂಸ್ತತ್ರ ಸುಹೃದ್ವನ್ನಿಶಿ ತಿಷ್ಠತೋಃ
॥ ೪೦ ॥

ಏಕದಾ ಮಾತುಲೇಯಂ ವೈ ಪ್ರಾಹ ರಾಜನ್ ವೃಕೋದರಃ ।
ನ ಶಕ್ತೋಽಹಂ ಜರಾಸಂಧಂ ನಿರ್ಜೇತುಂ ಯುಧಿ ಮಾಧವ
॥ ೪೧ ॥

ಶತ್ರೋರ್ಜನ್ಮಮೃತೀ ವಿದ್ವಾನ್ ಜೀವಿತಂ ಚ ಜರಾಕೃತಮ್ ।
ಪಾರ್ಥಮಾಪ್ಯಾಯಯನ್ ಸ್ವೇನ ತೇಜಸಾಚಿಂತಯದ್ಧರಿಃ
॥ ೪೨ ॥

ಸಂಚಿಂತ್ಯಾರಿವಧೋಪಾಯಂ ಭೀಮಸ್ಯಾಮೋಘದರ್ಶನಃ ।
ದರ್ಶಯಾಮಾಸ ವಿಟಪಂ ಪಾಟಯನ್ನಿವ ಸಂಜ್ಞಯಾ
॥ ೪೩ ॥

ತದ್ವಿಜ್ಞಾಯ ಮಹಾಸತ್ತ್ವೋ ಭೀಮಃ ಪ್ರಹರತಾಂ ವರಃ ।
ಗೃಹೀತ್ವಾ ಪಾದಯೋಃ ಶತ್ರುಂ ಪಾತಯಾಮಾಸ ಭೂತಲೇ
॥ ೪೪ ॥

ಏಕಂ ಪಾದಂ ಪದಾಽಽಕ್ರಮ್ಯ ದೋರ್ಭ್ಯಾಮನ್ಯಂ ಪ್ರಗೃಹ್ಯ ಸಃ ।
ಗುದತಃ ಪಾಟಯಾಮಾಸ ಶಾಖಾಮಿವ ಮಹಾಗಜಃ
॥ ೪೫ ॥

ಏಕಪಾದೋರುವೃಷಣಕಟಿಪೃಷ್ಠಸ್ತನಾಂಸಕೇ ।
ಏಕಬಾಹ್ವಕ್ಷಿಭ್ರೂಕರ್ಣೇ ಶಕಲೇ ದದೃಶುಃ ಪ್ರಜಾಃ
॥ ೪೬ ॥

ಹಾಹಾಕಾರೋ ಮಹಾನಾಸೀನ್ನಿಹತೇ ಮಗಧೇಶ್ವರೇ ।
ಪೂಜಯಾಮಾಸತುರ್ಭೀಮಂ ಪರಿರಭ್ಯ ಜಯಾಚ್ಯುತೌ
॥ ೪೭ ॥

ಸಹದೇವಂ ತತ್ತನಯಂ ಭಗವಾನ್ ಭೂತಭಾವನಃ ।
ಅಭ್ಯಷಿಂಚದಮೇಯಾತ್ಮಾ ಮಗಧಾನಾಂ ಪತಿಂ ಪ್ರಭುಃ ।
ಮೋಚಯಾಮಾಸ ರಾಜನ್ಯಾನ್ಸಂರುದ್ಧಾ ಮಾಗಧೇನ ಯೇ
॥ ೪೮ ॥

ಆ ವೀರರಿಬ್ಬರೂ ರಾತ್ರಿಯಲ್ಲಿ ಸುಹೃದರಂತೆ ಇರುತ್ತಿದ್ದರು. ಬೆಳಗಾಗುತ್ತಲೇ ಯುದ್ಧದಲ್ಲಿ ತೊಡಗುತ್ತಿದ್ದರು. ಮಹಾರಾಜನೇ! ಈ ಪ್ರಕಾರವಾಗಿ ಅವರ ದ್ವಂದ್ವ ಯುದ್ಧವು ಇಪ್ಪತ್ತೇಳು ದಿನಗಳವರೆಗೂ ನಡೆಯಿತು. ॥ ೪೦ ॥ ಪ್ರಿಯ ಪರೀಕ್ಷಿತನೇ! ಇಪ್ಪತ್ತೆಂಟನೆಯ ದಿನ ಭೀಮಸೇನನು ಸೋದರಮಾವನ ಮಗನಾದ ಶ್ರೀಕೃಷ್ಣನಲ್ಲಿ ಹೇಳಿದನು - ಮಾಧವ! ಯುದ್ಧದಲ್ಲಿ ಜರಾಸಂಧನನ್ನು ನಾನು ಜಯಿಸಲಾರೆನು. ॥ ೪೧ ॥ ಭಗವಾನ್ ಶ್ರೀಕೃಷ್ಣನು ಜರಾಸಂಧನ ಜನ್ಮ ಮತ್ತು ಮೃತ್ಯುವಿನ ರಹಸ್ಯವನ್ನು ತಿಳಿದಿದ್ದನು. ಜರಾ ಎಂಬ ರಾಕ್ಷಸಿಯು ಎರಡು ಹೋಳುಗಳಾಗಿ ಬಿದ್ದಿದ್ದ ಶರೀರದ ಭಾಗಗಳನ್ನು ಜೋಡಿಸಿ ಜರಾಸಂಧನಿಗೆ ಜೀವದಾನ ಮಾಡಿದ್ದಳೆಂಬುದೂ ಅವನಿಗೆ ತಿಳಿದಿತ್ತು. ಅದಕ್ಕಾಗಿ ಭೀಮಸೇನನ ಶರೀರದಲ್ಲಿ ತನ್ನ ಶಕ್ತಿಯನ್ನು ತುಂಬಿ ಜರಾಸಂಧನ ವಧೆಯ ಉಪಾಯವನ್ನು ಯೋಚಿಸಿದನು. ॥ ೪೨ ॥ ಪರೀಕ್ಷಿತನೇ! ಬಳಿಕ ಅಮೋಘ ಜ್ಞಾನಶಕ್ತಿಯನ್ನು ಹೊಂದಿದ್ದ ಶ್ರೀಕೃಷ್ಣನು ಜರಾಸಂಧನ ಮೃತ್ಯುವಿನ ಉಪಾಯವನ್ನು ಅರಿತು ಒಂದು ಮರದ ರೆಂಬೆಯನ್ನು ಉದ್ದವಾಗಿ ಸೀಳಿ ಹಾಕಿ ಈ ಸಂಜ್ಞೆಯ ಮೂಲಕ ಭೀಮಸೇನನಿಗೆ ತೋರಿಸಿದನು. ॥ ೪೩ ॥ ವೀರಶಿರೋಮಣಿಯೂ, ಶಕ್ತಿಶಾಲಿಯೂ ಆದ ಭೀಮಸೇನನು ಭಗವಾನ್ ಶ್ರೀಕೃಷ್ಣನ ಅಭಿಪ್ರಾಯವನ್ನು ಗ್ರಹಿಸಿ, ಜರಾಸಂಧನ ಕಾಲನ್ನು ಹಿಡಿದು ನೆಲಕ್ಕೆ ಕೆಡವಿದನು. ॥ ೪೪ ॥ ಬಳಿಕ ಜರಾಸಂಧನ ಒಂದು ಕಾಲನ್ನು ತನ್ನ ಕಾಲಿನಿಂದ ಮೆಟ್ಟಿಕೊಂಡು ಮತ್ತೊಂದು ಕಾಲನ್ನು ಎರಡೂ ಕೈಗಳಿಂದ ಹಿಡಿದು, ಸಲಗವು ಮರದ ರೆಂಬೆಯನ್ನು ಸೀಳುವಂತೆ ಗುದದ್ವಾರದ ಕಡೆಯಿಂದ ಅವನನ್ನು ಸೀಳಿಬಿಟ್ಟನು. ॥ ೪೫ ॥ ನೆರೆದಿದ್ದ ಜನರು ಎರಡು ಸೀಳುಗಳಲ್ಲಿಯೂ ಒಂದೊಂದು ಕಾಲು, ತೊಡೆ, ಅಂಡಕೋಶ, ಕಟಿಭಾಗ, ಪೃಷ್ಠ, ಸ್ತನ, ಹೆಗಲು, ತೋಳು, ಕಣ್ಣು, ಹುಬ್ಬು ಮತ್ತು ಕಿವಿಗಳಿರುವುದನ್ನು ನೋಡಿದರು. ॥ ೪೬ ॥ ಮಗಧರಾಜನಾದ ಜರಾಸಂಧನು ಸತ್ತುಹೋದಾಗ ಅವನ ಪ್ರಜೆಗಳು ಗಟ್ಟಿಯಾಗಿ ಅಯ್ಯೋ! ಅಯ್ಯೋ! ನಮಗೆ ಇನ್ನಾರುಗತಿ! ಎಂದು ಗೋಳಾಡಿದರು. ಭಗವಾನ್ ಶ್ರೀಕೃಷ್ಣಾರ್ಜುನರು ಭೀಮಸೇನನನ್ನು ಆಲಿಂಗಿಸಿಕೊಂಡು ಪ್ರಶಂಸಿಸಿದರು. ॥ ೪೭ ॥ ಸಕಲ ಪ್ರಾಣಿಗಳನ್ನು ಪರಿಪಾಲಿಸುವ, ಅಪ್ರಮೇಯಾತ್ಮನಾದ ಶ್ರೀಕೃಷ್ಣನು ಜರಾಸಂಧನ ಮಗನಾದ ಸಹದೇವನನ್ನು ಮಗಧರಾಜ್ಯಕ್ಕೆ ರಾಜನನ್ನಾಗಿ ಸಿಂಹಾಸನದಲ್ಲಿ ಕುಳ್ಳಿರಿಸಿ ಪಟ್ಟಾಭಿಷೇಕ ಮಾಡಿದನು. ಜರಾಸಂಧನು ಬಂಧಿಸಿಟ್ಟಿದ್ದ ರಾಜರೆಲ್ಲರನ್ನು ಬಂಧಮುಕ್ತಗೊಳಿಸಿದನು. ॥ ೪೮ ॥

ಎಪ್ಪತ್ತೆರಡನೆಯ ಅಧ್ಯಾಯವು ಮುಗಿಯಿತು. ॥ ೭೨ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮ ಸ್ಕಂಧೇ ಉತ್ತರಾರ್ಧೇ

ಜರಾಸಂಧವಧೋ ನಾಮ ದ್ವಿಸಪ್ತತಿತಮೋಽಧ್ಯಾಯಃ ॥ ೭೨ ॥

ಎಪ್ಪತ್ತಮೂರನೆಯ ಅಧ್ಯಾಯ

ಜರಾಸಂಧನ ಸೆರೆಮನೆಯಲ್ಲಿದ್ದ ರಾಜರ ಬೀಳ್ಕೊಡಿಗೆ, ಶ್ರೀಕೃಷ್ಣನು ಭೀಮಾರ್ಜುನರೊಡನೆ ಇಂದ್ರಪ್ರಸ್ಥಕ್ಕೆ ಹಿಂದಿರುಗಿದುದು

ಶ್ರೀಶುಕ ಉವಾಚ

ಅಯುತೇ ದ್ವೇ ಶತಾನ್ಯಷ್ಟೌ ಲೀಲಯಾ ಯುಧಿ ನಿರ್ಜಿತಾಃ ।
ತೇ ನಿರ್ಗತಾ ಗಿರಿದ್ರೋಣ್ಯಾಂ ಮಲಿನಾ ಮಲವಾಸಸಃ ॥ ೧ ॥

ಕ್ಷುತ್ಕ್ಷಾಮಾಃ ಶುಷ್ಕವದನಾಃ ಸಂರೋಧಪರಿಕರ್ಶಿತಾಃ ।
ದದೃಶುಸ್ತೇ ಘನಶ್ಯಾಮಂ ಪೀತಕೌಶೇಯವಾಸಸಮ್ ॥ ೨ ॥

ಶ್ರೀವತ್ಸಾಂಕಂ ಚತುರ್ಬಾಹುಂ ಪದ್ಮಗರ್ಭಾರುಣೇಕ್ಷಣಮ್ ।
ಚಾರುಪ್ರಸನ್ನವದನಂ ಸ್ಫುರನ್ಮಕರಕುಂಡಲಮ್ ॥ ೩ ॥

ಪದ್ಮಹಸ್ತಂ ಗದಾಶಂಖರಥಾಂಗೈರುಪಲಕ್ಷಿತಮ್ ।
ಕಿರೀಟಹಾರಕಟಕಕಟಿಸೂತ್ರಾಂಗದಾಂಚಿತಮ್ ॥ ೪ ॥

ಭ್ರಾಜದ್ವರಮಣಿಗ್ರೀವಂ ನಿವೀತಂ ವನಮಾಲಯಾ ।
ಪಿಬಂತ ಇವ ಚಕ್ಷುರ್ಭ್ಯಾಂ ಲಿಹಂತ ಇವ ಜಿಹ್ವಯಾ ॥ ೫ ॥

ಜಿಘ್ರಂತ ಇವ ನಾಸಾಭ್ಯಾಂ ರಂಭಂತ ಇವ ಬಾಹುಭಿಃ ।
ಪ್ರಣೇಮುರ್ಹತಪಾಪ್ಮಾನೋ ಮೂರ್ಧಭಿಃ ಪಾದಯೋರ್ಹರೇಃ ॥ ೬ ॥

ಕೃಷ್ಣಸಂದರ್ಶನಾಹ್ಲಾದಧ್ವಸ್ತಸಂರೋಧನಕ್ಲಮಾಃ ।
ಪ್ರಶಶಂಸುರ್ಹೃಷೀಕೇಶಂ ಗೀರ್ಭಿಃ ಪ್ರಾಂಜಲಯೋ ನೃಪಾಃ ॥ ೭ ॥

ರಾಜಾನ ಊಚುಃ

ನಮಸ್ತೇ ದೇವದೇವೇಶ ಪ್ರಪನ್ನಾರ್ತಿಹರಾವ್ಯಯ ।
ಪ್ರಪನ್ನಾನ್ಪಾಹಿ ನಃ ಕೃಷ್ಣ ನಿರ್ವಿಣ್ಣಾನ್ ಘೋರಸಂಸೃತೇಃ ॥ ೮ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ - ಎಲೈ ಪರೀಕ್ಷಿತನೇ ! ಜರಾಸಂಧನು ಅನಾಯಾಸವಾಗಿ ಇಪ್ಪತ್ತು ಸಾವಿರದ ಎಂಟು ನೂರು ರಾಜರನ್ನು ಜಯಿಸಿ ಪರ್ವತಗಳ ಮಧ್ಯದಲ್ಲಿದ್ದ ಸೆರೆಮನೆಯಲ್ಲಿಟ್ಟಿದ್ದನು. ಭಗವಾನ್ ಶ್ರೀಕೃಷ್ಣನು ಅವರನ್ನು ಮುಕ್ತಗೊಳಿಸಿದಾಗ ಸೆರೆಮನೆಯಿಂದ ಹೊರಬಂದರು. ಆಗ ಅವರ ಶರೀರಗಳು ಮತ್ತು ವಸ್ತ್ರಗಳು ಅತ್ಯಂತ ಮಲಿನವಾಗಿದ್ದವು. ॥ ೧ ॥ ಹಸಿವಿನಿಂದ ಕಂಗೆಟ್ಟು ಮುಖಗಳು ಬಾಡಿಹೋಗಿದ್ದವು. ಸೆರೆಮನೆಯ ವಾಸದಿಂದ ಅವರ ಅಂಗಾಂಗಗಳು ಶಿಥಿಲಗೊಂಡಿದ್ದವು. ಅಲ್ಲಿಂದ ಹೊರಬರುತ್ತಲೇ ರಾಜರೆಲ್ಲರೂ ತಮ್ಮ ಮುಂದೆ ನಿಂತಿದ್ದ ಭಗವಾನ್ ಶ್ರೀಕೃಷ್ಣನನ್ನು ನೋಡಿದರು. ಅವನ ಶರೀರವು ಮೇಘಶ್ಯಾಮಲವಾಗಿದ್ದು ರೇಷ್ಮೆಯ ಪೀತಾಂಬರವನ್ನು ಧರಿಸಿದ್ದನು. ॥ ೨ ॥ ಅವನಿಗೆ ನಾಲ್ಕು ಭುಜಗಳಿದ್ದು ಶಂಖ, ಚಕ್ರ, ಗದಾ, ಪದ್ಮಗಳಿಂದ ಸುಶೋಭಿತವಾಗಿದ್ದವು. ವಕ್ಷಃಸ್ಥಳದಲ್ಲಿ ಶ್ರೀವತ್ಸ ಚಿಹ್ನೆಯು ವಿರಾಜಿಸುತ್ತಿತ್ತು. ಕಮಲದ ಒಳಭಾಗದಂತೆ ಕೋಮಲವಾದ ನಸುಗೆಂಪು ಕಣ್ಣುಗಳು, ಸುಂದರವಾದ ವದನವು ಪ್ರಸನ್ನತೆಯ ಸದನದಂತಿದೆ. ಕಿವಿಗಳಲ್ಲಿ ಮಕರಾಕೃತಿಯ ಕುಂಡಲಗಳು, ಸುಂದರವಾದ ಕಿರೀಟ, ಮುತ್ತಿನಹಾರಗಳು, ಕಡಗ-ಕಂಕಣ ಮತ್ತು ತೋಳ್ಬಂದಿಗಳು ಆಯಾಯ ಸ್ಥಾನಗಳಲ್ಲಿ ಶೋಭಿಸುತ್ತಿದ್ದವು. ॥ ೩-೪ ॥ ಕೊರಳಲ್ಲಿ ಕೌಸ್ತುಭಮಣಿಯು ಹೊಳೆಯುತ್ತಿತ್ತು. ವನಮಾಲೆಯನ್ನು ತೊಟ್ಟುಕೊಂಡಿರುವ ಶ್ರೀಕೃಷ್ಣನನ್ನು ಆ ರಾಜರು ಕಣ್ಣುಗಳನ್ನು ಅರಳಿಸಿಕೊಂಡು, ತೆರೆದಬಾಯಿಂದ ಎವೆಯಿಕ್ಕದೆ ನೋಡುತ್ತಿರುವುದನ್ನು ನೋಡಿದರೆ ಅವರು ತಮ್ಮ ಕಣ್ಣುಗಳಿಂದಲೇ ಅವನ ರೂಪ ಮಾಧುರ್ಯವನ್ನು ಸವಿಯುತ್ತಿರುವಂತೆಯೂ, ನಾಲಿಗೆಯಿಂದ ನೆಕ್ಕುತ್ತಿರುವಂತೆಯೂ, ಮೂಗಿನಿಂದ ಆಘ್ರಾಣಿಸುವಂತೆಯೂ, ಬಾಹುಗಳಿಂದ ಆಲಿಂಗಿಸಿಕೊಳ್ಳುತ್ತಿರುವಂತೆಯೂ ಅನಿಸುತ್ತಿತ್ತು. ಅವನ ದರ್ಶನ ಮಾತ್ರದಿಂದಲೇ ಸಮಸ್ತ ಪಾಪಗಳನ್ನು ಕಳೆದುಕೊಂಡ ಆ ರಾಜರು ಭಗವಂತನ ಚರಣಗಳಲ್ಲಿ ಶಿರಸ್ಸನ್ನಿಟ್ಟು ನಮಸ್ಕರಿಸಿದರು. ॥ ೫-೬ ॥ ಭಗವಾನ್ ಶ್ರೀಕೃಷ್ಣನ ದರ್ಶನದಿಂದಾದ ಆನಂದದಲ್ಲಿ ಸೆರೆಮನೆಯ ಕಷ್ಟಗಳೆಲ್ಲ ಮರೆತುಹೋದುವು. ಅವರೆಲ್ಲರೂ ಕೈಜೋಡಿಸಿಕೊಂಡು ವಿನಮ್ರ ವಾಣಿಯಿಂದ ಶ್ರೀಕೃಷ್ಣನನ್ನು ಸ್ತುತಿಸತೊಡಗಿದರು. ॥ ೭ ॥

ರಾಜರುಗಳೆಂದರು - ಶರಣಾಗತರ ಸಮಸ್ತ ದುಃಖಗಳನ್ನೂ ಭಯವನ್ನು ಹೋಗಲಾಡಿಸುವವನೇ ! ದೇವದೇವೇಶ್ವರನೇ ! ಸಚ್ಚಿದಾನಂದ ಸ್ವರೂಪನೇ ! ಅವಿನಾಶಿಯೇ ! ಶ್ರೀಕೃಷ್ಣನೇ ! ನಾವೆಲ್ಲರೂ ನಿನಗೆ ನಮಸ್ಕರಿಸುತ್ತೇವೆ. ಜರಾಸಂಧನ ಕಾರಾಗೃಹದಿಂದೇನೋ ನಮ್ಮನ್ನು ಬಿಡುಗಡೆ ಮಾಡಿದೆ. ಈಗ ಈ ಜನ್ಮ-ಮರಣ ರೂಪವಾದ ಘೋರವಾದ ಸಂಸಾರ ಚಕ್ರದಿಂದಲೂ ಬಿಡುಗಡೆಮಾಡು. ಸಂಸಾರದ ಕಟುವಾದ ದುಃಖವನ್ನು ಅನುಭವಿಸಿ ಬೇಸತ್ತಿದ್ದೇವೆ. ಶರಣಾಗತರಾಗಿರುವ ನಮ್ಮನ್ನು ಸಂರಕ್ಷಿಸು. ॥ ೮ ॥

ನೈವಂ ನಾಥಾನಸೂಯಾಮೋ ಮಾಗಧಂ ಮಧುಸೂದನ ।
ಅನುಗ್ರಹೋ ಯದ್ಭವತೋ ರಾಜ್ಞಾಂ ರಾಜ್ಯಚ್ಯುತಿರ್ವಿಭೋ ॥ ೯ ॥

ರಾಜ್ಯೈಶ್ವರ್ಯಮದೋನ್ನದ್ಧೋ ನ ಶ್ರೇಯೋ ವಿಂದತೇ ನೃಪಃ ।
ತ್ವನ್ಮಾಯಾಮೋಹಿತೋಽನಿತ್ಯಾ ಮನ್ಯತೇ ಸಂಪದೋಽಚಲಾಃ ॥ ೧೦ ॥

ಮೃಗತೃಷ್ಣಾಂ ಯಥಾ ಬಾಲಾ ಮನ್ಯಂತ ಉದಕಾಶಯಮ್ ।
ಏವಂ ವೈಕಾರಿಕೀಂ ಮಾಯಾಮಯುಕ್ತಾ ವಸ್ತು ಚಕ್ಷತೇ ॥ ೧೧ ॥

ವಯಂ ಪುರಾ ಶ್ರೀಮದನಷ್ಟದೃಷ್ಟಯೋ
ಜಿಗೀಷಯಾಸ್ಯಾ ಇತರೇತರಸ್ಪೃಧಃ ।
ಘ್ನಂತಃ ಪ್ರಜಾಃ ಸ್ವಾ ಅತಿನಿರ್ಘೃಣಾಃ ಪ್ರಭೋ
ಮೃತ್ಯುಂ ಪುರಸ್ತ್ವಾವಿಗಣಯ್ಯ ದುರ್ಮದಾಃ ॥ ೧೨ ॥

ತ ಏವ ಕೃಷ್ಣಾದ್ಯ ಗಭೀರರಂಹಸಾ
ದುರಂತವೀರ್ಯೇಣ ವಿಚಾಲಿತಾಃ ಶ್ರಿಯಃ ।
ಕಾಲೇನ ತನ್ವಾ ಭವತೋಽನುಕಂಪಯಾ
ವಿನಷ್ಟದರ್ಪಾಶ್ಚರಣೌ ಸ್ಮರಾಮ ತೇ ॥ ೧೩ ॥

ಅಥೋ ನ ರಾಜ್ಯಂ ಮೃಗತೃಷ್ಣಿರೂಪಿತಂ
ದೇಹೇನ ಶಶ್ವತ್ ಪತತಾ ರುಜಾಂ ಭುವಾ ।
ಉಪಾಸಿತವ್ಯಂ ಸ್ಪೃಹಯಾಮಹೇ ವಿಭೋ
ಕ್ರಿಯಾಫಲಂ ಪ್ರೇತ್ಯ ಚ ಕರ್ಣರೋಚನಮ್ ॥ ೧೪ ॥

ತಂ ನಃ ಸಮಾದಿಶೋಪಾಯಂ ಯೇನ ತೇ ಚರಣಾಬ್ಜಯೋಃ ।
ಸ್ಮೃತಿರ್ಯಥಾ ನ ವಿರಮೇದಪಿ ಸಂಸರತಾಮಿಹ ॥ ೧೫ ॥

ಕೃಷ್ಣಾಯ ವಾಸುದೇವಾಯ ಹರಯೇ ಪರಮಾತ್ಮನೇ ।
ಪ್ರಣತಕ್ಲೇಶನಾಶಾಯ ಗೋವಿಂದಾಯ ನಮೋ ನಮಃ ॥ ೧೬ ॥

ಶ್ರೀಶುಕ ಉವಾಚ

ಸಂಸ್ತೂಯಮಾನೋ ಭಗವಾನ್ ರಾಜಭಿರ್ಮುಕ್ತಬಂಧನೈಃ ।
ತಾನಾಹ ಕರುಣಸ್ತಾತ ಶರಣ್ಯಃ ಶ್ಲಕ್ಷ್ಣಯಾ ಗಿರಾ ॥ ೧೭ ॥

ನಮ್ಮ ಸ್ವಾಮಿಯಾದ ಮಧುಸೂದನನೇ! ರಾಜ್ಯಚ್ಯುತರಾದ ಬಗ್ಗೆ ಜರಾಸಂಧನಲ್ಲಿ ನಾವು ದೋಷವೆಣಿಸುವುದಿಲ್ಲ. ಭಗವಂತಾ! ಇದಾದರೋ ನಿನ್ನ ಅನುಗ್ರಹವನ್ನು ಪಡೆಯಲು ಕಾರಣವಾಯಿತು. ॥ ೯ ॥ ರಾಜ್ಯ ಐಶ್ವರ್ಯದ ಮದದಿಂದ ಉನ್ಮತ್ತರಾದ ರಾಜರಿಗೆ ನಿಜಸುಖದ - ಶ್ರೇಯಸ್ಸಿನ ಪ್ರಾಪ್ತಿಯು ಎಂದಿಗೂ ಆಗುವುದಿಲ್ಲ. ಅವರು ನಿನ್ನ ಮಾಯೆಯಿಂದ ಮೋಹಿತರಾಗಿ ಅನಿತ್ಯವಾದ ಸಂಪತ್ತುಗಳನ್ನು ಅಚಲವೆಂದು ತಿಳಿದಿರುತ್ತಾರೆ. ॥ ೧೦ ॥ ಮೂರ್ಖರಾದವರು ಬಿಸಿಲ್ಗುದುರೆಯನ್ನು ಜಲಾಶಯವೆಂದು ಭಾವಿಸುವಂತೆಯೇ ಇಂದ್ರಿಯ ಲೋಲುಪರಾದ ಅಜ್ಞಾನಿಗಳು ಈ ಪರಿವರ್ತನ ಶೀಲವಾದ ಮಾಯೆಯನ್ನು ಸತ್ಯವಾದದ್ದೆಂದು ತಿಳಿಯುತ್ತಾರೆ. ॥ ೧೧ ॥ ಭಗವಂತಾ! ಮೊದಲು ನಾವುಗಳು ಧನ-ಸಂಪತ್ತಿನ ಅಮಲಿನಿಂದ ಕುರುಡರಾಗಿದ್ದೆವು. ಈ ಪೃಥಿವಿಯನ್ನು ಗೆಲ್ಲಲು ಪರಸ್ಪರ ಸ್ಪರ್ಧಿಸುತ್ತಿದ್ದೆವು ಹಾಗೂ ನಮ್ಮ ಪ್ರಜೆಗಳನ್ನೇ ಪೀಡಿಸುತ್ತಿದ್ದೆವು. ನಿಜವಾಗಿಯೂ ನಮ್ಮ ಜೀವನವು ಅತ್ಯಂತ ಕ್ರೂರತೆಯಿಂದ ಕೂಡಿತ್ತು. ನೀನೇ ಮೃತ್ಯುರೂಪದಿಂದ ನಮ್ಮ ಮುಂದೆ ನಿಂತಿರುವೆ ಎಂಬುದನ್ನು ಲೆಕ್ಕಿಸದಷ್ಟು ನಾವು ಗರ್ವಿಷ್ಠರಾಗಿದ್ದೆವು. ॥ ೧೨ ॥ ಸಚ್ಚಿದಾನಂದ ಸ್ವರೂಪನಾದ ಶ್ರೀಕೃಷ್ಣನೇ! ಕಾಲದ ಗತಿಯು ಅತ್ಯಂತ ಗಹನವಾಗಿದೆ. ಯಾರಿಂದಲೂ ನಿವಾರಿಸಲಾರದಷ್ಟು ಬಲವತ್ತರವಾಗಿದೆ. ಏನಾದರೂ ಅದು ನಿನ್ನ ಸ್ವರೂಪವೇ ಅಲ್ಲವೇ! ಈಗ ಅದು ನಮ್ಮನ್ನು ಶ್ರೀಹೀನರನ್ನಾಗಿಯೂ, ರಾಜ್ಯಹೀನರನ್ನಾಗಿಯೂ ಮಾಡಿಬಿಟ್ಟಿದೆ. ನಿನ್ನ ಅಹೈತುಕವಾದ ಅನುಕಂಪದಿಂದಾಗಿ ನಮ್ಮ ಮದವು ನುಚ್ಚು-ನೂರಾಯಿತು. ಈಗ ನಾವು ನಿನ್ನ ಚರಣಗಳನ್ನು ಸ್ಮರಿಸುತ್ತೇವೆ. ॥ ೧೩ ॥ ಪ್ರಭೋ! ಈ ಶರೀರವು ದಿನ-ದಿನಕ್ಕೆ ಕ್ಷೀಣಿಸುತ್ತಾ ಹೋಗುತ್ತದೆ. ರೋಗಗಳ ಜನ್ಮಭೂಮಿಯೇ ಆಗಿದೆ. ಆದುದರಿಂದ ಮರೀಚಿಕೆಯಂತೆ ಸುಖಮಯವಾಗಿ ಕಾಣುವ ಈ ರಾಜ್ಯಭೋಗವೂ ಮರಣಾಂತರದಲ್ಲಿ ಕರ್ಮಗಳ ಫಲವಾಗಿ ನಮಗೆ ಸಿಗುವ ಸ್ವರ್ಗಾದಿಗಳೂ ಬೇಡ. ಏಕೆಂದರೆ, ಅವು ನಿಸ್ಸಾರವಾದವುಗಳು ಎಂದೂ, ಕೇವಲ ಕೇಳಲು ಮಾತ್ರ ಆಕರ್ಷಕವಾಗಿವೆ ಎಂಬುದೂ ನಾವು ತಿಳಿದಿದ್ದೇವೆ. ॥ ೧೪ ॥ ನಿನ್ನ ಚರಣಾರವಿಂದಗಳ ಸ್ಮೃತಿಯು ಎಂದೂ ಮರೆಯದೆ ಅದು ಸದಾ ಸ್ಮೃತಿಪಥದಲ್ಲಿ ನಿರಂತರವಾಗುವಂತಹ ಯಾವುದಾದರೂ ಉಪಾಯವನ್ನು ಹೇಳು. ನಾವು ಪ್ರಪಂಚದ ಯಾವುದೇ ಯೋನಿಯಲ್ಲಿಯೂ ಪುನಃ ಹುಟ್ಟಿದರೂ ನಿನ್ನ ಸ್ಮೃತಿಯು ಸದಾಕಾಲ ಇರುವಂತೆ ಮಾಡು. ॥ ೧೫ ॥ ನಮಿಸಿದವರ ಕ್ಲೇಶಗಳನ್ನು ಹೋಗಲಾಡಿಸುವ ಶ್ರೀಕೃಷ್ಣನಿಗೆ, ವಾಸುದೇವನಿಗೆ, ಶ್ರೀಹರಿಯೇ! ಪರಮಾತ್ಮನೇ! ಗೋವಿಂದನೇ! ನಿನಗೆ ಪುನಃ ಪುನಃ ನಮಸ್ಕರಿಸುತ್ತೇವೆ. ॥ ೧೬ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ - ಪರೀಕ್ಷಿತನೇ! ಕಾರಾಗೃಹದಿಂದ ಮುಕ್ತರಾದ ರಾಜರು ಕರುಣಾ ಸಮುದ್ರನಾದ ಭಗವಾನ್ ಶ್ರೀಕೃಷ್ಣನನ್ನು ಹೀಗೆ ಸ್ತೋತ್ರಮಾಡಲು, ಶರಣಾಗತ ರಕ್ಷಕನಾದ ಪ್ರಭುವು ಮಧುರವಾದ ಮಾತಿನಿಂದ ಅವರಲ್ಲಿ ಇಂತೆಂದನು. ॥ ೧೭ ॥

ಶ್ರೀಭಗವಾನುವಾಚ

ಅದ್ಯಪ್ರಭೃತಿ ವೋ ಭೂಪಾ ಮಯ್ಯಾತ್ಮನ್ಯಖಿಲೇಶ್ವರೇ ।
ಸುದೃಢಾ ಜಾಯತೇ ಭಕ್ತಿರ್ಬಾಢಮಾಶಂಸಿತಂ ತಥಾ ॥ ೧೮ ॥

ದಿಷ್ಟ್ಯಾ ವ್ಯವಸಿತಂ ಭೂಪಾ ಭವಂತ ಋತಭಾಷಿಣಃ ।
ಶ್ರಿಯೈಶ್ವರ್ಯಮದೋನ್ನಾಹಂ ಪಶ್ಯ ಉನ್ಮಾದಕಂ ನೃಣಾಮ್ ॥ ೧೯ ॥

ಹೈಹಯೋ ನಹುಷೋ ವೇನೋ ರಾವಣೋ ನರಕೋಽಪರೇ ।
ಶ್ರೀಮದಾದ್ಭ್ರಂಶಿತಾಃ ಸ್ಥಾನಾದ್ದೇವದೈತ್ಯನರೇಶ್ವರಾಃ ॥ ೨೦ ॥

ಭವಂತ ಏತದ್ವಿಜ್ಞಾಯ ದೇಹಾದ್ಯುತ್ಪಾದ್ಯಮಂತವತ್ ।
ಮಾಂ ಯಜಂತೋಽಧ್ವರೈರ್ಯುಕ್ತಾಃ ಪ್ರಜಾ ಧರ್ಮೇಣ ರಕ್ಷಥ ॥ ೨೧ ॥

ಸಂತನ್ವಂತಃ ಪ್ರಜಾತಂತೂನ್ ಸುಖಂ ದುಃಖಂ ಭವಾಭವೌ ।
ಪ್ರಾಪ್ತಂ ಪ್ರಾಪ್ತಂ ಚ ಸೇವಂತೋ ಮಚ್ಚಿತ್ತಾ ವಿಚರಿಷ್ಯಥ ॥ ೨೨ ॥

ಉದಾಸೀನಾಶ್ಚ ದೇಹಾದಾವಾತ್ಮಾರಾಮಾ ಧೃತವ್ರತಾಃ ।
ಮಯ್ಯಾವೇಶ್ಯ ಮನಃ ಸಮ್ಯಙ್ಮಾಮಂತೇ ಬ್ರಹ್ಮ ಯಾಸ್ಯಥ ॥ ೨೩ ॥

ಶ್ರೀಶುಕ ಉವಾಚ

ಇತ್ಯಾದಿಶ್ಯ ನೃಪಾನ್ ಕೃಷ್ಣೋ ಭಗವಾನ್ ಭುವನೇಶ್ವರಃ ।
ತೇಷಾಂ ನ್ಯಯುಂಕ್ತ ಪುರುಷಾನ್ ಸ್ತ್ರಿಯೋ ಮಜ್ಜನಕರ್ಮಣಿ ॥ ೨೪ ॥

ಸಪರ್ಯಾಂ ಕಾರಯಾಮಾಸ ಸಹದೇವೇನ ಭಾರತ ।
ನರದೇವೋಚಿತೈರ್ವಸ್ತ್ರೈರ್ಭೂಷಣೈಃ ಸ್ರಗ್ವಿಲೇಪನೈಃ ॥ ೨೫ ॥

ಭೋಜಯಿತ್ವಾ ವರಾನ್ನೇನ ಸುಸ್ನಾತಾನ್ ಸಮಲಂಕೃತಾನ್ ।
ಭೋಗೈಶ್ಚ ವಿವಿಧೈರ್ಯುಕ್ತಾಂಸ್ತಾಂಬೂಲಾದ್ಯೈರ್ನೃಪೋಚಿತೈಃ ॥ ೨೬ ॥

ತೇ ಪೂಜಿತಾ ಮುಕುಂದೇನ ರಾಜಾನೋ ಮೃಷ್ಟಕುಂಡಲಾಃ ।
ವಿರೇಜುರ್ಮೋಚಿತಾಃ ಕ್ಲೇಶಾತ್ಪ್ರಾವೃಡಂತೇ ಯಥಾ ಗ್ರಹಾಃ ॥ ೨೭ ॥

ಭಗವಾನ್ ಶ್ರೀಕೃಷ್ಣನು ಹೇಳಿದನು – ನರಪತಿಗಳೇ! ನಿಮ್ಮ ಅಪೇಕ್ಷೆಯಂತೆ ಇಂದಿನಿಂದ ನಿಮಗೆ ಆತ್ಮಸ್ವರೂಪನಾದ ಮತ್ತು ಅಖಿಲೇಶ್ವರನಾದ ನನ್ನಲ್ಲಿ ಭಕ್ತಿಯು ಉಂಟಾಗುತ್ತದೆ. ॥ ೧೮ ॥ ರಾಜರುಗಳೇ! ನನ್ನನ್ನು ಯಾವಾಗಲೂ ಸ್ಮರಿಸುತ್ತಿರಬೇಕೆಂದು ನೀವು ನಿಶ್ಚಯವನ್ನು ಮಾಡಿರುವಿರಿ. ನೀವೆಲ್ಲರೂ ಸತ್ಯಭಾಷಿಗಳೇ ಆಗಿರುವಿರಿ. ಐಶ್ವರ್ಯಮದ ಮತ್ತು ಪ್ರಭುತ್ವಮದದಿಂದ ಉಂಟಾಗುವ ಗರ್ವಾತಿರೇಕವು ಜನರಿಗೆ ಹುಚ್ಚು ಹಿಡಿಸುವುದೆಂಬುದನ್ನು ನಾನು ನೋಡಿದ್ದೇನೆ. ॥ ೧೯ ॥ ಹೈಹಯ, ನಹುಷ, ವೇನ, ರಾವಣ, ನರಕಾಸುರ ಮೊದಲಾದ ಅನೇಕ ದೇವ ದೈತ್ಯ-ನರಪತಿಗಳು ಶ್ರೀಮದದ ಮತ್ತು ಅಧಿಕಾರ ಮದದಿಂದ ತಮ್ಮ ಸ್ಥಾನದಿಂದ ಚ್ಯುತರಾದರು. ॥ ೨೦ ॥ ಶರೀರ ಮತ್ತು ಅದರ ಸಂಬಂಧಿಗಳು ಹುಟ್ಟುತ್ತಾರೆ ಆದ್ದರಿಂದ ಅವರ ನಾಶವೂ ಅವಶ್ಯವಾಗಿ ಆಗುತ್ತದೆ ಇದನ್ನು ನೆನಪಿನಲ್ಲಿಟ್ಟುಕೊಳ್ಳಿ. ಆದ್ದರಿಂದ ಅದರಲ್ಲಿ ಆಸಕ್ತರಾಗಬೇಡಿರಿ. ಮನಸ್ಸನ್ನು ಇಂದ್ರಿಯಗಳನ್ನು ವಶದಲ್ಲಿಟ್ಟುಕೊಂಡು ಯಜ್ಞಗಳ ಮೂಲಕ ನನ್ನನ್ನು ಆರಾಧಿಸಿ, ಧರ್ಮದಿಂದ ಪ್ರಜೆಗಳನ್ನು ರಕ್ಷಿಸಿರಿ. ॥ ೨೧ ॥ ನೀವು ಪುತ್ರರನ್ನು ಪಡೆದು ವಂಶಪರಂಪರೆಯನ್ನು ರಕ್ಷಿಸಿರಿ. ಪ್ರಾರಬ್ಧದ ಅನುಸಾರವಾಗಿ ಪ್ರಾಪ್ತವಾಗುವ ಸುಖ-ದುಃಖಗಳನ್ನು, ಹುಟ್ಟು-ಸಾವುಗಳನ್ನು, ಲಾಭ-ನಷ್ಟಗಳನ್ನು ಸಮಭಾವದಿಂದ ಕಾಣುತ್ತಾ ನನ್ನ ಪ್ರಸಾದವೆಂದು ಭಾವಿಸಿ ಅನುಭವಿಸಿರಿ. ಯಾವಾಗಲೂ ನಿಮ್ಮ ಮನಸ್ಸನ್ನು ನನ್ನಲ್ಲಿಯೇ ನೆಲೆಗೊಳಿಸಿ ಜೀವನವನ್ನು ಸಾಗಿಸಿರಿ. ॥ ೨೨ ॥ ದೇಹ ಮತ್ತು ದೇಹ ಸಂಬಂಧಿಗಳಲ್ಲಿ ಯಾವುದೇ ಆಸಕ್ತಿಯನ್ನಿಡದೇ ಉದಾಸೀನರಾಗಿರಿ. ದೃಢವ್ರತರಾಗಿ, ನಿಮ್ಮ-ನಿಮ್ಮ ಆತ್ಮಗಳಲ್ಲೇ ರಮಿಸುತ್ತ ಇರಿ. ನಿಮ್ಮ ಮನಸ್ಸನ್ನು ನನ್ನಲ್ಲಿಯೇ ಚೆನ್ನಾಗಿ ನೆಲೆಗೊಳಿಸಿ, ನೀವು ಕಡೆಯಲ್ಲಿ ಬ್ರಹ್ಮ ಸ್ವರೂಪನಾದ ನನ್ನನ್ನೇ ಹೊಂದುವಿರಿ. ॥ ೨೩ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ! ಭುವನೇಶ್ವರನಾದ ಭಗವಾನ್ ಶ್ರೀಕೃಷ್ಣನು ರಾಜರುಗಳಿಗೆ ಹೀಗೆ ಉಪದೇಶಮಾಡಿ ಅವರಿಗೆ ಸ್ನಾನಾದಿಗಳನ್ನು ಮಾಡಿಸಲು ಅನೇಕ ಸ್ತ್ರೀ-ಪುರುಷರನ್ನು ನೇಮಿಸಿದನು. ॥ ೨೪ ॥ ಪರೀಕ್ಷಿದ್ರಾಜನೇ! ಜರಾಸಂಧನ ಪುತ್ರನಾದ ಸಹದೇವನಿಂದ ಅವರಿಗೆಲ್ಲ ರಾಜೋಚಿತವಾದ ವಸ್ತ್ರಾಭೂಷಣಗಳನ್ನು ಮಾಲೆ – ಚಂದನಾದಿಗಳನ್ನು ಕೊಡಿಸಿ ಬಹಳವಾಗಿ ಸನ್ಮಾನಿಸಿದನು. ॥ ೨೫ ॥ ರಾಜರೆಲ್ಲರೂ ಸ್ನಾನ ಮಾಡಿ ವಸ್ತ್ರಾಭರಣಗಳಿಂದ ಅಲಂಕೃತರಾದಾಗ ಅವರಿಗೆ ನಾನಾ ವಿಧವಾದ ಮೃಷ್ಟಾನ್ನದ ಭೋಜನವನ್ನು ಮಾಡಿಸಿ, ರಾಜೋಚಿತವಾದ ಫಲ-ಪುಷ್ಪ-ತಾಂಬೂಲಗಳನ್ನು ಸಹದೇವನಿಂದ ಶ್ರೀಕೃಷ್ಣನು ಕೊಡಿಸಿದನು. ॥ ೨೬ ॥ ಭಗವಾನ್ ಶ್ರೀಕೃಷ್ಣನು ಹೀಗೆ ಸೆರೆಯಿಂದ ಮುಕ್ತರಾದ ರಾಜರನ್ನು ಸಮ್ಮಾನಿಸಿದನು. ಈಗ ಅವರು ಸಮಸ್ತ ಕ್ಲೇಶಗಳಿಂದ ಬಿಡುಗಡೆಹೊಂದಿ, ದಿವ್ಯವಾದ ಕುಂಡಲಗಳಿಂದ ಸಮಲಂಕೃತರಾಗಿ ವರ್ಷಾಕಾಲವು ಕಳೆದನಂತರ ಮೋಡಗಳಿಲ್ಲದ ಆಕಾಶದಲ್ಲಿ ತಾರೆಗಳು ಬೆಳಗುವಂತೆ ರಾರಾಜಿಸಿದರು. ॥ ೨೭ ॥

ರಥಾನ್ಸದಶ್ವಾನಾರೋಪ್ಯ ಮಣಿಕಾಂಚನಭೂಷಿತಾನ್ ।
ಪ್ರೀಣಯ್ಯ ಸೂನೃತೈರ್ವಾಕ್ಯೈಃ ಸ್ವದೇಶಾನ್ಪ್ರತ್ಯಯಾಪಯತ್ ॥ ೨೮ ॥

ಮತ್ತೆ ಭಗವಾನ್ ಶ್ರೀಕೃಷ್ಣನು ಮಣಿಕಾಂಚನಗಳಿಂದ ಭೂಷಿತವಾದ, ಶ್ರೇಷ್ಠವಾದ ಕುದುರೆಗಳಿಂದ ಕೂಡಿದ ರಥಗಳಲ್ಲಿ ಆ ರಾಜರನ್ನು ಕುಳ್ಳಿರಿಸಿ, ಸುಮಧುರವಾದ ಮಾತುಗಳಿಂದ ಅವರನ್ನು ತೃಪ್ತಿಪಡಿಸಿ ಅವರವರ ದೇಶಗಳಿಗೆ ಕಳಿಸಿಕೊಟ್ಟನು. ॥ ೨೮ ॥

ತ ಏವಂ ಮೋಚಿತಾಃ ಕೃಚ್ಛ್ರಾತ್ ಕೃಷ್ಣೇನ ಸುಮಹಾತ್ಮನಾ ।
ಯಯುಸ್ತಮೇವ ಧ್ಯಾಯಂತಃ ಕೃತಾನಿ ಚ ಜಗತ್ಪತೇಃ ॥ ೨೯ ॥

ಹೀಗೆ ಉದಾರಶಿರೋಮಣಿಯಾದ ಭಗವಾನ್ ಶ್ರೀಕೃಷ್ಣನು ಎಲ್ಲ ರಾಜರನ್ನು ಕಷ್ಟದಿಂದ ಪಾರುಮಾಡಿದನು. ಆ ರಾಜರೆಲ್ಲರೂ ಜಗತ್ಪತಿಯಾದ ಶ್ರೀಕೃಷ್ಣನ ರೂಪ, ಗುಣ ಮತ್ತು ಲೀಲೆಗಳನ್ನು ಚಿಂತಿಸುತ್ತಾ ತಮ್ಮ-ತಮ್ಮ ರಾಜಧಾನಿಗಳಿಗೆ ಪ್ರಯಾಣ ಮಾಡಿದರು. ॥ ೨೯ ॥

ಜಗದುಃ ಪ್ರಕೃತಿಭ್ಯಸ್ತೇ ಮಹಾಪುರುಷಚೇಷ್ಟಿತಮ್ ।
ಯಥಾನ್ವಶಾಸದ್ಭಗವಾಂಸ್ತಥಾ ಚಕ್ರುರತಂದ್ರಿತಾಃ ॥ ೩೦ ॥

ತಮ್ಮ ರಾಜಧಾನಿಗೆ ತೆರಳಿದ ಬಳಿಕ ಆ ರಾಜರೆಲ್ಲರೂ ಮಹಾಪುರುಷನಾದ ಶ್ರೀಕೃಷ್ಣನು ತಮಗೆ ಮಾಡಿದ ಉಪಕಾರವನ್ನೂ, ಅವನ ಇತರ ಅದ್ಭುತವಾದ ಲೀಲಾ ಪ್ರಸಂಗಗಳನ್ನು ಪ್ರಜೆಗಳಲ್ಲಿ ಪ್ರಚುರಪಡಿಸಿದರು. ಮತ್ತೆ ಎಚ್ಚರಿಕೆಯಿಂದ ಭಗವಂತನ ಆಜ್ಞಾನುಸಾರವಾಗಿ ತಮ್ಮ ಜೀವನವನ್ನು ನಿರ್ವಹಿಸುತ್ತಿದ್ದರು. ॥ ೩೦ ॥

ಜರಾಸಂಧಂ ಘಾತಯಿತ್ವಾ ಭೀಮಸೇನೇನ ಕೇಶವಃ ।
ಪಾರ್ಥಾಭ್ಯಾಂ ಸಂಯುತಃ ಪ್ರಾಯಾತ್ಸಹದೇವೇನ ಪೂಜಿತಃ ॥ ೩೧ ॥

ಗತ್ವಾ ತೇ ಖಾಂಡವಪ್ರಸ್ಥಂ ಶಂಖಾನ್ ದಧ್ಮುರ್ಜಿತಾರಯಃ ।
ಹರ್ಷಯಂತಃ ಸ್ವಸುಹೃದೋ ದುರ್ಹೃದಾಂ ಚಾಸುಖಾವಹಾಃ ॥ ೩೨ ॥

ಪರೀಕ್ಷಿತನೇ! ಈ ಪ್ರಕಾರವಾಗಿ ಭಗವಾನ್ ಶ್ರೀಕೃಷ್ಣನು ಭೀಮಸೇನನಿಂದ ಜರಾಸಂಧನ ವಧೆಯನ್ನು ಮಾಡಿಸಿ, ಭೀಮಸೇನ ಮತ್ತು ಅರ್ಜುನರೊಂದಿಗೆ ಜರಾಸಂಧನ ಮಗನಾದ ಸಹದೇವನಿಂದ ಸತ್ಕೃತರಾಗಿ ಇಂದ್ರಪ್ರಸ್ಥಕ್ಕೆ ಪ್ರಯಾಣ ಮಾಡಿದರು. ವಿಜಯಿಗಳಾಗಿ ಬಂದಿರುವ ಕೃಷ್ಣಾರ್ಜುನ ಭೀಮಸೇನರು ಇಂದ್ರಪ್ರಸ್ಥದ ಸಮೀಪಕ್ಕೆ ಬಂದು ತಮ್ಮ-ತಮ್ಮ ಶಂಖಗಳನ್ನು ಊದಿದರು. ಇದರಿಂದ ಅವರ ಇಷ್ಟ ಮಿತ್ರರಿಗೆ ಬಹಳ ಸುಖವಾದರೆ ಶತ್ರುಗಳಿಗೆ ತುಂಬಾ ದುಃಖವಾಯಿತು. ॥ ೩೧-೩೨ ॥

ತಚ್ಛ್ರುತ್ವಾ ಪ್ರೀತಮನಸ ಇಂದ್ರಪ್ರಸ್ಥನಿವಾಸಿನಃ ।
ಮೇನಿರೇ ಮಾಗಧಂ ಶಾಂತಂ ರಾಜಾ ಚಾಪ್ತಮನೋರಥಃ ॥ ೩೩ ॥

ಆ ಶಂಖಧ್ವನಿಯನ್ನು ಕೇಳಿ ಇಂದ್ರಪ್ರಸ್ಥದ ನಿವಾಸಿಗಳ ಮನಸ್ಸು ಪ್ರಫುಲ್ಲಿತವಾಯಿತು. ಜರಾಸಂಧನು ಮೃತನಾದನೆಂದೇ ಅವರು ತಿಳಿದುಕೊಂಡರು. ಇನ್ನು ಯುಧಿಷ್ಠಿರ ಮಹಾರಾಜರ ರಾಜಸೂಯಯಜ್ಞದ ಸಂಕಲ್ಪವು ಈಡೇರಿದಂತೆಯೇ ಸರಿ ಎಂದು ಆನಂದಿಸಿದರು. ॥ ೩೩ ॥

ಅಭಿವಂದ್ಯಾಥ ರಾಜಾನಂ ಭೀಮಾರ್ಜುನಜನಾರ್ದನಾಃ ।
ಸರ್ವಮಾಶ್ರಾವಯಾಂಚಕ್ರುರಾತ್ಮನಾ ಯದನುಷ್ಠಿತಮ್ ॥ ೩೪ ॥

ಭೀಮಾರ್ಜುನ ಶ್ರೀಕೃಷ್ಣರು ಅರಮನೆಗೆ ಬಂದು ಯುಧಿಷ್ಠಿರನನ್ನು ವಂದಿಸಿ, ಜರಾಸಂಧನ ವಧೆಗಾಗಿ ತಾವು ಮಾಡಿದ ಎಲ್ಲ ಕಾರ್ಯಗಳನ್ನು ವಿವರಿಸಿ ಹೇಳಿದರು. ॥ ೩೪ ॥

ನಿಶಮ್ಯ ಧರ್ಮರಾಜಸ್ತತ್ ಕೇಶವೇನಾನುಕಂಪಿತಮ್ ।
ಆನಂದಾಶ್ರುಕಲಾಂ ಮುಂಚನ್ಪ್ರೇಮ್ಣಾ ನೋವಾಚ ಕಿಂಚನ ॥ ೩೫ ॥

ಭಗವಾನ್ ಶ್ರೀಕೃಷ್ಣನ ಪರಮಾನುಗ್ರಹದ ಮಾತನ್ನು ಕೇಳಿದ ಯುಧಿಷ್ಠಿರನು ಆನಂದಭರಿತನಾದನು. ಆನಂದಾಶ್ರುಗಳು ಕಣ್ಣುಗಳಿಂದ ಹರಿಯತೊಡಗಿದವು. ಇದರಿಂದ ಅವನಿಗೆ ಏನನ್ನೂ ಮಾತನಾಡಲು ಸಾಧ್ಯವಾಗದೇ ಹೋಯಿತು. ॥ ೩೫ ॥

ಎಪ್ಪತ್ತಮೂರನೆಯ ಅಧ್ಯಾಯವು ಮುಗಿಯಿತು. ॥ ೭೩ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮಸ್ಕಂಧೇ ಉತ್ತರಾರ್ಧೇ
ಕೃಷ್ಣಾದ್ಯಾಗಮನಂ ನಾಮ ತ್ರಿಸಪ್ತತಿತಮೋಽಧ್ಯಾಯಃ ॥ ೭೩ ॥

ಎಪ್ಪತ್ತನಾಲ್ಕನೆಯ ಅಧ್ಯಾಯ

ಭಗವಂತನ ಅಗ್ರಪೂಜೆ - ಶಿಶುಪಾಲವಧೆ

ಶ್ರೀಶುಕ ಉವಾಚ

ಏವಂ ಯುಧಿಷ್ಠಿರೋ ರಾಜಾ ಜರಾಸಂಧವಧಂ ವಿಭೋಃ ।
ಕೃಷ್ಣಸ್ಯ ಚಾನುಭಾವಂ ತಂ ಶ್ರುತ್ವಾ ಪ್ರೀತಸ್ತಮಬ್ರವೀತ್ ॥ ೧ ॥

ಯುಧಿಷ್ಠಿರ ಉವಾಚ

ಯೇ ಸ್ಯುಸ್ತ್ರೈಲೋಕ್ಯಗುರವಃ ಸರ್ವೇ ಲೋಕಮಹೇಶ್ವರಾಃ ।
ವಹಂತಿ ದುರ್ಲಭಂ ಲಬ್ಧ್ವಾ ಶಿರಸೈವಾನುಶಾಸನಮ್ ॥ ೨ ॥

ಸ ಭವಾನರವಿಂದಾಕ್ಷೋ ದೀನಾನಾಮೀಶಮಾನಿನಾಮ್ ।
ಧತ್ತೇಽನುಶಾಸನಂ ಭೂಮಂಸ್ತದತ್ಯಂತವಿಡಂಬನಮ್ ॥ ೩ ॥

ನ ಹ್ಯೇಕಸ್ಯಾದ್ವಿತೀಯಸ್ಯ ಬ್ರಹ್ಮಣಃ ಪರಮಾತ್ಮನಃ ।
ಕರ್ಮಭಿರ್ವರ್ಧತೇ ತೇಜೋ ಹ್ರಸತೇ ಚ ಯಥಾ ರವೇಃ ॥ ೪ ॥

ನ ವೈ ತೇಽಜಿತ ಭಕ್ತಾನಾಂ ಮಮಾಹಮಿತಿ ಮಾಧವ ।
ತ್ವಂ ತವೇತಿ ಚ ನಾನಾಧೀಃ ಪಶೂನಾಮಿವ ವೈಕೃತಾ ॥ ೫ ॥

ಶ್ರೀಶುಕ ಉವಾಚ

ಇತ್ಯುಕ್ತ್ವಾ ಯಜ್ಞಿಯೇ ಕಾಲೇ ವವ್ರೇ ಯುಕ್ತಾನ್ಸ ಋತ್ವಿಜಃ ।
ಕೃಷ್ಣಾನುಮೋದಿತಃ ಪಾರ್ಥೋ ಬ್ರಾಹ್ಮಣಾನ್ಬ್ರಹ್ಮವಾದಿನಃ ॥ ೬ ॥

ದ್ವೈಪಾಯನೋ ಭರದ್ವಾಜಃ ಸುಮಂತುರ್ಗೋತಮೋಽಸಿತಃ ।
ವಸಿಷ್ಠಶ್ಚ್ಯವನಃ ಕಣ್ವೋ ಮೈತ್ರೇಯಃ ಕವಷಸ್ತ್ರಿತಃ ॥ ೭ ॥

ವಿಶ್ವಾಮಿತ್ರೋ ವಾಮದೇವಃ ಸುಮತಿರ್ಜೈಮಿನಿಃ ಕ್ರತುಃ ।
ಪೈಲಃ ಪರಾಶರೋ ಗರ್ಗೋ ವೈಶಂಪಾಯನ ಏವ ಚ ॥ ೮ ॥

ಅಥರ್ವಾ ಕಶ್ಯಪೋ ಧೌಮ್ಯೋ ರಾಮೋ ಭಾರ್ಗವ ಆಸುರಿಃ ।
ವೀತಿಹೋತ್ರೋ ಮಧುಚ್ಛಂದಾ ವೀರಸೇನೋಽಕೃತವ್ರಣಃ ॥ ೯ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ - ಎಲೈ ಪರೀಕ್ಷಿತನೇ! ಯುಧಿಷ್ಠಿರ ಮಹಾರಾಜನು ಜರಾಸಂಧನ ವಧೆ ಮತ್ತು ಸರ್ವಶಕ್ತನಾದ ಭಗವಾನ್ ಶ್ರೀಕೃಷ್ಣನ ಅದ್ಭುತ ಮಹಿಮೆಯನ್ನು ಕೇಳಿ ಸುಪ್ರೀತನಾಗಿ ಇಂತೆಂದನು - ॥ ೧ ॥

ಯುಧಿಷ್ಠಿರನು ಹೇಳಿದನು - ಸಚ್ಚಿದಾನಂದ ಸ್ವರೂಪನಾದ ಶ್ರೀಕೃಷ್ಣ! ಮೂರು ಲೋಕಗಳಿಗೂ ಸ್ವಾಮಿಗಳಾದ ಬ್ರಹ್ಮಾ-ಶಂಕರರು ಮತ್ತು ಇಂದ್ರನೇ ಮೊದಲಾದ ಲೋಕಪಾಲರು ನಿನ್ನ ಆಜ್ಞೆಯನ್ನು ಪಡೆಯಲು ಹವಣಿಸುತ್ತಿರುವರು. ಅದು ದೊರಕಿದರೆ ಬಹಳ ಶ್ರದ್ಧೆಯಿಂದ ಶಿರಸಾವಹಿಸಿ ಪಾಲಿಸುತ್ತಾರೆ. ॥ ೨ ॥ ಅನಂತನೇ! ನಾವಾದರೋ ಅತ್ಯಂತ ದೀನರಾಗಿದ್ದರೂ ಭೂಪತಿ, ನರಪತಿಗಳೆಂದು ಭಾವಿಸಿಕೊಂಡಿದ್ದೇವೆ. ಇಂತಹ ಸ್ಥಿತಿಯಲ್ಲಿ ನಾವು ದಂಡನೆಗೆ ಅರ್ಹರಾಗಿದ್ದರೂ ನೀನು ನಮ್ಮ ಆಜ್ಞೆಯನ್ನು ಸ್ವೀಕರಿಸಿ ಅದನ್ನು ಪಾಲಿಸುತ್ತಿರುವೆ. ಸರ್ವಶಕ್ತನಾದ, ಕಮಲಾಕ್ಷನಾದ ಭಗವಂತನಿಗೆ ಇದು ಮನುಷ್ಯಲೀಲೆಯ ಅಭಿನಯ ಮಾತ್ರವಾಗಿದೆ. ॥ ೩ ॥ ಉದಯಾಸ್ತಮಾನಗಳಿಗೆ ಕಾರಣನಾದ ಸೂರ್ಯನ ತೇಜಸ್ಸು ಹೆಚ್ಚು-ಕಡಿಮೆಯಾಗದಿರುವಂತೆಯೇ, ಯಾವುದೇ ಪ್ರಕಾರದ ಕರ್ಮಗಳಿಂದ ನಿನ್ನಲ್ಲಿ ಉಲ್ಲಾಸವಾಗಲೀ, ಹ್ರಾಸವಾಗಲಿ ಆಗುವುದಿಲ್ಲ. ಏಕೆಂದರೆ, ನೀನು ಸಜಾತೀಯ, ವಿಜಾತೀಯ ಮತ್ತು ಸ್ವಗತಭೇದದಿಂದ ರಹಿತನಾದ ಸಾಕ್ಷಾತ್ ಪರಬ್ರಹ್ಮ ಪರಮಾತ್ಮನಾಗಿರುವೆ. ॥ ೪ ॥ ಯಾರಿಂದಲೂ ಜಯಿಸಲ್ಪಡದ ಮಾಧವನೇ! 'ಇದು ನಾನು-ನನ್ನದು, ಇದು ನೀನು-ನಿನ್ನದು' ಇಂತಹ ವಿಕಾರಯುಕ್ತ ಭೇದ ಬುದ್ಧಿಯು ಪಶುಗಳಲ್ಲಿರುತ್ತದೆ. ಆದರೆ ನಿನ್ನ ಅನನ್ಯ ಭಕ್ತರಾದವರ ಚಿತ್ತದಲ್ಲಿ ಇಂತಹ ಹುಚ್ಚುತನದ ವಿಚಾರವೇ ಬರುವುದಿಲ್ಲ. ಹೀಗಿರುವಾಗ ನಿನ್ನಲ್ಲಿ ಹೇಗಿದ್ದೀತು? ನೀನು ಮಾಡುವುದೆಲ್ಲವೂ ಲೀಲೆಯೇ ಆಗಿದೆ. ॥ ೫ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ - ಪರೀಕ್ಷಿತನೇ! ಹೀಗೆ ಹೇಳಿ ಯುಧಿಷ್ಠಿರನು ಭಗವಾನ್ ಶ್ರೀಕೃಷ್ಣನ ಅನುಮತಿಯಂತೆ ಯಜ್ಞದ ಕಾಲವು ಸನ್ನಿಹಿತವಾಗಲು ಯಜ್ಞಕರ್ಮಗಳಲ್ಲಿ ನಿಪುಣರಾದ ವೇದವಾದಿಗಳಾದ ಬ್ರಾಹ್ಮಣರನ್ನು ಋತ್ವಿಕ್-ಆಚಾರ್ಯರನ್ನು ವರಣಮಾಡಿಕೊಂಡನು. ॥ ೬ ॥ ಅವರ ಹೆಸರು ಇಂತಿತ್ತು - ಶ್ರೀಕೃಷ್ಣ ದ್ವೈಪಾಯನ ವ್ಯಾಸರು, ಭರದ್ವಾಜ, ಸುಮಂತು, ಗೌತಮ, ಅಸಿತ, ವಸಿಷ್ಠ ಚ್ಯವನ, ಕಣ್ವ, ಮೈತ್ರೇಯ, ಕವಷ, ತ್ರಿತ, ವಿಶ್ವಾಮಿತ್ರ, ವಾಮದೇವ, ಸುಮತಿ, ಜೈಮಿನಿ, ಕ್ರತು, ಪೈಲ, ಪರಾಶರ, ಗರ್ಗ, ವೈಶಂಪಾಯನ, ಅಥರ್ವಣ, ಕಶ್ಯಪ, ಧೌಮ್ಯ, ಪರಶುರಾಮ, ಶುಕ್ರಾಚಾರ್ಯ, ಆಸುರಿ, ವೀತಿಹೋತ್ರ, ಮಧುಚ್ಛಂದಸ, ವೀರಸೇನ ಮತ್ತು ಅಕೃತವ್ರಣ. ॥ ೭-೯ ॥

ಉಪಹೂತಾಸ್ತಥಾ ಚಾನ್ಯೇ ದ್ರೋಣಭೀಷ್ಮಕೃಪಾದಯಃ ।
ಧೃತರಾಷ್ಟ್ರಃ ಸಹಸುತೋ ವಿದುರಶ್ಚ ಮಹಾಮತಿಃ ॥ ೧೦ ॥

ಬ್ರಾಹ್ಮಣಾಃ ಕ್ಷತ್ರಿಯಾ ವೈಶ್ಯಾಃ ಶೂದ್ರಾ ಯಜ್ಞದಿದೃಕ್ಷವಃ ।
ತತ್ರೇಯುಃ ಸರ್ವರಾಜಾನೋ ರಾಜ್ಞಾಂ ಪ್ರಕೃತಯೋ ನೃಪ ॥ ೧೧ ॥

ತತಸ್ತೇ ದೇವಯಜನಂ ಬ್ರಾಹ್ಮಣಾಃ ಸ್ವರ್ಣಲಾಂಗಲೈಃ ।
ಕೃಷ್ಟ್ವಾ ತತ್ರ ಯಥಾಮ್ನಾಯಂ ದೀಕ್ಷಯಾಂಚಕ್ರಿರೇ ನೃಪಮ್ ॥ ೧೨ ॥

ಹೈಮಾಃ ಕಿಲೋಪಕರಣಾ ವರುಣಸ್ಯ ಯಥಾ ಪುರಾ ।
ಇಂದ್ರಾದಯೋ ಲೋಕಪಾಲಾ ವಿರಿಂಚಿಭವಸಂಯುತಾಃ ॥ ೧೩ ॥

ಸಗಣಾಃ ಸಿದ್ಧಗಂಧರ್ವಾ ವಿದ್ಯಾಧರಮಹೋರಗಾಃ ।
ಮುನಯೋ ಯಕ್ಷರಕ್ಷಾಂಸಿ ಖಗಕಿನ್ನರಚಾರಣಾಃ ॥ ೧೪ ॥

ರಾಜಾನಶ್ಚ ಸಮಾಹೂತಾ ರಾಜಪತ್ನ್ಯಶ್ಚ ಸರ್ವಶಃ ।
ರಾಜಸೂಯಂ ಸಮೀಯುಃ ಸ್ಮ ರಾಜ್ಞಃ ಪಾಂಡುಸುತಸ್ಯ ವೈ ॥ ೧೫ ॥

ಮೇನಿರೇ ಕೃಷ್ಣಭಕ್ತಸ್ಯ ಸೂಪಪನ್ನಮವಿಸ್ಮಿತಾಃ ।
ಅಯಾಜಯನ್ಮಹಾರಾಜಂ ಯಾಜಕಾ ದೇವವರ್ಚಸಃ ।
ರಾಜಸೂಯೇನ ವಿಧಿವತ್ಪ್ರಾಚೇತಸಮಿವಾಮರಾಃ ॥ ೧೬ ॥

ಸೌತ್ಯೇಽಹನ್ಯವನೀಪಾಲೋ ಯಾಜಕಾನ್ ಸದಸಸ್ಪತೀನ್ ।
ಅಪೂಜಯನ್ಮಹಾಭಾಗಾನ್ ಯಥಾವತ್ ಸುಸಮಾಹಿತಃ ॥ ೧೭ ॥

ಸದಸ್ಯಾಗ್ರ್ಯಾರ್ಹಣಾರ್ಹಂ ವೈ ವಿಮೃಶಂತಃ ಸಭಾಸದಃ ।
ನಾಧ್ಯಗಚ್ಛನ್ನನೈಕಾಂತ್ಯಾತ್ ಸಹದೇವಸ್ತದಾಬ್ರವೀತ್ ॥ ೧೮ ॥

ಅರ್ಹತಿ ಹ್ಯಚ್ಯುತಃ ಶ್ರೈಷ್ಠ್ಯಂ ಭಗವಾನ್ ಸಾತ್ವತಾಂ ಪತಿಃ ।
ಏಷ ವೈ ದೇವತಾಃ ಸರ್ವಾ ದೇಶಕಾಲಧನಾದಯಃ ॥ ೧೯ ॥

ಯದಾತ್ಮಕಮಿದಂ ವಿಶ್ವಂ ಕ್ರತವಶ್ಚ ಯದಾತ್ಮಕಾಃ ।
ಅಗ್ನಿರಾಹುತಯೋ ಮಂತ್ರಾಃ ಸಾಂಖ್ಯಂ ಯೋಗಶ್ಚ ಯತ್ಪರಃ ॥ ೨೦ ॥

ಇವರಲ್ಲದೇ ದ್ರೋಣಾಚಾರ್ಯ, ಭೀಷ್ಮಪಿತಾಮಹ, ಕೃಪಾಚಾರ್ಯ, ಧೃತರಾಷ್ಟ್ರ ದುರ್ಯೋಧನನೇ ಮೊದಲಾದ ಅವನ ಮಕ್ಕಳು, ಮಹಾಮತಿ ವಿದುರ ಇವರನ್ನು ಧರ್ಮರಾಯನು ಕರೆಸಿದನು. ॥ ೧೦ ॥ ರಾಜೇಂದ್ರ! ರಾಜಸೂಯ ಯಜ್ಞವನ್ನು ನೋಡಲು ದೇಶ-ದೇಶಗಳ ಎಲ್ಲ ರಾಜರೂ ಅವರ ಮಂತ್ರಿಗಳೂ, ಬ್ರಾಹ್ಮಣ-ಕ್ಷತ್ರಿಯ-ವೈಶ್ಯ-ಶೂದ್ರರೂ, ಸಮಸ್ತ ಪ್ರಜೆಗಳೂ ಇಂದ್ರಪ್ರಸ್ಥಕ್ಕೆ ಆಗಮಿಸಿದರು. ॥ ೧೧ ॥

ಅನಂತರ ಋತ್ವಿಜ ಬ್ರಾಹ್ಮಣರು ಶುಭಮುಹೂರ್ತದಲ್ಲಿ ಚಿನ್ನದ ನೇಗಿಲಿನಿಂದ ಯಾಗಭೂಮಿಯನ್ನು ಉತ್ತು ಯುಧಿಷ್ಠಿರನಿಗೆ ಶಾಸ್ತ್ರವಿಧಿಗನುಸಾರವಾಗಿ ಯಜ್ಞದೀಕ್ಷೆಯನ್ನು ಕೊಟ್ಟರು. ॥ ೧೨ ॥ ಹಿಂದಿನ ಕಾಲದಲ್ಲಿ ವರುಣನ ಯಜ್ಞದಲ್ಲಿ ಯಜ್ಞಪಾತ್ರೆಗಳೆಲ್ಲವೂ ಸ್ವರ್ಣಮಯವಾಗಿದ್ದಂತೆಯೇ ಯುಧಿಷ್ಠಿರನ ಯಜ್ಞದಲ್ಲಿಯೂ ಎಲ್ಲ ಸ್ವರ್ಣಪಾತ್ರೆಗಳೇ ಇದ್ದವು. ರಾಜಸೂಯಯಜ್ಞಕ್ಕೆ ಯುಧಿಷ್ಠಿರನಿಂದ ಆಹ್ವಾನವನ್ನು ಸ್ವೀಕರಿಸಿದ ಬ್ರಹ್ಮದೇವರು, ರುದ್ರದೇವರು, ಇಂದ್ರಾದಿ ಲೋಕಪಾಲರು, ತಮ್ಮ-ತಮ್ಮ ಗಣಗಳೊಂದಿಗೆ ಸಿದ್ಧ ಗಂಧರ್ವರು, ವಿದ್ಯಾಧರರು, ನಾಗರು, ಮುನಿಗಳು, ಯಕ್ಷರು, ರಾಕ್ಷಸರು, ಪಕ್ಷಿಗಳು, ಕಿನ್ನರ-ಚಾರಣರು, ದೊಡ್ಡ-ದೊಡ್ಡ ರಾಜರು, ರಾಜಪತ್ನಿಯರು - ಹೀಗೆ ಇವರೆಲ್ಲರೂ ಆಗಮಿಸಿದರು. ॥ ೧೩-೧೫ ॥ ರಾಜಸೂಯದ ವೈಭವವನ್ನು ಕಂಡು ಯಾರೂ ಅಚ್ಚರಿಗೊಳ್ಳಲಿಲ್ಲ. ಭಗವಾನ್ ಶ್ರೀಕೃಷ್ಣನ ಪರಮ ಭಕ್ತನಾದ ಯುಧಿಷ್ಠಿರನಿಗೆ ಇದು ಅನುರೂಪವಾಗಿರುವುದೆಂದೇ ಎಲ್ಲರೂ ಭಾವಿಸಿದರು. ಹಿಂದೆ ವರುಣನಿಂದ ದೇವತೆಗಳು ರಾಜಸೂಯ ಯಾಗವನ್ನು ಮಾಡಿಸಿದಂತೆಯೇ, ದೇವತೆಗಳಂತೆಯೇ ಮಹಾತೇಜಸ್ವಿಗಳಾದ ಯಾಜಕರು ಯುಧಿಷ್ಠಿರನಿಂದ ವಿಧಿವತ್ತಾಗಿ ರಾಜಸೂಯ ಯಜ್ಞವನ್ನು ಮಾಡಿಸಿದರು. ॥ ೧೬ ॥ ಸೋಮರಸವನ್ನು ಹಿಂಡುವ ದಿವಸ ಧರ್ಮರಾಜನು ತನ್ನ ಪರಮಭಾಗ್ಯಶಾಲಿಗಳಾದ ಯಾಜಕರನ್ನು ಮತ್ತು ಯಜ್ಞದ ನ್ಯೂನಾತಿರೇಕಗಳನ್ನು ನಿರೀಕ್ಷಿಸಲು ನಿಯುಕ್ತರಾಗಿದ್ದ ಸದಸ್ಯಪತಿಗಳನ್ನು ಏಕಾಗ್ರಚಿತ್ತದಿಂದ ಪೂಜಿಸಿ ಸತ್ಕರಿಸಿದನು. ॥ ೧೭ ॥

ಈಗ ಸಭಾಸದಸ್ಯರಲ್ಲಿ ಮೊಟ್ಟಮೊದಲಿಗೆ ಯಾರನ್ನು ಪೂಜಿಸಬೇಕು? ಅಗ್ರಪೂಜೆ ಯಾರಿಗೆ ಎಂಬ ವಿಷಯದಲ್ಲಿ ಅಲ್ಲಿ ನೆರೆದ ಸಭಾಸದರು ಚರ್ಚಿಸತೊಡಗಿದರು. ಎಷ್ಟು ಮತಿಗಳೋ ಅಷ್ಟು ಮತಗಳು. ಆದ್ದರಿಂದ ಸರ್ವಸಮ್ಮತವಾದ ನಿರ್ಣಯವು ಆಗದೇ ಹೋಯಿತು. ಇಂತಹ ಸ್ಥಿತಿಯಲ್ಲಿ ಸಹದೇವನು ಹೇಳಿದನು-॥೧೮॥ ಯದುವಂಶಶಿರೋಮಣಿ ಭಕ್ತವತ್ಸಲ ಭಗವಾನ್ ಶ್ರೀಕೃಷ್ಣನೇ ಸರ್ವಸದಸ್ಯರಲ್ಲಿ ಶ್ರೇಷ್ಠನೂ, ಅಗ್ರಪೂಜೆಗೆ ಯೋಗ್ಯನಾಗಿದ್ದಾನೆ. ಏಕೆಂದರೆ, ಇವನೇ ಸಮಸ್ತ ದೇವತೆಗಳ ರೂಪದಲ್ಲಿರುವವನು ಮತ್ತು ದೇಶ, ಕಾಲ, ಧನ ಮುಂತಾದ ಇರುವ ಎಲ್ಲ ವಸ್ತುಗಳ ರೂಪದಲ್ಲಿಯೂ ಅವನೇ ಆಗಿದ್ದಾನೆ. ॥ ೧೯ ॥ ಸಮಸ್ತ ವಿಶ್ವವೂ ಶ್ರೀಕೃಷ್ಣನ ರೂಪವೇ ಆಗಿದೆ. ಭಗವಾನ್ ಶ್ರೀಕೃಷ್ಣನೇ ಅಗ್ನಿ ಆಹುತಿ ಮತ್ತು ಮಂತ್ರದ ಸ್ವರೂಪನಾಗಿರುವನು. ಜ್ಞಾನಮಾರ್ಗ ಮತ್ತು ಕರ್ಮಮಾರ್ಗ ಇವೆರಡೂ ಅವನನ್ನು ಪಡೆಯುವ ಸಾಧನಗಳಾಗಿವೆ. ॥ ೨೦ ॥

ಏಕ ಏವಾದ್ವಿತೀಯೋಽಸಾವೈತದಾತ್ಮ್ಯಮಿದಂ ಜಗತ್ ।
ಆತ್ಮನಾಽಽತ್ಮಾಶ್ರಯಃ ಸಭ್ಯಾಃ ಸೃಜತ್ಯವತಿ ಹಂತ್ಯಜಃ ॥ ೨೧ ॥

ವಿವಿಧಾನೀಹ ಕರ್ಮಾಣಿ ಜನಯನ್ಯದವೇಕ್ಷಯಾ ।
ಈಹತೇ ಯದಯಂ ಸರ್ವಃ ಶ್ರೇಯೋ ಧರ್ಮಾದಿಲಕ್ಷಣಮ್ ॥ ೨೨ ॥

ತಸ್ಮಾತ್ ಕೃಷ್ಣಾಯ ಮಹತೇ ದೀಯತಾಂ ಪರಮಾರ್ಹಣಮ್ ।
ಏವಂ ಚೇತ್ ಸರ್ವಭೂತಾನಾಮಾತ್ಮನಶ್ಚಾರ್ಹಣಂ ಭವೇತ್ ॥ ೨೩ ॥

ಸರ್ವಭೂತಾತ್ಮಭೂತಾಯ ಕೃಷ್ಣಾಯಾನನ್ಯದರ್ಶಿನೇ ।
ದೇಯಂ ಶಾಂತಾಯ ಪೂರ್ಣಾಯ ದತ್ತಸ್ಯಾನಂತ್ಯಮಿಚ್ಛತಾ ॥ ೨೪ ॥

ಇತ್ಯುಕ್ತ್ವಾ ಸಹದೇವೋಽಭೂತ್ತೂಷ್ಣೀಂ ಕೃಷ್ಣಾನುಭಾವವಿತ್ ।
ತಚ್ಛ್ರುತ್ವಾ ತುಷ್ಟುವುಃ ಸರ್ವೇ ಸಾಧು ಸಾಧ್ವಿತಿ ಸತ್ತಮಾಃ ॥ ೨೫ ॥

ಶ್ರುತ್ವಾ ದ್ವಿಜೇರಿತಂ ರಾಜಾ ಜ್ಞಾತ್ವಾ ಹಾರ್ದಂ ಸಭಾಸದಾಮ್ ।
ಸಮರ್ಹಯದ್ಧೃಷೀಕೇಶಂ ಪ್ರೀತಃ ಪ್ರಣಯವಿಹ್ವಲಃ ॥ ೨೬ ॥

ತತ್ಪಾದಾವವನಿಜ್ಯಾಪಃ ಶಿರಸಾ ಲೋಕಪಾವನೀಃ ।
ಸಭಾರ್ಯಃ ಸಾನುಜಾಮಾತ್ಯಃ ಸಕುಟುಂಬೋಽವಹನ್ಮುದಾ ॥ ೨೭ ॥

ವಾಸೋಭಿಃ ಪೀತಕೌಶೇಯೈರ್ಭೂಷಣೈಶ್ಚ ಮಹಾಧನೈಃ ।
ಅರ್ಹಯಿತ್ವಾಶ್ರುಪೂರ್ಣಾಕ್ಷೋ ನಾಶಕತ್ಸಮವೇಕ್ಷಿತುಮ್ ॥ ೨೮ ॥

ಇತ್ಥಂ ಸಭಾಜಿತಂ ವೀಕ್ಷ್ಯ ಸರ್ವೇ ಪ್ರಾಂಜಲಯೋ ಜನಾಃ ।
ನಮೋ ಜಯೇತಿ ನೇಮುಸ್ತಂ ನಿಪೇತುಃ ಪುಷ್ಪವೃಷ್ಟಯಃ ॥ ೨೯ ॥

ಇತ್ಥಂ ನಿಶಮ್ಯ ದಮಘೋಷಸುತಃ ಸ್ವಪೀಠಾ-
ದುತ್ಥಾಯ ಕೃಷ್ಣಗುಣವರ್ಣನಜಾತಮನ್ಯುಃ ।
ಉತ್ಕ್ಷಿಪ್ಯ ಬಾಹುಮಿದಮಾಹ ಸದಸ್ಯಮರ್ಷೀ
ಸಂಶ್ರಾವಯನ್ ಭಗವತೇ ಪರುಷಾಣ್ಯಭೀತಃ ॥ ೩೦ ॥

ಸಭಾಸದರೇ! ಭಗವಾನ್ ಶ್ರೀಕೃಷ್ಣನು ಏಕಮೇವಾದ್ವಿತೀಯ ಬ್ರಹ್ಮನಾಗಿದ್ದಾನೆ. ಅಖಂಡ ಬ್ರಹ್ಮಾಂಡವೂ ಇವನ ಸ್ವರೂಪವೇ ಆಗಿದೆ. ಅವನು ತಾನೇ-ತನ್ನಲ್ಲಿ ಸ್ಥಿತನಾಗಿದ್ದಾನೆ ಮತ್ತು ಜನ್ಮ, ಅಸ್ತಿತ್ವ, ವೃದ್ಧಿ ಮೊದಲಾದ ಆರು ಭಾವ ವಿಕಾರಗಳಿಂದ ರಹಿತನಾಗಿದ್ದಾನೆ. ಅವನು ತನ್ನ ಆತ್ಮಸ್ವರೂಪ ಸಂಕಲ್ಪದಿಂದಲೇ ಜಗತ್ತಿನ ಸೃಷ್ಟಿ, ಸ್ಥಿತಿ, ಸಂಹಾರಗಳನ್ನು ಮಾಡುತ್ತಾನೆ. ॥ ೨೧ ॥ ಸಮಸ್ತ ಜಗತ್ತು ಶ್ರೀಕೃಷ್ಣನ ಅನುಗ್ರಹದಿಂದಲೇ ಅನೇಕ ವಿಧದ ಕರ್ಮಾನುಷ್ಠಾನಗಳನ್ನು ಮಾಡುತ್ತಾ ಧರ್ಮ, ಅರ್ಥ, ಕಾಮ, ಮೋಕ್ಷಗಳೆಂಬ ಪುರುಷಾರ್ಥಗಳನ್ನು ಸಾಧಿಸಿಕೊಳ್ಳುತ್ತಾರೆ. ॥ ೨೨ ॥ ಆದಕ್ಕಾಗಿ ಸರ್ವಶ್ರೇಷ್ಠನಾದ ಭಗವಾನ್ ಶ್ರೀಕೃಷ್ಣನದೇ ಅಗ್ರಪೂಜೆಯಾಗಬೇಕು. ಇವನನ್ನು ಪೂಜಿಸುವುದರಿಂದ ಸಮಸ್ತ ಪ್ರಾಣಿಗಳ ಹಾಗೂ ತನ್ನಾತ್ಮದ ಪೂಜೆಯೂ ನಡೆದಂತಾಗುತ್ತದೆ. ॥ ೨೩ ॥ ದಾನಕ್ಕೆ ಅನಂತವಾದ ಫಲವನ್ನು ಅಪೇಕ್ಷಿಸುವವನು ಸಮಸ್ತ ಪ್ರಾಣಿಗಳಿಗೂ ಆತ್ಮಸ್ವರೂಪನಾದ, ಭೇದಭಾವರಹಿತನಾದ, ಪರಮಶಾಂತನಾದ, ಪರಿಪೂರ್ಣನಾದ, ಮಹಾತ್ಮನಾದ ಶ್ರೀಕೃಷ್ಣನಿಗೇ ದಾನಮಾಡಬೇಕು. ॥ ೨೪ ॥ ಪರೀಕ್ಷಿತನೇ! ಭಗವಂತನ ಮಹಿಮೆಯನ್ನೂ, ಅವನ ಪ್ರಭಾವವನ್ನು ಅರಿತಿದ್ದ ಸಹದೇವನು ಹೀಗೆ ಹೇಳಿ ಸುಮ್ಮನಾದನು. ಆ ಸಮಯದಲ್ಲಿ ಧರ್ಮರಾಯನ ಯಜ್ಞಸಭೆಯಲ್ಲಿ ಉಪಸ್ಥಿತರಾಗಿದ್ದ ಸತ್ಪುರುಷರೆಲ್ಲರೂ ಏಕಕಂಠದಿಂದ ಸಾಧು! ಸಾಧು! ಬಹಳ ಚೆನ್ನಾಗಿದೆ ಎಂದು ಹೇಳಿ ಸಹದೇವನ ಮಾತನ್ನು ಸಮರ್ಥಿಸಿದರು. ॥ ೨೫ ॥ ಯುಧಿಷ್ಠಿರನು ಬ್ರಾಹ್ಮಣರ ಈ ಸಾಧುವಾದವನ್ನು ಕೇಳಿ, ಸಭ್ಯರ ಅಭಿಪ್ರಾಯವನ್ನು ತಿಳಿದವನಾಗಿ ಆನಂದದಿಂದಲೂ, ಪ್ರೇಮೋದ್ರೇಕದಿಂದಲೂ ವಿಹ್ವಲನಾಗಿ ಭಗವಾನ್ ಶ್ರೀಕೃಷ್ಣನ ಅಗ್ರಪೂಜೆಯನ್ನು ಮಾಡಿದನು. ॥ ೨೬ ॥ ಯುಧಿಷ್ಠಿರನು ತನ್ನ ಪತ್ನಿಯರು, ತಮ್ಮಂದಿರು, ಮಂತ್ರಿಗಳು ಮತ್ತು ಕುಟುಂಬ ವರ್ಗದವರೊಡನೆ ಅತ್ಯಂತ ಪ್ರೇಮದಿಂದಲೂ, ಆನಂದದಿಂದಲೂ ಭಗವಂತನ ಚರಣಾರವಿಂದಗಳನ್ನು ತೊಳೆದು ಲೋಕಪಾವನವಾದ ಚರಣತೀರ್ಥವನ್ನು ತಲೆಯಲ್ಲಿ ಧರಿಸಿಕೊಂಡನು. ॥ ೨೭ ॥ ಆಗ ಅವನು ಭಗವಂತನಿಗೆ ರೇಷ್ಮೆಯ ಪೀತಾಂಬರವನ್ನು ಬಹುಮೂಲ್ಯವಾದ ಆಭರಣಗಳನ್ನು ಸಮರ್ಪಿಸಿದನು. ಆ ಸಮಯದಲ್ಲಿ ಅವನ ಕಣ್ಣುಗಳು ಪ್ರೇಮಾನಂದದ ಅಶ್ರುಗಳಿಂದ ತುಂಬಿಹೋಗಿ ಭಗವಂತನನ್ನು ಸರಿಯಾಗಿ ನೋಡಲು ಸಾಧ್ಯವಾಗಲಿಲ್ಲ. ॥ ೨೮ ॥ ಹೀಗೆ ಅಗ್ರಪೂಜೆಯಿಂದ ಸಮ್ಮಾನಿತನಾದ ಶ್ರೀಕೃಷ್ಣನನ್ನು ನೋಡಿ ಆ ಸಭೆಯಲ್ಲಿ ಕುಳಿತಿದ್ದವರೆಲ್ಲರೂ ಕೈಜೋಡಿಸಿಕೊಂಡು ಶ್ರೀಕೃಷ್ಣಾಯ ನಮೋ ನಮಃ, ಶ್ರೀಕೃಷ್ಣನಿಗೆ ಜಯವಾಗಲಿ ಎಂದು ಹೇಳಿಕೊಂಡು ನಮಸ್ಕರಿಸತೊಡಗಿದರು. ಆಗ ಆಕಾಶದಿಂದ ತಾನಾಗಿಯೇ ಪುಷ್ಪವೃಷ್ಟಿಯಾಗತೊಡಗಿತು. ॥ ೨೯ ॥

ಪರೀಕ್ಷಿತನೇ! ತನ್ನ ಆಸನದಲ್ಲಿ ಕುಳಿತಿದ್ದ ಶಿಶುಪಾಲನು ಇದೆಲ್ಲವನ್ನು ನೋಡಿ-ಕೇಳುತ್ತಿದ್ದನು. ಭಗವಾನ್ ಶ್ರೀಕೃಷ್ಣನ ಗುಣಗಾನವನ್ನು ಕೇಳಿ ಕ್ರೋಧಗೊಂಡು ಎದ್ದುನಿಂತು, ತುಂಬಿದ ಸಭೆಯಲ್ಲಿ ಕೈಯನ್ನು ಮೇಲೆತ್ತಿ ಅಸಹಿಷ್ಣುತೆಯಿಂದ, ನಿರ್ಭಯನಾಗಿ ಭಗವಂತನಿಗೆ ಕೇಳಿಸುವಂತೆ ಅತ್ಯಂತ ಕಠೋರವಾದ ಮಾತುಗಳನ್ನಾಡತೊಡಗಿದನು. ॥ ೩೦ ॥

ತತೋ ದುರತ್ಯಯಃ ಕಾಲ ಇತಿ ಸತ್ಯವತೀ ಶ್ರುತಿಃ ।
ವೃದ್ಧಾನಾಮಪಿ ಯದ್ಬುದ್ಧಿರ್ಬಾಲವಾಕ್ಯೈರ್ವಿಭಿದ್ಯತೇ ॥ ೩೧ ॥

ಯೂಯಂ ಪಾತ್ರವಿದಾಂ ಶ್ರೇಷ್ಠಾ ಮಾ ಮಂಧ್ವಂ ಬಾಲಭಾಷಿತಮ್ ।
ಸದಸಸ್ಪತಯಃ ಸರ್ವೇ ಕೃಷ್ಣೋ ಯತ್ಸಮ್ಮತೋಽರ್ಹಣೇ ॥ ೩೨ ॥

ತಪೋವಿದ್ಯಾವ್ರತಧರಾನ್ ಜ್ಞಾನವಿಧ್ವಸ್ತಕಲ್ಮಷಾನ್ ।
ಪರಮರ್ಷೀನ್ ಬ್ರಹ್ಮನಿಷ್ಠಾನ್ಲೋಕಪಾಲೈಶ್ಚ ಪೂಜಿತಾನ್ ॥ ೩೩ ॥

ಸದಸ್ಪತೀನತಿಕ್ರಮ್ಯ ಗೋಪಾಲಃ ಕುಲಪಾಂಸನಃ ।
ಯಥಾ ಕಾಕಃ ಪುರೋಡಾಶಂ ಸಪರ್ಯಾಂ ಕಥಮರ್ಹತಿ ॥ ೩೪ ॥

ವರ್ಣಾಶ್ರಮಕುಲಾಪೇತಃ ಸರ್ವಧರ್ಮಬಹಿಷ್ಕೃತಃ ।
ಸ್ವೈರವರ್ತೀ ಗುಣೈರ್ಹೀನಃ ಸಪರ್ಯಾಂ ಕಥಮರ್ಹತಿ ॥ ೩೫ ॥

ಯಯಾತಿನೈಷಾಂ ಹಿ ಕುಲಂ ಶಪ್ತಂ ಸದ್ಭಿರ್ಬಹಿಷ್ಕೃತಮ್ ।
ವೃಥಾ ಪಾನರತಂ ಶಶ್ವತ್ಸಪರ್ಯಾಂ ಕಥಮರ್ಹತಿ ॥ ೩೬ ॥

ಬ್ರಹ್ಮರ್ಷಿಸೇವಿತಾನ್ ದೇಶಾನ್ ಹಿತ್ವೈತೇಽಬ್ರಹ್ಮವರ್ಚಸಮ್ ।
ಸಮುದ್ರಂ ದುರ್ಗಮಾಶ್ರಿತ್ಯ ಬಾಧಂತೇ ದಸ್ಯವಃ ಪ್ರಜಾಃ ॥ ೩೭ ॥

ಏವಮಾದೀನ್ಯಭದ್ರಾಣಿ ಬಭಾಷೇ ನಷ್ಟಮಂಗಲಃ ।
ನೋವಾಚ ಕಿಂಚಿದ್ಭಗವಾನ್ ಯಥಾ ಸಿಂಹಃ ಶಿವಾರುತಮ್ ॥ ೩೮ ॥

ಭಗವನ್ನಿಂದನಂ ಶ್ರುತ್ವಾ ದುಃಸಹಂ ತತ್ಸಭಾಸದಃ ।
ಕರ್ಣೌ ಪಿಧಾಯ ನಿರ್ಜಗ್ಮುಃ ಶಪಂತಶ್ಚೇದಿಪಂ ರುಷಾ ॥ ೩೯ ॥

ಸಜ್ಜನರೇ! 'ಕಾಲನೇ ಈಶ್ವರನಾಗಿದ್ದಾನೆ' ಎಂದು ಹೇಳಿದ ಶ್ರುತಿಯ ಮಾತು ಅಕ್ಷರಶಃ ಸತ್ಯವಾಗಿದೆ. ಲಕ್ಷ-ಲಕ್ಷ ಪ್ರಯತ್ನ ಮಾಡಿದರೂ ಅದು ತನ್ನ ಕೆಲಸವನ್ನು ಮಾಡಿಯೇ ತೀರುತ್ತದೆ. ಇಲ್ಲಿ ಮಕ್ಕಳ ಮತ್ತು ಮೂರ್ಖರ ಮಾತುಗಳಿಂದ ದೊಡ್ಡ-ದೊಡ್ಡ ವಯೋವೃದ್ಧರ, ಜ್ಞಾನವೃದ್ಧರ ಬುದ್ಧಿಯೂ ಪಲ್ಲಟವಾಗುವುದು. ಇದರ ಪ್ರತ್ಯಕ್ಷಪ್ರಮಾಣವಾಗಿದೆ. ॥ ೩೧ ॥ ನೀವೆಲ್ಲರೂ ಅಗ್ರಪೂಜೆಗೆ ಅರ್ಹರಾರೆಂಬುದನ್ನು ನಿರ್ಣಯಿಸುವುದರಲ್ಲಿ ಸಮರ್ಥರಾಗಿರುವಿರಿ ಎಂದು ನಾನು ತಿಳಿದಿದ್ದೇನೆ. ಅದಕ್ಕಾಗಿ ಸದಸ್ಯರುಗಳೇ! ಬಾಲಕನಾದ ಸಹದೇವನು ಹೇಳಿದ – 'ಶ್ರೀಕೃಷ್ಣನೇ ಅಗ್ರಪೂಜೆಗೆ ಅರ್ಹನಾಗಿದ್ದಾನೆ' ಎಂಬ ಮಾತನ್ನು ನೀವು ಅನುಮೋದಿಸಬೇಡಿರಿ. ॥ ೩೨ ॥ ಇಲ್ಲಿ ದೊಡ್ಡ-ದೊಡ್ಡ ತಪಸ್ವಿಗಳು, ವಿದ್ವಾಂಸರು, ವ್ರತನಿಷ್ಠರು, ಜ್ಞಾನದ ಮೂಲಕ ತಮ್ಮ ಸಮಸ್ತ ಪಾಪ-ತಾಪಗಳನ್ನು ನಾಶಗೊಳಿಸಿದವರು, ಪರಮಜ್ಞಾನಿ ಪರಮ ಋಷಿಗಳಾದ ಬ್ರಹ್ಮನಿಷ್ಠರು ಮುಂತಾದವರು ಉಪಸ್ಥಿತರಾಗಿ ಇದ್ದಾರೆ. ಇಂತಹವರನ್ನು ದೊಡ್ಡ-ದೊಡ್ಡ ಲೋಕಪಾಲರೂ ಪೂಜಿಸುತ್ತಿರುವರು. ॥ ೩೩ ॥ ಯಜ್ಞದ ನ್ಯೂನಾತಿರೇಕವನ್ನು ಹೇಳುವಂತಹ ಆ ಸದಸ್ಪತಿಗಳನ್ನು ಬಿಟ್ಟು ಈ ಕುಲಕಲಂಕನಾದ ಗೊಲ್ಲನು ಹೇಗೆ ತಾನೆ ಅಗ್ರಪೂಜೆಗೆ ಅಧಿಕಾರಿಯಾಗಬಲ್ಲನು? ಎಂದಾದರೂ ಕಾಗೆಯು ಯಜ್ಞದ ಪುರೋಡಾಶಕ್ಕೆ ಅಧಿಕಾರಿಯಾಗಬಲ್ಲುದೇ? ॥ ೩೪ ॥ ಇವನಿಗೆ ಯಾವುದೇ ವರ್ಣವಾಗಲೀ, ಆಶ್ರಮವಾಗಲೀ ಇಲ್ಲ, ಕುಲವೂ ಉನ್ನತವಾಗಿಲ್ಲ, ಎಲ್ಲ ಧರ್ಮಗಳಿಂದಲೂ ಹೊರಗಾಗಿರುವನು. ವೇದ ಮತ್ತು ಲೋಕ ಮರ್ಯಾದೆಗಳನ್ನು ಉಲ್ಲಂಘಿಸಿ ಮನಬಂದಂತೆ ವರ್ತಿಸುತ್ತಾನೆ. ಇವನಲ್ಲಿ ಯಾವುದೇ ಗುಣಗಳಿಲ್ಲ. ಇಂತಹ ಸ್ಥಿತಿಯಲ್ಲಿ ಇವನು ಅಗ್ರಪೂಜೆಗೆ ಹೇಗೆ ಅರ್ಹನಾಗಬಲ್ಲನು? ॥ ೩೫ ॥ ಯಯಾತಿ ರಾಜನು ಇವನ ವಂಶಕ್ಕೆ ಶಪಿಸಿರುವುದು ನೀವೆಲ್ಲರೂ ತಿಳಿದಿರುವಿರಿ. ಆದ್ದರಿಂದ ಸತ್ಪುರುಷರು ಈ ವಂಶವನ್ನು ಬಹಿಷ್ಕರಿಸಿರುವರು. ಇವರೆಲ್ಲರೂ ಸದಾಕಾಲ ಮಧುಪಾನದಲ್ಲೇ ಆಸಕ್ತರಾಗಿರುತ್ತಾರೆ. ಹೀಗಿರುವಾಗ ಇವನು ಅಗ್ರಪೂಜೆಗೆ ಹೇಗೆ ಯೋಗ್ಯನಾಗಬಲ್ಲನು? ॥ ೩೬ ॥ ಇವರೆಲ್ಲರೂ ಬ್ರಹ್ಮರ್ಷಿಗಳಿಂದ ಸೇವಿತವಾದ ಮಥುರೆಯನ್ನು ತ್ಯಜಿಸಿ, ಬ್ರಹ್ಮವರ್ಚಸ್ಸಿನ ವಿರೋಧಿಯಾದ (ವೇದ ಚರ್ಚಾರಹಿತ) ಸಮುದ್ರದಲ್ಲಿ ದುರ್ಗವನ್ನು ರಚಿಸಿಕೊಂಡು ಇರುತ್ತಾರೆ. ಅಲ್ಲಿಂದ ಇವರು ಹೊರಗೆ ಬಂದಾಗ ಕಳ್ಳರಂತೆ ಪ್ರಜೆಗಳೆಲ್ಲರನ್ನೂ ತೊಂದರೆಪಡಿಸುತ್ತಾರೆ. ॥ ೩೭ ॥ ಪರೀಕ್ಷಿತನೇ! ನಿರ್ಭಾಗ್ಯನಾದ ಶಿಶುಪಾಲನು ಹೀಗೆ ಅನೇಕ ಕರ್ಣಕಠೋರವಾದ ಮತ್ತು ಅಶುಭವಾದ ಮಾತುಗಳಿಂದ ಶ್ರೀಕೃಷ್ಣನನ್ನು ನಿಂದೆ ಮಾಡುತ್ತಿರಲು – ಸಿಂಹವು ನರಿಯ ಕೂಗನ್ನು ಅಲಕ್ಷಿಸುವಂತೆ ಭಗವಾನ್ ಶ್ರೀಕೃಷ್ಣನು ಅವನೊಡನೆ ಏನನ್ನೂ ಮಾತನಾಡಲಿಲ್ಲ. ॥ ೩೮ ॥ ಆದರೆ ಸಭಾಸದರಿಗೆ ಭಗವಂತನ ನಿಂದೆಯನ್ನು ಕೇಳುವುದು ಅಸಹ್ಯವುಂಟಾಗಿ ತಮ್ಮ-ತಮ್ಮ ಕಿವಿಗಳನ್ನು ಮುಚ್ಚಿಕೊಂಡು ಸಿಟ್ಟಿನಿಂದ ಶಿಶುಪಾಲನನ್ನು ನಿಂದಿಸುತ್ತಾ ಸಭಾಭವನದಿಂದ ಹೊರಟುಹೋದರು. ॥ ೩೯ ॥

ನಿಂದಾಂ ಭಗವತಃ ಶೃಣ್ವಂಸ್ತತ್ಪರಸ್ಯ ಜನಸ್ಯ ವಾ ।
ತತೋ ನಾಪೈತಿ ಯಃ ಸೋಽಪಿ ಯಾತ್ಯಧಃ ಸುಕೃತಾಚ್ಚ್ಯುತಃ ॥ ೪೦ ॥

ತತಃ ಪಾಂಡುಸುತಾಃ ಕ್ರುದ್ಧಾ ಮತ್ಸ್ಯಕೈಕಯಸೃಂಜಯಾಃ ।
ಉದಾಯುಧಾಃ ಸಮುತ್ತಸ್ಥುಃ ಶಿಶುಪಾಲಜಿಘಾಂಸವಃ ॥ ೪೧ ॥

ತತಶ್ಚೈದ್ಯಸ್ತ್ವಸಂಭ್ರಾಂತೋ ಜಗೃಹೇ ಖಡ್ಗಚರ್ಮಣೀ ।
ಭರ್ತ್ಸಯನ್ ಕೃಷ್ಣಪಕ್ಷೀಯಾನ್ರಾಜ್ಞಃ ಸದಸಿ ಭಾರತ ॥ ೪೨ ॥

ತಾವದುತ್ಥಾಯ ಭಗವಾನ್ ಸ್ವಾನ್ನಿವಾರ್ಯ ಸ್ವಯಂ ರುಷಾ ।
ಶಿರಃ ಕ್ಷುರಾಂತಚಕ್ರೇಣ ಜಹಾರಾಪತತೋ ರಿಪೋಃ ॥ ೪೩ ॥

ಶಬ್ದಃ ಕೋಲಾಹಲೋಽಪ್ಯಾಸೀತ್ ಶಿಶುಪಾಲೇ ಹತೇ ಮಹಾನ್ ।
ತಸ್ಯಾನುಯಾಯಿನೋ ಭೂಪಾ ದುದ್ರುವುರ್ಜೀವಿತೈಷಿಣಃ ॥ ೪೪ ॥

ಚೈದ್ಯದೇಹೋತ್ಥಿತಂ ಜ್ಯೋತಿರ್ವಾಸುದೇವಮುಪಾವಿಶತ್ ।
ಪಶ್ಯತಾಂ ಸರ್ವಭೂತಾನಾಮುಲ್ಕೇವ ಭುವಿ ಖಾಚ್ಚ್ಯುತಾ ॥ ೪೫ ॥

ಜನ್ಮತ್ರಯಾನುಗುಣಿತವೈರಸಂರಬ್ಧಯಾ ಧಿಯಾ ।
ಧ್ಯಾಯಂಸ್ತನ್ಮಯತಾಂ ಯಾತೋ ಭಾವೋ ಹಿ ಭವಕಾರಣಮ್ ॥ ೪೬ ॥

ಋತ್ವಿಗ್ಭ್ಯಃ ಸಸದಸ್ಯೇಭ್ಯೋ ದಕ್ಷಿಣಾಂ ವಿಪುಲಾಮದಾತ್ ।
ಸರ್ವಾನ್ ಸಂಪೂಜ್ಯ ವಿಧಿವಚ್ಚಕ್ರೇಽವಭೃಥಮೇಕರಾಟ್ ॥ ೪೭ ॥

ಸಾಧಯಿತ್ವಾ ಕ್ರತುಂ ರಾಜ್ಞಃ ಕೃಷ್ಣೋ ಯೋಗೇಶ್ವರೇಶ್ವರಃ ।
ಉವಾಸ ಕತಿಚಿನ್ಮಾಸಾನ್ಸುಹೃದ್ಭಿರಭಿಯಾಚಿತಃ ॥ ೪೮ ॥

ತತೋಽನುಜ್ಞಾಪ್ಯ ರಾಜಾನಮನಿಚ್ಛಂತಮಪೀಶ್ವರಃ ।
ಯಯೌ ಸಭಾರ್ಯಃ ಸಾಮಾತ್ಯಃ ಸ್ವಪುರಂ ದೇವಕೀಸುತಃ ॥ ೪೯ ॥

ವರ್ಣಿತಂ ತದುಪಾಖ್ಯಾನಂ ಮಯಾ ತೇ ಬಹುವಿಸ್ತರಮ್ ।
ವೈಕುಂಠವಾಸಿನೋರ್ಜನ್ಮ ವಿಪ್ರಶಾಪಾತ್ ಪುನಃ ಪುನಃ ॥ ೫೦ ॥

ಪರೀಕ್ಷಿದ್ರಾಜನೇ! ಭಗವಂತನ ಅಥವಾ ಅವನ ಭಕ್ತರ ನಿಂದೆಯನ್ನು ಕೇಳಿ ಅಲ್ಲಿಂದ ಹೊರಟುಹೋಗದವನು ತನ್ನ ಶುಭಕರ್ಮಗಳಿಂದ ಚ್ಯುತನಾಗಿ, ಅವನ ಅಧೋಗತಿಯಾಗುತ್ತದೆ. ॥ ೪೦ ॥ ಪರೀಕ್ಷಿತನೇ! ಶಿಶುಪಾಲನ ಶ್ರೀಕೃಷ್ಣನಿಂದಾವಾಕ್ಯಗಳಿಂದ ಅತಿಕ್ರುದ್ಧರಾದ ಪಾಂಡವ, ಮತ್ಸ್ಯ, ಕೇಕಯ ಮತ್ತು ಸೃಂಜಯ ನರಪತಿಗಳು ಶಿಶುಪಾಲನನ್ನು ಕೊಂದುಹಾಕಲೆಂದು ಆಯುಧಗಳನ್ನು ಧರಿಸಿ ಎದ್ದುನಿಂತರು. ॥ ೪೧ ॥ ಆದರೆ ಇದರಿಂದ ಶಿಶುಪಾಲನು ಗಾಬರಿಗೊಳ್ಳಲಿಲ್ಲ. ಅವನು ಹಿಂದೆ-ಮುಂದೆ ಯೋಚಿಸದೆ ತನ್ನ ಕತ್ತಿ ಗುರಾಣಿಗಳನ್ನು ಎತ್ತಿಕೊಂಡು ತುಂಬಿದ ಆ ಸಭೆಯಲ್ಲಿ ಶ್ರೀಕೃಷ್ಣನ ಪಕ್ಷಪಾತಿಗಳಾದ ರಾಜರುಗಳಿಗೆ ಯುದ್ಧಕ್ಕೆ ಸಿದ್ಧನಾದನು. ॥ ೪೨ ॥ ಅಷ್ಟರಲ್ಲಿ ಭಗವಾನ್ ಶ್ರೀಕೃಷ್ಣನು ಆಸನದಿಂದ ಮೇಲೆದ್ದು ತನ್ನ ಕಡೆಯವರೆಲ್ಲರನ್ನು ಹಿಂದಕ್ಕೆ ಸರಿಸಿ, ಪರಮ ಕ್ರುದ್ಧನಾಗಿ ಕತ್ತಿಯಂತೆ ಹರಿತವಾದ ಅಲಗಿನಿಂದ ಕೂಡಿದ್ದ ಚಕ್ರದ ಧಾರೆಯಿಂದ ತನ್ನ ಕಡೆಗೆ ನುಗ್ಗಿಬರುತ್ತಿದ್ದ ಶಿಶುಪಾಲನ ಶಿರಸ್ಸನ್ನು ಕತ್ತರಿಸಿ ಬಿಟ್ಟನು. ॥ ೪೩ ॥ ಶಿಶುಪಾಲನ ಸಂಹಾರವಾದೊಡನೆ ಆ ಸಭೆಯಲ್ಲಿ ದೊಡ್ಡ ಕೋಲಾಹಲವುಂಟಾಯಿತು. ಶಿಶುಪಾಲನ ಅನುಯಾಯಿಗಳಾದ ರಾಜರು ಜೀವಿಸಿರಬೇಕೆಂಬ ಆಸೆಯಿಂದ ಅಲ್ಲಿಂದ ಪಲಾಯನ ಮಾಡಿದರು. ॥ ೪೪ ॥ ಉಲ್ಕೆಯು ಅಂತರಿಕ್ಷದಿಂದ ಭೂಮಿಗೆ ಬೀಳುವಂತೆ ಸಮಸ್ತರು ನೋಡುತ್ತಿರುವಂತೆ ಶಿಶುಪಾಲನ ಶರೀರದಿಂದ ಹೊರಟ ಅವನ ಜೀವಜ್ಯೋತಿಯು ಭಗವಾನ್ ಶ್ರೀಕೃಷ್ಣನಲ್ಲಿ ಸೇರಿಹೋಯಿತು. ॥ ೪೫ ॥ ಪರೀಕ್ಷಿತನೇ! ಶಿಶುಪಾಲನ ಅಂತಃಕರಣದಲ್ಲಿ ಮೂರು ಜನ್ಮಗಳಿಂದಲೂ ಒಂದೇ ಸಮನೆ ವೈರಭಾವವು ಬೆಳೆಯುತ್ತಲೇ ಇತ್ತು. ಹೀಗೆ ವೈರಭಾವದಿಂದಲೇ ಆಗಲಿ ಅವನು ಶ್ರೀಕೃಷ್ಣನನ್ನು ಸದಾ ಧ್ಯಾನಿಸುತ್ತಲೇ ಇದ್ದನು. ಈ ಕಾರಣದಿಂದಲೇ ಅವನು ವಿಷ್ಣುವಿನ ಪಾರ್ಷದರಲ್ಲಿ ಸೇರಿ ಹೋದನು. ಮರಣಾನಂತರ ದೊರೆಯುವ ಗತಿಗೆ ಭಾವವೇ ಕಾರಣವಾಗುತ್ತದೆ. ॥ ೪೬ ॥ ಶಿಶುಪಾಲನಿಗೆ ಸದ್ಗತಿಯುಂಟಾದ ಬಳಿಕ ಚಕ್ರವರ್ತಿ ಧರ್ಮರಾಜ ಯುಧಿಷ್ಠಿರನು ಆಚಾರ್ಯರಿಗೂ ಮತ್ತು ಋತ್ವಿಜರಿಗೂ ಹೇರಳವಾದ ದಕ್ಷಿಣೆಯನ್ನು ಕೊಟ್ಟು ಸತ್ಕರಿಸಿ ವಿಧಿಪೂರ್ವಕವಾಗಿ ಯಜ್ಞಾಂತ್ಯದ ಅವಭೃತಸ್ನಾನ ಮಾಡಿದನು. ॥ ೪೭ ॥

ಪರೀಕ್ಷಿತನೇ! ಈ ಪ್ರಕಾರವಾಗಿ ಯೋಗೇಶ್ವರ ಭಗವಾನ್ ಶ್ರೀಕೃಷ್ಣನು ಯುಧಿಷ್ಠಿರನ ರಾಜಸೂಯ ಯಜ್ಞವನ್ನು ಪೂರ್ಣಗೊಳಿಸಿಕೊಟ್ಟು ತನ್ನ ನೆಂಟರಿಷ್ಟರ ಮತ್ತು ಸುಹೃದರ ಆಗ್ರಹದಿಂದ ಕೆಲವು ತಿಂಗಳುಗಳವರೆಗೆ ಅಲ್ಲೇ ಇದ್ದನು. ॥ ೪೮ ॥ ಅನಂತರ ಯುಧಿಷ್ಠಿರನಿಗೆ ಕಳಿಸಿಕೊಡಲು ಇಷ್ಟವಿಲ್ಲದಿದ್ದರೂ ಸರ್ವಶಕ್ತನಾದ ಭಗವಾನ್ ಶ್ರೀಕೃಷ್ಣನು ಅವನಿಂದ ಬೀಳ್ಕೊಂಡು ತನ್ನ ರಾಣಿಯರೊಂದಿಗೆ, ಮಂತ್ರಿಗಳೊಡನೆ ಇಂದ್ರಪ್ರಸ್ಥದಿಂದ ದ್ವಾರಕೆಗೆ ಪ್ರಯಾಣ ಬೆಳೆಸಿದನು. ॥ ೪೯ ॥ ಪರೀಕ್ಷಿತನೇ! ವೈಕುಂಠವಾಸಿಗಳಾದ ಜಯ-ವಿಜಯರು ಸನಕಾದಿಗಳ ಶಾಪದಿಂದ ಪುನಃ ಪುನಃ ಹುಟ್ಟಬೇಕಾಗಿ ಬಂದ ಉಪಾಖ್ಯಾನವನ್ನು ನಾನು ಹಿಂದೆ (ಸಪ್ತಮಸ್ಕಂಧದಲ್ಲಿ) ನಿನಗೆ ವಿಸ್ತಾರವಾಗಿ ಹೇಳಿಬಿಟ್ಟಿದ್ದೇನೆ. ॥ ೫೦ ॥

ರಾಜಸೂಯಾವಭೃಥ್ಯೇನ ಸ್ನಾತೋ ರಾಜಾ ಯುಧಿಷ್ಠಿರಃ ।
ಬ್ರಹ್ಮಕ್ಷತ್ರಸಭಾಮಧ್ಯೇ ಶುಶುಭೇ ಸುರರಾಡಿವ ॥ ೫೧ ॥

ರಾಜ್ಞಾ ಸಭಾಜಿತಾಃ ಸರ್ವೇ ಸುರಮಾನವಖೇಚರಾಃ ।
ಕೃಷ್ಣಂ ಕ್ರತುಂ ಚ ಶಂಸಂತಃ ಸ್ವಧಾಮಾನಿ ಯಯುರ್ಮುದಾ ॥ ೫೨ ॥

ದುರ್ಯೋಧನಮೃತೇ ಪಾಪಂ ಕಲಿಂ ಕುರುಕುಲಾಮಯಮ್ ।
ಯೋ ನ ಸೇಹೇ ಶ್ರಿಯಂ ಸ್ಫೀತಾಂ ದೃಷ್ಟ್ವಾ ಪಾಂಡುಸುತಸ್ಯ ತಾಮ್ ॥ ೫೩ ॥

ಯ ಇದಂ ಕೀರ್ತಯೇದ್ವಿಷ್ಣೋಃ ಕರ್ಮ ಚೈದ್ಯವಧಾದಿಕಮ್ ।
ರಾಜಮೋಕ್ಷಂ ವಿತಾನಂ ಚ ಸರ್ವಪಾಪೈಃ ಪ್ರಮುಚ್ಯತೇ ॥ ೫೪ ॥

ರಾಜಸೂಯ ಯಾಗವನ್ನು ಮಾಡಿ ವಿಧಿವತ್ತಾಗಿ ಅವಭೃತ ಸ್ನಾನ ಮಾಡಿದ ಯುಧಿಷ್ಠಿರನು ಬ್ರಾಹ್ಮಣ ಮತ್ತು ಕ್ಷತ್ರಿಯರ ಸಭೆಯಲ್ಲಿ ದೇವೇಂದ್ರನಂತೆ ಪ್ರಕಾಶಿಸಿದನು. ॥ ೫೧ ॥ ಯುಧಿಷ್ಠಿರನು ದೇವತೆಗಳನ್ನು ಮನುಷ್ಯರನ್ನು ಆಕಾಶಚಾರಿಗಳನ್ನು ಯಥಾಯೋಗ್ಯವಾಗಿ ಸತ್ಕರಿಸಿದನು. ಅವರೆಲ್ಲರೂ ರಾಜಸೂಯ ಯಜ್ಞವನ್ನು ಮತ್ತು ಭಗವಾನ್ ಶ್ರೀಕೃಷ್ಣನನ್ನು ಪ್ರಶಂಸಿಸುತ್ತಾ ಬಹಳ ಆನಂದದಿಂದ ತಮ್ಮ-ತಮ್ಮ ಲೋಕಗಳಿಗೆ ತೆರಳಿದರು. ॥ ೫೨ ॥ ಪರೀಕ್ಷಿತನೇ! ಎಲ್ಲರೂ ಸಂತೋಷಗೊಂಡರು ಆದರೆ ದುರ್ಯೋಧನನಿಗೆ ಪಾಂಡವರ ಈ ಉಜ್ವಲ ರಾಜ್ಯಲಕ್ಷ್ಮಿಯ ಉತ್ಕರ್ಷವುಸಹಿಸದಾಯಿತು. ಏಕೆಂದರೆ, ಅವನು ಸ್ವಭಾವದಿಂದಲೇ ಪಾಪಿಯೂ, ಕಲಹಪ್ರಿಯನೂ ಮತ್ತು ಕುರುಕುಲವನ್ನು ನಾಶಗೊಳಿಸುವಂತಹ ಒಂದು ರೋಗವೇ ಆಗಿದ್ದನು. ॥ ೫೩ ॥

ಪರೀಕ್ಷಿತನೇ! ಭಗವಾನ್ ಶ್ರೀಕೃಷ್ಣನ-ಶಿಶುಪಾಲ ವಧೆ, ಜರಾಸಂಧ ವಧೆ, ಸೆರೆಯಾಳಾದ ರಾಜರ ಬಿಡುಗಡೆ, ಯಜ್ಞಾನುಷ್ಠಾನ ಮೊದಲಾದ ಈ ಲೀಲೆಗಳನ್ನು ಕೀರ್ತನೆ ಮಾಡುವವನು ಸಮಸ್ತ ಪಾಪಗಳಿಂದ ಮುಕ್ತನಾಗಿ ಹೋಗುವನು. ॥ ೫೪ ॥

ಎಪ್ಪತ್ತನಾಲ್ಕನೆಯ ಅಧ್ಯಾಯವು ಮುಗಿಯಿತು. ॥ ೭೪ ॥
ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮಸ್ಕಂಧೇ ಉತ್ತರಾರ್ಧೇ
ಶಿಶುಪಾಲವಧೋ ನಾಮ ಚತುಸ್ಸಪ್ತತಿತಮೋಽಧ್ಯಾಯಃ ॥ ೭೪ ॥

ಎಪ್ಪತ್ತೈದನೆಯ ಅಧ್ಯಾಯ

ರಾಜಸೂಯ ಯಜ್ಞದ ಪರಿಸಮಾಪ್ತಿ - ದುರ್ಯೋಧನನಿಗಾದ ಅವಮಾನ

ರಾಜೋವಾಚ

ಅಜಾತಶತ್ರೋಸ್ತಂ ದೃಷ್ಟ್ವಾ ರಾಜಸೂಯಮಹೋದಯಮ್ ।
ಸರ್ವೇ ಮುಮುದಿರೇ ಬ್ರಹ್ಮನ್ನೃದೇವಾ ಯೇ ಸಮಾಗತಾಃ ॥ ೧ ॥

ದುರ್ಯೋಧನಂ ವರ್ಜಯಿತ್ವಾ ರಾಜಾನಃ ಸರ್ಷಯಃ ಸುರಾಃ ।
ಇತಿ ಶ್ರುತಂ ನೋ ಭಗವಂಸ್ತತ್ರ ಕಾರಣಮುಚ್ಯತಾಮ್ ॥ ೨ ॥

ಋಷಿರುವಾಚ

ಪಿತಾಮಹಸ್ಯ ತೇ ಯಜ್ಞೇ ರಾಜಸೂಯೇ ಮಹಾತ್ಮನಃ ।
ಬಾಂಧವಾಃ ಪರಿಚರ್ಯಾಯಾಂ ತಸ್ಯಾಸನ್ ಪ್ರೇಮಬಂಧನಾಃ ॥ ೩ ॥

ಭೀಮೋ ಮಹಾನಸಾಧ್ಯಕ್ಷೋ ಧನಾಧ್ಯಕ್ಷಃ ಸುಯೋಧನಃ ।
ಸಹದೇವಸ್ತು ಪೂಜಾಯಾಂ ನಕುಲೋ ದ್ರವ್ಯಸಾಧನೇ ॥ ೪ ॥

ಗುರುಶುಶ್ರೂಷಣೇ ಜಿಷ್ಣುಃ ಕೃಷ್ಣಃ ಪಾದಾವನೇಜನೇ ।
ಪರಿವೇಷಣೇ ದ್ರುಪದಜಾ ಕರ್ಣೋ ದಾನೇ ಮಹಾಮನಾಃ ॥ ೫ ॥

ಪರೀಕ್ಷಿದ್ರಾಜನು ಕೇಳಿದನು - ಪೂಜ್ಯರೇ! ಅಜಾತಶತ್ರುವಾದ ಯುಧಿಷ್ಠಿರನ ರಾಜಸೂಯ ಯಜ್ಞವನ್ನು ನೋಡಲು ಬಂದಿರುವ ಮನುಷ್ಯರೂ, ರಾಜರೂ, ಋಷಿ-ಮುನಿಗಳೂ, ದೇವತೆಗಳೂ ಮುಂತಾದವರೆಲ್ಲರೂ ಆನಂದಿತರಾದರು. ಆದರೆ ದುರ್ಯೋಧನನಿಗೆ ಮಾತ್ರ ಸಂತೋಷವಾಗಲಿಲ್ಲ, ದುಃಖವಾಯಿತು ಎಂದು ನೀವು ಹೇಳಿದಿರಿ. ಇದರ ಕಾರಣವನ್ನು ದಯವಿಟ್ಟು ಹೇಳಿರಿ. ೧-೨ ॥

ಶ್ರೀಶುಕಮಹಾಮುನಿಗಳು ಹೇಳಿದರು - ಪರೀಕ್ಷಿತನೇ! ನಿನ್ನ ಪಿತಾಮಹ ಯುಧಿಷ್ಠಿರನು ಮಹಾತ್ಮನಾಗಿದ್ದನು. ಅವನ ಪ್ರೇಮ ಬಂಧನಕ್ಕೆ ಸಿಲುಕಿದ ಎಲ್ಲ ಬಂಧುಬಾಂಧವರು ರಾಜಸೂಯ ಯಜ್ಞದಲ್ಲಿ ಬೇರೆ-ಬೇರೆ ಸೇವಾಕಾರ್ಯಗಳನ್ನು ವಹಿಸಿಕೊಂಡಿದ್ದರು. ॥ ೩ ॥ ಭೀಮಸೇನನು ಪಾಕಶಾಲೆಗೆ ಅಧ್ಯಕ್ಷನಾಗಿದ್ದನು. ದುರ್ಯೋಧನನು ಧನಾಧ್ಯಕ್ಷನಾಗಿದ್ದನು. ಸಹದೇವನು ಅಭ್ಯಾಗತರ ಸ್ವಾಗತ-ಸತ್ಕಾರದಲ್ಲಿ ನಿಯುಕ್ತನಾಗಿದ್ದನು. ನಕುಲನು ಸಾಮಗ್ರಿಗಳನ್ನು ಸಂಗ್ರಹಿಸುವ ಕಾರ್ಯವನ್ನು ನೋಡಿಕೊಳ್ಳುತ್ತಿದ್ದನು. ॥ ೪ ॥ ಅರ್ಜುನನು ಗುರುಜನರ ಸೇವಾ-ಶುಶ್ರೂಷೆಗಳ ಹೊಣೆಯನ್ನು ಹೊತ್ತಿದ್ದನು. ಭಗವಾನ್ ಶ್ರೀಕೃಷ್ಣನು ಅತಿಥಿಗಳ ಕಾಲುಗಳನ್ನು ತೊಳೆಯುವ ಕೆಲಸಮಾಡುತ್ತಿದ್ದನು. ದ್ರೌಪದಾದೇವಿಯು ಊಟ ಬಡಿಸುವ ವ್ಯವಸ್ಥೆಯನ್ನು ನೋಡಿಕೊಳ್ಳುತ್ತಿದ್ದಳು. ಉದಾರಶಿರೋಮಣಿಯಾದ ಕರ್ಣನು ಮುಕ್ತಹಸ್ತದಿಂದ ದಾನಮಾಡುತ್ತಿದ್ದನು. ॥ ೫ ॥

ಯುಯುಧಾನೋ ವಿಕರ್ಣಶ್ಚ ಹಾರ್ದಿಕ್ಯೋ ವಿದುರಾದಯಃ ।
ಬಾಹ್ಲೀಕಪುತ್ರಾ ಭೂರ್ಯಾದ್ಯಾ ಯೇ ಚ ಸಂತರ್ದನಾದಯಃ
॥ ೬ ॥

ನಿರೂಪಿತಾ ಮಹಾಯಜ್ಞೇ ನಾನಾಕರ್ಮಸು ತೇ ತದಾ ।
ಪ್ರವರ್ತಂತೇ ಸ್ಮ ರಾಜೇಂದ್ರ ರಾಜ್ಞಃ ಪ್ರಿಯಚಿಕೀರ್ಷವಃ
॥ ೭ ॥

ಋತ್ವಿಕ್ಸದಸ್ಯಬಹುವಿತ್ಸು ಸುಹೃತ್ತಮೇಷು
ಸ್ವಿಷ್ಟೇಷು ಸೂನೃತಸಮರ್ಹಣದಕ್ಷಿಣಾಭಿಃ ।
ಚೈದ್ಯೇ ಚ ಸಾತ್ವತಪತೇಶ್ಚರಣಂ ಪ್ರವಿಷ್ಟೇ
ಚಕ್ರುಸ್ತತಸ್ತ್ವವಭೃಥಸ್ನಪನಂ ದ್ಯುನದ್ಯಾಮ್ ॥ ೮ ॥

ಮೃದಂಗಶಂಖಪಣವಧುಂಧುರ್ಯಾನಕಗೋಮುಖಾಃ ।
ವಾದಿತ್ರಾಣಿ ವಿಚಿತ್ರಾಣಿ ನೇದುರಾವಭೃಥೋತ್ಸವೇ
॥ ೯ ॥

ನರ್ತಕ್ಯೋ ನನೃತುರ್ಹೃಷ್ಟಾ ಗಾಯಕಾ ಯೂಥಶೋ ಜಗುಃ ।
ವೀಣಾವೇಣುತಲೋನ್ನಾದಸ್ತೇಷಾಂ ಸ ದಿವಮಸ್ಪೃಶತ್
॥ ೧೦ ॥

ಚಿತ್ರಧ್ವಜಪತಾಕಾಗ್ರೈರಿಭೇಂದ್ರಸ್ಯಂದನಾರ್ವಭಿಃ ।
ಸ್ವಲಂಕೃತೈರ್ಭಟೈರ್ಭೂಪಾ ನಿರ್ಯಯೂ ರುಕ್ಮಮಾಲಿನಃ
॥ ೧೧ ॥

ಯದುಸೃಂಜಯಕಾಂಭೋಜಕುರುಕೇಕಯಕೋಸಲಾಃ ।
ಕಂಪಯಂತೋ ಭುವಂ ಸೈನ್ಯೈರ್ಯಜಮಾನಪುರಸ್ಸರಾಃ
॥ ೧೨ ॥

ಸದಸ್ಯರ್ತ್ವಿಗ್ದ್ವಿಜಶ್ರೇಷ್ಠಾ ಬ್ರಹ್ಮಘೋಷೇಣ ಭೂಯಸಾ ।
ದೇವರ್ಷಿಪಿತೃಗಂಧರ್ವಾಸ್ತುಷ್ಟುವುಃ ಪುಷ್ಪವರ್ಷಿಣಃ
॥ ೧೩ ॥

ಸ್ವಲಂಕೃತಾ ನರಾ ನಾರ್ಯೋ ಗಂಧಸ್ರಗ್ಭೂಷಣಾಂಬರೈಃ ।
ವಿಲಿಂಪಂತ್ಯೋಽಭಿಷಿಂಚಂತ್ಯೋ ವಿಜಹ್ರುರ್ವಿವಿಧೈ ರಸೈಃ
॥ ೧೪ ॥

ತೈಲಗೋರಸಗಂಧೋದಹರಿದ್ರಾಸಾಂದ್ರಕುಂಕುಮೈಃ ।
ಪುಂಭಿರ್ಲಿಪ್ತಾಃ ಪ್ರಲಿಂಪಂತ್ಯೋ ವಿಜಹ್ರುರ್ವಾರಯೋಷಿತಃ
॥ ೧೫ ॥

ಗುಪ್ತಾ ನೃಭಿರ್ನಿರಗಮನ್ನುಪಲಬ್ಧುಮೇತದ್
ದೇವ್ಯೋ ಯಥಾ ದಿವಿ ವಿಮಾನವರೈರ್ನೃದೇವ್ಯಃ ।
ತಾ ಮಾತುಲೇಯಸಖಿಭಿಃ ಪರಿಷಿಚ್ಯಮಾನಾಃ
ಸವ್ರೀಡಹಾಸವಿಕಸದ್ವದನಾ ವಿರೇಜುಃ ॥ ೧೬ ॥

ಪರೀಕ್ಷಿತನೇ । ಹೀಗೆಯೇ ಸಾತ್ಯಕಿ, ವಿಕರ್ಣ, ಹಾರ್ದಿಕ್ಯ, ವಿದುರ, ಭೂರಿಶ್ರವಾ ಮೊದಲಾದ ಬಾಹ್ಲೀಕನ ಮಕ್ಕಳು, ಸಂತರ್ದನನೇ ಮುಂತಾದವರೆಲ್ಲರೂ ರಾಜಸೂಯ ಯಜ್ಞದಲ್ಲಿ ಬೇರೆ-ಬೇರೆ ಕಾರ್ಯದಲ್ಲಿ ನಿಯುಕ್ತರಾದರು. ಎಲ್ಲರ ಆಶಯವೂ ಕೂಡ ಯುಧಿಷ್ಠಿರನಿಗೆ ಪ್ರಿಯ ಮತ್ತು ಹಿತವನ್ನುಂಟುಮಾಡಬೇಕೆಂದೇ ಇತ್ತು. ॥ ೬-೭ ॥

ಪರೀಕ್ಷಿತನೇ ! ಹೀಗೆ ಋತ್ವಿಜರು, ಸದಸ್ಯರು, ವಿದ್ವಾಂಸರು, ಇಷ್ಟ-ಮಿತ್ರರು, ಬಂಧು-ಬಾಂಧವರು ಸಮಸ್ತರೂ ಪ್ರಿಯವಚನಗಳಿಂದಲೂ, ಮರ್ಯಾದೆಗಳಿಂದಲೂ, ದಕ್ಷಿಣೆಗಳಿಂದಲೂ ಯಥಾಯೋಗ್ಯವಾಗಿ ಪೂಜಿಸಲ್ಪಟ್ಟು, ಶಿಶುಪಾಲನು ಭಕ್ತವತ್ಸಲನಾದ ಭಗವಂತನ ಚರಣಗಳಲ್ಲಿ ಸೇರಿ ಹೋದನು. ಬಳಿಕ ಧರ್ಮರಾಜನು ದೇವಗಂಗೆಯಲ್ಲಿ ಅವಭೃಥಸ್ನಾನಕ್ಕಾಗಿ ಹೊರಟನು. ॥ ೮ ॥ ಅವನು ಅವಭೃಥಸ್ನಾನ ಮಾಡತೊಡಗಿದಾಗ ಮೃದಂಗ, ಶಂಖ, ಪಣವ, ಆನಕ, ನಗಾರಿ, ಢಕ್ಕೆ ಗೋಮುಖ ಮೊದಲಾದ ಮಂಗಳವಾದ್ಯಗಳು ಮೊಳಗಿದವು. ॥ ೯ ॥ ನರ್ತಕಿಯರು ನರ್ತನ ಮಾಡಿದರು. ಗಾಯಕರು ಗುಂಪು-ಗುಂಪಾಗಿ ಹಾಡತೊಡಗಿದರು. ವೀಣೆ, ಕೊಳಲು, ತಾಳಗಳು ನುಡಿಸಲ್ಪಟ್ಟವು. ಇವುಗಳ ಶಬ್ದವು ಆಕಾಶದಲ್ಲೆಲ್ಲ ಪ್ರತಿಧ್ವನಿಸಿತು. ॥ ೧೦ ॥ ಸುವರ್ಣದ ಹಾರಗಳಿಂದ ಸಮಲಂಕೃತರಾದ ಯದು, ಸೃಂಜಯ, ಕಾಂಬೋಜ, ಕುರು, ಕೇಕಯ ಮತ್ತು ಕೋಸಲ ದೇಶಗಳ ರಾಜರು ಬಣ್ಣ-ಬಣ್ಣದ ಧ್ವಜಪತಾಕೆಗಳಿಂದ ಅಲಂಕೃತವಾಗಿದ್ದ ಮಹಾಗಜಗಳ ಮೇಲೂ, ಕುದುರೆಗಳ ಮೇಲೂ, ರಥಗಳಲ್ಲಿಯೂ ಕುಳಿತು ಪದಾತಿ ಸೈನಿಕರೊಡನೆ ಭೂಮಿಯನ್ನೇ ನಡುಗಿಸುತ್ತಾ ಯುಧಿಷ್ಠಿರ ಮಹಾರಾಜನನ್ನು ಮುಂದುಮಾಡಿಕೊಂಡು ಅವಭೃಥಕ್ಕೆ ಹೋಗುತ್ತಿದ್ದರು. ॥ ೧೧-೧೨ ॥ ಯಜ್ಞದ ಸದಸ್ಯರು, ಋತ್ವಿಜರು, ಬಹಳಷ್ಟು ಮಂದಿ ಬ್ರಾಹ್ಮಣಶ್ರೇಷ್ಠರು ಉಚ್ಚ ಸ್ವರದಲ್ಲಿ ಮಂತ್ರಗಳನ್ನು ಪಠಿಸತೊಡಗಿದರು. ದೇವತೆಗಳು, ಋಷಿಗಳು, ಪಿತೃಗಳು, ಗಂಧರ್ವರು ಆಕಾಶದಿಂದ ಹೂಮಳೆಗರೆಯುತ್ತಾ ಯುಧಿಷ್ಠಿರನನ್ನು ಹೊಗಳುತ್ತಿದ್ದರು. ॥ ೧೩ ॥ ಗಂಧಮಾಲ್ಯಾಭರಣ ವಸ್ತ್ರಗಳಿಂದ ಸಮಲಂಕೃತರಾಗಿದ್ದ ಇಂದ್ರಪ್ರಸ್ಥದ ನರ-ನಾರಿಯರು ಓಕುಳಿಯ ನೀರು, ಹಾಲು, ಎಣ್ಣೆ, ಬೆಣ್ಣೆ ಮುಂತಾದವುಗಳನ್ನು ಒಬ್ಬರ ಮೇಲೊಬ್ಬರು ಎರಚಾಡುತ್ತಾ, ಆಟವಾಡುತ್ತಾ ಹಿಂಬಾಲಿಸುತ್ತಿದ್ದರು. ॥ ೧೪ ॥ ವಾರಾಂಗನೆಯರು ಎಣ್ಣೆ, ಹಾಲು, ತುಪ್ಪ, ಬೆಣ್ಣೆ, ಪನ್ನೀರು, ಅರಿಶಿನ ಇವೇ ಮುಂತಾದುವನ್ನು ಬೆರೆಸಿದ ಕೇಸರೀ ಮಿಶ್ರಿತವಾದ ಕೆಂಪುನೀರನ್ನು ಪುರುಷರ ಮೇಲೆ ಸುರಿಯುವರು ಮತ್ತು ಪುರುಷರೂ ಅವರ ಮೇಲೆ ಎರಚುತ್ತಾ ಓಕುಳಿಯ ಆಟವನ್ನಾಡುತ್ತಿದ್ದರು. ॥ ೧೫ ॥

ಆ ಸಮಯದಲ್ಲಿ ಅವಭೃಥೋತ್ಸವವನ್ನು ನೋಡುವ ಸಲುವಾಗಿ ಶ್ರೇಷ್ಠವಾದ ವಿಮಾನಗಳಲ್ಲಿ ಕುಳಿತು ಆಕಾಶದಲ್ಲಿ ಅಸಂಖ್ಯಾತ ದೇವಿಯರು ಉಪಸ್ಥಿತರಾಗಿರುವಂತೆಯೇ ಇಂದ್ರಪ್ರಸ್ಥದ ರಾಜಮಹಿಷಿಯರು ಸೈನಿಕರಿಂದ ಸಂರಕ್ಷಿತರಾಗಿ ಸುಂದರವಾದ ಪಲ್ಲಕ್ಕಿಗಳಲ್ಲಿ ಕುಳಿತು ಆಗಮಿಸಿದ್ದರು. ಪಾಂಡವರ ಸೋದರಮಾವನ

ತಾ ದೇವರಾನುತ ಸಖೀನ್ಸಿಷಿಚುರ್ದೃತೀಭಿಃ
ಕ್ಲಿನ್ನಾಂಬರಾ ವಿವೃತಗಾತ್ರಕುಚೋರುಮಧ್ಯಾಃ ।
ಔತ್ಸುಕ್ಯಮುಕ್ತಕಬರಾಚ್ಚ್ಯವಮಾನಮಾಲ್ಯಾಃ
ಕ್ಷೋಭಂ ದಧುರ್ಮಲಧಿಯಾಂ ರುಚಿರೈರ್ವಿಹಾರೈಃ ॥ ೧೭ ॥

ಸ ಸಮ್ರಾಡ್ ರಥಮಾರೂಢಃ ಸದಶ್ವಂ ರುಕ್ಮಮಾಲಿನಮ್ ।
ವ್ಯರೋಚತ ಸ್ವಪತ್ನೀಭಿಃ ಕ್ರಿಯಾಭಿಃ ಕ್ರತುರಾಡಿವ ॥ ೧೮ ॥

ಪತ್ನೀಸಂಯಾಜಾವಭೃಥ್ಯೈಶ್ಚರಿತ್ವಾ ತೇ ತಮೃತ್ವಿಜಃ ।
ಆಚಾಂತಂ ಸ್ನಾಪಯಾಂಚಕ್ರುರ್ಗಂಗಾಯಾಂ ಸಹ ಕೃಷ್ಣಯಾ ॥ ೧೯ ॥

ದೇವದುಂದುಭಯೋ ನೇದುರ್ನರದುಂದುಭಿಭಿಃ ಸಮಮ್ ।
ಮುಮುಚುಃ ಪುಷ್ಪವರ್ಷಾಣಿ ದೇವರ್ಷಿಪಿತೃಮಾನವಾಃ ॥ ೨೦ ॥

ಸಸ್ನುಸ್ತತ್ರ ತತಃ ಸರ್ವೇ ವರ್ಣಾಶ್ರಮಯುತಾ ನರಾಃ ।
ಮಹಾಪಾತಕ್ಯಪಿ ಯತಃ ಸದ್ಯೋ ಮುಚ್ಯೇತ ಕಿಲ್ಬಿಷಾತ್ ॥ ೨೧ ॥

ಅಥ ರಾಜಾಽಹತೇ ಕ್ಷೌಮೇ ಪರಿಧಾಯ ಸ್ವಲಂಕೃತಃ ।
ಋತ್ವಿಕ್ಸದಸ್ಯವಿಪ್ರಾದೀನಾನರ್ಚಾಭರಣಾಂಬರೈಃ ॥ ೨೨ ॥

ಬಂಧುಜ್ಞಾತಿನೃಪಾನ್ಮಿತ್ರಸುಹೃದೋಽನ್ಯಾಂಶ್ಚ ಸರ್ವಶಃ ।
ಅಭೀಕ್ಷ್ಣಂ ಪೂಜಯಾಮಾಸ ನಾರಾಯಣಪರೋ ನೃಪಃ ॥ ೨೩ ॥

ಸರ್ವೇ ಜನಾಃ ಸುರರುಚೋ ಮಣಿಕುಂಡಲಸ್ರ-
ಗುಷ್ಣೀಷಕಂಚುಕದುಕೂಲಮಹಾರ್ಘ್ಯಹಾರಾಃ ।
ನಾರ್ಯಶ್ಚ ಕುಂಡಲಯುಗಾಲಕವೃಂದ ಜುಷ್ಟ-
ವಕ್ತ್ರಶ್ರಿಯಃ ಕನಕಮೇಖಲಯಾ ವಿರೇಜುಃ ॥ ೨೪ ॥

ಮಗನಾದ ಶ್ರೀಕೃಷ್ಣ ಮತ್ತು ಅವನ ಸ್ನೇಹಿತರು ಆ ರಾಣಿಯರ ಮೇಲೆ ಓಕುಳಿಯನ್ನು ಚೆಲ್ಲುತ್ತಿದ್ದರು ಇದರಿಂದ ರಾಜಮಹಿಷಿಯರ ಮುಖವು ನಾಚಿಕೆಯಿಂದಲೂ, ಮಂದಹಾಸದಿಂದಲೂ ವಿಕಸಿತವಾಗಿ ಅತ್ಯಂತ ಶೋಭಾಯಮಾನವಾಗಿ ಕಾಣುತ್ತಿತ್ತು. ॥ ೧೬ ॥ ಹಾಗೆಯೇ ಪಲ್ಲಕ್ಕಿಗಳಲ್ಲಿ ಕುಳಿತಿದ್ದ ರಾಣಿಯರೂ ಕೂಡ ಭಾವಮೈದುನರ ಮೇಲೂ, ಸಖಿಯರ ಮೇಲೂ ಜೇಕೋಳವೆಯಿಂದ ಓಕುಳಿಯನ್ನು ಎರಚುತ್ತಿದ್ದರು. ಹೀಗೆ ಪರಸ್ಪರ ಓಕುಳಿಯ ಆಟವನ್ನಾಡುತ್ತಿದ್ದಾಗ ಸ್ತ್ರೀಯರ ಬಟ್ಟೆಗಳೆಲ್ಲವೂ ಒದ್ದೆಯಾಗಿದ್ದವು. ಆಟವಾಡುವ ಸಂಭ್ರಮದಲ್ಲಿ ಅವರ ಮುಡಿಗಳು ಸಡಿಲವಾಗಿ ಮುಡಿದ ಹೂವುಗಳು ನಕ್ಷತ್ರಗಳಂತೆ ಉದುರುತ್ತಿದ್ದವು. ಪರೀಕ್ಷಿತನೇ! ಅವರ ಇಂತಹ ಸುಂದರವಾದ ಮತ್ತು ಪವಿತ್ರವಾದ ವಿಹಾರವನ್ನು ಕಂಡು ಮಲಿನವಾದ ಅಂತಃಕರಣವುಳ್ಳ ಪುರುಷರ ಮನಸ್ಸು ಕ್ಷೋಭೆಗೊಂಡವು. ॥ ೧೭ ॥

ಚಕ್ರವರ್ತಿ ಮಹಾರಾಜ ಯುಧಿಷ್ಠಿರನು ದ್ರೌಪದಿಯೇ ಮೊದಲಾದ ತನ್ನ ಪತ್ನಿಯರೊಡನೆ ಸುಂದರವಾದ ಕುದುರೆಗಳನ್ನು ಹೂಡಲ್ಪಟ್ಟ ಸುವರ್ಣಮಾಲೆಗಳಿಂದ ಸಮಲಂಕೃತವಾದ ದಿವ್ಯರಥದಲ್ಲಿ ಕುಳಿತು ಪ್ರಯಾಜವೇ ಮೊದಲಾದ ಯಜ್ಞಕ್ರಿಯೆಗಳಿಂದ ಕೂಡಿ ಮೂರ್ತಿವತ್ತಾಗಿ ಆವಿರ್ಭವಿಸಿದ ರಾಜಸೂಯ ಯಜ್ಞದಂತೆಯೇ ಪ್ರಕಾಶಿಸಿದನು. ॥ ೧೮ ॥ ಅನಂತರ ಋತ್ವಿಜರು ಪತ್ನೀಸಂಯಾಜ (ಒಂದು ಯಜ್ಞಕ್ರಿಯೆ)ವೆಂಬ ವಿಶೇಷಯಾಗವನ್ನೂ ಮತ್ತು ಯಜ್ಞಾಂತ-ಸ್ನಾನದ ಸಂಬಂಧವಾದ ಕರ್ಮಗಳನ್ನು ಯುಧಿಷ್ಠಿರನಿಂದ ಮಾಡಿಸಿ, ಅವನಿಂದ ಶುದ್ಧಾಚಮನ ಮಾಡಿಸಿದನಂತರ ದ್ರೌಪದಿಯೊಡನೆ ಗಂಗಾಸ್ನಾನವನ್ನು ಮಾಡಿಸಿದರು. ॥ ೧೯ ॥ ಆ ಸಮಯದಲ್ಲಿ ನುಡಿಸಿದ ದುಂದುಭಿಗಳೊಡನೆ ದೇವದುಂದುಭಿಗಳೂ ಮೊಳಗಿದವು. ದೇವರ್ಷಿ-ಪಿತೃ-ಮನುಷ್ಯರು ಧರ್ಮರಾಜನ ಮೇಲೆ ಪುಷ್ಪವೃಷ್ಟಿಯನ್ನು ಸುರಿಸಿದರು. ॥ ೨೦ ॥ ಮಹಾರಾಜ ಯುಧಿಷ್ಠಿರನು ದ್ರೌಪದಿಯೊಡನೆ ಅವಭೃತ ಸ್ನಾನಮಾಡಿದನಂತರ ಇತರ ಸಮಸ್ತ ವರ್ಣದವರೂ ಗಂಗೆಯಲ್ಲಿ ಸ್ನಾನಮಾಡಿದರು. ಈ ಪವಿತ್ರಸ್ನಾನದಿಂದ ಮಹಾಪಾತಕಿಯಾದರೂ ತನ್ನ ಪಾಪಗಳಿಂದ ಕ್ಷಣದಲ್ಲೇ ಮುಕ್ತನಾಗಿ ಹೋಗುತ್ತಾನೆ. ॥ ೨೧ ॥ ಬಳಿಕ ಯುಧಿಷ್ಠಿರನು ನವೀನ ರೇಷ್ಮೆಯ ಪಂಚೆ-ಉತ್ತರೀಯವನ್ನು ಧರಿಸಿಕೊಂಡು ವಿಧ-ವಿಧವಾದ ಆಭರಣಗಳಿಂದ ಅಲಂಕೃತನಾದನು. ಮತ್ತೆ ಋತ್ವಿಜರಿಗೆ, ಸದಸ್ಯರಿಗೆ, ಬ್ರಾಹ್ಮಣರಿಗೆ ವಸ್ತ್ರಾಭೂಷಣಗಳನ್ನು ಕೊಟ್ಟು ಸತ್ಕರಿಸಿದನು. ॥ ೨೨ ॥ ನಾರಾಯಣಪರಾಯಣನೂ, ಎಲ್ಲರಲ್ಲಿಯೂ ಭಗವಂತನನ್ನೇ ಕಾಣುವವನೂ, ಶ್ರೀಕೃಷ್ಣನ ಪರಮಭಕ್ತನೂ ಆದ ಯುಧಿಷ್ಠಿರನು ಬಂಧುಗಳನ್ನೂ, ಜ್ಞಾತಿಗಳನ್ನೂ, ರಾಜರನ್ನೂ, ಸುಹೃದರನ್ನೂ, ಸಮಸ್ತರನ್ನೂ ಪುನಃ ಪುನಃ ಪೂಜಿಸಿ ಸತ್ಕರಿಸಿದನು. ॥ ೨೩ ॥ ಆ ಸಮಯದಲ್ಲಿ ಸಮಸ್ತ ಜನರೂ ರತ್ನಕುಂಡಲಗಳಿಂದಲೂ, ಪುಷ್ಪಹಾರಗಳಿಂದಲೂ, ರುಮಾಲುಗಳಿಂದಲೂ, ಕವಚಗಳಿಂದಲೂ, ಪಟ್ಟೆವಸ್ತ್ರಗಳಿಂದಲೂ, ಬಹುಮೂಲ್ಯ ರತ್ನಹಾರಗಳಿಂದಲೂ ಸಮಲಂಕೃತರಾಗಿ ದೇವತೆಗಳಂತೆ

ಅಥರ್ತ್ವಿಜೋ ಮಹಾಶೀಲಾಃ ಸದಸ್ಯಾ ಬ್ರಹ್ಮವಾದಿನಃ ।
ಬ್ರಹ್ಮಕ್ಷತ್ರಿಯವಿಟ್ಶೂದ್ರಾ ರಾಜಾನೋ ಯೇ ಸಮಾಗತಾಃ ॥ ೨೫ ॥

ದೇವರ್ಷಿಪಿತೃಭೂತಾನಿ ಲೋಕಪಾಲಾಃ ಸಹಾನುಗಾಃ ।
ಪೂಜಿತಾಸ್ತಮನುಜ್ಞಾಪ್ಯ ಸ್ಥಾನಾನಿ ಯಯುರ್ನೃಪ ॥ ೨೬ ॥

ಹರಿದಾಸಸ್ಯ ರಾಜರ್ಷೇ ರಾಜಸೂಯಮಹೋದಯಮ್ ।
ನೈವಾತೃಪ್ಯನ್ ಪ್ರಶಂಸಂತಃ ಪಿಬನ್ಮರ್ತ್ಯೋಽಮೃತಂ ಯಥಾ ॥ ೨೭ ॥

ತತೋ ಯುಧಿಷ್ಠಿರೋ ರಾಜಾ ಸುಹೃತ್ಸಂಬಂಧಿ ಬಾಂಧವಾನ್ ।
ಪ್ರೇಮ್ಣಾ ನಿವಾಸಯಾಮಾಸ ಕೃಷ್ಣಂ ಚ ತ್ಯಾಗಕಾತರಃ ॥ ೨೮ ॥

ಭಗವಾನಪಿ ತತ್ರಾಂಗ ನ್ಯವಾತ್ಸೀತ್ತತ್ಪ್ರಿಯಂಕರಃ ।
ಪ್ರಸ್ಥಾಪ್ಯ ಯದುವೀರಾಂಶ್ಚ ಸಾಂಬಾದೀಂಶ್ಚ ಕುಶಸ್ಥಲೀಮ್ ॥ ೨೯ ॥

ಇತ್ಥಂ ರಾಜಾ ಧರ್ಮಸುತೋ ಮನೋರಥಮಹಾರ್ಣವಮ್ ।
ಸುದುಸ್ತರಂ ಸಮುತ್ತೀರ್ಯ ಕೃಷ್ಣೇನಾಸೀದ್ಗತಜ್ವರಃ ॥ ೩೦ ॥

ಏಕದಾಂತಃಪುರೇ ತಸ್ಯ ವೀಕ್ಷ್ಯ ದುರ್ಯೋಧನಃ ಶ್ರಿಯಮ್ ।
ಅತಪ್ಯದ್ರಾಜಸೂಯಸ್ಯ ಮಹಿತ್ವಂ ಚಾಚ್ಯುತಾತ್ಮನಃ ॥ ೩೦ ॥

ಯಸ್ಮಿನ್ ನರೇಂದ್ರದಿತಿಜೇಂದ್ರಸುರೇಂದ್ರಲಕ್ಷ್ಮೀ-
ರ್ನಾನಾ ವಿಭಾಂತಿ ಕಿಲ ವಿಶ್ವಸೃಜೋಪಕ್ಲೃಪ್ತಾಃ ।
ತಾಭಿಃ ಪತೀಂದ್ರುಪದರಾಜಸುತೋಪತಸ್ಥೇ
ಯಸ್ಯಾಂ ವಿಷಕ್ತಹೃದಯಃ ಕುರುರಾಡತಪ್ಯತ್ ॥ ೩೨ ॥

ಶೋಭಿಸುತ್ತಿದ್ದರು. ಸ್ತ್ರೀಯರೂ ಕೂಡ ಥಳ-ಥಳಿಸುವ ಓಲೆಗಳನ್ನು ಧರಿಸಿ, ಗುಂಗುರು ಕೂದಲುಗಳಿಂದ ಅಲಂಕೃತವಾದ ಮುಖ ಕಮಲಗಳಿಂದಲೂ, ಸುವರ್ಣಮಯವಾದ ಸೊಂಟಪಟ್ಟಿಯಿಂದಲೂ ಕೂಡಿ ಅತ್ಯಂತ ಶೋಭಾಯಮಾನರಾಗಿ ಕಾಣುತ್ತಿದ್ದರು. ॥ ೨೪ ॥

ಪರೀಕ್ಷಿತನೇ! ರಾಜಸೂಯ ಯಜ್ಞಕ್ಕೆ ಆಗಮಿಸಿದ್ದ ಶೀಲವಂತರಾದ ಋತ್ವಿಜರು, ವೇದಪಾಠಿಗಳಾದ ಸದಸ್ಯರು, ಬ್ರಾಹ್ಮಣ ಕ್ಷತ್ರಿಯ-ವೈಶ್ಯ-ಶೂದ್ರರು, ರಾಜರು, ದೇವತೆಗಳು, ಋಷಿಗಳು, ಮುನಿಗಳು, ಪಿತೃದೇವತೆಗಳು, ಇತರ ಪ್ರಾಣಿಗಳೂ ತಮ್ಮ-ತಮ್ಮ ಅನುಯಾಯಿಗಳೊಂದಿಗೆ ಆಗಮಿಸಿದ್ದ ಲೋಕಪಾಲರು - ಇವರೆಲ್ಲರನ್ನೂ ಧರ್ಮರಾಜನಾದ ಯುಧಿಷ್ಠಿರನು ಯಥೋಚಿತವಾಗಿ ಪೂಜಿಸಿ ಸತ್ಕರಿಸಿದನು. ಅನಂತರ ಅವರೆಲ್ಲರೂ ರಾಜನ ಅನುಮತಿಯನ್ನು ಪಡೆದು ತಮ್ಮ-ತಮ್ಮ ನಿವಾಸಸ್ಥಾನಗಳಿಗೆ ಹೊರಟು ಹೋದರು. ॥ ೨೫-೨೬ ॥ ಪರೀಕ್ಷಿದ್ರಾಜನೇ! ಅಮೃತಪಾನ ಮಾಡುತ್ತಾ-ಮಾಡುತ್ತಾ ಮನುಷ್ಯನು ತೃಪ್ತನಾಗದಿರುವಂತೆಯೇ ಹರಿದಾಸನಾದ, ರಾಜರ್ಷಿಯಾದ ಯುಧಿಷ್ಠಿರನ ರಾಜಸೂಯ ಯಾಗವನ್ನು ಎಷ್ಟು ಹೊಗಳಿದರೂ ಜನರಿಗೆ ತೃಪ್ತಿಯೇ ಆಗುತ್ತಿರಲಿಲ್ಲ. ॥ ೨೭ ॥ ಬಳಿಕ ಯುಧಿಷ್ಠಿರನು ಪ್ರಯಾಣ ಹೊರಟಿದ್ದ ತನ್ನ ಸುಹೃದರನ್ನು ನೆಂಟರಿಷ್ಟರನ್ನು, ಬಂಧುಗಳನ್ನು ಮತ್ತು ಶ್ರೀಕೃಷ್ಣನನ್ನು ಅವರ ವಿಯೋಗವನ್ನು ಸಹಿಸಿಕೊಳ್ಳಲಾರದೆ ಪ್ರೇಮದಿಂದ ಅವರೆಲ್ಲರನ್ನೂ ತಡೆಹಿಡಿದು ಇರಿಸಿಕೊಂಡನು. ॥ ೨೮ ॥ ಪರೀಕ್ಷಿತನೇ! ಭಗವಾನ್ ಶ್ರೀಕೃಷ್ಣನು ಯದುವಂಶದ ವೀರರಾದ ಸಾಂಬನೇ ಮೊದಲಾದವರನ್ನು ದ್ವಾರಕೆಗೆ ಕಳಿಸಿಕೊಟ್ಟು, ತಾನು ಯುಧಿಷ್ಠಿರರಾಜನ ಅಭಿಲಾಷೆಯನ್ನು ಪೂರ್ಣಗೊಳಿಸಲಿಕ್ಕಾಗಿ, ಅವನಿಗೆ ಆನಂದವನ್ನುಂಟುಮಾಡುವುದಕ್ಕಾಗಿ ಸ್ವಲ್ಪಕಾಲ ಅಲ್ಲೇ ಇರಲು ಬಯಸಿದನು. ॥ ೨೯ ॥ ಹೀಗೆ ಧರ್ಮನಂದನನಾದ ಯುಧಿಷ್ಠಿರನು ದಾಟಲು ಅತ್ಯಂತ ದುಸ್ತರವಾಗಿದ್ದ ಮನೋರಥವೆಂಬ ಮಹಾಸಮುದ್ರವನ್ನು ಭಗವಾನ್ ಶ್ರೀಕೃಷ್ಣನ ಕೃಪಾವಿಶೇಷದಿಂದ ಸುಲಭವಾಗಿ ದಾಟಿ ನಿಶ್ಚಿಂತನಾದನು. ॥ ೩೦ ॥

ಹಾಗೆ ಉಳಿದುಕೊಂಡವರಲ್ಲಿ ದುರ್ಯೋಧನನು ಒಬ್ಬನು. ಒಂದು ದಿನ ಭಗವಂತನ ಪರಮಪ್ರೇಮಿ ಯುಧಿಷ್ಠಿರ ರಾಜನ ಅಂತಃಪುರದ ಸೌಂದರ್ಯ - ಸಂಪತ್ತನ್ನೂ, ರಾಜಸೂಯಯಜ್ಞದಿಂದ ಪ್ರಾಪ್ತವಾದ ಮಹತ್ವವನ್ನು ನೋಡಿದ ದುರ್ಯೋಧನನ ಮನಸ್ಸು ಮತ್ಸರದಿಂದ ಕುದಿಯಲು ತೊಡಗಿತು. ॥ ೩೦ ॥ ಪರೀಕ್ಷಿತನೇ! ಪಾಂಡವರಿಗಾಗಿ ಮಯನಿಂದ ನಿರ್ಮಿಸಿಕೊಟ್ಟಿದ್ದ ಆ ಸಭಾಭವನದಲ್ಲಿ ನರೇಂದ್ರರ, ದೈತ್ಯೇಂದ್ರರ ಮತ್ತು ಸುರೇಂದ್ರರ ವೈಭವವು ಎದ್ದು ಕಾಣುತ್ತಿತ್ತು. ನಾನಾ ಪ್ರಕಾರದ ಭೋಗಸಾಮಗ್ರಿಗಳು ಆ ಸಭಾಭವನದಲ್ಲಿದ್ದು, ಅವುಗಳ ಮೂಲಕ ದ್ರೌಪದಿಯು ತನ್ನ ಪತಿಗಳ ಸೇವೆ ಮಾಡುತ್ತಿದ್ದಳು. ಅಂತಹ ರಾಜಭವನದಲ್ಲಿ ಆ ದಿನಗಳಲ್ಲಿ ಶ್ರೀಕೃಷ್ಣನ ಸಾವಿರಾರು ರಾಣಿಯರು ವಾಸಿಸುತ್ತಿದ್ದರು. ಅವರು ನಿತಂಬಗಳ ಭಾರದಿಂದ ನಿಧಾನವಾಗಿ ನಡೆಯುತ್ತಿದ್ದರು. ಆಗ ಅವರ ಕಾಲ್ಗೆಜ್ಜೆಗಳ ಝಣ-ಝಣ ನಿನಾದವು ಎಲ್ಲೆಡೆ ವ್ಯಾಪಿಸಿತ್ತು. ಸುಂದರವಾದ ಕಟಿಭಾಗವುಳ್ಳ ಅವರು ಧರಿಸಿದ್ದ ಬಿಳಿಯ ಮುತ್ತಿನ ಹಾರಗಳು ಕುಚಗಳಿಗೆ ಲೇಪಿತವಾದ ಕುಂಕುಮ

ಯಸ್ಮಿಂಸ್ತದಾ ಮಧುಪತೇರ್ಮಹಿಷೀಸಹಸ್ರಂ
ಶ್ರೋಣೀಭರೇಣ ಶನಕೈಃ ಕ್ವಣದಂಘ್ರಿಶೋಭಮ್ ।
ಮಧ್ಯೇ ಸುಚಾರು ಕುಚಕುಂಕುಮಶೋಣಹಾರಂ
ಶ್ರೀಮನ್ಮುಖಂ ಪ್ರಚಲಕುಂಡಲಕುಂತಲಾಢ್ಯಮ್ ॥ ೩೩ ॥

ಸಭಾಯಾಂ ಮಯಕ್ಲೃಪ್ತಾಯಾಂ ಕ್ವಾಪಿ ಧರ್ಮಸುತೋಽಧಿರಾಟ್ ।
ವೃತೋಽನುಜೈರ್ಬಂಧುಭಿಶ್ಚ ಕೃಷ್ಣೇನಾಪಿ ಸ್ವಚಕ್ಷುಷಾ ॥ ೩೪ ॥

ಆಸೀನಃ ಕಾಂಚನೇ ಸಾಕ್ಷಾದಾಸನೇ ಮಘವಾನಿವ ।
ಪಾರಮೇಷ್ಠ್ಯಶ್ರಿಯಾ ಜುಷ್ಟಃ ಸ್ತೂಯಮಾನಶ್ಚ ವಂದಿಭಿಃ ॥ ೩೫ ॥

ತತ್ರ ದುರ್ಯೋಧನೋ ಮಾನೀ ಪರೀತೋ ಭ್ರಾತೃಭಿರ್ನೃಪ ।
ಕಿರೀಟಮಾಲೀ ನ್ಯವಿಶದಸಿಹಸ್ತಃ ಕ್ಷಿಪನ್ರುಷಾ ॥ ೩೬ ॥

ಸ್ಥಲೇಽಭ್ಯಗೃಹ್ಣಾದ್ವಸ್ತ್ರಾಂತಂ ಜಲಂ ಮತ್ವಾ ಸ್ಥಲೇಽಪತತ್ ।
ಜಲೇ ಚ ಸ್ಥಲವದ್ಭ್ರಾಂತ್ಯಾ ಮಯಮಾಯಾವಿಮೋಹಿತಃ ॥ ೩೭ ॥

ಜಹಾಸ ಭೀಮಸ್ತಂ ದೃಷ್ಟ್ವಾ ಸ್ತ್ರಿಯೋ ನೃಪತಯೋಽಪರೇ ।
ನಿವಾರ್ಯಮಾಣಾ ಅಪ್ಯಂಗ ರಾಜ್ಞಾ ಕೃಷ್ಣಾನುಮೋದಿತಾಃ ॥ ೩೮ ॥

ಸ ವ್ರೀಡಿತೋಽವಾಗ್ವದನೋ ರುಷಾ ಜ್ವಲನ್
ನಿಷ್ಕ್ರಮ್ಯ ತೂಷ್ಣೀಂ ಪ್ರಯಯೌ ಗಜಾಹ್ವಯಮ್ ।
ಹಾಹೇತಿ ಶಬ್ದಃ ಸುಮಹಾನಭೂತ್ಸತಾ-
ಮಜಾತಶತ್ರುರ್ವಿಮನಾ ಇವಾಭವತ್ ।
ಬಭೂವ ತೂಷ್ಣೀಂ ಭಗವಾನ್ಭುವೋ ಭರಂ
ಸಮುಜ್ಜಿಹೀರ್ಷುರ್ಭ್ರಮತಿ ಸ್ಮ ಯದ್ದೃಶಾ ॥ ೩೯ ॥

ಏತತ್ತೇಽಭಿಹಿತಂ ರಾಜನ್ ಯತ್ಪೃಷ್ಟೋಽಹಮಿಹ ತ್ವಯಾ ।
ಸುಯೋಧನಸ್ಯ ದೌರಾತ್ಮ್ಯಂ ರಾಜಸೂಯೇ ಮಹಾಕ್ರತೌ ॥ ೪೦ ॥

ಕೇಸರಿಯಿಂದಾಗಿ ಕೆಂಪಾಗಿ ಹೊಳೆಯುತ್ತಿದ್ದುವು. ಕುಂಡಲಗಳು ಮತ್ತು ಮುಂಗುರುಳುಗಳ ನಲಿದಾಟದಿಂದ ಅವರ ಮುಖದ ಶೋಭೆಯು ಇನ್ನೂ ಹೆಚ್ಚಾಗುತ್ತಿತ್ತು. ಇಂತಹ ವೈಭವವನ್ನು ಕಂಡ ದುರ್ಯೋಧನನು ಅಂತಹ ವೈಭವವು ತನಗಿಲ್ಲವಲ್ಲ ಎಂದು ಪರಿತಪಿಸಿದನು. ಪರೀಕ್ಷಿತನೇ! ನಿಜ ಹೇಳಬೇಕೆಂದರೆ, ದುರ್ಯೋಧನನ ಮನಸ್ಸು ದ್ರೌಪದಿಯಲ್ಲಿ ಆಸಕ್ತವಾಗಿದ್ದುದೇ ಅವನ ಸಂತಾಪಕ್ಕೆ ಮುಖ್ಯ ಕಾರಣವಾಗಿತ್ತು. ॥ ೩೨-೩೩ ॥

ಒಂದು ದಿನ ರಾಜಾಧಿರಾಜನಾದ ಯುಧಿಷ್ಠಿರ ಮಹಾರಾಜನು ತನ್ನ ಅನುಜರಿಂದಲೂ, ಸಂಬಂಧಿಗಳಿಂದಲೂ, ತನ್ನ ಕಣ್ಣಾಗಿಯೂ, ಪರಮಹಿತೈಷಿಯೂ ಆದ ಭಗವಾನ್ ಶ್ರೀಕೃಷ್ಣನೊಡನೆ ಮಯಸಭೆಯಲ್ಲಿ ಸ್ವರ್ಣ ಸಿಂಹಾಸನದಲ್ಲಿ ದೇವೇಂದ್ರನಂತೆ ವಿರಾಜಮಾನನಾಗಿದ್ದನು. ಅವನಲ್ಲಿದ್ದ ಭೋಗ-ಸಾಮಗ್ರಿಗಳೂ, ರಾಜ್ಯಲಕ್ಷ್ಮಿಯೂ ಬ್ರಹ್ಮನ ಐಶ್ವರ್ಯಕ್ಕೆ ಸಮಾನವಾಗಿತ್ತು. ವಂದೀಜನರು ಅವನನ್ನು ಸ್ತುತಿಸುತ್ತಿದ್ದರು. ॥ ೩೪-೩೫ ॥ ಅದೇ ಸಮಯಕ್ಕೆ ಅಭಿಮಾನಿಯಾದ ದುರ್ಯೋಧನನು ತನ್ನ ತಮ್ಮಂದಿರಾದ ದುಃಶಾಸನರೇ ಮೊದಲಾದವರೊಂದಿಗೆ ಅಲ್ಲಿಗೆ ಬಂದನು. ಅವನ ತಲೆಯಲ್ಲಿ ಕಿರೀಟ, ಕತ್ತಿನಲ್ಲಿ ಹಾರಗಳು, ಕೈಯಲ್ಲಿ ಖಡ್ಗವಿದ್ದು, ಅವನು ಕ್ರೋಧಗೊಂಡು ದ್ವಾರಪಾಲಕರನ್ನು ತಿರಸ್ಕರಿಸುತ್ತಾ ಪ್ರವೇಶಿಸಿದನು. ॥ ೩೬ ॥ ಆ ಸಭಾಭವನದಲ್ಲಿ ಮಯನು ನಿರ್ಮಿಸಿದ ಮಾಯೆಯಿಂದಾಗಿ ದುರ್ಯೋಧನನು ಮೋಹಿತನಾಗಿ ನೆಲವನ್ನು ಜಲವೆಂದೂ ಭ್ರಮಿಸಿ ತನ್ನ ಬಟ್ಟೆಗಳನ್ನು ಎತ್ತಿ ಹಿಡಿದನು ಹಾಗೂ ಜಲವನ್ನು ನೆಲವೆಂದು ತಿಳಿದು ಅದರಲ್ಲಿ ಬಿದ್ದುಬಿಟ್ಟನು. ॥ ೩೭ ॥ ಅವನು ಬಿದ್ದುದನ್ನು ನೋಡಿ ಭೀಮಸೇನ, ರಾಣಿಯರು ಹಾಗೂ ನೆರೆದಿದ್ದ ರಾಜರೆಲ್ಲರೂ ನಗತೊಡಗಿದರು. ಯುಧಿಷ್ಠಿರನು ನಗಬಾರದೆಂದು ತಡೆಯುತ್ತಿದ್ದರೂ, ಅವರಿಗೆ ಶ್ರೀಕೃಷ್ಣನ ಸಂಕೇತ-ಅನುಮೋದನೆಯೂ ದೊರಕಿತ್ತು. ॥ ೩೮ ॥ ಇದರಿಂದ ದುರ್ಯೋಧನನು ನಾಚಿಕೊಂಡು ಅವನ ರೋಮ ರೋಮಗಳೆಲ್ಲ ಕ್ರೋಧದಿಂದ ಉರಿಯತೊಡಗಿತು. ಅವನು ತಲೆತಗ್ಗಿಸಿಕೊಂಡು, ಏನನ್ನೂ ಮಾತನಾಡದೆ ಹಸ್ತಿನಾಪುರಕ್ಕೆ ಹೊರಟು ಹೋದನು. ಈ ಘಟನೆಯನ್ನು ನೋಡಿ ಸತ್ಪುರುಷರಲ್ಲಿ ಹಾಹಾಕಾರವೆದ್ದಿತು. ಧರ್ಮರಾಜ ಯುಧಿಷ್ಠಿರನ ಮನಸ್ಸು ಖಿನ್ನವಾಯಿತು. ಪರೀಕ್ಷಿತನೇ! ಇದೆಲ್ಲವೂ ನಡೆದರೂ ಶ್ರೀಕೃಷ್ಣನು ಸುಮ್ಮನಿದ್ದನು. ಯಾವುದೇ ಪ್ರಕಾರದಿಂದ ಭೂಭಾರವು ತಗ್ಗಬೇಕೆಂಬುದೇ ಅವನ ಇಚ್ಛೆಯಿತ್ತು. ನಿಜಹೇಳಬೇಕಾದರೆ ಅವನ ಮಾಯೆಯಿಂದಲೇ ದುರ್ಯೋಧನನಿಗೆ ಅಂತಹ ಭ್ರಮೆ ಉಂಟಾಗಿತ್ತು. ॥ ೩೯ ॥ ಪರೀಕ್ಷಿತನೇ! ಆ ಮಹಾರಾಜಸೂಯ ಯಜ್ಞದಲ್ಲಿ ದುರ್ಯೋಧನನಿಗೆ ಏಕೆ ಮತ್ಸರವುಂಟಾಗಿತ್ತು? ಎಂದು ನೀನು ಕೇಳಿದ್ದೆಯಲ್ಲ! ಅದೆಲ್ಲವನ್ನು ನಾನು ನಿನಗೆ ವಿಸ್ತಾರವಾಗಿ ತಿಳಿಸಿದ್ದೇನೆ. ॥ ೪೦ ॥

ಎಪ್ಪತ್ತೈದನೆಯ ಅಧ್ಯಾಯವು ಮುಗಿಯಿತು. ॥ ೭೫ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮಸ್ಕಂಧೇ ಉತ್ತರಾರ್ಧೇ
ದುರ್ಯೋಧನಮಾನಭಂಗೋ ನಾಮ ಪಂಚಸಪ್ತತಿತಮೋಽಧ್ಯಾಯಃ ॥ ೭೫ ॥

ಎಪ್ಪತ್ತಾರನೆಯ ಅಧ್ಯಾಯ

ಶಾಲ್ವನೊಡನೆ ಯಾದವರ ಯುದ್ಧ

ಶ್ರೀಶುಕ ಉವಾಚ

ಅಥಾನ್ಯದಪಿ ಕೃಷ್ಣಸ್ಯ ಶೃಣು ಕರ್ಮಾದ್ಭುತಂ ನೃಪ ।
ಕ್ರೀಡಾನರಶರೀರಸ್ಯ ಯಥಾ ಸೌಭಪತಿರ್ಹತಃ ॥ ೧ ॥

ಶಿಶುಪಾಲಸಖಃ ಶಾಲ್ವೋ ರುಕ್ಮಿಣ್ಯುದ್ವಾಹ ಆಗತಃ ।
ಯದುಭಿರ್ನಿರ್ಜಿತಃ ಸಂಖ್ಯೇ ಜರಾಸಂಧಾದಯಸ್ತಥಾ ॥ ೨ ॥

ಶಾಲ್ವಃ ಪ್ರತಿಜ್ಞಾಮಕರೋತ್ ಶೃಣ್ವತಾಂ ಸರ್ವಭೂಭುಜಾಮ್ ।
ಅಯಾದವೀಂ ಕ್ಷ್ಮಾಂ ಕರಿಷ್ಯೇ ಪೌರುಷಂ ಮಮ ಪಶ್ಯತ ॥ ೩ ॥

ಇತಿ ಮೂಢಃ ಪ್ರತಿಜ್ಞಾಯ ದೇವಂ ಪಶುಪತಿಂ ಪ್ರಭುಮ್ ।
ಆರಾಧಯಾಮಾಸ ನೃಪ ಪಾಂಸುಮುಷ್ಟಿಂ ಸಕೃದ್ಗ್ರಸನ್ ॥ ೪ ॥

ಸಂವತ್ಸರಾಂತೇ ಭಗವಾನಾಶುತೋಷ ಉಮಾಪತಿಃ ।
ವರೇಣಚ್ಛಂದಯಾಮಾಸ ಶಾಲ್ವಂ ಶರಣಮಾಗತಮ್ ॥ ೫ ॥

ದೇವಾಸುರಮನುಷ್ಯಾಣಾಂ ಗಂಧರ್ವೋರಗರಕ್ಷಸಾಮ್ ।
ಅಭೇದ್ಯಂ ಕಾಮಗಂ ವವ್ರೇ ಸ ಯಾನಂ ವೃಷ್ಣಿಭೀಷಣಮ್ ॥ ೬ ॥

ತಥೇತಿ ಗಿರಿಶಾದಿಷ್ಟೋ ಮಯಃ ಪರಪುರಂಜಯಃ ।
ಪುರಂ ನಿರ್ಮಾಯ ಶಾಲ್ವಾಯ ಪ್ರಾದಾತ್ಸೌಭಮಯಸ್ಮಯಮ್ ॥ ೭ ॥

ಸ ಲಬ್ಧ್ವಾ ಕಾಮಗಂ ಯಾನಂ ತಮೋಧಾಮ ದುರಾಸದಮ್ ।
ಯಯೌ ದ್ವಾರವತೀಂ ಶಾಲ್ವೋ ವೈರಂ ವೃಷ್ಣಿಕೃತಂ ಸ್ಮರನ್ ॥ ೮ ॥

ಶ್ರೀಶುಕಮಹಾಮುನಿಗಳು ಹೇಳಿದರು – ಎಲೈ ಪರೀಕ್ಷಿತನೇ! ಲೀಲಾಮಾನುಷ ವಿಗ್ರಹನಾದ ಭಗವಾನ್ ಶ್ರೀಕೃಷ್ಣನ ಮತ್ತೊಂದು ಅದ್ಭುತವಾದ ಚರಿತ್ರೆಯನ್ನು ಹೇಳುವೆನು; ಕೇಳು. ಇದರಲ್ಲಿ ಸೌಭವೆಂಬ ವಿಮಾನಕ್ಕೆ ಒಡೆಯನಾದ ಶಾಲ್ವನು ಶ್ರೀಕೃಷ್ಣನಿಂದ ಹೇಗೆ ಹತನಾದನೆಂಬುದನ್ನು ಹೇಳಲಾಗುವುದು. ॥ ೧ ॥ ಶಾಲ್ವನು ಶಿಶುಪಾಲನ ಸ್ನೇಹಿತನಾಗಿದ್ದು, ರುಕ್ಮಿಣಿಯ ವಿವಾಹದ ಸಂದರ್ಭದಲ್ಲಿ ಶಿಶುಪಾಲನ ದಿಬ್ಬಣದೊಂದಿಗೆ ಇವನೂ ಬಂದಿದ್ದನು. ಆ ಸಮಯದಲ್ಲಿ ಯಾದವವೀರರು ಯುದ್ಧದಲ್ಲಿ ಜರಾಸಂಧರೇ ಮೊದಲಾದವರೊಂದಿಗೆ ಶಾಲ್ವನನ್ನು ಗೆದ್ದುಕೊಂಡಿದ್ದರು. ॥ ೨ ॥ ಆ ದಿನ ಎಲ್ಲ ರಾಜರ ಮುಂದೆ ಶಾಲ್ವನು ಹೀಗೆ ಪ್ರತಿಜ್ಞೆಮಾಡಿದ್ದನು 'ನಾನು ಈ ಭೂಮಂಡಲವನ್ನು ಯಾದವರಿಂದ ರಹಿತವನ್ನಾಗಿ ಬಿಡುತ್ತೇನೆ. ಅಂತಹ ನನ್ನ ಪೌರುಷವನ್ನು ನೀವು ನೋಡುವಿರಂತೆ.' ॥ ೩ ॥ ಪರೀಕ್ಷಿತನೇ! ಮೂರ್ಖನಾದ ಶಾಲ್ವನು ಹೀಗೆ ಪ್ರತಿಜ್ಞೆಮಾಡಿ ದೇವಾಧಿದೇವನಾದ ಭಗವಾನ್ ಪಶುಪತಿಯ ಆರಾಧನೆಯನ್ನು ಪ್ರಾರಂಭಿಸಿದನು. ಅವನು ದಿನಕ್ಕೆ ಒಂದು ಮುಷ್ಟಿಯಷ್ಟು ಬೂದಿಯನ್ನು ಮಾತ್ರ ಸೇವಿಸುತ್ತಿದ್ದನು. ॥ ೪ ॥ ಉಮಾಪತಿಯಾದ ಶಿವನು ಬಹಳ ಬೇಗ ಸಂತುಷ್ಟನಾಗುವವನಾದರೂ ಶಾಲ್ವನ ಮನಸ್ಸಿನಲ್ಲಿದ್ದ ದುರಭಿಪ್ರಾಯವನ್ನು ಗ್ರಹಿಸಿ ಒಂದು ವರ್ಷದ ಮೇಲೆಯೇ ಪ್ರಸನ್ನನಾಗಿ ಶರಣಾಗತನಾದ ಶಾಲ್ವನಿಗೆ ವರವನ್ನು ಕೇಳಿಕೊಳ್ಳುವಂತೆ ಅನುಗ್ರಹಿಸಿದನು. ॥ ೫ ॥ ಆಗ ಶಾಲ್ವನು – ದೇವಾಸುರ-ಮನುಷ್ಯರಿಂದಲೂ, ಗಂಧರ್ವೋರಗ ರಾಕ್ಷಸರಿಂದಲೂ ಭೇದಿಸಲಾಗದ, ಇಚ್ಛೆಬಂದೆಡೆಗೆ ಹೋಗುವ, ವೃಷ್ಣಿವಂಶದವರಿಗೆ ಭಯವನ್ನುಂಟುಮಾಡುವ ವಿಮಾನವೊಂದನ್ನು ದಯಪಾಲಿಸುವಂತೆ ಪರಶಿವನಲ್ಲಿ ಕೇಳಿಕೊಂಡನು. ॥ ೬ ॥ ಹಾಗೆಯೇ ಆಗಲೆಂದು ಹೇಳಿ ಭಗವಾನ್ ಶಂಕರನು ಅಂತಹ ಅಪೂರ್ವವಾದ ವಿಮಾನವೊಂದನ್ನು ನಿರ್ಮಿಸಿಕೊಡುವಂತೆ ದಾನವ ಶಿಲ್ಪಿಯಾದ ಮಯಾಸುರನಿಗೆ ಆಜ್ಞಾಪಿಸಿದನು. ಶತ್ರು ಪಟ್ಟಣವನ್ನು ಜಯಿಸುವ ಸಾಮರ್ಥ್ಯವುಳ್ಳ ಮಯಾಸುರನು ಶಿವನ ಆಜ್ಞೆಯಂತೆ ಲೋಹಮಯವಾದ ಸೌಭವೆಂಬ ವಿಮಾನವನ್ನು ನಿರ್ಮಿಸಿ ಶಾಲ್ವನಿಗೆ ಕೊಟ್ಟನು. ॥ ೭ ॥ ಅದ್ಭುತವಾದ ನಗರದಂತೆ ಇದ್ದ ಆ ವಿಮಾನವು ಅಂಧಕಾರಮಯವಾಗಿತ್ತು. ಯಾರ ಕಣ್ಣಿಗೂ ಕಾಣಿಸುತ್ತಿರಲಿಲ್ಲ. ಆದುದರಿಂದ ಅದನ್ನು ಯಾರಿಂದಲೂ ಹಿಡಿಯಲಾಗುತ್ತಿರಲಿಲ್ಲ. ಅದು ನಡೆಸುವವನ ಇಚ್ಛೆಬಂದಲ್ಲಿಗೆ ಹೋಗುವ ಸಾಮರ್ಥ್ಯ ಹೊಂದಿತ್ತು. ಶಾಲ್ವನು ವೃಷ್ಣಿಗಳೊಡನೆ ಅಥವಾ ಶ್ರೀಕೃಷ್ಣನೊಡನೆ ತನಗಿದ್ದ ವೈರವನ್ನು ಪದೇ-ಪದೇ ಸ್ಮರಿಸಿಕೊಳ್ಳುತ್ತಾ ಸೌಭವಿಮಾನಾರೂಢನಾಗಿ ಸೈನ್ಯಸಮೇತನಾಗಿ ದ್ವಾರಕೆಯನ್ನು ಮುತ್ತಿದನು. ॥ ೮ ॥

ನಿರುದ್ಧ್ಯ ಸೇನಯಾ ಶಾಲ್ವೋ ಮಹತ್ಯಾ ಭರತರ್ಷಭ ।
ಪುರೀಂ ಬಭಂಜೋಪವನಾನ್ಯುದ್ಯಾನಾನಿ ಚ ಸರ್ವಶಃ ॥ ೯ ॥

ಸಗೋಪುರಾಣಿ ದ್ವಾರಾಣಿ ಪ್ರಾಸಾದಾಟ್ಟಾಲತೋಲಿಕಾಃ ।
ವಿಹಾರಾನ್ಸ ವಿಮಾನಾಗ್ರ್ಯಾನ್ನಿಪೇತುಃ ಶಸ್ತ್ರವೃಷ್ಟಯಃ ॥ ೧೦ ॥

ಶಿಲಾ ದ್ರುಮಾಶ್ಚಾಶನಯಃ ಸರ್ಪಾ ಆಸಾರಶರ್ಕರಾಃ ।
ಪ್ರಚಂಡಶ್ಚಕ್ರವಾತೋಽಭೂದ್ರಜಸಾಽಽಚ್ಛಾದಿತಾ ದಿಶಃ ॥ ೧೧ ॥

ಇತ್ಯರ್ದ್ಯಮಾನಾ ಸೌಭೇನ ಕೃಷ್ಣಸ್ಯ ನಗರೀ ಭೃಶಮ್ ।
ನಾಭ್ಯಪದ್ಯತ ಶಂ ರಾಜಂಸ್ತ್ರಿಪುರೇಣ ಯಥಾ ಮಹೀ ॥ ೧೨ ॥

ಪ್ರದ್ಯುಮ್ನೋ ಭಗವಾನ್ ವೀಕ್ಷ್ಯ ಬಾಧ್ಯಮಾನಾ ನಿಜಾಃ ಪ್ರಜಾಃ ।
ಮಾ ಭೈಷ್ಟೇತ್ಯಭ್ಯಧಾದ್ವೀರೋ ರಥಾರೂಢೋ ಮಹಾಯಶಾಃ ॥ ೧೩ ॥

ಸಾತ್ಯಕಿಶ್ಚಾರುದೇಷ್ಣಶ್ಚ ಸಾಂಬೋಽಕ್ರೂರಃ ಸಹಾನುಜಃ ।
ಹಾರ್ದಿಕ್ಯೋ ಭಾನುವಿಂದಶ್ಚ ಗದಶ್ಚ ಶುಕಸಾರಣೌ ॥ ೧೪ ॥

ಅಪರೇ ಚ ಮಹೇಷ್ವಾಸಾ ರಥಯೂಥಪಯೂಥಪಾಃ ।
ನಿರ್ಯಯುರ್ದಂಶಿತಾ ಗುಪ್ತಾ ರಥೇಭಾಶ್ವಪದಾತಿಭಿಃ ॥ ೧೫ ॥

ತತಃ ಪ್ರವವೃತೇ ಯುದ್ಧಂ ಶಾಲ್ವಾನಾಂ ಯದುಭಿಃ ಸಹ ।
ಯಥಾಸುರಾಣಾಂ ವಿಬುಧೈಸ್ತುಮುಲಂ ಲೋಮಹರ್ಷಣಮ್ ॥ ೧೬ ॥

ತಾಶ್ಚ ಸೌಭಪತೇರ್ಮಾಯಾ ದಿವ್ಯಾಸ್ತ್ರೈ ರುಕ್ಮಿಣೀಸುತಃ ।
ಕ್ಷಣೇನ ನಾಶಯಾಮಾಸ ನೈಶಂ ತಮ ಇವೋಷ್ಣಗುಃ ॥ ೧೭ ॥

ವಿವ್ಯಾಧ ಪಂಚವಿಂಶತ್ಯಾ ಸ್ವರ್ಣಪುಂಖೈರಯೋಮುಖೈಃ ।
ಶಾಲ್ವಸ್ಯ ಧ್ವಜಿನೀಪಾಲಂ ಶರೈಃ ಸನ್ನತಪರ್ವಭಿಃ ॥ ೧೮ ॥

ಶತೇನಾತಾಡಯಚ್ಛಾಲ್ವಮೇಕೈಕೇನಾಸ್ಯ ಸೈನಿಕಾನ್ ।
ದಶಭಿರ್ದಶಭಿರ್ನೇತೄನ್ ವಾಹನಾನಿ ತ್ರಿಭಿಸ್ತ್ರಿಭಿಃ ॥ ೧೯ ॥

ತದದ್ಭುತಂ ಮಹತ್ಕರ್ಮ ಪ್ರದ್ಯುಮ್ನಸ್ಯ ಮಹಾತ್ಮನಃ ।
ದೃಷ್ಟ್ವಾ ತಂ ಪೂಜಯಾಮಾಸುಃ ಸರ್ವೇ ಸ್ವಪರಸೈನಿಕಾಃ ॥ ೨೦ ॥

ಪರೀಕ್ಷಿತನೇ! ಸೇನಾಸಮೇತನಾಗಿದ್ದ ಶಾಲ್ವನು ದ್ವಾರಕೆಯನ್ನು ನಾಲ್ಕು ದಿಕ್ಕುಗಳಿಂದಲೂ ಮುತ್ತಿಗೆ ಹಾಕಿ, ಫಲ-ಪುಷ್ಪಗಳಿಂದ ತುಂಬಿದ್ದ ಉಪವನಗಳನ್ನು, ಉದ್ಯಾನಗಳನ್ನು, ಧ್ವಂಸಮಾಡಿದನು. ಹಾಗೆಯೇ ನಗರದ್ವಾರಗಳನ್ನು, ಪ್ರಾಕಾರಗಳನ್ನು, ಉಪ್ಪರಿಗೆಯ ಸೌಧಗಳನ್ನು, ರಾಜಭವನಗಳನ್ನು, ಕ್ರೀಡಾಸ್ಥಳಗಳನ್ನು ನಾಶಮಾಡ ತೊಡಗಿದನು. ಶಾಲ್ವನು ಸೌಭವಿಮಾನದ ಅಗ್ರಭಾಗದಿಂದ ಶಸ್ತ್ರಾಸ್ತ್ರಗಳ ಮಳೆಯನ್ನೇ ಸುರಿಸಿದನು. ॥ ೯-೧೦ ॥ ಅಷ್ಟೇ ಅಲ್ಲದೆ ಆ ವಿಮಾನದಿಂದ ದೊಡ್ಡ-ದೊಡ್ಡ ಬಂಡೆಗಳು, ಮರಗಳು ಸರ್ಪಗಳ ವೃಷ್ಟಿಯೇ ಆಗುತ್ತಿತ್ತು. ಸಿಡಿಲು ಬಡಿದು, ಆಲಿಕಲ್ಲಿನ ಮಳೆಗರೆಯುತ್ತಿತ್ತು. ಪ್ರಚಂಡವಾದ ಸುಂಟರಗಾಳಿ ಎದ್ದು ದ್ವಾರಕೆಯ ಎಲ್ಲೆಡೆ ಧೂಳನ್ನು ತುಂಬಿಬಿಟ್ಟಿತು. ॥ ೧೧ ॥ ಪರೀಕ್ಷಿತನೇ! ಹಿಂದೆ ತ್ರಿಪುರಾಸುರನಿಂದ ಭೂಮಿಯು ಕ್ಷೋಭೆಗೊಂಡಂತೆ ಶಾಲ್ವನ ವಿಮಾನದಿಂದ ಪೀಡಿಸಲ್ಪಡುತ್ತಿದ್ದ ಶ್ರೀಕೃಷ್ಣನ ದ್ವಾರಕಾಪಟ್ಟಣವು ಆಗ ಸ್ವಲ್ಪವಾದರೂ ಸುಖವನ್ನು ಕಾಣದೆ, ಪ್ರಜೆಗಳು ತತ್ತರಿಸಿ ಹೋದರು. ॥ ೧೨ ॥ (ಆ ಸಮಯದಲ್ಲಿ ಶ್ರೀಕೃಷ್ಣನು ದ್ವಾರಕೆಯಲ್ಲಿರಲಿಲ್ಲ) ಆಗ ಶ್ರೀಕೃಷ್ಣನ ಮಗನಾದ ಪರಮಯಶಸ್ವೀ ವೀರಪ್ರದ್ಯುಮ್ನನು – ತನ್ನ ಪ್ರಜೆಗಳೆಲ್ಲರೂ ಕಷ್ಟಪಡುತ್ತಿರುವುದನ್ನು ಕಂಡು – 'ಹೆದರಬೇಡಿರಿ' ಎಂದು ಅವರಿಗೆ ಧೈರ್ಯತುಂಬಿ ರಥಾರೂಢನಾಗಿ ಯುದ್ಧಕ್ಕೆ ಹೊರಟೇಬಿಟ್ಟನು. ॥ ೧೩ ॥ ಅವನನ್ನು ಅನುಸರಿಸುತ್ತಾ ಸಾತ್ಯಕಿ, ಚಾರುದೇಷ್ಣ, ಸಾಂಬ, ತಮ್ಮಂದಿರೊಡನೆ ಅಕ್ರೂರ, ಕೃತವರ್ಮ, ಭಾನುವಿಂದ, ಗದ, ಶುಕ, ಸಾರಣ ಮೊದಲಾದ ಮಹಾರಥಿಗಳಾದ ಅನೇಕ ಮಹಾ-ಮಹಾವೀರರು ಕವಚಗಳನ್ನು ತೊಟ್ಟು, ಧನುಷ್ಪಾಣಿಯಾಗಿ ಹೊರಟರು. ಅವರೊಂದಿಗೆ ಅಸಂಖ್ಯಾತ ರಥ, ಗಜ, ಅಶ್ವ ಮತ್ತು ಪದಾತಿಗಳೆಂಬ ಚತುರಂಗ ಸೇನೆಯು ಹೊರಟಿತು. ॥ ೧೪-೧೫ ॥ ಹಿಂದಿನ ಕಾಲದಲ್ಲಿ ದೇವತೆಗಳೊಂದಿಗೆ ಅಸುರರ ತುಮುಲಯುದ್ಧವಾದಂತೆಯೇ ಶಾಲ್ವನ ಸೈನಿಕರೊಡನೆ ಯಾದವವೀರರ ಯುದ್ಧವು ಪ್ರಾರಂಭಗೊಂಡಿತು. ಆ ಅದ್ಭುತಯುದ್ಧವನ್ನು ನೋಡಿದವರ ರೋಮಗಳು ನಿಮಿರಿನಿಂತಿರುತ್ತಿದ್ದುವು. ॥ ೧೬ ॥ ಸೂರ್ಯನು ತನ್ನ ಪ್ರಖರವಾದ ಕಿರಣಗಳಿಂದ ಕತ್ತಲೆಯನ್ನು ಓಡಿಸಿಹಾಕುವಂತೆ ವೀರವರನಾದ ಪ್ರದ್ಯುಮ್ನನು ತನ್ನ ದಿವ್ಯ ಅಸ್ತ್ರಗಳಿಂದ ಕ್ಷಣದಲ್ಲಿ ಸೌಭಪತಿ ಶಾಲ್ವನ ಮಾಯೆಯೆಲ್ಲವನ್ನೂ ಕತ್ತರಿಸಿ ಹಾಕಿದನು. ॥ ೧೭ ॥ ಸುವರ್ಣಮಯವಾದ ರೆಕ್ಕೆಗಳನ್ನು ಹೊಂದಿದ ಲೋಹದ ಅಗ್ರಭಾಗವುಳ್ಳ ಇಪ್ಪತ್ತೈದು ಬಾಣಗಳಿಂದ ಪ್ರದ್ಯುಮ್ನನು ಶಾಲ್ವನ ಸೇನಾಪತಿಯನ್ನು ಘಾಸಿಗೊಳಿಸಿದನು. ॥ ೧೮ ॥ ಮಹಾವೀರನಾದ ಪ್ರದ್ಯುಮ್ನನು ಪುನಃ ಶಾಲ್ವನನ್ನು ನೂರು ಬಾಣಗಳಿಂದಲೂ, ಒಟ್ಟೊಟ್ಟು ಸೈನಿಕರನ್ನು ಒಂದೊಂದು ಬಾಣದಿಂದಲೂ ಸಾರಥಿಗಳನ್ನು ಹತ್ತತ್ತು ಬಾಣಗಳಿಂದಲೂ, ವಾಹನಗಳನ್ನು ಮೂರು-ಮೂರು ಬಾಣಗಳಿಂದ ಪ್ರಹರಿಸಿ ಗಾಯಗೊಳಿಸಿದನು. ॥ ೧೯ ॥ ಮಹಾತ್ಮನಾದ ಪ್ರದ್ಯುಮ್ನನ ಈ ಮಹತ್ಕಾರ್ಯವನ್ನು ಕಂಡು ಅವನ ಕಡೆಯ ಸೈನಿಕರು ಮತ್ತು ಶತ್ರು ಪಕ್ಷದ ಸೈನಿಕರೂ ಕೂಡ ಅವನನ್ನು ಬಹಳವಾಗಿ ಪ್ರಶಂಸಿಸಿದರು. ॥ ೨೦ ॥

ಬಹುರೂಪೈಕರೂಪಂ ತದ್ದೃಶ್ಯತೇ ನ ಚ ದೃಶ್ಯತೇ ।
ಮಾಯಾಮಯಂ ಮಯಕೃತಂ ದುರ್ವಿಭಾವ್ಯಂ ಪರೈರಭೂತ್ ॥ ೨೧ ॥

ಕ್ವಚಿದ್ಭೂಮೌ ಕ್ವಚಿದ್ವ್ಯೋಮ್ನಿ ಗಿರಿಮೂರ್ಧ್ನಿ ಜಲೇ ಕ್ವಚಿತ್ ।
ಅಲಾತಚಕ್ರವದ್ಭ್ರಾಮ್ಯತ್ಸೌಭಂ ತದ್ದುರವಸ್ಥಿತಮ್ ॥ ೨೨ ॥

ಯತ್ರ ಯತ್ರೋಪಲಕ್ಷ್ಯೇತ ಸಸೌಭಃ ಸಹಸೈನಿಕಃ ।
ಶಾಲ್ವಸ್ತತಸ್ತತೋಽಮುಂಚನ್ ಶರಾನ್ಸಾತ್ವತಯೂಥಪಾಃ ॥ ೨೩ ॥

ಶರೈರಗ್ನ್ಯರ್ಕಸಂಸ್ಪರ್ಶೈರಾಶೀವಿಷದುರಾಸದೈಃ ।
ಪೀಡ್ಯಮಾನಪುರಾನೀಕಃ ಶಾಲ್ವೋಽಮುಹ್ಯತ್ಪರೇರಿತೈಃ ॥ ೨೪ ॥

ಶಾಲ್ವಾನೀಕಪಶಸ್ತ್ರೌಘೈರ್ವೃಷ್ಣಿವೀರಾ ಭೃಶಾರ್ದಿತಾಃ ।
ನ ತತ್ಯಜೂ ರಣಂ ಸ್ವಂ ಸ್ವಂ ಲೋಕದ್ವಯಜಿಗೀಷವಃ ॥ ೨೫ ॥

ಶಾಲ್ವಾಮಾತ್ಯೋ ದ್ಯುಮಾನ್ನಾಮ ಪ್ರದ್ಯುಮ್ನಂ ಪ್ರಾಕ್ಪ್ರಪೀಡಿತಃ ।
ಆಸಾದ್ಯ ಗದಯಾ ಮೌರ್ವ್ಯಾ ವ್ಯಾಹತ್ಯ ವ್ಯನದದ್ಬಲೀ ॥ ೨೬ ॥

ಪ್ರದ್ಯುಮ್ನಂ ಗದಯಾ ಶೀರ್ಣವಕ್ಷಃಸ್ಥಲಮರಿಂದಮಮ್ ।
ಅಪೋವಾಹ ರಣಾತ್ಸೂತೋ ಧರ್ಮವಿದ್ದಾರುಕಾತ್ಮಜಃ ॥ ೨೭ ॥

ಲಬ್ಧಸಂಜ್ಞೋ ಮುಹೂರ್ತೇನ ಕಾರ್ಷ್ಣಿಃ ಸಾರಥಿಮಬ್ರವೀತ್ ।
ಅಹೋ ಅಸಾಧ್ವಿದಂ ಸೂತ ಯದ್ರಣಾನ್ಮೇಽಪಸರ್ಪಣಮ್ ॥ ೨೮ ॥

ನ ಯದೂನಾಂ ಕುಲೇ ಜಾತಃ ಶ್ರೂಯತೇ ರಣವಿಚ್ಯುತಃ ।
ವಿನಾ ಮತ್ಕ್ಲೀಬಚಿತ್ತೇನ ಸೂತೇನ ಪ್ರಾಪ್ತಕಿಲ್ಬಿಷಾತ್ ॥ ೨೯ ॥

ಪರೀಕ್ಷಿತನೇ! ಮಾಯಾಸುರನಿಂದ ನಿರ್ಮಿಸಲ್ಪಟ್ಟ ಸೌಭ ವಿಮಾನವು ಅತ್ಯಂತ ಮಾಯಾಮಯವಾಗಿತ್ತು ಕೆಲವೊಮ್ಮೆ ಅನೇಕ ರೂಪದಿಂದ ಕಂಡುಬಂದರೆ, ಕೆಲವೊಮ್ಮೆ ಒಂದೇಯಾಗಿ ತೋರುತ್ತಿತ್ತು. ಕೆಲವೊಮ್ಮೆ ಕಣ್ಮರೆಯಾಗುತ್ತಿತ್ತು. ಯದುವೀರರಿಗೆ ಆ ವಿಮಾನವು ಎಲ್ಲಿದೆ? ಯಾವಾಗ ಬರುತ್ತಿದೆ? ಎಂಬುದೇ ತಿಳಿಯುತ್ತಿರಲಿಲ್ಲ. ॥ ೨೧ ॥ ಅದು ಕೆಲವೊಮ್ಮೆ ಭೂಮಿಯಲ್ಲಿ ಸಂಚರಿಸಿದರೆ, ಕೆಲವೊಮ್ಮೆ ಆಕಾಶದಲ್ಲಿ ಹಾರುತ್ತಿತ್ತು. ಕೆಲವೊಮ್ಮೆ ಪರ್ವತಾಗ್ರದಲ್ಲಿ ಕಂಡುಬಂದರೆ, ಕೆಲವೊಮ್ಮೆ ನೀರಿನ ಮೇಲೆ ತೇಲುತ್ತಿತ್ತು. ಆ ಸೌಭವಿಮಾನವು ಕೊಳ್ಳಿಯ ಚಕ್ರದಂತೆ ಎಲ್ಲೆಂದರಲ್ಲಿ ಸಂಚರಿಸುತ್ತಾ ನಿಂತಲ್ಲಿ ನಿಲ್ಲದೆ ಯದುವೀರರಿಗೆ ಭ್ರಾಂತಿಯನ್ನು ಉಂಟುಮಾಡುತ್ತಿತ್ತು. ॥ ೨೨ ॥ ಶಾಲ್ವನು ಸೈನಿಕರೊಡನೆ ಮತ್ತು ತನ್ನ ವಿಮಾನದೊಡನೆ ಕಂಡುಬಂದಲ್ಲೆಲ್ಲ ಯಾದವ ಸೇನಾಪತಿಗಳು ಬಾಣಗಳ ಮಳೆಯನ್ನೇ ಸುರಿಸುತ್ತಿದ್ದರು. ॥ ೨೩ ॥ ಅವರ ಬಾಣಗಳು ಸೂರ್ಯ ಅಗ್ನಿಗಳಂತೆ ಉರಿಯುತ್ತಾ ಪ್ರಖರವಾಗಿದ್ದು, ವಿಷಸರ್ಪಗಳಂತೆ ತಡೆದುಕೊಳ್ಳಲು ಅಸಾಧ್ಯವಾಗಿದ್ದವು. ಅವುಗಳಿಂದ ಶಾಲ್ವನ ನಗರಾಕಾರವಾದ ವಿಮಾನ ಮತ್ತು ಸೈನ್ಯವು ಅತ್ಯಂತ ಪೀಡಿತವಾಯಿತು. ಕೊನೆಗೆ ಯಾದವರ ಬಾಣಗಳಿಂದ ಶಾಲ್ವನೂ ಮೂರ್ಛೆಗೊಂಡನು. ॥ ೨೪ ॥

ಪರೀಕ್ಷಿತನೇ! ಶಾಲ್ವನ ಸೇನಾಪತಿಗಳೂ ಯಾದವ ಸೈನ್ಯದ ಮೇಲೆ ಶಸ್ತ್ರಾಸ್ತ್ರಗಳನ್ನು ಮಳೆಗರೆದರು. ಇದರಿಂದ ಯಾದವ ಸೈನಿಕರು ಬಹಳ ಗಾಯಗೊಂಡರು. ಆದರೂ 'ಜಯಿಸಿದರೆ ಭೋಗ, ಸತ್ತರೆ ಸ್ವರ್ಗ' ಎಂದು ಯೋಚಿಸುತ್ತಾ ಅವರು ರಣಭೂಮಿಯನ್ನು ಬಿಟ್ಟು ಹೋಗಲಿಲ್ಲ. ॥ ೨೫ ॥ ಪರೀಕ್ಷಿದ್ರಾಜನೇ! ಶಾಲ್ವನ ದ್ಯುಮಂತನೆಂಬ ಮಂತ್ರಿಯು ಈ ಹಿಂದೆ ಪ್ರದ್ಯುಮ್ನನು ಪ್ರಯೋಗಿಸಿದ ಇಪ್ಪತ್ತೈದು ಬಾಣಗಳಿಂದ ಬಹಳ ಗಾಯಗೊಂಡಿದ್ದನು. ಸ್ವಲ್ಪ ಚೇತರಿಸಿಕೊಂಡು ಪುನಃ ಪ್ರದ್ಯುಮ್ನನೊಡನೆ ಯುದ್ಧಮಾಡಲು ಬಂದು ಮಹಾಬಲಿಷ್ಠನಾದ ದ್ಯುಮಂತನು ಕಬ್ಬಿಣದ ಗದೆಯಿಂದ ಪ್ರದ್ಯುಮ್ನನನ್ನು ರಭಸದಿಂದ ಪ್ರಹರಿಸಿ ಗಟ್ಟಿಯಾಗಿ ಗರ್ಜಿಸಿದನು. ॥ ೨೬ ॥ ಪರೀಕ್ಷಿತನೇ! ದ್ಯುಮಂತನ ಗದಾಪ್ರಹಾರದಿಂದ ಪ್ರದ್ಯುಮ್ನನ ಎದೆ ಒಡೆದಂತಾಗಿ ಮೂರ್ಛಿತನಾದನು. ಅವನ ರಥವನ್ನು ನಡೆಸುತ್ತಿದ್ದ ದಾರುಕನ ಪುತ್ರನು ಸಾರಥಿಯ ಧರ್ಮಕ್ಕನುಸಾರ ಅವನನ್ನು ರಣಭೂಮಿಯಿಂದ ದೂರಕ್ಕೆ ಕೊಂಡೊಯ್ದನು. ॥ ೨೭ ॥ ಮುಹೂರ್ತಕಾಲವು ಕಳೆದನಂತರ ಪ್ರದ್ಯುಮ್ನನಿಗೆ ಮೂರ್ಛೆಯು ತಿಳಿಯಿತು. ಆಗ ಅವನು ಸಾರಥಿಗೆ ಹೇಳಿದನು ಸಾರಥಿಯೇ! ನನ್ನನ್ನು ರಣರಂಗದಿಂದ ಹಿಂದಕ್ಕೆ ಕರೆತಂದು ಬಹಳ ತಪ್ಪು ಕೆಲಸವನ್ನು ಮಾಡಿಬಿಟ್ಟಿರುವೆ. ನೀನು ಹೀಗೆ ಮಾಡಬಾರದಾಗಿತ್ತು. ॥ ೨೮ ॥ ಸೂತನೇ! ನಮ್ಮ ವಂಶದಲ್ಲಿ ಯಾವನೇ ವೀರನು ರಣರಂಗದಿಂದ ಪಲಾಯನಮಾಡಿದನೆಂಬುದು ನಾನು ಇದುವರೆಗೂ ಕೇಳಿಯೇ ಇಲ್ಲ. ಹೇಡಿಯಾದ ಸಾರಥಿಯಿಂದಾಗಿ ನಾನೊಬ್ಬನು ಇಂತಹ ಕಳಂಕಕ್ಕೆ ಗುರಿಯಾಗಬೇಕಾಯಿತಲ್ಲ! ॥ ೨೯ ॥

ಕಿಂ ನು ವಕ್ಷ್ಯೇಽಭಿಸಂಗಮ್ಯ ಪಿತರೌ ರಾಮಕೇಶವೌ ।
ಯುದ್ಧಾತ್ಸಮ್ಯಗಪಕ್ರಾಂತಃ ಪೃಷ್ಟಸ್ತತ್ರಾತ್ಮನಃ ಕ್ಷಮಮ್ ॥ ೩೦ ॥

ಈಗ ನಾನು ದೊಡ್ಡಪ್ಪನಾದ ಬಲರಾಮನ ಮತ್ತು ತಂದೆಯಾದ ಶ್ರೀಕೃಷ್ಣನ ಮುಂದೆ ಹೋಗಿ ಏನು ಹೇಳಲಿ? ಈಗಲಾದರೋ ಎಲ್ಲ ಜನರು 'ನಾನು ಯುದ್ಧದಿಂದ ಓಡಿ ಹೋದೆ' ಎಂದೇ ಹೇಳುವರು. ಅವರು ಪ್ರಶ್ನಿಸಿದಾಗ ನನ್ನ ಶೌರ್ಯ-ಸಾಹಸಗಳಿಗೆ ಅನುರೂಪವಾದ ಯಾವ ಉತ್ತರವನ್ನು ಕೊಡಲಿ? ॥ ೩೦ ॥

ವ್ಯಕ್ತಂ ಮೇ ಕಥಯಿಷ್ಯಂತಿ ಹಸಂತ್ಯೋ ಭ್ರಾತೃಜಾಮಯಃ ।
ಕ್ಲೈಬ್ಯಂ ಕಥಂ ಕಥಂ ವೀರ ತವಾನ್ಯೈಃ ಕಥ್ಯತಾಂ ಮೃಧೇ ॥ ೩೧ ॥

ನನ್ನ ಅತ್ತಿಗೆ-ನಾದಿನಿಯರು ನನ್ನ ಹೇಡಿತನವನ್ನು ಹಂಗಿಸುತ್ತಾ, ಗಹ-ಗಹಿಸಿ ನಗುತ್ತಾ 'ವೀರಶೂರನೇ! ನೀನು ನಪುಂಸಕ ಹೇಗಾದೆ? ನೀನು ಶತ್ರುಗಳೊಡನೆ ರಣರಂಗದಲ್ಲಿ ಹೇಗೆ ಯುದ್ಧ ಮಾಡಿದೆ? ವಿವರಿಸಿ ಹೇಳು' ಎಂದು ಕೇಳಿದರೆ ನಾನೇನು ಉತ್ತರಿಸಲಿ? ॥ ೩೧ ॥

ಸಾರಥಿರುವಾಚ

ಧರ್ಮಂ ವಿಜಾನತಾಽಽಯುಷ್ಮನ್ ಕೃತಮೇತನ್ಮಯಾ ವಿಭೋ ।
ಸೂತಃ ಕೃಚ್ಛ್ರಗತಂ ರಕ್ಷೇದ್ರಥಿನಂ ಸಾರಥಿಂ ರಥೀ ॥ ೩೨ ॥

ಸಾರಥಿಯು ಹೇಳಿದನು - ಆಯುಷ್ಮಂತನೇ! ನಾನು ಸಾರಥಿಯ ಧರ್ಮವನ್ನು ಅರಿತುಕೊಂಡೇ ಮಾಡಿರುವೆನು. ಒಡೆಯಾ! ಪ್ರಾಣಾಪತ್ತಿನಲ್ಲಿ ಸಿಕ್ಕಿಬಿದ್ದಿರುವಾಗ ಸಾರಥಿಯು ರಥಿಕನನ್ನು ರಕ್ಷಿಸಬೇಕು. ಹಾಗೆಯೇ ಸಾರಥಿಯನ್ನು ಕಾಪಾಡಬೇಕು ಎಂಬುದು ಯುದ್ಧದ ಧರ್ಮವಾಗಿದೆಯಲ್ಲ! ॥ ೩೨ ॥

ಏತದ್ವಿದಿತ್ವಾ ತು ಭವಾನ್ ಮಯಾಪೋವಾಹಿತೋ ರಣಾತ್ ।
ಉಪಸೃಷ್ಟಃ ಪರೇಣೇತಿ ಮೂರ್ಛಿತೋ ಗದಯಾ ಹತಃ ॥ ೩೩ ॥

ಈ ಧರ್ಮವನ್ನು ತಿಳಿದುಕೊಂಡೇ ನಾನು ನಿಮ್ಮನ್ನು ರಣರಂಗದಿಂದ ಕರೆ ತಂದಿರುವೆನು. ಶತ್ರುವು ನಿಮ್ಮ ಮೇಲೆ ಗದಾ ಪ್ರಹಾರಮಾಡಿದಾಗ ನೀವು ಮೂರ್ಛಿತರಾದಿರಿ. ದೊಡ್ಡ ಆಪತ್ತಿನಲ್ಲಿ ಸಿಲುಕಿದಿರಿ. ಅದರಿಂದಾಗಿ ನಾನು ಹೀಗೆ ಮಾಡಬೇಕಾಯಿತು. (ಸೂತನ ಮಾತನ್ನು ಕೇಳಿ ಪ್ರದ್ಯುಮ್ನನಿಗೂ ಸಮಾಧಾನವಾಯಿತು.) ॥ ೩೩ ॥

ಎಪ್ಪತ್ತಾರನೆಯ ಅಧ್ಯಾಯವು ಮುಗಿಯಿತು. ॥ ೭೬ ॥
ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮಸ್ಕಂಧೇ ಉತ್ತರಾರ್ಧೇ
ಶಾಲ್ವಯುದ್ಧೇ ಷಟ್ಸಪ್ತತಿತಮೋಽಧ್ಯಾಯಃ ॥ ೭೬ ॥

ಎಪ್ಪತ್ತೇಳನೆಯ ಅಧ್ಯಾಯ

ಶಾಲ್ವನ ಸಂಹಾರ

ಶ್ರೀಶುಕ ಉವಾಚ

ಸ ಉಪಸ್ಪೃಶ್ಯ ಸಲಿಲಂ ದಂಶಿತೋ ಧೃತಕಾರ್ಮುಕಃ ।
ನಯ ಮಾಂ ದ್ಯುಮತಃ ಪಾರ್ಶ್ವಂ ವೀರಸ್ಯೇತ್ಯಾಹ ಸಾರಥಿಮ್ ॥ ೧ ॥

ವಿಧಮಂತಂ ಸ್ವಸೈನ್ಯಾನಿ ದ್ಯುಮಂತಂ ರುಕ್ಮಿಣೀಸುತಃ ।
ಪ್ರತಿಹತ್ಯ ಪ್ರತ್ಯವಿಧ್ಯನ್ನಾರಾಚೈರಷ್ಟಭಿಃ ಸ್ಮಯನ್ ॥ ೨ ॥

ಚತುರ್ಭಿಶ್ಚತುರೋ ವಾಹಾನ್ ಸೂತಮೇಕೇನ ಚಾಹನತ್ ।
ದ್ವಾಭ್ಯಾಂ ಧನುಶ್ಚ ಕೇತುಂ ಚ ಶರೇಣಾನ್ಯೇನ ವೈ ಶಿರಃ ॥ ೩ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ - ಪರೀಕ್ಷಿತ ಮಹಾರಾಜನೇ! ಬಳಿಕ ಪ್ರದ್ಯುಮ್ನನು ಶುದ್ಧಾಚಮನವನ್ನು ಮಾಡಿ ಕವಚವನ್ನು ತೊಟ್ಟು ಧನುಸ್ಸನ್ನು ಧರಿಸಿ ಸಾರಥಿಗೆ ಹೇಳಿದನು ಶೀಘ್ರವಾಗಿ ನನ್ನನ್ನು ದ್ಯುಮಂತನ ಬಳಿಗೆ ಕರೆದೊಯ್ಯುವವನಾಗು. ॥ ೧ ॥ ಪ್ರದ್ಯುಮ್ನನ ಆಜ್ಞೆಯಂತೆ ಸಾರಥಿಯು ರಥವನ್ನು ದ್ಯುಮಂತನ ಬಳಿಗೆ ಒಯ್ದನು. ಆಗ ಅವನು ಯಾದವರ ಸೈನ್ಯವನ್ನು ಧ್ವಂಸಮಾಡುತ್ತಿದ್ದನು. ಪ್ರದ್ಯುಮ್ನನು ಅವನನ್ನು ತಡೆದು ಎಂಟು ಬಾಣಗಳಿಂದ ನಸುನಗುತ್ತಲೇ ಪ್ರಹರಿಸಿದನು. ॥ ೨ ॥ ನಾಲ್ಕು ಬಾಣಗಳಿಂದ ಅವನ ನಾಲ್ಕು ಕುದುರೆಗಳನ್ನು ಕೊಂದು, ಒಂದು ಬಾಣದಿಂದ ಸಾರಥಿಯನ್ನು, ಎರಡು ಬಾಣಗಳಿಂದ ಧನುಸ್ಸನ್ನು ಧ್ವಜವನ್ನು ಕತ್ತರಿಸಿ, ಮತ್ತೊಂದು ಬಾಣದಿಂದ ದ್ಯುಮಂತನ ತಲೆಯನ್ನು ತರಿದನು. ॥ ೩ ॥

ಗದಸಾತ್ಯಕಿಸಾಂಬಾದ್ಯಾ ಜಘ್ನುಃ ಸೌಭಪತೇರ್ಬಲಮ್ ।
ಪೇತುಃ ಸಮುದ್ರೇ ಸೌಭೇಯಾಃ ಸರ್ವೇ ಸಂಛಿನ್ನಕಂಧರಾಃ ॥ ೪ ॥

ಏವಂ ಯದೂನಾಂ ಶಾಲ್ವಾನಾಂ ನಿಘ್ನತಾಮಿತರೇತರಮ್ ।
ಯುದ್ಧಂ ತ್ರಿಣವರಾತ್ರಂ ತದಭೂತ್ತುಮುಲಮುಲ್ಬಣಮ್ ॥ ೫ ॥

ಇಂದ್ರಪ್ರಸ್ಥಂ ಗತಃ ಕೃಷ್ಣ ಆಹೂತೋ ಧರ್ಮಸೂನುನಾ ।
ರಾಜಸೂಯೇಽಥ ನಿರ್ವೃತ್ತೇ ಶಿಶುಪಾಲೇ ಚ ಸಂಸ್ಥಿತೇ ॥ ೬ ॥

ಕುರುವೃದ್ಧಾನನುಜ್ಞಾಪ್ಯ ಮುನೀಂಶ್ಚ ಸಸುತಾಂ ಪೃಥಾಮ್ ।
ನಿಮಿತ್ತಾನ್ಯತಿಘೋರಾಣಿ ಪಶ್ಯನ್ ದ್ವಾರವತೀಂ ಯಯೌ ॥ ೭ ॥

ಆಹ ಚಾಹಮಿಹಾಯಾತ ಆರ್ಯಮಿಶ್ರಾಭಿಸಂಗತಃ ।
ರಾಜನ್ಯಾಶ್ಚೈದ್ಯಪಕ್ಷೀಯಾ ನೂನಂ ಹನ್ಯುಃ ಪುರೀಂ ಮಮ ॥ ೮ ॥

ವೀಕ್ಷ್ಯ ತತ್ಕದನಂ ಸ್ವಾನಾಂ ನಿರೂಪ್ಯ ಪುರರಕ್ಷಣಮ್ ।
ಸೌಭಂ ಚ ಶಾಲ್ವರಾಜಂ ಚ ದಾರುಕಂ ಪ್ರಾಹ ಕೇಶವಃ ॥ ೯ ॥

ರಥಂ ಪ್ರಾಪಯ ಮೇ ಸೂತ ಶಾಲ್ವಸ್ಯಾಂತಿಕಮಾಶು ವೈ ।
ಸಂಭ್ರಮಸ್ತೇ ನ ಕರ್ತವ್ಯೋ ಮಾಯಾವೀ ಸೌಭರಾಡಯಮ್ ॥ ೧೦ ॥

ಇತ್ಯುಕ್ತಶ್ಚೋದಯಾಮಾಸ ರಥಮಾಸ್ಥಾಯ ದಾರುಕಃ ।
ವಿಶಂತಂ ದದೃಶುಃ ಸರ್ವೇ ಸ್ವೇ ಪರೇ ಚಾರುಣಾನುಜಮ್ ॥ ೧೧ ॥

ಶಾಲ್ವಶ್ಚ ಕೃಷ್ಣಮಾಲೋಕ್ಯ ಹತಪ್ರಾಯಬಲೇಶ್ವರಃ ।
ಪ್ರಾಹರತ್ ಕೃಷ್ಣಸೂತಾಯ ಶಕ್ತಿಂ ಭೀಮರವಾಂ ಮೃಧೇ ॥ ೧೨ ॥

ತಾಮಾಪತಂತೀಂ ನಭಸಿ ಮಹೋಲ್ಕಾಮಿವ ರಂಹಸಾ ।
ಭಾಸಯಂತೀಂ ದಿಶಃ ಶೌರಿಃ ಸಾಯಕೈಃ ಶತಧಾಚ್ಛಿನತ್ ॥ ೧೩ ॥

ತಂ ಚ ಷೋಡಶಭಿರ್ವಿದ್ಧ್ವಾ ಬಾಣೈಃ ಸೌಭಂ ಚ ಖೇ ಭ್ರಮತ್ ।
ಅವಿಧ್ಯಚ್ಛರಸಂದೋಹೈಃ ಖಂ ಸೂರ್ಯ ಇವ ರಶ್ಮಿಭಿಃ ॥ ೧೪ ॥

ಶಾಲ್ವಃ ಶೌರೇಸ್ತು ದೋಃ ಸವ್ಯಂ ಸಶಾರ್ಙ್ಗಂ ಶಾರ್ಙ್ಗಧನ್ವನಃ ।
ಬಿಭೇದ ನ್ಯಪತದ್ಧಸ್ತಾತ್ ಶಾರ್ಙ್ಗಮಾಸೀತ್ತದದ್ಭುತಮ್ ॥ ೧೫ ॥

ಇತ್ತ ಕಡೆ ಗದ, ಸಾತ್ಯಕಿ, ಸಾಂಬ ಮೊದಲಾದ ಯಾದವ ವೀರರೂ ಶಾಲ್ವನ ಸೇನೆಯನ್ನು ಸಂಹರಿಸಲು ತೊಡಗಿದರು. ಸೌಭ ವಿಮಾನದಲ್ಲಿದ್ದ ಸೈನಿಕರ ತಲೆಗಳು ತುಂಡಾಗಿ ಸಮುದ್ರಕ್ಕೆ ಬೀಳುತ್ತಿದ್ದವು. ॥ ೪ ॥ ಹೀಗೆ ಯದುವಂಶೀಯ ವೀರರಲ್ಲಿ ಮತ್ತು ಶಾಲ್ವನ ಸೈನಿಕರಲ್ಲಿ ಪರಸ್ಪರವಾಗಿ ಪ್ರಹರಿಸುತ್ತಾ ಇಪ್ಪತ್ತೇಳು ದಿನಗಳ ವರೆಗೆ ಅತ್ಯಂತ ಘೋರವಾದ ಮತ್ತು ಭಯಂಕರವಾದ ಯುದ್ಧವು ನಡೆಯಿತು. ॥ ೫ ॥

ಆ ಸಮಯದಲ್ಲಿ ಭಗವಾನ್ ಶ್ರೀಕೃಷ್ಣನು ಧರ್ಮನಂದನನ ಕರೆಯಂತೆ ಇಂದ್ರಪ್ರಸ್ಥಕ್ಕೆ ಹೋಗಿದ್ದನು. ರಾಜಸೂಯಯಜ್ಞವು ಮುಗಿದಿತ್ತು ಶಿಶುಪಾಲನ ವಧೆಯೂ ಆಗಿಹೋಗಿತ್ತು ॥ ೬ ॥ ಅಲ್ಲಿ ಭಯಂಕರವಾದ ಅಪಶಕುನಗಳು ಆಗುತ್ತಿರುವುದನ್ನು ಕಂಡು ಭಗವಾನ್ ಶ್ರೀಕೃಷ್ಣನು ಕುರುವಂಶದ ಹಿರಿಯರಿಂದ, ಋಷಿ-ಮುನಿಗಳಿಂದ, ಕುಂತೀ ಮತ್ತು ಪಾಂಡವರಿಂದ ಅನುಮತಿ ಪಡೆದು ದ್ವಾರಕೆಗೆ ಪ್ರಯಾಣ ಮಾಡಿದನು. ॥ ೭ ॥ 'ನಾನು ಪೂಜ್ಯನಾದ ಅಣ್ಣ ಬಲರಾಮನೊಂದಿಗೆ ಇಂದ್ರಪ್ರಸ್ಥಕ್ಕೆ ಬಂದು ಬಿಟ್ಟೆ. ಈಗ ಶಿಶುಪಾಲನ ಪಕ್ಷಪಾತಿಗಳಾದ ಕ್ಷತ್ರಿಯರು ಅವಶ್ಯಕವಾಗಿ ದ್ವಾರಕೆಯ ಮೇಲೆ ಆಕ್ರಮಣ ಮಾಡಿರಬಹುದು' ಎಂದು ಮನಸ್ಸಿನಲ್ಲೇ ಅಂದುಕೊಂಡನು. ॥ ೮ ॥ ಭಗವಾನ್ ಶ್ರೀಕೃಷ್ಣನು ದ್ವಾರಕೆಗೆ ಬಂದು ನೋಡುತ್ತಾನೆ - ನಿಜವಾಗಿಯೂ ಯಾದವರ ಮೇಲೆ ದೊಡ್ಡ ಆಪತ್ತು ಬಂದೊದಗಿದೆ. ಆಗ ಬಲರಾಮನನ್ನು ದ್ವಾರಕೆಯ ರಕ್ಷಣೆಗಾಗಿ ನಿಯೋಜಿಸಿ, ಸೌಭಪತಿ ಶಾಲ್ವನನ್ನು ನೋಡಿ ತನ್ನ ಸಾರಥಿಯಾದ ದಾರುಕನಲ್ಲಿ ಹೇಳಿದನು ॥ ೯ ॥ ದಾರುಕನೇ! ನೀನು ಅತಿ ಶೀಘ್ರವಾಗಿ ನನ್ನ ರಥವನ್ನು ಶಾಲ್ವನ ಬಳಿಗೊಂಡು ಹೋಗು. ನೋಡು, ಈ ಶಾಲ್ವನು ಮಹಾಮಾಯಾವಿಯಾಗಿದ್ದಾನೆ. ಆದರೂ ನೀನು ಸ್ವಲ್ಪವೂ ಭಯಪಡಬೇಡ. ॥ ೧೦ ॥ ಶ್ರೀಕೃಷ್ಣನ ಆಜ್ಞೆ ಯಾದೊಡನೆಯೇ ದಾರುಕನು ರಥವನ್ನು ಶಾಲ್ವನ ಬಳಿಗೆ ಒಯ್ದನು. ಭಗವಂತನ ರಥದ ಗರುಡಧ್ವಜವನ್ನು ಕಂಡೊಡನೆ ಶ್ರೀಕೃಷ್ಣನೇ ಆಗಮಿಸಿದನೆಂದು ಯಾದವರೂ ಮತ್ತು ಶತ್ರು ಸೈನ್ಯದವರು ಭಾವಿಸಿದರು. ॥ ೧೧ ॥ ಪರೀಕ್ಷಿತನೇ! ಅಷ್ಟರೊಳಗೆ ಶಾಲ್ವನ ಸೈನ್ಯವೆಲ್ಲ ಪ್ರಾಯಶಃ ನಾಶವಾಗಿ ಹೋಗಿತ್ತು. ಭಗವಾನ್ ಶ್ರೀಕೃಷ್ಣನನ್ನು ನೋಡುತ್ತಲೇ ಶಾಲ್ವನು ಅತ್ಯಂತ ಭಯಂಕರವಾದ ಶಕ್ತ್ಯಾಯುಧವೊಂದನ್ನು ದಾರುಕನ ಮೇಲೆ ಪ್ರಯೋಗಿಸಿದನು. ಆ ಶಕ್ತಿಯು ಭಾರೀ ಶಬ್ದಮಾಡುತ್ತಾ, ಹತ್ತು ದಿಕ್ಕುಗಳನ್ನು ಬೆಳಗಿಸುತ್ತಾ ದೊಡ್ಡ ಉಲ್ಕೆಯಂತೆ ವೇಗವಾಗಿ ಸಾರಥಿಯ ಕಡೆಗೆ ಬರುತ್ತಿರುವುದನ್ನು ನೋಡಿದ ಶ್ರೀಕೃಷ್ಣನು ತನ್ನ ಬಾಣಗಳಿಂದ ಅದನ್ನು ನೂರಾರು ತುಂಡುಗಳಾಗಿ ಕತ್ತರಿಸಿ ಬಿಟ್ಟನು. ॥ ೧೨-೧೩ ॥ ಮತ್ತೆ ಶ್ರೀಕೃಷ್ಣನು ಹದಿನಾರು ಬಾಣಗಳಿಂದ ಶಾಲ್ವನನ್ನು ಪ್ರಹರಿಸಿ, ಆಕಾಶದಲ್ಲಿ ಸಂಚರಿಸುತ್ತಿದ್ದ ಸೌಭವಿಮಾನವನ್ನೂ ಸೂರ್ಯನು ತನ್ನ ಕಿರಣಗಳಿಂದ ಆಕಾಶವನ್ನು ಮುಚ್ಚಿಬಿಡುವಂತೆ - ಅಸಂಖ್ಯಾತವಾದ ಬಾಣಗಳಿಂದ ಮುಚ್ಚಿಬಿಟ್ಟನು. ॥ ೧೪ ॥ ಇದಕ್ಕೆ ಪ್ರತಿಯಾಗಿ ಶಾಲ್ವನು ಶಾರ್ಙ್ಗ ಧನುಸ್ಸಿನಿಂದ ಕೂಡಿದ ಶ್ರೀಕೃಷ್ಣನ ಎಡ ತೋಳನ್ನು ತೀಕ್ಷ್ಣವಾದ ಬಾಣದಿಂದ ಪ್ರಹರಿಸಿದನು. ಇದರಿಂದ ಭಗವಂತನು ಧರಿಸಿದ್ದ ಶಾರ್ಙ್ಗಧನುಸ್ಸು ಕೆಳಗೆ ಬಿದ್ದು ಹೋಯಿತು. ಇಂತಹ ಅದ್ಭುತವಾದೊಂದು ಘಟನೆ ನಡೆದುಹೋಯಿತು. ॥ ೧೫ ॥

ಹಾಹಾಕಾರೋ ಮಹಾನಾಸೀದ್ ಭೂತಾನಾಂ ತತ್ರ ಪಶ್ಯತಾಮ್ ।
ವಿನದ್ಯ ಸೌಭರಾಡುಚ್ಚೈರಿದಮಾಹ ಜನಾರ್ದನಮ್ ॥ ೧೬ ॥

ಯತ್ತ್ವಯಾ ಮೂಢ ನಃ ಸಖ್ಯುರ್ಭ್ರಾತುರ್ಭಾರ್ಯಾ ಹೃತೇಕ್ಷತಾಮ್ ।
ಪ್ರಮತ್ತಃ ಸ ಸಭಾಮಧ್ಯೇ ತ್ವಯಾ ವ್ಯಾಪಾದಿತಃ ಸಖಾ ॥ ೧೭ ॥

ತಂ ತ್ವಾದ್ಯ ನಿಶಿತೈರ್ಬಾಣೈರಪರಾಜಿತಮಾನಿನಮ್ ।
ನಯಾಮ್ಯಪುನರಾವೃತ್ತಿಂ ಯದಿ ತಿಷ್ಠೇರ್ಮಮಾಗ್ರತಃ ॥ ೧೮ ॥

ಶ್ರೀಭಗವಾನುವಾಚ

ವೃಥಾ ತ್ವಂ ಕತ್ಥಸೇ ಮಂದ ನ ಪಶ್ಯಸ್ಯಂತಿಕೇಽಂತಕಮ್ ।
ಪೌರುಷಂ ದರ್ಶಯಂತಿ ಸ್ಮ ಶೂರಾ ನ ಬಹುಭಾಷಿಣಃ ॥ ೧೯ ॥

ಇತ್ಯುಕ್ತ್ವಾ ಭಗವಾನ್ ಶಾಲ್ವಂ ಗದಯಾ ಭೀಮವೇಗಯಾ ।
ತತಾಡ ಜತ್ರೌ ಸಂರಬ್ಧಃ ಸ ಚಕಂಪೇ ವಮನ್ನಸೃಕ್ ॥ ೨೦ ॥

ಗದಾಯಾಂ ಸನ್ನಿವೃತ್ತಾಯಾಂ ಶಾಲ್ವಸ್ತ್ವಂತರಧೀಯತ ।
ತತೋ ಮುಹೂರ್ತ ಆಗತ್ಯ ಪುರುಷಃ ಶಿರಸಾಚ್ಯುತಮ್ ।
ದೇವಕ್ಯಾ ಪ್ರಹಿತೋಽಸ್ಮೀತಿ ನತ್ವಾ ಪ್ರಾಹ ವಚೋ ರುದನ್ ॥ ೨೧ ॥

ಕೃಷ್ಣ ಕೃಷ್ಣ ಮಹಾಬಾಹೋ ಪಿತಾ ತೇ ಪಿತೃವತ್ಸಲ ।
ಬದ್ಧ್ವಾಪನೀತಃ ಶಾಲ್ವೇನ ಸೌನಿಕೇನ ಯಥಾ ಪಶುಃ ॥ ೨೨ ॥

ನಿಶಮ್ಯ ವಿಪ್ರಿಯಂ ಕೃಷ್ಣೋ ಮಾನುಷೀಂ ಪ್ರಕೃತಿಂ ಗತಃ ।
ವಿಮನಸ್ಕೋ ಘೃಣೀ ಸ್ನೇಹಾದ್ಬಭಾಷೇ ಪ್ರಾಕೃತೋ ಯಥಾ ॥ ೨೩ ॥

ಕಥಂ ರಾಮಮಸಂಭ್ರಾಂತಂ ಜಿತ್ವಾಽಜೇಯಂ ಸುರಾಸುರೈಃ ।
ಶಾಲ್ವೇನಾಲ್ಪೀಯಸಾ ನೀತಃ ಪಿತಾ ಮೇ ಬಲವಾನ್ ವಿಧಿಃ ॥ ೨೪ ॥

ಇತಿ ಬ್ರುವಾಣೇ ಗೋವಿಂದೇ ಸೌಭರಾಟ್ ಪ್ರತ್ಯುಪಸ್ಥಿತಃ ।
ವಸುದೇವಮಿವಾನೀಯ ಕೃಷ್ಣಂ ಚೇದಮುವಾಚ ಸಃ ॥ ೨೫ ॥

ಏಷ ತೇ ಜನಿತಾ ತಾತೋ ಯದರ್ಥಮಿಹ ಜೀವಸಿ ।
ವಧಿಷ್ಯೇ ವೀಕ್ಷತಸ್ತೇಽಮುಮೀಶಶ್ಚೇತ್ ಪಾಹಿ ಬಾಲಿಶ ॥ ೨೬ ॥

ಆಕಾಶದಲ್ಲಿ ಮತ್ತು ಭೂಮಿಯಲ್ಲಿ ಈ ಯುದ್ಧವನ್ನು ನೋಡುತ್ತಿದ್ದ ಜನರು ಗಟ್ಟಿಯಾಗಿ ಹಾಹಾಕಾರ ಮಾಡಿದರು. ಆಗ ಶಾಲ್ವನು ಗರ್ಜಿಸುತ್ತಾ ಶ್ರೀಕೃಷ್ಣನಲ್ಲಿ ಹೀಗೆ ಹೇಳಿದನು - ॥ ೧೬ ॥ ಎಲೈ ಮೂಢನೇ! ನಾವೆಲ್ಲರೂ ನೋಡು-ನೋಡುತ್ತಿರುವಂತೆಯೇ ನಮ್ಮ ತಮ್ಮನೂ, ಮಿತ್ರನೂ ಆದ ಶಿಶುಪಾಲನ ಪತ್ನಿಯನ್ನು ನೀನು ಕದ್ದುಕೊಂಡು ಹೋದೆ ಮತ್ತು ತುಂಬಿದ ಸಭೆಯಲ್ಲಿ ನಮ್ಮ ಮಿತ್ರನಾದ ಶಿಶುಪಾಲನು ಅಜಾಗರೂಕನಾಗಿದ್ದಾಗ ನೀನು ಅವನನ್ನು ಕೊಂದು ಹಾಕಿದೆ. ॥ ೧೭ ॥ ಆದರೂ ನಿನ್ನನ್ನು ಅಜೇಯನೆಂದು ಭಾವಿಸಿರುವೆ. ಒಂದು ವೇಳೆ ನನ್ನೆದುರಿಗೆ ಯುದ್ಧಕ್ಕೆ ನಿಂತರೆ ಇಂದು ತೀಕ್ಷ್ಣವಾದ ಬಾಣಗಳಿಂದ ಮರಳಿ ಬಾರದಿರುವ ಜಾಗಕ್ಕೆ ತಲುಪಿಸಿಬಿಡುತ್ತೇನೆ. ॥ ೧೮ ॥

ಭಗವಾನ್ ಶ್ರೀಕೃಷ್ಣನು ಹೇಳಿದನು - ಎಲೈ ಮೂರ್ಖನೇ! ನೀನು ವ್ಯರ್ಥವಾಗಿ ಗಳಹುತ್ತಿರುವೆ. ನಿನ್ನ ತಲೆಯ ಮೇಲೆ ಮೃತ್ಯುವು ಕುಣಿಯುತ್ತಿರುವುದನ್ನು ನೀನರಿಯೆ. ನಿಜವಾದ ಶೂರರು ಹೆಚ್ಚು ಮಾತನಾಡುವುದಿಲ್ಲ. ತಮ್ಮ ಪೌರುಷವನ್ನು ತೋರಿಸಿಕೊಡುತ್ತಾರೆ. ॥ ೧೯ ॥ ಹೀಗೆ ಹೇಳಿ ಭಗವಾನ್ ಶ್ರೀಕೃಷ್ಣನು ಕ್ರುದ್ಧನಾಗಿ, ಅತ್ಯಂತ ವೇಗಶಾಲಿಯಾದ, ಭಯಂಕರವಾದ ತನ್ನ ಗದೆಯಿಂದ ಶಾಲ್ವನ ಹೆಗಲಮೇಲೆ ಪ್ರಹರಿಸಿದನು. ಇದರಿಂದ ಅವನು ರಕ್ತವನ್ನು ಕಕ್ಕುತ್ತಾ ಥರ-ಥರನೆ ನಡುಗಿಹೋದನು. ॥ ೨೦ ॥ ಇತ್ತ ಗದೆಯು ಭಗವಂತನ ಬಳಿಗೆ ಮರಳಿ ಬಂದಾಗ ಶಾಲ್ವನು ಅಂತರ್ಧಾನನಾದನು. ಅನಂತರ ಮುಹೂರ್ತಕಾಲ ಕಳೆಯುತ್ತಿರುವಂತೆ ಒಬ್ಬ ಮನುಷ್ಯನು ಭಗವಂತನ ಸಮೀಪಕ್ಕೆ ಬಂದು ತಲೆ ಬಾಗಿ ನಮಸ್ಕರಿಸಿ, ಅಳುತ್ತಾ ಹೇಳಿದನು - ನನ್ನನ್ನು ನಿಮ್ಮ ತಾಯಿ ದೇವಕಿಯು ಕಳಿಸಿರುವಳು - ॥ ೨೧ ॥ ಆಕೆಯು ಹೇಳಿರುವಳು - ಕೃಷ್ಣ! ಕೃಷ್ಣಾ! ಮಹಾಬಾಹುವೇ! ಪಿತೃವತ್ಸಲನೇ! ಶಾಲ್ವನು ನಿನ್ನ ತಂದೆಯನ್ನು ಬಂಧಿಸಿ, ಕಟುಕನು ಪಶುವನ್ನು ಕಟ್ಟಿಕೊಂಡು ಎಳೆದೊಯ್ಯುವಂತೆ ಕೊಂಡುಹೋಗಿರುವನು. ॥ ೨೨ ॥ ಈ ಅಪ್ರಿಯವಾದ ಸಮಾಚಾರವನ್ನು ಕೇಳಿದ ಭಗವಾನ್ ಶ್ರೀಕೃಷ್ಣನ ಮುಖದಲ್ಲಿ ಮನುಷ್ಯ ಸ್ವಭಾವದಂತೆ ಖಿನ್ನತೆ ಆವರಿಸಿತು. ಅವನು ಸಾಮಾನ್ಯ ಮನುಷ್ಯರಂತೆ ಅತ್ಯಂತ ದಯಾಪರನಾಗಿ ಪಿತೃಸ್ನೇಹದಿಂದ ಹೀಗೆ ಹೇಳತೊಡಗಿದನು. ॥ ೨೩ ॥ ಅರೇ! ನನ್ನಣ್ಣ ಬಲರಾಮನನ್ನು ದೇವತೆಗಳು ಅಥವಾ ಅಸುರರು ಯಾರೂ ಗೆಲ್ಲಲಾರರು. ಅವನು ಸದಾಕಾಲ ಸಾವಧಾನವಾಗಿರುವವನು. ಶಾಲ್ವನ ಬಲ-ಪೌರುಷವಾದರೋ ಅಲ್ಪವಾದುದು. ಹೀಗಿದ್ದರೂ ಇವನು ನನ್ನಣ್ಣನನ್ನು ಹೇಗೆ ಗೆದ್ದುಕೊಂಡನು? ನಮ್ಮ ತಂದೆಯನ್ನು ಹೇಗೆ ಬಂಧಿಸಿಕೊಂಡು ಹೋದನು? ನಿಜವಾಗಿ ಪ್ರಾರಬ್ಧವು ಬಲವತ್ತರವಾದುದು. ॥ ೨೪ ॥ ಭಗವಾನ್ ಶ್ರೀಕೃಷ್ಣನು ಹೀಗೆ ಹೇಳುತ್ತಿರುವಂತೆಯೇ ಶಾಲ್ವನು ವಸುದೇವನಂತಹ ಒಬ್ಬ ಮಾಯಾರಚಿತ ಮನುಷ್ಯನನ್ನು ಹಿಡಿದುಕೊಂಡು ಬಂದು, ಶ್ರೀಕೃಷ್ಣನಲ್ಲಿ ಹೇಳತೊಡಗಿದನು. ॥ ೨೫ ॥ ಮೂರ್ಖನೇ! ನೀನು ಯಾರಿಗಾಗಿ ಬದುಕಿರುವೆಯೋ ಅಂತಹ ನಿನಗೆ ಜನ್ಮದಾತನಾದ ತಂದೆಯೇ ಇವನಾಗಿದ್ದಾನೆ; ನೋಡು. ನೀನು ನೋಡುತ್ತಿರುವಂತೆ ಇವನನ್ನು ನಾನೀಗ ಕತ್ತರಿಸಿಬಿಡುತ್ತೇನೆ. ನಿನಗೇನಾದರೂ ಶಕ್ತಿಯಿದ್ದರೆ ಇವನನ್ನು ಬದುಕಿಸಿಕೋ. ॥ ೨೬ ॥

ಏವಂ ನಿರ್ಭರ್ತ್ಸ್ಯ ಮಾಯಾವೀ ಖಡ್ಗೇನಾನಕದುಂದುಭೇಃ ।
ಉತ್ಕೃತ್ಯ ಶಿರ ಆದಾಯ ಖಸ್ಥಂ ಸೌಭಂ ಸಮಾವಿಶತ್ ॥ ೨೭ ॥

ತತೋ ಮುಹೂರ್ತಂ ಪ್ರಕೃತಾವುಪಪ್ಲುತಃ
ಸ್ವಬೋಧ ಆಸ್ತೇ ಸ್ವಜನಾನುಷಂಗತಃ ।
ಮಹಾನುಭಾವಸ್ತದಬುಧ್ಯದಾಸುರೀಂ
ಮಾಯಾಂ ಸ ಶಾಲ್ವಪ್ರಸೃತಾಂ ಮಯೋದಿತಾಮ್ ॥ ೨೮ ॥

ನ ತತ್ರ ದೂತಂ ನ ಪಿತುಃ ಕಲೇವರಂ
ಪ್ರಬುದ್ಧ ಆಜೌ ಸಮಪಶ್ಯದಚ್ಯುತಃ ।
ಸ್ವಾಪ್ನಂ ಯಥಾ ಚಾಂಬರಚಾರಿಣಂ ರಿಪುಂ
ಸೌಭಸ್ಥಮಾಲೋಕ್ಯ ನಿಹಂತುಮುದ್ಯತಃ ॥ ೨೯ ॥

ಏವಂ ವದಂತಿ ರಾಜರ್ಷೇ ಋಷಯಃ ಕೇಚ ನಾನ್ವಿತಾಃ ।
ಯತ್ ಸ್ವವಾಚೋ ವಿರುಧ್ಯೇತ ನೂನಂ ತೇ ನ ಸ್ಮರಂತ್ಯುತ ॥ ೩೦ ॥

ಕ್ವ ಶೋಕಮೋಹೌ ಸ್ನೇಹೋ ವಾ ಭಯಂ ವಾ ಯೇಽಜ್ಞಸಂಭವಾಃ ।
ಕ್ವ ಚಾಖಂಡಿತವಿಜ್ಞಾನಜ್ಞಾನೈಶ್ವರ್ಯಸ್ತ್ವಖಂಡಿತಃ ॥ ೩೧ ॥

ಯತ್ಪಾದಸೇವೋರ್ಜಿತಯಾಽಽತ್ಮವಿದ್ಯಯಾ
ಹಿನ್ವಂತ್ಯನಾದ್ಯಾತ್ಮವಿಪರ್ಯಯಗ್ರಹಮ್ ।
ಲಭಂತ ಆತ್ಮೀಯಮನಂತಮೈಶ್ವರಂ
ಕುತೋ ನು ಮೋಹಃ ಪರಮಸ್ಯ ಸದ್ಗತೇಃ ॥ ೩೨ ॥

ತಂ ಶಸ್ತ್ರಪೂಗೈಃ ಪ್ರಹರಂತಮೋಜಸಾ
ಶಾಲ್ವಂ ಶರೈಃ ಶೌರಿರಮೋಘವಿಕ್ರಮಃ ।
ವಿದ್ಧ್ವಾಚ್ಛಿನದ್ವರ್ಮ ಧನುಃ ಶಿರೋಮಣಿಂ
ಸೌಭಂ ಚ ಶತ್ರೋರ್ಗದಯಾ ರುರೋಜ ಹ ॥ ೩೩ ॥

ತತ್ ಕೃಷ್ಣಹಸ್ತೇರಿತಯಾ ವಿಚೂರ್ಣಿತಂ
ಪಪಾತ ತೋಯೇ ಗದಯಾ ಸಹಸ್ರಧಾ ।
ವಿಸೃಜ್ಯ ತದ್ಭೂತಲಮಾಸ್ಥಿತೋ ಗದಾ-
ಮುದ್ಯಮ್ಯ ಶಾಲ್ವೋಽಚ್ಯುತಮಭ್ಯಗಾದ್ದ್ರುತಮ್ ॥ ೩೪ ॥

ಮಾಯಾವಿಯಾದ ಶಾಲ್ವನು ಹೀಗೆ ಭಗವಂತನನ್ನು ನಿಂದಿಸುತ್ತಾ ಮಾಯಾರಚಿತ ವಸುದೇವನ ತಲೆಯನ್ನು ಕತ್ತಿಯಿಂದ ಕತ್ತರಿಸಿ, ಅದನ್ನೆತ್ತಿಕೊಂಡು ಆಕಾಶದಲ್ಲಿ ನಿಂತಿದ್ದ ಸೌಭವಿಮಾನವನ್ನೇರಿದನು. ॥ ೨೭ ॥ ಪರೀಕ್ಷಿತನೇ! ಭಗವಾನ್ ಶ್ರೀಕೃಷ್ಣನು ಸ್ವಯಂಸಿದ್ಧ ಜ್ಞಾನಸ್ವರೂಪನೂ, ಮಹಾನುಭಾವನೂ ಆಗಿದ್ದನು. ಆ ಘಟನೆಯನ್ನು ನೋಡಿ ಎರಡು ಗಳಿಗೆ ತಂದೆಯಾದ ವಸುದೇವನ ವಿಷಯದಲ್ಲಿ ಅತ್ಯಂತ ಪ್ರೀತಿಯಿದ್ದ ಕಾರಣ ಸಾಧಾರಣ ಮನುಷ್ಯರಂತೆ ಶೋಕ ಸಾಗರದಲ್ಲಿ ಮುಳುಗಿ ಹೋದನು. ಸ್ವಲ್ಪ ಹೊತ್ತಾದನಂತರ ತಾನು ಕಂಡದ್ದು ಶಾಲ್ವನಿಗೆ ಮಯನು ಉಪದೇಶಿಸಿದ್ದ ಮಾಯಾವಿದ್ಯೆಯ ಪ್ರದರ್ಶನವೆಂಬುದು ಶ್ರೀಕೃಷ್ಣನಿಗೆ ತಿಳಿದು ಹೋಯಿತು. ॥ ೨೮ ॥ ಕನಸಿನಲ್ಲಿ ಕಂಡದ್ದೆಲ್ಲಾ ಎಚ್ಚರವಾದೊಡನೆ ಕಾಣದೇ ಹೋಗುವಂತೆಯೇ ಶ್ರೀಕೃಷ್ಣನಿಗೆ ನಿಜಸ್ಥಿತಿಯುಂಟಾಗುತ್ತಲೇ ಅಲ್ಲಿ ಆ ದೂತನಾಗಲೀ, ತಂದೆಯ ಶರೀರವಾಗಲೀ ಏನೂ ಇರಲಿಲ್ಲ. ವಿಮಾನವನ್ನು ಹತ್ತಿ ಅಟ್ಟಹಾಸದಿಂದ ಆಕಾಶದಲ್ಲಿ ಸಂಚರಿಸುತ್ತಿದ್ದ ಶಾಲ್ವನನ್ನು ನೋಡಿ ಅವನನ್ನು ವಧಿಸಲು ಮುಂದಾದನು. ॥ ೨೯ ॥

ಪ್ರಿಯ ಪರೀಕ್ಷಿತನೇ! ಶ್ರೀಕೃಷ್ಣನಿಗೆ ವಿಮೋಹ ಉಂಟಾದ ಮಾತುಗಳನ್ನು ಪೂರ್ವಾಪರ ವಿಚಾರ ಮಾಡದ ಕೆಲವು - ಕೆಲವು ಋಷಿಗಳು ಹೇಳುತ್ತಿರುತ್ತಾರೆ. ಶ್ರೀಕೃಷ್ಣನ ವಿಷಯದಲ್ಲಿ ಹೀಗೆ ಹೇಳುವುದು – 'ಅವನು ಮಾಯಾತೀತನೂ, ಸರ್ವಜ್ಞನೂ' ಎಂದು ಅವರೇ ಹಿಂದೆ ಹೇಳಿದ ಮಾತುಗಳಿಗೆ ವಿರೋಧವಾಗಿದೆ. ॥ ೩೦ ॥ ಅಜ್ಞಾನದಿಂದುಂಟಾಗುವ ಶೋಕ-ಮೋಹ-ಸ್ನೇಹ-ಭಯಗಳೆಲ್ಲಿ? ಪರಿಪೂರ್ಣವಾದ ಜ್ಞಾನ- ವಿಜ್ಞಾನೈಶ್ವರ್ಯಗಳಿಗೆ ನೆಲೆಯಾದ, ದೇವವಂದ್ಯನಾದ, ಪರಿಪೂರ್ಣನಾದ ಶ್ರೀಕೃಷ್ಣನೆಲ್ಲಿ? (ಅವನಲ್ಲಿ ಇಂತಹ ಭಾವಗಳಿರುವುದು ಸಂಭವವೇ ಇಲ್ಲ.) ॥ ೩೧ ॥ ದೊಡ್ಡ ದೊಡ್ಡ ಋಷಿಮುನಿಗಳು ಭಗವಾನ್ ಶ್ರೀಕೃಷ್ಣನ ಚರಣಕಮಲಗಳ ಸೇವೆ ಮಾಡಿ ಆತ್ಮವಿದ್ಯೆಯನ್ನು ಸಂಪಾದಿಸಿಕೊಳ್ಳುತ್ತಾರೆ ಮತ್ತು ಅನಾದಿ ಕಾಲದಿಂದಲೂ ಬಂದಿರುವ ಅಜ್ಞಾನರೂಪವಾದ ದೇಹಾತ್ಮಬುದ್ಧಿಯನ್ನು ತೊರೆಯುತ್ತಾರೆ. ಆತ್ಮಸಂಬಂಧಿಯಾದ ಅನಂತ ಐಶ್ವರ್ಯವನ್ನು ಪಡೆದುಕೊಳ್ಳುತ್ತಾರೆ. ಅಂತಹ ಸಂತರ ಪರಮಗತಿ ಸ್ವರೂಪನಾದ ಭಗವಾನ್ ಶ್ರೀಕೃಷ್ಣನಲ್ಲಿ ಇಂತಹ ಮೋಹವು ಹೇಗೆ ತಾನೇ ಉಂಟಾಗಬಲ್ಲದು? ॥ ೩೨ ॥

ಈಗ ಶಾಲ್ವನು ಉತ್ಸಾಹಭರಿತನಾಗಿ ಶ್ರೀಕೃಷ್ಣನ ಮೇಲೆ ಪುಂಖಾನುಪುಂಖವಾಗಿ ಶಸ್ತ್ರಗಳ ಮಳೆಗರೆಯತೊಡಗಿದನು. ಅಮೋಘಶಕ್ತಿಯುಳ್ಳ ಭಗವಾನ್ ಶ್ರೀಕೃಷ್ಣನೂ ಕೂಡ ತನ್ನ ಬಾಣಗಳಿಂದ ಶಾಲ್ವನನ್ನು ಗಾಯಗೊಳಿಸಿ, ಕವಚ, ಧನುಸ್ಸು ಮತ್ತು ಕಿರೀಟವನ್ನು ಪುಡಿ-ಪುಡಿ ಮಾಡಿದನು. ಜೊತೆಗೆ ಗದಾಘಾತದಿಂದ ಅವನ ವಿಮಾನವನ್ನು ಘಾಸಿಗೊಳಿಸಿದನು. ॥ ೩೩ ॥ ಪರೀಕ್ಷಿತನೇ! ಭಗವಾನ್ ಶ್ರೀಕೃಷ್ಣನು ವೇಗವಾಗಿ ಎಸೆದಿರುವ ಗದೆಯಿಂದ ಆ ವಿಮಾನವು ನುಚ್ಚು-ನೂರಾಗಿ ಸಮುದ್ರಕ್ಕೆ ಬಿದ್ದು ಹೋಯಿತು. ಅದು ಬೀಳುವ ಮೊದಲೇ ಶಾಲ್ವನು ವಿಮಾನದಿಂದ ನೆಲಕ್ಕೆ ಹಾರಿ ಗದಾಪಾಣಿಯಾಗಿ ವೇಗವಾಗಿ ಶ್ರೀಕೃಷ್ಣನ ಕಡೆಗೆ ಮುನ್ನುಗ್ಗಿದನು. ॥ ೩೪ ॥

ಅಥಾವತಃ ಸಗದಂ ತಸ್ಯ ಬಾಹುಂ
ಭಲ್ಲೇನ ಛಿತ್ತ್ವಾಥ ರಥಾಂಗಮದ್ಭುತಮ್ ।
ವಧಾಯ ಶಾಲ್ವಸ್ಯ ಲಯಾರ್ಕಸನ್ನಿಭಂ
ಬಿಭ್ರದ್ಬಭೌ ಸಾರ್ಕ ಇವೋದಯಾಚಲಃ ॥ ೩೫ ॥

ಶಾಲ್ವನ ಆಕ್ರಮಣವನ್ನು ನೋಡಿದ ಶ್ರೀಕೃಷ್ಣನು ಭಲ್ಲೆಯಿಂದ ಗದೆಯ ಸಹಿತ ಅವನ ತೋಳನ್ನು ಕತ್ತರಿಸಿ ಹಾಕಿದನು. ಮತ್ತೆ ಅವನನ್ನು ಕೊಲ್ಲಲಿಕ್ಕಾಗಿ ಪ್ರಳಯಕಾಲದ ಸೂರ್ಯನಂತೆ ತೇಜಸ್ಸಿನಿಂದ ಕೂಡಿದ್ದ ಪರಮಾದ್ಭುತವಾದ ಸುದರ್ಶನ ಚಕ್ರವನ್ನು ಧರಿಸಿ ಸೂರ್ಯನಿಂದ ಕೂಡಿದ ಉದಯಾಚಲದಂತೆ ಪ್ರಕಾಶಿಸಿದನು. ॥ ೩೫ ॥ ಭಗವಾನ್ ಶ್ರೀಕೃಷ್ಣನು ಮಾಯಾವಿ ಶಾಲ್ವನ ಕಿರೀಟ ಕುಂಡಲ ಸಹಿತ ಶಿರಸ್ಸನ್ನು-ಇಂದ್ರನು ವಜ್ರಾಯುಧದಿಂದ ವೃತ್ರಾಸುರನ ಶಿರವನ್ನು ಕತ್ತರಿಸಿದಂತೆ ಚಕ್ರಾಯುಧದಿಂದ ಕತ್ತರಿಸಿಬಿಟ್ಟನು. ಆ ಸಮಯದಲ್ಲಿ ಶಾಲ್ವನ ಸೈನಿಕರೆಲ್ಲರೂ ದುಃಖಿತರಾಗಿ ಅಯ್ಯೋ! ಅಯ್ಯೋ! ಎಂದು ಕಿರುಚಿಕೊಂಡರು. ॥ ೩೬ ॥

ಜಹಾರ ತೇನೈವ ಶಿರಃ ಸಕುಂಡಲಂ
ಕಿರೀಟಯುಕ್ತಂ ಪುರುಮಾಯಿನೋ ಹರಿಃ ।
ವಜ್ರೇಣ ವೃತ್ರಸ್ಯ ಯಥಾ ಪುರಂದರೋ
ಬಭೂವ ಹಾಹೇತಿ ವಚಸ್ತದಾ ನೃಣಾಮ್ ॥ ೩೬ ॥

ತಸ್ಮಿನ್ನಿಪತಿತೇ ಪಾಪೇ ಸೌಭೇ ಚ ಗದಯಾ ಹತೇ ।
ನೇದುರ್ದುಂದುಭಯೋ ರಾಜನ್ ದಿವಿ ದೇವಗಣೇರಿತಾಃ ।
ಸಖೀನಾಮಪಚಿತಿಂ ಕುರ್ವನ್ ದಂತವಕ್ತ್ರೋ ರುಷಾಭ್ಯಗಾತ್
॥ ೩೭ ॥

ಪರೀಕ್ಷಿತನೇ! ಹೀಗೆ ಪಾಪಿಯಾದ ಶಾಲ್ವನು ಸತ್ತುಹೋಗಿ ಅವನ ವಿಮಾನವೂ ಗದೆಯಿಂದ ವಿಧ್ವಸ್ತವಾದಾಗ ದೇವತೆಗಳು ಆಕಾಶದಲ್ಲಿ ದುಂದುಭಿಗಳನ್ನು ನುಡಿಸತೊಡಗಿದರು. ಇದೇ ಸಮಯಕ್ಕೆ ಸರಿಯಾಗಿ ದಂತವಕ್ತ್ರನು ತನ್ನ ಮಿತ್ರನಾದ ಶಿಶುಪಾಲನೇ ಮೊದಲಾದವರ ಸಾವಿನ ಸೇಡನ್ನು ತೀರಿಸಿಕೊಳ್ಳಲು ಅತ್ಯಂತ ಕ್ರುದ್ಧನಾಗಿ ದ್ವಾರಕೆಗೆ ಆಗಮಿಸಿದನು. ॥ ೩೭ ॥

ಎಪ್ಪತ್ತೇಳನೆಯ ಅಧ್ಯಾಯವು ಮುಗಿಯಿತು. ॥ ೭೭ ॥
ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮ ಸ್ಕಂಧೇ ಉತ್ತರಾರ್ಧೇ
ಸೌಭವಧೋನಾಮ ಸಪ್ತಸಪ್ತತಿತಮೋಽಧ್ಯಾಯಃ ॥ ೭೭ ॥

ಎಪ್ಪತ್ತೆಂಟನೆಯ ಅಧ್ಯಾಯ

ದಂತವಕ್ತ್ರ-ವಿದೂರಥ ಸಂಹಾರ

ತೀರ್ಥಯಾತ್ರೆಯಲ್ಲಿ ಬಲರಾಮನಿಂದ ಸೂತಪುರಾಣಿಕರ ವಧೆ

ಶ್ರೀಶುಕ ಉವಾಚ

ಶಿಶುಪಾಲಸ್ಯ ಶಾಲ್ವಸ್ಯ ಪೌಂಡ್ರಕಸ್ಯಾಪಿ ದುರ್ಮತಿಃ ।
ಪರಲೋಕಗತಾನಾಂ ಚ ಕುರ್ವನ್ ಪಾರೋಕ್ಷ್ಯಸೌಹೃದಮ್
॥ ೧ ॥

ಏಕಃ ಪದಾತಿಃ ಸಂಕ್ರುದ್ಧೋ ಗದಾಪಾಣಿಃ ಪ್ರಕಂಪಯನ್ ।
ಪದ್ಭ್ಯಾಮಿಮಾಂ ಮಹಾರಾಜ ಮಹಾಸತ್ತ್ವೋ ವ್ಯದೃಶ್ಯತ
॥ ೨ ॥

ತಂ ತಥಾಽಽಯಾಂತಮಾಲೋಕ್ಯ ಗದಾಮಾದಾಯ ಸತ್ವರಃ ।
ಅವಪ್ಲುತ್ಯ ರಥಾತ್ ಕೃಷ್ಣಃ ಸಿಂಧುಂ ವೇಲೇವ ಪ್ರತ್ಯಧಾತ್
॥ ೩ ॥

ಗದಾಮುದ್ಯಮ್ಯ ಕಾರೂಷೋ ಮುಕುಂದಂ ಪ್ರಾಹ ದುರ್ಮದಃ ।
ದಿಷ್ಟ್ಯಾ ದಿಷ್ಟ್ಯಾ ಭವಾನದ್ಯ ಮಮ ದೃಷ್ಟಿಪಥಂ ಗತಃ
॥ ೪ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ - ಪರೀಕ್ಷಿತನೇ! ಶಿಶುಪಾಲ, ಶಾಲ್ವ, ಪೌಂಡ್ರಕ ಮೊದಲಾದವರು ಪರಲೋಕವನ್ನು ಸೇರಿದುದರಿಂದ ಅವರ ಮಿತ್ರ ಋಣವನ್ನು ತೀರಿಸಬೇಕೆಂದು ದುರ್ಮತಿಯಾದ ದಂತವಕ್ತ್ರನು ಒಬ್ಬಂಟಿಗನಾಗಿ ಕಾಲ್ನಡಿಗೆಯಿಂದ ಯುದ್ಧಭೂಮಿಗೆ ಆಗಮಿಸಿದನು. ಆಗ ಮಹಾಶಕ್ತಿಶಾಲಿಯಾದ ಅವನು ಅತ್ಯಂತ ಕ್ರುದ್ಧನಾಗಿ ಗದೆಯನ್ನೆತ್ತಿಕೊಂಡು, ಗಡುಸಾದ ಹೆಜ್ಜೆಗಳಿಂದ ಭೂಮಿಯನ್ನು ನಡುಗಿಸುತ್ತಾ ಬರುತ್ತಿರುವುದನ್ನು ಜನರು ನೋಡಿದರು. ॥ ೧-೨ ॥ ಹೀಗೆ ತನ್ನೆಡೆಗೆ ಬರುತ್ತಿರುವ ದಂತವಕ್ತ್ರನನ್ನು ನೋಡಿ ಭಗವಾನ್ ಶ್ರೀಕೃಷ್ಣನು ಶೀಘ್ರವಾಗಿ ಗದೆಯನ್ನೆತ್ತಿಕೊಂಡು ರಥದಿಂದ ಧುಮುಕಿ-ಸಮುದ್ರದ ಅಲೆಗಳನ್ನು ತೀರವು ತಡೆದು ನಿಲ್ಲಿಸುವಂತೆ ಅವನನ್ನು ತಡೆದು ನಿಲ್ಲಿಸಿದನು. ॥ ೩ ॥ ಶ್ರೀಕೃಷ್ಣನು ಎದುರಿಗೆ ನಿಂತಿರುವುದನ್ನು ನೋಡಿ ದುರ್ಮದನಾದ ಕರೂಷನರೇಶನಾದ ದಂತವಕ್ತ್ರನು ಗದೆಯನ್ನು ಮೇಲೆತ್ತಿಕೊಂಡು ಶ್ರೀಕೃಷ್ಣನಿಗೆ ಹೇಳಿದನು - ಇಂದು ನೀನು ಸೌಭಾಗ್ಯವಶದಿಂದ ನನ್ನ ಕಣ್ಣಿಗೆ ಬಿದ್ದಿರುವೆ. ॥ ೪ ॥

ತ್ವಂ ಮಾತುಲೇಯೋ ನಃ ಕೃಷ್ಣ ಮಿತ್ರಧ್ರುಙ್ಮಾಂ ಜಿಘಾಂಸಸಿ ।
ಅತಸ್ತ್ವಾಂ ಗದಯಾ ಮಂದ ಹನಿಷ್ಯೇ ವಜ್ರಕಲ್ಪಯಾ ॥ ೫ ॥

ತರ್ಹ್ಯಾನೃಣ್ಯಮುಪೈಮ್ಯಜ್ಞ ಮಿತ್ರಾಣಾಂ ಮಿತ್ರವತ್ಸಲಃ ।
ಬಂಧುರೂಪಮರಿಂ ಹತ್ವಾ ವ್ಯಾಧಿಂ ದೇಹಚರಂ ಯಥಾ ॥ ೬ ॥

ಏವಂ ರೂಕ್ಷೈಸ್ತುದನ್ ವಾಕ್ಯೈಃ ಕೃಷ್ಣಂ ತೋತ್ತ್ರೈರಿವ ದ್ವಿಪಮ್ ।
ಗದಯಾ ತಾಡಯನ್ಮೂರ್ಧ್ನಿ ಸಿಂಹವದ್ವ್ಯನದಚ್ಚ ಸಃ ॥ ೭ ॥

ಗದಯಾಭಿಹತೋಽಪ್ಯಾಜೌ ನ ಚಚಾಲ ಯದೂದ್ವಹಃ ।
ಕೃಷ್ಣೋಽಪಿ ತಮಹನ್ಗುರ್ವ್ಯಾ ಕೌಮೋದಕ್ಯಾ ಸ್ತನಾಂತರೇ ॥ ೮ ॥

ಗದಾನಿರ್ಭಿನ್ನ ಹೃದಯ ಉದ್ವಮನ್ರುಧಿರಂ ಮುಖಾತ್ ।
ಪ್ರಸಾರ್ಯ ಕೇಶಬಾಹ್ವಂಘ್ರೀಂಧರಣ್ಯಾಂ ನ್ಯಪತದ್ವ್ಯಸುಃ ॥ ೯ ॥

ತತಃ ಸೂಕ್ಷ್ಮತರಂ ಜ್ಯೋತಿಃ ಕೃಷ್ಣಮಾವಿಶದದ್ಭುತಮ್ ।
ಪಶ್ಯತಾಂ ಸರ್ವಭೂತಾನಾಂ ಯಥಾ ಚೈದ್ಯವಧೇ ನೃಪ ॥ ೧೦ ॥

ವಿದೂರಥಸ್ತು ತದ್ಭ್ರಾತಾ ಭ್ರಾತೃಶೋಕಪರಿಪ್ಲುತಃ ।
ಆಗಚ್ಛದಸಿಚರ್ಮಭ್ಯಾಮುಚ್ಛ್ವಸಂಸ್ತಜ್ಜಿಘಾಂಸಯಾ ॥ ೧೧ ॥

ತಸ್ಯ ಚಾಪತತಃ ಕೃಷ್ಣಶ್ಚಕ್ರೇಣ ಕ್ಷುರನೇಮಿನಾ ।
ಶಿರೋ ಜಹಾರ ರಾಜೇಂದ್ರ ಸಕಿರೀಟಂ ಸಕುಂಡಲಮ್ ॥ ೧೨ ॥

ಏವಂ ಸೌಭಂ ಚ ಶಾಲ್ವಂ ಚ ದಂತವಕ್ತ್ರಂ ಸಹಾನುಜಮ್ ।
ಹತ್ವಾ ದುರ್ವಿಷಹಾನನ್ಯೈರೀಡಿತಃ ಸುರಮಾನವೈಃ ॥ ೧೩ ॥

ಮುನಿಭಿಃ ಸಿದ್ಧಗಂಧರ್ವೈರ್ವಿದ್ಯಾಧರಮಹೋರಗೈಃ ।
ಅಪ್ಸರೋಭಿಃ ಪಿತೃಗಣೈರ್ಯಕ್ಷೈಃ ಕಿನ್ನರಚಾರಣೈಃ ॥ ೧೪ ॥

ಕೃಷ್ಣ! ನೀನು ನನ್ನ ಮಾವನ ಮಗನೇ ಆಗಿರುವೆ. ಆದ್ದರಿಂದ ನಿನ್ನನ್ನು ಕೊಲ್ಲಬಾರದು. ಆದರೆ ಅಂದು ನೀನು ನನ್ನ ಮಿತ್ರನನ್ನು ಕೊಂದು ಹಾಕಿದೆ. ಮತ್ತೆ ಇಂದು ನನ್ನನ್ನು ಕೊಲ್ಲಲೆಳಸುವೆ. ಅದಕ್ಕಾಗಿ ಎಲೈ ಮೂರ್ಖನೇ! ಈಗ ನಾನು ನಿನ್ನನ್ನು ನನ್ನ ವಜ್ರಕರ್ಕಶವಾದ ಗದೆಯಿಂದ ಸಂಹರಿಸಿಬಿಡುತ್ತೇನೆ. ॥ ೫ ॥ ಮಂದಮತಿಯೇ! ಹಾಗೆ ನೋಡಿದರೆ ನೀನು ನನಗೆ ಸಂಬಂಧಿಯೇ ಆಗಿರುವೆ. ಆದರೆ ಶರೀರದಲ್ಲಿ ಇರುವ ಯಾವುದಾದರೂ ರೋಗದಂತೆ ನೀನು ಶತ್ರುವೇ ಆಗಿರುವೆ. ನಾನು ನನ್ನ ಮಿತ್ರರನ್ನು ತುಂಬಾ ಪ್ರೀತಿಸುತ್ತೇನೆ. ಅವರ ಋಣ ನನ್ನ ಮೇಲಿದೆ. ಈಗ ನಿನ್ನನ್ನು ಕೊಂದು ಅದನ್ನು ತೀರಿಸಿಕೊಳ್ಳುವೆ. ॥ ೬ ॥ ಮಾವುತನು ಅಂಕುಶದಿಂದ ತಿವಿದು ಆನೆಯನ್ನು ಕೆರಳಿಸುವಂತೆ ದಂತವಕ್ತ್ರನು ತನ್ನ ಕಠೋರವಾದ ಮಾತುಗಳಿಂದ ಶ್ರೀಕೃಷ್ಣನನ್ನು ಕೆಣಕಿದನು ಹಾಗೂ ವೇಗವಾಗಿ ಅವನ ತಲೆಯಮೇಲೆ ಗದೆಯಿಂದ ಹೊಡೆದು ಸಿಂಹದಂತೆ ಗರ್ಜಿಸಿದನು. ॥ ೭ ॥ ರಣರಂಗದಲ್ಲಿ ಗದೆಯ ಏಟನ್ನು ತಿಂದರೂ ಭಗವಾನ್ ಶ್ರೀಕೃಷ್ಣನು ಹಿಂದಕ್ಕೆ ಸರಿಯದೆ ಸ್ಥಿರವಾಗಿ ನಿಂತು ತನ್ನ ಅತ್ಯಂತ ಭಾರವಾಗಿದ್ದ ಕೌಮೋದಕೀ ಗದೆಯಿಂದ ದಂತವಕ್ತ್ರನ ವಕ್ಷಸ್ಥಳದಲ್ಲಿ ರಭಸದಿಂದ ಪ್ರಹರಿಸಿದನು. ॥ ೮ ॥ ಗದಾಘಾತದಿಂದ ದಂತವಕ್ತ್ರನ ಎದೆಯೊಡೆದು ರಕ್ತವನ್ನು ಕಾರತೊಡಗಿದನು. ಕೂದಲುಗಳು ಕೆದರಿಹೋಯಿತು. ಬಾಹುಗಳನ್ನು ಚಾಚಿ ಗತಪ್ರಾಣನಾಗಿ ಅವನು ಭೂಮಿಗೊರಗಿದನು. ॥ ೯ ॥ ಪರೀಕ್ಷಿತನೇ! ಶಿಶುಪಾಲನ ವಧೆಯ ಸಮಯದಲ್ಲಿ ಆದಂತೆಯೇ, ಗತಪ್ರಾಣನಾದ ದಂತವಕ್ತ್ರನ ಶರೀರದಿಂದ ಅತ್ಯಂತ ಸೂಕ್ಷ್ಮವಾದ ಜ್ಯೋತಿಯೊಂದು ಹೊರಬಂದು ಎಲ್ಲರೂ ನೋಡುತ್ತಿರುವಂತೆಯೇ ಅದು ವಿಚಿತ್ರ ರೀತಿಯಿಂದ ಭಗವಾನ್ ಶ್ರೀಕೃಷ್ಣನಲ್ಲಿ ಸೇರಿ ಹೋಯಿತು. ॥ ೧೦ ॥

ವಿದೂರಥನೆಂಬುವನು ದಂತವಕ್ತ್ರನ ತಮ್ಮನು. ಅವನು ಅಣ್ಣನ ಮರಣದಿಂದಾಗಿ ಅತ್ಯಂತ ಶೋಕಾಕುಲನಾಗಿದ್ದನು. ಈಗವನು ಬಹಳವಾಗಿ ಕ್ರುದ್ಧನಾಗಿ ದೀರ್ಘವಾಗಿ ನಿಟ್ಟುಸಿರುಬಿಡುತ್ತಾ ಕೈಯಲ್ಲಿ ಕತ್ತಿ-ಗುರಾಣಿಗಳನ್ನು ಹಿಡಿದು ಶ್ರೀಕೃಷ್ಣನನ್ನು ಕೊಂದುಹಾಕುವುದಕ್ಕಾಗಿ ಬಂದನು. ॥ ೧೧ ॥ ರಾಜೇಂದ್ರನೇ! ಅವನು ತನ್ನ ಮೇಲೆ ಪ್ರಹಾರಮಾಡಲು ಬಯಸುತ್ತಿರುವುದನ್ನು ನೋಡಿದ ಭಗವಾನ್ ಶ್ರೀಕೃಷ್ಣನು ಕತ್ತಿಯಂತೆ ಹರಿತವಾದ ಅಂಚುಗಳುಳ್ಳ ಚಕ್ರಾಯುಧದಿಂದ ಕಿರೀಟ-ಕುಂಡಲಗಳ ಸಹಿತವಾಗಿ ಅವನ ತಲೆಯನ್ನು ಕತ್ತರಿಸಿ ಹಾಕಿದನು. ॥ ೧೨ ॥ ಈ ಪ್ರಕಾರವಾಗಿ ಶ್ರೀಕೃಷ್ಣನು ಇತರರಿಂದ ಎದುರಿಸಲು ಅಸಾಧ್ಯರಾದ ಸಾಲ್ವನನ್ನೂ, ಅವನ ಸೌಭ ವಿಮಾನವನ್ನೂ, ದಂತವಕ್ತ್ರನನ್ನೂ, ವಿದೂರಥನನ್ನು ಸಂಹರಿಸಿ ದ್ವಾರಕಾ ಪಟ್ಟಣವನ್ನು ಪ್ರವೇಶಿಸಿದನು. ಆ ಸಮಯದಲ್ಲಿ ದೇವತೆಗಳು, ಮನುಷ್ಯರು ಅವನನ್ನು ಸ್ತುತಿಸುತ್ತಿದ್ದರು. ದೊಡ್ಡ-ದೊಡ್ಡ ಋಷಿ-ಮುನಿಗಳು, ಸಿದ್ಧರು-ಗಂಧರ್ವರು, ವಿದ್ಯಾಧರರು ಮತ್ತು ವಾಸುಕಿಯೇ ಮೊದಲಾದ ನಾಗರು, ಅಪ್ಸರೆಯರು, ಪಿತೃಗಳೂ, ಯಕ್ಷರು, ಕಿನ್ನರರು, ಚಾರಣರೂ ಅವನ ಮೇಲೆ ಹೂವಿನ ಮಳೆಗರೆಯುತ್ತಾ, ಅವನ ವಿಜಯ ಕೀರ್ತನೆಗಳನ್ನು ಹಾಡುತ್ತಿದ್ದರು.

ಉಪಗೀಯಮಾನವಿಜಯಃ ಕುಸುಮೈರಭಿವರ್ಷಿತಃ ।
ವೃತಶ್ಚ ವೃಷ್ಣಿಪ್ರವರೈರ್ವಿವೇಶಾಲಂಕೃತಾಂ ಪುರೀಮ್ ॥ ೧೫ ॥

ಏವಂ ಯೋಗೇಶ್ವರಃ ಕೃಷ್ಣೋ ಭಗವಾನ್ ಜಗದೀಶ್ವರಃ ।
ಈಯತೇ ಪಶುದೃಷ್ಟೀನಾಂ ನಿರ್ಜಿತೋ ಜಯತೀತಿ ಸಃ ॥ ೧೬ ॥

ಶ್ರುತ್ವಾ ಯುದ್ಧೋದ್ಯಮಂ ರಾಮಃ ಕುರೂಣಾಂ ಸಹ ಪಾಂಡವೈಃ ।
ತೀರ್ಥಾಭಿಷೇಕವ್ಯಾಜೇನ ಮಧ್ಯಸ್ಥಃ ಪ್ರಯಯೌ ಕಿಲ ॥ ೧೭ ॥

ಸ್ನಾತ್ವಾ ಪ್ರಭಾಸೇ ಸಂತರ್ಪ್ಯ ದೇವರ್ಷಿಪಿತೃಮಾನವಾನ್ ।
ಸರಸ್ವತೀಂ ಪ್ರತಿಸ್ರೋತಂ ಯಯೌ ಬ್ರಾಹ್ಮಣಸಂವೃತಃ ॥ ೧೮ ॥

ಪೃಥೂದಕಂ ಬಿಂದುಸರಸ್ತ್ರಿತಕೂಪಂ ಸುದರ್ಶನಮ್ ।
ವಿಶಾಲಂ ಬ್ರಹ್ಮತೀರ್ಥಂ ಚ ಚಕ್ರಂ ಪ್ರಾಚೀಂ ಸರಸ್ವತೀಮ್ ॥ ೧೯ ॥

ಯಮುನಾಮನು ಯಾನ್ಯೇವ ಗಂಗಾಮನು ಚ ಭಾರತ ।
ಜಗಾಮ ನೈಮಿಷಂ ಯತ್ರ ಋಷಯಃ ಸತ್ರಮಾಸತೇ ॥ ೨೦ ॥

ತಮಾಗತಮಭಿಪ್ರೇತ್ಯ ಮುನಯೋ ದೀರ್ಘಸತ್ರಿಣಃ ।
ಅಭಿನಂದ್ಯ ಯಥಾನ್ಯಾಯಂ ಪ್ರಣಮ್ಯೋತ್ಥಾಯ ಚಾರ್ಚಯನ್ ॥ ೨೧ ॥

ಸೋಽರ್ಚಿತಃ ಸಪರೀವಾರಃ ಕೃತಾಸನಪರಿಗ್ರಹಃ ।
ರೋಮಹರ್ಷಣಮಾಸೀನಂ ಮಹರ್ಷೇಃ ಶಿಷ್ಯಮೈಕ್ಷತ ॥ ೨೨ ॥

ಅಪ್ರತ್ಯುತ್ಥಾಯಿನಂ ಸೂತಮಕೃತಪ್ರಹ್ವಣಾಂಜಲಿಮ್ ।
ಅಧ್ಯಾಸೀನಂ ಚ ತಾನ್ವಿಪ್ರಾಂಶ್ಚುಕೋಪೋದ್ವೀಕ್ಷ್ಯ ಮಾಧವಃ ॥ ೨೩ ॥

ಕಸ್ಮಾದಸಾವಿಮಾನ್ ವಿಪ್ರಾನಧ್ಯಾಸ್ತೇ ಪ್ರತಿಲೋಮಜಃ ।
ಧರ್ಮಪಾಲಾಂಸ್ತಥೈವಾಸ್ಮಾನ್ ವಧಮರ್ಹತಿ ದುರ್ಮತಿಃ ॥ ೨೪ ॥

ಭಗವಂತನು ಪ್ರವೇಶಿಸುವಾಗ ದ್ವಾರಕೆಯು ಬಹಳ ಅಲಂಕೃತವಾಗಿತ್ತು. ಮಹಾ-ಮಹಾ ವೃಷ್ಣಿವಂಶೀ ಯಾದವ ವೀರರೂ ಅವನನ್ನೇ ಅನುಸರಿಸುತ್ತಿದ್ದರು. ॥ ೧೩-೧೫ ॥

ಪರೀಕ್ಷಿತನೇ! ಯೋಗೇಶ್ವರನೂ, ಜಗದೀಶ್ವರನೂ ಆದ ಭಗವಾನ್ ಶ್ರೀಕೃಷ್ಣನು ಹೀಗೆ ಅನೇಕ ಪ್ರಕಾರವಾದ ಲೀಲೆಗಳನ್ನು ಆಡುತ್ತಿದ್ದನು. ಇವನ ನಿಜಸ್ವರೂಪವನ್ನು ತಿಳಿಯದಿದ್ದ ಪಾಮರರಾದ ಅವಿವೇಕಿಗಳು ಕೆಲವು ಸಲ ಶ್ರೀಕೃಷ್ಣನು ಸೋತನೆಂದೂ, ಕೆಲವು ಸಲ ಜಯಗಳಿಸಿದನೆಂದೂ ಭಾವಿಸುತ್ತಿದ್ದರು. ಆದರೆ ವಾಸ್ತವವಾಗಿ ಅವನು ಸದಾಕಾಲ ವಿಜಯಿಯೇ ಆಗಿದ್ದಾನೆ. ಅವನಿಗೆ ಸೋಲೆಂಬುದೇ ಇಲ್ಲ. ಇದೆಲ್ಲವೂ ಲೀಲಾಮಾತ್ರ ಆಗಿದೆ. ॥ ೧೬ ॥

ಒಮ್ಮೆ ಬಲರಾಮನು ಕೌರವರಿಗೂ-ಪಾಂಡವರಿಗೂ ಯುದ್ಧಕ್ಕಾಗಿ ಸಿದ್ಧತೆಗಳು ಆಗುತ್ತಿರುವುದೆಂಬ ವಾರ್ತೆಯನ್ನು ಕೇಳಿದನು. ಯಾರೊಬ್ಬರ ಪಕ್ಷವನ್ನೂ ವಹಿಸುವುದು ಅವನಿಗೆ ಇಷ್ಟವಿರಲಿಲ್ಲ. ಅವನು ತಟಸ್ಥನಾಗಿದ್ದನು. ಅದಕ್ಕಾಗಿ ಅವನು ತೀರ್ಥಯಾತ್ರೆಯ ನೆಪದಿಂದ ದ್ವಾರಕೆಯಿಂದ ಹೊರಟು ಬಿಟ್ಟನು. ॥ ೧೭ ॥ ಅಲ್ಲಿಂದ ಹೊರಟು ಅವನು ಮೊದಲಿಗೆ ಪ್ರಭಾಸಕ್ಷೇತ್ರದಲ್ಲಿ ಸ್ನಾನ ತರ್ಪಣಾದಿಗಳನ್ನು ಮಾಡಿ, ಬ್ರಾಹ್ಮಣ ಭೋಜನದ ಮೂಲಕ ದೇವತೆಗಳನ್ನು, ಋಷಿಗಳನ್ನು, ಪಿತೃಗಳನ್ನು ಮನುಷ್ಯರನ್ನು ಸಂತೃಪ್ತಗೊಳಿಸಿದನು. ಅನಂತರ ಅವನು ಕೆಲವು ಬ್ರಾಹ್ಮಣರೊಂದಿಗೆ ಪಶ್ಚಿಮವಾಹಿನಿಯಾದ ಸರಸ್ವತೀನದಿಯ ತೀರಕ್ಕೆ ಬಂದನು.॥೧೮॥ ಅಲ್ಲಿ ಸ್ನಾನಾದಿಗಳನ್ನು ಮುಗಿಸಿಕೊಂಡು ಕ್ರಮವಾಗಿ ಪೃಥೂದಕ, ಬಿಂದುಸರ, ತ್ರಿತಕೂಪ, ಸುದರ್ಶನತೀರ್ಥ, ವಿಶಾಲತೀರ್ಥ, ಬ್ರಹ್ಮತೀರ್ಥ ಚಕ್ರತೀರ್ಥ ಮತ್ತು ಪೂರ್ವವಾಹಿನಿಯಾದ ಸರಸ್ವತೀ ಮುಂತಾದ ತೀರ್ಥಗಳಿಗೆ ಹೋದನು. ॥ ೧೯ ॥ ಪರೀಕ್ಷಿತನೇ! ಅನಂತರ ಯಮುನಾತೀರದ ಮತ್ತು ಮುಖ್ಯ-ಮುಖ್ಯ ತೀರ್ಥಗಳನ್ನು ಸಂದರ್ಶಿಸುತ್ತಾ ದೊಡ್ಡ-ದೊಡ್ಡ ಋಷಿಗಳು ಸತ್ಸಂಗ ಸತ್ರವನ್ನು ನಡೆಸುತ್ತಿದ್ದ ನೈಮಿಷಾರಣ್ಯಕ್ಕೆ ಬಂದನು. ॥ ೨೦ ॥ ದೀರ್ಘಕಾಲ ನಡೆಯುವ ಸತ್ರಯಾಗದ ವ್ರತವನ್ನು ಕೈಗೊಂಡು ಕುಳಿತಿದ್ದ ಮಹರ್ಷಿಗಳು ಬಲರಾಮನು ಬಂದುದನ್ನು ನೋಡಿ ತಮ್ಮ ಆಸನಗಳಿಂದೆದ್ದು ಮುಂದೆ ಹೋಗಿ ಅವನನ್ನು ಸ್ವಾಗತಿಸಿ ಯಥಾಯೋಗ್ಯವಾಗಿ ಅಭಿನಂದಿಸಿ ಅವನನ್ನು ಪೂಜಿಸಿದರು. ॥ ೨೧ ॥ ತನ್ನ ಜೊತೆಯವರೊಡನೆ ಆಸನವನ್ನು ಸ್ವೀಕರಿಸಿ ಕುಳಿತು ಅವರಿಂದ ಸತ್ಕೃತನಾದ ಬಲರಾಮನು-ವ್ಯಾಸ-ಪೀಠದಲ್ಲಿ ಕುಳಿತಿದ್ದ ಭಗವಾನ್ ವ್ಯಾಸರ ಶಿಷ್ಯನಾದ ರೋಮಹರ್ಷಣನನ್ನು ನೋಡಿದನು. ॥ ೨೨ ॥ ರೋಮಹರ್ಷಣನು ಸೂತಜಾತಿಯಲ್ಲಿ ಹುಟ್ಟಿದವನಾಗಿದ್ದರೂ ಬ್ರಾಹ್ಮಣರು ಕುಳಿತಿದ್ದುದಕ್ಕಿಂತ ಎತ್ತರವಾದ ಆಸನದಲ್ಲಿ ಕುಳಿತಿದ್ದುದನ್ನು, ತಾನು ಆಗಮಿಸಿದರೂ ಮೇಲೆದ್ದು ಅಭಿನಂದಿಸದೇ ಇದ್ದುದನ್ನು ನೋಡಿ ಬಲರಾಮನು ಕುಪಿತನಾಗಿ ಗುಡುಗಿದನು - ॥ ೨೩ ॥ "ಈ ರೋಮಹರ್ಷಣನು ಪ್ರತಿಲೋಮ ಜಾತಿಯಲ್ಲಿ ಹುಟ್ಟಿದವನಾಗಿದ್ದರೂ ಈ ಶ್ರೇಷ್ಠರಾದ ಬ್ರಾಹ್ಮಣರು ಮತ್ತು ಧರ್ಮರಕ್ಷಕರಾದ ನಾವು ಕುಳಿತಿರುವುದಕ್ಕಿಂತ ಉನ್ನತವಾದ ಪೀಠದಲ್ಲಿ ಕುಳಿತಿರುವನು. ಆದುದರಿಂದ ಈ ದುರ್ಬುದ್ಧಿಯು ಮರಣದಂಡನೆಗೆ ಪಾತ್ರನಾಗಿದ್ದಾನೆ. ॥ ೨೪ ॥

ಋಷೇರ್ಭಗವತೋ ಭೂತ್ವಾ ಶಿಷ್ಯೋಽಧೀತ್ಯ ಬಹೂನಿ ಚ ।
ಸೇತಿಹಾಸಪುರಾಣಾನಿ ಧರ್ಮಶಾಸ್ತ್ರಾಣಿ ಸರ್ವಶಃ ॥ ೨೫ ॥

ಅದಾಂತಸ್ಯಾವಿನೀತಸ್ಯ ವೃಥಾ ಪಂಡಿತಮಾನಿನಃ ।
ನ ಗುಣಾಯ ಭವಂತಿ ಸ್ಮ ನಟಸ್ಯೇವಾಜಿತಾತ್ಮನಃ ॥ ೨೬ ॥

ಈ ಮೂರ್ಖನು ಭಗವಾನ್ ವ್ಯಾಸಮಹರ್ಷಿಗಳ ಶಿಷ್ಯನಾಗಿ ಅವರಿಂದ ಇತಿಹಾಸ-ಪುರಾಣಗಳನ್ನು ಧರ್ಮಶಾಸ್ತ್ರವೇ ಮೊದಲಾದ ಹಲವಾರು ಶಾಸ್ತ್ರಗಳನ್ನೂ ಅಧ್ಯಯನ ಮಾಡಿರುವನು. ಆದರೆ ಇವನಿಗೆ ಮನಸ್ಸಿನ ಮೇಲೆ ಸಂಯಮವೇ ಇಲ್ಲ, ಇವನಲ್ಲಿ ವಿನಯವೂ ಇರದೆ, ಉದ್ದಂಡನಾಗಿದ್ದಾನೆ. ತಾನೇ ಮಹಾಪಂಡಿತನೆಂದು ಭಾವಿಸಿಕೊಂಡು ಬಿಟ್ಟಿದ್ದಾನೆ. ನಟನಾದವನ ಎಲ್ಲ ಚೇಷ್ಟೆಗಳೂ ಅಭಿನಯಮಾತ್ರವಾಗಿರುವಂತೆ ಇವನ ಅಧ್ಯಯನವೆಲ್ಲವೂ ಕೇವಲ ತೋರಿಕೆಗೆ ಮಾತ್ರವಾಗಿದೆ. ಇದರಿಂದ ಇವನಿಗಾಗಲೀ, ಇತರರಿಗಾಗಲೀ ಯಾವ ಪ್ರಯೋಜನವೂ ಇಲ್ಲ. ॥ ೨೫-೨೬ ॥

ಏತದರ್ಥೋ ಹಿ ಲೋಕೇಽಸ್ಮಿನ್ನವತಾರೋ ಮಯಾ ಕೃತಃ ।
ವಧ್ಯಾ ಮೇ ಧರ್ಮಧ್ವಜಿನಸ್ತೇ ಹಿ ಪಾತಕಿನೋಽಧಿಕಾಃ ॥ ೨೭ ॥

ಧರ್ಮದ ಲಾಂಛನಗಳನ್ನು ಧರಿಸಿಕೊಂಡು ಧರ್ಮವನ್ನು ಪಾಲಿಸದಿರುವವರು ಹೆಚ್ಚು ಪಾಪಿಗಳಾಗಿದ್ದಾರೆ. ಇವರು ವಧಿಸಲು ಯೋಗ್ಯರಾಗಿದ್ದಾರೆ. ಈ ಜಗತ್ತಿನಲ್ಲಿ ಇಂತಹ ಧರ್ಮಧ್ವಜಿಗಳನ್ನು ಶಿಕ್ಷಿಸುವ ಸಲುವಾಗಿಯೇ ನಾನು ಅವತಾರವೆತ್ತಿದ್ದೇನೆ.' ॥ ೨೭ ॥

ಏತಾವದುಕ್ತ್ವಾ ಭಗವಾನ್ ನಿವೃತ್ತೋಽಸದ್ವಧಾದಪಿ ।
ಭಾವಿತ್ವಾತ್ತಂ ಕುಶಾಗ್ರೇಣ ಕರಸ್ಥೇನಾಹನತ್ ಪ್ರಭುಃ ॥ ೨೮ ॥

ಭಗವಾನ್ ಬಲರಾಮನು ತೀರ್ಥಯಾತ್ರೆಯ ಕಾರಣದಿಂದ ದುಷ್ಟರ ಸಂಹಾರವನ್ನು ನಿಲ್ಲಿಸಿಬಿಟ್ಟಿದ್ದರೂ ಹೀಗೆ ಹೇಳಿ ಅವನು ಕೈಯಲ್ಲಿದ್ದ ದರ್ಭೆಯ ಅಗ್ರಭಾಗದಿಂದ ರೋಮಹರ್ಷಣನನ್ನು ಪ್ರಹರಿಸಿದನು. ಕೂಡಲೇ ಅವನು ಅಸುನೀಗಿದನು. ಆಗಬೇಕಾಗಿದ್ದುದು ಆಗಿಯೇ ತೀರುವುದು. ॥ ೨೮ ॥

ಹಾಹೇತಿ ವಾದಿನಃ ಸರ್ವೇ ಮುನಯಃ ಖಿನ್ನಮಾನಸಾಃ ।
ಊಚುಃ ಸಂಕರ್ಷಣಂ ದೇವಮಧರ್ಮಸ್ತೇ ಕೃತಃ ಪ್ರಭೋ ॥ ೨೯ ॥

ಸೂತನು ಹತನಾದುದನ್ನು ಕಂಡು ಎಲ್ಲ ಋಷಿ-ಮುನಿಗಳು 'ಅಯ್ಯೋ! ಎಂತಹ ಅನಾಹುತವಾಯಿತು" ಎಂದು ಕೂಗಿಕೊಳ್ಳುತ್ತಾ ಖಿನ್ನಮನಸ್ಕರಾದರು. ಅವರು ದೇವಾಧಿದೇವನಾದ ಭಗವಾನ್ ಬಲರಾಮನಲ್ಲಿ - 'ಪ್ರಭೋ! ನೀನು ಭಾರೀ ದೊಡ್ಡ ಅಧರ್ಮವನ್ನು ಮಾಡಿಬಿಟ್ಟೆ' ಎಂದು ಹೇಳಿದರು. ॥ ೨೯ ॥

ಅಸ್ಯ ಬ್ರಹ್ಮಾಸನಂ ದತ್ತಮಸ್ಮಾಭಿರ್ಯದುನಂದನ ।
ಆಯುಶ್ಚಾತ್ಮಾಕ್ಲಮಂ ತಾವದ್ಯಾವತ್ಸತ್ರಂ ಸಮಾಪ್ಯತೇ ॥ ೩೦ ॥

ಯದುವಂಶ ಶಿರೋಮಣಿಯೇ! ರೋಮಹರ್ಷಣ ಸೂತನನ್ನು ಯಜ್ಞದಲ್ಲಿ ಪುರಾಣವನ್ನು ಹೇಳಲು ಬ್ರಹ್ಮನ ಆಸನದಲ್ಲಿ ನಾವೇ ಕುಳ್ಳಿರಿಸಿದ್ದೆವು. ನಾವು ಪ್ರಾರಂಭಿಸಿದ ಸತ್ರಯಾಗವು ಮುಗಿಯುವವರೆಗೆ ಅವನಿಗೆ ಶಾರೀರಿಕ ಕಷ್ಟಗಳಿಂದ ರಹಿತವಾದ ಆಯುಸ್ಸನ್ನೂ ಕೊಟ್ಟಿದ್ದೆವು. ॥ ೩೦ ॥

ಅಜಾನತೈವಾಚರಿತಸ್ತ್ವಯಾ ಬ್ರಹ್ಮವಧೋ ಯಥಾ ।
ಯೋಗೇಶ್ವರಸ್ಯ ಭವತೋ ನಾಮ್ನಾಯೋಽಪಿ ನಿಯಾಮಕಃ ॥ ೩೧ ॥

ಯದ್ಯೇತದ್ಬ್ರಹ್ಮಹತ್ಯಾಯಾಃ ಪಾವನಂ ಲೋಕಪಾವನ ।
ಚರಿಷ್ಯತಿ ಭವಾನ್ಲೋಕಸಂಗ್ರಹೋಽನನ್ಯಚೋದಿತಃ ॥ ೩೨ ॥

ಈ ವಿಷಯವನ್ನು ತಿಳಿಯದ ನೀನು ಬ್ರಹ್ಮಹತ್ಯೆಗೆ ಸಮಾನವಾದ ಕಾರ್ಯವನ್ನು ಮಾಡಿಬಿಟ್ಟಿರುವೆ. ಯೋಗೇಶ್ವರನಾದ ನಿನ್ನ ಮೇಲೆ ವೇದಗಳೂ ಕೂಡ ವಿಧಿ-ನಿಷೇಧಗಳನ್ನು ಹೇರಲಾರವು ಎಂಬುದನ್ನೂ ನಾವು ಅರಿತಿದ್ದೇವೆ. ಲೋಕವನ್ನು ಪವಿತ್ರಗೊಳಿಸುವ ಸಲುವಾಗಿಯೇ ನಿನ್ನ ಅವತಾರವಾಗಿದೆ. ಆದರೂ ನಮ್ಮದೊಂದು ಪ್ರಾರ್ಥನೆಯಿದೆ. ಯಾರ ಪ್ರೇರಣೆಯೂ ಇಲ್ಲದೆ ಸ್ವೇಚ್ಛೆಯಿಂದಲೇ ನೀನು ಬ್ರಹ್ಮಹತ್ಯಾ ದೋಷಕ್ಕೆ ಪ್ರಾಯಶ್ಚಿತ್ತವನ್ನು ಮಾಡಿಕೊಂಡರೆ ಇದರಿಂದ ಜನರಿಗೆ ದೊಡ್ಡ ಪಾಠಸಿಗಬಹುದು. ॥ ೩೧-೩೨ ॥

ಶ್ರೀಭಗವಾನುವಾಚ

ಕರಿಷ್ಯೇ ವಧನಿರ್ವೇಶಂ ಲೋಕಾನುಗ್ರಹಕಾಮ್ಯಯಾ ।
ನಿಯಮಃ ಪ್ರಥಮೇ ಕಲ್ಪೇ ಯಾವಾನ್ಸತು ವಿಧೀಯತಾಮ್ ॥ ೩೩ ॥

ಭಗವಾನ್ ಬಲರಾಮನು ಹೇಳುತ್ತಾನೆ - ನಾನು ಲೋಕಶಿಕ್ಷಣಕ್ಕಾಗಿ ಮತ್ತು ಲೋಕಾನುಗ್ರಹಕ್ಕಾಗಿ ಬ್ರಹ್ಮಹತ್ಯಾಪಾಪಕ್ಕೆ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳುತ್ತೇನೆ. ಆದುದರಿಂದ ಪ್ರಥಮ ಶ್ರೇಣಿಯ ಪ್ರಾಯಶ್ಚಿತ್ತದ ವಿಧಿ-ವಿಧಾನಗಳನ್ನು ನೀವು ನನಗೆ ಹೇಳಿರಿ. ॥ ೩೩ ॥

ದೀರ್ಘಮಾಯುರ್ಬತೈತಸ್ಯ ಸತ್ತ್ವಮಿಂದ್ರಿಯಮೇವ ಚ ।
ಆಶಾಸಿತಂ ಯತ್ತದ್ ಬ್ರೂತ ಸಾಧಯೇ ಯೋಗಮಾಯಯಾ ॥ ೩೪ ॥

ಋಷಯ ಊಚುಃ

ಅಸ್ತ್ರಸ್ಯ ತವ ವೀರ್ಯಸ್ಯ ಮೃತ್ಯೋರಸ್ಮಾಕಮೇವ ಚ ।
ಯಥಾ ಭವೇದ್ವಚಃ ಸತ್ಯಂ ತಥಾ ರಾಮ ವಿಧೀಯತಾಮ್ ॥ ೩೫ ॥

ಶ್ರೀಭಗವಾನುವಾಚ

ಆತ್ಮಾ ವೈ ಪುತ್ರ ಉತ್ಪನ್ನ ಇತಿ ವೇದಾನುಶಾಸನಮ್ ।
ತಸ್ಮಾದಸ್ಯ ಭವೇದ್ವಕ್ತಾ ಆಯುರಿಂದ್ರಿಯಸತ್ತ್ವವಾನ್ ॥ ೩೬ ॥

ಕಿಂ ವಃ ಕಾಮೋ ಮುನಿಶ್ರೇಷ್ಠಾ ಬ್ರೂತಾಹಂ ಕರವಾಣ್ಯಥ ।
ಅಜಾನತಸ್ತ್ವಪಚಿತಿಂ ಯಥಾ ಮೇ ಚಿಂತ್ಯತಾಂ ಬುಧಾಃ ॥ ೩೭ ॥

* ಋಷಯ ಊಚುಃ

ಇಲ್ವಲಸ್ಯ ಸುತೋ ಘೋರೋ ಬಲ್ವಲೋ ನಾಮ ದಾನವಃ ।
ಸ ದೂಷಯತಿ ನಃ ಸತ್ರಮೇತ್ಯ ಪರ್ವಣಿ ಪರ್ವಣಿ ॥ ೩೮ ॥

ತಂ ಪಾಪಂ ಜಹಿ ದಾಶಾರ್ಹ ತನ್ನಃ ಶುಶ್ರೂಷಣಂ ಪರಮ್ ।
ಪೂಯಶೋಣಿತವಿಣ್ಮೂತ್ರಸುರಾಮಾಂಸಾಭಿವರ್ಷಿಣಮ್ ॥ ೩೯ ॥

ತತಶ್ಚ ಭಾರತಂ ವರ್ಷಂ ಪರೀತ್ಯ ಸುಸಮಾಹಿತಃ ।
ಚರಿತ್ವಾ ದ್ವಾದಶ ಮಾಸಾಂಸ್ತೀರ್ಥಸ್ನಾಯೀ ವಿಶುದ್ಧ್ಯಸೇ ॥ ೪೦ ॥

ಈ ರೋಮಹರ್ಷಣನಿಗೆ ನೀವು ಕೊಡಲು ಬಯಸಿದ ದೀರ್ಘಾಯುಷ್ಯವನ್ನು, ಶರೀರ ಬಲವನ್ನೂ, ಇಂದ್ರಿಯಶಕ್ತಿಯನ್ನೂ ನನಗೆ ಹೇಳಿರಿ. ನನ್ನ ಯೋಗಮಾಯೆಯಿಂದ ಅವೆಲ್ಲವನ್ನು ಸಾಧಿಸಿಕೊಡುತ್ತೇನೆ. ॥ ೩೪ ॥

ಋಷಿಗಳು ಹೇಳಿದರು – ಬಲರಾಮನೇ! ನಿನ್ನ ಅಸ್ತ್ರ ಪರಾಕ್ರಮ ಮತ್ತು ಇವನ ಮೃತ್ಯುವು ವ್ಯರ್ಥವಾಗಬಾರದು. ನಾವು ಇವನಿಗೆ ಕೊಟ್ಟವರದಾನವೂ ಸತ್ಯವಾಗಬೇಕು. ನಿನ್ನ ಯೋಗಮಾಯೆಯಿಂದ ಇದನ್ನು ಸಾಧಿಸಿಕೊಡು ಪ್ರಭುವೇ! ॥ ೩೫ ॥

ಭಗವಾನ್ ಬಲರಾಮನು ಹೇಳಿದನು – ಋಷಿಗಳಿರಾ! ತಾನೇ (ಆತ್ಮನು) ಪುತ್ರನ ರೂಪದಲ್ಲಿ ಹುಟ್ಟುವನೆಂದು ವೇದವು ಹೇಳುತ್ತದೆ. ಆದಕಾರಣ ರೋಮಹರ್ಷಣನ ಸ್ಥಾನದಲ್ಲಿ ಅವನ ಮಗನು ನಿಮಗೆ ಪುರಾಣಕಥೆಗಳನ್ನು ಹೇಳುವನು. ಅವನಿಗೆ ನಾನು ನನ್ನ ಶಕ್ತಿಯಿಂದ ದೀರ್ಘಾಯುಸ್ಸು, ಇಂದ್ರಿಯಪಟುತ್ವ ಮತ್ತು ಬಲವನ್ನು ಕರುಣಿಸುತ್ತೇನೆ. ॥ ೩೬ ॥ ಮಹರ್ಷಿಗಳೇ! ಇದಲ್ಲದೆ ಇನ್ನೇನು ನೀವುಗಳು ಬಯಸುವಿರೋ ಅದನ್ನು ಹೇಳಿರಿ. ನಾನು ನಿಮ್ಮಗಳ ಇಚ್ಛೆಯನ್ನು ಪೂರ್ಣಗೊಳಿಸುವೆನು. ತಿಳಿಯದೆ ನನ್ನಿಂದಾದ ಅಪರಾಧಕ್ಕೆ ಪ್ರಾಯಶ್ಚಿತ್ತವನ್ನೂ ಹೇಳಿರಿ. ಏಕೆಂದರೆ, ತಾವು ಈ ವಿಷಯದಲ್ಲಿ ವಿದ್ವಾಂಸರಾಗಿದ್ದೀರಿ. ॥ ೩೭ ॥

ಋಷಿಗಳು ಹೇಳಿದರು – ಇಲ್ವಲನ ಮಗ ಬಲ್ವಲ ಎಂಬ ಭಯಂಕರನಾದ ದಾನವನಿರುವನು. ಅವನು ಪ್ರತಿಯೊಂದು ಪರ್ವಗಳಲ್ಲಿಯೂ (ಅಮಾವಾಸ್ಯೆ ಮತ್ತು ಪೌರ್ಣಮಿ) ಇಲ್ಲಿಗೆ ಬಂದು ನಮ್ಮ ಸತ್ರವನ್ನು ಕೆಡಿಸುತ್ತಾನೆ. ॥ ೩೮ ॥ ಯದುನಂದನನೇ! ಅವನು ಇಲ್ಲಿಗೆ ಬಂದು ಕೀವು, ರಕ್ತ, ಅಮೇಧ್ಯ, ಮೂತ್ರ, ಮದ್ಯ, ಮಾಂಸ ಇವುಗಳನ್ನು ಯಜ್ಞವೇದಿಕೆಯಲ್ಲಿ ಸುರಿಯುತ್ತಾನೆ. ನೀನು ಆ ಪಾಪಿಯನ್ನು ಸಂಹರಿಸಿದರೆ ನಮ್ಮಗಳ ದೊಡ್ಡ ಸೇವೆ ಮಾಡಿದಂತಾಗುವುದು. ॥ ೩೯ ॥ ಅನಂತರ ನೀನು ಏಕಾಗ್ರ ಮನಸ್ಸಿನಿಂದ ತೀರ್ಥಗಳಲ್ಲಿ, ಸ್ನಾನ ಮಾಡುತ್ತಾ ಹನ್ನೆರಡು ತಿಂಗಳವರೆಗೆ ಭಾರತವರ್ಷವನ್ನು ಸಂಚರಿಸು. ಇದರಿಂದ ನಿನ್ನ ಶುದ್ಧಿಯಾಗುವುದು. ॥ ೪೦ ॥

ಎಪ್ಪತ್ತೆಂಟನೆಯ ಅಧ್ಯಾಯವು ಮುಗಿಯಿತು. ॥ ೭೮ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮಸ್ಕಂಧೇ ಉತ್ತರಾರ್ಧೇ ಬಲದೇವಚರಿತ್ರೇ ಬಲ್ವಲವಧೋಪಕ್ರಮೋ ನಾಮಾಷ್ಟಸಪ್ತತಿತಮೋಽಧ್ಯಾಯಃ ॥ ೭೮ ॥

ಎಪ್ಪತ್ತೊಂಭತ್ತನೆಯ ಅಧ್ಯಾಯ

ಬಲರಾಮನಿಂದ ಬಲ್ವಲನ ಸಂಹಾರ - ತೀರ್ಥಯಾತ್ರೆ

ಶ್ರೀಶುಕ ಉವಾಚ

ತತಃ ಪರ್ವಣ್ಯುಪಾವೃತ್ತೇ ಪ್ರಚಂಡಃ ಪಾಂಸುವರ್ಷಣಃ ।
ಭೀಮೋ ವಾಯುರಭೂದ್ರಾಜನ್ ಪೂಯಗಂಧಸ್ತು ಸರ್ವಶಃ ॥ ೧ ॥

ತತೋಽಮೇಧ್ಯಮಯಂ ವರ್ಷಂ ಬಲ್ವಲೇನ ವಿನಿರ್ಮಿತಮ್ ।
ಅಭವದ್ಯಜ್ಞಶಾಲಾಯಾಂ ಸೋಽನ್ವದೃಶ್ಯತ ಶೂಲಧೃಕ್ ॥ ೨ ॥

ತಂ ವಿಲೋಕ್ಯ ಬೃಹತ್ಕಾಯಂ ಭಿನ್ನಾಂಜನಚಯೋಪಮಮ್ ।
ತಪ್ತತಾಮ್ರಶಿಖಾಶ್ಮಶ್ರುಂ ದಂಷ್ಟ್ರೋಗ್ರಭ್ರುಕುಟೀಮುಖಮ್ ॥ ೩ ॥

ಸಸ್ಮಾರ ಮುಸಲಂ ರಾಮಃ ಪರಸೈನ್ಯವಿದಾರಣಮ್ ।
ಹಲಂ ಚ ದೈತ್ಯದಮನಂ ತೇ ತೂರ್ಣಮುಪತಸ್ಥತುಃ ॥ ೪ ॥

ತಮಾಕೃಷ್ಯ ಹಲಾಗ್ರೇಣ ಬಲ್ವಲಂ ಗಗನೇಚರಮ್ ।
ಮುಸಲೇನಾಹನತ್ಕ್ರುದ್ಧೋ ಮೂರ್ಧ್ನಿ ಬ್ರಹ್ಮದ್ರುಹಂ ಬಲಃ ॥ ೫ ॥

ಸೋಽಪತದ್ಭುವಿ ನಿರ್ಭಿನ್ನಲಲಾಟೋಽಸೃಕ್ಸಮುತ್ಸೃಜನ್ ।
ಮುಂಚನ್ನಾರ್ತಸ್ವರಂ ಶೈಲೋ ಯಥಾ ವಜ್ರಹತೋಽರುಣಃ ॥ ೬ ॥

ಸಂಸ್ತುತ್ಯ ಮುನಯೋ ರಾಮಂ ಪ್ರಯುಜ್ಯಾವಿತಥಾಶಿಷಃ ।
ಅಭ್ಯಷಿಂಚನ್ಮಹಾಭಾಗಾ ವೃತ್ರಘ್ನಂ ವಿಬುಧಾ ಯಥಾ ॥ ೭ ॥

ವೈಜಯಂತೀಂ ದದುರ್ಮಾಲಾಂ ಶ್ರೀಧಾಮಾಮ್ಲಾನಪಂಕಜಾಮ್ ।
ರಾಮಾಯ ವಾಸಸೀ ದಿವ್ಯೇ ದಿವ್ಯಾನ್ಯಾಭರಣಾನಿ ಚ ॥ ೮ ॥

ಅಥ ತೈರಭ್ಯನುಜ್ಞಾತಃ ಕೌಶಿಕೀಮೇತ್ಯ ಬ್ರಾಹ್ಮಣೈಃ ।
ಸ್ನಾತ್ವಾ ಸರೋವರಮಗಾದ್ಯತಃ ಸರಯೂರಾಸ್ರವತ್ ॥ ೯ ॥

ಅನುಸ್ರೋತೇನ ಸರಯೂಂ ಪ್ರಯಾಗಮುಪಗಮ್ಯ ಸಃ ।
ಸ್ನಾತ್ವಾ ಸಂತರ್ಪ್ಯ ದೇವಾದೀನ್ಜಗಾಮ ಪುಲಹಾಶ್ರಮಮ್ ॥ ೧೦ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ - ಪರೀಕ್ಷಿತನೇ! ಪರ್ವದಿವಸವು ಬಂದಾಗ ಭಯಂಕರ ಗಾಳಿಯು ಬೀಸ ತೊಡಗಿತು. ಧೂಳಿನ ಮಳೆಯು ಸುರಿಯತೊಡಗಿತು. ಎಲ್ಲ ಕಡೆಯಿಂದ ಕೀವಿನ ದುರ್ಗಂಧವು ಹರಡಿಕೊಂಡಿತು. ॥ ೧ ॥ ಬಳಿಕ ಬಲ್ವಲ ರಾಕ್ಷಸನು ಯಜ್ಞಶಾಲೆಯಲ್ಲಿ ಮಲ-ಮೂತ್ರಾದಿ ಅಪವಿತ್ರ ವಸ್ತುಗಳನ್ನು ಸುರಿಸಿದನು. ಅನಂತರ ಕೈಯಲ್ಲಿ ತ್ರಿಶೂಲವನ್ನು ಹಿಡಿದುಕೊಂಡು ಕಾಣಿಸಿಕೊಂಡನು. ॥ ೨ ॥ ದೊಡ್ಡದಾದ ಶರೀರವನ್ನು ಹೊಂದಿದ್ದ ಅವನು ಕಾಡಿಗೆಯ ಬೆಟ್ಟದಂತೆ ಕಪ್ಪಾಗಿದ್ದು ಕಾಯಿಸಿದ ತಾಮ್ರದಂತೆ ಕೆಂಪಾದ ತಲೆದೂದಲು, ಗಡ್ಡ-ಮೀಸೆಗಳನ್ನು ಹೊಂದಿದ್ದನು. ದೊಡ್ಡ-ದೊಡ್ಡ ಕೋರೆದಾಡೆಗಳಿಂದಲೂ, ಗಂಟಿಕ್ಕಿದ ಹುಬ್ಬುಗಳಿಂದಲೂ ಅವನ ಮುಖವು ಭಯಂಕರವಾಗಿ ಕಾಣುತ್ತಿತ್ತು. ಅವನನ್ನು ನೋಡಿದೊಡನೆ ಬಲರಾಮನು ಶತ್ರುಸೈನ್ಯವನ್ನು ಧ್ವಂಸಗೊಳಿಸುವ ಮುಸಲಾಯುಧವನ್ನು, ದೈತ್ಯರನ್ನು ಸಂಹರಿಸುವ ಹಲಾಯುಧ ವನ್ನು ಸ್ಮರಿಸಿಕೊಂಡನು. ಸ್ಮರಿಸಿದಾಕ್ಷಣದಲ್ಲೇ ಆ ದಿವ್ಯಾಯುಧಗಳು ಬಲರಾಮನ ಕೈಗಳನ್ನು ಅಲಂಕರಿಸಿದುವು. ॥ ೩-೪ ॥ ಬಲರಾಮನು ಆಕಾಶದಲ್ಲಿ ಸಂಚರಿಸುವ ಬಲ್ವಲ ದೈತ್ಯನನ್ನು ತನ್ನ ಹಲಾಯುಧದಿಂದ ಸೆಳೆದುಕೊಂಡು ಆ ಬ್ರಹ್ಮದ್ರೋಹಿಯ ಶಿರಸ್ಸಿನಲ್ಲಿ ಅತ್ಯಂತ ಕ್ರೋಧಗೊಂಡು ಮುಸಲಾಯುಧದಿಂದ ಬಲವಾಗಿ ಹೊಡೆದನು. ಇದರಿಂದ ಅವನ ಹಣೆ ಒಡೆದು, ರಕ್ತವನ್ನು ಉಗುಳುತ್ತಾ ವಜ್ರಾಘಾತದಿಂದ ಗೈರಿಕಾದಿ ಧಾತುಗಳಿಂದ ಕೆಂಪಾದ ಪರ್ವತವು ಉರುಳುವಂತೆ ಆರ್ತಸ್ವರದಿಂದ ಬೊಬ್ಬಿರಿದು ಸತ್ತು ನೆಲಕ್ಕೆ ಉರುಳಿದನು. ॥ ೫-೬ ॥ ನೈಮಿಷಾರಣ್ಯ ನಿವಾಸಿಗಳಾದ ಮಹಾಭಾಗ್ಯ ಶಾಲಿಗಳಾದ ಮುನಿಗಳು ಬಲರಾಮನನ್ನು ಸ್ತುತಿಸಿ, ಎಂದೂ ವ್ಯರ್ಥವಾಗದಿರುವ ಆಶೀರ್ವಾದಗಳನ್ನು ಕೊಟ್ಟರು. ಮತ್ತೆ ದೇವತೆಗಳು ಇಂದ್ರನಿಗೆ ಅಭಿಷೇಕ ಮಾಡಿದಂತೆಯೇ ಬಲರಾಮನಿಗೆ ಅಭಿಷೇಕ ಮಾಡಿದರು. ॥ ೭ ॥ ಅನಂತರ ಋಷಿಗಳು ಬಲರಾಮನಿಗೆ ದಿವ್ಯವಾದ ವಸ್ತ್ರಾಭೂಷಣಗಳನ್ನು ಸಮರ್ಪಿಸಿ, ಎಂದೂ ಬಾಡದಿರುವ, ಸೌಂದರ್ಯಕ್ಕೆ ಆಶ್ರಯವಾದ ಕಮಲ ಪುಷ್ಪಗಳಿಂದ ಕೂಡಿದ ವೈಜಯಂತಿ ಮಾಲೆಯನ್ನು ಅರ್ಪಿಸಿದರು. ॥ ೮ ॥

ಅನಂತರ ನೈಮಿಷಾರಣ್ಯವಾಸಿಗಳಾದ ಋಷಿಗಳಿಂದ ಬೀಳ್ಕೊಂಡು, ಅವರ ಆಜ್ಞೆಯಂತೆ ಬಲರಾಮನು ಬ್ರಾಹ್ಮಣರೊಡನೆ ಕೌಶಿಕೀ ನದಿಯ ತೀರಕ್ಕೆ ಬಂದನು. ಅಲ್ಲಿ ಸ್ನಾನ ಮಾಡಿ, ಸರಯೂ ನದಿಯ ಉಗಮವಾದ ಮಾನಸ ಸರೋವರಕ್ಕೆ ಹೋದನು. ॥ ೯ ॥ ಅಲ್ಲಿಂದ ಸರಯೂ ತೀರದಲ್ಲೇ ಮುಂದರಿಯುತ್ತಾ ತೀರ್ಥರಾಜ ಪ್ರಯಾಗಕ್ಕೆ ಬಂದನು. ಅಲ್ಲಿ ಸ್ನಾನಮಾಡಿ, ದೇವ-ಋಷಿ-ಪಿತೃ ತರ್ಪಣಗಳನ್ನು ಮಾಡಿ ಅಲ್ಲಿಂದ ಪುಲಹಾಶ್ರಮಕ್ಕೆ ಹೋದನು. ॥ ೧೦ ॥

ಗೋಮತೀಂ ಗಂಡಕೀಂ ಸ್ನಾತ್ವಾ ವಿಪಾಶಾಂ ಶೋಣ ಆಪ್ಲುತಃ ।
ಗಯಾಂ ಗತ್ವಾ ಪಿತೄನಿಷ್ಟ್ವಾ ಗಂಗಾಸಾಗರಸಂಗಮೇ
॥ ೧೧ ॥

ಉಪಸ್ಪೃಶ್ಯ ಮಹೇಂದ್ರಾದ್ರೌ ರಾಮಂ ದೃಷ್ಟ್ವಾಭಿವಾದ್ಯ ಚ ।
ಸಪ್ತಗೋದಾವರೀಂ ವೇಣಾಂ ಪಂಪಾಂ ಭೀಮರಥೀಂ ತತಃ
॥ ೧೨ ॥

ಸ್ಕಂದಂ ದೃಷ್ಟ್ವಾ ಯಯೌ ರಾಮಃ ಶ್ರೀಶೈಲಂ ಗಿರಿಶಾಲಯಮ್ ।
ದ್ರವಿಡೇಷು ಮಹಾಪುಣ್ಯಂ ದೃಷ್ಟ್ವಾದ್ರಿಂ ವೇಂಕಟಂ ಪ್ರಭುಃ
॥ ೧೩ ॥

ಕಾಮಕೋಷ್ಣೀಂ ಪುರೀಂ ಕಾಂಚೀಂ ಕಾವೇರೀಂ ಚ ಸರಿದ್ವರಾಮ್ ।
ಶ್ರೀರಂಗಾಖ್ಯಂ ಮಹಾಪುಣ್ಯಂ ಯತ್ರ ಸನ್ನಿಹಿತೋ ಹರಿಃ
॥ ೧೪ ॥

ಋಷಭಾದ್ರಿಂ ಹರೇಃ ಕ್ಷೇತ್ರಂ ದಕ್ಷಿಣಾಂ ಮಥುರಾಂ ತಥಾ ।
ಸಾಮುದ್ರಂ ಸೇತುಮಗಮನ್ಮಹಾಪಾತಕನಾಶನಮ್
॥ ೧೫ ॥

ತತ್ರಾಯುತಮದಾದ್ಧೇನೂರ್ಬ್ರಾಹ್ಮಣೇಭ್ಯೋ ಹಲಾಯುಧಃ ।
ಕೃತಮಾಲಾಂ ತಾಮ್ರಪರ್ಣೀಂ ಮಲಯಂ ಚ ಕುಲಾಚಲಮ್
॥ ೧೬ ॥

ತತ್ರಾಗಸ್ತ್ಯಂ ಸಮಾಸೀನಂ ನಮಸ್ಕೃತ್ಯಾಭಿವಾದ್ಯ ಚ ।
ಯೋಜಿತಸ್ತೇನ ಚಾಶೀರ್ಭಿರನುಜ್ಞಾತೋ ಗತೋಽರ್ಣವಮ್ ।
ದಕ್ಷಿಣಂ ತತ್ರ ಕನ್ಯಾಖ್ಯಾಂ ದುರ್ಗಾಂ ದೇವೀಂ ದದರ್ಶ ಸಃ
॥ ೧೭ ॥

ತತಃ ಫಾಲ್ಗುನಮಾಸಾದ್ಯ ಪಂಚಾಪ್ಸರಸಮುತ್ತಮಮ್ ।
ವಿಷ್ಣುಃ ಸನ್ನಿಹಿತೋ ಯತ್ರ ಸ್ನಾತ್ವಾಸ್ಪರ್ಶದ್ಗವಾಯುತಮ್
॥ ೧೮ ॥

ತತೋಽಭಿವ್ರಜ್ಯ ಭಗವಾನ್ ಕೇರಲಾಂಸ್ತು ತ್ರಿಗರ್ತಕಾನ್ ।
ಗೋಕರ್ಣಾಖ್ಯಂ ಶಿವಕ್ಷೇತ್ರಂ ಸಾನ್ನಿಧ್ಯಂ ಯತ್ರ ಧೂರ್ಜಟೇಃ
॥ ೧೯ ॥

ಆರ್ಯಾಂ ದ್ವೈಪಾಯನೀಂ ದೃಷ್ಟ್ವಾ ಶೂರ್ಪಾರಕಮಗಾದ್ಬಲಃ ।
ತಾಪೀಂ ಪಯೋಷ್ಣೀಂ ನಿರ್ವಿಂಧ್ಯಾಮುಪಸ್ಪೃಶ್ಯಾಥ ದಂಡಕಮ್
॥ ೨೦ ॥

ಅಲ್ಲಿಂದ ಮುಂದೆ ಗಂಡಕೀ, ಗೋಮತೀ, ವಿಪಾಶಾ, ಶೋಣಾ ಮುಂತಾದ ಪುಣ್ಯನದಿಗಳಲ್ಲಿ ಸ್ನಾನಮಾಡಿ, ಗಯಾ ಕ್ಷೇತ್ರಕ್ಕೆ ಬಂದು ಅಲ್ಲಿ ಪಿತೃಗಳಿಗೆ ಶ್ರಾದ್ಧಮಾಡಿ, ತರ್ಪಣಾದಿಗಳನ್ನಿತ್ತು ಮುಂದೆ ಪ್ರಯಾಣ ಮಾಡುತ್ತಾ ಗಂಗಾ-ಸಾಗರ ಸಂಗಮಕ್ಕೆ ಹೋಗಿ ಅಲ್ಲಿ ಸ್ನಾನಾದಿ ತೀರ್ಥಕರ್ಮಗಳನ್ನಾಚರಿಸಿ, ಮಹೇಂದ್ರ ಪರ್ವತಕ್ಕೆ ಹೋದನು. ಅಲ್ಲಿ ಪರಶುರಾಮರ ದರ್ಶನ ಮತ್ತು ಅಭಿವಾದನ ಮಾಡಿದನು. ಅನಂತರ ಸಪ್ತಗೋದಾವರೀ, ವೇಣಾ, ಪಂಪಾ ಭೀಮರಥೀ ಮುಂತಾದವುಗಳಲ್ಲಿ ಸ್ನಾನಮಾಡಿ, ಕಾರ್ತಿಕ ಸ್ವಾಮಿಯನ್ನು ದರ್ಶಿಸಿ ಪರಶಿವನ ನಿವಾಸವಾದ ಶ್ರೀಶೈಲಕ್ಕೆ ತಲುಪಿದನು. ಬಳಿಕ ಬಲರಾಮನು ದ್ರವಿಡ ದೇಶದ ಪರಮ ಪುಣ್ಯಮಯ ವೇಂಕಟಾದ್ರಿ ಕ್ಷೇತ್ರವನ್ನು ದರ್ಶನಮಾಡಿ ಅಲ್ಲಿಂದ ಆವನು ಕಂಚಿ ಕಾಮಾಕ್ಷಿ, ಶಿವಕಂಚಿ, ವಿಷ್ಣುಕಂಚಿ ದರ್ಶನ ಮಾಡುತ್ತಾ ಶ್ರೇಷ್ಠವಾದ ಕಾವೇರಿ ನದಿಯಲ್ಲಿ ಸ್ನಾನಮಾಡಿ, ಪುಣ್ಯಪ್ರದವಾದ, ಶ್ರೀಹರಿಯ ಸಾಕ್ಷಾತ್ ಸಾನ್ನಿಧ್ಯವಿರುವ ಶ್ರೀರಂಗಕ್ಷೇತ್ರಕ್ಕೆ ಆಗಮಿಸಿದನು. ॥ ೧೧-೧೪ ॥ ಅಲ್ಲಿ ರಂಗನಾಥ ಸ್ವಾಮಿಯನ್ನು ಸಂದರ್ಶಿಸಿ ಅಲ್ಲಿಂದ ಭಗವಾನ್ ವಿಷ್ಣುವಿನ ಮತ್ತೊಂದು ಕ್ಷೇತ್ರವಾದ ಋಷಭ ಪರ್ವತ, ದಕ್ಷಿಣ ಮಥುರೆ ಹಾಗೂ ಮಹಾ ಮಹಾ ಪಾಪಗಳನ್ನು ನಾಶಗೊಳಿಸುವ ಸೇತುಬಂಧದ ಯಾತ್ರೆ ಮಾಡಿದನು. ॥ ೧೫ ॥ ಅಲ್ಲಿ ಬಲರಾಮನು ಬ್ರಾಹ್ಮಣರಿಗೆ ಹತ್ತು ಸಾವಿರ ಗೋವುಗಳನ್ನು ದಾನಮಾಡಿದನು. ಪುನಃ ಅಲ್ಲಿಂದ ಕೃತಮಾಲಾ, ತಾಮ್ರಪರ್ಣಿ ನದಿಗಳಲ್ಲಿ ಸ್ನಾನಮಾಡಿ ಮತ್ತೆ ಮಲಯಾಚಲಕ್ಕೆ ಹೋದನು. ಆ ಪರ್ವತವು ಏಳು ಕುಲಪರ್ವತ ಗಳಲ್ಲಿ ಒಂದಾಗಿದೆ. ॥ ೧೬ ॥ ಅಲ್ಲಿ ವಿರಾಜಮಾನರಾದ ಅಗಸ್ತ್ಯ ಮುನಿಗಳನ್ನು ಅಭಿವಾದನ - ನಮಸ್ಕಾರಮಾಡಿ, ಅವರಿಂದ ಆಶೀರ್ವಾದ-ಅನುಜ್ಞೆಯನ್ನು ಪಡೆದು ಬಲರಾಮನು ದಕ್ಷಿಣ ಸಮುದ್ರದ ಯಾತ್ರೆ ಗೈದನು. ಅಲ್ಲಿ ಅವನು ದುರ್ಗಾದೇವಿಯನ್ನು ಕನ್ಯಾಕುಮಾರಿಯ ರೂಪದಲ್ಲಿ ದರ್ಶಿಸಿದನು. ॥ ೧೭ ॥ ಅನಂತರ ಆವನು ಫಾಲ್ಗುಣತೀರ್ಥವಾದ ಅನಂತಶಯನ ಕ್ಷೇತ್ರಕ್ಕೆ ಹೋಗಿ ಅಲ್ಲಿಯ ಪಂಚಾಪ್ಸರಸ ತೀರ್ಥದಲ್ಲಿ ಸ್ನಾನಮಾಡಿದನು. ಆ ತೀರ್ಥ ದಲ್ಲಿ ಭಗವಾನ್ ವಿಷ್ಣುವಿನ ಸದಾ ಸಾನ್ನಿಧ್ಯವಿರುತ್ತದೆ. ಅಲ್ಲಿ ಬಲ ರಾಮನು ಹತ್ತು ಸಾವಿರ ಗೋವುಗಳನ್ನು ಬ್ರಾಹ್ಮಣರಿಗೆ ದಾನ ಮಾಡಿದನು. ॥ ೧೮ ॥

ಅನಂತರ ಭಗವಾನ್ ಬಲರಾಮನು ಅಲ್ಲಿಂದ ಹೊರಟು ಕೇರಳ ಮತ್ತು ತ್ರಿಗರ್ತದೇಶಗಳನ್ನು ಸಂಚರಿಸಿ ಸದಾ-ಸರ್ವದಾ ಶ್ರೀಶಂಕರನ ಸಾನ್ನಿಧ್ಯವಿರುವ ಗೋಕರ್ಣಕ್ಷೇತ್ರಕ್ಕೆ ಹೋಗಿ ಮಹಾಬಲೇಶ್ವರನದರ್ಶನ ಮಾಡಿದನು. ॥ ೧೯ ॥ ಅಲ್ಲಿಂದ ಮುಂದೆ ನೀರಿನಿಂದಾವೃತವಾದ ದ್ವೀಪದಲ್ಲಿ ನಿವಾಸ ಮಾಡಿದ್ದ ಆರ್ಯಾ ದುರ್ಗೆಯ ದರ್ಶನಮಾಡಲು ಕೊಂಕಣ ಪ್ರದೇಶಕ್ಕೆ ಹೋದನು ಮತ್ತೆ ಅಲ್ಲಿಂದ ಹೊರಟು ಶೂರ್ಪಾರಕ ಕ್ಷೇತ್ರದ ಯಾತ್ರೆ ಮಾಡಿದನು. ಬಳಿಕ ತಾಪೀ, ಪಯೋಷ್ಣಿ ಮತ್ತು ನಿರ್ವಿಂಧ್ಯಾ ನದಿಗಳಲ್ಲಿ ಸ್ನಾನಮಾಡಿ ದಂಡಕಾರಣ್ಯಕ್ಕೆ ಹೋದನು. ॥ ೨೦ ॥

ಪ್ರವಿಶ್ಯ ರೇವಾಮಗಮದ್ಯತ್ರ ಮಾಹಿಷ್ಮತೀ ಪುರೀ ।
ಮನುತೀರ್ಥಮುಪಸ್ಪೃಶ್ಯ ಪ್ರಭಾಸಂ ಪುನರಾಗಮತ್ ॥ ೨೦ ॥

ಶ್ರುತ್ವಾ ದ್ವಿಜೈಃ ಕಥ್ಯಮಾನಂ ಕುರುಪಾಂಡವಸಂಯುಗೇ ।
ಸರ್ವರಾಜನ್ಯನಿಧನಂ ಭಾರಂ ಮೇನೇ ಹೃತಂ ಭುವಃ ॥ ೨೧ ॥

ಸ ಭೀಮದುರ್ಯೋಧನಯೋರ್ಗದಾಭ್ಯಾಂ ಯುಧ್ಯತೋರ್ಮೃಧೇ ।
ವಾರಯಿಷ್ಯನ್ವಿನಶನಂ ಜಗಾಮ ಯದುನಂದನಃ ॥ ೨೨ ॥

ಯುಧಿಷ್ಠಿರಸ್ತು ತಂ ದೃಷ್ಟ್ವಾ ಯಮೌ ಕೃಷ್ಣಾರ್ಜುನಾವಪಿ ।
ಅಭಿವಾದ್ಯಾಭವಂಸ್ತೂಷ್ಣೀಂ ಕಿಂವಿವಕ್ಷುರಿಹಾಗತಃ ॥ ೨೩ ॥

ಗದಾಪಾಣೀ ಉಭೌ ದೃಷ್ಟ್ವಾ ಸಂರಬ್ಧೌ ವಿಜಯೈಷಿಣೌ ।
ಮಂಡಲಾನಿ ವಿಚಿತ್ರಾಣಿ ಚರಂತಾವಿದಮಬ್ರವೀತ್ ॥ ೨೪ ॥

ಯುವಾಂ ತುಲ್ಯಬಲೌ ವೀರೌ ಹೇ ರಾಜನ್ ಹೇ ವೃಕೋದರ ।
ಏಕಂ ಪ್ರಾಣಾಧಿಕಂ ಮನ್ಯೇ ಉತೈಕಂ ಶಿಕ್ಷಯಾಧಿಕಮ್ ॥ ೨೫ ॥

ತಸ್ಮಾದೇಕತರಸ್ಯೇಹ ಯುವಯೋಃ ಸಮವೀರ್ಯಯೋಃ ।
ನ ಲಕ್ಷ್ಯತೇ ಜಯೋಽನ್ಯೋ ವಾ ವಿರಮತ್ವಫಲೋ ರಣಃ ॥ ೨೬ ॥

ನ ತದ್ವಾಕ್ಯಂ ಜಗೃಹತುರ್ಬದ್ಧವೈರೌ ನೃಪಾರ್ಥವತ್ ।
ಅನುಸ್ಮರಂತಾವನ್ಯೋನ್ಯಂ ದುರುಕ್ತಂ ದುಷ್ಕೃತಾನಿ ಚ ॥ ೨೭ ॥

ದಿಷ್ಟಂ ತದನುಮನ್ವಾನೋ ರಾಮೋ ದ್ವಾರವತೀಂ ಯಯೌ ।
ಉಗ್ರಸೇನಾದಿಭಿಃ ಪ್ರೀತೈರ್ಜ್ಞಾತಿಭಿಃ ಸಮುಪಾಗತಃ ॥ ೨೮ ॥

ತಂ ಪುನರ್ನೈಮಿಷಂ ಪ್ರಾಪ್ತಮೃಷಯೋಽಯಾಜಯನ್ಮುದಾ ।
ಕ್ರತ್ವಂಗಂ ಕ್ರತುಭಿಃ ಸರ್ವೈರ್ನಿವೃತ್ತಾಖಿಲವಿಗ್ರಹಮ್ ॥ ೨೯ ॥

ಅಲ್ಲಿಂದ ನರ್ಮದಾ ತೀರದಲ್ಲಿರುವ ಮಾಹಿಷ್ಮತಿಪುರಿಗೆ ಹೋಗಿ ಅಲ್ಲಿ ಮನುತೀರ್ಥದಲ್ಲಿ ಸ್ನಾನಮಾಡಿ ಮತ್ತೆ ಪ್ರಭಾಸ ಕ್ಷೇತ್ರಕ್ಕೆ ಹೊರಟುಬಂದನು. ॥ ೨೦ ॥ ಅಲ್ಲಿ ಅವನು ಕೌರವ-ಪಾಂಡವರ ಯುದ್ಧದಲ್ಲಿ ಅಧಿಕಾಂಶ ಕ್ಷತ್ರಿಯರ ಸಂಹಾರವಾಗಿದೆ ಎಂದು ಬ್ರಾಹ್ಮಣರಿಂದ ಕೇಳಿದನು. ಈಗ ಬಹಳಷ್ಟು ಭೂಭಾರವು ತಗ್ಗಿತೆಂದು ಅವನು ಅಂದುಕೊಂಡನು ॥ ೨೧ ॥ ಮಹಾಭಾರತ ಸಂಗ್ರಾಮದ ಕೊನೆಯ ದಿನ ರಣರಂಗದಲ್ಲಿ ಭೀಮಸೇನ ಮತ್ತು ದುರ್ಯೋಧನರ ಗದಾಯುದ್ಧ ನಡೆಯುತ್ತಿದ್ದಾಗಲೇ ಬಲರಾಮನು ಅವರನ್ನು ತಡೆಯಲು ಕುರುಕ್ಷೇತ್ರಕ್ಕೆ ಹೋದನು. ॥ ೨೨ ॥

ಬಲರಾಮನನ್ನು ನೋಡಿ ಮಹಾರಾಜಯುಧಿಷ್ಠಿರ, ನಕುಲ, ಸಹದೇವ, ಭಗವಾನ್ ಶ್ರೀಕೃಷ್ಣ ಅರ್ಜುನ - ಇವರೆಲ್ಲರೂ ಅವನಿಗೆ ನಮಸ್ಕಾರ ಮಾಡಿ ಸುಮ್ಮನೇ ಇದ್ದರು. ಇವನು ಏನು ಹೇಳಲು ಇಲ್ಲಿಗೆ ಬಂದಿರುವನೋ ಎಂದು ಹೆದರುತ್ತಲೇ ಮನಸ್ಸಿನಲ್ಲಿ ಯೋಚಿಸುತ್ತಿದ್ದರು. ॥ ೨೩ ॥ ಆ ಸಮಯದಲ್ಲಿ ಭೀಮಸೇನ ಮತ್ತು ದುರ್ಯೋಧನ ಇಬ್ಬರೂ ಕೈಗಳಲ್ಲಿ ಗದೆಗಳನ್ನು ಹಿಡಿದುಕೊಂಡು ಕ್ರೋಧಾಭಿಭೂತರಾಗಿ ಒಬ್ಬರು ಮತ್ತೊಬ್ಬರನ್ನು ಗೆಲ್ಲಬೇಕೆಂಬ ಆಸೆಯಿಂದ ಮಂಡಲಾಕಾರವಾಗಿ ಹೆಜ್ಜೆಯ ನ್ನಿಡುತ್ತಾ ನಾನಾ ರೀತಿಯ ಪಟ್ಟುಗಳನ್ನು ಪ್ರಯೋಗಿಸುತ್ತಾ ಕಾದಾಡುತ್ತಿದ್ದರು. ಅವರನ್ನು ನೋಡಿ ಬಲರಾಮನು ಹೇಳಿದನು ॥ ೨೪ ॥ ಭೀಮ ದುರ್ಯೋಧನರೇ! ನೀವಿಬ್ಬರು ವೀರರಿದ್ದೀರಿ. ನಿಮ್ಮಿಬ್ಬರಲ್ಲಿಯೂ ಬಲ-ಪೌರುಷಗಳು ಸಮಾನವಾಗಿವೆ. ಭೀಮಸೇನನಲ್ಲಿ ಬಲವು ಹೆಚ್ಚಾಗಿದೆ ಮತ್ತು ದುರ್ಯೋಧನನು ಗದಾಯುದ್ಧದಲ್ಲಿ ಹೆಚ್ಚಿನ ಶಿಕ್ಷಣ ಪಡೆದಿರುವನೆಂದು ನಾನು ತಿಳಿಯುತ್ತೇನೆ. ॥ ೨೫ ॥ ಆದ್ದರಿಂದ ನಿಮ್ಮಂತಹ ಸಮಾನ ಬಲಶಾಲಿಗಳಲ್ಲಿ ಯಾರೇ ಒಬ್ಬನ ವಿಜಯ ಅಥವಾ ಪರಾಜಯವಾಗುವುದು ಕಾಣುವುದಿಲ್ಲ. ಆದ್ದರಿಂದ ನೀವು ವ್ಯರ್ಥವಾಗಿ ಯುದ್ಧಮಾಡಬೇಡಿ. ಈಗ ಇದನ್ನು ನಿಲ್ಲಿಸಿ ಬಿಡಿರಿ. ॥ ೨೬ ॥ ಪರೀಕ್ಷಿತನೇ! ಬಲರಾಮನ ಮಾತು ಇಬ್ಬರಿಗೂ ಹಿತಕರವಾಗಿತ್ತು. ಆದರೆ ಅವರಿಬ್ಬರ ವೈರಭಾವವು ಅತೀವದೃಢವಾಗಿದ್ದರಿಂದ ಅವರು ಬಲರಾಮನ ಮಾತನ್ನು ಪುರಸ್ಕರಿಸಲಿಲ್ಲ. ಅವರು ಹಿಂದಿನ ದುರ್ವ್ಯವಹಾರಗಳನ್ನು ನೆನೆಯುತ್ತಾ ಕಟುಮಾತುಗಳನ್ನಾಡುತ್ತಾ ಉನ್ಮತ್ತರಾಗಿಯೇ ಇದ್ದರು. ॥ ೨೭ ॥ ಭಗವಾನ್ ಬಲರಾಮನು - 'ಇವರ ಪ್ರಾರಬ್ಧವೇ ಹೀಗಿದೆ' ಎಂದು ನಿಶ್ಚಯಿಸಿ, ಈ ವಿಷಯದಲ್ಲಿ ಆಗ್ರಹ ಮಾಡದೆ ದ್ವಾರಕೆಗೆ ಹೊರಟುಹೋದನು. ದ್ವಾರಕೆಯಲ್ಲಿ ಉಗ್ರಸೇನರೇ ಮುಂತಾದ ಹಿರಿಯರೂ ಹಾಗೂ ಇತರ ಸಂಬಂಧಿಗಳು ಅತ್ಯಂತ ಪ್ರೇಮದಿಂದ ಮುಂದೆ ಬಂದು ಬಲರಾಮನನ್ನು ಸ್ವಾಗತಿಸಿದರು. ॥ ೨೮ ॥ ಅಲ್ಲಿಂದ ಪುನಃ ಬಲರಾಮನು ನೈಮಿಷಾರಣ್ಯ ಕ್ಷೇತ್ರಕ್ಕೆ ಹೋದನು. ಅಲ್ಲಿಯ ಋಷಿಗಳು ಯುದ್ಧಾದಿಗಳಿಂದ ನಿವೃತ್ತನಾದ ಬಲರಾಮನಿಂದ ತುಂಬು ಪ್ರೇಮದಿಂದ ಎಲ್ಲ ಪ್ರಕಾರದ ಯಜ್ಞಗಳನ್ನು ಮಾಡಿಸಿದರು. ಪರೀಕ್ಷಿತನೇ! ನಿಜಹೇಳಬೇಕೆಂದರೆ, ಇರುವ ಎಲ್ಲ ಯಜ್ಞಗಳು ಬಲರಾಮನ ಅಂಗಭೂತವೇ ಆಗಿವೆ. ಅದಕ್ಕಾಗಿ ಅವನ ಈ ಯಜ್ಞಾನುಷ್ಠಾನವು ಕೇವಲ ಲೋಕಸಂಗ್ರಹಕ್ಕಾಗಿಯೇ ಇತ್ತು. ॥ ೩೦ ॥

ತೇಭ್ಯೋ ವಿಶುದ್ಧವಿಜ್ಞಾನಂ ಭಗವಾನ್ ವ್ಯತರದ್ವಿಭುಃ ।
ಯೇನೈವಾತ್ಮನ್ಯದೋ ವಿಶ್ವಮಾತ್ಮಾನಂ ವಿಶ್ವಗಂ ವಿದುಃ ॥ ೩೦ ॥

ಸ್ವಪತ್ನ್ಯಾವಭೃಥಸ್ನಾತೋ ಜ್ಞಾತಿಬಂಧುಸುಹೃದ್ವೃತಃ ।
ರೇಜೇ ಸ್ವಜ್ಯೋತ್ಸ್ನಯೇವೇಂದುಃ ಸುವಾಸಾಃ ಸುಷ್ಠ್ವಲಂಕೃತಃ ॥ ೩೨ ॥

ಈದೃಗ್ವಿಧಾನ್ಯಸಂಖ್ಯಾನಿ ಬಲಸ್ಯ ಬಲಶಾಲಿನಃ ।
ಅನಂತಸ್ಯಾಪ್ರಮೇಯಸ್ಯ ಮಾಯಾಮರ್ತ್ಯಸ್ಯ ಸಂತಿ ಹಿ ॥ ೩೩ ॥

ಯೋಽನುಸ್ಮರೇತ ರಾಮಸ್ಯ ಕರ್ಮಾಣ್ಯದ್ಭುತಕರ್ಮಣಃ ।
ಸಾಯಂ ಪ್ರಾತರನಂತಸ್ಯ ವಿಷ್ಣೋಃ ಸ ದಯಿತೋ ಭವೇತ್ ॥ ೩೪ ॥

ಸರ್ವಸಮರ್ಥನಾದ ಬಲಭದ್ರನು ಆ ಋಷಿಗಳಿಗೆ ವಿಶುದ್ಧ ತತ್ತ್ವಜ್ಞಾನದ ಉಪದೇಶ ಮಾಡಿದನು. ಇದರಿಂದ ಆ ಜನರೆಲ್ಲರೂ ಈ ಸಮಸ್ತ ವಿಶ್ವವು ತನ್ನಲ್ಲಿ ಮತ್ತು ತನ್ನನ್ನು ಸಮಸ್ತ ವಿಶ್ವದಲ್ಲಿ ಅನುಭವಿಸತೊಡಗಿದರು. ॥ ೩೦ ॥ ಅನಂತರ ಬಲರಾಮನು ತನ್ನ ಪತ್ನೀ ರೇವತಿಯೊಂದಿಗೆ ಯಜ್ಞಾಂತಸ್ನಾನ (ಅವಭೃಥ) ಮಾಡಿ, ಸುಂದರವಾದ ವಸ್ತ್ರಾಲಂಕಾರಗಳಿಂದ ವಿಭೂಷಿತನಾಗಿ ಸ್ವಜನ-ಸಂಬಂಧಿಗಳೊಡನೆ - ತನ್ನ ಬೆಳದಿಂಗಳಿಂದ ನಕ್ಷತ್ರಗಳೊಡನೆ ಬೆಳಗುವ ಚಂದ್ರನಂತೆ ಶೋಭಾಯಮಾನನಾದನು. ॥ ೩೨ ॥ ಪರೀಕ್ಷಿತನೇ! ಭಗವಾನ್ ಬಲರಾಮನು ಸಾಕ್ಷಾತ್ ಅನಂತನೇ ಆಗಿದ್ದಾನೆ. ಅವನ ಸ್ವರೂಪವು ಮನ-ವಚನಗಳಿಗೆ ಅತೀತವಾದುದು. ಅವನು ಲೀಲೆಗಾಗಿಯೆ ಮನುಷ್ಯ ಶರೀರವನ್ನು ಧರಿಸಿರುವನು. ಆ ಮಹಾಬಲಶಾಲಿಯಾದ ಬಲರಾಮನ ಇಂತಹ ಅನಂತ ಚರಿತ್ರೆಗಳನ್ನು ಯಾರು ತಾನೇ ಎಣಿಸಬಲ್ಲರು? ॥ ೩೩ ॥ ಅನಂತನೂ, ಸರ್ವವ್ಯಾಪಕನೂ, ಅದ್ಭುತ ಕರ್ಮಗಳನ್ನು ಮಾಡಿದ ಭಗವಾನ್ ಬಲರಾಮನ ಚರಿತ್ರೆಗಳನ್ನು ಸಾಯಂಕಾಲ-ಪ್ರಾತಃಕಾಲಗಳಲ್ಲಿ ಸ್ಮರಿಸುವ ಮನುಷ್ಯನು ಭಗವಂತನಿಗೆ ಅತ್ಯಂತ ಪ್ರಿಯನೆನಿಸುವನು. ॥ ೩೪ ॥

ಎಪ್ಪತ್ತೊಂಭತ್ತನೆಯ ಅಧ್ಯಾಯವು ಮುಗಿಯಿತು. ॥ ೭೯ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮಸ್ಕಂಧೇ ಉತ್ತರಾರ್ಧೇ
ಬಲದೇವತೀರ್ಥಯಾತ್ರಾನಿರೂಪಣಂ ನಾಮ ಏಕೋನಾಶೀತಿತಮೋಽಧ್ಯಾಯಃ ॥ ೭೯ ॥

ಎಂಭತ್ತನೆಯ ಅಧ್ಯಾಯ

ಶ್ರೀಕೃಷ್ಣನಿಂದ ಸುದಾಮನ ಸ್ವಾಗತ

ರಾಜೋವಾಚ

ಭಗವನ್ ಯಾನಿ ಚಾನ್ಯಾನಿ
ಮುಕುಂದಸ್ಯ ಮಹಾತ್ಮನಃ ।
ವೀರ್ಯಾಣ್ಯನಂತವೀರ್ಯಸ್ಯ
ಶ್ರೋತುಮಿಚ್ಛಾಮಹೇ ಪ್ರಭೋ ॥ ೧ ॥

ಕೋ ನು ಶ್ರುತ್ವಾಸಕೃದ್ ಬ್ರಹ್ಮನ್ನುತ್ತಮಶ್ಲೋಕಸತ್ಕಥಾಃ ।
ವಿರಮೇತ ವಿಶೇಷಜ್ಞೋ ವಿಷಣ್ಣಃ ಕಾಮಮಾರ್ಗಣೈಃ ॥ ೨ ॥

ಸಾ ವಾಗ್ಯಯಾ ತಸ್ಯ ಗುಣಾನ್ ಗೃಣೀತೇ
ಕರೌ ಚ ತತ್ಕರ್ಮಕರೌ ಮನಶ್ಚ ।
ಸ್ಮರೇದ್ವಸಂತಂ ಸ್ಥಿರಜಂಗಮೇಷು
ಶೃಣೋತಿ ತತ್ಪುಣ್ಯಕಥಾಃ ಸ ಕರ್ಣಃ ॥ ೩ ॥

ಪರೀಕ್ಷಿದ್ರಾಜನು ಕೇಳಿದನು - ಮಹಾತ್ಮರೇ! ಪ್ರೇಮ ಮತ್ತು ಮುಕ್ತಿಯನ್ನು ಕರುಣಿಸುವ ಪರಬ್ರಹ್ಮ ಪರಮಾತ್ಮನಾದ ಭಗವಾನ್ ಶ್ರೀಕೃಷ್ಣನ ಶಕ್ತಿಯು ಅನಂತವಾಗಿದೆ. ಅದಕ್ಕಾಗಿ ಮಾಧುರ್ಯ ಹಾಗೂ ಐಶ್ವರ್ಯಗಳಿಂದ ಕೂಡಿದ ಲೀಲೆಗಳೂ ಅನಂತವಾಗಿವೆ. ನಾವು ಇದುವರೆಗೂ ವರ್ಣಿಸದಿರುವ ಅವನ ಇತರ ಲೀಲೆಗಳನ್ನೂ ಕೇಳಲು ನಾವು ಬಯಸುತ್ತಿದ್ದೇವೆ. ॥ ೧ ॥ ಬ್ರಾಹ್ಮಣೋತ್ತಮರೇ! ಈ ಜೀವನು ವಿಷಯ ಸುಖವನ್ನು ಅರಸುತ್ತಾ-ಅರಸುತ್ತಾ ಅತ್ಯಂತ ದುಃಖಿತನಾಗಿದ್ದಾನೆ. ಅವು ಬಾಣಗಳಂತೆ ಇವನ ಮನಸ್ಸಿಗೆ ನಾಟುತ್ತಾ ಇರುತ್ತವೆ. ಇಂತಹ ಸ್ಥಿತಿಯಲ್ಲಿ ಪವಿತ್ರಕೀರ್ತಿ ಭಗವಾನ್ ಶ್ರೀಕೃಷ್ಣನ ಮಂಗಳಮಯ ಲೀಲೆಗಳನ್ನು ಪದೇ-ಪದೇ ಶ್ರವಣಿಸುವ ರಸಜ್ಞನಾದವನು ಅದರಿಂದ ಹೇಗೆ ತಾನೇ ವಿಮುಖನಾದಾನು? ॥ ೨ ॥ ಭಗವಂತನ ಗುಣಗಳನ್ನು ಹಾಡುತ್ತಿರುವ ವಾಣಿಯು ನಿಜವಾದ ವಾಣಿಯು. ಭಗವಂತನ ಸೇವೆಗಾಗಿ ದುಡಿಯುವ ಕೈಗಳೇ ನಿಜವಾದ ಕೈಗಳು. ಚರಾಚರ ಪ್ರಾಣಿಗಳಲ್ಲಿ ವಾಸಿಸುವ ಭಗವಂತನನ್ನು ಸ್ಮರಿಸುವ ಮನಸ್ಸೇ ನಿಜವಾದ ಮನಸ್ಸು. ಭಗವಂತನ ಪುಣ್ಯಮಯ ಕಥೆಗಳನ್ನು ಕೇಳುವ ಕಿವಿಗಳೇ ನಿಜವಾದ ಕಿವಿಗಳೆಂದು ಕರೆಯಲ್ಪಡುವವು. ॥ ೩ ॥

ಶಿರಸ್ತು ತಸ್ಯೋಭಯಲಿಂಗಮಾನಮೇ-
ತ್ತದೇವ ಯತ್ಪಶ್ಯತಿ ತದ್ಧಿ ಚಕ್ಷುಃ ।
ಅಂಗಾನಿ ವಿಷ್ಣೋರಥ ತಜ್ಜನಾನಾಂ
ಪಾದೋದಕಂ ಯಾನಿ ಭಜಂತಿ ನಿತ್ಯಮ್ ॥ ೪ ॥

ಸೂತ ಉವಾಚ

ವಿಷ್ಣುರಾತೇನ ಸಂಪೃಷ್ಟೋ ಭಗವಾನ್ ಬಾದರಾಯಣಿಃ ।
ವಾಸುದೇವೇ ಭಗವತಿ ನಿಮಗ್ನಹೃದಯೋಽಬ್ರವೀತ್ ॥ ೫ ॥

ಶ್ರೀಶುಕ ಉವಾಚ

ಕೃಷ್ಣಸ್ಯಾಸೀತ್ಸಖಾ ಕಶ್ಚಿದ್ ಬ್ರಾಹ್ಮಣೋ ಬ್ರಹ್ಮವಿತ್ತಮಃ ।
ವಿರಕ್ತ ಇಂದ್ರಿಯಾರ್ಥೇಷು ಪ್ರಶಾಂತಾತ್ಮಾ ಜಿತೇಂದ್ರಿಯಃ ॥ ೬ ॥

ಯದೃಚ್ಛಯೋಪಪನ್ನೇನ ವರ್ತಮಾನೋ ಗೃಹಾಶ್ರಮೀ ।
ತಸ್ಯ ಭಾರ್ಯಾ ಕುಚೈಲಸ್ಯ ಕ್ಷುತ್ಕ್ಷಾಮಾ ಚ ತಥಾವಿಧಾ ॥ ೭ ॥

ಪತಿವ್ರತಾ ಪತಿಂ ಪ್ರಾಹ ಮ್ಲಾಯತಾ ವದನೇನ ಸಾ ।
ದರಿದ್ರಾ ಸೀದಮಾನಾ ಸಾ ವೇಪಮಾನಾಭಿಗಮ್ಯ ಚ ॥ ೮ ॥

ನನು ಬ್ರಹ್ಮನ್ ಭಗವತಃ ಸಖಾ ಸಾಕ್ಷಾಚ್ಛ್ರಿಯಃ ಪತಿಃ ।
ಬ್ರಹ್ಮಣ್ಯಶ್ಚ ಶರಣ್ಯಶ್ಚ ಭಗವಾನ್ ಸಾತ್ವತರ್ಷಭಃ ॥ ೯ ॥

ತಮುಪೈಹಿ ಮಹಾಭಾಗ ಸಾಧೂನಾಂ ಚ ಪರಾಯಣಮ್ ।
ದಾಸ್ಯತಿ ದ್ರವಿಣಂ ಭೂರಿ ಸೀದತೇ ತೇ ಕುಟುಂಬಿನೇ ॥ ೧೦ ॥

ಆಸ್ತೇಽಧುನಾ ದ್ವಾರವತ್ಯಾಂ ಭೋಜವೃಷ್ಣ್ಯಂಧಕೇಶ್ವರಃ ।
ಸ್ಮರತಃ ಪಾದಕಮಲಮಾತ್ಮಾನಮಪಿ ಯಚ್ಛತಿ ।
ಕಿಂನ್ವರ್ಥಕಾಮಾನ್ಭಜತೋ ನಾತ್ಯಭೀಷ್ಟಾನ್ ಜಗದ್ಗುರುಃ ॥ ೧೧ ॥

ಸ ಏವಂ ಭಾರ್ಯಯಾ ವಿಪ್ರೋ ಬಹುಶಃ ಪ್ರಾರ್ಥಿತೋ ಮೃದು ।
ಅಯಂ ಹಿ ಪರಮೋ ಲಾಭ ಉತ್ತಮಶ್ಲೋಕದರ್ಶನಮ್ ॥ ೧೨ ॥

ಚರಾಚರ ಜಗತ್ತನ್ನು ಭಗವಂತನ ಅಚಲ ಪ್ರತಿಮೆ ಎಂದು ಅರಿತು ನಮಸ್ಕರಿಸುವ ತಲೆಯೇ ಸಾರ್ಥಕವಾದ ತಲೆಯು. ಸರ್ವತ್ರ ಭಗವದ್ವಿಗ್ರಹವನ್ನು ದರ್ಶಿಸುವ ಕಣ್ಣುಗಳೇ ವಾಸ್ತವವಾದ ಕಣ್ಣುಗಳು. ಭಗವಂತನ ಮತ್ತು ಅವನ ಭಕ್ತರ ಚರಣೋದಕವನ್ನು ಸೇವಿಸುವ ಅಂಗಗಳೇ ನಿಜವಾದ ಅಂಗಗಳು. ನಿಜಹೇಳಬೇಕೆಂದರೆ ಅವನವರಾಗುವುದೇ ಸಾರ್ಥಕ ಜೀವನವು. ಆದುದರಿಂದ ಅವನ ಕಥಾಮೃತವನ್ನು ವರ್ಣಿಸಿರಿ. ॥ ೪ ॥

ಸೂತ ಪುರಾಣಿಕರು ಹೇಳುತ್ತಾರೆ – ಶೌನಕಾದಿ ಋಷಿಗಳಿರಾ! ಪರೀಕ್ಷಿದ್ರಾಜನು ಹೀಗೆ ಪ್ರಶ್ನಿಸಿದಾಗ ಪೂಜ್ಯರಾದ ಭಕ್ತಶಿರೋಮಣಿಗಳಾದ ಶ್ರೀಶುಕಮುನಿಗಳ ಮನಸ್ಸು ಶ್ರೀಕೃಷ್ಣನಲ್ಲೇ ತಲ್ಲೀನವಾಗಿ ಹೋಯಿತು. ಸ್ವಲ್ಪ ಹೊತ್ತು ತಡೆದು ಅವರು ಪರೀಕ್ಷಿತನಿಗೆ ಹೇಳತೊಡಗಿದರು. ॥ ೫ ॥

ಶ್ರೀಶುಕಮಹಾಮುನಿಗಳು ಹೇಳಿದರು – ಪರೀಕ್ಷಿತನೇ! ಭಗವಾನ್ ಶ್ರೀಕೃಷ್ಣನಿಗೆ ಪರಮಮಿತ್ರನಾದ ಬ್ರಾಹ್ಮಣನೊಬ್ಬನಿದ್ದನು. ಅವನು ಮಹಾಬ್ರಹ್ಮಜ್ಞಾನಿಯೂ, ವಿಷಯಗಳಿಂದ ವಿರಕ್ತನೂ, ಶಾಂತಚಿತ್ತನೂ, ಜಿತೇಂದ್ರಿಯನೂ ಆಗಿದ್ದನು. ॥ ೬ ॥ ಅವನು ಗೃಹಸ್ಥನಾಗಿದ್ದರೂ ಯಾವುದೇ ಪ್ರಕಾರದ ಸಂಗ್ರಹ- ಪರಿಗ್ರಹವಿಲ್ಲದೆ ಪ್ರಾರಬ್ಧಕ್ಕನುಸಾರ ದೊರೆತುದರಲ್ಲಿ ಸಂತುಷ್ಟನಾಗಿರುತ್ತಿದ್ದನು. ಅವನ ವಸ್ತ್ರಗಳು ಹರಿದು – ಹಳೆಯದಾಗಿದ್ದು ಕುಚೇಲನೆಂದೇ ಜನರು ಅವನನ್ನು ಕರೆಯುತ್ತಿದ್ದರು. ಅವನ ಪತ್ನಿಯೂ ಅವನಂತೇ ಇದ್ದು ಪತಿಯಂತೆ–ಹಸಿವೆಯಿಂದ ಕೃಶಳಾಗಿದ್ದಳು.॥ ೭ ॥ ದರಿದ್ರತೆಯ ಪ್ರತಿಮೂರ್ತಿಯಂತಿದ್ದ ದುಃಖಿತಳಾದ ಪತಿವ್ರತೆಯಾದ ಆಕೆಯು ಹಸಿವಿನಿಂದ ಕಂಗೆಟ್ಟು ಒಂದು ದಿನ ತನ್ನ ಪತಿಯ ಬಳಿಗೆ ಹೋಗಿ ಬಾಡಿದ ಮುಖದಿಂದ ಸಂಕೋಚದಿಂದಲೇ ಹೀಗೆಂದಳು – ॥ ೮ ॥ ಬ್ರಾಹ್ಮಣೋತ್ತಮರೇ! ಸಾಕ್ಷಾತ್ ಲಕ್ಷ್ಮೀಪತಿಯಾದ ಭಗವಾನ್ ಶ್ರೀಕೃಷ್ಣನು ನಿಮಗೆ ಸ್ನೇಹಿತನಾಗಿರುವನು. ಅವನು ವಾಂಛಾಕಲ್ಪತರುವೂ, ಶರಣಾಗತವತ್ಸಲನೂ, ಬ್ರಾಹ್ಮಣರ ಪರಮಭಕ್ತನೂ ಆಗಿರುವನು. ॥ ೯ ॥ ಪರಮಭಾಗ್ಯಶಾಲಿಗಳಾದ ಆರ್ಯಪುತ್ರರೇ! ಆ ಭಗವಂತನು ಸಂತರ ಏಕಮಾತ್ರ ಆಶ್ರಯನಾಗಿರುವನು. ನೀವು ದಯವಿಟ್ಟು ಅವನ ಬಳಿಗೆ ಹೋಗಿರಿ. ನೀವು ಕುಟುಂಬಿಗಳಾಗಿದ್ದೀರಿ, ಅನ್ನವಿಲ್ಲದೆ ದುಃಖಿತರಾಗಿರುವಿರಿ ಎಂದು ತಿಳಿದಾಗ ಅವನು ನಿಮಗೆ ಬಹಳಷ್ಟು ಧನವನ್ನು ಕೊಡುವನು. ॥ ೧೦ ॥ ಭೋಜ, ವೃಷ್ಣಿ, ಅಂಧಕ ಇವರೇ ಮೊದಲಾದ ಯಾದವರಿಗೆ ಸ್ವಾಮಿಯಾಗಿ ಶ್ರೀಕೃಷ್ಣನು ಈಗ ದ್ವಾರಕೆಯಲ್ಲೇ ಇದ್ದಾನೆ. ತನ್ನ ಚರಣಕಮಲಗಳನ್ನು ಸ್ಮರಿಸುವ ಭಕ್ತರಿಗೆ ಅವನು ತನ್ನನ್ನೇ ಕೊಟ್ಟುಕೊಂಡು ಬಿಡುತ್ತಾನೆ. ಹೀಗಿರುವಾಗ ಜಗದ್ಗುರುವಾದ ಶ್ರೀಕೃಷ್ಣನು ತನ್ನ ಭಕ್ತರಿಗೆ ಲೆಕ್ಕಕ್ಕಿಲ್ಲದ (ಭಕ್ತಿಯ ಹೊರತಾಗಿ ಬೇರೇನೂ ಬೇಕಿಲ್ಲ) ಪ್ರಾಪಂಚಿಕ ಸುಖಗಳನ್ನು, ಐಶ್ವರ್ಯವನ್ನು ದಯಪಾಲಿಸುವುದರಲ್ಲಿ ಆಶ್ಚರ್ಯವೇನಿದೆ? ॥ ೧೧ ॥ ಹೀಗೆ ಆ ಪತಿವ್ರತೆಯು ತನ್ನ ಪತಿಯಲ್ಲಿ ಹಲವುಬಾರಿ ನಮ್ರತೆಯಿಂದ ಪ್ರಾರ್ಥಿಸಿದಾಗ, ಸುದಾಮನೂ – ಧನದ ಮಾತಿರಲಿ, ಆದರೆ ಭಗವಾನ್ ಶ್ರೀಕೃಷ್ಣನ ದರ್ಶನವಾಗುವುದೇ! ಇದೇ ಜೀವನದ ಬಹಳ ದೊಡ್ಡ ಲಾಭವಾಗಿದೆ ಎಂದು ಯೋಚಿಸಿದನು. ॥ ೧೨ ॥

ಇತಿ ಸಂಚಿಂತ್ಯ ಮನಸಾ ಗಮನಾಯ ಮತಿಂ ದಧೇ ।
ಅಪ್ಯಸ್ತ್ಯುಪಾಯನಂ ಕಿಂಚಿದ್ಗೃಹೇ ಕಲ್ಯಾಣಿ ದೀಯತಾಮ್ ॥ ೧೩ ॥

ಯಾಚಿತ್ವಾ ಚತುರೋ ಮುಷ್ಟೀನ್ ವಿಪ್ರಾನ್ ಪೃಥುಕತಂಡುಲಾನ್ ।
ಚೈಲಖಂಡೇನ ತಾನ್ಬದ್ಧ್ವಾ ಭರ್ತ್ರೇ ಪ್ರಾದಾದುಪಾಯನಮ್ ॥ ೧೪ ॥

ಸ ತಾನಾದಾಯ ವಿಪ್ರಾಗ್ರ್ಯಃ ಪ್ರಯಯೌ ದ್ವಾರಕಾಂ ಕಿಲ ।
ಕೃಷ್ಣಸಂದರ್ಶನಂ ಮಹ್ಯಂ ಕಥಂ ಸ್ಯಾದಿತಿ ಚಿಂತಯನ್ ॥ ೧೫ ॥

ತ್ರೀಣಿ ಗುಲ್ಮಾನ್ಯತೀಯಾಯ ತಿಸ್ರಃ ಕಕ್ಷಾಶ್ಚ ಸ ದ್ವಿಜಃ ।
ವಿಪ್ರೋಽಗಮ್ಯಾಂಧಕವೃಷ್ಣೀನಾಂ ಗೃಹೇಷ್ವಚ್ಯುತಧರ್ಮಿಣಾಮ್ ॥ ೧೬ ॥

ಗೃಹಂ ದ್ವ್ಯಷ್ಟಸಹಸ್ರಾಣಾಂ ಮಹಿಷೀಣಾಂ ಹರೇರ್ದ್ವಿಜಃ ।
ವಿವೇಶೈಕತಮಂ ಶ್ರೀಮದ್ಬ್ರಹ್ಮಾನಂದಂ ಗತೋ ಯಥಾ ॥ ೧೭ ॥

ತಂ ವಿಲೋಕ್ಯಾಚ್ಯುತೋ ದೂರಾತ್ ಪ್ರಿಯಾಪರ್ಯಂಕಮಾಸ್ಥಿತಃ ।
ಸಹಸೋತ್ಥಾಯ ಚಾಭ್ಯೇತ್ಯ ದೋರ್ಭ್ಯಾಂ ಪರ್ಯಗ್ರಹೀನ್ಮುದಾ ॥ ೧೮ ॥

ಸಖ್ಯುಃ ಪ್ರಿಯಸ್ಯ ವಿಪ್ರರ್ಷೇರಂಗಸಂಗಾತಿನಿರ್ವೃತಃ ।
ಪ್ರೀತೋ ವ್ಯಮುಂಚದಬ್ಬಿಂದೂನ್ನೇತ್ರಾಭ್ಯಾಂ ಪುಷ್ಕರೇಕ್ಷಣಃ ॥ ೧೯ ॥

ಅಥೋಪವೇಶ್ಯ ಪರ್ಯಂಕೇ ಸ್ವಯಂ ಸಖ್ಯುಃ ಸಮರ್ಹಣಮ್ ।
ಉಪಹೃತ್ಯಾವನಿಜ್ಯಾಸ್ಯ ಪಾದೌ ಪಾದಾವನೇಜನೀಃ ॥ ೨೦ ॥

ಅಗ್ರಹೀಚ್ಛಿರಸಾ ರಾಜನ್ ಭಗವಾನ್ ಲೋಕಪಾವನಃ ।
ವ್ಯಲಿಂಪದ್ದಿವ್ಯಗಂಧೇನ ಚಂದನಾಗುರುಕುಂಕುಮೈಃ ॥ ೨೧ ॥

ಧೂಪೈಃ ಸುರಭಿಭಿರ್ಮಿತ್ರಂ ಪ್ರದೀಪಾವಲಿಭಿರ್ಮುದಾ ।
ಅರ್ಚಿತ್ವಾಽಽವೇದ್ಯ ತಾಂಬೂಲಂ ಗಾಂ ಚ ಸ್ವಾಗತಮಬ್ರವೀತ್ ॥ ೨೨ ॥

ಹೀಗೆ ವಿಚಾರಮಾಡಿ ಅವನು ದ್ವಾರಕೆಗೆ ಹೋಗಲು ನಿಶ್ಚಯಿಸಿದನು ಮತ್ತು ಪತ್ನಿಯಲ್ಲಿ ಕೇಳಿದನು - ಕಲ್ಯಾಣೀ! ಶ್ರೀಕೃಷ್ಣನಿಗೆ ಕೊಡಲು ಯೋಗ್ಯವಾದ ಏನಾದರೂ ವಸ್ತು ಮನೆಯಲ್ಲಿದೆಯೇ? ಇದ್ದರೆ ಕೊಡು. ಸ್ನೇಹಿತನನ್ನು ಬರಿಗೈಯಿಂದ ಎಂತು ಕಾಣುವುದು? ॥ ೧೩ ॥ ಆಗ ಆ ಬ್ರಾಹ್ಮಣಿಯು ಅಕ್ಕ-ಪಕ್ಕದ ಬ್ರಾಹ್ಮಣರ ಮನೆಗಳಿಂದ ನಾಲ್ಕು ಮುಷ್ಟಿ ಅವಲಕ್ಕಿಯನ್ನು ಬೇಡಿ ತಂದು, ಒಂದು ಹರಕು ಬಟ್ಟೆಯಲ್ಲಿ ಕಟ್ಟಿ ಭಗವಂತನಿಗೆ ಕೊಡಲಿಕ್ಕಾಗಿ ಗಂಡನ ಕೈಯಲ್ಲಿಟ್ಟಳು. ॥ ೧೪ ॥ ಅನಂತರ ಆ ಅವಲಕ್ಕಿಯನ್ನು ಕಂಕುಳಲ್ಲಿಟ್ಟುಕೊಂಡು ಸುದಾಮನು ದ್ವಾರಕೆಗೆ ಹೊರಟನು. ನನಗೆ ಭಗವಾನ್ ಶ್ರೀಕೃಷ್ಣನ ದರ್ಶನ ಎಂತಾಗುವುದು ಎಂದು ದಾರಿಯಲ್ಲಿ ಯೋಚಿಸುತ್ತಾ ಹೋಗುತ್ತಿದ್ದನು. ॥ ೧೫ ॥

ಪರೀಕ್ಷಿತನೇ! ದ್ವಾರಕೆಯನ್ನು ತಲುಪಿದೊಡನೆ ಆ ಬ್ರಾಹ್ಮಣೋತ್ತಮನು ಇತರ ಬ್ರಾಹ್ಮಣರೊಂದಿಗೆ ಮೂರು ಸೇನಾ ತುಕಡಿಗಳನ್ನು ಮೂರು ಪ್ರಾಕಾರವನ್ನು ದಾಟಿ, ಪ್ರವೇಶಿಸಲು ಅತ್ಯಂತ ಕಠಿಣವಾದ ಭಗವದ್ಧರ್ಮವನ್ನು ಪಾಲಿಸುವ ಅಂಧಕ, ವೃಷ್ಣಿ ವಂಶೀಯ ಯಾದವರ ಅರಮನೆಗಳನ್ನು ತಲುಪಿದನು. ॥ ೧೬ ॥ ಅವುಗಳ ನಡುವೆ ಭಗವಾನ್ ಶ್ರೀಕೃಷ್ಣನ ಹದಿನಾರು ಸಾವಿರ ರಾಣಿಯರ ಅರಮನೆಗಳಿದ್ದವು. ಅವುಗಳಲ್ಲಿ ಬಹಳವಾಗಿ ಅಲಂಕರಿಸಲ್ಪಟ್ಟು ಅತ್ಯಂತ ಶೋಭಾಯುಕ್ತವಾಗಿದ್ದ ಅರಮನೆಯೊಂದರೊಳಗೆ ಬ್ರಾಹ್ಮಣನು ಪ್ರವೇಶಿಸಿದನು. ಅದನ್ನು ಪ್ರವೇಶಿಸುತ್ತಲೇ ಅವನಿಗೆ ಬ್ರಹ್ಮಾನಂದದ ಸಮುದ್ರದಲ್ಲಿ ತೇಲಾಡಿದಂತೆ ಅನಿಸಿತು. ॥ ೧೭ ॥ ಆ ಸಮಯದಲ್ಲಿ ಭಗವಾನ್ ಶ್ರೀಕೃಷ್ಣನು ತನ್ನ ಪ್ರಾಣಪ್ರಿಯಳಾದ ರುಕ್ಮಿಣಿಯ ಮಂಚದಲ್ಲಿ ವಿರಾಜಮಾನನಾಗಿದ್ದನು. ತನ್ನೆಡೆಗೆ ಬರುತ್ತಿದ್ದ ವಿಪ್ರೋತ್ತಮನನ್ನು ದೂರದಲ್ಲೇ ಕಂಡು ಮಂಚದಿಂದ ಇಳಿದು ಅವನ ಬಳಿಗೆ ತೆರಳಿ ಅತ್ಯಂತ ಆನಂದದಿಂದ ಅವನನ್ನು ಬಿಗಿದಪ್ಪಿಕೊಂಡನು. ॥ ೧೮ ॥ ಪರೀಕ್ಷಿತನೇ! ಪರಮಾನಂದ ಸ್ವರೂಪನಾದ ಶ್ರೀಕೃಷ್ಣನು ತನ್ನ ಪ್ರಿಯಸಖನಾದ ವಿಪ್ರೋತ್ತಮನ ಅಂಗಸಂಗದಿಂದ ಅತ್ಯಂತ ಆನಂದಿತನಾದನು. ಅವನ ಕಮಲದಂತಿರುವ ಕೋಮಲ ನೇತ್ರಗಳಿಂದ ಪ್ರೇಮಾಶ್ರುಗಳು ಸುರಿಯತೊಡಗಿದುವು. ॥ ೧೯ ॥ ಬಳಿಕ ಭಗವಾನ್ ಶ್ರೀಕೃಷ್ಣನು ಅವನನ್ನು ಕರೆತಂದು ತನ್ನ ಪರ್ಯಂಕದಲ್ಲಿ ಕುಳ್ಳಿರಿಸಿದನು. ಸ್ವತಃ ತಾನೇ ಪೂಜಾಸಾಮಗ್ರಿಗಳನ್ನು ತಂದು ಅವನನ್ನು ಪೂಜಿಸಿದನು. ಪರೀಕ್ಷಿತನೇ! ಭಗವಾನ್ ಶ್ರೀಕೃಷ್ಣನು ಎಲ್ಲರನ್ನು ಪವಿತ್ರಗೊಳಿಸುವವನಾಗಿದ್ದರೂ ಅವನು ತನ್ನ ಕೈಗಳಿಂದಲೇ ಬ್ರಾಹ್ಮಣೋತ್ತಮನ ಕಾಲುಗಳನ್ನು ತೊಳೆದು, ಆ ಚರಣೋದಕವನ್ನು ತನ್ನ ತಲೆಯಲ್ಲಿ ಧರಿಸಿಕೊಂಡನು ಹಾಗೂ ಅವನ ಶರೀರಕ್ಕೆ ಚಂದನ, ಅಗರು, ಕೇಸರಿ ಮುಂತಾದ ದಿವ್ಯ ಸುಗಂಧ ದ್ರವ್ಯಗಳನ್ನು ಲೇಪಿಸಿದನು. ॥ ೨೦-೨೧ ॥ ಮತ್ತೆ ಅವನು ಬಹಳ ಆನಂದದಿಂದ ಸುಗಂಧಿತ ಧೂಪದಿಂದ, ದೀಪಾವಳಿಗಳಿಂದ ಆರತಿಯನ್ನೆತ್ತಿ ಪೂಜೆಮಾಡಿ, ತಾಂಬೂಲ ಮತ್ತು ಗೋವನ್ನು ಕೊಟ್ಟು ಸುಮಧುರ ವಚನಗಳಿಂದ ಮಿತ್ರನೇ! ನೀನು ಬಂದುದು ಬಹಳ ಒಳ್ಳೆಯದಾಯಿತು ಎಂದು ಹೇಳುತ್ತಾ ಸ್ವಾಗತಿಸಿದನು. ॥ ೨೨ ॥

ಕುಚೈಲಂ ಮಲಿನಂ ಕ್ಷಾಮಂ ದ್ವಿಜಂ ಧಮನಿಸಂತತಮ್ ।
ದೇವೀ ಪರ್ಯಚರತ್ಸಾಕ್ಷಾಚ್ಚಾಮರವ್ಯಜನೇನ ವೈ ॥ ೨೩ ॥

ಅಂತಃಪುರಜನೋ ದೃಷ್ಟ್ವಾ ಕೃಷ್ಣೇನಾಮಲಕೀರ್ತಿನಾ ।
ವಿಸ್ಮಿತೋಽಭೂದತಿಪ್ರೀತ್ಯಾ ಅವಧೂತಂ ಸಭಾಜಿತಮ್ ॥ ೨೪ ॥

ಕಿಮನೇನ ಕೃತಂ ಪುಣ್ಯಮವಧೂತೇನ ಭಿಕ್ಷುಣಾ ।
ಶ್ರಿಯಾ ಹೀನೇನ ಲೋಕೇಽಸ್ಮಿನ್ ಗರ್ಹಿತೇನಾಧಮೇನ ಚ ॥ ೨೫ ॥

ಯೋಽಸೌ ತ್ರಿಲೋಕಗುರುಣಾ ಶ್ರೀನಿವಾಸೇನ ಸಂಭೃತಃ ।
ಪರ್ಯಂಕಸ್ಥಾಂ ಶ್ರಿಯಂ ಹಿತ್ವಾ ಪರಿಷ್ವಕ್ತೋಽಗ್ರಜೋ ಯಥಾ ॥ ೨೬ ॥

ಕಥಯಾಂಚಕ್ರತುರ್ಗಾಥಾಃ ಪೂರ್ವಾ ಗುರುಕುಲೇ ಸತೋಃ ।
ಆತ್ಮನೋ ಲಲಿತಾ ರಾಜನ್ಕರೌ ಗೃಹ್ಯ ಪರಸ್ಪರಮ್ ॥ ೨೭ ॥

ಶ್ರೀಭಗವಾನುವಾಚ

ಅಪಿ ಬ್ರಹ್ಮನ್ಗುರುಕುಲಾದ್ಭವತಾ ಲಬ್ಧದಕ್ಷಿಣಾತ್ ।
ಸಮಾವೃತ್ತೇನ ಧರ್ಮಜ್ಞ ಭಾರ್ಯೋಢಾ ಸದೃಶೀ ನ ವಾ ॥ ೨೮ ॥

ಪ್ರಾಯೋ ಗೃಹೇಷು ತೇ ಚಿತ್ತಮಕಾಮವಿಹಿತಂ ತಥಾ ।
ನೈವಾತಿಪ್ರೀಯಸೇ ವಿದ್ವನ್ ಧನೇಷು ವಿದಿತಂ ಹಿ ಮೇ ॥ ೨೯ ॥

ಕೇಚಿತ್ಕುರ್ವಂತಿ ಕರ್ಮಾಣಿ ಕಾಮೈರಹತಚೇತಸಃ ।
ತ್ಯಜಂತಃ ಪ್ರಕೃತೀರ್ದೈವೀರ್ಯಥಾಹಂ ಲೋಕಸಂಗ್ರಹಮ್ ॥ ೩೦ ॥

ಕಚ್ಚಿದ್ಗುರುಕುಲೇ ವಾಸಂ ಬ್ರಹ್ಮನ್ಸ್ಮರಸಿ ನೌ ಯತಃ ।
ದ್ವಿಜೋ ವಿಜ್ಞಾಯ ವಿಜ್ಞೇಯಂ ತಮಸಃ ಪಾರಮಶ್ನುತೇ ॥ ೩೧ ॥

ಸ ವೈ ಸತ್ಕರ್ಮಣಾಂ ಸಾಕ್ಷಾತ್ ದ್ವಿಜಾತೇರಿಹ ಸಂಭವಃ ।
ಆದ್ಯೋಽಂಗ ಯತ್ರಾಶ್ರಮಿಣಾಂ ಯಥಾಹಂ ಜ್ಞಾನದೋ ಗುರುಃ ॥ ೩೨ ॥

ಕುಚೇಲನು ಹರಿದ-ಹಳೆಯ ವಸ್ತ್ರವನ್ನುಟ್ಟಿದ್ದನು. ಅವನ ಶರೀರವು ದುರ್ಬಲವೂ ಮಲಿನವೂ ಆಗಿದ್ದಿತು. ಶರೀರದ ನರಗಳೆಲ್ಲ ಎದ್ದು ಕಾಣುತ್ತಿದ್ದವು. ಅಂತಹವನಿಗೆ ಸಾಕ್ಷಾತ್ ರುಕ್ಮಿಣೀ ದೇವಿಯೇ ಚಾಮರವನ್ನು ಬೀಸುತ್ತಾ ಸೇವೆ ಮಾಡುತ್ತಿದ್ದಳು. ॥ ೨೩ ॥ ಪವಿತ್ರ ಕೀರ್ತಿಯಾದ ಭಗವಾನ್ ಶ್ರೀಕೃಷ್ಣನು ಅತಿಶಯ ಪ್ರೀತ್ಯಾದರಗಳಿಂದ ಈ ಕುಚೇಲನಾದ ಅವಧೂತ ಬ್ರಾಹ್ಮಣನ ಸೇವೆ ಮಾಡುತ್ತಿರುವುದನ್ನು ಕಂಡು ಅಂತಃಪುರದ ಸ್ತ್ರೀಯರೆಲ್ಲ ಆಶ್ಚರ್ಯಗೊಂಡರು. ॥ ೨೪ ॥ ಅವರು ಪರಸ್ಪರ ಹೇಳಿಕೊಂಡರು – 'ಈ ನಿರ್ಧನನೂ, ನಿಂದನೀಯನೂ, ನಿಕೃಷ್ಟನೂ, ಭಿಕ್ಷುಕನೂ ಆದ ಈ ಅವಧೂತ ಬ್ರಾಹ್ಮಣನು ಏನು ಪುಣ್ಯಮಾಡಿದ್ದನೋ! ಅದರಿಂದ ಮೂರುಲೋಕದ ಗುರುವಾದ ಶ್ರೀನಿವಾಸ ಶ್ರೀಕೃಷ್ಣನು ಸ್ವತಃ ಇವನ ಆದರ-ಸತ್ಕಾರವನ್ನು ಮಾಡುತ್ತಿರುವನಲ್ಲ! ನೋಡೇ! ಇವನು ತನ್ನ ಪರ್ಯಂಕದಲ್ಲಿ ಸೇವೆಮಾಡುತ್ತಿದ್ದ ಸಾಕ್ಷಾತ್ ಲಕ್ಷ್ಮೀರೂಪಳಾದ ರುಕ್ಮಿಣೀದೇವಿಯನ್ನು ಬಿಟ್ಟು ಈ ಬ್ರಾಹ್ಮಣನನ್ನು ತನ್ನಣ್ಣ ಬಲರಾಮನಂತೆ ಆಲಿಂಗಿಸಿಕೊಂಡನಲ್ಲ!' ॥ ೨೫-೨೬ ॥ ಪ್ರಿಯ ಪರೀಕ್ಷಿತನೇ! ಭಗವಾನ್ ಶ್ರೀಕೃಷ್ಣನು ಮತ್ತು ಆ ಬ್ರಾಹ್ಮಣನು ಇಬ್ಬರೂ ಕೈ ಕೈಹಿಡಿದುಕೊಂಡು ತಮ್ಮ ಬಾಲ್ಯದ ಜೀವನದ ಆನಂದದಾಯಕ ಘಟನೆಗಳನ್ನು ಸ್ಮರಿಸಿಕೊಳ್ಳುತ್ತ, ಗುರುಕುಲದಲ್ಲಿದ್ದಾಗ ನಡೆದ ಘಟನೆಗಳನ್ನು ಮೆಲುಕುಹಾಕತೊಡಗಿದರು. ॥ ೨೭ ॥

ಭಗವಾನ್ ಶ್ರೀಕೃಷ್ಣನು ಹೇಳಿದನು – ಧರ್ಮಜ್ಞನಾದ ಬ್ರಾಹ್ಮಣನೇ! ಗುರುದಕ್ಷಿಣೆಯನ್ನು ಸಮರ್ಪಿಸಿ ಗುರುಕುಲದಿಂದ ಹಿಂದಿರುಗಿದ ನಂತರ ನೀನು ನಿನಗೆ ಅನುರೂಪಳಾದ ಭಾರ್ಯೆಯನ್ನು ವಿವಾಹವಾದೆಯಲ್ಲವೇ? ॥ ೨೮ ॥ ವಿವಾಹಿತನಾಗಿ ಗೃಹಸ್ಥಧರ್ಮದಲ್ಲಿದ್ದರೂ ಕೂಡ ಪ್ರಾಯಶಃ ನಿನ್ನ ಮನಸ್ಸು ವಿಷಯ ಭೋಗಗಳಲ್ಲಿ ಆಸಕ್ತವಾಗಿಲ್ಲವೆಂದು ನಾನು ಭಾವಿಸಿದ್ದೇನೆ. ವಿದ್ವಾಂಸನೇ! ಧನಾದಿಗಳಲ್ಲಿಯೂ ಕೂಡ ನಿನಗೆ ಯಾವ ಪ್ರೀತಿಯು ಇಲ್ಲವೆಂಬುದು ನನಗೆ ತಿಳಿದಿದೆ. ॥ ೨೯ ॥ ಪ್ರಪಂಚದಲ್ಲಿ ಕೆಲವೇ ಜನರು ಮಾಯೆಯಿಂದ ನಿರ್ಮಿತವಾದ ವಿಷಯ ಸಂಬಂಧವಾದ ವಾಸನೆಗಳನ್ನು ದೂರಮಾಡಿ, ವಿಷಯ ವಾಸನೆಯು ಕಿಂಚಿತ್ತಾದರೂ ಮನಸ್ಸಿನಲ್ಲಿ ಇರದಿದ್ದರೂ ನನ್ನಂತೆ ಲೋಕಸಂಗ್ರಹಕ್ಕಾಗಿ ಕರ್ತವ್ಯ ಕರ್ಮಗಳನ್ನು ಮಾಡುತ್ತಿರುತ್ತಾರೆ. ॥ ೩೦ ॥ ಬ್ರಾಹ್ಮಣ ಶ್ರೇಷ್ಠನೇ ನಾವಿಬ್ಬರೂ ಒಟ್ಟಿಗೆ ಗುರುಕುಲದಲ್ಲಿ ವಾಸಿಸುತ್ತಿದ್ದಾಗಿನ ಮಾತುಗಳು ನೆನಪಿದೆಯೆ? ನಿಜವಾಗಿ ಗುರುಕುಲದಲ್ಲೇ ದ್ವಿಜರಿಗೆ ತಾವು ತಿಳಿಯಬೇಕಾದ ಜ್ಞಾನವುಂಟಾಗುತ್ತದೆ. ಅದರ ಮೂಲಕ ಅವರು ಅಜ್ಞಾನಾಂಧಕಾರದಿಂದ ಪಾರಾಗಿ ಹೋಗುವರು. ॥ ೩೧ ॥ ಮಿತ್ರನೇ! ಈ ಪ್ರಪಂಚದಲ್ಲಿ ಶರೀರಕ್ಕೆ ಕಾರಣನಾದ ಜನ್ಮದಾತ ತಂದೆಯು ಮೊದಲನೆಯ ಗುರು. ಅನಂತರ ಉಪನಯನಾದಿ ಸಂಸ್ಕಾರಗಳನ್ನು ಮಾಡಿ ಸತ್ಕರ್ಮಗಳ ಶಿಕ್ಷಣವನ್ನು ಕೊಡುವವನು ಎರಡನೆಯ ಗುರುವು ಪೂಜ್ಯನೇ ಆಗಿರುವನು. ಬಳಿಕ ಜ್ಞಾನೋಪದೇಶವನ್ನು ಮಾಡಿ ಪರಮಾತ್ಮನನ್ನು ಸಾಕ್ಷಾತ್ಕರಿಸಿಕೊಡುವ ಗುರುವು ಪರಮಾತ್ಮಸ್ವರೂಪನೇ ಆಗಿರುವನು. ವರ್ಣಾಶ್ರಮಿಗಳಿಗೆ ಹೀಗೆ ಮೂರು ಗುರುಗಳಿರುತ್ತಾರೆ. ॥ ೩೨ ॥

ನನ್ವರ್ಥಕೋವಿದಾ ಬ್ರಹ್ಮನ್ ವರ್ಣಾಶ್ರಮವತಾಮಿಹ ।
ಯೇ ಮಯಾ ಗುರುಣಾ ವಾಚಾ ತರಂತ್ಯಂಜೋ ಭವಾರ್ಣವಮ್
॥ ೩೩ ॥

ನಾಹಮಿಜ್ಯಾಪ್ರಜಾತಿಭ್ಯಾಂ ತಪಸೋಪಶಮೇನ ವಾ ।
ತುಷ್ಯೇಯಂ ಸರ್ವಭೂತಾತ್ಮಾ ಗುರುಶುಶ್ರೂಷಯಾ ಯಥಾ
॥ ೩೪ ॥

ಅಪಿ ನಃ ಸ್ಮರ್ಯತೇ ಬ್ರಹ್ಮನ್ವೃತ್ತಂ ನಿವಸತಾಂ ಗುರೌ ।
ಗುರುದಾರೈಶ್ಚೋದಿತಾನಾಮಿಂಧನಾನಯನೇ ಕ್ವಚಿತ್
॥ ೩೫ ॥

ಪ್ರವಿಷ್ಟಾನಾಂ ಮಹಾರಣ್ಯಮಪರ್ತೌ ಸುಮಹದ್ದ್ವಿಜ ।
ವಾತವರ್ಷಮಭೂತ್ತೀವ್ರಂ ನಿಷ್ಠುರಾಃ ಸ್ತನಯಿತ್ನವಃ
॥ ೩೬ ॥

ಸೂರ್ಯಶ್ಚಾಸ್ತಂ ಗತಸ್ತಾವತ್ತಮಸಾ ಚಾವೃತಾ ದಿಶಃ ।
ನಿಮ್ನಂ ಕೂಲಂ ಜಲಮಯಂ ನ ಪ್ರಾಜ್ಞಾಯತ ಕಿಂಚನ
॥ ೩೭ ॥

ವಯಂ ಭೃಶಂ ತತ್ರ ಮಹಾನಿಲಾಂಬುಭಿ-
ರ್ನಿಹನ್ಯಮಾನಾ ಮುಹುರಂಬುಸಂಪ್ಲವೇ ।
ದಿಶೋಽವಿದಂತೋಽಥ ಪರಸ್ಪರಂ ವನೇ
ಗೃಹೀತಹಸ್ತಾಃ ಪರಿಬಭ್ರಿಮಾತುರಾಃ ॥ ೩೮ ॥

ಏತದ್ವಿದಿತ್ವಾ ಉದಿತೇ ರವೌ ಸಾಂದೀಪನಿರ್ಗುರುಃ ।
ಅನ್ವೇಷಮಾಣೋ ನಃ ಶಿಷ್ಯಾನಾಚಾರ್ಯೋಽಪಶ್ಯದಾತುರಾನ್
॥ ೩೯ ॥

ಅಹೋ ಹೇ ಪುತ್ರಕಾ ಯೂಯಮಸ್ಮದರ್ಥೇಽತಿದುಃಖಿತಾಃ ।
ಆತ್ಮಾ ವೈ ಪ್ರಾಣಿನಾಂ ಪ್ರೇಷ್ಠಸ್ತಮನಾದೃತ್ಯ ಮತ್ಪರಾಃ
॥ ೪೦ ॥

ಏತದೇವ ಹಿ ಸಚ್ಛಿಷ್ಯೈಃ ಕರ್ತವ್ಯಂ ಗುರುನಿಷ್ಕೃತಮ್ ।
ಯದ್ವೈ ವಿಶುದ್ಧಭಾವೇನ ಸರ್ವಾರ್ಥಾತ್ಮಾರ್ಪಣಂ ಗುರೌ
॥ ೪೦ ॥

ತುಷ್ಟೋಽಹಂ ಭೋ ದ್ವಿಜಶ್ರೇಷ್ಠಾಃ ಸತ್ಯಾಃ ಸಂತು ಮನೋರಥಾಃ ।
ಛಂದಾಂಸ್ಯಯಾತಯಾಮಾನಿ ಭವಂತ್ವಿಹ ಪರತ್ರ ಚ
॥ ೪೨ ॥

ಪ್ರಿಯಸಖನೇ! ಗುರುವಿನ ಸ್ವರೂಪದಲ್ಲಿ ಸಾಕ್ಷಾತ್ ನಾನೇ ಆಗಿರುವೆನು. ಈ ಜಗತ್ತಿನ ವರ್ಣಾಶ್ರಮಿಗಳಲ್ಲಿ ತನ್ನ ಸದ್ಗುರುವಿನ ಉಪದೇಶದಂತೆ ಆಯಾಸವಿಲ್ಲದೆಯೇ ಭವಸಾಗರವನ್ನು ದಾಟುವವರೇ ತನ್ನ ಸ್ವಾರ್ಥ ಮತ್ತು ಪರಮಾರ್ಥದ ನಿಜವಾದ ಕೋವಿದರಲ್ಲವೇ? ॥ ೩೩ ॥ ಪ್ರಿಯ ಮಿತ್ರನೇ! ನಾನು ಸಮಸ್ತ ಪ್ರಾಣಿಗಳ ಹೃದಯದಲ್ಲಿ ಅಂತರ್ಯಾಮಿರೂಪದಿಂದ ಆತ್ಮನಾಗಿ ವಿರಾಜಿಸುತ್ತಿರುವೆನು. ಸದ್ಗುರುವಿನ ಸೇವಾ ಶುಶ್ರೂಷೆಗಳಿಂದ ನಾನು ಸಂತುಷ್ಟನಾಗುವಂತೆ, ಗೃಹಸ್ಥರ ಧರ್ಮವಾದ ಪಂಚಮಹಾಯಜ್ಞಾದಿಗಳನ್ನು ಮಾಡುವುದರಿಂದಾಗಲೀ, ಬ್ರಹ್ಮಚಾರಿಯ ಧರ್ಮವಾದ ವೇದಾಧ್ಯಯನದಿಂದಾಗಲೀ ವಾನಪ್ರಸ್ಥಾಶ್ರಮದ ಧರ್ಮವಾದ ತಪಸ್ಸಿನಿಂದಾಗಲೀ, ಸಂನ್ಯಾಸಿಗಳ ಧರ್ಮವಾದ ವಿರಕ್ತತೆಯಿಂದಾಗಲೀ ನನಗೆ ತೃಪ್ತಿಯಾಗುವುದಿಲ್ಲ. ॥ ೩೪ ॥

ಬ್ರಾಹ್ಮಣೋತ್ತಮನೇ! ನಾವಿಬ್ಬರೂ ಗುರುಕುಲದಲ್ಲಿದ್ದಾಗ ನಡೆದ ಒಂದು ಪ್ರಸಂಗವು ನಿನಗೆ ನೆನಪಿದೆಯೇ! ಒಂದು ದಿನ ನಮ್ಮಿಬ್ಬರಿಗೂ ಗುರುಪತ್ನಿಯರು ಸೌದೆಯನ್ನು ತರಲು ಕಾಡಿಗೆ ಕಳಿಸಿದ್ದರು. ॥ ೩೫ ॥ ಆಗ ನಾವುಗಳು ನಿಬಿಡವಾದ ಕಾಡೊಂದನ್ನು ಪ್ರವೇಶಿಸಿದೆವು. ಅದು ಮಳೆಗಾಲವಲ್ಲದಿದ್ದರೂ ಭಯಂಕರವಾದ ಬಿರುಗಾಳಿಯೊಂದಿಗೆ ಧಾರಾಕಾರ ಮಳೆಯು ಸುರಿಯ ತೊಡಗಿತು. ಆಕಾಶದಲ್ಲಿ ಗುಡುಗು-ಸಿಡಿಲುಗಳು ಆರ್ಭಟಿಸುತ್ತಿದ್ದವು. ॥ ೩೬ ॥ ಸೂರ್ಯನಾರಾಯಣನು ಅಸ್ತಮಿಸಿದನು. ಎಲ್ಲೆಡೆ ಗಾಢಾಂಧಕಾರವು ಕವಿಯಿತು. ಅತಿವೃಷ್ಟಿಯಿಂದಾಗಿ ಎಲ್ಲಾ ಕಡೆ ನೀರು ತುಂಬಿಹೋಗಿ ತಗ್ಗೆಲ್ಲಿದೆ? ದಿಟ್ಟೆಲ್ಲಿದೆ? ಎಂಬುದೇ ತಿಳಿಯುತ್ತಿರಲಿಲ್ಲ. ॥ ೩೭ ॥ ಅದೊಂದು ಸಣ್ಣ ಪ್ರಳಯದಂತೆ ಇತ್ತು. ಬಿರುಗಾಳಿಯು ಮತ್ತು ಮಳೆಯ ನೀರಿನ ಹೊಡೆತದಿಂದ ನಮಗೆ ಅತ್ಯಂತ ಪೀಡೆಯುಂಟಾಗಿ ದಿಕ್ಕುಗಾಣದೆ ಪರಸ್ಪರ ಕೈ ಕೈ ಹಿಡಿದುಕೊಂಡು ಭಯಗೊಂಡವರಾಗಿ ಅರಣ್ಯದಲ್ಲಿ ಅತ್ತ-ಇತ್ತ ಅಲೆಯುತ್ತಿದ್ದೆವು. ॥ ೩೮ ॥ ರಾತ್ರಿಯಲ್ಲಿ ನಾವು ಆಶ್ರಮಕ್ಕೆ ಹಿಂದಿರುಗಲಿಲ್ಲವೆಂದು ತಿಳಿದ ಸಾಂದೀಪನಿಮುನಿಗಳು ಸೂರ್ಯೋದಯವಾಗುತ್ತಲೇ ಶಿಷ್ಯರೊಡನೆ ನಮ್ಮನ್ನು ಹುಡುಕುತ್ತಾ ಬಂದು ಭಯಗೊಂಡಿದ್ದ ನಮ್ಮನ್ನು ನೋಡಿದರು. ॥ ೩೯ ॥ ಅವರು ಹೇಳಿದರು - ಆಶ್ಚರ್ಯ! ಏನಚ್ಚರಿ! ಮಕ್ಕಳೇ! ನೀವು ನಮ್ಮ ಸಲುವಾಗಿ ಬಹಳವಾಗಿ ಕಷ್ಟಪಡುತ್ತಿರುವಿರಿ. ಎಲ್ಲ ಪ್ರಾಣಿಗಳಿಗೂ ಅವರವರ ಶರೀರವು ಎಲ್ಲಕ್ಕಿಂತ ಹೆಚ್ಚು ಪ್ರಿಯವಾಗಿರುತ್ತದೆ. ಆದರೆ ನೀವಿಬ್ಬರೂ ಅದನ್ನು ಲೆಕ್ಕಿಸದೇ ನಮ್ಮ ಸೇವೆಯಲ್ಲಿ ತತ್ಪರರಾಗಿರುವಿರಿ. ॥ ೪೦ ॥ ಸತ್ ಶಿಷ್ಯರಿಗೆ ವಿಶುದ್ಧಭಾವದಿಂದ ತನ್ನ ಸಮಸ್ತವನ್ನೂ ಮತ್ತು ಶರೀರವನ್ನು ಗುರುಗಳ ಸೇವೆಯಲ್ಲಿ ಸಮರ್ಪಿಸುವುದೇ ಗುರುಗಳ ಋಣದಿಂದ ಮುಕ್ತರಾಗಲು ಇರುವ ಕರ್ತವ್ಯವಾಗಿದೆ. ॥ ೪೧ ॥ ದ್ವಿಜ ಶಿರೋಮಣಿಗಳೇ! ನಾನು ನಿಮ್ಮ ವಿಷಯದಲ್ಲಿ ಸಂತುಷ್ಟನಾಗಿದ್ದೇನೆ. ನಿಮ್ಮ ಸಮಸ್ತ ಮನೋರಥಗಳು ಪೂರ್ಣಗೊಳ್ಳಲಿ. ನೀವುಗಳು ನಮ್ಮಿಂದ ಮಾಡಿರುವ ವೇದಾಧ್ಯಯನವು ನಿಮಗೆ ಸದಾಕಾಲ ಕಂಠಸ್ಥವಾಗಿದ್ದು ಈ ಲೋಕ-ಪರಲೋಕಗಳಲ್ಲಿ ಎಲ್ಲಿಯೂ ನಿಷ್ಫಲವಾಗದಿರಲಿ. ॥ ೪೨ ॥

ಇತ್ಥಂವಿಧಾನ್ಯನೇಕಾನಿ ವಸತಾಂ ಗುರುವೇಶ್ಮಸು ।
ಗುರೋರನುಗ್ರಹೇಣೈವ ಪುಮಾನ್ಪೂರ್ಣಃ ಪ್ರಶಾಂತಯೇ ॥ ೪೩ ॥

ಪ್ರಿಯಮಿತ್ರನೇ! ನಾವುಗಳು ಗುರುಕುಲದಲ್ಲಿ ವಾಸವಾಗಿದ್ದಾಗ ನಮ್ಮ ಜೀವನದಲ್ಲಿ ಇಂತಹ ಅನೇಕ ಘಟನೆಗಳು ಘಟಿಸಿದ್ದವು. ಸದ್ಗುರುವಿನ ಕೃಪೆಯಿಂದಲೇ ಮನುಷ್ಯನು ಶಾಂತಿಯ ಅಧಿಕಾರಿಯಾಗುತ್ತಾನೆ ಮತ್ತು ಪೂರ್ಣತೆಗೆ ತಲುಪುತ್ತಾನೆ ಇದರಲ್ಲಿ ಸಂದೇಹವೇ ಇಲ್ಲ. ॥ ೪೩ ॥

ಬ್ರಾಹ್ಮಣ ಉವಾಚ

ಕಿಮಸ್ಮಾಭಿರನಿರ್ವೃತ್ತಂ ದೇವದೇವ ಜಗದ್ಗುರೋ ।
ಭವತಾ ಸತ್ಯಕಾಮೇನ ಯೇಷಾಂ ವಾಸೋ ಗುರಾವಭೂತ್ ॥ ೪೪ ॥

ಯಸ್ಯಚ್ಛಂದೋಮಯಂ ಬ್ರಹ್ಮ ದೇಹ ಆವಪನಂ ವಿಭೋ ।
ಶ್ರೇಯಸಾಂ ತಸ್ಯ ಗುರುಷು ವಾಸೋಽತ್ಯಂತವಿಡಂಬನಮ್ ॥ ೪೫ ॥

ಸುದಾಮ ಬ್ರಾಹ್ಮಣನು ಹೇಳಿದನು – ದೇವ ದೇವನಾದ ಜಗದ್ಗುರು ಶ್ರೀಕೃಷ್ಣನೇ! ಸತ್ಯಸಂಕಲ್ಪನಾದ, ಪರಮಾತ್ಮನಾದ ನಿನ್ನೊಡನೆ ಗುರುಕುಲದಲ್ಲಿ ವಾಸಮಾಡುವ ಸೌಭಾಗ್ಯವು ಸಿಕ್ಕಿದ ನನಗೆ ಇನ್ನು ಏನು ತಾನೇ ಮಾಡಲು ಉಳಿದಿದೆ? ಎಲ್ಲ ಕರ್ತವ್ಯಗಳನ್ನು ಮುಗಿಸಿದಂತಾಗಿದೆ. ॥ ೪೪ ॥ ಪ್ರಭುವೇ! ಛಂದೋಮಯವಾದ ವೇದವು ಚತುರ್ವಿಧ ಪುರುಷಾರ್ಥಗಳಿಗೂ ಮೂಲಸ್ರೋತವಾಗಿದೆ ಹಾಗೂ ಅದು ನಿನ್ನ ಶರೀರವೇ ಆಗಿದೆ. ಅಂತಹ ನೀನು ವೇದಾಧ್ಯಯನಕ್ಕಾಗಿ ಗುರುಕುಲದಲ್ಲಿ ವಾಸಿಸುವುದು ಮನುಷ್ಯಲೀಲೆಯ ಅಭಿನಯವಲ್ಲದೆ ಮತ್ತೇನಿದೆ? ॥ ೪೫ ॥

ಎಂಭತ್ತನೆಯ ಅಧ್ಯಾಯವು ಮುಗಿಯಿತು. ॥ ೮೦ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮಸ್ಕಂಧೇ ಉತ್ತರಾರ್ಧೇ
ಶ್ರೀದಾಮಚರಿತೇ ಅಶೀತಿತಮೋಽಧ್ಯಾಯಃ ॥ ೮೦ ॥

ಎಂಭತ್ತೊಂದನೆಯ ಅಧ್ಯಾಯ

ಸುದಾಮನಿಗೆ ಐಶ್ವರ್ಯದ ಪ್ರಾಪ್ತಿ

ಶ್ರೀಶುಕ ಉವಾಚ

ಸ ಇತ್ಥಂ ದ್ವಿಜಮುಖ್ಯೇನ ಸಹ ಸಂಕಥಯನ್ ಹರಿಃ ।
ಸರ್ವಭೂತಮನೋಽಭಿಜ್ಞಃ ಸ್ಮಯಮಾನ ಉವಾಚ ತಮ್ ॥ ೧ ॥

ಬ್ರಹ್ಮಣ್ಯೋ ಬ್ರಾಹ್ಮಣಂ ಕೃಷ್ಣೋ ಭಗವಾನ್ಪ್ರಹಸನ್ಪ್ರಿಯಮ್ ।
ಪ್ರೇಮ್ಣಾ ನಿರೀಕ್ಷಣೇನೈವ ಪ್ರೇಕ್ಷನ್ ಖಲು ಸತಾಂ ಗತಿಃ ॥ ೨ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪ್ರಿಯಪರೀಕ್ಷಿತನೇ! ಭಗವಾನ್ ಶ್ರೀಕೃಷ್ಣನು ಸಮಸ್ತರ ಮನಸ್ಸಿನ ಮಾತನ್ನು ತಿಳಿದಿರುತ್ತಾನೆ. ಅವನು ಬ್ರಾಹ್ಮಣರ ಪರಮಭಕ್ತನಾಗಿದ್ದು, ಅವರ ಕ್ಲೇಶಗಳ ನಾಶಕನೂ, ಸಂತರ ಏಕಮಾತ್ರ ಆಶ್ರಯನೂ ಆಗಿರುವ ಶ್ರೀಕೃಷ್ಣನು ಹಿಂದೆ ಹೇಳಿದಂತೆ ತನ್ನ ಪ್ರಿಯಸಖನೊಂದಿಗೆ ಬಹಳ ಹೊತ್ತಿನವರೆಗೆ ಮಾತನಾಡುತ್ತಾ ಇದ್ದನು. ಅವನು ತನ್ನ ಪ್ರಿಯಸಖನಾದ ಸುದಾಮನನ್ನು ಪ್ರೇಮಪೂರ್ಣವಾದ ದೃಷ್ಟಿಯಿಂದ ನೋಡುತ್ತಾ ಸ್ವಲ್ಪ ಮುಗುಳ್ನಕ್ಕು ವಿನೋದದಿಂದ ಇಂತೆಂದನು. ॥ ೧-೨ ॥

ಶ್ರೀಭಗವಾನುವಾಚ

ಕಿಮುಪಾಯನಮಾನೀತಂ ಬ್ರಹ್ಮನ್ ಮೇ ಭವತಾ ಗೃಹಾತ್ ।
ಅಣ್ವಪ್ಯುಪಾಹೃತಂ ಭಕ್ತೈಃ ಪ್ರೇಮ್ಣಾ ಭೂರ್ಯೇವ ಮೇ ಭವೇತ್ ।
ಭೂರ್ಯಪ್ಯಭಕ್ತೋಪಹೃತಂ ನ ಮೇ ತೋಷಾಯ ಕಲ್ಪತೇ ॥ ೩ ॥

ಪತ್ರಂ ಪುಷ್ಪಂ ಫಲಂ ತೋಯಂ ಯೋ ಮೇ ಭಕ್ತ್ಯಾ ಪ್ರಯಚ್ಛತಿ ।
ತದಹಂ ಭಕ್ತ್ಯುಪಹೃತಮಶ್ನಾಮಿ ಪ್ರಯತಾತ್ಮನಃ ॥ ೪ ॥

ಭಗವಾನ್ ಶ್ರೀಕೃಷ್ಣನು ಹೇಳಿದನು – ಪ್ರಿಯಸಖನೇ! ನನಗಾಗಿ ನೀನು ಮನೆಯಿಂದ ಯಾವ ಉಪಹಾರವನ್ನು ತಂದಿರುವೆ? ನನ್ನ ಪ್ರಿಯಭಕ್ತರು ಪ್ರೇಮದಿಂದ ಸಣ್ಣದಾದ ವಸ್ತುವನ್ನು ಅರ್ಪಿಸಿದರೂ ನನಗೆ ಅದು ಬಹುದೊಡ್ಡದಾಗಿ ಹೋಗುತ್ತದೆ. ಆದರೆ ಭಕ್ತಿಯಿಲ್ಲದವರು ಬಹಳಷ್ಟು ವಸ್ತುಗಳನ್ನು ಕಾಣಿಕೆಯಾಗಿ ಕೊಟ್ಟರೂ ನಾನು ಅದರಿಂದ ಸಂತುಷ್ಟನಾಗುವುದಿಲ್ಲ. ॥ ೩ ॥ ಭಕ್ತಿಪರವಶನಾಗಿ ಫಲ, ಪುಷ್ಪ, ಪತ್ರೆ, ನೀರು – ಇವುಗಳಲ್ಲಿ ಯಾವುದೇ ವಸ್ತುವನ್ನು ನನಗೆ ಅರ್ಪಿಸುವ ಆ ಶುದ್ಧ ಹೃದಯದ ಭಕ್ತನ ಪ್ರೇಮೋಪಹಾರವನ್ನು ನಾನು ಸ್ವೀಕರಿಸುತ್ತೇನೆ ಮಾತ್ರವಲ್ಲ, ಅದನ್ನು ಆದರದಿಂದ ಸೇವಿಸುತ್ತೇನೆ. ॥ ೪ ॥

ಇತ್ಯುಕ್ತೋಽಪಿ ದ್ವಿಜಸ್ತಸ್ಮೈ ವ್ರೀಡಿತಃ ಪತಯೇ ಶ್ರಿಯಃ ।
ಪೃಥುಕಪ್ರಸೃತಿಂ ರಾಜನ್ ನ ಪ್ರಾಯಚ್ಛದವಾಙ್ಮುಖಃ ॥ ೫ ॥

ಸರ್ವಭೂತಾತ್ಮದೃಕ್ ಸಾಕ್ಷಾತ್ ತಸ್ಯಾಗಮನಕಾರಣಮ್ ।
ವಿಜ್ಞಾಯಾಚಿಂತಯನ್ನಾಯಂ ಶ್ರೀಕಾಮೋ ಮಾಭಜತ್ಪುರಾ ॥ ೬ ॥

ಪತ್ನ್ಯಾಃ ಪತಿವ್ರತಾಯಾಸ್ತು ಸಖಾ ಪ್ರಿಯಚಿಕೀರ್ಷಯಾ ।
ಪ್ರಾಪ್ತೋ ಮಾಮಸ್ಯ ದಾಸ್ಯಾಮಿ ಸಂಪದೋಽಮರ್ತ್ಯದುರ್ಲಭಾಃ ॥ ೭ ॥

ಇತ್ಥಂ ವಿಚಿಂತ್ಯ ವಸನಾಚ್ಚೀರಬದ್ಧಾನ್ ದ್ವಿಜನ್ಮನಃ ।
ಸ್ವಯಂ ಜಹಾರ ಕಿಮಿದಮಿತಿ ಪೃಥುಕತಂಡುಲಾನ್ ॥ ೮ ॥

ನನ್ವೇತದುಪನೀತಂ ಮೇ ಪರಮಪ್ರೀಣನಂ ಸಖೇ ।
ತರ್ಪಯಂತ್ಯಂಗ ಮಾಂ ವಿಶ್ವಮೇತೇ ಪೃಥುಕತಂಡುಲಾಃ ॥ ೯ ॥

ಇತಿ ಮುಷ್ಟಿಂ ಸಕೃಜ್ಜಗ್ಧ್ವಾ ದ್ವಿತೀಯಾಂ ಜಗ್ಧುಮಾದದೇ ।
ತಾವಚ್ಛ್ರೀರ್ಜಗೃಹೇ ಹಸ್ತಂ ತತ್ಪರಾ ಪರಮೇಷ್ಠಿನಃ ॥ ೧೦ ॥

ಏತಾವತಾಲಂ ವಿಶ್ವಾತ್ಮನ್ಸರ್ವಸಂಪತ್ಸಮೃದ್ಧಯೇ ।
ಅಸ್ಮಿನ್ಲೋಕೇಽಥವಾಮುಷ್ಮಿನ್ಪುಂಸಸ್ತ್ವತ್ತೋಷಕಾರಣಮ್ ॥ ೧೧ ॥

ಬ್ರಾಹ್ಮಣಸ್ತಾಂ ತು ರಜನೀಮುಷಿತ್ವಾಚ್ಯುತಮಂದಿರೇ ।
ಭುಕ್ತ್ವಾ ಪೀತ್ವಾ ಸುಖಂ ಮೇನೇ ಆತ್ಮಾನಂ ಸ್ವರ್ಗತಂ ಯಥಾ ॥ ೧೨ ॥

ಶ್ವೋಭೂತೇ ವಿಶ್ವಭಾವೇನ ಸ್ವಸುಖೇನಾಭಿವಂದಿತಃ ।
ಜಗಾಮ ಸ್ವಾಲಯಂ ತಾತ ಪಥ್ಯನುವ್ರಜ್ಯ ನಂದಿತಃ ॥ ೧೩ ॥

ಸ ಚಾಲಬ್ಧ್ವಾ ಧನಂ ಕೃಷ್ಣಾನ್ನ ತು ಯಾಚಿತವಾನ್ ಸ್ವಯಮ್ ।
ಸ್ವಗೃಹಾನ್ ವ್ರೀಡಿತೋಽಗಚ್ಛನ್ಮಹದ್ದರ್ಶನನಿರ್ವೃತಃ ॥ ೧೪ ॥

ಅಹೋ ಬ್ರಹ್ಮಣ್ಯದೇವಸ್ಯ ದೃಷ್ಟಾ ಬ್ರಹ್ಮಣ್ಯತಾ ಮಯಾ ।
ಯದ್ದರಿದ್ರತಮೋ ಲಕ್ಷ್ಮೀಮಾಶ್ಲಿಷ್ಟೋ ಬಿಭ್ರತೋರಸಿ ॥ ೧೫ ॥

ಪರೀಕ್ಷಿತನೇ! ಭಗವಾನ್ ಶ್ರೀಕೃಷ್ಣನು ಹೀಗೆ ಹೇಳಿದ್ದರೂ ಆ ಬ್ರಾಹ್ಮಣನು ನಾಚಿಕೆಯಿಂದಾಗಿ ಶ್ರೀಯಃಪತಿಯಾದ ತನ್ನ ಮಿತ್ರನಿಗೆ ನಾಲ್ಕು ಮುಷ್ಟಿ ಅವಲಕ್ಕಿಯನ್ನು ಕೊಡಲಿಲ್ಲ, ಸಂಕೋಚದಿಂದ ತಲೆತಗ್ಗಿಸಿ ಕುಳಿತುಬಿಟ್ಟನು. ಪರೀಕ್ಷಿತ! ಶ್ರೀಕೃಷ್ಣನು ಸಮಸ್ತ ಪ್ರಾಣಿಗಳ ಮನಸ್ಸಿನಲ್ಲಿ ಏನಿರುವುದೆಂಬುದನ್ನು ಸಾಕ್ಷಾತ್ತಾಗಿ ಕಾಣುವ ಸಾಮರ್ಥ್ಯವನ್ನು ಹೊಂದಿದವನು. ಸುದಾಮನ ಆಗಮನದ ಕಾರಣವನ್ನು ತಿಳಿದುಕೊಂಡನು, ಅವನ ಹೃದಯದ ಮಾತೂ ಅರ್ಥವಾಗಿತ್ತು. 'ಇವನಾದರೋ ನನ್ನ ಪ್ರಿಯಮಿತ್ರನಾಗಿರುವನು. ಅಲ್ಲದೆ ಇವನು ಎಂದಿಗೂ ಶ್ರೀಕಾಮನಾಗಿ ನನ್ನನ್ನು ಭಜಿಸಲಿಲ್ಲ. ಈ ಸಮಯದಲ್ಲಿ ತನ್ನ ಪತಿವ್ರತೆಯಾದ ಪತ್ನಿಯ ಮನಸಂತೋಷಕ್ಕಾಗಿ, ಆಕೆಯ ಆಗ್ರಹದಿಂದ ಇಲ್ಲಿಗೆ ಬಂದಿರುವನು. ಈಗ ನಾನು ಇವನಿಗೆ ದೇವತೆಗಳಿಗೂ ಅತ್ಯಂತ ದುರ್ಲಭವಾದ ಸಂಪತ್ತನ್ನು ಅನುಗ್ರಹಿಸುವೆನು' ಎಂದು ಯೋಚಿಸಿದನು. ॥ ೫-೭ ॥ ಭಗವಾನ್ ಶ್ರೀಕೃಷ್ಣನು ಹೀಗೆ ವಿಚಾರಮಾಡಿ ಅವನ ಕಂಕುಳಲ್ಲಿದ್ದ ಅವಲಕ್ಕಿಯ ಬಟ್ಟೆ ಗಂಟನ್ನು 'ಇದೇನಿದು?' ಎಂದು ಹೇಳುತ್ತಾ ಕಸಿದುಕೊಂಡನು. ॥ ೮ ॥ ಪ್ರಿಯ ಮಿತ್ರನೇ! ನೀನಾದರೋ ನನಗೆ ಅತ್ಯಂತ ಪ್ರಿಯವಾದ ತಿಂಡಿಯನ್ನೇ ತಂದಿರುವೆಯಲ್ಲ! ಸುದಾಮಾ! ಈ ಅವಲಕ್ಕಿಯು ಕೇವಲ ನನ್ನನ್ನೇ ಅಲ್ಲ, ಇಡೀ ಪ್ರಪಂಚವನ್ನೇ ತೃಪ್ತಿಪಡಿಸಲು ಸಾಕಾಗುವಷ್ಟಿದೆ ಎಂದು ಆಹ್ಲಾದದಿಂದ ನುಡಿದನು. ॥ ೯ ॥ ಹೀಗೆ ಹೇಳಿ ಶ್ರೀಕೃಷ್ಣನು ಅದರಲ್ಲಿ ಒಂದು ಮುಷ್ಟಿ ಅವಲಕ್ಕಿಯನ್ನು ತೆಗೆದು ತಿಂದುಬಿಟ್ಟನು ಮತ್ತು ಇನ್ನೊಂದು ಮುಷ್ಟಿಯನ್ನು ಎತ್ತಿಕೊಂಡಾಗ ಸಾಕ್ಷಾತ್ ಲಕ್ಷ್ಮೀದೇವಿಯಾದ ರುಕ್ಮಿಣಿಯು ಭಗವಾನ್ ಶ್ರೀಕೃಷ್ಣನ ಕೈಯನ್ನು ಹಿಡಿದುಕೊಂಡಳು. ಏಕೆಂದರೆ, ಆಕೆಯು ಏಕಮಾತ್ರ ಭಗವಂತನಲ್ಲೇ ಪರಾಯಣಳಾಗಿದ್ದಳು. ಅವನನ್ನು ಬಿಟ್ಟು ಬೇರೆಲ್ಲಿಗೂ ಹೋಗಲಾರಳು. ॥ ೧೦ ॥ ರುಕ್ಮಿಣಿಯು ಹೇಳಿದಳು - ವಿಶ್ವಾತ್ಮನೇ! ಸಾಕು, ಸಾಕು! ಮನುಷ್ಯನಿಗೆ ಈ ಲೋಕದಲ್ಲಿ ಹಾಗೂ ಪರಲೋಕದಲ್ಲಿ ಸಮಸ್ತ ಸಂಪತ್ಸಮೃದ್ಧಿಯನ್ನು ಹೊಂದಲು ನೀನು ತಿಂದಿರುವ ಈ ಒಂದು ಮುಷ್ಟಿ ಅವಲಕ್ಕಿಯೇ ಹೆಚ್ಚಾಗಿದೆ. ಏಕೆಂದರೆ, ಇಷ್ಟರಿಂದಲೇ ನೀನು ಸಂತುಷ್ಟನಾಗಿರುವೆ. ॥ ೧೧ ॥

ಪರೀಕ್ಷಿತನೇ! ಸುದಾಮನು ಅಂದಿನ ಇರುಳನ್ನು ಭಗವಾನ್ ಶ್ರೀಕೃಷ್ಣನ ಅರಮನೆಯಲ್ಲೇ ಕಳೆದನು. ಆದರ ಪೂರ್ವಕವಾಗಿ ಶ್ರೀಕೃಷ್ಣನಿತ್ತ ಮೃಷ್ಟಾನ್ನವನ್ನು ತಿಂದು, ಪಾನೀಯಗಳನ್ನು ಕುಡಿದು, ನಾನು ವೈಕುಂಠವನ್ನೇ ಸೇರಿರುವೆನೋ ಎಂಬಂತೆ ಅನುಭವಿಸಿದನು. ॥ ೧೨ ॥ ಪರೀಕ್ಷಿತನೇ! ಶ್ರೀಕೃಷ್ಣನಿಂದ ಸುದಾಮನಿಗೆ ಪ್ರತ್ಯಕ್ಷವಾಗಿ ಏನೂ ಸಿಗದಿದ್ದರೂ ಅವನು ಮಿತ್ರನಲ್ಲಿ ಏನನ್ನೂ ಬೇಡಲಿಲ್ಲ. ಅವನು ತನ್ನ ಚಿತ್ತದ ಕಾರ್ಯದ ಬಗ್ಗೆ ಸ್ವಲ್ಪ ಲಜ್ಜಿತನಾಗಿ ಭಗವಂತನ ದರ್ಶನದಿಂದ ಉಂಟಾದ ಆನಂದಾಂಬುಧಿಯಲ್ಲಿ ಮುಳುಗಿ, ತೇಲುತ್ತಾ ತನ್ನ ಮನೆಯ ಕಡೆಗೆ ಹೊರಟನು. ॥ ೧೩-೧೪ ॥ ಅವನು ಮನಸ್ಸಿನಲ್ಲೇ ಯೋಚಿಸತೊಡಗಿದನು - ಆಹಾ! ಎಂತಹ ಆನಂದದ ಮತ್ತು ಆಶ್ಚರ್ಯದ ಮಾತಾಗಿದೆ! ಬ್ರಾಹ್ಮಣರನ್ನು ತನ್ನ ಇಷ್ಟದೇವರೆಂದು ತಿಳಿಯುವ ಭಗವಾನ್ ಶ್ರೀಕೃಷ್ಣನ ಬ್ರಾಹ್ಮಣಭಕ್ತಿಯನ್ನು ಇಂದು ನಾನು ಕಣ್ಣಾರೆ ಕಂಡೆನು. ಧನ್ಯ, ಧನ್ಯನಿವನು! ವಕ್ಷಃಸ್ಥಳದಲ್ಲಿ ಸಾಕ್ಷಾತ್ ಲಕ್ಷ್ಮೀದೇವಿಯನ್ನು ಧರಿಸಿದ್ದ ಶ್ರೀಕೃಷ್ಣನು ನನ್ನಂತಹ ಕಡುಬಡವನನ್ನು ಆಲಿಂಗಿಸಿಕೊಂಡುಬಿಟ್ಟನಲ್ಲ! ॥ ೧೫ ..

ಕ್ವಾಹಂ ದರಿದ್ರಃ ಪಾಪೀಯಾನ್ ಕ್ವ ಕೃಷ್ಣಃ ಶ್ರೀನಿಕೇತನಃ ।
ಬ್ರಹ್ಮಬಂಧುರಿತಿ ಸ್ಮಾಹಂ ಬಾಹುಭ್ಯಾಂ ಪರಿರಂಭಿತಃ ॥ ೧೬ ॥

ನಿವಾಸಿತಃ ಪ್ರಿಯಾಜುಷ್ಟೇ ಪರ್ಯಂಕೇ ಭ್ರಾತರೋ ಯಥಾ ।
ಮಹಿಷ್ಯಾ ವೀಜಿತಃ ಶ್ರಾಂತೋ ವಾಲವ್ಯಜನಹಸ್ತಯಾ ॥ ೧೭ ॥

ಶುಶ್ರೂಷಯಾ ಪರಮಯಾ ಪಾದಸಂವಾಹನಾದಿಭಿಃ ।
ಪೂಜಿತೋ ದೇವದೇವೇನ ವಿಪ್ರದೇವೇನ ದೇವವತ್ ॥ ೧೮ ॥

ಸ್ವರ್ಗಾಪವರ್ಗಯೋಃ ಪುಂಸಾಂ ರಸಾಯಾಂ ಭುವಿ ಸಂಪದಾಮ್ ।
ಸರ್ವಾಸಾಮಪಿ ಸಿದ್ಧೀನಾಂ ಮೂಲಂ ತಚ್ಚರಣಾರ್ಚನಮ್ ॥ ೧೯ ॥

ಅಧನೋಽಯಂ ಧನಂ ಪ್ರಾಪ್ಯ ಮಾದ್ಯನ್ನುಚ್ಚೈರ್ನ ಮಾಂ ಸ್ಮರೇತ್ ।
ಇತಿ ಕಾರುಣಿಕೋ ನೂನಂ ಧನಂ ಮೇಽಭೂರಿ ನಾದದಾತ್ ॥ ೨೦ ॥

ಇತಿ ತಚ್ಚಿಂತಯನ್ನಂತಃ ಪ್ರಾಪ್ತೋ ನಿಜಗೃಹಾಂತಿಕಮ್ ।
ಸೂರ್ಯಾನಲೇಂದುಸಂಕಾಶೈರ್ವಿಮಾನೈಃ ಸರ್ವತೋ ವೃತಮ್ ॥ ೨೧ ॥

ವಿಚಿತ್ರೋಪವನೋದ್ಯಾನೈಃ ಕೂಜದ್ದ್ವಿಜಕುಲಾಕುಲೈಃ ।
ಪ್ರೋತ್ಫುಲ್ಲಕುಮುದಾಂಭೋಜಕಹ್ಲಾರೋತ್ಪಲವಾರಿಭಿಃ ॥ ೨೨ ॥

ಜುಷ್ಟಂ ಸ್ವಲಂಕೃತೈಃ ಪುಂಭಿಃ ಸ್ತ್ರೀಭಿಶ್ಚ ಹರಿಣಾಕ್ಷಿಭಿಃ ।
ಕಿಮಿದಂ ಕಸ್ಯ ವಾ ಸ್ಥಾನಂ ಕಥಂ ತದಿದಮಿತ್ಯಭೂತ್ ॥ ೨೩ ॥

ಏವಂ ಮೀಮಾಂಸಮಾನಂ ತಂ ನರಾ ನಾರ್ಯೋಽಮರಪ್ರಭಾಃ ।
ಪ್ರತ್ಯಗೃಹ್ಣನ್ಮಹಾಭಾಗಂ ಗೀತವಾದ್ಯೇನ ಭೂಯಸಾ ॥ ೨೪ ॥

ಪತಿಮಾಗತಮಾಕರ್ಣ್ಯ ಪತ್ನ್ಯುದ್ಧರ್ಷಾತಿಸಂಭ್ರಮಾ ।
ನಿಶ್ಚಕ್ರಾಮ ಗೃಹಾತ್ತೂರ್ಣಂ ರೂಪಿಣೀ ಶ್ರೀರಿವಾಲಯಾತ್ ॥ ೨೫ ॥

ಅತ್ಯಂತ ಪಾಪಿಯೂ, ದರಿದ್ರನೂ ಆದ ನಾನೆಲ್ಲಿ! ಲಕ್ಷ್ಮೀದೇವಿಯ ಏಕಮಾತ್ರ ಆಶ್ರಯನಾದ ಭಗವಾನ್ ಶ್ರೀಕೃಷ್ಣನೆಲ್ಲಿ! ಆದರೂ ಅವನು 'ಇವನು ಬ್ರಾಹ್ಮಣ' ಎಂದು ಭಾವಿಸಿ ನನ್ನನ್ನು ತನ್ನ ತೋಳುಗಳಿಂದ ಅಪ್ಪಿಕೊಂಡನು. ॥ ೧೬ ॥ ಇಷ್ಟೇ ಅಲ್ಲ, ತನ್ನ ಪ್ರಾಣಪ್ರಿಯಳಾದ ರುಕ್ಮಿಣೀ ದೇವಿಯು ಮಲಗುವ ಶ್ರೇಷ್ಠವಾದ ಮಂಚದಲ್ಲಿ ತನ್ನ ನಿಜ ಸಹೋದರನಂತೆ ನನ್ನನ್ನು ಮಲಗಿಸಿದನು. ಪರ್ಯಂಕದಲ್ಲಿ ಎಷ್ಟೊಂದು ಹೇಳಲೀ! ದಣಿದಿದ್ದ ನನಗೆ ಸಾಕ್ಷಾತ್ ಅವನ ಪಟ್ಟದರಸಿಯಾದ ರುಕ್ಮಿಣಿಯೇ ತನ್ನ ಕೈಯಾರ ಚಾಮರಬೀಸಿ ನನ್ನ ಸೇವೆಮಾಡಿದಳು. ॥ ೧೭ ॥ ಆಹಾ! ದೇವತೆಗಳಿಗೆ ಆರಾಧ್ಯನಾಗಿದ್ದರೂ ಬ್ರಾಹ್ಮಣರನ್ನು ತನ್ನ ಇಷ್ಟದೇವರೆಂದು ಭಾವಿಸಿರುವ ಪ್ರಭುವು ನನ್ನ ಕಾಲನ್ನೊತ್ತಿ, ತನ್ನ ಕೈಯಿಂದ ಊಟೋಪಚಾರ ಮಾಡಿಸಿ ಅತ್ಯಂತ ಆದರದಿಂದ ದೇವತೆಯಂತೆ ಪೂಜಿಸಿ ಸೇವೆ ಮಾಡಿದನು. ॥ ೧೮ ॥ ಸ್ವರ್ಗ, ಮೋಕ್ಷ, ಪೃಥಿವಿ ಮತ್ತು ರಸಾತಲದ ಸಮಸ್ತ ಸಂಪತ್ತು ಹಾಗೂ ಸಮಸ್ತ ಯೋಗಸಿದ್ಧಿಗಳ ಪ್ರಾಪ್ತಿಯ ಮೂಲಸಾಧನ ಶ್ರೀಕೃಷ್ಣನ ಚರಣ ಕಮಲಗಳ ಪೂಜೆಯೇ ಆಗಿದೆ. ॥ ೧೯ ॥ ಹೀಗಿದ್ದರೂ ಪರಮ ದಯಾಳುವಾದ ಶ್ರೀಕೃಷ್ಣನು – ಎಲ್ಲಾದರೂ ಈ ದರಿದ್ರನು ಧನವನ್ನು ಪಡೆದು ಧನಮದದಿಂದ ತನ್ನನ್ನು ಮರೆಯದಿರಲಿ ಎಂದು ಭಾವಿಸಿಯೇ ನನಗೆ ಸ್ವಲ್ಪವೂ ಧನವನ್ನು ಕೊಡಲಿಲ್ಲ. ॥ ೨೦ ॥

ಸುದಾಮನು ಹೀಗೆ ಆನಂದ ಮಗ್ನನಾಗಿ ಯೋಚಿಸುತ್ತಾ ಶ್ರೀಕೃಷ್ಣನ ಆತಿಥ್ಯವನ್ನು ಬಾರಿ-ಬಾರಿಗೂ ಸ್ಮರಿಸುತ್ತಾ ತನ್ನ ಮನೆಯ ಬಳಿಗೆ ಬಂದನು. ಅಲ್ಲಿ ತಾನು ಹಿಂದೆ ವಾಸವಾಗಿದ್ದ ಜೋಪಡಿಯು ಕಾಣಸಲೇ ಇಲ್ಲ. ಸೂರ್ಯಾಗ್ನಿ-ಚಂದ್ರರ ತೇಜಸ್ಸಿಗೆ ಸಮಾನವಾದ ತೇಜಸ್ಸಿನ ರತ್ನಗಳಿಂದ ನಿರ್ಮಿತವಾದ ಗೋಪುರಗಳಿಂದ ಆ ಸ್ಥಳವು ಸಮಾವೃತವಾಗಿತ್ತು. ಆ ಅರಮನೆಯ ಸುತ್ತಲೂ ಉಪವನಗಳೂ, ಉದ್ಯಾನಗಳೂ ಕಂಗೊಳಿಸುತ್ತಿದ್ದು, ಅಲ್ಲಿದ್ದ ಮರಗಳ ಮೇಲೆ ವಿಧ-ವಿಧವಾದ ಬಣ್ಣದ ಪಕ್ಷಿಗಳು ಗುಂಪು-ಗುಂಪಾಗಿ ಚಿಲಿ-ಪಿಲಿಗುಟ್ಟುತ್ತಿದ್ದವು. ಆ ಉದ್ಯಾನಗಳಲ್ಲಿನ ಸರೋವರಗಳಲ್ಲಿ ಅರಳಿದ ಕನ್ನೈದಿಲೆ, ತಾವರೆ, ಕೆಂದಾವರೆಗಳೂ ಇದ್ದು ಅವು ಅತ್ಯಂತ ಶೋಭಾಯಮಾನವಾಗಿದ್ದವು. ಹರಿಣಾಕ್ಷಿಯರೂ, ಪುರುಷಸಿಂಹರೂ ಸುಂದರವಾದ ವಸ್ತ್ರಾಭರಣಗಳಿಂದ ಸಮಲಂಕೃತರಾಗಿ ಅಲ್ಲಲ್ಲಿ ಓಡುತ್ತಿದ್ದರು. ಆ ಸ್ಥಾನವನ್ನು ನೋಡಿ ಸುದಾಮನು ಇದೇನಿದು? ಇದು ಯಾರ ನಿವಾಸ? ನಾನಿದ್ದ ಮನೆಯೇ ಇದಾಗಿದ್ದರೆ ಇದು ಹೇಗಾಯಿತು? ಹೀಗೆ ಪರಿ-ಪರಿಯಾಗಿ ಯೋಚಿಸಿದನು. ॥ ೨೧-೨೩ ॥ ಹೀಗೆ ಚಿಂತಿಸುತ್ತಿರುವಾಗಲೇ ಅಲ್ಲಿದ್ದ ದೇವತೆಗಳಂತೆಯೇ ಪ್ರಕಾಶಮಾನರಾಗಿದ್ದ ನರ-ನಾರಿಯರು ಮಂಗಳ ಗೀತ-ವಾದ್ಯಗಳೊಂದಿಗೆ ಬಂದು ಮಹಾಭಾಗ್ಯಶಾಲಿಯಾದ ಸುದಾಮನನ್ನು ಸ್ವಾಗತಿಸಿದರು. ॥ ೨೪ ॥ ಪತಿದೇವನ ಆಗಮನದಿಂದ ಸುದಾಮನ ಪತ್ನಿಗೆ ಪರಮಾನಂದವಾಯಿತು. ಆಕೆಯು ಪತಿಯನ್ನು ಸ್ವಾಗತಿಸಲು ಸಂಭ್ರಮದಿಂದಲೂ, ಲಗು-ಬಗೆಯಿಂದಲೂ ಮೇಲೆದ್ದು ಹೊರಗೆ ಬಂದಳು. ಆವಳಾಗ ಕಮಲವನದಿಂದ ಆಗಮಿಸಿದ್ದ ಸಾಕ್ಷಾತ್ ಲಕ್ಷ್ಮೀದೇವಿಯಂತೆ ಕಾಣುತ್ತಿದ್ದಳು. ॥ ೨೫ ॥

ಪತಿವ್ರತಾ ಪತಿಂ ದೃಷ್ಟ್ವಾ ಪ್ರೇಮೋತ್ಕಂಠಾಶ್ರುಲೋಚನಾ ।
ಮೀಲಿತಾಕ್ಷ್ಯನಮದ್ಬುದ್ಧ್ಯಾ ಮನಸಾ ಪರಿಷಸ್ವಜೇ
॥ ೨೬ ॥

ಪತಿದೇವನನ್ನು ನೋಡುತ್ತಲೇ ಪ್ರೇಮದ ಉತ್ಕಂಠದಿಂದ ಆಕೆಯ ಕಣ್ಣುಗಳಲ್ಲಿ ಆನಂದಬಾಷ್ಪಗಳು ಚಿಮ್ಮಿದುವು. ಕಣ್ಣುಗಳನ್ನು ಮುಚ್ಚಿಕೊಂಡು ಆಕೆಯು ಪತಿದೇವನಿಗೆ ನಮಸ್ಕರಿಸಿ, ಮನಸ್ಸಿನಿಂದಲೇ ಅವನನ್ನು ಆಲಿಂಗಿಸಿಕೊಂಡಳು. ॥ ೨೬ ॥

ಪತ್ನೀಂ ವೀಕ್ಷ್ಯ ವಿಸ್ಫುರಂತೀಂ ದೇವೀಂ ವೈಮಾನಿಕೀಮಿವ ।
ದಾಸೀನಾಂ ನಿಷ್ಕಕಂಠೀನಾಂ ಮಧ್ಯೇ ಭಾಂತೀಂ ಸ ವಿಸ್ಮಿತಃ
॥ ೨೭ ॥

ಪ್ರೀತಃ ಸ್ವಯಂ ತಯಾ ಯುಕ್ತಃ ಪ್ರವಿಷ್ಟೋ ನಿಜಮಂದಿರಮ್ ।
ಮಣಿಸ್ತಂಭಶತೋಪೇತಂ ಮಹೇಂದ್ರಭವನಂ ಯಥಾ
॥ ೨೮ ॥

ಪಯಃಫೇನನಿಭಾಃ ಶಯ್ಯಾ ದಾಂತಾ ರುಕ್ಮಪರಿಚ್ಛದಾಃ ।
ಪರ್ಯಂಕಾ ಹೇಮದಂಡಾನಿ ಚಾಮರವ್ಯಜನಾನಿ ಚ
॥ ೨೯ ॥

ಆಸನಾನಿ ಚ ಹೈಮಾನಿ ಮೃದೂಪಸ್ತರಣಾನಿ ಚ ।
ಮುಕ್ತಾದಾಮವಿಲಂಬೀನಿ ವಿತಾನಾನಿ ದ್ಯುಮಂತಿ ಚ
॥ ೩೦ ॥

ಸ್ವಚ್ಛಸ್ಫಟಿಕಕುಡ್ಯೇಷು ಮಹಾಮಾರಕತೇಷು ಚ ।
ರತ್ನದೀಪಾ ಭ್ರಾಜಮಾನಾ ಲಲನಾರತ್ನ ಸಂಯುತಾಃ
॥ ೩೦ ॥

ವಿಲೋಕ್ಯ ಬ್ರಾಹ್ಮಣಸ್ತತ್ರ ಸಮೃದ್ಧೀಃ ಸರ್ವಸಂಪದಾಮ್ ।
ತರ್ಕಯಾಮಾಸ ನಿರ್ವ್ಯಗ್ರಃ ಸ್ವಸಮೃದ್ಧಿಮಹೈತುಕೀಮ್
॥ ೩೨ ॥

ನೂನಂ ಬತೈತನ್ಮಮ ದುರ್ಭಗಸ್ಯ
ಶಶ್ವದ್ದರಿದ್ರಸ್ಯ ಸಮೃದ್ಧಿಹೇತುಃ ।
ಮಹಾವಿಭೂತೇರವಲೋಕತೋಽನ್ಯೋ
ನೈವೋಪಪದ್ಯೇತ ಯದೂತ್ತಮಸ್ಯ ॥ ೩೩ ॥

ನನ್ವಬ್ರುವಾಣೋ ದಿಶತೇ ಸಮಕ್ಷಂ
ಯಾಚಿಷ್ಣವೇ ಭೂರ್ಯಪಿ ಭೂರಿಭೋಜಃ ।
ಪರ್ಜನ್ಯವತ್ತತ್ಸ್ವಯಮೀಕ್ಷಮಾಣೋ
ದಾಶಾರ್ಹಕಾಣಾಮೃಷಭಃ ಸಖಾ ಮೇ ॥ ೩೪ ॥

ಪ್ರಿಯ ಪರೀಕ್ಷಿತನೇ! ಬ್ರಾಹ್ಮಣನ ಪತ್ನಿಯು ಚಿನ್ನದ ಹಾರಗಳನ್ನು ಧರಿಸಿದ್ದ ಸೇವಕಿಯರ ಮಧ್ಯದಲ್ಲಿ ವಿಮಾನಸ್ಥಳಾದ ದೇವಾಂಗನೆಯಂತೆಯೇ ಅತ್ಯಂತ ಶೋಭಾಯಮಾನಳಾಗಿ ಕಾಣುತ್ತಿದ್ದಳು. ಆಕೆಯನ್ನು ಈ ರೂಪದಲ್ಲಿ ನೋಡಿದ ಸುದಾಮನು ವಿಸ್ಮಿತನಾದನು. ॥ ೨೭ ॥ ಅವನು ತನ್ನ ಪತ್ನಿಯೊಂದಿಗೆ ದೇವೇಂದ್ರನ ನಿವಾಸಸ್ಥಾನದಂತಿರುವ ಸಾವಿರಾರು ಮಣಿಮಯ ಕಂಬಗಳಿಂದ ಕೂಡಿದ ಆ ಸರ್ವಾಂಗ ಸುಂದರವಾದ ಅರಮನೆಯನ್ನು ಪರಮ ಪ್ರೀತನಾಗಿ ಪ್ರವೇಶಿಸಿದನು. ॥ ೨೮ ॥ ಅಲ್ಲಿ ಹಸ್ತಿದಂತಗಳಿಂದ ನಿರ್ಮಿತವಾಗಿದ್ದ ಸ್ವರ್ಣ ಖಚಿತವಾದ ಮಂಚಗಳಲ್ಲಿ ಹಾಲಿನ ನೊರೆಯಂತಿದ್ದ ಬಿಳಿಯ ಹಂಸತೂಲಿಕಾ ತಲ್ಪಗಳು ಹಾಸಿದ್ದುವು. ಚಿನ್ನದ ಹಿಡಿಗಳಿದ್ದ ಛತ್ರ-ಚಾಮರಗಳು ಅಲ್ಲಿ ಇಡಲ್ಪಟ್ಟಿದ್ದುವು. ॥ ೨೯ ॥ ಸ್ವರ್ಣ ಸಿಂಹಾಸನದಲ್ಲಿ ಮೃದುವಾದ ಮೆತ್ತೆಗಳು, ಮೇಲ್ಭಾಗದಲ್ಲಿ ತೂಗುಹಾಕಿದ್ದ ಮುತ್ತಿನ ಗೊಂಚಲುಗಳಿಂದ ಅಲಂಕೃತವಾದ ಮೇಲ್ಕಟ್ಟುಗಳೂ ಇದ್ದುವು. ॥ ೩೦ ॥ ಆ ಅರಮನೆಯಲ್ಲಿ ಸ್ವಚ್ಛವಾದ ಸ್ಫಟಿಕದ ಗೋಡೆಗಳು ಮರಕತ ಮಣಿಗಳಿಂದ ಚಿತ್ರಿತವಾಗಿದ್ದುವು. ರತ್ನನಿರ್ಮಿತವಾದ ಸ್ತ್ರೀವಿಗ್ರಹಗಳ ಕೈಗಳಲ್ಲಿ ರತ್ನಮಣಿ ದೀಪಗಳು ಬೆಳಗುತ್ತಿದ್ದುವು. ॥ ೩೦ ॥ ಹೀಗೆ ಸಮಸ್ತ ಸಂಪತ್ತುಗಳ ಸಮೃದ್ಧಿಯನ್ನು ನೋಡಿ, ಅದರ ಪ್ರತ್ಯಕ್ಷವಾದ ಯಾವ ಕಾರಣವನ್ನು ಕಾಣದೆ ಬ್ರಾಹ್ಮಣ ಸುದಾಮನು – ನನ್ನ ಬಳಿ ಇಷ್ಟೊಂದು ಸಂಪತ್ತು ಹೇಗೆ ಬಂತು? ಎಂದು ಗಹನವಾಗಿ ಯೋಚಿಸತೊಡಗಿದನು. ॥ ೩೨ ॥ ನಾನು ಹುಟ್ಟಿನಿಂದಲೇ ಭಾಗ್ಯಹೀನನಾದ ದರಿದ್ರನು. ಹೀಗಿದ್ದರೂ ನನ್ನ ಸಂಪತ್ತಿನ ಸಮೃದ್ಧಿಗೆ ಕಾರಣವೇನಿರಬಹುದು ಎಂದು ಮನಸ್ಸಿನಲ್ಲೆ ಅಂದುಕೊಂಡನು. ಪರಮೈಶ್ವರ್ಯಶಾಲಿಯಾದ ಯದುವಂಶ ಶಿರೋಮಣಿ ಭಗವಾನ್ ಶ್ರೀಕೃಷ್ಣನ ಕೃಪಾಕಟಾಕ್ಷವಲ್ಲದೆ ಬೇರೆ ಯಾವ ಕಾರಣವೂ ಖಂಡಿತವಾಗಿಯೂ ಇರಲಾರದು. ॥ ೩೩ ॥ ಇದೆಲ್ಲವೂ ಅವನ ಕರುಣಾ ಪ್ರಸಾದವೇ ಆಗಿದೆ. ಸಾಕ್ಷಾತ್ ಭಗವಾನ್ ಶ್ರೀಕೃಷ್ಣನು ಪೂರ್ಣಕಾಮನೂ, ಲಕ್ಷ್ಮೀಪತಿಯೂ ಆಗಿರುವುದರಿಂದಲೇ ಅನಂತ ಭೋಗ ಸಾಮಗ್ರಿಗಳಿಂದ ಕೂಡಿರುವನು. ಅದಕ್ಕಾಗಿ ಅವನು ಬೇಡುವ ಭಕ್ತನಿಗೆ ಅವನ ಮನಸ್ಸಿನ ಭಾವವನ್ನರಿತು ಬಹಳಷ್ಟು ಕೊಡುತ್ತಾನೆ. ಆದರೆ ಕೊಟ್ಟದ್ದು ಸ್ವಲ್ಪವೇ ಎಂದು ಭಾವಿಸಿ ಮುಂದುಗಡೆ ಏನನ್ನೂ ಆಡುವುದಿಲ್ಲ. ನನ್ನ ಮಿತ್ರನಾದ ಯದುವಂಶಭೂಷಣ ಶ್ಯಾಮಸುಂದರನು ನಿಜವಾಗಿ – ಸಮುದ್ರವನ್ನೇ ತುಂಬುವ ಸಾಮರ್ಥ್ಯವಿದ್ದರೂ ಮೇಘಗಳು ರೈತನಿಗೆ ಕಾಣಿಸದೆ ಅವನು ಮಲಗಿದಾಗ ರಾತ್ರಿಯಲ್ಲಿ ಮಳೆಸುರಿಸಿದರೂ ನಾನು ಸ್ವಲ್ಪವೇ ಕೊಟ್ಟಿರುವೆನು ಎಂದುತಿಳಿಯುವಂತೆ, ಆ ಮೇಘಗಳಿಂದಲೂ ಮಿಗಿಲಾದ ಉದಾರನಾಗಿದ್ದಾನೆ. ॥ ೩೪ ॥

ಕಿಂಚಿತ್ಕರೋತ್ಯುರ್ವಪಿ ಯತ್ ಸ್ವದತ್ತಂ
ಸುಹೃತ್ಕೃತಂ ಫಲ್ಗ್ವಪಿ ಭೂರಿಕಾರೀ ।
ಮಯೋಪನೀತಾಂ ಪೃಥುಕೈಕಮುಷ್ಟಿಂ
ಪ್ರತ್ಯಗ್ರಹೀತ್ ಪ್ರೀತಿಯುತೋ ಮಹಾತ್ಮಾ ॥ ೩೫ ॥

ತಸ್ಯೈವ ಮೇ ಸೌಹೃದಸಖ್ಯಮೈತ್ರೀ
ದಾಸ್ಯಂ ಪುನರ್ಜನ್ಮನಿ ಜನ್ಮನಿ ಸ್ಯಾತ್ ।
ಮಹಾನುಭಾವೇನ ಗುಣಾಲಯೇನ
ವಿಷಜ್ಜತಸ್ತತ್ಪುರುಷಪ್ರಸಂಗಃ ॥ ೩೬ ॥

ಭಕ್ತಾಯ ಚಿತ್ರಾ ಭಗವಾನ್ ಹಿ ಸಂಪದೋ
ರಾಜ್ಯಂ ವಿಭೂತೀರ್ನ ಸಮರ್ಥಯತ್ಯಜಃ ।
ಅದೀರ್ಘಬೋಧಾಯ ವಿಚಕ್ಷಣಃ ಸ್ವಯಂ
ಪಶ್ಯನ್ನಿಪಾತಂ ಧನಿನಾಂ ಮದೋದ್ಭವಮ್ ॥ ೩೭ ॥

ಇತ್ಥಂ ವ್ಯವಸಿತೋ ಬುದ್ಧ್ಯಾ ಭಕ್ತೋಽತೀವ ಜನಾರ್ದನೇ ।
ವಿಷಯಾನ್ ಜಾಯಯಾ ತ್ಯಕ್ಷ್ಯನ್ ಬುಭುಜೇ ನಾತಿಲಂಪಟಃ
॥ ೩೮ ॥

ತಸ್ಯ ವೈ ದೇವದೇವಸ್ಯ ಹರೇರ್ಯಜ್ಞಪತೇಃ ಪ್ರಭೋಃ ।
ಬ್ರಾಹ್ಮಣಾಃ ಪ್ರಭವೋ ದೈವಂ ನ ತೇಭ್ಯೋ ವಿದ್ಯತೇ ಪರಮ್
॥ ೩೯ ॥

ಏವಂ ಸ ವಿಪ್ರೋ ಭಗವತ್ಸುಹೃತ್ತದಾ
ದೃಷ್ಟ್ವಾ ಸ್ವಭೃತ್ಯೈರಜಿತಂ ಪರಾಜಿತಮ್ ।
ತದ್ಧ್ಯಾನವೇಗೋದ್ಗ್ರಥಿತಾತ್ಮಬಂಧನ-
ಸ್ತದ್ಧಾಮ ಲೇಭೇಽಚಿರತಃ ಸತಾಂ ಗತಿಮ್ ॥ ೪೦ ॥

ಏತದ್ಬ್ರಹ್ಮಣ್ಯದೇವಸ್ಯ ಶ್ರುತ್ವಾ ಬ್ರಹ್ಮಣ್ಯತಾಂ ನರಃ ।
ಲಬ್ಧಭಾವೋ ಭಗವತಿ ಕರ್ಮಬಂಧಾದ್ವಿಮುಚ್ಯತೇ
॥ ೪೧ ॥

ನನ್ನ ಪ್ರಿಯ ಸಖನಾದ ಶ್ರೀಕೃಷ್ಣನು ಅನಂತವಾಗಿ ಕರುಣಿಸಿದರೂ ಅಲ್ಪವೆಂದೇ ಭಾವಿಸುವನು. ಅವನ ಪ್ರೇಮಿಭಕ್ತರು ಅವನಿಗಾಗಿ ಏನಾದರೂ ಕಿಂಚಿತ್ ಕೊಟ್ಟರೂ ಅವನು ಅಪಾರವೆಂದು ಭಾವಿಸಿಕೊಳ್ಳುತ್ತಾನೆ. ನಾನು ಅವನಿಗೆ ಕೇವಲ ಒಂದು ಹಿಡಿ ಅವಲಕ್ಕಿಯನ್ನು ಕೊಟ್ಟೆನ್ನು; ಆದರೆ ಉದಾರಶಿರೋಮಣಿಯಾದ ಶ್ರೀಕೃಷ್ಣನು ಅದನ್ನು ಅತಿದೊಡ್ಡ ಕಾಣಿಕೆ ಎಂದು ಭಾವಿಸಿ ಅತ್ಯಂತ ಆದರ ಪ್ರೀತಿಯಿಂದ ತಿಂದುಬಿಟ್ಟನಲ್ಲ! ॥ ೩೫ ॥ ಜನ್ಮ-ಜನ್ಮಗಳಲ್ಲಿಯೂ ನನಗೆ ನನ್ನ ಪ್ರಿಯಸಖನಾದ, ಮಹಾನುಭಾವನಾದ, ಸಮಸ್ತ ಗುಣಗಳಿಗೂ ಏಕಮಾತ್ರ ನಿವಾಸಸ್ಥಾನವಾದ ಶ್ರೀಕೃಷ್ಣನೊಬ್ಬನ ಸೌಹೃದ, ಸಖ್ಯ, ಮೈತ್ರಿ, ದಾಸ್ಯಗಳು ಲಭಿಸಲಿ. ಭಗವಾನ್ ಶ್ರೀಕೃಷ್ಣನ ಪಾದಾರವಿಂದಗಳಲ್ಲಿಯೇ ನನ್ನ ಅನುರಾಗವು ಬೆಳೆಯುತ್ತಾ ಇರಲಿ. ಅವನ ಪ್ರೇಮಿ ಭಕ್ತರ ಸತ್ಸಂಗ ದೊರೆಯುತ್ತಾ ಇರಲಿ. ॥ ೩೬ ॥ ಅಜನ್ಮನಾದ ಭಗವಾನ್ ಶ್ರೀಕೃಷ್ಣನು ಸಂಪತ್ತು ಮುಂತಾದವುಗಳ ದೋಷವನ್ನು ತಿಳಿದಿರುವನು. ದೊಡ್ಡ ದೊಡ್ಡ ಶ್ರೀಮಂತರಿಗೆ ಧನಮದದಿಂದ ಉಂಟಾಗುವ ಅಧಃಪತನವನ್ನು ನೋಡುತ್ತಾನೆ. ಆದಕ್ಕಾಗಿ ಅವನು ದೂರದೃಷ್ಟಿಯಿಲ್ಲದ ತನ್ನ ಭಕ್ತನು ಬಯಸಿದರೂ ನಾನಾ ರೀತಿಯ ರಾಜ್ಯ, ಸಂಪತ್ತು, ಐಶ್ವರ್ಯ ಮುಂತಾದವುಗಳನ್ನು ಅವನಿಗೆ ಕೊಡುವುದಿಲ್ಲ. ಇದು ಅವನ ಪರಮ ಕರುಣೆಯೇ ಆಗಿದೆ. ॥ ೩೭ ॥ ಪರೀಕ್ಷಿತನೇ! ಸುದಾಮನು ಹೀಗೆ ತನ್ನ ಬುದ್ಧಿಯಿಂದ ನಿಶ್ಚಯಿಸಿ, ತ್ಯಾಗಪೂರ್ವಕ ಅನಾಸಕ್ತ ಭಾವದಿಂದ ತನ್ನ ಪತ್ನಿಯೊಂದಿಗೆ ಭಗವತ್ಪ್ರಸಾದರೂಪವಾಗಿ ದೊರೆತ ವಿಷಯಗಳನ್ನು ಅನುಭವಿಸತೊಡಗಿದನು. ಹೀಗೆ ದಿನದಿಂದ ದಿನಕ್ಕೆ ಅವನ ಪ್ರೇಮ-ಭಕ್ತಿಗಳು ಹೆಚ್ಚುತ್ತಲೇ ಹೋದವು. ॥ ೩೮ ॥

ಪ್ರಿಯ ಪರೀಕ್ಷಿತನೇ! ದೇವದೇವನೂ, ಭಕ್ತಭಯಹಾರಿಯೂ, ಯಜ್ಞಪತಿಯೂ ಆದ ಪ್ರಭುವು ಬ್ರಾಹ್ಮಣರನ್ನು ಸಾಕ್ಷಾತ್ ತನ್ನ ಇಷ್ಟದೇವರೆಂದು ಭಾವಿಸುತ್ತಾನೆ. ಆದಕ್ಕಾಗಿ ಬ್ರಾಹ್ಮಣರಿಗಿಂತ ಮಿಗಿಲಾದ ಯಾವುದೇ ಪ್ರಾಣಿಯು ಜಗತ್ತಿನಲ್ಲಿ ಇಲ್ಲ. ॥ ೩೯ ॥ ಹೀಗೆ ಭಗವಂತನ ಪ್ರಿಯಮಿತ್ರನಾದ ಸುದಾಮನು- ಯಾರಿಂದಲೂ ಜಯಿಸಲ್ಪಡದ ಭಗವಂತನು ತನ್ನ ಸೇವಕರಾದ ಭಕ್ತರಿಂದ ಜಯಿಸಲ್ಪಟ್ಟಿರುವುದನ್ನು ಕಂಡು ಅವನ ಧ್ಯಾನದಲ್ಲಿಯೇ ಸದಾ ನಿರತನಾಗಿರುತ್ತಿದ್ದನು. ಧ್ಯಾನದ ಆವೇಗದಿಂದ ಅವಿದ್ಯೆಯ ಗಂಟು ಕಳಚಿಹೋಗಿ, ಅತ್ಯಲ್ಪ ಸಮಯದಲ್ಲೇ ಸಂತರಿಗೆ ಏಕಮಾತ್ರ ಆಶ್ರಯನಾದ ಭಗವಂತನ ಧಾಮವನ್ನು ಸೇರಿದನು. ॥ ೪೦ ॥

ಪರೀಕ್ಷಿತನೇ! ಬ್ರಾಹ್ಮಣರನ್ನು ತನ್ನ ಇಷ್ಟದೇವರೆಂದು ಭಾವಿಸುವ ಭಗವಾನ್ ಶ್ರೀಕೃಷ್ಣನ ಈ ಬ್ರಾಹ್ಮಣಭಕ್ತಿಯನ್ನು ಕೇಳುವವನಿಗೆ ಭಗವಂತನ ಚರಣಗಳಲ್ಲಿ ಪ್ರೇಮಭಾವವು ಉಂಟಾಗಿ, ಅವನು ಕರ್ಮಬಂಧನದಿಂದ ಬಿಡುಗಡೆ ಹೊಂದುವನು. ॥ ೪೧ ॥

ಎಂಭತ್ತೊಂದನೆಯ ಅಧ್ಯಾಯವು ಮುಗಿಯಿತು. ॥ ೮೧ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮ ಸ್ಕಂಧೇ ಉತ್ತರಾರ್ಧೇ
ಪೃಥುಕೋಪಾಖ್ಯಾನಂ ನಾಮ ಏಕಾಶೀತಿತಮೋಽಧ್ಯಾಯಃ ॥ ೮೧ ॥

ಎಂಭತ್ತೆರಡನೆಯ ಅಧ್ಯಾಯ

ಬಲರಾಮ ಕೃಷ್ಣರು ಗೋಪ-ಗೋಪಿಯರನ್ನು ಸಂಧಿಸಿದುದು

ಶ್ರೀಶುಕ ಉವಾಚ

ಅಥೈಕದಾ ದ್ವಾರವತ್ಯಾಂ ವಸತೋ ರಾಮಕೃಷ್ಣಯೋಃ ।
ಸೂರ್ಯೋಪರಾಗಃ ಸುಮಹಾನಾಸೀತ್ಕಲ್ಪಕ್ಷಯೇ ಯಥಾ ॥ ೧ ॥

ತಂ ಜ್ಞಾತ್ವಾ ಮನುಜಾ ರಾಜನ್ ಪುರಸ್ತಾದೇವ ಸರ್ವತಃ ।
ಸಮಂತಪಂಚಕಂ ಕ್ಷೇತ್ರಂ ಯಯುಃ ಶ್ರೇಯೋವಿಧಿತ್ಸಯಾ ॥ ೨ ॥

ನಿಃಕ್ಷತ್ರಿಯಾಂ ಮಹೀಂ ಕುರ್ವನ್ರಾಮಃ ಶಸ್ತ್ರಭೃತಾಂ ವರಃ ।
ನೃಪಾಣಾಂ ರುಧಿರೌಘೇಣ ಯತ್ರ ಚಕ್ರೇ ಮಹಾಹ್ರದಾನ್ ॥ ೩ ॥

ಈಜೇ ಚ ಭಗವಾನ್ರಾಮೋ ಯತ್ರಾಸ್ಪೃಷ್ಟೋಽಪಿ ಕರ್ಮಣಾ ।
ಲೋಕಂ ಸಂಗ್ರಾಹಯನ್ನೀಶೋ ಯಥಾನ್ಯೋಽಘಾಪನುತ್ತಯೇ ॥ ೪ ॥

ಮಹತ್ಯಾಂ ತೀರ್ಥಯಾತ್ರಾಯಾಂ ತತ್ರಾಗನ್ ಭಾರತೀಃ ಪ್ರಜಾಃ ।
ವೃಷ್ಣಯಶ್ಚ ತಥಾಕ್ರೂರವಸುದೇವಾಹುಕಾದಯಃ ॥ ೫ ॥

ಯಯುರ್ಭಾರತ ತತ್ ಕ್ಷೇತ್ರಂ ಸ್ವಮಘಂ ಕ್ಷಪಯಿಷ್ಣವಃ ।
ಗದಪ್ರದ್ಯುಮ್ನಸಾಂಬಾದ್ಯಾಃ ಸುಚಂದ್ರಶುಕಸಾರಣೈಃ ॥ ೬ ॥

ಆಸ್ತೇಽನಿರುದ್ಧೋ ರಕ್ಷಾಯಾಂ ಕೃತವರ್ಮಾ ಚ ಯೂಥಪಃ ।
ತೇ ರಥೈರ್ದೇವಧಿಷ್ಣ್ಯಾಭೈರ್ಹಯೈಶ್ಚ ತರಲಪ್ಲವೈಃ ॥ ೭ ॥

ಗಜೈರ್ನದದ್ಭಿರಭ್ರಾಭೈರ್ನೃಭಿರ್ವಿದ್ಯಾಧರದ್ಯುಭಿಃ ।
ವ್ಯರೋಚಂತ ಮಹಾತೇಜಾಃ ಪಥಿ ಕಾಂಚನಮಾಲಿನಃ ॥ ೮ ॥

ದಿವ್ಯಸ್ರಗ್ವಸ್ತ್ರಸನ್ನಾಹಾಃ ಕಲತ್ರೈಃ ಖೇಚರಾ ಇವ ।
ತತ್ರ ಸ್ನಾತ್ವಾ ಮಹಾಭಾಗಾ ಉಪೋಷ್ಯ ಸುಸಮಾಹಿತಾಃ ॥ ೯ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ - ಎಲೈ ಪರೀಕ್ಷಿತನೇ! ಹೀಗೆ ಬಲರಾಮ-ಶ್ರೀಕೃಷ್ಣರು ದ್ವಾರಕೆಯಲ್ಲಿ ವಾಸಮಾಡುತ್ತಿದ್ದಾಗ ಒಮ್ಮೆ ಪ್ರಳಯಕಾಲದೋಪಾದಿಯಲ್ಲಿ ಮಹತ್ತರವಾದ ಪೂರ್ಣಗ್ರಾಸ ಸೂರ್ಯಗ್ರಹಣವು ಉಂಟಾಗಿತ್ತು. ॥ ೧ ॥ ಪರೀಕ್ಷಿತನೇ! ಇದನ್ನು ಮೊದಲೇ ತಿಳಿದ ಜನರು ತಮ್ಮ ಶ್ರೇಯಃಪ್ರಾಪ್ತಿಗಾಗಿ ಎಲ್ಲ ಕಡೆಗಳಿಂದಲೂ ಸ್ಯಮಂತಪಂಚಕ ಕ್ಷೇತ್ರಕ್ಕೆ (ಕುರುಕ್ಷೇತ್ರ)ಕ್ಕೆ ಧಾವಿಸಿದರು. ॥ ೨ ॥ ಶಸ್ತ್ರಧಾರಿಗಳಲ್ಲಿ ಶ್ರೇಷ್ಠನಾದ ಪರಶುರಾಮನು ಭೂಮಂಡಲವನ್ನೇ ಕ್ಷತ್ರಿಯರಿಂದ ರಹಿತವಾಗಿಸಿ, ರಾಜರ ರಕ್ತದ ಕೋಡಿಯಿಂದಲೇ ದೊಡ್ಡ-ದೊಡ್ಡ ಕುಂಡಗಳನ್ನು ನಿರ್ಮಿಸಿದನು. ಅದೇ ಸ್ಯಮಂತಪಂಚಕ ಕ್ಷೇತ್ರವು. ॥ ೩ ॥ ಸಾಧಾರಣ ಮನುಷ್ಯನು ತನ್ನ ಪಾಪಪರಿಹಾರಕ್ಕಾಗಿ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳುವಂತೆಯೇ ಸರ್ವಶಕ್ತನಾದ ಭಗವಾನ್ ಪರಶುರಾಮನು - ತನಗೂ, ತಾನು ಮಾಡಿದ ಕರ್ಮಕ್ಕೂ ಸಂಬಂಧವಿಲ್ಲದಿದ್ದರೂ ಲೋಕಮರ್ಯಾದೆಯನ್ನು ರಕ್ಷಿಸಲಿಕ್ಕಾಗಿ ಅಲ್ಲಿಯೇ ಮಹಾಯಜ್ಞವನ್ನು ಮಾಡಿದ್ದನು. ॥ ೪ ॥

ಪರೀಕ್ಷಿತನೇ! ಮಹತ್ವಪೂರ್ಣವಾದ ಆ ತೀರ್ಥಯಾತ್ರೆಯ ಸಮಯದಲ್ಲಿ ಭಾರತವರ್ಷದ ಎಲ್ಲ ಪ್ರಾಂತಗಳ ಪ್ರಜೆಗಳು ಕುರುಕ್ಷೇತ್ರಕ್ಕೆ ಆಗಮಿಸಿದರು. ಅವರಲ್ಲಿ ಅಕ್ರೂರ, ವಸುದೇವ, ಉಗ್ರಸೇನನೇ ಮೊದಲಾದ ಹಿರಿಯರೂ, ಗದ, ಪ್ರದ್ಯುಮ್ನ ಸಾಂಬರೇ ಮೊದಲಾದ ಬೇರೆ ಯದುವಂಶೀಯರೂ ತಮ್ಮ-ತಮ್ಮ ಪಾಪಗಳನ್ನು ನಾಶಮಾಡಿಕೊಳ್ಳಲು ಕುರುಕ್ಷೇತ್ರಕ್ಕೆ ಬಂದಿದ್ದರು. ಪ್ರದ್ಯುಮ್ನನಂದನ ಅನಿರುದ್ಧ ಮತ್ತು ಯಾದವ ಸೇನಾಪತಿ ಕೃತವರ್ಮ ಇವರಿಬ್ಬರೂ ಸುಚಂದ್ರ, ಶುಕ, ಸಾರಣ ಮೊದಲಾದವರೊಡನೆ ನಗರದ ರಕ್ಷಣೆಗಾಗಿ ದ್ವಾರಕೆಯಲ್ಲೇ ಉಳಿದರು. ಯಾದವರು ಮೊದಲೇ ಸ್ವಭಾವದಿಂದ ಪರಮ ತೇಜಸ್ವಿಗಳಾಗಿದ್ದರು. ಈಗ ಕೊರಳಲ್ಲಿ ಚಿನ್ನದ ಸರಗಳನ್ನು, ಪುಷ್ಪಹಾರಗಳನ್ನೂ, ಬಹುಮೂಲ್ಯ ವಸ್ತ್ರಗಳನ್ನು ಕವಚಗಳನ್ನು ಧರಿಸಿ ಅವರ ಶೋಭೆ ಇನ್ನೂ ಹೆಚ್ಚಾಗಿತ್ತು. ಅವರೆಲ್ಲರೂ ದೇವತೆಗಳ ವಿಮಾನಕ್ಕೆ ಸದೃಶವಾದ ರಥಗಳಲ್ಲಿಯೂ, ಸಮುದ್ರದ ಅಲೆಗಳಂತೆ ಚಲಿಸುವ ಕುದುರೆಗಳ ಮೇಲೆಯೂ, ಮೇಘಸದೃಶವಾದ ಘೀಳಿಡುತ್ತಿದ್ದ ಆನೆಗಳ ಮೇಲೆಯೂ, ವಿದ್ಯಾಧರರಿಗೆ ಸದೃಶರಾದ ಮನುಷ್ಯರಿಂದ ಒಯ್ಯಲ್ಪಡುತ್ತಿದ್ದ ಪಲ್ಲಕ್ಕಿಗಳ ಮೇಲೆಯೂ ತಮ್ಮ-ತಮ್ಮ ಮಡದಿಯರೊಂದಿಗೆ ಕೂಡಿ ಸ್ವರ್ಗದ ದೇವತೆಗಳಂತೆಯೇ ಯಾತ್ರೆ ಮಾಡಿದರು. ಮಹಾಭಾಗ್ಯಶಾಲಿಗಳಾದ ಯದುವಂಶೀಯರು ಕುರುಕ್ಷೇತ್ರಕ್ಕೆ ತಲುಪಿ ಏಕಾಗ್ರತೆಯಿಂದ ಪುಣ್ಯತೀರ್ಥದಲ್ಲಿ ಸ್ನಾನ ಮಾಡಿ ಉಪವಾಸದಿಂದಿದ್ದು ಗ್ರಹಣದ ಪರ್ವಕಾಲವನ್ನು ನಿರೀಕ್ಷಿಸುತ್ತಿದ್ದರು. ॥ ೫-೯ ॥

ಬ್ರಾಹ್ಮಣೇಭ್ಯೋ ದದುರ್ಧೇನೂರ್ವಾಸಃಸ್ರಗ್ರುಕ್ಮಮಾಲಿನೀಃ ।
ರಾಮಹ್ರದೇಷು ವಿಧಿವತ್ಪುನರಾಪ್ಲುತ್ಯ ವೃಷ್ಣಯಃ ॥ ೧೦ ॥

ದದುಃ ಸ್ವನ್ನಂ ದ್ವಿಜಾಗ್ರ್ಯೇಭ್ಯಃ ಕೃಷ್ಣೇ ನೋ ಭಕ್ತಿರಸ್ತ್ವಿತಿ ।
ಸ್ವಯಂ ಚ ತದನುಜ್ಞಾತಾ ವೃಷ್ಣಯಃ ಕೃಷ್ಣದೇವತಾಃ ॥ ೧೧ ॥

ಭುಕ್ತ್ವೋಪವಿವಿಶುಃ ಕಾಮಂ ಸ್ನಿಗ್ಧಚ್ಛಾಯಾಂಘ್ರಿಪಾಂಘ್ರಿಷು ।
ತತ್ರಾಗತಾಂಸ್ತೇ ದದೃಶುಃ ಸುಹೃತ್ಸಂಬಂಧಿನೋ ನೃಪಾನ್ ॥ ೧೨ ॥

ಮತ್ಸ್ಯೋಶೀನರಕೌಸಲ್ಯವಿದರ್ಭಕುರುಸೃಂಜಯಾನ್ ।
ಕಾಂಭೋಜಕೈಕಯಾನ್ಮದ್ರಾನ್ ಕುಂತೀನಾನರ್ತಕೇರಲಾನ್ ॥ ೧೩ ॥

ಅನ್ಯಾಂಶ್ಚೈವಾತ್ಮಪಕ್ಷೀಯಾನ್ ಪರಾಂಶ್ಚ ಶತಶೋ ನೃಪ ।
ನಂದಾದೀನ್ಸುಹೃದೋ ಗೋಪಾನ್ ಗೋಪೀಶ್ಚೋತ್ಕಂಠಿತಾಶ್ಚಿರಮ್ ॥ ೧೪ ॥

ಅನ್ಯೋನ್ಯಸಂದರ್ಶನಹರ್ಷರಂಹಸಾ
ಪ್ರೋತ್ಫುಲ್ಲಹೃದ್ವಕ್ತ್ರಸರೋರುಹಶ್ರಿಯಃ ।
ಆಶ್ಲಿಷ್ಯ ಗಾಢಂ ನಯನೈಃ ಸ್ರವಜ್ಜಲಾ
ಹೃಷ್ಯತ್ತ್ವಚೋ ರುದ್ಧಗಿರೋ ಯಯುರ್ಮುದಮ್ ॥ ೧೫ ॥

ಸ್ತ್ರಿಯಶ್ಚ ಸಂವೀಕ್ಷ್ಯ ಮಿಥೋಽತಿಸೌಹೃದ-
ಸ್ಮಿತಾಮಲಾಪಾಂಗದೃಶೋಽಭಿರೇಭಿರೇ ।
ಸ್ತನೈಃ ಸ್ತನಾನ್ಕುಂಕುಮಪಂಕರೂಷಿತಾನ್
ನಿಹತ್ಯ ದೋರ್ಭಿಃ ಪ್ರಣಯಾಶ್ರುಲೋಚನಾಃ ॥ ೧೬ ॥

ತತೋಽಭಿವಾದ್ಯ ತೇ ವೃದ್ಧಾನ್ಯವಿಷ್ಠೈರಭಿವಾದಿತಾಃ ।
ಸ್ವಾಗತಂ ಕುಶಲಂ ಪೃಷ್ಟ್ವಾ ಚಕ್ರುಃ ಕೃಷ್ಣಕಥಾ ಮಿಥಃ ॥ ೧೭ ॥

ಸೂರ್ಯಗ್ರಹಣವು ಪ್ರಾರಂಭವಾಗುತ್ತಲೇ ವಸ್ತ್ರಗಳಿಂದಲೂ, ಪುಷ್ಪಮಾಲಿಕೆಗಳಿಂದಲೂ ಮತ್ತು ಚಿನ್ನದ ಸರಗಳಿಂದಲೂ ಸಮಲಂಕೃತವಾದ ಗೋವುಗಳನ್ನು ಬ್ರಾಹ್ಮಣರಿಗೆ ದಾನಮಾಡಿದರು. ಗ್ರಹಣದ ಮೋಕ್ಷವಾಗುತ್ತಲೇ ಅವರು ಪರಶುರಾಮನಿಂದ ನಿರ್ಮಿತವಾದ ಕುಂಡಗಳಲ್ಲಿ ಯಾದವರು ವಿಧಿವತ್ತಾಗಿ ಸ್ನಾನ ಮಾಡಿದರು ಹಾಗೂ ಸತ್ಪಾತ್ರರಾದ ಬ್ರಾಹ್ಮಣರಿಗೆ ಮೃಷ್ಟಾನ್ನವನ್ನು ಭೋಜನ ಮಾಡಿಸಿ, ಶ್ರೀಕೃಷ್ಣನಲ್ಲಿ ತಮಗೆ ಅಚಲವಾದ ಭಕ್ತಿ ಇರುವಂತೆ ಆಶೀರ್ವದಿಸಬೇಕೆಂದು ಬ್ರಾಹ್ಮಣರಲ್ಲಿ ಪ್ರಾರ್ಥಿಸಿದರು. ಭಗವಾನ್ ಶ್ರೀಕೃಷ್ಣನನ್ನೇ ತಮ್ಮ ಆದರ್ಶ ಮತ್ತು ಇಷ್ಟದೇವನೆಂದು ತಿಳಿದಿರುವ ಯದುವಂಶೀಯರು ಬ್ರಾಹ್ಮಣರಿಂದ ಅನುಮತಿ ಪಡೆದು ಭೋಜನಮಾಡಿದರು. ಮತ್ತೆ ದಟ್ಟವಾದ ಮರಗಳ ಕೆಳಗೆ ತಂಪಾದ ನೆರಳಲ್ಲಿ ತಮ್ಮ-ತಮ್ಮ ಇಚ್ಛಾನುಸಾರವಾಗಿ ಬಿಡಾರಗಳನ್ನು ನಿರ್ಮಿಸಿಕೊಂಡು ವಿಶ್ರಮಿಸಿದರು. ಪರೀಕ್ಷಿತನೇ! ಹೀಗೆ ವಿಶ್ರಾಂತಿ ಪಡೆದು ಯಾದವರು ಅಲ್ಲಿಗೆ ಬಂದಿದ್ದ ತಮ್ಮ ಸುಹೃದರನ್ನು ಸಂಬಂಧಿಗಳನ್ನು ಸಂದರ್ಶಿಸತೊಡಗಿದರು. ॥ ೧೦-೧೨ ॥ ಅಲ್ಲಿಗೆ ಮತ್ಸ್ಯ, ಉಶೀನರ, ಕೋಸಲ, ವಿದರ್ಭ, ಕುರು, ಸೃಂಜಯ, ಕಾಂಭೋಜ, ಕೈಕಯ, ಮದ್ರ, ಕುಂತಿ, ಆನರ್ತ, ಕೇರಳ, ಹಾಗೆಯೇ ಬೇರೆ ಅನೇಕ ದೇಶದ ತಮ್ಮ ಪಕ್ಷದ ಮತ್ತು ಶತ್ರುಪಕ್ಷದ ನೂರಾರು ರಾಜರು ಬಂದಿದ್ದರು. ಪರೀಕ್ಷಿತನೇ! ಇದಲ್ಲದೆ ಪರಮ ಹಿತೈಷಿ ನಂದರಾಜ ಮೊದಲಾದ ಗೋಪಾಲಕರೂ ಮತ್ತು ಭಗವಂತನ ದರ್ಶನಕ್ಕಾಗಿ ಎಷ್ಟೋ ಕಾಲದಿಂದ ಉತ್ಕಂಠಿತರಾದ ಗೋಪಿಯರೂ ಅಲ್ಲಿಗೆ ಬಂದಿದ್ದರು. ಯಾದವರು ಇವರೆಲ್ಲರನ್ನೂ ನೋಡಿದರು. ॥ ೧೩-೧೪ ॥. ಪರೀಕ್ಷಿತನೇ! ಪರಸ್ಪರ ದರ್ಶನ, ಮಿಲನ, ವಾರ್ತಾಲಾಪದಿಂದ ಎಲ್ಲರಿಗೂ ಬಹಳ ಆನಂದವಾಯಿತು. ಎಲ್ಲರ ಹೃದಯ-ಕಮಲ ಹಾಗೂ ಮುಖ-ಕಮಲಗಳು ಅರಳಿದವು. ಒಬ್ಬರು ಮತ್ತೊಬ್ಬರನ್ನು ಬರಸೆಳೆದು ಅಪ್ಪಿಕೊಳ್ಳುವರು, ಅವರ ಕಣ್ಣುಗಳಲ್ಲಿ ಆನಂದಾಶ್ರುಗಳು ಸುರಿಯುತ್ತಿದ್ದವು. ರೋಮಾಂಚನವುಂಟಾಗಿ ಪ್ರೇಮೋದ್ರೇಕದಿಂದ ಗಂಟಲು ಬಿಗಿದುಕೊಂಡಿತು. ಸಮಸ್ತರೂ ಆನಂದ ಸಾಗರದಲ್ಲಿ ಮುಳುಗಿ ಹೋದರು. ॥ ೧೫ ॥ ಪುರುಷರಂತೆಯೇ ಸ್ತ್ರೀಯರೂ ಪರಸ್ಪರ ಒಬ್ಬರನ್ನೊಬ್ಬರನ್ನು ನೋಡಿ ಪ್ರೇಮಾನಂದಭರಿತರಾದರು. ಅವರು ಅತ್ಯಂತ ಸೌಹಾರ್ದಭಾವವನ್ನು ಸೂಚಿಸುತ್ತಾ ಮಂದಹಾಸವನ್ನು ಬೀರುತ್ತಾ ಕಡೆಗಣ್ಣನೋಟದಿಂದ ಅನುರಾಗವನ್ನು ವ್ಯಕ್ತಪಡಿಸುತ್ತಾ ಆನಂದಿಸಿದರು. ಒಬ್ಬರನ್ನೊಬ್ಬರು ಬಿಗಿದಪ್ಪಿಕೊಂಡಾಗ ಕುಂಕುಮ ಲಿಪ್ತವಾದ ಕುಚಗಳಿಂದ ಕುಚಗಳನ್ನು ಸಂಘಟಿಸುತ್ತಾ, ಆನಂದ ಬಾಷ್ಪವನ್ನು ಸುರಿಸುತ್ತಾ ನಲಿದಾಡಿದರು. ॥ ೧೬ ॥ ಅನಂತರ ತಮಗಿಂತ ಹಿರಿಯರಿಗೆ ನಮಸ್ಕರಿಸಿದರು ಮತ್ತು ತಮಗಿಂತ ಕಿರಿಯವರಿಂದ ನಮಸ್ಕಾರ ಸ್ವೀಕರಿಸಿದರು. ಅವರು ಪರಸ್ಪರ ಸ್ವಾಗತಿಸುತ್ತಾ, ಕ್ಷೇಮಸಮಾಚಾರವನ್ನು ಕೇಳಿಕೊಂಡು ಮತ್ತೆ ಶ್ರೀಕೃಷ್ಣನ ಮಧುರ ಲೀಲೆಗಳನ್ನು ಒಬ್ಬರು ಮತ್ತೊಬ್ಬರಿಗೆ ಹೇಳಿಕೊಳ್ಳತೊಡಗಿದರು. ॥ ೧೭ ॥

ಪೃಥಾ ಭ್ರಾತೄನ್ ಸ್ವಸೄರ್ವೀಕ್ಷ್ಯ ತತ್ಪುತ್ರಾನ್ಪಿತರಾವಪಿ ।
ಭ್ರಾತೃಪತ್ನೀರ್ಮುಕುಂದಂ ಚ ಜಹೌ ಸಂಕಥಯಾ ಶುಚಃ ॥ ೧೮ ॥

ಪರೀಕ್ಷಿತನೇ! ಕುಂತಿಯು ವಸುದೇವನೇ ಮೊದಲಾದ ತನ್ನ ಸಹೋದರ-ಸಹೋದರಿಯರನ್ನೂ, ಅವರ ಪುತ್ರರನ್ನೂ, ತಂದೆ ತಾಯಿ, ಅತ್ತಿಗೆಯರನ್ನು ಹಾಗೂ ಭಗವಾನ್ ಶ್ರೀಕೃಷ್ಣನನ್ನು ನೋಡಿ, ಅವರೊಂದಿಗೆ ಮಾತಾಡಿ ತನ್ನ ದುಃಖವೆಲ್ಲವನ್ನೂ ಮರೆತಳು. ॥೧೮॥

ಕುಂತ್ಯುವಾಚ

ಆರ್ಯ ಭ್ರಾತರಹಂ ಮನ್ಯೇ ಆತ್ಮಾನಮಕೃತಾಶಿಷಮ್ ।
ಯದ್ವಾ ಆಪತ್ಸು ಮದ್ವಾರ್ತಾಂ ನಾನುಸ್ಮರಥ ಸತ್ತಮಾಃ ॥ ೧೯ ॥

ಸುಹೃದೋ ಜ್ಞಾತಯಃ ಪುತ್ರಾ ಭ್ರಾತರಃ ಪಿತರಾವಪಿ ।
ನಾನುಸ್ಮರಂತಿ ಸ್ವಜನಂ ಯಸ್ಯ ದೈವಮದಕ್ಷಿಣಮ್ ॥ ೨೦ ॥

ಕುಂತಿಯು ವಸುದೇವನಲ್ಲಿ ಹೇಳಿದಳು - ಅಣ್ಣಾ! ನಾನು ನಿಜವಾಗಿಯೂ ನಿರ್ಭಾಗ್ಯಳೇ ಸರಿ. ನನ್ನ ಒಂದೂ ಆಸೆ ಈಡೇರಲಿಲ್ಲ. ನಿಮ್ಮಂತಹ ಸಾಧು-ಸ್ವಭಾವದ ಸಜ್ಜನ ಸಹೋದರರೂ ಆಪತ್ತಿನಲ್ಲಿ ಸಿಕ್ಕಿಕೊಂಡ ನನ್ನ ಸಮಾಚಾರವನ್ನು ಸ್ಮರಿಸಲೇ ಇಲ್ಲ. ಇದಕ್ಕಿಂತ ಮಿಗಿಲಾದ ದುಃಖದ ಮಾತೇನಿರಬಹುದು? ॥ ೧೯ ॥ ಅಣ್ಣಾ! ದೈವವು ಪ್ರತಿಕೂಲವಾದಾಗ ಅಂತಹವರನ್ನು ಸ್ವಜನರು, ಸಂಬಂಧಿಗಳು, ಪುತ್ರರು, ತಂದೆ-ತಾಯಿಗಳು, ಸಹೋದರರು ಮರೆತು ಬಿಡುತ್ತಾರೆ. ಇದರಲ್ಲಿ ನಿಮ್ಮದೇನೂ ದೋಷವಿಲ್ಲ. ॥ ೨೦ ॥

ವಸುದೇವ ಉವಾಚ

ಅಂಬ ಮಾಸ್ಮಾನಸೂಯೇಥಾ ದೈವಕ್ರೀಡನಕಾನ್ನರಾನ್ ।
ಈಶಸ್ಯ ಹಿ ವಶೇ ಲೋಕಃ ಕುರುತೇ ಕಾರ್ಯತೇಽಥವಾ ॥ ೨೧ ॥

ಕಂಸಪ್ರತಾಪಿತಾಃ ಸರ್ವೇ ವಯಂ ಯಾತಾ ದಿಶಂ ದಿಶಮ್ ।
ಏತರ್ಹ್ಯೇವ ಪುನಃ ಸ್ಥಾನಂ ದೈವೇನಾಸಾದಿತಾಃ ಸ್ವಸಃ ॥ ೨೨ ॥

ವಸುದೇವನು ಹೇಳಿದನು - ತಂಗೀ! ಬೇಸರಪಡಬೇಡ. ನಮ್ಮಿಂದ ಬೇರೆ ಎಂದು ಎಣಿಸಬೇಡ. ಮನುಷ್ಯರೆಲ್ಲರೂ ದೈವದ ಕೈಯ ಆಟದ ಗೊಂಬೆಗಳು. ಈ ಸಂಪೂರ್ಣ ಜಗತ್ತು ಈಶ್ವರನ ಅಧೀನದಲ್ಲಿದ್ದು ಕರ್ಮಮಾಡುತ್ತಾ ಅದರ ಫಲವನ್ನು ಅನುಭವಿಸುತ್ತಾರೆ. ॥ ೨೧॥ ಸಹೋದರಿ! ಕಂಸನ ಉಪಟಳದಿಂದ ನಾವೆಲ್ಲರೂ ದಿಕ್ಕಾಪಾಲಾಗಿ ಹೋಗಿದ್ದೆವು. ಈಶ ಕೃಪೆಯಿಂದ ನಾವೆಲ್ಲರೂ ಪುನಃ ನಮ್ಮ-ನಮ್ಮ ಸ್ಥಾನವನ್ನು ಹೊಂದಿ ಕೆಲವೇ ದಿನಗಳಾಗಿವೆ. ॥ ೨೨ ॥

ಶ್ರೀಶುಕ ಉವಾಚ

ವಸುದೇವೋಗ್ರಸೇನಾದ್ಯೈರ್ಯದುಭಿಸ್ತೇಽರ್ಚಿತಾ ನೃಪಾಃ ।
ಆಸನ್ನಚ್ಯುತಸಂದರ್ಶಪರಮಾನಂದನಿರ್ವೃತಾಃ ॥ ೨೩ ॥

ಭೀಷ್ಮೋ ದ್ರೋಣೋಽಂಬಿಕಾಪುತ್ರೋ ಗಾಂಧಾರೀ ಸಸುತಾ ತಥಾ ।
ಸದಾರಾಃ ಪಾಂಡವಾಃ ಕುಂತೀ ಸೃಂಜಯೋ ವಿದುರಃ ಕೃಪಃ ॥ ೨೪ ॥

ಕುಂತಿಭೋಜೋ ವಿರಾಟಶ್ಚ ಭೀಷ್ಮಕೋ ನಗ್ನಜಿನ್ಮಹಾನ್ ।
ಪುರುಜಿದ್ದ್ರುಪದಃ ಶಲ್ಯೋ ಧೃಷ್ಟಕೇತುಃ ಸ ಕಾಶಿರಾಟ್ ॥ ೨೫ ॥

ದಮಘೋಷೋ ವಿಶಾಲಾಕ್ಷೋ ಮೈಥಿಲೋ ಮದ್ರಕೇಕಯೌ ।
ಯುಧಾಮನ್ಯುಃ ಸುಶರ್ಮಾ ಚ ಸಸುತಾ ಬಾಹ್ಲಿಕಾದಯಃ ॥ ೨೬ ॥

ರಾಜಾನೋ ಯೇ ಚ ರಾಜೇಂದ್ರ ಯುಧಿಷ್ಠಿರಮನುವ್ರತಾಃ ।
ಶ್ರೀನಿಕೇತಂ ವಪುಃ ಶೌರೇಃ ಸಸ್ತ್ರೀಕಂ ವೀಕ್ಷ್ಯ ವಿಸ್ಮಿತಾಃ ॥ ೨೭ ॥

ಅಥ ತೇ ರಾಮಕೃಷ್ಣಾಭ್ಯಾಂ ಸಮ್ಯಕ್ ಪ್ರಾಪ್ತಸಮರ್ಹಣಾಃ ।
ಪ್ರಶಶಂಸುರ್ಮುದಾ ಯುಕ್ತಾ ವೃಷ್ಣೀನ್ ಕೃಷ್ಣಪರಿಗ್ರಹಾನ್ ॥ ೨೮ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ - ಪರೀಕ್ಷಿತನೇ! ವಸುದೇವ, ಉಗ್ರಸೇನರೇ ಮೊದಲಾದ ಯಾದವರು ಇಲ್ಲಿಗೆ ಬಂದಿರುವ ಎಲ್ಲ ರಾಜರನ್ನೂ ಯಥೋಚಿತ ನಮಸ್ಕಾರ ಮಾಡಿದರು. ಅವರೆಲ್ಲರೂ ಭಗವಾನ್ ಶ್ರೀಕೃಷ್ಣನ ದರ್ಶನವನ್ನು ಪಡೆದು ಪರಮಾನಂದಭರಿತರಾಗಿ ಶಾಂತಿಯನ್ನು ಅನುಭವಿಸಿದರು. ॥ ೨೩ ॥ ಪರೀಕ್ಷಿತನೇ! ಪಿತಾಮಹ ಭೀಷ್ಮರು, ದ್ರೋಣಾಚಾರ್ಯರು, ಧೃತರಾಷ್ಟ್ರ, ದುರ್ಯೋಧನಾದಿ ಪುತ್ರರೊಂದಿಗೆ ಗಾಂಧಾರಿ, ಪತ್ನಿಯರೊಂದಿಗೆ ಯುಧಿಷ್ಠಿರನೇ ಮೊದಲಾದ ಪಾಂಡವರು, ಕುಂತೀ, ಸೃಂಜಯ, ವಿದುರ, ಕೃಪಾಚಾರ್ಯರು, ಕುಂತಿಭೋಜ, ವಿರಾಟ, ಭೀಷ್ಮಕ, ಮಹಾರಾಜ ನಗ್ನಜಿತ್ತು, ಪುರುಜಿತ್ತು, ದ್ರುಪದ, ಶಲ್ಯ, ಧೃಷ್ಟಕೇತು, ಕಾಶೀರಾಜ, ದಮಘೋಷ, ವಿಶಾಲಾಕ್ಷ, ಮಿಥಿಲಾನರೇಶ, ಮದ್ರರಾಜ, ಕೇಕಯನರೇಶ, ಯುಧಾಮನ್ಯು, ಸುಶರ್ಮ, ತಮ್ಮ ಪುತ್ರರೊಂದಿಗೆ ಬಾಹ್ಲೀಕ ಹಾಗೂ ಇತರ ಯುಧಿಷ್ಠಿರನ ಅನುಯಾಯಿಗಳಾದ ರಾಜರು - ಹೀಗೆ ಇವರೆಲ್ಲರೂ ರಾಣಿಯರೊಡಗೂಡಿದ್ದ ಭಗವಾನ್ ಶ್ರೀಕೃಷ್ಣನ ಪರಮಸುಂದರ ಶ್ರೀನಿಕೇತನ ದಿವ್ಯಮಂಗಳ ವಿಗ್ರಹವನ್ನು ನೋಡಿ ಅತ್ಯಂತ ವಿಸ್ಮಿತರಾದರು. ॥ ೨೪-೨೭ ॥ ಈಗ ಅವರೆಲ್ಲರೂ ಬಲರಾಮ-ಶ್ರೀಕೃಷ್ಣರಿಂದ ಯಥೋಚಿತವಾದ ಸಮ್ಮಾನವನ್ನು ಪಡೆದು ಆತ್ಮಾನಂದದಿಂದ ಶ್ರೀಕೃಷ್ಣನನ್ನು, ಅವನ ಸ್ವಜನ ಯದುವಂಶೀಯರನ್ನೂ ಪ್ರಶಂಸಿಸತೊಡಗಿದರು. ॥ ೨೮ ॥

ಅಹೋ ಭೋಜಪತೇ ಯೂಯಂ ಜನ್ಮಭಾಜೋ ನೃಣಾಮಿಹ ।
ಯತ್ಪಶ್ಯಥಾಸಕೃತ್ಕೃಷ್ಣಂ ದುರ್ದರ್ಶಮಪಿ ಯೋಗಿನಾಮ್ ॥ ೨೯ ॥

ಅವರೆಲ್ಲರೂ ಪ್ರಧಾನವಾಗಿ ಉಗ್ರಸೇನನನ್ನು ಸಂಬೋಧಿಸುತ್ತಾ ಹೇಳತೊಡಗಿದರು – "ಭೋಜರಾಜ ಉಗ್ರಸೇನನೇ! ಮನುಷ್ಯ ಲೋಕದಲ್ಲಿ ಜನ್ಮತಾಳಿರುವ ನಿಮ್ಮ ಜೀವನವೇ ನಿಶ್ಚಯವಾಗಿ ಧನ್ಯವಾಗಿದೆ. ಸಾರ್ಥಕವಾಗಿದೆ. ಏಕೆಂದರೆ, ದೊಡ್ಡ-ದೊಡ್ಡ ಯೋಗಿಗಳಿಗೂ ದರ್ಶನಕ್ಕೆ ದುರ್ಲಭನಾದ ಶ್ರೀಕೃಷ್ಣನನ್ನು ನೀವೆಲ್ಲರೂ ನಿತ್ಯ ನಿರಂತರವಾಗಿ ನೋಡುತ್ತಾ ಇದ್ದೀರಿ. ॥ ೨೯ ॥

ಯದ್ವಿಶ್ರುತಿಃ ಶ್ರುತಿನುತೇದಮಲಂ ಪುನಾತಿ
ಪಾದಾವನೇಜನಪಯಶ್ಚ ವಚಶ್ಚ ಶಾಸ್ತ್ರಮ್ ।
ಭೂಃ ಕಾಲಭರ್ಜಿತಭಗಾಪಿ ಯದಂಘ್ರಿಪದ್ಮ-
ಸ್ಪರ್ಶೋತ್ಥಶಕ್ತಿರಭಿವರ್ಷತಿ ನೋಽಖಿಲಾರ್ಥಾನ್ ॥ ೩೦ ॥

ವೇದಗಳು ಆತ್ಯಾದರದಿಂದ ಭಗವಾನ್ ಶ್ರೀಕೃಷ್ಣನ ಕೀರ್ತಿಯನ್ನು ಕೊಂಡಾಡುತ್ತವೆ. ಅವನ ಚರಣೋದಕ ಗಂಗೆಯು, ಅವನ ವಾಣಿಯಾದ (ಗೀತೆಯು) ಶಾಸ್ತ್ರವು ಮತ್ತು ಅವನ ಮಂಗಳ ಕೀರ್ತಿಯು ಈ ಜಗತ್ತನ್ನು ಪಾವನಗೊಳಿಸುತ್ತಿದೆ. ಕಾಲಬಾಧಿತವಾಗಿ ಪೃಥಿವಿಯ ಸೌಭಾಗ್ಯವೆಲ್ಲವೂ ನಾಶವಾಗಿ ಹೋಗಿತ್ತು. ಆದರೆ ಅವನ ಚರಣಕಮಲಗಳ ಸ್ಪರ್ಶಸುಖವನ್ನು ಪಡೆದು ಭೂದೇವಿಯು ಸರ್ವಸಮರ್ಥಳಾಗಿ ನಾವು ಅಪೇಕ್ಷಿಸಿದುದೆಲ್ಲವನ್ನೂ ಮಳೆಗರೆಯುತ್ತಿದ್ದಾಳೆ. ॥ ೩೦ ॥ ಉಗ್ರಸೇನನೇ! ಅಂತಹ ದೇವ-ದೇವನಾದ ಶ್ರೀಕೃಷ್ಣನೊಡನೆ ನಿಮಗೆ ವಿವಾಹಸಂಬಂಧ ಹಾಗೂ ಗೋತ್ರ ಸಂಬಂಧವೂ ಇದೆ. ಇಷ್ಟೇ ಅಲ್ಲ; ನೀವೆಲ್ಲರೂ ಯಾವಾಗಲೂ ಅವನನ್ನು ದರ್ಶಿಸುತ್ತಾ, ಸ್ಪರ್ಶಿಸುತ್ತಾ ಇರುವಿರಿ. ಅವನೊಡನೆ ನಡೆಯುವಿರಿ, ಮಾತನಾಡುವಿರಿ, ಮಲಗುವಿರಿ, ಕುಳಿತುಕೊಳ್ಳುವಿರಿ, ಊಟ-ತಿಂಡಿಗಳನ್ನು ಮಾಡುತ್ತಿರುವಿರಿ. ನೀವು ನರಕಕ್ಕೆ ದಾರಿಯಾದ ಸಂಸಾರಸಾಗರದಲ್ಲಿ ಬಿದ್ದು ಕೊಳೆಯುತ್ತಿದ್ದರೂ ನಿಮ್ಮ ಮನೆಯಲ್ಲಿ ಸರ್ವವ್ಯಾಪಕನಾದ ಭಗವಾನ್ ವಿಷ್ಣುವು ಮೂರ್ತಿಮಂತನಾಗಿ ನಿವಾಸಮಾಡಿದ್ದಾನೆ. ಅವನ ದರ್ಶನ ಮಾತ್ರದಿಂದಲೇ ಸ್ವರ್ಗ-ಮೋಕ್ಷಗಳ ಅಭಿಲಾಷೆಗಳೂ ಇಲ್ಲವಾಗುತ್ತವೆ." ॥ ೩೧ ॥

ತದ್ದರ್ಶನಸ್ಪರ್ಶನಾನುಪಥಪ್ರಜಲ್ಪ-
ಶಯ್ಯಾಸನಾಶನಸಯೌನಸಪಿಂಡಬಂಧಃ ।
ಯೇಷಾಂ ಗೃಹೇ ನಿರಯವರ್ತ್ಮನಿ ವರ್ತತಾಂ ವಃ
ಸ್ವರ್ಗಾಪವರ್ಗವಿರಮಃ ಸ್ವಯಮಾಸ ವಿಷ್ಣುಃ ॥ ೩೧ ॥

ಶ್ರೀಶುಕ ಉವಾಚ

ನಂದಸ್ತತ್ರ ಯದೂನ್ಪ್ರಾಪ್ತಾನ್ ಜ್ಞಾತ್ವಾ ಕೃಷ್ಣಪುರೋಗಮಾನ್ ।
ತತ್ರಾಗಮದ್ವೃತೋ ಗೋಪೈರನಃಸ್ಥಾರ್ಥೈರ್ದಿದೃಕ್ಷಯಾ ॥ ೩೨ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ! ಶ್ರೀಕೃಷ್ಣನೇ ಮೊದಲಾದ ಯಾದವರು ಕುರುಕ್ಷೇತ್ರಕ್ಕೆ ಆಗಮಿಸಿರುವರು ಎಂದು ಕೇಳಿದ ನಂದಗೋಪನು ಗೋಪಾಲರೊಂದಿಗೆ ತಮ್ಮ ಸಾಮಗ್ರಿಗಳನ್ನು ಎತ್ತಿನ ಗಾಡಿಗಳಲ್ಲಿ ಹೇರಿಕೊಂಡು ತಮ್ಮ ಪ್ರಿಯ ಪುತ್ರರಾದ ಶ್ರೀಕೃಷ್ಣ ಬಲರಾಮರನ್ನು ನೋಡಲಿಕ್ಕಾಗಿ ಅಲ್ಲಿಗೆ ಬಂದರು. ॥ ೩೨ ॥ ನಂದರಾಜ ಮೊದಲಾದ ಗೋಪಾಲರನ್ನು ನೋಡಿ ಸಮಸ್ತ ಯಾದವರು ಆನಂದತುಂದಿಲರಾದರು. ಮೃತ ಶರೀರದಲ್ಲಿ ಪ್ರಾಣಸಂಚಾರವಾದಂತೆ ಲಗುಬಗೆಯಿಂದ ಎದ್ದು ನಿಂತರು. ಪರಸ್ಪರ ಅವರು ಒಬ್ಬರನ್ನೊಬ್ಬರು ಭೇಟಿಯಾಗಲು ಬಹಳ ದಿನಗಳಿಂದ ಕಾತುರರಾಗಿದ್ದರು. ಆದರಿಂದ ಒಬ್ಬರನ್ನೊಬ್ಬರು ಬಹಳ ಹೊತ್ತಿನವರೆಗೆ ಗಾಢವಾಗಿ ಆಲಿಂಗಿಸಿಕೊಂಡೇ ಇದ್ದರು. ॥ ೩೩ ॥ ವಸುದೇವನು ಅತ್ಯಂತ ಪ್ರೇಮವಿಹ್ವಲನಾಗಿ ನಂದಗೋಪನನ್ನು ಅಪ್ಪಿಕೊಂಡನು. ಕಂಸನು ಯಾವ ರೀತಿಯಿಂದ ಸತಾಯಿಸುತ್ತಿದ್ದನು. ತನ್ನ ಪುತ್ರರನ್ನು ಗೋಕುಲಕ್ಕೆ ಕೊಂಡು ಹೋಗಿ ನಂದರಾಜನಲ್ಲಿ ಹೇಗೆ ಇರಿಸಿದೆನು, ಹೀಗೆ ಎಲ್ಲ ಘಟನೆಗಳು ಒಂದೊಂದಾಗಿ ಅವನಿಗೆ ನೆನಪಾದುವು. ॥ ೩೪ ॥

ತಂ ದೃಷ್ಟ್ವಾ ವೃಷ್ಣಯೋ ಹೃಷ್ಟಾಸ್ತನ್ವಃ ಪ್ರಾಣಮಿವೋತ್ಥಿತಾಃ ।
ಪರಿಷಸ್ವಜಿರೇ ಗಾಢಂ ಚಿರದರ್ಶನಕಾತರಾಃ ॥ ೩೩ ॥

ವಸುದೇವಃ ಪರಿಷ್ವಜ್ಯ ಸಂಪ್ರೀತಃ ಪ್ರೇಮವಿಹ್ವಲಃ ।
ಸ್ಮರನ್ ಕಂಸಕೃತಾನ್ ಕ್ಲೇಶಾನ್ ಪುತ್ರನ್ಯಾಸಂ ಚ ಗೋಕುಲೇ ॥ ೩೪ ॥

ಕೃಷ್ಣರಾಮೌ ಪರಿಷ್ವಜ್ಯ ಪಿತರಾವಭಿವಾದ್ಯ ಚ ।
ನ ಕಿಂಚನೋಚತುಃ ಪ್ರೇಮ್ಣಾ ಸಾಶ್ರುಕಂಠೌ ಕುರೂದ್ವಹ ॥ ೩೫ ॥

ತಾವಾತ್ಮಾಸನಮಾರೋಪ್ಯ ಬಾಹುಭ್ಯಾಂ ಪರಿರಭ್ಯ ಚ ।
ಯಶೋದಾ ಚ ಮಹಾಭಾಗಾ ಸುತೌ ವಿಜಹತುಃ ಶುಚಃ ॥ ೩೬ ॥

ರೋಹಿಣೀ ದೇವಕೀ ಚಾಥ ಪರಿಷ್ವಜ್ಯ ವ್ರಜೇಶ್ವರೀಮ್ ।
ಸ್ಮರಂತ್ಯೌ ತತ್ಕೃತಾಂ ಮೈತ್ರೀಂ ಬಾಷ್ಪಕಂಠ್ಯೌ ಸಮೂಚತುಃ ॥ ೩೭ ॥

ಕಾ ವಿಸ್ಮರೇತ ವಾಂ ಮೈತ್ರೀಮನಿವೃತ್ತಾಂ ವ್ರಜೇಶ್ವರಿ ।
ಅವಾಪ್ಯಾಪ್ಯೈಂದ್ರಮೈಶ್ವರ್ಯಂ ಯಸ್ಯಾ ನೇಹ ಪ್ರತಿಕ್ರಿಯಾ ॥ ೩೮ ॥

ಏತಾವದೃಷ್ಟಪಿತರೌ ಯುವಯೋಃ ಸ್ಮ ಪಿತ್ರೋಃ
ಸಂಪ್ರೀಣನಾಭ್ಯುದಯಪೋಷಣಪಾಲನಾನಿ ।
ಪ್ರಾಪ್ಯೋಷತುರ್ಭವತಿ ಪಕ್ಷ್ಮ ಹ ಯದ್ವದಕ್ಷ್ಣೋ-
ರ್ನ್ಯಸ್ತಾವಕುತ್ರ ಚ ಭಯೌ ನ ಸತಾಂ ಪರಃ ಸ್ವಃ ॥ ೩೯ ॥

ಶ್ರೀಶುಕ ಉವಾಚ

ಗೋಪ್ಯಶ್ಚ ಕೃಷ್ಣಮುಪಲಭ್ಯ ಚಿರಾದಭೀಷ್ಟಂ-
ಯತ್ಪ್ರೇಕ್ಷಣೇ ದೃಶಿಷು ಪಕ್ಷ್ಮಕೃತಂ ಶಪಂತಿ ।
ದೃಗ್ಭಿರ್ಹೃದೀಕೃತಮಲಂ ಪರಿರಭ್ಯ ಸರ್ವಾಃ
ತದ್ಭಾವಮಾಪುರಪಿ ನಿತ್ಯಯುಜಾಂ ದುರಾಪಮ್ ॥ ೪೦ ॥

ಭಗವಾನ್ ಶ್ರೀಕೃಷ್ಣ ಮತ್ತು ಬಲರಾಮರು ತಾಯಿ ಯಶೋದೆಯನ್ನು ತಂದೆ ನಂದಗೋಪನನ್ನು ಪ್ರೇಮಾದರದಿಂದ ಅಪ್ಪಿಕೊಂಡು, ಚರಣಗಳಲ್ಲಿ ವಂದಿಸಿಕೊಂಡರು. ಪರೀಕ್ಷಿತನೇ! ಆ ಸಮಯದಲ್ಲಿ ಪ್ರೇಮೋದ್ರೇಕದಿಂದ ಸಹೋದರರಿಬ್ಬರ ಗಂಟಲು ಕಟ್ಟಿಕೊಂಡು ಏನನ್ನೂ ಮಾತನಾಡದಾದರು. ॥ ೩೫ ॥ ಮಹಾಭಾಗ್ಯಶಾಲಿಯಾದ ಯಶೋದೆ ಮತ್ತು ನಂದರಾಜನು ಪುತ್ರರಿಬ್ಬರನ್ನು ತೊಡೆಯಲ್ಲಿ ಕುಳ್ಳಿರಿಸಿಕೊಂಡು, ಗಾಢವಾಗಿ ಬಿಗಿದಪ್ಪಿಕೊಂಡರು. ಬಹಳ ಕಾಲದಿಂದ ಕಾಣದೇ ಇದ್ದ ಅವರ ಹೃದಯದ ದುಃಖವೆಲ್ಲವೂ ಅಳಿದುಹೋಯಿತು. ॥ ೩೬ ॥ ವಸುದೇವನ ಪತ್ನಿಯರಾದ ದೇವಕೀ-ರೋಹಿಣಿಯರು ವ್ರಜೇಶ್ವರಿಯಾದ ಯಶೋದೆಯನ್ನು ಗಾಢವಾಗಿ ಆಲಿಂಗಿಸಿಕೊಂಡು ಆನಂದ ಬಾಷ್ಪಗಳನ್ನು ಸುರಿಸಿದರು. ತಮ್ಮ ಹಿಂದಿನ ಮೈತ್ರಿಯನ್ನು ಮತ್ತು ಯಶೋದೆಯು ಮಾಡಿದ ಉಪಕಾರವನ್ನು ಜ್ಞಾಪಿಸಿಕೊಳ್ಳುತ್ತಾ ಅವರು ಯಶೋದೆಯ ಬಳಿ ಹೇಳಿದರು - ॥ ೩೭ ॥ ಯಶೋದಾ ದೇವಿಯೇ! ನಿನ್ನ ಮತ್ತು ವ್ರಜೇಶ್ವರರಾದ ನಂದಗೋಪನ ಸುಸ್ಥಿರವಾದ ಮೈತ್ರಿಯನ್ನು ಯಾವಳು ತಾನೇ ಮರೆಯಬಲ್ಲಳು? ಇಂದ್ರನ ಐಶ್ವರ್ಯವನ್ನೇ ಪಡೆದುಕೊಂಡು ನಿಮಗೆ ಕೊಟ್ಟರೂ ನೀವು ಮಾಡಿದ ಉಪಕಾರವನ್ನು ತೀರಿಸಲಾಗದು. ॥ ೩೮ ॥ ದೇವಿ! ಬಲರಾಮ – ಶ್ರೀಕೃಷ್ಣರು ತಂದೆ-ತಾಯಿಯರನ್ನೇ ಕಾಣದಿದ್ದಾಗ ಇವರ ತಂದೆಯು ಇವರನ್ನು ನ್ಯಾಸರೂಪವಾಗಿ ನಿಮ್ಮಲ್ಲಿ ಬಿಟ್ಟು ಬಂದರು. ಆ ಸಮಯದಲ್ಲಿ ನೀವು ಇವರಿಬ್ಬರನ್ನೂ ರೆಪ್ಪೆಗಳು ಕಣ್ಣನ್ನು ರಕ್ಷಿಸುವಂತೆ ರಕ್ಷಿಸಿದಿರಿ. ನೀವು ಈ ಮಕ್ಕಳನ್ನು ನಿಮ್ಮ ಮುದ್ದು ಮಕ್ಕಳೆಂದೇ ಭಾವಿಸಿ ಪ್ರೀತಿಸಿದಿರಿ, ಬೆಳೆಸಿದಿರಿ, ಲಾಲಿಸಿ ಪಾಲಿಸಿದಿರಿ, ಇವರ ಅಭ್ಯುದಯಕ್ಕಾಗಿ ಅನೇಕ ಮಾಂಗಲಿಕ ಉತ್ಸವಗಳನ್ನು ಆಚರಿಸಿದಿರಿ. ನಿಜಹೇಳಬೇಕೆಂದರೆ ಇವರ ತಂದೆ ತಾಯಿಗಳು ನೀವೇ ಆಗಿದ್ದೀರಿ. ನಿಮ್ಮ ಪಾಲನೆಯಲ್ಲಿ ಇವರು ಯಾವ ಭಯವೂ ಇಲ್ಲದೆ ನಿಮ್ಮ ಮನೆಯಲ್ಲಿ ಇದ್ದರು. ಹೀಗೆ ಮಾಡಿದುದು ಸತ್ಪುರುಷರಾದ ನಿಮಗೆ ಅನುಗುಣವೇ ಆಗಿತ್ತು. ಏಕೆಂದರೆ, ಸತ್ಪುರುಷರ ದೃಷ್ಟಿಯಲ್ಲಿ 'ನಮ್ಮದು–ಬೇರೆಯವರದ್ದು' ಎಂಬ ಭೇದ–ಭಾವವೇ ಇರುವುದಿಲ್ಲ. ಹೀಗೆ ಹೇಳುತ್ತ ಯಶೋದೆಯನ್ನು ಬಹಳವಾಗಿ ಶ್ಲಾಘಿಸಿದರು. ॥ ೩೯ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ! ಗೋಪಿಯರಿಗೆ ಪರಮಪ್ರಿಯತಮನೂ, ಜೀವನಸರ್ವಸ್ವನೂ ಶ್ರೀಕೃಷ್ಣನೇ ಆಗಿದ್ದನು ಎಂದು ನಾನು ಹೇಳಿದೆನಷ್ಟೆ! ಅವನನ್ನು ದರ್ಶನಮಾಡುವಾಗ ರೆಪ್ಪೆಗಳು ಮುಚ್ಚಿಕೊಂಡಾಗ ಅವರು ಆ ರೆಪ್ಪೆಗಳನ್ನು ಸೃಷ್ಟಿಸಿದವನನ್ನೇ ಬೈಯುತ್ತಿದ್ದರು. ಅಂತಹ ಪ್ರೇಮಮೂರ್ತಿಗಳಾದ ಗೋಪಿಯರಿಗೆ ಬಹಳ ದಿನಗಳ ಬಳಿಕ ಇಂದು ಭಗವಾನ್ ಶ್ರೀಕೃಷ್ಣನ ದರ್ಶನವಾಯಿತು. ಇದಕ್ಕಾಗಿ ಅವರ ಮನಸ್ಸಿನಲ್ಲಿದ್ದ ಅಭಿಲಾಷೆಯನ್ನು ಯಾರೂ ಅರಿಯಲಾರರು. ಅವರು ಕಂಗಳ ಮೂಲಕ ತಮ್ಮ ಪ್ರಿಯತಮ ಶ್ರೀಕೃಷ್ಣನನ್ನು ಹೃದಯಕ್ಕೊಯ್ದು ಗಾಢವಾಗಿ ಆಲಿಂಗಿಸಿಕೊಂಡರು ಮತ್ತು ಮನಸ್ಸಿನಲ್ಲೇ ಆಲಿಂಗಿಸಿಕೊಂಡು ತನ್ಮಯರಾಗಿಬಿಟ್ಟರು. ಪರೀಕ್ಷಿತನೇ! ನಿತ್ಯ-ನಿರಂತರ ಅಭ್ಯಾಸ ಮಾಡುವಂತಹ ಯೋಗಿಗಳಿಗೂ ಅತ್ಯಂತ ದುರ್ಲಭವಾದ ಭಾವಸ್ಥಿತಿಯನ್ನು ಅಂದು ಅವರು ಪಡೆದುಕೊಂಡರು. ॥ ೪೦ ॥

ಭಗವಾಂಸ್ತಾಸ್ತಥಾಭೂತಾ ವಿವಿಕ್ತ ಉಪಸಂಗತಃ ।
ಆಶ್ಲಿಷ್ಯಾನಾಮಯಂ ಪೃಷ್ಟ್ವಾ ಪ್ರಹಸನ್ನಿದಮಬ್ರವೀತ್ ॥ ೪೧ ॥

ಅಪಿ ಸ್ಮರಥ ನಃ ಸಖ್ಯಃ ಸ್ವಾನಾಮರ್ಥಚಿಕೀರ್ಷಯಾ ।
ಗತಾಂಶ್ಚಿರಾಯಿತಾನ್ ಶತ್ರುಪಕ್ಷಕ್ಷಪಣಚೇತಸಃ ॥ ೪೨ ॥

ಅಪ್ಯವಧ್ಯಾಯಥಾಸ್ಮಾನ್ ಸ್ವಿದಕೃತಜ್ಞಾವಿಶಂಕಯಾ ।
ನೂನಂ ಭೂತಾನಿ ಭಗವಾನ್ ಯುನಕ್ತಿ ವಿಯುನಕ್ತಿ ಚ ॥ ೪೩ ॥

ವಾಯುರ್ಯಥಾ ಘನಾನೀಕಂ ತೃಣಂ ತೂಲಂ ರಜಾಂಸಿ ಚ ।
ಸಂಯೋಜ್ಯಾಕ್ಷಿಪತೇ ಭೂಯಸ್ತಥಾ ಭೂತಾನಿ ಭೂತಕೃತ್ ॥ ೪೪ ॥

ಮಯಿ ಭಕ್ತಿರ್ಹಿ ಭೂತಾನಾಮಮೃತತ್ವಾಯ ಕಲ್ಪತೇ ।
ದಿಷ್ಟ್ಯಾ ಯದಾಸೀನ್ಮತ್ಸ್ನೇಹೋ ಭವತೀನಾಂ ಮದಾಪನಃ ॥ ೪೫ ॥

ಅಹಂ ಹಿ ಸರ್ವಭೂತಾನಾಮಾದಿರಂತೋಽಂತರಂ ಬಹಿಃ ।
ಭೌತಿಕಾನಾಂ ಯಥಾ ಖಂ ವಾರ್ಭೂರ್ವಾಯುರ್ಜ್ಯೋತಿರಂಗನಾಃ ॥ ೪೬ ॥

ಏವಂ ಹ್ಯೇತಾನಿ ಭೂತಾನಿ ಭೂತೇಷ್ವಾತ್ಮಾಽಽತ್ಮನಾ ತತಃ ।
ಉಭಯಂ ಮಯ್ಯಥ ಪರೇ ಪಶ್ಯತಾಭಾತಮಕ್ಷರೇ ॥ ೪೭ ॥

ಶ್ರೀಶುಕ ಉವಾಚ

ಅಧ್ಯಾತ್ಮಶಿಕ್ಷಯಾ ಗೋಪ್ಯ ಏವಂ ಕೃಷ್ಣೇನ ಶಿಕ್ಷಿತಾಃ ।
ತದನುಸ್ಮರಣಧ್ವಸ್ತಜೀವಕೋಶಾಸ್ತಮಧ್ಯಗನ್ ॥ ೪೮ ॥

ಗೋಪಿಯರು ತನ್ನಲ್ಲಿ ತನ್ಮಯರಾಗಿ ಬಿಟ್ಟಿದ್ದಾರೆ ಎಂದು ನೋಡಿದ ಭಗವಾನ್ ಶ್ರೀಕೃಷ್ಣನು ಏಕಾಂತದಲ್ಲಿ ಅವರ ಬಳಿಗೆ ಹೋದನು. ಅವರನ್ನು ಅಪ್ಪಿಕೊಂಡನು. ಕ್ಷೇಮ-ಸಮಾಚಾರವನ್ನು ಕೇಳುತ್ತಾ, ನಗು-ನಗುತ್ತಾ ಹೀಗೆ ಹೇಳಿದನು - ॥ ೪೧ ॥ ಸಖಿಯರೇ! ನಾವು ನಮ್ಮ ಸ್ವಜನ-ಸಂಬಂಧಿಗಳ ಕೆಲಸವನ್ನು ಮಾಡುವುದಕ್ಕಾಗಿ ವ್ರಜದಿಂದ ಹೊರಗೆ ಮತ್ತು ಹೀಗೆ ನಿಮ್ಮಂತಹ ಪ್ರೇಯಸಿಯರನ್ನು ಬಿಟ್ಟು ನಾವು ಶತ್ರುಗಳನ್ನು ನಾಶಮಾಡುವುದರಲ್ಲಿ ತೊಡಗಿ ಬಿಟ್ಟೆವು. ಬಹಳದಿನಗಳು ಕಳೆದುವು ಎಂದಾದರು ನೀವುಗಳು ನಮ್ಮನ್ನು ಸ್ಮರಿಸುತ್ತಿರೇನು? ॥ ೪೨ ॥ ಪ್ರಿಯಗೋಪಿಯರೇ! ಮಾಡಿದ ಉಪಕಾರವನ್ನು ಸ್ಮರಿಸುವವನಲ್ಲವೆಂದು ಭಾವಿಸಿ ನನ್ನನ್ನು ಕಡೆಗಣಿಸಿ ಬಿಟ್ಟಿದ್ದೀರಾ? ಹಾಗೆ ನನ್ನನ್ನು ತಿಳಿಯಬೇಡಿರಿ. ಸೇರುವಿಕೆಯೂ ಅಗಲುವಿಕೆಯೂ ನಮ್ಮ ಅಧೀನದಲ್ಲಿಲ್ಲ. ಭಗವಂತನೇ ಪ್ರಾಣಿಗಳ ಸಂಯೋಗ ಮತ್ತು ವಿಯೋಗಕ್ಕೆ ಕಾರಣ ನಾಗಿದ್ದಾನೆ. ॥ ೪೩ ॥ ವಾಯುವು ಮೋಡಗಳನ್ನು ಹುಲ್ಲುಕಡ್ಡಿ ಗಳನ್ನು ಹತ್ತಿಯನ್ನು ಧೂಳಿನ ಕಣಗಳನ್ನು ಒಮ್ಮೆ ಒಂದಾಗಿಸಿ ಮತ್ತೊಮ್ಮೆ ಛಿದ್ರಗೊಳಿಸುತ್ತದೆಯೋ ಹಾಗೆಯೇ ಸಮಸ್ತ ಪದಾರ್ಥ ಗಳ ಸೃಷ್ಟಿಕರ್ತನಾದ ಭಗವಂತನು ಪ್ರಾಣಿಗಳಿಗೆ ಸ್ವೇಚ್ಛೆಯಿಂದ ಸಂಯೋಗ-ವಿಯೋಗಗಳನ್ನು ಉಂಟುಮಾಡುತ್ತಾನೆ. ॥ ೪೪ ॥ ಸಖಿಯರೇ! ನನ್ನನ್ನು ಪಡೆಯುವಂತಹ ಪರಮಪ್ರೇಮವು ನಿಮುಗೆ ಲ್ಲರಿಗೆ ಪ್ರಾಪ್ತವಾಗಿರುವುದು ದೊಡ್ಡ ಸೌಭಾಗ್ಯದ ಮಾತಾಗಿದೆ. ಏಕೆಂದರೆ, ನನ್ನ ಕುರಿತು ಉಂಟಾದ ಪ್ರೇಮಾ-ಭಕ್ತಿಯು ಪ್ರಾಣಿ ಗಳಿಗೆ ಅಮೃತತ್ತ್ವವನ್ನು ದೊರಕಿಸುವುದರಲ್ಲಿ ಸಮರ್ಥ ವಾಗಿದೆ. ॥ ೪೫ ॥ ಪ್ರಿಯ ಗೋಪಿಯರೇ! ಘಟ-ಪಟಗಳೇ ಮೊದಲಾದ ಭೌತಿಕ ಪದಾರ್ಥಗಳಿಗೆ ಪಂಚಭೂತಗಳಾದ ಪೃಥಿವಿ, ಜಲ, ವಾಯು, ಅಗ್ನಿ ಆಕಾಶಗಳೇ ಮೂಲಕಾರಣವಾಗಿದ್ದು ಅವುಗಳ ಹೊರಗೂ, ಒಳಗೂ ಇದ್ದು ಅವುಗಳಲ್ಲಿ ಹಾಸುಹೊಕ್ಕಾಗಿದೆಯೋ ಹಾಗೆಯೇ ನಾನು ಸಮಸ್ತ ಪ್ರಾಣಿಗಳ ಆದಿಯೂ, ಮಧ್ಯನೂ, ಅಂತ್ಯನೂ ಹಾಗೂ ಅವುಗಳ ಹೊರಗೆ, ಒಳಗೆ ಕೇವಲ ನಾನೇ ವ್ಯಾಪಿಸಿಕೊಂಡಿದ್ದೇನೆ. ॥ ೪೬ ॥ ಹೀಗೆ ಸಮಸ್ತ ಪ್ರಾಣಿಗಳ ಶರೀರ ಗಳಲ್ಲಿಯೂ ಈ ಪಂಚಭೂತಗಳೇ ಕಾರಣರೂಪದಿಂದ ಉಪಸ್ಥಿತ ವಾಗಿವೆ. ಆತ್ಮನು ಭೋಕ್ತೃವಿನ ರೂಪದಲ್ಲಿ ಅಥವಾ ಜೀವರೂಪ ದಿಂದ ಇದ್ದಾನೆ. ನಾನಾದರೋ ಇವೆರಡರಿಂದಲೂ ಬೇರೆಯಾಗಿ ಅವಿನಾಶಿಯಾದ ಸತ್ಯಸ್ವರೂಪದಲ್ಲಿರುತ್ತೇನೆ. ಆದುದರಿಂದ ಇವೆರಡೂ ನನ್ನೊಳಗೆ ಕಂಡುಬರುತ್ತವೆ. ಹೀಗೆ ನೀವೆಲ್ಲರೂ ಕಂಡುಕೊಳ್ಳಿರಿ. ॥ ೪೭ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ - ಪರೀಕ್ಷಿತನೇ! ಭಗವಾನ್ ಶ್ರೀಕೃಷ್ಣನು ಹೀಗೆ ಗೋಪಿಯರಿಗೆ ಅಧ್ಯಾತ್ಮಜ್ಞಾನದ ಉಪದೇಶವಿತ್ತನು. ಇಂತಹ ಭಗವದುಪದೇಶವನ್ನು ಪದೇ-ಪದೇ ಸ್ಮರಿಸಿಕೊಳ್ಳುತ್ತಾ ಗೋಪಿಯರ ಜೀವಕೋಶ (ಲಿಂಗಶರೀರ) ನಾಶ ವಾಗಿ ಹೋಯಿತು. ಅವರೆಲ್ಲರೂ ಭಗವಂತನ ನಿಜಸ್ವರೂಪವನ್ನು ಹೊಂದಿದರು. ॥ ೪೮ ॥

ಆಹುಶ್ಚ ತೇ ನಲಿನನಾಭ ಪದಾರವಿಂದಂ
ಯೋಗೇಶ್ವರೈರ್ಹೃದಿ ವಿಚಿಂತ್ಯಮಗಾಧಬೋಧೈಃ ।
ಸಂಸಾರಕೂಪಪತಿತೋತ್ತರಣಾವಲಂಬಂ
ಗೇಹಂಜುಷಾಮಪಿ ಮನಸ್ಯುದಿಯಾತ್ಸದಾ ನಃ ॥ ೪೮ ॥

ಆನಂದತುಂದಿಲರಾದ ಅವರು ಶ್ರೀಕೃಷ್ಣನನ್ನು ಹೀಗೆ ಪ್ರಾರ್ಥಿಸಿಕೊಂಡರು - ಓ ಕಮಲನಾಭನೇ! ಜ್ಞಾನ ಸಂಪನ್ನರಾದ ಮಹಾ-ಮಹಾಯೋಗಿಗಳು ತಮ್ಮ ಹೃದಯಕಮಲಗಳಲ್ಲಿ ನಿನ್ನ ದಿವ್ಯವಾದ ಚರಣಕಮಲಗಳನ್ನು ಸದಾ ಧ್ಯಾನ ಮಾಡುತ್ತಿರುತ್ತಾರೆ. ಸಂಸಾರ ಕೂಪದಲ್ಲಿ ಬಿದ್ದಿರುವ ಜನರಿಗೆ ಪಾರಾಗಲು ನಿನ್ನ ಚರಣಕಮಲಗಳೇ ಏಕಮಾತ್ರ ಅವಲಂಬನೆಯಾಗಿದೆ. ಪ್ರಭೋ! ನಿನ್ನ ಚರಣಕಮಲಗಳು ಮನೆವಾರ್ತೆಯ ಕೆಲಸ ಮಾಡುತ್ತಿದ್ದರೂ ಸದಾಕಾಲ ನಮ್ಮ ಹೃದಯದಲ್ಲಿ ವಿರಾಜಿಸುತ್ತಿರಲಿ. ನಾವು ಒಂದು ಕ್ಷಣವೂ ಅದನ್ನು ಮರೆಯದಂತೆ ದಯಮಾಡಿ ಅನುಗ್ರಹಿಸು. ॥ ೪೮ ॥

ಎಂಭತ್ತೆರಡನೆಯ ಅಧ್ಯಾಯವು ಮುಗಿಯಿತು. ॥ ೮೨ ॥
ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮಸ್ಕಂಧೇ ಉತ್ತರಾರ್ಧೇ
ವೃಷ್ಣಿಗೋಪಸಂಗಮೋನಾಮ ದ್ವ್ಯಶೀತಿತಮೋಽಧ್ಯಾಯಃ ॥ ೮೨ ॥

ಎಂಭತ್ತಮೂರನೆಯ ಅಧ್ಯಾಯ

ಶ್ರೀಕೃಷ್ಣನ ಪಟ್ಟದರಸಿಯರೊಡನೆ ದ್ರೌಪದಿಯ ಮಾತುಕತೆ

ಶ್ರೀಶುಕ ಉವಾಚ

ತಥಾನುಗೃಹ್ಯ ಭಗವಾನ್ ಗೋಪೀನಾಂ ಸ ಗುರುರ್ಗತಿಃ ।
ಯುಧಿಷ್ಠಿರಮಥಾಪೃಚ್ಛತ್ಸರ್ವಾಂಶ್ಚ ಸುಹೃದೋಽವ್ಯಯಮ್ ॥ ೧ ॥

ಶ್ರೀಶುಕಮಹಾಮುನಿಗಳು **ಹೇಳುತ್ತಾರೆ** - ಪರೀಕ್ಷಿತ ಮಹಾರಾಜ! ಗೋಪಿಯರಿಗೆ ಪರಮಗುರುವೂ, ಪರಮಾತ್ಮನೂ ಆದ ಶ್ರೀಕೃಷ್ಣನು ನಾನು ಹಿಂದೆ ಹೇಳಿದ ಪ್ರಕಾರ ಗೋಪಿಯರಿಗೆ ಅಧ್ಯಾತ್ಮ ಶಿಕ್ಷಣವನ್ನು ಕೊಟ್ಟು ಅನುಗ್ರಹಿಸಿ, ಯುಧಿಷ್ಠಿರನ ಮತ್ತು ಇತರ ಸಮಸ್ತ ಸುಹೃದರ ಕುಶಲಗಳನ್ನು ಕೇಳಿದನು. ॥ ೧ ॥

ತ ಏವಂ ಲೋಕನಾಥೇನ ಪರಿಪೃಷ್ಟಾಃ ಸುಸತ್ಕೃತಾಃ ।
ಪ್ರತ್ಯೂಚುರ್ಹೃಷ್ಟಮನಸಸ್ತತ್ಪಾದೇಕ್ಷಾಹತಾಂಹಸಃ ॥ ೨ ॥

ಲೋಕನಾಥನಾದ ಶ್ರೀಕೃಷ್ಣನಿಂದ ಸತ್ಕೃತರಾಗಿ ಕುಶಲಪ್ರಶ್ನೆ ಮಾಡಲ್ಪಟ್ಟು ಹಾಗೂ ಆ ಭಗವಂತನ ದಿವ್ಯಪಾದಾರವಿಂದಗಳ ದರ್ಶನಮಾತ್ರದಿಂದಲೇ ಸಮಸ್ತ ಪಾಪಗಳಿಂದ ವಿಮುಕ್ತರಾದ ಯುಧಿಷ್ಠಿರನೇ ಮೊದಲಾದವರು ಪರಮಸಂತುಷ್ಟರಾಗಿ ವಾಸುದೇವನಲ್ಲಿ ಹೇಳಿದರು. ॥ ೨ ॥

ಕುತೋಽಶಿವಂ ತ್ವಚ್ಚರಣಾಂಬುಜಾಸವಂ
ಮಹನ್ಮನಸ್ತೋ ಮುಖನಿಃಸೃತಂ ಕ್ವಚಿತ್ ।
ಪಿಬಂತಿ ಯೇ ಕರ್ಣಪುಟೈರಲಂ ಪ್ರಭೋ
ದೇಹಂಭೃತಾಂ ದೇಹಕೃದಸ್ಮೃತಿಚ್ಛಿದಮ್ ॥ ೩ ॥

ಭಗವಂತಾ! ಮಹಾ ಪುರುಷರು ಸದಾಕಾಲ ತಮ್ಮ ಮನಸ್ಸಿನಲ್ಲೇ ನಿನ್ನ ಪಾದಾರವಿಂದಗಳ ಮಕರಂದವನ್ನು ಪಾನಮಾಡುತ್ತಾ ಇರುತ್ತಾರೆ. ಕೆಲವೊಮ್ಮೆ ಅವರ ಮುಖಕಮಲದಿಂದ ಲೀಲಾ-ಕಥೆಯ ರೂಪದಲ್ಲಿ ಆ ರಸವು ಹೊರಹೊಮ್ಮುವುದು. ಪ್ರಭೋ! ಅಂತಹ ದಿವ್ಯರಸವನ್ನು ಯಾವುದೇ ಪ್ರಾಣಿಯು ಪಾನಮಾಡಿದರೆ ಅವನ ಜನ್ಮ-ಮೃತ್ಯುವಿನ ಚಕ್ರದಲ್ಲಿ ಕೆಡಹುವ ಅವಿದ್ಯೆಯನ್ನು ನಾಶಮಾಡಿಬಿಡುತ್ತದೆ. ಅಂತಹ ರಸವನ್ನು ಕಿವಿಗಳೆಂಬ ದೊನ್ನೆಯಿಂದ ಪಾನಮಾಡುವವರಿಗೆ ಅಮಂಗಳದ ಆಶಂಕೆಯು ಎಲ್ಲಿಯದು? ॥ ೩ ॥

ಹಿತ್ವಾಽಽತ್ಮಧಾಮ ವಿಧುತಾತ್ಮಕೃತತ್ರ್ಯವಸ್ಥ-
ಮಾನಂದಸಂಪ್ಲವಮಖಂಡಮಕುಂಠಬೋಧಮ್ ।
ಕಾಲೋಪಸೃಷ್ಟನಿಗಮಾವನ ಆತ್ತಯೋಗ-
ಮಾಯಾಕೃತಿಂ ಪರಮಹಂಸಗತಿಂ ನತಾಃ ಸ್ಮ ॥ ೪ ॥

ಭಗವಂತನೇ! ನೀನು ಏಕರಸನೂ, ಜ್ಞಾನಸ್ವರೂಪನೂ, ಅಖಂಡ ಆನಂದದ ಸಮುದ್ರನೂ ಆಗಿರುವೆ. ಬುದ್ಧಿ-ವೃತ್ತಿಗಳಿಂದ ಉಂಟಾಗುವ ಜಾಗ್ರತ್, ಸ್ವಪ್ನ, ಸುಷುಪ್ತಿ - ಈ ಮೂರು ಅವಸ್ಥೆಗಳೂ ನಿನ್ನ ಸ್ವಯಂಪ್ರಕಾಶ ಸ್ವರೂಪದವರೆಗೆ ತಲುಪಲಾರವು. ದೂರದಿಂದಲೇ ನಾಶವಾಗಿ ಹೋಗುವುದು. ನೀನು ಪರಮಹಂಸರಿಗೆ ಏಕಮಾತ್ರ ಗತಿಸ್ವರೂಪನು. ಕಾಲಕ್ರಮದಲ್ಲಿ ವೇದಗಳು ಹ್ರಾಸ ಗೊಂಡಿರುವುದನ್ನು ನೋಡಿ, ಅವನ್ನು ರಕ್ಷಿಸಲಿಕ್ಕಾಗಿ ನೀನೇ ಅಚಿಂತ್ಯ ಯೋಗಮಾಯೆಯ ಮೂಲಕ ಮನುಷ್ಯರಂತೆ ಶರೀರವನ್ನು ಗ್ರಹಿಸುತ್ತೀಯೆ. ಅಂತಹ ನಿನ್ನ ಚರಣಗಳಲ್ಲಿ ನಾವು ಪದೇ-ಪದೇ ನಮಸ್ಕರಿಸುತ್ತೇವೆ. ॥ ೪ ॥

ಋಷಿರುವಾಚ

ಇತ್ಯುತ್ತಮಶ್ಲೋಕಶಿಖಾಮಣಿಂ ಜನೇ-
ಷ್ವಭಿಷ್ಟುವತ್ಸ್ವಂಧಕಕೌರವಸ್ತ್ರಿಯಃ ।
ಸಮೇತ್ಯ ಗೋವಿಂದ ಕಥಾ ಮಿಥೋಽಗೃಣಂ-
ಸ್ತ್ರಿಲೋಕಗೀತಾಃ ಶೃಣು ವರ್ಣಯಾಮಿ ತೇ ॥ ೫ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ - ಪರೀಕ್ಷಿತನೇ! ಹೀಗೆ ಯುಧಿಷ್ಠಿರಾದಿಗಳು ಶ್ರೀಕೃಷ್ಣನನ್ನು ಸ್ತುತಿಸುತ್ತಿದ್ದಾಗ ಯಾದವ ಸ್ತ್ರೀಯರು ಮತ್ತು ಕೌರವ ಕುಲದ ಸ್ತ್ರೀಯರು ಒಟ್ಟಾಗಿ ಕುಳಿತು ಪರಸ್ಪರವಾಗಿ ಭಗವಂತನ ತ್ರಿಭುವನವಿಖ್ಯಾತವಾದ ಲೀಲೆಗಳನ್ನು ಮಾತನಾಡಿಕೊಳ್ಳುತ್ತಿದ್ದರು. ಈಗ ನಾನು ನಿನಗೆ ಅವರ ಮಾತುಗಳನ್ನು ವರ್ಣಿಸುವೆನು. ಏಕಾಗ್ರಚಿತ್ತನಾಗಿ ಕೇಳು. ॥ ೫ ॥

ದ್ರೌಪದ್ಯುವಾಚ

ಹೇ ವೈದರ್ಭ್ಯಚ್ಯುತೋ ಭದ್ರೇ ಹೇ ಜಾಂಬವತಿ ಕೌಸಲೇ ।
ಹೇ ಸತ್ಯಭಾಮೇ ಕಾಲಿಂದಿ ಶೈಬ್ಯೇ ರೋಹಿಣಿ ಲಕ್ಷ್ಮಣೇ ॥ ೬ ॥

ಹೇ ಕೃಷ್ಣಪತ್ನ್ಯ ಏತನ್ನೋ ಬ್ರೂತ ವೋ ಭಗವಾನ್ ಸ್ವಯಮ್ ।
ಉಪಯೇಮೇ ಯಥಾ ಲೋಕಮನುಕುರ್ವನ್ ಸ್ವಮಾಯಯಾ ॥ ೭ ॥

ದ್ರೌಪದಿಯು ಹೇಳಿದಳು - ಎಲೌ ರುಕ್ಮಿಣಿಯೇ! ಭದ್ರೆ! ಜಾಂಬವತಿ! ಸತ್ಯೆ! ಸತ್ಯಭಾಮೆ! ಕಾಲಿಂದಿ! ಶೈಬ್ಯೆ! ಮಿತ್ರವಿಂದೆ! ಲಕ್ಷ್ಮಣೇ! ರೋಹಿಣಿಯೇ! ಮತ್ತು ಶ್ರೀಕೃಷ್ಣನ ಇತರ ಪತ್ನಿಯರೇ! ಸಾಕ್ಷಾತ್ ಭಗವಾನ್ ಶ್ರೀಕೃಷ್ಣನು ತನ್ನ ಮಾಯೆಯಿಂದ ಲೋಕಾಚಾರವನ್ನು ಅನುಸರಿಸುತ್ತಾ ಯಾವ ರೀತಿಯಿಂದ ನಿಮ್ಮೆಲ್ಲರನ್ನು ಮದುವೆಯಾದನು? ಇದನ್ನು ಕೇಳುವ ಉತ್ಸುಕತೆ ನಮಗಿದೆ. ನಿಮ್ಮ-ನಿಮ್ಮ ವಿವಾಹ ಪ್ರಸಂಗವನ್ನು ವಿವರಿಸಿ ಹೇಳಿರಿ. ॥ ೬-೭ ॥

ರುಕ್ಮಿಣ್ಯುವಾಚ

ಚೈದ್ಯಾಯ ಮಾರ್ಪಯಿತುಮುದ್ಯತಕಾರ್ಮುಕೇಷು
ರಾಜಸ್ವಜೇಯಭಟಶೇಖರಿತಾಂಘ್ರಿರೇಣುಃ ।
ನಿನ್ಯೇ ಮೃಗೇಂದ್ರ ಇವ ಭಾಗಮಜಾವಿಯೂಥಾತ್
ತಚ್ಛ್ರೀನಿಕೇತ ಚರಣೋಽಸ್ತು ಮಮಾರ್ಚನಾಯ ॥ ೮ ॥

ರುಕ್ಮಿಣಿಯು ಹೇಳುತ್ತಾಳೆ - ದ್ರೌಪದಾದೇವೀ! ಜರಾಸಂಧನೇ ಮೊದಲಾದ ಸಮಸ್ತರಾಜರು ನನ್ನ ವಿವಾಹವು ಶಿಶುಪಾಲನೊಂದಿಗೆ ಆಗಬೇಕೆಂದು ಬಯಸುತ್ತಿದ್ದರು. ಅದಕ್ಕಾಗಿ ಅವರೆಲ್ಲರೂ ಶಸ್ತ್ರಾಸ್ತ್ರಗಳಿಂದ ಸಜ್ಜಾಗಿ ಯುದ್ಧಮಾಡಲು ಸಿದ್ಧರಾಗಿದ್ದರು. ಆದರೆ ಭಗವಂತನು - ಸಿಂಹವು ಕುರಿಯ ಮಂದೆಗೆ ನುಗ್ಗಿ ತನ್ನ ಭಾಗವನ್ನು ಕೊಂಡೊಯ್ಯುವಂತೆ ಆ ರಾಜರ ಮಧ್ಯದಿಂದ ನನ್ನನ್ನು ಕೊಂಡೊಯ್ದನು. ಸಮಸ್ತ ಸಂಪತ್ತಿಗೂ, ಸೌಂದರ್ಯಕ್ಕೂ ಆಶ್ರಯವಾದ ಆ ಭಗವಂತನ ಚರಣಕಮಲಗಳೇ ಜನ್ಮ-ಜನ್ಮಗಳಲ್ಲಿ ನನ್ನ ಆರಾಧನೆಗೆ ಲಭಿಸುವಂತಾಗಲಿ. ॥ ೮ ॥

ಸತ್ಯಭಾಮೋವಾಚ

ಯೋ ಮೇ ಸನಾಭಿವಧತಪ್ತಹೃದಾ ತತೇನ
ಲಿಪ್ತಾಭಿಶಾಪಮಪಮಾರ್ಷ್ಟುಮುಪಾಜಹಾರ ।
ಜಿತ್ವರ್ಕ್ಷರಾಜಮಥ ರತ್ನಮದಾತ್ಸ ತೇನ
ಭೀತಃ ಪಿತಾದಿಶತ ಮಾಂ ಪ್ರಭವೇಽಪಿ ದತ್ತಾಮ್ ॥ ೯ ॥

ಸತ್ಯಭಾಮೆಯು ಹೇಳುತ್ತಾಳೆ - ದ್ರೌಪದಿಯೇ! ನನ್ನ ತಂದೆಯು ತಮ್ಮನಾದ ಪ್ರಸೇನನ ಮೃತ್ಯುವಿನಿಂದಾಗಿ ಬಹಳ ದುಃಖಿತನಾಗಿದ್ದನು. ಆದ್ದರಿಂದ ಅವನು ತಮ್ಮನ ವಧೆಯ ಕಲಂಕವನ್ನು ಭಗವಂತನಿಗೆ ಹಚ್ಚಿದನು. ಆ ಕಲಂಕವನ್ನು ದೂರ ಮಾಡಲಿಕ್ಕಾಗಿ ಭಗವಂತನು ಋಕ್ಷರಾಜ ಜಾಂಬವಂತನನ್ನು ಜಯಿಸಿ ಆ ಸ್ಯಮಂತಕ ರತ್ನವನ್ನು ತಂದು ನನ್ನ ತಂದೆಗೆ ಕೊಟ್ಟನು. ಮಿಥ್ಯಾಪವಾದ ಹೊರಿಸಿದ ಕಾರಣದಿಂದ ಹೆದರಿಹೋಗಿದ್ದ ನನ್ನ ತಂದೆಯು ಬೇರೆಯವರಿಗೆ ವಾಗ್ದಾನಮಾಡಿದ್ದರೂ, ಅವರು ನನ್ನನ್ನು ಸ್ಯಮಂತಕ ಮಣಿಯೊಂದಿಗೆ ಭಗವಂತನ ಚರಣಗಳಲ್ಲಿ ಅರ್ಪಿಸಿದನು. ॥ ೯ ॥

ಜಾಂಬವತ್ಯುವಾಚ

ಪ್ರಾಜ್ಞಾಯ ದೇಹಕೃದಮುಂ ನಿಜನಾಥದೈವಂ
ಸೀತಾಪತಿಂ ತ್ರಿನವಹಾನ್ಯಮುನಾಭ್ಯಯುಧ್ಯತ್ ।
ಜ್ಞಾತ್ವಾ ಪರೀಕ್ಷಿತ ಉಪಾಹರದರ್ಹಣಂ ಮಾಂ
ಪಾದೌ ಪ್ರಗೃಹ್ಯ ಮಣಿನಾಹಮಮುಷ್ಯ ದಾಸೀ ॥ ೧೦ ॥

ಜಾಂಬವತಿಯು ಹೇಳುತ್ತಾಳೆ – ಪಾಂಚಾಲಿಯೇ! ಋಕ್ಷರಾಜನಾದ ನನ್ನ ತಂದೆ ಜಾಂಬವಂತನಿಗೆ ಶ್ರೀಕೃಷ್ಣನು ತನ್ನ ಸ್ವಾಮಿಯಾದ ಸೀತಾಪತಿ ಶ್ರೀರಾಮನೇ ಎಂಬುದು ಮೊದಲು ತಿಳಿದಿರಲಿಲ್ಲ. ಇದರಿಂದ ನನ್ನ ತಂದೆಯು ಇವರೊಂದಿಗೆ ಇಪ್ಪತ್ತೇಳು ದಿನಗಳವರೆಗೆ ಯುದ್ಧಮಾಡಿದನು. ಆದರೆ ಪರೀಕ್ಷೆಯು ಪೂರ್ಣಗೊಂಡಾಗ ಇವನು ಭಗವಾನ್ ಶ್ರೀರಾಮನೇ ಆಗಿರುವನು ಎಂದು ತಿಳಿದಾಗ ಶ್ರೀಕೃಷ್ಣನ ಚರಣಕಮಲಗಳನ್ನು ಹಿಡಿದುಕೊಂಡು ಸ್ಯಮಂತಕ ಮಣಿಯೊಂದಿಗೆ ಕಾಣಿಕೆಯಾಗಿ ನನ್ನನ್ನೂ ಸಮರ್ಪಿಸಿದನು. ಜನ್ಮ-ಜನ್ಮಗಳಲ್ಲಿಯೂ ಇವರ ದಾಸಿಯಾಗಿಯೇ ಇರಬೇಕೆಂದು ನಾನೂ ಬಯಸಿದ್ದೆ. ॥ ೧೦ ॥

ಕಾಲಿಂದ್ಯುವಾಚ

ತಪಶ್ಚರಂತೀಮಾಜ್ಞಾಯ ಸ್ವಪಾದಸ್ಪರ್ಶನಾಶಯಾ ।
ಸಖ್ಯೋಪೇತ್ಯಾಗ್ರಹೀತ್ಪಾಣಿಂ ಯೋಽಹಂ ತದ್ಗೃಹಮಾರ್ಜನೀ ॥ ೧೧ ॥

ಕಾಲಿಂದಿಯು ಹೇಳುತ್ತಾಳೆ – ದ್ರೌಪದೀದೇವಿ! ನಾನು ಭಗವಂತನ ಚರಣಗಳನ್ನು ಸ್ಪರ್ಶಿಸಬೇಕೆಂಬ ಅಭಿಲಾಷೆಯಿಂದ ತಪಸ್ಸು ಮಾಡುತ್ತಿದ್ದೇನೆ ಎಂದು ತಿಳಿದ ಶ್ರೀಕೃಷ್ಣನು ತನ್ನ ಮಿತ್ರನಾದ ಅರ್ಜುನನೊಂದಿಗೆ ಯಮುನಾತೀರಕ್ಕೆ ಬಂದು ನನ್ನನ್ನು ಪರಿಗ್ರಹಿಸಿದನು. ನಾನು ಅವನ ಮನೆಯ ಕಸಗುಡಿಸುವ ದಾಸಿಯಾಗಿದ್ದೇನೆ. ॥ ೧೧ ॥

ಮಿತ್ರವಿಂದೋವಾಚ

ಯೋ ಮಾಂ ಸ್ವಯಂವರ ಉಪೇತ್ಯ ವಿಜಿತ್ಯ ಭೂಪಾನ್
ನಿನ್ಯೇ ಶ್ವಯೂಥಗಮಿವಾತ್ಮಬಲಿಂ ದ್ವಿಪಾರಿಃ ।
ಭ್ರಾತೄಂಶ್ಚ ಮೇಽಪಕುರುತಃ ಸ್ವಪುರಂ ಶ್ರಿಯೌಕ-
ಸ್ತಸ್ಯಾಸ್ತು ಮೇಽನುಭವಮಂಘ್ರ್ಯವನೇಜನತ್ವಮ್ ॥ ೧೨ ॥

ಮಿತ್ರವಿಂದೆಯು ಹೇಳಿದಳು – ಪಾಂಚಾಲರಾಜಕುಮಾರಿ! ನನ್ನ ಸ್ವಯಂವರವನ್ನು ಏರ್ಪಡಿಸಿದ್ದರು. ಅಲ್ಲಿಗೆ ಬಂದು ಭಗವಂತನು – ಸಿಂಹವು ನಾಯಿಗಳ ಮಧ್ಯದಲ್ಲಿರುವ ತನ್ನ ಭಾಗವನ್ನು ಎತ್ತಿಕೊಂಡು ಹೋಗುವಂತೆಯೇ ಅಲ್ಲಿ ನೆರೆದಿದ್ದ ಸಮಸ್ತ ರಾಜರನ್ನು ಗೆದ್ದು ನನ್ನನ್ನು ತನ್ನ ಶೋಭಾಸಂಪನ್ನ ದ್ವಾರಕೆಗೆ ಕರೆತಂದನು. ನನ್ನ ಸಹೋದರನೂ ಕೂಡ ಭಗವಂತನಿಂದ ಬಿಡಿಸಿ ನನಗೆ ಅಪಕಾರವನ್ನು ಮಾಡಲೆಳಸಿದನು; ಆದರೆ ಅವನೂ ಸೋತು ಹಿಂದಿರುಗಿದನು. ನನಗೆ ಜನ್ಮ-ಜನ್ಮಾಂತರಗಳಲ್ಲಿಯೂ ಭಗವಂತನ ಪಾದಸೇವೆ ಮಾಡುವ ಸೌಭಾಗ್ಯವು ಪ್ರಾಪ್ತವಾಗಲೆಂದೇ ನಾನು ಬಯಸುತ್ತೇನೆ. ॥ ೧೨ ॥

ಸತ್ಯೋವಾಚ

ಸಪ್ತೋಕ್ಷಣೋಽತಿಬಲವೀರ್ಯಸುತೀಕ್ಷ್ಣಶೃಂಗಾನ್
ಪಿತ್ರಾ ಕೃತಾನ್ ಕ್ಷಿತಿಪವೀರ್ಯಪರೀಕ್ಷಣಾಯ ।
ತಾನ್ವೀರದುರ್ಮದಹನಸ್ತರಸಾ ನಿಗೃಹ್ಯ
ಕ್ರೀಡನ್ಬಬಂಧ ಹ ಯಥಾ ಶಿಶವೋಽಜತೋಕಾನ್ ॥ ೧೩ ॥

ಯ ಇತ್ಥಂ ವೀರ್ಯಶುಲ್ಕಾಂ ಮಾಂ ದಾಸೀಭಿಶ್ಚತುರಂಗಿಣೀಮ್ ।
ಪಥಿ ನಿರ್ಜಿತ್ಯ ರಾಜನ್ಯಾನ್ನಿನ್ಯೇ ತದ್ದಾಸ್ಯಮಸ್ತು ಮೇ ॥ ೧೪ ॥

ಸತ್ಯೆಯು ಹೇಳಿದಳು – ದ್ರೌಪದಿ! ನನ್ನ ತಂದೆಯು ಸ್ವಯಂವರಕ್ಕೆ ಆಗಮಿಸುವ ರಾಜಕುಮಾರರ ಬಲ-ಪೌರುಷಗಳನ್ನು ಪರೀಕ್ಷಿಸುವ ಸಲುವಾಗಿ ಬಲಿಷ್ಠವಾಗಿದ್ದ, ಪರಾಕ್ರಮಿಗಳಾದ ಮತ್ತು ತೀಕ್ಷ್ಣವಾದ ಕೊಂಬುಗಳಿಂದ ಭಯಂಕರವಾಗಿ ಕಾಣುತ್ತಿದ್ದ ಏಳು ಹೋರಿಗಳನ್ನು ಸಿದ್ಧಗೊಳಿಸಿದ್ದನು. ಆ ಹೋರಿಗಳನ್ನು ಪಳಗಿಸಿದವನಿಗೆ ನನ್ನನ್ನು ಕೊಡುವುದಾಗಿ ನನ್ನ ತಂದೆಯ ಆಶಯವಾಗಿತ್ತು. ನನ್ನ ಕೈಹಿಡಿಯಲು ಬಂದಿದ್ದ ಹಲವಾರು ರಾಜಕುಮಾರರನ್ನು ಆ ಹೋರಿಗಳು ಛಿನ್ನ-ಭಿನ್ನಗೊಳಿಸಿದ್ದವು. ಆದರೆ ನನ್ನ ಪ್ರಭುವಾದ ಶ್ರೀಕೃಷ್ಣನು ಆ ಏಳು ಹೋರಿಗಳನ್ನು – ಬಾಲಕರು ಮೇಕೆಯ ಮರಿಗಳನ್ನು ಹಿಡಿದು ಕಟ್ಟಿಹಾಕುವಂತೆ ಆಟವಾಡುತ್ತಲೇ ಬಂಧಿಸಿಬಿಟ್ಟನು. ॥ ೧೩ ॥ ಹೀಗೆ ಭಗವಂತನು ಬಲ-ಪೌರುಷಗಳಿಂದ ನನ್ನನ್ನು ಪಡೆದುಕೊಂಡು ಚತುರಂಗ ಸೈನ್ಯದೊಂದಿಗೆ ಮತ್ತು ಹಲವಾರು ದಾಸಿಯರೊಂದಿಗೆ ದ್ವಾರಕೆಗೆ ಕರೆತಂದನು. ದಾರಿಯಲ್ಲಿ ವಿಘ್ನವನ್ನೊಡ್ಡಿದ ರಾಜರನ್ನು ಸೋಲಿಸಿಬಿಟ್ಟನು. ನನಗೆ ಅವನ ಸೇವೆಯ ಸೌಭಾಗ್ಯವು ಸದಾ-ಸರ್ವಕಾಲಗಳಲ್ಲಿ ದೊರೆಯುತ್ತಿರಬೇಕೆಂಬುದೇ ನನ್ನ ಬಯಕೆಯಾಗಿದೆ. ॥ ೧೪ ॥

ಭದ್ರೋವಾಚ

ಪಿತಾ ಮೇ ಮಾತುಲೇಯಾಯ ಸ್ವಯಮಾಹೂಯ ದತ್ತವಾನ್ ।
ಕೃಷ್ಣೇ ಕೃಷ್ಣಾಯ ತಚ್ಚಿತ್ತಾಮಕ್ಷೌಹಿಣ್ಯಾ ಸಖೀಜನೈಃ ॥ ೧೫ ॥

ಅಸ್ಯ ಮೇ ಪಾದಸಂಸ್ಪರ್ಶೋ ಭವೇಜ್ಜನ್ಮನಿ ಜನ್ಮನಿ ।
ಕರ್ಮಭಿರ್ಭ್ರಾಮ್ಯಮಾಣಾಯಾ ಯೇನ ತಚ್ಛ್ರೇಯ ಆತ್ಮನಃ ॥ ೧೬ ॥

ಲಕ್ಷ್ಮಣೋವಾಚ

ಮಮಾಪಿ ರಾಜ್ಞ್ಯಚ್ಯುತಜನ್ಮಕರ್ಮ
ಶ್ರುತ್ವಾ ಮುಹುರ್ನಾರದಗೀತಮಾಸ ಹ ।
ಚಿತ್ತಂ ಮುಕುಂದೇ ಕಿಲ ಪದ್ಮಹಸ್ತಯಾ
ವೃತಃ ಸುಸಂಮೃಶ್ಯ ವಿಹಾಯ ಲೋಕಪಾನ್ ॥ ೧೭ ॥

ಜ್ಞಾತ್ವಾ ಮಮ ಮತಂ ಸಾಧ್ವಿ ಪಿತಾ ದುಹಿತೃವತ್ಸಲಃ ।
ಬೃಹತ್ಸೇನ ಇತಿ ಖ್ಯಾತಸ್ತತ್ರೋಪಾಯಮಚೀಕರತ್ ॥ ೧೮ ॥

ಯಥಾ ಸ್ವಯಂವರೇ ರಾಜ್ಞಿ ಮತ್ಸ್ಯಃ ಪಾರ್ಥೇಪ್ಸಯಾ ಕೃತಃ ।
ಅಯಂ ತು ಬಹಿರಾಚ್ಛನ್ನೋ ದೃಶ್ಯತೇ ಸ ಜಲೇ ಪರಮ್ ॥ ೧೯ ॥

ಶ್ರುತ್ವೈತತ್ಸರ್ವತೋ ಭೂಪಾ ಆಯಯುರ್ಮತ್ಪಿತುಃ ಪುರಮ್ ।
ಸರ್ವಾಸ್ತ್ರಶಸ್ತ್ರತತ್ತ್ವಜ್ಞಾಃ ಸೋಪಾಧ್ಯಾಯಾಃ ಸಹಸ್ರಶಃ ॥ ೨೦ ॥

ಪಿತ್ರಾ ಸಂಪೂಜಿತಾಃ ಸರ್ವೇ ಯಥಾವೀರ್ಯಂ ಯಥಾವಯಃ ।
ಆದದುಃ ಸಶರಂ ಚಾಪಂ ವೇದ್ಧುಂ ಪರ್ಷದಿ ಮದ್ಧಿಯಃ ॥ ೨೧ ॥

ಆದಾಯ ವ್ಯಸೃಜನ್ ಕೇಚಿತ್ಸಜ್ಯಂ ಕರ್ತುಮನೀಶ್ವರಾಃ ।
ಆಕೋಷ್ಠಂ ಜ್ಯಾಂ ಸಮುತ್ಕೃಷ್ಯ ಪೇತುರೇಕೇಽಮುನಾ ಹತಾಃ ॥ ೨೨ ॥

ಸಜ್ಯಂ ಕೃತ್ವಾ ಪರೇ ವೀರಾ ಮಾಗಧಾಂಬಷ್ಠಚೇದಿಪಾಃ ।
ಭೀಮೋ ದುರ್ಯೋಧನಃ ಕರ್ಣೋ ನಾವಿಂದಂಸ್ತದವಸ್ಥಿತಿಮ್ ॥ ೨೩ ॥

ಭದ್ರೆಯು ಹೇಳಿದಳು - ದ್ರುಪದನಂದಿನಿ! ಭಗವಾನ್ ಶ್ರೀಕೃಷ್ಣನು ನನ್ನ ಸಹೋದರಮಾವನ ಮಗನು. ನನ್ನ ಚಿತ್ತವು ಅವರ ಚರಣಗಳಲ್ಲೇ ಅನುರಕ್ತವಾಗಿ ಹೋಗಿತ್ತು. ನನ್ನ ತಂದೆಯವರಿಗೆ ಈ ವಿಷಯ ತಿಳಿದಾಗ ಅವರು ಸ್ವತಃ ಭಗವಂತನನ್ನು ಕರೆಸಿ ಅನೇಕ ಅಕ್ಷೌಹಿಣೀ ಸೈನ್ಯ ಮತ್ತು ಬಹಳಷ್ಟು ದಾಸಿಯರೊಂದಿಗೆ ನನ್ನನ್ನು ಇವರ ಚರಣಗಳಲ್ಲಿ ಸಮರ್ಪಿಸಿದನು. ॥ ೧೫ ॥ ನಾನು ಮಾಡಿದ ಕರ್ಮಕ್ಕನುಸಾರ ನನಗೆ ಎಲ್ಲೆ ಹುಟ್ಟಬೇಕಾಗಿ ಬಂದರೂ ಎಲ್ಲಾ ಕಡೆಗಳಲ್ಲಿಯೂ ಶ್ರೀಕೃಷ್ಣನ ಚರಣಕಮಲಗಳ ಸಂಸ್ಪರ್ಶವೇ ದೊರೆಯುತ್ತಿರಲಿ. ಇದರಲ್ಲೇ ನನ್ನ ಶ್ರೇಯಸ್ಸಿದೆ ಎಂದು ತಿಳಿಯುತ್ತೇನೆ. ॥ ೧೬ ॥

ಲಕ್ಷ್ಮಣೆಯು ಹೇಳುತ್ತಾಳೆ - ಮಹಾರಾಣಿ! ದೇವರ್ಷಿ ನಾರದರು ಪದೇ-ಪದೇ ಭಗವಂತನ ಅವತಾರ, ಲೀಲಾಪ್ರಸಂಗಗಳನ್ನು ಹಾಡುತ್ತಾ ಇರುತ್ತಾರೆ. ಲಕ್ಷ್ಮೀದೇವಿಯು ಸಮಸ್ತ ಲೋಕಪಾಲರನ್ನು ತ್ಯಜಿಸಿ ಭಗವಂತನನ್ನೇ ವರಿಸಿದಳು; ಇದನ್ನು ಕೇಳಿದ ನಾನೂ ಭಗವಂತನನ್ನೇ ಸೇರಬೇಕೆಂದು ವಿಚಾರಮಾಡಿ ನನ್ನ ಮನಸ್ಸೂ ಭಗವಂತನ ಚರಣಗಳಲ್ಲಿ ಆಸಕ್ತವಾಯಿತು. ॥ ೧೭ ॥ ಸಾಧ್ವಿ! ನನ್ನ ತಂದೆಯಾದ ಬೃಹತ್ಸೇನನು ನನ್ನನ್ನು ತುಂಬಾ ಪ್ರೀತಿಸುತ್ತಿದ್ದನು. ನನ್ನ ಅಭಿಪ್ರಾಯವು ಅವನಿಗೆ ತಿಳಿಸಿದಾಗ ಅವನು ನನ್ನ ಇಚ್ಛೆಯನ್ನು ನೆರವೇರಿಸಲು ಹೀಗೆ ಉಪಾಯಮಾಡಿದನು. ॥ ೧೮ ॥ ದ್ರೌಪದಿಯೇ! ಪಾಂಡವವೀರನಾದ ಅರ್ಜುನನನ್ನು ಆರಿಸಿಕೊಳ್ಳಲು ನಿನ್ನ ತಂದೆಯು ಸ್ವಯಂವರದಲ್ಲಿ ಮತ್ಸ್ಯಯಂತ್ರವನ್ನು ಇರಿಸಿದ್ದನೋ ಹಾಗೆಯೇ ನನ್ನ ತಂದೆಯೂ ಮಾಡಿದರು. ಆದರೆ ನಿಮ್ಮ ಮತ್ಸ್ಯಯಂತ್ರಕ್ಕಿಂತ ನಮ್ಮದು ವಿಶಿಷ್ಟವಾಗಿತ್ತು. ನಿಮ್ಮಲ್ಲಿ ಮತ್ಸ್ಯವು ಹೊರಗಿನಿಂದ ಕಂಡುಬಂದರೆ ನಮ್ಮದು ಹೊರಗಿಂದ ಮುಚ್ಚಲ್ಪಟ್ಟು ಅದರ ನೆರಳು ಕೆಳಗಿನ ನೀರಿನಲ್ಲಿ ಮಾತ್ರ ಕಾಣುತ್ತಿತ್ತು. ॥ ೧೯ ॥ ಈ ಸಮಾಚಾರವು ರಾಜರಿಗೆ ತಿಳಿದಾಗ ಎಲ್ಲ ಕಡೆಗಳಿಂದ ಸಾವಿರಾರು ಅಸ್ತ್ರ-ಶಸ್ತ್ರಗಳ ತಜ್ಞರಾದ ರಾಜರು ತಮ್ಮ-ತಮ್ಮ ಗುರುಗಳೊಂದಿಗೆ ನಮ್ಮ ತಂದೆಯ ರಾಜಧಾನಿಗೆ ಆಗಮಿಸಿದರು. ॥ ೨೦ ॥ ನನ್ನ ತಂದೆಯವರು ಬಂದಿರುವ ರಾಜರೆಲ್ಲರ ಬಲ-ಪೌರುಷ, ವಯಸ್ಸಿಗೆ ತಕ್ಕಂತೆ ಯಥೋಚಿತವಾಗಿ ಸ್ವಾಗತ-ಸತ್ಕಾರವನ್ನು ಮಾಡಿದರು. ಬಂದವರು ನನ್ನನ್ನು ಪಡೆದುಕೊಳ್ಳಲೋಸುವ ಸ್ವಯಂವರ ಸಭೆಯಲ್ಲಿ ಇಟ್ಟ ಧನುರ್ಬಾಣಗಳನ್ನು ಎತ್ತಿಕೊಂಡರು. ॥ ೨೧ ॥ ಅವರಲ್ಲಿ ಎಷ್ಟೋ ರಾಜರು ಧನುಸ್ಸಿಗೆ ಹೆದೆಯೇರಿಸದೇ ಹೋದರು. ಅವರು ಧನುಸ್ಸನ್ನು ಹಾಗೆಯೇ ಇಟ್ಟುಬಿಟ್ಟರು. ಕೆಲವರು ಹೆದೆಯೇರಿಸುವಾಗ ನಾಣನ್ನು ಇನ್ನೊಂದು ತುದಿಗೆ ಬಿಗಿಯಬೇಕೆನ್ನುವಷ್ಟರಲ್ಲಿ ಕೈಜಾರಿ ಬಿದ್ದುಬಿಟ್ಟರು. ॥ ೨೨ ॥ ಮಹಾರಾಣಿ! ಜರಾಸಂಧ, ಅಂಬಷ್ಠನರೇಶ, ಶಿಶುಪಾಲ, ಭೀಮಸೇನ, ದುರ್ಯೋಧನ, ಕರ್ಣ ಮೊದಲಾದ ಮಹಾ-ಮಹಾ ಪ್ರಸಿದ್ಧ ವೀರರು ಹೆದೆಯೇನೋ ಏರಿಸಿದರು. ಆದರೆ ಅವರಿಗೆ ಮೀನಿನ ಲಕ್ಷ್ಯವು ತಿಳಿಯದೇ ಹೋಯಿತು. ॥ ೨೩ ॥

ಮತ್ಸ್ಯಾಭಾಸಂ ಜಲೇ ವೀಕ್ಷ್ಯ ಜ್ಞಾತ್ವಾ ಚ ತದವಸ್ಥಿತಿಮ್ ।
ಪಾರ್ಥೋ ಯತ್ತೋಽಸೃಜದ್ಬಾಣಂ ನಾಚ್ಛಿನತ್ಪಸ್ಪೃಶೇ ಪರಮ್ ॥ ೨೪ ॥

ರಾಜನ್ಯೇಷು ನಿವೃತ್ತೇಷು ಭಗ್ನಮಾನೇಷು ಮಾನಿಷು ।
ಭಗವಾನ್ ಧನುರಾದಾಯ ಸಜ್ಯಂ ಕೃತ್ವಾಥ ಲೀಲಯಾ ॥ ೨೫ ॥

ತಸ್ಮಿನ್ಸಂಧಾಯ ವಿಶಿಖಂ ಮತ್ಸ್ಯಂ ವೀಕ್ಷ್ಯ ಸಕೃಜ್ಜಲೇ ।
ಛಿತ್ತ್ವೇಷುಣಾಪಾತಯತ್ತಂ ಸೂರ್ಯೇ ಚಾಭಿಜಿತಿ ಸ್ಥಿತೇ ॥ ೨೬ ॥

ದಿವಿ ದುಂದುಭಯೋ ನೇದುರ್ಜಯಶಬ್ದಯುತಾ ಭುವಿ ।
ದೇವಾಶ್ಚ ಕುಸುಮಾಸಾರಾನ್ಮುಮುಚುರ್ಹರ್ಷವಿಹ್ವಲಾಃ ॥ ೨೭ ॥

ತದ್ರಂಗಮಾವಿಶಮಹಂ ಕಲನೂಪುರಾಭ್ಯಾಂ
ಪದ್ಭ್ಯಾಂ ಪ್ರಗೃಹ್ಯ ಕನಕೋಜ್ಜ್ವಲರತ್ನಮಾಲಾಮ್ ।
ನೂತ್ನೇ ನಿವೀಯ ಪರಿಧಾಯ ಚ ಕೌಶಿಕಾಗ್ರ್ಯೇ
ಸವ್ರೀಡಹಾಸವದನಾ ಕಬರೀಧೃತಸ್ರಕ್ ॥ ೨೮ ॥

ಉನ್ನೀಯ ವಕ್ತ್ರಮುರುಕುಂತಲಕುಂಡಲತ್ವಿಟ್-
ಗಂಡಸ್ಥಲಂ ಶಿಶಿರಹಾಸಕಟಾಕ್ಷಮೋಕ್ಷೈಃ ।
ರಾಜ್ಞೋ ನಿರೀಕ್ಷ್ಯ ಪರಿತಃ ಶನಕೈರ್ಮುರಾರೇ-
ರಂಸೇಽನುರಕ್ತಹೃದಯಾ ನಿದಧೇ ಸ್ವಮಾಲಾಮ್ ॥ ೨೯ ॥

ತಾವನ್ಮೃದಂಗಪಟಹಾಃ ಶಂಖಭೇರ್ಯಾನಕಾದಯಃ ।
ನಿನೇದುರ್ನಟನರ್ತಕ್ಯೋ ನನೃತುರ್ಗಾಯಕಾ ಜಗುಃ ॥ ೩೦ ॥

ಏವಂ ವೃತೇ ಭಗವತಿ ಮಯೇಶೇ ನೃಪಯೂಥಪಾಃ ।
ನ ಸೇಹಿರೇ ಯಾಜ್ಞಸೇನಿ ಸ್ಪರ್ಧಂತೋ ಹೃಚ್ಛಯಾತುರಾಃ ॥ ೩೧ ॥

ಮಾಂ ತಾವದ್ರಥಮಾರೋಪ್ಯ ಹಯರತ್ನಚತುಷ್ಟಯಮ್ ।
ಶಾರ್ಙ್ಗಮುದ್ಯಮ್ಯ ಸನ್ನದ್ಧಸ್ತಸ್ಥಾವಾಜೌ ಚತುರ್ಭುಜಃ ॥ ೩೨ ॥

ಮಧ್ಯಮ ಪಾಂಡವನಾದ ಅರ್ಜುನನು ನೀರಿನಲ್ಲಿ ಮೀನಿನ ನೆರಳನ್ನು ಗುರುತಿಸಿ ಅದೆಲ್ಲಿದೆ ಎಂಬುದನ್ನು ತಿಳಿದುಕೊಂಡನು. ಬಹಳ ಎಚ್ಚರಿಕೆಯಿಂದ ಬಾಣವನ್ನೂ ಪ್ರಯೋಗಿಸಿದನು. ಆದರೆ ಅವನಿಂದಲೂ ಲಕ್ಷ್ಯವೇಧವಾಗದೆ ಈ ಬಾಣವು ಲಕ್ಷ್ಯವನ್ನು ಸ್ಪರ್ಶಿಸಿ ಹೊರಟುಹೋಯಿತು. ॥ ೨೪ ॥

ಮಹಾರಾಣಿ! ಹೀಗೆ ಮಹಾ-ಮಹಾ ಅಭಿಮಾನಿಗಳಾಗಿದ್ದ ರಾಜರು ಭಗ್ನದರ್ಪರಾಗಿ, ಭಗ್ನಮನೋರಥರಾಗಿ ಹಿಂದಿರುಗಿದ ನಂತರ ಉಳಿದವರೂ ನನ್ನನ್ನು ಪಡೆಯಬೇಕೆಂಬ ಆಸೆಯನ್ನು ಮತ್ಸ್ಯಯಂತ್ರಭೇದನದ ಪ್ರಯತ್ನವನ್ನು ತೊರೆದುಬಿಟ್ಟರು. ಆಗ ಭಗವಂತನು ಧನುಸ್ಸನ್ನೆತ್ತಿಕೊಂಡು ಆಡುತ್ತಾಡುತ್ತಲೇ ನಿರಾಯಸವಾಗಿ ಹೆದೆಯನ್ನೇರಿಸಿ, ಬಾಣವನ್ನು ಸಂಧಾನಗೈದು ನೀರಿನಲ್ಲಿ ಒಂದೇ ಬಾರಿಗೆ ಮೀನಿನ ನೆರಳನ್ನು ನೋಡಿ ಬಾಣವನ್ನು ಹೂಡಿ ಮೀನನ್ನು ಕೆಳಗೆ ಬೀಳಿಸಿದನು. ಆ ಸಮಯದಲ್ಲಿ ಸರಿಯಾಗಿ ಮಧ್ಯಾಹ್ನವಾಗಿದ್ದು ಸರ್ವಸಾಧಕ ಅಭಿಜನ್ಮುಹೂರ್ತವಾಗಿತ್ತು. ॥ ೨೫-೨೬ ॥ ದೇವಿಯೇ! ಆಗ ದೇವದುಂದುಭಿಗಳು ಮೊಳಗಿದವು. ಶ್ರೀಕೃಷ್ಣನಿಗೆ ಜಯವಾಗಲಿ ಎಂಬ ಜಯಘೋಷ ಭೂಮಂಡಲದಲ್ಲೆಲ್ಲ ಕೇಳಬರುತ್ತಿತ್ತು. ದೇವತೆಗಳು ಆನಂದ ತುಂದಿಲರಾಗಿ ಹೂವಿನ ಮಳೆಯನ್ನು ಸುರಿಸಿದರು. ॥ ೨೭ ॥ ಮಹಾರಾಣಿ! ಅದೇ ಸಮಯಕ್ಕೆ ಕಾಲಂದುಗೆಗಳು ಝಣ ಝಣಿಸುತ್ತಾ ನಾನು ಸ್ವಯಂವರ ಮಂಟಪವನ್ನು ಪ್ರವೇಶಿಸಿದೆನು. ನಾನು ನವೀನವಾದ ರೇಷ್ಮೆಸೀರೆಯನ್ನುಟ್ಟಿದ್ದು, ತುರುಬಿಗೆ ಮಲ್ಲಿಗೆಯ ದಂಡೆಯನ್ನು ಮುಡಿದುಕೊಂಡು ಬರುವಾಗ ನನ್ನ ಮುಖದಲ್ಲಿ ಲಜ್ಜಾಮಿಶ್ರವಾದ ಮಂದಹಾಸವು ಮಿನುಗುತ್ತಿತ್ತು. ನಾನು ಕೈಯಲ್ಲಿ ರತ್ನಗಳನ್ನು ಕೋದ ಸ್ವರ್ಣ ಹಾರವನ್ನು ಹಿಡಿದಿದ್ದೆನು. ದ್ರೌಪದಿ! ಆಗ ನನ್ನ ಮುಖಮಂಡಲವು ಮುಂಗುರುಳುಗಳಿಂದಲೂ, ಕಿವಿಗಳ ಮೇಲೆ ಬಿದ್ದ ಕುಂಡಲಗಳ ಪ್ರಭೆಯಿಂದ ಅತ್ಯಂತ ಸುಶೋಭಿತವಾಗಿತ್ತು. ನಾನೊಮ್ಮೆ ಮುಖವೆತ್ತಿ ಚಂದ್ರಕಿರಣದಂತಿರುವ ಶೀತಲ ಓರೆನೋಟದಿಂದ ಸುತ್ತಲೂ ಕುಳಿತಿದ್ದ ರಾಜರ ಕಡೆಗೆ ನೋಡಿ ಮತ್ತೆ ನಿಧಾನವಾಗಿ ಮುನ್ನಡೆದು ಶ್ರೀಕೃಷ್ಣನಲ್ಲೇ ಅನುರಕ್ತವಾದ ಮನಸ್ಸಿನಿಂದ ವರಮಾಲೆಯನ್ನು ಭಗವಂತನ ಕೊರಳಿಗೆ ಹಾಕಿದೆನು. ॥ ೨೮-೨೯ ॥ ನಾನು ವರಮಾಲೆಯನ್ನು ತೊಡಿಸುತ್ತಲೇ ಮೃದಂಗ, ಪಟಹ, ಶಂಖ, ಡೋಲು, ನಗಾರಿ ಮುಂತಾದ ಮಂಗಳವಾದ್ಯಗಳು ಮೊಳಗಿದವು. ನಟ ನರ್ತಕಿಯರು ನೃತ್ಯಮಾಡತೊಡಗಿದರು, ಗಾಯಕರು ಕರ್ಣಾನಂದವಾಗಿ ಹಾಡುತ್ತಿದ್ದರು. ॥ ೩೦ ॥

ದ್ರೌಪದಿದೇವಿಯೇ! ನಾನು ಈ ಪ್ರಕಾರವಾಗಿ ಸರ್ವೇಶ್ವರನಾದ ಶ್ರೀಕೃಷ್ಣನ ಕೊರಳಿಗೆ ವರಮಾಲೆಯನ್ನು ತೊಡಿಸಿ ವರಿಸಿಕೊಂಡಾಗ ಕಾಮಾತುರರಾದ ರಾಜರೆಲ್ಲರೂ ಸಹಿಸಲಾರದೆ ಮತ್ಸರಗೊಂಡು ಕೆರಳಿನಿಂತರು. ॥ ೩೧ ॥ ಚತುರ್ಭುಜನಾದ ಭಗವಂತನು ಶ್ರೇಷ್ಠವಾದ ನಾಲ್ಕು ಕುದುರೆಗಳನ್ನು ಹೂಡಿದ್ದ ರಥದಲ್ಲಿ ನನ್ನನ್ನು ಕುಳ್ಳಿರಿಸಿಕೊಂಡು, ಕವಚವನ್ನು ತೊಟ್ಟು ಕೈಯಲ್ಲಿ ಶಾರ್ಙ್ಗಧನುಸ್ಸನ್ನು ಹಿಡಿದುಕೊಂಡು ಯುದ್ಧಕ್ಕೆ ಸಿದ್ಧನಾಗಿ ನಿಂತನು. ॥ ೩೨ ॥

ದಾರುಕಶ್ಚೋದಯಾಮಾಸ ಕಾಂಚನೋಪಸ್ಕರಂ ರಥಮ್ ।
ಮಿಷತಾಂ ಭೂಭುಜಾಂ ರಾಜ್ಞಿ ಮೃಗಾಣಾಂ ಮೃಗರಾಡಿವ ॥ ೩೩ ॥

ತೇಽನ್ವಸಜ್ಜಂತ ರಾಜನ್ಯಾ ನಿಷೇದ್ಧುಂ ಪಥಿ ಕೇಚನ ।
ಸಂಯತ್ತಾ ಉದ್ಧೃತೇಷ್ವಾಸಾ ಗ್ರಾಮಸಿಂಹಾ ಯಥಾ ಹರಿಮ್ ॥ ೩೪ ॥

ತೇ ಶಾರ್ಙ್ಗಚ್ಯುತಬಾಣೌಘೈಃ ಕೃತ್ತಬಾಹ್ವಂಘ್ರಿಕಂಧರಾಃ ।
ನಿಪೇತುಃ ಪ್ರಧನೇ ಕೇಚಿದೇಕೇ ಸಂತ್ಯಜ್ಯ ದುದ್ರುವುಃ ॥ ೩೫ ॥

ತತಃ ಪುರೀಂ ಯದುಪತಿರತ್ಯಲಂಕೃತಾಮ್
ರವಿಚ್ಛದಧ್ವಜಪಟಚಿತ್ರತೋರಣಾಮ್ ।
ಕುಶಸ್ಥಲೀಂ ದಿವಿ ಭುವಿ ಚಾಭಿಸಂಸ್ತುತಾಂ
ಸಮಾವಿಶತ್ತರಣಿರಿವ ಸ್ವಕೇತನಮ್ ॥ ೩೬ ॥

ಪಿತಾ ಮೇ ಪೂಜಯಾಮಾಸ ಸುಹೃತ್ಸಂಬಂಧಿ ಬಾಂಧವಾನ್ ।
ಮಹಾರ್ಹವಾಸೋಽಲಂಕಾರೈಃ ಶಯ್ಯಾಸನಪರಿಚ್ಛದೈಃ ॥ ೩೭ ॥

ದಾಸೀಭಿಃ ಸರ್ವಸಂಪದ್ಭಿರ್ಭಟೇಭರಥವಾಜಿಭಿಃ ।
ಆಯುಧಾನಿ ಮಹಾರ್ಹಾಣಿ ದದೌ ಪೂರ್ಣಸ್ಯ ಭಕ್ತಿತಃ ॥ ೩೮ ॥

ಆತ್ಮಾರಾಮಸ್ಯ ತಸ್ಯೇಮಾ ವಯಂ ವೈ ಗೃಹದಾಸಿಕಾಃ ।
ಸರ್ವಸಂಗನಿವೃತ್ತ್ಯಾದ್ಧಾ ತಪಸಾ ಚ ಬಭೂವಿಮ ॥ ೩೯ ॥

ಮಹಿಷ್ಯ ಊಚುಃ

ಭೌಮಂ ನಿಹತ್ಯ ಸಗಣಂ ಯುಧಿ ತೇನ ರುದ್ಧಾ
ಜ್ಞಾತ್ವಾಥ ನಃ ಕ್ಷಿತಿಜಯೇ ಜಿತರಾಜಕನ್ಯಾಃ ।
ನಿರ್ಮುಚ್ಯ ಸಂಸೃತಿವಿಮೋಕ್ಷಮನುಸ್ಮರಂತೀಃ
ಪಾದಾಂಬುಜಂ ಪರಿಣಿನಾಯ ಯ ಆಪ್ತಕಾಮಃ ॥ ೪೦ ॥

ಮಹಾರಾಣಿಯೇ! ಸಿಂಹವು ಜಿಂಕೆಗಳ ಗುಂಪಿನ ನಡುವಿನಿಂದ ಹಾದುಹೋಗುವಂತೆ ಶ್ರೀಕೃಷ್ಣನ ಸಾರಥಿಯಾಗಿ ದಾರುಕನು ಸ್ವರ್ಣಮಯ ಸಾಮಗ್ರಿಗಳಿಂದ ಸುಸಜ್ಜಿತವಾದ ದಿವ್ಯರಥವನ್ನು ರಾಜರುಗಳು ನೋಡುತ್ತಿರುವಂತೆ ಮುನ್ನುಗ್ಗಿಸಿದನು. ॥ ೩೩ ॥ ಸ್ಪರ್ಧಿಸಲು ಹೊರಟಿದ್ದ ರಾಜರಲ್ಲಿ ಕೆಲವರು ಆಯುಧಗಳನ್ನು ಧರಿಸಿ ಯುದ್ಧಸನ್ನದ್ಧರಾಗಿ ಸಿಂಹವನ್ನು ಗ್ರಾಮಸಿಂಹ (ನಾಯಿಗಳು)ಗಳು ಹಿಂಬಾಲಿಸುವಂತೆ ನಾವು ಕುಳಿತಿದ್ದ ರಥವನ್ನು ಹಿಂಬಾಲಿಸಿದರು. ॥ ೩೪ ॥ ಶ್ರೀಕೃಷ್ಣನು ರಥವನ್ನು ನಿಲ್ಲಿಸಿ ಅವರೊಡನೆ ಯುದ್ಧಮಾಡತೊಡಗಿದನು. ಶಾರ್ಙ್ಗಧನುಸ್ಸಿನಿಂದ ಹೊರಟ ಬಾಣಗಳಿಂದ ಹಲವು ರಾಜರ ತೋಳುಗಳು, ತೊಡೆಗಳು, ಕುತ್ತಿಗೆಗಳೂ ಕತ್ತರಿಸಲ್ಪಟ್ಟು ಕೆಳಕ್ಕೆ ಬಿದ್ದವು. ಕೆಲವು ಧರಾಶಾಯಿಗಳಾದರು. ಅಳಿದುಳಿದ ಕೆಲವರು ರಣರಂಗದಿಂದ ಪಲಾಯನ ಮಾಡಿದರು. ॥ ೩೫ ॥

ಅನಂತರ ಸೂರ್ಯನನ್ನು ಮರೆಮಾಡುವ ಧ್ವಜ-ಪತಾಕೆಗಳಿಂದಲೂ, ಚಿತ್ರ-ವಿಚಿತ್ರವಾದ ತೋರಣಗಳಿಂದ ಅತಿಶಯವಾಗಿ ಅಲಂಕರಿಸಲ್ಪಟ್ಟಿದ್ದ ಸ್ವರ್ಗದಲ್ಲಿಯೂ, ಭೂಮಿಯಲ್ಲಿಯೂ ಪ್ರಶಂಸಿತವಾದ ಕುಶಸ್ಥಲಿಯನ್ನು (ದ್ವಾರಕೆಯನ್ನು) ಸೂರ್ಯನಂತೆ ಯದುವಂಶ ಶಿರೋಮಣಿಯಾದ ಶ್ರೀಕೃಷ್ಣನು ಪ್ರವೇಶಿಸಿದನು. ॥ ೩೬ ॥ ನನ್ನ ಮನೋರಥವು ಪೂರ್ಣಗೊಂಡಿದ್ದರಿಂದ ನನ್ನ ತಂದೆಯವರಿಗೆ ಬಹಳ ಸಂತೋಷವಾಯಿತು. ಅವನು ತನ್ನ ಹಿತೈಷಿ ಸುಹೃದರನ್ನು ಬಂಧು-ಬಾಂಧವರನ್ನು, ಜ್ಞಾತಿ ಬಂಧುಗಳನ್ನು ಬಹುಮೂಲ್ಯ ವಸ್ತ್ರಭೂಷಣ, ಶಯ್ಯೆ ಆಸನ ಮೊದಲಾದ ವಿವಿಧ ಸಾಮಗ್ರಿಗಳನ್ನು ಕೊಟ್ಟು ಸನ್ಮಾನಿಸಿದನು. ॥ ೩೭ ॥ ಭಗವಂತನು ಪರಿಪೂರ್ಣನಾಗಿದ್ದರೂ ನನ್ನ ತಂದೆಯು ಅವನಿಗೆ ಅನೇಕ ದಾಸಿಯರನ್ನು, ಅತುಲಸಂಪತ್ತನ್ನೂ, ಚತುರಂಗ ಸೈನ್ಯವನ್ನು ಬಹುಮೂಲ್ಯ ಶಸ್ತ್ರಾಸ್ತ್ರಗಳನ್ನು ಬಳುವಳಿಯಾಗಿ ಸಮರ್ಪಿಸಿದನು. ॥ ೩೮ ॥ ಮಹಾರಾಣಿ! ನಾವು ಹಿಂದಿನ ಜನ್ಮದಲ್ಲಿ ಎಲ್ಲದರ ಆಸಕ್ತಿಯನ್ನು ತ್ಯಜಿಸಿ ಯಾವುದೋ ಮಹತ್ತರ ತಪಸ್ಸು ಮಾಡಿದ್ದಿರಬೇಕು; ಆದರಿಂದಲೇ ನಮಗೆ ಈ ಜನ್ಮದಲ್ಲಿ ಆತ್ಮಾರಾಮನಾದ ಭಗವಂತನ ದಾಸಿಯರಾಗಿರುವ ಸೌಭಾಗ್ಯವು ದೊರೆಯಿತು. ॥ ೩೯ ॥

ಹದಿನಾರು ಸಾವಿರ ಪತ್ನಿಯರ ಪರವಾಗಿ ರೋಹಿಣಿಯು ಹೇಳುತ್ತಾಳೆ - ದ್ರೌಪದಿಯೇ! ಭೌಮಾಸುರನು ದಿಗ್ವಿಜಯದ ಸಮಯದಲ್ಲಿ ಬಹಳಷ್ಟು ರಾಜರನ್ನು ಗೆದ್ದು ಅವರ ಕನ್ಯೆಯರಾದ ನಮ್ಮನ್ನು ಕಾರಾಗೃಹದಲ್ಲಿ ಇರಿಸಿದ್ದನು. ಇದನ್ನು ತಿಳಿದ ಭಗವಂತನು ಭೌಮಾಸುರನನ್ನು ಮತ್ತು ಅವನ ಸೇನೆಯನ್ನು ಸಂಹರಿಸಿ, ಶ್ರೀಕೃಷ್ಣನು ಪೂರ್ಣಕಾಮನಾಗಿದ್ದರೂ ಅವನು ನಮ್ಮನ್ನು, ಅಲ್ಲಿಂದ ಬಿಡಿಸಿ, ನಮ್ಮ ಪಾಣಿಗ್ರಹಣವನ್ನು ಮಾಡಿ ತನ್ನ ದಾಸಿಯರನ್ನಾಗಿಸಿದನು. ನಾವೆಲ್ಲರೂ ಸದಾಕಾಲ ಜನ್ಮ-ಮೃತ್ಯುರೂಪವಾದ ಸಂಸಾರದಿಂದ ಬಿಡುಗಡೆಹೊಂದಲು ಅವನ ಚರಣಕಮಲಗಳನ್ನೇ ಧ್ಯಾನಿಸುತ್ತಾ ಇದ್ದೆವು. ॥ ೪೦ ॥

ನ ವಯಂ ಸಾಧ್ವಿ ಸಾಮ್ರಾಜ್ಯಂ ಸ್ವಾರಾಜ್ಯಂ ಭೌಜ್ಯಮಪ್ಯುತ ।
ವೈರಾಜ್ಯಂ ಪಾರಮೇಷ್ಠ್ಯಂ ಚ ಆನಂತ್ಯಂ ವಾ ಹರೇಃ ಪದಮ್ ॥ ೪೧ ॥

ಕಾಮಯಾಮಹ ಏತಸ್ಯ ಶ್ರೀಮತ್ಪಾದರಜಃಶ್ರಿಯಃ ।
ಕುಚಕುಂಕುಮಗಂಧಾಢ್ಯಂ ಮೂರ್ಧ್ನಾ ವೋಢುಂ ಗದಾಭೃತಃ ॥ ೪೨ ॥

ವ್ರಜಸ್ತ್ರಿಯೋ ಯದ್ವಾಂಛಂತಿ ಪುಲಿಂದ್ಯಸ್ತೃಣವೀರುಧಃ ।
ಗಾವಶ್ಚಾರಯತೋ ಗೋಪಾಃ ಪಾದಸ್ಪರ್ಶಂ ಮಹಾತ್ಮನಃ ॥ ೪೩ ॥

ಸಾಧ್ವಿಯೇ! ನಮಗೆ ಸಾಮ್ರಾಜ್ಯವಾಗಲೀ (ಚಕ್ರವರ್ತಿ ಪದವಿ), ಸ್ವಾರಾಜ್ಯವಾಗಲೀ (ಇಂದ್ರ ಪದವಿ), ಭೌಜ್ಯವಾಗಲೀ (ತ್ರೈಲೋಕ್ಯಾಧಿಪತ್ಯ), ವೈರಾಜ್ಯವಾಗಲೀ (ಅಣಿಮಾದಿ ಅಷ್ಟ ಸಿದ್ಧಿಗಳು), ಪಾರಮೇಷ್ಠ್ಯವಾಗಲೀ (ಬ್ರಹ್ಮ ಪದವಿ), ಮೋಕ್ಷವಾಗಲೀ, ಅಪೇಕ್ಷಿತವಲ್ಲ. ಶ್ರೀದೇವಿಯ ಕುಚ ಕುಂಕುಮದಿಂದ ಸುಗಂಧಿತವಾದ ಶ್ರೀಕೃಷ್ಣನ ಸುಕೋಮಲವಾದ ಪಾದಾರವಿಂದಗಳ ಧೂಳಿಯನ್ನು ಸದಾ ತಲೆಯಲ್ಲಿ ಧರಿಸಿಕೊಂಡಿರಲು ಬಯಸುತ್ತೇವೆ. ॥ ೪೧-೪೨ ॥ ಜಗದಾನಂದ ಕಂದನಾದ ಶ್ರೀಕೃಷ್ಣನು ಹಸುಗಳನ್ನು ಮೇಯಿಸುವಾಗ ಅವನ ಕಾಲಿನ ಯಾವ ಧೂಳಿಯನ್ನು ಸ್ಪರ್ಶಿಸಬೇಕೆಂದು ಗೊಲ್ಲತಿಯರೂ, ಗೋಪರೂ, ಬೇಡತಿಯರೂ ಅಪೇಕ್ಷಿಸುತ್ತಿದ್ದರೋ, ಹುಲ್ಲು-ಕಡ್ಡಿಗಳೂ ಯಾರ ಪಾದಸ್ಪರ್ಶವನ್ನು ಬಯಸುತ್ತಿದ್ದವೋ, ಹಾಗೆಯೇ ನಾವೂ ಕೂಡ ಅವನ ದಿವ್ಯಪಾದಧೂಳಿಯನ್ನು ತಲೆಯಲ್ಲಿ ಸದಾಕಾಲ ಅಪೇಕ್ಷಿಸುತ್ತೇವೆ. ॥ ೪೩ ॥

ಎಂಭತ್ತಮೂರನೆಯ ಅಧ್ಯಾಯವು ಮುಗಿಯಿತು. ॥ ೮೩ ॥
ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮಸ್ಕಂಧೇ ಉತ್ತರಾರ್ಧೇ ತ್ರ್ಯಶೀತಿತಮೋಽಧ್ಯಾಯಃ ॥ ೮೩ ॥

ಎಂಭತ್ತನಾಲ್ಕನೆಯ ಅಧ್ಯಾಯ

ವಸುದೇವನ ಯಜ್ಞೋತ್ಸವವು

ಶ್ರೀಶುಕ ಉವಾಚ

ಶ್ರುತ್ವಾ ಪೃಥಾ ಸುಬಲಪುತ್ರ್ಯಥ ಯಾಜ್ಞಸೇನೀ
ಮಾಧವ್ಯಥ ಕ್ಷಿತಿಪಪತ್ನ್ಯ ಉತ ಸ್ವಗೋಪ್ಯಃ ।
ಕೃಷ್ಣೇಽಖಿಲಾತ್ಮನಿ ಹರೌ ಪ್ರಣಯಾನುಬಂಧಂ
ಸರ್ವಾ ವಿಸಿಸ್ಮ್ಯುರಲಮಶ್ರುಕಲಾಕುಲಾಕ್ಷ್ಯಃ ॥ ೧ ॥

ಇತಿ ಸಂಭಾಷಮಾಣಾಸು ಸ್ತ್ರೀಭಿಃ ಸ್ತ್ರೀಷು ನೃಭಿರ್ನೃಷು ।
ಆಯಯುರ್ಮುನಯಸ್ತತ್ರ ಕೃಷ್ಣರಾಮದಿದೃಕ್ಷಯಾ ॥ ೨ ॥

ದ್ವೈಪಾಯನೋ ನಾರದಶ್ಚ ಚ್ಯವನೋ ದೇವಲೋಽಸಿತಃ ।
ವಿಶ್ವಾಮಿತ್ರಃ ಶತಾನಂದೋ ಭರದ್ವಾಜೋಽಥ ಗೌತಮಃ ॥ ೩ ॥

ರಾಮಃ ಸಶಿಷ್ಯೋ ಭಗವಾನ್ ವಸಿಷ್ಠೋ ಗಾಲವೋ ಭೃಗುಃ ।
ಪುಲಸ್ತ್ಯಃ ಕಶ್ಯಪೋಽತ್ರಿಶ್ಚ ಮಾರ್ಕಂಡೇಯೋ ಬೃಹಸ್ಪತಿಃ ॥ ೪ ॥

ದ್ವಿತಸ್ತ್ರಿತಶ್ಚೈಕತಶ್ಚ ಬ್ರಹ್ಮಪುತ್ರಾಸ್ತಥಾಂಗಿರಾಃ ।
ಅಗಸ್ತ್ಯೋ ಯಾಜ್ಞವಲ್ಕ್ಯಶ್ಚ ವಾಮದೇವಾದಯೋಽಪರೇ ॥ ೫ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿದ್ರಾಜನೇ! ಸರ್ವಾತ್ಮನಾದ ಭಕ್ತಜನ ಭಯಾಪಹಾರಿಯಾದ ಭಗವಾನ್ ಶ್ರೀಕೃಷ್ಣನ ಕುರಿತು ಅವರ ಪತ್ನಿಯರಿಗೆ ಇರುವ ಪ್ರೇಮಾನುಬಂಧವನ್ನು ಅವರ ಬಾಯಿಯಿಂದಲೇ ಕೇಳಿದ ಕುಂತೀ, ಗಾಂಧಾರಿ, ದ್ರೌಪದಿ, ಸುಭದ್ರೆ, ಇತರ ರಾಜಪತ್ನಿಯರು ಮತ್ತು ಭಗವಂತನ ಪ್ರಿಯತಮೆಯರಾದ ಗೋಪಿಯರು – ಅವರ ಅಲೌಕಿಕ ಪ್ರೇಮವನ್ನು ನೋಡಿ ಅತ್ಯಂತ ಮುಗ್ಧರಾಗಿ ಅಚ್ಚರಿಗೊಂಡರು. ಎಲ್ಲರ ಕಣ್ಣುಗಳಲ್ಲಿಯೂ ಪ್ರೇಮಾಶ್ರುಗಳು ಸುರಿದವು. ॥ ೧ ॥ ಈ ಪ್ರಕಾರವಾಗಿ ಸ್ತ್ರೀಯರೊಂದಿಗೆ ಸ್ತ್ರೀಯರೂ, ಪುರುಷರೊಂದಿಗೆ ಪುರುಷರೂ ಮಾತನಾಡಿಕೊಂಡಿರುವಾಗಲೇ ಅನೇಕ ಋಷಿ-ಮುನಿಗಳು ಭಗವಾನ್ ಶ್ರೀಕೃಷ್ಣನನ್ನು ಮತ್ತು ಬಲರಾಮನನ್ನು ದರ್ಶನಮಾಡಲು ಅಲ್ಲಿಗೆ ಬಂದರು. ॥ ೨ ॥ ಅವರಲ್ಲಿ ಶ್ರೀಕೃಷ್ಣದ್ವೈಪಾಯನ ವ್ಯಾಸರು, ದೇವರ್ಷಿನಾರದರು, ಚ್ಯವನ, ದೇವಲ, ಅಸಿತ, ವಿಶ್ವಾಮಿತ್ರ, ಶತಾನಂದ, ಭರದ್ವಾಜ, ಗೌತಮ, ತನ್ನ ಶಿಷ್ಯರೊಂದಿಗೆ ಭಗವಾನ್ ಪರಶುರಾಮ, ವಸಿಷ್ಠ, ಗಾಲವ, ಭೃಗು, ಪುಲಸ್ತ್ಯ, ಕಶ್ಯಪ, ಅತ್ರಿ, ಮಾರ್ಕಂಡೇಯ, ಬೃಹಸ್ಪತಿ, ದ್ವಿತ, ತ್ರಿತ, ಏಕತ, ಸನಕ, ಸನಂದನ, ಸನಾತನ, ಸನತ್ಕುಮಾರ, ಅಂಗಿರಸ್ಸು, ಅಗಸ್ತ್ಯ, ಯಾಜ್ಞವಲ್ಕ್ಯ ಮತ್ತು ವಾಮದೇವ – ಇವರು ಪ್ರಧಾನರಾಗಿದ್ದರು. ॥ ೩-೫ ॥

ತಾನ್ ದೃಷ್ಟ್ವಾ ಸಹಸೋತ್ಥಾಯ ಪ್ರಾಗಾಸೀನಾ ನೃಪಾದಯಃ ।
ಪಾಂಡವಾಃ ಕೃಷ್ಣರಾಮೌ ಚ ಪ್ರಣೇಮುರ್ವಿಶ್ವವಂದಿತಾನ್ ॥ ೬ ॥

ತಾನಾನರ್ಚುರ್ಯಥಾ ಸರ್ವೇ ಸಹರಾಮೋಽಚ್ಯುತೋಽರ್ಚಯತ್ ।
ಸ್ವಾಗತಾಸನಪಾದ್ಯಾರ್ಘ್ಯಮಾಲ್ಯಧೂಪಾನುಲೇಪನೈಃ ॥ ೭ ॥

ಉವಾಚ ಸುಖಮಾಸೀನಾನ್ ಭಗವಾನ್ ಧರ್ಮಗುಪ್ವಿಭುಃ ।
ಸದಸಸ್ತಸ್ಯ ಮಹತೋ ಯತವಾಚೋಽನುಶೃಣ್ವತಃ ॥ ೮ ॥

ಶ್ರೀಭಗವಾನುವಾಚ

ಅಹೋ ವಯಂ ಜನ್ಮಭೃತೋ ಲಬ್ಧಂ ಕಾರ್ತ್ಸ್ನ್ಯೇನ ತತ್ಫಲಮ್ ।
ದೇವಾನಾಮಪಿ ದುಷ್ಪ್ರಾಪಂ ಯದ್ಯೋಗೇಶ್ವರದರ್ಶನಮ್ ॥ ೯ ॥

ಕಿಂ ಸ್ವಲ್ಪತಪಸಾಂ ನೃಣಾಮರ್ಚಾಯಾಂ ದೇವಚಕ್ಷುಷಾಮ್ ।
ದರ್ಶನಸ್ಪರ್ಶನಪ್ರಶ್ನಪ್ರಹ್ವಪಾದಾರ್ಚನಾದಿಕಮ್ ॥ ೧೦ ॥

ನ ಹ್ಯಮ್ಮಯಾನಿ ತೀರ್ಥಾನಿ ನ ದೇವಾ ಮೃಚ್ಛಿಲಾಮಯಾಃ ।
ತೇ ಪುನಂತ್ಯುರುಕಾಲೇನ ದರ್ಶನಾದೇವ ಸಾಧವಃ ॥ ೧೧ ॥

ನಾಗ್ನಿರ್ನ ಸೂರ್ಯೋ ನ ಚ ಚಂದ್ರತಾರಕಾ
ನ ಭೂರ್ಜಲಂ ಖಂ ಶ್ವಸನೋಽಥ ವಾಙ್ಮನಃ ।
ಉಪಾಸಿತಾ ಭೇದಕೃತೋ ಹರಂತ್ಯಘಂ
ವಿಪಶ್ಚಿತೋ ಘ್ನಂತಿ ಮುಹೂರ್ತಸೇವಯಾ ॥ ೧೨ ॥

ಯಸ್ಯಾತ್ಮಬುದ್ಧಿಃ ಕುಣಪೇ ತ್ರಿಧಾತುಕೇ
ಸ್ವಧೀಃ ಕಲತ್ರಾದಿಷು ಭೌಮ ಇಜ್ಯಧೀಃ ।
ಯತ್ತೀರ್ಥಬುದ್ಧಿಃ ಸಲಿಲೇ ನ ಕರ್ಹಿಚಿ-
ಜ್ಜನೇಷ್ವಭಿಜ್ಞೇಷು ಸ ಏವ ಗೋಖರಃ ॥ ೧೩ ॥

ಋಷಿಗಳನ್ನು ನೋಡುತ್ತಲೇ ಮೊದಲಿನಿಂದ ಕುಳಿತಿದ್ದ ರಾಜರುಗಳೂ, ಯುಧಿಷ್ಠಿರಾದಿ ಪಾಂಡವರೂ, ಭಗವಾನ್ ಶ್ರೀಕೃಷ್ಣ ಮತ್ತು ಬಲರಾಮರೂ ಎದ್ದು ನಿಂತು ವಿಶ್ವವಂದಿತರಾದ ಋಷಿಗಳಿಗೆ ನಮಸ್ಕರಿಸಿದರು. ॥ ೬ ॥ ಅನಂತರ ಸಮಸ್ತ ರಾಜರೂ, ಬಲರಾಮನೊಂದಿಗೆ ಭಗವಾನ್ ಶ್ರೀಕೃಷ್ಣನೂ ಆ ಋಷಿಗಳೆಲ್ಲರಿಗೂ ಸ್ವಾಗತ, ಆಸನ, ಅರ್ಘ್ಯ, ಪಾದ್ಯ, ಹೂವಿನ ಹಾರ, ಧೂಪ, ಚಂದನಾದಿಗಳಿಂದ ವಿಧಿವತ್ತಾಗಿ ಪೂಜಿಸಿದರು. ॥ ೭ ॥ ಋಷಿ-ಮುನಿಗಳು ಸುಖಾಸನದಲ್ಲಿ ಕುಳಿತನಂತರ, ಸಭಾಸದರೂ ಮೌನದಿಂದ ಕುಳಿತಿರಲಾಗಿ, ಸಮಸ್ತರೂ ಕೇಳುವಂತೆ ಧರ್ಮದ ರಕ್ಷಣೆಗಾಗಿಯೇ ಅವತರಿಸಿದ್ದ ಭಗವಾನ್ ಶ್ರೀಕೃಷ್ಣನು ಇಂತೆಂದನು - ॥ ೮ ॥

ಭಗವಾನ್ ಶ್ರೀಕೃಷ್ಣನು ಹೇಳಿದನು - ಪೂಜ್ಯರಾದ ಋಷಿಶ್ರೇಷ್ಠರೇ! ನಾವಿಂದು ಧನ್ಯರಾದೆವು. ನಮ್ಮ ಜನ್ಮವು ಸಾರ್ಥಕ್ಯವನ್ನು ಹೊಂದಿತು. ಹುಟ್ಟಿನ ಪೂರ್ಣಫಲವನ್ನು ಇಂದು ಪಡೆದಂತಾಯಿತು. ದೊಡ್ಡ-ದೊಡ್ಡ ದೇವತೆಗಳಿಗೂ ಅತ್ಯಂತ ದುರ್ಲಭವಾದ ಮಹಾಯೋಗೇಶ್ವರರ ದರ್ಶನವು ನಮಗೆ ನಿರಾಯಾಸವಾಗಿ ಪ್ರಾಪ್ತವಾಯಿತು. ॥ ೯ ॥ ಸ್ವಲ್ಪವೇ ತಪಸ್ಸು ಮಾಡುವವರಿಗೆ ಮತ್ತು ಇಷ್ಟದೇವತೆಯನ್ನು ಸಮಸ್ತ ಪ್ರಾಣಿಗಳ ಹೃದಯದಲ್ಲಿ ನೋಡದೆ ಕೇವಲ ವಿಗ್ರಹಗಳಲ್ಲೇ ದೇವರನ್ನು ಕಾಣುವವರಿಗೆ ತಮ್ಮಂತಹ ಮಹಾತ್ಮರ ದರ್ಶನ, ಸ್ಪರ್ಶನ, ಕುಶಲಪ್ರಶ್ನೆ, ಪ್ರಣಾಮ, ಪಾದಪೂಜೆ ಮೊದಲಾದವುಗಳ ಸದವಕಾಶ ಹೇಗೆ ತಾನೇ ದೊರೆಯಬಲ್ಲದು? ॥ ೧೦ ॥ ಕೇವಲ ನೀರು ತೀರ್ಥವೆನಿಸುವುದಿಲ್ಲ, ಕೇವಲ ಮಣ್ಣಿನ ಅಥವಾ ಕಲ್ಲಿನ ವಿಗ್ರಹಗಳು ದೇವತೆಗಳಾಗುವುದಿಲ್ಲ. ಸಂತ-ಸತ್ಪುರುಷರೇ ನಿಜವಾಗಿ ತೀರ್ಥರೂಪರು ಮತ್ತು ದೇವತೆಗಳಾಗಿದ್ದಾರೆ. ಏಕೆಂದರೆ, ತೀರ್ಥಗಳು, ದೇವತೆಗಳು ಬಹಳ ಸಮಯದವರೆಗೆ ಸೇವಿಸಿದಾಗಲೇ ಅವು ಪವಿತ್ರವಾಗಿಸಬಲ್ಲವು. ಆದರೆ ಸತ್ಪುರುಷರು ದರ್ಶನಮಾತ್ರದಿಂದಲೇ ಕೃತಾರ್ಥರಾಗಿಸುತ್ತಾರೆ. ॥ ೧೧ ॥ ಅಗ್ನಿ, ಸೂರ್ಯ, ಚಂದ್ರ, ತಾರೆಗಳು, ಪೃಥಿವಿ, ಜಲ, ಆಕಾಶ, ವಾಯು, ವಾಣಿ ಮತ್ತು ಮನಸ್ಸಿನ ಅಧಿಷ್ಠಾತೃ ದೇವತೆಗಳು - ಇವುಗಳ ಉಪಾಸನೆ ಮಾಡಿದರೂ ಪಾಪವು ಪೂರ್ಣವಾಗಿ ನಾಶವಾಗಲಾರದು. ಏಕೆಂದರೆ, ಅವರ ಉಪಾಸನೆಯಿಂದ ಭೇದಬುದ್ಧಿಯು ನಾಶವಾಗದೇ ಇನ್ನೂ ಬೆಳೆಯುತ್ತದೆ. ಆದರೆ ಎರಡು ಗಳಿಗೆಯಾದರೂ ಜ್ಞಾನೀಮಹಾಪುರುಷರ ಸೇವೆ ಮಾಡಿದರೂ ಸಕಲ ಪಾಪಗಳು ಅಳಿದು ಹೋಗುತ್ತವೆ. ಏಕೆಂದರೆ, ಅವರು ಭೇದ-ಬುದ್ಧಿಯ ವಿನಾಶಕರಾಗಿದ್ದಾರೆ. ॥ ೧೨ ॥ ಮಹಾತ್ಮರೇ ಮತ್ತು ಸಭಾಸದರೇ! ಯಾವ ಮನುಷ್ಯರಿಗೆ ವಾತ, ಪಿತ್ತ, ಕಫ - ಈ ಮೂರು ಧಾತುಗಳಿಂದ ಉಂಟಾದ ಶವದಂತಿರುವ ಶರೀರದಲ್ಲೇ ತಾನೆಂಬ ಅಭಿಮಾನವಿರುತ್ತದೋ, ಹೆಂಡತಿ ಮಕ್ಕಳು ಇವರನ್ನೇ ತನ್ನವರೆಂದು ತಿಳಿಯುತ್ತಾರೋ, ಕಲ್ಲು, ಮಣ್ಣು, ಕಟ್ಟಿಗೆ ಮೊದಲಾದ ಪಾರ್ಥಿವ ವಿಕಾರಗಳನ್ನೇ ಇಷ್ಟದೇವರೆಂದು ತಿಳಿಯುತ್ತಾರೋ, ಜ್ಞಾನೀ ಪುರುಷರಲ್ಲದೆ ಕೇವಲ ನೀರನ್ನೇ ತೀರ್ಥವೆಂದು ತಿಳಿಯುತ್ತಾರೋ, ಅಂತಹವರು ಮನುಷ್ಯರಾಗಿದ್ದೂ ಪಶುಗಳಲ್ಲಿಯೂ ನಿಮ್ನ ಕೋಟಿಯವರೇ ಆಗಿದ್ದಾರೆ. ॥ ೧೩ ॥

ಶ್ರೀಶುಕ ಉವಾಚ

ನಿಶಮ್ಯೇತ್ಥಂ ಭಗವತಃ ಕೃಷ್ಣಸ್ಯಾಕುಂಠಮೇಧಸಃ ।
ವಚೋ ದುರನ್ವಯಂ ವಿಪ್ರಾಸ್ತೂಷ್ಣೀಮಾಸನ್ಭ್ರಮದ್ಧಿಯಃ ॥ ೧೪ ॥

ಚಿರಂ ವಿಮೃಶ್ಯ ಮುನಯ ಈಶ್ವರಸ್ಯೇಶಿತವ್ಯತಾಮ್ ।
ಜನಸಂಗ್ರಹ ಇತ್ಯೂಚುಃ ಸ್ಮಯಂತಸ್ತಂ ಜಗದ್ಗುರುಮ್ ॥ ೧೫ ॥

ಮುನಯ ಊಚುಃ

ಯನ್ಮಾಯಯಾ ತತ್ತ್ವವಿದುತ್ತಮಾ ವಯಂ
ವಿಮೋಹಿತಾ ವಿಶ್ವಸೃಜಾಮಧೀಶ್ವರಾಃ ।
ಯದೀಶಿತವ್ಯಾಯತಿ ಗೂಢ ಈಹಯಾ
ಅಹೋ ವಿಚಿತ್ರಂ ಭಗವದ್ವಿಚೇಷ್ಟಿತಮ್ ॥ ೧೬ ॥

ಅನೀಹ ಏತದ್ಬಹುಧೈಕ ಆತ್ಮನಾ
ಸೃಜತ್ಯವತ್ಯತ್ತಿ ನ ಬಧ್ಯತೇ ಯಥಾ ।
ಭೌಮೈರ್ಹಿ ಭೂಮಿರ್ಬಹುನಾಮರೂಪಿಣೀ
ಅಹೋ ವಿಭೂಮ್ನಶ್ಚರಿತಂ ವಿಡಂಬನಮ್ ॥ ೧೭ ॥

ಅಥಾಪಿ ಕಾಲೇ ಸ್ವಜನಾಭಿಗುಪ್ತಯೇ
ಬಿಭರ್ಷಿ ಸತ್ತ್ವಂ ಖಲನಿಗ್ರಹಾಯ ಚ ।
ಸ್ವಲೀಲಯಾ ವೇದಪಥಂ ಸನಾತನಂ
ವರ್ಣಾಶ್ರಮಾತ್ಮಾ ಪುರುಷಃ ಪರೋ ಭವಾನ್ ॥ ೧೮ ॥

ಬ್ರಹ್ಮ ತೇ ಹೃದಯಂ ಶುಕ್ಲಂ ತಪಃಸ್ವಾಧ್ಯಾಯಸಂಯಮೈಃ ।
ಯತ್ರೋಪಲಬ್ಧಂ ಸದ್ವ್ಯಕ್ತಮವ್ಯಕ್ತಂ ಚ ತತಃ ಪರಮ್ ॥ ೧೯ ॥

ತಸ್ಮಾದ್ ಬ್ರಹ್ಮಕುಲಂ ಬ್ರಹ್ಮನ್ ಶಾಸ್ತ್ರಯೋನೇಸ್ತ್ವಮಾತ್ಮನಃ ।
ಸಭಾಜಯಸಿ ಸದ್ಧಾಮ ತದ್ ಬ್ರಹ್ಮಣ್ಯಾಗ್ರಣೀರ್ಭವಾನ್ ॥ ೨೦ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ! ಭಗವಾನ್ ಶ್ರೀಕೃಷ್ಣನು ಅಖಂಡ ಜ್ಞಾನಸಂಪನ್ನನಾಗಿರುವನು. ಅವನ ಈ ಗೂಢವಾದ ಮಾತುಗಳನ್ನು ಕೇಳಿ ಎಲ್ಲ ಋಷಿಮುನಿಗಳು ಸುಮ್ಮನಾಗಿಬಿಟ್ಟರು. ಭಗವಂತನು ಹೀಗೆ ಏಕೆ ಹೇಳುತ್ತಿರುವನೆಂದು ಅರಿಯದೆ ಅವರ ಬುದ್ಧಿಗೆ ಮಂಕುಕವಿದಂತಾಯಿತು. ॥ ೧೪ ॥ ಅವರು ಬಹಳ ಹೊತ್ತು ವಿಚಾರಮಾಡಿದ ಬಳಿಕ ಭಗವಂತನು ಸರ್ವೇಶ್ವರನಾಗಿದ್ದರೂ ಈ ರೀತಿಯ ಸಾಮಾನ್ಯ ಕರ್ಮಪರತಂತ್ರ ಜನರಂತೆ ವ್ಯವಹರಿಸುವುದು ಕೇವಲ ಲೋಕಸಂಗ್ರಹಕ್ಕಾಗಿಯೇ ಇದೆ ಎಂದು ನಿಶ್ಚಯಿಸಿ, ಅವರೆಲ್ಲರೂ ಮುಗುಳ್ನಗುತ್ತಾ ಜಗದ್ಗುರು ಭಗವಾನ್ ಶ್ರೀಕೃಷ್ಣನಲ್ಲಿ ಹೇಳತೊಡಗಿದರು. ॥ ೧೫ ॥

ಮುನಿಗಳು ಹೇಳುತ್ತಾರೆ – ಭಗವಂತಾ! ನಿನ್ನ ಮಾಯೆಯಿಂದ ಪ್ರಜಾಪತಿಗಳು, ಅಧೀಶ್ವರರಾದ ಮರೀಚಿಯೇ ಮೊದಲಾದವರು ಹಾಗೂ ದೊಡ್ಡ-ದೊಡ್ಡ ತತ್ತ್ವಜ್ಞಾನಿಗಳಾದ ನಾವುಗಳು ಮೋಹಿತರಾಗಿಬಿಟ್ಟಿದ್ದೇವೆ. ನೀನು ಸಾಕ್ಷಾತ್ ಭಗವಂತನೇ ಆಗಿದ್ದರೂ ಮನುಷ್ಯರಂತಹ ಚೇಷ್ಟೆಗಳಿಂದ ನಿನ್ನನ್ನು ಅಡಗಿಸಿಟ್ಟುಕೊಂಡು ಜೀವಿಗಳಂತೆ ಆಚರಿಸುತ್ತಿರುವೆಯಲ್ಲ! ಭಗವಂತಾ! ನಿಜವಾಗಿಯೂ ನಿನ್ನ ಲೀಲೆಯು ವಿಚಿತ್ರವೂ ಆಶ್ಚರ್ಯಮಯವೂ ಆಗಿದೆ. ॥ ೧೬ ॥ ಪೃಥಿವಿಯು ತನ್ನ ವಿಕಾರಗಳಾದ ವೃಕ್ಷ, ಕಲ್ಲು, ಘಟ ಮೊದಲಾದವುಗಳ ಮೂಲಕ ಅನೇಕ ನಾಮ-ರೂಪಗಳನ್ನು ಪಡೆಯುತ್ತದೆ, ವಾಸ್ತವವಾಗಿ ಅದು ಒಂದೇ ಆಗಿದೆ. ಹಾಗೆಯೇ ನೀನು ಏಕನೂ, ಚೇಷ್ಟಾರಹಿತನೂ ಆಗಿದ್ದರೂ ಅನೇಕ ರೂಪಗಳನ್ನು ಧರಿಸುತ್ತೀಯೆ. ನೀನು-ನಿನ್ನಿಂದಲೇ ಈ ಜಗತ್ತಿನ ರಚನೆ, ರಕ್ಷಣೆ ಮತ್ತು ಸಂಹಾರ ಮಾಡುತ್ತಿರುವೆ. ಆದರೆ ಇದೆಲ್ಲವನ್ನು ಮಾಡುತ್ತಿದ್ದರೂ ಈ ಕರ್ಮಗಳಿಂದ ಲಿಪ್ತನಾಗುವುದಿಲ್ಲ. ಸಜಾತೀಯ, ವಿಜಾತೀಯ ಮತ್ತು ಸ್ವಗತಭೇದ ಶೂನ್ಯನೂ, ಏಕರಸನೂ, ಅನಂತನೂ ಆದ ನಿನ್ನ ಈ ವಿಚಿತ್ರ ಚರಿತ್ರವು ಲೀಲೆಯಲ್ಲದೆ ಮತ್ತೇನು? ॥ ೧೭ ॥ ಭಗವಂತ! ನೀನು ಪ್ರಕೃತಿಗೆ ಅತೀತನಾದ ಸಾಕ್ಷಾತ್ ಪರಬ್ರಹ್ಮ ಪರಮಾತ್ಮನೇ ಆಗಿದ್ದರೂ ಆಗಾಗ ಭಕ್ತಜನರನ್ನು ರಕ್ಷಿಸಲು ಹಾಗೂ ದುಷ್ಟರ ದಮನಕ್ಕಾಗಿ ವಿಶುದ್ಧ ಸತ್ತ್ವಮಯ ಶ್ರೀವಿಗ್ರಹವನ್ನು ಪ್ರಕಟಿಸುತ್ತಿರುವೆ. ನಿನ್ನ ಲೀಲೆಗಳ ಮೂಲಕ ಸನಾತನ ವೈದಿಕ ಧರ್ಮವನ್ನು ರಕ್ಷಿಸುತ್ತಿರುವೆ. ಏಕೆಂದರೆ, ಎಲ್ಲ ವರ್ಣ ಮತ್ತು ಆಶ್ರಮಗಳ ರೂಪದಲ್ಲಿ ನೀನೇ ಸ್ವಯಂ ಪ್ರಕಟನಾಗಿರುವೆ. ॥ ೧೮ ॥ ಭಗವಂತ! ವೇದವೇ ನಿನ್ನ ವಿಶುದ್ಧ ಹೃದಯವಾಗಿದೆ. ತಪಸ್ಸು, ಸ್ವಾಧ್ಯಾಯ, ಧಾರಣೆ, ಧ್ಯಾನ ಮತ್ತು ಸಮಾಧಿಯ ಮೂಲಕ ಅದರಲ್ಲೇ ನಿನ್ನ ಸಾಕಾರ-ನಿರಾಕಾರ ಎರಡೂ ರೂಪಗಳ ಅಧಿಷ್ಠಾನ ಸ್ವರೂಪವಾದ ಪರಬ್ರಹ್ಮ ಪರಮಾತ್ಮನ ಸಾಕ್ಷಾತ್ಕಾರವಾಗುತ್ತದೆ. ॥ ೧೯ ॥ ಪರಮಾತ್ಮ! ಬ್ರಾಹ್ಮಣರೇ ವೇದಗಳ ಆಧಾರಭೂತ ನಿನ್ನ ಸ್ವರೂಪದ ಉಪಲಬ್ಧಿಯ ಸ್ಥಾನರಾಗಿದ್ದಾರೆ. ಇದರಿಂದಲೇ ನೀನು ಬ್ರಾಹ್ಮಣರಿಗೆ ಸನ್ಮಾನ ಕೊಡುವೆ. ಇದರಿಂದಲೆ ನೀನು ಬ್ರಾಹ್ಮಣ ಭಕ್ತರಲ್ಲಿ ಅಗ್ರಗಣ್ಯನಾಗಿರುವೆ. ॥ ೨೦ ॥

ಅದ್ಯ ನೋ ಜನ್ಮಸಾಫಲ್ಯಂ ವಿದ್ಯಾಯಾಸ್ತಪಸೋ ದೃಶಃ ।
ತ್ವಯಾ ಸಂಗಮ್ಯ ಸದ್ಗತ್ಯಾ ಯದಂತಃ ಶ್ರೇಯಸಾಂ ಪರಃ ॥ ೨೧ ॥

ನಮಸ್ತಸ್ಮೈ ಭಗವತೇ ಕೃಷ್ಣಾಯಾಕುಂಠಮೇಧಸೇ ।
ಸ್ವಯೋಗಮಾಯಯಾಚ್ಛನ್ನಮಹಿಮ್ನೇ ಪರಮಾತ್ಮನೇ ॥ ೨೨ ॥

ನ ಯಂ ವಿದಂತ್ಯಮೀ ಭೂಪಾ ಏಕಾರಾಮಾಶ್ಚ ವೃಷ್ಣಯಃ ।
ಮಾಯಾಜವನಿಕಾಚ್ಛನ್ನಮಾತ್ಮಾನಂ ಕಾಲಮೀಶ್ವರಮ್ ॥ ೨೩ ॥

ಯಥಾ ಶಯಾನಃ ಪುರುಷ ಆತ್ಮಾನಂ ಗುಣತತ್ತ್ವದೃಕ್ ।
ನಾಮಮಾತ್ರೇಂದ್ರಿಯಾಭಾತಂ ನ ವೇದ ರಹಿತಂ ಪರಮ್ ॥ ೨೪ ॥

ಏವಂ ತ್ವಾ ನಾಮಮಾತ್ರೇಷು ವಿಷಯೇಷ್ವಿಂದ್ರಿಯೇಹಯಾ ।
ಮಾಯಯಾ ವಿಭ್ರಮಚ್ಚಿತ್ತೋ ನ ವೇದ ಸ್ಮೃತ್ಯುಪಪ್ಲವಾತ್ ॥ ೨೫ ॥

ತಸ್ಯಾದ್ಯ ತೇ ದದೃಶಿಮಾಂಘ್ರಿಮಘೌಘಮರ್ಷ-
ತೀರ್ಥಾಸ್ಪದಂ ಹೃದಿ ಕೃತಂ ಸುವಿಪಕ್ವಯೋಗೈಃ ।
ಉತ್ಸಿಕ್ತಭಕ್ತ್ಯುಪಹತಾಶಯಜೀವಕೋಶಾ
ಆಪುರ್ಭವದ್ಗತಿಮಥೋಽನುಗೃಹಾಣ ಭಕ್ತಾನ್ ॥ ೨೬ ॥

ನೀನು ಸಮಸ್ತವಾದ ಶ್ರೇಯಸ್ಸುಗಳಿಗೂ ಚರಮಸ್ಥಾನವಾಗಿರುವೆ. ಸತ್ಪುರುಷರಿಗೆ ಏಕಮಾತ್ರ ಆಶ್ರಯನಾಗಿರುವೆ. ನಿನ್ನನ್ನು ಸೇರಿ ಇಂದು ನಮ್ಮ ಜನ್ಮ, ವಿದ್ಯೆ, ತಪಸ್ಸು ಮತ್ತು ಜ್ಞಾನ - ಇವೆಲ್ಲವೂ ಸಫಲವಾದುವು. ವಾಸ್ತವವಾಗಿ ಎಲ್ಲದರ ಪರಮ ಫಲವು ನೀನೇ ಆಗಿರುವೆ. ॥ ೨೧ ॥ ಪ್ರಭುವೇ! ನಿನ್ನ ಜ್ಞಾನವು ಅನಂತವಾಗಿದೆ. ನೀನು ಸಾಕ್ಷಾತ್ ಸಚ್ಚಿದಾನಂದ ಸ್ವರೂಪನಾದ ಪರಬ್ರಹ್ಮ ಪರಮಾತ್ಮ ಭಗವಂತನೇ ಆಗಿರುವೆ. ನೀನು ನಿನ್ನ ಅಚಿಂತ್ಯ ಶಕ್ತಿಯಾದ ಯೋಗಮಾಯೆಯ ಮೂಲಕ ನಿನ್ನ ಮಹಿಮೆಯನ್ನು ಅಡಗಿಸಿಕೊಂಡಿರುವೆ. ಅಂತಹ ನಿನಗೆ ನಾವು ನಮಸ್ಕರಿಸುತ್ತೇವೆ. ॥ ೨೨ ॥ ಈ ಸಭೆಯಲ್ಲಿ ಕುಳಿತಿರುವ ರಾಜರಾಗಲೀ, ನಿನ್ನ ಒಡನಾಡಿಗಳಾಗಿ ನಿನ್ನೊಡನೆ ಆಹಾರ-ವಿಹಾರ ಮಾಡುವ ಯದುವಂಶೀಯರಾಗಲೀ ನಿನ್ನನ್ನು ವಾಸ್ತವವಾಗಿ ತಿಳಿದವರಲ್ಲ. ಏಕೆಂದರೆ, ನೀನು ಸರ್ವಾಂತರ್ಯಾಮಿಯೂ, ಜಗತ್ತಿಗೆ ನಿಯಾಮಕನೂ, ಆದಿಕಾರಣನೂ ಆಗಿದ್ದರೂ ಮಾಯೆಯೆಂಬ ತೆರೆಯಿಂದ ಮುಚ್ಚಲ್ಪಟ್ಟಿರುವೆ. ॥ ೨೩ ॥ ಕನಸ್ಸನ್ನು ಕಾಣುತ್ತಿರುವಾಗ ಮನುಷ್ಯನು ಸ್ವಪ್ನದಲ್ಲಿ ಮಿಥ್ಯೆಯಾದ ಪದಾರ್ಥಗಳನ್ನು ಸತ್ಯವೆಂದೇ ತಿಳಿಯುತ್ತಾನೆ. ಹೆಸರಿಗೆ ಮಾತ್ರ ಸತ್ಯವೆಂದು ತೋರುವ ತನ್ನ ಸ್ವಪ್ನ ಶರೀರವನ್ನೇ ನಿಜವೆಂದು ಭಾವಿಸುತ್ತಾನೆ. ಸ್ವಪ್ನವಿರುವತನಕ ಅವನಿಗೆ ಈ ಸ್ವಪ್ನ ಶರೀರವಲ್ಲದೆ ಇನ್ನೊಂದು ಜಾಗ್ರದವಸ್ಥೆಯ ಶರೀರವಿದೆ ಎಂಬುದೂ ತಿಳಿದಿರುವುದಿಲ್ಲ. ॥ ೨೪ ॥ ಹೀಗೆಯೇ ಜಾಗ್ರದವಸ್ಥೆಯಲ್ಲಿಯೂ ಇಂದ್ರಿಯಗಳ ಪ್ರವೃತ್ತಿರೂಪವಾದ ಮಾಯೆಯಿಂದ ಚಿತ್ತವು ವಿಮೋಹಿತವಾಗಿ ಹೆಸರಿಗಷ್ಟೇ ಇರುವ ವಿಷಯಗಳಲ್ಲಿ ಅಲೆಯುತ್ತಿರುತ್ತದೆ. ಆ ಸಮಯದಲ್ಲಿಯೂ ಚಿತ್ತದ ಭ್ರಾಂತಿಯಿಂದ ವಿವೇಕಶಕ್ತಿಯು ಮುಚ್ಚಲ್ಪಟ್ಟಿರುತ್ತದೆ. ಇದರಿಂದ ತಾನು ಈ ಜಗತ್ತು - ಸಂಸಾರದಿಂದ ಅತೀತನಾಗಿರುವವನು ಎಂಬುದೂ ಜೀವಿಗೆ ತಿಳಿದಿರುವುದಿಲ್ಲ. ॥ ೨೫ ॥ ಪ್ರಭೋ! ದೊಡ್ಡ-ದೊಡ್ಡ ಋಷಿ-ಮುನಿಗಳು ಅತ್ಯಂತ ಪರಿಪಕ್ವ ಯೋಗಸಾಧನೆಯ ಮೂಲಕ ಸಮಸ್ತ ಪಾಪರಾಶಿಯನ್ನೂ ನಾಶಮಾಡುವಂತಹ, ಗಂಗೆಗೆ ಆಶ್ರಯಸ್ಥಾನವಾದ ನಿನ್ನ ಚರಣಕಮಲಗಳನ್ನು ಹೃದಯದಲ್ಲಿ ಧರಿಸಿಕೊಂಡಿರುತ್ತಾರೆ. ಇಂದು ನಮಗೆ ಅಂತಹ ಚರಣಕಮಲಗಳ ದರ್ಶನವಾದುದು ನಮ್ಮ ಸೌಭಾಗ್ಯವೇ ಆಗಿದೆ. ಪ್ರಭೋ! ನಾವು ನಿನ್ನ ಭಕ್ತರಾಗಿದ್ದೇವೆ. ನೀನು ನಮ್ಮ ಮೇಲೆ ದಯೆದೋರು. ಏಕೆಂದರೆ, ಯಾರ ಲಿಂಗಶರೀರರೂಪವಾದ ಜೀವಕೋಶವು ನಿನ್ನ ಅತ್ಯುಚ್ಚ ಭಕ್ತಿಯ ಮೂಲಕ ನಾಶವಾಗಿದೆಯೋ ಅವರಿಗೆ ನಿನ್ನ ಪರಮ ಪದದ ಪ್ರಾಪ್ತಿಯಾಗುತ್ತದೆ. ॥ ೨೬ ॥

ಶ್ರೀಶುಕ ಉವಾಚ

ಇತ್ಯನುಜ್ಞಾಪ್ಯ ದಾಶಾರ್ಹಂ ಧೃತರಾಷ್ಟ್ರಂ ಯುಧಿಷ್ಠಿರಮ್ ।
ರಾಜರ್ಷೇ ಸ್ವಾಶ್ರಮಾನ್ಗಂತುಂ ಮುನಯೋ ದಧಿರೇ ಮನಃ ॥ ೨೭ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ - ರಾಜರ್ಷಿ ಪರೀಕ್ಷಿತನೇ! ಭಗವಂತನನ್ನು ಈ ಪ್ರಕಾರವಾಗಿ ಸ್ತುತಿಸಿದ್ದು, ಅವನಿಂದ, ಧೃತರಾಷ್ಟ್ರನಿಂದ, ಧರ್ಮರಾಜ ಯುಧಿಷ್ಠಿರನಿಂದ ಅನುಮತಿಯನ್ನು ಪಡೆದು ಅವರೆಲ್ಲರೂ ತಮ್ಮ-ತಮ್ಮ ಆಶ್ರಮಗಳಿಗೆ ಹೋಗಲು ವಿಚಾರಮಾಡಿದರು. ॥ ೨೭ ॥

ತದ್ವೀಕ್ಷ್ಯ ತಾನುಪವ್ರಜ್ಯ ವಸುದೇವೋ ಮಹಾಯಶಾಃ ।
ಪ್ರಣಮ್ಯ ಚೋಪಸಂಗೃಹ್ಯ ಬಭಾಷೇದಂ ಸುಯಂತ್ರಿತಃ ॥ ೨೮ ॥

ಮಹಾಯಶೋವಂತನಾದ ವಸುದೇವನು ಋಷಿ-ಮುನಿಗಳು ಹೊರಟು ಹೋಗುವ ವಿಚಾರವನ್ನು ತಿಳಿದು ಅವರ ಬಳಿಗೆ ಹೋಗಿ ಅವರ ಕಾಲುಗಳನ್ನು ಹಿಡಿದು ವಂದಿಸಿಕೊಂಡು ವಿನಮ್ರನಾಗಿ ನಿವೇದಿಸಿಕೊಂಡನು. ॥ ೨೮॥

ವಸುದೇವ ಉವಾಚ

ನಮೋ ವಃ ಸರ್ವದೇವೇಭ್ಯ ಋಷಯಃ ಶ್ರೋತುಮರ್ಹಥ ।
ಕರ್ಮಣಾ ಕರ್ಮನಿರ್ಹಾರೋ ಯಥಾ ಸ್ಯಾನ್ನಸ್ತದುಚ್ಯತಾಮ್ ॥ ೨೯ ॥

ವಸುದೇವನು ಹೇಳಿದನು – ಋಷಿ ಮುನಿಗಳೇ! ನೀವು ಸಮಸ್ತ ದೇವತಾ ಸ್ವರೂಪರಾಗಿದ್ದೀರಿ. ನಾನು ನಿಮಗೆ ವಂದಿಸುತ್ತಿದ್ದೇನೆ. ತಾವುಗಳು ನನ್ನದೊಂದು ಪ್ರಾರ್ಥನೆಯನ್ನು ಆಲಿಸಬೇಕು. ಯಾವ ಕರ್ಮಗಳ ಅನುಷ್ಠಾನದಿಂದ ಕರ್ಮಗಳು ಮತ್ತು ಕರ್ಮವಾಸನೆಗಳ ಆತ್ಯಂತಿಕ ನಾಶವಾಗಿ ಮೋಕ್ಷವುಂಟಾಗುವುದೋ ಅದನ್ನು ನೀವುಗಳು ನನಗೆ ಉಪದೇಶಿಸಿರಿ. ॥ ೨೯ ॥

ನಾರದ ಉವಾಚ

ನಾತಿಚಿತ್ರಮಿದಂ ವಿಪ್ರಾ ವಸುದೇವೋ ಬುಭುತ್ಸಯಾ ।
ಕೃಷ್ಣಂ ಮತ್ವಾರ್ಭಕಂ ಯನ್ನಃ ಪೃಚ್ಛತಿ ಶ್ರೇಯ ಆತ್ಮನಃ ॥ ೩೦ ॥

ಸನ್ನಿಕರ್ಷೋ ಹಿ ಮರ್ತ್ಯಾನಾಮನಾದರಣಕಾರಣಮ್ ।
ಗಾಂಗಂ ಹಿತ್ವಾ ಯಥಾನ್ಯಾಂಭಸ್ತತ್ರತ್ಯೋ ಯಾತಿ ಶುದ್ಧಯೇ ॥ ೩೧ ॥

ನಾರದರು ಹೇಳಿದರು – ಋಷಿವರ್ಯರೇ! ವಸುದೇವನು ಶ್ರೀಕೃಷ್ಣನನ್ನು ತನ್ನ ಮಗನೆಂದು ತಿಳಿದು ಶುದ್ಧಜಿಜ್ಞಾಸೆಯ ಭಾವದಿಂದ ತನ್ನ ಶ್ರೇಯಸ್ಸಿನ ಸಾಧನೆಯನ್ನು ನಮ್ಮ ಬಳಿ ಕೇಳುತ್ತಿರುವನು. ಇದರಲ್ಲಿ ಯಾವುದೇ ಆಶ್ಚರ್ಯವಿಲ್ಲ. ॥ ೩೦ ॥ ಪ್ರಪಂಚದಲ್ಲಿ ಬಹಳ ಹತ್ತಿರವಿರುವುದು ಅನಾದರಕ್ಕೆ ಕಾರಣವಾಗುತ್ತದೆ. ಗಂಗಾ ತೀರದಲ್ಲಿರುವವರು ಗಂಗೆಯನ್ನು ಬಿಟ್ಟು ತಮ್ಮ ಪಾಪಶುದ್ಧಿಗಾಗಿ ಬೇರೆ ತೀರ್ಥಕ್ಕೆ ಹೋಗುತ್ತಿರುವುದನ್ನು ನೋಡುತ್ತೇವಲ್ಲ! ॥ ೩೧ ॥

ಯಸ್ಯಾನುಭೂತಿಃ ಕಾಲೇನ ಲಯೋತ್ಪತ್ತ್ಯಾದಿನಾಸ್ಯ ವೈ ।
ಸ್ವತೋऽನ್ಯಸ್ಮಾಚ್ಚ ಗುಣತೋ ನ ಕುತಶ್ಚನ ರಿಷ್ಯತಿ ॥ ೩೨ ॥

ತಂ ಕ್ಲೇಶಕರ್ಮಪರಿಪಾಕಗುಣಪ್ರವಾಹೈ-
ರವ್ಯಾಹತಾನುಭವಮೀಶ್ವರಮದ್ವಿತೀಯಮ್ ।
ಪ್ರಾಣಾದಿಭಿಃ ಸ್ವವಿಭವೈರುಪಗೂಢಮನ್ಯೋ
ಮನ್ಯೇತ ಸೂರ್ಯಮಿವ ಮೇಘಹಿಮೋಪರಾಗೈಃ ॥ ೩೩ ॥

ಶ್ರೀಕೃಷ್ಣನ ಅನುಭೂತಿಯು ಕಾಲಾನುಕ್ರಮವಾಗಿ ನಡೆಯುವ ಜಗತ್ತಿನ ಸೃಷ್ಟಿ, ಸ್ಥಿತಿ, ಪ್ರಳಯಗಳಿಂದ ಅಳಿದುಹೋಗುವಂತಹುದಲ್ಲ. ಅದು ಸ್ವತಃ ಯಾವುದೇ ಬೇರೆ ನಿಮಿತ್ತದಿಂದ, ಗುಣಗಳಿಂದ ಮತ್ತು ಯಾವುದರಿಂದಲೂ ಕ್ಷೀಣಿಸುವಂತಹುದಲ್ಲ. ॥ ೩೨ ॥ ಅವನ ಜ್ಞಾನಮಯ ಸ್ವರೂಪವು ಅವಿದ್ಯೆಯಿಂದಾಗಲೀ, ರಾಗ-ದ್ವೇಷಾದಿ ಕ್ಲೇಶಗಳಿಂದಾಗಲೀ, ಪುಣ್ಯ-ಪಾಪಮಯ ಕರ್ಮಗಳಿಂದಾಗಲೀ, ಸುಖ-ದುಃಖಾದಿ ಕರ್ಮಫಲಗಳಿಂದಾಗಲೀ, ಸತ್ತ್ವಾದಿಗುಣ ಪ್ರವಾಹದಿಂದಾಗಲೀ ನಾಶಹೊಂದುವುದಿಲ್ಲ. ಅವನು ಸಾಕ್ಷಾತ್ ಅದ್ವಿತೀಯ ಪರಮಾತ್ಮನಾಗಿದ್ದಾನೆ. ಅವನು ತನ್ನನ್ನು ತನ್ನದೇ ಶಕ್ತಿಗಳಿಂದ ಪ್ರಾಣಾದಿಗಳಿಂದ ಮುಚ್ಚಿಕೊಳ್ಳುವನು. ಆಗ ಮೂರ್ಖಜನರು – ಮೋಡ, ಮಂಜು ಅಥವಾ ಗ್ರಹಣದಿಂದ ಮರೆಯಾದ ಸೂರ್ಯನು ಮುಚ್ಚಿಹೋಗಿರುವನು ಎಂದು ತಿಳಿಯುವಂತೆಯೇ ಶ್ರೀಕೃಷ್ಣನನ್ನು ತಿಳಿಯುತ್ತಾರೆ. ॥ ೩೩ ॥

ಅಥೋಚುರ್ಮುನಯೋ ರಾಜನ್ನಾ-
ಭಾಷ್ಯಾನಕದುಂದುಭಿಮ್ ।
ಸರ್ವೇಷಾಂ ಶೃಣ್ವತಾಂ ರಾಜ್ಞಾಂ
ತಥೈವಾಚ್ಯುತರಾಮಯೋಃ ॥ ೩೪ ॥

ಪರೀಕ್ಷಿತನೇ! ಅನಂತರ ಋಷಿ-ಮುನಿಗಳು ಭಗವಾನ್ ಶ್ರೀಕೃಷ್ಣ-ಬಲರಾಮರು, ಯುಧಿಷ್ಠಿರನೇ ಮೊದಲಾದ ರಾಜರ ಸಮ್ಮುಖದಲ್ಲಿ ವಸುದೇವನನ್ನು ಸಂಬೋಧಿಸುತ್ತಾ ಹೇಳಿದರು. ॥ ೩೪ ॥

ಕರ್ಮಣಾ ಕರ್ಮನಿರ್ಹಾರ ಏಷ ಸಾಧು ನಿರೂಪಿತಃ ।
ಯಚ್ಛ್ರದ್ಧಯಾ ಯಜೇದ್ವಿಷ್ಣುಂ ಸರ್ವಯಜ್ಞೇಶ್ವರಂ ಮಖೈಃ ॥ ೩೫ ॥

ಚಿತ್ತಸ್ಯೋಪಶಮೋऽಯಂ ವೈ ಕವಿಭಿಃ ಶಾಸ್ತ್ರಚಕ್ಷುಷಾ ।
ದರ್ಶಿತಃ ಸುಗಮೋ ಯೋಗೋ ಧರ್ಮಶ್ಚಾತ್ಮಮುದಾವಹಃ ॥ ೩೬ ॥

ವಸುದೇವನೇ! ಯಜ್ಞಾದಿಗಳ ಮೂಲಕ ಸಮಸ್ತ ಯಜ್ಞಗಳ ಅಧಿಪತಿಯಾದ ಭಗವಾನ್ ವಿಷ್ಣುವನ್ನು ಶ್ರದ್ಧಾಪೂರ್ವಕ ಆರಾಧಿಸುವುದೇ ಕರ್ಮಗಳ ಮೂಲಕ ಕರ್ಮವಾಸನೆ ಮತ್ತು ಕರ್ಮಫಲಗಳನ್ನು ಆತ್ಯಂತಿಕವಾಗಿ ನಾಶಮಾಡುವ ಒಳ್ಳೆಯ ಉಪಾಯವಾಗಿದೆ. ॥ ೩೫ ॥ ತ್ರಿಕಾಲದರ್ಶಿಗಳಾದ ಜ್ಞಾನಿಗಳು ಶಾಸ್ತ್ರದೃಷ್ಟಿಯಿಂದ ಚಿತ್ತದ ಶಾಂತಿಗೆ ಇದೇ ಉಪಾಯವೆಂದೂ, ಸುಲಭವಾದ ಮೋಕ್ಷಸಾಧನವೆಂದೂ, ಚಿತ್ತದಲ್ಲಿ ಆನಂದೋಲ್ಲಾಸವನ್ನು ಉಂಟುಮಾಡುವ ಧರ್ಮವೆಂದೂ ತಿಳಿಸಿರುವರು. ॥ ೩೬ ॥

ಅಯಂ ಸ್ವಸ್ತ್ಯಯನಃ ಪಂಥಾ ದ್ವಿಜಾತೇರ್ಗೃಹಮೇಧಿನಃ ।
ಯಚ್ಛ್ರದ್ಧಯಾಽಽಪ್ತವಿತ್ತೇನ ಶುಕ್ಲೇನೇಜ್ಯೇತ ಪೂರುಷಃ
॥ ೩೭ ॥

ವಿತ್ತೈಷಣಾಂ ಯಜ್ಞದಾನೈರ್ಗೃಹೈರ್ದಾರಸುತೈಷಣಾಮ್ ।
ಆತ್ಮಲೋಕೈಷಣಾಂ ದೇವ ಕಾಲೇನ ವಿಸೃಜೇದ್ಬುಧಃ ।
ಗ್ರಾಮೇ ತ್ಯಕ್ತೈಷಣಾಃ ಸರ್ವೇ ಯಯುರ್ಧೀರಾಸ್ತಪೋವನಮ್
॥ ೩೮ ॥

ಋಣೈಸ್ತ್ರಿಭಿರ್ದ್ವಿಜೋ ಜಾತೋ ದೇವರ್ಷಿಪಿತೄಣಾಂ ಪ್ರಭೋ ।
ಯಜ್ಞಾಧ್ಯಯನಪುತ್ರೈಸ್ತಾನ್ಯನಿಸ್ತೀರ್ಯ ತ್ಯಜನ್ಪತೇತ್
॥ ೩೯ ॥

ತ್ವಂ ತ್ವದ್ಯ ಮುಕ್ತೋ ದ್ವಾಭ್ಯಾಂ ವೈ ಋಷಿಪಿತ್ರೋರ್ಮಹಾಮತೇ ।
ಯಜ್ಞೈರ್ದೇವರ್ಣಮುನ್ಮುಚ್ಯ ನಿರೃಣೋಽಶರಣೋ ಭವ
॥ ೪೦ ॥

ವಸುದೇವ ಭವಾನ್ ನೂನಂ ಭಕ್ತ್ಯಾ ಪರಮಯಾ ಹರಿಮ್ ।
ಜಗತಾಮೀಶ್ವರಂ ಪ್ರಾರ್ಚಃ ಸ ಯದ್ವಾಂ ಪುತ್ರತಾಂ ಗತಃ
॥ ೪೧ ॥

ಶ್ರೀಶುಕ ಉವಾಚ

ಇತಿ ತದ್ವಚನಂ ಶ್ರುತ್ವಾ ವಸುದೇವೋ ಮಹಾಮನಾಃ ।
ತಾನೃಷೀನೃತ್ವಿಜೋ ವವ್ರೇ ಮೂರ್ಧ್ನಾಽಽನಮ್ಯ ಪ್ರಸಾದ್ಯ ಚ
॥ ೪೨ ॥

ತ ಏನಮೃಷಯೋ ರಾಜನ್ ವೃತಾ ಧರ್ಮೇಣ ಧಾರ್ಮಿಕಮ್ ।
ತಸ್ಮಿನ್ನಯಾಜಯನ್ ಕ್ಷೇತ್ರೇ ಮಖೈರುತ್ತಮಕಲ್ಪಕೈಃ
॥ ೪೩ ॥

ತದ್ದೀಕ್ಷಾಯಾಂ ಪ್ರವೃತ್ತಾಯಾಂ ವೃಷ್ಣಯಃ ಪುಷ್ಕರಸ್ರಜಃ ।
ಸ್ನಾತಾಃ ಸುವಾಸಸೋ ರಾಜನ್ ರಾಜಾನಃ ಸುಷ್ಠ್ವಲಂಕೃತಾಃ
॥ ೪೪ ॥

ತನ್ಮಹಿಷ್ಯಶ್ಚ ಮುದಿತಾ ನಿಷ್ಕಕಂಠ್ಯಃ ಸುವಾಸಸಃ ।
ದೀಕ್ಷಾಶಾಲಾಮುಪಾಜಗ್ಮುರಾಲಿಪ್ತಾ ವಸ್ತುಪಾಣಯಃ
॥ ೪೫ ॥

ನೇದುರ್ಮೃದಂಗಪಟಹಶಂಖಭೇರ್ಯಾನಕಾದಯಃ ।
ನನೃತುರ್ನಟನರ್ತಕ್ಯಸ್ತುಷ್ಟುವುಃ ಸೂತಮಾಗಧಾಃ ।
ಜಗುಃ ಸುಕಂಠ್ಯೋ ಗಂಧರ್ವ್ಯಃ ಸಂಗೀತಂ ಸಹಭರ್ತೃಕಾಃ
॥ ೪೬ ॥

ತನ್ನ ನ್ಯಾಯೋಪಾರ್ಜಿತ ಧನದಿಂದ ಶ್ರದ್ಧಾಪೂರ್ವಕವಾಗಿ ಭಗವಾನ್ ಪುರುಷೋತ್ತಮನನ್ನು ಆರಾಧಿಸುವುದೇ ದ್ವಿಜರಾದ ಗೃಹಸ್ಥರಿಗೆ ಪರಮ ಶ್ರೇಯಸ್ಸಿನ ಮಾರ್ಗವಾಗಿದೆ. ॥ ೩೭ ॥ ವಸುದೇವನೇ! ವಿದ್ವಾಂಸನಾದವನು ಯಜ್ಞ, ದಾನಾದಿಗಳಿಂದ ಧನದ ಆಸೆಯನ್ನೂ, ಗೃಹಸ್ಥೋಚಿತ ಭೋಗಗಳಿಂದ ಪತ್ನೀ-ಪುತ್ರರ ಇಚ್ಛೆಯನ್ನೂ, ಕಾಲಾನುಕ್ರಮವಾಗಿ ಸ್ವರ್ಗಾದಿಭೋಗಗಳು ನಾಶವಾಗುವವು ಎಂಬ ಅರಿವಿನಿಂದ ಲೋಕೈಷಣವನ್ನು ತ್ಯಾಗ ಮಾಡಬೇಕು. ಹೀಗೆ ಈಷಣಾ ತ್ರಯಗಳನ್ನು ತ್ಯಾಗಮಾಡಿದ ವಿಚಾರವಂತ ಮನುಷ್ಯನು ಗ್ರಾಮವನ್ನು ಬಿಟ್ಟು ಅರಣ್ಯದ ದಾರಿಯನ್ನು ಹಿಡಿಯುತ್ತಾನೆ. ॥ ೩೮ ॥ ಸಮರ್ಥನಾದ ವಸುದೇವನೇ! ಬ್ರಾಹ್ಮಣ, ಕ್ಷತ್ರಿಯ, ವೈಶ್ಯ - ಇವರು ದೇವ-ಋಷಿ-ಪಿತೃ ಎಂಬ ಮೂರು ಋಣವನ್ನು ಪಡೆದುಕೊಂಡೇ ಹುಟ್ಟುತ್ತಾರೆ. ಯಜ್ಞ, ಅಧ್ಯಯನ, ಸಂತಾನೋತ್ಪತ್ತಿ ಇವುಗಳಿಂದ ಈ ಮೂರು ಋಣದಿಂದ ಬಿಡುಗಡೆ ಹೊಂದುತ್ತಾನೆ. ಆ ಋಣವನ್ನು ತೀರಿಸದೆಯೇ ಸಂಸಾರವನ್ನು ತ್ಯಾಗ ಮಾಡುವವನಿಗೆ ಅಧಃಪತನವಾಗುತ್ತದೆ. ॥ ೩೯ ॥ ಮಹಾಮತಿಯಾದ ವಸುದೇವ! ನೀನೀಗ ಋಷಿ ಮತ್ತು ಪಿತೃಗಳ ಋಣಗಳಿಂದ ಮುಕ್ತನಾಗಿರುವೆ. ಇನ್ನು ಯಜ್ಞಗಳ ಮೂಲಕ ದೇವತೆಗಳ ಋಣವನ್ನು ತೀರಿಸಿಬಿಡು. ಹೀಗೆ ಎಲ್ಲ ಋಣಗಳಿಂದ ಬಿಡುಗಡೆ ಹೊಂದಿ ಗೃಹತ್ಯಾಗಮಾಡಿ ಭಗವಂತನಿಗೆ ಶರಣಾಗು. ॥ ೪೦ ॥ ವಸುದೇವನೇ! ನೀನು ಅವಶ್ಯವಾಗಿ ಪರಮಭಕ್ತಿಯಿಂದ ಜಗದೀಶ್ವರನಾದ ಶ್ರೀಹರಿಯನ್ನು ಉಪಾಸನೆ ಮಾಡಿರುವೆ. ಆದರಿಂದಲೇ ಜಗದೊಡೆಯರಾದ ಇಬ್ಬರು ಪುತ್ರರನ್ನು ಪಡೆದಿರುವೆ. ೪೧ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ - ಮನನಶೀಲನಾದ ವಸುದೇವನು ಋಷಿಗಳ ಈ ಮಾತನ್ನು ಕೇಳಿ, ಅವರ ಚರಣಗಳಲ್ಲಿ ಶಿರಸ್ಸನ್ನಿಟ್ಟು ಪ್ರಣಾಮ ಮಾಡಿ ಅವರನ್ನು ಪ್ರಸನ್ನಗೊಳಿಸಿ, ಯಜ್ಞಕ್ಕಾಗಿ ಅವರನ್ನು ಋತ್ವಿಜರಾಗಿ ವರಣಮಾಡಿಕೊಂಡನು. ॥ ೪೨ ॥ ಪರೀಕ್ಷಿತನೇ! ಹೀಗೆ ವಸುದೇವನಿಂದ ಧರ್ಮಪೂರ್ವಕವಾಗಿ ವರಣಮಾಡಲ್ಪಟ್ಟ ಋಷಿಮುನಿಗಳು ಧರ್ಮಕ್ಷೇತ್ರವಾದ ಕುರುಕ್ಷೇತ್ರದಲ್ಲಿ ಪರಮಧಾರ್ಮಿಕನಾದ ವಸುದೇವನಿಂದ ಉತ್ತಮೋತ್ತಮ ಸಾಮಗ್ರಿಗಳಿಂದ ಕೂಡಿದ ಹಲವಾರು ಯಜ್ಞಗಳನ್ನು ಮಾಡಿಸಿದರು. ॥ ೪೩ ॥ ಪರೀಕ್ಷಿತ! ವಸುದೇವನು ಯಜ್ಞದೀಕ್ಷಿತನಾದಾಗ ಯಾದವರು ಸ್ನಾನಾದಿಗಳನ್ನು ಮಾಡಿ ಸುಂದರ ವಸ್ತ್ರಾಭೂಷಣಗಳನ್ನು ಕಮಲಪುಷ್ಪಗಳ ಮಾಲೆಗಳನ್ನು ಧರಿಸಿದರು. ಸಮಸ್ತ ರಾಜರೂ ವಸ್ತ್ರಾಭರಣಗಳಿಂದ ಸಜ್ಜಾದರು. ॥ ೪೪ ॥ ವಸುದೇವನ ಪತ್ನಿಯರೂ ಸುಂದರವಸ್ತ್ರ, ಅಂಗರಾಗ, ಸ್ವರ್ಣಹಾರಗಳಿಂದ ಅಲಂಕರಿಸಿಕೊಂಡು, ಪರಮಾನಂದ ಭರಿತರಾಗಿ ಕೈಗಳಲ್ಲಿ ಮಂಗಳ ದ್ರವ್ಯಗಳನ್ನು ಹಿಡಿದುಕೊಂಡು ಯಜ್ಞಶಾಲೆಯನ್ನು ಪ್ರವೇಶಿಸಿದರು. ॥ ೪೫ ॥ ಆ ಸಮಯದಲ್ಲಿ ಮೃದಂಗ, ಪಟಹ, ಶಂಖ, ಭೇರಿ, ನಗಾರಿಗಳು ಮುಂತಾದ ಮಂಗಳ ವಾದ್ಯಗಳು ಮೊಳಗುತ್ತಿದ್ದವು. ಸೂತ-ಮಾಗಧರೂ ಸ್ತುತಿಸತೊಡಗಿದರು. ಗಂಧರ್ವಸ್ತ್ರೀಯರು ತಮ್ಮ ಗಂಡಂದಿರೊಡನೆ ಸುಶ್ರಾವ್ಯವಾಗಿ ಹಾಡತೊಡಗಿದರು. ॥ ೪೬ ॥

ತಮಭ್ಯಷಿಂಚನ್ ವಿಧಿವದಕ್ತಮಭ್ಯಕ್ತಮೃತ್ವಿಜಃ ।
ಪತ್ನೀಭಿರಷ್ಟಾದಶಭಿಃ ಸೋಮರಾಜಮಿವೋಡುಭಿಃ ॥ ೪೭ ॥

ತಾಭಿರ್ದುಕೂಲವಲಯೈರ್ಹಾರನೂಪುರಕುಂಡಲೈಃ ।
ಸ್ವಲಂಕೃತಾಭಿರ್ವಿಬಭೌ ದೀಕ್ಷಿತೋಽಜಿನಸಂವೃತಃ ॥ ೪೮ ॥

ತಸ್ಯರ್ತ್ವಿಜೋ ಮಹಾರಾಜ ರತ್ನಕೌಶೇಯವಾಸಸಃ ।
ಸಸದಸ್ಯಾ ವಿರೇಜುಸ್ತೇ ಯಥಾ ವೃತ್ರಹಣೋಽಧ್ವರೇ ॥ ೪೯ ॥

ತದಾ ರಾಮಶ್ಚ ಕೃಷ್ಣಶ್ಚ ಸ್ವೈಃ ಸ್ವೈರ್ಬಂಧುಭಿರನ್ವಿತೌ ।
ರೇಜತುಃ ಸ್ವಸುತೈರ್ದಾರೈರ್ಜೀವೇಶೌ ಸ್ವವಿಭೂತಿಭಿಃ ॥ ೫೦ ॥

ಈಜೇಽನುಯಜ್ಞಂ ವಿಧಿನಾ ಅಗ್ನಿಹೋತ್ರಾದಿಲಕ್ಷಣೈಃ ।
ಪ್ರಾಕೃತೈರ್ವೈಕೃತೈರ್ಯಜ್ಞೈರ್ದ್ರವ್ಯಜ್ಞಾನಕ್ರಿಯೇಶ್ವರಮ್ ॥ ೫೧ ॥

ಅಥರ್ತ್ವಿಗ್ಭ್ಯೋಽದದಾತ್ಕಾಲೇ ಯಥಾಮ್ನಾತಂ ಸ ದಕ್ಷಿಣಾಃ ।
ಸ್ವಲಂಕೃತೇಭ್ಯೋಽಲಂಕೃತ್ಯ ಗೋಭೂಕನ್ಯಾ ಮಹಾಧನಾಃ ॥ ೫೨ ॥

ಪತ್ನೀಸಂಯಾಜಾವಭೃಥ್ಯೈಶ್ಚರಿತ್ವಾ ತೇ ಮಹರ್ಷಯಃ ।
ಸಸ್ನೂ ರಾಮಹ್ರದೇ ವಿಪ್ರಾ ಯಜಮಾನಪುರಸ್ಸರಾಃ ॥ ೫೩ ॥

ಸ್ನಾತೋಽಲಂಕಾರವಾಸಾಂಸಿ ವಂದಿಭ್ಯೋಽದಾತ್ತಥಾ ಸ್ತ್ರಿಯಃ ।
ತತಃ ಸ್ವಲಂಕೃತೋ ವರ್ಣಾನಾಶ್ವಭ್ಯೋಽನ್ನೇನ ಪೂಜಯತ್ ॥ ೫೪ ॥

ಬಂಧೂನ್ ಸದಾರಾನ್ ಸಸುತಾನ್ ಪಾರಿಬರ್ಹೇಣ ಭೂಯಸಾ ।
ವಿದರ್ಭಕೋಸಲಕುರೂನ್ ಕಾಶಿಕೇಕಯಸೃಂಜಯಾನ್ ॥ ೫೫ ॥

ಸದಸ್ಯರ್ತ್ವಿಕ್ ಸುರಗಣಾನ್ ನೃಭೂತಪಿತೃಚಾರಣಾನ್ ।
ಶ್ರೀನಿಕೇತಮನುಜ್ಞಾಪ್ಯ ಶಂಸಂತಃ ಪ್ರಯಯುಃ ಕ್ರತುಮ್ ॥ ೫೬ ॥

ವಸುದೇವನು ಮೊದಲಿಗೆ ಕಣ್ಣುಗಳಿಗೆ ಕಾಡಿಗೆ ಹಚ್ಚಿಕೊಂಡು, ಮೈಗೆ ಬೆಣ್ಣೆಯನ್ನು ಲೇಪಿಸಿಕೊಂಡನು. ದೇವಕಿಯೇ ಮೊದಲಾದ ಆವನ ಹದಿನೆಂಟು ಮಂದಿ ಪತ್ನಿಯರೊಂದಿಗೆ ಹಿಂದೆ ನಕ್ಷತ್ರಗಳೊಂದಿಗೆ ಚಂದ್ರನ ಅಭಿಷೇಕವಾದಂತೆ ಋತ್ವಿಜರು ವಸುದೇವನಿಗೆ ಮಹಾಭಿಷೇಕ ಮಾಡಿದರು. ॥ ೪೭ ॥ ಆಗ ಯಜ್ಞದೀಕ್ಷಿತನಾದ್ದರಿಂದ ವಸುದೇವನು ಮೃಗಚರ್ಮವನ್ನು ಹೊದ್ದುಕೊಂಡಿದ್ದನು. ಆವನ ಪತ್ನಿಯರು ಸುಂದರವಾದ ಸೀರೆಗಳಿಂದಲೂ, ಚಿನ್ನದ ಬಳೆ, ಹಾರಗಳಿಂದಲೂ, ಕಾಲಂದುಗೆಗಳಿಂದಲೂ, ಹೊಳೆಯುತ್ತಿದ್ದ ಕರ್ಣಾಭರಣಗಳಿಂದಲೂ ಅಲಂಕರಿಸಿಕೊಂಡಿದ್ದರು. ಪತ್ನಿಯರೊಡನೆ ವಸುದೇವನು ಬಹಳವಾಗಿ ಸುಶೋಭಿತನಾಗಿದ್ದನು. ॥ ೪೮ ॥ ವಸುದೇವನ ಋತ್ವಿಜರೂ, ಸದಸ್ಯರೂ ಹಿಂದೆ ಇಂದ್ರನ ಯಜ್ಞದಲ್ಲಿ ಶೋಭಿಸುತ್ತಿದ್ದ ಋತ್ವಿಜರಂತೆಯೇ ರೇಷ್ಮೆಯ ವಸ್ತ್ರಗಳಿಂದ, ರತ್ನಜಡಿತ ಆಭರಣಗಳಿಂದ ಸಮಲಂಕೃತರಾಗಿ ಶೋಭಿಸುತ್ತಿದ್ದರು. ॥ ೪೯ ॥ ಸಮಸ್ತ ಜೀವಕೋಟಿಗೂ ಪ್ರಭುಗಳಾದ ಬಲರಾಮ-ಶ್ರೀಕೃಷ್ಣರು ತಮ್ಮ-ತಮ್ಮ ಬಂಧುಗಳಿಂದಲೂ, ಪತ್ನೀ-ಪುತ್ರರೊಂದಿಗೂ ಪರಿವೃತರಾಗಿ ತಮ್ಮದೇ ಆದ ವೈಭವದಿಂದ ರಾರಾಜಿಸಿದರು. ॥ ೫೦ ॥

ವಸುದೇವನು ಪ್ರತಿಯೊಂದು ಯಜ್ಞದಲ್ಲಿಯೂ ಗಾರ್ಹಪತ್ಯವೇ ಮೊದಲಾದ ಅಗ್ನಿತ್ರಯಗಳ ಉಪಾಸನೆಯೇ ಮುಖ್ಯಲಕ್ಷ್ಯವಾಗಿರುವ ಅಗ್ನಿಷ್ಟೋಮ, ದರ್ಶ, ಪೂರ್ಣಮಾಸ ಮುಂತಾದ ಪ್ರಕೃತಿಯಾಗಗಳಿಂದಲೂ, ಸೂರ್ಯಸತ್ರವೇ ಮೊದಲಾದ ವಿಕೃತಿಯಾಗಗಳಿಂದಲೂ, ಅಗ್ನಿಹೋತ್ರಾದಿ ಇತರ ಯಜ್ಞಗಳ ಮೂಲಕ ದ್ರವ್ಯ, ಜ್ಞಾನ, ಕ್ರಿಯೆ ಇವುಗಳಿಗೆ ಈಶ್ವರನಾದ ಯಜ್ಞಪುರುಷ ವಿಷ್ಣುವನ್ನು ಆರಾಧಿಸಿದನು. ॥ ೫೧ ॥ ಅನಂತರ ವಸುದೇವನು ಸಮುಚಿತ ಕಾಲದಲ್ಲಿ ಋತ್ವಿಜರನ್ನು ವಸ್ತ್ರಾಲಂಕಾರಗಳಿಂದ ಪೂಜಿಸಿ ಶಾಸ್ತ್ರಾನುಸಾರವಾಗಿ ಅವರಿಗೆ ಹೇರಳವಾದ ದಕ್ಷಿಣೆಯೊಂದಿಗೆ ಸಾಲಂಕೃತ ಗೋವುಗಳನ್ನು, ಭೂಮಿಯನ್ನು ಸುಂದರ ಕನ್ಯೆಯರನ್ನು ದಾನಮಾಡಿದನು. ॥ ೫೨ ॥ ಬಳಿಕ ಮಹರ್ಷಿಗಳು ಪತ್ನೀಸಂಯಾಜ ಮತ್ತು ಅವಭೃಥ್ಯಗಳೆಂಬ ಯಜ್ಞಾಂಗಕರ್ಮಗಳನ್ನು ವಸುದೇವನಿಂದಲೂ ಪತ್ನಿಯರಿಂದಲೂ ಮಾಡಿಸಿ, ಆತನನ್ನು ಮುಂದೆ ಮಾಡಿಕೊಂಡು ಪರಶುರಾಮನು ನಿರ್ಮಿಸಿದ ಸಮಂತಪಂಚಕ ಸರೋವರದಲ್ಲಿ ಅವಭೃತಸ್ನಾನ ಮಾಡಿಸಿದರು. ॥ ೫೩ ॥ ಸ್ನಾನಮಾಡಿದನಂತರ ವಸುದೇವನು ಮತ್ತು ಆತನ ಪತ್ನಿಯರು ತಾವು ಉಟ್ಟಿದ್ದ ವಸ್ತ್ರಾಭರಣಗಳನ್ನು ವಂದಿಮಾಗಧರಿಗೆ ಕೊಟ್ಟುಬಿಟ್ಟರು. ಬಳಿಕ ವಸುದೇವನು ನೂತನ ವಸ್ತ್ರಾಭರಣಗಳಿಂದ ಸಮಲಂಕೃತನಾಗಿ ಬ್ರಾಹ್ಮಣರಿಂದ ಹಿಡಿದು ನಾಯಿಯವರೆಗಿನ ಸಮಸ್ತ ಪ್ರಾಣಿಗಳಿಗೂ ಮೃಷ್ಟಾನ್ನ ಭೋಜನ ಮಾಡಿಸಿದನು. ॥ ೫೪ ॥ ಮತ್ತೆ ವಸುದೇವನು ತನ್ನ ಬಂಧು ಬಾಂಧವರಿಗೆ, ಅವರ ಪತ್ನೀ-ಪುತ್ರರಿಗೆ ಹಾಗೂ ವಿದರ್ಭ, ಕೋಸಲ, ಕುರು, ಕಾಶಿ, ಕೇಕಯ, ಸೃಂಜಯ ಮೊದಲಾದ ರಾಜರುಗಳಿಗೆ, ಸದಸ್ಯರಿಗೆ, ಋತ್ವಿಜರಿಗೆ, ದೇವತೆಗಳಿಗೆ, ಮನುಷ್ಯರಿಗೆ, ಭೂತಗಳಿಗೆ, ಪಿತೃಗಳಿಗೆ, ಚಾರಣರಿಗೆ ಹಲವಾರು ವಿಧದ ಪಾರಿತೋಷಕಗಳನ್ನು ಕೊಟ್ಟು ಸನ್ಮಾನಿಸಿದನು. ಅವರೆಲ್ಲರೂ ಶ್ರೀನಿಕೇತನನಾದ ಶ್ರೀಕೃಷ್ಣನ ಅನುಮತಿಯನ್ನು ಪಡೆದು ಯಜ್ಞವನ್ನು ಪ್ರಶಂಸಿಸುತ್ತಾ ತಮ್ಮ-ತಮ್ಮ ನಿವಾಸಗಳಿಗೆ ತೆರಳಿದರು. ॥ ೫೫-೫೬ ॥

ಧೃತರಾಷ್ಟ್ರೋಽನುಜಃ ಪಾರ್ಥಾ ಭೀಷ್ಮೋ ದ್ರೋಣಃ ಪೃಥಾ ಯಮೌ ।
ನಾರದೋ ಭಗವಾನ್ ವ್ಯಾಸಃ ಸುಹೃತ್ಸಂಬಂಧಿಬಾಂಧವಾಃ ॥ ೫೭ ॥

ಬಂಧೂನ್ ಪರಿಷ್ವಜ್ಯ ಯದೂನ್ ಸೌಹೃದಾತ್ ಕ್ಲಿನ್ನಚೇತಸಃ ।
ಯಯುರ್ವಿರಹಕೃಚ್ಛ್ರೇಣ ಸ್ವದೇಶಾಂಶ್ಚಾಪರೇ ಜನಾಃ ॥ ೫೮ ॥

ನಂದಸ್ತು ಸಹ ಗೋಪಾಲೈರ್ಬೃಹತ್ಯಾ ಪೂಜಯಾರ್ಚಿತಃ ।
ಕೃಷ್ಣರಾಮೋಗ್ರಸೇನಾದ್ಯೈರ್ನ್ಯವಾತ್ಸೀದ್ಬಂಧುವತ್ಸಲಃ ॥ ೫೯ ॥

ವಸುದೇವೋಽಂಜಸೋತ್ತೀರ್ಯ ಮನೋರಥಮಹಾರ್ಣವಮ್ ।
ಸುಹೃದ್ವೃತಃ ಪ್ರೀತಮನಾ ನಂದಮಾಹ ಕರೇ ಸ್ಪೃಶನ್ ॥ ೬೦ ॥

ವಸುದೇವ ಉವಾಚ

ಭ್ರಾತರೀಶಕೃತಃ ಪಾಶೋ ನೃಣಾಂ ಯಃ ಸ್ನೇಹಸಂಜ್ಞಿತಃ ।
ತಂ ದುಸ್ತ್ಯಜಮಹಂ ಮನ್ಯೇ ಶೂರಾಣಾಮಪಿ ಯೋಗಿನಾಮ್ ॥ ೬೧ ॥

ಅಸ್ಮಾಸ್ವಪ್ರತಿಕಲ್ಪೇಯಂ ಯತ್ಕೃತಾಜ್ಞೇಷು ಸತ್ತಮೈಃ ।
ಮೈತ್ರ್ಯರ್ಪಿತಾಫಲಾ ವಾಪಿ ನ ನಿವರ್ತೇತ ಕರ್ಹಿಚಿತ್ ॥ ೬೨ ॥

ಪ್ರಾಗಕಲ್ಪಾಚ್ಚ ಕುಶಲಂ ಭ್ರಾತರ್ವೋ ನಾಚರಾಮ ಹಿ ।
ಅಧುನಾ ಶ್ರೀಮದಾಂಧಾಕ್ಷಾ ನ ಪಶ್ಯಾಮಃ ಪುರಃ ಸತಃ ॥ ೬೩ ॥

ಮಾ ರಾಜ್ಯಶ್ರೀರಭೂತ್ ಪುಂಸಃ ಶ್ರೇಯಸ್ಕಾಮಸ್ಯ ಮಾನದ ।
ಸ್ವಜನಾನುತ ಬಂಧೂನ್ ವಾ ನ ಪಶ್ಯತಿ ಯಯಾಂಧದೃಕ್ ॥ ೬೪ ॥

ಶ್ರೀಶುಕ ಉವಾಚ

ಏವಂ ಸೌಹೃದಶೈಥಿಲ್ಯಚಿತ್ತ ಆನಕದುಂದುಭಿಃ ।
ರುರೋದ ತತ್ಕೃತಾಂ ಮೈತ್ರೀಂ ಸ್ಮರನ್ನಶ್ರುವಿಲೋಚನಃ ॥ ೬೫ ॥

ಆ ಸಮಯದಲ್ಲಿ ಧೃತರಾಷ್ಟ್ರ-ವಿದುರ-ಯುಧಿಷ್ಠಿರ, ಭೀಮಾರ್ಜುನ-ನಕುಲ-ಸಹದೇವರೂ, ಭೀಷ್ಮ-ದ್ರೋಣಾದಿಗಳೂ, ಕುಂತೀ, ನಾರದರೂ, ಭಗವಾನ್ ವೇದವ್ಯಾಸರೂ ಹಾಗೂ ಇತರ ಸ್ವಜನ ಸಂಬಂಧಿಗಳೂ ಹಿತೈಷಿಗಳಾದ ಯಾದವರನ್ನು ಬಿಟ್ಟು ಹೋಗಲು ಸಾಧ್ಯವಾಗದೆ ವಿರಹ ವ್ಯಥೆಯನ್ನು ಅನುಭವಿಸುತ್ತಿದ್ದರು. ಅವರು ಅತ್ಯಂತ ಸ್ನೇಹಾರ್ದ್ರರಾಗಿ ಯದುವೀರರನ್ನು ಗಾಢವಾಗಿ ಆಲಿಂಗಿಸಿಕೊಂಡು, ಅವರಿಂದ ಅನುಮತಿಯನ್ನು ಪಡೆದು ಬಹಳ ಕಷ್ಟದಿಂದ ತಮ್ಮ-ತಮ್ಮ ದೇಶಗಳಿಗೆ ಹಿಂದಿರುಗಿದರು. ಹಾಗೆಯೇ ಯಜ್ಞವನ್ನು ನೋಡಲು ಬಂದಿದ್ದ ಇತರರೂ ತಮ್ಮ-ತಮ್ಮ ನಿವಾಸಗಳಿಗೆ ತೆರಳಿದರು. ॥ ೫೭-೫೮ ॥ ಪರೀಕ್ಷಿತನೇ! ಭಗವಾನ್ ಶ್ರೀಕೃಷ್ಣ ಬಲರಾಮರು ಹಾಗೂ ಉಗ್ರಸೇನರೇ ಮೊದಲಾದವರು ನಂದಗೋಪನನ್ನು ಮತ್ತು ಇತರ ಎಲ್ಲ ಗೋಪಾಲಕರನ್ನು ಅಮೂಲ್ಯ ವಸ್ತುಗಳಿಂದ ಪೂಜಿಸಿ ಸತ್ಕರಿಸಿದರು. ಅವರೂ ಪ್ರೇಮ ಪರವಶರಾಗಿ ಅನೇಕ ದಿನಗಳವರೆಗೆ ಅಲ್ಲಿಯೇ ಇದ್ದರು. ॥ ೫೯ ॥ ವಸುದೇವನು ಮನೋರಥವೆಂಬ ಮಹಾಸಾಗರವನ್ನು ಅನಾಯಾಸವಾಗಿ ದಾಟಿಬಿಟ್ಟನು. ಅವನ ಆನಂದಕ್ಕೆ ಪಾರವೇ ಇರಲಿಲ್ಲ. ಸುಹೃದರಿಂದ ಸುತ್ತುವರಿಯಲ್ಪಟ್ಟ ಪ್ರಸನ್ನಚಿತ್ತನಾದ ವಸುದೇವನು ನಂದಗೋಪನ ಕೈಹಿಡಿದುಕೊಂಡು ಇಂತೆಂದನು. ॥ ೬೦ ॥

ವಸುದೇವನು ಹೇಳಿದನು - ಸಹೋದರ! ಭಗವಂತನು ಮನುಷ್ಯರಿಗೆ ಸ್ನೇಹ, ಪ್ರೇಮಪಾಶವೆಂಬ ಬಂಧನವನ್ನು ಕಲ್ಪಿಸಿಬಿಟ್ಟಿದ್ದಾನೆ. ಈ ಸ್ನೇಹ ಸಂಬಂಧವನ್ನು ತ್ಯಜಿಸಲು ದೊಡ್ಡ-ದೊಡ್ಡ ಶೂರರಿಗೂ, ಯೋಗಿ-ಯತಿಗಳಿಗೂ ಸಾಧ್ಯವಾಗದೆಂದು ನಾನು ಭಾವಿಸುತ್ತೇನೆ. ॥ ೬೧ ॥ ನಮ್ಮಂತಹ ಅಕೃತಜ್ಞರೊಂದಿಗೆ ನೀವು ಅಸದೃಶವಾದ ಸ್ನೇಹದ ವ್ಯವಹಾರಮಾಡಿರುವಿರಿ. ನಿಮ್ಮಂತಹ ಸಂತಶಿರೋಮಣಿಗಳಿಗೆ ಇಂತಹ ವ್ಯವಹಾರವು ಸ್ವಭಾವಸಿದ್ಧವೇ ಆಗಿರುತ್ತದೆ. ನಾವು ಇದನ್ನು ಎಂದೂ ತೀರಿಸಲಾರೆವು. ನಿಮಗೆ ಇದರ ಪ್ರತಿಫಲವನ್ನು ಕೊಡಲು ಸಮರ್ಥರಲ್ಲ. ಹೀಗಿದ್ದರೂ ನಮ್ಮಗಳ ಈ ನಿಸ್ವಾರ್ಥವಾದ ಮಿತ್ರತೆಯ ಸಂಬಂಧವು ಅಚಲವಾಗಿಯೇ ಉಳಿಯಲಿ. ॥ ೬೨ ॥ ಹಿಂದೆ ನಾವು ಕಾರಾಗೃಹದಲ್ಲಿ ಬಂಧಿತರಾಗಿದ್ದರಿಂದ ನಿಮಗೆ ಯಾವುದೇ ಉಪಕಾರವನ್ನು ಮಾಡಲೂ ಅಶಕ್ಯವಾಗಿತ್ತು. ಈಗಲಾದರೋ ಧನಮದದಿಂದ ಕುರುಡರಾಗಿ ನೀವು ನಮ್ಮ ಮುಂದೆಯೇ ಇದ್ದರೂ ಕಣ್ಣೆತ್ತಿಯೂ ನೋಡುತ್ತಿಲ್ಲ. ॥ ೬೩ ॥ ಮಾನದನಾದ ನಂದಗೋಪನೇ! ಶ್ರೇಯಸ್ಕಾಮನಾದವನಿಗೆ ರಾಜ್ಯಲಕ್ಷ್ಮಿಯು ದೊರಕದಿರುವುದೇ ಒಳಿತು. ಏಕೆಂದರೆ, ಮನುಷ್ಯನು ರಾಜ್ಯಲಕ್ಷ್ಮಿಯಿಂದ ಕುರುಡನಾಗುತ್ತಾನೆ ಮತ್ತು ತನ್ನ ಸ್ವಜನರನ್ನಾಗಲೀ, ಬಂಧುಗಳನ್ನೂ ನೋಡಲಾರನು. ॥ ೬೪ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ - ಪರೀಕ್ಷಿತನೇ! ಹೀಗೆ ಹೇಳುತ್ತಿದ್ದಂತೆಯೇ ವಸುದೇವನ ಹೃದಯವು ಪ್ರೇಮದಿಂದ ಗದ್ಗದವಾಯಿತು. ನಂದಗೋಪನ ಮೈತ್ರಿಯೂ ಹಿಂದೆ ಮಾಡಿದ ಉಪಕಾರಗಳೂ ಸ್ಮರಣೆಗೆ ಬಂದು ಅವನ ಕಣ್ಣುಗಳಲ್ಲಿ ನೀರು ತುಂಬಿಬಂದು ಗಳಗಳನೆ ಅತ್ತುಬಿಟ್ಟನು. ॥ ೬೫ ॥

ನಂದಸ್ತು ಸಖ್ಯುಃ ಪ್ರಿಯಕೃತ್ ಪ್ರೇಮ್ಣಾ ಗೋವಿಂದರಾಮಯೋಃ ।
ಅದ್ಯ ಶ್ವ ಇತಿ ಮಾಸಾಂಸ್ತ್ರೀನ್ ಯದುಭಿರ್ಮಾನಿತೋಽವಸತ್
॥ ೬೬ ॥

ನಂದಗೋಪನು ತನ್ನ ಮಿತ್ರನಾದ ವಸುದೇವನಿಗೆ ಹಾಗೂ ಶ್ರೀಕೃಷ್ಣ-ಬಲರಾಮರಿಗೆ ಸಂತೋಷಪಡಿಸಲು, ಅವರ ಪ್ರೇಮ ಪಾಶದಲ್ಲಿ ಬಂಧಿತನಾಗಿ ಇಂದು-ನಾಳೆ ಎಂದೆನ್ನುತ್ತಾ ಮೂರು ತಿಂಗಳು ಅಲ್ಲೇ ಇದ್ದುಬಿಟ್ಟನು. ॥ ೬೬ ॥

ತತಃ ಕಾಮೈಃ ಪೂರ್ಯಮಾಣಃ ಸವ್ರಜಃ ಸಹಬಾಂಧವಃ ।
ಪರಾರ್ಧ್ಯಾಭರಣಕ್ಷೌಮನಾನಾನರ್ಘ್ಯಪರಿಚ್ಛದೈಃ
॥ ೬೭ ॥

ಬಳಿಕ ಬಹುಮೂಲ್ಯವಾದ ಆಭೂಷಣಗಳಿಂದ, ರೇಷ್ಮೆ ವಸ್ತ್ರಗಳಿಂದ, ನಾನಾವಿಧದ ಉತ್ತಮೋತ್ತಮ ವಸ್ತುಗಳಾದ ಮತ್ತು ಭೋಗಸಾಮಗ್ರಿಗಳಿಂದ ನಂದಗೋಪನನ್ನು ಅವನ ವ್ರಜವಾಸಿಗಳಾದ ಸಂಗಡಿಗರನ್ನೂ ಬಂಧು ಬಾಂಧವರನ್ನು ಉದಾರ ಮನಸ್ಸಿನಿಂದ ತೃಪ್ತಿಪಡಿಸಿದನು. ॥ ೬೭ ॥

ವಸುದೇವೋಗ್ರಸೇನಾಭ್ಯಾಂ ಕೃಷ್ಣೋದ್ಧವಬಲಾದಿಭಿಃ ।
ದತ್ತಮಾದಾಯ ಪಾರಿಬರ್ಹಂ ಯಾಪಿತೋ ಯದುಭಿರ್ಯಯೌ
॥ ೬೮ ॥

ವಸುದೇವ, ಉಗ್ರಸೇನ, ಶ್ರೀಕೃಷ್ಣ-ಬಲರಾಮರು, ಉದ್ಧವರೇ ಮೊದಲಾದ ಯದುವಂಶೀಯರು ಬೇರೆ-ಬೇರೆಯಾಗಿ ಅವನಿಗೆ ಅನೇಕ ಉಡುಗೊರೆಗಳನ್ನು ಕೊಟ್ಟರು. ಅವರಿಂದ ಬೀಳ್ಕೊಂಡು, ಅವರಿತ್ತ ಸಾಮಗ್ರಿಗಳಿಂದೊಡಗೂಡಿ ನಂದಗೋಪನು ತನ್ನ ವ್ರಜ ಮಂಡಲಕ್ಕೆ ಪ್ರಯಾಣಮಾಡಿದನು. ॥ ೬೮ ॥

ನಂದೋ ಗೋಪಾಶ್ಚ ಗೋಪ್ಯಶ್ಚ ಗೋವಿಂದಚರಣಾಂಬುಜೇ ।
ಮನಃ ಕ್ಷಿಪ್ತಂ ಪುನರ್ಹರ್ತುಮನೀಶಾ ಮಥುರಾಂ ಯಯುಃ
॥ ೬೯ ॥

ನಂದಗೋಪ, ಗೋಪಾಲರು ಮತ್ತು ಗೋಪಿಯರ ಚಿತ್ತವು ಭಗವಾನ್ ಶ್ರೀಕೃಷ್ಣನ ಚರಣಕಮಲಗಳಲ್ಲಿ ಎಷ್ಟು ನೆಟ್ಟುಹೋಗಿತ್ತೆಂದರೆ ಅದನ್ನು ಪ್ರಯತ್ನ ಮಾಡಿದರೂ ಹಿಂದಿರುಗಿಸದಾದರು. ಕೊನೆಗೆ ಮನಸ್ಸಿಲ್ಲದೆಯೇ ಅವರು ಮಥುರೆಗೆ ಹೊರಟು ಹೋದರು. ॥ ೬೯ ॥

ಬಂಧುಷು ಪ್ರತಿಯಾತೇಷು ವೃಷ್ಣಯಃ ಕೃಷ್ಣದೇವತಾಃ ।
ವೀಕ್ಷ್ಯ ಪ್ರಾವೃಷಮಾಸನ್ನಾಂ ಯಯುರ್ದ್ವಾರವತೀಂ ಪುನಃ
॥ ೭೦ ॥

ಬಂಧು-ಮಿತ್ರರು ಹೋದನಂತರ ಶ್ರೀಕೃಷ್ಣನನ್ನೇ ಏಕಮಾತ್ರ ಇಷ್ಟದೇವನೆಂದು ಭಾವಿಸಿದ್ದ ಯಾದವರು ವರ್ಷಾಕಾಲವು ಸನ್ನಿಹಿತವಾದುದನ್ನು ಕಂಡು ದ್ವಾರಕೆಗೆ ಪ್ರಯಾಣ ಮಾಡಿದರು. ॥ ೭೦ ॥

ಜನೇಭ್ಯಃ ಕಥಯಾಂಚಕ್ರುರ್ಯದುದೇವಮಹೋತ್ಸವಮ್ ।
ಯದಾಸೀತ್ತೀರ್ಥಯಾತ್ರಾಯಾಂ ಸುಹೃತ್ಸಂದರ್ಶನಾದಿಕಮ್
॥ ೭೧ ॥

ದ್ವಾರಾವತಿಯನ್ನು ಸೇರಿದ ಬಳಿಕ ಅವರೆಲ್ಲರೂ ಅಲ್ಲಿದ್ದ ಪ್ರಜೆಗಳಿಗೆ ವಸುದೇವನ ಯಜ್ಞೋತ್ಸವವನ್ನು, ತೀರ್ಥಯಾತ್ರೆಯ ಪ್ರಸಂಗದಲ್ಲಿ ಸ್ವಜನ-ಸಂಬಂಧಿಗಳ ದರ್ಶನ-ಭೇಟಿ, ವಾರ್ತಾಲಾಪ ಮೊದಲಾದುವನ್ನು ವಿವರಿಸಿ ಹೇಳಿದರು. ॥ ೭೧ ॥

ಎಂಭತ್ತನಾಲ್ಕನೆಯ ಅಧ್ಯಾಯವು ಮುಗಿಯಿತು. ॥ ೮೪ ॥
ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮ ಸ್ಕಂಧೇ ಉತ್ತರಾರ್ಧೇ
ತೀರ್ಥಯಾತ್ರಾನುವರ್ಣನಂ ನಾಮ ಚತುರಶೀತಿತಮೋಽಧ್ಯಾಯಃ ॥ ೮೪ ॥

ಎಂಭತ್ತೈದನೆಯ ಅಧ್ಯಾಯ

ಭಗವಂತನು ವಸುದೇವನಿಗೆ ಬ್ರಹ್ಮಜ್ಞಾನವನ್ನು ಉಪದೇಶಿಸಿದುದು – ಗತಿಸಿಹೋದ ದೇವಕಿಯ ಆರು ಮಕ್ಕಳನ್ನು ಶ್ರೀಕೃಷ್ಣನು ಹಿಂದಕ್ಕೆ ತಂದುದು

ಶ್ರೀಬಾದರಾಯಣಿರುವಾಚ

ಅಥೈಕದಾಽಽತ್ಮಜೌ ಪ್ರಾಪ್ತೌ ಕೃತಪಾದಾಭಿವಂದನೌ ।
ವಸುದೇವೋಽಭಿನಂದ್ಯಾಹ ಪ್ರೀತ್ಯಾ ಸಂಕರ್ಷಣಾಚ್ಯುತೌ
॥ ೧ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ! ದೈನಂದಿನ ಪದ್ಧತಿಯಂತೆ ಶ್ರೀಕೃಷ್ಣ-ಬಲರಾಮರು ಒಂದು ದಿನ ಪ್ರಾತಃಕಾಲದಲ್ಲಿ ನಮಸ್ಕರಿಸಲು ತಂದೆ-ತಾಯಿಗಳ ಬಳಿಗೆ ಬಂದರು. ಅಭಿವಂದಿಸಿದ ಬಳಿಕ ವಸುದೇವ-ದೇವಕಿಯರು ಪುತ್ರರಿಬ್ಬರನ್ನು ಅತ್ಯಂತ ಪ್ರೇಮದಿಂದ ಪ್ರಶಂಸಿಸುತ್ತಾ ಹೇಳತೊಡಗಿದರು. ॥ ೧ ॥

ಮುನೀನಾಂ ಸ ವಚಃ ಶ್ರುತ್ವಾ ಪುತ್ರಯೋರ್ಧಾಮಸೂಚಕಮ್ ।
ತದ್ವೀರ್ಯೈರ್ಜಾತವಿಸ್ರಂಭಃ ಪರಿಭಾಷ್ಯಾಭ್ಯಭಾಷತ
॥ ೨ ॥

ಕೃಷ್ಣ ಕೃಷ್ಣ ಮಹಾಯೋಗಿನ್ ಸಂಕರ್ಷಣ ಸನಾತನ ।
ಜಾನೇ ವಾಮಸ್ಯ ಯತ್ಸಾಕ್ಷಾತ್ ಪ್ರಧಾನಪುರುಷೌ ಪರೌ
॥ ೩ ॥

ಯತ್ರ ಯೇನ ಯತೋ ಯಸ್ಯ ಯಸ್ಮೈ ಯದ್ಯದ್ಯಥಾ ಯದಾ ।
ಸ್ಯಾದಿದಂ ಭಗವಾನ್ ಸಾಕ್ಷಾತ್ಪ್ರಧಾನಪುರುಷೇಶ್ವರಃ
॥ ೪ ॥

ಏತನ್ನಾನಾವಿಧಂ ವಿಶ್ವಮಾತ್ಮಸೃಷ್ಟಮಧೋಕ್ಷಜ ।
ಆತ್ಮನಾನುಪ್ರವಿಶ್ಯಾತ್ಮನ್ ಪ್ರಾಣೋ ಜೀವೋ ಬಿಭರ್ಷ್ಯಜ
॥ ೫ ॥

ಪ್ರಾಣಾದೀನಾಂ ವಿಶ್ವಸೃಜಾಂ ಶಕ್ತಯೋ ಯಾಃ ಪರಸ್ಯ ತಾಃ ।
ಪಾರತಂತ್ರ್ಯಾದ್ ವೈಸಾದೃಶ್ಯಾದ್ ದ್ವಯೋಶ್ಚೇಷ್ಟೈವ ಚೇಷ್ಟತಾಮ್
॥ ೬ ॥

ಕಾಂತಿಸ್ತೇಜಃ ಪ್ರಭಾ ಸತ್ತಾ ಚಂದ್ರಾಗ್ನ್ಯರ್ಕರ್ಕ್ಷವಿದ್ಯುತಾಮ್ ।
ಯತ್ ಸ್ಥೈರ್ಯಂ ಭೂಭೃತಾಂ ಭೂಮೇ-
ರ್ವೃತ್ತಿರ್ಗಂಧೋಽರ್ಥತೋ ಭವಾನ್
॥ ೭ ॥

ತರ್ಪಣಂ ಪ್ರಾಣನಮಪಾಂ ದೇವ ತ್ವಂ ತಾಶ್ಚ ತದ್ರಸಃ ।
ಓಜಃ ಸಹೋ ಬಲಂ ಚೇಷ್ಟಾ ಗತಿರ್ವಾಯೋಸ್ತವೇಶ್ವರ
॥ ೮ ॥

ದಿಶಾಂ ತ್ವಮವಕಾಶೋಽಸಿ ದಿಶಃ ಖಂ ಸ್ಫೋಟ ಆಶ್ರಯಃ ।
ನಾದೋ ವರ್ಣಸ್ತ್ವಮೋಂಕಾರ ಆಕೃತೀನಾಂ ಪೃಥಕ್ಕೃತಿಃ
॥ ೯ ॥

ವಸುದೇವನು ಮಹಾ-ಮಹಾ ಋಷಿಗಳ ಮುಖದಿಂದ ಭಗವಂತನ ಮಹಿಮೆಯನ್ನು ಕೇಳಿದ್ದನು ಮತ್ತು ಐಶ್ವರ್ಯ ಪೂರ್ಣವಾದ ಅವನ ಚರಿತ್ರೆಗಳನ್ನು ಕಣ್ಣಾರೆ ಕಂಡಿದ್ದನು. ಇವನು ಸಾಧಾರಣವಲ್ಲವೆಂದೂ ಸಾಕ್ಷಾತ್ ಭಗವಂತನೇ ಆಗಿರುವನೆಂಬ ಮಾತಿನಲ್ಲಿ ದೃಢವಿಶ್ವಾಸವಿತ್ತು. ಇದರಿಂದ ಅವನು ತನ್ನ ಪುತ್ರರನ್ನು ಪ್ರೇಮಪೂರ್ವಕವಾಗಿ ಸಂಬೋಧಿಸಿ ಹೀಗೆ ಹೇಳಿದನು. ॥ ೨ ॥ ಸಚ್ಚಿದಾನಂದ ಸ್ವರೂಪನಾದ ಶ್ರೀಕೃಷ್ಣನೇ! ಮಹಾಯೋಗೀಶ್ವರ ಸಂಕರ್ಷಣನೇ! ನೀವಿಬ್ಬರೂ ಸನಾತನರಾಗಿರುವಿರಿ. ನೀವಿಬ್ಬರೂ ಪ್ರಕೃತಿ-ಪುರುಷ ಸ್ವರೂಪರೆಂದೂ ಸಾಕ್ಷಾತ್ ಈಶ್ವರರೆಂದೂ ನಾನು ತಿಳಿದಿರುತ್ತೇನೆ. ॥ ೩ ॥ ಈ ಜಗತ್ತಿನ ಆಧಾರರೂ, ನಿರ್ಮಾತೃಗಳೂ ನಿರ್ಮಾಣ ಸಾಮಗ್ರಿಯೂ ನೀವೇ ಆಗಿದ್ದೀರಿ. ಈ ಸಮಸ್ತ ಜಗತ್ತಿನ ಸ್ವಾಮಿಯೂ ನೀವಿಬ್ಬರು ಆಗಿರುವಿರಿ. ಮತ್ತು ನಿಮ್ಮ ಕ್ರೀಡೆಗಾಗಿಯೇ ಇದರ ನಿರ್ಮಾಣವಾಗಿದೆ. ಇದು ಯಾವಾಗ, ಯಾವ ರೂಪದಿಂದ, ಏನೆಲ್ಲ ಇರುತ್ತದೋ, ಆಗುತ್ತಿದೆಯೋ ಅದೆಲ್ಲವೂ ನೀವೇ ಆಗಿದ್ದೀರಿ. ಈ ಜಗತ್ತಿನಲ್ಲಿ ಪ್ರಕೃತಿರೂಪದಿಂದ ಭೋಗ್ಯನೂ ಮತ್ತು ಪುರುಷರೂಪದಿಂದ ಭೋಕ್ತಾನು ಹಾಗೂ ಎರಡರಿಂದಲೂ ಅತೀತನೂ, ಎರಡರ ನಿಯಾಮಕರೂ ಆದ ಸಾಕ್ಷಾತ್ ಭಗವಂತನೇ ನೀವಾಗಿರುವಿರಿ ॥ ೪ ॥ ಇಂದ್ರಿಯಾತೀತನೇ! ಜನ್ಮ-ಸ್ಥಿತಿಯೇ ಮೊದಲಾದ ಭಾವವಿಕಾರದಿಂದ ರಹಿತರಾದ ಪರಮಾತ್ಮನೇ! ಈ ಚಿತ್ರ - ವಿಚಿತ್ರವಾದ ಜಗತ್ತನ್ನು ನೀವೇ ನಿರ್ಮಿಸಿರುವಿರಿ. ಇದರಲ್ಲಿ ನೀವೇ ಆತ್ಮರೂಪದಿಂದ ಪ್ರವೇಶಿಸಿಯೂ ಇದ್ದೀರಿ. ನೀವು ಪ್ರಾಣ (ಕ್ರಿಯಾಶಕ್ತಿ) ಮತ್ತು ಜೀವ (ಜ್ಞಾನಶಕ್ತಿ) ರೂಪದಿಂದ ಇದನ್ನು ಪಾಲಿಸುತ್ತಾ-ಪೋಷಿಸುತ್ತಾ ಇರುವಿರಿ. ॥ ೫ ॥ ಕ್ರಿಯಾಶಕ್ತಿ ಪ್ರಧಾನವಾದ ಪ್ರಾಣವೇ ಮೊದಲಾದುವುಗಳಿಗೆ ಜಗತ್ತಿನ ವಸ್ತುಗಳನ್ನು ಸೃಷ್ಟಿಸುವ ಸಾಮರ್ಥ್ಯವಿದೆಯೋ ಅದು ಅವುಗಳ ಸಾಮರ್ಥ್ಯವಾಗಿರದೆ ನಿನ್ನದೇ ಆಗಿದೆ. ಏಕೆಂದರೆ, ಅವು ನಿನ್ನಂತೆ ಚೇತನರಲ್ಲ ಅಚೇತನರಾಗಿರುವವರು. ಸ್ವತಂತ್ರರಲ್ಲ, ಪರತಂತ್ರರಾಗಿದ್ದಾರೆ. ಆದ್ದರಿಂದ ಆ ಚೇಷ್ಟಾಶೀಲ ಪ್ರಾಣವೇ ಮೊದಲಾದುವುಗಳಲ್ಲಿ ಕೇವಲ ಚೇಷ್ಟಾಮಾತ್ರವಿರುತ್ತದೆ, ಶಕ್ತಿಯಲ್ಲ. ಶಕ್ತಿಯಾದರೋ ನಿನ್ನದೇ ಆಗಿದೆ. ॥ ೬ ॥ ಪ್ರಭೋ! ಚಂದ್ರನಕಾಂತಿ, ಅಗ್ನಿಯತೇಜ, ಸೂರ್ಯನಪ್ರಭೆ, ನಕ್ಷತ್ರ ಮತ್ತು ವಿದ್ಯುತ್ತಿನ ಸ್ಫುರಣರೂಪದ ಸತ್ತೆ, ಪರ್ವತಗಳ ಸ್ಥಿರತೆ, ಪೃಥಿವಿಯ ಆಧಾರ ಶಕ್ತಿರೂಪವಾದ ವೃತ್ತಿ ಮತ್ತು ಗಂಧರೂಪ ಗುಣ - ಇವೆಲ್ಲವೂ ವಾಸ್ತವವಾಗಿ ನೀನೇ ಆಗಿರುವೆ. ॥ ೭ ॥ ಪರಮೇಶ್ವರನೇ! ನೀರಿನಲ್ಲಿರುವ ತೃಪ್ತಿಪಡಿಸುವ, ಜೀವನ ನೀಡುವ, ಶುದ್ಧಗೊಳಿಸುವ ಶಕ್ತಿಗಳು ನಿನ್ನದೇ ಸ್ವರೂಪವಾಗಿದೆ. ಜಲ ಮತ್ತು ಅದರ ರಸ ನೀನೇ ಆಗಿರುವೆ. ಪ್ರಭೋ ವಾಯುವಿನಲ್ಲಿರುವ ಇಂದ್ರಿಯ ಶಕ್ತಿ ಅಂತಃಕರಣದ ಶಕ್ತಿ, ಶರೀರದ ಶಕ್ತಿ, ಚೇಷ್ಟೆ, ಗಮನ ಶಕ್ತಿ - ಈ ಶಕ್ತಿಗಳೆಲ್ಲವೂ ನಿನ್ನವುಗಳೇ ಆಗಿವೆ. ॥ ೮ ॥ ದಿಕ್ಕುಗಳಲ್ಲಿರುವ ಅವಕಾಶವು ನೀನೇ ಆಗಿರುವೆ. ಆಕಾಶ ಮತ್ತು ಅದರ ಆಶ್ರಯಭೂತವಾಗಿರುವ ಸ್ಫೋಟ, ಶಬ್ದ ತನ್ಮಾತ್ರೆ ಅಥವಾ ಪರಾವಾಣಿ, ನಾದ-ಪಶ್ಯಂತಿ, ಓಂಕಾರ-ಮಧ್ಯಮಾ ಮತ್ತು ವರ್ಣ (ಅಕ್ಷರ) ಹಾಗೂ ಪದಾರ್ಥಗಳನ್ನು ಬೇರೆ-ಬೇರೆಯಾಗಿ ನಿರ್ದೇಶಿಸುವ ಪದ, ರೂಪ ವೈಖರಿ ವಾಣಿಯೂ ನೀನೇ ಆಗಿರುವೆ. ॥ ೯ ॥

ಇಂದ್ರಿಯಂ ತ್ವಿಂದ್ರಿಯಾಣಾಂ ತ್ವಂ ದೇವಾಶ್ಚ ತದನುಗ್ರಹಃ ।
ಅವಬೋಧೋ ಭವಾನ್ ಬುದ್ಧೇರ್ಜೀವಸ್ಯಾನುಸ್ಮೃತಿಃ ಸತೀ ॥ ೧೦ ॥

ಭೂತಾನಾಮಸಿ ಭೂತಾದಿರಿಂದ್ರಿಯಾಣಾಂ ಚ ತೈಜಸಃ ।
ವೈಕಾರಿಕೋ ವಿಕಲ್ಪಾನಾಂ ಪ್ರಧಾನಮನುಶಾಯಿನಾಮ್ ॥ ೧೧ ॥

ನಶ್ವರೇಷ್ವಿಹ ಭಾವೇಷು ತದಸಿ ತ್ವಮನಶ್ವರಮ್ ।
ಯಥಾ ದ್ರವ್ಯವಿಕಾರೇಷು ದ್ರವ್ಯಮಾತ್ರಂ ನಿರೂಪಿತಮ್ ॥ ೧೨ ॥

ಸತ್ತ್ವಂ ರಜಸ್ತಮ ಇತಿ ಗುಣಾಸ್ತದ್ವೃತ್ತಯಶ್ಚ ಯಾಃ ।
ತ್ವಯ್ಯದ್ಧಾ ಬ್ರಹ್ಮಣಿ ಪರೇ ಕಲ್ಪಿತಾ ಯೋಗಮಾಯಯಾ ॥ ೧೩ ॥

ತಸ್ಮಾನ್ನ ಸಂತ್ಯಮೀ ಭಾವಾ ಯರ್ಹಿ ತ್ವಯಿ ವಿಕಲ್ಪಿತಾಃ ।
ತ್ವಂ ಚಾಮೀಷು ವಿಕಾರೇಷು ಹ್ಯನ್ಯದಾ ವ್ಯಾವಹಾರಿಕಃ ॥ ೧೪ ॥

ಗುಣಪ್ರವಾಹ ಏತಸ್ಮಿನ್ನಬುಧಾಸ್ತ್ವಖಿಲಾತ್ಮನಃ ।
ಗತಿಂ ಸೂಕ್ಷ್ಮಾಮಬೋಧೇನ ಸಂಸರಂತೀಹ ಕರ್ಮಭಿಃ ॥ ೧೫ ॥

ಯದೃಚ್ಛಯಾ ನೃತಾಂ ಪ್ರಾಪ್ಯ ಸುಕಲ್ಪಾಮಿಹ ದುರ್ಲಭಾಮ್ ।
ಸ್ವಾರ್ಥೇ ಪ್ರಮತ್ತಸ್ಯ ವಯೋ ಗತಂ ತ್ವನ್ಮಾಯಯೇಶ್ವರ ॥ ೧೬ ॥

ಅಸಾವಹಂ ಮಮೈವೈತೇ ದೇಹೇ ಚಾಸ್ಯಾನ್ವಯಾದಿಷು ।
ಸ್ನೇಹಪಾಶೈರ್ನಿಬಧ್ನಾತಿ ಭವಾನ್ ಸರ್ವಮಿದಂ ಜಗತ್ ॥ ೧೭ ॥

ಯುವಾಂ ನ ನಃ ಸುತೌ ಸಾಕ್ಷಾತ್ಪ್ರಧಾನಪುರುಷೇಶ್ವರೌ ।
ಭೂಭಾರಕ್ಷತ್ರಕ್ಷಪಣ ಅವತೀರ್ಣೌ ತಥಾಽಽತ್ಥ ಹ ॥ ೧೮ ॥

ಇಂದ್ರಿಯಗಳು, ಅವುಗಳ ವಿಷಯ ಪ್ರಕಾಶಿಸುವ ಶಕ್ತಿ ಮತ್ತು ಅಧಿಷ್ಠಾತೃದೇವತೆಗಳು ನೀನೇ ಆಗಿರುವೆ. ಬುದ್ಧಿಯ ನಿಶ್ಚಯಾತ್ಮಿಕಾಶಕ್ತಿ ಮತ್ತು ಜೀವಿಯ ವಿಶುದ್ಧ ಸ್ಮರಣಶಕ್ತಿಯೂ ನೀನೇ ಆಗಿರುವೆ. ॥ ೧೦ ॥ ಭೂತಮಾತ್ರರಲ್ಲಿ ಅವುಗಳ ಕಾರಣವಾದ ತಾಮಸಾಹಂಕಾರ ಮತ್ತು ಇಂದ್ರಿಯಗಳಿಗೆ ಕಾರಣವಾದ ತೈಜಸಾಹಂಕಾರ ಹಾಗೂ ಇಂದ್ರಿಯಗಳ ಅಧಿಷ್ಠಾತೃ-ದೇವತೆಗಳಲ್ಲಿ ಅವರ ಕಾರಣವಾದ ಸಾತ್ತ್ವಿಕ ಅಹಂಕಾರ ಜೀವನ ಹುಟ್ಟು-ಸಾವಿಗೆ ಕಾರಣವಾದ ಮಾಯೆಯೂ ನೀನೇ ಆಗಿರುವೆ. ॥ ೧೧ ॥ ಭಗವಂತಾ! ಮಣ್ಣಿನ ವಸ್ತುಗಳ ವಿಕಾರವಾದ ಗಡಿಗೆ, ಮರ ಮುಂತಾದವುಗಳಲ್ಲಿ ಮಣ್ಣೇ ನಿರಂತರವಾಗಿರುತ್ತದೆ ಮತ್ತು ವಾಸ್ತವವಾಗಿ ಅವು ಕಾರಣ (ಮಣ್ಣು) ರೂಪವೇ ಆಗಿವೆ. ಹಾಗೆಯೇ ನಾಶಹೊಂದುವ ಎಲ್ಲ ಪದಾರ್ಥಗಳಲ್ಲಿಯೂ ನೀನೇ ಕಾರಣರೂಪದಿಂದ ಅವಿನಾಶೀ ತತ್ತ್ವವಾಗಿರುವೆ. ವಾಸ್ತವವಾಗಿ ಅವೆಲ್ಲವೂ ನಿನ್ನ ಸ್ವರೂಪವೇ ಆಗಿವೆ. ॥ ೧೨ ॥ ಪ್ರಭೋ! ಸತ್ತ್ವ, ರಜ, ತಮ – ಈ ತ್ರಿಗುಣಗಳು ಮತ್ತು ಅವುಗಳ ವೃತ್ತಿಗಳು (ಪರಿಣಾಮ) - ಮಹತ್ತತ್ತ್ವಾದಿಗಳು ಪರಬ್ರಹ್ಮ ಪರಮಾತ್ಮನಾದ ನಿನ್ನಲ್ಲೇ ಯೋಗಮಾಯೆಯಿಂದ ಕಲ್ಪಿತವಾಗಿವೆ. ॥ ೧೩ ॥ ಅದಕ್ಕಾಗಿ ಜನ್ಮ-ಸ್ಥಿತಿ ಮೊದಲಾದ ಈ ಭಾವವಿಕಾರಗಳು ನಿನ್ನಲ್ಲಿ ಖಂಡಿತವಾಗಿಯೂ ಇಲ್ಲ. ನಿನ್ನಲ್ಲಿ ಇವುಗಳನ್ನು ಕಲ್ಪಿಸಿಕೊಂಡಾಗ ನೀನು ಈ ವಿಕಾರಗಳಲ್ಲಿ ಅನುಗತನಾದವನಂತೆ ಕಂಡುಬರುವೆ. ಕಲ್ಪನೆಯ ನಿವೃತ್ತಿ ಉಂಟಾದಾಗ ನಿರ್ವಿಕಲ್ಪ ಪರಮಾರ್ಥ ಸ್ವರೂಪನಾದ ನೀನೇ ಉಳಿದುಬಿಡುವೆ. ॥ ೧೪ ॥ ಈ ಜಗತ್ತು ಸತ್ತ್ವ, ರಜ, ತಮ – ಈ ತ್ರಿಗುಣಗಳ ಪ್ರವಾಹವಾಗಿದೆ. ದೇಹ, ಇಂದ್ರಿಯಗಳು, ಅಂತಃಕರಣ, ಸುಖ, ದುಃಖ, ರಾಗ-ಲೋಭಾದಿಗಳು ಅವುಗಳ ಕಾರ್ಯವಾಗಿದೆ. ಇದರಲ್ಲಿ ಅಜ್ಞಾನಿಗಳಾದವರು ನಿನ್ನ ಸರ್ವಾತ್ಮಕವಾದ ಸೂಕ್ಷ್ಮಸ್ವರೂಪವನ್ನು ತಿಳಿಯುತ್ತಿಲ್ಲ. ಅವರು ತಮ್ಮ ದೇಹಾಭಿಮಾನರೂಪವಾದ ಅಜ್ಞಾನದಿಂದಲೇ ಕರ್ಮಗಳಲ್ಲಿ ಸಿಕ್ಕಿಹಾಕಿಕೊಂಡು ಪದೇ-ಪದೇ ಹುಟ್ಟು- ಸಾವಿನ ಉರುಳಾಟದಲ್ಲಿ ಅಲೆಯುತ್ತಾ ಇರುತ್ತಾರೆ. ॥ ೧೫ ॥ ಪರಮೇಶ್ವರನೇ! ನನಗೆ ಶುಭ ಪ್ರಾರಬ್ಧಾನುಸಾರವಾಗಿ ಸಶಕ್ತ ಇಂದ್ರಿಯಗಳಿಂದ ಕೂಡಿದ ಅತ್ಯಂತ ದುರ್ಲಭವಾದ ಮನುಷ್ಯ ಶರೀರವು ದೊರಕಿದೆ. ಆದರೆ ನಿನ್ನ ಮಾಯೆಗೆ ವಶನಾಗಿ ಪ್ರಮತ್ತನಾಗಿರುವ ನನ್ನ ಆಯುಷ್ಯವೂ ನಿಜವಾದ ಪರಮಾರ್ಥ ಸಾಧನೆಯಲ್ಲಿ ವ್ಯರ್ಥವಾಗಿ ಕಳೆದು ಹೋಯಿತು. ॥ ೧೬ ॥ ಪ್ರಭೋ! ಈ ಶರೀರವು ನನ್ನದು ಮತ್ತು ಈ ಶರೀರದ ಸಂಬಂಧಿಗಳು ನನ್ನವರಾಗಿದ್ದಾರೆ ಎಂಬ ಅಹಂತೆ-ಮಮತೆಯ ರೂಪವಾದ ಸ್ನೇಹದ ಬಲೆಯಲ್ಲಿ ನೀನೇ ಈ ಸಮಸ್ತ ಜಗತ್ತನ್ನು ಕಟ್ಟಿಹಾಕಿರುವೆ. ॥ ೧೭ ॥ ನೀವಿಬ್ಬರೂ ನನ್ನ ಪುತ್ರರಾಗಿರದೇ ಸಂಪೂರ್ಣ ಪ್ರಕೃತಿ ಮತ್ತು ಜೀವರ ಸ್ವಾಮಿಯಾಗಿರುವಿರಿ ಎಂಬುದು ನಾನು ತಿಳಿದಿರುತ್ತೇನೆ. ಭೂಮಿಗೆ ಭಾರವಾಗಿದ್ದ ರಾಜರನ್ನು ವಿನಾಶಗೊಳಿಸಲೆಂದೇ ನೀವು ಅವತರಿಸಿರುವಿರಿ. ಈ ಮಾತನ್ನು ನೀವು ಹಿಂದೆ ನನಗೆ ಹೇಳಿಯೂ ಇದ್ದೀರಿ. ॥ ೧೮ ॥

ತತ್ತೇ ಗತೋಽಸ್ಮ್ಯರಣಮದ್ಯ ಪದಾರವಿಂದ-
ಮಾಪನ್ನಸಂಸೃತಿಭಯಾಪಹಮಾರ್ತಬಂಧೋ ।
ಏತಾವತಾಲಮಲಮಿಂದ್ರಿಯಲಾಲಸೇನ
ಮರ್ತ್ಯಾತ್ಮದೃಕ್ ತ್ವಯಿ ಪರೇ ಯದಪತ್ಯಬುದ್ಧಿಃ ॥ ೧೯ ॥

ಸೂತೀಗೃಹೇ ನನು ಜಗಾದ ಭವಾನಜೋ ನೌ
ಸಂಜಜ್ಞ ಇತ್ಯನುಯುಗಂ ನಿಜಧರ್ಮಗುಪ್ತ್ಯೈ ।
ನಾನಾತನೂರ್ಗಗನವದ್ವಿದಧಜ್ಜಹಾಸಿ
ಕೋ ವೇದ ಭೂಮ್ನ ಉರುಗಾಯ ವಿಭೂತಿಮಾಯಾಮ್ ॥ ೨೦ ॥

ಅದಕ್ಕಾಗಿ ದೀನ ಜನರ ಹಿತೈಷಿಯೇ! ಶರಣಾಗತವತ್ಸಲನೇ! ಶರಣಾಗತರ ಸಂಸಾರಭಯವನ್ನು ದೂರಮಾಡುವಂತಹ ನಿನ್ನ ಚರಣಕಮಲಗಳಲ್ಲಿ ಶರಣಾಗತನಾಗಿದ್ದೇನೆ. ನನಗಿನ್ನು ಈ ಪ್ರಾಪಂಚಿಕ ವಿಷಯಗಳಲ್ಲಿ ಭೋಗಲಾಲಸೆಯು ಉಂಟಾಗದಂತೆ ಕೃಪೆಮಾಡು. ನಶ್ವರವಾದ ಈ ಶರೀರದಲ್ಲಿ ಆತ್ಮಬುದ್ಧಿಯನ್ನು ಹೊಂದಿ, ಸರ್ವೇಶ್ವರನಾದ ನಿನ್ನಲ್ಲಿ ಪುತ್ರನೆಂಬ ಬುದ್ಧಿಯನ್ನು ಹೊಂದಿದೆನು. ॥ ೧೯ ॥ ಶ್ರೀಹರಿಯೇ! ಹುಟ್ಟು ಸಾವುಗಳಿಲ್ಲದ ನೀನು ಧರ್ಮವನ್ನು ಪರಿಪಾಲಿಸಲಿಕ್ಕಾಗಿ ಪ್ರತಿಯುಗದಲ್ಲಿಯೂ ನಮ್ಮಿಬ್ಬರಿಗೂ ಮಗನಾಗಿ ಹುಟ್ಟುವೆನು ಎಂದು ನೀನು ಹುಟ್ಟಿದೊಡನೆಯೇ ಪ್ರಸೂತಿಗೃಹದಲ್ಲಿ ನಮಗೆ ಹೇಳಿದೆಯಲ್ಲವೇ? ಆಕಾಶದಂತೆ ನಿರ್ಲಿಪ್ತನಾಗಿರುವ ನೀನು ನಾನಾ ಅವತಾರಗಳನ್ನು ಧರಿಸುವೆ ಮತ್ತು ಪರಿತ್ಯಜಿಸುವೆ. ವ್ಯಾಪಕವಾದ ನಿನ್ನ ಲೀಲೈಶ್ವರ್ಯಗಳನ್ನು ಯಾರು ತಾನೇ ತಿಳಿಯಬಲ್ಲರು? ಎಲ್ಲ ಜನರೂ ನಿನ್ನ ಕೀರ್ತಿಯನ್ನೇ ಕೊಂಡಾಡುತ್ತಿರುವರು. ॥ ೨೦ ॥

ಶ್ರೀಶುಕ ಉವಾಚ

ಆಕರ್ಣ್ಯೇತ್ಥಂ ಪಿತುರ್ವಾಕ್ಯಂ ಭಗವಾನ್ ಸಾತ್ವತರ್ಷಭಃ ।
ಪ್ರತ್ಯಾಹ ಪ್ರಶ್ರಯಾನಮ್ರಃ ಪ್ರಹಸನ್ ಶ್ಲಕ್ಷ್ಣಯಾ ಗಿರಾ ॥ ೨೧ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ! ವಸುದೇವನ ಈ ವಚನಗಳನ್ನು ಕೇಳಿ ಯದುವಂಶ ತಿಲಕನಾದ ಭಕ್ತವತ್ಸಲ ಭಗವಾನ್ ಶ್ರೀಕೃಷ್ಣನು ಮುಗುಳ್ನಕ್ಕನು. ಅವನು ವಿನಯದಿಂದ ತಲೆತಗ್ಗಿಸಿಕೊಂಡು ಮಧುರವಾಗಿ ಇಂತೆಂದನು. ॥ ೨೧ ॥

ಶ್ರೀಭಗವಾನುವಾಚ

ವಚೋ ವಃ ಸಮವೇತಾರ್ಥಂ ತಾತೈತದುಪಮನ್ಮಹೇ ।
ಯನ್ನಃ ಪುತ್ರಾನ್ಸಮುದ್ದಿಶ್ಯ ತತ್ತ್ವಗ್ರಾಮ ಉದಾಹೃತಃ ॥ ೨೨ ॥

ಅಹಂ ಯೂಯಮಸಾವಾರ್ಯ ಇಮೇ ಚ ದ್ವಾರಕೌಕಸಃ ।
ಸರ್ವೇಽಪ್ಯೇವಂ ಯದುಶ್ರೇಷ್ಠ ವಿಮೃಗ್ಯಾಃ ಸಚರಾಚರಮ್ ॥ ೨೩ ॥

ಆತ್ಮಾ ಹ್ಯೇಕಃ ಸ್ವಯಂಜ್ಯೋತಿರ್ನಿತ್ಯೋಽನ್ಯೋ ನಿರ್ಗುಣೋ ಗುಣೈಃ ।
ಆತ್ಮಸೃಷ್ಟೈಸ್ತತ್ಕೃತೇಷು ಭೂತೇಷು ಬಹುಧೇಯತೇ ॥ ೨೪ ॥

ಖಂ ವಾಯುರ್ಜ್ಯೋತಿರಾಪೋ ಭೂಸ್ತತ್ಕೃತೇಷು ಯಥಾಶಯಮ್ ।
ಆವಿಸ್ತಿರೋಽಲ್ಪಭೂರ್ಯೇಕೋ ನಾನಾತ್ವಂ ಯಾತ್ಯಸಾವಪಿ ॥ ೨೫ ॥

ಭಗವಾನ್ ಶ್ರೀಕೃಷ್ಣನು ಹೇಳಿದನು – ಅಪ್ಪಾ! ನಾವು ನಿನ್ನ ಮಕ್ಕಳೇ ಆಗಿದ್ದೇವೆ. ನಮ್ಮನ್ನು ಕುರಿತೇ ನೀನು ಈ ತತ್ತ್ವಜ್ಞಾನದ ಉಪದೇಶವನ್ನು ಮಾಡಿರುವೆ. ನಿನ್ನ ಒಂದೊಂದು ಮಾತೂ ಕೂಡ ಯುಕ್ತಿಯುಕ್ತವೆಂದು ನಾವು ಭಾವಿಸುತ್ತೇವೆ. ॥ ೨೨ ॥ ತಂದೆಯೇ! ನಾನು, ನೀವು, ನಮ್ಮಣ್ಣ ಬಲರಾಮ, ದ್ವಾರಕೆಯ ಈ ಪ್ರಜೆಗಳೆಲ್ಲರೂ, ಸಂಪೂರ್ಣ ಚರಾಚರ ಜಗತ್ತು-ಸಮಸ್ತವೂ ನೀವು ಹೇಳಿದಂತೆ ಬ್ರಹ್ಮವಸ್ತುವೆಂದೇ ವಿಮರ್ಶಿಸಿ ತಿಳಿಯಬೇಕು. ॥ ೨೩ ॥ ತಂದೆಯೇ! ಆತ್ಮನಾದರೋ ಒಂದೇ ಆಗಿದೆ. ಆದರೆ ಅವನು ತನ್ನಲ್ಲೇ ಗುಣಗಳನ್ನು ಸೃಷ್ಟಿಸಿಕೊಳ್ಳುತ್ತಾನೆ. ಗುಣಗಳ ಮೂಲಕ ಉಂಟಾದ ಪಂಚಭೂತಗಳಲ್ಲಿ ಒಂದೇ ಆಗಿದ್ದರೂ ಅನೇಕ, ಸ್ವಯಂಪ್ರಕಾಶನಾಗಿದ್ದರೂ ದೃಶ್ಯ, ತನ್ನ ಸ್ವರೂಪವೇ ಆಗಿದ್ದರೂ ತನ್ನಿಂದ ಭಿನ್ನ, ನಿತ್ಯನಾಗಿದ್ದರೂ ಅನಿತ್ಯ, ನಿರ್ಗುಣನಾಗಿದ್ದರೂ ಸಗುಣರೂಪದಿಂದ ಕಂಡುಬರುತ್ತಾನೆ. ॥ ೨೪ ॥ ಆಕಾಶ, ವಾಯು, ಅಗ್ನಿ, ಜಲ, ಪೃಥಿವಿ, – ಈ ಪಂಚಭೂತಗಳು ತಮ್ಮ ಕಾರ್ಯವಾದ ಘಟ-ಪಟಾದಿಗಳಲ್ಲಿ ಪ್ರಕಟ-ಅಪ್ರಕಟ, ದೊಡ್ಡದು-ಸಣ್ಣದು, ಹೆಚ್ಚು-ಕಡಿಮೆ, ಏಕ ಅನೇಕ ಹೀಗೆ ಕಂಡುಬರುತ್ತವೆ. ಆದರೆ ವಾಸ್ತವವಾಗಿ ಸತ್ತಾರೂಪದಿಂದ ಅವು ಒಂದೇ ಆಗಿರುವಂತೆಯೇ ಆತ್ಮನಲ್ಲಿಯೂ ಉಪಾಧಿಗಳ ಭೇದದಿಂದಲೇ ನಾನಾತ್ವದ ಪ್ರತೀತಿ ಆಗುತ್ತದೆ. ಅದಕ್ಕಾಗಿ 'ನಾನೇ ಎಲ್ಲವೂ ಆಗಿದ್ದೇನೆ' ಎಂಬ ನಿನ್ನ ಮಾತು ಸಮುಚಿತವೇ ಆಗಿದೆ. ॥ ೨೫ ॥

ಶ್ರೀಶುಕ ಉವಾಚ

ಏವಂ ಭಗವತಾ ರಾಜನ್ ವಸುದೇವ ಉದಾಹೃತಮ್ ।
ಶ್ರುತ್ವಾ ವಿನಷ್ಟನಾನಾಧೀಸ್ತೂಷ್ಣೀಂ ಪ್ರೀತಮನಾ ಅಭೂತ್ ॥ ೨೬ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿದ್ರಾಜನೇ! ಭಗವಾನ್ ಶ್ರೀಕೃಷ್ಣನ ಈ ಮಾತುಗಳನ್ನು ಕೇಳಿ ವಸುದೇವನ ನಾನಾತ್ವ ಬುದ್ಧಿಯು ಹೊರಟುಹೋಯಿತು. ಆನಂದ ಮಗ್ನನಾಗಿ ಅವನ ಮಾತು ನಿಂತು ಹೋಯಿತು. ಮನಸ್ಸು ನಿರ್ಮಲವಾಯಿತು. ॥ ೨೬ ॥

ಅಥ ತತ್ರ ಕುರುಶ್ರೇಷ್ಠ ದೇವಕೀ ಸರ್ವದೇವತಾ ।
ಶ್ರುತ್ವಾಽಽನೀತಂ ಗುರೋಃ ಪುತ್ರಮಾತ್ಮಜಾಭ್ಯಾಂ ಸುವಿಸ್ಮಿತಾ ॥ ೨೭ ॥

ಕೃಷ್ಣರಾಮೌ ಸಮಾಶ್ರಾವ್ಯ ಪುತ್ರಾನ್ ಕಂಸವಿಹಿಂಸಿತಾನ್ ।
ಸ್ಮರಂತೀ ಕೃಪಣಂ ಪ್ರಾಹ ವೈಕ್ಲವ್ಯಾದಶ್ರುಲೋಚನಾ ॥ ೨೮ ॥

ದೇವಕ್ಯುವಾಚ

ರಾಮ ರಾಮಾಪ್ರಮೇಯಾತ್ಮನ್ ಕೃಷ್ಣ ಯೋಗೇಶ್ವರೇಶ್ವರ ।
ವೇದಾಹಂ ವಾಂ ವಿಶ್ವಸೃಜಾಮೀಶ್ವರಾವಾದಿಪೂರುಷೌ ॥ ೨೯ ॥

ಕಾಲವಿಧ್ವಸ್ತಸತ್ತ್ವಾನಾಂ ರಾಜ್ಞಾಮುಚ್ಛಾಸ್ತ್ರವರ್ತಿನಾಮ್ ।
ಭೂಮೇರ್ಭಾರಾಯಮಾಣಾನಾಮವತೀರ್ಣೌ ಕಿಲಾದ್ಯ ಮೇ ॥ ೩೦ ॥

ಯಸ್ಯಾಂಶಾಂಶಾಂಶಭಾಗೇನ ವಿಶ್ವೋತ್ಪತ್ತಿಲಯೋದಯಾಃ ।
ಭವಂತಿ ಕಿಲ ವಿಶ್ವಾತ್ಮಂಸ್ತಂ ತ್ವಾದ್ಯಾಹಂ ಗತಿಂ ಗತಾ ॥ ೩೧ ॥

ಚಿರಾನ್ಮೃತಸುತಾದಾನೇ ಗುರುಣಾ ಕಾಲಚೋದಿತೌ ।
ಆನಿನ್ಯಥುಃ ಪಿತೃಸ್ಥಾನಾದ್ಗುರವೇ ಗುರುದಕ್ಷಿಣಾಮ್ ॥ ೩೨ ॥

ತಥಾ ಮೇ ಕುರುತಂ ಕಾಮಂ ಯುವಾಂ ಯೋಗೇಶ್ವರೇಶ್ವರೌ ।
ಭೋಜರಾಜಹತಾನ್ಪುತ್ರಾನ್ ಕಾಮಯೇ ದ್ರಷ್ಟುಮಾಹೃತಾನ್ ॥ ೩೩ ॥

ಋಷಿರುವಾಚ

ಏವಂ ಸಂಚೋದಿತೌ ಮಾತ್ರಾ ರಾಮಃ ಕೃಷ್ಣಶ್ಚ ಭಾರತ ।
ಸುತಲಂ ಸಂವಿವಿಶತುರ್ಯೋಗಮಾಯಾಮುಪಾಶ್ರಿತೌ ॥ ೩೪ ॥

ತಸ್ಮಿನ್ಪ್ರವಿಷ್ಟಾವುಪಲಭ್ಯ ದೈತ್ಯರಾಡ್
ವಿಶ್ವಾತ್ಮದೈವಂ ಸುತರಾಂ ತಥಾಽಽತ್ಮನಃ ।
ತದ್ದರ್ಶನಾಹ್ಲಾದಪರಿಪ್ಲುತಾಶಯಃ
ಸದ್ಯಃ ಸಮುತ್ಥಾಯ ನನಾಮ ಸಾನ್ವಯಃ ॥ ೩೫ ॥

ಕುರುಶ್ರೇಷ್ಠನೇ! ಆ ಸಮಯದಲ್ಲಿ ಅಲ್ಲಿ ಸಮಸ್ತ ದೇವತಾ ಸ್ವರೂಪಳಾದ ದೇವಕಿಯೂ ಕುಳಿತಿದ್ದಳು. ಬಹಳ ಹಿಂದೆ ಸತ್ತು ಹೋದ ಗುರುಪುತ್ರನನ್ನು ಶ್ರೀಕೃಷ್ಣ-ಬಲರಾಮರು ಯಮಲೋಕದಿಂದ ಮರಳಿತಂದಿದ್ದರೆಂದು ಕೇಳಿದ್ದ ಆಕೆಯು ಅತ್ಯಂತ ವಿಸ್ಮಿತಳಾಗಿದ್ದಳು. ॥ ೨೭ ॥ ಆಗ ಅವಳಿಗೆ ಕಂಸನು ಕೊಂದುಹಾಕಿದ ತನ್ನ ಆರು ಮಕ್ಕಳುಗಳ ನೆನಪಾಯಿತು. ಒಡನೆಯೇ ಮನಸ್ಸು ಕಳವಳಗೊಂಡಿತು. ಕಣ್ಣುಗಳಲ್ಲಿ ನೀರು ತುಂಬಿಕೊಂಡಿತು. ಕರುಣಾಜನಕ ಮಾತುಗಳಿಂದ ಆಕೆಯು ಬಲರಾಮ-ಶ್ರೀಕೃಷ್ಣರನ್ನು ಸಂಬೋಧಿಸಿ ಇಂತೆಂದಳು - ॥ ೨೮ ॥

ದೇವಕಿಯು ಹೇಳಿದಳು – ಅಪ್ರಮೇಯಾತ್ಮನಾದ ಲೋಕಾಭಿರಾಮನಾದ ಬಲರಾಮನೇ! ಯೋಗೇಶ್ವರರಿಗೂ ಈಶ್ವರನಾದ ಶ್ರೀಕೃಷ್ಣನೇ! ನೀವಿಬ್ಬರೂ ಪ್ರಜಾಪತಿಗಳಿಗೂ ಈಶ್ವರರಾದ ಆದಿಪುರುಷರೆಂಬುದನ್ನು ನಾನು ತಿಳಿದಿರುತ್ತೇನೆ. ॥ ೨೯ ॥ ಕಾಲದ ಮಹಿಮೆಯಿಂದ ಸತ್ತ್ವಗುಣವನ್ನು ಕಳೆದುಕೊಂಡು (ತಾಮಸಿಗಳು), ಈ ಕಾರಣದಿಂದಲೇ ಶಾಸ್ತ್ರನಿರ್ದೇಶಗಳನ್ನು ಉಲ್ಲಂಘಿಸುತ್ತಿರುವ ಸ್ವೇಚ್ಛಾಚಾರಿಗಳಾದ, ಭೂಮಿಗೆ ಭಾರವಾದ ರಾಜರನ್ನು ಸಂಹರಿಸುವ ಸಲುವಾಗಿಯೇ ನೀವಿಬ್ಬರೂ ನನ್ನ ಗರ್ಭದಲ್ಲಿ ಅವತರಿಸಿರುವಿರೆಂಬುದನ್ನೂ ನಾನು ತಿಳಿದಿರುವೆನು. ॥ ೩೦ ॥ ವಿಶ್ವಾತ್ಮನೇ! ನಿನ್ನ ಪುರುಷರೂಪದ ಅಂಶದಿಂದ ಉತ್ಪನ್ನವಾದ ಮಾಯೆಯಿಂದ ಗುಣಗಳು ಹುಟ್ಟುತ್ತವೆ ಮತ್ತು ಅವುಗಳ ಲೇಶಮಾತ್ರ ಅಂಶದಿಂದ ಜಗತ್ತಿನ ಉತ್ಪತ್ತಿ, ವಿನಾಶ, ಲಯಗಳಾಗುತ್ತವೆ. ಈಗ ನಾನು ಅಂತಃಕರಣಪೂರ್ವಕವಾಗಿ ನಿನಗೆ ಶರಣಾಗತಳಾಗಿದ್ದೇನೆ. ॥ ೩೧ ॥ ನಿಮ್ಮ ಗುರುಗಳಾದ ಸಾಂದೀಪನಿಮುನಿಗಳ ಪುತ್ರನು ತೀರಿಹೋಗಿ ಬಹಳ ದಿನಗಳಾಗಿದ್ದವು. ಗುರುದಕ್ಷಿಣೆಯನ್ನು ಕೊಡುವುದಕ್ಕಾಗಿ ಗುರುಗಳ ಆಜ್ಞೆಯಂತೆ ಹಾಗೂ ಕಾಲದ ಪ್ರೇರಣೆಯಂತೆ ನೀವಿಬ್ಬರೂ ಅವರ ಸತ್ತುಹೋದ ಪುತ್ರನನ್ನು ಯಮಲೋಕದಿಂದ ಮರಳಿತಂದು ಕೊಟ್ಟಿರಿ ಎಂದೂ ನಾನು ಕೇಳಿದ್ದೇನೆ. ॥ ೩೨ ॥ ನೀವಿಬ್ಬರೂ ಯೋಗೇಶ್ವರರಿಗೂ ಈಶ್ವರರಾಗಿರುವಿರಿ. ಆದುದರಿಂದಾಗಿ ಇಂದು ನನ್ನ ಅಭಿಲಾಷೆಯನ್ನು ಪೂರ್ಣಗೊಳಿಸಿರಿ. ನೀವಿಬ್ಬರೂ ಕಂಸನು ಅಂದು ಕೊಂದು ಹಾಕಿದ ನನ್ನ ಪುತ್ರರನ್ನು ತಂದು ಕೊಡಿರಿ. ಅವರನ್ನು ಕಣ್ತುಂಬಾ ನೋಡಬೇಕೆಂದು ನಾನು ಬಯಸುತ್ತೇನೆ. ॥ ೩೩ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪ್ರಿಯ ಪರೀಕ್ಷಿತನೇ! ತಾಯಿಯಾದ ದೇವಕಿಯ ಈ ಮಾತನ್ನು ಕೇಳಿ ಭಗವಾನ್ ಶ್ರೀಕೃಷ್ಣ ಮತ್ತು ಬಲರಾಮರಿಬ್ಬರೂ ಯೋಗಮಾಯೆಯನ್ನು ಆಶ್ರಯಿಸಿ ಸುತಲಲೋಕವನ್ನು ಪ್ರವೇಶಿಸಿದರು. ॥ ೩೪ ॥ ಜಗದಾತ್ಮನೂ, ಇಷ್ಟದೇವನೂ, ತನ್ನ ಪರಮಸ್ವಾಮಿಯೂ ಆದ ಭಗವಾನ್ ಶ್ರೀಕೃಷ್ಣನು ಬಲರಾಮನೊಂದಿಗೆ ತನ್ನ ಸುತಲಲೋಕಕ್ಕೆ ಆಗಮಿಸಿರುವರು ಎಂದು ನೋಡಿದ ಬಲಿಚಕ್ರವರ್ತಿಯ ಮನಸ್ಸು ಆನಂದ ಸಾಗರದಲ್ಲಿ ಮುಳುಗಿ ಹೋಯಿತು. ಅವನು ಒಡನೆಯೇ ಆಸನದಿಂದೆದ್ದು ಪರಿವಾರ ಸಹಿತನಾಗಿ ಭಗವಂತನ ಚರಣಗಳಲ್ಲಿ ಸಾಷ್ಟಾಂಗ ನಮಸ್ಕಾರ ಮಾಡಿದನು. ॥ ೩೫ ॥

ತಯೋಃ ಸಮಾನೀಯ ವರಾಸನಂ ಮುದಾ
ನಿವಿಷ್ಟಯೋಸ್ತತ್ರ ಮಹಾತ್ಮನೋಸ್ತಯೋಃ ।
ದಧಾರ ಪಾದಾವವನಿಜ್ಯ ತಜ್ಜಲಂ
ಸವೃಂದ ಆಬ್ರಹ್ಮ ಪುನದ್ಯದಂಬು ಹ ॥ ೩೬ ॥

ಸಮರ್ಹಯಾಮಾಸ ಸ ತೌ ವಿಭೂತಿಭಿ-
ರ್ಮಹಾರ್ಹವಸ್ತ್ರಾಭರಣಾನುಲೇಪನೈಃ ।
ತಾಂಬೂಲದೀಪಾಮೃತಭಕ್ಷಣಾದಿಭಿಃ
ಸ್ವಗೋತ್ರವಿತ್ತಾತ್ಮ ಸಮರ್ಪಣೇನ ಚ ॥ ೩೭ ॥

ಸ ಇಂದ್ರಸೇನೋ ಭಗವತ್ಪದಾಂಬುಜಂ
ಬಿಭ್ರನ್ಮುಹುಃ ಪ್ರೇಮವಿಭಿನ್ನಯಾ ಧಿಯಾ ।
ಉವಾಚ ಹಾನಂದಜಲಾಕುಲೇಕ್ಷಣಃ
ಪ್ರಹೃಷ್ಟರೋಮಾ ನೃಪ ಗದ್ಗದಾಕ್ಷರಮ್ ॥ ೩೮ ॥

ಬಲಿರುವಾಚ

ನಮೋಽನಂತಾಯ ಬೃಹತೇ ನಮಃ ಕೃಷ್ಣಾಯ ವೇಧಸೇ ।
ಸಾಂಖ್ಯಯೋಗವಿತಾನಾಯ ಬ್ರಹ್ಮಣೇ ಪರಮಾತ್ಮನೇ ॥ ೩೯ ॥

ದರ್ಶನಂ ವಾಂ ಹಿ ಭೂತಾನಾಂ ದುಷ್ಪ್ರಾಪಂ ಚಾಪ್ಯದುರ್ಲಭಮ್ ।
ರಜಸ್ತಮಃಸ್ವಭಾವಾನಾಂ ಯನ್ನಃ ಪ್ರಾಪ್ತೌ ಯದೃಚ್ಛಯಾ ॥ ೪೦ ॥

ದೈತ್ಯದಾನವಗಂಧರ್ವಾಃ ಸಿದ್ಧವಿದ್ಯಾಧ್ರಚಾರಣಾಃ ।
ಯಕ್ಷರಕ್ಷಃಪಿಶಾಚಾಶ್ಚ ಭೂತಪ್ರಮಥನಾಯಕಾಃ ॥ ೪೧ ॥

ವಿಶುದ್ಧಸತ್ತ್ವಧಾಮ್ನ್ಯದ್ಧಾ ತ್ವಯಿ ಶಾಸ್ತ್ರಶರೀರಿಣಿ ।
ನಿತ್ಯಂ ನಿಬದ್ಧವೈರಾಸ್ತೇ ವಯಂ ಚಾನ್ಯೇ ಚ ತಾದೃಶಾಃ ॥ ೪೨ ॥

ಕೇಚನೋದ್ಬದ್ಧವೈರೇಣ ಭಕ್ತ್ಯಾ ಕೇಚನ ಕಾಮತಃ ।
ನ ತಥಾ ಸತ್ತ್ವಸಂರಬ್ಧಾಃ ಸಂನಿಕೃಷ್ಟಾಃ ಸುರಾದಯಃ ॥ ೪೩ ॥

ಇದಮಿತ್ಥಮಿತಿ ಪ್ರಾಯಸ್ತವ ಯೋಗೇಶ್ವರೇಶ್ವರ ।
ನ ವಿದಂತ್ಯಪಿ ಯೋಗೇಶಾ ಯೋಗಮಾಯಾಂ ಕುತೋ ವಯಮ್ ॥ ೪೪ ॥

ಆನಂದತುಂದಿಲನಾದ ದೈತ್ಯರಾಜ ಬಲಿಯು ಶ್ರೀಕೃಷ್ಣ-ಬಲರಾಮರನ್ನು ಶ್ರೇಷ್ಠವಾದ ಸಿಂಹಾಸನಗಳಲ್ಲಿ ಕುಳ್ಳಿರಿಸಿದನು. ಅವರು ಸುಖಾಸೀನರಾದ ಬಳಿಕ ಅವರಿಬ್ಬರ ದಿವ್ಯಪಾದಗಳನ್ನು ತೊಳೆದು ಆ ಚರಣೋದಕವನ್ನು ಪರಿವಾರ ಸಹಿತ ತನ್ನ ತಲೆಯಲ್ಲಿ ಧರಿಸಿಕೊಂಡನು. ಪರೀಕ್ಷಿತನೇ! ಭಗವಂತನ ಚರಣೋದಕವು ಬ್ರಹ್ಮಪರ್ಯಂತವಾಗಿ ಸಮಸ್ತ ಜಗತ್ತನ್ನು ಪವಿತ್ರಗೊಳಿಸುತ್ತದೆ. ॥ ೩೬ ॥ ಅನಂತರ ದೈತ್ಯರಾಜನಾದ ಬಲಿಯು ಬಹುಮೂಲ್ಯವಾದ ವಸ್ತ್ರ, ಆಭೂಷಣ, ಚಂದನ, ತಾಂಬೂಲ, ಧೂಪ, ದೀಪ, ಅಮೃತೋಪಮವಾದ ಭೋಜನ ಹಾಗೂ ಇತರ ಸಾಮಗ್ರಿಗಳಿಂದ ಭಗವಂತನನ್ನು ಪೂಜಿಸಿ, ತನ್ನ ಸಮಸ್ತ ಪರಿವಾರ, ಧನ, ಶರೀರಾದಿಗಳನ್ನು ಅವನ ಚರಣಗಳಲ್ಲಿ ಸಮರ್ಪಿಸಿದನು. ॥ ೩೭ ॥ ಪರೀಕ್ಷಿತನೇ! ಬಲಿಚಕ್ರವರ್ತಿಯು ಪದೇ-ಪದೇ ಭಗವಂತನ ಚರಣಕಮಲಗಳನ್ನು ತನ್ನ ವಕ್ಷಸ್ಥಳದಲ್ಲಿ, ಶಿರದಲ್ಲಿರಿಸಿಕೊಂಡು ಪ್ರೇಮಾನಂದದಿಂದ ವಿಹ್ವಲನಾದನು. ಕಣ್ಣುಗಳಿಂದ ಆನಂದಾಶ್ರುಗಳು ಹರಿಯತೊಡಗಿದವು. ರೋಮಕೋಟಿಗಳು ನಿಮಿರಿನಿಂತವು. ಗದ್ಗದಕಂಠದಿಂದ ಭಗವಂತನನ್ನು ಸ್ತುತಿಸತೊಡಗಿದನು. ॥ ೩೮ ॥

ದೈತ್ಯರಾಜ ಬಲಿಯು ಹೇಳಿದನು – ಬಲರಾಮನೇ! ನೀನು ಅನಂತನಾಗಿರುವೆ. ಮಹಾಮಹಿಮನಾದ ನಿನ್ನೊಳಗೆ ಶೇಷನೇ ಮೊದಲಾದ ಸಮಸ್ತ ವಿಗ್ರಹಗಳು ಅಂತರ್ಭೂತವಾಗಿವೆ. ಸಚ್ಚಿದಾನಂದ ಸ್ವರೂಪನಾದ ಶ್ರೀಕೃಷ್ಣನೇ! ಸಮಸ್ತ ಜಗತ್ತನ್ನು ನೀನೇ ಸೃಷ್ಟಿಸಿರುವೆ. ಜ್ಞಾನಯೋಗ-ಭಕ್ತಿಯೋಗಗಳ ಪ್ರವರ್ತಕನೂ ನೀನೇ ಆಗಿದ್ದೀಯೆ. ನೀನೆ ಸಾಕ್ಷಾತ್ ಪರಬ್ರಹ್ಮ ಪರಮಾತ್ಮನು. ನಾನು ನಿಮ್ಮಿಬ್ಬರಿಗೂ ನಮಸ್ಕರಿಸುತ್ತೇನೆ. ॥ ೩೯ ॥ ಭಗವಂತಾ! ನಿಮ್ಮಿಬ್ಬರ ದರ್ಶನವು ಪ್ರಾಣಿಗಳಿಗೆ ಅತ್ಯಂತ ದುರ್ಲಭವಾದುದು. ಹೀಗಿದ್ದರೂ ನಿನ್ನ ಕೃಪೆಯಿಂದ ಅದು ಸುಲಭವಾಗುತ್ತದೆ. ಏಕೆಂದರೆ, ಇಂದು ನೀನು ದಯೆಗೈದು ರಜೋಗುಣೀ ಹಾಗೂ ತಮೋಗುಣಿಗಳಾದ ನಮ್ಮಂತಹ ದೈತ್ಯರಿಗೂ ದರ್ಶನವಿತ್ತಿಹೆ. ॥ ೪೦ ॥ ಪ್ರಭುವೇ! ಸಾಕ್ಷಾತ್ ವೇದಮಯವೂ, ವಿಶುದ್ಧಸತ್ತ್ವಮಯವೂ ಆದ ನಿನ್ನ ಶ್ರೀವಿಗ್ರಹವನ್ನು ನಾವು ಮತ್ತು ನಮ್ಮಂತೆಯೇ ಇರುವ ಇತರ ದೈತ್ಯರು ದ್ವೇಷಿಸುತ್ತೇವೆ. ಹಾಗೆಯೇ ದಾನವರೂ, ಗಂಧರ್ವರೂ, ಸಿದ್ಧರೂ, ವಿದ್ಯಾಧರರೂ ಚಾರಣರೂ, ಯಕ್ಷರೂ, ರಾಕ್ಷಸರೂ, ಪಿಶಾಚಿಗಳೂ ಭೂತ-ಪ್ರಮಥಾದಿಗಳು ನಿನ್ನನ್ನು ಭಜಿಸುವುದಿರಲಿ ನಿನ್ನಲ್ಲಿ ಸದಾಕಾಲ ದೃಢವಾದ ವೈರವನ್ನೇ ಇರಿಸುತ್ತಾರೆ. ಆದರಿಂದಲೇ ನಮ್ಮಲ್ಲಿ ಅನೇಕರು ದೃಢವಾದ ವೈರಭಾವದಿಂದ, ಕೆಲವರು ಭಕ್ತಿಯಿಂದ, ಕೆಲವರು ಕಾಮನೆಯಿಂದ ನಿನ್ನನ್ನು ಸ್ಮರಿಸಿ – ನಿನ್ನ ಸಮೀಪದಲ್ಲೇ ಇರುವ ಸತ್ತ್ವಪ್ರಧಾನರಾದ ದೇವತೆಗಳಿಗೂ ಪ್ರಾಪ್ತವಾಗದಿರುವ ಆ ಪರಮಪದವನ್ನು ಪಡೆದುಕೊಂಡಿರುವರು. ॥ ೪೧-೪೩ ॥ ಯೋಗೇಶ್ವರರ ಅಧೀಶ್ವರನೇ! ನಿನ್ನ ಯೋಗಮಾಯೆಯು ಹೀಗೆಯೇ ಇದೆ ಎಂಬುದನ್ನು ದೊಡ್ಡ-ದೊಡ್ಡ ಯೋಗೇಶ್ವರರೂ ಪ್ರಾಯಶಃ ತಿಳಿಯಲಾರರು. ಅಂತಿರುವಾಗ ನಮ್ಮಂತಹವರ ಮಾತೇನು? ॥ ೪೪ ॥

ತಸ್ಮಾತ್ ಪ್ರಸೀದ ನಿರಪೇಕ್ಷವಿಮೃಗ್ಯಯುಷ್ಮತ್-
ಪಾದಾರವಿಂದಧಿಷಣಾನ್ಯಗೃಹಾಂಧಕೂಪಾತ್ ।
ನಿಷ್ಕ್ರಮ್ಯ ವಿಶ್ವಶರಣಾಂಘ್ರ್ಯುಪಲಬ್ಧವೃತ್ತಿಃ
ಶಾಂತೋ ಯಥೈಕ ಉತ ಸರ್ವಸಖೈಶ್ಚರಾಮಿ ॥ ೪೫ ॥

ಶಾಧ್ಯಸ್ಮಾನೀಶಿತವ್ಯೇಶ ನಿಷ್ಪಾಪಾನ್ಕುರು ನಃ ಪ್ರಭೋ ।
ಪುಮಾನ್ಯಚ್ಛ್ರದ್ಧಯಾಽಽತಿಷ್ಠಂಶ್ಚೋದನಾಯಾ ವಿಮುಚ್ಯತೇ
॥ ೪೬ ॥

ಶ್ರೀಭಗವಾನುವಾಚ

ಆಸನ್ ಮರೀಚೇಃ ಷಟ್ ಪುತ್ರಾ
ಊರ್ಣಾಯಾಂ ಪ್ರಥಮೇಽಂತರೇ ।
ದೇವಾಃ ಕಂ ಜಹಸುರ್ವೀಕ್ಷ್ಯ
ಸುತಾಂ ಯಭಿತುಮುದ್ಯತಮ್ ॥ ೪೭ ॥

ತೇನಾಸುರೀಮಗನ್ಯೋನಿಮಧುನಾವದ್ಯಕರ್ಮಣಾ ।
ಹಿರಣ್ಯಕಶಿಪೋರ್ಜಾತಾ ನೀತಾಸ್ತೇ ಯೋಗಮಾಯಯಾ
॥ ೪೮ ॥

ದೇವಕ್ಯಾ ಉದರೇ ಜಾತಾ ರಾಜನ್ ಕಂಸವಿಹಿಂಸಿತಾಃ ।
ಸಾ ತಾನ್ ಶೋಚತ್ಯಾತ್ಮಜಾನ್ಸ್ವಾಂಸ್ತ ಇಮೇಽಧ್ಯಾಸತೇಽಂತಿಕೇ
॥ ೪೯ ॥

ಇತ ಏತಾನ್ಪ್ರಣೇಷ್ಯಾಮೋ ಮಾತೃಶೋಕಾಪನುತ್ತಯೇ ।
ತತಃ ಶಾಪಾದ್ವಿನಿರ್ಮುಕ್ತಾ ಲೋಕಂ ಯಾಸ್ಯಂತಿ ವಿಜ್ವರಾಃ
॥ ೫೦ ॥

ಸ್ಮರೋದ್ಗೀಥಃ ಪರಿಷ್ವಂಗಃ ಪತಂಗಃ ಕ್ಷುದ್ರಭೃದ್ಘೃಣೀ ।
ಷಡಿಮೇ ಮತ್ಪ್ರಸಾದೇನ ಪುನರ್ಯಾಸ್ಯಂತಿ ಸದ್ಗತಿಮ್
॥ ೫೧ ॥

ಇತ್ಯುಕ್ತ್ವಾ ತಾನ್ಸಮಾದಾಯ ಇಂದ್ರಸೇನೇನ ಪೂಜಿತೌ ।
ಪುನರ್ದ್ವಾರವತೀಮೇತ್ಯ ಮಾತುಃ ಪುತ್ರಾನಯಚ್ಛತಾಮ್
॥ ೫೨ ॥

ತಾನ್ದೃಷ್ಟ್ವಾ ಬಾಲಕಾನ್ ದೇವೀ ಪುತ್ರಸ್ನೇಹಸ್ನುತಸ್ತನೀ ।
ಪರಿಷ್ವಜ್ಯಾಂಕಮಾರೋಪ್ಯ ಮೂರ್ಧ್ನ್ಯಜಿಘ್ರದಭೀಕ್ಷ್ಣಶಃ
॥ ೫೩ ॥

ಅದಕ್ಕಾಗಿ ಸ್ವಾಮಿ! ಯಾವುದರ ಅಪೇಕ್ಷೆಯೂ ಇಲ್ಲದಿರುವ ಪರಮಹಂಸರು ಸದಾ ಹುಡುಕುತ್ತಿರುವ ನಿನ್ನ ಚರಣಕಮಲಗಳಲ್ಲಿ ನನ್ನ ಚಿತ್ತವೃತ್ತಿಯು ನೆಲೆಗೊಳ್ಳುವಂತೆ ನನ್ನ ಮೇಲೆ ಕೃಪೆಮಾಡು. ಅದನ್ನು ಆಶ್ರಯಿಸಿದ ನಾನು ಅದಕ್ಕಿಂತ ಭಿನ್ನವಾದ ಈ ಅಂಧಕಾರಮಯ ಸಂಸಾರಕೂಪದಿಂದ ಪಾರಾಗಿ ಹೋಗುವೆನು. ಪ್ರಭೋ! ಹೀಗೆ ಸಮಸ್ತ ಜಗತ್ತಿಗೆ ಏಕಮಾತ್ರ ಆಶ್ರಯವಾದ ನಿನ್ನ ಚರಣಕಮಲಗಳಲ್ಲಿ ಶರಣಾಗಿ ಶಾಂತನಾಗುವೆನು. ಒಬ್ಬಂಟಿಗನಾಗಿ ಸಂಚರಿಸುವೆನು. ಯಾರದಾದರೂ ಸಂಗವನ್ನು ಮಾಡಲೇ ಬೇಕೆಂದಾಗ ಸಮಸ್ತರ ಪರಮ ಹಿತೈಷಿಗಳಾದ ಸಂತರ ಸಂಗವೇ ಮಾಡುವೆನು. ॥ ೪೫ ॥ ಪ್ರಭೋ! ನೀನು ಸಮಸ್ತ ಚರಾಚರ ಜಗತ್ತಿನ ನಿಯಾಮಕನೂ, ಒಡೆಯನೂ ಆಗಿರುವೆ. ನೀನು ನಮಗೆ ಆಜ್ಞಾಪಿಸಿ ನಿಷ್ಪಾಪರನ್ನಾಗಿ ಮಾಡು. ನಮ್ಮ ಪಾಪಗಳನ್ನು ನಾಶ ಮಾಡಿಬಿಡು. ಏಕೆಂದರೆ, ಶ್ರದ್ಧೆಯಿಂದ ನಿನ್ನ ಆಜ್ಞೆಯನ್ನು ಪಾಲಿಸುವವನು ವಿಧಿ-ನಿಷೇಧಗಳ ಬಂಧನಗಳಿಂದ ಬಿಡುಗಡೆ ಹೊಂದುವನು. ॥ ೪೬ ॥

ಭಗವಾನ್ ಶ್ರೀಕೃಷ್ಣನು ಹೇಳಿದನು - ರಾಜನೇ! ಸ್ವಾಯಂಭುವ ಮನ್ವಂತರಗಳಲ್ಲಿ ಪ್ರಜಾಪತಿಯಾದ ಮರೀಚಿಯ ಪತ್ನೀ ಊರ್ಣಾಳ ಗರ್ಭದಿಂದ ಆರು ಮಂದಿ ಪುತ್ರರು ಹುಟ್ಟಿದ್ದರು. ಅವರೆಲ್ಲರೂ ದೇವತೆಗಳೇ ಆಗಿದ್ದರು. ಒಮ್ಮೆ ಬ್ರಹ್ಮನು ತನ್ನ ಪುತ್ರಿಯರೊಂದಿಗೆ ಸಮಾಗಮ ಮಾಡಲಿದ್ದುದನ್ನು ಕಂಡು ಅವರು ನಕ್ಕುಬಿಟ್ಟರು. ॥ ೪೭ ॥ ಇಂತಹ ಉಪಹಾಸರೂಪವಾದ ಅಪರಾಧದಿಂದ ಅವರಿಗೆ ಬ್ರಹ್ಮದೇವರು ಶಾಪವನ್ನಿತ್ತರು ಹಾಗೂ ಅವರು ಅಸುರ ಯೋನಿಯಲ್ಲಿ ಹಿರಣ್ಯಕಶಿಪುವಿನ ಪುತ್ರರಾಗಿ ಹುಟ್ಟಿದರು. ಆಗ ಯೋಗಮಾಯೆಯು ಅವರನ್ನು ಅಲ್ಲಿಂದ ತಂದು ದೇವಕಿಯ ಗರ್ಭದಲ್ಲಿರಿಸಿದಳು. ಅವರು ಹುಟ್ಟುತ್ತಲೇ ಕಂಸನು ಕೊಂದುಹಾಕಿದನು. ದೈತ್ಯರಾಜನೇ! ನನ್ನ ತಾಯಿಯಾದ ದೇವಕಿಯು ಆ ಪುತ್ರರಿಗಾಗಿ ಅತ್ಯಂತ ಶೋಕಾತುರಳಾಗಿರುವಳು. ಆ ಮಕ್ಕಳು ನಿನ್ನ ಬಳಿಯಲ್ಲೇ ಇದ್ದಾರೆ. ॥ ೪೮-೪೯ ॥ ಆದ್ದರಿಂದ ನಾವು ನಮ್ಮ ತಾಯಿಯ ಶೋಕವನ್ನು ದೂರಗೊಳಿಸಲಿಕ್ಕಾಗಿ ಇವರನ್ನು ಇಲ್ಲಿಂದ ಕೊಂಡುಹೋಗುವೆವು. ಅನಂತರ ಇವರು ಶಾಪದಿಂದ ಮುಕ್ತರಾಗಿ ಆನಂದಭರಿತರಾಗಿ ತಮ್ಮ ಲೋಕಗಳಿಗೆ ಹೊರಟುಹೋಗುವರು. ॥ ೫೦ ॥ ಈಗ ನಿನ್ನ ಬಳಿಯಲ್ಲಿರುವ ಸ್ಮರ, ಉದ್ಗೀಥ, ಪರಿಷ್ವಂಗ, ಪತಂಗ, ಕ್ಷುದ್ರಭೃತ್ ಮತ್ತು ಘೃಣಿ - ಎಂಬ ಈ ಮಕ್ಕಳು, ನನ್ನ ಕೃಪೆಯಿಂದಾಗಿ ಪುನಃ ಅವರಿಗೆ ಸದ್ಗತಿಯು ದೊರೆಯುತ್ತದೆ. ॥ ೫೧ ॥ ಪರೀಕ್ಷಿತನೇ! ಇಷ್ಟು ಹೇಳಿ ಭಗವಾನ್ ಶ್ರೀಕೃಷ್ಣನು ಸುಮ್ಮನಾದನು. ದೈತ್ಯರಾಜ ಬಲಿಚಕ್ರವರ್ತಿಯು ಪುನಃ ಅವರನ್ನು ಪೂಜಿಸಿದನು. ಅನಂತರ ಶ್ರೀಕೃಷ್ಣ ಬಲರಾಮರು ಆ ಮಕ್ಕಳನ್ನು ಕರೆದುಕೊಂಡು ದ್ವಾರಕೆಗೆ ಬಂದು ತಾಯಿ ದೇವಕಿಗೆ ಒಪ್ಪಿಸಿದರು. ॥ ೫೨ ॥ ಆ ಬಾಲಕರನ್ನು ನೋಡಿ ದೇವಕೀದೇವಿಯ ಹೃದಯ ವಾತ್ಸಲ್ಯದಿಂದ ತುಂಬಿಹೋಗಿ ಸ್ತನಗಳಿಂದ ಹಾಲು ಒಸರತೊಡಗಿತು. ಆಕೆಯು ಮತ್ತೆ-ಮತ್ತೆ ಅವರನ್ನು ಆಲಿಂಗಿಸಿ ತೊಡೆಯಲ್ಲಿ ಕುಳ್ಳಿರಿಸಿಕೊಂಡು ನೆತ್ತಿಯನ್ನು ಆಘ್ರಾಣಿಸಿದಳು. ॥ ೫೩ ॥

ಅಪಾಯಯತ್ ಸ್ತನಂ ಪ್ರೀತಾ ಸುತಸ್ಪರ್ಶಪರಿಸ್ನುತಾ ।
ಮೋಹಿತಾ ಮಾಯಯಾ ವಿಷ್ಣೋರ್ಯಯಾ ಸೃಷ್ಟಿಃ ಪ್ರವರ್ತತೇ ॥ ೫೪ ॥

ಪುತ್ರರ ಸ್ಪರ್ಶದಿಂದ ಆನಂದಸಾಗರದಲ್ಲಿ ಮುಳುಗಿಹೋಗಿದ್ದ ದೇವಕಿಯು ಅವರೆಲ್ಲರಿಗೂ ಸ್ತನ್ಯಪಾನ ಮಾಡಿಸಿದಳು. ಆ ಸಮಯದಲ್ಲಿ ಆಕೆಯು ಸೃಷ್ಟಿಗೆ ಮೂಲಕಾರಣನಾದ ಭಗವಾನ್ ಶ್ರೀವಿಷ್ಣುವಿನ ಯೋಗಮಾಯೆಯಿಂದ ಮೋಹಿತಳಾಗಿದ್ದಳು. ॥ ೫೪ ॥

ಪೀತ್ವಾಮೃತಂ ಪಯಸ್ತಸ್ಯಾಃ ಪೀತಶೇಷಂ ಗದಾಭೃತಃ ।
ನಾರಾಯಣಾಂಗಸಂಸ್ಪರ್ಶಪ್ರತಿಲಬ್ಧಾತ್ಮದರ್ಶನಾಃ ॥ ೫೫ ॥

ಪರೀಕ್ಷಿತನೇ! ದೇವಕಿಯ ಎದೆ ಹಾಲು ಶ್ರೀಕೃಷ್ಣನು ಉಂಡು ಮಿಕ್ಕಿದ್ದರಿಂದ ಅದು ಅಮೃತಮಯವೇ ಆಗಿತ್ತು. ಆ ಬಾಲಕರೂ ಆ ಅಮೃತಮಯ ಎದೆಹಾಲನ್ನು ಕುಡಿದುದರಿಂದಲೂ, ಶ್ರೀಕೃಷ್ಣನ ಅಂಗಸ್ಪರ್ಶದಿಂದಲೂ ಯೋಗಿಗಳಿಗೂ ದುರ್ಲಭವಾದ ಆತ್ಮ ಸಾಕ್ಷಾತ್ಕಾರವನ್ನೇ ಪಡೆದುಕೊಂಡರು. ॥ ೫೫ ॥

ತೇ ನಮಸ್ಕೃತ್ಯ ಗೋವಿಂದಂ ದೇವಕೀಂ ಪಿತರಂ ಬಲಮ್ ।
ಮಿಷತಾಂ ಸರ್ವಭೂತಾನಾಂ ಯಯುರ್ಧಾಮ ದಿವೌಕಸಾಮ್ ॥ ೫೬ ॥

ಅನಂತರ ಆ ಬಾಲಕರು ಭಗವಾನ್ ಶ್ರೀಕೃಷ್ಣನಿಗೆ, ತಾಯಿ ದೇವಕಿಗೆ, ತಂದೆ ವಸುದೇವನಿಗೆ ಮತ್ತು ಬಲರಾಮನಿಗೆ ನಮಸ್ಕಾರ ಮಾಡಿ ಎಲ್ಲರೂ ನೋಡುತ್ತಿರುವಂತೆಯೇ ದೇವಲೋಕಕ್ಕೆ ಹೊರಟು ಹೋದರು. ॥ ೫೬ ॥

ತಂ ದೃಷ್ಟ್ವಾ ದೇವಕೀ ದೇವೀ ಮೃತಾಗಮನನಿರ್ಗಮಮ್ ।
ಮೇನೇ ಸುವಿಸ್ಮಿತಾ ಮಾಯಾಂ ಕೃಷ್ಣಸ್ಯ ರಚಿತಾಂ ನೃಪ ॥ ೫೭ ॥

ಪರೀಕ್ಷಿತನೇ! ದೇವಕೀದೇವಿಯು ತನ್ನ ಸತ್ತುಹೋಗಿರುವ ಮಕ್ಕಳು ಮರಳಿ ಬಂದರು ಮತ್ತು ಪುನಃ ಹೊರಟುಹೋದರು ಇದನ್ನು ಕಂಡು ಅತ್ಯಂತ ವಿಸ್ಮಿತಳಾದಳು. ಇದು ಶ್ರೀಕೃಷ್ಣನ ಯಾವುದೋ ಲೀಲಾ ಕೌಶಲ್ಯವೇ ಆಗಿರಬೇಕೆಂದು ಆಕೆಯು ನಿಶ್ಚಯಿಸಿಕೊಂಡಳು. ॥ ೫೭ ॥

ಏವಂವಿಧಾನ್ಯದ್ಭುತಾನಿ ಕೃಷ್ಣಸ್ಯ ಪರಮಾತ್ಮನಃ ।
ವೀರ್ಯಾಣ್ಯನಂತವೀರ್ಯಸ್ಯ ಸಂತ್ಯನಂತಾನಿ ಭಾರತ ॥ ೫೮ ॥

ಪರೀಕ್ಷಿತನೇ! ಭಗವಾನ್ ಶ್ರೀಕೃಷ್ಣನು ಸಾಕ್ಷಾತ್ ಪರಮಾತ್ಮನಾಗಿದ್ದು, ಅವನ ಶಕ್ತಿ ಅನಂತವಾಗಿದೆ. ಅವನ ಇಂತಹ ಅದ್ಭುತ ಚರಿತ್ರೆಗಳು ಅಪಾರವಾಗಿವೆ. ಎಷ್ಟು ಹೇಳಿದರೂ ಮುಗಿಯದಷ್ಟು ಅವನ ಲೀಲಾಪ್ರಸಂಗಗಳಿವೆ. ॥ ೫೮ ॥

ಸೂತ ಉವಾಚ

ಯ ಇದಮನುಶೃಣೋತಿ ಶ್ರಾವಯೇದ್ವಾ ಮುರಾರೇ-
ಶ್ಚರಿತಮಮೃತಕೀರ್ತೇರ್ವರ್ಣಿತಂ ವ್ಯಾಸಪುತ್ರೈಃ ।
ಜಗದಘಭಿದಲಂ ತದ್ ಭಕ್ತಸತ್ಕರ್ಣಪೂರಂ
ಭಗವತಿ ಕೃತಚಿತ್ತೋ ಯಾತಿ ತತ್ ಕ್ಷೇಮಧಾಮ ॥ ೫೯ ॥

ಸೂತಪುರಾಣಿಕರು ಹೇಳುತ್ತಾರೆ - ಶೌನಕಾದಿ ಮಹರ್ಷಿಗಳೇ! ಭಗವಾನ್ ಶ್ರೀಕೃಷ್ಣನ ಕೀರ್ತಿಯು ಅಮರವೂ, ಅಮೃತಮಯವೂ ಆಗಿದೆ. ವ್ಯಾಸನಂದನರಾದ ಭಗವಾನ್ ಶ್ರೀಶುಕಮುನಿಯಿಂದ ಹೇಳಲ್ಪಟ್ಟ ಅವನ ಚರಿತಾಮೃತವು ಭಕ್ತಜನರ ಪಾಪ ನಿವಾರಕವೂ, ಶ್ರೋತ್ರಾನಂದಕರವೂ ಆಗಿದೆ. ಇದನ್ನು ಶ್ರವಣ ಮಾಡುವವನ, ಇತರರಿಗೆ ಹೇಳುವವನ, ಚಿತ್ತವೃತ್ತಿಗಳು ಭಗವಂತನಲ್ಲಿ ನೆಲಸಿ, ಪರಮಾತ್ಮನ ಪರಮಪದವನ್ನು ಪಡೆಯುವನು. ॥ ೫೯ ॥

ಎಂಭತ್ತೈದನೆಯ ಅಧ್ಯಾಯವು ಮುಗಿಯಿತು. ॥ ೮೫ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮಸ್ಕಂಧೇ ಉತ್ತರಾರ್ಧೇ
ಮೃತಾಗ್ರಜಾನಯನಂ ನಾಮ ಪಂಚಾಶೀತಿತಮೋಽಧ್ಯಾಯಃ ॥ ೮೫ ॥

ಎಂಭತ್ತಾರನೆಯ ಅಧ್ಯಾಯ

ಸುಭದ್ರಾಹರಣ - ಭಗವಾನ್ ಶ್ರೀಕೃಷ್ಣನು ಮಿಥಿಲೆಯ ರಾಜನಾದ ಜನಕನ ಅರಮನೆಗೂ ಮತ್ತು ಶ್ರುತದೇವ ಬ್ರಾಹ್ಮಣನ ಮನೆಗೂ ಏಕಕಾಲದಲ್ಲಿ ಪ್ರವೇಶಿಸಿದುದು

ರಾಜೋವಾಚ

ಬ್ರಹ್ಮನ್ ವೇದಿತುಮಿಚ್ಛಾಮಃ ಸ್ವಸಾರಂ ರಾಮಕೃಷ್ಣಯೋಃ ।
ಯಥೋಪಯೇಮೇ ವಿಜಯೋ
ಯಾ ಮಮಾಸೀತ್ ಪಿತಾಮಹೀ ॥ ೧ ॥

ಪರೀಕ್ಷಿದ್ರಾಜನು ಕೇಳಿದನು - ಪೂಜ್ಯರೇ! ನನ್ನ ತಾತನಾದ ಅರ್ಜುನನು ಶ್ರೀಕೃಷ್ಣ ಬಲರಾಮರ ತಂಗಿಯಾದ, ನನ್ನ ಅಜ್ಜಿಯಾದ ಸುಭದ್ರೆಯನ್ನು ಹೇಗೆ ಮದುವೆಯಾದನು? ಇದನ್ನು ಕೇಳಲು ನಾನು ಬಹಳ ಉತ್ಸುಕನಾಗಿದ್ದೇನೆ. ॥ ೧ ॥

ಶ್ರೀಶುಕ ಉವಾಚ

ಅರ್ಜುನಸ್ತೀರ್ಥಯಾತ್ರಾಯಾಂ ಪರ್ಯಟನ್ನವನೀಂ ಪ್ರಭುಃ ।
ಗತಃ ಪ್ರಭಾಸಮಶೃಣೋನ್ಮಾತುಲೇಯೀಂ ಸ ಆತ್ಮನಃ ॥ ೨ ॥

ದುರ್ಯೋಧನಾಯ ರಾಮಸ್ತಾಂ ದಾಸ್ಯತೀತಿ ನ ಚಾಪರೇ ।
ತಲ್ಲಿಪ್ಸುಃ ಸ ಯತಿರ್ಭೂತ್ವಾ ತ್ರಿದಂಡೀ ದ್ವಾರಕಾಮಗಾತ್ ॥ ೩ ॥

ತತ್ರ ವೈ ವಾರ್ಷಿಕಾನ್ ಮಾಸಾನವಾತ್ಸೀತ್ಸ್ವಾರ್ಥಸಾಧಕಃ ।
ಪೌರೈಃ ಸಭಾಜಿತೋಽಭೀಕ್ಷ್ಣಂ ರಾಮೇಣಾಜಾನತಾ ಚ ಸಃ ॥ ೪ ॥

ಏಕದಾ ಗೃಹಮಾನೀಯ ಆತಿಥ್ಯೇನ ನಿಮಂತ್ರ್ಯ ತಮ್ ।
ಶ್ರದ್ಧಯೋಪಹೃತಂ ಭೈಕ್ಷ್ಯಂ ಬಲೇನ ಬುಭುಜೇ ಕಿಲ ॥ ೫ ॥

ಸೋಽಪಶ್ಯತ್ತತ್ರ ಮಹತೀಂ ಕನ್ಯಾಂ ವೀರಮನೋಹರಾಮ್ ।
ಪ್ರೀತ್ಯುತ್ಫುಲ್ಲೇಕ್ಷಣಸ್ತಸ್ಯಾಂ ಭಾವಕ್ಷುಬ್ಧಂ ಮನೋ ದಧೇ ॥ ೬ ॥

ಸಾಪಿ ತಂ ಚಕಮೇ ವೀಕ್ಷ್ಯ ನಾರೀಣಾಂ ಹೃದಯಂಗಮಮ್ ।
ಹಸಂತೀ ವ್ರೀಡಿತಾಪಾಂಗೀ ತನ್ನ್ಯಸ್ತಹೃದಯೇಕ್ಷಣಾ ॥ ೭ ॥

ತಾಂ ಪರಂ ಸಮನುಧ್ಯಾಯನ್ನಂತರಂ ಪ್ರೇಪ್ಸುರರ್ಜುನಃ ।
ನ ಲೇಭೇ ಶಂ ಭ್ರಮಚ್ಚಿತ್ತಃ ಕಾಮೇನಾತಿಬಲೀಯಸಾ ॥ ೮ ॥

ಮಹತ್ಯಾಂ ದೇವಯಾತ್ರಾಯಾಂ ರಥಸ್ಥಾಂ ದುರ್ಗನಿರ್ಗತಾಮ್ ।
ಜಹಾರಾನುಮತಃ ಪಿತ್ರೋಃ ಕೃಷ್ಣಸ್ಯ ಚ ಮಹಾರಥಃ ॥ ೯ ॥

ಶ್ರೀಶುಕಮಹಾಮುನಿಗಳು ಹೇಳಿದರು – ಪರೀಕ್ಷಿತನೇ! ಒಮ್ಮೆ ಪ್ರಭಾವಶಾಲಿಯಾದ ಅರ್ಜುನನು ತೀರ್ಥಯಾತ್ರೆಯನ್ನು ಮಾಡುತ್ತಾ ಭೂಮಂಡಲದಲ್ಲಿ ಸಂಚರಿಸುತ್ತಿದ್ದಾಗ ಪ್ರಭಾಸಕ್ಷೇತ್ರಕ್ಕೆ ಆಗಮಿಸಿದನು. ಅಲ್ಲಿ ಅವನು ತಮ್ಮ ಸೋದರ ಮಾವನ ಮಗಳಾದ ಸುಭದ್ರೆಯನ್ನು ದುರ್ಯೋಧನನಿಗೆ ಕೊಟ್ಟು ಮದುವೆ ಮಾಡಲು ಬಲರಾಮನು ನಿಶ್ಚಯಿಸಿದ್ದಾನೆಂದೂ, ಇದಕ್ಕೆ ವಸುದೇವನ ಮತ್ತು ಶ್ರೀಕೃಷ್ಣನ ಸಹಮತವಿಲ್ಲವೆಂದೂ ಕೇಳಿದನು. ಆಗ ಅರ್ಜುನನ ಮನಸ್ಸಿನಲ್ಲಿ ಸುಭದ್ರೆಯನ್ನು ತಾನು ಮದುವೆಯಾಗಬೇಕೆಂಬ ಆಸೆಯು ಅಂಕುರಿಸಿತು. ಇದನ್ನು ಸಾಧಿಸಲಿಕ್ಕಾಗಿ ತ್ರಿದಂಡೀ ಸಂನ್ಯಾಸಿ ವೇಷವನ್ನು ಧರಿಸಿ ಅವನು ದ್ವಾರಕೆಗೆ ಹೋದನು. ॥ ೨-೩ ॥ ಅರ್ಜುನನು ಸುಭದ್ರೆಯನ್ನು ಪಡೆದುಕೊಳ್ಳಲು ದ್ವಾರಕೆಯಲ್ಲಿ ವರ್ಷಾಕಾಲದ ನಾಲ್ಕು ತಿಂಗಳು ತಂಗಿದನು. ಅಲ್ಲಿ ನಗರವಾಸಿಗಳೂ, ಬಲರಾಮನೂ ಅವನನ್ನು ಬಹಳವಾಗಿ ಸನ್ಮಾನಿಸಿದರು. ಆದರೆ ಇವನು ಅರ್ಜುನನೆಂದು ಅವರಿಗೆ ತಿಳಿಯಲಿಲ್ಲ. ॥ ೪ ॥

ಒಂದು ದಿನ ಬಲರಾಮನು ಆತಿಥ್ಯವನ್ನು ನೀಡಲು ಆ ಸಂನ್ಯಾಸಿಯನ್ನು ತಮ್ಮ ಅರಮನೆಗೆ ಕರೆದುಕೊಂಡು ಬಂದನು. ಸಂನ್ಯಾಸಿ ವೇಷಧಾರಿಯಾದ ಅರ್ಜುನನಿಗೆ ಬಲರಾಮನು ಬಹಳ ಶ್ರದ್ಧೆಯೊಂದಿಗೆ ಮೃಷ್ಟಾನ್ನವನ್ನು ಭೋಜನಮಾಡಿಸಿದನು. ॥ ೫ ॥ ಅರ್ಜುನನು ಭೋಜನಮಾಡುವಾಗ ಅಲ್ಲಿ ವಿವಾಹಯೋಗ್ಯಳಾದ ಪರಮ ಸುಂದರಿಯಾದ ಸುಭದ್ರೆಯನ್ನು ನೋಡಿದನು. ಆಕೆಯ ಸೌಂದರ್ಯವು ಮಹಾ-ಮಹಾವೀರರ ಮನಸ್ಸನ್ನು ಅಪಹರಿಸುವಂತಹುದಿತ್ತು. ಆಕೆಯನ್ನು ನೋಡಿ ಅರ್ಜುನನ ಕಣ್ಣುಗಳು ಅರಳಿದವು. ಅವಳನ್ನು ಪಡೆಯಬೇಕೆಂಬ ಆಕಾಂಕ್ಷೆಯಿಂದ ಅವನ ಮನಸ್ಸು ಕ್ಷುಬ್ಧವಾಯಿತು ಮತ್ತು ಅವಳನ್ನು ಪತ್ನಿಯಾಗಿಸಿಕೊಳ್ಳಬೇಕೆಂದು ನಿಶ್ಚಯಿಸಿದನು. ॥ ೬ ॥ ಪರೀಕ್ಷಿತನೇ! ನಿನ್ನ ತಾತನಾದ ಅರ್ಜುನನೂ ತುಂಬಾ ಸುಂದರನಾಗಿದ್ದನು. ಅವನ ಸೌಂದರ್ಯಕ್ಕೆ ಆಕರ್ಷಿತರಾಗದ ಸ್ತ್ರೀಯರೇ ಇರಲಿಲ್ಲ. ಅಂತಹ ಸುಂದರ ಪುರುಷನನ್ನು ನೋಡಿದ ಸುಭದ್ರೆಯೂ ಕೂಡ ಅವನನ್ನೇ ಪತಿಯನ್ನಾಗಿ ವರಿಸಲು ನಿಶ್ಚಯಿಸಿದಳು. ಅವಳು ಸ್ವಲ್ಪ ಮುಗುಳ್ನಕ್ಕು ನಾಚಿಕೆಯಿಂದ ಕೂಡಿದ ಓರೆಗಣ್ಣನೋಟದಿಂದ ಅವನನ್ನು ನೋಡಿದಳು. ಆಕೆಯು ತನ್ನ ಹೃದಯವನ್ನು ಅವನಿಗೆ ಸಮರ್ಪಿಸಿಬಿಟ್ಟಳು. ॥ ೭ ॥ ಈಗ ಅರ್ಜುನನು ಕೇವಲ ಆಕೆಯ ಚಿಂತೆಯಲ್ಲೇ ಇದ್ದು, ಇವಳನ್ನು ಯಾವಾಗ ಅಪಹರಿಸಿಕೊಂಡು ಹೋಗಬಹುದೆಂದು ಸಂದರ್ಭವನ್ನು ಹುಡುಕುತ್ತಿದ್ದನು. ಸುಭದ್ರೆಯನ್ನು ಪಡೆಯುವ ಉತ್ಕಟ ಕಾಮನೆಯಿಂದ ಅವನ ಚಿತ್ತವು ಚಂಚಲವಾಗಿ, ಅವನಿಗೆ ಸ್ವಲ್ಪವೂ ಶಾಂತಿಯೇ ಇಲ್ಲದಂತಾಯಿತು. ॥ ೮ ॥

ಒಮ್ಮೆ ಸುಭದ್ರೆಯು ದೇವರ ದರ್ಶನಕ್ಕಾಗಿ ರಥದಲ್ಲಿ ಕುಳಿತುಕೊಂಡು ದ್ವಾರಕೆಯ ದುರ್ಗದಿಂದ ಹೊರಗೆ ಹೊರಟಳು. ಅದೇ ಸಮಯದಲ್ಲಿ ಅರ್ಜುನನು ವಸುದೇವ-ದೇವಕಿಯ ಮತ್ತು ಶ್ರೀಕೃಷ್ಣನ ಅನುಮತಿಯನ್ನು ಪಡೆದು ಸುಭದ್ರೆಯನ್ನು ಅಪಹರಿಸಿಕೊಂಡು ಹೋದನು. ॥ ೯ ॥

ರಥಸ್ಥೋ ಧನುರಾದಾಯ ಶೂರಾಂಶ್ಚಾರುಂಧತೋ ಭಟಾನ್ ।
ವಿದ್ರಾವ್ಯ ಕ್ರೋಶತಾಂ ಸ್ವಾನಾಂ ಸ್ವಭಾಗಂ ಮೃಗರಾಡಿವ ॥ ೧೦ ॥

ತಚ್ಛ್ರುತ್ವಾ ಕ್ಷುಭಿತೋ ರಾಮಃ ಪರ್ವಣೀವ ಮಹಾರ್ಣವಃ ।
ಗೃಹೀತಪಾದಃ ಕೃಷ್ಣೇನ ಸುಹೃದ್ಭಿಶ್ಚಾನುಸಾಂತ್ವಿತಃ ॥ ೧೧ ॥

ಪ್ರಾಹಿಣೋತ್ಪಾರಿಬರ್ಹಾಣಿ ವರವಧ್ವೋರ್ಮುದಾ ಬಲಃ ।
ಮಹಾಧನೋಪಸ್ಕರೇಭರಥಾಶ್ವನರಯೋಷಿತಃ ॥ ೧೨ ॥

ಶ್ರೀಶುಕ ಉವಾಚ

ಕೃಷ್ಣಸ್ಯಾಸೀದ್ದ್ವಿಜಶ್ರೇಷ್ಠಃ ಶ್ರುತದೇವ ಇತಿ ಶ್ರುತಃ ।
ಕೃಷ್ಣೈಕಭಕ್ತ್ಯಾ ಪೂರ್ಣಾರ್ಥಃ ಶಾಂತಃ ಕವಿರಲಂಪಟಃ ॥ ೧೩ ॥

ಸ ಉವಾಸ ವಿದೇಹೇಷು ಮಿಥಿಲಾಯಾಂ ಗೃಹಾಶ್ರಮೀ ।
ಅನೀಹಯಾಽಽಗತಾಹಾರ್ಯನಿರ್ವರ್ತಿತನಿಜಕ್ರಿಯಃ ॥ ೧೪ ॥

ಯಾತ್ರಾಮಾತ್ರಂ ತ್ವಹರಹರ್ದೈವಾದುಪನಮತ್ಯುತ ।
ನಾಧಿಕಂ ತಾವತಾ ತುಷ್ಟಃ ಕ್ರಿಯಾಶ್ಚಕ್ರೇ ಯಥೋಚಿತಾಃ ॥ ೧೫ ॥

ತಥಾ ತದ್ರಾಷ್ಟ್ರಪಾಲೋಽಂಗ ಬಹುಲಾಶ್ವ ಇತಿ ಶ್ರುತಃ ।
ಮೈಥಿಲೋ ನಿರಹಮ್ಮಾನ ಉಭಾವಪ್ಯಚ್ಯುತಪ್ರಿಯೌ ॥ ೧೬ ॥

ತಯೋಃ ಪ್ರಸನ್ನೋ ಭಗವಾನ್ ದಾರುಕೇಣಾಹೃತಂ ರಥಮ್ ।
ಆರುಹ್ಯ ಸಾಕಂ ಮುನಿಭಿರ್ವಿದೇಹಾನ್ಪ್ರಯಯೌ ಪ್ರಭುಃ ॥ ೧೭ ॥

ನಾರದೋ ವಾಮದೇವೋಽತ್ರಿಃ ಕೃಷ್ಣೋ ರಾಮೋಽಸಿತೋಽರುಣಿಃ ।
ಅಹಂ ಬೃಹಸ್ಪತಿಃ ಕಣ್ವೋ ಮೈತ್ರೇಯಶ್ಚ್ಯವನಾದಯಃ ॥ ೧೮ ॥

ತತ್ರ ತತ್ರ ತಮಾಯಾಂತಂ ಪೌರಾ ಜಾನಪದಾ ನೃಪ ।
ಉಪತಸ್ಥುಃ ಸಾರ್ಘ್ಯಹಸ್ತಾ ಗ್ರಹೈಃ ಸೂರ್ಯಮಿವೋದಿತಮ್ ॥ ೧೯ ॥

ರಥಾರೂಢನಾದ ವೀರ ಅರ್ಜುನನು ಧನುಸ್ಸನ್ನು ಎತ್ತಿಕೊಂಡು ತನ್ನನ್ನು ತಡೆಯಲು ಬಂದ ಸೈನಿಕರನ್ನು ಹೊಡೆದು ಓಡಿಸಿದನು. ಸುಭದ್ರೆಯ ಆಪ್ತವರ್ಗವು ಆಟುತ್ತಾಗೋಳಾಡುತ್ತಿದ್ದಂತೆ ಸಿಂಹವು ತನಗೆ ಸೇರಬೇಕಾದ ಭಾಗವನ್ನು ನಿರ್ಭಯವಾಗಿ ಎತ್ತಿಕೊಂಡು ಹೋಗುವಂತೆ ಅರ್ಜುನನು ಸುಭದ್ರೆಯನ್ನು ರಥದಲ್ಲಿ ಕುಳ್ಳಿರಿಸಿಕೊಂಡು ಹೊರಟುಹೋದನು. ॥ ೧೦ ॥ ಈ ಸಮಾಚಾರವನ್ನು ಕೇಳಿದ ಬಲರಾಮನ ಕೋಪವು ಹುಣ್ಣಿಮೆಯ ದಿನ ಸಮುದ್ರವು ಉಕ್ಕೇರುವಂತೆ, ಉಕ್ಕೇರಿಬಂದಿತು. ಆದರೆ ಭಗವಾನ್ ಶ್ರೀಕೃಷ್ಣನು ಹಾಗೂ ಇತರ ಸುಹೃದ್ ಸಂಬಂಧಿಗಳು ಅವನ ಕಾಲುಗಳನ್ನು ಹಿಡಿದುಕೊಂಡು ನಾನಾ ವಿಧದಿಂದ ಸಮಾಧಾನಪಡಿಸಿದಾಗ ಶಾಂತನಾದನು. ॥ ೧೧ ॥ ಅನಂತರ ಬಲರಾಮನು ಪ್ರಸನ್ನನಾಗಿ ವಧೂ-ವರರಿಗೆ ಅಪಾರವಾದ ಧನವನ್ನು ನಾನಾ ಸಾಮಗ್ರಿಗಳನ್ನು ಆನೆ, ಕುದುರೆ, ರಥ ಮತ್ತು ದಾಸೀ ದಾಸರನ್ನು ಬಳುವಳಿಯಾಗಿ ಕಳಿಸಿಕೊಟ್ಟನು. ॥ ೧೨ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ! ವಿದೇಹರಾಜ್ಯದ ರಾಜಧಾನಿಯಾದ ಮಿಥಿಲಾಪಟ್ಟಣದಲ್ಲಿ ಶ್ರುತದೇವನೆಂಬ ಒಬ್ಬ ಗೃಹಸ್ಥ ಬ್ರಾಹ್ಮಣನಿದ್ದನು. ಅವನು ಭಗವಾನ್ ಶ್ರೀಕೃಷ್ಣನ ಪರಮಭಕ್ತನಾಗಿದ್ದನು. ಅವನು ಏಕಮಾತ್ರ ಭಗವದ್ಭಕ್ತಿಯಿಂದ ಪೂರ್ಣಮನೋರಥನೂ, ಪರಮಶಾಂತನೂ, ಜ್ಞಾನಿಯೂ, ವಿರಕ್ತನೂ ಆಗಿದ್ದನು. ॥ ೧೩ ॥ ಅವನು ಗೃಹಸ್ಥಾಶ್ರಮದಲ್ಲಿ ಇರುತ್ತಿದ್ದರೂ ಜೀವನ ನಿರ್ವಹಣೆಗಾಗಿ ಯಾವುದೇ ಉದ್ಯೋಗವನ್ನು ಮಾಡುತ್ತಿರಲಿಲ್ಲ. ಭಗವಂತನ ದಯೆಯಿಂದ ದೊರೆತುದರಲ್ಲೇ ಜೀವನ ಸಾಗಿಸುತ್ತಿದ್ದನು. ॥ ೧೪ ॥ ಪ್ರಾರಬ್ಧವಶದಿಂದ ಅವನಿಗೆ ಪ್ರತಿದಿನವೂ ಜೀವನನಿರ್ವಾಹಕ್ಕಾಗುವಷ್ಟು ಸಾಮಗ್ರಿಯು ದೊರೆಯುತ್ತಿತ್ತು. ಹೆಚ್ಚಿಗೆ ಸಿಗುತ್ತಿರಲಿಲ್ಲ. ಅವನು ಅಷ್ಟರಲ್ಲೇ ಸಂತುಷ್ಟನಾಗಿದ್ದು ತನ್ನ ವರ್ಣಾಶ್ರಮಕ್ಕನುಸಾರ ಧರ್ಮವನ್ನು ಪಾಲಿಸುವುದರಲ್ಲಿ ತತ್ಪರನಾಗಿರುತ್ತಿದ್ದನು. ॥ ೧೫ ॥ ಪ್ರಿಯ ಪರೀಕ್ಷಿತನೇ! ಆ ದೇಶದ ರಾಜನೂ ಕೂಡ ಬ್ರಾಹ್ಮಣನಂತೆಯೇ ಭಕ್ತಿಯುಳ್ಳವನಾಗಿದ್ದನು. ಮಿಥಿಲಾ ಪಟ್ಟಣದ ಆ ಪ್ರತಿಷ್ಠಿತ ನರಪತಿಯ ಹೆಸರು ಬಹುಲಾಶ್ವನೆಂದಿತ್ತು. ಅವನಲ್ಲಿ ಅಹಂಕಾರ ಲೇಶಮಾತ್ರವೂ ಇರಲಿಲ್ಲ. ಶ್ರುತದೇವ ಮತ್ತು ಬಹುಲಾಶ್ವರಿಬ್ಬರೂ ಭಗವಾನ್ ಶ್ರೀಕೃಷ್ಣನ ಪರಮಭಕ್ತರಾಗಿದ್ದರು. ॥ ೧೬ ॥

ಒಮ್ಮೆ ಭಗವಾನ್ ಶ್ರೀಕೃಷ್ಣನು ಅವರಿಬ್ಬರ ಮೇಲೆ ಪ್ರಸನ್ನನಾಗಿ ದಾರುಕನಿಂದ ರಥವನ್ನು ಸಿದ್ಧಗೊಳಿಸಿ, ಆ ರಥವನ್ನು ಹತ್ತಿ ದ್ವಾರಕೆಯಿಂದ ವಿದೇಹ ನಗರಕ್ಕೆ ಪ್ರಯಾಣ ಬೆಳೆಸಿದನು. ॥ ೧೭ ॥ ಭಗವಂತನೊಂದಿಗೆ ನಾರದರು, ವಾಮದೇವ, ಅತ್ರಿ, ವೇದವ್ಯಾಸರು, ಪರಶುರಾಮರು, ಅಸಿತ, ಆರುಣಿ, ಬೃಹಸ್ಪತಿ, ಕಣ್ವ, ಮೈತ್ರೇಯ, ಚ್ಯವನ ಮೊದಲಾದ ಋಷಿಗಳೊಂದಿಗೆ ನಾನೂ (ಶುಕರು) ಅವರಲ್ಲಿ ಸೇರಿಕೊಂಡಿದ್ದೆ. ॥ ೧೮ ॥ ಪರೀಕ್ಷಿತನೇ! ಅವರು ಹೋದಲೆಲ್ಲ ಅಲ್ಲಿಯ ನಾಗರಿಕರೂ, ಗ್ರಾಮವಾಸಿಗಳೂ ಪೂಜಾಸಾಮಗ್ರಿಗಳೊಂದಿಗೆ ಉಪಸ್ಥಿತರಿದ್ದರು. ಗ್ರಹಗಳೊಂದಿಗೆ ಸಾಕ್ಷಾತ್ ಸೂರ್ಯನಾರಾಯಣನೇ ಉದಯಿಸಿ ಬಂದಿರುವನೋ ಎಂದು ತಿಳಿದು ಭಗವಂತನನ್ನು ಭಕ್ತಿಯಿಂದ ಪೂಜಿಸುತ್ತಿದ್ದರು. ॥ ೧೯ ॥

ಆನರ್ತಧನ್ವಕುರುಜಾಂಗಲಕಂಕಮತ್ಸ್ಯ-
ಪಾಂಚಾಲಕುಂತಿಮಧುಕೇಕಯಕೋಸಲಾರ್ಣಾಃ ।
ಅನ್ಯೇ ಚ ತನ್ಮುಖಸರೋಜಮುದಾರಹಾಸ-
ಸ್ನಿಗ್ಧೇಕ್ಷಣಂ ನೃಪ ಪಪುರ್ದೃಶಿಭಿರ್ನೃನಾರ್ಯಃ ॥ ೨೦ ॥

ತೇಭ್ಯಃ ಸ್ವವೀಕ್ಷಣವಿನಷ್ಟತಮಿಸ್ರದೃಗ್ಭ್ಯಃ
ಕ್ಷೇಮಂ ತ್ರಿಲೋಕಗುರುರರ್ಥದೃಶಂ ಚ ಯಚ್ಛನ್ ।
ಶೃಣ್ವನ್ ದಿಗಂತಧವಲಂ ಸ್ವಯಶೋಽಶುಭಘ್ನಂ
ಗೀತಂ ಸುರೈರ್ನೃಭಿರಗಾಚ್ಛನಕೈರ್ವಿದೇಹಾನ್ ॥ ೨೧ ॥

ತೇಽಚ್ಯುತಂ ಪ್ರಾಪ್ತಮಾಕರ್ಣ್ಯ ಪೌರಾ ಜಾನಪದಾ ನೃಪ ।
ಅಭೀಯುರ್ಮುದಿತಾಸ್ತಸ್ಮೈ ಗೃಹೀತಾರ್ಹಣಪಾಣಯಃ ॥ ೨೨ ॥

ದೃಷ್ಟ್ವಾ ತ ಉತ್ತಮಶ್ಲೋಕಂ ಪ್ರೀತ್ಯುತ್ಫುಲ್ಲಾನನಾಶಯಾಃ ।
ಕೈರ್ಧೃತಾಂಜಲಿಭಿರ್ನೇಮುಃ ಶ್ರುತಪೂರ್ವಾಂಸ್ತಥಾ ಮುನೀನ್ ॥ ೨೩ ॥

ಸ್ವಾನುಗ್ರಹಾಯ ಸಂಪ್ರಾಪ್ತಂ ಮನ್ವಾನೌ ತಂ ಜಗದ್ಗುರುಮ್ ।
ಮೈಥಿಲಃ ಶ್ರುತದೇವಶ್ಚ ಪಾದಯೋಃ ಪೇತತುಃ ಪ್ರಭೋಃ ॥ ೨೪ ॥

ನ್ಯಮಂತ್ರಯೇತಾಂ ದಾಶಾರ್ಹಮಾತಿಥ್ಯೇನ ಸಹ ದ್ವಿಜೈಃ ।
ಮೈಥಿಲಃ ಶ್ರುತದೇವಶ್ಚ ಯುಗಪತ್ಸಂಹತಾಂಜಲೀ ॥ ೨೫ ॥

ಭಗವಾಂಸ್ತದಭಿಪ್ರೇತ್ಯ ದ್ವಯೋಃ ಪ್ರಿಯಚಿಕೀರ್ಷಯಾ ।
ಉಭಯೋರಾವಿಶದ್ಗೇಹಮುಭಾಭ್ಯಾಂ ತದಲಕ್ಷಿತಃ ॥ ೨೬ ॥

ಶ್ರೋತುಮಪ್ಯಸತಾಂ ದೂರಾನ್ ಜನಕಃ ಸ್ವಗೃಹಾಗತಾನ್ ।
ಆನೀತೇಷ್ವಾಸನಾಗ್ರ್ಯೇಷು ಸುಖಾಸೀನಾನ್ಮಹಾಮನಾಃ ॥ ೨೭ ॥

ಪ್ರವೃದ್ಧಭಕ್ತ್ಯಾ ಉದ್ಧರ್ಷಹೃದಯಾಸ್ರಾವಿಲೇಕ್ಷಣಃ ।
ನತ್ವಾ ತದಂಘ್ರೀನ್ ಪ್ರಕ್ಷಾಲ್ಯ ತದಪೋ ಲೋಕಪಾವನೀಃ ॥ ೨೮ ॥

ಪರೀಕ್ಷಿತನೇ! ದಾರಿಯಲ್ಲಿ ಆನರ್ತ, ಧನ್ವ, ಕುರುಜಾಂಗಲ, ಕಂಕ, ಮತ್ಸ್ಯ, ಪಾಂಚಾಲ, ಕುಂತೀ, ಮಧು, ಕೇಕಯ, ಕೋಸಲ, ಅರ್ಣ ಮೊದಲಾದ ಅನೇಕ ದೇಶದ ನರ-ನಾರಿಯರು ತಮ್ಮ ನೇತ್ರಗಳೆಂಬ ದ್ರೋಣಗಳಿಂದ ಭಗವಾನ್ ಶ್ರೀಕೃಷ್ಣನ ಉನ್ಮುಕ್ತ ಹಾಸ್ಯವನ್ನೂ ಪ್ರೇಮಪೂರ್ಣ ಕಟಾಕ್ಷದಿಂದ ಕೂಡಿದ ಮುಖಾರವಿಂದದ ಮಕರಂದವನ್ನು ಪಾನಮಾಡಿದರು. ॥ ೨೦ ॥ ಮೂರು ಲೋಕಗಳ ಗುರುವಾದ ಭಗವಾನ್ ಶ್ರೀಕೃಷ್ಣನ ದರ್ಶನದಿಂದ ಆ ಜನರ ಅಜ್ಞಾನದೃಷ್ಟಿಯು ನಾಶವಾಯಿತು. ಪ್ರಭುವು ದರ್ಶನ ಮಾಡುವ ನರ-ನಾರಿಯರಿಗೆ ತನ್ನ ಕರುಣಾ ದೃಷ್ಟಿಯಿಂದ ಪರಮ ಶ್ರೇಯಸ್ಸನ್ನು, ಆತ್ಮಜ್ಞಾನವನ್ನು ಕರುಣಿಸುತ್ತಾ ಮುಂದರಿಯುತ್ತಿದ್ದನು. ಅಲ್ಲಲ್ಲಿ ಮನುಷ್ಯರು, ದೇವತೆಗಳು - ಸಮಸ್ತ ದಿಕ್ಕುಗಳನ್ನು ಉಜ್ಜ್ವಲಗೊಳಿಸುವಂತಹ, ಸಮಸ್ತ ಅಶುಭಗಳನ್ನು ನಾಶಮಾಡುವಂತಹ ಭಗವಂತನ ಗುಣಗಳ ಕೀರ್ತಿಯನ್ನು ಹಾಡುತ್ತಿದ್ದರು. ಅಂತಹ ಸ್ತೋತ್ರಗಳನ್ನು ಆಲಿಸುತ್ತಾ ಭಗವಾನ್ ಶ್ರೀಕೃಷ್ಣನು ಮಿಥಿಲಾ ಪಟ್ಟಣವನ್ನು ಸೇರಿದನು. ॥ ೨೧ ॥

ಪರೀಕ್ಷಿತನೇ! ಭಗವಾನ್ ಶ್ರೀಕೃಷ್ಣನ ಶುಭಾಗಮನದ ಸಮಾಚಾರವನ್ನು ಕೇಳಿದ ಮಿಥಿಲಾಪುರ ನಿವಾಸಿಗಳ ಆನಂದಕ್ಕೆ ಪಾರವೇ ಇರಲಿಲ್ಲ. ಅವರು ಕೈಗಳಲ್ಲಿ ವಿವಿಧ ಪೂಜಾಸಾಮಗ್ರಿಗಳನ್ನು ಹಿಡಿದುಕೊಂಡು ಶ್ರೀಕೃಷ್ಣನನ್ನು ಸ್ವಾಗತಿಸಲು ಧಾವಿಸಿ ಬಂದರು. ॥ ೨೨ ॥ ಭಗವಾನ್ ಶ್ರೀಕೃಷ್ಣನ ದರ್ಶನವನ್ನು ಪಡೆದು ಅವರ ಹೃದಯ ಮತ್ತು ಮುಖಕಮಲಗಳು ಆನಂದದಿಂದ ವಿಕಸಿತವಾದುವು. ಅವರೆಲ್ಲರೂ ಭಗವಂತನ ಹಾಗೂ ಮುನಿಗಳ ಹೆಸರುಗಳನ್ನು ಮಾತ್ರ ಕೇಳಿದ್ದರೇ ವಿನಹ ನೋಡಿರಲಿಲ್ಲ. ಈಗ ಪ್ರತ್ಯಕ್ಷವಾಗಿ ನೋಡಿ ಕೈಮುಗಿದು, ತಲೆತಗ್ಗಿಸಿ ವಂದಿಸಿಕೊಂಡರು. ॥ ೨೩ ॥ ಜಗದ್ಗುರು ಭಗವಾನ್ ಶ್ರೀಕೃಷ್ಣನು ನಮ್ಮ ಮೇಲೆ ಅನುಗ್ರಹಿಸಲಿಕ್ಕಾಗಿಯೇ ಆಗಮಿಸಿರುವನೆಂದು ತಿಳಿದ ಮಿಥಿಲೇಶ ಬಹುಲಾಶ್ವ ಮತ್ತು ಶ್ರುತದೇವರು ಅವನ ಚರಣಗಳಲ್ಲಿ ಬಿದ್ದು ನಮಸ್ಕರಿಸಿಕೊಂಡರು. ॥ ೨೪ ॥ ಬಹುಲಾಶ್ವ ಹಾಗೂ ಶ್ರುತದೇವರಿಬ್ಬರೂ ಒಟ್ಟಿಗೆ ಕೈಮುಗಿದುಕೊಂಡು ಮುನಿಮಂಡಲಿಯೊಂದಿಗೆ ಭಗವಾನ್ ಶ್ರೀಕೃಷ್ಣನಿಗೆ ನಮ್ಮ ಆತಿಥ್ಯವನ್ನು ಸ್ವೀಕರಿಸಬೇಕೆಂದು ಪ್ರಾರ್ಥಿಸಿಕೊಂಡರು. ॥ ೨೫ ॥ ಭಗವಾನ್ ಶ್ರೀಕೃಷ್ಣನು ಇಬ್ಬರ ಪ್ರಾರ್ಥನೆಯನ್ನು ಸ್ವೀಕರಿಸಿ ಇಬ್ಬರನ್ನು ಸಂತೋಷಪಡಿಸಲಿಕ್ಕಾಗಿ ಒಂದೇ ಬಾರಿಗೆ ಬೇರೆ-ಬೇರೆ ರೂಪಗಳಿಂದ ಇಬ್ಬರ ಮನೆಗಳಿಗೂ ತೆರಳಿದನು. ಆದರೆ ಭಗವಾನ್ ಶ್ರೀಕೃಷ್ಣನು ನನ್ನ ಮನೆಗೆ ಬಂದಿರುವನು ಬೇರೆಲ್ಲೂ ಹೋಗಲಿಲ್ಲ ಎಂಬ ವಿಷಯ ತಿಳಿಯಲೇ ಇಲ್ಲ. ॥ ೨೬ ॥ ದುಷ್ಟ-ದುರಾಚಾರಿ ಅಸತ್ಪುರುಷರು ಯಾರ ಹೆಸರೂ ಕೂಡ ಕೇಳಲಾರರೋ ಅಂತಹ ಭಗವಾನ್ ಶ್ರೀಕೃಷ್ಣನು ಮತ್ತು ಋಷಿ-ಮುನಿಗಳು ತನ್ನ ಮನೆಗೆ ಆಗಮಿಸಿದ್ದನ್ನು ನೋಡಿದ ಮಹಾನುಭಾವನಾದ ಬಹುಲಾಶ್ವನು ಸುಂದರವಾದ ಆಸನಗಳನ್ನು ತರಿಸಿ ಭಗವಂತನನ್ನು ಹಾಗೂ ಋಷಿ - ಮುನಿಗಳನ್ನು ಕುಳ್ಳಿರಿಸಿದನು. ಆ ಸಮಯದಲ್ಲಿ ಬಹುಲಾಶ್ವನಿಗೆ ಪ್ರೇಮ ಭಕ್ತಿಯ ಉದ್ರೇಕದಿಂದ ಹೃದಯ ತುಂಬಿಬಂತು. ಕಣ್ಣುಗಳಲ್ಲಿ ಆನಂದಾಶ್ರುಗಳು ಚಿಮ್ಮಿದವು. ಅವನು ತನ್ನ ಪರಮಪೂಜ್ಯ ಅತಿಥಿಗ

ಸಕುಟುಂಬೋ ವಹನ್ಮೂರ್ಧ್ನಾ ಪೂಜಯಾಂಚಕ್ರ ಈಶ್ವರಾನ್ ।
ಗಂಧಮಾಲ್ಯಾಂಬರಾಕಲ್ಪಧೂಪದೀಪಾರ್ಘ್ಯಗೋವೃಷೈಃ
॥ ೨೯ ॥

ವಾಚಾ ಮಧುರಯಾ ಪ್ರೀಣನ್ನಿದಮಾಹಾನ್ನತರ್ಪಿತಾನ್ ।
ಪಾದಾವಂಕಗತೌ ವಿಷ್ಣೋಃ ಸಂಸ್ಪೃಶನ್ ಶನಕೈರ್ಮುದಾ
॥ ೩೦ ॥

ರಾಜೋವಾಚ

ಭವಾನ್ ಹಿ ಸರ್ವಭೂತಾನಾಮಾತ್ಮಾ ಸಾಕ್ಷೀ ಸ್ವದೃಗ್ವಿಭೋ ।
ಅಥ ನಸ್ತ್ವತ್ಪದಾಂಭೋಜಂ ಸ್ಮರತಾಂ ದರ್ಶನಂ ಗತಃ
॥ ೩೧ ॥

ಸ್ವವಚಸ್ತದೃತಂ ಕರ್ತುಮಸ್ಮದ್ದೃಗ್ಗೋಚರೋ ಭವಾನ್ ।
ಯದಾತ್ಥೈಕಾಂತಭಕ್ತಾನ್ಮೇ ನಾನಂತಃ ಶ್ರೀರಜಃ ಪ್ರಿಯಃ
॥ ೩೨ ॥

ಕೋ ನು ತ್ವಚ್ಚರಣಾಂಭೋಜಮೇವಂವಿದ್ವಿಸೃಜೇತ್ಪುಮಾನ್ ।
ನಿಷ್ಕಿಂಚನಾನಾಂ ಶಾಂತಾನಾಂ ಮುನೀನಾಂ ಯಸ್ತ್ವಮಾತ್ಮದಃ
॥ ೩೩ ॥

ಯೋಽವತೀರ್ಯ ಯದೋರ್ವಂಶೇ ನೃಣಾಂ ಸಂಸರತಾಮಿಹ ।
ಯಶೋ ವಿತೇನೇ ತಚ್ಛಾಂತ್ಯೈ ತ್ರೈಲೋಕ್ಯವೃಜಿನಾಪಹಮ್
॥ ೩೪ ॥

ನಮಸ್ತುಭ್ಯಂ ಭಗವತೇ ಕೃಷ್ಣಾಯಾಕುಂಠಮೇಧಸೇ ।
ನಾರಾಯಣಾಯ ಋಷಯೇ ಸುಶಾಂತಂ ತಪ ಈಯುಷೇ
॥ ೩೫ ॥

ದಿನಾನಿ ಕತಿಚಿದ್ಭೂಮನ್ ಗೃಹಾನ್ ನೋ ನಿವಸ ದ್ವಿಜೈಃ ।
ಸಮೇತಃ ಪಾದರಜಸಾ ಪುನೀಹೀದಂ ನಿಮೇಃ ಕುಲಮ್
॥ ೩೬ ॥

ಇತ್ಯುಪಾಮಂತ್ರಿತೋ ರಾಜ್ಞಾ ಭಗವಾಁಲ್ಲೋಕಭಾವನಃ ।
ಉವಾಸ ಕುರ್ವನ್ ಕಲ್ಯಾಣಂ ಮಿಥಿಲಾನರಯೋಷಿತಾಮ್
॥ ೩೭ ॥

ಶ್ರುತದೇವೋಽಚ್ಯುತಂ ಪ್ರಾಪ್ತಂ ಸ್ವಗೃಹಾಞ್ಜನಕೋ ಯಥಾ ।
ನತ್ವಾ ಮುನೀನ್ ಸುಸಂಹೃಷ್ಟೋ ಧುನ್ವನ್ವಾಸೋ ನನರ್ತ ಹ
॥ ೩೮ ॥

ಚರಣಗಳಲ್ಲಿ ನಮಸ್ಕಾರ ಮಾಡಿ, ಪಾದಗಳನ್ನು ತೊಳೆದು ಆ ಪವಿತ್ರ ಚರಣೋದಕವನ್ನು ತನ್ನ ಕುಟುಂಬದವರೊಂದಿಗೆ ತಲೆಯಲ್ಲಿ ಧರಿಸಿಕೊಂಡನು. ಮತ್ತೆ ಭಗವಂತನನ್ನು ಮತ್ತು ಭಗವತ್ಸ್ವರೂಪಿಗಳಾದ ಋಷಿಗಳನ್ನು ಗಂಧ, ಪುಷ್ಪಮಾಲೆ, ವಸ್ತ್ರಾಲಂಕಾರ, ಧೂಪ, ದೀಪ, ಅರ್ಘ್ಯ, ಗೋ, ವೃಷಭ ಮುಂತಾದುವನ್ನು ಸಮರ್ಪಿಸಿ ಭಕ್ತಿಯಿಂದ ಪೂಜೆಮಾಡಿದನು. ॥ ೨೭-೨೯ ॥ ಎಲ್ಲ ಜನರೂ ಭೋಜನಾದಿಗಳಿಂದ ತೃಪ್ತರಾದಾಗ ಬಹುಲಾಶ್ವರಾಜನು ಭಗವಾನ್ ಶ್ರೀಕೃಷ್ಣನ ಚರಣಗಳನ್ನು ತನ್ನ ತೊಡೆಯಲ್ಲಿ ಎತ್ತಿಕೊಂಡು ಅತ್ಯಂತ ಆನಂದದಿಂದ ನಿಧಾನವಾಗಿ ಕಾಲುಗಳನ್ನೊತ್ತುತ್ತಾ, ಮಧುರವಾದ ಮಾತುಗಳಿಂದ ಭಗವಂತನನ್ನು ಸ್ತುತಿಸತೊಡಗಿದನು. ॥ ೩೦ ॥

ಬಹುಲಾಶ್ವರಾಜನು ಹೇಳಿದನು – ಪ್ರಭುವೇ ! ನೀನು ಸಮಸ್ತ ಪ್ರಾಣಿಗಳ ಆತ್ಮಸ್ವರೂಪದ ಸಾಕ್ಷಿಯೂ, ಸ್ವಯಂ ಪ್ರಕಾಶನೂ ಆಗಿರುವೆ. ನಾವು ಯಾವಾಗಲೂ ನಿನ್ನ ಚರಣ ಕಮಲಗಳ ಸ್ಮರಣೆಯನ್ನು ಮಾಡುತ್ತಲೇ ಇದ್ದೇವೆ. ಅದರಿಂದಲೇ ನೀನು ನಮಗೆ ದಿವ್ಯದರ್ಶನವನ್ನಿತ್ತು ನಮ್ಮನ್ನು ಕೃತಾರ್ಥರನ್ನಾಗಿ ಮಾಡಿರುವೆ. ॥ ೩೧ ॥ ಭಗವಂತಾ ! ನನ್ನಲ್ಲಿ ಅನನ್ಯವಾದ ಭಕ್ತಿಯಿರುವ ಏಕಾಂತ ಭಕ್ತರು – ನನ್ನ ಸ್ವರೂಪರೇ ಆಗಿದ್ದಾರೆ. ಅವರು ಅನಂತನಿಗಿಂತಲೂ, ಅರ್ಧಾಂಗಿನೀ ಲಕ್ಷ್ಮೀದೇವಿಗಿಂತಲೂ, ಪುತ್ರನಾದ ಬ್ರಹ್ಮದೇವರಿಗಿಂತಲೂ ಹೆಚ್ಚು ಪ್ರಿಯರಾದವರು ಎಂದು ಹೇಳಿರುವ ನಿನ್ನ ಮಾತನ್ನು ಸತ್ಯಗೊಳಿಸುವ ಸಲುವಾಗಿಯೇ ನೀನು ನಮಗೆ ದರ್ಶನವನ್ನು ಕೊಟ್ಟಿರುವೆ. ॥ ೩೨ ॥ ನಿನ್ನ ಇಂತಹ ಪರಮ ದಯೆಯನ್ನೂ, ಪ್ರೇಮಪರವಶತೆಯನ್ನು ತಿಳಿದಿರುವ ಯಾವನು ತಾನೇ ನಿನ್ನ ಚರಣಕಮಲಗಳನ್ನು ತ್ಯಜಿಸಬಲ್ಲನು ? ನಿನ್ನನ್ನು ಬಿಟ್ಟು ಬೇರೆ ತಮ್ಮದೆಂಬ ಯಾವ ವಸ್ತುವೂ ಇಲ್ಲದಿರುವ ಶಾಂತಾತ್ಮರಾದ ಮುನಿಗಳಿಗೆ ನೀನು ನಿನ್ನನ್ನೇ ಕೊಟ್ಟುಕೊಳ್ಳುವೆ. ॥ ೩೩ ॥ ನೀನು ಯದುವಂಶದಲ್ಲಿ ಅವತರಿಸಿ ಹುಟ್ಟು ಸಾವುಗಳೆಂಬ ಚಕ್ರದಲ್ಲಿ ಸಿಕ್ಕಿ ಸರಳುತ್ತಿರುವ ಮನುಷ್ಯರನ್ನು ಉದ್ಧರಿಸುವ ಸಲುವಾಗಿ, ಮೂರು ಲೋಕಗಳ ಪಾಪಗಳನ್ನು ತೊಡೆದು ಹಾಕುವಂತಹ ನಿನ್ನ ಧವಳ ಕೀರ್ತಿಯನ್ನು ವಿಸ್ತರಿಸಿರುವೆ. ॥ ೩೪ ॥ ಅಚಿಂತ್ಯ ಮಹಿಮನಾದ, ಪಾಪಹರನಾದ, ತಡೆಯಿಲ್ಲದ ಮೇಧಾಶಕ್ತಿಯುಳ್ಳ ನಾರಾಯಣ ಋಷಿಸ್ವರೂಪನೂ, ಶಾಂತತಪಸ್ವನೂ ಆದ ಶ್ರೀಕೃಷ್ಣ ನಿನಗೆ ನಮಸ್ಕರಿಸುತ್ತೇನೆ. ॥ ೩೫ ॥ ಪರಬ್ರಹ್ಮ ಸ್ವರೂಪನೇ ! ನೀನು ಕೆಲವು ದಿವಸಗಳಾದರೂ ಋಷಿಮುನಿಗಳೊಡನೆ ನಮ್ಮ ಆತಿಥ್ಯವನ್ನು ಸ್ವೀಕರಿಸುತ್ತಾ ನಮ್ಮ ಅರಮನೆಯಲ್ಲೇ ಇದ್ದು ನಿನ್ನ ಚರಣಕಮಲಗಳ ಧೂಳಿನಿಂದ ನಿಮಿವಂಶವನ್ನು ಪವಿತ್ರಗೊಳಿಸು. ॥ ೩೬ ॥ ಪರೀಕ್ಷಿತನೇ ! ಎಲ್ಲರ ಜೀವನದಾತನಾದ ಭಗವಾನ್ ಶ್ರೀಕೃಷ್ಣನು ಬಹುಲಾಶ್ವರಾಜನ ಈ ಪ್ರಾರ್ಥನೆಯನ್ನು ಮನ್ನಿಸಿ ಮಿಥಿಲೆಯ ನರ-ನಾರಿಯರ ಕಲ್ಯಾಣವನ್ನುಂಟುಮಾಡುತ್ತಾ ಕೆಲವು ದಿವಸಗಳ ವರೆಗೆ ಅಲ್ಲೇ ಇದ್ದನು. ॥ ೩೭ ॥

ಪ್ರಿಯ ಪರೀಕ್ಷಿತನೇ ! ಇತ್ತ ರಾಜಾಬಹುಲಾಶ್ವನಂತೆಯೇ ಶ್ರುತದೇವನೂ ಭಗವಾನ್ ಶ್ರೀಕೃಷ್ಣನನ್ನು ಮತ್ತು ಋಷಿಮುನಿಗಳನ್ನು ತನ್ನ ಮನೆಗೆ ಕರೆದುಕೊಂಡು ಹೋಗಿ ಶ್ರೀಕೃಷ್ಣನಿಗೂ, ಮುನಿಗಳಿಗೂ ನಮಸ್ಕರಿಸಿ ಆನಂದತುಂದಿಲನಾಗಿ ವಸ್ತ್ರವನ್ನು ಮೇಲಕ್ಕೆ ಹಾರಿಸುತ್ತಾ ಕುಣಿದಾಡಿದನು. ॥ ೩೮ ॥

ತೃಣಪೀಠಬೃಸೀಷ್ವೇತಾನಾನೀತೇಷೂಪವೇಶ್ಯ ಸಃ ।
ಸ್ವಾಗತೇನಾಭಿನಂದ್ಯಾಂಘ್ರೀನ್ ಸಭಾರ್ಯೋಽವನಿಜೇ ಮುದಾ ॥ ೩೯ ॥

ತದಂಭಸಾ ಮಹಾಭಾಗ ಆತ್ಮಾನಂ ಸಗೃಹಾನ್ವಯಮ್ ।
ಸ್ನಾಪಯಾಂಚಕ್ರ ಉದ್ಧರ್ಷೋ ಲಬ್ಧಸರ್ವಮನೋರಥಃ ॥ ೪೦ ॥

ಫಲಾರ್ಹಣೋಶೀರಶಿವಾಮೃತಾಂಬುಭಿ-
ರ್ಮೃದಾ ಸುರಭ್ಯಾ ತುಲಸೀಕುಶಾಂಬುಜೈಃ ।
ಆರಾಧಯಾಮಾಸ ಯಥೋಪಪನ್ನಯಾ
ಸಪರ್ಯಯಾ ಸತ್ತ್ವವಿವರ್ಧನಾಂಧಸಾ ॥ ೪೧ ॥

ಸ ತರ್ಕಯಾಮಾಸ ಕುತೋ ಮಮಾನ್ವಭೂ-
ದ್ಗೃಹಾಂಧಕೂಪೇ ಪತಿತಸ್ಯ ಸಂಗಮಃ ।
ಯಃ ಸರ್ವತೀರ್ಥಾಸ್ಪದಪಾದರೇಣುಭಿಃ
ಕೃಷ್ಣೇನ ಚಾಸ್ಯಾತ್ಮನಿಕೇತಭೂಸುರೈಃ ॥ ೪೨ ॥

ಸೂಪವಿಷ್ಟಾನ್ ಕೃತಾತಿಥ್ಯಾನ್ ಶ್ರುತದೇವ ಉಪಸ್ಥಿತಃ ।
ಸಭಾರ್ಯಃ ಸ್ವಜನಾಪತ್ಯ ಉವಾಚಾಂಘ್ರ್ಯಭಿಮರ್ಶನಃ ॥ ೪೩ ॥

ಶ್ರುತದೇವ ಉವಾಚ

ನಾದ್ಯ ನೋ ದರ್ಶನಂ ಪ್ರಾಪ್ತಃ ಪರಂ ಪರಮಪೂರುಷಃ ।
ಯರ್ಹೀದಂ ಶಕ್ತಿಭಿಃ ಸೃಷ್ಟ್ವಾ ಪ್ರವಿಷ್ಟೋ ಹ್ಯಾತ್ಮಸತ್ತಯಾ ॥ ೪೪ ॥

ಯಥಾ ಶಯಾನಃ ಪುರುಷೋ ಮನಸೈವಾತ್ಮಮಾಯಯಾ ।
ಸೃಷ್ಟ್ವಾ ಲೋಕಂ ಪರಂ ಸ್ವಾಪ್ನಮನುವಿಶ್ಯಾವಭಾಸತೇ ॥ ೪೫ ॥

ಶೃಣ್ವತಾಂ ಗದತಾಂ ಶಶ್ವದರ್ಚತಾಂ ತ್ವಾಭಿವಂದತಾಮ್ ।
ನೃಣಾಂ ಸಂವದತಾಮಂತರ್ಹೃದಿ ಭಾಸ್ಯಮಲಾತ್ಮನಾಮ್ ॥ ೪೬ ॥

ಶ್ರುತದೇವನು ಮಣೆ, ಚಾಪೆ, ದರ್ಭಾಸನಗಳನ್ನು ಹಾಸಿ ಭಗವಾನ್ ಶ್ರೀಕೃಷ್ಣನನ್ನು ಮತ್ತು ಮುನಿಗಳನ್ನು ಕುಳ್ಳಿರಿಸಿ ಸ್ವಾಗತ ಭಾಷಣಗಳ ಮೂಲಕ ಅವರನ್ನು ಅಭಿನಂದಿಸಿ, ತನ್ನ ಪತ್ನಿಯೊಂದಿಗೆ ಅತ್ಯಂತ ಆನಂದದಿಂದ ಎಲ್ಲರ ಕಾಲುಗಳನ್ನು ತೊಳೆದನು. ॥ ೩೯ ॥ ಬಳಿಕ ಮಹಾ ಸೌಭಾಗ್ಯಶಾಲಿಯಾದ ಶ್ರುತದೇವನು ಭಗವಂತನ ಹಾಗೂ ಋಷಿಗಳ ಚರಣೋದಕವನ್ನು ಮನೆ- ಕುಟುಂಬದವರಿಗೆ ಸಿಂಪಡಿಸಿ, ತಾನೂ ತಲೆಯಲ್ಲಿ ಧರಿಸಿಕೊಂಡನು. ಆ ಸಮಯದಲ್ಲಿ ಅವನ ಸಕಲಮನೋರಥಗಳು ಪೂರ್ಣಗೊಂಡವು. ಅವನು ಹರ್ಷಾತಿರೇಕದಿಂದ ಉನ್ಮತ್ತನಂತಾಗಿದ್ದನು. ॥ ೪೦॥ ಅನಂತರ ಅವನು ಫಲ, ಗಂಧ, ಲಾವಂಚದಿಂದ ಸುವಾಸಿತವಾದ, ನಿರ್ಮಲವಾದ, ಸುಮಧುರವಾದ ಶುದ್ಧೋದಕ, ಸುಗಂಧಿತ ಮೃತ್ತಿಕೆ, ತುಲಸೀ, ದರ್ಭೆ, ಕಮಲ ಮುಂತಾದ ಸುಲಭವಾಗಿ ದೊರೆಯುವ ಪೂಜಾಸಾಮಗ್ರಿಗಳಿಂದಲೂ, ಸತ್ತ್ವಗುಣವನ್ನು ಹೆಚ್ಚಿಸುವ ಮೃಷ್ಟಾನ್ನದಿಂದಲೂ ಎಲ್ಲರ ಆರಾಧನೆಯನ್ನು ಮಾಡಿದನು. ॥ ೪೧ ॥ ಆ ಸಮಯದಲ್ಲಿ ಶ್ರುತದೇವನು ತನ್ನಲ್ಲೇ ಹೀಗೆ ಯೋಚಿಸಿದನು – 'ನಾನಾದರೋ ಮನೆ-ಮಠ ಎಂಬ ಸಂಸಾರದ ಕತ್ತಲೆಯ ಬಾವಿಯಲ್ಲಿ ಬಿದ್ದ ನಿರ್ಭಾಗ್ಯನಾಗಿದ್ದೇನೆ. ನನಗೆ ಸಮಸ್ತ ತೀರ್ಥಗಳನ್ನು ತೀರ್ಥೀಕರಿಸುವ ಪರಮ ಪವಿತ್ರವಾದ ಪಾದಧೂಳಿಯನ್ನು ಹೊಂದಿರುವ ಭಗವಾನ್ ಶ್ರೀಕೃಷ್ಣನ ಮತ್ತು ಭಾಗವತೋತ್ತಮರ ಸಂಗವು ಹೇಗೆ ತಾನೇ ಪ್ರಾಪ್ತವಾಯಿತು ? ॥ ೪೨ ॥ ಅತಿಥಿಗಳೆಲ್ಲರೂ ಆದರದ ಆತಿಥ್ಯವನ್ನು ಸ್ವೀಕರಿಸಿ ಸುಖಾಸನಗಳಲ್ಲಿ ಕುಳಿತನಂತರ ಶ್ರುತದೇವನು ತನ್ನ ಪತ್ನೀ-ಪುತ್ರರೊಡನೆ ಹಾಗೂ ಇತರ ಸಂಬಂಧಿಗಳೊಂದಿಗೆ ಅವರ ಸೇವೆಯಲ್ಲಿ ತೊಡಗಿದನು. ಭಗವಾನ್ ಶ್ರೀಕೃಷ್ಣನ ಚರಣಕಮಲಗಳನ್ನು ಹಿಡಿದುಕೊಂಡು ಅವನು ಪರಿ-ಪರಿಯಾಗಿ ಸ್ತುತಿಸಿದನು – ॥ ೪೩ ॥

ಶ್ರುತದೇವನು ಹೇಳಿದನು – ಪ್ರಭೋ! ನೀನು ವ್ಯಕ್ತಾವ್ಯಕ್ತರೂಪೀ ಪ್ರಕೃತಿ ಮತ್ತು ಜೀವರಿಂದ ಅತೀತನಾದ ಪುರುಷೋತ್ತಮನಾಗಿರುವೆ. ನೀನು ನನಗೆ ಇಂದೇ ದರ್ಶನ ಕೊಟ್ಟಿರುವೆ ಎಂದೇನಿಲ್ಲ, ನೀನು ನಿನ್ನ ಶಕ್ತಿಗಳಿಂದ ಈ ಜಗತ್ತನ್ನು ಸೃಷ್ಟಿಸಿ, ಆತ್ಮಸತ್ತೆಯ ರೂಪದಿಂದ ಇದರಲ್ಲಿ ಪ್ರವೇಶಿಸಿದೆ. ಅಂದಿನಿಂದಲೂ ನಮಗೆಲ್ಲರಿಗೆ ದೊರಕಿರುವೆ. ॥ ೪೪ ॥ ಮಲಗಿರುವ ಮನುಷ್ಯನು ಸ್ವಪ್ನಾವಸ್ಥೆಯಲ್ಲಿ ಅವಿದ್ಯಾವಶನಾಗಿ ಮನಸ್ಸಿನಿಂದಲೇ ಸ್ವಪ್ನಜಗತ್ತನ್ನು ಸೃಷ್ಟಿಸಿ, ಆ ಜಗತ್ತಿನಲ್ಲೇ ಅನೇಕ ರೂಪಗಳಿಂದ ಕರ್ಮಮಾಡುತ್ತಿರುವಂತೆ ತೋರುತ್ತದೆ. ಹಾಗೆಯೇ ನೀನು ನಿನ್ನಲ್ಲೇ ನಿನ್ನ ಮಾಯೆಯಿಂದ ಜಗತ್ತನ್ನು ರಚಿಸಿ ಅದರಲ್ಲಿ ಪ್ರವಿಷ್ಟನಾಗಿ ಅನೇಕ ರೂಪಗಳಿಂದ ಪ್ರಕಾಶಿಸುತ್ತಿರುವೆ. ॥ ೪೫ ॥ ಸದಾಕಾಲವೂ ನಿನ್ನ ಲೀಲಾಕಥೆಗಳನ್ನು ಶ್ರವಣ-ಕೀರ್ತನೆ ಮತ್ತು ನಿನ್ನ ಪ್ರತಿಮೆಗಳ ಅರ್ಚನೆ-ವಂದನೆ ಮಾಡುತ್ತಾ, ಪರಸ್ಪರವಾಗಿ ನಿನ್ನ ಕುರಿತಾಗಿಯೇ ಚರ್ಚಿಸುತ್ತಿರುವವರ ಹೃದಯ ಶುದ್ಧವಾಗುತ್ತದೆ ಮತ್ತು ನೀನು ಅದರಲ್ಲಿ ಪ್ರಕಾಶಿತನಾಗುವೆ. ॥ ೪೬ ॥

ಹೃದಿಸ್ಥೋಽಪ್ಯತಿದೂರಸ್ಥಃ ಕರ್ಮವಿಕ್ಷಿಪ್ತಚೇತಸಾಮ್ ।
ಆತ್ಮಶಕ್ತಿಭಿರಗ್ರಾಹ್ಯೋಽಪ್ಯಂತ್ಯುಪೇತಗುಣಾತ್ಮನಾಮ್ ॥ ೪೭ ॥

ನಮೋಽಸ್ತು ತೇಽಧ್ಯಾತ್ಮವಿದಾಂ ಪರಾತ್ಮನೇ
ಅನಾತ್ಮನೇ ಸ್ವಾತ್ಮವಿಭಕ್ತಮೃತ್ಯವೇ ।
ಸಕಾರಣಾಕಾರಣಲಿಂಗಮೀಯುಷೇ
ಸ್ವಮಾಯಯಾಸಂವೃತರುದ್ಧದೃಷ್ಟಯೇ ॥ ೪೮ ॥

ಸ ತ್ವಂ ಶಾಧಿ ಸ್ವಭೃತ್ಯಾನ್ ನಃ ಕಿಂ ದೇವ ಕರವಾಮಹೇ ।
ಏತದಂತೋ ನೃಣಾಂ ಕ್ಲೇಶೋ ಯದ್ಭವಾನಕ್ಷಿಗೋಚರಃ ॥ ೪೯ ॥

ಶ್ರೀಶುಕ ಉವಾಚ

ತದುಕ್ತಮಿತ್ಯುಪಾಕರ್ಣ್ಯ ಭಗವಾನ್ ಪ್ರಣತಾರ್ತಿಹಾ ।
ಗೃಹೀತ್ವಾ ಪಾಣಿನಾ ಪಾಣಿಂ ಪ್ರಹಸಂಸ್ತಮುವಾಚ ಹ ॥ ೫೦ ॥

ಶ್ರೀಭಗವಾನುವಾಚ

ಬ್ರಹ್ಮಂಸ್ತೇಽನುಗ್ರಹಾರ್ಥಾಯ
ಸಂಪ್ರಾಪ್ತಾನ್ ವಿದ್ಧ್ಯಮೂನ್ ಮುನೀನ್ ।
ಸಂಚರಂತಿ ಮಯಾ ಲೋಕಾನ್
ಪುನಂತಃ ಪಾದರೇಣುಭಿಃ ॥ ೫೧॥

ದೇವಾಃ ಕ್ಷೇತ್ರಾಣಿ ತೀರ್ಥಾನಿ ದರ್ಶನಸ್ಪರ್ಶನಾರ್ಚನೈಃ ।
ಶನೈಃ ಪುನಂತಿ ಕಾಲೇನ ತದಪ್ಯರ್ಹತ್ತಮೇಕ್ಷಯಾ ॥ ೫೨ ॥

ಬ್ರಾಹ್ಮಣೋ ಜನ್ಮನಾ ಶ್ರೇಯಾನ್ಸರ್ವೇಷಾಂ ಪ್ರಾಣಿನಾಮಿಹ ।
ತಪಸಾ ವಿದ್ಯಯಾ ತುಷ್ಟ್ಯಾ ಕಿಮು ಮತ್ಕಲಯಾ ಯುತಃ ॥ ೫೩ ॥

ನ ಬ್ರಾಹ್ಮಣಾನ್ಮೇ ದಯಿತಂ ರೂಪಮೇತಚ್ಚತುರ್ಭುಜಮ್ ।
ಸರ್ವವೇದಮಯೋ ವಿಪ್ರಃ ಸರ್ವದೇವಮಯೋ ಹ್ಯಹಮ್ ॥ ೫೪ ॥

ನೀನು ಸಮಸ್ತರ ಹೃದಯದಲ್ಲಿ ನೆಲೆಸಿದ್ದರೂ ಕಾಮ್ಯಕರ್ಮಗಳಲ್ಲಿ ತೊಡಗಿ ಚಂಚಲ ಚಿತ್ತರಾದವರಿಂದ ನೀನು ಬಹಳ ದೂರನಾಗಿರುವೆ. ಆದರೆ ನಿನ್ನ ಗುಣಗಾನದಿಂದ ತಮ್ಮ ಅಂತಃಕರಣವನ್ನು ಸದ್ಗುಣ ಸಂಪನ್ನವಾಗಿಸಿಕೊಂಡವರಿಗೆ ಚಿತ್ತವೃತ್ತಿಗಳಿಂದ ಅಗ್ರಾಹ್ಯನಾದರೂ ನೀನು ಅತ್ಯಂತ ಸಮೀಪದವನಾಗುವೆ. ॥ ೪೭ ॥

ಪ್ರಭೋ! ಅಧ್ಯಾತ್ಮತತ್ತ್ವವನ್ನು ತಿಳಿದ ಜ್ಞಾನಿಗಳಿಗೆ ನೀನು ಆತ್ಮಸ್ವರೂಪನಾಗಿ ಅವರ ಹೃದಯದಲ್ಲಿ ಬೆಳಗುವೆ. ದೇಹಾತ್ಮಬುದ್ಧಿಯುಳ್ಳವರಿಗೆ ನೀನು ಅವರಿಗೆ ಪ್ರಾಪ್ತವಾಗುವ ಮೃತ್ಯುವಿನ ಸ್ವರೂಪನಾಗಿರುವೆ. ಮಹತ್ತತ್ತ್ವವೇ ಮೊದಲಾದ ಕಾರ್ಯಕಾರಣರೂಪವಾದ ಪ್ರಕೃತಿಯ ನಿಯಾಮಕನೂ, ಶಾಸಕನೂ ನೀನೇ ಆಗಿರುವೆ. ನಿನ್ನಿಂದಲೇ ಸೃಷ್ಟಿಸಲ್ಪಟ್ಟ ಮಾಯೆಯು ನಿನ್ನನ್ನು ಮುಚ್ಚಲಾರದು. ನೀನು ಮಾಯೆಗೆ ಅತೀತನಾಗಿರುವೆ. ಆದರೆ ಆ ಮಾಯೆಯು ಇತರರ ದೃಷ್ಟಿಯನ್ನು ಮುಚ್ಚಿಬಿಡುತ್ತದೆ. ಅಂತಹ ನಿನಗೆ ನಾನು ನಮಸ್ಕರಿಸುತ್ತೇನೆ. ॥ ೪೮ ॥ ದೇವದೇವ! ನಿನ್ನ ಸೇವಕರಾಗಿರುವ ನಾವು ನಿನ್ನ ಯಾವ ಸೇವೆ ಮಾಡಲಿ ಎಂದು ಆಜ್ಞಾಪಿಸು. ಕಣ್ಣುಗಳಿಂದ ನಿನ್ನ ದರ್ಶನವಾಗುವ ತನಕ ಜೀವರಿಗೆ ಕ್ಲೇಶಗಳಿರುತ್ತವೆ. ನಿನ್ನ ದರ್ಶನವಾಗುತ್ತಲೇ ಸಮಸ್ತ ಕ್ಲೇಶಗಳು ಹೊರಟುಹೋಗುತ್ತವೆ. ॥ ೪೯ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ - ಪರೀಕ್ಷಿತನೇ! ಶರಣಾಗತಭಯಹಾರಿಯಾದ ಭಗವಾನ್ ಶ್ರೀಕೃಷ್ಣನು ಶ್ರುತದೇವನ ಪ್ರಾರ್ಥನೆಯನ್ನು ಕೇಳಿ, ತನ್ನ ಕೈಯಿಂದ ಅವನ ಕೈ ಹಿಡಿದುಕೊಂಡು ಮುಗುಳ್ನಗುತ್ತಾ ಇಂತೆಂದನು. ॥ ೫೦ ॥

ಭಗವಾನ್ ಶ್ರೀಕೃಷ್ಣನು ಹೇಳಿದನು - ಪ್ರಿಯ ಶ್ರುತದೇವನೇ! ಈ ಮಹಾ-ಮಹಾ-ಋಷಿ-ಮುನಿಗಳು ನಿನ್ನನ್ನು ಅನುಗ್ರಹಿಸಲೆಂದೇ ಇಲ್ಲಿಗೆ ಆಗಮಿಸಿದ್ದಾರೆ. ಇವರು ತಮ್ಮ ಚರಣಕಮಲಗಳ ಧೂಳಿಯಿಂದ ಜನರನ್ನು ಮತ್ತು ಲೋಕಗಳನ್ನು ಪವಿತ್ರಗೊಳಿಸುತ್ತಾ ನನ್ನೊಡನೆ ಸಂಚರಿಸುತ್ತಿರುವರು. ॥ ೫೧ ॥ ದೇವತೆಗಳು, ಪುಣ್ಯಕ್ಷೇತ್ರಗಳು, ತೀರ್ಥಗಳು - ಇವೆಲ್ಲ ದರ್ಶನ, ಸ್ಪರ್ಶನ, ಅರ್ಚನ ಮುಂತಾದವುಗಳ ಮೂಲಕ ನಿಧಾನವಾಗಿ ಬಹಳ ದಿನಗಳಲ್ಲಿ ಪವಿತ್ರಗೊಳಿಸುತ್ತವೆ. ಆದರೆ ಸತ್ಪುರುಷರಾದವರು ತಮ್ಮ ದೃಷ್ಟಿಯಿಂದಲೇ ಪವಿತ್ರರಾಗಿಸಿಬಿಡುತ್ತಾರೆ. ಇಷ್ಟೇ ಅಲ್ಲ, ದೇವತಾದಿಗಳಲ್ಲಿರುವ ಪವಿತ್ರ ಮಾಡುವ ಶಕ್ತಿಯೂ ಕೂಡ ಅವರಿಗೆ ಸಂತರ ದೃಷ್ಟಿಯಿಂದಲೇ ದೊರೆತಿದೆ. ॥ ೫೨ ॥ ಶ್ರುತದೇವ! ಹುಟ್ಟಿನಿಂದಲೇ ಬ್ರಾಹ್ಮಣನು ಸಕಲ ಪ್ರಾಣಿಗಳಿಗೂ ಶ್ರೇಷ್ಠನೆನಿಸುತ್ತಾನೆ. ಹೀಗಿರುವಾಗ ಅವನು ತಪಸ್ಸು, ವಿದ್ಯೆ, ಸಂತೋಷ ಮತ್ತು ನನ್ನ ಉಪಾಸನೆ ನನ್ನ ಭಕ್ತಿಯಿಂದ ಕೂಡಿದ್ದರೆ ಹೇಳುವುದೇನಿದೆ? ॥ ೫೩ ॥ ನನಗೆ ಈ ನನ್ನ ಚತುರ್ಭುಜಗಳಿಂದ ಕೂಡಿದ ಶರೀರವೂ ಕೂಡ ಬ್ರಾಹ್ಮಣರಷ್ಟು ಪ್ರಿಯವಲ್ಲ. ಏಕೆಂದರೆ, ಬ್ರಾಹ್ಮಣನು ಸರ್ವವೇದಮಯನಾಗಿದ್ದಾನೆ. ನಾನು ಸರ್ವದೇವಮಯನಾಗಿರುವೆನು. ಸರ್ವದೇವತೆಗಳು ವೇದಕ್ಕೆ ಅಧೀನರಲ್ಲವೇ? ॥ ೫೪ ॥

ದುಷ್ಪ್ರಜ್ಞಾ ಅವಿದಿತ್ವೈವಮವಜಾನಂತ್ಯಸೂಯವಃ ।
ಗುರುಂ ಮಾಂ ವಿಪ್ರಮಾತ್ಮಾನಮರ್ಚಾದಾವಿಜ್ಯದೃಷ್ಟಯಃ ॥ ೫೫ ॥

ದುರ್ಬುದ್ಧಿಯುಳ್ಳ ಮನುಷ್ಯರು ಇದನ್ನು ತಿಳಿಯದೆ ಕೇವಲ ಶಿಲಾ-ಲೋಹವಿಗ್ರಹಗಳಲ್ಲಿಯೇ ಪೂಜ್ಯಬುದ್ಧಿಯನ್ನಿಡುತ್ತಾ, ಗುಣಗಳಲ್ಲಿ ದೋಷವನ್ನೇ ಹುಡುಕುತ್ತಾ, ಸರ್ವರಿಗೂ ಗುರುವಾದ ಬ್ರಾಹ್ಮಣರನ್ನು ಮತ್ತು ನನ್ನನ್ನು ತಿರಸ್ಕಾರ ದೃಷ್ಟಿಯಿಂದ ನೋಡುತ್ತಾರೆ. ॥ ೫೫ ॥

ಚರಾಚರಮಿದಂ ವಿಶ್ವಂ ಭಾವಾ ಯೇ ಚಾಸ್ಯ ಹೇತವಃ ।
ಮದ್ರೂಪಾಣೀತಿ ಚೇತಸ್ಯಾಧತ್ತೇ ವಿಪ್ರೋ ಮದೀಕ್ಷಯಾ ॥ ೫೬ ॥

ಬ್ರಾಹ್ಮಣರು ನನ್ನ ಸಾಕ್ಷಾತ್ಕಾರವನ್ನು ಪಡೆದು ಈ ಚರಾಚರ ಜಗತ್ತು, ಇದರ ಸಂಬಂಧಿಸಿದ ಎಲ್ಲ ಭಾವನೆಗಳು, ಇದರ ಕಾರಣಗಳಾದ ಪ್ರಕೃತಿ-ಮಹತ್ತತ್ತ್ವವೇ ಮೊದಲಾದ ಎಲ್ಲವೂ ಆತ್ಮಸ್ವರೂಪೀ ಭಗವಂತನ ರೂಪಗಳೇ ಆಗಿವೆ ಎಂದು ತಮ್ಮ ಚಿತ್ತದಲ್ಲಿ ನಿಶ್ಚಯಿಸಿಕೊಳ್ಳುವರು. ॥ ೫೬ ॥

ತಸ್ಮಾದ್ ಬ್ರಹ್ಮಋಷೀನೇತಾನ್ ಬ್ರಹ್ಮನ್ ಮಚ್ಛ್ರದ್ಧಯಾರ್ಚಯ ।
ಏವಂ ಚೇದರ್ಚಿತೋಽಸ್ಮ್ಯದ್ಧಾ ನಾನ್ಯಥಾ ಭೂರಿಭೂತಿಭಿಃ ॥ ೫೭ ॥

ಆದ್ದರಿಂದ ಶ್ರುತದೇವನೇ! ನೀನು ಈ ಮಹರ್ಷಿಗಳನ್ನು ನನ್ನ ಸ್ವರೂಪವೆಂದೇ ತಿಳಿದು ಪೂರ್ಣ ಶ್ರದ್ಧೆಯಿಂದ ಇವರನ್ನು ಪೂಜಿಸು. ನೀನು ಹೀಗೆ ಮಾಡಿದರೆ ಆಯಾಸವಿಲ್ಲದೆ ಸಾಕ್ಷಾತ್ ನನ್ನ ಪೂಜೆಯನ್ನೇ ಮಾಡಿದಂತಾಗುವುದು. ಇಲ್ಲದಿದ್ದರೆ ಬಹುಮೂಲ್ಯ ಪೂಜಾಸಾಮಗ್ರಿಗಳಿಂದಲೂ ಮಾಡಿದ ಅರ್ಚನೆಯು ನನ್ನ ಪೂಜೆಯಾಗಲಾರದು. ॥ ೫೭ ॥

ಶ್ರೀಶುಕ ಉವಾಚ

ಸ ಇತ್ಥಂ ಪ್ರಭುಣಾಽಽದಿಷ್ಟಃ ಸಹಕೃಷ್ಣಾನ್ ದ್ವಿಜೋತ್ತಮಾನ್ ।
ಆರಾಧ್ಯೈಕಾತ್ಮಭಾವೇನ ಮೈಥಿಲಶ್ಚಾಪ ಸದ್ಗತಿಮ್ ॥ ೫೮ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ - ಪರೀಕ್ಷಿತನೇ! ಭಗವಾನ್ ಶ್ರೀಕೃಷ್ಣನ ಈ ಆದೇಶವನ್ನು ಕೇಳಿ ಶ್ರುತದೇವನು ಶ್ರೀಕೃಷ್ಣನನ್ನು ಮತ್ತು ಆ ಬ್ರಹ್ಮರ್ಷಿಗಳನ್ನು ಏಕಾತ್ಮಭಾವನೆಯಿಂದ ಆರಾಧಿಸಿದನು ಹಾಗೂ ಅವರ ಕೃಪೆಯಿಂದ ಅವನು ಭಗವತ್ಸ್ವರೂಪವನ್ನು ಹೊಂದಿದನು. ಬಹುಲಾಶ್ವರಾಜನೂ ಅದೇ ಸದ್ಗತಿಯನ್ನು ಪಡೆದನು. ॥ ೫೮ ॥

ಏವಂ ಸ್ವಭಕ್ತಯೋ ರಾಜನ್ ಭಗವಾನ್ ಭಕ್ತಭಕ್ತಿಮಾನ್ ।
ಉಷಿತ್ವಾಽಽದಿಶ್ಯ ಸನ್ಮಾರ್ಗಂ ಪುನರ್ದ್ವಾರವತೀಮಗಾತ್ ॥ ೫೯ ॥

ಪ್ರಿಯ ಪರೀಕ್ಷಿತನೇ! ಭಕ್ತನಾದವನು ಭಗವಂತನಲ್ಲಿ ಹೇಗೆ ಭಕ್ತಿಯನ್ನಿಡುವನೋ ಹಾಗೆಯೇ ಭಗವಂತನೂ ಕೂಡ ಭಕ್ತರ ಕುರಿತು ಭಕ್ತಿಯನ್ನಿಡುತ್ತಾನೆ. ಇಬ್ಬರೂ ಭಕ್ತರಿಗೆ ಸಂತೋಷಪಡಿಸಲಿಕ್ಕಾಗಿ ಕೆಲವು ದಿನಗಳವರೆಗೆ ಶ್ರೀಕೃಷ್ಣನು ಮಿಥಿಲೆಯಲ್ಲೇ ಇದ್ದು, ಅವರಿಗೆ ಸಾಧು ಸತ್ಪುರುಷರ ಮಾರ್ಗದ ಉಪದೇಶವನ್ನಿತ್ತು ದ್ವಾರಕೆಗೆ ಮರಳಿದನು. ॥ ೫೯ ॥

ಎಂಭತ್ತಾರನೆಯ ಅಧ್ಯಾಯವು ಮುಗಿಯಿತು. ॥ ೮೬ ॥
ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮಸ್ಕಂಧೇ ಉತ್ತರಾರ್ಧೇ
ಶ್ರುತದೇವಾನುಗ್ರಹೋ ನಾಮ ಷಡಶೀತಿತಮೋಽಧ್ಯಾಯಃ ॥ ೮೬ ॥

ಎಂಭತ್ತೇಳನೆಯ ಅಧ್ಯಾಯ

ವೇದಸ್ತುತಿ

ಪರೀಕ್ಷಿದುವಾಚ

ಬ್ರಹ್ಮನ್ ಬ್ರಹ್ಮಣ್ಯನಿರ್ದೇಶ್ಯೇ ನಿರ್ಗುಣೇ ಗುಣವೃತ್ತಯಃ ।
ಕಥಂ ಚರಂತಿ ಶ್ರುತಯಃ ಸಾಕ್ಷಾತ್ ಸದಸತಃ ಪರೇ ॥ ೧ ॥

ಪರೀಕ್ಷಿದ್ರಾಜನು ಕೇಳಿದನು - ಬ್ರಾಹ್ಮಣೋತ್ತಮರೇ! ಪರಬ್ರಹ್ಮತತ್ತ್ವವು ಕಾರ್ಯ-ಕಾರಣಗಳಿಂದ ಸರ್ವಥಾ ಅತೀತವಾಗಿದೆ. ಮನಸ್ಸು-ವಾಣಿಯ ಮೂಲಕ ಸಂಕೇತರೂಪದಿಂದಲೂ ಅದನ್ನು ನಿರ್ದೇಶಿಸಲಾಗುವುದಿಲ್ಲ, ಆದರೆ ಶ್ರುತಿಗಳು ಗುಣಗಳ ವಿಷಯದಲ್ಲೇ ಹೇಳಬಲ್ಲವು. ನಿರ್ಗುಣ ತತ್ತ್ವದ ಸ್ವರೂಪವಾದರೋ ಅವುಗಳಿಗೆ ನಿಲುಕಲಾರದು. ಹೀಗಿರುವಾಗ ಶ್ರುತಿಗಳು ನಿರ್ಗುಣ ಬ್ರಹ್ಮವನ್ನು ಹೇಗೆ ಪ್ರತಿಪಾದಿಸುತ್ತವೆ? ॥ ೧ ॥

ಶ್ರೀಶುಕ ಉವಾಚ

ಬುದ್ಧೀಂದ್ರಿಯಮನಃಪ್ರಾಣಾನ್ ಜನಾನಾಮಸೃಜತ್ಪ್ರಭುಃ ।
ಮಾತ್ರಾರ್ಥಂ ಚ ಭವಾರ್ಥಂ ಚ ಆತ್ಮನೇಽಕಲ್ಪನಾಯ ಚ ॥ ೨ ॥

ಸೈಷಾ ಹ್ಯುಪನಿಷದ್ಬ್ರಾಹ್ಮೀ ಪೂರ್ವೇಷಾಂ ಪೂರ್ವಜೈರ್ಧೃತಾ ।
ಶ್ರದ್ಧಯಾ ಧಾರಯೇದ್ಯಸ್ತಾಂ ಕ್ಷೇಮಂ ಗಚ್ಛೇದಕಿಂಚನಃ ॥ ೩ ॥

ಅತ್ರ ತೇ ವರ್ಣಯಿಷ್ಯಾಮಿ ಗಾಥಾಂ ನಾರಾಯಣಾನ್ವಿತಾಮ್ ।
ನಾರದಸ್ಯ ಚ ಸಂವಾದಮೃಷೇರ್ನಾರಾಯಣಸ್ಯ ಚ ॥ ೪ ॥

ಏಕದಾ ನಾರದೋ ಲೋಕಾನ್ ಪರ್ಯಟನ್ ಭಗವತ್ಪ್ರಿಯಃ ।
ಸನಾತನಮೃಷಿಂ ದ್ರಷ್ಟುಂ ಯಯೌ ನಾರಾಯಣಾಶ್ರಮಮ್ ॥ ೫ ॥

ಯೋ ವೈ ಭಾರತವರ್ಷೇಽಸ್ಮಿನ್ ಕ್ಷೇಮಾಯ ಸ್ವಸ್ತಯೇ ನೃಣಾಮ್ ।
ಧರ್ಮಜ್ಞಾನಶಮೋಪೇತಮಾಕಲ್ಪಾದಾಸ್ಥಿತಸ್ತಪಃ ॥ ೬ ॥

ತತ್ರೋಪವಿಷ್ಟಮೃಷಿಭಿಃ ಕಲಾಪಗ್ರಾಮವಾಸಿಭಿಃ ।
ಪರೀತಂ ಪ್ರಣತೋಽಪೃಚ್ಛದಿದಮೇವ ಕುರೂದ್ವಹ ॥ ೭ ॥

ತಸ್ಮೈ ಹ್ಯವೋಚದ್ಭಗವಾನೃಷೀಣಾಂ ಶೃಣ್ವತಾಮಿದಮ್ ।
ಯೋ ಬ್ರಹ್ಮವಾದಃ ಪೂರ್ವೇಷಾಂ ಜನಲೋಕನಿವಾಸಿನಾಮ್ ॥ ೮ ॥

ಶ್ರೀಭಗವಾನುವಾಚ

ಸ್ವಾಯಂಭುವ ಬ್ರಹ್ಮಸತ್ರಂ ಜನಲೋಕೇಽಭವತ್ಪುರಾ ।
ತತ್ರಸ್ಥಾನಾಂ ಮಾನಸಾನಾಂ ಮುನೀನಾಮೂರ್ಧ್ವರೇತಸಾಮ್ ॥ ೯ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ! ಭಗವಂತನು ಮನುಷ್ಯರಿಗಾಗಿ ಮನ, ಬುದ್ಧಿ, ಇಂದ್ರಿಯಗಳನ್ನು ಮತ್ತು ಪ್ರಾಣಗಳನ್ನೂ ಜೊತೆಗೆ ವಿಷಯಗಳನ್ನು ಸೃಷ್ಟಿಸಿದನು. ಅದರಿಂದ ಅವರು ಆ ವಿಷಯಗಳನ್ನು ಅನುಭವಿಸುತ್ತಾ ಜೀವನ ಧಾರಣಮಾಡಬಲ್ಲರು. ಇದರಿಂದ ಸೃಷ್ಟಿಯ ಪರಂಪರೆಯೂ ನಡೆಯುತ್ತಿರುವುದು ಮತ್ತು ಅವರು ಧರ್ಮವನ್ನು ಆಚರಿಸಬಲ್ಲರು, ಕರ್ಮಫಲವನ್ನು ಭೋಗಿಸಬಲ್ಲರು. ಜೊತೆಗೆ ಅವರು ತಮ್ಮ ಆತ್ಮಸ್ವರೂಪವನ್ನು ಅರಿತುಕೊಂಡು ಸಂಸಾರಬಂಧನದಿಂದ ಮುಕ್ತರೂ ಆಗುವರು. ॥ ೨ ॥

ಬ್ರಹ್ಮನನ್ನು ಪ್ರತಿಪಾದಿಸುವ ಈ ಉಪನಿಷತ್ತನ್ನು ಪೂರ್ವಜರಿಗೂ ಪೂರ್ವಜರಾದ ಸನಕಾದಿ ಋಷಿಗಳು ಧರಿಸಿದ್ದರು. ಯಾರಿಗೆ ಯಾವುದೇ ಕಾಮನೆ ಇಲ್ಲವೋ ಅವರೇ ಇದನ್ನು ಶ್ರದ್ಧೆಯಿಂದ ಧರಿಸಬಲ್ಲರು, ಅವರೇ ಕಲ್ಯಾಣ ಸ್ವರೂಪವಾದ ಪರಬ್ರಹ್ಮ ಪರಮಾತ್ಮನನ್ನು ಪಡೆದುಕೊಳ್ಳುತ್ತಾರೆ. ॥ ೩ ॥ ಈ ವಿಷಯದಲ್ಲಿ ಭಗವಾನ್ ನಾರಾಯಣನಿಗೆ ಸಂಬಂಧಿಸಿದ ಒಂದು ಕಥೆಯನ್ನು ಹೇಳುವೆನು. ಅದರಲ್ಲಿ ದೇವಋಷಿ ನಾರದರು ಮತ್ತು ಋಷಿಶ್ರೇಷ್ಠ ನಾರಾಯಣನ ಸಂವಾದವಿದೆ. ॥ ೪ ॥ ಒಮ್ಮೆ ಭಗವಂತನ ಪ್ರಿಯಭಕ್ತರಾದ ದೇವಋಷಿ ನಾರದರು ಬೇರೆ-ಬೇರೆ ಲೋಕಗಳಲ್ಲಿ ಸಂಚರಿಸುತ್ತಾ ಸನಾತನ ಋಷಿಗಳಾದ ಭಗವಾನ್ ನಾರಾಯಣನನ್ನು ದರ್ಶಿಸಲು ಬದರಿಕಾಶ್ರಮಕ್ಕೆ ತೆರಳಿದನು. ॥ ೫ ॥ ಭಗವಾನ್ ನಾರಾಯಣನು ಮನುಷ್ಯರ ಅಭ್ಯುದಯ (ಲೌಕಿಕ ಕಲ್ಯಾಣ)ಕ್ಕಾಗಿ ಮತ್ತು ನಿಃಶ್ರೇಯಸ್ಸಿಗಾಗಿ (ಮೋಕ್ಷಪ್ರಾಪ್ತಿಗಾಗಿ) ಈ ಭಾರತ ವರ್ಷದಲ್ಲಿ ಕಲ್ಪದ ಪ್ರಾರಂಭದಿಂದಲೇ ಧರ್ಮ, ಜ್ಞಾನ, ಸಂಯಮದೊಂದಿಗೆ ಮಹಾತಪಸ್ಸನ್ನು ಮಾಡುತ್ತಿದ್ದನು. ॥ ೬ ॥ ನಾರದರು ಬದರಿಕಾಶ್ರಮಕ್ಕೆ ಹೋಗಿ ಭಗವಾನ್ ನಾರಾಯಣನಿಗೆ ನಮಸ್ಕಾರ ಮಾಡಿ ವಿನಮ್ರಭಾವದಿಂದ ಕುಳಿತು ತತ್ತ್ವದ ಬಗೆಗೆ ಇದೇ ಪ್ರಶ್ನೆ ಮಾಡಿದರು. ಭಗವಂತನು ಆ ಕಲಾಪಗ್ರಾಮ ವಾಸಿಗಳಾದ ಋಷಿಗಳ ಸಮಕ್ಷಮದಲ್ಲೇ ಈ ವಿಷಯವಾಗಿ ತಿಳಿಸಿದ್ದನು. ಪ್ರಿಯ ಪರೀಕ್ಷಿತನೇ! ನೀನೂ ಕೂಡ ಈಗ ನನ್ನಲ್ಲಿ ಆ ಬ್ರಹ್ಮನ ವಿಷಯದಲ್ಲೇ ಕೇಳುತ್ತಿರುವೆ. ಬ್ರಹ್ಮನ ಸ್ವರೂಪದ ವಿಷಯದಲ್ಲಿ ನಾನು ನಿನಗೆ ಹೇಳುವುದನ್ನು ನೀನು ಭಗವಾನ್ ನಾರಾಯಣನ ಶಬ್ದಗಳಲ್ಲೇ ಕೇಳು. ಇದನ್ನು ಬಹಳ ಹಿಂದೆ ಸ್ವತಃ ಭಗವಾನ್ ನಾರಾಯಣನು ಜನೋಲೋಕ ನಿವಾಸಿಗಳಾದ ಸನಕಾದಿ ಋಷಿಗಳಿಗೆ ಹೇಳಿದ್ದನು. ಅಲ್ಲಿಯೂ ಬ್ರಹ್ಮವಿಷಯಕವಾದ ಚರ್ಚೆಯೇ ನಡೆಯುತ್ತಿತ್ತು. ॥ ೮ ॥

ಭಗವಾನ್ ನಾರಾಯಣನು ಹೇಳಿದನು – ಪ್ರಿಯನಾರದನೇ! ಒಮ್ಮೆ ಜನೋಲೋಕದಲ್ಲಿ ಇಂತಹುದೇ ಒಂದು ಬ್ರಹ್ಮಸತ್ರ ನಡೆದಿತ್ತು. ಆ ಸತ್ರವು ಅಲ್ಲಿ ವಾಸಿಸುವ ಬ್ರಹ್ಮಮಾನಸ ಪುತ್ರರಾದ ಸನಕ, ಸನಂದನ, ಸನಾತನ, ಸನತ್ಕುಮಾರರ ಇವರ ನಡುವೆ ನಡೆದಿತ್ತು. ಇವರು ನಾಲ್ವರೂ ನೈಷ್ಠಿಕ ಬ್ರಹ್ಮಚಾರಿಗಳಾಗಿದ್ದಾರೆ. ॥ ೯ ॥

ಶ್ವೇತದ್ವೀಪಂ ಗತವತಿ ತ್ವಯಿ ದ್ರಷ್ಟುಂ ತದೀಶ್ವರಮ್ ।
ಬ್ರಹ್ಮವಾದಃ ಸುಸಂವೃತ್ತಃ ಶ್ರುತಯೋ ಯತ್ರ ಶೇರತೇ ।
ತತ್ರ ಹಾಯಮಭೂತ್ ಪ್ರಶ್ನಸ್ತ್ವಂ ಮಾಂ ಯಮನುಪೃಚ್ಛಸಿ ॥ ೧೦ ॥

ತುಲ್ಯಶ್ರುತತಪಃಶೀಲಾಸ್ತುಲ್ಯಸ್ವೀಯಾರಿಮಧ್ಯಮಾಃ ।
ಅಪಿ ಚಕ್ರುಃ ಪ್ರವಚನಮೇಕಂ ಶುಶ್ರೂಷವೋಽಪರೇ ॥ ೧೧ ॥

ಸನಂದನ ಉವಾಚ

ಸ್ವಸೃಷ್ಟಮಿದಮಾಪೀಯ ಶಯಾನಂ ಸಹ ಶಕ್ತಿಭಿಃ ।
ತದಂತೇ ಬೋಧಯಾಂಚಕ್ರುಸ್ತಲ್ಲಿಂಗೈಃ ಶ್ರುತಯಃ ಪರಮ್ ॥ ೧೨ ॥

ಯಥಾ ಶಯಾನಂ ಸಮ್ರಾಜಂ ವಂದಿನಸ್ತತ್ಪರಾಕ್ರಮೈಃ ।
ಪ್ರತ್ಯೂಷೇಽಭ್ಯೇತ್ಯ ಸುಶ್ಲೋಕೈರ್ಬೋಧಯಂತ್ಯನುಜೀವಿನಃ ॥ ೧೩ ॥

ಶ್ರುತಯ ಊಚುಃ

ಜಯ ಜಯ ಜಹ್ಯಜಾಮಜಿತ ದೋಷಗೃಭೀತಗುಣಾಂ
ತ್ವಮಸಿ ಯದಾತ್ಮನಾ ಸಮವರುದ್ಧಸಮಸ್ತಭಗಃ ।
ಅಗಜಗದೋಕಸಾಮಖಿಲಶಕ್ತ್ಯವಬೋಧಕ ತೇ
ಕ್ವಚಿದಜಯಾಽಽತ್ಮನಾ ಚ ಚರತೋಽನುಚರೇನ್ನಿಗಮಃ ॥ ೧೪ ॥

ಆ ಸಮಯದಲ್ಲಿ ನೀನು ಶ್ವೇತದ್ವೀಪಾಧಿಪತಿಯಾದ ನನ್ನ ಅನಿರುದ್ಧ ಮೂರ್ತಿಯನ್ನು ದರ್ಶನ ಮಾಡಲು ಹೋಗಿದ್ದೆ. ಆ ಸಮಯದಲ್ಲಿ ಜನೋಲೋಕದಲ್ಲಿ ಬ್ರಹ್ಮನ ವಿಷಯದಲ್ಲಿ ಬಹಳ ಸುಂದರವಾದ ಚರ್ಚೆ ನಡೆಯಿತು. ಈ ವಿಷಯದಲ್ಲಿ ಶ್ರುತಿಗಳೂ ಕೂಡ ವರ್ಣಿಸಲಾರವು. ಅಲ್ಲಿ 'ಶ್ರುತಿಗಳು ಹೇಗೆ ನಿರ್ಗುಣ ಬ್ರಹ್ಮನನ್ನು ವರ್ಣಿಸಬಲ್ಲವು?' ಎಂದು ನೀನು ನನ್ನಲ್ಲಿ ಕೇಳಿರುವ ಪ್ರಶ್ನೆಯೇ ಪ್ರಸ್ತುತವಾಗಿತ್ತು. ॥ ೧೦ ॥ ಸನಕಾದಿ ನಾಲ್ವರೂ ಋಷಿಗಳು ಶಾಸ್ತ್ರೀಯ ಜ್ಞಾನದಿಂದ ಸಂಪನ್ನರಾಗಿದ್ದರು. ತಪಸ್ಸು, ಶೀಲ-ಸ್ವಭಾವಗಳಲ್ಲಿಯೂ ಸಮಾನರಾಗಿದ್ದರು. ಅವರ ದೃಷ್ಟಿಯಲ್ಲಿ ಶತ್ರು-ಮಿತ್ರ ಉದಾಸೀನ – ಇವರುಗಳು ಒಂದೇ ಆಗಿದ್ದರು. ಅವರು ತಮ್ಮಲ್ಲಿ ಸನಂದನನ್ನು ಪ್ರವಚನಕಾರನನ್ನಾಗಿ ಮಾಡಿ ಉಳಿದ ಮೂವರೂ ಶ್ರೋತೃಗಳಾದರು. ॥ ೧೧ ॥

ಸನಂದನರು ಹೇಳುತ್ತಾರೆ – ಪರಮಾತ್ಮನು ತಾನೇ ಸೃಷ್ಟಿಸಿದ್ದ ಜಗತ್ತನ್ನು ತನ್ನೊಳಗೆ ಲೀನವಾಗಿಸಿಕೊಂಡು ತನ್ನ ಶಕ್ತಿಗಳೊಂದಿಗೆ ಯೋಗನಿದ್ರಾವಶನಾಗಿ ಮಲಗಿದ್ದು ಪ್ರಳಯಕಾಲವು ಮುಗಿದು ಪುನಃ ಸೃಷ್ಟಿಯ ಸಮಯವು ಬಂದಾಗ – ಮಲಗಿರುವ ಸಾಮ್ರಾಟನನ್ನು ಎಚ್ಚರಿಸಲು ಪ್ರಾತಃಕಾಲದಲ್ಲಿ ರಾಜೋಪಜೀವಿಗಳಾದ ವಂದಿಜನರು ಬಂದು ಅವನ ಪರಾಕ್ರಮಗಳನ್ನು ಮತ್ತು ಸತ್ಕೀರ್ತಿಯನ್ನು ವರ್ಣಿಸಿ ಎಬ್ಬಿಸುವಂತೆಯೇ–ಶ್ರುತಿಗಳು ಪರಮಾತ್ಮನನ್ನು ಪ್ರತಿಪಾದಿಸುವ ಸೂಕ್ತಗಳಿಂದ ಎಚ್ಚರಗೊಳಿಸಿದವು. ॥ ೧೨-೧೩ ॥

ಶ್ರುತಿಗಳು ಹೇಳುತ್ತವೆ – ಅಜಿತನೇ! ನೀನು ಸರ್ವಶ್ರೇಷ್ಠನಾಗಿರುವೆ. ನಿನಗೆ ಜಯವಾಗಲಿ! ಜಯವಾಗಲಿ! ಈ ಚರಾಚರ ಜಗತ್ತಿನ ಆನಂದಾದಿ ಗುಣಗಳನ್ನು ಮರೆಮಾಡುವುದಕ್ಕಾಗಿಯೇ ಈ ಮಾಯೆಯು ಸತ್ತ್ವಾದಿ ಗುಣಗಳನ್ನು ಸ್ವೀಕರಿಸಿದೆ. ಅಂತಹ ಮಾಯೆಯನ್ನು ನೀನು ನಾಶಗೊಳಿಸು. ಏಕೆಂದರೆ, ನೀನೇ ಸಾಕ್ಷಾತ್ತಾಗಿ ಸಮಸ್ತ ಐಶ್ವರ್ಯಗಳಿಂದ ಪರಿಪೂರ್ಣನಾಗಿರುವೆ. ಆದ್ದರಿಂದ ಮನುಷ್ಯರೇ ಆದಿಯಾಗಿ ಸಮಸ್ತ ಪ್ರಾಣಿಗಳ ಜ್ಞಾನ ವೈರಾಗ್ಯ ಮುಂತಾದ ಶಕ್ತಿಗಳನ್ನು ಜಾಗ್ರತಗೊಳಿಸುವವನೂ ನೀನೇ ಆಗಿರುವೆ. ಕೆಲವೊಮ್ಮೆ ನೀನು ಮಾಯೆಯಿಂದ ಜಗತ್ತಿನ ರೂಪದಲ್ಲಿ ಪ್ರಕಟನಾಗುವೆ. ಕೆಲವೊಮ್ಮೆ ಸಚ್ಚಿದಾನಂದ ಸ್ವರೂಪದಲ್ಲಿ ಸ್ಥಿತನಾಗಿರುವೆ. ಎಂದಾದರೂ ನೀನು ವಿಶ್ವವನ್ನು ನಿರ್ಮಿಸುವ ಸಂಕಲ್ಪವನ್ನು ಮಾಡಿದಾಗ ಸೃಷ್ಟಿ, ಸ್ಥಿತಿ, ಸಂಹಾರದ ಲೀಲೆಯನ್ನು ಮಾಡುವೆ. (ಅಥವಾ ಜಗತ್ತಿನ ಕಲ್ಯಾಣಕ್ಕಾಗಿ ಅವತರಿಸಿಯೂ ಲೀಲೆ ಮಾಡುವೆ.) ಅಂತಹ ನಿನ್ನ ಸಗುಣರೂಪವನ್ನು ವರ್ಣಿಸುವುದರಲ್ಲಿ ಶ್ರುತಿಗಳಾದ ನಾವು ಯತ್ಕಿಂಚಿತ್ ಸಮರ್ಥರಾಗುತ್ತೇವೆ. ॥ ೧೪ ॥

ಪ್ರಭುವೇ! ಈ ಸಮಸ್ತ ಜಗತ್ತು ನಿನ್ನಿಂದಲೇ ಉತ್ಪನ್ನವಾಗಿದೆ. ಅದಕ್ಕಾಗಿ ಈ ಸಂಪೂರ್ಣ ಜಗತ್ತು ಬ್ರಹ್ಮನದೇ ಸ್ವರೂಪವಾಗಿದೆ. ಪರಮಜ್ಞಾನಿಗಳು ಇಡೀ ವಿಶ್ವವನ್ನು ಬ್ರಹ್ಮಮಯವಾಗಿ ಭಾವಿಸುತ್ತಾರೆ. ಏಕೆಂದರೆ, ಇದು ಬ್ರಹ್ಮನಿಂದಲೇ ಉತ್ಪನ್ನವಾಗಿದೆ ಮತ್ತು ಬ್ರಹ್ಮನಲ್ಲೇ ವಿಲೀನಗೊಳ್ಳುವುದು. ಶೇಷವಾಗಿ ಪರಮಾತ್ಮನೇ

ಬೃಹದುಪಲಬ್ಧಮೇತದವಯಂತ್ಯವಶೇಷತಯಾ

ಯತ ಉದಯಾಸ್ತಮಯೌ ವಿಕೃತೇರ್ಮೃದಿ ವಾವಿಕೃತಾತ್ ।

ಅತ ಋಷಯೋ ದಧುಸ್ತ್ವಯಿ ಮನೋವಚನಾಚರಿತಂ

ಕಥಮಯಥಾ ಭವಂತಿ ಭುವಿ ದತ್ತಪದಾನಿ ನೃಣಾಮ್

॥ ೧೫ ॥

ಇತಿ ತವ ಸೂರಯಸ್ತ್ರ್ಯಧಿಪತೇಽಖಿಲಲೋಕಮಲ-

ಕ್ಷಪಣಕಥಾಮೃತಾಬ್ಧಿಮವಗಾಹ್ಯ ತಪಾಂಸಿ ಜಹುಃ ।

ಕಿಮುತ ಪುನಃ ಸ್ವಧಾಮವಿಧುತಾಶಯಕಾಲಗುಣಾಃ

ಪರಮ ಭಜಂತಿ ಯೇ ಪದಮಜಸ್ರಸುಖಾನುಭವಮ್

॥ ೧೬ ॥

ಉಳಿಯುವನು. ಅದಕ್ಕಾಗಿ ತತ್ತ್ವದೃಷ್ಟಿಯಿಂದ ಏಕಮಾತ್ರ ಪರಬ್ರಹ್ಮನ ಸತ್ತೆಯೇ ಇದೆ. ಮಣ್ಣಿನಿಂದ ನಿರ್ಮಿಸಿದ ನಾನಾ ತರಹದ ಪಾತ್ರೆಗಳಲ್ಲಿ ಬೇರೆ-ಬೇರೆ ಆಕೃತಿಗಳು ಇರುತ್ತವೆ. ಪಾತ್ರೆಗಳು ಆಗುವ ಮೊದಲು ಮಣ್ಣೇ ಇತ್ತು; ಪಾತ್ರೆಗಳು ನಾಶವಾದಾಗಲೂ ಮಣ್ಣೇ ಉಳಿಯುತ್ತದೆ. ಮಣ್ಣು ಅವಿಕಾರೀ-ರೂಪದಿಂದ ಒಂದೇ ಆಗಿರುತ್ತದೆ. ಹಾಗೆಯೇ ಪ್ರಪಂಚದ ನಿರ್ಮಾಣವು ನಿನ್ನಿಂದಲೇ ಆಗುವುದರಿಂದ ಇದರ ಆದಿ-ಮಧ್ಯ-ಅಂತ್ಯಗಳಲ್ಲಿ ಅವಿಕಾರೀರೂಪದಿಂದ ನೀನೇ ಇರುತ್ತೀಯೆ. ಪ್ರಕೃತಿಯ ಕಾರ್ಯರೂಪವಾದ ಜಗತ್ತಿನಲ್ಲಿ ಪ್ರತಿಕ್ಷಣವೂ ಪರಿವರ್ತನೆಯಾಗುತ್ತಾ ಇರುತ್ತದೆ. ಅದಕ್ಕಾಗಿ ಋಷಿಗಳ ಮನಸ್ಸಿನಿಂದಾಗುವ ಚಿಂತನೆ, ವಾಣಿಯಿಂದ ಹೇಳುವ ಮಾತು, ಅವೆಲ್ಲವೂ ಪರಬ್ರಹ್ಮನ ಚಿಂತನ-ಮನನ, ವರ್ಣನೆಯೇ ಆಗುತ್ತದೆ. ಮನುಷ್ಯನು ಎಲ್ಲೇ ಕಾಲಿಟ್ಟರೂ ಅದು ಪೃಥಿವಿಯ ಮೇಲೆಯೇ ಇಟ್ಟಂತಾಗುವುದು ಏಕೆಂದರೆ, ಅವೆಲ್ಲವೂ ಪೃಥಿವಿಯ ಸ್ವರೂಪವೇ ಆಗಿದೆ. ಹಾಗೆಯೇ ಅಗ್ನಿ, ವರುಣ, ಇಂದ್ರ ಮುಂತಾದರೂಪಗಳಲ್ಲಿ ಮಾಡುವ ಉಪಾಸನೆಯೆಲ್ಲವೂ ಬ್ರಹ್ಮನ ಉಪಾಸನೆಯೇ ಆಗಿದೆ. ಅದಕ್ಕಾಗಿ ಶ್ರುತಿಗಳಾದನಾವು ಯಾವುದೇ ನಾಮ ರೂಪದಿಂದ ವರ್ಣಿಸಿದರೂ ಅದೆಲ್ಲವೂ ನಿನ್ನ ವರ್ಣನೆಯೇ ಆಗುವುದು. ॥ ೧೫ ॥

ಓ ತ್ರೈಲೋಕ್ಯಾಧಿಪತಿಯೇ! ಪರಮಾತ್ಮನೇ! ನಿನ್ನ ತತ್ತ್ವ ರಹಸ್ಯವನ್ನು ತಿಳಿದ ಭಕ್ತರಲ್ಲಿ ಎಷ್ಟೋ ಭಕ್ತರಾದರೋ ನಿನ್ನ ಲೀಲಾ ಕಥಾಮೃತ ಸಾಗರದಲ್ಲಿ ಮುಳುಗಿ ತಮ್ಮ ಪಾಪ-ತಾಪಗಳನ್ನು ತೊಳೆದುಕೊಂಡು ನಿನ್ನನ್ನೇ ಹೊಂದುತ್ತಾರೆ. ಇತರ ಎಷ್ಟೋ ಭಕ್ತರು ಜ್ಞಾನಮಾರ್ಗದ ಮೂಲಕ ರಾಗ-ದ್ವೇಷಾದಿಗಳನ್ನು ಇಲ್ಲವಾಗಿಸಿ ಕರ್ಮವಾಸನೆ ಕ್ಷೀಣವಾದಾಗ ನಿನ್ನ ಸ್ವರೂಪದಲ್ಲೇ ಒಂದಾಗಿ ನಿನ್ನನ್ನೇ ಹೊಂದುತ್ತಾರೆ. ಈ ಪ್ರಕಾರ ನಿನ್ನ ಆ ಭಕ್ತರು ತಮ್ಮ ಅಂತಃಕರಣವನ್ನು ಆತ್ಮಜ್ಞಾನದ ಮೂಲಕ ಶಾಂತವೂ, ಪರಿಶುದ್ಧವೂ ಮಾಡಿಕೊಂಡಿರುವರು. ಆದ್ದರಿಂದ ಅವರಿಗೆ ಶರೀರದಲ್ಲಾಗುವ ಕಾಲಧರ್ಮಗಳಾದ ಜರಾ-ಮರಣವೇ ಮುಂತಾದ ದೋಷಗಳೂ ಬಾಧಿಸಲಾರವು. ಅವರಾದರೋ ನಿರಂತರವಾಗಿ ಪರಮಾನಂದವನ್ನು ಅನುಭವಿಸುತ್ತಾ ನಿನ್ನ ಭಜನೆ-ಧ್ಯಾನದಲ್ಲೇ ತೊಡಗಿರುತ್ತಾರೆ. ॥ ೧೬ ॥

ಪರಮಾತ್ಮನೇ! ಪ್ರಾಣಿಯು ನಿನ್ನ ಭಜನೆ-ಪೂಜೆ ಮುಂತಾದುವನ್ನು ಮಾಡಿದಾಗಲೇ ಅವರ ಜೀವನ ಸಾರ್ಥಕವಾಗುತ್ತದೆ. ಇಲ್ಲದಿದ್ದರೆ ಅವನು ಉಸಿರಾಡುವುದು ಕಮ್ಮಾರನ ತಿದಿಯಂತೆ ವ್ಯರ್ಥವೇ ಆಗಿದೆ. ಮಹತತ್ತ್ವಾದಿ ಇರುವ ತತ್ತ್ವಗಳೆಲ್ಲವೂ ಜಡವಾಗಿವೆ. ಸೃಷ್ಟಿರಚನಾಕಾರ್ಯದಲ್ಲಿ ಇವುಗಳು ಸಫಲವಾಗದಿದ್ದಾಗ ನೀನೇ ಕೃಪೆದೋರಿ ಈ ತತ್ತ್ವಗಳಲ್ಲಿ ಅನುಪ್ರವೇಶ ಮಾಡಿದಾಗಲೇ ಇವು ಸೃಷ್ಟಿನಿರ್ಮಾಣ ಕಾರ್ಯದಲ್ಲಿ ಸಫಲರಾದುವು. ಹೀಗೆ ನಿನ್ನ ಅನುಗ್ರಹದಿಂದಲೇ ಸೃಷ್ಟಿಯ ನಿರ್ಮಾಣವಾಯಿತು. ಅನ್ನಮಯ, ಪ್ರಾಣಮಯ, ಮನೋಮಯ, ವಿಜ್ಞಾನಮಯ ಮತ್ತು ಆನಂದಮಯ ಕೋಶಗಳಲ್ಲಿ ಆಯಾಯ ಶರೀರಕ್ಕನುಸಾರವಾಗಿ ನೀನೇ ಪುರುಷರೂಪದಿಂದ ಇರುತ್ತೀಯೆ.

ದೃತಯ ಇವ ಶ್ವಸಂತ್ಯಸುಭೃತೋ ಯದಿ ತೇಽನುವಿಧಾ
ಮಹದಹಮಾದಯೋಽಂಡಮಸೃಜನ್ ಯದನುಗ್ರಹತಃ ।
ಪುರುಷವಿಧೋಽನ್ವಯೋಽತ್ರ ಚರಮೋಽನ್ನಮಯಾದಿಷು
ಯಃ ಸದಸತಃ ಪರಂ ತ್ವಮಥ ಯದೇಷ್ವವಶೇಷಮೃತಮ್ ॥ ೧೭ ॥

ಇವುಗಳಲ್ಲಿ ಕಡೆಯದಾದ ಆನಂದಮಯಕೋಶವು ನಿನ್ನದೇ ಸ್ವರೂಪವಾಗಿದೆ. ಆ ಆನಂದಮಯ ಕೋಶವು ನಿನ್ನನ್ನು ಪಡೆಯುವ ಸ್ಥಾನವಾಗಿದೆ. ನೀನು ಅದರಿಂದಲೂ ಬೇರೆ ಆಗಿರುವೆ. ಸತ್-ಅಸತ್ ಅರ್ಥಾತ್ ಕಾರ್ಯ-ಕಾರಣರೂಪವಾದ ಜಗತ್ತಿಗಿಂತ ನೀನು ಅತೀತನಾಗಿರುವೆ. ಆದ್ದರಿಂದ ಜ್ಞಾನಿಗಳು ಈ ಸಮಗ್ರ ಜಗತ್ತನ್ನು 'ನೇತಿ-ನೇತಿ' ಈ ಉಪನಿಷದ್ವಾಕ್ಯದಿಂದ ನಿರಾಕರಣ ಮಾಡಿದ ಮೇಲೆ ಉಳಿಯುವ ಪರಮಾತ್ಮ ತತ್ತ್ವವನ್ನೇ ಋತ್ ಅರ್ಥಾತ್ ಸತ್ಯವೆಂದು ತಿಳಿಯುತ್ತಾರೆ. ಆ ಸತ್ಯ-ತತ್ತ್ವವು ನೀನೇ ಆಗಿರುವೆ. ॥ ೧೭ ॥

ಉದರಮುಪಾಸತೇ ಯ ಋಷಿವರ್ತ್ಮಸು ಕೂರ್ಪದೃಶಃ
ಪರಿಸರಪದ್ಧತಿಂ ಹೃದಯಮಾರುಣಯೋ ದಹರಮ್ ।
ತತ ಉದಗಾದನಂತ ತವ ಧಾಮ ಶಿರಃ ಪರಮಂ
ಪುನರಿಹ ಯತ್ಸಮೇತ್ಯ ನ ಪತಂತಿ ಕೃತಾಂತಮುಖೇ ॥ ೧೮ ॥

ಪ್ರಭುವೇ! ಋಷಿಗಳು ನಿನ್ನ ಪ್ರಾಪ್ತಿಗಾಗಿ ಅನೇಕ ಮಾರ್ಗಗಳನ್ನು ಹೇಳಿರುವರು. ಅವರಲ್ಲಿ ಸ್ಥೂಲದೃಷ್ಟಿಯುಳ್ಳವರು ಮಣಿಪೂರ ಚಕ್ರದಲ್ಲಿ (ನಾಭಿಯಲ್ಲಿ) ಅಗ್ನಿರೂಪದಿಂದ ನಿನ್ನನ್ನು ಉಪಾಸಿಸುತ್ತಾರೆ. ಇತರ ಅರುಣ ವಂಶದ ಋಷಿಗಳು ಸಮಸ್ತ ನಾಡಿಗಳಿಗೂ ಪ್ರಸರಣ ಸ್ಥಾನವೆನಿಸಿದ ಅನಾಹತಚಕ್ರದಲ್ಲಿ (ಹೃದಯದಲ್ಲಿ) ದಹರಾಕಾಶರೂಪವಾದ ಬ್ರಹ್ಮನನ್ನು ಉಪಾಸಿಸುತ್ತಾರೆ. ಹೇ ಅನಂತ! ನಿನ್ನನ್ನು ಪಡೆಯುವ ಶ್ರೇಷ್ಠಮಾರ್ಗವಾದ ಹೃದಯದಿಂದ ಮಸ್ತಕದಲ್ಲಿ ಬ್ರಹ್ಮರಂಧ್ರ (ಸಹಸ್ರಾರ)ದವರೆಗೆ ಹೋಗಿರುವ ಸುಷುಮ್ನಾನಾಡಿಯಾದ ಜ್ಯೋತಿರ್ಮಯ ಮಾರ್ಗದ ಮೂಲಕ ಯೋಗಿಯು ಮೇಲಕ್ಕೆ ಹೋಗಿ ನಿನ್ನನ್ನು ಪಡೆದುಕೊಳ್ಳುವನು. ಇದಕ್ಕೆ ಅರ್ಚಿರಾದಿ ಮಾರ್ಗವೆಂದು ಹೇಳುತ್ತಾರೆ. ನಿನ್ನನ್ನು ಪಡೆದ ಮೇಲೆ ಜೀವನು ಜನ್ಮ-ಮರಣ ಚಕ್ರದಿಂದ ಬಿಡುಗಡೆ ಹೊಂದುವನು. ॥ ೧೮ ॥

ಸ್ವಕೃತವಿಚಿತ್ರಯೋನಿಷು ವಿಶನ್ನಿವ ಹೇತುತಯಾ
ತರತಮತಶ್ಚಕಾಸ್ಸ್ಯನಲವತ್ ಸ್ವಕೃತಾನುಕೃತಿಃ ।
ಅಥ ವಿತಥಾಸ್ವಮೂಷ್ವವಿತಥಂ ತವ ಧಾಮ ಸಮಂ
ವಿರಜಧಿಯೋಽನ್ವಯಂತ್ಯಭಿವಿಪಣ್ಯವ ಏಕರಸಮ್ ॥ ೧೯ ॥

ಭಗವಂತನೇ! ನೀನೇ ನಾನಾ ಪ್ರಕಾರದ ಯೋನಿಗಳನ್ನು ನಿರ್ಮಿಸಿ, ಅವುಗಳಲ್ಲಿ ಕಾರಣರೂಪದಿಂದ ಪ್ರವೇಶಿಸಿರುವಂತೆ ಕಾಣುವೆ. ನೀನಾದರೋ ಸರ್ವವ್ಯಾಪಕನಾಗಿರುವೆ. ಮತ್ತೆ ನೀನು ಪ್ರವೇಶಮಾಡಿದೆ ಎಂಬ ಮಾತು ಹೇಗೆ ಹೇಳಬಹುದು? ಹೀಗಿದ್ದರೂ ಪ್ರವೇಶಿಸಿದಂತೆಯೇ ಅನಿಸುವುದು. ಅಗ್ನಿಯು ಎಲ್ಲ ಕಡೆಗಳಲ್ಲಿ ಸಮಾನವಾಗಿ ಇದ್ದರೂ ಕಟ್ಟಿಗೆಯ ಆಕೃತಿಯ ಭೇದದಿಂದ ಬೇರೆ-ಬೇರೆ ರೂಪದಲ್ಲಿ ಕಂಡುಬರುವಂತೆಯೇ ನೀನು ಸದಾ ಸರ್ವದಾ ಸರ್ವತ್ರ ಏಕರಸವಾಗಿ ಸಮಭಾವದಿಂದ ವ್ಯಾಪಕನಾಗಿರುವೆ. ಆನಂದ ಸ್ವರೂಪನಾಗಿರುವೆ, ಸತ್ಯಸ್ವರೂಪನಾಗಿರುವೆ. ಹೀಗಿದ್ದರೂ ಕೆಲವು ಕಡೆ ಉತ್ತಮರೂಪದಿಂದಲೂ, ಕೆಲವೆಡೆಗಳಲ್ಲಿ ಕುಪ್ಪರೂಪದಲ್ಲಿಯೂ ಕಾಣಿಸಿಕೊಳ್ಳುವೆ. ನಿರ್ಮಲ ಬುದ್ಧಿಯುಳ್ಳ ಮಹಾಪುರುಷರು ಕರ್ಮಗಳ ಫಲದ ಕಾಮನೆಯಿಂದ ರಹಿತರಾಗಿ ಪ್ರಾಪಂಚಿಕ ಸತ್ತೆಯನ್ನು ಹಾಗೂ ಆ ಆಕೃತಿಗಳನ್ನು ಮಿಥ್ಯೆಯೆಂದು ತಿಳಿದು ಹೊರಗಿನ ನಾಮ-ರೂಪಗಳನ್ನು ತ್ಯಜಿಸಿ ತತ್ತ್ವರೂಪದಿಂದ ಏಕಮಾತ್ರ ಪರಮಾತ್ಮಸತ್ತೆಯನ್ನೇ ಯಾವಾಗಲೂ ಎಲ್ಲೆಡೆಯಲ್ಲಿ ಸಾಕ್ಷಾತ್ಕರಿಸಿಕೊಳ್ಳುತ್ತಾರೆ. ॥ ೧೯ ॥

ಸ್ವಕೃತಪುರೇಷ್ವಮೀಷ್ವಬಹಿರಂತರಸಂವರಣಂ
ತವ ಪುರುಷಂ ವದಂತ್ಯಖಿಲಶಕ್ತಿಧೃತೋಽಂಶಕೃತಮ್ ।
ಇತಿ ನೃಗತಿಂ ವಿವಿಚ್ಯ ಕವಯೋ ನಿಗಮಾವಪನಂ
ಭವತ ಉಪಾಸತೇಽಙ್ಘ್ರಿಮಭವಂ ಭುವಿ ವಿಶ್ವಸಿತಾಃ ॥ ೨೦ ॥

ಜೀವಿಯ ಎಲ್ಲ ಶರೀರಗಳನ್ನು ನೀನೇ ನಿರ್ಮಾಣ ಮಾಡಿರುವೆ. ಆ ಶರೀರಗಳಲ್ಲಿರುವ ಜೀವನು ಏಕಮಾತ್ರ ನಿನ್ನದೇ ಸನಾತನ ಅಂಶನಾಗಿರುವವನು. (**ಮಮೈವಾಂಶೋ ಜೀವಲೋಕೇ ಜೀವ ಭೂತಃ ಸನಾತನಃ** - ಭಗವದ್ಗೀತೆ) ಜಡತತ್ತ್ವಗಳಿಂದ ನಿನ್ನ ಸ್ವರೂಪವು ಅತೀತವಾಗಿರುವಂತೆಯೇ ನಿನ್ನದೇ ಅಂಶನಾದ ಕಾರಣ ನಿನಗೆ ಪಿತಾ-ಪುತ್ರರಂತೆ ಸಂಬಂಧವಿದೆ. ಇವನ ವಾಸ್ತವಿಕ ಸ್ವರೂಪವೂ ಜಡದಿಂದ ಪೂರ್ಣವಾಗಿ ಅತೀತವಾಗಿದೆ. ನಿನ್ನಿಂದ ರಚಿಸಲ್ಪಟ್ಟ ಶರೀರಗಳಲ್ಲಿ ಜೀವನು (ಅಂತಸಂವರಣಮ್ ಅರ್ಥಾತ್ - ಪ್ರಕೃತಿಯ ಕಾರಣದ ಆವರಣ ಮತ್ತು ಬಹಿಃ ಸಂವರಣಮ್ ಅರ್ಥಾತ್ - ಪ್ರಕೃತಿಯ ಕಾರ್ಯರೂಪವಾದ ಶರೀರದ-ಆವರಣ) ಈ ಎರಡೂ ಆವರಣಗಳಿಂದ ರಹಿತನಾಗಿದ್ದಾನೆ. ಅರ್ಥಾತ್-ಜಡ ಪ್ರಕೃತಿಗಿಂತ ಪರನಾಗಿದ್ದಾನೆ. ನಿನ್ನ ವಾಸ್ತವಿಕ ಸ್ವರೂಪವು ಶುದ್ಧ ಚೇತನವು ಆನಂದ ಸ್ವರೂಪವೂ, ಅವಿನಾಶಿಯೂ ಆಗಿರುವಂತೆಯೇ ಜೀವನೂ ಕೂಡ ಚೇತನನೂ, ಶುದ್ಧನೂ, ಸಹಜಸುಖರಾಶಿಯೂ, ಅವಿನಾಶಿಯೂ ಆಗಿರುವನು. ತತ್ತ್ವಜ್ಞಾನಿಗಳು ಇವನನ್ನು ಸಮಸ್ತ ಶಕ್ತಿಗಳನ್ನು ಧರಿಸುವಂತಹ ನಿನ್ನದೇ ಸನಾತನ ಅಂಶವೆಂದು ಭಾವಿಸುತ್ತಾರೆ. ಜೀವಿಯ ಇಂತಹ ಮಹತ್ತ್ವವನ್ನು ಅರಿತು ಜ್ಞಾನಿಗಳು ನಿನ್ನ ಚರಣಗಳ ಉಪಾಸನೆಯನ್ನೇ ಮಾಡುತ್ತಾರೆ. ನಿನ್ನ ಚರಣಗಳ ಸೇವೆ-ಪೂಜೆಗಳು ಸಂಸಾರ ಚಕ್ರವನ್ನು ನಾಶಮಾಡುತ್ತವೆ. ಎಲ್ಲ ವಿಧದ ಲೌಕಿಕ-ವೈದಿಕ ಕರ್ಮಗಳ ಸಮರ್ಪಣ ಸ್ಥಾನವೂ ನಿನ್ನ ಈ ಚರಣಕಮಲಗಳೇ ಆಗಿವೆ. ಇಂತಹ ದೃಢನಿಶ್ಚಯದೊಂದಿಗೆ ನಿನ್ನ ಉಪಾಸನೆ ಮಾಡುತ್ತಾ ನಿನ್ನ ಭಕ್ತರು ವೈಕುಂಠಧಾಮಕ್ಕೆ ಹೋಗುತ್ತಾರೆ. ॥ ೨೦ ॥

ದುರವಗಮಾತ್ಮತತ್ತ್ವನಿಗಮಾಯ ತವಾತ್ತತನೋ-
ಶ್ಚರಿತಮಹಾಮೃತಾಬ್ಧಿಪರಿವರ್ತಪರಿಶ್ರಮಣಾಃ ।
ನ ಪರಿಲಷಂತಿ ಕೇಚಿದಪವರ್ಗಮಪೀಶ್ವರ ತೇ
ಚರಣಸರೋಜಹಂಸಕುಲಸಂಗವಿಸೃಷ್ಟಗೃಹಾಃ ॥ ೨೧ ॥

ಈಶ್ವರನೇ ! ಪರಮಾತ್ಮತತ್ತ್ವದ ಜ್ಞಾನವನ್ನು ಪಡೆಯುವುದು ಬಹಳ ಕಠಿಣವಾಗಿದೆ. ಹೀಗೆ ವಿಚಾರಮಾಡಿ, ಜೀವಿಗಳ ಮೇಲೆ ಅನುಗ್ರಹವನ್ನು ಮಾಡುವುದಕ್ಕಾಗಿ ಹಾಗೂ ಅವರನ್ನು ಸಂಸಾರ ಚಕ್ರದಿಂದ ಬಿಡುಗಡೆಗೊಳಿಸಲು ನೀನು ನಾನಾ ಪ್ರಕಾರದ ಅವತಾರಗಳನ್ನು ಧರಿಸಿ ಅಮೃತ ಸಾಗರದಂತೆ ಲೀಲೆಗಳನ್ನು ಮಾಡುವೆ. ಆ ಸಾಗರದಲ್ಲಿ ಮುಳುಗಿ-ಮುಳುಗಿ ಜೀವನು ಸಾಂಸಾರಿಕ ಕ್ಲೇಶ-ಬಾಧೆಗಳನ್ನು ಶಾಂತಗೊಳಿಸುವನು. ಸಂಸಾರ ಭ್ರಮಣೆಯ ಬಳಲಿಕೆಯನ್ನು ಕಳೆದುಕೊಳ್ಳುವನು. ಆದ್ದರಿಂದ ನಿನ್ನ ಭಕ್ತರು ನಿನ್ನ ಚರಣ-ಕಮಲಗಳ ಪ್ರೇಮಿಗಳಾದ ಪರಮಹಂಸರ ಸತ್ಸಂಗದಲ್ಲೇ ಅನಂತ ಆನಂದವನ್ನು ಅನುಭವಿಸುತ್ತಾರೆ. ಅವರು ಮತ್ತೆ ಮನೆ ಮಠ, ಪತ್ನೀ-ಪುತ್ರರನ್ನೂ ನೆನೆಯುವುದೂ ಇಲ್ಲ, ಅವರು ಕಥಾಮೃತದ ಆನಂದವಲ್ಲದೆ ಮೋಕ್ಷವನ್ನು ಬಯಸುವುದಿಲ್ಲ. ಏಕೆಂದರೆ, ನಿನ್ನ ಕಥೆಯು ಒಂದು ಅಮೃತದ ತರಂಗಿತ ಸಾಗರವೇ ಆಗಿದೆ. ಅವರ ಚಿತ್ತವು ಪೂರ್ಣರೂಪದಿಂದ ನಿನ್ನಲ್ಲೇ ನೆಲೆಸಿರುತ್ತದೆ. ಆದ್ದರಿಂದ ನೀನು ಅವತರಿಸುವುದೂ ಕೂಡ ಜೀವಿಗಳ ಮೇಲೆ ನಿನ್ನ ಪರಮಾನುಗ್ರಹವೇ ಆಗಿದೆ. ॥ ೨೧ ॥

ತ್ವದನುಪಥಂ ಕುಲಾಯಮಿದಮಾತ್ಮಸುಹೃತ್ಪ್ರಿಯವ-
ಚ್ಚರತಿ ತಥೋನ್ಮುಖೇ ತ್ವಯಿ ಹಿತೇ ಪ್ರಿಯ ಆತ್ಮನಿ ಚ ।
ನ ಬತ ರಮಂತ್ಯಹೋ ಅಸದುಪಾಸನಯಾಽಽತ್ಮಹನೋ
ಯದನುಶಯಾ ಭ್ರಮಂತ್ಯುರುಭಯೇ ಕುಶರೀರಭೃತಃ
॥ ೨೨ ॥

ಪರಮಾತ್ಮನೇ! ಈ ಪಾಂಚಭೌತಿಕ ಶರೀರವು ನಿನ್ನನ್ನು ಪಡೆಯುವ ಒಂದು ಸಾಧನವಾಗಿದೆ. ಇದನ್ನು ನಿನ್ನ ಪ್ರಾಪ್ತಿಯ ಮಾರ್ಗಕ್ಕೆ ತೊಡಗಿಸಿದರೆ ಇದೇ ತನ್ನ ಆತ್ಮೀಯ, ಪ್ರಿಯ ಸುಹೃದನಂತೆ ಆಚರಿಸುತ್ತದೆ. ಏಕೆಂದರೆ, ನೀನು ಜೀವಿಯ ಮಿಲನಕ್ಕೆ ಸದಾ ಸಿದ್ಧನಾಗಿರುವೆ. ಅವನ ಮುಂದೆಯೇ ಇರುವೆ. ಹೆಚ್ಚೇನು ಹೇಳಲಿ ನೀನು ಎಲ್ಲರ ಸುಹೃದನೂ, ಪ್ರಿಯನೂ, ಆತ್ಮನೂ ಆಗಿರುವೆ. ಇಂತಹ ಸ್ಥಿತಿಯಲ್ಲಿ ನಿನ್ನ ಕಡೆಯಿಂದ ನಿನ್ನನ್ನು ಪಡೆಯಲು ಸಾಕಷ್ಟು ಸಾಮಗ್ರಿಯನ್ನು ನೀನೇ ಪ್ರಸ್ತುತಪಡಿಸಿರುವೆ. ಹೀಗಿದ್ದರೂ ಜೀವನು ಅಸತ್ ಭೋಗಗಳ ಕಾಮನೆಗಳನ್ನು ಮಾಡುತ್ತಾ ಅವುಗಳಲ್ಲೇ ರಮಿಸಿಹೋಗುತ್ತಾನೆ ಮತ್ತು ಕಾಮನಾ ಪೂರ್ತಿಗಾಗಿ ತೊಡಗುತ್ತಾನೆ. ಇದು ಎಂತಹ ದುಃಖದ ಮಾತಾಗಿದೆ. ಈ ಪ್ರಕಾರವಾಗಿ ಅವರು ತಮ್ಮ ಆತ್ಮವನ್ನೇ ಹನನ ಮಾಡುತ್ತಿದ್ದಾರೆ. ಇಂತಹ ಜೀವಿಗಳು ಶರೀರ ಧರಿಸುವುದು ಒಂದು ರೀತಿಯಿಂದ ಜನ್ಮ-ಮೃತ್ಯುವಿನ ಚಕ್ರದಲ್ಲಿ ಅಲೆಯುವುದೇ ಆಗಿದೆ. ಇವರ ಜೀವನವೂ ವ್ಯರ್ಥವೇ ಆಗಿದೆ. ॥ ೨೨ ॥

ನಿಭೃತಮರುನ್ಮನೋಽಕ್ಷದೃಢಯೋಗಯುಜೋ ಹೃದಿ ಯನ್
ಮುನಯ ಉಪಾಸತೇ ತದರಯೋಽಪಿ ಯಯುಃ ಸ್ಮರಣಾತ್ ।
ಸ್ತ್ರಿಯ ಉರಗೇಂದ್ರಭೋಗಭುಜದಂಡವಿಷಕ್ತಧಿಯೋ
ವಯಮಪಿ ತೇ ಸಮಾಃ ಸಮದೃಶೋಽಂಘ್ರಿಸರೋಜಸುಧಾಃ
॥ ೨೩ ॥

ಪ್ರಭೋ! ನಿನಗೆ ಎಲ್ಲರ ಕುರಿತು ಸಮಾನ ಭಾವವಿದೆ. ಜೊತೆಗೇ ಸಮಸ್ತ ಜೀವರ ಕುರಿತು ನಿನಗೆ ಅಪಾರ ಕರುಣೆ ಇದೆ. ಇದರ ಪ್ರಮಾಣ - ಪ್ರಾಣಾಯಾಮಾದಿಗಳ ಮೂಲಕ ಮನ ಇಂದ್ರಿಯಗಳನ್ನು ವಶಪಡಿಸಿಕೊಂಡಿರುವ ಯೋಗಿಗಳೂ ನಿನ್ನ ಉಪಾಸನೆಯನ್ನೇ ಮಾಡುತ್ತಾ ನಿನ್ನನ್ನೇ ಹೊಂದುತ್ತಾರೆ. ಅದೇ ಪ್ರಕಾರದಿಂದ ನಿನ್ನನ್ನು ಶತ್ರುಭಾವದಿಂದ ಸ್ಮರಿಸುವವರೂ (ರಾವಣ, ಕಂಸ, ಶಿಶುಪಾಲರೇ ಮುಂತಾದವರು) ಕೂಡ ನಿನ್ನನ್ನೇ ಪಡೆದುಕೊಳ್ಳುತ್ತಾರೆ. ಇದಲ್ಲದೆ ಸರ್ಪರಾಜನಂತೆ ನೀಳವಾದ ಭುಜಗಳುಳ್ಳ ನಿನ್ನಲ್ಲೇ ಬುದ್ಧಿಯನ್ನು ನೆಲೆಸಿಬಿಟ್ಟಿರುವ ಗೋಪಿಯರೇ ಆದಿ ಸ್ತ್ರೀಯರು ಹಾಗೂ ಇತರ ಕಾಮಭಾವದಿಂದ ಪ್ರೇಮಿಸುವ ಸ್ತ್ರೀಯರೂ ಕೂಡ ನಿನ್ನನ್ನು ಪ್ರೇಮಭಾವದಿಂದ ಸ್ಮರಿಸಿ ನಿನ್ನನ್ನೇ ಪಡೆದುಕೊಂಡರು. ನಿನ್ನ ಚರಣಕಮಲಗಳನ್ನು ಚೆನ್ನಾಗಿ ಧರಿಸಿಕೊಂಡಿರುವ ಶ್ರುತಿಗಳಾದ ನಾವೂ ಕೂಡ ನಿನ್ನನ್ನೇ ಸೇರುತ್ತೇವೆ. ಅರ್ಥಾತ್ ನಿನ್ನ ಸ್ಮರಣೆಯನ್ನು ಯಾವುದೇ ಭಾವದಿಂದ ಮಾಡಿದರೂ ಕೊನೆಗೆ ನಿನ್ನ ಪ್ರಾಪ್ತಿಯೇ ಆಗುತ್ತದೆ. ಹೀಗೆ ನಿನಗೆ ಎಲ್ಲರ ಕುರಿತು ಸಮಾನ ಭಾವವಿದೆ. ॥ ೨೩ ॥

ಕ ಇಹ ನು ವೇದ ಬತಾವರಜನ್ಮಲಯೋಽಗ್ರಸರಂ
ಯತ ಉದಗಾದೃಷಿರ್ಯಮನು ದೇವಗಣಾ ಉಭಯೇ ।
ತರ್ಹಿ ನ ಸನ್ನ ಚಾಸದುಭಯಂ ನ ಚ ಕಾಲಜವಃ
ಕಿಮಪಿ ನ ತತ್ರ ಶಾಸ್ತ್ರಮವಕೃಷ್ಯ ಶಯೀತ ಯದಾ
॥ ೨೪ ॥

ಭಗವಂತನೇ! ನೀನೆ ಎಲ್ಲರ ಆದಿಕಾರಣನಾಗಿರುವೆ. ನಿನ್ನಿಂದಲೇ ಮೊಟ್ಟಮೊದಲಿಗೆ ಬ್ರಹ್ಮದೇವರ ಉತ್ಪತ್ತಿಯಾಯಿತು. ಅನಂತರ ಎರಡೂ ಪ್ರಕಾರದ (ಆಧ್ಯಾತ್ಮಿಕ ಮತ್ತು ಆಧಿದೈವಿಕ) ದೇವತೆಗಳು (ಆಧ್ಯಾತ್ಮಿಕ ಅರ್ಥಾತ್ ಶರೀರದಲ್ಲಿರುವ ಮನ-ಇಂದ್ರಿಯಗಳ ಅಭಿಮಾನಿ ದೇವತೆಗಳು.) ಆಧಿದೈವಿಕ (ಅರ್ಥಾತ್-ಹೊರಗಿನ ಇತರ ಲೋಕಪಾಲರು) ಉತ್ಪನ್ನರಾದರು. ಹೀಗೆ ಎಲ್ಲರೂ ನಿನ್ನಿಂದಲೇ ಉತ್ಪನ್ನರಾದವರು ಎಲ್ಲರಿಗೂ ಮೂಲಕಾರಣನಾದ ನಿನ್ನ ವಾಸ್ತವಿಕ ಸ್ವರೂಪವನ್ನು ನಿನ್ನ ಅನಂತರ ಹುಟ್ಟಿದವರು ಹೇಗೆ ತಾನೆ ತಿಳಿಯಬಲ್ಲರು? ಹುಟ್ಟಿದವರ ಸಾವು ನಿಶ್ಚಿತವಾಗಿದೆಯಲ್ಲ! ಅವಿನಾಶಿಯಾದ ನೀನು ಸಮಗ್ರ ಪ್ರಪಂಚವನ್ನು ಅಡಗಿಸಿಕೊಂಡು

ಜನಿಮಸತಃ ಸತೋ ಮೃತಿಮುತಾತ್ಮನಿ ಯೇ ಚ ಭಿದಾಂ
ವಿಪಣಮೃತಂ ಸ್ಮರಂತ್ಯುಪದಿಶಂತಿ ತ ಆರುಪಿತೈಃ ।
ತ್ರಿಗುಣಮಯಃ ಪುಮಾನಿತಿ ಭಿದಾ ಯದಬೋಧಕೃತಾ
ತ್ವಯಿ ನ ತತಃ ಪರತ್ರ ಸ ಭವೇದವಬೋಧರಸೇ ॥ ೨೫ ॥

ಮಲಗಿದ್ದಾಗ ಕಾರಣವಾಗಲೀ, ಕಾರ್ಯವಾಗಲೀ ಇರುವುದಿಲ್ಲ. ಅರ್ಥಾತ್ - ಸೂಕ್ಷ್ಮ ಮತ್ತು ಸ್ಥೂಲ ಎರಡು ಬಗೆಯ ಸೃಷ್ಟಿಯೂ ಇರುವುದಿಲ್ಲ. ಕಾಲದ ಅವಯವಗಳೂ ವೇಗವೂ ಇರುವುದಿಲ್ಲ. ಯಾವುದೇ ಶಾಸ್ತ್ರವೂ ಇರುವುದಿಲ್ಲ. ಇಂತಹ ಸ್ಥಿತಿಯಲ್ಲಿ ನೀನು ಹೇಗಿದ್ದೀಯೋ ಎಂಬುದರ ಕುರಿತು ಕಲ್ಪನೆಯನ್ನಾದರೂ ಹೇಗೆ ಮಾಡಬಹುದು ? ॥ ೨೪ ॥

ಈ ಪ್ರಕಾರವಾಗಿ ನಿನ್ನ ವಾಸ್ತವಿಕ ತತ್ತ್ವದ ಜ್ಞಾನ ಪಡೆಯುವುದು ಸುಲಭವಲ್ಲ. ಇದರಿಂದಲೇ ಉಪದೇಶಕರಲ್ಲಿ ಅನೇಕ ಬಗೆಯ ಮತಭೇದಗಳು ಉಂಟಾಗುತ್ತವೆ. ಅವರಲ್ಲಿ ಕೆಲವರು ನ್ಯಾಯ ವಾದವನ್ನು ಒಪ್ಪುವವರು - ಈ ಪ್ರಪಂಚದ ಉತ್ಪತ್ತಿಯು ಜಡದಿಂದ ಉಂಟಾಗಿದೆ. ಅರ್ಥಾತ್-ಸ್ತ್ರೀ-ಪುರುಷರ ಸಂಯೋಗದಿಂದ ಪ್ರಕೃತಿಯ ಮೂಲಕ ಈ ಜಗತ್ತಿನ ಉತ್ಪತ್ತಿಯಾಯಿತು. ಉತ್ಪನ್ನವಾದುದು ಒಂದು ದಿನ ನಾಶವೂ ಆಗುತ್ತದೆ; ಅದೂ ಪ್ರಕೃತಿಯ ಮೂಲಕವೇ ಎಂದು ಹೇಳುತ್ತಾರೆ. ಕೆಲವರು ದುಃಖದ ನಾಶವಾದ ಬಳಿಕವೇ ಮುಕ್ತಿ ಎಂದೂ ತಿಳಿಯುತ್ತಾರೆ. ಇತರ ಕೆಲವರು ಕರ್ಮ ಮತ್ತು ಅದರ ಫಲವನ್ನು ಸತ್ಯವೆಂದೇ ತಿಳಿಯುತ್ತಾರೆ. ಇನ್ನೂ ಕೆಲವರು ಆತ್ಮವನ್ನು ಅನೇಕ ರೂಪಗಳಲ್ಲಿ ಇದೆ ಎಂದು ಹೇಳುತ್ತಾರೆ. ಇವೆಲ್ಲವನ್ನೂ ಭ್ರಮೆಯಿಂದ ಆರೋಪಿಸಿಯೇ ಹೀಗೆ ಹೇಳುತ್ತಾರೆ. ಕೆಲವರು ಜೀವನನ್ನು ತ್ರಿಗುಣಮಯನೆಂದು ಹೇಳುತ್ತಾರೆ. ವಾಸ್ತವವಾಗಿ ಇವೆಲ್ಲ ಮಾತುಗಳು ಅಜ್ಞಾನದ ಕಾರಣದಿಂದಲೇ ಇವೆ. ನೀನು ಜ್ಞಾನಸ್ವರೂಪನಾಗಿರುವಂತೆಯೇ ಜೀವನೂ ವಾಸ್ತವವಾಗಿ ಜ್ಞಾನಸ್ವರೂಪನೇ ಆಗಿರುವನು. ಆದರೆ ಅವನು ತನ್ನ ಆತ್ಮಸ್ವರೂಪವನ್ನು ಮರೆತು ಮಾಯೆಯ ಬಲೆಯಲ್ಲಿ ಸಿಕ್ಕಿಹಾಕಿಕೊಂಡಿರುವನು. ಇದರಿಂದ ನಾನಾ ಬಗೆಯ ಭ್ರಮೆಗಳು ಉಪಸ್ಥಿತವಾದುವು. ಜ್ಞಾನಸ್ವರೂಪನಾದ ನಿನ್ನಲ್ಲಿ ಇವೆಲ್ಲ ಭ್ರಮೆಗಳು ಕಿಂಚಿತ್ತಾದರೂ ಇಲ್ಲ. ॥ ೨೫ ॥

ಸದಿವ ಮನಸ್ತ್ರಿವೃತ್ತ್ವಯಿ ವಿಭಾತ್ಯಸದಾಮನುಜಾತ್
ಸದಭಿಮೃಶಂತ್ಯಶೇಷಮಿದಮಾತ್ಮತಯಾಽಽತ್ಮವಿದಃ ।
ನ ಹಿ ವಿಕೃತಿಂ ತ್ಯಜಂತಿ ಕನಕಸ್ಯ ತದಾತ್ಮತಯಾ
ಸ್ವಕೃತಮನುಪ್ರವಿಷ್ಟಮಿದಮಾತ್ಮತಯಾವಸಿತಮ್ ॥ ೨೬ ॥

ಈ ತ್ರಿಗುಣಾತ್ಮಕ ಜಗತ್ತು ಮನಸ್ಸಿನ ಕಲ್ಪನೆಯೇ ಆಗಿದೆ. ಪ್ರಕೃತಿಯ ಕಾರ್ಯವಾದ್ದರಿಂದ ಅಸತ್ತಾಗಿಯೇ ಇದೆ. ಆದರೆ ಇದರ ಆಧಾರವಾದ ನೀನೇ ಇದರಲ್ಲಿ ಪರಿಪೂರ್ಣನಾಗಿರುವೆ. ಅದಕ್ಕಾಗಿ ಇದು ಅಸತ್ತಾಗಿದ್ದರೂ ಸತ್ಯದಂತೆ ಕಂಡುಬರುತ್ತದೆ. ಆತ್ಮಜ್ಞಾನಿಗೆ ಬ್ರಹ್ಮದೃಷ್ಟಿ ಇರುವುದರಿಂದ ಅವನಿಗೆ ಈ ಇಡೀ ವಿಶ್ವವು ಬ್ರಹ್ಮಮಯವೇ ಆಗಿದೆ. ಅವನು ಇದರಲ್ಲಿ ನಿನ್ನದೇ ಸ್ವರೂಪವನ್ನು ನೋಡುತ್ತಾನೆ. ಅವನು ಮಾಯೆಯನ್ನು ಸ್ವೀಕರಿಸುವುದಿಲ್ಲ. ಚಿನ್ನದಿಂದ ಮಾಡಿದ ಒಡವೆಗಳಲ್ಲಿ ಸುವರ್ಣತತ್ತ್ವವನ್ನು ತಿಳಿದವನು ಒಡವೆಗಳ ಆಕೃತಿಯನ್ನು ಮಿಥ್ಯೆಯೆಂದೇ ತಿಳಿದು, ಚಿನ್ನದ ಬೆಲೆಯನ್ನು ಮಾತ್ರ ಅರಿಯುತ್ತಾನೆ. ಹಾಗೆಯೇ ತತ್ತ್ವಜ್ಞಾನಿಯಾದವನು ಮಾಯಾನಿರ್ಮಿತ ಆಕೃತಿಗಳನ್ನು ಮಿಥ್ಯೆಯೆಂದು ತಿಳಿದು, ಅಧಿಷ್ಠಾನ ರೂಪದಲ್ಲಿರುವ ನಿನ್ನನ್ನೇ ನೋಡುತ್ತಾನೆ. ಏಕೆಂದರೆ, ಈ ವಿಶ್ವವನ್ನು ನಿರ್ಮಿಸಿ ನೀನೇ ಇದರಲ್ಲಿ ಪ್ರವಿಷ್ಟನಾಗಿರುವೆ. ॥ ೨೬ ॥

ತವ ಪರಿ ಯೇ ಚರಂತ್ಯಖಿಲಸತ್ತ್ವನಿಕೇತತಯಾ
ತ ಉತ ಪದಾಽಽಕ್ರಮಂತ್ಯವಿಗಣಯ್ಯ ಶಿರೋ ನಿರ್ಋತೇಃ ।
ಪರಿವಯಸೇ ಪಶೂನಿವ ಗಿರಾ ವಿಬುಧಾನಪಿ ತಾಂ-
ಸ್ತ್ವಯಿ ಕೃತಸೌಹೃದಾಃ ಖಲು ಪುನಂತಿ ನ ಯೇ ವಿಮುಖಾಃ
॥ ೨೭ ॥

ಈ ಪ್ರಕಾರ ಸಮಸ್ತ ಪ್ರಾಣಿಗಳಲ್ಲಿ ನೀನೇ ಪ್ರಕಾಶಿಸುತ್ತಿರುವೆ ಎಂದು ತಿಳಿದು ನಿನ್ನ ಅನನ್ಯ ಭಕ್ತರಾದವರು ಎಲ್ಲರ ಕುರಿತು ಆತ್ಮಭಾವವನ್ನಿರಿಸಿಕೊಂಡು ಸಮಸ್ತ ಪ್ರಾಣಿಗಳ ಸೇವೆಯು ನಿನ್ನದೇ ಸೇವೆ ಎಂದು ಭಾವಿಸುತ್ತಾರೆ. ಅಂತಹ ಮಹಾಪುರುಷರ ಎಲ್ಲ ಕ್ರಿಯಾ-ಕಲಾಪಗಳು ನಿನ್ನೊಡನೆಯೇ ಆಗುತ್ತಾ ಇರುತ್ತವೆ. ಅವರು ಮೃತ್ಯುವಿನಿಂದ ಭಯ ಪಡದೆ ಅದರ ತಲೆಯನ್ನು ಮೆಟ್ಟಿನಿಲ್ಲುತ್ತಾರೆ. ಅಂತಹ ಭಕ್ತರ ಮನಸ್ಸು ನಿನ್ನಲ್ಲೇ ನೆಲಸಿದ್ದರಿಂದ ಅವರು ಅತ್ಯಂತ ಪವಿತ್ರರಾಗಿರುತ್ತಾರೆ. ಆದ್ದರಿಂದ ಅವರು ಹುಟ್ಟು-ಸಾವಿನ ಕಟ್ಟೆಯಲ್ಲಿ ಸಿಲುಕುವುದಿಲ್ಲ. ಆದರೆ ನಿನ್ನ ಭಕ್ತಿಯಿಂದ ವಿಮುಖರಾದವರು ವಿದ್ವಾಂಸರಾಗಿದ್ದರೂ ಕರ್ಮಫಲವನ್ನು ವರ್ಣಿಸುವ ವೇದವಾಣಿಗಳಲ್ಲೇ ತೊಡಗಿರುತ್ತಾರೆ. ಆ ವಾಣಿಗಳಲ್ಲಿರುವ ಕರ್ಮಫಲದ ಆಸೆಯೇ ಅವರನ್ನು ಕರ್ಮಗಳನ್ನು ಆಚರಿಸಲು ಬಂಧಿಸುತ್ತದೆ. ಪಶುವನ್ನು ಬಂಧಿಸಿ ಆದರಿಂದ ಕೆಲಸ ಮಾಡಿಸಿಕೊಳ್ಳುವಂತೆಯೇ ಅವರು ಆ ವಾಣಿಗಳಲ್ಲಿ ಮೋಸ ಹೋಗಿ ಕರ್ಮಗಳನ್ನು ಮಾಡುತ್ತಲೇ ಇರುತ್ತಾರೆ. ತಮ್ಮ ಪುಣ್ಯ-ಪಾಪಗಳ ಫಲವಾಗಿ ಅವರಿಗೆ ಹುಟ್ಟು-ಸಾವುಗಳ ಚಕ್ರ ಅಂಟಿಕೊಂಡೇ ಇರುತ್ತದೆ. ಆದರೆ ನಿನ್ನ ಭಕ್ತರಾದರೋ ನಿನ್ನನ್ನೇ ಹೊಂದುತ್ತಾರೆ. ಅವರು ಪುನಃ ಜಗತ್ತಿಗೆ ಬರುವುದಿಲ್ಲ. ಆದುದರಿಂದ ನಿನ್ನ ಭಕ್ತಿಯೇ ಜೀವಿಗಳಿಗೆ ಸರ್ವೋತ್ಕೃಷ್ಟ ಸಾಧನವಾಗಿದೆ. ॥ ೨೭ ॥

ತ್ವಮಕರಣಃ ಸ್ವರಾಡಖಿಲಕಾರಕಶಕ್ತಿಧರ-
ಸ್ತವ ಬಲಿಮುದ್ವಹಂತಿ ಸಮದಂತ್ಯಜಯಾನಿಮಿಷಾಃ ।
ವರ್ಷಭುಜೋಽಖಿಲಕ್ಷಿತಿಪತೇರಿವ ವಿಶ್ವಸೃಜೋ
ವಿದಧತಿ ಯತ್ರ ಯೇ ತ್ವಧಿಕೃತಾ ಭವತಶ್ಚಕಿತಾಃ
॥ ೨೮ ॥

ಪ್ರಭುವೇ! ನೀನು ಮನ, ಬುದ್ಧಿ ಇಂದ್ರಿಯಾದಿಗಳಿಂದ ರಹಿತನಾಗಿದ್ದರೂ ಸಮಸ್ತ ಇಂದ್ರಿಯಗಳ ಶಕ್ತಿಗಳನ್ನು ಧರಿಸಿರುವ ಸ್ವಯಂಪ್ರಕಾಶ ಸ್ವರೂಪನಾಗಿರುವೆ. ನೀನೇ ಎಲ್ಲರಿಗೆ ಎಲ್ಲ ವಿಧದ ಶಕ್ತಿಯನ್ನು ಕರುಣಿಸುತ್ತಿರುವೆ. ಅದಕ್ಕಾಗಿ ಸಮಸ್ತ ದೇವತೆಗಳು ತಮ್ಮ-ತಮ್ಮ ಉಪಹಾರವನ್ನು ನಿನಗೆ ಸಮರ್ಪಿಸುತ್ತಾರೆ. ಮತ್ತೆ ನಿನ್ನಿಂದಲೇ ಆ ವಸ್ತುಗಳನ್ನು ಪ್ರಸಾದವಾಗಿ ಪಡೆದುಕೊಂಡು ಇಂದ್ರಿಯಗಳ ದೇವತೆಗಳರೂಪದಲ್ಲಿ ಅಯಾಯ ವಿಷಯಗಳನ್ನು ಅನುಭವಿಸುತ್ತಾರೆ. ಭಗವಂತಾ! ಇದೆಲ್ಲವೂ ನಿನ್ನ ಪೂಜೆಯೇ ಆಗಿದೆ. ದೊಡ್ಡ ಸಾಮ್ರಾಟನ ಅಧೀನದಲ್ಲಿರುವ ಮಾಂಡಲಿಕ ರಾಜರು ಪ್ರಜೆಗಳಿಂದ ಕಂದಾಯವನ್ನು ಪಡೆದು ಸಾಮ್ರಾಟನಿಗೆ ಒಪ್ಪಿಸಿ ಅವನಿಂದ ದೊರೆತುದನ್ನು ಅನುಭವಿಸುತ್ತಾರೆ. ಹಾಗೆಯೇ ಈ ದೇವತೆಗಳೂ ನಿನ್ನಿಂದ ಸಮಸ್ತ ಭೋಗಗಳನ್ನು ಪಡೆದುಕೊಂಡು ಅವನ್ನು ಅನುಭವಿಸುತ್ತಾರೆ ಹಾಗೂ ನಿನ್ನಿಂದ ನಿಯಮಿಸಲ್ಪಟ್ಟ ತಮ್ಮ-ತಮ್ಮ ಕಾರ್ಯಗಳನ್ನು ನಿನಗೆ ಹೆದರಿಕೊಂಡೇ ಎಚ್ಚರಿಕೆಯಿಂದ ಮಾಡುತ್ತಾ ಇರುತ್ತಾರೆ. ॥ ೨೮ ॥

ಸ್ಥಿರಚರಜಾತಯಃ ಸ್ಯುರಜಯೋತ್ಥನಿಮಿತ್ತಯುಜೋ
ವಿಹರ ಉದೀಕ್ಷಯಾ ಯದಿ ಪರಸ್ಯ ವಿಮುಕ್ತ ತತಃ ।
ನ ಹಿ ಪರಮಸ್ಯ ಕಶ್ಚಿದಪರೋ ನ ಪರಶ್ಚ ಭವೇ-
ದ್ವಿಯತ ಇವಾಪದಸ್ಯ ತವ ಶೂನ್ಯತುಲಾಂ ದಧತಃ
॥ ೨೯ ॥

ನಿತ್ಯಮುಕ್ತನಾದ ಪರಮೇಶ್ವರನೇ! ನಿನಗೆ ಲೀಲೆಯನ್ನು ನಡೆಸಬೇಕೆಂಬ ಇಚ್ಛೆಯುಂಟಾದಾಗ ನಿನ್ನ ಸಂಕಲ್ಪ ಮಾತ್ರದಿಂದ ಸ್ಥಾವರ ಜಂಗಮ ಪ್ರಾಣಿಗಳು ಮತ್ತು ಇತರ ಪದಾರ್ಥಗಳು ಇವೆಲ್ಲದರ ನಾಮ-ರೂಪಾತ್ಮಕವಾದ ಸೃಷ್ಟಿಯಾಗುತ್ತದೆ. ಆ ಸಮಯದಲ್ಲಿ ಹಿಂದಿನ ಸಂಸ್ಕಾರಗಳಿಂದ ಕೂಡಿಕೊಂಡು ಎಲ್ಲ ಪ್ರಾಣಿಗಳು ಉತ್ಪನ್ನವಾಗುತ್ತವೆ. ನೀನಾದರೋ ಆಕಾಶದಂತೆ ಎಲ್ಲದರಲ್ಲಿ ಅಸಂಗನಾಗಿಯೇ ಇರುತ್ತೀಯೆ. ಸರ್ವವ್ಯಾಪಿಯೂ, ಸರ್ವಶ್ರೇಷ್ಠನೂ, ಪರಮನೂ ಆದ ನಿನಗೆ ತನ್ನವರು-ಪರರು ಎಂದು ಯಾರೂ ಇಲ್ಲ. ಹೀಗಿದ್ದರೂ ನಿನ್ನನ್ನು ಭಜಿಸುವವರು ಈ ಜನ್ಮ-ಮೃತ್ಯುರೂಪವಾದ ಸಂಸಾರದಿಂದ ಪಾರಾಗಿ ಮುಮುಕ್ಷುವನ್ನು ಪಡೆಯುಕೊಳ್ಳುವರು. ॥೨೯॥

ಅಪರಿಮಿತಾ ಧ್ರುವಾಸ್ತನುಭೃತೋ ಯದಿ ಸರ್ವಗತಾ-
ಸ್ತರ್ಹಿ ನ ಶಾಸ್ಯತೇತಿ ನಿಯಮೋ ಧ್ರುವ ನೇತರಥಾ ।
ಅಜನಿ ಚ ಯನ್ಮಯಂ ತದವಿಮುಚ್ಯ ನಿಯಂತೃ ಭವೇತ್
ಸಮಮನುಜಾನತಾಂ ಯದಮತಂ ಮತದುಷ್ಟತಯಾ
॥ ೩೦ ॥

ನ ಘಟತ ಉದ್ಭವಃ ಪ್ರಕೃತಿಪೂರುಷಯೋರಜಯೋ-
ರುಭಯಯುಜಾ ಭವಂತ್ಯಸುಭೃತೋ ಜಲಬುದ್ಬುದವತ್ ।
ತ್ವಯಿ ತ ಇಮೇ ತತೋ ವಿವಿಧನಾಮಗುಣೈಃ ಪರಮೇ
ಸರಿತ ಇವಾರ್ಣವೇ ಮಧುನಿ ಲಿಲ್ಯುರಶೇಷರಸಾಃ
॥ ೩೧ ॥

ನೃಷು ತವ ಮಾಯಯಾ ಭ್ರಮಮಮೀಷ್ವವಗತ್ಯ ಭೃಶಂ
ತ್ವಯಿ ಸುಧಿಯೋಽಭವೇ ದಧತಿ ಭಾವಮನುಪ್ರಭವಮ್ ।
ಕಥಮನುವರ್ತತಾಂ ಭವಭಯಂ ತವ ಯದ್ಭ್ರುಕುಟಿಃ
ಸೃಜತಿ ಮುಹುಸ್ತ್ರಿಣೇಮಿರಭವಚ್ಛರಣೇಷು ಭಯಮ್
॥ ೩೨ ॥

ಸತ್ಯಸ್ವರೂಪನಾದ ಪರಮಾತ್ಮನೇ! ಅಸಂಖ್ಯರಾದ ಪ್ರಾಣಿಗಳನ್ನು ಸ್ಥಿರರೂ-ಸರ್ವವ್ಯಾಪಿಗಳೂ ಎಂದು ತಿಳಿದುಕೊಂಡರೆ ಇವೆಲ್ಲ ಜೀವರು ನಿನಗೆ ಸಮಾನರೇ ಆಗುವರು. ಮತ್ತೆ ಅಂತಹ ಸ್ಥಿತಿಯಲ್ಲಿ ಅವನ್ನು ನಿಯಂತ್ರಿಸುವುದು ನಿನಗೆ ಅಸಂಭವವಾಗುತ್ತಿತ್ತು. ಏಕೆಂದರೆ, ಶಾಸಿತನಾಗುವವನು ಸರ್ವವ್ಯಾಪಕನಾಗಲಾರನು. ಅದರಿಂದಲೇ ಯಾವ ಕಾರಣದಿಂದ ಇದು ಯುಕ್ತವಾಗಿದೆಯೋ ಮತ್ತು ಯಾವುದರಿಂದ ಉತ್ಪನ್ನವಾಗಿದೆಯೋ ಅವನೇ ಇದರ ಶಾಸಕನಾಗಬಲ್ಲನು. ಈ ವಿಶ್ವವು ನಿನ್ನಿಂದಲೇ ಉತ್ಪನ್ನವಾಗಿದೆ. ಇದರ ಉಪಾದಾನ ಕಾರಣವೂ ಆಗಿರುವೆ. ನೀನೇ ಇದರ ನಿಯಾಮಕನಾಗಿದ್ದೀಯೆ. ಈ ವಿಶ್ವದಲ್ಲಿ ಇದ್ದುಕೊಂಡು ನೀನೇ ಎಲ್ಲರನ್ನು ಸಮಭಾವದಿಂದ ಶಾಸನ ಮಾಡುತ್ತಿರುವೆ. ಈ ವಿಶ್ವವು ನಿನ್ನದೇ ಸ್ವರೂಪವಾಗಿದೆ. ಆದ್ದರಿಂದ ನಿನ್ನನ್ನು ಬಿಟ್ಟು ಬೇರೆ ಯಾರೂ ಇದರ ನಿಯಾಮಕನಾಗಲಾರನು. ಯಾರಾದರೂ ನಾನು ನಿನ್ನನ್ನು ತಿಳಿದಿದ್ದೇನೆ ಎಂದು ಹೇಳಿದರೆ, ಅವನು ಹೇಳುವುದರಲ್ಲಿ ಮತಿಯ ದೋಷವಿರುವುದರಿಂದ ಸರಿಯಾಗಲಾರದು. ಪರಮಪಿತಾ ಪರಮೇಶ್ವರನಾದ ನಿನ್ನ ಚರಣಗಳಲ್ಲಿ ಶರಣಾಗುವುದೇ ಅಭಯ ಪದವನ್ನು ಪಡೆಯುವ ಸಾಧನವೆಂಬುದಾಗಿ ನಮ್ಮ ಮತವಾಗಿದೆ. ॥ ೩೦ ॥

ಸ್ವಾಮಿಯೇ! ಪ್ರಕೃತಿ ಮತ್ತು ಪುರುಷ ಎರಡೂ ಅಜನ್ಮಾ ಅನಾದಿಯಾಗಿದೆ. ಆದರೆ ಇವುಗಳಿಂದ ಈ ವಿಶ್ವದ ಉತ್ಪತ್ತಿಯು ಘಟಿಸುವುದಿಲ್ಲ. (ನೀನಾದರೋ ನಿನ್ನ ಸಂಕಲ್ಪ ಮಾತ್ರದಿಂದಲೇ ಅನಂತ ಕೋಟಿ ಬ್ರಹ್ಮಾಂಡಗಳನ್ನು ನಿರ್ಮಾಣ ಮಾಡುತ್ತೀಯೆ.) ನೀರು ಮತ್ತು ಗಾಳಿಯ ಸಂಯೋಗದಿಂದ ನೀರಗುಳ್ಳೆಗಳು ಉಂಟಾಗುತ್ತವೆ ಹಾಗೂ ವಿಲೀನವಾಗುತ್ತವೆ. ಹಾಗೆಯೇ ಪ್ರಾಣಿಗಳೂ ಕೂಡ ಪ್ರಕೃತಿ ಮತ್ತು ಪುರುಷರ ಸಂಯೋಗದಿಂದ ಉತ್ಪನ್ನರಾಗುತ್ತಾರೆ. ಮತ್ತೆ ನದಿಗಳು ತಮ್ಮ ನಾಮ-ರೂಪಗಳನ್ನು ಕಳೆದುಕೊಂಡು ಸಮುದ್ರದಲ್ಲಿ ಒಂದಾಗುವಂತೆ ಕೊನೆಯಲ್ಲಿ ಅನೇಕ ನಾಮ-ಗುಣಗಳೊಂದಿಗೆ ಸರ್ವಶ್ರೇಷ್ಠನಾದ ನಿನ್ನಲ್ಲೇ ಸೇರಿ ಹೋಗುತ್ತಾರೆ. ಜೇನಿನಲ್ಲಿ ಎಲ್ಲ ಹೂವುಗಳ ರಸವು ಸೇರಿಹೋಗುವಂತೆಯೇ ಎಲ್ಲ ಜೀವರು ನಿನ್ನಲ್ಲೇ ಲೀನವಾಗುತ್ತಾರೆ. ॥ ೩೧ ।

ಪ್ರಭೋ! ನೀನು ಅಜನಾಗಿರುವೆ. ಜ್ಞಾನಿಗಳು ನಿನ್ನ ಚರಣಕಮಲಗಳನ್ನು ದೃಢವಾಗಿ ಆಶ್ರಯಿಸಿ ಅಭಯ ಪದವನ್ನು ಪಡೆಯುವರು. ನಿನ್ನ ಮಾಯೆಯ ಹಿಡಿತಕ್ಕೆ ಸಿಕ್ಕಿಬಿದ್ದು ಜೀವನು ಅಲೆಯುತ್ತಾ ಇದ್ದಾನೆ. ನಿನ್ನ ಚರಣಗಳಲ್ಲಿ ಶರಣಾಗದೆ ಇರುವುದರಿಂದ ಅವನಿಗೆ ನಿನ್ನ ಕಾಲಚಕ್ರವು ಪದೇ-ಪದೇ ಭಯವನ್ನುಂಟು ಮಾಡುತ್ತದೆ. ಮಳೆ, ಸೆಕೆ, ಛಳಿ ಎಂಬ ಮೂರು ಭಾಗವುಳ್ಳ ಸಂವತ್ಸರರೂಪವಾದ ಕಾಲಚಕ್ರವು ನಿನ್ನ ಭ್ರೂವಿಲಾಸವಾಗಿದೆ ಎಂಬುದನ್ನು ಚೆನ್ನಾಗಿ ತಿಳಿದು ಜ್ಞಾನಿಗಳು ಪೂರ್ಣರೂಪದಿಂದ ನಿನ್ನಲ್ಲಿಯೇ ಭಕ್ತಿಭಾವವನ್ನಿರಿಸುತ್ತಾರೆ. ನಿನ್ನನ್ನು ಅನುಸರಿಸುವವರಿಗೆ ಸಂಸಾರದ ಭಯವು ಉಂಟಾಗಲಾರದು. ಆದ್ದರಿಂದ ಭಗವಂತನೇ! ನಿನಗೆ ಶರಣು ಬಂದಿರುವ ಈ ಜೀವರನ್ನು ನೀನೇ ಉದ್ಧರಿಸು ॥ ೩೨ ॥

ವಿಜಿತಹೃಷೀಕವಾಯುಭಿರದಾಂತಮನಸ್ತುರಗಂ
ಯ ಇಹ ಯತಂತಿ ಯಂತುಮತಿಲೋಲಮುಪಾಯಖಿದಃ ।
ವ್ಯಸನಶತಾನ್ವಿತಾಃ ಸಮವಹಾಯ ಗುರೋಶ್ಚರಣಂ
ವಣಿಜ ಇವಾಜ ಸಂತ್ಯಕೃತಕರ್ಣಧರಾ ಜಲಧೌ
॥ ೩೩ ॥

ಜನ್ಮಾದಿಗಳಿಲ್ಲದ ಪ್ರಭುವೇ! ಪ್ರಾಣಾಯಾಮಾದಿ ಸಾಧನೆಗಳ ಮೂಲಕ ಇಂದ್ರಿಯಗಳ ಮೇಲೆ ಹತೋಟಿ ಪಡೆದಿದ್ದರೂ, ಸದ್ಗುರುವಿನ ಚರಣಗಳನ್ನು ಆಶ್ರಯಿಸದ ಕಾರಣ ಅತ್ಯಂತ ಚಂಚಲವಾದ ಅವನ ಮನೋರೂಪೀ ಕುದುರೆಯು ವಶವಾಗುವುದಿಲ್ಲ. ಅದು ಅವರ ಇಂದ್ರಿಯಗಳನ್ನು ಪದೇ-ಪದೇ ಕ್ಷುಬ್ಧಗೊಳಿಸುತ್ತಾ ಇರುತ್ತದೆ ಮತ್ತು ಅನೇಕ ವಿಪತ್ತುಗಳನ್ನು ಅವರ ಮುಂದೆ ಒಡ್ಡುತ್ತದೆ. ನಾವಿಕನಿಲ್ಲದ ಸಮುದ್ರದ ಹಡಗಿನಲ್ಲಿ ಪ್ರಯಾಣಿಸುವ ವ್ಯಾಪಾರಿಯಂತೆಯೇ ಅವರ ಸ್ಥಿತಿಗತಿಯಾಗುತ್ತದೆ. ಆದ್ದರಿಂದ ಮನೋರೂಪಿ ಕುದುರೆಯನ್ನು ವಶದಲ್ಲಿಟ್ಟುಕೊಳ್ಳಲು, ಪರಮಾನಂದದ ಪ್ರಾಪ್ತಿಗಾಗಿ ಸದ್ಗುರುವಿನ ಚರಣಗಳಲ್ಲಿ ಶರಣಾಗಬೇಕು. ಸದ್ಗುರುವಿನ ರೂಪದಲ್ಲಿ ಸಾಕ್ಷಾತ್ ನೀನೇ ಇರುವೆ. ॥ ೩೩ ॥

ಸ್ವಜನಸುತಾತ್ಮದಾರಧನಧಾಮಧರಾಸುರಥೈ-
ಸ್ತ್ವಯಿ ಸತಿ ಕಿಂ ನೃಣಾಂ ಶ್ರಯತ ಆತ್ಮನಿ ಸರ್ವರಸೇ ।
ಇತಿ ಸದಜಾನತಾಂ ಮಿಥುನತೋ ರತಯೇ ಚರತಾಂ
ಸುಖಯತಿ ಕೋ ನ್ವಿಹ ಸ್ವವಿಹತೇ ಸ್ವನಿರಸ್ತಭಗೇ
॥ ೩೪ ॥

ಭಗವಂತಾ! ನೀನು ಅಖಂಡ ಆನಂದಸ್ವರೂಪನೂ, ಶರಣಾಗತ ಭಕ್ತರಿಗೆ ಆತ್ಮಸ್ವರೂಪನೂ ಆಗಿರುವೆ. ನೀನಿರುವಾಗ ಸ್ವಜನರೆಂದು ಹೇಳಿಕೊಳ್ಳುವ ಪತ್ನೀ-ಪುತ್ರರು, ದೇಹ-ಗೇಹ, ಧನಸಂಪತ್ತು, ಭೂಮಿ, ರಥ-ವಾಹನಾದಿಗಳಿಂದ ಏನು ಪ್ರಯೋಜನ? ಈ ಸತ್ಯವನ್ನು ಅರಿಯದ ಜನರು ಆನಂದವನ್ನು ಪಡೆಯಲು ಸಂಸಾರದಲ್ಲಿ ರಮಮಾಣರಾಗುತ್ತಾರೆ ಹಾಗೂ ವಿಷಯಗಳ ಕಡೆಗೆ ಓಡುತ್ತಾ ಇರುತ್ತಾರೆ. ಆ ವಿಷಯಗಳಾದರೋ ಸ್ವರೂಪತಃ ವಿನಾಶವುಳ್ಳದ್ದು ಸಾರಹೀನವೂ ಆಗಿವೆ. ಅವು ಜೀವನಿಗೆ ಯಾವ ಸುಖವನ್ನು ತಾನೇ ಕೊಡಬಲ್ಲವು? ಆದ್ದರಿಂದ ಜೀವಿಯು ಪರಮಾನಂದ ಸ್ವರೂಪನಾದ ನಿನ್ನನ್ನೇ ಭಜಿಸಬೇಕು. ॥ ೩೪ ॥

ಭುವಿ ಪುರುಪುಣ್ಯತೀರ್ಥಸದನಾನ್ಯೃಷಯೋ ವಿಮದಾ-
ಸ್ತ ಉತ ಭವತ್ಪದಾಂಬುಜಹೃದೋಽಘಭಿದಂಘ್ರಿಜಲಾಃ ।
ದಧತಿ ಸಕೃನ್ಮನಸ್ತ್ವಯಿ ಯ ಆತ್ಮನಿ ನಿತ್ಯಸುಖೇ
ನ ಪುನರುಪಾಸತೇ ಪುರುಷಸಾರಹರಾವಸಥಾನ್
॥ ೩೫ ॥

ಭಗವಂತನೇ! ನಿನ್ನ ಚರಣಗಳನ್ನು ಹೃದಯದಲ್ಲಿ ಧರಿಸಿರುವಂತಹ ಮಹಾಪುರುಷರು ಮದ-ಮತ್ಸರಾದಿ ದೋಷಗಳಿಂದ ರಹಿತರಾಗಿರುತ್ತಾರೆ. ಇಂತಹವರು ಈ ಭೂಮಂಡಲದಲ್ಲಿ ಅತ್ಯಂತ ಪವಿತ್ರರಾಗಿದ್ದು ಸಾಕ್ಷಾತ್ ತೀರ್ಥಸ್ವರೂಪಿಗಳೇ ಆಗಿದ್ದಾರೆ. ಆ ಮಹಾಪುರುಷರ ಚರಣೋದಕವು ಸಮಸ್ತ ಪಾಪ-ತಾಪಗಳನ್ನು ಎಂದೆಂದಿಗೂ ನಾಶಮಾಡುವಂತಹುದು. ನೀನು ನಿತ್ಯಾನಂದ ಸ್ವರೂಪನೂ, ಎಲ್ಲರ ಆತ್ಮರೂಪನೂ ಆಗಿರುವೆ. ನಿನ್ನ ಲೀಲಾ-ಕಥೆಗಳು ನಿರಂತರವಾಗಿಯೂ ಕೇಳಲು ಸಿಗುವಂತಹ ಆ ಮಹಾಪುರುಷರ ಸತ್ಸಂಗದಲ್ಲಿ ಒಮ್ಮೆಯಾದರೂ ತನ್ನ ಮನಸ್ಸನ್ನು ತೊಡಗಿಸಿದರೆ ಮತ್ತೆ ಮನುಷ್ಯರ ಗುಣಗಳನ್ನು ಹರಣಮಾಡುವ ಸಂಸಾರದ ಬಲೆಯಲ್ಲಿ ಸಿಕ್ಕಿಹಾಕಿಕೊಳ್ಳುವುದಿಲ್ಲ. ॥ ೩೫ ॥

ಈ ಜಗತ್ತು ಸತ್‌ವಸ್ತುವಿನಿಂದ ಉತ್ಪನ್ನವಾಗಿದೆ. ಆದ್ದರಿಂದ ಇದನ್ನೂ ಸತ್ಯವೆಂದೇ ತಿಳಿದುಕೊಂಡರೆ ಆಪತ್ತೇನಿದೆ? ಎಂದು ಪ್ರಶ್ನಿಸಿದರೆ, ಇದರ ಉತ್ತರ - ಈ ಮಾತು ತರ್ಕದಿಂದ ಸಿದ್ಧವಾಗುವುದಿಲ್ಲ. ಏಕೆಂದರೆ, ಇದರಲ್ಲಿ ಅನೇಕತೆಯ ಜೊತೆಗೆ ಅಸತ್ಯವೂ ಕಂಡುಬರುತ್ತದೆ. ಆದ್ದರಿಂದ ಇದನ್ನು ಸತ್ಯವೆಂದು ತಿಳಿಯಲಾಗುವುದಿಲ್ಲ. ವಾಸ್ತವವಾಗಿ ಇದು ವಿದ್ಯೆ ಮತ್ತು ಅವಿದ್ಯೆ ಅರ್ಥಾತ್-ಚೇತನ ಮತ್ತು ಜಡ ಎರಡರಿಂದಲೂ ಸೇರಿಕೊಂಡೇ ಇದೆ. ಪ್ರಭೋ! ಇದರ ಅಧಿಷ್ಠಾನದಲ್ಲಿ ಸತ್ಯರೂಪ ಪರಮಾತ್ಮನಾದ ನೀನೇ ಇರುವೆ. ಜೊತೆಗೆ ಮಾಯೆಯ ಕಾರ್ಯರೂಪೀ ಪ್ರಪಂಚವೂ ಇದೆ. ಅದು ವಿಕಲ್ಪದಿಂದ ಇದೆ, ಆದರೂ

ಸತ ಇದಮುತ್ಥಿತಂ ಸದಿತಿ ಚೇನ್ನನು ತರ್ಕಹತಂ
ವ್ಯಭಿಚರತಿ ಕ್ವಚ ಕ್ವಚ ಮೃಷಾ ನ ತಥೋಭಯಯುಕ್ ।
ವ್ಯವಹೃತಯೇ ವಿಕಲ್ಪ ಇಷಿತೋಽಂಧಪರಂಪರಯಾ
ಭ್ರಮಯತಿ ಭಾರತೀ ತ ಉರುವೃತ್ತಿಭಿರುಕ್ಥಜಡಾನ್ ॥ ೩೬ ॥

ನ ಯದಿದಮಗ್ರ ಆಸ ನ ಭವಿಷ್ಯದತೋ ನಿಧನಾ-
ದನುಮಿತಮಂತರಾ ತ್ವಯಿ ವಿಭಾತಿ ಮೃಷೈಕರಸೇ ।
ಅತ ಉಪಮೀಯತೇ ದ್ರವಿಣಜಾತಿವಿಕಲ್ಪಪಥೈ-
ರ್ವಿತಥಮನೋವಿಲಾಸಮೃತಮಿತ್ಯವಯಂತ್ಯಬುಧಾಃ ॥ ೩೭ ॥

ಸ ಯದಜಯಾ ತ್ವಜಾಮನುಶಯೀತ ಗುಣಾಂಶ್ಚ ಜುಷನ್
ಭಜತಿ ಸರೂಪತಾಂ ತದನು ಮೃತ್ಯುಮಪೇತಭಗಃ ।
ತ್ವಮುತ ಜಹಾಸಿ ತಾಮಹಿರಿವ ತ್ವಚಮಾತ್ತಭಗೋ
ಮಹಸಿ ಮಹೀಯಸೇಽಷ್ಟಗುಣಿತೇಽಪರಿಮೇಯಭಗಃ ॥ ೩೮ ॥

ವ್ಯವಹಾರಕ್ಕಾಗಿ ಒಪ್ಪಿಕೊಂಡದ್ದಾಗಿದೆ; ಎನ್ನುವ ಮಾನ್ಯತೆಯೂ ಅಂಧಪರಂಪರೆಯಿಂದ ನಡೆದುಬಂದಿದೆ. ನಿನ್ನ ವಾಣಿಯಾದ ವೇದದ ವಾಸ್ತವಿಕ ತಾತ್ಪರ್ಯ ಜಗತ್ತಿನ ಸತ್ಯತೆಯಲ್ಲಿಲ್ಲ. ಹೀಗಿದ್ದರೂ ಕರ್ಮಕಾಂಡದಲ್ಲಿ ಸಿಕ್ಕಿಹಾಕಿಕೊಂಡ ಜನರು ದೊಡ್ಡ-ದೊಡ್ಡ ಕರ್ಮಫಲಗಳ ಪ್ರಲೋಭನೆಯಿಂದ ಸ್ವರ್ಗಾದಿಭೋಗಗಳನ್ನೇ ಹಾಗೂ ಭೌತಿಕ ಸುಖವನ್ನೇ ಸುಖವೆಂದು ತಿಳಿಯುತ್ತಾರೆ. ಅವರ ಈ ಮಾನ್ಯತೆಯು ಭ್ರಮೆಯಿಂದ ಹಗ್ಗವನ್ನು ಸರ್ಪವೆಂದು ತಿಳಿಯುವಂತೆಯೇ ಆಗಿದೆ. ಆ ಭ್ರಾಂತಿಯಿಂದ ಹಗ್ಗವೂ ಹಾವಾಗಿ ಕಂಡುಬರುತ್ತದೆ. ಹಾಗೆಯೇ ಈ ಜಗತ್ತಿನ ರೂಪದಲ್ಲಿ ಸಗುಣ ನಿರಾಕಾರ ರೂಪದಿಂದ ಪರಮಾತ್ಮನ ಸತ್ತೆಯೇ ಇದೆ. ಆದರೆ ಮಾಯೆಯ ಪರದೆಯ ಕಾರಣ ಪ್ರಪಂಚವೇ ಸತ್ಯವಾಗಿ ತೋರುವುದು, ಪರಮಾತ್ಮನು ಕಾಣುವುದಿಲ್ಲ. ॥ ೩೬ ॥

ಇದರ ಇನ್ನೊಂದು ಮುಖ್ಯ ಪ್ರಮಾಣ – ಈ ಜಗತ್ತು ಉತ್ಪತ್ತಿಗೆ ಮೊದಲು ಇರಲಿಲ್ಲ, ಪ್ರಳಯದ ನಂತರವೂ ಇರಲಾರದು. ಆದುದರಿಂದ ನಡುವೆಯೂ ಮಿಥ್ಯೆಯೇ ಆಗಿದೆ ಎಂಬುದು ಸಿದ್ಧವಾಗುತ್ತದೆ. ಕೆಲವು ಸಮಯದವರೆಗೆ ಇದು ನಿನ್ನಲ್ಲಿ ಕಂಡು ಬರುತ್ತದೆ. ದ್ರವ್ಯ, ಜಾತಿ, ಆಕಾರ ಮುಂತಾದವುಗಳ ಮೂಲಕ ಇವೆಲ್ಲದರ ವ್ಯವಹಾರಕ್ಕಾಗಿ ಅವೆಲ್ಲವುಗಳಿಗೆ ನಾಮ-ರೂಪಗಳನ್ನು ಇರಿಸಲಾಗುತ್ತದೆ. ವಾಸ್ತವವಾಗಿ ಇದೂ ಕೂಡ ವಾಣಿಯ ವಿಲಾಸವೇ ಆಗಿದೆ. ಅವುಗಳ ಹೆಸರನ್ನಿತ್ತು ವ್ಯವಹಾರದಲ್ಲಿ ಬಳಸುವುದೂ ಒಂದು ರೀತಿಯಿಂದ ನಮ್ಮ ಕಲ್ಪನೆಯೇ ಆಗಿದೆ. ಜ್ಞಾನಿಗಳು ಅವೆಲ್ಲವನ್ನು ಮತ್ತು ಅವುಗಳ ವ್ಯವಹಾರವನ್ನು ಮಿಥ್ಯೆಯೆಂದೇ ತಿಳಿಯುತ್ತಾರೆ. ಅವರ ದೃಷ್ಟಿಯಲ್ಲಿ ಎಲ್ಲದರಲ್ಲಿಯೂ ಏಕರಸನಾದ ನೀನೇ ಇರುವೆ. ಅವರು ನಿನ್ನ ಸಾಕ್ಷಾತ್ಕಾರವನ್ನೇ ಪಡೆಯುತ್ತಾರೆ. ಆದರೆ ಅಜ್ಞಾನಿಗಳಿಗೆ ನೀನು ಕಾಣುವುದಿಲ್ಲ. ಪ್ರಾಪಂಚಿಕ ವಸ್ತುಗಳನ್ನೇ ನೋಡುತ್ತಾರೆ ಹಾಗೂ ಅವನ್ನೇ ಸತ್ಯವೆಂದು ತಿಳಿಯುತ್ತಾರೆ. ॥ ೩೭ ॥

ಹೀಗೆ ಈ ಜೀವನು ಮಾಯೆಯ ಕಾರಣ ಮಾಯೆಯನ್ನು ಸ್ವೀಕರಿಸಿ ಮತ್ತೆ ಗುಣಗಳನ್ನು ಸ್ವೀಕರಿಸಿ ತಾನು ಮಾಯಾಮಯನೇ ಆಗಿ ಹೋಗುತ್ತಾನೆ. ತನ್ನ ಸ್ವರೂಪವಾದ ಸಚ್ಚಿದಾನಂದ ಸ್ವರೂಪವನ್ನು ಪೂರ್ಣವಾಗಿ ಮರೆತುಬಿಡುತ್ತಾನೆ. ಹೀಗೆ ತನ್ನ ಐಶ್ವರ್ಯವನ್ನು ನಾಶಪಡಿಸಿಕೊಂಡು ಮೃತ್ಯುಮುಖಿನಾಗುತ್ತಾನೆ ಹಾಗೂ ಜನ್ಮ-ಮರಣ ಚಕ್ರದಲ್ಲಿ ಅಲೆಯುತ್ತಾ ಇರುತ್ತಾನೆ. ಆದರೆ ನೀನು ನಿನ್ನ ಐಶ್ವರ್ಯವನ್ನು ನಿನ್ನ ಬಳಿಯೇ ಇಟ್ಟುಕೊಂಡು ಹಾವು ಪೊರೆಯನ್ನು ಕಳಚುವಂತೆ ಮಾಯೆಯನ್ನು ಬಿಟ್ಟು ಬಿಡುವೆ. ನೀನು ನಿನ್ನದೇ ಆದ ಅಪರಿಮಿತ ಅಣಿಮಾದಿ ಅಷ್ಟಸಿದ್ಧಿಗಳಿಂದ ಕೂಡಿಕೊಂಡು ನಿನ್ನ ಐಶ್ವರ್ಯದಲ್ಲೇ ಸ್ಥಿತನಾಗಿರುವೆ. ಜೀವನು ನಿನ್ನ ಅಂಶನಾದ್ದರಿಂದ ಸಚ್ಚಿದಾನಂದ ಸ್ವರೂಪನೇ ಆಗಿದ್ದಾನೆ. ಆದರೆ ಅಲ್ಪವಾದ ಜೀವನು ತನ್ನ ಐಶ್ವರ್ಯವನ್ನು ಕಳೆದುಕೊಳ್ಳುವನು ಮಹಾನ್ ಆದ ನೀನು ನಿನ್ನ ಮಹಿಮೆಯಲ್ಲೇ ಸ್ಥಿತನಾಗಿರುವೆ. ॥ ೩೮ ॥

ಯದಿ ನ ಸಮುದ್ಧರಂತಿ ಯತಯೋ ಹೃದಿ ಕಾಮಜಟಾ
ದುರಧಿಗಮೋಽಸತಾಂ ಹೃದಿ ಗತೋಽಸ್ಮೃತಕಂಠಮಣಿಃ ।
ಅಸುತೃಪಯೋಗಿನಾಮುಭಯತೋಽಪ್ಯಸುಖಂ ಭಗವನ್
ನನಪಗತಾಂತಕಾದನಧಿರೂಢಪದಾದ್ಭವತಃ
॥ ೩೯ ॥

ಪ್ರಭುವೇ! ಹೃದಯದಲ್ಲಿರುವ ಕಾಮವಾಸನೆಯ ಜಾಲವನ್ನು ಸಂಯಮದ ಮೂಲಕ ಸಮೂಲವಾಗಿ ಕಿತ್ತೊಗೆಯದಿದ್ದರೆ ವಿಷಯಗಳಲ್ಲಿ ಮುಳುಗಿದ ಸಾಧಕರ ಹೃದಯದಲ್ಲಿ ನೀನಿದ್ದರೂ ಕೊರಳ ಕಂಠೀಹಾರವನ್ನು ಮರೆತಂತೆ ನಿನ್ನ ದರ್ಶನ ಪಡೆಯುವುದು ಅವರಿಗೆ ಕಷ್ಟವೇ ಇದೆ. ಈ ಕಾರಣದಿಂದಲೇ ವಿಷಯೀ ಮನುಷ್ಯರು ನಿನ್ನಿಂದ ವಿಮುಖರಾಗಿದ್ದು ಇಂದ್ರಿಯಗಳನ್ನು ಮತ್ತು ಪ್ರಾಣಗಳನ್ನು ತೃಪ್ತಿಪಡಿಸುವುದರಲ್ಲೇ ತೊಡಗಿರುತ್ತಾರೆ. ಅವರು ಮೃತ್ಯುವಿನಿಂದ ಬಿಡುಗಡೆ ಹೊಂದುವುದೇ ಇಲ್ಲ. ನಿನ್ನ ಸ್ವರೂಪವನ್ನು ತಿಳಿಯದ ಕಾರಣ ಮರಣಾನಂತರ ನರಕವನ್ನೂ ಅನುಭವಿಸಬೇಕಾಗುತ್ತದೆ. ಹೀಗೆ ಇಹಲೋಕ ಮತ್ತು ಪರಲೋಕ ಎರಡರಿಂದಲೂ ಅವನಿಗೆ ದುಃಖವೇ ದುಃಖವಿದೆ. ॥ ೩೯ ॥

ತ್ವದವಗಮೀ ನ ವೇತ್ತಿ ಭವದುತ್ಥಶುಭಾಶುಭಯೋ-
ರ್ಗುಣವಿಗುಣಾನ್ವಯಾಂಸ್ತರ್ಹಿ ದೇಹಭೃತಾಂ ಚ ಗಿರಃ ।
ಅನುಯುಗಮನ್ವಹಂ ಸಗುಣ ಗೀತಪರಂಪರಯಾ
ಶ್ರವಣಭೃತೋ ಯತಸ್ತ್ವಮಪವರ್ಗಗತಿರ್ಮನುಜೈಃ
॥ ೪೦ ॥

ಸಗುಣನಾದ ಪರಮಾತ್ಮನೇ! ನಿನ್ನನ್ನು ತಿಳಿದ ಭಕ್ತನು ಪುಣ್ಯ ಪಾಪಗಳ ಫಲಗಳನ್ನು ಇಲ್ಲೇ ತ್ಯಜಿಸಿ ಬಿಡುತ್ತಾನೆ. ಇವೆರಡೂ ಅವನಿಗೆ ಸಂಬಂಧಿಸಿದ್ದಲ್ಲ. ಅವನು ಇತರ ದೇಹಧಾರಿಗಳಿಗೆ ಇರುವ ವಿಧಿ-ನಿಷೇಧಗಳೆಂಬ ವೇದವಾಣಿಯನ್ನು ಸ್ವೀಕರಿಸುವುದಿಲ್ಲ. ಏಕೆಂದರೆ, ಅವನು ತನ್ನ ವಾಸ್ತವಿಕ ಸ್ವರೂಪವನ್ನು ಅರ್ಥಾತ್ ನಿನ್ನನ್ನು ಪಡೆದುಕೊಂಡುಬಿಟ್ಟಿರುವನು. ನಿನ್ನನ್ನು ಪಡೆಯುವುದೇ ಶಾಸ್ತ್ರಗಳ ಚರಮ ಸಿದ್ಧಾಂತವಾಗಿದೆ. ಭಕ್ತರು ಪ್ರತಿಯುಗದಲ್ಲಿಯೂ ಗೀತ ಪರಂಪರೆಯಿಂದ ನಿನ್ನ ಗುಣಗಳನ್ನು ಹಾಡುತ್ತಾ ಬಂದಿದ್ದಾರೆ. ಅವನ್ನು ಅವನು ಶ್ರವಣಿಸುತ್ತಾನೆ. ಶ್ರವಣ ಮಾಡುತ್ತಾ- ಮಾಡುತ್ತಾ ಅವನ ವೃತ್ತಿಯು ತದಾಕಾರವಾಗಿ ಹೋಗುತ್ತದೆ. ಅವನಿಗೆ ನೀನು ಮೋಕ್ಷ ಸ್ವರೂಪ ಸದ್ಗತಿಯನ್ನು ಕರುಣಿಸುತ್ತೀಯೆ. ॥ ೪೦ ॥

ದ್ಯುಪತಯ ಏವ ತೇ ನ ಯಯುರಂತಮನಂತತಯಾ
ತ್ವಮಪಿ ಯದಂತರಾಂಡನಿಚಯಾ ನನು ಸಾವರಣಾಃ ।
ಖ ಇವ ರಜಾಂಸಿ ವಾಂತಿ ವಯಸಾ ಸಹ ಯಚ್ಛ್ರುತಯ-
ಸ್ತ್ವಯಿ ಹಿ ಫಲಂತ್ಯತನ್ನಿರಸನೇನ ಭವನ್ನಿಧನಾಃ
॥ ೪೧ ॥

ಭಗವಂತನೇ! ನಿನ್ನೊಳಗೆ ಏಳೇಳು ಆವರಣಗಳ ಸಹಿತ ಅನೇಕ ಬ್ರಹ್ಮಾಂಡಗಳ ಸಮುದಾಯವೇ ಇದೆ. ಅನಂತಕೋಟಿ ಬ್ರಹ್ಮಾಂಡ ನಾಯಕನಾದ ನಿನ್ನಲ್ಲಿ ಅವು ಆಕಾಶದಲ್ಲಿ ಹಾರಾಡುತ್ತಿರುವ ಧೂಳಿನ ಕಣಗಳಂತೆ ಸುತ್ತುತ್ತಾ ಇವೆ. ನೀನು ಅನಂತನೂ, ಅಸೀಮನೂ ಆಗಿರುವೆ. ನಿನ್ನ ಆದಿ-ಅಂತ್ಯವನ್ನು ನಿನ್ನಿಂದಲೇ ವರ್ಣಿಸಲಾಗದಿದ್ದಾಗ ಸಾಧಾರಣ ಬೇರೆ ಪ್ರಾಣಿ ಅದನ್ನು ಹೇಗೆ ತಿಳಿಯಬಲ್ಲನು? ಇದೆಂತಹ ಆಶ್ಚರ್ಯವಾಗಿದೆ. ಅವೆಲ್ಲ ಬ್ರಹ್ಮಾಂಡಗಳು ಕಾಲನ ವೇಗದಿಂದ ಸುತ್ತುತ್ತಾ ಇರುತ್ತವೆ. ಶ್ರುತಿಗಳಾದ ನಾವೂ ಕೂಡ 'ನೇತಿ-ನೇತಿ' ಎಂಬ ವಾಕ್ಯಗಳ ಮೂಲಕ ಇತರ ಎಲ್ಲವನ್ನು ನಿರಾಕರಣ ಮಾಡಿ ಕೊನೆಗೆ ಶೇಷವಾಗಿ ಉಳಿಯುವ ನಿನ್ನಲ್ಲೇ ಸಫಲರಾಗುತ್ತೇವೆ. ॥ ೪೧ ॥

ಶ್ರೀಭಗವಾನುವಾಚ

ಇತ್ಯೇತದ್ ಬ್ರಹ್ಮಣಃ ಪುತ್ರಾ ಆಶ್ರುತ್ಯಾತ್ಮಾನುಶಾಸನಮ್ ।
ಸನಂದನಮಥಾನರ್ಚುಃ ಸಿದ್ಧಾ ಜ್ಞಾತ್ವಾತ್ಮನೋ ಗತಿಮ್
॥ ೪೨ ॥

ಭಗವಾನ್ ನಾರಾಯಣನು ಹೇಳಿದನು – ದೇವರ್ಷಿಗಳೇ! ಈ ಪ್ರಕಾರ ಸನಕಾದಿ ಋಷಿಗಳು ಜೀವ (ಆತ್ಮಾ) ಮತ್ತು ಬ್ರಹ್ಮನ ಏಕತೆಯನ್ನು ಹೇಳುವ ಉಪದೇಶವನ್ನು ಕೇಳಿ ಆತ್ಮಸ್ವರೂಪವನ್ನು ಸಾಕ್ಷಾತ್ಕರಿಸಿಕೊಂಡರು. ನಿತ್ಯಸಿದ್ಧರಾಗಿದ್ದರೂ ಅವರ ಉಪದೇಶವನ್ನು ಶ್ರವಣಿಸಿ ಅವರು ಕೃತಕೃತ್ಯರಾಗಿ ಸನಂದನರನ್ನು ಪೂಜಿಸಿದರು. ॥ ೪೨ ॥

ಇತ್ಯಶೇಷಸಮಾಮ್ನಾಯಪುರಾಣೋಪನಿಷದ್ರಸಃ ।
ಸಮುದ್ಧೃತಃ ಪೂರ್ವಜಾತೈರ್ವ್ಯೋಮಯಾನೈರ್ಮಹಾತ್ಮಭಿಃ ॥ ೪೩ ॥

ತ್ವಂ ಚೈತದ್ಬ್ರಹ್ಮದಾಯಾದ ಶ್ರದ್ಧಯಾऽऽತ್ಮಾನುಶಾಸನಮ್ ।
ಧಾರಯಂಶ್ಚರ ಗಾಂ ಕಾಮಂ ಕಾಮಾನಾಂ ಭರ್ಜನಂ ನೃಣಾಮ್ ॥ ೪೪ ॥

ಶ್ರೀಶುಕ ಉವಾಚ

ಏವಂ ಸ ಋಷಿಣಾऽऽದಿಷ್ಟಂ ಗೃಹೀತ್ವಾ ಶ್ರದ್ಧಯಾऽऽತ್ಮವಾನ್ ।
ಪೂರ್ಣಃ ಶ್ರುತಧರೋ ರಾಜನ್ನಾಹ ವೀರವ್ರತೋ ಮುನಿಃ ॥ ೪೫ ॥

ನಾರದ ಉವಾಚ

ನಮಸ್ತಸ್ಮೈ ಭಗವತೇ ಕೃಷ್ಣಾಯಾಮಲಕೀರ್ತಯೇ ।
ಯೋ ಧತ್ತೇ ಸರ್ವಭೂತಾನಾಮಭವಾಯೋಶತೀಃ ಕಲಾಃ ॥ ೪೬ ॥

ಇತ್ಯಾದ್ಯಮೃಷಿಮಾನಮ್ಯ ತಚ್ಛಿಷ್ಯಾಂಶ್ಚ ಮಹಾತ್ಮನಃ ।
ತತೋऽಗಾದಾಶ್ರಮಂ ಸಾಕ್ಷಾತ್ ಪಿತುರ್ದ್ವೈಪಾಯನಸ್ಯ ಮೇ ॥ ೪೭ ॥

ಸಭಾಜಿತೋ ಭಗವತಾ ಕೃತಾಸನಪರಿಗ್ರಹಃ ।
ತಸ್ಮೈ ತದ್ವರ್ಣಯಾಮಾಸ ನಾರಾಯಣಮುಖಾಚ್ಛ್ರುತಮ್ ॥ ೪೮ ॥

ಇತ್ಯೇತದ್ವರ್ಣಿತಂ ರಾಜನ್ ಯನ್ನಃ ಪ್ರಶ್ನಃ ಕೃತಸ್ತ್ವಯಾ ।
ಯಥಾ ಬ್ರಹ್ಮಣ್ಯನಿರ್ದೇಶ್ಯೇ ನಿರ್ಗುಣೇऽಪಿ ಮನಶ್ಚರೇತ್ ॥ ೪೯ ॥

ನಾರದನೇ! ಸನಕಾದಿ ಋಷಿಗಳು ಸೃಷ್ಟಿಯ ಮೊದಲಿಗೆ ಉತ್ಪನ್ನರಾಗಿದ್ದರು. ಆದ್ದರಿಂದ ಅವರು ಎಲ್ಲರ ಪೂರ್ವಜರಾಗಿದ್ದಾರೆ. ಆಕಾಶಗಾಮಿಗಳಾದ ಆ ಮಹಾತ್ಮರು ಈ ಪ್ರಕಾರ ಸಮಸ್ತ ವೇದ, ಪುರಾಣ ಮತ್ತು ಉಪನಿಷತ್ತುಗಳ ಸಾರವನ್ನು ತೆಗೆದು ಹೇಳಿದುದು ಸಮಸ್ತ ಶಾಸ್ತ್ರಗಳ ಸಾರವಾಗಿದೆ. ॥ ೪೩ ॥ ದೇವರ್ಷಿಯೇ! ನೀನೂ ಕೂಡ ಅವರಂತೆಯೇ ಬ್ರಹ್ಮಮಾನಸ ಪುತ್ರನಾಗಿರುವೆ. ಅವರ ಜ್ಞಾನಸಂಪತ್ತಿಗೆ ಅಧಿಕಾರಿಯಾಗಿರುವೆ. ಆದ್ದರಿಂದ ನೀನೂ ಈ ಬ್ರಹ್ಮವಿದ್ಯೆಯನ್ನು ಧರಿಸಿಕೊಂಡು ಸ್ವಚ್ಛಂದ ಭಾವದಿಂದ ಭೂಮಂಡಲದಲ್ಲಿ ಸಂಚರಿಸು. ಈ ವಿದ್ಯೆಯು ಸಮಸ್ತ ವಾಸನೆಗಳನ್ನು ಭಸ್ಮಮಾಡುವಂತಹುದು. ॥ ೪೪ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪ್ರಿಯ ಪರೀಕ್ಷಿತನೇ! ದೇವಋಷಿನಾರದರು ದೊಡ್ಡ ಸಂಯಮಿಯೂ, ಜ್ಞಾನಿಗಳೂ, ಪೂರ್ಣಕಾಮರೂ, ನೈಷ್ಠಿಕ ಬ್ರಹ್ಮಚಾರಿಗಳೂ ಆಗಿದ್ದಾರೆ. ಭಗವಾನ್ ನಾರಾಯಣನಿಂದ ಕೊಡಲ್ಪಟ್ಟ ಉಪದೇಶವನ್ನು ಅವರು ಬಹಳ ಶ್ರದ್ಧೆಯಿಂದ ಶ್ರವಣಿಸಿ ಇಂತೆಂದರು – ॥ ೪೫ ॥

ದೇವರ್ಷಿನಾರದರು ಹೇಳಿದರು – ಭಗವಂತನೇ! ನೀನು ಸಚ್ಚಿದಾನಂದ ಸ್ವರೂಪನಾದ ಶ್ರೀಕೃಷ್ಣನೇ ಆಗಿರುವೆ. ನಿನ್ನ ಕೀರ್ತಿಯು ಪರಮ ಪವಿತ್ರವಾಗಿದೆ. ನೀನು ಸಮಸ್ತ ಪ್ರಾಣಿಗಳ ಪರಮ ಕಲ್ಯಾಣಕ್ಕಾಗಿ ಅವರ ಮೇಲೆ ಅನುಗ್ರಹವನ್ನು ತೋರಲು ಮನೋಹರವಾದ ಅವತಾರವನ್ನು ತಾಳುವ ಲೀಲೆಯನ್ನು ಮಾಡುತ್ತಿರುವೆ. ಅಂತಹ ನಿನಗೆ ನಾನು ನಮಸ್ಕರಿಸುತ್ತೇನೆ. ॥ ೪೬ ॥

ಪ್ರಿಯಪರೀಕ್ಷಿತನೇ! ಹೀಗೆ ಆದಿಋಷಿ ಭಗವಾನ್ ನಾರಾಯಣನಿಗೆ ಮತ್ತು ಅವನ ಶಿಷ್ಯರಿಗೆ ನಮಸ್ಕಾರ ಮಾಡಿ ದೇವರ್ಷಿನಾರದರು ನನ್ನ ತಂದೆಯವರಾದ ಶ್ರೀಕೃಷ್ಣದ್ವೈಪಾಯನರ ಆಶ್ರಮಕ್ಕೆ ಹೋದರು. ॥ ೪೭ ॥ ಅಲ್ಲಿ ನನ್ನ ತಂದೆಯವರಾದ ಶ್ರೀವೇದವ್ಯಾಸರು ಅವರನ್ನು ಯಥೋಚಿತವಾಗಿ ಸತ್ಕರಿಸಿದರು. ಅವರು ಸುಖಾಸೀನರಾಗಿ ಕುಳಿತು ಭಗವಾನ್ ನಾರಾಯಣನ ಶ್ರೀಮುಖದಿಂದ ಕೇಳಿದ ಬ್ರಹ್ಮವಿಷಯಕ ಚರ್ಚೆಯನ್ನು ಆದ್ಯಂತವಾಗಿ ತಿಳಿಸಿದರು. ॥ ೪೮ ॥ ರಾಜೇಂದ್ರನೇ! "ಶ್ರುತಿಗಳು ಬ್ರಹ್ಮ ವಸ್ತುವನ್ನು ಹೇಗೆ ಪ್ರತಿಪಾದಿಸಬಲ್ಲವು? ಏಕೆಂದರೆ, ನಿರ್ಗುಣ ತತ್ತ್ವವಾದರೋ ಮನಸ್ಸು ವಾತಿಗಿಂತ ಅತೀತವಾಗಿದೆ ಮತ್ತು ಪ್ರಕೃತಿ ಗುಣಗಳಿಂದ ರಹಿತವಾಗಿದೆ" ಎಂದು ನೀನು ಕೇಳಿದ ಪ್ರಶ್ನೆಗೆ ನಾನು ಉತ್ತರ ಕೊಟ್ಟಂತಾಯಿತಲ್ಲ! ॥ ೪೯ ॥ ಪ್ರಿಯಪರೀಕ್ಷಿತನೇ! ಭಗವಂತನು ತನ್ನ ಸಂಕಲ್ಪದಿಂದಲೇ ಈ ವಿಶ್ವವನ್ನು ನಿರ್ಮಿಸಿರುತ್ತಾನೆ. ಅವನೇ ಎಲ್ಲರ ಪ್ರೇರಕನೂ ಆಗಿದ್ದಾನೆ. ಆದಿ, ಮಧ್ಯ, ಅಂತ್ಯದಲ್ಲಿ ಅವನೇ ಇರುತ್ತಾನೆ. ಅವನೇ ಅವ್ಯಕ್ತ ಪ್ರಕೃತಿ ಮತ್ತು ಜೀವ ಎರಡರ ಈಶ್ವರನಾಗಿದ್ದಾನೆ. ಅವನೇ ಈ ವಿಶ್ವವನ್ನು ಸೃಷ್ಟಿಸಿ ಜೀವರೂಪದಿಂದ ಇದರಲ್ಲಿ ಪ್ರವೇಶಿಸಿದನು. ಜೀವನು ಸಾಕ್ಷಾತ್ ಪರಮಾತ್ಮನ ಅಂಶನಾದ್ದರಿಂದ ಇವನು ಋಷಿಸ್ವರೂಪನಾಗಿದ್ದಾನೆ. ಇವನಿಗೆ ನಿಲ್ಲಲೆಂದೇ ಪರಮಾತ್ಮನು

ಯೋಽಸ್ಯೋತ್ಪ್ರೇಕ್ಷಕ ಆದಿಮಧ್ಯನಿಧನೇ
ಯೋಽವ್ಯಕ್ತಜೀವೇಶ್ವರೋ
ಯಃ ಸೃಷ್ಟ್ವೇದಮನುಪ್ರವಿಶ್ಯ ಋಷಿಣಾ
ಚಕ್ರೇ ಪುರಃ ಶಾಸ್ತಿ ತಾಃ ।
ಯಂ ಸಂಪದ್ಯ ಜಹಾತ್ಯಜಾಮನುಶಯೀ
ಸುಪ್ತಃ ಕುಲಾಯಂ ಯಥಾ
ತಂ ಕೈವಲ್ಯನಿರಸ್ತಯೋನಿಮಭಯಂ
ಧ್ಯಾಯೇದಜಸ್ರಂ ಹರಿಮ್ ॥ ೫೦ ॥

ದೇಹವನ್ನು ನಿರ್ಮಿಸಿ ಸಮಸ್ತ ಜೀವರ ನಿಯಂತ್ರಣವನ್ನು ಮಾಡುತ್ತಿರುವನು. ಆ ಪರಬ್ರಹ್ಮ ಪರಮಾತ್ಮನನ್ನು ಪ್ರಾಪ್ತಮಾಡಿಕೊಂಡು ಜೀವನು ಮಾಯೆಯನ್ನು ತ್ಯಜಿಸಿ ತನ್ನ ಸ್ವರೂಪವಾದ ಪರಬ್ರಹ್ಮನನ್ನು ಹೊಂದುತ್ತಾನೆ. ಗಾಢನಿದ್ರೆಯಲ್ಲಿ ಮನುಷ್ಯನಿಗೆ ಈ ಪಾಂಚಭೌತಿಕ ಶರೀರದ ಎಚ್ಚರವಿರುವುದಿಲ್ಲವೋ ಹಾಗೆಯೇ ಸತತ ಪರಮಾತ್ಮನನ್ನು ಚಿಂತಿಸುತ್ತಿರುವ ಭಕ್ತನಿಗೆ ಮಾಯಾಮಯ ಪದಾರ್ಥಗಳ ಚಿಂತನೆ ಆಗುವುದಿಲ್ಲ. ಆದ್ದರಿಂದ ಮುಕ್ತನಾಗಲು ಏಕಮಾತ್ರ ಸರಳ ಉಪಾಯವು ಸತತವಾಗಿ ಭಗವಂತನನ್ನು ಸ್ಮರಿಸುವುದೇ ಆಗಿದೆ. ಭಗವಂತನು ಕೈವಲ್ಯ ಸ್ವರೂಪನಾಗಿದ್ದಾನೆ. ಅವನ ಭಜನೆ ಮಾಡುವುದರಿಂದ ಪ್ರಪಂಚದ ಆವಾಗಮನವು ನಾಶವಾಗಿ ಹೋಗುತ್ತದೆ. ಆದ್ದರಿಂದ ಯಾವಾಗಲೂ ಭಗವಂತನನ್ನೇ ಚಿಂತನೆ ಭಜನೆ ಮಾಡುತ್ತಾ ಇರಬೇಕು. ಅದರಲ್ಲೇ ಜೀವಿಯ ಮಂಗಳವಿದೆ. ಅದೇ ನಿರ್ಭಯ ಸ್ಥಾನವಾಗಿದೆ. ಆದ್ದರಿಂದ ಭಗವಂತನಲ್ಲಿ ಶರಣಾಗಬೇಕು. ॥ ೫೦ ॥

ಎಂಭತ್ತೇಳನೆಯ ಅಧ್ಯಾಯವು ಮುಗಿಯಿತು. ॥ ೮೭ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮಸ್ಕಂಧೇ ಉತ್ತರಾರ್ಧೇ
ನಾರದನಾರಾಯಣಸಂವಾದೇ ವೇದಸ್ತುತಿರ್ನಾಮ ಸಪ್ತಾಶೀತಿತಮೋಽಧ್ಯಾಯಃ ॥ ೮೭ ॥

ಎಂಭತ್ತೆಂಟನೆಯ ಅಧ್ಯಾಯ

ವೃಕಾಸುರನ ಕಥೆ

ರಾಜೋವಾಚ

ದೇವಾಸುರಮನುಷ್ಯೇಷು ಯೇ ಭಜಂತ್ಯಶಿವಂ ಶಿವಮ್ ।
ಪ್ರಾಯಸ್ತೇ ಧನಿನೋ ಭೋಜಾ ನ ತು ಲಕ್ಷ್ಮ್ಯಾಃ ಪತಿಂ ಹರಿಮ್ ॥ ೧ ॥

ಏತದ್ವೇದಿತುಮಿಚ್ಛಾಮಃ ಸಂದೇಹೋಽತ್ರ ಮಹಾನ್ ಹಿ ನಃ ।
ವಿರುದ್ಧಶೀಲಯೋಃ ಪ್ರಭ್ವೋರ್ವಿರುದ್ಧಾ ಭಜತಾಂ ಗತಿಃ ॥ ೨ ॥

ಶ್ರೀಶುಕ ಉವಾಚ

ಶಿವಃ ಶಕ್ತಿಯುತಃ ಶಶ್ವತ್ತ್ರಿಲಿಂಗೋ ಗುಣಸಂವೃತಃ ।
ವೈಕಾರಿಕಸ್ತೈಜಸಶ್ಚ ತಾಮಸಶ್ಚೇತ್ಯಹಂ ತ್ರಿಧಾ ॥ ೩ ॥

ಪರೀಕ್ಷಿದ್ರಾಜನು ಕೇಳುತ್ತಾನೆ – ಪೂಜ್ಯರೇ! ಭಗವಾನ್ ಶಂಕರನು ಸಕಲಭೋಗಪರಿತ್ಯಾಗಿಯು. ಆದರೆ ಅವನನ್ನು ಉಪಾಸಿಸುವ ದೇವಾಸುರ–ಮನುಷ್ಯರು ಪ್ರಾಯಶಃ ಶ್ರೀಮಂತರೂ, ಭೋಗಸಂಪನ್ನರೂ ಆಗುತ್ತಾರೆ. ಇದಕ್ಕೆ ಪ್ರತಿಯಾಗಿ ಭಗವಾನ್ ವಿಷ್ಣುವು ಲಕ್ಷ್ಮೀಪತಿಯು. ಅವನನ್ನು ಉಪಾಸಿಸುವವರು ಪ್ರಾಯಶಃ ಧನಹೀನರೂ, ವಿರಾಗಿಗಳೂ ಆಗಿರುತ್ತಾರೆ. ॥ ೧ ॥ ಇಬ್ಬರೂ ಪ್ರಭುಗಳು ತ್ಯಾಗ ಮತ್ತು ಭೋಗಗಳ ದೃಷ್ಟಿಯಿಂದ ವಿರುದ್ಧ ಸ್ವಭಾವದವರಾಗಿದ್ದಾರೆ. ಆದರೆ ಅವರ ಉಪಾಸಕರಿಗೆ ಅವರ ಸ್ವರೂಪದ ವಿರುದ್ಧ ಫಲವೇ ಸಿಗುತ್ತದೆ. ತ್ಯಾಗಿಯ ಉಪಾಸನೆಯಿಂದ ಭೋಗ ಮತ್ತು ಲಕ್ಷ್ಮೀಪತಿಯ ಉಪಾಸನೆಯಿಂದ ತ್ಯಾಗ ಹೇಗೆ ದೊರೆಯುತ್ತದೆ? ಈ ವಿಷಯದಲ್ಲಿ ನನಗೆ ಸಂದೇಹ ಉಂಟಾಗಿದೆ ದಯವಿಟ್ಟು ಇದನ್ನು ತಿಳಿಸಿರಿ. ॥ ೨ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ! ಶಿವನು ಸದಾ ತನ್ನ ಶಕ್ತಿಯಿಂದ ಯುಕ್ತನಾಗಿರುವನು. ಅವನು ಸತ್ತ್ವಾದಿ ಗುಣಗಳಿಂದ ಕೂಡಿ ಅಹಂಕಾರಕ್ಕೆ ಅಧಿಷ್ಠಾನನೂ ಆಗಿರುವನು. ವೈಕಾರಿಕ, ತೈಜಸ ಮತ್ತು ತಾಮಸ – ಇವು ಅಹಂಕಾರದ ಮೂರು ಭೇದಗಳು. ॥ ೩ ॥

ತತೋ ವಿಕಾರಾ ಅಭವನ್ ಷೋಡಶಾಮೀಷು ಕಂಚನ ।
ಉಪಧಾವನ್ ವಿಭೂತೀನಾಂ ಸರ್ವಾಸಾಮಶ್ನುತೇ ಗತಿಮ್ ॥ ೪ ॥

ಹರಿರ್ಹಿ ನಿರ್ಗುಣಃ ಸಾಕ್ಷಾತ್ ಪುರುಷಃ ಪ್ರಕೃತೇಃ ಪರಃ ।
ಸ ಸರ್ವದೃಗುಪದ್ರಷ್ಟಾ ತಂ ಭಜನ್ ನಿರ್ಗುಣೋ ಭವೇತ್ ॥ ೫ ॥

ನಿವೃತ್ತೇಷ್ವಶ್ವಮೇಧೇಷು ರಾಜಾ ಯುಷ್ಮತ್ಪಿತಾಮಹಃ ।
ಶೃಣ್ವನ್ಭಗವತೋ ಧರ್ಮಾನಪೃಚ್ಛದಿದಮಚ್ಯುತಮ್ ॥ ೬ ॥

ಸ ಆಹ ಭಗವಾನ್‌ಸ್ತಸ್ಮೈ ಪ್ರೀತಃ ಶುಶ್ರೂಷವೇ ಪ್ರಭುಃ ।
ನೃಣಾಂ ನಿಃಶ್ರೇಯಸಾರ್ಥಾಯ ಯೋಽವತೀರ್ಣೋ ಯದೋಃ ಕುಲೇ ॥ ೭ ॥

ಶ್ರೀಭಗವಾನುವಾಚ

ಯಸ್ಯಾಹಮನುಗೃಹ್ಣಾಮಿ ಹರಿಷ್ಯೇ ತದ್ಧನಂ ಶನೈಃ ।
ತತೋಽಧನಂ ತ್ಯಜಂತ್ಯಸ್ಯ ಸ್ವಜನಾ ದುಃಖದುಃಖಿತಮ್ ॥ ೮ ॥

ಸ ಯದಾ ವಿತಥೋದ್ಯೋಗೋ ನಿರ್ವಿಣ್ಣಃ ಸ್ಯಾದ್ಧನೇಹಯಾ ।
ಮತ್ಪರೈಃ ಕೃತಮೈತ್ರಸ್ಯ ಕರಿಷ್ಯೇ ಮದನುಗ್ರಹಮ್ ॥ ೯ ॥

ತದ್ಬ್ರಹ್ಮ ಪರಮಂ ಸೂಕ್ಷ್ಮಂ ಚಿನ್ಮಾತ್ರಂ ಸದನಂತಕಮ್ ।
ಅತೋ ಮಾಂ ಸುದುರಾರಾಧ್ಯಂ ಹಿತ್ವಾನ್ಯಾನ್ ಭಜತೇ ಜನಃ ॥ ೧೦ ॥

ತತಸ್ತ ಆಶುತೋಷೇಭ್ಯೋ ಲಬ್ಧರಾಜ್ಯಶ್ರಿಯೋದ್ಧತಾಃ ।
ಮತ್ತಾಃ ಪ್ರಮತ್ತಾ ವರದಾನ್ ವಿಸ್ಮರಂತ್ಯವಜಾನತೇ ॥ ೧೧ ॥

ಈ ತ್ರಿವಿಧ ಅಹಂಕಾರದಿಂದ ಹತ್ತು ಇಂದ್ರಿಯಗಳು, ಐದು ಮಹಾಭೂತಗಳು, ಒಂದು ಮನಸ್ಸು - ಹೀಗೆ ಹದಿನಾರು ವಿಕಾರಗಳಾದುವು. ಆದ್ದರಿಂದ ಇವೆಲ್ಲದರ ಅಧಿಷ್ಠಾತೃ ದೇವತೆಗಳಲ್ಲಿ ಯಾರನ್ನೇ ಉಪಾಸನೆ ಮಾಡಿದರೂ ಸಮಸ್ತ ಐಶ್ವರ್ಯಗಳು ದೊರೆಯುತ್ತವೆ. ॥ ೪ ॥ ಪರೀಕ್ಷಿತನೇ! ಆದರೆ ಶ್ರೀಹರಿಯಾದರೋ ಪ್ರಕೃತಿಗಿಂತ ಆಚೆಗಿರುವ ಪುರುಷೋತ್ತಮನು. ಪ್ರಾಕೃತಗುಣರಹಿತನು. ಅವನು ಸರ್ವಜ್ಞನೂ, ಎಲ್ಲರ ಅಂತಃಕರಣಗಳ ಸಾಕ್ಷಿಯೂ ಆಗಿದ್ದಾನೆ. ಅವನನ್ನು ಭಜಿಸುವವನೂ ಗುಣಾತೀತನಾಗಿ ಹೋಗುತ್ತಾನೆ. ॥ ೫ ॥ ಪರೀಕ್ಷಿತ! ಹಿಂದೆ ನಿನ್ನ ತಾತನಾದ ಯುಧಿಷ್ಠಿರನು ಅಶ್ವಮೇಧ ಯಜ್ಞವನ್ನು ಮಾಡಿದಾಗ ಭಗವಂತನಿಂದ ಭಾಗವತಧರ್ಮದ ವರ್ಣನೆಯನ್ನು ಕೇಳುತ್ತಿದ್ದಾಗಲೂ ಅವನು ಇದೇ ಪ್ರಶ್ನೆಯನ್ನು ಕೇಳಿದ್ದನು. ॥ ೬ ॥

ಮಹಾರಾಜ! ಮನುಷ್ಯರ ಕಲ್ಯಾಣಕ್ಕಾಗಿಯೇ ಯದುವಂಶದಲ್ಲಿ ಅವತರಿಸಿದ ಭಗವಾನ್ ಶ್ರೀಕೃಷ್ಣನು ಸರ್ವಶಕ್ತನಾದ ಪರಮೇಶ್ವರನೇ ಆಗಿದ್ದಾನೆ. ಧರ್ಮರಾಯನ ಪ್ರಶ್ನೆಯನ್ನು ಆಲಿಸಿ, ಅದನ್ನು ಕೇಳಬೇಕೆಂದು ತವಕಿಸುತ್ತಿರುವ ಅವನಲ್ಲಿ ಪರಮಪ್ರೀತಿಯಿಂದ ಹೀಗೆ ಉತ್ತರಿಸತೊಡಗಿದನು. ॥ ೭ ॥

ಭಗವಾನ್ ಶ್ರೀಕೃಷ್ಣನು ಹೇಳಿದನು - ಯುಧಿಷ್ಠಿರನೇ! ನಾನು ಯಾರಿಗೆ ಅನುಗ್ರಹತೋರುವೆನೋ ಅವನ ಸಂಪತ್ತೆಲ್ಲವನ್ನೂ ನಿಧಾನವಾಗಿ ಕಸಿದುಕೊಳ್ಳುವೆನು. ಅವನು ನಿರ್ಧನನಾದಾಗ ಅವನ ನೆಂಟರಿಷ್ಟರೆಲ್ಲರೂ ಆತನು ದುಃಖಿತನಾಗಿದ್ದರೂ ಎಣಿಸದೆ ಬಿಟ್ಟುಬಿಡುತ್ತಾರೆ. ॥ ೮ ॥ ಮತ್ತೆ ಅವನು ಧನಸಂಗ್ರಹಣೆಗೆ ಉದ್ಯೋಗಶೀಲನಾದಾಗ ನಾನು ಅವನ ಆ ಪ್ರಯತ್ನವನ್ನು ನಿಷ್ಫಲ ಮಾಡಿಬಿಡುತ್ತೇನೆ. ಹೀಗೆ ಪದೇ-ಪದೇ ಅಸಫಲನಾಗಿ ಅವನ ಮನಸ್ಸು ಧನವನ್ನು ಗಳಿಸುವುದರಿಂದ ವಿರಕ್ತವಾಗುತ್ತದೆ. ಧನದ ಮೇಲಿನ ಆಸೆಯು ದುಃಖಕ್ಕೆ ಕಾರಣವೆಂದರಿತು ನನ್ನ ಭಕ್ತರೊಂದಿಗೆ ಮೈತ್ರಿಯನ್ನು ಬೆಳೆಸುತ್ತಾನೆ. ಆಗ ನಾನು ಅವನ ಮೇಲೆ ಅಹೈತುಕವಾದ ಕೃಪಾವರ್ಷವನ್ನು ಗರೆಯುತ್ತೇನೆ. ॥ ೯ ॥ ನನ್ನ ಕೃಪೆಯಿಂದ ಅವನಿಗೆ ಪರಮಸೂಕ್ಷ್ಮ ಅನಂತ ಸಚ್ಚಿದಾನಂದ ಸ್ವರೂಪ ಪರಬ್ರಹ್ಮನ ಪ್ರಾಪ್ತಿಯಾಗುತ್ತದೆ. ಹೀಗೆ ನನ್ನ ಅನುಗ್ರಹವೂ, ಆರಾಧನೆಯೂ ಬಹಳ ಕಠಿಣವಾಗಿದೆ. ಆದರಿಂದ ಸಾಮಾನ್ಯ ಜನರು ನನ್ನನ್ನು ಬಿಟ್ಟು ನನ್ನದೇ ರೂಪವಾದ ಬೇರೆ-ಬೇರೆ ದೇವತೆಗಳನ್ನು ಆರಾಧಿಸುತ್ತಾರೆ. ॥ ೧೦ ॥ ಇತರ ದೇವತೆಗಳು ಬೇಗನೇ ಪ್ರಸನ್ನರಾಗುತ್ತಾರೆ. ಇಂತಹ ಆಶು-ತೋಷ ದೇವತೆಗಳ ಭಕ್ತರಿಗೆ ಸಾಮ್ರಾಜ್ಯ ಲಕ್ಷ್ಮಿಯನ್ನು ಕೊಟ್ಟುಬಿಡುತ್ತಾರೆ. ಅದನ್ನು ಪಡೆದ ಅವರು ಉಚ್ಛೃಂಖಲರೂ, ಪ್ರಮಾದಿಗಳೂ, ಮದೋನ್ಮತ್ತರೂ ಆಗಿ, ತಮ್ಮ ಆರಾಧ್ಯ ದೇವತೆಗಳನ್ನೇ ಮರೆತುಬಿಡುತ್ತಾರೆ ಹಾಗೂ ಅವರನ್ನು ತಿರಸ್ಕರಿಸುತ್ತಾರೆ. ॥ ೧೧ ॥

ಶ್ರೀಶುಕ ಉವಾಚ

ಶಾಪಪ್ರಸಾದಯೋರೀಶಾ ಬ್ರಹ್ಮವಿಷ್ಣುಶಿವಾದಯಃ ।
ಸದ್ಯಃ ಶಾಪಪ್ರಸಾದೋಽಂಗ ಶಿವೋ ಬ್ರಹ್ಮಾ ನ ಚಾಚ್ಯುತಃ ॥ ೧೨ ॥

ಅತ್ರ ಚೋದಾಹರಂತೀಮಮಿತಿಹಾಸಂ ಪುರಾತನಮ್ ।
ವೃಕಾಸುರಾಯ ಗಿರಿಶೋ ವರಂ ದತ್ತ್ವಾಽಽಪ ಸಂಕಟಮ್ ॥ ೧೩ ॥

ವೃಕೋ ನಾಮಾಸುರಃ ಪುತ್ರಃ ಶಕುನೇಃ ಪಥಿ ನಾರದಮ್ ।
ದೃಷ್ಟ್ವಾಽಽಶುತೋಷಂ ಪಪ್ರಚ್ಛ ದೇವೇಷು ತ್ರಿಷು ದುರ್ಮತಿಃ ॥ ೧೪ ॥

ಸ ಆಹ ದೇವಂ ಗಿರಿಶಮುಪಾಧಾವಾಶು ಸಿದ್ಧ್ಯಸಿ ।
ಯೋಽಲ್ಪಾಭ್ಯಾಂ ಗುಣದೋಷಾಭ್ಯಾಮಾಶು ತುಷ್ಯತಿ ಕುಪ್ಯತಿ ॥ ೧೫ ॥

ದಶಾಸ್ಯಬಾಣಯೋಸ್ತುಷ್ಟಃ ಸ್ತುವತೋರ್ವಂದಿನೋರಿವ ।
ಐಶ್ವರ್ಯಮತುಲಂ ದತ್ತ್ವಾ ತತ ಆಪ ಸುಸಂಕಟಮ್ ॥ ೧೬ ॥

ಇತ್ಯಾದಿಷ್ಟಸ್ತಮಸುರ ಉಪಾಧಾವತ್ಸ್ವಗಾತ್ರತಃ ।
ಕೇದಾರ ಆತ್ಮಕ್ರವ್ಯೇಣ ಜುಹ್ವಾನೋಽಗ್ನಿಮುಖಂ ಹರಮ್ ॥ ೧೭ ॥

ದೇವೋಪಲಬ್ಧಿಮಪ್ರಾಪ್ಯ ನಿರ್ವೇದಾತ್ಸಪ್ತಮೇಽಹನಿ ।
ಶಿರೋಽವೃಶ್ಚತ್ ಸುಧಿತಿನಾ ತತ್ತೀರ್ಥಕ್ಲಿನ್ನಮೂರ್ಧಜಮ್ ॥ ೧೮ ॥

ತದಾ ಮಹಾಕಾರುಣಿಕಃ ಸ ಧೂರ್ಜಟಿ-
ರ್ಯಥಾ ವಯಂ ಚಾಗ್ನಿರಿವೋತ್ಥಿತೋಽನಲಾತ್ ।
ನಿಗೃಹ್ಯ ದೋರ್ಭ್ಯಾಂ ಭುಜಯೋರ್ನ್ಯವಾರಯತ್-
ತತ್ ಸ್ಪರ್ಶನಾದ್ಭೂಯ ಉಪಸ್ಕೃತಾಕೃತಿಃ ॥ ೧೯ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿದ್ರಾಜನೇ! ಬ್ರಹ್ಮಾ-ವಿಷ್ಣು-ಮಹೇಶ್ವರ ಇವರು ಮೂವರೂ ಶಾಪಾನುಗ್ರಹ ಸಾಮರ್ಥ್ಯವುಳ್ಳವರೇ. ಆದರೆ ಇವರಲ್ಲಿ ಮಹಾದೇವ ಮತ್ತು ಬ್ರಹ್ಮದೇವರು ಬೇಗನೇ ಪ್ರಸನ್ನರಾಗಿ ವರವನ್ನು ಕೊಡುತ್ತಾರೆ. ಹಾಗೆಯೇ ಬಹಳ ಬೇಗ ಕೋಪಗೊಂಡು ಶಾಪವನ್ನೂ ಕೊಟ್ಟುಬಿಡುತ್ತಾರೆ. ಆದರೆ ಭಗವಾನ್ ವಿಷ್ಣುವು ಹಾಗಲ್ಲ. ॥ ೧೨ ॥ ಈ ವಿಷಯದಲ್ಲಿ ಮಹಾತ್ಮರು ಒಂದು ಪ್ರಾಚೀನ ಇತಿಹಾಸವನ್ನು ಹೇಳುತ್ತಾ ಇರುತ್ತಾರೆ. ಭಗವಾನ್ ಶಂಕರನು ಒಮ್ಮೆ ವೃಕಾಸುರ ನೆಂಬುವನಿಗೆ ವರವನ್ನು ಕೊಟ್ಟು ಸಂಕಟಕ್ಕೊಳಗಾಗಿದ್ದನು. ॥ ೧೩ ॥ ಪರೀಕ್ಷಿತನೇ! ಶಕುನಿಯ ಪುತ್ರನಾದ ವೃಕಾಸುರನ ಬುದ್ಧಿಯು ಬಹಳವಾಗಿ ಕೆಟ್ಟು ಹೋಗಿತ್ತು. ಒಂದು ದಿನ ಅವನು ಎಲ್ಲೋ ಹೋಗುವಾಗ ದೇವರ್ಷಿನಾರದರನ್ನು ನೋಡಿದನು. ಅವರಿಗೆ ವಂದಿಸಿ ಸ್ವಾಮಿ! ಮೂರು ದೇವತೆಗಳಲ್ಲಿ ಶೀಘ್ರವಾಗಿ ಪ್ರಸನ್ನರಾಗುವವರು ಯಾರು ? ಎಂದು ಕೇಳಿದನು. ॥ ೧೪ ॥

ದೇವರ್ಷಿ ನಾರದರು ಹೇಳಿದರು – ನೀನು ಭಗವಾನ್ ಶಂಕರನನ್ನು ಆರಾಧಿಸು. ಇದರಿಂದ ನಿನ್ನ ಮನೋರಥವು ಬಹುಬೇಗನೇ ಈಡೇರುವುದು. ಅವನು ಅತ್ಯಲ್ಪ ಗುಣಗಳಿಂದ (ಪ್ರಾರ್ಥನೆಯಿಂದ) ಶೀಘ್ರಾತಿಶೀಘ್ರವಾಗಿ ಪ್ರಸನ್ನನಾಗುತ್ತಾನೆ ಮತ್ತು ಸಣ್ಣ ಅಪರಾಧದಿಂದಲೂ ಕೂಡಲೇ ಕ್ರೋಧಗೊಳ್ಳುವನು. ॥ ೧೫ ॥ ರಾವಣ ಮತ್ತು ಬಾಣಾಸುರರು ಕೇವಲ ವಂದಿ ಮಾಗಧರಂತೆ ಶಂಕರನನ್ನು ಸ್ತೋತ್ರಮಾಡಿದ್ದರು. ಇದರಿಂದಲೇ ಶಿವನು ಅವರಿಗೆ ಅತುಳವಾದ ಐಶ್ವರ್ಯವನ್ನು ಕೊಟ್ಟಿದ್ದನು. ಬಳಿಕ ರಾವಣನು ಕೈಲಾಸವನ್ನೇ ಎತ್ತಿದುದರಿಂದ ಮತ್ತು ಬಾಣಾಸುರನ ನಗರ ರಕ್ಷಣೆಯ ಹೊಣೆಯನ್ನು ಹೊತ್ತಿದ್ದರಿಂದ ಶಂಕರನು ಸಂಕಟಕ್ಕೀಡಾದನು. ॥ ೧೬ ॥

ನಾರದರಿಂದ ಉಪದೇಶವನ್ನು ಪಡೆದು ವೃಕಾಸುರನು ಕೇದಾರ ಕ್ಷೇತ್ರಕ್ಕೆ ಹೋಗಿ, ಅಗ್ನಿಯನ್ನು ಶಂಕರನ ಮುಖವೆಂದು ಭಾವಿಸಿ ತನ್ನ ಶರೀರದ ಮಾಂಸಖಂಡಗಳನ್ನೇ ಕಡಿದು ಕಡಿದು ಹೋಮ ಮಾಡುತ್ತಾ ಆರಾಧಿಸತೊಡಗಿದನು. ॥ ೧೭ ॥ ಈ ಪ್ರಕಾರ ಆರು ದಿನಗಳವರೆಗೆ ಉಪಾಸನೆ ಮಾಡಿದರೂ ಭಗವಾನ್ ಶಂಕರನು ಪ್ರಸನ್ನನಾಗದಿದ್ದಾಗ ಅವನಿಗೆ ತುಂಬಾ ದುಃಖವಾಯಿತು. ಏಳನೆಯ ದಿನ ಕೇದಾರತೀರ್ಥದಲ್ಲಿ ಸ್ನಾನಮಾಡಿ ಅವನು ಒದ್ದೆಯಾದ ತನ್ನ ತಲೆಯನ್ನೇ ಕತ್ತಿಯಿಂದ ಕಡಿದು ಹೋಮ ಮಾಡಲು ಬಯಸಿದನು. ॥ ೧೮ ॥ ಪರೀಕ್ಷಿತನೇ! ಜಗತ್ತಿನಲ್ಲಿ ಯಾರಾದರೂ ದುಃಖದಿಂದ ಆತ್ಮಹತ್ಯೆ ಮಾಡಿಕೊಳ್ಳಲು ತೊಡಗಿದರೆ ನಾವು ಕರುಣೆಯಿಂದ ಅವನನ್ನು ತಡೆಯುವಂತೆಯೇ ಪರಮ ದಯಾಳುವಾದ ಭಗವಾನ್ ಶಂಕರನು ವೃಕಾಸುರನ ಆತ್ಮಘಾತದ ಮೊದಲೇ ಅಗ್ನಿಕುಂಡದಿಂದ ಯಜ್ಞೇಶ್ವರನಂತೆ ಪ್ರಕಾಶಿಸುತ್ತಾ ಪ್ರಕಟನಾಗಿ ತನ್ನೆರಡೂ ಕೈಗಳಿಂದ ಅವನ ಎರಡೂ ಕೈಗಳನ್ನು ಹಿಡಿದುಕೊಂಡು ಕತ್ತನ್ನು ತುಂಡರಿಸುವುದನ್ನು ತಡೆದನು. ಶಿವನ ಸ್ಪರ್ಶವಾಗುತ್ತಲೇ ವೃಕಾಸುರನ ಅಂಗಾಂಗಗಳು ಮೊದಲಿದ್ದಂತೆ ಹೃಷ್ಟ-ಪುಷ್ಟಗಳಾದವು. ॥ ೧೯ ॥ ಭಗವಾನ್ ಶಂಕರನು ಪ್ರಸನ್ನನಾಗಿ ಹೇಳಿದನು

ತಮಾಹ ಚಾಂಗಾಲಮಲಂ ವೃಣೀಷ್ವ ಮೇ
ಯಥಾಭಿಕಾಮಂ ವಿತರಾಮಿ ತೇ ವರಮ್ ।
ಪ್ರೀಯೇಯ ತೋಯೇನ ನೃಣಾಂ ಪ್ರಪದ್ಯತಾ-
ಮಹೋ ತ್ವಯಾಽಽತ್ಮಾ ಭೃಶಮರ್ದ್ಯತೇ ವೃಥಾ ॥ ೨೦ ॥

ದೇವಂ ಸ ವವ್ರೇ ಪಾಪೀಯಾನ್
ವರಂ ಭೂತಭಯಾವಹಮ್ ।
ಯಸ್ಯ ಯಸ್ಯ ಕರಂ ಶೀರ್ಷ್ಣಿ
ಧಾಸ್ಯೇ ಸ ಮ್ರಿಯತಾಮಿತಿ ॥ ೨೧ ॥

ತಚ್ಛ್ರುತ್ವಾ ಭಗವಾನ್ ರುದ್ರೋ ದುರ್ಮನಾ ಇವ ಭಾರತ ।
ಓಮಿತಿ ಪ್ರಹಸಂಸ್ತಸ್ಮೈ ದದೇಽಹೇರಮೃತಂ ಯಥಾ ॥ ೨೨ ॥

ಇತ್ಯುಕ್ತಃ ಸೋಽಸುರೋ ನೂನಂ ಗೌರೀಹರಣಲಾಲಸಃ ।
ಸ ತದ್ವರಪರೀಕ್ಷಾರ್ಥಂ ಶಂಭೋರ್ಮೂರ್ಧ್ನಿ ಕಿಲಾಸುರಃ ।
ಸ್ವಹಸ್ತಂ ಧಾತುಮಾರೇಭೇ ಸೋಽಬಿಭ್ಯತ್ ಸ್ವಕೃತಾಚ್ಛಿವಃ ॥ ೨೩ ॥

ತೇನೋಪಸೃಷ್ಟಃ ಸಂತ್ರಸ್ತಃ ಪರಾಧಾವನ್ಸವೇಪಥುಃ ।
ಯಾವದಂತಂ ದಿವೋ ಭೂಮೇಃ ಕಾಷ್ಠಾನಾಮುದಗಾದುದಕ್ ॥ ೨೪ ॥

ಅಜಾನಂತಃ ಪ್ರತಿವಿಧಿಂ ತೂಷ್ಣೀಮಾಸನ್ಸುರೇಶ್ವರಾಃ ।
ತತೋ ವೈಕುಂಠ ಮಗಮದ್ಭಾಸ್ವರಂ ತಮಸಃ ಪರಮ್ ॥ ೨೫ ॥

ಯತ್ರ ನಾರಾಯಣಃ ಸಾಕ್ಷಾನ್ನ್ಯಾಸಿನಾಂ ಪರಮೋಗತಿಃ ।
ಶಾಂತಾನಾಂ ನ್ಯಸ್ತದಂಡಾನಾಂ ಯತೋ ನಾವರ್ತತೇ ಗತಃ ॥ ೨೬ ॥

ತಂ ತಥಾವ್ಯಸನಂ ದೃಷ್ಟ್ವಾ ಭಗವಾನ್ ವೃಜಿನಾರ್ದನಃ ।
ದೂರಾತ್ ಪ್ರತ್ಯುದಿಯಾದ್ಭೂತ್ವಾ ಬಟುಕೋ ಯೋಗಮಾಯಯಾ ॥ ೨೭ ॥

ಮೇಖಲಾಜಿನದಂಡಾಕ್ಷೈಸ್ತೇಜಸಾಗ್ನಿರಿವ ಜ್ವಲನ್ ।
ಅಭಿವಾದಯಾಮಾಸ ಚ ತಂ ಕುಶಪಾಣಿರ್ವಿನೀತವತ್ ॥ ೨೮ ॥

ವೃಕಾಸುರನೇ! ಸಾಕುಮಾಡು ನಿಲ್ಲಿಸು! ನಿನಗೆ ಬೇಕಾದವರನ್ನು ಕೇಳು, ನಾನು ನಿನಗೆ ಕೊಡುತ್ತೇನೆ. ನಾನಾದರೋ ಶರಣಾಗತರಾದ ಭಕ್ತರು ಮಾಡಿದ ಕೇವಲ ನೀರಿನ ಅಭಿಷೇಕದಿಂದಲೇ ಸಂತುಷ್ಟನಾಗುವವನು. ನೀನು ನಿನ್ನ ಶರೀರವನ್ನೇ ವಿನಾಶಗೊಳಿಸಲು ವ್ಯರ್ಥವಾಗಿ ಪ್ರಯತ್ನಿಸುತ್ತಿರುವೆಯಲ್ಲ!' ॥ ೨೦ ॥ ಪರೀಕ್ಷಿತನೇ! ಅತ್ಯಂತ ಪಾಪಿಯಾದ ವೃಕಾಸುರನು ಸಮಸ್ತ ಪ್ರಾಣಿಗಳನ್ನು ಭಯಭೀತಗೊಳಿಸುವಂತಹ ವರವನ್ನು ಕೇಳಿದನು - ಸ್ವಾಮಿ! ನಾನು ಯಾರ ತಲೆಯ ಮೇಲೆ ಕೈಯನ್ನಿಡುವೆನೋ ಅವನು ಮರಣಹೊಂದಬೇಕು. ॥ ೨೧ ॥ ರಾಜೇಂದ್ರ! ಅವನ ಈ ಬೇಡಿಕೆಯನ್ನು ಕೇಳಿದ ಭಗವಾನ್ ರುದ್ರನು ಮನಗುಂದಿದವನಂತಾಗಿ ಕೊಡಲು ಮನಸ್ಸಿಲ್ಲದಿದ್ದರೂ ನಸುನಗುತ್ತಾ ವರವನ್ನು ಕೊಟ್ಟು ಸರ್ಪಕ್ಕೆ ಅಮೃತವನ್ನುಣಿಸಿದಂತೆ - 'ಸರಿ! ಹಾಗೆಯೇ ಆಗಲಿ' ಎಂದು ಹೇಳಿದನು. ॥ ೨೨ ॥

ಭಗವಾನ್ ಶಂಕರನಿಂದ ಇಂತಹ ಸರ್ವನಾಶಕವಾದ ವರವನ್ನು ಪಡೆದ ವೃಕಾಸುರನ ಮನಸ್ಸಿನಲ್ಲಿ ಮೊದಲಿಗೆ ಪಾರ್ವತಿಯನ್ನು ಅಪಹರಿಸಬೇಕೆಂಬ ಲಾಲಸೆ ಉಂಟಾಯಿತು. ಅದಕ್ಕಾಗಿ ಆ ಅಸುರನು ಶಂಕರನ ವರವನ್ನು ಪರೀಕ್ಷಿಸಲಿಕ್ಕಾಗಿ ಅವನ ತಲೆಯ ಮೇಲೆಯೇ ಕೈಯನ್ನಿಡಲು ಹೊರಟನು. ಇದರಿಂದ ಶಿವನು ತಾನು ಕೊಟ್ಟ ವರದಿಂದಲೇ ಭಯಗೊಂಡನು. ॥ ೨೩ ॥ ದೈತ್ಯನು ಬೆನ್ನಟ್ಟಿಕೊಂಡು ಬರುವುದನ್ನು ಕಂಡು ಶಂಕರನು ಭಯದಿಂದ ನಡುಗುತ್ತ ಓಡತೊಡಗಿದನು. ಅವನು ಪೃಥಿವಿ, ಸ್ವರ್ಗ ದಿಗಂತದವರೆಗೂ ಓಡಿದನು. ಆದರೂ ಬೆನ್ನಬಿದ್ದ ಅಸುರನನ್ನು ನೋಡಿ ಉತ್ತರದ ಕಡೆಗೆ ಓಡಿದನು. ॥ ೨೪ ॥ ಶಿವನ ಈ ಸಂಕಟದಿಂದ ಪಾರಾಗಿಸಲು ಕೈಲಾಗದ ದೊಡ್ಡ-ದೊಡ್ಡ ದೇವತೆಗಳು ಸುಮ್ಮನಾದರು. ಕೊನೆಗೆ ಅವನು ಪ್ರಾಕೃತಿಕ ಅಂಧಕಾರದಿಂದ ಆಚೆಗೆ ಇರುವ ಪ್ರಕಾಶಮಯ ವೈಕುಂಠಕ್ಕೆ ಹೋದನು. ॥ ೨೫ ॥ ಸಾಕ್ಷಾತ್ ಭಗವಾನ್ ಶ್ರೀಮನ್ನಾರಾಯಣನು ಆ ವೈಕುಂಠದಲ್ಲಿ ವಾಸವಾಗಿದ್ದನು. ಸಂನ್ಯಾಸಿಗಳಿಗೆ ಏಕಮಾತ್ರ ಪರಮಗತಿಸ್ವರೂಪನಾದ ಅವನು ಸಮಸ್ತ ಜಗತ್ತಿಗೆ ಅಭಯವನ್ನಿತ್ತು ಶಾಂತಭಾವದಿಂದ ವಿರಾಜಿಸುತ್ತಿದ್ದನು. ವೈಕುಂಠದಲ್ಲಿ ಅವನನ್ನು ನೋಡಿದ ಬಳಿಕ ಮರ್ತ್ಯಲೋಕಕ್ಕೆ ಮರಳಬೇಕಾಗುವುದಿಲ್ಲ. ॥ ೨೬ ॥ ಶಂಕರನು ಬಹುದೊಡ್ಡ ಸಂಕಟಕ್ಕೆ ಸಿಕ್ಕಿಕೊಂಡಿದ್ದನ್ನು ಕಂಡು ಭಕ್ತಭಯಹಾರಿಯಾದ ಭಗವಂತನು ತನ್ನ ಯೋಗಮಾಯೆಯಿಂದ ಬ್ರಹ್ಮಚಾರಿಯ ರೂಪವನ್ನಾಂತು ನಿಧಾನವಾಗಿ ಬರುತ್ತಿದ್ದ ವೃಕಾಸುರನ ಕಡೆಗೆ ನಡೆಯತೊಡಗಿದನು. ॥ ೨೭ ॥ ಆಗ ಭಗವಂತನು ಮೌಂಜಿಯ ಮೇಖಲೆಯನ್ನೂ, ಕೃಷ್ಣಮೃಗ ಚರ್ಮವನ್ನೂ, ದಂಡವನ್ನೂ, ರುದ್ರಾಕ್ಷಮಾಲೆಯನ್ನು ಧರಿಸಿದ್ದನು. ಅವನು ಪ್ರತಿಯೊಂದು ಅಂಗದಿಂದಲೂ ಧಗಧಗಿಸುತ್ತಿರುವ ದಿವ್ಯಜ್ಯೋತಿಯಿಂದ ಪ್ರಕಾಶಿಸುತ್ತಿದ್ದನು. ಕೈಯಲ್ಲಿ ದರ್ಭೆಗಳನ್ನು ಹಿಡಿದಿದ್ದನು. ವೃಕಾಸುರನನ್ನು ನೋಡುತ್ತಲೇ ಅವನು ಬಹಳ ನಮ್ರತೆಯಿಂದ ಬಾಗಿ ವಂದಿಸಿದನು. ॥ ೨೮ ॥

ಶ್ರೀಭಗವಾನುವಾಚ

ಶಾಕುನೇಯ ಭವಾನ್ ವ್ಯಕ್ತಂ ಶ್ರಾಂತಃ ಕಿಂ ದೂರಮಾಗತಃ ।
ಕ್ಷಣಂ ವಿಶ್ರಮ್ಯತಾಂ ಪುಂಸ ಆತ್ಮಾಯಂ ಸರ್ವಕಾಮಧುಕ್ ॥ ೨೯ ॥

ಯದಿ ನಃ ಶ್ರವಣಾಯಾಲಂ ಯುಷ್ಮದ್ವ್ಯವಸಿತಂ ವಿಭೋ ।
ಭಣ್ಯತಾಂ ಪ್ರಾಯಶಃ ಪುಂಭಿರ್ಧೃತೈಃ ಸ್ವಾರ್ಥಾನ್ಸಮೀಹತೇ ॥ ೩೦ ॥

ಶ್ರೀಶುಕ ಉವಾಚ

ಏವಂ ಭಗವತಾ ಪೃಷ್ಟೋ ವಚಸಾಮೃತವರ್ಷಿಣಾ ।
ಗತಕ್ಲಮೋಽಬ್ರವೀತ್ತಸ್ಮೈ ಯಥಾಪೂರ್ವಮನುಷ್ಠಿತಮ್ ॥ ೩೧ ॥

ಶ್ರೀಭಗವಾನುವಾಚ

ಏವಂ ಚೇತ್ತರ್ಹಿ ತದ್ವಾಕ್ಯಂ ನ ವಯಂ ಶ್ರದ್ದಧೀಮಹಿ ।
ಯೋ ದಕ್ಷಶಾಪಾತ್ ಪೈಶಾಚ್ಯಂ ಪ್ರಾಪ್ತಃ ಪ್ರೇತಪಿಶಾಚರಾಟ್ ॥ ೩೨ ॥

ಯದಿ ವಸ್ತತ್ರ ವಿಶ್ರಂಭೋ ದಾನವೇಂದ್ರ ಜಗದ್ಗುರೌ ।
ತರ್ಹ್ಯಂಗಾಶು ಸ್ವಶಿರಸಿ ಹಸ್ತಂ ನ್ಯಸ್ಯ ಪ್ರತೀಯತಾಮ್ ॥ ೩೩ ॥

ಯದ್ಯಸತ್ಯಂ ವಚಃ ಶಂಭೋಃ ಕಥಂಚಿದ್ದಾನವರ್ಷಭ ।
ತದೈನಂ ಜಹ್ಯಸದ್ವಾಚಂ ನ ಯದ್ವಕ್ತಾನೃತಂ ಪುನಃ ॥ ೩೪ ॥

ಇತ್ಥಂ ಭಗವತಶ್ಚಿತ್ರೈರ್ವಚೋಭಿಃ ಸ ಸುಪೇಶಲೈಃ ।
ಭಿನ್ನಧೀರ್ವಿಸ್ಮೃತಃ ಶೀರ್ಷ್ಣಿ ಸ್ವಹಸ್ತಂ ಕುಮತಿರ್ನ್ಯಧಾತ್ ॥ ೩೫ ॥

ಅಥಾಪತದ್ಭಿನ್ನಶಿರಾ ವಜ್ರಾಹತ ಇವ ಕ್ಷಣಾತ್ ।
ಜಯಶಬ್ದೋ ನಮಃಶಬ್ದಃ ಸಾಧುಶಬ್ದೋಽಭವದ್ದಿವಿ ॥ ೩೬ ॥

ಮುಮುಚುಃ ಪುಷ್ಪವರ್ಷಾಣಿ ಹತೇ ಪಾಪೇ ವೃಕಾಸುರೇ ।
ದೇವರ್ಷಿಪಿತೃಗಂಧರ್ವಾ ಮೋಚಿತಃ ಸಂಕಟಾಚ್ಛಿವಃ ॥ ೩೭ ॥

ಬ್ರಹ್ಮಚಾರಿ ವೇಷಧಾರಿಯಾದ ಭಗವಂತನು ಹೇಳಿದನು - ಶಕುನಿ ನಂದನ ವೃಕಾಸುರನೇ! ನೀನು ಬಹಳ ಬಳಲಿದವನಂತೆ ಕಂಡು ಬರುತ್ತೀಯೆ. ಇಂದು ನೀನು ಬಹಳ ದೂರದಿಂದ ಬಂದಿರುವೆಯೋ? ಸ್ವಲ್ಪ ವಿಶ್ರಾಂತಿಯನ್ನು ಪಡೆದುಕೊ. ನೋಡು, ಈ ಶರೀರವು ಎಲ್ಲ ಸುಖಗಳ ಮೂಲವಾಗಿದೆ. ಇದರಿಂದಲೇ ಸಮಸ್ತ ಕಾಮನೆಗಳೂ ಕೈಗೂಡುವುವು. ಇದಕ್ಕೆ ಹೆಚ್ಚು ಕಷ್ಟಕೊಡಬಾರದು. ॥ ೨೯ ॥ ನೀನಾದರೋ ಸರ್ವಸಮರ್ಥನಾಗಿರುವೆ. ಈ ಸಮಯದಲ್ಲಿ ನೀನು ಏನು ಮಾಡಬೇಕೆಂದಿರುವೆ? ನಾನು ಕೇಳಲು ಯೋಗ್ಯವಾಗಿದ್ದರೆ ಹೇಳು. ಏಕೆಂದರೆ ಪ್ರಪಂಚದಲ್ಲಿ ಜನರು ಸಹಾಯಕರಿಂದ ಬಹಳಷ್ಟು ಕೆಲಸವನ್ನು ಸಾಧಿಸಿಕೊಳ್ಳುವುದನ್ನು ನೋಡುತ್ತೇವೆ. ॥ ೩೦ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ - ಪರೀಕ್ಷಿತನೇ! ಭಗವಂತನ ಪ್ರತಿಯೊಂದು ಶಬ್ದವು ಅಮೃತದಲ್ಲಿ ಅದ್ದಿತೆಗೆದಂತಿತ್ತು. ಅದನ್ನು ಕೇಳಿದಾಗ ಅವನು ಕೊಂಚ ಸುಧಾರಿಸಿಕೊಂಡು ಕ್ರಮವಾಗಿ ತಾನು ಮಾಡಿದ ತಪಸ್ಸು, ಪಡೆದ ವರ, ಶಂಕರನನ್ನು ಬೆನ್ನಟ್ಟಿ ಹೋದುದೆಲ್ಲವನ್ನು ಮೊದಲಿನಿಂದ ಹೇಳಿದನು. ॥ ೩೧ ॥

ಶ್ರೀಭಗವಂತನು ಹೇಳಿದನು - ಸರಿ, ಹೀಗೋ ಮಾತು! ಅಯ್ಯಾ! ನಾವು ಆ ಶಿವನ ಮಾತಿನಲ್ಲಿ ವಿಶ್ವಾಸವಿಡುವುದಿಲ್ಲ, ನಿನಗೆ ಇದು ಗೊತ್ತಿಲ್ಲವೇ? ಅವನಾದರೋ ದಕ್ಷಪ್ರಜಾಪತಿಯ ಶಾಪದಿಂದ ಪಿಶಾಚಭಾವವನ್ನು ತಳೆದಿರುವನು. ಇಂದು ಅವನೇ ಪ್ರೇತಗಳ, ಪಿಶಾಚಗಳ ಸಾಮ್ರಾಟನಾಗಿದ್ದಾನೆ. ॥ ೩೨ ॥ ದಾನವೇಂದ್ರಾ! ನೀನು ಇಷ್ಟು ದೊಡ್ಡವನಾದರೂ ಇಂತಹ ಸಣ್ಣ-ಪುಟ್ಟ ಮಾತುಗಳಲ್ಲಿ ವಿಶ್ವಾಸವಿಡುತ್ತೀಯಲ್ಲ? ನೀನು ಈಗಲೂ ಅವನನ್ನು ಜಗದ್ಗುರು ಎಂದು ಭಾವಿಸುವುದಾದರೆ, ಅವನ ಮಾತಿನಲ್ಲಿ ವಿಶ್ವಾಸವಿಡುವೆಯಾದರೆ ಕೂಡಲೇ ನಿನ್ನ ಕೈಯನ್ನು ನಿನ್ನ ತಲೆಯ ಮೇಲೆ ಇಟ್ಟುಕೊಂಡು ಪರೀಕ್ಷಿಸಬಾರದೇ! ॥ ೩೩ ॥ ದಾನವಶಿರೋಮಣಿ! ಯಾವುದೇ ರೀತಿಯಿಂದ ಶಂಕರನ ಮಾತು ಸುಳ್ಳಾದರೆ ಆ ಅಸತ್ಯವಾದಿಯನ್ನು ಕೊಂದುಬಿಡು. ಇದರಿಂದ ಮತ್ತೆ ಅವನು ಸುಳ್ಳು ಹೇಳಲಾರನು. ॥ ೩೪ ॥ ಪರೀಕ್ಷಿತನೇ! ಭಗವಂತನು ಇಂತಹ ಮೋಹಗೊಳಿಸುವಂತಹ ಅದ್ಭುತವಾದ ಸಿಹಿಯಾದ ಮಾತುಗಳನ್ನು ಕೇಳುತ್ತಲೇ ಅವನ ಬುದ್ಧಿಯು ಮಂಕಾಯಿತು. ಆ ದುರ್ಬುದ್ಧಿಯು ವರದಾನವನ್ನು ಮರೆತು ತನ್ನ ಕೈಯನ್ನೇ ತನ್ನ ತಲೆಯ ಮೇಲಿರಿಸಿಕೊಂಡನು. ॥ ೩೫ ॥ ಸರಿ, ಆ ಕ್ಷಣವೇ ಅವನ ತಲೆ ಒಡೆದು, ಸಿಡಿಲು ಬಡಿದವನಂತೆ ನೆಲಕ್ಕುರುಳಿ ಸತ್ತು ಹೋದನು. ಆ ಸಮಯದಲ್ಲಿ ದೇವತೆಗಳು ಆಕಾಶದಲ್ಲಿ ಸಾಧು! ಸಾಧು! ಎಂದು ಹೇಳುತ್ತಾ ನಮೋ ನಮಃ ಎಂದು ವಂದಿಸುತ್ತಾ ಜಯ-ಜಯಕಾರ ಮಾಡಿದರು. ॥ ೩೬ ॥ ಪಾಪಿಯಾದ ವೃಕಾಸುರನ ಮೃತ್ಯುವಿನಿಂದ ದೇವತೆಗಳು, ಪಿತೃಗಳು, ಗಂಧರ್ವರು ಅತ್ಯಂತ ಸಂತೋಷಗೊಂಡು ಪುಷ್ಪವೃಷ್ಟಿಗರೆದರು. ಭಗವಾನ್ ಶಂಕರನು ಇಂತಹ ವಿಕಟ ಸಂಕಟದಿಂದ ಮುಕ್ತನಾದನು. ॥ ೩೭ ॥

ಮುಕ್ತಂ ಗಿರಿಶಮಭ್ಯಾಹ ಭಗವಾನ್ ಪುರುಷೋತ್ತಮಃ ।
ಅಹೋ ದೇವ ಮಹಾದೇವ ಪಾಪೋಽಯಂ ಸ್ವೇನ ಪಾಪ್ಮನಾ ॥ ೩೮ ॥

ಹತಃ ಕೋ ನು ಮಹತ್ಸ್ವೀಶ ಜಂತುರ್ವೈ ಕೃತಕಿಲ್ಬಿಷಃ ।
ಕ್ಷೇಮೀ ಸ್ಯಾತ್ ಕಿಮು ವಿಶ್ವೇಶೇ ಕೃತಾಗಸ್ಕೋ ಜಗದ್ಗುರೌ ॥ ೩೯ ॥

ಆಗ ಭಯ ಗೊಂಡಿರುವ ಶಂಕರನ ಬಳಿ ಭಗವಾನ್ ಪುರುಷೋತ್ತಮನು ಹೇಳಿದನು – ದೇವಾಧಿದೇವಾ ! ಈ ದುಷ್ಟನನ್ನು ಅವನ ಪಾಪಗಳೇ ಕೊಂದು ಹಾಕಿದುದು ಸಂತೋಷದ ಮಾತೇ ಸರಿ. ಪರಮೇಶ್ವರನೇ ! ಮಹಾಪುರುಷರಿಗೆ ಅಪರಾಧವನ್ನು ಮಾಡಿದವರು ಯಾರು ತಾನೇ ಕ್ಷೇಮದಿಂದ ಇರಬಲ್ಲನು ? ಮತ್ತೆ ಸಾಕ್ಷಾತ್ ಜಗದ್ಗುರು ವಿಶ್ವೇಶ್ವರನಾದ ನಿನಗೆ ಅಪರಾಧವನ್ನು ಮಾಡಿದ ಯಾರಾದರೂ ಕುಶಲಿಯಾಗಿ ಹೇಗೆ ಇರಬಲ್ಲರು ? ॥ ೩೮-೩೯ ॥

ಯ ಏವಮವ್ಯಾಕೃತಶಕ್ತ್ಯುದನ್ವತಃ
ಪರಸ್ಯ ಸಾಕ್ಷಾತ್ ಪರಮಾತ್ಮನೋ ಹರೇಃ ।
ಗಿರಿತ್ರಮೋಕ್ಷಂ ಕಥಯೇಚ್ಛೃಣೋತಿ ವಾ
ವಿಮುಚ್ಯತೇ ಸಂಸೃತಿಭಿಸ್ತಥಾರಿಭಿಃ ॥ ೪೦ ॥

ಅನಂತಶಕ್ತಿಗಳ ಸಮುದ್ರನಾದ ಭಗವಂತನ ಒಂದೊಂದು ಶಕ್ತಿಯೂ ಮಾತು-ಮನಸ್ಸಿನ ಸೀಮೆಯಿಂದ ಅತೀತವಾದುದು. ಅವನು ಪ್ರಕೃತಿಗಿಂತ ಪರನಾದ ಸಾಕ್ಷಾತ್ ಪರಮಾತ್ಮನಾಗಿದ್ದಾನೆ. ಶಂಕರನನ್ನು ಈ ಸಂಕಟದಿಂದ ಬಿಡಿಸಿದ ಅವನ ಈ ಲೀಲೆಯನ್ನು ಹೇಳುವವನು, ಕೇಳುವವನು ಸಂಸಾರ ಬಂಧನದಿಂದ ಮತ್ತು ಶತ್ರುಗಳ ಭಯದಿಂದ ಮುಕ್ತನಾಗಿ ಹೋಗುತ್ತಾನೆ. ॥ ೪೦ ॥

ಎಂಭತ್ತೆಂಟನೆಯ ಅಧ್ಯಾಯವು ಮುಗಿಯಿತು. ॥ ೮೮ ॥
ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮ ಸ್ಕಂಧೇ ಉತ್ತರಾರ್ಧೇ
ರುದ್ರಮೋಕ್ಷಣಂ ನಾಮ ಅಷ್ಟಾಶೀತಿತಮೋಽಧ್ಯಾಯಃ ॥ ೮೮ ॥

ಎಂಭತ್ತೊಂಭತ್ತನೆಯ ಅಧ್ಯಾಯ

ಭೃಗು ಮಹರ್ಷಿಯು ತ್ರಿಮೂರ್ತಿಗಳನ್ನು ಪರೀಕ್ಷಿಸಿದುದು – ಭಗವಂತನು ಸತ್ತು ಹೋಗಿದ್ದ ಬ್ರಾಹ್ಮಣ ಬಾಲಕರನ್ನು ಮರಳಿ ತಂದು ಕೊಟ್ಟದ್ದು

ಶ್ರೀಶುಕ ಉವಾಚ

ಸರಸ್ವತ್ಯಾಸ್ತಟೇ ರಾಜನ್ನೃಷಯಃ ಸತ್ರಮಾಸತ ।
ವಿತರ್ಕಃ ಸಮಭೂತ್ತೇಷಾಂ ತ್ರಿಷ್ವಧೀಶೇಷು ಕೋ ಮಹಾನ್ ॥ ೧ ॥

ತಸ್ಯ ಜಿಜ್ಞಾಸಯಾ ತೇ ವೈ ಭೃಗುಂ ಬ್ರಹ್ಮಸುತಂ ನೃಪ ।
ತಜ್ಜ್ಞಪ್ತ್ಯೈ ಪ್ರೇಷಯಾಮಾಸುಃ ಸೋಽಭ್ಯಗಾದ್ಬ್ರಹ್ಮಣಃ ಸಭಾಮ್ ॥ ೨ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಎಲೈ ಪರೀಕ್ಷಿತನೇ ! ಒಮ್ಮೆ ಪವಿತ್ರವಾದ ಸರಸ್ವತೀ ನದಿಯ ತೀರದಲ್ಲಿ ಮಹಾಯಜ್ಞವನ್ನು ಪ್ರಾರಂಭಿಸುವ ಸಲುವಾಗಿ ಮಹಾ-ಮಹಾ ಋಷಿಮುನಿಗಳು ಸೇರಿದರು. ಅವರಲ್ಲಿ ಬ್ರಹ್ಮ-ವಿಷ್ಣು-ಶಿವರಲ್ಲಿ ಎಲ್ಲರಿಗಿಂತ ದೊಡ್ಡವರು ಯಾರು ? ಎಂಬ ವಿಷಯದಲ್ಲಿ ವಿವಾದ ನಡೆಯುತ್ತಿತ್ತು ॥ ೧ ॥ ಪರೀಕ್ಷಿತನೇ ! ಅವರೆಲ್ಲರೂ ಈ ವಿಷಯವನ್ನು ತಿಳಿಯಲಿಕ್ಕಾಗಿ ಹಾಗೂ ಬ್ರಹ್ಮ ವಿಷ್ಣು ಮಹೇಶ್ವರರನ್ನು ಪರೀಕ್ಷಿಸುವ ಉದ್ದೇಶದಿಂದ ಬ್ರಹ್ಮಮಾನಸ ಪುತ್ರರಾದ ಭೃಗುಮಹರ್ಷಿಗಳನ್ನು ಅವರ ಬಳಿಗೆ ಕಳಿಸಿದರು. ಭೃಗುಮಹರ್ಷಿಗಳು ಮೊಟ್ಟಮೊದಲಿಗೆ ಬ್ರಹ್ಮದೇವರ ಸಭೆಗೆ ಹೋದರು. ॥ ೨ ॥

ನ ತಸ್ಮೈ ಪ್ರಹ್ವಣಂ ಸ್ತೋತ್ರಂ ಚಕ್ರೇ ಸತ್ತ್ವಪರೀಕ್ಷಯಾ ।
ತಸ್ಮೈ ಚುಕ್ರೋಧ ಭಗವಾನ್ ಪ್ರಜ್ವಲನ್ ಸ್ವೇನ ತೇಜಸಾ ॥ ೩ ॥

ಸ ಆತ್ಮನ್ಯುತ್ಥಿತಂ ಮನ್ಯುಮಾತ್ಮಜಾಯಾತ್ಮನಾ ಪ್ರಭುಃ ।
ಅಶೀಶಮದ್ಯಥಾ ವಹ್ನಿಂ ಸ್ವಯೋನ್ಯಾ ವಾರಿಣಾಽಽತ್ಮಭೂಃ ॥ ೪ ॥

ಅವರು ಬ್ರಹ್ಮನ ಸತ್ತ್ವವನ್ನು ಪರೀಕ್ಷಿಸುವುದಕ್ಕಾಗಿ ಅವನನ್ನು ಸ್ತುತಿಸಲೂ ಇಲ್ಲ, ನಮಸ್ಕರಿಸಲೂ ಇಲ್ಲ. ಇದರಿಂದ ಬ್ರಹ್ಮನು ತನ್ನ ತೇಜದಿಂದ ಉರಿಯುತ್ತಿದ್ದನು. ಅವನು ಕ್ರೋಧಗೊಂಡಿರುವನೆಂದು ತಿಳಿಯಿತು. ॥ ೩ ॥ ಆದರೆ ಸಮರ್ಥನಾದ ಬ್ರಹ್ಮದೇವರು ಇವನಾದರೋ ನನ್ನ ಪುತ್ರನಾಗಿದ್ದಾನೆಂದು ನೋಡಿದಾಗ ತನ್ನ ಮನಸ್ಸಿನಲ್ಲಿ ಎದ್ದ ಕ್ರೋಧಾಗ್ನಿಯನ್ನು ಅರಣಿಮಂಥನದಿಂದ ಉತ್ಪನ್ನವಾದ ಅಗ್ನಿಯನ್ನು ನೀರನ್ನು ಹಾಕಿ ನಂದಿಸುವಂತೆ ವಿವೇಕ ಬುದ್ಧಿಯ ಮೂಲಕ ಮನಸ್ಸಿನಲ್ಲೇ ಅಡಗಿಸಿಕೊಂಡನು. ॥ ೪ ॥

ತತಃ ಕೈಲಾಸಮಗಮತ್ ಸ ತಂ ದೇವೋ ಮಹೇಶ್ವರಃ ।
ಪರಿರಬ್ಧುಂ ಸಮಾರೇಭೇ ಉತ್ಥಾಯ ಭ್ರಾತರಂ ಮುದಾ ॥ ೫ ॥

ನೈಚ್ಛತ್ತ್ವಮಸ್ಯುತ್ಪಥಗ ಇತಿ ದೇವಶ್ಚುಕೋಪ ಹ ।
ಶೂಲಮುದ್ಯಮ್ಯ ತಂ ಹಂತುಮಾರೇಭೇ ತಿಗ್ಮಲೋಚನಃ ॥ ೬ ॥

ಪತಿತ್ವಾ ಪಾದಯೋರ್ದೇವೀ ಸಾಂತ್ವಯಾಮಾಸ ತಂ ಗಿರಾ ।
ಅಥೋ ಜಗಾಮ ವೈಕುಂಠಂ ಯತ್ರ ದೇವೋ ಜನಾರ್ದನಃ ॥ ೭ ॥

ಶಯಾನಂ ಶ್ರಿಯ ಉತ್ಸಂಗೇ ಪದಾ ವಕ್ಷಸ್ಯತಾಡಯತ್ ।
ತತ ಉತ್ಥಾಯ ಭಗವಾನ್ ಸಹ ಲಕ್ಷ್ಮ್ಯಾ ಸತಾಂ ಗತಿಃ ॥ ೮ ॥

ಸ್ವತಲ್ಪಾದವರುಹ್ಯಾಥ ನನಾಮ ಶಿರಸಾ ಮುನಿಮ್ ।
ಆಹ ತೇ ಸ್ವಾಗತಂ ಬ್ರಹ್ಮನ್ ನಿಷೀದಾತ್ರಾಸನೇ ಕ್ಷಣಮ್ ।
ಅಜಾನತಾಮಾಗತಾನ್ವಃ ಕ್ಷಂತುಮರ್ಹಥ ನಃ ಪ್ರಭೋ ॥ ೯ ॥

ಅತೀವ ಕೋಮಲೌ ತಾತ ಚರಣೌ ತೇ ಮಹಾಮುನೇ ।
ಇತ್ಯುಕ್ತ್ವಾ ವಿಪ್ರಚರಣೌ ಮರ್ದಯನ್ಸ್ವೇನ ಪಾಣಿನಾ ॥ ೧೦ ॥

ಪುನೀಹಿ ಸಹಲೋಕಂ ಮಾಂ ಲೋಕಪಾಲಾಂಶ್ಚ ಮದ್ಗತಾನ್ ।
ಪಾದೋದಕೇನ ಭವತಸ್ತೀರ್ಥಾನಾಂ ತೀರ್ಥಕಾರಿಣಾ ॥ ೧೧ ॥

ಅದ್ಯಾಹಂ ಭಗವನ್ ಲಕ್ಷ್ಮ್ಯಾ ಆಸಮೇಕಾಂತಭಾಜನಮ್ ।
ವತ್ಸ್ಯತ್ಯುರಸಿ ಮೇ ಭೂತಿರ್ಭವತ್ಪಾದಹತಾಂಹಸಃ ॥ ೧೨ ॥

ಶ್ರೀಶುಕ ಉವಾಚ

ಏವಂ ಬ್ರುವಾಣೇ ವೈಕುಂಠೇ ಭೃಗುಸ್ತನ್ಮಂದ್ರಯಾ ಗಿರಾ ।
ನಿರ್ವೃತಸ್ತರ್ಪಿತಸ್ತೂಷ್ಣೀಂ ಭಕ್ತ್ಯುತ್ಕಂಠೋಽಶ್ರುಲೋಚನಃ ॥ ೧೩ ॥

ಪುನಶ್ಚ ಸತ್ರಮಾವ್ರಜ್ಯ ಮುನೀನಾಂ ಬ್ರಹ್ಮವಾದಿನಾಮ್ ।
ಸ್ವಾನುಭೂತಮಶೇಷೇಣ ರಾಜನ್ ಭೃಗುರವರ್ಣಯತ್ ॥ ೧೪ ॥

ಅಲ್ಲಿಂದ ಭೃಗುಗಳು ಕೈಲಾಸಕ್ಕೆ ಹೋದರು. ದೇವಾಧಿದೇವನಾದ ಭಗವಾನ್ ಶಂಕರನು ತನ್ನ ತಮ್ಮನಾದ ಭೃಗುವು ಬಂದಿರುವನೆಂದು ನೋಡಿದಾಗ ಆನಂದದಿಂದ ಎದ್ದುನಿಂತು ಆಲಿಂಗಿಸಿಕೊಳ್ಳಲು ಬಾಹುಗಳನ್ನು ಚಾಚಿದನು. ॥ ೫ ॥ ಆದರೆ ಭೃಗುಮಹರ್ಷಿಗಳು ಅವನ ಆಲಿಂಗನವನ್ನು ತಿರಸ್ಕರಿಸುತ್ತಾ ಹೇಳುತ್ತಾರೆ 'ನೀನು ಲೋಕ ಮತ್ತು ವೇದದ ಮರ್ಯಾದೆಯನ್ನು ಉಲ್ಲಂಘಿಸಿರುವೆ. ಇದರಿಂದ ನಾನು ನಿನ್ನನ್ನು ಆಲಿಂಗಿಸಿಕೊಳ್ಳುವುದಿಲ್ಲ.' ಭೃಗುಗಳ ಮಾತನ್ನು ಕೇಳಿದ ಭಗವಾನ್ ಶಂಕರನು ಕ್ರೋಧದಿಂದ ಉರಿದೆದ್ದು, ಹುಬ್ಬನ್ನು ಮೇಲೇರಿಸಿಕೊಂಡು ತ್ರಿಶೂಲವನ್ನೆತ್ತಿಕೊಂಡು ಭೃಗುವನ್ನು ಕೊಲ್ಲಲು ಬಯಸಿದನು. ॥ ೬ ॥ ಆದರೆ ಅದೇ ಸಮಯದಲ್ಲಿ ಸತೀದೇವಿಯು ಅವನ ಚರಣಗಳನ್ನು ಹಿಡಿದುಕೊಂಡು ಬಹಳ ಅನುನಯಗಳಿಂದ ಅವನ ಕ್ರೋಧವನ್ನು ಶಾಂತಗೊಳಿಸಿದಳು. ಮತ್ತೆ ಭೃಗುಮಹರ್ಷಿಗಳು ಭಗವಾನ್ ವಿಷ್ಣುವಿನ ನಿವಾಸಸ್ಥಾನವಾದ ವೈಕುಂಠಕ್ಕೆ ಹೋದರು. ॥ ೭ ॥ ಆ ಸಮಯದಲ್ಲಿ ಭಗವಾನ್ ವಿಷ್ಣುವು ಲಕ್ಷ್ಮೀದೇವಿಯ ತೊಡೆಯ ಮೇಲೆ ತಲೆಯನ್ನಿಟ್ಟು ಒರಗಿದ್ದನು. ಭೃಗುಗಳು ಹೋಗಿ ಅವನ ವಕ್ಷಸ್ಥಳಕ್ಕೆ ಕಾಲಿನಿಂದ ಒದ್ದು ಬಿಟ್ಟನು. ಭಕ್ತವತ್ಸಲನಾದ ಭಗವಾನ್ ಮಹಾವಿಷ್ಣುವು ಲಕ್ಷ್ಮೀದೇವಿಯೊಂದಿಗೆ ಎದ್ದು, ಲಗುಬಗೆಯಿಂದ ಹಾಸಿಗೆಯಿಂದ ಕೆಳಗಿಳಿದು ಮುನಿಗಳಿಗೆ ತಲೆಬಾಗಿ ವಂದಿಸಿದನು. ಭಗವಂತನೆಂದನು – ಬ್ರಾಹ್ಮಣಶ್ರೇಷ್ಠರೇ! ತಾವು ಬಂದುದು ಬಹಳ ಚೆನ್ನಾಯ್ತು, ತಮಗೆ ಸ್ವಾಗತ ಕೋರುತ್ತೇವೆ. ಈ ಸುಖಾಸನದಲ್ಲಿ ಕುಳಿತು ವಿಶ್ರಮಿಸಿಕೊಳ್ಳಿ, ಸ್ವಾಮಿ! ತಮ್ಮ ಶುಭಾಗಮನದ ವಿಚಾರತಿಳಿದಿರಲಿಲ್ಲ, ಇಲ್ಲದಿದ್ದರೆ ನಿಮ್ಮನ್ನು ಸ್ವಾಗತಿಸಲು ನಾನೇ ಮುಂದೆ ಬರುತ್ತಿದ್ದೆ. ನನ್ನ ಅಪರಾಧವನ್ನು ಕ್ಷಮಿಸಿಬಿಡಿ. ॥ ೮-೯ ॥ ಮಹಾಮುನಿಗಳೇ! ತಮ್ಮ ಚರಣಗಳು ಅತ್ಯಂತ ಕೋಮಲವಾಗಿದೆ ಎಂದು ಹೇಳಿ ಭೃಗುಗಳ ಚರಣಗಳನ್ನು ಭಗವಂತನು ತನ್ನ ಕೈಗಳಿಂದ ಒತ್ತತೊಡಗಿದನು. ॥ ೧೦ ॥ ಮಹರ್ಷಿಯೇ! ತಮ್ಮ ಚರಣಗಳ ಜಲವು ತೀರ್ಥಗಳನ್ನು ತೀರ್ಥವಾಗಿಸುವಂತಹುದು. ನೀವು ಅದರಿಂದ ಈ ವೈಕುಂಠಲೋಕವನ್ನು, ನನ್ನನ್ನು ಮತ್ತು ಲೋಕಪಾಲಕರನ್ನು ಪವಿತ್ರಗೊಳಿಸಿರಿ. ॥ ೧೧ ॥ ಪೂಜ್ಯರೇ! ತಮ್ಮ ಚರಣಕಮಲಗಳ ಸ್ಪರ್ಶದಿಂದ ನನ್ನ ಎಲ್ಲ ಪಾಪಗಳು ತೊಳೆದುಹೋದುವು. ಇಂದು ನಾನು ಲಕ್ಷ್ಮೀದೇವಿಯ ಏಕಮಾತ್ರ ಆಶ್ರಯನಾದೆ. ಈಗ ನಿಮ್ಮ ಚರಣಗಳಿಂದ ಅಂಕಿತಗೊಂಡ ನನ್ನ ವಕ್ಷಸ್ಥಳದಲ್ಲಿ ಲಕ್ಷ್ಮಿಯು ಸದಾ-ಸರ್ವದಾ ನಿವಾಸ ಮಾಡುವಳು. ॥ ೧೨ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ! ಭಗವಂತನು ಅತ್ಯಂತ ಗಂಭೀರ ವಾಣಿಯಿಂದ ಹೀಗೆ ಹೇಳಿದಾಗ ಭೃಗುಮುನಿ ಪರಮಸುಖಿಗಳೂ, ತೃಪ್ತರೂ ಆದರು. ಭಕ್ತಿಯ ಉದ್ರೇಕದಿಂದ ಅವರ ಕಂಠವು ಬಿಗಿದುಕೊಂಡಿತು. ಕಣ್ಣುಗಳಲ್ಲಿ ನೀರು ತುಂಬಿಬಂದು, ಮೌನವಾಗಿಬಿಟ್ಟರು. ॥ ೧೩ ॥ ಪರೀಕ್ಷಿತನೇ! ಭೃಗುಮುನಿಗಳು ಅಲ್ಲಿಂದ ಮರಳಿ ಯಜ್ಞಕಾರ್ಯ ನಡೆವಲ್ಲಿ ಬ್ರಹ್ಮವಾದಿಗಳಾದ ಮುನಿಗಳ ಸತ್ಸಂಗದಲ್ಲಿ ಬಂದು ಸೇರಿ ಬ್ರಹ್ಮಾ, ಶಿವ ಮತ್ತು ವಿಷ್ಣು ಭಗವಂತರಲ್ಲಿ ನಡೆದುದೆಲ್ಲವನ್ನು ಹೇಳಿದರು. ॥ ೧೪ ॥

ತನ್ನಿಶಮ್ಯಾಥ ಮುನಯೋ ವಿಸ್ಮಿತಾ ಮುಕ್ತಸಂಶಯಾಃ ।
ಭೂಯಾಂಸಂ ಶ್ರದ್ದಧುರ್ವಿಷ್ಣುಂ ಯತಃ ಶಾಂತಿರ್ಯತೋಽಭಯಮ್ ॥ ೧೫ ॥

ಧರ್ಮಃ ಸಾಕ್ಷಾದ್ಯತೋ ಜ್ಞಾನಂ ವೈರಾಗ್ಯಂ ಚ ತದನ್ವಿತಮ್ ।
ಐಶ್ವರ್ಯಂ ಚಾಷ್ಟಧಾ ಯಸ್ಮಾದ್ಯಶಶ್ಚಾತ್ಮಮಲಾಪಹಮ್ ॥ ೧೬ ॥

ಮುನೀನಾಂ ನ್ಯಸ್ತದಂಡಾನಾಂ ಶಾಂತಾನಾಂ ಸಮಚೇತಸಾಮ್ ।
ಅಕಿಂಚನಾನಾಂ ಸಾಧೂನಾಂ ಯಮಾಹುಃ ಪರಮಾಂ ಗತಿಮ್ ॥ ೧೭ ॥

ಸತ್ತ್ವಂ ಯಸ್ಯ ಪ್ರಿಯಾ ಮೂರ್ತಿರ್ಬ್ರಾಹ್ಮಣಾಸ್ತ್ವಿಷ್ಟದೇವತಾಃ ।
ಭಜಂತ್ಯನಾಶಿಷಃ ಶಾಂತಾ ಯಂ ವಾ ನಿಪುಣಬುದ್ಧಯಃ ॥ ೧೮ ॥

ತ್ರಿವಿಧಾಕೃತಯಸ್ತಸ್ಯ ರಾಕ್ಷಸಾ ಅಸುರಾಃ ಸುರಾಃ ।
ಗುಣಿನ್ಯಾ ಮಾಯಯಾ ಸೃಷ್ಟಾಃ ಸತ್ತ್ವಂ ತತ್ತೀರ್ಥಸಾಧನಮ್ ॥ ೧೯ ॥

ಶ್ರೀಶುಕ ಉವಾಚ

ಏವಂ ಸಾರಸ್ವತಾ ವಿಪ್ರಾ ನೃಣಾಂ ಸಂಶಯನುತ್ತಯೇ ।
ಪುರುಷಸ್ಯ ಪದಾಂಭೋಜಸೇವಯಾ ತದ್ಗತಿಂ ಗತಾಃ ॥ ೨೦ ॥

ಸೂತ ಉವಾಚ

ಇತ್ಯೇತನ್ಮುನಿತನಯಾಸ್ಯಪದ್ಮಗಂಧ-
ಪೀಯೂಷಂ ಭವಭಯಭಿತ್ಪರಸ್ಯ ಪುಂಸಃ ।
ಸುಶ್ಲೋಕಂ ಶ್ರವಣಪುಟೈಃ ಪಿಬತ್ಯಭೀಕ್ಷ್ಣಂ
ಪಾಂಥೋಽಧ್ವಭ್ರಮಣಪರಿಶ್ರಮಂ ಜಹಾತಿ ॥ ೨೧ ॥

ಶ್ರೀಶುಕ ಉವಾಚ

ಏಕದಾ ದ್ವಾರವತ್ಯಾಂ ತು ವಿಪ್ರಪತ್ನ್ಯಾಃ ಕುಮಾರಕಃ ।
ಜಾತಮಾತ್ರೋ ಭುವಂ ಸ್ಪೃಷ್ಟ್ವಾ ಮಮಾರ ಕಿಲ ಭಾರತ ॥ ೨೨ ॥

ವಿಪ್ರೋ ಗೃಹೀತ್ವಾ ಮೃತಕಂ ರಾಜದ್ವಾರ್ಯುಪಧಾಯ ಸಃ ।
ಇದಂ ಪ್ರೋವಾಚ ವಿಲಪನ್ನಾತುರೋ ದೀನಮಾನಸಃ ॥ ೨೩ ॥

ಬ್ರಹ್ಮದ್ವಿಷಃ ಶಠಧಿಯೋ ಲುಬ್ಧಸ್ಯ ವಿಷಯಾತ್ಮನಃ ।
ಕ್ಷತ್ರಬಂಧೋಃ ಕರ್ಮದೋಷಾತ್ಪಂಚತ್ವಂ ಮೇ ಗತೋಽರ್ಭಕಃ ॥ ೨೪ ॥

ಭೃಗುಮುನಿಗಳ ಅನುಭವವನ್ನು ಕೇಳಿದ ಎಲ್ಲ ಋಷಿ-ಮುನಿಗಳಿಗೆ ಅತ್ಯಂತ ವಿಸ್ಮಯವಾಯಿತು. ಅವರಲ್ಲಿದ್ದ ಸಂದೇಹ ದೂರವಾಯಿತು. ಅಂದಿನಿಂದ ಅವರು ಶಾಂತಿ ಮತ್ತು ಅಭಯಗಳ ಉದ್ಗಮಸ್ಥಾನವಾದ ಭಗವಾನ್ ವಿಷ್ಣುವನ್ನೇ ಸರ್ವೋತ್ತಮನೆಂದು ಭಾವಿಸತೊಡಗಿದರು. ॥ ೧೫ ॥ ಭಗವಾನ್ ವಿಷ್ಣುವಿನಿಂದಲೇ ಸಾಕ್ಷಾತ್ ಧರ್ಮ, ಜ್ಞಾನ, ವೈರಾಗ್ಯ, ಎಂಟು ಬಗೆಯ ಐಶ್ವರ್ಯ ಮತ್ತು ಚಿತ್ತವನ್ನು ಶುದ್ಧಗೊಳಿಸುವ ಯಶಸ್ಸು ಪ್ರಾಪ್ತವಾಗುತ್ತದೆ. ॥ ೧೬ ॥ ಶಾಂತರೂ, ಸಮಚಿತ್ತರೂ, ಅಕಿಂಚನರೂ, ಎಲ್ಲರಿಗೆ ಅಭಯವನ್ನು ಕೊಡುವವರೂ ಆದ ಸಾಧು-ಸಂತರಿಗೆ ಅವನೇ ಏಕಮಾತ್ರ ಪರಮಗತಿಯಾಗಿದ್ದಾನೆ ಎಂದು ಸಮಸ್ತ ಶಾಸ್ತ್ರಗಳು ಹೇಳುತ್ತವೆ. ॥ ೧೭ ॥ ಶುದ್ಧಸತ್ತ್ವವೇ ಅವನಿಗೆ ಪ್ರಿಯವಾದ ಶರೀರ. ಬ್ರಾಹ್ಮಣರೇ ಅವನ ಇಷ್ಟದೇವರು. ನಿಷ್ಕಾಮರೂ, ಶಾಂತಸ್ವಭಾವದವರೂ, ವಿವೇಕ ಸಂಪನ್ನರೂ ಅಂತಹ ಶ್ರೀಹರಿಯನ್ನೇ ಭಜಿಸುತ್ತಾರೆ. ॥ ೧೮ ॥ ಭಗವಂತನ ಗುಣಮಯಿಮಾಯೆಯು ರಾಕ್ಷಸ ಅಸುರ-ದೇವತೆಗಳೆಂಬ ಮೂರು ರೂಪಗಳನ್ನು ಅವನಲ್ಲಿ ಕಲ್ಪಿಸಿದೆ. ಇವುಗಳಲ್ಲಿ ಸತ್ತ್ವಗುಣವೇ ಅವನ ಪ್ರಾಪ್ತಿಯ ಸಾಧನೆಯಾಗಿದೆ. ಅವನು ಸಾಕ್ಷಾತ್ ಸಮಸ್ತ ಪುರುಷಾರ್ಥ ಸ್ವರೂಪನಾಗಿದ್ದಾನೆ. ॥ ೧೯ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ - ಪರೀಕ್ಷಿತನೇ! ಸರಸ್ವತೀ ತೀರದಲ್ಲಿದ್ದ ಋಷಿಗಳು ಕಮಾಗಿ ಅಲ್ಲ ; ಮನುಷ್ಯರ ಸಂಶಯವನ್ನು ದೂರಗೊಳಿಸಲೆಂದೇ ಈ ಯುಕ್ತಿಯನ್ನು ರಚಿಸಿದ್ದರು. ಪುರುಷೋತ್ತಮ ಭಗವಂತನ ಚರಣಕಮಲಗಳ ಸೇವೆ ಮಾಡಿ ಅವರೆಲ್ಲರೂ ಅವನ ಪರಮಪದವನ್ನು ಪಡೆದುಕೊಂಡರು. ॥ ೨೦ ॥

ಸೂತಪುರಾಣಿಕರು ಹೇಳುತ್ತಾರೆ - ಶೌನಕಾದಿ ಋಷಿಗಳೇ! ಹೀಗೆ ವ್ಯಾಸಮುನಿಗಳ ಪುತ್ರರಾದ ಶ್ರೀಶುಕಮಹಾಮುನಿಗಳ ಮುಖಾರವಿಂದದಿಂದ ಹೊರಟ ಸುಗಂಧಯುಕ್ತವಾದ, ಸಂಸಾರ ಭಯವನ್ನು ಹೋಗಲಾಡಿಸುವ, ಪರಮಪುರುಷನ ಶ್ಲಾಘ್ಯವಾದ ಹರಿಕಥಾಮೃತವನ್ನು ಕಿವಿಗಳಿಂದ ಆಡಿಗಡಿಗ ಪಾನಮಾಡುವವರು ಸಂಸಾರದಲ್ಲಿ ಅಲೆದಾಡುವ ಆಯಾಸದಿಂದ ಮುಕ್ತರಾಗುತ್ತಾರೆ. ॥ ೨೧ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ - ಪರೀಕ್ಷಿತನೇ! ಒಮ್ಮೆ ದ್ವಾರಕಾಪಟ್ಟಣದಲ್ಲಿ ಬ್ರಾಹ್ಮಣಿಯೊಬ್ಬಳ ಗರ್ಭದಿಂದ ಒಂದು ಮಗು ಹುಟ್ಟಿತು. ಆದರೆ ಅದು ಭೂಸ್ಪರ್ಶವಾಗುತ್ತಲೇ ತೀರಿಹೋಯಿತು. ॥ ೨೨ ॥ ಬ್ರಾಹ್ಮಣನು ತನ್ನ ಮೃತ ಬಾಲಕನನ್ನು ಎತ್ತಿಕೊಂಡು ದ್ವಾರಕೆಯ ಮಹಾದ್ವಾರಕ್ಕೆ ಹೋದನು. ಅಲ್ಲಿ ಅದನ್ನಿಟ್ಟು ಅತ್ಯಂತ ದೀನ ಮನಸ್ಸಿನಿಂದ ತವಕಗೊಂಡಿದ್ದ ಅವನು ಈ ರೀತಿ ಹೇಳತೊಡಗಿದನು. ॥ ೨೩ ॥ ಬ್ರಾಹ್ಮಣದ್ರೋಹಿಯಾದ, ಧೂರ್ತನಾದ, ಕೃಪಣನಾದ, ವಿಷಯಲಂಪಟನಾದ ರಾಜನ ಕರ್ಮದೋಷದಿಂದಲೇ ನನ್ನ ಮಗುವು ಸತ್ತುಹೋಯಿತು. ಇದರಲ್ಲಿ ಸಂದೇಹವೇ ಇಲ್ಲ. ॥ ೨೪ ॥ ಹಿಂಸಾಪರಾಯಣನಾದ,

ಹಿಂಸಾವಿಹಾರಂ ನೃಪತಿಂ ದುಃಶೀಲಮಜಿತೇಂದ್ರಿಯಮ್ ।
ಪ್ರಜಾ ಭಜಂತ್ಯಃ ಸೀದಂತಿ ದರಿದ್ರಾ ನಿತ್ಯದುಃಖಿತಾಃ ॥ ೨೫ ॥

ಏವಂ ದ್ವಿತೀಯಂ ವಿಪ್ರರ್ಷಿಸ್ತೃತೀಯಂ ತ್ವೇವಮೇವ ಚ ।
ವಿಸೃಜ್ಯ ಸ ನೃಪದ್ವಾರಿ ತಾಂ ಗಾಥಾಂ ಸಮಗಾಯತ ॥ ೨೬ ॥

ತಾಮರ್ಜುನ ಉಪಶ್ರುತ್ಯ ಕರ್ಹಿಚಿತ್ ಕೇಶವಾಂತಿಕೇ ।
ಪರೇತೇ ನವಮೇ ಬಾಲೇ ಬ್ರಾಹ್ಮಣಂ ಸಮಭಾಷತ ॥ ೨೭ ॥

ಕಿಂಸ್ವಿದ್ ಬ್ರಹ್ಮಂಸ್ತ್ವನ್ನಿವಾಸೇ ಇಹ ನಾಸ್ತಿ ಧನುರ್ಧರಃ ।
ರಾಜನ್ಯಬಂಧುರೇತೇ ವೈ ಬ್ರಾಹ್ಮಣಾಃ ಸತ್ರ ಆಸತೇ ॥ ೨೮ ॥

ಧನದಾರಾತ್ಮಜಾಪೃಕ್ತಾ ಯತ್ರ ಶೋಚಂತಿ ಬ್ರಾಹ್ಮಣಾಃ ।
ತೇ ವೈ ರಾಜನ್ಯವೇಷೇಣ ನಟಾ ಜೀವಂತ್ಯಸುಂಭರಾಃ ॥ ೨೯ ॥

ಅಹಂ ಪ್ರಜಾವಾಂ ಭಗವನ್ ರಕ್ಷಿಷ್ಯೇ ದೀನಯೋರಿಹ ।
ಅನಿಸ್ತೀರ್ಣಪ್ರತಿಜ್ಞೋಽಗ್ನಿಂ ಪ್ರವೇಕ್ಷ್ಯೇ ಹತಕಲ್ಮಷಃ ॥ ೩೦ ॥

ಬ್ರಾಹ್ಮಣ ಉವಾಚ

ಸಂಕರ್ಷಣೋ ವಾಸುದೇವಃ ಪ್ರದ್ಯುಮ್ನೋ ಧನ್ವಿನಾಂ ವರಃ ।
ಅನಿರುದ್ಧೋಽಪ್ರತಿರಥೋ ನ ತ್ರಾತುಂ ಶಕ್ನುವಂತಿ ಯತ್ ॥ ೩೧ ॥

ತತ್ ಕಥಂ ನು ಭವಾನ್ ಕರ್ಮ ದುಷ್ಕರಂ ಜಗದೀಶ್ವರೈಃ ।
ಚಿಕೀರ್ಷಸಿ ತ್ವಂ ಬಾಲಿಶ್ಯಾತ್ ತನ್ನ ಶ್ರದ್ದಧ್ಮಹೇ ವಯಮ್ ॥ ೩೨ ॥

ಅರ್ಜುನ ಉವಾಚ

ನಾಹಂ ಸಂಕರ್ಷಣೋ ಬ್ರಹ್ಮನ್ ನ ಕೃಷ್ಣ ಕಾರ್ಷ್ಣಿರೇವ ಚ ।
ಅಹಂ ವಾ ಅರ್ಜುನೋ ನಾಮ ಗಾಂಡೀವಂ ಯಸ್ಯ ವೈ ಧನುಃ ॥ ೩೩ ॥

ಮಾವಮಂಸ್ಥಾ ಮಮ ಬ್ರಹ್ಮನ್-
ವೀರ್ಯಂ ತ್ರ್ಯಂಬಕತೋಷಣಮ್ ।
ಮೃತ್ಯುಂ ವಿಜಿತ್ಯ ಪ್ರಧನೇ
ಆನೇಷ್ಯೇ ತೇ ಪ್ರಜಾಂ ಪ್ರಭೋ ॥ ೩೪ ॥

ದುಃಶೀಲನಾದ, ವಿಷಯಲಂಪಟನಾದ ಮನುಷ್ಯನನ್ನು ರಾಜನೆಂದು ಭಾವಿಸಿ ಅವನ ಸೇವೆ ಮಾಡುವ ಪ್ರಜೆಗಳು ದರಿದ್ರರಾಗಿ ದುಃಖದ ಮೇಲೆ ದುಃಖವನ್ನು ಅನುಭವಿಸುತ್ತಾ ವಿನಾಶ ಹೊಂದುವರು. ॥ ೨೫ ॥ ಪರೀಕ್ಷಿತನೇ! ಹೀಗೆಯೇ ಎರಡನೇ ಮೂರನೇ ಮಕ್ಕಳು ಹುಟ್ಟುತ್ತಲೇ ಸತ್ತು ಹೋದಾಗ ಆ ಬ್ರಾಹ್ಮಣನು ಮಗುವಿನ ಶವವನ್ನು ಅರಮನೆಯ ಮಹಾದ್ವಾರದಲ್ಲಿಟ್ಟು ಹಿಂದಿನಂತೆಯೇ ಮಾತುಗಳನ್ನಾಡಿದನು. ॥ ೨೬ ॥ ಒಂಭತ್ತನೇ ಮಗುವೂ ಸತ್ತು ಅವನು ರಾಜದ್ವಾರಕ್ಕೆ ಬಂದಾಗ ಆ ಸಮಯದಲ್ಲಿ ಭಗವಾನ್ ಶ್ರೀಕೃಷ್ಣನ ಬಳಿಯಲ್ಲಿ ಅರ್ಜುನನೂ ಕುಳಿತಿದ್ದನು. ಅವನು ಬ್ರಾಹ್ಮಣನ ಮಾತನ್ನು ಕೇಳಿ ಅವನಲ್ಲಿ ಕೇಳಿದನು. ॥ ೨೭ ॥ ಎಲೈ ಬ್ರಾಹ್ಮಣನೇ! ನೀನು ವಾಸಿಸುವ ದ್ವಾರಕೆಯಲ್ಲಿ ಯಾರೂ ಧನುರ್ಧಾರಿಯಾದ ಕ್ಷತ್ರಿಯನಿಲ್ಲವೇ? ಈ ಯದುವಂಶೀಯರು ಬ್ರಾಹ್ಮಣರಂತೆ ಪ್ರಜಾಪಾಲನೆಯನ್ನು ಬಿಟ್ಟು ಯಾವುದೋ ಯಜ್ಞದಲ್ಲಿ ಕುಳಿತಂತಿದೆ. ॥ ೨೮ ॥ ಯಾರ ರಾಜ್ಯದಲ್ಲಿ ಬ್ರಾಹ್ಮಣರು ಪತ್ನೀ-ಪುತ್ರರು-ಧನ ಇವುಗಳನ್ನು ಕಳೆದುಕೊಂಡು ದುಃಖಿಸುವರೋ ಅವರು ನಿಜವಾದ ಕ್ಷತ್ರಿಯರಾಗಿರದೆ ರಾಜರ ವೇಷದಲ್ಲಿರುವ ನಟರೇ ಸರಿ. ಅವರ ಜೀವನವು ವ್ಯರ್ಥವಾದುದು. ॥ ೨೯ ॥

ಬ್ರಾಹ್ಮಣೋತ್ತಮನೇ! ದಂಪತಿಗಳಾದ ನೀವು ಪುತ್ರರ ಮೃತ್ಯುವಿನಿಂದಾಗಿ ಅತ್ಯಂತ ದೀನರಾಗಿರುವಿರಿ ಎಂದು ನಾನು ತಿಳಿಯುತ್ತೇನೆ. ನಾನು ನಿನ್ನ ಸಂತಾನವನ್ನು ರಕ್ಷಿಸಿಕೊಡುತ್ತೇನೆ. ನಾನು ನನ್ನ ಪ್ರತಿಜ್ಞೆಯನ್ನು ಈಡೇರಿಸದಿದ್ದರೆ ಅಗ್ನಿಪ್ರವೇಶ ಮಾಡಿ ಪ್ರತಿಜ್ಞಾಭಂಗದ ಪಾಪವನ್ನು ಕಳೆದುಕೊಳ್ಳುವೆನು. ॥ ೩೦ ॥

ಬ್ರಾಹ್ಮಣನೆಂದನು - ಅರ್ಜುನಾ! ಇಲ್ಲಿ ಬಲರಾಮ, ಭಗವಾನ್ ಶ್ರೀಕೃಷ್ಣ, ಧನುಷ್ಮಂತರಲ್ಲಿ ಶ್ರೇಷ್ಠನಾದ ಪ್ರದ್ಯುಮ್ನ, ಅಪ್ರತಿರಥನಾದ ಅನಿರುದ್ಧ-ಇಂತಹ ಮಹಾ-ಮಹಾವೀರರೂ ನನ್ನ ಬಾಲಕರನ್ನು ರಕ್ಷಿಸಲು ಅಸಮರ್ಥರಾಗಿರುವಾಗ ಈ ಜಗದೀಶ್ವರರಿಗೆ ಕಠಿಣವೆನಿಸಿದ ಕಾರ್ಯವನ್ನು ಬಾಲಕನಾದ ನೀನು ಹೇಗೆ ತಾನೇ ಮಾಡಬಲ್ಲೆ! ನಿಜವಾಗಿಯೂ ಇದು ನಿನ್ನ ಮೂರ್ಖತೆಯೇ ಆಗಿದೆ. ನಾನಂತೂ ನಿನ್ನ ಮಾತಿನಲ್ಲಿ ಖಂಡಿತವಾಗಿ ವಿಶ್ವಾಸವಿಡುವುದಿಲ್ಲ. ॥ ೩೧-೩೨ ॥

ಅರ್ಜುನನು ಹೇಳಿದನು - ಬ್ರಾಹ್ಮಣೋತ್ತಮನೇ! ನಾನು ಶ್ರೀಕೃಷ್ಣನಾಗಲೀ, ಬಲರಾಮನಾಗಲೀ, ಪ್ರದ್ಯುಮ್ನನಾಗಲೀ ಅಲ್ಲ. ನಾನು ಅರ್ಜುನನಾಗಿದ್ದೇನೆ. ನನ್ನ ಗಾಂಡೀವವೆಂಬ ಧನುಸ್ಸು ವಿಶ್ವವಿಖ್ಯಾತವಾಗಿದೆ. ॥ ೩೩ ॥ ವಿಪ್ರೋತ್ತಮನೇ! ನೀನು ನನ್ನ ಬಲ ಪೌರುಷಗಳನ್ನು ತಿರಸ್ಕರಿಸಬೇಡ. ನಾನು ನನ್ನ ಪರಾಕ್ರಮದಿಂದ ಭಗವಾನ್ ಶಂಕರನನ್ನು ಸಂತೋಷಗೊಳಿಸಿದ್ದುದನ್ನು ನೀನು ತಿಳಿಯೆ. ಸ್ವಾಮಿ! ಹೆಚ್ಚೇನು ಹೇಳಲಿ. ನಾನು ಯುದ್ಧದಲ್ಲಿ ಸಾಕ್ಷಾತ್ ಮೃತ್ಯುವನ್ನು ಗೆದ್ದು ನಿನ್ನ ಸಂತಾನವನ್ನು ತಂದುಕೊಡುವೆ. ॥ ೩೪ ॥

ಏವಂ ವಿಶ್ರಂಭಿತೋ ವಿಪ್ರಃ ಫಾಲ್ಗುನೇನ ಪರಂತಪ।
ಜಗಾಮ ಸ್ವಗೃಹಂ ಪ್ರೀತಃ ಪಾರ್ಥವೀರ್ಯಂ ನಿಶಾಮಯನ್
॥ ೩೫ ॥

ಪ್ರಸೂತಿಕಾಲ ಆಸನ್ನೇ ಭಾರ್ಯಾಯಾ ದ್ವಿಜಸತ್ತಮಃ।
ಪಾಹಿ ಪಾಹಿ ಪ್ರಜಾಂ ಮೃತ್ಯೋರಿತ್ಯಾಹಾರ್ಜುನಮಾತುರಃ
॥ ೩೬ ॥

ಸ ಉಪಸ್ಪೃಶ್ಯ ಶುಚ್ಯಂಭೋ ನಮಸ್ಕೃತ್ಯ ಮಹೇಶ್ವರಮ್।
ದಿವ್ಯಾನ್ಯಸ್ತ್ರಾಣಿ ಸಂಸ್ಮೃತ್ಯ ಸಜ್ಯಂ ಗಾಂಡೀವಮಾದದೇ
॥ ೩೭ ॥

ನ್ಯರುಣತ್ಸೂತಿಕಾಗಾರಂ ಶರೈರ್ನಾನಾಸ್ತ್ರ ಯೋಜಿತೈಃ।
ತಿರ್ಯಗೂರ್ಧ್ವಮಧಃ ಪಾರ್ಥಶ್ಚಕಾರ ಶರಪಂಜರಮ್
॥ ೩೮ ॥

ತತಃ ಕುಮಾರಃ ಸಂಜಾತೋ ವಿಪ್ರಪತ್ನ್ಯಾ ರುದನ್ ಮುಹುಃ।
ಸದ್ಯೋಽದರ್ಶನಮಾಪೇದೇ ಸಶರೀರೋ ವಿಹಾಯಸಾ
॥ ೩೯ ॥

ತದಾಽಽಹ ವಿಪ್ರೋ ವಿಜಯಂ ವಿನಿಂದನ್ ಕೃಷ್ಣಸನ್ನಿಧೌ।
ಮೌಢ್ಯಂ ಪಶ್ಯತ ಮೇ ಯೋಽಹಂ ಶ್ರದ್ದಧೇ ಕ್ಲೀಬಕತ್ಥನಮ್
॥ ೪೦ ॥

ನ ಪ್ರದ್ಯುಮ್ನೋ ನಾನಿರುದ್ಧೋ ನ ರಾಮೋ ನ ಚ ಕೇಶವಃ।
ಯಸ್ಯ ಶೇಕುಃ ಪರಿತ್ರಾತುಂ ಕೋಽನ್ಯಸ್ತದವಿತೇಶ್ವರಃ
॥ ೪೧ ॥

ಧಿಗರ್ಜುನಂ ಮೃಷಾವಾದಂ ಧಿಗಾತ್ಮಶ್ಲಾಘಿನೋ ಧನುಃ।
ದೈವೋಪಸೃಷ್ಟಂ ಯೋ ಮೌಢ್ಯಾದಾನಿನೀಷತಿ ದುರ್ಮತಿಃ
॥ ೪೨ ॥

ಏವಂ ಶಪತಿ ವಿಪ್ರರ್ಷೌ ವಿದ್ಯಾಮಾಸ್ಥಾಯ ಫಾಲ್ಗುನಃ।
ಯಯೌ ಸಂಯಮನೀಮಾಶು ಯತ್ರಾಸ್ತೇ ಭಗವಾನ್ ಯಮಃ
॥ ೪೩ ॥

ವಿಪ್ರಾಪತ್ಯಮಚಕ್ಷಾಣಸ್ತತ ಐಂದ್ರೀಮಗಾತ್ ಪುರೀಮ್।
ಆಗ್ನೇಯೀಂ ನೈರ್ಋತೀಂ ಸೌಮ್ಯಾಂ ವಾಯವ್ಯಾಂ ವಾರುಣೀಮಥ।
ರಸಾತಲಂ ನಾಕಪೃಷ್ಠಂ ಧಿಷ್ಣ್ಯಾನ್ಯನ್ಯಾನ್ಯುದಾಯುಧಃ
॥ ೪೪ ॥

ತತೋಽಲಬ್ಧದ್ವಿಜಸುತೋ ಹ್ಯನಿಸ್ತೀರ್ಣಪ್ರತಿಶ್ರುತಃ।
ಅಗ್ನಿಂ ವಿವಿಕ್ಷುಃ ಕೃಷ್ಣೇನ ಪ್ರತ್ಯುಕ್ತಃ ಪ್ರತಿಷೇಧತಾ
॥ ೪೫ ॥

ಪರೀಕ್ಷಿತನೇ! ಅರ್ಜುನನು ಬ್ರಾಹ್ಮಣನಿಗೆ ಈ ಪ್ರಕಾರವಾಗಿ ವಿಶ್ವಾಸವನ್ನುಂಟುಮಾಡಿದಾಗ ಅವನು ಅರ್ಜುನನ ಬಲ-ಪೌರುಷವನ್ನು ಜನರಲ್ಲಿ ಕೊಂಡಾಡುತ್ತಾ ಸಂತೋಷಗೊಂಡು ಮನೆಗೆ ಮರಳಿದನು. ॥ ೩೫ ॥ ಮತ್ತೊಂದು ಹೆರಿಗೆಯು ಸಮೀಪಿಸಿದಾಗ ಬ್ರಾಹ್ಮಣನು ಕಾತುರನಾಗಿ ಅರ್ಜುನನ ಬಳಿಗೆ ಬಂದು ಹೇಳಿದನು – 'ಈ ಬಾರಿಯಾದರೂ ನನ್ನ ಮಗುವನ್ನು ಮೃತ್ಯುವಿನಿಂದ ಬದುಕಿಸಿಕೊಡು.' ॥ ೩೬ ॥ ಇದನ್ನು ಕೇಳಿದ ಅರ್ಜುನನು ಶುದ್ಧ ಜಲದಿಂದ ಆಚಮನಮಾಡಿ ಮಹೇಶ್ವರನಿಗೆ ನಮಸ್ಕರಿಸಿ, ದಿವ್ಯಾಸ್ತ್ರಗಳನ್ನು ಸ್ಮರಿಸಿಕೊಂಡು ಗಾಂಡೀವ ಧನುಸ್ಸಿಗೆ ಹೆದೆಯೇರಿಸಿ ಕೈಗೆತ್ತಿಕೊಂಡನು. ॥ ೩೭ ॥ ಅರ್ಜುನನು ಬಾಣಗಳನ್ನು ಅನೇಕ-ವಿಧದಿಂದ ಅಸ್ತ್ರ-ಮಂತ್ರಗಳಿಂದ ಅಭಿಮಂತ್ರಿಸಿ ಪ್ರಸವಗೃಹಕ್ಕೆ ಸುತ್ತಲೂ ಬಾಣಗಳ ಪಂಜರವನ್ನೇ ನಿರ್ಮಿಸಿದನು. ॥ ೩೮ ॥ ಬಳಿಕ ಬ್ರಾಹ್ಮಣಿಯ ಗರ್ಭದಿಂದ ಒಂದು ಮಗು ಹುಟ್ಟಿತು. ಅದು ಪದೇ-ಪದೇ ಜೋರಾಗಿ ಅಳುತ್ತಿತ್ತು. ಆದರೆ ನೋಡು ನೋಡುತ್ತಾ ಅದು ಸಶರೀರವಾಗಿ ಆಕಾಶದಲ್ಲಿ ಅಂತರ್ಧಾನವಾಯಿತು. ॥ ೩೯ ॥ ಬ್ರಾಹ್ಮಣನು ಶ್ರೀಕೃಷ್ಣನ ಮುಂದೆಯೇ ಅರ್ಜುನನನ್ನು ನಿಂದಿಸತೊಡಗಿದನು. ಅವನೆಂದ – ಅಯ್ಯೋ! ನನ್ನ ಮೂರ್ಖತೆಯನ್ನು ನೋಡಿರಿ. ನಾನು ಈ ನಪುಂಸಕನ ಜಂಬದ ಮಾತುಗಳನ್ನು ನಂಬಿದೆನಲ್ಲ! ॥ ೪೦ ॥

ಪ್ರದ್ಯುಮ್ನ, ಅನಿರುದ್ಧ, ಬಲರಾಮ, ಶ್ರೀಕೃಷ್ಣನಿಂದಲೂ ರಕ್ಷಿಸಲೂ ಸಾಧ್ಯವಾಗದಿದ್ದಾಗ ಯಾರು ತಾನೇ ಸಮರ್ಥನಾಗುವನು? ॥ ೪೧ ॥ ಮಿಥ್ಯಾವಾದಿಯಾದ ಅರ್ಜುನನಿಗೆ ಧಿಕ್ಕಾರವಿರಲಿ! ಗಾಂಡೀವ ಧನುಸ್ಸು ತನ್ನಲ್ಲಿದೆ ಎಂದು ಜಂಬಕೊಚ್ಚಿಕೊಳ್ಳುವ ಈತನಿಗೂ, ಈತನ ಧನುಸ್ಸಿಗೂ ಧಿಕ್ಕಾರವಿರಲಿ! ಇವನ ದುರ್ಬುದ್ಧಿಯನ್ನಾದರೂ ನೋಡಿರಲ್ಲ, ಈ ದುರ್ಮತಿಯಾದವನು ಪ್ರಾರಬ್ಧವಶದಿಂದ ನಮ್ಮಿಂದ ಅಗಲಿ ಹೋದ ಆ ಬಾಲಕನನ್ನು ಮರಳಿ ತರಲು ಬಯಸುತ್ತಾನೆ. ॥ ೪೨ ॥

ಆ ಬ್ರಾಹ್ಮಣನು ಹೀಗೆ ಅರ್ಜುನನನ್ನು ಹೀನಾಯವಾಗಿ ನಿಂದಿಸಿದಾಗ ಅವನು ಯೋಗಬಲದಿಂದ ಒಡನೆಯೇ ಯಮಧರ್ಮನ ನಿವಾಸವಾದ ಸಂಯಮಿನೀ ಪುರಿಗೆ ಹೋದನು. ॥ ೪೩ ॥ ಅಲ್ಲಿ ಬ್ರಾಹ್ಮಣಕುಮಾರನನ್ನು ಕಾಣದಿದ್ದಾಗ ಶಸ್ತ್ರಧಾರಿಯಾದ ಅವನು ಕ್ರಮವಾಗಿ ಇಂದ್ರ, ಅಗ್ನಿ, ನಿರ್ಋತಿ, ಸೋಮ, ವಾಯು, ವರುಣ ಮೊದಲಾದವರ ಲೋಕಗಳಿಗೆ ಹೋದನು. ಅತಲವೇ ಮೊದಲಾದ ಕೆಳಗಿನ ಲೋಕಗಳಿಗೆ, ಸ್ವರ್ಗದಿಂದ ಮೇಲಿರುವ ಮಹರ್ಲೋಕಗಳಿಗೂ ಹಾಗು ಇತರ ಸ್ಥಾನಗಳಿಗೂ ಹೋದನು. ॥ ೪೪ ॥ ಆದರೆ ಅವನಿಗೆ ಎಲ್ಲಿಯೂ ಬ್ರಾಹ್ಮಣ ಬಾಲಕನು ಸಿಗಲಿಲ್ಲ. ಅವನ ಪ್ರತಿಜ್ಞೆ ಈಡೇರಲಿಲ್ಲ. ಆಗ ಅವನು ಅಗ್ನಿಪ್ರವೇಶಮಾಡಲು ನಿಶ್ಚಯಿಸಿದನು. ಆದರೆ ಭಗವಾನ್ ಶ್ರೀಕೃಷ್ಣನು ಹೀಗೆ ಮಾಡಲು ತಡೆದು ಹೇಳಿದನು – ॥ ೪೫ ॥ ಅಯ್ಯಾ ಅರ್ಜುನ! ನಿನ್ನನ್ನೇ

ದರ್ಶಯೇ ದ್ವಿಜಸೂನೂಂಸ್ತೇ ಮಾವಜ್ಞಾತ್ಮಾನಮಾತ್ಮನಾ ।
ಯೇ ತೇ ನಃ ಕೀರ್ತಿಂ ವಿಮಲಾಂ ಮನುಷ್ಯಾಃ ಸ್ಥಾಪಯಿಷ್ಯಂತಿ ॥ ೪೬ ॥

ಇತಿ ಸಂಭಾಷ್ಯ ಭಗವಾನರ್ಜುನೇನ ಸಹೇಶ್ವರಃ ।
ದಿವ್ಯಂ ಸ್ವರಥಮಾಸ್ಥಾಯ ಪ್ರತೀಚೀಂ ದಿಶಮಾವಿಶತ್ ॥ ೪೭ ॥

ಸಪ್ತ ದ್ವೀಪಾನ್ ಸಪ್ತ ಸಿಂಧೂನ್ ಸಪ್ತಸಪ್ತಗಿರೀನಥ ।
ಲೋಕಾಲೋಕಂ ತಥಾತೀತ್ಯ ವಿವೇಶ ಸುಮಹತ್ತಮಃ ॥ ೪೮ ॥

ತತ್ರಾಶ್ವಾಃ ಶೈಬ್ಯಸುಗ್ರೀವಮೇಘಪುಷ್ಪಬಲಾಹಕಾಃ ।
ತಮಸಿ ಭ್ರಷ್ಟಗತಯೋ ಬಭೂವುರ್ಭರತರ್ಷಭ ॥ ೪೯ ॥

ತಾನ್‌ದೃಷ್ಟ್ವಾ ಭಗವಾನ್ ಕೃಷ್ಣೋ ಮಹಾಯೋಗೇಶ್ವರೇಶ್ವರಃ ।
ಸಹಸ್ರಾದಿತ್ಯಸಂಕಾಶಂ ಸ್ವಚಕ್ರಂ ಪ್ರಾಹಿಣೋತ್ಪುರಃ ॥ ೫೦ ॥

ತಮಃ ಸುಘೋರಂ ಗಹನಂ ಕೃತಂ ಮಹದ್
ವಿದಾರಯದ್ಭೂರಿತರೇಣ ರೋಚಿಷಾ ।
ಮನೋಜವಂ ನಿರ್ವಿವಿಶೇ ಸುದರ್ಶನಂ
ಗುಣಚ್ಯುತೋ ರಾಮಶರೋ ಯಥಾ ಚಮೂಃ ॥ ೫೧ ॥

ದ್ವಾರೇಣ ಚಕ್ರಾನುಪಥೇನ ತತ್ತಮಃ
ಪರಂ ಪರಂ ಜ್ಯೋತಿರನಂತಪಾರಮ್ ।
ಸಮಶ್ನುವಾನಂ ಪ್ರಸಮೀಕ್ಷ್ಯ ಫಾಲ್ಗುನಃ
ಪ್ರತಾಡಿತಾಕ್ಷೋಽಪಿದಧೇಽಕ್ಷಿಣೀ ಉಭೇ ॥ ೫೨ ॥

ತತಃ ಪ್ರವಿಷ್ಟಃ ಸಲಿಲಂ ನಭಸ್ವತಾ
ಬಲೀಯಸೈಜದ್ಬೃಹದೂರ್ಮಿಭೂಷಣಮ್ ।
ತತ್ರಾದ್ಭುತಂ ವೈ ಭವನಂ ದ್ಯುಮತ್ತಮಂ
ಭ್ರಾಜನ್ಮಣಿಸ್ತಂಭಸಹಸ್ರಶೋಭಿತಮ್ ॥ ೫೩ ॥

ತಸ್ಮಿನ್ ಮಹಾಭೀಮಮನಂತಮದ್ಭುತಂ
ಸಹಸ್ರಮೂರ್ಧನ್ಯಫಣಾಮಣಿದ್ಯುಭಿಃ ।
ವಿಭ್ರಾಜಮಾನಂ ದ್ವಿಗುಣೋಲ್ಬಣೇಕ್ಷಣಂ
ಸಿತಾಚಲಾಭಂ ಶಿತಿಕಂಠಜಿಹ್ವಮ್ ॥ ೫೪ ॥

ನೀನು ಹಳಿದುಕೊಳ್ಳಬೇಡ. ನಾನು ನಿನಗೆ ಬ್ರಾಹ್ಮಣನ ಎಲ್ಲ ಬಾಲಕರನ್ನು ತೋರಿಸಿಕೊಡುತ್ತೇನೆ. ಇಂದು ನಿನ್ನನ್ನು ನಿಂದಿಸುವವರೇ ನಾಳೆ ನಿನ್ನ ಕೀರ್ತಿಯನ್ನು ಲೋಕದಲ್ಲಿ ಕೊಂಡಾಡುವರು. ॥ ೪೬ ॥

ಸರ್ವೇಶ್ವರನಾದ ಭಗವಾನ್ ಶ್ರೀಕೃಷ್ಣನು ಅರ್ಜುನನಿಗೆ ಹೀಗೆ ಹೇಳಿ ಅವನೊಡನೆ ದಿವ್ಯವಾದ ರಥದಲ್ಲಿ ಕುಳಿತು ಪಶ್ಚಿಮ ದಿಕ್ಕಿನ ಕಡೆಗೆ ಪ್ರಯಾಣ ಹೊರಟನು. ॥ ೪೭ ॥ ಅವರು ಏಳೇಳು ಪರ್ವತಗಳಿದ್ದ ಏಳು ದ್ವೀಪಗಳನ್ನು, ಏಳು ಸಮುದ್ರಗಳನ್ನೂ, ಲೋಕಾಲೋಕವೆಂಬ ಪರ್ವತವನ್ನು ದಾಟಿ ಗಾಢಾಂಧಕಾರವನ್ನು ಪ್ರವೇಶಿಸಿದರು. ॥ ೪೮ ॥ ಪರೀಕ್ಷಿತನೇ ! ಶ್ರೀಕೃಷ್ಣನ ರಥಕ್ಕೆ ಹೂಡಿದ್ದ ಶೈಬ್ಯ, ಸುಗ್ರೀವ, ಮೇಘಪುಷ್ಪ, ಬಲಾಹಕಗಳೆಂಬ ನಾಲ್ಕು ಕುದುರೆಗಳು ಆ ಗಾಂಢಾಂಧಕಾರದಲ್ಲಿ ದಾರಿತಪ್ಪಿ ಏನೂ ತೋಚದೆ ಯದ್ವಾ ತದ್ವಾ ಹೋಗತೊಡಗಿದವು. ॥ ೪೯ ॥ ಯೋಗೇಶ್ವರರಿಗೂ ಈಶ್ವರನಾದ ಭಗವಾನ್ ಶ್ರೀಕೃಷ್ಣನು ಕುದುರೆಗಳ ಈ ಸ್ಥಿತಿಯನ್ನು ಕಂಡು ಸಾವಿರಾರು ಸೂರ್ಯರಿಗೆ ಸಮಾನವಾದ ಪ್ರಕಾಶವುಳ್ಳ ತನ್ನ ಸುದರ್ಶನಕ್ಕೆ ಮುಂದೆ ಹೋಗುವಂತೆ ಆಜ್ಞಾಪಿಸಿದನು. ॥ ೫೦ ॥ ಸುದರ್ಶನ ಚಕ್ರವು ತನ್ನ ಜ್ಯೋತಿರ್ಮಯ ತೇಜದಿಂದ ಸಾಕ್ಷಾತ್ ಭಗವಂತನಿಂದಲೇ ಉತ್ಪನ್ನವಾದ ಗಾಢಾಂಧಕಾರವನ್ನು ಸೀಳುತ್ತಾ ಭಗವಾನ್ ರಾಮನ ಬಾಣವು ರಾಕ್ಷಸ ಸೈನ್ಯವನ್ನು ಹೊಕ್ಕು ಧ್ವಂಸ ಮಾಡುವಂತೆ ಮನಸ್ಸಿನ ವೇಗಕ್ಕಿಂತಲೂ ತೀವ್ರವಾದ ವೇಗದಿಂದ ಮುಂದರಿಯಿತು. ॥ ೫೧ ॥

ಈ ಪ್ರಕಾರವಾಗಿ ಸುದರ್ಶನ ಚಕ್ರವು ತೋರಿದ ದಾರಿಯಿಂದ ಮುಂದೆ ಹೋಗುತ್ತಾ ರಥವು ಅಂಧಕಾರದ ಕೊನೆಯ ತುದಿಗೆ ತಲುಪಿತು. ಆ ಅಂಧಕಾರದ ಆಚೆ ಸರ್ವಶ್ರೇಷ್ಠ ಪರಮಜ್ಯೋತಿಯು ಎಲ್ಲೆಡೆ ಬೆಳಗುತ್ತಿತ್ತು. ಅದನ್ನು ನೋಡಿ ಅರ್ಜುನನ ಕಣ್ಣುಗಳು ಕೋರೈಸಿದಂತಾಗಿ ಅವನು ತನ್ನ ಕಣ್ಣುಗಳನ್ನು ಮುಚ್ಚಿಕೊಂಡನು. ॥೫೨॥ ಅನಂತರ ಭಗವಂತನ ರಥವು ದಿವ್ಯ ಜಲರಾಶಿಯಲ್ಲಿ ಪ್ರವೇಶಿಸಿತು. ಅತ್ಯಂತ ಬಲಿಷ್ಠವಾದ ಬಿರುಗಾಳಿಯು ಬೀಸುತ್ತಿದ್ದರಿಂದ ಆ ನೀರಿನಲ್ಲಿ ದೊಡ್ಡ-ದೊಡ್ಡ ಅಲೆಗಳು ಏಳುತ್ತಿದ್ದವು. ಅವು ಜಲರಾಶಿಗೆ ಭೂಷಣಪ್ರಾಯವಾಗಿ ಕಾಣುತ್ತಿದ್ದವು. ಅಲ್ಲಿ ಅತ್ಯಂತ ಸುಂದರವಾದ ಒಂದು ಭವನವಿತ್ತು. ಅದರಲ್ಲಿ ಮಣಿಗಳ ಸಾವಿರಾರು ಕಂಬಗಳು ಹೊಳೆಯುತ್ತಾ ಅದರ ಶೋಭೆಯನ್ನು ಹೆಚ್ಚಿಸಿದ್ದವು. ಹಾಗೂ ಅದರ ಸುತ್ತಲೂ ಉಜ್ವಲ ಜ್ಯೋತಿಯು ಹರಡಿತ್ತು. ॥ ೫೩ ॥ ಅದೇ ಭವನದಲ್ಲಿ ಭಗವಾನ್ ಆದಿಶೇಷನು ವಿರಾಜಮಾನನಾಗಿದ್ದನು. ಅವನ ಶರೀರವು ಅತ್ಯಂತ ಭಯಾನಕವೂ, ಅದ್ಭುತವೂ ಆಗಿತ್ತು. ಅವನಿಗೆ ಸಾವಿರ ಹೆಡೆಗಳಿದ್ದು ಪ್ರತಿಯೊಂದರಲ್ಲಿಯೂ ಸುಂದರ ಮಣಿಗಳು ಹೊಳೆಯುತ್ತಿದ್ದವು. ಪ್ರತಿಯೊಂದು ಹೆಡೆಗೂ ಭಯಂಕರವಾದ ಎರಡೆರಡು ಕಣ್ಣುಗಳಿದ್ದವು. ಅವನ ಶರೀರವೆಲ್ಲವೂ ಕೈಲಾಸದಂತೆ ಬೆಳ್ಳಗಿದ್ದು, ಕಂಠ ಮತ್ತು ನಾಲಗೆಗಳು ನೀಲವಾಗಿದ್ದವು. ॥ ೫೪ ॥ ಆ ಆದಿಶೇಷನನ್ನೇ ಸುಖಮಯವಾದ

ದದರ್ಶ ತದ್ಭೋಗಸುಖಾಸನಂ ವಿಭುಂ
ಮಹಾನುಭಾವಂ ಪುರುಷೋತ್ತಮೋತ್ತಮಮ್ ।
ಸಾಂದ್ರಾಂಬುದಾಭಂ ಸುಪಿಶಂಗವಾಸಸಂ
ಪ್ರಸನ್ನವಕ್ತ್ರಂ ರುಚಿರಾಯತೇಕ್ಷಣಮ್ ॥ ೫೫ ॥

ಮಹಾಮಣಿವ್ರಾತಕಿರೀಟಕುಂಡಲ-
ಪ್ರಭಾಪರಿಕ್ಷಿಪ್ತಸಹಸ್ರಕುಂತಲಮ್ ।
ಪ್ರಲಂಬಚಾರ್ವಷ್ಟಭುಜಂ ಸಕೌಸ್ತುಭಂ
ಶ್ರೀವತ್ಸಲಕ್ಷ್ಮಂ ವನಮಾಲಯಾ ವೃತಮ್ ॥ ೫೬॥

ಸುನಂದನಂದಪ್ರಮುಖೈಃ ಸ್ವಪಾರ್ಷದೈಃ
ಚಕ್ರಾದಿಭಿರ್ಮೂರ್ತಿಧರೈರ್ನಿಜಾಯುಧೈಃ ।
ಪುಷ್ಟ್ಯಾ ಶ್ರಿಯಾ ಕೀರ್ತ್ಯಜಯಾಖಿಲರ್ದ್ಧಿಭಿಃ
ನಿಷೇವ್ಯಮಾಣಂ ಪರಮೇಷ್ಠಿನಾಂ ಪತಿಮ್ ॥ ೫೭ ॥

ವವಂದ ಆತ್ಮಾನಮನಂತಮಚ್ಯುತೋ
ಜಿಷ್ಣುಶ್ಚ ತದ್ದರ್ಶನಜಾತಸಾಧ್ವಸಃ ।
ತಾವಾಹ ಭೂಮಾ ಪರಮೇಷ್ಠಿನಾಂ ಪ್ರಭು-
ರ್ಬದ್ಧಾಂಜಲೀ ಸಸ್ಮಿತಮೂರ್ಜಯಾ ಗಿರಾ ॥ ೫೮ ॥

ದ್ವಿಜಾತ್ಮಜಾ ಮೇ ಯುವಯೋರ್ದಿದೃಕ್ಷುಣಾ
ಮಯೋಪನೀತಾ ಭುವಿ ಧರ್ಮಗುಪ್ತಯೇ ।
ಕಲಾವತೀರ್ಣಾವವನೇರ್ಭರಾಸುರಾನ್
ಹತ್ವೇಹ ಭೂಯಸ್ತ್ವರಯೇತಮಂತಿ ಮೇ ॥ ೫೯ ॥

ಪೂರ್ಣಕಾಮಾವಪಿ ಯುವಾಂ ನರನಾರಾಯಣಾವೃಷೀ ।
ಧರ್ಮಮಾಚರತಾಂ ಸ್ಥಿತ್ಯೈ ಋಷಭೌ ಲೋಕಸಂಗ್ರಹಮ್
॥ ೬೦ ॥

ಇತ್ಯಾದಿಷ್ಟೌ ಭಗವತಾ ತೌ ಕೃಷ್ಣೌ ಪರಮೇಷ್ಠಿನಾ ।
ಓಮಿತ್ಯಾನಮ್ಯ ಭೂಮಾನಮಾದಾಯ ದ್ವಿಜದಾರಕಾನ್
॥ ೬೧ ॥

ನ್ಯವರ್ತತಾಂ ಸ್ವಕಂ ಧಾಮ ಸಂಪ್ರಹೃಷ್ಟೌ ಯಥಾಗತಮ್ ।
ವಿಪ್ರಾಯ ದದತುಃ ಪುತ್ರಾನ್ ಯಥಾರೂಪಂ ಯಥಾವಯಃ
॥ ೬೨ ॥

ಹಾಸಿಗೆಯನ್ನಾಗಿಸಿಕೊಂಡು ಸರ್ವವ್ಯಾಪಕನೂ, ಅತ್ಯಂತ ಪ್ರಭಾವಶಾಲಿಯೂ ಆದ ಪುರುಷೋತ್ತಮನು ಪವಡಿಸಿರುವುದನ್ನು ಅರ್ಜುನನು ನೋಡಿದನು. ಆ ಪುರುಷೋತ್ತಮನು ನೀಲಮೇಘಶ್ಯಾಮನಾಗಿದ್ದನು. ಸುಂದರವಾದ ಪೀತಾಂಬರವನ್ನು ಉಟ್ಟಿದ್ದನು. ಪ್ರಸನ್ನವದನನಾಗಿದ್ದನು. ಸುಂದರವೂ ವಿಶಾಲವೂ ಆದ ಕಣ್ಣುಗಳನ್ನು ಹೊಂದಿದ್ದನು. ॥ ೫೫ ॥ ಭಗವಂತನ ಸಾವಿರಾರು ಮುಂಗುರುಳುಗಳು ಮಹಾಮಣಿಗಳ ರಾಶಿಯಿಂದ ಸಿದ್ಧಗೊಳಿಸಿದ ಕಿರೀಟ-ಕುಂಡಲಗಳ ಕಾಂತಿಯಿಂದ ರಾರಾಜಿಸುತ್ತಿದ್ದವು. ನೀಳವಾದ ಅಷ್ಟಭುಜಗಳಿದ್ದವು. ಕೊರಳಲ್ಲಿ ಕೌಸ್ತುಭ ಮಣಿಯಿದ್ದು, ವಕ್ಷಸ್ಥಳದಲ್ಲಿ ಶ್ರೀವತ್ಸಲಾಂಛನವು ಶೋಭಿಸುತ್ತಿತ್ತು. ಅವನು ವನಮಾಲೆಯಿಂದ ಸಮಲಂಕೃತನಾಗಿದ್ದನು. ॥ ೫೬ ॥ ನಂದ, ಸುನಂದ ಮುಂತಾದ ಪಾರ್ಷದರೂ, ಚಕ್ರ-ಸುದರ್ಶನ ಮುಂತಾದ ಆಯುಧಗಳು ಮೂರ್ತಿಮಂತರಾಗಿ, ಪುಷ್ಟಿ-ಶ್ರೀ ಕೀರ್ತಿ-ಅಜಾ ಎಂಬ ನಾಲ್ಕು ಶಕ್ತಿಗಳೂ, ಸಮಸ್ತ ಋದ್ಧಿಗಳೂ, ಬ್ರಹ್ಮಾದಿಲೋಕಪಾಲರು ಜಗದೀಶ್ವರನಾದ ಭಗವಂತನನ್ನು ಸೇವಿಸುತ್ತಿರುವುದನ್ನು ಅರ್ಜುನನು ನೋಡಿದನು. ॥ ೫೭ ॥ ಪರೀಕ್ಷಿತನೇ! ಭಗವಾನ್ ಶ್ರೀಕೃಷ್ಣನು ತನ್ನದೇ ಸ್ವರೂಪವಾದ ಅನಂತ ಭಗವಂತನಿಗೆ ವಂದಿಸಿದನು. ಅರ್ಜುನನು ಅವನ ದರ್ಶನದಿಂದ ಸ್ವಲ್ಪ ಭಯಗೊಂಡಿದ್ದನು. ಶ್ರೀಕೃಷ್ಣನು ವಂದಿಸಿದ ಬಳಿಕ ಅವನೂ ಭಗವಂತನಿಗೆ ನಮಸ್ಕರಿಸಿದನು. ಕೈಗಳನ್ನು ಜೋಡಿಸಿಕೊಂಡು ನಿಂತಿದ್ದ ಶ್ರೀಕೃಷ್ಣಾರ್ಜುನರನ್ನು ಕುರಿತು ಪರಬ್ರಹ್ಮಸ್ವರೂಪನೂ, ಲೋಕಪಾಲರೆಲ್ಲರ ಪ್ರಭುವೂ ಆದ ಪುರುಷೋತ್ತಮನು ಮೇಘಗಂಭೀರವಾಣಿಯಿಂದ ಈ ಮಾತನ್ನು ಹೇಳಿದನು - ॥ ೫೮ ॥

ಕೃಷ್ಣಾರ್ಜುನರೇ! ನಿಮ್ಮಿಬ್ಬರನ್ನು ನೋಡುವ ಸಲುವಾಗಿಯೇ ಬ್ರಾಹ್ಮಣ ಬಾಲಕರನ್ನು ನನ್ನ ಬಳಿಗೆ ಕರೆತಂದಿರುವೆನು. ನೀವಿಬ್ಬರೂ ಧರ್ಮದ ರಕ್ಷಣೆಗಾಗಿಯೇ ನನ್ನ ಕಲಾಂಶಗಳಿಂದ ಭೂಮಿಯಲ್ಲಿ ಅವತರಿಸಿರುವಿರಿ. ಪೃಥಿವಿಗೆ ಭಾರರೂಪವಾದ ದೈತ್ಯರೆಲ್ಲರನ್ನು ಸಂಹರಿಸಿ ನೀವಿಬ್ಬರೂ ಶೀಘ್ರಾತಿಶೀಘ್ರವಾಗಿ ನನ್ನ ಬಳಿಗೆ ಮರಳಿ ಬನ್ನಿರಿ. ॥ ೫೯ ॥ ನೀವಿಬ್ಬರೂ ಋಷಿಶ್ರೇಷ್ಠರಾದ ನರ-ನಾರಾಯಣರೇ ಆಗಿರುವಿರಿ. ನೀವು ಪೂರ್ಣಕಾಮರೂ, ಸರ್ವಶ್ರೇಷ್ಠರೂ, ಆಗಿದ್ದರೂ ಜಗತ್ತಿನ ಸ್ಥಿತಿ ಮತ್ತು ಲೋಕಸಂಗ್ರಹಕ್ಕಾಗಿ ಧರ್ಮವನ್ನು ಆಚರಿಸುತ್ತಾ ಇರಿ. ॥ ೬೦ ॥

ಪರಬ್ರಹ್ಮಸ್ವರೂಪನಾದ ಪುರುಷೋತ್ತಮನು ಕೃಷ್ಣಾರ್ಜುನರಿಗೆ ಹೀಗೆ ಆದೇಶವನ್ನು ನೀಡಲು, ಅವರು ಅದನ್ನು ಸ್ವೀಕರಿಸಿ ಅವನಿಗೆ ನಮಸ್ಕಾರಮಾಡಿ ಅತ್ಯಂತ ಆನಂದದಿಂದ ಬ್ರಾಹ್ಮಣಬಾಲಕರನ್ನು ಕರೆದುಕೊಂಡು ಬಂದ ದಾರಿಯಿಂದಲೇ ದ್ವಾರಕೆಗೆ ಮರಳಿದರು. ಬ್ರಾಹ್ಮಣನ ಬಾಲಕರು ತಮ್ಮ-ತಮ್ಮ ವಯಸ್ಸಿಗೆ ಅನುಗುಣವಾದ ರೂಪವುಳ್ಳವರಾಗಿಯೂ, ಆಕೃತಿಯುಳ್ಳವರಾಗಿಯೂ ಇದ್ದರು. ಭಗವಾನ್ ಶ್ರೀಕೃಷ್ಣ ಮತ್ತು ಅರ್ಜುನರು ಅವರನ್ನು ಬ್ರಾಹ್ಮಣನಿಗೆ ಒಪ್ಪಿಸಿದರು. ॥ ೬೧-೬೨ ॥

ನಿಶಾಮ್ಯ ವೈಷ್ಣವಂ ಧಾಮ ಪಾರ್ಥಃ ಪರಮವಿಸ್ಮಿತಃ ।
ಯತ್ಕಿಂಚಿತ್ಪೌರುಷಂ ಪುಂಸಾಂ ಮೇನೇ ಕೃಷ್ಣಾನುಕಂಪಿತಮ್ ॥ ೬೩ ॥

ಇತೀದೃಶಾನ್ಯನೇಕಾನಿ ವೀರ್ಯಾಣೀಹ ಪ್ರದರ್ಶಯನ್ ।
ಬುಭುಜೇ ವಿಷಯಾನ್ ಗ್ರಾಮ್ಯಾನೀಜೇ ಚಾತ್ಯೂರ್ಜಿತೈರ್ಮಖೈಃ ॥ ೬೪ ॥

ಪ್ರವವರ್ಷಾಖಿಲಾನ್ ಕಾಮಾನ್ ಪ್ರಜಾಸು ಬ್ರಾಹ್ಮಣಾದಿಷು ।
ಯಥಾಕಾಲಂ ಯಥೈವೇಂದ್ರೋ ಭಗವಾನ್ ಶ್ರೈಷ್ಠ್ಯಮಾಸ್ಥಿತಃ ॥ ೬೫ ॥

ಹತ್ವಾ ನೃಪಾನಧರ್ಮಿಷ್ಠಾನ್ ಘಾತಯಿತ್ವಾರ್ಜುನಾದಿಭಿಃ ।
ಅಂಜಸಾ ವರ್ತಯಾಮಾಸ ಧರ್ಮಂ ಧರ್ಮಸುತಾದಿಭಿಃ ॥ ೬೬ ॥

ಭಗವಾನ್ ವಿಷ್ಣುವಿನ ಆ ಪರಮ ಧಾಮವನ್ನು ನೋಡಿದ ಅರ್ಜುನನ ಆಶ್ಚರ್ಯಕ್ಕೆ ಪಾರವೇ ಇರಲಿಲ್ಲ. ಜೀವರಲ್ಲಿರುವ ಬಲ-ಪೌರುಷಗಳೆಲ್ಲವೂ ಭಗವಾನ್ ಶ್ರೀಕೃಷ್ಣನ ಕೃಪೆಯ ಫಲವೇ ಆಗಿದೆ ಎಂದು ಅವನು ಅರಿತು ಕೊಂಡನು. ॥ ೬೩ ॥ ಪರೀಕ್ಷಿತನೇ ! ಭಗವಂತನು ಇಂತಹ ಅನೇಕ ಐಶ್ವರ್ಯಯುಕ್ತವೂ, ವೀರ್ಯ-ಶೌರ್ಯಗಳಿಂದಲೂ ಪರಿ ಪೂರ್ಣವಾದ ಲೀಲೆಗಳನ್ನು ಮಾಡಿದನು. ಲೌಕಿಕದೃಷ್ಟಿಯಲ್ಲಿ ಸಾಮಾನ್ಯ ಜನರಂತೆ ಸಾಂಸಾರಿಕ ವಿಷಯಗಳನ್ನು ಅನುಭವಿಸಿದನು ಮತ್ತು ದೊಡ್ಡ-ದೊಡ್ಡ ಮಹಾರಾಜರಂತೆ ಶ್ರೇಷ್ಠವಾದ ಯಜ್ಞಗಳನ್ನು ಮಾಡಿದನು. ॥ ೬೪ ॥ ಭಗವಾನ್ ಶ್ರೀಕೃಷ್ಣನು ಆದರ್ಶ ಮಹಾಪುರುಷರಂತೆಯೇ ಆಚರಣೆ ಮಾಡುತ್ತಾ ಬ್ರಾಹ್ಮಣರೇ ಮೊದಲಾದ ಎಲ್ಲ ಪ್ರಜಾಜನರ ಸಮಸ್ತ ಮನೋರಥಗಳನ್ನು ಇಂದ್ರನು ಪ್ರಜೆಗಳಿಗೆ ಸಮಯಕ್ಕೆ ಸರಿಯಾಗಿ ಮಳೆಸುರಿಸುವಂತೆ ಪೂರ್ಣಗೊಳಿಸಿದನು. ॥ ೬೫ ॥ ಅವನು ಬಹಳಷ್ಟು ಅಧರ್ಮಿಗಳಾದ ರಾಜನನ್ನು ತಾನೇ ಸಂಹರಿಸಿದನು ಮತ್ತು ಅನೇಕರನ್ನು ಅರ್ಜುನಾದಿಗಳಿಂದ ಕೊಲ್ಲಿಸಿದನು. ಈ ಪ್ರಕಾರವಾಗಿ ಧರ್ಮರಾಜ ಯುಧಿಷ್ಠಿರಾದಿ ಧಾರ್ಮಿಕ ರಾಜರುಗಳಿಂದ ಅವನು ಅನಾಯಾಸವಾಗಿಯೇ ಸಮಸ್ತ ಪೃಥಿವಿಯಲ್ಲಿ ಧರ್ಮಮರ್ಯಾದೆಯನ್ನು ಸ್ಥಾಪಿಸಿದನು. ॥ ೬೬ ॥

ಎಂಭತ್ತೊಂಭತ್ತನೆಯ ಅಧ್ಯಾಯವು ಮುಗಿಯಿತು. ॥ ೮೯ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮ ಸ್ಕಂಧೇ ಉತ್ತರಾರ್ಧೇ
ದ್ವಿಜಕುಮಾರಾನಯನಂ ನಾಮ ಏಕೋನನವತಿತಮೋಽಧ್ಯಾಯಃ ॥ ೮೯ ॥

ತೊಂಭತ್ತನೆಯ ಅಧ್ಯಾಯ

ಭಗವಾನ್ ಶ್ರೀಕೃಷ್ಣನ ಲೀಲಾವಿಹಾರ ವರ್ಣನೆ

ಶ್ರೀಶುಕ ಉವಾಚ

ಸುಖಂ ಸ್ವಪುರ್ಯಾಂ ನಿವಸನ್ ದ್ವಾರಕಾಯಾಂ ಶ್ರಿಯಃ ಪತಿಃ ।
ಸರ್ವಸಂಪತ್ಸಮೃದ್ಧಾಯಾಂ ಜುಷ್ಟಾಯಾಂ ವೃಷ್ಣಿಪುಂಗವೈಃ ॥ ೧ ॥

ಸ್ತ್ರೀಭಿಶ್ಚೋತ್ತಮವೇಷಾಭಿರ್ನವಯೌವನಕಾಂತಿಭಿಃ ।
ಕಂದುಕಾದಿಭಿರ್ಹರ್ಮ್ಯೇಷು ಕ್ರೀಡಂತೀಭಿಸ್ತಡಿದ್ದ್ಯುಭಿಃ ॥ ೨ ॥

ನಿತ್ಯಂ ಸಂಕುಲಮಾರ್ಗಾಯಾಂ ಮದಚ್ಯುದ್ಭಿರ್ಮತಂಗಜೈಃ ।
ಸ್ವಲಂಕೃತೈರ್ಭಟೈರಶ್ವೈ ರಥೈಶ್ಚ ಕನಕೋಜ್ಜ್ವಲೈಃ ॥ ೩ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ - ಪರೀಕ್ಷಿದ್ರಾಜನೇ ! ಶ್ರಿಯಃಪತಿಯಾದ ಶ್ರೀಕೃಷ್ಣನು ಸಕಲ ವಿಧವಾದ ಸಂಪತ್ತುಗಳಿಂದಲೂ ಸಮೃದ್ಧವಾಗಿದ್ದ ತನ್ನ ದ್ವಾರಕೆಯಲ್ಲಿ ಯಾದವ ಶ್ರೇಷ್ಠರಿಂದ ಪರಿವೃತನಾಗಿ ಸುಖದಿಂದ ವಾಸಮಾಡಿಕೊಂಡಿದ್ದನು. ॥ ೧ ॥ ನವಯೌವನ ಕಾಂತಿಯಿಂದ ಬೆಳಗುತ್ತಿದ್ದ, ಶ್ರೇಷ್ಠವಾದ ವೇಷ ಭೂಷಗಳನ್ನು ಧರಿಸಿದ್ದ, ಮಿಂಚಿನಂತೆ ಕಾಂತಿಯುಳ್ಳವರಾಗಿದ್ದು ಅಂತಃಪುರದಲ್ಲಿ ಚೆಂಡಾಟಗಳನ್ನಾಡುತ್ತಿದ್ದ ಶ್ರೀಕೃಷ್ಣನ ಪ್ರೇಯಸಿಯರಿಂದ ದ್ವಾರಕೆಯು ಬೆಳಗುತ್ತಿತ್ತು. ॥ ೨ ॥ ದ್ವಾರಕೆಯ ಬೀದಿಗಳು ಮದೋದಕವನ್ನು ಸುರಿಸುತ್ತಿದ್ದ ಮಹಾಗಜಗಳಿಂದಲೂ, ವಸ್ತ್ರಾಭರಣಗಳಿಂದ ಸಮಲಂಕೃತರಾದ ಭಟರಿಂದಲೂ, ಶ್ರೇಷ್ಠವಾದ ಕುದುರೆಗಳಿಂದಲೂ, ಕನಕಾಲಂಕಾರಭೂಷಿತವಾದ ರಥಗಳಿಂದಲೂ ನಿಬಿಡವಾಗಿದ್ದವು. ॥ ೩ ॥ ಅಲ್ಲಿ ಅಡಿಗಡಿಗೂ ಉದ್ಯಾನಗಳೂ

ಉದ್ಯಾನೋಪವನಾಢ್ಯಾಯಾಂ ಪುಷ್ಪಿತದ್ರುಮರಾಜಿಷು ।
ನಿರ್ವಿಶದ್ ಭೃಂಗವಿಹಗೈರ್ನಾದಿತಾಯಾಂ ಸಮಂತತಃ ॥ ೪ ॥

ರೇಮೇ ಷೋಡಶಸಾಹಸ್ರಪತ್ನೀನಾಮೇಕವಲ್ಲಭಃ ।
ತಾವದ್ವಿಚಿತ್ರರೂಪೋಽಸೌ ತದ್ಗೃಹೇಷು ಮಹರ್ದ್ಧಿಷು ॥ ೫ ॥

ಪ್ರೋತ್ಫುಲ್ಲೋತ್ಪಲಕಲ್ಹಾರಕುಮುದಾಂಭೋಜರೇಣುಭಿಃ ।
ವಾಸಿತಾಮಲತೋಯೇಷು ಕೂಜದ್ದ್ವಿಜಕುಲೇಷು ಚ ॥ ೬ ॥

ವಿಜಹಾರ ವಿಗಾಹ್ಯಾಂಭೋ ಹ್ರದಿನೀಷು ಮಹೋದಯಃ ।
ಕುಚಕುಂಕುಮಲಿಪ್ತಾಂಗಃ ಪರಿರಬ್ಧಶ್ಚ ಯೋಷಿತಾಮ್ ॥ ೭ ॥

ಉಪಗೀಯಮಾನೋ ಗಂಧರ್ವೈರ್ಮೃದಂಗಪಣವಾನಕಾನ್ ।
ವಾದಯದ್ಭಿರ್ಮುದಾ ವೀಣಾಂ ಸೂತಮಾಗಧವಂದಿಭಿಃ ॥ ೮ ॥

ಸಿಚ್ಯಮಾನೋಽಚ್ಯುತಸ್ತಾಭಿರ್ಹಸಂತೀಭಿಃ ಸ್ಮ ರೇಚಕೈಃ ।
ಪ್ರತಿಷಿಂಚನ್ವಿಚಿಕ್ರೀಡೇ ಯಕ್ಷೀಭಿರ್ಯಕ್ಷರಾಡಿವ ॥ ೯ ॥

ತಾಃ ಕ್ಲಿನ್ನವಸ್ತ್ರ ವಿವೃತೋರುಕುಚಪ್ರದೇಶಾಃ
ಸಿಂಚಂತ್ಯ ಉದ್ಧೃತಬೃಹತ್ಕಬರಪ್ರಸೂನಾಃ ।
ಕಾಂತಂ ಸ್ಮ ರೇಚಕಜಿಹೀರಷಯೋಪಗುಹ್ಯ
ಜಾತಸ್ಮರೋತ್ಸವಲಸದ್ವದನಾ ವಿರೇಜುಃ ॥ ೧೦ ॥

ಕೃಷ್ಣಸ್ತು ತತ್ಸ್ತನವಿಷಜ್ಜಿತಕುಂಕುಮಸ್ರಕ್
ಕ್ರೀಡಾಭಿಷಂಗಧುತಕುಂತಲವೃಂದಬಂಧಃ ।
ಸಿಂಚನ್ಮುಹುರ್ಯುವತಿಭಿಃ ಪ್ರತಿಷಿಚ್ಯಮಾನೋ
ರೇಮೇ ಕರೇಣುಭಿರಿವೇಭಪತಿಃ ಪರೀತಃ ॥ ೧೧ ॥

ಹೂದೋಟಗಳೂ, ತೋಪುಗಳೂ ಇದ್ದುವು. ಅವುಗಳಲ್ಲಿನ ಮರ ಗಿಡ ಬಳ್ಳಿಗಳು ಹೂವುಗಳಿಂದ ಸಮಲಂಕೃತವಾಗಿದ್ದು, ದುಂಬಿಗಳೂ, ಹಕ್ಕಿಗಳೂ ಕುಳಿತು ಇಂಪಾಗಿ ಹಾಡುತ್ತಿದ್ದವು. ॥ ೪ ॥ ಭಗವಾನ್ ಶ್ರೀಕೃಷ್ಣನು ಹದಿನಾರು ಸಾವಿರಕ್ಕಿಂತಲೂ ಅಧಿಕವಾದ ಪತ್ನಿಯರಿಗೆ ಏಕಮಾತ್ರ ವಲ್ಲಭನಾಗಿದ್ದನು. ಪ್ರಭುವಿನ ಪತ್ನಿಯರ ಪ್ರತ್ಯೇಕ ಪ್ರತ್ಯೇಕವಾದ ಅರಮನೆಗಳೂ ಐಶ್ವರ್ಯದಿಂದ ಸಮೃದ್ಧವಾಗಿದ್ದವು. ಎಷ್ಟು ಸಂಖ್ಯೆಯಲ್ಲಿ ಪತ್ನಿಯರಿದ್ದರೋ ಶ್ರೀಕೃಷ್ಣನು ಅಷ್ಟೇ ಸಂಖ್ಯೆಯಲ್ಲಿ ಅದ್ಭುತ ರೂಪಗಳನ್ನು ಧರಿಸಿ ಅವರೊಂದಿಗೆ ವಿಹರಿಸುತ್ತಿದ್ದನು. ॥ ೫ ॥ ಎಲ್ಲ ಪತ್ನಿಯರ ಅರಮನೆಗಳಲ್ಲಿಯೂ ಸುಂದರವಾದ ಸರೋವರಗಳಿದ್ದವು. ಅವುಗಳಲ್ಲಿದ್ದ ನಿರ್ಮಲವಾದ ನೀರು ನೈದಿಲೆ, ಕೆಂದಾವರೆ, ಬಿಳಿನೈದಿಲೆ, ಶತಪತ್ರ ಮುಂತಾದ ಬಗೆ-ಬಗೆಯ ಕಮಲ ಪುಷ್ಪಗಳ ಪರಾಗದಿಂದ ಸುಗಂಧಿತವಾಗಿತ್ತು. ಆ ಸರೋವರಗಳಲ್ಲಿ ಹಂಸ, ಸಾರಸ ಮುಂತಾದ ಜಲಚರ ಪಕ್ಷಿಗಳು ನಲಿದಾಡುತ್ತಿದ್ದವು. ಭಗವಾನ್ ಶ್ರೀಕೃಷ್ಣನು ಅಂತಹ ಸುಂದರವಾದ ಸರೋವರಗಳಲ್ಲಿಯೂ, ಕೆಲವೊಮ್ಮೆ ನದಿಗಳಲ್ಲಿಯೂ ತನ್ನ ಪತ್ನಿಯರೊಡನೆ ಜಲಕ್ರೀಡೆಯಾಡುವನು. ಮಹಾನುಭಾವನಾದ ಶ್ರೀಕೃಷ್ಣನು ಹಾಗೆ ಜಲಕ್ರೀಡೆಯಾಡುತ್ತಿದ್ದಾಗ ಪತ್ನಿಯರಿಂದ ಆಲಿಂಗಿಸಲ್ಪಟ್ಟು ಅವರ ಕುಚಕುಂಕುಮಗಂಧಗಳಿಂದ ಲಿಪ್ತವಾದ ವಕ್ಷಸ್ಥಳದಿಂದ ಕೂಡಿ ಬಹಳವಾಗಿ ಶೋಭಿಸುತ್ತಿದ್ದನು. ॥ ೬-೭ ॥ ಆ ಸಮಯದಲ್ಲಿ ಗಂಧರ್ವರು ಶ್ರೀಕೃಷ್ಣನ ಧರ್ಮ-ಕೀರ್ತಿಗಳನ್ನು ಗಾನಮಾಡುತ್ತಿದ್ದರು. ಸೂತ-ಮಾಗಧ-ವಂದಿಗಳು ಆನಂದತುಂದಿಲರಾಗಿ ವೀಣಾ, ಮೃದಂಗ, ಮದ್ದಳೆಗಳನ್ನು ನುಡಿಸುತ್ತಿದ್ದರು. ॥ ೮ ॥

ಶ್ರೀಕೃಷ್ಣನ ಪತ್ನಿಯರು ಕಿಲ-ಕಿಲನೆ ನಗುತ್ತಾ ಅವನ ಸುತ್ತಲೂ ನಿಂತು ನೀರ್ಕೋವಿಯಿಂದ ಶ್ರೀಕೃಷ್ಣನ ಮೇಲೆ ನೀರು ಸುರಿಸುವರು. ಇದಕ್ಕೆ ಪ್ರತಿಯಾಗಿ ಶ್ರೀಕೃಷ್ಣನು ಅವರ ಮೇಲೆ ರಭಸದಿಂದ ನೀರುಗುಗ್ಗುತ್ತಾ ಯಕ್ಷಸ್ತ್ರೀಯರೊಡನೆ ಯಕ್ಷರು ಜಲಕ್ರೀಡೆಯಾಡುವಂತೆ ನೀರಾಟವಾಡುತ್ತಿದ್ದನು. ॥ ೯ ॥ ನೀರಿನ ಎರಚಾಟದಿಂದ ಲಲನೆಯರ ವಸ್ತ್ರಗಳು ನೆನೆಯುತ್ತಿದ್ದವು. ಅವರ ದೊಡ್ಡ-ದೊಡ್ಡ ಮುಡಿಗಳಿಂದ ಪುಷ್ಪಗಳು ಉದುರುತ್ತಿದ್ದವು. ಕೃಷ್ಣನಿಂದ ನೀರನ್ನು ಸುರಿಸಲ್ಪಡುತ್ತಿದ್ದ ಜೀರ್ಕೋವಿಯನ್ನು ಕಿತ್ತುಕೊಳ್ಳುವ ನೆಪದಿಂದ ಪ್ರಮದೆಯರು ಪುರುಷೋತ್ತಮನನ್ನು ಆಲಿಂಗಿಸಿಕೊಳ್ಳುತ್ತಿದ್ದರು. ಅವನ ಸ್ಪರ್ಶದಿಂದ ಪತ್ನಿಯರ ಹೃದಯದಲ್ಲಿ ಪ್ರೇಮ-ಭಾವದ ಅಭಿವೃದ್ಧಿಯಾಗುತ್ತಿತ್ತು. ಆದರಿಂದ ಅವರ ಮುಖಕಮಲಗಳು ವಿಕಸಿತವಾಗಿ ಅವರ ಶೋಭೆಯು ಇನ್ನೂ ಹೆಚ್ಚುತ್ತಿತ್ತು. ॥ ೧೦ ॥ ಆ ಸಮಯದಲ್ಲಿ ಶ್ರೀಕೃಷ್ಣನ ವನಮಾಲೆಯು ಆ ರಾಣಿಯರ ವಕ್ಷಸ್ಥಳಕ್ಕೆ ಹಚ್ಚಿಕೊಂಡ ಕುಂಕುಮಕೇಸರಿಯ ಬಣ್ಣದಿಂದ ಕೆಂಪಾಗುತ್ತಿತ್ತು. ನೀರಾಟದ ಸಂಭ್ರಮದಲ್ಲಿ ಶ್ರೀಕೃಷ್ಣನ ಗುಂಗುರು ಕೂದಲುಗಳು ಕೆದರಿ ತಲೆಯಸುತ್ತಲೂ ಹರಡಿಕೊಂಡಿದ್ದವು. ಅವನು ತನ್ನ ರಾಣಿಯರನ್ನು ಮೇಲಿಂದ ಮೇಲೆ ನೀರಿನಿಂದ ನೆನೆಸಿಬಿಡುತ್ತಿದ್ದರೆ, ಅವರೂ ಶ್ರೀಕೃಷ್ಣನನ್ನು ನೆನೆಸಿಬಿಡುತ್ತಿದ್ದರು. ಗಜರಾಜನು ಹೆಣ್ಣಾನೆಗಳೊಡನೆ ಸುತ್ತುವರಿದು ಜಲಕ್ರೀಡೆಯಾಡುವಂತೆ ಶ್ರೀಕೃಷ್ಣನು ಪತ್ನಿಯರೊಡನೆ ವಿಹರಿಸಿದನು. ॥ ೧೧ ॥

ನಟಾನಾಂ ನರ್ತಕೀನಾಂ ಚ ಗೀತವಾದ್ಯೋಪಜೀವಿನಾಮ್ ।
ಕ್ರೀಡಾಲಂಕಾರವಾಸಾಂಸಿ ಕೃಷ್ಣೋಽದಾತ್ತಸ್ಯ ಚ ಸ್ತ್ರಿಯಃ
॥ ೧೨ ॥

ಭಗವಾನ್ ಶ್ರೀಕೃಷ್ಣನ ಮತ್ತು ಅವರ ಪತ್ನಿಯರು ಕ್ರೀಡೆಯಾಡಿದ ಬಳಿಕ ತಮ್ಮ-ತಮ್ಮ ವಸ್ತ್ರಾಭರಣಗಳನ್ನು ಕಳಚಿ ಗೀತ-ವಾದ್ಯಗಳಿಂದಲೇ ಜೀವನ ನಿರ್ವಹಿಸುತ್ತಿದ್ದ ನಟ-ನರ್ತಕಿಯರಿಗೆ ಕೊಡುತ್ತಿದ್ದರು. ॥ ೧೨ ॥ ಪರೀಕ್ಷಿತನೇ ! ಈ ರೀತಿಯಿಂದ ಶ್ರೀಕೃಷ್ಣನು ಅವರೊಡನೆ ವಿಹರಿಸುತ್ತಿದ್ದನು. ಶ್ರೀಕೃಷ್ಣನು ಪ್ರಿಯ ವಿಲಾಸಗಳಿಂದಲೂ, ಮಂದಗಮನದಿಂದಲೂ, ಕಿರುನಗೆಯಿಂದಲೂ, ಪರಿಹಾಸೋಕ್ತಿಗಳಿಂದಲೂ, ಕಡೆಗಣ್ಣ ನೋಟದಿಂದಲೂ, ಆಲಿಂಗನ ಚುಂಬನಾದಿಗಳಿಂದಲೂ ಸ್ತ್ರೀಯರ ಮನಸ್ಸನ್ನು ಸಂಪೂರ್ಣವಾಗಿ ಅಪಹರಿಸಿ ಬಿಟ್ಟಿದ್ದನು. ॥ ೧೩ ॥ ರಾಣಿಯರಿಗೆ ಜೀವನ ಸರ್ವಸ್ವವೂ ಏಕಮಾತ್ರ ಹೃದಯೇಶ್ವರನಾದ ಶ್ರೀಕೃಷ್ಣನೇ ಆಗಿದ್ದನು. ಅವರು ಕೆಲವು ವೇಳೆ ಯಾರೊಂದಿಗೂ ಮಾತನ್ನಾಡದೆ ಮೌನವಾಗಿ ಕಮಲನಯನ ಶ್ಯಾಮಸುಂದರನ ಧ್ಯಾನದಲ್ಲೇ ತಲ್ಲೀನರಾಗುತ್ತಿದ್ದರು. ಕೆಲವೊಮ್ಮೆ ಉನ್ಮತ್ತರಂತೆ ಮಾತುಗಳನ್ನಾಡುವರು. ಕೆಲವೊಮ್ಮೆ ಶ್ರೀಕೃಷ್ಣನ ಸನಿಹದಲ್ಲೇ ಇದ್ದರೂ ಪ್ರೇಮೋನ್ಮಾದದ ಕಾರಣ ಅವನ ವಿರಹವನ್ನು ಅನುಭವಿಸುತ್ತಿದ್ದರು ಮತ್ತು ಏನೇನೋ ಮಾತನಾಡುತ್ತಿದ್ದರು. ಮಹಾರಾಜಾ ! ಅವರಾಡುತ್ತಿದ್ದ ಮಾತುಗಳನ್ನು ಯಥಾವತ್ತಾಗಿ ಹೇಳುತ್ತೇನೆ, ಕೇಳು. ॥ ೧೪ ॥

ಕೃಷ್ಣಸ್ಯೈವಂ ವಿಹರತೋ ಗತ್ಯಾಲಾಪೇಕ್ಷಿತಸ್ಮಿತೈಃ ।
ನರ್ಮಕ್ಷ್ವೇಲಿಪರಿಷ್ವಂಗೈಃ ಸ್ತ್ರೀಣಾಂ ಕಿಲ ಹೃತಾ ಧಿಯಃ
॥ ೧೩ ॥

ಊಚುರ್ಮುಕುಂದೈಕಧಿಯೋಽಗಿರ ಉನ್ಮತ್ತವಜ್ಜಡಮ್ ।
ಚಿಂತಯಂತ್ಯೋಽರವಿಂದಾಕ್ಷಂ ತಾನಿ ಮೇ ಗದತಃ ಶೃಣು
॥ ೧೪ ॥

ಮಹಿಷ್ಯ ಊಚುಃ

ಕುರರಿ ವಿಲಪಸಿ ತ್ವಂ ವೀತನಿದ್ರಾ ನ ಶೇಷೇ
ಸ್ವಪಿತಿ ಜಗತಿ ರಾತ್ರ್ಯಾಮೀಶ್ವರೋ ಗುಪ್ತಬೋಧಃ ।
ವಯಮಿವ ಸಖಿ ಕಚ್ಚಿದ್ಗಾಢನಿರ್ಭಿನ್ನಚೇತಾ
ನಲಿನನಯನಹಾಸೋದಾರಲೀಲೇಕ್ಷಿತೇನ ॥ ೧೫ ॥

ರಾಣಿಯರು ಹೇಳುತ್ತಾರೆ - ಎಲೈ ಕುಕರ ಪಕ್ಷಿಯೇ ! ಸರ್ವೇಶ್ವರನಾದ ಶ್ರೀಕೃಷ್ಣನು ಬಾಹ್ಯ ವಿಷಯಗಳನ್ನು ಮರೆತು ಈ ರಾತ್ರಿಯಲ್ಲಿ ಸುಖವಾಗಿ ನಿದ್ರಿಸುತ್ತಿದ್ದಾನೆ. ನೀನಾದರೋ ನಿದ್ರಿಸುತ್ತಿಲ್ಲ, ಮಾತ್ರವಲ್ಲ ಅಳುತ್ತಿರುವೆ. ಇದರಿಂದ ಪ್ರಭುವಿನ ನಿದ್ರೆಗೆ ಭಂಗವುಂಟಾಗದೇ ? ಸಖಿಯೇ ! ಕಮಲಾಕ್ಷನಾದ ಶ್ರೀಕೃಷ್ಣನ ಉದಾರವಾದ ಲೀಲಾಕಟಾಕ್ಷವೀಕ್ಷಣದಿಂದ ನನ್ನಂತೆಯೇ ನಿನ್ನ ಮನಸ್ಸು ಕದಡಿ ಹೋಗಿದೆಯೇ ? ॥ ೧೫ ॥

ನೇತ್ರೇ ನಿಮೀಲಯಸಿ ನಕ್ತಮದೃಷ್ಟಬಂಧು-
ಸ್ತ್ವಂ ರೋರವೀಷಿ ಕರುಣಂ ಬತ ಚಕ್ರವಾಕಿ ।
ದಾಸ್ಯಂ ಗತಾ ವಯಮಿವಾಚ್ಯುತಪಾದಜುಷ್ಟಾಂ
ಕಿಂ ವಾ ಸ್ರಜಂ ಸ್ಪೃಹಯಸೇ ಕಬರೇಣ ವೋಢುಮ್ ॥ ೧೬ ॥

ಚಕ್ರವಾಕ ಪಕ್ಷಿಯೇ ! ನೀನೇಕೆ ರಾತ್ರಿಯಲ್ಲಿ ಕಣ್ಣುಗಳನ್ನು ಮುಚ್ಚಿಕೊಂಡಿರುವೆ ? ನಿನ್ನ ಪತಿಯು ದೇಶಾಂತರಕ್ಕೇನಾದರೂ ಹೋಗಿರುವನೇ ? ಇದರಿಂದಲೇ ನೀನು ಕರುಣಾಜನಕವಾದ ಸ್ವರದಲ್ಲಿ ಕೂಗಿಕೊಳ್ಳುತ್ತಿರುವೆಯಾ ? ಅಯ್ಯೋ ಪಾಪ ! ನೀನು ಬಹಳದುಃಖಿಯಾಗಿರುವೆ. ಅಥವಾ ನಮ್ಮಂತೆಯೇ ನಿನ್ನ ಹೃದಯದಲ್ಲಿ ಭಗವಂತನ ದಾಸೀಭಾವವು ಜಾಗ್ರತವಾಗಿದೆಯೇ ? ಈ ಕಾರಣದಿಂದಲೇ ನೀನು ಅವನ ಚರಣಗಳಲ್ಲಿ ಏರಿಸಿರುವ ಪುಷ್ಪಮಾಲೆಯನ್ನು ನಿನ್ನ ತರುಬಿನಲ್ಲಿ ಧರಿಸಲು ಅಪೇಕ್ಷಿಸುತ್ತಿರುವೆಯಾ ? ॥ ೧೬ ॥

ಭೋ ಭೋಃ ಸದಾ ನಿಷ್ಟನಸೇ ಉದನ್ವ-
ನ್ನಲಬ್ಧನಿದ್ರೋಽಧಿಗತಪ್ರಜಾಗರಃ ।
ಕಿಂ ವಾ ಮುಕುಂದಾಪಹೃತಾತ್ಮಲಾಂಛನಃ
ಪ್ರಾಪ್ತಾಂ ದಶಾಂ ತ್ವಂ ಚ ಗತೋ ದುರತ್ಯಯಾಮ್ ॥ ೧೭ ॥

ಎಲೈ ಸಮುದ್ರವೇ ! ನೀನು ನಿರಂತರ ಭೋರ್ಗರೆಯುತ್ತಲೇ ಇರುವೆಯಲ್ಲ! ನಿನಗೆ ನಿದ್ದೆ ಬರುವುದಿಲ್ಲವೇ ? ನಿನಗೆ ನಿದ್ರೆ ಬಾರದಿರುವ ರೋಗವೇನಾದರೂ ಉಂಟಾಗಿದೆಯೇ ? ಆದರೆ ಹಾಗಲ್ಲ, ನಿನಗೆ ಪ್ರಿಯನಾದ ಶ್ಯಾಮಸುಂದರನು ನಿನ್ನ ಧೈರ್ಯ, ಗಾಂಭೀರ್ಯ ಮೊದಲಾದ ಸ್ವಾಭಾವಿಕ ಗುಣಗಳನ್ನು ಕಿತ್ತು ಕೊಂಡಿರುವನು. ಇದರಿಂದ ನೀನು ನಮ್ಮಂತೆಯೇ ಯಾವುದೇ ಔಷಧಿಯೇ ಇಲ್ಲದ ರೋಗಕ್ಕೆ ತುತ್ತಾಗಿರುವಂತೆ ಕಾಣುತ್ತದೆ. ॥ ೧೭ ॥

ಎಲೈ ಚಂದ್ರನೇ ! ನೀನು ಬಲವಾದ ಕ್ಷಯರೋಗದಿಂದ ಪೀಡಿತನಾಗಿರುವೆ. ಆದರಿಂದಲೇ ಅತ್ಯಂತ ದುರ್ಬಲನಾಗಿರುವೆ. ಅಯ್ಯೋ ! ರಾಮ, ರಾಮ ! ಈಗ ನೀನು ನಿನ್ನ ಕಿರಣಗಳಿಂದ

ತ್ವಂ ಯಕ್ಷ್ಮಣಾ ಬಲವತಾಸಿ ಗೃಹೀತ ಇಂದೋ
ಕ್ಷೀಣಸ್ತಮೋ ನ ನಿಜದೀಧಿತಿಭಿಃ ಕ್ಷಿಣೋಷಿ ।
ಕಚ್ಚಿನ್ಮುಕುಂದಗದಿತಾನಿ ಯಥಾ ವಯಂ ತ್ವಂ
ವಿಸ್ಮೃತ್ಯ ಭೋಃ ಸ್ಥಗಿತಗೀರುಪಲಕ್ಷ್ಯಸೇ ನಃ ॥ ೧೮ ॥

ಕತ್ತಲೆಯನ್ನು ಓಡಿಸಲು ಅಸಮರ್ಥನಾಗಿರುವೆ. ನಮ್ಮ ಪ್ರಿಯ ಶ್ಯಾಮಸುಂದರನ ಮಧುರವಾದ ರಹಸ್ಯವಾದ ಮಾತುಗಳನ್ನು ಮರೆತು ಅದನ್ನೇ ಪುನಃ ಸ್ಮರಿಸುತ್ತಾ ನೀನು ಕ್ಷೀಣನೂ, ಮೌನಿಯೂ ಆಗಿರಬಹುದೇ ? ॥ ೧೮ ॥

ಕಿಂ ತ್ವಾಚರಿತಮಸ್ಮಾಭಿರ್ಮಲಯಾನಿಲ ತೇಽಪ್ರಿಯಮ್ ।
ಗೋವಿಂದಾಪಾಂಗನಿರ್ಭಿನ್ನೇ ಹೃದೀರಯಸಿ ನಃ ಸ್ಮರಮ್
॥ ೧೯ ॥

ಎಲೈ ಮಲಯಾನಿಲವೇ! ನಮ್ಮ ಹೃದಯದಲ್ಲಿ ಸುಪ್ತವಾಗಿದ್ದ ಕಾಮವನ್ನು ಬಡಿದೆಬ್ಬಿಸುತ್ತಿರುವೆಯಲ್ಲ! ನಾವೇನು ನಿನಗೆ ಅಪರಾಧ ವೆಸಗಿದ್ದೇವೆ ? ಅಯ್ಯಾ! ಭಗವಂತನ ಕಟಾಕ್ಷ-ವೀಕ್ಷಣದಿಂದ ನಮ್ಮ ಹೃದಯಗಳು ಮೊದಲೇ ಘಾಸಿಗೊಂಡಿವೆ. ಇದನ್ನು ತಿಳಿಯದೆ ಪುನಃ ನಮ್ಮನ್ನು ಏಕೆ ಸತಾಯಿಸುತ್ತಿರುವೆ ? ॥ ೧೯ ॥

ಮೇಘ ಶ್ರೀಮಂಸ್ತ್ವಮಸಿ ದಯಿತೋ ಯಾದವೇಂದ್ರಸ್ಯ ನೂನಂ
ಶ್ರೀವತ್ಸಾಂಕಂ ವಯಮಿವ ಭವಾನ್ ಧ್ಯಾಯತಿ ಪ್ರೇಮಬದ್ಧಃ ।
ಅತ್ಯುತ್ಕಂಠಃ ಶಬಲಹೃದಯೋಽಸ್ಮದ್ವಿಧೋ ಬಾಷ್ಪಧಾರಾಃ
ಸ್ಮೃತ್ವಾ ಸ್ಮೃತ್ವಾ ವಿಸೃಜಸಿ ಮುಹುರ್ದುಃಖದಸ್ತತ್ಪ್ರಸಂಗಃ
॥ ೨೦ ॥

ಶ್ರೀಮಂತನಾದ ಮೇಘರಾಜನೇ! ನೀನು ಶ್ಯಾಮಲವರ್ಣ ದವನಾದ್ದರಿಂದ ಮೇಘಶ್ಯಾಮನಾದ ನಮ್ಮ ಪ್ರಿಯತಮನಿಗೆ ಅತ್ಯಂತ ಪ್ರಿಯನಾಗಿರುವೆ. ಆದರಿಂದಲೇ ನೀನು ನಮ್ಮಂತೆಯೇ ಪ್ರೇಮಪಾಶದಲ್ಲಿ ಬಿದ್ದು ಅವನನ್ನು ಧ್ಯಾನಮಾಡುತ್ತಿರುವೆ. ನೋಡು! ನೋಡು! ನಿನ್ನ ಹೃದಯವು ಚಿಂತೆಯಿಂದ ತುಂಬಿ ಹೋಗಿದೆ. ನೀನು ಅವನಿಗಾಗಿ ಅತ್ಯಂತ ಉತ್ಕಂಠಿತನಾಗಿರುವೆ. ಅದಕ್ಕೆಂದೇ ಪದೇ-ಪದೇ ಅವನನ್ನು ನೆನೆಯುತ್ತಾ ನಮ್ಮಂತೆಯೇ ಕಣ್ಣೀರ ಧಾರೆಗಳನ್ನು ಸುರಿಸುತ್ತಿರುವೆ. ಶ್ಯಾಮಘನ! ನಿಜ ವಾಗಿಯೂ ಘನಶ್ಯಾಮನಲ್ಲಿ ಸಂಬಂಧ ಬೆಳೆಸುವುದೆಂದರೆ ದುಃಖ ಗಳಿಗೆ ಆಮಂತ್ರಣ ಕೊಟ್ಟಂತೆಯೇ ಸರಿ. ॥ ೨೦ ॥

ಪ್ರಿಯರಾವಪದಾನಿ ಭಾಷಸೇಮೃತ-
ಸಂಜೀವಿಕಯಾನಯಾ ಗಿರಾ ।
ಕರವಾಣಿ ಕಿಮದ್ಯ ತೇ ಪ್ರಿಯಂ
ವದ ಮೇ ವಲ್ಗಿತಕಂಠ ಕೋಕಿಲ ॥ ೨೧ ॥

ಎಲೈ ಕೋಗಿಲೆಯೇ! ನೀನು ರಮಣೀಯವಾದ ಕಂಠ ಮಾಧುರ್ಯದಿಂದ ಕೂಡಿರುವೆ. ನಮ್ಮ ಪ್ರಿಯಕರ ಶ್ರೀಕೃಷ್ಣ ನಂತೆಯೇ ನೀನು ಕೂಡ ಮೃದುಮಧುರವಾದ, ಸತ್ತವರನ್ನೂ ಬದುಕಿಸುವ ಮಾಧರ್ಯದಿಂದ ಕೂಡಿರುವ ಮಾತುಗಳನ್ನೇ ಆಡುತ್ತಿರುವೆ. ಈಗ ನಿನಗೆ ಪ್ರಿಯವಾದ ಯಾವ ಕಾರ್ಯವನ್ನು ಮಾಡಿಕೊಡಲಿ ? ಹೇಳು. ॥ ೨೧ ॥

ನ ಚಲಸಿ ನ ವದಸ್ಯುದಾರಬುದ್ಧೇ
ಕ್ಷಿತಿಧರ ಚಿಂತಯಸೇ ಮಹಾಂತಮರ್ಥಮ್ ।
ಅಪಿ ಬತ ವಸುದೇವನಂದನಾಂಘ್ರಿಂ
ವಯಮಿವ ಕಾಮಯಸೇ ಸ್ತನೈರ್ವಿಧರ್ತುಮ್ ॥ ೨೨ ॥

ಉದಾರ ಬುದ್ಧಿಯುಳ್ಳ ಕ್ಷಿತಿಧರನೇ! ಪರ್ವತವೇ! ನೀನು ಚಲಿಸುವುದಿಲ್ಲ, ಮಾತನಾಡುವುದೂ ಇಲ್ಲ, ಯಾವುದೋ ಗಂಭೀರ ವಾದ ವಿಷಯವನ್ನು ಕುರಿತು ಆಲೋಚಿಸುತ್ತಿರುವಂತೆ ಕಾಣುತ್ತಿ ರುವೆ. ನಾವು ನಮ್ಮ ಸ್ತನಗಳಿಂದ ಧರಿಸಲು ಬಯಸುವ ವಾಸು ದೇವನ ಚರಣಾರವಿಂದಗಳನ್ನು ನಿನ್ನ ಶಿಖರಗಳಿಂದೇನಾದರೂ ಧರಿಸಲು ಅಪೇಕ್ಷಿಸುತ್ತಿರುವೆಯಾ ? ಅದನ್ನೇ ಗಾಢವಾಗಿ ಯೋಚಿಸು ತ್ತಿರುವೆಯಾ ? ಹೇಳು. ॥ ೨೨ ॥

ಶುಷ್ಯದ್ಧ್ರದಾಃ ಕರ್ಶಿತಾ ಬತ ಸಿಂಧುಪತ್ನ್ಯಃ
ಸಂಪ್ರತ್ಯಪಾಸ್ತಕಮಲಶ್ರಿಯ ಇಷ್ಟಭರ್ತುಃ ।
ಯದ್ವದ್ವಯಂ ಮಧುಪತೇಃ ಪ್ರಣಯಾವಲೋಕಮ್
ಅಪ್ರಾಪ್ಯ ಮುಷ್ಟಹೃದಯಾಃ ಪುರುಕರ್ಶಿತಾಃ ಸ್ಮ ॥ ೨೩ ॥

ಎಲೈ ಸಮುದ್ರಪತ್ನಿಯರಾದ ನದಿಗಳೇ! ಇದು ಗ್ರೀಷ್ಮಋತು. ನಿಮ್ಮ ಮಡುಗಳೆಲ್ಲ ಒಣಗಿ ಹೋಗಿವೆ. ನಿಮ್ಮಲ್ಲಿ ಅರಳಿದ ಕಮಲ ಗಳ ಸೌಂದರ್ಯವು ಕಂಡುಬರುವುದಿಲ್ಲ, ನೀವು ಬಹಳ ಸೊರಗಿ ದ್ದೀರಿ. ನಾವು ನಮ್ಮ ಪ್ರಿಯತಮ ಶ್ಯಾಮಸುಂದರನ ಪ್ರೇಮ ತುಂಬಿದ ಓರೆನೋಟವನ್ನು ಪಡೆಯದೆ ನಮ್ಮ ಹೃದಯಗಳು ಬರಿದಾಗಿ ಅತ್ಯಂತ ಸೊರಗಿ ಹೋಗಿದ್ದೇವೆ. ಹಾಗೆಯೇ ನೀವು ಕೂಡ ಮೇಘಗಳ ಮೂಲಕ ನಿಮ್ಮ ಪ್ರಿಯಕರ ಸಮುದ್ರದ ನೀರು ಪಡೆಯದೆ ಹೀಗೆ ದೀನರಾಗಿದ್ದೀರಿ ಎಂದು ತೋರುತ್ತದೆ. ॥ ೨೩. ॥

ಎಲೈ ಹಂಸವೇ! ಬಾ! ಬಾ! ನಿನಗೆ ಸ್ವಾಗತ ಬಯಸುತ್ತೇವೆ. ಈ ಪೀಠದಲ್ಲಿ ಕುಳಿತುಕೋ. ಸ್ವಲ್ಪ ಹಾಲು ಕುಡಿ. ಪ್ರಿಯ ಹಂಸವೇ! ಶ್ಯಾಮಸುಂದರನ ಸಮಾಚಾರವನ್ನು ಹೇಳು. ನೀನು ಅವನ

ಹಂಸ ಸ್ವಾಗತಮಾಸ್ಯತಾಂ ಪಿಬ ಪಯೋ
ಬ್ರೂಹ್ಯಂಗ ಶೌರೇಃ ಕಥಾಂ
ದೂತಂ ತ್ವಾಂ ನು ವಿದಾಮ ಕಚ್ಚಿದಜಿತಃ
ಸ್ವಸ್ತ್ಯಾಸ್ತ ಉಕ್ತಂ ಪುರಾ ।
ಕಿಂ ವಾ ನಶ್ಚಲಸೌಹೃದಃ ಸ್ಮರತಿ ತಂ
ಕಸ್ಮಾದ್ಭಜಾಮೋ ವಯಂ
ಕ್ಷೌದ್ರಾಲಾಪಯ ಕಾಮದಂ ಶ್ರಿಯಮೃತೇ
ಸೈವೈಕನಿಷ್ಠಾ ಸ್ತ್ರಿಯಾಂ ॥ ೨೪ ॥

ದೂತನಾಗಿರುವೆ ಎಂದೇ ನಾವು ಭಾವಿಸುತ್ತೇವೆ. ಯಾರಿಗೂ ವಶನಾಗದಿರುವ ಶ್ಯಾಮಸುಂದರನು ಕುಶಲನಾಗಿರುವನಲ್ಲ? ಅಯ್ಯೋ! ಅವನ ಸ್ನೇಹ ಬಹಳ ಅಸ್ಥಿರ ಹಾಗೂ ಕ್ಷಣಭಂಗುರ. ನೀವೇ ನನಗೆ ಪರಮಪ್ರಿಯರು ಎಂದು ಅವನು ನಮಗೆ ಹೇಳಿದ್ದನು. ಏನು ಅದು ಅವನಿಗೆ ಸ್ಮರಣೆಯಲ್ಲಿದೆಯೇ? ನೀನೇ ಹೇಳು. ಹೋಗು! ಹೋಗು! ನಾವು ನಿನ್ನ ಅನುನಯ-ವಿನಯವನ್ನು ಕೇಳುವುದಿಲ್ಲ. ಅವನೇ ನಮ್ಮನ್ನು ಲಕ್ಷಿಸುವುದಿಲ್ಲವಾದರೆ ನಾವಾದರೂ ಅವನ ಹಿಂದೆ ಏಕೆ ಬೀಳಬೇಕು? ಕ್ಷುದ್ರನಾದ ದೂತನೇ! ನಾವು ಅವನ ಬಳಿಗೆ ಹೋಗುವುದಿಲ್ಲ. ಏನು ಹೇಳಿದ ಅವನು? ನಮ್ಮ ಇಚ್ಛೆಯನ್ನು ಪೂರ್ಣಗೊಳಿಸಲು ಅವನು ಬರಲು ಇಚ್ಛಿಸುವನೇ? ಸರಿ! ಹಾಗಾದರೆ ಅವನನ್ನು ಕರಕೊಂಡು ಬಾ, ಅವನೊಡನೆ ಮಾತನಾಡಲು ಅವಕಾಶಮಾಡಿಕೊಡು. ಆದರೆ ಲಕ್ಷ್ಮಿಯನ್ನು ಎಲ್ಲಾದರು ಜೊತೆಗೆ ಕರೆದುಕೊಂಡು ಬರುವುದು ಬೇಡ. ಹಾಗೇನೆ ಅವನು ಲಕ್ಷ್ಮಿಯನ್ನು ಬಿಟ್ಟು ಇಲ್ಲಿಗೆ ಬರಲು ಇಚ್ಛಿಸುವುದಿಲ್ಲವೇ? ಇದೆಂತಹ ಮಾತು? ಏನು ಸ್ತ್ರೀಯರಲ್ಲಿ ಲಕ್ಷ್ಮಿಯೊಬ್ಬಳಿಗೇ ಭಗವಂತನಲ್ಲಿ ಪ್ರೇಮವಿರುವುದೇ? ಏನು ನಮ್ಮಲ್ಲಿ ಯಾರೂ ಅಂತಹವರಿಲ್ಲವೇ? ॥ ೨೪ ॥

ಶ್ರೀಶುಕ ಉವಾಚ

ಇತೀದೃಶೇನ ಭಾವೇನ ಕೃಷ್ಣೇ ಯೋಗೇಶ್ವರೇಶ್ವರೇ ।
ಕ್ರಿಯಮಾಣೇನ ಮಾಧವ್ಯೋ ಲೇಭಿರೇ ಪರಮಾಂ ಗತಿಮ್
॥ ೨೫ ॥

ಶ್ರೀಶುಕಮಹಾಮುನಿಗಳು ಹೇಳಿದರು - ಪರೀಕ್ಷಿತನೇ! ಶ್ರೀಕೃಷ್ಣನ ಪತ್ನಿಯರು ಯೋಗೇಶ್ವರನಾದ ಭಗವಂತನಲ್ಲಿ ಇಂತಹ ಅನನ್ಯವಾದ ಪ್ರೇಮಭಾವವನ್ನು ಇಟ್ಟಿದ್ದರು. ಆದರಿಂದಲೇ ಅವರು ಪರಮಪದವನ್ನು ಪಡೆದುಕೊಂಡರು. ॥ ೨೫ ॥

ಶ್ರುತಮಾತ್ರೋಽಪಿ ಯಃ ಸ್ತ್ರೀಣಾಂ ಪ್ರಸಹ್ಯಾಕರ್ಷತೇ ಮನಃ ।
ಉರುಗಾಯೋರುಗೀತೋ ವಾ ಪಶ್ಯಂತೀನಾಂ ಕುತಃ ಪುನಃ
॥ ೨೬ ॥

ಭಗವಾನ್ ಶ್ರೀಕೃಷ್ಣನ ಅನಂತ ಲೀಲೆಗಳು ವಿವಿಧ ಪ್ರಕಾರದಿಂದ, ಅನೇಕ ಗೀತಗಳಿಂದ ಹಾಡಲ್ಪಟ್ಟಿವೆ. ಅವನ್ನು ಕೇಳಿದ ಮಾತ್ರದಿಂದಲೇ ಸ್ತ್ರೀಯರ ಮನಸ್ಸು ಬಲವಂತವಾಗಿ ಅವನೆಡೆಗೆ ಆಕರ್ಷಿಸಲ್ಪಡುವಷ್ಟು ಮಧುರವೂ, ಮನೋಹರವೂ ಆಗಿವೆ. ಹಾಗಿರುವಾಗ ಅವನನ್ನು ಕಣ್ಣಾರೆಕಂಡ ಸ್ತ್ರೀಯರ ವಿಷಯದಲ್ಲಿ ಹೇಳುವುದೇನಿದೆ? ॥ ೨೬ ॥

ಯಾಃ ಸಂಪರ್ಯಚರನ್ಪ್ರೇಮ್ಣಾ ಪಾದಸಂವಾಹನಾದಿಭಿಃ ।
ಜಗದ್ಗುರುಂ ಭರ್ತೃಬುದ್ಧ್ಯಾ ತಾಸಾಂ ಕಿಂ ವರ್ಣ್ಯತೇ ತಪಃ
॥ ೨೭ ॥

ಜಗದ್ಗುರು ಭಗವಾನ್ ಶ್ರೀಕೃಷ್ಣನನ್ನೇ ಪತಿಯೆಂದು ಭಾವಿಸಿದ ಸೌಭಾಗ್ಯವತಿಯರು ಅವನಿಗೆ ಪರಮಪ್ರೇಮದಿಂದ ಸ್ನಾನಮಾಡಿಸುವುದು, ಚರಣಗಳನ್ನು ಒತ್ತುವುದು, ಊಟಮಾಡಿಸುವುದು, ಮುಂತಾದ ಅನೇಕ ವಿಧದಿಂದ ಸೇವೆ ಮಾಡಿದರು. ಅವರ ತಪಸ್ಸನ್ನು ಯಾರು ತಾನೇ ವರ್ಣಿಸಬಲ್ಲರು? ॥ ೨೭ ॥

ಏವಂ ವೇದೋದಿತಂ ಧರ್ಮಮನುತಿಷ್ಠನ್ ಸತಾಂ ಗತಿಃ ।
ಗೃಹಂ ಧರ್ಮಾರ್ಥಕಾಮಾನಾಂ ಮುಹುಶ್ಚಾದರ್ಶಯತ್ಪದಮ್
॥ ೨೮ ॥

ಪರೀಕ್ಷಿತನೇ! ಭಗವಾನ್ ಶ್ರೀಕೃಷ್ಣನು ಸತ್ಪುರುಷರಿಗೆ ಏಕಮಾತ್ರ ಆಶ್ರಯನಾಗಿರುವನು. ಅವನು ವೇದೋಕ್ತ ಧರ್ಮವನ್ನು ಪದೇ-ಪದೇ ಆಚರಿಸಿ - ಮನೆಯೇ, ಧರ್ಮ, ಅರ್ಥ, ಕಾಮ ಇವುಗಳನ್ನು ಸಾಧಿಸುವ ಸ್ಥಳವಾಗಿದೆ ಎಂದು ಜನರಿಗೆ ತೋರಿಸಿಕೊಟ್ಟಿರುವನು. ॥ ೨೮ ॥

ಆಸ್ಥಿತಸ್ಯ ಪರಂ ಧರ್ಮಂ ಕೃಷ್ಣಸ್ಯ ಗೃಹಮೇಧಿನಾಮ್ ।
ಆಸನ್ ಷೋಡಶಸಾಹಸ್ರಂ ಮಹಿಷ್ಯಶ್ಚ ಶತಾಧಿಕಮ್
॥ ೨೯ ॥

ಇದಕ್ಕಾಗಿಯೇ ಅವನು ಗೃಹಸ್ಥೋಚಿತವಾದ ಶ್ರೇಷ್ಠಧರ್ಮವನ್ನು ಆಶ್ರಯಿಸಿ ವ್ಯವಹರಿಸುತ್ತಿದ್ದನು. ಪರೀಕ್ಷಿತನೇ! ಅವನ ರಾಣಿಯರ ಸಂಖ್ಯೆ ಹದಿನಾರುಸಾವಿರದ ಒಂದುನೂರ ಎಂಟು ಇತ್ತು ಎಂದು ನಾನು ಮೊದಲೇ ನಿನಗೆ ಹೇಳಿರುವೆನು. ॥ ೨೯ ॥

ತಾಸಾಂ ಸ್ತ್ರೀರತ್ನಭೂತಾನಾಮಷ್ಟೌ ಯಾಃ ಪ್ರಾಗುದಾಹೃತಾಃ ।
ರುಕ್ಮಿಣೀಪ್ರಮುಖಾ ರಾಜನ್ಸ್ತತ್ಪುತ್ರಾಶ್ಚಾನುಪೂರ್ವಶಃ
॥ ೩೦ ॥

ಅಂತಹ ಶ್ರೇಷ್ಠ ಸ್ತ್ರೀಯರಲ್ಲಿ ರುಕ್ಮಿಣಿಯೇ ಮೊದಲಾದ ಎಂಟು ಜನ ಪಟ್ಟದರಸಿಯರು ಮತ್ತು ಅವರ ಪುತ್ರರ ಕುರಿತು ನಾನು ಮೊದಲೇ ಕ್ರಮವಾಗಿ ವರ್ಣಿಸಿರುವೆನು. ॥ ೩೦ ॥

ಏಕೈಕಸ್ಯಾಂ ದಶ ದಶ ಕೃಷ್ಣೋಽಜೀಜನದಾತ್ಮಜಾನ್ ।
ಯಾವತ್ಯ ಆತ್ಮನೋ ಭಾರ್ಯಾ ಅಮೋಘಗತಿರೀಶ್ವರಃ ॥ ೩೧ ॥

ತೇಷಾಮುದ್ದಾಮವೀರ್ಯಾಣಾಮಷ್ಟಾದಶ ಮಹಾರಥಾಃ ।
ಆಸನ್ನುದಾರಯಶಸಸ್ತೇಷಾಂ ನಾಮಾನಿ ಮೇ ಶೃಣು ॥ ೩೨ ॥

ಪ್ರದ್ಯುಮ್ನಶ್ಚಾನಿರುದ್ಧಶ್ಚ ದೀಪ್ತಿಮಾನ್ ಭಾನುರೇವ ಚ ।
ಸಾಂಬೋ ಮಧುರ್ಬೃಹದ್ಭಾನುಶ್ಚಿತ್ರಭಾನುರ್ವೃಕೋಽರುಣಃ ॥ ೩೩ ॥

ಪುಷ್ಕರೋ ವೇದಬಾಹುಶ್ಚ ಶ್ರುತದೇವಃ ಸುನಂದನಃ ।
ಚಿತ್ರಬಾಹುರ್ವಿರೂಪಶ್ಚ ಕವಿರ್ನ್ಯಗ್ರೋಧ ಏವ ಚ ॥ ೩೪ ॥

ಏತೇಷಾಮಪಿ ರಾಜೇಂದ್ರ ತನುಜಾನಾಂ ಮಧುದ್ವಿಷಃ ।
ಪ್ರದ್ಯುಮ್ನ ಆಸೀತ್ಪ್ರಥಮಃ ಪಿತೃವದ್ರುಕ್ಮಿಣೀಸುತಃ ॥ ೩೫ ॥

ಸ ರುಕ್ಮಿಣೋ ದುಹಿತರಮುಪಯೇಮೇ ಮಹಾರಥಃ ।
ತಸ್ಮಾತ್ಸುತೋಽನಿರುದ್ಧೋಽಭೂನ್ನಾಗಾಯುತಬಲಾನ್ವಿತಃ ॥ ೩೬ ॥

ಸ ಚಾಪಿ ರುಕ್ಮಿಣಃ ಪೌತ್ರೀಂ ದೌಹಿತ್ರೋ ಜಗೃಹೇ ತತಃ ।
ವಜ್ರಸ್ತಸ್ಯಾಭವದ್ಯಸ್ತು ಮೌಸಲಾದವಶೇಷಿತಃ ॥ ೩೭ ॥

ಪ್ರತಿಬಾಹುರಭೂತ್ತಸ್ಮಾತ್ ಸುಬಾಹುಸ್ತಸ್ಯ ಚಾತ್ಮಜಃ ।
ಸುಬಾಹೋಃ ಶಾಂತಸೇನೋಽಭೂಚ್ಛತಸೇನಸ್ತು ತತ್ಸುತಃ ॥ ೩೮ ॥

ನ ಹ್ಯೇತಸ್ಮಿನ್ಕುಲೇ ಜಾತಾ ಅಧನಾ ಅಬಹುಪ್ರಜಾಃ ।
ಅಲ್ಪಾಯುಷೋಽಲ್ಪವೀರ್ಯಾಶ್ಚ ಅಬ್ರಹ್ಮಣ್ಯಾಶ್ಚ ಜಜ್ಞಿರೇ ॥ ೩೯ ॥

ಯದುವಂಶಪ್ರಸೂತಾನಾಂ ಪುಂಸಾಂ ವಿಖ್ಯಾತಕರ್ಮಣಾಮ್ ।
ಸಂಖ್ಯಾ ನ ಶಕ್ಯತೇ ಕರ್ತುಮಪಿ ವರ್ಷಾಯುತೈರ್ನೃಪ ॥ ೪೦ ॥

ತಿಸ್ರಃ ಕೋಟ್ಯಃ ಸಹಸ್ರಾಣಾಮಷ್ಟಾಶೀತಿಶತಾನಿ ಚ ।
ಆಸನ್ ಯದುಕುಲಾಚಾರ್ಯಾಃ ಕುಮಾರಾಣಾಮಿತಿ ಶ್ರುತಮ್ ॥ ೪೧ ॥

ಸಂಖ್ಯಾನಂ ಯಾದವಾನಾಂ ಕಃ ಕರಿಷ್ಯತಿ ಮಹಾತ್ಮನಾಮ್ ।
ಯತ್ರಾಯುತಾನಾಮಯುತಲಕ್ಷೇಣಾಸ್ತೇ ಸ ಆಹುಕಃ ॥ ೪೨ ॥

ದೇವಾಸುರಾಹವಹತಾ ದೈತೇಯಾ ಯೇ ಸುದಾರುಣಾಃ ।
ತೇ ಚೋತ್ಪನ್ನಾ ಮನುಷ್ಯೇಷು ಪ್ರಜಾ ದೃಪ್ತಾ ಬಬಾಧಿರೇ ॥ ೪೩ ॥

ಇವರಲ್ಲದೆ ಇತರ ಶ್ರೀಕೃಷ್ಣನ ಪತ್ನಿಯರಲ್ಲಿ ಪ್ರತಿಯೊಬ್ಬಳಲ್ಲಿಯೂ ಹತ್ತ-ಹತ್ತು ಪುತ್ರರು ಇದ್ದರು. ಇದೇನೋ ಆಶ್ಚರ್ಯದಸಂಗತಿಯಲ್ಲ. ಏಕೆಂದರೆ ಭಗವಂತನು ಸರ್ವಶಕ್ತನೂ, ಸತ್ಯಸಂಕಲ್ಪನೂ ಆಗಿರುವನು. ॥ ೩೧ ॥ ಭಗವಂತನ ಪರಮ ಪರಾಕ್ರಮಿ ಪುತ್ರರಲ್ಲಿ ಹದಿನೆಂಟು ಮಂದಿ ಮಹಾರಥರೇ ಆಗಿದ್ದರು. ಅವರ ಕೀರ್ತಿಯೂ ಇಡೀ ಜಗತ್ತಿನಲ್ಲಿ ಹರಡಿತ್ತು. ಅವರ ಹೆಸರು ಇಂತಿದೆ. ॥ ೩೨ ॥ ಪ್ರದ್ಯುಮ್ನ, ಅನಿರುದ್ಧ, ದೀಪ್ತಿಮಂತ, ಭಾನು, ಸಾಂಬ, ಮಧು, ಬೃಹದ್ಭಾನು, ಚಿತ್ರಭಾನು, ವೃಕ, ಅರುಣ, ಪುಷ್ಕರ, ವೇದಬಾಹು, ಶ್ರುತದೇವ, ಸುನಂದನ, ಚಿತ್ರಬಾಹು, ವಿರೂಪ, ಕವಿ ಮತ್ತು ನ್ಯಗ್ರೋಧ. ॥ ೩೩-೩೪ ॥ ರಾಜೇಂದ್ರನೇ! ಭಗವಾನ್ ಶ್ರೀಕೃಷ್ಣನ ಈ ಪುತ್ರರಲ್ಲಿ ರುಕ್ಮಿಣಿನಂದನ ಪ್ರದ್ಯುಮ್ನನೇ ಸರ್ವಶ್ರೇಷ್ಠನಾಗಿದ್ದನು. ಅವನು ಸರ್ವಗುಣಗಳಲ್ಲಿ ತಂದೆಯಂತೆಯೇ ಇದ್ದನು. ॥ ೩೫ ॥ ಮಹಾರಥಿ ಪ್ರದ್ಯುಮ್ನನು ರುಕ್ಮಿಯ ಮಗಳೊಂದಿಗೆ ವಿವಾಹವಾಗಿದ್ದನು. ಆಕೆಯ ಗರ್ಭದಲ್ಲಿ ಹತ್ತು ಸಾವಿರ ಆನೆಗಳ ಬಲವುಳ್ಳ ಅನಿರುದ್ಧನು ಹುಟ್ಟಿದನು. ॥ ೩೬ ॥ ಅನಿರುದ್ಧನು ರುಕ್ಮಿಯ ಮೊಮ್ಮಗಳನ್ನು ವಿವಾಹವಾಗಿ ಅವಳಲ್ಲಿ ವಜ್ರನಾಭನೆಂಬ ಮಗನನ್ನು ಪಡೆದನು. ಬ್ರಾಹ್ಮಣರ ಶಾಪದಿಂದ ಯದುವಂಶವು ನಾಶವಾಗಿ ಹೋದ ಬಳಿಕ ಏಕಮಾತ್ರ ವಜ್ರನಾಭನು ಉಳಿದಿದ್ದನು. ॥ ೩೭ ॥

ವಜ್ರನಾಭನ ಪುತ್ರನು ಪ್ರತಿಬಾಹು, ಪ್ರತಿಬಾಹುವಿಗೆ ಸುಬಾಹು, ಸುಬಾಹುವಿಗೆ ಶಾಂತಸೇನ ಮತ್ತು ಶಾಂತಸೇನನಿಗೆ ಶತಸೇನ ಹುಟ್ಟಿದನು. ॥ ೩೮ ॥ ಪರೀಕ್ಷಿತನೇ! ಈ ವಂಶದಲ್ಲಿ ಸಂತಾನವಿಲ್ಲದವನೂ, ನಿರ್ಧನನೂ, ಅಲ್ಪಾಯುವೂ ಅಲ್ಪವೀರ್ಯನೂ ಯಾರೂ ಇರಲಿಲ್ಲ, ಅವರೆಲ್ಲರೂ ಬ್ರಾಹ್ಮಣ ಭಕ್ತರಾಗಿದ್ದರು. ॥ ೩೯ ॥ ಪರೀಕ್ಷಿತನೇ! ಯದುವಂಶದಲ್ಲಿ ಆಗಿಹೋದ ಇಂತಿಂತಹ ಯಶಸ್ವಿಗಳ, ಪರಾಕ್ರಮಿಗಳ ಗಣನೆಯು ಸಾವಿರಾರು ವರ್ಷಗಳಲ್ಲಿಯೂ ಮುಗಿಯಲಾರದು. ॥ ೪೦ ॥ ಯದುವಂಶದಲ್ಲಿ ಬಾಲಕರಿಗೆ ಕಲಿಸಲು ಮೂರು ಕೋಟಿ ಎಂಭತ್ತೆಂಟು ಲಕ್ಷ ಆಚಾರ್ಯರಿದ್ದರೆಂದು ನಾನು ಕೇಳಿದ್ದೆ. ॥ ೪೧ ॥ ಇಂತಹ ಸ್ಥಿತಿಯಲ್ಲಿ ಮಹಾತ್ಮರಾದ ಯದುವಂಶಿಯರ ಸಂಖ್ಯೆಯನ್ನಾದರೋ ಹೇಗೆ ಹೇಳಬಹುದಾಗಿದೆ. ಮಹಾರಾಜನಾದ ಉಗ್ರಸೇನನೊಡನೆ ಅಂದಾಜು ಒಂದು ನೀಲ (ಒಂದು ಅಂಕೆ ಬರೆದು ಹದಿಮೂರು ಸೊನ್ನೆ ಬರೆಯಬೇಕು.) ಸೈನಿಕರಿದ್ದರು. ॥ ೪೨ ॥

ಪರೀಕ್ಷಿತನೇ! ಹಿಂದೆ ನಡೆದ ದೇವಾಸುರರ ಸಂಗ್ರಾಮದಲ್ಲಿ ಅಸಂಖ್ಯಾತ ಭಯಂಕರ ಅಸುರರು ಅಸುನೀಗಿದರು. ಅವರೇ ಈಗ ಮನುಷ್ಯರಾಗಿ ಹುಟ್ಟಿ ಮಹಾಗರ್ವಿಷ್ಠರಾಗಿ ಜನರನ್ನು ಪೀಡಿಸತೊಡಗಿದರು. ॥ ೪೩ ॥ ಅವರನ್ನು ನಿಗ್ರಹಿಸುವ ಸಲುವಾಗಿ ಭಗವಂತನ

ತನ್ನಿಗ್ರಹಾಯ ಹರಿಣಾ ಪ್ರೋಕ್ತಾ ದೇವಾ ಯದೋಃ ಕುಲೇ ।
ಅವತೀರ್ಣಾಃ ಕುಲಶತಂ ತೇಷಾಮೇಕಾಧಿಕಂ ನೃಪ ॥ ೪೪ ॥

ತೇಷಾಂ ಪ್ರಮಾಣಂ ಭಗವಾನ್ ಪ್ರಭುತ್ವೇನಾಭವದ್ಧರಿಃ ।
ಯೇ ಚಾನುವರ್ತಿನಸ್ತಸ್ಯ ವವೃಧುಃ ಸರ್ವಯಾದವಾಃ ॥ ೪೫ ॥

ಶಯ್ಯಾಸನಾಟನಾಲಾಪಕ್ರೀಡಾಸ್ನಾನಾದಿಕರ್ಮಸು ।
ನ ವಿದುಃ ಸಂತಮಾತ್ಮಾನಂ ವೃಷ್ಣಯಃ ಕೃಷ್ಣಚೇತಸಃ ॥ ೪೬ ॥

ತೀರ್ಥಂ ಚಕ್ರೇ ನೃಪೋನಂ ಯದಜನಿ ಯದುಷು ಸ್ವಃಸರಿತ್ಪಾದಶೌಚಂ
ವಿದ್ವಿಟ್‌ಸ್ನಿಗ್ಧಾಃ ಸ್ವರೂಪಂ ಯಯುರಜಿತಪರಾ ಶ್ರೀರ್ಯದರ್ಥೇಽನ್ಯಯತ್ನಃ ।
ಯನ್ನಾಮಾಮಂಗಲಘ್ನಂ ಶ್ರುತಮಥ ಗದಿತಂ ಯತ್ಕೃತೋ ಗೋತ್ರಧರ್ಮಃ
ಕೃಷ್ಣಸ್ಯೈತನ್ನ ಚಿತ್ರಂ ಕ್ಷಿತಿಭರಹರಣಂ ಕಾಲಚಕ್ರಾಯುಧಸ್ಯ ॥ ೪೭ ॥

ಜಯತಿ ಜನನಿವಾಸೋ ದೇವಕೀಜನ್ಮವಾದೋ
ಯದುವರಪರ್ಷತ್ಸ್ವೈರ್ದೋರ್ಭಿರಸ್ಯನ್ನಧರ್ಮಮ್ ।
ಸ್ಥಿರಚರವೃಜಿನಘ್ನಃ ಸುಸ್ಮಿತಶ್ರೀಮುಖೇನ
ವ್ರಜಪುರವನಿತಾನಾಂ ವರ್ಧಯನ್ಕಾಮದೇವಮ್ ॥ ೪೮ ॥

ಆಜ್ಞೆಯಂತೆ ದೇವತೆಗಳೇ ಯದುವಂಶದಲ್ಲಿ ಅವತರಿಸಿದ್ದರು. ಪರೀಕ್ಷಿತನೇ! ಯದುವಂಶದಲ್ಲಿ ಒಳಭೇದಗಳಾಗಿ ಒಂದುನೂರ ಒಂದು ಕುಲಗಳಿದ್ದವು. ॥ ೪೪ ॥

ಅವರೆಲ್ಲರೂ ಭಗವಾನ್ ಶ್ರೀಕೃಷ್ಣನನ್ನೇ ತಮ್ಮ ಸ್ವಾಮಿಯೆಂದೂ, ಆದರ್ಶನೆಂದೂ ಭಾವಿಸಿದ್ದರು. ಅವನ ಅನುಯಾಯಿಗಳಾದ ಯಾದವರಿಗೆ ಎಲ್ಲ ವಿಧದಿಂದ ಉನ್ನತಿಯಾಯಿತು. ॥ ೪೫ ॥ ಯದುವಂಶೀಯರ ಚಿತ್ತವು ಮಲಗುವಾಗ, ಕುಳಿತಿರುವಾಗ, ಅಡ್ಡಾಡುವಾಗ, ಆಟವಾಡುವಾಗ, ಮಾತನಾಡುವಾಗ, ಸ್ನಾನಮಾಡುವಾಗ ಮೊದಲಾದ ಎಲ್ಲ ಕರ್ಮಗಳಲ್ಲಿ ಭಗವಾನ್ ಶ್ರೀಕೃಷ್ಣನಲ್ಲೇ ನೆಲೆಸಿದ್ದು ತಮ್ಮ ಶರೀರದ ಪ್ರಜ್ಞೆಯು ಇರುತ್ತಿರಲಿಲ್ಲ. ತಮ್ಮ ಶರೀರವು ಏನುಮಾಡುತ್ತಿದೆ ಎಂಬುದೂ ಅವರಿಗೆ ಅರಿವಿರಲಿಲ್ಲ. ಶರೀರದ ಎಲ್ಲ ಕ್ರಿಯೆಗಳು ಯಂತ್ರದಂತೆ ತಾನೇ-ತಾನಾಗಿ ನಡೆಯುತ್ತಿದ್ದವು. ॥ ೪೬ ॥

ಪರೀಕ್ಷಿತನೇ! ವಿಷ್ಣುಪಾದೋದ್ಭವೆಯಾದ ಗಂಗಾದೇವಿಯು ವಿಶ್ವದಲ್ಲೇ ಪವಿತ್ರತಮಳೆಂದು ಪ್ರಸಿದ್ಧಿಯನ್ನು ಹೊಂದಿದ್ದರೂ ಯಾದವಕುಲದಲ್ಲಿ ಶ್ರೀಕೃಷ್ಣನ ಕೀರ್ತಿರೂಪವಾದ ತೀರ್ಥವು ಉದಯಿಸಿದಾಗ ದೇವಗಂಗೆಯ ಮಹಿಮೆಯು ಕಡಿಮೆಯಾಯಿತು. ಶತ್ರು-ಮಿತ್ರರೆಂಬ ಭೇದವೇ ಇಲ್ಲದೆ ಪರಮಪುರುಷನಾದ ಶ್ರೀಕೃಷ್ಣನನ್ನು ಭಜಿಸಿದವರೆಲ್ಲರೂ ಪರಮಪದವನ್ನು ಪಡೆದರು. ಯಾವಳ ಕೃಪಾಕಟಾಕ್ಷವನ್ನು ಸಂಪಾದಿಸಲು ಬ್ರಹ್ಮನೇ ಮೊದಲಾದ ದೇವತೆಗಳು ಯಜ್ಞಮಾಡುವರೋ, ಆಕೆಯೇ ಭಗವಂತನ ಸೇವೆಯಲ್ಲಿ ನಿತ್ಯ-ನಿರಂತರವಾಗಿ ತೊಡಗಿರುವಳು. ಭಗವಂತನ ನಾಮವನ್ನು ಒಂದು ಬಾರಿ ಕೇಳುವುದರಿಂದ, ಉಚ್ಚರಿಸುವುದರಿಂದಲೇ ಸಮಸ್ತ ಅಮಂಗಳಗಳು ನಾಶವಾಗಿ ಹೋಗುತ್ತವೆ. ಋಷಿಗಳ ವಂಶಜರಲ್ಲಿ ಪ್ರಚಲಿತವಾಗಿರುವ ಧರ್ಮಗಳೆಲ್ಲವುಗಳ ಸಂಸ್ಥಾಪಕನು ಭಗವಾನ್ ಶ್ರೀಕೃಷ್ಣನೇ ಆಗಿರುವನು. ಅವನು ತನ್ನ ಕೈಯಲ್ಲಿ ಕಾಲಸ್ವರೂಪವಾದ ಚಕ್ರವನ್ನು ಧರಿಸಿರುವನು. ಪರೀಕ್ಷಿತನೇ! ಇಂತಹ ಸ್ಥಿತಿಯಲ್ಲಿ ಅವನು ಭೂಭಾರ ಹರಣ ಮಾಡಿದುದು ಏನು ತಾನೇ ದೊಡ್ಡ ಮಾತು ? ॥ ೪೭ ॥ ಭಗವಾನ್ ಶ್ರೀಕೃಷ್ಣನೇ ಸಮಸ್ತ ಜೀವರ ಆಶ್ರಯಸ್ಥಾನನಾಗಿದ್ದಾನೆ. ಅವನು ಸದಾ-ಸರ್ವದಾ ಸರ್ವತ್ರ- ವ್ಯಾಪ್ತನಾಗಿದ್ದರೂ ಹೆಸರಿಗಷ್ಟೇ ದೇವಕಿಯ ಗರ್ಭದಲ್ಲಿ ಜನಿಸಿದನು. ಯದುವಂಶದ ವೀರರು ಪಾರ್ಷದರಂತೆ ಅವನ ಸೇವೆ ಮಾಡುತ್ತಾ ಇರುತ್ತಾರೆ. ಅವನು ತನ್ನ ಭುಜಬಲದಿಂದ ಅಧರ್ಮವನ್ನು ನಾಶಗೊಳಿಸಿದನು. ಪರೀಕ್ಷಿತನೇ! ಭಗವಂತನು ಸ್ವಭಾವತಃ ಚರಾಚರ ಜಗತ್ತಿನ ದುಃಖವನ್ನು ಕಳೆಯುತ್ತಿರುವನು. ಅವನ ಮಂದ ಮಧುರವಾದ ಮುಗ್ಧನಗೆಯಿಂದ ಕೂಡಿದ ಸುಂದರ ಮುಖಾರವಿಂದದಿಂದ ವ್ರಜಸ್ತ್ರೀಯರ ಮತ್ತು ಪುರಸ್ತ್ರೀಯರ ಹೃದಯದಲ್ಲಿ ಪ್ರೇಮಸಂಚಾರವಾಗುತ್ತಿತ್ತು. ವಾಸ್ತವವಾಗಿ ಸಮಸ್ತ ಜಗತ್ತಿನಲ್ಲಿ ಅವನೇ ವಿಜಯಿಯಾಗಿದ್ದಾನೆ. ಅವನಿಗೆ ಜಯವಾಗಲಿ! ಜಯವಾಗಲಿ! ॥ ೪೮ ॥

ಇತ್ಥಂ ಪರಸ್ಯ ನಿಜವರ್ತ್ಮರಿರಕ್ಷಯಾऽऽತ್ತ-
ಲೀಲಾತನೋಸ್ತದನುರೂಪವಿಡಂಬನಾನಿ ।
ಕರ್ಮಾಣಿ ಕರ್ಮಕಷಣಾನಿ ಯದೂತ್ತಮಸ್ಯ
ಶ್ರೂಯಾದಮುಷ್ಯ ಪದಯೋರನುವೃತ್ತಿಮಿಚ್ಛನ್ ॥ ೪೯ ॥

ಪರೀಕ್ಷಿತನೇ! ಪ್ರಕೃತಿಗೆ ಅತೀತನಾದ ಪರಮಾತ್ಮನು ತಾನೇ ಸ್ಥಾಪಿಸಿದ ಧರ್ಮಮರ್ಯಾದೆಯ ರಕ್ಷಣೆಗಾಗಿ ದಿವ್ಯ ಲೀಲಾ ಶರೀರವನ್ನು ಗ್ರಹಣಮಾಡಿ, ಅದಕ್ಕನುರೂಪವಾಗಿ ಅನೇಕ ಅದ್ಭುತ ಚರಿತ್ರಗಳನ್ನು ಅಭಿನಯಿಸಿದನು. ಅವನ ಒಂದೊಂದು ಕರ್ಮವನ್ನು ಸ್ಮರಿಸುವವರ ಕರ್ಮಬಂಧನಗಳು ಕಡಿದುಹೋಗುತ್ತವೆ. ಯದುವಂಶ ಶಿರೋಮಣಿ ಭಗವಾನ್ ಶ್ರೀಕೃಷ್ಣನ ಚರಣಕಮಲಗಳ ಸೇವೆಯ ಅಧಿಕಾರ ಪಡೆಯಬೇಕಿದ್ದರೆ ಅವನ ಲೀಲೆಗಳನ್ನೇ ಶ್ರವಣಿಸಬೇಕು. ॥ ೪೯ ॥ ಪರೀಕ್ಷಿತನೇ! ಮನುಷ್ಯನು ಪ್ರತಿಕ್ಷಣವೂ ಭಗವಾನ್ ಶ್ರೀಕೃಷ್ಣನ ಮನೋಹರವಾದ ಲೀಲಾಕಥೆಗಳನ್ನು ಹೆಚ್ಚೆಚ್ಚು ಶ್ರವಣ, ಕೀರ್ತನೆ, ಚಿಂತನೆ ಮಾಡತೊಡಗಿದಾಗ ಅವನ ಈ ಭಕ್ತಿಯೇ ಅವನನ್ನು ಭಗವಂತನ ಪರಮಧಾಮಕ್ಕೆ ಕೊಂಡೊಯ್ಯುತ್ತದೆ. ಕಾಲನ ಗತಿಯನ್ನು ಮೀರುವುದು ಬಹಳ ಕಷ್ಟವಾಗಿದ್ದರೂ ಭಗವಂತನ ಧಾಮದಲ್ಲಿ ಕಾಲನ ಪ್ರಭಾವ ನಡೆಯುವುದಿಲ್ಲ, ಅದು ಅಲ್ಲಿಗೆ ತಲುಪಲಾರದು. ಅದೇ ಧಾಮದ ಪ್ರಾಪ್ತಿಗಾಗಿ ಅನೇಕ ಸಾಮ್ರಾಟರು ತಮ್ಮ ರಾಜ್ಯಲಕ್ಷ್ಮಿಯನ್ನು ತೊರೆದು ತಪಸ್ಸಿಗಾಗಿ ಅರಣ್ಯಕ್ಕೆ ಹೋದರು. ಅದಕ್ಕಾಗಿ ಮನುಷ್ಯನು ಅವನ ಲೀಲಾ ಕಥೆಗಳನ್ನು ಶ್ರವಣಿಸುತ್ತಲೇ ಇರಬೇಕು. ॥ ೫೦ ॥

ಮರ್ತ್ಯಸ್ತಯಾನುಸವಮೇಧಿತಯಾ ಮುಕುಂದ-
ಶ್ರೀಮತ್ಕಥಾಶ್ರವಣಕೀರ್ತನಚಿಂತಯೈತಿ ।
ತದ್ಧಾಮ ದುಸ್ತರಕೃತಾಂತಜವಾಪವರ್ಗಂ
ಗ್ರಾಮಾದ್ವನಂ ಕ್ಷಿತಿಭುಜೋऽಪಿ ಯಯುರ್ಯದರ್ಥಾಃ ॥ ೫೦ ॥

ತೊಂಭತ್ತನೆಯ ಅಧ್ಯಾಯವು ಮುಗಿಯಿತು. ॥ ೯೦ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದಶಮ ಸ್ಕಂಧೇ ಉತ್ತರಾರ್ಧೇ
ಶ್ರೀಕೃಷ್ಣಚರಿತಾನುವರ್ಣನಂ ನಾಮ ನವತಿತಮೋऽಧ್ಯಾಯಃ ॥ ೯೦ ॥

ಹತ್ತನೆಯ ಸ್ಕಂಧದ ಉತ್ತರಾರ್ಧವು ಸಂಪೂರ್ಣವಾಯಿತು.

ದಶಮ ಸ್ಕಂಧವು ಮುಗಿಯಿತು

ಹರಿಃ ಓಂ ತತ್ಸತ್ ಹರಿಃ ಓಂ ತತ್ಸತ್

॥ ಓಂ ನಮೋ ಭಗವತೇ ವಾಸುದೇವಾಯ ॥

ಶ್ರೀಮದ್ಭಾಗವತಮಹಾಪುರಾಣಮ್

ಏಕಾದಶಃ ಸ್ಕಂಧಃ

ಮೊದಲನೆಯ ಅಧ್ಯಾಯ

ಯದುವಂಶಕ್ಕೆ ಋಷಿಗಳ ಶಾಪ

ಶ್ರೀಬಾದರಾಯಣಿರುವಾಚ

ಕೃತ್ವಾ ದೈತ್ಯವಧಂ ಕೃಷ್ಣಃ ಸರಾಮೋ ಯದುಭಿರ್ವೃತಃ ।
ಭುವೋಽವತಾರಯದ್ಭಾರಂ ಜವಿಷ್ಠಂ ಜನಯನ್ಕಲಿಮ್ ॥ ೧ ॥

ಯೇ ಕೋಪಿತಾಃ ಸುಬಹು ಪಾಂಡುಸುತಾಃ ಸಪತ್ನೈ-
ರ್ದುರ್ದ್ಯೂತಹೇಲನಕಚಗ್ರಹಣಾದಿಭಿಸ್ತಾನ್ ।
ಕೃತ್ವಾ ನಿಮಿತ್ತಮಿತರೇತರತಃ ಸಮೇತಾನ್
ಹತ್ವಾ ನೃಪಾನ್ ನಿರಹರತ್ಕ್ಷಿತಿಭಾರಮೀಶಃ ॥ ೨ ॥

ಭೂಭಾರರಾಜಪೃತನಾ ಯದುಭಿರ್ನಿರಸ್ಯ
ಗುಪ್ತೈಃ ಸ್ವಬಾಹುಭಿರಚಿಂತಯದಪ್ರಮೇಯಃ ।
ಮನ್ಯೇಽವನೇರ್ನನು ಗತೋಽಪ್ಯಗತಂ ಹಿ ಭಾರಂ
ಯದ್ಯಾದವಂ ಕುಲಮಹೋ ಅವಿಷಹ್ಯಮಾಸ್ತೇ ॥ ೩ ॥

ನೈವಾನ್ಯತಃ ಪರಿಭವೋಽಸ್ಯ ಭವೇತ್ ಕಥಂಚಿನ್
ಮತ್ಸಂಶ್ರಯಸ್ಯ ವಿಭವೋನ್ನಹನಸ್ಯ ನಿತ್ಯಮ್ ।
ಅಂತಃಕಲಿಂ ಯದುಕುಲಸ್ಯ ವಿಧಾಯ ವೇಣು-
ಸ್ತಂಬಸ್ಯ ವಹ್ನಿಮಿವ ಶಾಂತಿಮುಪೈಮಿ ಧಾಮ ॥ ೪ ॥

ಏವಂ ವ್ಯವಸಿತೋ ರಾಜನ್ ಸತ್ಯಸಂಕಲ್ಪ ಈಶ್ವರಃ ।
ಶಾಪವ್ಯಾಜೇನ ವಿಪ್ರಾಣಾಂ ಸಂಜಹ್ರೇ ಸ್ವಕುಲಂ ವಿಭುಃ ॥ ೫ ॥

ವ್ಯಾಸನಂದನ ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಎಲೈ ಪರೀಕ್ಷಿತನೇ! ಭಗವಾನ್ ಶ್ರೀಕೃಷ್ಣನು ಬಲರಾಮ ಹಾಗೂ ಬೇರೆ ಯಾದವರೊಂದಿಗೆ ಸೇರಿ ಅನೇಕ ದೈತ್ಯರನ್ನು ಸಂಹರಿಸಿ, ಕೌರವ ಪಾಂಡವರಲ್ಲಿ ಭಾರೀ ಕಲಹವನ್ನು ಉಂಟುಮಾಡಿ ಭೂಭಾರವನ್ನು ಇಳಿಸಿದನು. ॥ ೧ ॥ ಪಾಂಡವರನ್ನು ಅವರ ಶತ್ರುಗಳಾದ ಕೌರವರು ಕಪಟದ್ಯೂತದಿಂದ ಸೋಲಿಸಿ, ದ್ರೌಪದಿಯ ಮಾನ ಭಂಗವೇ ಮೊದಲಾದ ಅತ್ಯಾಚಾರಗಳಿಂದ ಕೆಣಕಿದರು. ಅಂತಹ ಪಾಂಡವರನ್ನು ನಿಮಿತ್ತವಾಗಿಸಿ ಭಗವಾನ್ ಶ್ರೀಕೃಷ್ಣನು ಕೌರವ ಪಾಂಡವರ ಎರಡೂ ಪಕ್ಷದಲ್ಲಿ ಸೇರಿದ ರಾಜರನ್ನು ಪರಸ್ಪರ ಕೊಲ್ಲಿಸಿದನು. ಈ ವಿಧವಾಗಿ ಅವನು ಪೃಥ್ವಿಯ ಭಾರವನ್ನು ಇಳಿಸಿದನು. ॥ ೨ ॥ ಅಪ್ರಮೇಯಸ್ವರೂಪೀ ಭಗವಾನ್ ಶ್ರೀಕೃಷ್ಣನು ತನ್ನ ಬಾಹುಬಲದಿಂದ ರಕ್ಷಿತ ಯಾದವರ ಮೂಲಕ ಕಂಟಕಪ್ರಾಯರಾದ ರಾಜರನ್ನು ಅವರ ಸೇನೆಯನ್ನೂ ವಿನಾಶಗೊಳಿಸಿದನು. ಈಗಲಾದರೋ ಯಾದವರು ಈ ಭೂಮಿಯಲ್ಲಿ ಇರುವ ಬೇರೆ ಯಾರಿಂದಲೂ ಜಯಿಸಲಾರರು. ಇಂತಹ ಪ್ರಬಲ ಪರಾಕ್ರಮಿ ಯಾದವರು ಭೂಮಂಡಲದಲ್ಲಿ ಜೀವಿಸಿರುವ ತನಕ, ಇಷ್ಟು ಭೂಭಾರ ತಗ್ಗಿದರೂ ಇನ್ನೂ ಪೃಥ್ವಿಯ ಭಾರ ಕಡಿಮೆಯಾಗಿಲ್ಲ ಎಂದೇ ನಾನು ತಿಳಿಯುತ್ತೇನೆ; ಹೀಗೆ ಯೋಚಿಸಿದನು. ॥ ೩ ॥ ನನ್ನ ಆಶ್ರಯದಲ್ಲಿರುವುದರಿಂದ ಈ ಯಾದವರನ್ನು ಬೇರೆ ಯಾರೂ ಪರಾಭವಗೊಳಿಸಲಾರರು. ಇವರು ಪೂರ್ಣವಾಗಿ ಉಚ್ಛೃಂಖಲರಾಗುತ್ತಿದ್ದಾರೆ. ಅಪಾರ ಸಂಪತ್ತು - ವೈಭವದಿಂದಾಗಿ ಇವರು ಯಾರ ಶಾಸನವನ್ನೂ ಲೆಕ್ಕಿಸರು. ಆದ್ದರಿಂದ ಬಿದಿರುಮೆಳೆ ಒಂದಕ್ಕೊಂದರ ಸಂಘರ್ಷದಿಂದ ಉಂಟಾದ ಬೆಂಕಿಯಿಂದ ಬಿದಿರುವನವನ್ನೇ ಸುಡುವಂತೆ ಈ ಯಾದವರಲ್ಲಿ ಪರಸ್ಪರ ಜಗಳ ಉಂಟುಮಾಡಿ ನಾನು ನನ್ನ ಶಾಂತಸ್ವರೂಪ ಪರಮಧಾಮಕ್ಕೆ ತೆರಳುವೆನು. ॥ ೪ ॥ ಎಲೈ ರಾಜನೇ! ಸತ್ಯಸಂಕಲ್ಪ, ಸರ್ವಸಮರ್ಥ ಭಗವಂತನು ಹೀಗೆ ನಿಶ್ಚಯಿಸಿ, ಆ ಸರ್ವವ್ಯಾಪೀ ಪರಮಾತ್ಮನು ಬ್ರಾಹ್ಮಣರ ಶಾಪವನ್ನು ನಿಮಿತ್ತವಾಗಿಸಿ ತನ್ನ ಕುಲದ ಸಂಹಾರ ಮಾಡಿಸಿದನು. ॥ ೫ ॥

[1740]20 A

ಸ್ವಮೂರ್ತ್ಯಾ ಲೋಕಲಾವಣ್ಯನಿರ್ಮುಕ್ತ್ಯಾ ಲೋಚನಂ ನೃಣಾಮ್ ।
ಗೀರ್ಭಿಸ್ತಾಃ ಸ್ಮರತಾಂ ಚಿತ್ತಂ ಪದೈಸ್ತಾನೀಕ್ಷತಾಂ ಕ್ರಿಯಾಃ
॥ ೬ ॥

ಆಚ್ಛಿದ್ಯ ಕೀರ್ತಿಂ ಸುಶ್ಲೋಕಾಂ ವಿತತ್ಯ ಹ್ಯಂಜಸಾನು ಕೌ ।
ತಮೋಽನಯಾ ತರಿಷ್ಯಂತೀತ್ಯಗಾತ್ಸ್ವಂ ಪದಮೀಶ್ವರಃ
॥ ೭ ॥

ರಾಜೋವಾಚ

ಬ್ರಹ್ಮಣ್ಯಾನಾಂ ವದಾನ್ಯಾನಾಂ ನಿತ್ಯಂ ವೃದ್ಧೋಪಸೇವಿನಾಮ್ ।
ವಿಪ್ರಶಾಪಃ ಕಥಮಭೂದ್ವೃಷ್ಣೀನಾಂ ಕೃಷ್ಣಚೇತಸಾಮ್
॥ ೮ ॥

ಯನ್ನಿಮಿತ್ತಃ ಸ ವೈ ಶಾಪೋ ಯಾದೃಶೋ ದ್ವಿಜಸತ್ತಮ ।
ಕಥಾಮೇಕಾತ್ಮನಾಂ ಭೇದ ಏತತ್ಸರ್ವಂ ವದಸ್ವ ಮೇ
॥ ೯ ॥

ಶ್ರೀಶುಕ ಉವಾಚ

ಬಿಭ್ರದ್ವಪುಃ ಸಕಲಸುಂದರಸನ್ನಿವೇಶಂ
ಕರ್ಮಾಚರನ್ ಭುವಿ ಸುಮಂಗಲಮಾಪ್ತಕಾಮಃ ।
ಆಸ್ಥಾಯ ಧಾಮ ರಮಮಾಣ ಉದಾರಕೀರ್ತಿಃ
ಸಂಹರ್ತುಮೈಚ್ಛತ ಕುಲಂ ಸ್ಥಿತಕೃತ್ಯಶೇಷಃ ॥ ೧೦ ॥

ಭಗವಾನ್ ಶ್ರೀಕೃಷ್ಣನು ಅಖಂಡ ತ್ರಿಲೋಕಕ್ಕೆ ಸೌಂದರ್ಯ, ಮಾಧುರ್ಯವನ್ನು ಕರುಣಿಸುವವನು. ಅವನು ಸೌಂದರ್ಯ ಮಾಧುರ್ಯದ ನಿಧಿಯಾಗಿದ್ದಾನೆ. ಭಗವಂತನ ಶ್ಯಾಮಸುಂದರ ಸ್ವರೂಪವು ಯಾರೇ ಆಗಲೀ ಒಮ್ಮೆ ನೋಡಿದರೆ ಸಾಕು ಅವರ ಕಣ್ಣುಗಳು ಆ ಭಗವಂತನಲ್ಲಿ ಎಂದೆಂದಿಗೂ ನೆಟ್ಟುಹೋಗುವಷ್ಟು ಸುಂದರ, ಮನೋಹರವಾಗಿತ್ತು. ಅವನ ವಾಣಿಯು ಚಿಂತಿಸುವವರ ಚಿತ್ತವು ಮತ್ತೆ ಭಗವಂತನಲ್ಲೇ ಸ್ಥಿರವಾಗಿ ತೊಡಗುವಷ್ಟು ಮಧುರವಾಗಿತ್ತು. ಅವನ ಸುಮಧುರ ಮುರಳಿಯಗಾನ, ತ್ರಿಭಂಗಿ ಲಲಿತ ಭಂಗಿಯು, ಎಲ್ಲ ಪ್ರಾಣಿಗಳು ತಮ್ಮ ಕ್ರಿಯೆಗಳನ್ನು ಮರೆತು, ಕೆಲಸ-ಕಾರ್ಯಗಳನ್ನು ಬಿಟ್ಟು ಅವನೆಡೆಗೆ ಸೆಳೆಯಲ್ಪಡುತ್ತಿದ್ದವು. (ಈ ಪ್ರಕಾರ ಕಣ್ಣುಗಳನ್ನು ಆಕರ್ಷಿಸಿ ಅವರ ಸ್ಥೂಲಶರೀರವನ್ನು, ಚಿತ್ತವನ್ನು ಸೆಳೆದು ಅವರ ಸೂಕ್ಷ್ಮ ಶರೀರವನ್ನು, ಕ್ರಿಯೆಗಳನ್ನು ಆಕೃಷ್ಟವಾಗಿಸಿ, ಕರ್ಮವಾಸನೆಯ ಬೀಜವನ್ನೇ ನಾಶಗೊಳಿಸಿ ಅವರ ಕಾರಣಶರೀರವನ್ನು, ಹೀಗೆ ಎಲ್ಲವನ್ನೂ ತನ್ನತ್ತ ಸೆಳೆದುಕೊಂಡು ಜೀವಿಗಳನ್ನು ಪೂರ್ಣವಾಗಿ ಕರ್ಮಬಂಧನಗಳಿಂದ ಮುಕ್ತವಾಗಿಸುತ್ತಿದ್ದನು.) ಭಗವಂತನು ಈ ಪ್ರಕಾರ ತನ್ನ ಕೀರ್ತಿಯನ್ನು ಭೂಮಂಡಲದಲ್ಲಿ ವಿಸ್ತರಿಸಿದನು. ಆ ಲೀಲೆಗಳನ್ನು ಹಾಡಿ ಕೇಳಿ ಮನುಷ್ಯರು ಆಯಾಸವಿಲ್ಲದೆ ಈ ಅಜ್ಞಾನಾಂಧಕಾರವನ್ನು ದಾಟಿ ಹೋಗುವರು.* ಪರಮ ದಯಾಳು ಭಗವಾನ್ ಶ್ರೀಕೃಷ್ಣನು ಈ ರೀತಿ ತನ್ನ ಪವಿತ್ರ ಯಶಸ್ಸನ್ನು ವಿಸ್ತರಿಸಿ ತನ್ನ ಪರಮಧಾಮಕ್ಕೆ ತೆರಳಿದನು. ॥ ೬-೭ ॥

ರಾಜಾ ಪರೀಕ್ಷಿತನು ಕೇಳಿದನು – ಈ ಯದುವಂಶೀಯರಾದರೋ ಬ್ರಾಹ್ಮಣಭಕ್ತರಾಗಿದ್ದರು. ಉದಾರರಾಗಿದ್ದು ಗುರುಹಿರಿಯರನ್ನು ಆದರಪೂರ್ವಕವಾಗಿ ಸೇವಿಸುವವರಾಗಿದ್ದರು. ಅವರ ಚಿತ್ತ ಸದಾಕಾಲ ಶ್ರೀಕೃಷ್ಣನಲ್ಲೇ ತೊಡಗಿರುತ್ತಿತ್ತು. ಅವರಿಗೆ ಬ್ರಾಹ್ಮಣರ ಶಾಪ ಹೇಗೆ ಉಂಟಾಯಿತು ? ಯಾವ ಕಾರಣದಿಂದ ಶಾಪ ಒದಗಿತು ? ಆ ಶಾಪ ಏನಾಗಿತ್ತು ? ಎಲ್ಲ ಯಾದವರು ಪರಸ್ಪರ ಪ್ರೇಮದಿಂದಲೇ ಕೂಡಿಕೊಂಡಿದ್ದರೂ ಅವರಲ್ಲಿ ಇಂತಹ ಭೇದಭಾವ ಏಕೆ ಉಂಟಾಯಿತು ? ವಿರಸ ಹೇಗೆ ಉಂಟಾಯಿತು ? ಇದೆಲ್ಲವನ್ನು ತಾವು ನನಗೆ ತಿಳಿಸುವ ಕೃಪೆಮಾಡಬೇಕು. ॥ ೮-೯ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಭಗವಾನ್ ಶ್ರೀಕೃಷ್ಣನ ಶ್ರೀವಿಗ್ರಹದಲ್ಲಿ ಸಮಸ್ತ ಸೌಂದರ್ಯರೂಪರಾಶಿಯು ರಾರಾಜಿಸುತ್ತಿತ್ತು. ಆ ಪ್ರಭುವು ಈ ಭೂಮಂಡಲದಲ್ಲಿ ಅನೇಕ ಮಂಗಲಮಯ ಶ್ರೇಯಸ್ಕರವಾದ ಕರ್ಮಗಳನ್ನು ಆಚರಿಸಿದನು.

* ಭಗವಂತನು ಎಲ್ಲ ಪ್ರಾಣಿಗಳ ನಿಜವಾದ ಸುಹೃದ್ ಆಗಿದ್ದಾನೆ. ಜೀವಿಗಳ ಉದ್ಧಾರಕ್ಕಾಗಿಯೇ ಅವನು ಅವತಾರ ಲೀಲೆಗಳನ್ನು ನಡೆಸುತ್ತಾನೆ. ಮನುಷ್ಯರು ಭಗವಂತನ ಆ ಲೀಲೆಗಳನ್ನು ಮನನ-ಚಿಂತನ-ಸ್ಮರಣಗೈದು ನಿಜವಾಗಿ ಈ ಮೃತ್ಯುಸಂಸಾರ ಸಾಗರದಿಂದ ದಾಟಿ ಹೋಗುವರು. ಇದರಲ್ಲಿಯೂ ಭಗವಂತನ ಅಸೀಮ ಕೃಪೆಯೇ ತುಂಬಿದೆ. ಆದ್ದರಿಂದ ಭಗವಂತನ ನಾಮದ ಜಪ, ಸ್ವರೂಪದ ಚಿಂತನೆ, ಲೀಲೆಗಳ ಸ್ಮರಣೆ ಮಾಡುವ ಅಭ್ಯಾಸ ಹೆಚ್ಚಿಸಿಕೊಳ್ಳಬೇಕು. ಭಗವಂತನು ಭಗವದ್ಗೀತೆಯಲ್ಲಿ ಹೀಗೆ ಹೇಳಿರುವನು –
ಮಚ್ಚಿತ್ತಾ ಮದ್ಗತಪ್ರಾಣಾ ಬೋಧಯಂತಃ ಪರಸ್ಪರಮ್ । ಕಥಯಂತಶ್ಚ ಮಾಂ ನಿತ್ಯಂ ತುಷ್ಯಂತಿ ಚ ರಮಂತಿ ಚ ॥ (ಭಗವದ್ಗೀತೆ – ೧೦/೯)
ನಿರಂತರವಾಗಿ ನನ್ನಲ್ಲಿ ಮನಸ್ಸನ್ನು ತೊಡಗಿಸುವವರು ಮತ್ತು ನನ್ನಲ್ಲೇ ಪ್ರಾಣಗಳನ್ನು ಅರ್ಪಿಸುವ ಭಕ್ತಜನರು, ನನ್ನ ಭಕ್ತಿಯ ಚರ್ಚೆಯ ಮೂಲಕ ತಮ್ಮ ತಮ್ಮಲ್ಲಿ ನನ್ನ ಪ್ರಭಾವವನ್ನು ತಿಳಿಸಿಕೊಡುತ್ತ ಹಾಗೂ ಗುಣ ಮತ್ತು ಪ್ರಭಾವಸಹಿತ ನನ್ನ ಕಥೆಗಳನ್ನು ಹೇಳಿಕೊಳ್ಳುತ್ತಲೇ ನಿರಂತರ ಸಂತುಷ್ಟರಾಗುತ್ತಾರೆ ಮತ್ತು ವಾಸುದೇವನಾದ ನನ್ನಲ್ಲಿಯೇ ರಮಿಸುತ್ತಾರೆ.

ಕರ್ಮಾಣಿ ಪುಣ್ಯನಿವಹಾನಿ ಸುಮಂಗಲಾನಿ
ಗಾಯಜ್ಜಗತ್ಕಲಿಮಲಾಪಹರಾಣಿ ಕೃತ್ವಾ ।
ಕಾಲಾತ್ಮನಾ ನಿವಸತಾ ಯದುದೇವಗೇಹೇ
ಪಿಂಡಾರಕಂ ಸಮಗಮನ್ ಮುನಯೋ ನಿಸೃಷ್ಟಾಃ ॥ ೧೦ ॥

ವಿಶ್ವಾಮಿತ್ರೋಽಸಿತಃ ಕಣ್ವೋ ದುರ್ವಾಸಾ ಭೃಗುರಂಗಿರಾಃ ।
ಕಶ್ಯಪೋ ವಾಮದೇವೋಽತ್ರಿರ್ವಸಿಷ್ಠೋ ನಾರದಾದಯಃ
॥ ೧೨ ॥

ಕ್ರೀಡಂತಸ್ತಾನುಪವ್ರಜ್ಯ ಕುಮಾರಾ ಯದುನಂದನಾಃ ।
ಉಪಸಂಗೃಹ್ಯ ಪಪ್ರಚ್ಛುರವಿನೀತಾ ವಿನೀತವತ್
॥ ೧೩ ॥

ತೇ ವೇಷಯಿತ್ವಾ ಸ್ತ್ರೀವೇಷೈಃ ಸಾಂಬಂ ಜಾಂಬವತೀಸುತಮ್ ।
ಏಷಾ ಪೃಚ್ಛತಿ ವೋ ವಿಪ್ರಾ ಅಂತರ್ವತ್ನ್ಯಸಿತೇಕ್ಷಣಾ
॥ ೧೪ ॥

ಪ್ರಷ್ಟುಂ ವಿಲಜ್ಜತೀ ಸಾಕ್ಷಾತ್ ಪ್ರಬ್ರೂತಾಮೋಘದರ್ಶನಾಃ ।
ಪ್ರಸೋಷ್ಯಂತೀ ಪುತ್ರಕಾಮಾ ಕಿಂಸ್ವಿತ್ ಸಂಜನಯಿಷ್ಯತಿ
॥ ೧೫ ॥

ಏವಂ ಪ್ರಲಬ್ಧಾ ಮುನಯಸ್ತಾನೂಚುಃ ಕುಪಿತಾ ನೃಪ ।
ಜನಯಿಷ್ಯತಿ ವೋ ಮಂದಾ ಮುಸಲಂ ಕುಲನಾಶನಮ್
॥ ೧೬ ॥

ತಚ್ಛ್ರುತ್ವಾ ತೇಽತಿಸಂತ್ರಸ್ತಾ ವಿಮುಚ್ಯ ಸಹಸೋದರಮ್ ।
ಸಾಂಬಸ್ಯ ದದೃಶುಸ್ತಸ್ಮಿನ್ ಮುಸಲಂ ಖಲ್ವಯಸ್ಮಯಮ್
॥ ೧೭ ॥

ಕಿಂ ಕೃತಂ ಮಂದಭಾಗ್ಯೈರ್ನಃ ಕಿಂ ವದಿಷ್ಯಂತಿ ನೋ ಜನಾಃ ।
ಇತಿ ವಿಹ್ವಲಿತಾ ಗೇಹಾನಾದಾಯ ಮುಸಲಂ ಯಯುಃ
॥ ೧೮ ॥

ತಚ್ಚೋಪನೀಯ ಸದಸಿ ಪರಿಮ್ಲಾನಮುಖಶ್ರಿಯಃ ।
ರಾಜ್ಞ ಆವೇದಯಾಂಚಕ್ರುಃ ಸರ್ವಯಾದವಸನ್ನಿಧೌ
॥ ೧೯ ॥

ಅವನು ಸ್ವತಃ ಪೂರ್ಣಕಾಮನಾಗಿದ್ದನು. ತನ್ನ ಪರಮಧಾಮದಲ್ಲಿ ಇದ್ದುಕೊಂಡು ತನ್ನಲ್ಲೇ ರಮಮಾಣನಾದ ಉದಾರಕೀರ್ತಿಯುಳ್ಳ ಪ್ರಭುವು ತನ್ನ ಕುಲದ ಸಂಹಾರಮಾಡಲು ಸಂಕಲ್ಪಿಸಿದನು. ಭೂಭಾರ ಹರಣದಲ್ಲಿ ಇದೊಂದೇ ಕಾರ್ಯ ಉಳಿದಿತ್ತು ಎಂದು ಯೋಚಿಸಿದನು. ॥ ೧೦ ॥ ಭಗವಾನ್ ಶ್ರೀಕೃಷ್ಣನು ಅನೇಕ ಮಂಗಲಮಯ ಮತ್ತು ಪುಣ್ಯಕರ ಕರ್ಮಗಳನ್ನು ಮಾಡಿದನು. ಅದನ್ನು ಕೊಂಡಾಡುವವರ ಎಲ್ಲ ಪಾಪಗಳು ನಾಶವಾಗಿ ಹೋಗುತ್ತವೆ. ಇಂತಹ ಪವಿತ್ರ ಕರ್ಮಗಳನ್ನಾಚರಿಸಿ ಈಗ ಅವನು ಕಾಲರೂಪದಿಂದ ವಸುದೇವನ ಮನೆಯಲ್ಲಿ ವಾಸಿಸುತ್ತಿದ್ದನು. ಆಗಲೇ ಅವನು ಅನೇಕ ಮುನಿಗಳನ್ನು ಪಿಂಡಾರಕ(ಪ್ರಭಾಸ)ಕ್ಷೇತ್ರಕ್ಕೆ ಹೋಗಲು ಪ್ರೇರೇಪಿಸಿದನು. ಭಗವಂತನ ಸಂಕಲ್ಪದಂತೆ ಅವರೆಲ್ಲರೂ ಅಲ್ಲಿಗೆ ತೆರಳಿದರು. ಆ ಮುನಿಗಳಲ್ಲಿ ವಿಶ್ವಾಮಿತ್ರ, ಅಸಿತ, ಕಣ್ವ, ದುರ್ವಾಸ, ಭೃಗು, ಅಂಗಿರಾ, ಕಶ್ಯಪ, ವಾಮದೇವ, ಅತ್ರಿ, ವಸಿಷ್ಠ, ನಾರದ ಮುಂತಾದವರಿದ್ದರು. ॥ ೧೧-೧೨ ॥

ಒಂದು ದಿನ ಕೆಲವು ಯದುವಂಶೀಯ ಕುಮಾರರು ಆಡುತ್ತಾ ಆಡುತ್ತಾ ಅವರ ಬಳಿಗೆ ತಲುಪಿದರು. ಅವರು ಉದ್ಧಟರಾಗಿದ್ದರು, ಆದರೆ ಕೃತಕ ವಿನಯವನ್ನು ತೋರುತ್ತಾ ಮುನಿಗಳಲ್ಲಿ ಪ್ರಶ್ನಿಸಿದರು. ॥ ೧೩ ॥ ಆ ಯದುವಂಶೀ ಬಾಲಕರು ಜಾಂಬವತಿಯ ಪುತ್ರ ಸಾಂಬನಿಗೆ ಸ್ತ್ರೀವೇಷ ತೊಡಿಸಿಕೊಂಡು ಹೋಗಿ ಅವರು ಬ್ರಾಹ್ಮಣರಲ್ಲಿ – ವಿಪ್ರವರ್ಯರೇ! ಈ ವಿಶಾಲಾಕ್ಷಿಯಾದ ಸುಂದರಿಯು ಗರ್ಭವತಿಯಾಗಿರುವಳು. ಇವಳು ಪುತ್ರರತ್ನವನ್ನು ಹಡೆಯಬೇಕೆಂದು ಬಯಸುವಳು. ಸ್ವತಃ ನಿಮ್ಮಲ್ಲಿ ಕೇಳಲು ನಾಚಿಕೊಳ್ಳುತ್ತಿರುವಳು. ನಿಮ್ಮ ಜ್ಞಾನ ಅಮೋಘವಾಗಿದೆ. ಆದ್ದರಿಂದ ಇವಳು ಗಂಡುಹಡೆಯುವಳೋ ಹೇಣ್ಣೋ ? ಇದನ್ನು ತಿಳಿಸಿರಿ ; ಎಂದು ವಿನಂತಿಸಿ ಕೊಂಡರು. ॥ ೧೪-೧೫ ॥ ರಾಜನೇ ! ಈ ವಿಧವಾಗಿ ಆ ಕುಮಾರರು ಮುನಿಗಳಲ್ಲಿ ಒತ್ತಾಯಮಾಡಿದಾಗ, ಮುನಿಗಳು ಕುಪಿತರಾಗಿ ನುಡಿದರು – ಎಲೈ ಮೂರ್ಖರಿರಾ ! ಇವನು ನಿಮ್ಮ ಕುಲವನ್ನು ಸಂಹಾರ ಮಾಡುವಂತಹ ಒನಕೆಯನ್ನು ಹಡೆಯುವನು. ॥ ೧೬ ॥ ಇದನ್ನು ಕೇಳಿ ಅವರೆಲ್ಲರೂ ಅತ್ಯಂತ ಭಯಪಟ್ಟರು. ಕೂಡಲೇ ಸಾಂಬನ ಹೊಟ್ಟೆಯನ್ನು ಬಿಚ್ಚಿನೋಡಿದರೆ ನಿಜವಾಗಿಯೇ ಒಂದು ಕಬ್ಬಿಣದ ಒನಕೆಯೇ ಇತ್ತು.* ॥ ೧೭ ॥ ಅವರೆಲ್ಲರೂ ಯೋಚಿಸತೊಡಗಿದರು – ನಮ್ಮಗಳ ಭಾಗ್ಯವೇ ಬಹಳ ಕೆಟ್ಟದಾಗಿದೆ. ನಾವೇನು ಮಾಡಿಬಿಟ್ಟೆವು ? ನಮಗೆ ಜನರು ಏನನ್ನುವರು ? ಈ ಪ್ರಕಾರ ವ್ಯಾಕುಲರಾಗಿ ಅವರೆಲ್ಲರೂ ಆ ಒನಕೆಯನ್ನು ಎತ್ತಿಕೊಂಡು ಮನೆಗೆ ತೆರಳಿದರು. ॥ ೧೮ ॥ ಆ ಒನಕೆಯನ್ನು ಎಲ್ಲ ಯಾದವರ ಮುಂದಿರಿಸಿ ರಾಜಾ ಉಗ್ರಸೇನನಿಗೆ ಎಲ್ಲ ನಿಜಸಂಗತಿಯನ್ನು ಅರುಹಿದರು. ಆಗ ಅವರೆಲ್ಲರ ಮುಖಗಳು ಬಾಡಿಹೋಗಿದ್ದವು. ॥ ೧೯ ॥

* ಆ ಬಾಲಕರು ಮುನಿಗಳನ್ನು ಮೋಸಮಾಡಲು ಸಾಂಬನ ಹೊಟ್ಟೆಗೆ ಬಟ್ಟೆ ಸುತ್ತಿದ್ದರು. ಆದರೆ ವಿಧಿವಶದಿಂದ ಅದು ಕಬ್ಬಿಣದ ಒನಕೆಯಾಗಿಹೋಯಿತು. ಈ ಪ್ರಕಾರ ತಮ್ಮ ಕೃತ್ಯದ ಕುರಿತು ಪಶ್ಚಾತ್ತಾಪಪಟ್ಟರು.

ಶ್ರುತ್ವಾಽಮೋಘಂ ವಿಪ್ರಶಾಪಂ ದೃಷ್ಟ್ವಾ ಚ ಮುಸಲಂ ನೃಪ ।
ವಿಸ್ಮಿತಾ ಭಯಸಂತ್ರಸ್ತಾ ಬಭೂವುರ್ದ್ವಾರಕೌಕಸಃ
॥ ೨೦ ॥

ಎಲೈ ರಾಜನೇ! ಬ್ರಾಹ್ಮಣರ ಶಾಪವು ಅಮೋಘವಾದುದು. ಎಲ್ಲ ದ್ವಾರಕಾವಾಸಿಗಳು ಬ್ರಾಹ್ಮಣರ ಶಾಪವೃತ್ತಾಂತವನ್ನು ಕೇಳಿ, ಆ ಒನಕೆಯನ್ನು ನೋಡಿ, ಬಹು ವಿಸ್ಮಿತರಾಗಿ, ಭಯದಿಂದ ನಡುಗಿ ಹೋದರು. ॥ ೨೦ ॥

ತಚ್ಚೂರ್ಣಯಿತ್ವಾ ಮುಸಲಂ ಯದುರಾಜಃ ಸ ಆಹುಕಃ ।
ಸಮುದ್ರಸಲಿಲೇ ಪ್ರಾಸ್ಯಲ್ಲೋಹಂ ಚಾಸ್ಯಾವಶೇಷಿತಮ್
॥ ೨೧ ॥

ಯಾದವರ ರಾಜನಾದ ಉಗ್ರಸೇನನು ಆ ಒನಕೆಯನ್ನು ಪುಡಿಮಾಡಿ ಚೂರ್ಣವನ್ನಾಗಿಸಿ, ಅದನ್ನು ಸಮುದ್ರದಲ್ಲಿ ಹಾಕಿಸಿಬಿಟ್ಟನು. ಅದರ ಉಳಿದ ತುದಿಯ ಒಂದು ತುಂಡು ಚೂರಾಗದೆ ಹಾಗೆ ಉಳಿಯಿತು. ಅದನ್ನು ಹಾಗೆಯೇ ಸಮುದ್ರದಲ್ಲಿ ಎಸೆದರು. ॥ ೨೧ ॥

ಕಶ್ಚಿನ್ಮತ್ಸ್ಯೋಽಗ್ರಸೀಲ್ಲೋಹಂ ಚೂರ್ಣಾನಿ ತರಲೈಸ್ತತಃ ।
ಉಹ್ಯಮಾನಾನಿ ವೇಲಾಯಾಂ ಲಗ್ನಾನ್ಯಾಸನ್ಕಿಲೈರಕಾಃ
॥ ೨೨ ॥

ಕೆಲವು ದಿನಗಳಲ್ಲಿ ಆ ಒನಕೆಯ ಪುಡಿಯು ಸಮುದ್ರದ ಅಲೆಗಳಿಂದಾಗಿ ಸಮುದ್ರತೀರಕ್ಕೆ ಬಂದುಬಿದ್ದಿತು. ಅದರಿಂದ ಐರಕವೆಂಬ ಹುಲ್ಲು ಹುಟ್ಟಿಕೊಂಡಿತು. ತುದಿಯ ಕಬ್ಬಿಣದ ತುಂಡನ್ನು ಮೀನೊಂದು ನುಂಗಿಬಿಟ್ಟಿತು. ॥ ೨೨ ॥

ಮತ್ಸ್ಯೋ ಗೃಹೀತೋ ಮತ್ಸ್ಯಘ್ನೈರ್ಜಾಲೇನಾನ್ಯೈಃ ಸಹಾರ್ಣವೇ ।
ತಸ್ಯೋದರಗತಂ ಲೋಹಂ ಸ ಶಲ್ಯೇ ಲುಬ್ಧಕೋಽಕರೋತ್
॥ ೨೩ ॥

ಆ ಮೀನು ಯಾವನೋ ಬೆಸ್ತನ ಬಲೆಯಲ್ಲಿ ಸಿಕ್ಕಿಬಿತ್ತು. ಓರ್ವ ಬೇಡನು ಆ ಮೀನನ್ನು ಕೊಂಡುಹೋದನು. ಅದರ ಹೊಟ್ಟೆಯಲ್ಲಿ ಅವನಿಗೆ ಕಬ್ಬಿಣದ ಚೂರೊಂದು ದೊರೆಯಿತು. ಅದನ್ನು ಆ ಬೇಡನು ತನ್ನ ಬಾಣದ ತುದಿಗೆ ಜೋಡಿಸಿದನು.* ॥ ೨೩ ॥

ಭಗವಾನ್ಜ್ಞಾತಸರ್ವಾರ್ಥ ಈಶ್ವರೋಽಪಿ ತದನ್ಯಥಾ ।
ಕರ್ತುಂ ನೈಚ್ಛದ್ವಿಪ್ರಶಾಪಂ ಕಾಲರೂಪ್ಯನ್ವಮೋದತ
॥ ೨೪ ॥

ಭಗವಂತನು ಎಲ್ಲವನ್ನು ಬಲ್ಲವನಾಗಿದ್ದಾನೆ. ಅವನು ಸರ್ವಸಮರ್ಥನಾಗಿದ್ದಾನೆ. ಬ್ರಾಹ್ಮಣರ ಶಾಪವನ್ನು ವ್ಯರ್ಥವಾಗಿಸುವ ಸಾಮರ್ಥ್ಯ ಅವನಲ್ಲಿದ್ದರೂ ಆ ಕಾಲಸ್ವರೂಪೀ ಭಗವಂತನು ಬ್ರಾಹ್ಮಣರ ಶಾಪವನ್ನು ಅನುಮೋದಿಸಿದನು. ॥ ೨೪ ॥

ಮೊದಲನೆಯ ಅಧ್ಯಾಯವು ಮುಗಿಯಿತು. ॥ ೧ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಏಕಾದಶ ಸ್ಕಂಧೇ ಪ್ರಥಮೋಽಧ್ಯಾಯಃ ॥ ೧ ॥

ಎರಡನೆಯ ಅಧ್ಯಾಯ

ವಸುದೇವನ ಬಳಿಗೆ ನಾರದರು ಬರುವುದು, ಅವರಿಗೆ ರಾಜಾ ನಿಮಿ ಹಾಗೂ ಒಂಭತ್ತು ಯೋಗೀಶ್ವರರ ಸಂವಾದವನ್ನು ತಿಳಿಸಿದುದು

ಶ್ರೀಶುಕ ಉವಾಚ

ಗೋವಿಂದಭುಜಗುಪ್ತಾಯಾಂ ದ್ವಾರವತ್ಯಾಂ ಕುರೂದ್ವಹ ।
ಅವಾತ್ಸೀನ್ನಾರದೋಽಭೀಕ್ಷ್ಣಂ ಕೃಷ್ಣೋಪಾಸನಲಾಲಸಃ
॥ ೧ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಎಲೈ ಕುರುನಂದನಾ! ಭಗವಾನ್ ಶ್ರೀಕೃಷ್ಣನ ಬಾಹುಬಲದಿಂದ ಸಂರಕ್ಷಿತ ದ್ವಾರಕಾಪುರಿಯಲ್ಲಿ ಶ್ರೀಕೃಷ್ಣದರ್ಶನದ ಲಾಲಸೆಯಿಂದ ನಾರದ ಮಹರ್ಷಿಗಳು ಮೇಲಿಂದ ಮೇಲೆ ಬಂದು ತಂಗುತ್ತಿದ್ದರು. ॥ ೧ ॥

ಕೋ ನು ರಾಜನ್ನಿಂದ್ರಿಯವಾನ್ ಮುಕುಂದಚರಣಾಂಬುಜಮ್ ।
ನ ಭಜೇತ್ ಸರ್ವತೋಮೃತ್ಯುರುಪಾಸ್ಯಮಮರೋತ್ತಮೈಃ
॥ ೨ ॥

ಎಲೈ ರಾಜನೇ! ಬ್ರಹ್ಮಾದಿ ದೇವತೆಗಳ ಉಪಾಸ್ಯನಾದ ಭಗವಂತನ ಚರಣಕಮಲಗಳ ದಿವ್ಯ ಮಧುರ ಮಕರಂದವನ್ನು ಪಾನಮಾಡದವನು, ಭಜಿಸದವನು, ಅವನ ಅಲೌಕಿಕ ರೂಪಮಾಧುರ್ಯವನ್ನು ನೋಡದವನು, ಮಂಗಲಮಯ ಧ್ವನಿಯನ್ನು ಕೇಳದವನು ಯಾರಿರುವನು? ಏಕೆಂದರೆ, ಅವನು ಎಲ್ಲ ಕಡೆಯಿಂದ ಮೃತ್ಯುವಿನಿಂದ ಮುತ್ತಲ್ಪಟ್ಟವನಾಗಿದ್ದಾನೆ. ॥ ೨ ॥

* ಮೀನಿನ ಹೊಟ್ಟೆಯಲ್ಲಿ ದೊರೆತಿರುವ ಕಬ್ಬಿಣದ ಚೂರನ್ನು ಬಾಣದ ತುದಿಗೆ ಅಳವಡಿಸಿದರೆ, ಅಸಾಧ್ಯಬೇಟೆಯು ಸುಲಭವಾಗಿ ಸಿಗುತ್ತದೆ. ಆ ಬಾಣವು ಅಮೋಘವಾಗುತ್ತದೆ. ಇದೆಲ್ಲ ನಡೆದ ಘಟನೆಗಳು ಸ್ವಯಂ ಭಗವಂತನ ಇಚ್ಛೆಯೇ ಆಗಿತ್ತು.

ತಮೇಕದಾ ತು ದೇವರ್ಷಿಂ ವಸುದೇವೋ ಗೃಹಾಗತಮ್ ।
ಅರ್ಚಿತಂ ಸುಖಮಾಸೀನಮಭಿವಾದ್ಯೇದಮಬ್ರವೀತ್
॥ ೩ ॥

ವಸುದೇವ ಉವಾಚ

ಭಗವನ್ ಭವತೋ ಯಾತ್ರಾ ಸ್ವಸ್ತಯೇ ಸರ್ವದೇಹಿನಾಮ್ ।
ಕೃಪಣಾನಾಂ ಯಥಾ ಪಿತ್ರೋರುತ್ತಮಶ್ಲೋಕವರ್ತ್ಮನಾಮ್
॥ ೪ ॥

ಭೂತಾನಾಂ ದೇವಚರಿತಂ ದುಃಖಾಯ ಚ ಸುಖಾಯ ಚ ।
ಸುಖಾಯೈವ ಹಿ ಸಾಧೂನಾಂ ತ್ವಾದೃಶಾಮಚ್ಯುತಾತ್ಮನಾಮ್
॥ ೫ ॥

ಭಜಂತಿ ಯೇ ಯಥಾ ದೇವಾನ್ ದೇವಾ ಅಪಿ ತಥೈವ ತಾನ್ ।
ಛಾಯೇವ ಕರ್ಮಸಚಿವಾಃ ಸಾಧವೋ ದೀನವತ್ಸಲಾಃ
॥ ೬ ॥

ಬ್ರಹ್ಮಂಸ್ತಥಾಪಿ ಪೃಚ್ಛಾಮೋ ಧರ್ಮಾನ್ಭಾಗವತಾಂಸ್ತವ ।
ಯಾಂಛ್ರುತ್ವಾ ಶ್ರದ್ಧಯಾ ಮರ್ತ್ಯೋ ಮುಚ್ಯತೇ ಸರ್ವತೋಭಯಾತ್
॥ ೭ ॥

ಅಹಂ ಕಿಲ ಪುರಾನಂತಂ ಪ್ರಜಾರ್ಥೋ ಭುವಿ ಮುಕ್ತಿದಮ್ ।
ಅಪೂಜಯಂ ನ ಮೋಕ್ಷಾಯ ಮೋಹಿತೋ ದೇವಮಾಯಯಾ
॥ ೮ ॥

ಯಥಾ ವಿಚಿತ್ರವ್ಯಸನಾದ್ಭವದ್ಭಿರ್ವಿಶ್ವತೋಭಯಾತ್ ।
ಮುಚ್ಯೇಮ ಹ್ಯಂಜಸೈವಾದ್ಧಾ ತಥಾ ನಃ ಶಾಧಿ ಸುವ್ರತ
॥ ೯ ॥

ಶ್ರೀಶುಕ ಉವಾಚ

ರಾಜನ್ನೇವಂ ಕೃತಪ್ರಶ್ನೋ ವಸುದೇವೇನ ಧೀಮತಾ ।
ಪ್ರೀತಸ್ತಮಾಹ ದೇವರ್ಷಿರ್ಹರೇಃ ಸಂಸ್ಮಾರಿತೋ ಗುಣೈಃ
॥ ೧೦ ॥

ನಾರದ ಉವಾಚ

ಸಮ್ಯಗೇತದ್ವ್ಯವಸಿತಂ ಭವತಾ ಸಾತ್ವತರ್ಷಭ ।
ಯತ್ಪೃಚ್ಛಸೇ ಭಾಗವತಾನ್ ಧರ್ಮಾಂಸ್ತ್ವಂ ವಿಶ್ವಭಾವನಾನ್
॥ ೧೧ ॥

ಒಮ್ಮೆ ಶ್ರೀನಾರದರು ವಸುದೇವನ ಅರಮನೆಗೆ ಬಂದಿದ್ದರು. ವಸುದೇವನು ಆದರಪೂರ್ವಕ ಅವರನ್ನು ಅಭಿನಂದಿಸಿ, ಸುಖಾಸನದಲ್ಲಿ ಕುಳ್ಳಿರಿಸಿ, ಅವರನ್ನು ಯಥಾವಿಧಿಯಿಂದ ಪೂಜಿಸಿದನು. ಮತ್ತೆ ವಂದಿಸಿಕೊಂಡು ಇಂತೆಂದನು – ॥ ೩ ॥

ವಸುದೇವನು ಹೇಳಿದನು – ಮಹಾತ್ಮರಾದ ನಾರದರೇ! ನೀವು ಪುಣ್ಯಶ್ಲೋಕ ಭಗವಂತನ ಮಾರ್ಗಾನುಯಾಯಿಗಳು. ತಮ್ಮ ಸಂಚಾರ (ಯಾತ್ರೆ)ವು ಎಲ್ಲ ಪ್ರಾಣಿಗಳ ಮಂಗಳಕ್ಕಾಗಿಯೇ ಇರುತ್ತದೆ. ತಂದೆ-ತಾಯಿಯವರನ್ನೇ ಅವಲಂಬಿಸಿರುವ ಸಣ್ಣ ಮಕ್ಕಳಿಗೆ ಅವರು ಬಳಿಗೆ ಬಂದಾಗ ಪರಮಹರ್ಷವಾಗುವಂತೆ, ನಿಮ್ಮಂತಹ ಮಹಾಪುರುಷರ ಆಗಮನವು ಎಲ್ಲ ಪ್ರಾಣಿಗಳಿಗೆ ಶ್ರೇಯಸ್ಕರವೇ ಆಗಿರುತ್ತದೆ. ॥ ೪ ॥ ಬೇರೆ ದೇವತೆಗಳ ವ್ಯವಹಾರ ಪ್ರಾಣಿಗಳ ಸುಖಕ್ಕಾಗಿಯೂ, ದುಃಖಕ್ಕಾಗಿಯೂ ಆಗಿರುತ್ತದೆ. (ದೇವತೆಗಳನ್ನು ವಿಧಿವತ್ತಾಗಿ ಪೂಜಿಸಿದರೆ ಸಂತೋಷಗೊಂಡು ಸುಖಕೊಡುತ್ತಾರೆ, ಪೂಜೆಯಲ್ಲಿ ಕೊರತೆಯಾದರೆ, ಸಿಟ್ಟಾಗಿ ದುಃಖವನ್ನೂ ಕೊಡುತ್ತಾರೆ.) ಆದರೆ ನಿಮ್ಮಂತಹ ಮಹಾತ್ಮರ, ಭಗವದ್ಭಕ್ತರ, ಸಂತರ ವ್ಯವಹಾರ ಯಾವಾಗಲೂ ಎಲ್ಲ ಪ್ರಾಣಿಗಳ ಹಿತಕ್ಕಾಗಿಯೇ ಇರುತ್ತದೆ. ॥ ೫ ॥ ಜನರು ದೇವತೆಗಳನ್ನು ಉಪಾಸನೆ ಮಾಡುವ ಭಾವಕ್ಕನುಸಾರ ದೇವತೆಗಳು ಫಲನೀಡುತ್ತಾರೆ. ಅವರು ನೆರಳಿನಂತಿರುತ್ತಾರೆ. ಕರ್ಮಕ್ಕನುಸಾರ ಫಲಕೊಡುತ್ತಾರೆ. ಆದರೆ ಸಾಧು ಮಹಾತ್ಮರ ಸ್ವಭಾವ ದೀನರ ಮೇಲೆ ಅಹೈತುಕವಾಗಿ ಕೃಪೆದೋರುವುದೇ ಆಗಿರುತ್ತದೆ. ॥ ೬ ॥ ಓ ಬ್ರಹ್ಮಸ್ವರೂಪರೇ! ಶ್ರದ್ಧಾಪೂರ್ವಕ ಶ್ರವಣಿಸುವುದರಿಂದ ಮನುಷ್ಯರು ಎಲ್ಲ ವಿಧದ ಭಯದಿಂದ ಮುಕ್ತರಾಗುವಂತಹ, ಭಾಗವತ ಧರ್ಮದ ಕುರಿತು ಈಗ ನಾನು ನಿಮ್ಮಲ್ಲಿ ಕೇಳುತ್ತೇನೆ. ॥ ೭ ॥ ಭಗವಾನ್ ವಿಷ್ಣುವು ಮುಕ್ತಿದಾತನು. ಹಿಂದೆ ನಾನು ಆ ಮೋಕ್ಷದಾತನಾದ ಭಗವಂತನ ಉಪಾಸನೆಯನ್ನು ಮೋಕ್ಷಕ್ಕಾಗಿ ಮಾಡದೆ, ಅವನನ್ನು ನನ್ನ ಪುತ್ರರೂಪದಿಂದ ಪಡೆಯಲು ಮಾಡಿದ್ದೆ, ಏಕೆಂದರೆ, ಆಗ ನಾನು ಅವನ ಮಾಯೆಯಿಂದ ಮೋಹಿತನಾಗಿದ್ದೆ. ॥ ೮ ॥ ಓ ಭಗವನ್ನಿಷ್ಠರೇ! ಪ್ರಪಂಚದ ದುಃಖಗಳೂ ಕೂಡ ಸುಖದಂತೆ ಭಾಸವಾಗುತ್ತವೆ, ಇದೆಂತಹ ವಿಚಿತ್ರವಾದ ವಿಷಯ, ಅತ್ಯಂತ ದುಃಖರೂಪವಾದ ಇಂತಹ ವಿಚಿತ್ರವ್ಯಸನಗಳಿಂದ (ದುಃಖಗಳಿಂದ) ನಾನು ಆಯಾಸವಿಲ್ಲದೆ, ನಿಶ್ಚಿತವಾಗಿ ಮುಕ್ತನಾಗುವಂತಹ ಸರಳವಾದ ಉಪಾಯವನ್ನು ತಿಳಿಸಿರಿ. ॥ ೯ ॥

ಶ್ರೀಶುಕಮಹಾಮುನಿಗಳು ಹೇಳಿದರು – ಎಲೈ ರಾಜನೇ! ಬುದ್ಧಿವಂತನಾದ ವಸುದೇವನು ಈ ಪ್ರಕಾರ ಪ್ರಶ್ನಿಸಿದಾಗ, ದೇವರ್ಷಿ ನಾರದರು ಭಗವಂತನ ಅನಂತಕಲ್ಯಾಣಗುಣಗಳನ್ನು ಸ್ಮರಿಸುತ್ತಾ ತನ್ಮಯರಾದರು. ಪ್ರೇಮಾನಂದದಲ್ಲಿ ಮಗ್ನರಾಗಿ ನುಡಿಯತೊಡಗಿದರು. ॥ ೧೦ ॥

ಶ್ರೀನಾರದರು ಹೇಳುತ್ತಾರೆ – ಓ ಯದುವಂಶ ಶಿರೋಮಣಿ! ನೀನು ಇಡೀ ವಿಶ್ವದ ಕಲ್ಯಾಣ ಮಾಡುವಂತಹ ಭಾಗವತ ಧರ್ಮದ ಕುರಿತು ಕೇಳುತ್ತಿರುವೆ. ಈ ನಿನ್ನ ನಿಶ್ಚಯವು ಬಹಳ ಸರಿಯಾಗಿದೆ. ॥ ೧೧ ॥

ಶ್ರುತೋಽನುಪಠಿತೋ ಧ್ಯಾತ ಆದೃತೋ ವಾನುಮೋದಿತಃ ।
ಸದ್ಯಃ ಪುನಾತಿ ಸದ್ಧರ್ಮೋ ದೇವವಿಶ್ವದ್ರುಹೋಽಪಿ ಹಿ
॥ ೧೨ ॥

ತ್ವಯಾ ಪರಮಕಲ್ಯಾಣಃ ಪುಣ್ಯಶ್ರವಣಕೀರ್ತನಃ ।
ಸ್ಮಾರಿತೋ ಭಗವಾನದ್ಯ ದೇವೋ ನಾರಾಯಣೋ ಮಮ
॥ ೧೩ ॥

ಅತ್ರಾಪ್ಯುದಾಹರಂತೀಮಮಿತಿಹಾಸಂ ಪುರಾತನಮ್ ।
ಆರ್ಷಭಾಣಾಂ ಚ ಸಂವಾದಂ ವಿದೇಹಸ್ಯ ಮಹಾತ್ಮನಃ
॥ ೧೪ ॥

ಪ್ರಿಯವ್ರತೋ ನಾಮ ಸುತೋ ಮನೋಃ ಸ್ವಾಯಂಭುವಸ್ಯ ಯಃ ।
ತಸ್ಯಾಗ್ನೀಧ್ರಸ್ತತೋ ನಾಭಿರೃಷಭಸ್ತತ್ಸುತಃ ಸ್ಮೃತಃ
॥ ೧೫ ॥

ತಮಾಹುರ್ವಾಸುದೇವಾಂಶಂ ಮೋಕ್ಷಧರ್ಮವಿವಕ್ಷಯಾ ।
ಅವತೀರ್ಣಂ ಸುತಶತಂ ತಸ್ಯಾಸೀದ್ಬ್ರಹ್ಮಪಾರಗಮ್
॥ ೧೬ ॥

ತೇಷಾಂ ವೈ ಭರತೋ ಜ್ಯೇಷ್ಠೋ ನಾರಾಯಣಪರಾಯಣಃ ।
ವಿಖ್ಯಾತಂ ವರ್ಷಮೇತದ್ಯನ್ನಾಮ್ನಾ ಭಾರತಮದ್ಭುತಮ್
॥ ೧೭ ॥

ಸ ಭುಕ್ತಭೋಗಾಂ ತ್ಯಕ್ತ್ವೇಮಾಂ ನಿರ್ಗತಸ್ತಪಸಾ ಹರಿಮ್ ।
ಉಪಾಸೀನಸ್ತತ್ಪದವೀಂ ಲೇಭೇ ವೈ ಜನ್ಮಭಿಸ್ತ್ರಿಭಿಃ
॥ ೧೮ ॥

ತೇಷಾಂ ನವ ನವದ್ವೀಪಪತಯೋಽಸ್ಯ ಸಮಂತತಃ ।
ಕರ್ಮತಂತ್ರಪ್ರಣೇತಾರ ಏಕಾಶೀತಿರ್ದ್ವಿಜಾತಯಃ
॥ ೧೯ ॥

ನವಾಭವನ್ಮಹಾಭಾಗಾ ಮುನಯೋ ಹ್ಯರ್ಥಶಂಸಿನಃ ।
ಶ್ರಮಣಾ ವಾತರಶನಾ ಆತ್ಮವಿದ್ಯಾವಿಶಾರದಾಃ
॥ ೨೦ ॥

ಕವಿರ್ಹರಿರಂತರಿಕ್ಷಃ ಪ್ರಬುದ್ಧಃ ಪಿಪ್ಪಲಾಯನಃ ।
ಆವಿರ್ಹೋತ್ರೋಽಥ ದ್ರುಮಿಲಶ್ಚಮಸಃ ಕರಭಾಜನಃ
॥ ೨೧ ॥

ಎಲೈ ವಸುದೇವನೇ ! ಈ ಭಾಗವತ ಧರ್ಮವನ್ನು ಕಿವಿಗೊಟ್ಟು ಶ್ರವಣಿಸಿದರೆ, ವಾಣಿಯಿಂದ ಕೊಂಡಾಡಿದರೆ, ಮನಸ್ಸಿನಿಂದ ಸ್ಮರಿಸಿದರೆ, ಹೃತ್ಪೂರ್ವಕವಾಗಿ ಆದರಿಸಿದರೆ, ಒಪ್ಪಿಕೊಂಡರೆ ಮನುಷ್ಯನು ಆಗಲೇ ಪುನೀತನಾಗಿ ಹೋಗುತ್ತಾನೆ. ಇದನ್ನು ಆಶ್ರಯಿಸಿದವರು ಎಷ್ಟೇ ದುಷ್ಟನಾಗಿರಲಿ, ಅವನನ್ನೂ ಪವಿತ್ರ ವಾಗಿಸುವಂತಹ ಮಹಿಮೆ ಈ ಭಾಗವತ ಧರ್ಮದ್ದಾಗಿದೆ. ಭಗವಂತನು ಪರಮ ಕಲ್ಯಾಣ ಸ್ವರೂಪನು. ಅವನ ನಾಮಸ್ಮರಣೆ, ಕೀರ್ತನೆ ಭಾರೀ ಪುಣ್ಯ ಪ್ರದವಾಗಿದೆ. ಇಂತಹ ದೇವಾಧಿದೇವ ಆದಿಪುರುಷ ಭಗವಾನ್ ನಾರಾಯಣ ಸ್ಮರಣೆಯನ್ನು ನೀನು ನನಗೆ ಮಾಡಿಸಿದೆ. ॥ ೧೨-೧೩ ॥ ಈ ವಿಷಯದಲ್ಲಿ ಒಂದು ಪ್ರಾಚೀನ ಇತಿಹಾಸವನ್ನು ಉದಾಹರಣೆ ಯಾಗಿ ನಿನಗೆ ಅರುಹುತ್ತೇನೆ. ಅದರಲ್ಲಿ ಮಹಾತ್ಮಾ ವಿದೇಹರಾಜ ನಿಮಿಯ ಹಾಗೂ ಋಷಭದೇವರ ಒಂಭತ್ತು ಪುತ್ರರ (ಯೋಗೀ ಶ್ವರರ) ಸಂವಾದವಿದೆ. ॥ ೧೪ ॥ ಹಿಂದೆ ಸ್ವಾಯಂಭುವ ಮನುವಿನ ಪುತ್ರ ಪ್ರಿಯವ್ರತನೆಂಬುವನಿದ್ದನು. ಅವನಿಂದ ಆಗ್ನೀಧ್ರನಾದನು. ಅವನಿಂದ ನಾಭಿ ಮತ್ತು ನಾಭಿಯ ಪುತ್ರನಾಗಿ ಭಗವಂತನು ಋಷಭದೇವನಾಗಿ ಉದಿಸಿದನು. ॥ ೧೫ ॥ ಆ ಋಷಭದೇವನನ್ನು ಭಗವಾನ್ ವಾಸುದೇವನ ಅಂಶಾವತಾರವೆಂದೇ ತಿಳಿಯಲಾಗಿದೆ. ಅವನು ಮೋಕ್ಷಧರ್ಮದ ಉಪದೇಶ ಕೊಡುವುದಕ್ಕಾಗಿಯೇ ಅವ ತರಿಸಿದ್ದನು. ಅವನಿಗೆ ನೂರುಮಂದಿ ಪುತ್ರರುದಿಸಿದರು. ಅವ ರೆಲ್ಲರೂ ವೇದಗಳಲ್ಲಿ ಪಾರಂಗತರಾಗಿದ್ದರು. ॥ ೧೬ ॥

ಅವರಲ್ಲಿ ಭರತನೇ ಹಿರಿಯವನಾಗಿದ್ದನು. ಅವನು ಭಗವಾನ್ ನಾರಾಯಣಪರಾಯಣನಾಗಿದ್ದನು. ಅವನ ಹೆಸರಿನಿಂದಲೇ ಈ ದೇಶದ ಹೆಸರು ಭಾರತವರ್ಷವೆಂದು ಪ್ರಸಿದ್ಧವಾಯಿತು. ॥ ೧೭ ॥ ರಾಜರ್ಷಿ ಭರತನು ಸಮಸ್ತ ಭೂಮಂಡಲವನ್ನು ಆಳಿದನು. ಮತ್ತೆ ರಾಜ್ಯವನ್ನು ತ್ಯಜಿಸಿ ಭಗವಂತನ ಆರಾಧನೆಗಾಗಿ, ತಪಸ್ಸಿಗಾಗಿ ಕಾಡಿಗೆ ಹೊರಟುಹೋದನು. ಅಲ್ಲಿ ಭಗವಂತನ ಉಪಾಸನೆಗೈದು ಮೂರು ಜನ್ಮಗಳಲ್ಲಿ ಭಗವಂತನನ್ನು ಪಡೆದುಕೊಂಡನು. (ಇದೇ ರಾಜರ್ಷಿ ಭರತನು ಎರಡನೇ ಜನ್ಮದಲ್ಲಿ ಜಿಂಕೆಯಾಗಿ ಹುಟ್ಟಿದ್ದನು. ಮೂರನೆಯ ಬ್ರಾಹ್ಮಣಜನ್ಮದಲ್ಲಿ ಜಡಭರತನ ಹೆಸರಿನಿಂದ ಖ್ಯಾತನಾಗಿದ್ದ ಈ ಕಥೆ ಪ್ರಸಿದ್ಧವಾಗಿದೆ.) ॥ ೧೮ ॥ ಋಷಭದೇವರ ನೂರು ಮಂದಿ ಪುತ್ರರಲ್ಲಿ ಒಂಭತ್ತು ಜನರು ಒಂಭತ್ತು ದ್ವೀಪಗಳ ಅಧಿಪತಿಗಳಾದರು. ಅವು ಭಾರತವರ್ಷದ ಸುತ್ತಲೂ ನೆಲೆಸಿವೆ. ಉಳಿದ ಎಂಭತ್ತೊಂದು ಮಂದಿ ಕರ್ಮಕಾಂಡದ ರಚಯಿತರೂ, ಅಗ್ನಿಹೋತ್ರಾದಿಗಳನ್ನು ಮಾಡುವ ಬ್ರಾಹ್ಮಣರಾದರು. ॥ ೧೯ ॥ ಹಾಗೂ ಪರಮಾರ್ಥ ತತ್ತ್ವದ ಪ್ರಚಾರಕ ಮಹಾಭಾಗ್ಯವಾನ್ ಒಂಭತ್ತು ಮಂದಿ ಸಂನ್ಯಾಸಿಗಳಾದರು. ಅವರು ದಿಗಂಬರ ಸಂನ್ಯಾಸಿಗಳಾಗಿದ್ದು ಆತ್ಮವಿದ್ಯೆಯಲ್ಲಿ ಪಾರಂಗತರಾಗಿದ್ದರು. ಅವರ ಹೆಸರುಗಳು ಇಂತಿವೆ – ಕವಿ, ಹರಿ, ಅಂತರಿಕ್ಷ, ಪ್ರಬುದ್ಧ, ಪಿಪ್ಪಲಾಯನ, ಆವಿರ್ಹೋತ್ರ, ದ್ರುಮಿಲ, ಚಮಸ ಮತ್ತು ಕರಭಾಜನ. ॥ ೨೦-೨೧ ॥

ತ ಏತೇ ಭಗವದ್ರೂಪಂ ವಿಶ್ವಂ ಸದಸದಾತ್ಮಕಮ್ ।
ಆತ್ಮನೋಽವ್ಯತಿರೇಕೇಣ ಪಶ್ಯಂತೋ ವ್ಯಚರನ್ಮಹೀಮ್
॥ ೨೨ ॥

ಅವ್ಯಾಹತೇಷ್ಟಗತಯಃ ಸುರಸಿದ್ಧಸಾಧ್ಯ-
ಗಂಧರ್ವಯಕ್ಷನರಕಿನ್ನರನಾಗಲೋಕಾನ್ ।
ಮುಕ್ತಾಶ್ಚರಂತಿ ಮುನಿಚಾರಣಭೂತನಾಥ-
ವಿದ್ಯಾಧರದ್ವಿಜಗವಾಂ ಭುವನಾನಿ ಕಾಮಮ್ ॥ ೨೩ ॥

ತ ಏಕದಾ ನಿಮೇಃ ಸತ್ರಮುಪಜಗ್ಮುರ್ಯದೃಚ್ಛಯಾ ।
ವಿತಾಯಮಾನಮೃಷಿಭಿರಜನಾಭೇ ಮಹಾತ್ಮನಃ
॥ ೨೪ ॥

ತಾನ್ ದೃಷ್ಟ್ವಾ ಸೂರ್ಯಸಂಕಾಶಾನ್ ಮಹಾಭಾಗವತಾನ್ನೃಪಃ ।
ಯಜಮಾನೋಽಗ್ನಯೋ ವಿಪ್ರಾಃ ಸರ್ವ ಏವೋಪತಸ್ಥಿರೇ
॥ ೨೫ ॥

ವಿದೇಹಸ್ತಾನಭಿಪ್ರೇತ್ಯ ನಾರಾಯಣಪರಾಯಣಾನ್ ।
ಪ್ರೀತಃ ಸಂಪೂಜಯಾಂಚಕ್ರೇ ಆಸನಸ್ಥಾನ್ಯಥಾರ್ಹತಃ
॥ ೨೬ ॥

ತಾನ್ರೋಚಮಾನಾನ್ ಸ್ವರುಚಾ ಬ್ರಹ್ಮಪುತ್ರೋಪಮಾನ್ನವ ।
ಪಪ್ರಚ್ಛ ಪರಮಪ್ರೀತಃ ಪ್ರಶ್ರಯಾವನತೋ ನೃಪಃ
॥ ೨೭ ॥

ವಿದೇಹ ಉವಾಚ

ಮನ್ಯೇ ಭಗವತಸ್ಸಾಕ್ಷಾತ್ಪಾರ್ಷದಾನ್ವೋ ಮಧುದ್ವಿಷಃ ।
ವಿಷ್ಣೋರ್ಭೂತಾನಿ ಲೋಕಾನಾಂ ಪಾವನಾಯ ಚರಂತಿ ಹಿ
॥ ೨೮ ॥

ದುರ್ಲಭೋ ಮಾನುಷೋ ದೇಹೋ ದೇಹಿನಾಂ ಕ್ಷಣಭಂಗುರಃ ।
ತತ್ರಾಪಿ ದುರ್ಲಭಂ ಮನ್ಯೇ ವೈಕುಂಠಪ್ರಿಯದರ್ಶನಮ್
॥ ೨೯ ॥

ಅತ ಆತ್ಯಂತಿಕಂ ಕ್ಷೇಮಂ ಪೃಚ್ಛಾಮೋ ಭವತೋಽನಘಾಃ ।
ಸಂಸಾರೇಽಸ್ಮಿನ್ ಕ್ಷಣಾರ್ಧೋಽಪಿ ಸತ್ಸಂಗಃ ಶೇವಧಿರ್ನೃಣಾಮ್
॥ ೩೦ ॥

ಧರ್ಮಾನ್ ಭಾಗವತಾನ್ ಬ್ರೂತ ಯದಿ ನಃ ಶ್ರುತಯೇ ಕ್ಷಮಮ್ ।
ಯೈಃ ಪ್ರಸನ್ನಃ ಪ್ರಪನ್ನಾಯ ದಾಸ್ಯತ್ಯಾತ್ಮಾನಮಪ್ಯಜಃ
॥ ೩೧ ॥

ಇವರೆಲ್ಲ ಮಹಾತ್ಮರು ಈ ಜಡ-ಚೇತನಾತ್ಮಕ ಸಮಸ್ತ ವಿಶ್ವವನ್ನು ಭಗವಂತನ ಸ್ವರೂಪವೆಂದೇ ತಿಳಿಯುತ್ತಿದ್ದರು. ಅದನ್ನು ತಮ್ಮಿಂದ ಬೇರೆ ಎಂದು ನೋಡುತ್ತಿರಲಿಲ್ಲ. ಅರ್ಥಾತ್ – ಎಲ್ಲ ಕಡೆಗಳಲ್ಲಿ ಅವರಿಗೆ ಪರಮಾತ್ಮನೊಬ್ಬನ ದರ್ಶನವೇ ಆಗುತ್ತಿತ್ತು. ಈ ವಿಧವಾಗಿ ಸರ್ವತ್ರ ಆತ್ಮಭಾವವನ್ನಿರಿಸಿಕೊಂಡು ಅದ್ವಿತೀಯ ಪರಮಾತ್ಮನನ್ನೇ ದರ್ಶಿಸುತ್ತಾ ವಿಶ್ವಾದ್ಯಂತ ಸಂಚರಿಸುತ್ತಿದ್ದರು. ॥ ೨೨ ॥ ಮೂರು ಲೋಕಗಳಲ್ಲೆಲ್ಲ ಅವರ ಗತಿ ಅಬಾಧಿತವಾಗಿತ್ತು. ಅವರು ದೇವತೆ, ಸಿದ್ಧ ಸಾಧ್ಯ, ಗಂಧರ್ವ, ಯಕ್ಷ, ಮನುಷ್ಯ, ಕಿನ್ನರ, ನಾಗಲೋಕ ಹೀಗೆ ಎಲ್ಲ ಲೋಕಗಳಲ್ಲಿ ಸ್ವಚ್ಛಂದವಾಗಿ ವಿಚರಿಸುತ್ತಿದ್ದರು. ಇಷ್ಟೇ ಅಲ್ಲದೆ ಅವರು ಇನ್ನೂ ಕೂಡ ಮುನಿ, ಚಾರಣ, ಭೂತನಾಥ, ವಿದ್ಯಾಧರ, ಬ್ರಾಹ್ಮಣ ಮತ್ತು ಗೋವುಗಳು ಇವರ ಸ್ಥಾನಗಳಲ್ಲಿ ಮುಕ್ತರಾಗಿ ವಿಹರಿಸುತ್ತಿದ್ದರು. ॥ ೨೩ ॥

ಒಮ್ಮೆ ಅಜನಾಭವರ್ಷದಲ್ಲಿ (ಭಾರತವರ್ಷದಲ್ಲಿ) ಮಹಾತ್ಮಾ ನಿಮಿರಾಜನು ದೊಡ್ಡ-ದೊಡ್ಡ ಋಷಿಗಳಿಂದೊಡಗೂಡಿ ಯಜ್ಞ ಮಾಡುತ್ತಿದ್ದನು. ಆಗ ಈ ಒಂಭತ್ತು ಯೋಗೀಶ್ವರರು ನಿಮಿಯ ಯಜ್ಞದಲ್ಲಿ ಸ್ವಾಭಾವಿಕವಾಗಿ ಸಂಚರಿಸುತ್ತಾ ಬಂದು ತಲುಪಿದರು. ॥ ೨೪ ॥ ಈ ಪರಮ ಭಾಗವತ ಮಹಾತ್ಮರು ಸೂರ್ಯನಂತೆ ತಮ್ಮ ಕಾಂತಿಯಿಂದ ಪ್ರಕಾಶಿಸುತ್ತಿದ್ದರು. ಇಂತಹ ಯೋಗೀಶ್ವರರನ್ನು ಕಂಡು ಯಜ್ಞಮಾಡುತ್ತಿದ್ದ ರಾಜಾ ನಿಮಿ, ಮೂರ್ತಿಮಂತ ಅಗ್ನಿದೇವರು, ಋತ್ವಿಜಾದಿ ಬ್ರಾಹ್ಮಣರು ಹೀಗೆ ಎಲ್ಲರೂ ಅವರ ಸ್ವಾಗತಕ್ಕಾಗಿ ಎದ್ದುನಿಂತರು. ॥ ೨೫ ॥ ರಾಜಾ ನಿಮಿಯು ಆ ಒಂಭತ್ತು ಯೋಗೀಶ್ವರರನ್ನು ಭಗವಾನ್ ನಾರಾಯಣ ಪರಾಯಣರೆಂದು ಭಾವಿಸಿ, ಬಹಳ ಹರ್ಷಿತನಾಗಿ ಅವರನ್ನು ಉಚಿತಾಸನಗಳಲ್ಲಿ ಕುಳ್ಳಿರಿಸಿ, ವಿಧಿಪೂರ್ವಕ ಅವರನ್ನು ಪೂಜಿಸಿದನು. ॥ ೨೬ ॥ ಆ ಯೋಗೀಶ್ವರರು ಸಾಕ್ಷಾತ್ ಬ್ರಹ್ಮಮಾನಸ ಪುತ್ರರಾದ ಸನಕಾದಿಗಳಂತೆ ತಮ್ಮ ಕಾಂತಿಯಿಂದ ಪ್ರಕಾಶಿತರಾಗಿದ್ದರು. ರಾಜಾ ನಿಮಿಯು ವಿನಯದಿಂದ ತಲೆಬಾಗಿ, ಕೈಜೋಡಿಸಿಕೊಂಡು ಪರಮ ಪ್ರೇಮದಿಂದ ಅವರಲ್ಲಿ ಇಂತು ಪ್ರಶ್ನಿಸಿದನು. ॥ ೨೭ ॥

ವಿದೇಹರಾಜನಾದ ನಿಮಿಯು ಹೇಳಿದನು – ನಾನು ನಿಮ್ಮನ್ನು ಸಾಕ್ಷಾತ್ ಭಗವಾನ್ ಮಧುಸೂದನನ ಪಾರ್ಷದರೆಂದೇ ತಿಳಿಯುತ್ತೇನೆ. ಭಗವಾನ್ ಮಹಾವಿಷ್ಣುವಿನ ಸೇವಕರು, ದಾಸರು ಸಮಸ್ತ ಲೋಕಗಳನ್ನು ಪವಿತ್ರ ಮಾಡಲೆಂದೇ ಸಂಚರಿಸುತ್ತಾರೆ. ॥ ೨೮ ॥ ಈ ಮನುಷ್ಯಜನ್ಮವು ಜೀವರಿಗೆ ತುಂಬಾ ದುರ್ಲಭವಾಗಿದೆ ಹಾಗೂ ಕ್ಷಣಭಂಗುರವೂ ಆಗಿದೆ. ಅದರಲ್ಲಿಯೂ ಭಗವಂತನ ಭಕ್ತರಾದವರ ದರ್ಶನಭಾಗ್ಯ ದೊರೆಯುವುದು ಇನ್ನೂ ದುರ್ಲಭವಾಗಿದೆ. ॥ ೨೯ ॥ ಆದ್ದರಿಂದ ತ್ರಿಲೋಕಗಳನ್ನು ಪಾವನಗೊಳಿಸುವ ಮಹಾತ್ಮರೇ ! ನಾನು ನಿಮ್ಮಗಳಲ್ಲಿ ಆತ್ಯಂತಿಕ ಶ್ರೇಯಸ್ಸಿನ ಕುರಿತು ಕೇಳುತ್ತಿದ್ದೇನೆ. ಏಕೆಂದರೆ, ಈ ಪ್ರಪಂಚದಲ್ಲಿ ಅರೆಕ್ಷಣದ ಸತ್ಸಂಗವೂ ಕೂಡ ಮನುಷ್ಯರಿಗಾಗಿ ಶ್ರೇಷ್ಠನಿಧಿಯಾಗಿದೆ. ॥ ೩೦ ॥ ನಾನು ಇದರ ಬಗ್ಗೆ ಯೋಗ್ಯ ಅಧಿಕಾರಿ ಎಂದು ತಿಳಿಯುವಿರಾದರೆ ದಯೆಗೈದು ಭಾಗವತ ಧರ್ಮಗಳ ಕುರಿತು ತಿಳಿಸುವವರಾಗಿರಿ. ಆ ಭಾಗವತ ಧರ್ಮದಿಂದ ಅಜನ್ಮಾ ಭಗವಂತನು ಪ್ರಸನ್ನನಾಗಿ ತನ್ನ ಶರಣಾಗತ ಭಕ್ತರಿಗೆ ಸ್ವತಃ ತನ್ನನ್ನೇ ಕೊಟ್ಟುಕೊಳ್ಳುವನು. ॥ ೩೧ ॥

ಶ್ರೀನಾರದ ಉವಾಚ

ಏವಂ ತೇ ನಿಮಿನಾ ಪೃಷ್ಟಾ ವಸುದೇವ ಮಹತ್ತಮಾಃ ।
ಪ್ರತಿಪೂಜ್ಯಾಬ್ರುವನ್ ಪ್ರೀತ್ಯಾ ಸಸದಸ್ಯರ್ತ್ವಿಜಂ ನೃಪಮ್ ॥ ೩೨ ॥

ಕವಿರುವಾಚ

ಮನ್ಯೇಽಕುತಶ್ಚಿದ್ಭಯಮಚ್ಯುತಸ್ಯ
ಪಾದಾಂಬುಜೋಪಾಸನಮತ್ರ ನಿತ್ಯಮ್ ।
ಉದ್ವಿಗ್ನಬುದ್ಧೇರಸದಾತ್ಮಭಾವಾದ್
ವಿಶ್ವಾತ್ಮನಾ ಯತ್ರ ನಿವರ್ತತೇ ಭೀಃ ॥ ೩೩ ॥

ಯೇ ವೈ ಭಗವತಾ ಪ್ರೋಕ್ತಾ ಉಪಾಯಾ ಹ್ಯಾತ್ಮಲಬ್ಧಯೇ ।
ಅಂಜಃ ಪುಂಸಾಮವಿದುಷಾಂ ವಿದ್ಧಿ ಭಾಗವತಾನ್ಹಿ ತಾನ್ ॥ ೩೪ ॥

ಯಾನಾಸ್ಥಾಯ ನರೋ ರಾಜನ್ ನ ಪ್ರಮಾದ್ಯೇತ ಕರ್ಹಿಚಿತ್ ।
ಧಾವನ್ನಿಮೀಲ್ಯ ವಾ ನೇತ್ರೇ ನ ಸ್ಖಲೇನ್ನ ಪತೇದಿಹ ॥ ೩೫ ॥

ಕಾಯೇನ ವಾಚಾ ಮನಸೇಂದ್ರಿಯೈರ್ವಾ
ಬುದ್ಧ್ಯಾಽಽತ್ಮನಾ ವಾನುಸೃತಸ್ವಭಾವಾತ್ ।
ಕರೋತಿ ಯದ್ಯತ್ಸಕಲಂ ಪರಸ್ಮೈ
ನಾರಾಯಣಾಯೇತಿ ಸಮರ್ಪಯೇತ್ತತ್ ॥ ೩೬ ॥

ಭಯಂ ದ್ವಿತೀಯಾಭಿನಿವೇಶತಃ ಸ್ಯಾ-
ದೀಶಾದಪೇತಸ್ಯ ವಿಪರ್ಯಯೋಽಸ್ಮೃತಿಃ ।
ತನ್ಮಾಯಯಾತೋ ಬುಧ ಆಭಜೇತ್ತಂ
ಭಕ್ತ್ಯೈಕಯೇಶಂ ಗುರುದೇವತಾತ್ಮಾ ॥ ೩೭ ॥

ಶ್ರೀನಾರದರು ಹೇಳಿದರು – ಎಲೈ ವಸುದೇವನೇ! ಈ ವಿಧವಾಗಿ ಆ ಮಹಾತ್ಮಾ ಯೋಗೀಶ್ವರರಲ್ಲಿ ರಾಜಾ ನಿಮಿಯು ಪ್ರಶ್ನಿಸಿದನು. ಆಗ ಯೋಗೀಶ್ವರರು ಅವನ ಪ್ರಶ್ನೆಯನ್ನು ಪ್ರಶಂಸಿಸುತ್ತಾ, ಆ ಸಭೆಯಲ್ಲಿ ಕುಳಿತಿರುವ ಸದಸ್ಯರನ್ನು ಮತ್ತು ರಾಜನನ್ನು ಸಂಬೋಧಿಸಿ ಹೇಳತೊಡಗಿದರು. ॥ ೩೨ ॥

ಮೊದಲಿಗೆ ಮಹಾತ್ಮಾ ಕವಿ ಯೋಗೀಶ್ವರರು ಹೇಳಿದರು – ಎಲೈ ರಾಜನೇ! (ಆತ್ಯಂತಿಕ ಶ್ರೇಯಸ್ಸಿಗಾಗಿ ನೀನು ಪ್ರಶ್ನಿಸಿರುವೆ. ಅದಕ್ಕಾಗಿ ಅನನ್ಯ ಶರಣಾಗತಿಯೇ ಸರ್ವೋತ್ಕೃಷ್ಟ ಸಾಧನವಾಗಿದೆ.) ಈ ವಿಷಯದಲ್ಲಿ ಭಗವಾನ್ ಅಚ್ಯುತನ ಚರಣಗಳಿಗೆ ಶರಣಾಗುವುದೇ, ಶಾಶ್ವತವಾಗಿ ಭಯರಹಿತನಾಗಲು ಉತ್ತಮೋತ್ತಮ ಸಾಧನವೆಂದು ನಾನು ತಿಳಿಯುತ್ತೇನೆ. ಏಕೆಂದರೆ, ಸಾಂಸಾರಿಕ ಪದಾರ್ಥಗಳಲ್ಲಿ ಆತ್ಮಬುದ್ಧಿ ಸುಖಬುದ್ಧಿ ಇರುವ ಜನರೂ ಕೂಡ ಭಗವಂತನಿಗೆ ಅನನ್ಯ ಶರಣಾದರೆ ಅದರ ಫಲವಾಗಿ ಅವರ ಅಜ್ಞಾನ ದೂರವಾಗುತ್ತದೆ. ಪ್ರಪಂಚದಲ್ಲಿ ದುಃಖದ ಅನುಭವ ಪಡೆದು ಅವರು ವಿರಕ್ತರಾಗುತ್ತಾರೆ. ಅವರಿಗೆ ಆಧ್ಯಾತ್ಮಿಕ ಪ್ರಸನ್ನತೆ ಪ್ರಾಪ್ತವಾಗಿ, ಅವರ ಭಯ ಪೂರ್ಣರೂಪದಿಂದ ನಿವೃತ್ತವಾಗುತ್ತದೆ. ॥ ೩೩ ॥ ಅವರಿಗೆ ಎಲ್ಲ ಕಡೆಗಳಲ್ಲಿ ಆತ್ಮಭಾವ ಉಂಟಾಗಿ ಸರ್ವತ್ರ, ಸಮಭಾವದಿಂದ ನಿರಂತರ ಪರಮಾತ್ಮನ ಅನುಭವವೇ ಆಗತೊಡಗುತ್ತದೆ. ಸಾಮಾನ್ಯ ಅಜ್ಞಾನಿ ಜನರಿಗೂ ಕೂಡ ತುಂಬಾ ಸುಲಭವಾಗಿ ತನ್ನ ಸಾಕ್ಷಾತ್ಕಾರ ಪ್ರಾಪ್ತಿಯ ಉಪಾಯವನ್ನು ಭಗವಂತನು ತನ್ನ ಶ್ರೀಮುಖದಿಂದ ತಿಳಿಸಿರುವನು. ಅದನ್ನೇ ಭಗವತ್-ಸಂಬಂಧೀ ಭಾಗವತ ಧರ್ಮವೆಂದು ತಿಳಿ. ॥ ೩೪ ॥ ರಾಜನೇ! ಈ ಭಾಗವತ ಧರ್ಮಗಳನ್ನು ಅವಲಂಬಿಸುವ ಮನುಷ್ಯನು ಎಂದೂ ಯಾವುದೇ ದುಃಖಗಳಿಂದ ಪೀಡಿತನಾಗುವುದಿಲ್ಲ. ಕಣ್ಣುಮುಚ್ಚಿ ಓಡಿದರೂ ಕೂಡ ಅರ್ಥಾತ್ ವಿಧಿ-ವಿಧಾನಗಳಲ್ಲಿ ಕೊರತೆ ಉಂಟಾದರೂ ಮತ್ತೆ ಅವನು ಪತಿತನಾಗಲಾರನು. ಫಲದಿಂದ ವಂಚಿತನೂ ಆಗಲಾರನು. ॥ ೩೫ ॥ ಮನುಷ್ಯನು ತನ್ನ ಶರೀರದಿಂದಾಗಲೀ, ವಾಣಿಯಿಂದಾಗಲೀ, ಮನಸ್ಸಿನಿಂದಾಗಲೀ, ಇಂದ್ರಿಯಗಳಿಂದಾಗಲೀ, ಬುದ್ಧಿಯಿಂದಾಗಲೀ, ಅಹಂಕಾರದಿಂದಾಗಲೀ, ಅಥವಾ ತನ್ನ ಸ್ವಭಾವಕ್ಕನುಸಾರ ಯಾವುದೇ ಕರ್ಮಮಾಡಿದರೂ ಅದೆಲ್ಲವನ್ನು ಪರಾತ್ಪರ ಭಗವಾನ್ ನಾರಾಯಣನಿಗೆ ಅರ್ಪಿಸಿಬಿಡುವುದೇ ಬಹಳ ಸರಳ, ಸುಲಭ ಉಪಾಯವಾಗಿದೆ. ॥ ೩೬ ॥ ಭಗವಂತನಲ್ಲದೆ ಬೇರೆ ವಸ್ತುಗಳಲ್ಲಿ ದೇಹ, ಗೇಹಾದಿಗಳಲ್ಲಿ ಆಸಕ್ತಿ ಇರುವುದರಿಂದಲೇ ಅರ್ಥಾತ್ – ಅಸತ್ ವಸ್ತುವಿನ ಅಸ್ತಿತ್ವವನ್ನು ಒಪ್ಪಿಕೊಂಡು, ಅದರ ಕುರಿತು ಹೆಚ್ಚಿನ ಪ್ರೀತಿ ಇರುವುದರಿಂದಲೇ ಭಯ ಉಂಟಾಗುತ್ತದೆ. ಇಂತಹ ಸ್ಥಿತಿಯಲ್ಲಿ ಅವನು ಪರಮಾತ್ಮನಿಂದ ವಿಮುಖನಾಗುತ್ತಾನೆ. ಅವನು ಭ್ರಮೆಯಿಂದಾಗಿ ಅನಾತ್ಮವಸ್ತುಗಳಲ್ಲಿ ಆತ್ಮಬುದ್ಧಿಯನ್ನಿರಿಸುತ್ತಾನೆ. ಅದರಿಂದಾಗಿ ತನ್ನ ನಿಜಸ್ವರೂಪವನ್ನು ಮರೆಯುತ್ತಾನೆ. ಭಗವಂತನ ಮಾಯೆಯಿಂದಲೇ ಹೀಗಾಗುತ್ತದೆ. ಆದ್ದರಿಂದ ಬುದ್ಧಿವಂತನಾದವನು ಅಜ್ಞಾನದಿಂದ ಬಿಡುಗಡೆ ಹೊಂದಲು ಅನನ್ಯ ಭಕ್ತಿಪೂರ್ವಕ ಓರ್ವ ಪರಮಾತ್ಮನಿಗೇ ಶರಣಾಗಬೇಕು. ಇದಕ್ಕಾಗಿ ಗುರುವಿನಲ್ಲಿ ಭಗವದ್ಬುದ್ಧಿ ಇರಿಸಬೇಕು. ॥ ೩೭ ॥

ಅವಿದ್ಯಮಾನೋಽಪ್ಯವಭಾತಿ ಹಿ ದ್ವಯೋ-
ರ್ಧ್ಯಾತುರ್ಧಿಯಾ ಸ್ವಪ್ನಮನೋರಥೌ ಯಥಾ ।
ತತ್ಕರ್ಮಸಂಕಲ್ಪವಿಕಲ್ಪಕಂ ಮನೋ
ಬುಧೋ ನಿರುಂಧ್ಯಾದಭಯಂ ತತಃ ಸ್ಯಾತ್ ॥ ೩೮ ॥

ಶೃಣ್ವನ್ ಸುಭದ್ರಾಣಿ ರಥಾಂಗಪಾಣೇ-
ರ್ಜನ್ಮಾನಿ ಕರ್ಮಾಣಿ ಚ ಯಾನಿ ಲೋಕೇ ।
ಗೀತಾನಿ ನಾಮಾನಿ ತದರ್ಥಕಾನಿ
ಗಾಯನ್ ವಿಲಜ್ಜೋ ವಿಚರೇದಸಂಗಃ ॥ ೩೯ ॥

ಏವಂವ್ರತಃ ಸ್ವಪ್ರಿಯನಾಮಕೀರ್ತ್ಯಾ
ಜಾತಾನುರಾಗೋ ದ್ರುತಚಿತ್ತ ಉಚ್ಚೈಃ ।
ಹಸತ್ಯಥೋ ರೋದಿತಿ ರೌತಿ ಗಾಯ-
ತ್ಯುನ್ಮಾದವನ್ನೃತ್ಯತಿ ಲೋಕಬಾಹ್ಯಃ ॥ ೪೦ ॥

ಖಂ ವಾಯುಮಗ್ನಿಂ ಸಲಿಲಂ ಮಹೀಂ ಚ
ಜ್ಯೋತೀಂಷಿ ಸತ್ತ್ವಾನಿ ದಿಶೋ ದ್ರುಮಾದೀನ್ ।
ಸರಿತ್ಸಮುದ್ರಾಂಶ್ಚ ಹರೇಃ ಶರೀರಂ
ಯತ್ಕಿಂಚ ಭೂತಂ ಪ್ರಣಮೇದನನ್ಯಃ ॥ ೪೧ ॥

ವಾಸ್ತವದಲ್ಲಿ ಪರಮಾತ್ಮತತ್ತ್ವವೇ ಸತ್ಯವಸ್ತುವಾಗಿದೆ. ಆದರೆ ನಾನಾತ್ವ (ಪ್ರಪಂಚ) ವನ್ನು ಚಿಂತಿಸುವವರಿಗೆ ಆ ವಸ್ತುಗಳ ಚಿಂತನೆಯಿಂದ ಬುದ್ಧಿಯಲ್ಲಿ ಅವುಗಳ ಪ್ರತೀತಿ ಉಂಟಾಗುತ್ತದೆ. ಅವನ್ನೇ ಸತ್ ಎಂದು ಒಪ್ಪಿಕೊಂಡಿದ್ದರಿಂದ ಅಸತ್ ಪದಾರ್ಥಗಳ ಸತ್ತೆಯನ್ನು ಸ್ವೀಕರಿಸುತ್ತಾರೆ. ಆದರೆ ಸ್ವಪ್ನಾವಸ್ಥೆಯ ದೃಶ್ಯಗಳು ಎಚ್ಚರವಾದ ಮೇಲೆ ಅವುಗಳ ಮಿಥ್ಯಾತ್ವ ಅರಿವಿಗೆ ಬರುತ್ತದೆ, ಹಾಗೆಯೇ ಸಾಂಸಾರಿಕ ವಿಷಯಗಳ ಕುರಿತು ಮಾಡಲಾದ ಜಾಗ್ರತ್ ಅವಸ್ಥೆಯ ಮನೋರಥಗಳೂ ಮಿಥ್ಯೆಯೇ ಆಗಿವೆ. ಆದ್ದರಿಂದ ಬುದ್ಧಿವಂತರಾದವರು ಪ್ರಾಪಂಚಿಕ ಕರ್ಮಗಳ ಸಂಬಂಧದಲ್ಲಿ ಸಂಕಲ್ಪ-ವಿಕಲ್ಪಮಾಡುವ ಅಲೆಯುವ ಮನಸ್ಸನ್ನು ತಡೆಯಬೇಕು. ಹೀಗೆ ಮಾಡುವುದರಿಂದಲೇ ಅವರಿಗೆ ಅಭಯಪದದ ಅರ್ಥಾತ್ ಪರಮಪದದ ಪ್ರಾಪ್ತಿ ಆಗಿಹೋದೀತು. ॥ ೩೮ ॥ ಜಗತ್ತಿನಲ್ಲಿ ಭಗವಂತನ ಜನ್ಮ-ಕರ್ಮಗಳ ಲೀಲೆಗಳ ಬಹಳ ಮಂಗಲಮಯ ಕಥೆಗಳು ಪ್ರಸಿದ್ಧವಾಗಿವೆ. ಇವನ್ನು ಶ್ರವಣ ಮನನಮಾಡುವುದೇ ಮನಸ್ಸನ್ನು ಭಗವಂತನಲ್ಲಿ ತೊಡಗಿಸುವ ಉಪಾಯವೆಂದು ಹೇಳಲಾಗಿದೆ. ಹಾಗೆಯೇ ಅವನ ಗುಣಗಳನ್ನು, ಲೀಲೆಗಳನ್ನು ಸ್ಮರಣೆಗೆ ತರುವ ಭಗವಂತನ ಅನೇಕ ನಾಮಗಳು ಪ್ರಸಿದ್ಧವಾಗಿವೆ. ಅಂಜಿಕೆ ನಾಚಿಕೆಬಿಟ್ಟು ಅವನ್ನು ಕೊಂಡಾಡುತ್ತಾ ಇರಬೇಕು. ಯಾವುದೇ ವ್ಯಕ್ತಿ, ವಸ್ತು, ಸ್ಥಾನಗಳಲ್ಲಿ ಆಸಕ್ತಿಯನ್ನಿಡಬಾರದು. ॥ ೩೯ ॥ ಈ ಪ್ರಕಾರ ವಿಶುದ್ಧ ವ್ರತ, ನಿಯಮವನ್ನು ಕೈಗೊಳ್ಳುವವನ ಹೃದಯದಲ್ಲಿ ತನ್ನ ಪರಮಪ್ರಿಯತಮ ಪ್ರಭುವಿನ ನಾಮ-ಕೀರ್ತನೆಯಿಂದ ಭಗವಂತನಲ್ಲಿ ಪ್ರೇಮವು ಅಂಕುರಿಸುತ್ತದೆ. ಅವನ ಚಿತ್ತ ದ್ರವಿತವಾಗುತ್ತದೆ. ಆಗ ಅವನು ಸಾಧಾರಣ ಜನರ ಸ್ಥಿತಿಯಿಂದ ಮೇಲೇರುತ್ತಾನೆ. ಜನರ ಮಾನ್ಯತೆ, ನಂಬಿಕೆಗಳಿಂದ ಅತೀತನಾಗುತ್ತಾನೆ. ದಂಭವಿಲ್ಲದೆ ಸ್ವಾಭಾವಿಕವಾಗಿ ಉನ್ಮತ್ತನಾಗಿ ಕೆಲವೊಮ್ಮೆ ಭಗವಂತನ ಲೀಲೆಗಳನ್ನು ನೋಡುತ್ತಾ ಆನಂದದಲ್ಲಿ ಮುಳುಗಿ ನಗುತ್ತಿರುತ್ತಾನೆ. ಕೆಲವೊಮ್ಮೆ ಗೋಪಿಯರಂತೆ ಪ್ರಭು! ನೀನೆಲ್ಲಿ ಹೋಗಿರುವೆ ? ಎಂದು ಬಿದ್ದು-ಬಿದ್ದು ಅಳುತ್ತಾನೆ. ಕೆಲವೊಮ್ಮೆ ಗಟ್ಟಿಯಾಗಿ ಭಗವಂತನನ್ನು ಕೂಗುತ್ತಾನೆ. ಕೆಲವೊಮ್ಮೆ ಮಧುರವಾಗಿ ಅವನ ಗುಣಗಾನ ಮಾಡುತ್ತಾನೆ. ಕೆಲ-ಕೆಲವೊಮ್ಮೆ ತನ್ನ ಪ್ರಿಯತಮನನ್ನು ಕಣ್ಣುಮುಂದೆ ದರ್ಶಿಸುತ್ತಾ ಉನ್ಮಾದದಿಂದ ನೃತ್ಯಮಾಡತೊಡಗುತ್ತಾನೆ. ಈ ಪ್ರಕಾರ ಅವನ ಎಲ್ಲ ಕ್ರಿಯೆಗಳು ಲೋಕ ವಿಲಕ್ಷಣವಾಗುತ್ತದೆ. ॥ ೪೦ ॥

ರಾಜನೇ! ಆಕಾಶ, ವಾಯು, ಅಗ್ನಿ, ಜಲ, ಪೃಥಿವಿ, ಗ್ರಹ, ನಕ್ಷತ್ರ, ಪ್ರಾಣಿಗಳು, ದಿಕ್ಕುಗಳು, ವೃಕ್ಷ-ವನಸ್ಪತಿ, ನದಿ, ಸಮುದ್ರ ಇವೆಲ್ಲವೂ ಭಗವಂತನ ಶರೀರವಾಗಿದೆ. ಎಲ್ಲ ರೂಪಗಳಲ್ಲಿ ಸ್ವತಃ ಭಗವಂತನೇ ಪ್ರಕಟನಾಗಿದ್ದಾನೆ. ಹೀಗೆ ತಿಳಿದುಕೊಂಡು ಅವನು ತನ್ನ ಮುಂದೆ ಸುಳಿಯುವುದೆಲ್ಲವನ್ನೂ – ಭಗವದ್ಭಾವದಿಂದ ನಮಸ್ಕರಿಸುತ್ತಾನೆ. ॥ ೪೧ ॥

ಭಕ್ತಿಃ ಪರೇಶಾನುಭವೋ ವಿರಕ್ತಿ-
ರನ್ಯತ್ರ ಚೈಷ ತ್ರಿಕ ಏಕಕಾಲಃ ।
ಪ್ರಪದ್ಯಮಾನಸ್ಯ ಯಥಾಶ್ನತಃ ಸ್ಯು-
ಸ್ತುಷ್ಟಿಃ ಪುಷ್ಟಿಃ ಕ್ಷುದಪಾಯೋಽನುಘಾಸಮ್ ॥ ೪೨ ॥

ಇತ್ಯಚ್ಯುತಾಂಘ್ರಿಂ ಭಜತೋಽನುವೃತ್ತ್ಯಾ
ಭಕ್ತಿರ್ವಿರಕ್ತಿರ್ಭಗವತ್ಪ್ರಬೋಧಃ ।
ಭವಂತಿ ವೈ ಭಾಗವತಸ್ಯ ರಾಜಂ
ಸ್ತತಃ ಪರಾಂ ಶಾಂತಿಮುಪೈತಿ ಸಾಕ್ಷಾತ್ ॥ ೪೩ ॥

ರಾಜೋವಾಚ

ಅಥ ಭಾಗವತಂ ಬ್ರೂತ ಯದ್ಧರ್ಮೋ ಯಾದೃಶೋ ನೃಣಾಮ್ ।
ಯಥಾ ಚರತಿ ಯದ್ಬ್ರೂತೇ ಯೈರ್ಲಿಂಗೈರ್ಭಗವತ್ಪ್ರಿಯಃ ॥ ೪೪ ॥

ಹರಿರುವಾಚ

ಸರ್ವಭೂತೇಷು ಯಃ ಪಶ್ಯೇದ್ಭಗವದ್ಭಾವಮಾತ್ಮನಃ ।
ಭೂತಾನಿ ಭಗವತ್ಯಾತ್ಮನ್ಯೇಷ ಭಾಗವತೋತ್ತಮಃ ॥ ೪೫ ॥

ಈಶ್ವರೇ ತದಧೀನೇಷು ಬಾಲಿಶೇಷು ದ್ವಿಷತ್ಸು ಚ ।
ಪ್ರೇಮಮೈತ್ರೀಕೃಪೋಪೇಕ್ಷಾ ಯಃ ಕರೋತಿ ಸ ಮಧ್ಯಮಃ ॥ ೪೬ ॥

ಅರ್ಚಾಯಾಮೇವ ಹರಯೇ ಪೂಜಾಂ ಯಃ ಶ್ರದ್ಧಯೇಹತೇ ।
ನ ತದ್ಭಕ್ತೇಷು ಚಾನ್ಯೇಷು ಸ ಭಕ್ತಃ ಪ್ರಾಕೃತಃ ಸ್ಮೃತಃ ॥ ೪೭ ॥

ಗೃಹೀತ್ವಾಪೀಂದ್ರಿಯೈರರ್ಥಾನ್ ಯೋ ನ ದ್ವೇಷ್ಟಿ ನ ಹೃಷ್ಯತಿ ।
ವಿಷ್ಣೋರ್ಮಾಯಾಮಿದಂ ಪಶ್ಯನ್ಸ ವೈ ಭಾಗವತೋತ್ತಮಃ ॥ ೪೮ ॥

ಊಟಮಾಡುವಾಗ ಪ್ರತಿಯೊಂದು ತುತ್ತಿಗೂ ತುಷ್ಟಿ (ತೃಪ್ತಿ ಅಥವಾ ಸುಖ), ಪುಷ್ಟಿ (ಜೀವನ ಶಕ್ತಿಯ ಸಂಚಾರ), ಕ್ಷುಧಾನಿವೃತ್ತಿ ಇವು ಮೂರು ಒಂದೇ ಬಾರಿಗೆ ಆಗುತ್ತಾ ಇರುತ್ತವೆ. ಹಾಗೆಯೇ ಭಗವಂತನಿಗೆ ಶರಣಾಗಿ ಅವನ ಭಜನೆ ಮಾಡುವವನಿಗೆ, ಭಜನೆಯ ಪ್ರತಿಯೊಂದು ಕ್ಷಣದಲ್ಲಿ ಭಗವಂತನ ಕುರಿತು ಪ್ರೀತಿ, ತನ್ನ ಪ್ರೇಮಾಸ್ಪದ ಪ್ರಭುವಿನ ಸ್ವರೂಪದ ಅನುಭವ ಹಾಗೂ ಅವನಲ್ಲದ ಇತರ ವಸ್ತುಗಳಲ್ಲಿ ವೈರಾಗ್ಯ ಇವು ಮೂರು ಒಂದೇ ಬಾರಿಗೆ ಪ್ರಾಪ್ತಿಯಾಗುತ್ತವೆ. ॥ ೪೨ ॥ ರಾಜನೇ! ಈ ವಿಧವಾಗಿ ಪ್ರತಿಕ್ಷಣ ಪ್ರತಿಯೊಂದು ವೃತ್ತಿಯ ಮೂಲಕ ಭಗವಂತನ ಚರಣ ಕಮಲಗಳನ್ನು ಭಜಿಸುವವನಿಗೆ ಭಗವಂತನ ಕುರಿತು ಪ್ರೇಮಮಯ ಭಕ್ತಿ, ಪ್ರಪಂಚದ ಕುರಿತು ವೈರಾಗ್ಯ, ತನ್ನ ಪ್ರಿಯತಮ ಭಗವಂತನ ಸ್ವರೂಪದ ಜ್ಞಾನ ಇವೆಲ್ಲವೂ ಅವಶ್ಯವಾಗಿ ಉಂಟಾಗುತ್ತವೆ. ಅವನು ಭಾಗವತನಾಗಿ ಹೋಗುತ್ತಾನೆ. ಇವೆಲ್ಲವೂ ಪ್ರಾಪ್ತವಾದಾಗ ಅವನು ಪರಮಶಾಂತಿಯನ್ನು ಅನುಭವಿಸತೊಡಗುವನು. (ಆದ್ದರಿಂದ ಶ್ರೇಯೋಕಾಮಿ ಮನುಷ್ಯನು ಭಗವಂತನಿಗೆ ಶರಣಾಗಬೇಕು. ಇದು ಸರ್ವೋತ್ತಮ ಸರಳ ಸಾಧನೆಯಾಗಿದೆ.) ॥ ೪೩ ॥

ರಾಜಾ ನಿಮಿಯು ಕೇಳಿದನು – ಯೋಗೀಶ್ವರರೇ! ಈಗ ನೀವು ದಯಮಾಡಿ ಭಗವದ್ಭಕ್ತನ ಲಕ್ಷಣಗಳನ್ನು ವರ್ಣಿಸಿರಿ. ಅವನ ಧರ್ಮವೇನು? ಅವನ ಸ್ವಭಾವ ಹೇಗಿರುತ್ತದೆ. ಅವನು ಇತರ ರೊಂದಿಗೆ ವ್ಯವಹರಿಸುವಾಗ ಅವನ ಆಚರಣೆ ಹೇಗೆ ಇರುತ್ತದೆ? ಹೇಗೆ ಮಾತಾಡುತ್ತಾನೆ? ಯಾವ ಲಕ್ಷಣಗಳಿಂದ ಅವನು ಭಗವಂತನಿಗೆ ಪ್ರಿಯನಾಗಿರುತ್ತಾನೆ? ॥ ೪೪ ॥

ಒಂಭತ್ತು ಯೋಗೀಶ್ವರರಲ್ಲಿ ಎರಡನೆಯವರಾದ ಹರಿಯೋಗಿಗಳು ಇಂತೆಂದರು – ರಾಜನೇ! ಎಲ್ಲಕ್ಕಿಂತ ಶ್ರೇಷ್ಠ ಭಗವದ್ಭಕ್ತನ ಲಕ್ಷಣಗಳನ್ನು ಹೇಳುತ್ತೇನೆ; ಕೇಳು. ಸಮಸ್ತ ಪ್ರಾಣಿಗಳಲ್ಲಿ ಒಂದೇ ಆತ್ಮನಿರುವನು ಎಂದು ಭಾವಿಸಿ, ಭಗವಂತನ ಸತ್ತೆಯನ್ನು ನೋಡುವವನು, ಸಮಸ್ತ ಪ್ರಾಣಿಗಳನ್ನು ಆತ್ಮಸ್ವರೂಪೀ ಭಗವಂತನಲ್ಲಿ ನೋಡುವವನು ಉತ್ತಮ ಭಾಗವತನಾಗಿದ್ದಾನೆ. ಆದರೆ ಭಗವಂತನಲ್ಲಿ ಪ್ರೇಮವನ್ನಿರಿಸಿ, ಅವನ ಭಕ್ತರಲ್ಲಿ ಸಖಿತನವಿರಿಸುತ್ತಾ, ದುಃಖಿತರ, ಅಜ್ಞಾನಿಗಳ ಮೇಲೆ ದಯೆವಿರಿಸುತ್ತಾ, ಇದ್ದರೂ ಭಗವಂತನನ್ನು ದ್ವೇಷಿಸುವವನನ್ನು ಉಪೇಕ್ಷಿಸುವವನು ಮಧ್ಯಮ ದರ್ಜೆಯ ಭಕ್ತನಾಗಿದ್ದಾನೆ. ॥ ೪೫-೪೬ ॥ ಇದರಿಂದ ಬೇರೆಯಾಗಿ ಭಗವಂತನ ಅರ್ಚಾ-ವಿಗ್ರಹ-ಮೂರ್ತಿಗಳ ಪೂಜೆಯನ್ನೇನೋ ಶ್ರದ್ಧೆಯಿಂದ ಮಾಡುತ್ತಾನೆ, ಆದರೆ ಭಗವಂತನ ಭಕ್ತರಲ್ಲೇ ಅವನಿಗೆ ಶ್ರದ್ಧೆ ಇಲ್ಲ – ಎಂದಾಗ ಬೇರೆ ಜನರಲ್ಲಾದರೋ ಶ್ರದ್ಧೆ ಹೇಗೆ ಉಂಟಾದೀತು? ಇಂತಹವನು ಪ್ರಾಕೃತನಾಗಿದ್ದಾನೆ. ಅವನು ಕೆಳದರ್ಜೆಯ ಭಕ್ತನಾಗಿದ್ದಾನೆ. ॥ ೪೭ ॥

ಗುಣಾತೀತ ಅವಸ್ಥೆಯನ್ನು ವರ್ಣಿಸುತ್ತಾ ಹೇಳುತ್ತಾರೆ – ಇಂದ್ರಿಯಗಳ ಮೂಲಕ ವಿಷಯಗಳನ್ನು ಗ್ರಹಿಸುತ್ತಾ, ಅವು ಬಂದು ಹೋಗುವುದರಲ್ಲಿ ಹರ್ಷಿತನಾಗುವುದಿಲ್ಲ, ಅವುಗಳನ್ನು ದ್ವೇಷಿಸುವುದೂ ಇಲ್ಲ, ಈ ವಿಶ್ವವನ್ನು ಭಗವಂತನ ಮಾಯೆಯೆಂದು ತಿಳಿಯುವವನು ಉತ್ತಮ ಭಾಗವತನಾಗಿದ್ದಾನೆ. ॥ ೪೮ ॥

ದೇಹೇಂದ್ರಿಯ ಪ್ರಾಣಮನೋಧಿಯಾಂ ಯೋ
ಜನ್ಮಾಪ್ಯಯಕ್ಷುದ್ಭಯತರ್ಷಕೃಚ್ಛ್ರೈಃ ।
ಸಂಸಾರಧರ್ಮೈರವಿಮುಹ್ಯಮಾನಃ
ಸ್ಮೃತ್ಯಾ ಹರೇರ್ಭಾಗವತಪ್ರಧಾನಃ ॥ ೪೯ ॥

ನ ಕಾಮಕರ್ಮಬೀಜಾನಾಂ ಯಸ್ಯ ಚೇತಸಿ ಸಂಭವಃ ।
ವಾಸುದೇವೈಕನಿಲಯಃ ಸ ವೈ ಭಾಗವತೋತ್ತಮಃ ॥ ೫೦ ॥

ನ ಯಸ್ಯ ಜನ್ಮ ಕರ್ಮಭ್ಯಾಂ ನ ವರ್ಣಾಶ್ರಮಜಾತಿಭಿಃ ।
ಸಜ್ಜತೇಽಸ್ಮಿನ್ನಹಂಭಾವೋ ದೇಹೇ ವೈ ಸ ಹರೇಃ ಪ್ರಿಯಃ ॥ ೫೧ ॥

ನ ಯಸ್ಯ ಸ್ವಃ ಪರ ಇತಿ ವಿತ್ತೇಷ್ವಾತ್ಮನಿ ವಾ ಭಿದಾ ।
ಸರ್ವಭೂತಸಮಃ ಶಾಂತಃ ಸ ವೈ ಭಾಗವತೋತ್ತಮಃ ॥ ೫೨ ॥

ತ್ರಿಭುವನವಿಭವಹೇತವೇಽಪ್ಯಕುಂಠ-
ಸ್ಮೃತಿರಜಿತಾತ್ಮ ಸುರಾದಿಭಿರ್ವಿಮೃಗ್ಯಾತ್ ।
ನ ಚಲತಿ ಭಗವತ್ಪದಾರವಿಂದಾ-
ಲ್ಲವನಿಮಿಷಾರ್ಧಮಪಿ ಯಃ ಸ ವೈಷ್ಣವಾಗ್ರ್ಯಃ ॥ ೫೩ ॥

ಭಗವತ ಉರುವಿಕ್ರಮಾಂಘ್ರಿಶಾಖಾ-
ನಖಮಣಿಚಂದ್ರಿಕಯಾ ನಿರಸ್ತತಾಪೇ ।
ಹೃದಿ ಕಥಮುಪಸೀದತಾಂ ಪುನಃ ಸ
ಪ್ರಭವತಿ ಚಂದ್ರ ಇವೋದಿತೇಽರ್ಕತಾಪಃ ॥ ೫೪ ॥

ಜನ್ಮ - ಮೃತ್ಯು, ಹಸಿವು - ಬಾಯಾರಿಕೆ, ಭಯ, ಕಷ್ಟ ಮುಂತಾದ ಪ್ರಾಪಂಚಿಕ ಧರ್ಮಗಳು ದೇಹ, ಇಂದ್ರಿಯ, ಪ್ರಾಣ, ಮನ, ಬುದ್ಧಿ ಇವುಗಳಲ್ಲಿ ಬಂದುಹೋಗುತ್ತಾ ಇರುತ್ತವೆ. ಆದರೆ ಭಗವಂತನ ಸ್ಮೃತಿಯಲ್ಲಿ ನಿಮಗ್ನನಾಗಿದ್ದು, ಅವುಗಳಿಂದ ಬಾಧಿತನಾಗದ ಭಗವದ್ಭಕ್ತನು ಉತ್ತಮ ಶ್ರೇಣಿಯ ಭಕ್ತನಾಗಿದ್ದಾನೆ. ಮನಸ್ಸಿನಲ್ಲಿ ವಿಷಯ-ಭೋಗಗಳ ಇಚ್ಛೆ ಕರ್ಮ ಪ್ರವೃತ್ತಿ , ಅವುಗಳ ಬೀಜ ವಾಸನೆಗಳು ಉಂಟಾಗದಿರುವವನು, ಏಕಮಾತ್ರ ಭಗವಾನ್ ವಾಸುದೇವನಲ್ಲೇ ವಾಸಿಸುವವನು ಉತ್ತಮ ಭಗವದ್ಭಕ್ತನಾಗಿರುವನು. ॥ ೪೯-೫೦ ॥ ಆ ಭಕ್ತನು ಜನ್ಮ ಹಾಗೂ ಕರ್ಮದಿಂದಾಗಿ ಅಥವಾ ವರ್ಣ, ಆಶ್ರಮ, ಜಾತಿಯಿಂದಾಗಿ ಅಥವಾ ಶರೀರದಿಂದಾಗಿ ಎಲ್ಲಿಯೂ ಅಹಂತೆ, ಮಮತೆ ಇಡುವುದಿಲ್ಲ ಮತ್ತು ಇವೆಲ್ಲದರಲ್ಲಿ ಆಸಕ್ತನಾಗಿರುವುದಿಲ್ಲ, ಇಂತಹವನು ಭಗವಂತನಿಗೆ ನಿಶ್ಚಯವಾಗಿ ಬಹು ಪ್ರಿಯನಾಗಿರುವನು. ॥ ೫೧ ॥ ಧನ, ಶರೀರಾದಿಗಳಲ್ಲಿ ಆಸಕ್ತಿ ಇಲ್ಲದವನು 'ಇದು ನನ್ನದು, ಇದು ಪರರದು' ಈ ಪ್ರಕಾರದ ಭೇದವಿರಿಸುವುದಿಲ್ಲ, ಅವನು ಸರ್ವತ್ರ ಸಮಭಾವದಿಂದ ಏಕಮಾತ್ರ ಪರಮಾತ್ಮನನ್ನೇ ನೋಡುವನು. ಯಾವುದೇ ಘಟನೆ ಅಥವಾ ಸಂಕಲ್ಪದಿಂದ ವಿಕ್ಷಿಪ್ತನಾಗದೆ ಸದಾಕಾಲ ಶಾಂತವಾಗಿರುತ್ತಾನೆ. ಅವನು ಖಂಡಿತವಾಗಿಯೇ ಭಗವಂತನ ಉತ್ತಮ ಭಕ್ತನಾಗಿದ್ದಾನೆ. ॥ ೫೨ ॥ ರಾಜನೇ! ದೊಡ್ಡ-ದೊಡ್ಡ ದೇವತೆ ಮುಂತಾದವರೂ ಕೂಡ ತಮ್ಮ ಮನಸ್ಸು, ಶರೀರ, ಇಂದ್ರಿಯಗಳನ್ನು ತಮ್ಮ ವಶಪಡಿಸಿಕೊಳ್ಳದೆ, ಭಗವಂತನ ಆ ಚರಣಾರವಿಂದಗಳನ್ನು ಹುಡುಕುತ್ತಲೇ ಇರುತ್ತಾರೆ. ಆದರೆ ಅವರೂ ಕೂಡ ಭಗವತ್ಕೃಪೆಯಿಲ್ಲದೆ ಅವನ್ನು ಪಡೆಯಲಾರರು. ಆದರೆ ಭಗವಂತನ ಪ್ರೇಮೀಭಕ್ತನ ಚಿತ್ತ ನಿರಂತರ ಆ ಚರಣಗಳ ಸನ್ನಿಧಿಯಲ್ಲಿ ಹಾಗೂ ಸೇವೆಯಲ್ಲಿ ತೊಡಗಿರುತ್ತವೆ. ಅವನಿಗೆ ಯಾರಾದರೂ ಮೂರುಲೋಕದ ರಾಜ್ಯಲಕ್ಷ್ಮಿಯ ಪ್ರಲೋಭನೆ ಒಡ್ಡಿದರೂ ಅವನು ಭಗವತ್ ಸ್ಮೃತಿಯಿಂದ ವಿಚಲಿತನಾಗುವುದಿಲ್ಲ. ಏನೇ ಹೇಳಲೀ, ಅವನು ಆ ರಾಜ್ಯಲಕ್ಷ್ಮಿಯ ಕಡೆಗೆ ಗಮನವನ್ನೇ ಕೊಡುವುದಿಲ್ಲ, ಇಂತಹ ಭಕ್ತನಿಗಾಗಿ ಭಗವಂತನು ಅರೆಕ್ಷಣವೂ ಮರೆಯಾಗುವುದಿಲ್ಲ, ಅವನೂ ಕೂಡ ಭಗವಂತನಿಂದ ಮರೆಯಾಗುವುದಿಲ್ಲ, ಇಂತಹ ಭಗವದ್ಭಕ್ತನು ವೈಷ್ಣವರಲ್ಲಿ ಅಗ್ರಗಣ್ಯನಾಗಿದ್ದಾನೆ. ಎಲ್ಲರಿಂದ ಶ್ರೇಷ್ಠನಾಗಿದ್ದಾನೆ. ॥ ೫೩ ॥ ಭಗವಂತನ ಪರಾಕ್ರಮ ಅಸೀಮವಾಗಿದೆ. ಇಂತಹ ಆ ಪ್ರಭುವಿನ ಪಾದನಖಚಂದ್ರಿಕೆಯಿಂದ ಶರಣಾಗತ ಭಕ್ತರ ಹೃದಯದ ಸಂತಾಪವು ಒಮ್ಮೆಗೇ ದೂರವಾಗಿಹೋಗುತ್ತದೆ. ಆ ಭಕ್ತನು ಭಗವಂತನ ಭಕ್ತಿಯಲ್ಲೇ ಆನಂದಿತನಾಗಿರುತ್ತಾನೆ. ಭಗವಂತನ ಚರಣಗಳಲ್ಲಿ ಅನನ್ಯ ಶರಣಾಗತಿಯ ಹೊರತು ಅವನು ಎಲ್ಲಿಗೂ ಹೋಗಲಾರನು. ಚಂದ್ರೋದಯವಾದ ಬಳಿಕ ಸೂರ್ಯನ ಪ್ರಖರ ತಾಪ ಬಾಧಿಸದಂತೆ, ಅವನನ್ನು ಕಾಮ, ಕ್ರೋಧಾದಿ ಶತ್ರುಗಳು ಮತ್ತೆ ಪ್ರಭಾವಿತನನ್ನಾಗಿಸಲಾರವು. ॥ ೫೪ ॥

ವಿಸೃಜತಿ ಹೃದಯಂ ನ ಯಸ್ಯ ಸಾಕ್ಷಾ-
ದ್ಧರಿರವಶಾಭಿಹಿತೋಽಪ್ಯಘೌಘನಾಶಃ ।
ಪ್ರಣಯರಶನಯಾ ಧೃತಾಂಘ್ರಿಪದ್ಮಃ
ಸ ಭವತಿ ಭಾಗವತಪ್ರಧಾನ ಉಕ್ತಃ ॥ ೫೫ ॥

ಭಗವಂತನ ನಾಮವನ್ನು ವಿವಶನಾಗಿ ಉಚ್ಚರಿಸಿದರೂ ಕೂಡ ಭಗವಂತನು ಅವನ ಸಂಪೂರ್ಣ ಪಾಪರಾಶಿಯನ್ನು ತತ್‌ಕಾಲವೇ ನಾಶಮಾಡಿಬಿಡುತ್ತಾನೆ. ಅಂತಹ ಸ್ವಯಂ ಭಗವಾನ್ ಶ್ರೀಹರಿಯು ಅವನ ಹೃದಯದಿಂದ ಒಂದು ಕ್ಷಣವೂ ಅಗಲುವುದಿಲ್ಲ, ಏಕೆಂದರೆ, ಅವನು ಪ್ರೇಮಸೂತ್ರದಿಂದ ಅವನ ಚರಣಕಮಲಗಳನ್ನು ಗಟ್ಟಿಯಾಗಿ ಕಟ್ಟಿ ಇಟ್ಟಿರುವನು. ನಿಜವಾಗಿ ಇಂತಹವನೇ ಭಗವಂತನ ಭಕ್ತರಲ್ಲಿ ಅಗ್ರೇಸರನಾಗಿರುವನು. ಅವನೇ ಮಹಾಪುರುಷನಾಗಿದ್ದಾನೆ. ॥ ೫೫ ॥

ಎರಡನೆಯ ಅಧ್ಯಾಯವು ಮುಗಿಯಿತು. ॥ ೨ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಏಕಾದಶಸ್ಕಂಧೇ ದ್ವಿತೀಯೋಽಧ್ಯಾಯಃ ॥ ೨ ॥

ಮೂರನೆಯ ಅಧ್ಯಾಯ

ಮಾಯೆ, ಮಾಯೆಯಿಂದ ಪಾರಾಗುವ ಉಪಾಯ – ಬ್ರಹ್ಮ ಹಾಗೂ ಕರ್ಮಯೋಗದ ನಿರೂಪಣೆ

ರಾಜೋವಾಚ

ಪರಸ್ಯ ವಿಷ್ಣೋರೀಶಸ್ಯ ಮಾಯಿನಾಮಪಿ ಮೋಹಿನೀಮ್ ।
ಮಾಯಾಂ ವೇದಿತುಮಿಚ್ಛಾಮೋ ಭಗವಂತೋ ಬ್ರುವಂತು ನಃ ॥ ೧ ॥

ನಾನುತೃಪ್ಯೇ ಜುಷನ್ಯುಷ್ಮದ್ವಚೋ ಹರಿಕಥಾಮೃತಮ್ ।
ಸಂಸಾರತಾಪನಿಸ್ತಪ್ತೋ ಮರ್ತ್ಯಸ್ತತ್ತಾಪಭೇಷಜಮ್ ॥ ೨ ॥

ರಾಜಾ ನಿಮಿಯು ಕೇಳಿದನು – ಭಗವನ್ ! ಸರ್ವಶಕ್ತಿಸಂಪನ್ನ ಪರಮಕಾರಣ ಭಗವಾನ್ ವಿಷ್ಣುವಿನ ಮಾಯೆಯು ಬ್ರಹ್ಮದೇವರಿಂದ ಹಿಡಿದು ಸಮಸ್ತ ಜೀವಿಗಳನ್ನೂ ಮೋಹಿಸುತ್ತದೆ. ಅದರ ನಿಜರೂಪವನ್ನು ಯಾರೂ ತಿಳಿಯಲಾರರು. ನಾನು ಪ್ರಭುವಿನ ಮಾಯೆಯ ಸ್ವರೂಪವನ್ನು ತಿಳಿಯಬಯಸುತ್ತೇನೆ. ಕೃಪೆದೋರಿ ನನಗೆ ತಿಳಿಸುವರಾಗಿರಿ. ॥ ೧ ॥ ಈ ಮನುಷ್ಯನು ಪ್ರಪಂಚದ ತ್ರಿತಾಪದಿಂದ ಬೇಯುತ್ತಿದ್ದಾನೆ. ಇಂತಹ ತಾಪದಿಂದ ಬಿಡುಗಡೆ ಹೊಂದಲು ಭಗವಂತನ ಅಮೃತಮಯ ಹರಿಕಥೆಯೇ ಏಕಮಾತ್ರ ಪರಮೌಷಧವಾಗಿದೆ. ನಿಮ್ಮ ಮೂಲಕ ಭಗವತ್‌ಕಥಾಮೃತವನ್ನು ಪಾನಮಾಡುತ್ತಿದ್ದರೂ ನಮಗೆ ತೃಪ್ತಿಯಾಗುತ್ತಿಲ್ಲ, ಇನ್ನೂ-ಮತ್ತೂ ಕೇಳುವ ಉತ್ಕಂಠತೆ ಹೆಚ್ಚುತ್ತಾ ಹೋಗುತ್ತದೆ. ॥ ೨ ॥

ಅಂತರಿಕ್ಷ ಉವಾಚ

ಏಭಿರ್ಭೂತಾನಿ ಭೂತಾತ್ಮಾ ಮಹಾಭೂತೈರ್ಮಹಾಭುಜ ।
ಸಸರ್ಜೋಚ್ಚಾವಚಾನ್ಯಾದ್ಯಃ ಸ್ವಮಾತ್ರಾತ್ಮಪ್ರಸಿದ್ಧಯೇ ॥ ೩ ॥

ಏವಂ ಸೃಷ್ಟಾನಿ ಭೂತಾನಿ ಪ್ರವಿಷ್ಟಃ ಪಂಚಧಾತುಭಿಃ ।
ಏಕಧಾ ದಶಧಾಽಽತ್ಮಾನಂ ವಿಭಜನ್ ಜುಷತೇ ಗುಣಾನ್ ॥ ೪ ॥

ಮೂರನೇಯ ಅಂತರಿಕ್ಷ ಯೋಗೀಶ್ವರರು ಹೇಳಿದರು – ಮಹಾಬಾಹುವೇ ! ಆದಿಪುರುಷ ಭಗವಾನ್ ನಾರಾಯಣನು ಸರ್ವಪ್ರಾಣಿಗಳ ಆತ್ಮಾ ಆಗಿದ್ದಾನೆ. ಅವನೇ ಈ ಪಂಚಭೂತಗಳಿಂದ ಸಣ್ಣ-ದೊಡ್ಡ ಎಲ್ಲ ರೀತಿಯ ಪ್ರಾಣಿಗಳನ್ನು ಸೃಷ್ಟಿಸಿದನು ಹಾಗೂ ತಾನೇ ಸ್ವತಃ ವಿಷಯಭೋಗ ಪ್ರದಾನ ಮಾಡಲು ಅನೇಕ ವಿಧದಿಂದ ಸಾಮಗ್ರಿಯನ್ನೂ ಪ್ರಸ್ತುತಪಡಿಸಿದನು. ತನ್ನ ಆತ್ಮಸ್ವರೂಪದ ಜ್ಞಾನದ ವಿಸ್ತಾರಕ್ಕಾಗಿ ಅವನು ಸ್ವಯಂ ಅನೇಕ ರೂಪಗಳನ್ನು ಧರಿಸಿದನು. ಈ ಪ್ರಕಾರ ಸಮಸ್ತ ಸೃಷ್ಟಿ ಏಕಮಾತ್ರ ಪರಮಾತ್ಮನದ್ದೇ ಸ್ವರೂಪವಾಗಿದೆ. ॥ ೩ ॥ ಈ ವಿಧದಿಂದ ಪರಮಾತ್ಮನು ಎಲ್ಲ ಪ್ರಾಣಿಗಳನ್ನು ನಿರ್ಮಿಸಿ, ಪಂಚಮಹಾಭೂತಗಳಿಂದ ಉಂಟಾದ ಆ ಶರೀರಗಳಲ್ಲಿ ಅಂತರ್ಯಾಮಿಯಾಗಿ ಸ್ವತಃ ಪ್ರವಿಷ್ಟನಾದನು. ಒಂದು ಮನಸ್ಸು ಮತ್ತು ಹತ್ತು ಇಂದ್ರಿಯಗಳ ಮೂಲಕ ತನ್ನನ್ನೇ ವಿಭಕ್ತನನ್ನಾಗಿಸಿ, ಸ್ವಯಂ ಆ ಗುಣಗಳನ್ನು ಉಪಭೋಗಿಸುತ್ತಾನೆ. ಆದರೆ ಅವನು ಆ ಗುಣಗಳಲ್ಲಿ ಆಸಕ್ತನಾಗುವುದಿಲ್ಲ, ತನ್ನ ಮೂಲಕವೇ ಪ್ರಕಾಶಿತವಾದ ಈ ಗುಣಗಳೇ

ಗುಣೈರ್ಗುಣಾನ್ ಸ ಭುಂಜಾನ ಆತ್ಮಪ್ರದ್ಯೋತಿತೈಃ ಪ್ರಭುಃ ।
ಮನ್ಯಮಾನ ಇದಂ ಸೃಷ್ಟಮಾತ್ಮಾನಮಿಹ ಸಜ್ಜತೇ ॥ ೫ ॥

ಕರ್ಮಾಣಿ ಕರ್ಮಭಿಃ ಕುರ್ವನ್ಸನಿಮಿತ್ತಾನಿ ದೇಹಭೃತ್ ।
ತತ್ತತ್ಕರ್ಮಫಲಂ ಗೃಹ್ಣನ್ಭ್ರಮತೀಹ ಸುಖೇತರಮ್ ॥ ೬ ॥

ಇತ್ಥಂ ಕರ್ಮಗತೀರ್ಗಚ್ಛನ್ ಬಹ್ವಭದ್ರವಹಾಃ ಪುಮಾನ್ ।
ಆಭೂತಸಂಪ್ಲವಾತ್ ಸರ್ಗಪ್ರಲಯಾವಶ್ನುತೇಽವಶಃ ॥ ೭ ॥

ಧಾತೂಪಪ್ಲವ ಆಸನ್ನೇ ವ್ಯಕ್ತಂ ದ್ರವ್ಯಗುಣಾತ್ಮಕಮ್ ।
ಅನಾದಿನಿಧನಃ ಕಾಲೋ ಹ್ಯವ್ಯಕ್ತಾಯಾಪಕರ್ಷತಿ ॥ ೮ ॥

ಶತವರ್ಷಾ ಹ್ಯನಾವೃಷ್ಟಿರ್ಭವಿಷ್ಯತ್ಯುಲ್ಬಣಾ ಭುವಿ ।
ತತ್ಕಾಲೋಪಚಿತೋಷ್ಣಾರ್ಕೋ ಲೋಕಾಂಸ್ತ್ರೀನ್ ಪ್ರತಪಿಷ್ಯತಿ ॥ ೯ ॥

ಪಾತಾಲತಲಮಾರಭ್ಯ ಸಂಕರ್ಷಣಮುಖಾನಲಃ ।
ದಹನ್ನೂರ್ಧ್ವಶಿಖೋ ವಿಷ್ವಗ್ವರ್ಧತೇ ವಾಯುನೇರಿತಃ ॥ ೧೦ ॥

ಸಾಂವರ್ತಕೋ ಮೇಘಗಣೋ ವರ್ಷತಿ ಸ್ಮ ಶತಂ ಸಮಾಃ ।
ಧಾರಾಭಿರ್ಹಸ್ತಿಹಸ್ತಾಭಿರ್ಲೀಯತೇ ಸಲಿಲೇ ವಿರಾಟ್ ॥ ೧೧ ॥

ತತೋ ವಿರಾಜಮುತ್ಸೃಜ್ಯ ವೈರಾಜಃ ಪುರುಷೋ ನೃಪ ।
ಅವ್ಯಕ್ತಂ ವಿಶತೇ ಸೂಕ್ಷ್ಮಂ ನಿರಿಂಧನ ಇವಾನಲಃ ॥ ೧೨ ॥

ವಾಯುನಾ ಹೃತಗಂಧಾ ಭೂಃ ಸಲಿಲತ್ವಾಯ ಕಲ್ಪತೇ ।
ಸಲಿಲಂ ತದ್ಧೃತರಸಂ ಜ್ಯೋತಿಷ್ಟ್ವಾಯೋಪಕಲ್ಪತೇ ॥ ೧೩ ॥

ಹೃತರೂಪಂ ತು ತಮಸಾ ವಾಯೌ ಜ್ಯೋತಿಃ ಪ್ರಲೀಯತೇ ।
ಹೃತಸ್ಪರ್ಶೋಽವಕಾಶೇನ ವಾಯುರ್ನಭಸಿ ಲೀಯತೇ ॥ ೧೪ ॥

ಗುಣಗಳಲ್ಲಿ ವರ್ತಿಸುತ್ತವೆ. ಆದರೆ ಜೀವಿಯು ಅವನಿಂದ ನಿರ್ಮಿಸಲ್ಪಟ್ಟ ಪ್ರಪಂಚದಲ್ಲಿ ಆತ್ಮಬುದ್ಧಿಯನ್ನಿರಿಸಿ, 'ಇದೆಲ್ಲವೂ ನಾನೇ ಆಗಿದ್ದೇನೆ, ನನ್ನದೇ ಆಗಿದೆ' ಎಂಬ ಸಂಬಂಧವನ್ನು ಜೋಡಿಸಿ ಕೊಂಡು, ತನ್ನಲ್ಲಿ ಕರ್ತೃತ್ವ-ಭೋಕ್ತೃತ್ವವನ್ನು ಆರೋಪಿಸಿಕೊಂಡು ಅವನು ಬಂಧಿತ ನಾಗುವನು. ಇದೇ ಮಾಯೆ ಆಗಿದೆ. ॥ ೪-೫ ॥ ಈ ಪ್ರಕಾರ ದೇಹಾಭಿಮಾನಿ ಮನುಷ್ಯನು ಕರ್ಮೇಂದ್ರಿಯಗಳಿಂದ ಕರ್ಮಗಳನ್ನು ಸಕಾಮಭಾವದಿಂದ ಮಾಡುತ್ತಾ ಆಯಾಯಾ ಕರ್ಮಗಳನುಸಾರ ಫಲವನ್ನು ಭೋಗಿಸುತ್ತಾನೆ ಹಾಗೂ ಸುಖ ದುಃಖಗಳಲ್ಲಿ ಸಿಕ್ಕಿಹಾಕಿಕೊಂಡು ಜನ್ಮ-ಮರಣಗಳ ಸುಳಿಯಲ್ಲಿ ಅಲೆಯುತ್ತಾ ಇರುತ್ತಾನೆ. ಅವನು ಇದರಿಂದ ಮುಕ್ತನಾಗು ವುದಿಲ್ಲ. ॥ ೬ ॥ ಹೀಗೆ ಈ ಜೀವಿಯು ಅಹಂಭಾವದ ಕಾರಣವೇ ಅನೇಕ ಅಮಂಗಳ ಗತಿಗಳನ್ನು ಹೊಂದುತ್ತಾ ಇರುತ್ತಾನೆ. ಮಹಾ ಪ್ರಳಯದವರೆಗೂ ಹುಟ್ಟಿದ ಬಳಿಕ ಮೃತ್ಯು, ಮೃತ್ಯುವಿನ ಬಳಿಕ ಜನ್ಮ ಹೀಗೆ ಪರವಶನಾಗಿ ಹುಟ್ಟು-ಸಾವಿನ ಚಕ್ರದಲ್ಲಿ ಯಾವಾಗಲೂ ಸುತ್ತುತ್ತಾ ಇರುತ್ತಾನೆ. ಇದೆಲ್ಲವೂ ಭಗವಂತನ ಮಾಯೆ ಯಾಗಿದೆ. ॥ ೭ ॥ ಪಂಚಮಹಾಭೂತಗಳ ಪ್ರಳಯದ ಸಮಯ ಸಮೀಪಿಸಿದಾಗ ಅನಾದಿ ಹಾಗೂ ಅನಂತ ಕಾಲನೇ ಸ್ಥೂಲ, ಸೂಕ್ಷ್ಮ ದ್ರವ್ಯ, ಗುಣರೂಪೀ ಈ ಸಮಸ್ತ ದೃಶ್ಯಪ್ರಪಂಚವನ್ನು ಅವ್ಯಕ್ತದ ಕಡೆಗೆ ಅರ್ಥಾತ್ ತನ್ನ ಮೂಲಪ್ರಕೃತಿಯಲ್ಲಿ ಸೆಳೆದುಕೊಳ್ಳುವನು. ಅಂದರೆ ಎಲ್ಲವನ್ನೂ ತನ್ನಲ್ಲಿ ಲೀನಗೊಳಿಸಿಕೊಳ್ಳುವನು. ಆಗ ಒಂದೇ ಸವನೆ ನೂರುವರ್ಷ ಭಯಂಕರ ಕ್ಷಾಮತಲೆದೋರಿ, ಭೂಮಿಯಲ್ಲಿ ಭಾರೀ ಉಷ್ಣತೆ ಬೆಳೆಯುತ್ತದೆ. ಆ ಹೆಚ್ಚಾದ ಉಷ್ಣತೆಯಿಂದ ಮೂರೂ ಲೋಕಗಳು ಸುಡಲು ತೊಡಗುತ್ತವೆ. ॥ ೮-೯ ॥ ಆಗಲೇ ಸಂಕ ರ್ಷಣನ ಮುಖದಿಂದ ಪ್ರಚಂಡ ಅಗ್ನಿಜ್ವಾಲೆಗಳು ಹೊರಬೀಳುತ್ತವೆ. ವಾಯುವಿನ ಪ್ರೇರಣೆಯಿಂದ ಆ ಜ್ವಾಲೆಗಳು ಪಾತಾಳದಿಂದ ಸುಡಲು ಪ್ರಾರಂಭಿಸುತ್ತವೆ ಹಾಗೂ ಅತಿ ಎತ್ತರಕ್ಕೆ ಬೆಳೆಯುತ್ತಾ ಎಲ್ಲೆಡೆ ಹರಡಿಕೊಂಡು ಇಡೀ ವಿಶ್ವವನ್ನು ಸುಡಲು ತೊಡಗು ತ್ತವೆ. ॥ ೧೦ ॥ ಆ ಪ್ರಚಂಡ ಉಷ್ಣತೆಯ ಪರಿಣಾಮವಾಗಿ ನೂರು ವರ್ಷಗಳವರೆಗೆ ಪ್ರಳಯಕಾಲದ ಸಂವರ್ತಕ ಮೇಘಗಳು ಆನೆಯ ಸೊಂಡಿಲಿನ ಗಾತ್ರದ ಭಾರೀ ಮಳೆ ಸುರಿಸುತ್ತವೆ. ಆಗ ಈ ವಿರಾಟ್ ವಿಶ್ವವು ನೀರಿನಲ್ಲಿ ಮುಳುಗಿಹೋಗುತ್ತದೆ. ॥ ೧೧ ॥ ಎಲೈ ರಾಜನೇ ! ಉರವಲು ಮುಗಿದಾಗ ಅಗ್ನಿಯು ತನ್ನ ಅವ್ಯಕ್ತ ಸ್ವರೂಪದಲ್ಲಿ ಲೀನವಾಗುವಂತೆ, ಈ ವಿರಾಟ್ ಸ್ವರೂಪವುಳ್ಳ ಪರಮಾತ್ಮನು ತನ್ನ ವಿರಾಟ್ ಶರೀರವನ್ನು ತ್ಯಜಿಸಿ ತನ್ನ ಅವ್ಯಕ್ತ ಸ್ವರೂಪದಲ್ಲಿ ಇರುತ್ತಾನೆ. ಆ ಪ್ರಳಯಕಾಲದಲ್ಲಿ ಪೃಥ್ವಿಯ ಗಂಧ ತನ್ಮಾತ್ರೆಯನ್ನು ವಾಯುವು ಸೆಳೆದುಕೊಂಡಾಗ ಪೃಥ್ವಿಯು ನೀರಿನಲ್ಲಿ ಮುಳುಗಿಹೋಗುತ್ತದೆ. ಹೀಗೆಯೇ ಜಲದ ತನ್ಮಾತ್ರೆ ರಸವನ್ನೂ ವಾಯು ಸೆಳೆದು ಕೊಂಡಾಗ ಜಲವು ತನ್ನ ಕಾರಣವಾದ ಅಗ್ನಿಯಲ್ಲಿ ವಿಲೀನವಾಗು ತ್ತದೆ. ॥ ೧೨-೧೩ ॥ ಅಂಧಕಾರದ ಮೂಲಕ ಅಗ್ನಿಯ ರೂಪತನ್ಮಾತ್ರೆಯನ್ನು ಹೀರಿಕೊಂಡಾಗ ಜ್ಯೋತಿ (ಅಗ್ನಿ) ತತ್ತ್ವವು ವಾಯುವಿನಲ್ಲಿ ವಿಲೀನವಾಗಿ ಹೋಗುತ್ತದೆ. ಹೀಗೆಯೇ ವಾಯುವಿನ ಗುಣ ಸ್ಪರ್ಶ ತನ್ಮಾತ್ರೆಯನ್ನು ಆಕಾಶದ ಮೂಲಕ ಹೀರಿ ಕೊಂಡಾಗ ವಾಯು ಆಕಾಶದಲ್ಲಿ ವಿಲೀನವಾಗುತ್ತದೆ. ॥ ೧೪ ॥

ಕಾಲಾತ್ಮನಾ ಹೃತಗುಣಂ ನಭ ಆತ್ಮನಿ ಲೀಯತೇ ।
ಇಂದ್ರಿಯಾಣಿ ಮನೋ ಬುದ್ಧಿಃ ಸಹ ವೈಕಾರಿಕೈರ್ನೃಪ ।
ಪ್ರವಿಶಂತಿ ಹ್ಯಹಂಕಾರಂ ಸ್ವಗುಣೈರಹಮಾತ್ಮನಿ ॥ ೧೫ ॥

ಏಷಾ ಮಾಯಾ ಭಗವತಃ ಸರ್ಗಸ್ಥಿತ್ಯಂತಕಾರಿಣೀ ।
ತ್ರಿವರ್ಣಾ ವರ್ಣಿತಾಸ್ಮಾಭಿಃ ಕಿಂ ಭೂಯಃ ಶ್ರೋತುಮಿಚ್ಛಸಿ ॥ ೧೬ ॥

ರಾಜೋವಾಚ

ಯಥೈತಾಮೈಶ್ವರೀಂ ಮಾಯಾಂ ದುಸ್ತರಾಮಕೃತಾತ್ಮಭಿಃ ।
ತರಂತ್ಯಂಜಃ ಸ್ಥೂಲಧಿಯೋ ಮಹರ್ಷ ಇದಮುಚ್ಯತಾಮ್ ॥ ೧೭ ॥

ಪ್ರಬುದ್ಧ ಉವಾಚ

ಕರ್ಮಾಣ್ಯಾರಭಮಾಣಾನಾಂ ದುಃಖಹತ್ಯೈ ಸುಖಾಯ ಚ ।
ಪಶ್ಯೇತ್ಪಾಕವಿಪರ್ಯಾಸಂ ಮಿಥುನೀಚಾರಿಣಾಂ ನೃಣಾಮ್ ॥ ೧೮ ॥

ನಿತ್ಯಾರ್ತಿದೇನ ವಿತ್ತೇನ ದುರ್ಲಭೇನಾತ್ಮಮೃತ್ಯುನಾ ।
ಗೃಹಾಪತ್ಯಾಪ್ತಪಶುಭಿಃ ಕಾ ಪ್ರೀತಿಃ ಸಾಧಿತೈಶ್ಚಲೈಃ ॥ ೧೯ ॥

ಏವಂ ಲೋಕಂ ಪರಂ ವಿದ್ಯಾನ್ನಶ್ವರಂ ಕರ್ಮನಿರ್ಮಿತಮ್ ।
ಸತುಲ್ಯಾತಿಶಯಧ್ವಂಸಂ ಯಥಾ ಮಂಡಲವರ್ತಿನಾಮ್ ॥ ೨೦ ॥

ತಸ್ಮಾದ್ಗುರುಂ ಪ್ರಪದ್ಯೇತ ಜಿಜ್ಞಾಸುಃ ಶ್ರೇಯ ಉತ್ತಮಮ್ ।
ಶಾಬ್ದೇ ಪರೇ ಚ ನಿಷ್ಣಾತಂ ಬ್ರಹ್ಮಣ್ಯುಪಶಮಾಶ್ರಯಮ್ ॥ ೨೧ ॥

ಕಾಲಸ್ವರೂಪಿಯಾದ ಈಶ್ವರನು ಆಕಾಶದ ಗುಣ ಶಬ್ದ ತನ್ಮಾತ್ರೆಯನ್ನು ಹೀರಿಕೊಂಡಾಗ ಆಕಾಶವು ಅಹಂಕಾರ ತತ್ತ್ವದಲ್ಲಿ ಲಯವಾಗುತ್ತದೆ. ಜೊತೆಗೆ ಇಂದ್ರಿಯಗಳು, ಮನ-ಬುದ್ಧಿಗಳು ಇವೆಲ್ಲವೂ ತಮ್ಮ-ತಮ್ಮ ಅಧಿಷ್ಠಾತೃ ದೇವತೆಗಳೊಂದಿಗೆ ಅಹಂಕಾರದಲ್ಲಿ ಲೀನವಾಗುತ್ತವೆ. ಮತ್ತೆ ಅಹಂಕಾರವೂ ಮೂಲಸ್ವರೂಪ ಮಹತ್ತತ್ತ್ವದಲ್ಲಿ ಲೀನವಾಗಿ ಹೋಗುತ್ತದೆ. ॥ ೧೫ ॥ ಈ ವಿಧದಿಂದ ಭಗವಂತನೇ ತ್ರಿಗುಣಮಯಿ ಮಾಯೆಯ ಮೂಲಕ ಈ ಸೃಷ್ಟಿಯ ಉತ್ಪತ್ತಿ, ಸ್ಥಿತಿ, ಸಂಹಾರ ಮಾಡುತ್ತಾ ಇರುತ್ತಾನೆ. ಇದನ್ನು ನಾನು ವರ್ಣಿಸಿದೆ. ಈಗ ನೀನು ಏನನ್ನು ಕೇಳಲು ಬಯಸುವೆ. ॥ ೧೬ ॥

ರಾಜಾ ನಿಮಿಯು ಕೇಳಿದನು – ಓ ಮಹರ್ಷಿಗಳೇ! ತಮ್ಮ ಮನವನ್ನು ವಶಪಡಿಸಿಕೊಂಡಿರದ ಜನರಿಗೆ ಭಗವಂತನ ಮಾಯೆಯನ್ನು ದಾಟುವುದು ತುಂಬಾ ಕಠಿಣವಾಗಿದೆ. ಆದ್ದರಿಂದ ಸಾಮಾನ್ಯ ಜನರೂ ಕೂಡ ಆಯಾಸವಿಲ್ಲದೆ ಈ ಮಾಯೆಯನ್ನು ದಾಟಬಲ್ಲಂತಹ ಯಾವುದಾದರೂ ಸರಳ ಉಪಾಯವನ್ನು ತಾವು ತಿಳಿಸಿರಿ. ॥ ೧೭ ॥

ಈಗ ನಾಲ್ಕನೆಯವರಾದ ಶ್ರೀಪ್ರಬುದ್ಧ ಯೋಗೀಶ್ವರರು ಹೇಳುತ್ತಾರೆ – ಜನರು ಕಾಮನೆಗಳಿಂದ ಬಂಧಿತರಾಗಿ ಅನೇಕ ಪ್ರಕಾರದ ಕರ್ಮಗಳನ್ನು ಮಾಡುತ್ತಾ, ಇದರಿಂದ ತಮ್ಮ ಕಷ್ಟಗಳು ಇಲ್ಲವಾಗುವವು ಹಾಗೂ ಸುಖಿಯಾಗುವೆವು ಎಂದು ಯೋಚಿಸುತ್ತಾರೆ. ಆದರೆ ಅದರ ಪರಿಣಾಮ ವಿಪರೀತವೇ ಆಗುತ್ತದೆ. ಈ ಪ್ರಕಾರ ಜನರು ಕಾಮ್ಯ ಪ್ರವೃತ್ತಿಯಲ್ಲಿ ಸಿಕ್ಕಿಕೊಂಡಿರುವರು. ಅವರ ಆ ಕರ್ಮಗಳ ವಿಪರೀತ ಪರಿಣಾಮವನ್ನು ನೋಡಿ, ವಿಚಾರ ಕುಶಲರಾದವರು ಕಾಮ್ಯಕರ್ಮಗಳಿಂದ ನಿವೃತ್ತರಾಗಬೇಕು. ॥ ೧೮ ॥ ಧನವು ನಿತ್ಯವೂ ದುಃಖ ಕೊಡುವಂತಹುದು. ಅನೇಕ ಕಷ್ಟಗಳಿಂದ ಕೂಡಿದೆ. ಅದನ್ನು ಗಳಿಸಲು ಅನೇಕ ಕಷ್ಟಗಳು ಇದ್ದೇ ಇವೆ. ದೊರಕಿದರೂ ಪಡೆದವರ ಮೃತ್ಯುವಿನ ಕಾರಣವೂ ಆಗುತ್ತದೆ. ಹೀಗೆಯೇ ಮನೆ, ಮಕ್ಕಳು, ನೆಂಟರು, ಪಶು, ಧನ ಮುಂತಾದವುಗಳೂ ಕೂಡ ಅನಿತ್ಯ ಮತ್ತು ನಾಶವುಳ್ಳದ್ದಾಗಿದೆ. ಇಂತಹ ನಾಶವುಳ್ಳ ಪದಾರ್ಥಗಳಿಂದ ಶಾಶ್ವತವಾದ ಶಾಂತಿಯು ಹೇಗೆ ದೊರೆಯಬಲ್ಲದು? ॥ ೧೯ ॥ ಇದೇ ಪ್ರಕಾರ ಈ ಸಕಾಮ ಅನುಷ್ಠಾನಗಳಿಂದ ಪಡೆದುಕೊಂಡ ಸ್ವರ್ಗಾದಿಗಳೂ ಅನಿತ್ಯ, ನಾಶವುಳ್ಳದ್ದಾಗಿವೆ ಎಂದೇ ತಿಳಿಯಬೇಕು. ಏಕೆಂದರೆ, ಇಲ್ಲಿಯ ರಾಜರಲ್ಲಿ ಬೇರೆ ರಾಜರ ಕುರಿತು ಇರುವ ಮತ್ಸರದಂತೆ, ಅಲ್ಲಿಯೂ ಕೂಡ ಪರಸ್ಪರ ಸ್ಪರ್ಧೆಯ ಭಾವನೆ, ಈರ್ಷ್ಯಾ-ದ್ವೇಷದ ಭಾವ ಇರುತ್ತದೆ. ಆದ್ದರಿಂದ ಇಂತಹ ರಾಗ-ದ್ವೇಷದ ವಾತಾವರಣದಲ್ಲಿ ಸುಖ-ಶಾಂತಿ ಹೇಗೆ ಸಿಗಬಲ್ಲದು? ॥ ೨೦ ॥ ಆದ್ದರಿಂದ ಸರ್ವೋತ್ತಮ ಶ್ರೇಯೋಪ್ರಾಪ್ತಿಯ ಜಿಜ್ಞಾಸುವು ಶಬ್ದ ಬ್ರಹ್ಮನಲ್ಲಿ (ವೇದಾದಿಗಳಲ್ಲಿ) ನಿಷ್ಣಾತನಾಗಿದ್ದು ಪರಬ್ರಹ್ಮ ಪರಮಾತ್ಮನಲ್ಲೇ ಶಾಂತಿಯ ಆಶ್ರಯ ಪಡೆದಂತಹ ಸದ್ಗುರುವನ್ನು ಶರಣು ಹೋಗಬೇಕು. ॥ ೨೧ ॥ ಆ ಸದ್ಗುರುವು ತನ್ನ

ತತ್ರ ಭಾಗವತಾನ್ ಧರ್ಮಾನ್ ಶಿಕ್ಷೇದ್ ಗುರ್ವಾತ್ಮದೈವತಃ ।
ಅಮಾಯಯಾನುವೃತ್ತ್ಯಾ ಯೈಸ್ತುಷ್ಯೇದಾತ್ಮಾಽಽತ್ಮದೋ ಹರಿಃ
॥ ೨೨ ॥

ಸರ್ವತೋ ಮನಸೋಽಸಂಗ-
ಮಾದೌ ಸಂಗಂ ಚ ಸಾಧುಷು ।
ದಯಾಂ ಮೈತ್ರೀಂ ಪ್ರಶ್ರಯಂ ಚ
ಭೂತೇಷ್ವದ್ಧಾ ಯಥೋಚಿತಮ್ ॥ ೨೩ ॥

ಶೌಚಂ ತಪಸ್ತಿತಿಕ್ಷಾಂ ಚ ಮೌನಂ ಸ್ವಾಧ್ಯಾಯಮಾರ್ಜವಮ್ ।
ಬ್ರಹ್ಮಚರ್ಯಮಹಿಂಸಾಂ ಚ ಸಮತ್ವಂ ದ್ವಂದ್ವಸಂಜ್ಞಯೋಃ
॥ ೨೪ ॥

ಸರ್ವತ್ರಾತ್ಮೇಶ್ವರಾನ್ವೀಕ್ಷಾಂ ಕೈವಲ್ಯಮನಿಕೇತತಾಮ್ ।
ವಿವಿಕ್ತಚೀರವಸನಂ ಸಂತೋಷಂ ಯೇನ ಕೇನಚಿತ್
॥ ೨೫ ॥

ಶ್ರದ್ಧಾಂ ಭಾಗವತೇ ಶಾಸ್ತ್ರೇಽನಿಂದಾಮನ್ಯತ್ರ ಚಾಪಿ ಹಿ ।
ಮನೋವಾಕ್ಕರ್ಮದಂಡಂ ಚ ಸತ್ಯಂ ಶಮದಮಾವಪಿ
॥ ೨೬ ॥

ಶ್ರವಣಂ ಕೀರ್ತನಂ ಧ್ಯಾನಂ ಹರೇರದ್ಭುತಕರ್ಮಣಃ ।
ಜನ್ಮಕರ್ಮಗುಣಾನಾಂ ಚ ತದರ್ಥೇಽಖಿಲಚೇಷ್ಟಿತಮ್
॥ ೨೭ ॥

ಇಷ್ಟಂ ದತ್ತಂ ತಪೋ ಜಪ್ತಂ ವೃತ್ತಂ ಯಚ್ಚಾತ್ಮನಃ ಪ್ರಿಯಮ್ ।
ದಾರಾನ್ಸುತಾನ್ ಗೃಹಾನ್ ಪ್ರಾಣಾನ್ಯತ್ಪರಸ್ಮೈ ನಿವೇದನಮ್
॥ ೨೮ ॥

ಏವಂ ಕೃಷ್ಣಾತ್ಮನಾಥೇಷು ಮನುಷ್ಯೇಷು ಚ ಸೌಹೃದಮ್ ।
ಪರಿಚರ್ಯಾಂ ಚೋಭಯತ್ರ ಮಹತ್ಸು ನೃಷು ಸಾಧುಷು
॥ ೨೯ ॥

ಪರಸ್ಪರಾನುಕಥನಂ ಪಾವನಂ ಭಗವದ್ಯಶಃ ।
ಮಿಥೋ ರತಿರ್ಮಿಥಸ್ತುಷ್ಟಿರ್ನಿವೃತ್ತಿರ್ಮಿಥ ಆತ್ಮನಃ
॥ ೩೦ ॥

ಪ್ರಿಯ ಆತ್ಮಾ, ಇಷ್ಟದೈವವೆಂದು ತಿಳಿಯಬೇಕು. ಅವರ ಬಳಿಯಲ್ಲಿದ್ದು ಭಾಗವತ ಧರ್ಮದ ಉಪದೇಶವನ್ನು ಪಡೆಯಬೇಕು. ನಮ್ಮ ಪ್ರತಿಯೊಂದು ಕ್ರಿಯೆಯ ಮೂಲಕ ನಿಷ್ಕಪಟ ಭಾವದಿಂದ, ಸರಳ ಬುದ್ಧಿಯಿಂದ ಅವರ ಸೇವೆ ಮಾಡಬೇಕು. ಹೀಗೆ ಮಾಡುವುದರಿಂದ ಭಗವಂತನು ಬಹಳ ಬೇಗ ಒಲಿಯುವನು ; ಭಗವಂತನು ಕೃಪಾಮೂರ್ತಿಯಾಗಿದ್ದಾನೆ. ಭಕ್ತರ ಮೇಲೆ ಕೃಪೆದೋರಲು ಸಂದರ್ಭ ನೋಡುತ್ತಿರುತ್ತಾನೆ. ಹೆಚ್ಚೇನು, ಅವನು ಭಕ್ತರಿಗೆ ತನ್ನನ್ನೇ ಕೊಟ್ಟು ಕೊಳ್ಳುವನು. ॥ ೨೨ ॥ ಮೊಟ್ಟಮೊದಲಿಗೆ ಎಲ್ಲ ಕಡೆಗಳಿಂದ, ಅಂತರಮನಸ್ಸಿನಿಂದ ಪೂರ್ಣ ಅನಾಸಕ್ತನಾಗಬೇಕು. ಸಾಧು ಸಂತರಲ್ಲಿ ಪ್ರೇಮವಿಡಬೇಕು. ಯಥಾಯೋಗ್ಯ ರೀತಿಯಿಂದ ಸಾಮಾನ್ಯ ಪ್ರಾಣಿಗಳಲ್ಲಿ ಪ್ರೀತಿ-ದಯೆ ; ಸಮಾನರಲ್ಲಿ ಮಿತ್ರತೆ, ಹಿರಿಯರಲ್ಲಿ ಗೌರವ- ವಿನಮ್ರತೆ ಇರಬೇಕು. ॥ ೨೩ ॥ ಒಳ-ಹೊರ ಗಿನ ಶುದ್ಧಿ, ಸ್ವಧರ್ಮಾಚರಣರೂಪೀ ತಪಸ್ಸು, ಸಹಿಷ್ಣುತೆ, ಭಗವತ್ ಸ್ವರೂಪದ ಮನನ, ಸತ್‌ಶಾಸ್ತ್ರಗಳ ಸ್ವಾಧ್ಯಾಯ, ನಾಮಜಪ, ಸರಳತೆ, ಬ್ರಹ್ಮಚರ್ಯ, ಅಹಿಂಸಾ, ಚಳಿ-ಸೆಕೆ, ಸುಖ-ದುಃಖಾದಿ ದ್ವಂದ್ವಗಳಲ್ಲಿ ಹರ್ಷ-ಶೋಕದಿಂದ ರಹಿತನಾಗಿರಬೇಕು. ॥ ೨೪ ॥ ಒಂದೇ ಆತ್ಮವು ಸರ್ವತ್ರವ್ಯಾಪ್ತವಾಗಿದೆ ಎಂಬ ಭಾವದಿಂದ ಆತ್ಮನ ಅಸ್ತಿತ್ವವನ್ನು ಎಲ್ಲಕಡೆ ನೋಡುವುದು, ಏಕಾಂತ ಪವಿತ್ರಸ್ಥಳದಲ್ಲಿ ಇರುವುದು, ಮನೆಯ ಕುರಿತು ಮಮತೆ ಇಲ್ಲದಿರುವುದು, ಸಾದಾ ಸರಳ ಉಡುಪು ಧರಿಸುವುದು, ಸಂನ್ಯಾಸಿಯಾಗಿದ್ದರೆ ವಲ್ಕಲ ಉಡುವುದು, ದೊರೆತುದರಲ್ಲಿ ಸಂತುಷ್ಟನಾಗಿರಬೇಕು. ॥ ೨೫ ॥ ಭಗವತ್ ಪ್ರಾಪ್ತಿಯನ್ನು ತಿಳಿಸುವ ಶಾಸ್ತ್ರಗಳಲ್ಲಿ ಶ್ರದ್ಧೆ, ಯಾವುದೇ ಬೇರೆ ಶಾಸ್ತ್ರವನ್ನು ನಿಂದಿಸದಿರುವುದು; ಮನ, ವಾಣೀ, ಶರೀರದ ಸಂಯಮವಿಡುವುದು, ಸತ್ಯವಾಗಿ ನುಡಿಯುವುದು, ಶಮ-ಮನೋ ನಿಗ್ರಹ, ದಮ-ಇಂದ್ರಿಯನಿಗ್ರಹವಿರಬೇಕು. ॥ ೨೬ ॥ ಅದ್ಭುತ ಕರ್ಮಿ ಯಾದ ಶ್ರೀಹರಿಯ ಜನ್ಮ-ಕರ್ಮ ಹಾಗೂ ಗುಣ-ಲೀಲೆ ಗಳನ್ನು ಶ್ರವಣ, ಕೀರ್ತನೆ, ಧ್ಯಾನ ಮಾಡುತ್ತಾ, ಅವನಿಗಾಗಿಯೇ ಎಲ್ಲ ಕ್ರಿಯೆಗಳನ್ನು ಮಾಡಬೇಕು. ಜಪ, ಯಜ್ಞ, ದಾನ, ಸದಾಚಾರ ಇವುಗಳಲ್ಲದೆ ಬೇರೆ ತನಗೆ ಪ್ರಿಯವಾದ ಪದಾರ್ಥಗಳೆಲ್ಲವನ್ನು, ಅಂದರೆ ತನ್ನ ಪತ್ನೀ, ಪುತ್ರ, ಮನೆ, ಪ್ರಾಣಗಳನ್ನೂ ಹೀಗೆ ಎಲ್ಲವನ್ನು ಭಗವಂತನಿಗೆ ಅರ್ಪಿಸಬೇಕು. ॥ ೨೭-೨೮ ॥ ಶ್ರೀಕೃಷ್ಣನೇ ತಮ್ಮ ಆತ್ಮನಾಗಿರುವ ಮನುಷ್ಯರಲ್ಲಿ ನಾವು ಸೌಹಾರ್ದವನ್ನು ಸ್ಥಾಪಿಸಬೇಕು. ಸಂತ-ಮಹಾತ್ಮರನ್ನು ಸೇವಿಸಬೇಕು. ಹಾಗೆಯೇ ಸಾಮಾನ್ಯ ಜನರ ಕೂಡ ಸೇವೆ ಮಾಡಬೇಕು. ಅದರಲ್ಲಿಯೂ ಎಲ್ಲಾದರೂ ದೈವೀ ಆಪತ್ತು ಬಂದಾಗ, ಅದರಲ್ಲಿ ತೊಂದರೆಗೊಳಗಾದ ಜನರಿಗೆ ತುಂಬಾ ಶ್ರದ್ಧೆ, ಪ್ರೇಮದಿಂದ ನಿಷ್ಕಾಮಭಾವದಿಂದ ಸೇವೆಮಾಡಬೇಕು. ಭಗವಂತನ ಪರಮಪಾವನ ಯಶಗಳ ಸಂಬಂಧದಲ್ಲೇ ಪರಸ್ಪರ ಮಾತಾಡಬೇಕು. ಇಂತಹ ಸಾಧಕರನ್ನು ಸೇರಿಸಿ, ಅವರಲ್ಲಿ ಪ್ರೇಮ ವಿಡುವುದು, ಅವರೊಂದಿಗೆ ಎಲ್ಲ ರೀತಿಯಿಂದ ಪ್ರಸನ್ನನಾಗಿರು ವುದು, ಪ್ರಪಂಚದಿಂದ ನಿವೃತ್ತನಾಗಿ ಪರಸ್ಪರ ಆಧ್ಯಾತ್ಮಿಕ ಶಾಂತಿಯನ್ನು ಅನುಭವಿಸಬೇಕು. ॥ ೨೯-೩೦ ॥

ಸ್ಮರಂತಃ ಸ್ಮಾರಯಂತಶ್ಚ ಮಿಥೋಽಘೌಘಹರಂ ಹರಿಮ್ ।
ಭಕ್ತ್ಯಾ ಸಂಜಾತಯಾ ಭಕ್ತ್ಯಾ ಬಿಭ್ರತ್ಯುತ್ಪುಲಕಾಂ ತನುಮ್
॥ ೩೧ ॥

ಕ್ವಚಿದ್ರುದಂತ್ಯಚ್ಯುತಚಿಂತಯಾ ಕ್ವಚಿ-
ದ್ಧಸಂತಿ ನಂದಂತಿ ವದಂತ್ಯಲೌಕಿಕಾಃ ।
ನೃತ್ಯಂತಿ ಗಾಯಂತ್ಯನುಶೀಲಯಂತ್ಯಜಂ
ಭವಂತಿ ತೂಷ್ಣೀಂ ಪರಮೇತ್ಯ ನಿರ್ವೃತಾಃ ॥ ೩೨ ॥

ಇತಿ ಭಾಗವತಾನ್ ಧರ್ಮಾನ್ ಶಿಕ್ಷನ್ಭಕ್ತ್ಯಾ ತದುತ್ಥಯಾ ।
ನಾರಾಯಣಪರೋ ಮಾಯಾಮಂಜಸ್ತರತಿ ದುಸ್ತರಾಮ್
॥ ೩೩ ॥

ರಾಜೋವಾಚ

ನಾರಾಯಣಾಭಿಧಾನಸ್ಯ ಬ್ರಹ್ಮಣಃ ಪರಮಾತ್ಮನಃ ।
ನಿಷ್ಠಾಮರ್ಹಥ ನೋ ವಕ್ತುಂ ಯೂಯಂ ಹಿ ಬ್ರಹ್ಮವಿತ್ತಮಾಃ
॥ ೩೪ ॥

ಪಿಪ್ಪಲಾಯನ ಉವಾಚ

ಸ್ಥಿತ್ಯುದ್ಭವಪ್ರಲಯಹೇತುರಹೇತುರಸ್ಯ
ಯತ್ ಸ್ವಪ್ನಜಾಗರಸುಷುಪ್ತಿಷು ಸದ್ಬಹಿಶ್ಚ ।
ದೇಹೇಂದ್ರಿಯಾಸುಹೃದಯಾನಿ ಚರಂತಿ ಯೇನ
ಸಂಜೀವಿತಾನಿ ತದವೇಹಿ ಪರಂ ನರೇಂದ್ರ ॥ ೩೫ ॥

ನೈತನ್ಮನೋ ವಿಶತಿ ವಾಗುತ ಚಕ್ಷುರಾತ್ಮಾ
ಪ್ರಾಣೇಂದ್ರಿಯಾಣಿ ಚ ಯಥಾನಲಮರ್ಚಿಷಃ ಸ್ವಾಃ ।
ಶಬ್ದೋಽಪಿ ಬೋಧಕನಿಷೇಧತಯಾಽಽತ್ಮಮೂಲ-
ಮರ್ಥೋಕ್ತಮಾಹ ಯದೃತೇ ನ ನಿಷೇಧಸಿದ್ಧಿಃ ॥ ೩೬ ॥

ರಾಜನೇ ! ಶ್ರೀಹರಿಯು ಪಾಪರಾಶಿಗಳನ್ನು ಕ್ಷಣಮಾತ್ರದಲ್ಲಿ ಭಸ್ಮಮಾಡಿಬಿಡುತ್ತಾನೆ. ಆದ್ದರಿಂದ ಸತತವಾಗಿ ಅವನನ್ನೇ ಸ್ಮರಿಸಬೇಕು ಮತ್ತು ಇತರರಿಂದಲೂ ಸ್ಮರಣೆ ಮಾಡಿಸಬೇಕು. ಈ ಪ್ರಕಾರದ ಸಾಧನ ಭಕ್ತಿಯ ಅನುಷ್ಠಾನ ಮಾಡುತ್ತಾ-ಮಾಡುತ್ತಾ ಪ್ರೇಮ ಭಕ್ತಿಯು, ಸಾಧ್ಯಭಕ್ತಿಯು ಉದಯವಾಗುತ್ತದೆ. ಈ ಭಕ್ತಿಯಿಂದ ಅವನ ಶರೀರ ಪ್ರೇಮ ಪುಳಕಿತವಾಗುತ್ತಾ ಇರುತ್ತದೆ. ॥ ೩೧ ॥ ಭಗವಂತನ ಇಂತಹ ಭಕ್ತರು ಕೆಲವೊಮ್ಮೆ 'ಅಯ್ಯೋ ! ಇನ್ನೂ ಭಗವಾನ್ ಅಚ್ಯುತನ ದರ್ಶನವಾಗಲಿಲ್ಲವಲ್ಲ !' ಎಂದು ಅಳುತ್ತಾರೆ ; ಕೆಲವೊಮ್ಮೆ ನಗುತ್ತಾರೆ; ಕೆಲವೊಮ್ಮೆ ಆನಂದಿತರಾಗಿ, ಲೋಕೋತ್ತರ ಮಾತುಗಳನ್ನು ಆಡುತ್ತಿರುತ್ತಾರೆ; ಕೆಲವೊಮ್ಮೆ ಕುಣಿಯುತ್ತಾರೆ, ಹಾಡುತ್ತಾರೆ; ಕೆಲವೊಮ್ಮೆ ಪರಮಾತ್ಮನ ಲೀಲೆಗಳ ಅನುಕರಣ ಮಾಡುತ್ತಾರೆ; ಕೆಲವೊಮ್ಮೆ ಸುಮ್ಮನೆ ಇದ್ದುಬಿಡುತ್ತಾರೆ. ಹೀಗೆ ಮಾಡುತ್ತಾ-ಮಾಡುತ್ತಾ ಕೊನೆಗೆ ಅವರು ಪರಮಾತ್ಮನನ್ನು ಪಡೆದು ಪರಮಾನಂದವನ್ನು ಹೊಂದುತ್ತಾರೆ. (ಗೋಪಿಯರು ಭಗವಂತನ ಪ್ರೇಮದಲ್ಲಿ ಮುಳುಗಿರುತ್ತಿದ್ದರೋ ಹಾಗೆ.) ಈ ರೀತಿ ಭಾಗವತ ಧರ್ಮದ ಶಿಕ್ಷಣದಿಂದ ಸಂಪನ್ನರಾಗಿ ಅವರು ಅದರಿಂದ ಉಂಟಾದ ಭಕ್ತಿಯಿಂದ ನಾರಾಯಣ ಪರಾಯಣರಾಗುತ್ತಾರೆ. ಆ ಭಕ್ತಿಯ ಮಹಿಮೆಯಿಂದ ಈ ದುಸ್ತರ ಮಾಯೆಯನ್ನು ಸುಲಭವಾಗಿ ಪಾರಾಗಿ ಹೋಗುತ್ತಾರೆ. (ಇದು ಭಗವಂತನ ಭಕ್ತಿಯ ಮಹಿಮೆಯಾಗಿದೆ.) ॥ ೩೨-೩೩ ॥

ರಾಜಾ ನಿಮಿಯು ಕೇಳಿದನು – ಮಹರ್ಷಿಗಳೇ ! ನೀವೆಲ್ಲ ಪರಮಾತ್ಮನ ನಿಜವಾದ ಸ್ವರೂಪವನ್ನು ಅರಿತವರಲ್ಲಿ ಸರ್ವಶ್ರೇಷ್ಠರಾಗಿರುವಿರಿ. ಪರಬ್ರಹ್ಮ ಪರಮಾತ್ಮನನ್ನು ನಾರಾಯಣನ ಹೆಸರಿನಿಂದ ವರ್ಣಿಸಲಾಗಿದೆ. ಅವನ ಸ್ವರೂಪವನ್ನು ನನಗೆ ತಿಳಿಸುವವರಾಗಿರಿ. ॥ ೩೪ ॥

ಐದನೆಯವರಾದ ಶ್ರೀಪಿಪ್ಪಲಾಯನ ಯೋಗೀಶ್ವರರು ಹೇಳಿದರು – ರಾಜನೇ ! ಪರಮಪ್ರಭು ಈ ವಿಶ್ವದ ಉತ್ಪತ್ತಿ, ಸ್ಥಿತಿ, ಪ್ರಳಯದ ಕಾರಣನಾಗಿರುವನು, ಆದರೆ ಅವನಿಗೆ ಯಾವ ಕಾರಣವೂ ಇಲ್ಲ, ಅವನೇ ಜಾಗ್ರತ್, ಸ್ವಪ್ನ , ಸುಷುಪ್ತಿ ಮೂರೂ ಅವಸ್ಥೆಗಳಲ್ಲಿ ಸಾಕ್ಷಿರೂಪದಿಂದ ಇರುತ್ತಾನೆ ಹಾಗೂ ಒಳಗೂ ಹೊರಗೂ ತುಂಬಿರುವನು. ಅವನ ಕಾರಣದಿಂದಲೇ ಈ ದೇಹ, ಇಂದ್ರಿಯಗಳು, ಪ್ರಾಣ, ಹೃದಯ ಉಜ್ಜೀವಿತವಾಗುತ್ತದೆ. ಅವನ ಅಸ್ತಿತ್ವದಿಂದಲೇ ಇವು ತಮ್ಮ-ತಮ್ಮ ಕೆಲಸ ಮಾಡುತ್ತವೆ. ಅವನನ್ನೇ ನೀನು ಪರಮ ಸತ್ಯ ತತ್ತ್ವ ನಾರಾಯಣನೆಂದು ತಿಳಿ. ॥ ೩೫ ॥ ಅಗ್ನಿಯ ಜ್ವಾಲೆಗಳು ಅಗ್ನಿಯಿಂದಲೇ ಉತ್ಪನ್ನವಾಗುತ್ತವೆ, ಆದರೆ ತಮ್ಮ ಸ್ವರೂಪ ಅಗ್ನಿಯನ್ನು ಇವು ಪ್ರಕಾಶಿಸಲಾರವು. ಹಾಗೆಯೇ ವಾಣೀ, ನೇತ್ರ, ಪ್ರಾಣ, ಇಂದ್ರಿಯಗಳು, ಅಂತಃಕರಣ ಇವೆಲ್ಲದರ ಮೂಲ ಆಧಾರ ಮತ್ತು ಪ್ರಕಾಶಕ ಏಕಮಾತ್ರ ಪರಮಾತ್ಮನೇ ಆಗಿರುವನು, ಆದರೆ ಇವೆಲ್ಲವು ತಮ್ಮ ಮೂಲ ಸ್ವರೂಪವನ್ನು ವರ್ಣಿಸಲು ಅಸಮರ್ಥವಾಗಿವೆ. ವೇದಗಳೂ ಕೂಡ ತಮ್ಮ ಕಾರಣಸ್ವರೂಪೀ ಪರಮಾತ್ಮತತ್ತ್ವವನ್ನು ಆದರ ಬೋಧ ಮಾಡಿಸುವ ಸಾಧಕರಿಗೆ ತಾತ್ಪರ್ಯರೂಪದಿಂದ 'ನೇತಿ-ನೇತಿ' ಹೀಗೆ

ಸತ್ತ್ವಂ ರಜಸ್ತಮ ಇತಿ ತ್ರಿವೃದೇಕಮಾದೌ
ಸೂತ್ರಂ ಮಹಾನಹಮಿತಿ ಪ್ರವದಂತಿ ಜೀವಮ್ ।
ಜ್ಞಾನಕ್ರಿಯಾರ್ಥಫಲರೂಪತಯೋರುಶಕ್ತಿ
ಬ್ರಹ್ಮೈವ ಭಾತಿ ಸದಸಚ್ಚ ತಯೋಃ ಪರಂ ಯತ್ ॥ ೩೭ ॥

ನಾತ್ಮಾ ಜಜಾನ ನ ಮರಿಷ್ಯತಿ ನೈಧತೇಽಸೌ
ನ ಕ್ಷೀಯತೇ ಸವನವಿದ್ವ್ಯಭಿಚಾರಿಣಾಂ ಹಿ ।
ಸರ್ವತ್ರ ಶಶ್ವದನಪಾಯ್ಯುಪಲಬ್ಧಿಮಾತ್ರಂ
ಪ್ರಾಣೋ ಯಥೇಂದ್ರಿಯಬಲೇನ ವಿಕಲ್ಪಿತಂ ಸತ್ ॥ ೩೮ ॥

ಅಂಡೇಷು ಪೇಶಿಷು ತರುಷ್ವವಿನಿಶ್ಚಿತೇಷು
ಪ್ರಾಣೋ ಹಿ ಜೀವಮುಪಧಾವತಿ ತತ್ರ ತತ್ರ ।
ಸನ್ನೇ ಯದಿಂದ್ರಿಯಗಣೇಽಹಮಿ ಚ ಪ್ರಸುಪ್ತೇ
ಕೂಟಸ್ಥ ಆಶಯಮೃತೇ ತದನುಸ್ಮೃತಿರ್ನಃ ॥ ೩೯ ॥

ಯರ್ಹ್ಯಬ್ಜನಾಭಚರಣೈಷಣಯೋರುಭಕ್ತ್ಯಾ
ಚೇತೋಮಲಾನಿ ವಿಧಮೇದ್ಗುಣಕರ್ಮಜಾನಿ ।
ತಸ್ಮಿನ್ವಿಶುದ್ಧ ಉಪಲಭ್ಯತ ಆತ್ಮತತ್ತ್ವಂ
ಸಾಕ್ಷಾದ್ಯಥಾಮಲದೃಶೋಃ ಸವಿತೃಪ್ರಕಾಶಃ ॥ ೪೦ ॥

ನಿಷೇಧಾತ್ಮಕ ವಚನಗಳಿಂದಲೇ ನಿರೂಪಿಸುತ್ತವೆ. ಏಕೆಂದರೆ, ಪರಮಾತ್ಮ ತತ್ತ್ವದ ಸತ್ತೆಯಿಲ್ಲದೆ ನಿಷೇಧವೂ ಕೂಡ ಸಿದ್ಧವಾಗಲಾರದು. ಎಲ್ಲವನ್ನು ನಿಷೇಧ ಮಾಡುತ್ತಾ-ಮಾಡುತ್ತಾ ಕೊನೆಗೆ ಉಳಿಯುವ ತತ್ತ್ವವನ್ನೇ ಪರಮತತ್ತ್ವ 'ನಾರಾಯಣ'ನೆಂದು ತಿಳಿ. ॥ ೩೬ ॥ ಸೃಷ್ಟಿಯ ಆದಿಯಲ್ಲಿ ಏಕಮಾತ್ರ ಬ್ರಹ್ಮವೇ ಇತ್ತು. ಅವನಿಂದಲೇ ಸತ್ತ್ವ, ರಜ, ತಮ ಹೀಗೆ ತ್ರಿಗುಣಾತ್ಮಿಕಾ ಮೂಲಪ್ರಕೃತಿ ಉಂಟಾಯಿತು. ಪ್ರಕೃತಿಯಲ್ಲಿ ಕ್ಷೋಭೆ ಉಂಟಾದಾಗ ಮಹತ್ತತ್ತ್ವ ಉತ್ಪನ್ನವಾಯಿತು. ಅದರಿಂದಲೇ ಸೂತ್ರಾತ್ಮಾ ಹಿರಣ್ಯಗರ್ಭನ ಉತ್ಪತ್ತಿಯಾಯಿತು. ಮತ್ತೆ ಅಹಂಕಾರದಿಂದಲೇ ಮನ ಹಾಗೂ ಇಂದ್ರಿಯಗಳ ಅಧಿಷ್ಠಾತೃ ದೇವತೆಗಳು, ಪ್ರಾಣ, ಇಂದ್ರಿಯಗಳು ಮತ್ತು ವಿಷಯಗಳು ಹುಟ್ಟಿಕೊಂಡವು. ಬಳಿಕ ಆ ಪರಮಾತ್ಮನೇ ಜೀವರೂಪದಿಂದ ಇವೆಲ್ಲ ತತ್ತ್ವಗಳಲ್ಲಿ ಪ್ರವೇಶಿಸಿದನು. ಈ ಪ್ರಕಾರ ಅವೆಲ್ಲ ರೂಪದಲ್ಲಿ ಏಕಮಾತ್ರ ಆ ಅನಂತಶಕ್ತಿಸ್ವರೂಪ ಪರಬ್ರಹ್ಮ ಪರಮಾತ್ಮನೇ ಪ್ರಕಾಶಿತನಾಗುತ್ತಿರುವನು. ಹೀಗೆ ಸತ್-ಅಸತ್ ಅರ್ಥಾತ್ ಕಾರ್ಯ-ಕಾರಣವೆರಡರಲ್ಲಿಯೂ ಏಕಮಾತ್ರ ಬ್ರಹ್ಮನೇ ಇರುವನು. ಇದರಿಂದ ಆಚೆ ಇರುವವನು ಆ ಬ್ರಹ್ಮನೇ ಆಗಿರುವನು. ॥ ೩೭ ॥ ಆ ಪರಬ್ರಹ್ಮಸ್ವರೂಪೀ ಆತ್ಮನು ಹುಟ್ಟುವುದಿಲ್ಲ, ಸಾಯುವುದಿಲ್ಲ, ವೃದ್ಧಿಯನ್ನು ಹೊಂದುವುದಿಲ್ಲ, ಇದೇ ಪ್ರಕಾರ ಅವನು ಕ್ಷೀಣನೂ ಆಗುವುದಿಲ್ಲ, ಅರ್ಥಾತ್ – ಆತ್ಮನು ಷಡ್ಭಾವ ವಿಕಾರಗಳಿಂದ ರಹಿತನಾಗಿರುವನು. ಪರಿವರ್ತನ ಶೀಲ ಎಲ್ಲ ವಸ್ತುಗಳ ಭೂತ, ಭವಿಷ್ಯ, ವರ್ತಮಾನ ಎಲ್ಲ ಅವಸ್ಥೆಗಳನ್ನು ಆತ್ಮನು ತಿಳಿಯುವವನಾಗಿದ್ದು, ಸರ್ವವ್ಯಾಪಿಯೂ, ಅವಿನಾಶಿಯೂ, ಜ್ಞಾನಸ್ವರೂಪನೂ ಆಗಿರುವನು. ಪ್ರಾಣವಾದರೋ ಒಂದೇಯಾಗಿದ್ದು ಸ್ಥಾನಭೇದದಿಂದ ಅದರ ಅನೇಕ ಹೆಸರುಗಳಾಗುವಂತೆ, ಒಂದೇ ಜ್ಞಾನವು ಇಂದ್ರಿಯಗಳ ಭೇದದ ಕಾರಣದಿಂದ ಬೇರೆ ಬೇರೆ ಹೆಸರುಗಳಿಂದ ತಿಳಿಯಲಾಗುತ್ತದೆ. ಅರ್ಥಾತ್ ಇಂದ್ರಿಯಗಳ ಭೇದದಿಂದ ನೋಡುವುದು, ಕೇಳುವುದು ಮುಂತಾದ ಕ್ರಿಯೆಗಳ ಹೆಸರು ಬೇರೆ-ಬೇರೆಯಾಗುತ್ತವೆ. ಹಾಗೆಯೇ ಒಂದೇ ಆತ್ಮನ ಸತ್ತೆಯನ್ನು ವಿವಿಧ ರೀತಿಯಿಂದ ತಿಳಿಯಲ್ಪಡುತ್ತದೆ. ಅಂಡಜ, ಜರಾಯುಜ, ಉದ್ಭಿಜ್ಜ, ಸ್ವೇದಜ ಈ ನಾಲ್ಕು ಪ್ರಕಾರದ ಜೀವಿಗಳಿವೆ. ಎಲ್ಲ ಜೀವಿಗಳಲ್ಲಿ ಪ್ರಾಣವು ಅವುಗಳ ಜೊತೆ-ಜೊತೆಗೆ ಹೋಗುತ್ತದೆ. ಜೀವಿಯು ಪ್ರಗಾಢನಿದ್ರೆಯಲ್ಲಿ ಮಲಗಿದ್ದಾಗ ಇಂದ್ರಿಯಗಳ ಸಹಿತ ಅಹಂಕಾರವೂ ನಿಶ್ಚೇಷ್ಟಿತವಾಗುತ್ತದೆ. ಆದರೆ ಸಾಕ್ಷಿರೂಪದಿಂದ ಆತ್ಮನು ನಿರ್ವಿಕಾರನಾಗಿ ಸ್ಥಿರವಾಗಿರುತ್ತಾನೆ. ಆ ಆತ್ಮನ ಸತ್ತೆಯಿಂದಲೇ ಮಲಗಿ ಎದ್ದ ಬಳಿಕ 'ನಾನು ಗಾಢವಾದ ನಿದ್ದೆಯಲ್ಲಿ ಮಲಗಿದ್ದೆ' ಎಂಬ ಸ್ಮೃತಿ ಇರುತ್ತದೆ. ಈ ಸ್ಮೃತಿಯೇ ಸುಷುಪ್ತಾವಸ್ಥೆಯಲ್ಲಿ ಆತ್ಮನು ಇರುವುದನ್ನು ಸಿದ್ಧಪಡಿಸುತ್ತದೆ. ॥ ೩೮-೩೯ ॥ ಭಗವಾನ್ ಕಮಲನಾಭನ ಚರಣಗಳಲ್ಲಿ ತೀವ್ರವಾದ ಭಕ್ತಿಯನ್ನಿರಿಸಿದಾಗ, ಆ ಭಕ್ತಿಯೇ ಗುಣ-ಕರ್ಮಗಳಿಂದ ಉತ್ಪನ್ನವಾದ ಚಿತ್ತದ ಎಲ್ಲ ರೀತಿಯ ಮಲ, ವಿಕ್ಷೇಪ, ಆವರಣ ದೋಷಗಳನ್ನು ತೊಳೆದುಬಿಡುತ್ತದೆ. ಈ ವಿಧವಾಗಿ ಚಿತ್ತಶುದ್ಧಿಯಾದ ಬಳಿಕ ಆತ್ಮತತ್ತ್ವದ ಸಾಕ್ಷಾತ್ಕಾರವು ತಾನಾಗಿ ಆಗುತ್ತದೆ. ॥ ೪೦ ॥

ರಾಜೋವಾಚ

ಕರ್ಮಯೋಗಂ ವದತ ನಃ ಪುರುಷೋ ಯೇನ ಸಂಸ್ಕೃತಃ ।
ವಿಧೂಯೇಹಾಶು ಕರ್ಮಾಣಿ ನೈಷ್ಕರ್ಮ್ಯಂ ವಿಂದತೇ ಪರಮ್ ॥ ೪೧ ॥

ಏವಂ ಪ್ರಶ್ನಮೃಷೀನ್ ಪೂರ್ವಮಪೃಚ್ಛಂ ಪಿತುರಂತಿಕೇ ।
ನಾಬ್ರುವನ್ ಬ್ರಹ್ಮಣಃ ಪುತ್ರಾಸ್ತತ್ರ ಕಾರಣಮುಚ್ಯತಾಮ್ ॥ ೪೨ ॥

ಆವಿರ್ಹೋತ್ರ ಉವಾಚ

ಕರ್ಮಾಕರ್ಮವಿಕರ್ಮೇತಿ ವೇದವಾದೋ ನ ಲೌಕಿಕಃ ।
ವೇದಸ್ಯ ಚೇಶ್ವರಾತ್ಮತ್ವಾತ್ ತತ್ರ ಮುಹ್ಯಂತಿ ಸೂರಯಃ ॥ ೪೩ ॥

ಪರೋಕ್ಷವಾದೋ ವೇದೋಽಯಂ ಬಾಲಾನಾಮನುಶಾಸನಮ್ ।
ಕರ್ಮಮೋಕ್ಷಾಯ ಕರ್ಮಾಣಿ ವಿಧತ್ತೇ ಹ್ಯಗದಂ ಯಥಾ ॥ ೪೪ ॥

ನಾಚರೇದ್ಯಸ್ತು ವೇದೋಕ್ತಂ ಸ್ವಯಮಜ್ಞೋಽಜಿತೇಂದ್ರಿಯಃ ।
ವಿಕರ್ಮಣಾ ಹ್ಯಧರ್ಮೇಣ ಮೃತ್ಯೋರ್ಮೃತ್ಯುಮುಪೈತಿ ಸಃ ॥ ೪೫ ॥

ವೇದೋಕ್ತಮೇವ ಕುರ್ವಾಣೋ ನಿಸ್ಸಂಗೋಽರ್ಪಿತಮೀಶ್ವರೇ ।
ನೈಷ್ಕರ್ಮ್ಯಾಂ ಲಭತೇ ಸಿದ್ಧಿಂ ರೋಚನಾರ್ಥಾ ಫಲಶ್ರುತಿಃ ॥ ೪೬ ॥

ಯ ಆಶು ಹೃದಯಗ್ರಂಥಿಂ ನಿರ್ಜಿಹೀರ್ಷುಃ ಪರಾತ್ಮನಃ ।
ವಿಧಿನೋಪಚರೇದ್ದೇವಂ ತಂತ್ರೋಕ್ತೇನ ಚ ಕೇಶವಮ್ ॥ ೪೭ ॥

ರಾಜಾ ನಿಮಿಯು ಪ್ರಶ್ನಿಸಿದನು – ಯೋಗೀಶ್ವರರೇ! ಯಾವುದರ ಆಚರಣೆಯಿಂದ ಮನುಷ್ಯನು ಪರಮ ನೈಷ್ಕರ್ಮ್ಯ ಸಿದ್ಧಿಯನ್ನು ಪಡೆದುಕೊಳ್ಳುವನೋ, ತನ್ನ ಎಲ್ಲ ಪ್ರಕಾರದ ಕರ್ಮಗಳನ್ನು ಬೇಗನೇ ತೊಳೆದುಬಿಡುತ್ತಾನೋ, ಅರ್ಥಾತ್ ಯಾವ ಕರ್ಮಯೋಗದ ಆಚರಣೆಯಿಂದ ಮನುಷ್ಯನು ಕರ್ಮಬಂಧನದಿಂದ ಮುಕ್ತನಾಗಿ ಪರಮಶಾಂತಿಯನ್ನು ಪಡೆಯುವನೋ ಅಂತಹ ಕರ್ಮಯೋಗವನ್ನು ಈಗ ನನಗೆ ವರ್ಣಿಸಿ ಹೇಳಿರಿ. ॥ ೪೧ ॥ ಒಮ್ಮೆ ಇದೇ ಪ್ರಶ್ನೆಯನ್ನು ನಾನು ನನ್ನ ತಂದೆಯವರ ಮುಂದೆ ಬ್ರಹ್ಮಮಾನಸಪುತ್ರರಾದ ಸನಕಾದಿ ಋಷಿಗಳಲ್ಲಿ ಮಾಡಿದ್ದೆ. ಆದರೆ ಅವರು ಸರ್ವಜ್ಞರಾಗಿದ್ದರೂ ನನ್ನ ಪ್ರಶ್ನೆಗೆ ಉತ್ತರಿಸಲಿಲ್ಲ. ಇದರ ಕಾರಣವೇನಿತ್ತು ? ದಯಮಾಡಿ ನನಗೆ ತಿಳಿಸಿರಿ. ॥ ೪೨ ॥

ಈಗ ಆರನೆಯವರಾದ ಆವಿರ್ಹೋತ್ರ ಯೋಗೀಶ್ವರರು ಹೇಳುತ್ತಾರೆ – ಕರ್ಮ (ಶಾಸ್ತ್ರವಿಹಿತ ಕರ್ಮ) ಅಕರ್ಮ (ನಿಷಿದ್ಧ ಕರ್ಮ), ವಿಕರ್ಮ (ವಿಹಿತ ಕರ್ಮದ ಉಲ್ಲಂಘನೆ) ಈ ಮೂರರ ವಿಧಾನ ವೇದಗಳ ಮೂಲಕ ಮಾಡಲಾಗಿದೆ; ಜನರಿಂದಲ್ಲ. ವೇದಗಳು ಪರಮಾತ್ಮನ ಸ್ವರೂಪವಾಗಿವೆ. ಆದರೆ ವೇದವಾಣಿಯಲ್ಲಿ ವಿದ್ವಾಂಸರೂ ಮೋಹಿತರಾಗುತ್ತಾರೆ. ಏಕೆಂದರೆ, ವೇದದ ವಾಣಿ ಪರೋಕ್ಷವಾದಾತ್ಮಕವಾಗಿದೆ. (ಶಬ್ದಾರ್ಥ ಬೇರೆಯಾಗಿದ್ದು, ತಾತ್ಪರ್ಯ ಬೇರೆಯಾಗಿರುವುದನ್ನು ಪರೋಕ್ಷವಾದ ಎಂದು ಹೇಳುತ್ತಾರೆ.) ರೋಗ ನಿವೃತ್ತಿಗಾಗಿ ಔಷಧಿಯನ್ನು ಮಿಠಾಯಿಯೊಳಗಿಟ್ಟು ತಿನ್ನಿಸುವಂತೆ, ಆ ಕರ್ಮಗಳ ಮೂಲಕ ಕರ್ಮಬಂಧನದಿಂದ ಮುಕ್ತರಾಗಲಿ ಎಂದು ವೇದಗಳು ಅಜ್ಞಾನಿಗಳನ್ನು ಅನುಶಾಸಿತವಾಗಿಸಲು ಕರ್ಮಗಳ ವಿಧಾನ ಮಾಡುತ್ತವೆ.* ॥ ೪೩-೪೪ ॥ ಸ್ವತಃ ಅಜ್ಞಾನಿಯಾಗಿದ್ದು, ಅಜಿತೇಂದ್ರಿಯನಾಗಿದ್ದು, ವೇದವಿಹಿತ ಕರ್ಮಗಳನ್ನು ಆಚರಿಸದವನು ವಿಹಿತ ಕರ್ಮಗಳ ಉಲ್ಲಂಘನೆಯಿಂದ ಪಾಪಕ್ಕೆ ಭಾಗಿಯಾಗುತ್ತಾನೆ. ತತ್ಫಲವಾಗಿ ಸತ್ತಬಳಿಕ ಮೃತ್ಯುವನ್ನೇ ಪಡೆಯುತ್ತಾರೆ. ಅರ್ಥಾತ್ ಜನ್ಮ-ಮರಣದ ಚಕ್ರದಲ್ಲಿ ಬಿದ್ದಿರುತ್ತಾನೆ, ಮುಕ್ತನಾಗುವುದಿಲ್ಲ. ॥ ೪೫ ॥ ವೇದವಿಹಿತ ಕರ್ಮಗಳನ್ನು ಮಾಡುತ್ತಾ ಭಗವಂತನಿಗೆ ಅರ್ಪಿಸುತ್ತಾ, ಅನಾಸಕ್ತಭಾವದಿಂದ ಕರ್ಮಮಾಡುವ ವ್ಯಕ್ತಿಯು ನೈಷ್ಕರ್ಮ್ಯರೂಪೀ ಪರಮ ಸಿದ್ಧಿಯನ್ನು ಪಡೆದುಕೊಳ್ಳುತ್ತಾನೆ. ವೇದಗಳಲ್ಲಿ ಸ್ವರ್ಗಾದಿರೂಪೀ ಫಲದ ವರ್ಣನೆಯೂ ಇದೆ. ಆದರ ತಾತ್ಪರ್ಯ – ಫಲದ ಸತ್ಯತೆಯಲ್ಲಿರದೆ ವೈದಿಕ ಕರ್ಮಗಳಲ್ಲಿ ಅಭಿರುಚಿ ಉಂಟಾಗಿಸಲೆಂದೇ ಆಗಿದೆ. ॥ ೪೬ ॥

ರಾಜನೇ! ಯಾರು ಪರಬ್ರಹ್ಮಸ್ವರೂಪೀ ಆತ್ಮನ ವಿಷಯದಲ್ಲಿರುವ ಅಜ್ಞಾನದ ಗ್ರಂಥಿಯನ್ನು ಪೂರ್ಣವಾಗಿ ಕತ್ತರಿಸಲು ಬಯಸುತ್ತಾನೋ, ಅವನು ವೈದಿಕ ಹಾಗೂ ಆಗಮ ಎರಡೂ ಪದ್ಧತಿಯಿಂದ ಭಗವಂತನ ಆರಾಧನೆ ಮಾಡಬೇಕು. ॥ ೪೭ ॥

* ಸಕಾಮ ಕರ್ಮಗಳ ಅನುಷ್ಠಾನದಲ್ಲಿ ಆಸ್ಥೆ ಇರುವವರು ಫಲಾಕಾಂಕ್ಷೆಯಿಂದ ಯಜ್ಞಾದಿ ಅನುಷ್ಠಾನ ಮಾಡುತ್ತಾರೆ. ಇದರ ಫಲವಾಗಿ ಸ್ವರ್ಗಾದಿ ಲೋಕಗಳ ಪ್ರಾಪ್ತಿಯೂ ಆಗುತ್ತದೆ. ಅದರಿಂದ ಅವರಿಗೆ ವೇದವಾಣಿಯಲ್ಲಿ ಆಸ್ಥೆ ದೃಢವಾಗುತ್ತದೆ. ಹೀಗೆ ಮಾಡುತ್ತಾ-ಮಾಡುತ್ತಾ ಭಗವತ್ಕೃಪೆಯಿಂದ ಎಂದಾದರೂ ಅವರಿಗೆ ಪರಮಾತ್ಮ ತತ್ತ್ವದ ಜಿಜ್ಞಾಸೆಯೂ ಕೂಡ ಉಂಟಾದರೆ ಅವರು ಸಾರ್ಥಕರಾಗುತ್ತಾರೆ.

ಲಬ್ಧಾನುಗ್ರಹ ಆಚಾರ್ಯಾತ್ತೇನ ಸಂದರ್ಶಿತಾಗಮಃ ।
ಮಹಾಪುರುಷಮಭ್ಯರ್ಚೇನ್ಮೂರ್ತ್ಯಾಭಿಮತಯಾಽಽತ್ಮನಃ ॥ ೪೮ ॥

ಶುಚಿಃ ಸಮ್ಮುಖಮಾಸೀನಃ ಪ್ರಾಣಸಂಯಮನಾದಿಭಿಃ ।
ಪಿಂಡಂ ವಿಶೋಧ್ಯ ಸಂನ್ಯಾಸಕೃತರಕ್ಷೋಽರ್ಚಯೇದ್ಧರಿಮ್ ॥ ೪೯ ॥

ಅರ್ಚಾದೌ ಹೃದಯೇ ಚಾಪಿ ಯಥಾಲಬ್ಧೋಪಚಾರಕೈಃ ।
ದ್ರವ್ಯಕ್ಷಿತ್ಯಾತ್ಮಲಿಂಗಾನಿ ನಿಷ್ಪಾದ್ಯ ಪ್ರೋಕ್ಷ್ಯ ಚಾಸನಮ್ ॥ ೫೦ ॥

ಪಾದ್ಯಾದೀನುಪಕಲ್ಪ್ಯಾಥ ಸನ್ನಿಧಾಪ್ಯ ಸಮಾಹಿತಃ ।
ಹೃದಾದಿಭಿಃ ಕೃತನ್ಯಾಸೋ ಮೂಲಮಂತ್ರೇಣ ಚಾರ್ಚಯೇತ್ ॥ ೫೧ ॥

ಸಾಂಗೋಪಾಂಗಾಂ ಸಪಾರ್ಷದಾಂ
ತಾಂ ತಾಂ ಮೂರ್ತಿಂ ಸ್ವಮಂತ್ರತಃ ।
ಪಾದ್ಯಾರ್ಘ್ಯಾಚಮನೀಯಾದ್ಯೈಃ
ಸ್ನಾನವಾಸೋವಿಭೂಷಣೈ ॥ ೫೨ ॥

ಗಂಧಮಾಲ್ಯಾಕ್ಷತ ಸ್ರಗ್ಭಿರ್ಧೂಪದೀಪೋಪಹಾರಕೈಃ ।
ಸಾಂಗಂ ಸಂಪೂಜ್ಯ ವಿಧಿವತ್ಸ್ತವೈಃ ಸ್ತುತ್ವಾನಮೇದ್ಧರಿಮ್ ॥ ೫೩ ॥

ಆತ್ಮಾನಂ ತನ್ಮಯಂ ಧ್ಯಾಯನ್ಮೂರ್ತಿಂ ಸಂಪೂಜಯೇದ್ಧರೇಃ ।
ಶೇಷಾಮಾಧಾಯ ಶಿರಸಿ ಸ್ವಧಾಮ್ನ್ಯುದ್ವಾಸ್ಯ ಸತ್ಕೃತಮ್ ॥ ೫೪ ॥

ಏವಮಗ್ನ್ಯರ್ಕತೋಯಾದಾವತಿಥೌ ಹೃದಯೇ ಚ ಯಃ ।
ಯಜತೀಶ್ವರಮಾತ್ಮಾನಮಚಿರಾನ್ಮುಚ್ಯತೇ ಹಿ ಸಃ ॥ ೫೫ ॥

ಮೊದಲಿಗೆ ಸೇವಾದಿಗಳ ಮೂಲಕ ಗುರುಗಳಿಂದ ದೀಕ್ಷೆಯನ್ನು ಪಡೆದು, ಮತ್ತೆ ಅವರಿಂದ ಉಪಾಸನಾ ವಿಧಿಯನ್ನು ಕಲಿಯಬೇಕು. ನಮಗೆ ಪ್ರಿಯವಾದ, ಇಷ್ಟವಾದ ಭಗವಂತನ ಮೂರ್ತಿಯ ಮೂಲಕ ಭಗವಾನ್ ಪುರುಷೋತ್ತಮನನ್ನು ಪೂಜಿಸಬೇಕು. ॥೪೮॥ ಸ್ನಾನಾದಿಗಳಿಂದ ಶರೀರವನ್ನು ಮತ್ತು ಸಂತೋಷಾದಿಗಳಿಂದ ಅಂತಃಕರಣವನ್ನು ಶುದ್ಧಮಾಡಬೇಕು. ಇದಾದ ಬಳಿಕ ಭಗವಂತನ ಮೂರ್ತಿಯ ಮುಂದೆ ಕುಳಿತುಕೊಂಡು ಪ್ರಾಣಾಯಾಮಾದಿಗಳಿಂದ ಭೂತಶುದ್ಧಿ-ನಾಡೀಶೋಧನ ಮಾಡಬೇಕು. ಅನಂತರ ವಿಧಿಪೂರ್ವಕ ಮಂತ್ರ, ದೇವತೆ ಇವುಗಳ ನ್ಯಾಸದಿಂದ ಶರೀರ ರಕ್ಷೆಯನ್ನು ಮಾಡಿಕೊಂಡು ಭಗವಂತನನ್ನು ಪೂಜಿಸಬೇಕು. ॥೪೯॥ ಮೊದಲಿಗೆ ಭಗವಂತನನ್ನು ಹೃದಯದಲ್ಲಿ ಧ್ಯಾನಿಸಿ ಮತ್ತೆ ಅರ್ಚಾವಿಗ್ರಹದಲ್ಲಿ ಆವಾಹಿಸಬೇಕು. ಸಮಯಕ್ಕನುಸಾರ ಲಭ್ಯವಾದ ಎಲ್ಲ ಸಾಮಗ್ರಿಗಳನ್ನು ಶುದ್ಧ ಹಾಗೂ ಪವಿತ್ರಗೊಳಿಸಿ, ನೆಲವನ್ನು ತೊಳೆದು, ಸ್ವತಃ ಸ್ನಾನಾದಿಗಳಿಂದ ಶುದ್ಧನಾಗಿ ಪೂಜಿಸುವ ಭಗವಂತನ ಮೂರ್ತಿ, ಪ್ರತಿಮೆಯನ್ನೂ ಕೂಡ ಮೊದಲೇ ಸಿದ್ಧವಾಗಿಡಬೇಕು. ಎಲ್ಲ ವಸ್ತುಗಳನ್ನು ಮೊದಲೇ ಸಿದ್ಧಪಡಿಸಿ, ಆಸನವನ್ನೂ ಶುದ್ಧಮಾಡಬೇಕು. ಪಾದ್ಯ, ಅರ್ಘ್ಯ, ಧೂಪ, ದೀಪ, ನೈವೇದ್ಯ ಮುಂತಾದುವನ್ನೂ ಮುಂದುಗಡೆ ಸಿದ್ಧಪಡಿಸಬೇಕು. ಮತ್ತೆ ಹೃದಯಾದಿನ್ಯಾಸ ಅಂಗನ್ಯಾಸ, ಕರನ್ಯಾಸಮಾಡಿ ಮೂಲಮಂತ್ರದಿಂದ ಭಗವಂತನನ್ನು ಪೂಜಿಸಬೇಕು. ॥ ೫೦-೫೧ ॥ ತಮ್ಮ-ತಮ್ಮ ಉಪಾಸ್ಯದೇವರ ಶ್ರೀವಿಗ್ರಹದ ಹೃದಯಾದಿ ಅಂಗ, ಆಯುಧಾದಿ ಉಪಾಂಗಗಳನ್ನೂ ಮತ್ತು ಪಾರ್ಷದರ ಸಹಿತ ಅವನ ಮೂಲಮಂತ್ರದಿಂದ ಅರ್ಘ್ಯ, ಪಾದ್ಯ, ಆಚಮನ, ಮಧುಪರ್ಕ, ಸ್ನಾನ, ವಸ್ತ್ರ ಆಭೂಷಣ, ಗಂಧ, ಪುಷ್ಪ, ದಧಿ, ಅಕ್ಷತೆಯಿಂದ * ತಿಲಕಗೈದು, ಧೂಪ, ದೀಪ, ನೈವೇದ್ಯ ಮುಂತಾದುವನ್ನೂ ವಿಧಿವತ್ತಾಗಿ ಪೂಜಿಸಿ, ಮತ್ತೆ ಸ್ತೋತ್ರಗಳಿಂದ ಸ್ತುತಿಮಾಡಿ ಪರಿವಾರಸಹಿತ ಭಗವಾನ್ ಶ್ರೀಹರಿಯನ್ನು ನಮಸ್ಕರಿಸ ಬೇಕು. ॥ ೫೨-೫೩ ॥ ತನ್ನನ್ನು ಭಗವನ್ಮಯನೆಂದು ಧ್ಯಾನಮಾಡುತ್ತಾ ಭಗವಂತನ ಮೂರ್ತಿಯನ್ನು ಪೂಜಿಸಬೇಕು. ಪುಷ್ಪ ಪ್ರಸಾದವನ್ನು ತನ್ನ ತಲೆಯಲ್ಲಿ ಧರಿಸಿ, ಆದರದಿಂದ ಭಗವದ್ವಿಗ್ರಹವನ್ನು ಅದರ ಸ್ಥಾನವಾದ ಸಿಂಹಾಸನದಲ್ಲಿ ಸ್ಥಾಪಿಸಿ ಪೂಜೆಯನ್ನು ಮುಗಿಸಬೇಕು. ॥ ೫೪ ॥ ಈ ಪ್ರಕಾರ ಅಗ್ನಿ, ಸೂರ್ಯ, ಜಲ, ಅತಿಥಿ ಮತ್ತು ತನ್ನ ಹೃದಯದಲ್ಲಿ ಆತ್ಮರೂಪದಿಂದ ಶ್ರೀಹರಿಯ ಪೂಜೆ ಮಾಡುವವನು ಬೇಗನೆ ಮುಕ್ತನಾಗಿ ಹೋಗುತ್ತಾನೆ. ॥ ೫೫ ॥

ಮೂರನೆಯ ಅಧ್ಯಾಯವು ಮುಗಿಯಿತು. ॥ ೩ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಏಕಾದಶ ಸ್ಕಂಧೇ ತೃತೀಯೋಽಧ್ಯಾಯಃ ॥ ೩ ॥

---

* ಭಗವಾನ್ ವಿಷ್ಣುವಿನ ಪೂಜೆಯಲ್ಲಿ ಅಕ್ಷತೆಗಳ ಪ್ರಯೋಗ ಕೇವಲ ತಿಲಕಾಲಂಕಾರದಲ್ಲಿ ಮಾತ್ರ ಮಾಡಬೇಕು. ಪೂಜೆಯಲ್ಲಿ ಮಾಡಬಾರದು. "ನಾಕ್ಷತೈರರ್ಚಯೇದ್ ವಿಷ್ಣುಂ ನ ಕೇತಕ್ಯಾ ಮಹೇಶ್ವರಮ್"

ನಾಲ್ಕನೆಯ ಅಧ್ಯಾಯ

ಭಗವಂತನ ಅವತಾರಗಳ ವರ್ಣನೆ

ರಾಜೋವಾಚ

ಯಾನಿ ಯಾನೀಹ ಕರ್ಮಾಣಿ ಯೈರ್ಯೈಃ ಸ್ವಚ್ಛಂದಜನ್ಮಭಿಃ ।
ಚಕ್ರೇ ಕರೋತಿ ಕರ್ತಾ ವಾ ಹರಿಸ್ತಾನಿ ಬ್ರುವಂತು ನಃ ॥ ೧ ॥

ದ್ರುಮಿಲ ಉವಾಚ

ಯೋ ವಾ ಅನಂತಸ್ಯ ಗುಣಾನನಂತಾ-
ನನುಕ್ರಮಿಷ್ಯನ್ ಸ ತು ಬಾಲಬುದ್ಧಿಃ ।
ರಜಾಂಸಿ ಭೂಮೇರ್ಗಣಯೇತ್ ಕಥಂಚಿತ್
ಕಾಲೇನ ನೈವಾಖಿಲಶಕ್ತಿಧಾಮ್ನಃ ॥ ೨ ॥

ಭೂತೈರ್ಯದಾ ಪಂಚಭಿರಾತ್ಮಸೃಷ್ಟೈಃ
ಪುರಂ ವಿರಾಜಂ ವಿರಚಯ್ಯ ತಸ್ಮಿನ್ ।
ಸ್ವಾಂಶೇನ ವಿಷ್ಟಃ ಪುರುಷಾಭಿಧಾನ-
ಮವಾಪ ನಾರಾಯಣ ಆದಿದೇವಃ ॥ ೩ ॥

ಯತ್ಕಾಯ ಏಷ ಭುವನತ್ರಯಸನ್ನಿವೇಶೋ
ಯಸ್ಯೇಂದ್ರಿಯೈಸ್ತನುಭೃತಾಮುಭಯೇಂದ್ರಿಯಾಣಿ ।
ಜ್ಞಾನಂ ಸ್ವತಃ ಶ್ವಸನತೋ ಬಲಮೋಜ ಈಹಾ
ಸತ್ತ್ವಾದಿಭಿಃ ಸ್ಥಿತಿಲಯೋದ್ಭವ ಆದಿಕರ್ತಾ ॥ ೪ ॥

ಆದಾವಭೂಚ್ಛತಧೃತೀ ರಜಸಾಸ್ಯ ಸರ್ಗೇ
ವಿಷ್ಣುಃ ಸ್ಥಿತೌ ಕ್ರತುಪತಿರ್ದ್ವಿಜಧರ್ಮಸೇತುಃ ।
ರುದ್ರೋಽಪ್ಯಯಾಯ ತಮಸಾ ಪುರುಷಃ ಸ ಆದ್ಯ
ಇತ್ಯುದ್ಭವಸ್ಥಿತಿಲಯಾಃ ಸತತಂ ಪ್ರಜಾಸು ॥ ೫ ॥

ರಾಜಾ ನಿಮಿಯು ಕೇಳಿದನು – ಯೋಗೀಶ್ವರರೇ ! ಭಗವಂತನು ತನ್ನ ಭಕ್ತರ ಭಕ್ತಿಗೆ ವಶೀಭೂತನಾಗಿ ತನ್ನ ಇಚ್ಛಾನುಸಾರವಾಗಿ ಅನೇಕ ಅವತಾರಗಳನ್ನು ಎತ್ತಿ, ನಾನಾ ಪ್ರಕಾರದ ಲೀಲೆಗಳನ್ನು ಮಾಡುತ್ತಾನೆ. ಇಷ್ಟರವರೆಗೆ ಭಗವಂತನು ಎತ್ತಿದ, ಈಗ ಇರುವ, ಮುಂದೆ ಎತ್ತಲಿರುವ ಅವತಾರಗಳ ಲೀಲೆಗಳನ್ನು ದಯವಿಟ್ಟು ವರ್ಣಿಸಿರಿ. ॥ ೧ ॥

ಏಳನೆಯವರಾದ ದ್ರುಮಿಲ ಯೋಗೀಶ್ವರರು ಹೇಳಿದರು – ರಾಜನೇ ! ಭಗವಂತನು ಅನಂತನು. ಅವನ ಗುಣಗಳೂ ಅನಂತ. ಅಂತಹ ಭಗವಂತನ ಅನಂತ ಕಲ್ಯಾಣಗುಣಗಳನ್ನು ಯಥಾಕ್ರಮದಿಂದ ಪೂರ್ಣವಾಗಿ ಯಾರೂ ವರ್ಣಿಸಲಾರರು. ಭಗವಂತನ ಗುಣಗಳನ್ನು ಪೂರ್ಣವಾಗಿ ವರ್ಣಿಸಬಲ್ಲೆ ಎಂದು ಯಾರಾದರೂ ಯೋಚಿಸಿದರೆ ಅವನು ಅಲ್ಪ ಬುದ್ಧಿಯವನೇ ಆಗಿರುವನು. ಭೂಮಿಯಲ್ಲಿರುವ ಧೂಳಿನ ಕಣಗಳನ್ನು ಎಣಿಸುವುದು ಅಸಂಭವವೇ. ಕದಾಚಿತ್ ಅದನ್ನಾದರೂ ಯಾರಾದರೂ ಎಣಿಸಬಹುದು. ಆದರೆ ಸಮಸ್ತ ಶಕ್ತಿಗಳ ಆಶ್ರಯಸ್ವರೂಪೀ ಭಗವಂತನ ಅನಂತ ಗುಣಗಳ ಅಂತವನ್ನು ಯಾರೂ ಮುಟ್ಟಲಾರರು. ॥ ೨ ॥ ಭಗವಂತನೇ ಪೃಥ್ವೀ, ಜಲ, ಅಗ್ನಿ, ವಾಯು, ಆಕಾಶ ಈ ಪಂಚ ಭೂತಗಳನ್ನು ತಾನೇ-ತನ್ನಿಂದ-ತನ್ನಲ್ಲೇ ಸೃಷ್ಟಿಸಿದನು. ಇವುಗಳ ಮೂಲಕ ವಿರಾಟ್ ಬ್ರಹ್ಮಾಂಡವನ್ನು ನಿರ್ಮಿಸಿ, ಲೀಲೆಯಿಂದ ತನ್ನ ಅಂಶ ಅಂತರ್ಯಾಮಿ ರೂಪದಿಂದ ಅದರಲ್ಲಿ ಪ್ರವೇಶಿಸಿದನು. ಆ ಆದಿದೇವ ನಾರಾಯಣನನ್ನೇ ಪುರುಷನೆಂದು ಹೇಳಲಾಗಿದೆ. ॥ ೩. ॥ ಈ ತ್ರಿಭುವನಗಳ ರಚನೆ ಭಗವಂತನದೇ ಶರೀರವಾಗಿದೆ. ಅವನ ಶಕ್ತಿಯಿಂದಲೇ ಸಮಸ್ತ ಪ್ರಾಣಿಗಳ ಜ್ಞಾನೇಂದ್ರಿಯಗಳು, ಕರ್ಮೇಂದ್ರಿಯಗಳು ಉಂಟಾಗಿವೆ. ಅವನೇ ಎಲ್ಲ ಪ್ರಾಣಿಗಳಲ್ಲಿ ಅಂತರ್ಯಾಮಿ ರೂಪದಿಂದ ಸ್ಥಿತನಾಗಿರುವನು. ಅವನು ಇರುವುದರಿಂದಲೇ ಎಲ್ಲರಲ್ಲಿ ಜ್ಞಾನಶಕ್ತಿಯ ಸಂಚಾರವಾಗುತ್ತದೆ. ಅವನೇ ಪ್ರಾಣರೂಪದಿಂದ ಎಲ್ಲರಲ್ಲಿ ನೆಲೆಸಿರುವನು. ಅವನ ಶಕ್ತಿ ಯಿಂದಲೇ ಎಲ್ಲರಿಗೆ ಶಾರೀರಿಕ ಬಲ, ಮಾನಸಿಕ ಶಕ್ತಿ ಪ್ರಾಪ್ತ ವಾಗುತ್ತದೆ ಹಾಗೂ ಕ್ರಿಯೆಗಳನ್ನು ಮಾಡುವ ಶಕ್ತಿಯೂ ದೊರೆಯುತ್ತದೆ. ಆ ಆದಿಕರ್ತಾ ಭಗವಾನ್ ನಾರಾಯಣನೇ ಸತ್ತ್ವಾದಿ ಮೂರುಗುಣಗಳಿಂದ ಪ್ರಪಂಚದ ಉತ್ಪತ್ತಿ, ಸ್ಥಿತಿ, ಪ್ರಳಯ ಮಾಡುತ್ತಾ ಇರುತ್ತಾನೆ. ಇದೆಲ್ಲವೂ ಅವನ ಲೀಲಾವಿಲಾಸವೇ ಆಗಿದೆ. ॥ ೪ ॥ ಆ ಆದಿಪುರುಷ ನಾರಾಯಣನೇ ಮೊಟ್ಟಮೊದಲು ವಿಶ್ವದ ಸೃಷ್ಟಿಗಾಗಿ ರಜೋಗುಣದ ಮೂಲಕ ಚತುರ್ಮುಖ ಬ್ರಹ್ಮನಾದನು. ಯಜ್ಞಗಳ ಅಧಿಪತಿ ಆ ಭಗವಾನ್ ನಾರಾಯಣನೇ ಸತ್ತ್ವಗುಣವನ್ನು ಸ್ವೀಕರಿಸಿ ಕೊಂಡು ಬ್ರಾಹ್ಮಣರನ್ನು, ಧರ್ಮವನ್ನು ರಕ್ಷಿಸುವುದಕ್ಕಾಗಿ ಹಾಗೂ ವಿಶ್ವದ ಪಾಲನೆಗಾಗಿ ವಿಷ್ಣುರೂಪನಾದನು. ಅದೇ ಆದಿಪುರುಷ ನಾರಾಯಣನು ತಮೋಗುಣದಿಂದ ರುದ್ರರೂಪನಾಗಿ ಇದನ್ನು ಸಂಹಾರ ಮಾಡುತ್ತಾನೆ. ಈ ವಿಧವಾಗಿ ಈ ಪ್ರಪಂಚದ ಉತ್ಪತ್ತಿ, ಸ್ಥಿತಿ, ಸಂಹಾರ ಮೂರೂ ಅವನಿಂದಲೇ ಆಗುತ್ತಾ ಇರುತ್ತವೆ. ॥ ೫ ॥

ಧರ್ಮಸ್ಯ ದಕ್ಷದುಹಿತರ್ಯಜನಿಷ್ಟ ಮೂರ್ತ್ಯಾಂ
ನಾರಾಯಣೋ ನರ ಋಷಿಪ್ರವರಃ ಪ್ರಶಾಂತಃ ।
ನೈಷ್ಕರ್ಮ್ಯಲಕ್ಷಣಮುವಾಚ ಚಚಾರ ಕರ್ಮ
ಯೋಽದ್ಯಾಪಿ ಚಾಸ್ತ ಋಷಿವರ್ಯನಿಷೇವಿತಾಂಘ್ರಿಃ ॥ ೬ ॥

ದಕ್ಷ ಪ್ರಜಾಪತಿಯ ಮಗಳೂ, ಧರ್ಮನ ಪತ್ನಿಯೂ ಆದ ಮೂರ್ತಿ ಎಂಬಾಕೆಯಲ್ಲಿ ಋಷಿಶ್ರೇಷ್ಠ ನರ-ನಾರಾಯಣನಾಗಿ ಅವನೇ ಅವತರಿಸಿದನು. ಆ ಅವತಾರದಲ್ಲಿ ಅವನು ಕರ್ಮ ಬಂಧನದಿಂದ ಬಿಡಿಸಿ, ನೈಷ್ಕರ್ಮ್ಯಸ್ಥಿತಿಯನ್ನು ಪ್ರಾಪ್ತಮಾಡಿಕೊಳ್ಳುವ, ಆತ್ಮತತ್ತ್ವದ ಸಾಕ್ಷಾತ್ಕಾರ ಮಾಡಿಸುವ ಭಗವದ್ ಆರಾಧನಾರೂಪೀ ಕರ್ಮದ ಉಪದೇಶವನ್ನು ನೀಡಿದನು. ಅವನು ಸ್ವತಃ ಆ ವಿಧಿಯಿಂದ ಕರ್ಮಗಳನ್ನು ಆಚರಿಸಿ, ಇಂದೂ ಕೂಡ ಲೋಕಕಲ್ಯಾಣದ ಭಾವನೆಯಿಂದ ಬದರಿಕಾಶ್ರಮದಲ್ಲಿ ನರ ನಾರಾಯಣ ರೂಪದಿಂದ ವಿರಾಜಮಾನನಾಗಿದ್ದಾನೆ. ದೊಡ್ಡ ದೊಡ್ಡ ಋಷಿ ಮುನಿಗಳು ಅವನ ಚರಣಕಮಲಗಳನ್ನು ಸೇವಿಸುತ್ತಾ ಇದ್ದಾರೆ. ॥ ೬ ॥

ಇಂದ್ರೋ ವಿಶಂಕ್ಯ ಮಮ ಧಾಮ ಜಿಘೃಕ್ಷತೀತಿ
ಕಾಮಂ ನ್ಯಯುಂಕ್ತ ಸಗಣಂ ಸ ಬದರ್ಯುಪಾಖ್ಯಮ್ ।
ಗತ್ವಾಪ್ಸರೋಗಣವಸಂತಸುಮಂದವಾತೈಃ
ಸ್ತ್ರೀಪ್ರೇಕ್ಷಣೇಷುಭಿರವಿಧ್ಯದತನ್ಮಹಿಜ್ಞಃ ॥ ೭ ॥

ಒಮ್ಮೆ ನರ-ನಾರಾಯಣರ ಘೋರ ತಪಸ್ಸನ್ನು ನೋಡಿ ಇವರು ನನ್ನ ಸ್ವರ್ಗವನ್ನು ಕಸಿದುಕೊಳ್ಳಲು ಬಯಸುತ್ತಿರುವರೋ ಎಂದು ಇಂದ್ರನ ಮನಸ್ಸಿನಲ್ಲಿ ಸಂದೇಹ ಉಂಟಾಯಿತು. ಅವನು ಅವರ ತಪಸ್ಸಿನಲ್ಲಿ ವಿಘ್ನವನ್ನೊಡ್ಡಲು ಮನ್ಮಥನನ್ನು ಅವನ ಸೇನೆಯೊಂದಿಗೆ ಬದರಿಕಾಶ್ರಮಕ್ಕೆ ಕಳಿಸಿದನು. ಮನ್ಮಥನಿಗೆ ಅವರ ಮಹಿಮೆಯ ಜ್ಞಾನವಿರಲಿಲ್ಲ. ಆದ್ದರಿಂದ ಅವನು ತನ್ನ ಸೇನೆಯೊಂದಿಗೆ ಅರ್ಥಾತ್ ಅಪ್ಸರೆಯರನ್ನೊಳಗೊಂಡು, ವಸಂತ, ಮಂದ-ಸುಗಂಧ ವಾಯುವಿನೊಂದಿಗೆ ಹೋಗಿ ಸ್ತ್ರೀಯರ ಕಟಾಕ್ಷ ಬಾಣಗಳಿಂದ ಅವರನ್ನು ಘಾಸಿ ಮಾಡತೊಡಗಿದನು. ॥ ೭ ॥

ವಿಜ್ಞಾಯ ಶಕ್ರಕೃತಮಕ್ರಮಮಾದಿದೇವಃ
ಪ್ರಾಹ ಪ್ರಹಸ್ಯ ಗತವಿಸ್ಮಯ ಏಜಮಾನಾನ್ ।
ಮಾ ಭೈಷ್ಟ ಭೋ ಮದನ ಮಾರುತ ದೇವವಧ್ವೋ
ಗೃಹ್ಣೀತ ನೋ ಬಲಿಮಶೂನ್ಯಮಿಮಂ ಕುರುಧ್ವಮ್ ॥ ೮ ॥

ಭಗವಾನ್ ನಾರಾಯಣನು ಇದೆಲ್ಲ ಕೃತ್ಯ ಇಂದ್ರನದೇ ಆಗಿದೆ ಎಂದು ತಿಳಿದುಕೊಂಡನು. ಅವರ ಮುಂದೆ ಕಾಮದೇವನ ಸೇನೆ ಅವರ ಪ್ರಭಾವವನ್ನು ನೋಡಿ ಭಯದಿಂದ ನಡುಗಿಹೋಯಿತು. ನರ-ನಾರಾಯಣರು ವಿಸ್ಮಿತರಾಗದೆ ಮಂದಹಾಸ ಸೂಸುತ್ತಾ, ಅಭಯವನ್ನಿತ್ತು ಇಂತೆಂದರು – ಎಲೈ ಮದನನೇ! ಮಾರುತ ಮತ್ತು ಅಪ್ಸರೆಯರೇ! ನೀವು ಹೆದರಬೇಡಿರಿ. ನಮ್ಮ ಆಶ್ರಮಕ್ಕೆ ನೀವು ಬಂದಿರುವಿರಿ. ನಮ್ಮ ಆತಿಥ್ಯವನ್ನು ಸ್ವೀಕರಿಸಿರಿ. ಈ ಆಶ್ರಮವನ್ನು ಅತಿಥಿರಹಿತನನ್ನಾಗಿಸಬೇಡಿ. ॥ ೮ ॥ ರಾಜನೇ! ನರ-ನಾರಾಯಣ ಋಷಿಗಳು ಅವರಿಗೆ ಅಭಯದಾನವನ್ನಿತ್ತು ನುಡಿದಾಗ ಕಾಮದೇವ ಮುಂತಾದವರ ತಲೆ ನಾಚಿಕೆಯಿಂದ ತಗ್ಗಿತು. ಮದನನು ದಯಾಳು ಭಗವಾನ್ ನಾರಾಯಣನಲ್ಲಿ ಹೇಳಿದನು – ಪ್ರಭೋ! ನೀನು ಪರಬ್ರಹ್ಮ ಸ್ವರೂಪನಾಗಿರುವೆ, ನಿರ್ವಿಕಾರನಾಗಿರುವೆ. ಆದರಿಂದ ಇದೇನು ಆಶ್ಚರ್ಯದ ಮಾತಲ್ಲ. ದೊಡ್ಡ-ದೊಡ್ಡ ಆತ್ಮಾರಾಮರಾದ ಧೀರಪುರುಷರು ನಿರಂತರ ನಿನ್ನ ಚರಣಕಮಲಗಳಲ್ಲಿ ವಂದಿಸುತ್ತಿರುತ್ತಾರೆ. ॥ ೯ ॥

ಇತ್ಥಂ ಬ್ರುವತ್ಯಭಯದೇ ನರದೇವ ದೇವಾಃ
ಸವ್ರೀಡನಮ್ರಶಿರಸಃ ಸಘೃಣಂ ತಮೂಚುಃ ।
ನೈತದ್ವಿಭೋ ತ್ವಯಿ ಪರೇಽವಿಕೃತೇ ವಿಚಿತ್ರಂ
ಸ್ವಾರಾಮಧೀರನಿಕರಾನತಪಾದಪದ್ಮೇ ॥ ೯ ॥

ಯಾವ ಜನರು ದೇವತೆಗಳ ಆರಾಧನೆಯ ನಿಮಿತ್ತ ಯಜ್ಞಾದಿಗಳಲ್ಲಿ ದೇವತೆಗಳ ಹೆಸರಿನಲ್ಲಿ ಅವರಿಗೆ ಹವಿರ್ಭಾಗ ಅರ್ಪಿಸುತ್ತಾರೋ, ಅವರ ಸಾಧನೆಯಲ್ಲಾದರೋ ದೇವತೆಗಳು ವಿಘ್ನವನ್ನೊಡ್ಡುವುದಿಲ್ಲ. ಆದರೆ ಪ್ರಭೋ! ನಿನ್ನ ಭಕ್ತರು ನಿನ್ನನ್ನು ಆರಾಧಿಸುವಾಗ ಅವರ ಭಕ್ತಿಯಲ್ಲಿ ದೇವತೆಗಳು ಅನೇಕ ವಿಘ್ನಗಳನ್ನು ಉಂಟುಮಾಡುತ್ತಾರೆ. ಅವರು ಯೋಚಿಸುತ್ತಾರೆ – 'ಈ ಭಕ್ತನು ನಮ್ಮಗಳ ಸ್ವರ್ಗವನ್ನು ದಾಟಿ ಪರಮಪದಕ್ಕೆ ಹೋಗುತ್ತಿರುವನು.' ಆದರೆ ನಿನ್ನ ಭಕ್ತರನ್ನು ನೀನೇ ರಕ್ಷಿಸುತ್ತಿರುವೆ. ಅವರ ವಿಘ್ನಗಳ ಮೇಲೆ ನೀನೇ ಕಾಲನ್ನು ಇಟ್ಟಿರುವೆ. ಆದ್ದರಿಂದ ನಿನ್ನಿಂದ ರಕ್ಷಿತರಾದ ಭಕ್ತರು ನಿನ್ನ ಧಾಮಕ್ಕೆ ಹೊರಟುಹೋಗುತ್ತಾರೆ. ॥ ೧೦ ॥

ತ್ವಾಂ ಸೇವತಾಂ ಸುರಕೃತಾ ಬಹವೋಽಂತರಾಯಾಃ
ಸ್ವೌಕೋ ವಿಲಂಘ್ಯ ಪರಮಂ ವ್ರಜತಾಂ ಪದಂ ತೇ ।
ನಾನ್ಯಸ್ಯ ಬರ್ಹಿಷಿ ಬಲೀನ್ ದದತಃ ಸ್ವಭಾಗಾನ್-
ಧತ್ತೇ ಪದಂ ತ್ವಮವಿತಾ ಯದಿ ವಿಘ್ನಮೂರ್ಧ್ನಿ ॥ ೧೦ ॥

ಕ್ಷುತ್ತೃಟ್ತ್ರಿಕಾಲಗುಣಮಾರುತಜೈಹ್ವ್ಯಶೈಶ್ನ್ಯಾ-
    ನಸ್ಮಾನಪಾರಜಲಧೀನತಿತೀರ್ಯ ಕೇಚಿತ್ ।
ಕ್ರೋಧಸ್ಯ ಯಾಂತಿ ವಿಫಲಸ್ಯ ವಶಂ ಪದೇ ಗೋ-
    ರ್ಮಜ್ಜಂತಿ ದುಶ್ಚರತಪಶ್ಚ ವೃಥೋತ್ಸೃಜಂತಿ ॥ ೧೧ ॥

ಇತಿ ಪ್ರಗೃಣತಾಂ ತೇಷಾಂ ಸ್ತ್ರಿಯೋಽತ್ಯದ್ಭುತದರ್ಶನಾಃ ।
ದರ್ಶಯಾಮಾಸ ಶುಶ್ರೂಷಾಂ ಸ್ವರ್ಚಿತಾಃ ಕುರ್ವತೀರ್ವಿಭುಃ
॥ ೧೨ ॥

ತೇ ದೇವಾನುಚರಾ ದೃಷ್ಟ್ವಾ ಸ್ತ್ರಿಯಃ ಶ್ರೀರಿವ ರೂಪಿಣೀಃ ।
ಗಂಧೇನ ಮುಮುಹುಸ್ತಾಸಾಂ ರೂಪೌದಾರ್ಯಹತಶ್ರಿಯಃ
॥ ೧೩ ॥

ತಾನಾಹ ದೇವದೇವೇಶಃ ಪ್ರಣತಾನ್ಪ್ರಹಸನ್ನಿವ ।
ಆಸಾಮೇಕತಮಾಂ ವೃಙ್ಧ್ವಂ ಸವರ್ಣಾಂ ಸ್ವರ್ಗಭೂಷಣಾಮ್
॥ ೧೪ ॥

ಓಮಿತ್ಯಾದೇಶಮಾದಾಯ ನತ್ವಾ ತಂ ಸುರವಂದಿನಃ ।
ಊರ್ವಶೀಮಪ್ಸರಃಶ್ರೇಷ್ಠಾಂ ಪುರಸ್ಕೃತ್ಯ ದಿವಂ ಯಯುಃ
॥ ೧೫ ॥

ಇಂದ್ರಾಯಾನಮ್ಯ ಸದಸಿ ಶೃಣ್ವತಾಂ ತ್ರಿದಿವೌಕಸಾಮ್ ।
ಊಚುರ್ನಾರಾಯಣಬಲಂ ಶಕ್ರಸ್ತತ್ರಾಸ ವಿಸ್ಮಿತಃ
॥ ೧೬ ॥

ಹಂಸಸ್ವರೂಪ್ಯವದದಚ್ಯುತ ಆತ್ಮಯೋಗಂ
    ದತ್ತಃ ಕುಮಾರ ಋಷಭೋ ಭಗವಾನ್ ಪಿತಾ ನಃ ।
ವಿಷ್ಣುಃ ಶಿವಾಯ ಜಗತಾಂ ಕಲಯಾವತೀರ್ಣ-
    ಸ್ತೇನಾಹೃತಾ ಮಧುಭಿದಾ ಶ್ರುತಯೋ ಹಯಾಸ್ಯೇ ॥ ೧೭ ॥

ಗುಪ್ತೋಽಪ್ಯಯೇ ಮನುರಿಲೌಷಧಯಶ್ಚ ಮಾತ್ಸ್ಯೇ
ಕ್ರೌಡೇ ಹತೋ ದಿತಿಜ ಉದ್ಧರತಾಂಭಸಃ ಕ್ಷ್ಮಾಮ್ ।
ಕೌರ್ಮೇ ಧೃತೋಽದ್ರಿರಮೃತೋನ್ಮಥನೇ ಸ್ವಪೃಷ್ಠೇ
ಗ್ರಾಹಾತ್ ಪ್ರಪನ್ನಮಿಭರಾಜಮಮುಂಚದಾರ್ತಮ್ ॥ ೧೮ ॥

ಕೆಲವರು ಸಹಿಸಲು ತುಂಬಾ ಕಷ್ಟವಾದ - ಹಸಿವು, ಬಾಯಾರಿಕೆ, ಚಳಿ, ಸೆಕೆ, ಮಳೆ, ಚಂಡಮಾರುತದಂತಹ ಕಷ್ಟಗಳನ್ನು ಹಾಗೂ ರಸನೇಂದ್ರಿಯ, ಜನನೇಂದ್ರಿಯಗಳ ವೇಗವನ್ನು ಸಹಿಸಿಕೊಳ್ಳುತ್ತಾರೆ. ಈ ಪ್ರಕಾರ ಅವರು ಅಪಾರ ಸಮುದ್ರದಂತಹ ವೇಗಗಳನ್ನಾದರೋ ದಾಟಿಹೋಗುತ್ತಾರೆ. ಆದರೆ ಕ್ರೋಧಕ್ಕೆ ವಶೀಭೂತರಾಗಿ ಸಾಮಾನ್ಯ ಗೋಷ್ಪಾದದಷ್ಟು ನೀರಿನಲ್ಲಿ ಮುಳುಗಿ ಹೋಗುತ್ತಾರೆ. ಈ ವಿಧವಾಗಿ ತಮ್ಮ ಕಠಿಣ ತಪಸ್ಸನ್ನು ವ್ಯರ್ಥವಾಗಿ ಕಳೆದುಕೊಳ್ಳುತ್ತಾರೆ. ॥ ೧೧ ॥ ಮನ್ಮಥ, ವಸಂತನೇ ಮೊದಲಾದವರು ಭಗವಂತನನ್ನು ಸ್ತುತಿಸಿದಾಗ, ಸರ್ವಶಕ್ತಿವಂತ ಭಗವಂತನು ತನ್ನ ಯೋಗಮಾಯೆಯಿಂದ ಅವರ ಎದುರಿಗೇ ಸರ್ವಾಲಂಕಾರ ಭೂಷಿತರಾದ ಅದ್ಭುತ ರೂಪಲಾವಣ್ಯಯುಕ್ತ ಅನೇಕ ರಮಣಿಯರನ್ನು ಪ್ರಕಟಿಸಿ ತೋರಿಸಿದನು. ಅವರೆಲ್ಲರೂ ಭಗವಂತನನ್ನು ಸೇವಿಸುತ್ತಿದ್ದರು. ॥ ೧೨ ॥ ದೇವರಾಜ ಇಂದ್ರನ ಅನುಚರರು ಆ ಲಕ್ಷ್ಮೀದೇವಿಗೆ ಸಮಾನರಾದ ರೂಪವತಿ ಸ್ತ್ರೀಯರನ್ನು ನೋಡಿದಾಗ, ಅವರ ಅಪಾರ ಸೌಂದರ್ಯದ ಮುಂದೆ ಇವರೆಲ್ಲರ ಕಾಂತಿಯು ಮಸಕಾಯಿತು. ಅವರ ಶರೀರದಲ್ಲಿ ಹೊರಸೂಸುತ್ತಿದ್ದ ದಿವ್ಯಗಂಧದಿಂದ ಎಲ್ಲರೂ ಮೋಹಿತರಾದರು. ॥ ೧೩ ॥ ಅವರು ವಿನಮ್ರರಾಗಿ ತಲೆಬಾಗಿದರು. ಆಗ ದೇವಾಧಿದೇವ ಭಗವಂತನು ನಗುತ್ತಾ - 'ನಿಮಗೆ ಅನುರೂಪರಾದ ಇವರಲ್ಲಿ ಯಾರನ್ನಾದರೂ ಒಬ್ಬರನ್ನು, ನೀವು ತೆಗೆದುಕೊಳ್ಳಿ, ಅವಳು ನಿಮ್ಮ ಸ್ವರ್ಗಲೋಕದ ಶೋಭೆಯನ್ನು ಹೆಚ್ಚಿಸುವಳು' ಎಂದು ಹೇಳಿದನು. ॥ ೧೪ ॥ ದೇವೇಂದ್ರನ ಅನುಚರರು 'ಹಾಗೇ ಆಗಲೀ' ಎಂದು ಹೇಳುತ್ತಾ ಭಗವಂತನ ಆದೇಶವನ್ನು ಸ್ವೀಕರಿಸಿ, ಅವನನ್ನು ನಮಸ್ಕರಿಸಿ, ಸ್ತ್ರೀಯರಲ್ಲಿ ಶ್ರೇಷ್ಠಳಾದ ಊರ್ವಶೀ ಅಪ್ಸರೆಯನ್ನು ಪಡೆದು ಸ್ವರ್ಗಕ್ಕೆ ತೆರಳಿದರು. ॥ ೧೫ ॥ ಸ್ವರ್ಗವನ್ನು ಸೇರಿ ದೇವತೆಗಳು ತುಂಬಿದ ಸಭೆಯಲ್ಲಿ ಕಾಮನು ಭಗವಾನ್ ನರ-ನಾರಾಯಣರ ಬಲ, ಮಹಿಮೆಯನ್ನು ವರ್ಣಿಸಿದನು. ಇಂದ್ರನು ತಾನು ಗೈದುದನ್ನು ನೆನೆದು ಭಯಭೀತನಾದನು ಹಾಗೂ ಭಗವಂತನ ಮಹಿಮೆಯನ್ನು ನೋಡಿ ವಿಸ್ಮಿತನಾದನು. ॥ ೧೬ ॥

ಭಗವಾನ್ ನಾರಾಯಣನೇ ಹಂಸರೂಪನಾಗಿ ಆತ್ಮಯೋಗವನ್ನು ಉಪದೇಶಿಸಿದನು. ಅವನೇ ದತ್ತಾತ್ರೇಯ, ಸನತ್ಕುಮಾರ ಮತ್ತು ನಮ್ಮ ತೀರ್ಥರೂಪರಾದ ಋಷಭದೇವರ ರೂಪದಿಂದ ಆತ್ಮಯೋಗವನ್ನು ಕುರಿತು ಉಪದೇಶಿಸಿದನು. ಅದೇ ಭಗವಂತನು ಜಗತ್ತಿನ ಕಲ್ಯಾಣಕ್ಕಾಗಿ ತನ್ನ ಅಂಶದಿಂದ ಅವತರಿಸುತ್ತಾನೆ. ಅವನೇ ಹಯಗ್ರೀವನಾಗಿ ಅವತರಿಸಿ, ಮಧು-ಕೈಟಭರೆಂಬ ಅಸುರರನ್ನು ಸಂಹರಿಸಿ, ಅವರಿಂದ ಕದಿಯಲ್ಪಟ್ಟ ವೇದಗಳನ್ನು ಉದ್ಧರಿಸಿದನು. ॥ ೧೭ ॥ ಜಲಪ್ರಳಯದ ಸಮಯ ಮತ್ಸ್ಯಾವತಾರ ತಳೆದು ಅವನೇ ಸತ್ಯವ್ರತ ಮನುವನ್ನು, ಪೃಥ್ವಿಯನ್ನು ಮತ್ತು ಓಷಧಿಗಳನ್ನು ರಕ್ಷಿಸಿದನು. ವರಾಹ ಅವತಾರವನ್ನೆತ್ತಿ ಹಿರಣ್ಯಾಕ್ಷನನ್ನು ವಧಿಸಿ, ರಸಾತಲದಲ್ಲಿ ಮುಳುಗಿಹೋಗಿದ್ದ ಭೂಮಿಯನ್ನು ಉದ್ಧರಿಸಿದನು. ಕೂರ್ಮಾವತಾರದಲ್ಲಿ ಸಮುದ್ರಮಂಥನದ ಸಮಯ ಮಂದರಾಚಲವನ್ನು ತನ್ನ ಬೆನ್ನಮೇಲೆ ಹೊತ್ತು ಸುರರನ್ನು ಕಾಪಾಡಿದನು. ಅವನೇ ಮಕರಿಯನ್ನು ತರಿದು ಪೀಡಿತನಾದ ಗಜೇಂದ್ರನನ್ನು ಬಿಡಿಸಿದನು. ॥ ೧೮ ॥

ಸಂಸ್ತುನ್ವತೋಽಬ್ಧಿಪತಿತಾನ್ ಶ್ರಮಣಾನೃಷೀಂಶ್ಚ
ಶಕ್ರಂ ಚ ವೃತ್ರವಧತಸ್ತಮಸಿ ಪ್ರವಿಷ್ಟಮ್ ।

ದೇವಸ್ತ್ರಿಯೋಽಸುರಗೃಹೇ ಪಿಹಿತಾ ಅನಾಥಾ
ಜಘ್ನೇಽಸುರೇಂದ್ರಮಭಯಾಯ ಸತಾಂ ನೃಸಿಂಹೇ ॥ ೧೯ ॥

ದೇವಾಸುರೇ ಯುಧಿ ಚ ದೈತ್ಯಪತೀನ್ಸುರಾರ್ಥೇ
ಹತ್ವಾಂತರೇಷು ಭುವನಾನ್ಯದಧಾತ್ಕಲಾಭಿಃ ।

ಭೂತ್ವಾಥ ವಾಮನ ಇಮಾಮಹರದ್ಬಲೇಃ ಕ್ಷ್ಮಾಂ
ಯಾಚ್ಞಾಚ್ಛಲೇನ ಸಮದಾದದಿತೇಃ ಸುತೇಭ್ಯಃ ॥ ೨೦ ॥

ನಿಃಕ್ಷತ್ರಿಯಾಮಕೃತ ಗಾಂ ಚ ತ್ರಿಃ ಸಪ್ತಕೃತ್ವೋ
ರಾಮಸ್ತು ಹೈಹಯಕುಲಾಪ್ಯಯಭಾರ್ಗವಾಗ್ನಿಃ ।

ಸೋಽಬ್ಧಿಂ ಬಬಂಧ ದಶವಕ್ತ್ರಮಹನ್ಸಲಂಕಂ
ಸೀತಾಪತಿರ್ಜಯತಿ ಲೋಕಮಲಘ್ನಕೀರ್ತಿಃ ॥ ೨೧ ॥

ಭೂಮೇರ್ಭರಾವತರಣಾಯ ಯದುಷ್ವಜನ್ಮಾ
ಜಾತಃ ಕರಿಷ್ಯತಿ ಸುರೈರಪಿ ದುಷ್ಕರಾಣಿ ।

ವಾದೈರ್ವಿಮೋಹಯತಿ ಯಜ್ಞಕೃತೋಽತದರ್ಹಾನ್
ಶೂದ್ರಾನ್ಕಲೌ ಕ್ಷಿತಿಭುಜೋ ನ್ಯಹನಿಷ್ಯದಂತೇ ॥ ೨೨ ॥

ಏವಂವಿಧಾನಿ ಕರ್ಮಾಣಿ ಜನ್ಮಾನಿ ಚ ಜಗತ್ಪತೇಃ ।
ಭೂರೀಣಿ ಭೂರಿಯಶಸೋ ವರ್ಣಿತಾನಿ ಮಹಾಭುಜ
॥ ೨೩ ॥

ಹಿಂದಿನಕಾಲದ ಮಾತು – ವಾಲಖಿಲ್ಯ ಋಷಿಗಳು ತಪಸ್ಸು ಮಾಡುತ್ತಾ-ಮಾಡುತ್ತಾ ಅತ್ಯಂತ ದುರ್ಬಲರಾಗಿದ್ದರು. ಅವರು ಕಶ್ಯಪರಿಗಾಗಿ ಸಮಿಧೆಗಳನ್ನು ತರುತ್ತಿರುವಾಗ ಹಸುವಿನ ಕಾಲಿನಷ್ಟು ಹೊಂಡದಲ್ಲಿ ಬಿದ್ದುಬಿಟ್ಟರು. ಅವರಿಗೆ ಸಮುದ್ರದಲ್ಲೇ ಮುಳುಗಿದಂತಾಯಿತು. ಅವರು ಭಗವಂತನನ್ನು ಸ್ತುತಿಸಿದಾಗ, ಅವನು ಅವರನ್ನು ಉದ್ಧರಿಸಿದನು. ವೃತ್ರಾಸುರನನ್ನು ಕೊಂದ ಕಾರಣ ಇಂದ್ರನಿಗೆ ಬ್ರಹ್ಮಹತ್ಯೆ ತಗುಲಿತ್ತು. ಅವನು ಅದರ ಭಯದಿಂದ ಓಡಿಹೋಗಿ ಅಡಗಿದ್ದರೆ ಭಗವಂತನು ಆ ಬ್ರಹ್ಮಹತ್ಯೆಯಿಂದ ಇಂದ್ರನನ್ನು ರಕ್ಷಿಸಿದ್ದನು. ದೇವತೆಗಳ ಹೆಂಡಿರನ್ನು ಹಿರಣ್ಯಕಶಿಪು ಸೆರೆಯಲ್ಲಿಟ್ಟಿದ್ದನು. ಆಗ ಭಗವಂತನು ನರಸಿಂಹರೂಪದಿಂದ ಅವನನ್ನು ಕೊಂದು ಅಸುರನಿಂದ ಬಿಡಿಸಿ, ಪ್ರಹ್ಲಾದಾದಿ ಸಂತರನ್ನು ನಿರ್ಭಯರನ್ನಾಗಿಸಿದನು. ॥ ೧೯ ॥ ಭಗವಂತನೇ ದೇವತೆಗಳನ್ನು ರಕ್ಷಿಸಲಿಕ್ಕಾಗಿ ದೇವಾಸುರ ಸಂಗ್ರಾಮದಲ್ಲಿ ದೈತ್ಯಪತಿಗಳನ್ನು ವಧಿಸಿದನು. ಬೇರೆ-ಬೇರೆ ಮನ್ವಂತರಗಳಲ್ಲಿ ತನ್ನ ಶಕ್ತಿಯಿಂದ ಅನೇಕ ಅಂಶಾವತಾರಗಳನ್ನು ಧರಿಸಿ, ತ್ರಿಭುವನವನ್ನು ರಕ್ಷಿಸಿದನು. ಮತ್ತೆ ವಾಮನ ಅವತಾರದ ಮೂಲಕ ಬೇಡುವ ನೆಪದಿಂದ ದೇವತೆಗಳ ಸಂಪತ್ತನ್ನು ಬಲಿಯಿಂದ ಪಡೆದು ಅವರಿಗೆ ಕೊಡಿಸಿದನು. ॥ ೨೦ ॥ ಪರಶುರಾಮಾವತಾರ ವನ್ನು ಎತ್ತಿ ಇಪ್ಪತ್ತೊಂದು ಬಾರಿ ಪೃಥ್ವಿಯನ್ನು ನಿಃಕ್ಷತ್ರಿಯವಾಗಿಸಿದನು. ಇಂತಹ ಭಾರ್ಗವರಾಮನು ಹೈಹಯ ಕುಲವನ್ನು ನಾಶಗೊಳಿಸಲು ಅಗ್ನಿಸ್ವರೂಪನಾಗಿದ್ದನು. ಅವನೇ ರಾಮಾವತಾರದಲ್ಲಿ ಸಮುದ್ರಕ್ಕೆ ಸೇತುವೆಯನ್ನು ಬಿಗಿದು ದಶಮುಖ ರಾವಣನನ್ನು ಅವನ ಸೇನೆಸಹಿತ ಸಂಹರಿಸಿದನು. ಶೋಕ ಮತ್ತು ಭಯವನ್ನು ನಾಶಗೊಳಿಸುವಂತಹ ಪವಿತ್ರ ಕೀರ್ತಿಯುಳ್ಳ ಸೀತಾಪತಿ ಶ್ರೀರಾಮನಿಗೆ ಜಯವಾಗಲಿ. ॥ ೨೧ ॥ ಎಲೈ ರಾಜನೇ! ಅಜನ್ಮಾ ಆಗಿದ್ದರೂ ಭಗವಂತನು ಭೂಭಾರವನ್ನು ಹರಿಸಲೋಸುಗ ಯದುವಂಶದಲ್ಲಿ ಅವತರಿಸಿ, ದೊಡ್ಡ-ದೊಡ್ಡ ದೇವತೆಗಳಿಂದಲೂ ಮಾಡಲಾಗದ ಅಲೌಕಿಕ ಕಾರ್ಯಗಳನ್ನು ಮಾಡುವನು. ಮುಂದೆ ಬುದ್ಧನಾಗಿ ಅವತರಿಸುವನು. ಯಜ್ಞದ ಅನಧಿಕಾರಿಗಳು ಯಜ್ಞಮಾಡುವುದನ್ನು ನೋಡಿ, ಅವರನ್ನು ಅನೇಕ ಪ್ರಕಾರದ ವಾದಗಳಿಂದ ಮೋಹಿತಗೊಳಿಸುವನು. ಕಲಿಯುಗದ ಕೊನೆಯಲ್ಲಿ ಕಲ್ಕಿಯಾಗಿ ಅವತರಿಸಿ ಶೂದ್ರರಾಜರನ್ನು ವಧಿಸುವನು. ॥ ೨೨ ॥ ಮಹಾಬಾಹುವಾದ ವಿದೇಹರಾಜನೇ! ಭಗವಂತನ ಕೀರ್ತಿ ಅನಂತ. ಮಹಾತ್ಮರು ಜಗತ್ಪತಿ ಭಗವಂತನ ಇಂತಹ ಅನೇಕ ಜನ್ಮ ಮತ್ತು ಕರ್ಮಗಳನ್ನು ಬಹಳ ವಿಧವಾಗಿ ವರ್ಣಿಸಿರುವರು. (ಇದನ್ನು ನಾನು ತುಂಬಾ ಸಂಕ್ಷೇಪವಾಗಿ ಭಗವಂತನ ಕೆಲವು ಲೀಲೆಗಳನ್ನು ಮಾತ್ರ ವರ್ಣಿಸಿರುವೆನು. ಭಗವಂತನು ಅನಂತ, ಅವನ ಜನ್ಮ-ಕರ್ಮಗಳೂ ಅನಂತ.) ॥ ೨೩ ॥

ನಾಲ್ಕನೆಯ ಅಧ್ಯಾಯವು ಮುಗಿಯಿತು. ॥ ೪ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಏಕಾದಶ ಸ್ಕಂಧೇ
ಚತುರ್ಥೋಽಧ್ಯಾಯಃ ॥ ೪ ॥

ಐದನೆಯ ಅಧ್ಯಾಯ

ಭಕ್ತಿಹೀನ ಪುರುಷರ ಗತಿ ಮತ್ತು ಭಗವಂತನ ಪೂಜಾವಿಧಾನದ ವರ್ಣನೆ

ರಾಜೋವಾಚ

ಭಗವಂತಂ ಹರಿಂ ಪ್ರಾಯೋ ನ ಭಜಂತ್ಯಾತ್ಮವಿತ್ತಮಾಃ ।
ತೇಷಾಮಶಾಂತಕಾಮಾನಾಂ ಕಾ ನಿಷ್ಠಾವಿಜಿತಾತ್ಮನಾಮ್ ॥ ೧ ॥

ಚಮಸ ಉವಾಚ

ಮುಖಬಾಹೂರುಪಾದೇಭ್ಯಃ ಪುರುಷಸ್ಯಾಶ್ರಮೈಃ ಸಹ ।
ಚತ್ವಾರೋ ಜಜ್ಞಿರೇ ವರ್ಣಾ ಗುಣೈರ್ವಿಪ್ರಾದಯಃ ಪೃಥಕ್ ॥ ೨ ॥

ಯ ಏಷಾಂ ಪುರುಷಂ ಸಾಕ್ಷಾದಾತ್ಮಪ್ರಭವಮೀಶ್ವರಮ್ ।
ನ ಭಜಂತ್ಯವಜಾನಂತಿ ಸ್ಥಾನಾದ್ಭ್ರಷ್ಟಾಃ ಪತನ್ತ್ಯಧಃ ॥ ೩ ॥

ದೂರೇಹರಿಕಥಾಃ ಕೇಚಿದ್ದೂರೇಚಾಚ್ಯುತಕೀರ್ತನಾಃ ।
ಸ್ತ್ರಿಯಃ ಶೂದ್ರಾದಯಶ್ಚೈವ ತೇಽನುಕಂಪ್ಯಾ ಭವಾದೃಶಾಮ್ ॥ ೪ ॥

ವಿಪ್ರೋ ರಾಜನ್ಯವೈಶ್ಯೌ ಚ ಹರೇಃ ಪ್ರಾಪ್ತಾಃ ಪದಾಂತಿಕಮ್ ।
ಶ್ರೌತೇನ ಜನ್ಮನಾಥಾಪಿ ಮುಹ್ಯಂತ್ಯಾಮ್ನಾಯವಾದಿನಃ ॥ ೫ ॥

ಕರ್ಮಣ್ಯಕೋವಿದಾಃ ಸ್ತಬ್ಧಾ ಮೂರ್ಖಾಃ ಪಂಡಿತಮಾನಿನಃ ।
ವದಂತಿ ಚಾಟುಕಾನ್ಮೂಢಾ ಯಯಾ ಮಾಧ್ವ್ಯಾ ಗಿರೋತ್ಸುಕಾಃ ॥ ೬ ॥

ರಜಸಾ ಘೋರಸಂಕಲ್ಪಾಃ ಕಾಮುಕಾ ಅಹಿಮನ್ಯವಃ ।
ದಾಂಭಿಕಾ ಮಾನಿನಃ ಪಾಪಾ ವಿಹಸಂತ್ಯಚ್ಯುತಪ್ರಿಯಾನ್ ॥ ೭ ॥

ರಾಜಾ ನಿಮಿಯು ಕೇಳಿದನು – ಆತ್ಮ ತತ್ತ್ವವನ್ನು ಅರಿತಿರುವ ಯೋಗೀಶ್ವರರೇ! ತಮ್ಮ ಇಂದ್ರಿಯಗಳನ್ನು ಜಯಿಸದವರು, ಜೊತೆ-ಜೊತೆಗೆ ಚಿತ್ತವೂ ಭೋಗಗಳ ಲಾಲಸೆಯಿಂದ ಅಶಾಂತವಾಗಿರುವ ಜನರು ಪ್ರಾಯಶಃ ಭಗವಂತನನ್ನು ಭಜಿಸುವುದಿಲ್ಲ, ಇಂತಹವರ ಗತಿ ಏನಾಗುತ್ತದೆ? ॥ ೧ ॥

ಎಂಟನೆಯವರಾದ ಶ್ರೀಚಮಸ ಯೋಗೀಶ್ವರರು ಹೇಳುತ್ತಾರೆ – ರಾಜನೇ! ವಿರಾಟ್‌ಪುರುಷ ಪರಮಾತ್ಮನ ಮುಖ, ಬಾಹು, ಊರು, ಚರಣಗಳಿಂದ ನಾಲ್ಕು ವರ್ಣ ಮತ್ತು ಆಶ್ರಮಗಳ ಉತ್ಪತ್ತಿಯು ಅವರವರ ಗುಣ ಹಾಗೂ ಕರ್ಮಗಳನುಸಾರ ಆಗಿದೆ. ಭಗವಂತನ ಮುಖದಿಂದ ಸತ್ತ್ವಪ್ರಧಾನ ಬ್ರಾಹ್ಮಣರ, ಬಾಹುಗಳಿಂದ ಸತ್ತ್ವ-ರಜ ಮಿಶ್ರಿತ ಕ್ಷತ್ರಿಯರ, ತೊಡೆಯಿಂದ ರಜೋಗುಣ-ತಮೋಗುಣ ಮಿಶ್ರಿತ ವೈಶ್ಯರ, ಚರಣಗಳಿಂದ ತಮೋಗುಣ ಪ್ರಧಾನ ಶೂದ್ರರ ಉತ್ಪತ್ತಿಯಾಯಿತು. ಹೀಗೆಯೇ ಹೃದಯ, ಜಂಘೇ, ವಕ್ಷಃಸ್ಥಳ, ಶಿರ ಇವುಗಳಿಂದ ಬ್ರಹ್ಮಚರ್ಯ, ಗೃಹಸ್ಥ, ವಾನಪ್ರಸ್ಥ ಮತ್ತು ಸಂನ್ಯಾಸ ಆಶ್ರಮಗಳು ಉಂಟಾದುವು. ಈ ಪ್ರಕಾರ ವರ್ಣಾಶ್ರಮದ ವಿಭಾಗದಿಂದ ಇಡೀ ವಿಶ್ವವು ಭಗವಂತನಿಂದಲೇ ಉಂಟಾಗಿದೆ. ॥ ೨ ॥ ಈ ನಾಲ್ಕು ವರ್ಣಗಳಲ್ಲಿನ ಜನರು ಪರಾತ್ಪರ ಪರಮಾತ್ಮನನ್ನು ಭಜಿಸದವರು, ಅವನನ್ನು ಆದರಿಸದವರು ತಮ್ಮ ಸ್ಥಾನದಿಂದ ಭ್ರಷ್ಟರಾಗಿ ಅಧೋಗತಿಯನ್ನು ಪಡೆಯುತ್ತಾರೆ. ॥ ೩ ॥ ಇಂತಹ ಭಗವಂತನ ಹರಿಕಥಾ ಸತ್ಸಂಗಾದಿಗಳಿಂದ ದೂರವಿರುವ ಜನರೆಲ್ಲರೂ, ಭಗವಂತನ ಸಂಕೀರ್ತನಾದಿಗಳಿಂದ ದೂರವಾದ ಸ್ತ್ರೀ-ಶೂದ್ರಾದಿಗಳು ನಿಮ್ಮಂತಹ ಭಗವತ್‌ಭಕ್ತರ ಕೃಪಾಪಾತ್ರರಾಗಿದ್ದಾರೆ. ॥ ೪ ॥ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಇವರುಗಳು ದ್ವಿಜಾತಿಗಳಾಗಿದ್ದಾರೆ. ಆದ್ದರಿಂದ ವೇದಾಧ್ಯಯನಾದಿ ಸಂಸ್ಕಾರಗಳಿಂದ ಸುಸಂಪನ್ನರಾದ ಕಾರಣ ಭಗವತ್‌ಸನ್ನಿಧಾನ ಪಡೆಯಲು ವಿಶೇಷವಾಗಿ ಯೋಗ್ಯತೆ ಇರುವವರು. ಇಂತಹ ಸೌಲಭ್ಯ ಅವರಿಗೆ ದೊರಕಿದರೂ ಕೂಡ ಅವರಲ್ಲಿನ ಕೆಲವರು ಅಜ್ಞಾನಕ್ಕೆ ವಶೀಭೂತರಾಗಿ, ವೇದಗಳಲ್ಲಿ ವರ್ಣಿಸಿದ ಸಕಾಮಕರ್ಮಗಳ ಅನುಷ್ಠಾನ ಮತ್ತು ಅವುಗಳ ಫಲಗಳಲ್ಲಿ ಮೋಹಿತರಾಗಿರುತ್ತಾರೆ. ॥ ೫ ॥ ಅಂತಹ ಜನರು ಕರ್ಮಗಳ ರಹಸ್ಯವನ್ನಾದರೋ ತಿಳಿಯುವುದೇ ಇಲ್ಲ, ಬದಲಿಗೆ ಗರ್ವಿತರೂ ಹಾಗೂ ಮೂರ್ಖರಾಗಿರುತ್ತಾರೆ ಹಾಗೂ ತಮ್ಮನ್ನು ಪಂಡಿತರೆಂದೇ ತಿಳಿದಿರುತ್ತಾರೆ. ಇಂತಹ ಉದ್ಧಟ, ಮೂರ್ಖಜನರು ಹೇಳುವ ಪುಷ್ಪಿತ ಮಧುರವಾಣಿಯನ್ನು ಕೇಳಿ, ಅಜ್ಞಾನಿಗಳು ಮತ್ತರಾಗಿ ಉಬ್ಬಿಹೋಗುತ್ತಾರೆ. ॥ ೬ ॥ ಇಂತಹ ಜನರು ರಜೋಗುಣದಿಂದ ತುಂಬಿರುತ್ತಾರೆ. ಅವರ ಸಂಕಲ್ಪಗಳೂ ಭಯಾನಕವಾಗಿರುತ್ತವೆ. ಅವರ ಕಾಮನೆಗಳು ಎಂದೂ ಕೊನೆಗೊಳ್ಳುವುದಿಲ್ಲ, ಇವರು ಬಹಳ ಕ್ರೋಧಿಗಳಾಗಿದ್ದು, ದಂಭಾಚಾರದಿಂದ ಕೂಡಿರುತ್ತಾರೆ. ಈ ಉನ್ಮತ್ತ, ಪಾಪಕರ್ಮಿಗಳಾದರೋ ಭಗವಂತನ ಭಕ್ತರ ಉಪಹಾಸವನ್ನೇ ಮಾಡುತ್ತಾರೆ. ॥ ೭ ॥

ವದಂತಿ ತೇಽನ್ಯೋನ್ಯಮುಪಾಸಿತಸ್ತ್ರಿಯೋ
ಗೃಹೇಷು ಮೈಥುನ್ಯಪರೇಷು ಚಾಶಿಷಃ ।
ಯಜಂತ್ಯಸೃಷ್ಟಾನ್ನವಿಧಾನದಕ್ಷಿಣಂ
ವೃತ್ತ್ಯೈ ಪರಂ ಘ್ನಂತಿ ಪಶೂನತದ್ವಿದಃ ॥ ೮ ॥

ಶ್ರಿಯಾ ವಿಭೂತ್ಯಾಭಿಜನೇನ ವಿದ್ಯಯಾ
ತ್ಯಾಗೇನ ರೂಪೇಣ ಬಲೇನ ಕರ್ಮಣಾ ।
ಜಾತಸ್ಮಯೇನಾಂಧಧಿಯಃ ಸಹೇಶ್ವರಾನ್
ಸತೋಽವಮನ್ಯಂತಿ ಹರಿಪ್ರಿಯಾನ್ ಖಲಾಃ ॥ ೯ ॥

ಸರ್ವೇಷು ಶಶ್ವತ್ತನುಭೃತ್ಸ್ವವಸ್ಥಿತಂ
ಯಥಾ ಖಮಾತ್ಮಾನಮಭೀಷ್ಟಮೀಶ್ವರಮ್ ।
ವೇದೋಪಗೀತಂ ಚ ನ ಶೃಣ್ವತೇಽಬುಧಾ
ಮನೋರಥಾನಾಂ ಪ್ರವದಂತಿ ವಾರ್ತಯಾ ॥ ೧೦ ॥

ಲೋಕೇ ವ್ಯವಾಯಾಮಿಷಮದ್ಯಸೇವಾ
ನಿತ್ಯಾಸ್ತು ಜಂತೋರ್ನ ಹಿ ತತ್ರ ಚೋದನಾ ।
ವ್ಯವಸ್ಥಿತಿಸ್ತೇಷು ವಿವಾಹಯಜ್ಞ-
ಸುರಾಗ್ರಹೈರಾಸು ನಿವೃತ್ತಿರಿಷ್ಟಾ ॥ ೧೧ ॥

ಧನಂ ಚ ಧರ್ಮೈಕಫಲಂ ಯತೋ ವೈ
ಜ್ಞಾನಂ ಸವಿಜ್ಞಾನಮನುಪ್ರಶಾಂತಿ ।
ಗೃಹೇಷು ಯುಂಜಂತಿ ಕಲೇವರಸ್ಯ
ಮೃತ್ಯುಂ ನ ಪಶ್ಯಂತಿ ದುರಂತವೀರ್ಯಮ್ ॥ ೧೨ ॥

ಯದ್ ಘ್ರಾಣಭಕ್ಷೋ ವಿಹಿತಃ ಸುರಾಯಾ-
ಸ್ತಥಾ ಪಶೋರಾಲಭನಂ ನ ಹಿಂಸಾ ।
ಏವಂ ವ್ಯವಾಯಃ ಪ್ರಜಯಾ ನ ರತ್ಯಾ
ಇಮಂ ವಿಶುದ್ಧಂ ನ ವಿದುಃ ಸ್ವಧರ್ಮಮ್ ॥ ೧೩ ॥

ಇಂತಹ ಸ್ತ್ರೀಪರಾಯಣರಾದ ಜನರು ಪರಸ್ಪರ ಮನೆವಾರ್ತೆ ಹಾಗೂ ವ್ಯರ್ಥ ಸಾಂಸಾರಿಕ ಚರ್ಚೆಯಲ್ಲಿ ತಮ್ಮ ಅಮೂಲ್ಯ ಸಮಯವನ್ನು ನಾಶಮಾಡಿಕೊಳ್ಳುತ್ತಾರೆ. ಸ್ತ್ರೀ ಸಹವಾಸದಲ್ಲೇ ಅವರಿಗೆ ಸುಖವೆಲ್ಲವೂ ಸೀಮಿತವಾಗಿರುತ್ತದೆ. ಈ ಅಜ್ಞಾನೀ ಜನರು ಅನ್ನದಾನವಿಲ್ಲದೆ, ದಕ್ಷಿಣೆಯಿಲ್ಲದೆ ಅವಿಧಿಪೂರ್ವಕ ಯಜ್ಞ ಮಾಡುತ್ತಿರುತ್ತಾರೆ. ತನ್ನ ಜೀವನ ನಿರ್ವಹಣೆಯ ವೃತ್ತಿಯಾಗಿ ಪಶುಗಳನ್ನು ಕೊಂದು ತಮ್ಮ ಇಂದ್ರಿಯಗಳನ್ನು ತೃಪ್ತಿಪಡಿಸುತ್ತಾರೆ. ಇಂತಹ ಜನರಿಗೆ ಯಜ್ಞಾನುಷ್ಠಾನದ ಹೆಸರಿನಲ್ಲಿ ಪಶುಹಿಂಸೆಯ ಮೂಲಕ ಗಳಿಸುವ ಪಾಪದ ಮೂಟೆಯ ಅರಿವೂ ಇರುವುದಿಲ್ಲ. ॥ ೮ ॥ ಇಂತಹ ದುಷ್ಟ ಜನರು ಧನ-ವೈಭವ, ಕುಲೀನತೆ, ವಿದ್ಯೆ, ದಾನ, ಸೌಂದರ್ಯ, ಬಲ, ಕರ್ಮ ಮುಂತಾದವುಗಳಿಂದ ಗರ್ವ, ಅಭಿಮಾನದಲ್ಲಿ ಮುಳುಗಿರುತ್ತಾರೆ. ಅದರಿಂದ ಮದಾಂಧರಾಗಿ ಭಗವಂತನ, ಭಗವಂತನ ಪ್ರಿಯ ಭಕ್ತರ, ಸಂತ-ಮಹಾತ್ಮರ ನಿಂದೆ ಮಾಡುತ್ತಾ ಇರುತ್ತಾರೆ. ॥ ೯ ॥ ಆಕಾಶವು ಸಮಾನವಾಗಿ ಸರ್ವತ್ರ ವ್ಯಾಪ್ತವಿರುವಂತೆಯೇ ಪರಮಾತ್ಮನು ಎಲ್ಲ ದೇಹಧಾರಿಗಳ ಒಳ-ಹೊರಗೆ ಎಲ್ಲೆಡೆ ಪರಿಪೂರ್ಣನಾಗಿದ್ದಾನೆ. ವೇದಗಳೂ ಕೂಡ ಇದನ್ನು ಅನೇಕ ಬಾರಿ ವರ್ಣಿಸಿವೆ. ಆದರೆ ಆ ಅಜ್ಞಾನಿಗಳು ಇವೆಲ್ಲ ಮಾತುಗಳನ್ನು ಕೇಳುವುದೇ ಇಲ್ಲ. ಇದಕ್ಕೆ ವಿಪರೀತವಾಗಿ ಅನೇಕ ವಿಧದ ಮನೋರಥಗಳ ವ್ಯರ್ಥಮಾತುಗಳನ್ನು ತಮ್ಮ-ತಮ್ಮಲ್ಲಿ ಆಡುತ್ತಾ ಕೇಳುತ್ತಾ ಇರುತ್ತಾರೆ. ॥ ೧೦ ॥ ಜೀವಿಗಳಲ್ಲಿ ಮೈಥುನ, ಮಾಂಸ, ಮದ್ಯ ಇವುಗಳ ಸೇವನೆಯ ಕಡೆಗೆ ಸ್ವಾಭಾವಿಕವಾಗಿಯೇ ಪ್ರವೃತ್ತಿ ಇರುತ್ತದೆ. ಇವು ಮೂರೂ ಪತನವಾಗಿಸುವಂತಹುದು. ವಿವಾಹದ ಬಳಿಕ ಋತುಕಾಲದಲ್ಲಿ ಸ್ತ್ರೀ ಸಹವಾಸ ಮತ್ತು ಸೌತ್ರಾಮಣಿ ಯಜ್ಞದಲ್ಲಿ ಸುರೆಯನ್ನು ಕೇವಲ ಮೂಸಿಬಿಡುವ ವಿಧಾನವನ್ನು ಶಾಸ್ತ್ರಗಳಲ್ಲಿ ತಿಳಿಸಲಾಗಿದೆ. ಇವೆಲ್ಲದರಲ್ಲಿ ಈ ವಸ್ತುಗಳಿಂದ ದೂರ ಉಳಿಯಲೆಂದೇ ಶಾಸ್ತ್ರಗಳ ಅಭಿಪ್ರಾಯವಾಗಿದೆ. ಜನರ ಲೌಲ್ಯ ಪ್ರವೃತ್ತಿಯನ್ನು ಮರ್ಯಾದಿತವಾಗಿ ಇಡಲೆಂದೇ ಶಾಸ್ತ್ರಗಳು ಅವುಗಳ ಸೇವನೆಗೆ ಒಂದು ಸೀಮೆಯನ್ನು ವಿಧಿಸಿವೆ. ॥ ೧೧ ॥ ಧನವನ್ನು ಧಾರ್ಮಿಕ ಕಾರ್ಯಗಳಲ್ಲಿ ತೊಡಗಿಸುವುದೇ ಎಲ್ಲಕ್ಕಿಂತ ಒಳ್ಳೆಯ ಉಪಾಯವಾಗಿದೆ. ಏಕೆಂದರೆ, ಧರ್ಮದಿಂದ ಜ್ಞಾನ ಪ್ರಾಪ್ತವಾಗುತ್ತದೆ. ಜ್ಞಾನದಿಂದ ಪರಮಾತ್ಮನ ಪ್ರಾಪ್ತಿ ಹಾಗೂ ಪರಮ ಶಾಂತಿ ಪ್ರಾಪ್ತವಾಗುತ್ತದೆ. ಆದರೆ ಧನವನ್ನು ಕೇವಲ ತನ್ನ ಮನೆಗಾಗಿ ಹಾಗೂ ಸಂಸಾರಕ್ಕಾಗಿ ಖರ್ಚುಮಾಡುವ ಜನರು ಈ ಶರೀರವನ್ನು ನಾಶಗೊಳಿಸುವಂತಹ ಕರಾಳ ಕಾಲವನ್ನು ನೋಡುವುದಿಲ್ಲ. ॥ ೧೨ ॥ ಸೌತ್ರಾಮಣಿಯಜ್ಞದಲ್ಲಿ ಸುರೆಯನ್ನು ಆಘ್ರಾಣಿಸುವ ವಿಧಾನ ಮಾತ್ರ ಹೇಳಲಾಗಿದೆ. (ಅದನ್ನು ಕುಡಿಯಲು ಇಲ್ಲ) ಯಜ್ಞದಲ್ಲಿ ಪಶುವನ್ನು ಸ್ಪರ್ಶಿಸುವ ವಿಧಾನ ಮಾತ್ರವಿದೆ, (ಅದನ್ನು ಕೊಲ್ಲುವುದಕ್ಕಾಗಿ ಇಲ್ಲ) ಹಾಗೆಯೇ ಮೈಥುನವೂ ಸಂತತಿ ಪರಂಪರೆಯನ್ನು ಬೆಳೆಸಲಿಕ್ಕಾಗಿಯೇ ವಿಧಿಸಿದೆ ; ರತಿಸುಖಕ್ಕಾಗಿ ಅಲ್ಲ. ಇಂತಹ ವಿಶುದ್ಧ ಧರ್ಮವನ್ನು ಅಜ್ಞಾನಿಗಳು ತಿಳಿಯುವುದಿಲ್ಲ. ॥ ೧೩ ॥

ಯೇ ತ್ವನೇವಂವಿದೋಽಸಂತಃ ಸ್ತಬ್ಧಾಃ ಸದಭಿಮಾನಿನಃ ।
ಪಶೂಂದ್ರುಹ್ಯಂತಿ ವಿಸ್ರಬ್ಧಾಃ ಪ್ರೇತ್ಯ ಖಾದಂತಿ ತೇ ಚ ತಾನ್
॥ ೧೪ ॥

ದ್ವಿಷಂತಃ ಪರಕಾಯೇಷು ಸ್ವಾತ್ಮಾನಂ ಹರಿಮೀಶ್ವರಮ್ ।
ಮೃತಕೇ ಸಾನುಬಂಧೇಽಸ್ಮಿನ್ ಬದ್ಧಸ್ನೇಹಾಃ ಪತಂತ್ಯಧಃ
॥ ೧೫ ॥

ಯೇ ಕೈವಲ್ಯಮಸಂಪ್ರಾಪ್ತಾ ಯೇ ಚಾತೀತಾಶ್ಚ ಮೂಢತಾಮ್ ।
ತ್ರೈವರ್ಗಿಕಾ ಹ್ಯಕ್ಷಣಿಕಾ ಆತ್ಮಾನಂ ಘಾತಯಂತಿ ತೇ
॥ ೧೬ ॥

ಏತ ಆತ್ಮಹನೋಽಶಾಂತಾ ಅಜ್ಞಾನೇ ಜ್ಞಾನಮಾನಿನಃ ।
ಸೀದಂತ್ಯಕೃತಕೃತ್ಯಾ ವೈ ಕಾಲಧ್ವಸ್ತಮನೋರಥಾಃ
॥ ೧೭ ॥

ಹಿತ್ವಾತ್ಮಾಯಾಸರಚಿತಾ ಗೃಹಾಪತ್ಯಸುಹೃಚ್ಛ್ರಿಯಃ ।
ತಮೋ ವಿಶಂತ್ಯನಿಚ್ಛಂತೋ ವಾಸುದೇವಪರಾಙ್ಮುಖಾಃ
॥ ೧೮ ॥

ರಾಜೋವಾಚ

ಕಸ್ಮಿನ್ಕಾಲೇ ಸ ಭಗವಾನ್ ಕಿಂ ವರ್ಣಃ ಕೀದೃಶೋ ನೃಭಿಃ ।
ನಾಮ್ನಾ ವಾ ಕೇನ ವಿಧಿನಾ ಪೂಜ್ಯತೇ ತದಿಹೋಚ್ಯತಾಮ್
॥ ೧೯ ॥

ಕರಭಾಜನ ಉವಾಚ

ಕೃತಂ ತ್ರೇತಾ ದ್ವಾಪರಂ ಚ ಕಲಿರಿತ್ಯೇಷು ಕೇಶವಃ ।
ನಾನಾವರ್ಣಾಭಿಧಾಕಾರೋ ನಾನೈವ ವಿಧಿನೇಜ್ಯತೇ
॥ ೨೦ ॥

ಕೃತೇ ಶುಕ್ಲಶ್ಚತುರ್ಬಾಹುರ್ಜಟಿಲೋ ವಲ್ಕಲಾಂಬರಃ ।
ಕೃಷ್ಣಾಜಿನೋಪವೀತಾಕ್ಷಾನ್ ಬಿಭ್ರದ್ ದಂಡಕಮಂಡಲೂ
॥ ೨೧ ॥

ಇಂತಹ ವಿಶುದ್ಧ ಧರ್ಮವನ್ನು ತಿಳಿಯದ ಗರ್ವಿಷ್ಠರಾದ ಜನರು ತಮ್ಮದೇ ಮಾತಿನಲ್ಲಿ ಹಟತೊಟ್ಟು, ತಮ್ಮದೇ ಮಾತಿನಲ್ಲಿ ಶ್ರದ್ಧೆಯಿರಿಸಿಕೊಂಡು ಮೂಕಪಶುಗಳ ಹತ್ಯೆ ಮಾಡುತ್ತಿರುತ್ತಾರೆ. ಸತ್ತಬಳಿಕ ಆ ಪಶುಗಳೇ ಈ ಕೊಲ್ಲುವವರನ್ನು ತಿಂದುಬಿಡು ತ್ತವೆ. ॥ ೧೪ ॥ ಇಂತಹ ಜನರು ಈ ಮರಣಧರ್ಮಿ ಶರೀರದಲ್ಲೇ ಹಾಗೂ ತಮ್ಮ ಪರಿವಾರದಲ್ಲೇ ತಮ್ಮ ಮಮತೆಯನ್ನು ಇಟ್ಟುಕೊಳ್ಳು ತ್ತಾರೆ. ಅವರು ಬೇರೆ ಜನರೊಂದಿಗೆ ದ್ವೇಷಮಾಡುತ್ತಾರೆ. ಭಗವಾನ್ ಶ್ರೀಹರಿಯೇ ಎಲ್ಲರ ಆತ್ಮಾ ಆಗಿದ್ದಾನೆ, ಈ ಮಾತನ್ನು ಅವರು ಯೋಚಿಸುವುದೇ ಇಲ್ಲ. ॥ ೧೫ ॥ ಇಂತಹ ಮೂರ್ಖರಿಗೆ ಮೋಕ್ಷದ ಪ್ರಾಪ್ತಿಯಾದರೋ ದೂರವುಳಿಯಿತು, ಅವರು ಮೂರ್ಖತೆಯ ಸೀಮೆಯನ್ನು ದಾಟಿದ ಮಹಾ ಮೂರ್ಖರು, ಅರ್ಥಾತ್ ವಜ್ರಮೂಢರು. ಈ ಜನರು ವೇದವಾದರೂಪೀ ಕ್ಷಣಭಂಗುರವಾದ, ನಾಶವುಳ್ಳ ಧರ್ಮ, ಅರ್ಥ, ಕಾಮ ಈ ಮೂರನ್ನೇ ಪುರುಷಾರ್ಥಗಳೆಂದು ಭಾವಿಸುತ್ತಾರೆ. ಈ ವಿಧವಾಗಿ ಕಾಮ್ಯಕರ್ಮಗಳ ಸುಳಿಯಲ್ಲಿ ಸಿಕ್ಕಿಹಾಕಿಕೊಂಡ ಜನರು ತಮ್ಮ ಆತ್ಮನನ್ನೇ ಕೊಲ್ಲುವವರಾಗಿದ್ದಾರೆ. ॥ ೧೬ ॥ ಈ ಪ್ರಕಾರ ಆತ್ಮಘಾತಿ ಜನರಿಗೆ ಎಂದೂ ಶಾಂತಿ ದೊರೆಯುವುದಿಲ್ಲ. ಇವರು ಅಜ್ಞಾನ ವನ್ನೇ ಜ್ಞಾನವೆಂದು ತಿಳಿದಿರುವರು. ಮನುಷ್ಯ ಶರೀರವು ಪರ ಮಾತ್ಮನ ಪ್ರಾಪ್ತಿಗಾಗಿಯೇ ದೊರೆತಿದೆ. ಆದರೆ ಇವರು ಇಂತಹ ಅಮೂಲ್ಯ ಜೀವನವನ್ನು ಪಡೆದುಕೊಂಡಿದ್ದರೂ ಪರಮ ಲಾಭ ದಿಂದ ವಂಚಿತರೇ ಆಗಿರುತ್ತಾರೆ ಹಾಗೂ ಕಷ್ಟಗಳನ್ನು ಭೋಗಿಸು ತ್ತಲೇ ಇರುತ್ತಾರೆ. ಅವರ ಮನೋರಥಗಳು ಎಂದೂ ಪೂರ್ಣ ಗೊಳ್ಳುವುದಿಲ್ಲ. ॥ ೧೭ ॥ ಇಂತಹ ಜನರು ಭಗವಂತನ ಭಕ್ತಿ ಯಿಂದ ಪೂರ್ಣವಾಗಿ ವಿಮುಖರಾಗಿರುತ್ತಾರೆ. ಇವರು ಬಹಳ ಕಷ್ಟಪಟ್ಟು, ಭಾರೀ ಪರಿಶ್ರಮದಿಂದ ಗಳಿಸಿದ ಮನೆ, ಪುತ್ರ, ಸ್ನೇಹಿತರು, ಧನ-ಸಂಪತ್ತು ಇವನ್ನು ಬಯಸದೆಯೇ ಬಿಟ್ಟುಹೋಗ ಬೇಕಾಗುತ್ತದೆ ಹಾಗೂ ನರಕಭಾಜನರಾಗಬೇಕಾಗುತ್ತದೆ. (ಈ ಪ್ರಕಾರ ಭಗವಂತನ ಭಜನೆ ಮಾಡದವರ ಗತಿಯ ಕುರಿತು ನೀನು ಕೇಳಿದ್ದನ್ನು ನಾನು ಹೇಳಿರುವೆ.) ॥ ೧೮ ॥

ರಾಜಾ ನಿಮಿಯು ಕೇಳಿದನು – ಯೋಗೀಶ್ವರರೇ ! ಭಗವಂತನು ಯಾವಾಗ ಯಾವ ಬಣ್ಣವನ್ನು ಹೆಸರನ್ನು, ಆಕಾರವನ್ನು ಸ್ವೀಕರಿಸು ತ್ತಾನೆ ? ಮನುಷ್ಯರು ಯಾವ ಹೆಸರುಗಳಿಂದ ಹಾಗೂ ಯಾವ ವಿಧಿ ಯಿಂದ ಅವನನ್ನು ಉಪಾಸಿಸುತ್ತಾರೆ ? ದಯಮಾಡಿಟ್ಟು ನೀವು ತಿಳಿಸು ವವರಾಗಿರಿ. ॥ ೧೯ ॥

ಒಂಭತ್ತನೆಯವರಾದ ಕರಭಾಜನ ಯೋಗೀಶ್ವರರು ಹೇಳುತ್ತಾರೆ – ರಾಜನೇ ! ಕೃತ, ತ್ರೇತಾ, ದ್ವಾಪರ, ಕಲಿ ಈ ನಾಲ್ಕೂ ಯುಗಗಳಲ್ಲಿ ಭಗವಾನ್ ಕೇಶವನ ಅನೇಕ ಬಣ್ಣ, ಹೆಸರು, ಆಕಾರಗಳಿರುತ್ತವೆ ಹಾಗೂ ಅನೇಕ ವಿಧದಿಂದ ಅವನ ಪೂಜೆ ಮಾಡಲಾಗು ತ್ತದೆ. ॥ ೨೦ ॥ ಕೃತಯುಗದಲ್ಲಿ ಭಗವಂತನ ಶ್ರೀವಿಗ್ರಹದ ಬಣ್ಣ ಶ್ವೇತವಾಗಿರುತ್ತದೆ. ಅವನಿಗೆ ನಾಲ್ಕು ಭುಜಗಳಿದ್ದು ತಲೆಯಮೇಲೆ ಜಟೆ ಇರುತ್ತದೆ. ಅವನು ವಲ್ಕಲವನ್ನು ಧರಿಸಿರುತ್ತಾನೆ. ಕೃಷ್ಣಮೃಗ ಚರ್ಮ, ಯಜ್ಞೋಪವೀತ, ರುದ್ರಾಕ್ಷಮಾಲೆ, ದಂಡ, ಕಮಂಡಲು ಧರಿಸಿರುತ್ತಾನೆ. ॥ ೨೧ ॥

ಮನುಷ್ಯಾಸ್ತು ತದಾ ಶಾಂತಾ ನಿರ್ವೈರಾಃ ಸುಹೃದಃ ಸಮಾಃ ।
ಯಜಂತಿ ತಪಸಾ ದೇವಂ ಶಮೇನ ಚ ದಮೇನ ಚ
॥ ೨೨ ॥

ಹಂಸಃಸುಪರ್ಣೋ ವೈಕುಂಠೋ
ಧರ್ಮೋ ಯೋಗೇಶ್ವರೋಽಮಲಃ ।
ಈಶ್ವರಃ ಪುರುಷೋಽವ್ಯಕ್ತಃ
ಪರಮಾತ್ಮೇತಿ ಗೀಯತೇ ॥ ೨೩ ॥

ತ್ರೇತಾಯಾಂ ರಕ್ತವರ್ಣೋಽಸೌ ಚತುರ್ಬಾಹುಸ್ತ್ರಿಮೇಖಲಃ ।
ಹಿರಣ್ಯಕೇಶಸ್ತ್ರಯ್ಯಾತ್ಮಾ ಸ್ರುಕ್ಸ್ರುವಾದ್ಯುಪಲಕ್ಷಣಃ
॥ ೨೪ ॥

ತಂ ತದಾ ಮನುಜಾ ದೇವಂ ಸರ್ವದೇವಮಯಂ ಹರಿಮ್ ।
ಯಜಂತಿ ವಿದ್ಯಯಾ ತ್ರಯ್ಯಾ ಧರ್ಮಿಷ್ಠಾ ಬ್ರಹ್ಮವಾದಿನಃ
॥ ೨೫ ॥

ವಿಷ್ಣುರ್ಯಜ್ಞಃ ಪೃಶ್ನಿಗರ್ಭಃ ಸರ್ವದೇವ ಉರುಕ್ರಮಃ ।
ವೃಷಾಕಪಿರ್ಜಯಂತಶ್ಚ ಉರುಗಾಯ ಇತೀರ್ಯತೇ
॥ ೨೬ ॥

ದ್ವಾಪರೇ ಭಗವಾನ್ ಶ್ಯಾಮಃ ಪೀತವಾಸಾ ನಿಜಾಯುಧಃ ।
ಶ್ರೀವತ್ಸಾದಿಭಿರಂಕೈಶ್ಚ ಲಕ್ಷಣೈರುಪಲಕ್ಷಿತಃ
॥ ೨೭ ॥

ತಂ ತದಾ ಪುರುಷಂ ಮರ್ತ್ಯಾ ಮಹಾರಾಜೋಪಲಕ್ಷಣಮ್ ।
ಯಜಂತಿ ವೇದತಂತ್ರಾಭ್ಯಾಂ ಪರಂ ಜಿಜ್ಞಾಸವೋ ನೃಪ
॥ ೨೮ ॥

ನಮಸ್ತೇ ವಾಸುದೇವಾಯ ನಮಃ ಸಂಕರ್ಷಣಾಯ ಚ ।
ಪ್ರದ್ಯುಮ್ನಾಯಾನಿರುದ್ಧಾಯ ತುಭ್ಯಂ ಭಗವತೇ ನಮಃ
॥ ೨೯ ॥

ನಾರಾಯಣಾಯ ಋಷಯೇ ಪುರುಷಾಯ ಮಹಾತ್ಮನೇ ।
ವಿಶ್ವೇಶ್ವರಾಯ ವಿಶ್ವಾಯ ಸರ್ವಭೂತಾತ್ಮನೇ ನಮಃ
॥ ೩೦ ॥

ಇತಿ ದ್ವಾಪರ ಉರ್ವೀಶ ಸ್ತುವಂತಿ ಜಗದೀಶ್ವರಮ್ ।
ನಾನಾತಂತ್ರ ವಿಧಾನೇನ ಕಲಾವಪಿ ಯಥಾ ಶೃಣು
॥ ೩೧ ॥

ಕೃತಯುಗದಲ್ಲಿ ಮನುಷ್ಯರು ತುಂಬಾ ಶಾಂತರೂ, ಪರಸ್ಪರ ವೈರರಹಿತರೂ, ಎಲ್ಲರ ಹಿತೈಷಿಗಳೂ, ಸಮದರ್ಶಿಗಳೂ ಆಗಿರುತ್ತಾರೆ. ಅವರು ಇಂದ್ರಿಯ-ಮನವನ್ನು ವಶದಲ್ಲಿರಿಸಿಕೊಂಡು ಧ್ಯಾನರೂಪೀ ತಪಸ್ಸಿನಿಂದ ಪರಮಾತ್ಮನನ್ನು ಆರಾಸುತ್ತಾರೆ. ॥ ೨೨ ॥ ಅವರು ಪರಮಾತ್ಮನನ್ನು ಹಂಸ, ಸುಪರ್ಣ, ವೈಕುಂಠ, ಧರ್ಮ, ಯೋಗೇಶ್ವರ, ಅಮಲ, ಈಶ್ವರ, ಪುರುಷ, ಅವ್ಯಕ್ತ ಈ ಹೆಸರುಗಳಿಂದ ಭಗವಂತನ ಗುಣ-ಲೀಲೆಗಳನ್ನು ಕೊಂಡಾಡುತ್ತಾರೆ. ॥ ೨೩ ॥ ರಾಜನೇ! ತ್ರೇತಾಯುಗದಲ್ಲಿ ಭಗವಂತನ ಶ್ರೀವಿಗ್ರಹದ ಬಣ್ಣ ಕೆಂಪಾಗಿರುತ್ತದೆ. ನಾಲ್ಕು ಭುಜಗಳಿದ್ದು, ಕಟಿಭಾಗದಲ್ಲಿ ಮೂರು ಮೇಖಲೆಗಳಿರುತ್ತವೆ. ಅವನ ಕೇಶಗಳು ಬಂಗಾರ ವರ್ಣದ್ದಾಗಿರುತ್ತವೆ. ಅವನು ವೇದ ಪ್ರತಿಪಾದಿತ ಯಜ್ಞದ ರೂಪದಲ್ಲಿದ್ದು ಸ್ರುಕ್, ಸ್ರುವೇ ಮುಂತಾದ ಯಜ್ಞಪಾತ್ರೆಗಳನ್ನು ಧರಿಸಿರುತ್ತಾನೆ. ॥ ೨೪ ॥ ಈ ಯುಗದಲ್ಲಿ ಮನುಷ್ಯರು ತಮ್ಮ ಧರ್ಮದಲ್ಲಿ ನಿಷ್ಠೆಯುಳ್ಳವರಾಗಿದ್ದು, ವೇದಗಳ ಅಧ್ಯಯನ, ಅಧ್ಯಾಪನೆಯಲ್ಲಿ ತುಂಬಾ ಪ್ರವೀಣರಾಗಿರುತ್ತಾರೆ. ಅವರು ಋಗ್ವೇದ, ಯಜುರ್ವೇದ, ಸಾಮವೇದರೂಪೀ ವೇದತ್ರಯಿಯ ಮೂಲಕ ಸರ್ವದೇವ ಸ್ವರೂಪ ದೇವಾಧಿದೇವ ಭಗವಾನ್ ಶ್ರೀಹರಿಯನ್ನು ಆರಾಧಿಸುತ್ತಾರೆ. ॥ ೨೫ ॥ ಈ ತ್ರೇತಾಯುಗದಲ್ಲಿ ಹೆಚ್ಚಿನ ಜನರು ಭಗವಂತನನ್ನು ವಿಷ್ಣು, ಯಜ್ಞ, ಪ್ರಶ್ನಿಗರ್ಭ, ಸರ್ವದೇವ, ಉರುಕ್ರಮ, ವೃಷಾಕಪಿ, ಜಯಂತ, ಉರುಗಾಯ ಮುಂತಾದ ನಾಮಗಳಿಂದ ಕರೆದು, ಅವನ ಗುಣ-ಲೀಲಾದಿಗಳನ್ನು ಕೀರ್ತಿಸುತ್ತಾರೆ. ॥ ೨೬ ॥ ರಾಜನೇ! ದ್ವಾಪರ ಯುಗದಲ್ಲಿ ಭಗವಂತನ ಶ್ರೀವಿಗ್ರಹದ ಬಣ್ಣ ಶ್ಯಾಮಲವಾಗಿರುತ್ತದೆ. ಅವನು ಪೀತಾಂಬರ, ಶಂಖ, ಚಕ್ರ, ಗದಾ, ಪದ್ಮ ಮುಂತಾದ ಆಯುಧಗಳನ್ನು ಧರಿಸುತ್ತಾನೆ. ವಕ್ಷಸ್ಥಳದಲ್ಲಿ ಶ್ರೀವತ್ಸದ ಚಿಹ್ನೆ, ಭೃಗುಲಾಂಛನ, ಕೌಸ್ತುಭಮಣಿ ಮುಂತಾದ ಲಕ್ಷಣಗಳಿಂದ ಲಕ್ಷಿತನಾಗಿರುತ್ತಾನೆ. ॥ ೨೭ ॥ ಆಗ ಜಿಜ್ಞಾಸು ಜನರು ಮಹಾರಾಜರ ಚಿಹ್ನೆಗಳಾದ ಛತ್ರ, ಚಾಮರಾದಿಗಳಿಂದ ಯುಕ್ತ ಪರಮಪುರುಷ ಭಗವಂತನನ್ನು ವೈದಿಕ, ಆಗಮವಿಧಿಗಳಿಂದ ಆರಾಸುತ್ತಾರೆ. ॥ ೨೮ ॥ ಅವರು ಭಗವಂತನನ್ನು ಈ ವಿಧವಾಗಿ ಸ್ತುತಿಸುತ್ತಾರೆ – "ಹೇ ಜ್ಞಾನಸ್ವರೂಪ ಭಗವಾನ್ ವಾಸುದೇವಾ! ಕ್ರಿಯಾಶಕ್ತಿರೂಪೀ ಸಂಕರ್ಷಣಾ! ನಾವು ನಿನಗೆ ಪದೇ-ಪದೇ ನಮಸ್ಕರಿಸುತ್ತೇವೆ. ಭಗವಾನ್ ಪ್ರದ್ಯುಮ್ನ ಮತ್ತು ಅನಿರುದ್ಧ ರೂಪದಲ್ಲಿರುವ ನಿನಗೆ ನಾವು ವಂದಿಸುತ್ತೇವೆ. ನಾರಾಯಣ ಋಷಿಯೇ! ಮಹಾತ್ಮಾ ನರನೇ! ವಿಶ್ವೇಶ್ವರ, ವಿಶ್ವರೂಪೀ, ಭಗವಾನ್ ಸರ್ವಭೂತಾತ್ಮಾ! ನಾವು ನಮಸ್ಕರಿಸುತ್ತೇವೆ. ॥ ೨೯-೩೦ ॥ ರಾಜನೇ! ದ್ವಾಪರ ಯುಗದಲ್ಲಿ ಜನರು ಈ ಪ್ರಕಾರ ಜಗದೀಶ್ವರ ಭಗವಂತನನ್ನು ಸ್ತುತಿಸುತ್ತಾರೆ. ಹೀಗೆಯೇ ಕಲಿಯುಗದಲ್ಲಿಯೂ ಅನೇಕ ಆಗಮೋಕ್ತ ರೀತಿಯಿಂದ ಭಗವಂತನನ್ನು ಹೇಗೆ ಪೂಜಿಸುತ್ತಾರೋ ಅದರ ವರ್ಣನೆಯನ್ನು ಕೇಳು. ॥ ೩೧ ॥

ಕೃಷ್ಣವರ್ಣಂ ತ್ವಿಷಾಕೃಷ್ಣಂ ಸಾಂಗೋಪಾಂಗಾಸ್ತ್ರಪಾರ್ಷದಮ್ ।
ಯಜ್ಞೈಃ ಸಂಕೀರ್ತನಪ್ರಾಯೈರ್ಯಜಂತಿ ಹಿ ಸುಮೇಧಸಃ
॥ ೩೨ ॥

ಧ್ಯೇಯಂ ಸದಾ ಪರಿಭವಘ್ನಮಭೀಷ್ಟದೋಹಂ
ತೀರ್ಥಾಸ್ಪದಂ ಶಿವವಿರಿಂಚಿನುತಂ ಶರಣ್ಯಮ್ ।
ಭೃತ್ಯಾರ್ತಿಹಂ ಪ್ರಣತಪಾಲ ಭವಾಬ್ಧಿಪೋತಂ
ವಂದೇ ಮಹಾಪುರುಷ ತೇ ಚರಣಾರವಿಂದಮ್ ॥ ೩೩ ॥

ತ್ಯಕ್ತ್ವಾ ಸುದುಸ್ತ್ಯಜಸುರೇಪ್ಸಿತರಾಜ್ಯಲಕ್ಷ್ಮೀಂ
ಧರ್ಮಿಷ್ಠ ಆರ್ಯವಚಸಾ ಯದಗಾದರಣ್ಯಮ್ ।
ಮಾಯಾಮೃಗಂ ದಯಿತಯೇಪ್ಸಿತಮನ್ವಧಾವದ್
ವಂದೇ ಮಹಾಪುರುಷ ತೇ ಚರಣಾರವಿಂದಮ್ ॥ ೩೪ ॥

ಏವಂ ಯುಗಾನುರೂಪಾಭ್ಯಾಂ ಭಗವಾನ್ ಯುಗವರ್ತಿಭಿಃ ।
ಮನುಜೈರಿಜ್ಯತೇ ರಾಜನ್ ಶ್ರೇಯಸಾಮೀಶ್ವರೋ ಹರಿಃ
॥ ೩೫ ॥

ಕಲಿಂ ಸಭಾಜಯಂತ್ಯಾರ್ಯಾ ಗುಣಜ್ಞಾಃ ಸಾರಭಾಗಿನಃ ।
ಯತ್ರ ಸಂಕೀರ್ತನೇನೈವ ಸರ್ವಃ ಸ್ವಾರ್ಥೋಽಭಿಲಭ್ಯತೇ
॥ ೩೬ ॥

ನ ಹ್ಯತಃ ಪರಮೋ ಲಾಭೋ ದೇಹಿನಾಂ ಭ್ರಾಮ್ಯತಾಮಿಹ ।
ಯತೋ ವಿಂದೇತ ಪರಮಾಂ ಶಾಂತಿಂ ನಶ್ಯತಿ ಸಂಸೃತಿಃ
॥ ೩೭ ॥

ಕಲಿಯುಗದಲ್ಲಿ ಭಗವಂತನ ಬಣ್ಣವಾದರೋ ಕೃಷ್ಣವಾಗಿರುತ್ತದೆ, ಆದರೆ ಆ ಕೃಷ್ಣವರ್ಣವು ಇಂದ್ರನೀಲಕಾಂತಿಯಂತೆ ಉಜ್ವಲವಾಗಿರುತ್ತದೆ. ಅರ್ಥಾತ್ – ಬಹಳ ಮನೋಹರ ರೂಪ ಅವನದಾಗಿರುತ್ತದೆ. ಎಲ್ಲರನ್ನು ತನ್ನತ್ತ ಸೆಳೆದುಕೊಂಡು ಆನಂದಿತರನ್ನಾಗಿಸುತ್ತಾನೆ. ಅವನು ಹೃದಯಾದಿ ಅಂಗ, ಕೌಸ್ತುಭಾದಿ ಉಪಾಂಗಗಳಿಂದಲೂ, ಸುದರ್ಶನಾದಿ ಅಸ್ತ್ರ, ಸುನಂದಾದಿ ಪಾರ್ಷದರಿಂದಲೂ ಕೂಡಿಕೊಂಡಿರುತ್ತಾನೆ. ಈ ಯುಗದಲ್ಲಿ ಶ್ರೇಷ್ಠ ಬುದ್ಧಿ ಸಂಪನ್ನರಾದ ಜನರು ಅವನ ನಾಮ, ಗುಣ, ಲೀಲೆ ಮುಂತಾದವುಗಳು ಪ್ರಧಾನವಿರುವ ಸಂಕೀರ್ತನ ಯಜ್ಞದ ಮೂಲಕ ಅವನನ್ನು ಆರಾಧಿಸುತ್ತಾರೆ. ॥ ೩೨ ॥ ಅವರು ಈ ವಿಧವಾಗಿ ಭಗವಂತನನ್ನು ಸ್ತುತಿಸುತ್ತಾರೆ – ಓ ಶರಣಾಗತವತ್ಸಲ ಪ್ರಭೋ! ಮಹಾಪುರುಷನೇ! ನಿನ್ನ ಚರಣಾರವಿಂದಗಳಲ್ಲಿ ಪದೇ-ಪದೇ ನಾವು ನಮಸ್ಕರಿಸುತ್ತೇವೆ. ನಿನ್ನ ಚರಣಕಮಲಗಳು ಸದಾಕಾಲ ಧ್ಯಾನಿಸಲು ಯೋಗ್ಯವಾಗಿವೆ. ಅವು ಧ್ಯಾನ ಮಾಡುವವರ ಎಲ್ಲ ಪ್ರಕಾರದ ಸಂಕಟಗಳನ್ನು ಇಲ್ಲವಾಗಿಸುವಂತಹವುಗಳು. ಭಕ್ತರಿಗೆ ಅಭೀಷ್ಟಪ್ರದವಾಗಿವೆ. ತೀರ್ಥಸ್ವರೂಪವಾಗಿವೆ. ಶಿವ, ಬ್ರಹ್ಮಾದಿ ದೇವತೆಗಳು ಅನವರತ ಇವನನ್ನು ವಂದಿಸುತ್ತಿರುತ್ತಾರೆ. ಶರಣಾಗಲು ಯೋಗ್ಯವಾಗಿದ್ದು ಭಕ್ತರ ಎಲ್ಲ ವಿಘ್ನ-ಬಾಧೆಗಳನ್ನು ಕಳೆಯುವಂತಹವುಗಳು. ಸಂಸಾರಸಾಗರವನ್ನು ದಾಟಿಹೋಗಲು ದೋಣಿಯಂತಿವೆ. ಇಂತಹ ನಿನ್ನ ಚರಣಕಮಲಗಳಿಗೆ ಪುನಃ-ಪುನಃ ವಂದಿಸುತ್ತೇವೆ. ॥ ೩೩ ॥ ಓ ಧರ್ಮಪಾಲಕಾ! ಮಹಾಪುರುಷನೇ! ನಾವು ನಿನ್ನ ಚರಣಕಮಲಗಳಲ್ಲಿ ಅನಂತ ಪ್ರಣಾಮಗಳನ್ನು ಮಾಡುತ್ತೇವೆ. ದೇವತೆಗಳೂ ಕೂಡ ಆಶಿಸುತ್ತಿರುವ ಅಯೋಧ್ಯೆಯ ರಾಜ್ಯಲಕ್ಷ್ಮಿಯನ್ನು ತ್ಯಾಗಮಾಡುವುದು ಬೇರೆಯವರಿಗೆ ತುಂಬು ಕಠಿಣವೇ ಆಗಿದೆ. ಆದರೆ ಪಿತೃವಾಕ್ಯ ಪರಿಪಾಲನೆಗಾಗಿ ಅದನ್ನು ಬಿಟ್ಟು ವನಕ್ಕೆ ನಡೆದ ಚರಣಕಮಲಗಳಿಗೆ, ಪ್ರಿಯ ಪತ್ನೀ ಸೀತೆಗಾಗಿ ಮಾಯಾಮೃಗದ ಹಿಂದೆ ಓಡಿದ ಚರಣಾರವಿಂದಗಳಿಗೆ ನಾವು ಕೋಟಿ-ಕೋಟಿ ಪ್ರಣಾಮ ಸಲ್ಲಿಸುತ್ತೇವೆ. ॥ ೩೪ ॥

ರಾಜನೇ! ಈ ವಿಧವಾಗಿ ವಿಭಿನ್ನ ಯುಗದ ಜನರು ತಮ್ಮ-ತಮ್ಮ ಯುಗಕ್ಕನುರೂಪವಾಗಿ ನಾಮ ಮತ್ತು ರೂಪಗಳ ಮೂಲಕ ಬೇರೆ-ಬೇರೆ ಪ್ರಕಾರದಿಂದ ಭಗವಂತನನ್ನು ಆರಾಧಿಸುತ್ತಾರೆ. ಧರ್ಮ, ಅರ್ಥ, ಕಾಮ, ಮೋಕ್ಷ ಮೊದಲಾದ ಎಲ್ಲ ಪುರುಷಾರ್ಥಗಳ ಏಕಮಾತ್ರ ಸ್ವಾಮಿಯಾದರೋ ಭಗವಾನ್ ಶ್ರೀಹರಿಯೇ ಆಗಿರುವನು ಇದರಲ್ಲಿ ಸಂದೇಹವೇ ಇಲ್ಲ. ॥ ೩೫ ॥ ಯುಗಗಳ ಗುಣಗಳನ್ನು ಬಲ್ಲವರು, ಸಾರಗ್ರಾಹಿಗಳು ಕಲಿಯುಗವನ್ನು ತುಂಬಾ ಪ್ರಶಂಸಿಸುತ್ತಾರೆ. ಕಾರಣ ಈ ಕಲಿಯುಗದಲ್ಲಿ ಕೇವಲ ಭಗವಂತನ ನಾಮಸಂಕೀರ್ತನದಿಂದಲೇ ಎಲ್ಲ ಪ್ರಕಾರದ ಸ್ವಾರ್ಥ ಮತ್ತು ಪರಮಾರ್ಥ ಲಭಿಸುತ್ತದೆ. ॥ ೩೬ ॥ ದೇಹಾಭಿಮಾನಿ ಜೀವರು ಈ ಸಂಸಾರಚಕ್ರದಲ್ಲಿ ಸುತ್ತುತ್ತಾ ಇರುತ್ತಾರೆ. ಅವರಿಗಾಗಿ ಭಗವಂತನ ನಾಮ ಸಂಕೀರ್ತನೆಯಂತಹ ಸರಳ ಸಾಧನೆಯಿದೆ. ಇದರಿಂದ ಪರಮ ಶಾಂತಿಯು ಸಿಗುತ್ತದೆ ಹಾಗೂ ಎಂದೆಂದಿಗೂ ಜನ್ಮ-ಮರಣಗಳ ಪರಿಭ್ರಮಣೆ ಮುಗಿದು ಹೋಗುತ್ತದೆ. ಮನುಷ್ಯನಿಗೆ ಇದರಿಂದ ಮಿಗಿಲಾದ ಇನ್ನೊಂದು ಲಾಭವು ಇಲ್ಲವೇ ಇಲ್ಲ. ॥ ೩೭ ॥

ಕೃತಾದಿಷು ಪ್ರಜಾ ರಾಜನ್ ಕಲಾವಿಚ್ಛಂತಿ ಸಂಭವಮ್ ।
ಕಲೌ ಖಲು ಭವಿಷ್ಯಂತಿ ನಾರಾಯಣಪರಾಯಣಾಃ ॥ ೩೮ ॥

ಕ್ವಚಿತ್ ಕ್ವಚಿನ್ಮಹಾರಾಜ ದ್ರವಿಡೇಷು ಚ ಭೂರಿಶಃ ।
ತಾಮ್ರಪರ್ಣೀ ನದೀ ಯತ್ರ ಕೃತಮಾಲಾ ಪಯಸ್ವಿನೀ ॥ ೩೯ ॥

ಕಾವೇರೀ ಚ ಮಹಾಪುಣ್ಯಾ ಪ್ರತೀಚೀ ಚ ಮಹಾನದೀ ।
ಯೇ ಪಿಬಂತಿ ಜಲಂ ತಾಸಾಂ ಮನುಜಾ ಮನುಜೇಶ್ವರ ।
ಪ್ರಾಯೋ ಭಕ್ತಾ ಭಗವತಿ ವಾಸುದೇವೇಽಮಲಾಶಯಾಃ ॥ ೪೦ ॥

ದೇವರ್ಷಿಭೂತಾಪ್ತನೃಣಾಂ ಪಿತೄಣಾಂ
ನ ಕಿಂಕರೋ ನಾಯಮೃಣೀ ಚ ರಾಜನ್ ।
ಸರ್ವಾತ್ಮನಾ ಯಃ ಶರಣಂ ಶರಣ್ಯಂ
ಗತೋ ಮುಕುಂದಂ ಪರಿಹೃತ್ಯ ಕರ್ತಮ್ ॥ ೪೧ ॥

ಸ್ವಪಾದಮೂಲಂ ಭಜತಃ ಪ್ರಿಯಸ್ಯ
ತ್ಯಕ್ತಾನ್ಯಭಾವಸ್ಯ ಹರಿಃ ಪರೇಶಃ ।
ವಿಕರ್ಮ ಯಚ್ಚೋತ್ಪತಿತಂ ಕಥಂಚಿದ್
ಧುನೋತಿ ಸರ್ವಂ ಹೃದಿ ಸನ್ನಿವಿಷ್ಟಃ ॥ ೪೨ ॥

ರಾಜನೇ! ಕೃತಯುಗವೇ ಮೊದಲಾದ ಯುಗಗಳಲ್ಲಿ ಹುಟ್ಟಿದ ಜನರೂ ಕೂಡ ಈ ಕಲಿಯುಗದಲ್ಲಿ ಜನ್ಮತಳೆಯಲು ಬಯಸುತ್ತಾರೆ. ಏಕೆಂದರೆ, ಕಲಿಯುಗದಲ್ಲಿ ಅಲ್ಲಲ್ಲಿ ಭಗವಾನ್ ನಾರಾಯಣನ ಶರಣಾಗತರು ಮತ್ತು ಅವನ ಆಶ್ರಿತರಾದ ಅನೇಕ ಭಕ್ತರು ಉಂಟಾಗುವರು. ॥ ೩೮ ॥ ಎಲೈ ರಾಜನೇ! ಕಲಿಯುಗದಲ್ಲಿ ದ್ರಾವಿಡದೇಶದಲ್ಲಿ (ದಕ್ಷಿಣಭಾರತದಲ್ಲಿ) ಅನೇಕ ಭಕ್ತರಾಗುವರು. ತಾಮ್ರಪರ್ಣಿ, ಕೃತಮಾಲಾ, ಪಯಸ್ವಿನೀ, ಪರಮಪವಿತ್ರ ಕಾವೇರಿ, ಮಹಾನದಿ ಹಾಗೂ ಪ್ರತೀಚೀ ಮೊದಲಾದ ನದಿಗಳು ಹರಿಯುವಲ್ಲೆಲ್ಲ ಭಕ್ತರು ಹುಟ್ಟುವರು. ರಾಜನೇ! ಈ ಪವಿತ್ರ ನದಿಗಳ ನೀರನ್ನು ಕುಡಿದವರ ಅಂತಃಕರಣ ಶುದ್ಧವಾಗಿ ಅವರು ಭಗವಾನ್ ವಾಸುದೇವನ ಪರಮ ಭಕ್ತರಾಗುವರು. ॥ ೩೯-೪೦ ॥

ಶರಣಾಗಲು ಏಕಮಾತ್ರ ಭಗವಂತನೇ ಯೋಗ್ಯನಾಗಿದ್ದಾನೆ. ಪೂರ್ಣರೂಪದಿಂದ ಭಗವಂತನಿಗೆ ಶರಣಾದ ಭಕ್ತನು ದೇವತೆಗಳು, ಋಷಿಗಳು, ಪಿತೃಗಳು, ಕುಟುಂಬಿಗಳು, ಅತಿಥಿಗಳು ಹೀಗೆ ಇವರೆಲ್ಲರ ಋಣದಿಂದ ಮುಕ್ತನಾಗುತ್ತಾನೆ. ಅವನು ಇವರಲ್ಲಿ ಯಾರ ಕಿಂಕರನೂ ಆಗಿರುವುದಿಲ್ಲ. ಅವನು ಎಲ್ಲ ಕರ್ಮವಾಸನೆಗಳಿಂದ, ಕರ್ಮಬಂಧನದಿಂದ ಪೂರ್ಣವಾಗಿ ಮುಕ್ತನಾಗಿ, ಮುಕ್ತಿಯ ಮತ್ತು ಪ್ರೇಮದ ದಾತೃ ಭಗವಂತನನ್ನು ಪಡೆದುಕೊಳ್ಳುತ್ತಾನೆ. ॥ ೪೧ ॥ ಭಗವಂತನ ಅನನ್ಯ ಶರಣಾಗತಿಯನ್ನು ಪಡೆದ ಭಕ್ತರಿಂದ ಪಾಪಕರ್ಮಗಳಾದರೋ ಆಗುವುದೇ ಇಲ್ಲ. ಕದಾಚಿತ್ ಯಾವುದಾದರೂ ಪಾಪಕರ್ಮ, ನಿಷಿದ್ಧಕರ್ಮ ನಡೆದುಹೋದರೂ, ಎಲ್ಲರ ಹೃದಯದಲ್ಲಿ ವಿರಾಜಮಾನನಾದ ಸರ್ವೇಶ್ವರ ಭಗವಾನ್ ಶ್ರೀಹರಿಯು ಸ್ವತಃ ಅವನ ಹೃದಯದ ಪಾಪಗಳನ್ನು ಮತ್ತು ಪಾಪವಾಸನೆಗಳನ್ನು ತೊಳೆದು ಅವನನ್ನು ಶುದ್ಧನಾಗಿಸುತ್ತಾನೆ. ॥ ೪೨ ॥*

ನಾರದ ಉವಾಚ

ಧರ್ಮಾನ್ಭಾಗವತಾನಿತ್ಥಂ ಶ್ರುತ್ವಾಥ ಮಿಥಿಲೇಶ್ವರಃ ।
ಜಾಯಂತೇಯಾನ್ ಮುನೀನ್ಪ್ರೀತಃ ಸೋಪಾಧ್ಯಾಯೋ ಹ್ಯಪೂಜಯತ್ ॥ ೪೩ ॥

ತತೋಽಂತರ್ದಧಿರೇ ಸಿದ್ಧಾಃ ಸರ್ವಲೋಕಸ್ಯ ಪಶ್ಯತಃ ।
ರಾಜಾ ಧರ್ಮಾನುಪಾತಿಷ್ಠನ್ನವಾಪ ಪರಮಾಂ ಗತಿಮ್ ॥ ೪೪ ॥

ತ್ವಮಪ್ಯೇತಾನ್ಮಹಾಭಾಗ ಧರ್ಮಾನ್ಭಾಗವತಾನ್ ಶ್ರುತಾನ್ ।
ಆಸ್ಥಿತಃ ಶ್ರದ್ಧಯಾ ಯುಕ್ತೋ ನಿಸ್ಸಂಗೋ ಯಾಸ್ಯಸೇ ಪರಮ್ ॥ ೪೫ ॥

ನಾರದರು ಹೇಳುತ್ತಾರೆ – ವಸುದೇವನೇ! ಮಿಥಿಲಾಧೀಶ ರಾಜಾ ನಿಮಿಯು ಒಂಭತ್ತು ಯೋಗೀಶ್ವರರಿಂದ ಈ ವಿಧವಾಗಿ ಭಾಗವತಧರ್ಮಗಳ ವರ್ಣನೆಯನ್ನು ಕೇಳಿ ಬಹಳ ಆನಂದಿತನಾದನು. ಅವನು ತನ್ನ ಋತ್ವಿಜರು ಮತ್ತು ಆಚಾರ್ಯರೊಂದಿಗೆ ಋಷಭನಂದನ** ನವಯೋಗೀಶ್ವರರನ್ನು ಭಕ್ತಿಯಿಂದ ಪೂಜಿಸಿದನು. ॥ ೪೩ ॥ ಇದಾದ ಬಳಿಕ ಎಲ್ಲರೂ ನೋಡುತ್ತಿರುವಂತೆಯೇ ಆ ಸಿದ್ಧರು ಅಂತರ್ಧಾನರಾದರು. ವಿದೇಹರಾಜಾ ನಿಮಿಯು ಅವರಿಂದ ಕೇಳಿದ ಭಾಗವತ ಧರ್ಮಗಳನ್ನು ಆಚರಿಸುತ್ತಾ, ಪರಮಗತಿಯನ್ನು ಪಡೆದುಕೊಂಡನು. ॥ ೪೪ ॥ ಮಹಾಭಾಗ್ಯವಂತನಾದ ವಸುದೇವನೇ! ನಾನು ನಿನ್ನ ಮುಂದೆಯೂ ಭಾಗವತ ಧರ್ಮಗಳನ್ನು ವರ್ಣಿಸಿರುವೆನು. ನೀನೂ ಕೂಡ ಶ್ರದ್ಧೆಯಿಂದ ಇವುಗಳನ್ನು ಆಚರಿಸಿದರೆ ಕೊನೆಗೆ ಎಲ್ಲ ಆಸಕ್ತಿಗಳಿಂದ ಬಿಡುಗಡೆಹೊಂದಿ ಪರಮಪದವನ್ನು ಪಡೆದುಕೊಳ್ಳಬಲ್ಲೆ. ॥ ೪೫ ॥

* (ಈ ಪ್ರಕಾರ ನವಯೋಗೀಶ್ವರರ ಪ್ರಕರಣವು ಶರಣಾಗತಿಯಿಂದ ಪ್ರಾರಂಭವಾಗಿ, ಪರ್ಯವಸಾನವೂ ಶರಣಾಗತಿಯಲ್ಲೇ ಆಗಿದೆ. ಆತ್ಯಂತಿಕ ಶ್ರೇಯಸ್ಸನ್ನು ಪಡೆಯಲು ಶರಣಾಗತಿಯೇ ಸರ್ವೋತ್ಕೃಷ್ಟ ಸಾಧನೆಯಾಗಿದೆ.)

** ಈ ಯೋಗೀಶ್ವರರ ತಾಯಿಯ ಹೆಸರು ಜಯಂತಿ ಎಂದಿದ್ದು ತಂದೆ ಭಗವಾನ್ ಋಷಭದೇವರಾಗಿದ್ದಾರೆ. ಅದಕ್ಕಾಗಿ ಶ್ಲೋಕದಲ್ಲಿ 'ಜಾಯಂತೇಯಾನ್' ಎಂಬ ಶಬ್ದದಿಂದ ಇವರ ತಾಯಿ ಜಯಂತಿಯೆಂದು ತಿಳಿದುಕೊಳ್ಳಬೇಕು.

ಯುವಯೋಃ ಖಲು ದಂಪತ್ಯೋರ್ಯಶಸಾ ಪೂರಿತಂ ಜಗತ್ ।
ಪುತ್ರತಾಮಗಮದ್ಯದ್ವಾಂ ಭಗವಾನೀಶ್ವರೋ ಹರಿಃ ॥ ೪೬ ॥

ದರ್ಶನಾಲಿಂಗನಾಲಾಪೈಃ ಶಯನಾಸನಭೋಜನೈಃ ।
ಆತ್ಮಾ ವಾಂ ಪಾವಿತಃ ಕೃಷ್ಣೇ ಪುತ್ರಸ್ನೇಹಂ ಪ್ರಕುರ್ವತೋಃ ॥ ೪೭ ॥

ವೈರೇಣ ಯಂ ನೃಪತಯಃ ಶಿಶುಪಾಲಪೌಂಡ್ರ-
ಶಾಲ್ವಾದಯೋ ಗತಿವಿಲಾಸವಿಲೋಕನಾದ್ಯೈಃ ।
ಧ್ಯಾಯಂತ ಆಕೃತಧಿಯಃ ಶಯನಾಸನಾದೌ
ತತ್ಸಾಮ್ಯಮಾಪುರನುರಕ್ತಧಿಯಾಂ ಪುನಃ ಕಿಮ್ ॥ ೪೮ ॥

ಮಾಽಪತ್ಯಬುದ್ಧಿಮಕೃಥಾಃ ಕೃಷ್ಣೇ ಸರ್ವಾತ್ಮನೀಶ್ವರೇ ।
ಮಾಯಾಮನುಷ್ಯಭಾವೇನ ಗೂಢೈಶ್ವರ್ಯೇ ಪರೇಽವ್ಯಯೇ ॥ ೪೯ ॥

ಭೂಭಾರಾಸುರರಾಜನ್ಯಹಂತವೇ ಗುಪ್ತಯೇ ಸತಾಮ್ ।
ಅವತೀರ್ಣಸ್ಯ ನಿರ್ವೃತ್ಯೈ ಯಶೋ ಲೋಕೇ ವಿತನ್ಯತೇ ॥ ೫೦ ॥

ಶ್ರೀಶುಕ ಉವಾಚ

ಏತಚ್ಛ್ರುತ್ವಾ ಮಹಾಭಾಗೋ ವಸುದೇವೋಽತಿವಿಸ್ಮಿತಃ ।
ದೇವಕೀ ಚ ಮಹಾಭಾಗಾ ಜಹತುರ್ಮೋಹಮಾತ್ಮನಃ ॥ ೫೦ ॥

ಇತಿಹಾಸಮಿಮಂ ಪುಣ್ಯಂ ಧಾರಯೇದ್ಯಃ ಸಮಾಹಿತಃ ।
ಸ ವಿಧೂಯೇಹ ಶಮಲಂ ಬ್ರಹ್ಮಭೂಯಾಯ ಕಲ್ಪತೇ ॥ ೫೨ ॥

ವಸುದೇವನೇ! ನಿನ್ನ ಮತ್ತು ದೇವಕಿಯ ಕೀರ್ತಿಯಿಂದಲಾದರೋ ಇಡೀ ವಿಶ್ವವೇ ತುಂಬಿಹೋಗಿದೆ. ಏಕೆಂದರೆ, ಸರ್ವಶಕ್ತಿವಂತ ಭಗವಾನ್ ಶ್ರೀಕೃಷ್ಣನು ನಿಮ್ಮ ಪುತ್ರನಾಗಿ ಅವತರಿಸಿರುವನು. ॥ ೪೬ ॥ ನೀವುಗಳೆಲ್ಲ ಭಗವಂತನ ದರ್ಶನ, ಆಲಿಂಗನ ಹಾಗೂ ಮಾತು-ಕತೆಗಳಿಂದ, ಅವನನ್ನು ಮಲಗಿಸುವುದು, ಆಡಿಸುವುದು ಇವುಗಳ ಮೂಲಕ ವಾತ್ಸಲ್ಯಸ್ನೇಹಗೈದು ನಿಮ್ಮ ಹೃದಯವನ್ನು ಪವಿತ್ರವಾಗಿಸಿಕೊಂಡಿರುವಿರಿ. ಇದರಿಂದ ನೀವು ಪರಮ ಪವಿತ್ರರಾಗಿ ಹೋಗಿದ್ದೀರಿ. ॥ ೪೭ ॥ ವಸುದೇವನೇ! ಶಿಶುಪಾಲ, ಪೌಂಡ್ರಕ, ಶಾಲ್ವ ಮುಂತಾದ ರಾಜರಾದರೋ ವೈರಭಾವದಿಂದ ಶ್ರೀಕೃಷ್ಣನ ನಡೆ-ನುಡಿ, ಲೀಲಾವಿಲಾಸ, ನೋಟ ಮಾಟ ಮುಂತಾದವುಗಳನ್ನು ಸ್ಮರಿಸಿದ್ದರು. ಅದೂ ಕೂಡ ನಿಯಮಾನುಸಾರವಲ್ಲ, ಮಲಗುವಾಗ, ಕುಳಿತಿರುವಾಗ, ಓಡಾಡುವಾಗ ಸ್ವಾಭಾವಿಕವಾಗಿಯೇ ಇತ್ತು. ಆದರೂ ಕೂಡ ಅವರ ಚಿತ್ತವೃತ್ತಿ ಶ್ರೀಕೃಷ್ಣಾಕಾರವಾಯಿತು ಹಾಗೂ ಸಾರೂಪ್ಯ ಮುಕ್ತಿಯ ಅಧಿಕಾರಿಗಳಾದರು. ಹಾಗಿರುವಾಗ ಪ್ರೇಮಭಾವದಿಂದ, ಅನುರಾಗಪೂರ್ವಕ ಶ್ರೀಕೃಷ್ಣನನ್ನು ಚಿಂತಿಸುವವರಿಗೆ ಶ್ರೀಕೃಷ್ಣನ ಪ್ರಾಪ್ತಿಯಾಗುವುದರಲ್ಲಿ ಸಂದೇಹವೇನಿದೆ? ॥ ೪೮ ॥ ವಸುದೇವಾ! ನೀನು ಶ್ರೀಕೃಷ್ಣನನ್ನು ಕೇವಲ ನಿನ್ನ ಪುತ್ರನೆಂದೇ ತಿಳಿಯಬೇಡ. ಅವನು ಸರ್ವಾತ್ಮಾ ಸರ್ವೇಶ್ವರ, ಕಾರಣಾತೀತ, ಅವಿನಾಶಿಯಾಗಿದ್ದಾನೆ. ಅವನು ಲೀಲೆಗಾಗಿ ಮನುಷ್ಯರೂಪದಿಂದ ಪ್ರಕಟನಾಗಿ, ತನ್ನ ಐಶ್ವರ್ಯವನ್ನು ಅಡಗಿಸಿಟ್ಟಿರುವನು. ॥ ೪೯ ॥ ಅವನು ಪೃಥ್ವಿಯ ಭಾರರೂಪೀ ರಾಜವೇಷಧಾರೀ ಅಸುರರನ್ನು ನಾಶಗೊಳಿಸಲು ಮತ್ತು ಸಂತರನ್ನು ರಕ್ಷಿಸಲು, ಜೀವಿಗಳಿಗೆ ಪರಮ ಶಾಂತಿ, ಮುಕ್ತಿ ಕೊಡಲೋಸುಗವೇ ಅವತರಿಸಿರುವನು. ಅದಕ್ಕಾಗಿಯೇ ಜಗತ್ತಿನಲ್ಲಿ ಅವನ ಕೀರ್ತಿಯು ಹಾಡಲ್ಪಡುತ್ತಿದೆ. ॥ ೫೦ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪ್ರಿಯ ಪರೀಕ್ಷಿತನೇ! ನಾರದರ ಬಾಯಿಂದ ಇದೆಲ್ಲವನ್ನು ಕೇಳಿ ಪರಮಭಾಗ್ಯವಂತ ವಸುದೇವನು ಮತ್ತು ಪರಮಭಾಗ್ಯವತಿ ದೇವಕಿಗೆ ಭಾರೀ ವಿಸ್ಮಯವಾಯಿತು. ಅವರಲ್ಲಿದ್ದ ಅಲ್ಪ-ಸ್ವಲ್ಪ ಮಾಯಾ-ಮೋಹ ಶೇಷವನ್ನು ಅವರು ತಕ್ಷಣ ತ್ಯಜಿಸಿದರು. ॥ ೫೧ ॥ ರಾಜನೇ ಈ ಪರಮ ಪವಿತ್ರ ಇತಿಹಾಸವನ್ನು ಧರಿಸುವವನು ತನ್ನ ಎಲ್ಲ ಶೋಕ-ಮೋಹಗಳನ್ನು ದೂರಗೈದು ಬ್ರಹ್ಮಪದವನ್ನು ಪಡೆದುಕೊಳ್ಳುವನು. ॥ ೫೨ ॥

ಐದನೆಯ ಅಧ್ಯಾಯವು ಮುಗಿಯಿತು. ॥ ೫ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಏಕಾದಶ ಸ್ಕಂಧೇ ಪಂಚಮೋಽಧ್ಯಾಯಃ ॥ ೫ ॥

ಆರನೆಯ ಅಧ್ಯಾಯ

ದೇವತೆಗಳು ಶ್ರೀಕೃಷ್ಣನನ್ನು ತನ್ನ ಪರಮಪದಕ್ಕೆ ಹಿಂದಿರುಗಲು ಪ್ರಾರ್ಥಿಸಿದುದು ; ಯಾದವರು ಪ್ರಭಾಸ ಕ್ಷೇತ್ರಕ್ಕೆ ಹೊರಡಲು ಸಿದ್ಧರಾಗುತ್ತಿರುವುದನ್ನು ನೋಡಿ, ಉದ್ಧವನು ಶ್ರೀಕೃಷ್ಣನ ಬಳಿಗೆ ಹೋದುದು

ಶ್ರೀಶುಕ ಉವಾಚ

ಅಥ ಬ್ರಹ್ಮಾಽಽತ್ಮಜೈರ್ದೇವೈಃ ಪ್ರಜೇಶೈರಾವೃತೋಽಭ್ಯಗಾತ್ ।
ಭವಶ್ಚ ಭೂತಭವ್ಯೇಶೋ ಯಯೌ ಭೂತಗಣೈರ್ವೃತಃ ॥ ೧ ॥

ಇಂದ್ರೋ ಮರುದ್ಭಿರ್ಭಗವಾನಾದಿತ್ಯಾ ವಸವೋಽಶ್ವಿನೌ ।
ಋಭವೋಽಂಗಿರಸೋ ರುದ್ರಾ ವಿಶ್ವೇ ಸಾಧ್ಯಾಶ್ಚ ದೇವತಾಃ ॥ ೨ ॥

ಗಂಧರ್ವಾಪ್ಸರಸೋ ನಾಗಾಃ ಸಿದ್ಧಚಾರಣಗುಹ್ಯಕಾಃ ।
ಋಷಯಃ ಪಿತರಶ್ಚೈವ ಸವಿದ್ಯಾಧರಕಿನ್ನರಾಃ ॥ ೩ ॥

ದ್ವಾರಕಾಮುಪಸಂಜಗ್ಮುಃ ಸರ್ವೇ ಕೃಷ್ಣದಿದೃಕ್ಷವಃ ।
ವಪುಷಾ ಯೇನ ಭಗವಾನ್ ನರಲೋಕಮನೋರಮಃ ।
ಯಶೋ ವಿತೇನೇ ಲೋಕೇಷು ಸರ್ವಲೋಕಮಲಾಪಹಮ್ ॥ ೪ ॥

ತಸ್ಯಾಂ ವಿಭ್ರಾಜಮಾನಾಯಾಂ ಸಮೃದ್ಧಾಯಾಂ ಮಹರ್ದ್ಧಿಭಿಃ ।
ವ್ಯಚಕ್ಷತಾವಿತೃಪ್ತಾಕ್ಷಾಃ ಕೃಷ್ಣಮದ್ಭುತದರ್ಶನಮ್ ॥ ೫ ॥

ಸ್ವರ್ಗೋದ್ಯಾನೋಪಗೈರ್ಮಾಲ್ಯೈಶ್ಛಾದಯಂತೋ ಯದೂತ್ತಮಮ್ ।
ಗೀರ್ಭಿಶ್ಚಿತ್ರಪದಾರ್ಥಾಭಿಸ್ತುಷ್ಟುವುರ್ಜಗದೀಶ್ವರಮ್ ॥ ೬ ॥

ದೇವಾ ಊಚುಃ

ನತಾಃ ಸ್ಮ ತೇ ನಾಥ ಪದಾರವಿಂದಂ
ಬುದ್ಧೀಂದ್ರಿಯಪ್ರಾಣಮನೋವಚೋಭಿಃ ।
ಯಚ್ಚಿಂತ್ಯತೇಽಂತರ್ಹೃದಿ ಭಾವಯುಕ್ತೈ-
ರ್ಮುಮುಕ್ಷುಭಿಃ ಕರ್ಮಮಯೋರುಪಾಶಾತ್ ॥ ೭ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪ್ರಿಯ ಪರೀಕ್ಷಿತರಾಜನೇ! ಮಹರ್ಷಿಗಳಾದ ನಾರದರು ವಸುದೇವನಿಗೆ ಭಾಗವತಧರ್ಮವನ್ನು ಉಪದೇಶಿಸಿ ಹೊರಟುಹೋದ ಬಳಿಕ, ಒಮ್ಮೆ ಬ್ರಹ್ಮದೇವರು ಭಗವಾನ್ ಶ್ರೀಕೃಷ್ಣನನ್ನು ದರ್ಶಿಸುವ ಇಚ್ಛೆಯಿಂದ ದ್ವಾರಕೆಗೆ ಬಂದರು. ಅವರೊಂದಿಗೆ ಅವರ ಪುತ್ರರಾದ ಸನಕಾದಿಗಳು, ಬೇರೆ ದೇವತೆಗಳೂ, ಪ್ರಜಾಪತಿಗಳೂ ಇದ್ದರು. ಶಂಕರನೂ ಭೂತಗಣಗಳೊಂದಿಗೆ ಬಂದರು. ಮರುದ್ಗಣರೊಡನೆ ದೇವರಾಜ ಇಂದ್ರನೂ ಆಗಮಿಸಿದನು. ಇಂದ್ರನನ್ನು ಅನುಸರಿಸಿ ದ್ವಾದಶ ಆದಿತ್ಯರೂ, ಅಷ್ಟವಸುಗಳೂ, ಅಶ್ವಿನೀ ದೇವತೆಗಳೂ, ಋಭು, ಅಂಗೀರಸ ವಂಶಜ ಋಷಿಗಳೂ, ಏಕಾದಶ ರುದ್ರರೂ, ವಿಶ್ವೇದೇವತೆಗಳೂ, ಸಾಧ್ಯದೇವತೆಗಳೂ, ಗಂಧರ್ವಾಪ್ಸರೆಯರೂ, ನಾಗರೂ, ಸಿದ್ಧರೂ, ಚಾರಣರೂ, ಗುಹ್ಯಕರೂ, ಋಷಿಗಳೂ, ಪಿತೃಗಳೂ, ವಿದ್ಯಾಧರ-ಕಿನ್ನರರೂ ಶ್ರೀಕೃಷ್ಣನನ್ನು ಸಂದರ್ಶಿಸಲು ದ್ವಾರಕೆಗೆ ಬಂದರು. ಭಗವಂತನ ಶ್ಯಾಮಸುಂದರ ವಿಗ್ರಹ ಶ್ರೀಕೃಷ್ಣನ ಸ್ವರೂಪವು ಎಲ್ಲರ ಮನಸ್ಸನ್ನು ಆನಂದಿತವಾಗಿಸುವಂತಹುದು. ಶ್ರೀಕೃಷ್ಣಾವತಾರದ ಮೂಲಕ ಗೈದ ಲೀಲೆಗಳನ್ನು ಗಾಯನ, ಶ್ರವಣ, ವರ್ಣನೆ ಮಾಡುವುದರಿಂದ ಎಲ್ಲ ಪಾಪರಾಶಿಗಳು ಸುಟ್ಟುಹೋಗುವಂತಹ ಮಂಗಲಮಯ ಕೀರ್ತಿಯನ್ನು ವಿಸ್ತರಿಸಿದನು. ॥ ೧-೪ ॥ ಸರ್ವಸಂಪತ್ತಿನಿಂದಲೂ ಸಮೃದ್ಧವಾಗಿ, ಲೋಕೋತ್ತರವಾದ ಪ್ರಕಾಶದಿಂದ ಬೆಳಗುತ್ತಿರುವ ದ್ವಾರಕಾಪಟ್ಟಣದಲ್ಲಿ ಅದ್ಭುತದರ್ಶನನಾದ ಶ್ರೀಕೃಷ್ಣನನ್ನು ಎಷ್ಟು ನೋಡಿದರೂ ತೃಪ್ತಿಹೊಂದದ ಕಣ್ಣುಗಳಿಂದ ಬ್ರಹ್ಮಾದಿದೇವತೆಗಳು ನೋಡುತ್ತಿದ್ದರು. ॥ ೫ ॥ ಶ್ರೀಕೃಷ್ಣನ ದಿವ್ಯ ದರ್ಶನದಿಂದ ಆನಂದತುಂದಿಲರಾದ ಅವರು ಸ್ವರ್ಗದ ಉದ್ಯಾನವಾದ ನಂದನ ವನದಿಂದಲೂ, ಚೈತ್ರರಥವನದಿಂದಲೂ ತಂದಿರುವ ದಿವ್ಯವಾದ ಪುಷ್ಪಮಾಲಿಕೆಗಳಿಂದ ಜಗದೀಶ್ವರನಾದ ಭಗವಾನ್ ಶ್ರೀಕೃಷ್ಣನನ್ನು ನಾನಾ ವಿಧವಾಗಿ ಅಲಂಕರಿಸಿ, ಸುಂದರ ಸ್ತೋತ್ರಗಳಿಂದ ಹಾಗೂ ಅರ್ಥವತ್ತಾದ ಸವಿಮಾತುಗಳ ಮೂಲಕ ಭಗವಂತನನ್ನು ಸ್ತುತಿಸ ತೊಡಗಿದರು. ॥ ೬ ॥

ದೇವತೆಗಳು ಇಂತೆಂದರು – ಸ್ವಾಮಿಯೇ! ನಾವೆಲ್ಲರೂ ನಿನ್ನ ಚರಣಕಮಲಗಳಲ್ಲಿ ವಂದಿಸಿಕೊಳ್ಳುವೆವು. ಕರ್ಮಗಳೆಂಬ ಮಹಾ ಪಾಶಗಳಿಂದ ಬಿಡಿಸಿಕೊಳ್ಳುವ ಸಲುವಾಗಿ ಮೋಕ್ಷವನ್ನು ಬಯಸುವ ಜನರು ಭಕ್ತಿಭಾವದಿಂದ ಯಾವ ನಿನ್ನ ದಿವ್ಯ ಪಾದಾರವಿಂದಗಳನ್ನು ತಮ್ಮ ಹೃದಯದಲ್ಲಿ ಚಿಂತಿಸುವರೋ ಅಂತಹ ನಿನ್ನ ಚರಣ

ತ್ವಂ ಮಾಯಯಾ ತ್ರಿಗುಣಯಾಽಽತ್ಮನಿ ದುರ್ವಿಭಾವ್ಯಂ
ವ್ಯಕ್ತಂ ಸೃಜಸ್ಯವಸಿ ಲುಂಪಸಿ ತದ್ಗುಣಸ್ಥಃ ।
ನೈತೈರ್ಭವಾನಜಿತ ಕರ್ಮಭಿರಜ್ಯತೇ ವೈ
ಯತ್ಸ್ವೇ ಸುಖೇಽವ್ಯವಹಿತೇಽಭಿರತೋಽನವದ್ಯಃ ॥ ೮ ॥

ಶುದ್ಧಿರ್ನೃಣಾಂ ನ ತು ತಥೇಡ್ಯ ದುರಾಶಯಾನಾಂ
ವಿದ್ಯಾಶ್ರುತಾಧ್ಯಯನದಾನತಪಃ ಕ್ರಿಯಾಭಿಃ ।
ಸತ್ತ್ವಾತ್ಮನಾಮೃಷಭ ತೇ ಯಶಸಿ ಪ್ರವೃದ್ಧ-
ಸಚ್ಛ್ರದ್ಧಯಾ ಶ್ರವಣಸಂಭೃತಯಾ ಯಥಾ ಸ್ಯಾತ್ ॥ ೯ ॥

ಸ್ಯಾನ್ನಸ್ತವಾಂಘ್ರಿರಶುಭಾಶಯಧೂಮಕೇತುಃ
ಕ್ಷೇಮಾಯ ಯೋ ಮುನಿಭಿರಾರ್ದ್ರಹೃದೋಹ್ಯಮಾನಃ ।
ಯಃ ಸಾತ್ವತೈಃ ಸಮವಿಭೂತಯ ಆತ್ಮವದ್ಭಿ-
ರ್ವ್ಯೂಹೇಽರ್ಚಿತಃ ಸವನಶಃ ಸ್ವರತಿಕ್ರಮಾಯ ॥ ೧೦ ॥

ಯಶ್ಚಿಂತ್ಯತೇ ಪ್ರಯತಪಾಣಿಭಿರಧ್ವರಾಗ್ನೌ
ತ್ರಯ್ಯಾ ನಿರುಕ್ತವಿಧಿನೇಶ ಹವಿರ್ಗೃಹೀತ್ವಾ ।
ಅಧ್ಯಾತ್ಮಯೋಗ ಉತ ಯೋಗಿಭಿರಾತ್ಮಮಾಯಾಂ
ಜಿಜ್ಞಾಸುಭಿಃ ಪರಮಭಾಗವತೈಃ ಪರೀಷ್ಟಃ ॥ ೧೧ ॥

ಕಮಲಗಳಿಗೆ ನಾವು ಬುದ್ಧಿ, ಇಂದ್ರಿಯ, ಪ್ರಾಣ, ಮನಸ್ಸು, ಮಾತು ಇವುಗಳ ಮೂಲಕ ನಿನಗೆ ಸಾಷ್ಟಾಂಗ ನಮಸ್ಕಾರ ಮಾಡುತ್ತೇವೆ. * ॥ ೭ ॥ ಓ ಭಗವಂತಾ! ನಿನ್ನ ತ್ರಿಗುಣಮಯ ಮಾಯೆಯನ್ನು ತಿಳಿದುಕೊಳ್ಳುವುದು ತುಂಬಾ ಕಠಿಣವು. ಇಂತಹ ಮಾಯೆಯ ಮೂಲಕ ನಿನ್ನಲ್ಲೇ ನೀನು ಈ ದೃಶ್ಯಜಗತ್ತನ್ನು ಲೀಲೆಯಿಂದಲೇ ರಜೋಗುಣದಿಂದ ನಿರ್ಮಿಸಿರುವೆ. ಸತ್ತ್ವಗುಣದಿಂದ ಪಾಲಿಸುತ್ತಿರುವೆ. ತಮೋಗುಣದಿಂದ ಸಂಹಾರವನ್ನೂ ಮಾಡುವೆ. ಇದೆಲ್ಲವನ್ನು ಮಾಡುತ್ತಿದ್ದರೂ ನೀನು ಇವುಗಳೊಂದಿಗೆ ಲಿಪ್ತನಾಗುವುದಿಲ್ಲ, ನೀನು ನಿನ್ನ ಅಖಂಡ ಆನಂದದಲ್ಲಿ ಮಗ್ನನಾಗಿರುವೆ. ನಿನ್ನೊಳಗೆ ಮಾಯೆಯ ಯಾವುದೇ ವ್ಯವಧಾನವಿಲ್ಲ, ನೀನು ನಿರಂಜನನಾಗಿದ್ದು, ನಿನ್ನ ಅಖಂಡ ಸ್ವರೂಪ ಪರಮಾನಂದದಲ್ಲಿ ಮುಳುಗಿರುವೆ. ॥ ೮ ॥ ಸ್ತುತಿಸಲು ಯೋಗ್ಯನಾದ ಓ ಪರಮಾತ್ಮನೇ! ಅಂತಃಕರಣ ಶುದ್ಧವಿಲ್ಲದ ಜನರ ಚಿತ್ತಶುದ್ಧಿಯು ವಿದ್ಯಾಭ್ಯಾಸದಿಂದಾಗಲೀ, ವೇದಾಧ್ಯಯನದಿಂದಾಗಲೀ, ದಾನ, ತಪಸ್ಸು, ಯಜ್ಞಾದಿ ಕ್ರಿಯೆಗಳಿಂದಾಗಲೀ, ಆಗುವುದಿಲ್ಲ. ಆದರೆ ಓ ದೇವಶ್ರೇಷ್ಠನೇ! ಶುದ್ಧ ಅಂತಃಕರಣವುಳ್ಳ ನಿನ್ನ ಭಕ್ತರು ನಿನ್ನ ಲೀಲಾಕಥೆಗಳನ್ನು, ಮಹಿಮೆಯನ್ನು, ಯಶಸ್ಸನ್ನು, ನಿನ್ನ ಕಲ್ಯಾಣ ಗುಣಗಳನ್ನು ವರ್ಣಿಸುತ್ತಾ, ಶ್ರವಣಿಸುತ್ತಾರೆ. ಈ ಶ್ರವಣದಿಂದ ಉಂಟಾದ ಶ್ರದ್ಧೆಯಿಂದ ಉತ್ಕಟಭಕ್ತಿ ಉಂಟಾಗುತ್ತದೆ. ಅದರಿಂದ ಅವರ ಅಂತಃಕರಣವು ತತ್ಕಾಲವೇ ಪವಿತ್ರವಾಗುತ್ತದೆ. ॥ ೯ ॥ ಓ ಪ್ರಭುವೇ! ನಿನ್ನ ಚರಣಕಮಲಗಳು ನಮ್ಮ ಎಲ್ಲ ಅಮಂಗಳಗಳನ್ನು ಬೆಂಕಿಯಾಗಿ ಸುಟ್ಟು ನಾಶವಾಗಿಸಲಿ. ನಿನ್ನ ಇವೇ ಚರಣಕಮಲಗಳನ್ನು ನಿನ್ನ ಭಕ್ತರು ಪ್ರೇಮಮಗ್ನರಾಗಿ ತಮ್ಮ ಹೃದಯದಲ್ಲಿ ಧರಿಸುತ್ತಿರುವರು. ಇವು ನಮ್ಮ ಶ್ರೇಯಸ್ಸನ್ನು ವಿಸ್ತರಿಸುವಂತಾಗಲಿ. ಇಂದ್ರಿಯಗಳನ್ನು ವಶದಲ್ಲಿರಿಸಿಕೊಂಡಂತಹ ನಿನ್ನ ಭಕ್ತರು ನಿನ್ನ ಸಾಯುಜ್ಯವನ್ನು ಪಡೆಯುವುದಕ್ಕಾಗಿ ಮೂರೂ ಕಾಲಗಳಲ್ಲಿ ವಾಸುದೇವ - ಸಂಕರ್ಷಣ-ಪ್ರದ್ಯುಮ್ನ-ಅನಿರುದ್ಧರ ವ್ಯೂಹದಲ್ಲಿ ನಿನ್ನ ಇವೇ ಚರಣಕಮಲಗಳನ್ನು ಉಪಾಸಿಸುತ್ತಾ ಸ್ವರ್ಗವನ್ನು ಅತಿಕ್ರಮಿಸಿ ನಿನ್ನ ಧಾಮಕ್ಕೆ ತೆರಳುತ್ತಾರೆ. ॥ ೧೦ ॥ ನಿನ್ನ ಭಕ್ತರು ವೇದೋಕ್ತವಿಧಿಯಿಂದ ಪುರೋಡಾಶಾದಿ ಹವಿಸ್ಸನ್ನು ಮೂರು ವೇದಗಳ ಮಂತ್ರಗಳಿಂದಲೂ, ನಿರುಕ್ತದ ವಿಧಾನವನ್ನು ಅನುಸರಿಸಿ ಅಗ್ನಿಯಲ್ಲಿ ಹೋಮಮಾಡುವಾಗಲೂ ಇವೇ ಚರಣಕಮಲಗಳನ್ನು ಚಿಂತಿಸುವರು. ಜ್ಞಾನಮಾರ್ಗದ ಮೂಲಕ ಸಾಕ್ಷಾತ್ಕಾರ ಪಡೆಯಲು ಯೋಗಿಗಳು ಇವೇ ಚರಣಕಮಲಗಳನ್ನು ಧ್ಯಾನಿಸುವರು. ಹೀಗೆಯೇ ನಿನ್ನ ಮಾಯೆಯ ಸ್ವರೂಪವನ್ನು ತಿಳಿಯಬಯಸುವ

* ಇಲ್ಲಿ ಸಾಷ್ಟಾಂಗ ಪ್ರಣಾಮವನ್ನು ಹೇಳಿದ್ದಾರೆ –
ದೋರ್ಭ್ಯಾಂ ಪದ್ಭ್ಯಾಂ ಚ ಜಾನುಭ್ಯಾಮುರಸಾ ಶಿರಸಾ ದೃಶಾ । ಮನಸಾ ವಚಸಾ ಚೈವ ಪ್ರಣಾಮೋಽಷ್ಟಾಂಗ ಈರಿತಃ ॥
ಏಕಕಾಲದಲ್ಲಿ ಕೈಗಳಿಂದಲೂ, ಕಾಲುಗಳಿಂದಲೂ, ಮಂಡಿಗಳಿಂದಲೂ, ವಕ್ಷಸ್ಥಳದಿಂದಲೂ, ಶಿರಸ್ಸಿನಿಂದಲೂ, ಕಣ್ಣುಗಳಿಂದಲೂ, ಮನಸ್ಸಿನಿಂದಲೂ, ಮಾತಿನಿಂದಲೂ ಮಾಡುವ ನಮಸ್ಕಾರಕ್ಕೆ ಸಾಷ್ಟಾಂಗನಮಸ್ಕಾರವೆಂದು ಹೇಳುತ್ತಾರೆ.
ಇಲ್ಲಿ ಭಗವಂತನ ಪಾದಾರವಿಂದಗಳಲ್ಲಿ ಮಾನಸಿಕ ಪ್ರಣಾಮ, ವಾಚಿಕ ಪ್ರಣಾಮ, ಕಾಯಿಕ ಪ್ರಣಾಮ ಎಂಬ ಮೂರು ಬಗೆಯ ಪ್ರಣಾಮ ಹೇಳಿದೆ. ಬುದ್ಧಿ ಶಬ್ದದಿಂದ ಮಾನಸಿಕ, ವಚಃಶಬ್ದದಿಂದ ವಾಚಿಕ ಮತ್ತು ಇಂದ್ರಿಯ, ಪ್ರಾಣ ಇವುಗಳಿಂದ ಕಾಯಿಕ ನಮಸ್ಕಾರವೂ ಹೇಳಲ್ಪಟ್ಟಿದೆ.

ಪರ್ಯುಷ್ಟಯಾ ತವ ವಿಭೋ ವನಮಾಲಯೇಯಂ
ಸಂಸ್ಪರ್ಧಿನೀ ಭಗವತೀ ಪ್ರತಿಪತ್ನಿವಚ್ಛ್ರೀಃ ।
ಯಃ ಸುಪ್ರಣೀತಮಮುಯಾರ್ಹಣಮಾದದನ್ನೋ
ಭೂಯಾತ್ಸದಾಂಘ್ರಿರಶುಭಾಶಯಧೂಮಕೇತುಃ ॥ ೧೨ ॥

ಕೇತುಸ್ತ್ರಿವಿಕ್ರಮಯುತಸ್ತ್ರಿಪತತ್ಪತಾಕೋ
ಯಸ್ತೇ ಭಯಾಭಯಕರೋಽಸುರದೇವಚಮ್ವೋಃ ।
ಸ್ವರ್ಗಾಯ ಸಾಧುಷು ಖಲೇಷ್ವಿತರಾಯ ಭೂಮನ್
ಪಾದಃ ಪುನಾತು ಭಗವನ್ ಭಜತಾಮಘಂ ನಃ ॥ ೧೩ ॥

ನಸ್ಯೋತಗಾವ ಇವ ಯಸ್ಯ ವಶೇ ಭವಂತಿ
ಬ್ರಹ್ಮಾದಯಸ್ತನುಭೃತೋ ಮಿಥುರರ್ದ್ಯಮಾನಾಃ ।
ಕಾಲಸ್ಯ ತೇ ಪ್ರಕೃತಿಪೂರುಷಯೋಃ ಪರಸ್ಯ
ಶಂ ನಸ್ತನೋತು ಚರಣಃ ಪುರುಷೋತ್ತಮಸ್ಯ ॥ ೧೪ ॥

ಜಿಜ್ಞಾಸುಭಕ್ತರೂ ಕೂಡ ನಿನ್ನ ಚರಣಗಳನ್ನೇ ನೆನೆಯುತ್ತಾರೆ. ಈ ವಿಧವಾಗಿ ನಿನ್ನ ಪ್ರೇಮಿಭಕ್ತರು ನಿನ್ನ ಚರಣಕಮಲಗಳನ್ನೇ ತಮ್ಮ ಸರ್ವೋತ್ಕೃಷ್ಟ ಪರಮ ಆರಾಧ್ಯವೆಂದು ತಿಳಿದು ಇವುಗಳನ್ನೇ ಉಪಾಸಿಸುತ್ತಾರೆ. ॥ ೧೧ ॥ ಓ ಪ್ರಭುವೇ! ನಿನ್ನ ಭಕ್ತರು ಪ್ರೇಮದಿಂದ ಅರ್ಪಿಸುವ ವನಮಾಲೆಯನ್ನು ನೀನು ತುಂಬಾ ಸಮ್ಮಾನದಿಂದ ಸ್ವೀಕರಿಸುತ್ತಿರುವೆ. ಭಕ್ತರ ಕುರಿತು ನಿನಗಿರುವ ವಿಲಕ್ಷಣಪ್ರೇಮದ ಪ್ರತ್ಯಕ್ಷ ಉದಾಹರಣೆ ಇದಾಗಿದೆ. ಸಾಕ್ಷಾತ್ ಭಗವತಿ ಲಕ್ಷ್ಮಿಯೂ ನಿನ್ನಲ್ಲಿ ಪ್ರೇಮವಿಟ್ಟಿರುವಳು. ಆದರೆ ನಿನ್ನ ವಕ್ಷಃಸ್ಥಳದಲ್ಲಿ ಸುತ್ತಲೂ ಹರಡಿಕೊಂಡಿರುವ ವನಮಾಲೆಯನ್ನು ನೋಡಿ ಹಾಗೂ ಭಕ್ತರ ಕುರಿತು ನಿನಗಿರುವ ವಿಶೇಷ ಪ್ರೇಮವನ್ನು ನೋಡಿ ಸವತಿಯಂತೆ ವನಮಾಲೆಯೊಂದಿಗೆ ಸ್ಪರ್ಧಿಸುತ್ತಿರುವಳು. ಆ ವನಮಾಲೆಯಲ್ಲಿ ತುಳಸಿಯೂ ಇರುತ್ತದೆ. ತುಳಸಿಯನ್ನು ಅರ್ಪಿಸುವುದರಿಂದ ನಿನ್ನ ಪೂಜೆಯು ಸಾಂಗವಾಗಿ ಪೂರ್ಣಗೊಂಡು, ನೀನು ಇನ್ನೂ ಹೆಚ್ಚು ಪ್ರಸನ್ನನಾಗುವೆ. ಅಂತಹ ವನಮಾಲೆಯಿಂದ ಸಮಲಂಕೃತವಾದ ನಿನ್ನ ಚರಣಕಮಲಗಳು ನಮ್ಮ ಎಲ್ಲ ವಿಷಯವಾಸನೆಗಳನ್ನು ಭಸ್ಮಮಾಡುವ ಅಗ್ನಿಯಂತಾಗಲಿ. ॥ ೧೨ ॥ ವಾಮನಾವತಾರದಲ್ಲಿ ದೈತ್ಯನಾದ ಬಲಿಯು ದಾನಮಾಡಿದ ಮೂರು ಹೆಜ್ಜೆಗಳಷ್ಟು ಭೂಮಿಯನ್ನು ಅಳೆಯುವಾಗ ಮೊದಲನೆಯ ಹೆಜ್ಜೆಯಿಂದ ಭೂಮಂಡಲವನ್ನೇ ವ್ಯಾಪಿಸಿ, ಎರಡನೆಯ ಹೆಜ್ಜೆಯು ವ್ಯೋಮವನ್ನು ಅತಿಕ್ರಮಿಸಿದಾಗ ಸತ್ಯಲೋಕವನ್ನೂ ವ್ಯಾಪಿಸಿದ ಆ ದಿವ್ಯಪಾದವು ದೊಡ್ಡದಾದ ವಿಜಯಧ್ವಜದಂತೆ ಕಂಗೊಳಿಸಿತು. ಆಗ ಬ್ರಹ್ಮದೇವರು ಆ ಪವಿತ್ರಪಾದವನ್ನು ತೊಳೆದು ಆ ಪಾದೋದಕವನ್ನು ತನ್ನ ಕಮಂಡಲುವಿನಲ್ಲಿರಿಸಿಕೊಂಡರು. ಅಲ್ಲಿಂದ ಹೊರಟ ಮೂರು ಪ್ರವಾಹಗಳು ಭಾಗೀರಥಿ ಗಂಗೆಯಾಗಿ ಹರಿದು ನಿನ್ನ ಕೀರ್ತಿ ಪತಾಕೆಯಂತೆ ಕಾಣುತ್ತಿದ್ದವು. ಇದನ್ನು ನೋಡಿ ಅಸುರ ಸೈನ್ಯವು ಭಯಗೊಂಡಿತು. ಭಕ್ತರು, ದೇವತೆಗಳು ನಿರ್ಭಯರಾದರು. ಹೇ ಪರಬ್ರಹ್ಮಸ್ವರೂಪಿಯೇ! ಅಂತಹ ನಿನ್ನ ಪಾದಕಮಲವು ಸಾಧು-ಸತ್ಪುರುಷರನ್ನು ಪರಮಧಾಮಕ್ಕೆ ಒಯ್ಯುವುದಕ್ಕೂ, ದುಷ್ಟರನ್ನು ಅಧೋಗತಿಗೆ ತಳ್ಳುವುದಕ್ಕೂ ಕಾರಣವಾಗಿದೆ. ಅಂತಹ ನಿನ್ನ ದಿವ್ಯ-ಸುಂದರ-ಪವಿತ್ರ ಪಾದಾರವಿಂದವು ಪ್ರಾರ್ಥಿಸುತ್ತಿರುವ ನಮ್ಮ ಪಾಪಗಳನ್ನು ಕಳೆದು ನಮ್ಮನ್ನು ಅನವರತವಾಗಿ ರಕ್ಷಿಸಲಿ. ॥ ೧೩ ॥ ಸತ್ತ್ವ-ರಜ-ತಮೋಗುಣಗಳಾದ ಬ್ರಹ್ಮನೇ ಮೊದಲಾದ ಸಮಸ್ತ ಶರೀರಧಾರೀ ಜೀವರು ಪರಸ್ಪರವಾಗಿ ಡಿಕ್ಕಿಹೊಡೆಯುತ್ತಿದ್ದರೂ ಮೂಗುದಾರವನ್ನು ಹಾಕಿದ ಎತ್ತು ಒಡೆಯನ ಹಿಡಿತದಲ್ಲಿರುವಂತೆ ಅವರೆಲ್ಲರೂ ನಿನ್ನ ವಶವರ್ತಿಗಳಾಗಿಯೇ ಇರುತ್ತಾರೆ. ನೀನು ಪ್ರಕೃತಿ ಮತ್ತು ಪುರುಷರಿಗಿಂತಲೂ ಮೀರಿದ ಕಾಲಸ್ವರೂಪವಾಗಿರುವೆ. ಅಂತಹ ಪುರುಷೋತ್ತಮಸ್ವರೂಪೀ ನಿನ್ನ ಚರಣಕಮಲಗಳು ನಮ್ಮ ಶ್ರೇಯಸ್ಸನ್ನು ವಿಸ್ತರಿಸಲಿ. ॥ ೧೪ ॥

ಅಸ್ಯಾಸಿ ಹೇತುರುದಯಸ್ಥಿತಿಸಂಯಮಾನಾ-
ಮವ್ಯಕ್ತಜೀವಮಹತಾಮಪಿ ಕಾಲಮಾಹುಃ ।
ಸೋಽಯಂ ತ್ರಿಣಾಭಿರಖಿಲಾಪಚಯೇ ಪ್ರವೃತ್ತಃ
ಕಾಲೋ ಗಭೀರರಯ ಉತ್ತಮಪೂರುಷಸ್ತ್ವಮ್ ॥ ೧೫ ॥

ತ್ವತ್ತಃ ಪುಮಾನ್ಸಮಧಿಗಮ್ಯ ಯಯಾ ಸ್ವವೀರ್ಯಂ
ಧತ್ತೇ ಮಹಾಂತಮಿವ ಗರ್ಭಮಮೋಘವೀರ್ಯಃ ।
ಸೋಽಯಂ ತಯಾನುಗತ ಆತ್ಮನ ಆಂಡಕೋಶಂ
ಹೈಮಂ ಸಸರ್ಜ ಬಹಿರಾವರಣೈರುಪೇತಮ್ ॥ ೧೬ ॥

ತತ್ತಸ್ಥುಷಶ್ಚ ಜಗತಶ್ಚ ಭವಾನಧೀಶೋ
ಯನ್ಮಾಯಯೋತ್ಥಗುಣವಿಕ್ರಿಯಯೋಪನೀತಾನ್ ।
ಅರ್ಥಾನ್ ಜುಷನ್ನಪಿ ಹೃಷೀಕಪತೇ ನ ಲಿಪ್ತೋ
ಯೇಽನ್ಯೇ ಸ್ವತಃ ಪರಿಹೃತಾದಪಿ ಬಿಭ್ಯತಿ ಸ್ಮ ॥ ೧೭ ॥

ಸ್ಮಾಯಾವಲೋಕಲವದರ್ಶಿತಭಾವಹಾರಿ-
ಭ್ರೂಮಂಡಲಪ್ರಹಿತಸೌರತಮಂತ್ರಶೌಂಡೈಃ ।
ಪತ್ನ್ಯಸ್ತು ಷೋಡಶಸಹಸ್ರಮನಂಗಬಾಣೈ-
ರ್ಯಸ್ಯೇಂದ್ರಿಯಂ ವಿಮಥಿತುಂ ಕರಣೈರ್ನ ವಿಭ್ವ್ಯಃ ॥ ೧೮ ॥

ವಿಭ್ವ್ಯಸ್ತವಾಮೃತಕಥೋದವಹಾಸ್ತ್ರಿಲೋಕ್ಯಾಃ
ಪಾದಾವನೇಜಸರಿತಃ ಶಮಲಾನಿ ಹಂತುಮ್ ।
ಆನುಶ್ರವಂ ಶ್ರುತಿಭಿರಂಘ್ರಿಜಮಂಗಸಂಗೈ-
ಸ್ತೀರ್ಥದ್ವಯಂ ಶುಚಿಷದಸ್ತ ಉಪಸ್ಪೃಶಂತಿ ॥ ೧೯ ॥

ನೀನೇ ಈ ಜಗತ್ತಿನ ಉತ್ಪತ್ತಿ , ಸ್ಥಿತಿ, ಸಂಹಾರ ಇವುಗಳ ಪರಮ ಕಾರಣನಾಗಿರುವೆ. ನೀನೇ ಅವ್ಯಕ್ತ (ಮೂಲಪ್ರಕೃತಿ), ಪುರುಷ, ಮಹತ್ತತ್ತ್ವ ಇವೆಲ್ಲದರ ನಿಯಾಮಕನಾಗಿರುವೆ. ಕಾಲಸ್ವರೂಪನೂ ನೀನೇ ಆಗಿರುವೆ. ಸಂವತ್ಸರ ರೂಪದಿಂದ ಶೀತಕಾಲ, ಬೇಸಿಗೆ ಕಾಲ, ಮಳೆಗಾಲ ಎಂಬ ಈ ಮೂರು ಋತುಗಳು ಮೂರು ಸುಳಿಗಳ ರೂಪದಲ್ಲಿ ನಿನ್ನ ಕಾಲಚಕ್ರ ವನ್ನು ಅತಿವೇಗವಾಗಿ ತಿರುಗಿಸುತ್ತಿವೆ. ಆ ಕಾಲವು ಎಲ್ಲರ ನಾಶ ಮಾಡುವುದರಲ್ಲಿ ವೇಗವಾಗಿ ತೊಡಗಿದೆ. ಹೀಗೆ ಇವೆಲ್ಲದರ ಶಾಸಕ ಉತ್ತರ ಪುರುಷನು ನೀನೇ ಆಗಿರುವೆ. ॥ ೧೫ ॥ ಸೂತ್ರಾತ್ಮಾ ಹಿರಣ್ಯ ಗರ್ಭನು ನಿನ್ನಿಂದಲೇ ಶಕ್ತಿಯನ್ನು ಪಡೆದು ಅಮೋಘವೀರ್ಯನಾಗಿ ಮಾಯೆಯೊಡನೆ ಸೇರಿಕೊಂಡು ಜಗತ್ತಿನ ಗರ್ಭದಂತಿರುವ ಮಹತ್ತತ್ತ್ವವನ್ನು ಧರಿಸುವನು. ಮತ್ತೆ ಆ ಮಹತ್ತತ್ತ್ವವೇ (ಹಿರಣ್ಯಗರ್ಭ ಬ್ರಹ್ಮಾ) ತ್ರಿಗುಣಾತ್ಮಕವಾದ ಮಾಯೆಯನ್ನು ಅನುಸರಿಸಿ, ಪೃಥಿವಿ, ಜಲ, ತೇಜಸ್ಸು, ವಾಯು, ಆಕಾಶ, ಅಹಂಕಾರ ಮತ್ತು ಮಹತ್ತತ್ತ್ವ ಇವುಗಳ ರೂಪವಾದ ಏಳು ಆವರಣಗಳಿಂದ ಕೂಡಿದ ಸುವರ್ಣಮಯವಾದ ಬ್ರಹ್ಮಾಂಡವನ್ನು ಸೃಷ್ಟಿಸಿತು. ಈ ವಿರಾಟ್ ಬ್ರಹ್ಮಾಂಡವು ನಿನ್ನಿಂದಲೇ ಪ್ರಕಟವಾಗಿದೆ. ॥ ೧೬ ॥ ನೀನೇ ಈ ಚರಾಚರ ಜಗತ್ತಿನ ಅಧೀಶ್ವರನಾಗಿರುವೆ. ಇಡೀ ಈ ಜಗತ್ತು ಮಾಯೆಯ ಗುಣಗಳಿಂದ ಮತ್ತು ಅವುಗಳ ವಿಕ್ರಿಯೆಯಿಂದಲೇ ಉಂಟಾಗಿದೆ. ಹೇ ಹೃಷೀಕೇಶಾ! ನೀನೇ ಎಲ್ಲ ಇಂದ್ರಿಯಗಳ ಒಡೆಯನಾಗಿದ್ದು, ಅವುಗಳ ವಿಷಯುಗಳ ಭೋಕ್ತಾನೂ ನೀನೇ ಆಗಿರುವೆ. ಆದರೆ ನೀನಾದರೋ ಅವುಗಳನ್ನು ಭೋಗಿಸುತ್ತಿದ್ದರೂ ಅವುಗಳಲ್ಲಿ ಲಿಪ್ತನಾಗಿರುವುದಿಲ್ಲ. ಇದು ನಿನ್ನ ಆಶ್ಚರ್ಯವೇ ಆಗಿದೆ. ಆದರೆ ಬೇರೆಯವರು ಸ್ವತಃ ಆ ಭೋಗಗಳನ್ನು ತ್ಯಾಗ ಮಾಡಿಬಿಡುವರು. ಅವರು ತ್ಯಾಗಮಾಡಿದ ಬಳಿಕವೂ ಆ ವಿಷಯಗಳೊಂದಿಗೆ ಹೆದರುತ್ತಿರುತ್ತಾರೆ. ॥ ೧೭ ॥ ಹದಿನಾರು ಸಾವಿರ ರಾಣಿಯರು ನಿನ್ನ ಅಂತಃಪುರದಲ್ಲಿದ್ದು, ಅವರೆಲ್ಲರೂ ತಮ್ಮ-ತಮ್ಮ ಕಿರುನಗೆಯಿಂದಲೂ, ಕುಡಿಗಣ್ಣಿನ ನೋಟದಿಂದ, ಮನೋಹರ ಹಾವ-ಭಾವದಿಂದ ನಿನ್ನನ್ನು ನೋಡುತ್ತಿರುತ್ತಾರೆ. ಸುರತ ಮಂತ್ರದಲ್ಲಿ ಪ್ರವೀಣರಾದ ಅವರೆಲ್ಲರೂ ತಮ್ಮ ಕಾಮ ಬಾಣಗಳನ್ನು ನಿನ್ನ ಮೇಲೆ ಎಸೆಯುತ್ತಿರುತ್ತಾರೆ. ಆದರೆ ಅವರು ನಿನ್ನ ಇಂದ್ರಿಯಗಳನ್ನು ಅಸ್ಥಿರಗೊಳಿಸಲು ಸ್ವಲ್ಪವೂ ಸಮರ್ಥರಾಗಲಿಲ್ಲ. ॥ ೧೮ ॥ ಆದರೆ ನಿನ್ನ ಎರಡು ಪುಣ್ಯಮಯ ನದಿಗಳು ತ್ರಿಲೋಕಗಳ ಎಲ್ಲ ಪಾಪಗಳನ್ನು ತೊಳೆಯಲು ಪೂರ್ಣವಾಗಿ ಸಮರ್ಥವಾಗಿವೆ. ಒಂದು :– ನಿನ್ನ ಅಮೃತಮಯವಾದ ಲೀಲೆಗಳಿಂದ ಸಮೃದ್ಧವಾದ ಹರಿಕಥಾನದಿ. ಅದನ್ನು ನಿರಂತರ ಕಿವಿಗಳಿಂದ ಶ್ರವಣಿಸಿದರೆ ಹೃದಯ ನಿರ್ಮಲವಾಗುತ್ತದೆ. ಇನ್ನೊಂದು ನಿನ್ನ ಪಾದ ಪ್ರಕ್ಷಾಳನದಿಂದ ಹೊರಟ ಗಂಗಾನದಿ. ಅದರಲ್ಲಿ ಸ್ನಾನಮಾಡಿದರೆ ಜನರು ಪುನೀತರಾಗುತ್ತಾರೆ. ಹೀಗೆ ಇವೆರಡೂ ಪವಿತ್ರ ನದಿಗಳನ್ನು ಪುಣ್ಯಾತ್ಮರಾದ ಸಜ್ಜನರು ನಿರಂತರ ಸೇವಿಸುತ್ತಾ ಇರುತ್ತಾರೆ. ॥ ೧೯ ॥

ಶ್ರೀಶುಕ ಉವಾಚ

ಇತ್ಯಭಿಷ್ಟೂಯ ವಿಬುಧೈಃ ಸೇಶಃ ಶತಧೃತಿರ್ಹರಿಮ್ ।
ಅಭ್ಯಭಾಷತ ಗೋವಿಂದಂ ಪ್ರಣಮ್ಯಾಂಬರಮಾಶ್ರಿತ ॥ ೨೦ ॥

ಬ್ರಹ್ಮೋವಾಚ

ಭೂಮೇರ್ಭಾರಾವತಾರಾಯ ಪುರಾ ವಿಜ್ಞಾಪಿತಃ ಪ್ರಭೋ ।
ತ್ವಮಸ್ಮಾಭಿರಶೇಷಾತ್ಮಂಸ್ತತ್ತಥೈವೋಪಪಾದಿತಮ್ ॥ ೨೧ ॥

ಧರ್ಮಶ್ಚ ಸ್ಥಾಪಿತಃ ಸತ್ಸು ಸತ್ಯಸಂಧೇಷು ವೈ ತ್ವಯಾ ।
ಕೀರ್ತಿಶ್ಚ ದಿಕ್ಷು ವಿಕ್ಷಿಪ್ತಾ ಸರ್ವಲೋಕಮಲಾಪಹಾ ॥ ೨೨ ॥

ಅವತೀರ್ಯ ಯದೋರ್ವಂಶೇ ಬಿಭ್ರದ್ರೂಪಮನುತ್ತಮಮ್ ।
ಕರ್ಮಾಣ್ಯುದ್ದಾಮವೃತ್ತಾನಿ ಹಿತಾಯ ಜಗತೋಽಕೃಥಾಃ ॥ ೨೩ ॥

ಯಾನಿ ತೇ ಚರಿತಾನೀಶ ಮನುಷ್ಯಾಃ ಸಾಧವಃ ಕಲೌ ।
ಶೃಣ್ವಂತಃ ಕೀರ್ತಯಂತಶ್ಚ ತರಿಷ್ಯಂತ್ಯಂಜಸಾ ತಮಃ ॥ ೨೪ ॥

ಯದುವಂಶೇಽವತೀರ್ಣಸ್ಯ ಭವತಃ ಪುರುಷೋತ್ತಮ ।
ಶರಚ್ಛತಂ ವ್ಯತೀಯಾಯ ಪಂಚವಿಂಶಾಧಿಕಂ ಪ್ರಭೋ ॥ ೨೫ ॥

ನಾಧುನಾ ತೇಽಖಿಲಾಧಾರ ದೇವಕಾರ್ಯಾವಶೇಷಿತಮ್ ।
ಕುಲಂ ಚ ವಿಪ್ರಶಾಪೇನ ನಷ್ಟಪ್ರಾಯಮಭೂದಿದಮ್ ॥ ೨೬ ॥

ತತಃ ಸ್ವಧಾಮ ಪರಮಂ ವಿಶಸ್ವ ಯದಿ ಮನ್ಯಸೇ ।
ಸಲೋಕಾನ್ಲೋಕಪಾಲಾನ್ ನಃ ಪಾಹಿ ವೈಕುಂಠ ಕಿಂಕರಾನ್ ॥ ೨೭ ॥

ಶ್ರೀಭಗವಾನುವಾಚ

ಅವಧಾರಿತಮೇತನ್ಮೇ ಯದಾತ್ಥ ವಿಬುಧೇಶ್ವರ ।
ಕೃತಂ ವಃ ಕಾರ್ಯಮಖಿಲಂ ಭೂಮೇರ್ಭಾರೋಽವತಾರಿತಃ ॥ ೨೮ ॥

ತದಿದಂ ಯಾದವಕುಲಂ ವೀರ್ಯಶೌರ್ಯಶ್ರಿಯೋದ್ಧತಮ್ ।
ಲೋಕಂ ಜಿಘೃಕ್ಷದ್ರುದ್ಧಂ ಮೇ ವೇಲಯೇವ ಮಹಾರ್ಣವಃ ॥ ೨೯ ॥

ಶ್ರೀಶುಕಮುನಿಗಳು ಹೇಳುತ್ತಾರೆ – ಪರೀಕ್ಷಿತ ಮಹಾರಾಜಾ! ಸಮಸ್ತ ದೇವತೆಗಳೂ, ಮತ್ತು ಭಗವಾನ್ ಶಂಕರನೊಂದಿಗೆ ಬ್ರಹ್ಮದೇವರು ಈ ವಿಧವಾಗಿ ಭಗವಂತನನ್ನು ಸ್ತುತಿಸಿದರು. ಬಳಿಕ ಅವರು ವಂದಿಸಿ ತಮ್ಮ ಸ್ವಧಾಮಕ್ಕೆ ಹಿಂದಿರುಗಲು ಸಿದ್ಧರಾಗಿ ಅಂತರಿಕ್ಷದಲ್ಲಿ ನಿಂತು ಭಗವಾನ್ ಗೋವಿಂದನನ್ನು ಕುರಿತು ಇಂತೆಂದರು – ॥ ೨೦ ॥

ಬ್ರಹ್ಮದೇವರು ಹೇಳಿದರು – "ಸರ್ವಾತ್ಮನಾದ ಪ್ರಭುವೇ! ಈ ಮೊದಲು ನಾವು ನಿನ್ನಲ್ಲಿ ಭೂಭಾರಹರಣಕ್ಕಾಗಿ ಭುವಿಯಲ್ಲಿ ಅವತರಿಸಲು ಪ್ರಾರ್ಥಿಸಿದ್ದೆವು. ಅದನ್ನು ನೀನು ನಮ್ಮ ಪ್ರಾರ್ಥನೆಗನುಸಾರ ಯಥೋಚಿತವಾದ ರೀತಿಯಲ್ಲಿ ಪೂರ್ಣಗೊಳಿಸಿದೆ. ॥ ೨೧ ॥ ಸತ್ಯಪರಾಯಣನಾದ ನೀನು ಸಾಧುಸತ್ಪುರುಷರ ಕಲ್ಯಾಣಾರ್ಥವಾಗಿ ಧರ್ಮವನ್ನು ಪುನಃ ನೆಲೆಗೊಳಿಸಿರುವೆ. ಸಮಸ್ತ ಲೋಕಗಳ ಪಾಪಗಳನ್ನು ಪರಿಹರಿಸುವ ನಿನ್ನ ಧವಳಕೀರ್ತಿಯನ್ನು ಎಲ್ಲ ದಿಕ್ಕುಗಳಲ್ಲಿಯೂ ಹರಡಿರುವೆ. ॥ ೨೨ ॥ ನೀನು ಈ ಸರ್ವೋತ್ತಮ ರೂಪವನ್ನು ಧರಿಸಿ ಯದುವಂಶದಲ್ಲಿ ಅವತರಿಸಿದೆ. ಜಗತ್ತಿನ ಹಿತಕ್ಕಾಗಿ ಉದಾರ ಪರಾಕ್ರಮವುಳ್ಳ ಅನೇಕ ಲೀಲೆಗಳನ್ನು ನಡೆಸಿದೆ. ॥ ೨೩ ॥ ಪ್ರಭುವೇ! ಕಲಿಯುಗದಲ್ಲಿ ನಿನ್ನ ಈ ಲೀಲೆಗಳನ್ನು ಶ್ರವಣಿಸುವ, ಕೀರ್ತಿಸುವ, ಸಾಧುಸ್ವಭಾವವುಳ್ಳ ಮನುಷ್ಯರು ಬಹಳ ಸುಲಭವಾಗಿ ಅಜ್ಞಾನಾಂಧಕಾರವನ್ನು ದಾಟಿಬಿಡುತ್ತಾರೆ. ॥ ೨೪ ॥ ಪುರುಷೋತ್ತಮನೇ! ಸರ್ವಶಕ್ತ ಪ್ರಭುವೇ! ನೀನು ಯದುವಂಶದಲ್ಲಿ ಅವತರಿಸಿ ಒಂದುನೂರಇಪ್ಪತ್ತೈದು ವರ್ಷಗಳು ಕಳೆದುಹೋಗಿವೆ. ॥ ೨೫ ॥ ಸರ್ವಾಧಾರನೇ! ಈಗ ದೇವತೆಗಳಾದ ನಮ್ಮ ಎಲ್ಲ ಕಾರ್ಯಗಳನ್ನು ಚೆನ್ನಾಗಿ ನೀನು ನಡೆಸಿಕೊಟ್ಟಿರುವೆ. ಈಗ ಯಾವುದೇ ಕಾರ್ಯವು ಬಾಕಿ ಉಳಿಯಲಿಲ್ಲ. ಬ್ರಾಹ್ಮಣರ ಶಾಪದ ಕಾರಣ ಈ ಯದುವಂಶವೂ ಕೂಡ ಒಂದು ರೀತಿಯಿಂದ ನಾಶವಾಗಿಯೇ ಹೋಗಿದೆ. ॥ ೨೬ ॥ ಆದುದರಿಂದ ಹೇ ವೈಕುಂಠನಾಥನೇ! ನಿನಗೆ ಉಚಿತವೆನಿಸಿದರೆ ನಿನ್ನ ಪರಮಧಾಮಕ್ಕೆ ಹಿಂದಿರುಗುವವನಾಗು. ಅಲ್ಲಿ ನಿನ್ನ ಸೇವಕರಾದ ನಮ್ಮನ್ನೂ ಲೋಕಪಾಲಕರನ್ನೂ ಮತ್ತು ನಮ್ಮ ಲೋಕಗಳನ್ನು ಪಾಲಿಸಿ ಪೋಷಿಸುವವನಾಗು." ॥ ೨೭ ॥

ಭಗವಾನ್ ಶ್ರೀಕೃಷ್ಣನು ಹೇಳಿದನು – ದೇವತೆಗಳೊಡೆಯ ಬ್ರಹ್ಮನೇ! ನೀನು ಹೇಳಿದುದನ್ನೇ ನಾನೂ ಕೂಡ ಮೊದಲೇ ನಿಶ್ಚಯ ಮಾಡಿರುವೆನು. ನಾನು ನಿಮ್ಮ ಕಾರ್ಯಗಳನ್ನೆಲ್ಲ ಪೂರ್ಣಗೊಳಿಸಿ ಭೂಮಿಯ ಭಾರವನ್ನು ಇಳುಹಿಸಿರುವೆನು. ॥ ೨೮ ॥ ಆದರೆ ಒಂದು ಕಾರ್ಯ ಹಾಗೆಯೇ ಉಳಿದಿದೆ. ಈ ಯದುವಂಶೀಯರು ಬಲ-ವಿಕ್ರಮಗಳಿಂದಲೂ, ವೀರ್ಯ-ಶೌರ್ಯಾದಿಗಳಿಂದಲೂ, ಧನ-ಸಂಪತ್ತಿನಿಂದಲೂ ಉನ್ಮತ್ತರಾಗಿ ಬಿಟ್ಟಿದ್ದಾರೆ. ಲೋಕವನ್ನೇ ನುಂಗಿಹಾಕಬೇಕೆಂದಿರುವ ಅವರ ತವಕವನ್ನು ನಾನು ಕಡಲದಡವು ಕಡಲನ್ನು ತಡೆಹಿಡಿದಂತೆ ತಡೆ ಹಿಡಿದಿಟ್ಟಿರುವೆನು. ॥ ೨೯ ॥ ನಾನೇನಾದರೂ

ಯದ್ಯಸಂಹೃತ್ಯ ದೃಪ್ತಾನಾಂ ಯದೂನಾಂ ವಿಪುಲಂ ಕುಲಮ್ ।
ಗಂತಾಸ್ಮ್ಯನೇನ ಲೋಕೋಽಯಮುದ್ವೇಲೇನ ವಿನಂಕ್ಷ್ಯತಿ
॥ ೩೦ ॥

ಇದಾನೀಂ ನಾಶ ಆರಬ್ಧಃ ಕುಲಸ್ಯ ದ್ವಿಜಶಾಪತಃ ।
ಯಾಸ್ಯಾಮಿ ಭವನಂ ಬ್ರಹ್ಮನ್ನೇತದಂತೇ ತವಾನಘ
॥ ೩೧ ॥

ಶ್ರೀಶುಕ ಉವಾಚ

ಇತ್ಯುಕ್ತೋ ಲೋಕನಾಥೇನ ಸ್ವಯಂಭೂಃ ಪ್ರಣಿಪತ್ಯ ತಮ್ ।
ಸಹ ದೇವಗಣೈರ್ದೇವಃ ಸ್ವಧಾಮ ಸಮಪದ್ಯತ
॥ ೩೨ ॥

ಅಥ ತಸ್ಯಾಂ ಮಹೋತ್ಪಾತಾಂದ್ವಾರವತ್ಯಾನ್ ಸಮುತ್ಥಿತಾನ್ ।
ವಿಲೋಕ್ಯ ಭಗವಾನಾಹ ಯದುವೃದ್ಧಾನ್ಸಮಾಗತಾನ್
॥ ೩೩ ॥

ಶ್ರೀಭಗವಾನುವಾಚ

ಏತೇ ವೈ ಸುಮಹೋತ್ಪಾತಾ ವ್ಯುತ್ತಿಷ್ಠಂತೀಹ ಸರ್ವತಃ ।
ಶಾಪಶ್ಚ ನಃ ಕುಲಸ್ಯಾಸೀದ್ಬ್ರಾಹ್ಮಣೇಭ್ಯೋ ದುರತ್ಯಯಃ
॥ ೩೪ ॥

ನ ವಸ್ತವ್ಯಮಿಹಾಸ್ಮಾಭಿರ್ಜಿಜೀವಿಷುಭಿರಾರ್ಯಕಾಃ ।
ಪ್ರಭಾಸಂ ಸುಮಹತ್ಪುಣ್ಯಂ ಯಾಸ್ಯಾಮೋಽದ್ಯೈವ ಮಾ ಚಿರಮ್
॥ ೩೫ ॥

ಯತ್ರ ಸ್ನಾತ್ವಾ ದಕ್ಷಶಾಪಾದ್ ಗೃಹೀತೋ ಯಕ್ಷ್ಮಣೋಡುರಾಟ್ ।
ವಿಮುಕ್ತಃ ಕಿಲ್ಬಿಷಾತ್ಸದ್ಯೋ ಭೇಜೇ ಭೂಯಃ ಕಲೋದಯಮ್
॥ ೩೬ ॥

ವಯಂ ಚ ತಸ್ಮಿನ್ನಾಪ್ಲುತ್ಯ ತರ್ಪಯಿತ್ವಾ ಪಿತೄನ್ಸುರಾನ್ ।
ಭೋಜಯಿತ್ವೋಶಿಜೋ ವಿಪ್ರಾನ್ ನಾನಾಗುಣವತಾಂಧಸಾ
॥ ೩೭ ॥

ತೇಷು ದಾನಾನಿ ಪಾತ್ರೇಷು ಶ್ರದ್ಧಯೋಪ್ತ್ವಾ ಮಹಾಂತಿ ವೈ ।
ವೃಜಿನಾನಿ ತರಿಷ್ಯಾಮೋ ದಾನೈರ್ನೌಭಿರಿವಾರ್ಣವಮ್
॥ ೩೮ ॥

ಶ್ರೀಶುಕ ಉವಾಚ

ಏವಂ ಭಗವತಾಽಽದಿಷ್ಟಾ ಯಾದವಾಃ ಕುಲನಂದನ ।
ಗಂತುಂ ಕೃತಧಿಯಸ್ತೀರ್ಥಂ ಸ್ಯಂದನಾನ್ಸಮಯೂಯುಜನ್
॥ ೩೯ ॥

ಮದಾಂಧರೂ, ಸ್ವೇಚ್ಛಾಚಾರಿಗಳೂ ಆದ ಯದುವಂಶೀಯರ ಈ ವಿಶಾಲ ವಂಶವನ್ನು ವಿನಾಶಗೊಳಿಸದೇ ಸ್ವಧಾಮವನ್ನು ಸೇರಿಕೊಂಡರೆ ಇವರು ಎಲ್ಲ ಲೋಕಮರ್ಯಾದೆಗಳನ್ನು ಉಲ್ಲಂಘಿಸಿ, ಹದ್ದುಮೀರಿ ನಡೆದು ಸಮಸ್ತ ಲೋಕಗಳನ್ನು ವಿನಾಶಗೊಳಿಸುವರು. ॥ ೩೦ ॥ ಪುಣ್ಯಾತ್ಮನಾದ ಬ್ರಹ್ಮನೇ! ಈ ಬ್ರಾಹ್ಮಣರ ಶಾಪದಿಂದ ಈ ವಂಶದ ನಾಶ ಪ್ರಾರಂಭವಾಗಿಬಿಟ್ಟಿದೆ. ಇದರ ಅಂತ್ಯವಾಗುತ್ತಲೇ ನಾನು ನಿನ್ನ ಧಾಮದ ಮೂಲಕ ಸ್ವಧಾಮಕ್ಕೆ ತೆರಳುವೆನು." ॥ ೩೧ ॥

ಶ್ರೀಶುಕಮುನಿಗಳು ಹೇಳುತ್ತಾರೆ – ಪರೀಕ್ಷಿತನೇ! ಅಖಿಲ ಲೋಕಾಧಿಪತಿ ಭಗವಾನ್ ಶ್ರೀಕೃಷ್ಣನು ಹೀಗೆ ಹೇಳಲು, ಬ್ರಹ್ಮದೇವರು ಅವನಿಗೆ ವಂದಿಸಿ ದೇವತೆಗಳೊಂದಿಗೆ ತಮ್ಮ ಧಾಮಕ್ಕೆ ಹೊರಟುಹೋದರು. ॥ ೩೨ ॥ ಬ್ರಹ್ಮಾದಿಗಳು ಹೊರಟುಹೋಗುತ್ತಲೇ ದ್ವಾರಕೆಯಲ್ಲಿ ದೊಡ್ಡ-ದೊಡ್ಡ ಉತ್ಪಾತಗಳೂ, ಅಪಶಕುನಗಳೂ ಕಾಣಿಸಿಕೊಂಡವು. ಇದನ್ನು ನೋಡಿ ಗಾಬರಿಗೊಂಡು ಕೆಲವು ಯದುವಂಶದ ಹಿರಿಯರು ಶ್ರೀಕೃಷ್ಣನ ಬಳಿಗೆ ಬಂದು ತಮ್ಮ ಆತಂಕವನ್ನು ತೋಡಿಕೊಂಡರು. ಆಗ ಭಗವಾನ್ ಶ್ರೀಕೃಷ್ಣನು ಅವರನ್ನು ಸಮಾಧಾನಪಡಿಸುತ್ತಾ ಇಂತೆಂದನು. ॥ ೩೩ ॥

ಭಗವಾನ್ ಶ್ರೀಕೃಷ್ಣನು ಹೇಳಿದನು – ಹಿರಿಯರೇ! ನಿಮ್ಮ ಆತಂಕವು ಸಹಜವಾಗಿಯೇ ಇದೆ. ಇಂದು ದ್ವಾರಕೆಯಲ್ಲಿ ಎಲ್ಲಿ ನೋಡಿದಲ್ಲಿ ದೊಡ್ಡ-ದೊಡ್ಡ ಅಪಶಕುನಗಳೂ, ಉತ್ಪಾತಗಳೂ ವಿಶೇಷವಾಗಿ ಉಂಟಾಗುತ್ತಿವೆ. ಬ್ರಾಹ್ಮಣರು ನಮ್ಮ ವಂಶಕ್ಕೆ ಪರಿಹರಿಸಲು ಬಹಳ ಕಠಿಣವಾದ ಶಾಪವನ್ನು ಕೊಟ್ಟಿರುವುದು ನಿಮಗೆ ತಿಳಿದೇ ಇದೆ. ನಾವೆಲ್ಲ ನಮ್ಮ ಪ್ರಾಣಗಳನ್ನು ರಕ್ಷಿಸಿಕೊಳ್ಳಬೇಕಿದ್ದರೆ ನಾವು ಇಲ್ಲಿ ಇರದೆ, ಇಂದೇ ಪ್ರಭಾಸಕ್ಷೇತ್ರಕ್ಕೆ ಹೊರಡಬೇಕೆಂದು ನನಗನಿಸುತ್ತದೆ. ॥ ೩೪-೩೫ ॥ ಪ್ರಭಾಸ ಕ್ಷೇತ್ರದ ಮಹಿಮೆ ಬಹಳ ಪ್ರಸಿದ್ಧವಾಗಿದೆ. ದಕ್ಷ ಪ್ರಜಾಪತಿಯ ಶಾಪದಿಂದ ಚಂದ್ರನಿಗೆ ರಾಜಯಕ್ಷ್ಮ (ಕ್ಷಯ) ರೋಗವು ಆವರಿಸಿದ್ದಾಗ, ಚಂದ್ರನು ಪ್ರಭಾಸಕ್ಷೇತ್ರಕ್ಕೆ ಹೋಗಿ ಸ್ನಾನಮಾಡಿದನು. ಆಗಲೇ ಆ ಪಾಪಜನ್ಯ ರೋಗದಿಂದ ಬಿಡುಗಡೆ ಹೊಂದಿದನು. ಜೊತೆಗೆ ಅವನಿಗೆ ಕಲೆಗಳ ಅಭಿವೃದ್ಧಿಯು ಪ್ರಾಪ್ತವಾಯಿತು. ॥ ೩೬ ॥ ನಾವೂ ಕೂಡ ಪ್ರಭಾಸಕ್ಷೇತ್ರಕ್ಕೆ ಹೋಗಿ ಸ್ನಾನಮಾಡಿ, ದೇವತೆಗಳಿಗೆ, ಪಿತೃಗಳಿಗೆ ತರ್ಪಣವಿತ್ತು, ಜೊತೆಗೆ ನಾನಾಗುಣಗಳಿಂದ ಕೂಡಿದ ಪಕ್ವಾನ್ನಗಳನ್ನು ಮಾಡಿ ಶ್ರೇಷ್ಠ ಬ್ರಾಹ್ಮಣರಿಗೆ ಊಟಬಡಿಸೋಣ. ಅಲ್ಲಿ ನಾವು ಆ ಸತ್ಪಾತ್ರ ಬ್ರಾಹ್ಮಣರಿಗೆ ಶ್ರದ್ಧೆಯಿಂದ ಭಾರೀ ದಕ್ಷಿಣೆಗಳನ್ನು ಕೊಟ್ಟು ಅವರ ಮೂಲಕ, ಹಡಗಿನ ಮೂಲಕ ಸಮುದ್ರವನ್ನು ದಾಟುವಂತೆ ನಾವು ದೊಡ್ಡಸಂಕಟದಿಂದ ಪಾರಾಗಿ ಹೋಗೋಣ. ॥ ೩೭-೩೮ ॥

ಶ್ರೀಶುಕಮುನಿಗಳು ಹೇಳುತ್ತಾರೆ – ಕುರುಕುಲನಂದನನೇ! ಭಗವಾನ್ ಶ್ರೀಕೃಷ್ಣನು ಈ ವಿಧವಾಗಿ ಅಜ್ಞೆಮಾಡಿದಾಗ ಯದುವಂಶೀಯರು ಒಮ್ಮತದಿಂದ ಪ್ರಭಾಸಕ್ಷೇತ್ರಕ್ಕೆ ಹೋಗಲು ನಿಶ್ಚಯಿಸಿದರು. ಎಲ್ಲರೂ ತಮ್ಮ-ತಮ್ಮ ರಥಗಳನ್ನು ಸಜ್ಜುಗೊಳಿಸತೊಡಗಿದರು. ॥ ೩೯ ॥

ತನ್ನಿರೀಕ್ಷ್ಯೋದ್ಧವೋ ರಾಜನ್ ಶ್ರುತ್ವಾ ಭಗವತೋದಿತಮ್ ।
ದೃಷ್ಟ್ವಾರಿಷ್ಟಾನಿ ಘೋರಾಣಿ ನಿತ್ಯಂ ಕೃಷ್ಣಮನುವ್ರತಃ
॥ ೪೦ ॥

ವಿವಿಕ್ತ ಉಪಸಂಗಮ್ಯ ಜಗತಾಮೀಶ್ವರೇಶ್ವರಮ್ ।
ಪ್ರಣಮ್ಯ ಶಿರಸಾ ಪಾದೌ ಪ್ರಾಂಜಲಿಸ್ತಮಭಾಷತ
॥ ೪೧ ॥

ಉದ್ಧವ ಉವಾಚ

ದೇವದೇವೇಶ ಯೋಗೇಶ ಪುಣ್ಯಶ್ರವಣಕೀರ್ತನ ।
ಸಂಹೃತ್ಯೈತತ್ಕುಲಂ ನೂನಂ ಲೋಕಂ ಸಂತ್ಯಕ್ಷ್ಯತೇ ಭವಾನ್ ।
ವಿಪ್ರಶಾಪಂ ಸಮರ್ಥೋಽಪಿ ಪ್ರತ್ಯಹನ್ನ ಯದೀಶ್ವರಃ
॥ ೪೨ ॥

ನಾಹಂ ತವಾಂಘ್ರಿಕಮಲಂ ಕ್ಷಣಾರ್ಧಮಪಿ ಕೇಶವ ।
ತ್ಯಕ್ತುಂ ಸಮುತ್ಸಹೇ ನಾಥ ಸ್ವಧಾಮ ನಯ ಮಾಮಪಿ
॥ ೪೩ ॥

ತವ ವಿಕ್ರೀಡಿತಂ ಕೃಷ್ಣ ನೃಣಾಂ ಪರಮಮಂಗಲಮ್ ।
ಕರ್ಣಪೀಯೂಷಮಾಸ್ವಾದ್ಯ ತ್ಯಜತ್ಯನ್ಯಸ್ಪೃಹಾಂ ಜನಃ
॥ ೪೪ ॥

ಶಯ್ಯಾಸನಾಟನಸ್ಥಾನಸ್ನಾನಕ್ರೀಡಾಶನಾದಿಷು ।
ಕಥಂ ತ್ವಾಂ ಪ್ರಿಯಮಾತ್ಮಾನಂ ವಯಂ ಭಕ್ತಾಸ್ತ್ಯಜೇಮಹಿ
॥ ೪೫ ॥

ತ್ವಯೋಪಭುಕ್ತಸ್ರಗ್ಗಂಧವಾಸೋಽಲಂಕಾರಚರ್ಚಿತಾಃ ।
ಉಚ್ಛಿಷ್ಟಭೋಜಿನೋ ದಾಸಾಸ್ತವ ಮಾಯಾಂ ಜಯೇಮಹಿ
॥ ೪೬ ॥

ವಾತರಶನಾ ಯ ಋಷಯಃ ಶ್ರಮಣಾ ಊರ್ಧ್ವಮಂಥಿನಃ ।
ಬ್ರಹ್ಮಾಖ್ಯಂ ಧಾಮ ತೇ ಯಾಂತಿ ಶಾಂತಾಃ ಸಂನ್ಯಾಸಿನೋಽಮಲಾಃ
॥ ೪೭ ॥

ಪರೀಕ್ಷಿತನೇ! ಉದ್ಧವನು ಭಗವಾನ್ ಶ್ರೀಕೃಷ್ಣನ ಭಕ್ತನೂ, ಸೇವಕನೂ ಆಗಿದ್ದನು. ಅವನು ಯದುವಂಶೀಯರ ಯಾತ್ರೆಯ ಸಿದ್ಧತೆಯನ್ನು ನೋಡಿ, ಭಗವಂತನ ಆಜ್ಞೆಯನ್ನು ಕೇಳಿ, ಅತ್ಯಂತ ಘೋರ ಅಪಶಕುನಗಳನ್ನು ಗಮನಿಸಿದಾಗ ಉದ್ಧವನು ಜಗತ್ತಿನ ಏಕಮಾತ್ರ ಅಧೀಶ್ವರ ಭಗವಾನ್ ಶ್ರೀಕೃಷ್ಣನ ಏಕಾಂತವನ್ನು ಪ್ರವೇಶಿಸಿ ಅವನ ಚರಣಗಳಲ್ಲಿ ಶಿರಸ್ಸನ್ನಿಟ್ಟು ವಂದಿಸಿ, ಕೈಜೋಡಿಸಿ ಕೊಂಡು ಅವನಲ್ಲಿ ಪ್ರಾರ್ಥಿಸತೊಡಗಿದನು. ॥ ೪೦-೪೧ ॥

ಉದ್ಧವನಿಂತೆಂದನು – ಯೋಗೇಶ್ವರನೇ! ದೇವಾಧಿ ದೇವನೇ! ನಿನ್ನ ಲೀಲೆಗಳ ಶ್ರವಣ-ಕೀರ್ತನದಿಂದ ಜಗತ್ತು ಪವಿತ್ರ ವಾಗುತ್ತದೆ. ನೀನು ಸರ್ವಶಕ್ತ ಪರಮೇಶ್ವರನಾಗಿರುವೆ. ಬ್ರಾಹ್ಮಣರ ಶಾಪವನ್ನು ತೊಡೆದುಹಾಕುವಲ್ಲಿ ನೀನು ಸಮರ್ಥನಾಗಿದ್ದರೂ ಹಾಗೆ ಮಾಡಲಿಲ್ಲ. ಈಗ ನೀನು ಯದುವಂಶವನ್ನು ಸಂಹರಿಸಿ, ಇದನ್ನು ಕೊನೆಗಾಣಿಸಿ ನೀನು ಅವಶ್ಯವಾಗಿ ಈ ಲೋಕವನ್ನು ಪರಿತ್ಯಜಿಸುವೆ ಎಂದು ನಾನು ತಿಳಿದುಕೊಂಡೆ. ॥ ೪೨ ॥

ಓ ಶ್ಯಾಮಸುಂದರಾ! ಪ್ರಾಣನಾಥನೇ! ನಾನು ನಿನ್ನ ದಿವ್ಯ ವಾದ ಚರಣಕಮಲಗಳನ್ನು ಕ್ಷಣಾರ್ಧವೂ ಬಿಟ್ಟಿರಲಾರೆನು. ನನ್ನ ಜೀವನ ಸರ್ವಸ್ವವಾದ ಸ್ವಾಮಿಯೇ! ನೀನು ನನ್ನನ್ನೂ ನಿನ್ನ ಧಾಮಕ್ಕೆ ಕೊಂಡುಹೋಗಿಬಿಡು. ॥ ೪೩ ॥ ಪ್ರಿಯಕೃಷ್ಣಾ! ನಿನ್ನ ಒಂದೊಂದು ಲೀಲೆಯೂ ಮನುಷ್ಯರಿಗಾಗಿ ಪರಮ ಮಂಗಳ ದಾಯಕವಾಗಿದೆ. ಕಿವಿಗಳಿಗೆ ಅಮೃತಪ್ರಾಯವಾಗಿದೆ. ಒಮ್ಮೆ ಆ ಅಮೃತದ ಸವಿಯನ್ನು ಮೆದ್ದವನ ಮನಸ್ಸು ಮತ್ತೆ ಬೇರೆಡೆಗೆ ಹೋಗುವುದಿಲ್ಲ, ಸ್ವಾಮಿ! ನಾವಾದರೋ ಎದ್ದಾಗ-ಕುಳಿತಾಗ, ಮಲಗಿ ಎದ್ದಾಗ, ಅಡ್ಡಾಡುವಾಗ ನಿನ್ನ ಜೊತೆಯಲ್ಲೇ ಇದ್ದೆವು. ನಾವು ನಿನ್ನೊಡನೆ ಸ್ನಾನಮಾಡಿದೆವು, ಆಟವಾಡಿದೆವು, ಊಟ ಮಾಡಿದೆವು, ಎಷ್ಟೊಂದು ಹೇಳಲಿ, ನಮ್ಮ ಎಲ್ಲ ಕ್ರಿಯೆಗಳು ನಿನ್ನೊಡನೇ ನಡೆಯುತ್ತಿತ್ತು. ನೀನು ನಮ್ಮ ಪ್ರಿಯತಮನಾಗಿರುವೆ. ಹೆಚ್ಚೇನು ನಮ್ಮ ಆತ್ಮನೇ ಆಗಿರುವೆ. ಇಂತಹ ಸ್ಥಿತಿಯಲ್ಲಿ ಪ್ರೇಮಿ ಭಕ್ತರಾದ ನಾವು ನಿನ್ನನ್ನು ಹೇಗೆ ಬಿಡಬಲ್ಲೆವು! ॥ ೪೪-೪೫ ॥ ನೀನು ಧರಿಸಿದ ವನಮಾಲೆಯನ್ನು ನಾವು ಪ್ರಸಾದರೂಪವಾಗಿ ಧರಿಸಿದೆವು. ನೀನು ಧರಿಸಿದ ಚಂದನಾದಿ ಅಲಂಕಾರಗಳನ್ನು ನಿನ್ನ ಪ್ರಸಾದವೆಂದು ಪಡೆದುಕೊಂಡೆವು. ನಾವು ನಿನ್ನ ಪ್ರಸಾದವನ್ನು ಪಡೆಯುವ ಸೇವಕರಾಗಿದ್ದೇವೆ. ಅದಕ್ಕಾಗಿ ನಾವು ನಿನ್ನ ಮಾಯೆಯ ಮೇಲೆ ಅವಶ್ಯವಾಗಿ ವಿಜಯವನ್ನು ಪಡೆದುಕೊಂಡೆವು. (ಆದ್ದ ರಿಂದ ಸ್ವಾಮಿ! ನಮಗೆ ನಿನ್ನ ಮಾಯೆಯ ಭಯವಿಲ್ಲ. ಭಯವಿರುವುದಾದರೆ ಕೇವಲ ನಿನ್ನ ವಿಯೋಗದ್ದು) ॥ ೪೬ ॥ ದೊಡ್ಡ ದೊಡ್ಡ ಋಷಿ-ಮುನಿಗಳು ದಿಗಂಬರರಾಗಿದ್ದು ಆಜೀವನ ನೈಷ್ಠಿಕ ಬ್ರಹ್ಮಚರ್ಯವನ್ನು ಪಾಲಿಸುತ್ತಾ ಅಧ್ಯಾತ್ಮವಿದ್ಯೆಗಾಗಿ ಅತ್ಯಂತ ಪರಿಶ್ರಮ ಪಡುವರು. ಈ ವಿಧವಾಗಿ ಕಠಿಣ ಸಾಧನೆಯಿಂದ ಆ ಸಂನ್ಯಾಸಿಗಳ ಹೃದಯ ನಿರ್ಮಲವಾಗುತ್ತದೆ. ಆಗ ಎಲ್ಲಾದರೂ ಅವರು ಸಮಸ್ತ ವೃತ್ತಿಗಳ ಶಾಂತಿರೂಪೀ ನೈಷ್ಕರ್ಮ್ಯ ಅವಸ್ಥೆಯಲ್ಲಿ ಸ್ಥಿತರಾಗಿ ನಿನ್ನ ಬ್ರಹ್ಮನಾಮಕ ಧಾಮವನ್ನು ಪಡೆದುಕೊಳ್ಳುತ್ತಾರೆ. ॥ ೪೭ ॥

ವಯಂ ತ್ವಿಹ ಮಹಾಯೋಗಿನ್ ಭ್ರಮಂತಃ ಕರ್ಮವರ್ತ್ಮಸು ।
ತ್ವದ್ವಾರ್ತಯಾ ತರಿಷ್ಯಾಮಸ್ತಾವಕೈರ್ದುಸ್ತರಂ ತಮಃ ॥ ೪೮ ॥

ಸ್ಮರಂತಃ ಕೀರ್ತಯಂತಸ್ತೇ ಕೃತಾನಿ ಗದಿತಾನಿ ಚ ।
ಗತ್ಯುತ್ಸ್ಮಿತೇಕ್ಷಣಕ್ಷ್ವೇಲಿ ಯನ್ನೃಲೋಕವಿಡಂಬನಮ್ ॥ ೪೯ ॥

ಓ ಮಹಾಯೋಗಿಯೇ! ನಾವಾದರೋ ಕರ್ಮಮಾರ್ಗದಲ್ಲೇ ಅಲೆಯುತ್ತಿದ್ದೇವೆ. ಆದರೆ ನಾವು ನಿನ್ನ ಭಕ್ತರೊಡನೆ ನಿನ್ನ ಗುಣ-ಲೀಲೆಗಳನ್ನು ಚರ್ಚಿಸುತ್ತಾ, ಮನುಷ್ಯರಂತೆ ಲೀಲೆಗಳನ್ನು ಮಾಡುತ್ತಾ ನೀನು ಹೇಳಿದುದನ್ನು ಸ್ಮರಣ-ಕೀರ್ತನೆ ಮಾಡುತ್ತಾ ಇರುವೆವು. ಜೊತೆಗೆ ನಿನ್ನ ನಡೆ-ನಿಲುವು, ಮಂದಹಾಸ, ಓರೆನೋಟ, ಹಾಸ-ಪರಿಹಾಸಗಳ ಸ್ಮೃತಿಯಲ್ಲಿ ತಲ್ಲೀನವಾಗಿ ಹೋಗುವೆವು. ಕೇವಲ ಇದರಿಂದಲೇ ನಾವು ದುಸ್ತರವಾದ ಮಾಯೆಯನ್ನು ದಾಟಿಹೋಗುವೆವು. (ಅದಕ್ಕಾಗಿ ನಮಗೆ ಮಾಯೆಯನ್ನು ದಾಟಲು ಚಿಂತೆಯಿಲ್ಲ, ನಿನ್ನ ವಿರಹದ್ದೇ ಚಿಂತೆ ಇದೆ. ನೀನು ನಮ್ಮ ಕೈಬಿಡದೆ, ಜೊತೆಗೆ ಕರೆದುಕೊಂಡು ಹೋಗು.) ॥ ೪೮-೪೯ ॥

ಶ್ರೀಶುಕ ಉವಾಚ

ಏವಂ ವಿಜ್ಞಾಪಿತೋ ರಾಜನ್ ಭಗವಾನ್ ದೇವಕೀಸುತಃ ।
ಏಕಾಂತಿನಂ ಪ್ರಿಯಂ ಭೃತ್ಯಮುದ್ಧವಂ ಸಮಭಾಷತ ॥ ೫೦ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ! ಉದ್ಧವನು ದೇವಕಿನಂದನ ಭಗವಾನ್ ಶ್ರೀಕೃಷ್ಣನಲ್ಲಿ ಈ ಪ್ರಕಾರ ಪ್ರಾರ್ಥಿಸಿದಾಗ ಅವನು ತನ್ನ ಅನನ್ಯ ಪ್ರೇಮಿಯೂ, ಸಖನೂ, ಸೇವಕನೂ ಆದ ಉದ್ಧವನಲ್ಲಿ ಇಂತೆಂದನು – ॥ ೫೦ ॥

ಆರನೆಯ ಅಧ್ಯಾಯವು ಮುಗಿಯಿತು. ॥ ೬ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಏಕಾದಶ ಸ್ಕಂಧೇ ಷಷ್ಠೋಽಧ್ಯಾಯಃ ॥ ೬ ॥

ಏಳನೆಯ ಅಧ್ಯಾಯ

ಅವಧೂತೋಪಾಖ್ಯಾನ
ಪೃಥ್ವಿಯಿಂದ ಪಾರಿವಾಳದ ತನಕ ಎಂಟು ಗುರುಗಳ ಕಥೆ

ಶ್ರೀಭಗವಾನುವಾಚ

ಯದಾತ್ಥ ಮಾಂ ಮಹಾಭಾಗ ತಚ್ಚಿಕೀರ್ಷಿತಮೇವ ಮೇ ।
ಬ್ರಹ್ಮಾ ಭವೋ ಲೋಕಪಾಲಾಃ ಸ್ವರ್ವಾಸಂ ಮೇಽಭಿಕಾಂಕ್ಷಿಣಃ ॥ ೧ ॥

ಮಯಾ ನಿಷ್ಪಾದಿತಂ ಹ್ಯತ್ರ ದೇವಕಾರ್ಯಮಶೇಷತಃ ।
ಯದರ್ಥಮವತೀರ್ಣೋಽಹಮಂಶೇನ ಬ್ರಹ್ಮಣಾರ್ಥಿತಃ ॥ ೨ ॥

ಕುಲಂ ವೈ ಶಾಪನಿರ್ದಗ್ಧಂ ನಂಕ್ಷ್ಯತ್ಯನ್ಯೋನ್ಯ ವಿಗ್ರಹಾತ್ ।
ಸಮುದ್ರಃ ಸಪ್ತಮೇಽಹ್ನ್ಯೇತಾಂ ಪುರೀಂ ಚ ಪ್ಲಾವಯಿಷ್ಯತಿ ॥ ೩ ॥

ಯರ್ಹ್ಯೇವಾಯಂ ಮಯಾ ತ್ಯಕ್ತೋ ಲೋಕೋಽಯಂ ನಷ್ಟಮಂಗಲಃ ।
ಭವಿಷ್ಯತ್ಯಚಿರಾತ್ ಸಾಧೋ ಕಲಿನಾಪಿ ನಿರಾಕೃತಃ ॥ ೪ ॥

ಭಗವಾನ್ ಶ್ರೀಕೃಷ್ಣನು ಹೇಳಿದನು – ಮಹಾಭಾಗ್ಯಶಾಲಿಯಾದ ಉದ್ಧವನೇ! ನೀನು ನನ್ನೊಡನೆ ಹೇಳಿದುದನ್ನೇ ನಾನು ಮಾಡಲು ಅಪೇಕ್ಷಿಸಿದ್ದೇನೆ. ಬ್ರಹ್ಮ ರುದ್ರಾದಿ, ಇಂದ್ರನೇ ಮೊದಲಾದ ಲೋಕಪಾಲರೂ ಕೂಡ ನಾನು ಭೂಲೋಕವನ್ನು ತ್ಯಜಿಸಿ ಸ್ವಧಾಮದಲ್ಲಿ ವಾಸಿಸಬೇಕೆಂದು ಅಪೇಕ್ಷಿಸುತ್ತಿದ್ದಾರೆ. ॥ ೧ ॥ ಬ್ರಹ್ಮನ ಪ್ರಾರ್ಥನೆಯಂತೆ ನಾನು ನನ್ನ ಅಂಶ ಬಲರಾಮನೊಂದಿಗೆ ಭೂತಲದಲ್ಲಿ ಅವತರಿಸಿದ್ದೆ. ದೇವತೆಗಳ ಸಲುವಾಗಿ ಇದ್ದ ಎಲ್ಲ ಕಾರ್ಯಗಳನ್ನು ಮಾಡಿ ಮುಗಿಸಿದೆ. ॥ ೨ ॥ ನಮ್ಮ ಕುಲವು ಈಗಾಗಲೇ ಬ್ರಾಹ್ಮಣರ ಶಾಪದಿಂದ ದಗ್ಧವಾಗಿದ್ದು, ಪರಸ್ಪರ ಕಲಹದಿಂದ ಮತ್ತು ಯುದ್ಧದಿಂದ ವಿನಾಶ ಹೊಂದುತ್ತದೆ. ಇಂದಿನಿಂದ ಏಳನೆಯ ದಿನ ಸಮುದ್ರವು ಈ ದ್ವಾರಕಾಪುರಿಯನ್ನು ಮುಳುಗಿಸಿಬಿಡುತ್ತದೆ. ॥ ೩ ॥ ಪ್ರಿಯ ಉದ್ಧವನೇ! ಈ ಮರ್ತ್ಯಲೋಕವನ್ನು ನಾನು ಪರಿತ್ಯಜಿಸಿ ಹೊರಟುಹೋದೊಡನೆಯೇ ಇದರ ಎಲ್ಲ ಮಂಗಳಗಳೂ ನಾಶವಾಗಿ ಹೋಗುವುವು ಮತ್ತು ಕೆಲವೇ ದಿನಗಳಲ್ಲಿ ಕಲಿಯುಗವು ಪೂರ್ಣವಾಗಿ ಆವರಿಸಿಬಿಡುವುದು. ॥ ೪ ॥

ನ ವಸ್ತವ್ಯಂ ತ್ವಯೈವೇಹ ಮಯಾ ತ್ಯಕ್ತೇ ಮಹೀತಲೇ ।
ಜನೋಽಧರ್ಮರುಚಿರ್ಭದ್ರ ಭವಿಷ್ಯತಿ ಕಲೌ ಯುಗೇ ॥ ೫ ॥

ತ್ವಂ ತು ಸರ್ವಂ ಪರಿತ್ಯಜ್ಯ ಸ್ನೇಹಂ ಸ್ವಜನಬಂಧುಷು ।
ಮಯ್ಯಾವೇಶ್ಯ ಮನಃ ಸಮ್ಯಕ್ ಸಮದೃಗ್ವಿಚರಸ್ವ ಗಾಮ್ ॥ ೬ ॥

ಯದಿದಂ ಮನಸಾ ವಾಚಾ ಚಕ್ಷುರ್ಭ್ಯಾಂ ಶ್ರವಣಾದಿಭಿಃ ।
ನಶ್ವರಂ ಗೃಹ್ಯಮಾಣಂ ಚ ವಿದ್ಧಿ ಮಾಯಾ ಮನೋಮಯಮ್ ॥ ೭ ॥

ಪುಂಸೋಽಯುಕ್ತಸ್ಯ ನಾನಾರ್ಥೋ ಭ್ರಮಃ ಸ ಗುಣದೋಷಭಾಕ್ ।
ಕರ್ಮಾಕರ್ಮವಿಕರ್ಮೇತಿ ಗುಣದೋಷಧಿಯೋ ಭಿದಾ ॥ ೮ ॥

ತಸ್ಮಾದ್ಯುಕ್ತೇಂದ್ರಿಯಗ್ರಾಮೋ ಯುಕ್ತಚಿತ್ತ ಇದಂ ಜಗತ್ ।
ಆತ್ಮನೀಕ್ಷಸ್ವ ವಿತತಮಾತ್ಮಾನಂ ಮಯ್ಯಧೀಶ್ವರೇ ॥ ೯ ॥

ಜ್ಞಾನವಿಜ್ಞಾನಸಂಯುಕ್ತ ಆತ್ಮಭೂತಃ ಶರೀರಿಣಾಮ್ ।
ಆತ್ಮಾನುಭವತುಷ್ಟಾತ್ಮಾ ನಾಂತರಾಯೈರ್ವಿಹನ್ಯಸೇ ॥ ೧೦ ॥

ದೋಷಬುದ್ಧ್ಯೋಭಯಾತೀತೋ ನಿಷೇಧಾನ್ನ ನಿವರ್ತತೇ ।
ಗುಣಬುದ್ಧ್ಯಾ ಚ ವಿಹಿತಂ ನ ಕರೋತಿ ಯಥಾರ್ಭಕಃ ॥ ೧೧ ॥

ಸರ್ವಭೂತಸುಹೃಚ್ಛಾಂತೋ ಜ್ಞಾನವಿಜ್ಞಾನನಿಶ್ಚಯಃ ।
ಪಶ್ಯನ್ಮದಾತ್ಮಕಂ ವಿಶ್ವಂ ನ ವಿಪದ್ಯೇತ ವೈ ಪುನಃ ॥ ೧೨ ॥

ಶ್ರೀಶುಕ ಉವಾಚ

ಇತ್ಯಾದಿಷ್ಟೋ ಭಗವತಾ ಮಹಾಭಾಗವತೋ ನೃಪ ।
ಉದ್ಧವಃ ಪ್ರಣಿಪತ್ಯಾಹ ತತ್ತ್ವಜಿಜ್ಞಾಸುರಚ್ಯುತಮ್ ॥ ೧೩ ॥

ಸಾಧು ಉದ್ಧವನೇ! ನಾನು ಪೃಥ್ವಿಯನ್ನು ತ್ಯಜಿಸಿದ ಬಳಿಕ ನೀನೂ ಇಲ್ಲಿರಬಾರದು. ಏಕೆಂದರೆ ಕಲಿಯುಗದಲ್ಲಿ ಜನರು ಅಧರ್ಮದಲ್ಲಿಯೇ ಹೆಚ್ಚು ಅಭಿರುಚಿಯುಳ್ಳವರಾಗಿರುತ್ತಾರೆ. ಅಂತಹವರ ಮಧ್ಯದಲ್ಲಿ ನೀನು ಇರಬಾರದು. ॥ ೫ ॥ ಈಗ ನೀನಾದರೋ ನಿನ್ನ ಆತ್ಮೀಯ ಸ್ವಜನ ಬಂಧು-ಬಾಂಧವರಲ್ಲಿದ್ದ ಸ್ನೇಹಸಂಬಂಧವನ್ನು ತೊರೆದು, ನಿನ್ನ ಮನಸ್ಸನ್ನು ಅನನ್ಯಭಕ್ತಿಯಿಂದ ನನ್ನಲ್ಲಿ ತೊಡಗಿಸಿ, ಚರಾಚರ ಪ್ರಾಣಿಗಳನ್ನು ಸಮದೃಷ್ಟಿಯಿಂದ ನೋಡುತ್ತಾ ಭೂಮಿಯಲ್ಲಿ ಸ್ವಚ್ಛಂದವಾಗಿ ಸಂಚರಿಸುತ್ತಿರು.॥ ೬ ॥ ಈ ಜಗತ್ತಿನಲ್ಲಿ ಮನಸ್ಸಿನಿಂದ ಯೋಚಿಸಲಾಗುವ, ವಾಣಿಯಿಂದ ನುಡಿಯಲಾಗುವ, ಕಣ್ಣುಗಳಿಂದ ನೋಡಲಾಗುವ, ಕಿವಿಗಳಿಂದ ಕೇಳಲಾಗುವ, ಮೂಗಿನಿಂದ ಮೂಸುವ, ಚರ್ಮದಿಂದ ಸ್ಪರ್ಶಿಸುವ ಎಲ್ಲವೂ ನಾಶವುಳ್ಳದ್ದಾಗಿದೆ. ಸ್ವಪ್ನದಂತೆ ಮನೋವಿಲಾಸವಾಗಿದೆ. ಆದಕ್ಕಾಗಿ ಮಾಯಾಮಾತ್ರವಾಗಿದ್ದು ಮಿಥ್ಯೆಯಾಗಿದೆ ಎಂದು ತಿಳಿದುಕೊ. ॥ ೭ ॥ ಚಂಚಲಚಿತ್ತವುಳ್ಳ ಅಸಂಯಮಿ ಮನುಷ್ಯನಿಗೆ ನಾನಾತ್ವದ ಭಾವನೆ ಉಂಟಾಗುತ್ತದೆ. ಇಂತಹ ಭ್ರಮೆ ಉಂಟಾದಬಳಿಕ ಇದು ಗುಣ, ಇದು ದೋಷ ಎಂಬೀ ಭೇದದೃಷ್ಟಿ ಉಂಟಾಗಿದ್ದು ತನ್ನಲ್ಲೇ ಕಲ್ಪಿಸಿಕೊಂಡದ್ದಾಗಿದೆ. ಇಂತಹ ಜನರಿಗಾಗಿಯೇ ಕರ್ಮ (ಶಾಸ್ತ್ರವಿಹಿತ ಕರ್ಮ), ಅಕರ್ಮ (ಶಾಸ್ತ್ರನಿಷಿದ್ಧಕರ್ಮ), ವಿಕರ್ಮ (ವಿಹಿತಕರ್ಮದ ತ್ಯಾಗ) – ಇವುಗಳ ವಿಷಯದಲ್ಲಿ ಪ್ರತಿಪಾದಿಸಲಾಗುತ್ತದೆ. ॥ ೮ ॥ ಆದುದರಿಂದ ಎಲೈ ಉದ್ಧವನೇ! ನೀನು ನಿನ್ನ ಇಂದ್ರಿಯುಗಳನ್ನು, ಚಿತ್ತವನ್ನು ವಶಪಡಿಸಿಕೊಂಡು ಈ ಸಮಸ್ತ ವಿಶ್ವವನ್ನು ಆತ್ಮನಲ್ಲಿ ನೋಡು ಮತ್ತು ಆತ್ಮವನ್ನು ಅಧೀಶ್ವರನಾದ ನನ್ನಲ್ಲಿ ನೋಡು. ॥ ೯ ॥ ಎಲ್ಲರ ಆತ್ಮವು ನಾನೇ ಆಗಿದ್ದೇನೆ ಎಂದು ಅರಿತು ಎಲ್ಲ ದೇಹಧಾರಿಗಳಲ್ಲಿ ಆತ್ಮಭೂತನಾಗಿ ಹೋಗು. ತನ್ನ ಆತ್ಮಾನುಭವದಲ್ಲಿ ಆನಂದಮಗ್ನನಾಗಿ, ಜ್ಞಾನ ವಿಜ್ಞಾನದಿಂದ ಸಂಪನ್ನನಾಗಿರು. ಮತ್ತೆ ಯಾವುದೇ ವಿಘ್ನಗಳು ಬಂದರೂ ನೀನು ಪೀಡಿತನಾಗಲಾರೆ. ॥ ೧೦ ॥ ಗುಣ ಮತ್ತು ದೋಷ ಇವೆರಡರಿಂದ ಪೂರ್ಣವಾಗಿ ಅತೀತನಾಗು. ಮಗುವು ಗುಣಬುದ್ಧಿಯಿಂದ ವಿಹಿತಕರ್ಮವನ್ನು ಮಾಡುವುದಿಲ್ಲ. ದೋಷ ಬುದ್ಧಿಯಿಂದ ನಿಷಿದ್ಧದಿಂದ ನಿವೃತ್ತನಾಗುವುದಿಲ್ಲ, ಅರ್ಥಾತ್ ಮಗುವಿನಲ್ಲಿ ಗುಣಬುದ್ಧಿಯೂ ಇರುವುದಿಲ್ಲ, ದೋಷಬುದ್ಧಿಯೂ ಇರುವುದಿಲ್ಲ. ಅದಾದರೋ ಪರಮಹಂಸನಂತೆ ಇರುತ್ತದೆ. ಹಾಗೆಯೇ ನೀನೂ ಗುಣ-ದೋಷಗಳಿಂದ ಅತೀತನಾಗು. ॥ ೧೧ ॥ ಯೋಗಿಯು ಸಮಸ್ತ ಪ್ರಾಣಿಗಳಲ್ಲಿ ಸುಹೃದ್‌ಭಾವವಿರಿಸಬೇಕು. ಚಿತ್ತದಲ್ಲಿ ಸದಾಕಾಲ ಶಾಂತಿಯಿದ್ದು ಏಕಮಾತ್ರ ಪರಮಾತ್ಮನ ಅನುಭವವು ದೃಢವಾಗಿ ಇರಬೇಕು. ಇಡೀ ವಿಶ್ವವು ನನ್ನದೇ ಸ್ವರೂಪವೆಂದು ತಿಳಿಯಬೇಕು. ಹೀಗಾದಾಗ ಮತ್ತೆ ಅವನು ಜನ್ಮ ಮರಣದ ಚಕ್ರದಲ್ಲಿ ಬೀಳುವುದಿಲ್ಲ. ॥ ೧೨ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ! ಭಗವಾನ್ ಶ್ರೀಕೃಷ್ಣನು ಹೀಗೆ ಆದೇಶಿಸಿದಾಗ ಪರಮಪ್ರೇಮೀ ಉದ್ಧವನು ಭಗವಂತನಿಗೆ ನಮಸ್ಕರಿಸುತ್ತಾ ತತ್ತ್ವಜ್ಞಾನ ಪ್ರಾಪ್ತಿಯ ಬಯಕೆಯಿಂದ ಇಂತು ಪ್ರಶ್ನಿಸಿದನು – ॥ ೧೩ ॥

ಉದ್ಧವ ಉವಾಚ

ಯೋಗೇಶ ಯೋಗವಿನ್ಯಾಸ ಯೋಗಾತ್ಮನ್ ಯೋಗಸಂಭವ ।
ನಿಃಶ್ರೇಯಸಾಯ ಮೇ ಪ್ರೋಕ್ತಸ್ತ್ಯಾಗಃ ಸಂನ್ಯಾಸಲಕ್ಷಣಃ
॥ ೧೪ ॥

ತ್ಯಾಗೋಽಯಂ ದುಷ್ಕರೋ ಭೂಮನ್ ಕಾಮಾನಾಂ ವಿಷಯಾತ್ಮಭಿಃ ।
ಸುತರಾಂ ತ್ವಯಿ ಸರ್ವಾತ್ಮನ್ನಭಕ್ತೈರಿತಿ ಮೇ ಮತಿಃ
॥ ೧೫ ॥

ಸೋಽಹಂ ಮಮಾಹಮಿತಿ ಮೂಢಮತಿರ್ವಿಗಾಢ-
ಸ್ತ್ವನ್ಮಾಯಯಾ ವಿರಚಿತಾತ್ಮನಿ ಸಾನುಬಂಧೇ ।
ತತ್ತ್ವಂಜಸಾ ನಿಗದಿತಂ ಭವತಾ ಯಥಾಹಂ
ಸಂಸಾಧಯಾಮಿ ಭಗವನ್ನನುಶಾಧಿ ಭೃತ್ಯಮ್ ॥ ೧೬ ॥

ಸತ್ಯಸ್ಯ ತೇ ಸ್ವದೃಶ ಆತ್ಮನ ಆತ್ಮನೋಽನ್ಯಂ
ವಕ್ತಾರಮೀಶ ವಿಬುಧೇಷ್ವಪಿ ನಾನುಚಕ್ಷೇ ।
ಸರ್ವೇ ವಿಮೋಹಿತಧಿಯಸ್ತವ ಮಾಯಯೇಮೇ
ಬ್ರಹ್ಮಾದಯಸ್ತನುಭೃತೋ ಬಹಿರರ್ಥಭಾವಾಃ ॥ ೧೭ ॥

ತಸ್ಮಾದ್ಭವಂತಮನವದ್ಯಮನಂತಪಾರಂ
ಸರ್ವಜ್ಞಮೀಶ್ವರಮಕುಂಠವಿಕುಂಠಧಿಷ್ಣ್ಯಮ್ ।
ನಿರ್ವಿಣ್ಣಧೀರಹಮು ಹ ವೃಜಿನಾಭಿತಪ್ತೋ
ನಾರಾಯಣಂ ನರಸಖಂ ಶರಣಂ ಪ್ರಪದ್ಯೇ ॥ ೧೮ ॥

ಶ್ರೀಭಗವಾನುವಾಚ

ಪ್ರಾಯೇಣ ಮನುಜಾ ಲೋಕೇ ಲೋಕತತ್ತ್ವವಿಚಕ್ಷಣಾಃ ।
ಸಮುದ್ಧರಂತಿ ಹ್ಯಾತ್ಮಾನಮಾತ್ಮನೈವಾಶುಭಾಶಯಾತ್
॥ ೧೯ ॥

ಆತ್ಮನೋ ಗುರುರಾತ್ಮೈವ ಪುರುಷಸ್ಯ ವಿಶೇಷತಃ ।
ಯತ್ಪ್ರತ್ಯಕ್ಷಾನುಮಾನಾಭ್ಯಾಂ ಶ್ರೇಯೋಽಸಾವನುವಿಂದತೇ
॥ ೨೦ ॥

ಪುರುಷತ್ವೇ ಚ ಮಾಂ ಧೀರಾಃ ಸಾಂಖ್ಯಯೋಗವಿಶಾರದಾಃ ।
ಆವಿಸ್ತರಾಂ ಪ್ರಪಶ್ಯಂತಿ ಸರ್ವಶಕ್ತ್ಯುಪಬೃಂಹಿತಮ್
॥ ೨೦ ॥

ಉದ್ಧವನಿಂತೆಂದನು – ಓ ಭಗವಂತಾ! ನೀನೇ ಯೋಗದ ಒಡೆಯನಾಗಿರುವೆ. ಯೋಗವು ನಿನ್ನಲ್ಲೇ ಪ್ರತಿಷ್ಠಿತವಾಗಿದೆ. ನೀನು ಸಾಕ್ಷಾತ್ ಯೋಗದ ಸ್ವರೂಪವೇ ಆಗಿರುವೆ. ಯೋಗದ ಜನ್ಮಸ್ಥಾನವು ನೀನೇ ಆಗಿರುವೆ. ನೀನು ನನಗಾಗಿ ಪರಮ ಶ್ರೇಯಸ್ಸಿಗಾಗಿಯೇ ಸಂನ್ಯಾಸರೂಪೀ ತ್ಯಾಗದ ಲಕ್ಷಣವನ್ನು ಉಪದೇಶಿಸಿರುವೆ. ॥ ೧೪ ॥ ಅನೇಕ ಕಾಮನೆಗಳಲ್ಲಿ ಸಿಕ್ಕಿಕೊಂಡಿರುವ ವಿಷಯೀ ಜೀವರಿಗೆ ಈ ತ್ಯಾಗದ ತತ್ತ್ವವು ತಿಳಿಯಲು ಬಹು ಕಠಿಣವಾಗಿದೆ. ಮುಖ್ಯವಾಗಿ ನಿನ್ನ ಭಕ್ತಿಯಿಂದ ವಿಮುಖರಾದವರಿಗಂತೂ ಇನ್ನೂ ಕಷ್ಟವೇ ಆಗಿದೆ. ಇದು ನನ್ನ ನಿಶ್ಚಿತವಾದ ಅಭಿಪ್ರಾಯವಾಗಿದೆ. ॥ ೧೫ ॥ ಪ್ರಭುವೇ! ನಾನೂ ಕೂಡ 'ನಾನು–ನನ್ನದು' ಎಂಬ ಸುಳಿಯಲ್ಲಿ ಸಿಕ್ಕಿಕೊಂಡಿರುವೆನು. ನನ್ನ ಬುದ್ಧಿಯೂ ನಿನ್ನದೇ ಮಾಯೆಯಿಂದ ನನ್ನ ಪರಿವಾರದ ಆಪ್ತಜನರ ಕುರಿತು ಅಹಂತೆ, ಮಮತೆಯಲ್ಲಿ ಮೂಢತೆಯಿಂದ ಬಿಡಲಾರದಷ್ಟು ಆಳವಾಗಿ ಬೇರೂರಿದೆ. ನೀನು ಈಗ ಪ್ರತಿಪಾದಿಸಿದ ಸಂನ್ಯಾಸ ತ್ಯಾಗದ ಧರ್ಮವನ್ನು ನಾನು ಹೇಗೆ ಸಹಜಭಾವದಿಂದ ಸಾಧನೆ ಮಾಡಬಲ್ಲೆ? ಎಂಬುದೇ ಯೋಚನೆಯಾಗಿದೆ. ಸೇವಕನಾದ ನನಗೆ ಸರಳ ರೀತಿಯಿಂದ ನೀನು ಉಪದೇಶಿಸುವ ಕೃಪೆಮಾಡಬೇಕು. ॥ ೧೬ ॥ ಪ್ರಭುವೇ! ನೀನೇ ಸತ್ಯಸ್ವರೂಪನಾಗಿರುವೆ. ಎಲ್ಲರ ನೇತ್ರಸ್ವರೂಪ ಅರ್ಥಾತ್ ಪ್ರಕಾಶಕನೂ ನೀನೇ ಆಗಿರುವೆ. ಎಲ್ಲರ ಆತ್ಮವೂ ನೀನೇ ಆಗಿರುವೆ. ಇಂತಹ ನೀನಿರುವಾಗ ಈ ಆತ್ಮತತ್ತ್ವದ ವಿಷಯದಲ್ಲಿ ಪ್ರತಿಪಾದಿಸುವವರು ನಿನ್ನಿಂದ ಬೇರೆ ಯಾರನ್ನೂ ನಾನು ನೋಡುವುದಿಲ್ಲ. ಏಕೆಂದರೆ, ಬ್ರಹ್ಮನಿಂದ ಹಿಡಿದು ಇರುವವರೆಲ್ಲ ಜೀವರೂ ನಿನ್ನ ಮಾಯೆಯಿಂದ ಮೋಹಿತರಾಗಿರುವರು. ಆದ್ದರಿಂದ ಅವರು ಬಾಹ್ಯವಸ್ತುಗಳನ್ನೇ ಸತ್ಯವೆಂದು ಭಾವಿಸುತ್ತಾರೆ. ॥ ೧೭ ॥ ಪ್ರಭುವೇ! ನರಸಖ ನಾರಾಯಣ ಸ್ವರೂಪಿಯಾದ ನಿನ್ನಲ್ಲಿ ನಾನು ಶರಣಾಗಿದ್ದೇನೆ. ನೀನು ನಿರಂಜನನಾಗಿರುವೆ, ನಿನಗೆ ಅಂತ್ಯ–ಪಾರಗಳಿಲ್ಲ. ನೀನು ಸರ್ವಜ್ಞನಾಗಿದ್ದು ಎಲ್ಲರ ನಿಯಾಮಕನಾಗಿರುವೆ. ಅವಿನಾಶೀ ವೈಕುಂಠವು ನಿನ್ನದೇ ಧಾಮವಾಗಿದೆ. ನಾನು ಸಂಸಾರದಿಂದ ದುಃಖಿತನಾಗಿ ಸಂತಪ್ತನಾಗಿರುವೆನು. (ನೀನು ನನಗೆ ಶ್ರೇಯಸ್ಸಿನ ಉಪದೇಶವನ್ನಿತ್ತು ನನ್ನನ್ನು ಉದ್ಧರಿಸು.) ॥ ೧೮ ॥

ಭಗವಂತನೆಂದನು – ಪ್ರಿಯ ಉದ್ಧವಾ! ಪ್ರಾಯಶಃ ಈ ಪ್ರಪಂಚದ ವಾಸ್ತವಿಕ ಸ್ವರೂಪವನ್ನು ತಿಳಿಯಲು ಈ ಲೋಕವು ಅನಿತ್ಯವಾಗಿದೆ ಎಂದು ತಿಳಿದ ವಿದ್ವಾಂಸರಾದವರು ತಾವೇ ತಮ್ಮನ್ನು ಅಮಂಗಳಕರವಾದ ವಿಷಯವಾಸನೆಗಳಿಂದ ಉದ್ಧರಿಸಿಕೊಳ್ಳುತ್ತಾರೆ. ॥ ೧೯ ॥ ವಿಶೇಷವಾಗಿ ಮನುಷ್ಯನಿಗೆ ಅವನ ಆತ್ಮನೇ ಗುರುವಾಗಿದ್ದಾನೆ. ಅವನು ಪ್ರತ್ಯಕ್ಷಪ್ರಮಾಣದ ಮೂಲಕ ಹಾಗೂ ಅನುಮಾನ ಪ್ರಮಾಣದ ಮೂಲಕ ಸ್ವತಃ ತನ್ನ ಶ್ರೇಯಸ್ಸನ್ನು ಪಡೆಯಲು ಸಮರ್ಥನಾಗಿರುವನು. ॥ ೨೦ ॥ ಸಾಂಖ್ಯಶಾಸ್ತ್ರ ಮತ್ತು ಯೋಗಶಾಸ್ತ್ರಗಳಲ್ಲಿ ಪ್ರವೀಣರಾದ ಜ್ಞಾನಿಗಳು ಮನುಷ್ಯಯೋನಿಯಲ್ಲೇ ಸರ್ವಶಕ್ತಿ ಸಂಪನ್ನ ಪರಮಾತ್ಮನಾದ ನನ್ನನ್ನು ಅಪರೋಕ್ಷದಿಂದ ಹಾಗೂ ಸರ್ವವ್ಯಾಪಕ ವಿರಾಟ್ ಸಗುಣ ನಿರಾಕಾರ ರೂಪದಿಂದಲೂ ನನ್ನ ಸಾಕ್ಷಾತ್ಕಾರವನ್ನು ಪಡೆಯುತ್ತಾರೆ. ॥ ೨೧ ॥

ಏಕದ್ವಿತ್ರಿಚತುಷ್ಪಾದೋ ಬಹುಪಾದಸ್ತಥಾಪದಃ ।
ಬಹ್ವ್ಯಃ ಸಂತಿ ಪುರಃ ಸೃಷ್ಟಾಸ್ತಾಸಾಂ ಮೇ ಪೌರುಷೀ ಪ್ರಿಯಾ
॥ ೨೨ ॥

ಅತ್ರ ಮಾಂ ಮಾರ್ಗಯಂತ್ಯದ್ಧಾ ಯುಕ್ತಾ ಹೇತುಭಿರೀಶ್ವರಮ್ ।
ಗೃಹ್ಯಮಾಣೈರ್ಗುಣೈರ್ಲಿಂಗೈರಗ್ರಾಹ್ಯಮನುಮಾನತಃ
॥ ೨೩ ॥

ಅತ್ರಾಪ್ಯುದಾಹರಂತೀಮಮಿತಿಹಾಸಂ ಪುರಾತನಮ್ ।
ಅವಧೂತಸ್ಯ ಸಂವಾದಂ ಯದೋರಮಿತತೇಜಸಃ
॥ ೨೪ ॥

ಅವಧೂತಂ ದ್ವಿಜಂ ಕಂಚಿಚ್ಚರಂತಮಕುತೋಭಯಮ್ ।
ಕವಿಂ ನಿರೀಕ್ಷ್ಯ ತರುಣಂ ಯದುಃ ಪಪ್ರಚ್ಛ ಧರ್ಮವಿತ್
॥ ೨೫ ॥

ಯದುರುವಾಚ

ಕುತೋ ಬುದ್ಧಿರಿಯಂ ಬ್ರಹ್ಮನ್ನಕರ್ತುಃ ಸುವಿಶಾರದಾ ।
ಯಾಮಾಸಾದ್ಯ ಭವಾನ್ಲೋಕಂ ವಿದ್ವಾಂಶ್ಚರತಿ ಬಾಲವತ್
॥ ೨೬ ॥

ಪ್ರಾಯೋ ಧರ್ಮಾರ್ಥಕಾಮೇಷು ವಿವಿತ್ಸಾಯಾಂ ಚ ಮಾನವಾಃ ।
ಹೇತುನೈವ ಸಮೀಹಂತೇ ಆಯುಷೋ ಯಶಸಃ ಶ್ರಿಯಃ
॥ ೨೭ ॥

ತ್ವಂ ತು ಕಲ್ಪಃ ಕವಿರ್ದಕ್ಷಃ ಸುಭಗೋಽಮೃತಭಾಷಣಃ ।
ನ ಕರ್ತಾ ನೇಹಸೇ ಕಿಂಚಿಜ್ಜಡೋನ್ಮತ್ತಪಿಶಾಚವತ್
॥ ೨೮ ॥

ಜನೇಷು ದಹ್ಯಮಾನೇಷು ಕಾಮಲೋಭದವಾಗ್ನಿನಾ ।
ನ ತಪ್ಯಸೇಽಗ್ನಿನಾ ಮುಕ್ತೋ ಗಂಗಾಂಭಃಸ್ಥ ಇವ ದ್ವಿಪಃ
॥ ೨೯ ॥

ತ್ವಂ ಹಿ ನಃ ಪೃಚ್ಛತಾಂ ಬ್ರಹ್ಮನ್ನಾತ್ಮನ್ಯಾನಂದಕಾರಣಮ್ ।
ಬ್ರೂಹಿ ಸ್ಪರ್ಶವಿಹೀನಸ್ಯ ಭವತಃ ಕೇವಲಾತ್ಮನಃ
॥ ೩೦ ॥

ನಾನು ಒಂದು ಕಾಲಿನ ಪ್ರಾಣಿಗಳನ್ನು, ಎರಡು ಕಾಲಿನ, ಮೂರು ಕಾಲಿನ, ನಾಲ್ಕು ಕಾಲಿನ, ಅನೇಕ ಕಾಲುಗಳುಳ್ಳ ಮತ್ತು ಕಾಲಿಲ್ಲದ ಅನೇಕ ಪ್ರಕಾರದ ಯೋನಿಗಳನ್ನು ನಿರ್ಮಾಣ ಮಾಡಿರುವೆನು. ಆದರೆ ಇವೆಲ್ಲದರಲ್ಲಿ ದ್ವಿಪಾದಿಯಾದ ಮನುಷ್ಯ ಶರೀರವೇ ನನಗೆ ಎಲ್ಲಕ್ಕಿಂತ ಹೆಚ್ಚು ಪ್ರಿಯವಾದುದು. ॥ ೨೨ ॥ ಭಗವಂತ ಹೇಳುತ್ತಾನೆ ನಾನಾದರೋ ಅಗ್ರಾಹ್ಯನಾಗಿದ್ದರೂ ಈ ಮನುಷ್ಯ ಶರೀರದ ಮೂಲಕವೇ ತಿಳಿಯಲ್ಪಡುವ ಕಾರಣಗಳಾದ ಹೇತುಗಳಿಂದ, ಗುಣಗಳಿಂದ, ಚಿಹ್ನೆಗಳಿಂದ, ಅನುಮಾನದಿಂದ ಈಶ್ವರನಾದ ನನ್ನನ್ನು ಹುಡುಕಿಕೊಳ್ಳುತ್ತಾರೆ. ॥ ೨೩ ॥ ಈ ವಿಷಯದಲ್ಲಿ ಮಹಾತ್ಮರು ಒಂದು ಪ್ರಾಚೀನ ಇತಿಹಾಸವನ್ನು ಹೇಳುತ್ತಿರುತ್ತಾರೆ. ಆ ಇತಿಹಾಸವು ಪರಮ ತೇಜಸ್ವೀ ಅವಧೂತ ದತ್ತಾತ್ರೇಯ* ಮತ್ತು ಯದುರಾಜನ ಸಂವಾದರೂಪದಲ್ಲಿದೆ. ॥ ೨೪ ॥ ಒಮ್ಮೆ ಧರ್ಮದ ಮರ್ಮಜ್ಞನಾದ ಯದುರಾಜನು ಓರ್ವ ತ್ರಿಕಾಲದರ್ಶಿ ತರುಣ ಅವಧೂತ ಬ್ರಾಹ್ಮಣನು ನಿರ್ಭಯನಾಗಿ ಸಂಚರಿಸುವುದನ್ನು ನೋಡಿದನು. ಆಗ ಅವನು ಆ ಅವಧೂತನಲ್ಲಿ ಪ್ರಶ್ನಿಸಿದನು – ॥ ೨೫ ॥

ಯದುರಾಜನು ಕೇಳಿದನು – ಬ್ರಾಹ್ಮಣ ಶ್ರೇಷ್ಠರೇ! ನೀವಾದರೋ ಯಾವ ಕರ್ಮವನ್ನೂ ಮಾಡುತ್ತಿಲ್ಲ, ಆದರೂ ನಿಮಗೆ ಈ ಅತ್ಯಂತ ನೈಪುಣ್ಯ ಬುದ್ಧಿಯು ಹೇಗೆ ಬಂತು? ಅಂತಹ ಶ್ರೇಷ್ಠ ಬುದ್ಧಿಯನ್ನು ಆಶ್ರಯಿಸಿ ನೀವು ಪರಮವಿದ್ವಾಂಸರಾಗಿದ್ದರೂ ಬಾಲಕನಂತೆ ಪ್ರಪಂಚದಲ್ಲಿ ಅಲೆದಾಡುತ್ತಿರುವಿರಲ್ಲಾ! ॥ ೨೬ ॥ ಪ್ರಾಯಶಃ ಜನರು ಒಂದಲ್ಲ ಒಂದು ಕಾಮನೆಯಿಂದಲೇ ಧರ್ಮ, ಅರ್ಥ, ಕಾಮದಲ್ಲಿ ಹಾಗೂ ತತ್ತ್ವಜ್ಞಾನದ ಇಚ್ಛೆಯಲ್ಲಿ ಪ್ರವೃತ್ತರಾಗಿ ಆದರ ಬದಲು ಆಯುಸ್ಸು, ಕೀರ್ತಿ, ಅಥವಾ ಧನ-ಸಂಪತ್ತು ಸಿಗಬಹುದು ಎಂದು ಯೋಚಿಸುವುದನ್ನು ನೋಡಲಾಗುತ್ತದೆ. ಆದರೆ ನಿಮ್ಮನ್ನು ನೋಡಿದರೆ – ನೀವು ಸಮರ್ಥರಾಗಿದ್ದು ಜ್ಞಾನೀ ಹಾಗೂ ದಕ್ಷರಾಗಿರುವಿರಿ. ಸುಂದರ ಶರೀರವೂ ಇದೆ. ಅಮೃತಭಾಷಿಗಳಾಗಿದ್ದೀರಿ. ಆದರೂ ನೀವು ಏನನ್ನೂ ಮಾಡುವುದಿಲ್ಲ, ಬಯಸುವುದಿಲ್ಲ, ಇಂತಹ ವಿದ್ವಾಂಸರಾಗಿದ್ದರೂ ನೀವು ಜಡನಂತೆ, ಉನ್ಮತ್ತನಂತೆ ಅವಧೂತನಂತೆ ಪ್ರಪಂಚದಲ್ಲಿ ಅಲೆದಾಡುತ್ತಿರುವಿರಿ. ॥ ೨೭-೨೮ ॥ ಬೇರೆ ಜನರಾದರೋ ಕಾಮ, ಕ್ರೋಧ, ಲೋಭರೂಪೀ ದಾವಾನಲದಲ್ಲಿ ಬೇಯುತ್ತಿರುವರು. ಆ ಅಗ್ನಿಯಿಂದ ರಕ್ಷಿಸಿಕೊಳ್ಳಲು ಯಾವುದೇ ದಾರಿ ಇಲ್ಲದಿದ್ದರೂ ನೀವಾದರೋ ಪೂರ್ಣವಾಗಿ ಮುಕ್ತರಾಗಿದ್ದೀರಿ. ಗಂಗೆಯ ನೀರಿನಲ್ಲಿ ನಿಂತ ಆನೆಗೆ ದಾವಾನಲದ ತಾಪ ತಗಲದೆ ಶೀತಲತೆಯನ್ನೇ ಅನುಭವಿಸುತ್ತದೆ. ಹಾಗೆಯೇ ನೀವು ಈ ಪ್ರಪಂಚದ ಯಾವ ತಾಪವೂ ಇಲ್ಲದೆ ಸ್ವಸ್ಥರಾಗಿರುವಿರಲ್ಲ! ॥ ೨೯ ॥ ಬ್ರಾಹ್ಮಣೋತ್ತಮಾ! ನಿಮಗೆ ಈ ಪ್ರಪಂಚದಲ್ಲಿ ಯಾರ ಕುರಿತು ಕಿಂಚಿತ್ತಾದರೂ ಆಸಕ್ತಿಯಿಲ್ಲ, ನೀವು ನಿಮ್ಮ ಶುದ್ಧ ಸ್ವರೂಪದಲ್ಲಿಯೇ ಸದಾ ಸ್ಥಿತರಾಗಿರುವಿರಿ. ನಿಮ್ಮ ಈ ಅನಿರ್ವಚನೀಯ ಆನಂದದ ಕಾರಣವೇನು? ಇದನ್ನು ತಾವು ನನಗೆ ತಿಳಿಸುವ ಕೃಪೆಮಾಡಬೇಕು. ॥ ೩೦ ॥

* ದತ್ತಾತ್ರೇಯನು ಸ್ವಯಂ ಭಗವಂತನ ಅವತಾರವಾಗಿದ್ದಾನೆ. ಅವನು ಜನರಿಗೆ ಪಾಠಹೇಳುವ ಉದ್ದೇಶದಿಂದಲೇ ಈ ಇಪ್ಪತ್ತನಾಲ್ಕು ಗುರುಗಳನ್ನು ಹೆಸರಿಸಿದ್ದಾನೆ. ಉದಾಹರಣೆಯಿಂದ ಉಪದೇಶವನ್ನು ಗ್ರಹಿಸಲು, ತಿಳಿಯಲು ಸುಲಭವಾಗುತ್ತದೆ. ಆದ್ದರಿಂದ ಸಾರವಾದ ಮಾತನ್ನು ಗ್ರಹಿಸಬೇಕು.

ಶ್ರೀಭಗವಾನುವಾಚ

ಯದುನೈವಂ ಮಹಾಭಾಗೋ ಬ್ರಹ್ಮಣ್ಯೇನ ಸುಮೇಧಸಾ ।
ಪೃಷ್ಟಃ ಸಭಾಜಿತಃ ಪ್ರಾಹ ಪ್ರಶ್ರಯಾವನತಂ ದ್ವಿಜಃ ॥ ೩೧ ॥

ಬ್ರಾಹ್ಮಣ ಉವಾಚ

ಸಂತಿ ಮೇ ಗುರವೋ ರಾಜನ್ ಬಹವೋ ಬುದ್ಧ್ಯುಪಾಶ್ರಿತಾಃ ।
ಯತೋ ಬುದ್ಧಿಮುಪಾದಾಯ ಮುಕ್ತೋಽಟಾಮೀಹ ತಾನ್ಶೃಣು ॥ ೩೨ ॥

ಪೃಥಿವೀ ವಾಯುರಾಕಾಶಮಾಪೋಽಗ್ನಿಶ್ಚಂದ್ರಮಾ ರವಿಃ ।
ಕಪೋತೋಽಜಗರಃ ಸಿಂಧುಃ ಪತಂಗೋ ಮಧುಕೃದ್ಗಜಃ ॥ ೩೩ ॥

ಮಧುಹಾ ಹರಿಣೋ ಮೀನಃ ಪಿಂಗಲಾ ಕುರರೋಽರ್ಭಕಃ ।
ಕುಮಾರೀ ಶರಕೃತ್ಸರ್ಪ ಊರ್ಣನಾಭಿಃ ಸುಪೇಶಕೃತ್ ॥ ೩೪ ॥

ಏತೇ ಮೇ ಗುರವೋ ರಾಜನ್ಚತುರ್ವಿಂಶತಿರಾಶ್ರಿತಾಃ ।
ಶಿಕ್ಷಾ ವೃತ್ತಿಭಿರೇತೇಷಾಮನ್ವಶಿಕ್ಷಮಿಹಾತ್ಮನಃ ॥ ೩೫ ॥

ಯತೋ ಯದನುಶಿಕ್ಷಾಮಿ ಯಥಾ ವಾ ನಾಹುಷಾತ್ಮಜ ।
ತತ್ತಥಾ ಪುರುಷವ್ಯಾಘ್ರ ನಿಬೋಧ ಕಥಯಾಮಿ ತೇ ॥ ೩೬ ॥

ಭೂತೈರಾಕ್ರಮ್ಯಮಾಣೋಽಪಿ ಧೀರೋ ದೈವವಶಾನುಗೈಃ ।
ತದ್ವಿದ್ವಾನ್ನ ಚಲೇನ್ಮಾರ್ಗಾದನ್ವಶಿಕ್ಷಂ ಕ್ಷಿತೇರ್ವ್ರತಮ್ ॥ ೩೭ ॥

ಶಶ್ವತ್ಪರಾರ್ಥಸರ್ವೇಹಃ ಪರಾರ್ಥೈಕಾಂತ ಸಂಭವಃ ।
ಸಾಧುಃ ಶಿಕ್ಷೇತ ಭೂಭೃತ್ತೋ ನಗಶಿಷ್ಯಃ ಪರಾತ್ಮತಾಮ್ ॥ ೩೮ ॥

ಪ್ರಾಣವೃತ್ತ್ಯೈವ ಸಂತುಷ್ಯೇನ್ಮುನಿರ್ನೈವೇಂದ್ರಿಯಪ್ರಿಯೈಃ ।
ಜ್ಞಾನಂ ಯಥಾ ನ ನಶ್ಯೇತ ನಾವಕೀರ್ಯೇತ ವಾಙ್ಮನಃ ॥ ೩೯ ॥

ವಿಷಯೇಷ್ವಾವಿಶನ್ಯೋಗೀ ನಾನಾಧರ್ಮೇಷು ಸರ್ವತಃ ।
ಗುಣದೋಷವ್ಯಪೇತಾತ್ಮಾ ನ ವಿಷಜ್ಜೇತ ವಾಯುವತ್ ॥ ೪೦ ॥

ಶ್ರೀಭಗವಂತನು ಹೇಳುತ್ತಾನೆ – ಉದ್ಧವನೇ! ಬ್ರಾಹ್ಮಣರನ್ನು ಆದರಿಸುವ ಪರಮ ಬುದ್ಧಿವಂತ ಮಹಾರಾಜಾ ಯದುವು ಬಹಳ ವಿನಮ್ರಭಾವದಿಂದ ನತಮಸ್ತಕನಾಗಿ ಮಹಾಭಾಗ್ಯಶಾಲೀ ಬ್ರಾಹ್ಮಣ ಶ್ರೇಷ್ಠ ಅವಧೂತ ದತ್ತಾತ್ರೇಯರನ್ನು ಹೀಗೆ ಸನ್ಮಾನಿಸಿದನು. ಅವನ ಪ್ರಶ್ನೆಗಳಿಗೆ ಅವಧೂತರು ಈ ಪ್ರಕಾರ ಉತ್ತರಿಸತೊಡಗಿದರು. ॥ ೩೧ ॥

ಶ್ರೀದತ್ತಾತ್ರೇಯರೂಪೀ ಬ್ರಾಹ್ಮಣರು ಇಂತೆಂದರು – ರಾಜನೇ! ನಾನು ನನ್ನ ಬುದ್ಧಿಯಿಂದ ಹಲವಾರು ಗುರುಗಳನ್ನು ಆಶ್ರಯಿಸಿದ್ದೇನೆ. ಅವರಿಂದ ಶಿಕ್ಷಣವನ್ನು ಪಡೆದು ನಾನು ಈ ಜಗತ್ತಿನಲ್ಲಿ ಮುಕ್ತಭಾವದಿಂದ ಸಂಚರಿಸುತ್ತಿದ್ದೇನೆ. ಆ ನನ್ನ ಗುರುಗಳ ಹೆಸರುಗಳನ್ನು ಹಾಗೂ ಅವರಿಂದ ಪಡೆದ ಶಿಕ್ಷಣವನ್ನು ಹೇಳುವೆನು ಕೇಳು. ॥ ೩೨ ॥ ಭೂಮಿ, ವಾಯು, ಆಕಾಶ, ಜಲ, ಅಗ್ನಿ, ಚಂದ್ರ, ಸೂರ್ಯ, ಪಾರಿವಾಳ, ಹೆಬ್ಬಾವು, ಸಮುದ್ರ, ಪತಂಗ, ದುಂಬಿ ಅಥವಾ ಜೇನುನೊಣ, ಆನೆ, ಜೇನು ತೆಗೆಯುವವನು, ಜಿಂಕೆ, ಮೀನು, ಪಿಂಗಳಾವೇಶ್ಯೆ, ಕುರರಪಕ್ಷಿ, ಮಗು, ಕುಮಾರೀ, ಬಾಣವನ್ನು ತಯಾರಿಸುವವನು, ಸರ್ಪ, ಜೇಡರಹುಳು, ಭೃಂಗ ಕೀಟ – ಇವರೇ ನನ್ನ ಇಪ್ಪತ್ತನಾಲ್ಕು ಮಂದಿ ಗುರುಗಳು. ॥೩೩–೩೪॥

ರಾಜನೇ! ನಾನು ಈ ಇಪ್ಪತ್ತನಾಲ್ಕು ಗುರುಗಳಿಂದ ಕಲಿತಿರುವ ವಿಷಯವನ್ನು ನಿನಗೆ ಹೇಳುತ್ತೇನೆ. ಎಲೈ ಪುರುಷ ಶ್ರೇಷ್ಠ ಯಯಾತಿನಂದನಾ! ನೀನು ಅದನ್ನು ಯಥಾವತ್ತಾಗಿ ಕೇಳು. ॥ ೩೫–೩೬ ॥

ಪೃಥ್ವಿಯ ದೃಷ್ಟಾಂತವನ್ನು ಕೊಡುತ್ತಾ ಹೇಳುತ್ತಾರೆ – ಜ್ಞಾನಿಯು ತನಗೆ ಬೇರೆಯವರು ಎಷ್ಟೇ ಕಷ್ಟಕೊಟ್ಟರೂ, ಅದೆಲ್ಲವೂ ಪ್ರಾರಬ್ಧಾನುಸಾರ ಪ್ರಾಪ್ತವಾದುದೆಂದು ತಿಳಿದು, ತನ್ನ ಸ್ವರೂಪದಿಂದ ಕಿಂಚಿತ್ತಾದರೂ ವಿಚಲಿತನಾಗಬಾರದು. ಇದನ್ನು ನಾನು ಪೃಥ್ವಿಯ ಕ್ಷಮಾಗುಣದಿಂದ ಕಲಿತೆ. ಪೃಥ್ವಿಯ ಸಮಸ್ತ ಕ್ರಿಯೆಗಳು ಪರೋಪಕಾರಕ್ಕಾಗಿಯೇ ಇರುತ್ತವೆ. ಪೃಥ್ವಿಯನ್ನು ಆಶ್ರಯಿಸಿದ ಪರ್ವತಗಳಿಂದ ಹಾಗೂ ವೃಕ್ಷಗಳಿಂದಲೂ ನಾನು ಪರೋಪಕಾರದ ಭಾವನೆಯನ್ನು ಕಲಿತೆನು. ॥ ೩೭–೩೮ ॥

(ವಾಯುವಿನ ಕುರಿತು ಹೇಳುವಾಗ–) ಮುನಿಯು ಪ್ರಾಣ ವೃತ್ತಿಯಲ್ಲೇ ಸಂತುಷ್ಟನಾಗಿರಬೇಕು. ಅರ್ಥಾತ್ – ಪ್ರಾಣಧಾರಣೆ ಆಗುವಷ್ಟೇ ಆಹಾರವನ್ನು ತೆಗೆದುಕೊಳ್ಳಬೇಕು, ಇಂದ್ರಿಯಗಳ ತೃಪ್ತಿಗಾಗಿ ಅಲ್ಲ. ಅದರಿಂದ ವಾಣಿ ಮತ್ತು ಮನಸ್ಸು ಅತ್ತ-ಇತ್ತ ಅಲೆದಾಡದಿರಲಿ. ತನ್ನ ಜ್ಞಾನವೂ ನಷ್ಟವಾಗದಿರಲಿ. ॥ ೩೯ ॥ ವಾಯುವು ಸರ್ವತ್ರ ಸಂಚರಿಸುತ್ತದೆ, ಆದರೆ ಯಾವುದರಲ್ಲಿಯೂ ಲಿಪ್ತವಾಗುವುದಿಲ್ಲ, ಗಂಧವನ್ನು ಗ್ರಹಿಸುತ್ತದೆ ಹಾಗೂ ಬಿಡುತ್ತದೆ. ಹಾಗೆಯೇ ಯೋಗಿಯು ಎಲ್ಲೆಡೆ ಸಂಚರಿಸುತ್ತಿದ್ದರೂ, ಅನೇಕ ಧರ್ಮಗಳ ವಿಷಯಗಳಿಂದ, ಅವುಗಳ ಗುಣ–ದೋಷಗಳಿಂದ ತನ್ನನ್ನು ಸರ್ವಥಾ ಬೇರೆಯಾಗಿಟ್ಟುಕೊಂಡು, ಅವುಗಳಲ್ಲಿ ಆಸಕ್ತನಾಗಬಾರದು. ॥ ೪೦ ॥

ಪಾರ್ಥಿವೇಷ್ವಿಹ ದೇಹೇಷು ಪ್ರವಿಷ್ಟಸ್ತದ್ಗುಣಾಶ್ರಯಃ ।
ಗುಣೈರ್ನ ಯುಜ್ಯತೇ ಯೋಗೀ ಗಂಧೈರ್ವಾಯುರಿವಾತ್ಮದೃಕ್ ॥ ೪೧ ॥

ವಾಯುವು ಗಂಧವನ್ನು ಹೊತ್ತುಕೊಂಡು ಹೋಗುತ್ತದೆ, ಆದರೆ ಆದರ ಗುಣ-ದೋಷಗಳಲ್ಲಿ ಅದು ಅಸಂಗವಾಗಿಯೇ ಇರುತ್ತದೆ. ಹಾಗೆಯೇ ಆತ್ಮಜ್ಞಾನಿಯು ಎಲ್ಲೆಡೆ ವಿಚರಿಸುತ್ತಿದ್ದರೂ ಎಲ್ಲಿಯೂ ಗುಣ-ದೋಷಗಳಲ್ಲಿ ಸಿಕ್ಕಿಹಾಕಿಕೊಳ್ಳ ಬಾರದು. ಒಂದೇ ಆತ್ಮವು ಸರ್ವತ್ರ ಪರಿಪೂರ್ಣವಾಗಿದೆ. ಆದೇ ಆತ್ಮವು ಪಾರ್ಥಿವ ಶರೀರದಲ್ಲಿಯೂ ಇದೆ. ಆದರೆ ಆತ್ಮವು ಶರೀರದಲ್ಲಿದ್ದರೂ ನಿರ್ಲಿಪ್ತವಾಗಿರುವಂತೆ ಜ್ಞಾನಿಯೂ ಶರೀರದಲ್ಲಿ ಇದ್ದರೂ ಆದರ ಗುಣ-ದೋಷಗಳೊಂದಿಗೆ ತನ್ನನ್ನು ಒಂದಾಗಿಸ ಬಾರದು. ॥ ೪೧ ॥

ಅಂತರ್ಹಿತಶ್ಚ ಸ್ಥಿರಜಂಗಮೇಷು
ಬ್ರಹ್ಮಾತ್ಮಭಾವೇನ ಸಮನ್ವಯೇನ ।
ವ್ಯಾಪ್ತ್ಯಾವ್ಯವಚ್ಛೇದಮಸಂಗಮಾತ್ಮನೋ
ಮುನಿರ್ನಭಸ್ತ್ವಂ ವಿತತಸ್ಯ ಭಾವಯೇತ್ ॥ ೪೨ ॥

(ಈಗ ಆಕಾಶದ ಉದಾಹರಣೆಯನ್ನು ಎರಡು ಶ್ಲೋಕಗಳಲ್ಲಿ ತಿಳಿಸುತ್ತಾರೆ –) ಆಕಾಶವು ಎಲ್ಲ ಕಡೆಗಳಲ್ಲಿ ತುಂಬಿಕೊಂಡು, ಸರ್ವವ್ಯಾಪಕವಾಗಿದೆ. ಹಾಗೆಯೇ ಆ ಬ್ರಹ್ಮವು ಸ್ಥಾವರ ಜಂಗಮ ಎಲ್ಲ ಪ್ರಾಣಿಗಳಲ್ಲಿ ಸಮರೂಪದಿಂದ ಮತ್ತು ಅನ್ವಯರೂಪದಿಂದ ಸರ್ವವ್ಯಾಪಕವಾಗಿದೆ. ಅರ್ಥಾತ್ – ಹೊರಗೆ ಒಳಗೆ ಎಲ್ಲೆಡೆ ಪರಿಪೂರ್ಣವಾಗಿದೆ. ಆ ಬ್ರಹ್ಮವು ಅಖಂಡರೂಪದಿಂದಿದ್ದು ಅಸಂಗವಾಗಿದೆ. ಇಂತಹ ಆತ್ಮನ ಸರ್ವವ್ಯಾಪಕತೆಯ ಅನುಭವವನ್ನು ಮುನಿಯು ಆಕಾಶದ ದೃಷ್ಟಾಂತದಿಂದ ಕಲಿಯಬೇಕು. ॥ ೪೨ ॥

ತೇಜೋಽಬನ್ನಮಯೈರ್ಭಾವೈರ್ಮೇಘಾದ್ಯೈರ್ವಾಯುನೇರಿತೈಃ ।
ನ ಸ್ಪೃಶ್ಯತೇ ನಭಸ್ತದ್ವತ್ಕಾಲಸೃಷ್ಟೈರ್ಗುಣೈಃ ಪುಮಾನ್ ॥ ೪೩ ॥

ವಾಯುವಿನಿಂದ ಪ್ರೇರಿತವಾದ ಮೋಡಗಳ ಸಮೂಹ ಆಕಾಶದಲ್ಲೇ ಇರುತ್ತದೆ, ಆದರೆ ಆಕಾಶವು ಅವುಗಳಿಂದ ನಿರ್ಲಿಪ್ತವಾಗಿರುತ್ತದೆ. ಹಾಗೆಯೇ ಕಾಲನ ಪ್ರೇರಣೆಯಿಂದ ಸತ್ತ್ವಾದಿ ಮೂರು ಗುಣಗಳ ಕಾರ್ಯರೂಪೀ ಈ ಅಗ್ನಿ, ಜಲ, ಪೃಥ್ವಿ (ಅನ್ನ) ರೂಪದಲ್ಲಿ ನಿರ್ಮಿತ ಶರೀರ ಇಂದ್ರಿಯಾದಿಗಳಿಂದ ಪುರುಷನಿಗೆ ಯಾವ ಸಂಬಂಧವೂ ಇಲ್ಲ. ॥ ೪೩ ॥

ಸ್ವಚ್ಛಃ ಪ್ರಕೃತಿತಃ ಸ್ನಿಗ್ಧೋ ಮಾಧುರ್ಯಸ್ತೀರ್ಥಭೂರ್ನೃಣಾಮ್ ।
ಮುನಿಃ ಪುನಾತ್ಯಪಾಂ ಮಿತ್ರಮೀಕ್ಷೋಪಸ್ಪರ್ಶಕೀರ್ತನೈಃ ॥ ೪೪ ॥

(ಈಗ ಜಲದ ಉದಾಹರಣೆಯನ್ನು ಕೊಡುತ್ತಾ ಹೇಳುತ್ತಾರೆ –) ನೀರು ಸ್ವಭಾವತಃ ಸ್ವಚ್ಛವಾಗಿದೆ, ಪ್ರಿಯವಾಗಿದೆ, ತೀರ್ಥವಾಗಿರುವುದರಿಂದ ಮನುಷ್ಯರನ್ನು ಪವಿತ್ರವಾಗಿಸುತ್ತದೆ. ಹಾಗೆಯೇ ಮುನಿಯ ಸ್ವಭಾವವು ಕೂಡ ಸ್ವಚ್ಛವಾಗಿರುತ್ತದೆ. ಅವನು ಎಲ್ಲರಿಗೆ ಪ್ರಿಯನಾಗಿರುತ್ತಾನೆ. ತನ್ನ ದೃಷ್ಟಿಯ ಮೂಲಕ ಹಾಗೂ ಮಧುರವಾಣಿಯಿಂದ ಜನರನ್ನು ಪವಿತ್ರರಾಗಿಸುತ್ತಾನೆ. ಆದಕ್ಕಾಗಿ ಮುನಿಯು ಶುದ್ಧ ಸ್ನಿಗ್ಧ ಮಧುರ ಸ್ವಭಾವವನ್ನು ಹೊಂದಿರುತ್ತಾನೆ. ॥ ೪೪ ॥

ತೇಜಸ್ವೀ ತಪಸಾ ದೀಪ್ತೋ ದುರ್ಧರ್ಷೋದರಭಾಜನಃ ।
ಸರ್ವಭಕ್ಷ್ಯೋಽಪಿ ಯುಕ್ತಾತ್ಮಾ ನಾದತ್ತೇ ಮಲಮಗ್ನಿವತ್ ॥ ೪೫ ॥

ಅಗ್ನಿಯು ತೇಜಸ್ವಿಯೂ, ಜ್ಯೋತಿರ್ಮಯನೂ ಆಗಿದ್ದಾನೆ. ಅವನು ದುರಾಧರ್ಷನು ಅವನನ್ನು ಯಾರೂ ಎದುರಿಸಲಾರರು ಸಂಗ್ರಹ ಪರಿಗ್ರಹಕ್ಕಾಗಿ ಅವನು ಪಾತ್ರೆಯಿಲ್ಲ ಉದರವೇ ಅವನ ಪಾತ್ರೆಯು. ಸರ್ವಭಕ್ಷಕನಾಗಿದ್ದರೂ ಆಯಾ ವಸ್ತುಗಳ ಗುಣ ದೋಷಗಳಿಂದ ಲಿಪ್ತನಾಗುವುದಿಲ್ಲ ಹಾಗೆಯೇ ಮುನಿಯು ತಪಸ್ವಿ, ತೇಜಸ್ವಿ ಹಾಗೂ ಸರ್ವ ಭಾಷಿಯಾಗಿದ್ದರೂ ಆಯಾ ವಸ್ತುಗಳ ಗುಣದೋಷಗಳಿಂದ ಲಿಪ್ತನಾಗುವುದಿಲ್ಲ. ಸಂಗ್ರಹ, ಪರಿಗ್ರಹಗಳಿಂದ ದೂರವಿರಬೇಕು. ॥ ೪೫ ॥ ಅಗ್ನಿಯು ಕೆಲವೆಡೆ ಪ್ರಕಟವಾಗಿದ್ದು, ಕೆಲವೆಡೆ ಅಪ್ರಕಟವಾಗಿರುತ್ತದೆ ಹಾಗೂ ಆದರ ಉಪಾಸನೆಯೂ ಮಾಡಲಾಗುತ್ತದೆ. ಹಾಗೆಯೇ ಸಾಧುವು ಕೆಲವೆಡೆ ತನ್ನನ್ನು ಅಡಗಿಸಿಕೊಂಡು, ಕೆಲವೆಡೆ ಪ್ರಕಟಪಡಿಸುವನು. ಶ್ರೇಯೋಕಾಮಿಯಾದ ಪುರುಷರಿಗೆ ಅವನು ಉಪಾಸ್ಯನೂ ಆಗುತ್ತಾನೆ. ಅಗ್ನಿಯಂತೆ ಅವರು ಸರ್ವಭಕ್ಷಿಯಾಗಿದ್ದಾರೆ. ಇಂತಹ

ಕ್ವಚಿಚ್ಛನ್ನಃ ಕ್ವಚಿತ್ಸ್ಪಷ್ಟ ಉಪಾಸ್ಯಃ ಶ್ರೇಯ ಇಚ್ಛತಾಮ್ ।
ಭುಂಕ್ತೇ ಸರ್ವತ್ರ ದಾತೃಣಾಂ ದಹನ್ಪ್ರಾಗುತ್ತರಾಶುಭಮ್ ॥ ೪೬ ॥

ಸ್ವಮಾಯಯಾ ಸೃಷ್ಟಮಿದಂ ಸದಸಲ್ಲಕ್ಷಣಂ ವಿಭುಃ ।
ಪ್ರವಿಷ್ಟ ಈಯತೇ ತತ್ತತ್ಸ್ವರೂಪೋಽಗ್ನಿರಿವೈಧಸಿ ॥ ೪೭ ॥

ವಿಸರ್ಗಾದ್ಯಾಃ ಶ್ಮಶಾನಾಂತಾ ಭಾವಾ ದೇಹಸ್ಯ ನಾತ್ಮನಃ ।
ಕಲಾನಾಮಿವ ಚಂದ್ರಸ್ಯ ಕಾಲೇನಾವ್ಯಕ್ತವರ್ತ್ಮನಾ ॥ ೪೮ ॥

ಕಾಲೇನ ಹ್ಯೋಘವೇಗೇನ ಭೂತಾನಾಂ ಪ್ರಭವಾಪ್ಯಯೌ ।
ನಿತ್ಯಾವಪಿ ನ ದೃಶ್ಯೇತೇ ಆತ್ಮನೋಽಗ್ನೇರ್ಯಥಾರ್ಚಿಷಾಮ್ ॥ ೪೯ ॥

ಗುಣೈರ್ಗುಣಾನುಪಾದತ್ತೇ ಯಥಾಕಾಲಂ ವಿಮುಂಚತಿ ।
ನ ತೇಷು ಯುಜ್ಯತೇ ಯೋಗೀ ಗೋಭಿರ್ಗಾ ಇವ ಗೋಪತಿಃ ॥ ೫೦ ॥

ಬುಧ್ಯತೇ ಸ್ವೇ ನ ಭೇದೇನ ವ್ಯಕ್ತಿಸ್ಥ ಇವ ತದ್ಗತಃ ।
ಲಕ್ಷ್ಯತೇ ಸ್ಥೂಲಮತಿಭಿರಾತ್ಮಾ ಚಾವಸ್ಥಿತೋಽರ್ಕವತ್ ॥ ೫೧ ॥

ನಾತಿಸ್ನೇಹಃ ಪ್ರಸಂಗೋ ವಾ ಕರ್ತವ್ಯಃ ಕ್ವಾಪಿ ಕೇನಚಿತ್ ।
ಕುರ್ವನ್ವಿಂದೇತ ಸಂತಾಪಂ ಕಪೋತ ಇವ ದೀನಧೀಃ ॥ ೫೨ ॥

ಕಪೋತಃ ಕಶ್ಚನಾರಣ್ಯೇ ಕೃತನೀಡೋ ವನಸ್ಪತೌ ।
ಕಪೋತ್ಯಾ ಭಾರ್ಯಯಾ ಸಾರ್ಧಮುವಾಸ ಕತಿಚಿತ್ಸಮಾಃ ॥ ೫೩ ॥

ಮಹಾಪುರುಷರಾದ ಸಾಧುಗಳು ಅನ್ನವೇ ಮುಂತಾದುವನ್ನು ಕೊಡುವವರ ಭೂತ, ಭವಿಷ್ಯದ ಎಲ್ಲ ಅಮಂಗಳಗಳನ್ನು ನಾಶ ಮಾಡಿಬಿಡುತ್ತಾರೆ. ಅವರನ್ನು ಪವಿತ್ರರಾಗಿಸುತ್ತಾರೆ. (ಇಂತಹ ಪವಿತ್ರಾತ್ಮರಾದ ಮಹಾತ್ಮಾ ಸಾಧುಗಳಾದರೋ ಬೇರೆಯವರನ್ನು ಪವಿತ್ರರಾಗಿಸ ಲೆಂದೇ ಭಿಕ್ಷೆ ಸ್ವೀಕರಿಸುತ್ತಾರೆ.) ॥ ೪೬ ॥ ಅಗ್ನಿಯು ಎಲ್ಲ ಇಂಧನ (ಕಟ್ಟಿಗೆ)ಗಳಲ್ಲಿ ವ್ಯಾಪಕನಾಗಿರುತ್ತಾನೆ. ಸೌದೆಯ ಆಕಾರದಂತೆ ಅಗ್ನಿಯು ಕಂಡುಬರುತ್ತಾನೆ. ಹಾಗೆಯೇ ತನ್ನ ಮಾಯೆಯಿಂದ ಉಂಟಾದ ಸತ್-ಅಸತ್ (ವ್ಯಕ್ತ-ಅವ್ಯಕ್ತ) ಎಲ್ಲ ಚರಾಚರ ಪ್ರಾಣಿಗಳಲ್ಲಿ ಪ್ರವಿಷ್ಟನಾದ ಒಂದೇ ಆತ್ಮವು ಆಯಾಯಾ ರೂಪದಲ್ಲಿ ಕಂಡುಬರುತ್ತಾನೆ. ॥ ೪೭ ॥

(ಈಗ ಚಂದ್ರನ ದೃಷ್ಟಾಂತವನ್ನು ಎರಡು ಶ್ಲೋಕಗಳಲ್ಲಿ ಹೇಳುತ್ತಾರೆ –) ಕಾಲದ ವೇಗದ ಪ್ರಭಾವದಿಂದ ಚಂದ್ರನ ಕಲೆಗಳು ವೃದ್ಧಿ-ಕ್ಷಯವಾಗುತ್ತಾ ಇರುತ್ತವೆ. ಇದೇ ರೀತಿ ದೇಹವು ಉತ್ಪತ್ತಿಯಿಂದ ಹಿಡಿದು ಮೃತ್ಯುವಿನವರೆಗೆ ಆಗುವ ಅವಸ್ಥೆಗಳು ಗಮನಕ್ಕೆ ಬಾರದಿರುವ ಕಾಲದ ಪ್ರಭಾವದಿಂದ ಬದಲಾಗುತ್ತಾ ಇರುತ್ತವೆ. ಆತ್ಮನಿಗೆ ಅವುಗಳ ಯಾವ ಸಂಬಂಧವೂ ಇರುವುದಿಲ್ಲ. ಅಗ್ನಿಯ ಜ್ವಾಲೆಗಳು ಅಗ್ನಿಯಿಂದ ಹೊರಟು ಕಣ್ಮರೆಯಾಗುತ್ತವೆ. ಆದರೆ ಕಾಣುವುದಿಲ್ಲ; ಹಾಗೆಯೇ ಕಾಲದ ಪ್ರಚಂಡವೇಗದಿಂದ ಎಲ್ಲ ಪ್ರಾಣಿಗಳ ಉತ್ಪತ್ತಿ ಮತ್ತು ಮೃತ್ಯು ಸದಾಕಾಲ ಆಗುತ್ತಾ ಇರುತ್ತದೆ. ಆದರೆ ಅದು ಕಾಣುವುದಿಲ್ಲ. ॥ ೪೮-೪೯ ॥

(ಈಗ ಸೂರ್ಯನ ದೃಷ್ಟಾಂತಕ್ಕಾಗಿ ಎರಡು ಶ್ಲೋಕಗಳನ್ನು ಹೇಳುತ್ತಾರೆ –) 'ಗೋಪತಿಃ' ಸೂರ್ಯನು ತನ್ನ ಕಿರಣಗಳಿಂದ ಸಮಯಕ್ಕೆ ಸರಿಯಾಗಿ ನೀರನ್ನು ಗ್ರಹಿಸಿ, ಅದನ್ನು ಮಳೆಯಾಗಿ ಸುರಿಸುತ್ತಾನೆ. ಆದರೆ ಸೂರ್ಯನು ಎಲ್ಲಿಯೂ ಆಸಕ್ತನಾಗುವುದಿಲ್ಲ. ಹಾಗೆಯೇ ಯೋಗಿಯು ಗ್ರಹಿಸುವಾಗ ಮತ್ತು ತ್ಯಜಿಸುವಾಗ ಎಲ್ಲಿಯೂ ಆಸಕ್ತನಾಗಿರಬಾರದು. ॥ ೫೦ ॥ ಹಲವಾರು ಪಾತ್ರೆಗಳಲ್ಲಿ ನೀರನ್ನು ತುಂಬಿಟ್ಟು ನೋಡಿದರೆ, ಆ ಪಾತ್ರೆಗಳಲ್ಲಿ ಪ್ರತಿಫಲಿತನಾದ ಸೂರ್ಯನು ಅನೇಕನಾಗಿರುವಂತೆ ಕಾಣುತ್ತದೆ. ಆದರೆ ಇರುವ ಸೂರ್ಯನು ಒಬ್ಬನೇ. ಹಾಗೆಯೇ ಆತ್ಮವೂ ಒಂದೇ ಆಗಿದೆ, ಆದರೆ ಸ್ಥೂಲಬುದ್ಧಿಯುಳ್ಳವರಿಗೆ ನಾನಾತ್ವದ ಭಾವನೆಯ ಕಾರಣ ಒಂದೇ ಆತ್ಮದ ಸತ್ತೆಯ ಬೋಧವಾಗುವುದಿಲ್ಲ. ಆದ್ದರಿಂದ ಸೂರ್ಯನ ದೃಷ್ಟಾಂತದಿಂದ ಆತ್ಮನ ಅಖಂಡತೆಯನ್ನು ಅರಿತುಕೊಳ್ಳಬೇಕು. ॥ ೫೧ ॥

(ಈಗ ಪಾರಿವಾಳದ ಉದಾಹರಣೆಯನ್ನು ಕೊಡುತ್ತಾರೆ –) ರಾಜನೇ! ಎಲ್ಲಿಯೂ ಯಾರೊಡನೆಯೂ ಅತಿ ಸ್ನೇಹ ಅಥವಾ ಆಸಕ್ತಿ ಇಡಬಾರದು. ಇಲ್ಲದಿದ್ದರೆ ಅವನು ದೀನನಾಗಿ ಪಾರಿವಾಳದಂತೆ ಅತ್ಯಂತ ಕ್ಲೇಶವನ್ನು ಅನುಭವಿಸಬೇಕಾಗುವುದು. ॥ ೫೨ ॥ ರಾಜನೇ! ಒಂದಾನೊಂದು ಕಾಡಿನಲ್ಲಿ ಒಂದು ಪಾರಿವಾಳವು ವಾಸಿಸುತ್ತಿತ್ತು. ಅದು ಒಂದು ಮರದ ಮೇಲೆ ಗೂಡುಕಟ್ಟಿಕೊಂಡಿತ್ತು. ಅದು ತನ್ನ ಹೆಣ್ಣು ಪಾರಿವಾಳದೊಂದಿಗೆ ಅನೇಕ ವರ್ಷಗಳವರೆಗೆ ಅದೇ ಗೂಡಿನಲ್ಲಿ ವಾಸಿಸುತ್ತಿತ್ತು. ಆ ಪಾರಿವಾಳ ದಂಪತಿಗಳ ಹೃದಯದಲ್ಲಿ ನಿರಂತರ ಒಬ್ಬರ ಕುರಿತು ಮತ್ತೊಬ್ಬರ

ಕಪೋತೌ ಸ್ನೇಹಗುಣಿತಹೃದಯೌ ಗೃಹಧರ್ಮಿಣೌ ।
ದೃಷ್ಟಿಂ ದೃಷ್ಟ್ಯಾಂಗಮಂಗೇನ ಬುದ್ಧಿಂ ಬುದ್ಧ್ಯಾ ಬಬಂಧತುಃ
॥ ೫೪ ॥

ಶಯ್ಯಾಸನಾಟನಸ್ಥಾನವಾರ್ತಾಕ್ರೀಡಾಶನಾದಿಕಮ್ ।
ಮಿಥುನೀಭೂಯ ವಿಸ್ರಬ್ಧೌ ಚೇರತುರ್ವನರಾಜಿಷು
॥ ೫೫ ॥

ಯಂ ಯಂ ವಾಂಛತಿ ಸಾ ರಾಜನ್ ತರ್ಪಯಂತ್ಯನುಕಂಪಿತಾ ।
ತಂ ತಂ ಸಮನಯತ್ಕಾಮಂ ಕೃಚ್ಛ್ರೇಣಾಪ್ಯಜಿತೇಂದ್ರಿಯಃ
॥ ೫೬ ॥

ಕಪೋತೀ ಪ್ರಥಮಂ ಗರ್ಭಂ ಗೃಹ್ಣತೀ ಕಾಲ ಆಗತೇ ।
ಅಂಡಾನಿ ಸುಷುವೇ ನೀಡೇ ಸ್ವಪತ್ಯುಃ ಸನ್ನಿಧೌ ಸತೀ
॥ ೫೭ ॥

ತೇಷು ಕಾಲೇ ವ್ಯಜಾಯಂತ ರಚಿತಾವಯವಾ ಹರೇಃ ।
ಶಕ್ತಿಭಿರ್ದುರ್ವಿಭಾವ್ಯಾಭಿಃ ಕೋಮಲಾಂಗತನೂರುಹಾಃ
॥ ೫೮ ॥

ಪ್ರಜಾಃ ಪುಪುಷತುಃ ಪ್ರೀತೌ ದಂಪತೀ ಪುತ್ರವತ್ಸಲೌ ।
ಶೃಣ್ವಂತೌ ಕೂಜಿತಂ ತಾಸಾಂ ನಿರ್ವೃತೌ ಕಲಭಾಷಿತೈಃ
॥ ೫೯ ॥

ತಾಸಾಂ ಪತತ್ತ್ರೈಃ ಸುಸ್ಪರ್ಶೈಃ ಕೂಜಿತೈರ್ಮುಗ್ಧಚೇಷ್ಟಿತೈಃ ।
ಪ್ರತ್ಯುದ್ಗಮೈರದೀನಾನಾಂ ಪಿತರೌ ಮುದಮಾಪತುಃ
॥ ೬೦ ॥

ಸ್ನೇಹಾನುಬದ್ಧಹೃದಯಾವನ್ಯೋನ್ಯಂ ವಿಷ್ಣುಮಾಯಯಾ ।
ವಿಮೋಹಿತೌ ದೀನಧಿಯೌ ಶಿಶೂನ್ ಪುಪುಷತುಃ ಪ್ರಜಾಃ
॥ ೬೧ ॥

ಏಕದಾ ಜಗ್ಮತುಸ್ತಾಸಾಮನ್ನಾರ್ಥಂ ತೌ ಕುಟುಂಬಿನೌ ।
ಪರಿತಃ ಕಾನನೇ ತಸ್ಮಿನ್ನರ್ಥಿನೌ ಚೇರತುಶ್ಚಿರಮ್
॥ ೬೨ ॥

ದೃಷ್ಟ್ವಾ ತಾನ್ ಲುಬ್ಧಕಃ ಕಶ್ಚಿದ್ಯದೃಚ್ಛಾತೋ ವನೇಚರಃ ।
ಜಗೃಹೇ ಜಾಲಮಾತತ್ಯ ಚರತಃ ಸ್ವಾಲಯಾಂತಿಕೇ
॥ ೬೩ ॥

ಪ್ರೇಮ ಬೆಳೆಯುತ್ತಲೇ ಇತ್ತು. ಅವು ಪರಸ್ಪರ ದೃಷ್ಟಿಯಿಂದ ದೃಷ್ಟಿ, ಅಂಗದಿಂದ ಅಂಗ, ಬುದ್ಧಿಯಿಂದ ಬುದ್ಧಿ ಹೀಗೆ ಬಂಧಿತರಾಗಿ ಗೃಹಸ್ಥ ಧರ್ಮದಲ್ಲಿ ಆಸಕ್ತವಾಗಿದ್ದವು. ॥ ೫೩-೫೪ ॥

ಅವು ನಿಃಶಂಕವಾಗಿ ಅಲ್ಲಿಯ ವೃಕ್ಷ ಲತೆಗಳಲ್ಲಿ ಒಟ್ಟಿಗೆ ಮಲಗುವುದು, ಕುಳಿತುಕೊಳ್ಳುವುದು, ಅಡ್ಡಾಡುವುದು, ಮಾತು ಕತೆಯಾಡುವುದು, ಆಡುವುದು, ತಿನ್ನುಣ್ಣುವುದು, ವಾಸಿಸುವುದಷ್ಟು ಒಬ್ಬರಿಗೆ ಮತ್ತೊಬ್ಬರಮೇಲೆ ವಿಶ್ವಾಸ ಉಂಟಾಗಿತ್ತು.॥ ೫೫ ॥ ರಾಜನೇ! ಆ ಪಾರಿವಾಳವು ಹೆಣ್ಣು ಪಾರಿವಾಳವು ಏನನ್ನೂ ಬಯಸಿದರೂ ಭಾರೀ ಕಷ್ಟಪಟ್ಟು ಅದರ ಕಾಮನೆ ಪೂರ್ಣಮಾಡುವಷ್ಟು ಅದಕ್ಕೆ ಪ್ರೇಮವಿತ್ತು. ಆ ಹೆಣ್ಣು ಪಾರಿವಾಳವು ಸುರತಾಲಾಪದಿಂದ ಪಾರಿವಾಳವನ್ನು ಸಂತೋಷಪಡಿಸುತ್ತಿತ್ತು.॥ ೫೬ ॥ ಸಮಯ ಒದಗಿದಾಗ ಹೆಣ್ಣು ಪಾರಿವಾಳವು ಗರ್ಭವತಿಯಾಗಿ, ಅದು ತನ್ನ ಪತಿಯೊಂದಿಗೆ ಅದೇ ಗೂಡಿನಲ್ಲಿ ಇದ್ದು ಮೊಟ್ಟೆಗಳನ್ನಿಟ್ಟಿತು. ಭಗವಂತನ ಅಚಿಂತ್ಯ ಶಕ್ತಿಯಿಂದ ಸಮಯಕ್ಕೆ ಸರಿಯಾಗಿ ಆ ಮೊಟ್ಟೆಗಳು ಒಡೆದು ಅದರಿಂದ ಕೈಕಾಲುಗಳಿದ್ದ ಮರಿಗಳು ಹೊರಟವು. ಅವುಗಳ ಪ್ರತಿಯೊಂದು ಅಂಗವು ಮತ್ತು ರೆಕ್ಕೆಗಳು ಅತ್ಯಂತ ಕೋಮಲವಾಗಿದ್ದವು. ॥ ೫೭-೫೮ ॥ ಈ ಪಾರಿವಾಳ ದಂಪತಿಗಳ ಕಣ್ಣು ತಮ್ಮ ಮರಿಗಳ ಮೇಲೆಯೇ ನೆಟ್ಟಿತ್ತು. ಅವು ತುಂಬಾ ಪ್ರೇಮ, ಆನಂದದಿಂದ ತನ್ನ ಮರಿಗಳ ಪಾಲನೆ-ಪೋಷಣೆ ಮಾಡುತ್ತಾ, ಅವುಗಳ ಸಿಹಿಯಾದ ಮಾತು, ಅವುಗಳ ಗುಟರ್-ಗುಟರ್ ಕೇಳಿ ಆನಂದಮಗ್ನರಾಗುತ್ತಿದ್ದವು. ॥ ೫೯ ॥ ಈ ಪ್ರಕಾರ ಆನಂದದಲ್ಲಿ ಮುಳುಗಿ ಮರಿಗಳ ಸುಕೋಮಲ ರೆಕ್ಕೆಗಳನ್ನು ಮುಟ್ಟುತ್ತಾ, ಅವುಗಳ ಕಲರವ ಮತ್ತು ಮುಗ್ಧ ಚೇಷ್ಟೆಗಳನ್ನು ನೋಡ-ನೋಡುತ್ತಾ ಅವುಗಳಿಗೆ ಭಾರೀ ಸಂತೋಷವಾಗುತ್ತಿತ್ತು. ಅವು ನೆಗೆಯುತ್ತಾ-ನೆಗೆಯುತ್ತಾ ತಮ್ಮ ತಂದೆ-ತಾಯಿಗಳ ಬಳಿಗೆ ಬಂದಾಗ ಕಪೋತ-ಕಪೋತಿಯು ಸಂತೋಷಭರಿತರಾಗುತ್ತಿದ್ದವು. ॥ ೬೦ ॥ ರಾಜನೇ! ಹೀಗೆ ಆ ಕಪೋತ ದಂಪತಿಯು ಭಗವಂತನ ಮಾಯೆಯಿಂದ ಮೋಹಿತರಾಗಿದ್ದವು. ಅವುಗಳ ಹೃದಯವು ಒಬ್ಬರು ಮತ್ತೊಬ್ಬರ ಸ್ನೇಹ ಬಂಧನದಲ್ಲಿ ಬಂಧಿತವಾಗಿತ್ತು. ಆ ಬಡಪಾಯಿ ಕಪೋತ ದಂಪತಿಗಳು ತಮ್ಮ ಎಳೆಯ ಮರಿಗಳ ಪಾಲನೆ-ಪೋಷಣೆಯಲ್ಲಿ ಜಗತ್ತು, ಲೋಕ-ಪರಲೋಕದ ನೆನಪು ಕೂಡ ಇರದಷ್ಟು ವ್ಯಗ್ರವಾಗಿದ್ದವು. ॥ ೬೧ ॥ ಒಂದು ದಿನ ಇಬ್ಬರೂ ಗಂಡು-ಹೆಣ್ಣು ತಮ್ಮ ಮರಿಗಳಿಗೆ ಆಹಾರವನ್ನು ತರಲು ಕಾಡಿಗೆ ಹೋಗಿದ್ದವು. ಏಕೆಂದರೆ ಈಗ ಅವರ ಕುಟುಂಬ ತುಂಬಾ ಬೆಳೆದುಹೋಗಿತ್ತು. ಅವು ಆಹಾರಕ್ಕಾಗಿ ಹೆಚ್ಚು ಹೊತ್ತು ಕಾಡಿನಲ್ಲಿ ಅಲೆಯುತ್ತಾ ಇದ್ದವು. ॥ ೬೨ ॥ ಇತ್ತ ಓರ್ವ ಬೇಡನು ತಿರುಗಾಡುತ್ತಾ ಸಂಯೋಗವಶದಿಂದ ಅವುಗಳ ಗೂಡಿನ ಕಡೆಗೆ ಬಂದು ತಲುಪಿದನು. ಅವನು ನೋಡಿದನು ಗೂಡಿನ ಸುತ್ತಲೂ ಪಾರಿವಾಳದ ಮರಿಗಳು ನೆಗೆಯುತ್ತಿದ್ದವು. ಅವನು ಬಲೆಬೀಸಿ ಅವನ್ನು ಹಿಡಿದುಕೊಂಡನು. ॥ ೬೩ ॥ ಕಪೋತ-ಕಪೋತಿಗಳು

ಕಪೋತಶ್ಚ ಕಪೋತೀ ಚ ಪ್ರಜಾಪೋಷೇ ಸದೋತ್ಸುಕೌ ।
ಗತೌ ಪೋಷಣಮಾದಾಯ ಸ್ವನೀಡಮುಪಜಗ್ಮತುಃ
॥ ೬೪ ॥

ಕಪೋತೀ ಸ್ವಾತ್ಮಜಾನ್ವೀಕ್ಷ್ಯ ಬಾಲಕಾನ್ ಜಾಲಸಂವೃತಾನ್ ।
ತಾನಭ್ಯಧಾವತ್ ಕ್ರೋಶಂತೀ ಕ್ರೋಶತೋ ಭೃಶದುಃಖಿತಾ
॥ ೬೫ ॥

ಸಾಸಕೃತ್ಸ್ನೇಹಗುಣಿತಾ ದೀನಚಿತ್ತಾಜಮಾಯಯಾ ।
ಸ್ವಯಂ ಚಾಬಧ್ಯತ ಶಿಚಾ ಬದ್ಧಾನ್ಪಶ್ಯಂತ್ಯಪಸ್ಮೃತಿಃ
॥ ೬೬ ॥

ಕಪೋತಶ್ಚಾತ್ಮಜಾನ್ಬದ್ಧಾನಾತ್ಮನೋಽಪ್ಯಧಿಕಾನ್ಪ್ರಿಯಾನ್ ।
ಭಾರ್ಯಾಂ ಚಾತ್ಮಸಮಾಂ ದೀನೋ ವಿಲಲಾಪಾತಿದುಃಖಿತಃ
॥ ೬೭ ॥

ಅಹೋ ಮೇ ಪಶ್ಯತಾಪಾಯಮಲ್ಪಪುಣ್ಯಸ್ಯ ದುರ್ಮತೇಃ ।
ಅತೃಪ್ತಸ್ಯಾಕೃತಾರ್ಥಸ್ಯ ಗೃಹಸ್ತ್ರೈವರ್ಗಿಕೋ ಹತಃ
॥ ೬೮ ॥

ಅನುರೂಪಾನುಕೂಲಾ ಚ ಯಸ್ಯ ಮೇ ಪತಿದೇವತಾ ।
ಶೂನ್ಯೇ ಗೃಹೇ ಮಾಂ ಸಂತ್ಯಜ್ಯ ಪುತ್ರೈಃ ಸ್ವರ್ಯಾತಿ ಸಾಧುಭಿಃ
॥ ೬೯ ॥

ಸೋಽಹಂ ಶೂನ್ಯೇ ಗೃಹೇ ದೀನೋ ಮೃತದಾರೋ ಮೃತಪ್ರಜಃ ।
ಜಿಜೀವಿಷೇ ಕಿಮರ್ಥಂ ವಾ ವಿಧುರೋ ದುಃಖಜೀವಿತಃ
॥ ೭೦ ॥

ತಾಂಸ್ತಥೈವಾವೃತಾನ್ ಶಿಗ್ಭಿರ್ಮೃತ್ಯುಗ್ರಸ್ತಾನ್ವಿಚೇಷ್ಟತಃ ।
ಸ್ವಯಂ ಚ ಕೃಪಣಃ ಶಿಕ್ಷು ಪಶ್ಯನ್ನಪ್ಯಬುಧೋಽಪತತ್
॥ ೭೧ ॥

ತಂ ಲಬ್ಧ್ವಾ ಲುಬ್ಧಕಃ ಕ್ರೂರಃ ಕಪೋತಂ ಗೃಹಮೇಧಿನಮ್ ।
ಕಪೋತಕಾನ್ ಕಪೋತೀಂ ಚ ಸಿದ್ಧಾರ್ಥಃ ಪ್ರಯಯೌ ಗೃಹಮ್
॥ ೭೨ ॥

ಮರಿಗಳಿಗೆ ಉಣಿಸಲು ಯಾವಾಗಲೂ ಉತ್ಸುಕರಾಗಿರುತ್ತಿದ್ದರು. ಈಗ ಅವುಗಳು ಆಹಾರ ಎತ್ತಿಕೊಂಡು ಗೂಡಿನ ಬಳಿಗೆ ಬಂದವು. ಕಪೋತಿ ನೋಡುತ್ತಾಳೆ– ಅವಳ ಹೃದಯದ ಹೋಳಾದ ಮುದ್ದಾದ ಮರಿಗಳು ಬಲೆಯಲ್ಲಿ ಸಿಕ್ಕಿಹಾಕಿಕೊಂಡಿವೆ. ದುಃಖದಿಂದ ಚೌ-ಚೌ ಮಾಡುತ್ತಿವೆ. ಅವುಗಳನ್ನು ಇಂತಹ ಸ್ಥಿತಿಯಲ್ಲಿ ನೋಡಿದ ಕಪೋತಿಯ ದುಃಖಕ್ಕೆ ಸೀಮೆಯೇ ಇರಲಿಲ್ಲ. ಅವಳು ಅಳುತ್ತಾ–ಬೊಬ್ಬೆಯಿಡುತ್ತಾ ಮರಿಗಳ ಬಳಿಗೆ ಹೋದಳು. ॥ ೬೪-೬೫ ॥

ಭಗವಂತನ ಮಾಯೆಯಿಂದ ಅವರ ಚಿತ್ತವು ಅತ್ಯಂತ ದೀನ-ದುಃಖಿತವಾಗಿತ್ತು. ಅದರ ಸ್ಮೃತಿ ಲುಪ್ತವಾಗಿತ್ತು. ಸ್ನೇಹಪಾಶದಿಂದ ಬಂಧಿತಳಾದ ಕಾರಣ ಹಾಗೂ ತನ್ನ ಮರಿಗಳು ಬಲೆಯಲ್ಲಿ ಸಿಕ್ಕಿಹಾಕಿಕೊಂಡಿರುವುದನ್ನು ನೋಡಿ ಸ್ವತಃ ತಾನೂ ಹೋಗಿ ಬಲೆಯಲ್ಲಿ ಸಿಕ್ಕಿಕೊಂಡಳು. ॥ ೬೬ ॥ ಗಂಡು ಪಾರಿವಾಳ (ಕಪೋತ)ವು ತನ್ನ ಪ್ರಾಣಕ್ಕಿಂತ ಪ್ರಿಯರಾದ ಮರಿಗಳು ಬಲೆಯಲ್ಲಿ ಸಿಕ್ಕಿಕೊಂಡಿರುವವು ಹಾಗೂ ತನ್ನ ಪ್ರಾಣಪ್ರಿಯ ಪತ್ನಿಯೂ ಅದೇ ಸ್ಥಿತಿಯಲ್ಲಿರುವುದನ್ನು ನೋಡಿದಾಗ ಅದು ಅತ್ಯಂತ ದುಃಖಿತವಾಗಿ ವಿಲಪಿಸತೊಡಗಿತು. ನಿಜವಾಗಿಯೂ ಆಗ ಅದರ ಸ್ಥಿತಿ ಅತ್ಯಂತ ದಯನೀಯವಾಗಿತ್ತು. ॥ ೬೭॥ ಅದು ಯೋಚಿಸಿತು – "ನಾನು ನಿರ್ಭಾಗ್ಯನಾಗಿದ್ದೇನೆ, ದುರ್ಮತಿಯಾಗಿದ್ದೇನೆ. ಅಯ್ಯೋ! ನನ್ನದೆಲ್ಲವೂ ಸತ್ಯಾನಾಶವಾಯಿತು. ನೋಡು – ನನಗೆ ಇನ್ನೂ ತೃಪ್ತಿ ಆಗಿಲ್ಲ, ನನ್ನ ಆಸೆಗಳು ಪೂರ್ಣಗೊಂಡಿಲ್ಲ, ಅಯ್ಯೊ! ಅಷ್ಟರೊಳಗೆ ನನ್ನ ಧರ್ಮ, ಅರ್ಥ, ಕಾಮದ ಮೂಲವಾದ ಈ ಗೃಹಸ್ಥಾಶ್ರಮವು ನಾಶವಾಯಿತಲ್ಲ! ॥ ೬೮ ॥ ಅಯ್ಯೋ! ನನ್ನ ಪ್ರಾಣವಲ್ಲಭೆ ನನ್ನನ್ನೇ ತನ್ನ ಇಷ್ಟದೇವರೆಂದು ತಿಳಿಯುತ್ತಿದ್ದಳು. ನನ್ನ ಪ್ರತಿಯೊಂದು ಮಾತನ್ನೂ ನಡೆಸುತ್ತಿದ್ದಳು. ನನ್ನ ಸಂಕೇತದಂತೆ ಕುಣಿಯುತ್ತಿದ್ದಳು. ಎಲ್ಲ ರೀತಿಯಿಂದಲೂ ನನಗೆ ಯೋಗ್ಯವಾಗಿದ್ದಳು. ಇಂದು ಅವಳು ನನ್ನನ್ನು ಬರಿದಾದ ಮನೆಯಲ್ಲಿ ಬಿಟ್ಟು ನಮ್ಮ ಅಬೋಧ ಮರಿಗಳೊಂದಿಗೆ ಸ್ವರ್ಗಕ್ಕೆ ಹೋಗುತ್ತಿರುವಳಲ್ಲ! ॥ ೬೯ ॥ ನನ್ನ ಮಕ್ಕಳು ಸತ್ತುಹೋದುವು. ನನ್ನ ಹೆಂಡತಿ ಹೊರಟುಹೋದಳು. ಇನ್ನು ಈ ಸಂಸಾರದಲ್ಲಿ ನನಗೇನು ಕೆಲಸವಿದೆ. ದೀನನಾದ ನನ್ನ ವಿಧುರ ಜೀವನವು ದುಃಖಮಯವೇ ಆಗಿದೆ. ಈಗ ನಾನು ಈ ಶೂನ್ಯಪ್ರಾಯ ಮನೆಯಲ್ಲಿ ಯಾರಿಗಾಗಿ ಬದುಕಲಿ? ಅವರ ಜೊತೆಯಲ್ಲೇ ನಾನೂ ಹೋಗುವೆನು." ॥ ೭೦ ॥ ರಾಜನೇ! ಹೀಗೆ ಅವಿವೇಕಿಯಾದ ಆ ಕಪೋತವು ನಿರ್ಧರಿಸಿ – ಬಲೆಯಲ್ಲಿ ಸಿಕ್ಕಿಕೊಂಡು ಸಾವಿನ ದವಡೆಯಲ್ಲಿ ಸಿಲುಕಿ ಪತ್ನೀ-ಪುತ್ರರು ಒದ್ದಾಡುತ್ತಿರುವುದನ್ನು ನೋಡುತ್ತಿದ್ದರೂ ತಾನೂ ಹೋಗಿ ಬೇಡನ ಆ ಬಲೆಯಲ್ಲಿ ಸಿಕ್ಕಿಹಾಕಿಕೊಂಡಿತು. ॥ ೭೧ ॥ ರಾಜನೇ! ಆ ಬೇಡನು ಬಹಳ ಕ್ರೂರಿಯಾಗಿದ್ದನು. ಗೃಹಸ್ಥಾಶ್ರಮಿ ಪಾರಿವಾಳದ ಪರಿವಾರ ಅನಾಯಾಸವಾಸವಾಗಿ ದೊರೆತುದರಿಂದ ಭಾರೀ ಸಂತೋಷವಾಯಿತು. ತನ್ನ ಕೆಲಸವಾಯಿತೆಂದು ತಿಳಿದು ಅವನು ಅವನ್ನು ಎತ್ತಿಕೊಂಡು ಹೊರಟುಹೋದನು. ॥ ೭೨ ॥

ಏವಂ ಕುಟುಂಬ್ಯಶಾಂತಾತ್ಮಾ ದ್ವಂದ್ವಾರಾಮಃ ಪತತ್ರಿವತ್ ।
ಪುಷ್ಣನ್ ಕುಟುಂಬಂ ಕೃಪಣಃ ಸಾನುಬಂಧೋಽವಸೀದತಿ
॥ ೭೩ ॥

ಇದೇ ಪ್ರಕಾರ ಗೃಹಸ್ಥನು ವಿಷಯಗಳಲ್ಲೇ ಸುಖವನ್ನು ಅರಸುತ್ತಾ, ಚಿತ್ತಚಂಚಲನಾದವನು, ತನ್ನ ಪರಿವಾರವನ್ನು ಸಾಕುವುದರಲ್ಲೇ ತೊಡಗಿರುವವನು ಪಾರಿವಾಳ ದಂಪತಿಯಂತೆ ದೀನ ಅವಸ್ಥೆಯನ್ನು ಹೊಂದಿ, ಪರಿವಾರಸಹಿತ ಅವನ ಪತನವಾಗುತ್ತದೆ ಎಂಬುದೇ ಸಾರಾಂಶವಾಗಿದೆ. ॥ ೭೩ ॥ ಅದಕ್ಕಾಗಿ ದೊರೆತಿರುವ ಈ ಮನುಷ್ಯ ಶರೀರವು ತೆರೆದಿರುವ ಮುಕ್ತಿಯ ದ್ವಾರವಾಗಿದೆ ಎಂದು ತಿಳಿಯಬೇಕು. ಇದನ್ನು ಪಡೆದುಕೊಂಡರೂ ಮುಕ್ತಿಗಾಗಿ ಪ್ರಯತ್ನಿಸದಿರುವವನು, ಮನೆ-ಸಂಸಾರದಲ್ಲೇ ಕಪೋತದಂಪತಿಯಂತೆ ಆಸಕ್ತನಾಗಿರುವವನು ಶ್ರೇಯೋಮಾರ್ಗದ ನಿಚ್ಚಣಿಕೆಯಲ್ಲಿ ಏರಿ ಕೆಳಗೆ ಬಿದ್ದವನೆಂದೇ ತಿಳಿಯಬೇಕು. ಶಾಸ್ತ್ರದ ಭಾಷೆಯಲ್ಲಿ ಅವನನ್ನು "ಆರೂಢಚ್ಯುತ" ಎಂದು ಹೇಳುತ್ತಾರೆ. ॥ ೭೪ ॥

ಯಃ ಪ್ರಾಪ್ಯ ಮಾನುಷಂ ಲೋಕಂ ಮುಕ್ತಿದ್ವಾರಮಪಾವೃತಮ್ ।
ಗೃಹೇಷು ಖಗವತ್ ಸಕ್ತಸ್ತಮಾರೂಢಚ್ಯುತಂ ವಿದುಃ
॥ ೭೪ ॥

ಏಳನೆಯ ಅಧ್ಯಾಯವು ಮುಗಿಯಿತು. ॥ ೭ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಏಕಾದಶ ಸ್ಕಂಧೇ ಸಪ್ತಮೋಽಧ್ಯಾಯಃ ॥ ೭ ॥

ಎಂಟನೆಯ ಅಧ್ಯಾಯ

ಅವಧೂತೋಪಾಖ್ಯಾನ – ಹೆಬ್ಬಾವಿನಿಂದ ಪಿಂಗಳೆಯ ತನಕ ಒಂಭತ್ತು ಗುರುಗಳ ಕಥೆ

ಬ್ರಾಹ್ಮಣ ಉವಾಚ

ಸುಖಮೈಂದ್ರಿಯಕಂ ರಾಜನ್ ಸ್ವರ್ಗೇ ನರಕ ಏವ ಚ ।
ದೇಹಿನಾಂ ಯದ್ಯಥಾ ದುಃಖಂ ತಸ್ಮಾನ್ನೇಚ್ಛೇತ ತದ್ಬುಧಃ
॥ ೧ ॥

ಗ್ರಾಸಂ ಸುಮೃಷ್ಟಂ ವಿರಸಂ ಮಹಾಂತಂ ಸ್ತೋಕಮೇವ ವಾ ।
ಯದೃಚ್ಛಯೈವಾಪತಿತಂ ಗ್ರಸೇದಾಜಗರೋಽಕ್ರಿಯಃ
॥ ೨ ॥

ಶಯೀತಾಹಾನಿ ಭೂರೀಣಿ ನಿರಾಹಾರೋಽನುಪಕ್ರಮಃ ।
ಯದಿ ನೋಪನಮೇದ್ಗ್ರಾಸೋ ಮಹಾಹಿರಿವ ದಿಷ್ಟಭುಕ್
॥ ೩ ॥

ಓಜಃಸಹೋಬಲಯುತಂ ಬಿಭ್ರದ್ದೇಹಮಕರ್ಮಕಮ್ ।
ಶಯಾನೋ ವೀತನಿದ್ರಶ್ಚ ನೇಹೇತೇಂದ್ರಿಯವಾನಪಿ
॥ ೪ ॥

ಮುನಿಃ ಪ್ರಸನ್ನಗಂಭೀರೋ ದುರ್ವಿಗಾಹ್ಯೋ ದುರತ್ಯಯಃ ।
ಅನಂತಪಾರೋ ಹ್ಯಕ್ಷೋಭ್ಯಃ ಸ್ತಿಮಿತೋದ ಇವಾರ್ಣವಃ
॥ ೫ ॥

ಅವಧೂತ ದತ್ತಾತ್ರೇಯರು ಹೇಳುತ್ತಾರೆ – ಎಲೈ ರಾಜನೇ ! ಇಂದ್ರಿಯಗಳಿಂದ ದೊರೆಯುವ ಸುಖವು ಸ್ವರ್ಗದಲ್ಲಿ ಇರುವಂತೆ ನರಕದಲ್ಲಿಯೂ ಇದೆ. ಪ್ರಯತ್ನವಿಲ್ಲದೆ ದುಃಖಗಳು ಬರುವಂತೆ ಸುಖವೂ ಬರುತ್ತದೆ. ಆದ್ದರಿಂದ ಬುದ್ಧಿವಂತರು ಅದನ್ನು ಬಯಸಬಾರದು. ॥ ೧ ॥ (ಈಗ ಹೆಬ್ಬಾವಿನ ದೃಷ್ಟಾಂತದಿಂದ ಮೂರು ಶ್ಲೋಕಗಳನ್ನು ಹೇಳುತ್ತಾರೆ –) ಯೋಗಿಯು ತಾನೇ ತಾನಾಗಿ ದೊರೆತುದನ್ನು ತಿಂದು ಸಂತುಷ್ಟನಾಗಿರಬೇಕು. ಅದು ಬೇಕಾದರೆ ಮಧುರವಾಗಿರಲೀ, ನೀರಸವಾಗಿರಲೀ, ಹೆಚ್ಚಿರಲೀ, ಕಡಿಮೆಯಿರಲಿ ಹೆಬ್ಬಾವಿನಂತೆ ಜೀವನ – ನಿರ್ವಾಹಕ್ಕೆಂದು ಉದಾಸೀನನಾಗಿರಬೇಕು. ॥ ೨ ॥ ಒಂದೊಮ್ಮೆ ಅನೇಕ ದಿನಗಳವರೆಗೆ ಭೋಜನ ಸಿಗದಿದ್ದರೂ ಅದಕ್ಕಾಗಿ ಪ್ರಯತ್ನಿಸಬಾರದು. ಪ್ರಾರಬ್ಧದ ಭೋಗವೆಂದು ತಿಳಿದು ಅಜಗರದಂತೆ ಬಿದ್ದುಕೊಂಡಿರಬೇಕು. ॥ ೩ ॥ ಓಜ (ಮನೋಬಲ) ಸಹ (ಇಂದ್ರಿಯಬಲ) ಬಲ (ಶಾರೀರಿಕಬಲ) ಇವು ಮೂರರಿಂದ ಕೂಡಿದ್ದರೂ, ಇಂದ್ರಿಯಗಳಲ್ಲಿ ಕಾರ್ಯವೆಸಗುವ ಕ್ಷಮತೆ ಇದ್ದರೂ ಮಲಗಿದಂತೆ ಇರಬೇಕು. ॥ ೪ ॥

(ಸಮುದ್ರದ ದೃಷ್ಟಾಂತವನ್ನು ಎರಡು ಶ್ಲೋಕಗಳಲ್ಲಿ ಹೇಳುತ್ತಾರೆ –) ಮುನಿಯಾದವನು ಸಮುದ್ರದಂತೆ ಪ್ರಸನ್ನ ಮತ್ತು ಗಂಭೀರನಾಗಿರಬೇಕು. ಅವನ ಭಾವ ಅಗಾಧವಾಗಿರಬೇಕು. ಅವನು ಪ್ರಭಾವಶಾಲಿಯಾಗಿರುತ್ತಾನೆ. ಅವನನ್ನು ಅತಿಕ್ರಮಿಸಲು ಕಠಿಣವಾಗಿರುತ್ತದೆ. ಅವನನ್ನು ಕಾಮ, ಕ್ರೋಧ ಮುಂತಾದ ಯಾವ

ಸಮೃದ್ಧಕಾಮೋ ಹೀನೋ ವಾ ನಾರಾಯಣಪರೋ ಮುನಿಃ ।
ನೋತ್ಸರ್ಪೇತ ನ ಶುಷ್ಯೇತ ಸರಿದ್ಭಿರಿವ ಸಾಗರಃ ॥ ೬ ॥

ದೃಷ್ಟ್ವಾ ಸ್ತ್ರಿಯಂ ದೇವಮಾಯಾಂ ತದ್ಭಾವೈರಜಿತೇಂದ್ರಿಯಃ ।
ಪ್ರಲೋಭಿತಃ ಪತತ್ಯಂಧೇ ತಮಸ್ಯಗ್ನೌ ಪತಂಗವತ್ ॥ ೭ ॥

ಯೋಷಿದ್ಧಿರಣ್ಯಾಭರಣಾಂಬರಾದಿ-
ದ್ರವ್ಯೇಷು ಮಾಯಾರಚಿತೇಷು ಮೂಢಃ ।
ಪ್ರಲೋಭಿತಾತ್ಮಾ ಹ್ಯುಪಭೋಗಬುದ್ಧ್ಯಾ
ಪತಂಗವನ್ನಶ್ಯತಿ ನಷ್ಟದೃಷ್ಟಿಃ ॥ ೮ ॥

ಸ್ತೋಕಂ ಸ್ತೋಕಂ ಗ್ರಸೇದ್ ಗ್ರಾಸಂ ದೇಹೋ ವರ್ತೇತ ಯಾವತಾ ।
ಗೃಹಾನಹಿಂಸನ್ನಾತಿಷ್ಠೇತ್ ವೃತ್ತಿಂ ಮಾಧುಕರೀಂ ಮುನಿಃ ॥ ೯ ॥

ಅಣುಭ್ಯಶ್ಚ ಮಹದ್ಭ್ಯಶ್ಚ ಶಾಸ್ತ್ರೇಭ್ಯಃ ಕುಶಲೋ ನರಃ ।
ಸರ್ವತಃ ಸಾರಮಾದದ್ಯಾತ್ ಪುಷ್ಪೇಭ್ಯ ಇವ ಷಟ್ಪದಃ ॥ ೧೦ ॥

ಸಾಯಂತನಂ ಶ್ವಸ್ತನಂ ವಾ ನ ಸಂಗೃಹ್ಣೀತ ಭಿಕ್ಷಿತಮ್ ।
ಪಾಣಿಪಾತ್ರೋದರಾಮತ್ರೋ ಮಕ್ಷಿಕೇವ ನ ಸಂಗ್ರಹೀ ॥ ೧೧ ॥

ಸಾಯಂತನಂ ಶ್ವಸ್ತನಂ ವಾ ನ ಸಂಗೃಹ್ಣೀತ ಭಿಕ್ಷುಕಃ ।
ಮಕ್ಷಿಕಾ ಇವ ಸಂಗೃಹ್ಣನ್ ಸಹ ತೇನ ವಿನಶ್ಯತಿ ॥ ೧೨ ॥

ಶತ್ರುಗಳೂ ವಿಚಲಿತಗೊಳಿಸಲಾರರು. ನಿಶ್ಚಲ, ಪ್ರಶಾಂತ ಸಮುದ್ರದಂತೆ ಯಾವಾಗಲೂ ಇರುವ ಶಾಂತಿಯು ಅವನಲ್ಲಿ ಪ್ರತ್ಯಕ್ಷವಾಗಿರುತ್ತದೆ. ॥ ೫ ॥ ಸಮುದ್ರದಲ್ಲಿ ನದಿಗಳ ನೀರು ಬಂದು ಸೇರಿದರೂ ಸಮುದ್ರವು ತನ್ನ ಎಲ್ಲೆಯನ್ನು ಮೀರುವುದಿಲ್ಲ, ನೀರು ಬಾರದಿದ್ದರೂ ಒಣಗುವುದಿಲ್ಲ. ಹೀಗೆಯೇ ಮುನಿಯೂ ಕೂಡ ಸಮೃದ್ಧಿಯಿಂದ ಕೂಡಿದ್ದರೂ ಉಬ್ಬುವುದಿಲ್ಲ, ಸಮೃದ್ಧಿಹೀನನಾದರೂ ಕುಗ್ಗುವುದಿಲ್ಲ. ಸಮುದ್ರದಂತೆ ಎರಡೂ ಸ್ಥಿತಿಯಲ್ಲಿ ಒಂದೇ ರೀತಿಯಾಗಿರುತ್ತಾನೆ. ॥ ೬ ॥

(ಈಗ ಪತಂಗದ (ದೀಪದಹುಳು) ದೃಷ್ಟಾಂತವನ್ನು ಎರಡು ಶ್ಲೋಕಗಳಲ್ಲಿ ಹೇಳುತ್ತಾರೆ.) ದೀಪದ ಹುಳವು ಬೆಂಕಿಗೆ ಆಕರ್ಷಿತನಾಗಿ ಬೆಂಕಿಯಲ್ಲಿ ಬಿದ್ದು ಸಾಯುವಂತೆಯೇ ಅಜಿತೇಂದ್ರಿಯ (ಇಂದ್ರಿಯಗಳ ಗುಲಾಮ) ವ್ಯಕ್ತಿಯು ದೇವಮಾಯಾರೂಪೀ ಸ್ತ್ರೀಯನ್ನು ನೋಡಿ, ಅವಳ ಮೋಹದಲ್ಲಿ ಮೋಸಹೋಗಿ ಅಂಧಕಾರಮಯ ನರಕದಲ್ಲಿ ಬೀಳುತ್ತಾನೆ. ॥ ೭ ॥ ಕಾಮಿನಿ, ಕಾಂಚನ, ಆಭೂಷಣ, ವಸ್ತ್ರ ಮುಂತಾದ ಇರುವ ಎಲ್ಲ ದ್ರವ್ಯಗಳು ಮಾಯಾನಿರ್ಮಿತವಾಗಿವೆ. ಮೂಢಬುದ್ಧಿ ಮನುಷ್ಯನು ಉಪಭೋಗಬುದ್ಧಿಯಿಂದ ಅವುಗಳಲ್ಲಿ ಆಸಕ್ತನಾಗಿ ತನ್ನ ವಿವೇಕವನ್ನು ಕಳೆದುಕೊಳ್ಳುತ್ತಾನೆ. ದೀಪದ ಹುಳುವಿನಂತೆ ಸ್ವತಃ ಅವುಗಳಲ್ಲಿ ಬಿದ್ದು ತನ್ನ ನಾಶವನ್ನು ಮಾಡಿಕೊಳ್ಳುತ್ತಾನೆ. ॥ ೮ ॥

(ಈಗ ಭ್ರಮರ (ದುಂಬಿ)ದ ಉದಾಹರಣೆಯನ್ನು ಎರಡು ಶ್ಲೋಕಗಳಲ್ಲಿ ಕೊಡುತ್ತಾರೆ –) ಭ್ರಮರವು ಹೂವುಗಳ ಮೇಲೆ ಹಾರಾಡುತ್ತಾ ಪರಾಗವನ್ನು ಗ್ರಹಿಸುವಂತೆ ಮುನಿಯಾದವನು ಅನೇಕ ಮನೆಗಳಿಂದ ಸ್ವಲ್ಪ-ಸ್ವಲ್ಪ ಅನ್ನವನ್ನು ಬೇಡಿ ತರಬೇಕು. * ಅದರಿಂದ ಶರೀರನಿರ್ವಾಹವೂ ನಡೆದು, ಯಾರಿಗೂ ಕೊಡಲು ಕಷ್ಟವಾಗುವುದಿಲ್ಲ. ಈ ಪ್ರಕಾರ ಮಧುಕರೀ ವೃತ್ತಿಯನ್ನು ಆಶ್ರಯಿಸಬೇಕು. ॥ ೯ ॥ ದುಂಬಿಯು ಹೂವುಗಳಿಂದ ಸಾರ-ರಸ ಗ್ರಹಿಸುವಂತೆ ಕುಶಲನಾದ ಮನುಷ್ಯನು ಎಲ್ಲ ಹಿರಿಯ-ಕಿರಿಯ ಶಾಸ್ತ್ರಗಳಿಂದ ಸಾರವಾದ ಮಾತನ್ನು ತೆಗೆದುಕೊಳ್ಳಬೇಕು. (ವಿವಾದದಿಂದ ದೂರವುಳಿಯಬೇಕು.) ॥ ೧೦ ॥

(ಈಗ ಜೇನುನೊಣದ ದೃಷ್ಟಾಂತವನ್ನು ಎರಡು ಶ್ಲೋಕಗಳಲ್ಲಿ ತಿಳಿಸುತ್ತಾರೆ–) ಸಂನ್ಯಾಸಿಯಾದವನು ಸಂಜೆಗಾಗಿ ಅಥವಾ ಮರುದಿನಕ್ಕಾಗಿ ಭಿಕ್ಷೆಯನ್ನು ಉಳಿಸಿಡಬಾರದು. ಭಿಕ್ಷೆಯ ಪಾತ್ರದ ಸ್ಥಾನದಲ್ಲಿ ಕೇವಲ ಕೈ ಮತ್ತು ಇಡುವುದಕ್ಕಾಗಿ ಹೊಟ್ಟೆಯೇ ಇರಬೇಕು. ಏಕೆಂದರೆ, ಜೇನುನೊಣವು ಜೇನನ್ನು ಸಂಗ್ರಹಿಸಿದರೆ ಜೇನಿನ ಜೊತೆಗೆ ಅದರ ಜೀವನವು ಆಪತ್ತಿಗೆ ಗುರಿಯಾಗುವುದನ್ನು ಪ್ರತ್ಯಕ್ಷವಾಗಿ ನೋಡಲಾಗುತ್ತದೆ. ಇದನ್ನು ಅರಿತುಕೊಂಡು ಸಂನ್ಯಾಸಿಯು ಯಾವುದೇ ರೀತಿಯ ಸಂಗ್ರಹಮಾಡಬಾರದು. ॥ ೧೧-೧೨ ॥

* ಇಲ್ಲದಿದ್ದರೆ ಒಂದೇ ಕಮಲದ ಗಂಧದಲ್ಲಿ ಆಸಕ್ತವಾದ ಭ್ರಮರವು ರಾತ್ರಿಯಲ್ಲಿ ಮುಚ್ಚಿಕೊಂಡ ಆ ಕಮಲದಲ್ಲಿ ಸಿಕ್ಕಿಕೊಂಡು ಸತ್ತುಹೋಗುವಂತೆ, ಸ್ವಾದವಾಸನೆಯಿಂದ ಒಂದೇ ಮನೆಯಲ್ಲಿ ಅನ್ನ ತಿನ್ನುವುದರಿಂದ ಸಾಂಸರ್ಗಿಕ ಮೋಹದಲ್ಲಿ ಸಿಕ್ಕಿಕೊಂಡು ಯತಿಯು ಭ್ರಷ್ಟನಾಗಿ ಹೋಗುವನು.

ಪದಾಪಿ ಯುವತೀಂ ಭಿಕ್ಷುರ್ನ ಸ್ಪೃಶೇದ್ದಾರವೀಮಪಿ ।
ಸ್ಪೃಶನ್ ಕರೀವ ಬದ್ಧ್ಯೇತ ಕರಿಣ್ಯಾ ಅಂಗಸಂಗತಃ ॥ ೧೩ ॥

ನಾಧಿಗಚ್ಛೇತ್ ಸ್ತ್ರಿಯಂ ಪ್ರಾಜ್ಞಃ ಕರ್ಹಿಚಿನ್ಮೃತ್ಯುಮಾತ್ಮನಃ ।
ಬಲಾಧಿಕೈಃ ಸ ಹನ್ಯೇತ ಗಜೈರನ್ಯೈರ್ಗಜೋ ಯಥಾ ॥ ೧೪ ॥

(ಈಗ ಆನೆಯ ದೃಷ್ಟಾಂತವನ್ನು ಎರಡು ಶ್ಲೋಕಗಳಲ್ಲಿ ಹೇಳುತ್ತಾರೆ–) ಸಂನ್ಯಾಸಿಯಾದವನು ಎಲ್ಲಿಯವರೆಗೆಂದರೆ ಮರದಿಂದ ಮಾಡಿದ ಸ್ತ್ರೀಯನ್ನೂ ಕೂಡ ಕಾಲಿನಿಂದಲೂ ಮುಟ್ಟಬಾರದು. ಇಲ್ಲದಿದ್ದರೆ ಹೆಣ್ಣಾನೆಯಲ್ಲಿ ಆಸಕ್ತವಾದ ಗಂಡಾನೆಯು ಖೆಡ್ಡಾದಲ್ಲಿ ಬಿದ್ದು ಬಂಧಿತವಾಗುವಂತೆ* ಅವನೂ ಮೋಸ ಹೋಗುತ್ತಾನೆ. ॥ ೧೩ ॥ ಕದಾಚಿತ್ ಸ್ತ್ರೀಯ ರೂಪದಲ್ಲಿ ತನ್ನ ಮೃತ್ಯುವೂ ಕೂಡ ಆಗಬಹುದು, ಅದಕ್ಕಾಗಿ ವಿವೇಕಿಯಾದ ಪುರುಷನು ಅವಳ ಬಳಿಗೆ ಹೋಗಬಾರದು. ಏಕೆಂದರೆ ಹೆಣ್ಣಾನೆಯಲ್ಲಿ ಆಸಕ್ತವಾದ ಗಂಡಾನೆಯು ಬೇರೆ ಬಲಿಷ್ಠ ಆನೆಗಳಿಂದ ಕೊಲ್ಲಲ್ಪಡುತ್ತದೆ. ಹಾಗೆಯೇ ಅವನೂ ಮೃತ್ಯುವಿಗೆ ತುತ್ತಾಗುತ್ತಾನೆ. ॥ ೧೪ ॥

ನ ದೇಯ ನೋಪಭೋಗ್ಯಂ ಚ ಲುಬ್ಧೈರ್ಯದ್ದುಃಖಸಂಚಿತಮ್ ।
ಭುಂಕ್ತೇ ತದಪಿ ತಚ್ಚಾನ್ಯೋ ಮಧುಹೇವಾರ್ಥವಿನ್ಮಧು ॥ ೧೫ ॥

(ಈಗ ಜೇನು ತೆಗೆಯುವವನ ದೃಷ್ಟಾಂತವನ್ನು ಕೊಡುತ್ತಾರೆ –) ಲೋಭಿ ಮನುಷ್ಯನು ಕೂಡಿಟ್ಟ ಧನವನ್ನು ಬೇರೆ ಯಾರಿಗೂ ದಾನ ಮಾಡುವುದಿಲ್ಲ, ತಾನೂ ಭೋಗಿಸುವುದೂ ಇಲ್ಲ, ಅವನ ಧನವನ್ನು ಬೇರೆ ಯಾರೋ ಭೋಗಿಸುತ್ತಾನೆ. ಜೇನು ತೆಗೆಯುವವನ ಬಳಿ ಜೇನಿದೆ ಎಂದು ತಿಳಿದಾಗ ಬೇರೆಯವರು ಏನಾದರೂ ಉಪಾಯ ಮಾಡಿ ಅವನಿಂದ ತೆಗೆದುಕೊಳ್ಳುತ್ತಾರೆ. ಅವನು ಜೇನಿನ ಉಪಭೋಗದಿಂದ ವಂಚಿತನೇ ಆಗಿರುತ್ತಾನೆ. ॥ ೧೫ ॥

ಸುದುಃಖೋಪಾರ್ಜಿತೈರ್ವಿತ್ತೈರಾಶಾಸಾನಾಂ ಗೃಹಾಶಿಷಃ ।
ಮಧುಹೇವಾಗ್ರತೋ ಭುಂಕ್ತೇ ಯತಿರ್ವೈ ಗೃಹಮೇಧಿನಾಮ್ ॥ ೧೬ ॥

ಭೋಗದ ಕಾಮನೆಯುಳ್ಳವರು ಕೇವಲ ತಮ್ಮ ಸುಖಭೋಗದ ಆಸೆಯಿಂದ ಬಹಳ ಕಷ್ಟಪಟ್ಟು ಧನವನ್ನು ಗಳಿಸುತ್ತಾರೆ. ಅವರ ಮನೆಯಲ್ಲಿ ಸಿದ್ಧವಾದ ಅನ್ನವನ್ನು – ಜೇನುತೆಗೆಯುವವನ ಜೇನನ್ನು ಬೇರೆ ಜನರೇ ಉಪಭೋಗಿಸುವಂತೆ ಸಂನ್ಯಾಸಿಗಳು ಅವರಿಂದ ಮೊದಲೇ ಊಟಮಾಡುತ್ತಾರೆ. (ಧಾರ್ಮಿಕ ಭಾವನೆಯುಳ್ಳವರಾದರೋ ಎಲ್ಲ ಧನವು ಜನತಾಜನಾರ್ದನದ್ದಾಗಿದೆ ಎಂಬ ಭಾವನೆಯನ್ನಿರಿಸಿ ಅದನ್ನು ಸದ್ವಿನಿಯೋಗ ಮಾಡಿಯೇ ಮಾಡುತ್ತಾರೆ.) ॥ ೧೬ ॥

ಗ್ರಾಮ್ಯಗೀತಂ ನ ಶೃಣುಯಾದ್ಯತಿರ್ವನಚರಃ ಕ್ವಚಿತ್ ।
ಶಿಕ್ಷೇತ ಹರಿಣಾದ್ಬದ್ಧಾನ್ಮೃಗಯೋರ್ಗೀತಮೋಹಿತಾತ್ ॥ ೧೭ ॥

ನೃತ್ಯವಾದಿತ್ರಗೀತಾನಿ ಜುಷನ್ ಗ್ರಾಮ್ಯಾಣಿ ಯೋಷಿತಾಮ್ ।
ಆಸಾಂ ಕ್ರೀಡನಕೋ ವಶ್ಯ ಋಷ್ಯಶೃಂಗೋ ಮೃಗೀಸುತಃ ॥ ೧೮ ॥

ವನವಾಸೀ ಸಂನ್ಯಾಸಿಯು ಎಂದೂ ವಿಷಯ-ಸಂಬಂಧೀ ಗ್ರಾಮ್ಯಗೀತಗಳನ್ನು ಕೇಳಬಾರದು. ವ್ಯಾಧನ ಹಾಡಿನಿಂದ ಮೋಹಿತವಾಗಿ ಬಂಧಿತವಾಗುವ ಜಿಂಕೆಯಿಂದ ಈ ಪಾಠವನ್ನು ಸಂನ್ಯಾಸಿಯು ಕಲಿತುಕೊಳ್ಳಬೇಕು. ಇದನ್ನು ನಾನು ಜಿಂಕೆಯಿಂದ ಕಲಿತುಕೊಂಡೆ. ॥ ೧೭ ॥ ಜಿಂಕೆಯ ಗರ್ಭದಲ್ಲಿ ಹುಟ್ಟಿದ ಋಷ್ಯಶೃಂಗ ಮುನಿಯು ಸ್ತ್ರೀಯರ ಹಾಡು-ಕುಣಿತಗಳನ್ನು ನೋಡಿ ಕೇಳಿ ಅವರಿಗೆ ವಶನಾಗಿ, ಅವರ ಕೈಗೊಂಬೆಯಾದುದು ನಿನಗೆ ತಿಳಿದೇ ಇದೆ. ॥ ೧೮ ॥

* ಕಾಡಾನೆಗಳನ್ನು ಹಿಡಿಯಲು ಮಾಡಿದ ಕಂದಕಕ್ಕೆ ಖೆಡ್ಡಾ ಎಂದು ಹೇಳುತ್ತಾರೆ. ಕಂದಕವನ್ನು ಆಳವಾಗಿ ತೋಡಿ, ಅದನ್ನು ಬಿದಿರು ಹುಲ್ಲಿನಿಂದ ಮುಚ್ಚಿ ಅದರ ಮೇಲೆ ಮರದಿಂದ ಮಾಡಿದ ಹೆಣ್ಣಾನೆಯನ್ನು ನಿಲ್ಲಿಸಿಡುತ್ತಾರೆ. ಅದನ್ನು ದೂರದಿಂದ ನೋಡಿದ ಗಂಡುಸಲಗ ಮರದ ಆನೆಯನ್ನು ನಿಜಆನೆಯೆಂದೇ ಭ್ರಮಿಸಿ ಬಂದು ಖೆಡ್ಡದಲ್ಲಿ ಬಿದ್ದು ಪರಾಧೀನವಾಗುತ್ತದೆ. ಅದಕ್ಕಾಗಿಯೇ ಸಂನ್ಯಾಸಿಯು ಮರದ ಹೆಣ್ಣು ಬೊಂಬೆಯನ್ನೂ ಮುಟ್ಟಬಾರದೆಂದು ತಿಳಿಸಲಾಗಿದೆ.

ಜಿಹ್ವಯಾತಿಪ್ರಮಾಥಿನ್ಯಾ ಜನೋ ರಸವಿಮೋಹಿತಃ ।
ಮೃತ್ಯುಮೃಚ್ಛತ್ಯಸದ್ಬುದ್ಧಿರ್ಮೀನಸ್ತು ಬಡಿಶೈರ್ಯಥಾ ॥ ೧೯ ॥

ಇಂದ್ರಿಯಾಣಿ ಜಯಂತ್ಯಾಶು ನಿರಾಹಾರಾ ಮನೀಷಿಣಃ ।
ವರ್ಜಯಿತ್ವಾ ತು ರಸನಂ ತನ್ನಿರನ್ನಸ್ಯ ವರ್ಧತೇ ॥ ೨೦ ॥

ತಾವಜ್ಜಿತೇಂದ್ರಿಯೋ ನ ಸ್ಯಾದ್ ವಿಜಿತಾನ್ಯೇಂದ್ರಿಯಃ ಪುಮಾನ್ ।
ನ ಜಯೇದ್ರಸನಂ ಯಾವಜ್ಜಿತಂ ಸರ್ವಂ ಜಿತೇ ರಸೇ ॥ ೨೧ ॥

ಪಿಂಗಲಾ ನಾಮ ವೇಶ್ಯಾಽಽಸೀದ್ವಿದೇಹನಗರೇ ಪುರಾ ।
ತಸ್ಯಾ ಮೇ ಶಿಕ್ಷಿತಂ ಕಿಂಚಿನ್ನಿಬೋಧ ನೃಪನಂದನ ॥ ೨೨ ॥

ಸಾ ಸ್ವೈರಿಣ್ಯೇಕದಾ ಕಾಂತಂ ಸಂಕೇತ ಉಪನೇಷ್ಯತೀ ।
ಅಭೂತ್ಕಾಲೇ ಬಹಿರ್ದ್ವಾರಿ ಬಿಭ್ರತೀ ರೂಪಮುತ್ತಮಮ್ ॥ ೨೩ ॥

ಮಾರ್ಗ ಆಗಚ್ಛತೋ ವೀಕ್ಷ್ಯ ಪುರುಷಾನ್ ಪುರುಷರ್ಷಭ ।
ತಾನ್ಶುಲ್ಕದಾನ್ವಿತ್ತವತಃ ಕಾಂತಾನ್ ಮೇನೇಽರ್ಥಕಾಮುಕಾ ॥ ೨೪ ॥

ಆಗತೇಷ್ವಪಯಾತೇಷು ಸಾ ಸಂಕೇತೋಪಜೀವಿನೀ ।
ಅಪ್ಯನ್ಯೋ ವಿತ್ತವಾನ್ಕೋಽಪಿ ಮಾಮುಪೈಷ್ಯತಿ ಭೂರಿದಃ ॥ ೨೫ ॥

ಏವಂ ದುರಾಶಯಾ ಧ್ವಸ್ತನಿದ್ರಾ ದ್ವಾರ್ಯವಲಂಬತೀ ।
ನಿರ್ಗಚ್ಛಂತೀ ಪ್ರವಿಶತೀ ನಿಶೀಥಂ ಸಮಪದ್ಯತ ॥ ೨೬ ॥

ತಸ್ಯಾ ವಿತ್ತಾಶಯಾ ಶುಷ್ಯದ್ವಕ್ತ್ರಾಯಾ ದೀನಚೇತಸಃ ।
ನಿರ್ವೇದಃ ಪರಮೋ ಜಜ್ಞೇ ಚಿಂತಾಹೇತುಃ ಸುಖಾವಹಃ ॥ ೨೭ ॥

ಈಗ ನಾನು ನಿನಗೆ ಮೀನಿನಿಂದ ಕಲಿತ ಪಾಠವನ್ನು ತಿಳಿಸುತ್ತೇನೆ. ಗಾಳದ ತುದಿಯಲ್ಲಿದ್ದ ಮಾಂಸದ ತುಂಡಿನ ಆಸೆಯಿಂದ ತನ್ನ ಪ್ರಾಣವನ್ನೇ ಕಳೆದುಕೊಳ್ಳುವಂತೆ, ಜಿಹ್ವಾಚಾಪಲ್ಯಕ್ಕೆ ಸಿಲುಕಿದ ದುರ್ಬುದ್ಧಿಯುಳ್ಳ ಮನುಷ್ಯನು ಮನಸ್ಸನ್ನು ಮಥಿಸಿ ವ್ಯಾಕುಲಗೊಳಿಸುವ ತನ್ನ ಜಿಹ್ವೆಗೆ ವಶನಾಗಿ ಹೋಗುತ್ತಾನೆ ಹಾಗೂ ಸತ್ತುಹೋಗುತ್ತಾನೆ. ॥ ೧೯ ॥ ವಿವೇಕಿ ಪುರುಷನು ಭೋಜನವನ್ನು ನಿಲ್ಲಿಸಿ, ಬೇರೆ ಇಂದ್ರಿಯಗಳ ಮೇಲೆ ಬೇಗನೆ ವಿಜಯವನ್ನು ಪಡೆದುಕೊಳ್ಳುತ್ತಾನೆ. ಆದರೆ ಇದರಿಂದ ಅವನ ರಸನೇಂದ್ರಿಯ (ನಾಲಿಗೆ) ವಶವಾಗುವುದಿಲ್ಲ. ಆದಾದರೋ ಊಟ ನಿಲ್ಲಿಸುವುದರಿಂದ ಇನ್ನೂ ಪ್ರಬಲವಾಗುತ್ತದೆ. ॥ ೨೦ ॥ ಮನುಷ್ಯನು ಎಲ್ಲ ಇಂದ್ರಿಯಗಳ ಮೇಲೆ ವಿಜಯಪಡೆದ ಬಳಿಕವೂ ರಸನೇಂದ್ರಿಯವನ್ನು ತನ್ನ ವಶಪಡಿಸಿಕೊಳ್ಳುವ ತನಕ ಅವನು ಜಿತೇಂದ್ರಿಯನಾಗಲಾರನು. ರಸನೇಂದ್ರಿಯವನ್ನು ವಶಪಡಿಸಿ ಕೊಂಡಾಗಲಂತೂ ಎಲ್ಲ ಇಂದ್ರಿಯಗಳನ್ನು ವಶವಾದಂತೆಯೇ ಸರಿ. ॥ ೨೧ ॥

ಎಲೈ ರಾಜನೇ ! ಹಿಂದಿನಕಾಲದಲ್ಲಿ ವಿದೇಹನಗರ ಮಿಥಿಲೆಯಲ್ಲಿ ಓರ್ವ ಪಿಂಗಳಾ ಹೆಸರಿನ ವೇಶ್ಯೆ ಇರುತ್ತಿದ್ದಳು. ಅವಳಿಂದ ಕೆಲವನ್ನು ನಾನು ಕಲಿತುಕೊಂಡಿರುವುದನ್ನು ನಿನಗೆ ಹೇಳುತ್ತೇನೆ. ಮನಸ್ಸಿಟ್ಟು ಕೇಳು. ॥ ೨೨ ॥ ಅವಳು ಸ್ವೇಚ್ಛಾಚಾರಿಣಿಯಾಗಿದ್ದು ರೂಪವತಿಯೂ ಆಗಿದ್ದಳು. ಒಂದು ದಿನ ರಾತ್ರೆ ಯಾರೋ ಪುರುಷನನ್ನು ತನ್ನ ರಮಣಸ್ಥಾನಕ್ಕೆ ಬರಮಾಡಿಕೊಳ್ಳಲು ತುಂಬಾ ಉತ್ತಮ ವಸ್ತ್ರಾಭೂಷಣಗಳಿಂದ ಅಲಂಕರಿಸಿಕೊಂಡು ಅವಳು ಬಹಳ ಹೊತ್ತು ತನ್ನ ಮನೆಯ ಹೊರಬಾಗಿಲಲ್ಲಿ ನಿಂತಿದ್ದಳು. ॥ ೨೩ ॥ ಎಲೈ ಪುರುಷಶ್ರೇಷ್ಠ ! ಧನದ ಕಾಮನೆಯುಳ್ಳ ಅರ್ಥಲೋಲುಪ ಕಾಮಿನಿಯು ಯಾರೇ ಪುರುಷನು ಆತ್ತಕಡೆಯಿಂದ ಬರುವುದನ್ನು ಕಂಡರೆ, ಇವನು ಯಾರೋ ಶ್ರೀಮಂತನಿರುವನು, ನನಗೆ ಹಣವನ್ನು ಕೊಟ್ಟು ಉಪಭೋಗಿಸಲೆಂದೇ ಈ ಕಡೆ ಬರುತ್ತಿರುವನು ಎಂದು ಯೋಚಿಸುತ್ತಿದ್ದಳು. ॥ ೨೪ ॥

ಆ ಸಂಕೇತೋಪಜೀವಿಯಾದ ವೇಶ್ಯೆಯು ಪುನಃ ಯಾರಾದರೂ ವಿಟಪುರುಷರನ್ನು ನೋಡುತ್ತಲೇ, ಇವನು ನನ್ನ ಬಳಿಗೆ ಬರುತ್ತಿರುವನು. ನಾನು ಬಯಸಿದಷ್ಟು ಹಣವನ್ನು ಕೊಡುವನು ಎಂದು ಯೋಚಿಸುತ್ತಾಳೆ. ಆದರೆ ಅವನು ಮುಂದಕ್ಕೆ ಹೋದಾಗ, ಈಗಲಂತೂ ಖಂಡಿತವಾಗಿ ಯಾರಾದರೂ ನನಗೆ ಹೇರಳ ಧನವನ್ನು ಕೊಡುವ ಶ್ರೀಮಂತನು ಬಂದೇ ಬರುವನು ಎಂದು ಎಣಿಸಿದಳು. ॥ ೨೫ ॥ ಅವಳ ಮನಸ್ಸಿನ ಈ ದುರಾಸೆ ಬೆಳೆಯುತ್ತಲೇ ಇತ್ತು. ಅವಳು ಬಹಳ ಹೊತ್ತು ಬಾಗಿಲಲ್ಲಿ ನಿಂತೇ ಇದ್ದಳು. ನಿದ್ದೆಯು ದೂರವಾಯಿತು. ಅವಳು ಒಮ್ಮೆ ಒಳಗೂ ಒಮ್ಮೆ ಹೊರಗೂ ಅಲೆಯುತ್ತಿದ್ದಳು. ಹೀಗೆ ಅರ್ಧರಾತ್ರಿ ಕಳೆದು ಹೋಯಿತು. ॥ ೨೬ ॥

ರಾಜನೇ ! ನಿಜವಾಗಿಯೂ ಧನದ ಆಸೆಯು ತುಂಬಾ ಕೆಟ್ಟದು. ಶ್ರೀಮಂತರ ದಾರಿ ನೋಡಿ-ನೋಡಿ ಅವಳ ಬಾಯಿ ಒಣಗಿತು, ಚಿತ್ತ ವ್ಯಾಕುಲವಾಯಿತು. ಈಗ ಅವಳಿಗೆ ಈ ವೃತ್ತಿಯಲ್ಲಿ ವೈರಾಗ್ಯ ಉಂಟಾಯಿತು. ಅದರಲ್ಲಿ ದುಃಖ ಬುದ್ಧಿ ಉಂಟಾಯಿತು. ಆ ವಿರಾಗವೇ ಅವಳಿಗೆ ಸುಖಕ್ಕೆ ಕಾರಣವಾಯಿತು. ॥ ೨೭ ॥

ತಸ್ಯಾ ನಿರ್ವಿಣ್ಣಚಿತ್ತಾಯಾ ಗೀತಂ ಶೃಣು ಯಥಾ ಮಮ ।
ನಿರ್ವೇದ ಆಶಾಪಾಶಾನಾಂ ಪುರುಷಸ್ಯ ಯಥಾ ಹ್ಯಸಿಃ ॥ ೨೮ ॥

ನ ಹ್ಯಂಗಾಜಾತನಿರ್ವೇದೋ ದೇಹಬಂಧಂ ಜಿಹಾಸತಿ ।
ಯಥಾ ವಿಜ್ಞಾನರಹಿತೋ ಮನುಜೋ ಮಮತಾಂ ನೃಪ ॥ ೨೯ ॥

ಪಿಂಗಲೋವಾಚ

ಅಹೋ ಮೇ ಮೋಹವಿತತಿಂ ಪಶ್ಯತಾವಿಜಿತಾತ್ಮನಃ ।
ಯಾ ಕಾಂತಾದಸತಃ ಕಾಮಂ ಕಾಮಯೇ ಯೇನ ಬಾಲಿಶಾ ॥ ೩೦ ॥

ಸಂತಂ ಸಮೀಪೇ ರಮಣಂ ರತಿಪ್ರದಂ
ವಿತ್ತಪ್ರದಂ ನಿತ್ಯಮಿಮಂ ವಿಹಾಯ ।
ಅಕಾಮದಂ ದುಃಖಭಯಾಧಿಶೋಕ-
ಮೋಹಪ್ರದಂ ತುಚ್ಛಮಹಂ ಭಜೇಽಜ್ಞಾ ॥ ೩೧ ॥

ಅಹೋ ಮಯಾಽಽತ್ಮಾ ಪರಿತಾಪಿತೋ ವೃಥಾ
ಸಾಂಕೇತ್ಯವೃತ್ತ್ಯಾತಿವಿಗರ್ಹ್ಯವಾರ್ತಯಾ ।
ಸ್ತ್ರೈಣಾನ್ನರಾದ್ಯಾರ್ಥತೃಷೋಽನುಶೋಚ್ಯಾತ್
ಕ್ರೀತೇನ ವಿತ್ತಂ ರತಿಮಾತ್ಮನೇಚ್ಛತೀ ॥ ೩೨ ॥

ಯದಸ್ಥಿಭಿರ್ನಿರ್ಮಿತವಂಶವಂಶ್ಯ-
ಸ್ಥೂಣಂ ತ್ವಚಾ ರೋಮನಖೈಃ ಪಿನದ್ಧಮ್ ।
ಕ್ಷರನ್ನವದ್ವಾರಮಗಾರಮೇತದ್
ವಿಣ್ಮೂತ್ರಪೂರ್ಣಂ ಮದುಪೈತಿ ಕಾನ್ಯಾ ॥ ೩೩ ॥

ವಿದೇಹಾನಾಂ ಪುರೇ ಹ್ಯಸ್ಮಿನ್ನಹಮೇಕೈವ ಮೂಢಧೀಃ ।
ಯಾನ್ಯಮಿಚ್ಛಂತ್ಯಸತ್ಯಸ್ಮಾದಾತ್ಮದಾತ್ಕಾಮಮಚ್ಯುತಾತ್ ॥ ೩೪ ॥

ಪಿಂಗಳೆಯ ಚಿತ್ತದಲ್ಲಿ ಈ ಪ್ರಕಾರ ವೈರಾಗ್ಯದ ಭಾವನೆ ಜಾಗ್ರತವಾದಾಗ ಅವಳು ಈ ಗೀತೆಯನ್ನು ಹಾಡಿದಳು. ಅದನ್ನು ಕೇಳು – "ವೈರಾಗ್ಯವೇ ಆಶಾರೂಪೀ ಉರುಳನ್ನು ಕತ್ತರಿಸುವಂತಹ ಹರಿತವಾದ ಖಡ್ಗವಾಗಿದೆ." ವೈರಾಗ್ಯವಿಲ್ಲದೆ ಮನುಷ್ಯನ ದುಃಖದ ನಿವೃತ್ತಿ ಆಗುವುದಿಲ್ಲ. ॥ ೨೮ ॥ ಪ್ರಿಯರಾಜನೇ! ಯಾರಿಗೆ ವೈರಾಗ್ಯ ಉಂಟಾಗಲಿಲ್ಲವೋ, ಈ ಜಂಜಾಟದಿಂದ ನಿರಾಸಕ್ತನಾಗುವುದಿಲ್ಲವೋ ಆ ಅಜ್ಞಾನಿ ಪುರುಷನು ಮಮತೆಯನ್ನು ಬಿಡಲು ಇಚ್ಛಿಸುವುದಿಲ್ಲ, ಹಾಗೆಯೇ ಈ ಶರೀರಾದಿ ಬಂಧನಗಳನ್ನು ತೊರೆಯಲು ಬಯಸುವುದಿಲ್ಲ. ॥ ೨೯ ॥

ಪಿಂಗಳೆಯು ಈ ಗೀತೆಯನ್ನು ಹಾಡಿದಳು – ಅಯ್ಯೋ! ನಾನು ಇಂದ್ರಿಯಗಳಿಗೆ ಅಧೀನನಾದೆಯಲ್ಲ! ಇದು ಬಹು ದುಃಖದ ಮಾತಾಗಿದೆ. ನನ್ನ ಮೂರ್ಖತೆಯನ್ನು, ನನ್ನ ಮೋಹದ ವಿಸ್ತಾರವಾದರೋ ನೋಡಿ! ನನ್ನ ಕಾಂತನಲ್ಲದ ಜನರೊಂದಿಗೆ ನಾನು ಕಾಮನೆ ಮಾಡಿದೆನಲ್ಲ! ॥ ೩೦ ॥ ನನ್ನ ಪರಮ ಕಾಂತನಾದರೋ ಶಾಶ್ವತವಾಗಿ ನನ್ನ ಬಳಿಯೇ ಇರುವನು. ಅವನು ಪರಮಾನಂದ ಸ್ವರೂಪನೂ, ಸುಖಪ್ರದಾತನೂ, ಲಕ್ಷ್ಮೀಪತಿಯೂ ಆಗಿರುವ ಕಾರಣದಿಂದ ಧನವನ್ನೂ ಕೊಡುವವನಾಗಿರುವನು. ನನ್ನ ಹೃದಯದಲ್ಲೇ ವಿರಾಜಮಾನನಾದ ಇಂತಹ ಪ್ರಭುವು ಇರುವಾಗ ಅವನನ್ನು ಬಿಟ್ಟು, ಯಥೇಷ್ಟ ಭೋಗವನ್ನು ಸಂಪಾದಿಸಲು ಅಸಮರ್ಥರೂ, ದುಃಖ, ಭಯ, ಆಧಿ–ವ್ಯಾಧಿ, ಶೋಕ, ಮೋಹ ಇವನ್ನು ಕೊಡುವವರೂ ಆದ ಜನರನ್ನು ನಾನು ಸೇವಿಸಿದೆನಲ್ಲ! ಆದ್ದರಿಂದ ನಾನು ಮೂರ್ಖಳಾಗಿದ್ದೇನೆ. ॥ ೩೧ ॥ ನಾನು ಅತ್ಯಂತ ನಿಂದನೀಯ ಆಜೀವಿಕೆಯಾದ ವೇಶ್ಯಾವೃತ್ತಿಯನ್ನು ಆಶ್ರಯಿಸಿದೆ. ವ್ಯರ್ಥವಾಗಿ ನನ್ನ ಶರೀರವನ್ನೂ, ಮನವನ್ನೂ ಮಾರಿಬಿಟ್ಟೆ. ಲಂಪಟರೂ, ಲೋಭಿಗಳೂ, ನಿಂದನೀಯರೂ ಆದ ಮನುಷ್ಯರು ಇದನ್ನು ಕೊಂಡುಕೊಂಡರು. ನಾನು ಇದೇ ಶರೀರದಿಂದ ಧನ ಮತ್ತು ರತಿಸುಖವನ್ನು ಬಯಸಿದೆನಲ್ಲ! ಇದು ಎಂತಹ ದುಃಖದ ಮಾತಾಗಿದೆ. ನನಗೆ ಧಿಕ್ಕಾರವಿರಲಿ! ॥ ೩೨ ॥

ಕಂಬಗಳನ್ನು ನೆಟ್ಟು ಮನೆಯನ್ನು ನಿಲ್ಲಿಸುವಂತೆ ಬೆನ್ನು ಹುರಿ, ಎಲುಬುಗಳಿಂದ ಈ ಶರೀರವೆಂಬ ಮನೆಯು ನಿರ್ಮಾಣಗೊಂಡಿದೆ. ಇದನ್ನು ನಖ, ಚರ್ಮ, ರೋಮಗಳಿಂದ ಮುಚ್ಚಲಾಗಿದೆ. ಇದಕ್ಕೆ ಇರುವ ಒಂಭತ್ತು ಬಾಗಿಲುಗಳಿಂದ ಯಾವಾಗಲೂ ಮಲ–ಮೂತ್ರ ಮುಂತಾದವುಗಳು ಒಸರುತ್ತಿರುತ್ತವೆ. ಇಂತಹ ಅಸ್ಥಿಪಂಜರವಾದ, ನಿಂದ್ಯವಾದ ಶರೀರವನ್ನೇ ಪ್ರಿಯವೆಂದು ತಿಳಿದು ಸೇವಿಸುವ ಸ್ತ್ರೀಯು ನಾನಲ್ಲದೆ ಬೇರೆ ಯಾರು ಇರಬಲ್ಲಳು? ॥ ೩೩ ॥ ಇದಾದರೋ ವಿದೇಹಿಗಳ ನಗರವಾಗಿದೆ. ಆದರೆ ಇದರಲ್ಲಿ ನಾನೊಬ್ಬಳೇ ಎಲ್ಲರಿಗಿಂತ ಮೂರ್ಖಳೂ, ದುಷ್ಟಳೂ ಆಗಿರುವೆನು. ಏಕೆಂದರೆ, ನಾನೊಬ್ಬಳೇ ಆತ್ಮದಾನೀ, ಅವಿನಾಶೀ ಹಾಗೂ ಪರಮ ಪ್ರಿಯತಮ ಪರಮಾತ್ಮನನ್ನು ಬಿಟ್ಟು ಬೇರೆ ಪುರುಷರ ಅಭಿಲಾಷೆ ಮಾಡುತ್ತಿರುವೆನಲ್ಲ! ॥ ೩೪ ॥

ಸುಹೃತ್ ಪ್ರೇಷ್ಠತಮೋ ನಾಥ ಆತ್ಮಾ ಚಾಯಂ ಶರೀರಿಣಾಮ್ ।
ತಂ ವಿಕ್ರೀಯಾತ್ಮನೈವಾಹಂ ರಮೇಽನೇನ ಯಥಾ ರಮಾ ॥ ೩೫ ॥

ಕಿಯತ್ ಪ್ರಿಯಂ ತೇ ವ್ಯಭಜನ್ ಕಾಮಾ ಯೇ ಕಾಮದಾ ನರಾಃ ।
ಆದ್ಯಂತವಂತೋ ಭಾರ್ಯಾಯಾ ದೇವಾ ವಾ ಕಾಲವಿದ್ರುತಾಃ ॥ ೩೬ ॥

ನೂನಂ ಮೇ ಭಗವಾನ್ ಪ್ರೀತೋ ವಿಷ್ಣುಃ ಕೇನಾಪಿ ಕರ್ಮಣಾ ।
ನಿರ್ವೇದೋಽಯಂ ದುರಾಶಾಯಾ ಯನ್ಮೇ ಜಾತಃ ಸುಖಾವಹಃ ॥ ೩೭ ॥

ಮೈವಂ ಸ್ಯುರ್ಮಂದಭಾಗ್ಯಾಯಾಃ ಕ್ಲೇಶಾ ನಿರ್ವೇದಹೇತವಃ ।
ಯೇನಾನುಬಂಧಂ ನಿರ್ಹೃತ್ಯ ಪುರುಷಃ ಶಮಮೃಚ್ಛತಿ ॥ ೩೮ ॥

ತೇನೋಪಕೃತಮಾದಾಯ ಶಿರಸಾ ಗ್ರಾಮ್ಯಸಂಗತಾಃ ।
ತ್ಯಕ್ತ್ವಾ ದುರಾಶಾಃ ಶರಣಂ ವ್ರಜಾಮಿ ತಮಧೀಶ್ವರಮ್ ॥ ೩೯ ॥

ಸಂತುಷ್ಟಾ ಶ್ರದ್ದಧತ್ಯೇತದ್ಯಥಾಲಾಭೇನ ಜೀವತೀ ।
ವಿಹರಾಮ್ಯಮುನೈವಾಹಮಾತ್ಮನಾ ರಮಣೇನ ವೈ ॥ ೪೦ ॥

ಸಂಸಾರಕೂಪೇ ಪತಿತಂ ವಿಷಯೈರ್ಮುಷಿತೇಕ್ಷಣಮ್ ।
ಗ್ರಸ್ತಂ ಕಾಲಾಹಿನಾಽಽತ್ಮಾನಂ ಕೋಽನ್ಯಸ್ತ್ರಾತುಮಧೀಶ್ವರಃ ॥ ೪೧ ॥

ಆತ್ಮೈವ ಹ್ಯಾತ್ಮನೋ ಗೋಪ್ತಾ ನಿರ್ವಿದ್ಯೇತ ಯದಾಖಿಲಾತ್ ।
ಅಪ್ರಮತ್ತ ಇದಂ ಪಶ್ಯೇದ್ ಗ್ರಸ್ತಂ ಕಾಲಾಹಿನಾ ಜಗತ್ ॥ ೪೨ ॥

ಬ್ರಾಹ್ಮಣ ಉವಾಚ

ಏವಂ ವ್ಯವಸಿತಮತಿರ್ದುರಾಶಾಂ ಕಾಂತತರ್ಷಜಾಮ್ ।
ಛಿತ್ತ್ವೋಪಶಮಮಾಸ್ಥಾಯ ಶಯ್ಯಾಮುಪವಿವೇಶ ಸಾ ॥ ೪೩ ॥

ನನ್ನ ಹೃದಯದಲ್ಲಿ ವಿರಾಜಮಾನನಾದ ಪ್ರಭುವೇ ಸಮಸ್ತ ಪ್ರಾಣಿಗಳ ಹಿತೈಷಿಯೂ, ಸುಹೃದನೂ, ಪ್ರಿಯತಮನೂ, ಒಡೆಯನೂ, ಆತ್ಮನೂ ಆಗಿರುವನು. ಈಗ ನಾನು ನನ್ನನ್ನೇ ಕೊಟ್ಟು ಕೊಂಡು ಅವನನ್ನು ಕೊಂಡುಕೊಳ್ಳುವೆನು. ಅವನೊಡನೆ ಲಕ್ಷ್ಮೀದೇವಿಯು ವಿಹರಿಸುವಂತೆ ನಾನೂ ವಿಹರಿಸುವೆನು. ॥ ೩೫ ॥ ಆದಿ ಮತ್ತು ಅಂತ್ಯವುಳ್ಳ ನಶ್ವರವಾದ ಕಾಮೋಪಭೋಗಗಳಾಗಲೀ, ಆ ಕಾಮೋಪಭೋಗಗಳನ್ನು ಒದಗಿಸಿಕೊಡುವ ಪುರುಷರಾಗಲೀ, ಕಾಲದಿಂದ ನಷ್ಟರಾಗಿ ಹೋಗುವ ದೇವತೆಗಳಾಗಲೀ, ತಮ್ಮ ಭಾರ್ಯೆಯರಿಗೆ ಯಾವ ಸಂತೋಷವನ್ನು ನೀಡಬಲ್ಲರು ? ಪರಮಾತ್ಮನು ದಯಪಾಲಿಸುವ ಆತ್ಮಸುಖದ ಮುಂದೆ ಮನುಷ್ಯರು ಅಥವಾ ದೇವತೆಗಳು ತಮ್ಮ ಭಾರ್ಯೆಯರಿಗೆ ಕೊಡುವ ಸುಖವು ಅತಿ ತುಚ್ಛವಾದುದು. ॥ ೩೬ ॥ ನನ್ನ ಯಾವುದೋ ಶುಭಕರ್ಮದಿಂದ ಭಗವಾನ್ ವಿಷ್ಣುವು ಅವಶ್ಯವಾಗಿ ನನ್ನ ಮೇಲೆ ಪ್ರಸನ್ನನಾಗಿರುವನು. ಅದಕ್ಕಾಗಿಯೇ ದುರಾಸೆಯಿಂದ ನನಗೆ ಈ ವಿಧವಾದ ವೈರಾಗ್ಯ ಉಂಟಾಯಿತು. ನನ್ನ ಈ ವೈರಾಗ್ಯವು ಅವಶ್ಯವಾಗಿ ಸುಖಕೊಡುವಂತಹುದಾದೀತು. ॥ ೩೭ ॥ ನನಗೆ ದುಃಖ ಉಂಟಾಯಿತು, ಇದೇ ನನಗೆ ವೈರಾಗ್ಯಕ್ಕೆ ಕಾರಣವಾಯಿತು. ಆದ್ದರಿಂದ ನಾನು ಭಾಗ್ಯಹೀನಳಲ್ಲ, ಏಕೆಂದರೆ, ಇದೇ ವೈರಾಗ್ಯದಿಂದ ಮನುಷ್ಯನು ತನ್ನ ಬಂಧನಗಳನ್ನು ಕಳಕೊಂಡು ಪರಮಶಾಂತಿಯನ್ನು ಪಡೆಯುತ್ತಾನೆ. ॥ ೩೮ ॥ ಈಗ ನಾನು ಆ ಭಗವಂತನ ಈ ಮಹೋಪಕಾರವನ್ನು ಆದರಪೂರ್ವಕ ತಲೆಬಾಗಿ ಸ್ವೀಕರಿಸುತ್ತೇನೆ. ಇನ್ನು ವಿಷಯಭೋಗಗಳ ದುರಾಸೆಯನ್ನು ಬಿಟ್ಟು ಆ ಜಗದೀಶ್ವರನಿಗೇ ಶರಣುಹೋಗುವೆನು. ॥ ೩೯ ॥ ಇನ್ನು ಮುಂದೆ ನಾನು ಪ್ರಾರಬ್ಧಾನುಸಾರ ದೊರೆತುದರಲ್ಲೇ ಜೀವನ ನಿರ್ವಾಹ ಮಾಡುವೆನು. ಬಹಳ ಸಂತೋಷ ಮತ್ತು ಶ್ರದ್ಧೆಯಿಂದೊಡಗೂಡಿ ಇರುವೆನು. ಇನ್ನು ನಾನು ಯಾವುದೇ ಬೇರೆ ಪುರುಷರತ್ತ ಕಣ್ಣೆತ್ತಿಯೂ ನೋಡದೆ, ನನ್ನ ಹೃದಯೇಶ್ವರ, ಆತ್ಮಸ್ವರೂಪೀ ಪ್ರಭುವಿನೊಂದಿಗೆ ವಿಹರಿಸುವೆನು. ॥ ೪೦ ॥ ಈ ಜೀವಿಯು ಸಂಸಾರ ಕೂಪದಲ್ಲಿ ಬಿದ್ದಿರುವುದು. ವಿಷಯಗಳು ಇವನನ್ನು ಕುರುಡಾಗಿಸಿವೆ. ಕಾಲರೂಪೀ ಅಜಗರವು ಇವನನ್ನು ತನ್ನ ಬಾಯಲ್ಲಿ ಕಚ್ಚಿಕೊಂಡಿದೆ. ಈಗ ಭಗವಂತನನ್ನು ಬಿಟ್ಟು ಇವನನ್ನು ರಕ್ಷಿಸುವವರು ಬೇರೆ ಯಾರು ಸಮರ್ಥರಾಗಿರುವರು ? ॥ ೪೧ ॥ ಜೀವಿಯು ಸಮಸ್ತ ವಿಷಯಗಳಿಂದ ವಿರಕ್ತನಾದಾಗ ಅವನು ಸ್ವತಃ ತನ್ನನ್ನು ರಕ್ಷಿಸಿಕೊಳ್ಳುತ್ತಾನೆ. ಅದಕ್ಕಾಗಿ ಇಡೀ ಜಗತ್ತು ಕಾಲರೂಪೀ ಅಜಗರಕ್ಕೆ ತುತ್ತಾಗಿದೆ ಎಂಬುದನ್ನು ಎಚ್ಚರಿಕೆಯಿಂದ ಗಮನಿಸುತ್ತಿರಬೇಕು. ॥ ೪೨ ॥

ಅವಧೂತ ದತ್ತಾತ್ರೇಯರು ಹೇಳುತ್ತಾರೆ – ರಾಜನೇ! ಪಿಂಗಳೆ ವೇಶ್ಯೆಯು ಹೀಗೆ ನಿಶ್ಚಯಿಸಿಕೊಂಡು ತನ್ನ ಪ್ರಿಯ ಶ್ರೀಮಂತರ ದುರಾಸೆಯನ್ನು, ವಿಟರನ್ನು ಸೇರುವ ಲಾಲಸೆಯನ್ನು

ಆಶಾ ಹಿ ಪರಮಂ ದುಃಖಂ ನೈರಾಶ್ಯಂ ಪರಮಂ ಸುಖಮ್ ।
ಯಥಾ ಸಂಛಿದ್ಯ ಕಾಂತಾಶಾಂ ಸುಖಂ ಸುಷ್ವಾಪ ಪಿಂಗಲಾ ॥ ೪೪ ॥

ಪರಿತ್ಯಜಿಸಿ, ಶಾಂತಭಾವದಿಂದ ಹೋಗಿ ತನ್ನ ಹಾಸಿಗೆಯಲ್ಲಿ ಮಲಗಿಕೊಂಡಳು. ॥ ೪೩ ॥ ನಿಜವಾಗಿಯೂ ಆಸೆಯೇ ಎಲ್ಲಕ್ಕಿಂತ ದೊಡ್ಡ ದುಃಖವಾಗಿದೆ, ನಿರಾಸೆಯೇ ಎಲ್ಲಕ್ಕಿಂತ ಭಾರೀ ಸುಖವಾಗಿದೆ. ಏಕೆಂದರೆ, ಪಿಂಗಳೆವೇಶ್ಯೆಯು ಪುರುಷರ ಆಸೆಯನ್ನು ತೊರೆದಾಗಲೇ ಅವಳು ಸುಖವಾಗಿ ಮಲಗಲು ಸಾಧ್ಯವಾಯಿತು. ॥ ೪೪ ॥

ಎಂಟನೆಯ ಅಧ್ಯಾಯವು ಮುಗಿಯಿತು. ॥ ೮ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಏಕಾದಶ ಸ್ಕಂಧೇ ಅಷ್ಟಮೋಽಧ್ಯಾಯಃ ॥ ೮ ॥

ಒಂಭತ್ತನೆಯ ಅಧ್ಯಾಯ

ಅವಧೂತೋಪಾಖ್ಯಾನ – ಕುರರಪಕ್ಷಿಯಿಂದ ಹಿಡಿದು ಭೃಂಗದವರೆಗಿನ ಏಳು ಗುರುಗಳ ಕಥೆ

ಬ್ರಾಹ್ಮಣ ಉವಾಚ

ಪರಿಗ್ರಹೋ ಹಿ ದುಃಖಾಯ ಯದ್ಯತ್ಪ್ರಿಯತಮಂ ನೃಣಾಮ್ ।
ಅನಂತಂ ಸುಖಮಾಪ್ನೋತಿ ತದ್ವಿದ್ವಾನ್ ಯಸ್ತ್ವಕಿಂಚನಃ ॥ ೧ ॥

ಬ್ರಾಹ್ಮಣಶ್ರೇಷ್ಠರಾದ ಅವಧೂತ ದತ್ತಾತ್ರೇಯರು ಹೇಳುತ್ತಾರೆ – ರಾಜನೇ! ಮನುಷ್ಯನಿಗೆ ಪ್ರಿಯವೆನಿಸಿದ ವಸ್ತು, ಪದಾರ್ಥಗಳನ್ನೇ ಪರಿಗ್ರಹ, ಸಂಗ್ರಹಮಾಡುತ್ತಾನೆ. ಅವೇ ಅವನ ದುಃಖಕ್ಕೆ ಕಾರಣವಾಗುತ್ತವೆ. ಆದರೆ ಅಕಿಂಚನನೂ, ಅಪರಿಗ್ರಹನೂ ಆದ ವಿದ್ವಾಂಸನು ಆನಂದವನ್ನು ಅನುಭವಿಸುತ್ತಾನೆ. ಆದ್ದರಿಂದ ಶ್ರೇಯೋಕಾಮಿ ಮನುಷ್ಯನು ಸಂಗ್ರಹದಿಂದ ದೂರವುಳಿಯಬೇಕು. ॥ ೧ ॥

ಸಾಮಿಷಂ ಕುರರಂ ಜಘ್ನುರ್ಬಲಿನೋ ಯೇ ನಿರಾಮಿಷಾಃ ।
ತದಾಮಿಷಂ ಪರಿತ್ಯಜ್ಯ ಸ ಸುಖಂ ಸಮವಿಂದತ ॥ ೨ ॥

(ಕುರರಪಕ್ಷಿಯ ದೃಷ್ಟಾಂತವನ್ನು ಕೊಟ್ಟು ಹೇಳುತ್ತಾರೆ –) ಯಾವುದೋ ಕುರರ ಪಕ್ಷಿಗೆ ಎಲ್ಲೋ ಒಂದು ಮಾಂಸದ ತುಂಡು ಸಿಕ್ಕಿತು. ಅದನ್ನು ಕೊಕ್ಕಿನಲ್ಲಿ ಕಚ್ಚಿಕೊಂಡು ಹಾರುವಾಗ ಅದನ್ನು ನೋಡಿ ಬೇರೆ ಮಾಂಸದ ಲೋಭಿಪಕ್ಷಿಗಳು ಅದನ್ನು ಆಕ್ರಮಿಸಿ ಪೀಡಿಸತೊಡಗಿದವು. ಆಗ ಆ ಪಕ್ಷಿಯು ಮಾಂಸದ ತುಂಡನ್ನು ಎಸೆದುಬಿಡಲು ಆಕ್ರಮಣದಿಂದ ಪಾರಾಗಿ ಸುಖಿಯಾಯಿತು. ಇದರಿಂದ ಸಂಗ್ರಹಿಸುವುದನ್ನು ಆಪತ್ತಿನ ಮೂಲವೆಂಬುದನ್ನು ತಿಳಿಯಬೇಕು. ॥ ೨ ॥

ನ ಮೇ ಮಾನಾವಮಾನೌ ಸ್ತೋ ನ ಚಿಂತಾ ಗೇಹಪುತ್ರಿಣಾಮ್ ।
ಆತ್ಮಕ್ರೀಡ ಆತ್ಮರತಿರ್ವಿಚರಾಮೀಹ ಬಾಲವತ್ ॥ ೩ ॥

ದ್ವಾವೇವ ಚಿಂತಯಾ ಮುಕ್ತೌ ಪರಮಾನಂದ ಆಪ್ಲುತೌ ।
ಯೋ ವಿಮುಗ್ಧೋ ಜಡೋ ಬಾಲೋ ಯೋ ಗುಣೇಭ್ಯಃ ಪರಂ ಗತಃ ॥ ೪ ॥

(ಬಾಲಕನ (ಮಗು) ಉದಾಹರಣೆಯಿಂದ ತಿಳಿಸುತ್ತಿದ್ದಾರೆ –) ಸಣ್ಣ ಬಾಲಕನು ತಾನೇ-ತನ್ನಲ್ಲಿ ರಮಮಾಣವಾಗಿದ್ದು, ನಿಶ್ಚಿಂತವಾಗಿರುತ್ತಾನೆ. ಹಾಗೆಯೇ ನಾನೂ ನನ್ನ ಆತ್ಮಾನಂದದಲ್ಲಿ ಮಗ್ನನಾಗಿರುತ್ತೇನೆ. ಮಾನ ಬರಲೀ, ಅಪಮಾನವಾಗಲೀ, ಅದರ ಪರಿಣಾಮ ನನ್ನ ಮೇಲೆ ಏನೂ ಆಗುವುದಿಲ್ಲ ಹಾಗೂ ಮನೆ ಪರಿವಾರ ಚಿಂತೆಯೂ ನನಗಿಲ್ಲ. ಪ್ರಪಂಚದಲ್ಲಿ ಇಬ್ಬರೇ ಚಿಂತೆಯಿಂದ ಮುಕ್ತರಾಗಿದ್ದಾರೆ. ಒಂದು ಮುಗ್ಧ ಮಗು, ಇನ್ನೊಬ್ಬ ಗುಣಾತೀತ ಯೋಗಿ. ಇವರಿಬ್ಬರೂ ಪರಮ ಆನಂದದಲ್ಲಿ ಮಗ್ನರಾಗಿರುತ್ತಾರೆ. ॥ ೩-೪ ॥

ಕ್ವಚಿತ್ ಕುಮಾರೀ ತ್ವಾತ್ಮಾನಂ ವೃಣಾನಾನ್ ಗೃಹಮಾಗತಾನ್ ।
ಸ್ವಯಂ ತಾನರ್ಹಯಾಮಾಸ ಕ್ವಾಪಿ ಯಾತೇಷು ಬಂಧುಷು
॥ ೫ ॥

ತೇಷಾಮಭ್ಯವಹಾರಾರ್ಥಂ ಶಾಲೀನ್ರಹಸಿ ಪಾರ್ಥಿವ ।
ಅವಘ್ನಂತ್ಯಾಃ ಪ್ರಕೋಷ್ಠಸ್ಥಾಶ್ಚಕ್ರುಃ ಶಂಖಾಃ ಸ್ವನಂ ಮಹತ್
॥ ೬ ॥

ಸಾ ತಜ್ಜುಗುಪ್ಸಿತಂ ಮತ್ವಾ ಮಹತೀ ವ್ರೀಡಿತಾ ತತಃ ।
ಬಭಂಜೈಕೈಕಶಃ ಶಂಖಾನ್ ದ್ವೌ ದ್ವೌ ಪಾಣ್ಯೋರಶೇಷಯತ್
॥ ೭ ॥

ಉಭಯೋರಪ್ಯಭೂದ್ಘೋಷೋ ಹ್ಯವಘ್ನಂತ್ಯಾಃ ಸ್ಮ ಶಂಖಯೋಃ ।
ತತ್ರಾಪ್ಯೇಕಂ ನಿರಭಿದದೇಕಸ್ಮಾನ್ನಾಭವದ್ಧ್ವನಿಃ
॥ ೮ ॥

ಅನ್ವಶಿಕ್ಷಮಿಮಂ ತಸ್ಯಾ ಉಪದೇಶಮರಿಂದಮ ।
ಲೋಕಾನನುಚರನ್ನೇತಾನ್ ಲೋಕತತ್ತ್ವವಿವಿತ್ಸಯಾ
॥ ೯ ॥

ವಾಸೇ ಬಹೂನಾಂ ಕಲಹೋ ಭವೇದ್ವಾರ್ತಾ ದ್ವಯೋರಪಿ ।
ಏಕ ಏವ ಚರೇತ್ತಸ್ಮಾತ್ ಕುಮಾರ್ಯಾ ಇವ ಕಂಕಣಃ
॥ ೧೦ ॥

ಮನ ಏಕತ್ರ ಸಂಯುಂಜ್ಯಾಜ್ಜಿತಶ್ವಾಸೋ ಜಿತಾಸನಃ ।
ವೈರಾಗ್ಯಾಭ್ಯಾಸಯೋಗೇನ ಧ್ರಿಯಮಾಣಮತಂದ್ರಿತಃ
॥ ೧೧ ॥

ಯಸ್ಮಿನ್ ಮನೋ ಲಬ್ಧಪದಂ ಯದೇತ-
ಚ್ಛನೈಃ ಶನೈರ್ಮುಂಚತಿ ಕರ್ಮರೇಣೂನ್ ।
ಸತ್ತ್ವೇನ ವೃದ್ಧೇನ ರಜಸ್ತಮಶ್ಚ
ವಿಧೂಯ ನಿರ್ವಾಣಮುಪೈತ್ಯನಿಂಧನಮ್ ॥ ೧೨ ॥

ತದೈವಮಾತ್ಮನ್ಯವರುದ್ಧಚಿತ್ತೋ
ನ ವೇದ ಕಿಂಚಿದ್ಬಹಿರಂತರಂ ವಾ ।
ಯಥೇಷುಕಾರೋ ನೃಪತಿಂ ವ್ರಜಂತ-
ಮಿಷೌ ಗತಾತ್ಮಾ ನ ದದರ್ಶ ಪಾರ್ಶ್ವೇ ॥ ೧೩ ॥

(ಈಗ ಕುಮಾರಿಯೊಬ್ಬಳ ಉದಾಹರಣೆಯನ್ನು ತಿಳಿಸುತ್ತಾರೆ –) ಒಮ್ಮೆ ಕುಮಾರಿಯೋರ್ವಳ ಮನೆಗೆ ಕನ್ಯಾವರಣಕ್ಕಾಗಿ ಕೆಲವರು ಬಂದರು. ಅಂದು ಉಳಿದ ಮನೆಯವರೆಲ್ಲರೂ ಎಲ್ಲೋ ಹೊರಗೆ ಹೋಗಿದ್ದರು. ಅದಕ್ಕಾಗಿ ಅವಳು ಸ್ವತಃ ಅವರ ಆದರ-ಆತಿಥ್ಯ ಮಾಡಬೇಕಾಗಿ ಬಂತು. ॥ ೫ ॥

ರಾಜನೇ! ಬಂದ ಅತಿಥಿಗಳಿಗೆ ಭೋಜನಕ್ಕಾಗಿ ಅವಳು ಮನೆಯೊಳಗೆ ಏಕಾಂತದಲ್ಲಿ ಭತ್ತ ಕುಟ್ಟುತ್ತಿದ್ದಳು. ಆಗ ಅವಳು ತೊಟ್ಟುಕೊಂಡಿದ್ದ ಶಂಖದ ಬಳೆಗಳು ಒಂದಕ್ಕೊಂದು ತಗುಲಿ ಶಬ್ದಮಾಡತೊಡಗಿದವು. ಈ ಶಬ್ದವನ್ನು ನಿಂದಿತವೆಂದು ತಿಳಿದು ಕುಮಾರಿಗೆ ತುಂಬಾ ನಾಚಿಕೆಯಾಯಿತು.* ಅವಳು ಒಂದೊಂದಾಗಿ ಬಳೆಗಳನ್ನು ಒಡೆದು ಹಾಕಿ ಕೊನೆಗೆ ಎರಡೆರಡು ಬಳೆಗಳು ಉಳಿದವು. ॥ ೬-೭ ॥ ಅವಳು ಪುನಃ ಭತ್ತ ಕುಟ್ಟಲು ಪ್ರಾರಂಭಿಸಿದಳು. ಆದರೆ ಆ ಎರಡೆರಡು ಬಳೆಗಳೂ ಸದ್ದು ಮಾಡುತ್ತಿದ್ದವು. ಕೊನೆಗೆ ಅದರಲ್ಲಿ ಒಂದೊಂದನ್ನು ಒಡೆದುಹಾಕಿ ಕೇವಲ ಒಂದೊಂದೇ ಬಳೆ ಉಳಿಯಿತು. ಆಗ ಯಾವ ಸದ್ದೂ ಉಂಟಾಗುತ್ತಿರಲಿಲ್ಲ. ॥ ೮ ॥ ಶತ್ರುಸೂದನಾ! ಆಗಲೇ ವ್ಯವಹಾರವನ್ನು ತಿಳಿಯುವ ಇಚ್ಛೆಯಿಂದ ನಾನೂ ಅಲ್ಲಿಗೆ ತಲುಪಿದೆ. ಆಗ ನಾನು ಅವಳಿಂದ ಈ ಶಿಕ್ಷಣವನ್ನು ಪಡೆದುಕೊಂಡೆ. ಅನೇಕ ಜನರು ಒಟ್ಟಿಗೆ ಒಂದೆಡೆ ಇದ್ದರೆ ಕಲಹ ಉಂಟಾಗುತ್ತದೆ. ಇಬ್ಬರು ಜೊತೆಯಲ್ಲಿದ್ದರೂ ವ್ಯರ್ಥವಾದ ಮಾತುಗಳು ನಡೆಯುತ್ತವೆ. ಆದಕ್ಕಾಗಿ ಆ ಹೆಣ್ಣುಮಗಳ ಬಳೆಗಳಂತೆ ಒಬ್ಬನೇ ಸಂಚರಿಸಬೇಕು. ॥ ೯-೧೦ ॥

ರಾಜನೇ! ಆಸನ ಮತ್ತು ಪ್ರಾಣಾಯಾಮದ ಮೂಲಕ ಶ್ವಾಸವನ್ನು ಗೆದ್ದು ವೈರಾಗ್ಯ ಹಾಗೂ ಅಭ್ಯಾಸದಿಂದ ತನ್ನ ಮನವನ್ನು ವಶಪಡಿಸಿಕೊಳ್ಳಬೇಕು. ಮತ್ತೆ ಬಹಳ ಜಾಗರೂಕತೆಯಿಂದ ಅದನ್ನು ಒಂದು ಗುರಿಯಲ್ಲಿ ನೆಲೆಗೊಳಿಸಬೇಕು. ಇದನ್ನು ನಾನು ಬಾಣವನ್ನು ತಯಾರಿಸುವವನಿಂದ ಕಲಿತೆನು. ॥ ೧೧ ॥ ಪರಮಾನಂದ ಸ್ವರೂಪೀ ಪರಮಾತ್ಮನಲ್ಲಿ ಮನಸ್ಸು ಸ್ಥಿರವಾದಾಗ ಅದು ಕ್ರಮವಾಗಿ ಕರ್ಮವಾಸನೆಯ ಧೂಳನ್ನು ತೊಳೆದುಬಿಡುತ್ತದೆ. ಸತ್ತ್ವಗುಣದ ವೃದ್ಧಿಯಾಗುತ್ತದೆ. ರಜೋಗುಣ ಮತ್ತು ತಮೋಗುಣ ಇವುಗಳ ವೃತ್ತಿಗಳನ್ನು ತ್ಯಾಗಗೈದು ಮನಸ್ಸು – ಕಟ್ಟಿಗೆ ಇಲ್ಲದ ಅಗ್ನಿಯು ಶಾಂತವಾಗುವಂತೆ ಶಾಂತವಾಗುತ್ತದೆ. ॥ ೧೨ ॥ ಈ ವಿಧವಾಗಿ ಚಿತ್ತವು ತನ್ನ ಆತ್ಮನಲ್ಲೇ ಸ್ಥಿರ-ನಿರುದ್ಧನಾದವನಿಗೆ ಒಳ-ಹೊರಗೆ ಎಲ್ಲಿಯೂ ಯಾವುದೇ ಪದಾರ್ಥದ ಎಚ್ಚರವಿರುವುದಿಲ್ಲ. ಓರ್ವ ಕಮ್ಮಾರನು ಬಾಣವನ್ನು ತಯಾರಿಸುತ್ತಿದ್ದನು. ಅವನ ಬಳಿಯಿಂದಲೇ ಭೇರಿ, ನಗಾರಿ, ಕಹಳೆ ಮುಂತಾದ ವಾದ್ಯಗಳೊಂದಿಗೆ ರಾಜನ ಮೆರವಣಿಗೆ ಹೊರಟಿತ್ತು. ಆದರೆ ಅವನಿಗೆ ಇದರ ಅರಿವೇ ಇರದಷ್ಟು ತನ್ನ ಕಾಯಕದಲ್ಲಿ ತನ್ಮಯನಾಗಿ ಹೋಗಿದ್ದನು. ಇದನ್ನು ನಾನು ನೋಡಿದೆ. ॥ ೧೩ ॥

ಸರ್ಪದಿಂದ ನಾನು ಕಲಿತುದು – ಮುನಿಯಾದವನು ಒಬ್ಬಂಟಿಗನಾಗಿರಬೇಕು. (ಮಂಡಳಿ ಕಟ್ಟಿಕೊಳ್ಳಬಾರದು.) ಇರುವ ಜಾಗದಲ್ಲಿ ಮಮತೆ ಇರಬಾರದು. ಎಚ್ಚರಿಕೆಯಿಂದಿರಬೇಕು.

* ಏಕೆಂದರೆ, ಆದರಿಂದ ಅವಳು ಸ್ವತಃ ಭತ್ತಕುಟ್ಟುವುದು, ಅವರ ದರಿದ್ರತೆಯನ್ನು ಪ್ರದರ್ಶಿಸುತ್ತಿತ್ತು.

ಏಕಚಾರ್ಯನಿಕೇತಃ ಸ್ಯಾದಪ್ರಮತ್ತೋ ಗುಹಾಶಯಃ ।
ಅಲಕ್ಷ್ಯಮಾಣ ಆಚಾರ್ಯೈರ್ಮುನಿರೇಕೋಽಲ್ಪಭಾಷಣಃ
॥ ೧೪ ॥

ಗೃಹಾರಂಭೋಽತಿದುಃಖಾಯ ವಿಫಲಶ್ಚಾಧ್ರುವಾತ್ಮನಃ ।
ಸರ್ಪಃ ಪರಕೃತಂ ವೇಶ್ಮ ಪ್ರವಿಶ್ಯ ಸುಖಮೇಧತೇ
॥ ೧೫ ॥

ಏಕೋ ನಾರಾಯಣೋ ದೇವಃ ಪೂರ್ವಸೃಷ್ಟಂ ಸ್ವಮಾಯಯಾ ।
ಸಂಹೃತ್ಯ ಕಾಲಕಲಯಾ ಕಲ್ಪಾಂತ ಇದಮೀಶ್ವರಃ
॥ ೧೬ ॥

ಏಕ ಏವಾದ್ವಿತೀಯೋಽಭೂದಾತ್ಮಾಧಾರೋಽಖಿಲಾಶ್ರಯಃ ।
ಕಾಲೇನಾತ್ಮಾನುಭಾವೇನ ಸಾಮ್ಯಂ ನೀತಾಸು ಶಕ್ತಿಷು ।
ಸತ್ತ್ವಾದಿಷ್ವಾದಿಪುರುಷಃ ಪ್ರಧಾನಪುರುಷೇಶ್ವರಃ
॥ ೧೭ ॥

ಪರಾವರಾಣಾಂ ಪರಮ ಆಸ್ತೇ ಕೈವಲ್ಯಸಂಜ್ಞಿತಃ ।
ಕೇವಲಾನುಭವಾನಂದಸಂದೋಹೋ ನಿರುಪಾಧಿಕಃ
॥ ೧೮ ॥

ಕೇವಲಾತ್ಮಾನುಭಾವೇನ ಸ್ವಮಾಯಾಂ ತ್ರಿಗುಣಾತ್ಮಿಕಾಮ್ ।
ಸಂಕ್ಷೋಭಯನ್ಸೃಜತ್ಯಾದೌ ತಯಾ ಸೂತ್ರಮರಿಂದಮ
॥ ೧೯ ॥

ತಾಮಾಹುಸ್ತ್ರಿಗುಣವ್ಯಕ್ತಿಂ ಸೃಜಂತೀಂ ವಿಶ್ವತೋಮುಖಮ್ ।
ಯಸ್ಮಿನ್ ಪ್ರೋತಮಿದಂ ವಿಶ್ವಂ ಯೇನ ಸಂಸರತೇ ಪುಮಾನ್
॥ ೨೦ ॥

ಯಥೋರ್ಣನಾಭಿರ್ಹೃದಯಾದೂರ್ಣಾಂ ಸಂತತ್ಯ ವಕ್ತ್ರತಃ ।
ತಯಾ ವಿಹೃತ್ಯ ಭೂಯಸ್ತಾಂ ಗ್ರಸತ್ಯೇವಂ ಮಹೇಶ್ವರಃ
॥ ೨೧ ॥

ಏಕಾಂತದಲ್ಲಿ ಅಥವಾ ಗುಹೆಯಲ್ಲಿ ವಾಸಿಸಬೇಕು. ತನ್ನ ಆಚಾರ-ವ್ಯವಹಾರದಿಂದ ತನ್ನನ್ನು ಯಾರ ಮುಂದೆಯೂ ಪ್ರಕಟಿಸಬಾರದು. ಮಿತಭಾಷಿಯಾಗಿರಬೇಕು. ॥ ೧೪ ॥ ಈ ಅನಿತ್ಯ ಶರೀರಕ್ಕಾಗಿ ಇಷ್ಟು ಕಷ್ಟಪಟ್ಟು ಮನೆಕಟ್ಟುವುದು ವ್ಯರ್ಥವಾಗಿದೆ. ಇಲಿಯು ಮಾಡಿದ ಬಿಲದಲ್ಲೇ ಹಾವು ಹಾಯಾಗಿ ವಾಸಿಸುತ್ತದೆ. ಹಾಗೆಯೇ ಎಲ್ಲಾದರೂ ಇದ್ದು ತನ್ನ ನಿರ್ವಾಹವನ್ನು ಮಾಡಿಕೊಳ್ಳಬೇಕು. ॥ ೧೫ ॥

(ಈಗ ಜೇಡರಹುಳುವಿನ ದೃಷ್ಟಾಂತದಿಂದ ತಿಳಿಸುತ್ತಾರೆ –) ಅದ್ವಿತೀಯನಾದ, ದೇವದೇವನಾದ ನಾರಾಯಣನೇ ತನ್ನ ಮಾಯೆಯಿಂದ ವಿಶ್ವವನ್ನು ನಿರ್ಮಿಸುತ್ತಾನೆ. ಅವನೇ ಕಲ್ಪದ ಕೊನೆಯಲ್ಲಿ ತನ್ನ ಕಾಲಶಕ್ತಿಯ ಮೂಲಕ ಇದರ ಉಪಸಂಹಾರವನ್ನು ಮಾಡುತ್ತಾನೆ. ॥ ೧೬ ॥ ಆ ಪರಮಾತ್ಮನು ಓರ್ವನೇ ಆಗಿದ್ದಾನೆ. (ಅವನಲ್ಲಿ ಸಜಾತೀಯ ಜೀವ ಮುಂತಾದ ಭೇದಗಳಿಲ್ಲ) ಅದ್ವಿತೀಯನಾಗಿದ್ದಾನೆ. (ವಿಜಾತೀಯ ಪ್ರಧಾನಾದಿ ಭೇದದಿಂದ ರಹಿತನಾಗಿದ್ದಾನೆ.) ಹಾಗೂ (ನಿರುಪಾಧಿಕನಾಗಿದ್ದಾನೆ.) ಆದ್ದರಿಂದ ಸ್ವಗತಭೇದರಹಿತನಾಗಿದ್ದಾನೆ. ಈ ಪ್ರಕಾರ ಆ ಪರಮಾತ್ಮನು ಅಖಂಡರೂಪದಿಂದ ಸ್ವಯಂ ತಾನೇ ತಾನಾಗಿದ್ದಾನೆ. ಆ ಭಗವಾನ್ ಆದಿನಾರಾಯಣನೇ ಪ್ರಕೃತಿ–ಪುರುಷರ ನಿಯಾಮಕನಾಗಿದ್ದಾನೆ. ಅವನು ತನ್ನ ಕಾಲಶಕ್ತಿಯ ಮೂಲಕ ಈ ಸತ್ತ್ವಾದಿ ಶಕ್ತಿಗಳನ್ನು ಸಾಮ್ಯಾವಸ್ಥೆಗೆ ಒಯ್ದಾಗ ಏಕಮಾತ್ರ ಪರಮಾತ್ಮನೇ ಶೇಷವಾಗಿ ಇರುತ್ತಾನೆ. ॥ ೧೭ ॥ ಅವನು ಪರಮ ಶ್ರೇಷ್ಠನಾಗಿದ್ದು ಪರಾ ಮತ್ತು ಅಪರಾ ಇವೆರಡೂ ಪ್ರಕೃತಿಗಳಿಂದ ಅತೀತನಾಗಿದ್ದಾನೆ. ಅವನನ್ನು ಕೈವಲ್ಯನೆಂದೂ ಹೇಳಲಾಗುತ್ತದೆ. ಅವನು ಕೇವಲಸ್ವರೂಪನೂ, ಅನುಭವ ಸ್ವರೂಪನೂ, ಆನಂದ ಪುಂಜನೂ ಆಗಿರುವನು. ಅಲ್ಲಿ ಪ್ರಕೃತಿಯ ಯಾವ ಉಪಾಧಿಯೂ ಇಲ್ಲ. ॥ ೧೮ ॥ ಅವನು ಕೇವಲ ತನ್ನ ಸಾಮರ್ಥ್ಯದಿಂದಲೇ ತನ್ನ ತ್ರಿಗುಣಾತ್ಮಿಕಾ ಮಾಯೆಯಲ್ಲಿ ಕ್ಷೋಭೆ ಉಂಟುಮಾಡುತ್ತಾನೆ. ಹೇ ಶತ್ರುಸೂದನಾ ! ಆ ಮಾಯೆಯ ಮೂಲಕ ಮೊಟ್ಟಮೊದಲು ಕ್ರಿಯಾಶಕ್ತಿ ಪ್ರಧಾನನಾದ ಸೂತ್ರಾತ್ಮನನ್ನು ರಚಿಸುತ್ತಾನೆ. ॥ ೧೯ ॥ ಆ ಕ್ರಿಯಾಶಕ್ತಿ ಪ್ರಧಾನ ಸೂತ್ರಾತ್ಮನೇ ತ್ರಿಗುಣಾತ್ಮಿಕಾ ಶಕ್ತಿಯನ್ನು ಮತ್ತು ಮೂರೂ ಗುಣಗಳನ್ನು ಅಭಿವ್ಯಕ್ತಗೊಳಿಸುತ್ತಾನೆ. ಹೀಗೆ ಅವನೇ ಇಡೀ ವಿಶ್ವವನ್ನು ನಿರ್ಮಿಸುತ್ತಾನೆ. ಈ ಎಲ್ಲ ವಿಶ್ವದಲ್ಲಿ ವ್ಯಾಪ್ತವಾಗಿರುವವನು ಅವನೇ. ಆದರೆ ಪುರುಷನು ಅದರಲ್ಲಿ ಅಹಂ ಬುದ್ಧಿಯಿಂದ ಅಲೆಯುತ್ತಾನೆ. ॥ ೨೦ ॥ ಜೇಡರಹುಳುವು ಹೃದಯದಿಂದ ಹೊರಬಂದ ನೂಲೆಳೆಯನ್ನು ಬಾಯಿಂದ ಹರಡಿ ಬಲೆಯನ್ನು ಕಟ್ಟಿ, ಅದರಲ್ಲೇ ಸ್ವೇಚ್ಛೆಯಿಂದ ವಿಹರಿಸುತ್ತಿದ್ದು, ಕಡೆಗೆ ತಾನೇ ಅದನ್ನು ನುಂಗಿಬಿಡುತ್ತದೆ. ಹಾಗೆಯೇ ಪರಮೇಶ್ವರನೂ ಈ ಜಗತ್ತನ್ನು ತನ್ನಿಂದಲೇ ಸೃಷ್ಟಿಸಿ, ಅದರಲ್ಲಿ ಜೀವರೂಪದಿಂದ ವಿಹರಿಸುತ್ತಾ ಕೊನೆಗೆ ಅದನ್ನು ತನ್ನಲ್ಲೇ ಲೀನಗೊಳಿಸಿಕೊಳ್ಳುತ್ತಾನೆ. ಇದರಿಂದ ಮೊತ್ತವಾಗಿ ಈ ವಿಶ್ವವು ಪರಮಾತ್ಮನದೇ ಸ್ವರೂಪವಾಗಿದೆ ಎಂದು ತಿಳಿಯಬೇಕು. ॥ ೨೧ ॥

ಯತ್ರ ಯತ್ರ ಮನೋ ದೇಹೀ ಧಾರಯೇತ್ಸಕಲಂ ಧಿಯಾ ।
ಸ್ನೇಹಾದ್ದ್ವೇಷಾದ್ಭಯಾದ್ವಾಪಿ ಯಾತಿ ತತ್ತತ್ಸರೂಪತಾಮ್
॥ ೨೨ ॥

ಕೀಟಃ ಪೇಶಸ್ಕೃತಂ ಧ್ಯಾಯನ್ ಕುಡ್ಯಾಂ ತೇನ ಪ್ರವೇಶಿತಃ ।
ಯಾತಿ ತತ್ಸಾತ್ಮತಾಂ ರಾಜನ್ ಪೂರ್ವರೂಪಮಸಂತ್ಯಜನ್
॥ ೨೩ ॥

ಏವಂ ಗುರುಭ್ಯ ಏತೇಭ್ಯ ಏಷಾ ಮೇ ಶಿಕ್ಷಿತಾ ಮತಿಃ ।
ಸ್ವಾತ್ಮೋಪಶಿಕ್ಷಿತಾಂ ಬುದ್ಧಿಂ ಶೃಣು ಮೇ ವದತಃ ಪ್ರಭೋ
॥ ೨೪ ॥

ದೇಹೋ ಗುರುರ್ಮಮ ವಿರಕ್ತಿವಿವೇಕಹೇತು-
ರ್ಬಿಭ್ರತ್ ಸ್ಮ ಸತ್ತ್ವನಿಧನಂ ಸತತಾರ್ತ್ಯುದರ್ಕಮ್ ।
ತತ್ತ್ವಾನ್ಯನೇನ ವಿಮೃಶಾಮಿ ಯಥಾ ತಥಾಪಿ
ಪಾರಕ್ಯಮಿತ್ಯವಸಿತೋ ವಿಚರಾಮ್ಯಸಂಗಃ ॥ ೨೫ ॥

ಜಾಯಾತ್ಮಜಾರ್ಥಪಶುಭೃತ್ಯಗೃಹಾಪ್ತವರ್ಗಾನ್
ಪುಷ್ಣಾತಿ ಯತ್ಪ್ರಿಯಚಿಕೀರ್ಷುತಯಾ ವಿತನ್ವನ್ ।
ಸ್ವಾಂತೇ ಸಕೃಚ್ಛ್ರಮವರುದ್ಧಧನಃ ಸ ದೇಹಃ
ಸೃಷ್ಟ್ವಾಸ್ಯ ಬೀಜಮವಸೀದತಿ ವೃಕ್ಷಧರ್ಮಾ ॥ ೨೬ ॥

ಜಿಹ್ವೈಕತೋಽಮುಮಪಕರ್ಷತಿ ಕರ್ಹಿ ತರ್ಷಾ
ಶಿಶ್ನೋಽನ್ಯತಸ್ತ್ವಗುದರಂ ಶ್ರವಣಂ ಕುತಶ್ಚಿತ್ ।
ಘ್ರಾಣೋಽನ್ಯತಶ್ಚಪಲದೃಕ್ ಕ್ವಚ ಕರ್ಮಶಕ್ತಿ-
ರ್ಬಹ್ವ್ಯಃ ಸಪತ್ನ್ಯ ಇವ ಗೇಹಪತಿಂ ಲುನಂತಿ ॥ ೨೭ ॥

ರಾಜನೇ! ಪ್ರಾಣಿಯು ಸ್ನೇಹದಿಂದಾಗಲೀ, ದ್ವೇಷದಿಂದಾಗಲೀ ಅಥವಾ ಭಯದಿಂದಾಗಲೀ ತಿಳಿದು - ತಿಳಿದು ಏಕಾಗ್ರವಾಗಿ ತನ್ನ ಮನಸ್ಸನ್ನು ಯಾವುದರಲ್ಲಾದರೂ ತೊಡಗಿಸಿದರೆ, ಅದಕ್ಕೆ ಅದೇ ವಸ್ತುವಿನ ಸ್ವರೂಪ ಪ್ರಾಪ್ತವಾಗುತ್ತದೆ. ಇದನ್ನು ನಾನು ಭೃಂಗೀ (ಕಣಜದ) ಹುಳುವಿನಿಂದ ಕಲಿತುಕೊಂಡೆನು. ॥ ೨೨ ॥ ಕಣಜದ ಹುಳುವು ಯಾವುದೋ ಹುಳವನ್ನು ತಂದು ಅದನ್ನು ಮಣ್ಣಿನ ಗೂಡಿನಲ್ಲಿ ಮುಚ್ಚಿಡುತ್ತದೆ. ಹೊರಗಿನಿಂದ ತಾನು ಬಂದು ಪದೇ-ಪದೇ ಅದನ್ನು ಭೂಂ-ಭೂಂ ಮಾಡುತ್ತಾ ಹೆದರಿಸುತ್ತದೆ. ಒಳಗಿರುವ ಹುಳುವು ಕಣಜದ ಭಯದಿಂದ ಅದನ್ನೇ ಚಿಂತಿಸುತ್ತಾ ತನ್ನ ಹಿಂದಿನ ಶರೀರವನ್ನು ಬಿಡದೆ ತದ್ರೂಪವಾಗುತ್ತದೆ. ಅಂದರೆ ಕಣಜದ ಹುಳುವೇ ಆಗುತ್ತದೆ.* ಹೀಗೆಯೇ ಹೇಗೆಬೇಕಾದರೂ ಇರಲಿ ಪರಮಾತ್ಮನನ್ನು ಸತತ ಚಿಂತಿಸುವುದರಿಂದ ಮನುಷ್ಯನೂ ಅವಶ್ಯವಾಗಿ ಪರಮಾತ್ಮಸ್ವರೂಪನೇ ಆಗುವನು. ॥ ೨೩ ॥

ರಾಜನೇ! ಈ ಪ್ರಕಾರ ನಾನು ಇಷ್ಟು ಗುರುಗಳಿಂದ ಈ ಶಿಕ್ಷಣವನ್ನು ಗ್ರಹಿಸಿದೆ. ಈಗ ನಾನು ನನ್ನ ಶರೀರದಿಂದ ಕಲಿತಿರುವುದನ್ನು ನಿನಗೆ ತಿಳಿಸುತ್ತೇನೆ. ಮನಗೊಟ್ಟು ಕೇಳು. ॥ ೨೪ ॥ ಈ ದೇಹವೂ ನನ್ನ ಗುರುವಾಗಿದೆ. ಇದು ನನಗೆ ವೈರಾಗ್ಯ ಮತ್ತು ವಿವೇಕವನ್ನು ಉಪದೇಶಿಸುತ್ತದೆ. ದೇಹವು ಜನ್ಮ-ಮರಣಶೀಲವಾಗಿದೆ ಎಂಬುದು ಪ್ರಸಿದ್ಧವೇ ಆಗಿದೆ. ಪರಿಣಾಮದಲ್ಲಿ ಇದರೊಂದಿಗೆ ನಿರಂತರ ದುಃಖವೇ ಅಂಟಿಕೊಂಡಿದೆ. ಆದರೆ ಈ ದೇಹದಿಂದಲೇ ನಾನು ಪರಮಾತ್ಮ ತತ್ತ್ವವನ್ನು ಚಿಂತಿಸುತ್ತೇನೆ, ಇದೇ ಇದರ ದೊಡ್ಡ ಲಾಭವಾಗಿದೆ. ಈ ದೇಹವನ್ನು ಒಂದು ದಿನ ನರಿ-ನಾಯಿಗಳು ತಿಂದುಬಿಡುವುವು ಇದು ನಿಶ್ಚಯವಾಗಿದೆ. ಆದ್ದರಿಂದ ಇದು ನಮ್ಮದಲ್ಲ, ಬೇರೆಯವರದೇ ಆಗಿದೆ. ಆದಕ್ಕಾಗಿ ನಾನು ದೇಹದಿಂದಲೂ ಅಸಂಗನಾಗಿ ಸಂಚರಿಸುತ್ತೇನೆ. ॥ ೨೫ ॥ ಮನುಷ್ಯನು ಪತ್ನೀ-ಪುತ್ರ, ಧನ-ಸಂಪತ್ತು, ಪಶು, ಸೇವಕರು, ಮನೆ, ಸಂಬಂಧಿಗಳು, ಇವುಗಳನ್ನು ಬೆಳೆಸುತ್ತಾ, ಅವುಗಳಿಂದ ಸುಖ ಪಡೆಯುವ ಇಚ್ಛೆಯಿಂದ ಅವರ ಲಾಲನೆ-ಪೋಷಣೆ ಮಾಡುತ್ತಾನೆ. ತುಂಬಾ ಕಷ್ಟಪಟ್ಟು ಧನವನ್ನು ಗಳಿಸುತ್ತಾನೆ. ಬೀಜವನ್ನಿತ್ತು ವೃಕ್ಷವು ನಾಶವಾಗುವಂತೆ ಕೊನೆಗೆ ಅವನು ಮುಂದಿನ ಜನ್ಮಕ್ಕಾಗಿ ಕರ್ಮಬೀಜವನ್ನು ನಿರ್ಮಿಸಿಕೊಂಡು ಮೃತ್ಯುಮುಖಿನಾಗುತ್ತಾನೆ. ಈ ವಿಧವಾಗಿ ದೇಹವು ನಾಶವಾದ ಬಳಿಕವೂ ಅವನ ದುಃಖಗಳ ಕೊನೆಯಾಗುವುದಿಲ್ಲ. ಜನ್ಮ-ಮರಣದ ಚಕ್ರದಲ್ಲಿ ಸುತ್ತುತ್ತಾ ಇರುತ್ತಾನೆ. ॥ ೨೬ ॥ ಮನೆಯ ಯಜಮಾನನನ್ನು ಅವನ ಅನೇಕ ಸವತಿಯರು ತಮ್ಮ-ತಮ್ಮ ಕಡೆಗೆ ಸೆಳೆದುಕೊಂಡು ಹರಿದು ಹಂಚಿ ಹಾಕಿಬಿಡುವಂತೆ, ದೇಹಾಭಿಮಾನೀ ಜೀವಿಯನ್ನು ಒಂದು ಕಡೆಯಿಂದ ಅವನನ್ನು ನಾಲಿಗೆ ಸೆಳೆದರೆ, ಕೆಲವೊಮ್ಮೆ ಬಾಯಾರಿಕೆ ಕಂಗೆಡಿಸುತ್ತದೆ. ಕೆಲವೊಮ್ಮೆ ಜನನೇಂದ್ರಿಯವು ಸಂಭೋಗಕ್ಕಾಗಿ ವ್ಯಾಕುಲಗೊಳಿಸುತ್ತದೆ. ಹಾಗೆಯೇ ಚರ್ಮ, ಉದರ, ಕಿವಿ ಇವು ತಮ್ಮ-ತಮ್ಮ ವಿಷಯಗಳತ್ತ ಸೆಳೆಯುತ್ತವೆ. ಮೂಗೂ ಪರಿಮಳದತ್ತ

* ಅದೇ ಶರೀರದಿಂದ ಚಿಂತಿಸಿದ ಸ್ವರೂಪವೇ ಪ್ರಾಪ್ತವಾಗುವುದಾದರೆ ಬೇರೆ ಶರೀರದಿಂದ ಹೇಳುವುದೇನಿದೆ ? ಆದಕ್ಕಾಗಿ ಮನುಷ್ಯನು ಬೇರೆ ವಸ್ತುಗಳ ಚಿಂತನೆಮಾಡದೆ ಭಗವತ್ಪ್ರಾಪ್ತಿಯ ಉದ್ದೇಶದಿಂದ ಕೇವಲ ಪರಮಾತ್ಮನನ್ನೇ ಚಿಂತಿಸುತ್ತಿರಬೇಕು.

ಸೃಷ್ಟ್ವಾ ಪುರಾಣಿ ವಿವಿಧಾನ್ಯಜಯಾಽಽತ್ಮಶಕ್ತ್ಯಾ
ವೃಕ್ಷಾನ್ಸರೀಸೃಪಪಶೂನ್ ಖಗದಂಶಮತ್ಸ್ಯಾನ್ ।
ತೈಸ್ತೈರತುಷ್ಟಹೃದಯಃ ಪುರುಷಂ ವಿಧಾಯ
ಬ್ರಹ್ಮಾವಲೋಕಧಿಷಣಂ ಮುದಮಾಪ ದೇವಃ ॥ ೨೮ ॥

ಲಬ್ಧ್ವಾ ಸುದುರ್ಲಭಮಿದಂ ಬಹುಸಂಭವಾಂತೇ
ಮಾನುಷ್ಯಮರ್ಥದಮನಿತ್ಯಮಪೀಹ ಧೀರಃ ।
ತೂರ್ಣಂ ಯತೇತ ನಪತೇದನುಮೃತ್ಯು ಯಾವ-
ನ್ನಿಃಶ್ರೇಯಸಾಯ ವಿಷಯಃ ಖಲು ಸರ್ವತಃ ಸ್ಯಾತ್ ॥ ೨೯ ॥

ಏವಂ ಸಂಜಾತವೈರಾಗ್ಯೋ ವಿಜ್ಞಾನಾಲೋಕ ಆತ್ಮನಿ ।
ವಿಚರಾಮಿ ಮಹೀಮೇತಾಂ ಮುಕ್ತಸಂಗೋಽನಹಂಕೃತಿಃ
॥ ೩೦ ॥

ನಹ್ಯೇಕಸ್ಮಾತ್ ಗುರೋರ್ಜ್ಞಾನಂ ಸುಸ್ಥಿರಂ ಸ್ಯಾತ್ಸುಪುಷ್ಕಲಮ್ ।
ಬ್ರಹ್ಮೈತದದ್ವಿತೀಯಂ ವೈ ಗೀಯತೇ ಬಹುಧರ್ಷಿಭಿಃ
॥ ೩೧ ॥

ಶ್ರೀಭಗವಾನುವಾಚ

ಇತ್ಯುಕ್ತ್ವಾ ಸ ಯದುಂ ವಿಪ್ರಸ್ತಮಾಮಂತ್ರ್ಯ ಗಭೀರಧೀಃ ।
ವಂದಿತೋಽಭ್ಯರ್ಥಿತೋ ರಾಜ್ಞಾ ಯಯೌ ಪ್ರೀತೋ ಯಥಾಗತಮ್
॥ ೩೨ ॥

ಅವಧೂತವಚಃ ಶ್ರುತ್ವಾ ಪೂರ್ವೇಷಾಂ ನಃ ಸ ಪೂರ್ವಜಃ ।
ಸರ್ವಸಂಗವಿನಿರ್ಮುಕ್ತಃ ಸಮಚಿತ್ತೋ ಬಭೂವ ಹ
॥ ೩೩ ॥

ಸೆಳೆದರೆ, ಚಂಚಲನೇತ್ರಗಳು ಸುಂದರರೂಪವನ್ನು ನೋಡಲು ಆಕರ್ಷಿಸುತ್ತವೆ. ಹೀಗೆ ಕರ್ಮೇಂದ್ರಿಯ – ಜ್ಞಾನೇಂದ್ರಿಯಗಳು ಈ ದೇಹಾಭಿಮಾನಿ ಜೀವಿಯನ್ನು ತಮ್ಮ-ತಮ್ಮ ವಿಷಯಗಳ ಕಡೆಗೆ ಆಕರ್ಷಿಸಿ ಅವನನ್ನು ಕಂಗೆಡಿಸುತ್ತವೆ. ॥ ೨೭ ॥ ಭಗವಂತನು ತನ್ನ ಅಚಿಂತ್ಯ ಶಕ್ತಿ ಮಾಯೆಯಿಂದ ವೃಕ್ಷ, ಸರೀಸೃಪ, ಪಶು, ಪಕ್ಷಿ, ನೊಣ, ಮೀನು ಮುಂತಾದ ಅನೇಕ ಪ್ರಕಾರದ ಯೋನಿಗಳನ್ನು ರಚಿಸಿದನು. ಆದರೆ ಅದರಿಂದ ಅವನಿಗೆ ಸಂತೋಷವಾಗಲಿಲ್ಲ, ಕೊನೆಗೆ ಅವನು ಮನುಷ್ಯಶರೀರವನ್ನು ಸೃಷ್ಟಿಸಿದನು. ಇದು ಬ್ರಹ್ಮಸಾಕ್ಷಾತ್ಕಾರ ಮಾಡಬಹುದಾದ ಬುದ್ಧಿಯಿಂದ ಕೂಡಿದೆ. ಇದನ್ನು ರಚಿಸಿ ಅವನಿಗೆ ಬಹಳ ಆನಂದವಾಯಿತು. ॥ ೨೮ ॥ ಈ ಮನುಷ್ಯಶರೀರವು ಅತ್ಯಂತ ದುರ್ಲಭವಾಗಿದೆ. ಅನೇಕ ಜನ್ಮಗಳ ಬಳಿಕ ಭಗವಂತನ ಅಸೀಮಕೃಪೆಯಿಂದ ಪ್ರಾಪ್ತವಾಗಿದೆ. ಇದರಿಂದ ಪರಮ ಪುರುಷಾರ್ಥಸ್ವರೂಪೀ ಪರಮಾತ್ಮನ ಪ್ರಾಪ್ತಿಯಾಗ ಬಲ್ಲದು. ಜೊತೆಗೆ ಇದು ಅನಿತ್ಯವೂ ಆಗಿದೆ. ಇಂತಹ ಅಮೂಲ್ಯ ಮನುಷ್ಯಜೀವನವನ್ನು ಪಡೆದ ಬಳಿಕ ಶರೀರವನ್ನು ಮೃತ್ಯುವು ಬಂದು ನುಂಗಿಬಿಡುವ ಮೊದಲೇ ಭಗವತ್ಪ್ರಾಪ್ತಿರೂಪೀ ತನ್ನ ಪರಮ ಶ್ರೇಯಸ್ಸನ್ನು ಮಾಡಿಕೊಳ್ಳುವುದರಲ್ಲೇ ಮನುಷ್ಯತ್ವ ಇದೆ ಎಂದು ಬುದ್ಧಿವಂತರು ತಿಳಿಯಬೇಕು. ಏಕೆಂದರೆ, ವಿಷಯ ಭೋಗಗಳಾದರೋ ಎಲ್ಲ ಯೋನಿಗಳಲ್ಲಿಯೂ ಸಿಗುತ್ತವೆ. ಅದರಲ್ಲಿ ತಮ್ಮ ಅಮೂಲ್ಯ ಸಮಯವನ್ನು ಕಳೆಯ ಬಾರದು. ॥ ೨೯ ॥

ಎಲೈ ರಾಜನೇ! ಈ ವಿಧವಾಗಿ ನನಗೆ ವೈರಾಗ್ಯ ಉಂಟಾಯಿತು. ಅಂತಃಕರಣದಲ್ಲಿ ವಿಜ್ಞಾನದ ಪ್ರಕಾಶ ಹರಡಿಕೊಂಡಿತು. ಈಗ ನಾನು ಅಹಂಕಾರವನ್ನು ಬಿಟ್ಟು ಈ ಭೂತಲದಲ್ಲಿ ಸ್ವಚ್ಛಂದವಾಗಿ ವಿಚರಿಸುತ್ತೇನೆ. ॥ ೩೦ ॥ ಈ ಪ್ರಕಾರ ಒಬ್ಬನೇ ಗುರುವಿನಿಂದ ಪಡೆಯುವ ಜ್ಞಾನವು ಸುಸ್ಥಿರವೂ, ಪುಷ್ಕಳ ವಿಚಾರವುಳ್ಳದ್ದೂ ಆಗಿರುವುದಿಲ್ಲ, ಇದೆಲ್ಲವನ್ನು ನಾನು ನಿನಗೆ ಅರುಹಿದೆನು. ಒಂದೇ ಅದ್ವಿತೀಯ ಬ್ರಹ್ಮನ ಕುರಿತು ಋಷಿಗಳು ಅನೇಕ ರೀತಿಯಿಂದ ವರ್ಣಿಸಿರುವರು. ॥ ೩೧ ॥

ಭಗವಾನ್ ಶ್ರೀಕೃಷ್ಣನು ಹೇಳಿದನು – ಪ್ರಿಯ ಉದ್ಧವನೇ! ಆಳವಾದ ಬುದ್ಧಿಯುಳ್ಳ ಅವಧೂತ ದತ್ತಾತ್ರೇಯರು ಯದು ರಾಜನಿಗೆ ಹೀಗೆ ಉಪದೇಶಿಸಿದರು. ಯದುವು ಅವರನ್ನು ಪೂಜಿಸಿ, ವಂದಿಸಿಕೊಂಡನು. ದತ್ತಾತ್ರೇಯರು ಅವನಿಂದ ಬೀಳ್ಕೊಂಡು ತುಂಬಾ ಸಂತೋಷವಾಗಿ ತಮ್ಮ ಇಚ್ಛಾನುಸಾರ ದಯಮಾಡಿಸಿದರು. ನಮ್ಮ ಪೂರ್ವಜರ ಪೂರ್ವಜನೂ ಆದ ಯದುರಾಜರು ಅವಧೂತ ದತ್ತಾತ್ರೇಯರ ಈ ಮಾತುಗಳನ್ನು ಆಲಿಸಿ ಸಮಸ್ತ ಆಸಕ್ತಿಗಳಿಂದ ಬಿಡುಗಡೆಹೊಂದಿ ಸಮದರ್ಶಿಗಳಾದರು. (ಹೀಗೆಯೇ ನೀನೂ ಕೂಡ ಸಮಸ್ತ ಆಸಕ್ತಿಗಳನ್ನು ಪರಿತ್ಯಜಿಸಿ ಸಮದರ್ಶಿಯಾಗಬೇಕು.) ॥ ೩೨-೩೩ ॥

ಒಂಭತ್ತನೆಯ ಅಧ್ಯಾಯವು ಮುಗಿಯಿತು. ॥ ೯ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಏಕಾದಶ ಸ್ಕಂಧೇ ನವಮೋಽಧ್ಯಾಯಃ ॥ ೯ ॥

ಹತ್ತನೆಯ ಅಧ್ಯಾಯ

ಅಸಾರವಾದ ಲೌಕಿಕ ಮತ್ತು ಪಾರಲೌಕಿಕವಾದ ಭೋಗಗಳ ನಿರೂಪಣೆ

ಶ್ರೀಭಗವಾನುವಾಚ

ಮಯೋದಿತೇಷ್ವವಹಿತಃ ಸ್ವಧರ್ಮೇಷು ಮದಾಶ್ರಯಃ ।
ವರ್ಣಾಶ್ರಮಕುಲಾಚಾರಮಕಾಮಾತ್ಮಾ ಸಮಾಚರೇತ್ ॥ ೧ ॥

ಅನ್ವಿಕ್ಷೇತ ವಿಶುದ್ಧಾತ್ಮಾ ದೇಹಿನಾಂ ವಿಷಯಾತ್ಮನಾಮ್ ।
ಗುಣೇಷು ತತ್ತ್ವಧ್ಯಾನೇನ ಸರ್ವಾರಂಭವಿಪರ್ಯಯಮ್ ॥ ೨ ॥

ಸುಪ್ತಸ್ಯ ವಿಷಯಾಲೋಕೋ ಧ್ಯಾಯತೋ ವಾ ಮನೋರಥಃ ।
ನಾನಾತ್ಮಕತ್ವಾದ್ವಿಫಲಸ್ತಥಾ ಭೇದಾತ್ಮಧೀರ್ಗುಣೈಃ ॥ ೩ ॥

ನಿವೃತ್ತಂ ಕರ್ಮ ಸೇವೇತ ಪ್ರವೃತ್ತಂ ಮತ್ಪರಸ್ತ್ಯಜೇತ್ ।
ಜಿಜ್ಞಾಸಾಯಾಂ ಸಂಪ್ರವೃತ್ತೋ ನಾದ್ರಿಯೇತ್ಕರ್ಮಚೋದನಾಮ್ ॥ ೪ ॥

ಯಮಾನಭೀಕ್ಷ್ಣಂ ಸೇವೇತ ನಿಯಮಾನ್ಮತ್ಪರಃ ಕ್ವಚಿತ್ ।
ಮದಭಿಜ್ಞಂ ಗುರುಂ ಶಾಂತಮುಪಾಸೀತ ಮದಾತ್ಮಕಮ್ ॥ ೫ ॥

ಅಮಾನ್ಯಮತ್ಸರೋ ದಕ್ಷೋ ನಿರ್ಮಮೋ ದೃಢಸೌಹೃದಃ ।
ಅಸತ್ವರೋಽರ್ಥಜಿಜ್ಞಾಸುರನಸೂಯುರಮೋಘವಾಕ್ ॥ ೬ ॥

ಜಾಯಾಪತ್ಯಗೃಹಕ್ಷೇತ್ರಸ್ವಜನದ್ರವಿಣಾದಿಷು ।
ಉದಾಸೀನಃ ಸಮಂ ಪಶ್ಯನ್ಸರ್ವೇಷ್ವರ್ಥಮಿವಾತ್ಮನಃ ॥ ೭ ॥

ಭಗವಾನ್ ಶ್ರೀಕೃಷ್ಣನು ಹೇಳುತ್ತಾನೆ – ಪ್ರಿಯ ಉದ್ಧವನೇ ! ಸಾಧಕನಾದವನು ಎಲ್ಲ ರೀತಿಯಿಂದ ನನಗೆ ಶರಣಾಗಿ, ನನ್ನಿಂದ ಉಪದಿಷ್ಟವಾದ ಧರ್ಮಗಳನ್ನು ಜಾಗರೂಕತೆಯಿಂದ ಪಾಲನೆ ಮಾಡಬೇಕು. ನಿಷ್ಕಾಮ ಭಾವದಿಂದ ತಮ್ಮ ವರ್ಣ-ಆಶ್ರಮ ಹಾಗೂ ಕುಲಕ್ಕನುಸಾರ ಸದಾಚಾರವನ್ನು ಅನುಷ್ಠಾನ ಮಾಡಬೇಕು. ॥ ೧ ॥ ವಿಷಯಗಳಲ್ಲಿ ಮುಳುಗಿದ ಚಿತ್ತವುಳ್ಳ ಸಂಸಾರೀ ಜನರ ಎಲ್ಲ ಕರ್ಮಗಳ ಪರಿಣಾಮವು ವಿಪರೀತವೇ ಆಗುತ್ತದೆ. ಈ ಮಾತನ್ನು ಆಳವಾಗಿ ತಿಳಿದುಕೊಂಡು ಶುದ್ಧ ಅಂತಃಕರಣನಾಗಿ ಸಂಸಾರದಿಂದ ವಿಮುಖನಾಗಬೇಕು. ॥ ೨ ॥ ಮಲಗಿದ ಮನುಷ್ಯನು ಸ್ವಪ್ನಾವಸ್ಥೆಯಲಿ ವಿಷಯಗಳನ್ನು ಕಂಡು, ಎಚ್ಚರಗೊಂಡಾಗ ಅವನಿಗೆ ಅವುಗಳ ಮಿಥ್ಯತ್ವ ತಿಳಿದುಬರುತ್ತದೆ. ಹಾಗೆಯೇ ಜಾಗ್ರತ್ ಅವಸ್ಥೆಯಲ್ಲಿಯೂ ಮನಸ್ಸಿನಿಂದ ಮಾಡುವ ಸಂಕಲ್ಪ-ವಿಕಲ್ಪಗಳೆಲ್ಲವೂ ಮಿಥ್ಯೆಯೇ ಆಗಿದೆ. ಈ ನಾನಾತ್ವದ ಭ್ರಮೆಯು ಅಜ್ಞಾನದ ಕಾರಣದಿಂದಲೇ ಇದೆ. ॥ ೩ ॥ ಮನುಷ್ಯನು ನಿಷ್ಕಾಮ ಕರ್ಮವನ್ನು ಆಚರಿಸಬೇಕು. ಎಲ್ಲ ಕರ್ಮಗಳನ್ನು ಭಗವಂತನಿಗೆ ಅರ್ಪಿಸಿಬಿಡಬೇಕು. ಸಕಾಮ ಕರ್ಮವನ್ನು ಎಂದೂ ಮಾಡಬಾರದು. ಆತ್ಮಜ್ಞಾನದ ಉತ್ಕಟ ಇಚ್ಛೆ ಇದ್ದರೆ ಕರ್ಮಸಂಬಂಧೀ ವಿಧಾನವನ್ನು ಆದರಿಸಬಾರದು. ॥ ೪ ॥ ಯಮಗಳನ್ನು ಅಂದರೆ ಅಹಿಂಸಾ, ಸತ್ಯ, ಅಸ್ತೇಯ, ಬ್ರಹ್ಮಚರ್ಯ, ಅಪರಿಗ್ರಹ, ಇವನ್ನು ಪೂರ್ಣರೂಪದಿಂದ ಪಾಲಿಸಲಿ. ಶೌಚ, ಸಂತೋಷ, ತಪಸ್ಸು, ಸ್ವಾಧ್ಯಾಯ, ಈಶ್ವರಪ್ರಣಿಧಾನ ಈ ನಿಯಮಗಳನ್ನೂ ಕೂಡ ಯಥಾಸಾಧ್ಯ ಪಾಲಿಸಲಿ. ಪರಮಾತ್ಮನಾದ ನನ್ನನ್ನು ತಿಳಿದಿರುವ ಶಾಂತಸ್ವರೂಪೀ ಗುರುವಿನ ಬಳಿಗೆ ಹೋಗಿ, ಗುರುವನ್ನು ನನ್ನ ಸ್ವರೂಪವೆಂದೇ ತಿಳಿಯಲಿ. ಯಾವ ರೀತಿಯ ಅಭಿಮಾನವನ್ನೂ ಪಡದಿರಲಿ. ಯಾವುದೇ ಮತ್ಸರದ ಭಾವ ಇರಿಸದಿರಲಿ. ಎಲ್ಲ ವಿಧದಿಂದ ಕುಶಲನಾಗಲಿ. ಮಮತಾ ರಹಿತನಾಗಲಿ. ಗುರುವಿನಲ್ಲಿ ಮತ್ತು ನನ್ನಲ್ಲಿ ಧೃಢಪೂರ್ವಕವಾಗಿ ಅನುರಾಗವಿರಲಿ. ತತ್ತ್ವದ ಜಿಜ್ಞಾಸುವಿನಲ್ಲಿ ಯಾವುದೇ ಬೇಸರಿಕೆ ಇರದಿರಲಿ. ಯಾರೊಂದಿಗೂ ದೋಷದೃಷ್ಟಿ ಇರದಿರಲಿ. ವ್ಯರ್ಥ ಹಾಗೂ ಅಸತ್ಯ ಭಾಷಣದಿಂದ ದೂರವಿರಲಿ. ॥ ೫-೬ ॥ ಈ ಪ್ರಕಾರ ಅಭ್ಯಾಸ ಮಾಡುತ್ತಾ ಮಾಡುತ್ತಾ ಸಮತೆಯಲ್ಲಿ ಅವನ ಸ್ಥಿತಿ ಉಂಟಾದಾಗ ಪತ್ನೀ ಪುತ್ರ, ಮನೆ, ಭೂಮಿ, ಬಂಧು-ಬಾಂಧವರು, ಧನ ಮುಂತಾದವುಗಳಲ್ಲಿ ಎಲ್ಲಿಯೂ ಅವನಿಗೆ ಆಸಕ್ತಿಯು ಉಳಿಯುವುದಿಲ್ಲ, ಮತ್ತೆ ಅವನು ತನ್ನ ಪದಾರ್ಥದಂತೆಯೇ ಎಲ್ಲದರಲ್ಲಿ ಸಮಭಾವವನ್ನಿಡುತ್ತಾ, ಎಲ್ಲರಿಂದ ಪೂರ್ಣವಾಗಿ ಉದಾಸೀನನಾಗಿ ಹೋಗುತ್ತಾನೆ. ॥ ೭ ॥

ವಿಲಕ್ಷಣಃ ಸ್ಥೂಲಸೂಕ್ಷ್ಮಾದ್ದೇಹಾದಾತ್ಮೇಕ್ಷಿತಾ ಸ್ವದೃಕ್ ।
ಯಥಾಗ್ನಿರ್ದಾರುಣೋ ದಾಹ್ಯಾದ್ದಾಹಕೋಽನ್ಯಃ ಪ್ರಕಾಶಕಃ ॥ ೮ ॥

ನಿರೋಧೋತ್ಪತ್ತ್ಯಣುಬೃಹನ್ನಾನಾತ್ವಂ ತತ್ಕೃತಾನ್ಗುಣಾನ್ ।
ಅಂತಃಪ್ರವಿಷ್ಟ ಆಧತ್ತ ಏವಂ ದೇಹಗುಣಾನ್ ಪರಃ ॥ ೯ ॥

ಯೋಽಸೌ ಗುಣೈರ್ವಿರಚಿತೋ
ದೇಹೋಽಯಂ ಪುರುಷಸ್ಯ ಹಿ ।
ಸಂಸಾರಸ್ತನ್ನಿಬಂಧೋಽಯಂ
ಪುಂಸೋ ವಿದ್ಯಾಚ್ಛಿದಾತ್ಮನಃ ॥ ೧೦ ॥

ತಸ್ಮಾಜ್ಜಿಜ್ಞಾಸಯಾಽಽತ್ಮಾನಮಾತ್ಮಸ್ಥಂ ಕೇವಲಂ ಪರಮ್ ।
ಸಂಗಮ್ಯ ನಿರಸೇದೇತದ್ವಸ್ತುಬುದ್ಧಿಂ ಯಥಾಕ್ರಮಮ್ ॥ ೧೧ ॥

ಆಚಾರ್ಯೋಽರಣಿರಾದ್ಯಃ ಸ್ಯಾದಂತೇವಾಸ್ಯುತ್ತರಾರಣಿಃ ।
ತತ್ಸಂಧಾನಂ ಪ್ರವಚನಂ ವಿದ್ಯಾಸಂಧಿಃ ಸುಖಾವಹಃ ॥ ೧೨ ॥

ವೈಶಾರದೀ ಸಾತಿವಿಶುದ್ಧಬುದ್ಧಿ-
ರ್ಧುನೋತಿ ಮಾಯಾಂ ಗುಣಸಂಪ್ರಸೂತಾಮ್ ।
ಗುಣಾಂಶ್ಚ ಸಂದಹ್ಯ ಯದಾತ್ಮಮೇತತ್
ಸ್ವಯಂ ಚ ಶಾಮ್ಯತ್ಯಸಮಿದ್ಯಥಾಗ್ನಿಃ ॥ ೧೩ ॥

ಅಥೈಷಾಂ ಕರ್ಮಕರ್ತೄಣಾಂ
ಭೋಕ್ತೄಣಾಂ ಸುಖದುಃಖಯೋಃ ।
ನಾನಾತ್ವಮಥ ನಿತ್ಯತ್ವಂ
ಲೋಕಕಾಲಾಗಮಾತ್ಮನಾಮ್ ॥ ೧೪ ॥

ಆತ್ಮವು ಸ್ವಯಂ ಪ್ರಕಾಶಸ್ವರೂಪವಾಗಿದ್ದು, ಎಲ್ಲರ ಸಾಕ್ಷಿಯಾಗಿದೆ. ಸ್ಥೂಲ ಮತ್ತು ಸೂಕ್ಷ್ಮ ಇವೆರಡೂ ದೇಹಗಳಿಂದ ಖಂಡಿತವಾಗಿ ಭಿನ್ನನಾಗಿದ್ದಾನೆ. ಉರಿಯುವ ಕಟ್ಟಿಗೆಗಿಂತ ಅದನ್ನು ಸುಡುತ್ತಿರುವ ಅಗ್ನಿಯು ಭಿನ್ನವೇ ಆಗಿದೆ. ಹಾಗೆಯೇ ಇವೆಲ್ಲ ಶರೀರಗಳನ್ನು ಪ್ರಕಾಶಿಸುವ ಆತ್ಮನೂ ಕೂಡ ಈ ಶರೀರಗಳಿಂದ ಭಿನ್ನವಾಗಿದೆ. ॥ ೮ ॥ ಕಟ್ಟಿಗೆಯ ಸಂಬಂಧದ ಕಾರಣ ಅಗ್ನಿಯು ಕಟ್ಟಿಗೆಯ ಆಕಾರಕ್ಕನು ಸಾರ ಚಿಕ್ಕದಾಗಿ ದೊಡ್ಡದಾಗಿ ಕಾಣುತ್ತದೆ. ಕಟ್ಟಿಗೆಯು ಪೂರ್ಣ ವಾಗಿ ಸುಟ್ಟುಹೋದಾಗ ಅಗ್ನಿಯು ಶಾಂತವಾಗುವುದು ಮತ್ತು ಉರಿದಾಗ ಕಾಣಿಸಿಕೊಳ್ಳುವುದು ಮುಂತಾಗಿ ಕಂಡುಬರುತ್ತದೆ. ಆದರೆ ವಾಸ್ತವವಾಗಿ ಕಟ್ಟಿಗೆಯಿಂದ ಅಗ್ನಿಯು ಬೇರೆಯೇ ಆಗಿದೆ. ಹೀಗೆಯೇ ಆತ್ಮನೂ ಕೂಡ ದೇಹದ ಗುಣಗಳನ್ನು ಧರಿಸಿದಾಗ ದೇಹದ ವಿಕಾರಗಳು ಅದರಲ್ಲಿ ಆರೋಪಿತವಾಗುತ್ತದೆ. ॥ ೯ ॥

ಪುರುಷನ ಈ ಶರೀರವು ತ್ರಿಗುಣಗಳ ರಚನೆಯಾಗಿದೆ. ಈ ಗುಣಗಳಲ್ಲಿ ಅಹಂತೆ-ಮಮತೆಯ ಕಾರಣವೇ ಅವನು ಬಂಧಿತ ನಾಗಿದ್ದಾನೆ. ಅದು ಆತ್ಮನ ಜ್ಞಾನವನ್ನು ಮುಚ್ಚಿಬಿಡುತ್ತದೆ. ॥ ೧೦ ॥ ಆದ್ದರಿಂದ ತತ್ತ್ವವನ್ನು ತಿಳಿಯುವ ಇಚ್ಛೆಯನ್ನಿರಿಸಿಕೊಳ್ಳಬೇಕು. ಅದರಿಂದ ಆತ್ಮಸ್ವರೂಪದ ಬೋಧವಾಗುತ್ತದೆ. ಈ ಆತ್ಮನು ತನ್ನಲ್ಲೇ ಸ್ಥಿತನಾಗಿದ್ದಾನೆ, ಕೇವಲನಾಗಿದ್ದಾನೆ, ಶ್ರೇಷ್ಠನಾಗಿದ್ದಾನೆ. ಇದನ್ನು ಅರಿತುಕೊಂಡ ಬಳಿಕ ಅನಾತ್ಮ ಪದಾರ್ಥಗಳಲ್ಲಿ ಇರುವ ಸತ್ಯತೆಯ ಬುದ್ಧಿಯು ಕ್ರಮಶಃ ದೂರವಾಗುತ್ತಾ ಹೋಗುತ್ತದೆ. ॥ ೧೧ ॥

ಈ ವಿದ್ಯೆಯ ಜ್ಞಾನವನ್ನು ಪಡೆಯಲು ಗುರುವನ್ನೇ ಆಶ್ರಯಿಸಬೇಕು. ಅವರ ಬಳಿ ವಾಸಿಸಬೇಕು. ಅರಣಿಯನ್ನು ಕಡೆದು ಯಜ್ಞೇಶ್ವರನನ್ನು ಪ್ರಕಟಗೊಳಿಸುವಂತೆ ಇಲ್ಲಿಯೂ ಆಚಾರ್ಯನೇ ಅಧರಾರಣಿ, (ಕೆಳಗಿನದು) ಶಿಷ್ಯನೇ ಉತ್ತರಾರಣಿ (ಮೇಲಿನದು). ಆಚಾರ್ಯರ ಪ್ರವಚನವೇ ಅದರ ಮಂಥನದಂಡ. ಅದರಿಂದ ವಿದ್ಯಾರೂಪೀ ಅಗ್ನಿಯು ಪ್ರಕಟಗೊಳ್ಳುತ್ತದೆ. ಅದು ಅಜ್ಞಾನವನ್ನು ನಾಶಮಾಡಿ, ಪರಮಾನಂದವನ್ನು ಕರುಣಿಸುತ್ತದೆ. ॥ ೧೨ ॥ ಈ ಪ್ರಕಾರ ಅಭ್ಯಾಸಮಾಡುತ್ತಾ-ಮಾಡುತ್ತಾ ಬುದ್ಧಿಯು ಸೂಕ್ಷ್ಮವಾದಾಗ ಅತ್ಯಂತ ಶುದ್ಧವಾದ ಆ ಬುದ್ಧಿಯು ಮಾಯೆಯಿಂದ ಉಂಟಾಗುವ ಎಲ್ಲ ಗುಣಗಳನ್ನು ಭಸ್ಮಮಾಡಿಬಿಡುತ್ತದೆ. ಗುಣಗಳು ಭಸ್ಮವಾದಾಗ ಗುಣಗಳಿಂದ ಉಂಟಾದ ಈ ವಿಶ್ವವು ಅವನಿಗೆ ಉಳಿಯುವುದಿಲ್ಲ. ಅಗ್ನಿಯು ಇಂಧನಗಳನ್ನು ಭಸ್ಮಮಾಡಿ ಶಾಂತ ವಾಗುವಂತೆ, ಗುಣಗಳನ್ನು ಸುಟ್ಟು ಮತ್ತೆ ಆ ಬುದ್ಧಿಯು ಶಾಂತ ವಾಗುತ್ತದೆ. * ॥ ೧೩ ॥

ಕರ್ಮ ಮಾಡುವವರಲ್ಲಿ ಭಿನ್ನತೆ ಇದೆ ಎಂದು ಕದಾಚಿತ್ ಒಪ್ಪಿಕೊಂಡರೆ, ಅದಕ್ಕನುಸಾರ ಅವರ ಸುಖ-ದುಃಖಾದಿ ಫಲ ಗಳಲ್ಲಿಯೂ ಭಿನ್ನತೆ ಇದೆ ಹಾಗೂ ಅವರ ಕರ್ಮಗಳನುಸಾರ ಅವರ ಫಲಸ್ವರೂಪ ಸಿಗಬಹುದಾದ ಲೋಕ, ಅವುಗಳ ಭೋಗದ ಸಮಯ, ಆಯಾ ಕರ್ಮಗಳನ್ನು ವಿಧಾನ ಮಾಡುವ ಶಾಸ್ತ್ರಗಳು,

* ಸ್ವಯಂಪ್ರಕಾಶ ಜ್ಞಾನಸ್ವರೂಪೀ ಆತ್ಮನು ನಿತ್ಯನೂ, ಏಕನೂ ಆಗಿದ್ದಾನೆ ಎಂಬುದು ಸ್ಪಷ್ಟವಾಯಿತು. ಕರ್ತೃತ್ವ, ಭೋಕ್ತೃತ್ವ ಮುಂತಾದ ಧರ್ಮಗಳು ದೇಹಾಭಿಮಾನದ ಕಾರಣವಾಗಿವೆ. ಆತ್ಮನಲ್ಲದೆ ಇರುವದೆಲ್ಲವೂ ಅನಿತ್ಯವೂ, ಮಾಯಾಮಯವಾಗಿವೆ. ಆದಕ್ಕಾಗಿ ಆತ್ಮಜ್ಞಾನ ಉಂಟಾಗುತ್ತಲೇ ಸಮಸ್ತ ವಿಪತ್ತುಗಳಿಂದ ಮುಕ್ತಿ ದೊರೆಯುತ್ತದೆ.

ಮನ್ಯಸೇ ಸರ್ವಭಾವಾನಾಂ ಸಂಸ್ಥಾ ಹ್ಯೌತ್ಪತ್ತಿಕೀ ಯಥಾ ।
ತತ್ತದಾಕೃತಿಭೇದೇನ ಜಾಯತೇ ಭಿದ್ಯತೇ ಚ ಧೀಃ
॥ ೧೫ ॥

ಏವಮಪ್ಯಂಗ ಸರ್ವೇಷಾಂ ದೇಹಿನಾಂ ದೇಹಯೋಗತಃ ।
ಕಾಲಾವಯವತಃ ಸಂತಿ ಭಾವಾ ಜನ್ಮಾದಯೋಽಸಕೃತ್
॥ ೧೬ ॥

ಅತ್ರಾಪಿ ಕರ್ಮಣಾಂ ಕರ್ತು-
ರಸ್ವಾತಂತ್ರ್ಯಂ ಚ ಲಕ್ಷ್ಯತೇ ।
ಭೋಕ್ತುಶ್ಚ ದುಃಖಸುಖಯೋಃ
ಕೋ ನ್ವರ್ಥೋ ವಿವಶಂ ಭಜೇತ್ ॥ ೧೭ ॥

ನ ದೇಹಿನಾಂ ಸುಖಂ ಕಿಂಚಿದ್ವಿದ್ಯತೇ ವಿದುಷಾಮಪಿ ।
ತಥಾ ಚ ದುಃಖಂ ಮೂಢಾನಾಂ ವೃಥಾಹಂಕರಣಂ ಪರಮ್
॥ ೧೮ ॥

ಯದಿ ಪ್ರಾಪ್ತಿಂ ವಿಘಾತಂ ಚ ಜಾನಂತಿ ಸುಖದುಃಖಯೋಃ ।
ತೇಽಪ್ಯದ್ಧಾ ನ ವಿದುರ್ಯೋಗಂ ಮೃತ್ಯುರ್ನ ಪ್ರಭವೇದ್ಯಥಾ
॥ ೧೯ ॥

ಕೋ ನ್ವರ್ಥಃ ಸುಖಯತ್ಯೇನಂ ಕಾಮೋ ವಾ ಮೃತ್ಯುರಂತಿಕೇ ।
ಆಘಾತಂ ನೀಯಮಾನಸ್ಯ ವಧ್ಯಸ್ಯೇವ ನ ತುಷ್ಟಿದಃ
॥ ೨೦ ॥

ಶ್ರುತಂ ಚ ದೃಷ್ಟವದ್ದುಷ್ಟಂ ಸ್ಪರ್ಧಾಸೂಯಾತ್ಯಯವ್ಯಯೈಃ ।
ಬಹ್ವಂತರಾಯಕಾಮತ್ವಾತ್ ಕೃಷಿವಚ್ಚಾಪಿ ನಿಷ್ಫಲಮ್
॥ ೨೧ ॥

ಅಂತರಾಯೈರವಿಹತೋ ಯದಿ ಧರ್ಮಃ ಸ್ವನುಷ್ಠಿತಃ ।
ತೇನಾಪಿ ನಿರ್ಜಿತಂ ಸ್ಥಾನಂ ಯಥಾ ಗಚ್ಛತಿ ತಚ್ಛೃಣು
॥ ೨೨ ॥

ಇಷ್ಟ್ವೇಹ ದೇವತಾ ಯಜ್ಞೈಃ ಸ್ವರ್ಲೋಕಂ ಯಾತಿ ಯಾಜ್ಞಿಕಃ ।
ಭುಂಜೀತ ದೇವವತ್ತತ್ರ ಭೋಗಾನ್ ದಿವ್ಯಾನ್ ನಿಜಾರ್ಜಿತಾನ್
॥ ೨೩ ॥

ಅದರಿಂದ ದೊರೆಯುವ ಶರೀರ ಇವೆಲ್ಲವೂ ಭಿನ್ನ-ಭಿನ್ನವಾಗಿವೆ. ಈ ಭಿನ್ನತೆಗೆ ಮಾನ್ಯತೆ ಕೊಟ್ಟರೆ ಹಾಗೂ ಎಲ್ಲ ವಸ್ತು , ಪ್ರಾಣೀ, ಪದಾರ್ಥ, ಪ್ರವಾಹರೂಪದಿಂದ ಉತ್ಪನ್ನವಾಗುತ್ತವೆ ಮತ್ತು ನಾಶ ವಾಗುತ್ತವೆ ಎಂದು ಒಪ್ಪಿಕೊಂಡರೆ ಇದರಿಂದ ಬುದ್ಧಿಯಲ್ಲಿ ನಾನಾತ್ವದ ಭ್ರಮೆಯೇ ಉಪಸ್ಥಿತವಾಗುತ್ತದೆ. ಏಕೆಂದರೆ, ಮನುಷ್ಯನು ಯಾವ ರೀತಿಯ ಸತ್ತ್ವಾದಿ ದೇವತೆಗಳನ್ನು ಆರಾಧಿ ಸುತ್ತಾನೋ, ಅವರ ಆಕೃತಿಗನುಸಾರ ಸತ್ತ್ವಾದಿ ಗುಣಗಳ ತಾರತಮ್ಯದಿಂದ ಅವನ ಬುದ್ಧಿಯೂ ಅಂತಹ ಗುಣಗಳಿಂದಲೇ ಕೂಡಿರುತ್ತದೆ. ಆದರೆ ಇವೆಲ್ಲವೂ ದೇಹಾಭಿಮಾನೀ ಜೀವರಿಗೆ ದೇಹದೊಂದಿಗೆ ಸಂಬಂಧ ಬೆಳೆಸುವುದೇ ಆಗಿದೆ. ಕಾಲದ ಪ್ರವಾಹದಿಂದ ಎಲ್ಲ ಪ್ರಾಣಿ, ಪದಾರ್ಥಗಳು ಪ್ರತಿಕ್ಷಣ ವಿನಾಶದತ್ತ ಸಾಗುತ್ತಿವೆ. ಕರ್ಮಮಾಡುವ ಜೀವಿಯೂ ಸ್ವತಂತ್ರನಲ್ಲ, ಅವನು ಸುಖ-ದುಃಖದ ಭೋಗದಲ್ಲಿಯೂ ಪರತಂತ್ರನಾಗಿದ್ದಾನೆ. ಪರತಂತ್ರನಲ್ಲದಿದ್ದರೆ ವಿವಶನಾಗಿ ಯಾರು ದುಃಖವನ್ನು ಅನು ಭವಿಸಲು ಬಯಸುವನು ? ಎಲ್ಲರೂ ಸುಖವನ್ನೇ ಬಯಸು ವರು. ॥ ೧೪-೧೭ ॥ ವಿದ್ವಾಂಸನಾದರೂ ಕೂಡಾ ಸುಖಿ ಯಾಗಿಲ್ಲ ಎಂಬುದನ್ನು ನೋಡಲಾಗುತ್ತದೆ. ಹಾಗೆಯೇ ಮೂಢ ರಾದವರೂ ಕೂಡ ದುಃಖಿಗಳಾಗಿಲ್ಲ, ಇಂತಹ ಸ್ಥಿತಿಯಲ್ಲಿ ಅಹಂಕಾರ ಮಾಡುವುದು ವ್ಯರ್ಥವಾಗಿದೆ. ಸುಖ-ದುಃಖದ ಪ್ರಾಪ್ತಿ ಹಾಗೂ ಅದರ ನಾಶ ಹೇಗಾದೀತು ಎಂದು ತಿಳಿದುಕೊಂಡರೂ ಮೃತ್ಯು ವನ್ನು ಎಂದು ಬಂದೀತು ಎಂಬುದಂತೂ ತಿಳಿಯಲಾಗುವುದಿಲ್ಲ, ಮೃತ್ಯುವು ಹೇಗೆ ಪರಿಹರಿಸಬಹುದು, ಇದೂ ಕೂಡ ಯಾರು ತಿಳಿಯಲಾರರು. ॥ ೧೮-೧೯ ॥ ಯಾರಿಗಾದರೂ ನೇಣುಶಿಕ್ಷೆ ಯಾಗಿ ಸಾಯುವವನೆಂದಾದರೆ ಅವನಿಗೆ ಯಾವುದೇ ಭೋಗ-ಸಾಮಗ್ರಿಯು ಸಂತುಷ್ಟಪಡಿಸಲಾರದು. ಹಾಗೆಯೇ ಮೃತ್ಯು ವಾದರೋ ಪ್ರತಿಯೋರ್ವ ಮನುಷ್ಯನ ತಲೆಯ ಮೇಲೆ ಕುಣಿ ಯುತ್ತಿದೆ ಎಂದಾದರೆ ಯಾವ ವಸ್ತುವೂ ಈ ಮರಣಧರ್ಮಿಯನ್ನು ಹೇಗೆ ಸುಖಿಯಾಗಿಸಬಲ್ಲವು ? ॥ ೨೦ ॥

ಈ ಲೋಕದಂತೆಯೇ ಪರಲೋಕಗಳೂ ದೋಷಯುಕ್ತವೇ ಆಗಿವೆ. ಅಲ್ಲಿಯೂ ಸ್ಪರ್ಧೆ, ಅಸೂಯೆ, ನಿಧಾನವಾಗಿ ಕ್ಷೀಣ ವಾಗುವುದು ಮತ್ತು ನಾಶವಾಗುವುದು ಇವೆಲ್ಲವೂ ಇವೆ. ಪುಣ್ಯವು ಮುಗಿದಾಗ ಅಲ್ಲಿಂದಲೂ ಪತನವಿದ್ದೇ ಇದೆ. ರೈತನು ಪೈರನ್ನು ಬೆಳೆಸುತ್ತಾನೆ, ಆದರೆ ಅದು ಅತಿವೃಷ್ಟಿ, ಅನಾವೃಷ್ಟಿ ಮುಂತಾದ ಈತಿಬಾಧೆಗಳಿಂದ ನಾಶವಾಗಿ ಹೋಗುತ್ತದೆ. ಹಾಗೆಯೇ ಸ್ವರ್ಗಾದಿ ಕಾಮನೆಯಿಂದ ಮನುಷ್ಯನು ಮಾಡುವ ಪ್ರಯಾಸ ಗಳಲ್ಲಿಯೂ ಅನೇಕ ರೀತಿಯ ವಿಘ್ನಗಳು ಎದುರಾಗುತ್ತವೆ. ಅದರಿಂದ ಅವೂ ನಾಶವಾಗುತ್ತವೆ. ॥ ೨೧ ॥ ಒಂದೊಮ್ಮೆ ನಿರ್ವಿಘ್ನತೆಯಿಂದ ಚೆನ್ನಾಗಿ ಯಜ್ಞಾದಿ ಅನುಷ್ಠಾನವು ಸಾಂಗವಾಗಿ ನಡೆದು, ಅವನು ಊರ್ಧ್ವಲೋಕವನ್ನು ಪಡೆದುಕೊಂಡರೂ ಅವನ ಮುಂದಿನ ಗತಿಯ ಮಾತನ್ನು ಕೇಳು. ॥ ೨೨ ॥ ಯಜ್ಞ ಮಾಡುವ ಮನುಷ್ಯನು ಯಜ್ಞದ ಮೂಲಕ ದೇವತೆಗಳನ್ನು ಆರಾಧಿಸಿ ಸ್ವರ್ಗಕ್ಕೆ ಹೋಗುತ್ತಾನೆ ಮತ್ತು ಅಲ್ಲಿ ತನ್ನ ಪುಣ್ಯಕರ್ಮ ಗಳ ಮೂಲಕ ಗಳಿಸಿದ ದಿವ್ಯ ಭೋಗಗಳನ್ನು ದೇವತೆಗಳಂತೆ ಭೋಗಿಸುತ್ತಾನೆ. ॥ ೨೩ ॥ ಅವನಿಗೆ ಅವನ ಪುಣ್ಯಗಳನುಸಾರ

ಸ್ವಪುಣ್ಯೋಪಚಿತೇ ಶುಭ್ರೇ ವಿಮಾನ ಉಪಗೀಯತೇ ।
ಗಂಧರ್ವೈರ್ವಿಹರನ್ ಮಧ್ಯೇ ದೇವೀನಾಂ ಹೃದ್ಯವೇಷಧೃಕ್ ॥ ೨೪ ॥

ಸ್ತ್ರೀಭಿಃ ಕಾಮಗಯಾನೇನ ಕಿಂಕಿಣೀಜಾಲಮಾಲಿನಾ ।
ಕ್ರೀಡನ್ ನ ವೇದಾತ್ಮಪಾತಂ ಸುರಾಕ್ರೀಡೇಷು ನಿರ್ವೃತಃ ॥ ೨೫ ॥

ತಾವತ್ಪ್ರಮೋದತೇ ಸ್ವರ್ಗೇ ಯಾವತ್ಪುಣ್ಯಂ ಸಮಾಪ್ಯತೇ ।
ಕ್ಷೀಣಪುಣ್ಯಃ ಪತತ್ಯರ್ವಾಗನಿಚ್ಛನ್ ಕಾಲಚಾಲಿತಃ ॥ ೨೬ ॥

ಯದ್ಯಧರ್ಮರತಃ ಸಂಗಾದಸತಾಂ ವಾಜಿತೇಂದ್ರಿಯಃ ।
ಕಾಮಾತ್ಮಾ ಕೃಪಣೋ ಲುಬ್ಧಃ ಸ್ತ್ರೈಣೋ ಭೂತವಿಹಿಂಸಕಃ ॥ ೨೭ ॥

ಪಶೂನವಿಧಿನಾಽಽಲಭ್ಯ ಪ್ರೇತಭೂತಗಣಾನ್ಯಜನ್ ।
ನರಕಾನವಶೋ ಜಂತುರ್ಗತ್ವಾ ಯಾತ್ಯುಲ್ಬಣಂ ತಮಃ ॥ ೨೮ ॥

ಕರ್ಮಾಣಿ ದುಃಖೋದರ್ಕಾಣಿ ಕುರ್ವನ್ದೇಹೇನ ತೈಃ ಪುನಃ ।
ದೇಹಮಾಭಜತೇ ತತ್ರ ಕಿಂ ಸುಖಂ ಮರ್ತ್ಯಧರ್ಮಿಣಃ ॥ ೨೯ ॥

ಲೋಕಾನಾಂ ಲೋಕಪಾಲಾನಾಂ ಮದ್ಭಯಂ ಕಲ್ಪಜೀವಿನಾಮ್ ।
ಬ್ರಹ್ಮಣೋಽಪಿ ಭಯಂ ಮತ್ತೋ ದ್ವಿಪರಾರ್ಧಪರಾಯುಷಃ ॥ ೩೦ ॥

ಗುಣಾಃ ಸೃಜಂತಿ ಕರ್ಮಾಣಿ ಗುಣೋಽನುಸೃಜತೇ ಗುಣಾನ್ ।
ಜೀವಸ್ತು ಗುಣಸಂಯುಕ್ತೋ ಭುಂಕ್ತೇ ಕರ್ಮಫಲಾನ್ಯಸೌ ॥ ೩೧ ॥

ಯಾವತ್ ಸ್ಯಾದ್ಗುಣವೈಷಮ್ಯಂ ತಾವನ್ನಾನಾತ್ವಮಾತ್ಮನಃ ।
ನಾನಾತ್ವಮಾತ್ಮನೋ ಯಾವತ್ಪಾರತಂತ್ರ್ಯಂ ತದೈವ ಹಿ ॥ ೩೨ ॥

ಒಂದು ಹೊಳೆಯುವ ವಿಮಾನ ದೊರೆಯುತ್ತದೆ ಮತ್ತು ಅದರ ಮೂಲಕ ಸುರ-ಸುಂದರಿಯರೊಂದಿಗೆ ವಿಹರಿಸುತ್ತಾನೆ. ಗಂಧರ್ವರು ಅವನ ಗುಣಗಳನ್ನು ಗಾನಮಾಡುತ್ತಾರೆ. ಅವನ ರೂಪ ಲಾವಣ್ಯವನ್ನು ನೋಡಿ ಬೇರೆಯವರ ಮನಸ್ಸು ಆಕರ್ಷಿತವಾಗುತ್ತದೆ. ॥ ೨೪ ॥ ಅವನ ವಿಮಾನವು ಅವನು ಬಯಸಿದಲ್ಲಿಗೆ ಕೊಂಡು ಹೋಗುತ್ತದೆ. ಅದರ ಘಂಟೆಗಳ ಧ್ವನಿಗಳು ಎಲ್ಲ ದಿಕ್ಕುಗಳನ್ನು ಪ್ರತಿಧ್ವನಿಸುತ್ತವೆ. ಅವನು ಅಪ್ಸರೆಯರೊಂದಿಗೆ ನಂದನವನ ಮುಂತಾದ ದೇವತೆಗಳ ವಿಹಾರ ಸ್ಥಳಗಳಲ್ಲಿ ಕ್ರೀಡಿಸುತ್ತಾ ಇರುವಾಗ ಅವನಿಗೆ ಈಗ ನನ್ನ ಪುಣ್ಯವು ಮುಗಿದುಹೋದೀತು ಹಾಗೂ ನಾನು ಇಲ್ಲಿಂದ ತಳ್ಳಲ್ಪಡುವೆನೆಂಬ ಮಾತಿನ ಅರಿವು ಕೂಡ ಇರದಷ್ಟು ಮೈಮರೆಯುತ್ತಾನೆ. ॥ ೨೫ ॥ ಅವನ ಪುಣ್ಯಗಳು ಶೇಷವಾಗಿರುವತನಕ ಅವನು ಸ್ವರ್ಗದಲ್ಲಿ ಸಂತೋಷಪಡುತ್ತಾನೆ. ಪುಣ್ಯವೂ ಕ್ಷೀಣವಾಗುತ್ತಲೇ ಇಚ್ಛೆ ಇಲ್ಲದಿದ್ದರೂ ಅವನನ್ನು ಕಾಲದಮೂಲಕ ಕೆಳಗೆ ತಳ್ಳಲ್ಪಡುತ್ತಾನೆ. ॥ ೨೬ ॥

ಯಾವನಾದರೂ ಮನುಷ್ಯನು ದುಷ್ಟರ ಸಂಗತಿಯಲ್ಲಿ ಬಿದ್ದು ಅಧರ್ಮಪರಾಯಣನಾದರೆ, ತನ್ನ ಇಂದ್ರಿಯಗಳಿಗೆ ವಶನಾದರೆ, ಸ್ವಚ್ಛಂದವಾಗಿ ವಿಹರಿಸತೊಡಗಿದರೆ, ಲೋಭಿಯಾದರೆ, ಲಂಪಟನಾದರೆ, ಪ್ರಾಣಿಗಳನ್ನು ಸತಾಯಿಸುತ್ತಿದ್ದರೆ, ವಿಧಿ-ವಿರುದ್ಧ ಪಶುಬಲಿಯನ್ನಿತ್ತು ಭೂತ-ಪ್ರೇತಗಳ ಉಪಾಸನೆಯಲ್ಲಿ ತೊಡಗಿದರೆ, ಅವನು ಪರವಶನಾಗಿ ಘೋರ ಅಂಧಕಾರಪೂರ್ಣ ನರಕಕ್ಕೆ ಹೋಗಬೇಕಾಗುತ್ತದೆ. ॥ ೨೭-೨೮ ॥ ಸಕಾಮ ಕರ್ಮಗಳೆಲ್ಲದರ ಫಲವು ದುಃಖವೇ ಆಗಿದೆ. ಶರೀರದಲ್ಲಿ ಅಹಂತೆ-ಮಮತೆಯನ್ನಿಟ್ಟು ಅದರಲ್ಲೇ ತೊಡಗಿರುವ ಜೀವಿಗೆ ಜನ್ಮ-ಮರಣದ ಚಕ್ರದಿಂದ ಬಿಡುಗಡೆ ಸಿಗುವುದಿಲ್ಲ. ಇಂತಹ ಸ್ಥಿತಿಯಲ್ಲಿ ಮೃತ್ಯುಧರ್ಮಿಯಾದ ಜೀವಿಗೆ ಆ ಸಕಾಮ ಕರ್ಮಗಳಿಂದ ಯಾವ ಸುಖ ಸಿಗಬಹುದು ? ಲೋಕ ಮತ್ತು ಲೋಕಪಾಲರ ಆಯುಸ್ಸು ಕೂಡ ಕೇವಲ ಒಂದು ಕಲ್ಪವೇ ಆಗಿದೆ. ಅವರೂ ಕೂಡ ನನಗೆ ಭಯಪಡುವಾಗ, ಬೇರೆಯವರ ಮಾತೇನಿದೆ ? ಸ್ವಯಂ ಬ್ರಹ್ಮನ ಆಯುಸ್ಸು ಎರಡು ಪರಾರ್ಧವಾಗಿದೆ. ಇಷ್ಟು ದೀರ್ಘವಾದ ಆಯುಸ್ಸಿದ್ದರೂ ಅವನೂ ಕೂಡ ನನಗೆ ಭಯಪಡುತ್ತಾನೆ. ॥ ೨೯-೩೦ ॥ ಸತ್ತ್ವಾದಿ ಗುಣಗಳು ಇಂದ್ರಿಯಗಳನ್ನು ಅವುಗಳ ಕರ್ಮಗಳಲ್ಲಿ ಪ್ರೇರೇಪಿಸುತ್ತವೆ ಮತ್ತು ಇಂದ್ರಿಯಗಳು ಕರ್ಮಮಾಡುತ್ತವೆ. ಜೀವಿಯು ಅಜ್ಞಾನವಶನಾಗಿ ಸತ್ತ್ವ, ರಜ, ತಮ ಗುಣಗಳನ್ನು ಹಾಗೂ ಇಂದ್ರಿಯಗಳನ್ನು ತನ್ನ ಸ್ವರೂಪವೆಂದು ತಿಳಿದುಕೊಳ್ಳುತ್ತಾನೆ. ಅವುಗಳು ಮಾಡಿದ ಕರ್ಮಗಳೊಂದಿಗೆ ಸಂಬಂಧ ಬೆಳೆಸಿ ಸುಖ-ದುಃಖಗಳನ್ನು ಭೋಗಿಸತೊಡಗುತ್ತಾನೆ. ಗುಣಗಳ ವಿಷಮತೆ ಇರುವತನಕ ಅರ್ಥಾತ್ – ಶರೀರಾದಿಗಳಲ್ಲಿ ನಾನು-ನನ್ನದೆಂಬ ಅಭಿಮಾನವಿರುವತನಕ ಆತ್ಮನ ಏಕತ್ವದ ಅನುಭೂತಿ ಉಂಟಾಗುವುದಿಲ್ಲ, ನಾನಾತ್ವದ ಭ್ರಮೆ ಅಳಿಯುವುದಿಲ್ಲ. ಈ ಅಜ್ಞಾನಮೂಲ ಭ್ರಮದ ನಿವೃತ್ತಿ ಆಗುವವರೆಗೆ ಅವನು ಪರತಂತ್ರನೇ ಆಗಿರುವನು. ॥ ೩೧-೩೨ ॥

ಯಾವದಸ್ಯಾಸ್ವತಂತ್ರತ್ವಂ ತಾವದೀಶ್ವರತೋ ಭಯಮ್ ।
ಯ ಏತತ್ಸಮುಪಾಸೀರಂಸ್ತೇ ಮುಹ್ಯಂತಿ ಶುಚಾರ್ಪಿತಾಃ ॥ ೩೩ ॥

ಕಾಲ ಆತ್ಮಾಽಽಗಮೋ ಲೋಕಃ ಸ್ವಭಾವೋ ಧರ್ಮ ಏವ ಚ ।
ಇತಿ ಮಾಂ ಬಹುಧಾ ಪ್ರಾಹುರ್ಗುಣವ್ಯತಿಕರೇ ಸತಿ ॥ ೩೪ ॥

ಪರತಂತ್ರತೆ ಇರುವ ತನಕ ಈಶ್ವರನಿಂದ ಭಯವಿದ್ದೇ ಇರುತ್ತದೆ. ಈ ಪ್ರಕಾರದ ಗುಣ-ಧರ್ಮಗಳಲ್ಲಿ ಬಿದ್ದುಕೊಂಡಿರುವವನಿಗೆ ಶೋಕ ಮತ್ತು ಮೋಹದ ಪ್ರಾಪ್ತಿ ಆಗುತ್ತಾ ಇರುತ್ತದೆ. ॥ ೩೩ ॥ ಪ್ರಿಯ ಉದ್ಧವನೇ! ಮಾಯೆಯ ಗುಣಗಳಲ್ಲಿ ಕ್ಷೋಭೆ ಉಂಟಾದಾಗ ಅವುಗಳ ವ್ಯಾವಹಾರಿಕ ಸತ್ತೆಯು ಅನೇಕವಾಗಿ ಕಂಡುಬರುತ್ತದೆ. ಕಾಲ, ಆತ್ಮಾ, ಆಗಮ (ವೇದ), ಲೋಕ, ಸ್ವಭಾವ ಮತ್ತು ಧರ್ಮ ಇವೆಲ್ಲವೂ ನಾನೇ ಆಗಿದ್ದೇನೆ. (ಹೀಗೆ ಇವೆಲ್ಲದರಲ್ಲಿ ನಾನಾತ್ವದ ಭಾವನೆಯನ್ನಿರಿಸದೆ ಇವೆಲ್ಲದರ ರೂಪದಲ್ಲಿ ಓರ್ವ ಪರಮಾತ್ಮನಾದ ನನ್ನನ್ನೇ ನೋಡಬೇಕು.) ॥ ೩೪ ॥

ಉದ್ಧವ ಉವಾಚ

ಗುಣೇಷು ವರ್ತಮಾನೋಽಪಿ ದೇಹಜೇಷ್ವನಪಾವೃತಃ ।
ಗುಣೈರ್ನ ಬಧ್ಯತೇ ದೇಹೀ ಬಧ್ಯತೇ ವಾ ಕಥಂ ವಿಭೋ ॥ ೩೫ ॥

ಕಥಂ ವರ್ತೇತ ವಿಹರೇತ್ಕೈರ್ವಾ ಜ್ಞಾಯೇತ ಲಕ್ಷಣೈಃ ।
ಕಿಂ ಭುಂಜೀತೋತ ವಿಸೃಜೇಚ್ಛಯೀತಾಸೀತ ಯಾತಿ ವಾ ॥ ೩೬ ॥

ಏತದಚ್ಯುತ ಮೇ ಬ್ರೂಹಿ ಪ್ರಶ್ನಂ ಪ್ರಶ್ನವಿದಾಂ ವರ ।
ನಿತ್ಯಮುಕ್ತೋ ನಿತ್ಯಬದ್ಧ ಏಕ ಏವೇತಿ ಮೇ ಭ್ರಮಃ ॥ ೩೭ ॥

ಉದ್ಧವನು ಕೇಳಿದನು – ಭಗವಂತಾ! ಈ ಜೀವಿಯು ದೇಹದಿಂದ ಉಂಟಾಗುವ ಗುಣಗಳಲ್ಲಿ ಇದ್ದರೂ ಕೂಡ ಅವುಗಳಿಂದ ಮುಕ್ತಜೀವನ ಹೇಗೆ ನಡೆಸುತ್ತಾನೆ ಮತ್ತು ಆ ಗುಣಗಳಿಂದ ಹೇಗೆ ಬಂಧಿತನಾಗುವುದಿಲ್ಲ? ಹಾಗೆಯೇ ಬೇರೆಯವನು ಗುಣಗಳಿಂದ ಬದ್ಧನಾಗುತ್ತಾನೆ. ಇದು ಏಕೆ? ॥ ೩೫ ॥ ಬದ್ಧ ಅಥವಾ ಮುಕ್ತ ಪುರುಷನು ಹೇಗೆ ವರ್ತಿಸುತ್ತಾನೆ, ಅವನು ಹೇಗೆ ವಿಹರಿಸುತ್ತಾನೆ, ಅವನನ್ನು ಯಾವ ಲಕ್ಷಣಗಳಿಂದ ಗುರುತಿಸಲಾಗುತ್ತದೆ, ಹೇಗೆ ಊಟಮಾಡುತ್ತಾನೆ ಮತ್ತು ಹೇಗೆ ಮಲತ್ಯಾಗ ಇತ್ಯಾದಿ ಮಾಡುತ್ತಾನೆ, ಹೇಗೆ ಮಲಗುತ್ತಾನೆ, ಹೇಗೆ ಕುಳಿತುಕೊಳ್ಳುತ್ತಾನೆ ಹಾಗೂ ಹೇಗೆ ನಡೆಯುತ್ತಾನೆ? ॥ ೩೬ ॥ ಹೇ ಅಚ್ಯುತಾ! ಪ್ರಶ್ನೆಯ ಮರ್ಮವನ್ನು ತಿಳಿಯುವುದರಲ್ಲಿ ನೀನು ಶ್ರೇಷ್ಠನಾಗಿರುವೆ. ಅದಕ್ಕಾಗಿ ನೀನು ನನ್ನ ಪ್ರಶ್ನೆಗಳ ಉತ್ತರವನ್ನು ಕೊಡುವವನಾಗು. ಒಂದೇ ಆತ್ಮನು ನಿತ್ಯಬದ್ಧನೂ ಆಗಿದ್ದಾನೆ ಮತ್ತು ನಿತ್ಯಮುಕ್ತನೂ ಆಗಿದ್ದಾನೆ. ಈ ಮಾತಿನ ಕುರಿತು ನನಗೆ ಭ್ರಮ ಉಂಟಾಗುತ್ತಿದೆ. ॥ ೩೭ ॥

ಹತ್ತನೆಯ ಅಧ್ಯಾಯವು ಮುಗಿಯಿತು. ॥ ೧೦ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಏಕಾದಶ ಸ್ಕಂಧೇ
ಭಗವದುದ್ಧವ ಸಂವಾದೇ ದಶಮೋಽಧ್ಯಾಯಃ ॥ ೧೦ ॥

ಹನ್ನೊಂದನೆಯ ಅಧ್ಯಾಯ

ಬದ್ಧ, ಮುಕ್ತ ಮತ್ತು ಭಕ್ತಜನರ ಲಕ್ಷಣಗಳು

ಶ್ರೀಭಗವಾನುವಾಚ

ಬದ್ಧೋ ಮುಕ್ತ ಇತಿ ವ್ಯಾಖ್ಯಾ
ಗುಣತೋ ಮೇ ನ ವಸ್ತುತಃ ।
ಗುಣಸ್ಯ ಮಾಯಾಮೂಲತ್ವಾನ್ನ
ಮೇ ಮೋಕ್ಷೋ ನ ಬಂಧನಮ್ ॥ ೧ ॥

ಭಗವಾನ್ ಶ್ರೀಕೃಷ್ಣನು ಹೇಳಿದನು – ಪ್ರಿಯ ಉದ್ಧವನೇ! ಬದ್ಧ ಅಥವಾ ಮುಕ್ತನೆಂದು ಹೇಳುವುದು ಗುಣಗಳನ್ನು ಪರಿಗಣಿಸಿಯೇ ಆಗಿದೆ. ವಸ್ತುತಃ ನನ್ನ ಸ್ವರೂಪದಲ್ಲಿ ಅರ್ಥಾತ್ ಆತ್ಮನಲ್ಲಿ ಇವೆರಡು ಇಲ್ಲವೇ ಇಲ್ಲ. ಗುಣಗಳು ಮಾಯಾಮೂಲಕವಾಗಿವೆ. ಆತ್ಮಸ್ವರೂಪದಲ್ಲಿ ಬಂಧನವಾಗಲಿ, ಮೋಕ್ಷವಾಗಲಿ ಇಲ್ಲ. ॥ ೧ ॥ ಶೋಕ, ಮೋಹ, ಸುಖ, ದುಃಖ, ದೇಹಪ್ರಾಪ್ತಿ ಇವೆಲ್ಲವೂ ಮಾಯೆಯ ಕಾರಣದಿಂದಲೇ ಇದೆ.

ಶೋಕಮೋಹೌ ಸುಖಂ ದುಃಖಂ ದೇಹಾಪತ್ತಿಶ್ಚ ಮಾಯಯಾ ।
ಸ್ವಪ್ನೋ ಯಥಾಽಽತ್ಮನಃ ಖ್ಯಾತಿಃ ಸಂಸೃತಿರ್ನ ತು ವಾಸ್ತವೀ
॥ ೨ ॥

ವಿದ್ಯಾವಿದ್ಯೇ ಮಮ ತನೂ ವಿದ್ಧ್ಯುದ್ಧವ ಶರೀರಿಣಾಮ್ ।
ಮೋಕ್ಷಬಂಧಕರೀ ಆದ್ಯೇ ಮಾಯಯಾ ಮೇ ವಿನಿರ್ಮಿತೇ
॥ ೩ ॥

ಏಕಸ್ಯೈವ ಮಮಾಂಶಸ್ಯ ಜೀವಸ್ಯೈವ ಮಹಾಮತೇ ।
ಬಂಧೋಽಸ್ಯಾವಿದ್ಯಯಾನಾದಿರ್ವಿದ್ಯಯಾ ಚ ತಥೇತರಃ
॥ ೪ ॥

ಅಥ ಬದ್ಧಸ್ಯ ಮುಕ್ತಸ್ಯ ವೈಲಕ್ಷಣ್ಯಂ ವದಾಮಿ ತೇ ।
ವಿರುದ್ಧಧರ್ಮಿಣೋಸ್ತಾತ ಸ್ಥಿತಯೋರೇಕಧರ್ಮಿಣಿ
॥ ೫ ॥

ಸುಪರ್ಣಾವೇತೌ ಸದೃಶೌ ಸಖಾಯೌ
ಯದೃಚ್ಛಯೈತೌ ಕೃತನೀಡೌ ಚ ವೃಕ್ಷೇ ।
ಏಕಸ್ತಯೋಃ ಖಾದತಿ ಪಿಪ್ಪಲಾನ್ನ-
ಮನ್ಯೋ ನಿರನ್ನೋಽಪಿ ಬಲೇನ ಭೂಯಾನ್ ॥ ೬ ॥

ಆತ್ಮಾನಮನ್ಯಂ ಚ ಸ ವೇದ ವಿದ್ವಾ-
ನಪಿಪ್ಪಲಾದೋ ನ ತು ಪಿಪ್ಪಲಾದಃ ।
ಯೋಽವಿದ್ಯಯಾ ಯುಕ್ ಸ ತು ನಿತ್ಯಬದ್ಧೋ
ವಿದ್ಯಾಮಯೋ ಯಃ ಸ ತು ನಿತ್ಯಮುಕ್ತಃ ॥ ೭ ॥

ದೇಹಸ್ಥೋಽಪಿ ನ ದೇಹಸ್ಥೋ ವಿದ್ವಾನ್ ಸ್ವಪ್ನಾದ್ಯಥೋತ್ಥಿತಃ ।
ಅದೇಹಸ್ಥೋಽಪಿ ದೇಹಸ್ಥಃ ಕುಮತಿಃ ಸ್ವಪ್ನದೃಗ್ಯಥಾ
॥ ೮ ॥

ಇಂದ್ರಿಯೈರಿಂದ್ರಿಯಾರ್ಥೇಷು ಗುಣೈರಪಿ ಗುಣೇಷು ಚ ।
ಗೃಹ್ಯಮಾಣೇಷ್ವಹಂಕುರ್ಯಾನ್ನ ವಿದ್ವಾನ್ ಯಸ್ತ್ವವಿಕ್ರಿಯಃ
॥ ೯ ॥

ಆತ್ಮನಿಗಾಗಿ ಸಂಸೃತಿಯ ಮಾತು ಹೇಳುವುದು ಯಥಾರ್ಥವಲ್ಲ, ಸ್ವಪ್ನದ ಮಾತಿನಂತೆ ಇದೆ. ಅರ್ಥಾತ್ – ಸ್ವಪ್ನವು ಮಿಥ್ಯೆಯಾಗಿರುವಂತೆ ಆತ್ಮನಿಗಾಗಿ ಸಂಸೃತಿ ಹೇಳುವುದು ಮಿಥ್ಯೆಯೇ ಆಗಿದೆ. ॥ ೨ ॥ ಎಲೈ ಉದ್ಧವಾ ! ವಿದ್ಯೆ ಮತ್ತು ಅವಿದ್ಯೆ ಇವೆರಡೂ ನನ್ನದೇ ಶಕ್ತಿಗಳಾಗಿವೆ. ಅದು ಶರೀರಧಾರಿಗಳಿಗೆ ಕ್ರಮಶಃ ಮೋಕ್ಷ ಹಾಗೂ ಬಂಧನಗಳನ್ನು ಕೊಡುವುದಾಗಿದೆ. ಇವೆರಡೂ ಅನಾದಿಯಾಗಿದ್ದು, ನನ್ನ ಮಾಯೆಯಿಂದ ರಚಿತವಾಗಿವೆ. ॥ ೩ ॥ ಬುದ್ಧಿವಂತನೇ ! ಈ ಜೀವಿಯು ಏಕಮಾತ್ರ ನನ್ನದೇ ಅಂಶವಾಗಿದ್ದಾನೆ. ಅನಾದಿ ಅವಿದ್ಯೆಯು ಜೀವಿಯನ್ನು ಬಂಧಿಸುತ್ತದೆ, ಎರಡನೆಯದಾದ ನನ್ನ ವಿದ್ಯಾಶಕ್ತಿಯಿಂದ ಮೋಕ್ಷ ಉಂಟಾಗುತ್ತದೆ. ॥ ೪ ॥ ಬದ್ಧ ಮತ್ತು ಮುಕ್ತ ಎರಡರಲ್ಲಿರುವ ಪ್ರಭೇದವನ್ನು ಈಗ ನಾನು ನಿನಗೆ ಹೇಳುತ್ತೇನೆ. ಪ್ರಿಯ ಉದ್ಧವನೇ ! ಜೀವವು ನನ್ನದೇ ಸ್ವರೂಪವಾದ್ದರಿಂದ ವಾಸ್ತವವಾಗಿ ಆತ್ಮಾ ಮತ್ತು ಜೀವ ಇವೆರಡೂ ಒಂದೇ ಆಗಿದೆ. ಆದರೂ ಇವೆರಡರಲ್ಲಿ ಇರುವ ಪರಸ್ಪರ ಭೇದವನ್ನು ಕೇಳು. ನಾನು ಶಾಸಕ (ಆಳುವವನು)ನಾಗಿದ್ದೇನೆ, ಜೀವಿಯು ಶಾಸಿತಾ (ಆಳಲ್ಪಡುವವನು) ಆಗಿದ್ದಾನೆ. ನಾನು ಆನಂದಸ್ವರೂಪನಾಗಿದ್ದೇನೆ, ಜೀವಿಯು ಶೋಕ-ಮೋಹದಿಂದ ಗ್ರಸಿತನಾಗಿ ಸುಖೀ-ದುಃಖೀಯಾಗುತ್ತಾನೆ. ॥ ೫ ॥ ಈ ಶರೀರರೂಪೀ ವೃಕ್ಷದಲ್ಲಿ ಗೂಡು ಕಟ್ಟಿಕೊಂಡು ಜೊತೆಗೆ ವಾಸಿಸುವ ಇವೆರಡು ಪಕ್ಷಿಗಳಾಗಿವೆ. ಇಬ್ಬರೂ ಮಿತ್ರರಾಗಿದ್ದು, ಸಮಾನ ಧರ್ಮಿಗಳಾಗಿವೆ. ಇವೆರಡರಲ್ಲಿ ಒಂದಾದರೋ ಈ ಶರೀರದ ಮೂಲಕ ಗೈದ ಕರ್ಮಗಳ ಫಲವನ್ನು ಉಪಭೋಗಿಸುತ್ತದೆ. ಆದರೆ ಅದು ಅವನ್ನು ಉಪಭೋಗಿಸಿಯೂ ಕ್ಷೀಣವಾಗುತ್ತದೆ. ಆದರೆ ಇನ್ನೊಂದು ಪಕ್ಷಿಯು ಆ ಫಲಗಳನ್ನು ಉಪಭೋಗಿಸುವುದಿಲ್ಲ, ಆದರೂ ಅದು ಸಾಕಷ್ಟು ಬಲಶಾಲಿಯಾಗಿದೆ. ॥ ೬ ॥ ಫಲವನ್ನು ಉಪಭೋಗಿಸದಿರುವವನು ತನ್ನನ್ನೂ ತಿಳಿಯುತ್ತಾನೆ ಹಾಗೂ ತನ್ನ ಸಖನಾದ ಇನ್ನೊಂದು ಜೀವವನ್ನೂ ತಿಳಿಯುತ್ತಾನೆ. ಆದರೆ ಭೋಗಗಳನ್ನು ಉಪಭೋಗಿಸುವವನು ತನ್ನನ್ನೂ ತಿಳಿಯುವುದಿಲ್ಲ, ತನ್ನ ಸಖನಾದ ಆತ್ಮಸ್ವರೂಪವನ್ನೂ ತಿಳಿಯುವುದಿಲ್ಲ. ಈ ವಿಧವಾಗಿ ಅವಿದ್ಯೆಯಲ್ಲಿ ತೊಡಗಿರುವವನು ನಿತ್ಯಬದ್ಧನಾಗಿದ್ದಾನೆ ಮತ್ತು ತನ್ನ ನಿಜಸ್ವರೂಪವನ್ನು ಅರಿಯುವವನು ನಿತ್ಯಮುಕ್ತನಾಗಿದ್ದಾನೆ. ॥ ೭ ॥ ತನ್ನ ಆತ್ಮಸ್ವರೂಪವನ್ನು ಅರಿತುಕೊಂಡವನು ಈ ದೇಹದಲ್ಲಿ ಇದ್ದರೂ ದೇಹದ ಗುಣ ಧರ್ಮಗಳಿಂದ ಅತೀತನಾಗಿದ್ದಾನೆ. ಏಕೆಂದರೆ, ಸ್ವಪ್ನ ಪ್ರಪಂಚವು ಮಿಥ್ಯೆಯಾಗಿರುವಂತೆ ಈ ಪ್ರಪಂಚವೆಲ್ಲವೂ ಮಾಯಾಮಯವಾಗಿದ್ದು ಮಿಥ್ಯೆಯೇ ಆಗಿದೆ ಎಂದು ಅವನು ತಿಳಿದಿರುವನು. ಆದರೆ ಆತ್ಮನಿಗೆ ಶರೀರದೊಂದಿಗೆ ಯಾವ ಸಂಬಂಧವೂ ಇರದಿದ್ದರೂ ಅಜ್ಞಾನಿಯು ಸ್ವಪ್ನದ ಪ್ರಪಂಚವನ್ನು ನೋಡಿ ಸುಖಿ-ದುಃಖಿಯಾಗುವಂತೆ ಈ ಜಗತ್ತನ್ನು ಸತ್ಯವೆಂದು ತಿಳಿದು ಸುಖೀ-ದುಃಖಿಯಾಗುತ್ತಾ ಇರುತ್ತಾನೆ. ॥ ೮ ॥ ಇಂದ್ರಿಯಗಳೂ ಕೂಡ ತ್ರಿಗುಣಗಳ ವಿಕಾರವಾಗಿವೆ. ಮತ್ತು ಈ ವಿಷಯ ಭೋಗಗಳೂ ತ್ರಿಗುಣಗಳದ್ದೇ ವಿಕಾರವಾಗಿವೆ. ಹೀಗೆ ಗುಣಗಳ ಮೂಲಕ ಗುಣಗಳ ವ್ಯವಹಾರ ಪರಸ್ಪರ ನಡೆಯುತ್ತಾ ಇರುತ್ತದೆ. ವಿದ್ವಾಂಸನು ತನ್ನ ಆತ್ಮಸ್ವರೂಪದಲ್ಲಿ ಸ್ಥಿತನಾದ್ದರಿಂದ ಇವುಗಳಿಂದ ಪೂರ್ಣವಾಗಿ ನಿರ್ವಿಕಾರಿಯಾಗಿರುತ್ತಾನೆ ಹಾಗೂ ನಾನು ಏನನ್ನೂ ಮಾಡುವುದಿಲ್ಲ ಎಂದು ತಿಳಿಯುತ್ತಾನೆ. ॥ ೯ ॥

ದೈವಾಧೀನೇ ಶರೀರೇಽಸ್ಮಿನ್ ಗುಣಭಾವ್ಯೇನ ಕರ್ಮಣಾ ।
ವರ್ತಮಾನೋಽಬುಧಸ್ತತ್ರ ಕರ್ತಾಸ್ಮೀತಿ ನಿಬಧ್ಯತೇ ॥ ೧೦ ॥

ಏವಂ ವಿರಕ್ತಃ ಶಯನೇ ಆಸನಾಟನಮಜ್ಜನೇ ।
ದರ್ಶನಸ್ಪರ್ಶನಘ್ರಾಣಭೋಜನಶ್ರವಣಾದಿಷು ॥ ೧೧ ॥

ನ ತಥಾ ಬಧ್ಯತೇ ವಿದ್ವಾಂಸ್ತತ್ರ ತತ್ರಾದಯನ್ಗುಣಾನ್ ।
ಪ್ರಕೃತಿಸ್ಥೋಽಪ್ಯಸಂಸಕ್ತೋ ಯಥಾ ಖಂ ಸವಿತಾನಿಲಃ ॥ ೧೨ ॥

ವೈಶಾರದ್ಯೇಕ್ಷಯಾಸಂಗಶಿತಯಾ ಛಿನ್ನಸಂಶಯಃ ।
ಪ್ರತಿಬುದ್ಧ ಇವ ಸ್ವಪ್ನಾನ್ನಾನಾತ್ವಾದ್ವಿನಿವರ್ತತೇ ॥ ೧೩ ॥

ಯಸ್ಯ ಸ್ಯುರ್ವೀತಸಂಕಲ್ಪಾಃ ಪ್ರಾಣೇಂದ್ರಿಯಮನೋಧಿಯಾಮ್ ।
ವೃತ್ತಯಃ ಸ ವಿನಿರ್ಮುಕ್ತೋ ದೇಹಸ್ಥೋಽಪಿ ಹಿ ತದ್ಗುಣೈಃ ॥ ೧೪ ॥

ಯಸ್ಯಾತ್ಮಾ ಹಿಂಸ್ಯತೇ ಹಿಂಸ್ರೈರ್ಯೇನ ಕಿಂಚಿದ್ಯದೃಚ್ಛಯಾ ।
ಅರ್ಚ್ಯತೇ ವಾ ಕ್ವಚಿತ್ತತ್ರ ನ ವ್ಯತಿಕ್ರಿಯತೇ ಬುಧಃ ॥ ೧೫ ॥

ನ ಸ್ತುವೀತ ನ ನಿಂದೇತ ಕುರ್ವತಃ ಸಾಧ್ವಸಾಧು ವಾ ।
ವದತೋ ಗುಣದೋಷಾಭ್ಯಾಂ ವರ್ಜಿತಃ ಸಮದೃಙ್ಮುನಿಃ ॥ ೧೬ ॥

ನ ಕುರ್ಯಾನ್ನ ವದೇತ್ಕಿಂಚಿನ್ನ ಧ್ಯಾಯೇತ್ ಸಾಧ್ವಸಾಧು ವಾ ।
ಆತ್ಮಾರಾಮೋಽನಯಾ ವೃತ್ತ್ಯಾ ವಿಚರೇಜ್ಜಡವನ್ಮುನಿಃ ॥ ೧೭ ॥

ಈ ಶರೀರವಾದರೋ ಪ್ರಾರಬ್ಧಕ್ಕಧೀನವಾಗಿದೆ. ಇಂದ್ರಿಯಗಳಿಂದ ಕರ್ಮಗಳು ಮಾಡಲ್ಪಡುತ್ತವೆ ಅವುಗಳ ಪ್ರೇರಕವು ಮನಸ್ಸಾಗಿದೆ. ಹೀಗೆ ಈ ಮನ ಮತ್ತು ಇಂದ್ರಿಯಗಳು ಎರಡೂ ಗುಣಗಳ ಕಾರ್ಯವೇ ಆಗಿದೆ. ವಾಸ್ತವವಾಗಿ ಗುಣಗಳೇ ಗುಣಗಳಲ್ಲಿ ವರ್ತಿಸುತ್ತವೆ. ಆದರೆ ಅಜ್ಞಾನಿಯು 'ನಾನು ಕರ್ತಾ ಆಗಿದ್ದೇನೆ' ಹೀಗೆ ತಿಳಿದು ಬಂಧಿತನಾಗುತ್ತಾನೆ. ॥ ೧೦ ॥

ಆದರೆ ವಿರಕ್ತಜ್ಞಾನಿಯು ಮಲಗುವುದು, ಕುಳಿತುಕೊಳ್ಳುವುದು, ತಿರುಗಾಡುವುದು, ಸ್ನಾನಮಾಡುವುದು, ನೋಡುವುದು, ಮುಟ್ಟುವುದು, ಮೂಸುವುದು, ತಿನ್ನುವುದು, ಕೇಳುವುದು ಮುಂತಾದ ಕ್ರಿಯೆಗಳನ್ನು ಮಾಡುತ್ತಿದ್ದರೂ ತನ್ನನ್ನು ಕರ್ತಾ ಭೋಕ್ತಾ ಎಂದು ತಿಳಿಯುವುದಿಲ್ಲ, ಅವನು ಪ್ರಕೃತಿಯಲ್ಲಿ ನೆಲೆಸಿಯೂ ಅದರಿಂದ ಪೂರ್ಣ ಅಸಂಗನಾಗಿದ್ದಾನೆ. ಅರ್ಥಾತ್ – ಅವನು ಆ ಕರ್ಮಗಳಿಂದ ಲಿಪ್ತನಾಗುವುದಿಲ್ಲ, ಆಕಾಶ, ಸೂರ್ಯ, ವಾಯು ಇವು ಯಾರ ಗುಣದೋಷಗಳನ್ನು ಗ್ರಹಿಸುವುದಿಲ್ಲ, ಎಲ್ಲಿಯೂ ಲಿಪ್ತವಾಗುವುದಿಲ್ಲ, ಹಾಗೆಯೇ ಜ್ಞಾನಿಯು ಪೂರ್ಣವಾಗಿ ನಿರ್ಲಿಪ್ತನಾಗಿರುತ್ತಾನೆ. ಹೀಗೆ ವೈರಾಗ್ಯದಿಂದ ತೀಕ್ಷ್ಣವಾದ ದೃಷ್ಟಿಯುಳ್ಳವನ ಎಲ್ಲ ಸಂಶಯಗಳು ದೂರವಾಗುತ್ತವೆ. ಸ್ವಪ್ನದಿಂದ ಎಚ್ಚತ್ತಮೇಲೆ ಸ್ವಪ್ನದ ಸೃಷ್ಟಿಯು ಕಣ್ಮರೆಯಾಗುವಂತೆ ವಿವೇಕ ಜ್ಞಾನದ ಮೂಲಕ ಅವನ ಎಲ್ಲ ನಾನಾತ್ವದ ಭ್ರಮೆಯು ದೂರವಾಗುತ್ತದೆ. ॥ ೧೧–೧೩ ॥ ಪ್ರಾಣ, ಇಂದ್ರಿಯಗಳು, ಮನಸ್ಸು, ಬುದ್ಧಿ ಇವುಗಳ ಸಂಕಲ್ಪಗಳಿಂದ ಪೂರ್ಣವಾಗಿ ನಿವೃತ್ತವಾದವನು, ಪ್ರಾಪಂಚಿಕ ಕರ್ಮಗಳನ್ನು ಮಾಡುವ ಪರಂಪರೆ ನಾಶವಾದವನು ದೇಹದಲ್ಲಿ ಸ್ಥಿತನಾಗಿದ್ದರೂ ಅದರ ಗುಣಗಳಿಂದ ಸರ್ವಥಾ ಅತೀತನಾಗಿರುತ್ತಾನೆ ಅರ್ಥಾತ್ ಅವನು ಗುಣಾತೀತ ಅವಸ್ಥೆಯನ್ನು ಪಡೆದುಕೊಳ್ಳುತ್ತಾನೆ. ॥ ೧೪ ॥

ಆ ತತ್ತ್ವಜ್ಞ ಮುಕ್ತ ಪುರುಷನ ಶರೀರಕ್ಕೆ ಬೇಕಾದರೆ ಹಿಂಸಕರು ಸತಾಯಿಸಿ ದುಃಖಕೊಟ್ಟರೂ, ಬೇಕಾದರೆ ಎಂದಾದರೂ, ಯಾರಾದರೂ ದೈವಯೋಗದಿಂದ ಪೂಜಿಸಿದರೆ, ಅವನು ಸತಾಯಿಸುವುದರಿಂದ ದುಃಖಿಯೂ, ಪೂಜೆಯಿಂದ ಸುಖಿಯೂ ಆಗುವುದಿಲ್ಲ. ॥ ೧೫ ॥ ಮುನಿಯಾದವನು ತನ್ನನ್ನು ಬೇಕಾದರೆ ಸ್ತುತಿಸಲಿ, ನಿಂದಿಸಲಿ, ಅವರನ್ನು ಒಳ್ಳೆಯವರೆಂದಾಗಲೀ, ಕೆಟ್ಟವರೆಂದಾಗಲೀ ಹೇಳುವುದಿಲ್ಲ, ಎಲ್ಲೆಡೆ ಸಮದೃಷ್ಟಿಯಿದ್ದು ಓರ್ವ ಪರಮಾತ್ಮನದೇ ಭಾವನೆವಿರಿಸಬೇಕು. ಯಾರಾದರೂ ಗುಣದೋಷಗಳ ವಿಷಯದಲ್ಲಿ ಚರ್ಚಿಸುತ್ತಿದ್ದರೆ ಅದರಿಂದ ದೂರವುಳಿಯಬೇಕು. ॥ ೧೬ ॥ ಹೀಗೆ ಮುನಿಯಾದವನು ತನ್ನ ಆತ್ಮನಲ್ಲೇ ತನ್ಮಯನಾಗಿರಲಿ. ಈ ರೀತಿಯಿಂದ ಪ್ರಕೃತಿಯಲ್ಲಿ ಸ್ಥಿತನಾಗಿದ್ದರೂ ಅವನು ಯಾರಿಗಾಗಿಯೂ ಒಳ್ಳೆಯದಾಗಲೀ, ಕೆಟ್ಟದಾಗಲಿ ಮಾತನಾಡದಿರಲಿ, ಹೇಳದಿರಲಿ, ಚಿಂತಿಸದಿರಲಿ, ಜಡನಂತೆ ವರ್ತಿಸಲಿ. ತನ್ನ ಗೂಢಭಾವವನ್ನು ಯಾರಲ್ಲಿಯೂ ಪ್ರಕಟಿಸದಿರಲಿ. ॥ ೧೭ ॥

ಶಬ್ದಬ್ರಹ್ಮಣಿ ನಿಷ್ಣಾತೋ ನ ನಿಷ್ಣಾಯಾತ್ಪರೇ ಯದಿ ।
ಶ್ರಮಸ್ತಸ್ಯ ಶ್ರಮಫಲೋ ಹ್ಯಧೇನುಮಿವ ರಕ್ಷತಃ ॥ ೧೮ ॥

ಗಾಂ ದುಗ್ಧದೋಹಾಮಸತೀಂ ಚ ಭಾರ್ಯಾಂ
ದೇಹಂ ಪರಾಧೀನಮಸತ್ಪ್ರಜಾಂ ಚ ।
ವಿತ್ತಂ ತ್ವತೀರ್ಥೀಕೃತಮಂಗ ವಾಚಂ
ಹೀನಾಂ ಮಯಾ ರಕ್ಷತಿ ದುಃಖದುಃಖೀ ॥ ೧೯ ॥

ಯಸ್ಯಾಂ ನ ಮೇ ಪಾವನಮಂಗ ಕರ್ಮ
ಸ್ಥಿತ್ಯುದ್ಭವಪ್ರಾಣನಿರೋಧಮಸ್ಯ ।
ಲೀಲಾವತಾರೇಪ್ಸಿತಜನ್ಮ ವಾ ಸ್ಯಾದ್
ವಂಧ್ಯಾಂ ಗಿರಂ ತಾಂ ಬಿಭೃಯಾನ್ನ ಧೀರಃ ॥ ೨೦ ॥

ಏವಂ ಜಿಜ್ಞಾಸಯಾಪೋಹ್ಯ ನಾನಾತ್ವಭ್ರಮಮಾತ್ಮನಿ ।
ಉಪಾರಮೇತ ವಿರಜಂ ಮನೋ ಮಯ್ಯರ್ಪ್ಯ ಸರ್ವಗೇ ॥ ೨೧ ॥

ಯದ್ಯನೀಶೋ ಧಾರಯಿತುಂ ಮನೋ ಬ್ರಹ್ಮಣಿ ನಿಶ್ಚಲಮ್ ।
ಮಯಿ ಸರ್ವಾಣಿ ಕರ್ಮಾಣಿ ನಿರಪೇಕ್ಷಃ ಸಮಾಚರ ॥ ೨೨ ॥

ಶ್ರದ್ಧಾಲುರ್ಮೇ ಕಥಾಃ ಶೃಣ್ವನ್ ಸುಭದ್ರಾ ಲೋಕಪಾವನೀಃ ।
ಗಾಯನ್ನನುಸ್ಮರನ್ಕರ್ಮ ಜನ್ಮ ಚಾಭಿನಯನ್ಮುಹುಃ ॥ ೨೩ ॥

ಮದರ್ಥೇ ಧರ್ಮಕಾಮಾರ್ಥಾನಾಚರನ್ಮದಪಾಶ್ರಯಃ ।
ಲಭತೇ ನಿಶ್ಚಲಾಂ ಭಕ್ತಿಂ ಮಯ್ಯುದ್ಧವ ಸನಾತನೇ ॥ ೨೪ ॥

ಸತ್ಸಂಗಲಬ್ಧಯಾ ಭಕ್ತ್ಯಾ ಮಯಿ ಮಾಂ ಸ ಉಪಾಸಿತಾ ।
ಸ ವೈ ಮೇ ದರ್ಶಿತಂ ಸದ್ಭಿರಂಜಸಾ ವಿಂದತೇ ಪದಮ್ ॥ ೨೫ ॥

ಉದ್ಧವ ಉವಾಚ

ಸಾಧುಸ್ತವೋತ್ತಮಶ್ಲೋಕ ಮತಃ ಕೀದೃಗ್ವಿಧಃ ಪ್ರಭೋ ।
ಭಕ್ತಿಸ್ತ್ವಯ್ಯುಪಯುಜ್ಯೇತ ಕೀದೃಶೀ ಸದ್ಭಿರಾದೃತಾ ॥ ೨೬ ॥

ಏತನ್ಮೇ ಪುರುಷಾಧ್ಯಕ್ಷ ಲೋಕಾಧ್ಯಕ್ಷ ಜಗತ್ಪ್ರಭೋ ।
ಪ್ರಣತಾಯಾನುರಕ್ತಾಯ ಪ್ರಪನ್ನಾಯ ಚ ಕಥ್ಯತಾಮ್ ॥ ೨೭ ॥

ಆದರೆ ಪ್ರಿಯ ಉದ್ಧವನೇ! ವೇದದಲ್ಲಿ ಪಾರಂಗತನಾದ ವಿದ್ವಾಂಸನು ಪರಬ್ರಹ್ಮನ ಅನುಭವವು ಆಗದಿದ್ದರೆ, ಅವನ ಪರಿಶ್ರಮವು ಹಾಲುಕೊಡದ ಹಸುವನ್ನು ಸಾಕಿದಂತೆ ಇದೆ ಎಂದು ತಿಳಿಯಬೇಕು. ಅರ್ಥಾತ್ – ವ್ಯರ್ಥವೇ ಆಗಿದೆ. ॥ ೧೮ ॥

ಎಲೈ ಉದ್ಧವನೇ! ಹಾಲುಕೊಡದ ಹಸು, ಕುಲಟೆಯಾದ ಪತ್ನೀ, ಪರಾಧೀನದೇಹ, ದುಷ್ಟ ಸಂತತಿ,ಸತ್ಪಾತ್ರಕ್ಕೆ ದಾನಕೊಡದ ಧನ, ಭಗವಂತನ ನಾಮ-ರೂಪ-ಲೀಲೆ-ಧಾಮ ಮುಂತಾದ ಭಗವತ್ಸಂಬಂಧೀ ಚರ್ಚೆಯಿಲ್ಲದ ವಾಣೀ, ಇವುಗಳನ್ನು ಆಶ್ರಯಿಸಿ ದವನಿಗಾದರೋ ದುಃಖದ ಮೇಲೆ ದುಃಖವನ್ನೇ ಭೋಗಿಸ ಬೇಕಾಗುತ್ತದೆ. ॥ ೧೯॥ ನನ್ನ ಪವಿತ್ರ ಕರ್ಮಗಳ ಉಲ್ಲೇಖವಿಲ್ಲದ ವಾಣೀ, ಈ ಜಗತ್ತಿನ ಉತ್ಪತ್ತಿ , ಸ್ಥಿತಿ, ಸಂಹಾರಗೈವ ಭಗವಂತನ ಶಕ್ತಿಯ ನಿರೂಪಣೆಯಿಲ್ಲದ ವಾಣಿಯು, ಭಗವಂತನ ಬೇರೆ-ಬೇರೆ ಅವತಾರಗಳ, ಅವುಗಳ ಪವಿತ್ರಗುಣಗಳ, ಯಶೋಗಾನದ ವರ್ಣನೆ ಇಲ್ಲದಿರುವ ವಾಣಿಯು ವಂಧ್ಯೆಯೇ ಆಗಿದೆ. ಇಂತಹ ವಾಣಿಯನ್ನು ಜ್ಞಾನಿಗಳು ಆದರಿಸಬಾರದು. ॥ ೨೦ ॥

ಹೀಗೆ ತತ್ತ್ವದ ಜಿಜ್ಞಾಸೆಯಿಂದ ಜಗತ್ತಿನಲ್ಲಿ ಎಲ್ಲೆಡೆ ಓರ್ವ ಬ್ರಹ್ಮವನ್ನೇ ನೋಡಲಿ, ಆತ್ಮನಲ್ಲಿರುವ ನಾನಾತ್ವದ ಭ್ರಮೆಯು ಪೂರ್ಣವಾಗಿ ದೂರಾಗಿಸಲಿ, ಈ ಪ್ರಕಾರ ಶುದ್ಧವಾದ ಮನಸ್ಸನ್ನು ಸರ್ವವ್ಯಾಪೀ ಪರಮಾತ್ಮನಾದ ನನ್ನಲ್ಲಿ ತೊಡಗಿಸಲಿ, ಉಳಿದೆಲ್ಲದ ರಲ್ಲಿಯೂ ಉಪರಾಮನಾಗಲಿ. ॥ ೨೧ ॥ ಈ ವಿಧವಾಗಿ ಪರ ಮಾತ್ಮನಾದ ನನ್ನಲ್ಲಿ ನಿಶ್ಚಲರೂಪದಿಂದ ಮನಸ್ಸನ್ನು ತೊಡಗಿಸಲು ಅಸಮರ್ಥನಾದರೆ, ಮಾಡುವ ಎಲ್ಲ ಕ್ರಿಯೆಗಳನ್ನು ನಿರಪೇಕ್ಷನಾಗಿ ನನಗಾಗಿಯೇ ಮಾಡಲಿ. ॥ ೨೨ ॥ ಲೋಕಗಳನ್ನು ಪವಿತ್ರ ಗೊಳಿಸುವ ನನ್ನ ಶ್ರೇಯಸ್ಕರವಾದ ಕಥೆಗಳನ್ನು ಶ್ರದ್ಧಾಳುವಾದವನು ಶ್ರವಣಿಸಲಿ, ಕೀರ್ತಿಸಲಿ ಹಾಗೂ ಸ್ಮರಿಸಲಿ. ಹಾಗೆಯೇ ನನ್ನ ಅವತಾರದ (ರಾಮನವಮಿ, ಕೃಷ್ಣ-ಜನ್ಮಾಷ್ಟಮಿ ಮುಂತಾದ) ಲೀಲೆಗಳನ್ನು ಅಭಿನಯಿಸಲಿ. ॥ ೨೩ ॥ ಎಲೈ ಉದ್ಧವಾ! ಈ ಪ್ರಕಾರ ನನಗೆ ಶರಣಾಗಿ, ನನಗಾಗಿಯೇ ಧರ್ಮ, ಅರ್ಥ, ಕಾಮ ಇವುಗಳನ್ನು ಆಚರಿಸುತ್ತಿರುವ ನನ್ನ ಅನನ್ಯ ಪ್ರೇಮಿ ಭಕ್ತನು ಸನಾತನ ಪರಮಾತ್ಮನಾದ ನನ್ನಲ್ಲಿ ನಿಶ್ಚಲ ಭಕ್ತಿಯನ್ನು ಪಡೆದುಕೊಳ್ಳು ತ್ತಾನೆ. ॥ ೨೪ ॥

ಸತ್ಸಂಗದಿಂದ ಭಕ್ತಿಯು ಪ್ರಾಪ್ತವಾಗುತ್ತದೆ. ಮತ್ತೆ ಅವನು ನನ್ನನ್ನು ಉಪಾಸಿಸುತ್ತಾನೆ. ಸಂತರು ಹೇಳಿದ ಮಾರ್ಗದಿಂದ ನಡೆದು ಅವನು ಸುಲಭವಾಗಿ ನನ್ನನ್ನು ಪಡೆದುಕೊಳ್ಳುತ್ತಾನೆ. ॥ ೨೫ ॥

ಉದ್ಧವನು ಕೇಳಿದನು – ಪವಿತ್ರಕೀರ್ತಿಯುಳ್ಳ ಭಗವಂತನೇ! ನಿನ್ನ ಅಭಿಪ್ರಾಯದಲ್ಲಿ ಸಂತರ ಲಕ್ಷಣಗಳು ಯಾವುವು? ಸಂತಜನರು ಆದರಿಸುತ್ತಿರುವ ನಿನ್ನ ಕುರಿತಾದ ಭಕ್ತಿಯನ್ನು ಹೇಗೆ ಮಾಡಬೇಕು? ನೀನು ದಯಮಾಡಿ ತಿಳಿಸುವವನಾಗು. ॥ ೨೬ ॥ ಭಗವಂತನೇ! ನೀನೇ ಬ್ರಹ್ಮಾದಿ ಶ್ರೇಷ್ಠ ದೇವತೆಗಳಿಗೆ, ಸತ್ಯಾದಿ ಲೋಕಗಳಿಗೆ, ಚರಾಚರ ಜಗತ್ತಿಗೆ ಒಡೆಯನಾಗಿರುವೆ. ನಾನು ವಿನೀತ, ಪ್ರೇಮಿ, ಶರಣಾಗತನಾದ ನಿನ್ನ ಭಕ್ತನಾಗಿರುವೆನು. ನೀನು ನನಗೆ ಭಕ್ತಿ ಹಾಗೂ ಭಕ್ತರ ರಹಸ್ಯವನ್ನು ಹೇಳುವವನಾಗು. ॥ ೨೭ ॥

ತ್ವಂ ಬ್ರಹ್ಮ ಪರಮಂ ವ್ಯೋಮ ಪುರುಷಃ ಪ್ರಕೃತೇಃ ಪರಃ ।
ಅವತೀರ್ಣೋಽಸಿ ಭಗವನ್ ಸ್ವೇಚ್ಛೋಪಾತ್ತಪೃಥಗ್ವಪುಃ ॥ ೨೮ ॥

ಪರಮಾತ್ಮಾ! ನೀನು ಪ್ರಕೃತಿಗಿಂತ ಅತೀತನಾದ ಪುರುಷೋತ್ತಮನು ಹಾಗೂ ಚಿದಾಕಾಶಸ್ವರೂಪೀ ಬ್ರಹ್ಮನಾಗಿರುವೆ ಎಂಬುದನ್ನು ನಾನು ಬಲ್ಲೆನು. ನಿನ್ನಿಂದ ಭಿನ್ನವಾದುದು ಯಾವುದೂ ಇಲ್ಲ, ಆದರೂ ನೀನು ಲೀಲೆಗಾಗಿ ಸ್ವೇಚ್ಛೆಯಿಂದಲೇ ಈ ಬೇರೆಯಾದ ಕೃಷ್ಣರೂಪದಿಂದ ಅವತರಿಸಿರುವೆ. ಆದ್ದರಿಂದ ವಾಸ್ತವವಾಗಿ ನೀನೇ ಭಕ್ತಿ ಮತ್ತು ಭಕ್ತರ ರಹಸ್ಯವನ್ನು ತಿಳಿಸಬಲ್ಲೆ. ॥ ೨೮॥

ಶ್ರೀಭಗವಾನುವಾಚ

ಕೃಪಾಲುರಕೃತದ್ರೋಹಸ್ತಿತಿಕ್ಷುಃ ಸರ್ವದೇಹಿನಾಮ್ ।
ಸತ್ಯಸಾರೋಽನವದ್ಯಾತ್ಮಾ ಸಮಃ ಸರ್ವೋಪಕಾರಕಃ ॥ ೨೯ ॥

ಭಗವಾನ್ ಶ್ರೀಕೃಷ್ಣನೆಂದನು – ಪ್ರಿಯ ಉದ್ಧವನೇ! ನನ್ನ ಭಕ್ತನು ಕೃಪೆಯಮೂರ್ತಿಯಾಗಿರುತ್ತಾನೆ. ಅವನು ಯಾವುದೇ ಪ್ರಾಣಿಯಲ್ಲಿ ವೈರಭಾವವಿರಿಸುವುದಿಲ್ಲ, ಹಾಗೂ ಭಾರೀ ದೊಡ್ಡ ದುಃಖವನ್ನೂ ಕೂಡ ಸಂತೋಷವಾಗಿ ಸಹಿಸುತ್ತಾನೆ. ಸತ್ಯವೇ ಅವನ ಜೀವನದ ಜೀವಾಳವಾಗಿದೆ. ಅವನ ಮನಸ್ಸಿನಲ್ಲಿ ಯಾವ ವಿಧವಾದ ಪಾಪವಾಸನೆಯು ಎಂದೂ ಉಂಟಾಗುವುದಿಲ್ಲ. ಅವನು ಸಮದರ್ಶಿಯಾಗಿದ್ದು, ಎಲ್ಲರ ಒಳಿತನ್ನೇ ಮಾಡುವವನಾಗಿರುತ್ತಾನೆ. ॥ ೨೯ ॥

ಕಾಮೈರಹತಧೀರ್ದಾಂತೋ ಮೃದುಃ ಶುಚಿರಕಿಂಚನಃ ।
ಅನೀಹೋ ಮಿತಭುಕ್ ಶಾಂತಃ ಸ್ಥಿರೋ ಮಚ್ಛರಣೋ ಮುನಿಃ ॥ ೩೦ ॥

ಅವನ ಬುದ್ಧಿಯು ಕಾಮನೆಗಳಿಂದ ಕಲುಷಿತವಾಗುವುದಿಲ್ಲ. ಅವನು ಸಂಯಮಿಯೂ, ಮೃದು ಸ್ವಭಾವದವನೂ, ಪವಿತ್ರನೂ ಆಗಿರುತ್ತಾನೆ. ಸಂಗ್ರಹ-ಪರಿಗ್ರಹಗಳಿಂದ ಪೂರ್ಣವಾಗಿ ದೂರವಾಗಿರುತ್ತಾನೆ. ಯಾವುದೇ ವಸ್ತುವಿಗಾಗಿ ಅವನು ಪ್ರಯತ್ನಿಸುವುದಿಲ್ಲ, ಮಿತವಾಗಿ ಭೋಜನಮಾಡುತ್ತಾನೆ ಹಾಗೂ ಶಾಂತವಾಗಿರುತ್ತಾನೆ. ಅವನ ಬುದ್ಧಿಯು ಸ್ಥಿರವಾಗಿರುತ್ತದೆ. ಅವನಿಗೆ ಕೇವಲ ನನ್ನ ಭರವಸೆಯೇ ಇರುತ್ತದೆ ಹಾಗೂ ಆತ್ಮತತ್ತ್ವದ ಚಿಂತನೆಯಲ್ಲೇ ಸದಾಕಾಲ ತೊಡಗಿರುತ್ತಾನೆ. ॥ ೩೦॥

ಅಪ್ರಮತ್ತೋ ಗಭೀರಾತ್ಮಾ ಧೃತಿಮಾನ್ ಜಿತಷಡ್ಗುಣಃ ।
ಅಮಾನೀ ಮಾನದಃ ಕಲ್ಯೋ ಮೈತ್ರಃ ಕಾರುಣಿಕಃ ಕವಿಃ ॥ ೩೧ ॥

ಅವನು ಪೂರ್ಣವಾಗಿ ಎಚ್ಚರಿಕೆಯಿಂದಿರುತ್ತಾನೆ. ಗಂಭೀರಸ್ವಭಾವವಿದ್ದು ಧೈರ್ಯಶಾಲಿಯಾಗಿರುತ್ತಾನೆ. ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರ ಎಂಬ ಈ ಆರು ಅವಗುಣಗಳನ್ನು ಗೆದ್ದಿರುತ್ತಾನೆ. ಅವನು ಸ್ವತಃ ಎಂದೂ, ಯಾರಿಂದಲೂ, ಯಾವ ಪ್ರಕಾರದ ಸನ್ಮಾನವನ್ನು ಬಯಸುವುದಿಲ್ಲ, ಆದರೆ ಬೇರೆಯವರನ್ನು ಸನ್ಮಾನಿಸುತ್ತಾನೆ. ಸಮರ್ಥನಾಗಿದ್ದು ನನ್ನ ಕುರಿತಾದ ವಿಷಯವನ್ನು ಬೇರೆಯವರಿಗೆ ತಿಳಿಸಿಹೇಳಲು ತುಂಬಾ ನಿಪುಣನಾಗಿರುತ್ತಾನೆ. ಎಲ್ಲರೊಂದಿಗೆ ಮಿತ್ರತೆಯ ವ್ಯವಹಾರ ಮಾಡುತ್ತಾನೆ. ಅವನ ಹೃದಯದಲ್ಲಿ ಕರುಣೆ ತುಂಬಿರುತ್ತದೆ. ನನ್ನ ತತ್ತ್ವದ ಯಥಾರ್ಥಜ್ಞಾನ ಅವನಿಗಿರುತ್ತದೆ. ॥ ೩೧ ॥

ಆಜ್ಞಾಯೈವಂ ಗುಣಾನ್ ದೋಷಾನ್ ಮಯಾಽಽದಿಷ್ಟಾನಪಿ ಸ್ವಕಾನ್ ।
ಧರ್ಮಾನ್ ಸಂತ್ಯಜ್ಯ ಯಃ ಸರ್ವಾನ್ ಮಾಂ ಭಜೇತ ಸ ಸತ್ತಮಃ ॥ ೩೨ ॥

ನನ್ನ ಭಕ್ತನು ಗುಣ ಯಾವುದು, ದೋಷ ಯಾವುದು ಎಂಬುದನ್ನು ತಿಳಿದಿರುತ್ತಾನೆ. ಅವನ ಅಂತಃಕರಣವು ಶುದ್ಧವಾಗಿರುತ್ತದೆ. ಅವನಲ್ಲಿ ಭಕ್ತಿಯ ಪ್ರವಾಹ ನಿರಂತರ ಹೆಚ್ಚುತ್ತಲೇ ಇರುತ್ತದೆ, ಆಗ ಅವನು ನನ್ನಿಂದ ನಿರ್ದೇಶಿಸಲ್ಪಟ್ಟ ಕರ್ಮಗಳನ್ನು ಕೂಡ ಭಕ್ತಿಯಲ್ಲಿ ಬಾಧಕವೆಂದು ತಿಳಿದು ಎಲ್ಲ ಕರ್ಮಗಳನ್ನು ಭಗವಂತನಿಗೆ ಅರ್ಪಿಸಿ, ಅವನು ಎಲ್ಲ ರೀತಿಯ ಕರ್ಮಗಳಿಂದ ಉಪರಾಮನಾಗಿ, ಅನನ್ಯ ಭಾವದಿಂದ ಶರಣಾಗತನಾಗುತ್ತಾನೆ. ಭಕ್ತಿಯಲ್ಲೇ ಮುಳುಗಿರುವ ಇಂತಹ ಭಕ್ತನು ಬಹಳ ಶ್ರೇಷ್ಠನಾಗಿದ್ದಾನೆ.* ॥ ೩೨ ॥

ಜ್ಞಾತ್ವಾಜ್ಞಾತ್ವಾಥ ಯೇ ವೈ ಮಾಂ ಯಾವಾನ್ಯಶ್ಚಾಸ್ಮಿ ಯಾದೃಶಃ ।
ಭಜಂತ್ಯನನ್ಯಭಾವೇನ ತೇ ಮೇ ಭಕ್ತತಮಾ ಮತಾಃ ॥ ೩೩ ॥

ನಾನು (ಭಗವಂತನು) ಯಾರು, ಎಷ್ಟು ದೊಡ್ಡವನಾಗಿದ್ದೇನೆ, ಹೇಗಿದ್ದೇನೆ, ಎಂಬುದನ್ನು ತಿಳಿಯಲಿ, ತಿಳಿಯದಿರಲಿ; ಆದರೆ ಅನನ್ಯ ಭಾವದಿಂದ ನನ್ನನ್ನು ಭಜಿಸುವವನೇ ನನ್ನ ಅಭಿಪ್ರಾಯದಲ್ಲಿ ನನ್ನ ಪರಮಭಕ್ತನಾಗಿದ್ದಾನೆ. ॥ ೩೩ ॥

* ಗೀತೆ ೧೮/೬೬ರಲ್ಲಿ ಭಗವದ್ಗೀತೆಯ ಉಪಸಂಹಾರವನ್ನು ಭಗವಂತನು ಶರಣಾಗತಿಯಲ್ಲೇ ಮಾಡಿರುವನು.

ಮಲ್ಲಿಂಗ ಮದ್ಭಕ್ತಜನದರ್ಶನಸ್ಪರ್ಶನಾರ್ಚನಮ್ ।
ಪರಿಚರ್ಯಾ ಸ್ತುತಿಃ ಪ್ರಹ್ವಗುಣಕರ್ಮಾನುಕೀರ್ತನಮ್
॥ ೩೪ ॥

ಮತ್ಕಥಾಶ್ರವಣೇ ಶ್ರದ್ಧಾ ಮದನುಧ್ಯಾನಮುದ್ಧವ ।
ಸರ್ವಲಾಭೋಪಹರಣಂ ದಾಸ್ಯೇನಾತ್ಮನಿವೇದನಮ್
॥ ೩೫ ॥

ಮಜ್ಜನ್ಮಕರ್ಮಕಥನಂ ಮಮ ಪರ್ವಾನುಮೋದನಮ್ ।
ಗೀತತಾಂಡವವಾದಿತ್ರಗೋಷ್ಠೀಭಿರ್ಮದ್ಗೃಹೋತ್ಸವಃ
॥ ೩೬ ॥

ಯಾತ್ರಾ ಬಲಿವಿಧಾನಂ ಚ ಸರ್ವವಾರ್ಷಿಕಪರ್ವಸು ।
ವೈದಿಕೀ ತಾಂತ್ರಿಕೀ ದೀಕ್ಷಾ ಮದೀಯವ್ರತಧಾರಣಮ್
॥ ೩೭ ॥

ಮಮಾರ್ಚಾಸ್ಥಾಪನೇ ಶ್ರದ್ಧಾ ಸ್ವತಃ ಸಂಹತ್ಯ ಚೋದ್ಯಮಃ ।
ಉದ್ಯಾನೋಪವನಾಕ್ರೀಡಪುರಮಂದಿರಕರ್ಮಣಿ
॥ ೩೮ ॥

ಸಮ್ಮಾರ್ಜನೋಪಲೇಪಾಭ್ಯಾಂ ಸೇಕಮಂಡಲವರ್ತನೈಃ ।
ಗೃಹಶುಶ್ರೂಷಣಂ ಮಹ್ಯಂ ದಾಸವದ್ಯದಮಾಯಯಾ
॥ ೩೯ ॥

ಅಮಾನಿತ್ವಮದಂಭಿತ್ವಂ ಕೃತಸ್ಯಾಪರಿಕೀರ್ತನಮ್ ।
ಅಪಿ ದೀಪಾವಲೋಕಂ ಮೇ ನೋಪಯುಂಜ್ಯಾನ್ನಿವೇದಿತಮ್
॥ ೪೦ ॥

ಯದ್ಯದಿಷ್ಟತಮಂ ಲೋಕೇ ಯಚ್ಚಾತಿಪ್ರಿಯಮಾತ್ಮನಃ ।
ತತ್ತನ್ನಿವೇದಯೇನ್ಮಹ್ಯಂ ತದಾನಂತ್ಯಾಯ ಕಲ್ಪತೇ
॥ ೪೧ ॥

ಸೂರ್ಯೋಽಗ್ನಿರ್ಬ್ರಾಹ್ಮಣೋ ಗಾವೋ ವೈಷ್ಣವಃ ಖಂ ಮರುಜ್ಜಲಮ್ ।
ಭೂರಾತ್ಮಾ ಸರ್ವಭೂತಾನಿ ಭದ್ರ ಪೂಜಾಪದಾನಿ ಮೇ
॥ ೪೨ ॥

ಸೂರ್ಯೇ ತು ವಿದ್ಯಯಾ ತ್ರಯ್ಯಾ ಹವಿಷಾಗ್ನೌ ಯಜೇತ ಮಾಮ್ ।
ಆತಿಥ್ಯೇನ ತು ವಿಪ್ರಾಗ್ರ್ಯೇ ಗೋಷ್ವಂಗ ಯವಸಾದಿನಾ
॥ ೪೩ ॥

ಪ್ರಿಯ ಉದ್ಧವನೇ ! ಭಕ್ತರಾದವರು ನನ್ನ ಮೂರ್ತಿ ಮತ್ತು ನನ್ನ ಭಕ್ತರ ದರ್ಶನ, ಸ್ಪರ್ಶ, ಪೂಜೆ, ಸೇವೆ, ಶುಶ್ರೂಷೆ , ಸ್ತುತಿ ಮತ್ತು ನಮಸ್ಕಾರ ಮುಂತಾದುವನ್ನು ಮಾಡುತ್ತಾ, ನನ್ನ ಗುಣ-ಕರ್ಮಗಳನ್ನು ಕೀರ್ತಿಸಲಿ. ॥ ೩೪ ॥ ನನ್ನ ಕಥಾಶ್ರವಣದಲ್ಲಿ ಶ್ರದ್ಧೆಯಿದ್ದು ನಿರಂತರ ನನ್ನನ್ನು ಧ್ಯಾನಿಸುತ್ತಿರಲಿ. ದೊರೆತುದೆಲ್ಲವನ್ನು ನನಗೆ ಅರ್ಪಿಸುತ್ತಾ, ದಾಸ್ಯಭಾವದಿಂದ ನನ್ನಲ್ಲಿ ಆತ್ಮನಿವೇದನ ಮಾಡಲಿ ॥ ೩೫ ॥ ನನ್ನ ದಿವ್ಯವಾದ ಜನ್ಮ-ಕರ್ಮಗಳನ್ನು ಚರ್ಚಿಸುತ್ತಿರಲಿ. ಜನ್ಮಾಷ್ಟಮಿ, ರಾಮನವಮಿ ಮುಂತಾದ ಪರ್ವಗಳಲ್ಲಿ ಉತ್ಸವವನ್ನಾಚರಿಸುತ್ತಾ, ಸಂಗೀತ, ನೃತ್ಯ, ವಾದ್ಯಗೋಷ್ಠಿ ಇವುಗಳಿಂದ ಸೇವೆ ನಡೆಸಲಿ. ಸಮಾಜಬಾಂಧವರಿಂದೊಡಗೂಡಿ ನನ್ನ ಮಂದಿರದಲ್ಲಿ ಮಹೋತ್ಸವವನ್ನು ಏರ್ಪಡಿಸಲಿ. ॥ ೩೬ ॥ ವಾರ್ಷಿಕ ಹಬ್ಬ-ಹರಿದಿನಗಳಲ್ಲಿ ನನ್ನ ಕ್ಷೇತ್ರಗಳ ಯಾತ್ರೆ ಮಾಡಲಿ, ಮೆರವಣಿಗೆ ಹೊರಡಿಸಲಿ, ವಿವಿಧ ವಸ್ತು, ಉಪಚಾರಗಳಿಂದ ನನ್ನ ಪೂಜೆ ಮಾಡಲಿ, ವೈದಿಕ ಅಥವಾ ತಾಂತ್ರಿಕ ಪದ್ಧತಿಯಿಂದ ದೀಕ್ಷೆಯನ್ನು ಕೈಗೊಂಡು, ನನ್ನ ವ್ರತಗಳನ್ನು ಪಾಲಿಸುತ್ತಿರಲಿ. ॥ ೩೭ ॥ ಮಂದಿರಗಳಲ್ಲಿ ನನ್ನ ಮೂರ್ತಿಗಳ ಸ್ಥಾಪನೆಯಲ್ಲಿ ಶ್ರದ್ಧೆಯಿರಲಿ. ಒಂದು ವೇಳೆ ಈ ಕಾರ್ಯವು ಒಬ್ಬನಿಂದಾಗದಿದ್ದರೆ, ಬೇರೆಯವರನ್ನು ಸೇರಿಸಿಕೊಂಡು ಉದ್ಯೋಗಮಾಡಲಿ. ನನಗಾಗಿ ಹೂದೋಟ, ಉದ್ಯಾನಗಳು, ಕ್ರೀಡಾಮಂದಿರ, ನಗರ ಹಾಗೂ ದೇವಸ್ಥಾನಗಳನ್ನು ನಿರ್ಮಿಸಲಿ. ॥ ೩೮ ॥ ಸೇವಕನಂತೆ ಭಕ್ತಿಶ್ರದ್ಧೆಯಿಂದೊಡಗೂಡಿ ನಿಷ್ಕಪಟಭಾವದಿಂದ ನನ್ನ ಮಂದಿರದ ಕೈಂಕರ್ಯ ಕೈಗೊಳ್ಳಲಿ. ಗುಡಿಸುವುದು, ಸಾರಿಸುವುದು, ರಂಗೋಲಿಯಿಡುವುದು ಮುಂತಾದುವನ್ನು ಮಾಡುತ್ತಾ, ಬಣ್ಣ-ಬಣ್ಣದ ಮಂಡಲಗಳನ್ನು ಅಲಂಕರಿಸಲಿ. ॥ ೩೯ ॥ ಅಭಿಮಾನ, ದಂಭಾಚಾರ ಇಲ್ಲದಿರಲಿ, ಜೊತೆಗೆ ತನ್ನ ಶುಭಕರ್ಮಗಳ ಬಗ್ಗೆ 'ನಾನು ಇದನ್ನು ಮಾಡಿದೆ' ಎಂದು ಹೇಳಬಾರದು. ಬೇರೆ ದೇವರಿಗೆ ತೋರಿಸಿದ ದೀಪ (ಆರತಿ)ವನ್ನು ನನ್ನ ಪೂಜೆಯಲ್ಲಿ ಉಪಯೋಗಿಸಬಾರದು. ಅರ್ಥಾತ್ ಬೇರೆಯೇ ದೀಪವನ್ನು ನನಗಾಗಿ ಬೆಳಗಿಸಬೇಕು. ॥ ೪೦ ॥ ಪ್ರಪಂಚದಲ್ಲಿ ತನಗೆ ಎಲ್ಲಕ್ಕಿಂತ ಪ್ರಿಯವಾದ, ಅಭೀಷ್ಟವಾಗಿ ಕಂಡುಬರುವ ವಸ್ತುವನ್ನು ನನಗೆ ಸಮರ್ಪಿಸಲಿ. ಹೀಗೆ ಮಾಡುವುದರಿಂದ ಆ ವಸ್ತುಗಳು ಅನಂತಫಲವನ್ನು ಕೊಡುವವು. ॥ ೪೧ ॥

ಪುಣ್ಯಾತ್ಮನಾದ ಉದ್ಧವನೇ ! ಸೂರ್ಯ, ಅಗ್ನಿ, ಬ್ರಾಹ್ಮಣ, ಗೋವು, ವೈಷ್ಣವ, ಆಕಾಶ, ವಾಯು, ಜಲ, ಪೃಥ್ವಿ, ಆತ್ಮಾ ಮತ್ತು ಸಮಸ್ತ ಪ್ರಾಣಿಗಳು ಇವೆಲ್ಲವೂ ನನ್ನ ಪೂಜಾಸ್ಥಾನಗಳಾಗಿವೆ. ॥ ೪೨ ॥ ಪ್ರಿಯ ಉದ್ಧವಾ ! ಋಗ್ವೇದ, ಯಜುರ್ವೇದ, ಸಾಮವೇದಗಳ ಮಂತ್ರಗಳಿಂದ ಸೂರ್ಯನಲ್ಲಿ ನನ್ನನ್ನು ಪೂಜಿಸಬೇಕು. ಹವನದ ಮೂಲಕ ಅಗ್ನಿಯಲ್ಲಿ, ಆತಿಥಿಯ ಮೂಲಕ ಶ್ರೇಷ್ಠಬ್ರಾಹ್ಮಣನಲ್ಲಿ, ಹಚ್ಚ-ಹಸಿರಾದ ಹುಲ್ಲಿನ ಮೂಲಕ ಗೋವಿನಲ್ಲಿ ನನ್ನನ್ನು ಪೂಜಿಸಬೇಕು. ॥ ೪೩ ॥

ವೈಷ್ಣವೇ ಬಂಧುಸತ್ಕೃತ್ಯಾ ಹೃದಿ ಖೇ ಧ್ಯಾನನಿಷ್ಠಯಾ ।
ವಾಯೌ ಮುಖ್ಯಧಿಯಾ ತೋಯೇ ದ್ರವ್ಯೈಸ್ತೋಯಪುರಸ್ಕೃತೈಃ ॥ ೪೪ ॥

ಸ್ಥಂಡಿಲೇ ಮಂತ್ರಹೃದಯೈರ್ಭೋಗೈರಾತ್ಮಾನಮಾತ್ಮನಿ ।
ಕ್ಷೇತ್ರಜ್ಞಂ ಸರ್ವಭೂತೇಷು ಸಮತ್ವೇನ ಯಜೇತ ಮಾಮ್ ॥ ೪೫ ॥

ಧಿಷ್ಣ್ಯೇಷ್ವೇಷ್ವಿತಿ ಮದ್ರೂಪಂ ಶಂಖಚಕ್ರಗದಾಂಬುಜೈಃ ।
ಯುಕ್ತಂ ಚತುರ್ಭುಜಂ ಶಾಂತಂ ಧ್ಯಾಯನ್ನರ್ಚೇತ್ ಸಮಾಹಿತಃ ॥ ೪೬ ॥

ಇಷ್ಟಾಪೂರ್ತೇನ ಮಾಮೇವಂ ಯೋ ಯಜೇತ ಸಮಾಹಿತಃ ।
ಲಭತೇ ಮಯಿ ಸದ್ಭಕ್ತಿಂ ಮತ್ಸ್ಮೃತಿಃ ಸಾಧುಸೇವಯಾ ॥ ೪೭ ॥

ಪ್ರಾಯೇಣ ಭಕ್ತಿಯೋಗೇನ ಸತ್ಸಂಗೇನ ವಿನೋದ್ಧವ ।
ನೋಪಾಯೋ ವಿದ್ಯತೇ ಸಧ್ರ್ಯಙ್ ಪ್ರಾಯಣಂ ಹಿ ಸತಾಮಹಮ್ ॥ ೪೮ ॥

ಅಥೈತತ್ ಪರಮಂ ಗುಹ್ಯಂ ಶೃಣ್ವತೋ ಯದುನಂದನ ।
ಸುಗೋಪ್ಯಮಪಿ ವಕ್ಷ್ಯಾಮಿ ತ್ವಂ ಮೇ ಭೃತ್ಯಃ ಸುಹೃತ್ಸಖಾ ॥ ೪೯ ॥

ವಿಷ್ಣುಭಕ್ತನನ್ನು ತನ್ನ ಸೋದರನಂತೆ ತಿಳಿದು ಅವನ ಆದರ-ಸತ್ಕಾರ ಮಾಡಬೇಕು. ನಿರಂತರ ಧ್ಯಾನದಲ್ಲೇ ತೊಡಗಿದ್ದು ಹೃದಯಾಕಾಶದಲ್ಲಿ ನನ್ನನ್ನು ಪೂಜಿಸಬೇಕು. ಮುಖ್ಯಪ್ರಾಣನೆಂದು ತಿಳಿದು ವಾಯುವಿನಲ್ಲಿ ಮತ್ತು ಪುಷ್ಪಾದಿ ಸಾಮಗ್ರಿಗಳಿಂದ ನೀರಿನಲ್ಲಿ ನಾರಾಯಣನಾದ ನನ್ನನ್ನು ಆರಾಧಿಸಬೇಕು. ॥ ೪೪ ॥ ರಹಸ್ಯಮಯ ಮಂತ್ರಗಳಿಂದ ವೇದೀ (ಸ್ಥಂಡಿಲ)ಯಲ್ಲಿ ಪೂಜಿಸಬೇಕು. ಭೋಗಪದಾರ್ಥಗಳನ್ನು ತನ್ನೊಳಗೇ ವಿರಾಜಮಾನನಾದ ಸರ್ವಭೂತಾತ್ಮಾ ಪ್ರಭುವೇ ಭೋಜನ ಮಾಡುತ್ತಿದ್ದಾನೆ. (ಅಹಂ ವೈಶ್ವಾನರೋ ಭೂತ್ವಾ ಪ್ರಾಣಿನಾಂ ದೇಹಮಾಶ್ರಿತಃ) ಎಂದು ಭಾವಿಸಿ ಊಟಮಾಡಬೇಕು. ಎಲ್ಲ ಪ್ರಾಣಿಗಳಲ್ಲಿಯೂ ಓರ್ವನೇ ಕ್ಷೇತ್ರಜ್ಞ ಆತ್ಮನು ಸಮಭಾವದಿಂದ ವ್ಯಾಪ್ತನಾಗಿದ್ದಾನೆ ಹೀಗೆ ತಿಳಿದು ಎಲ್ಲ ಪ್ರಾಣಿಗಳನ್ನು ನನ್ನ ಸ್ವರೂಪವೆಂದೇ ಅರಿತು ಅವರೊಂದಿಗೆ ತುಂಬು ಪ್ರೇಮಪೂರ್ಣವಾಗಿ ವ್ಯವಹರಿಸುತ್ತಾ ಪೂಜಿಸಬೇಕು. ॥ ೪೫ ॥ ಇವೆಲ್ಲ ಸ್ಥಳಗಳಲ್ಲಿ ನನ್ನದೇ ಭಾವನೆಗೈದು ಧ್ಯಾನಮಾಡಬೇಕು. ಶಂಖ, ಚಕ್ರ, ಗದೆ, ಪದ್ಮ ಇವುಗಳನ್ನು ಧರಿಸಿದ ಚತುರ್ಭುಜ ಭಗವಾನ್ ವಿಷ್ಣುವು ನನ್ನ ಮುಂದೆ ವಿರಾಜಮಾನನಾಗಿದ್ದಾನೆ. ಅವನು ಸಂಪೂರ್ಣ ಶಾಂತಮೂರ್ತಿಯಾಗಿದ್ದಾನೆ. ಹೀಗೆ ಎಚ್ಚರಿಕೆಯಿಂದ ಭಗವಂತನನ್ನು ಮಾನಸಿಕ ರೀತಿಯಿಂದ ಪೂಜಿಸಬೇಕು. ॥ ೪೬ ॥ ಈ ಪ್ರಕಾರ ಏಕಾಗ್ರ ಚಿತ್ತದಿಂದ ಯಜ್ಞ-ಯಾಗಾದಿ 'ಇಷ್ಟ'ವೆಂದೂ ಮತ್ತು ಸಮಾಜದ ಉಪಯೋಗಕ್ಕಾಗಿ ಬರುವ ಧರ್ಮಶಾಲೆಗಳನ್ನು ಕಟ್ಟಿಸುವುದು, ಕೆರೆ-ಬಾವಿಗಳನ್ನು ನಿರ್ಮಿಸುವುದು ಮುಂತಾದ 'ಪೂರ್ತ'ವೆಂದೂ ಇದೆಲ್ಲವನ್ನು ನನ್ನ ಪೂಜೆಯೆಂದೇ ತಿಳಿದು ಮಾಡುವ ಮನುಷ್ಯನಿಗೆ ನನ್ನ ಶ್ರೇಷ್ಠ ಭಕ್ತಿಯು ಪ್ರಾಪ್ತವಾಗುತ್ತದೆ. ಸಂತ ಪುರುಷರ ಸೇವೆ ಮಾಡುವುದರಿಂದ ನನ್ನ ಸ್ವರೂಪದ ಜ್ಞಾನವೂ ಉಂಟಾಗುತ್ತದೆ. ॥ ೪೭ ॥ ಪ್ರಿಯ ಉದ್ಧವನೇ ! ಸತ್ಸಂಗ ಮತ್ತು ಭಕ್ತಿಯೋಗ – ಇವೆರಡರ ಸಾಧನೆಗಳ ಅನುಷ್ಠಾನ ಮಾಡುತ್ತಾ ಇರಬೇಕೆಂಬುದೇ ನನ್ನ ನಿಶ್ಚಯವಾಗಿದೆ. ಪ್ರಾಯಶಃ ಇವೆರಡಲ್ಲದೆ ಸಂಸಾರ ಸಾಗರದಿಂದ ಪಾರಾಗಲು ಬೇರೆ ಯಾವ ಉಪಾಯವೂ ಇಲ್ಲ, ಏಕೆಂದರೆ ಸಂತ-ಮಹಾತ್ಮರ ಶ್ರೇಷ್ಠ ಆಶ್ರಯಸ್ಥಾನ ನಾನೇ ಆಗಿರುವೆನು. ॥ ೪೮ ॥ ಎಲೈ ಉದ್ಧವನೇ ! ಈಗ ನಾನು ನಿನಗೆ ಇನ್ನೊಂದು ಅತ್ಯಂತ ಗೋಪ್ಯವಾದ, ಪರಮ ರಹಸ್ಯವಾದ ಮಾತನ್ನು ಹೇಳುವೆನು. ಏಕೆಂದರೆ ನೀನು ನನ್ನ ಪ್ರಿಯಸೇವಕನೂ, ಹಿತೈಷಿಯೂ, ಸುಹೃದನೂ, ಪ್ರೇಮಿಯೂ, ಸಖನೂ ಆಗಿರುವೆ. ಜೊತೆಗೆ ಕೇಳುವ ಇಚ್ಛುಕನೂ ಆಗಿರುವೆ. ॥ ೪೯ ॥

ಹನ್ನೊಂದನೆಯ ಅಧ್ಯಾಯವು ಮುಗಿಯಿತು. ॥ ೧೧ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಏಕಾದಶ ಸ್ಕಂಧೇ ಏಕಾದಶೋಽಧ್ಯಾಯಃ ॥ ೧೧ ॥

ಹನ್ನೆರಡನೆಯ ಅಧ್ಯಾಯ

ಸತ್ಸಂಗದ ಮಹಿಮೆ ಮತ್ತು ಕರ್ಮ ಹಾಗೂ ಕರ್ಮತ್ಯಾಗದ ವಿಧಾನ

ಶ್ರೀಭಗವಾನುವಾಚ

ನ ರೋಧಯತಿ ಮಾಂ ಯೋಗೋ ನ ಸಾಂಖ್ಯಂ ಧರ್ಮ ಏವ ಚ ।
ನ ಸ್ವಾಧ್ಯಾಯಸ್ತಪಸ್ತ್ಯಾಗೋ ನೇಷ್ಟಾಪೂರ್ತಂ ನ ದಕ್ಷಿಣಾ ॥ ೧ ॥

ವ್ರತಾನಿ ಯಜ್ಞಶ್ಛಂದಾಂಸಿ ತೀರ್ಥಾನಿ ನಿಯಮಾ ಯಮಾಃ ।
ಯಥಾವರುಂಧೇ ಸತ್ಸಂಗಃ ಸರ್ವಸಂಗಾಪಹೋ ಹಿ ಮಾಮ್ ॥ ೨ ॥

ಸತ್ಸಂಗೇನ ಹಿ ದೈತೇಯಾ ಯಾತುಧಾನಾ ಮೃಗಾಃ ಖಗಾಃ ।
ಗಂಧರ್ವಾಪ್ಸರಸೋ ನಾಗಾಃ ಸಿದ್ಧಾಶ್ಚಾರಣಗುಹ್ಯಕಾಃ ॥ ೩ ॥

ವಿದ್ಯಾಧರಾ ಮನುಷ್ಯೇಷು ವೈಶ್ಯಾಃ ಶೂದ್ರಾಃ ಸ್ತ್ರಿಯೋಽಂತ್ಯಜಾಃ ।
ರಜಸ್ತಮಃಪ್ರಕೃತಯಸ್ತಸ್ಮಿಂಸ್ತಸ್ಮಿನ್ ಯುಗೇಽನಘ ॥ ೪ ॥

ಬಹವೋ ಮತ್ಪದಂ ಪ್ರಾಪ್ತಾಸ್ತ್ವಾಷ್ಟ್ರಕಾಯಾಧವಾದಯಃ ।
ವೃಷಪರ್ವಾ ಬಲಿರ್ಬಾಣೋ ಮಯಶ್ಚಾಥ ವಿಭೀಷಣಃ ॥ ೫ ॥

ಸುಗ್ರೀವೋ ಹನುಮಾನೃಕ್ಷೋ ಗಜೋ ಗೃಧ್ರೋ ವಣಿಕ್ಪಥಃ ।
ವ್ಯಾಧಃ ಕುಬ್ಜಾ ವ್ರಜೇ ಗೋಪ್ಯೋ ಯಜ್ಞಪತ್ನ್ಯಸ್ತಥಾಪರೇ ॥ ೬ ॥

ತೇ ನಾಧೀತಶ್ರುತಿಗಣಾ ನೋಪಾಸಿತಮಹತ್ತಮಾಃ ।
ಅವ್ರತಾತಪ್ತತಪಸಃ ಸತ್ಸಂಗಾನ್ಮಾಮುಪಾಗತಾಃ ॥ ೭ ॥

ಕೇವಲೇನ ಹಿ ಭಾವೇನ ಗೋಪ್ಯೋ ಗಾವೋ ನಗಾ ಮೃಗಾಃ ।
ಯೇಽನ್ಯೇ ಮೂಢಧಿಯೋ ನಾಗಾಃ ಸಿದ್ಧಾ ಮಾಮೀಯುರಂಜಸಾ ॥ ೮ ॥

ಭಗವಾನ್ ಶ್ರೀಕೃಷ್ಣನು ಹೇಳುತ್ತಾನೆ – ಪ್ರಿಯ ಉದ್ಧವನೇ! ಸತ್ಸಂಗದ ಮಹಿಮೆಯು ತುಂಬಾ ಅದ್ಭುತವಾಗಿದೆ. ಇದು ಬಹಳ ಶ್ರೇಷ್ಠ ಸಾಧನೆಯಾಗಿದೆ. ನನ್ನ ಭಕ್ತನು ಸತ್ಸಂಗದಿಂದ ನನ್ನನ್ನು ಪಡೆದುಕೊಳ್ಳುವಂತೆ, ಬೇರೆ ಯಾವ ಸಾಧನೆಯಿಂದಲೂ ಇಲ್ಲ. ಸತ್ಸಂಗಸಾಧನೆಯಿಂದ ನನ್ನ ಪ್ರಾಪ್ತಿಯೂ ಸುಲಭವಾಗಿ ಆಗುವಂತೆ-ಯೋಗ, ಸಾಂಖ್ಯ, ಧರ್ಮ, ಸ್ವಾಧ್ಯಾಯ, ತಪಸ್ಸು, ತ್ಯಾಗ, ಇಷ್ಟಾಪೂರ್ತ, ದಕ್ಷಿಣಾ, ವ್ರತ, ಯಜ್ಞ, ವೇದಗಳ ರಹಸ್ಯಮಯ ಮಂತ್ರ, ತೀರ್ಥ, ನಿಯಮ, ಯಮ ಮುಂತಾದ ಸಾಧನೆಗಳಿಂದ ನನ್ನ ಪ್ರಾಪ್ತಿಯು ಬೇಗನೆ ಆಗಲಾರದು. ಏಕೆಂದರೆ, ಸತ್ಸಂಗದಿಂದ ಎಲ್ಲ ರೀತಿಯ ಆಸಕ್ತಿಯೂ ನಾಶವಾಗಿ ಹೋಗುತ್ತದೆ. ಆಸಕ್ತಿಯು ನಾಶವಾಗುವುದರಿಂದ ನನ್ನಲ್ಲಿ ಅವನ ಭಕ್ತಿಯು ಬೆಳೆಯುತ್ತದೆ ಮತ್ತು ಅವನು ಸಹಜವಾಗಿಯೇ ನನ್ನನ್ನು ಪಡೆದುಕೊಳ್ಳುತ್ತಾನೆ. ॥ ೧-೨॥ ಪುಣ್ಯಾತ್ಮನಾದ ಉದ್ಧವನೇ! ಪ್ರತಿಯೊಂದು ಯುಗದಲ್ಲಿಯೂ ಸತ್ಸಂಗದ ಮೂಲಕವೇ ದೈತ್ಯರು-ರಾಕ್ಷಸರು, ಪಶು-ಪಕ್ಷಿಗಳು, ಗಂಧರ್ವ-ಅಪ್ಸರೆಯರು, ನಾಗ-ಸಿದ್ಧರು, ಚಾರಣ-ಗುಹ್ಯಕರು, ವಿದ್ಯಾಧರರು ಮುಂತಾದವರೆಲ್ಲರೂ ನನ್ನನ್ನು ಪಡೆದುಕೊಂಡಿರುವರು. ಮನುಷ್ಯರಲ್ಲಿ ವೈಶ್ಯರು, ಶೂದ್ರರು, ಸ್ತ್ರೀಯರು, ಅಂತ್ಯಜರು ಮುಂತಾದ ರಜೋಗುಣೀ, ತಮೋಗುಣೀ, ಪ್ರಕೃತಿಯ ಬಹಳಷ್ಟು ಜೀವರು ನನ್ನ ಪರಮ ಪದವನ್ನು ಪಡೆದುಕೊಂಡಿರುವರು. ವೃತ್ರಾಸುರ, ಪ್ರಹ್ಲಾದ, ವೃಷಪರ್ವಾ, ಬಲಿ, ಬಾಣಾಸುರ, ಮಯದಾನವ, ವಿಭೀಷಣ, ಸುಗ್ರೀವ, ಹನುಮಂತ, ಜಾಂಬವಂತರು, ಗಜೇಂದ್ರ, ಜಟಾಯು, ತುಲಾಧಾರವೈಶ್ಯ, ಧರ್ಮವ್ಯಾಧ, ಕುಬ್ಜೆ, ವ್ರಜದ ಗೋಪಿಯರು, ಯಜ್ಞಪತ್ನಿಯರು, ಹಾಗೂ ಬೇರೆ ಜನರೂ ಕೂಡ ಸತ್ಸಂಗದ ಪ್ರಭಾವದಿಂದಲೇ ನನ್ನನ್ನು ಪಡೆದುಕೊಳ್ಳಲು ಸಾಧ್ಯವಾಯಿತು. ॥ ೩-೬ ॥ ಅವರಾದರೋ ವೇದಗಳನ್ನು ಅಧ್ಯಯನ ಮಾಡಿರಲಿಲ್ಲ, ವಿಧಿಪೂರ್ವಕ ಮಹಾಪುರುಷರ ಉಪಾಸನೆ ಮಾಡಿರಲಿಲ್ಲ. ಹೀಗೆ ಅವರು ಯಾವುದೇ ವ್ರತ, ತಪಸ್ಸು ಇವುಗಳನ್ನೂ ಮಾಡಿರಲಿಲ್ಲ, ಕೇವಲ ಸತ್ಸಂಗದ ಪ್ರಭಾವದಿಂದಲೇ ಅವರು ನನ್ನನ್ನು ಪಡೆದುಕೊಂಡರು. ॥ ೭ ॥ ಗೋಪಿಯರು, ಹಸುಗಳು, ಯಮಳಾರ್ಜುನ ಮುಂತಾದ ವೃಕ್ಷಗಳು, ವ್ರಜದ ಜಿಂಕೆಗಳು ಮುಂತಾದ ಪಶುಗಳು, ಇವರೆಲ್ಲರು ಭಾವನೆಯ ಮೂಲಕವೇ ನನ್ನನ್ನು ಪಡೆದುಕೊಂಡರು. ಇದಲ್ಲದೆ ಕಾಲಿಯಸರ್ಪದಂತಹ ಮೂಢಬುದ್ಧಿಯೂ ನನ್ನನ್ನು ಹೊಂದಿದನು. ಇಂತಹವರು ಅನೇಕರು ಆಗಿ ಹೋಗಿದ್ದಾರೆ. ಅವರು ಕೇವಲ ಪ್ರೇಮಪೂರ್ಣ ಭಾವದ ಮೂಲಕವೇ ಆಯಾಸವಿಲ್ಲದೆ ನನ್ನನ್ನು ಪಡೆದು ಕೃತಕೃತ್ಯರಾದರು. ॥ ೮ ॥ ಉದ್ಧವನೇ! ದೊಡ್ಡ-ದೊಡ್ಡ ಪ್ರಯತ್ನಶೀಲ ಸಾಧಕರು ಯೋಗ, ಸಾಂಖ್ಯ, ದಾನ, ವ್ರತ, ತಪಸ್ಸು, ಯಜ್ಞ,

ಯಂ ನ ಯೋಗೇನ ಸಾಂಖ್ಯೇನ ದಾನವ್ರತತಪೋಽಧ್ವರೈಃ ।
ವ್ಯಾಖ್ಯಾಸ್ವಾಧ್ಯಾಯಸಂನ್ಯಾಸೈಃ ಪ್ರಾಪ್ನುಯಾದ್ಯತ್ನವಾನಪಿ
॥ ೯ ॥

ರಾಮೇಣ ಸಾರ್ಧಂ ಮಥುರಾಂ ಪ್ರಣೀತೇ
ಶ್ವಾಫಲ್ಕಿನಾ ಮಯ್ಯನುರಕ್ತಚಿತ್ತಾಃ ।
ವಿಗಾಢಭಾವೇನ ನ ಮೇ ವಿಯೋಗ-
ತೀವ್ರಾಧಯೋಽನ್ಯಂ ದದೃಶುಃ ಸುಖಾಯ ॥ ೧೦ ॥

ತಾಸ್ತಾಃ ಕ್ಷಪಾಃ ಪ್ರೇಷ್ಠ ತಮೇನ ನೀತಾ
ಮಯೈವ ವೃಂದಾವನಗೋಚರೇಣ ।
ಕ್ಷಣಾರ್ಧವತ್ತಾಃ ಪುನರಂಗ ತಾಸಾಂ
ಹೀನಾ ಮಯಾ ಕಲ್ಪಸಮಾ ಬಭೂವುಃ ॥ ೧೧ ॥

ತಾ ನಾವಿದನ್ಮಯ್ಯನುಷಂಗಬದ್ಧ-
ಧಿಯಃ ಸ್ವಮಾತ್ಮಾನಮದಸ್ತಥೇದಮ್ ।
ಯಥಾ ಸಮಾಧೌ ಮುನಯೋಽಬ್ಧಿತೋಯೇ
ನದ್ಯಃ ಪ್ರವಿಷ್ಟಾ ಇವ ನಾಮರೂಪೇ ॥ ೧೨ ॥

ಮತ್ಕಾಮಾ ರಮಣಂ ಜಾರಮಸ್ವರೂಪವಿದೋಽಬಲಾಃ ।
ಬ್ರಹ್ಮ ಮಾಂ ಪರಮಂ ಪ್ರಾಪುಃ ಸಂಗಾಚ್ಛತಸಹಸ್ರಶಃ
॥ ೧೩ ॥

ತಸ್ಮಾತ್ತ್ವಮುದ್ಧವೋತ್ಸೃಜ್ಯ ಚೋದನಾಂ ಪ್ರತಿಚೋದನಾಮ್ ।
ಪ್ರವೃತ್ತಂ ಚ ನಿವೃತ್ತಂ ಚ ಶ್ರೋತವ್ಯಂ ಶ್ರುತಮೇವ ಚ
॥ ೧೪ ॥

ಮಾಮೇಕಮೇವ ಶರಣಮಾತ್ಮಾನಂ ಸರ್ವದೇಹಿನಾಮ್ ।
ಯಾಹಿ ಸರ್ವಾತ್ಮಭಾವೇನ ಮಯಾ ಸ್ಯಾ ಹ್ಯಕುತೋಭಯಃ
॥ ೧೫ ॥

ಉದ್ಧವ ಉವಾಚ

ಸಂಶಯಃ ಶೃಣ್ವತೋ ವಾಚಂ ತವ ಯೋಗೇಶ್ವರೇಶ್ವರ ।
ನ ನಿವರ್ತತ ಆತ್ಮಸ್ಥೋ ಯೇನ ಭ್ರಾಮ್ಯತಿ ಮೇ ಮನಃ
॥ ೧೬ ॥

ಶ್ರುತಿಗಳ ವ್ಯಾಖ್ಯೆ, ಸ್ವಾಧ್ಯಾಯ, ಸಂನ್ಯಾಸ ಮುಂತಾದ ಸಾಧನೆಗಳಿಂದ ನನ್ನನ್ನು ಪಡೆಯಲಾಗಲಿಲ್ಲ, ಆದರೆ ಸತ್ಸಂಗದಿಂದ ಲಾದರೋ ನಾನು ಅತ್ಯಂತ ಸುಲಭನಾಗುತ್ತೇನೆ. ಉದ್ಧವಾ! ಅಕ್ರೂರನು ಅಣ್ಣ ಬಲರಾಮನೊಂದಿಗೆ ನನ್ನನ್ನು ವ್ರಜದಿಂದ ಮಥುರೆಗೆ ಯಾವಾಗ ಕರೆತಂದನೋ, ಆಗ ಗೋಪಿಯರ ಹೃದಯ ಗಾಢವಾದ ಪ್ರೇಮದ ಕಾರಣ ನನ್ನಲ್ಲಿಯೇ ಅನುರಕ್ತ ವಾಗಿತ್ತು. ನನ್ನ ವಿಯೋಗದ ತೀವ್ರ ವ್ಯಾಧಿಯಿಂದ ನಾನಲ್ಲದೆ ಅವರಿಗೆ ಬೇರೆ ಯಾವ ವಸ್ತುವು ಸುಖಕಾರಕವಾಗದಷ್ಟು ವ್ಯಾಕುಲ ರಾಗಿದ್ದರು. ॥ ೯-೧೦ ॥ ನಾನೊಬ್ಬನೇ ಅವರ ಏಕಮಾತ್ರ ಪ್ರಿಯತಮನಾಗಿರುವೆನು ಎಂಬುದನ್ನು ನೀನು ತಿಳಿದಿರುವೆ. ನಾನು ವೃಂದಾವನದಲ್ಲಿದ್ದಾಗ ಅವರು ಅನೇಕ ರಾತ್ರಿಗಳು, ಮಹಾರಾಸದ ರಾತ್ರಿಗಳು ನನ್ನೊಡನೆ ಕ್ಷಣಾರ್ಧದಂತೆ ಕಳೆದಿದ್ದರು. ಆದರೆ ಪ್ರಿಯ ಉದ್ಧವಾ! ನನ್ನ ಹೊರತು ಅದೇ ರಾತ್ರಿಗಳು ಅವರಿಗೆ ಒಂದೊಂದು ಕಲ್ಪಕ್ಕೆ ಸಮಾನವಾಗುತ್ತಿತ್ತು. ॥ ೧೧ ॥ ಆ ಗೋಪಿಯರಿಗೆ ನನ್ನಲ್ಲಿ ಎಂತಹ ನಿಶ್ಚಲವಾದ ಪ್ರೇಮವಿತ್ತೆಂದರೆ, ಅವರ ಬುದ್ಧಿ ನನ್ನಲ್ಲಿ ಸ್ಥಿರವಾಗಿ ಹೋಗಿತ್ತು. ಅವರಿಗೆ ನಾನಲ್ಲದೆ ಬೇರೆ ಏನೂ ಸ್ಮೃತಿಯಲ್ಲಿ ಇರುತ್ತಿರಲಿಲ್ಲ, ಅವರ ಭಾವನೆ ನನ್ನಲ್ಲಿ ಗಾಢವಾಗಿ ಆವಿಷ್ಟವಾಗಿ ಹೋಗಿತ್ತು. ಅವರಿಗೆ 'ಇದು ನನ್ನ ಶರೀರವೋ ಅಥವಾ ಅದೋ' ಇದೂ ಕೂಡ ತಿಳಿಯದಷ್ಟು ಪ್ರಗಾಢ ಭಕ್ತಿ ಅವರದಾಗಿತ್ತು. ಮುನಿಗಳು ಸಮಾಧಿಯಲ್ಲಿ ಎಲ್ಲವನ್ನು ಮರೆತು ಭಗವಂತ ನೊಂದಿಗೇ ಒಂದಾಗುವಂತೆ, ನದಿಗಳು ಸಮುದ್ರವನ್ನು ಸೇರಿ ತಮ್ಮ ನಾಮ-ರೂಪಗಳನ್ನು ಕಳೆದುಕೊಳ್ಳುವಂತೆ ಆ ಗೋಪಿಯರೂ ಕೂಡ ನನ್ನಲ್ಲಿ ಏಕೀಭಾವದಿಂದ ಸ್ಥಿತರಾಗಿದ್ದರು. ॥ ೧೨ ॥ ಉದ್ಧವನೇ! ಆ ಗೋಪಿಯರಲ್ಲಿ ಅನೇಕರು ನನ್ನ ವಾಸ್ತವಿಕ ಸ್ವರೂಪವನ್ನು ತಿಳಿಯದವರೂ ಇದ್ದರು. ಅವರು ಕೇವಲ ನನ್ನನ್ನು ಪ್ರಿಯತಮ ನೆಂದೇ ತಿಳಿಯುತ್ತಿದ್ದರು. ಜಾರಭಾವದಿಂದ ನನ್ನೊಡನೆ ಸೇರುವ ಆಕಾಂಕ್ಷೆ ಹೊಂದಿದ್ದರು. ಆ ಸಾಧನಹೀನ ಸಾವಿರಾರು ಅಬಲೆ ಯರು ಕೇವಲ ಸಂಗದ ಪ್ರಭಾವದಿಂದಲೇ ಪರಬ್ರಹ್ಮ ಪರಮಾತ್ಮ ನಾದ ನನ್ನನ್ನು ಪಡೆದುಕೊಂಡರು. ॥ ೧೩ ॥ ಆದ್ದರಿಂದ ಎಲೈ ಉದ್ಧವಾ! ನೀನು ನಿವೃತ್ತಿ ಅಥವಾ ಪ್ರವೃತ್ತಿ ಹಾಗೂ ಇಹ-ಪರ ಸಂಬಂಧೀ ಎಲ್ಲ ಕರ್ಮಗಳನ್ನು ತ್ಯಜಿಸಿ, ಸಮಸ್ತ ಪ್ರಾಣಿಗಳ ಆತ್ಮ ಸ್ವರೂಪೀ ಏಕಮಾತ್ರ ಪರಮಾತ್ಮನಾದ ನನ್ನನ್ನೇ ಅನನ್ಯ ಭಾವದಿಂದ ಶರಣಾಗು. ಮತ್ತೆ ನಿನಗೆ ಯಾವುದೇ ಭಯ ಇರಲಾ ರದು. ॥ ೧೪-೧೫ ॥

ಉದ್ಧವನೆಂದನು – ಓ ಯೋಗೇಶ್ವರರಿಗೂ ಈಶ್ವರನೇ! ನಿನ್ನ ಅಮೃತಪೂರ್ಣ ವಾಣಿಯನ್ನು ಕೇಳುತ್ತಿದ್ದರೂ ನನಗೆ ತೃಪ್ತಿಯಾಗು ತ್ತಿಲ್ಲ, ಆದರೆ ಇನ್ನೂ ನನ್ನೊಳಗಿನ ಸಂಶಯ ನಿವೃತ್ತವಾಗಲಿಲ್ಲ. ಕರ್ಮಮಾಡಬೇಕೇ ಅಥವಾ ಬೇಡವೇ ಈ ವಿಷಯದಲ್ಲಿ ನನ್ನ ಬುದ್ಧಿಯು ಭ್ರಮಿತವಾಗಿದೆ. ಆದ್ದರಿಂದ ನನಗೆ ದಯಾಮಾಡಿ ಚೆನ್ನಾಗಿ ತಿಳಿಸಿಹೇಳು. ॥ ೧೬ ॥

ಶ್ರೀಭಗವಾನುವಾಚ

ಸ ಏಷ ಜೀವೋ ವಿವರಪ್ರಸೂತಿಃ
ಪ್ರಾಣೇನ ಘೋಷೇಣ ಗುಹಾಂ ಪ್ರವಿಷ್ಟಃ ।
ಮನೋಮಯಂ ಸೂಕ್ಷ್ಮಮುಪೇತ್ಯ ರೂಪಂ
ಮಾತ್ರಾ ಸ್ವರೋ ವರ್ಣ ಇತಿ ಸ್ಥವಿಷ್ಠಃ ॥ ೧೭ ॥

ಯಥಾನಲಃ ಖೇಽನಿಲಬಂಧುರೂಷ್ಮಾ
ಬಲೇನ ದಾರುಣ್ಯಧಿಮಥ್ಯಮಾನಃ ।
ಅಣುಃ ಪ್ರಜಾತೋ ಹವಿಷಾ ಸಮಿಧ್ಯತೇ
ತಥೈವ ಮೇ ವ್ಯಕ್ತಿರಿಯಂ ಹಿ ವಾಣೀ ॥ ೧೮ ॥

ಏವಂ ಗದಿಃ ಕರ್ಮ ಗತಿರ್ವಿಸರ್ಗೋ
ಘ್ರಾಣೋ ರಸೋ ದೃಕ್ ಸ್ಪರ್ಶಃ ಶ್ರುತಿಶ್ಚ ।
ಸಂಕಲ್ಪವಿಜ್ಞಾನಮಥಾಭಿಮಾನಃ
ಸೂತ್ರಂ ರಜಃಸತ್ತ್ವತಮೋವಿಕಾರಃ ॥ ೧೯ ॥

ಅಯಂ ಹಿ ಜೀವಸ್ತ್ರಿವೃದಬ್ಜಯೋನಿ-
ರವ್ಯಕ್ತ ಏಕೋ ವಯಸಾ ಸ ಆದ್ಯಃ ।
ವಿಶ್ಲಿಷ್ಟಶಕ್ತಿರ್ಬಹುಧೇವ ಭಾತಿ
ಬೀಜಾನಿ ಯೋನಿಂ ಪ್ರತಿಪದ್ಯ ಯದ್ವತ್ ॥ ೨೦ ॥

ಶ್ರೀಭಗವಂತನು ಹೇಳುತ್ತಾನೆ – ಪ್ರಿಯ ಉದ್ಧವಾ! ಏಕಮಾತ್ರ ಪರಮೇಶ್ವರನೇ ವಿಶ್ವದ ರೂಪದಲ್ಲಿದ್ದಾನೆ. "ಜೀವಯತಿ ಇತಿ ಜೀವಃ" ಅರ್ಥಾತ್ – ಪರಮಾತ್ಮನೇ ಎಲ್ಲರಿಗೆ ಚೇತನಾ ಶಕ್ತಿಯನ್ನು ಮತ್ತು ಜೀವನಶಕ್ತಿಯನ್ನು ಕರುಣಿಸುತ್ತಾನೆ. ಆದ್ದರಿಂದ ಜೀವರೂಪದಿಂದ ಪರಮಾತ್ಮನೇ ಇದ್ದಾನೆ. ಆ ಪರಮೇಶ್ವರನೇ ಮೊದಲಿಗೆ ಅನಾಹತ ನಾದಸ್ವರೂಪ ಪರಾವಾಣೀ ಹೆಸರಿನ ಪ್ರಾಣದೊಂದಿಗೆ ಮೂಲಾಧಾರ ಚಕ್ರದಲ್ಲಿ ಪ್ರವೇಶಿಸುತ್ತಾನೆ. ಮತ್ತೆ ಮನೋಮಯ ರೂಪವನ್ನು ಮನಸ್ಸಿನಿಂದ ಗ್ರಹಿಸಿ ಮಣಿಪೂರಕ ಚಕ್ರದಲ್ಲಿ ಪಶ್ಯಂತಿ ಹೆಸರಿನ ವಾಣಿಯ ಸೂಕ್ಷ್ಮರೂಪವನ್ನು ಧರಿಸುತ್ತಾನೆ. ಹಾಗೆಯೇ ಕಂಠದೇಶದಲ್ಲಿ ಸ್ಥಿತ ವಿಶುದ್ಧ ಹೆಸರಿನ ಚಕ್ರದಲ್ಲಿ ಬಂದು ಮಧ್ಯಮಾ ಹೆಸರಿನ ರೂಪವನ್ನು ಧರಿಸುತ್ತಾನೆ. ಅನಂತರ ಬಾಯಿಗೆ ಬಂದು ಅಕಾರಾದಿ ಮಾತ್ರಾ, ಸ್ವರ, ವರ್ಣ ಮುಂತಾದ ರೂಪಗಳಲ್ಲಿ ವೈಖರೀ ಹೆಸರಿನಿಂದ ವಾಣಿಯ ಸ್ಥೂಲ ರೂಪವನ್ನು ಧರಿಸುತ್ತಾನೆ. ಈ ಪ್ರಕಾರ ಶಬ್ದಬ್ರಹ್ಮನ ರೂಪದಲ್ಲಿ ಪರಮಾತ್ಮನದೇ ಅಭಿವ್ಯಕ್ತಿ ಎಂದು ತಿಳಿಯಬೇಕು. ॥ ೧೭ ॥ ಆಕಾಶದಲ್ಲಿ ಅಗ್ನಿಯು ಊಷ್ಮಾ ಅಥವಾ ವಿದ್ಯುತ್ತಿನ ರೂಪದಲ್ಲಿ ಸ್ಥಿತವಾಗಿರುತ್ತದೆ. ಅದೇ ಅಗ್ನಿಯು ಬಲಪೂರ್ವಕ ಕಡೆಗೋಲಿನಿಂದ ಅರಣಿಯನ್ನು ಕಡೆದಾಗ ಸಣ್ಣ-ಸಣ್ಣ ಕಿಡಿಗಳಾಗಿ ಪ್ರಕಟವಾಗುತ್ತದೆ. ಆದರೆ ಆ ಅಗ್ನಿಯು ಹವಿರ್ದ್ರವ್ಯವನ್ನು ಪಡೆದಾಗ ಪ್ರಜ್ವಲಿತವಾಗಿ ಪ್ರಚಂಡರೂಪವನ್ನು ಪಡೆಯುತ್ತದೆ. ಹೀಗೆಯೇ ಈ ವಾಣಿಯೂ ಕೂಡ ಸೂಕ್ಷ್ಮರೂಪದಿಂದ ಸ್ಥೂಲರೂಪದಲ್ಲಿ ಪ್ರಕಟವಾಗುತ್ತದೆ. ಈ ಪ್ರಕಾರ ಶಬ್ದಬ್ರಹ್ಮನ ರೂಪದಲ್ಲಿ ನನ್ನದೇ ಅಭಿವ್ಯಕ್ತಿಯಾಗಿದೆ. ॥ ೧೮ ॥ ಇದೇ ರೀತಿ ಬೇರೆ ಕ್ರಿಯೆಗಳ ಕುರಿತು ತಿಳಿದುಕೋ. ಅವೆಲ್ಲ ನನ್ನದೇ ಅಭಿವ್ಯಕ್ತಿಯಾಗಿವೆ. ಮಾತಾಡುವುದು, ಕರ್ಮಮಾಡುವುದು, ನಡೆಯುವುದು, ಮಲ-ಮೂತ್ರ ವಿಸರ್ಜಿಸುವುದು, ಮೂಸುವುದು, ರುಚಿ ತೆಗೆದುಕೊಳ್ಳುವುದು, ನೋಡುವುದು, ಸ್ಪರ್ಶಿಸುವುದು, ಕೇಳುವುದು ಮನಸ್ಸಿನ ಮೂಲಕ ಸಂಕಲ್ಪ-ವಿಕಲ್ಪಗೈಯ್ಯುವುದು, ಬುದ್ಧಿಯಿಂದ ಅರಿಯುವುದು, ಅಭಿಮಾನಪಡುವುದು, ಮುಂತಾದ ಎಲ್ಲ ಕ್ರಿಯೆಗಳೂ, ಮಹತ್ತತ್ತ್ವ ಹಾಗೂ ಸತ್ತ್ವ, ರಜ, ತಮ ಮೊದಲಾದ ಮೂರೂ ಗುಣಗಳ ವಿಕಾರಗಳೂ, ಇದಲ್ಲದೆ ಇರುವ ಈ ದೃಶ್ಯಪ್ರಪಂಚ ಎಲ್ಲವೂ ನನ್ನದೇ ಅಭಿವ್ಯಕ್ತಿ ಎಂದು ತಿಳಿ. ಇವೆಲ್ಲ ರೂಪಗಳಲ್ಲಿ ಪರಮಾತ್ಮನಾದ ನಾನೇ ಪ್ರಕಾಶಿತನಾಗುತ್ತಿದ್ದೇನೆ. ॥ ೧೯ ॥ ಪರಮಾತ್ಮನೇ ತ್ರಿಗುಣಮಯ ಬ್ರಹ್ಮಾಂಡರೂಪೀ, ಕಮಲವನ್ನು ಉಂಟುಮಾಡುವವನು. ಆ ನಾರಾಯಣನು ಅವ್ಯಕ್ತನೂ ಆಗಿದ್ದಾನೆ ಮತ್ತು ಎಲ್ಲ ರೂಪಗಳಲ್ಲಿ ವಿಭಕ್ತನಾಗಿಯೂ ಏಕಮಾತ್ರ ಅವನೇ ಆಗಿದ್ದಾನೆ. ಪುರಾಣಪುರುಷನೂ, ಎಲ್ಲರ ಆದಿಯೂ ಆಗಿದ್ದಾನೆ. ಅವನೇ ಅನೇಕ ಶಕ್ತಿಗಳಲ್ಲಿ ತನ್ನನ್ನು ವಿಭಜಿಸಿಕೊಂಡು ಅನೇಕ ರೂಪಗಳನ್ನು ಧರಿಸಿರುವವನು. ಅವನು ಆಯಾಯಾ ರೂಪಗಳಲ್ಲಿ ಪ್ರಕಾಶಿತನಾಗುತ್ತಿದ್ದಾನೆ. ಬೀಜವನ್ನು ನೆಲದಲ್ಲಿ ನೆಟ್ಟರೆ ಅದು ಅನೇಕ ರೂಪವಾಗಿ ಅಭಿವ್ಯಕ್ತವಾಗುವಂತೆ, ಪರಮಾತ್ಮನ ಉಜ್ಜೀವನೀ ಶಕ್ತಿಯನ್ನು ಪಡೆದು ಈ ಸಮಸ್ತ ವಿಶ್ವವು ಅನೇಕ ರೂಪಗಳಲ್ಲಿ

ಯಸ್ಮಿನ್ನಿದಂ ಪ್ರೋತಮಶೇಷಮೋತಂ
ಪಟೋ ಯಥಾ ತಂತುವಿತಾನಸಂಸ್ಥಃ ।
ಯ ಏಷ ಸಂಸಾರತರುಃ ಪುರಾಣಃ
ಕರ್ಮಾತ್ಮಕಃ ಪುಷ್ಪಫಲೇ ಪ್ರಸೂತೇ ॥ ೨೧ ॥

ಪ್ರಕಟವಾಗಿದೆ. ಇದೆಲ್ಲವೂ ಆ ಪರಮಾತ್ಮನದೇ ಅಭಿವ್ಯಕ್ತಿಯಾಗಿದೆ. ಬಟ್ಟೆಯಲ್ಲಿ ನೂಲು ಓತಪ್ರೋತವಾಗಿರುವಂತೆ ಈ ವಿಶ್ವದಲ್ಲಿ ಏಕಮಾತ್ರ ಪರಮಾತ್ಮನೇ ಓತಪ್ರೋತನಾಗಿದ್ದಾನೆ. ಅವನೇ ತುಂಬಿರುವನು. ಈ ಪ್ರಪಂಚರೂಪೀ ವೃಕ್ಷವು ಪುರಾತನವಾಗಿದೆ. ಕರ್ಮದ ಪರಂಪರೆ ಎಂದಿನಿಂದಲೋ ನಡೆದುಕೊಂಡು ಬಂದಿದೆ. ಆದ್ದರಿಂದ ಕರ್ಮರೂಪವು ಅವನೇ ಆಗಿದ್ದಾನೆ. ಆಗಿದೆ, ಆ ಕರ್ಮವೇ ಪುಷ್ಪ ಮತ್ತು ಫಲವನ್ನು ಉತ್ಪನ್ನ ಮಾಡುತ್ತದೆ. ॥ ೨೦-೨೧ ॥

ದ್ವೇ ಅಸ್ಯ ಬೀಜೇ ಶತಮೂಲಸ್ತ್ರಿನಾಲಃ
ಪಂಚಸ್ಕಂಧಃ ಪಂಚರಸಪ್ರಸೂತಿಃ ।
ದಶೈಕಶಾಖೋ ದ್ವಿಸುಪರ್ಣನೀಡ-
ಸ್ತ್ರಿವಲ್ಕಲೋ ದ್ವಿಫಲೋಽರ್ಕಂ ಪ್ರವಿಷ್ಟಃ ॥ ೨೨ ॥

ಅದಂತಿ ಚೈಕಂ ಫಲಮಸ್ಯ ಗೃಧ್ರಾ
ಗ್ರಾಮೇಚರಾ ಏಕಮರಣ್ಯವಾಸಾಃ ।
ಹಂಸಾ ಯ ಏಕಂ ಬಹುರೂಪಮಿಜ್ಯೈ-
ರ್ಮಾಯಾಮಯಂ ವೇದ ಸ ವೇದ ವೇದಮ್ ॥ ೨೩ ॥

ಈ ಪ್ರಪಂಚ ವೃಕ್ಷಕ್ಕೆ ಪಾಪ ಮತ್ತು ಪುಣ್ಯರೂಪೀ ಎರಡು ಬೀಜಗಳಿವೆ. ನೂರಾರು ವಾಸನೆಗಳೇ ಇದರ ಬೇರು ಆಗಿದೆ. ಮೂರು ಗುಣಗಳೇ ಇದರ ಕಾಂಡವಾಗಿದೆ. ಪಂಚಮಹಾಭೂತಗಳೇ ದಪ್ಪವಾದ ಐದು ಶಾಖೆಗಳಿವೆ. ಅದರಲ್ಲಿ ಐದು ಪ್ರಕಾರದ (ಶಬ್ದ, ಸ್ಪರ್ಶ, ರೂಪ, ರಸ, ಗಂಧ) ರಸಗಳು ಹೊರಡುತ್ತವೆ. ಹತ್ತು ಇಂದ್ರಿಯಗಳು ಮತ್ತು ಒಂದು ಮನಸ್ಸೇ ಟೊಂಗೆಗಳು. ಒಂದು ಜೀವ ಮತ್ತೊಂದು ಈಶ್ವರ ಈ ವೃಕ್ಷದಲ್ಲಿ ಗೂಡುಕಟ್ಟಿಕೊಂಡು ವಾಸಿಸುತ್ತಾರೆ. ವಾತ, ಪಿತ್ತ , ಕಫ ಇವು ಮೂರು ಇದರ ಸಿಪ್ಪೆಗಳಾಗಿವೆ. ಸುಖ-ದುಃಖ ಇವೆರಡು ಫಲಗಳಾಗಿವೆ. ಇಂತಹ ಈ ಪ್ರಪಂಚವೃಕ್ಷವು ಸೂರ್ಯಮಂಡಲದವರೆಗೆ ಹಬ್ಬಿದೆ. ಅವಿದ್ಯೆಗೆ ಮಹತ್ತ್ವವನ್ನಿತ್ತು ವಿಷಯಲೋಲುಪರಾದರೋ ಇದರ ದುಃಖರೂಪೀ ಫಲವನ್ನು ಉಣ್ಣುವರು. ಆದರೆ ವಿದ್ಯೆಗೆ ಮಹತ್ತ್ವವನ್ನೀಯುವವರು ಪವಿತ್ರಾತ್ಮರು ಇದರ ಸುಖರೂಪೀ ಫಲವನ್ನು ಮೆಲ್ಲುವರು. ಇಂತಹ ಪರಮಹಂಸ ಶ್ರೇಷ್ಠ ಮಹಾತ್ಮರು ಆ ಅದ್ವಿತೀಯ ಬ್ರಹ್ಮನನ್ನೇ ಅನೇಕ ರೂಪಗಳಲ್ಲಿ ನೋಡುತ್ತಾರೆ. ವಾಸ್ತವವಾಗಿ ವೇದದ ಈ ತಾತ್ಪರ್ಯವನ್ನು ತಿಳಿದವರೇ ಸರಿಯಾಗಿ ಅರಿತವರಾಗಿದ್ದಾರೆ. ॥ ೨೨-೨೩ ॥ ಎಲೈ ಉದ್ಧವನೇ ! ಈ ಪ್ರಕಾರ

ಏವಂ ಗುರೂಪಾಸನಯೈಕಭಕ್ತ್ಯಾ
ವಿದ್ಯಾಕುಠಾರೇಣ ಶಿತೇನ ಧೀರಃ ।
ವಿವೃಶ್ಚ್ಯ ಜೀವಾಶಯಮಪ್ರಮತ್ತಃ
ಸಂಪದ್ಯ ಚಾತ್ಮಾನಮಥ ತ್ಯಜಾಸ್ತ್ರಮ್ ॥ ೨೪ ॥

ಸದ್ಗುರುವಿನ ಉಪಾಸನೆಯಿಂದ ಹಾಗೂ ಅನನ್ಯ ಭಕ್ತಿಯಿಂದ ನೀನು ಜ್ಞಾನ ಸಂಪನ್ನನಾದಾಗ ಮತ್ತೆ ಎಚ್ಚರಿಕೆಯಿಂದ ಜ್ಞಾನರೂಪೀ ಹರಿತವಾದ ಖಡ್ಗದಿಂದ ನಿನ್ನ ಜೀವಭಾವವನ್ನು ತ್ಯಾಗ ಮಾಡುವೆ ಮತ್ತು ಆತ್ಮಸ್ವರೂಪವನ್ನು ಅರಿತುಕೊಂಡು ಆ ಅಸ್ತ್ರವನ್ನೂ ತ್ಯಾಗಗೈದು ಶಾಶ್ವತವಾಗಿ ನಿನ್ನ ಅಖಂಡಸ್ವರೂಪದಲ್ಲಿ ಸ್ಥಿತನಾಗುವೆ. ॥ ೨೪ ॥

ಹನ್ನೆರಡನೆಯ ಅಧ್ಯಾಯವು ಮುಗಿಯಿತು. ॥ ೧೨ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಏಕಾದಶಸ್ಕಂಧೇ ದ್ವಾದಶೋಽಧ್ಯಾಯಃ ॥ ೧೨ ॥

ಹದಿಮೂರನೆಯ ಅಧ್ಯಾಯ

ಹಂಸರೂಪದಿಂದ ಸನಕಾದಿಗಳಿಗೆ ಮಾಡಿದ ಉಪದೇಶದ ವರ್ಣನೆ

ಶ್ರೀಭಗವಾನುವಾಚ

ಸತ್ತ್ವಂ ರಜಸ್ತಮ ಇತಿ ಗುಣಾ ಬುದ್ಧೇರ್ನ ಚಾತ್ಮನಃ ।
ಸತ್ತ್ವೇನಾನ್ಯತಮೌ ಹನ್ಯಾತ್ಸತ್ತ್ವಂ ಸತ್ತ್ವೇನ ಚೈವ ಹಿ
॥ ೧ ॥

ಸತ್ತ್ವಾದ್ಧರ್ಮೋ ಭವೇದ್ವೃದ್ಧಾತ್ಪುಂಸೋ ಮದ್ಭಕ್ತಿಲಕ್ಷಣಃ ।
ಸಾತ್ತ್ವಿಕೋಪಾಸಯಾ ಸತ್ತ್ವಂ ತತೋ ಧರ್ಮಃ ಪ್ರವರ್ತತೇ
॥ ೨ ॥

ಧರ್ಮೋ ರಜಸ್ತಮೋ ಹನ್ಯಾತ್ಸತ್ತ್ವವೃದ್ಧಿರನುತ್ತಮಃ ।
ಆಶು ನಶ್ಯತಿ ತನ್ಮೂಲೋ ಹ್ಯಧರ್ಮ ಉಭಯೇ ಹತೇ
॥ ೩ ॥

ಆಗಮೋಽಪಃ ಪ್ರಜಾ ದೇಶಃ ಕಾಲಃ ಕರ್ಮ ಚ ಜನ್ಮ ಚ ।
ಧ್ಯಾನಂ ಮಂತ್ರೋಽಥ ಸಂಸ್ಕಾರೋ ದಶೈತೇ ಗುಣಹೇತವಃ
॥ ೪ ॥

ತತ್ತತ್ ಸಾತ್ತ್ವಿಕಮೇವೈಷಾಂ ಯದ್ಯದ್ವೃದ್ಧಾಃ ಪ್ರಚಕ್ಷತೇ ।
ನಿಂದಂತಿ ತಾಮಸಂ ತತ್ತದ್ರಾಜಸಂ ತದುಪೇಕ್ಷಿತಮ್
॥ ೫ ॥

ಸಾತ್ತ್ವಿಕಾನ್ಯೇವ ಸೇವೇತ ಪುಮಾನ್ ಸತ್ತ್ವವಿವೃದ್ಧಯೇ ।
ತತೋ ಧರ್ಮಸ್ತತೋ ಜ್ಞಾನಂ ಯಾವತ್ ಸ್ಮೃತಿರಪೋಹನಮ್
॥ ೬ ॥

ವೇಣುಸಂಘರ್ಷಜೋ ವಹ್ನಿರ್ದಗ್ಧ್ವಾ ಶಾಮ್ಯತಿ ತದ್ವನಮ್ ।
ಏವಂ ಗುಣವ್ಯತ್ಯಯಜೋ ದೇಹಃ ಶಾಮ್ಯತಿ ತತ್ಕ್ರಿಯಃ
॥ ೭ ॥

ಭಗವಾನ್ ಶ್ರೀಕೃಷ್ಣನು ಹೇಳುತ್ತಾನೆ – ಪ್ರಿಯ ಉದ್ಧವಾ! ಸತ್ತ್ವ, ರಜ, ತಮ, ಈ ಮೂರೂ ಗುಣಗಳು ಬುದ್ಧಿಯದಾಗಿವೆ, ಆತ್ಮನದಲ್ಲ. ಸತ್ತ್ವಗುಣದ ಮೂಲಕ ರಜ ಮತ್ತು ತಮೋಗುಣಗಳನ್ನು ನಾಶಮಾಡಿ, ಮತ್ತೆ ಅಂತಃಕರಣದ ಶುದ್ಧಿಯಾದ ಬಳಿಕ ಸತ್ತ್ವಗುಣವನ್ನು ತ್ಯಜಿಸಿ, ಗುಣಾತೀತನಾಗಬೇಕು. ॥ ೧॥ ಪುರುಷನು ಸತ್ತ್ವಗುಣ ಸಂಪನ್ನನಾದಾಗ ಭಗವತ್ಪ್ರಾಪ್ತಿಯನ್ನು ಮಾಡಿಸುವ ಧರ್ಮದ ವೃದ್ಧಿಯಾಗುತ್ತದೆ. ಸಾತ್ತ್ವಿಕ ಪದಾರ್ಥಗಳನ್ನೇ ಸೇವಿಸುವುದರಿಂದ ಕ್ರಮಶಃ ಸತ್ತ್ವಗುಣವು ಬೆಳೆಯುತ್ತದೆ. ತತ್ಫಲವಾಗಿ ಧರ್ಮದಲ್ಲಿ ಪ್ರವೃತ್ತಿ ಬೆಳೆಯುತ್ತದೆ. ॥ ೨॥ ಸತ್ತ್ವಗುಣವು ಚೆನ್ನಾಗಿ ಬೆಳೆದಾಗ ರಜ ಮತ್ತು ತಮ ಇವೆರಡನ್ನು ಅದು ಪೂರ್ಣವಾಗಿ ನಾಶಮಾಡಿಬಿಡುತ್ತದೆ. ಅಧರ್ಮವು ರಜ ಹಾಗೂ ತಮದ ಮೂಲವಾಗಿದೆ, ಮತ್ತೆ ಆ ಅಧರ್ಮವೂ ಕೂಡಲೇ ನಾಶವಾಗಿಬಿಡುತ್ತದೆ. ಈ ಪ್ರಕಾರ ಪುರುಷನು ಪೂರ್ಣರೂಪದಿಂದ ಶುದ್ಧನಾಗುತ್ತಾನೆ. ॥ ೩ ॥ ಗುಣಗಳ ವೃದ್ಧಿಗಾಗಿ ಈ ಹತ್ತು ಕಾರಣಗಳನ್ನು ಹೇಳಲಾಗಿವೆ. (೧) ಶಾಸ್ತ್ರ, (೨) ಜಲ, (೩) ಪ್ರಜೆ 'ಸಂತತಿ', (೪) ದೇಶ, (೫) ಕಾಲ, (೬) ಕರ್ಮ, (೭) ಜನ್ಮ, (೮) ಧ್ಯಾನ, (೯) ಮಂತ್ರ, (೧೦) ಸಂಸ್ಕಾರ. ಈ ಹತ್ತು ವಸ್ತುಗಳು ಸಾತ್ತ್ವಿಕವಾಗಿದ್ದರೆ ಸತ್ತ್ವಗುಣವನ್ನು, ರಾಜಸವಾಗಿದ್ದರೆ ರಜೋಗುಣವನ್ನು, ತಾಮಸವಾಗಿದ್ದರೆ ತಮೋಗುಣವನ್ನು ವೃದ್ಧಿಪಡಿಸುವುದಾಗಿದೆ. ॥ ೪ ॥ ಈಗ ಗುಣಗಳನ್ನು ಹೇಗೆ ಗುರುತಿಸಬೇಕು ; ಅದಕ್ಕಾಗಿ ಹೇಳುತ್ತಾರೆ – ಯಾರ ಕುರಿತು ಶ್ರೇಷ್ಠ ಜನರು ಪ್ರಶಂಸಿಸುತ್ತಾರೋ ಅವರನ್ನು ಸಾತ್ತ್ವಿಕರೆಂದೂ, ಯಾರನ್ನು ಉಪೇಕ್ಷಿಸುತ್ತಾರೋ ಅವರನ್ನು ರಾಜಸರೆಂದೂ, ಯಾರನ್ನು ನಿಂದಿಸುವರೋ ಅವರನ್ನು ತಾಮಸರೆಂದೂ ತಿಳಿಯಬೇಕು. ॥ ೫ ॥

ಸತ್ತ್ವಗುಣದ ವೃದ್ಧಿಗಾಗಿ ಸಾತ್ತ್ವಿಕ ವಸ್ತುಗಳನ್ನೇ ಸೇವಿಸಬೇಕು. ಆದರಿಂದ ಧರ್ಮ, ಜ್ಞಾನದ ವೃದ್ಧಿಯಾದೀತು. ತನ್ನ ಸ್ವರೂಪದ ಸ್ಮೃತಿ ಉಂಟಾದೀತು, ಎಲ್ಲ ರೀತಿಯ ಸಂಶಯಗಳು ನಾಶವಾಗುವವು. ಭಗವತ್ತತ್ತ್ವದ ಜ್ಞಾನ ಉಂಟಾಗುವವರೆಗೆ ಹೀಗೆ ಮಾಡುತ್ತಾ ಇರಬೇಕು. ॥ ೬ ॥ ಬಿದಿರುಗಳ ಘರ್ಷಣೆಯಿಂದ ಉಂಟಾದ ಬೆಂಕಿಯು ಬಿದಿರಿನ ವನವನ್ನೇ ಸುಟ್ಟು ಸ್ವಯಂ ಶಾಂತವಾಗುತ್ತದೆಯೋ ಹಾಗೆಯೇ ಮನುಷ್ಯನಲ್ಲಿ ಶಾಸ್ತ್ರವಿಚಾರದಿಂದ ಉತ್ಪನ್ನವಾದ ಜ್ಞಾನಾಗ್ನಿಯು ಶರೀರವು ಉಂಟಾಗುವ ಕಾರಣಗಳಾದ ತ್ರಿಗುಣಗಳನ್ನು ನಾಶಮಾಡಿ ಬಿಡುತ್ತದೆ. ಬಳಿಕ ಅದೂ ಸ್ವತಃ ಶಾಂತವಾಗುತ್ತದೆ. ॥ ೭ ॥

ಉದ್ಧವ ಉವಾಚ

ವಿದಂತಿ ಮರ್ತ್ಯಾಃ ಪ್ರಾಯೇಣ ವಿಷಯಾನ್ ಪದಮಾಪದಾಮ್ ।
ತಥಾಪಿ ಭುಂಜತೇ ಕೃಷ್ಣ ತತ್ಕಥಂ ಶ್ವಖರಾಜವತ್ ॥ ೮ ॥

ಉದ್ಧವನು ಕೇಳಿದನು – ಭಗವಂತಾ! ವಿಷಯಗಳು ವಿಪತ್ತುಗಳ ಮನೆಯಾಗಿದೆ ಎಂದು ಪ್ರಾಯಶಃ ಎಲ್ಲ ಮನುಷ್ಯರು ಇದನ್ನು ತಿಳಿಯುತ್ತಾರೆ. ಆದರೂ ಕೂಡ ಅವರು ನಾಯಿ, ಕತ್ತೆ, ಕುರಿಗಳಂತೆ ದುಃಖವನ್ನು ಸಹಿಸುತ್ತಲೂ ಅವನ್ನು ಭೋಗಿಸುತ್ತಾರೆ. ಇದರ ಕಾರಣವೇನು? ॥ ೮ ॥

ಶ್ರೀಭಗವಾನುವಾಚ

ಅಹಮಿತ್ಯನ್ಯಥಾಬುದ್ಧಿಃ ಪ್ರಮತ್ತಸ್ಯ ಯಥಾ ಹೃದಿ ।
ಉತ್ಸರ್ಪತಿ ರಜೋ ಘೋರಂ ತತೋ ವೈಕಾರಿಕಂ ಮನಃ ॥ ೯ ॥

ರಜೋಯುಕ್ತಸ್ಯ ಮನಸಃ ಸಂಕಲ್ಪಃ ಸವಿಕಲ್ಪಕಃ ।
ತತಃ ಕಾಮೋ ಗುಣಧ್ಯಾನಾದ್ದುಃಸಹಃ ಸ್ಯಾದ್ಧಿ ದುರ್ಮತೇಃ ॥ ೧೦ ॥

ಕರೋತಿ ಕಾಮವಶಗಃ ಕರ್ಮಾಣ್ಯವಿಜಿತೇಂದ್ರಿಯಃ ।
ದುಃಖೋದರ್ಕಾಣಿ ಸಂಪಶ್ಯನ್ ರಜೋವೇಗವಿಮೋಹಿತಃ ॥ ೧೧ ॥

ರಜಸ್ತಮೋಭ್ಯಾಂ ಯದಪಿ ವಿದ್ವಾನ್ ವಿಕ್ಷಿಪ್ತಧೀಃ ಪುನಃ ।
ಅತಂದ್ರಿತೋ ಮನೋ ಯುಂಜನ್ ದೋಷದೃಷ್ಟಿರ್ನ ಸಜ್ಜತೇ ॥ ೧೨ ॥

ಅಪ್ರಮತ್ತೋಽನುಯುಂಜೀತ ಮನೋ ಮಯ್ಯರ್ಪಯನ್ ಶನೈಃ ।
ಅನಿರ್ವಿಣ್ಣೋ ಯಥಾಕಾಲಂ ಜಿತಶ್ವಾಸೋ ಜಿತಾಸನಃ ॥ ೧೩ ॥

ಏತಾವಾನ್ ಯೋಗ ಆದಿಷ್ಟೋ ಮಚ್ಛಿಷ್ಯೈಃ ಸನಕಾದಿಭಿಃ ।
ಸರ್ವತೋ ಮನ ಆಕೃಷ್ಯ ಮಯ್ಯದ್ಧಾಽಽವೇಶ್ಯತೇ ಯಥಾ ॥ ೧೪ ॥

ಭಗವಾನ್ ಶ್ರೀಕೃಷ್ಣನು ಹೇಳುತ್ತಾನೆ – ಪ್ರಿಯ ಉದ್ಧವನೇ! ಅಜ್ಞಾನಿಗಳು ತಮ್ಮ ಹೃದಯದಲ್ಲಿ 'ನಾನು-ನನ್ನದು' ಈ ಮಿಥ್ಯಾ ಅಭಿನಿವೇಶ (ಅಭಿಮಾನ) ತಳೆದಿರುತ್ತಾರೆ. ಇದೇ ಇವರ ದುಃಖದ ಕಾರಣವಾಗಿದೆ. ವಾಸ್ತವವಾಗಿ ಮನಸ್ಸು ಸ್ವರೂಪತಃ ಸತ್ತ್ವಗುಣ ವಿಶಿಷ್ಟವಾಗಿದೆ. ಆದ್ದರಿಂದ ಸ್ವರೂಪತಃ ಶುದ್ಧವಾಗಿದ್ದರೂ ಅಹಂತೆ, ಮಮತೆಯ ಕಾರಣ ಅದನ್ನು ಘೋರ ರಜೋಗುಣವು ಆವರಿಸಿ ಬಿಡುತ್ತದೆ. ॥ ೯ ॥ ಮತ್ತೆ ರಜೋಗುಣದ ಮೂಲಕ ಆವೃತವಾದ ಮನಸ್ಸು ಅನೇಕ ರೀತಿಯ ಸಂಕಲ್ಪ-ವಿಕಲ್ಪಗಳನ್ನು ಮಾಡತೊಡಗುತ್ತದೆ. ನಿರಂತರ ಆ ಗುಣಗಳದ್ದೇ ಚಿಂತನೆ ಆಗುತ್ತದೆ. ಈ ಪ್ರಕಾರ ದೂಷಿತ ಬುದ್ಧಿಯುಳ್ಳವನು ತನ್ನ ಇಂದ್ರಿಯಗಳ ಮೇಲಿನ ಹತೋಟಿಯನ್ನು ಕಳೆದುಕೊಳ್ಳುತ್ತಾನೆ. ಕಾಮನೆಗಳಿಗೆ ವಶೀಭೂತನಾಗಿ, ರಜೋಗುಣದ ವೇಗದಿಂದ ಮೋಹಿತನಾದವನು ಪರಿಣಾಮದಲ್ಲಿ ದುಃಖವೇ-ದುಃಖವಿರುವ ಕರ್ಮಗಳಲ್ಲಿ ಸಿಕ್ಕಿಕೊಳ್ಳುತ್ತಾನೆ. ॥ ೧೦-೧೧ ॥ ವಿದ್ವಾಂಸರ ಬುದ್ಧಿಯೂ ರಜೋಗುಣ, ತಮೋಗುಣಗಳಿಂದ ವಿಕ್ಷಿಪ್ತವಾಗುತ್ತದೆ. ಆದರೆ ಅವನು ಎಚ್ಚರಿಕೆಯಿಂದ ಮನಸ್ಸನ್ನು ಪರಮಾತ್ಮನಲ್ಲಿ ತೊಡಗಿಸಿ, ಆ ಕರ್ಮಗಳ ಕುರಿತು ದೋಷದೃಷ್ಟಿಯನ್ನಿಟ್ಟು ಅವುಗಳಲ್ಲಿ ಆಸಕ್ತನಾಗುವುದಿಲ್ಲ. ॥ ೧೨ ॥ ಆದ್ದರಿಂದ ಎಲೈ ಉದ್ಧವಾ! ಶ್ರೇಯಸ್ಸನ್ನು ಬಯಸುವವನು ಎಚ್ಚರವಾಗಿರಬೇಕು, ಕ್ರಮಾನುಸಾರ ಅಭ್ಯಾಸದ ಮೂಲಕ ಮನಸ್ಸನ್ನು ನನ್ನಲ್ಲಿ ತೊಡಗಿಸಬೇಕು. ಸಾಧನೆಯಲ್ಲಿ ಬೇಸರಿಸಬಾರದು. ಸಾಧ್ಯವಾದಷ್ಟು ಪ್ರಯತ್ನ ಮಾಡುತ್ತಾ ಇರಬೇಕು. ಪ್ರಾಣ ಮತ್ತು ಆಸನಗಳ ಮೇಲೆ ಹತೋಟಿ ಸಾಧಿಸಬೇಕು. ಎಲ್ಲ ವಿಷಯಗಳಿಂದ ಮನಸ್ಸನ್ನು ಚೆನ್ನಾಗಿ ಸೆಳೆದುಕೊಂಡಾಗ ಆ ನಿರ್ವಿಷಯವಾದ ಮನಸ್ಸು ನನ್ನಲ್ಲಿ ದೃಢವಾಗಿ ಸ್ಥಿರವಾಗಿ ಹೋಗುತ್ತದೆ. ಈ ಯೋಗವನ್ನು ನಾನೇ ಬ್ರಹ್ಮದೇವನ ಸಾನ್ನಿಧ್ಯದಲ್ಲಿ ಸನಕಾದಿಗಳಿಗೆ ಹೇಳಿದ್ದೆ. ॥ ೧೩-೧೪ ॥

ಉದ್ಧವ ಉವಾಚ

ಯದಾ ತ್ವಂ ಸನಕಾದಿಭ್ಯೋ ಯೇನ ರೂಪೇಣ ಕೇಶವ ।
ಯೋಗಮಾದಿಷ್ಟವಾನೇತದ್ ರೂಪಮಿಚ್ಛಾಮಿ ವೇದಿತುಮ್ ॥ ೧೫ ॥

ಉದ್ಧವನು ಕೇಳಿದನು – ಕೇಶವಾ! ನೀನು ಈ ಯೋಗವನ್ನು ಸನಕಾದಿಗಳಿಗೆ ಎಂದು, ಯಾವ ವಿಧದಿಂದ ಉಪದೇಶಿಸಿದ್ದೆ ಅದನ್ನು ವಿವರವಾಗಿ ಕೇಳಲು ನಾನು ಬಯಸುತ್ತೇನೆ. ॥ ೧೫ ॥

ಶ್ರೀಭಗವಾನುವಾಚ

ಪುತ್ರಾ ಹಿರಣ್ಯಗರ್ಭಸ್ಯ ಮಾನಸಾಃ ಸನಕಾದಯಃ ।
ಪಪ್ರಚ್ಛುಃ ಪಿತರಂ ಸೂಕ್ಷ್ಮಾಂ ಯೋಗಸ್ಯೈಕಾಂತಿಕೀಂ ಗತಿಮ್ ॥ ೧೬ ॥

ಭಗವಾನ್ ಶ್ರೀಕೃಷ್ಣನು ಹೇಳಿದನು – ಪ್ರಿಯ ಉದ್ಧವಾ! ಸನಕಾದಿಗಳು ಬ್ರಹ್ಮನ ಮಾನಸಪುತ್ರರಾಗಿದ್ದಾರೆ. ಅವರು ಒಮ್ಮೆ ತಮ್ಮ ತಂದೆಯ ಬಳಿ ಯೋಗದ ಸೂಕ್ಷ್ಮ ಮತ್ತು ಅಂತಿಮ ಸೀಮೆಯ ಕುರಿತು ಪ್ರಶ್ನಿಸಿದರು. ಆ ಪ್ರಶ್ನೆ ಹೀಗಿತ್ತು – ॥ ೧೬ ॥

ಸನಕಾದಯ ಊಚುಃ

ಗುಣೇಷ್ವಾವಿಶತೇ ಚೇತೋ ಗುಣಾಶ್ಚೇತಸಿ ಚ ಪ್ರಭೋ ।
ಕಥಮನ್ಯೋನ್ಯಸಂತ್ಯಾಗೋ ಮುಮುಕ್ಷೋರತಿತಿತೀರ್ಷೋಃ ॥ ೧೭ ॥

ಶ್ರೀಭಗವಾನುವಾಚ

ಏವಂ ಪೃಷ್ಟೋ ಮಹಾದೇವಃ ಸ್ವಯಂಭೂರ್ಭೂತಭಾವನಃ ।
ಧ್ಯಾಯಮಾನಃ ಪ್ರಶ್ನಬೀಜಂ ನಾಭ್ಯಪದ್ಯತ ಕರ್ಮಧೀಃ ॥ ೧೮ ॥

ಸ ಮಾಮಚಿಂತಯದ್ದೇವಃ ಪ್ರಶ್ನಪಾರತಿತೀರ್ಷಯಾ ।
ತಸ್ಯಾಹಂ ಹಂಸರೂಪೇಣ ಸಕಾಶಮಗಮಂ ತದಾ ॥ ೧೯ ॥

ದೃಷ್ಟ್ವಾ ಮಾಂ ತ ಉಪವ್ರಜ್ಯ ಕೃತ್ವಾ ಪಾದಾಭಿವಂದನಮ್ ।
ಬ್ರಹ್ಮಾಣಮಗ್ರತಃ ಕೃತ್ವಾ ಪಪ್ರಚ್ಛುಃ ಕೋ ಭವಾನಿತಿ ॥ ೨೦ ॥

ಇತ್ಯಹಂ ಮುನಿಭಿಃ ಪೃಷ್ಟಸ್ತತ್ತ್ವಜಿಜ್ಞಾಸುಭಿಸ್ತದಾ ।
ಯದವೋಚಮಹಂ ತೇಭ್ಯಸ್ತದುದ್ಧವ ನಿಬೋಧ ಮೇ ॥ ೨೧ ॥

ವಸ್ತುನೋ ಯದ್ಯನಾನಾತ್ವಮಾತ್ಮನಃ ಪ್ರಶ್ನ ಈದೃಶಃ ।
ಕಥಂ ಘಟೇತ ವೋ ವಿಪ್ರಾ ವಕ್ತುರ್ವಾ ಮೇ ಕ ಆಶ್ರಯಃ ॥ ೨೨ ॥

ಪಂಚಾತ್ಮಕೇಷು ಭೂತೇಷು ಸಮಾನೇಷು ಚ ವಸ್ತುತಃ ।
ಕೋ ಭವಾನಿತಿ ವಃ ಪ್ರಶ್ನೋ ವಾಚಾರಂಭೋ ಹ್ಯನರ್ಥಕಃ ॥ ೨೩ ॥

ಮನಸಾ ವಚಸಾ ದೃಷ್ಟ್ಯಾ ಗೃಹ್ಯತೇಽನ್ಯೈರಪೀಂದ್ರಿಯೈಃ ।
ಅಹಮೇವ ನ ಮತ್ತೋಽನ್ಯದಿತಿ ಬುಧ್ಯಧ್ವಮಂಜಸಾ ॥ ೨೪ ॥

ಗುಣೇಷ್ವಾವಿಶತೇ ಚೇತೋ ಗುಣಾಶ್ಚೇತಸಿ ಚ ಪ್ರಜಾಃ ।
ಜೀವಸ್ಯ ದೇಹ ಉಭಯಂ ಗುಣಾಶ್ಚೇತೋ ಮದಾತ್ಮನಃ ॥ ೨೫ ॥

ಸನಕಾದಿಗಳು ಬ್ರಹ್ಮದೇವರಲ್ಲಿ ಕೇಳಿದರು – ಅಪ್ಪಾ! ಸ್ವಭಾವತಃ ಚಿತ್ತವು ವಿಷಯಗಳಲ್ಲಿ ಆಸಕ್ತವಾಗಿ ಅವುಗಳಲ್ಲಿ ಸೇರಿಕೊಳ್ಳುತ್ತದೆ ಮತ್ತು ಚಿಂತನದಿಂದ ಗುಣಗಳು ಚಿತ್ತದಲ್ಲಿ ಸೇರಿಕೊಂಡು ಬಿಡುತ್ತವೆ. ಹೀಗೆ ಗುಣಗಳು ಮತ್ತು ವಿಷಯಗಳು ಪರಸ್ಪರ ಒಂದರೊಳಗೊಂದು ಬೇರ್ಪಡಿಸುವುದು ಹೇಗೆ? ॥ ೧೭ ॥

ಭಗವಾನ್ ಶ್ರೀಕೃಷ್ಣನು ಹೇಳಿದನು – ಪ್ರಿಯ ಉದ್ಧವನೇ! ಸನಕಾದಿಗಳು ಲೋಕಪಿತಾಮಹ ದೇವಶಿರೋಮಣಿ ಭೂತಭಾವನ ಸ್ವಯಂಭೂ ಬ್ರಹ್ಮದೇವರ ಬಳಿ ಈ ರೀತಿಯಾಗಿ ಪ್ರಶ್ನಿಸಿದರು. ಆದರೆ ಬ್ರಹ್ಮದೇವರ ಬುದ್ಧಿಯು ಕರ್ಮಗಳಲ್ಲೇ ತೊಡಗಿದ್ದರಿಂದ ಅವರು ಆ ಪ್ರಶ್ನೆಯ ಬೀಜವನ್ನು ತಿಳಿಯದೆ ಹೋದರು ಮತ್ತು ಯಾವ ಉತ್ತರವನ್ನು ಕೊಡದಾದರು. ॥ ೧೮ ॥ ಪ್ರಶ್ನೆಯ ಅಭಿಪ್ರಾಯವನ್ನು ಅರಿಯಲು ಬ್ರಹ್ಮದೇವರು ನನ್ನನ್ನು ಸ್ಮರಿಸಿದರು. ಆಗ ನಾನು ಹಂಸರೂಪದಿಂದ ಅವರ ಮುಂದೆ ಪ್ರಕಟನಾದೆ. ॥ ೧೯ ॥ ಆಗ ಆ ಸನಕಾದಿಗಳು ನನ್ನನ್ನು ನೋಡಿ ಬ್ರಹ್ಮನನ್ನು ಮುಂದೆ ಮಾಡಿಕೊಂಡು ನನ್ನ ಬಳಿಗೆ ಬಂದು ನಮಸ್ಕರಿಸಿ "ನೀವು ಯಾರು?" ಎಂದು ಕೇಳತೊಡಗಿದರು – ಎಲೈ ಉದ್ಧವನೇ! ಆ ಸನಕಾದಿ ಮುನಿಗಳು ತತ್ತ್ವದ ವಿಷಯದಲ್ಲಿ ತಿಳಿಯಲೆಂದೇ ಬಂದಿದ್ದರು. ಆದ್ದರಿಂದ ನಾನು ಅವರಿಗೆ ಏನು ಹೇಳಿದೆನೋ ಅದನ್ನು ಕೇಳು – ॥ ೨೦-೨೧ ॥ ವಿಪ್ರೋತ್ತಮರೇ! ಆತ್ಮನ ವಿಷಯದಲ್ಲಿ ನಿಮ್ಮಗಳ ಈ ಪ್ರಶ್ನೆ ಇದ್ದರೆ, ಆತ್ಮನಾದರೋ ಒಂದೇ ಆಗಿದೆ. ನಿಮ್ಮಲ್ಲಿರುವ ಆತ್ಮನೇ ನನ್ನಲ್ಲಿಯೂ ಇದ್ದಾನೆ. ಆತ್ಮನಲ್ಲದೆ ಬೇರೆ ವಸ್ತುವು ಇಲ್ಲವೇ ಇಲ್ಲ. ಹೀಗಿರುವಾಗ ನಾನು ಉತ್ತರ ಕೊಡಲಿಕ್ಕಾಗಿ ಮಾತಾಡಿದರೆ ಯಾವುದರ ಆಧಾರವನ್ನು ಪಡೆದು ಮಾತಾಡಲೀ? ॥ ೨೨ ॥

ಪಂಚಭೂತಾತ್ಮಕ ತತ್ತ್ವವು ಎಲ್ಲ ಪ್ರಾಣಿಗಳಲ್ಲಿ ಸಮಾನವಾಗಿದೆ, ಆದ್ದರಿಂದ ನೀವು "ಕೋ ಭವಾನ್" ಎಂದು ಪ್ರಶ್ನಿಸಿದುದು ಕೇವಲ ವಾಣಿಯ ವ್ಯವಹಾರವಾಗಿದೆ. ತಾತ್ತ್ವಿಕ ಅರ್ಥದಿಂದ ರಹಿತವಾಗಿದೆ. ॥ ೨೩ ॥ ಮನಸ್ಸಿನಿಂದ, ವಾಣಿಯಿಂದ, ದೃಷ್ಟಿಯಿಂದ ಅಥವಾ ಬೇರೆ ಇಂದ್ರಿಯಗಳಿಂದ ಏನೆಲ್ಲ ನೋಡಲು ಕೇಳಲು, ಚಿಂತಿಸಲು ಬರುತ್ತದೋ, ಅದೆಲ್ಲ "ನಾನೇ ಆಗಿದ್ದೇನೆ, ನಾನಲ್ಲದೆ ಬೇರೆ ಏನೂ ಇಲ್ಲ" ಎಂದು ನೀವು ನಿಶ್ಚಯವಾಗಿ ಅರಿತುಕೊಳ್ಳಿರಿ. ॥ ೨೪ ॥ ಮಕ್ಕಳಿರಾ! ವಾಸ್ತವಿಕ ರೂಪದಿಂದ ಜೀವಿಯು ನನ್ನದೇ ಸ್ವರೂಪವಾಗಿದ್ದಾನೆ, ಆದರೆ ಅತೀವ ಆಸಕ್ತಿಯ ಕಾರಣ ಚಿತ್ತವು ಗುಣಗಳಲ್ಲಿ ಪ್ರವೇಶಿಸಿ, ಅವುಗಳ ಸತತ ಚಿಂತನೆಯಿಂದ ಆ ಗುಣಗಳು ಚಿತ್ತದಲ್ಲಿ ಆಳವಾಗಿ ಹೊಕ್ಕವು. ಹೀಗೆ ಈ ಗುಣಮಯ ಮತ್ತು ಚಿತ್ತಮಯ ಎರಡೂ ದೇಹಗಳು ಜೀವಿಯ ಉಪಾಧಿಯಾಗಿದೆ. (ಗುಣಗಳಿಂದ ಉಂಟಾದ ಸ್ಥೂಲಶರೀರ ಹಾಗೂ ಚಿತ್ತದಿಂದ ಉಂಟಾದ ಸೂಕ್ಷ್ಮಶರೀರವಾಗಿದೆ.) ಅನಾತ್ಮ ಪದಾರ್ಥಗಳಲ್ಲಿ ಆಸಕ್ತಿಯನ್ನಿರಿಸಿ ಜೀವಿಯು ಕರ್ಮಗಳಲ್ಲಿ ಸಿಕ್ಕಿಕೊಳ್ಳುವನು. ವಾಸನಾಮಯ ಕಾರಣಶರೀರವನ್ನು ನಿರ್ಮಿಸಿಕೊಳ್ಳುವನು. ಇದೆಲ್ಲವೂ ಅಜ್ಞಾನದ ಕಾರಣವೇ ಆಗಿದೆ. ॥ ೨೫ ॥

ಗುಣೇಷು ಚಾವಿಶಚ್ಚಿತ್ತಮಭೀಕ್ಷ್ಣಂ ಗುಣಸೇವಯಾ ।
ಗುಣಾಶ್ಚ ಚಿತ್ತಪ್ರಭವಾ ಮದ್ರೂಪ ಉಭಯಂ ತ್ಯಜೇತ್ ॥ ೨೬ ॥

ಜಾಗ್ರತ್ಸ್ವಪ್ನಃ ಸುಷುಪ್ತಂ ಚ ಗುಣತೋ ಬುದ್ಧಿವೃತ್ತಯಃ ।
ತಾಸಾಂ ವಿಲಕ್ಷಣೋ ಜೀವಃ ಸಾಕ್ಷಿತ್ವೇನ ವಿನಿಶ್ಚಿತಃ ॥ ೨೭ ॥

ಯರ್ಹಿ ಸಂಸೃತಿಬಂಧೋಽಯಮಾತ್ಮನೋ ಗುಣವೃತ್ತಿದಃ ।
ಮಯಿ ತುರ್ಯೇ ಸ್ಥಿತೋ ಜಹ್ಯಾತ್ತ್ಯಾಗಸ್ತದ್ಗುಣಚೇತಸಾಮ್ ॥ ೨೮ ॥

ಅಹಂಕಾರಕೃತಂ ಬಂಧಮಾತ್ಮನೋಽರ್ಥವಿಪರ್ಯಯಮ್ ।
ವಿದ್ವಾನ್ ನಿರ್ವಿದ್ಯ ಸಂಸಾರಚಿಂತಾಂ ತುರ್ಯೇ ಸ್ಥಿತಸ್ತ್ಯಜೇತ್ ॥ ೨೯ ॥

ಯಾವನ್ನಾನಾರ್ಥಧೀಃ ಪುಂಸೋ ನ ನಿವರ್ತೇತ ಯುಕ್ತಿಭಿಃ ।
ಜಾಗರ್ತ್ಯಪಿ ಸ್ವಪನ್ನಜ್ಞಃ ಸ್ವಪ್ನೇ ಜಾಗರಣಂ ಯಥಾ ॥ ೩೦ ॥

ಅಸತ್ತ್ವಾದಾತ್ಮನೋಽನ್ಯೇಷಾಂ ಭಾವಾನಾಂ ತತ್ಕೃತಾ ಭಿದಾ ।
ಗತಯೋ ಹೇತವಶ್ಚಾಸ್ಯ ಮೃಷಾ ಸ್ವಪ್ನದೃಶೋ ಯಥಾ ॥ ೩೧ ॥

ಯೋ ಜಾಗರೇ ಬಹಿರನುಕ್ಷಣಧರ್ಮಿಣೋಽರ್ಥಾನ್
ಭುಂಕ್ತೇ ಸಮಸ್ತಕರಣೈರ್ಹೃದಿ ತತ್ಸದೃಕ್ಷಾನ್ ।
ಸ್ವಪ್ನೇ ಸುಷುಪ್ತ ಉಪಸಂಹರತೇ ಸ ಏಕಃ
ಸ್ಮೃತ್ಯನ್ವಯಾತ್ತ್ರಿಗುಣವೃತ್ತಿದೃಗಿಂದ್ರಿಯೇಶಃ ॥ ೩೨ ॥

ಮೇಲಿಂದ-ಮೇಲೆ ವಿಷಯಗಳನ್ನು ಸೇವಿಸುತ್ತಾ ಇರುವುದರಿಂದ ಚಿತ್ತವು ಆ ವಿಷಯಗಳಲ್ಲಿ ಸೇರಿಕೊಳ್ಳುವುದು. ಈ ವಿಷಯಗಳು ಚಿತ್ತವು ಸಂಕಲ್ಪ-ವಿಕಲ್ಪ ಮಾಡುವುದರಿಂದಲೇ ಉತ್ಪನ್ನವಾಗುತ್ತವೆ. ಸಾಧಕನು ಮದ್ರೂಪನಾಗಿ ಚಿತ್ತವು ಅಲೆಯುವುದನ್ನು ಹಾಗೂ ವಿಷಯಗಳ ಚಿಂತನೆಯನ್ನು ಬಿಟ್ಟುಬಿಡಬೇಕು. ॥ ೨೬ ॥ ಜಾಗ್ರತ್, ಸ್ವಪ್ನ, ಸುಷುಪ್ತಿ ಇವು ಮೂರು ಕ್ರಮಶಃ ಸಾತ್ತ್ವಿಕ, ರಾಜಸ, ತಾಮಸ ಮೂರೂ ಗುಣಗಳ ಕಾರಣ ಬುದ್ಧಿಯದೇ ವೃತ್ತಿಗಳಾಗಿವೆ. ಜೀವಿಯು ಇವೆಲ್ಲವುಗಳ ಸಾಕ್ಷಿಯಾಗಿದ್ದಾನೆ. ಅವನು ಮೂರೂ ಅವಸ್ಥೆಗಳಿಂದ ಅತೀತನಾಗಿದ್ದಾನೆ. ಹೀಗೆ ಸಿದ್ಧಾಂತರೂಪದಿಂದ ತಿಳಿಯಲಾಗಿದೆ. ॥ ೨೭ ॥ ಈ ಚಿತ್ತವೇ ಸಂಕಲ್ಪ-ವಿಕಲ್ಪಗಳ ಮೂಲಕ ಅನೇಕ ವೃತ್ತಿಗಳನ್ನು ಉಂಟುಮಾಡಿ ಆತ್ಮನನ್ನು ಮೂರೂ ಗುಣಗಳಲ್ಲಿ ಅಲೆಯುವಂತೆ ಮಾಡುತ್ತದೆ. ಇದೇ ಆತ್ಮನ ಬಂಧನವಾಗಿದೆ. ಆದ್ದರಿಂದ ಸಾಧಕನು ತುರೀಯ ಅವಸ್ಥೆಯಲ್ಲಿ ಸ್ಥಿತನಾಗಿ ಗುಣ ಮತ್ತು ಚಿತ್ತ ಎರಡನ್ನೂ ತ್ಯಜಿಸಬೇಕು. ॥ ೨೮ ॥ ''ನಾನು-ನನ್ನದು'' ಹೀಗೆ ಅಹಂಕಾರ ಪಡುವುದರಿಂದಲೇ ಬಂಧನವಾಗುತ್ತದೆ. ಅದು ಆತ್ಮನನ್ನು ತಾತ್ತ್ವಿಕ ಅರ್ಥದಿಂದ ವಿಪರೀತವಾಗಿಸುತ್ತದೆ. ವಿದ್ವಾಂಸನು ಇವುಗಳಿಂದ ವಿರಕ್ತನಾಗಿ ಪ್ರಾಪಂಚಿಕ ಚಿಂತೆಯನ್ನು ಬಿಟ್ಟುಬಿಡಬೇಕು. ತನ್ನ ತುರೀಯ ಸ್ವರೂಪದಲ್ಲಿ ಸ್ಥಿತನಾಗಿರಬೇಕು. ॥ ೨೯ ॥ ಈ ನಾನಾತ್ವದ ಭ್ರಮೆಯನ್ನು ಯುಕ್ತಿಗಳ ಮೂಲಕ ಮನುಷ್ಯನು ನಾಶಮಾಡುವ ತನಕ ಅವನು ಎಚ್ಚರವಾಗಿದ್ದರೂ ಅಜ್ಞಾನ ನಿದ್ರೆಯಲ್ಲಿ ಮಲಗಿಯೇ ಇರುತ್ತಾನೆ. ಸ್ವಪ್ನಪ್ರಪಂಚದಲ್ಲಿ ಅಜ್ಞಾನಿಯು ಸುಖೀ-ದುಃಖಿಯಾಗುವಂತೆ, ಅವನು ಜಾಗ್ರತ್‌ನಲ್ಲಿಯೂ ಪ್ರಪಂಚದ ಅಸ್ತಿತ್ವವನ್ನು ಸ್ವೀಕರಿಸಿ ಸುಖೀ-ದುಃಖಿಯಾಗುತ್ತಾ ಇರುತ್ತಾನೆ. ॥ ೩೦ ॥ ನಿಜವಾಗಿ ಆತ್ಮನ ಹೊರತು ಬೇರೆ ಯಾವುದಕ್ಕೂ ಅಸ್ತಿತ್ವವಿಲ್ಲ. ಸ್ವಪ್ನನೋಡುವವನ ಎಲ್ಲ ಕ್ರಿಯೆಗಳು ಮಿಥ್ಯೆಯಾಗಿರುವಂತೆ, ಅಜ್ಞಾನಿಯ ಎಲ್ಲ ಕ್ರಿಯೆಗಳು – ಅವುಗಳ ಕಾರಣ ಮತ್ತು ಅವುಗಳಲ್ಲಿ ಭೇದಬುದ್ಧಿ – ಇವೆಲ್ಲವೂ ಮಿಥ್ಯೆಯೇ ಆಗಿದೆ. (ಜ್ಞಾನ ಉಂಟಾದಾಗಲೇ ಈ ನಾನಾತ್ವದ ಭ್ರಮೆಯು ಹೊರಟುಹೋಗುತ್ತದೆ.) ॥ ೩೧ ॥

ಬಾಹ್ಯವಿಷಯಗಳೆಲ್ಲ ಪ್ರತಿಕ್ಷಣ ಪರಿವರ್ತನಶೀಲವಾಗಿವೆ. ಇಂತಹ ನಾಶವುಳ್ಳ, ಕ್ಷಣಭಂಗುರವಾದ ವಿಷಯಗಳನ್ನು ಇಂದ್ರಿಯಗಳ ಮೂಲಕ ಜಾಗ್ರದವಸ್ಥೆಯಲ್ಲಿ ಉಪಭೋಗಿಸುವವನೇ ಸ್ವಪ್ನಾವಸ್ಥೆಯಲ್ಲಿಯೂ ಅವನ್ನು ಭೋಗಿಸುತ್ತಿರುತ್ತಾನೆ, ಆದರೆ ಗಾಢವಾದ ನಿದ್ರೆಯಲ್ಲಿ ಇವೆಲ್ಲವೂ ಅಳಿದುಹೋಗುತ್ತವೆ. ಹೀಗೆ ಈ ಮೂರೂ ಅವಸ್ಥೆಗಳನ್ನು ಅನುಭವಿಸುವ ಸಾಕ್ಷಿ ಚೇತನ ಆತ್ಮನು ಒಂದೇ ಆಗಿದ್ದಾನೆ. ಅವನು ಮೂರೂ ಅವಸ್ಥೆಗಳನ್ನು ಅರಿಯುವವನಾಗಿದ್ದಾನೆ. ಮೂರು ಗುಣಗಳ ವೃತ್ತಿಗಳನ್ನು ನೋಡುವವನಾಗಿದ್ದಾನೆ. ॥ ೩೨ ॥ ಈ ಮನಸ್ಸಿನ ಮೂರು ಅವಸ್ಥೆಗಳು ಗುಣಗಳ ಕಾರಣದಿಂದಲೇ ಉಂಟಾಗಿವೆ. ಅದು ನನ್ನ ಮಾಯೆಯ ಮೂಲಕ ನನ್ನಲ್ಲೇ ಕಲ್ಪಿತವಾಗಿವೆ. ಈ ಅವಸ್ಥೆಗಳು 'ನಾನು-ನನ್ನದು' ಎಂಬ ಭಾವನೆಯಿಂದಲೇ ಉಂಟಾಗಿವೆ ಹೀಗೆ ವಿಚಾರಗೈದು ಈ ಎಲ್ಲ

ಏವಂ ವಿಮೃಶ್ಯ ಗುಣತೋ ಮನಸಸ್ತ್ರ್ಯವಸ್ಥಾ
ಮನ್ಮಾಯಯಾ ಮಯಿ ಕೃತಾ ಇತಿ ನಿಶ್ಚಿತಾರ್ಥಾಃ ।
ಸಂಛಿದ್ಯ ಹಾರ್ದಮನುಮಾನಸದುಕ್ತಿತೀಕ್ಷ್ಣ-
ಜ್ಞಾನಾಸಿನಾ ಭಜತ ಮಾಖಿಲಸಂಶಯಾಧಿಮ್ ॥ ೩೩ ॥

ಈಕ್ಷೇತ ವಿಭ್ರಮಮಿದಂ ಮನಸೋ ವಿಲಾಸಂ
ದೃಷ್ಟಂ ವಿನಷ್ಟಮತಿಲೋಲಮಲಾತಚಕ್ರಮ್ ।
ವಿಜ್ಞಾನಮೇಕಮುರುಧೇವ ವಿಭಾತಿ ಮಾಯಾ
ಸ್ವಪ್ನಸ್ತ್ರಿಧಾ ಗುಣವಿಸರ್ಗಕೃತೋ ವಿಕಲ್ಪಃ ॥ ೩೪ ॥

ದೃಷ್ಟಿಂ ತತಃ ಪ್ರತಿನಿವರ್ತ್ಯ ನಿವೃತ್ತತೃಷ್ಣ-
ಸ್ತೂಷ್ಣೀಂ ಭವೇನ್ನಿಜಸುಖಾನುಭವೋ ನಿರೀಹಃ ।
ಸಂದೃಶ್ಯತೇ ಕ್ವ ಚ ಯದೀದಮವಸ್ತುಬುದ್ಧ್ಯಾ
ತ್ಯಕ್ತಂ ಭ್ರಮಾಯ ನ ಭವೇತ್ ಸ್ಮೃತಿರಾನಿಪಾತಾತ್ ॥ ೩೫ ॥

ದೇಹಂ ಚ ನಶ್ವರಮವಸ್ಥಿತಮುತ್ಥಿತಂ ವಾ
ಸಿದ್ಧೋ ನ ಪಶ್ಯತಿ ಯತೋಽಧ್ಯಗಮತ್ ಸ್ವರೂಪಮ್ ।
ದೈವಾದಪೇತಮುತ ದೈವವಶಾದುಪೇತಂ
ವಾಸೋ ಯಥಾ ಪರಿಕೃತಂ ಮದಿರಾಮದಾಂಧಃ ॥ ೩೬ ॥

ದೇಹೋಽಪಿ ದೈವವಶಗಃ ಖಲು ಕರ್ಮ ಯಾವತ್
ಸ್ವಾರಂಭಕಂ ಪ್ರತಿಸಮೀಕ್ಷತ ಏವ ಸಾಸುಃ ।
ತಂ ಸಪ್ರಪಂಚಮಧಿರೂಢಸಮಾಧಿಯೋಗಃ
ಸ್ವಾಪ್ನಂ ಪುನರ್ನ ಭಜತೇ ಪ್ರತಿಬುದ್ಧವಸ್ತುಃ ॥ ೩೭ ॥

ಸಂಶಯಗಳ ಆಧಾರಸ್ವರೂಪ ಅಹಂಭಾವವನ್ನು ಅನುಮಾನ ಪ್ರಮಾಣದ ಮೂಲಕ, ಸಂತರವಾಣಿಗಳ ಮೂಲಕ, ಹರಿತವಾದ ಜ್ಞಾನರೂಪೀ ಖಡ್ಗದಿಂದ ಚೆನ್ನಾಗಿ ಕತ್ತರಿಸಿ, ತನ್ನ ಹೃದಯದಲ್ಲೇ ಸ್ಥಿತನಾದ ಪರಮಾತ್ಮನಾದ ನನ್ನನ್ನು ಭಜಿಸಬೇಕು. ॥ ೩೩ ॥ ಕಂಡುಬರುವ ಈ ಪ್ರಪಂಚವೆಲ್ಲವೂ ಮನಸ್ಸಿನ ವಿಲಾಸಮಾತ್ರವಾಗಿದೆ, ಭ್ರಮೆಯಾಗಿದೆ, ಅತಿ ಚಂಚಲವಾಗಿದೆ. ಇದರ ಗತಿಯನ್ನು ಯಾರೂ ತಿಳಿಯಲಾರದಷ್ಟು ವೇಗವಾಗಿ ಇದು ಚಕ್ರದಂತೆ ಸುತ್ತುತ್ತಾ ಇದೆ. ಇದು ನಾಶವುಳ್ಳದ್ದು, ಕ್ಷಣಭಂಗುರವಾಗಿದೆ. ವಿಜ್ಞಾನ ಅರ್ಥಾತ್ ಏಕಮಾತ್ರ ಪರಮಾತ್ಮನೇ ಸಗುಣ- ನಿರಾಕಾರರೂಪದಿಂದ ಅನೇಕ ರೂಪಗಳಾಗಿ ಪ್ರಕಾಶಿಸುತ್ತಿರುವನು, ಆದರೆ ಅವನು ಕಂಡು ಬರುವುದಿಲ್ಲ, ಅವನ ಮಾಯೆಯೇ ಅನೇಕ ರೂಪಗಳನ್ನು ಧರಿಸಿ ಕೊಂಡು ಕಾಣುತ್ತಿದ್ದಾಳೆ. ಆ ಮಾಯೆಯು ಸ್ವಪ್ನದಂತೆ ಮಿಥ್ಯೆಯೇ ಆಗಿದೆ. ಮೂರೂ ಗುಣಗಳ ಸೃಷ್ಟಿಯ ಕಾರಣದಿಂದಲೇ ಈ ಭೇದ-ಭ್ರಮೆ ಉಂಟಾಗುತ್ತದೆ. ಅದು ಅಜ್ಞಾನದಿಂದಲೇ ಕಲ್ಪಿತ ವಾಗಿದೆ. ॥ ೩೪ ॥ ಸಾಧಕನು ತೃಷ್ಣಾರಹಿತನಾಗಿ ವಿಷಯಗಳಿಂದ ದೃಷ್ಟಿಯನ್ನು ತೊಡೆದು ಅಂತರ್ಮುಖಿ ಯಾಗಬೇಕು. ಪೂರ್ಣವಾಗಿ ಉಪರಮನಾಗಬೇಕು. ತನ್ನ ಆತ್ಮಾನಂದದಲ್ಲೇ ಮಗ್ನನಾಗಿದ್ದು ಯಾವುದೇ ಕಾಮನೆಯನ್ನು ಮಾಡಬಾರದು. ಏನಾದರೂ ಕಂಡುಬಂದರೆ ಇದು ನಿಜವಲ್ಲ, ಮಾಯೆಯಾಗಿದೆ, ಇದರಿಂದ ನನಗೇನು ಮಾಡುವುದಿದೆ? ಎಂದು ಅರಿತುಕೊಂಡು, ಅದರ ಕಡೆಯಿಂದ ಮುಖ ತಿರುಗಿಸಿಕೊಂಡರೆ ಭ್ರಮೆ ಆಗಲಾರದು. ಶಾರೀರಿಕ ವ್ಯವಹಾರದ ಸಂಸ್ಕಾರವಾದರೋ ಅವನ ಶರೀರವಿರುವ ತನಕ ಇದ್ದೀತು. ॥ ೩೫ ॥ ಸ್ವಸ್ವರೂಪವನ್ನು ಪಡೆದುಕೊಂಡ ಇಂತಹ ಸಿದ್ಧನಿಗೆ ಈ ನಶ್ವರದೇಹ ಕುಳಿತಿದೆ, ಅಥವಾ ನಿಂತಿದೆ ಎಂಬುದು ಅರಿವಿರುವುದಿಲ್ಲ, ಶರೀರದ ಮೇಲೆ ವಸ್ತ್ರವಿದೆ ಅಥವಾ ಇಲ್ಲ ಎಂಬುದೂ ತಿಳಿಯುವುದಿಲ್ಲ, ಮದಿರೆಯಿಂದ ಮದಮತ್ತನಾದ ವನಿಗೆ ತಮೋಗುಣದ ಪ್ರಭಾವದಿಂದ ಏನೂ ತಿಳಿಯುವುದಿಲ್ಲ. ಆದರೆ ಜ್ಞಾನಿಗಾದರೋ ತನ್ನ ತುರೀಯ ಶುದ್ಧಸ್ವರೂಪದಲ್ಲೇ ಸ್ಥಿತಿ ಇರುತ್ತದೆ. ಇದರಿಂದ ಅವನಿಗೆ ಜಗತ್ತಿನ ಯಾವ ಎಚ್ಚರವೂ ಇರುವುದಿಲ್ಲ. ॥ ೩೬ ॥

ದೇಹವು ಪ್ರಾರಬ್ಧಕ್ಕಧೀನವಾದ ಕಾರಣ ಶರೀರವನ್ನು ದೊರಕಿ ಸುವ ಕರ್ಮವು ಶೇಷವಾಗಿರುವ ತನಕ ಇವನು ಪ್ರಾಣಗಳ ಸಹಿತ ಬಿದ್ದುಹೋಗಲು ನಿರೀಕ್ಷಿಸುತ್ತಾನೆ. ಸಮಾಧಿಯಲ್ಲಿ ಅವನ ಸ್ಥಿತಿ ದೃಢವಾಗಿ ಇರುತ್ತದೆ, ಮತ್ತೆ ಅವನು ಪ್ರಪಂಚದಿಂದ ಅರ್ಥಾತ್ ಗುಣಗಳ ಕಾರ್ಯರೂಪೀ ದೇಹವನ್ನು ಸ್ವೀಕರಿಸುವುದಿಲ್ಲ, ಏಕೆಂದರೆ, ಅವನು ವಾಸ್ತವಿಕ ಪರಮಾತ್ಮತತ್ತ್ವವನ್ನು ತಿಳಿದುಕೊಂಡಿ ರುವನು. ಸ್ವಪ್ನದಿಂದ ಎಚ್ಚತ್ತವನು ಸ್ವಪ್ನದ ಮಾತನ್ನು ಸ್ವೀಕರಿಸ ದಂತೆ ಮತ್ತೆ ಅವನು ಈ ಅಜ್ಞಾನವನ್ನು ಸ್ವೀಕರಿಸುವುದಿಲ್ಲ, ಅವನ ಸ್ಥಿತಿ ಪರಮಾತ್ಮನಲ್ಲಿ ದೃಢವಾಗಿ ಆಗಿರುತ್ತದೆ. ॥ ೩೭ ॥

ಮಯ್ಯೈತದುಕ್ತಂ ವೋ ವಿಪ್ರಾ ಗುಹ್ಯಂ ಯತ್ಸಾಂಖ್ಯಯೋಗಯೋಃ ।
ಜಾನೀತ ಮಾಽಽಗತಂ ಯಜ್ಞಂ ಯುಷ್ಮದ್ಧರ್ಮವಿವಕ್ಷಯಾ
॥ ೩೮ ॥

ಎಲೈ ಬ್ರಾಹ್ಮಣರೇ! ನಾನು ಸಾಂಖ್ಯ ಮತ್ತು ಯೋಗದ ವಿಷಯದಲ್ಲಿ ಶಾಸ್ತ್ರಗಳಲ್ಲಿ ತಿಳಿಸಿದ ಮಾತನ್ನು ನಿಮ್ಮಗಳಿಗೆ ಹೇಳಿರುವೆನು. ನೀವುಗಳು ಮೋಕ್ಷಧರ್ಮದ ವಿಷಯದಲ್ಲಿ ಅರಿಯಲು ಬಯಸಿದ್ದೀರಿ. ಅದನ್ನು ನಾನು ನಿಮಗೆ ಹೇಳಿದೆ. ಯಜ್ಞಸ್ವರೂಪೀ ಭಗವಂತನಾದ ಸ್ವಯಂ ನಾನೇ ಹಂಸರೂಪದಿಂದ ನಿಮ್ಮಗಳಿಗೆ ಉಪದೇಶಿಸಲು ಬಂದಿರುವೆನು. ಹೀಗೆ ನೀವೆಲ್ಲ ತಿಳಿಯಿರಿ. ॥ ೩೮॥

ಅಹಂ ಯೋಗಸ್ಯ ಸಾಂಖ್ಯಸ್ಯ ಸತ್ಯಸ್ಯರ್ತಸ್ಯ ತೇಜಸಃ ।
ಪರಾಯಣಂ ದ್ವಿಜಶ್ರೇಷ್ಠಾಃ ಶ್ರಿಯಃ ಕೀರ್ತೇರ್ದಮಸ್ಯ ಚ
॥ ೩೯ ॥

ಎಲೈ ಶ್ರೇಷ್ಠ ಬ್ರಾಹ್ಮಣರಿರಾ! ಯೋಗ, ಸಾಂಖ್ಯ, ಸತ್ಯ, ಋತ, ತೇಜ, ಶ್ರೀ, ಕೀರ್ತಿ, ದಮ – ಇವೆಲ್ಲದರ ಆಶ್ರಯಸ್ಥಾನ ನಾನೇ ಆಗಿದ್ದೇನೆ. ॥ ೩೯ ॥

ಮಾಂ ಭಜಂತಿ ಗುಣಾಃ ಸರ್ವೇ ನಿರ್ಗುಣಂ ನಿರಪೇಕ್ಷಕಮ್ ।
ಸುಹೃದಂ ಪ್ರಿಯಮಾತ್ಮಾನಂ ಸಾಮ್ಯಾಸಂಗಾದಯೋಽಗುಣಾಃ
॥ ೪೦ ॥

ಸಮತೆ ಹಾಗೂ ಅನಾಸಕ್ತಿ ಮುಂತಾದ ಇರುವ ಶ್ರೇಷ್ಠ ಗುಣಗಳೆಲ್ಲವೂ ನಿರ್ಗುಣನೂ, ನಿರಪೇಕ್ಷನೂ, ಎಲ್ಲರ ಹೇತುರಹಿತ ಸುಹೃದನೂ, ಎಲ್ಲರ ಪ್ರಿಯನೂ, ಪರಮಾತ್ಮನಾದ ನನ್ನನ್ನು ಭಜಿಸುತ್ತವೆ. ಇವೆಲ್ಲ ಗುಣಗಳು ನನ್ನಲ್ಲೇ ನಿತ್ಯವಾಸವಾಗಿರುವುವು. ॥ ೪೦ ॥

ಇತಿ ಮೇ ಛಿನ್ನಸಂದೇಹಾ ಮುನಯಃ ಸನಕಾದಯಃ ।
ಸಭಾಜಯಿತ್ವಾ ಪರಯಾ ಭಕ್ತ್ಯಾಗೃಣತ ಸಂಸ್ತವೈಃ
॥ ೪೧ ॥

ಈ ರೀತಿ ಸನಕಾದಿ ಮುನಿಗಳ ಸಂದೇಹವನ್ನು ದೂರಗೊಳಿಸಿ ಅವರಿಗೆ ನಾನು ಉಪದೇಶ ಮಾಡಿದೆ. ಅವರು ಬಹಳ ಸಂತೋಷಗೊಂಡು ಪ್ರೇಮಮಗ್ನರಾಗಿ ಸ್ತುತಿಸತೊಡಗಿದರು. ॥ ೪೧ ॥

ತೈರಹಂ ಪೂಜಿತಃ ಸಮ್ಯಕ್ ಸಂಸ್ತುತಃ ಪರಮರ್ಷಿಭಿಃ ।
ಪ್ರತ್ಯೇಯಾಯ ಸ್ವಕಂ ಧಾಮ ಪಶ್ಯತಃ ಪರಮೇಷ್ಠಿನಃ
॥ ೪೨ ॥

ಈ ಪ್ರಕಾರ ಆ ಸನಕಾದಿ ಋಷಿಗಳು ಮಾಡಿದ ಸ್ತುತಿಯಿಂದ, ಪೂಜೆಯಿಂದ ನಾನು ಬಹಳ ಸಮ್ಮಾನಿತನಾಗಿ, ಬ್ರಹ್ಮದೇವರು, ಋಷಿಗಳು ನೋಡು-ನೋಡುತ್ತಿರುವಂತೆ ನಾನು ನನ್ನ ಧಾಮಕ್ಕೆ ಹೊರಟುಹೋದೆನು. ॥ ೪೨ ॥

ಹದಿಮೂರನೆಯ ಅಧ್ಯಾಯವು ಮುಗಿಯಿತು. ॥ ೧೩ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಏಕಾದಶಸ್ಕಂಧೇ ತ್ರಯೋದಶೋಽಧ್ಯಾಯಃ ॥ ೧೩ ॥

ಹದಿನಾಲ್ಕನೆಯ ಅಧ್ಯಾಯ

ಭಕ್ತಿಯೋಗದ ಮಹಿಮೆ ಹಾಗೂ ಧ್ಯಾನವಿಧಿಯ ವರ್ಣನೆ

ಉದ್ಧವ ಉವಾಚ

ವದಂತಿ ಕೃಷ್ಣ ಶ್ರೇಯಾಂಸಿ ಬಹೂನಿ ಬ್ರಹ್ಮವಾದಿನಃ ।
ತೇಷಾಂ ವಿಕಲ್ಪಪ್ರಾಧಾನ್ಯಮುತಾಹೋ ಏಕಮುಖ್ಯತಾ
॥ ೧ ॥

ಉದ್ಧವನು ಕೇಳಿದನು – ಶ್ರೀಕೃಷ್ಣಾ! ಬ್ರಹ್ಮವಾದಿ ಮಹಾತ್ಮರು ಆತ್ಮಕಲ್ಯಾಣಕ್ಕಾಗಿ ಧ್ಯಾನ, ಯೋಗ, ಭಕ್ತಿ, ಕರ್ಮ, ಸಾಂಖ್ಯ ಮುಂತಾದ ಅನೇಕ ಸಾಧನೆಗಳನ್ನು ಹೇಳಿರುವರು. ಇವೆಲ್ಲವೂ ಮುಖ್ಯವಾಗಿವೆಯೋ? ಅಥವಾ ಇವುಗಳಲ್ಲಿ ಯಾವುದಾದರೊಂದು ಮುಖ್ಯವಾಗಿದೆಯೇ? ॥ ೧ ॥

ಭವತೋದಾಹೃತಃ ಸ್ವಾಮಿನ್ ಭಕ್ತಿಯೋಗೋಽನಪೇಕ್ಷಿತಃ ।
ನಿರಸ್ಯ ಸರ್ವತಃ ಸಂಗಂ ಯೇನ ತ್ವಯ್ಯಾವಿಶೇನ್ಮನಃ
॥ ೨ ॥

ಸ್ವಾಮೀ! ನೀನು ಈಗ ಭಕ್ತಿಯೋಗವನ್ನು ನಿರಪೇಕ್ಷ ಮತ್ತು ಸ್ವತಂತ್ರ ಸಾಧನೆಯೆಂದು ತಿಳಿಸಿರುವಿ. ಭಕ್ತಿಯ ಮೂಲಕ ಎಲ್ಲ ರೀತಿಯ ಆಸಕ್ತಿ ಅಳಿದು ಹೋಗಿ, ಮನಸ್ಸು ನಿನ್ನಲ್ಲಿ ತೊಡಗಿ ತದ್ರೂಪವಾಗುತ್ತದೆ ಎಂದು ಹೇಳಿದ್ದೀಯೇ. ॥ ೨ ॥

ಶ್ರೀಭಗವಾನುವಾಚ

ಕಾಲೇನ ನಷ್ಟಾ ಪ್ರಲಯೇ ವಾಣೀಯಂ ವೇದಸಂಜ್ಞಿತಾ ।
ಮಯಾಽಽದೌ ಬ್ರಹ್ಮಣೇ ಪ್ರೋಕ್ತಾ ಧರ್ಮೋ ಯಸ್ಯಾಂ ಮದಾತ್ಮಕಃ ॥ ೩ ॥

ಭಗವಾನ್ ಶ್ರೀಕೃಷ್ಣನು ಹೇಳಿದನು – ಪ್ರಿಯ ಉದ್ಧವಾ! ಈ ವೇದವಾಣಿಯು ಕಾಲದ ಮೂಲಕ ಪ್ರಳಯದ ಸಮಯದಲ್ಲಿ ಲುಪ್ತವಾಗಿ ಹೋಗಿತ್ತು. ಮತ್ತೆ ಸೃಷ್ಟಿಯ ಸಮಯ ಬಂದಾಗ ನಾನೇ ನನ್ನ ಸಂಕಲ್ಪದಿಂದಲೇ ವೇದದ ಜ್ಞಾನವನ್ನು ಬ್ರಹ್ಮನಿಗೆ ಕರುಣಿಸಿದೆ. ವೇದದಲ್ಲಿ ನನ್ನ ಭಾಗವತ ಧರ್ಮದ್ದೇ ನಿರೂಪಣೆ ಮಾಡಲಾಗಿದೆ. ॥ ೩ ॥

ತೇನ ಪ್ರೋಕ್ತಾ ಚ ಪುತ್ರಾಯ ಮನವೇ ಪೂರ್ವಜಾಯ ಸಾ ।
ತತೋ ಭೃಗ್ವಾದಯೋಽಗೃಹ್ಣನ್ಸಪ್ತ ಬ್ರಹ್ಮಮಹರ್ಷಯಃ ॥ ೪ ॥

ತೇಭ್ಯಃ ಪಿತೃಭ್ಯಸ್ತತ್ಪುತ್ರಾ ದೇವದಾನವಗುಹ್ಯಕಾಃ ।
ಮನುಷ್ಯಾಃ ಸಿದ್ಧಗಂಧರ್ವಾಃ ಸವಿದ್ಯಾಧರಚಾರಣಾಃ ॥ ೫ ॥

ಕಿಂದೇವಾಃ ಕಿಂನರಾ ನಾಗಾ ರಕ್ಷಃಕಿಂಪುರುಷಾದಯಃ ।
ಬಹ್ವ್ಯಸ್ತೇಷಾಂ ಪ್ರಕೃತಯೋ ರಜಃಸತ್ತ್ವತಮೋಭುವಃ ॥ ೬ ॥

ಯಾಭಿರ್ಭೂತಾನಿ ಭಿದ್ಯಂತೇ ಭೂತಾನಾಂ ಮತಯಸ್ತಥಾ ।
ಯಥಾಪ್ರಕೃತಿ ಸರ್ವೇಷಾಂ ಚಿತ್ರಾ ವಾಚಃ ಸ್ರವಂತಿ ಹಿ ॥ ೭ ॥

ಏವಂ ಪ್ರಕೃತಿವೈಚಿತ್ರ್ಯಾದ್ಭಿದ್ಯಂತೇ ಮತಯೋ ನೃಣಾಮ್ ।
ಪಾರಂಪರ್ಯೇಣ ಕೇಷಾಂಚಿತ್ಪಾಖಂಡಮತಯೋಽಪರೇ ॥ ೮ ॥

ಮನ್ಮಾಯಾಮೋಹಿತಧಿಯಃ ಪುರುಷಾಃ ಪುರುಷರ್ಷಭ ।
ಶ್ರೇಯೋ ವದಂತ್ಯನೇಕಾಂತಂ ಯಥಾಕರ್ಮ ಯಥಾರುಚಿ ॥ ೯ ॥

ಧರ್ಮಮೇಕೇ ಯಶಶ್ಚಾನ್ಯೇ ಕಾಮಂ ಸತ್ಯಂ ದಮಂ ಶಮಮ್ ।
ಅನ್ಯೇ ವದಂತಿ ಸ್ವಾರ್ಥಂ ವಾ ಐಶ್ವರ್ಯಂ ತ್ಯಾಗಭೋಜನಮ್ ॥ ೧೦ ॥

ಕೇಚಿದ್ಯಜ್ಞ ತಪೋದಾನಂ ವ್ರತಾನಿ ನಿಯಮಾನ್ಯಮಾನ್ ।
ಆದ್ಯಂತವಂತ ಏವೈಷಾಂ ಲೋಕಾಃ ಕರ್ಮವಿನಿರ್ಮಿತಾಃ ।
ದುಃಖೋದರ್ಕಾಸ್ತಮೋನಿಷ್ಠಾಃ ಕ್ಷುದ್ರಾನಂದಾಃ ಶುಚಾರ್ಪಿತಾಃ ॥ ೧೧ ॥

ಮಯ್ಯರ್ಪಿತಾತ್ಮನಃ ಸಭ್ಯ ನಿರಪೇಕ್ಷಸ್ಯ ಸರ್ವತಃ ।
ಮಯಾಽಽತ್ಮನಾ ಸುಖಂ ಯತ್ತತ್ಕುತಃ ಸ್ಯಾದ್ವಿಷಯಾತ್ಮನಾಮ್ ॥ ೧೨ ॥

ಬ್ರಹ್ಮನು ತನ್ನ ಜೇಷ್ಠಪುತ್ರನಾದ ಸ್ವಾಯಂಭುವ ಮನುವಿಗೆ ಈ ವೇದದ ಜ್ಞಾನವನ್ನು ಕೊಟ್ಟನು. ಅವನಿಂದ ಮತ್ತೆ ಭೃಗುವೇ ಮುಂತಾದ ಸಪ್ತಬ್ರಹ್ಮರ್ಷಿಗಳು ಗ್ರಹಣಮಾಡಿದರು. ॥ ೪ ॥ ಆ ಸಪ್ತ ಮಹರ್ಷಿಗಳಿಂದ ಅವರ ಪುತ್ರರೂ ಹಾಗೂ ಬೇರೆ ದೇವತೆಗಳು, ದಾನವರು, ಗುಹ್ಯಕ, ಮನುಷ್ಯ, ಸಿದ್ಧ ಗಂಧರ್ವ, ವಿದ್ಯಾಧರ, ಚಾರಣ, ಕಿಂದೇವ[೧], ಕಿನ್ನರ[೨], ನಾಗ, ರಾಕ್ಷಸ, ಕಿಂಪುರುಷ[೩] ಮುಂತಾದ ಅನೇಕರು ವೇದದ ಜ್ಞಾನವನ್ನು ಪಡೆದರು. ಅವರೆಲ್ಲರೂ ಸಾತ್ತ್ವಿಕ, ರಾಜಸ, ತಾಮಸ ಹೀಗೆ ಬೇರೆ-ಬೇರೆ ಪ್ರಕೃತಿಯಿಂದ ಉತ್ಪನ್ನರಾದವರು. ॥ ೫-೬ ॥ ಅವರವರ ಪ್ರಕೃತಿ ಹಾಗೂ ಬುದ್ಧಿಯ ಭೇದದಿಂದ ಪರಸ್ಪರ ಕೆಲವು ರೀತಿಯ ಭೇದಗಳು ತಲೆದೋರಿದವು. ಅವೇ ಭೇದಗಳು ಪರಂಪರೆಯಿಂದ ನಡೆಯುತ್ತಾ ಬಂದವು. ಕೆಲವು ಪಾಖಂಡಿಗಳು ತಮ್ಮದೇ ಬೇರೆಯಾದ ಮತವನ್ನು ಕಲ್ಪಿಸಿಕೊಂಡರು. ॥ ೭ ॥ ಎಲೈ ಪುರುಷಶ್ರೇಷ್ಠ ಉದ್ಧವನೇ! ಅವರೆಲ್ಲರ ಬುದ್ಧಿಯು ನನ್ನ ಮಾಯೆಯ ಕಾರಣ ಮೋಹಗ್ರಸ್ತವಾದ್ದರಿಂದ ಎಂತಹ ಕರ್ಮದಲ್ಲಿ ಹೇಗೆ ರುಚಿ ಉಂಟಾಯಿತೋ ಅದನ್ನೇ ಶ್ರೇಯದ ಸಾಧನೆ ಎಂದು ಹೇಳತೊಡಗಿದರು. ಅವರಲ್ಲಿ ಕೆಲವರಾದರೋ ಕರ್ಮವನ್ನು ಹಾಗೂ ಕೆಲವರು ಕೀರ್ತಿಯನ್ನು ಶ್ರೇಯದ ಸಾಧನೆಯೆಂದು ಹೇಳಿದರೆ, ಬೇರೆಯವರು ಕಾಮ, ಸತ್ಯ, ದಮ, ಶಮ ಮುಂತಾದವುಗಳನ್ನು, ಹಾಗೆಯೇ ಕೆಲವರು ಸ್ವಾರ್ಥ ಹಾಗೂ ಐಶ್ವರ್ಯವನ್ನೇ ಶ್ರೇಯದ ಸಾಧನೆ ಎಂದು ಹೇಳುತ್ತಾರೆ. ಕೆಲವರು ಭೋಗಗಳ ತ್ಯಾಗವನ್ನೇ ಶ್ರೇಯದ ಸಾಧನೆ ಎಂದು ಹೇಳುತ್ತಾರೆ. ॥ ೮-೧೦ ॥ ಕೆಲವರು ಯಜ್ಞ, ದಾನ, ತಪಸ್ಸು ವ್ರತ, ನಿಯಮ, ಯಮ ಮುಂತಾದವುಗಳನ್ನು ಶ್ರೇಯದ ಸಾಧನೆಯೆಂದು ಹೇಳುತ್ತಾರೆ. ಪ್ರಿಯ ಉದ್ಧವನೇ! ಈ ಜನರು ಹೇಳಿದ ಕರ್ಮಗಳನುಸಾರ ಅವರಿಗೆ ದೊರೆಯುವ ಲೋಕಗಳೆಲ್ಲವೂ ಅವರ ಕರ್ಮಗಳ ಆಧಾರದಿಂದಲೇ ಇವೆ. ಅವುಗಳ ಸುಖವು ಬಹಳ ಅಲ್ಪವಾದುದು. ಸುಖದ ಸಮಯ ಮುಗಿಯುತ್ತಲೇ ಅವರು ಆ ಲೋಕದಿಂದ ತಳ್ಳಲ್ಪಡುತ್ತಾರೆ ಇದರಿಂದ ಶೋಕಗ್ರಸ್ತರಾಗಿ, ತಮೋಗುಣದಿಂದ ಮುಚ್ಚಿಹೋಗುತ್ತಾರೆ. ಪರಿಣಾಮವಾಗಿ ದುಃಖವೇ ಭೋಗಿಸಬೇಕಾಗುತ್ತದೆ. ॥ ೧೧ ॥

ಸಾಧು ಉದ್ಧವನೇ! ಪೂರ್ಣರೂಪದಿಂದ ತನ್ನನ್ನು ನನಗೆ ಅರ್ಪಿಸಿಕೊಂಡವನಿಗೆ, ಎಲ್ಲ ರೀತಿಯಿಂದ ನಿರಪೇಕ್ಷನಾದವನಿಗೆ, ನನ್ನಲ್ಲೇ ರಮಮಾಣನಾದವನಿಗೆ ಪ್ರಾಪ್ತವಾಗುವ ಸುಖವು ವಿಷಯೀ ಜೀವರಿಗೆ ಹೇಗೆ ದೊರೆಯಬಲ್ಲದು? ॥ ೧೨ ॥

[೧] ಶ್ರಮ ಮತ್ತು ಬೆವರೇ ಮುಂತಾದ ದುರ್ಗಂಧದಿಂದ ರಹಿತರಾದ ಕಾರಣ, ಅವರ ವಿಷಯದಲ್ಲಿ 'ಇವರು ದೇವತೆಗಳೋ, ಮನುಷ್ಯರೋ' ಹೀಗೆ ಸಂದೇಹ ಉಂಟಾಗುತ್ತದೆ. ಇವರು ದ್ವೀಪಾಂತರನಿವಾಸಿ ಮನುಷ್ಯರು.

[೨] ಮುಖ ಮತ್ತು ಶರೀರದ ಆಕೃತಿಯಿಂದ ಕೆಲ-ಕೆಲವರು ಮನುಷ್ಯರಂತಿರುವ ಪ್ರಾಣಿಗಳು.

[೩] ಕೆಲ-ಕೆಲವು ಪುರುಷರಂತೆ ಕಂಡುಬರುವ ವಾನರಾದಿಗಳು.

ಅಕಿಂಚನಸ್ಯ ದಾಂತಸ್ಯ ಶಾಂತಸ್ಯ ಸಮಚೇತಸಃ ।
ಮಯಾ ಸಂತುಷ್ಟಮನಸಃ ಸರ್ವಾಃ ಸುಖಮಯಾ ದಿಶಃ ॥ ೧೩ ॥

ನ ಪಾರಮೇಷ್ಠ್ಯಂ ನ ಮಹೇಂದ್ರಧಿಷ್ಣ್ಯಂ
ನ ಸಾರ್ವಭೌಮಂ ನ ರಸಾಧಿಪತ್ಯಮ್ ।
ನ ಯೋಗಸಿದ್ಧೀರಪುನರ್ಭವಂ ವಾ
ಮಯ್ಯರ್ಪಿತಾತ್ಮೇಚ್ಛತಿ ಮದ್ ವಿನಾನ್ಯತ್ ॥ ೧೪ ॥

ನ ತಥಾ ಮೇ ಪ್ರಿಯತಮ ಆತ್ಮಯೋನಿರ್ನ ಶಂಕರಃ ।
ನ ಚ ಸಂಕರ್ಷಣೋ ನ ಶ್ರೀರ್ನೈವಾತ್ಮಾ ಚ ಯಥಾ ಭವಾನ್ ॥ ೧೫ ॥

ನಿರಪೇಕ್ಷಂ ಮುನಿಂ ಶಾಂತಂ ನಿರ್ವೈರಂ ಸಮದರ್ಶನಮ್ ।
ಅನುವ್ರಜಾಮ್ಯಹಂ ನಿತ್ಯಂ ಪೂಯೇಯೇತ್ಯಂಘ್ರಿರೇಣುಭಿಃ ॥ ೧೬ ॥

ನಿಷ್ಕಿಂಚನಾ ಮಯ್ಯನುರಕ್ತಚೇತಸಃ
ಶಾಂತಾ ಮಹಾಂತೋಽಖಿಲಜೀವವತ್ಸಲಾಃ ।
ಕಾಮೈರನಾಲಬ್ಧಧಿಯೋ ಜುಷಂತಿ ಯತ್
ತನ್ನೈರಪೇಕ್ಷ್ಯಂ ನ ವಿದುಃ ಸುಖಂ ಮಮ ॥ ೧೭ ॥

ಬಾಧ್ಯಮಾನೋಽಪಿ ಮದ್ಭಕ್ತೋ ವಿಷಯೈರಜಿತೇಂದ್ರಿಯಃ ।
ಪ್ರಾಯಃ ಪ್ರಗಲ್ಭಯಾ ಭಕ್ತ್ಯಾ ವಿಷಯೈರ್ನಾಭಿಭೂಯತೇ ॥ ೧೮ ॥

ಯಥಾಗ್ನಿಃ ಸುಸಮೃದ್ಧಾರ್ಚಿಃ ಕರೋತ್ಯೇಧಾಂಸಿ ಭಸ್ಮಸಾತ್ ।
ತಥಾ ಮದ್ವಿಷಯಾ ಭಕ್ತಿರುದ್ಧವೈನಾಂಸಿ ಕೃತ್ಸ್ನಶಃ ॥ ೧೯ ॥

ನ ಸಾಧಯತಿ ಮಾಂ ಯೋಗೋ ನ ಸಾಂಖ್ಯಂ ಧರ್ಮ ಉದ್ಧವ ।
ನ ಸ್ವಾಧ್ಯಾಯಸ್ತಪಸ್ತ್ಯಾಗೋ ಯಥಾ ಭಕ್ತಿರ್ಮಮೋರ್ಜಿತಾ ॥ ೨೦ ॥

ಅಕಿಂಚನನೂ, ಇಂದ್ರಿಯ ವಿಜಯಿಯೂ, ಶಾಂತನೂ, ಸಮಚಿತ್ತನೂ, ನನ್ನಲ್ಲೇ ಸದಾಕಾಲ ಸಂತುಷ್ಟಿಯಿರುವವನೂ ಆದ ನನ್ನ ಭಕ್ತನಿಗಾಗಿ ಎಲ್ಲ ದಿಕ್ಕುಗಳು ಆನಂದದಿಂದ ತುಂಬಿರುತ್ತವೆ. ॥ ೧೩ ॥ ಇಂತಹ ನನ್ನ ಸಂತೋಷೀ ಭಕ್ತನು ಬ್ರಹ್ಮನ ಪದವಿಯನ್ನಾಗಲೀ, ಇಂದ್ರನ ಸ್ವರ್ಗದ ಅಧಿಪತ್ಯವನ್ನಾಗಲೀ, ಸಮಸ್ತ ಭೂಮಂಡಲದ ರಾಜ್ಯವೇ ದೊರಕಲೀ, ರಸಾತಲದ ಒಡೆತನವೇ ಇರಲಿ, ಇವಾವುದನ್ನೂ ಬಯಸುವುದಿಲ್ಲ. ಅವನಿಗೆ ಯೋಗ ಸಿದ್ಧಿಯ ಇಚ್ಛೆಯಾಗಲೀ, ಮೋಕ್ಷದ ಬಯಕೆಯಾಗಲಿ ಇರುವುದಿಲ್ಲ. ಅವನಾದರೋ ಪೂರ್ಣವಾಗಿ ನನ್ನಲ್ಲಿ ಸಮರ್ಪಿತನಾಗಿ ಹೋಗಿದ್ದಾನೆ. ಆದ್ದರಿಂದ ಅವನಿಗೆ ನಾನಲ್ಲದೆ ಬೇರೆ ಏನೂ ಬೇಕಾಗುವುದಿಲ್ಲ. ॥ ೧೪ ॥ ಉದ್ಧವಾ ! ನನಗೆ ನಿನ್ನಂತಹ ಪ್ರೇಮೀ ಭಕ್ತರು ಪ್ರಿಯತಮವಾದಷ್ಟು, ನನ್ನ ಪುತ್ರ ಬ್ರಹ್ಮಾ, ಆತ್ಮಾ ಶಂಕರ, ಸ್ವಂತ ಸಹೋದರ ಬಲರಾಮದೇವರು, ಅರ್ಧಾಂಗಿನಿಯಾದ ಲಕ್ಷ್ಮೀದೇವಿ ಮತ್ತು ನನ್ನ ಆತ್ಮವೂ ಕೂಡ ಪ್ರಿಯವಾಗಿಲ್ಲ. ॥ ೧೫॥ ಯಾರಿಗೆ ಯಾವುದರ ಅಪೇಕ್ಷೆಯೂ ಇಲ್ಲವೋ, ಜಗತ್ತಿನ ಚಿಂತನೆಯಿಂದ ಉಪರತನಾಗಿ ನನ್ನ ಮನನ-ಚಿಂತನೆಯಲ್ಲಿ ತಲ್ಲೀನನಾಗಿರುವನೋ ಮತ್ತು ರಾಗ- ದ್ವೇಷವಿರಿಸದೇ ಎಲ್ಲರ ಕುರಿತು ಸಮದೃಷ್ಟಿಯನ್ನಿರಿಸುವನೋ, ಅಂತಹ ಮಹಾತ್ಮನ ಹಿಂದೆ-ಹಿಂದೆ ನಾನು ಅವನ ಚರಣಗಳ ಧೂಳಿಯು ಹಾರಿ ನನ್ನ ಮೇಲೆ ಬೀಳಲಿ, ಇದರಿಂದ ನನ್ನೊಳಗೆ ಸ್ಥಿತವಿರುವ ಎಲ್ಲ ಲೋಕಗಳ ಸಹಿತ ನಾನು ಪವಿತ್ರನಾಗುವೆನು ಎಂದು ಯೋಚಿಸುತ್ತಾ ನಿರಂತರ ತಿರುಗಾಡುತ್ತಿರುತ್ತೇನೆ. ॥ ೧೬ ॥ ನನ್ನ ನಿಷ್ಕಿಂಚನ ಭಕ್ತನ ಚಿತ್ತವು ಸದಾಕಾಲ ನನ್ನಲ್ಲೇ ಅನುರಕ್ತವಾಗಿರುತ್ತದೆ. ಇಂತಹ ಆ ಮಹಾಪುರುಷರು ಬಹಳ ಶಾಂತಪ್ರಕೃತಿಯವರಾಗಿರುತ್ತಾರೆ. ಎಲ್ಲ ಜೀವಿಗಳ ಕುರಿತು ಅವರಲ್ಲಿ ಹೇತುರಹಿತ ಸೌಹಾರ್ದ್ರವಿರುತ್ತದೆ. ಕಾಮನೆಗಳಿಂದ ಅವರ ಬುದ್ಧಿಯು ದೂಷಿತವಾಗುವುದಿಲ್ಲ. ಈ ರೀತಿಯ ಸಂತರು ಅನುಭವಿಸುವ ಏಕಾಂತಿಕ ಸುಖವನ್ನು ಬೇರೆ ಯಾರೂ ತಿಳಿಯಲಾರರು. ॥ ೧೭ ॥

ಉದ್ಧವನೇ ! ನನ್ನ ಭಕ್ತನು ಜಿತೇಂದ್ರಿಯನಾಗದಿದ್ದರೂ ನನ್ನ ಪ್ರೀತಿಯು ಬೆಳೆಯುತ್ತಾ ಭಕ್ತಿಯ ಪ್ರಭಾವದಿಂದ ಅವನ ವಿಷಯ ವಾಸನೆ ದೂರವಾಗುತ್ತಾ ಹೋಗುತ್ತದೆ. ಎಂದಾದರೂ ಅವನನ್ನು ವಿಷಯಗಳು ಅದುಮಿದರೂ ಅವನು ಅವುಗಳಿಂದ ಬಾಧಿತನಾಗುವುದಿಲ್ಲ. (ಏಕೆಂದರೆ, ನಾನು ಅವನನ್ನು ರಕ್ಷಿಸುತ್ತೇನೆ.) ॥ ೧೮ ॥ ಪ್ರಚಂಡ ಅಗ್ನಿಯು ಎಲ್ಲ ಉರವಲನ್ನು ಭಸ್ಮಮಾಡಿ ಬಿಡುವಂತೆಯೇ ನನ್ನ ಭಕ್ತನೂ ಕೂಡ ಸಮಸ್ತ ಪಾಪರಾಶಿಗಳನ್ನು ಪೂರ್ಣವಾಗಿ ಸುಟ್ಟುಬಿಡುತ್ತಾನೆ. ॥ ೧೯ ॥ ಎಲೈ ಉದ್ಧವನೇ ! ಸರಳತೆಯಿಂದ ಬೆಳೆದಿರುವ ಭಕ್ತಿಯಮೂಲಕ ನಾನು ಸುಲಭವಾಗಿ ಪ್ರಾಪ್ತನಾಗುವಂತೆ, ಯೋಗ-ಸಾಧನೆ, ಸಾಂಖ್ಯ, ಧರ್ಮಾಚರಣೆ, ಸ್ವಾಧ್ಯಾಯ, ತಪಸ್ಸು, ತ್ಯಾಗ, ಇವುಗಳೆಲ್ಲವೂ ನನ್ನ ಪ್ರಾಪ್ತಿಯ ಸರಳ ಸಾಧನೆಗಳಲ್ಲ. ॥ ೨೦ ॥

ಭಕ್ತ್ಯಾಹಮೇಕಯಾ ಗ್ರಾಹ್ಯಃ ಶ್ರದ್ಧಯಾಽಽತ್ಮಾ ಪ್ರಿಯಃ ಸತಾಮ್ ।
ಭಕ್ತಿಃ ಪುನಾತಿ ಮನ್ನಿಷ್ಠಾ ಶ್ವಪಾಕಾನಪಿ ಸಂಭವಾತ್ ॥ ೨೧ ॥

ಧರ್ಮಃ ಸತ್ಯದಯೋಪೇತೋ ವಿದ್ಯಾ ವಾ ತಪಸಾನ್ವಿತಾ ।
ಮದ್ಭಕ್ತ್ಯಾಪೇತಮಾತ್ಮಾನಂ ನ ಸಮ್ಯಕ್ ಪ್ರಪುನಾತಿ ಹಿ ॥ ೨೨ ॥

ಕಥಂ ವಿನಾ ರೋಮಹರ್ಷಂ ದ್ರವತಾ ಚೇತಸಾ ವಿನಾ ।
ವಿನಾಽಽನಂದಾಶ್ರುಕಲಯಾ ಶುದ್ಧ್ಯೇದ್ಭಕ್ತ್ಯಾ ವಿನಾಽಽಶಯಃ ॥ ೨೩ ॥

ವಾಗ್ಗದ್ಗದಾ ದ್ರವತೇ ಯಸ್ಯ ಚಿತ್ತಂ
ರುದತ್ಯಭೀಕ್ಷ್ಣಂ ಹಸತಿ ಕ್ವಚಿಚ್ಚ ।
ವಿಲಜ್ಜ ಉದ್ಗಾಯತಿ ನೃತ್ಯತೇ ಚ
ಮದ್ಭಕ್ತಿಯುಕ್ತೋ ಭುವನಂ ಪುನಾತಿ ॥ ೨೪ ॥

ಯಥಾಗ್ನಿನಾ ಹೇಮಮಲಂ ಜಹಾತಿ
ಧ್ಮಾತಂ ಪುನಃ ಸ್ವಂ ಭಜತೇ ಚ ರೂಪಮ್ ।
ಆತ್ಮಾ ಚ ಕರ್ಮಾನುಶಯಂ ವಿಧೂಯ
ಮದ್ಭಕ್ತಿಯೋಗೇನ ಭಜತ್ಯಥೋ ಮಾಮ್ ॥ ೨೫ ॥

ಯಥಾ ಯಥಾಽಽತ್ಮಾ ಪರಿಮೃಜ್ಯತೇಽಸೌ
ಮತ್ಪುಣ್ಯಗಾಥಾಶ್ರವಣಾಭಿಧಾನೈಃ ।
ತಥಾ ತಥಾ ಪಶ್ಯತಿ ವಸ್ತು ಸೂಕ್ಷ್ಮಂ
ಚಕ್ಷುರ್ಯಥೈವಾಂಜನಸಂಪ್ರಯುಕ್ತಮ್ ॥ ೨೬ ॥

ವಿಷಯಾನ್ ಧ್ಯಾಯತಶ್ಚಿತ್ತಂ ವಿಷಯೇಷು ವಿಷಜ್ಜತೇ ।
ಮಾಮನುಸ್ಮರತಶ್ಚಿತ್ತಂ ಮಯ್ಯೇವ ಪ್ರವಿಲೀಯತೇ ॥ ೨೭ ॥

ತಸ್ಮಾದಸದಭಿಧ್ಯಾನಂ ಯಥಾ ಸ್ವಪ್ನಮನೋರಥಮ್ ।
ಹಿತ್ವಾ ಮಯಿ ಸಮಾಧತ್ಸ್ವ ಮನೋ ಮದ್ಭಾವಭಾವಿತಮ್ ॥ ೨೮ ॥

ಸ್ತ್ರೀಣಾಂ ಸ್ತ್ರೀಸಂಗಿನಾಂ ಸಂಗಂ ತ್ಯಕ್ತ್ವಾ ದೂರತ ಆತ್ಮವಾನ್ ।
ಕ್ಷೇಮೇ ವಿವಿಕ್ತ ಆಸೀನಶ್ಚಿಂತಯೇನ್ಮಾಮತಂದ್ರಿತಃ ॥ ೨೯ ॥

ನ ತಥಾಸ್ಯ ಭವೇತ್ ಕ್ಲೇಶೋ ಬಂಧಶ್ಚಾನ್ಯಪ್ರಸಂಗತಃ ।
ಯೋಷಿತ್ಸಂಗಾದ್ಯಥಾ ಪುಂಸೋ ಯಥಾತತ್ಸಂಗಿಸಂಗತಃ ॥ ೩೦ ॥

ನಾನು ಸಂತರಿಗೆ ಪ್ರಿಯನಾಗಿರುವೆನು, ಅವರ ಆತ್ಮನೇ ಆಗಿದ್ದೇನೆ. ಏಕಮಾತ್ರ ಶ್ರದ್ಧಾ-ಭಕ್ತಿಯಿಂದಲೇ ನಾನು ಅವರಿಗೆ ದೊರೆಯುತ್ತೇನೆ. ಒಂದು ವೇಳೆ ಜನ್ಮತಃ ಚಾಂಡಾಲನೇ ಆಗಿದ್ದರೂ ನನ್ನ ಕುರಿತು ಮಾಡಿದ ಭಕ್ತಿಯಿಂದ ಅವನು ಶುದ್ಧ, ಪವಿತ್ರನಾಗಿ ಹೋಗುತ್ತಾನೆ. ॥ ೨೧ ॥ ಯಾರಾದರೂ ಸತ್ಯ, ದಯೆಯಿಂದ ಕೂಡಿ ಧರ್ಮವನ್ನು ಪಾಲಿಸಿದ್ದರೂ, ಅಥವಾ ಯಾರಾದರೂ ತಪಸ್ಸಿನಿಂದೊಡಗೂಡಿ ವಿದ್ಯಾಭ್ಯಾಸ ಮಾಡಿದ್ದರೂ ಅವರು ನನ್ನ ಭಕ್ತಿಯಿಂದ ರಹಿತರಾಗಿದ್ದರೆ, ಇಂತಹ ಧರ್ಮ, ಸ್ವಾಧ್ಯಾಯಗಳು ಆ ವ್ಯಕ್ತಿಯನ್ನು ಪವಿತ್ರವಾಗಿಸಲಾರವು. ॥ ೨೨ ॥ ಭಕ್ತಿಯನ್ನು ಮಾಡುತ್ತಾ ಇರುವಾಗ ಶರೀರ ಪುಳಕಿತವಾಗುವುದಿಲ್ಲವೋ, ಚಿತ್ತವು ದ್ರವಿಸುವುದಿಲ್ಲವೋ, ಆನಂದದ ಕಣ್ಣೀರು ಒಸರುವುದಿಲ್ಲವೋ ಅಲ್ಲಿಯವರೆಗೆ ಅವನ ಅಂತಃಕರಣ ಪೂರ್ಣವಾಗಿ ಶುದ್ಧವಾಗಲಾರದು. ॥ ೨೩ ॥ ಆದರೆ ಭಕ್ತಿಯ ಪ್ರವಾಹ ಬೆಳೆದಾಗ ಅವನ ವಾಣಿಯು ಗದ್ಗದವಾಗುತ್ತದೆ, ಚಿತ್ತದ್ರವಿತವಾಗುತ್ತದೆ. ಕೆಲವೊಮ್ಮೆ (ಓ ಪ್ರಭುವೇ ನೀನೆಲ್ಲಿ ಹೋದೆ) ಎಂಬ ಉದ್ಗಾರವೆತ್ತುತ್ತಾ ಅಳುತ್ತಿದ್ದರೆ, ಕೆಲವೊಮ್ಮೆ ನಗುತ್ತಾನೆ. ನಾಚಿಕೆಬಿಟ್ಟು ಕೆಲವೊಮ್ಮೆ ಗಟ್ಟಿಯಾಗಿ ಹಾಡಿದರೆ, ಕೆಲವೊಮ್ಮೆ ನರ್ತಿಸುತ್ತಾನೆ. ಇಂತಹ ನನ್ನ ಭಕ್ತನು ಇಡೀ ಜಗತ್ತನ್ನೇ ಪವಿತ್ರವಾಗಿಸುತ್ತಾನೆ. ॥ ೨೪ ॥ ಚಿನ್ನವು ಬೆಂಕಿಯಲ್ಲಿ ಕಾಯಿಸಿದಾಗ ತನ್ನ ಎಲ್ಲ ಕೊಳೆಯನ್ನು ಬಿಟ್ಟು ಶುದ್ಧವಾಗಿ, ತನ್ನ ನಿಜರೂಪದಿಂದ ಹೊಳೆಯತೊಡಗುತ್ತದೆ. ಹಾಗೆಯೇ ಮನುಷ್ಯನು ನನ್ನ ಭಕ್ತಿಯನ್ನು ಮಾಡಿದಾಗ, ಆ ಭಕ್ತಿಯೋಗದ ಮೂಲಕ ತನ್ನ ಕರ್ಮವಾಸನೆಗಳನ್ನು ನಾಶಮಾಡಿ, ತನ್ನ ನಿಜಸ್ವರೂಪ ಪರಮಾತ್ಮನಾದ ನನ್ನನ್ನು ಪಡೆದು ಕೊಳ್ಳುತ್ತಾನೆ. ॥ ೨೫ ॥ ಉದ್ಧವನೇ ! ನನ್ನ ಪರಮಪಾವನ ಲೀಲಾ-ಕಥೆಗಳ ಶ್ರವಣ-ಕೀರ್ತನೆಯಿಂದ ಚಿತ್ತದ ಕೊಳೆಯು ತೊಳೆದು ಹೋಗುತ್ತಿರುವಂತೆ, ಕಣ್ಣಿಗೆ ಅಂಜನವನ್ನು ಹಾಕಿದಾಗ ಅದೃಶ್ಯವಸ್ತುವೂ ಕಾಣುವಂತೆ ಅವನಿಗೆ ಸೂಕ್ಷ್ಮವಸ್ತುವಿನ ವಾಸ್ತವಿಕ ತತ್ತ್ವದ ದರ್ಶನವು ಆಗತೊಡಗುತ್ತದೆ. ॥ ೨೬ ॥

ನಿರಂತರ ವಿಷಯಗಳ ಚಿಂತನೆ ಮಾಡುವ ಮನುಷ್ಯನ ಚಿತ್ತವು ವಿಷಯಗಳಲ್ಲಿ ಸಿಕ್ಕಿಹಾಕಿಕೊಳ್ಳುತ್ತದೆ ಮತ್ತು ನನ್ನನ್ನೇ ಸ್ಮರಿಸುವವನ ಚಿತ್ತವು ನನ್ನಲ್ಲೇ ತಲ್ಲೀನವಾಗುತ್ತದೆ. ॥ ೨೭ ॥ ಅಸತ್ ವಸ್ತುಗಳ ಚಿಂತನೆಯು ಸ್ವಪ್ನಮನೋರಥದಂತೆ ಮಿಥ್ಯೆಯೇ ಆಗಿದೆ. ಆದ್ದರಿಂದ ಅವುಗಳ ಚಿಂತನೆಯನ್ನು ಬಿಟ್ಟು ನನ್ನನ್ನೇ ಚಿಂತಿಸಬೇಕು. ನನ್ನಲ್ಲೇ ಮನಸ್ಸನ್ನು ತೊಡಗಿಸಬೇಕು. ॥ ೨೮ ॥ ಪ್ರಿಯ ಉದ್ಧವಾ ! ಸ್ತ್ರೀಯರ ಸಂಗದಿಂದ ಹಾಗೂ ಸ್ತ್ರೀ-ಸಂಗಿಗಳ ಸಂಗದಿಂದ ಕ್ಲೇಶಗಳ ಪರಂಪರೆಯೇ ಬೆಳೆಯುತ್ತಿರುವಂತೆ ಬೇರೆ ಯಾರ ಸಂಗದಿಂದಲೂ ಬೆಳೆಯುವುದಿಲ್ಲ, ಆದ್ದರಿಂದ ಸಾಧಕರು ತನ್ನ ಇಂದ್ರಿಯಗಳನ್ನು ವಶಪಡಿಸಿಕೊಂಡು, ಸ್ತ್ರೀಯರ ಮತ್ತು ಲಂಪಟರ ಸಂಗವನ್ನು ದೂರದಿಂದಲೇ ತ್ಯಜಿಸಬೇಕು. ಏಕಾಂತ ಪವಿತ್ರದೇಶದಲ್ಲಿ ಕುಳಿತುಕೊಂಡು ಎಚ್ಚರಿಕೆಯಿಂದ ನನ್ನನ್ನು ಚಿಂತಿಸಬೇಕು. ॥ ೨೯-೩೦ ॥

ಉದ್ಧವ ಉವಾಚ

ಯಥಾ ತ್ವಾಮರವಿಂದಾಕ್ಷ ಯಾದೃಶಂ ವಾ ಯದಾತ್ಮಕಮ್ ।
ಧ್ಯಾಯೇನ್ಮುಮುಕ್ಷುರೇತನ್ಮೇ ಧ್ಯಾನಂ ತ್ವಂ ವಕ್ತುಮರ್ಹಸಿ
॥ ೩೧ ॥

ಶ್ರೀಭಗವಾನುವಾಚ

ಸಮ ಆಸನ ಆಸೀನಃ ಸಮಕಾಯೋ ಯಥಾಸುಖಮ್ ।
ಹಸ್ತಾವುತ್ಸಂಗ ಆಧಾಯ ಸ್ವನಾಸಾಗ್ರಕೃತೇಕ್ಷಣಃ
॥ ೩೨ ॥

ಪ್ರಾಣಸ್ಯ ಶೋಧಯೇನ್ಮಾರ್ಗಂ ಪೂರಕುಂಭಕರೇಚಕೈಃ ।
ವಿಪರ್ಯಯೇಣಾಪಿ ಶನೈರಭ್ಯಸೇನ್ನಿರ್ಜಿತೇಂದ್ರಿಯಃ
॥ ೩೩ ॥

ಹೃದ್ಯವಿಚ್ಛಿನ್ನಮೋಂಕಾರಂ ಘಂಟಾನಾದಂ ಬಿಸೋರ್ಣವತ್ ।
ಪ್ರಾಣೇನೋದೀರ್ಯ ತತ್ರಾಥ ಪುನಃ ಸಂವೇಶಯೇತ್ ಸ್ವರಮ್
॥ ೩೪ ॥

ಏವಂ ಪ್ರಣವಸಂಯುಕ್ತಂ ಪ್ರಾಣಮೇವ ಸಮಭ್ಯಸೇತ್ ।
ದಶಕೃತ್ವಸ್ತ್ರಿಷವಣಂ ಮಾಸಾದರ್ವಾಗ್ಜಿತಾನಿಲಃ
॥ ೩೫ ॥

ಹೃತ್ಪುಂಡರೀಕಮಂತಃಸ್ಥಮೂರ್ಧ್ವನಾಲಮಧೋಮುಖಮ್ ।
ಧ್ಯಾತ್ವೋರ್ಧ್ವಮುಖಮುನ್ನಿದ್ರಮಷ್ಟಪತ್ರಂ ಸಕರ್ಣಿಕಮ್
॥ ೩೬ ॥

ಕರ್ಣಿಕಾಯಾಂ ನ್ಯಸೇತ್ಸೂರ್ಯಸೋಮಾಗ್ನೀನುತ್ತರೋತ್ತರಮ್ ।
ವಹ್ನಿ ಮಧ್ಯೇ ಸ್ಮರೇದ್ರೂಪಂ ಮಮೈತದ್ಧ್ಯಾನಮಂಗಲಮ್
॥ ೩೭ ॥

ಸಮಂ ಪ್ರಶಾಂತಂ ಸುಮುಖಂ ದೀರ್ಘಚಾರುಚತುರ್ಭುಜಮ್ ।
ಸುಚಾರುಸುಂದರಗ್ರೀವಂ ಸುಕಪೋಲಂ ಶುಚಿಸ್ಮಿತಮ್
॥ ೩೮ ॥

ಸಮಾನಕರ್ಣವಿನ್ಯಸ್ತಸ್ಫುರನ್ಮಕರಕುಂಡಲಮ್ ।
ಹೇಮಾಂಬರಂ ಘನಶ್ಯಾಮಂ ಶ್ರೀವತ್ಸಶ್ರೀನಿಕೇತನಮ್
॥ ೩೯ ॥

ಉದ್ಧವನು ಕೇಳಿದನು – ಕಮಲನಯನ ಶ್ಯಾಮಸುಂದರಾ! ಮುಮುಕ್ಷುವು ನಿನ್ನನ್ನು ಹೇಗೆ ಧ್ಯಾನಿಸಬೇಕು? ಯಾವ ರೂಪದಿಂದ ಹಾಗೂ ನಿನ್ನ ಯಾವ ಸ್ವರೂಪದ ಧ್ಯಾನ ಮಾಡಬೇಕು? ಅದನ್ನು ತಿಳಿಸುವ ಕೃಪೆಮಾಡು. ॥ ೩೧ ॥

ಭಗವಾನ್ ಶ್ರೀಕೃಷ್ಣನು ಹೇಳಿದನು – ಪ್ರಿಯ ಉದ್ಧವಾ! ತುಂಬಾ ಎತ್ತರವಲ್ಲದ, ತುಂಬಾ ತಗ್ಗಿಲ್ಲದ ಆಸನದಲ್ಲಿ ಶರೀರವನ್ನು ನೆಟ್ಟಗೆ ಇಟ್ಟುಕೊಂಡು ಕುಳಿತುಕೊಳ್ಳಬೇಕು. ಕೈಗಳನ್ನು ತನ್ನ ತೊಡೆಗಳಲ್ಲಿಟ್ಟುಕೊಂಡು, ದೃಷ್ಟಿಯು ನಾಸಿಕಾಗ್ರದಲ್ಲಿರಿಸಬೇಕು. ॥ ೩೨ ॥ ಅನಂತರ ಪೂರಕ, ಕುಂಭಕ, ರೇಚಕ ಮತ್ತು ರೇಚಕ, ಕುಂಭಕ, ಪೂರಕ ಹೀಗೆ ಪ್ರಾಣಾಯಾಮಗಳ ಮೂಲಕ ನಾಡೀ ಶೋಧನ ಮಾಡಬೇಕು. ಪ್ರಾಣಾಯಾಮದ ಅಭ್ಯಾಸವನ್ನು ಮೆಲ್ಲ-ಮೆಲ್ಲನೆ ಬೆಳೆಸಬೇಕು. ಜೊತೆ-ಜೊತೆಗೆ ಇಂದ್ರಿಯಗಳನ್ನು ಗೆಲ್ಲುವ ಅಭ್ಯಾಸವನ್ನೂ ಮಾಡಬೇಕು. ॥ ೩೩ ॥ ಹೃದಯದಲ್ಲಿ ಕಮಲನಾಳಗತ ತೆಳ್ಳನೆಯ ನೂಲಿನಂತೆ ಅವಿಚ್ಛಿನ್ನವಾಗಿ ಓಂಕಾರದ ಚಿಂತನೆ ಮಾಡಬೇಕು, ಪ್ರಾಣದ ಮೂಲಕ ಅದನ್ನು ಮೇಲಕ್ಕೆ ಒಯ್ದು ಅದರಲ್ಲಿ ಘಂಟಾನಾದದಂತೆ ಸ್ವರವನ್ನು ಸ್ಥಿರಗೊಳಿಸಬೇಕು. ಆ ಸ್ವರವೂ ತೈಲಧಾರೆಯಂತೆ ಅಖಂಡವಾಗಿರಬೇಕು. ಈ ಪ್ರಕಾರ ಪ್ರತಿದಿನ ಮೂರುಬಾರಿ ಹತ್ತತ್ತು ಬಾರಿ ಓಂಕಾರ ಸಹಿತ ಪ್ರಾಣಾಯಾಮವನ್ನು ಅಭ್ಯಸಿಸಬೇಕು. ಹೀಗೆ ಮಾಡುವುದರಿಂದ ಒಂದು ತಿಂಗಳೊಳಗೆ ಪ್ರಾಣವಾಯುವು ವಶವಾಗುತ್ತದೆ. ॥ ೩೪-೩೫ ॥ ಇದಾದ ಬಳಿಕ ಹೃದಯವು ಒಂದು ಕಮಲವಾಗಿದೆ, ಅದು ಶರೀರದ ಒಳಗೆ ಅದರ ತೊಟ್ಟು ಮೇಲಕ್ಕೆದ್ದು ಮುಖವು ಕೆಳಮುಖವಾಗಿರುವಂತೆ ಚಿಂತಿಸಬೇಕು. ಮತ್ತೆ ಅದನ್ನು ಮೇಲ್ಮುಖವಾಗಿಸಬೇಕು. ಅರಳಿದ, ಅದಕ್ಕೆ ಎಂಟು ಎಸಳುಗಳಿದ್ದು ಅದರ ಮಧ್ಯಭಾಗದಲ್ಲಿ ಹಳದಿಯಾದ ಅತ್ಯಂತ ಕೋಮಲವಾದ ಕರ್ಣಿಕೆ (ಪೀಠ) ಇದೆ. ॥ ೩೬ ॥ ಆ ಕರ್ಣಿಕೆಯಲ್ಲಿ ಕ್ರಮಶಃ ಸೂರ್ಯ, ಚಂದ್ರ ಮತ್ತು ಅಗ್ನಿ ಇವುಗಳನ್ನು ನ್ಯಾಸಮಾಡಬೇಕು. ಅನಂತರ ಅಗ್ನಿಯೊಳಗೆ ಧ್ಯಾನಕ್ಕಾಗಿ ಬಹಳ ಮಂಗಳಮಯವಾದ ನನ್ನ ಸ್ವರೂಪವನ್ನು ಸ್ಮರಿಸಬೇಕು. ॥ ೩೭ ॥

ಆ ಸ್ವರೂಪವು – ಎಲ್ಲ ಅವಯವಗಳು ಸಮಾನರೂಪದಿಂದಿವೆ. ಎಲ್ಲ ಅವಯವಗಳು ಸುಪುಷ್ಟವಾಗಿದ್ದು ಸುಂದರವಾಗಿವೆ. ರೋಮ-ರೋಮಗಳಲ್ಲಿ ಶಾಂತಿಯು ಒಸರುತ್ತಿದೆ. ಮುಖಕಮಲವು ಅತ್ಯಂತ ಪ್ರಫುಲ್ಲಿತವಾಗಿದ್ದು ಅಂದವಾಗಿದೆ. ಮೊಣಕಾಲು ಮುಟ್ಟುವ ದೀರ್ಘವಾದ ನಾಲ್ಕು ಮನೋಹರ ಭುಜಗಳಿವೆ. ತುಂಬಾ ಅಂದವಾದ ಕಂಠವು ಮನೋಹರವಾಗಿದೆ. ಮರಕತ ಮಣಿಯಂತೆ ಸ್ನಿಗ್ಧವಾದ ಗಲ್ಲಗಳಿವೆ. ಮುಖದಲ್ಲಿ ಮಂದಮಧುರ ಮುಗುಳ್ನಗೆಯು ಶೋಭಿಸುತ್ತಿದೆ. ಎರಡೂ ಕಿವಿಗಳು ಸಮಾನವಾಗಿದ್ದು ಅವುಗಳಲ್ಲಿ ಮಕರಾಕಾರದ ದಿವ್ಯ ಕುಂಡಲಗಳು ಓಲಾಡುತ್ತಿವೆ. ಮಳೆಗಾಲದ ಮೋಡದಂತೆ ಶ್ಯಾಮಲ ಶರೀರದ ಮೇಲೆ ಪೀತಾಂಬರವು ಕಂಗೊಳಿಸುತ್ತಿದೆ. ವಕ್ಷಃಸ್ಥಳದಲ್ಲಿ ಒಂದೆಡೆ ಶ್ರೀವತ್ಸಲಾಂಛನವಿದ್ದು ಮತ್ತೊಂದೆಡೆ ಶ್ರೀಲಕ್ಷ್ಮೀದೇವಿಯು ವಿರಾಜಮಾನಳಾಗಿದ್ದಾಳೆ. ಕೈಗಳಲ್ಲಿ ಶಂಖ, ಚಕ್ರ, ಗದೆ, ಪದ್ಮಗಳನ್ನು

ಶಂಖಚಕ್ರಗದಾಪದ್ಮವನಮಾಲಾವಿಭೂಷಿತಮ್ ।
ನೂಪುರೈರ್ವಿಲಸತ್ಪಾದಂ ಕೌಸ್ತುಭಪ್ರಭಯಾ ಯುತಮ್ ॥ ೪೦ ॥

ದ್ಯುಮತ್ಕಿರೀಟಕಟಕಕಟಿಸೂತ್ರಾಂಗದಾಯುತಮ್ ।
ಸರ್ವಾಂಗಸುಂದರಂ ಹೃದ್ಯಂ ಪ್ರಸಾದಸುಮುಖೇಕ್ಷಣಮ್ ।
ಸುಕುಮಾರಮಭಿಧ್ಯಾಯೇತ್ ಸರ್ವಾಂಗೇಷು ಮನೋ ದಧತ್ ॥ ೪೧ ॥

ಇಂದ್ರಿಯಾಣೀಂದ್ರಿಯಾರ್ಥೇಭ್ಯೋ ಮನಸಾಽಽಕೃಷ್ಯ ತನ್ಮನಃ ।
ಬುದ್ಧ್ಯಾ ಸಾರಥಿನಾ ಧೀರಃ ಪ್ರಣಯೇನ್ಮಯಿ ಸರ್ವತಃ ॥ ೪೨ ॥

ತತ್ಸರ್ವವ್ಯಾಪಕಂ ಚಿತ್ತಮಾಕೃಷ್ಯೈಕತ್ರ ಧಾರಯೇತ್ ।
ನಾನ್ಯಾನಿ ಚಿಂತಯೇದ್ಭೂಯಃ ಸುಸ್ಮಿತಂ ಭಾವಯೇನ್ಮುಖಮ್ ॥ ೪೩ ॥

ತತ್ರ ಲಬ್ಧಪದಂ ಚಿತ್ತಮಾಕೃಷ್ಯ ವ್ಯೋಮ್ನಿ ಧಾರಯೇತ್ ।
ತಚ್ಚ ತ್ಯಕ್ತ್ವಾ ಮದಾರೋಹೋ ನ ಕಿಂಚಿದಪಿ ಚಿಂತಯೇತ್ ॥ ೪೪ ॥

ಏವಂ ಸಮಾಹಿತಮತಿರ್ಮಾಮೇವಾತ್ಮಾನಮಾತ್ಮನಿ ।
ವಿಚಷ್ಟೇ ಮಯಿ ಸರ್ವಾತ್ಮನ್ ಜ್ಯೋತಿರ್ಜ್ಯೋತಿಷಿ ಸಂಯುತಮ್ ॥ ೪೫ ॥

ಧ್ಯಾನೇನೇತ್ಥಂ ಸುತೀವ್ರೇಣ ಯುಂಜತೋ ಯೋಗಿನೋ ಮನಃ ।
ಸಂಯಾಸ್ಯತ್ಯಾಶು ನಿರ್ವಾಣಂ ದ್ರವ್ಯಜ್ಞಾನಕ್ರಿಯಾಭ್ರಮಃ ॥ ೪೬ ॥

ಧರಿಸಿಕೊಂಡಿರುವವನು. ಕೊರಳಲ್ಲಿ ವನಮಾಲೆ ಶೋಭಿಸುತ್ತಿದೆ. ಚರಣಗಳಲ್ಲಿ ನೂಪುರಗಳಿದ್ದು ಕತ್ತಿನಲ್ಲಿ ಕೌಸ್ತುಭಮಣಿಯು ಹೊಳೆಯುತ್ತಿದೆ. ತಮ್ಮ ಸ್ಥಾನಗಳಲ್ಲಿ ಮಿಂಚುತ್ತಿರುವ ಕಿರೀಟ ಕಂಕಣಗಳು, ಭುಜಕೀರ್ತಿಗಳು, ಒಡ್ಯಾಣಗಳು ಶೋಭಾಯಮಾನವಾಗಿವೆ. ಎಲ್ಲವೂ ಹೃದಯಂಗಮವಾಗಿದೆ. ಅಂದವಾದ ಮುಖವು ಮತ್ತು ಕೃಪಾಪೂರ್ಣ ನೋಟದಿಂದ ನಾಲ್ಕುಕಡೆ ಕೃಪಾಪ್ರಸಾದವನ್ನು ವರ್ಷಿಸುತ್ತಿದೆ. ಉದ್ಧವನೇ! ನನ್ನ ಈ ಸುಕುಮಾರರೂಪವನ್ನು ಧ್ಯಾನಿಸಬೇಕು ಹಾಗೂ ತನ್ನ ಮನಸ್ಸನ್ನು ಒಂದೊಂದೇ ಅಂಗದಲ್ಲಿ ಸ್ಥಿರವಾಗಿಸಬೇಕು. ॥ ೩೮-೪೧ ॥

ಬುದ್ಧಿವಂತನಾದ ಮನುಷ್ಯನು ಮನಸ್ಸಿನ ಮೂಲಕ ಇಂದ್ರಿಯಗಳನ್ನು ಅವುಗಳ ವಿಷಯಗಳಿಂದ ಸೆಳೆದುಕೊಂಡು, ಆ ಮನಸ್ಸನ್ನು ಬುದ್ಧಿರೂಪೀ ಸಾರಥಿಯ ಸಹಾಯದಿಂದ ನನ್ನಲ್ಲೇ ತೊಡಗಿಸಬೇಕು. ॥ ೪೨ ॥ ಇಡೀ ಶರೀರದ ಧ್ಯಾನ ಉಂಟಾದಾಗ ತನ್ನ ಚಿತ್ತವನ್ನು ಸೆಳೆದುಕೊಂಡು ಒಂದೇ ಸ್ಥಾನದಲ್ಲಿ ಸ್ಥಿರಗೊಳಿಸಬೇಕು. ಬೇರೆ ಅಂಗಗಳ ಚಿಂತನೆಮಾಡದೆ ಕೇವಲ ಮಂದ-ಮಂದ ಮುಗುಳ್ನಗೆಯ ಪ್ರಭೆಯಿಂದ ಕೂಡಿದ ನನ್ನ ಮುಖಾರವಿಂದದಲ್ಲಿ ದೃಷ್ಟಿಯನ್ನು ನೆಲೆಗೊಳಿಸಬೇಕು. ॥ ೪೩ ॥ ಚಿತ್ತವು ಮುಖಾರವಿಂದದಲ್ಲಿ ನೆಲೆಗೊಂಡಾಗ ಅದನ್ನು ಅಲ್ಲಿಂದ ತೊಡೆದು ಆಕಾಶದಲ್ಲಿ ಸ್ಥಿರಗೊಳಿಸಬೇಕು. ಅನಂತರ ಆಕಾಶದ ಚಿಂತನೆಯನ್ನೂ ತ್ಯಜಿಸಿ ನನ್ನ ಸ್ವರೂಪದಲ್ಲೇ ಆರೂಢನಾಗಬೇಕು. ಮತ್ತೆ ನಾನಲ್ಲದೆ ಬೇರೆ ಯಾವ ವಸ್ತುವನ್ನೂ ಚಿಂತಿಸಬಾರದು. ॥ ೪೪ ॥ ಈ ಪ್ರಕಾರ ಚಿತ್ತವು ಒಂದೆಡೆ ಸೇರಿದಾಗ, ಒಂದು ಜ್ಯೋತಿಯು ಇನ್ನೊಂದು ಜ್ಯೋತಿಯನ್ನು ಸೇರಿ ಒಂದಾಗುವಂತೆ ತನ್ನಲ್ಲಿ ನನ್ನನ್ನು ಮತ್ತು ಸರ್ವಾತ್ಮನಾದ ನನ್ನಲ್ಲಿ ತನ್ನನ್ನು ಅನುಭವಿಸತೊಡಗುವನು. ಹೀಗೆ ಅವನು ನನ್ನಲ್ಲಿ ಏಕೀಭಾವದಿಂದ ಸ್ಥಿತನಾಗಿ ಹೋಗುತ್ತಾನೆ. ॥ ೪೫ ॥ ಈ ವಿಧವಾಗಿ ತೀವ್ರವಾದ ಧ್ಯಾನಯೋಗದ ಮೂಲಕ ನನ್ನಲ್ಲಿಯೇ ತನ್ನ ಚಿತ್ತವನ್ನು ತೊಡಗಿಸಿದ ಯೋಗಿಯಲ್ಲಿ ದ್ರವ್ಯ, ಜ್ಞಾನ, ಕ್ರಿಯೆ ಇವುಗಳ ಕುರಿತಾದ ನಾನಾತ್ವದ ಭ್ರಮೆ ಅಳಿದುಹೋಗುತ್ತದೆ. ಅರ್ಥಾತ್ – ಎಲ್ಲ ಪದಾರ್ಥಗಳ ರೂಪದಲ್ಲಿ ಓರ್ವ ಪರಮಾತ್ಮನ ಸತ್ತೆಯೇ ಕಂಡುಬರುತ್ತದೆ. ಅವನ ಜ್ಞಾನದಲ್ಲಿ ಏಕಮಾತ್ರ ಪರಮಾತ್ಮನೇ ಉಳಿದುಬಿಡುತ್ತಾನೆ. ಅವನ ಎಲ್ಲ ಕ್ರಿಯೆಗಳೂ ಪರಮಾತ್ಮನಿಗಾಗಿಯೇ ಆಗುತ್ತವೆ. ಹೀಗೆ ಅವನಿಗೆ ಎಲ್ಲೆಡೆ ಪರಮಾತ್ಮನದೇ ಸ್ವರೂಪ ಕಂಡುಬರಲು ತೊಡಗುತ್ತದೆ. ಬಳಿಕ ಅವನಿಗೆ ಆಗಲೇ ಮೋಕ್ಷದ ಪ್ರಾಪ್ತಿಯಾಗುತ್ತದೆ. ॥ ೪೬ ॥

ಹದಿನಾಲ್ಕನೆಯ ಅಧ್ಯಾಯವು ಮುಗಿಯಿತು. ॥ ೧೪ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಏಕಾದಶ ಸ್ಕಂಧೇ ಚತುರ್ದಶೋಽಧ್ಯಾಯಃ ॥ ೧೪ ॥

ಹದಿನೈದನೆಯ ಅಧ್ಯಾಯ

ಬೇರೆ-ಬೇರೆ ಸಿದ್ಧಿಗಳ ಹೆಸರುಗಳು ಮತ್ತು ಅವುಗಳ ಲಕ್ಷಣ

ಶ್ರೀಭಗವಾನುವಾಚ

ಜಿತೇಂದ್ರಿಯಸ್ಯ ಯುಕ್ತಸ್ಯ ಜಿತಶ್ವಾಸಸ್ಯ ಯೋಗಿನಃ ।
ಮಯಿ ಧಾರಯತಶ್ಚೇತ ಉಪತಿಷ್ಠಂತಿ ಸಿದ್ಧಯಃ
॥ ೧ ॥

ಉದ್ಧವ ಉವಾಚ

ಕಯಾ ಧಾರಣಯಾ ಕಾಸ್ವಿತ್ ಕಥಂಸ್ವಿತ್ ಸಿದ್ಧಿರಚ್ಯುತ ।
ಕತಿ ವಾ ಸಿದ್ಧಯೋ ಬ್ರೂಹಿ ಯೋಗಿನಾಂ ಸಿದ್ಧಿದೋ ಭವಾನ್
॥ ೨ ॥

ಶ್ರೀಭಗವಾನುವಾಚ

ಸಿದ್ಧಯೋಽಷ್ಟಾದಶ ಪ್ರೋಕ್ತಾ ಧಾರಣಾಯೋಗಪಾರಗೈಃ ।
ತಾಸಾಮಷ್ಟೌ ಮತ್ಪ್ರಧಾನಾ ದಶೈವ ಗುಣಹೇತವಃ
॥ ೩ ॥

ಅಣಿಮಾ ಮಹಿಮಾ ಮೂರ್ತೇರ್ಲಘಿಮಾ ಪ್ರಾಪ್ತಿರಿಂದ್ರಿಯೈಃ ।
ಪ್ರಾಕಾಮ್ಯಂ ಶ್ರುತದೃಷ್ಟೇಷು ಶಕ್ತಿಪ್ರೇರಣಮೀಶಿತಾ
॥ ೪ ॥

ಗುಣೇಷ್ವಸಂಗೋ ವಶಿತಾ ಯತ್ಕಾಮಸ್ತದವಸ್ಯತಿ ।
ಏತಾ ಮೇ ಸಿದ್ಧಯಃ ಸೌಮ್ಯ ಅಷ್ಟಾವೌತ್ಪತ್ತಿಕಾ ಮತಾಃ
॥ ೫ ॥

ಅನೂರ್ಮಿಮತ್ತ್ವಂ ದೇಹೇಽಸ್ಮಿನ್ ದೂರಶ್ರವಣದರ್ಶನಮ್ ।
ಮನೋಜವಃ ಕಾಮರೂಪಂ ಪರಕಾಯಪ್ರವೇಶನಮ್
॥ ೬ ॥

ಸ್ವಚ್ಛಂದಮೃತ್ಯುರ್ದೇವಾನಾಂ ಸಹಕ್ರೀಡಾನುದರ್ಶನಮ್ ।
ಯಥಾಸಂಕಲ್ಪಸಂಸಿದ್ಧಿರಾಜ್ಞಾಪ್ರತಿಹತಾಗತಿಃ
॥ ೭ ॥

ಭಗವಾನ್ ಶ್ರೀಕೃಷ್ಣನು ಹೇಳುತ್ತಾನೆ – ಪ್ರಿಯ ಉದ್ಧವನೇ! ಸಾಧಕನು ಇಂದ್ರಿಯ, ಪ್ರಾಣ, ಮನಸ್ಸನ್ನು ತನ್ನ ವಶಪಡಿಸಿಕೊಂಡು ತನ್ನ ಚಿತ್ತವನ್ನು ನನ್ನಲ್ಲಿ ತೊಡಗಿಸಿ, ನನ್ನ ಧಾರಣೆಯನ್ನು ಮಾಡತೊಡಗಿದಾಗ ಅವನ ಎದುರಿಗೆ ಅನೇಕ ಸಿದ್ಧಿಗಳು ಉಪಸ್ಥಿತವಾಗುತ್ತವೆ. ॥ ೧ ॥

ಉದ್ಧವನು ಕೇಳಿದನು – ಓ ಅಚ್ಯುತಾ! ಯಾವ ಧಾರಣೆಯಿಂದ ಯಾವ ವಿಧವಾದ ಸಿದ್ಧಿಯು ಪ್ರಾಪ್ತವಾಗುತ್ತದೆ ಮತ್ತು ಅವುಗಳ ಸಂಖ್ಯೆ ಎಷ್ಟು? ನೀನೇ ಯೋಗಿಗಳಿಗೆ ಸಿದ್ಧಿಗಳನ್ನು ಕೊಡುವವನು. ಆದ್ದರಿಂದ ಇವುಗಳನ್ನು ವರ್ಣಿಸುವವನಾಗು.॥೨॥

ಭಗವಾನ್ ಶ್ರೀಕೃಷ್ಣನು ಹೇಳಿದನು – ಪ್ರಿಯ ಉದ್ಧವಾ! ಧಾರಣಾಯೋಗದ ಪಾರಂಗತ ಯೋಗಿಗಳು ಹದಿನೆಂಟು ಪ್ರಕಾರದ ಸಿದ್ಧಿಗಳನ್ನು ತಿಳಿಸಿರುತ್ತಾರೆ. ಅವುಗಳಲ್ಲಿ ಎಂಟು ಸಿದ್ಧಿಗಳಾದರೋ ಪ್ರಧಾನವಾಗಿ ನನ್ನಲ್ಲೇ ಇರುತ್ತವೆ ಹಾಗೂ ಹತ್ತು ಸತ್ತ್ವಗುಣದ ವಿಕಾಸದಿಂದಲೂ ದೊರೆಯುತ್ತವೆ. ॥ ೩॥ ಅವುಗಳಲ್ಲಿ 'ಅಣಿಮಾ', 'ಮಹಿಮಾ', 'ಲಘಿಮಾ' ಈ ಮೂರು ಸಿದ್ಧಿಗಳಾದರೋ ಶರೀರದ್ದಾಗಿವೆ. ಬಯಸಿದೆಲ್ಲವೂ ದೊರೆಯುವುದು ಇದು 'ಪ್ರಾಪ್ತಿ' ಎಂಬ ಇಂದ್ರಿಯಗಳ ಒಂದು ಸಿದ್ಧಿಯಾಗಿದೆ. ಲೌಕಿಕ ಮತ್ತು ಪಾರಲೌಕಿಕ ಪದಾರ್ಥಗಳನ್ನು ಇಚ್ಛಾನುಸಾರ ಅನುಭವಿಸುವ ಸಿದ್ಧಿಯು 'ಪ್ರಾಕಾಮ್ಯ'ವಾಗಿದೆ. ಮಾಯೆ ಹಾಗೂ ಅದರ ಕಾರ್ಯಗಳನ್ನು ಇಚ್ಛಾನುಸಾರ ಸಂಚಾಲಿತಗೊಳಿಸುವುದು 'ಈಶಿತಾ' ಹೆಸರಿನ ಸಿದ್ಧಿಯಾಗಿದೆ. ॥ ೪ ॥ ವಿಷಯಗಳಲ್ಲಿದ್ದರೂ ಅವುಗಳಲ್ಲಿ ಆಸಕ್ತನಾಗದಿರುವುದು 'ವಶಿತಾ' ಆಗಿದೆ ಮತ್ತು ಯಾವು-ಯಾವುದನ್ನು ಕಾಮಿಸುವನೋ ಅದರ ಸೀಮೆಯತನಕ ಮುಟ್ಟುವುದೇ 'ಕಾಮಾವಸಾಯಿತಾ' ಎಂಬ ಎಂಟನೆಯ ಸಿದ್ಧಿಯಾಗಿದೆ. ಈ ಎಂಟೂ ಸಿದ್ಧಿಗಳು ನನ್ನಲ್ಲಿ ಸ್ವಭಾವತಃ ಇರುತ್ತವೆ. (ಇವನ್ನು ನಾನು ಯಾರಿಗೆ ಕೊಡುವೆನೋ ಅವನಿಗೆ ಅಂಶತಃ ಪ್ರಾಪ್ತವಾಗುತ್ತವೆ.) ॥ ೫ ॥ ಇವಲ್ಲದೆ ಬೇರೆ ಕೆಲವು ಸಿದ್ಧಿಗಳು ಇವೆ. ಶರೀರದಲ್ಲಿ ಹಸಿವು-ಬಾಯಾರಿಕೆ, ಕಾಮ-ಕ್ರೋಧ ಮುಂತಾದ ವೇಗಗಳು ಉಂಟಾಗದಿರುವುದು, ಬಹಳ ದೂರದ ವಸ್ತುವನ್ನು ನೋಡುವುದು, ತುಂಬಾ ದೂರದ ಮಾತನ್ನು ಕೇಳುವುದು, ಮನಸ್ಸಿನೊಂದಿಗೇ ಶರೀರದಿಂದ ಆ ಜಾಗಕ್ಕೆ ತಲುಪುವುದು, ಇಚ್ಛಿಸಿದ ರೂಪವನ್ನು ಧರಿಸುವುದು, ಬೇರೆಯವರ ಶರೀರದಲ್ಲಿ ಪ್ರವೇಶಿಸುವುದು, ಇಚ್ಛಿಸಿದಾಗ ಶರೀರವನ್ನು ಬಿಡುವುದು, ಅಪ್ಸರೆಯರೊಂದಿಗೆ ನಡೆಯುವ ದೇವತೆಗಳ ಕ್ರೀಡೆಗಳನ್ನು ದರ್ಶಿಸುವುದು, ಎಣಿಸಿದ ಸಂಕಲ್ಪದ ಸಿದ್ಧಿ, ಎಲ್ಲ ಕಡೆಗಳಲ್ಲಿ ಎಲ್ಲರ ಮೂಲಕ ವಿರೋಧವಿಲ್ಲದೆ ಆಜ್ಞಾಪಾಲನೆ – ಈ ಹತ್ತು ಸಿದ್ಧಿಗಳು ಸತ್ತ್ವಗುಣದ ವಿಶೇಷ ವಿಕಾಸದಿಂದ ಉಂಟಾಗುತ್ತವೆ. ॥ ೬-೭ ॥

ತ್ರಿಕಾಲಜ್ಞತ್ವಮದ್ವಂದ್ವಂ ಪರಚಿತ್ತಾದ್ಯಭಿಜ್ಞತಾ ।
ಅಗ್ನ್ಯರ್ಕಾಂಬುವಿಷಾದೀನಾಂ ಪ್ರತಿಷ್ಟಂಭೋಽಪರಾಜಯಃ ॥ ೮ ॥

ಏತಾಶ್ಚೋದ್ದೇಶತಃ ಪ್ರೋಕ್ತಾ ಯೋಗಧಾರಣಸಿದ್ಧಯಃ ।
ಯಯಾ ಧಾರಣಯಾ ಯಾ ಸ್ಯಾದ್ಯಥಾ ವಾ ಸ್ಯಾನ್ನಿಬೋಧ ಮೇ ॥ ೯ ॥

ಭೂತಸೂಕ್ಷ್ಮಾತ್ಮನಿ ಮಯಿ ತನ್ಮಾತ್ರಂ ಧಾರಯೇನ್ಮನಃ ।
ಅಣಿಮಾನಮವಾಪ್ನೋತಿ ತನ್ಮಾತ್ರೋಪಾಸಕೋ ಮಮ ॥ ೧೦ ॥

ಮಹತ್ಯಾತ್ಮನ್ಮಯಿ ಪರೇ ಯಥಾಸಂಸ್ಥಂ ಮನೋ ದಧತ್ ।
ಮಹಿಮಾನಮವಾಪ್ನೋತಿ ಭೂತಾನಾಂ ಚ ಪೃಥಕ್ ಪೃಥಕ್ ॥ ೧೧ ॥

ಪರಮಾಣುಮಯೇ ಚಿತ್ತಂ ಭೂತಾನಾಂ ಮಯಿ ರಂಜಯನ್ ।
ಕಾಲಸೂಕ್ಷ್ಮಾರ್ಥತಾಂ ಯೋಗೀ ಲಘಿಮಾನಮವಾಪ್ನುಯಾತ್ ॥ ೧೨ ॥

ಧಾರಯನ್ ಮಯ್ಯಹಂತತ್ತ್ವೇ ಮನೋ ವೈಕಾರಿಕೇಽಖಿಲಮ್ ।
ಸರ್ವೇಂದ್ರಿಯಾಣಾಮಾತ್ಮತ್ವಂ ಪ್ರಾಪ್ತಿಂ ಪ್ರಾಪ್ನೋತಿ ಮನ್ಮನಾಃ ॥ ೧೩ ॥

ಮಹತ್ಯಾತ್ಮನಿ ಯಃ ಸೂತ್ರೇ ಧಾರಯೇನ್ಮಯಿ ಮಾನಸಮ್ ।
ಪ್ರಾಕಾಮ್ಯಂ ಪಾರಮೇಷ್ಠ್ಯಂ ಮೇ ವಿಂದತೇಽವ್ಯಕ್ತಜನ್ಮನಃ ॥ ೧೪ ॥

ಭೂತ, ಭವಿಷ್ಯ, ವರ್ತಮಾನದ ಮಾತನ್ನು ತಿಳಿದುಕೊಳ್ಳುವುದು, ಶೀತ-ಉಷ್ಣ, ಸುಖ-ದುಃಖ, ರಾಗ-ದ್ವೇಷ ಮುಂತಾದ ದ್ವಂದ್ವಗಳಿಗೆ ವಶನಾಗದಿರುವುದು, ಬೇರೆಯವರ ಮನಸ್ಸಿನ ಮಾತನ್ನು ಅರಿತುಕೊಳ್ಳುವುದು, ಅಗ್ನಿ, ಸೂರ್ಯ, ಜಲ, ವಿಷ ಮುಂತಾದವುಗಳ ಶಕ್ತಿಯನ್ನು ಸ್ತಂಭಿತಗೊಳಿಸುವುದು, ಯಾರಿಂದಲೂ ಸೋಲದಿರುವುದು – ಈ ಐದು ಸಿದ್ಧಿಗಳೂ ಕೂಡ ಯೋಗಿಗಳಿಗೆ ದೊರೆಯುತ್ತವೆ. ॥ ೮ ॥ ಪ್ರಿಯ ಉದ್ಧವನೇ ! ಯೋಗ-ಧಾರಣೆ ಮಾಡುವುದರಿಂದ ಪ್ರಾಪ್ತವಾಗುವ ಸಿದ್ಧಿಗಳನ್ನು ನಾನು ನಾಮ ನಿರ್ದೇಶದೊಂದಿಗೆ ವರ್ಣಿಸಿದೆ. ಈಗ ಯಾವ ಧಾರಣೆಯಿಂದ ಯಾವ ಸಿದ್ಧಿಯು ಪ್ರಾಪ್ತವಾಗುತ್ತದೆ ಎಂಬುದನ್ನು ಹೇಳುತ್ತೇನೆ, ಕೇಳು. ॥ ೯ ॥*

ಪ್ರಿಯ ಉದ್ಧವಾ ! ಪಂಚಮಹಾಭೂತಗಳ ಸೂಕ್ಷ್ಮರೂಪವನ್ನು ತನ್ಮಾತ್ರೆ ಎಂದು ಹೇಳುತ್ತಾರೆ. ಅದು ನನ್ನದೇ ಶರೀರವಾಗಿದೆ. ನನ್ನ ಈ ಪಂಚತನ್ಮಾತ್ರೆಗಳಲ್ಲಿ ತನ್ನ ಮನಸ್ಸನ್ನು ಧಾರಣೆ ಮಾಡಿಕೊಂಡ ಸಾಧಕನಿಗೆ 'ಅಣಿಮಾ' ಎಂಬ ಸಿದ್ಧಿಯು ಪ್ರಾಪ್ತವಾಗುತ್ತದೆ. ॥ ೧೦ ॥ ಈ ಮಹತ್ತತ್ತ್ವದ ರೂಪದಲ್ಲಿ ನಾನೇ ಪ್ರಕಾಶಿತನಾಗಿದ್ದೇನೆ. ಹೇಗೆ ಸಾಧ್ಯವೋ ಹಾಗೆ ತನ್ನ ಮನಸ್ಸನ್ನು ನನ್ನ ಈ ಮಹತ್ತತ್ತ್ವರೂಪೀ ಪರಮಾತ್ಮನಲ್ಲಿ ಧಾರಣೆ ಮಾಡುವವನಿಗೆ 'ಮಹಿಮಾ' ಎಂಬ ಸಿದ್ಧಿಯು ಪ್ರಾಪ್ತವಾಗುತ್ತದೆ. ಹಾಗೆಯೇ ಒಂದೊಂದು ಮಹಾಭೂತದ ತನ್ಮಾತ್ರೆಯಲ್ಲಿ ಮನಸ್ಸನ್ನು ಧಾರಣೆಗೈದರೂ ಕೂಡ ಅವನಿಗೆ ಮಹಿಮೆ ಎಂಬ ಸಿದ್ಧಿಯು ಪ್ರಾಪ್ತವಾಗುತ್ತದೆ. ॥ ೧೧ ॥ ವಾಯುವೇ ಮುಂತಾದ ನಾಲ್ಕೂ ಭೂತಗಳೊಳಗೆ ಪರಮಾಣುರೂಪದಿಂದ ಆಕಾಶವು ಎಲ್ಲೆಡೆ ತುಂಬಿದೆ. ಹಾಗೆಯೇ ನಾನು ಸರ್ವತ್ರ ಪರಿಪೂರ್ಣನಾಗಿದ್ದೇನೆ. ಯೋಗಿಯು ತನ್ನ ಚಿತ್ತವನ್ನು ನನ್ನಲ್ಲಿ ತೊಡಗಿಸುತ್ತಾ ನನ್ನಲ್ಲಿ ಏಕತೆಯನ್ನು ಪಡೆದುಕೊಳ್ಳುವವನಿಗೆ 'ಲಘಿಮಾ' ಎಂಬ ಸಿದ್ಧಿಯು ಪ್ರಾಪ್ತವಾಗುತ್ತದೆ. ಕಾಲದ ಸೂಕ್ಷ್ಮಕ್ಕಿಂತ ಸೂಕ್ಷ್ಮಪರಮಾಣು ಆಗುವ ಸಾಮರ್ಥ್ಯವು ದೊರೆಯುತ್ತದೆ. ॥ ೧೨ ॥ ಮನಸ್ಸು ಎಲ್ಲ ಇಂದ್ರಿಯಗಳ ಒಡೆಯವಾಗಿದೆ. ಇದು ಅಹಂತತ್ತ್ವದ ಸತ್ತ್ವಗುಣರೂಪೀ ವಿಕಾರದಿಂದ ಉಂಟಾಗಿದೆ. ಯೋಗಿಯು ನನ್ನ ಸ್ವರೂಪಭೂತ ಸಾತ್ತ್ವಿಕ ಅಹಂಕಾರದಲ್ಲಿ ತನ್ನ ಮನಸ್ಸನ್ನು ಏಕಾಗ್ರಗೊಳಿಸಿದರೆ, ಅವನು ಎಲ್ಲ ಇಂದ್ರಿಯಗಳ ಒಡೆತನವನ್ನು ಪಡೆಯುತ್ತಾನೆ. ಹೀಗೆ ಮನಸ್ಸನ್ನು ನನ್ನಲ್ಲಿ ತೊಡಗಿಸುವ ಭಕ್ತನು 'ಪ್ರಾಪ್ತಿ' ಎಂಬ ಸಿದ್ಧಿಯನ್ನು ಪಡೆಯುತ್ತಾನೆ. ॥ ೧೩ ॥ ಅವ್ಯಕ್ತಜನ್ಮಾ ನನ್ನಿಂದಲೇ ಬ್ರಹ್ಮಾಂಡದ ನಿರ್ಮಾಣವಾಗಿದೆ. ಮಹತತ್ತ್ವದ ಅಭಿಮಾನಿಯಾದ ಸೂತ್ರಾತ್ಮಾ ಹಿರಣ್ಯಗರ್ಭದಲ್ಲಿ ಮನಸ್ಸನ್ನು ಧಾರಣೆಗೈದರೆ ಅವನಿಗೆ 'ಪ್ರಾಕಾಮ್ಯ' ಸಿದ್ಧಿಯು ಪ್ರಾಪ್ತವಾಗುತ್ತದೆ. ಅವನು ಇಡೀ ಬ್ರಹ್ಮಾಂಡದ ಒಡೆಯನಾಗುತ್ತಾನೆ. ಪಾರಮೇಷ್ಠ್ಯತ್ವವನ್ನು ಪಡೆದುಕೊಳ್ಳುತ್ತಾನೆ. ॥ ೧೪ ॥

* ಈ ಸಮಸ್ತ ವಿಶ್ವದಲ್ಲಿರುವುದೆಲ್ಲವೂ ಪರಮಾತ್ಮನ ಯಾವುದೋ ಒಂದು ಅಂಶದ ಅಭಿವ್ಯಕ್ತಿಯೇ ಆಗಿದೆ. ಇದರ ಹೊರಗೆ-ಒಳಗೆ ಎಲ್ಲೆಡೆ ಅವನೇ ವ್ಯಾಪ್ತನಾಗಿದ್ದಾನೆ. ಅವನು ಯಾವ ತತ್ತ್ವದ ಮೂಲಕ ಈ ವಿಶ್ವವನ್ನು ನಿರ್ಮಿಸಿರುವನೋ, ಆಯಾಯಾ ಸಮಷ್ಟಿ ತತ್ತ್ವದಲ್ಲಿ ಸಾಧಕನು ತನ್ನನ್ನು ಏಕಾಕಾರ ಮಾಡಿಕೊಂಡಾಗ, ಅದಕ್ಕನುಸಾರ ಆ ಶಕ್ತಿಯನ್ನು ಪಡೆದುಕೊಳ್ಳುವನು. ಇದಕ್ಕೆ ಸಿದ್ಧಿಗಳು ಎಂದು ಹೇಳುತ್ತಾರೆ. ಪರಮಾತ್ಮತತ್ತ್ವವನ್ನು ಪಡೆದ ಮಹಾಪುರುಷನಿಗಾಗಿ ಈ ಸಿದ್ಧಿಗಳ ಯಾವ ಮಹತ್ವವೂ ಇರುವುದಿಲ್ಲ.

ವಿಷ್ಣೌ ತ್ರ್ಯಧೀಶ್ವರೇ ಚಿತ್ತಂ ಧಾರಯೇತ್ಕಾಲವಿಗ್ರಹೇ ।
ಸ ಈಶಿತ್ವಮವಾಪ್ನೋತಿ ಕ್ಷೇತ್ರಕ್ಷೇತ್ರಜ್ಞಚೋದನಾಮ್
॥ ೧೫ ॥

ನಾರಾಯಣೇ ತುರೀಯಾಖ್ಯೇ ಭಗವಚ್ಛಬ್ದಶಬ್ದಿತೇ ।
ಮನೋ ಮಯ್ಯಾದಧದ್ಯೋಗೀ ಮದ್ಧರ್ಮಾ ವಶಿತಾಮಿಯಾತ್
॥ ೧೬ ॥

ನಿರ್ಗುಣೇ ಬ್ರಹ್ಮಣಿ ಮಯಿ ಧಾರಯನ್ ವಿಶದಂ ಮನಃ ।
ಪರಮಾನಂದಮಾಪ್ನೋತಿ ಯತ್ರ ಕಾಮೋಽವಸೀಯತೇ
॥ ೧೭ ॥

ಶ್ವೇತದ್ವೀಪಪತೌ ಚಿತ್ತಂ ಶುದ್ಧೇ ಧರ್ಮಮಯೇ ಮಯಿ ।
ಧಾರಯನ್ಶ್ವೇತತಾಂ ಯಾತಿ ಷಡೂರ್ಮಿರಹಿತೋ ನರಃ
॥ ೧೮ ॥

ಮಯ್ಯಾಕಾಶಾತ್ಮನಿ ಪ್ರಾಣೇ ಮನಸಾ ಘೋಷಮುದ್ವಹನ್ ।
ತತ್ರೋಪಲಬ್ಧಾಭೂತಾನಾಂ ಹಂಸೋ ವಾಚಃ ಶೃಣೋತ್ಯಸೌ
॥ ೧೯ ॥

ಚಕ್ಷುಸ್ತ್ವಷ್ಟರಿ ಸಂಯೋಜ್ಯ ತ್ವಷ್ಟಾರಮಪಿ ಚಕ್ಷುಷಿ ।
ಮಾಂ ತತ್ರ ಮನಸಾ ಧ್ಯಾಯನ್ವಿಶ್ವಂ ಪಶ್ಯತಿ ಸೂಕ್ಷ್ಮದೃಕ್
॥ ೨೦ ॥

ಮನೋ ಮಯಿ ಸುಸಂಯೋಜ್ಯ ದೇಹಂ ತದನು ವಾಯುನಾ ।
ಮದ್ಧಾರಣಾನುಭಾವೇನ ತತ್ರಾತ್ಮಾ ಯತ್ರ ವೈ ಮನಃ
॥ ೨೧ ॥

ತ್ರಿಲೋಕಗಳ ಆಧಾರನು ನಾನೇ ಆಗಿರುವೆನು. ತ್ರಿಗುಣಮಯ ಮಾಯೆಯ ಒಡೆಯ ನಾನೇ ಆಗಿದ್ದೇನೆ. ಸಮಸ್ತ ಬ್ರಹ್ಮಾಂಡವನ್ನು ನಾಶಗೊಳಿಸುವ ಸಮರ್ಥಕಾಲವೂ ನನ್ನದೇ ವಿಗ್ರಹವಾಗಿದೆ. ಕ್ಷೇತ್ರ (ಶರೀರ) ಮತ್ತು ಕ್ಷೇತ್ರಜ್ಞ (ಜೀವಾತ್ಮಾ) ಇವೆರಡರ ಪ್ರೇರಕ ಪುರುಷೋತ್ತಮನು ನಾನೇ ಆಗಿದ್ದೇನೆ. ನನ್ನ ಈ ವಿಷ್ಣುಸ್ವರೂಪದಲ್ಲಿ ಚಿತ್ತವನ್ನು ಧಾರಣೆಮಾಡಿದರೆ ಅವನಿಗೆ 'ಈಶಿತ್ವ' ಎಂಬ ಸಿದ್ಧಿಯು ಪ್ರಾಪ್ತವಾಗಿ ಹೋಗುತ್ತದೆ. ಅವನಿಗೂ ಕೂಡ ಮತ್ತೆ ನನ್ನಂತೆಯೇ ಜೀವಿಗಳನ್ನು ಇಚ್ಛಾನುಸಾರ ಪ್ರೇರಿತಗೊಳಿಸುವ ಸಾಮರ್ಥ್ಯ ದೊರೆಯುತ್ತದೆ. ॥ ೧೫ ॥ ''ಐಶ್ವರ್ಯಸ್ಯ ಸಮಗ್ರಸ್ಯ ಧರ್ಮಸ್ಯ ಯಶಸಃ ಶ್ರಿಯಃ ಜ್ಞಾನವೈರಾಗ್ಯಯೋಶ್ಚೈವ ಷಣ್ಣಾಂ ಭಗ ಇತೀರಣಾ ॥'' ಈ ಆರು ಐಶ್ವರ್ಯಗಳಿಂದ ಭಗವಂತನು ಕೂಡಿರುವನು. ಈ ಭಗವಂತನೇ ನಾರಾಯಣನಾಗಿರುವನು. ತುರೀಯ ಸ್ಥಿತಿಯಲ್ಲಿರುವ ನನ್ನ ಈ ನಾರಾಯಣ ಸ್ವರೂಪದಲ್ಲಿ ಮನಸ್ಸನ್ನು ಧಾರಣೆಗೈದು ಸ್ಥಿತನಾದ ಯೋಗಿಯು ಮದ್ಧರ್ಮಾ ಆಗಿಬಿಡುತ್ತಾನೆ. ಅರ್ಥಾತ್ – ನನ್ನ ಗುಣಗಳು ಅವನಲ್ಲಿ ಬಂದುಬಿಡುತ್ತವೆ. ಇಂತಹ ಯೋಗಿಯು 'ವಶಿತಾ' ಎಂಬ ಸಿದ್ಧಿಯನ್ನು ಪಡೆದುಕೊಳ್ಳುತ್ತಾನೆ. ॥ ೧೬ ॥ ಸ್ವಚ್ಛವಾದ ಮನಸ್ಸಿನಿಂದ ನಿರ್ಗುಣ ಬ್ರಹ್ಮವಾದ ನನ್ನಲ್ಲಿ ತೊಡಗಿರುವ ಯೋಗಿಯು ನನ್ನ ಆ ನಿರ್ಗುಣ ನಿರಾಕಾರ ರೂಪವನ್ನು ಉಪಾಸನೆಗೈದು ಪರಮಾನಂದವನ್ನು ಪಡೆಯುತ್ತಾನೆ. ಅವನಿಗೆ ಯಾವ ರೀತಿಯ ಕಾಮನೆಯೂ ಇರುವುದಿಲ್ಲ. ಇದನ್ನು 'ಕಾಮಾವಸಾಯಿತಾ' ಸಿದ್ಧಿ ಎಂದು ಹೇಳುತ್ತಾರೆ. ॥ ೧೭ ॥ ಶ್ವೇತದ್ವೀಪದ ಸ್ವಾಮಿ ನಾನೇ ಆಗಿದ್ದೇನೆ. ಧರ್ಮವು ನನ್ನದೇ ಸ್ವರೂಪವಾಗಿದೆ. ಇಂತಹ ನನ್ನ ವಿಶುದ್ಧ ಸ್ವರೂಪದಲ್ಲಿ ತನ್ನ ಮನಸ್ಸನ್ನು ಸ್ಥಿರಗೊಳಿಸುವವನು ಹಸಿವು, ತೃಷೆ, ಕಾಮ, ಕ್ರೋಧ, ಶೋಕ, ಮೋಹ ಇವುಗಳಿಂದ ಪೀಡಿತನಾಗುವುದಿಲ್ಲ. ಅವನಿಗೆ ಶುದ್ಧಸ್ವರೂಪ ಪರಮಾತ್ಮನಾದ ನನ್ನ ಪ್ರಾಪ್ತಿಯು ಉಂಟಾಗುತ್ತದೆ. ॥ ೧೮ ॥ ನಾನೇ ಸಮಷ್ಟಿ-ಪ್ರಾಣಸ್ವರೂಪೀ ಆಕಾಶಾತ್ಮಾ ಆಗಿದ್ದೇನೆ. ನನ್ನ ಈ ಸ್ವರೂಪದಲ್ಲಿ ಮನಸ್ಸಿನ ಮೂಲಕ ಅನಾಹತನಾದವನ್ನು ಚಿಂತಿಸುವವನು 'ದೂರಶ್ರವಣ' ಎಂಬ ಸಿದ್ಧಿಯಿಂದ ಸಂಪನ್ನನಾಗಿರುತ್ತಾನೆ. ಈ ಧಾರಣೆಯಿಂದ ಯೋಗಿಯು ಆಕಾಶದಲ್ಲಿ ಉಪಲಬ್ಧವಾಗುವ ವಿವಿಧ ಪ್ರಾಣಿಗಳ ಮಾತುಗಳನ್ನು ಕೇಳಿ-ತಿಳಿಯಬಲ್ಲನು. ॥ ೧೯ ॥ ಯಾವ ಯೋಗಿಯು ಕಣ್ಣುಗಳನ್ನು ಸೂರ್ಯನಲ್ಲಿ ಹಾಗೂ ಸೂರ್ಯನನ್ನು ಕಣ್ಣುಗಳಲ್ಲಿ ಸಂಯುಕ್ತಗೊಳಿಸುವನೋ ಮತ್ತು ಎರಡರ ಸಂಯೋಗದಲ್ಲಿ ಮನಸ್ಸಿನಲ್ಲೇ ನನ್ನನ್ನು ಧ್ಯಾನಿಸುವನೋ, ಅವನ ದೃಷ್ಟಿ ಸೂಕ್ಷ್ಮವಾಗಿ ಹೋಗುತ್ತದೆ. ಅವನಿಗೆ 'ದೂರದರ್ಶನ' ಎಂಬ ಸಿದ್ಧಿಯು ಪ್ರಾಪ್ತವಾಗುತ್ತದೆ. ಅವನು ಇಡೀ ಪ್ರಪಂಚವನ್ನು ನೋಡಬಲ್ಲನು. ॥ ೨೦ ॥ ಮನಸ್ಸು ಮತ್ತು ಶರೀರವನ್ನು ಪ್ರಾಣವಾಯು ಸಹಿತ ನನ್ನೊಡನೆ ಸಂಯುಕ್ತಗೊಳಿಸಿ, ನನ್ನ ಧಾರಣೆ ಮಾಡಿದರೆ ಇದರಿಂದ 'ಮನೋಜವ' ಎಂಬ ಸಿದ್ಧಿಯು ಪ್ರಾಪ್ತವಾಗುತ್ತದೆ. ಇದರ ಪ್ರಭಾವದಿಂದ ಆ ಯೋಗಿಯು ಎಲ್ಲಿಗಾದರೂ ಹೋಗುವ ಸಂಕಲ್ಪಮಾಡಿದರೆ, ಅಲ್ಲಿಗೆ ಅವನ ಶರೀರವು ಆಗಲೇ ತಲುಪುತ್ತದೆ. ॥ ೨೧ ॥

ಯದಾ ಮನ ಉಪಾದಾಯ ಯದ್ಯದ್ರೂಪಂ ಬುಭೂಷತಿ ।
ತತ್ತದ್ಭವೇನ್ಮನೋರೂಪಂ ಮದ್ಯೋಗಬಲಮಾಶ್ರಯಃ ॥ ೨೨ ॥

ಪರಕಾಯಂ ವಿಶನ್ ಸಿದ್ಧ ಆತ್ಮಾನಂ ತತ್ರ ಭಾವಯೇತ್ ।
ಪಿಂಡಂ ಹಿತ್ವಾ ವಿಶೇತ್ಪ್ರಾಣೋ ವಾಯುಭೂತಃ ಷಡಂಘ್ರಿವತ್ ॥ ೨೩ ॥

ಪಾರ್ಷ್ಣ್ಯಾಪೀಡ್ಯ ಗುದಂ ಪ್ರಾಣಂ ಹೃದುರಃಕಂಠಮೂರ್ಧಸು ।
ಆರೋಪ್ಯ ಬ್ರಹ್ಮರಂಧ್ರೇಣ ಬ್ರಹ್ಮ ನೀತ್ವೋತ್ಸೃಜೇತ್ತನುಮ್ ॥ ೨೪ ॥

ವಿಹರಿಷ್ಯನ್ಸುರಾಕ್ರೀಡೇ ಮತ್ಸ್ಥಂ ಸತ್ತ್ವಂ ವಿಭಾವಯೇತ್ ।
ವಿಮಾನೇನೋಪತಿಷ್ಠಂತಿ ಸತ್ತ್ವವೃತ್ತೀಃ ಸುರಸ್ತ್ರಿಯಃ ॥ ೨೫ ॥

ಯಥಾ ಸಂಕಲ್ಪಯೇದ್ಬುದ್ಧ್ಯಾ ಯದಾ ವಾ ಮತ್ಪರಃ ಪುಮಾನ್ ।
ಮಯಿ ಸತ್ಯೇ ಮನೋ ಯುಂಜನ್ ತಥಾ ತತ್ಸಮುಪಾಶ್ನುತೇ ॥ ೨೬ ॥

ಯೋ ವೈ ಮದ್ಭಾವಮಾಪನ್ನ ಈಶಿತುರ್ವಶಿತುಃ ಪುಮಾನ್ ।
ಕುತಶ್ಚಿನ್ನ ವಿಹನ್ಯೇತ ತಸ್ಯ ಚಾಜ್ಞಾ ಯಥಾ ಮಮ ॥ ೨೭ ॥

ಮದ್ಭಕ್ತ್ಯಾ ಶುದ್ಧಸತ್ತ್ವಸ್ಯ ಯೋಗಿನೋ ಧಾರಣಾವಿದಃ ।
ತಸ್ಯ ತ್ರೈಕಾಲಿಕೀ ಬುದ್ಧಿರ್ಜನ್ಮಮೃತ್ಯೂಪಬೃಂಹಿತಾ ॥ ೨೮ ॥

ಅಗ್ನ್ಯಾದಿಭಿರ್ನ ಹನ್ಯೇತ ಮುನೇರ್ಯೋಗಮಯಂ ವಪುಃ ।
ಮದ್ಯೋಗಶ್ರಾಂತಚಿತ್ತಸ್ಯ ಯಾದಸಾಮುದಕಂ ಯಥಾ ॥ ೨೯ ॥

ಮದ್ವಿಭೂತೀರಭಿಧ್ಯಾಯನ್ ಶ್ರೀವತ್ಸಾಸ್ತ್ರವಿಭೂಷಿತಾಃ ।
ಧ್ವಜಾತಪತ್ರವ್ಯಜನೈಃ ಸ ಭವೇದಪರಾಜಿತಃ ॥ ೩೦ ॥

ಯಾವಾಗ ಯೋಗಿಯು ಮನಸ್ಸನ್ನು ಉಪಾದಾನ ಕಾರಣವನ್ನಾಗಿಸಿ ಯಾರದಾದರೂ ರೂಪವನ್ನು ಧರಿಸಲು ಬಯಸಿದರೆ ತನ್ನ ಮನಸ್ಸಿಗನುಕೂಲವಾಗಿ ಅಂತಹುದೇ ರೂಪವನ್ನು ಧರಿಸಿಕೊಳ್ಳುವನು. ಇದರ ಕಾರಣ – ಅವನು ತನ್ನ ಚಿತ್ತವನ್ನು ನನ್ನೊಂದಿಗೆ ಸೇರಿಸಿರುವನು. ॥ ೨೨ ॥ ಇನ್ನೊಂದು ಶರೀರದಲ್ಲಿ ಪ್ರವೇಶಿಸಲು ಬಯಸುವ ಯೋಗಿಯು ನಾನು ಅದೇ ಶರೀರದಲ್ಲಿದ್ದೇನೆ ಹೀಗೆ ಭಾವಿಸಬೇಕು. ಹೀಗೆ ಮಾಡುವುದರಿಂದ ಅವನ ಪ್ರಾಣವು ವಾಯುರೂಪವನ್ನು ಧರಿಸಿ ಒಂದು ಹೂವಿನಿಂದ ಇನ್ನೊಂದು ಹೂವಿಗೆ ಹಾರುವ ದುಂಬಿಯಂತೆ ಅವನು ತನ್ನ ಶರೀರವನ್ನು ಬಿಟ್ಟು ಇನ್ನೊಂದು ಶರೀರದಲ್ಲಿ ಪ್ರವೇಶಿಸುತ್ತಾನೆ. ॥ ೨೩ ॥ ಯೋಗಿಗೆ ಶರೀರವನ್ನು ಪರಿತ್ಯಾಗ ಮಾಡಬೇಕೆಂದಾಗ ಹಿಮ್ಮಡಿಯಿಂದ ಗುದದ್ವಾರವನ್ನು ಒತ್ತಿ ಪ್ರಾಣವಾಯುವನ್ನು ಕ್ರಮವಾಗಿ ಹೃದಯ, ವಕ್ಷಸ್ಥಲ, ಕಂಠ, ಮಸ್ತಕಕ್ಕೆ ಕೊಂಡುಹೋಗಬೇಕು. ಮತ್ತೆ ಬ್ರಹ್ಮರಂಧ್ರದ ಮೂಲಕ ಅದನ್ನು ಬ್ರಹ್ಮನಲ್ಲಿ ಲೀನಗೊಳಿಸಿ ಶರೀರವನ್ನು ತ್ಯಜಿಸಿ ಬಿಡುತ್ತಾನೆ. ॥ ೨೪ ॥ ಅವನಿಗೆ ದೇವತೆಗಳ ವಿಹಾರಸ್ಥಳಗಳಲ್ಲಿ ಕ್ರೀಡಿಸಲು ಇಚ್ಛೆ ಉಂಟಾದರೆ, ನನ್ನ ಶುದ್ಧ ಸತ್ತ್ವಗುಣಮಯ ಸ್ವರೂಪವನ್ನು ಭಾವಿಸಬೇಕು ಹೀಗೆ ಮಾಡುವುದರಿಂದ ನನ್ನ ಸತ್ತ್ವಗುಣ ಅಂಶರೂಪೀ ಸುರ-ಸುಂದರಿಯರು ವಿಮಾನವನ್ನು ಹತ್ತಿ ಅವನ ಬಳಿಗೆ ಬಂದು ತಲುಪುತ್ತಾರೆ. ॥ ೨೫ ॥

ನನ್ನ ಪರಾಯಣನಾದ ಯೋಗಿಯು ಸತ್ಯಸಂಕಲ್ಪರೂಪೀ ನನ್ನಲ್ಲಿ ತನ್ನ ಚಿತ್ತವನ್ನು ಸ್ಥಿರಗೊಳಿಸಿದರೆ ಅವನಿಗೆ ಸಂಕಲ್ಪ ಸಿದ್ಧಿ ಉಂಟಾಗುತ್ತದೆ. ಮನಸ್ಸಿನಲ್ಲಿ ಯಾವಾಗ ಎಂತಹ ಸಂಕಲ್ಪ ಮಾಡುವನೋ, ಆಗಲೇ ಅವನ ಆ ಸಂಕಲ್ಪವು ಸಿದ್ಧವಾಗಿ ಹೋಗುತ್ತದೆ. ॥ ೨೬ ॥ ನಾನು 'ಈಶಿತ್ವ' ಮತ್ತು 'ವಶಿತ್ವ' ಎಂಬ ಎರಡೂ ಸಿದ್ಧಿಗಳ ಒಡೆಯನಾಗಿದ್ದೇನೆ. ಅದಕ್ಕಾಗಿ ಎಂದೂ ಯಾರೂ ನನ್ನ ಆಜ್ಞೆಯನ್ನು ಉಲ್ಲಂಘಿಸಲಾರರು ಹಾಗೂ ಎಲ್ಲರೂ ನನ್ನ ಶಾಸನವನ್ನೇ ಒಪ್ಪಿಕೊಳ್ಳುವರು. ನನ್ನ ಆ ರೂಪವನ್ನು ಚಿಂತಿಸುತ್ತಾ ಅದೇ ಭಾವನೆಯಿಂದ ಯುಕ್ತನಾದವನು ನನ್ನಂತೆಯೇ ಅವನ ಆಜ್ಞೆಯನ್ನು ಯಾರೂ ಉಲ್ಲಂಘಿಸಲಾರರು. ॥ ೨೭ ॥ ನನ್ನ ಧಾರಣೆಯನ್ನು ಮಾಡುತ್ತಾ-ಮಾಡುತ್ತಾ , ನನ್ನ ಭಕ್ತಿಯ ಪ್ರಭಾವದಿಂದ ಶುದ್ಧವಾದ ಯೋಗಿಯ ಬುದ್ಧಿಯು ಜನ್ಮ-ಮೃತ್ಯು ಮುಂತಾದ ಅದೃಷ್ಟ ವಿಷಯಗಳನ್ನು ತಿಳಿದುಕೊಳ್ಳುತ್ತದೆ. ಇನ್ನೇನು ಭೂತ, ಭವಿಷ್ಯತ್ತು , ವರ್ತಮಾನ ಇವುಗಳ ಎಲ್ಲ ಮಾತುಗಳು ಅವನ ಅರಿವಿಗೆ ಬರುತ್ತವೆ. ॥ ೨೮ ॥ ನೀರಿನಲ್ಲಿರುವ ಪ್ರಾಣಿಗಳು ನೀರಿನಿಂದಾಗಿ ನಾಶವಾಗುವುದಿಲ್ಲವೋ ಹಾಗೆಯೇ ನನ್ನಲ್ಲೇ ಏಕೀಭಾವದಿಂದ ಸ್ಥಿರವಾದ ಚಿತ್ತವುಳ್ಳ ಯೋಗಿಯ ಯೋಗಮಯ ಶರೀರವನ್ನು ಅಗ್ನಿ, ಜಲ ಮುಂತಾದ ಯಾವ ವಸ್ತುಗಳೂ ನಾಶಮಾಡಲಾರವು. ॥ ೨೯ ॥ ಶ್ರೀವತ್ಸ ಮುಂತಾದ ಚಿಹ್ನೆಗಳಿಂದ ಕೂಡಿದ, ಶಂಖ, ಚಕ್ರ, ಗದಾ, ಪದ್ಮ ಮುಂತಾದ ಆಯುಧಗಳಿಂದ ವಿಭೂಷಿತವಾದ, ಧ್ವಜ, ಛತ್ರ, ಚಾಮರ ಮುಂತಾದವುಗಳಿಂದ ಸಂಪನ್ನವಾದ ನನ್ನ ಅವತಾರಗಳನ್ನು ಧ್ಯಾನಿಸುವ ಪುರುಷನು ಅಜೇಯನಾಗುತ್ತಾನೆ. ॥ ೩೦ ॥

ಉಪಾಸಕಸ್ಯ ಮಾಮೇವಂ ಯೋಗಧಾರಣಯಾ ಮುನೇಃ ।
ಸಿದ್ಧಯಃ ಪೂರ್ವಕಥಿತಾ ಉಪತಿಷ್ಠಂತ್ಯಶೇಷತಃ
॥ ೩೧ ॥

ಜಿತೇಂದ್ರಿಯಸ್ಯ ದಾಂತಸ್ಯ ಜಿತಶ್ವಾಸಾತ್ಮನೋ ಮುನೇಃ ।
ಮದ್ಧಾರಣಾಂ ಧಾರಯತಃ ಕಾ ಸಾ ಸಿದ್ಧಿಃ ಸುದುರ್ಲಭಾ
॥ ೩೨ ॥

ಅಂತರಾಯಾನ್ ವದಂತ್ಯೇತಾ ಯುಂಜತೋ ಯೋಗಮುತ್ತಮಮ್ ।
ಮಯಾ ಸಂಪದ್ಯ ಮಾನಸ್ಯ ಕಾಲಕ್ಷಪಣಹೇತವಃ
॥ ೩೩ ॥

ಜನ್ಮೌಷಧಿತಪೋಮಂತ್ರೈರ್ಯಾವತೀರಿಹ ಸಿದ್ಧಯಃ ।
ಯೋಗೇನಾಪ್ನೋತಿ ತಾಃ ಸರ್ವಾ
ನಾನ್ಯೈರ್ಯೋಗಗತಿಂ ವ್ರಜೇತ್
॥ ೩೪ ॥

ಸರ್ವಾಸಾಮಪಿ ಸಿದ್ಧೀನಾಂ ಹೇತುಃ ಪತಿರಹಂ ಪ್ರಭುಃ ।
ಅಹಂ ಯೋಗಸ್ಯ ಸಾಂಖ್ಯಸ್ಯ ಧರ್ಮಸ್ಯ ಬ್ರಹ್ಮವಾದಿನಾಮ್
॥ ೩೫ ॥

ಅಹಮಾತ್ಮಾಽಽಂತರೋ ಬಾಹ್ಯೋಽನಾವೃತಃ ಸರ್ವದೇಹಿನಾಮ್ ।
ಯಥಾ ಭೂತಾನಿ ಭೂತೇಷು ಬಹಿರಂತಃ ಸ್ವಯಂ ತಥಾ
॥ ೩೬ ॥

ನನ್ನ ಉಪಾಸನೆಯನ್ನು ಮಾಡುತ್ತಾ , ಯೋಗಧಾರಣೆಯ ಮೂಲಕ ನನ್ನನ್ನೇ ಚಿಂತಿಸುವ ವಿಚಾರಶೀಲ ಪುರುಷನ ಮುಂದೆ ಈ ಸಿದ್ಧಿಗಳು ಎಲ್ಲ ರೀತಿಯಿಂದ ಬಂದು ಅಣಿಯಾಗುತ್ತವೆ. ಇದನ್ನು ನಾನು ನಿನಗೆ ವರ್ಣಿಸಿರುವೆನು. ॥ ೩೧ ॥ ಪ್ರಿಯ ಉದ್ಧವನೇ! ಯಾರು ತನ್ನ ಪ್ರಾಣ, ಮನಸ್ಸು, ಇಂದ್ರಿಯಗಳ ಮೇಲೆ ವಿಜಯ ಸಾಧಿಸಿರುವನೋ ಯಾರು ಸಂಯಮಿಯಾಗಿರುವನೋ, ನನ್ನದೇ ಸ್ವರೂಪವನ್ನು ಧರಿಸಿರುವನೋ ಅವನಿಗಾಗಿ ಇಂತಹ ಯಾವ ಸಿದ್ಧಿಗಳು ದುರ್ಲಭವಲ್ಲ, ಅವನಿಗಾದರೋ ಎಲ್ಲ ಸಿದ್ಧಿಗಳು ಪ್ರಾಪ್ತವೇ ಇರುತ್ತವೆ. ॥ ೩೨ ॥ ಭಕ್ತಿಯೋಗ ಅಥವಾ ಜ್ಞಾನ ಯೋಗಾದಿ ಉತ್ತಮ ಯೋಗಗಳ ಅಭ್ಯಾಸ ಮಾಡುತ್ತಿರುವ ಜನರಿಗೆ, ನನ್ನಲ್ಲಿ ಒಂದಾಗಿರುವವರಿಗೆ ಈ ಸಿದ್ಧಿಗಳು ಪ್ರಾಪ್ತವಾಗುವುದು ಒಂದು ವಿಘ್ನವೇ ಆಗಿದೆ. ಏಕೆಂದರೆ, ಇವೆಲ್ಲವೂ ಭಗವಂತನ ಬಳಿಗೆ ಹೋಗಲು ವಿಳಂಬಮಾಡುತ್ತವೆ ಎಂದು ಶ್ರೇಷ್ಠ ಪುರುಷರು ಹೇಳುತ್ತಾರೆ. ॥ ೩೩ ॥ ಜನ್ಮ, ಔಷಧಿ, ತಪಸ್ಸು, ಮಂತ್ರಾದಿಗಳ ಮೂಲಕ ಪ್ರಾಪ್ತವಾಗುವ ಸಿದ್ಧಿಗಳೆಲ್ಲವೂ ಯೋಗದ ಮೂಲಕ ದೊರೆಯುವವು. ಆದರೆ ಭಗವಂತನ ಪ್ರಾಪ್ತಿಯು ಏಕಮಾತ್ರ ಭಗವಂತನಲ್ಲಿ ಚಿತ್ತವನ್ನು ತೊಡಗಿಸುವುದರಿಂದಲೇ ಪ್ರಾಪ್ತಿಯಾಗುತ್ತದೆ. ॥ ೩೪ ॥ ಬ್ರಹ್ಮವಾದಿಗಳು ಯೋಗ, ಸಾಂಖ್ಯ, ಧರ್ಮ ಮುಂತಾದ ಅನೇಕ ಸಾಧನೆಗಳನ್ನು ಹೇಳಿರುವರು. ಅವುಗಳ ಹಾಗೂ ಸಮಸ್ತಸಿದ್ಧಿಗಳ ಏಕಮಾತ್ರ ಹೇತು ಸ್ವಾಮಿ ಮತ್ತು ಒಡೆಯ ನಾನೇ ಆಗಿದ್ದೇನೆ. ॥ ೩೫ ॥ ಎಲ್ಲ ಪ್ರಾಣಿಗಳ ಒಳ-ಹೊರಗೆ, ಸರ್ವತ್ರ ಸೂಕ್ಷ್ಮ ಪಂಚ-ಮಹಾಭೂತಗಳು ಇರುವಂತೆಯೇ, ನಾನು ಸಮಸ್ತ ಪ್ರಾಣಿಗಳ ಒಳಗೆ ದೃಷ್ಟಾರೂಪದಿಂದ ಮತ್ತು ಹೊರಗೆ ದೃಶ್ಯರೂಪದಿಂದ ಸ್ಥಿತನಾಗಿದ್ದೇನೆ. ನನ್ನಲ್ಲಿ ಒಳ-ಹೊರಗೆ ಭೇದವೇ ಇಲ್ಲ, ಏಕೆಂದರೆ, ನಾನು ನಿರಾವರಣ, ಒಂದೇ – ಅದ್ವಿತೀಯ ಆತ್ಮಾ ಸರ್ವವ್ಯಾಪಕನಾಗಿದ್ದೇನೆ. ॥ ೩೬ ॥

ಹದಿನೈದನೆಯ ಅಧ್ಯಾಯವು ಮುಗಿಯಿತು. ॥ ೧೫ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಏಕಾದಶ ಸ್ಕಂಧೇ ಪಂಚದಶೋಽಧ್ಯಾಯಃ ॥ ೧೫ ॥

ಹದಿನಾರನೆಯ ಅಧ್ಯಾಯ

ಭಗವಂತನ ವಿಭೂತಿಗಳ ವರ್ಣನೆ

ಉದ್ಧವ ಉವಾಚ

ತ್ವಂ ಬ್ರಹ್ಮ ಪರಮಂ ಸಾಕ್ಷಾದನಾದ್ಯಂತಮಪಾವೃತಮ್ ।
ಸರ್ವೇಷಾಮಪಿ ಭಾವಾನಾಂ ತ್ರಾಣಸ್ಥಿತ್ಯಪ್ಯಯೋದ್ಭವಃ
॥ ೧ ॥

ಉಚ್ಚಾವಚೇಷು ಭೂತೇಷು ದುರ್ಜ್ಞೇಯಮಕೃತಾತ್ಮಭಿಃ ।
ಉಪಾಸತೇ ತ್ವಾಂ ಭಗವನ್ ಯಾಥಾತಥ್ಯೇನ ಬ್ರಾಹ್ಮಣಾಃ
॥ ೨ ॥

ಉದ್ಧವನೆಂದನು – ಓ ಭಗವಂತನೇ! ನೀನು ಸ್ವತಃ ಭಗವಂತನಾಗಿರುವೆ. ನಿನಗೆ ಆದಿಯಾಗಲೀ, ಅಂತ್ಯವಾಗಲೀ ಇಲ್ಲ. ನೀನು ಆವರಣರಹಿತ, ಅದ್ವಿತೀಯ ತತ್ತ್ವನಾಗಿರುವೆ. ಸಮಸ್ತ ಪ್ರಾಣಿಗಳ ಮತ್ತು ಪದಾರ್ಥಗಳ ಉತ್ಪತ್ತಿ , ಸ್ಥಿತಿ, ರಕ್ಷಣೆ ಪ್ರಳಯದ ಕಾರಣವೂ ನೀನೇ ಆಗಿರುವೆ. ನೀನು ಉಚ್ಚ-ನೀಚ ಎಲ್ಲ ಪ್ರಾಣಿಗಳಲ್ಲಿ ಸ್ಥಿತನಾಗಿರುವೆ. ಆದರೆ ತಮ್ಮ ಮನಸ್ಸನ್ನು ವಶಪಡಿಸಿಕೊಳ್ಳದ ಜನರು ನಿನ್ನನ್ನು ಅರಿಯಲಾರರು. ಆದರೆ ನಿನ್ನ ವಿಷಯದಲ್ಲಿ ಯಥಾರ್ಥವಾಗಿ ತಿಳಿದವರೇ ನಿನ್ನ ಉಪಾಸನೆಯನ್ನು ಮಾಡುತ್ತಾರೆ. ॥ ೧-೨ ॥

ಯೇಷು ಯೇಷು ಚ ಭಾವೇಷು ಭಕ್ತ್ಯಾ ತ್ವಾಂ ಪರಮರ್ಷಯಃ ।
ಉಪಾಸೀನಾಃ ಪ್ರಪದ್ಯಂತೇ ಸಂಸಿದ್ಧಿಂ ತದ್ವದಸ್ವ ಮೇ
॥ ೩ ॥

ಗೂಢಶ್ಚರಸಿ ಭೂತಾತ್ಮಾ ಭೂತಾನಾಂ ಭೂತಭಾವನ ।
ನ ತ್ವಾಂ ಪಶ್ಯಂತಿ ಭೂತಾನಿ ಪಶ್ಯಂತಂ ಮೋಹಿತಾನಿ ತೇ
॥ ೪ ॥

ಯಾಃ ಕಾಶ್ಚ ಭೂಮೌ ದಿವಿ ವೈ ರಸಾಯಾಂ
ವಿಭೂತಯೋ ದಿಕ್ಷು ಮಹಾವಿಭೂತೇ ।
ತಾ ಮಹ್ಯಮಾಖ್ಯಾಹ್ಯನುಭಾವಿತಾಸ್ತೇ
ನಮಾಮಿ ತೇ ತೀರ್ಥಪದಾಂಘ್ರಿಪದ್ಮಮ್ ॥ ೫ ॥

ಶ್ರೀಭಗವಾನುವಾಚ

ಏವಮೇತದಹಂ ಪೃಷ್ಟಃ ಪ್ರಶ್ನಂ ಪ್ರಶ್ನವಿದಾಂ ವರ ।
ಯುಯುತ್ಸುನಾ ವಿನಶನೇ ಸಪತ್ನೈರರ್ಜುನೇನ ವೈ
॥ ೬ ॥

ಜ್ಞಾತ್ವಾ ಜ್ಞಾತಿವಧಂ ಗರ್ಹ್ಯಮಧರ್ಮಂ ರಾಜ್ಯ ಹೇತುಕಮ್ ।
ತತೋ ನಿವೃತ್ತೋ ಹಂತಾಹಂ ಹತೋಽಯಮಿತಿ ಲೌಕಿಕಃ
॥ ೭ ॥

ಸ ತದಾ ಪುರುಷವ್ಯಾಘ್ರೋ ಯುಕ್ತ್ಯಾ ಮೇ ಪ್ರತಿಬೋಧಿತಃ ।
ಅಭ್ಯಭಾಷತ ಮಾಮೇವಂ ಯಥಾ ತ್ವಂ ರಣಮೂರ್ಧನಿ
॥ ೮ ॥

ಅಹಮಾತ್ಮೋದ್ಧವಾಮೀಷಾಂ ಭೂತಾನಾಂ ಸುಹೃದೀಶ್ವರಃ ।
ಅಹಂ ಸರ್ವಾಣಿ ಭೂತಾನಿ ತೇಷಾಂ ಸ್ಥಿತ್ಯುದ್ಭವಾಪ್ಯಯಃ
॥ ೯ ॥

ಅಹಂ ಗತಿರ್ಗತಿಮತಾಂ ಕಾಲಃ ಕಲಯತಾಮಹಮ್ ।
ಗುಣಾನಾಂ ಚಾಪ್ಯಹಂ ಸಾಮ್ಯಂ ಗುಣಿನ್ಯೌತ್ಪತ್ತಿಕೋ ಗುಣಃ
॥ ೧೦ ॥

ಗುಣಿನಾಮಪ್ಯಹಂ ಸೂತ್ರಂ ಮಹತಾಂ ಚ ಮಹಾನಹಮ್ ।
ಸೂಕ್ಷ್ಮಾಣಾಮಪ್ಯಹಂ ಜೀವೋ ದುರ್ಜಯಾನಾಮಹಂ ಮನಃ
॥ ೧೧ ॥

ಹಿರಣ್ಯಗರ್ಭೋ ವೇದಾನಾಂ ಮಂತ್ರಾಣಾಂ ಪ್ರಣವಸ್ತ್ರಿವೃತ್ ।
ಅಕ್ಷರಾಣಾಮಕಾರೋಽಸ್ಮಿ ಪದಾನಿಚ್ಛಂದಸಾಮಹಮ್
॥ ೧೨ ॥

ದೊಡ್ಡ-ದೊಡ್ಡ ಋಷಿ-ಮಹರ್ಷಿಗಳು ನಿನ್ನ ಯಾವ ರೂಪಗಳನ್ನು ಮತ್ತು ವಿಭೂತಿಗಳನ್ನು ಪರಮ ಭಕ್ತಿಯಿಂದ ಉಪಾಸಿಸಿ ಸಿದ್ಧಿಯನ್ನು ಪಡೆಯುತ್ತಾರೋ ಅವನ್ನು ನೀನು ನನಗೆ ಹೇಳುವ ಕೃಪೆಮಾಡು. ॥ ೩ ॥ ಸಮಸ್ತ ಪ್ರಾಣಿಗಳ ಜೀವನದಾತೃವಾದ ಪ್ರಭುವೇ! ನೀನು ಸಮಸ್ತ ಪ್ರಾಣಿಗಳ ಅಂತರಾತ್ಮನಾಗಿರುವೆ. ನೀನು ಅವುಗಳಲ್ಲಿ ನಿನ್ನನ್ನು ಗುಪ್ತವಾಗಿರಿಸಿಕೊಂಡು ಲೀಲೆಮಾಡುತ್ತಿರುವೆ. ನೀನಾದರೋ ಎಲ್ಲರನ್ನು ನೋಡುತ್ತೀಯೆ, ಆದರೆ ಜಗತ್ತಿನ ಪ್ರಾಣಿಗಳು ನಿನ್ನ ಮಾಯೆಯಿಂದ ಮೋಹಿತರಾಗಿ ನಿನ್ನನ್ನು ನೋಡಲಾರರು. ॥ ೪ ॥ ಅಚಿಂತ್ಯ ಐಶ್ವರ್ಯ ಸಂಪನ್ನ ಪ್ರಭೋ! ಪೃಥಿವಿ, ಸ್ವರ್ಗ, ಪಾತಾಳ ಹಾಗೂ ದಶದಿಕ್ಕುಗಳಲ್ಲಿ ನಿನ್ನ ಪ್ರಭಾವದಿಂದ ಕೂಡಿದ ಯಾವ-ಯಾವ ವಿಭೂತಿಗಳು ಇವೆಯೋ, ಅವನ್ನು ನೀನು ದಯಮಾಡಿ ನನಗೆ ವರ್ಣಿಸಿ ಹೇಳು. ಸ್ವಾಮಿ! ಸಮಸ್ತ ತೀರ್ಥಗಳನ್ನು ಕೂಡ ತೀರ್ಥವಾಗಿಸುವ ನಿನ್ನ ಈ ಚರಣ ಕಮಲಗಳನ್ನು ನಾನು ವಂದಿಸುತ್ತೇನೆ. ॥ ೫ ॥

ಭಗವಾನ್ ಶ್ರೀಕೃಷ್ಣನು ಹೇಳಿದನು – ಪ್ರಿಯ ಉದ್ಧವಾ! ನೀನು ಪ್ರಶ್ನೆಯ ಮರ್ಮವನ್ನು ತಿಳಿಯುವವರಲ್ಲಿ ಶ್ರೇಷ್ಠನಾಗಿರುವೆ. ಕುರುಕ್ಷೇತ್ರದಲ್ಲಿ ಕೌರವ-ಪಾಂಡವರಿಗೆ ಯುದ್ಧವು ಸನ್ನದ್ಧವಾದಾಗ ಶತ್ರುಗಳೊಡನೆ ಯುದ್ಧಕ್ಕಾಗಿ ತತ್ಪರನಾದ ಅರ್ಜುನನು ನನ್ನಲ್ಲಿ ಹೀಗೆಯೇ ಪ್ರಶ್ನಿಸಿದ್ದನು. ॥ ೬ ॥

ಕುಟುಂಬದವರನ್ನು ರಾಜ್ಯಕ್ಕಾಗಿ ಕೊಲ್ಲುವುದು ಬಹಳ ನಿಂದನೀಯವೂ, ಅಧರ್ಮವೂ ಆಗಿದೆ ಎಂಬ ಧೋರಣೆ ಅರ್ಜುನನ ಮನಸ್ಸಿನಲ್ಲಿ ಉಂಟಾಗಿತ್ತು. ಸಾಧಾರಣ ಜನರಂತೆ 'ನಾನು ಕೊಲ್ಲುವವನೂ, ಇವರೆಲ್ಲ ಸಾಯುವವರಾಗಿದ್ದಾರೆ' ಹೀಗೆ ಯೋಚಿಸುತ್ತಾ ಅವನು ಯುದ್ಧದಿಂದ ನಿವೃತ್ತನಾಗಲು ಬಯಸಿದ್ದನು. ॥ ೭ ॥ ಆಗ ನಾನು ರಣಭೂಮಿಯಲ್ಲಿ ಬಹಳಷ್ಟು ಯುಕ್ತಿಗಳಿಂದ ವೀರವರ ಅರ್ಜುನನಿಗೆ ತಿಳಿಸಿಹೇಳಿದ್ದೆ. ಆಗಲೂ ಅರ್ಜುನನು ನೀನು ನನ್ನಲ್ಲಿ ಪ್ರಶ್ನಿಸಿದಂತೆ ಪ್ರಶ್ನಿಸಿದ್ದನು. ॥ ೮ ॥ ಎಲೈ ಉದ್ಧವನೇ! ನಾನು ಸಮಸ್ತ ಪ್ರಾಣಿಗಳ ಆತ್ಮಾ, ಹಿತೈಷಿ, ಸುಹೃದ್, ಈಶ್ವರ – ನಿಯಾಮಕನಾಗಿದ್ದೇನೆ. ನಾನೇ ಈ ಸಮಸ್ತ ಪ್ರಾಣಿ-ಪದಾರ್ಥಗಳ ರೂಪದಲ್ಲಿದ್ದೇನೆ. ಇವುಗಳ ಉತ್ಪತ್ತಿ, ಸ್ಥಿತಿ ಮತ್ತು ಪ್ರಳಯದ ಕಾರಣನೂ ನಾನೇ ಆಗಿದ್ದೇನೆ. ॥ ೯ ॥ ಗತಿಶೀಲ ಪದಾರ್ಥಗಳ ಗತಿಯು ನಾನೇ ಆಗಿದ್ದೇನೆ. ಗಣನೆ ಮಾಡುವವರಲ್ಲಿ ಕಾಲವು, ಗುಣಗಳ ಸಾಮ್ಯಾವಸ್ಥಾ ಪ್ರಕೃತಿ, ಗುಣಿಗಳ ನೈಸರ್ಗಿಕ ಗುಣಗಳು ನಾನೇ ಆಗಿದ್ದೇನೆ. ॥ ೧೦ ॥ ಗುಣಗಳಲ್ಲಿ ಕ್ಷೋಭೆ ಉಂಟಾಗಿ ಕ್ರಿಯಾಶಕ್ತಿ ಪ್ರಧಾನ ಸೂತ್ರಾತ್ಮಾ, ಜ್ಞಾನಶಕ್ತಿ ಪ್ರಧಾನ ಮಹತ್ತತ್ತ್ವ, ಸೂಕ್ಷ್ಮಗಳಲ್ಲಿಯೂ ಕೂಡ ಜೀವರೂಪದಿಂದ ನಾನೇ ಆಗಿರುವೆನು. ಕಷ್ಟವಾಗಿ ವಶಕ್ಕೆ ಬರುವಂತಹ ಮನಸ್ಸೂ ನಾನೇ ಆಗಿದ್ದೇನೆ. ॥ ೧೧ ॥ ವೇದಗಳ ಅಭಿವ್ಯಕ್ತಿಸ್ಥಾನ ಹಿರಣ್ಯಗರ್ಭನೂ, ಮಂತ್ರಗಳಲ್ಲಿ 'ಅ, ಉ, ಮ್' ಈ ಮೂರು ಮಾತ್ರೆಗಳಿಂದ ಕೂಡಿದ ಪ್ರಣವವೂ, ಅಕ್ಷರದಲ್ಲಿ ಅಕಾರವೂ, ಛಂದಸ್ಸುಗಳಲ್ಲಿ ತ್ರಿಪದಾ ಗಾಯತ್ರಿಯೂ ನಾನೇ ಆಗಿದ್ದೇನೆ. ॥ ೧೨ ॥

ಇಂದ್ರೋಽಹಂ ಸರ್ವದೇವಾನಾಂ ವಸೂನಾಮಸ್ಮಿ ಹವ್ಯವಾಟ್ ।
ಆದಿತ್ಯಾನಾಮಹಂ ವಿಷ್ಣೂ ರುದ್ರಾಣಾಂ ನೀಲಲೋಹಿತಃ
॥ ೧೩ ॥

ಬ್ರಹ್ಮರ್ಷೀಣಾಂ ಭೃಗುರಹಂ ರಾಜರ್ಷೀಣಾಮಹಂ ಮನುಃ ।
ದೇವರ್ಷೀಣಾಂ ನಾರದೋಽಹಂ ಹವಿರ್ಧಾನ್ಯಸ್ಮಿ ಧೇನುಷು
॥ ೧೪ ॥

ಸಿದ್ಧೇಶ್ವರಾಣಾಂ ಕಪಿಲಃ ಸುಪರ್ಣೋಽಹಂ ಪತತ್ರಿಣಾಮ್ ।
ಪ್ರಜಾಪತೀನಾಂ ದಕ್ಷೋಽಹಂ ಪಿತೄಣಾಮಹಮರ್ಯಮಾ
॥ ೧೫ ॥

ಮಾಂ ವಿದ್ಧ್ಯುದ್ಧವ ದೈತ್ಯಾನಾಂ ಪ್ರಹ್ಲಾದಮಸುರೇಶ್ವರಮ್ ।
ಸೋಮಂ ನಕ್ಷತ್ರೌಷಧೀನಾಂ ಧನೇಶಂ ಯಕ್ಷರಕ್ಷಸಾಮ್
॥ ೧೬ ॥

ಐರಾವತಂ ಗಜೇಂದ್ರಾಣಾಂ ಯಾದಸಾಂ ವರುಣಂ ಪ್ರಭುಮ್ ।
ತಪತಾಂ ದ್ಯುಮತಾಂ ಸೂರ್ಯಂ ಮನುಷ್ಯಾಣಾಂ ಚ ಭೂಪತಿಮ್
॥ ೧೭ ॥

ಉಚ್ಚೈಃಶ್ರವಾಸ್ತುರಂಗಾಣಾಂ ಧಾತೂನಾಮಸ್ಮಿ ಕಾಂಚನಮ್ ।
ಯಮಃ ಸಂಯಮತಾಂ ಚಾಹಂ ಸರ್ಪಾಣಾಮಸ್ಮಿ ವಾಸುಕಿಃ
॥ ೧೮ ॥

ನಾಗೇಂದ್ರಾಣಾಮನಂತೋಽಹಂ ಮೃಗೇಂದ್ರಃ ಶೃಂಗಿದಂಷ್ಟ್ರಿಣಾಮ್ ।
ಆಶ್ರಮಾಣಾಮಹಂ ತುರ್ಯೋ ವರ್ಣಾನಾಂ ಪ್ರಥಮೋಽನಘ
॥ ೧೯ ॥

ತೀರ್ಥಾನಾಂ ಸ್ರೋತಸಾಂ ಗಂಗಾ ಸಮುದ್ರಃ ಸರಸಾಮಹಮ್ ।
ಆಯುಧಾನಾಂ ಧನುರಹಂ ತ್ರಿಪುರಘ್ನೋ ಧನುಷ್ಮತಾಮ್
॥ ೨೦ ॥

ಧಿಷ್ಣ್ಯಾನಾಮಸ್ಮ್ಯಹಂ ಮೇರುರ್ಗಹನಾನಾಂ ಹಿಮಾಲಯಃ ।
ವನಸ್ಪತೀನಾಮಶ್ವತ್ಥ ಓಷಧೀನಾಮಹಂ ಯವಃ
॥ ೨೧ ॥

ಪುರೋಧಸಾಂ ವಸಿಷ್ಠೋಽಹಂ ಬ್ರಹ್ಮಿಷ್ಠಾನಾಂ ಬೃಹಸ್ಪತಿಃ ।
ಸ್ಕಂದೋಽಹಂ ಸರ್ವಸೇನಾನ್ಯಾಮಗ್ರಣ್ಯಾಂ ಭಗವಾನಜಃ
॥ ೨೨ ॥

ಯಜ್ಞಾನಾಂ ಬ್ರಹ್ಮಯಜ್ಞೋಽಹಂ ವ್ರತಾನಾಮವಿಹಿಂಸನಮ್ ।
ವಾಯ್ವಗ್ನ್ಯರ್ಕಾಂಬುವಾಗಾತ್ಮಾ ಶುಚೀನಾಮಪ್ಯಹಂ ಶುಚಿಃ
॥ ೨೩ ॥

ಯೋಗಾನಾಮಾತ್ಮಸಂರೋಧೋ ಮಂತ್ರೋಽಸ್ಮಿ ವಿಜಿಗೀಷತಾಮ್ ।
ಆನ್ವೀಕ್ಷಿಕೀ ಕೌಶಲಾನಾಂ ವಿಕಲ್ಪಃ ಖ್ಯಾತಿವಾದಿನಾಮ್
॥ ೨೪ ॥

ಸ್ತ್ರೀಣಾಂ ತು ಶತರೂಪಾಹಂ ಪುಂಸಾಂ ಸ್ವಾಯಂಭುವೋ ಮನುಃ ।
ನಾರಾಯಣೋ ಮುನೀನಾಂ ಚ ಕುಮಾರೋ ಬ್ರಹ್ಮಚಾರಿಣಾಮ್
॥ ೨೫ ॥

ಸಮಸ್ತ ದೇವತೆಗಳಲ್ಲಿ ಇಂದ್ರನೂ, ಎಂಟು ವಸುಗಳಲ್ಲಿ ಅಗ್ನಿಯೂ, ದ್ವಾದಶಾದಿತ್ಯರಲ್ಲಿ ವಿಷ್ಣುವೂ, ಏಕಾದಶ ರುದ್ರರಲ್ಲಿ ನೀಲಲೋಹಿತ ಹೆಸರಿನ ರುದ್ರನು ನಾನೇ ಆಗಿದ್ದೇನೆ. ಬ್ರಹ್ಮರ್ಷಿಗಳಲ್ಲಿ ಭೃಗು, ರಾಜರ್ಷಿಗಳಲ್ಲಿ ಮನು, ದೇವರ್ಷಿಗಳಲ್ಲಿ ನಾರದ, ಹಸುಗಳಲ್ಲಿ ಕಾಮಧೇನು ನಾನೇ ಆಗಿರುವೆನು. ॥ ೧೩-೧೪॥ ಸಿದ್ಧೇಶ್ವರರಲ್ಲಿ ಕಪಿಲನೂ, ಪಕ್ಷಿಗಳಲ್ಲಿ ಗರುಡನೂ, ಪ್ರಜಾಪತಿಗಳಲ್ಲಿ ದಕ್ಷಪ್ರಜಾಪತಿಯೂ, ಪಿತೃಗಳಲ್ಲಿ ಅರ್ಯಮಾ ನಾನಾಗಿದ್ದೇನೆ. ॥ ೧೫ ॥ ಪ್ರಿಯ ಉದ್ಧವಾ! ನಾನು ದೈತ್ಯರಲ್ಲಿ ದೈತ್ಯರಾಜ ಪ್ರಹ್ಲಾದನು, ನಕ್ಷತ್ರಗಳ ಅಧಿಪತಿ, ವನಸ್ಪತಿಗಳನ್ನು ಪುಷ್ಟಗೊಳಿಸುವ ಚಂದ್ರನು, ಯಕ್ಷ-ರಾಕ್ಷಸರಲ್ಲಿ ಧನಪತಿ ಕುಬೇರನು ನಾನೇ ಆಗಿದ್ದೇನೆ. ॥ ೧೬ ॥ ಗಜೇಂದ್ರರಲ್ಲಿ ಐರಾವತವೂ, ಜಲಚರಗಳ ಅಧಿಪತಿ ವರುಣ, ಬೆಳಗುವವರಲ್ಲಿ ಪ್ರಕಾಶಕೊಡುವಂತಹ ಸೂರ್ಯನೂ, ಮನುಷ್ಯರಲ್ಲಿ ರಾಜನೂ ನಾನೇ ಆಗಿದ್ದೇನೆ. ॥ ೧೭ ॥ ಕುದುರೆಗಳಲ್ಲಿ ಉಚ್ಚೈಶ್ರವಸ್ಸು, ಧಾತುಗಳಲ್ಲಿ ಚಿನ್ನ, ದಂಡಧಾರಿಗಳಲ್ಲಿ ಯಮ, ಸರ್ಪಗಳಲ್ಲಿ ವಾಸುಕಿ ನಾನೇ ಆಗಿರುವೆನು. ॥ ೧೮ ॥ ಪುಣ್ಯಾತ್ಮಾ ಉದ್ಧವನೇ! ನಾನೇ ನಾಗರಾಜರಲ್ಲಿ ಆದಿಶೇಷನೂ, ಕೊಂಬು ಮತ್ತು ದಾಡೆಗಳುಳ್ಳ ಪ್ರಾಣಿಗಳಲ್ಲಿ ಅವರ ರಾಜನಾದ ಸಿಂಹನೂ, ಆಶ್ರಮಗಳಲ್ಲಿ ಸಂನ್ಯಾಸವೂ, ವರ್ಣಗಳಲ್ಲಿ ಬ್ರಾಹ್ಮಣನೂ ಆಗಿದ್ದೇನೆ. ॥ ೧೯ ॥ ತೀರ್ಥಗಳಲ್ಲಿ ಹಾಗೂ ನದಿಗಳಲ್ಲಿ ಗಂಗೆಯೂ, ಜಲಾಶಯಗಳಲ್ಲಿ ಸಮುದ್ರವೂ, ಅಸ್ತ್ರ-ಶಸ್ತ್ರಗಳಲ್ಲಿ ಧನುಸ್ಸೂ, ಧನುರ್ಧಾರಿಗಳಲ್ಲಿ ತ್ರಿಪುರಾರೀ ಶಂಕರನೂ ನಾನೇ ಆಗಿರುವೆನು. ॥ ೨೦ ॥

ನಿವಾಸಸ್ಥಾನಗಳಲ್ಲಿ ಸುಮೇರುವೂ, ದುರ್ಗಮ ಸ್ಥಾನಗಳಲ್ಲಿ ಹಿಮಾಲಯವೂ, ವನಸ್ಪತಿಗಳಲ್ಲಿ ಅರಳೀಮರವೂ, ಧಾನ್ಯಗಳಲ್ಲಿ ಜವೆಯೂ ನಾನೇ ಆಗಿದ್ದೇನೆ. ॥ ೨೧ ॥ ಪುರೋಹಿತರಲ್ಲಿ ವಸಿಷ್ಠನೂ, ವೇದವೇತ್ತರಲ್ಲಿ ಬೃಹಸ್ಪತಿಯೂ, ಎಲ್ಲ ಸೇನಾಪತಿಗಳಲ್ಲಿ ಸ್ಕಂದನೂ, ಸನ್ಮಾರ್ಗ ಪ್ರವರ್ತಕರಲ್ಲಿ ಭಗವಾನ್ ಬ್ರಹ್ಮನೂ ನಾನೇ ಆಗಿರುವೆನು. ॥ ೨೨ ॥ ಪಂಚ ಮಹಾಯಜ್ಞಗಳಲ್ಲಿ ಬ್ರಹ್ಮಯಜ್ಞ (ಸ್ವಾಧ್ಯಾಯಯಜ್ಞ)ವೂ, ವ್ರತಗಳಲ್ಲಿ ಅಹಿಂಸಾವ್ರತವೂ, ಶುದ್ಧ ಮಾಡುವ ಪದಾರ್ಥಗಳಲ್ಲಿ ನಿತ್ಯಶುದ್ಧ ವಾಯುವೂ ಹಾಗೂ ಅಗ್ನಿ, ಸೂರ್ಯ, ಜಲ, ವಾಣಿ ಮತ್ತು ಆತ್ಮಾ ನಾನೇ ಆಗಿರುವೆನು. ॥ ೨೩ ॥ ಯೋಗಗಳಲ್ಲಿ ಮನೋನಿರೋಧರೂಪೀ ಸಮಾಧಿಯೋಗವೂ, ಗೆಲ್ಲುವ ಇಚ್ಛೆಯುಳ್ಳವರಲ್ಲಿ ಗುಪ್ತವಾಗಿಡುವಂತಹ ಮಂತ್ರಾಲೋಚನೆಯೂ, ಆತ್ಮಾನಾತ್ಮ ವಿವೇಕದ ಚರ್ಚೆಯಲ್ಲಿ ಬ್ರಹ್ಮವಿದ್ಯೆಯೂ ನಾನೇ ಆಗಿದ್ದೇನೆ. ತತ್ತ್ವಗಳ ನಿರ್ಣಯ ಮಾಡಲಾಗುವ ವಾದ-ವಿವಾದರೂಪೀ ವಿಕಲ್ಪವೂ ನಾನೇ. (ಏಕೆಂದರೆ ಇಂದಿನವರೆಗೆ ಯಾವುದೇ ತತ್ತ್ವಗಳ ವಿಷಯದಲ್ಲಿ ತತ್ತ್ವಗಳ ಸಂಖ್ಯೆ ಇಷ್ಟೇ ಇದೆ ಎಂಬುದು ನಿರ್ಣಯ ಮಾಡಲಾಗಲಿಲ್ಲ) ಸ್ತ್ರೀಯರಲ್ಲಿ ಮನುಪತ್ನೀ ಶತರೂಪಾ, ಪುರುಷರಲ್ಲಿ ಸ್ವಾಯಂಭುವ ಮನು, ಮುನೀಶ್ವರರಲ್ಲಿ ನಾರಾಯಣ, ಬ್ರಹ್ಮಚಾರಿಗಳಲ್ಲಿ ಸನತ್ಕುಮಾರರು ನಾನೇ ಆಗಿದ್ದೇನೆ. ॥ ೨೪-೨೫ ॥

ಧರ್ಮಾಣಾಮಸ್ಮಿ ಸಂನ್ಯಾಸಃ ಕ್ಷೇಮಾಣಾಮಬಹಿರ್ಮತಿಃ ।
ಗುಹ್ಯಾನಾಂ ಸೂನೃತಂ ಮೌನಂ ಮಿಥುನಾನಾಮಜಸ್ತ್ವಹಮ್
॥ ೨೬ ॥

ಸಂವತ್ಸರೋಽಸ್ಮ್ಯನಿಮಿಷಾಮೃತೂನಾಂ ಮಧುಮಾಧವೌ ।
ಮಾಸಾನಾಂ ಮಾರ್ಗಶೀರ್ಷೋಽಹಂ ನಕ್ಷತ್ರಾಣಾಂ ತಥಾಭಿಜಿತ್
॥ ೨೭ ॥

ಅಹಂ ಯುಗಾನಾಂ ಚ ಕೃತಂ ಧೀರಾಣಾಂ ದೇವಲೋಽಸಿತಃ ।
ದ್ವೈಪಾಯನೋಽಸ್ಮಿ ವ್ಯಾಸಾನಾಂ ಕವೀನಾಂ ಕಾವ್ಯ ಆತ್ಮವಾನ್
॥ ೨೮ ॥

ವಾಸುದೇವೋ ಭಗವತಾಂ ತ್ವಂ ತು ಭಾಗವತೇಷ್ವಹಮ್ ।
ಕಿಂಪುರುಷಾಣಾಂ ಹನುಮಾನ್ವಿದ್ಯಾಧ್ರಾಣಾಂ ಸುದರ್ಶನಃ
॥ ೨೯ ॥

ರತ್ನಾನಾಂ ಪದ್ಮರಾಗೋಽಸ್ಮಿ ಪದ್ಮಕೋಶಃ ಸುಪೇಶಸಾಮ್ ।
ಕುಶೋಽಸ್ಮಿ ದರ್ಭಜಾತೀನಾಂ ಗವ್ಯಮಾಜ್ಯಂ ಹವಿಃಷ್ವಹಮ್
॥ ೩೦ ॥

ವ್ಯವಸಾಯಿನಾಮಹಂ ಲಕ್ಷ್ಮೀಃ ಕಿತವಾನಾಂ ಛಲಗ್ರಹಃ ।
ತಿತಿಕ್ಷಾಸ್ಮಿ ತಿತಿಕ್ಷೂಣಾಂ ಸತ್ತ್ವಂ ಸತ್ತ್ವವತಾಮಹಮ್
॥ ೩೧ ॥

ಓಜಃ ಸಹೋ ಬಲವತಾಂ ಕರ್ಮಾಹಂ ವಿದ್ಧಿ ಸಾತ್ವತಾಮ್ ।
ಸಾತ್ವತಾಂ ನವಮೂರ್ತೀನಾಮಾದಿಮೂರ್ತಿರಹಂ ಪರಾ
॥ ೩೨ ॥

ವಿಶ್ವಾವಸುಃ ಪೂರ್ವಚಿತ್ತಿರ್ಗಂಧರ್ವಾಪ್ಸರಸಾಮಹಮ್ ।
ಭೂಧರಾಣಾಮಹಂ ಸ್ಥೈರ್ಯಂ ಗಂಧಮಾತ್ರಮಹಂ ಭುವಃ
॥ ೩೩ ॥

ಅಪಾಂ ರಸಶ್ಚ ಪರಮಸ್ತೇಜಿಷ್ಠಾನಾಂ ವಿಭಾವಸುಃ ।
ಪ್ರಭಾ ಸೂರ್ಯೇಂದುತಾರಾಣಾಂ ಶಬ್ದೋಽಹಂ ನಭಸಃ ಪರಃ
॥ ೩೪ ॥

ಬ್ರಹ್ಮಣ್ಯಾನಾಂ ಬಲಿರಹಂ ವೀರಾಣಾಮಹಮರ್ಜುನಃ ।
ಭೂತಾನಾಂ ಸ್ಥಿತಿರುತ್ಪತ್ತಿರಹಂ ವೈ ಪ್ರತಿಸಂಕ್ರಮಃ
॥ ೩೫ ॥

ಗತ್ಯುಕ್ತ್ಯುತ್ಸರ್ಗೋಪಾದಾನಮಾನಂದಸ್ಪರ್ಶಲಕ್ಷಣಮ್ ।
ಆಸ್ವಾದಶ್ರುತ್ಯವಘ್ರಾಣಮಹಂ ಸರ್ವೇಂದ್ರಿಯೇಂದ್ರಿಯಮ್
॥ ೩೬ ॥

ಧರ್ಮಗಳಲ್ಲಿ ಸಂನ್ಯಾಸ ಧರ್ಮವು ಶ್ರೇಯಸ್ಕಾಮೀ ಪುರುಷರ ಅಂತರ್ಮುಖೀ ವೃತ್ತಿಯೂ, ಯಾವುದೇ ಮಾತನ್ನು ಗೋಪನೀಯ ವಾಗಿಡುವುದಕ್ಕಾಗಿ ಮಧುರವಾಣೀ ಮತ್ತು ಮೌನ ನಾನೇ ಆಗಿದ್ದೇನೆ. ಯಾರ ಶರೀರದ ಎರಡು ಭಾಗಗಳಿಂದ ಸ್ತ್ರೀ-ಪುರುಷರ ಮೊದಲನೆಯ ಜೋಡಿಯು ಉತ್ಪನ್ನವಾಯಿತೋ ಆ ಬ್ರಹ್ಮದೇವರು ನಾನೇ ಆಗಿದ್ದೇನೆ. ॥ ೨೬ ॥ ಸದಾಕಾಲವೂ ಎಚ್ಚರವಾಗಿರುವವರಲ್ಲಿ ಸಂವತ್ಸರರೂಪೀ ಕಾಲವು ನಾನೇ. ಋತುಗಳಲ್ಲಿ ವಸಂತನೂ, ತಿಂಗಳುಗಳಲ್ಲಿ ಮಾರ್ಗಶೀರ್ಷವೂ, ನಕ್ಷತ್ರಗಳಲ್ಲಿ ಅಭಿಜಿತ್ ನಾನೇ ಆಗಿದ್ದೇನೆ. ॥ ೨೭ ॥ ಯುಗಗಳಲ್ಲಿ ಕೃತಯುಗವೂ, ವಿವೇಕಿಗಳಲ್ಲಿ ದೇವರ್ಷಿ ದೇವಲ ಮತ್ತು ಅಸಿತನೂ, ವ್ಯಾಸರಲ್ಲಿ ಶ್ರೀಕೃಷ್ಣದ್ವೈಪಾಯನ ವ್ಯಾಸ ಹಾಗೂ ಕವಿಗಳಲ್ಲಿ ಮನಸ್ವೀ ಶುಕ್ರಾಚಾರ್ಯರೂ ನಾನೇ ಆಗಿರುವೆನು. ॥ ೨೮॥ ಷಡ್ಗುಣೈಶ್ವರ್ಯಗಳಲ್ಲಿ ಭಗವಾನ್ ವಾಸುದೇವನು ನಾನೇ. ನನ್ನ ಪ್ರೇಮಿ ಭಕ್ತರಲ್ಲಿ ನೀನು (ಉದ್ಧವ), ಕಿಂಪುರುಷರಲ್ಲಿ ಹನುಮಂತನೂ, ವಿದ್ಯಾಧರರಲ್ಲಿ ಸುದರ್ಶನವೂ (ಅವನು ಅಜಗರ ರೂಪದಿಂದ ನಂದರಾಜನನ್ನು ನುಂಗಿದ್ದನು ಮತ್ತೆ ಭಗವಂತನ ಪಾದಸ್ಪರ್ಶದಿಂದ ಮುಕ್ತನಾಗಿದ್ದನು.) ನಾನೇ ಆಗಿದ್ದೇನೆ. ॥ ೨೯ ॥ ರತ್ನಗಳಲ್ಲಿ ಪದ್ಮರಾಗ (ಕೆಂಪು)ವೂ, ಸುಂದರ ವಸ್ತುಗಳಲ್ಲಿ ಕಮಲದ ಮೊಗ್ಗು, ತೃಣಗಳಲ್ಲಿ ಕುಶ, ಹವಿಸ್ಸುಗಳಲ್ಲಿ ಹಸುವಿನ ತುಪ್ಪ ನಾನೇ ಆಗಿದ್ದೇನೆ. ॥ ೩೦ ॥ ವ್ಯಾಪಾರಿಗಳಲ್ಲಿ ಇರುವ ಲಕ್ಷ್ಮೀಯೂ, ಛಲ-ಕಪಟಮಾಡುವವರಲ್ಲಿ ದ್ಯೂತ ಕ್ರೀಡೆಯೂ, ತಿತಿಕ್ಷುಗಳ ತಿತಿಕ್ಷೆಯೂ, ಸಾತ್ತ್ವಿಕರಲ್ಲಿರುವ ಸತ್ತ್ವಗುಣವೂ ನಾನೇ ಆಗಿರುವೆನು. ॥ ೩೧ ॥ ಬಲಿಷ್ಠರಲ್ಲಿ ಉತ್ಸಾಹ ಪರಾಕ್ರಮವೂ, ಭಗವದ್ಭಕ್ತರಲ್ಲಿ ಭಕ್ತಿಯುಕ್ತ ನಿಷ್ಕಾಮಕರ್ಮವೂ, ವೈಷ್ಣವರಲ್ಲಿ ವಾಸುದೇವ ಸಂಕರ್ಷಣ, ಪ್ರದ್ಯುಮ್ನ, ಅನಿರುದ್ಧ, ನಾರಾಯಣ, ಹಯಗ್ರೀವ, ವರಾಹ, ನೃಸಿಂಹ ಮತ್ತು ಬ್ರಹ್ಮಾ – ಈ ಒಂಭತ್ತು ಮೂರ್ತಿಗಳಲ್ಲಿ ಮೊದಲನೆಯದಾದ ಶ್ರೇಷ್ಠ ವಾಸುದೇವ ಮೂರ್ತಿಯೂ ನಾನೇ ಆಗಿದ್ದೇನೆ. ॥ ೩೨ ॥ ಗಂಧರ್ವರಲ್ಲಿ ವಿಶ್ವಾವಸು, ಅಪ್ಸರೆಯರಲ್ಲಿ ಬ್ರಹ್ಮನ ಆಸ್ಥಾನದ ಅಪ್ಸರೆ ಪೂರ್ವಚಿತ್ತಿ, ಪರ್ವತಗಳಲ್ಲಿ ಸ್ಥಿರತೆ, ಪೃಥ್ವಿಯಲ್ಲಿ ಶುದ್ಧಗಂಧ ತನ್ಮಾತ್ರೆಯ ಗುಣ ಶಬ್ದ ನಾನೇ ಆಗಿದ್ದೇನೆ. ॥ ೩೩ ॥ ಜಲದಲ್ಲಿ ರಸವೂ, ತೇಜಸ್ವೀ ಅಗ್ನಿ, ಸೂರ್ಯ, ಚಂದ್ರ, ನಕ್ಷತ್ರಗಳಲ್ಲಿ ಪ್ರಭೆನಾನಾಗಿದ್ದೇನೆ. ಆಕಾಶದಲ್ಲಿ ಅದರ ಏಕಮಾತ್ರ ಗುಣವಾದ ಶಬ್ದವು ನಾನೇ ಆಗಿದ್ದೇನೆ. ॥ ೩೪ ॥ ಉದ್ಧವನೇ ! ಬ್ರಾಹ್ಮಣಭಕ್ತರಲ್ಲಿ ಬಲಿ, ವೀರರಲ್ಲಿ ಅರ್ಜುನ, ಪ್ರಾಣಿಗಳಲ್ಲಿ ಅವರ ಉತ್ಪತ್ತಿ, ಸ್ಥಿತಿಯೂ, ಕೊನೆಗೆ ಅವರೆಲ್ಲ ನನ್ನ ಮೂಲಸ್ಥಾನದಲ್ಲಿ (ಪ್ರಳಯದಲ್ಲಿ) ಬಂದು ಸೇರುವ ವಿಧಾನವೂ ನಾನೇ ಆಗಿದ್ದೇನೆ. ॥ ೩೫ ॥ ನಾನೇ ಕಾಲುಗಳಿಂದ ನಡೆಯುವ ಶಕ್ತಿ, ವಾಣಿಯಿಂದ ಮಾತಾಡುವ ಶಕ್ತಿ , ವಾಯುವಿನಲ್ಲಿ ಮಲತ್ಯಾಗದ ಶಕ್ತಿ , ಕೈಗಳಲ್ಲಿ ಹಿಡಿಯುವ ಶಕ್ತಿ , ಜನನೇಂದ್ರಿಯದಲ್ಲಿ ಆನಂದೋಪಭೋಗದ ಶಕ್ತಿ , ತ್ವಚೆಯಲ್ಲಿ ಸ್ಪರ್ಶದ, ನೇತ್ರಗಳಲ್ಲಿ ದರ್ಶನದ, ರಸನೆಯಲ್ಲಿ ರುಚಿಯಾಗುವ, ಕಿವಿಗಳಲ್ಲಿ ಶ್ರವಣದ, ಮೂಗಿನಲ್ಲಿ ಮೂಸುವ ಶಕ್ತಿಯೂ ಸಮಸ್ತ ಇಂದ್ರಿಯಗಳ ಇಂದ್ರಿಯಶಕ್ತಿಯೂ ನಾನೇ ಆಗಿದ್ದೇನೆ. ಪೃಥ್ವೀ, ವಾಯು, ಆಕಾಶ,

ಪೃಥಿವೀ ವಾಯುರಾಕಾಶ ಆಪೋ ಜ್ಯೋತಿರಹಂ ಮಹಾನ್ ।
ವಿಕಾರಃ ಪುರುಷೋಽವ್ಯಕ್ತಂ ರಜಃ ಸತ್ತ್ವಂ ತಮಃ ಪರಮ್
॥ ೩೭ ॥

ಅಹಮೇತತ್ಪ್ರಸಂಖ್ಯಾನಂ ಜ್ಞಾನಂ ತತ್ತ್ವವಿನಿಶ್ಚಯಃ ।
ಮಯೇಶ್ವರೇಣ ಜೀವೇನ ಗುಣೇನ ಗುಣಿನಾ ವಿನಾ ।
ಸರ್ವಾತ್ಮನಾಪಿ ಸರ್ವೇಣ ನ ಭಾವೋ ವಿದ್ಯತೇ ಕ್ವಚಿತ್
॥ ೩೮ ॥

ಸಂಖ್ಯಾನಂ ಪರಮಾಣೂನಾಂ ಕಾಲೇನ ಕ್ರಿಯತೇ ಮಯಾ ।
ನ ತಥಾ ಮೇ ವಿಭೂತೀನಾಂ ಸೃಜತೋಽಂಡಾನಿ ಕೋಟಿಶಃ
॥ ೩೯ ॥

ತೇಜಃ ಶ್ರೀಃ ಕೀರ್ತಿರೈಶ್ವರ್ಯಂ ಹ್ರೀಸ್ತ್ಯಾಗಃ ಸೌಭಗಂ ಭಗಃ ।
ವೀರ್ಯಂ ತಿತಿಕ್ಷಾ ವಿಜ್ಞಾನಂ ಯತ್ರ ಯತ್ರ ಸ ಮೇಽಂಶಕಃ
॥ ೪೦ ॥

ಏತಾಸ್ತೇ ಕೀರ್ತಿತಾಃ ಸರ್ವಾಃ ಸಂಕ್ಷೇಪೇಣ ವಿಭೂತಯಃ ।
ಮನೋವಿಕಾರಾ ಏವೈತೇ ಯಥಾ ವಾಚಾಭಿಧೀಯತೇ
॥ ೪೧ ॥

ವಾಚಂ ಯಚ್ಛ ಮನೋ ಯಚ್ಛ ಪ್ರಾಣಾನ್ಯಚ್ಛೇಂದ್ರಿಯಾಣಿ ಚ ।
ಆತ್ಮಾನಮಾತ್ಮನಾ ಯಚ್ಛ ನ ಭೂಯಃ ಕಲ್ಪಸೇಽಧ್ವನೇ
॥ ೪೨ ॥

ಯೋ ವೈ ವಾಙ್ಮನಸೀ ಸಮ್ಯಗಸಂಯಚ್ಛನ್ ಧಿಯಾ ಯತಿಃ ।
ತಸ್ಯ ವ್ರತಂ ತಪೋ ಜ್ಞಾನಂ ಸ್ರವತ್ಯಾಮಘಟಾಂಬುವತ್
॥ ೪೩ ॥

ತಸ್ಮಾನ್ಮನೋವಚಃಪ್ರಾಣಾನ್ ನಿಯಚ್ಛೇನ್ಮತ್ಪರಾಯಣಃ ।
ಮದ್ಭಕ್ತಿಯುಕ್ತಯಾ ಬುದ್ಧ್ಯಾ ತತಃ ಪರಿಸಮಾಪ್ಯತೇ
॥ ೪೪ ॥

ಜಲ, ತೇಜ, ಅಹಂಕಾರ, ಮಹತ್ತತ್ತ್ವ, ಪಂಚಮಹಾಭೂತಗಳು, ಜೀವ, ಅವ್ಯಕ್ತ, ಪ್ರಕೃತಿ, ಸತ್ತ್ವ, ರಜ, ತಮ ಇವೆಲ್ಲ ವಿಕಾರಗಳು ಮತ್ತು ಇವುಗಳಿಂದ ಅತೀತವಾಗಿರುವ ಪರಬ್ರಹ್ಮ ಇವೆಲ್ಲವೂ ನಾನೇ ಆಗಿರುವೆನು. ॥ ೩೬-೩೭॥ ಈ ತತ್ತ್ವಗಳ ಗಣನೆ, ಲಕ್ಷಣಗಳ ಮೂಲಕ ಅವುಗಳ ಜ್ಞಾನ, ತತ್ತ್ವಜ್ಞಾನರೂಪೀ ಅದರ ಫಲವೂ ನಾನೇ ಆಗಿದ್ದೇನೆ. ನಾನೇ ಈಶ್ವರನೂ, ಜೀವವೂ, ಗುಣವೂ, ಗುಣಿಯೂ, ಎಲ್ಲರ ಆತ್ಮನೂ, ಸರ್ವರೂಪನೂ ಆಗಿರುವೆನು. ನಾನಲ್ಲದೆ ಬೇರೆ ಯಾವುದೇ ಪದಾರ್ಥ ಎಲ್ಲಿಯೂ ಇಲ್ಲ. ॥ ೩೮ ॥ ಒಂದೊಮ್ಮೆ ಎಣಿಸತೊಡಗಿದರೆ, ಪರಮಾಣುಗಳ ಎಣಿಕೆ ಕದಾಚಿತ್ ಆಗಬಹುದು; ಆದರೆ ನನ್ನ ವಿಭೂತಿಗಳ ಎಣಿಕೆ ಸಾಧ್ಯವಾಗದು. ಏಕೆಂದರೆ, ನಾನು ರಚಿಸಿದ ಕೋಟಿ-ಕೋಟಿ ಬ್ರಹ್ಮಾಂಡಗಳ ಎಣಿಕೆಯೇ ಆಗದಿದ್ದಾಗ, ನನ್ನ ವಿಭೂತಿಗಳ ಗಣನೆಯಾದರೂ ಹೇಗಾಗಬಲ್ಲದು ? ॥ ೩೯ ॥ ಯಾವುದರಲ್ಲೇ ಆಗಲೀ ತೇಜ, ಶ್ರೀ, ಕೀರ್ತಿ, ಐಶ್ವರ್ಯ, ಲಜ್ಜೆ, ತ್ಯಾಗ, ಸೌಂದರ್ಯ, ಸೌಭಾಗ್ಯ, ಪರಾಕ್ರಮ, ತಿತಿಕ್ಷೆ, ವಿಜ್ಞಾನ ಮುಂತಾದ ಇರುವ ಶ್ರೇಷ್ಠಗುಣಗಳೆಲ್ಲ ನನ್ನ ಅಂಶವೇ ಆಗಿದೆ ಎಂದು ತಿಳಿದುಕೊ. ॥ ೪೦ ॥

ಉದ್ಧವನೇ! ನಿನ್ನ ಪ್ರಶ್ನೆಗನುಸಾರ ನಾನು ಸಂಕ್ಷೇಪವಾಗಿ ವಿಭೂತಿಗಳನ್ನು ವರ್ಣಿಸಿರುವೆನು. ಇವೆಲ್ಲವೂ ಪರಮಾರ್ಥವಸ್ತು ಆಗಿರದೆ ಮನೋವಿಕಾರಮಾತ್ರವಾಗಿವೆ. ಏಕೆಂದರೆ, ಮನಸ್ಸಿನಿಂದ ಯೋಚಿಸಿದ, ವಾಣಿಯಿಂದ ಹೇಳಲಾದ ಯಾವುದೇ ವಸ್ತುವೂ ಪರಮಾರ್ಥ (ವಾಸ್ತವಿಕ) ವಾಗಿರುವುದಿಲ್ಲ, ಅದರ ಒಂದು ಕಲ್ಪನೆಯೇ ಆಗಿರುತ್ತದೆ. ॥ ೪೧ ॥ ಆದ್ದರಿಂದ ನೀನು ವಾಣಿಯನ್ನು ವಶಪಡಿಸಿಕೋ. ಮನಸ್ಸಿನ ಸಂಕಲ್ಪ - ವಿಕಲ್ಪಗಳನ್ನು ನಿಲ್ಲಿಸಿಬಿಡು. ಪ್ರಾಣಗಳನ್ನು ವಶಪಡಿಸಿಕೊಂಡು, ಇಂದ್ರಿಯಗಳನ್ನು ದಮನ ಮಾಡು. ಸಾತ್ತ್ವಿಕ ಬುದ್ಧಿಯಮೂಲಕ ಪ್ರಪಂಚಾಭಿಮುಖೀ ಬುದ್ಧಿಯನ್ನು ಶಾಂತಗೊಳಿಸು. ಮತ್ತೆ ನಿನಗೆ ಸಂಸಾರದ ಜನ್ಮ-ಮರಣ ರೂಪೀ ದುಃಖಮಯ ಮಾರ್ಗದಲ್ಲಿ ಅಲೆಯಬೇಕಾಗುವುದಿಲ್ಲ. ॥ ೪೨ ॥ ಬುದ್ಧಿಯ ಮೂಲಕ ವಾಣಿ ಮತ್ತು ಮನಸ್ಸನ್ನು ಪೂರ್ಣವಾಗಿ ವಶಪಡಿಸಿಕೊಳ್ಳಲಾರದ ಸಾಧಕನ ವ್ರತ, ತಪಸ್ಸು, ಜ್ಞಾನ ಇವುಗಳು ಹಸಿಗಡಿಗೆಯಲ್ಲಿ ತುಂಬಿಟ್ಟ ನೀರಿನಂತೆ, ಕ್ಷೀಣವಾಗುತ್ತದೆ. ॥ ೪೩ ॥ ಅದಕ್ಕಾಗಿ ನನ್ನ ಪ್ರೇಮೀ ಭಕ್ತನು ನನ್ನಲ್ಲಿ ಪರಾಯಣನಾಗಿ ಭಕ್ತಿಯುಕ್ತ ಬುದ್ಧಿಯಿಂದ ವಾಣೀ, ಮನಸ್ಸು ಪ್ರಾಣಗಳನ್ನು ಸಂಯಮ ಮಾಡಬೇಕು. ಹೀಗೆ ಮಾಡುವುದರಿಂದ ಮತ್ತೆ ಅವನಿಗೆ ಮಾಡಲು ಯಾವುದೇ ಬಾಕಿ ಇರುವುದಿಲ್ಲ, ಅವನು ಕೃತಕೃತ್ಯನಾಗಿ ಹೋಗುತ್ತಾನೆ. ॥ ೪೪ ॥

ಹದಿನಾರನೆಯ ಅಧ್ಯಾಯವು ಮುಗಿಯಿತು. ॥ ೧೬ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಏಕಾದಶಸ್ಕಂಧೇ ಷೋಡಶೋಽಧ್ಯಾಯಃ ॥ ೧೬ ॥

ಹದಿನೇಳನೆಯ ಅಧ್ಯಾಯ

ವರ್ಣಾಶ್ರಮ ಧರ್ಮದ ನಿರೂಪಣೆ

ಉದ್ಧವ ಉವಾಚ

ಯಸ್ತ್ವಯಾಭಿಹಿತಃ ಪೂರ್ವಂ ಧರ್ಮಸ್ತ್ವದ್ಭಕ್ತಿಲಕ್ಷಣಃ ।
ವರ್ಣಾಶ್ರಮಾಚಾರವತಾಂ ಸರ್ವೇಷಾಂ ದ್ವಿಪದಾಮಪಿ ॥ ೧ ॥

ಯಥಾನುಷ್ಠೀಯಮಾನೇನ ತ್ವಯಿ ಭಕ್ತಿರ್ನೃಣಾಂ ಭವೇತ್ ।
ಸ್ವಧರ್ಮೇಣಾರವಿಂದಾಕ್ಷ ತತ್ಸಮಾಖ್ಯಾತುಮರ್ಹಸಿ ॥ ೨ ॥

ಪುರಾ ಕಿಲ ಮಹಾಬಾಹೋ ಧರ್ಮಂ ಪರಮಕಂ ಪ್ರಭೋ ।
ಯತ್ತೇನ ಹಂಸರೂಪೇಣ ಬ್ರಹ್ಮಣೇಽಭ್ಯಾತ್ಥ ಮಾಧವ ॥ ೩ ॥

ಸ ಇದಾನೀಂ ಸುಮಹತಾ ಕಾಲೇನಾಮಿತ್ರಕರ್ಶನ ।
ನ ಪ್ರಾಯೋ ಭವಿತಾ ಮರ್ತ್ಯಲೋಕೇ ಪ್ರಾಗನುಶಾಸಿತಃ ॥ ೪ ॥

ವಕ್ತಾ ಕರ್ತಾವಿತಾ ನಾನ್ಯೋ ಧರ್ಮಸ್ಯಾಚ್ಯುತ ತೇ ಭುವಿ ।
ಸಭಾಯಾಮಪಿ ವೈರಿಂಚ್ಯಾಂ ಯತ್ರ ಮೂರ್ತಿಧರಾಃ ಕಲಾಃ ॥ ೫ ॥

ಕರ್ತ್ರಾವಿತ್ರಾ ಪ್ರವಕ್ತ್ರಾ ಚ ಭವತಾ ಮಧುಸೂದನ ।
ತ್ಯಕ್ತೇ ಮಹೀತಲೇ ದೇವ ವಿನಷ್ಟಂ ಕಃ ಪ್ರವಕ್ಷ್ಯತಿ ॥ ೬ ॥

ತತ್ತ್ವಂ ನಃ ಸರ್ವಧರ್ಮಜ್ಞ ಧರ್ಮಸ್ತ್ವದ್ಭಕ್ತಿಲಕ್ಷಣಃ ।
ಯಥಾ ಯಸ್ಯ ವಿಧೀಯೇತ ತಥಾ ವರ್ಣಯ ಮೇ ಪ್ರಭೋ ॥ ೭ ॥

ಶ್ರೀಶುಕ ಉವಾಚ

ಇತ್ಥಂ ಸ್ವಭೃತ್ಯಮುಖ್ಯೇನ ಪೃಷ್ಟಃ ಸ ಭಗವಾನ್ ಹರಿಃ ।
ಪ್ರೀತಃ ಕ್ಷೇಮಾಯ ಮರ್ತ್ಯಾನಾಂ ಧರ್ಮಾನಾಹ ಸನಾತನಾನ್ ॥ ೮ ॥

ಶ್ರೀಭಗವಾನುವಾಚ

ಧರ್ಮ್ಯ ಏಷ ತವ ಪ್ರಶ್ನೋ ನೈಃಶ್ರೇಯಸಕರೋ ನೃಣಾಮ್ ।
ವರ್ಣಾಶ್ರಮಾಚಾರವತಾಂ ತಮುದ್ಧವ ನಿಬೋಧ ಮೇ ॥ ೯ ॥

ಆದೌ ಕೃತಯುಗೇ ವರ್ಣೋ ನೃಣಾಂ ಹಂಸ ಇತಿ ಸ್ಮೃತಃ ।
ಕೃತಕೃತ್ಯಾಃ ಪ್ರಜಾ ಜಾತ್ಯಾ ತಸ್ಮಾತ್ ಕೃತಯುಗಂ ವಿದುಃ ॥ ೧೦ ॥

ಉದ್ಧವನು ಕೇಳಿದನು – ಕಮಲನಯನ ಶ್ರೀಕೃಷ್ಣಾ! ಈಗ ನೀನು ಧರ್ಮದ ವಿಷಯದಲ್ಲಿ ನಿರೂಪಿಸಿದೆ. ಅದರಿಂದ ನಿನ್ನ ಭಕ್ತಿಯು ಪ್ರಾಪ್ತವಾಗುತ್ತದೆ. ಅದು ಎಲ್ಲ ವರ್ಣ ಆಶ್ರಮದ ಮನುಷ್ಯರಿಗೆ ದೊರೆಯಬಲ್ಲದು. ತಮ್ಮ-ತಮ್ಮ ಧರ್ಮದ ಅನುಷ್ಠಾನವನ್ನು ಮಾಡುತ್ತಾ ಮನುಷ್ಯನು ನಿನ್ನ ಭಕ್ತಿಯನ್ನು ಸಹಜವಾಗಿ ಹೇಗೆ ಪಡೆಯಬಲ್ಲನು ಎಂಬುದನ್ನು ತಿಳಿಸುವ ಕೃಪೆ ಮಾಡಬೇಕು. ॥ ೧-೨ ॥ ಮಹಾಬಾಹು ಮಾಧವಾ ! ಸ್ವಾಮೀ ! ಮೊದಲು ನೀನು ಹಂಸರೂಪದಿಂದ ಅವತರಿಸಿ ಬ್ರಹ್ಮದೇವರಿಗೆ ಪರಮಧರ್ಮವನ್ನು ಉಪದೇಶಿಸಿರುವೆ. ॥ ೩ ॥ ಶತ್ರುಮರ್ದನಾ ! ಅನೇಕ ಕಾಲವು ಕಳೆದುಹೋದ ಕಾರಣ ಅದು ಈಗ ಮರ್ತ್ಯ ಲೋಕದಲ್ಲಿ ಪ್ರಾಯಶಃ ಇಲ್ಲವೆಂದೇ ಆಗಿದೆ. ಏಕೆಂದರೆ, ನೀನು ಅದನ್ನು ಉಪದೇಶಿಸಿ ಬಹಳ ದಿನಗಳು ಕಳೆದುಹೋದುವು. ॥ ೪ ॥ ಅಚ್ಯುತಾ ! ಈ ಪೃಥ್ವಿಯಲ್ಲಾಗಲೀ, ಸಮಸ್ತ ವೇದಗಳು ಮೂರ್ತಿಮಂತವಾಗಿ ವಿರಾಜಿಸುತ್ತಿರುವ ಚತುರ್ಮುಖ ಬ್ರಹ್ಮನ ಆ ಸಭೆಯಲ್ಲಾಗಲೀ, ನಿನ್ನ ಈ ಧರ್ಮದ ಪ್ರವಚನ, ಪ್ರವರ್ತನ ಅಥವಾ ಸಂರಕ್ಷಣ ಮಾಡಬಲ್ಲವರು ನೀನಲ್ಲದೆ ಬೇರೆ ಯಾರೂ ಇಲ್ಲ. ॥ ೫ ॥ ಓ ಮಧುಸೂದನಾ ! ನೀನೇ ಈ ಧರ್ಮದ ಪ್ರವರ್ತಕ, ರಕ್ಷಕ ಮತ್ತು ಉಪದೇಶಕನಾಗಿರುವೆ. ಓ ಪರಮಾತ್ಮಾ! ನೀನು ಈ ಮಹೀತಲದಿಂದ ನಿನ್ನ ಲೀಲೆಯನ್ನು ಸಂವರಣಮಾಡಿಕೊಂಡಾಗ ಈ ಧರ್ಮದ ಲೋಪವೇ ಆಗಿ ಹೋದೀತು. ಹಾಗಿರುವಾಗ ಅದನ್ನು ಯಾರು ಹೇಳುವರು ? ॥ ೬ ॥ ಆದ್ದರಿಂದ ಓ ಸರ್ವಧರ್ಮದ ಜ್ಞಾತೃವಾದ ಪ್ರಭೋ ! ನಿನ್ನ ಭಕ್ತಿಯು ಪ್ರಾಪ್ತವಾಗಿಸುವ, ಆ ಧರ್ಮವನ್ನು ನೀನು ವರ್ಣಿಸು. ಯಾರಿಗಾಗಿ ಅದರ ಯಾವ ವಿಧಾನವಾಗಿದೆ, ಅದನ್ನೂ ತಿಳಿಸುವವನಾಗು. ॥ ೭ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ ! ಭಕ್ತಶಿರೋಮಣಿ ಉದ್ಧವನು ಈ ವಿಧವಾಗಿ ಪ್ರಶ್ನಿಸಿದಾಗ ಭಗವಾನ್ ಶ್ರೀಕೃಷ್ಣನು ಅತ್ಯಂತ ಪ್ರಸನ್ನನಾಗಿ ಪ್ರಾಣಿಗಳ ಶ್ರೇಯಸ್ಸಿಗಾಗಿ ಸನಾತನ ಧರ್ಮವನ್ನು ಉಪದೇಶಿಸಿದನು. ॥ ೮ ॥

ಭಗವಾನ್ ಶ್ರೀಕೃಷ್ಣನು ಹೇಳಿದನು – ಪ್ರಿಯ ಉದ್ಧವನೇ ! ನಿನ್ನ ಪ್ರಶ್ನೆಯು ಧರ್ಮಮಯವಾಗಿದೆ. ಏಕೆಂದರೆ, ಇದು ಎಲ್ಲ ವರ್ಣಾಶ್ರಮಧರ್ಮಿ ಮನುಷ್ಯರಿಗೆ ಪರಮ ಶ್ರೇಯಸ್ಕರ ಮೋಕ್ಷವನ್ನು ಕೊಡುವುದಾಗಿದೆ. ಮನಸ್ಸು ಕೊಟ್ಟು ಕೇಳು. ॥ ೯ ॥

ಈ ಕಲ್ಪದ ಪ್ರಾರಂಭದ ಕೃತಯುಗದಲ್ಲಿ ಎಲ್ಲ ಜನರೂ ಹುಟ್ಟಿದಂದಿನಿಂದಲೇ ಕೃತಕೃತ್ಯರಾಗಿರುತ್ತಿದ್ದರು. ಆಗ ಎಲ್ಲರ ವರ್ಣವು ಹಂಸವೆಂದೇ ಇತ್ತು. ಅದಕ್ಕಾಗಿ ಅದರ ಹೆಸರೂ ಕೂಡ ಕೃತಯುಗವೆಂದಾಯಿತು. ॥ ೧೦ ॥ ಆಗ ಕೇವಲ ಪ್ರಣವವೇ ವೇದವಾಗಿತ್ತು.

ವೇದಃ ಪ್ರಣವ ಏವಾಗ್ರೇ ಧರ್ಮೋಽಹಂ ವೃಷರೂಪಧೃಕ್ ।
ಉಪಾಸತೇ ತಪೋನಿಷ್ಠಾ ಹಂಸಂ ಮಾಂ ಮುಕ್ತಕಿಲ್ಬಿಷಾಃ ॥ ೧೧ ॥

ತ್ರೇತಾಮುಖೇ ಮಹಾಭಾಗ ಪ್ರಾಣಾನ್ಮೇ ಹೃದಯಾತ್ತ್ರಯೀ ।
ವಿದ್ಯಾ ಪ್ರಾದುರಭೂತ್ತಸ್ಯಾ ಅಹಮಾಸಂ ತ್ರಿವೃನ್ಮಖಃ ॥ ೧೨ ॥

ವಿಪ್ರಕ್ಷತ್ರಿಯವಿಟ್ಶೂದ್ರಾ ಮುಖಬಾಹೂರುಪಾದಜಾಃ ।
ವೈರಾಜಾತ್ ಪುರುಷಾಜ್ಜಾತಾ ಯ ಆತ್ಮಾಚಾರಲಕ್ಷಣಾಃ ॥ ೧೩ ॥

ಗೃಹಾಶ್ರಮೋ ಜಘನತೋ ಬ್ರಹ್ಮಚರ್ಯಂ ಹೃದೋ ಮಮ ।
ವಕ್ಷಃಸ್ಥಾನಾದ್ವನೇ ವಾಸೋ ನ್ಯಾಸಃ ಶೀರ್ಷಣಿ ಸಂಸ್ಥಿತಃ ॥ ೧೪ ॥

ವರ್ಣಾನಾಮಾಶ್ರಮಾಣಾಂ ಚ ಜನ್ಮಭೂಮ್ಯನುಸಾರಿಣೀಃ ।
ಆಸನ್ ಪ್ರಕೃತಯೋ ನೃಣಾಂ ನೀಚೈರ್ನೀಚೋತ್ತಮೋತ್ತಮಾಃ ॥ ೧೫ ॥

ಶಮೋ ದಮಸ್ತಪಃ ಶೌಚಂ ಸಂತೋಷಃ ಕ್ಷಾಂತಿರಾರ್ಜವಮ್ ।
ಮದ್ಭಕ್ತಿಶ್ಚ ದಯಾ ಸತ್ಯಂ ಬ್ರಹ್ಮಪ್ರಕೃತಯಸ್ತ್ವಿಮಾಃ ॥ ೧೬ ॥

ತೇಜೋ ಬಲಂ ಧೃತಿಃ ಶೌರ್ಯಂ ತಿತಿಕ್ಷೌದಾರ್ಯಮುದ್ಯಮಃ ।
ಸ್ಥೈರ್ಯಂ ಬ್ರಹ್ಮಣ್ಯತೈಶ್ವರ್ಯಂ ಕ್ಷತ್ರಪ್ರಕೃತಯಸ್ತ್ವಿಮಾಃ ॥ ೧೭ ॥

ಆಸ್ತಿಕ್ಯಂ ದಾನನಿಷ್ಠಾ ಚ ಅದಂಭೋ ಬ್ರಹ್ಮಸೇವನಮ್ ।
ಅತುಷ್ಟಿರರ್ಥೋಪಚಯೈರ್ವೈಶ್ಯಪ್ರಕೃತಯಸ್ತ್ವಿಮಾಃ ॥ ೧೮ ॥

ಶುಶ್ರೂಷಣಂ ದ್ವಿಜಗವಾಂ ದೇವಾನಾಂ ಚಾಪ್ಯಮಾಯಯಾ ।
ತತ್ರ ಲಬ್ಧೇನ ಸಂತೋಷಃ ಶೂದ್ರಪ್ರಕೃತಯಸ್ತ್ವಿಮಾಃ ॥ ೧೯ ॥

ಅಶೌಚಮನೃತಂ ಸ್ತೇಯಂ ನಾಸ್ತಿಕ್ಯಂ ಶುಷ್ಕವಿಗ್ರಹಃ ।
ಕಾಮಃ ಕ್ರೋಧಶ್ಚ ತರ್ಷಶ್ಚ ಸ್ವಭಾವೋಽಂತೇವಸಾಯಿನಾಮ್ ॥ ೨೦ ॥

ತಪಸ್ಸು, ಶೌಚ, ದಯಾ, ಸತ್ಯ ಎಂಬ ನಾಲ್ಕು ಚರಣಗಳಿಂದ ಯುಕ್ತವಾದ ಧರ್ಮವು ವೃಷರೂಪಿಯಾಗಿ ನಾನೇ ಆಗಿದ್ದೆ. ಆಗ ನಿಷ್ಠಾಪರರೂ, ಪರಮ ತಪಸ್ವಿಗಳೂ ಆದ ಭಕ್ತಜನರು ಹಂಸ ಸ್ವರೂಪಿಯೂ, ಶುದ್ಧ ಪರಮಾತ್ಮನೂ ಆದ ನನ್ನನ್ನು ಉಪಾಸಿಸುತ್ತಿದ್ದರು. ॥ ೧೧ ॥ ಪರಮ ಭಾಗ್ಯಶಾಲಿಯಾದ ಉದ್ಧವನೇ! ಕೃತಯುಗದ ಬಳಿಕ ತ್ರೇತಾಯುಗದ ಪ್ರಾರಂಭದಲ್ಲಿ ನನ್ನ ಹೃದಯದಿಂದ ಪ್ರಾಣಗಳ ಮೂಲಕ ಋಗ್ವೇದ, ಸಾಮವೇದ, ಯಜುರ್ವೇದರೂಪೀ ತ್ರಯೀ ವಿದ್ಯೆ ಪ್ರಕಟವಾಯಿತು ಮತ್ತು ಆ ತ್ರಯೀ ವಿದ್ಯೆಯಿಂದ ಹೋತಾ, ಅಧ್ವರ್ಯು, ಉದ್ಗಾತಾ ಇವರ ಕರ್ಮರೂಪೀ ಮೂರು ಭೇದಗಳುಳ್ಳ ಯಜ್ಞದ ರೂಪದಲ್ಲಿ ನಾನೇ ಪ್ರಕಟನಾದೆ. ॥ ೧೨ ॥ ವಿರಾಟ್‌ಪುರುಷನ ಮುಖದಿಂದ ಬ್ರಾಹ್ಮಣರು, ಭುಜದಿಂದ ಕ್ಷತ್ರಿಯರು, ತೊಡೆಯಿಂದ ವೈಶ್ಯರು, ಚರಣಗಳಿಂದ ಶೂದ್ರರ ಉತ್ಪತ್ತಿಯಾಯಿತು. ಅವರ ಸ್ವಭಾವಕ್ಕನುಸಾರ ಹಾಗೂ ಆಚರಣಗಳಿಂದ ಅವರ ಪರಿಚಯವಾಗುತ್ತದೆ. ॥ ೧೩ ॥ ಉದ್ಧವನೇ! ವಿರಾಟ್‌ಪುರುಷನಾದ ನನ್ನ ತೊಡೆಯಿಂದ ಗೃಹಸ್ಥಾಶ್ರಮವು, ಹೃದಯದಿಂದ ಬ್ರಹ್ಮಚರ್ಯಾಶ್ರಮವೂ, ವಕ್ಷಸ್ಥಳದಿಂದ ವಾನಪ್ರಸ್ಥಾಶ್ರಮವೂ, ಮಸ್ತಕದಿಂದ ಸಂನ್ಯಾಸಾಶ್ರಮವೂ ಉಂಟಾಯಿತು. ॥ ೧೪ ॥

ಈ ವರ್ಣ ಮತ್ತು ಆಶ್ರಮಗಳ ಪುರುಷರ ಸ್ವಭಾವವೂ ಇವರ ಜನ್ಮಸ್ಥಾನಕ್ಕನುಸಾರವೇ ಉತ್ತಮ, ಮಧ್ಯಮ, ಅಧಮ ವೆಂದಾಯಿತು. ಅರ್ಥಾತ್ – ಉತ್ತಮ ಸ್ಥಾನದಿಂದ ಉತ್ಪನ್ನವಾಗುವ ವರ್ಣ ಮತ್ತು ಆಶ್ರಮಗಳ ಸ್ವಭಾವವು ಉತ್ತಮವಾಯಿತು. ಅಧಮ ಸ್ಥಾನದಿಂದ ಉತ್ಪನ್ನರಾದವರ ಸ್ವಭಾವ ಅಧಮವಾಯಿತು. ॥ ೧೫ ॥ ಶಮ, ದಮ, ತಪಸ್ಸು, ಪವಿತ್ರತೆ, ಸಂತೋಷ, ಕ್ಷಮಾಶೀಲತೆ, ಸರಳತೆ, ನನ್ನ ಭಕ್ತಿ, ದಯೆ ಮತ್ತು ಸತ್ಯ – ಇವು ಬ್ರಾಹ್ಮಣವರ್ಣದ ಸ್ವಭಾವವಾಗಿದೆ. ॥ ೧೬ ॥ ತೇಜ, ಬಲ, ಧೈರ್ಯ, ಶೌರ್ಯ, ಸಹನಶೀಲತೆ, ಉದಾರತೆ, ಉದ್ಯೋಗಶೀಲತೆ, ಸ್ಥಿರತೆ, ಬ್ರಾಹ್ಮಣಭಕ್ತಿ, ಐಶ್ವರ್ಯ – ಇವು ಕ್ಷತ್ರಿಯಧರ್ಮದ ಸ್ವಾಭಾವಿಕ ಸ್ವಭಾವವಾಗಿವೆ. ॥ ೧೭॥ ಆಸ್ತಿಕತೆ, ದಾನಶೀಲತೆ, ದಂಭಹೀನತೆ, ಬ್ರಾಹ್ಮಣರ ಸೇವೆಮಾಡುವುದು ಮತ್ತು ಧನಸಂಚಯದಿಂದ ಸಂತುಷ್ಟನಾಗುವುದು – ಇವು ವೈಶ್ಯವರ್ಣದ ಸ್ವಭಾವವಾಗಿದೆ. ॥ ೧೮ ॥ ಬ್ರಾಹ್ಮಣ, ಗೋವು ಮತ್ತು ದೇವತೆಗಳ ಸೇವೆಯನ್ನು ನಿಷ್ಕಪಟವಾಗಿ ಮಾಡುವುದು ಹಾಗೂ ಅದರಿಂದ ಏನು ಸಿಗುವುದೋ ಅದರಲ್ಲಿ ಸಂತುಷ್ಟನಾಗಿರುವುದು – ಇವು ಶೂದ್ರವರ್ಣದ ಸ್ವಭಾವವಾಗಿದೆ. ॥ ೧೯ ॥ ಅಪವಿತ್ರತೆ, ಸುಳ್ಳು ಹೇಳುವುದು, ಕಳ್ಳತನ ಮಾಡುವುದು, ಈಶ್ವರ ಮತ್ತು ಪರಲೋಕದ ಪರಿವೆ ಇಲ್ಲದಿರುವುದು, ಸುಳ್ಳು-ಪಳ್ಳು ಜಗಳ ಕಾದುವುದು, ಕಾಮ, ಕ್ರೋಧ, ತೃಷ್ಣೆಯ ವಶವಾಗುವುದು – ಇವು ಅಂತ್ಯಜರ ಸ್ವಭಾವವಾಗಿದೆ. ॥ ೨೦ ॥

ಅಹಿಂಸಾ ಸತ್ಯಮಸ್ತೇಯಮಕಾಮಕ್ರೋಧಲೋಭತಾ ।
ಭೂತಪ್ರಿಯಹಿತೇಹಾ ಚ ಧರ್ಮೋಽಯಂ ಸಾರ್ವವರ್ಣಿಕಃ ॥ ೨೦ ॥

ದ್ವಿತೀಯಂ ಪ್ರಾಪ್ಯಾನುಪೂರ್ವ್ಯಾಜ್ಜನ್ಮೋಪನಯನಂ ದ್ವಿಜಃ ।
ವಸನ್ ಗುರುಕುಲೇ ದಾಂತೋ ಬ್ರಹ್ಮಾಧೀಯೀತ ಚಾಹುತಃ ॥ ೨೧ ॥

ಮೇಖಲಾಜಿನದಂಡಾಕ್ಷಬ್ರಹ್ಮಸೂತ್ರಕಮಂಡಲೂನ್ ।
ಜಟಿಲೋಽಧೌತದದ್ವಾಸೋಽರಕ್ತಪೀಠಃ ಕುಶಾನ್ ದಧತ್ ॥ ೨೨ ॥

ಸ್ನಾನಭೋಜನಹೋಮೇಷು ಜಪೋಚ್ಚಾರೇ ಚ ವಾಗ್ಯತಃ ।
ನಚ್ಛಿಂದ್ಯಾನ್ನಖರೋಮಾಣಿ ಕಕ್ಷೋಪಸ್ಥಗತಾನ್ಯಪಿ ॥ ೨೩ ॥

ರೇತೋ ನಾವಕಿರೇಜ್ಜಾತು ಬ್ರಹ್ಮವ್ರತಧರಃ ಸ್ವಯಮ್ ।
ಅವಕೀರ್ಣೇಽವಗಾಹ್ಯಾಪ್ಸು ಯತಾಸುಸ್ತ್ರಿಪದೀಂ ಜಪೇತ್ ॥ ೨೪ ॥

ಅಗ್ನ್ಯರ್ಕಾಚಾರ್ಯಗೋವಿಪ್ರಗುರುವೃದ್ಧಸುರಾನ್ಶುಚಿಃ ।
ಸಮಾಹಿತ ಉಪಾಸೀತ ಸಂಧ್ಯೇ ಚ ಯತವಾಗ್ಜಪನ್ ॥ ೨೫ ॥

ಆಚಾರ್ಯಂ ಮಾಂ ವಿಜಾನೀಯಾನ್ನಾವಮನ್ಯೇತ ಕರ್ಹಿಚಿತ್ ।
ನ ಮರ್ತ್ಯಬುದ್ಧ್ಯಾಸೂಯೇತ ಸರ್ವದೇವಮಯೋ ಗುರುಃ ॥ ೨೬ ॥

ಸಾಯಂ ಪ್ರಾತರುಪಾನೀಯ ಭೈಕ್ಷ್ಯಂ ತಸ್ಮೈ ನಿವೇದಯೇತ್ ।
ಯಚ್ಚಾನ್ಯದಪ್ಯನುಜ್ಞಾತಮುಪಯುಂಜೀತ ಸಂಯತಃ ॥ ೨೭ ॥

ಶುಶ್ರೂಷಮಾಣ ಆಚಾರ್ಯಂ ಸದೋಪಾಸೀತ ನೀಚವತ್ ।
ಯಾನಶಯ್ಯಾಸನಸ್ಥಾನೈರ್ನಾತಿದೂರೇ ಕೃತಾಂಜಲಿಃ ॥ ೨೮ ॥

ಉದ್ಧವನೇ! ನಾಲ್ಕೂ ವರ್ಣಗಳಿಗೆ ಮತ್ತು ನಾಲ್ಕೂ ಆಶ್ರಮಗಳಿಗೆ – ಮನ, ವಾಣಿ ಮತ್ತು ಶರೀರದಿಂದ ಯಾರನ್ನೂ ಹಿಂಸಿಸದಿರುವುದು, ಸತ್ಯದಲ್ಲಿ ದೃಢವಾಗಿರುವುದು, ಕಳ್ಳತನ ಮಾಡದಿರುವುದು, ಕಾಮ, ಕ್ರೋಧ, ಲೋಭದಿಂದ ಬದುಕುಳಿದು, ಸಮಸ್ತ ಪ್ರಾಣಿಗಳ ಪ್ರಸನ್ನತೆ, ಅವರ ಒಳಿತು ಆಗುವಂತಹ ಕೆಲಸಗಳನ್ನೇ ಮಾಡುವುದು – ಇವು ಸಾಧಾರಣ ಧರ್ಮಗಳಾಗಿವೆ. ॥ ೨೦ ॥ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಇವರು ಗರ್ಭಾಧಾನಾದಿ ಸಂಸ್ಕಾರಗಳ ಕ್ರಮದಿಂದ ಉಪನಯನ ಸಂಸ್ಕಾರರೂಪೀ ದ್ವಿತೀಯ ಜನ್ಮವನ್ನು ಪಡೆದು ಗುರುಕುಲದಲ್ಲಿ ಇದ್ದು, ತಮ್ಮ ಇಂದ್ರಿಯಗಳನ್ನು ವಶದಲ್ಲಿರಿಸಿ ಕೊಳ್ಳಬೇಕು. ಆಚಾರ್ಯರಿಂದ ವೇದಾಧ್ಯಯನ ಗೈದು, ಅದರ ಅರ್ಥವನ್ನೂ ವಿಚಾರಮಾಡಬೇಕು. ॥ ೨೧ ॥ ಮೇಖಲೆ, ಮೃಗಚರ್ಮ, ವರ್ಣಕ್ಕನುಸಾರ ದಂಡ, ರುದ್ರಾಕ್ಷದ ಮಾಲೆ, ಯಜ್ಞೋಪವೀತ ಮತ್ತು ಕಮಂಡಲು ಧರಿಸಬೇಕು. ತಲೆಯಲ್ಲಿ ಶಿಖೆ ಇರಿಸಿಕೊಳ್ಳಬೇಕು. ದಂತಧಾವನ ಮತ್ತು ಬಟ್ಟೆ ತೊಳೆಯುವ ಹವ್ಯಾಸವಿರಬಾರದು. ಬಣ್ಣ-ಬಣ್ಣದ ಆಸನದಲ್ಲಿ ಕುಳಿತುಕೊಳ್ಳಬಾರದು. ಕುಶವನ್ನು ಧರಿಸಿಕೊಳ್ಳಬೇಕು. ॥ ೨೨ ॥ ಸ್ನಾನ, ಭೋಜನ, ಹವನ, ಜಪ ಹಾಗೂ ಮಲ-ಮೂತ್ರದ ಸಮಯದಲ್ಲಿ ಮೌನವಾಗಿರಬೇಕು. ಕಕ್ಷ ಮತ್ತು ಗುಹ್ಯೇಂದ್ರಿಯದ ಕೂದಲುಗಳನ್ನು ಮತ್ತು ಉಗುರುಗಳನ್ನು ಎಂದೂ ಕತ್ತರಿಸಬಾರದು.॥ ೨೩ ॥ ಪೂರ್ಣರೂಪದಿಂದ ಬ್ರಹ್ಮಚರ್ಯವನ್ನು ಪಾಲಿಸಬೇಕು. ಸ್ವತಃ ವೀರ್ಯಪಾತವನ್ನು ಎಂದೂ ಮಾಡಿಕೊಳ್ಳಬಾರದು. ಸ್ವಪ್ನಾದಿಗಳಲ್ಲಿ ವೀರ್ಯಸ್ಖಲನವಾದರೆ ನೀರಿನಲ್ಲಿ ಸ್ನಾನಮಾಡಿ, ಪ್ರಾಣಾಯಾಮ ಮಾಡಿ, ಗಾಯತ್ರಿಯನ್ನು ಜಪಿಸಬೇಕು. ॥ ೨೪ ॥ ಬ್ರಹ್ಮಚಾರಿಯು ಪವಿತ್ರತೆಯಿಂದ ಏಕಾಗ್ರಚಿತ್ತನಾಗಿ ಅಗ್ನಿ, ಸೂರ್ಯ, ಆಚಾರ್ಯ, ಗೋವು, ಬ್ರಾಹ್ಮಣ, ಗುರು, ಹಿರಿಯರು ಹಾಗೂ ದೇವತೆಗಳನ್ನು ಉಪಾಸಿಸಬೇಕು. ಸಾಯಂಕಾಲ ಮತ್ತು ಪ್ರಾತಃಕಾಲಗಳಲ್ಲಿ ಮೌನವಾಗಿದ್ದು ಸಂಧ್ಯೋ ಪಾಸನೆ ಮಾಡಿ ಗಾಯತ್ರಿಜಪವನ್ನು ಮಾಡಬೇಕು. ॥ ೨೫ ॥ ಆಚಾರ್ಯರನ್ನು ನನ್ನ ಸ್ವರೂಪವೆಂದೇ ತಿಳಿದು, ಎಂದೂ ಅವರ ತಿರಸ್ಕಾರ ಮಾಡಬಾರದು. ಅವರನ್ನು ಸಾಮಾನ್ಯ ಮನುಷ್ಯನೆಂದು ತಿಳಿದು ದೋಷದೃಷ್ಟಿ ಇರಿಸಬಾರದು. ಏಕೆಂದರೆ ಗುರುವು ಸರ್ವದೇವಮಯನಾಗಿರುವನು. ॥ ೨೬ ॥ ಸಾಯಂಕಾಲ ಮತ್ತು ಪ್ರಾತಃಕಾಲ ಎರಡೂ ಹೊತ್ತು ಭಿಕ್ಷೆಯಲ್ಲಿ ದೊರೆತುದನ್ನು ತಂದು ಗುರುಗಳ ಮುಂದಿರಿಸಿ, ಇನ್ನೇನಾದರೂ ಇದ್ದರೂ ಅದನ್ನೂ ಗುರುಗಳಿಗೆ ನಿವೇದಿಸಬೇಕು. ಅವರ ಅಪ್ಪಣೆಯ ಬಳಿಕವೇ ಅದನ್ನು ಉಪಯೋಗಿಸಬೇಕು. ॥ ೨೭ ॥ ಆಚಾರ್ಯರು ನಡೆದು ಹೋಗುತ್ತಿದ್ದರೆ, ಅವರ ಹಿಂದೆ-ಹಿಂದೆ ನಡೆಯಬೇಕು. ಅವರು ಮಲಗಿದ ಬಳಿಕವೇ ತುಂಬಾ ಎಚ್ಚರಿಕೆಯಿಂದ ಅವರಿಂದ ಸ್ವಲ್ಪ ದೂರದಲ್ಲಿ ಮಲಗಬೇಕು. ಅವರು ಬಳಲಿದ್ದರೆ ಹತ್ತಿರ ಕುಳಿತು ಪಾದಸೇವೆ (ಕಾಲು ಒತ್ತುವುದು) ಮಾಡಬೇಕು. ಅವರು ಕುಳಿತಿದ್ದರೆ ಅವರ ಆದೇಶವನ್ನು ನಿರೀಕ್ಷಿಸುತ್ತಾ ಕೈ ಜೋಡಿಸಿಕೊಂಡು ಹತ್ತಿರದಲ್ಲೇ ನಿಂತಿರಬೇಕು. ಹೀಗೆ ಅತ್ಯಂತ ನಮ್ರನಾಗಿ ಸೇವೆ-ಶುಶ್ರೂಷೆಗಳಿಂದ ಸದಾಕಾಲ ಆಚಾರ್ಯರ ಆಜ್ಞೆಯಲ್ಲಿ ತತ್ಪರನಾಗಿರಬೇಕು. ॥ ೨೮ ॥

ಏವಂವೃತ್ತೋ ಗುರುಕುಲೇ ವಸೇದ್ಭೋಗವಿವರ್ಜಿತಃ ।
ವಿದ್ಯಾ ಸಮಾಪ್ಯತೇ ಯಾವದ್ಬಿಭ್ರದ್ವ್ರತಮಖಂಡಿತಮ್
॥ ೩೦ ॥

ಯದ್ಯಸೌ ಛಂದಸಾಂ ಲೋಕಮಾರೋಕ್ಷ್ಯನ್ ಬ್ರಹ್ಮವಿಷ್ಟಪಮ್ ।
ಗುರವೇ ವಿನ್ಯಸೇದ್ದೇಹಂ ಸ್ವಾಧ್ಯಾಯಾರ್ಥಂ ಬೃಹದ್ವ್ರತಃ
॥ ೩೧ ॥

ಅಗ್ನೌ ಗುರಾವಾತ್ಮನಿ ಚ ಸರ್ವಭೂತೇಷು ಮಾಂ ಪರಮ್ ।
ಅಪೃಥಗ್ಧೀರುಪಾಸೀತ ಬ್ರಹ್ಮವರ್ಚಸ್ವ್ಯಕಲ್ಮಷಃ
॥ ೩೨ ॥

ಸ್ತ್ರೀಣಾಂ ನಿರೀಕ್ಷಣಸ್ಪರ್ಶಸಂಲಾಪಕ್ಷ್ವೇಲನಾದಿಕಮ್ ।
ಪ್ರಾಣಿನೋ ಮಿಥುನೀಭೂತಾನಗೃಹಸ್ಥೋಽಗ್ರತಸ್ತ್ಯಜೇತ್
॥ ೩೩ ॥

ಶೌಚಮಾಚಮನಂ ಸ್ನಾನಂಸಂಧ್ಯೋಪಾಸನಮಾರ್ಜವಮ್ ।
ತೀರ್ಥಸೇವಾ ಜಪೋಽಸ್ಪೃಶ್ಯಾಭಕ್ಷ್ಯಾಸಂಭಾಷ್ಯವರ್ಜನಮ್
॥ ೩೪ ॥

ಸರ್ವಾಶ್ರಮಪ್ರಯುಕ್ತೋಽಯಂ ನಿಯಮಃ ಕುಲನಂದನ ।
ಮದ್ಭಾವಃ ಸರ್ವಭೂತೇಷು ಮನೋವಾಕ್ಕಾಯಸಂಯಮಃ
॥ ೩೫ ॥

ಏವಂ ಬೃಹದ್ವ್ರತಧರೋ ಬ್ರಾಹ್ಮಣೋಽಗ್ನಿರಿವ ಜ್ವಲನ್ ।
ಮದ್ಭಕ್ತಸ್ತೀವ್ರತಪಸಾ ದಗ್ಧಕರ್ಮಾಶಯೋಽಮಲಃ
॥ ೩೬ ॥

ಅಥಾನಂತರಮಾವೇಕ್ಷ್ಯನ್ ಯಥಾ ಜಿಜ್ಞಾಸಿತಾಗಮಃ ।
ಗುರವೇ ದಕ್ಷಿಣಾಂ ದತ್ತ್ವಾ ಸ್ನಾಯಾದ್ಗುರ್ವನುಮೋದಿತಃ
॥ ೩೭ ॥

ಗೃಹಂ ವನಂ ವೋಪವಿಶೇತ್ ಪ್ರವ್ರಜೇದ್ವಾ ದ್ವಿಜೋತ್ತಮಃ ।
ಆಶ್ರಮಾದಾಶ್ರಮಂ ಗಚ್ಛೇನ್ನಾನ್ಯಥಾ ಮತ್ಪರಶ್ಚರೇತ್
॥ ೩೮ ॥

ವಿದ್ಯಾಧ್ಯಯನವು ಸಮಾಪ್ತವಾಗುವ ತನಕ ಎಲ್ಲ ರೀತಿಯ ಭೋಗಗಳಿಂದ ದೂರವಿದ್ದು ಇದೇ ಪ್ರಕಾರ ಗುರುಕುಲದಲ್ಲಿ ವಾಸಿಸಬೇಕು. ಎಂದಿಗೂ ತನ್ನ ಬ್ರಹ್ಮಚರ್ಯವನ್ನು ಭಂಗಗೊಳಿಸಬಾರದು. ॥ ೩೦ ॥ ಬ್ರಹ್ಮಚಾರಿಯು ಮೂರ್ತಿಮಂತ ವೇದಗಳ ನಿವಾಸಸ್ಥಾನವಾದ ಬ್ರಹ್ಮಲೋಕಕ್ಕೆ ಹೋಗಲು ಬಯಸಿದರೆ, ಅವನು ಆಜೀವನ ಬ್ರಹ್ಮಚರ್ಯವ್ರತವನ್ನು ಕೈಗೊಳ್ಳಬೇಕು ಹಾಗೂ ವೇದಗಳ ಸ್ವಾಧ್ಯಾಯಕ್ಕಾಗಿ ತನ್ನ ಇಡೀ ಜೀವನವನ್ನು ಆಚಾರ್ಯರ ಸೇವೆಯಲ್ಲೇ ಸಮರ್ಪಿಸಿ ಕೊಳ್ಳಬೇಕು. ॥ ೩೧ ॥ ಇಂತಹ ಬ್ರಹ್ಮಚಾರಿಯು ನಿಜವಾಗಿಯೂ ಬ್ರಹ್ಮತೇಜದಿಂದ ಸಂಪನ್ನನಾಗಿ, ಅವನ ಎಲ್ಲ ಪಾಪಗಳು ನಾಶವಾಗಿ ಹೋಗುತ್ತವೆ. ಅವನು ಅಗ್ನಿ, ಗುರು, ತನ್ನ ಶರೀರ ಮತ್ತು ಸಮಸ್ತ ಪ್ರಾಣಿಗಳಲ್ಲಿ ನನ್ನನ್ನೇ ಉಪಾಸಿಸಬೇಕು. ನನ್ನ ಹಾಗೂ ಎಲ್ಲರ ಹೃದಯದಲ್ಲಿ ಒಂದೇ ಪರಮಾತ್ಮನು ವಿರಾಜಮಾನನಾಗಿದ್ದಾನೆ ಎಂದು ಭಾವಿಸಬೇಕು. ॥ ೩೨ ॥ ಬ್ರಹ್ಮಚಾರೀ, ವಾನಪ್ರಸ್ಥ, ಸಂನ್ಯಾಸಿಗಳು ಸ್ತ್ರೀಯರನ್ನು ನೋಡುವುದು, ಸ್ಪರ್ಶಿಸುವುದು, ಅವರೊಂದಿಗೆ ಮಾತು-ಕತೆಯಾಡುವುದು, ಹಾಸ್ಯ-ವಿನೋದ ಮುಂತಾದವುಗಳಿಂದ ದೂರವುಳಿಯಬೇಕು. ಮೈಥುನದಲ್ಲಿ ತೊಡಗಿರುವ ಪ್ರಾಣಿಗಳ ಕಡೆಗೆ ಕಣ್ಣೆತ್ತಿಯೂ ನೋಡಬಾರದು. ॥ ೩೩ ॥ ಪ್ರಿಯ ಉದ್ಧವನೇ! ಶೌಚ, ಆಚಮನ, ಸ್ನಾನ, ಸಂಧ್ಯೋಪಾಸನೆ, ಸರಳತೆ, ತೀರ್ಥಸೇವನೆ, ಜಪ, ಸಮಸ್ತ ಪ್ರಾಣಿಗಳಲ್ಲಿ ನನ್ನನ್ನೇ ನೋಡುವುದು, ಮನ, ವಾಣೀ, ಶರೀರದ ಸಂಯಮ – ಇವು ಬ್ರಹ್ಮಚಾರೀ, ಗೃಹಸ್ಥ ವಾನಪ್ರಸ್ಥ, ಸಂನ್ಯಾಸಿ ಎಲ್ಲರಿಗಾಗಿ ಒಂದೇ ನಿಯಮಗಳಾಗಿವೆ. ಅಸ್ಪೃಶ್ಯರನ್ನು ಮುಟ್ಟದಿರುವುದು, ಅಭಕ್ಷ್ಯ ವಸ್ತುಗಳನ್ನು ತಿನ್ನದಿರುವುದು, ಯಾರೊಂದಿಗೆ ಮಾತಾಡಬಾರದೋ ಅವರೊಂದಿಗೆ ಮಾತಾಡದೇ ಇರುವುದು, ಈ ನಿಯಮಗಳೂ ಕೂಡ ಎಲ್ಲರಿಗಾಗಿಯೇ ಇವೆ. ॥ ೩೪-೩೫ ॥ ನೈಷ್ಠಿಕ ಬ್ರಹ್ಮಚಾರೀ ಬ್ರಾಹ್ಮಣನು ಈ ನಿಯಮಗಳನ್ನು ಪಾಲಿಸುವುದರಿಂದ ಅಗ್ನಿಯಂತೆ ತೇಜಸ್ವೀಯಾಗುತ್ತಾನೆ. ತೀವ್ರ ತಪಸ್ಸಿನ ಕಾರಣ ಅವನ ಕರ್ಮ-ಸಂಸ್ಕಾರಗಳು ಭಸ್ಮವಾಗಿ ಹೋಗುತ್ತವೆ. ಅಂತಃಕರಣ ಶುದ್ಧವಾಗುತ್ತದೆ. ಅವನು ನನ್ನ ಭಕ್ತನಾಗಿ ನನ್ನನ್ನೇ ಪಡೆದುಕೊಳ್ಳುತ್ತಾನೆ. ॥ ೩೬ ॥

ಪ್ರಿಯ ಉದ್ಧವನೇ! ಬ್ರಹ್ಮಚಾರಿಯು ಗೃಹಸ್ಥಾಶ್ರಮದಲ್ಲಿ ಪ್ರವೇಶಿಸಲು ಬಯಸಿದರೆ ವಿಧಿಪೂರ್ವಕ ವೇದಾಧ್ಯಯನವನ್ನು ಮುಗಿಸಿ, ಆಚಾರ್ಯರಿಗೆ ದಕ್ಷಿಣೆಯನ್ನಿತ್ತು, ಅವರ ಅನುಮತಿ ಪಡೆದು ಸಮಾವರ್ತನ ಸಂಸ್ಕಾರ ಮಾಡಿಕೊಂಡು, ಸ್ನಾತಕನಾಗಿ ಗೃಹಸ್ಥಾಶ್ರಮವನ್ನು ಸ್ವೀಕರಿಸಬೇಕು. ॥ ೩೭ ॥ ಬ್ರಹ್ಮಚಾರಿಯು ಬ್ರಹ್ಮಚರ್ಯಾಶ್ರಮದ ಬಳಿಕ ಬೇಕಾದರೆ ಗೃಹಸ್ಥ ಅಥವಾ ವಾನಪ್ರಸ್ಥ ಆಶ್ರಮವನ್ನು ಪ್ರವೇಶಿಸಲಿ. ಬ್ರಾಹ್ಮಣನಾಗಿದ್ದರೆ ಸಂನ್ಯಾಸವನ್ನು ಸ್ವೀಕರಿಸಲಿ, ಅಥವಾ ಕ್ರಮವಾಗಿ ಒಂದು ಆಶ್ರಮದಿಂದ ಮತ್ತೊಂದು ಆಶ್ರಮವನ್ನೂ ಪ್ರವೇಶಿಸಲಿ. ನನ್ನ ಪರಾಯಣನಾದ ಭಕ್ತನು ಎಂದೂ ಆಶ್ರಮವಿಲ್ಲದೆ ಇರಬಾರದು. ಮನಬಂದಂತೆ ಆಶ್ರಮ ಬದಲಾವಣೆ ಮಾಡುವ ಉಚ್ಛೃಂಖಲ ಪ್ರವೃತ್ತಿಯೂ ಸಲ್ಲದು. ॥ ೩೮ ॥

ಗೃಹಾರ್ಥೀ ಸದೃಶೀಂ ಭಾರ್ಯಾಮುದ್ವಹೇದಜುಗುಪ್ಸಿತಾಮ್ ।
ಯವೀಯಸೀಂ ತು ವಯಸಾ ತಾಂ ಸವರ್ಣಾಮನುಕ್ರಮಾತ್ ॥ ೩೯ ॥

ಪ್ರಿಯ ಉದ್ಧವನೇ! ಬ್ರಹ್ಮಚಾರಿಯು ಬ್ರಹ್ಮಚರ್ಯಾಶ್ರಮದ ಬಳಿಕ ಗೃಹಸ್ಥಾಶ್ರಮವನ್ನು ಸ್ವೀಕರಿಸುವುದಿದ್ದರೆ, ತನಗೆ ಅನುರೂಪ ಹಾಗೂ ಶಾಸ್ತ್ರೋಕ್ತ ಲಕ್ಷಣಗಳಿಂದ ಕೂಡಿದ ಕುಲೀನ ಕನ್ಯೆಯೊಂದಿಗೆ ವಿವಾಹಿತನಾಗಬೇಕು. ಅವಳು ತನ್ನ ವಯಸ್ಸಿನಿಂದ ಕಿರಿಯವಳು ಮತ್ತು ತನ್ನ ವರ್ಣದವಳೇ ಆಗಿರಬೇಕು. ॥ ೩೯ ॥

ಇಜ್ಯಾಧ್ಯಯನದಾನಾನಿ ಸರ್ವೇಷಾಂ ಚ ದ್ವಿಜನ್ಮನಾಮ್ ।
ಪ್ರತಿಗ್ರಹೋಽಧ್ಯಾಪನಂ ಚ ಬ್ರಾಹ್ಮಣಸ್ಯೈವ ಯಾಜನಮ್ ॥ ೪೦ ॥

ಯಜ್ಞ-ಯಾಗಾದಿ ಮಾಡುವುದು, ಅಧ್ಯಯನ, ದಾನಮಾಡುವ ಅಧಿಕಾರ, ಬ್ರಾಹ್ಮಣ, ಕ್ಷತ್ರಿಯ, ವೈಶ್ಯರಿಗೆ ಸಮಾನವಾಗಿ ಇದೆ. ಆದರೆ ದಾನ ಪಡೆಯುವುದು, ಕಲಿಸುವುದು, ಯಜ್ಞಮಾಡಿಸುವ ಅಧಿಕಾರ ಕೇವಲ ಬ್ರಾಹ್ಮಣರಿಗೇ ಇದೆ. ॥ ೪೦ ॥

ಪ್ರತಿಗ್ರಹಂ ಮನ್ಯಮಾನಸ್ತಪಸ್ತೇಜೋಯಶೋನುದಮ್ ।
ಅನ್ಯಾಭ್ಯಾಮೇವ ಜೀವೇತ ಶಿಲೈರ್ವಾ ದೋಷದೃಕ್ ತಯೋಃ ॥ ೪೧ ॥

ಬ್ರಾಹ್ಮಣನು ಈ ಮೂರು ವೃತ್ತಿಗಳಲ್ಲಿ ಪ್ರತಿಗ್ರಹ ಅರ್ಥಾತ್ – ದಾನ ಪಡೆಯುವ ವೃತ್ತಿಯು ತಪಸ್ಸು, ತೇಜ, ಕೀರ್ತಿ ಇವುಗಳನ್ನು ನಾಶಮಾಡುವುದೆಂದು ತಿಳಿದಿದ್ದರೆ, ಅವನು ಕಲಿಸುವುದು, ಯಜ್ಞಮಾಡಿಸುವ ಮೂಲಕವೇ ತನ್ನ ಜೀವನನಿರ್ವಾಹ ಮಾಡಲಿ. ಈ ಎರಡರಲ್ಲಿಯೂ ದೋಷದೃಷ್ಟಿ – ಪರಾವಲಂಬನೆ, ದೀನತೆ ಮುಂತಾದ ದೋಷಗಳು ಕಂಡುಬಂದರೆ, ಪೈರು ಕತ್ತರಿಸಿದ ಬಳಿಕ ಹೊಲದಲ್ಲಿ ಬಿದ್ದಿರುವ ಧಾನ್ಯವನ್ನು ಹೆಕ್ಕಿತಂದು ತನ್ನ ಜೀವನನಿರ್ವಾಹ ಮಾಡಲಿ. ॥ ೪೧ ॥

ಬ್ರಾಹ್ಮಣಸ್ಯ ಹಿ ದೇಹೋಽಯಂ ಕ್ಷುದ್ರಕಾಮಾಯ ನೇಷ್ಯತೇ ।
ಕೃಚ್ಛ್ರಾಯ ತಪಸೇ ಚೇಹ ಪ್ರೇತ್ಯಾನಂತಸುಖಾಯ ಚ ॥ ೪೨ ॥

ಉದ್ಧವನೇ! ಬ್ರಾಹ್ಮಣನ ಶರೀರವು ಅತ್ಯಂತ ದುರ್ಲಭವಾಗಿದೆ. ಇದು ತುಚ್ಛವಾದ ಭೋಗಗಳನ್ನು ಭೋಗಿಸಲಿಕ್ಕಾಗಿ ದೊರೆತುದಲ್ಲ. ಜೀವನವಿಡೀ ಕಠಿಣ ತಪಸ್ಸನ್ನಾಚರಿಸುತ್ತಾ ಕೊನೆಗೆ ಅನಂತ ಆನಂದಸ್ವರೂಪೀ ಮೋಕ್ಷವನ್ನು ಪಡೆಯಲೆಂದೇ ಇದೆ. ॥ ೪೨ ॥

ಶಿಲೋಂಛವೃತ್ತ್ಯಾ ಪರಿತುಷ್ಟಚಿತ್ತೋ
ಧರ್ಮಂ ಮಹಾಂತಂ ವಿರಜಂ ಜುಷಾಣಃ ।
ಮಯ್ಯರ್ಪಿತಾತ್ಮಾ ಗೃಹ ಏವ ತಿಷ್ಠ-
ನ್ನಾತಿಪ್ರಸಕ್ತಃ ಸಮುಪೈತಿ ಶಾಂತಿಮ್ ॥ ೪೩ ॥

ಬ್ರಾಹ್ಮಣನಾದವನು ಮನೆಯಲ್ಲೇ ಇದ್ದು ತನ್ನ ಮಹಾನ್ ಧರ್ಮವನ್ನು ನಿಷ್ಕಾಮವಾಗಿ ಆಚರಿಸುತ್ತಾ , ಹೊಲದಲ್ಲಿ ಬಿದ್ದಿರುವ ಕಾಳುಗಳನ್ನು ಅಥವಾ ಮಂಡಿಯಲ್ಲಿ ಬಿದ್ದಿರುವ ಕಾಳುಗಳನ್ನು ಹೆಕ್ಕಿತಂದು ಸಂತೋಷವಾಗಿ ತನ್ನ ಜೀವನ ನಿರ್ವಾಹ ಮಾಡುವವನು, ಜೊತೆಗೆ ತನ್ನ ಶರೀರ, ಪ್ರಾಣ, ಅಂತಃಕರಣ ಮತ್ತು ಆತ್ಮವನ್ನು ನನ್ನಲ್ಲಿ ಸಮರ್ಪಿಸುವವನು, ಎಲ್ಲಿಯೂ ಆಸಕ್ತಿಯನ್ನಿಡದವನು ಸಂನ್ಯಾಸ ಸ್ವೀಕರಿಸದೆಯೇ ಪರಮ ಶಾಂತಿ ಸ್ವರೂಪೀ ಪರಮಪದವನ್ನು ಪಡೆದುಕೊಳ್ಳುತ್ತಾನೆ. ॥ ೪೩॥

ಸಮುದ್ಧರಂತಿ ಯೇ ವಿಪ್ರಂ ಸೀದಂತಂ ಮತ್ಪರಾಯಣಮ್ ।
ತಾನುದ್ಧರಿಷ್ಯೇ ನಚಿರಾದಾಪದ್ಭ್ಯೋ ನೌರಿವಾರ್ಣವಾತ್ ॥ ೪೪ ॥

ವಿಪತ್ತಿ ನಲ್ಲಿ ಬಿದ್ದು ಕಷ್ಟಪಡುವ ನನ್ನ ಭಕ್ತ ಬ್ರಾಹ್ಮಣನನ್ನು ವಿಪತ್ತಿನಿಂದ ಕಾಪಾಡುವವನನ್ನು ನಾನು ಶೀಘ್ರವಾಗಿ, ಸಮುದ್ರದಲ್ಲಿ ಮುಳು ಗುವ ಪ್ರಾಣಿಯನ್ನು ದೋಣಿಯು ಪಾರಾಗಿಸುವಂತೆ, ಅವನನ್ನು ಎಲ್ಲ ವಿಪತ್ತುಗಳಿಂದ ಪಾರಾಗಿಸುತ್ತೇನೆ. ॥ ೪೪ ॥

ಸರ್ವಾಃ ಸಮುದ್ಧರೇದ್ರಾಜಾ ಪಿತೇವ ವ್ಯಸನಾತ್ಪ್ರಜಾಃ ।
ಆತ್ಮಾನಮಾತ್ಮನಾ ಧೀರೋ ಯಥಾ ಗಜಪತಿರ್ಗಜಾನ್ ॥ ೪೫ ॥

ರಾಜನಾದವನು ತಂದೆಯಂತೆ, ಗಜರಾಜನು ಬೇರೆ ಆನೆಗಳನ್ನು ರಕ್ಷಿಸುವಂತೆ ಎಲ್ಲ ಪ್ರಜೆಗಳನ್ನು ಕಷ್ಟದಿಂದ ಉದ್ಧಾರಗೈದು, ಅವರನ್ನು ರಕ್ಷಿಸಬೇಕು. ಧೀರನಾಗಿ ಸ್ವಯಂ ತಾನೇ-ತನ್ನನ್ನು ಉದ್ಧರಿಸಿಕೊಳ್ಳಬೇಕು. ॥ ೪೫ ॥

ಏವಂವಿಧೋ ನರಪತಿರ್ವಿಮಾನೇನಾರ್ಕವರ್ಚಸಾ ।
ವಿಧೂಯೇಹಾಶುಭಂ ಕೃತ್ಸ್ನಮಿಂದ್ರೇಣ ಸಹ ಮೋದತೇ ॥ ೪೬ ॥

ಈ ವಿಧವಾಗಿ ಪ್ರಜೆಗಳನ್ನು ರಕ್ಷಿಸುವವನು ಎಲ್ಲ ಪಾಪಗಳಿಂದ ಮುಕ್ತನಾಗಿ ಅಂತ್ಯದಲ್ಲಿ ಸೂರ್ಯನಂತಿರುವ ತೇಜಸ್ವೀ ವಿಮಾನದಲ್ಲಿ ಆರೂಢನಾಗಿ ಸ್ವರ್ಗಲೋಕಕ್ಕೆ ಹೋಗುತ್ತಾನೆ ಮತ್ತು ಇಂದ್ರನೊಡನೆ ಸುಖವನ್ನು ಭೋಗಿಸುತ್ತಾನೆ. ॥ ೪೬ ॥

ಸೀದನ್ವಿಪ್ರೋ ವಣಿಗ್ವೃತ್ತ್ಯಾ ಪಣ್ಯೈರೇವಾಪದಂ ತರೇತ್ ।
ಖಡ್ಗೇನ ವಾಽಽಪದಾಕ್ರಾಂತೋ ನ ಶ್ವವೃತ್ತ್ಯಾ ಕಥಂಚನ
॥ ೪೭ ॥

ಬ್ರಾಹ್ಮಣನಾದವನು ಅಧ್ಯಾಪನ ಅಥವಾ ಯಜ್ಞ-ಯಾಗಾದಿಗಳಿಂದ ಜೀವನ ನಿರ್ವಾಹ ನಡೆಯದಿದ್ದರೆ, ವೈಶ್ಯವೃತ್ತಿಯನ್ನು ಅವಲಂಬಿಸಬೇಕು. ಅದೂ ಕೂಡ ವಿಪತ್ತು ದೂರವಾಗುವವರೆಗೆ ಮಾತ್ರ. ಇನ್ನೂ ದೊಡ್ಡ ಆಪತ್ತನ್ನು ಇದಿರಿಸಬೇಕಾದಾಗ ಖಡ್ಗವನ್ನೆತ್ತಿ ಕ್ಷತ್ರಿಯ ವೃತ್ತಿಯಿಂದಲೂ ತನ್ನ ನಿರ್ವಾಹಮಾಡಿಕೊಳ್ಳಬಹುದು. ಆದರೆ ಯಾವುದೇ ಪರಿಸ್ಥಿತಿ ಯಲ್ಲಿಯೂ 'ಶ್ವಾನವೃತ್ತಿ' ಅಂದರೆ ನೀಚರ ಸೇವೆ ಎಂದೂ ಮಾಡಬಾರದು. ॥ ೪೭ ॥

ವೈಶ್ಯವೃತ್ತ್ಯಾತು ರಾಜನ್ಯೋ ಜೀವೇನ್ಮೃಗಯಯಾಽಽಪದಿ ।
ಚರೇದ್ವಾ ವಿಪ್ರರೂಪೇಣ ನ ಶ್ವವೃತ್ತ್ಯಾ ಕಥಂಚನ
॥ ೪೮ ॥

ಹೀಗೆಯೇ ಕ್ಷತ್ರಿಯನಾದವನು ಪ್ರಜಾಪಾಲನಾದಿಗಳಿಂದ ಜೀವನ ನಿರ್ವಾಹ ನಡೆಯದಿದ್ದರೆ ವೈಶ್ಯವೃತ್ತಿಯ ವ್ಯಾಪಾರಾದಿಗಳನ್ನು ಮಾಡಬೇಕು. ಬಹಳ ದೊಡ್ಡ ಆಪತ್ತು ಬಂದೊದಗಿದಾಗ ಬೇಟೆಯಿಂದ ಅಥವಾ ವಿದ್ಯಾರ್ಥಿಗಳಿಗೆ ಕಲಿಸಿ ತನ್ನ ಆಪತ್ತನ್ನು ದೂರಮಾಡಿ ಕೊಳ್ಳಬೇಕು. ಆದರೆ 'ಶ್ವಾನವೃತ್ತಿ' ನೀಚರ ಸೇವೆ ಎಂದೂ ಮಾಡ ಬಾರದು. ॥ ೪೮ ॥

ಶೂದ್ರವೃತ್ತಿಂ ಭಜೇದ್ವೈಶ್ಯಃ ಶೂದ್ರಃ ಕಾರುಕಟಕ್ರಿಯಾಮ್ ।
ಕೃಚ್ಛ್ರಾನ್ಮುಕ್ತೋ ನ ಗರ್ಹ್ಯೇಣ ವೃತ್ತಿಂ ಲಿಪ್ಸೇತ ಕರ್ಮಣಾ
॥ ೪೯ ॥

ವೈಶ್ಯರೂ ಕೂಡ ಆಪತ್ತಿನ ಸಮಯದಲ್ಲಿ ಶೂದ್ರರ ವೃತ್ತಿ ಸೇವೆಯ ಮೂಲಕ ತಮ್ಮ ಜೀವನನಿರ್ವಾಹ ಮಾಡಿಕೊಳ್ಳಬೇಕು. ಶೂದ್ರರೂ ಕೂಡ ಚಾಪೆ ಹೆಣೆಯುವುದು ಮುಂತಾದ ಕ್ರಿಯೆಗಳಿಂದ ತಮ್ಮ ಜೀವನ ನಡೆಸಬೇಕು. ಆದರೆ ಉದ್ಧವಾ ! ಇವೆಲ್ಲ ಮಾತುಗಳು ಆಪತ್ಕಾಲಕ್ಕಾಗಿ ಇವೆ. ಕಷ್ಟದಿಂದ ಮುಕ್ತನಾಗುವವರೆಗೆ ಮಾತ್ರ ಇಂತಹ ಕೆಲಸ ಮಾಡಬೇಕು. ಆದರೆ ಆಪತ್ತಿನ ಸಮಯ ಕಳೆದುಹೋದಮೇಲೆ ಕೆಳಗಿನ ವರ್ಣಗಳ ವೃತ್ತಿಯನ್ನು ಅವಲಂಬಿಸಿ ಜೀವನ ನಡೆಸುವ ಲೋಭವಿರಿಸಿಕೊಳ್ಳ ಬಾರದು. ॥ ೪೯ ॥

ವೇದಾಧ್ಯಾಯಸ್ವಧಾಸ್ವಾಹಾಬಲ್ಯನ್ನಾದ್ಯೈರ್ಯಥೋದಯಮ್ ।
ದೇವರ್ಷಿಪಿತೃಭೂತಾನಿ ಮದ್ರೂಪಾಣ್ಯನ್ವಹಂ ಯಜೇತ್
॥ ೫೦ ॥

ಗೃಹಸ್ಥನ ಧರ್ಮವನ್ನು ತಿಳಿಸುವಾಗ ಹೇಳುತ್ತಾರೆ – ಗೃಹಸ್ಥನಾದವನು ವೇದಾಧ್ಯಯನರೂಪೀ ಬ್ರಹ್ಮಯಜ್ಞ, ತರ್ಪಣರೂಪೀ ಪಿತೃಯಜ್ಞ, ಹವನರೂಪೀ ದೇವಯಜ್ಞ, ಕಾಕಬಲಿ ಮುಂತಾದ ಭೂತಯಜ್ಞ, ಅನ್ನದಾನರೂಪೀ ಅತಿಥಿಯಜ್ಞ ಇವುಗಳ ಮೂಲಕ ನನ್ನ ಸ್ವರೂಪಭೂತ ಋಷಿಗಳು, ದೇವತೆಗಳು, ಪಿತೃಗಳು, ಮನುಷ್ಯರು ಹಾಗೂ ಬೇರೆ ಸಮಸ್ತ ಪ್ರಾಣಿಗಳು ಇವುಗಳಲ್ಲಿ ನನ್ನ ಭಾವನೆಯನ್ನೇ ಇರಿಸಿ ಯಥಾಶಕ್ತಿ ಪ್ರತಿದಿನವೂ ಪೂಜಿಸಬೇಕು. ॥ ೫೦ ॥

ಯದೃಚ್ಛಯೋಪಪನ್ನೇನ ಶುಕ್ಲೇನೋಪಾರ್ಜಿತೇನ ವಾ ।
ಧನೇನಾಪೀಡಯನ್ಭೃತ್ಯಾನ್ ನ್ಯಾಯೇನೈವಾಹರೇತ್ಕ್ರತೂನ್
॥ ೫೧ ॥

ಗೃಹಸ್ಥನು ಅನಾಯಾಸವಾಗಿ ದೊರಕಿದ ಅಥವಾ ಶಾಸ್ತ್ರಸಮ್ಮತ ರೀತಿಯಿಂದ ಗಳಿಸಿದ ಶುದ್ಧ ಧನದಿಂದ ತನ್ನ ಭೃತ್ಯರನ್ನು, ಆಶ್ರಿತರನ್ನು ಯಾವುದೇ ವಿಧದಿಂದ ಕಷ್ಟಕೊಡದೆ, ಅರ್ಥಾತ್ ಅವರನ್ನು ಸಂತುಷ್ಟಗೊಳಿಸಿಯೇ ನ್ಯಾಯ ಮತ್ತು ವಿಧ್ಯುಕ್ತವಾಗಿಯೇ ಯಜ್ಞಮಾಡಬೇಕು. ॥ ೫೧ ॥

ಕುಟುಂಬೇಷು ನ ಸಜ್ಜೇತ ನ ಪ್ರಮಾದ್ಯೇತ್ ಕುಟುಂಬ್ಯಪಿ ।
ವಿಪಶ್ಚಿನ್ನಶ್ವರಂ ಪಶ್ಯೇದದೃಷ್ಟಮಪಿ ದೃಷ್ಟವತ್
॥ ೫೨ ॥

ಪ್ರಿಯ ಉದ್ಧವನೇ! ಗೃಹಸ್ಥನು ಕುಟುಂಬದಲ್ಲಿ ಆಸಕ್ತನಾಗ ಬಾರದು. ಕುಟುಂಬಿಯಾದರೂ ಭಜನೆಯಲ್ಲಿ ಪ್ರಮಾದ ಮಾಡ ಬಾರದು. ಈ ಲೋಕದ ಸಮಸ್ತ ವಸ್ತುಗಳು ನಾಶವುಳ್ಳವುಗಳಂತೆ ಸ್ವರ್ಗಾದಿ ಪರಲೋಕದ ಭೋಗಗಳೂ ನಾಶಯುಕ್ತವೇ ಆಗಿವೆ ಎಂದು ಬುದ್ಧಿವಂತನಾದವನು ಅರಿತುಕೊಳ್ಳಬೇಕು. ॥ ೫೨ ॥

ಪುತ್ರದಾರಾಪ್ತಬಂಧೂನಾಂ ಸಂಗಮಃ ಪಾಂಥಸಂಗಮಃ ।
ಅನುದೇಹಂ ವಿಯಂತ್ಯೇತೇ ಸ್ವಪ್ನೋ ನಿದ್ರಾನುಗೋ ಯಥಾ
॥ ೫೩ ॥

ಇತ್ಥಂ ಪರಿಮೃಶನ್ಮುಕ್ತೋ ಗೃಹೇಷ್ವತಿಥಿವದ್ವಸನ್ ।
ನ ಗೃಹೈರನುಬಧ್ಯೇತ ನಿರ್ಮಮೋ ನಿರಹಂಕೃತಃ
॥ ೫೪ ॥

ಕರ್ಮಭಿರ್ಗೃಹಮೇಧೀಯೈರಿಷ್ಟ್ವಾ ಮಾಮೇವ ಭಕ್ತಿಮಾನ್ ।
ತಿಷ್ಠೇದ್ವನಂ ವೋಪವಿಶೇತ್ ಪ್ರಜಾವಾನ್ವಾ ಪರಿವ್ರಜೇತ್
॥ ೫೫ ॥

ಯಸ್ತ್ವಾಸಕ್ತಮತಿರ್ಗೇಹೇ ಪುತ್ರವಿತ್ತೈಷಣಾತುರಃ ।
ಸ್ತ್ರೈಣಃ ಕೃಪಣಧೀರ್ಮೂಢೋ ಮಮಾಹಮಿತಿ ಬಧ್ಯತೇ
॥ ೫೬ ॥

ಅಹೋ ಮೇ ಪಿತರೌ ವೃದ್ಧೌ ಭಾರ್ಯಾ ಬಾಲಾತ್ಮಜಾಽಽತ್ಮಜಾಃ ।
ಅನಾಥಾ ಮಾಮೃತೇ ದೀನಾಃ ಕಥಂ ಜೀವಂತಿ ದುಃಖಿತಾಃ
॥ ೫೭ ॥

ಏವಂ ಗೃಹಾಶಯಾಕ್ಷಿಪ್ತಹೃದಯೋ ಮೂಢಧೀರಯಮ್ ।
ಅತೃಪ್ತಸ್ತಾನನುಧ್ಯಾಯನ್ಮೃತೋಽಂಧಂ ವಿಶತೇ ತಮಃ
॥ ೫೮ ॥

ಈ ಪತ್ನೀ, ಪುತ್ರರ, ಬಂಧು- ಬಾಂಧವರ, ಗುರುಹಿರಿಯರ ಕೂಡು ವಿಕೆಯೂ, ಯಾತ್ರೆಯಲ್ಲಿ ವಿವಿಧ ಯಾತ್ರಿಗಳು ಒಂದಾಗಿ, ಅಗಲುವಂತೆ ಇದೆ. ನಿದ್ದೆಯಲ್ಲಿ ಬರುವ ಸ್ವಪ್ನವು ಬೇರೆ-ಬೇರೆಯಾಗಿರುವಂತೆಯೇ ಪ್ರತಿಯೊಂದು ದೇಹದಲ್ಲಿ ಒಂದುಗೂಡುವ – ಅಗಲುವ ವ್ಯಕ್ತಿಗಳೂ ಬೇರೆ – ಬೇರೆಯಾಗಿಯೇ ಇರುತ್ತಾರೆ.*॥ ೫೩ ॥ ಗೃಹಸ್ಥನಾದವನು ಹೀಗೆ ವಿಚಾರಮಾಡಿ ಮನೆ ಸಂಸಾರದಲ್ಲಿ ಸಿಕ್ಕಿಕೊಳ್ಳಬಾರದು. ಅದರಲ್ಲಿ ಯಾರೋ ಅತಿಥಿಯು ವಾಸಿಸುತ್ತಿರುವಂತೆ ಅನಾಸಕ್ತ ಭಾವದಿಂದ ಇರಬೇಕು. ಶರೀರ ಮುಂತಾದವುಗಳಲ್ಲಿ, ಅಹಂಕಾರ ಮತ್ತು ಮನೆಯೇ ಮುಂತಾದವುಗಳಲ್ಲಿ ಮಮತೆ ಇಡದಿದ್ದರೆ ಅವನು ಗೃಹಸ್ಥಾಶ್ರಮದಲ್ಲಿ ಬಂಧಿತನಾಗಲಾರನು. ॥ ೫೪ ॥ ನನ್ನ ಭಕ್ತನು ಮಕ್ಕಳೊಂದಿಗನಾಗಿದ್ದರೆ ಗೃಹಸ್ಥೋಚಿತ ಶಾಸ್ತ್ರೋಕ್ತ ಪವಿತ್ರ ಕರ್ಮಗಳ ಮೂಲಕ ನನ್ನ ಆರಾಧನೆ ಮಾಡುತ್ತಾ ಮನೆಯಲ್ಲಿ ಇರಲಿ. ಇಲ್ಲದಿದ್ದರೆ ವಾನಪ್ರಸ್ಥ ಆಶ್ರಮ ಕೈಗೊಳ್ಳಲಿ ಅಥವಾ ಸಂನ್ಯಾಸಾಶ್ರಮವನ್ನು ಸ್ವೀಕರಿಸಲಿ. ॥ ೫೫ ॥ ಪ್ರಿಯ ಉದ್ಧವನೇ ! ಮನೆ-ಸಂಸಾರದಲ್ಲೇ ಆಸಕ್ತನಾಗಿ, ಪತ್ನೀ, ಪುತ್ರ, ಧನ ಇವುಗಳ ಕಾಮನೆಗಳಲ್ಲಿ ಸಿಕ್ಕಿಕೊಂಡು ಅಯ್ಯೋ-ಮುರ್‍ಯೋ ಎಂದು ಪಾಡು ಪಡುತ್ತಾ ಇರುವ ಜನರು, ಮೂಢತೆಯಿಂದ ಸ್ತ್ರೀಲಂಪಟ ಮತ್ತು ಕೃಪಣರಾಗಿ ನಾನು-ನನ್ನದು ಎಂಬ ಹೊಂಡದಲ್ಲಿ ಬಿದ್ದು ಬಂಧಿತರಾಗುತ್ತಾರೆ. ॥ ೫೬ ॥ ಅವರು ಅಯ್ಯೋ! ಶಿವನೇ! ನನ್ನ ತಂದೆ-ತಾಯಿಯರು ಮುದುಕರಾದರು. ಪತ್ನೀ-ಮಕ್ಕಳು ಇನ್ನು ಸಣ್ಣ-ಸಣ್ಣವರಾಗಿದ್ದಾರೆ. ನಾನಿಲ್ಲದಿದ್ದರೆ ಇವರು ದೀನರೂ, ದುಃಖಿಗಳೂ, ಅನಾಥರಾಗುವರು. ಮತ್ತೆ ಇವರ ಜೀವನ ಹೇಗೆ ನಡೆಯಬಹುದು ? ಎಂದು ಯೋಚಿಸುತ್ತಾ ಇರುತ್ತಾರೆ. ॥ ೫೭ ॥ ಈ ವಿಧವಾದ ಸಂಸಾರದ ಮಮತೆಯಿಂದ ವಿಕ್ಷಿಪ್ತವಾದ ಚಿತ್ತವುಳ್ಳ ಆ ಮೂಢಬುದ್ಧಿಯು ವಿಷಯಭೋಗಗಳಿಂದ ಎಂದೂ ತೃಪ್ತನಾಗುವುದಿಲ್ಲ, ಅದರಲ್ಲೇ ಸಿಕ್ಕಿಹಾಕಿಕೊಂಡು ತನ್ನ ಜೀವನವನ್ನು ಕಳೆದುಕೊಳ್ಳುವನು. ಸತ್ತಮೇಲೆ ಘೋರ ಅಂಧಕಾರಮಯ ನರಕಕ್ಕೆ ಹೋಗುತ್ತಾನೆ. ॥ ೫೮ ॥

ಹದಿನೇಳನೆಯ ಅಧ್ಯಾಯವು ಮುಗಿಯಿತು. ॥ ೧೭ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಏಕಾದಶ ಸ್ಕಂಧೇ
ಸಪ್ತದಶೋಽಧ್ಯಾಯಃ ॥ ೧೭ ॥

* 'ವಿಯಂತಿ – ವಿವಿಧಾಃ ಯಂತಿ' ಅರ್ಥಾತ್ ಎಲ್ಲ ಬಂಧು-ಬಾಂಧವರು ಬೇರೆ-ಬೇರೆಯೇ ಆಗಿರುತ್ತಾರೆ. ತನ್ನ ಶಾಶ್ವತ ಸಂಬಂಧವಾದರೋ ಪರಮಪಿತಾ ಪರಮೇಶ್ವರನೊಂದಿಗೆ ಇದೆ, ಲೌಕಿಕ ಸಂಬಂಧಗಳಾದರೋ ಮಾಡಿಕೊಂಡದ್ದು ಎಂದು ದೃಢವಾದ ಧಾರಣೆ ಮಾಡಿಕೊಳ್ಳಬೇಕು. ಆದ್ದರಿಂದ ತಮ್ಮ-ತಮ್ಮ ಅಧಿಕಾರಕ್ಕನುಸಾರ ಎಲ್ಲರ ಸೇವೆ ಮಾಡಬೇಕು. ಅವರಲ್ಲಿ ಆಸಕ್ತಿಯನ್ನಿರಿಸಿ ಮೋಸಹೋಗಬಾರದು.

ಹದಿನೆಂಟನೆಯ ಅಧ್ಯಾಯ

ವಾನಪ್ರಸ್ಥ ಮತ್ತು ಸಂನ್ಯಾಸಿಯ ಧರ್ಮ

ಶ್ರೀಭಗವಾನುವಾಚ

ವನಂ ವಿವಿಕ್ಷುಃ ಪುತ್ರೇಷು ಭಾರ್ಯಾಂ ನ್ಯಸ್ಯ ಸಹೈವ ವಾ ।
ವನ ಏವ ವಸೇಚ್ಛಾಂತಸ್ತೃತೀಯಂ ಭಾಗಮಾಯುಷಃ ॥ ೧ ॥

ಕಂದಮೂಲಫಲೈರ್ವನ್ಯೈರ್ಮೇಧ್ಯೈರ್ವೃತ್ತಿಂ ಪ್ರಕಲ್ಪಯೇತ್ ।
ವಸೀತ ವಲ್ಕಲಂ ವಾಸಸ್ತೃಣಪರ್ಣಾಜಿನಾನಿ ಚ ॥ ೨ ॥

ಕೇಶರೋಮನಖಶ್ಮಶ್ರುಮಲಾನಿ ಬಿಭೃಯಾದ್ದತಃ ।
ನ ಧಾವೇದಪ್ಸು ಮಜ್ಜೇತ ತ್ರಿಕಾಲಂ ಸ್ಥಂಡಿಲೇಶಯಃ ॥ ೩ ॥

ಗ್ರೀಷ್ಮೇ ತಪ್ಯೇತ ಪಂಚಾಗ್ನೀನ್ ವರ್ಷಾಸ್ವಾಸಾರಷಾಡ್ಜಲೇ ।
ಆಕಂಠಮಗ್ನಃ ಶಿಶಿರೇ ಏವಂವೃತ್ತಸ್ತಪಶ್ಚರೇತ್ ॥ ೪ ॥

ಅಗ್ನಿಪಕ್ವಂ ಸಮಶ್ನೀಯಾತ್ಕಾಲಪಕ್ವಮಥಾಪಿ ವಾ ।
ಉಲೂಖಲಾಶ್ಮಕುಟ್ಟೋ ವಾ ದಂತೋಲೂಖಲ ಏವ ವಾ ॥ ೫ ॥

ಸ್ವಯಂ ಸಂಚಿನುಯಾತ್ಸರ್ವಮಾತ್ಮನೋ ವೃತ್ತಿಕಾರಣಮ್ ।
ದೇಶಕಾಲಬಲಾಭಿಜ್ಞೋ ನಾದದೀತಾನ್ಯದಾಽಽಹೃತಮ್ ॥ ೬ ॥

ವನ್ಯೈಶ್ಚರುಪುರೋಡಾಶೈರ್ನಿರ್ವಪೇತ್ಕಾಲಚೋದಿತಾನ್ ।
ನ ತು ಶ್ರೌತೇನ ಪಶುನಾ ಮಾಂ ಯಜೇತ ವನಾಶ್ರಮೀ ॥ ೭ ॥

ಅಗ್ನಿಹೋತ್ರಂ ಚ ದರ್ಶಶ್ಚ ಪೂರ್ಣಮಾಸಶ್ಚ ಪೂರ್ವವತ್ ।
ಚಾತುರ್ಮಾಸ್ಯಾನಿ ಚ ಮುನೇರಾಮ್ನಾತಾನಿ ಚ ನೈಗಮೈಃ ॥ ೮ ॥

ಭಗವಾನ್ ಶ್ರೀಕೃಷ್ಣನು ಹೇಳುತ್ತಾನೆ – ಪ್ರಿಯ ಉದ್ಧವನೇ! ಗೃಹಸ್ಥನಾದ ಮನುಷ್ಯನು ವಾನಪ್ರಸ್ಥ ಆಶ್ರಮವನ್ನು ಕೈಗೊಳ್ಳಲು ಬಯಸಿದರೆ, ತನ್ನ ಪತ್ನಿಯನ್ನು ಪುತ್ರರಿಗೆ ಒಪ್ಪಿಸಬೇಕು, ಅಥವಾ ತನ್ನೊಂದಿಗೆ ಕರೆದುಕೊಳ್ಳಲಿ. ಮತ್ತೆ ಶಾಂತಚಿತ್ತದಿಂದ ತನ್ನ ಆಯುಸ್ಸಿನ ಮೂರನೆಯ ಭಾಗವನ್ನು ಕಾಡಿನಲ್ಲೇ ಇದ್ದು ಕಳೆಯಲಿ. ॥ ೧ ॥ ಅವನು ಕಾಡಿನ ಪವಿತ್ರ ಕಂದ-ಮೂಲ, ಫಲಗಳಿಂದಲೇ ಶರೀರ ನಿರ್ವಾಹ ಮಾಡಬೇಕು. ಬಟ್ಟೆಯ ಬದಲಿಗೆ ಮರದ ತೊಗಟೆ (ವಲ್ಕಲ)ಗಳನ್ನು ಧರಿಸಬೇಕು. ಹುಲ್ಲು, ಎಲೆ, ಮರದ ತೊಗಟೆಗಳನ್ನೇ ಉಪಯೋಗಿಸಬೇಕು. ॥ ೨ ॥ ಕೂದಲು, ರೋಮ, ಉಗುರು, ಗಡ್ಡ-ಮೀಸೆ ಮುಂತಾದ ಶರೀರದ ಮಲವನ್ನು ತೆಗೆಯಬಾರದು. ಹಲ್ಲು ಉಜ್ಜಬಾರದು. ನೀರಿನಲ್ಲಿ ಮುಳುಗಿ ತ್ರಿಕಾಲ ಸ್ನಾನ ಮಾಡಬೇಕು. ನೆಲದಲ್ಲೇ ಮಲಗಬೇಕು. ॥ ೩ ॥ ಗ್ರೀಷ್ಮ ಋತು (ಬೇಸಿಗೆ)ವಿನಲ್ಲಿ ಪಂಚಾಗ್ನಿಯ ನಡುವೆ ಇದ್ದು, ವರ್ಷಾಋತು (ಮಳೆಗಾಲ)ವಿನಲ್ಲಿ ತೆರೆದ ಬಯಲಲ್ಲಿ ನಿಂತು ಮಳೆಯನ್ನು ಸಹಿಸಬೇಕು. ಚಳಿಗಾಲದಲ್ಲಿ ಕತ್ತಿನವರೆಗೆ ನೀರಿನಲ್ಲಿ ಮುಳುಗಿರಬೇಕು. ಈ ಪ್ರಕಾರ ಘೋರ ತಪಸ್ಯಾಮಯ ಜೀವನ ನಡೆಸಬೇಕು. ॥ ೪ ॥ ಬೆಂಕಿಯಲ್ಲಿ ಬೆಂದ ಅನ್ನವನ್ನು ಅಥವಾ ಹಣ್ಣಾದ, ಬೆಳೆದ ಕಂದ ಮೂಲ, ಫಲಗಳಿಂದ ತನ್ನ ನಿರ್ವಾಹಮಾಡಿಕೊಳ್ಳಬೇಕು. ಅದನ್ನು ಕುಟ್ಟಬೇಕಾದ ಆವಶ್ಯಕತೆ ಕಂಡರೆ ಒರಳಲ್ಲಿ ಅಥವಾ ಕಲ್ಲಿನ ಮೇಲೆ ಕುಟ್ಟಿಕೊಳ್ಳಬೇಕು. ಇಲ್ಲವೇ ಹಲ್ಲಿನಿಂದ ಅಗಿದೇ ತಿಂದುಬಿಡಬೇಕು. ॥ ೫ ॥ ತನ್ನ ಉದರಪೂರ್ತಿಗಾಗಿ ಉಪಯೋಗೀ ಎಲ್ಲ ಸಾಮಗ್ರಿಗಳನ್ನು ಸ್ವತಃ ತಂದುಕೊಳ್ಳಬೇಕು. ದೇಶ-ಕಾಲ ಮತ್ತು ತನ್ನ ಶಾರೀರಿಕ ಸಾಮರ್ಥ್ಯವನ್ನು ನೋಡಿಕೊಂಡು ಬೇರೆಯವರು ತಂದಿರುವುದನ್ನು ಉಪಯೋಗಿಸಬಾರದು. * ॥ ೬ ॥ ವಾನಪ್ರಸ್ಥಿಯು ವನ್ಯವಸ್ತುಗಳಿಂದಲೇ ಪುರೋಡಾಶ ಮುಂತಾದ ಹವಿಷ್ಯಾನ್ನವನ್ನು ಸಿದ್ಧಗೊಳಿಸಬೇಕು. ಅದರಿಂದಲೇ ಸಮಯಾನುಸಾರ ಯಾವ ಸಮಯಕ್ಕೆ ಯಾವುದನ್ನು ಹೇಳಲಾಗಿದೆಯೋ ಆ ಆಗ್ರಾಯಣ ಇಷ್ಟಿ ಮುಂತಾದ ವೈದಿಕ ಯಜ್ಞಗಳನ್ನು ಮಾಡಬೇಕು. ಪಶುಬಲಿಯಿಂದ ನನ್ನ ಯಜನವನ್ನು ಎಂದೂ ಮಾಡಬಾರದು. ॥ ೭ ॥ ವಾನಪ್ರಸ್ಥಾಶ್ರಮಿಯು ವೇದವಿಹಿತ ಅಗ್ನಿಹೋತ್ರ, ಅಮಾವಾಸ್ಯಾ, ಪೌರ್ಣಮಿ ಹಾಗೂ ಚಾತುರ್ಮಾಸ್ಯ ಮೊದಲಾದವುಗಳಲ್ಲಿ ಶಾಸ್ತ್ರವಿಧಿಯಂತೆ ಯಜ್ಞ-ಯಾಗಾದಿಗಳನ್ನು ಗೃಹಸ್ಥಾಶ್ರಮದಲ್ಲಿ ಮಾಡಿದಂತೆ ವಾನಪ್ರಸ್ಥಿಯೂ ಮಾಡಬೇಕು. ಅವೆಲ್ಲವುಗಳ ಮೂಲಕ ನನ್ನನ್ನೇ ಪೂಜಿಸಬೇಕು. ॥ ೮ ॥

* ಅರ್ಥಾತ್ – ಇಂತಹ ಪದಾರ್ಥ ಎಲ್ಲಿಂದ ತರಬೇಕು, ಯಾವಾಗ ತರಬೇಕು, ಯಾವು-ಯಾವುದು ತನಗೆ ಅನುಕೂಲವಾಗಿದೆ ಎಂದು ಮುನಿಯು ಅರಿತುಕೊಂಡು ಸ್ವತಃ ಹೊಸ-ಹೊಸ ಕಂದ-ಮೂಲ-ಫಲಗಳನ್ನು ಸಂಗ್ರಹಿಸಬೇಕು. ದೇಶ-ಕಾಲವನ್ನು ತಿಳಿಯದ ಬೇರೆ ಜನರಿಂದ ತಂದಿರುವ ಅಥವಾ ಕಾಲಾಂತರದಲ್ಲಿ ಸಂಗ್ರಹಿಸಿದ ಪದಾರ್ಥಗಳ ಸೇವನೆಯಿಂದ ವ್ಯಾಧಿಯುಂಟಾಗಿ ತಪಸ್ಸಿನಲ್ಲಿ ವಿಘ್ನ ಉಂಟಾಗುವ ಆಶಂಕೆ ಇದೆ.

ಏವಂ ಚೀರ್ಣೇನ ತಪಸಾ ಮುನಿರ್ಧಮನಿಸಂತತಃ ।
ಮಾಂ ತಪೋಮಯಮಾರಾಧ್ಯ ಋಷಿಲೋಕಾದುಪೈತಿ ಮಾಮ್ ॥ ೯ ॥

ಯಸ್ತ್ವೇತತ್ಕೃಚ್ಛ್ರತಶ್ಚೀರ್ಣಂ ತಪೋ ನಿಃಶ್ರೇಯಸಂ ಮಹತ್ ।
ಕಾಮಾಯಾಲ್ಪೀಯಸೇ ಯುಂಜ್ಯಾದ್ಬಾಲಿಶಃ ಕೋಽಪರಸ್ತತಃ ॥ ೧೦ ॥

ಯದಾಸೌ ನಿಯಮೇಽಕಲ್ಪೋ ಜರಯಾ ಜಾತವೇಪಥುಃ ।
ಆತ್ಮನ್ಯಗ್ನೀನ್ಸಮಾರೋಪ್ಯ ಮಚ್ಚಿತ್ತೋಽಗ್ನಿಂ ಸಮಾವಿಶೇತ್ ॥ ೧೧ ॥

ಯದಾ ಕರ್ಮವಿಪಾಕೇಷು ಲೋಕೇಷು ನಿರಯಾತ್ಮಸು ।
ವಿರಾಗೋ ಜಾಯತೇ ಸಮ್ಯಙ್ನ್ಯಸ್ತಾಗ್ನಿಃ ಪ್ರವ್ರಜೇತ್ತತಃ ॥ ೧೨ ॥

ಇಷ್ಟ್ವಾ ಯಥೋಪದೇಶಂ ಮಾಂ ದತ್ತ್ವಾ ಸರ್ವಸ್ವಮೃತ್ವಿಜೇ ।
ಅಗ್ನೀನ್ಸ್ವಪ್ರಾಣ ಆವೇಶ್ಯ ನಿರಪೇಕ್ಷಃ ಪರಿವ್ರಜೇತ್ ॥ ೧೩ ॥

ವಿಪ್ರಸ್ಯ ವೈ ಸಂನ್ಯಸತೋ ದೇವಾ ದಾರಾದಿರೂಪಿಣಃ ।
ವಿಘ್ನಾನ್ ಕುರ್ವಂತ್ಯಯಂ ಹ್ಯಸ್ಮಾನಾಕ್ರಮ್ಯ ಸಮಿಯಾತ್ಪರಮ್ ॥ ೧೪ ॥

ಬಿಭೃಯಾಚ್ಚೇನ್ಮುನಿರ್ವಾಸಃ ಕೌಪೀನಾಚ್ಛಾದನಂ ಪರಮ್ ।
ತ್ಯಕ್ತಂ ನ ದಂಡಪಾತ್ರಾಭ್ಯಾಮನ್ಯತ್ಕಿಂಚಿದನಾಪದಿ ॥ ೧೫ ॥

ದೃಷ್ಟಿಪೂತಂ ನ್ಯಸೇತ್ಪಾದಂ ವಸ್ತ್ರಪೂತಂ ಪಿಬೇಜ್ಜಲಮ್ ।
ಸತ್ಯಪೂತಾಂ ವದೇದ್ವಾಚಂ ಮನಃಪೂತಂ ಸಮಾಚರೇತ್ ॥ ೧೬ ॥

ಈ ಪ್ರಕಾರ ತಪಸ್ಸನ್ನು ಆಚರಿಸುತ್ತಾ ಶರೀರವು ಶುಷ್ಕಪ್ರಾಯವಾದಾಗ ಆ ಮುನಿಯು ತಪೋಮೂರ್ತಿಸ್ವರೂಪೀ ಪರಮಾತ್ಮನಾದ ನನ್ನ ಆರಾಧನೆಯ ಫಲಸ್ವರೂಪ ಋಷಿಗಳಿಗೆ ಪ್ರಾಪ್ತವಾಗುವ ಲೋಕಕ್ಕೆ ಹೋಗುತ್ತಾನೆ. ಅರ್ಥಾತ್ – ಮಹರ್ಲೋಕಕ್ಕೆ ಹೋಗಿ ಮತ್ತೆ ನನ್ನ ಲೋಕಕ್ಕೆ ಬರುತ್ತಾನೆ. ॥ ೯ ॥ ಪ್ರಿಯ ಉದ್ಧವಾ ! ಬಹಳ ಕಷ್ಟದಿಂದ ಮಾಡಿರುವ ಮತ್ತು ಮೋಕ್ಷವನ್ನು ಕೊಡುವಂತಹ ಮಹಾನ್ ತಪಸ್ಸನ್ನು ಸ್ವರ್ಗ, ಬ್ರಹ್ಮಲೋಕ ಮುಂತಾದ ಸಣ್ಣ-ಪುಟ್ಟ ಫಲಗಳ ಪ್ರಾಪ್ತಿಗಾಗಿ ಮಾಡುವ ಮನುಷ್ಯನಿಗಿಂತ ಮಿಗಿಲಾದ ಮೂರ್ಖನು ಯಾರಿರಬಹುದು ? ಅದಕ್ಕಾಗಿ ತಪಸ್ಸಿನ ಅನುಷ್ಠಾನವನ್ನು ನಿಷ್ಕಾಮ ಭಾವದಿಂದಲೇ ಮಾಡಬೇಕು. ॥ ೧೦ ॥

ಪ್ರೀತಿಯ ಉದ್ಧವನೇ ! ವಾನಪ್ರಸ್ಥಿಯು ತನ್ನ ಆಶ್ರಮೋಚಿತ ನಿಯಮಗಳನ್ನು ಪಾಲಿಸಲು ಅಸಮರ್ಥನಾದರೆ, ವೃದ್ಧಾಪ್ಯದ ಕಾರಣ ಶರೀರವು ನಡುಗಲು ತೊಡಗಿದರೆ, ಯಜ್ಞಾಗ್ನಿಗಳನ್ನು ಭಾವನೆಯಿಂದ ತನ್ನ ಅಂತಃಕರಣದಲ್ಲಿ ಆರೋಪಿಸಿಕೊಂಡು, ತನ್ನ ಮನಸ್ಸನ್ನು ನನ್ನಲ್ಲಿ ತೊಡಗಿಸಿ ಅಗ್ನಿಪ್ರವೇಶಮಾಡಲಿ. (ವಿರಕ್ತನಲ್ಲದವನಿಗೆ ಮಾತ್ರ ಈ ವಿಧಾನವಿದೆ.) ॥ ೧೧ ॥ ಕರ್ಮಗಳ ಫಲಸ್ವರೂಪ ಪ್ರಾಪ್ತವಾಗುವ ಲೋಕಗಳೆಲ್ಲ ನರಕದಂತೆ ದುಃಖಪೂರ್ಣವಾಗಿವೆ. ಇಂತಹ ಪೂರ್ಣವೈರಾಗ್ಯ ಉಂಟಾದರೆ ವಿಧಿಪೂರ್ವಕ ಅಗ್ನಿಗಳನ್ನು ತ್ಯಜಿಸಿ ಸಂನ್ಯಾಸ ಸ್ವೀಕರಿಸಲಿ. ॥ ೧೨ ॥ ವಾನಪ್ರಸ್ಥಿಯು ಸಂನ್ಯಾಸಿಯಾಗಲು ಬಯಸಿದರೆ ಮೊದಲಿಗೆ ಅವನು ವೈದಿಕವಿಧಾನಕ್ಕನುಸಾರ ಎಂಟೂ ಪ್ರಕಾರದ ಶ್ರಾದ್ಧಗಳನ್ನು ಮತ್ತು ಪ್ರಾಜಾಪತ್ಯ ಯಜ್ಞದಿಂದ ನನ್ನನ್ನು ಆರಾಧಿಸಲಿ. ಇದಾದ ಬಳಿಕ ತನ್ನ ಸರ್ವಸ್ವವನ್ನು ಋತ್ವಿಜರಿಗೆ ಕೊಡಲಿ. ಯಜ್ಞಾಗ್ನಿಗಳನ್ನು ತನ್ನ ಪ್ರಾಣಗಳಲ್ಲಿ ಲೀನಗೊಳಿಸಿಕೊಳ್ಳಲಿ. ಮತ್ತೆ ಯಾವುದೇ ಸ್ಥಾನ, ವಸ್ತು, ವ್ಯಕ್ತಿಗಳ ಅಪೇಕ್ಷೆಯನ್ನಿಡದೆ ಸಂನ್ಯಾಸಿಯಾಗಲಿ. ॥ ೧೩ ॥ ಉದ್ಧವನೇ ! ಬ್ರಾಹ್ಮಣನು ಸಂನ್ಯಾಸವನ್ನು ಕೈಗೊಳ್ಳಲು ತೊಡಗಿದಾಗ ದೇವತೆಗಳು ಪತ್ನೀ, ಪುತ್ರಾದಿ ನೆಂಟರಿಷ್ಟರ ರೂಪವನ್ನು ಧರಿಸಿ ಅವನ ಸಂನ್ಯಾಸಗ್ರಹಣದಲ್ಲಿ ವಿಘ್ನವನ್ನು ತಂದೊಡ್ಡುವರು. ಅವರೆಲ್ಲರೂ ಅರೇ ! ಇವನಾದರೋ ನಮ್ಮಗಳ ಅವಹೇಳನಗೈದು, ನಮ್ಮನ್ನು ಮೀರಿ ಪರಮಾತ್ಮನನ್ನು ಪಡೆಯಲು ಹೋಗುತ್ತಿರುವನಲ್ಲ ! ಎಂದು ಯೋಚಿಸುತ್ತಾರೆ. ॥ ೧೪ ॥

ಸಂನ್ಯಾಸಿಯು ವಸ್ತ್ರವನ್ನು ತೊಟ್ಟುಕೊಳ್ಳಬೇಕೆಂದರೆ ಕೇವಲ ಲಂಗೋಟಿಯನ್ನು ಉಡಬೇಕು ಮತ್ತು ಹೆಚ್ಚೆಂದರೆ ಲಂಗೋಟಿಯನ್ನು ಮುಚ್ಚುವಷ್ಟು ಸಣ್ಣ ತುಂಡುಬಟ್ಟೆಯನ್ನು ಸುತ್ತಿಕೊಳ್ಳಲಿ. ಅವನು ಎಲ್ಲವನ್ನು ತ್ಯಜಿಸಿರುವನು ; ಆದ್ದರಿಂದ ಯಾವುದೇ ಆಪತ್ತು ಬರದಿದ್ದರೆ ಅವನು ಆಶ್ರಮೋಚಿತ ದಂಡ, ಕಮಂಡಲು ಬಿಟ್ಟು ಬೇರೆ ಯಾವ ವಸ್ತುವನ್ನೂ ತನ್ನ ಬಳಿ ಇರಿಸಿಕೊಳ್ಳಬಾರದು. ॥ ೧೫ ॥ ನಡೆಯುವಾಗ ಕಾಲುಕೆಳಗೆ ಯಾವ ಜೀವಿಯು ಸಿಕ್ಕಿಕೊಳ್ಳದಿರುವಂತೆ ನೋಡಿಕೊಂಡು ನಡೆಯಬೇಕು. ನೀರನ್ನು ಗಾಳಿಸಿ ಕುಡಿಯಬೇಕು. ಸತ್ಯದಿಂದ ಪವಿತ್ರವಾದ ವಾಣಿಯನ್ನೇ ಮಾತನಾಡಬೇಕು. ಮನಸ್ಸಿಗೆ ಪವಿತ್ರವೆನಿಸಿದಂತೆ ಆಚರಿಸಬೇಕು. ॥ ೧೬ ॥

ಮೌನಾನೀಹಾನಿಲಾಯಾಮಾ ದಂಡಾ ವಾಗ್ದೇಹಚೇತಸಾಮ್ ।
ನ ಹ್ಯೇತೇ ಯಸ್ಯ ಸಂತ್ಯಂಗ ವೇಣುಭಿರ್ನ ಭವೇದ್ಯತಿಃ
॥ ೧೭ ॥

ಭಿಕ್ಷಾಂ ಚತುರ್ಷು ವರ್ಣೇಷು ವಿಗರ್ಹ್ಯಾನ್ವರ್ಜಯಂಶ್ಚರೇತ್ ।
ಸಪ್ತಾಗಾರಾನ್ ಅಸಂಕ್ಲೃಪ್ತಾಂಸ್ತುಷ್ಯೇಲ್ಲಬ್ಧೇನ ತಾವತಾ
॥ ೧೮ ॥

ಬಹಿರ್ಜಲಾಶಯಂ ಗತ್ವಾ ತತ್ರೋಪಸ್ಪೃಶ್ಯ ವಾಗ್ಯತಃ ।
ವಿಭಜ್ಯ ಪಾವಿತಂ ಶೇಷಂ ಭುಂಜೀತಾಶೇಷಮಾಹೃತಮ್
॥ ೧೯ ॥

ಏಕಶ್ಚರೇನ್ಮಹೀಮೇತಾಂ ನಿಸ್ಸಂಗಃ ಸಂಯತೇಂದ್ರಿಯಃ ।
ಆತ್ಮಕ್ರೀಡ ಆತ್ಮರತ ಆತ್ಮವಾನ್ ಸಮದರ್ಶನಃ
॥ ೨೦ ॥

ವಿವಿಕ್ತಕ್ಷೇಮಶರಣೋ ಮದ್ಭಾವವಿಮಲಾಶಯಃ ।
ಆತ್ಮಾನಂ ಚಿಂತಯೇದೇಕಮಭೇದೇನ ಮಯಾ ಮುನಿಃ
॥ ೨೧ ॥

ಅನ್ವೀಕ್ಷೇತಾತ್ಮನೋ ಬಂಧಂ ಮೋಕ್ಷಂ ಚ ಜ್ಞಾನನಿಷ್ಠಯಾ ।
ಬಂಧ ಇಂದ್ರಿಯವಿಕ್ಷೇಪೋ ಮೋಕ್ಷ ಏಷಾಂ ಚ ಸಂಯಮಃ
॥ ೨೨ ॥

ತಸ್ಮಾನ್ನಿಯಮ್ಯ ಷಡ್ವರ್ಗಂ ಮದ್ಭಾವೇನ ಚರೇನ್ಮುನಿಃ ।
ವಿರಕ್ತಃ ಕ್ಷುಲ್ಲಕಾಮೇಭ್ಯೋ ಲಬ್ಧ್ವಾಽಽತ್ಮನಿ ಸುಖಂ ಮಹತ್
॥ ೨೩ ॥

ಪುರಗ್ರಾಮವ್ರಜಾನ್ ಸಾರ್ಥಾನ್ಭಿಕ್ಷಾರ್ಥಂ ಪ್ರವಿಶಂಶ್ಚರೇತ್ ।
ಪುಣ್ಯದೇಶಸರಿಚ್ಛೈಲವನಾಶ್ರಮವತೀಂ ಮಹೀಮ್
॥ ೨೪ ॥

ವಾನಪ್ರಸ್ಥಾಶ್ರಮಪದೇಷ್ವಭೀಕ್ಷ್ಣಂ ಭೈಕ್ಷ್ಯಮಾಚರೇತ್ ।
ಸಂಸಿಧ್ಯತ್ಯಾಶ್ವಸಂಮೋಹಃ ಶುದ್ಧಸತ್ತ್ವಃ ಶಿಲಾಂಧಸಾ
॥ ೨೫ ॥

ವಾಣಿಗಾಗಿ ಮೌನ, ಶರೀರಕ್ಕಾಗಿ ನಿಶ್ಚೇಷ್ಟಸ್ಥಿತಿ, ಮನಸ್ಸಿಗಾಗಿ ಪ್ರಾಣಾಯಾಮ ಇವು ದಂಡಗಳಾಗಿವೆ. ಈ ಮೂರು ದಂಡಗಳು ಇಲ್ಲದವನು ಕೇವಲ ಬಿದಿರಿನ ದಂಡದಿಂದ ದಂಡೀಸ್ವಾಮಿ ಆಗುವುದಿಲ್ಲ. ॥ ೧೭ ॥ ಸಂನ್ಯಾಸಿಯು ನಿಂದಿತ ಅಥವಾ ಪತಿತರನ್ನು ಬಿಟ್ಟು ನಾಲ್ಕೂ ವರ್ಣದವರಿಂದ ಭಿಕ್ಷೆ ಪಡೆಯಬೇಕು. ಮೊದಲು ನಿಶ್ಚಿತಪಡಿಸಿದ ಕೇವಲ ಏಳು ಮನೆಗಳಿಂದ ಭಿಕ್ಷೆ ಪಡೆಯಬೇಕು. ಭಿಕ್ಷೆಯಲ್ಲಿ ಸಿಕ್ಕಿದಷ್ಟರಲ್ಲೇ ಸಂತೋಷ ಪಡಬೇಕು. ॥ ೧೮ ॥ ಈ ಪ್ರಕಾರ ಭಿಕ್ಷೆಯನ್ನು ಎತ್ತಿ ಗ್ರಾಮದಿಂದ ಹೊರಗೆ ಜಲಾಶಯದ ಬಳಿಗೆ ಹೋಗಿ, ಅಲ್ಲಿ ಕೈ, ಕಾಲು ತೊಳೆದು ನೀರಿನಿಂದ ಭಿಕ್ಷೆಯನ್ನು ಪವಿತ್ರಗೊಳಿಸಿಕೊಳ್ಳಬೇಕು. ಮತ್ತೆ ಶಾಸ್ತ್ರೋಕ್ತಪದ್ಧತಿಯಿಂದ ಯಾರಿಗೆ ಭಿಕ್ಷೆಯ ಭಾಗವನ್ನು ಕೊಡಬೇಕೋ ಅವರಿಗೆ ಸಲ್ಲಿಸಿ, ಉಳಿದಿರುವುದನ್ನು ಮೌನವಾಗಿ ತಿನ್ನಬೇಕು ಮತ್ತೊಂದು ಸಮಯಕ್ಕೆ ಉಳಿಸಿಡಬಾರದು, ಎಸೆಯಲೂಬಾರದು. ಹಾಗೂ ಹೆಚ್ಚಿಗೆ ಬೇಡಿಕೊಂಡು ತರಬಾರದು. ॥ ೧೯ ॥ ಸಂನ್ಯಾಸಿಯು ಪೃಥಿವಿಯಲ್ಲಿ ಒಬ್ಬಂಟಿಗನಾಗಿಯೇ ಸಂಚರಿಸ ಬೇಕು. ಎಂದೂ ಯಾವುದರ ಮೇಲೂ ಆಸಕ್ತಿ ಇಡಬಾರದು. ಇಂದ್ರಿಯಗಳನ್ನು ವಶದಲ್ಲಿರಿಸಿಕೊಳ್ಳಬೇಕು. ತಾನೇ-ತನ್ನಲ್ಲಿ ಸಂತೋಷವಾಗಿರಬೇಕು. ಆತ್ಮ-ಪ್ರೇಮದಲ್ಲಿ ತನ್ಮಯನಾಗಿದ್ದು, ಅತಿ ಪ್ರತಿಕೂಲ ಪರಿಸ್ಥಿತಿಯಲ್ಲಿಯೂ ಧೈರ್ಯಗೆಡಬಾರದು ಮತ್ತು ಸರ್ವತ್ರ ಸಮಾನರೂಪದಿಂದ ಸ್ಥಿತನಾದ ಪರಮಾತ್ಮನನ್ನು ಅನುಭವಿಸುತ್ತಾ ಇರಬೇಕು. ॥ ೨೦ ॥ ಸಂನ್ಯಾಸಿಯು ನಿರ್ಜನ ಮತ್ತು ನಿರ್ಭಯ ಪವಿತ್ರ ಏಕಾಂತಸ್ಥಾನದಲ್ಲಿ ಇರಬೇಕು. ಅವನ ಹೃದಯ ನಿರಂತರ ನನ್ನ ಭಾವನೆಯಿಂದ ವಿಶುದ್ಧವಾಗಿರಬೇಕು. ಅವನು ತನ್ನನ್ನು ನನ್ನಿಂದ ಅಭಿನ್ನ ಹಾಗೂ ಅದ್ವಿತೀಯ, ಅಖಂಡರೂಪದಲ್ಲಿ ಚಿಂತಿಸುತ್ತಿರಬೇಕು. ॥ ೨೧ ॥ ಅವನು ತನ್ನ ಜ್ಞಾನನಿಷ್ಠೆಯಿಂದ ಚಿತ್ತದ ಬಂಧನ ಹಾಗೂ ಮೋಕ್ಷವನ್ನು ಕುರಿತು ವಿಚಾರಮಾಡಬೇಕು. ಇಂದ್ರಿಯಗಳು ವಿಷಯಗಳಿಗಾಗಿ ವಿಕ್ಷಿಪ್ತವಾಗುವುದು – ಚಂಚಲವಾಗುವುದು, ಬಂಧನವಾಗಿದೆ. ಅವುಗಳನ್ನು ಸಂಯಮದಲ್ಲಿರಿಸುವುದೇ ಮೋಕ್ಷವಾಗಿದೆ ಎಂದು ನಿಶ್ಚಯಿಸಿಕೊಳ್ಳಬೇಕು. ॥ ೨೨ ॥ ಅದಕ್ಕಾಗಿ ಸಂನ್ಯಾಸಿಯು ಮನ ಹಾಗೂ ಐದೂ ಜ್ಞಾನೇಂದ್ರಿಯಗಳನ್ನು ಗೆದ್ದುಕೊಳ್ಳಬೇಕು. ಭೋಗಗಳ ಕ್ಷುದ್ರತೆಯನ್ನು ಅರಿತುಕೊಂಡು, ಅವುಗಳಿಂದ ಸರ್ವಥಾ ವಿಮುಖನಾಗಬೇಕು. ತಾನೇ-ತನ್ನಲ್ಲಿ ಆನಂದವನ್ನು ಅನುಭವಿಸಬೇಕು. ಹೀಗೆ ಅವನು ನನ್ನ ಭಾವನೆಯಿಂದ ತುಂಬಿಕೊಂಡು ಪೃಥಿವಿಯಲ್ಲಿ ವಿಚರಿಸುತ್ತಿರಬೇಕು. ॥ ೨೩ ॥ ಪವಿತ್ರದೇಶ, ನದೀ, ಪರ್ವತ, ವನ, ಆಶ್ರಮಗಳಿಂದ ಪೂರ್ಣವಾದ ಪೃಥ್ವಿಯಲ್ಲಿ ಎಲ್ಲಿಯೂ ಮಮತೆಯನ್ನಿಡದೆ ತಿರುಗಾಡುತ್ತಾ ಇರಬೇಕು. ನಗರ, ಗ್ರಾಮ, ಗೋವಳರ ಹಟ್ಟಿ ಮೊದಲಾದವುಗಳಿಗೆ ಕೇವಲ ಭಿಕ್ಷೆಗಾಗಿ ಮಾತ್ರ ಹೋಗಬೇಕು. ॥ ೨೪ ॥ ಭಿಕ್ಷೆಯೂ ಹೆಚ್ಚಾಗಿ ವಾನಪ್ರಸ್ಥಿಗಳ ಆಶ್ರಮಗಳಿಂದಲೇ ಸ್ವೀಕರಿಸಬೇಕು; ಏಕೆಂದರೆ, ವಾನಪ್ರಸ್ಥಿಯಲ್ಲಿ ಶಿಲಾಂಧವಾಗಿರುವುದರಿಂದ ಪವಿತ್ರವಾಗುತ್ತದೆ. ಅದನ್ನು ತಿನ್ನುವುದರಿಂದ ಬೇಗನೇ ಮೋಹ ನಷ್ಟವಾಗುತ್ತದೆ. ಅದರಿಂದ ಚಿತ್ತಶುದ್ಧಿಯು ಶೀಘ್ರವಾಗಿ ಆಗುತ್ತದೆ. ॥ ೨೫ ॥

ನೈತದ್ವಸ್ತುತಯಾ ಪಶ್ಯೇದ್ದೃಶ್ಯಮಾನಂ ವಿನಶ್ಯತಿ ।
ಅಸಕ್ತಚಿತ್ತೋ ವಿರಮೇದಿಹಾಮುತ್ರ ಚಿಕೀರ್ಷಿತಾತ್ ॥ ೨೬ ॥

ಯದೇತದಾತ್ಮನಿ ಜಗನ್ಮನೋವಾಕ್ ಪ್ರಾಣಸಂಹತಮ್ ।
ಸರ್ವಂ ಮಾಯೇತಿ ತರ್ಕೇಣ ಸ್ವಸ್ಥಸ್ತ್ಯಕ್ತ್ವಾ ನ ತತ್ಸ್ಮರೇತ್ ॥ ೨೭ ॥

ಜ್ಞಾನನಿಷ್ಠೋ ವಿರಕ್ತೋ ವಾ ಮದ್ಭಕ್ತೋ ವಾನಪೇಕ್ಷಕಃ ।
ಸಲಿಂಗಾನಾಶ್ರಮಾಂಸ್ತ್ಯಕ್ತ್ವಾ ಚರೇದವಿಧಿಗೋಚರಃ ॥ ೨೮ ॥

ಬುಧೋ ಬಾಲಕವತ್ಕ್ರೀಡೇತ್ಕುಶಲೋ ಜಡವಚ್ಚರೇತ್ ।
ವದೇದುನ್ಮತ್ತವದ್ವಿದ್ವಾನ್ ಗೋಚರ್ಯಾಂ ನೈಗಮಶ್ಚರೇತ್ ॥ ೨೯ ॥

ವೇದವಾದರತೋ ನ ಸ್ಯಾನ್ನ ಪಾಖಂಡೀ ನ ಹೈತುಕಃ ।
ಶುಷ್ಕವಾದವಿವಾದೇ ನ ಕಂಚಿತ್ಪಕ್ಷಂ ಸಮಾಶ್ರಯೇತ್ ॥ ೩೦ ॥

ನೋದ್ವಿಜೇತ ಜನಾದ್ಧೀರೋ ಜನಂ ಚೋದ್ವೇಜಯೇನ್ನತು ।
ಅತಿವಾದಾಂಸ್ತಿತಿಕ್ಷೇತ ನಾವಮನ್ಯೇತ ಕಂಚನ ।
ದೇಹಮುದ್ದಿಶ್ಯ ಪಶುವದ್ ವೈರಂ ಕುರ್ಯಾನ್ನ ಕೇನಚಿತ್ ॥ ೩೧ ॥

ಏಕ ಏವ ಪರೋ ಹ್ಯಾತ್ಮಾ ಭೂತೇಷ್ವಾತ್ಮನ್ಯವಸ್ಥಿತಃ ।
ಯಥೇಂದುರುದಪಾತ್ರೇಷು ಭೂತಾನ್ಯೇಕಾತ್ಮಕಾನಿ ಚ ॥ ೩೨ ॥

ಅಲಬ್ಧ್ವಾ ನ ವಿಷೀದೇತ ಕಾಲೇ ಕಾಲೇಽಶನಂ ಕ್ವಚಿತ್ ।
ಲಬ್ಧ್ವಾ ನ ಹೃಷ್ಯೇದ್ಧೃತಿಮಾನುಭಯಂ ದೈವತಂತ್ರಿತಮ್ ॥ ೩೩ ॥

ವಿಚಾರವಂತ ಸಂನ್ಯಾಸಿಯು ದೃಶ್ಯಮಾನ ಜಗತ್ತನ್ನು ಎಂದಿಗೂ ಸತ್ಯವಾಗಿ ತಿಳಿಯಬಾರದು. ಏಕೆಂದರೆ, ಇದಾದರೋ ಪ್ರತ್ಯಕ್ಷವಾಗಿ ನಾಶವುಳ್ಳದ್ದಾಗಿದೆ. ಎಲ್ಲಿಯೂ ಆಸಕ್ತಿ ಇಡಬಾರದು. ಏನಾದರೂ ಮಾಡುವ ಇಚ್ಛೆ ಉಂಟಾದರೆ ಅದನ್ನೂ ಬಿಟ್ಟುಬಿಡಬೇಕು. ॥ ೨೬ ॥ ಆತ್ಮನಲ್ಲಿರುವ – ಮನ, ವಾಣೀ ಮತ್ತು ಪ್ರಾಣಗಳ ಸಂಘಾತರೂಪೀ ಈ ಜಗತ್ತೆಲ್ಲವೂ ಪೂರ್ಣವಾಗಿ ಮಾಯಾಮಯವಾಗಿದೆ ಎಂದು ಸಂನ್ಯಾಸಿಯು ವಿಚಾರಮಾಡಬೇಕು. ಈ ತರ್ಕದಿಂದ ಇದನ್ನು ನಿರಾಕರಣಮಾಡಿ ಅರ್ಥಾತ್ – ಇದನ್ನು ತ್ಯಜಿಸಿ, ಆತ್ಮಸ್ವರೂಪದಲ್ಲಿ ಸ್ಥಿತನಾಗಿ, ಮತ್ತೆ ಎಂದಿಗೂ ಅದನ್ನು ಸ್ಮರಿಸಬಾರದು. ॥ ೨೭ ॥ ಜ್ಞಾನನಿಷ್ಠ ವಿರಕ್ತ ಸಂನ್ಯಾಸಿ ಮತ್ತು ಯಾವ ಅಪೇಕ್ಷೆಯೂ ಇಲ್ಲದಿರುವ, ನನ್ನನ್ನೇ ಆಶ್ರಯಿಸಿದ ನನ್ನ ಭಕ್ತನಿಗಾಗಿ ಚಿಹ್ನೆ ಅಥವಾ ಆಶ್ರಮದ ಯಾವ ಆವಶ್ಯಕತೆಯೂ ಇಲ್ಲ. ಇವರು ವೇದಶಾಸ್ತ್ರಗಳ ವಿಧಿ-ನಿಷೇಧಗಳಿಂದ ಅತೀತರಾಗಿ ಸ್ವಚ್ಛಂದವಾಗಿ ವಿಚರಿಸಬೇಕು. ॥ ೨೮ ॥ ನನ್ನ ಅವಧೂತ ಭಕ್ತನು ಬುದ್ಧಿವಂತನಾಗಿದ್ದರೂ ಬಾಲಕರಂತೆ ಆಟವಾಡಲಿ. ನಿಪುಣನಾಗಿದ್ದರೂ ಜಡನಂತೆಯೇ ವರ್ತಿಸಲಿ. ವಿದ್ವಾಂಸನಾಗಿದ್ದರೂ ಹುಚ್ಚನಂತೆ ಮಾತು-ಕತೆಯಾಡಲಿ. ಸಮಸ್ತ ವೇದ-ವಿಧಿಗಳನ್ನು ಅರಿತಿದ್ದರೂ ಪಶುವೃತ್ತಿಯಿಂದ, ಅರ್ಥಾತ್ – ಅನಿಯತ ಆಚಾರ ಮಾಡುವವನಂತೆ ಇರಬೇಕು. ॥ ೨೯ ॥ ಅವನು ವೇದಗಳ ಕರ್ಮಕಾಂಡ ಭಾಗದ ವ್ಯಾಖ್ಯೆಯಲ್ಲಿ ತೊಡಗಬಾರದು. ವೇದವನ್ನು ನಿಂದಿಸುವ ಪಾಖಂಡ (ನಾಸ್ತಿಕ)ನೂ ಆಗಿರಬಾರದು. ತರ್ಕ-ವಿತರ್ಕದಿಂದ ದೂರವುಳಿಯಬೇಕು. ನಿಷ್ಪ್ರಯೋಜಕವಾದ ವಿವಾದಗಳಲ್ಲಿ ಯಾವುದೇ ಪಕ್ಷವನ್ನು ವಹಿಸಿಕೊಳ್ಳಬಾರದು. ॥ ೩೦ ॥ ಧೀರನಾದ ನನ್ನ ಪರಮಹಂಸ ಭಕ್ತನು ಜನರ ಆಚರಣೆಗಳಿಂದ ಉದ್ವಿಗ್ನನಾಗುವುದಿಲ್ಲ. ತನ್ನ ಆಚರಣೆಯಿಂದ ಯಾವ ಪ್ರಾಣಿಯನ್ನು ಉದ್ವಿಗ್ನಗೊಳಿಸುವುದಿಲ್ಲ. ತನ್ನ ಕುರಿತು ಯಾರಾದರೂ ನಿಂದಿಸಿದರೆ ಸಂತೋಷವಾಗಿ ಸಹಿಸುತ್ತಾನೆ. ಯಾರ ಅಪಮಾನವನ್ನೂ ಮಾಡುವುದಿಲ್ಲ. ದೇಹದ ಸಲುವಾಗಿ ಪಶುಗಳಂತೆ ಯಾರೊಡನೆಯೂ ದ್ವೇಷ ಕಟ್ಟಿಕೊಳ್ಳುವುದಿಲ್ಲ. ॥ ೩೧ ॥ ನೀರು ತುಂಬಿಟ್ಟ ವಿಭಿನ್ನ ಪಾತ್ರೆಗಳಲ್ಲಿ ಚಂದ್ರನು ಬೇರೆ-ಬೇರೆಯಾಗಿ ಪ್ರತಿಬಿಂಬಿಸುವಂತೆ, ಒಬ್ಬನೇ ಪರಮಾತ್ಮನು ಸಮಸ್ತ ಪ್ರಾಣಿಗಳಲ್ಲಿ ಮತ್ತು ತನ್ನಲ್ಲಿಯೂ ಸ್ಥಿತನಾಗಿದ್ದಾನೆ. ಎಲ್ಲರ ಆತ್ಮನಾದರೋ ಒಂದೇ ಆಗಿದೆ. ಎಲ್ಲ ಪ್ರಾಣಿಗಳ ಶರೀರವೂ ಕೂಡ ಒಂದೇ ರೀತಿಯ ಪಂಚಭೂತಗಳಿಂದ ಉಂಟಾಗಿದೆ. ಆದ್ದರಿಂದ ಅವುಗಳಲ್ಲಿರುವ ಪ್ರಾಣವೂ ಒಂದೇ ಆಗಿದೆ ಎಂಬ ತತ್ತ್ವವನ್ನು ನನ್ನ ಪರಮಹಂಸಭಕ್ತನು ಚೆನ್ನಾಗಿ ತಿಳಿದಿರುತ್ತಾನೆ. (ಇಂತಹ ಅವಸ್ಥೆಯಲ್ಲಿ ಯಾರೊಂದಿಗಾದರೂ ವೈರ-ವಿರೋಧ ಮಾಡಿದರೆ ತನ್ನೊಂದಿಗೆ ವೈರ-ವಿರೋಧಮಾಡಿದಂತೆ.) ॥ ೩೨ ॥

ಪ್ರಿಯ ಉದ್ಧವಾ! ಧೈರ್ಯಶಾಲಿಯಾದ ಸಂನ್ಯಾಸಿಯು ಎಂದಾದರೂ ಒಂದುದಿನ ಭಿಕ್ಷೆಯು ದೊರೆಯದಿದ್ದರೆ ವಿಷಾದಿಸಬಾರದು. ಕಾಲ-ಕಾಲಕ್ಕೆ ಸರಿಯಾಗಿ ಸಿಗುತ್ತಿದ್ದರೆ ಹರ್ಷಿತನಾಗಬಾರದು. ಭಿಕ್ಷೆ ದೊರೆಯುವುದು ದೊರಕದಿರುವುದು ಎರಡೂ ಪ್ರಾರಬ್ಧಾಧೀನವೆಂದು ಭಾವಿಸಬೇಕು. ॥ ೩೩ ॥

ಆಹಾರಾರ್ಥಂ ಸಮೀಹೇತ ಯುಕ್ತಂ ತತ್ ಪ್ರಾಣಧಾರಣಮ್ ।
ತತ್ತ್ವಂ ವಿಮೃಶ್ಯತೇ ತೇನ ತದ್ವಿಜ್ಞಾಯ ವಿಮುಚ್ಯತೇ ॥ ೩೪ ॥

ಯದೃಚ್ಛಯೋಪಪನ್ನಾನ್ನಮದ್ಯಾಚ್ಛ್ರೇಷ್ಠಮುತಾಪರಮ್ ।
ತಥಾ ವಾಸಸ್ತಥಾ ಶಯ್ಯಾಂ ಪ್ರಾಪ್ತಂ ಪ್ರಾಪ್ತಂ ಭಜೇನ್ಮುನಿಃ ॥ ೩೫ ॥

ಶೌಚಮಾಚಮನಂ ಸ್ನಾನಂ ನ ತು ಚೋದನಯಾ ಚರೇತ್ ।
ಅನ್ಯಾಂಶ್ಚ ನಿಯಮಾನ್ ಜ್ಞಾನೀ ಯಥಾಹಂ ಲೀಲಯೇಶ್ವರಃ ॥ ೩೬ ॥

ನ ಹಿ ತಸ್ಯ ವಿಕಲ್ಪಾಖ್ಯಾ ಯಾ ಚ ಮದ್ವೀಕ್ಷಯಾ ಹತಾ ।
ಆದೇಹಾಂತಾತ್ ಕ್ವಚಿತ್ ಖ್ಯಾತಿಸ್ತತಃ ಸಂಪದ್ಯತೇ ಮಯಾ ॥ ೩೭ ॥

ದುಃಖೋದರ್ಕೇಷು ಕಾಮೇಷು ಜಾತನಿರ್ವೇದ ಆತ್ಮವಾನ್ ।
ಅಜಿಜ್ಞಾಸಿತಮದ್ಧರ್ಮೋ ಗುರುಂ ಮುನಿಮುಪಾವ್ರಜೇತ್ ॥ ೩೮ ॥

ತಾವತ್ಪರಿಚರೇದ್ಭಕ್ತಃ ಶ್ರದ್ಧಾವಾನನಸೂಯಕಃ ।
ಯಾವದ್ಬ್ರಹ್ಮ ವಿಜಾನೀಯಾನ್ಮಾಮೇವ ಗುರುಮಾದೃತಃ ॥ ೩೯ ॥

ಯಸ್ತ್ವಸಂಯತಷಡ್ವರ್ಗಃ ಪ್ರಚಂಡೇಂದ್ರಿಯಸಾರಥಿಃ ।
ಜ್ಞಾನವೈರಾಗ್ಯರಹಿತಸ್ತ್ರಿದಂಡಮುಪಜೀವತಿ ॥ ೪೦ ॥

ಸುರಾನಾತ್ಮಾನಮಾತ್ಮಸ್ಥಂ ನಿಹ್ನುತೇ ಮಾಂ ಚ ಧರ್ಮಹಾ ।
ಅವಿಪಕ್ವಕಷಾಯೋಽಸ್ಮಾದಮುಷ್ಮಾಚ್ಚ ವಿಹೀಯತೇ ॥ ೪೧ ॥

ಸಂನ್ಯಾಸಿಯಾದವನು ಭಿಕ್ಷೆಯನ್ನು ಅವಶ್ಯವಾಗಿ ಬೇಡಲೇಬೇಕು. ಹೀಗೆ ಮಾಡುವುದು ಉಚಿತವೂ ಆಗಿದೆ. ಏಕೆಂದರೆ, ಭಿಕ್ಷೆಯಿಂದಲೇ ಪ್ರಾಣಗಳ ರಕ್ಷಣೆಯಾಗುತ್ತದೆ. ಪ್ರಾಣಗಳು ಉಳಿಯುವುದರಿಂದಲೇ ತತ್ತ್ವದ ವಿಚಾರವಾಗುತ್ತದೆ. ತತ್ತ್ವವಿಚಾರದಿಂದ ತತ್ತ್ವಜ್ಞಾನ ಉಂಟಾಗಿ ಮುಕ್ತಿ ದೊರೆಯುತ್ತದೆ. ॥ ೩೪ ॥ ಸಂನ್ಯಾಸಿಗೆ ಪ್ರಾರಬ್ಧಕ್ಕನುಸಾರ ದೊರೆಯುವ ಭಿಕ್ಷೆಯು ಒಳ್ಳೆದಾಗಲಿ-ಕೆಟ್ಟದಾಗಲೀ ಅದರಿಂದಲೇ ಹೊಟ್ಟೆತುಂಬಿಸಿಕೊಳ್ಳಬೇಕು. ವಸ್ತ್ರ ಮತ್ತು ಹಾಸಿಗೆಯೂ ಕೂಡ ಹೇಗೆ ದೊರೆಯುವುದೋ ಅದರಿಂದಲೇ ನಿರ್ವಾಹ ಮಾಡಬೇಕು. ಅದರಲ್ಲಿ ಒಳ್ಳೆಯದು ಕೆಟ್ಟದು ಎಂಬುದನ್ನು ಕಲ್ಪಿಸಬಾರದು. ॥ ೩೫ ॥ ಪ್ರಪಂಚದಲ್ಲಿ ಈಶ್ವರನಾದ ನನಗೆ ಮಾಡಬೇಕಾದ ಯಾವ ಕರ್ತವ್ಯವೂ ಇಲ್ಲದಿದ್ದರೂ ಲೋಕಸಂಗ್ರಹಾರ್ಥ ಲೀಲೆಯಿಂದಲೇ ಶೌಚಾಚಮನ ಸ್ನಾನಗಳನ್ನು ಶಾಸ್ತ್ರೋಕ್ತವಾಗಿ ನಾನು ಮಾಡುವಂತೆ, ಜ್ಞಾನಿಯೂ ಶೌಚಾಚಮನ ಸ್ನಾನಾದಿ ನಿಯಮಗಳನ್ನು ಲೋಕಸಂಗ್ರಹಾರ್ಥವಾಗಿ ಪಾಲಿಸಬೇಕು. ಶಾಸ್ತ್ರವು ಹೇಳಿದೆ ಎಂಬ ಕಾರಣದಿಂದ ಅದಕ್ಕೆ ಅಂಟಿಕೊಂಡು ಕರ್ಮಮಾಡುವ ಅವಶ್ಯಕತೆ ನನ್ನಂತೆ ಜ್ಞಾನಿಗೂ ಇರುವುದಿಲ್ಲ. ॥ ೩೬ ॥ ಜ್ಞಾನಿಯಾದವನು ಏಕಮಾತ್ರ ಭಗವಂತನನ್ನೇ ಎಲ್ಲೆಡೆ ನೋಡುತ್ತಾನೆ. ಆದ್ದರಿಂದ ಭಗವಂತನು ಇದ್ದಾನೆ ಅಥವಾ ಇಲ್ಲ ಎಂಬ ಭೇದದ ಪ್ರತೀತಿಯೂ ಅವನಿಗಿರುವುದಿಲ್ಲ. ಶರೀರ ಬಿದ್ದುಹೋಗುವ ಮೊದಲು ಎಂದಾದರೂ ಶಾರೀರಿಕ ಕಷ್ಟದಿಂದಾಗಿ ಕೆಲಸಮಯ ಭೇದದ ಪ್ರತೀತಿ ಉಂಟಾದರೂ ಮರಣಾನಂತರ ಅವನು ನನ್ನನ್ನೇ ಸೇರುತ್ತಾನೆ. ॥ ೩೭ ॥

ಉದ್ಧವನೇ ! ಜಿತೇಂದ್ರಿಯ ಪುರುಷನಿಗೆ ಸಾಂಸಾರಿಕ ವಿಷಯ ಭೋಗಗಳ ಫಲವು ದುಃಖವೇ ಆಗಿದೆ ಎಂಬ ನಿಶ್ಚಯವಾದಾಗ, ಅವನು ವಿರಕ್ತನಾಗುವನು. ಅವನು ನನ್ನ ಪ್ರಾಪ್ತಿಯ ಸಾಧನೆಗಳನ್ನು ತಿಳಿಯದಿದ್ದರೆ, ಭಗವಚ್ಚಿಂತನದಲ್ಲಿ ತನ್ಮಯನಾದ ಬ್ರಹ್ಮನಿಷ್ಠ ಸದ್ಗುರುವಿನಲ್ಲಿ ಶರಣುಹೋಗಬೇಕು. ॥ ೩೮ ॥ ಅವನು ಗುರುವಿನಲ್ಲಿ ದೃಢಭಕ್ತಿಗೈದು, ಶ್ರದ್ಧೆಯಿಡಬೇಕು ಮತ್ತು ಅವರಲ್ಲಿ ಎಂದೂ ದೋಷದೃಷ್ಟಿ ಇರಿಸಬಾರದು. ಬ್ರಹ್ಮಜ್ಞಾನ ಆಗುವವರೆಗೆ ತುಂಬಾ ಆದರದಿಂದ ನನ್ನನ್ನೇ ಗುರುವಿನ ರೂಪದಲ್ಲಿ ಅರಿತುಕೊಂಡು ಅವರನ್ನು ಸೇವಿಸಬೇಕು. ॥ ೩೯ ॥ ಆದರೆ ಐದು ಇಂದ್ರಿಯಗಳು ಮತ್ತು ಮನಸ್ಸು ಈ ಆರರ ಮೇಲೆ ವಿಜಯವನ್ನು ಪಡೆಯದವನು, ಇಂದ್ರಿಯರೂಪೀ ಕುದುರೆಗಳು, ಬುದ್ಧಿರೂಪೀ ಸಾರಥಿಯೂ ಕೆಟ್ಟುಹೋಗಿರುವವನು, ಹೃದಯದಲ್ಲಿ ಜ್ಞಾನ-ವೈರಾಗ್ಯವಿಲ್ಲದವನು, ತ್ರಿದಂಡಿ ಸಂನ್ಯಾಸಿಯ ವೇಷ ತೊಟ್ಟುಕೊಂಡು ಹೊಟ್ಟೆಹೊರೆಯುತ್ತಿದ್ದರೆ, ಅವನು ಸಂನ್ಯಾಸ ಧರ್ಮವನ್ನು ನಾಶಮಾಡುತ್ತಿದ್ದಾನೆ ಹಾಗೂ ತನ್ನ ಹೃದಯದಲ್ಲಿದ್ದ ನನ್ನನ್ನು ಮೋಸಗೊಳಿಸುವ ಚೇಷ್ಟೆ ಮಾಡುತ್ತಾನಷ್ಟೆ. ಇನ್ನೂ ಆ ವೇಷಮಾತ್ರದ ಸಂನ್ಯಾಸಿಯ ವಾಸನೆಗಳು ಕ್ಷೀಣವಾಗಲಿಲ್ಲ; ಆದರಿಂದ ಅವನು ಈ ಲೋಕ ಮತ್ತು ಪರಲೋಕ ಎರಡರಿಂದಲೂ ವಂಚಿತನಾಗಿ ಭ್ರಷ್ಟನಾಗುತ್ತಾನೆ. ॥ ೪೦-೪೧ ॥

ಭಿಕ್ಷೋರ್ಧರ್ಮಃ ಶಮೋಽಹಿಂಸಾ ತಪ ಈಕ್ಷಾ ವನೌಕಸಃ ।
ಗೃಹಿಣೋ ಭೂತರಕ್ಷೇಜ್ಯಾ ದ್ವಿಜಸ್ಯಾಚಾರ್ಯಸೇವನಮ್
॥ ೪೨ ॥

ಬ್ರಹ್ಮಚರ್ಯಂ ತಪಃ ಶೌಚಂ ಸಂತೋಷೋ ಭೂತಸೌಹೃದಮ್ ।
ಗೃಹಸ್ಥಸ್ಯಾಪ್ಯೃತೌ ಗಂತುಃ ಸರ್ವೇಷಾಂ ಮದುಪಾಸನಮ್
॥ ೪೩ ॥

ಇತಿ ಮಾಂ ಯಃ ಸ್ವಧರ್ಮೇಣ ಭಜನ್ನಿತ್ಯಮನನ್ಯಭಾಕ್ ।
ಸರ್ವಭೂತೇಷು ಮದ್ಭಾವೋ ಮದ್ ಭಕ್ತಿಂ ವಿಂದತೇ ದೃಢಾಮ್
॥ ೪೪ ॥

ಭಕ್ತ್ಯೋದ್ಧವಾನಪಾಯಿನ್ಯಾ ಸರ್ವಲೋಕಮಹೇಶ್ವರಮ್ ।
ಸರ್ವೋತ್ಪತ್ತ್ಯಪ್ಯಯಂ ಬ್ರಹ್ಮ ಕಾರಣಂ ಮೋಪಯಾತಿ ಸಃ
॥ ೪೫ ॥

ಇತಿ ಸ್ವಧರ್ಮನಿರ್ಣಿಕ್ತಸತ್ತ್ವೋ ನಿರ್ಜ್ಞಾತಮದ್ಗತಿಃ ।
ಜ್ಞಾನವಿಜ್ಞಾನಸಂಪನ್ನೋ ನಚಿರಾತ್ಸಮುಪೈತಿ ಮಾಮ್
॥ ೪೬ ॥

ವರ್ಣಾಶ್ರಮವತಾಂ ಧರ್ಮ ಏಷ ಆಚಾರಲಕ್ಷಣಃ ।
ಸ ಏವ ಮದ್ಭಕ್ತಿಯುತೋ ನಿಃಶ್ರೇಯಸಕರಃ ಪರಃ
॥ ೪೭ ॥

ಏತತ್ತೇಽಭಿಹಿತಂ ಸಾಧೋ
ಭವಾನ್ ಪೃಚ್ಛತಿ ಯಚ್ಚ ಮಾಮ್ ।
ಯಥಾ ಸ್ವಧರ್ಮಸಂಯುಕ್ತೋ
ಭಕ್ತೋ ಮಾಂ ಸಮಿಯಾತ್ಪರಮ್ ॥ ೪೮ ॥

ಶಾಂತಿ ಮತ್ತು ಅಹಿಂಸೆ ಇವು ಸಂನ್ಯಾಸಿಯ ಮುಖ್ಯ ಧರ್ಮಗಳು. ತಪಸ್ಸು ಹಾಗೂ ಭಗವದ್ಭಾವ ವಾನಪ್ರಸ್ಥಿಯ ಮುಖ್ಯ ಧರ್ಮಗಳು. ಪ್ರಾಣಿಗಳ ರಕ್ಷಣೆ, ಯಜ್ಞ-ಯಾಗ ಮಾಡುವುದು, ಇವು ಗೃಹಸ್ಥನ ಮುಖ್ಯ ಧರ್ಮಗಳಾದರೆ, ಬ್ರಹ್ಮಚಾರಿಯ ಮುಖ್ಯ ಧರ್ಮ ಆಚಾರ್ಯರ ಸೇವೆ ಆಗಿದೆ. ॥ ೪೨ ॥ ಗೃಹಸ್ಥನು ಋತು ಕಾಲದಲ್ಲಿ ಮಾತ್ರವೇ ಭಾರ್ಯೆಯೊಡನೆ ಸಮಾಗಮಮಾಡಲಿ. ಅವನಿಗಾಗಿಯೂ ಬ್ರಹ್ಮಚರ್ಯ, ತಪಸ್ಸು, ಶೌಚ, ಸಂತೋಷ, ಸಮಸ್ತಪ್ರಾಣಿಗಳಲ್ಲಿ ಪ್ರೇಮಭಾವ ಇವು ಮುಖ್ಯ ಧರ್ಮಗಳಾಗಿವೆ. ನನ್ನ ಉಪಾಸನೆಯಾದರೋ ಎಲ್ಲರೂ ಮಾಡಬೇಕು. ॥ ೪೩ ॥ ಈ ವಿಧವಾಗಿ ಅನನ್ಯ ಭಾವದಿಂದ ತನ್ನ ವರ್ಣಾಶ್ರಮದ ಮೂಲಕ ನನ್ನ ಸೇವೆಯಲ್ಲಿ ತೊಡಗಿದ್ದು ಸಮಸ್ತ ಪ್ರಾಣಿಗಳಲ್ಲಿ ನನ್ನ ಭಾವನೆ ಇರಿಸುವ ಮನುಷ್ಯನಿಗೆ ನನ್ನ ಅವಿಚಲ ಭಕ್ತಿಯು ಪ್ರಾಪ್ತವಾಗುತ್ತದೆ. ॥ ೪೪ ॥ ಉದ್ಧವನೇ ! ನಾನೇ ಸಮಸ್ತ ಲೋಕಗಳ ಏಕಮಾತ್ರ ಸ್ವಾಮಿಯೂ, ಎಲ್ಲರ ಉತ್ಪತ್ತಿ, ಪ್ರಳಯದ ಪರಮ ಕಾರಣ ಬ್ರಹ್ಮನೂ ಆಗಿರುವೆನು. ನಿತ್ಯ-ನಿರಂತರ ಅಖಂಡ ಭಕ್ತಿಯಿಂದ ಅವನು ನನ್ನನ್ನೇ ಪಡೆದುಕೊಳ್ಳುವನು. ॥ ೪೫ ॥ ಈ ಪ್ರಕಾರ ಆ ಗೃಹಸ್ಥನು ತನ್ನ ಧರ್ಮಪಾಲನೆಯಿಂದ ಅಂತಃಕರಣವನ್ನು ಚೆನ್ನಾಗಿ ಶುದ್ಧಮಾಡಿಕೊಂಡು ನನ್ನ ಐಶ್ವರ್ಯ-ಸ್ವರೂಪವನ್ನು ತಿಳಿದುಕೊಳ್ಳುವನು ಹಾಗೂ ಜ್ಞಾನ-ವಿಜ್ಞಾನದಿಂದ ಸಂಪನ್ನನಾಗಿ ಬೇಗನೇ ನನ್ನನ್ನು ಪಡೆದುಕೊಳ್ಳುತ್ತಾನೆ. ॥ ೪೬ ॥ ನಾನು ನಿನಗೆ ಈ ಸದಾಚಾರರೂಪೀ ವರ್ಣಾಶ್ರಮಿಗಳ ಧರ್ಮವನ್ನು ಹೇಳಿರುವೆನು. ಈ ಧರ್ಮಾನುಷ್ಠಾನದಲ್ಲಿ ನನ್ನ ಭಕ್ತಿಯಿಂದಲೂ ಸಂಪನ್ನನಾದರೆ ಇದರಿಂದ ಆಯಾಸವಿಲ್ಲದೆಯೇ ಪರಮ ಶ್ರೇಯಸ್ಕರವಾದ ಮೋಕ್ಷದ ಪ್ರಾಪ್ತಿಯಾಗಿ ಹೋಗುತ್ತದೆ. ॥ ೪೭ ॥ ಸಾಧು ಶಿರೋಮಣಿ ಉದ್ಧವಾ ! ನೀನು ನನ್ನಲ್ಲಿ ಪ್ರಶ್ನಿಸಿದುದರ ಉತ್ತರವನ್ನು ನಾನು ಕೊಟ್ಟಿರುವೆನು. ತನ್ನ ಧರ್ಮವನ್ನು ಪಾಲಿಸುವ ಭಕ್ತನು ಪರಬ್ರಹ್ಮಸ್ವರೂಪೀ ನನ್ನನ್ನು ಹೇಗೆ ಪಡೆದುಕೊಳ್ಳುತ್ತಾನೆ ಎಂಬುದನ್ನೂ ಹೇಳಿರುವೆನು. ॥ ೪೮ ॥

ಹದಿನೆಂಟನೆಯ ಅಧ್ಯಾಯವು ಮುಗಿಯಿತು. ॥ ೧೮ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಏಕಾದಶ ಸ್ಕಂಧೇ ಅಷ್ಟಾದಶೋಽಧ್ಯಾಯಃ ॥ ೧೮ ॥

ಹತ್ತೊಂಭತ್ತನೆಯ ಅಧ್ಯಾಯ

ಜ್ಞಾನ, ಭಕ್ತಿ , ಯಮ, ನಿಯಮ ಮುಂತಾದ ಸಾಧನೆಗಳ ವರ್ಣನೆ

ಶ್ರೀಭಗವಾನುವಾಚ

ಯೋ ವಿದ್ಯಾಶ್ರುತಸಂಪನ್ನ
ಆತ್ಮವಾನ್ ನಾನುಮಾನಿಕಃ ।
ಮಾಯಾಮಾತ್ರಮಿದಂ ಜ್ಞಾತ್ವಾ
ಜ್ಞಾನಂ ಚ ಮಯಿ ಸಂನ್ಯಸೇತ್ ॥ ೧ ॥

ಭಗವಾನ್ ಶ್ರೀಕೃಷ್ಣನು ಹೇಳುತ್ತಾನೆ – ಎಲೈ ಉದ್ಧವನೇ ! ಉಪನಿಷದಾದಿ ಶಾಸ್ತ್ರಗಳ ಶ್ರವಣ, ಮನನ, ನಿದಿಧ್ಯಾಸನದ ಮೂಲಕ ಆತ್ಮಸಾಕ್ಷಾತ್ಕಾರ ಪಡೆದಿರುವವನು, ಶ್ರೋತ್ರಿಯ ಹಾಗೂ ಬ್ರಹ್ಮನಿಷ್ಠನಾಗಿರುವವನು, ನಿಶ್ಚಯವು ಕೇವಲ ಯುಕ್ತಿಗಳಿಂದ ಮತ್ತು ಅನುಮಾನದಿಂದ ಪ್ರತ್ಯಕ್ಷವಾಗಿ ಇದೆಲ್ಲವೂ ಮಾಯಾಮಯವಾಗಿದೆ ಎಂಬ ಅನುಭವವನ್ನು ಪಡೆದಿರುವವನು ಪಡೆದ ಜ್ಞಾನವನ್ನೂ ನನ್ನಲ್ಲೇ ಲೀನಗೊಳಿಸಲಿ. ॥ ೧ ॥

ಜ್ಞಾನಿನಸ್ತ್ವಹಮೇವೇಷ್ಟಃ ಸ್ವಾರ್ಥೋ ಹೇತುಶ್ಚ ಸಂಮತಃ ।
ಸ್ವರ್ಗಶ್ಚೈವಾಪವರ್ಗಶ್ಚ ನಾನ್ಯೋಽರ್ಥೋ ಮದೃತೇ ಪ್ರಿಯಃ ॥ ೨ ॥

ಜ್ಞಾನವಿಜ್ಞಾನಸಂಸಿದ್ಧಾಃ ಪದಂ ಶ್ರೇಷ್ಠಂ ವಿದುರ್ಮಮ ।
ಜ್ಞಾನೀ ಪ್ರಿಯತಮೋಽತೋ ಮೇ ಜ್ಞಾನೇನಾಸೌ ಬಿಭರ್ತಿ ಮಾಮ್ ॥ ೩ ॥

ತಪಸ್ತೀರ್ಥಂ ಜಪೋ ದಾನಂ ಪವಿತ್ರಾಣೀತರಾಣಿ ಚ ।
ನಾಲಂ ಕುರ್ವಂತಿ ತಾಂ ಸಿದ್ಧಿಂ ಯಾ ಜ್ಞಾನಕಲಯಾ ಕೃತಾ ॥ ೪ ॥

ತಸ್ಮಾಜ್ಜ್ಞಾನೇನ ಸಹಿತಂ ಜ್ಞಾತ್ವಾ ಸ್ವಾತ್ಮಾನಮುದ್ಧವ ।
ಜ್ಞಾನವಿಜ್ಞಾನಸಂಪನ್ನೋ ಭಜ ಮಾಂ ಭಕ್ತಿಭಾವಿತಃ ॥ ೫ ॥

ಜ್ಞಾನವಿಜ್ಞಾನಯಜ್ಞೇನ ಮಾಮಿಷ್ಟ್ವಾಽಽತ್ಮಾನಮಾತ್ಮನಿ ।
ಸರ್ವಯಜ್ಞಪತಿಂ ಮಾಂ ವೈ ಸಂಸಿದ್ಧಿಂ ಮುನಯೋಽಗಮನ್ ॥ ೬ ॥

ತ್ವಯ್ಯುದ್ಧವಾಶ್ರಯತಿ ಯಸ್ತ್ರಿವಿಧೋ ವಿಕಾರೋ
ಮಾಯಾಂತರಾಽಽಪತತಿ ನಾದ್ಯಪವರ್ಗಯೋರ್ಯತ್ ।
ಜನ್ಮಾದಯೋಽಸ್ಯ ಯದಮೀ ತವ ತಸ್ಯ ಕಿಂ ಸ್ಯು-
ರಾದ್ಯಂತಯೋರ್ಯದಸತೋಽಸ್ತಿ ತದೇವ ಮಧ್ಯೇ ॥ ೭ ॥

ಉದ್ಧವ ಉವಾಚ

ಜ್ಞಾನಂ ವಿಶುದ್ಧಂ ವಿಪುಲಂ ಯಥೈತದ್
ವೈರಾಗ್ಯವಿಜ್ಞಾನಯುತಂ ಪುರಾಣಮ್ ।
ಆಖ್ಯಾಹಿ ವಿಶ್ವೇಶ್ವರ ವಿಶ್ವಮೂರ್ತೇ
ತ್ವದ್‌ಭಕ್ತಿಯೋಗಂ ಚ ಮಹದ್ವಿಮೃಗ್ಯಮ್ ॥ ೮ ॥

ತಾಪತ್ರಯೇಣಾಭಿಹತಸ್ಯ ಘೋರೇ
ಸಂತಪ್ಯಮಾನಸ್ಯ ಭವಾಧ್ವನೀಶ ।
ಪಶ್ಯಾಮಿ ನಾನ್ಯಚ್ಛರಣಂ ತವಾಂಘ್ರಿ-
ದ್ವಂದ್ವಾತಪತ್ರಾದಮೃತಾಭಿವರ್ಷಾತ್ ॥ ೯ ॥

ದಷ್ಟಂ ಜನಂ ಸಂಪತಿತಂ ಬಿಲೇಽಸ್ಮಿನ್
ಕಾಲಾಹಿನಾ ಕ್ಷುದ್ರಸುಖೋರುತರ್ಷಮ್ ।
ಸಮುದ್ಧರೈನಂ ಕೃಪಯಾಽಽಪವರ್ಗ್ಯೈಃ
ವಚೋಭಿರಾಸಿಂಚ ಮಹಾನುಭಾವ ॥ ೧೦ ॥

ಜ್ಞಾನಿಗೆ ಅಭೀಷ್ಟವಸ್ತುವು ನಾನೇ ಆಗಿದ್ದೇನೆ. ಅವನ ಸಾಧನೆ ಸಾಧ್ಯ, ಸ್ವರ್ಗ ಮತ್ತು ಅಪವರ್ಗ (ಮೋಕ್ಷ)ವೂ ನಾನೇ ಆಗಿದ್ದೇನೆ. ನಾನಲ್ಲದೆ ಬೇರೆ ಯಾವ ಪದಾರ್ಥವನ್ನು ಅವನು ಪ್ರೇಮಿಸುವುದಿಲ್ಲ. ॥ ೨ ॥ ಜ್ಞಾನ-ವಿಜ್ಞಾನದಿಂದ ಸಂಪನ್ನನಾದ ಸಿದ್ಧ ಪುರುಷನೇ ನನ್ನ ವಾಸ್ತವಿಕ ಸ್ವರೂಪವನ್ನು ಪರಮಪದವನ್ನು ಅರಿಯುತ್ತಾನೆ. ಅದಕ್ಕಾಗಿ ಜ್ಞಾನಿಯು ನನಗೆ ಪ್ರಿಯನಾಗಿದ್ದಾನೆ. ಉದ್ಧವನೇ! ಜ್ಞಾನಿಯು ತನ್ನ ಜ್ಞಾನದಿಂದ ನಿರಂತರವಾಗಿ ನನ್ನನ್ನು ತನ್ನ ಅಂತಃಕರಣದಲ್ಲಿ ಧರಿಸಿಕೊಂಡಿರುತ್ತಾನೆ. ॥ ೩ ॥ ಜ್ಞಾನದ ಒಂದು ಕಲೆಯಿಂದ ದೊರೆಯಬಹುದಾದ ಸಿದ್ಧಿಯು, ತಪಸ್ಸು ತೀರ್ಥಯಾತ್ರೆ, ಜಪ, ದಾನ, ಅಥವಾ ಬೇರೆ ಪವಿತ್ರ ಕ್ರಿಯಾಕಲಾಪಗಳಿಂದ ಸಿಗಲಾರದು. ॥ ೪ ॥

ಅದಕ್ಕಾಗಿ ಪ್ರೀತಿಯ ಉದ್ಧವನೇ! ನೀನು ಜ್ಞಾನದ ಸಹಿತ ನಿನ್ನ ಆತ್ಮಸ್ವರೂಪವನ್ನು ಅರಿತುಕೋ. ಮತ್ತೆ ಜ್ಞಾನ-ವಿಜ್ಞಾನದಿಂದ ಸಂಪನ್ನನಾಗಿ ಭಕ್ತಿಭಾವದಿಂದ ನನ್ನ ಭಜನೆಮಾಡು. ॥ ೫ ॥ ದೊಡ್ಡ ದೊಡ್ಡ ಋಷಿ-ಮುನಿಗಳು ಜ್ಞಾನ-ವಿಜ್ಞಾನರೂಪೀ ಯಜ್ಞದ ಮೂಲಕ ತಮ್ಮ ಅಂತಃಕರಣದಲ್ಲೇ ಸ್ಥಿತನಾದ ಸಮಸ್ತ ಯಜ್ಞಗಳಿಗೂ ಅಧಿಪತಿಯೂ, ಆತ್ಮಸ್ವರೂಪನೂ ಆದ ನನ್ನನ್ನು ಆರಾಧಿಸಿ ಸಿದ್ಧಿಯನ್ನು ಪಡೆದುಕೊಂಡಿರುವರು. ॥ ೬ ॥ ಎಲೈ ಉದ್ಧವನೇ! ದೇಹ, ಇಂದ್ರಿಯ, ಅಂತಃಕರಣದ ರೂಪದಿಂದ ಯಾವ ತ್ರಿಗುಣಾತ್ಮಿಕಾ ಪ್ರಕೃತಿಯ ವಿಕಾರರೂಪೀ ಶರೀರವಿದೆಯೋ, ಇದನ್ನೇ ನೀನು ಆಶ್ರಯಿಸಿರುವೆ. ಇದು ಅಜ್ಞಾನದ ಕಾರಣವೇ ಆಗಿದೆ. ಮಾಯೆಯಿಂದ ಆವೃತವಾದ್ದರಿಂದಲೇ ಇದರ ಪ್ರತೀತಿಯಾಗುತ್ತಿದೆ. ಇದು ಹುಟ್ಟುವ ಮೊದಲು ಅವ್ಯಕ್ತವಾಗಿತ್ತು, ಸತ್ತ ಬಳಿಕವೂ ಅವ್ಯಕ್ತವಾಗುತ್ತದೆ. ಕೇವಲ ನಡುವಿನಲ್ಲಿ ಮಾಯೆಯ ಕಾರಣದಿಂದ ಕಾಣುತ್ತಿದೆ. ಜನ್ಮ ಮುಂತಾದ ಆರು ವಿಕಾರಗಳು ಇದಕ್ಕೆ ಆಗುತ್ತವೆ. ಇಂತಹ ನಾಶವುಳ್ಳ ಶರೀರದೊಂದಿಗೆ ನಿನಗೆ ಯಾವ ಸಂಬಂಧವಿದೆ. ಅದು ಆದಿಯಲ್ಲಿ ಅಸತ್ತಾಗಿದೆ, ಅಂತ್ಯದಲ್ಲಿಯೂ ಅಸತ್ತಾಗಿದೆ, ಆದ್ದರಿಂದ ಮಧ್ಯದಲ್ಲಿಯೂ ಅಸತ್ತಾಗಿಯೇ ಇದೆ. ॥ ೭ ॥

ಉದ್ಧವನೆಂದನು – ಓ ವಿಶ್ವೇಶ್ವರಾ! ವಿಶ್ವಮೂರ್ತೇ! ಈಗ ನೀನು ವರ್ಣಿಸಿದ ಜ್ಞಾನವು ವಿಶುದ್ಧ, ವಿಪುಲ, ಸನಾತನವಾಗಿದೆ; ವೈರಾಗ್ಯ, ವಿಜ್ಞಾನದಿಂದ ಯುಕ್ತವಾಗಿದೆ. ಈಗ ನೀನು ದಯಮಾಡಿ ಬ್ರಹ್ಮಾದಿ ದೇವತೆಗಳೂ ಹುಡುಕುತ್ತಿರುವ ಭಕ್ತಿಯೋಗದ ವಿಷಯದಲ್ಲಿ ಹೇಳು. ॥ ೮ ॥ ನನ್ನ ಸ್ವಾಮಿಯೇ! ನಾನು ಈ ಭವಸಾಗರದಲ್ಲಿ ಮೂರೂ ತಾಪಗಳಿಗೆ ತುತ್ತಾಗಿ ಅತ್ಯಂತ ಪೀಡಿತನಾಗಿರುವೆನು. ಈ ಸಂಕಟದಿಂದ ಪಾರಾಗಲು ನಿನ್ನ ಈ ಅಮೃತ ವರ್ಷಿಸುವಂತಹ ಶರಣಾಗತರಿಗೆ ಅಭಯ ಕೊಡುವಂತಹ ಚರಣ ಯುಗಳಗಳಲ್ಲಿ ಶರಣಾಗುವ ಹೊರತು ನನಗೆ ಬೇರೆ ಯಾವ ಉಪಾಯವೂ ಕಾಣುವುದಿಲ್ಲ. ॥ ೯ ॥ ಮಹಾನುಭಾವಾ! ನಿನ್ನ ಈ ಸೇವಕನು ಕತ್ತಲೆಯ ಮಡುವಿನಲ್ಲಿ ಬಿದ್ದಿರುವನು, ಕಾಲರೂಪೀ ಸರ್ಪವು ಇವನನ್ನು ಕಚ್ಚಿಕೊಂಡಿರುವುದು. ಆದರೂ ವಿಷಯಗಳ ಕ್ಷುದ್ರ ಸುಖ-ಭೋಗಗಳ ತೀವ್ರ ತೃಷ್ಣೆಯು ಇಂಗುವುದಿಲ್ಲ, ಬೆಳೆಯುತ್ತಲೇ ಹೋಗುತ್ತಿದೆ. ನೀನು ದಯಮಾಡಿ ಇವನನ್ನು ಉದ್ಧರಿಸು. ಇದರಿಂದ ಮುಕ್ತಗೊಳಿಸುವಂತಹ ವಾಣಿಯಿಂದ ಅಮೃತ ಸಿಂಚನ ಮಾಡು. ॥ ೧೦ ॥

ಶ್ರೀಭಗವಾನುವಾಚ

ಇತ್ಥಮೇತತ್ ಪುರಾ ರಾಜಾ ಭೀಷ್ಮಂ ಧರ್ಮಭೃತಾಂ ವರಮ್ ।
ಅಜಾತಶತ್ರುಃ ಪಪ್ರಚ್ಛ ಸರ್ವೇಷಾಂ ನೋಽನುಶೃಣ್ವತಾಮ್ ॥ ೧೧ ॥

ನಿವೃತ್ತೇ ಭಾರತೇ ಯುದ್ಧೇ ಸುಹೃನ್ನಿಧನವಿಹ್ವಲಃ ।
ಶ್ರುತ್ವಾ ಧರ್ಮಾನ್ಬಹೂನ್ಪಶ್ಚಾನ್ಮೋಕ್ಷಧರ್ಮಾನಪೃಚ್ಛತ ॥ ೧೨ ॥

ತಾನಹಂ ತೇಽಭಿಧಾಸ್ಯಾಮಿ ದೇವವ್ರತಮುಖಾಚ್ಛ್ರುತಾನ್ ।
ಜ್ಞಾನವೈರಾಗ್ಯವಿಜ್ಞಾನಶ್ರದ್ಧಾಭಕ್ತ್ಯುಪಬೃಂಹಿತಾನ್ ॥ ೧೩ ॥

ನವೈಕಾದಶ ಪಂಚ ತ್ರೀನ್ಭಾವಾನ್ಭೂತೇಷು ಯೇನ ವೈ ।
ಈಕ್ಷೇತಾಥೈಕಮಪ್ಯೇಷು ತಜ್ಜ್ಞಾನಂ ಮಮ ನಿಶ್ಚಿತಮ್ ॥ ೧೪ ॥

ಏತದೇವ ಹಿ ವಿಜ್ಞಾನಂ ನ ತಥೈಕೇನ ಯೇನ ಯತ್ ।
ಸ್ಥಿತ್ಯುತ್ಪತ್ತ್ಯಪ್ಯಯಾನ್ ಪಶ್ಯೇದ್ಭಾವಾನಾಂ ತ್ರಿಗುಣಾತ್ಮನಾಮ್ ॥ ೧೫ ॥

ಆದಾವಂತೇ ಚ ಮಧ್ಯೇ ಚ ಸೃಜ್ಯಾತ್ಸೃಜ್ಯಂ ಯದನ್ವಿಯಾತ್ ।
ಪುನಸ್ತತ್ಪ್ರತಿಸಂಕ್ರಾಮೇ ಯಚ್ಛಿಷ್ಯೇತ ತದೇವ ಸತ್ ॥ ೧೬ ॥

ಶ್ರುತಿಃ ಪ್ರತ್ಯಕ್ಷಮೈತಿಹ್ಯಮನುಮಾನಂ ಚತುಷ್ಟಯಮ್ ।
ಪ್ರಮಾಣೇಷ್ವನವಸ್ಥಾನಾದ್ವಿಕಲ್ಪಾತ್ ಸ ವಿರಜ್ಯತೇ ॥ ೧೭ ॥

ಕರ್ಮಣಾಂ ಪರಿಣಾಮಿತ್ವಾದಾವಿರಿಂಚಾದಮಂಗಲಮ್ ।
ವಿಪಶ್ಚಿನ್ನಶ್ವರಂ ಪಶ್ಯೇದದೃಷ್ಟಮಪಿ ದೃಷ್ಟವತ್ ॥ ೧೮ ॥

ಭಗವಾನ್ ಶ್ರೀಕೃಷ್ಣನು ಹೇಳುತ್ತಾನೆ – ಉದ್ಧವನೇ! ನೀನು ನನ್ನಲ್ಲಿ ಪ್ರಶ್ನಿಸಿದಂತೆಯೇ ಧರ್ಮರಾಜ ಯುಧಿಷ್ಠಿರನು ಧಾರ್ಮಿಕ ಶಿರೋಮಣಿ ಭೀಷ್ಮಪಿತಾಮಹರಲ್ಲಿ ಪ್ರಶ್ನೆಮಾಡಿದ್ದನು. ಆಗ ನಾವೆಲ್ಲರೂ ಅಲ್ಲಿ ಉಪಸ್ಥಿತರಾಗಿದ್ದೆವು. ॥ ೧೧ ॥ ಮಹಾಭಾರತ ಯುದ್ಧವು ಮುಗಿದು, ಧರ್ಮರಾಜಾ ಯುಧಿಷ್ಠಿರನು ತನ್ನ ಸ್ವಜನ-ಸಂಬಂಧಿಗಳ ಸಂಹಾರದಿಂದಾಗಿ ಶೋಕವಿಹ್ವಲನಾಗಿದ್ದಾಗ, ಅವನು ಭೀಷ್ಮಪಿತಾಮಹರಲ್ಲಿ ಅನೇಕ ಧರ್ಮಗಳ ವಿವರಣೆಯನ್ನು ಕೇಳಿದ ಬಳಿಕ, ಮೋಕ್ಷ ಸಾಧನೆಗಳ ಕುರಿತು ಪ್ರಶ್ನಿಸಿದ್ದನು. ॥ ೧೨ ॥ ಆಗ ಭೀಷ್ಮಪಿತಾಮಹರ ಮುಖದಿಂದ ಕೇಳಿದ ಮೋಕ್ಷಧರ್ಮವನ್ನು ನಾನು ನಿನಗೆ ಹೇಳುವೆನು. ಏಕೆಂದರೆ ಅದು ಜ್ಞಾನ, ವೈರಾಗ್ಯ, ವಿಜ್ಞಾನ, ಶ್ರದ್ಧೆ ಭಕ್ತಿ ಇವುಗಳ ಭಾವಗಳಿಂದ ಪರಿಪೂರ್ಣವಾಗಿದೆ. ॥ ೧೩ ॥ ಉದ್ಧವನೇ! ಪ್ರಕೃತಿ, ಪುರುಷ, ಮಹತ್ತತ್ತ್ವ, ಅಹಂಕಾರ, ಪಂಚತನ್ಮಾತ್ರೆಗಳು ಹೀಗೆ ಈ ಒಂಭತ್ತು; ಐದು ಜ್ಞಾನೇಂದ್ರಿಯಗಳು, ಐದು ಕರ್ಮೇಂದ್ರಿಯಗಳು, ಮನಸ್ಸು ಹೀಗೆ ಹನ್ನೊಂದು; ಪಂಚಮಹಾಭೂತಗಳು ಹಾಗೂ ತ್ರಿಗುಣಗಳು ಹೀಗೆ ಎಂಟು. ಒಟ್ಟಿಗೆ ಈ ಇಪ್ಪತ್ತೆಂಟು ತತ್ತ್ವಗಳು ಬ್ರಹ್ಮನಿಂದ ಹಿಡಿದು ತೃಣದವರೆಗಿನ ಎಲ್ಲ ಕಾರ್ಯಗಳಲ್ಲಿ ನೋಡಲಾಗುವುದೇ ಜ್ಞಾನವಾಗಿದೆ. ಈ ಇಪ್ಪತ್ತೆಂಟು ತತ್ತ್ವಗಳಲ್ಲಿ ಅನುಗತನಾದ ಪರಮಾತ್ಮ ತತ್ತ್ವವನ್ನು ನೋಡುವುದೇ ವಿಜ್ಞಾನವಾಗಿದೆ ಎಂಬುದು ನನ್ನ ನಿಶ್ಚಿತವಾದ ಅಭಿಪ್ರಾಯವಾಗಿದೆ. ॥ ೧೪ ॥ ಈ ಇಪ್ಪತ್ತೆಂಟು ತತ್ತ್ವಗಳು ಉತ್ಪತ್ತಿ, ಸ್ಥಿತಿ ಮತ್ತು ನಾಶವುಳ್ಳವುಗಳು. ತ್ರಿಗುಣಾತ್ಮಿಕಾ ಮಾಯೆಯ ಕಾರ್ಯವಾಗಿದೆ. ಈ ಭಾವಗಳಿಂದಲೇ ಭಗವಂತನು ಪ್ರಪಂಚದ ಉತ್ಪತ್ತಿ, ಸ್ಥಿತಿ, ಸಂಹಾರರೂಪೀ ಲೀಲೆಮಾಡುತ್ತಾನೆ. ಇದರಲ್ಲದರಲ್ಲಿ ಅನುಗತನಾದ ಪರಮಾತ್ಮತತ್ತ್ವವು ಶಾಶ್ವತವಾಗಿದೆ. ಹೀಗೆ ಕೇವಲ ಒಂದೇ ತತ್ತ್ವವು ಅನುಭವದಲ್ಲಿ ಉಳಿದಾಗ, ಅದನ್ನು ವಿಜ್ಞಾನವೆಂದು ಹೇಳುತ್ತಾರೆ. ॥ ೧೫ ॥ ಈ ಪ್ರಕಾರ ಓರ್ವ ಪರಮಾತ್ಮನೇ ಆದಿ, ಮಧ್ಯ ಮತ್ತು ಅಂತ್ಯದಲ್ಲಿಯೂ ಇದ್ದಾನೆ. ಅವನು ತನ್ನಲ್ಲಿಯೇ ಈ ವಿಶ್ವವನ್ನು ಸೃಷ್ಟಿಸಿದನು ಹಾಗೂ ಅವನೇ ಇದರಲ್ಲಿ ಅನುಗತನಾದನು, ಅಂದರೆ ಸೇರಿಕೊಂಡನು. ಮತ್ತೆ ಪ್ರಳಯಮಾಡುವಾಗ ಅವನೇ ಪುನಃ ಇದನ್ನು ತನ್ನಲ್ಲೇ ಲೀನಗೊಳಿಸಿಕೊಳ್ಳುವನು. ಹೀಗೆ ಶೇಷವಾಗಿ ಉಳಿಯುವುದೇ ಸತ್ ತತ್ತ್ವವಾಗಿದೆ. ॥ ೧೬ ॥ ಶ್ರುತಿ (ವೇದ) ಪ್ರಮಾಣದಿಂದ, ಪ್ರತ್ಯಕ್ಷ ಪ್ರಮಾಣದಿಂದ, ಐತಿಹ್ಯ (ಮಹಾಪುರುಷರ ವಚನ)ದಿಂದ ಮತ್ತು ಅನುಮಾನ ಪ್ರಮಾಣದಿಂದ ಭೇದಬುದ್ಧಿಯ ಅಸ್ತಿತ್ವವು ಯಾವುದೇ ರೀತಿಯಿಂದ ಸಿದ್ಧವಾಗುವುದಿಲ್ಲ. ಆದ್ದರಿಂದ ವಿವೇಕಿಯು ಭೇದಬುದ್ಧಿಯಿಂದ ರಹಿತನಾಗಿರುತ್ತಾನೆ. ಅರ್ಥಾತ್ ಅವನ ಜ್ಞಾನದಲ್ಲಿ ಓರ್ವ ಪರಮಾತ್ಮನಲ್ಲದೆ ಬೇರೆ ಏನೂ ಇರುವುದಿಲ್ಲ. ॥ ೧೭ ॥ ಈ ಲೋಕದ ಭೋಗಗಳಿಗೆ ನಾಶವಿರುವಂತೆ, ಯಜ್ಞಾದಿ ಅನುಷ್ಠಾನದ ಫಲಸ್ವರೂಪವಾಗಿ ದೊರೆಯುವ ಸ್ವರ್ಗಾದಿ ಬ್ರಹ್ಮಲೋಕದವರೆಗಿನ ಎಲ್ಲ ಸುಖಗಳು ಅಮಂಗಲ, ದುಃಖದಾಯಕ ಹಾಗೂ ನಾಶವುಳ್ಳವುಗಳೆಂದು ವಿದ್ವಾಂಸನಾದವನು ನೋಡಬೇಕು. ॥ ೧೮ ॥

ಭಕ್ತಿಯೋಗಃ ಪುರೈವೋಕ್ತಃ ಪ್ರೀಯಮಾಣಾಯ ತೇಽನಘ ।
ಪುನಶ್ಚ ಕಥಯಿಷ್ಯಾಮಿ ಮದ್ಭಕ್ತೇಃ ಕಾರಣಂ ಪರಮ್
॥ ೧೯ ॥

ಶ್ರದ್ಧಾಮೃತಕಥಾಯಾಂ ಮೇ ಶಶ್ವನ್ಮದನುಕೀರ್ತನಮ್ ।
ಪರಿನಿಷ್ಠಾ ಚ ಪೂಜಾಯಾಂ ಸ್ತುತಿಭಿಃ ಸ್ತವನಂ ಮಮ
॥ ೨೦ ॥

ಆದರಃ ಪರಿಚರ್ಯಾಯಾಂ ಸರ್ವಾಂಗೈರಭಿವಂದನಮ್ ।
ಮದ್ಭಕ್ತಪೂಜಾಭ್ಯಧಿಕಾ ಸರ್ವಭೂತೇಷು ಮನ್ಮತಿಃ
॥ ೨೧ ॥

ಮದರ್ಥೇಷ್ವಂಗಚೇಷ್ಟಾ ಚ ವಚಸಾ ಮದ್ಗುಣೇರಣಮ್ ।
ಮಯ್ಯರ್ಪಣಂ ಚ ಮನಸಃ ಸರ್ವಕಾಮವಿವರ್ಜನಮ್
॥ ೨೨ ॥

ಮದರ್ಥೇಽರ್ಥಪರಿತ್ಯಾಗೋ ಭೋಗಸ್ಯ ಚ ಸುಖಸ್ಯ ಚ ।
ಇಷ್ಟಂ ದತ್ತಂ ಹುತಂ ಜಪ್ತಂ ಮದರ್ಥಂ ಯದ್ವ್ರತಂ ತಪಃ
॥ ೨೩ ॥

ಏವಂ ಧರ್ಮೈರ್ಮನುಷ್ಯಾಣಾಮುದ್ಧವಾತ್ಮನಿವೇದಿನಾಮ್ ।
ಮಯಿ ಸಂಜಾಯತೇ ಭಕ್ತಿಃ ಕೋಽನ್ಯೋಽರ್ಥೋಽಸ್ಯಾವಶಿಷ್ಯತೇ
॥ ೨೪ ॥

ಯದಾಽಽತ್ಮನ್ಯರ್ಪಿತಂ ಚಿತ್ತಂ ಶಾಂತಂ ಸತ್ತ್ವೋಪಬೃಂಹಿತಮ್ ।
ಧರ್ಮಂ ಜ್ಞಾನಂ ಸವೈರಾಗ್ಯಮೈಶ್ವರ್ಯಂ ಚಾಭಿಪದ್ಯತೇ
॥ ೨೫ ॥

ಯದರ್ಪಿತಂ ತದ್ವಿಕಲ್ಪೇ ಇಂದ್ರಿಯೈಃ ಪರಿಧಾವತಿ ।
ರಜಸ್ವಲಂ ಚಾಸನ್ನಿಷ್ಠಂ ಚಿತ್ತಂ ವಿದ್ಧಿ ವಿಪರ್ಯಯಮ್
॥ ೨೬ ॥

ಧರ್ಮೋ ಮದ್ಭಕ್ತಿಕೃತ್ ಪ್ರೋಕ್ತೋ ಜ್ಞಾನಂ ಚೈಕಾತ್ಮ್ಯದರ್ಶನಮ್ ।
ಗುಣೇಷ್ವಸಂಗೋ ವೈರಾಗ್ಯಮೈಶ್ವರ್ಯಂ ಚಾಣಿಮಾದಯಃ
॥ ೨೭ ॥

ಉದ್ಧವ ಉವಾಚ

ಯಮಃ ಕತಿವಿಧಃ ಪ್ರೋಕ್ತೋ ನಿಯಮೋ ವಾರಿಕರ್ಶನ ।
ಕಃ ಶಮಃ ಕೋ ದಮಃ ಕೃಷ್ಣ ಕಾ ತಿತಿಕ್ಷಾ ಧೃತಿಃ ಪ್ರಭೋ
॥ ೨೮ ॥

ಕಿಂ ದಾನಂ ಕಿಂ ತಪಃ ಶೌರ್ಯಂ ಕಿಂ ಸತ್ಯಮೃತಮುಚ್ಯತೇ ।
ಕಸ್ತ್ಯಾಗಃ ಕಿಂ ಧನಂ ಚೇಷ್ಟಂ ಕೋ ಯಜ್ಞಃ ಕಾ ಚ ದಕ್ಷಿಣಾ
॥ ೨೯ ॥

ಪುಂಸಃ ಕಿಂಸ್ವಿದ್ ಬಲಂ ಶ್ರೀಮನ್ ಭಗೋ ಲಾಭಶ್ಚ ಕೇಶವ ।
ಕಾ ವಿದ್ಯಾ ಹ್ರೀಃ ಪರಾ ಕಾ ಶ್ರೀಃ ಕಿಂ ಸುಖಂ ದುಃಖಮೇವ ಚ
॥ ೩೦ ॥

ಪುಣ್ಯಾತ್ಮನಾದ ಉದ್ಧವನೇ! ಭಕ್ತಿಯೋಗದ ವರ್ಣನೆಯನ್ನು ನಾನು ನಿನಗೆ ಮೊದಲೇ ಮಾಡಿರುವೆನು. ಆದರೆ ಅದರಲ್ಲಿ ನಿನಗೆ ಬಹಳ ಪ್ರೀತಿ ಇದೆ, ಅದಕ್ಕಾಗಿ ನಾನು ನಿನಗೆ ಪುನಃ ಭಕ್ತಿಯು ಪ್ರಾಪ್ತವಾಗುವ ಶ್ರೇಷ್ಠ ಸಾಧನೆಗಳನ್ನು ಹೇಳುತ್ತೇನೆ. ॥ ೧೯ ॥ ನನ್ನ ಭಕ್ತಿಯನ್ನು ಪಡೆಯಲು ಬಯಸುವವನು ನನ್ನ ಅಮೃತಮಯ ಕಥೆಗಳಲ್ಲಿ ಶ್ರದ್ಧೆಯನ್ನಿಡಬೇಕು. ನಿರಂತರ ನನ್ನ ಗುಣ-ಲೀಲೆ, ನಾಮಗಳನ್ನು ಸಂಕೀರ್ತನೆ ಮಾಡಬೇಕು. ನನ್ನ ಪೂಜೆಯಲ್ಲಿ ಅತ್ಯಂತ ನಿಷ್ಠೆಯಿದ್ದು, ಸ್ತೋತ್ರಗಳ ಮೂಲಕ ನನ್ನನ್ನು ಸ್ತುತಿಸ ಬೇಕು. ॥ ೨೦ ॥ ನನ್ನ ಸೇವೆ-ಪೂಜೆಯಲ್ಲಿ ಶ್ರದ್ಧೆ ಮತ್ತು ಪ್ರೇಮ ವಿರಲಿ. ನನ್ನಿದಿರಿಗೆ ಸಾಷ್ಟಾಂಗ ಮಲಗಿ ನಮಸ್ಕರಿಸಲಿ. ನನ್ನ ಭಕ್ತರನ್ನು ನನ್ನ ಪೂಜೆಗಿಂತ ಮಿಗಿಲಾಗಿ ಪೂಜಿಸಲಿ ಮತ್ತು ಸಮಸ್ತ ಪ್ರಾಣಿ ಗಳಲ್ಲಿ ನನ್ನನ್ನೇ ನೋಡಲಿ. ॥ ೨೧ ॥ ತನ್ನ ಎಲ್ಲ ವ್ಯವಹಾರಗಳನ್ನು ಕೇವಲ ನನ್ನದೇ ಸೇವೆಯೆಂದು ಮಾಡಲಿ. ವಾಣಿಯಿಂದ ನನ್ನದೇ ಗುಣಗಳನ್ನು ಹಾಡಲಿ. ತನ್ನ ಮನಸ್ಸನ್ನು ನನ್ನಲ್ಲೇ ಅರ್ಪಿಸಲಿ ಹಾಗೂ ಎಲ್ಲ ಕಾಮನೆಗಳನ್ನು ಬಿಟ್ಟುಬಿಡಲಿ. ॥ ೨೨ ॥ ನನಗಾಗಿ ಧನ, ಭೋಗ, ಸುಖ ಇವುಗಳನ್ನು ಪರಿತ್ಯಾಗಮಾಡಲಿ. ಯಜ್ಞ, ದಾನ, ಹವನ, ಜಪ, ವ್ರತ, ತಪಸ್ಸು ಮುಂತಾದುವೆಲ್ಲವನ್ನು ನನಗಾಗಿಯೇ ಮಾಡಲಿ. ॥ ೨೩ ॥ ಉದ್ಧವನೇ! ಈ ಧರ್ಮಗಳನ್ನು ಪಾಲಿಸು ವವನ ಹೃದಯದಲ್ಲಿ ನನ್ನ ಪ್ರೇಮಮಯ ಭಕ್ತಿಯ ಉದಯ ವಾಗುತ್ತದೆ. ನನ್ನ ಭಕ್ತಿಯು ಪ್ರಾಪ್ತವಾದವನಿಗೆ ಬೇರೆ ಯಾವ ವಸ್ತುವಿನ ಪ್ರಾಪ್ತಿಯು ಬಾಕಿ ಉಳಿಯುವುದಿಲ್ಲ. ॥ ೨೪ ॥ ಈ ಪ್ರಕಾರ ಧರ್ಮಗಳನ್ನು ಪಾಲಿಸುವುದರಿಂದ ಚಿತ್ತದಲ್ಲಿ ಸತ್ತ್ವ ಗುಣದ ವೃದ್ಧಿಯಾಗಿ ಅವನು ಶಾಂತನಾಗಿ ತನ್ನ ಆತ್ಮವನ್ನು ಏಕಮಾತ್ರ ನನ್ನಲ್ಲೇ ತೊಡಗಿಸುತ್ತಾನೆ. ಆಗ ಸಾಧಕನಿಗೆ ಭಕ್ತಿ, ಧರ್ಮ, ಜ್ಞಾನ, ವೈರಾಗ್ಯ, ಐಶ್ವರ್ಯ ಇವುಗಳು ತಾನಾಗಿಯೇ ಪ್ರಾಪ್ತವಾಗು ತ್ತವೆ. ॥ ೨೫ ॥ ಮನಸ್ಸು ನಾನಾವಿಧವಾದ ಕಲ್ಪನೆ ಮಾಡತೊಡಗಿ ದಾಗ ಅವನ ಇಂದ್ರಿಯಗಳು ಅತ್ತ-ಇತ್ತ ಓಡುತ್ತವೆ. ಚಿತ್ತವು ಸ್ಥಿರ ವಾಗುವುದಿಲ್ಲ, ಅವನ ಚಿತ್ತ ರಜೋಗುಣದಿಂದ ವ್ಯಾಪ್ತವಾಗುತ್ತದೆ. ಇಂತಹ ಸ್ಥಿತಿಯಲ್ಲಿ ಭಕ್ತಿ, ಜ್ಞಾನ, ಧರ್ಮ, ವೈರಾಗ್ಯ, ಐಶ್ವರ್ಯ ಇವುಗಳು ಅವನಿಂದ ದೂರವಾಗುತ್ತವೆ. ॥ ೨೬ ॥ ಉದ್ಧವಾ! ನನ್ನ ಭಕ್ತಿಯು ಯಾವುದರಿಂದ ಉಂಟಾಗುತ್ತದೋ, ಅದೇ ಧರ್ಮ ವಾಗಿದೆ. ಯಾವುದರಿಂದ ಬ್ರಹ್ಮ ಮತ್ತು ಆತ್ಮದ ಏಕತೆಯ ಸಾಕ್ಷಾತ್ಕಾರವಾಗುವುದೋ ಅದೇ ಜ್ಞಾನವಾಗಿದೆ. ವಿಷಯಗಳಿಂದ ಅಸಂಗ-ನಿರ್ಲೇಪನಾಗುವುದೇ ವೈರಾಗ್ಯವಾಗಿದೆ ಮತ್ತು ಅಣಿ ಮಾದಿ ಸಿದ್ಧಿಗಳೇ ಐಶ್ವರ್ಯವಾಗಿದೆ. ॥ ೨೭ ॥

ಉದ್ಧವನೆಂದನು – ಅರಿಸೂದನಾ! ಯಮ ಮತ್ತು ನಿಯಮ ಗಳು ಎಷ್ಟು ಪ್ರಕಾರದ್ದಾಗಿವೆ? ಶ್ರೀಕೃಷ್ಣಾ! ಶಮ ಎಂದರೇನು? ದಮ ಎಂದರೇನು? ಸ್ವಾಮಿ! ತಿತಿಕ್ಷಾ ಮತ್ತು ಧೈರ್ಯಯಾವುದು? ॥೨೮॥ ದಾನ, ತಪಸ್ಸು, ಶೌರ್ಯ, ಸತ್ಯ, ಋತ ಇವುಗಳ ಸ್ವರೂಪ ವನ್ನೂ ನೀನು ನನಗೆ ತಿಳಿಸು. ತ್ಯಾಗ ಎಂದರೇನು? ಅಭೀಷ್ಟ ಧನವು ಯಾವುದು? ಯಜ್ಞ ಯಾವುದಕ್ಕೆ ಹೇಳುತ್ತಾರೆ? ದಕ್ಷಿಣೆ ಯಾವ ವಸ್ತು ಆಗಿದೆ? ಓ ಕೇಶವಾ! ಪುರುಷನ ನಿಜವಾದ ಬಲವು ಯಾವುದು? ಭಗ ಯಾವುದಕ್ಕೆ ಹೇಳುತ್ತಾರೆ? ಲಾಭವೆಂದರೆ ಯಾವ ವಸ್ತುವಾಗಿದೆ? ಉತ್ತಮ ವಿದ್ಯೆ, ಲಜ್ಜೆ, ಶ್ರೀ, ಸುಖ ಮತ್ತು ದುಃಖ ಇವುಗಳ್ಯಾವುವು? ॥ ೨೯-೩೦ ॥

ಕಃ ಪಂಡಿತಃ ಕಶ್ಚ ಮೂರ್ಖಃ ಕಃ ಪಂಥಾ ಉತ್ಪಥಶ್ಚ ಕಃ ।
ಕಃ ಸ್ವರ್ಗೋ ನರಕಃ ಕಃ ಸ್ವಿತ್ಕೋ ಬಂಧುರುತ ಕಿಂ ಗೃಹಮ್
॥ ೩೧ ॥

ಕ ಆಢ್ಯಃ ಕೋ ದರಿದ್ರೋ ವಾ ಕೃಪಣಃ ಕಃ ಕ ಈಶ್ವರಃ ।
ಏತಾನ್ ಪ್ರಶ್ನಾನ್ ಮಮ ಬ್ರೂಹಿ ವಿಪರೀತಾಂಶ್ಚ ಸತ್ಪತೇ
॥ ೩೨ ॥

ಶ್ರೀಭಗವಾನುವಾಚ

ಅಹಿಂಸಾ ಸತ್ಯಮಸ್ತೇಯಮಸಂಗೋ ಹ್ರೀರಸಂಚಯಃ ।
ಆಸ್ತಿಕ್ಯಂ ಬ್ರಹ್ಮಚರ್ಯಂ ಚ ಮೌನಂ ಸ್ಥೈರ್ಯಂ ಕ್ಷಮಾಭಯಮ್
॥ ೩೩ ॥

ಶೌಚಂ ಜಪಸ್ತಪೋ ಹೋಮಃ ಶ್ರದ್ಧಾಽಽತಿಥ್ಯಂ ಮದರ್ಚನಮ್ ।
ತೀರ್ಥಾಟನಂ ಪರಾರ್ಥೇಹಾ ತುಷ್ಟಿರಾಚಾರ್ಯಸೇವನಮ್
॥ ೩೪ ॥

ಏತೇ ಯಮಾಃ ಸನಿಯಮಾ ಉಭಯೋರ್ದ್ವಾದಶ ಸ್ಮೃತಾಃ ।
ಪುಂಸಾಮುಪಾಸಿತಾಸ್ತಾತ ಯಥಾಕಾಮಂ ದುಹಂತಿ ಹಿ
॥ ೩೫ ॥

ಶಮೋ ಮನ್ನಿಷ್ಠತಾ ಬುದ್ಧೇರ್ದಮ ಇಂದ್ರಿಯಸಂಯಮಃ ।
ತಿತಿಕ್ಷಾ ದುಃಖಸಮ್ಮರ್ಷೋ ಜಿಹ್ವೋಪಸ್ಥಜಯೋ ಧೃತಿಃ
॥ ೩೬ ॥

ದಂಡನ್ಯಾಸಃ ಪರಂ ದಾನಂ ಕಾಮತ್ಯಾಗಸ್ತಪಃ ಸ್ಮೃತಮ್ ।
ಸ್ವಭಾವವಿಜಯಃ ಶೌರ್ಯಂ ಸತ್ಯಂ ಚ ಸಮದರ್ಶನಮ್
॥ ೩೭ ॥

ಋತಂ ಚ ಸೂನೃತಾ ವಾಣೀ ಕವಿಭಿಃ ಪರಿಕೀರ್ತಿತಾ ।
ಕರ್ಮಸ್ವಸಂಗಮಃ ಶೌಚಂ ತ್ಯಾಗಃ ಸಂನ್ಯಾಸ ಉಚ್ಯತೇ
॥ ೩೮ ॥

ಧರ್ಮ ಇಷ್ಟಂ ಧನಂ ನೄಣಾಂ ಯಜ್ಞೋಽಹಂ ಭಗವತ್ತಮಃ ।
ದಕ್ಷಿಣಾ ಜ್ಞಾನಸಂದೇಶಃ ಪ್ರಾಣಾಯಾಮಃ ಪರಂ ಬಲಮ್
॥ ೩೯ ॥

ಭಗೋ ಮ ಐಶ್ವರೋ ಭಾವೋ ಲಾಭೋ ಮದ್ಭಕ್ತಿರುತ್ತಮಃ ।
ವಿದ್ಯಾಽಽತ್ಮನಿ ಭಿದಾಬಾಧೋ ಜುಗುಪ್ಸಾ ಹ್ರೀರಕರ್ಮಸು
॥ ೪೦ ॥

ಪಂಡಿತ ಮತ್ತು ಮೂರ್ಖರ ಲಕ್ಷಣಗಳೇನು ? ಸುಮಾರ್ಗ ಹಾಗೂ ಕುಮಾರ್ಗ ಇವುಗಳ ಲಕ್ಷಣಗಳೇನು ? ಸ್ವರ್ಗ ಮತ್ತು ನರಕಗಳು ಯಾವುವು ? ಬಂಧು-ಬಾಂಧವರು ಯಾರು ? ಮನೆ ಯಾವುದು ? ಶ್ರೀಮಂತ ಮತ್ತು ದರಿದ್ರ ಎಂದು ಯಾರನ್ನು ಹೇಳುತ್ತಾರೆ ? ಲೋಭಿಯು ಯಾರು ? ಈಶ್ವರನೆಂದು ಯಾರನ್ನು ಹೇಳುತ್ತಾರೆ ? ಭಕ್ತವತ್ಸಲ ಪ್ರಭುವೇ ! ನೀನು ನನ್ನ ಈ ಪ್ರಶ್ನೆಗಳಿಗೆ ಉತ್ತರವನ್ನು ನೀಡುವವನಾಗು. ಹಾಗೆಯೇ ಇವುಗಳ ವಿರೋಧೀ ಭಾವಗಳನ್ನೂ ಕೂಡ ವ್ಯಾಖ್ಯಾನಿಸು. ॥ ೩೧-೩೨ ॥

ಭಗವಾನ್ ಶ್ರೀಕೃಷ್ಣನು ಹೇಳಿದನು - ಅಹಿಂಸಾ, ಸತ್ಯ, ಅಸ್ತೇಯ (ಕಳ್ಳತನ ಮಾಡದಿರುವುದು), ಅಸಂಗತೆ, ಲಜ್ಜೆ, ಅಸಂಚಯ (ಅವಶ್ಯಕತೆಗಿಂತ ಹೆಚ್ಚು ಧನವನ್ನು ಸಂಗ್ರಹಿಸದಿರುವುದು), ಆಸ್ತಿಕತೆ, ಬ್ರಹ್ಮಚರ್ಯ, ಮೌನ, ಸ್ಥಿರತೆ, ಕ್ಷಮೆ ಮತ್ತು ಅಭಯ ಇವು ಹನ್ನೆರಡು 'ಯಮ'ಗಳಾಗಿವೆ. ನಿಯಮಗಳ ಸಂಖ್ಯೆಯೂ ಹನ್ನೆರಡಿವೆ :- ಶೌಚ (ಒಳ-ಹೊರಗಿನ ಪವಿತ್ರತೆ), ಜಪ, ತಪಸ್ಸು, ಹವನ, ಶ್ರದ್ಧಾ, ಅತಿಥಿಸೇವೆ, ನನ್ನ ಪೂಜೆ, ತೀರ್ಥಯಾತ್ರೆ, ಪರೋಪಕಾರ ಸಂತೋಷ ಮತ್ತು ಗುರುಸೇವೆ; ಈ ಪ್ರಕಾರ 'ಯಮ' ಮತ್ತು 'ನಿಯಮ' ಎರಡರ ಸಂಖ್ಯೆಯೂ ಹನ್ನೆರಡು ಹನ್ನೆರಡಾಗಿದೆ. ಇವು ಸಕಾಮ ಮತ್ತು ನಿಷ್ಕಾಮ ಎರಡೂ ವಿಧದ ಸಾಧಕರಿಗೆ ಉಪಯೋಗಿಯಾಗಿವೆ. ಉದ್ಧವನೇ ! ಇವನ್ನು ಪಾಲಿಸುವ ಪುರುಷನಿಗೆ ಈ ಯಮ-ನಿಯಮಗಳು ಅವನ ಇಚ್ಛಾನುಸಾರ ಅವನಿಗೆ ಭೋಗ ಹಾಗೂ ಮೋಕ್ಷವನ್ನು ಪ್ರದಾನ ಮಾಡುತ್ತವೆ. ॥ ೩೩-೩೫ ॥ ಬುದ್ಧಿಯನ್ನು ನನ್ನಲ್ಲಿ ತೊಡಗಿಸುವುದೇ 'ಶಮ'ವಾಗಿದೆ. ಇಂದ್ರಿಯಗಳ ಸಂಯಮದ ಹೆಸರು 'ದಮ'ವಾಗಿದೆ. ದುಃಖಗಳನ್ನು ಸಹಿಸುವುದು 'ತಿತಿಕ್ಷೆ', ಜಿಹ್ವೆ ಮತ್ತು ಜನನೇಂದ್ರಿಯದ ಮೇಲೆ ವಿಜಯ ಪಡೆಯುವುದೇ 'ಧೈರ್ಯ'ವಾಗಿದೆ. ॥ ೩೬ ॥ ಯಾರನ್ನೂ ದಂಡಿಸದೆ, ಎಲ್ಲರಿಗೆ ಅಭಯನೀಡುವುದೇ 'ದಾನ'ವಾಗಿದೆ. ಕಾಮನೆಗಳನ್ನು ತ್ಯಜಿಸುವುದೇ 'ತಪಸ್ಸು' ಆಗಿದೆ. ತನ್ನ ವಾಸನೆಗಳನ್ನು ಗೆಲ್ಲುವುದೇ 'ಶೌರ್ಯ'ವಾಗಿದೆ. ಎಲ್ಲೆಡೆ ಸಮತ್ವರೂಪೀ, ಸತ್ಯಸ್ವರೂಪೀ ಪರಮಾತ್ಮನನ್ನು ದರ್ಶಿಸುವುದೇ 'ಸತ್ಯ'ವಾಗಿದೆ. ॥ ೩೭ ॥ ಹೀಗೆಯೇ ಸತ್ಯ ಮತ್ತು ಮಧುರ ಭಾಷಣವನ್ನೇ 'ಋತ'ವೆಂದು ಮಹಾತ್ಮರು ಹೇಳುತ್ತಾರೆ. ಕರ್ಮಗಳಲ್ಲಿ ಆಸಕ್ತನಾಗದಿರುವುದೇ 'ಶೌಚ'ವಾಗಿದೆ. ಕಾಮನೆಗಳ ತ್ಯಾಗವೇ ನಿಜವಾದ ಸಂನ್ಯಾಸವಾಗಿದೆ. ॥ ೩೮ ॥ ಧರ್ಮವೇ ಮನುಷ್ಯರ ಅಭೀಷ್ಟ 'ಧನ'ವಾಗಿದೆ. ಪರಮೇಶ್ವರನಾದ ನಾನೇ 'ಯಜ್ಞ'ನಾಗಿದ್ದೇನೆ. ಜ್ಞಾನವನ್ನು ಉಪದೇಶಿಸುವುದೇ 'ದಕ್ಷಿಣೆ'ಯಾಗಿದೆ. ಪ್ರಾಣಾಯಾಮವೇ ಶ್ರೇಷ್ಠ 'ಬಲ'ವಾಗಿದೆ. ॥ ೩೯ ॥ ನನ್ನ ಐಶ್ವರ್ಯವೇ 'ಭಗ'ವಾಗಿದೆ. ನನ್ನ ಶ್ರೇಷ್ಠ ಭಕ್ತಿಯೇ ಉತ್ತಮ 'ಲಾಭ'ವಾಗಿದೆ. ಬ್ರಹ್ಮ ಮತ್ತು ಆತ್ಮದ ಭೇದ ಅಳಿದುಹೋಗುವಂತಹುದೇ ನಿಜವಾದ 'ವಿದ್ಯೆ'ಯಾಗಿದೆ. ಪಾಪಮಾಡಲು ಜುಗುಪ್ಸೆ ಪಡುವುದೇ 'ಲಜ್ಜೆ'ಯಾಗಿದೆ. ॥ ೪೦ ॥

ಶ್ರೀರ್ಗುಣಾ ನೈರಪೇಕ್ಷ್ಯಾದ್ಯಾಃ ಸುಖಂ ದುಃಖಸುಖಾತ್ಯಯಃ ।
ದುಃಖಂ ಕಾಮಸುಖಾಪೇಕ್ಷಾ ಪಂಡಿತೋ ಬಂಧಮೋಕ್ಷವಿತ್ ॥ ೪೧ ॥

ಮೂರ್ಖೋ ದೇಹಾದ್ಯಹಂಬುದ್ಧಿಃ ಪಂಥಾ ಮನ್ನಿಗಮಃ ಸ್ಮೃತಃ ।
ಉತ್ಪಥಶ್ಚಿತ್ತವಿಕ್ಷೇಪಃ ಸ್ವರ್ಗಃ ಸತ್ತ್ವಗುಣೋದಯಃ ॥ ೪೨ ॥

ನರಕಸ್ತಮಉನ್ನಾಹೋ ಬಂಧುರ್ಗುರುರಹಂ ಸಖೇ ।
ಗೃಹಂ ಶರೀರಂ ಮಾನುಷ್ಯಂ ಗುಣಾಢ್ಯೋ ಹ್ಯಾಢ್ಯ ಉಚ್ಯತೇ ॥ ೪೩ ॥

ದರಿದ್ರೋ ಯಸ್ತ್ವಸಂತುಷ್ಟಃ ಕೃಪಣೋ ಯೋಽಜಿತೇಂದ್ರಿಯಃ ।
ಗುಣೇಷ್ವಸಕ್ತಧೀರೀಶೋ ಗುಣಸಂಗೋ ವಿಪರ್ಯಯಃ ॥ ೪೪ ॥

ಏತ ಉದ್ಧವ ತೇ ಪ್ರಶ್ನಾಃ ಸರ್ವೇ ಸಾಧು ನಿರೂಪಿತಾಃ ।
ಕಿಂ ವರ್ಣಿತೇನ ಬಹುನಾ ಲಕ್ಷಣಂ ಗುಣದೋಷಯೋಃ ।
ಗುಣದೋಷದೃಶಿರ್ದೋಷೋ ಗುಣಸ್ತೂಭಯವರ್ಜಿತಃ ॥ ೪೫ ॥

ಶರೀರಾದಿಗಳಲ್ಲಿ ನಾನು-ನನ್ನದು ಇರುವವನೇ 'ಮೂರ್ಖ'ನಾಗಿದ್ದಾನೆ. ಸಂಸಾರದಿಂದ ನಿವೃತ್ತಿಗೊಳಿಸಿ, ನನ್ನನ್ನು ಪ್ರಾಪ್ತಮಾಡಿಕೊಡುವುದೇ ನಿಜವಾದ 'ಸುಮಾರ್ಗ', ಚಿತ್ತದ ಬಹಿರ್ಮುಖತೆಯೇ 'ಕುಮಾರ್ಗ'ವಾಗಿದೆ. ಸಖನೇ! ಸತ್ತ್ವಗುಣದ ವೃದ್ಧಿಯೇ 'ಸ್ವರ್ಗ' ಮತ್ತು ತಮೋಗುಣದ ಹೆಚ್ಚಳವೇ 'ನರಕ'ವಾಗಿದೆ. ಗುರುವೇ ನಿಜವಾದ 'ಬಂಧು'ವಾಗಿದ್ದು ಆ ಗುರುವು ನಾನೇ ಆಗಿದ್ದೇನೆ. ಈ ಮನುಷ್ಯ ಶರೀರವೇ ನಿಜವಾದ 'ಮನೆ'ಯಾಗಿದೆ. ಗುಣಗಳಿಂದ ಸಂಪನ್ನನಾಗಿದ್ದು ಗುಣಗಳ ಭಂಡಾರವೇ ಬಳಿಯಲ್ಲಿ ಇರುವವನೇ ನಿಜವಾದ 'ಶ್ರೀಮಂತ'ನಾಗಿದ್ದಾನೆ. ॥ ೪೨–೪೩ ॥ ಯಾರ ಚಿತ್ತದಲ್ಲಿ ಅಸಂತೋಷವಿದ್ದು ಅಭಾವದ ಬೋಧವಿರುವವನೇ 'ದರಿದ್ರ'ನು. ಜಿತೇಂದ್ರಿಯನಲ್ಲದವನೇ 'ಕೃಪಣ'ನು. ಚಿತ್ತವೃತ್ತಿಯು ವಿಷಯಗಳಲ್ಲಿ ಆಸಕ್ತನಾಗದವನೇ ಈಶ್ವರನಾಗಿದ್ದಾನೆ. ಇದಕ್ಕೆ ವಿಪರೀತವಾಗಿ ವಿಷಯಗಳಲ್ಲಿ ಆಸಕ್ತನಾದವನು ಸರ್ವಥಾ 'ಅಸಮರ್ಥ'ನು. ॥ ೪೪ ॥ ಪ್ರಿಯ ಉದ್ಧವನೇ! ನೀನು ಕೇಳಿದ ಎಲ್ಲ ಪ್ರಶ್ನೆಗಳಿಗೆ ಉತ್ತರವನ್ನು ನಾನು ನೀಡಿರುವೆನು. ಇವುಗಳನ್ನು ತಿಳಿದುಕೊಳ್ಳುವುದು ಮೋಕ್ಷಮಾರ್ಗಕ್ಕೆ ಸಹಾಯಕವಾಗಿದೆ. ನಾನು ನಿನಗೆ ಗುಣ ಮತ್ತು ದೋಷಗಳ ಲಕ್ಷಣಗಳು ಬೇರೆ-ಬೇರೆಯಾಗಿ ಎಷ್ಟೊಂದು ಹೇಳಲಿ? ಎಲ್ಲದರ ಸಾರಾಂಶವಿಷ್ಟೇ – ಗುಣ ಮತ್ತು ದೋಷಗಳಲ್ಲಿ ದೃಷ್ಟಿ ಹರಿಸುವುದೇ ದೊಡ್ಡ ದೋಷವಾಗಿದೆ. ಗುಣ-ದೋಷಗಳ ಕಡೆಗೆ ದೃಷ್ಟಿಹೋಗದೆ ತನ್ನ ಶಾಂತ ನಿಃಸಂಕಲ್ಪ ಸ್ವರೂಪದಲ್ಲಿ ಸ್ಥಿತನಾಗಿರುವುದೇ ಎಲ್ಲಕ್ಕಿಂತ ದೊಡ್ಡ ಗುಣವಾಗಿದೆ. ॥ ೪೫ ॥

ಹತ್ತೊಂಭತ್ತನೆಯ ಅಧ್ಯಾಯವು ಮುಗಿಯಿತು. ॥ ೧೯ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಏಕಾದಶ ಸ್ಕಂಧೇ ಏಕೋನವಿಂಶೋಽಧ್ಯಾಯಃ ॥ ೧೯ ॥

ಇಪ್ಪತ್ತನೆಯ ಅಧ್ಯಾಯ

ಜ್ಞಾನಯೋಗ, ಕರ್ಮಯೋಗ, ಭಕ್ತಿಯೋಗ

ಉದ್ಧವ ಉವಾಚ

ವಿಧಿಶ್ಚ ಪ್ರತಿಷೇಧಶ್ಚ ನಿಗಮೋ ಹೀಶ್ವರಸ್ಯ ತೇ ।
ಅವೇಕ್ಷತೇಽರವಿಂದಾಕ್ಷ ಗುಣಂ ದೋಷಂ ಚ ಕರ್ಮಣಾಮ್ ॥ ೧ ॥

ವರ್ಣಾಶ್ರಮವಿಕಲ್ಪಂ ಚ ಪ್ರತಿಲೋಮಾನುಲೋಮಜಮ್ ।
ದ್ರವ್ಯದೇಶವಯಃಕಾಲಾನ್ಸ್ವರ್ಗಂ ನರಕಮೇವ ಚ ॥ ೨ ॥

ಗುಣದೋಷಭಿದಾದೃಷ್ಟಿಮಂತರೇಣ ವಚಸ್ತವ ।
ನಿಃಶ್ರೇಯಸಂ ಕಥಂ ನೃಣಾಂ ನಿಷೇಧವಿಧಿಲಕ್ಷಣಮ್ ॥ ೩ ॥

ಉದ್ಧವನು ಹೇಳಿದನು – ಅರವಿಂದಾಕ್ಷನೇ! ವೇದಗಳೇ ನಿನ್ನ ಆಜ್ಞಾರೂಪಿ ವಾಣಿಯಾಗಿದೆ. ವಿಧಿ ಮತ್ತು ನಿಷೇಧಗಳನ್ನು ನಿರ್ಣಯಿಸಲು ಹಾಗೂ ಕರ್ಮಗಳ ಗುಣದೋಷಗಳೂ ಕೂಡ ಈ ವೇದ ವಾಣಿಯನ್ನೇ ಆಧರಿಸಿದೆ. ॥ ೧ ॥ ವರ್ಣಾಶ್ರಮ ಭೇದ, ಪ್ರತಿಲೋಮ ಮತ್ತು ಅನುಲೋಮ ರೂಪಿ ವರ್ಣ ಸಂಕರ ಕರ್ಮಗಳ ಉಪಯುಕ್ತ ಹಾಗೂ ಅನುಪಯುಕ್ತ ದ್ರವ್ಯ, ದೇಶ, ಆಯು, ಕಾಲ, ಸ್ವರ್ಗ, ನರಕ ಇವುಗಳ ಭೇದಗಳ ಅರಿವು ವೇದಗಳಿಂದಲೇ ಆಗುವುದು. ॥ ೨ ॥ ಈ ಪ್ರಕಾರ ವಿಧಿನಿಷೇಧದ ಲಕ್ಷಣಗಳನ್ನು ಹೇಳುವ ನಿನ್ನದೇ ವೇದವಾಣಿಯಲ್ಲಿ ಗುಣ-ದೋಷಗಳ ಕುರಿತು ಕೂಡ ಹೇಳಲಾಗಿದೆ. ಹಾಗಿರುವಾಗ ಗುಣ-ದೋಷಗಳನ್ನು ಮನುಷ್ಯನು ತಿಳಿಯದಿರುವವರೆಗೆ ಅವನ ಶ್ರೇಯಸ್ಸಾದರೂ ಹೇಗಾಗಬಹುದು? ॥ ೩ ॥ ಓ ಸರ್ವಶಕ್ತಿವಂತ

ಪಿತೃದೇವಮನುಷ್ಯಾಣಾಂ ವೇದಶ್ಚಕ್ಷುಸ್ತವೇಶ್ವರ ।
ಶ್ರೇಯಸ್ತ್ವನುಪಲಬ್ಧೇಽರ್ಥೇ ಸಾಧ್ಯಸಾಧನಯೋರಪಿ
॥ ೪ ॥

ಗುಣದೋಷಭಿದಾದೃಷ್ಟಿರ್ನಿಗಮಾತ್ತೇ ನ ಹಿ ಸ್ವತಃ ।
ನಿಗಮೇನಾಪವಾದಶ್ಚ ಭಿದಾಯಾ ಇತಿ ಹ ಭ್ರಮಃ
॥ ೫ ॥

ಶ್ರೀಭಗವಾನುವಾಚ

ಯೋಗಾಸ್ತ್ರಯೋ ಮಯಾ ಪ್ರೋಕ್ತಾ ನೃಣಾಂ ಶ್ರೇಯೋವಿಧಿತ್ಸಯಾ ।
ಜ್ಞಾನಂ ಕರ್ಮ ಚ ಭಕ್ತಿಶ್ಚ ನೋಪಾಯೋಽನ್ಯೋಽಸ್ತಿ ಕುತ್ರಚಿತ್
॥ ೬ ॥

ನಿರ್ವಿಣ್ಣಾನಾಂ ಜ್ಞಾನಯೋಗೋ ನ್ಯಾಸಿನಾಮಿಹ ಕರ್ಮಸು ।
ತೇಷ್ವನಿರ್ವಿಣ್ಣಚಿತ್ತಾನಾಂ ಕರ್ಮಯೋಗಸ್ತು ಕಾಮಿನಾಮ್
॥ ೭ ॥

ಯದೃಚ್ಛಯಾ ಮತ್ಕಥಾದೌ ಜಾತಶ್ರದ್ಧಸ್ತು ಯಃ ಪುಮಾನ್ ।
ನ ನಿರ್ವಿಣ್ಣೋ ನಾತಿಸಕ್ತೋ ಭಕ್ತಿಯೋಗೋಽಸ್ಯ ಸಿದ್ಧಿದಃ
॥ ೮ ॥

ತಾವತ್ ಕರ್ಮಾಣಿ ಕುರ್ವೀತ ನ ನಿರ್ವಿದ್ಯೇತ ಯಾವತಾ ।
ಮತ್ಕಥಾಶ್ರವಣಾದೌ ವಾ ಶ್ರದ್ಧಾ ಯಾವನ್ನ ಜಾಯತೇ
॥ ೯ ॥

ಸ್ವಧರ್ಮಸ್ಥೋ ಯಜನ್ಯಜ್ಞೈರನಾಶೀಃ ಕಾಮ ಉದ್ಧವ ।
ನ ಯಾತಿ ಸ್ವರ್ಗನರಕೌ ಯದ್ಯನ್ಯನ್ನ ಸಮಾಚರೇತ್
॥ ೧೦ ॥

ಅಸ್ಮಿಂಲ್ಲೋಕೇ ವರ್ತಮಾನಃ ಸ್ವಧರ್ಮಸ್ಥೋಽನಘಃ ಶುಚಿಃ ।
ಜ್ಞಾನಂ ವಿಶುದ್ಧಮಾಪ್ನೋತಿ ಮದ್ಭಕ್ತಿಂ ವಾ ಯದೃಚ್ಛಯಾ
॥ ೧೧ ॥

ಸ್ವರ್ಗಿಣೋಽಪ್ಯೇತಮಿಚ್ಛಂತಿ ಲೋಕಂ ನಿರಯಿಣಸ್ತಥಾ ।
ಸಾಧಕಂ ಜ್ಞಾನಭಕ್ತಿಭ್ಯಾಮುಭಯಂ ತದಸಾಧಕಮ್
॥ ೧೨ ॥

ನಾದ ಪರಮೇಶ್ವರನೇ ! ನಿನ್ನ ವೇದಗಳೇ – ಪಿತೃಗಳು, ದೇವತೆಗಳು, ಮನುಷ್ಯರು ಇವರಿಗೆ ಶ್ರೇಯಸ್ಸಿನ ಮಾರ್ಗವನ್ನು ತೋರಿಸುವ ಕಣ್ಣುಗಳಾಗಿವೆ. ಈ ನೇತ್ರಗಳನ್ನು ಕಾಣದವನು ಶ್ರೇಯಸ್ಸು ಎಂದರೇನು ? ಸಾಧ್ಯ ಯಾವುದು, ಸಾಧನೆ ಯಾವುದು ? ಇವನ್ನು ನೋಡಲಾರನು. ॥ ೪ ॥ ಗುಣ-ದೋಷಗಳ ಭೇದಗಳು ಕೂಡ ನಿನ್ನ ವೇದವಾಣಿಯ ಮೂಲಕವೇ ನಿರ್ಣಯ ಮಾಡಲಾಗಿದೆ. ಇದು ಯಾರ ಕಲ್ಪನೆಯೂ ಅಲ್ಲ, ಇದು ತನ್ನಿಂದ ತಾನೇ ಉಂಟಾಗದೆ, ವೇದದಿಂದಲೇ ಗುಣ-ದೋಷಗಳ ದೃಷ್ಟಿ ಉಂಟಾಗಿದೆ. ಇದರಿಂದ ನನಗೆ ಭ್ರಮೆ ಆಗುತ್ತಾ ಇದೆ. ॥ ೫ ॥

ಭಗವಾನ್ ಶ್ರೀಕೃಷ್ಣನು ಹೇಳಿದನು – ಪ್ರಿಯ ಉದ್ಧವನೇ ! ನಾನೇ ವೇದಗಳಲ್ಲಿ ಮತ್ತು ಬೇರೆಡೆಗಳಲ್ಲಿಯೂ ಮನುಷ್ಯರ ಶ್ರೇಯಸ್ಸಿಗಾಗಿ ಅಧಿಕಾರ ಭೇದದಿಂದ ಜ್ಞಾನ, ಕರ್ಮ, ಭಕ್ತಿಗಳೆಂಬ ಮೂರು ಪ್ರಕಾರದ ಯೋಗಗಳನ್ನು ಉಪದೇಶಿಸಿರುವೆನು. ಇವುಗಳಲ್ಲದೆ ಮನುಷ್ಯನ ಪರಮ ಶ್ರೇಯಸ್ಸಿಗೆ ಬೇರೆ ಯಾವ ಉಪಾಯವೂ ಇಲ್ಲ. ॥ ೬ ॥ ಉದ್ಧವನೇ ! ಕರ್ಮಗಳು ಮತ್ತು ಅವುಗಳ ಫಲದಿಂದ ವಿರಕ್ತರಾದವರು, ಅವನ್ನು ತ್ಯಜಿಸಿದ ಜನರು ಜ್ಞಾನಯೋಗದ ಅಧಿಕಾರಿಗಳಾಗಿದ್ದಾರೆ. ಇದಕ್ಕೆ ವಿಪರೀತವಾಗಿ ಯಾರಿಗೆ ಚಿತ್ತದಲ್ಲಿ ಕರ್ಮಗಳು ಮತ್ತು ಅವುಗಳ ಫಲದಿಂದ ವೈರಾಗ್ಯ ಉಂಟಾಗಿಲ್ಲವೋ, ಅವುಗಳಲ್ಲಿ ದುಃಖಬುದ್ಧಿಯು ಉಂಟಾಗಲಿಲ್ಲವೋ ಆ ಸಕಾಮ ವ್ಯಕ್ತಿಯು ಕರ್ಮಯೋಗದ ಅಧಿಕಾರಿಯು. ॥ ೭ ॥ ಯಾರು ಅತ್ಯಂತ ವಿರಕ್ತನಲ್ಲವೋ, ಅತ್ಯಂತ ಆಸಕ್ತನಲ್ಲವೋ, ಹಾಗೂ ಯಾವುದೋ ಪೂರ್ವಜನ್ಮದ ಶುಭ ಕರ್ಮಗಳಿಂದ ಸೌಭಾಗ್ಯವಶ ನನ್ನ ಲೀಲೆ-ಕಥೆಗಳಲ್ಲಿ ಶ್ರದ್ಧೆ ಉಂಟಾಗಿದೆಯೋ ಅವರು ಭಕ್ತಿಯೋಗದ ಅಧಿಕಾರಿಗಳು. ಅವರಿಗೆ ಭಕ್ತಿಯೋಗದಿಂದಲೇ ಸಿದ್ಧಿ ದೊರೆಯಬಲ್ಲದು. ॥ ೮ ॥ ಕರ್ಮದ ಸಂಬಂಧವಾಗಿ ಇರುವ ವಿಧಿ-ನಿಷೇಧಗಳನುಸಾರ ಕರ್ಮಮಯ ಜಗತ್ತು ಮತ್ತು ಅದರಿಂದ ದೊರೆಯುವ ಸ್ವರ್ಗಾದಿ ಸುಖಗಳಲ್ಲಿ ವೈರಾಗ್ಯ ಉಂಟಾಗುವವರೆಗೆ ಅಥವಾ ನನ್ನ ಲೀಲೆ ಕಥೆಗಳ ಶ್ರವಣ ಕೀರ್ತನಾದಿಗಳಲ್ಲಿ ಶ್ರದ್ಧೆ ಉಂಟಾಗುವವರೆಗೆ ಕರ್ಮಗಳನ್ನು ಮಾಡುತ್ತಾ ಇರಬೇಕು. ॥ ೯ ॥ ಉದ್ಧವನೇ ! ಹೀಗೆ ತನ್ನ ವರ್ಣ, ಆಶ್ರಮಕ್ಕೆ ಅನುಕೂಲ ಧರ್ಮದಲ್ಲಿ ಸ್ಥಿತನಾಗಿದ್ದು, ಯಜ್ಞಗಳ ಮೂಲಕ ಯಾವುದೇ ಆಸೆ-ಕಾಮನೆಯಿಲ್ಲದೆ ನನ್ನನ್ನು ಆರಾಧಿಸುತ್ತಿದ್ದು, ನಿಷಿದ್ಧ ಕರ್ಮಗಳಿಂದ ದೂರವಿರಬೇಕು. ಕೇವಲ ವಿಹಿತ ಕರ್ಮಗಳನ್ನೇ ಆಚರಿಸಿದರೆ ಅವನಿಗೆ ಸ್ವರ್ಗ ಅಥವಾ ನರಕಕ್ಕೆ ಹೋಗಬೇಕಾಗುವುದಿಲ್ಲ. ॥ ೧೦ ॥ ತನ್ನ ಧರ್ಮದಲ್ಲಿ ನಿಷ್ಠೆಯುಳ್ಳ ಪುರುಷನ ಪಾಪಗಳು ಉಳಿಯುವುದಿಲ್ಲ, ಅವನು ಪವಿತ್ರನಾಗಿ ಹೋಗುತ್ತಾನೆ. ಅವನು ಈ ಲೋಕದಲ್ಲಿ ವ್ಯವಹಾರ ಮಾಡುತ್ತಾ ವಿಶುದ್ಧ ಜ್ಞಾನವನ್ನು ಪಡೆದುಕೊಳ್ಳುತ್ತಾನೆ. ಅವನಿಗೆ ಆಯಾಸವಿಲ್ಲದೆಯೇ ನನ್ನ ಭಕ್ತಿಯು ಪ್ರಾಪ್ತವಾಗುತ್ತದೆ. ॥ ೧೧ ॥ ಈ ಮನುಷ್ಯ ಶರೀರವು ಅತ್ಯಂತ ದುರ್ಲಭವಾಗಿದೆ. ಸ್ವರ್ಗದ ದೇವತೆಗಳೂ ಇದನ್ನು ಬಯಸುತ್ತಾರೆ ಹಾಗೂ ನರಕದ ಜನರೂ ಕೂಡ ಇದಕ್ಕೆ ಆಸೆಪಡುತ್ತಾರೆ. ಜ್ಞಾನಮಾರ್ಗ ಮತ್ತು ಭಕ್ತಿ ಮಾರ್ಗದ ಸಾಧಕರೂ ಮನುಷ್ಯಶರೀರವನ್ನು ಇಚ್ಛಿಸುತ್ತಾರೆ. ಏಕೆಂದರೆ ಸ್ವರ್ಗ ಅಥವಾ ನರಕಗಳಲ್ಲಿ ಭಗವತ್ಪ್ರಾಪ್ತಿಯಾಗಲಾರದು. ಆದರೆ ಮನುಷ್ಯ ಶರೀರದಲ್ಲಿ ಆಗಬಲ್ಲದು. ॥ ೧೨ ॥

ನ ನರಃ ಸ್ವರ್ಗತಿಂ ಕಾಂಕ್ಷೇನ್ನಾರಕೀಂ ವಾ ವಿಚಕ್ಷಣಃ ।
ನೇಮಂ ಲೋಕಂ ಚ ಕಾಂಕ್ಷೇತ ದೇಹಾವೇಶಾತ್ಪ್ರಮಾದ್ಯತಿ
॥ ೧೩ ॥

ಏತದ್ವಿದ್ವಾನ್ ಪುರಾ ಮೃತ್ಯೋರಭವಾಯ ಘಟೇತ ಸಃ ।
ಅಪ್ರಮತ್ತ ಇದಂ ಜ್ಞಾತ್ವಾ ಮರ್ತ್ಯಮಪ್ಯರ್ಥಸಿದ್ಧಿದಮ್
॥ ೧೪ ॥

ಛಿದ್ಯಮಾನಂ ಯಮೈರೇತೈಃ ಕೃತನೀಡಂ ವನಸ್ಪತಿಮ್ ।
ಖಗಃ ಸ್ವಕೇತಮುತ್ಸೃಜ್ಯ ಕ್ಷೇಮಂ ಯಾತಿ ಹ್ಯಲಂಪಟಃ
॥ ೧೫ ॥

ಅಹೋರಾತ್ರೈಶ್ಛಿದ್ಯಮಾನಂ ಬುದ್ಧ್ವಾಽಽಯುರ್ಭಯವೇಪಥುಃ ।
ಮುಕ್ತಸಂಗಃ ಪರಂ ಬುದ್ಧ್ವಾ ನಿರೀಹ ಉಪಶಾಮ್ಯತಿ
॥ ೧೬ ॥

ನೃದೇಹಮಾದ್ಯಂ ಸುಲಭಂ ಸುದುರ್ಲಭಂ
ಪ್ಲವಂ ಸುಕಲ್ಪಂ ಗುರುಕರ್ಣಧಾರಮ್ ।
ಮಯಾನುಕೂಲೇನ ನಭಸ್ವತೇರಿತಂ
ಪುಮಾನ್ ಭವಾಬ್ಧಿಂ ನ ತರೇತ್ಸ ಆತ್ಮಹಾ ॥ ೧೭ ॥

ಯದಾಽಽರಂಭೇಷು ನಿರ್ವಿಣ್ಣೋ ವಿರಕ್ತಃ ಸಂಯತೇಂದ್ರಿಯಃ ।
ಅಭ್ಯಾಸೇನಾತ್ಮನೋ ಯೋಗೀ ಧಾರಯೇದಚಲಂ ಮನಃ
॥ ೧೮ ॥

ಧಾರ್ಯಮಾಣಂ ಮನೋ ಯರ್ಹಿ ಭ್ರಾಮ್ಯದಾಶ್ವನವಸ್ಥಿತಮ್ ।
ಅತಂದ್ರಿತೋಽನುರೋಧೇನ ಮಾರ್ಗೇಣಾತ್ಮವಶಂ ನಯೇತ್
॥ ೧೯ ॥

ಮನೋಗತಿಂ ನ ವಿಸೃಜೇಜ್ಜಿತಪ್ರಾಣೋ ಜಿತೇಂದ್ರಿಯಃ ।
ಸತ್ತ್ವಸಂಪನ್ನಯಾ ಬುದ್ಧ್ಯಾ ಮನ ಆತ್ಮವಶಂ ನಯೇತ್
॥ ೨೦ ॥

ಏಷ ವೈ ಪರಮೋ ಯೋಗೋ ಮನಸಃ ಸಂಗ್ರಹಃ ಸ್ಮೃತಃ ।
ಹೃದಯಜ್ಞತ್ವಮನ್ವಿಚ್ಛನ್ ದಮ್ಯಸ್ಯೇವಾರ್ವತೋ ಮುಹುಃ
॥ ೨೧ ॥

ವಿಚಾರಕುಶಲ ಪುರುಷನು ಸ್ವರ್ಗದ, ನರಕದ, ಅಥವಾ ಈ ಲೋಕದ ಯಾವುದೇ ಕಾಮನೆ ಮಾಡಬಾರದು. ಏಕೆಂದರೆ, ದೇಹದಲ್ಲೇ ಅಹಂಬುದ್ಧಿ ಉಂಟಾಗಿ, ಅದರಿಂದ ಪ್ರಮಾದವಾಗುತ್ತದೆ, ಪತನವಾಗುತ್ತದೆ. ॥ ೧೩ ॥ ಆದ್ದರಿಂದ ಎಚ್ಚರಗೊಂಡು ವಿವೇಕದ ಮೂಲಕ ಈ ಶರೀರವು ಮರಣಧರ್ಮಿಯಾಗಿದ್ದರೂ, ಇದು ಪರಮಾತ್ಮನ ಪ್ರಾಪ್ತಿಮಾಡಿಕೊಡುವಂತಹುದು ಎಂದು ತಿಳಿದುಕೊಳ್ಳಬೇಕು. ಹೀಗೆ ನಿಶ್ಚಿತ ವಿಚಾರಗೈದು ಮೃತ್ಯುವಿಗೆ ಮೊದಲೇ ಆತ್ಮಕಲ್ಯಾಣಕ್ಕಾಗಿ ಪ್ರಯತ್ನಿಸಬೇಕು. ॥ ೧೪ ॥ ಈ ಶರೀರವು ಒಂದು ವೃಕ್ಷವಾಗಿದೆ. ಇದರಲ್ಲಿ ಗೂಡುಕಟ್ಟಿಕೊಂಡು ಜೀವರೂಪೀ ಪಕ್ಷಿಯು ವಾಸಿಸುತ್ತಿದೆ. ಈ ಮರವನ್ನು ಯಮನ ದೂತರು ಪ್ರತಿಕ್ಷಣ ಕತ್ತರಿಸುತ್ತಿರುವರು. ಮುರಿದುಬಿದ್ದ ಮರವನ್ನು ಪಕ್ಷಿಯು ಬಿಟ್ಟು ಹಾರಿಹೋಗುವಂತೆ, ಈ ಮನುಷ್ಯಶರೀರವನ್ನು ಕಾಲನು ಹಗಲು ರಾತ್ರೆಗಳ ಮೂಲಕ ವೇಗವಾಗಿ ಕತ್ತರಿಸಲು ತೊಡಗಿರುವನು. ಕಾಲನ ಈ ಕೃತ್ಯವನ್ನು ನೋಡಿ ಭಯದಿಂದ ಕಂಪಿತನಾಗಿ, ಕಾಮನಾಶೂನ್ಯನಾಗುವ ಮನುಷ್ಯನೇ ಪರಮಾತ್ಮತತ್ತ್ವವನ್ನು ಅರಿತುಕೊಂಡು ಶಾಂತಾತ್ಮನಾಗಿ, ಮೋಕ್ಷವನ್ನು ಪಡೆದುಕೊಳ್ಳುವನು.॥ ೧೫-೧೬ ॥ ಈ ಮನುಷ್ಯಶರೀರವು ಅತ್ಯಂತ ದುರ್ಲಭವಾಗಿದ್ದರೂ ಭಗವಂತನ ಅಸೀಮ ಅನುಕಂಪದಿಂದ ಇದು ಸುಲಭವಾಗಿದೆ. ಸಂಸಾರ ಸಾಗರವನ್ನು ದಾಟಲು ಮಾನವಶರೀರವು ದೃಢವಾದ ಒಂದು ನೌಕೆಯಾಗಿದೆ. ಸದ್ಗುರುವೇ ಇದರ ಕರ್ಣಧಾರ (ಅಂಬಿಗ). ಭಗವಂತನು ಹೇಳುತ್ತಾನೆ – ನಾನೇ ಅನುಕೂಲವಾದ ವಾಯು ಆಗಿ ಇದನ್ನು ನಡೆಸುತ್ತೇನೆ. ಭಗವಂತನ ಇಷ್ಟೊಂದು ಕರುಣೆ ಇದ್ದರೂ ಕೂಡ ಈ ಸಂಸಾರಸಾಗರವನ್ನು ದಾಟದವನು ಸ್ವತಃ ತನ್ನ ಆತ್ಮವನ್ನು ಕೊಲ್ಲುವವನೆಂದು ತಿಳಿಯಬೇಕು. ॥ ೧೭ ॥

ಪ್ರಿಯ ಉದ್ಧವನೇ! ಕರ್ಮಗಳಲ್ಲಿ ದುಃಖವನ್ನು ಅನುಭವಿಸುತ್ತಾ ಅವುಗಳಿಂದ ವಿರಕ್ತನಾದಾಗ ಮನುಷ್ಯನು ಜಿತೇಂದ್ರಿಯನಾಗಿ ಯೋಗದಲ್ಲಿ ಸ್ಥಿತನಾಗಬೇಕು. ಅಭ್ಯಾಸ ಮತ್ತು ಆತ್ಮಾನುಸಂಧಾನದಿಂದ ತನ್ನ ಮನಸ್ಸಲ್ಲಿ ಪರಮಾತ್ಮನಾದ ನನ್ನನ್ನು ನಿಶ್ಚಲರೂಪದಿಂದ ಧರಿಸಿಕೊಳ್ಳಬೇಕು. ॥ ೧೮ ॥ ಮನಸ್ಸನ್ನು ಸ್ಥಿರಗೊಳಿಸುವಾಗ ಅದು ಚಂಚಲವಾಗಿ ಅತ್ತ-ಇತ್ತ ಅಲೆಯತೊಡಗಿದಾಗ ಕೂಡಲೇ ತುಂಬಾ ಜಾಗರೂಕತೆಯಿಂದ ಅದನ್ನು ಒಲಿಸಿ-ಒಪ್ಪಿಸಿ, ಹಿಂದಕ್ಕೆ ಎಳೆದುತಂದು ತನ್ನ ವಶದಲ್ಲಿ ಇರಿಸಿಕೊಳ್ಳಬೇಕು. ॥ ೧೯ ॥ ಇಂದ್ರಿಯಗಳನ್ನು ಮತ್ತು ಪ್ರಾಣಗಳನ್ನು ತನ್ನ ವಶದಲ್ಲಿರಿಸಿಕೊಳ್ಳಬೇಕು. ಮನವನ್ನು ಒಂದು ಕ್ಷಣವಾದರೂ ಸ್ವತಂತ್ರವಾಗಿ ಬಿಡಬಾರದು. ಅದರ ಪ್ರತಿಯೊಂದು ಸ್ಥಿತಿ-ಗತಿಗಳನ್ನು ನೋಡುತ್ತಾ ಇರಬೇಕು. ಈ ಪ್ರಕಾರ ಸತ್ತ್ವಸಂಪನ್ನ ಬುದ್ಧಿಯಿಂದ ನಿಧಾನವಾಗಿ ಮನಸ್ಸನ್ನು ತನ್ನ ವಶದಲ್ಲಿ ಇರಿಸಿಕೊಳ್ಳಬೇಕು. ॥ ೨೦ ॥ ಉಚ್ಛೃಂಖಲವಾದ ಕುದುರೆಯನ್ನು ಪಳಗಿಸುವ ಅವಶ್ಯಕತೆ ಇರುತ್ತದೆ. ಅದನ್ನು ವಶಪಡಿಸಿದಂತೆ ಮನಸ್ಸಿನ ಭಾವಗಳನ್ನು ಅರಿತುಕೊಂಡು ಅದನ್ನು ವಶಪಡಿಸಿಕೊಳ್ಳಬೇಕು. ಮನಸ್ಸು ಪೂರ್ಣವಾಗಿ ವಶವಾದಾಗಲೇ ಪರಮಯೋಗಿಯಾಗುವನು. ॥ ೨೧ ॥

ಸಾಂಖ್ಯೇನ ಸರ್ವಭಾವಾನಾಂ ಪ್ರತಿಲೋಮಾನುಲೋಮತಃ ।
ಭವಾಪ್ಯಯಾವನುಧ್ಯಾಯೇನ್‌ಮನೋ ಯಾವತ್ಪ್ರಸೀದತಿ ॥ ೨೨ ॥

ನಿರ್ವಿಣ್ಣಸ್ಯ ವಿರಕ್ತಸ್ಯ ಪುರುಷಸ್ಯೋಕ್ತವೇದಿನಃ ।
ಮನಸ್ತ್ಯಜತಿ ದೌರಾತ್ಮ್ಯಂ ಚಿಂತಿತಸ್ಯಾನುಚಿಂತಯಾ ॥ ೨೩ ॥

ಯಮಾದಿಭಿರ್ಯೋಗಪಥೈರಾನ್ವೀಕ್ಷಿಕ್ಯಾ ಚ ವಿದ್ಯಯಾ ।
ಮಮಾರ್ಚೋಪಾಸನಾಭಿರ್ವಾ ನಾನ್ಯೈರ್ಯೋಗ್ಯಂ ಸ್ಮರೇನ್ಮನಃ ॥ ೨೪ ॥

ಯದಿ ಕುರ್ಯಾತ್ ಪ್ರಮಾದೇನ ಯೋಗೀ ಕರ್ಮ ವಿಗರ್ಹಿತಮ್ ।
ಯೋಗೇನೈವ ದಹೇದಂಹೋ ನಾನ್ಯತ್ತತ್ರ ಕದಾಚನ ॥ ೨೫ ॥

ಸ್ವೇ ಸ್ವೇಽಧಿಕಾರೇ ಯಾ ನಿಷ್ಠಾ ಸ ಗುಣಃ ಪರಿಕೀರ್ತಿತಃ ।
ಕರ್ಮಣಾಂ ಜಾತ್ಯಶುದ್ಧಾನಾಮನೇನ ನಿಯಮಃ ಕೃತಃ ।
ಗುಣದೋಷವಿಧಾನೇನ ಸಂಗಾನಾಂ ತ್ಯಾಜನೇಚ್ಛಯಾ ॥ ೨೬ ॥

ಜಾತಶ್ರದ್ಧೋ ಮತ್ಕಥಾಸು ನಿರ್ವಿಣ್ಣಃ ಸರ್ವಕರ್ಮಸು ।
ವೇದ ದುಃಖಾತ್ಮಕಾನ್ ಕಾಮಾನ್ಪರಿತ್ಯಾಗೇಽಪ್ಯನೀಶ್ವರಃ ॥ ೨೭ ॥

ತತೋ ಭಜೇತ ಮಾಂ ಪ್ರೀತಃ ಶ್ರದ್ಧಾಲುರ್ದೃಢನಿಶ್ಚಯಃ ।
ಜುಷಮಾಣಶ್ಚ ತಾನ್ಕಾಮಾನ್ ದುಃಖೋದರ್ಕಾಂಶ್ಚ ಗರ್ಹಯನ್ ॥ ೨೮ ॥

ಪ್ರೋಕ್ತೇನ ಭಕ್ತಿಯೋಗೇನ ಭಜತೋ ಮಾಸಕೃನ್ಮುನೇಃ ।
ಕಾಮಾ ಹೃದಯ್ಯಾ ನಶ್ಯಂತಿ ಸರ್ವೇ ಮಯಿ ಹೃದಿ ಸ್ಥಿತೇ ॥ ೨೯ ॥

ಸಾಂಖ್ಯಶಾಸ್ತ್ರದಲ್ಲಿ ತಿಳಿಸಿದ ಕ್ರಮಕ್ಕನುಸಾರವೇ ಪ್ರಕೃತಿಯಿಂದ ಹಿಡಿದು ಶರೀರದವರೆಗಿನ ಸೃಷ್ಟಿಯನ್ನು ಚಿಂತಿಸಬೇಕು. ಶರೀರಾದಿಗಳ ಪ್ರಕೃತಿಯಲ್ಲಿ ಲಯವಾಗುವ ಕ್ರಮವನ್ನು ಹೇಳಿದಂತೆ ಲಯ-ಚಿಂತನೆ ಮಾಡಬೇಕು. ಮನಸ್ಸು ಶಾಂತ-ಸ್ಥಿರವಾಗುವವರೆಗೆ ಈ ಕ್ರಮವನ್ನು ನಡೆಸುತ್ತಾ ಇರಬೇಕು. ॥ ೨೨ ॥ ಸಂಸಾರದಿಂದ ವಿರಕ್ತನಾದವನು, ಸಾಂಸಾರಿಕ ಪದಾರ್ಥಗಳಲ್ಲಿ ದುಃಖಬುದ್ಧಿ ಉಂಟಾದವನು ತನ್ನ ಗುರುಹಿರಿಯರ ಉಪದೇಶಗಳನ್ನು ಚೆನ್ನಾಗಿ ತಿಳಿದುಕೊಂಡು, ಪದೇ-ಪದೇ ತನ್ನ ಸ್ವರೂಪದ ಚಿಂತನೆಯಲ್ಲೇ ಮುಳುಗಿರುತ್ತಾನೆ. ಈ ಅಭ್ಯಾಸದಿಂದ ಬಹುಬೇಗನೇ ಅವನ ಮನಸ್ಸು ಚಂಚಲತೆಯನ್ನು ಬಿಟ್ಟುಬಿಡುತ್ತದೆ. ॥ ೨೩ ॥ ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧಾರಣಾ, ಧ್ಯಾನ, ಸಮಾಧಿ ಮುಂತಾದ ಯೋಗಮಾರ್ಗಗಳಿಂದ, ಆತ್ಮವಿದ್ಯೆಯಿಂದ ಹಾಗೂ ನನ್ನ ಪರಾಭಕ್ತಿಯಿಂದ, ನನ್ನ ಉಪಾಸನೆಯಿಂದ, ಭಕ್ತಿಯೋಗದಿಂದ ಮನಸ್ಸು ಪರಮಾತ್ಮನ ಚಿಂತನೆ ಮಾಡತೊಡಗುತ್ತದೆ. ಇದಲ್ಲದೆ ಬೇರೆ ಯಾವ ಉಪಾಯವೂ ಇಲ್ಲ. ॥ ೨೪ ॥

ಎಲೈ ಉದ್ಧವನೇ! ಯೋಗಿಯಾದರೋ ಎಂದೂ ನಿಂದಿತ ಕೆಲಸವನ್ನು ಮಾಡುವುದೇ ಇಲ್ಲ. ಆದರೆ ಒಂದೊಮ್ಮೆ ಎಲ್ಲಾದರೂ ಅವನಿಂದ ಪ್ರಮಾದವಶದಿಂದ ಯಾವುದಾದರೂ ಅಪರಾಧ ನಡೆದುಹೋದರೂ, ಯೋಗದ ಮೂಲಕವೇ ಆ ಪಾಪವನ್ನು ಸುಟ್ಟುಬಿಡುತ್ತಾನೆ. ಬೇರೆ ಯಾವ ಕರ್ಮವನ್ನು ಅದಕ್ಕಾಗಿ ಮಾಡದಿರಲಿ. ॥ ೨೫ ॥ ತಮ್ಮ-ತಮ್ಮ ಅಧಿಕಾರಕ್ಕನುಸಾರ ಆಚರಿಸುವುದೇ ಗುಣವಾಗಿದೆ. ಬೇರೆಯವರ ಕರ್ಮಗಳನ್ನು ಆಚರಿಸುವುದು ದೋಷವಾಗಿದೆ. ಏಕೆಂದರೆ, ಕರ್ಮಗಳು ಸ್ವಭಾವತಃ ಅಶುದ್ಧವಾಗಿಯೇ ಇರುತ್ತವೆ. ಕರ್ಮಗಳ ಆಸಕ್ತಿಯನ್ನು ತ್ಯಾಗ ಮಾಡಲೆಂದೇ ಅವುಗಳಲ್ಲಿ ಗುಣ-ದೋಷಗಳ ವಿಧಾನಗೈದು, ಅವನ್ನು ನಿಯಮನ ಮಾಡಲಾಗಿದೆ. ॥ ೨೬ ॥

ನನ್ನ ಕಥೆಯಲ್ಲಿ ಶ್ರದ್ಧೆಯಿರಲಿ. ಎಲ್ಲ ಕರ್ಮಗಳಲ್ಲಿ ವೈರಾಗ್ಯ ತಳೆಯಲಿ. ಕರ್ಮಗಳನ್ನು ತ್ಯಜಿಸಲು ಅಸಮರ್ಥನಾಗಿದ್ದರೂ ಕೂಡ ಕರ್ಮಗಳು ದುಃಖಾತ್ಮಕವೆಂದು ತಿಳಿದುಕೊಂಡು. ಅವುಗಳಿಂದ ವಿರಕ್ತನಾಗಲು ಪ್ರಯತ್ನಿಸಲಿ. ಹೀಗೆ ಬುದ್ಧಿಯಲ್ಲಿ ನನ್ನ ನಿಶ್ಚಯವನ್ನು ದೃಢಗೊಳಿಸಿ, ಶ್ರದ್ಧಾ-ಪ್ರೇಮದಿಂದ ನನ್ನನ್ನು ಭಜಿಸಲಿ. ಕಾಮನೆಗಳನ್ನು ನಾಶಪಡಿಸಲಾಗದಿದ್ದರೆ, ಸಂಸ್ಕಾರವಶನಾಗಿ ಅವುಗಳನ್ನು ಸೇವಿಸುತ್ತಾ, ಅವನ್ನು ನಿಂದ್ಯವೆಂದು ತಿಳಿದು, ಪರಿಣಾಮದಲ್ಲಿ ಇವು ದುಃಖಪ್ರದವೇ ಆಗಿದೆ ಎಂದು ಯೋಚಿಸಲಿ. ಹೀಗೆ ಮಾಡುವುದರಿಂದ ಸಹಜವಾಗಿಯೇ ಆ ಕರ್ಮಗಳಿಂದ ವಿರಕ್ತಿ ಉಂಟಾದೀತು. ॥ ೨೭-೨೮ ॥ ಈ ಪ್ರಕಾರ ನಾನು ತಿಳಿಸಿದಂತಹ ಭಕ್ತಿಯೋಗದಿಂದ ನಿರಂತರ ನನ್ನನ್ನು ಭಜಿಸುವುದರಿಂದ ನಾನು ಆ ಸಾಧಕನ ಹೃದಯದಲ್ಲಿ ಬಂದು ನೆಲಸುತ್ತೇನೆ. ನಾನು ವಿರಾಜಮಾನನಾಗುತ್ತಲೇ ಅವನ ಹೃದಯದ ಎಲ್ಲ ವಾಸನೆಗಳು ತಮ್ಮ ಸಂಸ್ಕಾರಗಳೊಡನೆ ನಾಶವಾಗಿ ಹೋಗುತ್ತವೆ. ॥ ೨೯ ॥

ಭಿದ್ಯತೇ ಹೃದಯಗ್ರಂಥಿಶ್ಛಿದ್ಯಂತೇ ಸರ್ವಸಂಶಯಾಃ ।
ಕ್ಷೀಯಂತೇ ಚಾಸ್ಯ ಕರ್ಮಾಣಿ ಮಯಿ ದೃಷ್ಟೇಽಖಿಲಾತ್ಮನಿ
॥ ೩೦ ॥

ತಸ್ಮಾನ್ಮದ್ ಭಕ್ತಿಯುಕ್ತಸ್ಯ ಯೋಗಿನೋ ವೈ ಮದಾತ್ಮನಃ ।
ನ ಜ್ಞಾನಂ ನ ಚ ವೈರಾಗ್ಯಂ ಪ್ರಾಯಃ ಶ್ರೇಯೋ ಭವೇದಿಹ
॥ ೩೧ ॥

ಯತ್ಕರ್ಮಭಿರ್ಯತ್ತಪಸಾ ಜ್ಞಾನವೈರಾಗ್ಯತಶ್ಚ ಯತ್ ।
ಯೋಗೇನ ದಾನಧರ್ಮೇಣ ಶ್ರೇಯೋಭಿರಿತರೈರಪಿ
॥ ೩೨ ॥

ಸರ್ವಂ ಮದ್ಭಕ್ತಿಯೋಗೇನ ಮದ್ಭಕ್ತೋ ಲಭತೇಽಂಜಸಾ ।
ಸ್ವರ್ಗಾಪವರ್ಗಂ ಮದ್ಧಾಮ ಕಥಂಚಿದ್ಯದಿ ವಾಂಛತಿ
॥ ೩೩ ॥

ನ ಕಿಂಚಿತ್ಸಾಧವೋ ಧೀರಾ ಭಕ್ತಾ ಹ್ಯೇಕಾಂತಿನೋ ಮಮ ।
ವಾಂಛಂತ್ಯಪಿ ಮಯಾ ದತ್ತಂ ಕೈವಲ್ಯಮಪುನರ್ಭವಮ್
॥ ೩೪ ॥

ನೈರಪೇಕ್ಷ್ಯಂ ಪರಂ ಪ್ರಾಹುರ್ನಿಃಶ್ರೇಯಸಮನಲ್ಪಕಮ್ ।
ತಸ್ಮಾನ್ನಿರಾಶಿಷೋ ಭಕ್ತಿರ್ನಿರಪೇಕ್ಷಸ್ಯ ಮೇ ಭವೇತ್
॥ ೩೫ ॥

ನ ಮಯ್ಯೇಕಾಂತಭಕ್ತಾನಾಂ ಗುಣದೋಷೋದ್ಭವಾ ಗುಣಾಃ ।
ಸಾಧೂನಾಂ ಸಮಚಿತ್ತಾನಾಂ ಬುದ್ಧೇಃ ಪರಮುಪೇಯುಷಾಮ್
॥ ೩೬ ॥

ಏವಮೇತಾನ್ಮಯಾಽಽದಿಷ್ಟಾನನುತಿಷ್ಠಂತಿ ಮೇ ಪಥಃ ।
ಕ್ಷೇಮಂ ವಿಂದಂತಿ ಮತ್ಸ್ಥಾನಂ ಯದ್ಬ್ರಹ್ಮ ಪರಮಂ ವಿದುಃ
॥ ೩೭ ॥

ಹೀಗೆ ಅವನಿಗೆ ಸರ್ವಾತ್ಮಕನಾದ ನನ್ನ ಸಾಕ್ಷಾತ್ಕಾರವಾಗುತ್ತಲೇ ಅವನ ಹೃದಯದ ಚಿಜ್ಜಡಗ್ರಂಥಿಯು ಬಿಚ್ಚಲ್ಪಡುತ್ತದೆ. ಅವನ ಎಲ್ಲ ಸಂಶಯಗಳು ಛಿನ್ನ-ಭಿನ್ನವಾಗುತ್ತವೆ ಹಾಗೂ ಕರ್ಮವಾಸನೆಯು ಸರ್ವಥಾ ಕ್ಷೀಣವಾಗುತ್ತದೆ. ॥ ೩೦ ॥ ಇದರಿಂದ ನನ್ನ ಭಕ್ತಿಯಿಂದ ಕೂಡಿದ ಯೋಗಿಯು ನನ್ನ ಚಿಂತನೆಯಲ್ಲೇ ಮಗ್ನನಾಗಿದ್ದು, ಅವನಿಗಾಗಿ ಜ್ಞಾನ ಅಥವಾ ವೈರಾಗ್ಯದ ಆವಶ್ಯಕತೆ ಇರುವುದಿಲ್ಲ. ಅವನ ಶ್ರೇಯಸ್ಸಾದರೋ ಪ್ರಾಯಶಃ ನನ್ನ ಭಕ್ತಿಯಿಂದಲೇ ಆಗಿ ಹೋಗುತ್ತದೆ. ॥ ೩೧ ॥ ಕರ್ಮ, ತಪಸ್ಸು, ಜ್ಞಾನ, ವೈರಾಗ್ಯ, ಯೋಗಾಭ್ಯಾಸ, ದಾನ, ಧರ್ಮ ಹಾಗೂ ಇನ್ನಿತರ ಶ್ರೇಯಸ್ಸಿನ ಸಾಧನೆಗಳಿಂದ ದೊರೆಯುವುದೆಲ್ಲವೂ, ನನ್ನ ಭಕ್ತನಿಗೆ ನನ್ನ ಭಕ್ತಿಯೋಗದ ಪ್ರಭಾವದಿಂದಲೇ ದೊರೆಯುತ್ತದೆ. ಸ್ವರ್ಗ, ಮೋಕ್ಷ ಅಥವಾ ನನ್ನ ಧಾಮವನ್ನು ಬಯಸುವ ನನ್ನ ಭಕ್ತನು ಆಯಾಸವಿಲ್ಲದೆ ಪಡೆದುಕೊಳ್ಳುತ್ತಾನೆ. ॥ ೩೨-೩೩॥ ನನ್ನ ಅನನ್ಯ ಪ್ರೇಮಿ ಹಾಗೂ ಧೈರ್ಯವುಳ್ಳ ಸಾಧು-ಭಕ್ತರು ಸ್ವತಃ ತಾನಾದರೋ ಏನನ್ನೂ ಬಯಸುವುದಿಲ್ಲ. ಒಂದೊಮ್ಮೆ ನಾನೇ ಕೈವಲ್ಯ-ಮೋಕ್ಷವನ್ನು ಕೊಟ್ಟರೂ ಅವರು ಅದನ್ನು ಪಡೆಯಲು ಇಚ್ಛಿಸುವುದಿಲ್ಲ. ॥ ೩೪ ॥ ಏನನ್ನೂ ಇಚ್ಛಿಸದಿರುವುದು ಪರಮ ಶ್ರೇಯಸ್ಸಾಗಿ, ಎಲ್ಲಕ್ಕಿಂತ ದೊಡ್ಡ ಸಾಧನೆಯಾಗಿದೆ. ಆದ್ದರಿಂದ ಯಾವುದೇ ಕಾಮನೆ ಇಲ್ಲದವನಿಗೆ, ಯಾವ ಅಪೇಕ್ಷೆಯೂ ಇಲ್ಲದವನಿಗೇ ನನ್ನಲ್ಲಿ ಭಕ್ತಿಯು ಉಂಟಾಗುತ್ತದೆ. ॥ ೩೫ ॥ ಬುದ್ಧಿಯಿಂದ ಅತೀತನಾದ ಪರಮಾತ್ಮ ತತ್ತ್ವವನ್ನು ಪಡೆದ ನನ್ನ ಅನನ್ಯ ಪ್ರೇಮೀ ಭಕ್ತರಿಗೆ, ಆ ಸಮದರ್ಶಿ ಮಹಾತ್ಮರಿಗೆ ಈ ವಿಧಿ-ನಿಷೇಧದಿಂದ ಉಂಟಾಗುವ ಪುಣ್ಯ-ಪಾಪಗಳಿಂದ ಯಾವುದೇ ಸಂಬಂಧವೂ ಇರುವುದಿಲ್ಲ. ॥ ೩೬ ॥ ಈ ಪ್ರಕಾರ ನಾನು ಹೇಳಿರುವ ಜ್ಞಾನ, ಭಕ್ತಿ , ಕರ್ಮಯೋಗಗಳ ಆಶ್ರಯಪಡೆದ ಜನರು ನನ್ನ ಪರಮ ಶ್ರೇಯಸ್ಕರವಾದ ಧಾಮವನ್ನು ಪಡೆದುಕೊಳ್ಳುತ್ತಾರೆ. ಏಕೆಂದರೆ, ಅವರು ಪರಬ್ರಹ್ಮ ತತ್ತ್ವವನ್ನು ತಿಳಿದುಕೊಂಡಿರುವರು. ॥ ೩೭ ॥

ಇಪ್ಪತ್ತನೆಯ ಅಧ್ಯಾಯವು ಮುಗಿಯಿತು. ॥ ೨೦ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಏಕಾದಶ ಸ್ಕಂಧೇ ವಿಂಶೋಽಧ್ಯಾಯಃ ॥ ೨೦ ॥

ಇಪ್ಪತ್ತೊಂದನೆಯ ಅಧ್ಯಾಯ

ಗುಣ-ದೋಷ ವ್ಯವಸ್ಥೆಗಳ ಸ್ವರೂಪ ಮತ್ತು ಅವುಗಳ ರಹಸ್ಯ

ಶ್ರೀಭಗವಾನುವಾಚ

ಯ ಏತಾನ್ ಮತ್ಪಥೋ ಹಿತ್ವಾ ಭಕ್ತಿಜ್ಞಾನಕ್ರಿಯಾತ್ಮಕಾನ್ ।
ಕ್ಷುದ್ರಾನ್ಕಾಮಾಂಶ್ಚಲೈಃ ಪ್ರಾಣೈರ್ಜುಷಂತಃ ಸಂಸರಂತಿ ತೇ
॥ ೧ ॥

ಭಗವಾನ್ ಶ್ರೀಕೃಷ್ಣನು ಹೇಳುತ್ತಾನೆ – ಪ್ರಿಯ ಉದ್ಧವನೇ! ನನ್ನ ಪ್ರಾಪ್ತಿಗಾಗಿ ಭಕ್ತಿಯೋಗ, ಜ್ಞಾನಯೋಗ, ಕರ್ಮಯೋಗಗಳೆಂಬ ಮೂರುಮಾರ್ಗಗಳಿವೆ. ಇವನ್ನು ಬಿಟ್ಟು ಚಂಚಲ ಇಂದ್ರಿಯಗಳ ಮೂಲಕ ಕ್ಷುದ್ರವಾದ ಭೋಗಗಳನ್ನು ಭೋಗಿಸುತ್ತಿರುವವರು ಪದೇ-ಪದೇ ಜನ್ಮ-ಮೃತ್ಯುರೂಪೀ ಸಂಸಾರದಲ್ಲಿ ಸುತ್ತುತ್ತಾ ಇರುತ್ತಾರೆ. ॥ ೧ ॥

ಸ್ವೇ ಸ್ವೇಽಧಿಕಾರೇ ಯಾ ನಿಷ್ಠಾ ಸ ಗುಣಃ ಪರಿಕೀರ್ತಿತಃ ।
ವಿಪರ್ಯಯಸ್ತು ದೋಷಃ ಸ್ಯಾದುಭಯೋರೇಷ ನಿಶ್ಚಯಃ
॥ ೨ ॥

ಶುದ್ಧ್ಯಶುದ್ಧೀ ವಿಧೀಯೇತೇ ಸಮಾನೇಷ್ವಪಿ ವಸ್ತುಷು ।
ದ್ರವ್ಯಸ್ಯ ವಿಚಿಕಿತ್ಸಾರ್ಥಂ ಗುಣದೋಷೌ ಶುಭಾಶುಭೌ
॥ ೩ ॥

ಧರ್ಮಾರ್ಥಂ ವ್ಯವಹಾರಾರ್ಥಂ ಯಾತ್ರಾರ್ಥಮಿತಿ ಚಾನಘ ।
ದರ್ಶಿತೋಽಯಂ ಮಯಾಽಽಚಾರೋ
ಧರ್ಮಮುದ್ವಹತಾಂ ಧುರಮ್
॥ ೪ ॥

ಭೂಮ್ಯಂಬ್ವಗ್ನ್ಯನಿಲಾಕಾಶಾ ಭೂತಾನಾಂ ಪಂಚ ಧಾತವಃ ।
ಆಬ್ರಹ್ಮಸ್ಥಾವರಾದೀನಾಂ ಶಾರೀರಾ ಆತ್ಮಸಂಯುತಾಃ
॥ ೫ ॥

ವೇದೇನ ನಾಮರೂಪಾಣಿ ವಿಷಮಾಣಿ ಸಮೇಷ್ವಪಿ ।
ಧಾತುಷೂದ್ಧವ ಕಲ್ಪ್ಯಂತೇ ಏತೇಷಾಂ ಸ್ವಾರ್ಥಸಿದ್ಧಯೇ
॥ ೬ ॥

ದೇಶಕಾಲಾದಿಭಾವಾನಾಂ ವಸ್ತೂನಾಂಮಮ ಸತ್ತಮ ।
ಗುಣದೋಷೌ ವಿಧೀಯೇತೇ ನಿಯಮಾರ್ಥಂ ಹಿ ಕರ್ಮಣಾಮ್
॥ ೭ ॥

ಅಕೃಷ್ಣಸಾರೋ ದೇಶಾನಾಮಬ್ರಹ್ಮಣ್ಯೋಽಶುಚಿರ್ಭವೇತ್ ।
ಕೃಷ್ಣಸಾರೋಽಪ್ಯಸೌವೀರಕೀಕಟಾಸಂಸ್ಕೃತೇರಿಣಮ್
॥ ೮ ॥

ಕರ್ಮಣ್ಯೋ ಗುಣವಾನ್ಕಾಲೋ ದ್ರವ್ಯತಃ ಸ್ವತ ಏವ ವಾ ।
ಯತೋ ನಿವರ್ತತೇ ಕರ್ಮ ಸ ದೋಷೋಽಕರ್ಮಕಃ ಸ್ಮೃತಃ
॥ ೯ ॥

ತಮ್ಮ-ತಮ್ಮ ಅಧಿಕಾರಕ್ಕನುಸಾರ ಧರ್ಮದಲ್ಲಿ ದೃಢನಿಷ್ಠೆ ಇರುವುದೇ ಗುಣವಾಗಿದೆ; ಇದಕ್ಕೆ ವಿಪರೀತವಾಗಿ ಅನಧಿಕಾರ ಚೇಷ್ಟೆಯನ್ನು ದೋಷವೆಂದು ಹೇಳಲಾಗಿದೆ. ತಾತ್ಪರ್ಯ – ಈ ಗುಣ-ದೋಷಗಳ ವ್ಯವಸ್ಥೆಯನ್ನು ಅಧಿಕಾರಕ್ಕನುಸಾರವೇ ಮಾಡಲಾಗುತ್ತದೆ; ಯಾವುದೇ ವಸ್ತುವಿಗನುಸಾರವಲ್ಲ, ಆದ್ದರಿಂದ ಸ್ವಧರ್ಮವನ್ನು ಪಾಲಿಸಬೇಕು. ॥ ೨ ॥ ಎಲ್ಲ ವಸ್ತುಗಳು ತಾತ್ತ್ವಿಕ ರೂಪದಿಂದ ಸಮಾನವೇ ಆಗಿವೆ. ಆದರೆ ದ್ರವ್ಯದ ಗುಣ-ದೋಷ, ಶುಭ ಅಥವಾ ಅಶುಭ ಇವುಗಳ ವಿಷಯದಲ್ಲಿ ಆ ವಸ್ತುವಿನ ನಿರ್ಣಯಮಾಡಿಯೇ ಶುದ್ಧಿ-ಅಶುದ್ಧಿಯ ವಿಷಯವಾಗಿ ಹೇಳಲಾಗುತ್ತದೆ. ॥ ೩ ॥ ಪುಣ್ಯಾತ್ಮನಾದ ಉದ್ಧವನೇ! ಈ ಶುದ್ಧಿ, ಅಶುದ್ಧಿಯ ನಿರ್ಣಯವು ಧರ್ಮದಿಂದಾಗಿಯೇ ಆಗುತ್ತದೆ. ವ್ಯವಹಾರ ಮತ್ತು ಶರೀರನಿರ್ವಾಹಕ್ಕಾಗಿಯೇ ಇದರ ವ್ಯವಸ್ಥೆ ಹೇಳಲಾಗಿದೆ. ಧರ್ಮದ ಮರ್ಯಾದೆಯನ್ನು ಪಾಲಿಸಲಿಕ್ಕಾಗಿ ನಾನೇ ಈ ಧರ್ಮದ ಆಚಾರವನ್ನು ಹೇಳಿರುವೆನು. ॥ ೪ ॥ ಪೃಥ್ವಿ, ಜಲ, ತೇಜ, ವಾಯು, ಆಕಾಶ ಈ ಪಂಚಭೂತಗಳೇ ಬ್ರಹ್ಮನಿಂದ ಹಿಡಿದು ಪರ್ವತ-ವೃಕ್ಷಗಳವರೆಗೆ ಎಲ್ಲ ಪ್ರಾಣಿಗಳ ಶರೀರಗಳ ಮೂಲ ಕಾರಣವಾಗಿವೆ. ಈ ರೀತಿ ಅವೆಲ್ಲವೂ ಶರೀರದ ದೃಷ್ಟಿಯಿಂದ ಸಮಾನವೇ ಆಗಿವೆ. ಎಲ್ಲರ ಆತ್ಮವೂ ಒಂದೇ ಆಗಿದೆ; ಆದ್ದರಿಂದ ಆತ್ಮನ ದೃಷ್ಟಿಯಿಂದಲೂ ಸಮಾನವಾಗಿವೆ. ॥ ೫ ॥ ಎಲೈ ಉದ್ಧವನೇ! ಪಂಚ - ಭೂತಗಳಾದರೋ ಎಲ್ಲದರಲ್ಲಿ ಸಮಾನವಾಗಿವೆ. ವೇದಗಳು ಅವುಗಳ ನಾಮ-ರೂಪಗಳನ್ನು ಬೇರೆ-ಬೇರೆಯಾಗಿ ಹೇಳುತ್ತವೆ. ಅವೆಲ್ಲವುಗಳಲ್ಲಿ ಸಜಾತೀಯ-ವಿಜಾತೀಯ, ಸ್ವಗತ ಭೇದಗಳನ್ನು ರಚಿಸಲಾಗಿದೆ. ಅವುಗಳ ಬೇರೆ-ಬೇರೆ ನಾಮ ರೂಪಗಳನ್ನು ಹೇಳಿರುವುದು ಆ ವಸ್ತುಗಳ ವ್ಯವಹಾರಕ್ಕಾಗಿಯೇ ಆಗಿದೆ. ॥ ೬ ॥ ಸಾಧುಶ್ರೇಷ್ಠ ಉದ್ಧವನೇ! ದೇಶ, ಕಾಲ ಮುಂತಾದವುಗಳ ವಿಷಯದಲ್ಲಿ ಮತ್ತು ಪದಾರ್ಥಗಳ ವಿಷಯದಲ್ಲಿ ಹೇಳಲಾದ ಗುಣ-ದೋಷಗಳ ವಿಧಾನವು ಕರ್ಮಗಳು ನಿಯಮಿತವಾಗಿ ನಡೆಯಲೆಂದೇ ಇದೆ. ॥ ೭ ॥ ಕೃಷ್ಣಸಾರ ಮೃಗವು ಇಲ್ಲದಿರುವ ಮತ್ತು ಬ್ರಾಹ್ಮಣಭಕ್ತರು ವಾಸಿಸದ ದೇಶವು ಅಪವಿತ್ರವಾಗಿದೆ. ಕೃಷ್ಣಸಾರ ಮೃಗವಿದ್ದರೂ, ಸಂತಪುರುಷರು ವಾಸಿಸುವಷ್ಟು ಪ್ರದೇಶವನ್ನು ಬಿಟ್ಟು ಕೀಕಟದೇಶವು ಅಪವಿತ್ರವಾಗಿದೆ. ಇದಲ್ಲದೆ ಸಜ್ಜನರು ಇರದ, ಬರಡುಭೂಮಿಯೂ ಅಪವಿತ್ರವೇ ಆಗಿದೆ.॥ ೮ ॥ ಕರ್ಮಮಾಡಲು ಯೋಗ್ಯ ಸಾಮಗ್ರಿ ದೊರೆಯಬಹುದಾದ ಹಾಗೂ ಕರ್ಮವೂ ಆಗಬಹುದಾದ ಸಮಯವೇ ಪವಿತ್ರವಾದುದು. ಇದಕ್ಕೆ ವಿಪರೀತವಾಗಿ ಕರ್ಮಮಾಡುವ ಸಾಮಗ್ರಿಯು ದೊರೆಯದಿದ್ದಾಗ, ಹಾಗೆಯೇ ಆಗಂತುಕ ದೋಷಗಳಿಂದ ಅಥವಾ ಸ್ವಾಭಾವಿಕ ದೋಷದ ಕಾರಣ, ಕರ್ಮವು ನಡೆಯದಿರುವ ಸಮಯವು ಅಶುದ್ಧವಾದುದು. ॥ ೯ ॥ ಪದಾರ್ಥಗಳ ಶುದ್ಧಿ-ಅಶುದ್ಧಿಯ ನಿರ್ಣಯವು, ದ್ರವ್ಯ, ವಚನ, ಸಂಸ್ಕಾರ, ಕಾಲ ಹೆಚ್ಚಾಗಿರುವುದು ಹಾಗೂ ಕಡಿಮೆ ಇರುವುದು ಇದರಿಂದಲೂ ಆಗುತ್ತದೆ. (ಹೇಗೆಂದರೆ ಯಾವುದಾದರೂ ಪಾತ್ರೆಯು ನೀರಿನಿಂದ ಶುದ್ಧಿಗೊಳಿಸಿದರೂ ಮೂತ್ರಾದಿಗಳಿಂದ ಅಶುದ್ಧವಾಗುತ್ತದೆ. ಯಾವುದೇ ವಸ್ತುವಿನ ಶುದ್ಧಿ ಅಥವಾ ಅಶುದ್ಧಿಯಲ್ಲಿ ಶಂಕೆ ಉಂಟಾದರೆ

ದ್ರವ್ಯಸ್ಯ ಶುದ್ಧ್ಯಶುದ್ಧೀ ಚ ದ್ರವ್ಯೇಣ ವಚನೇನ ಚ ।
ಸಂಸ್ಕಾರೇಣಾಥ ಕಾಲೇನ ಮಹತ್ತ್ವಾಲ್ಪತಯಾಥವಾ ॥ ೧೦ ॥

ಶಕ್ತ್ಯಾಶಕ್ತ್ಯಾಥವಾ ಬುದ್ಧ್ಯಾ ಸಮೃದ್ಧ್ಯಾ ಚ ಯದಾತ್ಮನೇ ।
ಅಘಂ ಕುರ್ವಂತಿ ಹಿ ಯಥಾ ದೇಶಾವಸ್ಥಾನುಸಾರತಃ ॥ ೧೧ ॥

ಧಾನ್ಯದಾರ್ವಸ್ಥಿತಂತೂನಾಂ ರಸತೈಜಸಚರ್ಮಣಾಮ್ ।
ಕಾಲವಾಯ್ವಗ್ನಿಮೃತ್ತೋಯೈಃ ಪಾರ್ಥಿವಾನಾಂ ಯುತಾಯುತೈಃ ॥ ೧೨ ॥

ಅಮೇಧ್ಯಲಿಪ್ತಂ ಯದ್ಯೇನ ಗಂಧಂ ಲೇಪಂ ವ್ಯಪೋಹತಿ ।
ಭಜತೇ ಪ್ರಕೃತಿಂ ತಸ್ಯ ತಚ್ಛೌಚಂ ತಾವದಿಷ್ಯತೇ ॥ ೧೩ ॥

ಸ್ನಾನದಾನತಪೋಽವಸ್ಥಾವೀರ್ಯಸಂಸ್ಕಾರಕರ್ಮಭಿಃ ।
ಮತ್ ಸ್ಮೃತ್ಯಾ ಚಾತ್ಮನಃ ಶೌಚಂ ಶುದ್ಧಃ ಕರ್ಮಾಚರೇದ್ದ್ವಿಜಃ ॥ ೧೪ ॥

ಮಂತ್ರಸ್ಯ ಚ ಪರಿಜ್ಞಾನಂ ಕರ್ಮಶುದ್ಧಿರ್ಮದರ್ಪಣಮ್ ।
ಧರ್ಮಃ ಸಂಪದ್ಯತೇ ಷಡ್ಭಿರಧರ್ಮಸ್ತು ವಿಪರ್ಯಯಃ ॥ ೧೫ ॥

ಬ್ರಾಹ್ಮಣರ ವಚನದಿಂದ ಅದು ಶುದ್ಧವಾಗುತ್ತದೆ. ಇಲ್ಲದಿದ್ದರೆ ಅಶುದ್ಧವಾಗಿರುತ್ತದೆ. ಪುಷ್ಪಾದಿಗಳು ನೀರು ಚಿಮುಕಿಸುವುದರಿಂದ ಶುದ್ಧ ಮತ್ತು ಮೂಸುವುದರಿಂದ ಅಶುದ್ಧವಾಗುತ್ತವೆ. ಆಗಲೇ ಬೇಯಿಸಿದ ಅನ್ನವು ಶುದ್ಧ ಹಾಗೂ ತಂಗಳಾದುದು ಅಶುದ್ಧವೆಂದು ತಿಳಿಯಲಾಗುತ್ತದೆ. ದೊಡ್ಡ ಸರೋವರ, ನದಿ ಇವುಗಳ ನೀರು ಶುದ್ಧ ಮತ್ತು ಸಣ್ಣ ಹೊಂಡದ ನೀರು ಅಶುದ್ಧ. ಹೀಗೆಯೇ ಬೇರೆ ವಸ್ತುಗಳನ್ನು ತಿಳಿದುಕೊಳ್ಳಬೇಕು.) ॥ ೧೦ ॥ ಶಕ್ತ, ಅಶಕ್ತ (ಅಸಮರ್ಥ, ಬಾಲಕ, ವೃದ್ಧ ರೋಗಿ ಮುಂತಾದವರು), ಬುದ್ಧಿ ಮತ್ತು ವೈಭವಕ್ಕನುಸಾರವೂ ಪವಿತ್ರತೆ, ಅಪವಿತ್ರತೆಯ ವ್ಯವಸ್ಥೆಯಾಗುತ್ತದೆ. ಅದರಲ್ಲಿಯೂ ಸ್ಥಾನ ಮತ್ತು ಉಪಯೋಗ ಮಾಡುವವನ ಆಯುಸ್ಸಿನ ವಿಚಾರಮಾಡುತ್ತಾ ಅಶುದ್ಧ ವಸ್ತುಗಳ ವ್ಯವಹಾರದ ದೋಷವೂ ಸರಿಯಾಗಿ ಗುರುತಿಸಲಾಗುತ್ತದೆ. (ಶ್ರೀಮಂತ-ದರಿದ್ರ, ಬಲಿಷ್ಠ-ನಿರ್ಬಲ, ಬುದ್ಧಿವಂತ-ಮೂರ್ಖ, ಉಪದ್ರವದಿಂದ ಕೂಡಿದ ಮತ್ತು ಸುಖಕರವಾದ ದೇಶ, ತರುಣ-ವೃದ್ಧಾವಸ್ಥೆ ಇವುಗಳ ಭೇದದಿಂದ ಶುದ್ಧಿ ಹಾಗೂ ಅಶುದ್ಧಿಯ ವ್ಯವಸ್ಥೆಯಲ್ಲಿ ವ್ಯತ್ಯಾಸವಿರುತ್ತದೆ.) ॥ ೧೧ ॥ ಧಾನ್ಯಗಳು, ಮರದಪಾತ್ರೆ, ಆನೆಯದಂತ, ನೂಲು, ಜೇನು, ಉಪ್ಪು ಎಣ್ಣೆ ತುಪ್ಪ ಮುಂತಾದ ರಸವಸ್ತುಗಳು, ಚಿನ್ನ, ಪಾದರಸ ಮೊದಲಾದ ತೈಜಸ ಪದಾರ್ಥಗಳು, ಹುಲಿ, ಜಿಂಕೆ ಇವುಗಳ ಚರ್ಮ, ಮಣ್ಣಿನ ಗಡಿಗೆಯೇ ಮುಂತಾದವುಗಳು ಸಮಯಾನುಸಾರ ತಾನಾಗಿಯೇ ಗಾಳಿ ತಾಗುವುದರಿಂದ, ಬೆಂಕಿಯಲ್ಲಿ ಸುಟ್ಟಾಗ, ಮಣ್ಣಿನಿಂದ ತಿಕ್ಕುವುದರಿಂದ, ನೀರಿನಿಂದ ತೊಳೆಯುವುದರಿಂದ ಶುದ್ಧವಾಗುತ್ತವೆ. ದೇಶ, ಕಾಲ ಹಾಗೂ ಅವಸ್ಥೆಗನುಸಾರ ಕೆಲವೊಮ್ಮೆ ನೀರು, ಮಣ್ಣು ಮುಂತಾದ ಶೋಧಕ ಸಾಮಗ್ರಿಯ ಸಂಯೋಗದಿಂದ ಶುದ್ಧ ಮಾಡಬೇಕಾಗುತ್ತದೆ. ಕೆಲವು ಕಡೆಗಳಲ್ಲಿ ಒಂದೊಂದರಿಂದಲೇ ಶುದ್ಧವಾಗುತ್ತವೆ. ॥ ೧೨ ॥ ಯಾವುದೇ ವಸ್ತುವಿನಲ್ಲಿ ಯಾವುದಾದರೂ ಅಶುದ್ಧ ಪದಾರ್ಥ ತಗುಲಿದರೆ, ಸುಲಿಯುವುದರಿಂದ ಅಥವಾ ಮಣ್ಣು ಮುಂತಾದವುಗಳಿಂದ ತಿಕ್ಕುವುದರಿಂದ, ಆ ಪದಾರ್ಥದ ವಾಸನೆ, ಲೇಪ ಹೊರಟುಹೋಗಿ ಆ ವಸ್ತುವು ತನ್ನ ಹಿಂದಿನರೂಪವನ್ನು ಪಡೆದಾಗ ಅದನ್ನು ಶುದ್ಧವೆಂದು ತಿಳಿಯಬೇಕು. ॥ ೧೩ ॥ ಸ್ನಾನ, ದಾನ, ತಪಸ್ಸು ವಯಸ್ಸು ಸಾಮರ್ಥ್ಯ, ಸಂಸ್ಕಾರ, ಕರ್ಮ ಮತ್ತು ನನ್ನ ಸ್ಮರಣೆಯಿಂದ ಚಿತ್ತದ ಶುದ್ಧಿಯಾಗುತ್ತದೆ. ಇವುಗಳ ಮೂಲಕ ಶುದ್ಧರಾಗಿ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಇವರುಗಳು ವಿಹಿತ ಕರ್ಮಗಳನ್ನು ಆಚರಿಸಬೇಕು. ॥ ೧೪॥ ಗುರುಮುಖದಿಂದ ಕೇಳಿ ಚೆನ್ನಾಗಿ ಹೃದಯಂಗಮ ಮಾಡಿಕೊಂಡಾಗ ಮಂತ್ರದ ಮತ್ತು ನನಗೆ ಸಮರ್ಪಿಸುವುದರಿಂದ ಕರ್ಮದ ಶುದ್ಧಿಯಾಗುತ್ತದೆ. ಉದ್ಧವನೇ! ಹೀಗೆ ದೇಶ, ಕಾಲ, ಪದಾರ್ಥ, ಕರ್ತಾ, ಮಂತ್ರ ಮತ್ತು ಕರ್ಮ ಈ ಆರು ಶುದ್ಧವಾಗುವುದರಿಂದ ಧರ್ಮವು ಶುದ್ಧವಾಗುತ್ತದೆ. ಅಶುದ್ಧವಾದಾಗ ಅಧರ್ಮವೂ ಆಗುತ್ತದೆ. ॥ ೧೫ ॥

ಕ್ವಚಿದ್ಗುಣೋಽಪಿ ದೋಷಃ ಸ್ಯಾದ್ದೋಷೋಽಪಿ ವಿಧಿನಾ ಗುಣಃ ।
ಗುಣದೋಷಾರ್ಥನಿಯಮಸ್ತದ್ಭಿದಾಮೇವ ಬಾಧತೇ ॥ ೧೬ ॥

ಸಮಾನಕರ್ಮಾಚರಣಂ ಪತಿತಾನಾಂ ನ ಪಾತಕಮ್ ।
ಔತ್ಪತ್ತಿಕೋ ಗುಣಃ ಸಂಗೋ ನ ಶಯಾನಃ ಪತತ್ಯಧಃ ॥ ೧೭ ॥

ಯತೋ ಯತೋ ನಿವರ್ತೇತ ವಿಮುಚ್ಯೇತ ತತಸ್ತತಃ ।
ಏಷ ಧರ್ಮೋ ನೃಣಾಂ ಕ್ಷೇಮಃ ಶೋಕಮೋಹಭಯಾಪಹಃ ॥ ೧೮ ॥

ವಿಷಯೇಷು ಗುಣಾಧ್ಯಾಸಾತ್ ಪುಂಸಃ ಸಂಗಸ್ತತೋ ಭವೇತ್ ।
ಸಂಗಾತ್ತತ್ರ ಭವೇತ್ಕಾಮಃ ಕಾಮಾದೇವ ಕಲಿರ್ನೃಣಾಮ್ ॥ ೧೯ ॥

ಕಲೇರ್ದುರ್ವಿಷಹಃ ಕ್ರೋಧಸ್ತಮಸ್ತಮನುವರ್ತತೇ ।
ತಮಸಾ ಗ್ರಸ್ಯತೇ ಪುಂಸಶ್ಚೇತನಾ ವ್ಯಾಪಿನೀ ದ್ರುತಮ್ ॥ ೨೦ ॥

ತಯಾ ವಿರಹಿತಃ ಸಾಧೋ ಜಂತುಃ ಶೂನ್ಯಾಯ ಕಲ್ಪತೇ ।
ತತೋಽಸ್ಯ ಸ್ವಾರ್ಥವಿಭ್ರಂಶೋ ಮೂರ್ಚ್ಛಿತಸ್ಯ ಮೃತಸ್ಯ ಚ ॥ ೨೧ ॥

ವಿಷಯಾಭಿನಿವೇಶೇನ ನಾತ್ಮಾನಂ ವೇದ ನಾಪರಮ್ ।
ವೃಕ್ಷಜೀವಿಕಯಾ ಜೀವನ್ವ್ಯರ್ಥಂ ಭಸ್ತ್ರೇವ ಯಃ ಶ್ವಸನ್ ॥ ೨೨ ॥

ಒಂದೇ ವಸ್ತುವು ಗುಣಯಾಗಿದ್ದರೂ ವಿಧಿಯು ನಿಷೇಧ ಮಾಡಿದ್ದರೆ ಆ ವಿಧಿವಾಕ್ಯಕ್ಕನುಸಾರ ಗುಣವೂ ದೋಷವಾಗುತ್ತದೆ. ಈ ಪ್ರಕಾರ ವಸ್ತುವಿನ ಗುಣ-ದೋಷಗಳ ವಿಷಯದಲ್ಲಿ ನಿಯಮಗಳನ್ನು ನಿರ್ಧರಿಸ ಲಾಗಿದೆ. ಆ ನಿಯಮಗಳನ್ನು ಯಾರು ಯಾವುದನ್ನು ಪಾಲಿಸಬೇಕು ಅಥವಾ ಯಾರು ಯಾವುದನ್ನು ಪಾಲಿಸಬಾರದು ಹೀಗೆ ಮಾಡಿರುವ ಭೇದವು ವರ್ಣವ್ಯವಸ್ಥೆಯನ್ನು ಸ್ಥಿರವಾಗಿಡಲೆಂದೇ ಆಗಿದೆ. ಆದ್ದರಿಂದಲೇ ಅವುಗಳಲ್ಲಿನ ಗುಣ-ದೋಷ ಭೇದವನ್ನು ಕಲ್ಪಿಸಲಾಗಿದೆ. ॥ ೧೬ ॥ ಪತಿತರಿಗೆ ಪಾಪದ ಆಚರಣೆಯು ಯಾವ ದೋಷವೂ ಇಲ್ಲ, ಅವರು ಮೊದಲಿನಿಂದಲೇ ಪಾತಕಿಗಳಾಗಿದ್ದಾರೆ. ಅವರು ಇನ್ನೂ ಪಾಪ ಮಾಡಿದರೆ ಅವರಿಗೆ ಪಾಪ ತಗಲುವುದಿಲ್ಲ, ಏಕೆಂದರೆ, ಗುಣ (ಪಾಪ)ಗಳಲ್ಲಿ ಆಸಕ್ತವಾಗುವುದಾದರೋ ಅವರ ಸ್ವಾಭಾವಿಕ ಪ್ರವೃತ್ತಿಯೇ ಆಗಿದೆ. ನೆಲದ ಮೇಲೆ ಮಲಗಿದವನಿಗೆ ಕೆಳಗೆ ಬೀಳುವ ಭಯವಿಲ್ಲ. ॥ ೧೭ ॥ ಯಾವ-ಯಾವ ಗುಣ-ದೋಷಗಳಿಂದ ಮನುಷ್ಯನ ಚಿತ್ತವು ಉಪರತವಾಗುತ್ತಾ ಹೋಗುತ್ತದೆಯೋ, ಆಯಾಯಾ ವಸ್ತುಗಳ ಬಂಧನದಿಂದ ಅವನು ಮುಕ್ತನಾಗುತ್ತಾ ಹೋಗುತ್ತಾನೆ. ಮನುಷ್ಯರಿಗಾಗಿ ಈ ನಿವೃತ್ತಿರೂಪೀ ಧರ್ಮವೇ ಪರಮ ಶ್ರೇಯಸ್ಸಿನ ಸಾಧನೆಯಾಗಿದೆ. ಏಕೆಂದರೆ, ಇದೇ ಶೋಕ, ಭಯ, ಮೋಹ ಇವುಗಳನ್ನು ಇಲ್ಲವಾಗಿಸುವಂತಹುದು. ॥ ೧೮ ॥ ಉದ್ಧವನೇ ! ವಿಷಯಗಳಲ್ಲಿ ಗುಣಗಳನ್ನು ಆರೋಪಿಸುವುದರಿಂದ ಆ ವಸ್ತುವಿನ ಕುರಿತು ಆಸಕ್ತಿ ಉಂಟಾಗುತ್ತದೆ. ಆಸಕ್ತಿ ಉಂಟಾದಾಗ ಅದನ್ನು ಪಡೆಯುವ ಕಾಮನೆ ಹುಟ್ಟುತ್ತದೆ. ಈ ಕಾಮನೆಯ ಪೂರ್ತಿಯಲ್ಲಿ ಯಾವುದಾದರೂ ಅಡ್ಡಿ ಇದಿರಾದರೆ ಜನರಲ್ಲಿ ಪರಸ್ಪರ ಕಲಹವಾಗತೊಡಗುತ್ತದೆ. ॥ ೧೯ ॥ ಕಲಹದಿಂದ ಅಸಹ್ಯವಾದ ಕ್ರೋಧವು ಉಂಟಾಗುತ್ತದೆ ಮತ್ತು ಕ್ರೋಧ ಬಂದಾಗ ತನ್ನ ಹಿತ-ಅಹಿತದ ಎಚ್ಚರವಿರುವುದಿಲ್ಲ, ಅಜ್ಞಾನ ಆವರಿಸಿಬಿಡುತ್ತದೆ. ಈ ಅಜ್ಞಾನದಿಂದ ಮನುಷ್ಯನಲ್ಲಿ ಕಾರ್ಯಾಕಾರ್ಯವನ್ನು ನಿರ್ಣಯಿಸುವ ಚೇತನಾಶಕ್ತಿಯು ಲುಪ್ತವಾಗುತ್ತದೆ. ॥ ೨೦ ॥ ಸಾಧುವೇ ! ಚೇತನಾಶಕ್ತಿಯು ಅರ್ಥಾತ್ ಸ್ಮೃತಿಯು ಲುಪ್ತವಾದಾಗ ಮನುಷ್ಯನಲ್ಲಿ ಮನುಷ್ಯತ್ವ ಉಳಿಯುವುದಿಲ್ಲ, ಪಶುತ್ವ ಬಂದುಬಿಡುತ್ತದೆ ಹಾಗೂ ಅವನು ಶೂನ್ಯದಂತೆ ಅಸ್ತಿತ್ವಹೀನನಾಗುತ್ತಾನೆ. ಆಗ ಅವನ ಸ್ಥಿತಿಯು ಮೂರ್ಛಿತ ಅಥವಾ ಹೆಣದಂತಾಗುತ್ತದೆ. ಇಂತಹ ಸ್ಥಿತಿಯಲ್ಲಿ ಅವನ ಸ್ವಾರ್ಥವೂ ಕೈಗೂಡುವುದಿಲ್ಲ, ಪರಮಾರ್ಥವೂ ಇಲ್ಲ. ॥ ೨೧ ॥ ವಿಷಯಗಳನ್ನು ಚಿಂತಿಸುತ್ತಾ-ಚಿಂತಿಸುತ್ತಾ ಅವನು ವಿಷಯರೂಪನಾಗುತ್ತಾನೆ. ಅವನ ಜೀವನವು ವೃಕ್ಷದಂತೆ ಜಡವಾಗುತ್ತದೆ. ಕಮ್ಮಾರನ ತಿದಿಯಂತೆ ಅವನ ಶರೀರದಲ್ಲಿ ವ್ಯರ್ಥವಾಗಿ ಶ್ವಾಸ ನಡೆಯುತ್ತಾ ಇರುತ್ತದೆ. ಅವನಿಗೆ ತನ್ನದಾಗಲೀ, ಬೇರೆಯವರದಾಗಲೀ ಜ್ಞಾನವಿರುವುದಿಲ್ಲ, ಅವನು ಸರ್ವಥಾ ಆತ್ಮವಂಚಿತನಾಗುತ್ತಾನೆ. ॥ ೨೨ ॥

ಫಲಶ್ರುತಿರಿಯಂ ನೃಣಾಂ ನ ಶ್ರೇಯೋ ರೋಚನಂ ಪರಮ್ ।
ಶ್ರೇಯೋವಿವಕ್ಷಯಾ ಪ್ರೋಕ್ತಂ ಯಥಾ ಭೈಷಜ್ಯರೋಚನಮ್ ॥ ೨೩ ॥

ಉತ್ಪತ್ತ್ಯೈವ ಹಿ ಕಾಮೇಷು ಪ್ರಾಣೇಷು ಸ್ವಜನೇಷು ಚ ।
ಆಸಕ್ತಮನಸೋ ಮರ್ತ್ಯಾ ಆತ್ಮನೋಽನರ್ಥಹೇತುಷು ॥ ೨೪ ॥

ನ ತಾನವಿದುಷಃ ಸ್ವಾರ್ಥಂ ಭ್ರಾಮ್ಯತೋ ವೃಜಿನಾಧ್ವನಿ ।
ಕಥಂ ಯುಂಜ್ಯಾತ್ ಪುನಸ್ತೇಷು ತಾಂಸ್ತಮೋ ವಿಶತೋ ಬುಧಃ ॥ ೨೫ ॥

ಏವಂ ವ್ಯವಸಿತಂ ಕೇಚಿದವಿಜ್ಞಾಯ ಕುಬುದ್ಧಯಃ ।
ಫಲಶ್ರುತಿಂ ಕುಸುಮಿತಾಂ ನ ವೇದಜ್ಞಾ ವದಂತಿ ಹಿ ॥ ೨೬ ॥

ಕಾಮಿನಃ ಕೃಪಣಾ ಲುಬ್ಧಾಃ ಪುಷ್ಪೇಷು ಫಲಬುದ್ಧಯಃ ।
ಅಗ್ನಿಮುಗ್ಧಾ ಧೂಮತಾಂತಾಃ ಸ್ವಂ ಲೋಕಂ ನ ವಿದಂತಿ ತೇ ॥ ೨೭ ॥

ನ ತೇ ಮಾಮಂಗ ಜಾನಂತಿ ಹೃದಿಸ್ಥಂ ಯ ಇದಂ ಯತಃ ।
ಉಕ್ಥಶಸ್ತ್ರಾ ಹ್ಯಸುತೃಪೋ ಯಥಾ ನೀಹಾರಚಕ್ಷುಷಃ ॥ ೨೮ ॥

ತೇ ಮೇ ಮತಮವಿಜ್ಞಾಯ ಪರೋಕ್ಷಂ ವಿಷಯಾತ್ಮಕಾಃ ।
ಹಿಂಸಾಯಾಂ ಯದಿ ರಾಗಃ ಸ್ಯಾದ್ಯಜ್ಞ ಏವ ನ ಚೋದನಾ ॥ ೨೯ ॥

ಸಿಹಿಮಾತುಗಳನ್ನಾಡಿ ಮಕ್ಕಳಿಗೆ ಕಹಿ ಔಷಧಿ ಕುಡಿಸುವಂತೆ, ವೇದಗಳಲ್ಲಿರುವ ಫಲಶ್ರುತಿಯು ವಾಸ್ತವವಾಗಿ ಶ್ರೇಯಸ್ಕರವಲ್ಲ, ಕೇವಲ ವೇದಗಳಲ್ಲಿ ಅಭಿರುಚಿಯನ್ನು ಉಂಟುಮಾಡಲೆಂದೇ ಇವೆ. ಆದ್ದರಿಂದ ವೈದಿಕ ಕರ್ಮಗಳಲ್ಲಿ ಅಭಿರುಚಿ ಉಂಟಾಗಿ ಅವನು ತನ್ನ ಶ್ರೇಯಸ್ಸನ್ನು ಮಾಡಿಕೊಳ್ಳಬಲ್ಲನು. ॥ ೨೩ ॥ ಕರ್ಮಗಳಲ್ಲಿ, ಪ್ರಾಣಗಳಲ್ಲಿ, ತನ್ನ ಹತ್ತಿರದ ನೆಂಟರಲ್ಲಿ, ಮನುಷ್ಯನ ಮನಸ್ಸು ಸ್ವಾಭಾವಿಕವಾಗಿಯೇ ಆಸಕ್ತವಾಗಿರುತ್ತದೆ. ಇದು ಅವನನ್ನು ಪತನವಾಗಿಸುವಂತಹುದು. ಹೀಗೆ ಈ ಮನುಷ್ಯನು ಜನ್ಮ-ಜನ್ಮಾಂತರದ ಸಂಸ್ಕಾರಗಳಿಗೆ ವಶೀಭೂತನಾಗಿ ತನ್ನ ಸ್ವಾರ್ಥದಿಂದ ಭ್ರಷ್ಟನಾಗಿರುವನು. ಪರಮಾರ್ಥಪಥದಿಂದ ಪತಿತನಾದ ಪ್ರಾಣಿಯು ಇನ್ನೂ ಹೆಚ್ಚು ಅಂಧಕಾರದಲ್ಲಿ ಹೋಗುತ್ತಿದ್ದಾನೆ. ಇದನ್ನು ನೋಡಿ ವೇದವಾಣಿ ಅಥವಾ ಯಾವುದೇ ವಿದ್ವಾಂಸನು ಅವನನ್ನು ಮತ್ತೂ ಹೆಚ್ಚಿನ ಕುಮಾರ್ಗದಲ್ಲಿ ಅಲೆಯಲು ಏಕೆ ಪ್ರವೃತ್ತವಾಗಿಸೀತು ? ವೇದವಾದರೋ ಜ್ಞಾನಭಂಡಾರವಾಗಿದೆ. ಆದ್ದರಿಂದ ವೇದವು ಕುಮಾರ್ಗದಿಂದ ತೊಲಗಿಸಿ, ವೈದಿಕ ಕರ್ಮಗಳಲ್ಲಿ ಫಲಶ್ರುತಿಯ ಮಾತನ್ನು ಹೇಳಿ, ಅವನಲ್ಲಿ ರುಚಿಯನ್ನುಂಟುಮಾಡಿ ಸನ್ಮಾರ್ಗಕ್ಕೆ ಹಚ್ಚುವ ಪ್ರೇರಣೆಯನ್ನು ನೀಡುತ್ತದೆ. ॥ ೨೪-೨೫ ॥ ದೂಷಿತ ಬುದ್ಧಿಯ ಜನರು (ಕರ್ಮವಾದಿಗಳು) ವೇದಗಳ ಈ ಅಭಿಪ್ರಾಯವನ್ನು ತಿಳಿಯದೆ ಕರ್ಮಾಸಕ್ತಿವಶರಾಗಿ ಪುಷ್ಪಗಳಂತೆ ಆಕರ್ಷಕವಾಗಿ ಸ್ವರ್ಗಾದಿ ಲೋಕಗಳನ್ನು ವರ್ಣಿಸುತ್ತಾ, ಕೇಳುತ್ತಾ ಇರುತ್ತಾರೆ. ಅವನ್ನೇ ಪರಮ ಫಲವೆಂದು ತಿಳಿದು ದಾರಿತಪ್ಪುತ್ತಾರೆ. ಆದರೆ ವೇದಗಳನ್ನು ತಿಳಿದ ಜನರು ಶ್ರುತಿಗಳ ಇಂತಹ ತಾತ್ಪರ್ಯವನ್ನು ಹೇಳುವುದಿಲ್ಲ. ॥ ೨೬ ॥ ವಿಷಯವಾಸನೆಯಲ್ಲಿ ಸಿಕ್ಕಿಬಿದ್ದ ದೀನ-ಹೀನ, ಲೋಭೀ ಪುರುಷರು ಬಣ್ಣ-ಬಣ್ಣದ ಹೂವುಗಳಂತೆ ಸ್ವರ್ಗಾದಿ ಲೋಕಗಳನ್ನೇ ಎಲ್ಲವೂ ಎಂದು ತಿಳಿದುಕೊಳ್ಳುತ್ತಾರೆ. ಅಗ್ನಿಯ ಮೂಲಕ ಸಿದ್ಧವಾಗುವ ಯಜ್ಞ-ಯಾಗಾದಿ ಕರ್ಮಗಳಲ್ಲೇ ಮೋಹಿತರಾಗಿ ದೇವಲೋಕ, ಪಿತೃಲೋಕ ಮುಂತಾದವುಗಳಿಗೆ ಹೋಗುತ್ತಾರೆ. ಬೇರೆಡೆ ಅಲೆಯುವುದರಿಂದ ಅವರು ತಮ್ಮ ನಿಜಧಾಮವಾದ ಪರಮಪದವನ್ನು ಹೊಂದುವುದಿಲ್ಲ. ॥ ೨೭ ॥ ಪ್ರಿಯ ಉದ್ಧವನೇ ! ಪರಮಾತ್ಮನಿಂದ ಈ ವಿಶ್ವವು ಉತ್ಪನ್ನವಾಗಿದೆ. ಆ ಪರಮಾತ್ಮಾ ಪರಮಾತ್ಮನಾದರೋ ಅವರ ಹೃದಯದಲ್ಲೇ ವಿರಾಜಮಾನನಾಗಿದ್ದಾನೆ. ಆದರೆ ಅವರು ಕರ್ಮಮಾರ್ಗದ ಶಸ್ತ್ರವನ್ನು ಹಿಡಿದೇ ನಡೆಯುತ್ತಾರೆ. ಇಂತಹ ಪ್ರಾಣಪೋಷಣೆಯಲ್ಲೇ ತೊಡಗಿರುವ ಜನರ ಕಣ್ಣುಗಳಲ್ಲಿ ಪ್ರಾಯಶಃ ಕತ್ತಲೆಯೇ ಆವರಿಸಿರುತ್ತದೆ. ॥ ೨೮ ॥ ಇದೇ ಕಾರಣದಿಂದ ಅವರು ನನ್ನನ್ನು ತಿಳಿಯದೇ ಹೋಗುತ್ತಾರೆ ಹಾಗೂ ನನ್ನ ಪರೋಕ್ಷ ಮತವನ್ನೂ ಕೂಡ ತಿಳಿಯದೆ ಹೋಗುವರು. ಬುದ್ಧಿಯಲ್ಲಿ ವಿಷಯಗಳೇ ನುಸುಳಿದ್ದರಿಂದ ಹಿಂಸೆಯಲ್ಲೇ ಅವರಿಗೆ ಆಸಕ್ತಿ ಇರುತ್ತದೆ. ಆ ಹಿಂಸಾವೃತ್ತಿಯನ್ನು ತಡೆಯುವುದಕ್ಕಾಗಿಯೇ, ಅವರ ಈ ಉಚ್ಛೃಂಖಲ ಪ್ರವೃತ್ತಿ ಒಂದು ಸೀಮೆಯೊಳಗೆ ಬಂಧಿಸಿರಲಿ ಎಂದೇ ಯಜ್ಞದ ವಿಧಾನವನ್ನು ಮಾಡಲಾಗಿದೆ. ॥ ೨೯ ॥

ಹಿಂಸಾವಿಹಾರಾ ಹ್ಯಾಲಬ್ಧೈಃ ಪಶುಭಿಃ ಸ್ವಸುಖೇಚ್ಛಯಾ ।
ಯಜಂತೇ ದೇವತಾ ಯಜ್ಞೈಃ ಪಿತೃಭೂತಪತೀನ್ ಖಲಾಃ
॥ ೩೦ ॥

ಸ್ವಪ್ನೋಪಮಮಮುಂ ಲೋಕಮಸಂತಂ ಶ್ರವಣಪ್ರಿಯಮ್ ।
ಆಶಿಷೋ ಹೃದಿ ಸಂಕಲ್ಪ್ಯ ತ್ಯಜಂತ್ಯರ್ಥಾನ್ಯಥಾ ವಣಿಕ್
॥ ೩೧ ॥

ರಜಃಸತ್ತ್ವತಮೋನಿಷ್ಠಾ ರಜಃಸತ್ತ್ವತಮೋಜುಷಃ ।
ಉಪಾಸತ ಇಂದ್ರಮುಖ್ಯಾನ್ ದೇವಾದೀನ್ ನ ತಥೈವ ಮಾಮ್
॥ ೩೨ ॥

ಇಷ್ಟ್ವೇಹ ದೇವತಾ ಯಜ್ಞೈರ್ಗತ್ವಾ ರಂಸ್ಯಾಮಹೇ ದಿವಿ ।
ತಸ್ಯಾಂತ ಇಹ ಭೂಯಾಸ್ಮ ಮಹಾಶಾಲಾ ಮಹಾಕುಲಾಃ
॥ ೩೩ ॥

ಏವಂ ಪುಷ್ಪಿತಯಾ ವಾಚಾ ವ್ಯಾಕ್ಷಿಪ್ತಮನಸಾಂ ನೃಣಾಮ್ ।
ಮಾನಿನಾಂ ಚಾತಿಸ್ತಬ್ಧಾನಾಂ ಮದ್ವಾರ್ತಾಪಿ ನ ರೋಚತೇ
॥ ೩೪ ॥

ವೇದಾ ಬ್ರಹ್ಮಾತ್ಮವಿಷಯಾಸ್ತ್ರಿಕಾಂಡವಿಷಯಾ ಇಮೇ ।
ಪರೋಕ್ಷವಾದಾ ಋಷಯಃ ಪರೋಕ್ಷಂ ಮಮ ಚ ಪ್ರಿಯಮ್
॥ ೩೫ ॥

ಶಬ್ದಬ್ರಹ್ಮಸುದುರ್ಬೋಧಂ ಪ್ರಾಣೇಂದ್ರಿಯಮನೋಮಯಮ್ ।
ಅನಂತಪಾರಂ ಗಂಭೀರಂ ದುರ್ವಿಗಾಹ್ಯಂ ಸಮುದ್ರವತ್
॥ ೩೬ ॥

ಈ ಪ್ರಕಾರ ಆ ಪಾಮರ ವಿಷಯಲೋಲುಪರು ತಮ್ಮ ಇಂದ್ರಿಯಗಳನ್ನು ತೃಪ್ತಿಪಡಿಸಲಿಕ್ಕಾಗಿ ಯಜ್ಞಗಳ ಮೂಲಕ, ದೇವತೆಗಳನ್ನು, ಪಿತೃಗಳನ್ನು ಮತ್ತು ಭೂತಪತಿಗಳನ್ನು ಒಲಿಸಿಕೊಳ್ಳಲು ಯಜನದ ದಂಭಾಚಾರವನ್ನು ಮಾಡುತ್ತಾ, ಮುಗ್ಧ ಮೂಕಪಶುಗಳನ್ನು ಹತ್ಯೆ ಮಾಡುತ್ತಾರೆ. ॥ ೩೦ ॥

ಎಲೈ ಉದ್ಧವನೇ! ಕೇಳಬರುವ ಸ್ವರ್ಗಾದಿ ಲೋಕಗಳ ಸುಖಭೋಗ, ಐಶ್ವರ್ಯಗಳು ಉಂಟಾಗದಿದ್ದರೂ ಕರ್ಣಪ್ರಿಯವಾಗಿವೆ. ವ್ಯಾಪಾರಿಯು ಲಾಭದ ಆಸೆಯಿಂದ ತನ್ನ ಮೂಲ ಭಂಡವಾಳವನ್ನು ಕಳೆದುಕೊಳ್ಳುವಂತೆ ಆ ಭೋಗಗಳ ಆಸೆಯನ್ನಿರಿಸಿ ಅದಕ್ಕಾಗಿ ತನ್ನ ನಿಜವಾದ ದ್ರವ್ಯವನ್ನು ಆ ಕರ್ಮಠರು ಕಳೆದು ಕೊಳ್ಳುತ್ತಾರೆ. ॥ ೩೧ ॥ ರಜಮಿಶ್ರಿತ ಸತ್ತ್ವಗುಣಿಗಳು ಮತ್ತು ತಮೋಗುಣ ಪ್ರಕೃತಿಯ ಜನರು ಈ ರೀತಿಯ ರಜಮಿಶ್ರಿತ ಸತ್ತ್ವಗುಣ ಮತ್ತು ತಮೋಗುಣಗಳನ್ನು ಸೇವಿಸುತ್ತಾ, ಆ ಸಾಮಗ್ರಿಗಳ ಮೂಲಕ ಇಂದ್ರಾದಿ ದೇವತೆಗಳನ್ನು ಉಪಾಸಿಸುತ್ತಾರೆ. ಆದರೆ ಅವರು ನನ್ನ ಉಪಾಸನೆಯನ್ನು ಮಾಡುವುದಿಲ್ಲ. ॥ ೩೨ ॥ ಅವರು ಈ ಪ್ರಕಾರ ಕಲ್ಪನೆ ಮಾಡುತ್ತಿರುತ್ತಾರೆ – 'ನಾವುಗಳು ಈ ಲೋಕದಲ್ಲಿ ಯಜ್ಞಗಳ ಮೂಲಕ ದೇವತೆಗಳನ್ನು ತೃಪ್ತಿಪಡಿಸಿ ಸ್ವರ್ಗಕ್ಕೆ ಹೋಗುವೆವು. ಅಲ್ಲಿ ದಿವ್ಯ ಭೋಗ-ಆನಂದವನ್ನು ಅನುಭವಿಸುವೆವು. ಅನಂತರ ಪುನಃ ನಮ್ಮ ಜನ್ಮವಾದಾಗ ನಾವು ದೊಡ್ಡ ಕುಲೀನ ಪರಿವಾರದಲ್ಲಿ ಹುಟ್ಟುವೆವು. ನಮ್ಮ ದೊಡ್ಡ ದೊಡ್ಡ ಅರಮನೆಗಳಿರುವುವು, ನಮ್ಮ ಕುಟುಂಬ ತುಂಬಾ ಸುಖೀಯಾಗಿದ್ದು ದೊಡ್ಡದಾಗಿರಬಹುದು.' ಹೀಗೆ ನೋಡಲು ಮಾತ್ರ ಸುಂದರ, ಮಧುರವಾಣಿಯಿಂದ ಅವರ ಚಿತ್ತವು ಕ್ಷುಬ್ಧವಾಗುತ್ತದೆ. ಅದರಲ್ಲೇ ಮೋಹಿತರಾಗಿರುತ್ತಾರೆ. ಆ ಮದಾಂಧರಿಗೆ ನನ್ನ ಸಂಬಂಧವಾದ ಮಾತು ಕೂಡ ಒಳ್ಳೆಯದೆನಿಸುವುದಿಲ್ಲ.॥ ೩೩-೩೪ ॥

ಎಲೈ ಉದ್ಧವನೇ! ವೇದಗಳಲ್ಲಿ ಕರ್ಮಕಾಂಡ, ಉಪಾಸನಾಕಾಂಡ, ಜ್ಞಾನಕಾಂಡ ಎಂಬ ಮೂರು ಕಾಂಡಗಳಿವೆ. ಈ ಮೂರರಲ್ಲಿಯೂ ಪ್ರತಿಪಾದಿತ ವಿಷಯವು ಬ್ರಹ್ಮ ಮತ್ತು ಆತ್ಮನ ಏಕತೆಯಾಗಿದೆ. ಎಲ್ಲ ಮಂತ್ರಗಳು ಮತ್ತು ಮಂತ್ರದ್ರಷ್ಟಾರ ಋಷಿಗಳು ಈ ವಿಷಯವನ್ನು ತೆರೆದುಹೇಳದೆ ಗುಪ್ತಭಾವದಿಂದ ಹೇಳುತ್ತಾರೆ. ನನಗೂ ಕೂಡ ಈ ಮಾತನ್ನು ಗುಪ್ತರೂಪದಿಂದ ಹೇಳುವುದೇ ಅಭೀಷ್ಟವಾಗಿದೆ.* (ಏಕೆಂದರೆ ಗುಪ್ತವಾಗಿಡುವುದರಿಂದಲೇ ಸೃಷ್ಟಿಯೂ ನಡೆಯಬಲ್ಲದು.) ॥ ೩೫ ॥ ವೇದಗಳ ಹೆಸರು ಶಬ್ದಬ್ರಹ್ಮವಾಗಿದೆ. ಅವು ನನ್ನ ಮೂರ್ತಿಯಾಗಿವೆ. ಇದರಿಂದ ಅವುಗಳ ರಹಸ್ಯವನ್ನು ತಿಳಿಯುವುದು ಅತ್ಯಂತ ಕಠಿಣವಾಗಿದೆ. ಆ ಶಬ್ದಬ್ರಹ್ಮವು ಪರಾ, ಪಶ್ಯಂತಿ, ಮಧ್ಯಮಾವಾಣಿಗಳ ರೂಪದಲ್ಲಿ ಪ್ರಾಣ, ಮನ, ಇಂದ್ರಿಯಮಯವಾಗಿದೆ. ಸಮುದ್ರದಂತೆ ಸೀಮಾರಹಿತ, ಗಂಭೀರವಾಗಿದೆ. ಅದರ ಆಳ ತಿಳಿಯುವುದು ಅತ್ಯಂತ ಕಠಿಣವಾಗಿದೆ. ದೊಡ್ಡ-ದೊಡ್ಡ ವಿದ್ವಾಂಸರೂ ಕೂಡ ಅವುಗಳ ತಾತ್ಪರ್ಯವನ್ನು ಸರಿಯಾಗಿ ನಿರ್ಣಯ ಮಾಡಲಾರರು. ॥ ೩೬ ॥

* ಏಕೆಂದರೆ, ಎಲ್ಲ ಜನರು ಇದರ ಅಧಿಕಾರಿಗಳಲ್ಲ, ಅಂತಃಕರಣ ಶುದ್ಧವಾದ ಮೇಲೆಯೇ ಈ ಮಾತು ಅರಿವಿಗೆ ಬರುತ್ತದೆ.

ಮಯೋಪಬೃಂಹಿತಂ ಭೂಮ್ನಾ ಬ್ರಹ್ಮಣಾನಂತಶಕ್ತಿನಾ ।
ಭೂತೇಷು ಘೋಷರೂಪೇಣ ಬಿಸೇಷೂರ್ಣೇವ ಲಕ್ಷ್ಯತೇ
॥ ೩೭ ॥

ಯಥೋರ್ಣನಾಭಿರ್ಹೃದಯಾದೂರ್ಣಾಮುದ್ವಮತೇ ಮುಖಾತ್ ।
ಆಕಾಶಾದ್ಘೋಷವಾನ್ಪ್ರಾಣೋ ಮನಸಾ ಸ್ಪರ್ಶರೂಪಿಣಾ
॥ ೩೮ ॥

ಛಂದೋಮಯೋಽಮೃತಮಯಃ ಸಹಸ್ರಪದವೀಂ ಪ್ರಭುಃ ।
ಓಂಕಾರಾದ್ವ್ಯಂಜಿತಸ್ಪರ್ಶಸ್ವರೋಷ್ಮಾಂತಃಸ್ಥಭೂಷಿತಾಮ್
॥ ೩೯ ॥

ವಿಚಿತ್ರಭಾಷಾವಿತತಾಂ ಛಂದೋಭಿಶ್ಚತುರುತ್ತರೈಃ ।
ಅನಂತಪಾರಾಂ ಬೃಹತೀಂ ಸೃಜತ್ಯಾಕ್ಷಿಪತೇ ಸ್ವಯಮ್
॥ ೪೦ ॥

ಗಾಯತ್ರ್ಯುಷ್ಣಿಗನುಷ್ಟುಪ್ ಚ ಬೃಹತೀ ಪಂಕ್ತಿರೇವ ಚ ।
ತ್ರಿಷ್ಟುಬ್ಜಗತ್ಯತಿಚ್ಛಂದೋ ಹ್ಯತ್ಯಷ್ಟ್ಯತಿಜಗದ್ವಿರಾಟ್
॥ ೪೧ ॥

ಕಿಂ ವಿಧತ್ತೇ ಕಿಮಾಚಷ್ಟೇ ಕಿಮನೂದ್ಯ ವಿಕಲ್ಪಯೇತ್ ।
ಇತ್ಯಸ್ಯಾ ಹೃದಯಂ ಲೋಕೇ ನಾನ್ಯೋ ಮದ್ವೇದ ಕಶ್ಚನ
॥ ೪೨ ॥

ಮಾಂ ವಿಧತ್ತೇಽಭಿಧತ್ತೇ ಮಾಂ ವಿಕಲ್ಪ್ಯಾಪೋಹ್ಯತೇ ತ್ವಹಮ್ ।
ಏತಾವಾನ್ ಸರ್ವವೇದಾರ್ಥಃ ಶಬ್ದ ಆಸ್ಥಾಯ ಮಾಂ ಭಿದಾಮ್ ।
ಮಾಯಾಮಾತ್ರಮನೂದ್ಯಾಂತೇ ಪ್ರತಿಷಿಧ್ಯ ಪ್ರಸೀದತಿ
॥ ೪೩॥

ಉದ್ಧವನೇ! ನಾನು ಅನಂತಶಕ್ತಿಸಂಪನ್ನ ಹಾಗೂ ಸ್ವಯಂ ಅನಂತ ಬ್ರಹ್ಮನಾಗಿದ್ದೇನೆ. ನಾನೇ ವೇದವಾಣಿಯನ್ನು ವಿಸ್ತರಿಸಿರುವೆನು. ಕಮಲದ ದಂಟಿನಲ್ಲಿ ತೆಳ್ಳನೆಯ ಸೂಕ್ಷ್ಮದಾರವಿರುವಂತೆ ಈ ವೇದ ವಾಣಿಯು ಪ್ರಾಣಿಗಳ ಅಂತಃಕರಣದಲ್ಲಿ ಅನಾಹತ ನಾದದ ರೂಪದಲ್ಲಿ ಪ್ರಕಟವಾಗುತ್ತದೆ. ॥ ೩೭ ॥ ಪ್ರತಿಯೊಬ್ಬ ಪ್ರಾಣಿಯ ಹೃದಯಾಕಾಶದಲ್ಲಿ ಅನಾಹತನಾದ ರೂಪದಲ್ಲಿ ಘೋಷಯುಕ್ತ ಪ್ರಾಣದ ಅಭಿವ್ಯಕ್ತಿಯು ಅನಾಹತನಾದದ ರೂಪದಲ್ಲಿ ಪ್ರಕಟ ವಾಗುತ್ತದೆ. ಅದು ಪ್ರಾಣ, ಮನಸ್ಸಿನ ಮೂಲಕ ಸ್ಪರ್ಶ ಆದಿ ವರ್ಣಗಳ ರೂಪದಲ್ಲಿ ಹೊರಗೆ ಬರುತ್ತದೆ. 'ಅ' ದಿಂದ 'ಮ'ವರೆಗೆ ಎಲ್ಲ ವಾಣಿಗಳು ಓಂಕಾರದಿಂದಲೇ ಉತ್ಪನ್ನವಾಗಿವೆ. ಸ್ಥಾನಭೇದ ದಿಂದ ಸ್ಪರ್ಶ, ಸ್ವರ, ಊಷ್ಮ, ಅಂತಸ್ಥ ಹೀಗೆ ಅವುಗಳ ಹೆಸರಾ ದುವು. ಜೇಡವು ತನ್ನ ಬಾಯಿಂದಲೇ ಬಲೆಯನ್ನು ನೆಯ್ದು ಮತ್ತೆ ನುಂಗಿಬಿಡುವಂತೆ ವೇದಮಯ ಪ್ರಭುವಾದ ನಾನು ಓಂಕಾರ ದಿಂದಲೇ ಸಾವಿರಾರು ಪ್ರಕಾರದ ಬೃಹತೀವಾಣಿಯನ್ನು ಉತ್ಪನ್ನ ಮಾಡುತ್ತೇನೆ ಹಾಗೂ ನನ್ನಲ್ಲೇ ಲೀನಗೊಳಿಸಿಕೊಳ್ಳುತ್ತೇನೆ. ಹೀಗೆ ವಾಣಿಯು ನನ್ನದೇ ಸ್ವರೂಪವಾಗಿದೆ. ಆ ವಾಣಿಯು ಹೃದ್ಗತ ಸೂಕ್ಷ್ಮ ಓಂಕಾರದ ಮೂಲಕ ಅಭಿವ್ಯಕ್ತ ಸ್ಪರ್ಶ ('ಕ'ದಿಂದ ಹಿಡಿದು 'ಮ' ವರೆಗೆ ೨೫), ಸ್ವರ ('ಅ' ದಿಂದ 'ಔ' ವರೆಗೆ ೯), ಊಷ್ಮಾ (ಶ, ಷ, ಸ, ಹ), ಅಂತಸ್ಥ (ಯ, ರ, ಲ, ವ) – ಈ ವರ್ಣಗಳಿಂದ ವಿಭೂಷಿತವಾಗಿವೆ. ಅವುಗಳಲ್ಲಿ ಉತ್ತರೋತ್ತರ ನಾಲ್ಕು-ನಾಲ್ಕು ವರ್ಣಗಳು ಹೆಚ್ಚುತ್ತಾ ಅನೇಕ ಛಂದಸ್ಸುಗಳು ಇವೆ. ಅವುಗಳ ಮೂಲಕ ವಿಚಿತ್ರ ಭಾಷೆಯ ರೂಪದಲ್ಲಿ ಅದು ವಿಸ್ತೃತ ವಾಗಿದೆ. ॥ ೩೮-೪೦ ॥ ನಾಲ್ಕು-ನಾಲ್ಕು ವರ್ಣಗಳು ಹೆಚ್ಚುತ್ತಾ ಅನೇಕ ಛಂದಸ್ಸುಗಳಾಗುತ್ತವೆ. ಅವು ಹೀಗಿವೆ – ಗಾಯತ್ರೀ, ಉಷ್ಣಿಕ್, ಅನುಷ್ಟುಪ್, ಬೃಹತೀ, ಪಂಕ್ತೀ, ತ್ರಿಷ್ಟುಪ್, ಜಗತೀ, ಅತಿಚ್ಛಂದ, ಅತ್ಯಷ್ಟಿ, ಅತಿಜಗತಿ ಮತ್ತು ವಿರಾಟ್. ॥ ೪೧ ॥ ಆ ವೇದ ವಾಣಿಯು ಕರ್ಮಕಾಂಡದಲ್ಲಿ ಯಾವ ವಿಧಾನಮಾಡು ತ್ತದೆ, ಉಪಾಸನಾ ಕಾಂಡದಲ್ಲಿ ಯಾವ ದೇವತೆಗಳನ್ನು ವರ್ಣಿಸು ತ್ತದೆ, ಜ್ಞಾನಕಾಂಡದಲ್ಲಿ ಯಾವ ಪ್ರತೀತಿಗಳನ್ನು ಅನುವಾದಿಸುತ್ತಾ, ಯಾವುದನ್ನು ನಿಷೇಧ ಮಾಡುತ್ತದೆ. ಇದರ ರಹಸ್ಯ ನಾನಲ್ಲದೆ ಬೇರೆ ಯಾರೂ ತಿಳಿಯಲಾರರು. ॥ ೪೨ ॥ ವೇದವು ಯಜ್ಞಾದಿ ಗಳ ಮೂಲಕ ನನ್ನನ್ನೇ ವರ್ಣಿಸುತ್ತವೆ. ಉಪಾಸನಾಕಾಂಡದಲ್ಲಿ ನನ್ನನ್ನೇ ಮುಖ್ಯಾರ್ಥದಲ್ಲಿ ದೇವತೆಗಳನ್ನು ವರ್ಣಿಸುತ್ತದೆ ; ಜ್ಞಾನ ಕಾಂಡದ ಮೂಲಕ ನನ್ನಿಂದ ಬೇರೆಯಾದ ವಸ್ತುವನ್ನು ವರ್ಣಿಸುತ್ತಾ 'ನೇತಿ-ನೇತಿ' ವಾಕ್ಯಗಳ ಮೂಲಕ ಬೇರೆಯದನ್ನು ನಿಷೇಧವನ್ನೂ ಮಾಡುತ್ತದೆ. ಈ ಪ್ರಕಾರ ವೇದವು ನನ್ನನ್ನೇ ಮುಂದಿರಿಸಿಕೊಂಡು ನನ್ನಲ್ಲೇ ಭೇದವನ್ನು ಆರೋಪಿಸುತ್ತದೆ, ಇದೆಲ್ಲವೂ ಮಾಯೆಯೇ ಆಗಿದೆ. ಕೊನೆಯಲ್ಲಿ "ಸರ್ವಂ ಖಲ್ವಿದಂ ಬ್ರಹ್ಮ" ಎಂದೇ ಹೇಳಿ ವೇದವು ಸಂತೋಷಪಡುತ್ತದೆ. ॥ ೪೩. ॥

ಇಪ್ಪತ್ತೊಂದನೆಯ ಅಧ್ಯಾಯವು ಮುಗಿಯಿತು. ॥ ೨೧ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಏಕಾದಶಸ್ಕಂಧೇ ಏಕವಿಂಶೋಽಧ್ಯಾಯಃ ॥ ೨೧ ॥

ಇಪ್ಪತ್ತೆರಡನೆಯ ಅಧ್ಯಾಯ

ತತ್ತ್ವಗಳ ಸಂಖ್ಯೆ ಮತ್ತು ಪ್ರಕೃತಿ ಪುರುಷರ ವಿಶ್ಲೇಷಣೆ

ಉದ್ಧವ ಉವಾಚ

ಕತಿ ತತ್ತ್ವಾನಿ ವಿಶ್ವೇಶ ಸಂಖ್ಯಾತಾನ್ಯೃಷಿಭಿಃ ಪ್ರಭೋ ।
ನವೈಕಾದಶ ಪಂಚ ತ್ರೀಣ್ಯಾತ್ಥ ತ್ವಮಿಹ ಶುಶ್ರುಮ
॥ ೧ ॥

ಕೇಚಿತ್ ಷಡ್ವಿಂಶತಿಂ ಪ್ರಾಹುರಪರೇ ಪಂಚವಿಂಶತಿಮ್ ।
ಸಪ್ತೈಕೇ ನವ ಷಟ್ಕೇಚಿಚ್ಚತ್ವಾರ್ಯೇಕಾದಶಾಪರೇ
॥ ೨ ॥

ಕೇಚಿತ್ ಸಪ್ತದಶ ಪ್ರಾಹುಃ ಷೋಡಶೈಕೇ ತ್ರಯೋದಶ ।
ಏತಾವತ್ತ್ವಂ ಹಿ ಸಂಖ್ಯಾನಾಮೃಷಯೋ ಯದ್ವಿವಕ್ಷಯಾ ।
ಗಾಯಂತಿ ಪೃಥಗಾಯುಷ್ಮನ್ನಿದಂ ನೋ ವಕ್ತುಮರ್ಹಸಿ
॥ ೩ ॥

ಶ್ರೀಭಗವಾನುವಾಚ

ಯುಕ್ತಂ ಚ ಸಂತಿ ಸರ್ವತ್ರ ಭಾಷಂತೇ ಬ್ರಾಹ್ಮಣಾ ಯಥಾ ।
ಮಾಯಾಂ ಮದೀಯಾಮುದ್ಗೃಹ್ಯ
ವದತಾಂ ಕಿಂ ನು ದುರ್ಘಟಮ್
॥ ೪ ॥

ನೈತದೇವಂ ಯಥಾಽಽತ್ಥ ತ್ವಂ ಯದಹಂ ವಚ್ಮಿ ತತ್ತಥಾ ।
ಏವಂ ವಿವದತಾಂ ಹೇತುಂ ಶಕ್ತಯೋ ಮೇ ದುರತ್ಯಯಾಃ
॥ ೫ ॥

ಯಾಸಾಂ ವ್ಯತಿಕರಾದಾಸೀದ್ವಿಕಲ್ಪೋ ವದತಾಂ ಪದಮ್ ।
ಪ್ರಾಪ್ತೇ ಶಮದಮೇಽಪ್ಯೇತಿ ವಾದಸ್ತಮನುಶಾಮ್ಯತಿ
॥ ೬ ॥

ಪರಸ್ಪರಾನುಪ್ರವೇಶಾತ್ ತತ್ತ್ವಾನಾಂ ಪುರುಷರ್ಷಭ ।
ಪೌರ್ವಾಪರ್ಯಪ್ರಸಂಖ್ಯಾನಂ ಯಥಾ ವಕ್ತುರ್ವಿವಕ್ಷಿತಮ್
॥ ೭ ॥

ಉದ್ಧವನು ಕೇಳಿದನು – ಸ್ವಾಮಿ ! ವಿಶ್ವೇಶ್ವರಾ ! ಋಷಿಗಳು ತತ್ತ್ವಗಳ ಸಂಖ್ಯೆಯನ್ನು ಎಷ್ಟು ತಿಳಿಸಿರುವರು ? ನೀನಾದರೋ ಈಗ (ಹತ್ತೊಂಭತ್ತನೆಯ ಅಧ್ಯಾಯದಲ್ಲಿ) ಒಂಭತ್ತು, ಹನ್ನೊಂದು, ಐದು ಮತ್ತು ಮೂರು ಅರ್ಥಾತ್ – ಒಟ್ಟಿಗೆ ಇಪ್ಪತ್ತೆಂಟು ತತ್ತ್ವಗಳನ್ನು ಎಣಿಸಿರುವೆ. ಇದಾದರೋ ನಾನು ಕೇಳಿಯೇ ಇದ್ದೇನೆ. ಆದರೆ ಕೆಲವರು ಇಪ್ಪತ್ತಾರು ತತ್ತ್ವಗಳನ್ನು ಹೇಳುತ್ತಾರೆ ; ಕೆಲವರು ಇಪ್ಪತ್ತೈದು ; ಕೆಲವರು ಏಳು, ಒಂಭತ್ತು ಅಥವಾ ಆರು ಸ್ವೀಕರಿಸುತ್ತಾರೆ. ಕೆಲವರು ನಾಲ್ಕೆಂದು ಹೇಳಿದರೆ ಕೆಲವರು ಹನ್ನೊಂದು. ॥೧-೨॥ ಹೀಗೆಯೇ ಕೆಲ-ಕೆಲ ಋಷಿ-ಮುನಿಗಳ ಮತದಲ್ಲಿ ಅವುಗಳ ಸಂಖ್ಯೆ ಹದಿನೇಳು ಇದೆ, ಕೆಲವರು ಹದಿನಾರು, ಕೆಲವರು ಹದಿಮೂರು ಎಂದು ಹೇಳುತ್ತಾರೆ. ಸನಾತನ ಶ್ರೀಕೃಷ್ಣಾ! ಋಷಿ-ಮುನಿಗಳು ಇಷ್ಟು ಭಿನ್ನವಾದ ಸಂಖ್ಯೆಯನ್ನು ಯಾವ ಅಭಿಪ್ರಾಯದಿಂದ ತಿಳಿಸುತ್ತಾರೆ ? ನೀನು ದಯವಿಟ್ಟು ನನಗೆ ತಿಳಿಸುವವನಾಗು. ॥ ೩ ॥

ಭಗವಾನ್ ಶ್ರೀಕೃಷ್ಣನು ಹೇಳಿದನು – ಉದ್ಧವನೇ ! ವೇದಜ್ಞ ಬ್ರಾಹ್ಮಣರು ಈ ವಿಷಯದಲ್ಲಿ ಹೇಳಿದುದೆಲ್ಲವೂ ಸರಿಯಾಗಿಯೇ ಇದೆ. ಏಕೆಂದರೆ, ಎಲ್ಲ ತತ್ತ್ವಗಳು ಎಲ್ಲದರಲ್ಲಿ ಅಂತರ್ಭೂತವಾಗಿವೆ. ನನ್ನ ಮಾಯೆಯನ್ನು ಸ್ವೀಕರಿಸಿಕೊಂಡು ಏನು ಹೇಳುವುದು ಅಸಂಭವವಿದೆ ? ॥ ೪ ॥ 'ನೀನು ಹೇಳಿರುವುದು ಸರಿಯಲ್ಲ, ನಾನು ಹೇಳುತ್ತಿರುವುದೇ ಯಥಾರ್ಥವಾಗಿದೆ' – ಈ ಪ್ರಕಾರ ಜಗತ್ತಿನ ಕಾರಣದ ಸಂಬಂಧದಲ್ಲಿ ವಿವಾದ ಏಕೆ ಆಗುತ್ತದೆ ಎಂದರೆ – ನನ್ನ ಶಕ್ತಿಗಳು ಸತ್ತ್ವ, ರಜ ಮುಂತಾದ ಗುಣಗಳು ಮತ್ತು ಅವುಗಳ ವೃತ್ತಿಗಳ ರಹಸ್ಯವನ್ನು ಜನರು ತಿಳಿಯುವುದಿಲ್ಲ ಆದಕ್ಕಾಗಿ ಅವರು ತಮ್ಮ-ತಮ್ಮ ಭಾವಕ್ಕನುಸಾರ ವಾದ-ವಿವಾದ ಮಾಡುತ್ತಾ ಇರುತ್ತಾರೆ. ॥ ೫॥ ಸತ್ತ್ವಾದಿ ಗುಣಗಳ ಕ್ಷೋಭದಿಂದಲೇ ಈ ವಿವಿಧ ಕಲ್ಪನಾರೂಪೀ ಪ್ರಪಂಚವು – ಯಾವ ವಸ್ತು ಇಲ್ಲದೆ ಕೇವಲ ನಾಮಮಾತ್ರವಿದೆಯೋ, ಅದು ಎದ್ದು ನಿಂತಿದೆ. ಇದೇ ವಾದ-ವಿವಾದ ಮಾಡುವವರ ವಿವಾದದ ವಿಷಯವಾಗಿದೆ. ಇಂದ್ರಿಯಗಳು ತನ್ನ ವಶವಾದಾಗ, ಚಿತ್ತವು ಶಾಂತವಾದಾಗ ಅವರ ಭೇದಬುದ್ಧಿಯೂ ದೂರಾಗುತ್ತದೆ ಹಾಗೂ ವಿವಾದವೂ ಮುಗಿದು ಹೋಗುತ್ತದೆ. ॥ ೬ ॥ ಪುರುಷಶ್ರೇಷ್ಠನೇ ! ತತ್ತ್ವಗಳು ಒಂದು ಮತ್ತೊಂದರಲ್ಲಿ ಅನುಪ್ರವೇಶವಾಗಿವೆ. ಆದಕ್ಕಾಗಿ ಪ್ರವಚನಕಾರನು ತಿಳಿಸಲು ಬಯಸುವ ಸಂಖ್ಯೆಗನುಸಾರವಾಗಿ ಕಾರಣಗಳನ್ನು ಕಾರ್ಯದಲ್ಲಿ ಅಥವಾ ಕಾರ್ಯವನ್ನು ಕಾರಣಗಳಲ್ಲಿ ಬೆರೆಸಿ ತಾನು ಬಯಸಿದ ಸಂಖ್ಯೆಯನ್ನು ಸಿದ್ಧಗೊಳಿಸಿ ಕೊಳ್ಳುತ್ತಾನೆ. ॥ ೭ ॥

ಏಕಸ್ಮಿನ್ನಪಿ ದೃಶ್ಯಂತೇ ಪ್ರವಿಷ್ಟಾನೀತರಾಣಿ ಚ ।
ಪೂರ್ವಸ್ಮಿನ್ ವಾಪರಸ್ಮಿನ್ ವಾ ತತ್ತ್ವೇ ತತ್ತ್ವಾನಿ ಸರ್ವಶಃ ॥ ೮ ॥

ಪೌರ್ವಾಪರ್ಯಮತೋಽಮೀಷಾಂ ಪ್ರಸಂಖ್ಯಾನಮಭೀಪ್ಸತಾಮ್ ।
ಯಥಾ ವಿವಿಕ್ತಂ ಯದ್ವಕ್ತ್ರಂ ಗೃಹ್ಣೀಮೋ ಯುಕ್ತಿಸಂಭವಾತ್ ॥ ೯ ॥

ಅನಾದ್ಯವಿದ್ಯಾಯುಕ್ತಸ್ಯ ಪುರುಷಸ್ಯಾತ್ಮವೇದನಮ್ ।
ಸ್ವತೋ ನ ಸಂಭವಾದನ್ಯಸ್ತತ್ತ್ವಜ್ಞೋ ಜ್ಞಾನದೋ ಭವೇತ್ ॥ ೧೦ ॥

ಪುರುಷೇಶ್ವರಯೋರತ್ರ ನ ವೈಲಕ್ಷಣ್ಯಮಣ್ವಪಿ ।
ತದನ್ಯಕಲ್ಪನಾಪಾರ್ಥಾ ಜ್ಞಾನಂ ಚ ಪ್ರಕೃತೇರ್ಗುಣಃ ॥ ೧೧ ॥

ಪ್ರಕೃತಿರ್ಗುಣಸಾಮ್ಯಂ ವೈ ಪ್ರಕೃತೇರ್ನಾತ್ಮನೋ ಗುಣಾಃ ।
ಸತ್ತ್ವಂ ರಜಸ್ತಮ ಇತಿ ಸ್ಥಿತ್ಯುತ್ಪತ್ತ್ಯಂತಹೇತವಃ ॥ ೧೨ ॥

ಸತ್ತ್ವಂ ಜ್ಞಾನಂ ರಜಃ ಕರ್ಮ ತಮೋಽಜ್ಞಾನಮಿಹೋಚ್ಯತೇ ।
ಗುಣವ್ಯತಿಕರಃ ಕಾಲಃ ಸ್ವಭಾವಃ ಸೂತ್ರಮೇವ ಚ ॥ ೧೩ ॥

ಪುರುಷಃ ಪ್ರಕೃತಿರ್ವ್ಯಕ್ತಮಹಂಕಾರೋ ನಭೋಽನಿಲಃ ।
ಜ್ಯೋತಿರಾಪಃ ಕ್ಷಿತಿರಿತಿ ತತ್ತ್ವಾನ್ಯುಕ್ತಾನಿ ಮೇ ನವ ॥ ೧೪ ॥

ಶ್ರೋತ್ರಂ ತ್ವಗ್ದರ್ಶನಂ ಘ್ರಾಣೋ ಜಿಹ್ವೇತಿ ಜ್ಞಾನಶಕ್ತಯಃ ।
ವಾಕ್ಪಾಣ್ಯುಪಸ್ಥಪಾಯ್ವಂಘ್ರಿಃಕರ್ಮಾಣ್ಯಂಗೋಭಯಂ ಮನಃ ॥ ೧೫ ॥

ಒಂದೇ ಕಾರಣರೂಪೀ ತತ್ತ್ವದಲ್ಲಿ ಅಥವಾ ಕಾರ್ಯರೂಪೀ ತತ್ತ್ವದಲ್ಲಿ ಪೂರ್ಣವಾಗಿ ಬೇರೆ ತತ್ತ್ವವು ಬೆರೆತಂತೆ ಕಾಣುತ್ತದೆ. ॥ ೮ ॥ ಇವನ್ನು ಎಣಿಸಲು ಬಯಸುವವರು ಯಾವ ಕಾರ್ಯವನ್ನು ಯಾವ ಕಾರಣದಲ್ಲಿ ಅಥವಾ ಯಾವ ಕಾರಣವನ್ನು ಯಾವ ಕಾರ್ಯದಲ್ಲಿ ಅಂತರ್ಭೂತಗೈದು ತತ್ತ್ವಗಳ ಎಷ್ಟು ಸಂಖ್ಯೆ ಸ್ವೀಕರಿಸಲಾಗಿದೆಯೋ ಅವುಗಳ ಪ್ರತಿಪಾದನೆ ಯುಕ್ತಿಸಂಗತವಾದ ಕಾರಣ ಅವರು ಹೇಳುವುದೆಲ್ಲವನ್ನು ಸ್ವೀಕರಿಸುತ್ತಾರೆ. ಯುಕ್ತಿಯಿಂದ ಎಲ್ಲ ಮಾತುಗಳು ಸಿದ್ಧವಾಗುತ್ತವೆ. ಆದ್ದರಿಂದ ನಿಜವಾಗಿವೆ. ॥ ೯ ॥

ಉದ್ಧವನೇ! ಇಪ್ಪತ್ತಾರು ಸಂಖ್ಯೆಯನ್ನು ಸ್ವೀಕರಿಸಿದ ಜನರು ಹೀಗೆ ಹೇಳುತ್ತಾರೆ – ಜೀವಿಯು ಅನಾದಿಕಾಲದಿಂದ ಅವಿದ್ಯೆಯಿಂದ ಗ್ರಸ್ತನಾಗಿದ್ದಾನೆ. ಅವನು ಸ್ವಯಂ ತನ್ನನ್ನು ತಿಳಿಯಲಾರನು. ಅವನಿಗೆ ಆತ್ಮಜ್ಞಾನ ಮಾಡಿಸಲು ಬೇರೆ ಯಾರಾದರೂ ಸರ್ವಜ್ಞನ ಆವಶ್ಯಕತೆ ಇದೆ. (ಆದಕ್ಕಾಗಿ ಪ್ರಕೃತಿಯ ಕಾರ್ಯ ಕಾರಣರೂಪೀ ಇಪ್ಪತ್ತನಾಲ್ಕು ತತ್ತ್ವ, ಇಪ್ಪತ್ತೈದನೆಯ ಪುರುಷ ಮತ್ತು ಇಪ್ಪತ್ತಾರನೆಯ ಈಶ್ವರ – ಹೀಗೆ ಒಟ್ಟಿಗೆ ಇಪ್ಪತ್ತಾರು ತತ್ತ್ವಗಳನ್ನು ಸ್ವೀಕರಿಸಬೇಕು.) ॥ ೧೦ ॥ ಇಪ್ಪತ್ತೈದು ತತ್ತ್ವಗಳನ್ನು ಒಪ್ಪುವವರು ಹೇಳುತ್ತಾರೆ – ಈ ಶರೀರದಲ್ಲಿ ಜೀವ ಮತ್ತು ಈಶ್ವರನಲ್ಲಿ ಅಣುಮಾತ್ರವೂ ಭೇದವಿಲ್ಲ, ಆದ್ದರಿಂದ ಅವುಗಳಲ್ಲಿ ಭೇದದ ಕಲ್ಪನೆ ವ್ಯರ್ಥವಾಗಿದೆ. ಉಳಿಯಿತು ಜ್ಞಾನದ ಮಾತು, ಆ ಜ್ಞಾನ ಪ್ರಕೃತಿಯ ಗುಣವಾಗಿದೆ. (ಆದ್ದರಿಂದ ಅವರು ಜ್ಞಾನವನ್ನು ಬೇರೆಯಾಗಿ ಸ್ವೀಕರಿಸುವುದಿಲ್ಲ, ಈ ಪ್ರಕಾರ ೨೪ ಜಡ ತತ್ತ್ವಗಳು ಮತ್ತು ಒಂದು ಚೇತನ ಪುರುಷ ಸೇರಿ ೨೫ ತತ್ತ್ವಗಳಾದವು.) ॥ ೧೧ ॥ ಮೂರೂ ಗುಣಗಳ ಸಾಮ್ಯಾವಸ್ಥೆಯೇ ಪ್ರಕೃತಿಯ ಸ್ವರೂಪವಾಗಿದೆ. ಆದಕ್ಕಾಗಿ ಸತ್ತ್ವ, ರಜ ಮುಂತಾದ ಗುಣಗಳು ಆತ್ಮನದಲ್ಲ, ಪ್ರಕೃತಿಯದ್ದೇ ಆಗಿವೆ. ಇವುಗಳ ಮೂಲಕ ಜಗತ್ತಿನ ಸ್ಥಿತಿ, ಉತ್ಪತ್ತಿ, ಪ್ರಳಯ ಆಗುತ್ತಾ ಇರುತ್ತವೆ. ಆದಕ್ಕಾಗಿ ಜ್ಞಾನವು ಆತ್ಮನ ಗುಣವಲ್ಲ, ಪ್ರಕೃತಿಯದೇ ಗುಣವೆಂದು ಸಿದ್ಧವಾಗುತ್ತದೆ. ॥ ೧೨ ॥ ಈ ಪ್ರಸಂಗದಲ್ಲಿ ಸತ್ತ್ವಗುಣವೇ ಜ್ಞಾನವಾಗಿದೆ, ರಜೋಗುಣ ಕರ್ಮವಾಗಿದೆ, ತಮೋಗುಣವೇ ಅಜ್ಞಾನವೆಂದು ಹೇಳಲಾಗುತ್ತದೆ. ಗುಣಗಳಲ್ಲಿ ಕ್ಷೋಭೆಯನ್ನುಂಟುಮಾಡುವ ಈಶ್ವರನೇ ಕಾಲನಾಗಿದ್ದಾನೆ ಮತ್ತು ಸೂತ್ರ ಅರ್ಥಾತ್ ಮಹತ್ತತ್ತ್ವವೇ ಸ್ವಭಾವವಾಗಿದೆ. (ಆದಕ್ಕಾಗಿ ೨೫ ಮತ್ತು ೨೬ ತತ್ತ್ವಗಳ ಎರಡೂ ಸಂಖ್ಯೆಗಳು ಯುಕ್ತಿಸಂಗತವಾಗಿವೆ.) ॥ ೧೩ ॥

ಉದ್ಧವನೇ! ಪುರುಷ, ಪ್ರಕೃತಿ, ಮಹತ್ತತ್ತ್ವ, ಅಹಂಕಾರ, ಆಕಾಶ, ವಾಯು, ತೇಜ, ಜಲ, ಪೃಥ್ವಿ ಈ ಒಂಭತ್ತು ತತ್ತ್ವಗಳನ್ನು ನಾನು ಮೊದಲೇ ಎಣಿಸಿದ್ದೆ. ಶ್ರೋತ್ರ, ತ್ವಚಾ, ಚಕ್ಷು, ನಾಸಿಕಾ, ರಸನಾ ಈ ಐದು ಜ್ಞಾನೇಂದ್ರಿಯಗಳು, ವಾಕ್, ಪಾಣಿ, ಪಾದ, ಪಾಯು, ಉಪಸ್ಥ ಈ ಐದು ಕರ್ಮೇಂದ್ರಿಯಗಳು. ಮನಸ್ಸು ಇದು ಜ್ಞಾನೇಂದ್ರಿಯ, ಕರ್ಮೇಂದ್ರಿಯ ಎರಡೂ ಆಗಿದೆ. ಈ ಒಟ್ಟಿಗೆ ಹನ್ನೊಂದು ಇಂದ್ರಿಯಗಳು ಹಾಗೂ ಶಬ್ದ, ಸ್ಪರ್ಶ, ರೂಪ, ರಸ, ಗಂಧ ಇವು ಜ್ಞಾನೇಂದ್ರಿಯಗಳ ವಿಷಯಗಳು, ಈ ಪ್ರಕಾರ

ಶಬ್ದಃ ಸ್ಪರ್ಶೋ ರಸೋ ಗಂಧೋ ರೂಪಂ ಚೇತ್ಯರ್ಥಜಾತಯಃ ।
ಗತ್ಯುಕ್ತ್ಯುತ್ಸರ್ಗಶಿಲ್ಪಾನಿ ಕರ್ಮಾಯತನಸಿದ್ಧಯಃ ॥ ೧೬ ॥

ಸರ್ಗಾದೌ ಪ್ರಕೃತಿರ್ಹ್ಯಸ್ಯ ಕಾರ್ಯಕಾರಣರೂಪಿಣೀ ।
ಸತ್ತ್ವಾದಿಭಿರ್ಗುಣೈರ್ಧತ್ತೇ ಪುರುಷೋಽವ್ಯಕ್ತ ಈಕ್ಷತೇ ॥ ೧೭ ॥

ವ್ಯಕ್ತಾದಯೋ ವಿಕುರ್ವಾಣಾ ಧಾತವಃ ಪುರುಷೇಕ್ಷಯಾ ।
ಲಬ್ಧವೀರ್ಯಾಃ ಸೃಜಂತ್ಯಂಡಂ ಸಂಹತಾಃ ಪ್ರಕೃತೇರ್ಬಲಾತ್ ॥ ೧೮ ॥

ಸಪ್ತೈವ ಧಾತವ ಇತಿ ತತ್ರಾರ್ಥಾಃ ಪಂಚ ಖಾದಯಃ ।
ಜ್ಞಾನಮಾತ್ಮೋಭಯಾಧಾರಸ್ತತೋ ದೇಹೇಂದ್ರಿಯಾಸವಃ ॥ ೧೯ ॥

ಷಡಿತ್ಯತ್ರಾಪಿ ಭೂತಾನಿ ಪಂಚ ಷಷ್ಠಃ ಪರಃ ಪುಮಾನ್ ।
ತೈರ್ಯುಕ್ತ ಆತ್ಮಸಂಭೂತೈಃ ಸೃಷ್ಟ್ವೇದಂ ಸಮುಪಾವಿಶತ್ ॥ ೨೦ ॥

ಚತ್ವಾರ್ಯೇವೇತಿ ತತ್ರಾಪಿ ತೇಜ ಆಪೋಽನ್ನಮಾತ್ಮನಃ ।
ಜಾತಾನಿ ತೈರಿದಂ ಜಾತಂ ಜನ್ಮಾವಯವಿನಃ ಖಲು ॥ ೨೧ ॥

ಸಂಖ್ಯಾನೇ ಸಪ್ತದಶಕೇ ಭೂತಮಾತ್ರೇಂದ್ರಿಯಾಣಿ ಚ ।
ಪಂಚ ಪಂಚೈಕಮನಸಾ ಆತ್ಮಾ ಸಪ್ತದಶಃ ಸ್ಮೃತಃ ॥ ೨೨ ॥

ಮೂರು, ಒಂಭತ್ತು, ಹನ್ನೊಂದು, ಐದು ಎಲ್ಲ ಸೇರಿ ಇಪ್ಪತ್ತೆಂಟು ತತ್ತ್ವಗಳಾಗುತ್ತವೆ. ಕರ್ಮೇಂದ್ರಿಯಗಳ ಮೂಲಕ ನಡೆಯುವ ಕರ್ಮ – ನಡೆಯುವುದು, ಮಾತನಾಡುವುದು, ಮಲ-ಮೂತ್ರ ತ್ಯಜಿಸುವುದು, ಕೆಲಸಮಾಡುವುದು ಇವುಗಳಿಂದ ತತ್ತ್ವದ ಸಂಖ್ಯೆ ಬೆಳೆಯುವುದಿಲ್ಲ. ಇವನ್ನು ಕರ್ಮೇಂದ್ರಿಯ ಸ್ವರೂಪವೆಂದೇ ತಿಳಿಯಬೇಕು. ॥ ೧೪-೧೬ ॥ ಸೃಷ್ಟಿಯ ಪ್ರಾರಂಭದಲ್ಲಿ ಕಾರ್ಯ (ಹನ್ನೊಂದು ಇಂದ್ರಿಯ ಮತ್ತು ಪಂಚಭೂತಗಳು) ಮತ್ತು ಕಾರಣ (ಮಹತ್ತತ್ತ್ವಾದಿ)ದ ರೂಪದಲ್ಲಿ ಪ್ರಕೃತಿಯೇ ಇರುತ್ತದೆ. ಅದೇ ಪ್ರಕೃತಿಯು ಸತ್ತ್ವಗುಣ, ರಜೋಗುಣ, ತಮೋಗುಣಗಳ ಸಹಾಯದಿಂದ ಜಗತ್ತಿನ ಉತ್ಪತ್ತಿ, ಸ್ಥಿತಿ, ಸಂಹಾರ ಸಂಬಂಧೀ ಅವಸ್ಥೆಗಳನ್ನು ಧರಿಸುತ್ತದೆ. ಅವ್ಯಕ್ತ ಪುರುಷನಾದರೋ ಪ್ರಕೃತಿ ಹಾಗೂ ಅದರ ಅವಸ್ಥೆಗಳ ಕೇವಲ ಸಾಕ್ಷಿಮಾತ್ರ ಆಗಿರುತ್ತಾನೆ. ॥ ೧೭ ॥ ಮಹತ್ತತ್ತ್ವಾದಿ ಪ್ರಕೃತಿಯ ಎಷ್ಟು ವಿಕಾರಗಳು ಉಂಟಾಗುತ್ತವೋ ಅವು ಪುರುಷನ ವೀಕ್ಷಣದಿಂದ ಶಕ್ತಿಯನ್ನು ಪಡೆದುಕೊಂಡು ಪರಸ್ಪರ ಬೆರೆತುಹೋಗುತ್ತವೆ. ಬಳಿಕ ಪ್ರಕೃತಿಯ ಆಶ್ರಯ ಪಡೆದು ಅದರ ಬಲದಿಂದಲೇ ಬ್ರಹ್ಮಾಂಡದ ಸೃಷ್ಟಿಯಾಗುತ್ತದೆ. ಅರ್ಥಾತ್ – ಈಶ್ವರನ ವೀಕ್ಷಣದಿಂದಲೇ ಪ್ರಕೃತಿಯು ಎಲ್ಲ ಕಾರ್ಯಗಳನ್ನು ಮಾಡುತ್ತದೆ. ॥ ೧೮ ॥

ಎಲೈ ಉದ್ಧವನೇ! ತತ್ತ್ವಗಳ ಸಂಖ್ಯೆ ಏಳು ಎಂದು ಸ್ವೀಕರಿಸುವವರ ವಿಚಾರದಲ್ಲಿ ಆಕಾಶ, ವಾಯು, ತೇಜ, ಜಲ, ಪೃಥ್ವಿ ಈ ಐದು ಭೂತಗಳು, ಆರನೇಯದು ಜೀವ, ಏಳನೆಯದು ಪರಮಾತ್ಮಾ ಅದು ಸಾಕ್ಷೀ ಜೀವ ಮತ್ತು ಸಾಕ್ಷ್ಯ ಜಗತ್ತು ಎರಡರ ಅಧಿಷ್ಠಾನವಾಗಿದೆ. ಇವೇ ತತ್ತ್ವಗಳಾಗಿವೆ. ದೇಹ, ಇಂದ್ರಿಯ ಹಾಗೂ ಪ್ರಾಣಾದಿಗಳ ಉತ್ಪತ್ತಿಯಾದರೋ ಪಂಚ-ಭೂತಗಳಿಂದಲೇ ಆಗಿದೆ. (ಆದಕ್ಕಾಗಿ ಅವರು ಇವನ್ನು ಬೇರೆಯಾಗಿ ಎಣಿಸುವುದಿಲ್ಲ.) ॥ ೧೯ ॥ ಕೇವಲ ಆರು ತತ್ತ್ವಗಳನ್ನು ಸ್ವೀಕರಿಸುವವರು ಹೇಳುತ್ತಾರೆ – ಐದು ಭೂತಗಳು ಮತ್ತು ಆರನೆಯ ಪರಮ ಪುರುಷ ಪರಮಾತ್ಮನು. ಆ ಪರಮಾತ್ಮನು ತಾನು ರಚಿಸಿದ ಪಂಚಭೂತಗಳಿಂದ ಕೂಡಿಕೊಂಡು ದೇಹಾದಿಗಳನ್ನು ಸೃಷ್ಟಿಸುತ್ತಾನೆ ಹಾಗೂ ಅದರಲ್ಲಿ ಜೀವರೂಪದಿಂದ ಪ್ರವೇಶಿಸುತ್ತಾನೆ. (ಈ ಮತದನುಸಾರ ಜೀವಿಯು ಪರಮಾತ್ಮನಲ್ಲಿ, ಶರೀರಾದಿಗಳು ಪಂಚಭೂತಗಳಲ್ಲಿ ಸಮಾವೇಶವಾಗುತ್ತದೆ.) ॥ ೨೦ ॥ ಕಾರಣದ ರೂಪದಲ್ಲಿ ನಾಲ್ಕೇ ತತ್ತ್ವಗಳನ್ನೂ ಸ್ವೀಕರಿಸುವ ಜನರು ಹೇಳುತ್ತಾರೆ – ಆತ್ಮನಿಂದ ತೇಜ, ಜಲ ಮತ್ತು ಪೃಥ್ವಿಯ ಉತ್ಪತ್ತಿಯಾಯಿತು. ಜಗತ್ತಿನಲ್ಲಿರುವ ಎಲ್ಲ ಪದಾರ್ಥಗಳು ಇವುಗಳಿಂದಲೇ ಉತ್ಪನ್ನವಾಗುತ್ತವೆ. ಅವರು ಎಲ್ಲ ಕಾರ್ಯಗಳನ್ನು ಇವುಗಳಲ್ಲೇ ಸಮಾವೇಶ ಮಾಡಿಕೊಳ್ಳುವರು. ॥ ೨೧ ॥ ತತ್ತ್ವಗಳ ಸಂಖ್ಯೆ ಹದಿನೇಳು ಎಂದು ಹೇಳುವವರು ಈ ಪ್ರಕಾರ ಎಣಿಸುತ್ತಾರೆ – ಐದು ಭೂತಗಳು, ಐದು ತನ್ಮಾತ್ರೆಗಳು, ಐದು ಜ್ಞಾನೇಂದ್ರಿಯಗಳು, ಒಂದು ಮನಸ್ಸು, ಒಂದು ಆತ್ಮಾ ॥ ೨೨ ॥

ತದ್ವತ್ ಷೋಡಶಸಂಖ್ಯಾನೇ ಆತ್ಮೈವ ಮನ ಉಚ್ಯತೇ ।
ಭೂತೇಂದ್ರಿಯಾಣಿ ಪಂಚೈವ ಮನ ಆತ್ಮಾ ತ್ರಯೋದಶ ॥ ೨೩ ॥

ಏಕಾದಶತ್ವ ಆತ್ಮಾಸೌ ಮಹಾಭೂತೇಂದ್ರಿಯಾಣಿ ಚ ।
ಅಷ್ಟೌ ಪ್ರಕೃತಯಶ್ಚೈವ ಪುರುಷಶ್ಚ ನವೇತ್ಯಥ ॥ ೨೪ ॥

ಇತಿ ನಾನಾಪ್ರಸಂಖ್ಯಾನಂ ತತ್ತ್ವಾನಾಮೃಷಿಭಿಃ ಕೃತಮ್ ।
ಸರ್ವಂ ನ್ಯಾಯ್ಯಂ ಯುಕ್ತಿಮತ್ತ್ವಾದ್ವಿದುಷಾಂ ಕಿಮಶೋಭನಮ್ ॥ ೨೫ ॥

ಉದ್ಧವ ಉವಾಚ

ಪ್ರಕೃತಿಃ ಪುರುಷಶ್ಚೋಭೌ ಯದ್ಯಪ್ಯಾತ್ಮವಿಲಕ್ಷಣೌ ।
ಅನ್ಯೋನ್ಯಾಪಾಶ್ರಯಾತ್ ಕೃಷ್ಣ ದೃಶ್ಯತೇ ನ ಭಿದಾ ತಯೋಃ ॥ ೨೬ ॥

ಪ್ರಕೃತೌ ಲಕ್ಷ್ಯತೇ ಹ್ಯಾತ್ಮಾ ಪ್ರಕೃತಿಶ್ಚ ತಥಾಽಽತ್ಮನಿ ।
ಏವಂ ಮೇ ಪುಂಡರೀಕಾಕ್ಷ ಮಹಾಂತಂ ಸಂಶಯಂ ಹೃದಿ ।
ಛೇತ್ತುಮರ್ಹಸಿ ಸರ್ವಜ್ಞ ವಚೋಭಿರ್ನಯನೈಪುಣ್ಯೈಃ ॥ ೨೭ ॥

ತ್ವತ್ತೋ ಜ್ಞಾನಂ ಹಿ ಜೀವಾನಾಂ ಪ್ರಮೋಷಸ್ತೇಽತ್ರ ಶಕ್ತಿತಃ ।
ತ್ವಮೇವ ಹ್ಯಾತ್ಮಮಾಯಾಯಾ ಗತಿಂ ವೇತ್ಥ ನ ಚಾಪರಃ ॥ ೨೮ ॥

ಶ್ರೀಭಗವಾನುವಾಚ

ಪ್ರಕೃತಿಃ ಪುರುಷಶ್ಚೇತಿ ವಿಕಲ್ಪಃ ಪುರುಷರ್ಷಭ ।
ಏಷ ವೈಕಾರಿಕಃ ಸರ್ಗೋ ಗುಣವ್ಯತಿಕರಾತ್ಮಕಃ ॥ ೨೯ ॥

ಮಮಾಂಗ ಮಾಯಾ ಗುಣಮಯ್ಯನೇಕಧಾ
ವಿಕಲ್ಪಬುದ್ಧೀಶ್ಚ ಗುಣೈರ್ವಿಧತ್ತೇ ।
ವೈಕಾರಿಕಸ್ತ್ರಿವಿಧೋಽಧ್ಯಾತ್ಮಮೇಕ-
ಮಥಾಧಿದೈವಮಧಿಭೂತಮನ್ಯತ್ ॥ ೩೦ ॥

ತತ್ತ್ವಗಳ ಸಂಖ್ಯೆ ಹದಿನಾರು ಎಂದು ಹೇಳುವವರ ಗಣನೆಯೂ ಇದೇ ಪ್ರಕಾರವಾಗಿದೆ. ಆತ್ಮನಲ್ಲೇ ಮನಸ್ಸನ್ನೂ ಸಮಾವೇಶಮಾಡುತ್ತಾರೆ, ಅಂತರ ಇಷ್ಟೇ ಆಗಿದೆ. ಹೀಗೆ ಅವರ ತತ್ತ್ವಸಂಖ್ಯೆಯು ಹದಿನಾರೇ ಉಳಿಯುತ್ತದೆ. ಹದಿಮೂರು ತತ್ತ್ವವನ್ನು ಒಪ್ಪಿಕೊಳ್ಳುವವರು ಹೇಳುತ್ತಾರೆ – ಆಕಾಶಾದಿ ಪಂಚಭೂತಗಳು, ಶ್ರೋತ್ರಾದಿ ಐದು ಜ್ಞಾನೇಂದ್ರಿಯಗಳು, ಒಂದು ಮನಸ್ಸು, ಒಂದು ಜೀವಾತ್ಮಾ ಮತ್ತು ಪರಮಾತ್ಮಾ – ಹೀಗೆ ಹದಿಮೂರು ತತ್ತ್ವಗಳು. ॥ ೨೩ ॥ ಹನ್ನೊಂದು ತತ್ತ್ವಗಳನ್ನು ಒಪ್ಪುವವರು ಐದು ಭೂತಗಳು, ಐದು ಜ್ಞಾನೇಂದ್ರಿಯಗಳು ಹಾಗೂ ಇವಲ್ಲದೆ ಒಂದು ಆತ್ಮನ ಅಸ್ತಿತ್ವವನ್ನು ಸ್ವೀಕರಿಸಿರುವರು. ಒಂಭತ್ತು ತತ್ತ್ವಗಳನ್ನು ಒಪ್ಪುವವರು ಆಕಾಶಾದಿ ಪಂಚಭೂತಗಳು, ಮನ, ಬುದ್ಧಿ, ಅಹಂಕಾರ ಈ ಎಂಟು ಪ್ರಕೃತಿಗಳು ಮತ್ತು ಒಂಭತ್ತನೆಯ ಪುರುಷ ಇವುಗಳನ್ನು ತತ್ತ್ವಗಳೆಂದು ತಿಳಿಯುವರು. ॥ ೨೪ ॥ ಉದ್ಧವನೇ! ಈ ಪ್ರಕಾರ ಋಷಿ-ಮುನಿಗಳು ಬೇರೆ-ಬೇರೆ ರೀತಿಯಿಂದ ತತ್ತ್ವಗಳನ್ನು ಎಣಿಸಿರುವರು. ಎಲ್ಲರೂ ಹೇಳುವುದೂ ಉಚಿತವೇ ಆಗಿದೆ. ಏಕೆಂದರೆ, ಎಲ್ಲರ ಸಂಖ್ಯೆಯು ಯುಕ್ತಿಯುಕ್ತವೇ ಆಗಿದೆ. ತತ್ತ್ವಜ್ಞಾನಿಗಳಾದ ಜನರಿಗೆ ಯಾವುದೇ ಮತದಲ್ಲಿ ಕೆಟ್ಟದು ಕಾಣುವುದಿಲ್ಲ, ಅವರಿಗಾದರೋ ಎಲ್ಲವೂ ಸರಿಯಾಗಿಯೇ ಇದೆ.॥ ೨೫॥

ಉದ್ಧವನು ಕೇಳಿದನು – ಶ್ಯಾಮಸುಂದರಾ! ಸ್ವರೂಪತಃ ಪ್ರಕೃತಿ ಮತ್ತು ಪುರುಷರಿಬ್ಬರೂ ಒಂದು ಮತ್ತೊಂದರಲ್ಲಿ ಸರ್ವಥಾ ಭಿನ್ನವಾಗಿದ್ದರೂ, ಅವುಗಳ ಭೇದವು ಸಾಧಾರಣವಾಗಿ ತಿಳಿಯದಷ್ಟು ಪರಸ್ಪರ ಸೇರಿಕೊಂಡಿದೆ. ಪ್ರಕೃತಿಯಲ್ಲಿ ಪುರುಷ ಮತ್ತು ಪುರುಷನಲ್ಲಿ ಪ್ರಕೃತಿ ಅಭಿನ್ನವಂತೆ ಕಂಡುಬರುತ್ತದೆ. ಇವುಗಳ ಭಿನ್ನತೆ ಹೇಗೆ ಸ್ಪಷ್ಟವಾದೀತು ? ॥ ೨೬ ॥ ಕಮಲನಯನ ಶ್ರೀಕೃಷ್ಣಾ! ಹೀಗೆ ನನ್ನ ಹೃದಯದಲ್ಲಿ ಇವುಗಳ ಭಿನ್ನತೆ ಮತ್ತು ಅಭಿನ್ನತೆಯ ಕುರಿತು ಬಹಳ ದೊಡ್ಡ ಸಂದೇಹವಿದೆ. ನೀನಾದರೋ ಸರ್ವಜ್ಞನಾಗಿರುವೆ. ನಿನ್ನ ಯುಕ್ತಿಯುಕ್ತ ವಾಣಿಯಿಂದ ನನ್ನ ಸಂದೇಹವನ್ನೂ ನಿವಾರಿಸುವವನಾಗು. ॥ ೨೭ ॥ ಓ ಭಗವಂತಾ! ನಿನ್ನ ಕೃಪೆಯಿಂದಲೇ ನಿನ್ನ ವಿದ್ಯಾಶಕ್ತಿಯ ಮೂಲಕ ಜೀವಿಗಳಿಗೆ ಜ್ಞಾನ ಉಂಟಾಗುತ್ತದೆ. ನಿನ್ನದೇ ಅವಿದ್ಯಾಶಕ್ತಿಯಿಂದ ಅವರ ಜ್ಞಾನದ ಲೋಪವಾಗುತ್ತದೆ. ನಿನ್ನ ಆತ್ಮಸ್ವರೂಪಿಣೀ ಮಾಯೆಯ ವಿಚಿತ್ರಗತಿಯನ್ನು ನೀನೇ ತಿಳಿಯುತ್ತಿರುವೆ. ಬೇರೆ ಯಾರೂ ಅರಿಯರು. ಆದ್ದರಿಂದ ನೀನೇ ನನ್ನ ಸಂದೇಹವನ್ನು ಇಲ್ಲವಾಗಿಸಲು ಸಮರ್ಥನಾಗಿರುವೆ. ॥ ೨೮ ॥

ಭಗವಾನ್ ಶ್ರೀಕೃಷ್ಣನು ಹೇಳಿದನು – ಉದ್ಧವನೇ! ಪ್ರಕೃತಿ ಮತ್ತು ಪುರುಷ ಅರ್ಥಾತ್ ಶರೀರ ಹಾಗೂ ಆತ್ಮಾ – ಇವೆರಡರಲ್ಲಿ ಅತ್ಯಂತ ಭೇದವಿದೆ. ಈ ಸೃಷ್ಟಿಯೂ ವಿಕಾರಗಳಿಂದ ಕೂಡಿದೆ. ಗುಣಗಳ ಕ್ಷೋಭೆಯಿಂದಲೇ ಸೃಷ್ಟಿಯು ಉತ್ಪನ್ನವಾಗುತ್ತದೆ. ॥ ೨೯ ॥ ಪ್ರಿಯ ಮಿತ್ರನೇ! ನನ್ನ ಮಾಯೆಯು ತ್ರಿಗುಣಾತ್ಮಿಕವಾಗಿದೆ. ಅದೇ ತನ್ನ ಸತ್ತ್ವ, ರಜ ಮುಂತಾದ ಗುಣಗಳಿಂದ ಅನೇಕ ಪ್ರಕಾರದ ಭೇದ ವೃತ್ತಿಗಳನ್ನು ಉಂಟುಮಾಡುತ್ತದೆ. ಇದರ ವಿಸ್ತಾರ ಅಸೀಮವಾಗಿದ್ದರೂ ಕೂಡ ಈ ವಿಕಾರಾತ್ಮಕವಾದ ಸೃಷ್ಟಿಯನ್ನು ಮೂರು ಭಾಗವಾಗಿ ಹಂಚಬಹುದು. ಅಧ್ಯಾತ್ಮ, ಅಧಿದೈವ, ಅಧಿಭೂತ – ಇವೇ ಆ ಮೂರು ಭಾಗಗಳಾಗಿವೆ. ॥ ೩೦ ॥

ದೃಗ್ರೂಪಮಾರ್ಕಂ ವಪುರತ್ರ ರಂಧ್ರೇ
ಪರಸ್ಪರಂ ಸಿಧ್ಯತಿ ಯಃ ಸ್ವತಃ ಖೇ ।
ಆತ್ಮಾ ಯದೇಷಾಮಪರೋ ಯ ಆದ್ಯಃ
ಸ್ವಯಾನುಭೂತ್ಯಾಖಿಲಸಿದ್ಧಸಿದ್ಧಿಃ
ಏವಂ ತ್ವಗಾದಿ ಶ್ರವಣಾದಿ ಚಕ್ಷು-
ರ್ಜಿಹ್ವಾದಿ ನಾಸಾದಿ ಚ ಚಿತ್ತಯುಕ್ತಮ್ ॥ ೩೧ ॥

ಉದಾಹರಣೆಗಾಗಿ – ನೇತ್ರೇಂದ್ರಿಯ ಅಧ್ಯಾತ್ಮವಾಗಿದೆ, ಅದರ ವಿಷಯರೂಪವು ಅಧಿಭೂತವಾಗಿದೆ. ನೇತ್ರಗೋಲಕದಲ್ಲಿ ಸ್ಥಿತ ಸೂರ್ಯದೇವತೆಯ ಅಂಶ ಅಧಿದೈವವಾಗಿದೆ. ಇವು ಮೂರೂ ಪರಸ್ಪರ ಒಂದು ಇನ್ನೊಂದರ ಆಶ್ರಯದಿಂದ ಸಿದ್ಧವಾಗುತ್ತವೆ. ಆದಕ್ಕಾಗಿ ಅಧ್ಯಾತ್ಮ, ಅಧಿದೈವ, ಅಧಿಭೂತ ಇವು ಮೂರೂ ಪರಸ್ಪರ ಒಂದು ಮತ್ತೊಂದರಿಂದ ಸಹಾಯ ಬಯಸುತ್ತವೆ. ಆದರೆ ಆಕಾಶದಲ್ಲಿರುವ ಸೂರ್ಯಮಂಡಲ ಇವು ಮೂರರಿಂದಲೂ ಮುಕ್ತವಾಗಿದೆ. ಏಕೆಂದರೆ ಅದು ಸ್ವತಃಸಿದ್ಧವಾಗಿದೆ. ಹೀಗೆಯೇ ಆತ್ಮನು ಮೇಲೆ ಹೇಳಿದ ಮೂರೂ ಭೇದಗಳ ಮೂಲಕಾರಣ, ಅವುಗಳ ಸಾಕ್ಷಿ ಮತ್ತು ಅವುಗಳಿಂದ ಅತೀತನಾಗಿದ್ದಾನೆ. ಅವನೇ ತನ್ನ ಸ್ವಯಂಸಿದ್ಧ ಪ್ರಕಾಶದಿಂದ ಸಮಸ್ತ ಪದಾರ್ಥಗಳನ್ನು ಸಿದ್ಧಪಡಿಸುತ್ತಾನೆ. ಅವನಿಂದಲೇ ಎಲ್ಲರ ಪ್ರಕಾಶವಾಗುತ್ತದೆ. ಅವನ ಅಸ್ತಿತ್ವದಿಂದಲೇ ಬೇರೆಯದಕ್ಕೆ ಅಸ್ತಿತ್ವವಿದೆ. ಹೇಗೆ ಚಕ್ಷುವಿನ ಮೂರು ಭೇದಗಳು ತಿಳಿಸಲಾಗಿದೆಯೋ, ಹಾಗೆಯೇ ತ್ವಚಾ, ಶ್ರೋತ್ರ, ಜಿಹ್ವೆ, ನಾಸಿಕಾ ಮತ್ತು ಚಿತ್ತ ಇವುಗಳದ್ದೂ ಮೂರು-ಮೂರು ಭೇದಗಳಿವೆ. * ॥ ೩೧ ॥

ಯೋಽಸೌ ಗುಣಕ್ಷೋಭಕೃತೋ ವಿಕಾರಃ
ಪ್ರಧಾನಮೂಲಾನ್ಮಹತಃ ಪ್ರಸೂತಃ ।
ಅಹಂ ತ್ರಿವೃನ್ಮೋಹವಿಕಲ್ಪಹೇತು-
ರ್ವೈಕಾರಿಕಸ್ತಾಮಸ ಐಂದ್ರಿಯಶ್ಚ ॥ ೩೨ ॥

ಪ್ರಕೃತಿಯಿಂದ ಮಹತ್ತತ್ತ್ವ ಉಂಟಾಗುತ್ತದೆ ಮತ್ತು ಮಹತ್ತತ್ತ್ವದಿಂದ ಅಹಂಕಾರ ಉಂಟಾಗುತ್ತದೆ. ಈ ಪ್ರಕಾರ ಈ ಅಹಂಕಾರವು ಗುಣಗಳ ಕ್ಷೋಭದಿಂದ ಉಂಟಾಗಿದ್ದ ಪ್ರಕೃತಿಯ ಒಂದು ವಿಕಾರವಾಗಿದೆ. ಅಹಂಕಾರದ ಮೂರು ಭೇದಗಳಿವೆ – (೧) ವೈಕಾರಿಕ-ಸತ್ತ್ವಗುಣ ವಿಶಿಷ್ಟ ಮನ ಹಾಗೂ ಇಂದ್ರಿಯಗಳ ದೇವತೆಗಳು, (೨) ತೈಜಸ ಹತ್ತು ಇಂದ್ರಿಯಗಳು, (೩) ತಾಮಸ-ಪಂಚಮಹಾಭೂತ ಹಾಗೂ ಐದು ಅವುಗಳ ವಿಷಯಗಳು. ಹೀಗೆ ಈ ಅಹಂಕಾರವೇ ಅಜ್ಞಾನ ಮತ್ತು ಸೃಷ್ಟಿಯ ವಿವಿಧತೆಯ ಮೂಲಕಾರಣವಾಗಿದೆ. ॥ ೩೨ ॥

ಆತ್ಮಾಪರಿಜ್ಞಾನಮಯೋ ವಿವಾದೋ
ಹ್ಯಸ್ತೀತಿ ನಾಸ್ತೀತಿ ಭಿದಾರ್ಥನಿಷ್ಠಃ ।
ವ್ಯರ್ಥೋಽಪಿ ನೈವೋಪರಮೇತ ಪುಂಸಾಂ
ಮತ್ತಃ ಪರಾವೃತ್ತಧಿಯಾಂ ಸ್ವಲೋಕಾತ್ ॥ ೩೩ ॥

ಆತ್ಮನು ಜ್ಞಾನಸ್ವರೂಪನಾಗಿದ್ದಾನೆ; ಅವನಿಗೆ ಈ ಪದಾರ್ಥಗಳೊಂದಿಗೆ ಯಾವ ಸಂಬಂಧವೂ ಇಲ್ಲ. ಅಸ್ತಿ (ಇದೆ) ನಾಸ್ತಿ (ಇಲ್ಲ) ಸುಗುಣ, ನಿರ್ಗುಣ, ಭಾವ-ಅಭಾವ, ಸತ್ಯ-ಮಿಥ್ಯಾ ಇವೆಲ್ಲವೂ ಭೇದದೃಷ್ಟಿಯೇ ಆಗಿದೆ. ಇದು ಸರ್ವಥಾ ವ್ಯರ್ಥವಾಗಿದೆ. ಜ್ಞಾನಸ್ವರೂಪೀ ಪರಮಾತ್ಮನಾದ ನನ್ನಿಂದ ವಿಮುಖರಾದ ಜನರು ಈ ವಿವಾದದಿಂದ ಮುಕ್ತರಾಗಲಾರರು. ॥ ೩೩ ॥

ಉದ್ಧವ ಉವಾಚ

ತ್ವತ್ತಃ ಪರಾವೃತ್ತಧಿಯಃ ಸ್ವಕೃತೈಃ ಕರ್ಮಭಿಃ ಪ್ರಭೋ ।
ಉಚ್ಚಾವಚಾನ್ಯಥಾ ದೇಹಾನ್ ಗೃಹ್ಣಂತಿ ವಿಸೃಜಂತಿ ಚ ॥ ೩೪ ॥

ಉದ್ಧವನು ಕೇಳಿದನು – ಭಗವಂತಾ! ನಿನ್ನಿಂದ ವಿಮುಖರಾದ ಜೀವಿಗಳು ತಾವು ಮಾಡಿದ ಪಾಪ-ಪುಣ್ಯಗಳ ಫಲವಾಗಿ ಉಚ್ಚ-ನೀಚ ಯೋನಿಗಳಲ್ಲಿ ಹುಟ್ಟುತ್ತಾ-ಸಾಯುತ್ತಾ ಇರುತ್ತಾರೆ. ಈಗ ಪ್ರಶ್ನೆಯೆಂದರೆ – ವ್ಯಾಪಕ ಆತ್ಮನು ಒಂದು ಶರೀರದಿಂದ ಇನ್ನೊಂದು ಶರೀರಕ್ಕೆ ಹೋಗುವುದು, ಅಕರ್ತನು ಕರ್ಮ ಮಾಡುವುದು, ನಿತ್ಯವಸ್ತುವಿಗೆ ಜನ್ಮ-ಮರಣವಾಗುವುದು, ಇದು ಹೇಗೆ ಸಂಭವಿಸುತ್ತದೆ? ॥ ೩೪ ॥

* ಹೇಗೆಂದರೆ – ತ್ವಚಾ, ಸ್ಪರ್ಶ, ವಾಯು; ಶ್ರವಣ, ಶಬ್ದ, ದಿಕ್ಕುಗಳು; ಜಿಹ್ವೆ, ರಸ, ವರುಣ; ನಾಸಿಕಾ, ಗಂಧ, ಅಶ್ವಿನೀಕುಮಾರರು; ಚಿತ್ತ, ಚಿತ್ತದ ವಿಷಯ, ವಾಸುದೇವ; ಮನಸ್ಸು, ಮನಸ್ಸಿನ ವಿಷಯ, ಚಂದ್ರ; ಅಹಂಕಾರ, ಅಹಂಕಾರದ ವಿಷಯ, ರುದ್ರ; ಬುದ್ಧಿ, ತಿಳಿಯುವ ವಿಷಯ, ಬ್ರಹ್ಮಾ; ಇವೆಲ್ಲ ತ್ರಿವಿಧ ತತ್ತ್ವಗಳಿಂದ ಆತ್ಮನಿಗೆ ಯಾವ ಸಂಬಂಧವೂ ಇಲ್ಲ.

ತನ್ಮಮಾಖ್ಯಾಹಿ ಗೋವಿಂದ ದುರ್ವಿಭಾವ್ಯಮನಾತ್ಮಭಿಃ ।
ನ ಹ್ಯೇತತ್ ಪ್ರಾಯಶೋ ಲೋಕೇ ವಿದ್ವಾಂಸಃ ಸಂತಿ ವಂಚಿತಾಃ
॥ ೩೫ ॥

ಗೋವಿಂದಾ! ಆತ್ಮಜ್ಞಾನ ರಹಿತರಾದವರು ಈ ವಿಷಯವನ್ನು ಸರಿಯಾಗಿ ಯೋಚಿಸಲಾರರು ಮತ್ತು ಈ ವಿಷಯ ತಿಳಿದ ವಿದ್ವಾಂಸರು ಪ್ರಪಂಚದಲ್ಲಿ ಪ್ರಾಯಶಃ ಸಿಗುವುದಿಲ್ಲ, ಏಕೆಂದರೆ, ಎಲ್ಲ ಜನರು ನಿನ್ನ ಮಾಯೆಯಿಂದ ಭ್ರಾಂತಿಯಲ್ಲಿ ಬಿದ್ದಿರುವವರು. ಅದಕ್ಕಾಗಿ ನೀನೇ ದಯಮಾಡಿ ಈ ರಹಸ್ಯವನ್ನು ನನಗೆ ತಿಳಿಸು. ॥ ೩೫ ॥

ಶ್ರೀಭಗವಾನುವಾಚ

ಮನಃ ಕರ್ಮಮಯಂ ನೃಣಾಮ್-
ಇಂದ್ರಿಯೈಃ ಪಂಚಭಿರ್ಯುತಮ್ ।
ಲೋಕಾಲ್ಲೋಕಂ ಪ್ರಯಾತ್ಯನ್ಯ
ಆತ್ಮಾ ತದನುವರ್ತತೇ ॥ ೩೬ ॥

ಭಗವಾನ್ ಶ್ರೀಕೃಷ್ಣನು ಹೇಳಿದನು – ಪ್ರಿಯ ಉದ್ಧವನೇ! ಮನುಷ್ಯರ ಮನಸ್ಸು ಕರ್ಮ-ಸಂಸ್ಕಾರಗಳ ಪುಂಜವಾಗಿದೆ. ಆ ಸಂಸ್ಕಾರಗಳನುಸಾರ ಭೋಗಗಳನ್ನು ಪಡೆಯಲು ಅದರ ಜೊತೆ ಐದು ಇಂದ್ರಿಯಗಳೂ ತೊಡಗಿವೆ. ಇದರ ಹೆಸರೇ ಲಿಂಗ ಶರೀರ. ಅದೇ ಕರ್ಮಗಳನುಸಾರ ಒಂದು ಶರೀರದಿಂದ ಮತ್ತೊಂದು ಶರೀರದಲ್ಲಿ, ಒಂದು ಲೋಕದಿಂದ ಇನ್ನೊಂದು ಲೋಕಕ್ಕೆ ಹೋಗುತ್ತಾ-ಬರುತ್ತಾ ಇರುತ್ತದೆ. ಆತ್ಮನು ಈ ಲಿಂಗಶರೀರದಿಂದ ಸರ್ವಥಾ ಬೇರೆಯಾಗಿದ್ದಾನೆ. ಆತ್ಮನು ಸರ್ವವ್ಯಾಪಿಯಾಗಿದ್ದಾನೆ. ಆದ್ದರಿಂದ ಅವನ ಗಮನಾಗಮನ ಆಗುವುದಿಲ್ಲ. ಆದರೆ ಅವನು ತನ್ನನ್ನು ಲಿಂಗಶರೀರವೆಂದೇ ತಿಳಿದಾಗ, ಅದರಲ್ಲೇ ಅಹಂಕಾರಪಟ್ಟಾಗ, ಅವನೂ ಕೂಡ ಬಂದು-ಹೋದಂತೆ ಕಂಡುಬರತೊಡಗುತ್ತಾನೆ. ॥ ೩೬ ॥

ಧ್ಯಾಯನ್ಮನೋಽನು ವಿಷಯಾನ್ ದೃಷ್ಟಾನ್ ವಾನುಶ್ರುತಾನಥ ।
ಉದ್ಯತ್ಸೀದತ್ಕರ್ಮತಂತ್ರಂ ಸ್ಮೃತಿಸ್ತದನು ಶಾಮ್ಯತಿ
॥ ೩೭ ॥

ಮನಸ್ಸು ಕರ್ಮಗಳ ಅಧೀನವಾಗಿದೆ. ಅದು ಈ ಲೋಕ ಅಥವಾ ಪರಲೋಕ ಸಂಬಂಧೀ ವಿಷಯಗಳನ್ನು ಸತತ ಚಿಂತಿಸುತ್ತಾ ಇರುತ್ತದೆ. ಹೊಸ ವಿಷಯ ಬಂದಾಗ ಮೊದಲಿನದನ್ನು ಮರೆಯುತ್ತಾ ಹೋಗುತ್ತದೆ ಹಾಗೂ ಹೊಸದರಲ್ಲಿ ತೊಡಗುತ್ತದೆ. ಹೀಗೆ ಹಿಂದಿನ ವಿಷಯಗಳ ಸ್ಮೃತಿಯೂ ಕೂಡ ಶಾಂತವಾಗುತ್ತಾ ಇರುತ್ತದೆ. ॥ ೩೭ ॥

ವಿಷಯಾಭಿನಿವೇಶೇನ ನಾತ್ಮಾನಂ ಯತ್ಸ್ಮರೇತ್ ಪುನಃ ।
ಜಂತೋರ್ವೈ ಕಸ್ಯಚಿದ್ಧೇತೋರ್ಮೃತ್ಯುರತ್ಯಂತವಿಸ್ಮೃತಿಃ
॥ ೩೮ ॥

ಹೀಗೆಯೇ ಹೊಸ-ಹೊಸ ವಿಷಯಗಳಲ್ಲಿ ಆಸಕ್ತಿಯನ್ನಿಡುತ್ತಾ, ಅದರಿಂದ ಹಿಂದಿನದನ್ನು ಮರೆಯುತ್ತಾ, ಹೊಸ-ಹೊಸದರ ಚಿಂತನೆ ನಡೆಯುತ್ತದೆ. ಹೀಗೆಯೇ ಯಾವುದೇ ಕಾರಣದಿಂದ ಮನುಷ್ಯನಿಗೆ ತನ್ನ ಹಿಂದಿನ ಶರೀರದ ಸ್ಮರಣೆ ಏನೂ ಉಳಿಯುವುದಿಲ್ಲ, ತನ್ನ ಹಿಂದಿನ ಶರೀರದ ಕುರಿತು ಪೂರ್ಣವಾಗಿ ವಿಸ್ಮೃತಿ ಉಂಟಾಗುತ್ತದೆ. ಇದೇ ಅವನ ಮೃತ್ಯುವಾಗಿದೆ. ॥ ೩೮ ॥

ಜನ್ಮ ತ್ವಾತ್ಮತಯಾ ಪುಂಸಃ ಸರ್ವಭಾವೇನ ಭೂರಿದ ।
ವಿಷಯಸ್ವೀಕೃತಿಂ ಪ್ರಾಹುರ್ಯಥಾ ಸ್ವಪ್ನಮನೋರಥಃ
॥ ೩೯ ॥

ಉದಾರನಾದ ಉದ್ಧವನೇ! ಮನುಷ್ಯನು ಈ ದೇಹವೇ ನಾನಾಗಿದ್ದೇನೆ, ಇದು ನನ್ನದಾಗಿದೆ, ಹೀಗೆ ತಿಳಿದುಕೊಂಡು ಹೊಸ ಶರೀರವನ್ನು ಸ್ವೀಕರಿಸುವುದೇ ಅವನ ಜನ್ಮವಾಗಿದೆ. ಈ ಹೊಸ ಶರೀರವನ್ನು ಸ್ವೀಕರಿಸಿ, ಸ್ವಪ್ನದಲ್ಲಿ ಮನೋರಥಗಳನ್ನು ಮಾಡುತ್ತಾ-ಮಾಡುತ್ತಾ ಕೆಲವೊಮ್ಮೆ ಸುಖಿಯಾಗುತ್ತದೆ, ಕೆಲವೊಮ್ಮೆ ದುಃಖಿಯಾಗುತ್ತದೆ. ಹೀಗೆಯೇ ಈ ಶರೀರದಲ್ಲಿ ಅವನು ಸುಖೀ-ದುಃಖೀ ಆಗುತ್ತಾ ಇರುತ್ತಾನೆ. ॥ ೩೯ ॥

ಸ್ವಪ್ನಂ ಮನೋರಥಂ ಚೇತ್ಥಂ ಪ್ರಾಕ್ತನಂ ನ ಸ್ಮರತ್ಯಸೌ ।
ತತ್ರ ಪೂರ್ವಮಿವಾತ್ಮಾನಮಪೂರ್ವಂ ಚಾನುಪಶ್ಯತಿ
॥ ೪೦ ॥

ಸ್ವಪ್ನದಲ್ಲಿ ಹೊಸ-ಹೊಸ ಮನೋರಥಗಳು ಬರುವಂತೆ ಜೀವಿಯೂ ಕೂಡ ಪದೇ-ಪದೇ ಹುಟ್ಟುತ್ತಾ ಸಾಯುತ್ತಾ ಇರುತ್ತಾನೆ. ಇದೂ ಕೂಡ ಸ್ವಪ್ನದಂತೆ ಮಿಥ್ಯೆಯೇ ಆಗಿದೆ. ಆದರೂ ಹೊಸ ಶರೀರವನ್ನು ಸ್ವೀಕರಿಸುವುದರಿಂದ ನಾನು ಮೊದಲು ಇರಲಿಲ್ಲ, ಈಗ ಹೊಸದಾಗಿಯೇ ಹುಟ್ಟಿರುವೆನು ಎಂದು ಅವನು ತಿಳಿಯುತ್ತಾನೆ. ಅವನು ತನ್ನ ಹಿಂದಿನ ಶರೀರವನ್ನು ಪೂರ್ಣವಾಗಿ ಮರೆತುಹೋಗುತ್ತಾನೆ. ॥ ೪೦ ॥

ಇಂದ್ರಿಯಾಯನಸೃಷ್ಟೇದಂ ತ್ರೈವಿಧ್ಯಂ ಭಾತಿ ವಸ್ತುನಿ ।
ಬಹಿರಂತರ್ಭಿದಾಹೇತುರ್ಜನೋಽಸಜ್ಜನಕೃದ್ಯಥಾ ॥ ೪೧ ॥

ನಿತ್ಯದಾ ಹ್ಯಂಗ ಭೂತಾನಿ ಭವಂತಿ ನ ಭವಂತಿ ಚ ।
ಕಾಲೇನಾಲಕ್ಷ್ಯವೇಗೇನ ಸೂಕ್ಷ್ಮತ್ವಾತ್ತನ್ನ ದೃಶ್ಯತೇ ॥ ೪೨ ॥

ಯಥಾರ್ಚಿಷಾಂ ಸ್ರೋತಸಾಂ ಚ ಫಲಾನಾಂ ವಾ ವನಸ್ಪತೇಃ ।
ತಥೈವ ಸರ್ವಭೂತಾನಾಂ ವಯೋಽವಸ್ಥಾದಯಃ ಕೃತಾಃ ॥ ೪೩ ॥

ಸೋಽಯಂ ದೀಪೋಽರ್ಚಿಷಾಂ ಯದ್ವತ್ಸ್ರೋತಸಾಂ ತದಿದಂ ಜಲಮ್ ।
ಸೋಽಯಂ ಪುಮಾನಿತಿ ನೃಣಾಂ ಮೃಷಾಗೀರ್ಧೀರ್ಮೃಷಾಯುಷಾಮ್ ॥ ೪೪ ॥

ಮಾ ಸ್ವಸ್ಯ ಕರ್ಮಬೀಜೇನ ಜಾಯತೇ ಸೋಽಪ್ಯಯಂ ಪುಮಾನ್ ।
ಮ್ರಿಯತೇ ವಾಮರೋ ಭ್ರಾಂತ್ಯಾ ಯಥಾಗ್ನಿರ್ದಾರುಸಂಯುತಃ ॥ ೪೫ ॥

ನಿಷೇಕಗರ್ಭಜನ್ಮಾನಿ ಬಾಲ್ಯಕೌಮಾರಯೌವನಮ್ ।
ವಯೋಮಧ್ಯಂ ಜರಾ ಮೃತ್ಯುರಿತ್ಯವಸ್ಥಾಸ್ತನೋರ್ನವ ॥ ೪೬ ॥

ಏತಾ ಮನೋರಥಮಯೀರ್ಹ್ಯನ್ಯಸ್ಯೋಚ್ಚಾವಚಾಸ್ತನೂಃ ।
ಗುಣಸಂಗಾದುಪಾದತ್ತೇ ಕ್ವಚಿತ್ಕಶ್ಚಿಜ್ಜಹಾತಿ ಚ ॥ ೪೭ ॥

ಆತ್ಮನು ಒಂದೇ ಆಗಿದ್ದು ಅದ್ವಿತೀಯ, ಅಖಂಡನಾಗಿದ್ದಾನೆ. ಇದರಲ್ಲಿ ಯಾವುದೇ ಒಳಗಿನ-ಹೊರಗಿನ ಭೇದವಿಲ್ಲ, ಆತ್ಮನಿಗೆ ಜನ್ಮ-ಮೃತ್ಯುಗಳಿಲ್ಲ, ಆದರೆ ಮನಸ್ಸೇ ಈ ಭೇದಬುದ್ಧಿಯ ಮೂಲ ಕಾರಣವಾಗಿದೆ. ಮನಸ್ಸಿನ ಆಶ್ರಯದಲ್ಲೇ ಇಂದ್ರಿಯಗಳು ಇರುತ್ತವೆ. ಮನಸ್ಸೇ ನಾನಾ ಪ್ರಕಾರದ ಕಲ್ಪನೆ ಮಾಡುತ್ತದೆ. ಆದರಿಂದಲೇ ಜನ್ಮ, ಸ್ಥಿತಿ ಮತ್ತು ಮೃತ್ಯುವಿನ ಭಾಸ ಆತ್ಮನಲ್ಲಾಗುತ್ತದೆ. ಯಾವುದಾದರೂ ಕುಟುಂಬದಲ್ಲಿ ಕೆಟ್ಟಮಗ ಹುಟ್ಟಿದರೆ ಪರಿವಾರದಲ್ಲಿ ಭೇದಬುದ್ಧಿ ಉಂಟುಮಾಡಿ ಇಡೀ ಮನೆಯನ್ನು ಉಧ್ವಸ್ತ ಮಾಡಿಬಿಡುವಂತೆ ಮನಸ್ಸಿನ ಸ್ಥಿತಿಯಾಗಿದೆ. ಇದು ಸತ್ತ್ವಗುಣ ವಿಶಿಷ್ಟವಾಗಿದ್ದರೂ ನಾನಾ ಪ್ರಕಾರದ ಸಂಕಲ್ಪ-ವಿಕಲ್ಪಗಳನ್ನು ಮಾಡುತ್ತಾ ಇಂದ್ರಿಯಗಳನ್ನು ಕ್ಷುಬ್ಧಗೊಳಿಸಿ, ಜೀವಿಯನ್ನು ಅಲೆಸುತ್ತಾ ಇರುತ್ತದೆ. ॥ ೪೧ ॥ ಪ್ರಿಯ ಉದ್ಧವನೇ! ಕಾಲದ ಗತಿಯು ಕಾಣಲಾರದಷ್ಟು ಸೂಕ್ಷ್ಮವಾಗಿದೆ. ಆದರ ಮೂಲಕ ಪ್ರತಿಕ್ಷಣವೂ ಶರೀರಗಳ ಉತ್ಪತ್ತಿ ಮತ್ತು ನಾಶ ಆಗುತ್ತಾ ಇರುತ್ತದೆ. ಸೂಕ್ಷ್ಮತೆಯ ಕಾರಣದಿಂದಾಗಿ ಪ್ರತಿಕ್ಷಣ ಆಗುವ ಜನ್ಮ-ಮರಣಗಳು ಕಂಡುಬರುವುದಿಲ್ಲ. ॥ ೪೨ ॥ ಕಾಲನ ಪ್ರಭಾವದಿಂದ ದೀಪದ ಜ್ಯೋತಿ, ನದಿಗಳ ಪ್ರವಾಹ, ವೃಕ್ಷದ ಫಲಗಳ ವಿಶೇಷ-ವಿಶೇಷ ಅವಸ್ಥೆ ಇವುಗಳು ಬದಲಾಗುತ್ತಿರುವಂತೆ, ಸಮಸ್ತ ಪ್ರಾಣಿಗಳ ಶರೀರಗಳ ಆಯುಸ್ಸು ಅವಸ್ಥೆ ಮುಂತಾದವುಗಳೂ ಕೂಡ ಬದಲಾಗುತ್ತಾ ಇರುತ್ತವೆ. ॥ ೪೩ ॥ ಇದು ಅದೇ ಜ್ಯೋತಿಗಳ ದೀಪವಾಗಿದೆ, ಈ ಪ್ರವಾಹದ ನೀರು ಅದೇ ಆಗಿದೆ – ಎಂದು ತಿಳಿಯುವುದು ಮತ್ತು ಹೇಳುವುದು ಮಿಥ್ಯೆಯಾಗಿರುವಂತೆ, ವಿಷಯ ಚಿಂತನೆಯಲ್ಲಿ ವ್ಯರ್ಥವಾಗಿ ಆಯುಸ್ಸನ್ನು ಕಳೆಯುವ ಅವಿವೇಕಿ ಪುರುಷನು ಅವನೇ ಆಗಿದ್ದಾನೆ ಎಂದು ಹೇಳುವುದು, ತಿಳಿಯುವುದು ಸರ್ವಥಾ ಮಿಥ್ಯೆಯಾಗಿದೆ. ॥ ೪೪ ॥ ಅದೇ ಈ ಆತ್ಮನು ವಾಸ್ತವವಾಗಿಯಾದರೋ ತನ್ನ ಕರ್ಮಬೀಜದಿಂದ ಹುಟ್ಟುವುದಿಲ್ಲ, ಸಾಯುವುದಿಲ್ಲ, ಆದರೆ ಹುಟ್ಟುವುದು ಮತ್ತು ಸಾಯುವುದು ಇವೆರಡೂ ಭ್ರಾಂತಿಯಿಂದಲೇ ತಿಳಿಯಲಾಗುತ್ತದೆ. ಕಟ್ಟಿಗೆಯ ಸಂಯೋಗದಿಂದ ಅಗ್ನಿಯು ಉರಿಯುವಂತೆ ಮತ್ತು ಶಾಂತವಾಗುವಂತೆ ಕಂಡುಬರುತ್ತದೆ, ಆದರೆ ಅಗ್ನಿಯಾದರೋ ವ್ಯಾಪಕವೇ ಆಗಿದೆ. ಕಟ್ಟಿಗೆಗಳು ಉರಿಯುವುದರಿಂದ ಶಾಂತವಾಗುವುದರಿಂದ ಅಗ್ನಿತತ್ತ್ವದಲ್ಲಿ ಯಾವ ವ್ಯತ್ಯಾಸವೂ ಬೀಳುವುದಿಲ್ಲ; ಸರಿಯಾಗಿ ಹಾಗೆಯೇ ಆತ್ಮನಾದರೋ ಅಮರನಾಗಿದ್ದಾನೆ. ॥ ೪೫ ॥ ಉದ್ಧವನೇ! ಗರ್ಭಾಧಾನ, ಗರ್ಭವೃದ್ಧಿ, ಜನ್ಮ, ಬಾಲ್ಯ, ಕೌಮಾರ್ಯ, ತಾರುಣ್ಯ, ಪ್ರೌಢ, ಮುಪ್ಪು ಮತ್ತು ಸಾವು ಇವು ಒಂಭತ್ತು ಶರೀರದ ಅವಸ್ಥೆಗಳಾಗಿವೆ. ॥ ೪೬ ॥ ಈ ಶರೀರವು ಜೀವನಿಂದ ಭಿನ್ನವಾಗಿದೆ ಮತ್ತು ಈ ಉಚ್ಚ-ನೀಚ ಅವಸ್ಥೆಗಳು ಅವನ ಮನೋಕಲ್ಪನೆಯೇ ಆಗಿದೆ ; ಆದರೆ ಅವನು ಅಜ್ಞಾನ ವಶನಾಗಿ ಗುಣಗಳ ಸಂಗದಿಂದ ಇವುಗಳನ್ನು ತನ್ನವು ಎಂದು ತಿಳಿದುಕೊಂಡು ಅಲೆಯತೊಡಗುತ್ತಾನೆ. ಯಾರಿಗಾದರೂ ವಿವೇಕ ಉಂಟಾದರೆ ಇವುಗಳನ್ನು ಬಿಟ್ಟುಬಿಡುತ್ತಾನೆ. ॥ ೪೭ ॥

ಆತ್ಮನಃ ಪಿತೃಪುತ್ರಾಭ್ಯಾಮನುಮೇಯೌ ಭವಾಪ್ಯಯೌ ।
ನ ಭವಾಪ್ಯಯವಸ್ತೂನಾಮಭಿಜ್ಞೋ ದ್ವಯಲಕ್ಷಣಃ ॥ ೪೮ ॥

ತರೋರ್ಬೀಜವಿಪಾಕಾಭ್ಯಾಂ ಯೋ ವಿದ್ವಾನ್ ಜನ್ಮಸಂಯಮೌ ।
ತರೋರ್ವಿಲಕ್ಷಣೋ ದ್ರಷ್ಟಾಏವಂ ದ್ರಷ್ಟಾ ತನೋಃ ಪೃಥಕ್ ॥ ೪೯ ॥

ಪ್ರಕೃತೇರೇವಮಾತ್ಮಾನಮವಿವಿಚ್ಯಾಬುಧಃ ಪುಮಾನ್ ।
ತತ್ತ್ವೇನ ಸ್ಪರ್ಶಸಮ್ಮೂಢಃ ಸಂಸಾರಂ ಪ್ರತಿಪದ್ಯತೇ ॥ ೫೦ ॥

ಸತ್ತ್ವಸಂಗಾದೃಷೀನ್ ದೇವಾನ್ ರಜಸಾಸುರಮಾನುಷಾನ್ ।
ತಮಸಾ ಭೂತತಿರ್ಯಕ್ತ್ವಂ ಭ್ರಾಮಿತೋ ಯಾತಿ ಕರ್ಮಭಿಃ ॥ ೫೧ ॥

ನೃತ್ಯತೋ ಗಾಯತಃ ಪಶ್ಯನ್ಯಥೈವಾನುಕರೋತಿ ತಾನ್ ।
ಏವಂ ಬುದ್ಧಿಗುಣಾನ್ ಪಶ್ಯನ್ನನೀಹೋಽಪ್ಯನುಕಾರ್ಯತೇ ॥ ೫೨ ॥

ಯಥಾಂಭಸಾ ಪ್ರಚಲತಾ ತರವೋಽಪಿ ಚಲಾ ಇವ ।
ಚಕ್ಷುಷಾ ಭ್ರಾಮ್ಯಮಾಣೇನ ದೃಶ್ಯತೇ ಭ್ರಮತೀವ ಭೂಃ ॥ ೫೩ ॥

ಯಥಾ ಮನೋರಥಧಿಯೋ ವಿಷಯಾನುಭವೋ ಮೃಷಾ ।
ಸ್ವಪ್ನದೃಷ್ಟಾಶ್ಚ ದಾಶಾರ್ಹ ತಥಾ ಸಂಸಾರ ಆತ್ಮನಃ ॥ ೫೪ ॥

ಅರ್ಥೇ ಹ್ಯವಿದ್ಯಮಾನೇಽಪಿ ಸಂಸೃತಿರ್ನ ನಿವರ್ತತೇ ।
ಧ್ಯಾಯತೋ ವಿಷಯಾನಸ್ಯ ಸ್ವಪ್ನೇಽನರ್ಥಾಗಮೋ ಯಥಾ ॥ ೫೫ ॥

ತಸ್ಮಾದುದ್ಧವ ಮಾ ಭುಂಕ್ಷ್ವ ವಿಷಯಾನಸದಿಂದ್ರಿಯೈಃ ।
ಆತ್ಮಾಗ್ರಹಣನಿರ್ಭಾತಂ ಪಶ್ಯ ವೈಕಲ್ಪಿಕಂ ಭ್ರಮಮ್ ॥ ೫೬ ॥

ತಂದೆಯು ಪುತ್ರನ ಮರಣದಿಂದ ಹಾಗೂ ಪುತ್ರನು ತಂದೆಯ ಮೃತ್ಯುವಿನಿಂದ ತಮ್ಮ ಜನ್ಮ-ಮೃತ್ಯುವಿನ ಅನುಮಾನ ಮಾಡಿಕೊಳ್ಳ ಬೇಕು. ಜನ್ಮ ಮತ್ತು ಮೃತ್ಯು ಯಾವ ವಸ್ತುಗಳಲ್ಲಿ ಇದೆಯೋ ಅವೆರಡನ್ನೂ ಅರಿಯುವ ಆತ್ಮನು ಜನ್ಮ-ಮೃತ್ಯು ಇವೆರಡೂ ಲಕ್ಷಣಗಳಿಂದ ಸರ್ವಥಾ ಬೇರೆಯೇ ಆಗಿದ್ದಾನೆ. ॥ ೪೮ ॥ ವೃಕ್ಷದ ಬೀಜ ಮತ್ತು ಪರಿಣಾಮಗಳನ್ನು ನೋಡಿ ವಿದ್ವಾಂಸನು ಅದರ ಹುಟ್ಟು-ವಿನಾಶವನ್ನು ನೋಡುತ್ತಾನೆ. ಇವೆರಡನ್ನು ನೋಡುವವ ನಾದರೋ ವಿಲಕ್ಷಣನೇ ಆಗಿದ್ದಾನೆ. ಅವನು ಬೇರೆಯೇ ಆಗಿದ್ದಾನೆ. ಹೀಗೆಯೇ ಶರೀರದ ಜನ್ಮ-ಮೃತ್ಯು ನೋಡುವವನು ಶರೀರದಿಂದ ಬೇರೆಯಾಗಿದ್ದಾನೆ, ಅವನೇ ಆತ್ಮನಾಗಿದ್ದಾನೆ. ಅವನ ಜನ್ಮ-ನಾಶ ವಾಗುವುದಿಲ್ಲ. ॥ ೪೯ ॥ ಅಜ್ಞಾನೀ ಪುರುಷನು ಹೀಗೆ ಪ್ರಕೃತಿ ಮತ್ತು ಆತ್ಮವನ್ನು ಶಾಸ್ತ್ರೀಕರೂಪದಿಂದ ವಿವೇಚಿಸುವುದಿಲ್ಲ, ಅವನು ಆತ್ಮವನ್ನು ಪ್ರಕೃತಿಯಿಂದ ತತ್ತ್ವತಃ ಬೇರೆಯಾಗಿ ಅನುಭವ ಪಡೆ ಯುವುದಿಲ್ಲ ಮತ್ತು ವಿಷಯ ಭೋಗದಲ್ಲೇ ನಿಜ ಸುಖವನ್ನು ತಿಳಿಯತೊಡಗುತ್ತಾ, ಅದರಲ್ಲೇ ಮೋಹಿತನಾಗುತ್ತಾನೆ. ಇದ ರಿಂದಲೇ ಅವರಿಗೆ ಜನ್ಮ-ಮೃತ್ಯುರೂಪೀ ಸಂಸಾರದಲ್ಲಿ ಅಲೆಯ ಬೇಕಾಗುತ್ತದೆ. ॥ ೫೦ ॥ ಅವಿವೇಕಿ ಜೀವಿಯು ತನ್ನ ಕರ್ಮ ಗಳನುಸಾರ ಜನ್ಮ-ಮೃತ್ಯುವಿನ ಚಕ್ರದಲ್ಲಿ ಅಲೆಯತೊಡಗಿದ್ದಾಗ ಸಾತ್ತ್ವಿಕ ಕರ್ಮಗಳ ಆಸಕ್ತಿಯಿಂದ ಋಷಿಲೋಕ, ದೇವಲೋಕ ವನ್ನೂ, ರಾಜಸಿಕ ಕರ್ಮಗಳ ಆಸಕ್ತಿಯಿಂದ ಮನುಷ್ಯ ಮತ್ತು ಅಸುರಯೋನಿಯನ್ನು, ತಾಮಸೀ ಕರ್ಮಗಳ ಆಸಕ್ತಿಯಿಂದ ಭೂತ-ಪ್ರೇತ ಹಾಗೂ ಪಶು-ಪಕ್ಷಿಗಳ ಯೋನಿಗಳನ್ನು ಅವನು ಹೊಂದುತ್ತಾನೆ. ॥ ೫೧ ॥ ಮನುಷ್ಯನು ಯಾರಾದರೂ ಹಾಡುತ್ತಾ ಕುಣಿಯುತ್ತಿರುವುದನ್ನು ನೋಡಿದಾಗ, ಅವನು ಸ್ವತಃ ಅದನ್ನು ಅನುಕರಣೆ ಮಾಡುತ್ತಾ ಆಲಾಪಿಸತೊಡಗುತ್ತಾನೆ.. ಹಾಗೆಯೇ ಜೀವಿಯು ಬುದ್ಧಿಯ ಗುಣಗಳನ್ನು ನೋಡಿದಾಗ ಸ್ವತಃ ನಿಷ್ಕ್ರಿಯ ನಾಗಿದ್ದರೂ ಅದನ್ನು ಅನುಕರಣೆಮಾಡಲು ಬಾಧ್ಯನಾಗು ತ್ತಾನೆ. ॥ ೫೨ ॥ ಹೊಳೆ, ಕೆರೆ ಮುಂತಾದವುಗಳ ನೀರು ಅಲ್ಲಾಡಿ ದಾಗ ತಟದಲ್ಲಿದ್ದ ವೃಕ್ಷಗಳ ಪ್ರತಿಬಿಂಬವು ಅಲ್ಲಾಡಿದ ಹಾಗೆ ಕಾಣುವಂತೆ, ಗಿರ-ಗಿರನೆ ತಿರುಗುವಾಗ ತನ್ನೊಂದಿಗೆ ಭೂಮಿಯು ತಿರುಗಿದಂತೆಯೇ ಕಂಡುಬರುವಂತೆ, ಮನಸ್ಸಿನ ಮೂಲಕ ಯೋಚಿಸಿದ್ದನ್ನು ಹಾಗೂ ಸ್ವಪ್ನದಲ್ಲಿ ನೋಡಲಾದ ಪದಾರ್ಥಗಳು ಸರ್ವಥಾ ಮಿಥ್ಯೆಯೇ ಆಗಿದೆ. ಹಾಗೆಯೇ ಎಲೈ ದಾಶಾರ್ಹನೇ! ಆತ್ಮನ ವಿಷಯಾನುಭವರೂಪೀ ಸಂಸಾರವೂ ಸರ್ವಥಾ ಅಸತ್ಯ ವಾಗಿದೆ. ಆತ್ಮನಾದರೋ ನಿತ್ಯ, ಶುದ್ಧ-ಬುದ್ಧ-ಮುಕ್ತನೇ ಆಗಿದ್ದಾನೆ. ॥ ೫೩-೫೪ ॥ ವಿಷಯಗಳು ಸತ್ಯವಾಗಿರದಿದ್ದರೂ ಅವುಗಳನ್ನು ಚಿಂತಿಸುತ್ತಾ ಇರುವ ಜೀವಿಯು ಸ್ವಪ್ನದಲ್ಲಿ ಪ್ರಾಪ್ತವಾದ ಅನರ್ಥ ಪರಂಪರೆಯು ಎಚ್ಚರವಾಗದೆ ನಿವೃತ್ತವಾಗದಿರುವಂತೆ ಜನ್ಮ ಮೃತ್ಯುರೂಪೀ ಚಕ್ರವು ಎಂದೂ ನಿವೃತ್ತವಾಗುವುದಿಲ್ಲ. ॥ ೫೫ ॥ ಪ್ರಿಯ ಉದ್ಧವನೇ! ಅದಕ್ಕಾಗಿ ಈ ದುಷ್ಟ (ಎಂದಿಗೂ ತೃಪ್ತವಾಗ ದಿರುವ) ಇಂದ್ರಿಯಗಳಿಂದ ವಿಷಯಗಳನ್ನು ಭೋಗಿಸಬೇಡ. ಅಜ್ಞಾನದ ಕಾರಣವೇ ಆತ್ಮನಲ್ಲಿ ಭ್ರಮೆಯಿಂದ ಭೇದಬುದ್ಧಿ ಉಂಟಾಗಿದೆ. ಅದನ್ನು ನೋಡಿ ದೂರಗೊಳಿಸು. ॥ ೫೬ ॥

ಕ್ಷಿಪ್ತೋಽವಮಾನಿತೋಽಸದ್ಭಿಃ
ಪ್ರಲಬ್ಧೋಽಸೂಯಿತೋಽಥವಾ ।
ತಾಡಿತಃ ಸನ್ನಿಬದ್ಧೋ ವಾ
ವೃತ್ತ್ಯಾ ವಾ ಪರಿಹಾಪಿತಃ ॥ ೫೭ ॥

ನಿಷ್ಠ್ಯುತೋ ಮೂತ್ರಿತೋ ವಾಜ್ಞೈರ್ಬಹುಧೈವಂ ಪ್ರಕಂಪಿತಃ ।
ಶ್ರೇಯಸ್ಕಾಮಃ ಕೃಚ್ಛ್ರಗತ ಆತ್ಮನಾಽಽತ್ಮಾನಮುದ್ಧರೇತ್ ॥ ೫೮ ॥

ಅಸಾಧುವಾದ ಪುರುಷನು ಕತ್ತುಹಿಡಿದು ಹೊರಗೆ ದಬ್ಬಲಿ, ಮಾತಿನಿಂದ ಅವಮಾನಿಸಲಿ, ಉಪಹಾಸ್ಯಮಾಡಲಿ, ನಿಂದಿಸಲಿ, ಹೊಡೆಯಲಿ, ಬಡೆಯಲಿ, ಕಟ್ಟಿಹಾಕಲಿ, ಜೀವನನಿರ್ವಾಹ ಕಿತ್ತುಕೊಳ್ಳಲಿ, ಮೈಮೇಲೆ ಉಗುಳಲಿ, ಮೂತ್ರ ವಿಸರ್ಜಿಸಲಿ, ಅನೇಕ ರೀತಿಯಿಂದ ವಿಚಲಿತಗೊಳಿಸಲಿ, ನಿಷ್ಠೆಯಿಂದ ಅಲ್ಲಾಡಿಸಲು ಪ್ರಯತ್ನಿಸಲಿ, ಬೇರೆಯವರ ಯಾವುದೇ ಉಪದ್ರವದಿಂದ ಕ್ಷುಬ್ಧನಾಗಬಾರದು. ಏಕೆಂದರೆ ಅವರಾದರೋ ಬಡಪಾಯಿ ಅಜ್ಞಾನಿಗಳಾಗಿದ್ದಾರೆ ; ಅವರಿಗೆ ಪರಮಾರ್ಥದ ಅರಿವೇ ಇಲ್ಲ. ಆದ್ದರಿಂದ ತನ್ನ ಶ್ರೇಯಸ್ಸನ್ನು ಬಯಸುವವನು ಎಲ್ಲ ಕಠಿಣತೆಗಳನ್ನು ತನ್ನ ವಿವೇಕ-ಬುದ್ಧಿಯ ಮೂಲಕ, ಹೊರಗಿನ ಯಾವುದೇ ಸಾಧನೆಯನ್ನು ಅವಲಂಬಿಸದೆ, ತನ್ನನ್ನು ಕಾಪಾಡಿಕೊಳ್ಳಬೇಕು. ವಸ್ತುತಃ ಆತ್ಮದೃಷ್ಟಿಯೇ ಸಮಸ್ತ ವಿಪತ್ತುಗಳಿಂದ ಪಾರಾಗಿಸುವ ಏಕಮಾತ್ರ ಸಾಧನೆಯಾಗಿದೆ. ॥ ೫೭-೫೮ ॥

ಉದ್ಧವ ಉವಾಚ

ಯಥೈವಮನುಬುಧ್ಯೇಯಂ ವದ ನೋ ವದತಾಂ ವರ ।
ಸುದುಸ್ಸಹಮಿಮಂ ಮನ್ಯೇ ಆತ್ಮನ್ಯಸದತಿಕ್ರಮಮ್ ॥ ೫೯ ॥

ವಿದುಷಾಮಪಿ ವಿಶ್ವಾತ್ಮನ್ ಪ್ರಕೃತಿರ್ಹಿ ಬಲೀಯಸೀ ।
ಋತೇ ತ್ವದ್ಧರ್ಮನಿರತಾನ್ ಶಾಂತಾಂಸ್ತೇ ಚರಣಾಲಯಾನ್ ॥ ೬೦ ॥

ಉದ್ಧವನು ಕೇಳಿದನು – ಭಗವಂತಾ! ನೀನು ಸಮಸ್ತ ವಕ್ತಾಗಳಲ್ಲಿ ಶ್ರೇಷ್ಠನಾಗಿರುವೆ. ಶಿರೋಮಣಿಯಾಗಿರುವೆ. ನಾನು ಈ ದುರ್ಜನರು ಮಾಡಿದ ತಿರಸ್ಕಾರವನ್ನು ಮನಸ್ಸಿನಲ್ಲಿ ಅತ್ಯಂತ ಅಸಹ್ಯವೆಂದು ತಿಳಿಯುತ್ತೇನೆ. ಆದ್ದರಿಂದ ನಾನು ಇದನ್ನು ತಿಳಿಯುವಂತೆ, ನಿನ್ನ ಉಪದೇಶವನ್ನು ಜೀವನದಲ್ಲಿ ಧರಿಸಿಕೊಳ್ಳುವಂತೆ ನನಗೆ ಉಪದೇಶಿಸು. ॥ ೫೯ ॥ ವಿಶ್ವಾತ್ಮನೇ! ಪ್ರಕೃತಿಯಾದರೋ ಬಹಳ ಬಲಿಷ್ಠವಾಗಿದೆ. ಅದು ವಿದ್ವಾಂಸರನ್ನೂ ಕೂಡ ಕ್ಷುಬ್ಧಮಾಡಿಬಿಡುತ್ತದೆ. ನಿನ್ನ ಚರಣಗಳಲ್ಲಿ ಶರಣಾದವರು ಮಾತ್ರ ಈ ಪ್ರಕೃತಿಯಿಂದ ಬಿಡುಗಡೆ ಹೊಂದಬಲ್ಲರು. ಅವರು ಸದಾಕಾಲ ನಿನ್ನದೇ ಭಾಗವತಧರ್ಮದಲ್ಲಿ ತೊಡಗಿದ್ದಾರೆ, ಶಾಂತರಾಗಿದ್ದಾರೆ. ಅವರಲ್ಲಿ ಊರ್ಮಿಗಳಿಲ್ಲ. ಸುಖ-ದುಃಖರೂಪೀ ದ್ವಂದ್ವಗಳಿಲ್ಲ. ಆದ್ದರಿಂದ ಇಂತಹ ಶರಣಾಗತ ಭಕ್ತರೇ ಈ ಪ್ರಪಂಚದಿಂದ ಬಾಧಿತರಾಗುವುದಿಲ್ಲ. ॥ ೬೦ ॥

ಇಪ್ಪತ್ತೆರಡನೆಯ ಅಧ್ಯಾಯವು ಮುಗಿಯಿತು. ॥ ೨೨ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಏಕಾದಶ ಸ್ಕಂಧೇ ದ್ವಾವಿಂಶೋಽಧ್ಯಾಯಃ ॥ ೨೨ ॥

ಇಪ್ಪತ್ತಮೂರನೆಯ ಅಧ್ಯಾಯ

ಓರ್ವ ತಿತಿಕ್ಷು ಬ್ರಾಹ್ಮಣನ ಇತಿಹಾಸ (ಭಿಕ್ಷುಗೀತೆ)

ಶ್ರೀಶುಕ ಉವಾಚ

ಸ ಏವಮಾಶಂಸಿತ ಉದ್ಧವೇನ
ಭಾಗವತಮುಖ್ಯೇನ ದಾಶಾರ್ಹಮುಖ್ಯಃ ।
ಸಭಾಜಯನ್ ಭೃತ್ಯವಚೋ ಮುಕುಂದ-
ಸ್ತಮಾಬಭಾಷೇ ಶ್ರವಣೀಯವೀರ್ಯಃ ॥ ೧ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ! ನಿಜವಾಗಿ ಭಗವಂತನ ಲೀಲಾಕಥೆಯೇ ಶ್ರವಣಿಸಲು ಯೋಗ್ಯವಾಗಿದೆ. ಅದೇ ಪ್ರೇಮ ಮತ್ತು ಮುಕ್ತಿಯನ್ನು ಕೊಡುವಂತಹುದು. ಶ್ರೀಕೃಷ್ಣನ ಪರಮಪ್ರೇಮೀ ಉದ್ಧವನು ಈ ವಿಧವಾಗಿ ಪ್ರಾರ್ಥನೆ ಮಾಡಿದಾಗ, ಯದುವಂಶ ಶಿರೋಮಣಿ ಶ್ರೀಭಗವಂತನು ಅವನ ಪ್ರಶ್ನೆಯನ್ನು ಪ್ರಶಂಸಿಸುತ್ತಾ ಅವನಲ್ಲಿ ಹೀಗೆಂದನು. ॥ ೧ ॥

ಶ್ರೀಭಗವಾನುವಾಚ

ಬಾರ್ಹಸ್ಪತ್ಯ ಸ ವೈ ನಾತ್ರ ಸಾಧುರ್ವೈ ದುರ್ಜನೇರಿತೈಃ ।
ದುರುಕ್ತೈರ್ಭಿನ್ನಮಾತ್ಮಾನಂ ಯಃ ಸಮಾಧಾತುಮೀಶ್ವರಃ
॥ ೨ ॥

ನ ತಥಾ ತಪ್ಯತೇ ವಿದ್ಧಃ ಪುಮಾನ್ ಬಾಣೈಃ ಸುಮರ್ಮಗೈಃ ।
ಯಥಾ ತುದಂತಿ ಮರ್ಮಸ್ಥಾ ಹ್ಯಸತಾಂ ಪರುಷೇಷವಃ
॥ ೩ ॥

ಕಥಯಂತಿ ಮಹತ್ಪುಣ್ಯಮಿತಿಹಾಸಮಿಹೋದ್ಧವ ।
ತಮಹಂ ವರ್ಣಯಿಷ್ಯಾಮಿ ನಿಬೋಧ ಸುಸಮಾಹಿತಃ
॥ ೪ ॥

ಕೇನಚಿದ್ಭಿಕ್ಷುಣಾ ಗೀತಂ ಪರಿಭೂತೇನ ದುರ್ಜನೈಃ ।
ಸ್ಮರತಾ ಧೃತಿಯುಕ್ತೇನ ವಿಪಾಕಂ ನಿಜಕರ್ಮಣಾಮ್
॥ ೫ ॥

ಅವಂತಿಷು ದ್ವಿಜಃ ಕಶ್ಚಿದಾಸೀದಾಢ್ಯತಮಃ ಶ್ರಿಯಾ ।
ವಾರ್ತಾವೃತ್ತಿಃ ಕದರ್ಯಸ್ತು ಕಾಮೀ ಲುಬ್ಧೋಽತಿಕೋಪನಃ
॥ ೬ ॥

ಜ್ಞಾತಯೋಽತಿಥಯಸ್ತಸ್ಯ ವಾಙ್ಮಾತ್ರೇಣಾಪಿ ನಾರ್ಚಿತಾಃ ।
ಶೂನ್ಯಾವಸಥ ಆತ್ಮಾಪಿ ಕಾಲೇ ಕಾಮೈರನರ್ಚಿತಃ
॥ ೭ ॥

ದುಶ್ಶೀಲಸ್ಯ ಕದರ್ಯಸ್ಯ ದ್ರುಹ್ಯಂತೇ ಪುತ್ರಬಾಂಧವಾಃ ।
ದಾರಾ ದುಹಿತರೋ ಭೃತ್ಯಾ ವಿಷಣ್ಣಾ ನಾಚರನ್ ಪ್ರಿಯಮ್
॥ ೮ ॥

ತಸ್ಯೈವಂ ಯಕ್ಷವಿತ್ತಸ್ಯ ಚ್ಯುತಸ್ಯೋಭಯಲೋಕತಃ ।
ಧರ್ಮಕಾಮವಿಹೀನಸ್ಯ ಚುಕ್ರುಧುಃ ಪಂಚಭಾಗಿನಃ
॥ ೯ ॥

ತದವಧ್ಯಾನವಿಸ್ರಸ್ತಪುಣ್ಯಸ್ಕಂಧಸ್ಯ ಭೂರಿದ ।
ಅರ್ಥೋಽಪ್ಯಗಚ್ಛನ್ನಿಧನಂ ಬಹ್ವಾಯಾಸಪರಿಶ್ರಮಃ
॥ ೧೦ ॥

ಜ್ಞಾತಯೋ ಜಗೃಹುಃ ಕಿಂಚಿತ್ ಕಿಂಚಿದ್ದಸ್ಯವ ಉದ್ಧವ ।
ದೈವತಃ ಕಾಲತಃ ಕಿಂಚಿದ್ಬ್ರಹ್ಮಬಂಧೋರ್ನೃಪಾರ್ಥಿವಾತ್
॥ ೧೧ ॥

ಭಗವಾನ್ ಶ್ರೀಕೃಷ್ಣನು ಹೇಳಿದನು – ದೇವಗುರು ಬೃಹಸ್ಪತಿಯ ಶಿಷ್ಯನಾದ ಉದ್ಧವನೇ! ಈ ಪ್ರಪಂಚದಲ್ಲಿ ಪ್ರಾಯಶಃ ದುರ್ಜನರ ಕಟುವಾಣಿಗೆ ಗುರಿಯಾದರೂ ತನ್ನ ಹೃದಯವನ್ನು ಕಾಯ್ದುಕೊಳ್ಳುವಂತಹ ಸಂತ ಪುರುಷರು ಸಿಗಲಾರರು. ॥ ೨ ॥ ಮನುಷ್ಯನ ಹೃದಯವು ದುಷ್ಟಜನರ ಮರ್ಮಾಂತಕ ಹಾಗೂ ಕಠೋರ ವಾಗ್ಬಾಣಗಳಿಂದ ಪೀಡಿತವಾದಷ್ಟು, ಮರ್ಮಭೇದೀ ಬಾಣಗಳು ಚುಚ್ಚಿದಾಗಲೂ ಆಗುವುದಿಲ್ಲ. ॥ ೩ ॥ ಉದ್ಧವನೇ! ಈ ವಿಷಯದಲ್ಲಿ ಮಹಾತ್ಮರು ಒಂದು ಬಹಳ ಪವಿತ್ರ, ಪ್ರಾಚೀನ ಇತಿಹಾಸವನ್ನು ಹೇಳುತ್ತಿರುತ್ತಾರೆ. ನಾನು ಅದನ್ನೇ ನಿನಗೆ ಹೇಳುವೆನು. ದತ್ತಚಿತ್ತನಾಗಿ ಅದನ್ನು ಕೇಳು. ॥ ೪ ॥ ಓರ್ವ ಸಂನ್ಯಾಸಿಯನ್ನು ದುಷ್ಟರು ತುಂಬಾ ಸತಾಯಿಸಿದರು. ಆಗಲೂ ಅವನು ಧೈರ್ಯಗೆಡಲಿಲ್ಲ. ಅವನು ತನ್ನ ಪೂರ್ವಜನ್ಮದ ಕರ್ಮಗಳ ಫಲವೆಂದು ತಿಳಿದುಕೊಂಡು ತನ್ನ ಮಾನಸಿಕ ಕೆಲವು ಉದ್ಗಾರಗಳನ್ನು ಪ್ರಕಟಿಸಿದ್ದನು. ಅದರದ್ದೇ ಈ ಇತಿಹಾಸದಲ್ಲಿ ವರ್ಣನೆ ಇದೆ. ॥ ೫ ॥

ಹಿಂದಿನಕಾಲದಲ್ಲಿ ಉಜ್ಜೈನಿಯಲ್ಲಿ ಓರ್ವ ಬ್ರಾಹ್ಮಣನು ವಾಸಿಸುತ್ತಿದ್ದನು. ಅವನು ಕೃಷಿ-ವ್ಯಾಪಾರಾದಿಗಳನ್ನು ಮಾಡಿ ಬಹಳಷ್ಟು ಧನ-ಸಂಪತ್ತನ್ನು ಗಳಿಸಿದನು. ಅವನು ತುಂಬಾ ಕೃಪಣನೂ, ಕಾಮಿಯೂ, ಲೋಭಿಯೂ ಆಗಿದ್ದನು. ಕ್ರೋಧವಾದರೋ ಅವನಿಗೆ ಮಾತು ಮಾತಿಗೆ ಬರುತ್ತಿತ್ತು. ॥ ೬ ॥ ಅವನು ತನ್ನ ಜಾತಿ–ಬಂಧುಗಳನ್ನು, ಅತಿಥಿಗಳನ್ನು ಎಂದೂ ಸಿಹಿಮಾತುಗಳಿಂದಲೂ ಸಂತೋಷಪಡಿಸಲಿಲ್ಲ. ಊಟಕ್ಕಿಕ್ಕುವುದಂತೂ ದೂರವೇ ಉಳಿಯಿತು. ಅವನು ಧರ್ಮ–ಕರ್ಮದಿಂದ ಶೂನ್ಯವಾದ ಮನೆಯಲ್ಲಿ ಇದ್ದುಕೊಂಡು, ತಾನು ಸ್ವತಃ ತನ್ನ ಧನ–ಸಂಪತ್ತಿನಿಂದ ತನ್ನ ಶರೀರಕ್ಕೂ ಸುಖ ನೀಡಲಿಲ್ಲ. ॥ ೭ ॥ ಅವನ ಲೋಭ ಮತ್ತು ಕೆಟ್ಟ ಸ್ವಭಾವದಿಂದಾಗಿ ಅವನ ಮಕ್ಕಳು, ಬಂಧು–ಬಾಂಧವರು, ಆಳು–ಕಾಳುಗಳು, ಹೆಂಡತಿಯೇ ಮುಂತಾದವರು ದುಃಖಿಗಳಾಗಿದ್ದು, ಮನಸ್ಸಿನಲ್ಲೇ ಅವನ ಅನಿಷ್ಟವನ್ನು ಚಿಂತಿಸುತ್ತಿದ್ದರು. ಯಾರೂ ಅವನ ಮನಸ್ಸಿಗೆ ಪ್ರಿಯವಾಗುವ ವ್ಯವಹಾರ ಮಾಡುತ್ತಿರಲಿಲ್ಲ. ॥ ೮ ॥ ಅವನು ಲೋಕ-ಪರಲೋಕ ಎರಡರಿಂದಲೂ ಪತಿತನಾಗಿದ್ದನು. ಯಕ್ಷರಂತೆ ಧನವನ್ನು ಕಾಯುತ್ತಿದ್ದನು. ಆ ಧನದಿಂದ ಅವನಾದರೋ ಧರ್ಮವನ್ನು ಮಾಡುತ್ತಿರಲಿಲ್ಲ, ಭೋಗವನ್ನೂ ಭೋಗಿಸುತ್ತಿರಲಿಲ್ಲ. ಅನೇಕ ದಿನಗಳವರೆಗೆ ಈ ಪ್ರಕಾರ ಜೀವನ ನಡೆಸಿದ್ದರಿಂದ ಪಂಚ-ಮಹಾಯಜ್ಞಗಳ ಭಾಗಿಯಾದ ದೇವತೆಗಳು ಕ್ರುದ್ಧರಾದರು.॥ ೯ ॥ ಉದಾರನಾದ ಉದ್ಧವನೇ! ಅವನ ಪೂರ್ವ ಪುಣ್ಯದ ಆಸರೆಯಿಂದ ಇಷ್ಟರವರೆಗೆ ನೆಲೆಸಿದ್ದ ಧನವು ಪಂಚಮಹಾಯಜ್ಞದ ಭಾಗಗಳ ತಿರಸ್ಕಾರದಿಂದ ಹೊರಟುಹೋಗಲು ತೊಡಗಿತು. ಅವನು ಬಹಳ ಉದ್ಯೋಗ-ಪರಿಶ್ರಮದಿಂದ ಗಳಿಸಿದ ಧನವು, ಅವನ ಕಣ್ಣುಮುಂದೆಯೇ ನಾಶವಾಗಿ ಹೋಯಿತು. ॥ ೧೦ ॥ ಆ ಅಧಮ ಬ್ರಾಹ್ಮಣನ ಸ್ವಲ್ಪ ಧನವನ್ನು ಅವನ ಕುಟುಂಬಿಗಳು ಕಸಿದು ಕೊಂಡರು. ಕೆಲವನ್ನು ಕಳ್ಳರು ಕದ್ದುಕೊಂಡು ಹೋದರು. ಕೆಲವು ಬೆಂಕಿಯೇ ಮುಂತಾದ ದೈವೀಕೋಪದಿಂದ ನಷ್ಟವಾಯಿತು. ಕೆಲವು ಸಮಯದ ಪ್ರಭಾವದಿಂದ ನಾಶಹೊಂದಿತು. ಕೆಲವನ್ನು ಸಾಧಾರಣ ಮನುಷ್ಯರು ಎತ್ತಿಹಾಕಿದರು. ಅಳಿದುಳಿದ ಧನವನ್ನು ಕರದರೂಪದಲ್ಲಿ, ದಂಡದ ರೂಪದಲ್ಲಿ ಶಾಸಕರು ಎತ್ತಿಕೊಂಡು ಹೋದರು. ॥ ೧೧ ॥

ಸ ಏವಂ ದ್ರವಿಣೇ ನಷ್ಟೇ ಧರ್ಮಕಾಮವಿವರ್ಜಿತಃ।
ಉಪೇಕ್ಷಿತಶ್ಚ ಸ್ವಜನೈಶ್ಚಿಂತಾಮಾಪ ದುರತ್ಯಯಾಮ್ ॥ ೧೨ ॥

ತಸ್ಯೈವಂ ಧ್ಯಾಯತೋ ದೀರ್ಘಂ ನಷ್ಟರಾಯಸ್ತಪಸ್ವಿನಃ।
ಖಿದ್ಯತೋ ಬಾಷ್ಪಕಂಠಸ್ಯ ನಿರ್ವೇದಃ ಸುಮಹಾನಭೂತ್ ॥ ೧೩ ॥

ಸ ಚಾಹೇದಮಹೋ ಕಷ್ಟಂ ವೃಥಾಽಽತ್ಮಾ ಮೇಽನುತಾಪಿತಃ।
ನ ಧರ್ಮಾಯ ನ ಕಾಮಾಯ ಯಸ್ಯಾರ್ಥಾಯಾಸ ಈದೃಶಃ ॥ ೧೪ ॥

ಪ್ರಾಯೇಣಾರ್ಥಾಃ ಕದರ್ಯಾಣಾಂ ನ ಸುಖಾಯ ಕದಾಚನ।
ಇಹ ಚಾತ್ಮೋಪತಾಪಾಯ ಮೃತಸ್ಯ ನರಕಾಯ ಚ ॥ ೧೫ ॥

ಯಶೋ ಯಶಸ್ವಿನಾಂ ಶುದ್ಧಂ ಶ್ಲಾಘ್ಯಾ ಯೇ ಗುಣಿನಾಂ ಗುಣಾಃ।
ಲೋಭಃ ಸ್ವಲ್ಪೋಽಪಿ ತಾನ್ಹಂತಿ ಶ್ವಿತ್ರೋ ರೂಪಮಿವೇಪ್ಸಿತಮ್ ॥ ೧೬ ॥

ಅರ್ಥಸ್ಯ ಸಾಧನೇ ಸಿದ್ಧೇ ಉತ್ಕರ್ಷೇ ರಕ್ಷಣೇ ವ್ಯಯೇ।
ನಾಶೋಪಭೋಗ ಆಯಾಸಸ್ತ್ರಾಸಶ್ಚಿಂತಾ ಭ್ರಮೋ ನೃಣಾಮ್ ॥ ೧೭ ॥

ಸ್ತೇಯಂ ಹಿಂಸಾನೃತಂ ದಂಭಃ ಕಾಮಃ ಕ್ರೋಧಃ ಸ್ಮಯೋ ಮದಃ।
ಭೇದೋ ವೈರಮವಿಶ್ವಾಸಃ ಸಂಸ್ಪರ್ಧಾ ವ್ಯಸನಾನಿ ಚ ॥ ೧೮ ॥

ಏತೇ ಪಂಚದಶಾನರ್ಥಾ ಹ್ಯರ್ಥಮೂಲಾ ಮತಾ ನೃಣಾಮ್।
ತಸ್ಮಾದನರ್ಥಮರ್ಥಾಖ್ಯಂ ಶ್ರೇಯೋಽರ್ಥೀ ದೂರತಸ್ತ್ಯಜೇತ್ ॥ ೧೯ ॥

ಭಿದ್ಯಂತೇ ಭ್ರಾತರೋ ದಾರಾಃ ಪಿತರಃ ಸುಹೃದಸ್ತಥಾ।
ಏಕಾಸ್ನಿಗ್ಧಾಃ ಕಾಕಿಣಿನಾ ಸದ್ಯಃ ಸರ್ವೇಽರಯಃ ಕೃತಾಃ ॥ ೨೦ ॥

ಅರ್ಥೇನಾಲ್ಪೀಯಸಾ ಹ್ಯೇತೇ ಸಂರಬ್ಧಾ ದೀಪ್ತಮನ್ಯವಃ।
ತ್ಯಜಂತ್ಯಾಶು ಸ್ಪೃಧೋ ಘ್ನಂತಿ ಸಹಸೋತ್ಸೃಜ್ಯ ಸೌಹೃದಮ್ ॥ ೨೧ ॥

ಉದ್ಧವನೇ! ಹೀಗೆ ಅವನ ಎಲ್ಲ ಸಂಪತ್ತು ಹೊರಟು ಹೋಯಿತು. ಅವನು ಧರ್ಮವನ್ನೂ ಗಳಿಸಲಿಲ್ಲ, ಭೋಗವನ್ನೂ ಭೋಗಿಸಲಿಲ್ಲ. ಇತ್ತ ಅವನ ನೆಂಟರಿಷ್ಟರೂ ಕೂಡ ಅವನತ್ತ ಮುಖಮುರಿದರು. ಈಗ ಅವನಿಗೆ ಭಾರೀ ಭಯಾನಕ ಚಿಂತೆಯು ಆವರಿಸಿತು. ॥ ೧೨ ॥ ಧನದ ನಾಶದಿಂದ ಅವನ ಹೃದಯದಲ್ಲಿ ಬಹಳ ಉರಿ ಉಂಟಾಯಿತು. ಅವನ ಮನಸ್ಸು ದುಗುಡದಿಂದ ತುಂಬಿತು. ಕಣ್ಣೀರಿನ ಕಾರಣದಿಂದ ಗಂಟಲು ಕಟ್ಟಿಹೋಯಿತು. ಆದರೆ ಈ ಪ್ರಕಾರ ಚಿಂತಿಸುತ್ತಾ-ಚಿಂತಿಸುತ್ತಲೇ ಅವನ ಮನಸ್ಸಿನಲ್ಲಿ ಸಂಸಾರದ ಕುರಿತು ಮಹಾನ್ ದುಃಖಬುದ್ಧಿ ಮತ್ತು ಉತ್ಕಟ ವೈರಾಗ್ಯದ ಉದಯವಾಯಿತು. ॥ ೧೩ ॥

ಈಗ ಆ ಬ್ರಾಹ್ಮಣನು ಮನಸ್ಸಿನಲ್ಲೇ ಅಂದುಕೊಂಡನು – ಅಯ್ಯೋ! ಶಿವನೇ! ನಾನು ಇಷ್ಟು ದಿನಗಳವರೆಗೆ ನನ್ನನ್ನು ವ್ಯರ್ಥವಾಗಿ ಸತಾಯಿಸಿಕೊಂಡೆ. ಇದು ಬಹಳ ದುಃಖದ ಮಾತಾಗಿದೆ. ಯಾವ ಧನಕ್ಕಾಗಿ ನಾನು ಕಠಿಣ ಪರಿಶ್ರಮ ಮಾಡಿದೆನೋ, ಆ ಧನವು ಧರ್ಮಕಾರ್ಯದಲ್ಲಾಗಲೀ, ಸುಖಭೋಗದಲ್ಲಾಗಲೀ ಉಪಯೋಗವಾಗಲೇ ಇಲ್ಲವಲ್ಲ! ॥ ೧೪ ॥ ಪ್ರಾಯಶಃ ಲೋಭೀ ಮನುಷ್ಯನಿಗೆ ಧನದಿಂದ ಎಂದೂ ಸುಖ ಸಿಗುವುದಿಲ್ಲ ಎಂಬುದನ್ನು ನೋಡಲಾಗುತ್ತದೆ. ಈ ಲೋಕದಲ್ಲಾದರೋ ಅವರು ಧನವನ್ನು ಗಳಿಸುವುದರಲ್ಲಿ ಮತ್ತು ಅದರ ರಕ್ಷಣೆಯ ಚಿಂತೆಯಿಂದ ಸುಡುತ್ತಿರುತ್ತಾರೆ. ಧರ್ಮವನ್ನು ಮಾಡದಿರುವುದರಿಂದ ಸತ್ತ ಬಳಿಕ ನರಕಕ್ಕೆ ಹೋಗುತ್ತಾರೆ. ॥ ೧೫ ॥ ಸ್ವಲ್ಪವೇ ತೊನ್ನು ಸರ್ವಾಂಗ ಸುಂದರ ಸ್ವರೂಪವನ್ನು ಕೆಡಿಸುವಂತೆ, ಸ್ವಲ್ಪವಾದ ಲೋಭವೂ ಕೂಡ ಯಶಸ್ವಿಗಳ ಶುದ್ಧಕೀರ್ತಿಯನ್ನು ಹಾಗೂ ಗುಣಿಗಳ ಪ್ರಶಂಸನೀಯ ಗುಣಗಳನ್ನು ನಾಶಮಾಡಿಬಿಡುತ್ತದೆ. ॥ ೧೬ ॥ ಧನವನ್ನು ಗಳಿಸುವುದರಲ್ಲಿ, ಗಳಿಸಿದ ಬಳಿಕ ಅದನ್ನು ಬೆಳೆಸುವುದರಲ್ಲಿ, ಕಾಪಾಡುವುದರಲ್ಲಿ, ವ್ಯಯಮಾಡುವುದರಲ್ಲಿ, ಅದರ ನಾಶದಲ್ಲಿ, ಉಪಭೋಗದಲ್ಲಿ ಎಲ್ಲಿ ನೋಡಿದರೂ ನಿರಂತರ ಪರಿಶ್ರಮ, ಭಯ, ಚಿಂತೆ, ಭ್ರಮೆ ಇವುಗಳನ್ನು ಎದುರಿಸಬೇಕಾಗುತ್ತದೆ.॥೧೭॥ ಕಳ್ಳತನ, ಹಿಂಸೆ, ಸುಳ್ಳು ಮಾತನಾಡುವುದು, ದಂಭ, ಕಾಮ, ಕ್ರೋಧ, ಗರ್ವ, ಅಹಂಕಾರ, ಭೇದಬುದ್ಧಿ, ವೈರ, ಅವಿಶ್ವಾಸ, ಸ್ಪರ್ಧೆ, ಲಂಪಟತೆ, ಜೂಜು, ಹೆಂಡ – ಈ ಹದಿನೈದು ಅನರ್ಥಗಳು ಮನುಷ್ಯನಲ್ಲಿ ಧನದ ಕಾರಣದಿಂದಲೇ ಪರಿಗಣಿಸಲಾಗಿದೆ. ಆದಕ್ಕಾಗಿ ಶ್ರೇಯಸ್ಕಾಮಿ ಪುರುಷನು ಸ್ವಾರ್ಥ ಹಾಗೂ ಪರಮಾರ್ಥದ ವಿರೋಧೀ ಅರ್ಥನಾಮಧಾರೀ ಅನರ್ಥವನ್ನು ದೂರದಿಂದಲೇ ಬಿಟ್ಟುಬಿಡಬೇಕು. ॥ ೧೮-೧೯ ॥ ಅಣ್ಣ-ತಮ್ಮಂದಿರು, ಪತ್ನೀ-ಪುತ್ರರು, ತಂದೆ-ತಾಯಿ, ಬಂಧು-ಬಾಂಧವರು, ಸ್ನೇಹ ಸಂಬಂಧದಿಂದ ಬಂಧಿತರಾಗಿ ಪೂರ್ಣವಾಗಿ ಒಂದಾಗಿಯೇ ಇರುತ್ತಾರೆ. ಆದರೆ ಧನದ ಕಾರಣದಿಂದ ಎಲ್ಲರೂ ಕೂಡಲೇ ಒಬ್ಬರು ಮತ್ತೊಬ್ಬರ ಶತ್ರುಗಳಾಗಿ ಹರಿದು-ಹಂಚಿಹೋಗುತ್ತಾರೆ. ॥ ೨೦ ॥ ಈ ಜನರು ಸ್ವಲ್ಪವೇ ಧನಕ್ಕಾಗಿಯೂ ಕ್ಷುಬ್ಧ ಮತ್ತು ಕ್ರುದ್ಧರಾಗುತ್ತಾರೆ. ನೋಡು-ನೋಡುತ್ತಿರುವಂತೆ ಸೌಹಾರ್ದ - ಸಂಬಂಧವನ್ನು ಬಿಟ್ಟುಬಿಡುತ್ತಾರೆ. ಪರಸ್ಪರ ಸ್ಪರ್ಧೆಯಲ್ಲಿ ತೊಡಗುತ್ತಾರೆ. ಒಬ್ಬರು-ಮತ್ತೊಬ್ಬರ ಸರ್ವನಾಶಮಾಡಿ ಪ್ರಾಣತೆಗೆಯುವಷ್ಟು ಮುಂದುವರಿಯುತ್ತಾರೆ. ॥ ೨೧ ॥

ಲಬ್ಧ್ವಾ ಜನ್ಮಾಮರಪ್ರಾರ್ಥ್ಯಂ ಮಾನುಷ್ಯಂ ತದ್ದ್ವಿಜಾಗ್ರ್ಯತಾಮ್ ।
ತದನಾದೃತ್ಯ ಯೇ ಸ್ವಾರ್ಥಂ ಘ್ನಂತಿ ಯಾಂತ್ಯಶುಭಾಂ ಗತಿಮ್ ॥ ೨೨ ॥

ಸ್ವರ್ಗಾಪವರ್ಗಯೋರ್ದ್ವಾರಂ ಪ್ರಾಪ್ಯ ಲೋಕಮಿಮಂ ಪುಮಾನ್ ।
ದ್ರವಿಣೇ ಕೋಽನುಷಜ್ಜೇತ ಮರ್ತ್ಯೋಽನರ್ಥಸ್ಯ ಧಾಮನಿ ॥ ೨೩ ॥

ದೇವರ್ಷಿಪಿತೃಭೂತಾನಿ ಜ್ಞಾತೀನ್ ಬಂಧೂಂಶ್ಚ ಭಾಗಿನಃ ।
ಅಸಂವಿಭಜ್ಯ ಚಾತ್ಮಾನಂ ಯಕ್ಷವಿತ್ತಃ ಪತತ್ಯಧಃ ॥ ೨೪ ॥

ವ್ಯರ್ಥಯಾರ್ಥೇಹಯಾ ವಿತ್ತಂ ಪ್ರಮತ್ತಸ್ಯ ವಯೋ ಬಲಮ್ ।
ಕುಶಲಾ ಯೇನ ಸಿಧ್ಯಂತಿ ಜರಠಃ ಕಿಂ ನು ಸಾಧಯೇ ॥ ೨೫ ॥

ಕಸ್ಮಾತ್ ಸಂಕ್ಲಿಶ್ಯತೇ ವಿದ್ವಾನ್ ವ್ಯರ್ಥಯಾರ್ಥೇಹಯಾಸಕೃತ್ ।
ಕಸ್ಯಚಿನ್ಮಾಯಯಾ ನೂನಂ ಲೋಕೋಽಯಂ ಸುವಿಮೋಹಿತಃ ॥ ೨೬ ॥

ಕಿಂ ಧನೈರ್ಧನದೈರ್ವಾ ಕಿಂ ಕಾಮೈರ್ವಾ ಕಾಮದೈರುತ ।
ಮೃತ್ಯುನಾ ಗ್ರಸ್ಯಮಾನಸ್ಯ ಕರ್ಮಭಿರ್ವೋತ ಜನ್ಮದೈಃ ॥ ೨೭ ॥

ನೂನಂ ಮೇ ಭಗವಾಂಸ್ತುಷ್ಟಃ ಸರ್ವದೇವಮಯೋ ಹರಿಃ ।
ಯೇನ ನೀತೋ ದಶಾಮೇತಾಂ ನಿರ್ವೇದಶ್ಚಾತ್ಮನಃ ಪ್ಲವಃ ॥ ೨೮ ॥

ಸೋಽಹಂ ಕಾಲಾವಶೇಷೇಣ ಶೋಷಯಿಷ್ಯೇಽಂಗಮಾತ್ಮನಃ ।
ಅಪ್ರಮತ್ತೋಽಖಿಲಸ್ವಾರ್ಥೇ ಯದಿ ಸ್ಯಾತ್ಸಿದ್ಧ ಆತ್ಮನಿ ॥ ೨೯ ॥

ತತ್ರ ಮಾಮನುಮೋದೇರನ್ ದೇವಾಸ್ತ್ರಿಭುವನೇಶ್ವರಾಃ ।
ಮುಹೂರ್ತೇನ ಬ್ರಹ್ಮಲೋಕಂ ಖಟ್ವಾಂಗಃ ಸಮಸಾಧಯತ್ ॥ ೩೦ ॥

ದೇವತೆಗಳೂ ಬಯಸುವ ಮನುಷ್ಯಜನ್ಮವನ್ನು, ಅದರಲ್ಲಿಯೂ ಬ್ರಾಹ್ಮಣಶರೀರವನ್ನು ಪಡೆದುಕೊಂಡು ಅದರ ಅನಾದರ ಮಾಡುವವರು, ತನ್ನ ನಿಜವಾದ ಸ್ವಾರ್ಥ-ಪರಮಾರ್ಥವನ್ನು ನಾಶಮಾಡುವವರು ಅಶುಭಗತಿಯನ್ನು ಪಡೆಯುತ್ತಾರೆ. ॥ ೨೨ ॥ ಈ ಮನುಷ್ಯಶರೀರವು ಮೋಕ್ಷ ಮತ್ತು ಸ್ವರ್ಗದ ದ್ವಾರವಾಗಿದೆ. ಇದನ್ನು ಪಡೆದಿದ್ದರೂ ಅನರ್ಥಗಳ ತವರಾದ ಧನದ ಮೋಸದಲ್ಲಿ ಯಾವ ಬುದ್ಧಿವಂತ ಮನುಷ್ಯನು ತಾನೇ ಸಿಕ್ಕಿಕೊಳ್ಳುವನು ? ॥ ೨೩ ॥ ಯಾವ ಮನುಷ್ಯನು ದೇವತೆಗಳು, ಋಷಿಗಳು, ಪಿತೃಗಳು, ಪ್ರಾಣಿಗಳು, ಜ್ಞಾತಿ-ಬಾಂಧವರು, ಕುಟುಂಬಿಗಳು ಹಾಗೂ ಧನದ ಇನ್ನಿತರ ಪಾಲುದಾರರು ಇವರಿಗೆಲ್ಲ ಅವರ ಪಾಲನ್ನು ಕೊಟ್ಟು ಸಂತೋಷಪಡಿಸುವುದಿಲ್ಲವೋ ಮತ್ತು ತಾನೂ ಅದನ್ನು ಉಪಭೋಗಿಸುವುದಿಲ್ಲವೋ ಅವನು ಯಕ್ಷನಂತೆ ಧನವನ್ನು ಕಾಯುವ ಕೃಪಣನಾಗಿ, ಅವಶ್ಯವಾಗಿ ಅಧೋಗತಿಯನ್ನು ಪಡೆಯುತ್ತಾನೆ. ॥ ೨೪ ॥ ನಾನು ನನ್ನ ಕರ್ತವ್ಯದಿಂದ ಚ್ಯುತನಾಗಿದ್ದೇನೆ. ನಾನು ಪ್ರಮಾದದಲ್ಲಿ ಆಯುಸ್ಸನ್ನು, ಧನವನ್ನು, ಬಲವನ್ನು, ಪೌರುಷವನ್ನು ಕಳೆದುಕೊಂಡೆ. ವಿವೇಕೀ ಜನರು ಯಾವ ಸಾಧನೆಗಳಿಂದ ಮೋಕ್ಷವನ್ನೂ ಕೂಡ ಪಡೆದುಕೊಳ್ಳುವರೋ, ಅವನ್ನೂ ನಾನು ಧನಗಳಿಸುವ ವ್ಯರ್ಥವಾದ ಪ್ರಯತ್ನದಲ್ಲಿ ಕಳಕೊಂಡುಬಿಟ್ಟೆ. ಈಗ ವೃದ್ಧಾಪ್ಯದಲ್ಲಿ ಯಾವ ಸಾಧನೆ ಮಾಡಲೀ ? ಎಂದು ಆ ಬ್ರಾಹ್ಮಣನು ಪಶ್ಚಾತ್ತಾಪಪಟ್ಟನು. ॥ ೨೫ ॥ ದೊಡ್ಡ-ದೊಡ್ಡ ವಿದ್ವಾಂಸರೂ ಕೂಡ ಧನದ ವ್ಯರ್ಥ ತೃಷ್ಣೆಯಿಂದ ನಿರಂತರ ಏಕೆ ದುಃಖಿಗಳಾಗಿ ಇರುತ್ತಾರೆ ? ಎಂಬುದು ನನಗೆ ತಿಳಿದಿರಲಿಲ್ಲ. ಏನೇ ಇರಲಿ, ಅವಶ್ಯವಾಗಿ ಈ ಪ್ರಪಂಚವು ಯಾರದೋ ಮಾಯೆಯಿಂದ ಅತ್ಯಂತ ಮೋಹಿತವಾಗುತ್ತಿದೆ. ॥ ೨೬ ॥

ಈ ಮನುಷ್ಯಶರೀರವು ಕಾಲನ ವಿಕರಾಳ ಹಿಡಿತದಲ್ಲಿ ಸಿಕ್ಕಿಕೊಂಡಿರುವುದು. ಇವನಿಗೆ ಧನದಿಂದಾಗಲೀ, ಧನವನ್ನು ಕೊಡುವ ದೇವತೆಗಳಿಂದಾಗಲೀ, ಜನರಿಂದಾಗಲೀ, ಭೋಗವಾಸನೆಯಿಂದಾಗಲೀ, ಅದನ್ನು ಪೂರ್ಣಗೊಳಿಸುವುದರಿಂದಾಗಲೀ, ಪದೇ-ಪದೇ ಜನ್ಮ-ಮೃತ್ಯುವಿನ ಚಕ್ರದಲ್ಲಿ ಕೆಡಹುವ ಸಕಾಮ ಕರ್ಮಗಳಿಂದಾಗಲೀ ಏನು ಲಾಭವಿದೆ ? ॥ ೨೭ ॥ ಸರ್ವದೇವಸ್ವರೂಪೀ ಭಗವಂತನು ನನ್ನ ಮೇಲೆ ಪ್ರಸನ್ನನಾಗಿರುವನು, ಇದರಲ್ಲಿ ಸಂದೇಹವೇ ಇಲ್ಲ. ಆದ್ದರಿಂದ ಅವನೇ ನನ್ನನ್ನು ಈ ಸ್ಥಿತಿಗೆ ತಂದು, ಜಗತ್ತಿನ ಕುರಿತು ನನಗೆ ಈ ದುಃಖಬುದ್ಧಿ, ವೈರಾಗ್ಯವನ್ನು ಕೊಟ್ಟಿರುವನು. ವಾಸ್ತವವಾಗಿ ವೈರಾಗ್ಯವೇ ಈ ಸಂಸಾರಸಾಗರದಿಂದ ಪಾರಾಗಲು ದೋಣಿಯಂತೆ ಇದೆ. ॥ ೨೮ ॥ ನನ್ನ ಆಯುಸ್ಸು ಬಾಕಿ ಉಳಿದಿದ್ದರೆ, ನಾನು ಆತ್ಮಲಾಭದಲ್ಲೇ ಸಂತುಷ್ಟನಾಗಿದ್ದು, ನನ್ನ ಪರಮಾರ್ಥದ ಸಂಬಂಧದಲ್ಲಿ ಜಾಗರೂಕನಾಗುವೆನು. ಈಗ ಉಳಿದಿರುವ ಸಮಯದಲ್ಲಿ ನನ್ನ ಶರೀರವನ್ನು ತಪಸ್ಸಿನ ಮೂಲಕ ಒಣಗಿಸಿಬಿಡುವೆನು. ಈಗ ನಾನು ಬೇರೆ ಏನನ್ನೂ ಬಯಸದೆ ಇದನ್ನೇ ಸಾಧಿಸುವ ಈ ಸ್ಥಿತಿಗೆ ತಲುಪಿರುವೆನು.॥ ೨೯ ॥ ಮೂರು ಲೋಕಗಳ ಒಡೆಯ ಹಾಗೂ ದೇವತೆಗಳೆಲ್ಲರೂ ನನ್ನ ಈ ಸಂಕಲ್ಪವನ್ನು ಅನುಮೋದಿಸಲಿ. ಈಗ ನಿರಾಶನಾಗುವ ಯಾವುದೇ ಮಾತಿಲ್ಲ. ಏಕೆಂದರೆ, ಖಟ್ವಾಂಗರಾಜನು ಕೇವಲ ಎರಡೇ ಗಳಿಗೆಯಲ್ಲಿ ಭಗವದ್ಧಾಮವನ್ನು ಪಡೆದುಕೊಂಡು ಬಿಟ್ಟಿದ್ದನು.॥೩೦॥

ಶ್ರೀಭಗವಾನುವಾಚ

ಇತ್ಯಭಿಪ್ರೇತ್ಯ ಮನಸಾ ಹ್ಯಾವಂತ್ಯೋ ದ್ವಿಜಸತ್ತಮಃ ।
ಉನ್ಮುಚ್ಯ ಹೃದಯಗ್ರಂಥೀನ್ ಶಾಂತೋ ಭಿಕ್ಷುರಭೂನ್ಮುನಿಃ ॥ ೩೧ ॥

ಸ ಚಚಾರ ಮಹೀಮೇತಾಂ ಸಂಯತಾತ್ಮೇಂದ್ರಿಯಾನಿಲಃ ।
ಭಿಕ್ಷಾರ್ಥಂ ನಗರಗ್ರಾಮಾನಸಂಗೋಽಲಕ್ಷಿತೋಽವಿಶತ್ ॥ ೩೨ ॥

ತಂ ವೈ ಪ್ರವಯಸಂ ಭಿಕ್ಷುಮವಧೂತಮಸಜ್ಜನಾಃ ।
ದೃಷ್ಟ್ವಾ ಪರ್ಯಭವನ್ಭದ್ರ ಬಹ್ವೀಭಿಃ ಪರಿಭೂತಿಭಿಃ ॥ ೩೩ ॥

ಕೇಚಿತ್ತ್ರಿವೇಣುಂ ಜಗೃಹುರೇಕೇ ಪಾತ್ರಂ ಕಮಂಡಲುಮ್ ।
ಪೀಠಂ ಚೈಕೇಽಕ್ಷಸೂತ್ರಂ ಚ ಕಂಥಾಂ ಚೀರಾಣಿ ಕೇಚನ ॥ ೩೪ ॥

ಪ್ರದಾಯ ಚ ಪುನಸ್ತಾನಿ ದರ್ಶಿತಾನ್ಯಾದದುರ್ಮುನೇಃ ।
ಅನ್ನಂ ಚ ಭೈಕ್ಷ್ಯಸಂಪನ್ನಂ ಭುಂಜಾನಸ್ಯ ಸರಿತ್ತಟೇ ॥ ೩೫ ॥

ಮೂತ್ರಯಂತಿ ಚ ಪಾಪಿಷ್ಠಾಃ ಷ್ಠೀವಂತ್ಯಸ್ಯ ಚ ಮೂರ್ಧನಿ ।
ಯತವಾಚಂ ವಾಚಯಂತಿ ತಾಡಯಂತಿ ನ ವಕ್ತಿ ಚೇತ್ ॥ ೩೬ ॥

ತರ್ಜಯಂತ್ಯಪರೇ ವಾಗ್ಭಿಃ ಸ್ತೇನೋಽಯಮಿತಿ ವಾದಿನಃ ।
ಬಧ್ನಂತಿ ರಜ್ಜ್ವಾ ತಂ ಕೇಚಿದ್ಬಧ್ಯತಾಂ ಬಧ್ಯತಾಮಿತಿ ॥ ೩೭ ॥

ಕ್ಷಿಪನ್ತ್ಯೇಕೇಽವಜಾನಂತ ಏಷ ಧರ್ಮಧ್ವಜಃ ಶಠಃ ।
ಕ್ಷೀಣವಿತ್ತ ಇಮಾಂ ವೃತ್ತಿಮಗ್ರಹೀತ್ಸ್ವಜನೋಜ್ಝಿತಃ ॥ ೩೮ ॥

ಅಹೋ ಏಷ ಮಹಾಸಾರೋ ಧೃತಿಮಾನ್ ಗಿರಿರಾಡಿವ ।
ಮೌನೇನ ಸಾಧಯತ್ಯರ್ಥಂ ಬಕವದ್ದೃಢನಿಶ್ಚಯಃ ॥ ೩೯ ॥

ಇತ್ಯೇಕೇ ವಿಹಸಂತ್ಯೇನಮೇಕೇ ದುರ್ವಾತಯಂತಿ ಚ ।
ತಂ ಬಬಂಧುರ್ನಿರುರುಧುರ್ಯಥಾ ಕ್ರೀಡನಕಂ ದ್ವಿಜಮ್ ॥ ೪೦ ॥

ಭಗವಾನ್ ಶ್ರೀಕೃಷ್ಣನು ಹೇಳುತ್ತಾನೆ – ಉದ್ಧವನೇ! ಆ ಉಜ್ಜಯಿನಿಯ ನಿವಾಸಿ ಬ್ರಾಹ್ಮಣನು 'ನಾನು ಮತ್ತು ನನ್ನದು ಎಂಬ ಗಂಟನ್ನು ಬಿಚ್ಚಿಬಿಟ್ಟಿರುವೆನು' ಎಂದು ಮನಸ್ಸಿನಲ್ಲೇ ನಿಶ್ಚಯಿಸಿದನು. ಅನಂತರ ಅವನು ಶಾಂತವಾಗಿ, ಮೌನೀ ಸಂನ್ಯಾಸಿಯಾಗಿ ಹೋದನು. ॥ ೩೧ ॥ ಈಗ ಅವನ ಚಿತ್ತದಲ್ಲಿ ಯಾವುದೇ ಸ್ಥಾನ, ವಸ್ತು, ವ್ಯಕ್ತಿಯ ಕುರಿತು ಆಸಕ್ತಿ ಉಳಿಯಲಿಲ್ಲ. ಅವನು ತನ್ನ ಮನ, ಇಂದ್ರಿಯ, ಪ್ರಾಣಗಳನ್ನು ವಶಪಡಿಸಿಕೊಂಡನು. ಅವನು ಪೃಥ್ವಿಯಲ್ಲಿ ಸ್ವಚ್ಛಂದವಾಗಿ ವಿಚರಿಸತೊಡಗಿದನು. ಅವನು ಭಿಕ್ಷೆಗಾಗಿ ಊರು-ನಗರಕ್ಕೆ ಅವಶ್ಯವಾಗಿ ಹೋಗುತ್ತಿದ್ದನು. ಆದರೆ ಯಾರೂ ಅವನನ್ನು ಗುರುತಿಸದಂತೆ ಇರುತ್ತಿದ್ದನು. ॥ ೩೨ ॥ ಎಲೈ ಉದ್ಧವನೇ! ಆ ಅವಧೂತ ಸಂನ್ಯಾಸಿಯು ತುಂಬಾ ಮುದುಕನಾಗಿದ್ದನು. ದುಷ್ಟರು ಅವನನ್ನು ನೋಡುತ್ತಲೇ ಹರಿಹಾಯ್ದು ಬೀಳುತ್ತಿದ್ದರು. ಅನೇಕ ರೀತಿಯಿಂದ ಅವನ ತಿರಸ್ಕಾರಮಾಡುತ್ತಾ ಸತಾಯಿಸುತ್ತಿದ್ದರು. ॥ ೩೩ ॥ ಕೆಲವರು ಅವನ ದಂಡವನ್ನು ಕಿತ್ತುಕೊಂಡರೆ, ಕೆಲವರು ಭಿಕ್ಷಾಪಾತ್ರೆಯನ್ನು ಎತ್ತಿಕೊಂಡು ಹೋಗುತ್ತಿದ್ದರು. ಕೆಲವರು ಕಮಂಡಲು ಎತ್ತಿಹಾಕುತ್ತಿದ್ದರೆ, ಕೆಲವರು ಆಸನ, ರುದ್ರಾಕ್ಷಿಮಾಲೆ, ಕಂಥಾ (ಚಿಂದಿಬಟ್ಟೆಗಳಿಂದ ಮಾಡಿದ ಕೌದಿ) ತೆಗೆದುಕೊಂಡು ಓಡಿಹೋಗುತ್ತಿದ್ದರು. ಕೆಲವರಾದರೋ ಅವನ ಲಂಗೋಟಿ, ವಸ್ತ್ರವನ್ನೂ ಅತ್ತ-ಇತ್ತ ಎಸೆದುಬಿಡುತ್ತಿದ್ದರು. ॥ ೩೪ ॥ ಕೆಲ-ಕೆಲವರು ಆ ವಸ್ತುಗಳನ್ನು ಕೊಟ್ಟು, ಕೆಲವರು ಕರುಣೆತೋರಿಸಿ ಮತ್ತೆ ಕಿತ್ತುಕೊಳ್ಳುತ್ತಿದ್ದರು. ಆ ಅವಧೂತನು ಮಧುಕರಿಯನ್ನು ಬೇಡಿತಂದು, ನದೀತೀರದಲ್ಲಿ ಅದನ್ನು ತಿನ್ನಲು ಕುಳಿತರೆ, ಪಾಪೀ ಜನರು ಕೆಲವೊಮ್ಮೆ ಅವನ ತಲೆಯಮೇಲೆ ಮೂತ್ರವಿಸರ್ಜನೆ ಮಾಡಿಬಿಡುತ್ತಿದ್ದರೆ, ಕೆಲವರು ಉಗುಳಿಬಿಡುತ್ತಿದ್ದರು. ಆ ಜನರು ಆ ಮೌನೀ ಅವಧೂತನನ್ನು ಅನೇಕ ರೀತಿಯಿಂದ ಮಾತನಾಡುವಂತೆ ಕಾಡುತ್ತಿದ್ದರು. ಮಾತನಾಡದಿದ್ದಾಗ ಬಡಿಯುತ್ತಿದ್ದರು. ॥ ೩೫-೩೬ ॥ ಕೆಲವರು ಅವನನ್ನು ಕಳ್ಳನೆಂದು ಗದರಿಸಿ-ಬೆದರಿಸುತ್ತಿದ್ದರು. ಕೆಲವರು 'ಇವನನ್ನು ಕಟ್ಟಿಹಾಕಿ' ಎಂದು ಹೇಳುತ್ತಾ ಮತ್ತೆ ಅವನನ್ನು ಹಗ್ಗದಿಂದ ಕಟ್ಟಿಹಾಕುತ್ತಿದ್ದರು. ॥ ೩೭ ॥ ಕೆಲವರು ಅವನನ್ನು ತಿರಸ್ಕರಿಸುತ್ತಾ – 'ನೋಡಿ-ನೋಡಿ! ಈಗ ಈ ಲೋಭಿಯು ಧರ್ಮದ ಸೋಗು ಹಾಕಿಕೊಂಡಿರುವನು. ಧನ-ಸಂಪತ್ತೆಲ್ಲ ಹೋಯಿತು. ಪತ್ನೀ-ಪುತ್ರರು ಮನೆಯಿಂದ ಹೊರಗೆ ಹಾಕಿದರು. ಈಗ ಇವನು ಭಿಕ್ಷೆಯೆತ್ತುವ ವೃತ್ತಿಯನ್ನು ತನ್ನದಾಗಿಸಿಕೊಂಡಿರುವನು. ಆಹಾ! ನೋಡಿರಲ್ಲ! ಈ ಧಡಿಯ ಭಿಕ್ಷುಕ ಧೈರ್ಯದಲ್ಲಿ ದೊಡ್ಡ ಪರ್ವತದಂತೆ ಇದ್ದಾನೆ. ಇವನು ಮೌನವಾಗಿದ್ದು ತನ್ನ ಕೆಲಸವನ್ನು ಸಾಧಿಸಿಕೊಳ್ಳಲು ಬಯಸುತ್ತಿರುವನು. ನಿಜವಾಗಿಯೂ ಇವನು ಬಕಪಕ್ಷಿಗಿಂತಲೂ ಮಿಗಿಲಾದ ವಂಚಕ ಮತ್ತು ದೃಢನಿಶ್ಚಯಿಯಾಗಿದ್ದಾನೆ' ಎಂದು ಗಳಹುತ್ತಿದ್ದರು. ॥ ೩೮-೩೯ ॥ ಕೆಲವರು ಆ ಅವಧೂತನನ್ನು ಪರಿಹಾಸ್ಯ ಮಾಡಿದರೆ, ಕೆಲವರು ಅವನ ಮೇಲೆ ಅಧೋವಾಯು ಬಿಡುತ್ತಿದ್ದರು. ಸಾಕುಪಕ್ಷಿಗಳಾದ ಗಿಳಿ, ಮೈನಾ ಹಕ್ಕಿಗಳನ್ನು ಜನರು ಬಂಧಿಸಿ ಪಂಜರದಲ್ಲಿ ಕೂಡಿಹಾಕುವಂತೆ, ಅವನನ್ನು ಬಂಧಿಸಿ, ಮನೆಗಳಲ್ಲಿ ಕೂಡಿಹಾಕುತ್ತಿದ್ದರು. ॥ ೪೦ ॥

ಏವಂ ಸ ಭೌತಿಕಂ ದುಃಖಂ ದೈವಿಕಂ ದೈಹಿಕಂ ಚ ಯತ್ ।
ಭೋಕ್ತವ್ಯಮಾತ್ಮನೋ ದಿಷ್ಟಂ ಪ್ರಾಪ್ತಂ ಪ್ರಾಪ್ತಮಬುಧ್ಯತ ॥ ೪೧ ॥

ಪರಿಭೂತ ಇಮಾಂ ಗಾಥಾಮಗಾಯತ ನರಾಧಮೈಃ ।
ಪಾತಯದ್ಭಿಃ ಸ್ವಧರ್ಮಸ್ಥೋ ಧೃತಿಮಾಸ್ಥಾಯ ಸಾತ್ತ್ವಿಕೀಮ್ ॥ ೪೨ ॥

ದ್ವಿಜ ಉವಾಚ

ನಾಯಂ ಜನೋ ಮೇ ಸುಖದುಃಖಹೇತು-
ರ್ನ ದೇವತಾಽಽತ್ಮಾ ಗ್ರಹಕರ್ಮಕಾಲಾಃ ।
ಮನಃ ಪರಂ ಕಾರಣಮಾಮನಂತಿ
ಸಂಸಾರಚಕ್ರಂ ಪರಿವರ್ತಯೇದ್ ಯತ್ ॥ ೪೩ ॥

ಮನೋ ಗುಣಾನ್ ವೈ ಸೃಜತೇ ಬಲೀಯ-
ಸ್ತತಶ್ಚ ಕರ್ಮಾಣಿ ವಿಲಕ್ಷಣಾನಿ ।
ಶುಕ್ಲಾನಿ ಕೃಷ್ಣಾನ್ಯಥ ಲೋಹಿತಾನಿ
ತೇಭ್ಯಃ ಸವರ್ಣಾಃ ಸೃತಯೋ ಭವಂತಿ ॥ ೪೪ ॥

ಅನೀಹ ಆತ್ಮಾ ಮನಸಾ ಸಮೀಹತಾ
ಹಿರಣ್ಮಯೋ ಮತ್ಸಖ ಉದ್ವಿಚಷ್ಟೇ ।
ಮನಃ ಸ್ವಲಿಂಗಂ ಪರಿಗೃಹ್ಯ ಕಾಮಾನ್
ಜುಷನ್ ನಿಬದ್ಧೋ ಗುಣಸಂಗತೋಽಸೌ ॥ ೪೫ ॥

ದಾನಂ ಸ್ವಧರ್ಮೋ ನಿಯಮೋ ಯಮಶ್ಚ
ಶ್ರುತಂ ಚ ಕರ್ಮಾಣಿ ಚ ಸದ್ವ್ರತಾನಿ ।
ಸರ್ವೇ ಮನೋನಿಗ್ರಹಲಕ್ಷಣಾಂತಾಃ
ಪರೋ ಹಿ ಯೋಗೋ ಮನಸಃ ಸಮಾಧಿಃ ॥ ೪೬ ॥

ಆದರೆ ಅವನು ಬಾಯಿಮುಚ್ಚಿಕೊಂಡು ಎಲ್ಲವನ್ನೂ ಸಹಿಸುತ್ತಿದ್ದನು. ಅವನಿಗೆ ಕೆಲವೊಮ್ಮೆ ಜ್ವರಾದಿಗಳ ಕಾರಣ ದೈಹಿಕಪೀಡೆ ಸಹಿಸಬೇಕಾಗುತ್ತಿತ್ತು. ಕೆಲವೊಮ್ಮೆ ಚಳಿ-ಸೆಕೆ ಮುಂತಾದ ದೈವೀ ಕಷ್ಟಗಳನ್ನು ಅನುಭವಿಸಬೇಕಾಗುತ್ತಿತ್ತು. ಕೆಲವೊಮ್ಮೆ ದುರ್ಜನರು ಅಪಮಾನಾದಿಗಳಿಂದ ಅವನಿಗೆ ಭೌತಿಕಕಷ್ಟ ಕೊಡುತ್ತಿದ್ದರು. ಆದರೆ ಸಂನ್ಯಾಸಿಯ ಮನಸ್ಸಿನಲ್ಲಿ ಇವುಗಳ ಯಾವ ವಿಕಾರಗಳೂ ಆಗುತ್ತಿರಲಿಲ್ಲ. ಇವೆಲ್ಲವೂ ನನ್ನ ಹಿಂದಿನಜನ್ಮದ ಕರ್ಮಗಳ ಫಲವಾಗಿದೆ, ಇದನ್ನು ನಾನು ಅವಶ್ಯವಾಗಿ ಭೋಗಿಸಲೇಬೇಕಾಗುವುದು ಎಂದು ತಿಳಿಯುತ್ತಿದ್ದನು. ॥ ೪೧ ॥ ನೀಚ ಜನರು ಅನೇಕ ರೀತಿಯ ತಿರಸ್ಕಾರಗೈದು ಅವನನ್ನು ಅವನ ಧರ್ಮದಿಂದ ಪತನವಾಗಿಸಲು ಪ್ರಯತ್ನಿಸುತ್ತಿದ್ದರೂ, ಅವನು ಭಾರೀ ದೃಢತೆಯಿಂದ ತನ್ನ ಧರ್ಮದಲ್ಲಿ ಸ್ಥಿರವಾಗಿರುತ್ತಿದ್ದನು. ಅವನು ಸಾತ್ತ್ವಿಕ ಧೃತಿಯ * ಆಶ್ರಯ ಪಡೆದು ಗೀತೆಯೊಂದನ್ನು ಹೀಗೆ ಹಾಡಿದನು – ॥ ೪೨ ॥

ಬ್ರಾಹ್ಮಣನೆಂದನು – ನನ್ನ ಸುಖ ಅಥವಾ ದುಃಖದ ಕಾರಣರು ಈ ಮನುಷ್ಯರಾಗಲೀ, ದೇವತೆಗಳಾಗಲೀ, ಶರೀರವಾಗಲೀ, ಗ್ರಹಗಳಾಗಲೀ, ಕರ್ಮವಾಗಲೀ, ಕಾಲವಾಗಲೀ, ಯಾವುದೂ ಅಲ್ಲ. ಶ್ರುತಿಗಳು, ಮಹಾತ್ಮರು ಮನಸ್ಸನ್ನೇ ಇದರ ಪರಮ ಕಾರಣವೆಂದು ಹೇಳುತ್ತಾರೆ. ಮನಸ್ಸೇ ಈ ಸಂಸಾರಚಕ್ರದಲ್ಲಿ ಜೀವಿಯನ್ನು ಅಲೆಸುತ್ತದೆ. ॥ ೪೩ ॥ ನಿಜವಾಗಿಯೂ ಈ ಮನಸ್ಸು ಬಹಳ ಬಲಿಷ್ಠವಾಗಿದೆ. ಇದೇ ವಿಷಯಗಳನ್ನು, ಅವುಗಳ ಕಾರಣ ಗುಣಗಳನ್ನು, ಅವುಗಳೊಂದಿಗೆ ಸಂಬಂಧವಿರಿಸುವ ವೃತ್ತಿಗಳನ್ನು ಸೃಷ್ಟಿಸಿದೆ. ಆ ವೃತ್ತಿಗಳ ಅನುಸಾರವೇ ಸಾತ್ತ್ವಿಕ, ರಾಜಸ, ತಾಮಸ ಹೀಗೆ ಅನೇಕ ಪ್ರಕಾರದ ಕರ್ಮಗಳು ನಡೆಯುತ್ತವೆ. ಕರ್ಮಗಳನುಸಾರವೇ ಜೀವಿಯ ವಿವಿಧ ಗತಿಗಳಾಗುತ್ತವೆ. ॥ ೪೪ ॥ ಮನಸ್ಸಿನ ವೃತ್ತಿಗಳ ಮೂಲಕವೇ ಕರ್ಮ ಪರಂಪರೆ ಉಂಟಾಗುತ್ತದೆ. ಆತ್ಮನಾದರೋ ನಿಷ್ಕ್ರಿಯನಾಗಿ, ಕರ್ಮಗಳ ಸಂಗದಿಂದ ರಹಿತನಾಗಿದ್ದಾನೆ. ಹಿರಣ್ಮಯ ಅರ್ಥಾತ್ – ವಿಜ್ಞಾನಸ್ವರೂಪಿಯಾಗಿದ್ದು, ಜೀವಿಯ ಸಖನಾಗಿರುವನು. ಸಾಕ್ಷಿರೂಪದಿಂದ ಎಚ್ಚರವಾಗಿದ್ದು ಜೀವಿಯನ್ನು ನೋಡುತ್ತಿರುತ್ತಾನೆ. ಆದರೆ ಜೀವಿಯು ಅಹಂಭಾವದಿಂದ ಮನಸ್ಸನ್ನು ಜೊತೆಯಾಗಿಸಿಕೊಂಡು ತನ್ನಲ್ಲಿಯೇ ಅನೇಕ ಪ್ರಕಾರದ ಗುಣವೃತ್ತಿಗಳನ್ನು ಕಲ್ಪಿಸಿಕೊಳ್ಳುತ್ತಾನೆ. ಅವುಗಳಲ್ಲಿ ಆಸಕ್ತನಾಗಿ ಸ್ವಯಂ ಬಂಧಿತನಾಗುತ್ತಾನೆ. ಈ ವಿಧವಾಗಿ ಮನಸ್ಸಿಗೆ ವಶೀಭೂತನಾಗಿ ಜೀವಿಯು ಅಲೆಯುತ್ತಾ ಇರುತ್ತಾನೆ. ॥ ೪೫ ॥ ದಾನ ಕೊಡುವುದು, ಸ್ವಧರ್ಮವನ್ನು ಪಾಲಿಸುವುದು, ಯಮ-ನಿಯಮಗಳನ್ನು ಪಾಲಿಸುವುದು, ವೇದಾಧ್ಯಯನ, ಒಳ್ಳೆಯ ವ್ರತಗಳನ್ನು ಪಾಲಿಸುವುದು, ವೇದಗಳಲ್ಲಿ ಹೇಳಿರುವ ಸತ್ಕರ್ಮಗಳು – ಹೀಗೆ ಇವೆಲ್ಲವೂ ಶುಭ ಕರ್ಮಗಳು. ಇವುಗಳಿಂದ ಮನಸ್ಸನ್ನು ವಶಪಡಿಸಲಾಗುತ್ತದೆ. ಇವೆಲ್ಲವನ್ನೂ ಮನಸ್ಸಿನ ನಿಗ್ರಹವಾಗುವ ತನಕ ಮಾಡಲೇ ಬೇಕು. ಆದರೆ ಮನಸ್ಸಿನ ಏಕಾಕಾರ ವೃತ್ತಿಯನ್ನು ಭಗವಂತನಲ್ಲಿ ತೊಡಗಿಸುವುದು ಪರಮ ಯೋಗವಾಗಿದೆ. ಮನಸ್ಸಿನ ಈ ಪ್ರಕಾರದ ಸಮಾಧಿ ಸ್ಥಿತಿ ಉಂಟಾದಮೇಲೆ ಬೇರೆ ಯಾವುದರ ಆವಶ್ಯಕತೆಯು ಉಳಿಯುವುದಿಲ್ಲ. ॥ ೪೬ ॥ ಯಾರ ಮನಸ್ಸು ಸುಸಂಯತವಾಗಿ

* ಸಾತ್ತ್ವಿಕ ಧೃತಿಯ ಲಕ್ಷಣ ಗೀತೆ ೧೮/೩೩ರಲ್ಲಿ ನೋಡಬೇಕು.

ಸಮಾಹಿತಂ ಯಸ್ಯ ಮನಃ ಪ್ರಶಾಂತಂ
ದಾನಾದಿಭಿಃ ಕಿಂ ವದ ತಸ್ಯ ಕೃತ್ಯಮ್ ।
ಅಸಂಯತಂ ಯಸ್ಯ ಮನೋವಿನಶ್ಯದ್
ದಾನಾದಿಭಿಶ್ಚೇದಪರಂ ಕಿಮೇಭಿಃ ॥ ೪೭ ॥

ಮನೋವಶೇಽನ್ಯೇ ಹ್ಯಭವನ್ ಸ್ಮ ದೇವಾ
ಮನಶ್ಚ ನಾನ್ಯಸ್ಯ ವಶಂ ಸಮೇತಿ ।
ಭೀಷ್ಮೋ ಹಿ ದೇವಃ ಸಹಸಃ ಸಹೀಯಾನ್
ಯುಂಜ್ಯಾದ್ವಶೇ ತಂ ಸ ಹಿ ದೇವದೇವಃ ॥ ೪೮ ॥

ತಂ ದುರ್ಜಯಂ ಶತ್ರುಮಸಹ್ಯವೇಗ-
ಮರುಂತುದಂ ತನ್ನ ವಿಜಿತ್ಯ ಕೇಚಿತ್ ।
ಕುರ್ವಂತ್ಯಸದ್ವಿಗ್ರಹಮತ್ರ ಮರ್ತ್ಯೈರ್-
ಮಿತ್ರಾಣ್ಯುದಾಸೀನರಿಪೂನ್ ವಿಮೂಢಾಃ ॥ ೪೯ ॥

ದೇಹಂ ಮನೋಮಾತ್ರಮಿಮಂ ಗೃಹೀತ್ವಾ
ಮಮಾಹಮಿತ್ಯಂಧಧಿಯೋ ಮನುಷ್ಯಾಃ ।
ಏಷೋಽಹಮನ್ಯೋಽಯಮಿತಿ ಭ್ರಮೇಣ
ದುರಂತಪಾರೇ ತಮಸಿ ಭ್ರಮಂತಿ ॥ ೫೦ ॥

ಜನಸ್ತು ಹೇತುಃ ಸುಖದುಃಖಯೋಶ್ಚೇತ್
ಕಿಮಾತ್ಮನಶ್ಚಾತ್ರ ಹ ಭೌಮಯೋಸ್ತತ್ ।
ಜಿಹ್ವಾಂ ಕ್ವಚಿತ್ ಸಂದಶತಿ ಸ್ವದದ್ಭಿಃ
ತದ್ವೇದನಾಯಾಂ ಕತಮಾಯ ಕುಪ್ಯೇತ್ ॥ ೫೧ ॥

ದುಃಖಸ್ಯ ಹೇತುರ್ಯದಿ ದೇವತಾಸ್ತು
ಕಿಮಾತ್ಮನಸ್ತತ್ರ ವಿಕಾರಯೋಸ್ತತ್ ।
ಯದಂಗಮಂಗೇನ ನಿಹನ್ಯತೇ ಕ್ವಚಿತ್
ಕ್ರುಧ್ಯೇತ ಕಸ್ಮೈ ಪುರುಷಃ ಸ್ವದೇಹೇ ॥ ೫೨ ॥

ಆತ್ಮಾ ಯದಿ ಸ್ಯಾತ್ಸುಖದುಃಖಹೇತುಃ
ಕಿಮನ್ಯತಸ್ತತ್ರ ನಿಜಸ್ವಭಾವಃ ।
ನ ಹ್ಯಾತ್ಮನೋಽನ್ಯದ್ಯದಿ ತನ್ಮೃಷಾ ಸ್ಯಾತ್
ಕ್ರುಧ್ಯೇತ ಕಸ್ಮಾನ್ನ ಸುಖಂ ನ ದುಃಖಮ್ ॥ ೫೩ ॥

ಪೂರ್ಣಶಾಂತವಾಗಿದೆಯೋ, ಅವನಿಗಾಗಿ ದಾನಾದಿ ಯಾವುದೇ ಕೃತ್ಯಗಳೂ ಕೂಡ ಬಾಕಿ ಉಳಿಯುವುದಿಲ್ಲ. ಯಾರ ಮನಸ್ಸು ವಶವಾಗಿಲ್ಲವೋ, ಅತ್ತ-ಇತ್ತ ಅಲೆಯುತ್ತಿದೆಯೋ, ಅವನಿಗೆ ದಾನಾದಿ ಕರ್ಮಗಳಿಂದಲೂ ಏನು ಲಾಭ ? ॥ ೪೭ ॥ ಮನಸ್ಸು ತನ್ನ ವಶವಾದಮೇಲೆ ಬೇರೆ ಇಂದ್ರಿಯಗಳ ದೇವತೆಗಳೂ ವಶರಾಗುತ್ತಾರೆ. ಇಂದ್ರಿಯಗಳು ಮನಸ್ಸನ್ನು ವಶಪಡಿಸಿ ಕೊಳ್ಳಲಾರವು. ಏಕೆಂದರೆ, ಮನಸ್ಸು ಬಲಿಷ್ಠರಲ್ಲಿ ಬಲಿಷ್ಠವಾಗಿದೆ. ಈ ಮನಸ್ಸಿನ ಮೇಲೆ ಹತೋಟಿ ಪಡೆಯುವವನು ದೇವತೆಗಳಿಗೂ ದೇವನಾಗುತ್ತಾನೆ. ॥ ೪೮ ॥ ನಿಜವಾಗಿಯೂ ಮನಸ್ಸು ಬಹು ದೊಡ್ಡ ಶತ್ರುವಾಗಿದೆ. ಇದರ ಆಕ್ರಮಣ ಅಸಹ್ಯವಾಗಿದೆ. ಇದು ಹೊರಗಿನ ಶರೀರವನ್ನೇ ಅಲ್ಲ, ಹೃದಯಾದಿ ಮರ್ಮಸ್ಥಾನಗಳನ್ನೂ ಭೇದಿಸುತ್ತದೆ. ಇದನ್ನು ಗೆಲ್ಲುವುದು ತುಂಬಾ ಕಠಿಣವಾಗಿದೆ. ಮನುಷ್ಯನು ಮೊಟ್ಟಮೊದಲಿಗೆ ಈ ಶತ್ರುವಿನ ಮೇಲೆ ವಿಜಯವನ್ನು ಪಡೆಯಬೇಕು. ಆದರೆ ಮೂರ್ಖಜನರು ಇದನ್ನು ಗೆಲ್ಲುವ ಪ್ರಯತ್ನವನ್ನೇ ಮಾಡುವುದಿಲ್ಲ. ಬೇರೆ ಮನುಷ್ಯರೊಂದಿಗೆ ಸುಳ್ಳು-ಸುಳ್ಳೇ ಜಗಳಕಾದು, ಈ ಜಗತ್ತಿನ ಜನರನ್ನೇ ಮಿತ್ರ-ಶತ್ರು – ಉದಾಸೀನರಾಗಿಸಿಕೊಳ್ಳುವರು. ॥ ೪೯ ॥ ಸಾಧಾರಣವಾಗಿ ಮನುಷ್ಯರ ಬುದ್ಧಿಯು ಕುರುಡಾಗಿರುತ್ತದೆ. ಆದರಿಂದಲೇ ಅವರು ಈ ಮನಃಕಲ್ಪಿತ ಶರೀರವನ್ನು 'ನಾನು–ನನ್ನದು' ಎಂದು ತಿಳಿದುಕೊಳ್ಳುತ್ತಾರೆ. ಮತ್ತೆ 'ಇದು ನಾನಾಗಿದ್ದೇನೆ – ಇದು ಬೇರೆಯಾಗಿದೆ' ಎಂಬ ಭ್ರಮೆಯ ಉರುಳಿನಲ್ಲಿ ಸಿಕ್ಕಿಹಾಕಿ ಕೊಳ್ಳುತ್ತಾರೆ. ಇದರ ಪರಿಣಾಮವಾಗಿ ಅವರು ಈ ಅನಂತ ಅಜ್ಞಾನಾಂಧಕಾರದಲ್ಲೇ ಅಲೆಯುತ್ತಾ ಇರುತ್ತಾರೆ. ॥ ೫೦ ॥ ಮನುಷ್ಯನೇ ಸುಖ–ದುಃಖಗಳಿಗೆ ಕಾರಣನಾಗಿದ್ದಾನೆ ಎಂದು ಒಪ್ಪಿಕೊಂಡರೂ ಅದರಲ್ಲಿ ಆತ್ಮನ ಸಂಬಂಧವೇನಿದೆ ? ಏಕೆಂದರೆ ಸುಖ–ದುಃಖಗಳನ್ನು ಕೊಡುವುದು ಮೃಣ್ಮಯಶರೀರವೇ ಆಗಿದೆ. ಭೋಗಿಸುವವನೂ ಮಣ್ಣಿನ ಶರೀರವೇ. ಎಂದಾದರೂ ಊಟದ ಸಮಯ ತನ್ನ ಹಲ್ಲುಗಳಿಂದಲೇ ತನ್ನ ನಾಲಿಗೆಯನ್ನು ಕಚ್ಚಿಕೊಂಡು ನೋವು ಉಂಟಾದರೆ ಮನುಷ್ಯನು ಯಾರ ಮೇಲೆ ಸಿಟ್ಟು ಮಾಡುವನು ? ॥ ೫೧ ॥ ದುಃಖವನ್ನು ಕೊಡುವುದರಲ್ಲಿ ದೇವತೆಗಳನ್ನು ಕಾರಣವೆಂದು ಒಪ್ಪಿಕೊಂಡರೆ, ಆದರಲ್ಲಿ ಆತ್ಮನ ಸಂಬಂಧವೇನಿದೆ ? ಏಕೆಂದರೆ, ಎಲ್ಲರ ಶರೀರಗಳಲ್ಲಿ ಇಂದ್ರಿಯಾಭಿಮಾನಿ ದೇವತೆಗಳು ಒಂದೇ ಆಗಿವೆ. ಇಂದ್ರಿಯದ ದೇವತೆಯು ಇನ್ನೊಂದು ಇಂದ್ರಿಯದ ದೇವತೆಗೆ ಕಷ್ಟಕೊಟ್ಟರೆ ಇದರಿಂದ ಆತ್ಮನ ಹಾನಿ ಏನಾಯಿತು ? ತನ್ನದೇ ಒಂದು ಅವಯವ ಇನ್ನೊಂದು ಅವಯವಕ್ಕೆ ತೊಂದರೆ ಕೊಟ್ಟರೆ ಯಾರಮೇಲೆ ಸಿಟ್ಟಾಗುವುದು ? ॥ ೫೨ ॥ ಆತ್ಮನನ್ನೇ ಸುಖ–ದುಃಖದ ಕಾರಣವೆಂದು ಒಪ್ಪಿಕೊಂಡರೆ ಬೇರೆಯವರಿಂದ ಅವನಿಗೆ ಏನು ಸಂಬಂಧವಿದೆ ? ಏಕೆಂದರೆ ಆತ್ಮನಾದರೋ ತನ್ನ ಸ್ವರೂಪವೇ ಆಗಿದೆ. ಆತ್ಮವಲ್ಲದೆ ಬೇರೆ ಏನೂ ಇಲ್ಲವೇ ಇಲ್ಲ. ಕಂಡುಬರುವುದೆಲ್ಲವೂ ಮಿಥ್ಯೆಯೇ ಆಗಿದೆ. ಆತ್ಮನು ಆನಂದ ಸ್ವರೂಪನಾಗಿದ್ದಾನೆ. ಅಲ್ಲಿ ಸುಖ–ದುಃಖ ಎರಡೂ ಇಲ್ಲ. ಹಾಗಾದರೆ ಸಿಟ್ಟು ಯಾರಮೇಲೆ ಮಾಡುವುದು ? ॥ ೫೩ ॥

ಗ್ರಹಾ ನಿಮಿತ್ತಂ ಸುಖದುಃಖಯೋಶ್ಚೇತ್
ಕಿಮಾತ್ಮನೋಽಜಸ್ಯ ಜನಸ್ಯ ತೇ ವೈ ।
ಗ್ರಹೈರ್ಗ್ರಹಸ್ಯೈವ ವದಂತಿ ಪೀಡಾಂ
ಕ್ರುಧ್ಯೇತ ಕಸ್ಮೈ ಪುರುಷಸ್ತತೋಽನ್ಯಃ ॥ ೫೪ ॥

ಕರ್ಮಾಸ್ತು ಹೇತುಃ ಸುಖದುಃಖಯೋಶ್ಚೇತ್
ಕಿಮಾತ್ಮನಸ್ತದ್ಧಿ ಜಡಾಜಡತ್ವೇ ।
ದೇಹಸ್ತ್ವಚಿತ್ ಪುರುಷೋಽಯಂ ಸುಪರ್ಣಃ
ಕ್ರುಧ್ಯೇತ ಕಸ್ಮೈ ನ ಹಿ ಕರ್ಮಮೂಲಮ್ ॥ ೫೫ ॥

ಕಾಲಸ್ತು ಹೇತುಃ ಸುಖದುಃಖಯೋಶ್ಚೇತ್
ಕಿಮಾತ್ಮನಸ್ತತ್ರ ತದಾತ್ಮಕೋಽಸೌ ।
ನಾಗ್ನೇರ್ಹಿ ತಾಪೋ ನ ಹಿಮಸ್ಯ ತತ್ ಸ್ಯಾತ್
ಕ್ರುಧ್ಯೇತ ಕಸ್ಮೈ ನ ಪರಸ್ಯ ದ್ವಂದ್ವಮ್ ॥ ೫೬ ॥

ನ ಕೇನಚಿತ್ ಕ್ವಾಪಿ ಕಥಂಚನಾಸ್ಯ
ದ್ವಂದ್ವೋಪರಾಗಃ ಪರತಃ ಪರಸ್ಯ ।
ಯಥಾಹಮಃ ಸಂಸೃತಿರೂಪಿಣಃ ಸ್ಯಾ-
ದೇವಂ ಪ್ರಬುದ್ಧೋ ನ ಬಿಭೇತಿ ಭೂತೈಃ ॥ ೫೭ ॥

ಏತಾಂ ಸ ಆಸ್ಥಾಯ ಪರಾತ್ಮನಿಷ್ಠಾ-
ಮಧ್ಯಾಸಿತಾಂ ಪೂರ್ವತಮೈರ್ಮಹರ್ಷಿಭಿಃ ।
ಅಹಂ ತರಿಷ್ಯಾಮಿ ದುರಂತಪಾರಂ
ತಮೋ ಮುಕುಂದಾಂಘ್ರಿನಿಷೇವಯೈವ ॥ ೫೮ ॥

ಶ್ರೀಭಗವಾನುವಾಚ

ನಿರ್ವಿದ್ಯ ನಷ್ಟದ್ರವಿಣೋ ಗತಕ್ಲಮಃ
ಪ್ರವ್ರಜ್ಯ ಗಾಂ ಪರ್ಯಟಮಾನ ಇತ್ಥಮ್ ।
ನಿರಾಕೃತೋಽಸದ್ಭಿರಪಿ ಸ್ವಧರ್ಮಾ-
ದಕಂಪಿತೋಽಮುಂ ಮುನಿರಾಹ ಗಾಥಾಮ್ ॥ ೫೯ ॥

ಸುಖ-ದುಃಖಗಳನ್ನು ಕೊಡುವವರು ಗ್ರಹಗಳು ಎಂದು ಒಪ್ಪಿಕೊಂಡರೆ, ಅಜನ್ಮಾ ಆತ್ಮನಿಗೆ ಸುಖ-ದುಃಖಗಳನ್ನು ಕೊಡಲು ಅವು ಕಾರಣವಾಗಲಾರರು. ಏಕೆಂದರೆ, ಹುಟ್ಟಿದವನಿಗೇ ಗ್ರಹಗಳು ಪೀಡೆ ಕೊಡಬಲ್ಲರು. ಆತ್ಮನು ಶಾಶ್ವತನಾಗಿದ್ದಾನೆ. ಶರೀರ ನಾಶ ವುಳ್ಳದ್ದಾಗಿದೆ. ಆದ್ದರಿಂದ ಗ್ರಹಗಳ ಪ್ರಭಾವ ಶರೀರದ ಮೇಲೆಯೇ ಬೀಳಬಲ್ಲದು. ಆತ್ಮನಿಗೆ ಅದರೊಂದಿಗೆ ಯಾವ ಸಂಬಂಧವೂ ಇಲ್ಲ. ಹಾಗಾದರೆ ಕ್ರೋಧ ಯಾರ ಮೇಲೆ ಮಾಡು ವುದು ? ॥ ೫೪ ॥ ಕರ್ಮಗಳನ್ನೇ ಸುಖ-ದುಃಖದ ಕಾರಣ ವೆಂದು ಒಪ್ಪಿಕೊಂಡರೆ, ಅವುಗಳೊಂದಿಗೆ ಆತ್ಮನ ಸಂಬಂಧ ಏನಿದೆ ? ಏಕೆಂದರೆ ಆತ್ಮನು ಸಾಕ್ಷಿಯಾಗಿದ್ದಾನೆ, ಶುದ್ಧ ಜ್ಞಾನ ಸ್ವರೂಪನಾಗಿದ್ದಾನೆ. ಜಡ ಮತ್ತು ಚೇತನಗಳು ಸೇರದೇ ಕರ್ಮ ಸಂಭವವಿಲ್ಲ. ಅವನು ಕರ್ಮಗಳಿಂದ ಸರ್ವಥಾ ನಿರ್ಲಿಪ್ತ ನಾಗಿರುವನು. ದೇಹವು ಜಡವಾಗಿರುವುದರಿಂದ ಏನೂ ಮಾಡು ವುದಿಲ್ಲ. ಆದೇ ರೀತಿ ಆತ್ಮ ಚೇತನವಾಗಿದೆ. ಆದ್ದರಿಂದ ಕರ್ಮಗಳ ಸಂಬಂಧವಿಲ್ಲ.ಹೀಗೆ ಕರ್ಮಮೂಲಕ ಸುಖ-ದುಃಖಗಳು ಮತ್ತು ಆತ್ಮನಿಗೆ ಯಾವ ಸಂಬಂಧವಿದೆ ? ಹಾಗೂ ಅವನು ಯಾರಮೇಲೆ ಸಿಟ್ಟುಮಾಡುವುದು? ॥ ೫೫ ॥ ಕಾಲವನ್ನು ಸುಖ-ದುಃಖವನ್ನು ಕೊಡುವವನೆಂದು ಒಪ್ಪಿಕೊಂಡರೆ ಕಾಲ ಮತ್ತು ಆತ್ಮಾ ಒಂದೇ ಆಗಿದೆ. ಈ ರೀತಿ ಆತ್ಮನಿಂದ ಆತ್ಮನಿಗೆ ಕಷ್ಟವಾಗುವುದಿಲ್ಲ. ಅಗ್ನಿಗೆ ಅಗ್ನಿಯಿಂದ ತಾಪವಾಗುವುದಿಲ್ಲ, ಮಂಜುಗಡ್ಡೆಯಿಂದ ಮಂಜು ಗಡ್ಡೆಗೆ ಶೀತಲತೆ ಬಾಧಿಸದು. ಹಾಗೆಯೇ ಆತ್ಮನಿಗೂ ಸುಖ-ದುಃಖಾದಿ ದ್ವಂದ್ವಗಳು ಇಲ್ಲ. ಇಂತಹ ಸ್ಥಿತಿಯಲ್ಲಿ ಸಿಟ್ಟು ಯಾರಮೇಲೆ ಮಾಡುವುದು ? ॥ ೫೬ ॥ ಪ್ರಕೃತಿಯಿಂದಲೂ ಅತೀತನಾದ ಆತ್ಮನಿಗೆ ಯಾರಿಂದಲೂ, ಯಾವರೀತಿಯಿಂದಲೂ ದ್ವಂದ್ವಗಳ ಸ್ಪರ್ಶವಾಗುವುದಿಲ್ಲ. ಇರುವ ಈ ಅಹಂಕಾರವೇ ಸಂಸೃತಿ (ಸಂಸಾರ)ರೂಪವಾಗಿದೆ. ಅದರಿಂದಲೇ ದ್ವಂದ್ವಗಳು ಉಂಟಾಗುತ್ತವೆ. ಈ ದ್ವಂದ್ವಗಳಿಂದ ಜನ್ಮ ಮೃತ್ಯು ಉಂಟಾ ಗುತ್ತದೆ. ಆದರೆ ಆತ್ಮಾ ಈ ದ್ವಂದ್ವಗಳಿಂದ ಮುಕ್ತವಾಗಿದೆ. ಹೀಗೆ ತಿಳಿದುಕೊಂಡ ಯೋಗಿಯು ಯಾವ ಪ್ರಾಣಿಗೂ ಹೆದರು ವುದಿಲ್ಲ. ॥ ೫೭ ॥ ಹಿಂದೆ ಮಹರ್ಷಿಗಳು ಆಶ್ರಯಿಸಿದ ಅಧ್ಯಾತ್ಮ-ನಿಷ್ಠೆಯನ್ನೇ ನಾನೂ ಆಶ್ರಯ ಪಡೆಯುವೆನು. ಈ ಪ್ರಕಾರ ಭಗವಾನ್ ಮುಕುಂದನ ಚರಣಕಮಲಗಳ ಸೇವೆಯ ಪ್ರಭಾವ ದಿಂದ ಈ ಅಜ್ಞಾನರೂಪೀ ಅಗಾಧ ಸಂಸಾರಸಾಗರವನ್ನು ದಾಟಿ ಹೋಗುವೆನು. ॥ ೫೮ ॥

ಭಗವಾನ್ ಶ್ರೀಕೃಷ್ಣನು ಹೇಳುತ್ತಾನೆ – ಎಲೈ ಉದ್ಧವನೇ ! ಆ ಅವಧೂತ ಬ್ರಾಹ್ಮಣನು ನಷ್ಟವಾಗಿ ಹೋದ ಧನದ ಕ್ಲೇಶವನ್ನೂ ಪೂರ್ಣವಾಗಿ ಕಳೆದುಕೊಂಡನು. ಈಗ ಅವನು ಪ್ರಪಂಚದಿಂದ ವಿರಕ್ತನಾಗಿದ್ದು ಸಂನ್ಯಾಸಿಯಾಗಿ ಭೂಮಿಯಲ್ಲಿ ಸ್ವಚ್ಛಂದವಾಗಿ ವಿಚರಿಸುತ್ತಿದ್ದನು. ದುಷ್ಟರು ಅವನನ್ನು ಬಹಳವಾಗಿ ಕಾಡಿದರೂ ಅವನು ತನ್ನ ಧರ್ಮದಿಂದ ವಿಚಲಿತನಾಗದೇ ಅಚಲವಾಗಿದ್ದನು. ಆಗ ಆ ಮೌನೀ ಅವಧೂತನು ಮನಸ್ಸಿನಲ್ಲೇ ಈ ಮೇಲಿನ ಗೀತೆಯನ್ನು ಹಾಡಿದ್ದನು. ॥ ೫೯ ॥

ಸುಖದುಃಖಪ್ರದೋ ನಾನ್ಯಃ ಪುರುಷಸ್ಯಾತ್ಮವಿಭ್ರಮಃ ।
ಮಿತ್ರೋದಾಸೀನರಿಪವಃ ಸಂಸಾರಸ್ತಮಸಃ ಕೃತಃ
॥ ೬೦ ॥

ಉದ್ಧವನೇ ! ಈ ಪ್ರಪಂಚದಲ್ಲಿ ಮನುಷ್ಯನಿಗೆ ಬೇರೆ ಯಾರೂ ಸುಖ-ದುಃಖಗಳನ್ನು ಕೊಡುವುದಿಲ್ಲ, ಇದಾದರೋ ಅವನ ಚಿತ್ತದ ಭ್ರಮೆಮಾತ್ರವಾಗಿದೆ. ಈ ಇಡೀ ಪ್ರಪಂಚ ಮತ್ತು ಇದರೊಳಗಿನ ಮಿತ್ರ, ಉದಾಸೀನ, ಶತ್ರು ಈ ಭೇದಗಳು ಅಜ್ಞಾನ ಕಲ್ಪಿತವಾಗಿವೆ. ॥ ೬೦ ॥

ತಸ್ಮಾತ್ ಸರ್ವಾತ್ಮನಾ ತಾತ ನಿಗೃಹಾಣ ಮನೋ ಧಿಯಾ ।
ಮಯ್ಯಾವೇಶಿತಯಾ ಯುಕ್ತ ಏತಾವಾನ್ಯೋಗಸಂಗ್ರಹಃ
॥ ೬೧ ॥

ಆದಕ್ಕಾಗಿ ಪ್ರಿಯ ಉದ್ಧವನೇ ! ನಿನ್ನ ವೃತ್ತಿಗಳನ್ನು ನನ್ನಲ್ಲಿ ತನ್ಮಯಗೊಳಿಸು ಹಾಗೂ ನಿನ್ನ ಶಕ್ತಿಯೆಲ್ಲವನ್ನು ತೊಡಗಿಸಿ ಮನಸ್ಸನ್ನು ವಶಪಡಿಸಿಕೋ. ಮತ್ತೆ ನನ್ನಲ್ಲೇ ನಿತ್ಯ ಯುಕ್ತನಾಗಿ ಸ್ಥಿತನಾಗಿ ಬಿಡು, ಸಾಕು. ಎಲ್ಲ ಯೋಗಸಾಧನೆಯ ಸಾರ-ಸಂಗ್ರಹ ಇದೇ ಆಗಿದೆ. ॥ ೬೧ ॥

ಯ ಏತಾಂ ಭಿಕ್ಷುಣಾ ಗೀತಾಂ ಬ್ರಹ್ಮನಿಷ್ಠಾಂ ಸಮಾಹಿತಃ ।
ಧಾರಯನ್ ಶ್ರಾವಯನ್ ಶೃಣ್ವನ್ ದ್ವಂದ್ವೈರ್ನೈವಾಭಿಭೂಯತೇ
॥ ೬೨ ॥

ಈ ಭಿಕ್ಷು (ಸಂನ್ಯಾಸಿಯ) ಗೀತೆಯು ಮೂರ್ತಿಮಂತ ಬ್ರಹ್ಮಜ್ಞಾನ ನಿಷ್ಠೆಯೇ ಆಗಿದೆ. ಇದನ್ನು ಏಕಾಗ್ರಚಿತ್ತದಿಂದ ಕೇಳಿ, ಹೇಳಿ, ಧಾರಣೆಮಾಡುವವನು ಎಂದೂ ದುಃಖಾದಿ ದ್ವಂದ್ವಗಳಿಗೆ ವಶನಾಗಲಾರನು. ॥ ೬೨ ॥

ಇಪ್ಪತ್ತಮೂರನೆಯ ಅಧ್ಯಾಯವು ಮುಗಿಯಿತು. ॥ ೨೩ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಏಕಾದಶಸ್ಕಂಧೇ ತ್ರಯೋವಿಂಶೋಽಧ್ಯಾಯಃ ॥ ೨೩ ॥

ಇಪ್ಪತ್ತನಾಲ್ಕನೆಯ ಅಧ್ಯಾಯ

ಸಾಂಖ್ಯಯೋಗ

ಶ್ರೀಭಗವಾನುವಾಚ

ಅಥ ತೇ ಸಂಪ್ರವಕ್ಷ್ಯಾಮಿ ಸಾಂಖ್ಯಂ ಪೂರ್ವೈರ್ವಿನಿಶ್ಚಿತಮ್ ।
ಯದ್ವಿಜ್ಞಾಯ ಪುಮಾನ್ಸದ್ಯೋ ಜಹ್ಯಾದ್ವೈಕಲ್ಪಿಕಂ ಭ್ರಮಮ್
॥ ೧ ॥

ಭಗವಾನ್ ಶ್ರೀಕೃಷ್ಣನು ಹೇಳುತ್ತಾನೆ – ಪ್ರಿಯ ಉದ್ಧವನೇ ! ಈಗ ನಿನಗೆ ಸಾಂಖ್ಯಶಾಸ್ತ್ರದ ನಿರ್ಣಯವನ್ನು ಹೇಳುವೆನು. ಹಿಂದಿನಕಾಲದ ದೊಡ್ಡ-ದೊಡ್ಡ ಋಷಿ-ಮುನಿಗಳು ಇದನ್ನು ನಿಶ್ಚಯಿಸಿರುವರು. ಜೀವಿಯು ಇದನ್ನು ಚೆನ್ನಾಗಿ ತಿಳಿದುಕೊಂಡರೆ, ಅವನು ವೈಕಲ್ಪಿಕ ಭ್ರಮೆಯನ್ನು ತತ್ಕಾಲವೇ ತ್ಯಜಿಸಿಬಿಡುವನು. ಒಂದು ಬ್ರಹ್ಮನಲ್ಲದೆ ಬೇರೆ ಏನೂ ಇಲ್ಲವೇ ಇಲ್ಲ ಎಂಬುದು ಅವನ ಅರಿವಿಗೆ ಬರುತ್ತದೆ. ॥ ೧ ॥

ಆಸೀಜ್ಜ್ಞಾನಮಥೋ ಹ್ಯರ್ಥ ಏಕಮೇವಾವಿಕಲ್ಪಿತಮ್ ।
ಯದಾ ವಿವೇಕನಿಪುಣಾ ಆದೌ ಕೃತಯುಗೇಽಯುಗೇ
॥ ೨ ॥

ಕಲ್ಪದ ಪ್ರಾರಂಭದಲ್ಲಿ ಯುಗವೇ ಇಲ್ಲದಿದ್ದಾಗ ಜ್ಞಾನ-ಜ್ಞೇಯ (ವಸ್ತುಪದಾರ್ಥ) ಹೀಗೆ ಯಾವ ಭೇದವೂ ಇರಲಿಲ್ಲ, ಕೇವಲ ಒಂದೇ ತತ್ತ್ವವು ಅವಿಭಾಜಿತವಾಗಿತ್ತು. ಬಳಿಕ ಕೃತಯುಗವು ಬಂದಾಗ ವಿವೇಕ ನಿಪುಣರಾದ ಜನರು ಬಂದರು. ಆಗ ಎಲ್ಲರಲ್ಲಿಯೂ ಬ್ರಹ್ಮದೃಷ್ಟಿಯೇ ಇತ್ತು. ಅವರು ಎಲ್ಲರನ್ನೂ ಅಭೇದರೂಪವಾಗಿ ಓರ್ವ ಪರಮಾತ್ಮನ ಸ್ವರೂಪವೆಂದೇ ತಿಳಿಯುತ್ತಿದ್ದರು. ॥ ೨ ॥

ತನ್ಮಾಯಾಫಲರೂಪೇಣ ಕೇವಲಂ ನಿರ್ವಿಕಲ್ಪಿತಮ್ ।
ವಾಙ್ಮನೋಽಗೋಚರಂ ಸತ್ಯಂ ದ್ವಿಧಾ ಸಮಭವದ್ಬೃಹತ್
॥ ೩ ॥

ಬ್ರಹ್ಮನಲ್ಲಿ ಯಾವ ಪ್ರಕಾರದ ವಿಕಲ್ಪವೂ ಇಲ್ಲ; ಅದು ಕೇವಲ – ಅದ್ವಿತೀಯ ಸತ್ಯವಾಗಿದೆ. ಮನಸ್ಸು ವಾಣಿಯ ಗತಿಯು ಅದರಲ್ಲಿಲ್ಲ. ಆ ಬೃಹತ್ ಸತ್ಯಸ್ವರೂಪೀ ಬ್ರಹ್ಮವೇ ಮಾಯೆ ಮತ್ತು ಅದರಲ್ಲಿ ಪ್ರತಿಬಿಂಬಿತ ಜೀವಿಯ ರೂಪದಲ್ಲಿ – ದೃಶ್ಯ ಮತ್ತು ದೃಷ್ಟಾನ ರೂಪದಲ್ಲಿ – ಎರಡು ಭಾಗವಾಗಿ ವಿಭಕ್ತನಂತೇ ಆದನು. ॥ ೩ ॥

ತಯೋರೇಕತರೋ ಹ್ಯರ್ಥಃ ಪ್ರಕೃತಿಃ ಸೋಭಯಾತ್ಮಿಕಾ ।
ಜ್ಞಾನಂ ತ್ವನ್ಯತಮೋ ಭಾವಃ ಪುರುಷಃ ಸೋಽಭಿಧೀಯತೇ
॥ ೪ ॥

ಅದರಲ್ಲಿ ಒಂದು ವಸ್ತುವನ್ನು ಪ್ರಕೃತಿ ಎಂದು ಹೇಳುತ್ತಾರೆ. ಅದೇ ಜಗತ್ತಿನಲ್ಲಿ ಕಾರ್ಯ ಮತ್ತು ಕಾರಣದ ರೂಪವನ್ನು ಧರಿಸಿತು. ಈ ಪ್ರಕಾರ ಕಾರ್ಯ ಮತ್ತು ಕಾರಣರೂಪವನ್ನು ಧರಿಸುವುದರಿಂದ ಪ್ರಕೃತಿಯು ಉಭಯಾತ್ಮಿಕೆಯಾಯಿತು. ಎರಡನೆಯ ವಸ್ತುವು ಚೇತನ ಜೀವಾತ್ಮಾ

ತಮೋ ರಜಃ ಸತ್ತ್ವಮಿತಿ ಪ್ರಕೃತೇರಭವನ್ಗುಣಾಃ ।
ಮಯಾ ಪ್ರಕ್ಷೋಭ್ಯಮಾಣಾಯಾಃ ಪುರುಷಾನುಮತೇನ ಚ ॥ ೫ ॥

ತೇಭ್ಯಃ ಸಮಭವತ್ಸೂತ್ರಂ ಮಹಾನ್ಸೂತ್ರೇಣ ಸಂಯುತಃ ।
ತತೋ ವಿಕುರ್ವತೋ ಜಾತೋಽಹಂಕಾರೋ ಯೋ ವಿಮೋಹನಃ ॥ ೬ ॥

ವೈಕಾರಿಕಸ್ತೈಜಸಶ್ಚ ತಾಮಸಶ್ಚೇತ್ಯಹಂ ತ್ರಿವೃತ್ ।
ತನ್ಮಾತ್ರೇಂದ್ರಿಯಮನಸಾಂ ಕಾರಣಂ ಚಿದಚಿನ್ಮಯಃ ॥ ೭ ॥

ಅರ್ಥಸ್ತನ್ಮಾತ್ರಿಕಾಜ್ಜಜ್ಞೇ ತಾಮಸಾದಿಂದ್ರಿಯಾಣಿ ಚ ।
ತೈಜಸಾದ್ದೇವತಾ ಆಸನ್ನೇಕಾದಶ ಚ ವೈಕೃತಾತ್ ॥ ೮ ॥

ಮಯಾ ಸಂಚೋದಿತಾ ಭಾವಾಃ ಸರ್ವೇ ಸಂಹತ್ಯಕಾರಿಣಃ ।
ಅಂಡಮುತ್ಪಾದಯಾಮಾಸುರ್ಮಮಾಯತನಮುತ್ತಮಮ್ ॥ ೯ ॥

ತಸ್ಮಿನ್ನಹಂ ಸಮಭವಮಂಡೇ ಸಲಿಲಸಂಸ್ಥಿತೌ ।
ಮಮ ನಾಭ್ಯಾಮಭೂತ್ಪದ್ಮಂ ವಿಶ್ವಾಖ್ಯಂ ತತ್ರ ಚಾತ್ಮಭೂಃ ॥ ೧೦ ॥

ಸೋಽಸೃಜತ್ತಪಸಾ ಯುಕ್ತೋ ರಜಸಾ ಮದನುಗ್ರಹಾತ್ ।
ಲೋಕಾನ್ಸಪಾಲಾನ್ ವಿಶ್ವಾತ್ಮಾ ಭೂರ್ಭುವಃಸ್ವರಿತಿ ತ್ರಿಧಾ ॥ ೧೧ ॥

ದೇವಾನಾಮೋಕ ಆಸೀತ್ಸ್ವರ್ಭೂತಾನಾಂ ಚ ಭುವಃ ಪದಮ್ ।
ಮರ್ತ್ಯಾದೀನಾಂ ಚ ಭೂರ್ಲೋಕಃ ಸಿದ್ಧಾನಾಂ ತ್ರಿತಯಾತ್ಪರಮ್ ॥ ೧೨ ॥

ಅಧೋಽಸುರಾಣಾಂ ನಾಗಾನಾಂ ಭೂಮೇರೋಕೋಽಸೃಜತ್ಪ್ರಭುಃ ।
ತ್ರಿಲೋಕ್ಯಾಂ ಗತಯಃ ಸರ್ವಾಃ ಕರ್ಮಣಾಂ ತ್ರಿಗುಣಾತ್ಮನಾಮ್ ॥ ೧೩ ॥

ಯೋಗಸ್ಯ ತಪಸಶ್ಚೈವ ನ್ಯಾಸಸ್ಯ ಗತಯೋಽಮಲಾಃ ।
ಮಹರ್ಜನಸ್ತಪಃ ಸತ್ಯಂ ಭಕ್ತಿಯೋಗಸ್ಯ ಮದ್ಗತಿಃ ॥ ೧೪ ॥

ಅದು ಜ್ಞಾನಸ್ವರೂಪನಾಗಿದ್ದು, ಅವನನ್ನು ಪುರುಷನೆಂದು ಹೇಳುತ್ತಾರೆ. ॥ ೪ ॥ ಉದ್ಧವನೇ! ನಾನೇ ಜೀವಿಗಳ ಶುಭ-ಅಶುಭ ಕರ್ಮಗಳನುಸಾರವಾಗಿ ಪ್ರಕೃತಿಯನ್ನು ಕ್ಷುಬ್ಧಗೊಳಿಸಿದೆ. ಆಗ ಅದರಿಂದ ಸತ್ತ್ವ, ರಜ, ತಮ ಈ ಮೂರು ಗುಣಗಳು ಪ್ರಕಟವಾದುವು. ॥ ೫ ॥ ಅವುಗಳಿಂದ ಕ್ರಿಯಾ-ಶಕ್ತಿಪ್ರಧಾನ ಸೂತ್ರ ಮತ್ತು ಜ್ಞಾನಶಕ್ತಿಪ್ರಧಾನ ಮಹತ್ತತ್ತ್ವ ಪ್ರಕಟವಾಯಿತು. ಅವೆರಡೂ ಪರಸ್ಪರ ಕೂಡಿಕೊಂಡೇ ಇರುತ್ತವೆ. ಮಹತ್ತತ್ತ್ವದಲ್ಲಿ ವಿಕಾರ ಉಂಟಾದಾಗ ಅಹಂಕಾರ ವ್ಯಕ್ತವಾಯಿತು. ಈ ಅಹಂಕಾರವೇ ಜೀವಿಗಳನ್ನು ಮೋಹದಲ್ಲಿ ಕೆಡಹುವಂತಹುದು. ॥ ೬ ॥ ಆ ಅಹಂಕಾರವು ಸಾತ್ತ್ವಿಕ, ರಾಜಸ, ತಾಮಸ ಎಂಬ ಮೂರು ಪ್ರಕಾರದಿಂದಿದೆ. ಅಹಂಕಾರವೇ ಪಂಚತನ್ಮಾತ್ರೆಗಳು, ಇಂದ್ರಿಯಗಳು, ಮನಸ್ಸು ಇವುಗಳ ಕಾರಣವಾಗಿದೆ. ಅದು ಜಡ-ಚೇತನ ಉಭಯಾತ್ಮಕವಾಗಿದೆ. ಈ ಅಹಂಕಾರವು ಕಾರ್ಯವೂ, ಕಾರಣವೂ ಆಗಿದೆ. ॥ ೭ ॥ ತಾಮಸ ಅಹಂಕಾರದಿಂದ ಪಂಚತನ್ಮಾತ್ರೆಗಳು ಮತ್ತು ಅವುಗಳಿಂದ ಪಂಚಭೂತಗಳ ಉತ್ಪತ್ತಿಯಾಯಿತು. ರಾಜಸ ಅಹಂಕಾರದಿಂದ ಇಂದ್ರಿಯಗಳು ಮತ್ತು ಸಾತ್ತ್ವಿಕ ಅಹಂಕಾರದಿಂದ ಇಂದ್ರಿಯಗಳ ಅಧಿಷ್ಠಾತೃ ಹನ್ನೊಂದು ದೇವತೆಗಳು ಪ್ರಕಟಗೊಂಡವು. ॥ ೮ ॥ ಇವೆಲ್ಲ ಪದಾರ್ಥಗಳು ನನ್ನ ಪ್ರೇರಣೆಯಿಂದ ಒಂದಾಗಿ ಪರಸ್ಪರ ಸೇರಿಕೊಂಡವು. ಇವುಗಳೇ ಈ ಬ್ರಹ್ಮಾಂಡರೂಪೀ ಅಂಡವನ್ನು ಉತ್ಪನ್ನಮಾಡಿದವು. ಈ ಬ್ರಹ್ಮಾಂಡವು ನನ್ನ ಉತ್ತಮ ನಿವಾಸವಾಗಿದೆ. ॥ ೯ ॥ ಈ ಅಂಡವು ನೀರಿನಲ್ಲಿ ಸ್ಥಿತವಾದಾಗ ನಾನೇ ನಾರಾಯಣರೂಪದಿಂದ ಇದರಲ್ಲಿ ವಿರಾಜಮಾನನಾದೆ. ನನ್ನ ನಾಭಿಯಿಂದ ವಿಶ್ವಕಮಲದ ಉತ್ಪತ್ತಿಯಾಯಿತು. ಅದರ ಮೇಲೆ ಬ್ರಹ್ಮನ ಆವಿರ್ಭಾವ ವಾಯಿತು. ॥ ೧೦ ॥ ವಿಶ್ವಸ್ರಷ್ಟಾ ಬ್ರಹ್ಮನು ಬಹಳ ದೊಡ್ಡ ತಪಸ್ಸು ಮಾಡಿದನು. ಅನಂತರ ನನ್ನ ಕೃಪಾಪ್ರಸಾದವನ್ನು ಪಡೆದು, ರಜೋಗುಣದ ಮೂಲಕ ಭೂಃ, ಭುವಃ, ಸ್ವಃ, ಅರ್ಥಾತ್ – ಪೃಥ್ವಿ, ಅಂತರಿಕ್ಷ, ಸ್ವರ್ಗ ಈ ಮೂರು ಲೋಕಗಳ ಹಾಗೂ ಇವುಗಳ ಲೋಕಪಾಲಕರನ್ನು ರಚಿಸಿದನು. ॥ ೧೧ ॥ ದೇವತೆಗಳ ನಿವಾಸಕ್ಕಾಗಿ ಸ್ವರ್ಲೋಕವನ್ನೂ, ಭೂತ-ಪ್ರೇತಾದಿಗಳಿಗಾಗಿ ಭುವರ್ಲೋಕ (ಅಂತರಿಕ್ಷ)ವನ್ನೂ, ಮನುಷ್ಯಾದಿಗಳಿಗಾಗಿ ಭೂರ್ಲೋಕ (ಪೃಥಿವಿ)ಯನ್ನೂ ನಿಶ್ಚಯಿಸಿದನು. ಈ ಮೂರು ಲೋಕಗಳ ಮೇಲೆ ಮಹರ್ಲೋಕ, ತಪೋಲೋಕ ಮುಂತಾದವುಗಳು ಸಿದ್ಧರ ನಿವಾಸಸ್ಥಾನಗಳಾದವು. ॥ ೧೨ ॥ ಸೃಷ್ಟಿಕಾರ್ಯದಲ್ಲಿ ಸಮರ್ಥರಾದ ಬ್ರಹ್ಮದೇವರು ಅಸುರ ಮತ್ತು ನಾಗಗಳಿಗಾಗಿ ಪೃಥ್ವಿಯ ಕೆಳಗೆ ಅತಲ, ವಿತಲ, ಸುತಲ ಮುಂತಾದ ಏಳು ಪಾತಾಳಗಳನ್ನು ನಿರ್ಮಿಸಿದರು. ಸ್ವರ್ಗ, ಮರ್ತ್ಯ, ಅಂತರಿಕ್ಷ ಈ ಮೂರು ಲೋಕಗಳಲ್ಲಿ ತ್ರಿಗುಣಾತ್ಮಿಕ ಕರ್ಮಗಳನುಸಾರ ವಿವಿಧಗತಿಗಳು ಪ್ರಾಪ್ತವಾಗುತ್ತವೆ. ॥ ೧೩ ॥ ಯೋಗ, ತಪಸ್ಸು, ಸಂನ್ಯಾಸದ ಮೂಲಕ ಮಹರ್ಲೋಕ, ಜನೋಲೋಕ, ತಪೋಲೋಕ ಮತ್ತು ಸತ್ಯಲೋಕರೂಪೀ ಉತ್ತಮ ಗತಿಯು ದೊರೆಯುತ್ತದೆ. ಹಾಗೆಯೇ ಭಕ್ತಿಯೋಗದಿಂದ ನನ್ನ ಪರಮಧಾಮವು ದೊರೆಯುತ್ತದೆ. ॥ ೧೪ ॥

ಮಯಾ ಕಾಲಾತ್ಮನಾ ಧಾತ್ರಾ ಕರ್ಮಯುಕ್ತಮಿದಂ ಜಗತ್ ।
ಗುಣಪ್ರವಾಹ ಏತಸ್ಮಿನ್ನುನ್ಮಜ್ಜತಿ ನಿಮಜ್ಜತಿ ॥ ೧೫ ॥

ಅಣುರ್ಬೃಹತ್ ಕೃಶಃ ಸ್ಥೂಲೋ ಯೋ ಯೋ ಭಾವಃ ಪ್ರಸಿಧ್ಯತಿ ।
ಸರ್ವೋಽಪ್ಯುಭಯಸಂಯುಕ್ತಃ ಪ್ರಕೃತ್ಯಾ ಪುರುಷೇಣ ಚ ॥ ೧೬ ॥

ಯಸ್ತು ಯಸ್ಯಾದಿರಂತಶ್ಚ ಸ ವೈ ಮಧ್ಯಂ ಚ ತಸ್ಯ ಸನ್ ।
ವಿಕಾರೋ ವ್ಯವಹಾರಾರ್ಥೋ ಯಥಾ ತೈಜಸಪಾರ್ಥಿವಾಃ ॥ ೧೭ ॥

ಯದುಪಾದಾಯ ಪೂರ್ವಸ್ತು ಭಾವೋ ವಿಕುರುತೇಽಪರಮ್ ।
ಆದಿರಂತೋ ಯದಾ ಯಸ್ಯ ತತ್ಸತ್ಯಮಭಿಧೀಯತೇ ॥ ೧೮ ॥

ಪ್ರಕೃತಿರ್ಹ್ಯಸ್ಯೋಪಾದಾನಮಾಧಾರಃ ಪುರುಷಃ ಪರಃ ।
ಸತೋಽಭಿವ್ಯಂಜಕಃ ಕಾಲೋ ಬ್ರಹ್ಮ ತತ್ತ್ರಿತಯಂ ತ್ವಹಮ್ ॥ ೧೯ ॥

ಸರ್ಗಃ ಪ್ರವರ್ತತೇ ತಾವತ್ ಪೌರ್ವಾಪರ್ಯೇಣ ನಿತ್ಯಶಃ ।
ಮಹಾನ್ಗುಣವಿಸರ್ಗಾರ್ಥಃ ಸ್ಥಿತ್ಯಂತೋ ಯಾವದೀಕ್ಷಣಮ್ ॥ ೨೦ ॥

ವಿರಾಣ್ಮಯಾಽಽಸಾದ್ಯಮಾನೋ ಲೋಕಕಲ್ಪವಿಕಲ್ಪಕಃ ।
ಪಂಚತ್ವಾಯ ವಿಶೇಷಾಯ ಕಲ್ಪತೇ ಭುವನೈಃ ಸಹ ॥ ೨೧ ॥

ಅನ್ನೇ ಪ್ರಲೀಯತೇ ಮರ್ತ್ಯಮನ್ನಂ ಧಾನಾಸು ಲೀಯತೇ ।
ಧಾನಾ ಭೂಮೌ ಪ್ರಲೀಯಂತೇ ಭೂಮಿರ್ಗಂಧೇ ಪ್ರಲೀಯತೇ ॥ ೨೨ ॥

ಅಪ್ಸು ಪ್ರಲೀಯತೇ ಗಂಧ ಆಪಶ್ಚ ಸ್ವಗುಣೇ ರಸೇ ।
ಲೀಯತೇ ಜ್ಯೋತಿಷಿ ರಸೋ ಜ್ಯೋತೀ ರೂಪೇ ಪ್ರಲೀಯತೇ ॥ ೨೩ ॥

ರೂಪಂ ವಾಯೌ ಸ ಚ ಸ್ಪರ್ಶೇ ಲೀಯತೇ ಸೋಽಪಿ ಚಾಂಬರೇ ।
ಅಂಬರಂ ಶಬ್ದತನ್ಮಾತ್ರ ಇಂದ್ರಿಯಾಣಿ ಸ್ವಯೋನಿಷು ॥ ೨೪ ॥

ಈ ಇಡೀ ಜಗತ್ತು ಕರ್ಮ ಮತ್ತು ಅವುಗಳ ಸಂಸ್ಕಾರಗಳಿಂದ ಯುಕ್ತವಾಗಿದೆ. ನಾನೇ ಕಾಲರೂಪದಿಂದ ಕರ್ಮಗಳನುಸಾರ ಅವುಗಳ ಫಲದ ವಿಧಾನವನ್ನು ಮಾಡುತ್ತೇನೆ. ಈ ಗುಣಪ್ರವಾಹದಲ್ಲಿ ಬಿದ್ದು ಜೀವಿಯು ಕೆಲವೊಮ್ಮೆ ಮುಳುಗುತ್ತಾನೆ, ಕೆಲವೊಮ್ಮೆ ಮೇಲಕ್ಕೆ ಬರುತ್ತಾನೆ – ಕೆಲವೊಮ್ಮೆ ಅಧೋಗತಿಯಾದರೆ, ಕೆಲವೊಮ್ಮೆ ಅವನಿಗೆ ಪುಣ್ಯವಶದಿಂದ ಉಚ್ಚಗತಿಯು ದೊರೆಯುತ್ತದೆ. ॥ ೧೫ ॥ ಜಗತ್ತಿನಲ್ಲಿ ಚಿಕ್ಕದು–ದೊಡ್ಡದು, ತೆಳ್ಳನೆಯ ದಪ್ಪನೆಯ, ಎಷ್ಟು ಪದಾರ್ಥಗಳು ಉಂಟಾಗುತ್ತವೋ ಅವೆಲ್ಲವೂ ಪ್ರಕೃತಿ–ಪುರುಷರ ಸಂಯೋಗದಿಂದಲೇ ಉಂಟಾಗುತ್ತವೆ. ॥ ೧೬ ॥

ಆದಿ ಮತ್ತು ಅಂತ್ಯದಲ್ಲಿರುವುದೇ ಮಧ್ಯದಲ್ಲಿಯೂ ಇದೆ; ಅದೇ ಸತ್ಯವಾಗಿದೆ. ವಿಕಾರವಾದರೋ ಕೇವಲ ವ್ಯವಹಾರಕ್ಕಾಗಿ ಮಾಡಿದ ಕಲ್ಪನೆಮಾತ್ರವಾಗಿದೆ. ಕಂಕಣ–ಕುಂಡಲಗಳು ಚಿನ್ನದ ವಿಕಾರಗಳು. ಮಡಿಕೆ–ಕುಡಿಕೆ ಮಣ್ಣಿನ ವಿಕಾರಗಳು. ಮೊದಲು ಚಿನ್ನ ಮತ್ತು ಮಣ್ಣೇ ಆಗಿದ್ದವು. ಕೊನೆಗೂ ಚಿನ್ನ–ಮಣ್ಣು ಆಗಿಯೇ ಉಳಿಯುವವು. ಆದ್ದರಿಂದ ನಡುವಿನಲ್ಲಿಯೂ ಚಿನ್ನ, ಮಣ್ಣೇ ಆಗಿವೆ. ಪೂರ್ವವರ್ತಿ ಕಾರಣ (ಮಹತ್ತತ್ತ್ವಾದಿ)ವೂ ಯಾವ ಪರಮ ಕಾರಣವನ್ನು ಉಪಾದಾನವಾಗಿಸಿಕೊಂಡು ಅಪರ (ಅಹಂಕಾರಾದಿ) ಕಾರ್ಯ–ವರ್ಗವನ್ನು ಸೃಷ್ಟಿಸುತ್ತದೆಯೋ ಅದೇ ಅವುಗಳಿಗಿಂತಲೂ ಪರಮಸತ್ಯವಾಗಿದೆ. ತಾತ್ಪರ್ಯ – ಯಾವುದೇ ಕಾರ್ಯದ ಆದಿಯಲ್ಲಿ ಮತ್ತು ಅಂತ್ಯದಲ್ಲಿ ಇರುವುದೋ ಅದೇ ಸತ್ಯವಾಗಿದೆ. ॥ ೧೭–೧೮ ॥ ಈ ಪ್ರಪಂಚದ ಉಪಾದನ ಕಾರಣ ಪ್ರಕೃತಿಯಾಗಿದೆ, ಆಧಾರ ಪುರುಷ (ಜೀವಾತ್ಮಾ) ಆಗಿದ್ದಾನೆ, ಇದನ್ನು ಪ್ರಕಟಪಡಿಸುವವನು ಕಾಲವಾಗಿದೆ. ಈ ತ್ರಿವಿಧತೆ ವಸ್ತುತಃ ಬ್ರಹ್ಮಸ್ವರೂಪವೇ ಆಗಿದೆ. ಆ ಶುದ್ಧಬ್ರಹ್ಮನು ನಾನೇ ಆಗಿದ್ದೇನೆ. ॥ ೧೯ ॥ ಪರಮಾತ್ಮನ ಈಕ್ಷಣ ಶಕ್ತಿಯು ತನ್ನ ಕೆಲಸ ಮಾಡುತ್ತಿರುವವರೆಗೆ, ಅವನ ಪಾಲನ ಪ್ರವೃತ್ತಿ ನಡೆಯುತ್ತಾ ಇರುವವರೆಗೆ, ಜೀವಿಗಳ ಕರ್ಮಭೋಗಗಳಿಗಾಗಿ ಕಾರಣವು – ಕಾರ್ಯರೂಪದಿಂದ ಅಥವಾ ಪಿತಾ–ಪುತ್ರಾದಿರೂಪದಿಂದ ಈ ಸೃಷ್ಟಿಚಕ್ರವು ನಿರಂತರ ನಡೆಯುತ್ತಾ ಇರುತ್ತದೆ. ॥ ೨೦ ॥ ಈ ವಿರಾಟವೇ ವಿವಿಧ ಲೋಕಗಳ ಸೃಷ್ಟಿ ಸ್ಥಿತಿ, ಸಂಹಾರದ ಲೀಲಾಭೂಮಿಯಾಗಿದೆ. ನಾನು ಪ್ರಳಯದ ಸಂಕಲ್ಪಮಾಡಿದಾಗ, ಕಾಲರೂಪದಿಂದ ಇದರಲ್ಲಿ ಪ್ರವೇಶಿಸುತ್ತೇನೆ. ಆಗ ಇದು ಭುವನಗಳೊಂದಿಗೆ ವಿನಾಶಕ್ಕೆ ಯೋಗ್ಯವಾಗುತ್ತದೆ. ॥ ೨೧ ॥ ಅದರ ಲೀನವಾಗುವ ಪ್ರಕ್ರಿಯೆ ಹೀಗಿದೆ – ಪ್ರಾಣಿಗಳ ಶರೀರವು ಅನ್ನದಲ್ಲಿ, ಅನ್ನವು ಬೀಜದಲ್ಲಿ, ಬೀಜವು ಭೂಮಿಯಲ್ಲಿ, ಭೂಮಿಯು ಗಂಧ ತನ್ಮಾತ್ರೆಯಲ್ಲಿ ಲೀನವಾಗಿ ಹೋಗುತ್ತದೆ. ॥ ೨೨ ॥ ಗಂಧವು ಜಲದಲ್ಲಿ, ಜಲವು ತನ್ನ ಗುಣ ರಸದಲ್ಲಿ, ರಸವು ತೇಜದಲ್ಲಿ, ತೇಜವು ರೂಪದಲ್ಲಿ ಲೀನವಾಗಿ ಹೋಗುತ್ತದೆ. ॥ ೨೩ ॥ ರೂಪವು ವಾಯುವಿನಲ್ಲಿ, ವಾಯು ಸ್ಪರ್ಶದಲ್ಲಿ, ಸ್ಪರ್ಶ ಆಕಾಶದಲ್ಲಿ, ಆಕಾಶವು ಶಬ್ದ ತನ್ಮಾತ್ರೆಯಲ್ಲಿ ಲೀನವಾಗುತ್ತದೆ. ಇಂದ್ರಿಯಗಳು ತಮ್ಮ–ತಮ್ಮ ಕಾರಣ ದೇವತೆಗಳಲ್ಲಿ ಮತ್ತು ಕೊನೆಗೆ ರಾಜಸ ಅಹಂಕಾರದಲ್ಲಿ ಸೇರಿ ಹೋಗುತ್ತವೆ. ॥ ೨೪ ॥

ಯೋನಿರ್ವೈಕಾರಿಕೇ ಸೌಮ್ಯ ಲೀಯತೇ ಮನಸೀಶ್ವರೇ ।
ಶಬ್ದೋ ಭೂತಾದಿಮಪ್ಯೇತಿ ಭೂತಾದಿರ್ಮಹತಿ ಪ್ರಭುಃ
॥ ೨೫ ॥

ಸ ಲೀಯತೇ ಮಹಾನ್ಸ್ವೇಷು ಗುಣೇಷು ಗುಣವತ್ತಮಃ ।
ತೇಽವ್ಯಕ್ತೇ ಸಂಪ್ರಲೀಯಂತೇ ತತ್ಕಾಲೇ ಲೀಯತೇಽವ್ಯಯೇ
॥ ೨೬ ॥

ಕಾಲೋ ಮಾಯಾಮಯೇ ಜೀವೇ ಜೀವ ಆತ್ಮನಿ ಮಯ್ಯಜೇ ।
ಆತ್ಮಾ ಕೇವಲ ಆತ್ಮಸ್ಥೋ ವಿಕಲ್ಪಾಪಾಯಲಕ್ಷಣಃ
॥ ೨೭ ॥

ಏವಮನ್ವೀಕ್ಷಮಾಣಸ್ಯ ಕಥಂ ವೈಕಲ್ಪಿಕೋ ಭ್ರಮಃ ।
ಮನಸೋ ಹೃದಿ ತಿಷ್ಠೇತ ವ್ಯೋಮ್ನೀ ವಾರ್ಕೋದಯೇ ತಮಃ
॥ ೨೮ ॥

ಏಷ ಸಾಂಖ್ಯ ವಿಧಿಃ ಪ್ರೋಕ್ತಃ ಸಂಶಯಗ್ರಂಥಿ ಭೇದನಃ ।
ಪ್ರತಿಲೋಮಾನುಲೋಮಾಭ್ಯಾಂ ಪರಾವರದೃಶಾ ಮಯಾ
॥ ೨೯ ॥

ಸೌಮ್ಯನೇ ! ರಾಜಸ ಅಹಂಕಾರವು ತನ್ನ ನಿಯಂತಾ ಸಾತ್ತ್ವಿಕ ಅಹಂಕಾರರೂಪೀ ಮನಸ್ಸಿನಲ್ಲಿ, ಶಬ್ದತನ್ಮಾತ್ರೆ ಪಂಚಭೂತಗಳ ಕಾರಣ ತಾಮಸ ಅಹಂಕಾರದಲ್ಲಿ ಹಾಗೂ ಇಡೀ ಜಗತ್ತನ್ನು ಮೋಹಿತಗೊಳಿಸಲು ಸಮರ್ಥವಾದ ತ್ರಿವಿಧ ಅಹಂಕಾರವು ಮಹತ್ತತ್ತ್ವದಲ್ಲಿ ಲೀನವಾಗುತ್ತದೆ. ॥ ೨೫ ॥ ಜ್ಞಾನಶಕ್ತಿ ಮತ್ತು ಕ್ರಿಯಾಶಕ್ತಿಪ್ರಧಾನ ಮಹತ್ತತ್ತ್ವವು ತನ್ನ ಕಾರಣ ಗುಣಗಳಲ್ಲಿ ಲೀನವಾಗುತ್ತದೆ. ಗುಣಗಳು ಅವ್ಯಕ್ತ ಪ್ರಕೃತಿಯಲ್ಲಿ ಹಾಗೂ ಪ್ರಕೃತಿಯು ತನ್ನ ಪ್ರೇರಕ ಅವಿನಾಶೀ ಕಾಲನಲ್ಲಿ ಲೀನವಾಗಿ ಹೋಗುತ್ತದೆ. ॥ ೨೬ ॥ ಕಾಲವು ಮಾಯಾಮಯ (ವಿದ್ಯಾಮಯ) ಜೀವನಲ್ಲಿ ಮತ್ತು ಜೀವನು ಅಜನ್ಮಾ ಆತ್ಮನಾದ ನನ್ನಲ್ಲಿ ಲೀನವಾಗಿ ಹೋಗುತ್ತಾನೆ. ಆತ್ಮವು ಯಾವುದರಲ್ಲಿಯೂ ಲೀನವಾಗುವುದಿಲ್ಲ, ಅವನು ಉಪಾಧಿರಹಿತ ತನ್ನ ಸ್ವರೂಪದಲ್ಲೇ ಸ್ಥಿತವಾಗಿರುತ್ತದೆ. ಅವನು ಜಗತ್ತಿನ ಸೃಷ್ಟಿ ಹಾಗೂ ಲಯದ ಅಧಿಷ್ಠಾನ ಮತ್ತು ಅವಧಿಯಾಗಿದ್ದಾನೆ. ॥ ೨೭ ॥ ಉದ್ಧವನೇ ! ಈ ಪ್ರಕಾರ ವಿವೇಕ ದೃಷ್ಟಿಯಿಂದ ನೋಡುವವನ ಚಿತ್ತದಲ್ಲಿ ಈ ಪ್ರಪಂಚದ ಭ್ರಮೆ ಎಂದಿಗೂ ಆಗಲಾರದು. ಒಂದೊಮ್ಮೆ ಅದರ ಸ್ಫೂರ್ತಿ ಉಂಟಾದರೂ ಅದು ಹೆಚ್ಚು ಸಮಯದವರೆಗೆ ಹೇಗೆ ನಿಲ್ಲಬಲ್ಲದು ? ಸೂರ್ಯೋದಯವಾದ ಬಳಿಕವೂ ಆಕಾಶದಲ್ಲಿ ಅಂಧಕಾರವು ಇರಬಲ್ಲುದೇ ? ॥ ೨೮ ॥ ಎಲೈ ಉದ್ಧವನೇ ! ನಾನು ಕಾರ್ಯ ಮತ್ತು ಕಾರಣ ಇವೆರಡರ ಸಾಕ್ಷಿಯಾಗಿದ್ದೇನೆ. ನಾನು ನಿನಗೆ ಸೃಷ್ಟಿಯಿಂದ ಪ್ರಳಯದ ಮತ್ತು ಪ್ರಳಯದಿಂದ ಸೃಷ್ಟಿವರೆಗಿನ ಸಾಂಖ್ಯವಿಧಿಯನ್ನು ತಿಳಿಸಿಹೇಳಿದೆ. ಇದರಿಂದ ಸಂದೇಹದ ಗ್ರಂಥಿಯು ಬಿಚ್ಚಲ್ಪಟ್ಟು, ಪುರುಷನು ತನ್ನ ಸ್ವರೂಪದಲ್ಲಿ ಸ್ಥಿತನಾಗಿ ಹೋಗುತ್ತಾನೆ. ॥ ೨೯ ॥

ಇಪ್ಪತ್ತನಾಲ್ಕನೆಯ ಅಧ್ಯಾಯವು ಮುಗಿಯಿತು. ॥ ೨೪ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಏಕಾದಶ ಸ್ಕಂಧೇ ಚತುರ್ವಿಂಶೋಽಧ್ಯಾಯಃ ॥ ೨೪ ॥

ಇಪ್ಪತ್ತೈದನೆಯ ಅಧ್ಯಾಯ

ಮೂರೂ ಗುಣವೃತ್ತಿಗಳ ನಿರೂಪಣೆ

ಶ್ರೀಭಗವಾನುವಾಚ

ಗುಣಾನಾಮಸಮಿಶ್ರಾಣಾಂ ಪುಮಾನ್ ಯೇನ ಯಥಾ ಭವೇತ್ ।
ತನ್ಮೇ ಪುರುಷವರ್ಯೇದಮುಪಧಾರಯ ಶಂಸತಃ
॥ ೧ ॥

ಶಮೋ ದಮಸ್ತಿತಿಕ್ಷೇಕ್ಷಾ ತಪಃ ಸತ್ಯಂ ದಯಾ ಸ್ಮೃತಿಃ ।
ತುಷ್ಟಿಸ್ತ್ಯಾಗೋಽಸ್ಪೃಹಾ ಶ್ರದ್ಧಾ ಹ್ರೀರ್ದಯಾದಿಃ ಸ್ವನಿರ್ವೃತಿಃ
॥ ೨ ॥

ಭಗವಾನ್ ಶ್ರೀಕೃಷ್ಣನು ಹೇಳುತ್ತಾನೆ – ಪುರುಷಪುಂಗವ ಉದ್ಧವನೇ ! ಪ್ರತಿಯೊಬ್ಬ ವ್ಯಕ್ತಿಯಲ್ಲಿಯೂ ಪ್ರ-ಪ್ರತ್ಯೇಕ ಗುಣಗಳು ಪ್ರಕಾಶಬೀರುತ್ತವೆ. ಅವುಗಳ ಕಾರಣದಿಂದ ಪ್ರಾಣಿಗಳ ಸ್ವಭಾವ ದಲ್ಲಿಯೂ ಭೇದಗಳು ಉಂಟಾಗುತ್ತವೆ. ಯಾವ ಗುಣದಿಂದ ಯಾವ-ಯಾವ ಸ್ವಭಾವಗಳು ಉಂಟಾಗುತ್ತವೆ ಎಂಬುದನ್ನು ನಾನು ಈಗ ತಿಳಿಸುತ್ತೇನೆ. ಮನಸ್ಸಿಟ್ಟು ಕೇಳು. ॥ ೧ ॥ ಶಮ (ಮನಸ್ಸಿನ ಸಂಯಮ), ದಮ (ಇಂದ್ರಿಯನಿಗ್ರಹ), ತಿತಿಕ್ಷಾ (ಸಹಿಷ್ಣುತೆ), ವಿವೇಕ, ತಪಸ್ಸು, ಸತ್ಯ, ದಯೆ, ಸ್ಮೃತಿ, ಸಂತೋಷ, ತ್ಯಾಗ, ವಿಷಯಗಳ ಕುರಿತು ಅನಿಚ್ಛೆ, ಶ್ರದ್ಧೆ, ಲಜ್ಜೆ (ಪಾಪಮಾಡು

ಕಾಮ ಈಹಾ ಮದಸ್ತೃಷ್ಣಾ ಸ್ತಂಭ ಆಶೀರ್ಭಿದಾ ಸುಖಮ್ ।
ಮದೋತ್ಸಾಹೋ ಯಶಃಪ್ರೀತಿರ್ಹಾಸ್ಯಂ ವೀರ್ಯಂ ಬಲೋದ್ಯಮಃ
॥ ೩ ॥

ಕ್ರೋಧೋ ಲೋಭೋಽನೃತಂ ಹಿಂಸಾ ಯಾಚ್ಞಾ ದಂಭಃ ಕ್ಲಮಃ ಕಲಿಃ ।
ಶೋಕಮೋಹೌ ವಿಷಾದಾರ್ತೀ ನಿದ್ರಾಽಽಶಾ ಭೀರನುದ್ಯಮಃ
॥ ೪ ॥

ಸತ್ತ್ವಸ್ಯ ರಜಸಶ್ಚೈತಾಸ್ತಮಸಶ್ಚಾನುಪೂರ್ವಶಃ ।
ವೃತ್ತಯೋ ವರ್ಣಿತಪ್ರಾಯಾಃ ಸನ್ನಿಪಾತಮಥೋ ಶೃಣು
॥ ೫ ॥

ಸನ್ನಿಪಾತಸ್ತ್ವಹಮಿತಿ ಮಮೇತ್ಯುದ್ಧವ ಯಾ ಮತಿಃ ।
ವ್ಯವಹಾರಃ ಸನ್ನಿಪಾತೋ ಮನೋಮಾತ್ರೇಂದ್ರಿಯಾಸುಭಿಃ
॥ ೬ ॥

ಧರ್ಮೇ ಚಾರ್ಥೇ ಚ ಕಾಮೇ ಚ ಯದಾಸೌ ಪರಿನಿಷ್ಠಿತಃ ।
ಗುಣಾನಾಂ ಸನ್ನಿಕರ್ಷೋಽಯಂ ಶ್ರದ್ಧಾರತಿಧನಾವಹಃ
॥ ೭ ॥

ಪ್ರವೃತ್ತಿಲಕ್ಷಣೇ ನಿಷ್ಠಾ ಪುಮಾನ್ಯರ್ಹಿ ಗೃಹಾಶ್ರಮೇ ।
ಸ್ವಧರ್ಮೇ ಚಾನುತಿಷ್ಠೇತ ಗುಣಾನಾಂ ಸಮಿತಿರ್ಹಿ ಸಾ
॥ ೮ ॥

ಪುರುಷಂ ಸತ್ತ್ವಸಂಯುಕ್ತಮನುಮೀಯಾಚ್ಛಮಾದಿಭಿಃ ।
ಕಾಮಾದಿಭೀ ರಜೋಯುಕ್ತಂ ಕ್ರೋಧಾದ್ಯೈಸ್ತಮಸಾ ಯುತಮ್
॥ ೯ ॥

ಯದಾ ಭಜತಿ ಮಾಂ ಭಕ್ತ್ಯಾ ನಿರಪೇಕ್ಷಃ ಸ್ವಕರ್ಮಭಿಃ ।
ತಂ ಸತ್ತ್ವಪ್ರಕೃತಿಂ ವಿದ್ಯಾತ್ಪುರುಷಂ ಸ್ತ್ರಿಯಮೇವ ವಾ
॥ ೧೦ ॥

ಯದಾ ಆಶಿಷ ಆಶಾಸ್ಯ ಮಾಂ ಭಜೇತ ಸ್ವಕರ್ಮಭಿಃ ।
ತಂ ರಜಃಪ್ರಕೃತಿಂ ವಿದ್ಯಾದ್ಧಿಂಸಾಮಾಶಾಸ್ಯ ತಾಮಸಮ್
॥ ೧೧ ॥

ಸತ್ತ್ವಂ ರಜಸ್ತಮ ಇತಿ ಗುಣಾ ಜೀವಸ್ಯ ನೈವ ಮೇ ।
ಚಿತ್ತಜಾ ಯೈಸ್ತು ಭೂತಾನಾಂ ಸಜ್ಜಮಾನೋ ನಿಬಧ್ಯತೇ
॥ ೧೨ ॥

ವುದರಲ್ಲಿ ಸ್ವಾಭಾವಿಕ ಸಂಕೋಚ), ಆತ್ಮರತಿ, ದಾನ, ವಿನಯ, ಸರಳತೆ ಮುಂತಾದವುಗಳು ಸತ್ತ್ವಗುಣದ ವೃತ್ತಿಗಳು. ॥ ೨ ॥ ಇಚ್ಛೆ, ಪ್ರಯತ್ನ ಮದ, ತೃಷ್ಣೆ (ತೃಪ್ತಿಯಿಲ್ಲದಿರುವುದು) ಗರ್ವ, ಧನಕ್ಕಾಗಿ ದೇವತೆಗಳಲ್ಲಿ ಪ್ರಾರ್ಥನೆ, ಭೇದಬುದ್ಧಿ ವಿಷಯಭೋಗ, ಯುದ್ಧಾದಿಗಳಲ್ಲಿ ಮದಜನಿತ ಉತ್ಸಾಹ, ತನ್ನ ಕೀರ್ತಿಯಲ್ಲಿ ಪ್ರೀತಿ, ಹಾಸ್ಯ, ಪರಾಕ್ರಮ, ಹಠದಿಂದ ಉದ್ಯೋಗಮಾಡುವ ಪ್ರವೃತ್ತಿ – ಇವು ರಜೋಗುಣದ ವೃತ್ತಿಗಳು. ॥ ೩ ॥ ಕ್ರೋಧ (ಅಸಹಿಷ್ಣುತೆ), ಲೋಭ, ಸುಳ್ಳುಹೇಳುವುದು, ಹಿಂಸೆ, ಯಾಚನೆ, ಡಂಭಾಚಾರ, ಶ್ರಮ, ಕಲಹ, ಶೋಕ, ಮೋಹ, ವಿಷಾದ, ದೀನತೆ, ನಿದ್ದೆ ಆಸೆ, ಭಯ, ಅಕರ್ಮಣ್ಯತೆ – ಇವು ತಮೋಗುಣದ ವೃತ್ತಿಗಳು. ॥ ೪ ॥ ಈ ಕ್ರಮದಿಂದ ಸತ್ತ್ವಗುಣ, ರಜೋಗುಣ, ತಮೋಗುಣ ಇವುಗಳು ಅಧಿಕಾಂಶವಿರುವ ವ್ಯಕ್ತಿಗಳ ವೃತ್ತಿಗಳನ್ನು ಬೇರೆ-ಬೇರೆಯಾಗಿ ವರ್ಣಿಸಿರುವೆನು. ಈಗ ಅವುಗಳ ಬೆರಕೆಯಿಂದ ಆಗುವ ವೃತ್ತಿಗಳ ವರ್ಣನೆಯನ್ನು ಕೇಳು. ॥ ೫ ॥ ಉದ್ಧವನೇ ! ಮೂರೂ ಗುಣಗಳ ಮಿಶ್ರಣದಿಂದಲೇ 'ನಾನು' ಮತ್ತು 'ನನ್ನದು' ಎಂಬ ಬುದ್ಧಿಯು ಉತ್ಪನ್ನವಾಗುತ್ತದೆ. ಮನಸ್ಸು, ಶಬ್ದಾದಿ ವಿಷಯಗಳು, ಇಂದ್ರಿಯಗಳು ಮತ್ತು ಪ್ರಾಣಗಳು ಇವುಗಳ ಕಾರಣದಿಂದ ವೃತ್ತಿಗಳ ವ್ಯವಹಾರ ನಡೆಯುತ್ತದೆ. ಸಾತ್ತ್ವಿಕ, ರಾಜಸ, ತಾಮಸ ಮೂರೂ ಗುಣಗಳ ಮಿಶ್ರಣದಿಂದಲೇ ಕ್ರಿಯೆಗಳು ನಡೆಯುತ್ತವೆ. ॥ ೬ ॥ ಮನುಷ್ಯನು ಧರ್ಮ, ಅರ್ಥ, ಕಾಮರೂಪೀ ಪುರುಷಾರ್ಥಗಳನ್ನು ಸಾಧಿಸಲು ತೊಡಗಿದಾಗ, ಅವನಿಗೆ ಮೂರೂ ಗುಣಗಳ ಅವಶ್ಯಕತೆ ಬೀಳುತ್ತದೆ. ಆಗ ಅವನಿಗೆ ಸತ್ತ್ವಗುಣದಿಂದ ಶ್ರದ್ಧೆ, ರಜೋಗುಣದಿಂದ ಆಸಕ್ತಿ, ತಮೋಗುಣದಿಂದ ಧನದ ಪ್ರಾಪ್ತಿಯಾಗುತ್ತದೆ. ಇದೂ ಕೂಡ ಗುಣಗಳ ಮಿಶ್ರಣವೇ ಆಗಿದೆ. ॥ ೭ ॥ ಮನುಷ್ಯನು ಸಕಾಮ ಕರ್ಮದ ಅನುಷ್ಠಾನ ಮಾಡುವಾಗ ಅಥವಾ ಅವನು ಗೃಹಸ್ಥಾಶ್ರಮದಲ್ಲಿ ನಿಷ್ಠೆ ಇರಿಸುತ್ತಾ ತನ್ನ ಕರ್ಮಗಳನ್ನು ಪಾಲಿಸುವಾಗಲೂ ಅವನಲ್ಲಿ ಮೂರೂ ಗುಣಗಳ ಸಮ್ಮಿಶ್ರಣವಿದೆ ಎಂದು ತಿಳಿಯಬೇಕು. ॥ ೮ ॥

ಮಾನಸಿಕ ಶಾಂತಿ, ಜಿತೇಂದ್ರಿಯತೆ ಮೊದಲಾದ ಗುಣಗಳಿಂದ ಸತ್ತ್ವಗುಣೀ ಮನುಷ್ಯನ, ಕಾಮನೆ ಮೊದಲಾದವುಗಳಿಂದ ರಜೋಗುಣಿ ವ್ಯಕ್ತಿಯ ಕ್ರೋಧ, ಹಿಂಸೆ ಮುಂತಾದ ಗುಣಗಳಿಂದ ತಮೋಗುಣಿಯ ಪರಿಚಯವಾಗುತ್ತದೆ. ॥ ೯ ॥ ಪುರುಷರಿರಲೀ, ಸ್ತ್ರೀಯಾಗಿರಲೀ ಅವರು ನಿಷ್ಕಾಮರಾಗಿ ತಮ್ಮ ನಿತ್ಯ ನೈಮಿತ್ತಿಕ ಕರ್ಮಗಳ ಮೂಲಕ ನನ್ನನ್ನು ಆರಾಧಿಸುತ್ತಿದ್ದರೆ ಅವರನ್ನು ಸತ್ತ್ವಗುಣಿಗಳು ಎಂದು ತಿಳಿಯಬೇಕು. ॥ ೧೦ ॥ ಸಕಾಮಭಾವದಿಂದ ತನ್ನ ಕರ್ಮಗಳ ಮೂಲಕ ನನ್ನ ಭಜನೆ-ಪೂಜೆ ಮಾಡುವವನು ರಜೋಗುಣಿಯಾಗಿದ್ದಾನೆ. ತನ್ನ ಶತ್ರುವಿನ ಮೃತ್ಯುಗಾಗಿ, ಹಿಂಸಾಯುಕ್ತ ನನ್ನ ಭಜನೆ-ಪೂಜೆ ಮಾಡುವವನು ತಮೋಗುಣೀ ಎಂದು ತಿಳಿಯಬೇಕು. ॥ ೧೧ ॥ ಸತ್ತ್ವ, ರಜ, ತಮ ಈ ಮೂರೂ ಗುಣಗಳು ಜೀವಿಯದಾಗಿವೆ. ಪರಮಾತ್ಮನಾದ ನನ್ನವುಗಳಲ್ಲ, ಇವು ಪ್ರಾಣಿಗಳ ಚಿತ್ತದಲ್ಲಿ ಹುಟ್ಟುತ್ತವೆ. ಈ ಗುಣಗಳ ಕಾರಣದಿಂದಲೇ ಶರೀರ, ಧನಾದಿಗಳಲ್ಲಿ ಆಸಕ್ತನಾಗಿ ಜೀವಿಯು ಸ್ವಯಂ ಬಂಧಿತನಾಗುತ್ತಾನೆ. ॥ ೧೨ ॥

ಯದೇತರೌ ಜಯೇತ್ಸತ್ತ್ವಂ ಭಾಸ್ವರಂ ವಿಶದಂ ಶಿವಮ್ ।
ತದಾ ಸುಖೇನ ಯುಜ್ಯೇತ ಧರ್ಮಜ್ಞಾನಾದಿಭಿಃ ಪುಮಾನ್
॥ ೧೩ ॥

ಯದಾ ಜಯೇತ್ತಮಃ ಸತ್ತ್ವಂ ರಜಃ ಸಂಗಂ ಭಿದಾ ಚಲಮ್ ।
ತದಾ ದುಃಖೇನ ಯುಜ್ಯೇತ ಕರ್ಮಣಾ ಯಶಸಾ ಶ್ರಿಯಾ
॥ ೧೪ ॥

ಯದಾ ಜಯೇದ್ರಜಃ ಸತ್ತ್ವಂ ತಮೋ ಮೂಢಂ ಲಯಂ ಜಡಮ್ ।
ಯುಜ್ಯೇತ ಶೋಕಮೋಹಾಭ್ಯಾಂ ನಿದ್ರಯಾ ಹಿಂಸಯಾಽಶಯಾ
॥ ೧೫ ॥

ಯದಾ ಚಿತ್ತಂ ಪ್ರಸೀದೇತ ಇಂದ್ರಿಯಾಣಾಂ ಚ ನಿರ್ವೃತಿಃ ।
ದೇಹೇಽಭಯಂ ಮನೋಽಸಂಗಂ ತತ್ಸತ್ತ್ವಂ ವಿದ್ಧಿ ಮತ್ಪದಮ್
॥ ೧೬ ॥

ವಿಕುರ್ವನ್ ಕ್ರಿಯಯಾ ಚಾಧೀರನಿರ್ವೃತ್ತಿಶ್ಚ ಚೇತಸಾಮ್ ।
ಗಾತ್ರಾಸ್ವಾಸ್ಥ್ಯಂ ಮನೋ ಭ್ರಾಂತಂ ರಜ ಏತೈರ್ನಿಶಾಮಯ
॥ ೧೭ ॥

ಸೀದಚ್ಚಿತ್ತಂ ವಿಲೀಯೇತ ಚೇತಸೋ ಗ್ರಹಣೇಽಕ್ಷಮಮ್ ।
ಮನೋ ನಷ್ಟಂ ತಮೋ ಗ್ಲಾನಿಸ್ತಮಸ್ತದುಪಧಾರಯ
॥ ೧೮ ॥

ಏಧಮಾನೇ ಗುಣೇ ಸತ್ತ್ವೇ ದೇವಾನಾಂ ಬಲಮೇಧತೇ ।
ಅಸುರಾಣಾಂ ಚ ರಜಸಿ ತಮಸ್ಯುದ್ಧವ ರಕ್ಷಸಾಮ್
॥ ೧೯ ॥

ಸತ್ತ್ವಾಜ್ಜಾಗರಣಂ ವಿದ್ಯಾದ್ರಜಸಾ ಸ್ವಪ್ನಮಾದಿಶೇತ್ ।
ಪ್ರಸ್ವಾಪಂ ತಮಸಾ ಜಂತೋಸ್ತುರೀಯಂ ತ್ರಿಷು ಸಂತತಮ್
॥ ೨೦ ॥

ಉಪರ್ಯುಪರಿ ಗಚ್ಛಂತಿ ಸತ್ತ್ವೇನ ಬ್ರಾಹ್ಮಣಾ ಜನಾಃ ।
ತಮಸಾಧೋಽಧ ಆಮುಖ್ಯಾದ್ ರಜಸಾಂತರಚಾರಿಣಃ
॥ ೨೧ ॥

ಸತ್ತ್ವಗುಣವು ಪ್ರಕಾಶಕ, ನಿರ್ಮಲ ಮತ್ತು ಶಾಂತವಾಗಿದೆ. ಅದು ರಜೋಗುಣ, ತಮೋಗುಣಗಳನ್ನು ಅದುಮಿ ಬೆಳೆದಾಗ ಪುರುಷನು ಸುಖಿ, ಧರ್ಮ, ಜ್ಞಾನ ಮುಂತಾದುವನ್ನು ಪಡೆದುಕೊಳ್ಳುತ್ತಾನೆ. ॥ ೧೩ ॥ ರಜೋಗುಣವು ಭೇದಬುದ್ಧಿಯ ಕಾರಣವಾಗಿದೆ. ಆಸಕ್ತಿ ಮತ್ತು ಪ್ರವೃತ್ತಿ ಅದರ ಸ್ವಭಾವವಾಗಿದೆ. ತಮೋಗುಣ ಮತ್ತು ಸತ್ತ್ವಗುಣಗಳನ್ನು ಅದುಮಿ ರಜೋಗುಣವು ಬೆಳೆದಾಗ ಮನುಷ್ಯನು ದುಃಖಿ, ಕರ್ಮ, ಕೀರ್ತಿ, ಲಕ್ಷ್ಮೀ (ಸಂಪತ್ತು) ಇವುಗಳಿಂದ ಸಂಪನ್ನನಾಗುತ್ತಾನೆ. ॥ ೧೪ ॥ ತಮೋಗುಣದ ಸ್ವರೂಪವು ಅಜ್ಞಾನವಾಗಿದೆ. ಆಲಸ್ಯ, ಬುದ್ಧಿಯ ಮೂಢತೆ ಅದರ ಸ್ವಭಾವವಾಗಿದೆ. ಆ ತಮೋಗುಣವು ಬೆಳೆದು ಸತ್ತ್ವಗುಣ ಮತ್ತು ರಜೋಗುಣಗಳನ್ನು ಅದುಮಿಬಿಡುತ್ತದೋ ಆಗ ಪ್ರಾಣಿಯು ಬಗೆ-ಬಗೆಯ ಆಸೆಗಳನ್ನು ಮಾಡುತ್ತಾನೆ. ಶೋಕ-ಮೋಹದಲ್ಲಿ ಬೀಳುವನು. ಹಿಂಸಿಸಲು ತೊಡಗುವನು. ಅಥವಾ ನಿದ್ರಾ-ಆಲಸ್ಯಕ್ಕೆ ವಶೀಭೂತನಾಗಿ ಮಲಗಿಕೊಂಡೇ ಇರುವನು. ॥ ೧೫ ॥ ಚಿತ್ತವು ಪ್ರಸನ್ನವಾದಾಗ, ಇಂದ್ರಿಯಗಳು ಶಾಂತವಾದಾಗ, ದೇಹವು ನಿರ್ಭಯವಾದಾಗ, ಮನಸ್ಸಿನಲ್ಲಿ ಆಸಕ್ತಿಯು ಉಳಿಯದಿದ್ದಾಗ, ಸತ್ತ್ವಗುಣವು ವೃದ್ಧಿಯಾಗಿದೆ ಎಂದು ತಿಳಿಯಬೇಕು. ಸತ್ತ್ವಗುಣವು ನನ್ನ ಪ್ರಾಪ್ತಿಯ ಸಾಧನೆಯಾಗಿದೆ. ॥ ೧೬ ॥ ಕೆಲಸ ಮಾಡುತ್ತಾ-ಮಾಡುತ್ತಾ ಜೀವಿಯ ಬುದ್ಧಿಯು ಚಂಚಲವಾದಾಗ; ಜ್ಞಾನೇಂದ್ರಿಯಗಳು ಅಸಂತುಷ್ಟವಾಗಿ, ಕರ್ಮೇಂದ್ರಿಯಗಳು ವಿಕಾರದಿಂದ ಕೂಡಿದರೆ; ಮನಸ್ಸು ಭ್ರಾಂತವಾಗಿ, ಶರೀರವು ಅಸ್ವಸ್ಥವಾದಾಗ ರಜೋಗುಣದ ವೇಗವು ಹೆಚ್ಚುತ್ತಿದೆ ಎಂದು ತಿಳಿಯಬೇಕು. ॥ ೧೭ ॥ ಚಿತ್ತವು ಜ್ಞಾನೇಂದ್ರಿಯಗಳ ಮೂಲಕ ಶಬ್ದಾದಿ ವಿಷಯಗಳನ್ನು ಸರಿಯಾಗಿ ಅರಿಯಲು ಅಸಮರ್ಥವಾದಾಗ ಮತ್ತು ಖಿನ್ನವಾಗಿ ಲೀನವಾಗತೊಡಗಿದಾಗ, ಮನಸ್ಸು ಬರಿದಾಗಿ, ಅಜ್ಞಾನ, ವಿಷಾದಗಳು ಹೆಚ್ಚಿದಾಗ, ತಮೋಗುಣವು ಹೆಚ್ಚಿರುವುದನ್ನು ತಿಳಿಯಬೇಕು. ॥ ೧೮ ॥

ಉದ್ಧವನೇ! ಸತ್ತ್ವಗುಣವು ವೃದ್ಧಿಯಾದಾಗ ದೇವತೆಗಳ, ರಜೋಗುಣ ಬೆಳೆದಾಗ ಅಸುರರ, ತಮೋಗುಣವು ಹೆಚ್ಚಿದಾಗ ರಾಕ್ಷಸರ ಬಲವು ಹೆಚ್ಚುತ್ತದೆ. (ವೃತ್ತಿಗಳಲ್ಲಿಯೂ ಕ್ರಮಶಃ ಸತ್ತ್ವಾದಿ ಗುಣಗಳ ಹೆಚ್ಚಳ ಉಂಟಾದಾಗ ದೇವತ್ವ, ಅಸುರತ್ವ, ರಾಕ್ಷಸತ್ವ ಪ್ರಧಾನವಾದ ನಿವೃತ್ತಿ, ಪ್ರವೃತ್ತಿ, ಮೋಹದ ಪ್ರಧಾನತೆ ಉಂಟಾಗುತ್ತದೆ.) ॥ ೧೯ ॥ ಸತ್ತ್ವಗುಣದಿಂದ ಜಾಗ್ರತ್-ಅವಸ್ಥೆ, ರಜೋಗುಣದಿಂದ ಸ್ವಪ್ನಾವಸ್ಥೆ, ತಮೋಗುಣದಿಂದ ಸುಷುಪ್ತಿ-ಅವಸ್ಥೆ ಉಂಟಾಗುತ್ತವೆ. ಈ ಮೂರರಲ್ಲಿಯೂ ತುರೀಯವು ಸಮಾನವಾಗಿ ವ್ಯಾಪಿಸಿರುತ್ತದೆ. ಅದೇ ಶುದ್ಧ, ಏಕರಸ ಆತ್ಮನಾಗಿದ್ದಾನೆ. ॥ ೨೦ ॥ ವೇದಗಳ ಅಭ್ಯಾಸದಲ್ಲಿ ತತ್ಪರರಾದ ಬ್ರಾಹ್ಮಣರು ಸತ್ತ್ವಗುಣದ ಮೂಲಕ ಉತ್ತರೋತ್ತರ ಮೇಲಿನ ಲೋಕಗಳಿಗೆ ಹೋಗುತ್ತಾರೆ. ತಮೋಗುಣದಿಂದ ಜೀವಿಗಳಿಗೆ ವೃಕ್ಷಾದಿಗಳವರೆಗಿನ ಅಧೋಗತಿ ಪ್ರಾಪ್ತವಾಗುತ್ತದೆ. ರಜೋಗುಣದಿಂದ ಮನುಷ್ಯ ಶರೀರವು ದೊರೆಯುತ್ತದೆ. ॥ ೨೧ ॥

ಸತ್ತ್ವೇ ಪ್ರಲೀನಾಃ ಸ್ವರ್ಯಾಂತಿ ನರಲೋಕಂ ರಜೋಲಯಾಃ ।
ತಮೋಲಯಾಸ್ತು ನಿರಯಂ ಯಾಂತಿ ಮಾಮೇವ ನಿರ್ಗುಣಾಃ
॥ ೨೨ ॥

ಮದರ್ಪಣಂ ನಿಷ್ಫಲಂ ವಾ ಸಾತ್ತ್ವಿಕಂ ನಿಜಕರ್ಮ ತತ್ ।
ರಾಜಸಂ ಫಲಸಂಕಲ್ಪಂ ಹಿಂಸಾಪ್ರಾಯಾದಿ ತಾಮಸಮ್
॥ ೨೩ ॥

ಕೈವಲ್ಯಂ ಸಾತ್ತ್ವಿಕಂ ಜ್ಞಾನಂ ರಜೋ ವೈಕಲ್ಪಿಕಂ ಚ ಯತ್ ।
ಪ್ರಾಕೃತಂ ತಾಮಸಂ ಜ್ಞಾನಂ ಮನ್ನಿಷ್ಠಂ ನಿರ್ಗುಣಂ ಸ್ಮೃತಮ್
॥ ೨೪ ॥

ವನಂ ತು ಸಾತ್ತ್ವಿಕೋ ವಾಸೋ ಗ್ರಾಮೋ ರಾಜಸ ಉಚ್ಯತೇ ।
ತಾಮಸಂ ದ್ಯೂತಸದನಂ ಮನ್ನಿಕೇತಂ ತು ನಿರ್ಗುಣಮ್
॥ ೨೫ ॥

ಸಾತ್ತ್ವಿಕಃ ಕಾರಕೋಽಸಂಗೀ ರಾಗಾಂಧೋ ರಾಜಸಃ ಸ್ಮೃತಃ ।
ತಾಮಸಃ ಸ್ಮೃತಿವಿಭ್ರಷ್ಟೋ ನಿರ್ಗುಣೋ ಮದಪಾಶ್ರಯಃ
॥ ೨೬ ॥

ಸಾತ್ತ್ವಿಕ್ಯಾಧ್ಯಾತ್ಮಿಕೀ ಶ್ರದ್ಧಾ ಕರ್ಮಶ್ರದ್ಧಾ ತು ರಾಜಸೀ ।
ತಾಮಸ್ಯಧರ್ಮೇ ಯಾ ಶ್ರದ್ಧಾ ಮತ್ಸೇವಾಯಾಂ ತು ನಿರ್ಗುಣಾ
॥ ೨೭ ॥

ಪಥ್ಯಂ ಪೂತಮನಾಯಸ್ತ ಮಾಹಾರ್ಯಂ ಸಾತ್ತ್ವಿಕಂ ಸ್ಮೃತಮ್ ।
ರಾಜಸಂ ಚೇಂದ್ರಿಯಪ್ರೇಷ್ಠಂ ತಾಮಸಂ ಚಾರ್ತಿದಾಶುಚಿ
॥ ೨೮ ॥

ಸಾತ್ತ್ವಿಕಂ ಸುಖಮಾತ್ಮೋತ್ಥಂ ವಿಷಯೋತ್ಥಂ ತು ರಾಜಸಮ್ ।
ತಾಮಸಂ ಮೋಹದೈನ್ಯೋತ್ಥಂ ನಿರ್ಗುಣಂ ಮದಪಾಶ್ರಯಮ್
॥ ೨೯ ॥

ದ್ರವ್ಯಂ ದೇಶಃ ಫಲಂ ಕಾಲೋ ಜ್ಞಾನಂ ಕರ್ಮ ಚ ಕಾರಕಃ ।
ಶ್ರದ್ಧಾವಸ್ಥಾಽಽಕೃತಿರ್ನಿಷ್ಠಾ ತ್ರೈಗುಣ್ಯಃ ಸರ್ವ ಏವ ಹಿ
॥ ೩೦ ॥

ಸತ್ತ್ವಗುಣವು ವೃದ್ಧಿಯಾದಾಗ ಮೃತ್ಯು ಸಂಭವಿಸಿದರೆ ಅವನು ಸ್ವರ್ಗವನ್ನು ಪಡೆದುಕೊಳ್ಳುತ್ತಾನೆ, ರಜೋಗುಣವು ಹೆಚ್ಚಿದಾಗ ಮೃತ್ಯುವಾದರೆ ಅವನಿಗೆ ಮನುಷ್ಯಲೋಕ ದೊರೆಯುತ್ತದೆ. ತಮೋಗುಣವು ಬೆಳೆದಾಗ ಸತ್ತರೆ ಅವನಿಗೆ ನರಕದ ಪ್ರಾಪ್ತಿಯಾಗುತ್ತದೆ. ಆದರೆ ತ್ರಿಗುಣಾತೀತ-ಜೀವನ್ಮುಕ್ತ ಪುರುಷನಿಗೆ ನನ್ನ ಪ್ರಾಪ್ತಿಯೇ ಆಗುತ್ತದೆ. ॥ ೨೨ ॥ ತನ್ನ ಸ್ವಧರ್ಮವನ್ನು ಭಗವದರ್ಪಣ ಭಾವದಿಂದ ಅಥವಾ ನಿಷ್ಕಾಮಭಾವದಿಂದ ಮಾಡಿದಾಗ ಅದು ಸಾತ್ತ್ವಿಕವಾಗುತ್ತದೆ. ಯಾವುದೇ ಕರ್ಮಾನುಷ್ಠಾನದಲ್ಲಿ ಫಲದ ಕಾಮನೆ ಇದ್ದಾಗ ಅದು ರಾಜಸವಾಗುತ್ತದೆ. ಯಾವುದೇ ಕರ್ಮದಲ್ಲಿ ಯಾರನ್ನಾದರೂ ಸತಾಯಿಸುವ ಅಥವಾ ತೋರಿಕೆಯ ಭಾವವಿದ್ದರೆ ಅದು ತಾಮಸಿಕವಾಗುತ್ತದೆ. ॥ ೨೩ ॥ ಶುದ್ಧ ಆತ್ಮನ ಜ್ಞಾನವು ಸಾತ್ತ್ವಿಕಜ್ಞಾನವಾಗಿದೆ. ತನ್ನನ್ನು ಕರ್ತಾ-ಭೋಕ್ತಾ ಎಂದು ತಿಳಿಯುವ ಜ್ಞಾನವು ರಾಜಸವಾಗಿದೆ. ಏಕಮಾತ್ರ ತನ್ನ ಶರೀರವನ್ನೇ ಆತ್ಮನೆಂದು ತಿಳಿಯುವುದು ತಾಮಸಿಕವಾಗಿದೆ. ಈ ಮೂರರಿಂದಲೂ ವಿಲಕ್ಷಣವಾದ ನನ್ನ ಸ್ವರೂಪದ ನಿಜವಾದ ಜ್ಞಾನ ಗುಣಾತೀತವಾಗಿದೆ. ॥ ೨೪ ॥ ಏಕಾಂತ ಪವಿತ್ರದೇಶದಲ್ಲಿ ವಾಸಿಸುವುದು ಸಾತ್ತ್ವಿಕವಾಗಿದೆ. ಗೃಹಾಸಕ್ತಿ ಇರುವುದು ರಾಜಸವಾಗಿದೆ ಮತ್ತು ಜೂಜು ಮದ್ಯಪಾನಾದಿಗಳಲ್ಲಿ ಆಸಕ್ತನಾಗುವುದು ತಾಮಸಿಕವಾಗಿದೆ. ಇವೆಲ್ಲಕ್ಕಿಂತ ಹೆಚ್ಚಾಗಿ ನನ್ನ ಮಂದಿರದಲ್ಲಿ ವಾಸಿಸುವುದು ನಿರ್ಗುಣ ನಿವಾಸವಾಗಿದೆ. ॥ ೨೫ ॥ ಅನಾಸಕ್ತಭಾವದಿಂದ ಕರ್ಮ ಮಾಡುವವನು ಸಾತ್ತ್ವಿಕನು ; ರಾಗಾಂಧನಾಗಿ ಕರ್ಮಮಾಡುವವನು ರಾಜಸಿಯು ; ಪೂರ್ವಾಪರ ವಿಚಾರರಹಿತನಾಗಿ ಕರ್ಮ ಮಾಡುವವನು ತಾಮಸಿಕನಾಗಿದ್ದಾನೆ. ಇವುಗಳನ್ನು ಬಿಟ್ಟು ಕೇವಲ ನನಗೆ ಶರಣಾಗಿ, ಅಹಂಕಾರವಿಲ್ಲದೆ ಕರ್ಮಮಾಡುವವನು ನಿರ್ಗುಣನಾಗಿದ್ದಾನೆ. ॥ ೨೬ ॥ ಆತ್ಮವಿಷಯಕ ಶ್ರದ್ಧೆಯು ಸಾತ್ತ್ವಿಕವಾಗಿದೆ, ಕರ್ಮವಿಷಯಕ ಶ್ರದ್ಧೆಯು ರಾಜಸವಾಗಿದೆ. ಅಧರ್ಮದಲ್ಲಿರುವ ಶ್ರದ್ಧೆಯು ತಾಮಸವಾಗಿದೆ. ನನ್ನ ಸೇವೆಯಲ್ಲೇ ಇರುವ ಶ್ರದ್ಧೆಯು ನಿರ್ಗುಣವಾಗಿದೆ. ॥ ೨೭ ॥

ಆರೋಗ್ಯದಾಯಕ, ಪವಿತ್ರ ಮತ್ತು ಅನಾಯಾಸವಾಗಿ ದೊರೆಯುವ ಭೋಜನವು ಸಾತ್ತ್ವಿಕವಾಗಿದೆ. ನಾಲಿಗೆಗೆ ರುಚಿಯಾದ, ಸ್ವಾದಿಷ್ಟದೃಷ್ಟಿಯಿಂದ ಕೂಡಿದ ಆಹಾರವು ರಾಜಸವಾಗಿದೆ. ದುಃಖಮಯ, ಅಪವಿತ್ರ ಊಟವು ತಾಮಸವಾಗಿದೆ. ॥ ೨೮ ॥ ಅಂತರ್ಮುಖತೆಯಿಂದ, ಆತ್ಮಚಿಂತನೆಯಿಂದ ದೊರೆಯುವ ಸುಖವು ಸಾತ್ತ್ವಿಕವಾಗಿದೆ. ಬಹಿರ್ಮುಖತೆಯಿಂದ, ವಿಷಯಗಳಿಂದ ಸಿಗುವ ಸುಖವು ರಾಜಸವಾಗಿದೆ. ಅಜ್ಞಾನ, ದೀನತೆಯಿಂದ ಆಗುವ ಸುಖವು ತಾಮಸವಾಗಿದೆ. ನನ್ನನ್ನು ಆಶ್ರಯಿಸಿದಾಗ ಉಂಟಾಗುವ ಸುಖವು ಗುಣಾತೀತ, ಅಪ್ರಾಕೃತವಾಗಿದೆ. ॥ ೨೯ ॥

ಉದ್ಧವನೇ ! ದ್ರವ್ಯ (ವಸ್ತು), ದೇಶ (ಸ್ಥಾನ), ಫಲ, ಕಾಲ, ಜ್ಞಾನ, ಕರ್ಮ, ಕರ್ತಾ, ಶ್ರದ್ಧೆ, ಅವಸ್ಥೆ, ದೇವ-ಮನುಷ್ಯ-ತಿರ್ಯಗಾದಿ ಶರೀರ ಮತ್ತು ನಿಷ್ಠೆ – ಇವೆಲ್ಲವೂ ತ್ರಿಗುಣಾತ್ಮಕವೇ ಆಗಿವೆ. ॥ ೩೦ ॥ ಪುರುಷಶ್ರೇಷ್ಠನೇ ! ಪುರುಷ ಮತ್ತು ಪ್ರಕೃತಿಯ

ಸರ್ವೇ ಗುಣಮಯಾ ಭಾವಾಃ ಪುರುಷಾವ್ಯಕ್ತಧಿಷ್ಠಿತಾಃ ।
ದೃಷ್ಟಂ ಶ್ರುತಮನುಧ್ಯಾತಂ ಬುದ್ಧ್ಯಾ ವಾ ಪುರುಷರ್ಷಭ ॥ ೩೧ ॥

ಆಶ್ರಿತವಾಗಿರುವ ಎಲ್ಲ ಭಾವಗಳು ಗುಣಮಯವೇ ಆಗಿವೆ. ಅವು ಬೇಕಾದರೆ ನೇತ್ರಾದಿ ಇಂದ್ರಿಯಗಳಿಂದ ಅನುಭವಿಸಿದುದಾಗಲೀ, ಅಥವಾ ಶಾಸ್ತ್ರಗಳ ಮೂಲಕ ಲೋಕ-ಲೋಕಾಂತರದ ಸಂಬಂಧವಾಗಿ ಕೇಳಿದುದಾಗಲೀ, ಇಲ್ಲವೇ ಬುದ್ಧಿಯಿಂದ ಯೋಚಿಸಿ, ವಿಚಾರಮಾಡಿದುದಾಗಲೀ ಎಲ್ಲವೂ ತ್ರಿಗುಣಾತ್ಮಕವೇ ಆಗಿವೆ. ॥ ೩೧ ॥

ಏತಾಃ ಸಂಸೃತಯಃ ಪುಂಸೋ ಗುಣಕರ್ಮನಿಬಂಧನಾಃ ।
ಯೇನೇಮೇ ನಿರ್ಜಿತಾಃ ಸೌಮ್ಯ ಗುಣಾ ಜೀವೇನ ಚಿತ್ತಜಾಃ ।
ಭಕ್ತಿಯೋಗೇನ ಮನ್ನಿಷ್ಠೋ ಮದ್ಭಾವಾಯ ಪ್ರಪದ್ಯತೇ ॥ ೩೨ ॥

ಜೀವಿಗಳಿಗೆ ದೊರೆಯುವ ಯೋನಿಗಳು ಅಥವಾ ಗತಿಗಳೆಲ್ಲವೂ ಅವನ ಗುಣ-ಕರ್ಮಗಳ ಅನುಸಾರವೇ ಇರುತ್ತವೆ. ಎಲೈ ಸೌಮ್ಯ! ಎಲ್ಲ ಗುಣಗಳು ಚಿತ್ತದೊಂದಿಗೆ ಸಂಬಂಧ ವಿರಿಸುತ್ತವೆ. ಅವುಗಳ ಮೇಲೆ ವಿಜಯ ಸಾಧಿಸಿದ ಜೀವಿಯು ಭಕ್ತಿಯೋಗದ ಮೂಲಕ ನನ್ನಲ್ಲೇ ಸ್ಥಿತನಾಗಿ, ಕೊನೆಯಲ್ಲಿ ನನ್ನ ಸ್ವರೂಪವನ್ನೇ ಪಡೆದುಕೊಳ್ಳುವನು. ॥ ೩೨ ॥

ತಸ್ಮಾದ್ದೇಹಮಿಮಂ ಲಬ್ಧ್ವಾ ಜ್ಞಾನವಿಜ್ಞಾನಸಂಭವಮ್ ।
ಗುಣಸಂಗಂ ವಿನಿರ್ಧೂಯ ಮಾಂ ಭಜಂತು ವಿಚಕ್ಷಣಾಃ ॥ ೩೩ ॥

ಈ ಮನುಷ್ಯ ಶರೀರವು ಬಹಳ ದುರ್ಲಭವಾಗಿದೆ. ಇದೇ ಶರೀರದಲ್ಲಿ ತತ್ತ್ವ ಜ್ಞಾನ ಮತ್ತು ಅದರಲ್ಲಿ ನಿಷ್ಠಾರೂಪೀ ವಿಜ್ಞಾನವನ್ನು ಪಡೆಯುವ ಸಂಭವವಿದೆ. ಆದಕ್ಕಾಗಿ ಇದನ್ನು ಪಡೆದ ಬುದ್ಧಿವಂತನಾದ ಮನುಷ್ಯನು ಗುಣಗಳ ಆಸಕ್ತಿಯನ್ನು ತೊಡೆದು ನನ್ನನ್ನೇ ಭಜಿಸಬೇಕು. ॥ ೩೩ ॥

ನಿಸ್ಸಂಗೋ ಮಾಂ ಭಜೇದ್ವಿದ್ವಾನಪ್ರಮತ್ತೋ ಜಿತೇಂದ್ರಿಯಃ ।
ರಜಸ್ತಮಶ್ಚಾಭಿಜಯೇತ್ಸತ್ತ್ವ ಸಂಸೇವಯಾ ಮುನಿಃ ॥ ೩೪ ॥

ವಿಚಾರಶೀಲ ಪುರುಷನು ತುಂಬಾ ಎಚ್ಚರಿಕೆಯಿಂದ ಸತ್ತ್ವಗುಣದ ಸೇವನೆಯಿಂದ ರಜೋಗುಣ, ತಮೋಗುಣಗಳನ್ನು ಗೆದ್ದುಕೊಳ್ಳಬೇಕು. ಇಂದ್ರಿಯಗಳನ್ನು ವಶಪಡಿಸಿಕೊಂಡು, ನನ್ನ ಸ್ವರೂಪವನ್ನು ಅರಿತುಕೊಂಡು, ನನ್ನ ಭಜನೆಯಲ್ಲಿ ತೊಡಗಬೇಕು. ಆಸಕ್ತಿಯು ಲೇಶಮಾತ್ರವೂ ಇರಬಾರದು. ॥ ೩೪ ॥

ಸತ್ತ್ವಂ ಚಾಭಿಜಯೇದ್ಯುಕ್ತೋ ನೈರಪೇಕ್ಷ್ಯೇಣ ಶಾಂತಧೀಃ ।
ಸಂಪದ್ಯತೇ ಗುಣೈರ್ಮುಕ್ತೋ ಜೀವೋ ಜೀವಂ ವಿಹಾಯ ಮಾಮ್ ॥ ೩೫ ॥

ಧ್ಯಾನಯೋಗದ ಮೂಲಕ ಚಿತ್ತವೃತ್ತಿಗಳನ್ನು ಶಾಂತಗೊಳಿಸಿಕೊಂಡು, ನಿರಪೇಕ್ಷತೆಯಿಂದ ಸತ್ತ್ವಗುಣದ ವಿಜಯ ಸಾಧಿಸಿಕೊಳ್ಳಬೇಕು. ಹೀಗೆ ಗುಣಗಳಿಂದ ಮುಕ್ತನಾದ ಜೀವಿಯು ತನ್ನ ಜೀವಭಾವವನ್ನು ಬಿಟ್ಟು, ನನ್ನಲ್ಲಿ ಒಂದಾಗಿಹೋಗುತ್ತಾನೆ.॥ ೩೫ ॥

ಜೀವೋ ಜೀವವಿನಿರ್ಮುಕ್ತೋ ಗುಣೈಶ್ಚಾಶಯಸಂಭವೈಃ ।
ಮಯೈವ ಬ್ರಹ್ಮಣಾ ಪೂರ್ಣೋ ನ ಬಹಿರ್ನಾಂತರಶ್ಚರೇತ್ ॥ ೩೬ ॥

ಜೀವಭಾವದಿಂದ ಮುಕ್ತನಾದ ಜೀವಿಯು ಅಂತಃಕರಣದಲ್ಲಿ ಉತ್ಪನ್ನವಾಗುವ ಗುಣಗಳಿಂದ ಮುಕ್ತನಾಗಿ, ಪರಿಪೂರ್ಣನಾದ ನನ್ನೊಂದಿಗೆ ಏಕೀಭಾವವನ್ನು ಪಡೆದುಕೊಂಡು, ನನ್ನಲ್ಲಿಯೇ ಸೇರಿ ಹೋಗುತ್ತಾನೆ. ಮತ್ತೆ ಅವನಿಗೆ ಪುನರ್ಜನ್ಮ ಇರುವುದಿಲ್ಲ. ॥ ೩೬ ॥

ಇಪ್ಪತ್ತೈದನೆಯ ಅಧ್ಯಾಯವು ಮುಗಿಯಿತು. ॥ ೨೫ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಏಕಾದಶ ಸ್ಕಂಧೇ ಪಂಚವಿಂಶೋಽಧ್ಯಾಯಃ ॥ ೨೫ ॥

ಇಪ್ಪತ್ತಾರನೆಯ ಅಧ್ಯಾಯ

ಪುರೂರವನ ವೈರಾಗ್ಯೋಕ್ತಿ

ಶ್ರೀಭಗವಾನುವಾಚ

ಮಲ್ಲಕ್ಷಣಮಿಮಂ ಕಾಯಂ ಲಬ್ಧ್ವಾ ಮದ್ಧರ್ಮ ಆಸ್ಥಿತಃ ।
ಆನಂದಂ ಪರಮಾತ್ಮಾನಮಾತ್ಮಸ್ಥಂ ಸಮುಪೈತಿ ಮಾಮ್ ॥ ೧ ॥

ಭಗವಾನ್ ಶ್ರೀಕೃಷ್ಣನು ಹೇಳುತ್ತಾನೆ – ಎಲೈ ಉದ್ಧವನೇ ! ಈ ಮನುಷ್ಯಶರೀರವು ನನ್ನ ಸ್ವರೂಪಜ್ಞಾನದ ಮತ್ತು ನನ್ನ ಪ್ರಾಪ್ತಿಯ ಮುಖ್ಯಸಾಧನವಾಗಿದೆ. ಇದನ್ನು ಪಡೆದ ಯಾವ ಮನುಷ್ಯನು ನಿಜವಾದ ಪ್ರೇಮದಿಂದ ನನ್ನ ಭಕ್ತಿ ಮಾಡುವನೋ, ಅವನು ಅಂತಃಕರಣದಲ್ಲಿ ಸ್ಥಿತವಾದ ಆನಂದಸ್ವರೂಪೀ ಪರಮಾತ್ಮನಾದ ನನ್ನನ್ನು ಪಡೆದುಕೊಳ್ಳುವನು. ॥ ೧ ॥

ಗುಣಮಯ್ಯಾ ಜೀವಯೋನ್ಯಾ ವಿಮುಕ್ತೋ ಜ್ಞಾನನಿಷ್ಠಯಾ ।
ಗುಣೇಷು ಮಾಯಾಮಾತ್ರೇಷು ದೃಶ್ಯಮಾನೇಷ್ವವಸ್ತುತಃ ।
ವರ್ತಮಾನೋಽಪಿ ನ ಪುಮಾನ್ ಯುಜ್ಯತೇಽವಸ್ತುಭಿರ್ಗುಣೈಃ
॥ ೨ ॥

ಸಂಗಂ ನ ಕುರ್ಯಾದಸತಾಂ ಶಿಶ್ನೋದರತೃಪಾಂ ಕ್ವಚಿತ್ ।
ತಸ್ಯಾನುಗಸ್ತಮಸ್ಯಂಧೇ ಪತತ್ಯಂಧಾನುಗಾಂಧವತ್
॥ ೩ ॥

ಐಲಃ ಸಮ್ರಾಡಿಮಾಂ ಗಾಥಾಮಗಾಯತ ಬೃಹಚ್ಛ್ರವಾಃ ।
ಊರ್ವಶೀವಿರಹಾನ್ಮುಹ್ಯನ್ನಿರ್ವಿಣ್ಣಃ ಶೋಕಸಂಯಮೇ
॥ ೪ ॥

ತ್ಯಕ್ತ್ವಾಽಽತ್ಮಾನಂ ವ್ರಜಂತೀಂ ತಾಂ ನಗ್ನ ಉನ್ಮತ್ತವನ್ನೃಪಃ ।
ವಿಲಪನ್ನನ್ವಗಾಜ್ಜಾಯೇ ಘೋರೇ ತಿಷ್ಠೇತಿ ವಿಕ್ಲವಃ
॥ ೫ ॥

ಕಾಮಾನತೃಪ್ತೋಽನುಜುಷನ್ ಕ್ಷುಲ್ಲಕಾನ್ವರ್ಷಯಾಮಿನೀಃ ।
ನ ವೇದ ಯಾಂತೀರ್ನಾಯಾಂತೀರುರ್ವಶ್ಯಾಕೃಷ್ಟಚೇತನಃ
॥ ೬ ॥

ಐಲ ಉವಾಚ

ಅಹೋ ಮೇ ಮೋಹವಿಸ್ತಾರಃ ಕಾಮಕಶ್ಮಲಚೇತಸಃ ।
ದೇವ್ಯಾ ಗೃಹೀತಕಂಠಸ್ಯ ನಾಯುಃಖಂಡಾ ಇಮೇ ಸ್ಮೃತಾಃ
॥ ೭ ॥

ನಾಹಂ ವೇದಾಭಿನಿರ್ಮುಕ್ತಃ ಸೂರ್ಯೋ ವಾಭ್ಯುದಿತೋಽಮುಯಾ ।
ಮೂಷಿತೋ ವರ್ಷಪೂಗಾನಾಂ ಬತಾಹಾನಿ ಗತಾನ್ಯುತ
॥ ೮ ॥

ಜೀವಿಗಳ ಎಲ್ಲ ಯೋನಿಗಳು, ಎಲ್ಲ ಗತಿಗಳು ತ್ರಿಗುಣಮಯವಾಗಿವೆ. ಜೀವಿಯು ಜ್ಞಾನನಿಷ್ಠೆಯ ಮೂಲಕ ಅವುಗಳಿಂದ ಎಂದೆಂದಿಗೂ ಮುಕ್ತನಾಗಿ ಹೋಗುತ್ತಾನೆ. ಕಂಡುಬರುವ ಸತ್ತ್ವ, ರಜ ಮುಂತಾದ ಗುಣಗಳು ವಾಸ್ತವಿಕವಾಗಿಲ್ಲ, ಮಾಯಾಮಾತ್ರವಾಗಿವೆ. ಜ್ಞಾನ ಉಂಟಾದ ಬಳಿಕ ಪುರುಷನು ಅವುಗಳ ನಡುವೆ ಇದ್ದರೂ ಕೂಡ, ಅವುಗಳ ಮೂಲಕ ವ್ಯವಹರಿಸುತ್ತಿದ್ದರೂ ಕೂಡ, ಅವುಗಳಿಂದ ಬಂಧಿತನಾಗುವುದಿಲ್ಲ, ಏಕೆಂದರೆ, ಆ ಗುಣಗಳ ವಾಸ್ತವಿಕ ಅಸ್ತಿತ್ವವೇ ಇರುವುದಿಲ್ಲ. ॥ ೨ ॥ ವಿಷಯಗಳ ಸೇವನೆ ಮತ್ತು ಉದರ ಪೋಷಣೆಯಲ್ಲೇ ತೊಡಗಿರುವ ಅಸತ್ ಪುರುಷರ ಸಂಗವನ್ನು ಎಂದೂ ಮಾಡಬಾರದು. ಸಾಮಾನ್ಯವಾಗಿ ಇದರ ಕುರಿತು ಜನರು ಲಕ್ಷ್ಯವಿಡಬೇಕು; ಏಕೆಂದರೆ, ಅವರನ್ನು ಅನುಸರಿಸುವವರಿಗೆ – 'ಕುರುಡನ ಆಸರೆಯಿಂದ ನಡೆಯುವ ಕುರುಡನಂತೆ' ದುರ್ದಶೆ ಉಂಟಾಗುತ್ತದೆ. ಅವನಿಗಾದರೋ ಘೋರ ಅಂಧಕಾರದಲ್ಲಿ ಅಲೆಯಬೇಕಾಗುತ್ತದೆ. ॥ ೩ ॥ ಉದ್ಧವನೇ ! ಹಿಂದೆ ಪರಮ ಯಶಸ್ವೀ ಸಾಮ್ರಾಟ ಇಲಾನಂದನ ಪುರೂರವನು ಊರ್ವಶಿಯ ವಿರಹದಿಂದ ಅತ್ಯಂತ ವ್ಯಾಕುಲನಾಗಿದ್ದನು. ಮತ್ತೆ ಶೋಕ ದೂರವಾದಾಗ ಅವನಲ್ಲಿ ಪ್ರಬಲವಾದ ವೈರಾಗ್ಯವು ಉದಿಸಿತು. ಆಗ ಅವನು ಅನುಭವಸಿದ್ಧವಾದ ಈ ಗಾಥೆಯನ್ನು ಹಾಡಿದನು. ॥ ೪ ॥ ತನ್ನನ್ನು ಅಗಲಿ ಓಡಿಹೋಗುತ್ತಿರುವ ಊರ್ವಶಿಯ ಹಿಂದೆ ರಾಜಾ ಪುರೂರವನು ವಿವಸ್ತ್ರನಾಗಿ ಹುಚ್ಚನಂತೆ ಅತ್ಯಂತ ವಿಹ್ವಲನಾಗಿ ಓಡುತ್ತಾ ಹೀಗೆ ಹೇಳತೊಡಗಿದನು – 'ದೇವೀ ! ನಿಷ್ಠುರ ಹೃದಯಳೇ ! ಸ್ವಲ್ಪ ಹೊತ್ತಾದರೂ ನಿಂತುಕೋ. ಓಡಿಹೋಗಬೇಡ. ॥ ೫ ॥ ಊರ್ವಶಿಯು ರಾಜನ ಚಿತ್ತವನ್ನು ಸಂಪೂರ್ಣವಾಗಿ ಅಪಹರಿಸಿಬಿಟ್ಟಿದ್ದಳು. ಅವಳೊಂದಿಗಿನ ಕಾಮೋಪಭೋಗದಿಂದ ಅವನಿಗೆ ತೃಪ್ತಿಯೇ ಆಗಿರಲಿಲ್ಲ, ಅವನು ಕ್ಷುದ್ರವಾದ ವಿಷಯಸೇವನೆಯಲ್ಲಿ ಅವನಿಗೆ ಎಷ್ಟೋ ವರ್ಷಗಳ ರಾತ್ರಿಗಳು ಬಂದು ಹೋದುದರ ಅರಿವೇ ಇಲ್ಲದಷ್ಟು ಮುಳುಗಿಹೋಗಿದ್ದನು. ಈಗ ಊರ್ವಶಿಯು ಬಿಟ್ಟು ಹೋದಾಗ ವಿವೇಕ ಉಂಟಾಗಿ, ಮನಸ್ಸಿನಲ್ಲೇ ಹೀಗೆ ಅಂದುಕೊಂಡನು. ॥ ೬ ॥

ಪುರೂರವನು ಹೇಳಿದನು – ಅಯ್ಯೋ ಶಿವನೇ ! ನನ್ನ ಮೂಢತೆಯನ್ನಾದರೋ ನೋಡಬಾರದೇ ! ಕಾಮವಾಸನೆಯು ನನ್ನ ಚಿತ್ತವನ್ನು ಎಷ್ಟು ಕಲುಷಿತಗೊಳಿಸಿತು ! ಊರ್ವಶಿಯು ತನ್ನ ಬಾಹುಗಳಿಂದ ನನ್ನ ಕತ್ತನ್ನು ಅಪ್ಪಿಕೊಂಡಳು, ಅದರಿಂದ ನಾನು ಆಯುಸ್ಸಿನ ಎಷ್ಟು ವರ್ಷಗಳನ್ನು ಕಳೆದುಕೊಂಡೆ ! ಅಯ್ಯೋ ! ವಿಸ್ಮೃತಿಗೂ ಒಂದು ಮೇರೆ ಇರುತ್ತದಲ್ಲ ! ॥ ೭ ॥ ಅಯ್ಯಯ್ಯೋ ! ಇವಳು ನನ್ನನ್ನು ಬರಿದಾಗಿಸಿದಳು. ಸೂರ್ಯ ಹುಟ್ಟಿದನೋ, ಮುಳುಗಿದನೋ ಎಂಬುದನ್ನೂ ನಾನು ಅರಿಯದೆ ಹೋದೆ. ಅನೇಕ ವರ್ಷಗಳ ದಿನಗಳ ಮೇಲೆ ದಿನಗಳು ಸಂದುಹೋದುವು. ಆದರೆ ನನ್ನ ಅರಿವಿಗೆ ಬರಲಿಲ್ಲ, ಎಂತಹ ದುಃಖದ ಮಾತಾಗಿದೆ ಇದು ! ॥ ೮ ॥ ಅಯ್ಯೋ ! ಆಶ್ಚರ್ಯವೇ ! ನನ್ನ ಮನಸ್ಸಿನಲ್ಲಿ ಎಷ್ಟು

ಅಹೋ ಮೇ ಆತ್ಮಸಮ್ಮೋಹೋ ಯೇನಾತ್ಮಾ ಯೋಷಿತಾಂ ಕೃತಃ ।
ಕ್ರೀಡಾಮೃಗಶ್ಚಕ್ರವರ್ತೀ ನರದೇವಶಿಖಾಮಣಿಃ ॥ ೯ ॥

ಸಪರಿಚ್ಛದಮಾತ್ಮಾನಂ ಹಿತ್ವಾ ತೃಣಮಿವೇಶ್ವರಮ್ ।
ಯಾಂತೀಂ ಸ್ತ್ರಿಯಂ ಚಾನ್ವಗಮಂ ನಗ್ನ ಉನ್ಮತ್ತವದ್ರುದನ್ ॥ ೧೦ ॥

ಕುತಸ್ತಸ್ಯಾನುಭಾವಃ ಸ್ಯಾತ್ತೇಜ ಈಶತ್ವಮೇವ ವಾ ।
ಯೋಽನ್ವಗಚ್ಛಂ ಸ್ತ್ರಿಯಂ ಯಾಂತೀಂ ಖರವತ್ಪಾದತಾಡಿತಃ ॥ ೧೧ ॥

ಕಿಂ ವಿದ್ಯಯಾ ಕಿಂ ತಪಸಾ ಕಿಂ ತ್ಯಾಗೇನ ಶ್ರುತೇನ ವಾ ।
ಕಿಂ ವಿವಿಕ್ತೇನ ಮೌನೇನ ಸ್ತ್ರೀಭಿರ್ಯಸ್ಯ ಮನೋ ಹೃತಮ್ ॥ ೧೨ ॥

ಸ್ವಾರ್ಥಸ್ಯಾಕೋವಿದಂ ಧಿಙ್ಮಾಂ ಮೂರ್ಖಂ ಪಂಡಿತಮಾನಿನಮ್ ।
ಯೋಽಹಮೀಶ್ವರತಾಂ ಪ್ರಾಪ್ಯ ಸ್ತ್ರೀಭಿರ್ಗೋಖರವಜ್ಜಿತಃ ॥ ೧೩ ॥

ಸೇವತೋ ವರ್ಷಪೂಗಾನ್ಮೇ ಉರ್ವಶ್ಯಾ ಅಧರಾಸವಮ್ ।
ನ ತೃಪ್ಯತ್ಯಾತ್ಮಭೂಃ ಕಾಮೋ ವಹ್ನಿರಾಹುತಿಭಿರ್ಯಥಾ ॥ ೧೪ ॥

ಪುಂಶ್ಚಲ್ಯಾಪಹೃತಂ ಚಿತ್ತಂ ಕೋ ನ್ವನ್ಯೋ ಮೋಚಿತುಂ ಪ್ರಭುಃ ।
ಆತ್ಮಾರಾಮೇಶ್ವರಮೃತೇ ಭಗವಂತಮಧೋಕ್ಷಜಮ್ ॥ ೧೫ ॥

ಬೋಧಿತಸ್ಯಾಪಿ ದೇವ್ಯಾ ಮೇ ಸೂಕ್ತವಾಕ್ಯೇನ ದುರ್ಮತೇಃ ।
ಮನೋಗತೋ ಮಹಾಮೋಹೋ ನಾಪಯಾತ್ಯಜಿತಾತ್ಮನಃ ॥ ೧೬ ॥

ಕಿಮೇತಯಾ ನೋಽಪಕೃತಂ ರಜ್ಜ್ವಾ ವಾ ಸರ್ಪಚೇತಸಃ ।
ರಜ್ಜುಸ್ವರೂಪಾವಿದುಷೋ ಯೋಽಹಂ ಯದಜಿತೇಂದ್ರಿಯಃ ॥ ೧೭ ॥

ಕ್ವಾಯಂ ಮಲೀಮಸಃ ಕಾಯೋ ದೌರ್ಗಂಧ್ಯಾದ್ಯಾತ್ಮಕೋಽಶುಚಿಃ ।
ಕ್ವ ಗುಣಾಃ ಸೌಮನಸ್ಯಾದ್ಯಾ ಹ್ಯಧ್ಯಾಸೋಽವಿದ್ಯಯಾ ಕೃತಃ ॥ ೧೮ ॥

ಮೋಹ ಬೆಳೆದುಹೋಯಿತು. ಅವಳು ನರಶ್ರೇಷ್ಠ ಚಕ್ರವರ್ತಿ ಶಿಖಾಮಣಿ ಸಾಮ್ರಾಟ ಪುರೂರವನಾದ ನನ್ನನ್ನು ಸ್ತ್ರೀಯರ ಕ್ರೀಡಾಮೃಗ (ಆಟಿಕೆ)ವನ್ನಾಗಿಬಿಟ್ಟಳು. ॥ ೯ ॥ ನೋಡು! ನಾನು ಪ್ರಜೆಯನ್ನು ಮರ್ಯಾದೆಯಲ್ಲಿ ಇರಿಸುವಂತಹ ಸಾಮ್ರಾಟನಾಗಿದ್ದೇನೆ. ಅವಳು ನನ್ನನ್ನು ಮತ್ತು ನನ್ನ ರಾಜ್ಯವನ್ನು ಹುಲ್ಲಿನ ಕಡ್ಡಿಯಂತೆ ತಿರಸ್ಕರಿಸಿ ಹೊರಟುಹೋದಳು. ನಾನು ಹುಚ್ಚನಂತೆ ಬತ್ತಲೆಯಾಗಿ ಅಳುತ್ತಾ, ಗೋಳಾಡುತ್ತಾ ಅವಳ ಹಿಂದೆ ಓಡುತ್ತಿರುವೆನಲ್ಲ! ಅಯ್ಯೋ! ಇದೊಂದು ಜೀವನವೇ! ॥ ೧೦ ॥ ಹೆಣ್ಣುಕತ್ತೆಯು ಹಿಂದಿನಿಂದ ಒದೆಯುತ್ತಿದ್ದರೂ ಅದನ್ನು ಲೆಕ್ಕಿಸದೆ ಅದರ ಹಿಂದೆಯೇ ಹೋಗುವ ಗಂಡುಕತ್ತೆಯಂತೆ ನಾನೂ ಈ ಹೆಂಗಸಿನ ಹಿಂದೆ ಓಡುತ್ತಿರುವೆನಲ್ಲ! ಮತ್ತೆ ನನ್ನಲ್ಲಿ ಪ್ರಭಾವ, ತೇಜ ಮತ್ತು ಸ್ವಾಮಿತ್ವ ಹೇಗೆ ತಾನೇ ಇರಬಲ್ಲದು? ॥ ೧೧ ॥ ಯಾವನ ಮನಸ್ಸನ್ನು ಸ್ತ್ರೀಯು ಅಪಹರಿಸುತ್ತಾಳೋ ಅವನಿಗೆ ಎಷ್ಟು ವಿದ್ಯೆ ಇದ್ದರೇನು ವ್ಯರ್ಥವೇ. ಅವನಿಗೆ ತಪಸ್ಸು, ತ್ಯಾಗ, ಶಾಸ್ತ್ರಾಭ್ಯಾಸದಿಂದಲೂ ಯಾವುದೇ ಲಾಭವಿಲ್ಲ. ಅವನ ಏಕಾಂತವಾಸ, ಮೌನ ಇವುಗಳೂ ನಿಷ್ಫಲವೇ. ॥ ೧೨ ॥ ನನ್ನ ಲಾಭ-ಹಾನಿಯನ್ನೇ ಅರಿಯದ ನಾನು ನನ್ನನ್ನು ಬಹುದೊಡ್ಡ ಪಂಡಿತನೆಂದು ತಿಳಿಯುತ್ತಿದ್ದೇನೆ. ನನ್ನಂತಹ ಮೂರ್ಖನಿಗೆ ಧಿಕ್ಕಾರವಿರಲಿ. ಅಯ್ಯೋ! ಶಿವನೇ! ನಾನು ಚಕ್ರವರ್ತಿ ಸಾಮ್ರಾಟನಾಗಿದ್ದರೂ ಕತ್ತೆ, ಎತ್ತುಗಳಂತೆ ಸ್ತ್ರೀಯರ ಬಲೆಯಲ್ಲಿ ಸಿಕ್ಕಿಹೋದೆನಲ್ಲ! ॥ ೧೩ ॥ ನಾನು ಅನೇಕ ವರ್ಷಗಳವರೆಗೆ ಊರ್ವಶಿಯ ಅಧರಾಮೃತವನ್ನು ಕುಡಿಯುತ್ತಾ ಇದ್ದೆ. ಆದರೆ ನನ್ನ ಕಾಮವಾಸನೆ ತೃಪ್ತವಾಗಲಿಲ್ಲ. ತುಪ್ಪದ ಆಹುತಿಯಿಂದ ಅಗ್ನಿಯು ತೃಪ್ತವಾಗುವುದಿಲ್ಲ. ಹಾಗೆಯೇ ನನ್ನಲ್ಲಿ ಉತ್ಪನ್ನವಾದ ಕಾಮವು ತೃಪ್ತವಾಗುವುದಿಲ್ಲ. ॥ ೧೪ ॥ ಆ ಕುಲಟೆಯು ನನ್ನ ಚಿತ್ತವನ್ನು ಅಪಹರಿಸಿಬಿಟ್ಟಿರುವಳು. ಅವಳ ಉರುಳಿನಿಂದ ನನ್ನ ಮನಸ್ಸನ್ನು ಬಿಡಿಸಲು ಆತ್ಮಾರಾಮನೂ, ಜೀವನ್ಮುಕ್ತರ ಸ್ವಾಮಿಯೂ ಆದ ಇಂದ್ರಿಯಾತೀತ ಭಗವಂತನನ್ನು ಬಿಟ್ಟು ಬೇರೆ ಯಾರಿದ್ದಾರೆ? ॥ ೧೫ ॥ ಊರ್ವಶಿಯಾದರೋ ನನಗೆ ವೈದಿಕ ಸೂಕ್ತದಿಂದ ಯಥಾರ್ಥವಾದ ಮಾತನ್ನು ಹೇಳಿದ್ದಳು. ಆದರೆ ನನ್ನ ಮನಸ್ಸಿನ ಆ ಭಯಂಕರ ಮೋಹವು ಅಳಿದುಹೋಗದಿದ್ದಾಗ, ನನ್ನ ಬುದ್ಧಿಯು ಪೂರ್ಣವಾಗಿ ಕೆಟ್ಟುಹೋಗಿತ್ತು. ನನ್ನ ಇಂದ್ರಿಯಗಳೇ ನನ್ನ ಕೈಮೀರಿ ಹೋಗಿದ್ದಾಗ ನಾನು ಹೇಗೆ ತಿಳಿದುಕೊಳ್ಳಬಲ್ಲೆ? ॥ ೧೬ ॥ ಹಗ್ಗವನ್ನು ಸರ್ಪವೆಂದು ತಿಳಿದು ಅದರಲ್ಲಿ ಸರ್ಪದ ಕಲ್ಪನೆ ಮಾಡಿ, ದುಃಖಿತನಾದವನಿಗೆ, ಆ ಹಗ್ಗವು ಏನು ತಾನೇ ಮಾಡಬಲ್ಲದು? ಸ್ವತಃ ನಾನೇ ಅಜಿತೇಂದ್ರಿಯನಾದ ಕಾರಣ ಅಪರಾಧಿ ನಾನೇ ಆಗಿದ್ದೇನೆ. ॥ ೧೭ ॥ ದುರ್ಗಂಧದಿಂದ ತುಂಬಿಕೊಂಡಿರುವ ಮಲಿನವೂ, ಅಪವಿತ್ರವೂ ಆಗಿರುವ ಆ ದೇಹವೆಲ್ಲಿ? ಕೋಮಲತೆ, ಪವಿತ್ರತೆ, ಸುಗಂಧವೇ ಮುಂತಾದ ಪುಷ್ಪಗಳಂತಿರುವ ಗುಣವೆಲ್ಲಿ? ಆದರೆ ನಾನೇ ಅಜ್ಞಾನವಶನಾಗಿ ಕುರೂಪವದಲ್ಲಿ ಸುಂದರತೆಯ ಆರೋಪಮಾಡಿದೆ, ಇದು ನನ್ನ ಮೂಢತೆಯೇ ಆಗಿದೆ. ॥ ೧೮ ॥ ಈ ಶರೀರವು ಜನ್ಮದಾತರಾದ

ಪಿತ್ರೋಃ ಕಿಂ ಸ್ವಂ ನು ಭಾರ್ಯಾಯಾಃ
ಸ್ವಾಮಿನೋಽಗ್ನೇಃ ಶ್ವಗೃಧ್ರಯೋಃ ।
ಕಿಮಾತ್ಮನಃ ಕಿಂ ಸುಹೃದಾಮಿತಿ
ಯೋ ನಾವಸೀಯತೇ ॥ ೧೯ ॥

ತಸ್ಮಿನ್ ಕಲೇವರೇಽಮೇಧ್ಯೇ ತುಚ್ಛನಿಷ್ಠೇ ವಿಷಜ್ಜತೇ ।
ಅಹೋ ಸುಭದ್ರಂ ಸುನಸಂ ಸುಸ್ಮಿತಂ ಚ ಮುಖಂ ಸ್ತ್ರಿಯಃ ॥ ೨೦ ॥

ತ್ವಙ್ಮಾಂಸರುಧಿರಸ್ನಾಯುಮೇದೋಮಜ್ಜಾಸ್ಥಿಸಂಹತೌ ।
ವಿಣ್ಮೂತ್ರಪೂಯೇ ರಮತಾಂ ಕೃಮೀಣಾಂ ಕಿಯದಂತರಮ್ ॥ ೨೧ ॥

ಅಥಾಪಿ ನೋಪಸಜ್ಜೇತ ಸ್ತ್ರೀಷು ಸ್ತ್ರೈಣೇಷು ಚಾರ್ಥವಿತ್ ।
ವಿಷಯೇಂದ್ರಿಯಸಂಯೋಗಾನ್ಮನಃ ಕ್ಷುಭ್ಯತಿ ನಾನ್ಯಥಾ ॥ ೨೨ ॥

ಅದೃಷ್ಟಾದಶ್ರುತಾದ್ಭಾವಾನ್ ನ ಭಾವ ಉಪಜಾಯತೇ ।
ಅಸಂಪ್ರಯುಂಜತಃ ಪ್ರಾಣಾನ್ ಶಾಮ್ಯತಿ ಸ್ತಿಮಿತಂ ಮನಃ ॥ ೨೩ ॥

ತಸ್ಮಾತ್ ಸಂಗೋ ನ ಕರ್ತವ್ಯಃ
ಸ್ತ್ರೀಷು ಸ್ತ್ರೈಣೇಷು ಚೇಂದ್ರಿಯೈಃ ।
ವಿದುಷಾಂ ಚಾಪ್ಯವಿಸ್ರಬ್ಧಃ
ಷಡ್ವರ್ಗಃ ಕಿಮು ಮಾದೃಶಾಮ್ ॥ ೨೪ ॥

ಶ್ರೀಭಗವಾನುವಾಚ

ಏವಂ ಪ್ರಗಾಯನ್ ನೃಪದೇವದೇವಃ
ಸ ಉರ್ವಶೀಲೋಕಮಥೋ ವಿಹಾಯ ।
ಆತ್ಮಾನಮಾತ್ಮನ್ಯವಗಮ್ಯ ಮಾಂ ವೈ
ಉಪಾರಮಜ್ಜ್ಞಾನವಿಧೂತಮೋಹಃ ॥ ೨೫ ॥

ತತೋ ದುಸ್ಸಂಗ ಮುತ್ಸೃಜ್ಯ ಸತ್ಸು ಸಜ್ಜೇತ ಬುದ್ಧಿಮಾನ್ ।
ಸಂತ ಏತಸ್ಯ ಛಿಂದಂತಿ ಮನೋವ್ಯಾಸಂಗಮುಕ್ತಿಭಿಃ ॥ ೨೬ ॥

ಸಂತೋಽನಪೇಕ್ಷಾ ಮಚ್ಚಿತ್ತಾಃ ಪ್ರಶಾಂತಾಃ ಸಮದರ್ಶಿನಃ ।
ನಿರ್ಮಮಾ ನಿರಹಂಕಾರಾ ನಿರ್ದ್ವಂದ್ವಾ ನಿಷ್ಪರಿಗ್ರಹಾಃ ॥ ೨೭ ॥

ತಂದೆ-ತಾಯಿಯರಿಗೆ ಸೇರಿದ್ದೇ? ವಿವಾಹಿತ ಪತ್ನಿಗೆ ಸೇರಿದ್ದೇ? ಅನ್ನವನ್ನಿಟ್ಟು ಸಾಕಿದ ಒಡೆಯನಿಗೆ ಸೇರಿದ್ದೇ? ಕೊನೆಗೆ ಬೆಂಕಿಗೆ ಸೇರಿದ್ದೇ? ನರಿ-ನಾಯಿಗಳಿಗೆ ಸೇರಿದ್ದೇ? ಇದನ್ನು ನನ್ನದೆಂದು ಹೇಳಲೇ? ಸುಹೃದ್ ಸಂಬಂಧಿಗಳದ್ದೆಂದು ಹೇಳಲೇ? ತುಂಬಾ ವಿಚಾರಮಾಡಿದಾಗ ಇದು ಯಾರದೂ ಅಲ್ಲ ಎಂಬುದೇ ನಿಶ್ಚಯವಾಗುತ್ತದೆ. ॥ ೧೯ ॥ ಈ ಶರೀರವು ಖಂಡಿತವಾಗಿ ಅಪವಿತ್ರವಾಗಿದ್ದು ಸ್ವರೂಪತಃ ತುಚ್ಛವಾಗಿದೆ. ಇಂತಹ ಶರೀರದಲ್ಲಿ ಆಸಕ್ತಿಯನ್ನಿರಿಸಿ 'ಆಹಾ! ಈ ಸ್ತ್ರೀಯ ಮುಖ, ಮೂಗು, ನಗು ಎಷ್ಟು ಸುಂದರವಾಗಿದೆ' ಎಂದು ಹೇಳತೊಡಗುತ್ತಾನೆ. ॥ ೨೦ ॥ ಈ ಶರೀರವು ಚರ್ಮ, ಮಾಂಸ, ಮಜ್ಜೆ ರಕ್ತ, ಸ್ನಾಯು, ಮೇದಸ್ಸು ಎಲುಬುಗಳ ರಾಶಿಯಾಗಿದೆ. ಮಲ-ಮೂತ್ರ, ಕೀವುಗಳಿಂದ ತುಂಬಿಕೊಂಡಿದೆ. ಮನುಷ್ಯನು ಇದರಲ್ಲಿ ರಮಿಸಿದರೆ ಮಲ ಮೂತ್ರದ ಕ್ರಿಮಿಗಳಿಗೂ ಇವನಿಗೂ ಅಂತರವೇನಿದೆ? ॥ ೨೧ ॥ ಆದಕ್ಕಾಗಿ ತನ್ನ ಒಳಿತನ್ನು ಬಯಸುವ ವಿವೇಕಿ ಮನುಷ್ಯನು ಸ್ತ್ರೀಯರ ಹಾಗೂ ಸ್ತ್ರೀಲಂಪಟರ ಸಂಗವನ್ನು ಎಂದಿಗೂ ಮಾಡಬಾರದು. ವಿಷಯ ಮತ್ತು ಇಂದ್ರಿಯಗಳ ಸಂಯೋಗದಿಂದಲೇ ಮನಸ್ಸಿನಲ್ಲಿ ವಿಕಾರ ಉಂಟಾಗುತ್ತದೆ. ಅದು ಬಿಟ್ಟು ವಿಕಾರಕ್ಕೆ ಬೇರೆ ಯಾವ ಅವಕಾಶವೂ ಇಲ್ಲ. ॥ ೨೨ ॥ ಎಂದೂ ನೋಡದ, ಕೇಳದೆ ಇರುವ ವಸ್ತುವಿನ ಕುರಿತು ಮನಸ್ಸಿನಲ್ಲಿ ವಿಕಾರ ಉಂಟಾಗುವುದಿಲ್ಲ. ವಿಷಯಗಳೊಂದಿಗೆ ಇಂದ್ರಿಯಗಳ ಸಂಯೋಗವು ಆಗದಂತೆ ನೋಡುವವನ ಮನಸ್ಸು ತಾನಾಗಿ ನಿಶ್ಚಲವಾಗಿ ಶಾಂತವಾಗುತ್ತದೆ. ಆದ್ದರಿಂದ ಮಾತು, ಕಿವಿ, ಮನಸ್ಸೇ ಮೊದಲಾದ ಇಂದ್ರಿಯಗಳಿಂದ ಸ್ತ್ರೀಯರ, ಸ್ತ್ರೀಲಂಪಟರ ಸಂಗ ಎಂದೂ ಮಾಡಬಾರದು. ನನ್ನಂತಹ ಜನರ ಮಾತಾದರೂ ಏನು, ದೊಡ್ಡ-ದೊಡ್ಡ ವಿದ್ವಾಂಸರಿಗೂ ಕೂಡ ತಮ್ಮ ಇಂದ್ರಿಯಗಳು ಮತ್ತು ಮನಸ್ಸು ನಂಬಲರ್ಹವಾದುವುಗಳಲ್ಲ. ॥ ೨೩-೨೪ ॥

ಭಗವಾನ್ ಶ್ರೀಕೃಷ್ಣನು ಹೇಳುತ್ತಾನೆ – ಉದ್ಧವನೇ! ರಾಜರಾಜೇಶ್ವರ ಪುರೂರವನ ಮನಸ್ಸಿನಲ್ಲಿ ಈ ರೀತಿಯ ಉದ್ಗಾರಗಳು ಏಳುತ್ತಿದ್ದಾಗ, ಅವನು ಊರ್ವಶಿಯ ಕಡೆಯಿಂದ ತನ್ನ ಮನಸ್ಸನ್ನು ಪೂರ್ಣವಾಗಿ ವಿಮುಖಗೊಳಿಸಿದನು. ಈಗ ಜ್ಞಾನೋದಯವಾದ ಕಾರಣ ಅವನ ಮೋಹವು ತೊಲಗಿತು. ಅವನು ತನ್ನ ಹೃದಯದಲ್ಲೇ ಆತ್ಮಸ್ವರೂಪನಾದ ನನ್ನ ಸಾಕ್ಷಾತ್ಕಾರಮಾಡಿಕೊಂಡನು ಹಾಗೂ ಶಾಂತಭಾವದಿಂದ ಸ್ಥಿತನಾದನು. ॥ ೨೫ ॥ ಆದಕ್ಕಾಗಿ ಬುದ್ಧಿವಂತರಾದ ಮನುಷ್ಯರು ಪುರೂರವನಂತೆ ಕುಸಂಗವನ್ನು ಬಿಟ್ಟು, ಸತ್ಪುರುಷರ ಸಂಗವನ್ನು ಮಾಡಬೇಕು. ಸಂತ ಮಹಾತ್ಮರು ತಮ್ಮ ಸದುಪದೇಶದಿಂದ ಅವನ ಮನಸ್ಸಿನ ಆಸಕ್ತಿಯನ್ನು ಇಲ್ಲವಾಗಿಸುತ್ತಾರೆ. ಸಂತ ಪುರುಷರಿಗೆ ಎಂದೂ ಯಾವುದೇ ವಸ್ತುವಿನ ಅಪೇಕ್ಷೆ ಇರುವುದಿಲ್ಲ. ಅವರ ಚಿತ್ತ ನನ್ನಲ್ಲೇ ತೊಡಗಿರುತ್ತದೆ. ಅವರ ಹೃದಯದಲ್ಲಿ ಶಾಂತಿಯ ಅಗಾಧ ಸಮುದ್ರವೇ ಉಕ್ಕುತ್ತಿರುತ್ತದೆ. ಅವರು ಯಾವಾಗಲೂ ಎಲ್ಲೆಡೆ, ಎಲ್ಲದರಲ್ಲಿ ಸಮರೂಪದಿಂದ ಸ್ಥಿತನಾದ ಭಗವಂತನನ್ನೇ ದರ್ಶಿಸುತ್ತಿರುತ್ತಾರೆ. ಅವರಲ್ಲಿ ಮಮತೆ, ಅಹಂಕಾರವು ಲೇಶಮಾತ್ರವೂ ಇರುವುದಿಲ್ಲ. ಅವರು ಚಳಿ-ಸೆಕೆ, ಸುಖ- ದುಃಖಾದಿ ದ್ವಂದ್ವಗಳಲ್ಲಿ ಏಕರಸವಾಗಿರುತ್ತಾರೆ. ಯಾವ ಪ್ರಕಾರದ ಪ್ರತಿಗ್ರಹವನ್ನೂ ಇರಿಸಿಕೊಳ್ಳುವುದಿಲ್ಲ. ॥ ೨೬-೨೭ ॥

ತೇಷು ನಿತ್ಯಂ ಮಹಾಭಾಗ ಮಹಾಭಾಗೇಷು ಮತ್ಕಥಾಃ ।
ಸಂಭವಂತಿ ಹಿತಾ ನೃಣಾಂ ಜುಷತಾಂ ಪ್ರಪುನಂತ್ಯಘಮ್ ॥ ೨೮ ॥

ತಾ ಯೇ ಶೃಣ್ವಂತಿ ಗಾಯಂತಿ ಹ್ಯನುಮೋದಂತಿ ಚಾದೃತಾಃ ।
ಮತ್ಪರಾಃ ಶ್ರದ್ದಧಾನಾಶ್ಚ ಭಕ್ತಿಂ ವಿಂದಂತಿ ತೇ ಮಯಿ ॥ ೨೯ ॥

ಭಕ್ತಿಂ ಲಬ್ಧವತಃ ಸಾಧೋಃ ಕಿಮನ್ಯದವಶಿಷ್ಯತೇ ।
ಮಯ್ಯನಂತಗುಣೇ ಬ್ರಹ್ಮಣ್ಯಾನಂದಾನುಭವಾತ್ಮನಿ ॥ ೩೦ ॥

ಯಥೋಪಶ್ರಯಮಾಣಸ್ಯ ಭಗವಂತಂ ವಿಭಾವಸುಮ್ ।
ಶೀತಂ ಭಯಂ ತಮೋಽಪ್ಯೇತಿ ಸಾಧೂನ್ಸಂಸೇವತಸ್ತಥಾ ॥ ೩೧ ॥

ನಿಮಜ್ಜ್ಯೋನ್ಮಜ್ಜತಾಂ ಘೋರೇ ಭವಾಬ್ಧೌ ಪರಮಾಯನಮ್ ।
ಸಂತೋ ಬ್ರಹ್ಮವಿದಃ ಶಾಂತಾ ನೌರ್ದೃಢೇವಾಪ್ಸು ಮಜ್ಜತಾಮ್ ॥ ೩೨ ॥

ಅನ್ನಂ ಹಿ ಪ್ರಾಣಿನಾಂ ಪ್ರಾಣ ಆರ್ತಾನಾಂ ಶರಣಂ ತ್ವಹಮ್ ।
ಧರ್ಮೋ ವಿತ್ತಂ ನೃಣಾಂ ಪ್ರೇತ್ಯ ಸಂತೋಽರ್ವಾಗ್ ಬಿಭ್ಯತೋಽರಣಮ್ ॥ ೩೩ ॥

ಸಂತೋ ದಿಶಂತಿ ಚಕ್ಷೂಂಷಿ ಬಹಿರರ್ಕಃ ಸಮುತ್ಥಿತಃ ।
ದೇವತಾ ಬಾಂಧವಾಃ ಸಂತಃ ಸಂತ ಆತ್ಮಾಹಮೇವ ಚ ॥ ೩೪ ॥

ವೈತಸೇನಸ್ತತೋಽಪ್ಯೇವಮುರ್ವಶ್ಯಾ ಲೋಕನಿಃಸ್ಪೃಹಃ ।
ಮುಕ್ತಸಂಗೋ ಮಹೀಮೇತಾಮಾತ್ಮಾರಾಮಶ್ಚಚಾರ ಹ ॥ ೩೫ ॥

ಮಹಾ ಭಾಗ್ಯಶಾಲೀ ಉದ್ಧವನೇ ! ಸಂತರ ಸೌಭಾಗ್ಯದ ಮಹಿಮೆಯನ್ನು ಯಾರು ಹೊಗಳಬಲ್ಲರು ? ಅವರು ನಡೆಸುವ ನನ್ನ ಕಥೆಗಳು ಮನುಷ್ಯರಿಗಾಗಿ ಪರಮ ಹಿತಕರವಾಗಿವೆ. ಅವರನ್ನು ಸೇವಿಸುವವನ ಎಲ್ಲ ಪಾಪಗಳು ತೊಳೆದುಹೋಗುತ್ತವೆ. ॥ ೨೮ ॥ ಯಾರು ಆದರ, ಶ್ರದ್ಧೆಯಿಂದ ನನ್ನ ಲೀಲಾ-ಕಥೆಗಳನ್ನು ಶ್ರವಣಿಸುತ್ತಾ, ಕೀರ್ತಿಸುತ್ತಾ, ಅನುಮೋದಿಸುವರೋ ಅವರು ನನ್ನ ಪರಾಯಣರಾಗಿ ಹೋಗುತ್ತಾರೆ ಮತ್ತು ನನ್ನ ಅನನ್ಯ ಪ್ರೇಮಮಯ ಭಕ್ತಿಯನ್ನು ಪಡೆದುಕೊಳ್ಳುವರು. ॥ ೨೯ ॥ ಎಲೈ ಉದ್ಧವನೇ ! ನಾನೇ ಅನಂತ, ಅಚಿಂತ್ಯ ಕಲ್ಯಾಣಮಯ ಗುಣಗಳ ಆಶ್ರಯನಾಗಿರುವೆನು. ನಾನು ಕೇವಲ ಆನಂದಾನುಭವಸ್ವರೂಪೀ ಎಲ್ಲರ ಆತ್ಮಾ ಸಾಕ್ಷಾತ್ ಪರಬ್ರಹ್ಮನಾಗಿರುವೆನು. ನನ್ನ ಭಕ್ತಿಯು ದೊರಕಿದವನೇ ಸಂತನಾಗಿಹೋದನು. ಈಗ ಅವನಿಗೆ ಪಡೆಯುವುದು ಯಾವುದೂ ಬಾಕಿ ಉಳಿಯಲಿಲ್ಲ. ॥ ೩೦ ॥ ಅಂತಹ ಸತ್ಪುರುಷರಲ್ಲಿ ಶರಣಾದವರ ಕರ್ಮಜಡತೆ, ಸಂಸಾರಭಯ, ಅಜ್ಞಾನ, ಮುಂತಾದವುಗಳು ಸರ್ವಥಾ ನಿವೃತ್ತವಾಗಿ ಹೋಗುತ್ತವೆ. ಅಗ್ನಿಯನ್ನು ಆಶ್ರಯಿಸಿದವನಿಗೆ ಛಳಿಯಾಗಲೀ, ಅಂಧಕಾರವಾಗಲಿ ಇವುಗಳ ದುಃಖವು ಆಗಬಲ್ಲುದೇ ? ॥ ೩೧ ॥ ನೀರಿನಲ್ಲಿ ಮುಳುಗಿದವನಿಗೆ ದೃಢವಾದ ನೌಕೆಯು ಆಶ್ರಯವಿರುವಂತೆ ಈ ಘೋರ ಸಂಸಾರ ಸಾಗರದಲ್ಲಿ ಮುಳುಗಿದವರಿಗೆ ಬ್ರಹ್ಮವೇತ್ತರಾದ, ಶಾಂತ ಸಂತರೇ ಏಕಮಾತ್ರ ಪರಮಾಶ್ರಯರಾಗಿದ್ದಾರೆ. ॥ ೩೨ ॥ ಅನ್ನದಿಂದ ಪ್ರಾಣಿಗಳ ಪ್ರಾಣಗಳು ರಕ್ಷಿಸಲ್ಪಡುವಂತೆ, ದೀನ-ದುಃಖಿಗಳ ಪರಮ ರಕ್ಷಕನು ನಾನೇ ಆಗಿರುವಂತೆ, ಪರಲೋಕದಲ್ಲಿ ಮನುಷ್ಯರಿಗೆ ಏಕಮಾತ್ರ ಧರ್ಮವು ರಕ್ಷಕವಾಗಿರುವಂತೆ, ಸಂಸಾರದಲ್ಲಿ ಭಯಭೀತರಾದವರಿಗೆ ಸಂತರೇ ಪರಮ ಧನ, ಪ್ರಾಣ ಮತ್ತು ಪರಮಾಶ್ರಯರಾಗಿದ್ದಾರೆ. ॥ ೩೩ ॥ ಸೂರ್ಯನು ಉದಯಿಸಿ ಜನರ ಕಣ್ಣುಗಳಿಗೆ ಪ್ರಕಾಶ ಕೊಡುವಂತೆ, ಸಂತ ಪುರುಷರು ತನ್ನನ್ನು ಹಾಗೂ ಭಗವಂತನನ್ನು ನೋಡಲಿಕ್ಕಾಗಿ ಅಂತರ್ದೃಷ್ಟಿಯನ್ನು ಕೊಡುತ್ತಾರೆ. ಸಂತರು ಅನುಗ್ರಹಶೀಲ ದೇವತೆಗಳಾಗಿದ್ದಾರೆ. ಸಂತರು ನನ್ನ ಸುಹೃದ್, ಹಿತೈಷಿಗಳಾಗಿದ್ದಾರೆ. ಸಂತರೇ ನನ್ನ ಪ್ರಿಯತಮ ಆತ್ಮಾ ಆಗಿದ್ದಾರೆ. ಹೆಚ್ಚೇನು ಹೇಳಲಿ ? ಸ್ವಯಂ ನಾನೇ ಸಂತರ ರೂಪದಲ್ಲಿ ವಿದ್ಯಮಾನನಾಗಿದ್ದೇನೆ. ॥ ೩೪ ॥ ಪ್ರಿಯ ಉದ್ಧವನೇ ! ಆತ್ಮ ಸಾಕ್ಷಾತ್ಕಾರವಾಗುತ್ತಲೇ ಇಲಾನಂದನ ಪುರೂರವನಿಗೆ ಊರ್ವಶಿಯ ಕಡೆಗಿನ ಸ್ಪೃಹೆಯು ಉಳಿಯಲಿಲ್ಲ. ಅವನ ಎಲ್ಲ ಆಸಕ್ತಿಗಳು ಇಲ್ಲವಾದುವು. ಅವನು ಆತ್ಮಾರಾಮನಾಗಿ ಸ್ವಚ್ಛಂದವಾಗಿ ಈ ಪೃಥ್ವಿಯಲ್ಲಿ ಸಂಚರಿಸತೊಡಗಿದನು. ॥ ೩೫ ॥

ಇಪ್ಪತ್ತಾರನೆಯ ಅಧ್ಯಾಯವು ಮುಗಿಯಿತು. ॥ ೨೬ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಏಕಾದಶ ಸ್ಕಂಧೇ ಷಡ್ವಿಂಶೋಽಧ್ಯಾಯಃ ॥ ೨೬ ॥

ಇಪ್ಪತ್ತೇಳನೆಯ ಅಧ್ಯಾಯ

ಭಗವಂತನ ಪೂಜಾ ವಿಧಾನ ವರ್ಣನೆ

ಉದ್ಧವ ಉವಾಚ

ಕ್ರಿಯಾಯೋಗಂ ಸಮಾಚಕ್ಷ್ವ ಭವದಾರಾಧನಂ ಪ್ರಭೋ ।
ಯಸ್ಮಾತ್ತ್ವಾಂ ಯೇ ಯಥಾರ್ಚಂತಿ ಸಾತ್ವತಾಃ ಸಾತ್ವತರ್ಷಭ ॥ ೧ ॥

ಏತದ್ವದಂತಿ ಮುನಯೋ ಮುಹುರ್ನಿಃಶ್ರೇಯಸಂ ನೃಣಾಮ್ ।
ನಾರದೋ ಭಗವಾನ್ ವ್ಯಾಸ ಆಚಾರ್ಯೋಽಂಗಿರಸಃ ಸುತಃ ॥ ೨ ॥

ನಿಸ್ಸೃತಂ ತೇ ಮುಖಾಂಭೋಜಾದ್ಯದಾಹ ಭಗವಾನಜಃ ।
ಪುತ್ರೇಭ್ಯೋ ಭೃಗುಮುಖ್ಯೇಭ್ಯೋ ದೇವ್ಯೈ ಚ ಭಗವಾನ್ ಭವಃ ॥ ೩ ॥

ಏತದ್ವೈ ಸರ್ವವರ್ಣಾನಾಮಾತ್ರಮಾಣಾಂ ಚ ಸಮ್ಮತಮ್ ।
ಶ್ರೇಯಸಾಮುತ್ತಮಂ ಮನ್ಯೇ ಸ್ತ್ರೀಶೂದ್ರಾಣಾಂ ಚ ಮಾನದ ॥ ೪ ॥

ಏತತ್ಕಮಲಪತ್ರಾಕ್ಷ ಕರ್ಮಬಂಧವಿಮೋಚನಮ್ ।
ಭಕ್ತಾಯ ಚಾನುರಕ್ತಾಯ ಬ್ರೂಹಿ ವಿಶ್ವೇಶ್ವರೇಶ್ವರ ॥ ೫ ॥

ಶ್ರೀಭಗವಾನುವಾಚ

ನ ಹ್ಯಂತೋಽನಂತಪಾರಸ್ಯ ಕರ್ಮಕಾಂಡಸ್ಯ ಚೋದ್ಧವ ।
ಸಂಕ್ಷಿಪ್ತಂ ವರ್ಣಯಿಷ್ಯಾಮಿ ಯಥಾವದನುಪೂರ್ವಶಃ ॥ ೬ ॥

ವೈದಿಕಸ್ತಾಂತ್ರಿಕೋ ಮಿಶ್ರ ಇತಿ ಮೇ ತ್ರಿವಿಧೋ ಮಖಃ ।
ತ್ರಯಾಣಾಮೀಪ್ಸಿತೇನೈವ ವಿಧಿನಾ ಮಾಂ ಸಮರ್ಚಯೇತ್ ॥ ೭ ॥

ಯದಾ ಸ್ವನಿಗಮೇನೋಕ್ತಂ ದ್ವಿಜತ್ವಂ ಪ್ರಾಪ್ಯ ಪೂರುಷಃ ।
ಯಥಾ ಯಜೇತ ಮಾಂ ಭಕ್ತ್ಯಾ ಶ್ರದ್ಧಯಾ ತನ್ನಿಬೋಧ ಮೇ ॥ ೮ ॥

ಅರ್ಚಾಯಾಂ ಸ್ಥಂಡಿಲೇಽಗ್ನೌ ವಾ ಸೂರ್ಯೇ ವಾಪ್ಸು ಹೃದಿ ದ್ವಿಜೇ ।
ದ್ರವ್ಯೇಣ ಭಕ್ತಿಯುಕ್ತೋಽರ್ಚೇತ್ ಸ್ವಗುರುಂ ಮಾಮಮಾಯಯಾ ॥ ೯ ॥

ಉದ್ಧವನು ಕೇಳಿದನು – ಭಕ್ತವತ್ಸಲ ಕೃಷ್ಣಾ! ಯಾವ ಕ್ರಿಯಾಯೋಗವನ್ನು ಆಶ್ರಯಿಸಿ ಭಕ್ತಜನರು ಯಾವ ಪ್ರಕಾರದಿಂದ, ಯಾವ ಉದ್ದೇಶಕ್ಕಾಗಿ, ನಿನ್ನನ್ನು ಆರಾಧಿಸುತ್ತಾರೆ? ನೀನು ನಿನ್ನ ಆರಾಧನಾರೂಪವಾದ ಆ ಕ್ರಿಯಾಯೋಗವನ್ನು ವರ್ಣಿಸುವ ಕೃಪೆಮಾಡು. ॥ ೧ ॥ ದೇವರ್ಷಿಗಳಾದ ನಾರದರು, ಭಗವಾನ್ ವೇದವ್ಯಾಸರು, ಆಚಾರ್ಯ ಬೃಹಸ್ಪತಿಯರು ಮುಂತಾದ ದೊಡ್ಡ ದೊಡ್ಡ ಋಷಿ-ಮುನಿಗಳು – 'ಕ್ರಿಯಾಯೋಗದ ಮೂಲಕ ನಿನ್ನ ಆರಾಧನೆಯು ಮನುಷ್ಯರ ಪರಮ ಶ್ರೇಯಸ್ಸಿನ ಸಾಧನೆಯಾಗಿದೆ' ಎಂದು ಪದೇ-ಪದೇ ಹೇಳುತ್ತಾರೆ. ॥ ೨ ॥ ಈ ಪೂಜಾವಿಧಾನವು ಮೊಟ್ಟಮೊದಲು ನಿನ್ನ ಮುಖಾರವಿಂದದಿಂದಲೇ ಹೊರಟಿತ್ತು. ಇದನ್ನು ಬ್ರಹ್ಮದೇವರು ನಿನ್ನಿಂದ ಗ್ರಹಿಸಿ, ತನ್ನ ಪುತ್ರ ಭೃಗು ಮುಂತಾದ ಮಹರ್ಷಿಗಳಿಗೆ ಹಾಗೂ ಭಗವಾನ್ ಶಂಕರನು ತನ್ನ ಅರ್ಧಾಂಗಿನೀ ಭಗವತೀ ಪಾರ್ವತಿಗೆ ಉಪದೇಶಿಸಿದ್ದರು. ॥ ೩ ॥ ಮರ್ಯಾದಾರಕ್ಷಕ ಪ್ರಭೋ! ಈ ಪೂಜಾಪದ್ಧತಿಯು ಬ್ರಾಹ್ಮಣ ಕ್ಷತ್ರಿಯ ಮುಂತಾದ ವರ್ಣಗಳಿಗೆ, ಬ್ರಹ್ಮಚಾರೀ-ಗೃಹಸ್ಥ ಮುಂತಾದ ಆಶ್ರಮಿಗಳಿಗೆ ಪರಮ ಶ್ರೇಯಸ್ಕರವಾಗಿದೆ. ಸ್ತ್ರೀ ಶೂದ್ರಾದಿಗಳಿಗಾಗಿಯೂ ಇದು ಎಲ್ಲಕ್ಕಿಂತ ಶ್ರೇಷ್ಠಸಾಧನ ಪದ್ಧತಿಯಾಗಿದೆ ಎಂದು ನಾನು ತಿಳಿಯುತ್ತೇನೆ. ॥ ೪ ॥ ಕಮಲನಯನ ಶ್ಯಾಮಸುಂದರಾ! ನೀನು ಶಂಕರಾದಿ ಜಗದೀಶ್ವರರಿಗೂ ಈಶ್ವರನಾಗಿರುವೆ. ನಾನು ನಿನ್ನ ಚರಣಗಳ ಪ್ರೇಮೀ ಭಕ್ತನಾಗಿದ್ದೇನೆ. ನೀನು ದಯಮಾಡಿ ನನಗೆ ಕರ್ಮಬಂಧನದಿಂದ ಬಿಡುಗಡೆಗೊಳಿಸುವ ಈ ವಿಧಿಯನ್ನು ತಿಳಿಸುವವನಾಗು. ॥ ೫ ॥

ಭಗವಾನ್ ಶ್ರೀಕೃಷ್ಣನು ಹೇಳಿದನು – ಎಲೈ ಉದ್ಧವನೇ! ಕರ್ಮಕಾಂಡವು ಸೀಮೆಯೇ ಇಲ್ಲದಷ್ಟು ವಿಸ್ತಾರವಾಗಿದೆ. ಅದಕ್ಕಾಗಿ ನಾನು ಸ್ವಲ್ಪದರಲ್ಲಿ ಪೂರ್ವಾಪರಕ್ರಮದಿಂದ ವರ್ಣಿಸುವೆನು. ॥ ೬ ॥ ನನ್ನ ಪೂಜೆಯಲ್ಲಿ ವೈದಿಕ, ತಾಂತ್ರಿಕ ಮತ್ತು ಮಿಶ್ರಿತ ಎಂಬ ಮೂರು ವಿಧಿಗಳಿವೆ. ಈ ಮೂರರಲ್ಲಿನ ಯಾವ ವಿಧಿಯು ನನ್ನ ಭಕ್ತನಿಗೆ ಅನುಕೂಲವಾಗಿದೆಯೋ, ಅದೇ ವಿಧಿಯಿಂದ ನನ್ನನ್ನು ಆರಾಧಿಸಬೇಕು. ॥ ೭ ॥ ಮೊದಲಿಗೆ ತನ್ನ ಅಧಿಕಾರಾನುಸಾರವಾಗಿ ಶಾಸ್ತ್ರೋಕ್ತ ವಿಧಿಯಿಂದ ಸಮಯಕ್ಕೆ ಸರಿಯಾಗಿ ಉಪನಯನ ಸಂಸ್ಕಾರದ ಮೂಲಕ ದ್ವಿಜತ್ವವನ್ನು ಪಡೆದು, ಮತ್ತೆ ಶ್ರದ್ಧೆ, ಭಕ್ತಿಯಿಂದೊಡಗೂಡಿ ಅವನು ಯಾವ ವಿಧಿಯಿಂದ ನನ್ನನ್ನು ಪೂಜಿಸಬೇಕೆಂಬುದನ್ನು ನಿನಗೆ ತಿಳಿಸುತ್ತೇನೆ. ॥ ೮ ॥ ಭಕ್ತಿಪೂರ್ವಕ ನಿಷ್ಕಪಟ ಭಾವದಿಂದ ನನ್ನ ಪ್ರತೀಕದಲ್ಲಾಗಲೀ, ವೇದಿಯಲ್ಲಾಗಲೀ, ಅಗ್ನಿಯಲ್ಲಾಗಲೀ, ನೀರಿನಲ್ಲಾಗಲೀ, ಹೃದಯದಲ್ಲಾಗಲೀ, ಅಥವಾ ಜ್ಞಾನಿಯಾದ ಬ್ರಾಹ್ಮಣನಲ್ಲಾಗಲೀ ಆತ್ಮಗುರುವಾದ ನನ್ನನ್ನು ಆವಾಹನೆಮಾಡಿ ಆರಾಧನೆಮಾಡಬೇಕು. ॥ ೯ ॥

ಪೂರ್ವಂ ಸ್ನಾನಂ ಪ್ರಕುರ್ವೀತ ಧೌತದಂತೋಽಂಗಶುದ್ಧಯೇ ।
ಉಭಯೈರಪಿ ಚ ಸ್ನಾನಂ ಮಂತ್ರೈರ್ಮೃದ್ ಗ್ರಹಣಾದಿನಾ ॥ ೧೦ ॥

ಸಂಧ್ಯೋಪಾಸ್ತ್ಯಾದಿಕರ್ಮಾಣಿ ವೇದೇನಾಽಚೋದಿತಾನಿ ಮೇ ।
ಪೂಜಾಂ ತೈಃ ಕಲ್ಪಯೇತ್ ಸಮ್ಯಕ್ ಸಂಕಲ್ಪಃ ಕರ್ಮಪಾವನೀಮ್ ॥ ೧೧ ॥

ಶೈಲೀ ದಾರುಮಯೀ ಲೌಹೀ ಲೇಪ್ಯಾ ಲೇಖ್ಯಾ ಚ ಸೈಕತೀ ।
ಮನೋಮಯೀ ಮಣಿಮಯೀ ಪ್ರತಿಮಾಷ್ಟವಿಧಾ ಸ್ಮೃತಾ ॥ ೧೨ ॥

ಚಲಾಚಲೇತಿ ದ್ವಿವಿಧಾ ಪ್ರತಿಷ್ಠಾ ಜೀವಮಂದಿರಮ್ ।
ಉದ್ವಾಸಾವಾಹನೇ ನ ಸ್ತಃ ಸ್ಥಿರಾಯಾಮುದ್ಧವಾರ್ಚನೇ ॥ ೧೩ ॥

ಅಸ್ಥಿರಾಯಾಂ ವಿಕಲ್ಪಃ ಸ್ಯಾತ್ಸ್ಥಂಡಿಲೇ ತು ಭವೇದ್ದ್ವಯಮ್ ।
ಸ್ನಪನಂ ತ್ವವಿಲೇಪ್ಯಾಯಾಮನ್ಯತ್ರ ಪರಿಮಾರ್ಜನಮ್ ॥ ೧೪ ॥

ದ್ರವ್ಯೈಃ ಪ್ರಸಿದ್ಧೈರ್ಮದ್ಯಾಗಃ ಪ್ರತಿಮಾದಿಷ್ವಮಾಯಿನಃ ।
ಭಕ್ತಸ್ಯ ಚ ಯಥಾಲಬ್ಧೈರ್ಹೃದಿ ಭಾವೇನ ಚೈವ ಹಿ ॥ ೧೫ ॥

ಸ್ನಾನಾಲಂಕರಣಂ ಪ್ರೇಷ್ಠಮರ್ಚಾಯಾಮೇವ ತೂದ್ಧವ ।
ಸ್ಥಂಡಿಲೇ ತತ್ತ್ವವಿನ್ಯಾಸೋ ವಹ್ನಾವಾಜ್ಯಪ್ಲುತಂ ಹವಿಃ ॥ ೧೬ ॥

ಸೂರ್ಯೇ ಚಾಭ್ಯರ್ಹಣಂ ಪ್ರೇಷ್ಠಂ ಸಲಿಲೇ ಸಲಿಲಾದಿಭಿಃ ।
ಶ್ರದ್ಧಯೋಪಾಹೃತಂ ಪ್ರೇಷ್ಠಂ ಭಕ್ತೇನ ಮಮ ವಾರ್ಯಪಿ ॥ ೧೭ ॥

ಉಪಾಸಕನಾದವನು ಪ್ರಾತಃಕಾಲದಲ್ಲಿ ಹಲ್ಲುಗಳನ್ನುಜ್ಜಿಕೊಂಡು, ಶರೀರ ಶುದ್ಧಿಗಾಗಿ ಸ್ನಾನ ಮಾಡಬೇಕು. ಮತ್ತೆ ವೈದಿಕ ಮತ್ತು ತಾಂತ್ರಿಕಗಳೆಂಬ ಎರಡೂ ಪ್ರಕಾರದ ಮಂತ್ರಗಳಿಂದ ಮೃತ್ತಿಕಾಸ್ನಾನ ಮಾಡಬೇಕು. ॥ ೧೦ ॥ ಇದಾದ ಬಳಿಕ ವೇದೋಕ್ತ ಸಂಧ್ಯಾವಂದನಾದಿ ನಿತ್ಯಕರ್ಮಗಳನ್ನು ಮಾಡಬೇಕು. ಅನಂತರ ನನ್ನ ಆರಾಧನೆಗಾಗಿಯೇ ದೃಢವಾದ ಸಂಕಲ್ಪವನ್ನು ಗೈದು, ವೈದಿಕ ಹಾಗೂ ತಾಂತ್ರಿಕವಿಧಿಗಳಿಂದ ಕರ್ಮಬಂಧನದಿಂದ ಬಿಡಿಸುವಂತಹ ನನ್ನ ಪೂಜೆಯನ್ನು ಮಾಡಬೇಕು. ॥ ೧೧ ॥ ನನ್ನ ಪ್ರತಿಮೆಗಳಲ್ಲಿ (೧) ಕಲ್ಲಿನದು, (೨) ಮರದ್ದು, (೩) ಧಾತುಗಳದ್ದು, (೪) ಮಣ್ಣು- ಅಥವಾ ಗಂಧದ್ದು, (೫) ಚಿತ್ರರೂಪದಲ್ಲಿ ಬರೆದುದು, (೬) ಮಳಲಿನದ್ದು, (೭) ಮನೋಮಯ ಮತ್ತು (೮) ಮಣಿಮಯ – ಹೀಗೆ ಎಂಟು ಪ್ರಕಾರಗಳಾಗಿವೆ. ॥ ೧೨ ॥ ಚಲ ಮತ್ತು ಅಚಲ ಭೇದದಿಂದ ಒಂದು ಮೂರ್ತಿಯು ಅಚಲವಾಗಿ ಮಂದಿರದಲ್ಲಿ ಪ್ರತಿಷ್ಠಿತವಾಗಿದ್ದು, ಇನ್ನೊಂದು ರಥೋತ್ಸವಾದಿಗಳಿಗೆ ಉತ್ಸವಮೂರ್ತಿಯಾಗಿರುತ್ತದೆ. ಇಂತಹ ಎರಡು ಪ್ರಕಾರದ ಪ್ರತಿಮೆಗಳಲ್ಲಿಯೂ ಭಗವಂತನಾದ ನನ್ನ ಸನ್ನಿಧಾನವಿರುತ್ತದೆ. ಉದ್ಧವನೇ ! ಅಚಲ ಪ್ರತಿಮೆಯ ಪೂಜೆಯಲ್ಲಿ ಪ್ರತಿದಿನ ಆವಾಹನೆ, ವಿಸರ್ಜನೆ ಇರುವುದಿಲ್ಲ. ॥ ೧೩ ॥ ಚಲ ಪ್ರತಿಮೆಯ ಸಂಬಂಧದಲ್ಲಿ ಆವಾಹನೆ ಮಾಡುವುದೂ, ಮಾಡದಿರುವುದೂ ವಿಕಲ್ಪವಿದೆ. (ಚರಮೂರ್ತಿಯಾದ ಸಾಲಿಗ್ರಾಮದಲ್ಲಿ ಆವಾಹನೆ-ವಿಸರ್ಜನೆಗಳಿಲ್ಲ.) ಆದರೆ ಮಳಲಮೂರ್ತಿಯಲ್ಲಾದರೋ ಪ್ರತಿದಿನ ಆಹಾವನೆ-ವಿಸರ್ಜನೆಮಾಡಬೇಕು. ಮಣ್ಣಿನ, ಗಂಧದ, ಚಿತ್ರಪಟ ಮುಂತಾದ ಪ್ರತಿಮೆಗಳಿಗೆ ಸ್ನಾನಮಾಡಿಸದೆ, ಕೇವಲ ಪ್ರೋಕ್ಷಣೆ ಮಾಡಬೇಕು. ಆದರೆ ಉಳಿದ ಎಲ್ಲ ಪ್ರತಿಮೆಗಳಿಗೆ ಸ್ನಾನ ಮಾಡಿಸಬೇಕು. ॥ ೧೪ ॥

ವಿಧಿಗನುಗುಣವಾಗಿ ವಿಶೇಷ ಪೂಜಾಸಾಮಗ್ರಿಗಳಿಂದ ಪ್ರತಿಮಾದಿಗಳಲ್ಲಿ ನನ್ನ ಪೂಜೆ ಮಾಡಬೇಕು. ಆದರೆ ನಿಷ್ಕಾಮಭಕ್ತನು ಸುಲಭವಾಗಿ ದೊರೆಯುವ (ಪತ್ರ, ಪುಷ್ಪ, ಜಲ, ಫಲ) ಸಾಮಗ್ರಿಗಳಿಂದಲೇ ನನ್ನ ಪೂಜೆ ಮಾಡಲಿ. ಅಥವಾ ಹೃದಯದಲ್ಲಿ ನನ್ನನ್ನು ಧ್ಯಾನಿಸುತ್ತಾ ಮಾನಸಿಕ ಪೂಜೆಯನ್ನೂ ಮಾಡಬಹುದು. ॥ ೧೫ ॥ ಎಲೈ ಉದ್ಧವನೇ! ಸ್ನಾನ, ವಸ್ತ್ರ, ಆಭೂಷಣಾದಿಗಳಾದರೋ ಕಲ್ಲಿನ ಅಥವಾ ಧಾತುವಿನ ಪ್ರತಿಮೆಯ ಪೂಜೆಯಲ್ಲಿ ವಿನಿಯೋಗಿಸಬೇಕು. ಮಳಲುಮಯ ಮೂರ್ತಿ ಅಥವಾ ಮಣ್ಣಿನ ವೇದಿಕೆಯಲ್ಲಿ ಪೂಜೆ ಮಾಡುವುದಿದ್ದರೆ, ಅವುಗಳಲ್ಲಿ ಮಂತ್ರಗಳ ಮೂಲಕ ತತ್ತ್ವನ್ಯಾಸಮಾಡಿ, ಪ್ರಧಾನ ದೇವತೆಗಳನ್ನು ಸ್ಥಾಪಿಸಿ ಪೂಜಿಸಬೇಕು. ಅಗ್ನಿಯಲ್ಲಿ ಘೃತಮಿಶ್ರಿತ ಹವನ ಸಾಮಗ್ರಿಗಳಿಂದ ಆಹುತಿಗಳನ್ನಿತ್ತು ಪೂಜಿಸಬೇಕು. ॥ ೧೬ ॥ ಸೂರ್ಯನನ್ನೇ ನನ್ನ ಪ್ರತೀಕವಾಗಿಸಿಕೊಂಡು ಮಾಡಲಾಗುವ ಪೂಜೆ-ಉಪಾಸನೆಯಲ್ಲಿ ಪ್ರಧಾನವಾಗಿ ಅರ್ಘ್ಯದಾನ ಮತ್ತು ಉಪಸ್ಥಾನ, ನಮಸ್ಕಾರವಿರಬೇಕು. ನೀರಿನಲ್ಲಿ ತರ್ಪಣಾದಿಗಳಿಂದ ನನ್ನ ಉಪಾಸನೆ ಮಾಡಬೇಕು. ಯಾರಾದರೂ ನನ್ನ ಭಕ್ತನು ಶ್ರದ್ಧೆಯಿಂದ, ಹೃತ್ಪೂರ್ವಕವಾಗಿ ನೀರನ್ನು ಅರ್ಪಿಸಿದರೂ ನಾನು ಅದನ್ನು ತುಂಬಾ ಪ್ರೇಮದಿಂದ ಸ್ವೀಕರಿಸುತ್ತೇನೆ. ॥೧೭॥

ಭೂರ್ಯಪ್ಯಭಕ್ತೋಪಹೃತಂ ನ ಮೇ ತೋಷಾಯ ಕಲ್ಪತೇ ।
ಗಂಧೋ ಧೂಪಃ ಸುಮನಸೋ ದೀಪೋಽನ್ನಾದ್ಯಂ ಚ ಕಿಂ ಪುನಃ
॥ ೧೮ ॥

ಶುಚಿಃ ಸಂಭೃತಸಂಭಾರಃ ಪ್ರಾಗ್ದರ್ಭೈಃ ಕಲ್ಪಿತಾಸನಃ ।
ಆಸೀನಃ ಪ್ರಾಗುದಗ್ವಾರ್ಚೇದರ್ಚಾಯಾಮಥ ಸಮ್ಮುಖಃ
॥ ೧೯ ॥

ಕೃತನ್ಯಾಸಃ ಕೃತನ್ಯಾಸಾಂ ಮದರ್ಚಾಂ ಪಾಣಿನಾಽಮೃಜೇತ್ ।
ಕಲಶಂ ಪ್ರೋಕ್ಷಣೀಯಂ ಚ ಯಥಾವದುಪಸಾಧಯೇತ್
॥ ೨೦ ॥

ತದದ್ಭಿರ್ದೇವಯಜನಂ ದ್ರವ್ಯಾಣ್ಯಾತ್ಮಾನಮೇವ ಚ ।
ಪ್ರೋಕ್ಷ್ಯ ಪಾತ್ರಾಣಿ ತ್ರೀಣ್ಯದ್ಭಿಃ ತೈಸ್ತೈರ್ದ್ರವ್ಯೈಶ್ಚ ಸಾಧಯೇತ್
॥ ೨೧ ॥

ಪಾದ್ಯಾರ್ಘ್ಯಾಚಮನೀಯಾರ್ಥಂ ತ್ರೀಣಿ ಪಾತ್ರಾಣಿ ದೈಶಿಕಃ ।
ಹೃದಾ ಶೀರ್ಷ್ಣಾಥ ಶಿಖಯಾ ಗಾಯತ್ರ್ಯಾ ಚಾಭಿಮಂತ್ರಯೇತ್
॥ ೨೨ ॥

ಪಿಂಡೇ ವಾಯ್ವಗ್ನಿ ಸಂಶುದ್ಧೇ ಹೃತ್ಪದ್ಮಸ್ಥಾಂ ಪರಾಂ ಮಮ ।
ಅಣ್ವೀಂ ಜೀವಕಲಾಂ ಧ್ಯಾಯೇನ್ನಾದಾಂತೇ ಸಿದ್ಧಭಾವಿತಾಮ್
॥ ೨೩ ॥

ತಯಾಽಽತ್ಮಭೂತಯಾ ಪಿಂಡೇ ವ್ಯಾಪ್ತೇ ಸಂಪೂಜ್ಯ ತನ್ಮಯಃ ।
ಆವಾಹ್ಯಾರ್ಚಾದಿಷು ಸ್ಥಾಪ್ಯನ್ಯಸ್ತಾಂಗಂ ಮಾಂ ಪ್ರಪೂಜಯೇತ್
॥ ೨೪ ॥

ಭಕ್ತಿಯಿಲ್ಲದವನು ನನಗೆ ಅನೇಕ ಸಾಮಗ್ರಿಗಳನ್ನು ನಿವೇದನೆ ಮಾಡಿದರೂ ಅದರಿಂದ ನಾನು ಸಂತುಷ್ಟನಾಗುವುದಿಲ್ಲ, ಆದರೆ ನನ್ನ ಭಕ್ತನು ನನಗೆ ಶ್ರದ್ಧಾಭಕ್ತಿಪೂರ್ವಕವಾಗಿ ನೀರನ್ನೇ ನಿವೇದನೆಗೈದರೂ ಅದರಿಂದ ನಾನು ಸಂತುಷ್ಟನಾಗುತ್ತೇನೆ. ಮತ್ತೆ ಪುಷ್ಪ, ಧೂಪ, ದೀಪ, ನೈವೇದ್ಯ ಮುಂತಾದ ಸಾಮಗ್ರಿಗಳಿಂದ ನನ್ನನ್ನು ಪೂಜಿಸಿದರೆ ಅವನಿಗಾಗಿ ಹೇಳುವುದೇನಿದೆ ? ॥ ೧೮ ॥

ಉಪಾಸಕನು ಮೊದಲಿಗೆ ಪೂಜೆಯ ಸಾಮಗ್ರಿಗಳನ್ನು ಅಣಿಗೊಳಿಸಿಕೊಳ್ಳಬೇಕು. ಮತ್ತೆ ಪೂರ್ವಾಗ್ರವಾಗಿ ಆಸನಕ್ಕಾಗಿ ದರ್ಭೆಗಳನ್ನು ಹಾಸಿಕೊಂಡು, ಪೂರ್ವ ಅಥವಾ ಉತ್ತರದ ಕಡೆಗೆ ಮುಖ ಮಾಡಿ ಪವಿತ್ರತೆಯಿಂದ ಆ ದರ್ಭಾಸನದಲ್ಲಿ ಕುಳಿತುಕೊಳ್ಳಬೇಕು. ಪ್ರತಿಮೆ ಅಚಲವಾಗಿದ್ದರೆ ಅದರ ಎದುರಿನಲ್ಲೇ ಕುಳಿತುಕೊಂಡು ಪೂಜೆಯನ್ನು ಪ್ರಾರಂಭಿಸಬೇಕು. ॥ ೧೯ ॥ ಮೊದಲಿಗೆ ವಿಧಿಪೂರ್ವಕ ಅಂಗನ್ಯಾಸ ಮತ್ತು ಕರನ್ಯಾಸಗಳನ್ನು ಮಾಡಿಕೊಂಡು, ಬಳಿಕ ಮೂರ್ತಿಯಲ್ಲಿ ಮಂತ್ರನ್ಯಾಸ (ತತ್ತ್ವನ್ಯಾಸ) ಮಾಡಬೇಕು. ದೇವರ ಮೇಲೆ ಹಿಂದೆ ಸಮರ್ಪಿಸಿದ ನಿರ್ಮಾಲ್ಯವನ್ನು ಕೈಯಿಂದ ತೆಗೆದು, ಚೆನ್ನಾಗಿ ಒರೆಸಿಡಬೇಕು. ಮತ್ತೆ ತುಂಬಿದ ಕಲಶ, ಪ್ರೋಕ್ಷಣಪಾತ್ರೆ, ಶಂಖ, ಗಂಟೆ ಇವುಗಳನ್ನು ಗಂಧಾಕ್ಷತೆಗಳಿಂದ ಪೂಜೆ ಮಾಡಬೇಕು. ॥ ೨೦ ॥ ಅನಂತರ ಪ್ರೋಕ್ಷಣಪಾತ್ರೆಯ ನೀರಿನಿಂದ ಪೂಜಾದ್ರವ್ಯಗಳನ್ನು ಮತ್ತು ತನ್ನ ಶರೀರವನ್ನು ಪ್ರೋಕ್ಷಿಸಿಕೊಳ್ಳಬೇಕು. ಪಾದ್ಯ, ಅರ್ಘ್ಯ, ಆಚಮನಗಳಿಗಾಗಿ ಮೂರು ಸಣ್ಣ ಪಾತ್ರೆಗಳಲ್ಲಿ ಕಲಶೋದಕವನ್ನು ತುಂಬಿ, ಪೂಜಾ ಪದ್ಧತಿಯಂತೆ ಸಾಮಗ್ರಿಗಳನ್ನು ಹಾಕಿ ಸಂಸ್ಕರಿಸಬೇಕು. (ಪಾದ್ಯಪಾತ್ರೆದಲ್ಲಿ – ಶ್ಯಾಮಾಕ, ದೂರ್ವೆ, ಕಮಲ, ವಿಷ್ಣುಕ್ರಾಂತ, ಗಂಧ, ತುಲಸೀದಳ ಇವುಗಳನ್ನೂ; ಅರ್ಘ್ಯಪಾತ್ರೆಯಲ್ಲಿ – ಗಂಧ, ಪುಷ್ಪ, ಅಕ್ಷತೆ, ಯವ, ಕುಶ, ಎಳ್ಳು, ಬಿಳಿಸಾಸಿವೆ, ಗರಿಕೆ ಇವುಗಳನ್ನೂ; ಆಚಮನ ಪಾತ್ರೆಯಲ್ಲಿ – ಜಾಜಿಹೂವು, ಲವಂಗ, ಕಂಕೋಲ ಇವುಗಳನ್ನೂ ಹಾಕಬೇಕು.) ॥ ೨೧ ॥ ಇದಾದ ಬಳಿಕ ಪೂಜಕನು ಪಾತ್ರೆಗಳಲ್ಲಿ ಕ್ರಮವಾಗಿ ಹೃದಯಮಂತ್ರ, ಶಿರೋಮಂತ್ರ, ಶಿಖಾಮಂತ್ರ ಇವುಗಳಿಂದ ಅಭಿಮಂತ್ರಿಸಿ, ಕೊನೆಗೆ ಈ ಮೂರೂ ಪಾತ್ರೆಗಳನ್ನು ಗಾಯತ್ರೀಮಂತ್ರದಿಂದ ಅಭಿಮಂತ್ರಿಸಬೇಕು. ॥ ೨೨ ॥ ಮತ್ತೆ ಪ್ರಾಣಾಯಾಮದಿಂದ ಪ್ರಾಣವಾಯುವನ್ನು ಮತ್ತು ಭಾವನೆಯ ಮೂಲಕ ಶರೀರಸ್ಥ ಅಗ್ನಿಯನ್ನು ಶುದ್ಧಗೊಳಿಸಿ, ಹೃದಯಕಮಲದಲ್ಲಿ ಪರಮಸೂಕ್ಷ್ಮ ಮತ್ತು ಶ್ರೇಷ್ಠವಾದ ದೀಪಶಿಖೆಯಂತಿರುವ ನನ್ನ ಜೀವಕಲೆಯನ್ನು ಧ್ಯಾನಿಸಬೇಕು. ದೊಡ್ಡ-ದೊಡ್ಡ ಸಿದ್ಧ-ಋಷಿ ಮುನಿಗಳು ಓಂಕಾರದ ಅಕಾರ, ಉಕಾರ, ಮಕಾರ, ಬಿಂದು, ನಾದ – ಈ ಐದು ಕಲೆಗಳ ಕೊನೆಯಲ್ಲಿ ಆ ಜೀವಕಲೆಯನ್ನು ಧ್ಯಾನಿಸುತ್ತಾರೆ. ॥ ೨೩ ॥ ಭಗವಂತನ ತೇಜೋಮಯ ಅಂಶವು ನನ್ನ ಹೃದಯದಲ್ಲಿದೆ, ಆ ಜೀವಕಲೆಯು ಆತ್ಮಸ್ವರೂಪವಾಗಿದೆ ಎಂದು ಪೂಜಕನು ಭಾವಿಸಬೇಕು. ಅವನ ತೇಜದಿಂದ ಇಡೀ ಅಂತಃಕರಣ ಮತ್ತು ಶರೀರ ತುಂಬಿಹೋದಾಗ ಮಾನಸಿಕ ಉಪಚಾರಗಳಿಂದ ಮನಸ್ಸಿನಲ್ಲೇ ಅವನನ್ನು ಪೂಜಿಸಬೇಕು. ತದನಂತರ ತನ್ಮಯನಾಗಿ ನನ್ನನ್ನು ಆವಾಹಿಸಿ ಪ್ರತಿಮಾದಿಗಳಲ್ಲಿ ಸ್ಥಾಪಿಸಬೇಕು. ಮತ್ತೆ ಅಂಗನ್ಯಾಸಮಾಡಿ ಮಂತ್ರಗಳ ಮೂಲಕ ನನ್ನ ಪೂಜೆ ಮಾಡಬೇಕು. ॥ ೨೪ ॥

ಪಾದ್ಯೋಪಸ್ಪರ್ಶಾರ್ಹಣಾದೀನ್ ಉಪಚಾರಾನ್ ಪ್ರಕಲ್ಪಯೇತ್ ।
ಧರ್ಮಾದಿಭಿಶ್ಚ ನವಭಿಃ ಕಲ್ಪಯಿತ್ವಾಽಽಸನಂ ಮಮ
॥ ೨೫ ॥

ಪದ್ಮಮಷ್ಟದಲಂ ತತ್ರ ಕರ್ಣಿಕಾಕೇಸರೋಜ್ಜ್ವಲಮ್ ।
ಉಭಾಭ್ಯಾಂ ವೇದತಂತ್ರಾಭ್ಯಾಂ ಮಹ್ಯಂ ತೂಭಯಸಿದ್ಧಯೇ
॥ ೨೬ ॥

ಸುದರ್ಶನಂ ಪಾಂಚಜನ್ಯಂ ಗದಾಸೀಷುಧನುರ್ಹಲಾನ್ ।
ಮುಸಲಂ ಕೌಸ್ತುಭಂ ಮಾಲಾಂ ಶ್ರೀವತ್ಸಂ ಚಾನುಪೂಜಯೇತ್
॥ ೨೭ ॥

ನಂದಂ ಸುನಂದಂ ಗರುಡಂ ಪ್ರಚಂಡಂ ಚಂಡಮೇವ ಚ ।
ಮಹಾಬಲಂ ಬಲಂ ಚೈವ ಕುಮುದಂ ಕುಮುದೇಕ್ಷಣಮ್
॥ ೨೮ ॥

ದುರ್ಗಾಂ ವಿನಾಯಕಂ ವ್ಯಾಸಂ ವಿಷ್ವಕ್ಸೇನಂ ಗುರೂನ್ಸುರಾನ್ ।
ಸ್ವೇ ಸ್ವೇ ಸ್ಥಾನೇ ತ್ವಭಿಮುಖಾನ್ ಪೂಜಯೇತ್ ಪ್ರೋಕ್ಷಣಾದಿಭಿಃ
॥ ೨೯ ॥

ಚಂದನೋಶೀರಕರ್ಪೂರಕುಂಕುಮಾಗುರುವಾಸಿತೈಃ ।
ಸಲಿಲೈಃ ಸ್ನಾಪಯೇನ್ಮಂತ್ರೈರ್ನಿತ್ಯದಾ ವಿಭವೇ ಸತಿ
॥ ೩೦ ॥

ಸ್ವರ್ಣಘರ್ಮಾನುವಾಕೇನ ಮಹಾಪುರುಷವಿದ್ಯಯಾ ।
ಪೌರುಷೇಣಾಪಿ ಸೂಕ್ತೇನ ಸಾಮಭೀ ರಾಜನಾದಿಭಿಃ
॥ ೩೧ ॥

ವಸ್ತ್ರೋಪವೀತಾಭರಣಪತ್ರಸ್ರಗ್ಗಂಧಲೇಪನೈಃ ।
ಅಲಂಕುರ್ವೀತ ಸಪ್ರೇಮ ಮದ್ಭಕ್ತೋ ಮಾಂ ಯಥೋಚಿತಮ್
॥ ೩೨ ॥

ಎಲೈ ಉದ್ಧವನೇ ! ನನ್ನ ಸಿಂಹಾಸನ (ಪೀಠ) ದಲ್ಲಿ ಧರ್ಮವೇ ಆದಿ ಗುಣಗಳನ್ನು ಮತ್ತು ವಿಮಲಾ ಮೊದಲಾದ ನವಶಕ್ತಿಗಳನ್ನು ಕಲ್ಪಿಸಿ ಆವಾಹಿಸಬೇಕು. ಅಂದರೆ ಪೀಠದ ನಾಲ್ಕೂ ಮೂಲೆಗಳಲ್ಲಿ ಧರ್ಮ, ಜ್ಞಾನ, ವೈರಾಗ್ಯ, ಐಶ್ವರ್ಯ ಈ ನಾಲ್ಕು ಕಾಲುಗಳಿವೆ. ಅಧರ್ಮ, ಅಜ್ಞಾನ, ಅವೈರಾಗ್ಯ, ಅನೈಶ್ವರ್ಯ ಎಂಬ ನಾಲ್ಕು ದಿಕ್ಕುಗಳಲ್ಲಿ ನಾಲ್ಕು ದಂಡಗಳಿವೆ. ಸತ್ತ್ವ, ರಜ, ತಮ ಎಂಬ ಮೂರು ಮೆಟ್ಟಿಲುಗಳಿಂದ ಕೂಡಿದ ಪೀಠವಿದೆ. ಅದರ ಮೇಲೆ ವಿಮಲಾ, ಉತ್ಕರ್ಷಿಣೀ, ಜ್ಞಾನಾ, ಕ್ರಿಯಾ, ಯೋಗಾ, ಪ್ರಹ್ವೀ, ಸತ್ಯಾ, ಈಶಾನಾ, ಅನುಗ್ರಹಾ ಎಂಬ ನವಶಕ್ತಿಗಳು ವಿರಾಜಮಾನ ವಾಗಿವೆ. ಆ ಪೀಠದಲ್ಲಿ ಒಂದು ಅಷ್ಟದಳ ಕಮಲವಿದೆ. ಅದರ ಕರ್ಣಿಕಾ ಅತ್ಯಂತ ಪ್ರಕಾಶಮಾನವಾಗಿದೆ ಮತ್ತು ಹಳದಿ ಬಣ್ಣದ ಕೇಸರಗಳ ಪ್ರಭೆ ಅಲೌಕಿಕವಾಗಿದೆ. ಆಸನದ ಸಂಬಂಧವಾಗಿ ಹೀಗೆ ಭಾವನೆ ಮಾಡಿ, ಪಾದ್ಯ, ಅರ್ಘ್ಯ, ಆಚಮನ ಮುಂತಾದ ಉಪ ಚಾರಗಳನ್ನು ಅರ್ಪಿಸಬೇಕು. ಬಳಿಕ ಭೋಗ ಮತ್ತು ಮೋಕ್ಷದ ಸಿದ್ಧಿಗಾಗಿ ವೈದಿಕ ಹಾಗೂ ತಾಂತ್ರಿಕ ವಿಧಿಯಿಂದ ನನ್ನನ್ನು ಪೂಜಿಸ ಬೇಕು. ॥ ೨೫-೨೬ ॥

ಸುದರ್ಶನ ಚಕ್ರ, ಪಾಂಚಜನ್ಯ ಶಂಖ ಕೌಮೋದಕೀ ಗದೆ, ಖಡ್ಗ ಬಾಣ, ಧನುಸ್ಸು ಹಲ, ಮುಸಲ ಎಂಬ ಎಂಟು ಆಯುಧ ಗಳನ್ನು ಎಂಟು ದಿಕ್ಕುಗಳಲ್ಲಿಯೂ ಪೂಜಿಸಬೇಕು. ಕೌಸ್ತುಭಮಣಿ, ವೈಜಯಂತೀಮಾಲೆ, ಶ್ರೀವತ್ಸಲಾಂಛನ ವಕ್ಷಸ್ಥಳದ ಯಥಾಸ್ಥಾನ ದಲ್ಲಿ ಪೂಜಿಸಬೇಕು. ॥ ೨೭ ॥ ನಂದ, ಸುನಂದ, ಪ್ರಚಂಡ, ಚಂಡ, ಮಹಾಬಲ, ಬಲ, ಕುಮುದ, ಕುಮುದೇಕ್ಷಣ – ಈ ಎಂಟು ಮಂದಿ ನನ್ನ ಪಾರ್ಷದರನ್ನು ಎಂಟುದಿಕ್ಕುಗಳಲ್ಲಿ ಸ್ಥಾಪಿಸಿ ಪೂಜಿಸಬೇಕು. ಗರುಡನನ್ನು ಇದಿರುಗಡೆಯಲ್ಲಿ ಸ್ಥಾಪಿಸಿ ಪೂಜಿಸ ಬೇಕು. ಬಳಿಕ ದುರ್ಗೆ, ವಿನಾಯಕ, ವ್ಯಾಸ, ವಿಷ್ವಕ್ಸೇನರನ್ನು ನಾಲ್ಕೂ ಮೂಲೆಗಳಲ್ಲಿ ಸ್ಥಾಪಿಸಿ ಪೂಜಿಸಬೇಕು. ಬಲಭಾಗದಲ್ಲಿ ಗುರು ವನ್ನು, ಪೂರ್ವಾದಿ ಎಂಟು ದಿಕ್ಕುಗಳಲ್ಲಿ ಇಂದ್ರಾದಿ ಅಷ್ಟ-ದಿಕ್ಪಾಲ ಕರನ್ನು ಸ್ಥಾಪಿಸಿ, ಪ್ರೋಕ್ಷಣ, ಪಾದ್ಯ, ಅರ್ಘ್ಯಪ್ರದಾನಾದಿ ಕ್ರಮಗ ಳಿಂದ ಪೂಜೆ ಮಾಡಬೇಕು. ॥ ೨೮-೨೯ ॥

ಪ್ರಿಯ ಉದ್ಧವನೇ ! ಸಾಮರ್ಥ್ಯ, ವೈಭವಗಳಿದ್ದರೆ ಪ್ರತಿ ದಿನವೂ ಚಂದನ, ಲಾವಂಚ, ಪಚ್ಚಕರ್ಪೂರ, ಕುಂಕುಕೇಸರಿ, ಅಗರು ಮುಂತಾದ ಸುಗಂಧ ದ್ರವ್ಯಗಳಿಂದ ಸುವಾಸಿತ ಜಲದಿಂದ ನನಗೆ ಅಭಿಷೇಕ ಮಾಡಬೇಕು. 'ಸುವರ್ಣಂ ಘರ್ಮಂ ಪರಿವೇದ ವೇನಮ್' ಸ್ವರ್ಣ ಘರ್ಮಾನುವಾಕದಿಂದಲೂ, 'ಜಿತಂತೇ ಪುಂಡರೀಕಾಕ್ಷ' ಎಂಬ ಮಹಾಪುರುಷವಿದ್ಯೆಯಿಂದಲೂ, ಪುರುಷ ಸೂಕ್ತದಿಂದಲೂ, 'ಇಂದ್ರಂ ನ ರೋನೇ ಮಥಿತಾ ಹವಂತ' ಮುಂತಾದ ರಾಜನಾದಿ ಸಾಮಗಾನದಿಂದಲೂ ನನಗೆ ಅಭಿಷೇಕ ಮಾಡಬೇಕು. ॥ ೩೦-೩೧ ॥ ನನ್ನ ಭಕ್ತನು – ವಸ್ತ್ರ, ಯಜ್ಞೋಪವೀತ, ಆಭೂಷಣ, ಪತ್ರ, ಪುಷ್ಪಮಾಲೆ, ಗಂಧ, ಚಂದನಾದಿಗಳಿಂದ ಪ್ರೇಮಪೂರ್ವಕ ಯಥಾವತ್ ನನ್ನನ್ನು ಶೃಂಗರಿಸಲಿ. ॥ ೩೨ ॥

ಪಾದ್ಯಮಾಚಮನೀಯಂ ಚ ಗಂಧಂ ಸುಮನಸೋಽಕ್ಷತಾನ್ ।
ಧೂಪದೀಪೋಪಹಾರ್ಯಾಣಿ ದದ್ಯಾನ್ಮೇ ಶ್ರದ್ಧಯಾರ್ಚಕಃ
॥ ೩೩ ॥

ಗುಡಪಾಯಸಸರ್ಪೀಂಷಿ ಶಷ್ಕುಲ್ಯಾಪೂಪಮೋದಕಾನ್ ।
ಸಂಯಾವದಧಿಸೂಪಾಂಶ್ಚ ನೈವೇದ್ಯಂ ಸತಿ ಕಲ್ಪಯೇತ್
॥ ೩೪ ॥

ಅಭ್ಯಂಗೋನ್ಮರ್ದನಾದರ್ಶದಂತಧಾವಾಭಿಷೇಚನಮ್ ।
ಅನ್ನಾದ್ಯಗೀತನೃತ್ಯಾದಿ ಪರ್ವಣಿ ಸ್ಯುರುತಾನ್ವಹಮ್
॥ ೩೫ ॥

ವಿಧಿನಾ ವಿಹಿತೇ ಕುಂಡೇ ಮೇಖಲಾಗರ್ತವೇದಿಭಿಃ ।
ಅಗ್ನಿಮಾಧಾಯ ಪರಿತಃ ಸಮೂಹೇತ್ಪಾಣಿನೋದಿತಮ್
॥ ೩೬ ॥

ಪರಿಸ್ತೀರ್ಯಾಥ ಪರ್ಯುಕ್ಷೇದನ್ವಾಧಾಯ ಯಥಾವಿಧಿ ।
ಪ್ರೋಕ್ಷಣ್ಯಾಽಽಸಾದ್ಯ ದ್ರವ್ಯಾಣಿ ಪ್ರೋಕ್ಷ್ಯಾಗ್ನೌ ಭಾವಯೇತ ಮಾಮ್
॥ ೩೭ ॥

ತಪ್ತಜಾಂಬೂನದಪ್ರಖ್ಯಂ ಶಂಖಚಕ್ರಗದಾಂಬುಜೈಃ ।
ಲಸಚ್ಚತುರ್ಭುಜಂ ಶಾಂತಂ ಪದ್ಮಕಿಂಜಲ್ಕವಾಸಸಮ್
॥ ೩೮ ॥

ಸ್ಫುರತ್ಕಿರೀಟಕಟಕಕಟಿಸೂತ್ರವರಾಂಗದಮ್ ।
ಶ್ರೀವತ್ಸವಕ್ಷಸಂ ಭ್ರಾಜತ್ಕೌಸ್ತುಭಂ ವನಮಾಲಿನಮ್
॥ ೩೯ ॥

ಧ್ಯಾಯನ್ನಭ್ಯರ್ಚ್ಯ ದಾರೂಣಿ ಹವಿಷಾಭಿಘೃತಾನಿ ಚ ।
ಪ್ರಾಸ್ಯಾಜ್ಯಭಾಗಾವಾಘಾರೌ ದತ್ತ್ವಾ ಚಾಜ್ಯಪ್ಲುತಂ ಹವಿಃ
॥ ೪೦ ॥

ಜುಹುಯಾನ್ಮೂಲಮಂತ್ರೇಣ ಷೋಡಶರ್ಚಾವದಾನತಃ ।
ಧರ್ಮಾದಿಭ್ಯೋ ಯಥಾನ್ಯಾಯಂ ಮಂತ್ರೈಃ ಸ್ವಿಷ್ಟಕೃತಂ ಬುಧಃ
॥ ೪೧ ॥

ಪೂಜಕನು ಶ್ರದ್ಧೆಯಿಂದ ನನಗೆ ಪಾದ್ಯ, ಆಚಮನ, ಚಂದನ, ಪುಷ್ಪ, ಅಕ್ಷತೆ, ಧೂಪ, ದೀಪ, ಮುಂತಾದ ಉಪಚಾರಗಳನ್ನು ಸಮರ್ಪಿಸಲಿ. ॥ ೩೩ ॥ ಅನುಕೂಲಕ್ಕೆ ತಕ್ಕಂತೆ ಬೆಲ್ಲ-ಪಾಯಸ, ತುಪ್ಪ, ಚಕ್ಕುಲಿ, ಅಪೂಪ (ವಡೆ), ಎರೆಯಪ್ಪ, ಅತಿರಸ, ಸಿಹಿಕಡಬು, ಲಾಡು, ಮೊಸರು, ತೊವ್ವೆ ಮೊದಲಾದ ನಾನಾ ವ್ಯಂಜನಗಳನ್ನು ನೈವೇದ್ಯಮಾಡಲಿ. ॥ ೩೪ ॥ ನನ್ನ ಶ್ರೀವಿಗ್ರಹಕ್ಕೆ ದಂತಧಾವನ, ಎಣ್ಣೆಮಜ್ಜನ, ಅಂಗಗಳನ್ನು ಒತ್ತುವಿಕೆ, ಪಂಚಾಮೃತಾಭಿಷೇಕ, ಸುಗಂಧದ್ರವ್ಯಗಳ ಲೇಪನಮಾಡಿ, ಅಲಂಕಾರ, ಕನ್ನಡಿಸೇವೆ, ಅನ್ನಭಕ್ಷ್ಯಗಳ ನೈವೇದ್ಯ ಇತ್ಯಾದಿಗಳನ್ನು ಪ್ರತಿನಿತ್ಯವೂ ಮಾಡಬೇಕು. ನೃತ್ಯ-ಗೀತಾದಿ ಸೇವೆಯನ್ನು ನಿತ್ಯವೂ ಮಾಡಬಹುದು, ಸೌಕರ್ಯವಿಲ್ಲದಿದ್ದರೆ ಪರ್ವದಿವಸಗಳಲ್ಲಾದರೂ ಮಾಡಬೇಕು. ಜೊತೆಗೆ ಭಗವನ್ನಾಮ ಸಂಕೀರ್ತನೆ, ಹರಿಕಥೆಗಳನ್ನೂ ಏರ್ಪಡಿಸಬೇಕು. ॥ ೩೫ ॥

ಉದ್ಧವನೇ ! ಪೂಜಕನು ತನ್ನ ಗೃಹ್ಯೋಕ್ತವಿಧಿಯಿಂದ ನಿರ್ಮಿತವಾದ ಮೇಖಲೇ, ಗರ್ತ, ವೇದಿ ಇವುಗಳಿಂದ ಕೂಡಿದ ಕುಂಡದಲ್ಲಿ ಅಗ್ನಿಯನ್ನು ಪ್ರತಿಷ್ಠಾಪಿಸಿ, ಪ್ರಜ್ವಲನಗೊಳಿಸಬೇಕು. ಸುತ್ತಲೂ ಕೈಯಿಂದ ನೀರನ್ನು ಪ್ರೋಕ್ಷಿಸಿ ಅದನ್ನು ಪರಿಸಮೂಹನ ಮಾಡಬೇಕು. ॥ ೩೬ ॥ ಬಳಿಕ ಹೋಮಕುಂಡದ ನಾಲ್ಕೂ ಕಡೆಗಳಲ್ಲಿಯೂ ಪರಿಸ್ತರಣವನ್ನು ಹಾಸಿ, ಪ್ರೋಕ್ಷಣಪಾತ್ರೆಯಲ್ಲಿರುವ ಜಲದಿಂದ ಸುತ್ತಲೂ ಪ್ರೋಕ್ಷಿಸಿ, ಸ್ವಗೃಹ್ಯೋಕ್ತವಿಧಿಯಿಂದ, ಸಮಿತ್ ಪ್ರಕ್ಷೇಪಾದಿ ವಿಧಿಯಿಂದ ಅನ್ವಾಧಾನ ಕರ್ಮವನ್ನು ಮಾಡಿ, ಅಗ್ನಿಗೆ ಉತ್ತರದಲ್ಲಿ ಹೋಮಕ್ಕೆ ಉಪಯುಕ್ತವಾದ ದ್ರವ್ಯಗಳನ್ನಿಟ್ಟು ಪ್ರೋಕ್ಷಣೀಪಾತ್ರೆಯ ಜಲದಿಂದ ಪ್ರೋಕ್ಷಿಸಬೇಕು. ಅನಂತರ ಆ ಅಗ್ನಿಯಲ್ಲಿ ನನ್ನನ್ನು ಧ್ಯಾನಿಸಬೇಕು. ॥ ೩೭ ॥ ಪುಟಕ್ಕೆ ಹಾಕಿದ ಭಂಗಾರದ ಹೊಂಬಣ್ಣದಿಂದ ಬೆಳಗುವ ಶರೀರದಿಂದ ಕೂಡಿರುವ, ಶಂಖ, ಚಕ್ರ, ಗದೆ, ಪದ್ಮ ಇವುಗಳಿಂದ ಸಮಲಂಕೃತವಾದ ನಾಲ್ಕು ಭುಜಗಳಿಂದ ಶೋಭಾಯಮಾನವಾದ, ಶಾಂತವಾದ ಮುಖಭಾವದಿಂದಿರುವ, ಕಮಲದ ಕೇಸರದಂತೆ ನವುರಾಗಿರುವ ಪೀತಾಂಬರವನ್ನು ಉಟ್ಟಿರುವ, ಕಿರೀಟ, ಕಂಕಣ, ಕಟಿಸೂತ್ರ, ಭುಜಕೀರ್ತಿಗಳಿಂದ ಕಂಗೊಳಿಸುತ್ತಿರುವ, ವಕ್ಷಸ್ಥಳದಲ್ಲಿ ಶ್ರೀವತ್ಸ ಲಾಂಛನವನ್ನೂ, ಕೌಸ್ತುಭಮಣಿಯನ್ನೂ, ವನಮಾಲೆಯನ್ನೂ ಧರಿಸಿರುವ, ನನ್ನ ದಿವ್ಯ ಮಂಗಳ ವಿಗ್ರಹವನ್ನು ಧ್ಯಾನಿಸಬೇಕು. ॥ ೩೮-೩೯ ॥ ಅಗ್ನಿಯಲ್ಲಿ ನನ್ನ ಈ ಮೂರ್ತಿಯನ್ನು ಧ್ಯಾನಿಸಿ ಪೂಜಿಸಬೇಕು. ಬಳಿಕ ಒಣಗಿದ ಸಮಿಧೆಗಳನ್ನು ತುಪ್ಪದಲ್ಲಿ ಅದ್ದಿ ಆಹುತಿಯನ್ನು ಕೊಡಬೇಕು. ಆಜ್ಯ ಭಾಗ ಮತ್ತು ಆಘಾರವೆಂಬ ಎರಡು ಆಹುತಿಗಳಿಂದ ಹವನ ಮಾಡಬೇಕು. ಬಳಿಕ ತುಪ್ಪದಲ್ಲಿ ಅದ್ದಿ ಬೇರೆ ಹವನ ದ್ರವ್ಯದಿಂದ ಆಹುತಿಗಳನ್ನು ಕೊಡಬೇಕು. ॥ ೪೦ ॥ ಇದಾದ ಬಳಿಕ ತನ್ನ ಇಷ್ಟಮಂತ್ರದಿಂದ ಅಥವಾ 'ಓಂ ನಮೋ ನಾರಾಯಣಾಯ' ಈ ಅಷ್ಟಾಕ್ಷರ ಮಂತ್ರದಿಂದ, ಮತ್ತು ಪುರುಷಸೂಕ್ತದ ಹದಿನಾರು ಮಂತ್ರಗಳಿಂದ ಹವನ ಮಾಡಬೇಕು. ಬುದ್ಧಿವಂತನಾದವನು ಧರ್ಮಾದಿ ದೇವತೆಗಳಿಗೂ ವಿಧಿಪೂರ್ವಕ ಮಂತ್ರಗಳಿಂದ ಆಹುತಿಯನ್ನು ನೀಡಿ ಕೊನೆಯಲ್ಲಿ ಸ್ವಿಷ್ಟಕೃತ್ ಆಹುತಿಯನ್ನು ಕೊಡಬೇಕು. ॥ ೪೧ ॥

ಅಭ್ಯರ್ಚ್ಯಾಥ ನಮಸ್ಕೃತ್ಯ ಪಾರ್ಷದೇಭ್ಯೋ ಬಲಿಂ ಹರೇತ್ ।
ಮೂಲಮಂತ್ರಂ ಜಪೇದ್ಬ್ರಹ್ಮ ಸ್ಮರನ್ನಾರಾಯಣಾತ್ಮಕಮ್ ॥ ೪೨ ॥

ದತ್ತ್ವಾಽಽಚಮನಮುಚ್ಛೇಷಂ ವಿಷ್ವಕ್ಸೇನಾಯ ಕಲ್ಪಯೇತ್ ।
ಮುಖವಾಸಂ ಸುರಭಿಮತ್ತಾಂಬೂಲಾದ್ಯಮಥಾರ್ಹಯೇತ್ ॥ ೪೩ ॥

ಉಪಗಾಯನ್ಗೃಣನ್ ನೃತ್ಯನ್ ಕರ್ಮಾಣ್ಯಭಿನಯನ್ ಮಮ ।
ಮತ್ಕಥಾಃ ಶ್ರಾವಯನ್ ಶೃಣ್ವನ್ ಮುಹೂರ್ತಂ ಕ್ಷಣಿಕೋ ಭವೇತ್ ॥ ೪೪ ॥

ಸ್ತವೈರುಚ್ಚಾವಚೈಃ ಸ್ತೋತ್ರೈಃ ಪೌರಾಣೈಃ ಪ್ರಾಕೃತೈರಪಿ ।
ಸ್ತುತ್ವಾ ಪ್ರಸೀದ ಭಗವನ್ನಿತಿ ವಂದೇತ ದಂಡವತ್ ॥ ೪೫ ॥

ಶಿರೋ ಮತ್ಪಾದಯೋಃ ಕೃತ್ವಾ ಬಾಹುಭ್ಯಾಂ ಚ ಪರಸ್ಪರಮ್ ।
ಪ್ರಪನ್ನಂ ಪಾಹಿ ಮಾಮೀಶ ಭೀತಂ ಮೃತ್ಯುಗ್ರಹಾರ್ಣವಾತ್ ॥ ೪೬ ॥

ಇತಿ ಶೇಷಾಂ ಮಯಾ ದತ್ತಾಂ ಶಿರಸ್ಯಾಧಾಯ ಸಾದರಮ್ ।
ಉದ್ವಾಸಯೇಚ್ಚೇದುದ್ವಾಸ್ಯಂ ಜ್ಯೋತಿರ್ಜ್ಯೋತಿಷಿ ತತ್ಪುನಃ ॥ ೪೭ ॥

ಅರ್ಚಾದಿಷು ಯದಾ ಯತ್ರ ಶ್ರದ್ಧಾ ಮಾಂ ತತ್ರ ಚಾರ್ಚಯೇತ್ ।
ಸರ್ವಭೂತೇಷ್ವಾತ್ಮನಿ ಚ ಸರ್ವಾತ್ಮಾಹಮವಸ್ಥಿತಃ ॥ ೪೮ ॥

ಹೀಗೆ ಅಗ್ನಿಯಲ್ಲಿ ಅಂತರ್ಯಾಮಿಯಾಗಿ ಸ್ಥಿತನಾದ ಭಗವಂತನ ಪೂಜೆಮಾಡಿ, ಅವನಿಗೆ ನಮಸ್ಕರಿಸಬೇಕು. ನಂದ, ಸುನಂದ ಮುಂತಾದ ಪಾರ್ಷದರಿಗೆ ಎಂಟೂದಿಕ್ಕುಗಳಲ್ಲಿ ಹವನಾಂಗ ಪಾಯಸಬಲಿಯನ್ನು ಅರ್ಪಿಸಬೇಕು. ಬಳಿಕ ಪ್ರತಿಮೆಯ ಮುಂದೆ ಕುಳಿತು ಪರಬ್ರಹ್ಮಸ್ವರೂಪೀ ಭಗವಾನ್ ನಾರಾಯಣನನ್ನು ಸ್ಮರಿಸಬೇಕು ಮತ್ತು ಭಗವತ್ಸ್ವರೂಪ ಮೂಲಮಂತ್ರ 'ಓಂ ನಮೋ ನಾರಾಯಣಾಯ' ಇದರ ಜಪಮಾಡಬೇಕು. ॥ ೪೨ ॥ ಇದಾದ ನಂತರ ಭಗವಂತನಿಗೆ ಹಸ್ತಪ್ರಕ್ಷಾಳನ, ಮುಖಪ್ರಕ್ಷಾಳನ, ಆಚಮನ ವನ್ನು ನೀಡಿ, ಅವನ ಪ್ರಸಾದವನ್ನು ವಿಷ್ವಕ್ಸೇನನಿಗೆ ಅರ್ಪಿಸಬೇಕು. ಬಳಿಕ ತನ್ನ ಇಷ್ಟದೇವರಿಗೆ ಮುಖವಾಸಕ್ಕಾಗಿ ಸುಗಂಧಿತ ತಾಂಬೂಲ ವನ್ನು ಅರ್ಪಿಸಿ, ಮಂತ್ರಪುಷ್ಪವನ್ನು ಸಮರ್ಪಿಸಬೇಕು. ॥ ೪೩ ॥ ನನ್ನ ಲೀಲೆಗಳನ್ನು ಹಾಡುತ್ತಾ, ಅವನ್ನು ವರ್ಣಿಸಬೇಕು. ನನ್ನ ಲೀಲೆಗಳನ್ನು ಅಭಿನಯದ ಮೂಲಕ ತೋರಿಸಬೇಕು. ಪ್ರೇಮೋನ್ಮತ್ತ ನಾಗಿ ನರ್ತಿಸಬೇಕು. ನನ್ನ ಲೀಲಾ-ಕಥೆಗಳನ್ನು ಸ್ವತಃ ಕೇಳುತ್ತಾ, ಇತರರಿಗೂ ಹೇಳಬೇಕು. ಆನಂದಪರವಶನಾಗಿ ಹೀಗೆ ನನ್ನ ಶ್ರೀವಿಗ್ರಹದಲ್ಲೇ ತನ್ಮಯನಾಗಿ ಮುಹೂರ್ತಕಾಲವನ್ನು ಕ್ಷಣದಂತೆ ಕಳೆಯಬೇಕು. ॥ ೪೪ ॥ ಪ್ರಾಚೀನ ಋಷಿ-ಮುನಿಗಳಿಂದ ರಚಿಸಲ್ಪಟ್ಟ ಮತ್ತು ಪ್ರಾಕೃತ ಭಕ್ತರಿಂದ ಹಾಡಲ್ಪಟ್ಟ ಚಿಕ್ಕ-ದೊಡ್ಡ ಸ್ತೋತ್ರ ಗಳಿಂದ ನನ್ನನ್ನು ಸ್ತುತಿಸಿ, 'ಭಗವಂತಾ ! ನನ್ನ ಮೇಲೆ ಪ್ರಸನ್ನನಾಗು. ನನಗೆ ನಿನ್ನ ಕೃಪಾಪ್ರಸಾದವನ್ನು ಕರುಣಿಸು' ಎಂದು ಪ್ರಾರ್ಥಿಸ-ಬೇಕು. ಬಳಿಕ ದಂಡವತ್ ಸಾಷ್ಟಾಂಗ ಪ್ರಣಾಮ ಮಾಡಬೇಕು. ॥ ೪೫ ॥ ಅರ್ಚಕನು ತನ್ನ ಶಿರಸ್ಸನ್ನು ನನ್ನ ಪಾದಗಳ ಮೇಲಿರಿಸಿಕೊಂಡು, ಬಲಗೈಯಿಂದ ನನ್ನ ಬಲಕಾಲನ್ನು, ಎಡಕೈ ಯಿಂದ ಎಡಕಾಲನ್ನು ಭದ್ರವಾಗಿ ಹಿಡಿದುಕೊಂಡು – 'ಭಗವಂತಾ ! ಈ ಸಂಸಾರಸಾಗರದಲ್ಲಿ ನಾನು ಮುಳುಗುತ್ತಿದ್ದೇನೆ. ಮೃತ್ಯುರೂಪೀ ಗ್ರಹವು ನನ್ನ ಬೆನ್ನುಬಿದ್ದಿದೆ, ನಾನು ಭಯಗೊಂಡು ನಿನ್ನಲ್ಲಿ ಶರಣಾಗಿದ್ದೇನೆ. ಓ ಪ್ರಭುವೇ ! ನೀನು ನನ್ನನ್ನು ಕಾಪಾಡು' ಎಂದು ಪ್ರಾರ್ಥಿಸಿಕೊಳ್ಳಬೇಕು. ॥ ೪೬ ॥ ಹೀಗೆ ದೈನ್ಯದಿಂದ ಪ್ರಾರ್ಥನೆಯನ್ನು ಸಲ್ಲಿಸಿ, ನನಗೆ ಸಮರ್ಪಿತವಾದ ಪುಷ್ಪಮಾಲಿಕೆ ಯನ್ನು ನಾನೇ ಕೈಯಾರೆ ಕೊಟ್ಟ ಪ್ರಸಾದವೆಂದು ತಿಳಿದು ಕಣ್ಣಿಗೊತ್ತಿಗೊಂಡು, ತಲೆಯಮೇಲೆ ಹೊತ್ತುಕೊಳ್ಳಬೇಕು. ವಿಸರ್ಜನೆ ಮಾಡಬೇಕಿದ್ದರೆ, ಶ್ರೀವಿಗ್ರಹದಲ್ಲಿರುವ ದಿವ್ಯಜ್ಯೋತಿಯು ಹೊರ ಬರುತ್ತಿರುವುದೆಂದೂ ತನ್ನ (ಭಕ್ತನ) ಹೃತ್ಕಮಲದಲ್ಲಿರುವ ಜ್ಯೋತಿ ಯೊಡನೆ ಲೀನವಾಗುತ್ತಿರುವುದೆಂದೂ ಭಾವಿಸಿಕೊಂಡು, ವಿಸರ್ಜನ ಮಂತ್ರವನ್ನು ಹೇಳಬೇಕು. ॥ ೪೭ ॥ ಉದ್ಧವನೇ ! ನನ್ನ ಅರ್ಚನೆಗೆ ಹೇಳಿರುವ ಹಲವಾರು ಪ್ರತಿಮೆಗಳಲ್ಲಿ ಯಾವ ಪ್ರತಿಮೆ ಯಲ್ಲಿ ಯಾವಾಗ ಪೂಜೆಮಾಡಲು ಶ್ರದ್ಧೆ ಉಂಟಾಗುವುದೋ ಆಗಲೇ ಆ ಪ್ರತಿಮೆಯಲ್ಲಿ ನನ್ನನ್ನು ಅರ್ಚಿಸಬೇಕು. ಪ್ರತಿಮೆಗಳಲ್ಲಿ ಯಾವುದೇ ತಾರತಮ್ಯವಿಲ್ಲ, ಸರ್ವಾತ್ಮನಾದ ನಾನು ಸಕಲ ಪ್ರಾಣಿ ಗಳಲ್ಲಿಯೂ, ಸಕಲ ಪ್ರಾಣಿಗಳ ಹೃದಯದಲ್ಲಿಯೂ ಸರ್ವದಾ ನೆಲೆಸಿರುತ್ತೇನೆ. ॥ ೪೮ ॥

ಏವಂ ಕ್ರಿಯಾಯೋಗಪಥೈಃ ಪುಮಾನ್ ವೈದಿಕತಾಂತ್ರಿಕೈಃ ।
ಅರ್ಚನ್ನುಭಯತಃ ಸಿದ್ಧಿಂ ಮತ್ತೋ ವಿಂದತ್ಯಭೀಪ್ಸಿತಾಮ್
॥ ೪೯ ॥

ಎಲೈ ಉದ್ಧವಾ! ಈ ಪ್ರಕಾರ ವೈದಿಕ, ತಾಂತ್ರಿಕ ಕ್ರಿಯಾಯೋಗದ ಮೂಲಕ ನನ್ನನ್ನು ಪೂಜಿಸುವ ಮನುಷ್ಯನು ಈ ಲೋಕ ಮತ್ತು ಪರಲೋಕದಲ್ಲಿ ನನ್ನಿಂದ ಅಭೀಷ್ಟವನ್ನು ಪಡೆದುಕೊಳ್ಳುತ್ತಾನೆ. ॥ ೪೯ ॥ ಉಪಾಸಕನು ಸಮರ್ಥನಾಗಿದ್ದರೆ ನನ್ನ ಸುಂದರ, ಸುದೃಢವಾದ ಮಂದಿರವನ್ನು ಕಟ್ಟಿ ಅದರಲ್ಲಿ ನನ್ನ ಪ್ರತಿಮೆಯನ್ನು ಪ್ರತಿಷ್ಠಾಪಿಸಲಿ. ಸುತ್ತಲೂ ರಮ್ಯವಾದ ಉದ್ಯಾನ ವನಗಳನ್ನು ನಿರ್ಮಿಸಲಿ. ನಿತ್ಯಪೂಜೆ, ನಿತ್ಯೋತ್ಸವ, ರಥೋತ್ಸವಗಳಿಗೆ ಬೇಕಾದ ವ್ಯವಸ್ಥೆಮಾಡಲಿ. ॥ ೫೦ ॥ ನನ್ನ ನಿತ್ಯಪೂಜೆ, ಪರ್ವ ದಿವಸಗಳಲ್ಲಿ ವಿಶೇಷಪೂಜೆ, ನಿತ್ಯೋತ್ಸವ-ರಥೋತ್ಸವಗಳು ಅವಿಚ್ಛಿನ್ನವಾಗಿ ನಡೆದುಕೊಂಡು ಹೋಗಲು ಶ್ರೀಮಂತರಾದ ಭಕ್ತರು ಹೊಲ-ಗದ್ದೆಗಳನ್ನೂ, ಅಂಗಡಿಗಳನ್ನು, ಗ್ರಾಮ-ಪಟ್ಟಣಗಳನ್ನು ಉಂಬಳಿಯಾಗಿ ಕೊಡಬೇಕು. ಇದರಿಂದ ಅವರಿಗೆ ನನ್ನ ಸಮಾನವಾದ ಐಶ್ವರ್ಯವು ನನ್ನ ಅನುಗ್ರಹದಿಂದ ದೊರೆಯುತ್ತದೆ. ॥ ೫೧ ॥ ನನ್ನ ವಿಗ್ರಹ ಪ್ರತಿಷ್ಠಾಪನೆಯಿಂದ ಪೃಥ್ವಿಯ ಏಕಚ್ಛತ್ರ ರಾಜ್ಯ, ಮಂದಿರ, ನಿರ್ಮಾಣದಿಂದ ತ್ರೈಲೋಕ್ಯದ ರಾಜ್ಯ, ಪೂಜಾದಿಗಳ ವ್ಯವಸ್ಥೆ ಮಾಡಿದವರಿಗೆ ಬ್ರಹ್ಮಲೋಕ ಮತ್ತು ಮೂರನ್ನೂ ಮಾಡಿದಾಗ ನನ್ನ ಸಾರೂಪ್ಯವನ್ನು ಪಡೆದುಕೊಳ್ಳುವನು. ॥ ೫೨ ॥ ನಿಷ್ಕಾಮಭಾವದಿಂದ ನನ್ನ ಪೂಜೆ ಮಾಡುವವನಿಗೆ ನನ್ನ ಭಕ್ತಿಯೋಗವು ಪ್ರಾಪ್ತವಾಗುತ್ತದೆ. ಆ ನಿರಪೇಕ್ಷ ಭಕ್ತಿಯೋಗದ ಮೂಲಕ ಅವನು ಸ್ವಯಂ ನನ್ನನ್ನು ಪಡೆದುಕೊಳ್ಳುತ್ತಾನೆ. ॥ ೫೩ ॥ ದೇವ-ಬ್ರಾಹ್ಮಣರಿಗೆ ತಾನು ಕೊಟ್ಟ ಉಂಬಳಿಯನ್ನಾಗಲೀ, ಇತರರು ಕೊಟ್ಟ ಉಂಬಳಿಯನ್ನಾಗಲೀ ಅಪಹರಿಸುವವನು ಕೋಟ್ಯಂತರ ವರ್ಷಗಳವರೆಗೆ ಅಮೇಧ್ಯದಲ್ಲಿನ ಕ್ರಿಮಿಯಾಗುತ್ತಾನೆ. ॥ ೫೪ ॥ ಇಂತಹ ಪಾಪಿಷ್ಠವಾದ, ಹೇಯವಾದ ಕೆಲಸಕ್ಕೆ ಸಹಾಯ ಮಾಡುವವರು, ಪ್ರೇರಕರೂ, ಅನುಮೋದಕರೂ ಇವರಿಗೂ ಇದೇ ವಿಧವಾದ ದುಷ್ಫಲವು ದೊರೆಯುತ್ತದೆ. ಇವರ ಕೈವಾಡ ಹೆಚ್ಚಿದ್ದರೆ ಅವರಿಗೆ ಫಲವೂ ಹೆಚ್ಚಾಗಿ ಸಿಗುತ್ತದೆ. ॥ ೫೫ ॥

ಮದರ್ಚಾಂ ಸಂಪ್ರತಿಷ್ಠಾಪ್ಯ ಮಂದಿರಂ ಕಾರಯೇದ್ದೃಢಮ್ ।
ಪುಷ್ಪೋದ್ಯಾನಾನಿ ರಮ್ಯಾಣಿ ಪೂಜಾಯಾತ್ರೋತ್ಸವಾಶ್ರಿತಾನ್
॥ ೫೦ ॥

ಪೂಜಾದೀನಾಂ ಪ್ರವಾಹಾರ್ಥಂ ಮಹಾಪರ್ವಸ್ವಥಾನ್ವಹಮ್ ।
ಕ್ಷೇತ್ರಾಪಣಪುರಗ್ರಾಮಾನ್ ದತ್ತ್ವಾ ಮತ್ಸಾರ್ಷ್ಟಿತಾಮಿಯಾತ್
॥ ೫೧ ॥

ಪ್ರತಿಷ್ಠಯಾ ಸಾರ್ವಭೌಮಂ ಸದ್ಮನಾ ಭುವನತ್ರಯಮ್ ।
ಪೂಜಾದಿನಾ ಬ್ರಹ್ಮಲೋಕಂ ತ್ರಿಭಿರ್ಮತ್ಸಾಮ್ಯತಾಮಿಯಾತ್
॥ ೫೨ ॥

ಮಾಮೇವ ನೈರಪೇಕ್ಷ್ಯೇಣ ಭಕ್ತಿಯೋಗೇನ ವಿಂದತಿ ।
ಭಕ್ತಿಯೋಗಂ ಸ ಲಭತೇ ಏವಂ ಯಃ ಪೂಜಯೇತ ಮಾಮ್
॥ ೫೩ ॥

ಯಃ ಸ್ವದತ್ತಾಂ ಪರೈರ್ದತ್ತಾಂ ಹರೇತ ಸುರವಿಪ್ರಯೋಃ ।
ವೃತ್ತಿಂ ಸ ಜಾಯತೇ ವಿಡ್ಭುಗ್ವರ್ಷಾಣಾಮಯುತಾಯುತಮ್
॥ ೫೪ ॥

ಕರ್ತುಶ್ಚ ಸಾರಥೇರ್ಹೇತೋರನುಮೋದಿತುರೇವ ಚ ।
ಕರ್ಮಣಾಂ ಭಾಗಿನಃ ಪ್ರೇತ್ಯ ಭೂಯೋ ಭೂಯಸಿ ತತ್ಫಲಮ್
॥ ೫೫ ॥

ಇಪ್ಪತ್ತೇಳನೆಯ ಅಧ್ಯಾಯವು ಮುಗಿಯಿತು. ॥ ೨೭ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಏಕಾದಶ ಸ್ಕಂಧೇ ಸಪ್ತವಿಂಶೋಽಧ್ಯಾಯಃ ॥ ೨೭ ॥

ಇಪ್ಪತ್ತೆಂಟನೆಯ ಅಧ್ಯಾಯ

ಪರಮಾರ್ಥ ನಿರೂಪಣೆ

ಶ್ರೀಭಗವಾನುವಾಚ

ಪರಸ್ವಭಾವಕರ್ಮಾಣಿ ನ ಪ್ರಶಂಸೇನ್ನ ಗರ್ಹಯೇತ್ ।

ವಿಶ್ವಮೇಕಾತ್ಮಕಂ ಪಶ್ಯನ್ ಪ್ರಕೃತ್ಯಾ ಪುರುಷೇಣ ಚ
॥ ೧ ॥

ಭಗವಾನ್ ಶ್ರೀಕೃಷ್ಣನು ಹೇಳುತ್ತಾನೆ – ಉದ್ಧವನೇ! ಬೇರೆಯವರ ಸ್ವಭಾವದ ಅಥವಾ ಅವರ ಕರ್ಮಗಳ ಬಗ್ಗೆ ಚರ್ಚೆ ಎಂದೂ ಮಾಡಬಾರದು. ಅವರನ್ನು ಹೊಗಳುವುದಾಗಲೀ, ತೆಗಳುವುದಾಗಲೀ ಮಾಡಬಾರದು. ಸಮಸ್ತ ವಿಶ್ವದಲ್ಲಿ ಒಂದೇ ಆತ್ಮನು ಒಳಗೆ-ಹೊರಗೆ ವ್ಯಾಪ್ತನಾಗಿದ್ದಾನೆ. ಪ್ರಕೃತಿ-ಪುರುಷರಿಂದ ಉಂಟಾದ ಈ ವಿಶ್ವದಲ್ಲಿ ಒಂದೇ ಆತ್ಮಸತ್ತೆಯನ್ನು ನೋಡಬೇಕು. ॥ ೧ ॥

ಪರಸ್ವಭಾವಕರ್ಮಾಣಿ ಯಃ ಪ್ರಶಂಸತಿ ನಿಂದತಿ ।
ಸ ಆಶು ಭ್ರಶ್ಯತೇ ಸ್ವಾರ್ಥಾದಸತ್ಯಭಿನಿವೇಶತಃ
॥ ೨ ॥

ತೈಜಸೇ ನಿದ್ರಯಾಽಽಪನ್ನೇ ಪಿಂಡಸ್ಥೋ ನಷ್ಟಚೇತನಃ ।
ಮಾಯಾಂ ಪ್ರಾಪ್ನೋತಿ ಮೃತ್ಯುಂ ವಾ ತದ್ವನ್ನಾನಾರ್ಥದೃಕ್ ಪುಮಾನ್
॥ ೩ ॥

ಕಿಂ ಭದ್ರಂ ಕಿಮಭದ್ರಂ ವಾ ದ್ವೈತಸ್ಯಾವಸ್ತುನಃ ಕಿಯತ್ ।
ವಾಚೋದಿತಂ ತದನೃತಂ ಮನಸಾ ಧ್ಯಾತಮೇವ ಚ
॥ ೪ ॥

ಛಾಯಾಪ್ರತ್ಯಾಹ್ವಯಾಭಾಸಾ ಹ್ಯಸಂತೋಽಪ್ಯರ್ಥಕಾರಿಣಃ ।
ಏವಂ ದೇಹಾದಯೋ ಭಾವಾ ಯಚ್ಛಂತ್ಯಾಮೃತ್ಯುತೋ ಭಯಮ್
॥ ೫ ॥

ಆತ್ಮೈವ ತದಿದಂ ವಿಶ್ವಂ ಸೃಜ್ಯತೇ ಸೃಜತಿ ಪ್ರಭುಃ ।
ತ್ರಾಯತೇ ತ್ರಾತಿ ವಿಶ್ವಾತ್ಮಾ ಹ್ರಿಯತೇ ಹರತೀಶ್ವರಃ
॥ ೬ ॥

ತಸ್ಮಾನ್ನಹ್ಯಾತ್ಮನೋಽನ್ಯಸ್ಮಾದನ್ಯೋ ಭಾವೋ ನಿರೂಪಿತಃ ।
ನಿರೂಪಿತೇಽಯಂ ತ್ರಿವಿಧಾ ನಿರ್ಮೂಲಾ ಭಾತಿರಾತ್ಮನಿ ।
ಇದಂ ಗುಣಮಯಂ ವಿದ್ಧಿ ತ್ರಿವಿಧಂ ಮಾಯಯಾ ಕೃತಮ್
॥ ೭ ॥

ಏತದ್ವಿದ್ವಾನ್ ಮದುದಿತಂ ಜ್ಞಾನವಿಜ್ಞಾನನೈಪುಣಮ್ ।
ನ ನಿಂದತಿ ನ ಚ ಸ್ತೌತಿ ಲೋಕೇ ಚರತಿ ಸೂರ್ಯವತ್
॥ ೮ ॥

ಬೇರೆಯವರ ಸ್ವಭಾವ ಮತ್ತು ಕರ್ಮದ ನಿಂದೆ-ಸ್ತುತಿ ಮಾಡುವ ವ್ಯಕ್ತಿಯು ಬೇಗನೇ ಅಸತ್ತಿನಲ್ಲಿ ಆಗ್ರಹವಿರಿಸಿ, ತನ್ನ ಉನ್ನತಿಯ ಮಾರ್ಗದಿಂದ ಭ್ರಷ್ಟನಾಗಿ ಪತಿತನಾಗುತ್ತಾನೆ. ॥ ೨ ॥ ನಿದ್ರಾವಸ್ಥೆಯಲ್ಲಿ ಇಂದ್ರಿಯಗಳು ಮಲಗಿಬಿಡುತ್ತವೆ. ದೇಹದಲ್ಲಿರುವ ಜೀವಿಯು ಆಗ ಜ್ಞಾನಶೂನ್ಯನಾಗುತ್ತಾನೆ. ಹೀಗೆ ನಿದ್ರಾವಸ್ಥೆಯಲ್ಲಿ ಎಂದಾದರೂ ಈ ಮನುಷ್ಯನು ಮಾಯೆ (ಸ್ವಪ್ನ)ಯನ್ನು ನೋಡುತ್ತಾನೆ. ಅಥವಾ ಸುಷುಪ್ತಿ ಅವಸ್ಥೆಯಲ್ಲಿ ಗಾಢನಿದ್ದೆಯಲ್ಲಿ ಪೂರ್ಣ ಜ್ಞಾನಶೂನ್ಯನಾಗುತ್ತಾನೆ. ಹಾಗೆಯೇ ಜಾಗ್ರತ್ ಅವಸ್ಥೆಯಲ್ಲಿಯೂ ಅನೇಕ ಪ್ರಕಾರದ ಪದಾರ್ಥಗಳನ್ನು ಚಿಂತಿಸುತ್ತಾನೆ ಮತ್ತು ನೋಡುತ್ತಾ ಇರುತ್ತಾನೆ. ಆದರೆ ಇದೆಲ್ಲವೂ ಮಿಥ್ಯೆಯೇ ಆಗಿದೆ. ಸತ್ಯ ವಸ್ತು ಏಕಮಾತ್ರ ಪರಮಾತ್ಮತತ್ತ್ವವೇ ಆಗಿದೆ. ॥ ೩ ॥ ಯಥಾರ್ಥದಲ್ಲಿ ಇಲ್ಲವೇ ಇಲ್ಲದ ವಸ್ತುವಿನ ಬಗ್ಗೆ ಏನು ಒಳ್ಳೆಯದು ಹೇಳಬಹುದು, ಏನು ಕೆಟ್ಟದೆಂದು ಹೇಳಬಹುದು ? ಇದೆಲ್ಲವೂ ಕೇವಲ ವಾಣಿಯ ವಿಲಾಸಮಾತ್ರವಾಗಿದೆ, ಆದ್ದರಿಂದ ಮಿಥ್ಯೆಯಾಗಿದೆ. ಹೀಗೆಯೇ ಮನಸ್ಸಿನಿಂದ ಈ ಅಸತ್ ಪದಾರ್ಥಗಳನ್ನು ಚಿಂತಿಸುವುದೂ ವ್ಯರ್ಥವೇ ಆಗಿದೆ. ॥ ೪ ॥ ಛಾಯೆ, ಪ್ರತಿಧ್ವನಿ ಮತ್ತು ಆಭಾಸ ಇವು ಮೂರೂ ನಿಜವಲ್ಲದಿದ್ದರೂ ತಮ್ಮ-ತಮ್ಮ ಕಾರ್ಯಗಳನ್ನಾದರೋ ಮಾಡಿಯೇ ಮಾಡುತ್ತವೆ. (ಛಾಯೆ (ನೆರಳು)ಯಲ್ಲಿ ಕುಳಿತಿರುತ್ತಾರೆ ಮತ್ತು ಅದನ್ನು ಒಪ್ಪಿಕೊಂಡು ಕಾರ್ಯವನ್ನೂ ಮಾಡುತ್ತಾರೆ. ಪ್ರತಿಧ್ವನಿಯಾದರೆ 'ಇದೇನಾಯಿತು ?' ಎಂದು ಗಾಬರಿಗೊಳ್ಳುವನು. ಹಗ್ಗದಲ್ಲಿ ಸರ್ಪದ ಭ್ರಮೆಯಿಂದ ಭಯವಾಗುತ್ತದೆ. ಇವೆಲ್ಲವೂ ತಮ್ಮ-ತಮ್ಮ ಕಾರ್ಯ ಮಾಡುತ್ತಿದ್ದರೂ ಇವು ಮೂರೂ ಮಿಥ್ಯೆಯಾಗಿದೆ.) ಹೀಗೆಯೇ ದೇಹಾದಿ ಪದಾರ್ಥಗಳೆಲ್ಲವೂ ಮಿಥ್ಯೆಯೇ ಆಗಿವೆ. ಆದರೂ ಪ್ರಾಣಿಗಳಿಗೆ ಸಾಯುವವರೆಗೆ ಭಯ, ದುಃಖಗಳಾದರೋ ಕೊಡುತ್ತಲೇ ಇರುತ್ತವೆ. ॥ ೫ ॥ ಸಮಸ್ತ ವಿಶ್ವದ ಆತ್ಮನಾದರೋ ಒಬ್ಬನೇ ಆಗಿದ್ದಾನೆ. ಆ ಆತ್ಮನೇ ಬ್ರಹ್ಮಾ ಆಗಿ ತನ್ನಿಂದಲೇ ತನ್ನನ್ನು (ವಿಶ್ವವಾಗಿ) ನಿರ್ಮಿಸಿಕೊಳ್ಳುವನು. ಆ ಸ್ವಯಂ ವಿಷ್ಣುರೂಪದಿಂದ ತನ್ನನ್ನೇ ರಕ್ಷಿಸಿಕೊಳ್ಳುವನು. ಪ್ರಳಯಕಾಲದಲ್ಲಿ ರುದ್ರರೂಪದಿಂದ ತನ್ನಿಂದ ಸೃಷ್ಟಿಸಲ್ಪಟ್ಟ ವಿಶ್ವವನ್ನು ಸಂಹಾರ ಮಾಡುತ್ತಾನೆ. ॥ ೬ ॥ ಈ ಪ್ರಕಾರ ಆತ್ಮನಲ್ಲದೆ ಬೇರೆ ಯಾವ ವಸ್ತುವೂ ಕೂಡ ಇರುವುದು ಸಿದ್ಧವಾಗುವುದಿಲ್ಲ, ಆತ್ಮನಿಂದ ಭಿನ್ನವಾದ ಇನ್ನೊಂದು ಭಾವ ಕಂಡುಬರುವುದರ ಯಾವ ಕಾರಣವೂ ಇಲ್ಲ, ಆದರೆ ಇಲ್ಲದೆಯೇ ಯಾವುದು ಆತ್ಮನಲ್ಲಿ ಮೂರು ಪ್ರಕಾರದಿಂದ ಭಾಸಮಾನವಾಗುತ್ತದೋ ಅದನ್ನು ನೀನು ತ್ರಿಗುಣಾತ್ಮಿಕಾ ಮಾಯೆಯ ಕಾರ್ಯವೆಂದೇ ತಿಳಿ. ॥ ೭ ॥ ಉದ್ಧವನೇ ! ಜ್ಞಾನ-ವಿಜ್ಞಾನದಿಂದ ಕೂಡಿದ ಈ ಉಪದೇಶವನ್ನು ನಾನು ನಿನಗೆ ಹೇಳಿರುವೆನು. ಇದನ್ನು ತಿಳಿದುಕೊಂಡು ವಿದ್ವಾಂಸನು ಯಾರನ್ನೂ ನಿಂದಿಸುವುದಿಲ್ಲ, ಸ್ತುತಿಸುವುದಿಲ್ಲ, ಇಂತಹ ಮಹಾಪುರುಷರು ಸೂರ್ಯನಂತೆ ಎಲ್ಲೆಡೆ ಜ್ಞಾನದ ಪ್ರಕಾಶವನ್ನು ಹರಡುತ್ತಾ ವಿಚರಿಸುತ್ತಿರುತ್ತಾರೆ. ॥ ೮ ॥ ಪ್ರತ್ಯಕ್ಷ ಪ್ರಮಾಣದಿಂದ, ಅನುಮಾನ

ಪ್ರತ್ಯಕ್ಷೇಣಾನುಮಾನೇನ ನಿಗಮೇನಾತ್ಮ ಸಂವಿದಾ ।
ಆದ್ಯಂತವದಸಜ್ಜ್ಞಾತ್ವಾ ನಿಸ್ಸಂಗೋ ವಿಚರೇದಿಹ ॥ ೯ ॥

ಉದ್ಧವ ಉವಾಚ

ನೈವಾತ್ಮನೋ ನ ದೇಹಸ್ಯ ಸಂಸೃತಿರ್ದ್ರಷ್ಟೃದೃಶ್ಯಯೋಃ ।
ಅನಾತ್ಮಸ್ವದೃಶೋರೀಶ ಕಸ್ಯ ಸ್ಯಾದುಪಲಭ್ಯತೇ ॥ ೧೦ ॥

ಆತ್ಮಾವ್ಯಯೋಽಗುಣಃ ಶುದ್ಧಃ ಸ್ವಯಂಜ್ಯೋತಿರನಾವೃತಃ ।
ಅಗ್ನಿವದ್ದಾರುವದಚಿದ್ದೇಹಃ ಕಸ್ಯೇಹ ಸಂಸೃತಿಃ ॥ ೧೧ ॥

ಶ್ರೀಭಗವಾನುವಾಚ

ಯಾವದ್ದೇಹೇಂದ್ರಿಯ ಪ್ರಾಣೈರಾತ್ಮನಃ ಸಂನಿಕರ್ಷಣಮ್ ।
ಸಂಸಾರಃ ಫಲವಾಂಸ್ತಾವದಪಾರ್ಥೋಽಪ್ಯವಿವೇಕಿನಃ ॥ ೧೨ ॥

ಅರ್ಥೇ ಹ್ಯವಿದ್ಯಮಾನೇಽಪಿ ಸಂಸೃತಿರ್ನ ನಿವರ್ತತೇ ।
ಧ್ಯಾಯತೋ ವಿಷಯಾನಸ್ಯ ಸ್ವಪ್ನೇಽನರ್ಥಾಗಮೋ ಯಥಾ ॥ ೧೩ ॥

ಯಥಾ ಹ್ಯಪ್ರತಿಬುದ್ಧಸ್ಯ ಪ್ರಸ್ವಾಪೋ ಬಹ್ವನರ್ಥಭೃತ್ ।
ಸ ಏವ ಪ್ರತಿಬುದ್ಧಸ್ಯ ನ ವೈ ಮೋಹಾಯ ಕಲ್ಪತೇ ॥ ೧೪ ॥

ಶೋಕಹರ್ಷಭಯಕ್ರೋಧಲೋಭಮೋಹಸ್ಪೃಹಾದಯಃ ।
ಅಹಂಕಾರಸ್ಯ ದೃಶ್ಯಂತೇ ಜನ್ಮಮೃತ್ಯುಶ್ಚ ನಾತ್ಮನಃ ॥ ೧೫ ॥

ದೇಹೇಂದ್ರಿಯಪ್ರಾಣಮನೋಽಭಿಮಾನೋ
ಜೀವೋಽಂತರಾತ್ಮಾ ಗುಣಕರ್ಮಮೂರ್ತಿಃ ।
ಸೂತ್ರಂ ಮಹಾನಿತ್ಯುರುಧೇವ ಗೀತಃ
ಸಂಸಾರ ಆಧಾವತಿ ಕಾಲತಂತ್ರಃ ॥ ೧೬ ॥

ಪ್ರಮಾಣದಿಂದ, ಶಾಸ್ತ್ರ ಮತ್ತು ಮಹಾಪುರುಷರ ವಚನಗಳಿಂದ ಹಾಗೂ ಆತ್ಮಾನುಭೂತಿಯಿಂದ – 'ಕಂಡುಬರುವ ಅಸತ್ ಪದಾರ್ಥಗಳೆಲ್ಲವೂ ಆದಿ-ಅಂತ್ಯಗಳಿಂದ ಕೂಡಿದೆ ಅರ್ಥಾತ್ ನಾಶವುಳ್ಳದ್ದಾಗಿದೆ' ಎಂದು ಸ್ಪಷ್ಟವಾಗಿ ತಿಳಿದುಕೋ. ಆದರಿಂದ ಅನಾಸಕ್ತನಾಗಿ ಪ್ರಪಂಚದಲ್ಲಿ ವಿಚರಿಸುತ್ತಿರು. ॥ ೯ ॥

ಉದ್ಧವನು ಕೇಳಿದನು – ಭಗವಂತಾ! ಆತ್ಮನು ದ್ರಷ್ಟಾ ಸಾಕ್ಷಿಯಾಗಿದ್ದು, ಸ್ವಯಂಪ್ರಕಾಶವಾಗಿದ್ದಾನೆ. ಅವನು ಏನನ್ನೂ ಮಾಡುವುದಿಲ್ಲ, ದೇಹವೂ ಕೂಡ ದೃಶ್ಯವಾಗಿದ್ದು, ಜಡವಾದ್ದರಿಂದ ಅದೂ ಕೂಡ ಪ್ರಪಂಚವನ್ನು ಮಾಡಲಾರದು. ಇಂತಹ ಸ್ಥಿತಿಯಲ್ಲಿ ಈ ಸಂಸೃತಿ (ಹುಟ್ಟು-ಸಾವು) ಯಾರಿಗಾಗುತ್ತದೆ? ॥ ೧೦ ॥ ಆತ್ಮನು ಅವಿನಾಶೀ, ನಿರ್ಗುಣ, ಶುದ್ಧ, ಸ್ವಯಂಜ್ಯೋತಿ ಮತ್ತು ಒಳ-ಹೊರಗೆ ಎಲ್ಲೆಡೆ ಪರಿಪೂರ್ಣನಾಗಿದ್ದು, ಅಗ್ನಿಯಂತೆ ಜ್ಯೋತಿರ್ಮಯವಾಗಿದ್ದಾನೆ. ಆದರೆ ಶರೀರವು ಕಾಷ್ಠದಂತೆ ಅಚೇತನವಾಗಿದೆ. ಇಂತಹ ಸ್ಥಿತಿಯಲ್ಲಿ ಜನ್ಮ-ಮೃತ್ಯುವಿನಲ್ಲಿ ಅಲೆಯುವವನು ಯಾರು? ॥ ೧೧ ॥

ಭಗವಾನ್ ಶ್ರೀಕೃಷ್ಣನು ಹೇಳಿದನು – ಪ್ರಿಯ ಉದ್ಧವನೇ! ದೇಹ, ಇಂದ್ರಿಯ, ಪ್ರಾಣಗಳೊಂದಿಗೆ ಆತ್ಮನ ಸಂಬಂಧವಿರುವ ತನಕ ಅಜ್ಞಾನಿಗೆ ಈ ಪ್ರಪಂಚವು ಅಸತ್ಯವಾಗಿದ್ದರೂ ಸತ್ಯದಂತೆ ಕಾಣುತ್ತದೆ. ॥ ೧೨ ॥ ಸ್ವಪ್ನದಲ್ಲಿ ನಾನಾ ಪ್ರಕಾರದ ಅನರ್ಥಗಳು ಆಗದಿದ್ದರೂ ಕಂಡುಬರುತ್ತವೆ. ಆದರಿಂದ ಅವನು ದುಃಖಿಯೂ ಆಗುತ್ತಾನೆ. ಆದರೆ ಎಚ್ಚರಗೊಂಡಾಗ ಅವೆಲ್ಲ ಅನರ್ಥಗಳು ದೂರವಾಗುತ್ತವೆ. ಹಾಗೆಯೇ ಜಾಗ್ರತದಲ್ಲಿಯೂ ವಿಷಯಗಳು ಮಿಥ್ಯೆಯೇ ಆಗಿದ್ದರೂ ಆ ವಿಷಯಗಳ ನಿರಂತರ ಚಿಂತನೆ ಮಾಡುತ್ತಿರುವುದರಿಂದ ಪ್ರಪಂಚದಲ್ಲಿ ಅಲೆಯುವುದು ನಿಲ್ಲುವುದಿಲ್ಲ. ॥ ೧೩ ॥ ಮನುಷ್ಯನು ಸ್ವಪ್ನವನ್ನು ನೋಡುತ್ತಾ ಇರುವಾಗ, ನಿದ್ದೆಯಿಂದ ಎಚ್ಚರವಾಗುವ ಮೊದಲು ದೊಡ್ಡ-ದೊಡ್ಡ ವಿಪತ್ತುಗಳನ್ನು ಎದುರಿಸಬೇಕಾಗುತ್ತದೆ. ಆದರೆ ನಿದ್ದೆಯಿಂದ ಎಚ್ಚರಗೊಂಡಾಗ ಸ್ವಪ್ನದ ವಿಪತ್ತುಗಳಾಗಲೀ, ಅವುಗಳ ಕಾರಣದಿಂದ ಉಂಟಾಗುವ ಮೋಹವೇ ಮುಂತಾದ ವಿಕಾರಗಳಾಗಲೀ, ಇರುವುದಿಲ್ಲ. ॥ ೧೪ ॥ ಉದ್ಧವನೇ! ಇದೇ ರೀತಿ ನಾನು ನನ್ನದು ಎಂಬ ಭಾವನೆ ಇರುವವರೆಗೆ ಶೋಕ, ಹರ್ಷ, ಭಯ, ಕ್ರೋಧ, ಲೋಭ, ಮೋಹ, ಸ್ಪೃಹೆ ಮುಂತಾದ ಭಾವಗಳು ಹಾಗೂ ಜನ್ಮ-ಮೃತ್ಯುವಿನ ದುಃಖ ಜೀವನಿಗೆ ಭೋಗಿಸಬೇಕಾಗುತ್ತದೆ. ಇವೆಲ್ಲವೂ ದೇಹಾಭಿಮಾನದಿಂದಲೇ ಇವೆಯೇ ಹೊರತು ಆತ್ಮನಿಗೆ ಇದರೊಂದಿಗೆ ಯಾವ ಸಂಬಂಧವೂ ಇಲ್ಲ. ॥ ೧೫ ॥ ಎಲೈ ಉದ್ಧವನೇ! ದೇಹ, ಇಂದ್ರಿಯಗಳು, ಪ್ರಾಣ ಮತ್ತು ಮನಸ್ಸಿನಲ್ಲಿ ಸ್ಥಿತನಾದ ಆತ್ಮನೇ ಗುಣ ಹಾಗೂ ಕರ್ಮಗಳಿಂದ ಉಂಟಾದ ಲಿಂಗಶರೀರದಲ್ಲಿ ಅಹಂಭಾವಪಟ್ಟಾಗ ಅವನೇ ಜೀವನೆಂದು ಹೇಳಲ್ಪಡುತ್ತಾನೆ. ಆಗ ಅವನು ತನ್ನ ಸ್ವರೂಪದಿಂದ ವಿಮುಖನಾಗಿ, ಜಡ ಪದಾರ್ಥಗಳಲ್ಲಿ ಅಹಂತೆ, ಮಮತೆಗೈದು ಬದ್ಧನಾಗುತ್ತಾನೆ. ಮತ್ತೆ ಕಾಲದ ಮೂಲಕ ಪ್ರೇರಿತನಾಗಿ ಸಂಸಾರದಲ್ಲಿ ಅಲೆಯುತ್ತಾ ಇರುತ್ತಾನೆ. ವಾಸ್ತವದಲ್ಲಾದರೋ ಈ ಜೀವಿಯು ಸೂಕ್ಷ್ಮಾತಿಸೂಕ್ಷ್ಮ ಆತ್ಮನದೇ ಮೂರ್ತಿಯಾಗಿದೆ. ಈ ಪ್ರಕಾರ ಈ ಆತ್ಮವನ್ನು ಸೂತ್ರಾತ್ಮಾ ಮಹತ್ತತ್ತ್ವ ಹಾಗೂ ಇನ್ನೂ ಅನೇಕ ಹೆಸರುಗಳಿಂದ ಹೇಳಲಾಗಿದೆ. ॥ ೧೬ ॥ ಈ ಅಹಂಕಾರವೇ

ಆಮೂಲಮೇತದ್ಬಹುರೂಪರೂಪಿತಂ
ಮನೋ ವಚಃ ಪ್ರಾಣಶರೀರಕರ್ಮ ।
ಜ್ಞಾನಾಸಿನೋಪಾಸನಯಾ ಶಿತೇನ-
ಚ್ಛಿತ್ತ್ವಾ ಮುನಿರ್ಗಾಂ ವಿಚರತ್ಯತೃಷ್ಣಃ ॥ ೧೭ ॥

ಮನ, ವಾಣೀ, ಪ್ರಾಣ, ಶರೀರ ಮತ್ತು ಕರ್ಮ ಮುಂತಾದ ಅನೇಕ ರೂಪಗಳಲ್ಲಿ ಕಂಡುಬರುತ್ತದೆ. ಇದಕ್ಕೆ ಯಾವುದೇ ಮೂಲವು ಇಲ್ಲದ್ದರಿಂದ ಮಿಥ್ಯೆಯೇ ಆಗಿದೆ. ಜೀವಿಯು ಸ್ವಯಂ ಇವುಗಳಲ್ಲಿ ಅಹಂಭಾವ ಮಾಡಿದಕಾರಣ ಬದ್ಧನಾಗಿದ್ದಾನೆ. ಇದರಿಂದ ಮುಕ್ತನಾಗಲು ಎಲ್ಲ ರೀತಿಯಿಂದ ತೃಷ್ಣಾರಹಿತನಾಗಿ, ಉಪಾಸನೆಯ ಮೂಲಕ ಜ್ಞಾನರೂಪೀ ತೀಕ್ಷ್ಣಖಡ್ಗದಿಂದ ಆತ್ಮನನ್ನು ಬಂಧಿಸುವ ಅಹಂಕಾರವನ್ನು ಸಮೂಲವಾಗಿ ಕತ್ತರಿಸಿ, ಭಗವತ್ಸ್ವರೂಪವನ್ನು ಮನನಮಾಡುತ್ತಾ, ಸ್ವಚ್ಛಂದವಾಗಿ ವಿಚರಿಸುವುದೇ ಉಪಾಯವಾಗಿದೆ. ॥ ೧೭ ॥

ಜ್ಞಾನಂ ವಿವೇಕೋ ನಿಗಮಸ್ತಪಶ್ಚ
ಪ್ರತ್ಯಕ್ಷಮೈತಿಹ್ಯಮಥಾನುಮಾನಮ್ ।
ಆದ್ಯಂತಯೋರಸ್ಯ ಯದೇವ ಕೇವಲಂ
ಕಾಲಶ್ಚ ಹೇತುಶ್ಚ ತದೇವ ಮಧ್ಯೇ ॥ ೧೮ ॥

ಆತ್ಮಾ-ಅನಾತ್ಮದ ಸ್ವರೂಪವನ್ನು ಚೆನ್ನಾಗಿ ತಿಳಿದುಕೊಳ್ಳುವುದೇ ಜ್ಞಾನವಾಗಿದೆ. ಈ ವಿವೇಕವು ಉಂಟಾದಾಗ ದ್ವೈತದ ಅಸ್ತಿತ್ವವು ಇರುವುದಿಲ್ಲ, ಆದ್ದರಿಂದ ಆತ್ಮಚಿಂತನೆಯಿಂದ ಹೃದಯವನ್ನು ಶುದ್ಧಗೊಳಿಸಬೇಕು. ಪ್ರತ್ಯಕ್ಷಪ್ರಮಾಣದಿಂದ, ಮಹಾಪುರುಷರ ವಚನಗಳಿಂದ, ಶಾಸ್ತ್ರಪ್ರಮಾಣದಿಂದ ಮತ್ತು ಅನುಮಾನ ಪ್ರಮಾಣದಿಂದ ಒಂದೇ ಆತ್ಮತತ್ತ್ವವನ್ನು ಎಲ್ಲೆಡೆಗಳಲ್ಲಿ ನೋಡಬೇಕು. ಅವನೇ ಈ ಜಗತ್ತಿನ ಆದಿ ಮತ್ತು ಅಂತ್ಯದಲ್ಲಿರುವನು. ನಡುವಿನಲ್ಲಿಯೂ ಅವನೇ ಇದ್ದಾನೆ ಎಂದು ನಿಶ್ಚಯಿಸಬೇಕು. ಅವನನ್ನೇ ಕಾಲನೆಂದೂ ಹೇತು ಎಂದೂ ಹೇಳುತ್ತಾರೆ. ಈ ಪ್ರಕಾರ ಚಿಂತನೆಯಿಂದ ಓರ್ವ ಪರಮಾತ್ಮನನ್ನೇ ಸರ್ವತ್ರ ನೋಡಬೇಕು. ॥ ೧೮ ॥

ಯಥಾ ಹಿರಣ್ಯಂ ಸ್ವಕೃತಂ ಪುರಸ್ತಾತ್
ಪಶ್ಚಾಚ್ಚ ಸರ್ವಸ್ಯ ಹಿರಣ್ಮಯಸ್ಯ ।
ತದೇವ ಮಧ್ಯೇ ವ್ಯವಹಾರ್ಯಮಾಣಂ
ನಾನಾಪದೇಶೈರಹಮಸ್ಯ ತದ್ವತ್ ॥ ೧೯ ॥

ಉದ್ಧವನೇ! ಚಿನ್ನದಿಂದ ಕಂಕಣ, ಕುಂಡಲಾದಿ ಅನೇಕ ಆಭರಣಗಳು ಆಗುತ್ತವೆ. ಆದರೆ ಒಡವೆಗಳು ಆಗದಿದ್ದಾಗಲೂ ಅದು ಚಿನ್ನವೇ ಇತ್ತು. ಒಡವೆಗಳು ಕರಗಿ ಇಲ್ಲವಾದಾಗಲೂ ಚಿನ್ನವೇ ಆಗಿ ಉಳಿಯುವುದು. ನಡುವಿನಲ್ಲಿ ಅದಕ್ಕೆ ಕಂಕಣ-ಕುಂಡಲಾದಿ ಅನೇಕ ಹೆಸರುಗಳನ್ನಿಟ್ಟು ವ್ಯವಹರಿಸುತ್ತಾರೆ. ಆಗಲೂ ಅದು ಚಿನ್ನವೇ ಆಗಿದೆ. ಸರಿಯಾಗಿ ಹಾಗೆಯೇ ಜಗತ್ತಿನ ಆದಿ, ಅಂತ್ಯ ಮತ್ತು ಮಧ್ಯದಲ್ಲಿಯೂ ನಾನೇ ಇದ್ದೇನೆ. ವಾಸ್ತವವಾಗಿ ನಾನೇ ಸತ್ಯತತ್ತ್ವನಾಗಿದ್ದೇನೆ. ॥ ೧೯ ॥

ವಿಜ್ಞಾನಮೇತತ್ತ್ರಿಯವಸ್ಥಮಂಗ
ಗುಣತ್ರಯಂ ಕಾರಣಕಾರ್ಯಕರ್ತೃ ।
ಸಮನ್ವಯೇನ ವ್ಯತಿರೇಕತಶ್ಚ
ಯೇನೈವ ತುರ್ಯೇಣ ತದೇವ ಸತ್ಯಮ್ ॥ ೨೦ ॥

ಪ್ರಿಯ ಉದ್ಧವನೇ! ಈ ವಿಶ್ವವು ಜಾಗ್ರತ್, ಸ್ವಪ್ನ, ಸುಷುಪ್ತಿ ಎಂಬ ಮೂರು ಅವಸ್ಥೆಗಳಿಂದ ಕೂಡಿದೆ. ಸತ್ತ್ವ, ರಜ, ತಮ ಹೀಗೆ ಮೂರುಗುಣಗಳಿಂದ ಉಂಟಾಗಿದೆ. ಅಧ್ಯಾತ್ಮ (ಇಂದ್ರಿಯಗಳು – ಕರಣ), ಅಧಿಭೂತ (ಪೃಥ್ವಿ ಆದಿಕಾರ್ಯ), ಅಧಿದೈವ (ಕರ್ತಾ) ಈ ರೀತಿಯ ಮೂರು ಭೇದಗಳಿಂದ ಯುಕ್ತವಾಗಿದೆ. ಈ ತ್ರಿವಿಧತೆಯಿಂದ ಯುಕ್ತವಾದ ಈ ಜಗತ್ತು ಅಧಿಷ್ಠಾನದಲ್ಲಿ ಪರಮಾತ್ಮನ ಸತ್ತೆ ಇರುವ ಕಾರಣವೇ ಸತ್ಯದಂತೆ ಕಂಡುಬರುತ್ತದೆ. ಅನ್ವಯರೂಪದಿಂದ ಎಲ್ಲದರಲ್ಲಿ ಪರಮಾತ್ಮನೇ ಅನುಸ್ಯೂತನಾಗಿದ್ದಾನೆ ಮತ್ತು ವ್ಯತಿರೇಕ ರೂಪದಿಂದ ಅರ್ಥಾತ್ ನೇತಿ-ನೇತಿಯ ಮೂಲಕ ಇವೆಲ್ಲದನ್ನು ನಿರಾಕರಣೆ ಮಾಡಿದಾಗ ಏಕಮಾತ್ರ ಪರಮಾತ್ಮನೇ ಶೇಷವಾಗಿ ಉಳಿಯುತ್ತಾನೆ. ನಾಲ್ಕನೆಯವನಿಂದಲೇ ಇದೆಲ್ಲವೂ ಇದೆ, ಅದೇ ಸತ್ಯತತ್ತ್ವವಾಗಿದೆ. ಆ ತುರೀಯ ತತ್ತ್ವದ ಜ್ಞಾನ ಉಂಟಾದಮೇಲೆ ಎಲ್ಲ ತ್ರಿವಿಧತೆ ಮುಗಿದುಹೋಗುತ್ತದೆ. ॥ ೨೦ ॥ ಮೊದಲೂ

ನ ಯತ್ ಪುರಸ್ತಾದುತ ಯನ್ನ ಪಶ್ಚಾ-
ನ್ಮಧ್ಯೇ ಚ ತನ್ನ ವ್ಯಪದೇಶಮಾತ್ರಮ್ ।
ಭೂತಂ ಪ್ರಸಿದ್ಧಂ ಚ ಪರೇಣ ಯದ್ಯತ್
ತದೇವ ತತ್ಸ್ಯಾದಿತಿ ಮೇ ಮನೀಷಾ ॥ ೨೦ ॥

ಅವಿದ್ಯಮಾನೋಽಪ್ಯವಭಾಸತೇ ಯೋ
ವೈಕಾರಿಕೋ ರಾಜಸಸರ್ಗ ಏಷಃ ।
ಬ್ರಹ್ಮ ಸ್ವಯಂಜ್ಯೋತಿರತೋ ವಿಭಾತಿ
ಬ್ರಹ್ಮೇಂದ್ರಿಯಾರ್ಥಾತ್ಮವಿಕಾರಚಿತ್ರಮ್ ॥ ೨೧ ॥

ಏವಂ ಸ್ಫುಟಂ ಬ್ರಹ್ಮವಿವೇಕಹೇತುಭಿಃ
ಪರಾಪವಾದೇನ ವಿಶಾರದೇನ ।
ಛಿತ್ತ್ವಾಽಽತ್ಮಸಂದೇಹಮುಪಾರಮೇತ
ಸ್ವಾನಂದತುಷ್ಟೋಽಖಿಲಕಾಮುಕೇಭ್ಯಃ ॥ ೨೨ ॥

ನಾತ್ಮಾ ವಪುಃ ಪಾರ್ಥಿವಮಿಂದ್ರಿಯಾಣಿ
ದೇವಾ ಹ್ಯಸುರ್ವಾಯುಜಲಂ ಹುತಾಶಃ ।
ಮನೋಽನ್ನಮಾತ್ರಂ ಧಿಷಣಾ ಚ ಸತ್ತ್ವ-
ಮಹಂಕೃತಿಃ ಖಂ ಕ್ಷಿತಿರರ್ಥಸಾಮ್ಯಮ್ ॥ ೨೩ ॥

ಸಮಾಹಿತೈಃ ಕಃ ಕರಣೈರ್ಗುಣಾತ್ಮಭಿ-
ರ್ಗುಣೋ ಭವೇನ್ಮತ್ಸುವಿವಿಕ್ತಧಾಮ್ನಃ ।
ವಿಕ್ಷಿಪ್ಯಮಾಣೈರುತ ಕಿಂ ನು ದೂಷಣಂ
ಘನೈರುಪೇತೈರ್ವಿಗತೈ ರವೇಃ ಕಿಮ್ ॥ ೨೪ ॥

ಯಥಾ ನಭೋ ವಾಯ್ವನಲಾಂಬುಭೂಗುಣೈ-
ರ್ಗತಾಗತೈರ್ವರ್ತುಗುಣೈರ್ನ ಸಜ್ಜತೇ ।
ತಥಾಕ್ಷರಂ ಸತ್ತ್ವರಜಸ್ತಮೋಮಲೈ-
ರಹಂಮತೇಃ ಸಂಸೃತಿಹೇತುಭಿಃ ಪರಮ್ ॥ ೨೫ ॥

ಇಲ್ಲದುದು, ನಂತರವೂ ಇಲ್ಲವಾಗುವ ಈ ಜಗತ್ತು ನಡು ವಿನಲ್ಲಿಯೂ ಇಲ್ಲ; ಇದು ಕೇವಲ ವಾಣಿಯ ವಿಲಾಸವಾಗಿದೆ. ಇದರಲ್ಲಿ ವಾಸ್ತವವಾದರೋ ಪರಮಾತ್ಮನೇ ಒಳ-ಹೊರಗೆ ಓತ ಪ್ರೋತವಾಗಿದ್ದಾನೆ. ಅವನಿಂದಲೇ ಭೂತಕಾಲದಲ್ಲಿ ಇದರ ಉತ್ಪತ್ತಿ ಯಾಗಿತ್ತು. ಇದರ ವ್ಯವಹಾರವೂ ಅವನಿಂದಲೇ ನಡೆಯುತ್ತಿದೆ. ಈ ಪ್ರಕಾರ ಸಮಸ್ತ ವ್ಯವಹಾರವೂ ಅವನ ಮೂಲಕವೇ ಅವನಲ್ಲೇ ಆಗುತ್ತಿವೆ. ಅದೇ ಪರಮಾರ್ಥ ಸತ್ತೆಯಾಗಿದೆ ಎಂಬುದೇ ನನ್ನ ದೃಢನಿಶ್ಚಯವಾಗಿದೆ. ॥ ೨೦ ॥ ಈ ವಿಕಾರಮಯ ರಾಜಸ ಸೃಷ್ಟಿಯು ಇಲ್ಲದೆಯೂ ಕಂಡುಬರುತ್ತದೆ. ಇದು ಸ್ವಯಂಪ್ರಕಾಶ ಬ್ರಹ್ಮವೇ ಆಗಿದೆ. ಅದಕ್ಕಾಗಿ ಇಂದ್ರಿಯಗಳು, ವಿಷಯ, ಮನಸ್ಸು ಪಂಚಭೂತಾದಿ ಚಿತ್ರ-ವಿಚಿತ್ರ ಎಷ್ಟು ನಾಮರೂಪಗಳಿವೆಯೋ, ಅವುಗಳ ರೂಪದಲ್ಲಿ ಬ್ರಹ್ಮವೇ ಕಂಡುಬರುತ್ತಿದ್ದಾನೆ. ॥ ೨೧ ॥ ಹೀಗೆ ಬ್ರಹ್ಮವಿಚಾರ ಮಾಡುವವರು ಎಲ್ಲ ಶ್ರವಣ, ಮನನ, ನಿಧಿ ಧ್ಯಾಸನ ಮತ್ತು ಸ್ವಾನುಭೂತಿ ಸಾಧನೆಗಳ ಮೂಲಕ ಕೌಶಲ್ಯದಿಂದ ಬೇರೆ ವಸ್ತುವನ್ನು ಪೂರ್ಣವಾಗಿ ನಿರಾಕರಣಮಾಡಿ, ಬ್ರಹ್ಮಜ್ಞಾನಿ ಗುರುದೇವರ ಉಪದೇಶದ ಮೂಲಕ ಆತ್ಮನ ವಿಷಯದಲ್ಲಿ ದೃಢನಿಶ್ಚಯಮಾಡಿಕೊಂಡು ಎಲ್ಲ ರೀತಿಯ ಕಾಮನೆಗಳನ್ನು ತ್ಯಜಿಸಿ, ಉಪರಾಮನಾಗಬೇಕು, ಆತ್ಮಾನಂದದಲ್ಲಿ ಮಗ್ನನಾಗ ಬೇಕು. ॥ ೨೨ ॥ ಈ ಪಾರ್ಥಿವ ಶರೀರವು ಆತ್ಮನಲ್ಲ, ಹೀಗೆಯೇ ಇಂದ್ರಿಯಗಳ ದೇವತೆಗಳು, ಪ್ರಾಣ, ವಾಯು, ಜಲ, ಅಗ್ನಿ, ಮನ ಇವು ಯಾವುವೂ ಆತ್ಮನಲ್ಲ, ಏಕೆಂದರೆ ಇವುಗಳ ಧಾರಣೆ ಪೋಷಣೆಯು ಶರೀರದಂತೆ ಅನ್ನದಿಂದಲೇ ಆಗುತ್ತದೆ. ಬುದ್ಧಿ, ಚಿತ್ತ, ಅಹಂಕಾರ, ಆಕಾಶ, ಪೃಥ್ವಿ, ಶಬ್ದಾದಿ ವಿಷಯಗಳು ಮತ್ತು ಗುಣಗಳ ಸಾಮ್ಯಾವಸ್ಥೆಯಾದ ಈ ಪ್ರಕೃತಿ ಇವೆಲ್ಲವೂ ಆತ್ಮನಲ್ಲ (ಹೀಗೆ ಅನಾತ್ಮವಸ್ತುಗಳನ್ನು ನೇತಿ-ನೇತಿ ವಚನಗಳಿಂದ ನಿರಾಕರಣ ಮಾಡಬೇಕು) ॥ ೨೩ ॥ ಪ್ರಿಯ ಉದ್ಧವನೇ! ಆಕಾಶದಲ್ಲಿ ಮೋಡಗಳು ಬರುತ್ತವೆ, ಹೋಗುತ್ತವೆ, ಆದರಿಂದ ಸೂರ್ಯನಿಗೆ ಏನು ಹಾನಿಯಿದೆ? ಹಾಗೆಯೇ ನನ್ನ ಸ್ವರೂಪದ ಜ್ಞಾನ ಚೆನ್ನಾಗಿ ಉಂಟಾದವನ ಮುಂದೆ ಮೂರೂ ಗುಣಗಳ ವೇಗ ಬರಲಿ, ಹೋಗಲಿ, ಅವನಿಗೆ ಆದರಿಂದ ಯಾವುದೇ ಹಾನಿ-ಲಾಭವಿಲ್ಲ, ಅವು ಅವನ ಮೇಲೆ ಯಾವುದೇ ಪ್ರಭಾವ ಬೀರಲಾರವು. ಏಕೆಂದರೆ ಅವನಾದರೋ ತನ್ನ ಜ್ಞಾನದಲ್ಲಿ ದೃಢನಿಶ್ಚಯಪೂರ್ವಕ ಅಚಲಸ್ಥಿತನಾಗಿರುತ್ತಾನೆ. ॥ ೨೪ ॥ ಆಕಾಶವನ್ನು ಗಾಳಿಯು ಒಣಗಿಸಲಾರದು, ಬೆಂಕಿ ಸುಡಲಾರದು, ನೀರು ತೋಯಿಸ ಲಾರದು, ಧೂಳು-ಹೊಗೆ ಮಲಿನವಾಗಿಸದು, ಋತುಗಳ ಗುಣ ಸೆಕೆ-ಚಳಿ ಮುಂತಾದವುಗಳಿಂದ ಪ್ರಭಾವಿತವಾಗಿಸಲಾರದು. ಏಕೆಂದರೆ ಇವೆಲ್ಲವು ಬಂದುಹೋಗುವ ಕ್ಷಣಿಕ ಭಾವಗಳಾಗಿವೆ. ಆಕಾಶವು ಇವೆಲ್ಲದರ ಅಧಿಷ್ಠಾನವಾಗಿದೆ. ಹಾಗೆಯೇ ಸತ್ತ್ವಗುಣ, ರಜೋಗುಣ, ತಮೋಗುಣಗಳ ವೃತ್ತಿಗಳೆಲ್ಲವೂ ಹಾಗೂ ಕರ್ಮ ಗಳೆಲ್ಲವೂ ಅವಿನಾಶೀ ಆತ್ಮನನ್ನು ಸ್ಪರ್ಶಿಸಲಾರವು. ಅವನಾದರೋ ಇವುಗಳಿಂದ ಸರ್ವಥಾ ಅತೀತನಾಗಿದ್ದಾನೆ. ಇವುಗಳಲ್ಲಿ ಅಹಂಕಾರ ಪಡುವ ಜೀವಿಯೇ ಪ್ರಪಂಚದಲ್ಲಿ ಅಲೆಯುತ್ತಿರುತ್ತಾನೆ. ॥ ೨೫ ॥

ತಥಾಪಿ ಸಂಗಃ ಪರಿವರ್ಜನೀಯೋ
ಗುಣೇಷು ಮಾಯಾರಚಿತೇಷು ತಾವತ್ ।
ಮದ್ಭಕ್ತಿಯೋಗೇನ ದೃಢೇನ ಯಾವದ್
ರಜೋ ನಿರಸ್ಯೇತ ಮನಃ ಕಷಾಯಃ ॥ ೨೭ ॥

ಯಥಾಽಽಮಯೋಽಸಾಧುಚಿಕಿತ್ಸಿತೋ ನೃಣಾಂ
ಪುನಃ ಪುನಃ ಸಂತುದತಿ ಪ್ರರೋಹನ್ ।
ಏವಂ ಮನೋಽಪಕ್ವಕಷಾಯಕರ್ಮ
ಕುಯೋಗಿನಂ ವಿಧ್ಯತಿ ಸರ್ವಸಂಗಮ್ ॥ ೨೮ ॥

ಕುಯೋಗಿನೋ ಯೇ ವಿಹಿತಾಂತರಾಯೈ-
ರ್ಮನುಷ್ಯಭೂತೈಸ್ತ್ರಿದಶೋಪಸೃಷ್ಟೈಃ ।
ತೇ ಪ್ರಾಕ್ತನಾಭ್ಯಾಸಬಲೇನ ಭೂಯೋ
ಯುಂಜಂತಿ ಯೋಗಂ ನ ತು ಕರ್ಮತಂತ್ರಮ್ ॥ ೨೯ ॥

ಕರೋತಿ ಕರ್ಮ ಕ್ರಿಯತೇ ಚ ಜಂತುಃ
ಕೇನಾಪ್ಯಸೌ ಚೋದಿತ ಆನಿಪಾತಾತ್ ।
ನ ತತ್ರ ವಿದ್ವಾನ್ಪ್ರಕೃತೌ ಸ್ಥಿತೋಽಪಿ
ನಿವೃತ್ತತೃಷ್ಣಃ ಸ್ವಸುಖಾನುಭೂತ್ಯಾ ॥ ೩೦ ॥

ತಿಷ್ಠಂತಮಾಸೀನಮುತ ವ್ರಜಂತಂ
ಶಯಾನಮುಕ್ಷಂತಮದಂತಮನ್ನಮ್ ।
ಸ್ವಭಾವಮನ್ಯತ್ಕಿಮಪೀಹಮಾನ-
ಮಾತ್ಮಾನಮಾತ್ಮಸ್ಥಮತಿರ್ನ ವೇದ ॥ ೩೧ ॥

ಯದಿ ಸ್ಮ ಪಶ್ಯತ್ಯಸದಿಂದ್ರಿಯಾರ್ಥಂ
ನಾನಾನುಮಾನೇನ ವಿರುದ್ಧಮನ್ಯತ್ ।
ನ ಮನ್ಯತೇ ವಸ್ತುತಯಾ ಮನೀಷೀ
ಸ್ವಾಪ್ನಂ ಯಥೋತ್ಥಾಯ ತಿರೋದಧಾನಮ್ ॥ ೩೨ ॥

ಉದ್ಧವನೇ! ಹೀಗಾದರೂ ಕೂಡ ನನ್ನ ಸುದೃಢ ಭಕ್ತಿಯೋಗದ ಮೂಲಕ ಮನಸ್ಸಿನ ರಜೋಗುಣರೂಪೀ ಮಲವು ಪೂರ್ಣವಾಗಿ ಹೊರಟುಹೋಗುವವರೆಗೆ, ಈ ಮಾಯಾನಿರ್ಮಿತಗುಣಗಳು ಮತ್ತು ಅವುಗಳ ಕಾರ್ಯಗಳ ಸಂಗವನ್ನು ಪೂರ್ಣವಾಗಿ ತ್ಯಜಿಸಿ ಬಿಡಬೇಕು. ॥ ೨೭ ॥ ಉದ್ಧವನೇ! ಚೆನ್ನಾಗಿ ಚಿಕಿತ್ಸೆ ಮಾಡದಿದ್ದಾಗ ರೋಗವು ಸಮೂಲವಾಗಿ ನಾಶವಾಗದೆ, ಅದು ಮೇಲಿಂದ ಮೇಲೆ ಉದ್ರೇಕಗೊಂಡು ಮನುಷ್ಯನನ್ನು ಸತಾಯಿಸುತ್ತಾ ಇರುತ್ತದೆ. ಹಾಗೆಯೇ ಮನಸ್ಸಿನ ವಾಸನೆಗಳು ಮತ್ತು ಕರ್ಮಗಳ ಸಂಸ್ಕಾರಗಳು ಅಳಿದುಹೋಗುವುದಿಲ್ಲವೋ, ಅದು ಪತ್ನೀ-ಪುತ್ರಾದಿಗಳಲ್ಲಿ ಆಸಕ್ತವಾಗಿದೆಯೋ, ಇಂತಹ ಅರ್ಧಂಬರ್ಧ ಯೋಗಿಗೆ ಈ ಕರ್ಮ-ವಾಸನೆಗಳು ಪೀಡಿಸುತ್ತಾ ಇರುತ್ತವೆ. ॥ ೨೮ ॥ ದೇವತೆಗಳ ಮೂಲಕ ಪ್ರೇರಿತನಾಗಿ ಅಥವಾ ಯಾರೇ ಮನುಷ್ಯನು ಒಡ್ಡಿದ ವಿಘ್ನಗಳಿಂದ ಕದಾಚಿತ್ ಯೋಗಿಯು ಯೋಗಭ್ರಷ್ಟನಾಗಿ ಹೋದರೆ, ಅವನು ಪೂರ್ವಾಭ್ಯಾಸದ ಕಾರಣ ಪುನಃ ಯೋಗಾಭ್ಯಾಸದಲ್ಲೇ ತೊಡಗುತ್ತಾನೆ. ಕರ್ಮಾದಿಗಳಲ್ಲಿ ಅವನ ಪ್ರವೃತ್ತಿ ಇರುವುದಿಲ್ಲ. ॥ ೨೯ ॥ ಉದ್ಧವನೇ! ಜೀವಿಯು ಸಂಸ್ಕಾರಾದಿಗಳಿಂದ ಪ್ರೇರಿತನಾಗಿ ಹುಟ್ಟಿನಿಂದ ಸಾಯುವವರೆಗೆ ಕರ್ಮದಲ್ಲೇ ತೊಡಗಿರುತ್ತಾನೆ. ಅವುಗಳಲ್ಲಿ ಇಷ್ಟ-ಅನಿಷ್ಟ ಬುದ್ಧಿಯನ್ನಿರಿಸಿ ಹರ್ಷ-ವಿಷಾದ ಮುಂತಾದ ವಿಕಾರಗಳನ್ನು ಪಡೆಯುತ್ತಾನೆ. ಆದರೆ ತತ್ತ್ವದ ಸಾಕ್ಷಾತ್ಕಾರಮಾಡಿಕೊಂಡವನು ಪ್ರಕೃತಿಯಲ್ಲಿ ಸ್ಥಿತನಾಗಿದ್ದರೂ, ಪೂರ್ವ ಸಂಸ್ಕಾರಾನುಸಾರ ಅವನಿಂದ ಕರ್ಮಗಳು ಆಗುತ್ತಿದ್ದರೂ ಕೂಡ ಹರ್ಷ-ಶೋಕಾದಿ ವಿಕಾರಗಳಿಂದ ಕೂಡಿರುವುದಿಲ್ಲ. ಏಕೆಂದರೆ, ಆನಂದಸ್ವರೂಪೀ ಆತ್ಮನ ಸಾಕ್ಷಾತ್ಕಾರದಿಂದ ಅವನ ಸಂಸಾರಸಂಬಂಧೀ ಎಲ್ಲ ಆಸೆ-ತೃಷ್ಣೆಗಳು ಮೊದಲೇ ನಾಶವಾಗಿ ಹೋಗಿದ್ದವು. ॥ ೩೦ ॥ ತನ್ನ ಸ್ವರೂಪದಲ್ಲಿ ಸ್ಥಿತನಾದವನಿಗೆ – ತನ್ನ ಶರೀರ ನಿಂತಿದೆಯೋ, ಕುಳಿತಿದೆಯೋ, ನಡೆಯುತ್ತಿದೆಯೋ, ಮಲಗಿದೆಯೋ, ಮಲ-ಮೂತ್ರ ವಿಸರ್ಜಿಸುತ್ತಿದೆಯೋ, ಊಟ ಮಾಡುತ್ತಿದೆಯೋ, ಅಥವಾ ಯಾವುದಾದರೂ ಸ್ವಾಭಾವಿಕ ಕರ್ಮಮಾಡುತ್ತಿದೆಯೋ ಎಂಬುದರ ಅರಿವು ಕೂಡ ಇರುವುದಿಲ್ಲ. ಏಕೆಂದರೆ, ಅವನ ವೃತ್ತಿಗಳಾದರೋ ಆತ್ಮಸ್ವರೂಪದಲ್ಲಿ ಸ್ಥಿತವಾಗಿ ಬ್ರಹ್ಮಾಕಾರವಾಗಿರುತ್ತವೆ. ॥ ೩೧ ॥ ಜ್ಞಾನೀ ಪುರುಷನ ದೃಷ್ಟಿಯಲ್ಲಿ ಅಸತ್ತಾದ ಇಂದ್ರಿಯಗಳ ವಿವಿಧ ಬಾಹ್ಯವಿಷಯಗಳು ಬಂದರೂ ಕೂಡ ಅವನು ಅದನ್ನು ತನ್ನ ಆತ್ಮನಿಂದ ಭಿನ್ನವಾಗಿ ತಿಳಿಯುವುದಿಲ್ಲ. ಮತ್ತು ಆತ್ಮನಿಗಿಂತ ಬೇರೆ ಸತ್ತೆಯನ್ನು ಸ್ವೀಕರಿಸುವುದೇ ಇಲ್ಲ. ಏಕೆಂದರೆ ಯುಕ್ತಿಗಳಿಂದ, ಪ್ರಮಾಣಗಳಿಂದ, ಸ್ವಾನುಭೂತಿಯಿಂದ ಅವುಗಳ ಸ್ವತಂತ್ರ ಸತ್ತೆ ಸಿದ್ಧವಾಗುವುದಿಲ್ಲ. ನಿದ್ದೆಯಿಂದ ಎದ್ದಮೇಲೆ ಸ್ವಪ್ನದಲ್ಲಿ ಕಂಡ ಮತ್ತು ಎಚ್ಚರವಾದಾಗ ತಿರೋಹಿತವಾದ ಪದಾರ್ಥಗಳನ್ನು ಯಾರೂ ಸತ್ಯವೆಂದು ತಿಳಿಯುವುದಿಲ್ಲ. ಹಾಗೆಯೇ ಜ್ಞಾನೀ ಪುರುಷನೂ ಕೂಡ ತನ್ನಿಂದ ಭಿನ್ನವಾಗಿ ಕಂಡುಬರುವ ಪದಾರ್ಥಗಳನ್ನು ಸತ್ಯವೆಂದು ತಿಳಿಯುವುದಿಲ್ಲ. ॥ ೩೨ ॥

ಪೂರ್ವಂ ಗೃಹೀತಂ ಗುಣಕರ್ಮಚಿತ್ರ-
ಮಜ್ಞಾನಮಾತ್ಮನ್ಯವಿವಿಕ್ತಮಂಗ ।
ನಿವರ್ತತೇ ತತ್ಪುನರೀಕ್ಷಯೈವ
ನ ಗೃಹ್ಯತೇ ನಾಪಿ ವಿಸೃಜ್ಯ ಆತ್ಮಾ ॥ ೩೩॥

ಯಥಾ ಹಿ ಭಾನೋರುದಯೋ ನೃಚಕ್ಷುಷಾಂ
ತಮೋ ನಿಹನ್ಯಾನ್ನ ತು ಸದ್ವಿಧತ್ತೇ ।
ಏವಂ ಸಮೀಕ್ಷಾ ನಿಪುಣಾ ಸತೀ ಮೇ
ಹನ್ಯಾತ್ತಮಿಸ್ರಂ ಪುರುಷಸ್ಯ ಬುದ್ಧೇಃ ॥ ೩೪ ॥

ಏಷ ಸ್ವಯಂಜ್ಯೋತಿರಜೋಽಪ್ರಮೇಯೋ
ಮಹಾನುಭೂತಿಃ ಸಕಲಾನುಭೂತಿಃ ।
ಏಕೋಽದ್ವಿತೀಯೋ ವಚಸಾಂ ವಿರಾಮೇ
ಯೇನೇಷಿತಾ ವಾಗಸವಶ್ಚರಂತಿ ॥ ೩೫ ॥

ಏತಾವಾನಾತ್ಮಸಂಮೋಹೋ ಯದ್ವಿಕಲ್ಪಸ್ತು ಕೇವಲೇ ।
ಆತ್ಮನ್ನೃತೇ ಸ್ವಮಾತ್ಮಾನಮವಲಂಬೋ ನ ಯಸ್ಯ ಹಿ ॥ ೩೬ ॥

ಯನ್ನಾಮಾಕೃತಿಭಿರ್ಗ್ರಾಹ್ಯಂ ಪಂಚವರ್ಣಮಬಾಧಿತಮ್ ।
ವ್ಯರ್ಥೇನಾಪ್ಯರ್ಥವಾದೋಽಯಂ ದ್ವಯಂ ಪಂಡಿತಮಾನಿನಾಮ್ ॥ ೩೭ ॥

ಯೋಗಿನೋಽಪಕ್ವಯೋಗಸ್ಯ ಯುಂಜತಃ ಕಾಯ ಉತ್ಥಿತೈಃ ।
ಉಪಸರ್ಗೈರ್ವಿಹನ್ಯೇತ ತತ್ರಾಯಂ ವಿಹಿತೋ ವಿಧಿಃ ॥ ೩೮ ॥

ಯೋಗಧಾರಣಯಾ ಕಾಂಶ್ಚಿದಾಸನೈರ್ಧಾರಣಾನ್ವಿತೈಃ ।
ತಪೋಮಂತ್ರೌಷಧೈಃ ಕಾಂಶ್ಚಿದುಪಸರ್ಗಾನ್ವಿನಿರ್ದಹೇತ್ ॥ ೩೯ ॥

ಕಾಂಶ್ಚಿನ್ಮಮಾನುಧ್ಯಾನೇನ ನಾಮಸಂಕೀರ್ತನಾದಿಭಿಃ ।
ಯೋಗೇಶ್ವರಾನುವೃತ್ತ್ಯಾ ವಾ ಹನ್ಯಾದಶುಭದಾನ್ಶನೈಃ ॥ ೪೦ ॥

ಪ್ರಿಯ ಉದ್ಧವನೇ ! ಅನೇಕ ಪ್ರಕಾರದ ಗುಣ, ಕರ್ಮಗಳಿಂದ ಕೂಡಿದ ಈ ದೇಹ, ಇಂದ್ರಿಯಗಳು, ಪದಾರ್ಥ ಮುಂತಾದವುಗಳಲ್ಲಿ ಮೊದಲು ಅಜ್ಞಾನದ ಕಾರಣ ಇವೆಲ್ಲವೂ ಆತ್ಮನಿಂದ ಬೇರೆಯಲ್ಲವೆಂದು ಕಂಡುಬರುತ್ತಿತ್ತು. ಆದರೆ ಜ್ಞಾನದಿಂದ ಅವುಗಳ ನಶ್ವರತೆಯ ಅರಿವು ಉಂಟಾದಾಗ, ಹಾಗೂ ಆ ಭ್ರಮೆಯು ಸಂಪೂರ್ಣ ನಿವೃತ್ತಿ ಆಗಿಹೋದಾಗ, ಅವನ ಜ್ಞಾನದಲ್ಲಿ ಏಕಮಾತ್ರ ಆತ್ಮತತ್ತ್ವವೇ ಇರುತ್ತದೆ. ಅವನು ಸ್ವತಃ ಆತ್ಮಸ್ವರೂಪವೇ ಆಗಿ ಹೋಗುತ್ತಾನೆ. ಈ ಸ್ಥಿತಿಯಲ್ಲಿ ಗ್ರಹಿಸುವುದು, ತ್ಯಜಿಸುವುದು ಏನು ಉಳಿಯುವುದಿಲ್ಲ. ॥ ೩೩ ॥ ಸೂರ್ಯನು ಉದಿಸಿದಾಗ ಮನುಷ್ಯರ ಅಂಧಕಾರವನ್ನು ದೂರಮಾಡುತ್ತಾನೆ. ಅವನು ಯಾವುದೇ ಹೊಸತನ್ನು ನಿರ್ಮಿಸುವುದಿಲ್ಲ. ಅದೇ ರೀತಿ ನನ್ನ ಪೂರ್ಣಜ್ಞಾನವಾದ ಮನುಷ್ಯನ ಬುದ್ಧಿಯ ಅಜ್ಞಾನ ದೂರವಾಗುತ್ತದೆ. ॥ ೩೪ ॥ ಈ ಆತ್ಮನು ಸ್ವಯಂಜ್ಯೋತಿ, ಅಜನ್ಮಾ ಅಪ್ರಮೇಯಸ್ವರೂಪೀ, ಮಹಾನುಭೂತಿ ಸ್ವರೂಪವಾಗಿದೆ. ಎಲ್ಲ ಅನುಭೂತಿಗಳು ಅದರಲ್ಲೇ ಆಗುತ್ತವೆ. ಈ ಆತ್ಮನು ಏಕನಾಗಿದ್ದು, ಅದ್ವಿತೀಯನಾಗಿದ್ದಾನೆ. ವಾಣಿಯ ವಿರಾಮವಾದಮೇಲೆ ಏಕಮಾತ್ರ ಅವನೇ ಉಳಿಯುತ್ತಾನೆ. ಅವನ ಇಚ್ಛೆಯಿಂದಲೇ ವಾಣೀ ಮತ್ತು ಪ್ರಾಣಗಳು ತಮ್ಮ-ತಮ್ಮ ಕಾರ್ಯಮಾಡುತ್ತವೆ. ॥ ೩೫ ॥

ಉದ್ಧವನೇ ! ಅದ್ವಿತೀಯ ಅಖಂಡ ಆತ್ಮತತ್ತ್ವದಲ್ಲಿ ಭೇದ ಭ್ರಮೆಯ ಕಲ್ಪನೆಯೇ ಅಜ್ಞಾನವಾಗಿದೆ. ಜೀವಿಯು ಪ್ರಕೃತಿಯೊಂದಿಗೆ ಅಹಂಭಾವವಿರಿಸಿಯೇ ಭೇದವನ್ನು ಕಲ್ಪಿಸುತ್ತಾನೆ. ಈ ಭ್ರಮೆಯ ಮತ್ತು ಅಜ್ಞಾನದ ಸ್ವತಂತ್ರ ಸತ್ತೆಯೇ ಇಲ್ಲ. ಆದರೆ ಇವು ಕಂಡುಬಂದರೆ ಆತ್ಮನ ಅಧಿಷ್ಠಾನದಿಂದಲೇ ಕಾಣುತ್ತವೆ. ಆದ್ದರಿಂದ ಎಲ್ಲವೂ ಆತ್ಮನೇ ಆಗಿದ್ದಾನೆ. ॥ ೩೬ ॥ ಅನೇಕರು ತಮ್ಮನ್ನು ಪಂಡಿತರೆಂದು ತಿಳಿಯುತ್ತಾರೆ. ಆದರೆ ವಾಸ್ತವವಾಗಿ ಪಂಡಿತರಲ್ಲ. ಇಂತಹ ಜನರು ನಾಮ-ರೂಪ ಮತ್ತು ಇಂದ್ರಿಯಗಳಿಂದ ಗ್ರಹಿಸಲಾಗುವ ಈ ಪಂಚಭೂತಾತ್ಮಕ ದ್ವೈತ ಜಗತ್ತು ಸತ್ಯವಾಗಿದೆ ಎಂದು ಸ್ವೀಕರಿಸುತ್ತಾರೆ. ಆದರೆ ಹೀಗೆ ಹೇಳುವುದು ಅವರ ಶಬ್ದಾಡಂಬರಮಾತ್ರವಾಗಿದೆ. ॥ ೩೭ ॥

ಉದ್ಧವನೇ ! ಯೋಗಸಾಧನೆಯು ಪೂರ್ಣವಾಗುವ ಮೊದಲೇ ಯಾರಾದರೂ ಸಾಧಕನ ಶರೀರವು ರೋಗಾದಿ ಉಪದ್ರವಗಳಿಂದ ಪೀಡಿತವಾದರೆ ಅವನು ಈ ಉಪಾಯಗಳನ್ನು ಆಶ್ರಯಿಸಬೇಕು. ॥ ೩೮ ॥ ಸೆಕೆ-ಚಳಿ ಮುಂತಾದುವನ್ನು ಚಂದ್ರ-ಸೂರ್ಯರನ್ನು ಧಾರಣೆಯ ಮೂಲಕ, ವಾತಾದಿ ರೋಗಗಳನ್ನು ಪ್ರಾಣಾಯಾಮ ಆದಿಯೋಗ ಧಾರಣಾಯುಕ್ತ ಆಸನಗಳ ಮೂಲಕ, ಗ್ರಹ-ಸರ್ಪಾದಿಕೃತ ವಿಘ್ನಗಳನ್ನು ತಪಸ್ಸು, ತಂತ್ರ ಹಾಗೂ ಔಷಧಿಗಳ ಮೂಲಕ ನಾಶಮಾಡಿಬಿಡಬೇಕು. ॥ ೩೯ ॥ ಕಾಮ ಕ್ರೋಧಾದಿ ವಿಘ್ನಗಳನ್ನು ನನ್ನ ಚಿಂತನೆ, ನಾಮಸಂಕೀರ್ತನೆ ಮೊದಲಾದುವುಗಳಿಂದ ನಾಶಮಾಡಬೇಕು. ಪತನದತ್ತ ಕೊಂಡು ಹೋಗುವ ದಂಭ-ಮದ ಮುಂತಾದ ವಿಘ್ನಗಳನ್ನು ನಿಧಾನವಾಗಿ ಮಹಾಪುರುಷರ ಸೇವೆಯಿಂದ ದೂರಗೊಳಿಸ ಬೇಕು. ॥ ೪೦ ॥

ಕೇಚಿದ್ದೇಹಮಿಮಂ ಧೀರಾಃ ಸುಕಲ್ಪಂ ವಯಸಿ ಸ್ಥಿರಮ್ ।
ವಿಧಾಯ ವಿವಿಧೋಪಾಯೈರಥ ಯುಂಜಂತಿ ಸಿದ್ಧಯೇ ॥ ೪೧ ॥

ನಹಿ ತತ್ಕುಶಲಾದೃತ್ಯಂ ತದಾಯಾಸೋ ಹ್ಯಪಾರ್ಥಕಃ ।
ಅಂತವತ್ತ್ವಾಚ್ಛರೀರಸ್ಯ ಫಲಸ್ಯೇವ ವನಸ್ಪತೇಃ ॥ ೪೨ ॥

ಯೋಗಂ ನಿಷೇವತೋ ನಿತ್ಯಂ ಕಾಯಶ್ಚೇತ್ಕಲ್ಪತಾಮಿಯಾತ್ ।
ತಚ್ಛ್ರದ್ದಧ್ಯಾನ್ನ ಮತಿಮಾನ್ ಯೋಗಮುತ್ಸೃಜ್ಯ ಮತ್ಪರಃ ॥ ೪೩ ॥

ಯೋಗಚರ್ಯಾಮಿಮಾಂ ಯೋಗೀ ವಿಚರನ್ಮದಪಾಶ್ರಯಃ ।
ನಾಂತರಾಯೈರ್ವಿಹನ್ಯೇತ ನಿಃಸ್ಪೃಹಃ ಸ್ವಸುಖಾನುಭೂಃ ॥ ೪೪ ॥

ಕೆಲ-ಕೆಲವು ಮನಸ್ವೀ ಯೋಗಿಗಳು ವಿವಿಧ ಉಪಾಯಗಳಿಂದ ಈ ಶರೀರವನ್ನು ಸುದೃಢ ಮತ್ತು ತರುಣವಾಗಿಯೇ ಸ್ಥಿರಗೊಳಿಸಿ ಮತ್ತೆ ಅಣಿಮಾದಿ ಸಿದ್ಧಿಗಳಿಗಾಗಿ ಯೋಗಸಾಧನೆಮಾಡುತ್ತಾರೆ. ಆದರೆ ಬುದ್ಧಿವಂತರಾದವರು ಇಂತಹ ವಿಚಾರವನ್ನು ಸಮರ್ಥಿಸುವುದಿಲ್ಲ. ಏಕೆಂದರೆ ಇದಾದರೋ ಒಂದು ವ್ಯರ್ಥ ಪ್ರಯಾಸವೇ ಆಗಿದೆ. ವೃಕ್ಷಗಳಲ್ಲಿ ಬಿಟ್ಟ ಫಲದಂತೆಯೇ ಈ ಶರೀರದ ನಾಶವು ಅವಶ್ಯಂಭಾವಿಯಾಗಿದೆ. ॥ ೪೧-೪೨ ॥ ಒಂದೊಮ್ಮೆ ಬಹಳ ದಿನಗಳವರೆಗೆ ನಿರಂತರ, ಆದರಪೂರ್ವಕವಾಗಿ ಯೋಗಸಾಧನೆ ಮಾಡುತ್ತಿರುವಾಗ ಶರೀರವು ಸುದೃಢವೂ ಆಗಬಹುದು. ಆಗಲೂ ಬುದ್ಧಿವಂತರಾದವರು ತಮ್ಮ ಸಾಧನೆಯನ್ನು ಬಿಟ್ಟು ಅದರಲ್ಲೇ ಸಂತೋಷಪಡಬಾರದು. ಅವರಾದರೋ ಸದಾಕಾಲವೂ ನನ್ನ ಪ್ರಾಪ್ತಿಗಾಗಿಯೇ ತೊಡಗಿರಬೇಕು. ॥ ೪೩ ॥ ನನ್ನನ್ನು ಆಶ್ರಯಿಸಿ, ನನ್ನಿಂದ ಹೇಳಲ್ಪಟ್ಟ ಯೋಗಸಾಧನೆಯಲ್ಲಿ ತೊಡಗಿರುವ ಸಾಧಕನಿಗೆ ಯಾವುದೇ ವಿಘ್ನಗಳು ಕದಲಿಸಲಾರವು. ಅವನ ಕಾಮನೆಗಳೆಲ್ಲ ನಾಶವಾಗಿ ಹೋಗುತ್ತವೆ ಮತ್ತು ಅವನು ಆತ್ಮಾನಂದದ ಅನುಭೂತಿಯಲ್ಲಿ ಮುಳುಗಿಹೋಗುತ್ತಾನೆ. ॥ ೪೪ ॥

ಇಪ್ಪತ್ತೆಂಟನೆಯ ಅಧ್ಯಾಯವು ಮುಗಿಯಿತು. ॥ ೨೮ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಏಕಾದಶಸ್ಕಂಧೇ ಅಷ್ಟಾವಿಂಶೋಽಧ್ಯಾಯಃ ॥ ೨೮ ॥

ಇಪ್ಪತ್ತೊಂಭತ್ತನೆಯ ಅಧ್ಯಾಯ

ಭಾಗವತಧರ್ಮಗಳ ನಿರೂಪಣೆ ಮತ್ತು ಉದ್ಧವನು ಬದರಿಕಾಶ್ರಮಕ್ಕೆ ಹೋದುದು

ಉದ್ಧವ ಉವಾಚ

ಸುದುಶ್ಚರಾಮಿಮಾಂ ಮನ್ಯೇ ಯೋಗಚರ್ಯಾಮನಾತ್ಮನಃ ।
ಯಥಾಂಜಸಾ ಪುಮಾನ್ ಸಿದ್ಧ್ಯೇತ್ ತನ್ಮೇ ಬ್ರೂಹ್ಯಂಜಸಾಚ್ಯುತ ॥ ೧ ॥

ಪ್ರಾಯಶಃ ಪುಂಡರೀಕಾಕ್ಷ ಯುಂಜಂತೋ ಯೋಗಿನೋ ಮನಃ ।
ವಿಷೀದಂತ್ಯಸಮಾಧಾನಾನ್ ಮನೋನಿಗ್ರಹಕರ್ಶಿತಾಃ ॥ ೨ ॥

ಉದ್ಧವನು ಕೇಳಿದನು – ಅಚ್ಯುತಾ ! ತನ್ನ ಮನಸ್ಸನ್ನು ವಶಪಡಿಸಿಕೊಳ್ಳಲಾರದವನಿಗೆ ನೀನು ಅರುಹಿದ ಈ ಯೋಗಸಾಧನೆಯು ಬಹಳ ಕಠಿಣವೆಂದೇ ನಾನು ತಿಳಿಯುತ್ತೇನೆ. ಆದ್ದರಿಂದ ಈಗ ನೀನು – ಮನುಷ್ಯನು ಆಯಾಸವಿಲ್ಲದೆ ಪರಮಪದವನ್ನು ಪಡೆಯುವಂತಹ ಸರಳ-ಸುಲಭ ಸಾಧನೆಯನ್ನು ತಿಳಿಸುವವನಾಗು. ॥ ೧ ॥ ಕಮಲನಯನಾ ! ನಿನ್ನನ್ನು ಪಡೆಯುವುದಕ್ಕಾಗಿ ಹೆಚ್ಚಿನ ಯೋಗಿಗಳು ತಮ್ಮ ಮನಸ್ಸನ್ನು ಏಕಾಗ್ರಮಾಡಲು ತೊಡಗಿದಾಗ, ಅವರು ಪದೇ-ಪದೇ ಪ್ರಯತ್ನಮಾಡಿದರೂ ಮನಸ್ಸನ್ನು ವಶಪಡಿಸಲು ಸಫಲರಾಗುವುದಿಲ್ಲ, ಕೊನೆಗೆ ಸೋತು ಹೋಗುತ್ತಾರೆ. ಈ ಪ್ರಕಾರ ನಿನ್ನ ಪ್ರಾಪ್ತಿಯನ್ನು ಮಾಡಿಕೊಳ್ಳದ ಕಾರಣ ದುಃಖವನ್ನು ಭೋಗಿಸುತ್ತಾ ಇರುತ್ತಾರೆ. ಇದು ನಿನಗೆ ತಿಳಿದೇ ಇದೆ. ಇಂತಹ ದುಃಖಗಳಿಂದ ಮುಕ್ತವಾಗಲು ಯಾವ ಉಪಾಯವಿದೆ ? ಎಂಬುದನ್ನು ತಿಳಿಸುವ ಕೃಪೆ ಮಾಡಬೇಕು. ॥ ೨ ॥ ಓ ಕಮಲನಯನಾ ! ಓ ವಿಶ್ವೇಶ್ವರಾ ! ನಿನ್ನ ಚರಣ

ಅಥಾತ ಆನಂದದುಘಂ ಪದಾಂಬುಜಂ
ಹಂಸಾಃ ಶ್ರಯೇರನ್ನರವಿಂದಲೋಚನ ।
ಸುಖಂ ನು ವಿಶ್ವೇಶ್ವರ ಯೋಗಕರ್ಮಭಿ-
ಸ್ತ್ವನ್ಮಾಯಯಾಮೀ ವಿಹತಾ ನ ಮಾನಿನಃ ॥ ೩ ॥

ಕಿಂ ಚಿತ್ರಮಚ್ಯುತ ತವೈತದಶೇಷಬಂಧೋ
ದಾಸೇಷ್ವನನ್ಯಶರಣೇಷು ಯದಾತ್ಮಸಾತ್ತ್ವಮ್ ।
ಯೋಽರೋಚಯತ್ಸಹ ಮೃಗೈಃ ಸ್ವಯಮೀಶ್ವರಾಣಾಂ
ಶ್ರೀಮತ್ಕಿರೀಟತಟಪೀಡಿತಪಾದಪೀಠಃ ॥ ೪ ॥

ತಂ ತ್ವಾಖಿಲಾತ್ಮದಯಿತೇಶ್ವರಮಾಶ್ರಿತಾನಾಂ
ಸರ್ವಾರ್ಥದಂ ಸ್ವಕೃತವಿದ್ವಿಸೃಜೇತ ಕೋ ನು ।
ಕೋ ವಾ ಭಜೇತ್ಕಿಮಪಿ ವಿಸ್ಮೃತಯೇಽನು ಭೂತ್ಯೈ
ಕಿಂ ವಾ ಭವೇನ್ನ ತವ ಪಾದರಜೋಜುಷಾಂ ನಃ ॥ ೫ ॥

ನೈವೋಪಯಂತ್ಯಪಚಿತಿಂ ಕವಯಸ್ತವೇಶ
ಬ್ರಹ್ಮಾಯುಷಾಪಿ ಕೃತಮೃದ್ಧಮುದಃ ಸ್ಮರಂತಃ ।
ಯೋಽಂತರ್ಬಹಿಸ್ತನುಭೃತಾಮಶುಭಂ ವಿಧುನ್ವ-
ನ್ನಾಚಾರ್ಯಚೈತ್ಯವಪುಷಾ ಸ್ವಗತಿಂ ವ್ಯನಕ್ತಿ ॥ ೬ ॥

ಶ್ರೀಶುಕ ಉವಾಚ

ಇತ್ಯುದ್ಧವೇನಾತ್ಯನುರಕ್ತಚೇತಸಾ
ಪೃಷ್ಟೋ ಜಗತ್ಕ್ರೀಡನಕಃ ಸ್ವಶಕ್ತಿಭಿಃ ।
ಗೃಹೀತಮೂರ್ತಿತ್ರಯ ಈಶ್ವರೇಶ್ವರೋ
ಜಗಾದ ಸಪ್ರೇಮ ಮನೋಹರಸ್ಮಿತಃ ॥ ೭ ॥

ಕಮಲಗಳು ಆನಂದವನ್ನು ವರ್ಷಿಸುವಂತಹವುಗಳು. ನಿನ್ನ ಅನನ್ಯ ಪ್ರೇಮೀ ಭಕ್ತರು ಆನಂದದಿಂದ ಈ ಚರಣಕಮಲಗಳಲ್ಲಿ ಶರಣಾಗುತ್ತಾರೆ. ಆದರೆ ನಿನ್ನ ಮಾಯೆಯಿಂದ ಮಣ್ಣುಗೂಡಿದ ಬುದ್ಧಿಯುಳ್ಳ ಜನರು ಯೋಗ ಮತ್ತು ಕರ್ಮಗಳಿಂದ ತಮ್ಮನ್ನು ಶ್ರೇಷ್ಠರೆಂದು ತಿಳಿದುಕೊಂಡು ಇವನ್ನು ಆಶ್ರಯಿಸುವುದಿಲ್ಲ. ॥ ೩ ॥ ಓ ಅಚ್ಯುತಾ ! ನೀನು ಸರ್ವಜಗತ್ತಿನ ಹಿತೈಷಿ, ಸುಹೃದನಾಗಿರುವೆ. ನೀನು ನಿನ್ನ ಅನನ್ಯ ಶರಣಾಗತ ಭಕ್ತರನ್ನು ಆತ್ಮಸಾತ್ ಮಾಡಿಕೊಳ್ಳುವೆ. ಅವರಿಗೆ ನಿನ್ನ ಸ್ವರೂಪವನ್ನೇ ಕೊಟ್ಟುಬಿಡುವೆ. ಎಲ್ಲಿಯವರೆಗೆಂದರೆ – ತೊಂಡರಿಗೆ ತೊಂಡನಾಗುವೆ. (ಬಲಿಯ ಭಕ್ತಿಗೊಲಿದು ಅವನ ದ್ವಾರಪಾಲನಾದೆ, ನರಸಿಂಹ ಮಹತಾಗೆ ನೀನು ಏನೇನು ಮಾಡಲಿಲ್ಲ? ಇತ್ಯಾದಿ) ನೀನು ಎಲ್ಲ ಲೋಕಪಾಲರ ಅಧೀಶ್ವರನಾಗಿರುವೆ. ಬ್ರಹ್ಮಾದಿ ಲೋಕೇಶ್ವರರು ಸದಾಕಾಲ ನಿನಗೆ ಭಕ್ತಿಪೂರ್ವಕ ನಮಸ್ಕರಿಸುತ್ತಿರುತ್ತಾರೆ. ಅವರು ನಿನ್ನ ಚರಣಕಮಲಗಳನ್ನಿಡುವ ಪೀಠಕ್ಕೆ ತಮ್ಮ ಕಿರೀಟಾಗ್ರದಿಂದ ಶ್ರದ್ಧಾ ಪ್ರೇಮಸಹಿತ ಸಾಷ್ಟಾಂಗ ನಮಸ್ಕಾರ ಸಲ್ಲಿಸುತ್ತಾರೆ. ಇಷ್ಟು ಮಹಿಮಾಯುಕ್ತನಾಗಿದ್ದರೂ ನೀನು ರಾಮಾವತಾರದಲ್ಲಿ ಪ್ರೇಮಕ್ಕೆ ಪರವಶನಾಗಿ ವಾನರರೊಂದಿಗೆ ಮಿತ್ರತೆಯಿಂದ ವ್ಯವಹರಿಸಿದೆ. ಇದೇನೋ ನಿನಗಾಗಿ ಆಶ್ಚರ್ಯದ ಮಾತಲ್ಲ, ಏಕೆಂದರೆ ನಿನಗಾದರೋ ಭಕ್ತಿಯೇ ಪ್ರಿಯವಾಗಿದೆ. ॥ ೪ ॥ ಓ ಸ್ವಾಮಿ ! ನೀನು ಎಲ್ಲರ ಪ್ರಿಯತಮ ಪ್ರಭು ಮತ್ತು ಆತ್ಮಾ ಆಗಿರುವೆ. ನೀನು ನಿನ್ನ ಅನನ್ಯ ಶರಣಾಗತರಿಗೆ ಎಲ್ಲವನ್ನೂ ಕೊಟ್ಟುಬಿಡುವೆ. ನೀನು ನಿನ್ನ ಭಕ್ತರಿಗಾಗಿ ಏನೇನು ಅದ್ಭುತಕಾರ್ಯ ಮಾಡಿರುವೆಯೋ, ಅವನ್ನು ತಿಳಿದಿರುವವರು ಯಾವುದೇ ಭೌತಿಕ ಸುಖಕ್ಕಾಗಿ ಯಾರು ನಿನ್ನ ಉಪಾಸನೆ ಮಾಡುವರು ? ಏಕೆಂದರೆ, ಈ ಭೌತಿಕ ಸುಖಗಳಾದರೋ ನಿನ್ನ ವಿಸ್ಮೃತಿಯಲ್ಲಿ ಕೆಡಹುವಂತಹವುಗಳು. ನಾವಾದರೋ ನಿನ್ನ ಚರಣಕಮಲ ರಜದ ಅನನ್ಯ ಉಪಾಸಕರಾಗಿದ್ದೇವೆ. ಆದ್ದರಿಂದ ನಮಗಾಗಿ ದುರ್ಲಭವೇನಿದೆ ? ॥ ೫ ॥ ಓ ಜಗದೀಶಾ ! ನೀನು ಮಾಡಿರುವ ಉಪಕಾರಗಳೂ ಪದೇ-ಪದೇ ನಮ್ಮ ಮನಸ್ಸಿನಲ್ಲಿ ಸ್ಮರಣೆಗೆ ಬರುತ್ತವೆ. ಈ ದೇವದುರ್ಲಭವಾದ ಮನುಷ್ಯಶರೀರವು ಕೇವಲ ನಿನ್ನ ಕೃಪೆಯಿಂದಲೇ ದೊರೆತಿದೆ. ನಿನ್ನ ಈ ಅಪಾರ ಅನುಕಂಪವನ್ನು ಮೇಲಿಂದಮೇಲೆ ನೆನೆಯುತ್ತಿರುವಾಗ ನಮ್ಮ ಹೃದಯದಲ್ಲಿ ಪರಮಾನಂದದ ನೆರೆಯೇ ಬರುತ್ತದೆ. ನಿನ್ನ ಕೃಪೆಯು ಊಹಿಸಲೂ ಸಾಧ್ಯವಾಗದಷ್ಟು ಅಪಾರವಾಗಿದೆ. ಒಂದೊಮ್ಮೆ ಬ್ರಹ್ಮನ ಆಯುಸ್ಸೇ ಸಿಕ್ಕಿದರೂ ನಾವು ನಿನ್ನ ಉಪಕಾರದ ಋಣವನ್ನು ತೀರಿಸಲಾರೆವು. ಮನುಷ್ಯನ ಹೊರಗೆ-ಒಳಗೆ ಇರುವ ಅಶುಭಗಳನ್ನು ನಿರ್ಮೂಲನಗೊಳಿಸಲು ಹೊರಗಿನಿಂದ ಸದ್ಗುರುರೂಪದಿಂದ ನೀನೇ ಜ್ಞಾನೋಪದೇಶವನ್ನು ಕೊಡುತ್ತಿರುವೆ. ಅಂತರ್ಯಾಮಿಯಾಗಿ ಅಂತರಾತ್ಮರೂಪದಿಂದ ಪ್ರಕಟನಾಗಿ ಅಜ್ಞಾನವನ್ನೂ ನೀನೇ ಕಳೆಯುವೆ. ॥ ೬ ॥

ಶ್ರೀಶುಕಯೋಗಿಗಳು ಹೇಳುತ್ತಾರೆ – ಪರೀಕ್ಷಿತನೇ ! ಭಗವಾನ್ ಶ್ರೀಕೃಷ್ಣನು ಬ್ರಹ್ಮಾದಿದೇವತೆಗಳಿಗೂ ಒಡೆಯನಾಗಿದ್ದಾನೆ. ಅವನೇ ತನ್ನ ಶಕ್ತಿಯಾದ ತ್ರಿಗುಣಗಳಿಂದ ಬ್ರಹ್ಮಾ ವಿಷ್ಣು ಮಹೇಶ್ವರ

ಶ್ರೀಭಗವಾನುವಾಚ

ಹಂತ ತೇ ಕಥಯಿಷ್ಯಾಮಿ ಮಮ ಧರ್ಮಾನ್ ಸುಮಂಗಲಾನ್ ।
ಯಾನ್ ಶ್ರದ್ಧಯಾಽಽಚರನ್ಮರ್ತ್ಯೋ ಮೃತ್ಯುಂ ಜಯತಿ ದುರ್ಜಯಮ್ ॥ ೮ ॥

ಕುರ್ಯಾತ್ ಸರ್ವಾಣಿ ಕರ್ಮಾಣಿ ಮದರ್ಥಂ ಶನಕೈಃ ಸ್ಮರನ್ ।
ಮಯ್ಯರ್ಪಿತಮನಶ್ಚಿತ್ತೋ ಮದ್ಧರ್ಮಾತ್ಮಮನೋರತಿಃ ॥ ೯ ॥

ದೇಶಾನ್ಪುಣ್ಯಾನಾಶ್ರಯೇತ ಮದ್ಭಕ್ತೈಃ ಸಾಧುಭಿಃ ಶ್ರಿತಾನ್ ।
ದೇವಾಸುರಮನುಷ್ಯೇಷು ಮದ್ಭಕ್ತಾಚರಿತಾನಿ ಚ ॥ ೧೦ ॥

ಪೃಥಕ್ ಸತ್ರೇಣ ವಾ ಮಹ್ಯಂ ಪರ್ವಯಾತ್ರಾಮಹೋತ್ಸವಾನ್ ।
ಕಾರಯೇದ್ಗೀತನೃತ್ಯಾದ್ಯೈರ್ಮಹಾರಾಜವಿಭೂತಿಭಿಃ ॥ ೧೧ ॥

ಮಾಮೇವ ಸರ್ವಭೂತೇಷು ಬಹಿರಂತರಪಾವೃತಮ್ ।
ಈಕ್ಷೇತಾತ್ಮನಿ ಚಾತ್ಮಾನಂ ಯಥಾ ಖಮಮಲಾಶಯಃ ॥ ೧೨ ॥

ಇತಿ ಸರ್ವಾಣಿ ಭೂತಾನಿ ಮದ್ಭಾವೇನ ಮಹಾದ್ಯುತೇ ।
ಸಭಾಜಯನ್ಮನ್ಯಮಾನೋ ಜ್ಞಾನಂ ಕೇವಲಮಾಶ್ರಿತಃ ॥ ೧೩ ॥

ಬ್ರಾಹ್ಮಣೇ ಪುಲ್ಕಸೇ ಸ್ತೇನೇ ಬ್ರಹ್ಮಣ್ಯೇಽರ್ಕೇ ಸ್ಫುಲಿಂಗಕೇ ।
ಅಕ್ರೂರೇ ಕ್ರೂರಕೇ ಚೈವ ಸಮದೃಕ್ ಪಂಡಿತೋ ಮತಃ ॥ ೧೪ ॥

ನರೇಷ್ವಭೀಕ್ಷ್ಣಂ ಮದ್ಭಾವಂ ಪುಂಸೋ ಭಾವಯತೋಽಚಿರಾತ್ ।
ಸ್ಪರ್ಧಾಸೂಯಾತಿರಸ್ಕಾರಾಃ ಸಾಹಂಕಾರಾ ವಿಯಂತಿ ಹಿ ॥ ೧೫ ॥

ವಿಸೃಜ್ಯ ಸ್ಮಯಮಾನಾನ್ ಸ್ವಾನ್ ದೃಶಂ ವ್ರೀಡಾಂ ಚ ದೈಹಿಕೀಮ್ ।
ಪ್ರಣಮೇದ್ದಂಡವದ್ಭೂಮಾವಾಶ್ವಚಾಂಡಾಲಗೋಖರಮ್ ॥ ೧೬ ॥

ರೂಪಗಳನ್ನು ಧರಿಸುತ್ತಾನೆ. ಈ ಜಗತ್ತು ಅವನ ಆಟ (ಲೀಲೆ) ಯಾಗಿದೆ. ಉದ್ಧವನು ಅನುರಾಗತುಂಬಿದ ಚಿತ್ತದಿಂದ ಹೀಗೆ ಪ್ರಶ್ನಿಸಿದಾಗ ಆವನು ಮಂದ-ಮಂದವಾಗಿ ಮುಗುಳ್ನಕ್ಕು ಬಹು ಪ್ರೇಮದಿಂದ ಹೇಳಲು ಪ್ರಾರಂಭಿಸಿದನು – ॥ ೭ ॥

ಶ್ರೀಭಗವಂತನು ಹೇಳಿದನು – ಪ್ರಿಯ ಉದ್ಧವನೇ! ನಿನ್ನ ಅನುರಾಗತುಂಬಿದ ವಾಣಿಯಿಂದ ನನಗೆ ತುಂಬಾ ಆನಂದ ವಾಯಿತು. ನಾನು ನಿನಗೆ ನನ್ನ ಮಂಗಲಮಯ ಭಾಗವತಧರ್ಮಗಳನ್ನು ಅರುಹುವೆನು. ಇವನ್ನು ಶ್ರದ್ಧೆಯಿಂದ ಆಚರಿಸಿದ ಮನುಷ್ಯನು ಸಂಸಾರರೂಪೀ ದುರ್ಜಯ ಮೃತ್ಯುವನ್ನು ಆಯಾಸ ವಿಲ್ಲದೆ ಗೆಲ್ಲಬಲ್ಲನು. ॥ ೮ ॥ ಉದ್ಧವನೇ! ನನ್ನ ಭಕ್ತನು ತನ್ನ ಎಲ್ಲ ಕರ್ಮಗಳನ್ನು ನನಗಾಗಿಯೇ ಮಾಡಬೇಕು. ಅವನ್ನು ಮಾಡುತ್ತಿರುವಾಗ ನನ್ನ ಸ್ಮರಣೆಯ ಅಭ್ಯಾಸವನ್ನು ಕ್ರಮವಾಗಿ ಬೆಳೆಸಬೇಕು. ಕೆಲವೇ ದಿನಗಳಲ್ಲಿ ಅವನ ಮನಸ್ಸು-ಚಿತ್ತಗಳು ನನ್ನಲ್ಲಿ ಸಮರ್ಪಿತವಾಗುತ್ತವೆ. ಅವನ ಮನ ಆತ್ಮಗಳು ನನ್ನ ಧರ್ಮದಲ್ಲೇ ರಮಿಸಿ ಹೋಗುವವು. ॥ ೯ ॥ ನನ್ನ ಸಾಧುಭಕ್ತರು ವಾಸಿಸಿದ ಸ್ಥಾನಗಳಲ್ಲಿ ವಾಸಮಾಡಬೇಕು. ನನ್ನ ಅನನ್ಯ ಭಕ್ತರಾದ ದೇವತೆಗಳು, ಅಸುರರು, ಮನುಷ್ಯರು ಆಚರಿಸಿದ ಆಚರಣೆಗಳನ್ನು ಅನುಸರಿಸಬೇಕು. ॥ ೧೦ ॥ ಪರ್ವದಿನಗಳಲ್ಲಿ (ರಾಮನವಮಿ, ಕೃಷ್ಣಾಷ್ಟಮಿ) ಎಲ್ಲರೊಂದಿಗೆ ಸೇರಿ ಅಥವಾ ಒಂಟಿಯಾಗಿ ಮಹಾರಾಜೋಚಿತ ವೈಭವದಿಂದ ನೃತ್ಯ, ಗಾಯನ, ವಾದ್ಯ ಮುಂತಾದವುಗಳಿಂದ ನನ್ನ ಉತ್ಸವಗಳನ್ನು ನಡೆಸಬೇಕು. ॥ ೧೧ ॥ ಶುದ್ಧಾಂತಃಕರಣರಾದವರು ಆಕಾಶದಂತೆ ಒಳ-ಹೊರಗೆ ಪರಿಪೂರ್ಣ ಮತ್ತು ನಿರಾವರಣ ಪರಮಾತ್ಮನಾದ ನನ್ನನ್ನೇ ಸಮಸ್ತ ಪ್ರಾಣಿಗಳಲ್ಲಿ ಹಾಗೂ ತನ್ನ ಹೃದಯದಲ್ಲಿ ಸ್ಥಿತನಾಗಿದ್ದಾನೆ ಎಂದು ನೋಡಬೇಕು. ॥ ೧೨ ॥ ನಿರ್ಮಲ ಬುದ್ಧಿಯುಳ್ಳ ಉದ್ಧವನೇ! ಯಾವ ಸಾಧಕನು ಕೇವಲ ಈ ಜ್ಞಾನದೃಷ್ಟಿಯನ್ನು ಆಶ್ರಯಿಸಿ ಸಮಸ್ತ ಪ್ರಾಣಿ-ಪದಾರ್ಥಗಳಲ್ಲಿ ನನ್ನನ್ನು ದರ್ಶಿಸುತ್ತಾನೋ, ಅವನ್ನು ನನ್ನದೇ ಸ್ವರೂಪವೆಂದು ತಿಳಿದು ಅವುಗಳನ್ನು ಸತ್ಕರಿಸುತ್ತಾನೋ, ಬ್ರಾಹ್ಮಣ ಮತ್ತು ಚಾಂಡಾಲನಲ್ಲಿ, ಕಳ್ಳ ಹಾಗೂ ಬ್ರಾಹ್ಮಣ-ಭಕ್ತರಲ್ಲಿ, ಸೂರ್ಯ ಮತ್ತು ಬೆಂಕಿಯ ಕಿಡಿಯಲ್ಲಿ, ಕೃಪಾಳು ಹಾಗೂ ಕ್ರೂರನಲ್ಲಿ ಸರ್ವತ್ರ ಸಮಾನದೃಷ್ಟಿಯನ್ನು ಇರಿಸುತ್ತಾನೋ, ಅವನೇ ನಿಜವಾದ ಜ್ಞಾನಿ ಎಂದು ತಿಳಿಯಬೇಕು. ॥ ೧೩-೧೪ ॥ ಹೀಗೆ ನಿರಂತರ ಎಲ್ಲ ನರ-ನಾರಿಯರಲ್ಲಿ ನನ್ನ ಭಾವನೆಯನ್ನೇ ಇರಿಸಿದಾಗ ಸ್ವಲ್ಪ ದಿನಗಳಲ್ಲೇ ಸಾಧಕನ ಚಿತ್ತದಿಂದ ಸ್ಪರ್ಧೆ, ಈರ್ಷೆ, ತಿರಸ್ಕಾರ, ಅಹಂಕಾರ ಮುಂತಾದ ದೋಷಗಳು ದೂರವಾಗುತ್ತವೆ. ॥ ೧೫ ॥ ತನ್ನ ಜನರೇ ಅಪಹಾಸ್ಯಮಾಡಿದರೂ ಅದನ್ನು ಪರಿಗಣಿಸಬಾರದು. ಲೋಕ-ಲಜ್ಜೆಯನ್ನು ಬಿಟ್ಟು ನಾಯಿ, ಚಾಂಡಾಲ, ಹಸು, ಕತ್ತೆ ಹಾಗೂ ತನ್ನಲ್ಲಿಯೂ ಕೂಡ ದೈಹಿಕದೃಷ್ಟಿಯನ್ನು ತೊರೆದು ಎಲ್ಲದರಲ್ಲಿ ಓರ್ವ ಪರಮಾತ್ಮನೇ ವಿರಾಜಮಾನನಾಗಿದ್ದಾನೆ ಎಂಬ ಭಾವನೆಯಿಂದ ಎಲ್ಲರಿಗೆ ಸಾಷ್ಟಾಂಗ ನಮಸ್ಕಾರ ಮಾಡಬೇಕು. ॥ ೧೬ ॥ ಸಮಸ್ತ ಪ್ರಾಣಿಗಳಲ್ಲಿ ನನ್ನ ಭಾವನೆ-

ಯಾವತ್ಸರ್ವೇಷು ಭೂತೇಷು ಮದ್ಭಾವೋ ನೋಪಜಾಯತೇ ।
ತಾವದೇವಮುಪಾಸೀತ ವಾಙ್ಮನಃಕಾಯವೃತ್ತಿಭಿಃ ॥ ೧೭ ॥

ಸರ್ವಂ ಬ್ರಹ್ಮಾತ್ಮಕಂ ತಸ್ಯ ವಿದ್ಯಯಾಽಽತ್ಮಮನೀಷಯಾ ।
ಪರಿಪಶ್ಯನ್ನುಪರಮೇತ್ಸರ್ವತೋ ಮುಕ್ತಸಂಶಯಃ ॥ ೧೮ ॥

ಅಯಂ ಹಿ ಸರ್ವಕಲ್ಪಾನಾಂ ಸಧ್ರೀಚೀನೋ ಮತೋ ಮಮ ।
ಮದ್ಭಾವಃ ಸರ್ವಭೂತೇಷು ಮನೋವಾಕ್ಕಾಯವೃತ್ತಿಭಿಃ ॥ ೧೯ ॥

ನ ಹ್ಯಂಗೋಪಕ್ರಮೇ ಧ್ವಂಸೋ ಮದ್ಧರ್ಮಸ್ಯೋದ್ಧವಾಣ್ವಪಿ ।
ಮಯಾ ವ್ಯವಸಿತಃ ಸಮ್ಯಙ್‌ನಿರ್ಗುಣತ್ವಾದನಾಶಿಷಃ ॥ ೨೦ ॥

ಯೋ ಯೋ ಮಯಿ ಪರೇ ಧರ್ಮಃ ಕಲ್ಪ್ಯತೇ ನಿಷ್ಫಲಾಯ ಚೇತ್ ।
ತದಾಯಾಸೋ ನಿರರ್ಥಃ ಸ್ಯಾದ್ ಭಯಾದೇರಿವ ಸತ್ತಮ ॥ ೨೧ ॥

ಏಷಾ ಬುದ್ಧಿಮತಾಂ ಬುದ್ಧಿರ್ಮನೀಷಾ ಚ ಮನೀಷಿಣಾಮ್ ।
ಯತ್ಸತ್ಯಮನೃತೇನೇಹ ಮರ್ತ್ಯೇನಾಪ್ನೋತಿ ಮಾಮೃತಮ್ ॥ ೨೨ ॥

ಏಷ ತೇಽಭಿಹಿತಃ ಕೃತ್ಸ್ನೋ ಬ್ರಹ್ಮವಾದಸ್ಯ ಸಂಗ್ರಹಃ ।
ಸಮಾಸವ್ಯಾಸವಿಧಿನಾ ದೇವಾನಾಮಪಿ ದುರ್ಗಮಃ ॥ ೨೩ ॥

ಅಭೀಕ್ಷ್ಣಶಸ್ತೇ ಗದಿತಂ ಜ್ಞಾನಂ ವಿಸ್ಪಷ್ಟಯುಕ್ತಿಮತ್ ।
ಏತದ್ವಿಜ್ಞಾಯ ಮುಚ್ಯೇತ ಪುರುಷೋ ನಷ್ಟಸಂಶಯಃ ॥ ೨೪ ॥

ಸುವಿವಿಕ್ತಂ ತವ ಪ್ರಶ್ನಂ ಮಯ್ಯೈತದಪಿ ಧಾರಯೇತ್ ।
ಸನಾತನಂ ಬ್ರಹ್ಮಗುಹ್ಯಂ ಪರಂ ಬ್ರಹ್ಮಾಧಿಗಚ್ಛತಿ ॥ ೨೫ ॥

ಯ ಏತನ್ಮಮ ಭಕ್ತೇಷು ಸಂಪ್ರದದ್ಯಾತ್ಸುಪುಷ್ಕಲಮ್ ।
ತಸ್ಯಾಹಂ ಬ್ರಹ್ಮದಾಯಸ್ಯ ದದಾಮ್ಯಾತ್ಮಾನಮಾತ್ಮನಾ ॥ ೨೬ ॥

ಯ ಏತತ್ಸಮಧೀಯೀತ ಪವಿತ್ರಂ ಪರಮಂ ಶುಚಿ ।
ಸ ಪೂಯೇತಾಹರಹರ್ಮಾಂ ಜ್ಞಾನದೀಪೇನ ದರ್ಶಯನ್ ॥ ೨೭ ॥

ಭಗವದ್ಭಾವನೆ ಉಂಟಾಗುವ ತನಕ ಈ ಪ್ರಕಾರದಿಂದ ಮನಸ್ಸು, ವಾಣೀ, ಶರೀರದ ಎಲ್ಲ ಸಂಕಲ್ಪ ಮತ್ತು ಕರ್ಮಗಳ ಮೂಲಕ ನನ್ನ ಉಪಾಸನೆಮಾಡುತ್ತಾ ಇರಬೇಕು. ॥ ೧೭ ॥ ಉದ್ಧವನೇ! ಈ ಪ್ರಕಾರ ಸರ್ವತ್ರ ಆತ್ಮಬುದ್ಧಿ-ಬ್ರಹ್ಮಬುದ್ಧಿಯ ಅಭ್ಯಾಸ ಮಾಡಿದಾಗ ಕೆಲವೇ ದಿನಗಳಲ್ಲಿ ಅವನಿಗೆ ಜ್ಞಾನ ವುಂಟಾಗಿ ಎಲ್ಲವೂ ಬ್ರಹ್ಮಸ್ವರೂಪವಾಗಿ ಕಂಡುಬರಲು ತೊಡಗುತ್ತದೆ. ಇಂತಹ ದೃಷ್ಟಿ ಉಂಟಾದಮೇಲೆ ಎಲ್ಲ ಸಂಶಯಗಳು ತಾನಾಗಿಯೇ ನಿವೃತ್ತವಾಗುತ್ತವೆ. ಹೀಗೆ ಅವನು ನನ್ನ ಸಾಕ್ಷಾತ್ಕಾರಪಡೆದು ಪ್ರಪಂಚದಿಂದ ಉಪರಾಮನಾಗುತ್ತಾನೆ. ॥ ೧೮ ॥ ನನ್ನ ಪ್ರಾಪ್ತಿಯ ಸಾಧನೆಗಳಲ್ಲಿ ಸಮಸ್ತ ಪ್ರಾಣಿ-ಪದಾರ್ಥಗಳಲ್ಲಿ ಮನ – ವಾಣಿ – ಶರೀರದ ಸಮಸ್ತ ವೃತ್ತಿಗಳಿಂದ ನನ್ನನ್ನೇ ಭಾವಿಸುವುದೇ ಎಲ್ಲಕ್ಕಿಂತ ಶ್ರೇಷ್ಠ ಸಾಧನೆಯಾಗಿದೆ. ॥ ೧೯ ॥ ಉದ್ಧವನೇ! ಇದೇ ನನ್ನ ಭಾಗವತಧರ್ಮವಾಗಿದೆ. ಇದನ್ನು ಒಮ್ಮೆ ಪ್ರಾರಂಭಿಸಿದ ಬಳಿಕ ಮತ್ತೆ ಯಾವುದೇ ವಿಘ್ನಬಾಧೆಗಳಿಂದ ಇದರಲ್ಲಿ ಕಿಂಚಿತ್ತಾದರೂ ಅಂತರ ಬೀಳುವುದಿಲ್ಲ. ಏಕೆಂದರೆ ಈ ಧರ್ಮವು ನಿಷ್ಕಾಮವಾಗಿದೆ ಮತ್ತು ಇದು ನಿರ್ಗುಣವಾದ್ದರಿಂದ ಸರ್ವೋತ್ತಮವೆಂದು ಸ್ವತಃ ನಾನೇ ನಿಶ್ಚಯಿಸಿರುವೆನು. ॥ ೨೦ ॥ ಈ ಧರ್ಮದ ಸಾಧಕನು ಭಯ- ಶೋಕಾದಿ ಅವಸ್ಥೆಗಳಲ್ಲಿ ಆಗುವ ಭಾವನೆಯನ್ನು ಮತ್ತು ಅಳುವುದು, ಬಡಬಡಿಸುವುದು, ಓಡುವುದು ಮುಂತಾದ ನಿರರ್ಥಕ ಕರ್ಮಗಳನ್ನೂ, ನಿಷ್ಕಾಮ ಭಾವದಿಂದ ನನಗೆ ಅರ್ಪಿಸಿದರೆ, ಅವುಗಳು ಕೂಡ ನನಗೆ ಅರ್ಪಿಸಿದ ಕಾರಣ ಧರ್ಮಗಳಾಗುವವಷ್ಟು ಈ ಭಾಗವತ ಧರ್ಮವು ಸರಳ ಸಾಧನೆಯಾಗಿದೆ. ॥ ೨೧ ॥ ವಿನಾಶಿಯೂ, ಅಸತ್ಯವೂ ಆದ ಈ ಶರೀರದ ಮೂಲಕವೇ ಅಮೃತಸ್ವರೂಪನೂ, ಸತ್ಯಸ್ವರೂಪನೂ ಆದ ಪರಮಾತ್ಮನಾದ ನನ್ನನ್ನು ಪಡೆದುಕೊಳ್ಳುವುದೇ ಬುದ್ಧಿವಂತರಲ್ಲಿರುವ ವಿವೇಕ ಮತ್ತು ಆತ್ಮಜ್ಞಾನಿಗಳ ಜ್ಞಾನವಾಗಿದೆ. ॥ ೨೨ ॥

ಉದ್ಧವನೇ! ಸಮಸ್ತ ಬ್ರಹ್ಮವಿದ್ಯೆಯ ಈ ರಹಸ್ಯವನ್ನು ನಾನು ನಿನಗೆ ಸಂಕ್ಷೇಪವಾಗಿ ಮತ್ತು ವಿಸ್ತಾರವಾಗಿ ತಿಳಿಸಿರುವೆನು. ಈ ರಹಸ್ಯವನ್ನು ತಿಳಿಯುವುದು ದೇವತೆಗಳಿಗೂ ಅತ್ಯಂತ ಕಠಿಣವಾಗಿದೆ. ॥ ೨೩ ॥ ನಾನು ಪದೇ-ಪದೇ ವರ್ಣಿಸಿದ ಸುಸ್ಪಷ್ಟ – ಯುಕ್ತಿಯುಕ್ತವಾಗಿ ಜ್ಞಾನದ ಮರ್ಮವನ್ನು ತಿಳಿದುಕೊಳ್ಳುವವನ ಹೃದಯದ ಸಂಶಯಗ್ರಂಥಿಗಳು ಛಿನ್ನ-ಭಿನ್ನವಾಗಿ, ಅವನು ಮುಕ್ತನಾಗುತ್ತಾನೆ. ॥ ೨೪ ॥ ನಾನು ನಿನ್ನ ಪ್ರಶ್ನೆಗೆ ಚೆನ್ನಾಗಿ ಉತ್ತರಿಸಿದೆ. ನಮ್ಮ ಈ ಪ್ರಶ್ನೋತ್ತರವನ್ನು ವಿಚಾರಪೂರ್ವಕ ಧರಿಸಿಕೊಳ್ಳುವವನು ವೇದಗಳ ಪರಮರಹಸ್ಯವಾದ ಸನಾತನ ಪರಬ್ರಹ್ಮವನ್ನು ಪಡೆದುಕೊಳ್ಳುತ್ತಾನೆ. ॥ ೨೫ ॥ ನನ್ನ ಭಕ್ತರಿಗೆ ಇದನ್ನು ಚೆನ್ನಾಗಿ ಸ್ಪಷ್ಟಪಡಿಸುವವನಿಗೆ, ಆ ಜ್ಞಾನದಾತೃವಿಗೆ ನಾನು ಪ್ರಸನ್ನ ಮನಸ್ಸಿನಿಂದ ನನ್ನ ಸ್ವರೂಪವನ್ನೇ ಕೊಟ್ಟುಬಿಡುತ್ತೇನೆ. ಅವನನ್ನು ಆತ್ಮಜ್ಞಾನಿಯಾಗಿಸುತ್ತೇನೆ. ॥ ೨೬ ॥ ಎಲೈ ಉದ್ಧವನೇ! ನಿನ್ನ ಮತ್ತು ನನ್ನ ಈ ಸಂವಾದವು ಸ್ವಯಂ ಪರಮ ಪವಿತ್ರವೇ ಆಗಿದೆ, ಬೇರೆಯವರನ್ನೂ ಪವಿತ್ರವಾಗಿಸುವಂತಹುದು. ಪ್ರತಿದಿನವು ಇದನ್ನು ಪಾರಾಯಣ ಮಾಡುವವನು, ಬೇರೆಯವರಿಗೆ ತಿಳಿಸುವವನು ಈ ಜ್ಞಾನದೀಪದ ಮೂಲಕ ಬೇರೆಯವರಿಗೆ ನನ್ನ ದರ್ಶನ ಮಾಡಿಸಿದ್ದರಿಂದ ಪವಿತ್ರನಾಗಿ ಹೋಗುವನು. ॥ ೨೭ ॥

ಯ ಏತಚ್ಛ್ರದ್ಧಯಾ ನಿತ್ಯಮವ್ಯಗ್ರಃ ಶೃಣುಯಾನ್ನರಃ ।
ಮಯಿ ಭಕ್ತಿಂ ಪರಾಂ ಕುರ್ವನ್ಕರ್ಮಭಿರ್ನ ಸ ಬಧ್ಯತೇ
॥ ೨೮ ॥

ಅಪ್ಯುದ್ಧವ ತ್ವಯಾ ಬ್ರಹ್ಮ ಸಖೇ ಸಮವಧಾರಿತಮ್ ।
ಅಪಿ ತೇ ವಿಗತೋ ಮೋಹಃ ಶೋಕಶ್ಚಾಸೌ ಮನೋಭವಃ
॥ ೨೯ ॥

ನೈತತ್ತ್ವಯಾ ದಾಂಭಿಕಾಯ ನಾಸ್ತಿಕಾಯ ಶಠಾಯ ಚ ।
ಅಶುಶ್ರೂಷೋರಭಕ್ತಾಯ ದುರ್ವಿನೀತಾಯ ದೀಯತಾಮ್
॥ ೩೦ ॥

ಏತೈರ್ದೋಷೈರ್ವಿಹೀನಾಯ ಬ್ರಹ್ಮಣ್ಯಾಯ ಪ್ರಿಯಾಯ ಚ ।
ಸಾಧವೇ ಶುಚಯೇ ಬ್ರೂಯಾದ್ ಭಕ್ತಿಃ ಸ್ಯಾಚ್ಛೂದ್ರಯೋಷಿತಾಮ್
॥ ೩೧ ॥

ನೈತದ್ವಿಜ್ಞಾಯ ಜಿಜ್ಞಾಸೋರ್ಜ್ಞಾತವ್ಯಮವಶಿಷ್ಯತೇ ।
ಪೀತ್ವಾ ಪೀಯೂಷಮಮೃತಂ ಪಾತವ್ಯಂ ನಾವಶಿಷ್ಯತೇ
॥ ೩೨ ॥

ಜ್ಞಾನೇ ಕರ್ಮಣಿ ಯೋಗೇ ಚ ವಾರ್ತಾಯಾಂ ದಂಡಧಾರಣೇ ।
ಯಾವಾನರ್ಥೋ ನೃಣಾಂ ತಾತ ತಾವಾಂಸ್ತೇಽಹಂ ಚತುರ್ವಿಧಃ
॥ ೩೩ ॥

ಮರ್ತ್ಯೋ ಯದಾ ತ್ಯಕ್ತಸಮಸ್ತಕರ್ಮಾ
ನಿವೇದಿತಾತ್ಮಾ ವಿಚಿಕೀರ್ಷಿತೋ ಮೇ ।
ತದಾಮೃತತ್ವಂ ಪ್ರತಿಪದ್ಯಮಾನೋ
ಮಯಾಽಽತ್ಮಭೂಯಾಯ ಚ ಕಲ್ಪತೇ ವೈ ॥ ೩೪ ॥

ಶ್ರೀಶುಕ ಉವಾಚ

ಸ ಏವಮಾದರ್ಶಿತಯೋಗಮಾರ್ಗ
ಸ್ತದೋತ್ತಮಶ್ಲೋಕವಚೋ ನಿಶಮ್ಯ ।
ಬದ್ಧಾಂಜಲಿಃ ಪ್ರೀತ್ಯುಪರುದ್ಧಕಂಠೋ
ನ ಕಿಂಚಿದೂಚೇಽಶ್ರುಪರಿಪ್ಲುತಾಕ್ಷಃ ॥ ೩೫ ॥

ವಿಷ್ಟಭ್ಯ ಚಿತ್ತಂ ಪ್ರಣಯಾವಘೂರ್ಣಂ
ಧೈರ್ಯೇಣ ರಾಜನ್ಬಹು ಮನ್ಯಮಾನಃ ।
ಕೃತಾಂಜಲಿಃ ಪ್ರಾಹ ಯದುಪ್ರವೀರಂ
ಶೀರ್ಷ್ಣಾ ಸ್ಪೃಶಂಸ್ತಚ್ಚರಣಾರವಿಂದಮ್ ॥ ೩೬ ॥

ಉದ್ಧವ ಉವಾಚ

ವಿದ್ರಾವಿತೋ ಮೋಹಮಹಾಂಧಕಾರೋ
ಯ ಆಶ್ರಿತೋ ಮೇ ತವ ಸಂನಿಧಾನಾತ್ ।
ವಿಭಾವಸೋಃ ಕಿಂ ನು ಸಮೀಪಗಸ್ಯ
ಶೀತಂ ತಮೋ ಭೀಃ ಪ್ರಭವಂತ್ಯಜಾದ್ಯ ॥ ೩೭ ॥

ಇದನ್ನು ಏಕಾಗ್ರಚಿತ್ತದಿಂದ, ಶ್ರದ್ಧಾಭಕ್ತಿಯಿಂದ ಕೇಳುವವನಿಗೆ ನನ್ನ ಪರಾಭಕ್ತಿಯು ಪ್ರಾಪ್ತವಾಗಿ, ಅವನು ಕರ್ಮಬಂಧನದಿಂದ ಮುಕ್ತನಾಗುವನು. ॥ ೨೮ ॥ ಪ್ರಿಯಮಿತ್ರಾ! ನೀನು ಚೆನ್ನಾಗಿ ಬ್ರಹ್ಮಸ್ವರೂಪವನ್ನು ತಿಳಿದುಕೊಂಡೆಯಲ್ಲ? ನಿನ್ನ ಚಿತ್ತದ ಮೋಹ ಹಾಗೂ ಶೋಕವಾದರೋ ದೂರವಾಯಿತಲ್ಲ? ॥ ೨೯ ॥ ನೀನು ಇದನ್ನು ದಾಂಭಿಕ, ನಾಸ್ತಿಕ, ಶ್ರದ್ಧೆಯಿಲ್ಲದ ಭಕ್ತಿಹೀನ, ಉದ್ಧಟ ಇಂತಹ ಜನರಿಗೆ ಎಂದಿಗೂ ಹೇಳಬಾರದು. ॥ ೩೦ ॥ ಈ ದೋಷ ಗಳಿಂದ ರಹಿತನೂ, ಬ್ರಾಹ್ಮಣಭಕ್ತನೂ, ಪ್ರೇಮಿಯೂ, ಸಾಧು ಸ್ವಭಾವನೂ, ಶುದ್ಧ ಚರಿತ್ರನೂ ಆದವರಿಗೆ ಈ ಪ್ರಸಂಗವನ್ನು ಹೇಳಬೇಕು. ಶೂದ್ರರು, ಸ್ತ್ರೀಯರು, ನನ್ನಲ್ಲಿ ಭಕ್ತಿಯನ್ನಿಡುವ ವರಾದರೆ ಅವರಿಗೂ ಇದನ್ನು ಉಪದೇಶಿಸಬೇಕು. ॥ ೩೧ ॥ ದಿವ್ಯ ಅಮೃತಪಾನ ಮಾಡಿದಮೇಲೆ ಏನನ್ನೂ ಕುಡಿಯುವುದೂ ಬಾಕಿ ಇರದಂತೆ, ಇದನ್ನು ಅರಿತುಕೊಂಡ ಮೇಲೆ ಜಿಜ್ಞಾಸುವಿಗೆ ಬೇರೆ ಏನನ್ನೂ ತಿಳಿಯುವುದು ಬಾಕಿ ಇರುವುದಿಲ್ಲ. ॥ ೩೨ ॥ ಪ್ರಿಯ ಉದ್ಧವನೇ! ಮನುಷ್ಯರಿಗೆ ಜ್ಞಾನ, ಕರ್ಮ, ಯೋಗ, ವಾಣಿಜ್ಯ, ದಂಡನೀತಿ ಇವುಗಳಿಂದ ಕ್ರಮವಾಗಿ ಮೋಕ್ಷ, ಧರ್ಮ, ಕಾಮ, ಅರ್ಥರೂಪೀ ಫಲಗಳು ದೊರೆಯುತ್ತವೆ. ಆದರೆ ನಿನ್ನಂತಹ ಅನನ್ಯ ಭಕ್ತರಿಗೆ ಆ ನಾಲ್ಕು ವಿಧದ ಫಲವೂ ನಾನೇ ಆಗಿದ್ದೇನೆ. ॥ ೩೩ ॥ ಮನುಷ್ಯನು ಎಲ್ಲ ಕರ್ಮಗಳನ್ನು ನನ್ನಲ್ಲಿ ಅರ್ಪಿಸಿ, ನನ್ನಲ್ಲಿ ಅನನ್ಯ ಶರಣಾದಾಗ, ಎಲ್ಲ ಕ್ರಿಯಾಕಲಾಪಗಳನ್ನು ನನಗಾಗಿಯೇ ಮಾಡಿದಾಗ, ಅವನ ಎಲ್ಲ ವ್ಯವಹಾರಗಳು ನನ್ನೊಂದಿಗೆ ಆಗುತ್ತವೆ. ಅವನು ನನಗೆ ತುಂಬಾ ಪ್ರಿಯನಾಗುತ್ತಾನೆ. ಮತ್ತೆ ನಾನೂ ಕೂಡ ಅವನಿಗಾಗಿ ಏನೇನು ಮಾಡಲಿ ಎಂದು ಯೋಚಿಸುತ್ತಾ ಇರುತ್ತೇನೆ. ಅವನಿಗೆ ಪ್ರಿಯವಾದುದನ್ನು ಮಾಡಲು ನನಗೆ ಪ್ರಬಲ ಉತ್ಕಂಠತೆ ಇರುತ್ತದೆ. ಇಂತಹ ನನ್ನ ಭಕ್ತನು ಅಮೃತತ್ತ್ವವನ್ನು ಪಡೆದುಕೊಂಡು, ನನ್ನ ಸ್ವರೂಪವೇ ಆಗುತ್ತಾನೆ. ॥ ೩೪ ॥

ಶ್ರೀಶುಕಯೋಗಿಗಳು ಹೇಳುತ್ತಾರೆ – ಪರೀಕ್ಷಿತನೇ! ಈಗ ಉದ್ಧವನು ಯೋಗಮಾರ್ಗದ ಪೂರ್ಣ ಉಪದೇಶವನ್ನು ಪಡೆದು ಕೊಂಡನು. ಭಗವಾನ್ ಶ್ರೀಕೃಷ್ಣನ ಮಾತನ್ನು ಕೇಳಿ ಅವನ ಕಣ್ಣು ಗಳಲ್ಲಿ ನೀರು ತುಂಬಿಬಂತು. ಪ್ರೇಮೋದ್ರೇಕದಿಂದ ಕಂಠ ಉಮ್ಮಳಿ ಸಿತು. ವಾಣಿಯಿಂದ ಏನನ್ನೂ ಮಾತನಾಡಲಾರದೆ ಮೌನವಾಗಿ ಕೈ ಜೋಡಿಸಿಕೊಂಡು ನಿಂತುಕೊಂಡನು. ॥ ೩೫ ॥ ಅವನ ಚಿತ್ತವು ಪ್ರೇಮಪರವಶವಾಗಿ ವಿಹ್ವಲವಾಗಿತ್ತು. ಅವನು ಧೈರ್ಯದಿಂದ ತಡೆದುಕೊಂಡು, ತನ್ನನ್ನು ಅತ್ಯಂತ ಭಾಗ್ಯಶಾಲಿಯೆಂದು ಅನುಭವಿ ಸುತ್ತಾ, ಯದುವಂಶ ಶಿರೋಮಣಿ ಭಗವಾನ್ ಶ್ರೀಕೃಷ್ಣನ ಚರಣ ಗಳಲ್ಲಿ ಶಿರವನ್ನಿಟ್ಟು ವಂದಿಸಿಕೊಂಡನು ಹಾಗೂ ಕೈಜೋಡಿಸಿ ಅವನಲ್ಲಿ ಹೀಗೆ ಪ್ರಾರ್ಥಿಸಿದನು. ॥ ೩೬ ॥

ಉದ್ಧವನು ಹೇಳಿದನು – ಬ್ರಹ್ಮನಿಗೂ ಆದಿಯಾದವನೇ! ನಾನು ಆಶ್ರಯಿಸಿದ್ದ ಮಹಾನ್ ಮೋಹರೂಪೀ ಅಂಧಕಾರವು ನಿನ್ನ ಜ್ಞಾನದ ಪ್ರಕಾಶದಿಂದ ದೂರವಾಯಿತು. ನಿನ್ನ ಬಳಿಗೆ ಬರುತ್ತಲೇ ಅದು ಎಂದೆಂದಿಗೂ ಓಡಿಹೋಯಿತು. ಬೆಂಕಿಯಬಳಿ ಸಾರಿದವ ನಿಗೆ ಚಳಿ, ಅಂಧಕಾರ ಮತ್ತು ಅದರಿಂದ ಉಂಟಾಗುವ ಭಯವು ನಿಲ್ಲಬಲ್ಲುವೇನು ? ॥ ೩೭ ॥

ಪ್ರತ್ಯರ್ಪಿತೋ ಮೇ ಭವತಾನುಕಂಪಿನಾ
ಭೃತ್ಯಾಯ ವಿಜ್ಞಾನಮಯಃ ಪ್ರದೀಪಃ ।
ಹಿತ್ವಾ ಕೃತಜ್ಞಸ್ತವ ಪಾದಮೂಲಂ
ಕೋಽನ್ಯತ್ಸಮೀಯಾಚ್ಛರಣಂ ತ್ವದೀಯಮ್ ॥ ೩೮ ॥

ವೃಕ್ಣಶ್ಚ ಮೇ ಸುದೃಢಃ ಸ್ನೇಹಪಾಶೋ
ದಾಶಾರ್ಹವೃಷ್ಣ್ಯಂಧಕಸಾತ್ವತೇಷು ।
ಪ್ರಸಾರಿತಃ ಸೃಷ್ಟಿವಿವೃದ್ಧಯೇ ತ್ವಯಾ
ಸ್ವಮಾಯಯಾ ಹ್ಯಾತ್ಮಸುಬೋಧಹೇತಿನಾ ॥ ೩೯ ॥

ನಮೋಽಸ್ತು ತೇ ಮಹಾಯೋಗಿನ್ ಪ್ರಪನ್ನಮನುಶಾಧಿ ಮಾಮ್ ।
ಯಥಾ ತ್ವಚ್ಚರಣಾಂಭೋಜೇ ರತಿಃ ಸ್ಯಾದನಪಾಯಿನೀ
॥ ೪೦ ॥

ಶ್ರೀಭಗವಾನುವಾಚ

ಗಚ್ಛೋದ್ಧವ ಮಯಾಽಽದಿಷ್ಟೋ
ಬದರ್ಯಾಖ್ಯಂ ಮಮಾಶ್ರಮಮ್ ।
ತತ್ರ ಮತ್ಪಾದತೀರ್ಥೋದೇ
ಸ್ನಾನೋಪಸ್ಪರ್ಶನೈಃ ಶುಚಿಃ ॥ ೪೧ ॥

ಈಕ್ಷಯಾಲಕನಂದಾಯಾ ವಿಧೂತಾಶೇಷಕಲ್ಮಷಃ ।
ವಸಾನೋ ವಲ್ಕಲಾನ್ಯಂಗ ವನ್ಯಭುಕ್ ಸುಖನಿಃಸ್ಪೃಹಃ
॥ ೪೨ ॥

ತಿತಿಕ್ಷುರ್ದ್ವಂದ್ವಮಾತ್ರಾಣಾಂ ಸುಶೀಲಃ ಸಂಯತೇಂದ್ರಿಯಃ ।
ಶಾಂತಃ ಸಮಾಹಿತಧಿಯಾ ಜ್ಞಾನವಿಜ್ಞಾನಸಂಯುತಃ
॥ ೪೩ ॥

ಮತ್ತೋಽನುಶಿಕ್ಷಿತಂ ಯತ್ತೇ ವಿವಿಕ್ತಮನುಭಾವಯನ್ ।
ಮಯ್ಯಾವೇಶಿತವಾಕ್ಚಿತ್ತೋ ಮದ್ಧರ್ಮನಿರತೋ ಭವ ।
ಅತಿವ್ರಜ್ಯ ಗತೀಸ್ತಿಸ್ರೋ ಮಾಮೇಷ್ಯಸಿ ತತಃ ಪರಮ್
॥ ೪೪ ॥

ಶ್ರೀಶುಕ ಉವಾಚ

ಸ ಏವಮುಕ್ತೋ ಹರಿಮೇಧಸೋದ್ಧವಃ
ಪ್ರದಕ್ಷಿಣಂ ತಂ ಪರಿಸೃತ್ಯ ಪಾದಯೋಃ ।
ಶಿರೋ ನಿಧಾಯಾಶ್ರುಕಲಾಭಿರಾರ್ದ್ರಧೀ-
ರ್ನ್ಯಷಿಂಚದದ್ವಂದ್ವಪರೋಽಪ್ಯಪಕ್ರಮೇ ॥ ೪೫ ॥

ಭಗವಂತಾ ! ನೀನು ದಯಾರ್ದ್ರನಾಗಿ ಸೇವಕನಾದ ನನಗೆ ವಿಜ್ಞಾನರೂಪೀ ದೀಪದ ಪ್ರಕಾಶವನ್ನು ಪ್ರದಾನಮಾಡಿದೆ. ನೀನು ನನ್ನಮೇಲೆ ಮಹಾನ್ ಅನುಗ್ರಹವನ್ನು ವರ್ಷಿಸಿದೆ. ನಿನ್ನ ಉಪಕಾರಗಳನ್ನು, ನಿನ್ನ ಮಹಾನ್‌ಕೃಪೆಯನ್ನು ಅನುಭವಿಸಿದವನು ಮತ್ತೆ ನಿನ್ನ ಈ ಚರಣಕಮಲಗಳನ್ನು ಬಿಟ್ಟು, ಬೇರೆಯವರಿಗೆ ಶರಣಾಗುವವನು ಯಾರು ತಾನೇ ಇರುವನು ? ॥ ೩೮ ॥ ನೀನೇ ನಿನ್ನ ಮೋಹರೂಪೀ ಮಾಯೆಯಿಂದ ನನ್ನನ್ನು ಮೊದಲು ತನ್ನ ಸೃಷ್ಟಿಯನ್ನು ವೃದ್ಧಿಗೊಳಿಸಲು ದಾಶಾರ್ಹ, ವೃಷ್ಣಿ, ಅಂಧಕ, ಸಾತ್ವತವಂಶೀ ಯಾದವರೊಂದಿಗೆ ಸುದೃಢವಾದ ಸ್ನೇಹಪಾಶದಿಂದ ಕಟ್ಟಿದ್ದೆ ಇಂದು ನೀನೇ ಆತ್ಮಬೋಧದ ಹರಿತವಾದ ಖಡ್ಗದಿಂದ ನನ್ನ ಆ ಬಂಧನವನ್ನು ಅನಾಯಾಸವಾಗಿ ಕತ್ತರಿಸಿ ಬಿಟ್ಟಿರುವೆ. ॥ ೩೯ ॥ ಮಹಾಯೋಗೇಶ್ವರಾ ! ನಿನಗೆ ನನ್ನ ನಮಸ್ಕಾರಗಳು. ಈಗ ನೀನು ನಿನ್ನ ಚರಣಕಮಲಗಳಲ್ಲಿ ಅನನ್ಯ ಭಕ್ತಿಯು ಉಂಟಾಗುವಂತೆ ಕೃಪೆ ಮಾಡಿ ಶರಣಾಗತನಾದ ನನಗೆ ಆಜ್ಞೆಯನ್ನು ದಯಪಾಲಿಸು. ॥ ೪೦ ॥

ಭಗವಾನ್ ಶ್ರೀಕೃಷ್ಣನು ಹೇಳಿದನು – ಉದ್ಧವನೇ ! ಈಗ ನೀನು ನನ್ನ ಅಪ್ಪಣೆಯಂತೆ ಬದರಿಕಾಶ್ರಮಕ್ಕೆ ಹೋಗು. ಅದು ನನ್ನದೇ ಆಶ್ರಮವಾಗಿದೆ. ಅಲ್ಲಿ ನನ್ನ ಚರಣಕಮಲಗಳನ್ನು ತೊಳೆದ ಗಂಗಾಜಲವನ್ನು ಸ್ನಾನ-ಪಾನಾದಿಗಳ ಮೂಲಕ ಸೇವಿಸುತ್ತಾ ನೀನು ಪವಿತ್ರನಾಗು. ॥ ೪೧ ॥ ಅಲಕನಂದೆಯ ದರ್ಶನಮಾತ್ರದಿಂದಲೇ ನಿನ್ನ ಪಾಪಗಳೆಲ್ಲ ನಾಶವಾಗುವವು. ಪ್ರಿಯ ಉದ್ಧವನೇ ! ಅಲ್ಲಿ ನೀನು ವಲ್ಕಲವನ್ನುಟ್ಟು, ಕಾಡಿನ ಕಂದ-ಮೂಲ-ಫಲಗಳನ್ನು ತಿನ್ನುತ್ತಾ, ಯಾವುದೇ ಭೋಗದ ಅಪೇಕ್ಷೆಯನ್ನಿಡದೆ ನಿಸ್ಪೃಹ ವೃತ್ತಿಯಿಂದ ನೀನೇ ನಿನ್ನಲ್ಲಿ ಆನಂದವಾಗಿರು. ॥ ೪೨ ॥ ಚಳಿ-ಸೆಕೆ, ಸುಖ-ದುಃಖ, ಏನೆಲ್ಲ ಇದಿರಾಗುತ್ತದೋ ಅದರಲ್ಲಿ ಸಮನಾಗಿದ್ದು ಸಹಿಸು. ಸ್ವಭಾವವು ಸೌಮ್ಯವಾಗಿರಲಿ. ಇಂದ್ರಿಯಗಳು ವಶದಲ್ಲಿರಲಿ. ಚಿತ್ತವು ಶಾಂತವಾಗಿದ್ದು, ಬುದ್ಧಿಸಮಾಹಿತವಾಗಿರಲಿ. ನೀನು ಸ್ವಯಂ ನನ್ನ ಸ್ವರೂಪ ಜ್ಞಾನದಲ್ಲಿ, ಅನುಭವದಲ್ಲಿ ಮುಳುಗಿರು. ॥ ೪೩ ॥ ನಾನು ನಿನಗೆ ಮಾಡಿದ ಉಪದೇಶವನ್ನು ಏಕಾಂತದಲ್ಲಿ ವಿಚಾರಪೂರ್ವಕ ಅನುಭವಿಸುತ್ತಿರು. ನಿನ್ನ ವಾಣಿ ಮತ್ತು ಚಿತ್ತವನ್ನು ನನ್ನಲ್ಲಿಯೇ ತೊಡಗಿಸಿಡಬೇಕು. ನಾನು ಹೇಳಿದ ಭಾಗವತಧರ್ಮದಲ್ಲಿ ಪ್ರೇಮದಿಂದ ನಿರತನಾಗಿರು. ಕೊನೆಗೆ ನೀನು ತ್ರಿಗುಣ ಮತ್ತು ಅವುಗಳ ಸಂಬಂಧವಿರಿಸುವ ಗತಿಗಳನ್ನು ದಾಟಿ, ಅದರಿಂದ ಆಚೆಗಿರುವ ನನ್ನ ಪರಮಾರ್ಥಸ್ವರೂಪದಲ್ಲಿ ಸೇರಿಹೋಗುವೆ. ॥ ೪೪ ॥

ಶ್ರೀಶುಕಯೋಗಿಗಳು ಹೇಳುತ್ತಾರೆ – ಪರೀಕ್ಷಿತನೇ ! ಭಗವಾನ್ ಶ್ರೀಕೃಷ್ಣನ ಸ್ವರೂಪದ ಜ್ಞಾನವು ಪ್ರಪಂಚದ ಭೇದ-ಭ್ರಮೆಗಳನ್ನು ಛಿನ್ನ-ಭಿನ್ನವಾಗಿಸುತ್ತದೆ. ಶ್ರೀಕೃಷ್ಣನು ಸ್ವತಃ ಉದ್ಧವನಿಗೆ ಹೀಗೆ ಉಪದೇಶಮಾಡಿದಾಗ, ಅವನು ಭಗವಂತನಿಗೆ ಪ್ರದಕ್ಷಿಣೆಮಾಡಿ, ಅವನ ಚರಣಗಳಲ್ಲಿ ಶಿರವನ್ನಿಟ್ಟನು. ಉದ್ಧವನು ಸಂಯೋಗ-ವಿಯೋಗದಿಂದ ಉಂಟಾಗುವ ಸುಖ-ದುಃಖಗಳ ದ್ವಂದ್ವಗಳಿಂದ ಮೀರಿದ್ದನು. ಏಕೆಂದರೆ, ಅವನು ಭಗವಂತನ

ಸುದುಸ್ತ್ಯಜಸ್ನೇಹವಿಯೋಗಕಾತರೋ
ನ ಶಕ್ನುವಂಸ್ತಂ ಪರಿಹಾತುಮಾತುರಃ ।
ಕೃಚ್ಛ್ರಂ ಯಯೌ ಮೂರ್ಧನಿ ಭರ್ತೃಪಾದುಕೇ
ಬಿಭ್ರನ್ನಮಸ್ಕೃತ್ಯ ಯಯೌ ಪುನಃ ಪುನಃ ॥ ೪೬ ॥

ತತಸ್ತಮಂತರ್ಹೃದಿ ಸಂನಿವೇಶ್ಯ
ಗತೋ ಮಹಾಭಾಗವತೋ ವಿಶಾಲಾಮ್ ।
ಯಥೋಪದಿಷ್ಟಾಂ ಜಗದೇಕಬಂಧುನಾ
ತಪಃ ಸಮಾಸ್ಥಾಯ ಹರೇರಗಾದ್ಗತಿಮ್ ॥ ೪೭ ॥

ಯ ಏತದಾನಂದ ಸಮುದ್ರಸಂಭೃತಂ
ಜ್ಞಾನಾಮೃತಂ ಭಾಗವತಾಯ ಭಾಷಿತಮ್ ।
ಕೃಷ್ಣೇನ ಯೋಗೇಶ್ವರಸೇವಿತಾಂಘ್ರಿಣಾ
ಸಚ್ಛ್ರದ್ಧಯಾಽಽಸೇವ್ಯ ಜಗದ್ವಿಮುಚ್ಯತೇ ॥ ೪೮ ॥

ಭವಭಯಮಪಹಂತುಂ ಜ್ಞಾನವಿಜ್ಞಾನಸಾರಂ
ನಿಗಮಕೃದುಪಜಹ್ರೇ ಭೃಂಗವದ್ವೇದಸಾರಮ್ ।
ಅಮೃತಮುದಧಿತಶ್ಚಾಪಾಯಯದ್ ಭೃತ್ಯವರ್ಗಾನ್
ಪುರುಷಮೃಷಭಮಾದ್ಯಂ ಕೃಷ್ಣಸಂಜ್ಞಂ ನತೋಽಸ್ಮಿ ॥ ೪೯ ॥

ಚರಣಗಳಲ್ಲಿ ಶರಣಾಗಿದ್ದನು. ಮತ್ತೆ ಅವನು ಅಲ್ಲಿಂದ ಹೊರಡುವಾಗ ಅವನ ಚಿತ್ತವು ಪ್ರೇಮಾವೇಶದಿಂದ ತುಂಬಿ ಹೋಗಿತ್ತು. ಅವನು ಕಣ್ಣುಗಳಿಂದ ಹರಿಯುವ ಪ್ರೇಮಾಶ್ರುಗಳಿಂದ ಭಗವಂತನ ಚರಣಕಮಲಗಳನ್ನು ತೊಳೆದುಬಿಟ್ಟನು. ॥ ೪೫ ॥ ಪರೀಕ್ಷಿತನೇ ! ಉದ್ಧವನು ಭಗವಂತನ ಚರಣಕಮಲಗಳನ್ನು ಬಿಟ್ಟು ದೂರ ಹೋಗಲು ಬಯಸುತ್ತಿರಲಿಲ್ಲ, ಆದರೆ ಭಗವಂತನ ಆಜ್ಞೆಯೇ ಹಾಗಿತ್ತು. ಆದ್ದರಿಂದ ಅವನ ವಿಯೋಗದಿಂದ ಕಾತರನಾಗಿ ಬಹು ಕಷ್ಟದಿಂದ ಹೋಗಲೇಬೇಕಾಯಿತು. ಹೊರಡುವಾಗ ಅವನು ಭಗವಂತನ ಚರಣಪಾದುಕೆಗಳನ್ನು ತನ್ನ ಶಿರದಲ್ಲಿ ಹೊತ್ತುಕೊಂಡು, ಪದೇ - ಪದೇ ವಂದಿಸುತ್ತಾ ಅಲ್ಲಿಂದ ಹೊರಟು ಹೋದನು. ॥ ೪೬ ॥ ಭಗವಂತನ ಪರಮಪ್ರೇಮಿ ಉದ್ಧವನು ಹೃದಯದಲ್ಲಿ ಅವನ ದಿವ್ಯಸ್ವರೂಪವನ್ನು ಧರಿಸಿಕೊಂಡು ಬದರಿಕಾಶ್ರಮವನ್ನು ತಲುಪಿದನು. ಅಲ್ಲಿ ಅವನು ತಪೋಮಯ ಜೀವನವನ್ನು ಕಳೆಯುತ್ತಾ , ಜಗತ್ತಿನ ಏಕಮಾತ್ರ ಹಿತೈಷಿ ಭಗವಾನ್ ಶ್ರೀಕೃಷ್ಣನ ಉಪದೇಶದಂತೆ, ಅವನ ಸ್ವರೂಪಭೂತ ಪರಮಗತಿಯನ್ನು ಪಡೆದುಕೊಂಡನು.॥ ೪೭ ॥ ಭಗವಾನ್ ಶಂಕರನೇ ಆದಿ ಯೋಗೇಶ್ವರರೂ ಕೂಡ ಸಚ್ಚಿದಾನಂದಸ್ವರೂಪೀ ಭಗವಾನ್ ಶ್ರೀಕೃಷ್ಣನ ಚರಣಗಳ ಸೇವೆ ಮಾಡುತ್ತಾರೆ. ಅವನು ಸ್ವತಃ ತನ್ನ ಶ್ರೀಮುಖದಿಂದ ಪರಮಪ್ರೇಮಿ ಭಕ್ತ ಉದ್ಧವನಿಗಾಗಿ ಈ ಜ್ಞಾನಾಮೃತವನ್ನು ಉಪದೇಶಿಸಿದನು. ಇದು ಜ್ಞಾನಾಮೃತರೂಪೀ ಮಹಾಸಾಗರದ ಸಾರವಾಗಿದೆ. ಶ್ರದ್ಧೆಯೊಂದಿಗೆ ಇದನ್ನು ಸೇವಿಸುವವನು ಮುಕ್ತನಾಗಿಯೇ ಹೋಗುತ್ತಾನೆ. ಅವನ ಸಂಗದಿಂದ ಇಡೀ ಜಗತ್ತು ಮುಕ್ತವಾಗಿ ಹೋಗುತ್ತದೆ. ॥ ೪೮ ॥ ಪರೀಕ್ಷಿತನೇ ! ಭ್ರಮರವು ವಿಭಿನ್ನ ಪುಷ್ಪಗಳಿಂದ ಸಾರವಾದ ಮಧುವನ್ನು ಸಂಗ್ರಹಿಸುವಂತೆ, ಸ್ವಯಂ ವೇದಗಳನ್ನು ಪ್ರಕಾಶಗೊಳಿಸುವ ಭಗವಾನ್ ಶ್ರೀಕೃಷ್ಣನು ಭಕ್ತರನ್ನು ಸಂಸಾರಸಾಗರದಿಂದ ಮುಕ್ತಗೊಳಿಸಲು ಈ ಜ್ಞಾನ-ವಿಜ್ಞಾನದ ಸಾರವನ್ನು ಅಮೃತರೂಪೀ ಸಾಗರದಿಂದ ತೆಗೆದು ತನ್ನ ಸೇವಕರಿಗಾಗಿ ಕೊಟ್ಟನು. ಇಂತಹ ಆ ಭಗವಾನ್ ಶ್ರೀಕೃಷ್ಣನೇ ಪುರುಷೋತ್ತಮನಾಗಿದ್ದಾನೆ, ಶ್ರೇಷ್ಠನಾಗಿದ್ದಾನೆ, ಆದಿನಾರಾಯಣನಾಗಿದ್ದಾನೆ ಹಾಗೂ ಇಡೀ ಜಗತ್ತಿನ ಮೂಲಕಾರಣನಾಗಿದ್ದಾನೆ. ಅವನಿಗೆ ನಾನು ಪದೇ-ಪದೇ ವಂದಿಸುತ್ತೇನೆ. ॥ ೪೯ ॥

ಇಪ್ಪತ್ತೊಂಭತ್ತನೆಯ ಅಧ್ಯಾಯವು ಮುಗಿಯಿತು. ॥ ೨೯ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಏಕಾದಶಸ್ಕಂಧೇ ಏಕೋನತ್ರಿಂಶೋಽಧ್ಯಾಯಃ ॥ ೨೯ ॥

ಮೂವತ್ತನೆಯ ಅಧ್ಯಾಯ

ಯದುಕುಲದ ಸಂಹಾರ

ರಾಜೋವಾಚ

ತತೋ ಮಹಾಭಾಗವತ ಉದ್ಧವೇ ನಿರ್ಗತೇ ವನಮ್ ।
ದ್ವಾರವತ್ಯಾಂ ಕಿಮಕರೋದ್ಭಗವಾನ್ ಭೂತಭಾವನಃ ॥ ೧ ॥

ಪರೀಕ್ಷಿತರಾಜನು ಕೇಳಿದನು – ಪೂಜ್ಯರೇ ! ಮಹಾಭಾಗವತ ಉದ್ಧವನು ಬದರಿಕಾಶ್ರಮಕ್ಕೆ ಹೊರಟುಹೋದ ಬಳಿಕ ಸಮಸ್ತ ಪ್ರಾಣಿಗಳ ಆತ್ಮಸ್ವರೂಪೀ ಭಗವಾನ್ ಶ್ರೀಕೃಷ್ಣನು ದ್ವಾರಕೆಯಲ್ಲಿ ಯಾವ-ಯಾವ ಲೀಲೆಗಳನ್ನು ಮಾಡಿದನು ? ॥ ೧ ॥

ಬ್ರಹ್ಮಶಾಪೋಪಸಂಸೃಷ್ಟೇ ಸ್ವಕುಲೇ ಯಾದವರ್ಷಭಃ ।
ಪ್ರೇಯಸೀಂ ಸರ್ವನೇತ್ರಾಣಾಂ ತನುಂ ಸ ಕಥಮತ್ಯಜತ್
॥ ೨ ॥

ಪ್ರತ್ಯಾಕ್ರಷ್ಟುಂ ನಯನಮಬಲಾ ಯತ್ರ ಲಗ್ನಂ ನ ಶೇಕುಃ
ಕರ್ಣಾವಿಷ್ಟಂ ನ ಸರತಿ ತತೋ ಯತ್ಸತಾಮಾತ್ಮಲಗ್ನಮ್ ।
ಯಚ್ಛ್ರೀರ್ವಾಚಾಂ ಜನಯತಿ ರತಿಂ ಕಿಂ ನು ಮಾನಂ ಕವೀನಾಂ
ದೃಷ್ಟ್ವಾ ಜಿಷ್ಣೋರ್ಯುಧಿ ರಥಗತಂ ಯಚ್ಚ ತತ್ಸಾಮ್ಯಮೀಯುಃ
॥ ೩ ॥

ಋಷಿರುವಾಚ

ದಿವಿ ಭುವ್ಯಂತರಿಕ್ಷೇ ಚ ಮಹೋತ್ಪಾತಾನ್ ಸಮುತ್ಥಿತಾನ್ ।
ದೃಷ್ಟ್ವಾಽಽಸೀನಾನ್ಸುಧರ್ಮಾಯಾಂ
ಕೃಷ್ಣಃ ಪ್ರಾಹ ಯದೂನಿದಮ್
॥ ೪ ॥

ಏತೇ ಘೋರಾ ಮಹೋತ್ಪಾತಾ
ದ್ವಾರ್ವತ್ಯಾಂ ಯಮಕೇತವಃ ।
ಮುಹೂರ್ತಮಪಿ ನ ಸ್ಥೇಯ-
ಮತ್ರ ನೋ ಯದುಪುಂಗವಾಃ ॥ ೫ ॥

ಸ್ತ್ರಿಯೋ ಬಾಲಾಶ್ಚ ವೃದ್ಧಾಶ್ಚ ಶಂಖೋದ್ಧಾರಂ ವ್ರಜಂತ್ವಿತಃ ।
ವಯಂ ಪ್ರಭಾಸಂ ಯಾಸ್ಯಾಮೋ ಯತ್ರ ಪ್ರತ್ಯಕ್ಸರಸ್ವತೀ
॥ ೬ ॥

ತತ್ರಾಭಿಷಿಚ್ಯ ಶುಚಯ ಉಪೋಷ್ಯ ಸುಸಮಾಹಿತಾಃ ।
ದೇವತಾಃ ಪೂಜಯಿಷ್ಯಾಮಃ ಸ್ನಪನಾಲೇಪನಾರ್ಹಣೈಃ
॥ ೭ ॥

ಬ್ರಾಹ್ಮಣಾಂಸ್ತು ಮಹಾಭಾಗಾನ್ಕೃತಸ್ವಸ್ತ್ಯಯನಾ ವಯಮ್ ।
ಗೋಭೂಹಿರಣ್ಯವಾಸೋಭಿರ್ಗಜಾಶ್ವರಥವೇಶ್ಮಭಿಃ
॥ ೮ ॥

ವಿಧಿರೇಷ ಹ್ಯರಿಷ್ಟಘ್ನೋ ಮಂಗಲಾಯನಮುತ್ತಮಮ್ ।
ದೇವದ್ವಿಜಗವಾಂ ಪೂಜಾ ಭೂತೇಷು ಪರಮೋ ಭವಃ
॥ ೯ ॥

ಸ್ವಾಮಿ ! ಯದುವಂಶ ಶಿರೋಮಣಿ ಭಗವಾನ್ ಶ್ರೀಕೃಷ್ಣನು ತನ್ನ ಕುಲವು ಶಾಪಗ್ರಸ್ತವಾದಾಗ ಸಮಸ್ತರ ಕಣ್ಣುಗಳಿಗೆ 'ಆನಂದಕರವಾಗಿದ್ದ ತನ್ನ ದಿವ್ಯ ಶ್ರೀವಿಗ್ರಹದ ಲೀಲೆಯನ್ನು ಹೇಗೆ ಉಪಸಂಹಾರ ಮಾಡಿದನು ? ॥ ೨ ॥ ಭಗವಾನ್ ಶ್ರೀಕೃಷ್ಣನ ಆ ಸ್ವರೂಪದಲ್ಲಿ ವ್ರಜಾಂಗನೆಯರ ಕಣ್ಣುಗಳು ಒಮ್ಮೆ ನೆಟ್ಟುಬಿಟ್ಟರೆ ಅಲ್ಲಿಂದ ಅವನ್ನು ಕೀಳುವುದಕ್ಕೆ ಅವರು ಅಸಮರ್ಥರಾಗುತ್ತಿದ್ದರು, ಅಷ್ಟೊಂದು ಸುಂದರವಾಗಿತ್ತು ಆ ಶ್ರೀವಿಗ್ರಹ. ಭಕ್ತರು, ರುಕ್ಮಿಣೀ, ಯಜ್ಞಪತ್ನಿಯರು (ಭಾಗ ೧೦/೨೩/೨೩) ಮುಂತಾದವರು ಕವಿಗಳ ಮೂಲಕ ಭಗವಂತನ ಆ ದಿವ್ಯರೂಪ ಸೌಂದರ್ಯವನ್ನು ವರ್ಣನೆಯನ್ನು ಕೇಳಿದಾಗ ಆ ರೂಪಮಾಧುರಿಯು ಅವರ ಚಿತ್ತದಿಂದ ಯಾವ ರೀತಿಯಿಂದಲೂ ವಿಸ್ಮೃತವಾಗುತ್ತಿರಲಿಲ್ಲ. ಭಗವಂತನ ಅದೇ ಶ್ರೀವಿಗ್ರಹದ ಶೋಭೆಯ ಕುರಿತು ಕವಿಗಳು ವರ್ಣಿಸುತ್ತಾ-ವರ್ಣಿಸುತ್ತಾ ಅವರಿಗೆ ತೃಪ್ತಿಯೇ ಆಗದಷ್ಟು ಅದರಲ್ಲಿ ಅನುರಾಗ ಬೆಳೆದುಹೋಯಿತು. ಅಷ್ಟೇ ಅಲ್ಲ, ಅದರಿಂದ ಆ ಕವಿಗಳೂ ಗೌರವಕ್ಕೆ ಪಾತ್ರರಾದರು. ಅರ್ಜುನನ ರಥದಲ್ಲಿ ಸಾರಥಿಯಾಗಿ ಕುಳಿತಿರುವ ಆ ಶ್ರೀಕೃಷ್ಣನ ಅದೇ ರೂಪಮಾಧುರಿಯನ್ನು ನೋಡುತ್ತಾ-ನೋಡುತ್ತಾ ಮಹಾಭಾರತಯುದ್ಧದಲ್ಲಿ ಪ್ರಾಣಗಳನ್ನು ತ್ಯಜಿಸಿದವರು ಅವನ ಸಾರೂಪ್ಯವನ್ನು ಪಡೆದರು. ಭಗವಂತನ ಅಂತಹ ಆ ಮುಗ್ಧಮನೋಹರ ಸ್ವರೂಪವನ್ನು ಅವನು ಹೇಗೆ ತ್ಯಜಿಸಿದನು. ॥ ೩ ॥

ಶ್ರೀಶುಕಯೋಗಿಗಳು ಹೇಳುತ್ತಾರೆ – ಪರೀಕ್ಷಿದ್ರಾಜನೇ ! ಆಕಾಶ, ಪೃಥಿವಿ, ಅಂತರಿಕ್ಷಗಳಲ್ಲಿ ದೊಡ್ಡ-ದೊಡ್ಡ ಉತ್ಪಾತ-ಅಪಶಕುನಗಳು ಆಗುತ್ತಿರುವುದನ್ನು ನೋಡಿದಾಗ, ಭಗವಾನ್ ಶ್ರೀಕೃಷ್ಣನು ಸುಧರ್ಮಾಸಭೆಯಲ್ಲಿ ಉಪಸ್ಥಿತ ಎಲ್ಲ ಯದುವಂಶೀಯರಲ್ಲಿ ಹೀಗೆ ಹೇಳಿದನು – ॥ ೪ ॥ ಶ್ರೇಷ್ಠ ಯದುವಂಶೀಯರೇ ! ದ್ವಾರಕೆಯಲ್ಲಿ ದೊಡ್ಡ-ದೊಡ್ಡ ಭಯಂಕರ ಉತ್ಪಾತಗಳು ನಡೆಯುವುದನ್ನು ನೀವೆಲ್ಲ ನೋಡುತ್ತಿದ್ದೀರಿ. ಇವು ಸಾಕ್ಷಾತ್ ಯಮರಾಜನ ಧ್ವಜದಂತೆ ನಮ್ಮ ಮಹಾನ್ ಅನಿಷ್ಟದ ಸೂಚಕಗಳಾಗಿವೆ. ಇನ್ನು ನಾವು ಇಲ್ಲಿ ಒಂದು ಮುಹೂರ್ತವೂ ನಿಲ್ಲಬಾರದು. ॥ ೫ ॥ ಸ್ತ್ರೀಯರು, ಮಕ್ಕಳು, ಮುದುಕರು ಇಲ್ಲಿಂದ ಶಂಖೋದ್ಧಾರಕ್ಷೇತ್ರಕ್ಕೆ ಹೊರಟು ಹೋಗಲಿ. ನಾವೆಲ್ಲರೂ ಪ್ರಭಾಸಕ್ಷೇತ್ರಕ್ಕೆ ಹೋಗೋಣ. ಅಲ್ಲಿ ಸರಸ್ವತಿ ನದಿಯು ಪಶ್ಚಿಮದ ಕಡೆಗೆ ಹರಿದು ಸಮುದ್ರಕ್ಕೆ ಸೇರುತ್ತದೆ ಎಂಬುದು ನೀವೆಲ್ಲರೂ ತಿಳಿದಿದ್ದೀರಿ. ॥ ೬ ॥ ಅಲ್ಲಿ ನಾವೆಲ್ಲರೂ ಸ್ನಾನಮಾಡಿ ಪವಿತ್ರರಾಗಿ ಉಪವಾಸ ಮಾಡುವೆವು. ಏಕಾಗ್ರಚಿತ್ತದಿಂದ ಸ್ನಾನ ಮತ್ತು ಚಂದನಾದಿ ಸಾಮಗ್ರಿಗಳಿಂದ ದೇವತೆಗಳನ್ನು ಪೂಜಿಸೋಣ. ॥ ೭ ॥ ಅಲ್ಲಿ ಬ್ರಾಹ್ಮಣರಿಂದ ಸ್ವಸ್ತಿವಾಚನ ಮಾಡಿಸಿದ ಬಳಿಕ ನಾವೆಲ್ಲರೂ ಗೋ, ಭೂಮಿ, ಸ್ವರ್ಣ, ವಸ್ತ್ರ, ಆನೆ, ಕುದುರೆ, ರಥ, ಮನೆಯೇ ಮುಂತಾದುವನ್ನು ದಾನಮಾಡಿ ಬ್ರಾಹ್ಮಣರನ್ನು ಸತ್ಕರಿಸುವೆವು. ॥ ೮ ॥ ಈ ವಿಧಿಯು ಎಲ್ಲ ರೀತಿಯ ಅಮಂಗಳವನ್ನು ನಾಶಮಾಡುವಂತಹುದು ಮತ್ತು ಪರಮ ಮಂಗಲದ ಜನನಿಯಾಗಿದೆ. ಶ್ರೇಷ್ಠ ಯದುವಂಶೀಯರೇ ! ದೇವತೆ, ಬ್ರಾಹ್ಮಣ, ಗೋವು ಇವುಗಳ ಪೂಜೆಯೇ ಪ್ರಾಣಿಗಳ ಜನ್ಮದ ಪರಮ ಲಾಭವಾಗಿದೆ. ॥ ೯ ॥

ಇತಿ ಸರ್ವೇ ಸಮಾಕರ್ಣ್ಯ ಯದುವೃದ್ಧಾ ಮಧುದ್ವಿಷಃ ।
ತಥೇತಿ ನೌಭಿರುತ್ತೀರ್ಯ ಪ್ರಭಾಸಂ ಪ್ರಯಯೂ ರಥೈಃ
॥ ೧೦ ॥

ತಸ್ಮಿನ್ಭಗವತಾಽಽದಿಷ್ಟಂ ಯದುದೇವೇನ ಯಾದವಾಃ ।
ಚಕ್ರುಃ ಪರಮಯಾ ಭಕ್ತ್ಯಾ ಸರ್ವಶ್ರೇಯೋಪಬೃಂಹಿತಮ್
॥ ೧೧ ॥

ತತಸ್ತಸ್ಮಿನ್ಮಹಾಪಾನಂ ಪಪುರ್ಮೈರೇಯಕಂ ಮಧು ।
ದಿಷ್ಟವಿಭ್ರಂಶಿತಧಿಯೋ ಯದ್ದ್ರವೈರ್ಭ್ರಶ್ಯತೇ ಮತಿಃ
॥ ೧೨ ॥

ಮಹಾಪಾನಾಭಿಮತ್ತಾನಾಂ ವೀರಾಣಾಂ ದೃಪ್ತಚೇತಸಾಮ್ ।
ಕೃಷ್ಣಮಾಯಾವಿಮೂಢಾನಾಂ ಸಂಘರ್ಷಃ ಸುಮಹಾನಭೂತ್
॥ ೧೩ ॥

ಯುಯುಧುಃ ಕ್ರೋಧಸಂರಬ್ಧಾ ವೇಲಾಯಾಮಾತತಾಯಿನಃ ।
ಧನುರ್ಭಿರಸಿಭಿರ್ಭಲ್ಲೈರ್ಗದಾಭಿಸ್ತೋಮರರ್ಷ್ಟಿಭಿಃ
॥ ೧೪ ॥

ಪತತ್ಪತಾಕೈ ರಥಕುಂಜರಾದಿಭಿಃ
ಖರೋಷ್ಟ್ರಗೋಭಿರ್ಮಹಿಷೈರ್ನರೈರಪಿ ।
ಮಿಥಃ ಸಮೇತ್ಯಾಶ್ವತರೈಃ ಸುದುರ್ಮದಾ
ನ್ಯಹನ್ಶರೈರ್ದದ್ಭಿರಿವ ದ್ವಿಪಾ ವನೇ ॥ ೧೫ ॥

ಪ್ರದ್ಯುಮ್ನಸಾಂಬೌ ಯುಧಿ ರೂಢಮತ್ಸರಾ-
ವಕ್ರೂರಭೋಜಾವನಿರುದ್ಧಸಾತ್ಯಕೀ ।
ಸುಭದ್ರಸಂಗ್ರಾಮಜಿತೌ ಸುದಾರುಣೌ
ಗದೌ ಸುಮಿತ್ರಾಸುರಥೌ ಸಮೀಯತುಃ ॥ ೧೬ ॥

ಅನ್ಯೇ ಚ ಯೇ ವೈ ನಿಶಠೋಲ್ಮುಕಾದಯಃ
ಸಹಸ್ರಜಿಚ್ಛತಜಿದ್ಭಾನುಮುಖ್ಯಾಃ ।
ಅನ್ಯೋನ್ಯಮಾಸಾದ್ಯ ಮದಾಂಧಕಾರಿತಾ
ಜಘ್ನುರ್ಮುಕುಂದೇನ ವಿಮೋಹಿತಾ ಭೃಶಮ್ ॥ ೧೭ ॥

ದಾಶಾರ್ಹವೃಷ್ಣ್ಯಂಧಕಭೋಜಸಾತ್ವತಾ
ಮಧ್ವರ್ಬುದಾ ಮಾಥುರಶೂರಸೇನಾಃ ।
ವಿಸರ್ಜನಾಃ ಕುಕುರಾಃ ಕುಂತಯಶ್ಚ
ಮಿಥಸ್ತತಸ್ತೇಽಥ ವಿಸೃಜ್ಯ ಸೌಹೃದಮ್ ॥ ೧೮ ॥

ಪರೀಕ್ಷಿತನೇ! ಎಲ್ಲ ವೃದ್ಧ ಯದುವಂಶೀಯರು ಭಗವಾನ್ ಶ್ರೀಕೃಷ್ಣನ ಮಾತನ್ನು ಕೇಳಿ 'ಹಾಗೆಯೇ ಆಗಲಿ' ಎಂದು ಹೇಳಿ ಅದನ್ನು ಅನುಮೋದಿಸಿದರು. ಕೂಡಲೇ ನಾವೆಗಳಿಂದ ಸಮುದ್ರವನ್ನು ದಾಟಿ ರಥಗಳಲ್ಲಿ ಪ್ರಭಾಸಕ್ಷೇತ್ರದ ಯಾತ್ರೆಯನ್ನು ಕೈಗೊಂಡರು. ॥ ೧೦ ॥ ಅಲ್ಲಿಗೆ ತಲುಪಿ ಯಾದವರು ಯದುವಂಶ ಶಿರೋಮಣಿ ಭಗವಾನ್ ಶ್ರೀಕೃಷ್ಣನ ಆದೇಶಾನುಸಾರ ಬಹು ಶ್ರದ್ಧೆ ಮತ್ತು ಭಕ್ತಿಯಿಂದ ಶಾಂತಿಪಾಠಾದಿಗಳನ್ನು ಗೈದು, ಎಲ್ಲ ರೀತಿಯ ಮಂಗಲ ಕೃತ್ಯಗಳನ್ನು ಮಾಡಿದರು. ॥ ೧೧ ॥ ಇದೆಲ್ಲವನ್ನು ಅವರೇನೋ ಮಾಡಿದರು, ಆದರೆ ದೈವವು ಅವರ ಬುದ್ಧಿಯನ್ನು ಅಪಹರಿಸಿತ್ತು. ಆದ್ದರಿಂದ ಅವರು ಮೈರೇಯಕವೆಂಬ ಮದಿರೆಯನ್ನು ಪಾನಮಾಡತೊಡಗಿದರು. ಅದರ ಮತ್ತಿನಿಂದ ಬುದ್ಧಿಯು ಭ್ರಷ್ಟವಾಗುತ್ತದೆ. ಅದು ಕುಡಿಯುವಾಗ ಸಿಹಿಯಾಗಿರುತ್ತದೆ, ಆದರೆ ಪರಿಣಾಮದಲ್ಲಿ ಸರ್ವನಾಶ ಮಾಡುವಂತಹುದು. ॥ ೧೨ ॥ ಆ ತೀವ್ರವಾದ ಮದಿರಾಪಾನದಿಂದ ಎಲ್ಲರೂ ಉನ್ಮತ್ತರಾದರು. ಅವರು ಗರ್ವದಿಂದ ಪರಸ್ಪರ ಜಗಳ ಕಾಯಲು ತೊಡಗಿದರು. ನಿಜವಾಗಿಯಾದರೋ ಅವರೆಲ್ಲರೂ ಶ್ರೀಕೃಷ್ಣನ ಮಾಯೆಯಿಂದ ಮೂಢರಾಗಿದ್ದರು. ॥ ೧೩ ॥ ಆಗ ಅವರೆಲ್ಲರೂ ಸಿಟ್ಟುಗೊಂಡು ಒಬ್ಬರು ಮತ್ತೊಬ್ಬರ ಮೇಲೆ ಆಕ್ರಮಣಕ್ಕೆ ತೊಡಗಿದರು. ಧನುಷ್ಯ ಬಾಣ, ಖಡ್ಗ, ಈಟಿ, ಗದೆ, ತೋಮರ, ಋಷ್ಟಿ ಮುಂತಾದ ಅಸ್ತ್ರಶಸ್ತ್ರಗಳಿಂದ ಅಲ್ಲೇ ಸಮುದ್ರತಟದಲ್ಲಿ ಪರಸ್ಪರ ಆಕ್ರಮಣ ಮಾಡಿದರು. ॥ ೧೪ ॥ ಮದೋನ್ಮತ್ತರಾದ ಯದುವಂಶೀಯರು ಆನೆ, ಕುದುರೆ, ಕತ್ತೆ, ಒಂಟೆ, ಹೇಸರಕತ್ತೆ, ಎತ್ತು, ಕೋಣ ಮತ್ತು ಮನುಷ್ಯರನ್ನೇ ವಾಹನವಾಗಿಸಿಕೊಂಡು ಒಬ್ಬರು ಮತ್ತೊಬ್ಬರನ್ನು ಬಾಣಗಳಿಂದ ಘಾಸಿಗೊಳಿಸಿದರು. ಅವನ ಕಾಳಗ ಕಾಡಾನೆಗಳು ಒಂದು ಮತ್ತೊಂದನ್ನು ದಂತದಿಂದ ತಿವಿಯುವಂತೆ ಇತ್ತು ಎಲ್ಲ ವಾಹನಗಳ ಮೇಲೆ ಧ್ವಜಗಳು ಹಾರಾಡುತ್ತಿದ್ದವು. ಕಾಲಾಳುಗಳೂ ಪರಸ್ಪರ ಕಾದುತ್ತಿದ್ದರು. ॥ ೧೫ ॥ ಪ್ರದ್ಯುಮ್ನನು ಸಾಂಬನೊಂದಿಗೆ, ಅಕ್ರೂರನು ಭೋಜನೊಂದಿಗೆ, ಅನಿರುದ್ಧನು-ಸಾತ್ಯಕಿಯೊಂದಿಗೆ, ಸುಭದ್ರನು ಸಂಗ್ರಾಮಜಿತನೊಂದಿಗೆ, ಶ್ರೀಕೃಷ್ಣನ ತಮ್ಮ ಗದನು ಅದೇ ಹೆಸರಿನ ಅವರ ಪುತ್ರನೊಂದಿಗೆ, ಸುಮಿತ್ರನು ಸುರಥನೊಂದಿಗೆ ಯುದ್ಧಮಾಡತೊಡಗಿದರು. ಅವರೆಲ್ಲರೂ ಭಯಂಕರ ಯೋಧರಾಗಿದ್ದರು. ಕ್ರೋಧದಿಂದ ಒಬ್ಬರು ಮತ್ತೊಬ್ಬರ ನಾಶ ಮಾಡಲು ಹವಣಿಸುತ್ತಿದ್ದರು. ॥ ೧೬ ॥ ಇವರಲ್ಲದೆ ನಿಶಠ, ಉಲ್ಮುಖ, ಸಹಸ್ರಜಿತ್, ಶತಜಿತ್, ಭಾನು ಮುಂತಾದ ಯಾದವರೂ ಪರಸ್ಪರ ಯುದ್ಧದಲ್ಲಿ ತೊಡಗಿದರು ಭಗವಾನ್ ಶ್ರೀಕೃಷ್ಣನ ಮಾಯೆಯಿಂದ ಅವರು ಅತ್ಯಂತ ಮೋಹಿತರಾಗಿದ್ದರು. ಇತ್ತ ಮದಿರೆಯ ಮತ್ತಿನಿಂದ ಅವರು ಕುರುಡಾಗಿದ್ದರು. ॥ ೧೭ ॥ ದಾಶಾರ್ಹ, ವೃಷ್ಣಿ ಅಂಧಕ, ಭೋಜ, ಸಾತ್ವತ, ಮಧು, ಅರ್ಬುದ, ಮಾಥುರ, ಶೂರಸೇನ, ವಿಸರ್ಜನ, ಕುಕುರ, ಕುಂತಿ ಮುಂತಾದ ವಂಶಜರು ಸೌಹಾರ್ದ್ರ, ಪ್ರೇಮವನ್ನು ಮರೆತು ಪರಸ್ಪರ ಕಡಿದಾಡಲು ತೊಡಗಿದರು. ॥ ೧೮ ॥

ಪುತ್ರಾ ಅಯುಧ್ಯನ್ ಪಿತೃಭಿರ್ಭ್ರಾತೃಭಿಶ್ಚ
ಸ್ವಸ್ರೀಯದೌಹಿತ್ರಪಿತೃವ್ಯಮಾತುಲೈಃ ।
ಮಿತ್ರಾಣಿ ಮಿತ್ರೈಃ ಸುಹೃದಃ ಸುಹೃದ್ಭಿ-
ರ್ಜ್ಞಾತೀಂಸ್ತ್ವಹನ್ ಜ್ಞಾತಯ ಏವ ಮೂಢಾಃ ॥ ೧೯ ॥

ಶರೇಷು ಕ್ಷೀಯಮಾಣೇಷು ಭಜ್ಯಮಾನೇಷು ಧನ್ವಸು ।
ಶಸ್ತ್ರೇಷು ಕ್ಷೀಯಮಾಣೇಷು ಮುಷ್ಟಿಭಿರ್ಜಹ್ರುರೇರಕಾಃ ॥ ೨೦ ॥

ತಾ ವಜ್ರಕಲ್ಪಾಹ್ಯಭವನ್ಪರಿಘಾ ಮುಷ್ಟಿನಾ ಭೃತಾಃ ।
ಜಘ್ನುರ್ದ್ವಿಷಸ್ತೈಃ ಕೃಷ್ಣೇನ ವಾರ್ಯಮಾಣಾಸ್ತು ತಂ ಚ ತೇ ॥ ೨೧ ॥

ಪ್ರತ್ಯನೀಕಂ ಮನ್ಯಮಾನಾ ಬಲಭದ್ರಂ ಚ ಮೋಹಿತಾಃ ।
ಹಂತುಂ ಕೃತಧಿಯೋ ರಾಜನ್ನಾಪನ್ನಾ ಆತತಾಯಿನಃ ॥ ೨೨ ॥

ಅಥ ತಾವಪಿ ಸಂಕ್ರುದ್ಧಾವುದ್ಯಮ್ಯ ಕುರುನಂದನ ।
ಏರಕಾಮುಷ್ಟಿಪರಿಘೌ ಚರಂತೌ ಜಘ್ನತುರ್ಯುಧಿ ॥ ೨೩ ॥

ಬ್ರಹ್ಮಶಾಪೋಪಸೃಷ್ಟಾನಾಂ ಕೃಷ್ಣಮಾಯಾವೃತಾತ್ಮನಾಮ್ ।
ಸ್ಪರ್ಧಾಕ್ರೋಧಃ ಕ್ಷಯಂ ನಿನ್ಯೇ ವೈಣವೋಽಗ್ನಿರ್ಯಥಾ ವನಮ್ ॥ ೨೪ ॥

ಏವಂ ನಷ್ಟೇಷು ಸರ್ವೇಷು ಕುಲೇಷು ಸ್ವೇಷು ಕೇಶವಃ ।
ಅವತಾರಿತೋ ಭುವೋ ಭಾರ ಇತಿ ಮೇನೇಽವಶೇಷಿತಃ ॥ ೨೫ ॥

ರಾಮಃ ಸಮುದ್ರವೇಲಾಯಾಂ ಯೋಗಮಾಸ್ಥಾಯ ಪೌರುಷಮ್ ।
ತತ್ಯಾಜ ಲೋಕಂ ಮಾನುಷ್ಯಂ ಸಂಯೋಜ್ಯಾತ್ಮಾನಮಾತ್ಮನಿ ॥ ೨೬ ॥

ರಾಮನಿರ್ಯಾಣಮಾಲೋಕ್ಯ ಭಗವಾನ್ ದೇವಕೀಸುತಃ ।
ನಿಷಸಾದ ಧರೋಪಸ್ಥೇ ತೂಷ್ಣೀಮಾಸಾದ್ಯ ಪಿಪ್ಪಲಮ್ ॥ ೨೭ ॥

ಬಿಭ್ರಚ್ಚತುರ್ಭುಜಂ ರೂಪಂ ಭ್ರಾಜಿಷ್ಣು ಪ್ರಭಯಾ ಸ್ವಯಾ ।
ದಿಶೋ ವಿತಿಮಿರಾಃ ಕುರ್ವನ್ವಿಧೂಮ ಇವ ಪಾವಕಃ ॥ ೨೮ ॥

ಶ್ರೀವತ್ಸಾಂಕಂ ಘನಶ್ಯಾಮಂ ತಪ್ತಹಾಟಕವರ್ಚಸಮ್ ।
ಕೌಶೇಯಾಂಬರಯುಗ್ಮೇನ ಪರಿವೀತಂ ಸುಮಂಗಲಮ್ ॥ ೨೯ ॥

ಮೂಢತೆಯಿಂದ ಮಗನು ತಂದೆಯು, ಸಹೋದರ ಸೋದರನ, ಅಳಿಯ ಮಾವನ, ಮೊಮ್ಮಗ ಅಜ್ಜನ, ಮಿತ್ರನು ಮಿತ್ರನ, ಸುಹೃದ್ ಸುಹೃದನ, ಸೋದರಳಿಯ ಸೋದರಮಾವನ ಹಾಗೂ ಒಂದೇ ಗೋತ್ರದವರು ಪರಸ್ಪರ ರಕ್ತಹರಿಸತೊಡಗಿದರು. ॥ ೧೯ ॥

ಕೊನೆಗೆ ಅವರ ಬಾಣಗಳು ಮುಗಿದಾಗ, ಧನುಸ್ಸುಗಳು ಮುರಿದಾಗ, ಶಸ್ತ್ರಾಸ್ತ್ರಗಳು ನಷ್ಟ-ಭ್ರಷ್ಟವಾದಾಗ ಅವರೆಲ್ಲರೂ ತಮ್ಮ ಕೈಗಳಿಂದ ಸಮುದ್ರತಟದಲ್ಲಿ ಬೆಳೆದ ಏರಕಾ ಎಂಬ ಹುಲ್ಲನ್ನು ಕೀಳಲು ತೊಡಗಿದರು. ಆ ಹುಲ್ಲು ಋಷಿಗಳ ಶಾಪದಿಂದ ಉತ್ಪನ್ನವಾದ ಕಬ್ಬಿಣದ ಒನಕೆಯ ಚೂರ್ಣದಿಂದ ಹುಟ್ಟಿತ್ತು. ॥ ೨೦ ॥ ಎಲೈ ರಾಜನೇ! ಆ ಹುಲ್ಲನ್ನು ಅವರು ಕೈಗೆತ್ತಿಕೊಳ್ಳುತ್ತಲೇ ಅದು ಪರಿಘದಂತೆ ಶಕ್ತಿಶಾಲಿಯಾಯಿತು. ಆಗ ಅವರು ರೋಷಾವಿಷ್ಟರಾಗಿ ಆ ಹುಲ್ಲಿನಿಂದಲೇ ವಿಪಕ್ಷಿಯರನ್ನು ಪ್ರಹರಿಸತೊಡಗಿದರು. ಭಗವಾನ್ ಶ್ರೀಕೃಷ್ಣನು ಅವರನ್ನು ತಡೆದರೂ ಅವರು ಅವನನ್ನು ಮತ್ತು ಬಲರಾಮನನ್ನು ತಮ್ಮ ಶತ್ರುಗಳೆಂದೇ ಭಾವಿಸಿದರು. ಆ ಆತತಾಯಿಗಳು ಕೃಷ್ಣ ಬಲರಾಮರನ್ನೇ ಹೊಡೆಯುವಷ್ಟು ಅವರ ಬುದ್ಧಿ ಮೂಢವಾಗಿತ್ತು. ॥ ೨೧-೨೨ ॥ ಕುರುನಂದನಾ! ಈಗ ಭಗವಾನ್ ಶ್ರೀಕೃಷ್ಣ ಬಲರಾಮರೂ ಕ್ರೋಧಗೊಂಡು ಯುದ್ಧಭೂಮಿಯಲ್ಲಿ ಅತ್ತ-ಇತ್ತ ಹೋಗುತ್ತಾ ಏರಕಾರೂಪೀ ಪರಿಘವನ್ನು ಕೈಯಲ್ಲೆತ್ತಿಕೊಂಡು ಅವರೆಲ್ಲರನ್ನು ಯುದ್ಧದಲ್ಲಿ ಕೊಲ್ಲತೊಡಗಿದರು. ॥ ೨೩ ॥ ಬಿದಿರಿನ ಘರ್ಷಣೆಯಿಂದ ಉಂಟಾದ ಬೆಂಕಿಯು ಬಿದಿರಮೆಳೆಯನ್ನೇ ಸುಡುವಂತೆ, ಬ್ರಹ್ಮಶಾಪದಿಂದ ಗ್ರಸ್ತರಾದ ಮತ್ತು ಶ್ರೀಕೃಷ್ಣನ ಮಾಯೆಯಿಂದ ಮೋಹಿತರಾದ ಯದುವಂಶೀಯರ ಸ್ಪರ್ಧಾಮೂಲಕ ಕ್ರೋಧವೇ ಅವರನ್ನು ನಾಶಮಾಡಿಬಿಟ್ಟಿತು. ॥ ೨೪ ॥ ಸಮಸ್ತ ಯದುವಂಶೀಯರ ಸಂಹಾರವಾಗಿ ಹೋದುದನ್ನು ನೋಡಿ 'ಈಗ ಅಳಿದುಳಿದ ಪೃಥ್ವಿಯ ಭಾರವೂ ತಗ್ಗಿಹೋಯಿತು' ಎಂದು ಭಗವಾನ್ ಶ್ರೀಕೃಷ್ಣನು ಯೋಚಿಸಿದನು.

ಪರೀಕ್ಷಿತನೇ! ಬಲರಾಮದೇವರು ಸಮುದ್ರತಟದಲ್ಲಿ ಕುಳಿತುಕೊಂಡು ಏಕಾಗ್ರಚಿತ್ತದಿಂದ ಪರಮಾತ್ಮನ ಚಿಂತನೆಮಾಡುತ್ತಾ ತನ್ನ ಆತ್ಮನನ್ನು ಆತ್ಮಸ್ವರೂಪದಲ್ಲಿ ಸ್ಥಿರಗೊಳಿಸಿದನು ಹಾಗೂ ಈ ಭೂಲೋಕವನ್ನು ಬಿಟ್ಟು ಹೊರಟುಹೋದನು. ॥ ೨೬ ॥ ಭಗವಾನ್ ಶ್ರೀಕೃಷ್ಣನು ತನ್ನ ಅಣ್ಣ ಬಲರಾಮನು ಪರಮಪದದಲ್ಲಿ ಲೀನವಾದನು ಎಂದು ನೋಡಿದಾಗ, ಅವನೂ ಕೂಡ ಒಂದು ಅರಳಿ ಮರದ ಕೆಳಗೆ ಹೋಗಿ ಮೌನಧರಿಸಿ ನೆಲದ ಮೇಲೆಯೇ ಕುಳಿತುಬಿಟ್ಟನು. ॥ ೨೭ ॥ ಭಗವಾನ್ ಶ್ರೀಕೃಷ್ಣನು ಆಗ ತನ್ನ ಅಂಗಕಾಂತಿಯಿಂದ ದೇದೀಪ್ಯಮಾನ ಚತುರ್ಭುಜರೂಪವನ್ನು ಧರಿಸಿದ್ದನು ಮತ್ತು ಧೂಮರಹಿತ ಅಗ್ನಿಯಂತೆ ಎಲ್ಲ ದಿಕ್ಕುಗಳನ್ನು ಪ್ರಕಾಶಿಸುತ್ತಿದ್ದನು. ॥ ೨೮ ॥ ವರ್ಷಾಕಾಲದ ಮೇಘದಂತೆ ಶ್ಯಾಮಲ ಶರೀರದಿಂದ ಕಾದ ಚಿನ್ನದಂತೆ ಜ್ಯೋತಿಯು ಹೊರಸೂಸುತ್ತಿತ್ತು. ವಕ್ಷಸ್ಥಳದಲ್ಲಿ ಶ್ರೀವತ್ಸಲಾಂಛನ ಶೋಭಿಸುತ್ತಿತ್ತು. ಅವನು ರೇಷ್ಮೆ ಪೀತಾಂಬರದ ಧೋತಿ ಮತ್ತು ಶಲ್ಯವನ್ನು ಧರಿಸಿದ್ದನು. ಅವನ ಆ ಸ್ವರೂಪವು ತುಂಬಾ ಮಂಗಲಮಯವಾಗಿತ್ತು. ॥ ೨೯ ॥

ಸುಂದರಸ್ಮಿತವಕ್ತ್ರಾಬ್ಜಂ ನೀಲಕುಂತಲಮಂಡಿತಮ್ ।
ಪುಂಡರೀಕಾಭಿರಾಮಾಕ್ಷಂ ಸ್ಫುರನ್ಮಕರಕುಂಡಲಮ್
॥ ೩೦ ॥

ಕಟಿಸೂತ್ರಬ್ರಹ್ಮಸೂತ್ರಕಿರೀಟಕಟಕಾಂಗದೈಃ ।
ಹಾರನೂಪುರಮುದ್ರಾಭಿಃ ಕೌಸ್ತುಭೇನ ವಿರಾಜಿತಮ್
॥ ೩೧ ॥

ವನಮಾಲಾಪರೀತಾಂಗಂ ಮೂರ್ತಿಮದ್ಭಿರ್ನಿಜಾಯುಧೈಃ ।
ಕೃತ್ವೋರೌ ದಕ್ಷಿಣೇ ಪಾದಮಾಸೀನಂ ಪಂಕಜಾರುಣಮ್
॥ ೩೨ ॥

ಮುಸಲಾವಶೇಷಾಯಃಖಂಡಕೃತೇಷುರ್ಲುಬ್ಧಕೋ ಜರಾ ।
ಮೃಗಾಸ್ಯಾಕಾರಂ ತಚ್ಚರಣಂ ವಿವ್ಯಾಧ ಮೃಗಶಂಕಯಾ
॥ ೩೩ ॥

ಚತುರ್ಭುಜಂ ತಂ ಪುರುಷಂ ದೃಷ್ಟ್ವಾ ಸ ಕೃತಕಿಲ್ಬಿಷಃ ।
ಭೀತಃ ಪಪಾತ ಶಿರಸಾ ಪಾದಯೋರಸುರದ್ವಿಷಃ
॥ ೩೪ ॥

ಅಜಾನತಾ ಕೃತಮಿದಂ ಪಾಪೇನ ಮಧುಸೂದನ ।
ಕ್ಷಂತುಮರ್ಹಸಿ ಪಾಪಸ್ಯ ಉತ್ತಮಶ್ಲೋಕ ಮೇಽನಘ
॥ ೩೫ ॥

ಯಸ್ಯಾನುಸ್ಮರಣಂ ನೃಣಾಮಜ್ಞಾನಧ್ವಾಂತನಾಶನಮ್ ।
ವದಂತಿ ತಸ್ಯ ತೇ ವಿಷ್ಣೋ ಮಯಾಸಾಧು ಕೃತಂ ಪ್ರಭೋ
॥ ೩೬ ॥

ತನ್ಮಾಽಽಶು ಜಹಿ ವೈಕುಂಠ ಪಾಪ್ಮಾನಂ ಮೃಗಲುಬ್ಧಕಮ್ ।
ಯಥಾ ಪುನರಹಂ ತ್ವೇವಂ ನ ಕುರ್ಯಾಂ ಸದತಿಕ್ರಮಮ್
॥ ೩೭ ॥

ಯಸ್ಯಾತ್ಮಯೋಗರಚಿತಂ ನ ವಿದುರ್ವಿರಿಂಚೋ
ರುದ್ರಾದಯೋಽಸ್ಯ ತನಯಾಃ ಪತಯೋ ಗಿರಾಂ ಯೇ ।
ತ್ವನ್ಮಾಯಯಾ ಪಿಹಿತದೃಷ್ಟಯ ಏತದಂಜಃ
ಕಿಂ ತಸ್ಯ ತೇ ವಯಮಸದ್ಗತಯೋ ಗೃಣೀಮಃ ॥ ೩೮ ॥

ಮುಖದಲ್ಲಿ ಸುಂದರ ಹಾಸ್ಯ, ಕಪೋಲಗಳಲ್ಲಿ ಕಪ್ಪಾದ ಮುಂಗುರುಳು ಲಾಸ್ಯವಾಡುತ್ತಿದ್ದವು. ಅವನ ನೇತ್ರಗಳು ಕಮಲದಂತೆ ಸುಂದರ ಹಾಗೂ ಸುಕುಮಾರವಾಗಿದ್ದವು. ಕಿವಿಗಳಲ್ಲಿ ಮಕರಾಕೃತಿಯ ಕುಂಡಲಗಳು ಓಲಾಡುತ್ತಿದ್ದು ಅವನು ಬಹಳ ಅಂದವಾಗಿ ಕಾಣುತ್ತಿದ್ದನು. ॥ ೩೦ ॥ ಸೊಂಟದಲ್ಲಿ ಉಡಿದಾರದಿಂದಲೂ, ಹೆಗಲಲ್ಲಿ ಯಜ್ಞೋಪವೀತದಿಂದಲೂ, ತಲೆಯ ಮೇಲಿನ ಕಿರೀಟದಿಂದಲೂ, ಕರಕಂಕಣಗಳಿಂದಲೂ, ತೋಳುಗಳಲ್ಲಿ ಬಾಜೂ-ಬಂದಿಗಳಿಂದಲೂ, ವಕ್ಷಃಸ್ಥಳದಲ್ಲಿ ಹಾರಗಳಿಂದಲೂ, ಚರಣಗಳಲ್ಲಿ ನೂಪುರಗಳಿಂದಲೂ, ಬೆರಳುಗಳಲ್ಲಿ ಉಂಗುರಗಳಿಂದಲೂ, ಕತ್ತಿನಲ್ಲಿ ಕೌಸ್ತುಭಮಣಿಯಿಂದಲೂ ಶೋಭಿಸುತ್ತಿದ್ದನು. ॥ ೩೧ ॥ ಮಂಡಿಯವರೆಗೆ ವನ ಮಾಲೆಯು ಓಲಾಡುತ್ತಿತ್ತು. ಶಂಖ, ಚಕ್ರ, ಗದೆ ಮುಂತಾದ ಆಯುಧಗಳು ಮೂರ್ತಿವತ್ತಾಗಿ ಪ್ರಭುವನ್ನು ಸೇವಿಸುತ್ತಿದ್ದವು. ಆಗ ಭಗವಂತನು ಬಲ ತೊಡೆಯ ಮೇಲೆ ಎಡ ಕಾಲನ್ನಿಟ್ಟುಕೊಂಡು ಕುಳಿತಿದ್ದನು. ಅವನ ಅಂಗಾಲುಗಳು ಕೆಂಪಾದ ಕಮಲದಂತೆ ಹೊಳೆಯುತ್ತಿದ್ದವು. ॥ ೩೨ ॥

ಪರೀಕ್ಷಿತನೇ! ಜರಾ ಎಂಬ ವ್ಯಾಧನು ಉಳಿದಿದ್ದ ಕಬ್ಬಿಣದ ಒನಕೆಯ ತುಂಡನ್ನು ತನ್ನ ಬಾಣದ ಅಲುಗನ್ನಾಗಿಸಿಕೊಂಡಿದ್ದನು. ಅವನಿಗೆ ದೂರದಿಂದ ಭಗವಂತನ ಕೆಂಪಾದ ಪಾದ ಪದ್ಮವು ಜಿಂಕೆಯ ಮುಖದಂತೆ ಕಂಡುಬಂತು. ಅವನು ಅದನ್ನು ನಿಜವಾದ ಮೃಗವೆಂದೇ ತಿಳಿದು ಅದೇ ಬಾಣವನ್ನು ಪ್ರಯೋಗಿಸಿದನು. ॥ ೩೩ ॥ ಮೃಗವನ್ನರಸುತ್ತಾ ಅವನು ಬಳಿಗೆ ಬಂದಾಗ ನೋಡಿದನು - ಅರೇ! ಇವನಾದರೋ ಚತುರ್ಭುಜ ಸ್ವಯಂ ಭಗವಂತನಾಗಿದ್ದಾನಲ್ಲ! ಈಗಲಾದರೋ ಅಪರಾಧ ನಡೆದು ಹೋಯಿತು. ಇದಕ್ಕಾಗಿ ಭಯದಿಂದ ನಡುಗುತ್ತಾ, ಅಸುರರನ್ನು ನಾಶಗೊಳಿಸುವ ಭಗವಾನ್ ಶ್ರೀಕೃಷ್ಣನ ಚರಣಗಳಲ್ಲಿ ತಲೆಯನ್ನಿಟ್ಟು ಹೊರಳಾಡುತ್ತಾ ಕ್ಷಮೆಕೇಳ ತೊಡಗಿದನು. ॥ ೩೪ ॥ ಬೇಡನು ಬೇಡಿಕೊಂಡನು ಓ ಮಧುಸೂದನಾ! ನಾನು ತಿಳಿಯದೆ ಈ ಪಾಪ ಮಾಡಿರುವೆನು. ನಿಜವಾಗಿ ನಾನು ದೊಡ್ಡ ಪಾಪಿಯಾಗಿದ್ದೇನೆ. ಆದರೆ ನೀನು ಪರಮ ಯಶಸ್ವೀ ಮತ್ತು ನಿರ್ವಿಕಾರನಾಗಿರುವೆ. ನೀನು ದಯಮಾಡಿ ನನ್ನ ಅಪರಾಧವನ್ನು ಕ್ಷಮಿಸು. ॥ ೩೫ ॥ ಸರ್ವವ್ಯಾಪಕ ಸರ್ವಶಕ್ತಿವಂತನಾದ ಪ್ರಭುವೇ! ನಿನ್ನ ಸ್ಮರಣಮಾತ್ರದಿಂದ ಮನುಷ್ಯರ ಅಜ್ಞಾನಾಂಧಕಾರವು ನಾಶವಾಗುತ್ತದೆ ಎಂದು ಮಹಾತ್ಮರು ಹೇಳುತ್ತಾರೆ. ನಾನು ಸ್ವಯಂ ನಿನಗೇ ಅನಿಷ್ಟಮಾಡಿದೆ ಇದು ತುಂಬಾ ದುಃಖದ ಮಾತಾಗಿದೆ. ॥ ೩೬ ॥ ವೈಕುಂಠನಾಥಾ! ನಾನು ನಿರಪರಾಧಿಯಾದ ಜಿಂಕೆಗಳನ್ನು ಕೊಲ್ಲುವಂತಹ ಮಹಾಪಾಪಿಯಾಗಿದ್ದೇನೆ. ನೀನು ಈಗಲೇ ನನ್ನನ್ನು ಕೊಂದುಬಿಡು. ಏಕೆಂದರೆ, ಸತ್ತು ಹೋದರೆ ನಾನು ಎಂದೂ ನಿನ್ನಂತಹ ಮಹಾಪುರುಷರಿಗೆ ಅಪರಾಧ ಮಾಡಲಾರೆನು. ॥ ೩೭ ॥ ನಿನ್ನ ಯೋಗಮಾಯೆಯಿಂದ ರಚಿತವಾದ ಈ ವಿಶ್ವದ ಕುರಿತು ಬ್ರಹ್ಮರುದ್ರಾದಿಗಳೂ ಹಾಗೂ ವಾಣಿಯ ಅಧಿಷ್ಠಾತಾ ಬೃಹಸ್ಪತಿ ಮುಂತಾದವರೂ ಸರಿಯಾಗಿ ತಿಳಿಯಲಾರರು. ಏಕೆಂದರೆ, ಅವರ ದೃಷ್ಟಿಯು ನಿನ್ನ ಮಾಯೆಯಿಂದ ಮುಚ್ಚಿಹೋಗಿದೆ. ಮತ್ತೆ ನಾವಾದರೋ ಪಾಪಯೋನಿಗಳು. ಅದರ ಕುರಿತು ಏನು ವರ್ಣಿಸ ಬಲ್ಲೆವು? ॥ ೩೮ ॥

ಶ್ರೀಭಗವಾನುವಾಚ

ಮಾ ಭೈರ್ಜರೇ ತ್ವಮುತ್ತಿಷ್ಠ ಕಾಮ ಏಷ ಕೃತೋ ಹಿ ಮೇ ।
ಯಾಹಿ ತ್ವಂ ಮದನುಜ್ಞಾತಃ ಸ್ವರ್ಗಂ ಸುಕೃತಿನಾಂ ಪದಮ್ ॥ ೩೯ ॥

ಶ್ರೀಶುಕ ಉವಾಚ

ಇತ್ಯಾದಿಷ್ಟೋ ಭಗವತಾ ಕೃಷ್ಣೇನೇಚ್ಛಾಶರೀರಿಣಾ ।
ತ್ರಿಃ ಪರಿಕ್ರಮ್ಯ ತಂ ನತ್ವಾ ವಿಮಾನೇನ ದಿವಂ ಯಯೌ ॥ ೪೦ ॥

ದಾರುಕಃ ಕೃಷ್ಣಪದವೀಮನ್ವಿಚ್ಛನ್ನಧಿಗಮ್ಯ ತಾಮ್ ।
ವಾಯುಂ ತುಲಸಿಕಾಮೋದಮಾಘ್ರಾಯಾಭಿಮುಖಂ ಯಯೌ ॥ ೪೧ ॥

ತಂ ತತ್ರ ತಿಗ್ಮದ್ಯುಭಿರಾಯುಧೈರ್ವೃತಂ
ಹ್ಯಶ್ವತ್ಥಮೂಲೇ ಕೃತಕೇತನಂ ಪತಿಮ್ ।
ಸ್ನೇಹಪ್ಲುತಾತ್ಮಾ ನಿಪಪಾತ ಪಾದಯೋಃ
ರಥಾದವಪ್ಲುತ್ಯ ಸಬಾಷ್ಪಲೋಚನಃ ॥ ೪೨ ॥

ಅಪಶ್ಯತಸ್ತ್ವಚ್ಚರಣಾಂಬುಜಂ ಪ್ರಭೋ
ದೃಷ್ಟಿಃ ಪ್ರನಷ್ಟಾ ತಮಸಿ ಪ್ರವಿಷ್ಟಾ ।
ದಿಶೋ ನ ಜಾನೇ ನ ಲಭೇ ಚ ಶಾಂತಿಂ
ಯಥಾ ನಿಶಾಯಾಮುಡುಪೇ ಪ್ರನಷ್ಟೇ ॥ ೪೩ ॥

ಇತಿ ಬ್ರುವತಿ ಸೂತೇ ವೈ ರಥೋ ಗರುಡಲಾಂಛನಃ ।
ಖಮುತ್ಪಪಾತ ರಾಜೇಂದ್ರ ಸಾಶ್ವಧ್ವಜ ಉದೀಕ್ಷತಃ ॥ ೪೪ ॥

ತಮನ್ವಗಚ್ಛನ್ ದಿವ್ಯಾನಿ ವಿಷ್ಣುಪ್ರಹರಣಾನಿ ಚ ।
ತೇನಾತಿವಿಸ್ಮಿತಾತ್ಮಾನಂ ಸೂತಮಾಹ ಜನಾರ್ದನಃ ॥ ೪೫ ॥

ಗಚ್ಛ ದ್ವಾರವತೀಂ ಸೂತ ಜ್ಞಾತೀನಾಂ ನಿಧನಂ ಮಿಥಃ ।
ಸಂಕರ್ಷಣಸ್ಯ ನಿರ್ಯಾಣಂ ಬಂಧುಭ್ಯೋ ಬ್ರೂಹಿ ಮದ್ದಶಾಮ್ ॥ ೪೬ ॥

ದ್ವಾರಕಾಯಾಂ ಚ ನ ಸ್ಥೇಯಂ ಭವದ್ಭಿಶ್ಚ ಸ್ವಬಂಧುಭಿಃ ।
ಮಯಾ ತ್ಯಕ್ತಾಂ ಯದುಪುರೀಂ ಸಮುದ್ರಃ ಪ್ಲಾವಯಿಷ್ಯತಿ ॥ ೪೭ ॥

ಸ್ವಂ ಸ್ವಂ ಪರಿಗ್ರಹಂ ಸರ್ವೇ ಆದಾಯ ಪಿತರೌ ಚ ನಃ ।
ಅರ್ಜುನೇನಾವಿತಾಃ ಸರ್ವೇ ಇಂದ್ರಪ್ರಸ್ಥಂ ಗಮಿಷ್ಯಥ ॥ ೪೮ ॥

ತ್ವಂ ತು ಮದ್ಧರ್ಮಮಾಸ್ಥಾಯ ಜ್ಞಾನನಿಷ್ಠ ಉಪೇಕ್ಷಕಃ ।
ಮನ್ಮಾಯಾರಚನಾಮೇತಾಂ ವಿಜ್ಞಾಯೋಪಶಮಂ ವ್ರಜ ॥ ೪೯ ॥

ಭಗವಾನ್ ಶ್ರೀಕೃಷ್ಣನು ಹೇಳಿದನು – ಜರಾವ್ಯಾಧನೇ! ಹೆದರಬೇಡ, ಮೇಲೇಳು. ನೀನು ನನಗೆ ಇಷ್ಟವಾದುದನ್ನೇ ಮಾಡಿರುವೆ. ನನ್ನ ಆಜ್ಞೆಯಿಂದ ನೀನು ದೊಡ್ಡ-ದೊಡ್ಡ ಪುಣ್ಯಾತ್ಮರಿಗೆ ದೊರಕುವಂತಹ ಸ್ವರ್ಗಕ್ಕೆ ಹೋಗಿ ವಾಸಿಸು. ॥ ೩೯ ॥

ಶ್ರೀಶುಕಮುನಿಗಳು ಹೇಳುತ್ತಾರೆ – ಪರೀಕ್ಷಿತನೇ ! ಭಗವಾನ್ ಶ್ರೀಕೃಷ್ಣನು ತನ್ನ ಇಚ್ಛೆಯಿಂದಲೇ ಶರೀರವನ್ನು ಧರಿಸಿದ್ದನು. ಆವನು ಜರಾವ್ಯಾಧನಿಗೆ ಹೀಗೆ ಅಪ್ಪಣೆ ಮಾಡಿದಾಗ ಅವನು ಭಗವಂತನಿಗೆ ಮೂರು ಪ್ರದಕ್ಷಿಣೆ ಬಂದು, ನಮಸ್ಕರಿಸಿ, ವಿಮಾನವನ್ನು ಹತ್ತಿ ದಿವ್ಯಲೋಕಕ್ಕೆ ಹೊರಟು ಹೋದನು. ॥ ೪೦ ॥ ಭಗವಾನ್ ಶ್ರೀಕೃಷ್ಣನ ಸಾರಥಿ ದಾರುಕನು ಅವನನ್ನು ಹುಡುಕುತ್ತಾ, ಅವನು ಧರಿಸಿದ ತುಲಸೀಮಾಲೆಯ ಪರಿಮಳದ ಓಘವನ್ನು ಹಿಡಿದು, ಶ್ರೀಕೃಷ್ಣನಿರುವ ಸ್ಥಳವನ್ನು ಗುರುತಿಸಿ ಅಲ್ಲಿಗೆ ಬಂದು ಸೇರಿದನು. ॥ ೪೧ ॥ ದಾರುಕನು ಅಲ್ಲಿಗೆ ಹೋಗಿ ನೋಡಿದನು – ಭಗವಾನ್ ಶ್ರೀಕೃಷ್ಣನು ಅರಳೀಮರದ ಕೆಳಗೆ ಕುಳಿತಿರುವನು. ಸಹಿಸಲಸಾಧ್ಯವಾದ ತೇಜಸ್ಸಿನಿಂದ ಕೂಡಿದ ಆಯುಧಗಳು ಮೂರ್ತಿಮಂತರಾಗಿ ಅವನ ಸೇವೆಯಲ್ಲಿ ನಿರತವಾಗಿವೆ. ಅವನನ್ನು ನೋಡಿ ದಾರುಕನ ಹೃದಯದಲ್ಲಿ ಪ್ರೇಮದ ನೆರೆಯೇ ಬಂದಂತಾಯಿತು. ಕಣ್ಣುಗಳಿಂದ ಅಶ್ರುಗಳು ಧಾರಾಕಾರವಾಗಿ ಹರಿದವು. ರಥದಿಂದ ಹಾರಿ ಭಗವಂತನ ಚರಣದಲ್ಲಿ ಕುಸಿದು ಬಿದ್ದನು. ॥ ೪೨ ॥ ದಾರುಕನು ಭಗವಂತನಲ್ಲಿ – ಸ್ವಾಮಿ ! ರಾತ್ರಿಯಲ್ಲಿ ಚಂದ್ರನು ಮರೆಯಾದಾಗ ದಿಕ್ಕುಗಳ ಅರಿವು ಆಗದೆ, ಅಂಧಕಾರದಿಂದ ಏನೂ ಕಾಣದಂತೆಯೇ ನಿನ್ನ ಈ ಚರಣ ಕಮಲಗಳನ್ನು ನೋಡದೆ ನನಗೆ ಎಲ್ಲೆಡೆಗಳಲ್ಲಿ ಕತ್ತಲೆಯೇ ಕಂಡು ಬರುತ್ತದೆ. ನನಗೆ ದಿಕ್ಕುಗಳ ಜ್ಞಾನವಿಲ್ಲ, ಹೃದಯದಲ್ಲಿ ಶಾಂತಿಯೂ ಇಲ್ಲ ಎಂದು ಪ್ರಾರ್ಥಿಸಿದನು. ॥ ೪೩ ॥ ಪರೀಕ್ಷಿತನೇ ! ದಾರುಕನು ಹೀಗೆ ಹೇಳುತ್ತಿರುವಂತೆ ಅವನ ಇದರಿಲ್ಲೇ ಭಗವಂತನ ಗುರುಡ ಧ್ವಜ ರಥವು, ಪತಾಕೆ, ಕುದುರೆಗಳೊಂದಿಗೆ ಆಕಾಶಕ್ಕೆ ಹಾರಿ ಹೋಯಿತು. ॥ ೪೪ ॥ ಅದರ ಬೆನ್ನಲ್ಲೇ ಭಗವಂತನ ದಿವ್ಯ ಆಯುಧಗಳೂ ಹೊರಟುಹೋದವು. ಇದೆಲ್ಲವನ್ನು ನೋಡಿದಾಗ ದಾರುಕನಿಗೆ ಆಶ್ಚರ್ಯದ ಸೀಮೆಯೇ ಉಳಿಯಲಿಲ್ಲ, ಆಗ ಭಗವಂತನು ಅವನಲ್ಲಿ ಹೇಳಿದನು. ॥ ೪೫ ॥ ದಾರುಕನೇ ! ಈಗ ನೀನು ದ್ವಾರಕೆಗೆ ಹೊರಟುಹೋಗು. ಅಲ್ಲಿ ಯದುವಂಶೀಯರ ಪಾರಸ್ಪರಿಕ ಸಂಹಾರ, ಅಣ್ಣ ಬಲರಾಮನ ಪರಮಗತಿ ಮತ್ತು ನನ್ನ ಸ್ವಧಾಮಗಮನದ ವಾರ್ತೆಯನ್ನು ಎಲ್ಲರಿಗೆ ಹೇಳು. ॥ ೪೬ ॥ ಈಗ ನೀವೆಲ್ಲರೂ ನಿಮ್ಮ-ನಿಮ್ಮ ಪರಿವಾರಗಳೊಂದಿಗೆ ದ್ವಾರಕೆಯಲ್ಲಿ ಇರಬಾರದು. ನಾನು ಇಲ್ಲದಿರುವುದರಿಂದ ಸಮುದ್ರವು ಆ ನಗರಿಯನ್ನು ಮುಳುಗಿಸಿಬಿಡುತ್ತದೆ. ॥ ೪೭ ॥ ಎಲ್ಲ ಜನರು ತಮ್ಮ-ತಮ್ಮ ಧನ-ಸಂಪತ್ತು, ಕುಟುಂಬಸಹಿತ, ನನ್ನ ತಂದೆ-ತಾಯಿಯರನ್ನು ಕರಕೊಂಡು ಅರ್ಜುನನ ಸಂರಕ್ಷಣೆಯಲ್ಲಿ ಇಂದ್ರಪ್ರಸ್ಥಕ್ಕೆ ಹೋಗಿರಿ. ॥ ೪೮ ॥ ದಾರುಕನೇ ! ನೀನು ನನ್ನ ಮೂಲಕ ಉಪದೇಶಿಸಲ್ಪಟ್ಟ ಭಾಗವತ ಧರ್ಮವನ್ನು ಆಶ್ರಯಿಸು. ಜ್ಞಾನನಿಷ್ಠನಾಗಿ, ಎಲ್ಲವುಗಳಿಂದ ನಿರಪೇಕ್ಷನಾಗು. ಈ ದೃಶ್ಯವನ್ನು ನನ್ನ ಮಾಯೆಯ ರಚನೆ ಎಂದು ತಿಳಿದು ಶಾಂತನಾಗು. ॥ ೪೯ ॥

ಇತ್ಯುಕ್ತಸ್ತಂ ಪರಿಕ್ರಮ್ಯ ನಮಸ್ಕೃತ್ಯ ಪುನಃ ಪುನಃ ।
ತತ್ಪಾದೌ ಶೀರ್ಷ್ಣ್ಯುಪಾಧಾಯ ದುರ್ಮನಾಃ ಪ್ರಯಯೌ ಪುರೀಮ್
॥ ೫೦ ॥

ಭಗವಂತನ ಈ ಆದೇಶವನ್ನು ಪಡೆದು ದಾರುಕನು ಭಗವಂತನಿಗೆ ಪ್ರದಕ್ಷಿಣೆಮಾಡಿ, ಅವನ ಚರಣಕಮಲಗಳಲ್ಲಿ ತನ್ನ ಶಿರಸ್ಸನ್ನಿಟ್ಟು ಪದೇ-ಪದೇ ನಮಸ್ಕರಿಸಿದನು. ಅನಂತರ ಖಿನ್ನವಾದ ಮನಸ್ಸಿನಿಂದ ದ್ವಾರಕೆಗೆ ಹೊರಟುಹೋದನು. ॥ ೫೦ ॥

ಮೂವತ್ತನೆಯ ಅಧ್ಯಾಯವು ಮುಗಿಯಿತು. ॥ ೩೦ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಏಕಾದಶಸ್ಕಂಧೇ ತ್ರಿಂಶೋಽಧ್ಯಾಯಃ ॥ ೩೦ ॥

ಮೂವತ್ತೊಂದನೆಯ ಅಧ್ಯಾಯ

ಶ್ರೀಭಗವಂತನ ಸ್ವಧಾಮಗಮನ

ಶ್ರೀಶುಕ ಉವಾಚ

ಅಥ ತತ್ರಾಗಮದ್ಬ್ರಹ್ಮಾ ಭವಾನ್ಯಾ ಚ ಸಮಂ ಭವಃ ।
ಮಹೇಂದ್ರಪ್ರಮುಖಾ ದೇವಾ ಮುನಯಃ ಸಪ್ರಜೇಶ್ವರಾಃ
॥ ೧ ॥

ಪಿತರಃ ಸಿದ್ಧಗಂಧರ್ವಾ ವಿದ್ಯಾಧರಮಹೋರಗಾಃ ।
ಚಾರಣಾ ಯಕ್ಷರಕ್ಷಾಂಸಿ ಕಿನ್ನರಾಪ್ಸರಸೋ ದ್ವಿಜಾಃ
॥ ೨ ॥

ದ್ರಷ್ಟುಕಾಮಾ ಭಗವತೋ ನಿರ್ಯಾಣಂ ಪರಮೋತ್ಸುಕಾಃ ।
ಗಾಯಂತಶ್ಚ ಗೃಣಂತಶ್ಚ ಶೌರೇಃ ಕರ್ಮಾಣಿ ಜನ್ಮ ಚ
॥ ೩ ॥

ವವೃಷುಃ ಪುಷ್ಪವರ್ಷಾಣಿ ವಿಮಾನಾವಲಿಭಿರ್ನಭಃ ।
ಕುರ್ವಂತಃ ಸಂಕುಲಂ ರಾಜನ್ಭಕ್ತ್ಯಾ ಪರಮಯಾ ಯುತಾಃ
॥ ೪ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತರಾಜನೇ! ದಾರುಕನು ಹೊರಟುಹೋದ ಮೇಲೆ ಬ್ರಹ್ಮದೇವರು, ಶಿವ ಪಾರ್ವತಿಯರು, ಇಂದ್ರಾದಿಲೋಕಪಾಲರು, ಮರೀಚಿ ಆದಿ ಪ್ರಜಾಪತಿಗಳು, ದೊಡ್ಡ-ದೊಡ್ಡ ಋಷಿ-ಮುನಿಗಳು, ಸಿದ್ಧರು, ಪಿತೃಗಳು, ಗಂಧರ್ವರು, ವಿದ್ಯಾಧರರು, ನಾಗರು, ಚಾರಣರು, ಯಕ್ಷ-ರಾಕ್ಷಸರು, ಕಿನ್ನರರು ; ಅಪ್ಸರೆಯರು, ಗರುಡ ಆದಿ ಪಕ್ಷಿಗಳು ಹಾಗೂ ಮೈತ್ರೇಯರೇ ಆದಿ ಬ್ರಾಹ್ಮಣರು ಭಗವಾನ್ ಶ್ರೀಕೃಷ್ಣನ ಪರಮಧಾಮ ಪ್ರಸ್ಥಾನವನ್ನು ನೋಡಲು ತುಂಬಾ ಉತ್ಸುಕತೆಯಿಂದ ಅಲ್ಲಿಗೆ ಬಂದರು. ಅವರೆಲ್ಲರೂ ಭಗವಾನ್ ಶ್ರೀಕೃಷ್ಣನ ಜನ್ಮ ಮತ್ತು ಲೀಲೆಗಳನ್ನು ಹಾಡುತ್ತಾ, ವರ್ಣಿಸುತ್ತಿದ್ದರು. ಅವರ ವಿಮಾನಗಳಿಂದ ಆಕಾಶವಿಡೀ ತುಂಬಿಹೋಗಿತ್ತು. ಅವರು ತುಂಬುಭಕ್ತಿಯಿಂದ ಭಗವಂತನ ಮೇಲೆ ಪುಷ್ಪವೃಷ್ಟಿ ಮಾಡುತ್ತಿದ್ದರು. ॥ ೧-೪ ॥

ಭಗವಾನ್ಪಿತಾಮಹಂ ವೀಕ್ಷ್ಯ ವಿಭೂತೀರಾತ್ಮನೋ ವಿಭುಃ ।
ಸಂಯೋಜ್ಯಾತ್ಮನಿ ಚಾತ್ಮಾನಂ ಪದ್ಮನೇತ್ರೇ ನ್ಯಮೀಲಯತ್
॥ ೫ ॥

ಸರ್ವವ್ಯಾಪಕ ಭಗವಾನ್ ಶ್ರೀಕೃಷ್ಣನು ತನ್ನದೇ ವಿಭೂತಿಸ್ವರೂಪ ಲೋಕಪಿತಾಮಹ ಬ್ರಹ್ಮನನ್ನು ಮತ್ತು ಬೇರೆ ದೇವತೆಗಳನ್ನು, ಋಷಿ-ಮುನೀಶ್ವರರನ್ನು ನೋಡಿ ತನ್ನ ಆತ್ಮಸ್ವರೂಪದಲ್ಲಿ ಸ್ಥಿತನಾಗಿ, ಕಮಲದಂತಿರುವ ಕಣ್ಣುಗಳನ್ನು ಮುಚ್ಚಿಕೊಂಡನು. ॥ ೫ ॥

ಲೋಕಾಭಿರಾಮಾಂ ಸ್ವತನುಂ ಧಾರಣಾಧ್ಯಾನಮಂಗಲಮ್ ।
ಯೋಗಧಾರಣಯಾಽಽಗ್ನೇಯ್ಯಾಽದಗ್ಧ್ವಾ ಧಾಮಾವಿಶತ್ಸ್ವಕಮ್
॥ ೬ ॥

ದಿವಿ ದುಂದುಭಯೋ ನೇದುಃ ಪೇತುಃ ಸುಮನಸಶ್ಚ ಖಾತ್ ।
ಸತ್ಯಂ ಧರ್ಮೋ ಧೃತಿರ್ಭೂಮೇಃ ಕೀರ್ತಿಃ ಶ್ರೀಶ್ಚಾನು ತಂ ಯಯುಃ
॥ ೭ ॥

ಭಗವಂತನ ಮಂಗಲಮಯ ಶ್ರೀವಿಗ್ರಹವು ಉಪಾಸಕರಿಗಾಗಿ ಧಾರಣೆ ಮತ್ತು ಧ್ಯಾನದ ಪರಮ ಮಂಗಲಮಯ ಆಶ್ರಯವಾಗಿದೆ. ಸಮಸ್ತ ಲೋಕಗಳ ಆಶ್ರಯವೂ ಆಗಿದೆ ಹಾಗೂ ಅವುಗಳಿಗೆ ಆನಂದವನ್ನು ಪ್ರದಾನಮಾಡುವುದಾಗಿದೆ. ಆದ್ದರಿಂದ ಭಗವಂತನು ತನ್ನ ಆ ಮಂಗಲಮಯ ವಿಗ್ರಹವನ್ನು ಯೋಗಧಾರಣೆಯ ಅಗ್ನಿಯಿಂದ ಸುಡದೆಯೇ ಸಶರೀರವಾಗಿ ತನ್ನ ಧಾಮಕ್ಕೆ ತೆರಳಿದನು. ॥ ೬ ॥ ಆಗ ಸ್ವರ್ಗದಲ್ಲಿ ದೇವ ದುಂದುಭಿಗಳು ಮೊಳಗಿದವು. ಆಕಾಶದಿಂದ ಪುಷ್ಪವೃಷ್ಟಿ ಆಗತೊಡಗಿತು. ಪರೀಕ್ಷಿತನೇ! ಭಗವಾನ್ ಶ್ರೀಕೃಷ್ಣನ ಹಿಂದೆ-ಹಿಂದೆಯೇ ಭೂಮಿಯಿಂದ ಸತ್ಯ, ಧರ್ಮ, ಧೃತಿ, ಕೀರ್ತಿ ಮತ್ತು ಶ್ರೀದೇವಿ ಹೊರಟುಹೋದರು. ॥ ೭ ॥

ದೇವಾದಯೋ ಬ್ರಹ್ಮಮುಖ್ಯಾ ನ ವಿಶಂತಂ ಸ್ವಧಾಮನಿ ।
ಅವಿಜ್ಞಾತಗತಿಂ ಕೃಷ್ಣಂ ದದೃಶುಶ್ಚಾತಿವಿಸ್ಮಿತಾಃ ॥ ೮ ॥

ಸೌದಾಮನ್ಯಾ ಯಥಾಽಽಕಾಶೇ ಯಾಂತ್ಯಾ ಹಿತ್ವಾಭ್ರಮಂಡಲಮ್ ।
ಗತಿರ್ನ ಲಕ್ಷ್ಯತೇ ಮರ್ತ್ಯೈಸ್ತಥಾ ಕೃಷ್ಣಸ್ಯ ದೈವತೈಃ ॥ ೯ ॥

ಬ್ರಹ್ಮರುದ್ರಾದಯಸ್ತೇ ತು ದೃಷ್ಟ್ವಾ ಯೋಗಗತಿಂ ಹರೇಃ ।
ವಿಸ್ಮಿತಾಸ್ತಾಂ ಪ್ರಶಂಸಂತಃ ಸ್ವಂ ಸ್ವಂ ಲೋಕಂ ಯಯುಸ್ತದಾ ॥ ೧೦ ॥

ರಾಜನ್ ಪರಸ್ಯ ತನುಭೃಜ್ಜನನಾಪ್ಯಯೇಹಾ
ಮಾಯಾವಿಡಂಬನಮವೇಹಿ ಯಥಾ ನಟಸ್ಯ ।
ಸೃಷ್ಟ್ವಾಽಽತ್ಮನೇದಮನುವಿಶ್ಯ ವಿಹೃತ್ಯ ಚಾಂತೇ
ಸಂಹೃತ್ಯ ಚಾತ್ಮಮಹಿಮೋಪರತಃ ಸ ಆಸ್ತೇ ॥ ೧೧ ॥

ಮರ್ತ್ಯೇನ ಯೋ ಗುರುಸುತಂ ಯಮಲೋಕನೀತಂ
ತ್ವಾಂ ಚಾನಯಚ್ಛರಣದಃ ಪರಮಾಸ್ತ್ರದಗ್ಧಮ್ ।
ಜಿಗ್ಯೇಽಂತಕಾಂತಕಮಪೀಶಮಸಾವನೀಶಃ
ಕಿಂ ಸ್ವಾವನೇ ಸ್ವರನಯನ್ಮೃಗಯುಂ ಸದೇಹಮ್ ॥ ೧೨ ॥

ತಥಾಪ್ಯಶೇಷಸ್ಥಿತಿಸಂಭವಾಪ್ಯಯೇ-
ಷ್ವನನ್ಯಹೇತುರ್ಯದಶೇಷಶಕ್ತಿಧೃಕ್ ।
ನೈಚ್ಛತ್ಪ್ರಣೇತುಂ ವಪುರತ್ರ ಶೇಷಿತಂ
ಮರ್ತ್ಯೇನ ಕಿಂ ಸ್ವಸ್ಥಗತಿಂ ಪ್ರದರ್ಶಯನ್ ॥ ೧೩ ॥

ಭಗವಾನ್ ಶ್ರೀಕೃಷ್ಣನ ಗತಿಯು ಮನ, ವಚನಗಳಿಗೆ ಅತೀತವಾಗಿದೆ. ಅದರಿಂದಲೇ ಭಗವಂತನು ತನ್ನ ಧಾಮಕ್ಕೆ ಪ್ರವೇಶಿಸುವಾಗ ಬ್ರಹ್ಮಾದಿ ದೇವತೆಗಳಿಂದಲೂ ಕೂಡ ಅದನ್ನು ನೋಡಲಾಗಲಿಲ್ಲ. ಈ ಘಟನೆಯಿಂದ ಅವರಿಗೆ ಭಾರೀ ಆಶ್ಚರ್ಯವಾಯಿತು. ॥ ೮ ॥ ಆಕಾಶದಲ್ಲಿ ಮಿಂಚು ಮೋಡಗಳಲ್ಲಿ ಕಾಣಿಸಿಕೊಂಡು ಕೂಡಲೇ ಆಕಾಶದಲ್ಲೇ ವಿಲೀನವಾಗಿ ಹೋಗುತ್ತದೆ. ಅದನ್ನು ಯಾವ ಮನುಷ್ಯನಿಂದಲೂ ನೋಡಲಾಗುವುದಿಲ್ಲ. ಹಾಗೆಯೇ ಭಗವಾನ್ ಶ್ರೀಕೃಷ್ಣನ ಸ್ವಧಾಮಗಮನದ ಲೀಲೆಯನ್ನು ನೋಡಲು ಅಲ್ಲಿ ನೆರೆದ ದೊಡ್ಡ-ದೊಡ್ಡ ದೇವತೆಗಳು ಋಷಿಗಳು ಮುನಿಗಳು ಯಾರಿಂದಲೂ ನೋಡಲಾಗಲಿಲ್ಲ. ॥ ೯ ॥ ಬ್ರಹ್ಮಾ, ಭಗವಾನ್ ಶಂಕರ ಮುಂತಾದ ದೇವತೆಗಳು ಭಗವಂತನ ಈ ಪರಮಯೋಗಮಯ ಗತಿಯನ್ನು ನೋಡಿ ಬಹು ವಿಸ್ಮಯಗೊಂಡು ಅವನನ್ನು ಸ್ತುತಿಸುತ್ತಾ ತಮ್ಮ-ತಮ್ಮ ಲೋಕಗಳಿಗೆ ತೆರಳಿದರು. ॥ ೧೦ ॥ ಪರೀಕ್ಷಿತನೇ! ನಟನಾದವನು ಅನೇಕ ವಿಧದ ಭೂಮಿಕೆಗಳನ್ನು ಧರಿಸಿದರೂ ಅವೆಲ್ಲವುಗಳಿಂದ ನಿರ್ಲೇಪನಾಗಿಯೇ ಇರುವಂತೆ ಭಗವಂತನು ಮನುಷ್ಯರಂತೆ ಅವತರಿಸುವುದು, ಮತ್ತೆ ಅದನ್ನು ತಿರೋಹಿತಗೊಳಿಸುವುದು, ನಾನಾ ರೀತಿಯ ಲೀಲೆಗಳನ್ನು ನಡೆಸುವುದು, ಇದೆಲ್ಲವೂ ಅವನ ಮಾಯಾವಿಲಾಸಮಾತ್ರವಾಗಿದೆ – ಅಭಿನಯಮಾತ್ರವಾಗಿದೆ. ಅವನು ಸ್ವತಃ ಈ ಜಗತ್ತನ್ನು ಸೃಷ್ಟಿಸಿ, ಇದರಲ್ಲಿ ಪ್ರವೇಶಿಸಿ ವಿಹರಿಸುತ್ತಾನೆ. ಕೊನೆಗೆ ಸಂಹಾರ ಲೀಲೆಗಳನ್ನು ಗೈದು ಎಲ್ಲದರಿಂದಲೂ ಉಪರತನಾಗಿ ತನ್ನ ಅನಂತ ಮಹಿಮಾಮಯ ಸ್ವರೂಪದಲ್ಲೇ ಸ್ಥಿತನಾಗಿರುತ್ತಾನೆ. ॥೧೧॥ ಪ್ರಿಯ ಪರೀಕ್ಷಿತನೇ! ಭಗವಾನ್ ಶ್ರೀಕೃಷ್ಣನು ಯಮಪುರಕ್ಕೆ ಹೋಗಿ ಗುರುಪುತ್ರರನ್ನು ಮರ್ತ್ಯಶರೀರದಿಂದಲೇ ತಂದನು. ಬ್ರಹ್ಮಾಸ್ತ್ರದಿಂದ ನಿನ್ನ ಶರೀರವು ಸುಟ್ಟುಹೋದಾಗ ಅದನ್ನು ಅವನು ಜೀವಂತವಾಗಿಸಿದನು. ಅವನು ಕಾಲಕ್ಕೂ ಮಹಾಕಾಲನಾದ ಶಂಕರನನ್ನು ಯುದ್ಧದಲ್ಲಿ ಗೆದ್ದುಕೊಂಡನು. ಜರಾವ್ಯಾಧನು ಇಷ್ಟೊಂದು ಭಯಂಕರವಾದ ಅಪರಾಧಮಾಡಿದರೂ, ಅವನ ಅಪರಾಧವನ್ನು ಕ್ಷಮಿಸಿ ಅವನನ್ನು ಸಶರೀರದಿಂದ ಸ್ವರ್ಗಕ್ಕೆ ಕಳಿಸಿಬಿಟ್ಟನು. ಹಾಗಿರುವಾಗ ಸರ್ವಸಮರ್ಥ ಪ್ರಭು ಶ್ರೀಕೃಷ್ಣನು ತನ್ನ ಶರೀರವನ್ನು ಇಲ್ಲಿ ಇರಿಸಲಾರನೇನು ? ಅವಶ್ಯವಾಗಿ ಇರಿಸುತ್ತಿದ್ದನು. ಇದರಲ್ಲಿ ಆಶ್ಚರ್ಯವೇನಿದೆ ? ॥ ೧೨ ॥ ಭಗವಾನ್ ಶ್ರೀಕೃಷ್ಣನು ಸಮಸ್ತ ಜಗತ್ತಿನ ಉತ್ಪತ್ತಿ, ಸ್ಥಿತಿ, ಸಂಹಾರಗಳ ನಿರಪೇಕ್ಷ ಕಾರಣನಾಗಿದ್ದಾನೆ. ಸಮಸ್ತ ಶಕ್ತಿಗಳನ್ನು ಧರಿಸುವಂತಹವನು. ಹಾಗಿರುವಾಗ ತನ್ನ ಶರೀರವನ್ನು ಇರಿಸುವುದು ಅವನಿಗೆ ಅಶಕ್ಯವಾಗಿತ್ತೆ? ಭಗವಂತನು ಸಮಸ್ತ ಯಾದವರ ಸಂಹಾರವಾದ ಬಳಿಕ ತನ್ನ ಶರೀರವನ್ನು ಇರಿಸಿಕೊಳ್ಳಲು ಇಚ್ಛಿಸಲಿಲ್ಲ. (ಇಷ್ಟೊಂದು ವಿಶಾಲ ದ್ವಾರಕೆಯ ಐಶ್ವರ್ಯದ ಕಡೆಗೆ ಹಾಗೂ ತನ್ನ ಕುಟುಂಬದ ಕಡೆಗೆ ಪೂರ್ಣ ಅನಾಸಕ್ತನಾಗಿ ತನ್ನ ದಿವ್ಯಧಾಮಕ್ಕೆ ಹೊರಟುಹೋದನು.) ಮನುಷ್ಯಶರೀರದ ಮೂಲಕ ಯೋಗಿಯು ಹೇಗೆ ದಿವ್ಯಧಾಮದ ಯಾತ್ರೆ ಮಾಡಬೇಕು ? ಈ ಆಚರಣೆಯನ್ನು ಕಲಿಸಲಿಕ್ಕಾಗಿ

ಯ ಏತಾಂ ಪ್ರಾತರುತ್ಥಾಯ ಕೃಷ್ಣಸ್ಯ ಪದವೀಂ ಪರಾಮ್ ।
ಪ್ರಯತಃ ಕೀರ್ತಯೇದ್ಭಕ್ತ್ಯಾ ತಾಮೇವಾಪ್ನೋತ್ಯನುತ್ತಮಾಮ್
॥ ೧೪ ॥

ದಾರುಕೋ ದ್ವಾರಕಾಮೇತ್ಯ ವಸುದೇವೋಗ್ರಸೇನಯೋಃ ।
ಪತಿತ್ವಾ ಚರಣಾವಸ್ರೈರ್ನ್ಯಷಿಂಚತ್ಕೃಷ್ಣವಿಚ್ಯುತಃ
॥ ೧೫ ॥

ಕಥಯಾಮಾಸ ನಿಧನಂ ವೃಷ್ಣೀನಾಂ ಕೃತ್ಸ್ನಶೋ ನೃಪ ।
ತಚ್ಛ್ರುತ್ವೋದ್ವಿಗ್ನಹೃದಯಾ ಜನಾಃ ಶೋಕವಿಮೂರ್ಛಿತಾಃ
॥ ೧೬ ॥

ತತ್ರ ಸ್ಮ ತ್ವರಿತಾ ಜಗ್ಮುಃ ಕೃಷ್ಣವಿಶ್ಲೇಷವಿಹ್ವಲಾಃ ।
ವ್ಯಸವಃ ಶೇರತೇ ಯತ್ರ ಜ್ಞಾತಯೋ ಘ್ನಂತ ಆನನಮ್
॥ ೧೭ ॥

ದೇವಕೀ ರೋಹಿಣೀ ಚೈವ ವಸುದೇವಸ್ತಥಾ ಸುತೌ ।
ಕೃಷ್ಣರಾಮಾವಪಶ್ಯಂತಃ ಶೋಕಾರ್ತಾ ವಿಜಹುಃ ಸ್ಮೃತಿಮ್
॥ ೧೮ ॥

ಪ್ರಾಣಾಂಶ್ಚ ವಿಜಹುಸ್ತತ್ರ ಭಗವದ್ವಿರಹಾತುರಾಃ ।
ಉಪಗುಹ್ಯ ಪತೀಂಸ್ತಾತ ಚಿತಾಮಾರುರುಹುಃ ಸ್ತ್ರಿಯಃ
॥ ೧೯ ॥

ರಾಮಪತ್ನ್ಯಶ್ಚ ತದ್ದೇಹಮುಪಗುಹ್ಯಾಗ್ನಿ ಮಾವಿಶನ್ ।
ವಸುದೇವಪತ್ನ್ಯಸ್ತದ್ಗಾತ್ರಂ ಪ್ರದ್ಯುಮ್ನಾದೀನ್ಹರೇಃ ಸ್ನುಷಾಃ ।
ಕೃಷ್ಣಪತ್ನ್ಯೋಽವಿಶನ್ನಗ್ನಿಂ ರುಕ್ಮಿಣ್ಯಾದ್ಯಾಸ್ತದಾತ್ಮಿಕಾಃ
॥ ೨೦ ॥

ಅರ್ಜುನಃ ಪ್ರೇಯಸಃ ಸಖ್ಯುಃ ಕೃಷ್ಣಸ್ಯ ವಿರಹಾತುರಃ ।
ಆತ್ಮಾನಂ ಸಾಂತ್ವಯಾಮಾಸ ಕೃಷ್ಣಗೀತೈಃ ಸದುಕ್ತಿಭಿಃ
॥ ೨೧ ॥

ಬಂಧೂನಾಂ ನಷ್ಟಗೋತ್ರಾಣಾಮರ್ಜುನಃ ಸಾಂಪರಾಯಿಕಮ್ ।
ಹತಾನಾಂ ಕಾರಯಾಮಾಸ ಯಥಾವದನುಪೂರ್ವಶಃ
॥ ೨೨ ॥

ದ್ವಾರಕಾಂ ಹರಿಣಾ ತ್ಯಕ್ತಾಂ ಸಮುದ್ರೋಽಪ್ಲಾವಯತ್ ಕ್ಷಣಾತ್ ।
ವರ್ಜಯಿತ್ವಾ ಮಹಾರಾಜ ಶ್ರೀಮದ್ಭಗವದಾಲಯಮ್
॥ ೨೩ ॥

ಭಗವಂತನು ಹೀಗೆ ಮಾಡಿರಬಹುದೇ ? ಅರ್ಥಾತ್ ಯೋಗಿಯು ಸಿದ್ಧಿಗಳ ಮೂಲಕ ತನ್ನ ಶರೀರವನ್ನು ಉಳಿಸಿಕೊಳ್ಳಲು ಹಾಗೂ ಸಂಸಾರದಲ್ಲಿ, ಮನೆಯಲ್ಲಿ, ಕುಟುಂಬದಲ್ಲಿ ರಮಮಾಣನಾಗಲು ಇಚ್ಛಿಸಬಾರದು. ಪೂರ್ಣವಾಗಿ ಅನಾಸಕ್ತನಾಗಿ ತನ್ನ ದಿವ್ಯಧಾಮ (ಪರಮಪದ)ದ ಯಾತ್ರೆಯನ್ನು ಕೈಗೊಳ್ಳಬೇಕು. ॥ ೧೩ ॥ ಪ್ರಾತಃ ಕಾಲ ಎದ್ದು ಭಗವಾನ್ ಶ್ರೀಕೃಷ್ಣನ ಪರಮಧಾಮಗಮನದ ಈ ಕಥೆಯನ್ನು ಏಕಾಗ್ರಚಿತ್ತದಿಂದ, ಭಕ್ತಿಯೊಂದಿಗೆ ಕೀರ್ತಿಸುವವನಿಗೆ ಭಗವಂತನ ಆ ಸರ್ವಶ್ರೇಷ್ಠ ಪರಮಪದ ಪ್ರಾಪ್ತಿಯಾಗುವುದು. ॥ ೧೪ ॥

ಇತ್ತ ದಾರುಕನು ಭಗವಾನ್ ಶ್ರೀಕೃಷ್ಣನ ವಿರಹದಿಂದ ವ್ಯಾಕುಲ ನಾಗಿ ದ್ವಾರಕೆಗೆ ಬಂದನು ಮತ್ತು ವಸುದೇವನ ಹಾಗೂ ಉಗ್ರ ಸೇನನ ಚರಣಗಳಲ್ಲಿ ಬಿದ್ದು, ಅವನ್ನು ಕಣ್ಣೀರಿನಿಂದ ತೊಳೆದನು. ॥ ೧೫ ॥ ಪರೀಕ್ಷಿತನೇ ! ಅವನು ತನ್ನನ್ನು ಸಾವರಿಸಿಕೊಂಡು ಯದುವಂಶೀಯರ ವಿನಾಶದ ಎಲ್ಲಾ ವಿವರವನ್ನು ತಿಳಿಸಿದನು. ಅದನ್ನು ಕೇಳಿ ಜನರು ತುಂಬಾ ದುಃಖಿತರಾದರು ಮತ್ತು ಶೋಕ ದಿಂದ ಮೂರ್ಛಿತರಾದರು. ॥ ೧೬ ॥ ಭಗವಾನ್ ಶ್ರೀಕೃಷ್ಣನ ವಿಯೋಗದಿಂದ ವಿಹ್ವಲರಾಗಿ ಆ ಜನರು ತಲೆಚಚ್ಚಿಕೊಳ್ಳುತ್ತಾ, ಅವರ ಬಂಧು-ಬಾಂಧವರು ನಿಷ್ಪ್ರಾಣರಾಗಿ ಬಿದ್ದಲ್ಲಿಗೆ ಕೂಡಲೇ ತಲುಪಿದರು. ॥ ೧೭ ॥

ದೇವಕಿ, ರೋಹಿಣೀ ಮತ್ತು ವಸುದೇವನು ತಮ್ಮ ಪ್ರಿಯ ಪುತ್ರ ಶ್ರೀಕೃಷ್ಣ-ಬಲರಾಮರನ್ನು ಕಾಣದೆ ಶೋಕದಿಂದ ಪೀಡಿತರಾಗಿ ಎಚ್ಚರತಪ್ಪಿದರು. ॥ ೧೮ ॥ ಅವರು ಭಗವದ್ವಿರಹದಿಂದ ವ್ಯಾಕುಲ ರಾಗಿ ಅಲ್ಲೇ ತಮ್ಮ ಪ್ರಾಣಗಳನ್ನು ಬಿಟ್ಟು ಬಿಟ್ಟರು. ಸ್ತ್ರೀಯರು ತಮ್ಮ-ತಮ್ಮ ಪತಿಗಳ ಶವಗಳನ್ನು ಗುರುತಿಸಿ, ಅವನ್ನು ಹೃದಯಕ್ಕೆ ಒತ್ತಿಕೊಂಡು, ಅವರೊಂದಿಗೆ ಚಿತೆಯನ್ನೇರಿ ಭಸ್ಮವಾಗಿ ಹೋದರು. ॥ ೧೯ ॥ ಬಲರಾಮನ ಪತ್ನಿಯರು, ಅವನ ಶರೀರವನ್ನು, ವಸುದೇವನ ಪತ್ನಿಯರು ಅವನ ಶವವನ್ನು, ಭಗವಂತನ ಸೊಸೆಯರು ತಮ್ಮ ಪತಿಗಳ ಶವದೊಂದಿಗೆ ಅಗ್ನಿಪ್ರವೇಶ ಮಾಡಿದರು. ರುಕ್ಮಿಣಿಯೇ ಮೊದಲಾದ ಭಗವಾನ್ ಶ್ರೀಕೃಷ್ಣನ ಪಟ್ಟ ಮಹಿಷಿಯರು ಜಗತ್ಪತಿಯ ಧ್ಯಾನದಲ್ಲಿ ಮಗ್ನರಾಗಿ ಅಗ್ನಿಪ್ರವೇಶ ಮಾಡಿದರು. ॥ ೨೦ ॥

ಪರೀಕ್ಷಿತನೇ ! ಅರ್ಜುನನು ತನ್ನ ಪರಮ ಪ್ರಿಯತಮನೂ, ಸಖನೂ ಆದ ಭಗವಾನ್ ಶ್ರೀಕೃಷ್ಣನ ವಿರಹದಿಂದ ಮೊದಲಿಗೇನೋ ಅತ್ಯಂತ ವ್ಯಾಕುಲನಾದನು. ಮತ್ತೆ ಅವನು ಶ್ರೀಕೃಷ್ಣನ ಗೀತೋಕ್ತ ಸದುಪದೇಶಗಳನ್ನು ಸ್ಮರಿಸುತ್ತಾ ತನ್ನ ಮನಸ್ಸನ್ನು ಸಮಾಧಾನಗೊಳಿಸಿದನು. ॥ ೨೧ ॥ ಯದುವಂಶದ ಮೃತ ವ್ಯಕ್ತಿಗಳಲ್ಲಿ ಪಿಂಡ ಕೊಡಲು ಯಾರೂ ಇಲ್ಲದ್ದರಿಂದ ಶ್ರಾದ್ಧಾದಿಗಳನ್ನು ಅರ್ಜುನನೇ ಕ್ರಮವಾಗಿ, ವಿಧಿಪೂರ್ವಕವಾಗಿ ಮಾಡಿಸಿದನು. ॥ ೨೨ ॥ ಮಹಾರಾಜನೇ ! ಭಗವಂತನು ಇಲ್ಲದಿದ್ದಾಗ ಸಮುದ್ರವು ಏಕಮಾತ್ರ ಭಗವಾನ್ ಶ್ರೀಕೃಷ್ಣನ ಅರಮನೆಯನ್ನು ಬಿಟ್ಟು ಒಂದೇ ಕ್ಷಣದಲ್ಲಿ ಇಡೀ ದ್ವಾರಕೆಯನ್ನು ಮುಳುಗಿಸಿಬಿಟ್ಟಿತು. ॥ ೨೩ ॥

ನಿತ್ಯಂ ಸಂನಿಹಿತಸ್ತತ್ರ ಭಗವಾನ್ ಮಧುಸೂದನಃ ।
ಸ್ಮೃತ್ಯಾಶೇಷಾಶುಭಹರಂ ಸರ್ವಮಂಗಲಮಂಗಲಮ್
॥ ೨೪ ॥

ಸ್ತ್ರೀಬಾಲವೃದ್ಧಾನಾದಾಯ ಹತಶೇಷಾನ್ ಧನಂಜಯಃ ।
ಇಂದ್ರಪ್ರಸ್ಥಂ ಸಮಾವೇಶ್ಯ ವಜ್ರಂ ತತ್ರಾಭ್ಯಷೇಚಯತ್
॥ ೨೫ ॥

ಶ್ರುತ್ವಾ ಸುಹೃದ್ವಧಂ ರಾಜನ್ನರ್ಜುನಾತ್ತೇ ಪಿತಾಮಹಾಃ ।
ತ್ವಾಂ ತು ವಂಶಧರಂ ಕೃತ್ವಾ ಜಗ್ಮುಃ ಸರ್ವೇ ಮಹಾಪಥಮ್
॥ ೨೬ ॥

ಯ ಏತದ್ದೇವದೇವಸ್ಯ ವಿಷ್ಣೋಃ ಕರ್ಮಾಣಿ ಜನ್ಮ ಚ ।
ಕೀರ್ತಯೇಚ್ಛ್ರದ್ಧಯಾ ಮರ್ತ್ಯಃ ಸರ್ವಪಾಪೈಃ ಪ್ರಮುಚ್ಯತೇ
॥ ೨೭ ॥

ಇತ್ಥಂ ಹರೇರ್ಭಗವತೋ ರುಚಿರಾವತಾರ-
ವೀರ್ಯಾಣಿ ಬಾಲಚರಿತಾನಿ ಚ ಶಂತಮಾನಿ ।
ಅನ್ಯತ್ರ ಚೇಹ ಚ ಶ್ರುತಾನಿ ಗೃಣನ್ಮನುಷ್ಯೋ
ಭಕ್ತಿಂ ಪರಾಂ ಪರಮಹಂಸಗತೌ ಲಭೇತ ॥ ೨೮ ॥

ಭಗವಾನ್ ಶ್ರೀಕೃಷ್ಣನು ಅಲ್ಲಿ ಈಗಲೂ ಸದಾ-ಸರ್ವದಾ ವಾಸಿಸುತ್ತಿರುವನು. ಆ ಸ್ಥಾನದ ಸ್ಮರಣಮಾತ್ರದಿಂದಲೇ ಎಲ್ಲ ಪಾಪ ತಾಪಗಳು ನಾಶವಾಗಿ, ಎಲ್ಲ ಮಂಗಲಗಳಿಗೂ ಮಂಗಲ ಉಂಟಾಗುವುದು. ॥ ೨೪ ॥ ಪ್ರಿಯ ಪರೀಕ್ಷಿತನೇ! ಪಿಂಡ ದಾನಾದಿಗಳ ಬಳಿಕ ಅಲ್ಲಿ ಉಳಿದಿದ್ದ ಸ್ತ್ರೀಯರೂ, ಬಾಲಕರು, ವೃದ್ಧರೇ ಮುಂತಾದವರನ್ನು ಕರೆದುಕೊಂಡು ಅರ್ಜುನನು ಇಂದ್ರ ಪ್ರಸ್ಥಕ್ಕೆ ಬಂದನು. ಅಲ್ಲಿ ಎಲ್ಲರಿಗೂ ಯಥಾಯೋಗ್ಯ ವಸತಿ ಏರ್ಪಡಿಸಿ ಮಥುರೆಯಲ್ಲಿ ಅನಿರುದ್ಧನ ಪುತ್ರ ವಜ್ರನಾಭನಿಗೆ ರಾಜ್ಯಾಭಿಷೇಕ ಮಾಡಿದನು. ॥ ೨೫ ॥ ರಾಜನೇ! ನಿನ್ನ ಪಿತಾಮಹನಾದ ಯುಧಿಷ್ಠಿರ ಮೊದಲಾದ ಪಾಂಡವರಿಗೆ ಯದುವಂಶೀಯರ ಸಂಹಾರವಾಯಿತು ಎಂಬುದು ಅರ್ಜುನನಿಂದಲೇ ತಿಳಿಯಿತು. ಆಗ ಅವರು ತನ್ನ ವಂಶಧರ ನಿನ್ನನ್ನು ರಾಜ್ಯಕ್ಕೆ ಪಟ್ಟಾಭಿಷೇಕಗೈದು ಹಿಮಾಲಯದ ವೀರಯಾತ್ರೆಯನ್ನು ಕೈಗೊಂಡರು. ॥ ೨೬ ॥

ನಾನು ನಿನಗೆ ದೇವತೆಗಳಿಗೂ ಆರಾಧ್ಯನಾದ ಭಗವಾನ್ ಶ್ರೀಕೃಷ್ಣನ ಜನ್ಮಲೀಲೆ ಮತ್ತು ಕರ್ಮಲೀಲೆಗಳನ್ನು ಹೇಳಿದೆ. ಶ್ರದ್ಧೆಯಿಂದೊಡಗೂಡಿ ಇದನ್ನು ಕೀರ್ತಿಸುವ ಮನುಷ್ಯನು ಸಮಸ್ತ ಪಾಪಗಳಿಂದ ಮುಕ್ತನಾಗಿ ಹೋಗುತ್ತಾನೆ. ॥ ೨೭ ॥ ಪರೀಕ್ಷಿತನೇ! ಈ ಪ್ರಕಾರ ಭಕ್ತಭಯಹಾರಿ ನಿಖಿಲ ಸೌಂದರ್ಯ-ಮಾಧುರ್ಯ ನಿಧಿ ಶ್ರೀಕೃಷ್ಣಚಂದ್ರನ ಅವತಾರ ಸಂಬಂಧೀ ರುಚಿರ ಪರಾಕ್ರಮ ಮತ್ತು ಈ ಶ್ರೀಮದ್ಭಾಗವತಮಹಾಪುರಾಣದಲ್ಲಿ ಹಾಗೂ ಬೇರೆ ಪುರಾಣಗಳಲ್ಲಿ ವರ್ಣಿತ ಪರಮಾನಂದಮಯ ಬಾಲಲೀಲೆ, ಕೈಶೋರಲೀಲೆ ಮುಂತಾದವುಗಳನ್ನು ಸಂಕೀರ್ತನೆ ಮಾಡುವ ಮನುಷ್ಯನಿಗೆ ಪರಮಹಂಸ ಮುನೀಂದ್ರರ ಅಂತಿಮ ಪ್ರಾಪ್ತವ್ಯವಾದ ಶ್ರೀಕೃಷ್ಣನ ಚರಣಗಳಲ್ಲಿ ಪರಾಭಕ್ತಿಯು ಪ್ರಾಪ್ತವಾಗುತ್ತದೆ.॥ ೨೮ ॥

ಮೂವತ್ತೊಂದನೆಯ ಅಧ್ಯಾಯವು ಮುಗಿಯಿತು. ॥ ೩೧ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಏಕಾದಶ ಸ್ಕಂಧೇ ಏಕತ್ರಿಂಶೋಽಧ್ಯಾಯಃ ॥ ೩೧ ॥

ಹನ್ನೊಂದನೆಯ ಸ್ಕಂಧವು ಸಂಪೂರ್ಣವಾಯಿತು.

ಹರಿಃಓಂ ತತ್ಸತ್ - ಹರಿಃಓಂ ತತ್ಸತ್

॥ ಓಂ ನಮೋ ಭಗವತೇ ವಾಸುದೇವಾಯ ॥

ಶ್ರೀಮದ್ಭಾಗವತಮಹಾಪುರಾಣಮ್

ದ್ವಾದಶಃ ಸ್ಕಂಧಃ

ಮೊದಲನೆಯ ಅಧ್ಯಾಯ

ಕಲಿಯುಗದ ರಾಜವಂಶಗಳ ವರ್ಣನೆ

ರಾಜೋವಾಚ

ಸ್ವಧಾಮಾನುಗತೇ ಕೃಷ್ಣೇ ಯದುವಂಶವಿಭೂಷಣೇ ।
ಕಸ್ಯ ವಂಶೋಽಭವತ್ಪೃಥ್ವ್ಯಾಮೇತದಾಚಕ್ಷ್ವ ಮೇ ಮುನೇ ॥ ೧ ॥

ಶ್ರೀಶುಕ ಉವಾಚ

ಯೋಽಂತ್ಯಃ ಪುರಂಜಯೋ ನಾಮ ಭಾವ್ಯೋ ಬಾರ್ಹದ್ರಥೋ ನೃಪ ।
ತಸ್ಯಾಮಾತ್ಯಸ್ತು ಶುನಕೋ ಹತ್ವಾ ಸ್ವಾಮಿನಮಾತ್ಮಜಮ್ ॥ ೨ ॥

ಪ್ರದ್ಯೋತಸಂಜ್ಞಂ ರಾಜಾನಂ ಕರ್ತಾ ಯತ್ಪಾಲಕಃ ಸುತಃ ।
ವಿಶಾಖಯೂಪಸ್ತತ್ಪುತ್ರೋ ಭವಿತಾ ರಾಜಕಸ್ತತಃ ॥ ೩ ॥

ನಂದಿವರ್ಧನಸ್ತತ್ಪುತ್ರಃ ಪಂಚ ಪ್ರದ್ಯೋತನಾ ಇಮೇ ।
ಅಷ್ಟತ್ರಿಂಶೋತ್ತರಶತಂ ಭೋಕ್ಷ್ಯಂತಿ ಪೃಥಿವೀಂ ನೃಪಾಃ ॥ ೪ ॥

ಶಿಶುನಾಗಸ್ತತೋ ಭಾವ್ಯಃ ಕಾಕವರ್ಣಸ್ತು ತತ್ಸುತಃ ।
ಕ್ಷೇಮಧರ್ಮಾ ತಸ್ಯ ಸುತಃ ಕ್ಷೇತ್ರಜ್ಞಃ ಕ್ಷೇಮಧರ್ಮಜಃ ॥ ೫ ॥

ವಿಧಿಸಾರಃ ಸುತಸ್ತಸ್ಯಾಜಾತಶತ್ರುರ್ಭವಿಷ್ಯತಿ ।
ದರ್ಭಕಸ್ತತ್ಸುತೋ ಭಾವೀ ದರ್ಭಕಸ್ಯಾಜಯಃ ಸ್ಮೃತಃ ॥ ೬ ॥

ನಂದಿವರ್ಧನ ಆಜೇಯೋ ಮಹಾನಂದಿಃ ಸುತಸ್ತತಃ ।
ಶಿಶುನಾಗಾ ದಶೈವೈತೇ ಷಷ್ಟ್ಯುತ್ತರಶತತ್ರಯಮ್ ॥ ೭ ॥

ಸಮಾ ಭೋಕ್ಷ್ಯಂತಿ ಪೃಥಿವೀಂ ಕುರುಶ್ರೇಷ್ಠ ಕಲೌ ನೃಪಾಃ ।
ಮಹಾನಂದಿಸುತೋ ರಾಜನ್ ಶೂದ್ರೀಗರ್ಭೋದ್ಭವೋ ಬಲೀ ॥ ೮ ॥

ಮಹಾಪದ್ಮಪತಿಃ ಕಶ್ಚಿನ್ನಂದಃ ಕ್ಷತ್ರವಿನಾಶಕೃತ್ ।
ತತೋ ನೃಪಾ ಭವಿಷ್ಯಂತಿ ಶೂದ್ರಪ್ರಾಯಾಸ್ತ್ವಧಾರ್ಮಿಕಾಃ ॥ ೯ ॥

ಪರೀಕ್ಷಿದ್ರಾಜನು ಕೇಳಿದನು – ಮಹಾಮುನಿಗಳೇ! ಯದುವಂಶ ಶಿರೋಮಣಿಯಾದ ಭಗವಾನ್ ಶ್ರೀಕೃಷ್ಣನು ಸ್ವಧಾಮಕ್ಕೆ ತೆರಳಿದ ಬಳಿಕ ಈ ಭೂಮಿಯಲ್ಲಿ ಯಾವ ರಾಜವಂಶದವರು ರಾಜ್ಯವಾಳಿದರು? ಈಗ ಯಾರು ಆಳುತ್ತಿರುವರು? ತಾವು ದಯಮಾಡಿ ತಿಳಿಸಿರಿ. ॥ ೧ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪ್ರಿಯ ಪರೀಕ್ಷಿತನೇ! ಜರಾಸಂಧನ ತಂದೆಯಾದ ಬೃಹದ್ರಥನ ವಂಶದಲ್ಲಿ ಪುರಂಜಯ ಅಥವಾ ರಿಪುಂಜಯ ಎನ್ನುವವನು ಕಡೆಯ ರಾಜನಾಗುವನು ಎಂದು ನಾನು ಹಿಂದೆ ಒಂಭತ್ತನೇ ಸ್ಕಂಧದಲ್ಲಿ ತಿಳಿಸಿದ್ದೆ. ಅವನಿಗೆ ಶುನಕನೆಂಬ ಮಂತ್ರಿಯಾಗುವನು. ಅವನು ತನ್ನ ಒಡೆಯನನ್ನು ಕೊಂದು ತನ್ನ ಪುತ್ರನಾದ ಪ್ರದ್ಯೋತನನ್ನು ಸಿಂಹಾಸನದಲ್ಲಿ ಕೂರಿಸುವನು. ಪ್ರದ್ಯೋತನಿಗೆ ಪಾಲಕನೆಂಬ ಪುತ್ರನೂ, ಪಾಲಕನಿಗೆ ವಿಶಾಖಯೂಪನೂ, ವಿಶಾಖಯೂಪನಿಗೆ ರಾಜಕ ಹಾಗೂ ರಾಜಕನಿಗೆ ನಂದಿವರ್ಧನನೆಂಬ ಪುತ್ರನು ಹುಟ್ಟುವನು. ಪ್ರದ್ಯೋತವಂಶದಲ್ಲಿ ಇವರೇ ಐದು ಮಂದಿ ರಾಜರಾಗುವರು. ಇವರೆಲ್ಲರೂ ಪ್ರದ್ಯೋತರೆಂದೇ ಕರೆಸಿಕೊಳ್ಳುವರು. ಇವರು ನೂರು ಮೂವತ್ತೆಂಟು ವರ್ಷಗಳವರೆಗೆ ಧರೆಯ ರಾಜತ್ವವನ್ನು ಅನುಭವಿಸುವರು. ॥ ೨-೪ ॥

ಅನಂತರ ಶಿಶುನಾಗನೆಂಬುವನು ರಾಜನಾಗುವನು. ಅವನ ಪುತ್ರನು ಕಾಕವರ್ಣ, ಅವನಿಗೆ ಕ್ಷೇಮಧರ್ಮನೆಂಬ ಪುತ್ರನೂ, ಅವನಿಗೆ ಕ್ಷೇತ್ರಜ್ಞನೆಂಬ ಪುತ್ರನು ಹುಟ್ಟುವನು. ॥ ೫ ॥ ಕ್ಷೇತ್ರಜ್ಞನಿಗೆ ವಿಧಿಸಾರನೂ, ಅವನಿಗೆ ಅಜಾತಶತ್ರುವೂ, ಅಜಾತಶತ್ರುವಿಗೆ ದರ್ಭಕನೂ, ಅವನಿಗೆ ಅಜಯನೆಂಬ ಪುತ್ರ ಜನಿಸುವನು. ॥ ೬ ॥ ಅಜಯನಿಂದ ನಂದಿವರ್ಧನನೂ, ಅವನಿಂದ ಮಹಾನಂದಿಯು ಹುಟ್ಟುವನು. ಈ ಶಿಶುನಾಗವಂಶದಲ್ಲಿ ಈ ಹತ್ತು ರಾಜರು ಕಲಿಯುಗದಲ್ಲಿ ಮುನ್ನೂರ ಅರವತ್ತು ವರ್ಷಗಳವರೆಗೆ ಭೂಮಿಯಲ್ಲಿ ರಾಜ್ಯವಾಳುವರು. ಮಹಾನಂದಿಯ ಶೂದ್ರಪತ್ನಿಯಲ್ಲಿ ನಂದನೆಂಬ ಪುತ್ರನು ಹುಟ್ಟುವನು. ಈ ಮಹಾಬಲಿಷ್ಠನಾದ ನಂದನು ಮಹಾಪದ್ಮವೆಂಬ ನಿಧಿಗೆ ಅಧಿಕಾರಿಯಾಗುವನು. ಆದರಿಂದ ಜನರು ಇವನಿಗೆ 'ಮಹಾಪದ್ಮ' ಎಂದೂ ಹೇಳುವರು. ಈತನು ಕ್ಷತ್ರಿಯರಾಜರ ನಾಶಕ್ಕೆ ಕಾರಣನಾಗುವನು. ಅಲ್ಲಿಂದ ಮುಂದಿನ ರಾಜರು ಪ್ರಾಯಶಃ ಶೂದ್ರರೂ, ಅಧಾರ್ಮಿಕರೇ ಆಗುವರು. ॥ ೭-೯ ॥

ಸ ಏಕಚ್ಛತ್ರಾಂ ಪೃಥಿವೀಮನುಲ್ಲಂಘಿತಶಾಸನಃ ।
ಶಾಸಿಷ್ಯತಿ ಮಹಾಪದ್ಮೋ ದ್ವಿತೀಯ ಇವ ಭಾರ್ಗವಃ
॥ ೧೦ ॥

ತಸ್ಯ ಚಾಷ್ಟೌ ಭವಿಷ್ಯಂತಿ ಸುಮಾಲ್ಯಪ್ರಮುಖಾಃ ಸುತಾಃ ।
ಯ ಇಮಾಂ ಭೋಕ್ಷ್ಯಂತಿ ಮಹೀಂ ರಾಜಾನಃ ಸ್ಮ ಶತಂ ಸಮಾಃ
॥ ೧೧ ॥

ನವ ನಂದಾನ್ ದ್ವಿಜಃ ಕಶ್ಚಿತ್ಪ್ರಪನ್ನಾನುದ್ಧರಿಷ್ಯತಿ ।
ತೇಷಾಮಭಾವೇ ಜಗತೀಂ ಮೌರ್ಯಾ ಭೋಕ್ಷ್ಯಂತಿ ವೈ ಕಲೌ
॥ ೧೨ ॥

ಸ ಏವ ಚಂದ್ರಗುಪ್ತಂ ವೈ ದ್ವಿಜೋ ರಾಜ್ಯೇಽಭಿಷೇಕ್ಷ್ಯತಿ ।
ತತ್ಸುತೋ ವಾರಿಸಾರಸ್ತು ತತಶ್ಚಾಶೋಕವರ್ಧನಃ
॥ ೧೩ ॥

ಸುಯಶಾ ಭವಿತಾ ತಸ್ಯ ಸಂಗತಃ ಸುಯಶಃಸುತಃ ।
ಶಾಲಿಶೂಕಸ್ತತಸ್ತಸ್ಯ ಸೋಮಶರ್ಮಾ ಭವಿಷ್ಯತಿ
॥ ೧೪ ॥

ಶತಧನ್ವಾ ತತಸ್ತಸ್ಯ ಭವಿತಾ ತದ್ಬೃಹದ್ರಥಃ ।
ಮೌರ್ಯಾ ಹ್ಯೇತೇ ದಶ ನೃಪಾಃ ಸಪ್ತತ್ರಿಂಶಚ್ಛತೋತ್ತರಮ್ ।
ಸಮಾ ಭೋಕ್ಷ್ಯಂತಿ ಪೃಥಿವೀಂ ಕಲೌ ಕುರುಕುಲೋದ್ವಹ
॥ ೧೫ ॥

ಹತ್ವಾ ಬೃಹದ್ರಥಂ ಮೌರ್ಯಂ ತಸ್ಯ ಸೇನಾಪತಿಃ ಕಲೌ ।
ಪುಷ್ಯಮಿತ್ರಸ್ತು ಶುಂಗಾಹ್ವಃ ಸ್ವಯಂ ರಾಜ್ಯಂ ಕರಿಷ್ಯತಿ ।
ಅಗ್ನಿಮಿತ್ರಸ್ತತಸ್ತಸ್ಮಾತ್ ಸುಜ್ಯೇಷ್ಠೋಽಥ ಭವಿಷ್ಯತಿ
॥ ೧೬ ॥

ವಸುಮಿತ್ರೋ ಭದ್ರಕಶ್ಚ ಪುಲಿಂದೋ ಭವಿತಾ ತತಃ ।
ತತೋ ಘೋಷಃ ಸುತಸ್ತಸ್ಮಾದ್ವಜ್ರಮಿತ್ರೋ ಭವಿಷ್ಯತಿ
॥ ೧೭ ॥

ತತೋ ಭಾಗವತಸ್ತಸ್ಮಾದ್ದೇವಭೂತಿರಿತಿ ಶ್ರುತಃ ।
ಶುಂಗಾ ದಶೈತೇ ಭೋಕ್ಷ್ಯಂತಿ ಭೂಮಿಂ ವರ್ಷಶತಾಧಿಕಮ್
॥ ೧೮ ॥

ತತಃ ಕಣ್ವಾನಿಯಂ ಭೂಮಿರ್ಯಾಸ್ಯತ್ಯಲ್ಪಗುಣಾನ್ನೃಪ ।
ಶುಂಗಂ ಹತ್ವಾ ದೇವಭೂತಿಂ ಕಣ್ವೋಽಮಾತ್ಯಸ್ತು ಕಾಮಿನಮ್
॥ ೧೯ ॥

ಸ್ವಯಂ ಕರಿಷ್ಯತೇ ರಾಜ್ಯಂ ವಸುದೇವೋ ಮಹಾಮತಿಃ ।
ತಸ್ಯ ಪುತ್ರಸ್ತು ಭೂಮಿತ್ರಸ್ತಸ್ಯ ನಾರಾಯಣಃ ಸುತಃ ।
ನಾರಾಯಣಸ್ಯ ಭವಿತಾ ಸುಶರ್ಮಾ ನಾಮ ವಿಶ್ರುತಃ
॥ ೨೦ ॥

ಮಹಾಪದ್ಮನು ಭೂಮಿಯಲ್ಲಿ ಏಕಚ್ಛತ್ರಾಧಿಪತಿಯಾಗುವನು. ಅವನ ಶಾಸನವನ್ನು ಯಾರೂ ಮೀರಲಾರರು. ಕ್ಷತ್ರಿಯರ ವಿನಾಶಕ್ಕೆ ಕಾರಣವಾದ ಇವನು ಇನ್ನೊಬ್ಬ ಪರಶುರಾಮನೆಂದೇ ತಿಳಿಯ ಬೇಕು. ॥ ೧೦ ॥ ಇವನಿಗೆ ಸುಮಾಲ್ಯರೇ ಮೊದಲಾದ ಎಂಟು ಮಂದಿ ಪುತ್ರರಾಗುವರು. ಅವರೆಲ್ಲರೂ ರಾಜರಾಗಿ ನೂರುವರ್ಷ ಗಳ ಕಾಲ ಭೂಮಿಯನ್ನು ಅನುಭವಿಸುವರು. ॥ ೧೧ ॥ ಕೌಟಿಲ್ಯ ವಾತ್ಸ್ಯಾಯನ ಅಥವಾ ಚಾಣಕ್ಯನೆಂದು ಪ್ರಸಿದ್ಧನಾದ ಒಬ್ಬ ಬ್ರಾಹ್ಮಣನು ವಿಶ್ವವಿಖ್ಯಾತ ನಂದ ಮತ್ತು ಅವನ ಸುಮಾಲ್ಯರೇ ಮುಂತಾದ ಎಂಟು ಪುತ್ರರನ್ನು ನಾಶಮಾಡುವನು. ಅವರು ಅಳಿದುಹೋದಮೇಲೆ ಕಲಿಯುಗದಲ್ಲಿ ಮೌರ್ಯವಂಶದ ರಾಜರು ಭೂಮಿಯನ್ನು ಆಳುವರು. ॥ ೧೨ ॥ ಚಾಣಕ್ಯನು ಮೊಟ್ಟ ಮೊದಲಿಗೆ ಚಂದ್ರಗುಪ್ತ ಮೌರ್ಯನನ್ನು ರಾಜನಾಗಿ ಪಟ್ಟಾಭಿಷೇಕ ಮಾಡುವನು. ಚಂದ್ರಗುಪ್ತನ ಪುತ್ರ ವಾರಿಸಾರನಾಗುವನು ಮತ್ತು ವಾರಿಸಾರನಿಗೆ ಅಶೋಕ ವರ್ಧನನು ಜನಿಸುವನು. ॥ ೧೩ ॥ ಅಶೋಕವರ್ಧನನಿಗೆ ಸುಯಶನೆಂಬ ಪುತ್ರನಾಗುವನು. ಅವನಿಗೆ ಸಂಗತ, ಸಂಗತನಿಗೆ ಶಾಲಿಶೂಕ ಮತ್ತು ಶಾಲಿಶೂಕನಿಗೆ ಸೋಮ ಶರ್ಮಾ ಆಗುವನು. ॥ ೧೪ ॥ ಸೋಮಶರ್ಮನಿಗೆ ಶತಧನ್ವಾ, ಶತಧನ್ವನಿಗೆ ಬೃಹದ್ರಥ ಪುತ್ರನಾಗುವನು. ಕುರುವಂಶ ವಿಭೂಷಿತ ಪರೀಕ್ಷಿತನೇ! ಮೌರ್ಯವಂಶದ ಈ ಹತ್ತು ಮಂದಿ* ರಾಜರು ಕಲಿಯುಗದಲ್ಲಿ ಒಂದುನೂರ ಮೂವತ್ತೇಳು ವರ್ಷಗಳ ಕಾಲ ರಾಜ್ಯವನ್ನಾಳುವರು. ಬೃಹದ್ರಥನಿಗೆ ಪುಷ್ಯಮಿತ್ರಶುಂಗನೆಂಬುವನು ಸೇನಾಪತಿ. ಅವನು ತನ್ನ ಒಡೆಯನನ್ನು ಕೊಂದು ತಾನೇ ರಾಜ ನಾಗುವನು. ಪುಷ್ಯಮಿತ್ರನಿಗೆ ಅಗ್ನಿಮಿತ್ರ ಹಾಗೂ ಅಗ್ನಿಮಿತ್ರನಿಗೆ ಸುಜ್ಯೇಷ್ಠನಾಗುವನು. ॥ ೧೫-೧೬ ॥ ಸುಜ್ಯೇಷ್ಠನಿಗೆ ವಸುಮಿತ್ರ, ವಸುಮಿತ್ರನಿಗೆ ಭದ್ರಕ ಮತ್ತು ಭದ್ರಕನಿಗೆ ಪುಲಿಂದ, ಪುಲಿಂದಕನಿಗೆ ಘೋಷ, ಘೋಷನಿಗೆ ವಜ್ರಮಿತ್ರನು ಮಗನಾಗುವನು. ॥ ೧೭ ॥ ವಜ್ರಮಿತ್ರನಿಗೆ ಭಾಗವತ, ಭಾಗವತನ ಪುತ್ರ ದೇವಭೂತಿ ಎಂಬು ವನು. ಶುಂಗವಂಶದ ಈ ಹತ್ತುಮಂದಿ ರಾಜರು ನೂರಹನ್ನೆರಡು ವರ್ಷಗಳವರೆಗೆ ಪೃಥ್ವಿಯನ್ನು ಪಾಲಿಸುವರು. ॥ ೧೮ ॥

ಪರೀಕ್ಷಿತನೇ! ಶುಂಗವಂಶೀಯರಾಜರ ತರುವಾಯ ಈ ಭೂಮಿಯನ್ನು ಕಣ್ವವಂಶೀಯ ರಾಜರು ಆಳುವರು. ಇವರು ತಮ್ಮ ಹಿಂದಿನ ರಾಜರಿಗಿಂತ ಗುಣಮಟ್ಟದಲ್ಲಿ ಅಲ್ಪರಾಗುವರು. ಶುಂಗ ವಂಶದ ಕೊನೆಯ ರಾಜನಾದ ದೇವಭೂತಿಯು ಅತ್ಯಂತ ವಿಷಯಲಂಪಟನಾಗುವನು. ಅವನನ್ನು ಕೊಂದು ಮಹಾಮತಿಯಾದ ಮಂತ್ರಿ ಕಣ್ವವಂಶೀಯ ವಸುದೇವನು ರಾಜ್ಯವನ್ನು ಪಡೆಯುವನು. ಆ ವಸುದೇವನಿಗೆ ಭೂಮಿತ್ರನೂ, ಭೂಮಿತ್ರನಿಗೆ ನಾರಾಯಣ ನೆಂಬುವನೂ, ಅವನಿಗೆ ಅತ್ಯಂತ ಯಶಸ್ವಿಯಾದ ಸುಶರ್ಮಾ ಎಂಬ ಪುತ್ರನಾಗುವನು. ॥ ೧೯-೨೦ ॥ ಕಣ್ವವಂಶದ ಈ ನಾಲ್ವರು

* ಮೌರ್ಯರಾಜರ ಸಂಖ್ಯೆ ಚಂದ್ರಗುಪ್ತನನ್ನು ಸೇರಿಸಿ ಒಂಭತ್ತೇ ಆಗುವುದು. ಆದರೆ ವಿಷ್ಣುಪುರಾಣಾದಿಗಳಲ್ಲಿ ಚಂದ್ರಗುಪ್ತನಿಂದ ಐದನೆಯವನಾದ ದಶರಥ ಎಂಬ ಮೌರ್ಯವಂಶೀರಾಜನ ಉಲ್ಲೇಖ ದೊರೆಯುತ್ತದೆ. ಅವನನ್ನು ಸೇರಿಸಿ ಇಲ್ಲಿ ಹತ್ತುಮಂದಿ ಎಂದು ತಿಳಿಯಬೇಕು.

ಕಾಣ್ವಾಯನಾ ಇಮೇ ಭೂಮಿಂ ಚತ್ವಾರಿಂಶಚ್ಚ ಪಂಚ ಚ ।
ಶತಾನಿ ತ್ರೀಣಿ ಭೋಕ್ಷ್ಯಂತಿ ವರ್ಷಾಣಾಂ ಚ ಕಲೌ ಯುಗೇ ॥ ೨೧ ॥

ಹತ್ವಾ ಕಾಣ್ವಂ ಸುಶರ್ಮಾಣಂ ತದ್ಭೃತ್ಯೋ ವೃಷಲೋ ಬಲೀ ।
ಗಾಂ ಭೋಕ್ಷ್ಯತ್ಯಂಧ್ರ ಜಾತೀಯಃ ಕಂಚಿತ್ಕಾಲಮಸತ್ತಮಃ ॥ ೨೨ ॥

ಕೃಷ್ಣನಾಮಾಥ ತದ್ಭ್ರಾತಾ ಭವಿತಾ ಪೃಥಿವೀಪತಿಃ ।
ಶ್ರೀಶಾಂತಕರ್ಣಸ್ತತ್ಪುತ್ರಃ ಪೌರ್ಣಮಾಸಸ್ತು ತತ್ಸುತಃ ॥ ೨೩ ॥

ಲಂಬೋದರಸ್ತು ತತ್ಪುತ್ರಸ್ತಸ್ಮಾಚ್ಚಿಬಿಲಕೋ ನೃಪಃ ।
ಮೇಘಸ್ವಾತಿಶ್ಚಿಬಿಲಕಾದಟಮಾನಸ್ತು ತಸ್ಯ ಚ ॥ ೨೪ ॥

ಅನಿಷ್ಟಕರ್ಮಾ ಹಾಲೇಯಸ್ತಲಕಸ್ತಸ್ಯ ಚಾತ್ಮಜಃ ।
ಪುರೀಷಭೀರುಸ್ತತ್ಪುತ್ರಸ್ತತೋ ರಾಜಾ ಸುನಂದನಃ ॥ ೨೫ ॥

ಚಕೋರೋ ಬಹವೋ ಯತ್ರ ಶಿವಸ್ವಾತಿರರಿಂದಮಃ ।
ತಸ್ಯಾಪಿ ಗೋಮತೀಪುತ್ರಃ ಪುರೀಮಾನ್ಭವಿತಾ ತತಃ ॥ ೨೬ ॥

ಮೇದಃಶಿರಾಃ ಶಿವಸ್ಕಂಧೋ ಯಜ್ಞಶ್ರೀಸ್ತತ್ಸುತಸ್ತತಃ ।
ವಿಜಯಸ್ತತ್ಸುತೋ ಭಾವ್ಯಶ್ಚಂದ್ರವಿಜ್ಞಃ ಸಲೋಮಧಿಃ ॥ ೨೭ ॥

ಏತೇ ತ್ರಿಂಶನ್ನೃಪತಯಶ್ಚತ್ವಾರ್ಯಬ್ದಶತಾನಿ ಚ ।
ಷಟ್‌ಪಂಚಾಶಚ್ಚ ಪೃಥಿವೀಂ ಭೋಕ್ಷ್ಯಂತಿ ಕುರುನಂದನ ॥ ೨೮ ॥

ಸಪ್ತಾಭೀರಾ ಆವಭೃತ್ಯಾ ದಶ ಗರ್ದಭಿನೋ ನೃಪಾಃ ।
ಕಂಕಾಃ ಷೋಡಶ ಭೂಪಾಲಾ ಭವಿಷ್ಯಂತ್ಯತಿಲೋಲುಪಾಃ ॥ ೨೯ ॥

ತತೋಽಷ್ಟೌ ಯವನಾ ಭಾವ್ಯಾಶ್ಚತುರ್ದಶ ತುರುಷ್ಕಕಾಃ ।
ಭೂಯೋ ದಶ ಗುರುಂಡಾಶ್ಚ ಮೌನಾ ಏಕಾದಶೈವ ತು ॥ ೩೦ ॥

ಏತೇ ಭೋಕ್ಷ್ಯಂತಿ ಪೃಥಿವೀಂ ದಶವರ್ಷಶತಾನಿ ಚ ।
ನವಾಧಿಕಾಂ ಚ ನವತಿಂ ಮೌನಾ ಏಕಾದಶ ಕ್ಷಿತಿಮ್ ॥ ೩೧ ॥

ಭೋಕ್ಷ್ಯಂತ್ಯಬ್ದಶತಾನ್ಯಂಗ ತ್ರೀಣಿ ತೈಃ ಸಂಸ್ಥಿತೇ ತತಃ ।
ಕಿಲಕಿಲಾಯಾಂ ನೃಪತಯೋ ಭೂತನಂದೋಽಥ ವಂಗಿರಿಃ ॥ ೩೨ ॥

ಶಿಶುನಂದಿಶ್ಚ ತದ್ ಭ್ರಾತಾ ಯಶೋನಂದಿಃ ಪ್ರವೀರಕಃ ।
ಇತ್ಯೇತೇ ವೈ ವರ್ಷಶತಂ ಭವಿಷ್ಯಂತ್ಯಧಿಕಾನಿ ಷಟ್ ॥ ೩೩ ॥

ತೇಷಾಂ ತ್ರಯೋದಶ ಸುತಾ ಭವಿತಾರಶ್ಚ ಬಾಹ್ಲಿಕಾಃ ।
ಪುಷ್ಯಮಿತ್ರೋಽಥ ರಾಜನ್ಯೋ ದುರ್ಮಿತ್ರೋಽಸ್ಯ ತಥೈವ ಚ ॥ ೩೪ ॥

ಕಾಣ್ವಾಯನರೆಂದು ಖ್ಯಾತರಾಗಿ ಕಲಿಯುಗದ ಮೂನ್ನೂರ ನಲವತ್ತೈದು ವರ್ಷಗಳವರೆಗೆ ಭೂಮಿಯನ್ನು ಆಳುವರು. ॥ ೨೧ ॥ ಪ್ರಿಯ ಪರೀಕ್ಷಿತನೇ! ಕಣ್ವವಂಶೀ ಸುಶರ್ಮನಿಗೆ ಬಲಿ ಎಂಬ ಶೂದ್ರ ಸೇವಕನಿರುವನು. ಅವನು ಆಂಧ್ರಜಾತಿಯವನಾಗಿದ್ದು ಬಹಳ ದುಷ್ಟನಾಗಿದ್ದನು. ಅವನು ಸುಶರ್ಮನನ್ನು ಕೊಂದು ಕೆಲವು ಕಾಲ ತಾನೇ ರಾಜನಾಗುವನು. ॥ ೨೨ ॥ ಅನಂತರ ಅವನ ತಮ್ಮ ಕೃಷ್ಣ ನೆಂಬುವನು ರಾಜನಾಗುವನು. ಕೃಷ್ಣನ ಪುತ್ರ ಶ್ರೀಶಾಂತಕರ್ಣನು. ಅವನಿಗೆ ಪೌರ್ಣಮಾಸ ಪುತ್ರನಾಗುವನು. ॥ ೨೩ ॥ ಪೌರ್ಣಮಾಸ ನಿಗೆ ಲಂಬೋದರ, ಲಂಬೋದರನಿಗೆ ಚಿಬಿಲಕ, ಚಿಬಿಲಕನಿಗೆ ಮೇಘಸ್ವಾತಿ, ಮೇಘಸ್ವಾತಿಯಿಂದ ಅಟಮಾನೂ, ಅವನಿಗೆ ಅನಿಷ್ಟಕರ್ಮನೂ, ಅನಿಷ್ಟಕರ್ಮನಿಂದ ಹಾಲೇಯ, ಅವನಿಂದ ತಲಕ, ತಲಕನಿಂದ ಪುರೀಷಭೀರು. ಪುರೀಷಭೀರುವಿಗೆ ರಾಜಾಸು ನಂದನು ಪುತ್ರನಾಗುವನು. ॥ ೨೪-೨೫ ॥ ಪರೀಕ್ಷಿತನೇ ! ಸುನಂದ ನಿಗೆ ಚಕೋರ, ಚಕೋರನಿಗೆ ಎಂಟು ಮಂದಿ ಪುತ್ರರಾಗುವರು. ಅವರು 'ಬಹು' ಎಂದು ಹೇಳಲ್ಪಡುವರು. ಇವರೆಲ್ಲರಲ್ಲಿ ಕಿರಿಯವ ನಾದ ಅತ್ಯಂತ ವೀರನೂ, ಶತ್ರುಗಳನ್ನು ದಮನ ಮಾಡುವವನೂ ಆದ ಶಿವಸ್ವಾತಿಗೆ ಗೋಮತಿಪುತ್ರನೆಂಬುವನೂ, ಅವನಿಗೆ ಪುರೀಮಂತ ಎಂಬ ಪುತ್ರನಾಗುವನು. ॥ ೨೬ ॥ ಪುರೀಮಂತನಿಗೆ ಮೇದಶ್ಶಿರ, ಮೇದಶ್ಶಿರನಿಗೆ ಶಿವಸ್ಕಂಧನೂ, ಶಿವಸ್ಕಂಧನಿಗೆ ಯಜ್ಞಶ್ರೀಯು, ಅವನಿಗೆ ವಿಜಯನೂ, ವಿಜಯನಿಗೆ ಚಂದ್ರವಿಜ್ಞ ಮತ್ತು ಲೋಮಧಿ ಎಂಬ ಇಬ್ಬರು ಪುತ್ರರಾಗುವರು. ॥ ೨೭ ॥ ಪರೀಕ್ಷಿತನೇ ! ಈ ಮೂವತ್ತುಮಂದಿ ರಾಜರು ನಾಲ್ಕುನೂರು ಐವತ್ತಾರು ವರ್ಷಗಳವರೆಗೆ ಪೃಥಿವಿಯ ಆಳ್ವಿಕೆಯನ್ನು ಅನುಭವಿಸುವರು. ॥ ೨೮ ॥

ಇವರ ನಂತರ ಅವಭೃತಿನಗರದ ಏಳು ಮಂದಿ ಆಭೀರ ರಾಜರೂ, ಹತ್ತುಮಂದಿ ಗರ್ದಭಿರಾಜರೂ, ಹದಿನಾರು ಕಂಕ ರೆಂಬರಾಜರೂ ಭೂಮಿಯನ್ನಾಳುವರು. ಇವರೆಲ್ಲರೂ ಕಡು ಲೋಭಿಗಳಾಗುವರು. ॥ ೨೯ ॥ ಇವರಾದ ಮೇಲೆ ಎಂಟುಮಂದಿ ಯವನರೂ, ಹದಿನಾಲ್ಕು ಮಂದಿ ತುರ್ಕರೂ ರಾಜ್ಯವಾಳುವರು. ಮತ್ತೆ ಹತ್ತು ಮಂದಿ ಗುರುಂಡರೂ, ಹನ್ನೊಂದು ಮಂದಿ ಮೌನರೂ ನರಪತಿಗಳಾಗುವರು. ॥ ೩೦॥ ಮೌನರಲ್ಲದೆ ಇವ ರೆಲ್ಲರೂ ಒಂದು ಸಾವಿರದ ತೊಂಭತ್ತೊಂಭತ್ತು ವರ್ಷಗಳು ಭೂಮಿಯನ್ನಾಳುವರು. ಹನ್ನೊಂದು ಮಂದಿ ಮೌನರು ಮುನ್ನೂರು ವರ್ಷಗಳವರೆಗೆ ಪೃಥಿವಿಯನ್ನು ಆಳುವರು. ಇವರ ಆಳ್ವಿಕೆಯು ಮುಗಿದುಹೋದಾಗ ಕಿಲಕಿಲಾ ಎಂಬ ನಗರದಲ್ಲಿ ಭೂತನಂದನೆಂಬ ರಾಜನಾಗುವನು. ಭೂತನಂದನನಿಗೆ ವಂಗಿ ರನೂ, ಅವನ ಸೋದರರಾದ ಶಿಶುನಂದಿ ಹಾಗೂ ಯಶೋನಂದಿ ಮತ್ತು ಪ್ರವೀರಕ ಇವರು ಒಂದು ನೂರಆರು ವರ್ಷಗಳವರೆಗೆ ರಾಜ್ಯವಾಳುವರು. ॥ ೩೧-೩೩ ॥ ಇವರಿಗೆ ಹದಿಮೂರು ಮಂದಿ ಪುತ್ರರಾಗುವರು. ಇವರೆಲ್ಲರಿಗೂ ಬಾಹ್ಲಿಕರೆಂದು ಹೆಸರು. ಇವರ ನಂತರ ಪುಷ್ಯಮಿತ್ರನೆಂಬ ಕ್ಷತ್ರಿಯನೂ ಮತ್ತು ಅವನ ಪುತ್ರನಾದ ದುರ್ಮಿತ್ರನೂ ರಾಜರಾಗುವರು. ॥ ೩೪ ॥

ಏಕಕಾಲಾ ಇಮೇ ಭೂಪಾಃ ಸಪ್ತಾಂಧ್ರಾಃ ಸಪ್ತ ಕೋಸಲಾಃ।
ವಿದೂರಪತಯೋ ಭಾವ್ಯಾ ನಿಷಧಾಸ್ತತ ಏವ ಹಿ
॥ ೩೫ ॥

ಮಾಗಧಾನಾಂ ತು ಭವಿತಾ ವಿಶ್ವಸ್ಫೂರ್ಜಿಃ ಪುರಂಜಯಃ।
ಕರಿಷ್ಯತ್ಯಪರೋ ವರ್ಣಾನ್ಪುಲಿಂದ ಯದುಮದ್ರಕಾನ್
॥ ೩೬ ॥

ಪ್ರಜಾಶ್ಚಾಬ್ರಹ್ಮಭೂಯಿಷ್ಠಾಃ ಸ್ಥಾಪಯಿಷ್ಯತಿ ದುರ್ಮತಿಃ।
ವೀರ್ಯವಾನ್ ಕ್ಷತ್ರಮುತ್ಸಾದ್ಯ ಪದ್ಮವತ್ಯಾಂ ಸ ವೈ ಪುರಿ।
ಅನುಗಂಗಾಮಾಪ್ರಯಾಗಂ ಗುಪ್ತಾಂ ಭೋಕ್ಷ್ಯತಿ ಮೇದಿನೀಮ್
॥ ೩೭ ॥

ಸೌರಾಷ್ಟ್ರಾವಂತ್ಯಾಭೀರಾಶ್ಚ ಶೂರಾ ಅರ್ಬುದಮಾಲವಾಃ।
ವ್ರಾತ್ಯಾ ದ್ವಿಜಾ ಭವಿಷ್ಯಂತಿ ಶೂದ್ರಪ್ರಾಯಾ ಜನಾಧಿಪಾಃ
॥ ೩೮ ॥

ಸಿಂಧೋಸ್ತಟಂ ಚಂದ್ರಭಾಗಾಂ ಕೌಂತೀಂ ಕಾಶ್ಮೀರಮಂಡಲಮ್।
ಭೋಕ್ಷ್ಯಂತಿ ಶೂದ್ರಾ ವ್ರಾತ್ಯಾದ್ಯಾ ಮ್ಲೇಚ್ಛಾಶ್ಚಾಬ್ರಹ್ಮವರ್ಚಸಃ
॥ ೩೯ ॥

ತುಲ್ಯಕಾಲಾ ಇಮೇ ರಾಜನ್ಮ್ಲೇಚ್ಛಪ್ರಾಯಾಶ್ಚ ಭೂಭೃತಃ।
ಏತೇಽಧರ್ಮಾನೃತಪರಾಃ ಫಲ್ಗುದಾಸ್ತೀವ್ರಮನ್ಯವಃ
॥ ೪೦ ॥

ಸ್ತ್ರೀಬಾಲಗೋದ್ವಿಜಘ್ನಾಶ್ಚ ಪರದಾರಧನಾದೃತಾಃ।
ಉದಿತಾಸ್ತಮಿತಪ್ರಾಯಾ ಅಲ್ಪಸತ್ತ್ವಾಲ್ಪಕಾಯುಷಃ
॥ ೪೧ ॥

ಅಸಂಸ್ಕೃತಾಃ ಕ್ರಿಯಾಹೀನಾ ರಜಸಾ ತಮಸಾಽಽವೃತಾಃ।
ಪ್ರಜಾಸ್ತೇ ಭಕ್ಷಯಿಷ್ಯಂತಿ ಮ್ಲೇಚ್ಛಾ ರಾಜನ್ಯರೂಪಿಣಃ
॥ ೪೨ ॥

ತನ್ನಾಥಾಸ್ತೇ - ಜನಪದಾಸ್ತಚ್ಛೀಲಾಚಾರವಾದಿನಃ।
ಅನ್ಯೋನ್ಯತೋ ರಾಜಭಿಶ್ಚ ಕ್ಷಯಂ ಯಾಸ್ಯಂತಿ ಪೀಡಿತಾಃ
॥ ೪೩ ॥

ಪರೀಕ್ಷಿತನೇ! ಬಾಹ್ಲಿಕವಂಶದ ರಾಜರು ಒಟ್ಟಿಗೆ ಬೇರೆ-ಬೇರೆ ಪ್ರಾಂತಗಳಲ್ಲಿ ರಾಜ್ಯವನ್ನಾಳುವರು. ಅವರಲ್ಲಿ ಏಳು ಮಂದಿ ಆಂಧ್ರ ದೇಶದ, ಏಳು ಮಂದಿ ಕೋಸಲದೇಶದ, ಕೆಲವರು ವಿದೂರ ಭೂಮಿಗೂ, ಮತ್ತೆ ಕೆಲವರು ನಿಷಧದೇಶಕ್ಕೆ ಶಾಸಕರಾಗುವರು. ॥ ೩೫ ॥

ಅನಂತರ ವಿಶ್ವಸ್ಫೂರ್ಜಿ ಎಂಬುವನು ಮಗಧ ದೇಶಕ್ಕೆ ರಾಜನಾಗುವನು. ಇವನು ಹಿಂದಿನ ಪುರಂಜಯನಲ್ಲದೆ ಎರಡನೇ ಪುರಂಜಯನೆಂದು ಕರೆಯಲ್ಪಡುವನು. ಇವನು ಬ್ರಾಹ್ಮಣರೇ ಆದ ಉಚ್ಚವರ್ಣೀಯರನ್ನು ಪುಲಿಂದ, ಯದು, ಮದ್ರ ಮುಂತಾದ ಮ್ಲೇಚ್ಛಸದೃಶರನ್ನಾಗಿ ಮಾಡುವನು. ॥ ೩೬ ॥ ಇವನು ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಇವರನ್ನು ನಾಶಪಡಿಸಿ ಶೂದ್ರಪ್ರಾಯ ಜನರನ್ನು ರಕ್ಷಿಸುವಂತಹ ದುಷ್ಟಬುದ್ಧಿಯಾಗುವನು. ಇವನು ಬಲ- ವಿಕ್ರಮದಿಂದ ಕ್ಷತ್ರಿಯರನ್ನು ನಿರ್ಮೂಲಗೊಳಿಸಿ, ಪದ್ಮಾವತಿ ಪುರವನ್ನು ರಾಜಧಾನಿಯನ್ನಾಗಿಸಿಕೊಂಡು ಹರಿದ್ವಾರದಿಂದ ಪ್ರಯಾಗದವರೆಗಿನ ಸುರಕ್ಷಿತವಾದ ಭೂಮಿಯನ್ನು ಆಳುವನು. ॥ ೩೭ ॥ ಪರೀಕ್ಷಿತನೇ! ಕಲಿಯುಗವು ಬಂದು ಹೋದಾಗಲೆಲ್ಲ ಸೌರಾಷ್ಟ್ರ, ಅವಂತಿ, ಅಭೀರ, ಶೂರ, ಅರ್ಬುದ ಮತ್ತು ಮಾಲವ ದೇಶಗಳ ಬ್ರಾಹ್ಮಣರು ಸಂಸ್ಕಾರಶೂನ್ಯರಾಗುವರು ಹಾಗೂ ರಾಜರು ಶೂದ್ರರಂತಾಗುವರು. ॥ ೩೮ ॥ ಸಿಂಧುನದಿಯ ತೀರ, ಚಂದ್ರಭಾಗಾ ನದಿಯ ದಡದ ಪ್ರದೇಶ, ಕೌಂತಿ ಮತ್ತು ಕಾಶ್ಮೀರ ಮಂಡಲಗಳಲ್ಲಿ ಸಾಮಾನ್ಯವಾಗಿ ಶೂದ್ರರಂತೆ ಸಂಸ್ಕಾರ ಮತ್ತು ಬ್ರಹ್ಮತೇಜದಿಂದ ರಹಿತರಾಗಿ ಹೆಸರಿಗಷ್ಟೇ ಬ್ರಾಹ್ಮಣರೂ ಮತ್ತು ಮ್ಲೇಚ್ಛರೂ ರಾಜ್ಯವನ್ನಾಳುವರು. ॥ ೩೯ ॥

ಪರೀಕ್ಷಿತನೇ! ಇವರೆಲ್ಲ ರಾಜರೂ ಆಚಾರ-ವಿಚಾರಗಳಲ್ಲಿ ಮ್ಲೇಚ್ಛರಂತಾಗುವರು. ಇವರೆಲ್ಲರೂ ಏಕಕಾಲದಲ್ಲಿ ಬೇರೆ-ಬೇರೆ ಪ್ರಾಂತಗಳಲ್ಲಿ ಆಳ್ವಿಕೆ ನಡೆಸುವರು. ಅಧರ್ಮ-ಅಸತ್ಯಗಳಲ್ಲಿ ನಿರತರಾಗಿದ್ದು ಅಲ್ಪವಾದ ದಾನಕೊಡುವವರಾಗುವರು. ಸಣ್ಣ-ಪುಟ್ಟ ಮಾತುಗಳಿಗೂ ಸಿಟ್ಟಿನಿಂದ ಉರಿದು ಬೀಳುವರು. ॥ ೪೦ ॥ ದುಷ್ಟರಾದ ಇವರು ಸ್ತ್ರೀಯರು, ಮಕ್ಕಳು, ಗೋವು, ಬ್ರಾಹ್ಮಣ ಇವರನ್ನು ಕೊಲ್ಲುವುದರಲ್ಲಿ ಹಿಂದೆ ಸರಿಯಲಾರರು. ಮತ್ತೊಬ್ಬರ ಹಣ, ಹೆಂಡಿರನ್ನು ಅಪಹರಿಸುವುದರಲ್ಲಿ ಸದಾ ಉತ್ಸುಕರಾಗಿರುವರು. ಇವರು ಬೇಗ-ಬೇಗನೆ ಹುಟ್ಟಿ-ಸಾಯುತ್ತಾ ಇರುತ್ತಾರೆ. ಇವರಿಗೆ ಶಕ್ತಿಯೂ ಕಡಿಮೆ, ಆಯುಸ್ಸೂ ಕಡಿಮೆ. ॥ ೪೧ ॥ ಇವರು ರಜೋಗುಣ-ತಮೋಗುಣಗಳಿಂದ ಕುರುಡಾಗಿ ಸಂಸ್ಕಾರ ಹೀನರಾಗಿರುತ್ತಾರೆ. ಕರ್ತವ್ಯ ಕರ್ಮಗಳನ್ನು ತೊರೆಯುವರು. ರಾಜವೇಷದಲ್ಲಿ ಮ್ಲೇಚ್ಛರೇ ಆಗಿದ್ದು, ಪ್ರಜೆಗಳ ರಕ್ತವನ್ನು ಹೀರುವರು. ॥ ೪೨ ॥ ಇಂತಹ ಜನರ ಶಾಸನ ಕಾಲದಲ್ಲಿ ದೇಶದ ಪ್ರಜೆಗಳು ಅಂತಹದೇ ಸ್ವಭಾವ, ಆಚರಣೆ ಮತ್ತು ಮಾತುಗಳು ಹೆಚ್ಚಾಗುವುವು. ರಾಜರೆನಿಸಿದವರು ಪ್ರಜೆಗಳನ್ನು ಶೋಷಣೆ ಮಾಡುವುದಲ್ಲದೆ ತಾವೂ ಪರಸ್ಪರ ಹಿಂಸಕರಾಗಿ ಕೊನೆಗೆ ಎಲ್ಲರೂ ನಾಶವಾಗುವರು. ॥ ೪೩ ॥

ಮೊದಲನೆಯ ಅಧ್ಯಾಯವು ಮುಗಿಯಿತು. ॥ ೧ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದ್ವಾದಶಸ್ಕಂಧೇ ಪ್ರಥಮೋಽಧ್ಯಾಯಃ ॥ ೧ ॥

ಎರಡನೆಯ ಅಧ್ಯಾಯ

ಕಲಿಯುಗದ ಧರ್ಮಗಳು

ಶ್ರೀಶುಕ ಉವಾಚ

ತತಶ್ಚಾನುದಿನಂ ಧರ್ಮಃ ಸತ್ಯಂ ಶೌಚಂ ಕ್ಷಮಾ ದಯಾ ।
ಕಾಲೇನ ಬಲಿನಾ ರಾಜನ್ ನಂಕ್ಷ್ಯತ್ಯಾಯುರ್ಬಲಂ ಸ್ಮೃತಿಃ ॥ ೧ ॥

ವಿತ್ತಮೇವ ಕಲೌ ನೄಣಾಂ ಜನ್ಮಾಚಾರಗುಣೋದಯಃ ।
ಧರ್ಮನ್ಯಾಯವ್ಯವಸ್ಥಾಯಾಂ ಕಾರಣಂ ಬಲಮೇವ ಹಿ ॥ ೨ ॥

ದಾಂಪತ್ಯೇಽಭಿರುಚಿರ್ಹೇತುರ್ಮಾಯೈವ ವ್ಯಾವಹಾರಿಕೇ ।
ಸ್ತ್ರೀತ್ವೇ ಪುಂಸ್ತ್ವೇ ಚ ಹಿ ರತಿರ್ವಿಪ್ರತ್ವೇ ಸೂತ್ರಮೇವ ಹಿ ॥ ೩ ॥

ಲಿಂಗಮೇವಾಶ್ರಮಖ್ಯಾತಾವನ್ಯೋನ್ಯಾಪತ್ತಿಕಾರಣಮ್ ।
ಅವೃತ್ತ್ಯಾ ನ್ಯಾಯದೌರ್ಬಲ್ಯಂ ಪಾಂಡಿತ್ಯೇ ಚಾಪಲಂ ವಚಃ ॥ ೪ ॥

ಅನಾಢ್ಯತೈವಾಸಾಧುತ್ವೇ ಸಾಧುತ್ವೇ ದಂಭ ಏವ ತು ।
ಸ್ವೀಕಾರ ಏವ ಚೋದ್ವಾಹೇ ಸ್ನಾನಮೇವ ಪ್ರಸಾಧನಮ್ ॥ ೫ ॥

ದೂರೇ ವಾರ್ಯಯನಂ ತೀರ್ಥಂ ಲಾವಣ್ಯಂ ಕೇಶಧಾರಣಮ್ ।
ಉದರಂಭರತಾ ಸ್ವಾರ್ಥಃ ಸತ್ಯತ್ವೇ ಧಾರ್ಷ್ಟ್ಯಮೇವ ಹಿ ॥ ೬ ॥

ದಾಕ್ಷ್ಯಂ ಕುಟುಂಬಭರಣಂ ಯಶೋಽರ್ಥೇ ಧರ್ಮಸೇವನಮ್ ।
ಏವಂ ಪ್ರಜಾಭಿರ್ದುಷ್ಟಾಭಿರಾಕೀರ್ಣೇ ಕ್ಷಿತಿಮಂಡಲೇ ॥ ೭ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಎಲೈ ಪರೀಕ್ಷಿತನೇ ! ಕಾಲವು ತುಂಬಾ ಬಲಶಾಲಿಯಾದುದು. ಕಲಿಯುಗವು ನಡೆಯುತ್ತಿರುವಂತೆಯೇ ಕ್ರಮೇಣ ಧರ್ಮ, ಸತ್ಯ, ಪವಿತ್ರತೆ, ಕ್ಷಮೆ, ದಯೆ, ಜನರ ಆಯುಸ್ಸು ಬಲ ಮತ್ತು ಸ್ಮರಣಶಕ್ತಿ ಇವೆಲ್ಲವೂ ಲೋಪ ಹೊಂದುತ್ತಾ ಹೋಗುವವು. ॥ ೧ ॥ ಕಲಿಯುಗದಲ್ಲಿ ಹಣವಿರುವವನನ್ನೇ ಜನರು ಕುಲೀನ, ಸದಾಚಾರಿ, ಸದ್ಗುಣಿಯೆಂದು ತಿಳಿಯುವರು. ಬಲಿಷ್ಠನಾದವನೇ ಧರ್ಮ ಮತ್ತು ನ್ಯಾಯದ ವ್ಯವಸ್ಥೆಯನ್ನು ತನಗೆ ಅನುಕೂಲವಾಗಿ ಮಾಡಿಕೊಳ್ಳುವನು. ॥ ೨ ॥ ವಿವಾಹ ಸಂಬಂಧಲ್ಲಿ ಕುಲ-ಶೀಲ-ಯೋಗ್ಯತೆ ಮುಂತಾದವುಗಳಿಗೆ ಬೆಲೆ ಕೊಡದೆ ಯುವಕ-ಯುವತಿಯರು ಪರಸ್ಪರ ಅಭಿರುಚಿಯಿಂದಲೇ ಸಂಬಂಧಗಳು ಏರ್ಪಡುವವು. ಛಲ-ಕಪಟಗಳೇ ವ್ಯವಹಾರ ನಿಪುಣತೆ ಎನಿಸುವುದು. ಸ್ತ್ರೀ-ಪುರುಷರ ಗುಣ ಮಟ್ಟದಲ್ಲಿ ಶೀಲ-ಸಂಯಮಗಳಿರದೆ ರತಿಕೌಶಲವೇ ಇರುವುದು. ಬ್ರಾಹ್ಮಣ ಪರಿಚಯವು ಗುಣ-ಸ್ವಭಾವದಿಂದ ಆಗದೆ ಕೇವಲ ಜನಿವಾರದಿಂದಲೇ ಆಗುವುದು. ॥ ೩ ॥ ಬಟ್ಟೆ, ದಂಡ, ಕಮಂಡಲು ಇವುಗಳೇ ಬ್ರಹ್ಮಚರ್ಯೆ, ಸಂನ್ಯಾಸವೇ ಮೊದಲಾದ ಆಶ್ರಮಗಳ ಗುರುತಾಗುವುದು. ಒಬ್ಬರು ಮತ್ತೊಬ್ಬರ ಚಿಹ್ನೆಗಳನ್ನು ಧರಿಸುವುದೇ ಬೇರೊಂದು ಆಶ್ರಮದಲ್ಲಿ ಪ್ರವೇಶದ ಸ್ವರೂಪವಾಗುವುದು. ಲಂಚ-ಕೊಡಲು, ಹಣವನ್ನು ಖರ್ಚುಮಾಡಲು ಅಸಮರ್ಥನಾದವನಿಗೆ ನ್ಯಾಯಲಯದಲ್ಲಿ ಸರಿಯಾದ ನ್ಯಾಯ ಸಿಗಲಾರದು. ನಡೆ-ನುಡಿಗಳಲ್ಲಿ ನಿಪುಣನಾದವನೇ ದೊಡ್ಡ ಪಂಡಿತನೆಂದು ತಿಳಿಯಲಾಗುವುದು. ॥ ೪ ॥ ಬಡವನಾಗುವುದೇ ಅಸಾಧುತೆಯ-ದೋಷಿಯಾಗುವ ಗುರುತಾಗಬಹುದು. ದಾಂಭಿಕತೆ-ಪಾಖಂಡತೆ ಹೆಚ್ಚು ತೋರುವವನ್ನೇ ದೊಡ್ಡ ಸಾಧುವೆಂದು ತಿಳಿಯುವರು. ವಿವಾಹಕ್ಕೆ ಪರಸ್ಪರ ಒಪ್ಪಿಗೆಯೇ ಸಾಕಾದೀತು. ಶಾಸ್ತ್ರೀಯ ವಿಧಿ-ವಿಧಾನದ ಸಂಸ್ಕಾರಾದಿಗಳ ಯಾವ ಆವಶ್ಯಕತೆಯೂ ಬೇಕಾಗುವುದಿಲ್ಲ. ಚೆನ್ನಾಗಿ ಕೂದಲನ್ನು ಬಾಚಿ ಸ್ವಚ್ಛವಾದ ಬಟ್ಟೆಗಳನ್ನು ತೊಡುವುದೇ ಸ್ನಾನವೆಂದು ತಿಳಿಯುವರು. ॥ ೫ ॥ ದೂರದಲ್ಲಿರುವ ಕುಂಡವನ್ನೇ ತೀರ್ಥವೆಂದು ತಿಳಿಯುವರು. ಬಳಿಯಲ್ಲಿರುವ ಗಂಗೆ-ಗೋಮತಿ, ತಂದೆ-ತಾಯಿ ಇವುಗಳನ್ನು ಉಪೇಕ್ಷಿಸುವರು. ತಲೆಯಲ್ಲಿ ಉದ್ದ-ಉದ್ದ ಕೂದಲು ಬೆಳೆಸುವುದೇ ಶರೀರದ ಸೌಂದರ್ಯ ಚಿಹ್ನೆಯೆಂದು ತಿಳಿಯುವರು. ತನ್ನ ಹೊಟ್ಟೆ ತುಂಬಿಸಿಕೊಳ್ಳುವುದೇ ಎಲ್ಲಕ್ಕಿಂತ ದೊಡ್ಡ ಪುರುಷಾರ್ಥವೆಂದಾದೀತು. ಎಷ್ಟು ಉದ್ಧಟತನದಿಂದ ಮಾತನಾಡುವನೋ ಅಷ್ಟೇ ದೊಡ್ಡ ಸತ್ಯಸಂಧನೆನಿಸುವನು. ॥ ೬ ॥ ತನ್ನ ಕುಟುಂಬವನ್ನು ಸಾಕುವುದೇ ಮನುಷ್ಯನ ಯೋಗ್ಯತೆ-ಚತುರತೆಯ ದೊಡ್ಡ ಲಕ್ಷಣವಾಗುವುದು. ಕೀರ್ತಿಗಾಗಿ ಧರ್ಮವನ್ನು ಆಚರಿಸಲಾಗುವುದು. ಹೀಗೆ ಇಡೀ ಪೃಥಿವಿಯಲ್ಲಿ ದುಷ್ಟರು ತುಂಬಿಹೋದಾಗ ಬ್ರಾಹ್ಮಣ,

ಬ್ರಹ್ಮವಿಟ್‌ಕ್ಷತ್ರಶೂದ್ರಾಣಾಂ ಯೋ ಬಲೀ ಭವಿತಾ ನೃಪಃ ।
ಪ್ರಜಾ ಹಿ ಲುಬ್ಧೈ ರಾಜನ್ಯೈರ್ನಿರ್ಘೃಣೈರ್ದಸ್ಯುಧರ್ಮಭಿಃ
॥ ೮ ॥

ಆಚ್ಛಿನ್ನದಾರದ್ರವಿಣಾ ಯಾಸ್ಯಂತಿ ಗಿರಿಕಾನನಮ್ ।
ಶಾಕಮೂಲಾಮಿಷಕ್ಷೌದ್ರಫಲಪುಷ್ಪಾಷ್ಟಿಭೋಜನಾಃ
॥ ೯ ॥

ಅನಾವೃಷ್ಟ್ಯಾ ವಿನಂಕ್ಷ್ಯಂತಿ ದುರ್ಭಿಕ್ಷಕರಪೀಡಿತಾಃ ।
ಶೀತವಾತಾತಪಪ್ರಾವೃಡ್ಹಿಮೈರನ್ಯೋನ್ಯತಃ ಪ್ರಜಾಃ
॥ ೧೦ ॥

ಕ್ಷುತ್ತೃಡ್ಭ್ಯಾಂ ವ್ಯಾಧಿಭಿಶ್ಚೈವ ಸಂತಪ್ಸ್ಯಂತೇ ಚ ಚಿಂತಯಾ ।
ತ್ರಿಂಶದ್ವಿಂಶತಿವರ್ಷಾಣಿ ಪರಮಾಯುಃ ಕಲೌ ನೃಣಾಮ್
॥ ೧೧ ॥

ಕ್ಷೀಯಮಾಣೇಷು ದೇಹೇಷು ದೇಹಿನಾಂ ಕಲಿದೋಷತಃ ।
ವರ್ಣಾಶ್ರಮವತಾಂ ಧರ್ಮೇ ನಷ್ಟೇ ವೇದಪಥೇ ನೃಣಾಮ್
॥ ೧೨ ॥

ಪಾಖಂಡಪ್ರಚುರೇ ಧರ್ಮೇ ದಸ್ಯುಪ್ರಾಯೇಷು ರಾಜಸು ।
ಚೌರ್ಯಾನೃತವೃಥಾಹಿಂಸಾನಾನಾವೃತ್ತಿಷು ವೈ ನೃಷು
॥ ೧೩ ॥

ಶೂದ್ರಪ್ರಾಯೇಷು ವರ್ಣೇಷುಚ್ಛಾಗಪ್ರಾಯಾಸು ಧೇನುಷು ।
ಗೃಹಪ್ರಾಯೇಷ್ವಾಶ್ರಮೇಷು ಯೌನಪ್ರಾಯೇಷು ಬಂಧುಷು
॥ ೧೪ ॥

ಅಣುಪ್ರಾಯಾಸ್ವೋಷಧೀಷು ಶಮೀಪ್ರಾಯೇಷು ಸ್ಥಾಣುಷು ।
ವಿದ್ಯುತ್ಪ್ರಾಯೇಷು ಮೇಘೇಷು ಶೂನ್ಯಪ್ರಾಯೇಷು ಸದ್ಮಸು
॥ ೧೫ ॥

ಇತ್ಥಂ ಕಲೌ ಗತಪ್ರಾಯೇ ಜನೇ ತು ಖರಧರ್ಮಿಣಿ ।
ಧರ್ಮತ್ರಾಣಾಯ ಸತ್ತ್ವೇನ ಭಗವಾನವತರಿಷ್ಯತಿ
॥ ೧೬ ॥

ಕ್ಷತ್ರಿಯ, ವೈಶ್ಯ ಮತ್ತು ಶೂದ್ರರಲ್ಲಿ ಹೆಚ್ಚು ಬಲಶಾಲಿಯಾದವನೇ ರಾಜನಾಗುವನು. ಆಗಿನ ರಾಜರು ನೀಚರೂ, ನಿರ್ದಯರೂ, ಕ್ರೂರಿಗಳೂ ಕಡುಲೋಭಿಗಳೂ, ಕಸಿದುಕೊಳ್ಳುವ ಮತ್ತು ಲೂಟಿ ದರೋಡೆ ಮಾಡುವವರಾಗುವರು. ಇವರು ಪ್ರಜೆಗಳ ಹಣ ಹೆಂಡಿರನ್ನು ಕಿತ್ತುಕೊಳ್ಳುವರು. ಇವರಿಗೆ ಹೆದರಿದ ಪ್ರಜೆಗಳು ಬೆಟ್ಟ ಕಾಡುಗಳಿಗೆ ಓಡಿ ಹೋಗುವರು. ಆ ಸಮಯದಲ್ಲಿ ಪ್ರಜೆಯು ಗೆಡ್ಡೆ-ಗೆಣಸು, ಮಾಂಸ, ಜೇನು, ಹಣ್ಣು, ಹೂವು, ಬೀಜ ಮುಂತಾದವುಗಳನ್ನು ತಿಂದುಕೊಂಡು ಹೊಟ್ಟೆಹೊರೆಯುವರು. ॥ ೭-೯ ॥ ಮಳೆಯೇ ಬಾರದೆ ಕ್ಷಾಮ ತಲೆದೋರಿತು. ಆಗಲೂ ಮೇಲಿಂದ ಮೇಲೆ ಕಂದಾಯ ಹೇರಲಾಗುವುದು. ಕೆಲವೊಮ್ಮೆ ಮೈಸುಡುವ ಸೆಕೆ ಉಂಟಾದೀತು. ಕೆಲವೊಮ್ಮೆ ಪ್ರಾಣಾಂತಕವಾದ ಜಲಪ್ರವಾಹ ಬಂದೀತು. ಇಂತಹ ಉತ್ಪಾತಗಳಿಂದ, ಪರಸ್ಪರ ಸಂಘರ್ಷದಿಂದ ಪ್ರಜೆಯು ಅತ್ಯಂತ ಪೀಡಿತವಾಗಿ ನಾಶವಾಗಿ ಹೋಗುವುದು. ॥ ೧೦ ॥ ಜನರು ಹಸಿವು-ಬಾಯಾರಿಕೆಗಳಿಂದ ಕಂಗೆಟ್ಟು, ನಾನಾ ರೀತಿಯ ಚಿಂತೆಗಳಿಂದ ದುಃಖಿತರಾಗಿ, ನಾನಾ ರೋಗಗಳಿಗೆ ತುತ್ತಾಗುವರು. ಕಲಿಯುಗದಲ್ಲಿ ಮನುಷ್ಯರ ಪರಮಾಯುಸ್ಸು ಕೇವಲ ಇಪ್ಪತ್ತು ಅಥವಾ ಮೂವತ್ತು ವರ್ಷಗಳಿರುವುದು. ॥ ೧೧ ॥

ಪರೀಕ್ಷಿತನೇ ! ಕಲಿಯುದೋಷದಿಂದ ಪ್ರಾಣಿಗಳ ಶರೀರಗಳು ಸಣ್ಣದಾಗಿಯೂ, ಕ್ಷೀಣವಾಗಿಯೂ, ರೋಗಗ್ರಸ್ತವಾಗಿರುವವು. ವರ್ಣಾಶ್ರಮಗಳ ಧರ್ಮವನ್ನು ಹೇಳುವ ವೇದ ಮಾರ್ಗವು ನಷ್ಟಪ್ರಾಯವಾಗುವುದು. ॥ ೧೨ ॥ ಧರ್ಮದಲ್ಲಿ ಪಾಖಂಡ ತನವೇ ಪ್ರಧಾನವಾದೀತು. ರಾಜ-ಮಹರಾಜರು ದರೋಡೆಕೋರರಾಗುವರು. ಜನರು ಕಳ್ಳತನ, ಸುಳ್ಳು, ನಿರಪರಾಧಿಗಳ ಹಿಂಸೆ ಮುಂತಾದ ಅನೇಕ ವಿಧದ ಕೆಟ್ಟಕೆಲಸಗಳಿಂದ ಜೀವನ ನಡೆಸುವರು. ॥ ೧೩ ॥ ನಾಲ್ಕು ವರ್ಣದ ಜನರು ಶೂದ್ರರಂತೆ ಆಗಿ ಹೋಗುವರು. ಹಸುಗಳು ಕುರಿಗಳಂತೆ ಸಣ್ಣ-ಸಣ್ಣದಾಗಿ ಕಡಿಮೆ ಹಾಲು ಕೊಡುವವು. ವಾನಪ್ರಸ್ಥರು ಮತ್ತು ಸಂನ್ಯಾಸಿ ಮುಂತಾದ ವಿರಕ್ತ ಆಶ್ರಮದವರೂ ಕೂಡ ಮನೆ-ಮಠಕಟ್ಟಿಕೊಂಡು ಗೃಹಸ್ಥರಂತೆ ವ್ಯಾಪಾರ ಮಾಡುವರು. ವಿವಾಹ ಸಂಬಂಧವಿರುವವರೇ ತಮ್ಮ ಸಂಬಂಧಿಗಳೆಂದು ತಿಳಿಯುವರು. ॥ ೧೪ ॥ ಭತ್ತ, ಗೋಧಿ ಮುಂತಾದ ಗಿಡಗಳು ಕಡುಚಿಕ್ಕದಾಗಿ ಬಿಡುವವು. ವೃಕ್ಷಗಳಲ್ಲಿ ಹೆಚ್ಚಿನವು ಶಮಿಯಂತೆ ಸಣ್ಣದಾಗಿ, ಮುಳ್ಳುಗಿಡಗಳೇ ಉಳಿಯುವವು. ಮೋಡಗಳಲ್ಲಿ ಮಿಂಚು ಬಳ್ಳಿಗಳು ಹೆಚ್ಚಾಗಿ ಕಾಣಿಸಿಕೊಂಡು ಮಳೆ ಕಡಿಮೆ ಬೀಳುವುದು. ಗೃಹಸ್ಥರ ಮನೆಗಳು ಅತಿಥಿ-ಸತ್ಕಾರ ಅಥವಾ ವೇದಧ್ವನಿರಹಿತವಾದ ಕಾರಣ ಅಥವಾ ಜನಸಂಖ್ಯೆಯು ಕಡಿಮೆಯಾಗಿ ಶೂನ್ಯವಾಗುವವು. ॥ ೧೫ ॥ ಪರೀಕ್ಷಿತನೇ ! ಕಲಿಯುಗವು ಮುಗಿಯುತ್ತಿರುವಂತೆ ಮನುಷ್ಯರ ಸ್ವಭಾವಗಳು ಕತ್ತೆಗಳಂತೆ ಆಗುವವು. ಜನರು ಸಂಸಾರದ ಹೊರೆಯನ್ನು ಹೊರುವ ವಿಷಯಿಗಳಾಗಿ ಹೋಗುವರು. ಇಂತಹ ಸ್ಥಿತಿಯಲ್ಲಿ ಧರ್ಮವನ್ನು ರಕ್ಷಿಸಲಿಕ್ಕಾಗಿ, ಭಗವಂತನು ಸತ್ತ್ವಗುಣವನ್ನು ಸ್ವೀಕರಿಸಿ ಅವತರಿಸುವನು. ॥ ೧೬ ॥

ಚರಾಚರಗುರೋರ್ವಿಷ್ಣೋರೀಶ್ವರಸ್ಯಾಖಿಲಾತ್ಮನಃ ।
ಧರ್ಮತ್ರಾಣಾಯ ಸಾಧೂನಾಂ ಜನ್ಮ ಕರ್ಮಾಪನುತ್ತಯೇ ॥ ೧೭ ॥

ಶಂಭಲಗ್ರಾಮಮುಖ್ಯಸ್ಯ ಬ್ರಾಹ್ಮಣಸ್ಯ ಮಹಾತ್ಮನಃ ।
ಭವನೇ ವಿಷ್ಣು ಯಶಸಃ ಕಲ್ಕಿಃ ಪ್ರಾದುರ್ಭವಿಷ್ಯತಿ ॥ ೧೮ ॥

ಅಶ್ವಮಾಶುಗಮಾರುಹ್ಯ ದೇವದತ್ತಂ ಜಗತ್ಪತಿಃ ।
ಅಸಿನಾಸಾಧುದಮನಮಷ್ಟೈಶ್ವರ್ಯಗುಣಾನ್ವಿತಃ ॥ ೧೯ ॥

ವಿಚರನ್ನಾಶುನಾ ಕ್ಷೋಣ್ಯಾಂ ಹಯೇನಾಪ್ರತಿಮದ್ಯುತಿಃ ।
ನೃಪಲಿಂಗಚ್ಛದೋ ದಸ್ಯೂನ್ಕೋಟಿಶೋ ನಿಹನಿಷ್ಯತಿ ॥ ೨೦ ॥

ಅಥ ತೇಷಾಂ ಭವಿಷ್ಯಂತಿ ಮನಾಂಸಿ ವಿಶದಾನಿ ವೈ ।
ವಾಸುದೇವಾಂಗರಾಗಾತಿಪುಣ್ಯಗಂಧಾನಿಲಸ್ಪೃಶಾಮ್ ।
ಪೌರಜಾನಪದಾನಾಂ ವೈ ಹತೇಷ್ವಖಿಲದಸ್ಯುಷು ॥ ೨೧ ॥

ತೇಷಾಂ ಪ್ರಜಾವಿಸರ್ಗಶ್ಚ ಸ್ಥವಿಷ್ಠಃ ಸಂಭವಿಷ್ಯತಿ ।
ವಾಸುದೇವೇ ಭಗವತಿ ಸತ್ತ್ವಮೂರ್ತೌ ಹೃದಿ ಸ್ಥಿತೇ ॥ ೨೨ ॥

ಯದಾವತೀರ್ಣೋ ಭಗವಾನ್ ಕಲ್ಕಿರ್ಧರ್ಮಪತಿರ್ಹರಿಃ ।
ಕೃತಂ ಭವಿಷ್ಯತಿ ತದಾ ಪ್ರಜಾಸೂತಿಶ್ಚ ಸಾತ್ತ್ವಿಕೀ ॥ ೨೩ ॥

ಯದಾಚಂದ್ರಶ್ಚ ಸೂರ್ಯಶ್ಚ ತಥಾ ತಿಷ್ಯಬೃಹಸ್ಪತೀ ।
ಏಕರಾಶೌ ಸಮೇಷ್ಯಂತಿ ತದಾ ಭವತಿ ತತ್ ಕೃತಮ್ ॥ ೨೪ ॥

ಯೇಽತೀತಾ ವರ್ತಮಾನಾ ಯೇ ಭವಿಷ್ಯಂತಿ ಚ ಪಾರ್ಥಿವಾಃ ।
ತೇ ತ ಉದ್ದೇಶತಃ ಪ್ರೋಕ್ತಾ ವಂಶೀಯಾಃ ಸೋಮಸೂರ್ಯಯೋಃ ॥ ೨೫ ॥

ಆರಭ್ಯ ಭವತೋ ಜನ್ಮ ಯಾವನ್ನಂದಾಭಿಷೇಚನಮ್ ।
ಏತದ್ವರ್ಷಸಹಸ್ರಂ ತು ಶತಂ ಪಂಚದಶೋತ್ತರಮ್ ॥ ೨೬ ॥

ಪ್ರಿಯಪರೀಕ್ಷಿತನೇ ! ಸರ್ವವ್ಯಾಪಕ ಭಗವಾನ್ ವಿಷ್ಣುವು ಸರ್ವಶಕ್ತನಾಗಿರುವನು. ಅವನು ಸರ್ವಸ್ವರೂಪನಾಗಿದ್ದರೂ ಚರಾಚರ ಜಗತ್ತಿಗೆ ನಿಜವಾದ ಸದ್ಗುರುವಾಗಿದ್ದಾನೆ. ಅವನು ಸಾಧು-ಸತ್ಪುರುಷರ ಧರ್ಮವನ್ನು ರಕ್ಷಿಸಲಿಕ್ಕಾಗಿ, ಅವರ ಕರ್ಮಬಂಧವನ್ನು ತುಂಡರಿಸಿ ಅವರನ್ನು ಜನ್ಮ-ಮೃತ್ಯುವಿನ ಚಕ್ರದಿಂದ ಬಿಡಿಸಲೆಂದೇ ಅವತರಿಸಿರುವನು. ॥ ೧೭ ॥ ಆ ದಿನಗಳಲ್ಲಿ ಶಂಬಲಗ್ರಾಮದಲ್ಲಿ ವಿಷ್ಣುಯಶನೆಂಬ ಬ್ರಾಹ್ಮಣನೋರ್ವನು ಇರುವನು. ಅವನು ಉದಾರ ಹೃದಯಿಯೂ, ಭಕ್ತಿಭಾವ ಸಂಪನ್ನನಾಗುವನು. ಅವನ ಮನೆಯಲ್ಲಿ ಭಗವಂತನು ಕಲ್ಕಿಯಾಗಿ ಅವತರಿಸುವನು. ॥ ೧೮ ॥ ಅಷ್ಟಸಿದ್ಧಿಗಳ ಹಾಗೂ ಸಮಸ್ತ ಸದ್ಗುಣಗಳ ಏಕಮಾತ್ರ ಆಶ್ರಯನು ಭಗವಂತನೇ ಆಗಿರುವನು. ಸಮಸ್ತ ಚರಾಚರ ಜಗತ್ತಿನ ರಕ್ಷಕನೂ, ಸ್ವಾಮಿಯೂ ಆಗಿದ್ದಾನೆ. ಅವನು ದೇವದತ್ತವೆಂಬ ಶೀಘ್ರಗಾಮಿಯಾದ ಕುದುರೆಯನ್ನೇರಿ ಖಡ್ಗದಿಂದ ದುಷ್ಟರನ್ನು ತರಿದು ಬಿಡುವನು. ॥ ೧೯ ॥ ಅವನ ರೋಮ-ರೋಮಗಳಲ್ಲಿ ಅತುಲ ತೇಜವು ಹೊರಹೊಮ್ಮುವುದು. ಅವನು ತನ್ನ ಮಹಾವೇಗಶಾಲಿಯಾದ ಕುದುರೆಯನ್ನೇರಿ ಪೃಥಿವಿಯಲ್ಲಿ ಎಲ್ಲೆಡೆ ಸಂಚರಿಸಿ, ರಾಜರವೇಷದಲ್ಲಿ ಅಡಗಿಕೊಂಡಿದ್ದ ಕೋಟಿ-ಕೋಟಿ ದಸ್ಯುಗಳನ್ನು ಸಂಹರಿಸುವನು. ॥ ೨೦ ॥

ಪ್ರಿಯಪರೀಕ್ಷಿತನೇ ! ಸಮಸ್ತ ದಸ್ಯುಗಳ ಸಂಹಾರವಾದಾಗ ನಗರದ ಮತ್ತು ದೇಶದ ಸಮಸ್ತ ಪ್ರಜೆಗಳ ಹೃದಯ ಪವಿತ್ರತೆಯಿಂದ ತುಂಬಿ ಹೋದೀತು. ಏಕೆಂದರೆ, ಕಲ್ಕಿ ಭಗವಂತನ ಶರೀರಕ್ಕೆ ಹಚ್ಚಿದ ಅಂಗರಾಗದ ಸ್ಪರ್ಶವನ್ನು ಪಡೆದ ಅತ್ಯಂತ ಪವಿತ್ರವಾದ ವಾಯುವು ಅವರನ್ನು ಸ್ಪರ್ಶಿಸುವುದರಿಂದ ಅವರು ಭಗವಂತನ ಶ್ರೀವಿಗ್ರಹದ ದಿವ್ಯ ಸುಗಂಧವನ್ನು ಪಡೆದುಕೊಳ್ಳುವರು. ॥ ೨೧ ॥ ಅವರ ಪವಿತ್ರ ಹೃದಯಗಳಲ್ಲಿ ಸತ್ತ್ವಮೂರ್ತಿಯಾದ ಭಗವಾನ್ ವಾಸುದೇವನು ವಿರಾಜಮಾನಾಗುವನು. ಮತ್ತೆ ಅವರ ಸಂತಾನಗಳು ಮೊದಲಿನಂತೆ ಹೃಷ್ಟ-ಪುಷ್ಟರೂ ಬಲಿಷ್ಠರೂ ಆಗುವರು.॥ ೨೨ ॥ ಪ್ರಜೆಯ ನಯನಮನೋಹರ ಹರಿಯೇ ಧರ್ಮದ ರಕ್ಷಕನು ಸ್ವಾಮಿಯೂ ಆಗಿರುವನು. ಅಂತಹ ಭಗವಂತನು ಕಲ್ಕಿಯಾಗಿ ಅವತರಿಸಿದಾಗಲೇ ಕೃತಯುಗದ ಪ್ರಾರಂಭವಾಗುವುದು ಹಾಗೂ ಪ್ರಜೆಯ ಸಂತಾನ-ಪರಂಪರೆಯು ತಾನಾಗಿಯೇ ಸತ್ತ್ವಗುಣದಿಂದ ಯುಕ್ತರಾಗುವರು. ॥ ೨೩ ॥ ಚಂದ್ರ, ಸೂರ್ಯ ಮತ್ತು ಬೃಹಸ್ಪತಿಯು ಒಂದೇ ಸಮಯದಲ್ಲಿ ಒಟ್ಟಿಗೆ ಪುಷ್ಯನಕ್ಷತ್ರದ ಪ್ರಥಮ ಚರಣದಲ್ಲಿ ಒಂದೇ ರಾಶಿಯಲ್ಲಿ ಪ್ರವೇಶಿಸಿದಾಗಲೇ ಕೃತಯುಗದ ಪ್ರಾರಂಭವಾಗುತ್ತದೆ. ॥ ೨೪ ॥

ಪರೀಕ್ಷಿತನೇ ! ಚಂದ್ರವಂಶ ಮತ್ತು ಸೂರ್ಯವಂಶದಲ್ಲಿ ಆಗಿ ಹೋದ ರಾಜರ ಕುರಿತು, ಮುಂದೆ ಆಗುವವರ ಕುರಿತು ಎಲ್ಲವನ್ನು ಸಂಕ್ಷೇಪವಾಗಿ ನಾನು ನಿನಗೆ ವರ್ಣಿಸಿರುವೆನು. ॥ ೨೫ ॥ ನಿನ್ನ ಜನ್ಮದಿಂದ ಹಿಡಿದು ನಂದರಾಜನ ಪಟ್ಟಾಭಿಷೇಕದವರೆಗೆ ಒಂದು ಸಾವಿರದ ನೂರಹದಿನೈದು ವರ್ಷಗಳ ಸಮಯ ತಗಲುವುದು. ॥ ೨೬ ॥

ಸಪ್ತರ್ಷೀಣಾಂ ತು ಯೌ ಪೂರ್ವೌ ದೃಶ್ಯೇತೇ ಉದಿತೌ ದಿವಿ ।
ತಯೋಸ್ತು ಮಧ್ಯೇ ನಕ್ಷತ್ರಂ ದೃಶ್ಯತೇ ಯತ್ಸಮಂ ನಿಶಿ
॥ ೨೭ ॥

ತೇನೈತ ಋಷಯೋ ಯುಕ್ತಾಸ್ತಿಷ್ಠಂತ್ಯಬ್ದಶತಂ ನೃಣಾಮ್ ।
ತೇ ತ್ವದೀಯೇ ದ್ವಿಜಾಃ ಕಾಲೇ ಅಧುನಾ ಚಾಶ್ರಿತಾ ಮಘಾಃ
॥ ೨೮ ॥

ವಿಷ್ಣೋರ್ಭಗವತೋ ಭಾನುಃ ಕೃಷ್ಣಾಖ್ಯೋಽಸೌ ದಿವಂ ಗತಃ ।
ತದಾವಿಶತ್ಕಲಿರ್ಲೋಕಂ ಪಾಪೇ ಯದ್ರಮತೇ ಜನಃ
॥ ೨೯ ॥

ಯಾವತ್ಸ ಪಾದಪದ್ಮಾಭ್ಯಾಂ ಸ್ಪೃಶನ್ನಾಸ್ತೇ ರಮಾಪತಿಃ ।
ತಾವತ್ಕಲಿರ್ವೈ ಪೃಥಿವೀಂ ಪರಾಕ್ರಾಂತುಂ ನ ಚಾಶಕತ್
॥ ೩೦ ॥

ಯದಾ ದೇವರ್ಷಯಃ ಸಪ್ತ ಮಘಾಸು ವಿಚರಂತಿ ಹಿ ।
ತದಾ ಪ್ರವೃತ್ತಸ್ತು ಕಲಿರ್ದ್ವಾದಶಾಬ್ದಶತಾತ್ಮಕಃ
॥ ೩೧ ॥

ಯದಾ ಮಘಾಭ್ಯೋ ಯಾಸ್ಯಂತಿ ಪೂರ್ವಾಷಾಢಾಂ ಮಹರ್ಷಯಃ ।
ತದಾ ನಂದಾತ್ಪ್ರಭೃತ್ಯೇಷ ಕಲಿರ್ವೃದ್ಧಿಂ ಗಮಿಷ್ಯತಿ
॥ ೩೨ ॥

ಯಸ್ಮಿನ್ಕೃಷ್ಣೋ ದಿವಂ ಯಾತಸ್ತಸ್ಮಿನ್ನೇವ ತದಾಹನಿ ।
ಪ್ರತಿಪನ್ನಂ ಕಲಿಯುಗಮಿತಿ ಪ್ರಾಹುಃ ಪುರಾವಿದಃ
॥ ೩೩ ॥

ದಿವ್ಯಾಬ್ದಾನಾಂ ಸಹಸ್ರಾಂತೇ ಚತುರ್ಥೇ ತು ಪುನಃ ಕೃತಮ್ ।
ಭವಿಷ್ಯತಿ ಯದಾ ನೃಣಾಂ ಮನ ಆತ್ಮಪ್ರಕಾಶಕಮ್
॥ ೩೪ ॥

ಇತ್ಯೇಷ ಮಾನವೋ ವಂಶೋ ಯಥಾ ಸಂಖ್ಯಾಯತೇ ಭುವಿ ।
ತಥಾ ವಿಟ್ಶೂದ್ರ ವಿಪ್ರಾಣಾಂ ತಾಸ್ತಾ ಜ್ಞೇಯಾ ಯುಗೇ ಯುಗೇ
॥ ೩೫ ॥

ಏತೇಷಾಂ ನಾಮಲಿಂಗಾನಾಂ ಪುರುಷಾಣಾಂ ಮಹಾತ್ಮನಾಮ್ ।
ಕಥಾಮಾತ್ರಾವಶಿಷ್ಟಾನಾಂ ಕೀರ್ತಿರೇವ ಸ್ಥಿತಾ ಭುವಿ
॥ ೩೬ ॥

ದೇವಾಪಿಃ ಶಂತನೋರ್ಭ್ರಾತಾ ಮರುಶ್ಚೇಕ್ಷ್ವಾಕುವಂಶಜಃ ।
ಕಲಾಪಗ್ರಾಮ ಆಸಾತೇ ಮಹಾಯೋಗಬಲಾನ್ವಿತೌ
॥ ೩೭ ॥

ಆಕಾಶದಲ್ಲಿ ಸಪ್ತರ್ಷಿಯರ ಉದಯವಾದ ಸಮಯದಲ್ಲಿ ಮೊದಲಿಗೆ ಅವರಲ್ಲಿ ಎರಡೇ ನಕ್ಷತ್ರಗಳು ಕಂಡುಬರುತ್ತವೆ. ಅವುಗಳ ಮಧ್ಯದಲ್ಲಿ ದಕ್ಷಿಣೋತ್ತರ ರೇಖೆಯ ಸಮಭಾಗದಲ್ಲಿ ಅಶ್ವಿನಿಯೇ ಮೊದಲಾದ ನಕ್ಷತ್ರಗಳಲ್ಲಿನ ಒಂದೇ ನಕ್ಷತ್ರವು ಕಂಡು ಬರುತ್ತದೆ. ॥ ೨೭ ॥ ಆ ನಕ್ಷತ್ರದೊಂದಿಗೆ ಸಪ್ತರ್ಷಿಗಳು ಮನುಷ್ಯಮಾನದ ಒಂದುನೂರು ವರ್ಷಗಳವರೆಗೆ ಇರುತ್ತಾರೆ. ಅವರು ನಿನ್ನ ಜನ್ಮ ಸಮಯದಲ್ಲಿ ಹಾಗೂ ಈಗಲೂ ಮಘಾನಕ್ಷತ್ರದಲ್ಲೇ ಇದ್ದಾರೆ. ॥ ೨೮॥

ಭಗವಂತನು ಶ್ರೀಕೃಷ್ಣನೆಂಬ ಹೆಸರಿನಿಂದ ಅವತರಿಸಿ ದಿವ್ಯ ಲೀಲೆಗಳನ್ನು ನಡೆಸಿ ತನ್ನ ಪರಮ ದಿವ್ಯಧಾಮಕ್ಕೆ ಹೊರಟುಹೋದ ಬಳಿಕ ಕಲಿಯು ಈ ಲೋಕವನ್ನು ಆಕ್ರಮಿಸಿದನು. ಅದರಿಂದಲೇ ಮನುಷ್ಯರ ಮತಿ-ಗತಿ ಪಾಪದ ಕಡೆಗೆ ವಾಲಿತು. ॥ ೨೯ ॥ ಲಕ್ಷ್ಮೀಪತಿಯಾದ ಭಗವಾನ್ ಶ್ರೀಕೃಷ್ಣನು ತನ್ನ ಚರಣಕಮಲಗಳಿಂದ ಭೂಮಿಯನ್ನು ಸ್ಪರ್ಶಿಸುತ್ತಿದ್ದವರೆಗೆ ಕಲಿಯುಗವು ಪೃಥಿವಿಯಲ್ಲಿ ತನ್ನ ಕಾಲನ್ನು ಊರದಾದನು. ॥ ೩೦ ॥ ಪರೀಕ್ಷಿತನೇ ! ಸಪ್ತರ್ಷಿಗಳು ಮಘಾನಕ್ಷತ್ರದಲ್ಲಿ ಸಂಚರಿಸುವ ಸಮಯದಲ್ಲೇ ಕಲಿಯುಗದ ಪ್ರಾರಂಭವಾಗುತ್ತದೆ. ಕಲಿಯುಗದ ಅವಧಿ ದೇವತೆಗಳ ವರ್ಷಗಣನೆಯಂತೆ ಹನ್ನೆರಡುನೂರು ವರ್ಷಗಳು ಅಂದರೆ, ಮನುಷ್ಯರ ಗಣನೆಯಂತೆ ನಾಲ್ಕು ಲಕ್ಷ ಮೂವತ್ತೆರಡು ಸಾವಿರ ವರ್ಷಗಳು. ॥ ೩೧ ॥ ಸಪ್ತರ್ಷಿಗಳು ಮಘಾನಕ್ಷತ್ರದಿಂದ ಪೂರ್ವಾಷಾಢಾ ನಕ್ಷತ್ರಕ್ಕೆ ಹೋದಾಗ ನಂದರಾಜನ ರಾಜ್ಯವಿರುವುದು. ಆಗಿನಿಂದಲೇ ಕಲಿಯುಗದ ವೃದ್ಧಿ ಪ್ರಾರಂಭವಾಗುವುದು. ॥ ೩೨ ॥ ಭಗವಾನ್ ಶ್ರೀಕೃಷ್ಣನು ತನ್ನ ಪರಮಧಾಮಕ್ಕೆ ಪ್ರಯಾಣ ಮಾಡಿದ ದಿನವೇ ಕಲಿಯುಗದ ಪ್ರಾರಂಭವಾಯಿತೆಂದು ಪುರಾತತ್ತ್ವವನ್ನು ಬಲ್ಲವರು ಹೇಳುತ್ತಾರೆ. ॥ ೩೩ ॥ ಪರೀಕ್ಷಿತನೆ! ದೇವತೆಗಳ ವರ್ಷಗಣನೆಯಂತೆ ಒಂದು ಸಾವಿರ ವರ್ಷಗಳು ಕಳೆದುಹೋದಾಗ ಕಲಿಯುಗದ ಕೊನೆಯ ದಿನಗಳಲ್ಲಿ ಪುನಃ ಭಗವಾನ್ ಕಲ್ಕಿಯ ಕೃಪೆಯಿಂದ ಮನುಷ್ಯರ ಮನಸ್ಸುಗಳಲ್ಲಿ ಸಾತ್ತ್ವಿಕತೆಯ ಸಂಚಾರವಾಗುವುದು. ಜನರು ತಮ್ಮ ವಾಸ್ತವಿಕ ಸ್ವರೂಪವನ್ನು ತಿಳಿದುಕೊಳ್ಳುವರು ಹಾಗೂ ಆಗಿನಿಂದಲೇ ಕೃತಯುಗದ ಪ್ರಾರಂಭವೂ ಆಗುವುದು. ॥ ೩೪॥

ಪರೀಕ್ಷಿತನೇ ! ನಾನಾದರೋ ನಿನಗೆ ಕೇವಲ ಮನುವಂಶವನ್ನೇ ಸಂಕ್ಷೇಪವಾಗಿ ವರ್ಣಿಸಿರುವೆನು. ಮನುವಂಶದ ಗಣನೆಯಾಗುವಂತೆಯೇ ಪ್ರತಿಯೊಂದು ಬ್ರಾಹ್ಮಣ, ವೈಶ್ಯ, ಶೂದ್ರರ ವಂಶ ಪರಂಪರೆಯನ್ನು ಭಾವಿಸಬೇಕು. ॥ ೩೫ ॥ ರಾಜನೇ ! ಯಾವ ಪುರುಷರ ಮತ್ತು ಮಹಾತ್ಮರ ಕುರಿತು ನಾನು ನಿನಗೆ ವರ್ಣಿಸಿರುವೆನೋ, ಅವರನ್ನು ಕೇವಲ ಹೆಸರಿನಿಂದಲೇ ಈಗ ಗುರುತಿಸಲಾಗುತ್ತದೆ. ಈಗ ಅವರಿಲ್ಲ, ಕೇವಲ ಅವರ ಕಥೆಗಳು ಉಳಿದುಕೊಂಡಿವೆ. ಈಗ ಅವರ ಕೀರ್ತಿಯೇ ಪೃಥಿವಿಯಲ್ಲಿ ಅಲ್ಲಲ್ಲಿ ಕೇಳಲು ಬರುತ್ತದೆ. ॥ ೩೬ ॥ ಭೀಷ್ಮಪಿತಾಮಹರ ತಂದೆ ರಾಜಾಶಂತನುವಿನ ತಮ್ಮ ದೇವಾಪಿಯು ಮತ್ತು ಇಕ್ಷ್ವಾಕುವಂಶದ ಮರು ಎಂಬುವರು ಈ ಸಮಯದಲ್ಲಿ ಕಲಾಪಗ್ರಾಮದಲ್ಲಿ ನೆಲೆಸಿರುವರು. ಅವರು ಬಹಳ ದೊಡ್ಡ ಯೋಗಬಲದಿಂದ ಕೂಡಿರುವರು. ॥ ೩೭ ॥

ತಾವಿಹೈತ್ಯ ಕಲೇರಂತೇ ವಾಸುದೇವಾನುಶಿಕ್ಷಿತೌ ।
ವರ್ಣಾಶ್ರಮಯುತಂ ಧರ್ಮಂ ಪೂರ್ವವತ್ಪ್ರಥಯಿಷ್ಯತಃ ॥ ೩೮ ॥

ಕೃತಂ ತ್ರೇತಾ ದ್ವಾಪರಂ ಚ ಕಲಿಶ್ಚೇತಿ ಚತುರ್ಯುಗಮ್ ।
ಅನೇನ ಕ್ರಮಯೋಗೇನ ಭುವಿ ಪ್ರಾಣಿಷು ವರ್ತತೇ ॥ ೩೯ ॥

ರಾಜನ್ನೇತೇ ಮಯಾ ಪ್ರೋಕ್ತಾ ನರದೇವಾಸ್ತಥಾಪರೇ ।
ಭೂಮೌ ಮಮತ್ವಂ ಕೃತ್ವಾಂತೇ ಹಿತ್ವೇಮಾಂ ನಿಧನಂ ಗತಾಃ ॥ ೪೦ ॥

ಕೃಮಿವಿಡ್ಭಸ್ಮಸಂಜ್ಞಾಂತೇ ರಾಜನಾಮ್ನೋಽಪಿ ಯಸ್ಯ ಚ ।
ಭೂತಧ್ರುಕ್ ತತ್ ಕೃತೇ ಸ್ವಾರ್ಥಂ ಕಿಂ ವೇದ ನಿರಯೋ ಯತಃ ॥ ೪೧ ॥

ಕಥಂ ಸೇಯಮಖಂಡಾ ಭೂಃ ಪೂರ್ವೈರ್ಮೇ ಪುರುಷೈರ್ಧೃತಾ ।
ಮತ್ಪುತ್ರಸ್ಯ ಚ ಪೌತ್ರಸ್ಯ ಮತ್ಪೂರ್ವಾ ವಂಶಜಸ್ಯ ವಾ ॥ ೪೨ ॥

ತೇಜೋಽಬನ್ನಮಯಂ ಕಾಯಂ ಗೃಹೀತ್ವಾಽಽತ್ಮತಯಾ ಬುಧಾಃ ।
ಮಹೀಂ ಮಮತಯಾ ಚೋಭೌ ಹಿತ್ವಾಂತೇಽದರ್ಶನಂ ಗತಾಃ ॥ ೪೩ ॥

ಯೇ ಯೇ ಭೂಪತಯೋ ರಾಜನ್ ಭುಂಜಂತಿ ಭುವಮೋಜಸಾ ।
ಕಾಲೇನ ತೇ ಕೃತಾಃ ಸರ್ವೇ ಕಥಾಮಾತ್ರಾಃ ಕಥಾಸು ಚ ॥ ೪೪ ॥

ಕಲಿಯುಗದ ಕೊನೆಯಲ್ಲಿ ಭಗವಾನ್ ಕಲ್ಕಿಯ ಅಪ್ಪಣೆಯಂತೆ ಅವರು ಪುನಃ ಇಲ್ಲಿಗೆ ಬಂದು ಮೊದಲಿನಂತೆ ವರ್ಣಾಶ್ರಮ ಧರ್ಮವನ್ನು ವಿಸ್ತಾರಗೊಳಿಸುವರು. ॥೩೮॥ ಕೃತ, ತ್ರೇತ, ದ್ವಾಪರ ಮತ್ತು ಕಲಿ ಎಂಬ ಈ ನಾಲ್ಕುಯುಗಗಳು ಹಿಂದಿನ ಕ್ರಮದಂತೆ ತಮ್ಮ-ತಮ್ಮ ಸಮಯದಲ್ಲಿ ಪೃಥಿವಿಯಲ್ಲಿನ ಪ್ರಾಣಿಗಳ ಮೇಲೆ ತಮ್ಮ ಪ್ರಭಾವವನ್ನು ಬೀರುತ್ತಾ ಇರುವವು. ॥ ೩೯ ॥ ಪರೀಕ್ಷಿತನೇ! ನಾನು ನಿನಗೆ ವರ್ಣಿಸಿದ ರಾಜರೆಲ್ಲರೂ ಹಾಗೂ ಇವರಲ್ಲದೆ ಇತರ ರಾಜರೂ ಕೂಡ ಈ ಪೃಥಿವಿಯನ್ನು ನನ್ನದು-ನನ್ನದು ಎಂದು ಹೇಳುತ್ತಲೇ ಇದ್ದರು. ಆದರೆ ಕೊನೆಗೆ ಸತ್ತು ಮಣ್ಣುಪಾಲಾದರು. ॥ ೪೦ ॥ ಈ ಶರೀರವನ್ನು ಯಾರೇ ರಾಜರೆಂದು ಹೇಳಲಿ; ಆದರೆ ಕೊನೆಯಲ್ಲಿ ಇದು ಕ್ರಿಮಿಗಳ ರಾಶಿ ಅಥವಾ ಬೂದಿಯಾಗಿಯೇ ಪರಿಣತವಾಗುವುದು. ಬೂದಿಯಾಗಿಯೇ ಇರುವುದು. ಇದೇ ಶರೀರಕ್ಕಾಗಿ ಅಥವಾ ಇದರ ಸಂಬಂಧಿಗಳಿಗಾಗಿ ಯಾವುದೇ ಪ್ರಾಣಿಯನ್ನು ಹಿಂಸಿಸುವವರು ತಮ್ಮ ಸ್ವಾರ್ಥವಾಗಲೀ, ಪರಮಾರ್ಥವಾಗಲೀ ಅರಿತವರಲ್ಲ. ಏಕೆಂದರೆ, ಪ್ರಾಣಿಗಳನ್ನು ಹಿಂಸಿಸುವುದು ನರಕದ ದ್ವಾರವೇ ಆಗಿದೆ. ॥ ೪೧ ॥ ನನ್ನ ತಾತ-ಮುತ್ತಾತಂದಿರು ಈ ಅಖಂಡ ಭೂಮಂಡಲಕ್ಕೆ ಶಾಸಕರಾಗಿದ್ದರು. ಈಗ ಇದು ನನ್ನ ಅಧೀನದಲ್ಲಿದೆ. ನಾನು ಸತ್ತ ಬಳಿಕ ನನ್ನ ಮಕ್ಕಳು-ಮೊಮ್ಮಕ್ಕಳು, ನನ್ನ ವಂಶದವರು ಹೀಗೆ ಇದನ್ನು ಅನುಭವಿಸುವರು ಎಂದು ಆ ಜನರು ಯೋಚಿಸುತ್ತಲೇ ಇರುವರು. ॥ ೪೨ ॥ ಅಂತಹ ಆ ಮೂರ್ಖರು ಬೆಂಕಿ, ನೀರು, ಮಣ್ಣಿನ ಈ ಶರೀರವನ್ನು ತನ್ನದೆಂದು ತಿಳಿದುಕೊಂಡು, ದುರಭಿಮಾನದಿಂದ ಈ ಪೃಥಿವಿಯು ನನ್ನದಾಗಿದೆ ಎಂದು ಜಂಭಕೊಚ್ಚಿಕೊಳ್ಳುವರು. ಕೊನೆಗೆ ಈ ಶರೀರ ಮತ್ತು ಪೃಥಿವಿಯನ್ನು ಬಿಟ್ಟು ಅವರು ಅದೃಶ್ಯರಾಗಿ ಹೋಗುವರು. ॥ ೪೩ ॥ ಪ್ರಿಯ ಪರೀಕ್ಷಿತನೇ! ಯಾವ ಯಾವ ರಾಜರು ಬಹಳ ಉತ್ಸಾಹದಿಂದ ಮತ್ತು ಬಲ-ಪೌರುಷದಿಂದ ಈ ಭೂಮಿಯನ್ನು ಅನುಭವಿಸಿದರೋ ಅವರೆಲ್ಲರನ್ನೂ ಕಾಲವು ತನ್ನ ವಿಕರಾಳ ಮುಖದಿಂದ ನುಂಗಿಹಾಕಿತು. ಈಗ ಕೇವಲ ಇತಿಹಾಸದಲ್ಲಿ ಅವರ ಕಥೆಮಾತ್ರ ಉಳಿದುಕೊಂಡಿದೆ. ॥ ೪೪ ॥

ಎರಡನೆಯ ಅಧ್ಯಾಯವು ಮುಗಿಯಿತು. ॥ ೨ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ದ್ವಾದಶ ಸ್ಕಂಧೇ ದ್ವಿತೀಯೋಽಧ್ಯಾಯಃ ॥ ೨ ॥

ಮೂರನೆಯ ಅಧ್ಯಾಯ

ಕಲಿಯುಗಧರ್ಮ ಮತ್ತು ಕಲಿಯುಗದ ದೋಷಗಳಿಂದ ಪಾರಾಗುವ ಉಪಾಯ – ನಾಮಸಂಕೀರ್ತನೆ

ಶ್ರೀಶುಕ ಉವಾಚ

ದೃಷ್ಟ್ವಾಽಽತ್ಮನಿ ಜಯೇ ವ್ಯಗ್ರಾನ್ ನೃಪಾನ್ ಹಸತಿ ಭೂರಿಯಮ್ ।
ಅಹೋ ಮಾ ವಿಜಿಗೀಷಂತಿ ಮೃತ್ಯೋಃ ಕ್ರೀಡನಕಾ ನೃಪಾಃ ॥ ೧ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ! ರಾಜರುಗಳು ತನ್ನ ಮೇಲೆ ವಿಜಯ ಸಾಧಿಸಲು ಹಾತೊರೆಯುತ್ತಿರುವುದನ್ನು ನೋಡಿ ಭೂದೇವಿಯು – 'ಎಂತಹ ಮೂರ್ಖರು ಇವರು ? ತಾವೇ ಮೃತ್ಯುವಿನ ಬೊಂಬೆಯಾಗಿರುವಾಗ ನನ್ನನ್ನು ಜಯಿಸಬೇಕೆಂದು ಹವಣಿಸುತ್ತಿದ್ದಾರಲ್ಲ! ಎಂದು ನಗುತ್ತಾಳೆ. ॥ ೧ ॥

ಕಾಮ ಏಷ ನರೇಂದ್ರಾಣಾಂ ಮೋಘಃ ಸ್ಯಾದ್ವಿದುಷಾಮಪಿ ।
ಯೇನ ಫೇನೋಪಮೇ ಪಿಂಡೇ ಯೇಽತಿವಿಶ್ರಂಭಿತಾ ನೃಪಾಃ ॥ ೨ ॥

ಪೂರ್ವಂ ನಿರ್ಜಿತ್ಯ ಷಡ್ವರ್ಗಂ ಜೇಷ್ಯಾಮೋ ರಾಜಮಂತ್ರಿಣಃ ।
ತತಃ ಸಚಿವಪೌರಾಪ್ತಕರೀಂದ್ರಾನಸ್ಯ ಕಂಟಕಾನ್ ॥ ೩ ॥

ಏವಂ ಕ್ರಮೇಣ ಜೇಷ್ಯಾಮಃ ಪೃಥ್ವೀಂ ಸಾಗರಮೇಖಲಾಮ್ ।
ಇತ್ಯಾಶಾಬದ್ಧಹೃದಯಾ ನ ಪಶ್ಯಂತ್ಯಂತಿಕೇಽಂತಕಮ್ ॥ ೪ ॥

ಸಮುದ್ರಾವರಣಾಂ ಜಿತ್ವಾ ಮಾಂ ವಿಶಂತ್ಯಬ್ಧಿಮೋಜಸಾ ।
ಕಿಯದಾತ್ಮಜಯಸ್ಯೈತನ್ಮುಕ್ತಿರಾತ್ಮಜಯೇ ಫಲಮ್ ॥ ೫ ॥

ಯಾಂ ವಿಸೃಜ್ಯೈವ ಮನವಸ್ತತ್ಸುತಾಶ್ಚ ಕುರೂದ್ವಹ ।
ಗತಾ ಯಥಾಗತಂ ಯುದ್ಧೇ ತಾಂ ಮಾಂ ಜೇಷ್ಯಂತ್ಯಬುದ್ಧಯಃ ॥ ೬ ॥

ಮತ್ಕೃತೇ ಪಿತೃಪುತ್ರಾಣಾಂ ಭ್ರಾತೄಣಾಂ ಚಾಪಿ ವಿಗ್ರಹಃ ।
ಜಾಯತೇ ಹ್ಯಸತಾಂ ರಾಜ್ಯೇ ಮಮತಾಬದ್ಧಚೇತಸಾಮ್ ॥ ೭ ॥

ಮಮೈವೇಯಂ ಮಹೀ ಕೃತ್ಸ್ನಾ ನ ತೇ ಮೂಢೇತಿ ವಾದಿನಃ ।
ಸ್ಪರ್ಧಮಾನಾ ಮಿಥೋ ಘ್ನಂತಿ ಮ್ರಿಯಂತೇ ಮತ್ಕೃತೇ ನೃಪಾಃ ॥ ೮ ॥

ಪೃಥುಃ ಪುರೂರವಾ ಗಾಧಿರ್ನಹುಷೋ ಭರತೋಽರ್ಜುನಃ ।
ಮಾಂಧಾತಾ ಸಗರೋ ರಾಮಃ ಖಟ್ವಾಂಗೋ ಧುಂಧುಹಾ ರಘುಃ ॥ ೯ ॥

ತೃಣಬಿಂದುರ್ಯಯಾತಿಶ್ಚ ಶರ್ಯಾತಿಃ ಶಂತನುರ್ಗಯಃ ।
ಭಗೀರಥಃ ಕುವಲಯಾಶ್ವಃ ಕಕುತ್ಸ್ಥೋ ನೈಷಧೋ ನೃಗಃ ॥ ೧೦ ॥

ತಾವು ಒಂದಲ್ಲ ಒಂದು ದಿನ ಸಾವನ್ನು ಅಪ್ಪಲೇಬೇಕು ಎಂದು ತಿಳಿದಿದ್ದರೂ ಈ ರಾಜರು ನನ್ನನ್ನು ಜಯಿಸಬೇಕೆಂದು ವ್ಯರ್ಥವಾಗಿ ಬಯಸುತ್ತಿದ್ದಾರಲ್ಲ! ನಿಜವಾಗಿ ಕಾಮನೆಗಳಿಂದ ಕುರುಡರಾದ ಇವರು ನೀರಮೇಲಣ ಗುಳ್ಳೆಯಂತೆ ಕ್ಷಣಭಂಗುರವಾದ ಶರೀರದ ಮೇಲೆ ವಿಶ್ವಾಸವಿರಿಸಿ ಮೋಸಹೋಗುತ್ತಿದ್ದಾರಲ್ಲ! ॥ ೨ ॥ ಅವರು ಯೋಚಿಸುತ್ತಾರೆ - ನಾವು ಮೊದಲು ಮನಸ್ಸು ಸಹಿತ ಐದು ಇಂದ್ರಿಯಗಳನ್ನು ವಶಪಡಿಸಿಕೊಳ್ಳುವೆವು. ಏಕೆಂದರೆ, ಇವನ್ನು ಗೆದ್ದುಕೊಳ್ಳದೆ ಹೊರಗಿನ ಶತ್ರುಗಳನ್ನು ಗೆಲ್ಲುವುದು ಕಷ್ಟವಾಗಿದೆ. ಅನಂತರ ನಮ್ಮ ಶತ್ರುಗಳನ್ನು, ಮಂತ್ರಿ-ಅಮಾತ್ಯರನ್ನು, ನಾಗರಿಕರನ್ನು, ಮುಖಂಡರನ್ನು, ಸೈನ್ಯವನ್ನು ವಶಪಡಿಸಿಕೊಳ್ಳುವೆವು. ನಮ್ಮ ವಿಜಯದ ಹಾದಿಯಲ್ಲಿ ಮುಳ್ಳಾಗುವವರನ್ನು ನಾವು ಜಯಿಸಿಬಿಡಬಹುದು. ॥ ೩ ॥ ಹೀಗೆ ನಿಧಾನವಾಗಿ ಇಡೀ ಪೃಥ್ವಿಯೇ ನಮ್ಮ ಕೈವಶವಾಗಬಹುದು. ಮತ್ತೆ ಸಮುದ್ರವೇ ಕಂದಕದಂತೆ ನಮಗೆ ಉಪಯೋಗವಾಗಬಹುದು. ಇಂತಹ ಅನೇಕ ಆಸೆಗಳನ್ನು ಮನಸ್ಸಿನಲ್ಲಿರಿಸಿಕೊಳ್ಳುವರು. ಆದರೆ ಅವರ ತಲೆಯ ಮೇಲೆ ಮೃತ್ಯುವೇ ಕೂತಿದೆ ಎಂಬುದು ಸ್ವಲ್ಪವೂ ತೋಚುವುದಿಲ್ಲ. ॥ ೪ ॥ ಇಷ್ಟೇ ಅಲ್ಲ, ಒಂದು ದ್ವೀಪವು ಕೈವಶವಾದರೆ ಮತ್ತೊಂದು ದ್ವೀಪವನ್ನು ಗೆದ್ದುಕೊಳ್ಳಲು ಬಹಳ ಸಕ್ತಿ, ಉತ್ಸಾಹದಿಂದ ಸಮುದ್ರಯಾತ್ರೆಯನ್ನು ಮಾಡುತ್ತಾರೆ. ತನ್ನ ಮನಸ್ಸು, ಇಂದ್ರಿಯಗಳನ್ನು ವಶಪಡಿಸಿಕೊಂಡು ಜನರು ಮುಕ್ತಿಯನ್ನು ಪಡೆಯ ಬಹುದಾಗಿದೆ. ಆದರೆ ಇವರು ಅವುಗಳನ್ನು ವಶಪಡಿಸಿಕೊಂಡರೂ ಅಲ್ಪವಾದ ಭೂಭಾಗವನ್ನು ಪಡೆದುಕೊಳ್ಳುತ್ತಾರೆ. ಇಷ್ಟು ಪರಿಶ್ರಮದ ಮತ್ತು ಆತ್ಮಸಂಯದ ಫಲವು ಎಷ್ಟು ತುಚ್ಛವಾಗಿದೆ ?" ॥ ೫ ॥ ಪರೀಕ್ಷಿತನೇ ! ಪೃಥಿವಿಯು ಹೇಳುತ್ತಾಳೆ - "ದೊಡ್ಡ-ದೊಡ್ಡ ಮನುಗಳು, ಅವರ ವೀರಪುತ್ರರು ನನ್ನನ್ನು ಬಿಟ್ಟು ಎಲ್ಲಿಂದ ಬಂದಿದ್ದರೋ ಅಲ್ಲಿಗೆ ಬರಿಗೈಯಿಂದ ಹೊರಟುಹೋದರು. ನನ್ನನ್ನು ತಮ್ಮೊಂದಿಗೆ ಕೊಂಡೊಯ್ಯಲಾಗಲಿಲ್ಲ. ಈಗ ಈ ಮೂರ್ಖರಾಜರು ನನ್ನನ್ನು ಯುದ್ಧದಲ್ಲಿ ಗೆದ್ದು ವಶಪಡಿಸಿಕೊಳ್ಳಲು ಬಯಸುತ್ತಿದ್ದಾರೆ. ॥ ೬ ॥ ಈ ಪೃಥಿವಿಯು ನನ್ನದಾಗಿದೆ ಎಂಬ ದುರಾಗ್ರಹವು ಯಾರ ಚಿತ್ತದಲ್ಲಿ ದೃಢಮೂಲವಾಗಿದೆಯೋ ಅಂತಹ ದುಷ್ಟರ ರಾಜ್ಯದಲ್ಲಿ ನನಗಾಗಿ ತಂದೆ-ಮಕ್ಕಳು, ಅಣ್ಣ-ತಮ್ಮಂದಿರು ಪರಸ್ಪರ ಕಾದಾಡುತ್ತಾರೆ. ॥ ೭ ॥ ಅವರು ಒಬ್ಬರು ಮತ್ತೊಬ್ಬರಿಗೆ - ಎಲೈ ಮೂರ್ಖನೇ ! ಈ ಇಡೀ ಪೃಥಿವಿಯು ನನ್ನದಾಗಿದೆ, ನಿನ್ನದಲ್ಲ, ಹೀಗೆ ರಾಜರು ಹೇಳುತ್ತಾ ಇರುತ್ತಾರೆ. ಹೀಗೆ ಪರಸ್ಪರ ಸ್ಪರ್ಧಿಸುತ್ತಾ ನನಗಾಗಿ ಒಬ್ಬರು ಮತ್ತೊಬ್ಬರನ್ನು ಕೊಲ್ಲುತ್ತಾ ತಾವು ಸತ್ತುಹೋಗುವರು. ॥ ೮ ॥ ಪೃಥು, ಪುರೂರವ, ಗಾಧಿ, ನಹುಷ, ಭರತ, ಸಹಸ್ರಾರ್ಜುನ, ಮಾಂಧಾತಾ, ಸಗರ, ರಾಮ, ಖಟ್ವಾಂಗ, ಧುಂಧುಮಾರ, ರಘು, ತೃಣಬಿಂದು, ಯಯಾತಿ, ಶರ್ಯಾತಿ, ಶಂತನು, ಗಯ, ಭಗೀರಥ, ಕುವಲಯಾಶ್ವ, ಕಕುಸ್ಥ, ನಳ, ನೃಗ, ಹಿರಣ್ಯಕಶಿಪು, ವೃತ್ರಾಸುರ, ಲೋಕದ್ರೋಹಿರಾವಣ, ನಮೂಚಿ, ಶಂಬರ, ಭೌಮಾಸುರ, ಹಿರಣ್ಯಾಕ್ಷ, ತಾರಕಾಸುರ ಮತ್ತು ಅನೇಕ

ಹಿರಣ್ಯಕಶಿಪುರ್ವೃತ್ರೋ ರಾವಣೋ ಲೋಕರಾವಣಃ ।
ನಮುಚಿಃ ಶಂಬರೋ ಭೌಮೋ ಹಿರಣ್ಯಾಕ್ಷೋಽಥ ತಾರಕಃ
॥ ೧೧ ॥

ಅನ್ಯೇ ಚ ಬಹವೋ ದೈತ್ಯಾ ರಾಜಾನೋ ಯೇ ಮಹೇಶ್ವರಾಃ ।
ಸರ್ವೇ ಸರ್ವವಿದಃ ಶೂರಾಃ ಸರ್ವೇ ಸರ್ವಜಿತೋಽಜಿತಾಃ
॥ ೧೨ ॥

ಮಮತಾಂ ಮಯ್ಯವರ್ತಂತ ಕೃತ್ವೋಚ್ಚೈರ್ಮರ್ತ್ಯಧರ್ಮಿಣಃ ।
ಕಥಾವಶೇಷಾಃ ಕಾಲೇನ ಹ್ಯಕೃತಾರ್ಥಾಃ ಕೃತಾ ವಿಭೋ
॥ ೧೩ ॥

ಕಥಾ ಇಮಾಸ್ತೇ ಕಥಿತಾ ಮಹೀಯಸಾಂ
ವಿತಾಯ ಲೋಕೇಷು ಯಶಃ ಪರೇಯುಷಾಮ್ ।
ವಿಜ್ಞಾನವೈರಾಗ್ಯವಿವಕ್ಷಯಾ ವಿಭೋ
ವಚೋವಿಭೂತೀರ್ನ ತು ಪಾರಮಾರ್ಥ್ಯಮ್ ॥ ೧೪ ॥

ಯಸ್ತೂತ್ತಮಶ್ಲೋಕಗುಣಾನುವಾದಃ
ಸಂಗೀಯತೇಽಭೀಕ್ಷ್ಣಮಮಂಗಲಘ್ನಃ ।
ತಮೇವ ನಿತ್ಯಂ ಶೃಣುಯಾದಭೀಕ್ಷ್ಣಂ
ಕೃಷ್ಣೇಽಮಲಾಂ ಭಕ್ತಿಮಭೀಪ್ಸಮಾನಃ ॥ ೧೫ ॥

ರಾಜೋವಾಚ

ಕೇನೋಪಾಯೇನ ಭಗವನ್ಕಲೇರ್ದೋಷಾನ್ಕಲೌ ಜನಾಃ ।
ವಿಧಮಿಷ್ಯಂತ್ಯುಪಚಿತಾಂಸ್ತನ್ಮೇ ಬ್ರೂಹಿ ಯಥಾ ಮುನೇ
॥ ೧೬ ॥

ಯುಗಾನಿ ಯುಗಧರ್ಮಾಂಶ್ಚ ಮಾನಂ ಪ್ರಲಯಕಲ್ಪಯೋಃ ।
ಕಾಲಸ್ಯೇಶ್ವರರೂಪಸ್ಯ ಗತಿಂ ವಿಷ್ಣೋರ್ಮಹಾತ್ಮನಃ
॥ ೧೭ ॥

ಶ್ರೀಶುಕ ಉವಾಚ

ಕೃತೇ ಪ್ರವರ್ತತೇ ಧರ್ಮಶ್ಚತುಷ್ಪಾತ್ತಜ್ಜನೈರ್ಧೃತಃ ।
ಸತ್ಯಂ ದಯಾ ತಪೋ ದಾನಮಿತಿ ಪಾದಾ ವಿಭೋರ್ನೃಪ
॥ ೧೮ ॥

ಸಂತುಷ್ಟಾಃ ಕರುಣಾ ಮೈತ್ರಾಃ ಶಾಂತಾ ದಾಂತಾಸ್ತಿತಿಕ್ಷವಃ ।
ಆತ್ಮಾರಾಮಾಃ ಸಮದೃಶಃ ಪ್ರಾಯಶಃ ಶ್ರಮಣಾ ಜನಾಃ
॥ ೧೯ ॥

ದೈತ್ಯರು, ಶಕ್ತಿಶಾಲಿಯಾದ ರಾಜರು ಆಗಿ ಹೋದರು. ಇವರೆಲ್ಲರೂ ಎಲ್ಲವನ್ನೂ ಅರಿತಿದ್ದರು. ಶೂರರಾಗಿದ್ದರು. ಎಲ್ಲರೂ ದಿಗ್ವಿಜಯ ದಲ್ಲಿ ಇತರರನ್ನು ಸೋಲಿಸಿದರು, ಇತರರು ಇವರನ್ನು ಗೆಲ್ಲ ಲಾಗಲಿಲ್ಲ; ಆದರೆ ಎಲ್ಲರೂ ಮೃತ್ಯುವಿಗೆ ತುತ್ತಾದರು. ರಾಜನೇ! ಅವರು ತಮ್ಮ ಅಂತಃಕರಣದಲ್ಲಿ ನನ್ನ (ಪೃಥಿವಿ) ಕುರಿತು ಮಮತೆ ಯನ್ನಿಟ್ಟಿದ್ದರು ಹಾಗೂ 'ಈ ಪೃಥಿವಿಯು ನನ್ನದಾಗಿದೆ' ಎಂದು ಭಾವಿಸಿದ್ದರು. ಆದರೆ ವಿಕರಾಳವಾದ ಕಾಲನು ಅವರ ಲಾಲಸೆ ಯನ್ನು ಪೂರ್ಣವಾಗಲು ಬಿಡಲಿಲ್ಲ. ಈಗ ಅವರ ಬಲ-ಪೌರುಷ, ಶರೀರ ಮುಂತಾದವುಗಳು ಯಾವುದೂ ಉಳಿಯದೇ ಕೇವಲ ಅವರ ಕಥೆ ಮಾತ್ರ ಉಳಿದುಕೊಂಡಿದೆ. ॥ ೯-೧೩ ॥

ಪರೀಕ್ಷಿತನೇ! ಜಗತ್ತಿನಲ್ಲಿ ದೊಡ್ಡ-ದೊಡ್ಡ ಪ್ರತಾಪಿಗಳಾದ ಮಹಾಪುರುಷರು ಆಗಿದ್ದಾರೆ. ಅವರು ಲೋಕಗಳಲ್ಲಿ ತಮ್ಮ ಕೀರ್ತಿ ಯನ್ನು ವಿಸ್ತರಿಸಿ ಇಲ್ಲಿಂದ ಹೊರಟುಹೋದರು. ನಾನು ನಿನಗೆ ಜ್ಞಾನ ಮತ್ತು ವೈರಾಗ್ಯದ ಉಪದೇಶವನ್ನು ಕೊಡಲೆಂದೇ ಅವರ ಕಥೆಗಳನ್ನು ಹೇಳಿರುವೆನು. ಇದೆಲ್ಲವೂ ವಾಣಿಯ ವಿಲಾಸವಾಗಿದೆ. ಇದರಲ್ಲಿ ಪಾರಮಾರ್ಥಿಕ ಸತ್ಯವು ಸ್ವಲ್ಪವೂ ಇಲ್ಲ. ॥ ೧೪ ॥ ಭಗವಾನ್ ಶ್ರೀಕೃಷ್ಣನ ಗುಣಾನುವಾದವೇ ಸಮಸ್ತ ಅಮಂಗಳವನ್ನು ನಾಶಮಾಡುವಂತಹುದು. ದೊಡ್ಡ-ದೊಡ್ಡ ಮಹಾತ್ಮರೂ ಅದನ್ನೇ ಗಾಯನಮಾಡುತ್ತಾ ಇರುತ್ತಾರೆ. ಭಗವಾನ್ ಶ್ರೀಕೃಷ್ಣನ ಚರಣ ಗಳಲ್ಲಿ ಅನನ್ಯ ಪ್ರೇಮಮಯ ಭಕ್ತಿಯ ಬಯಕೆಯಿರುವವರು ನಿತ್ಯ-ನಿರಂತರ ಭಗವಂತನ ದಿವ್ಯ ಗುಣಾನುವಾದವನ್ನೇ ಶ್ರವಣ ಸುತ್ತಾ ಇರಬೇಕು. ॥ ೧೫ ॥

ಪರೀಕ್ಷಿದ್ರಾಜನು ಕೇಳಿದನು – ಮಹಾತ್ಮರೇ! ನನಗಾದರೋ ಕಲಿಯುಗದಲ್ಲಿ ರಾಶಿ-ರಾಶಿಯಾಗಿ ದೋಷಗಳೇ ಕಂಡುಬರುತ್ತವೆ. ಹಾಗಿರುವಾಗ ಜನರು ಯಾವ ಉಪಾಯದಿಂದ ಆ ದೋಷ ಗಳನ್ನು ನಾಶಪಡಿಸಬಲ್ಲರು? ಇದಲ್ಲದೆ ಯುಗಗಳ ಸ್ವರೂಪ, ಅವುಗಳ ಧರ್ಮ, ಕಲ್ಪದಸ್ಥಿತಿ, ಪ್ರಳಯದ ಪರಿಮಾಣ ಹಾಗೂ ಸರ್ವವ್ಯಾಪಕ, ಸರ್ವಶಕ್ತನಾದ ಭಗವಂತನ ಕಾಲಸ್ವರೂಪವನ್ನು ನಿರೂಪಣೆ ಮಾಡಿರಿ. ॥ ೧೬-೧೭ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ! ಕೃತಯುಗದಲ್ಲಿ ಧರ್ಮಕ್ಕೆ ನಾಲ್ಕು ಚರಣಗಳಿರುತ್ತವೆ. ಸತ್ಯ, ದಯೆ, ತಪಸ್ಸು, ದಾನ – ಇವೇ ಆ ನಾಲ್ಕು ಪಾದಗಳು. ಆ ಸಮಯದಲ್ಲಿ ಜನರು ಪೂರ್ಣನಿಷ್ಠೆಯಿಂದ ತಮ್ಮ-ತಮ್ಮ ಧರ್ಮ ವನ್ನು ಪಾಲಿಸುತ್ತಾರೆ. ಧರ್ಮವು ಸಾಕ್ಷಾತ್ ಭಗವಂತನ ಸ್ವರೂಪ ವಾಗಿದೆ. ॥ ೧೮ ॥ ಕೃತಯುಗದ ಜನರು ಬಹಳ ಸಂತೋಷಿಗಳೂ, ದಯಾಳುಗಳೂ ಆಗಿರುತ್ತಾರೆ. ಅವರು ಎಲ್ಲರೊಂದಿಗೆ ಮೈತ್ರಿಯ ವ್ಯವಹಾರಮಾಡುತ್ತಾ ಶಾಂತರಾಗಿರುತ್ತಾರೆ. ಮನಸ್ಸು-ಇಂದ್ರಿಯ ಗಳು ಅವರ ವಶದಲ್ಲಿರುತ್ತವೆ. ಸುಖ-ದುಃಖಾದಿ ದ್ವಂದ್ವಗಳನ್ನು ಅವರು ಸಮವಾಗಿ ಸಹಿಸುತ್ತಾರೆ. ಹೆಚ್ಚಿನವರು ಸಮದರ್ಶಿಯೂ, ಆತ್ಮಾರಾಮರೂ ಆಗಿರುತ್ತಾರೆ. ಉಳಿದ ಜನರು ಸ್ವಸ್ವರೂಪ ಸ್ಥಿತಿಗಾಗಿ ಅಭ್ಯಾಸದಲ್ಲಿ ತತ್ಪರರಾಗಿರುತ್ತಾರೆ. ॥ ೧೯ ॥

ಜಲಂ ತದುದ್ಭವೈಶ್ಛನ್ನಂ ಹಿತ್ವಾಜ್ಞೋ ಜಲಕಾಮ್ಯಯಾ ।
ಮೃಗತೃಷ್ಣಾಮುಪಾಧಾವೇದ್ಯಥಾನ್ಯತ್ರಾರ್ಥದೃಕ್ ಸ್ವತಃ
॥ ೨೮ ॥

ದೇಹಾದಿಭಿರ್ದೈವತಂತ್ರೈರಾತ್ಮನಃ ಸುಖಮೀಹತಃ ।
ದುಃಖಾತ್ಯಯಂ ಚಾನೀಶಸ್ಯ ಕ್ರಿಯಾ ಮೋಘಾಃ ಕೃತಾಃ ಕೃತಾಃ
॥ ೨೯ ॥

ಆಧ್ಯಾತ್ಮಿಕಾದಿಭಿರ್ದುಃಖೈರವಿಮುಕ್ತಸ್ಯ ಕರ್ಹಿಚಿತ್ ।
ಮರ್ತ್ಯಸ್ಯ ಕೃಚ್ಛ್ರೋಪನತೈರರ್ಥೈಃ ಕಾಮೈಃ ಕ್ರಿಯೇತ ಕಿಮ್
॥ ೩೦ ॥

ಪಶ್ಯಾಮಿ ಧನಿನಾಂ ಕ್ಲೇಶಂ ಲುಬ್ಧಾನಾಮಜಿತಾತ್ಮನಾಮ್ ।
ಭಯಾದಲಬ್ಧನಿದ್ರಾಣಾಂ ಸರ್ವತೋಽಭಿವಿಶಂಕಿನಾಮ್
॥ ೩೧ ॥

ರಾಜತಶ್ಚೌರತಃ ಶತ್ರೋಃ ಸ್ವಜನಾತ್ಪಶುಪಕ್ಷಿತಃ ।
ಅರ್ಥಿಭ್ಯಃ ಕಾಲತಃ ಸ್ವಸ್ಮಾನ್ನಿತ್ಯಂ ಪ್ರಾಣಾರ್ಥವದ್ಭಯಮ್
॥ ೩೨ ॥

ಶೋಕಮೋಹಭಯಕ್ರೋಧ-
ರಾಗಕ್ಲೈಬ್ಯಶ್ರಮಾದಯಃ ।
ಯನ್ಮೂಲಾಃ ಸ್ಯುರ್ನೃಣಾಂ ಜಹ್ಯಾತ್
ಸ್ಪೃಹಾಂ ಪ್ರಾಣಾರ್ಥಯೋರ್ಬುಧಃ ॥ ೩೩ ॥

ಮಧುಕಾರಮಹಾಸರ್ಪೌ
ಲೋಕೇಽಸ್ಮಿನ್ನೋ ಗುರೂತ್ತಮೌ ।
ವೈರಾಗ್ಯಂ ಪರಿತೋಷಂ ಚ
ಪ್ರಾಪ್ತಾ ಯಚ್ಛಿಕ್ಷಯಾ ವಯಮ್ ॥ ೩೪ ॥

ವಿರಾಗಃ ಸರ್ವಕಾಮೇಭ್ಯಃ ಶಿಕ್ಷಿತೋ ಮೇ ಮಧುವ್ರತಾತ್ ।
ಕೃಚ್ಛ್ರಾಪ್ತಂ ಮಧುವದ್ವಿತ್ತಂ ಹತ್ವಾಪ್ಯನ್ಯೋ ಹರೇತ್ಪತಿಮ್
॥ ೩೫ ॥

ಅನೀಹಃ ಪರಿತುಷ್ಟಾತ್ಮಾ ಯದೃಚ್ಛೋಪನತಾದಹಮ್ ।
ನೋ ಚೇಚ್ಛಯೇ ಬಹ್ವಹಾನಿ ಮಹಾಹಿರಿವ ಸತ್ತ್ವವಾನ್
॥ ೩೬ ॥

ಕ್ವಚಿದಲ್ಪಂ ಕ್ವಚಿದ್ಭೂರಿ ಭುಂಜೇಽನ್ನಂ ಸ್ವಾದ್ವಸ್ವಾದು ವಾ ।
ಕ್ವಚಿದ್ಭೂರಿಗುಣೋಪೇತಂ ಗುಣಹೀನಮುತ ಕ್ವಚಿತ್
॥ ೩೭ ॥

ಅಜ್ಞಾನೀ ಮನುಷ್ಯನು ನೀರಿನಲ್ಲಿರುವ ಜೊಂಡು, ಪಾಚಿಗಳಿಂದ ಮುಚ್ಚಿಹೋದ ನೀರನ್ನು ನೀರೆಂದು ತಿಳಿಯದೆ, ಬಿಸಿಲ್ಗುದುರೆಯ ಕಡೆಯ ಓಡುವಂತೆಯೇ ತನ್ನ ಆತ್ಮನಿಗಿಂತ ಭಿನ್ನವಾದ ವಸ್ತುಗಳಲ್ಲಿ ಸುಖವನ್ನು ತಿಳಿಯುವವನು ಆತ್ಮನನ್ನು ಬಿಟ್ಟು ವಿಷಯಗಳ ಕಡೆಗೆ ಓಡುತ್ತಾ ಇದ್ದಾನೆ. ॥ ೨೮ ॥ ಭಕ್ತ ಪ್ರಹ್ಲಾದನೇ! ಶರೀರಾದಿಗಳಾದರೋ ಪ್ರಾರಬ್ಧಕ್ಕೆ ಅಧೀನವಾಗಿವೆ. ಅವುಗಳ ಮೂಲಕ ತನಗಾಗಿ ಸುಖವನ್ನು ಪಡೆಯಲು ಮತ್ತು ದುಃಖವನ್ನು ಹೋಗಲಾಡಿಸಲು ಬಯಸುವವನು ಎಂದಿಗೂ ತನ್ನ ಕಾರ್ಯದಲ್ಲಿ ಸಫಲನಾಗುವುದಿಲ್ಲ, ಅವನು ಬಾರಿ-ಬಾರಿಗೂ ಮಾಡಿದ ಕರ್ಮಗಳೆಲ್ಲ ವ್ಯರ್ಥವಾಗಿ ಹೋಗುತ್ತವೆ. ॥ ೨೯ ॥ ಮನುಷ್ಯನನ್ನು ಸದಾಕಾಲ ಶಾರೀರಿಕ, ಮಾನಸಿಕ ಮುಂತಾದ ದುಃಖಗಳು ಆಕ್ರಮಿಸಿಕೊಂಡಿರುತ್ತವೆ. ಅವನು ಸಾವನ್ನಂತೂ ಅಪ್ಪಲೇಬೇಕು. ಹೀಗಿರುವಾಗ ಆತನು ಅತಿಕಷ್ಟಪಟ್ಟು, ಪರಿಶ್ರಮದಿಂದ ಸ್ವಲ್ಪ ಧನ-ಭೋಗಗಳನ್ನು ಗಳಿಸಿಕೊಂಡರೂ ಏನು ಲಾಭವಿದೆ? ॥ ೩೦ ॥ ಲೋಭಿಗಳು ಮತ್ತು ಇಂದ್ರಿಯಗಳಿಗೆ ವಶರಾದ ಶ್ರೀಮಂತರ ದುಃಖವನ್ನಂತೂ ನಾನು ನೋಡುತ್ತಾ ಇರುತ್ತೇನೆ. ಭಯದಿಂದಾಗಿ ಅವರಿಗೆ ನಿದ್ದೆಯೇ ಬರುವುದಿಲ್ಲ, ಅವರಿಗೆ ಎಲ್ಲರ ಮೇಲೂ ಸಂದೇಹವೇ ಇರುತ್ತದೆ. ॥ ೩೧ ॥ ಜೀವನ ಮತ್ತು ಧನದ ಲೋಭಿಯಾದವನು – ರಾಜ, ಕಳ್ಳ, ಶತ್ರು, ಸ್ವಜನರು, ಪಶು-ಪಕ್ಷಿ, ಯಾಚಕ ಮತ್ತು ಕಾಲ – ಇವುಗಳಿಗೆ ಹೆದರುತ್ತಾ ಇರುತ್ತಾನೆ. ಅಷ್ಟೇ ಅಲ್ಲ – 'ನಾನೆಲ್ಲಿಯಾದರೂ ತಪ್ಪುಮಾಡಿ, ಹೆಚ್ಚು ಖರ್ಚುಮಾಡಿಬಿಟ್ಟೇನೋ' ಎಂಬ ಆಶಂಕೆಯಿಂದ ತನ್ನ ಕುರಿತೂ ಕೂಡ ಭಯಪಡುತ್ತಾ ಇರುತ್ತಾನೆ. ॥ ೩೨ ॥ ಆದ್ದರಿಂದ ಶೋಕ, ಮೋಹ, ಭಯ, ಕ್ರೋಧ, ರಾಗ, ಹೇಡಿತನ, ಶ್ರಮ – ಇವುಗಳಿಗೆ ತುತ್ತಾಗಬೇಕಾಗುವುದು. ಬುದ್ಧಿವಂತನಾದ ಮನುಷ್ಯನು – ಆ ಧನ ಮತ್ತು ಜೀವನದ ಆಸೆಯನ್ನು ತ್ಯಜಿಸಿಬಿಡಬೇಕು. ॥ ೩೩ ॥

ಈ ಲೋಕದಲ್ಲಿ ಅಜಗರ (ಹೆಬ್ಬಾವು) ಮತ್ತು ಜೇನುನೊಣ ಇವೆರಡೂ ಎಲ್ಲರಿಗಿಂತ ದೊಡ್ಡ ಗುರುಗಳು ನನಗೆ. ಅವುಗಳ ಶಿಕ್ಷಣದಿಂದ ನಮಗೆ ವೈರಾಗ್ಯ ಮತ್ತು ಸಂತೋಷಗಳು ಉಂಟಾಗಿವೆ. ॥ ೩೪ ॥ ಜೇನುನೊಣವು ಜೇನುತುಪ್ಪವನ್ನು ಸಂಗ್ರಹಿಸುವಂತೆಯೇ ಜನರು ಅತಿಕಷ್ಟದಿಂದ ಹಣವನ್ನು ಸಂಗ್ರಹಿಸುತ್ತಾರೆ. ಆದರೆ ಬೇರೆ ಯಾರೋ ಆ ಧನರಾಶಿಯ ಒಡೆಯನನ್ನು ಕೊಂದು ಅದನ್ನು ಕಿತ್ತುಕೊಳ್ಳುವನು. ಇದರಿಂದ ನಾನು – 'ವಿಷಯ ಭೋಗಗಳಿಂದ ವಿರಕ್ತನೇ ಆಗಿರಬೇಕು' ಎಂಬ ಪಾಠವನ್ನು ಕಲಿತೆ. ॥ ೩೫ ॥

ನಾನು ಅಜಗರದಂತೆ ನಿಶ್ಚೇಷ್ಟಿತನಾಗಿ ಬಿದ್ದುಕೊಂಡಿರುತ್ತೇನೆ. ದೈವವಶದಿಂದ ಏನಾದರೂ ಸಿಕ್ಕಿದರೆ ಅದರಲ್ಲೇ ಸಂತುಷ್ಟನಾಗಿರುತ್ತೇನೆ. ಏನೂ ಸಿಗದಿದ್ದರೆ ಅನೇಕ ದಿನಗಳವರೆಗೆ ಧೈರ್ಯವಹಿಸಿ ಹೀಗೆಯೇ ಬಿದ್ದುಕೊಂಡಿರುತ್ತೇನೆ. ॥ ೩೬ ॥ ಕೆಲವೊಮ್ಮೆ ಕಡಿಮೆ ಅನ್ನ ತಿಂದರೆ, ಕೆಲವೊಮ್ಮೆ ಹೆಚ್ಚು. ಅದೂ ಕೂಡ ಎಂದಾದರೂ ರುಚಿಕರವಾಗಿದ್ದರೆ, ಎಂದಾದರೂ ನೀರಸ, ಸಪ್ಪೆ, ಕೆಲವೊಮ್ಮೆ ಅನೇಕ ಗುಣಗಳಿಂದ ಕೂಡಿದ್ದರೆ, ಕೆಲವೊಮ್ಮೆ ಸರ್ವಥಾ ಗುಣಹೀನ. ॥ ೩೭ ॥

ಶ್ರದ್ಧಯೋಪಾಹೃತಂ ಕ್ವಾಪಿ ಕದಾಚಿನ್ಮಾನವರ್ಜಿತಮ್ ।
ಭುಂಜೇ ಭುಕ್ತ್ವಾಥ ಕಸ್ಮಿಂಶ್ಚಿದ್ದಿವಾ ನಕ್ತಂ ಯದೃಚ್ಛಯಾ
॥ ೩೮ ॥

ಕ್ಷೌಮಂ ದುಕೂಲಮಜಿನಂ ಚೀರಂ ವಲ್ಕಲಮೇವ ವಾ ।
ವಸೇಽನ್ಯದಪಿ ಸಂಪ್ರಾಪ್ತಂ ದಿಷ್ಟಭುಕ್ತುಷ್ಟಧೀರಹಮ್
॥ ೩೯ ॥

ಕ್ವಚಿಚ್ಛಯೇ ಧರೋಪಸ್ಥೇ ತೃಣಪರ್ಣಾಶ್ಮಭಸ್ಮಸು ।
ಕ್ವಚಿತ್ಪ್ರಾಸಾದಪರ್ಯಂಕೇ ಕಶಿಪೌ ವಾ ಪರೇಚ್ಛಯಾ
॥ ೪೦ ॥

ಕ್ವಚಿತ್ಸ್ನಾತೋಽನುಲಿಪ್ತಾಂಗಃ ಸುವಾಸಾಃ ಸ್ರಗ್ವ್ಯಲಂಕೃತಃ ।
ರಥೇಭಾಶ್ವೈಶ್ಚರೇ ಕ್ವಾಪಿ ದಿಗ್ವಾಸಾ ಗ್ರಹವದ್ವಿಭೋ
॥ ೪೧ ॥

ನಾಹಂ ನಿಂದೇ ನ ಚ ಸ್ತೌಮಿ ಸ್ವಭಾವವಿಷಮಂ ಜನಮ್ ।
ಏತೇಷಾಂ ಶ್ರೇಯ ಆಶಾಸೇ ಉತೈಕಾತ್ಮ್ಯಂ ಮಹಾತ್ಮನಿ
॥ ೪೨ ॥

ವಿಕಲ್ಪಂ ಜುಹುಯಾಚ್ಚಿತ್ತೌ ತಾಂ ಮನಸ್ಯರ್ಥವಿಭ್ರಮೇ ।
ಮನೋ ವೈಕಾರಿಕೇ ಹುತ್ವಾ ತಂ ಮಾಯಾಯಾಂ ಜುಹೋತ್ಯನು
॥ ೪೩ ॥

ಆತ್ಮಾನುಭೂತೌ ತಾಂ ಮಾಯಾಂ ಜುಹುಯಾತ್ಸತ್ಯದೃಙ್ಮುನಿಃ ।
ತತೋ ನಿರೀಹೋ ವಿರಮೇತ್ಸ್ವಾನುಭೂತ್ಯಾಽಽತ್ಮನಿ ಸ್ಥಿತಃ
॥ ೪೪ ॥

ಸ್ವಾತ್ಮವೃತ್ತಂ ಮಯೇತ್ಥಂ ತೇ ಸುಗುಪ್ತಮಪಿ ವರ್ಣಿತಮ್ ।
ವ್ಯಪೇತಂ ಲೋಕಶಾಸ್ತ್ರಾಭ್ಯಾಂ ಭವಾನ್ಹಿ ಭಗವತ್ಪರಃ
॥ ೪೫ ॥

ಕೆಲವೊಮ್ಮೆ ತುಂಬಾ ಶ್ರದ್ಧೆಯಿಂದ ದೊರೆತ ಅನ್ನವನ್ನು ತಿಂದರೆ, ಕೆಲವೊಮ್ಮೆ ಅಪಮಾನದಿಂದ ದೊರೆತ ಅನ್ನವನ್ನು ತಿನ್ನುತ್ತೇನೆ. ಕೆಲವೊಮ್ಮೆ ತಾನಾಗಿಯೇ ದೊರೆತಾಗ, ಕೆಲವೊಮ್ಮೆ ಹಗಲಿನಲ್ಲಿ, ಕೆಲವೊಮ್ಮೆ ರಾತ್ರಿಯಲ್ಲಿ ಭೋಜನ ಮಾಡುತ್ತೇನೆ. ಕೆಲವೊಮ್ಮೆ ಒಂದು ಊಟಮಾಡಿದರೆ ಕೆಲವೊಮ್ಮೆ ಎರಡುಬಾರಿ ಭುಂಜಿಸುತ್ತೇನೆ. ॥ ೩೮ ॥ ನಾನು ನನ್ನ ಪ್ರಾರಬ್ಧದ ಭೋಗದಲ್ಲೇ ಸಂತೋಷವಾಗಿರುತ್ತೇನೆ. ಅದರಿಂದ ನನಗೆ ರೇಷ್ಮೆ ಅಥವಾ ಹತ್ತಿಯ, ಮೃಗಚರ್ಮ ಅಥವಾ ನಾರುಬಟ್ಟೆ ಅಥವಾ ಬೇರೇನಾದರೂ ವಸ್ತ್ರವು ಒದಗಿಬರುತ್ತದೋ ಅದನ್ನೇ ಉಟ್ಟುಕೊಳ್ಳುತ್ತೇನೆ. ॥ ೩೯ ॥ ಕೆಲವೊಮ್ಮೆ ನಾನು ಭೂಮಿಯಲ್ಲಿ, ಹುಲ್ಲಿನಮೇಲೆ, ಎಲೆಗಳಮೇಲೆ, ಕಲ್ಲಿನಮೇಲೆ, ಬೂದಿಯರಾಶಿಯಲ್ಲೇ ಬಿದ್ದುಕೊಂಡಿರುತ್ತೇನೆ. ಕೆಲವೊಮ್ಮೆ ಇತರರ ಇಚ್ಛೆಯಂತೆ ಅರಮನೆಯಲ್ಲಿ ಮಂಚದಲ್ಲಿ ಹಾಸುಗೆಗಳಲ್ಲಿ ಮಲಗಿರುತ್ತೇನೆ. ॥ ೪೦ ॥ ದೈತ್ಯರಾಜನೇ! ಕೆಲವೊಮ್ಮೆ ಸ್ನಾನಮಾಡಿ ಶುಚಿಯಾಗಿ, ಗಂಧವನ್ನು ಹಚ್ಚಿಕೊಂಡು, ಸುಂದರ ವಸ್ತ್ರಗಳನ್ನು ಉಟ್ಟು, ಹೂವಿನ ಹಾರವನ್ನು ಧರಿಸಿಕೊಂಡು, ಒಡವೆಗಳನ್ನು ತೊಟ್ಟು ರಥ, ಆನೆ, ಕುದುರೆಗಳನ್ನು ಏರಿಕೊಂಡು ಹೋಗುತ್ತಿರುತ್ತೇನೆ. ಆದರೆ ಕೆಲವೊಮ್ಮೆ ದಿಗಂಬರನಾಗಿ ಪಿಶಾಚಿಯಂತೆ ಓಡಾಡುತ್ತೇನೆ. ॥ ೪೧ ॥ ಮನುಷ್ಯರ ಸ್ವಭಾವಗಳು ಬೇರೆ-ಬೇರೆಯಾಗಿರುತ್ತವೆ. ಆದ್ದರಿಂದ ನಾನು ಯಾರನ್ನೂ ನಿಂದಿಸುವುದಿಲ್ಲ, ಸ್ತುತಿಸುವುದೂ ಇಲ್ಲ. ನಾನು ಕೇವಲ ಇವರ ಪರಮಕಲ್ಯಾಣ ಮತ್ತು ಪರಮಾತ್ಮನಲ್ಲಿ ಏಕತೆಯನ್ನು ಬಯಸುತ್ತೇನೆ. ॥ ೪೨ ॥

ಸತ್ಯವನ್ನು ಅನುಸಂಧಾನ ಮಾಡುವ ಮನುಷ್ಯನಿಗೆ ಕಂಡುಬರುವ ನಾನಾ ಪದಾರ್ಥಗಳು ಮತ್ತು ಅವುಗಳ ಭೇದ-ವಿಭೇದಗಳನ್ನು ಚಿತ್ತವೃತ್ತಿಯಲ್ಲಿ ಹೋಮಮಾಡಬೇಕು. ಚಿತ್ತವೃತ್ತಿಯನ್ನು ಈ ಪದಾರ್ಥಗಳ ಸಂಬಂಧವಾಗಿ ವಿವಿಧ ಭ್ರಮೆಗಳನ್ನು ಉಂಟುಮಾಡುವ ಮನಸ್ಸಿನಲ್ಲಿ, ಮನಸ್ಸನ್ನು ಸಾತ್ತ್ವಿಕ ಅಹಂಕಾರದಲ್ಲಿ, ಸಾತ್ತ್ವಿಕ ಅಹಂಕಾರವನ್ನು ಮಹತ್ತತ್ತ್ವದ ಮೂಲಕ ಮಾಯೆಯಲ್ಲಿ ಹವನ ಮಾಡಬೇಕು. ಹೀಗೆ ಇವೆಲ್ಲ ಭೇದ-ವಿಭೇದಗಳು ಮತ್ತು ಅವುಗಳ ಕಾರಣ ಮಾಯೆಯೇ ಆಗಿದೆ ಹೀಗೆ ನಿಶ್ಚಯಮಾಡಿ ಮತ್ತೆ ಆ ಮಾಯೆಯನ್ನು ಆತ್ಮಾನುಭೂತಿಯಲ್ಲಿ ಸ್ವಾಹಾಮಾಡಬೇಕು. ಈ ವಿಧವಾಗಿ ಆತ್ಮಸಾಕ್ಷಾತ್ಕಾರದ ಮೂಲಕ ಆತ್ಮಸ್ವರೂಪದಲ್ಲಿ ನೆಲೆಸಿ ಕರ್ಮರಹಿತನಾಗಿ ವಿಶ್ರಾಂತಿಯನ್ನು ಹೊಂದಬೇಕು. ॥ ೪೩-೪೪ ॥ ಎಲೈ ಪ್ರಹ್ಲಾದ! ನನ್ನ ಈ ಆತ್ಮವೃತ್ತಾಂತವು ಅತ್ಯಂತ ಗೋಪ್ಯವೂ, ಲೋಕ ಮತ್ತು ಶಾಸ್ತ್ರಗಳ ಮರ್ಯಾದೆಯನ್ನು ಮೀರಿದ್ದರೂ, ನೀನು ಭಗವತ್ಪರಾಯಣನಾದ ಸಾಧುಶ್ರೇಷ್ಠನಾಗಿರುವುದರಿಂದ ನಿನಗೆ ಇದನ್ನು ವರ್ಣಿಸಿರುವೆನು. ॥ ೪೫ ॥

ನಾರದ ಉವಾಚ

ಧರ್ಮಂ ಪಾರಮಹಂಸ್ಯಂ ವೈ ಮುನೇಃ ಶ್ರುತ್ವಾಸುರೇಶ್ವರಃ ।
ಪೂಜಯಿತ್ವಾ ತತಃ ಪ್ರೀತ ಆಮನ್ತ್ರ್ಯ ಪ್ರಯಯೌ ಗೃಹಮ್ ॥ ೪೬ ॥

ನಾರದರು ಹೇಳಿದರು – ಯುಧಿಷ್ಠಿರನೇ! ಪ್ರಹ್ಲಾದನು ದತ್ತಾತ್ರೇಯಮುನಿಗಳಿಂದ ಪರಮಹಂಸರ ಈ ಧರ್ಮವನ್ನು ಶ್ರವಣಿಸಿ, ಅವರನ್ನು ಪೂಜಿಸಿ, ಅವರಿಂದ ಬೀಳ್ಕೊಂಡು, ಪರಮಸಂತೋಷದಿಂದ ತನ್ನ ರಾಜಧಾನಿಗೆ ಮರಳಿದನು. ॥ ೪೬ ॥

ಹದಿಮೂರನೆಯ ಅಧ್ಯಾಯವು ಮುಗಿಯಿತು. ॥ ೧೩ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಸಪ್ತಮ ಸ್ಕಂಧೇ
ಯುಧಿಷ್ಠಿರ-ನಾರದಸಂವಾದೇ ಯತಿಧರ್ಮೇ ತ್ರಯೋದಶೋಽಧ್ಯಾಯಃ ॥ ೧೩ ॥

ಹದಿನಾಲ್ಕನೆಯ ಅಧ್ಯಾಯ

ಗೃಹಸ್ಥಾಶ್ರಮದ ಸದಾಚಾರ

ಯುಧಿಷ್ಠಿರ ಉವಾಚ

ಗೃಹಸ್ಥ ಏತಾಂ ಪದವೀಂ ವಿಧಿನಾ ಯೇನ ಚಾಂಜಸಾ ।
ಯಾತಿ ದೇವಋಷೇ ಬ್ರೂಹಿ ಮಾದೃಶೋ ಗೃಹಮೂಢಧೀಃ ॥ ೧ ॥

ಯುಧಿಷ್ಠಿರರಾಜನು ಕೇಳಿದನು – ದೇವಋಷಿಗಳಾದ ನಾರದರೇ! ನನ್ನಂತಹ ಗೃಹಾಸಕ್ತ ಗೃಹಸ್ಥನು ವಿಶೇಷ ಪರಿಶ್ರಮವಿಲ್ಲದೆ ಈ ಶ್ರೇಷ್ಠತಮವಾದ ಪದವನ್ನು ಹೇಗೆ ಪಡೆಯಬಲ್ಲನು? ಎಂಬುದನ್ನು ಕೃಪೆಯಿಟ್ಟು ತಿಳಿಸಬೇಕು. ॥ ೧ ॥

ನಾರದ ಉವಾಚ

ಗೃಹೇಷ್ವವಸ್ಥಿತೋ ರಾಜನ್ ಕ್ರಿಯಾಃ ಕುರ್ವನ್ ಗೃಹೋಚಿತಾಃ ।
ವಾಸುದೇವಾರ್ಪಣಂ ಸಾಕ್ಷಾದುಪಾಸೀತ ಮಹಾಮುನೀನ್ ॥ ೨ ॥

ಶೃಣ್ವನ್ ಭಗವತೋಽಭೀಕ್ಷ್ಣಮವತಾರಕಥಾಮೃತಮ್ ।
ಶ್ರದ್ದಧಾನೋ ಯಥಾಕಾಲಮುಪಶಾಂತಜನಾವೃತಃ ॥ ೩ ॥

ಸತ್ಸಂಗಾಚ್ಛನೈಃ ಸಂಗಮಾತ್ಮಜಾಯಾತ್ಮಜಾದಿಷು ।
ವಿಮುಚ್ಯೇನ್ಮುಚ್ಯಮಾನೇಷು ಸ್ವಯಂ ಸ್ವಪ್ನವದುತ್ಥಿತಃ ॥ ೪ ॥

ಯಾವದರ್ಥಮುಪಾಸೀನೋ ದೇಹೇ ಗೇಹೇ ಚ ಪಂಡಿತಃ ।
ವಿರಕ್ತೋ ರಕ್ತವತ್ತತ್ರ ನೃಲೋಕೇ ನರತಾಂ ನ್ಯಸೇತ್ ॥ ೫ ॥

ಜ್ಞಾತಯಃ ಪಿತರೌ ಪುತ್ರಾ ಭ್ರಾತರಃ ಸುಹೃದೋಽಪರೇ ।
ಯದ್ವದಂತಿ ಯದಿಚ್ಛಂತಿ ಚಾನುಮೋದೇತ ನಿರ್ಮಮಃ ॥ ೬ ॥

ನಾರದರು ಹೇಳಿದರು – ಯುಧಿಷ್ಠಿರನೇ! ಮನುಷ್ಯನು ಗೃಹಸ್ಥಾಶ್ರಮದಲ್ಲಿ ಇದ್ದು, ಗೃಹಸ್ಥ ಧರ್ಮಕ್ಕೆ ಅನುಗುಣವಾಗಿ ಎಲ್ಲ ಕೆಲಸವನ್ನು ಮಾಡಲಿ. ಆದರೆ ಆ ಎಲ್ಲ ಕರ್ಮಗಳನ್ನು ಭಗವಂತನಿಗೆ ಸಮರ್ಪಿಸಿ, ದೊಡ್ಡ-ದೊಡ್ಡ ಸಂತ-ಮಹಾತ್ಮರ ಸೇವೆಯನ್ನು ಮಾಡುತ್ತಿರಬೇಕು. ॥ ೨ ॥ ಅವಕಾಶವು ದೊರೆತಾಗ ಪ್ರಶಾಂತ ಚಿತ್ತರಾದ ಸಾಧು-ಸಜ್ಜನರ ಸಹವಾಸದಲ್ಲಿರುತ್ತಾ ಅವರಿಂದ ಶ್ರೀಭಗವಂತನ ಲೀಲಾ-ಕಥಾಮೃತವನ್ನು ಶ್ರದ್ಧೆಯಿಂದ ಮತ್ತೆ-ಮತ್ತೆ ಕೇಳುತ್ತಾ ಇರಬೇಕು. ॥ ೩ ॥ ಕನಸಿನಿಂದ ಎಚ್ಚರಗೊಂಡ ಮನುಷ್ಯನು ಕನಸಿನ ಸಂಬಂಧಿಗಳೊಂದಿಗೆ ಆಸಕ್ತನಾಗಿರುವುದಿಲ್ಲ, ಹಾಗೆಯೇ ಸತ್ಸಂಗದಿಂದ ಬುದ್ಧಿಯು ಶುದ್ಧವಾಗುತ್ತಾ ಹೋದಂತೆ ಶರೀರ, ಪತ್ನೀ, ಪುತ್ರ, ಧನ ಮುಂತಾದ ಆಸಕ್ತಿಯನ್ನು ಬಿಟ್ಟು ಬಿಡಬೇಕು. ಏಕೆಂದರೆ ಒಂದಲ್ಲ-ಒಂದುದಿನ ಇವುಗಳು ಬಿಟ್ಟು ಹೋಗುವಂತಹವುಗಳೇ ಆಗಿವೆ. ॥ ೪ ॥ ಬುದ್ಧಿವಂತನಾದ ಮನುಷ್ಯನು ಆವಶ್ಯಕತೆ ಇದ್ದಷ್ಟೇ ಮನೆಯ ಮತ್ತು ಶರೀರದ ಸೇವೆಮಾಡಬೇಕು. ಹೆಚ್ಚಾಗಬಾರದು. ಒಳಗಿನಿಂದ ವಿರಕ್ತನಾಗಿದ್ದು, ಹೊರಗಿನಿಂದ ಆಸಕ್ತನಾಗಿರುವಂತೆ ಇತರ ಜನರೊಂದಿಗೆ ಸಾಮಾನ್ಯ ಮನುಷ್ಯರಂತೆ ವ್ಯವಹರಿಸುತ್ತಾ ಇರಬೇಕು. ॥ ೫ ॥ ತಂದೆ-ತಾಯಿ, ಅಣ್ಣ-ತಮ್ಮಂದಿರು, ಪುತ್ರ- ಮಿತ್ರರು, ಸ್ವಜನರು ಮತ್ತು ಇತರರು ಏನೇ ಹೇಳಿದರೂ ಅಥವಾ ಬಯಸಿದರೂ ಒಳಗಿನಿಂದ ಮಮತೆಯನ್ನು ಇಟ್ಟುಕೊಳ್ಳದೆ ಅದನ್ನು ಅನುಮೋದಿಸುತ್ತಿರಬೇಕು. ॥ ೬ ॥

ಬುದ್ಧಿವಂತನಾದ ಮನುಷ್ಯನು ದೇವತೆಗಳಿಂದಲೂ, ಭೂಮಿಯಿಂದಲೂ, ಅಂತರಿಕ್ಷದಿಂದಲೂ ತನಗೆ ದೊರಕುವ ಅನ್ನ-ಚಿನ್ನಗಳೇ ಮುಂತಾದ ಎಲ್ಲ ದ್ರವ್ಯಸಂಪತ್ತುಗಳನ್ನು ಶ್ರೀಭಗವಂತನ

ದಿವ್ಯಂ ಭೌಮಂ ಚಾಂತರಿಕ್ಷಂ ವಿತ್ತಮಚ್ಯುತನಿರ್ಮಿತಮ್ ।
ತತ್ಸರ್ವಮುಪಭುಂಜಾನ ಏತತ್ಕುರ್ಯಾತ್ಸ್ವತೋ ಬುಧಃ ॥ ೭ ॥

ಯಾವದ್ಭ್ರಿಯೇತ ಜಠರಂ ತಾವತ್ಸ್ವತ್ವಂ ಹಿ ದೇಹಿನಾಮ್ ।
ಅಧಿಕಂ ಯೋಽಭಿಮನ್ಯೇತ ಸ ಸ್ತೇನೋ ದಂಡಮರ್ಹತಿ ॥ ೮ ॥

ಮೃಗೋಷ್ಟ್ರಖರಮರ್ಕಾಖುಸರೀಸೃಪ್ಖಗಮಕ್ಷಿಕಾಃ ।
ಆತ್ಮನಃ ಪುತ್ರವತ್ಪಶ್ಯೇತ್ತೈರೇಷಾಮಂತರಂ ಕಿಯತ್ ॥ ೯ ॥

ತ್ರಿವರ್ಗಂ ನಾತಿಕೃಚ್ಛ್ರೇಣ ಭಜೇತ ಗೃಹಮೇಧ್ಯಪಿ ।
ಯಥಾದೇಶಂ ಯಥಾಕಾಲಂ ಯಾವದ್ದೈವೋಪಪಾದಿತಮ್ ॥ ೧೦ ॥

ಆಶ್ವಾಘಾಂತೇಽವಸಾಯಿಭ್ಯಃ ಕಾಮಾನ್ಸಂವಿಭಜೇದ್ಯಥಾ ।
ಅಪ್ಯೇಕಾಮಾತ್ಮನೋ ದಾರಾಂ ನೃಣಾಂ ಸ್ವತ್ವಗ್ರಹೋ ಯತಃ ॥ ೧೧ ॥

ಜಹ್ಯಾದ್ಯದರ್ಥೇ ಸ್ವಾನ್ಪ್ರಾಣಾನ್ಹನ್ಯಾದ್ವಾ ಪಿತರಂ ಗುರುಮ್ ।
ತಸ್ಯಾಂ ಸ್ವತ್ವಂ ಸ್ತ್ರಿಯಾಂ ಜಹ್ಯಾದ್ಯಸ್ತೇನ ಹ್ಯಜಿತೋ ಜಿತಃ ॥ ೧೨ ॥

ಕೃಮಿವಿಡ್ಭಸ್ಮನಿಷ್ಠಾಂತಂ ಕ್ವೇದಂ ತುಚ್ಛಂ ಕಲೇವರಮ್ ।
ಕ್ವ ತದೀಯರತಿರ್ಭಾರ್ಯಾ ಕ್ವಾಯಮಾತ್ಮಾ ನಭಶ್ಛದಿಃ ॥ ೧೩ ॥

ಸಿದ್ಧೈರ್ಯಜ್ಞಾವಶಿಷ್ಟಾರ್ಥೈಃ ಕಲ್ಪಯೇದ್ವೃತ್ತಿಮಾತ್ಮನಃ ।
ಶೇಷೇ ಸ್ವತ್ವಂ ತ್ಯಜನ್ಪ್ರಾಜ್ಞಃ ಪದವೀಂ ಮಹತಾಮಿಯಾತ್ ॥ ೧೪ ॥

ದೇವಾನೃಷೀನ್ನೃಭೂತಾನಿ ಪಿತೄನಾತ್ಮಾನಮನ್ವಹಮ್ ।
ಸ್ವವೃತ್ತ್ಯಾಗತವಿತ್ತೇನ ಯಜೇತ ಪುರುಷಂ ಪೃಥಕ್ ॥ ೧೫ ॥

ಯರ್ಹ್ಯಾತ್ಮನೋಽಧಿಕಾರಾದ್ಯಾಃ ಸರ್ವಾಃ ಸ್ಯುರ್ಯಜ್ಞಸಂಪದಃ ।
ವೈತಾನಿಕೇನ ವಿಧಿನಾ ಅಗ್ನಿಹೋತ್ರಾದಿನಾ ಯಜೇತ್ ॥ ೧೬ ॥

ನ ಹ್ಯಗ್ನಿಮುಖತೋಽಯಂ ವೈ ಭಗವಾನ್ಸರ್ವಯಜ್ಞಭುಕ್ ।
ಇಜ್ಯೇತ ಹವಿಷಾ ರಾಜನ್ಯಥಾ ವಿಪ್ರಮುಖೇ ಹುತೈಃ ॥ ೧೭ ॥

ವರಪ್ರದಾನವೆಂದು ಸ್ವೀಕರಿಸಿ ಪ್ರಾರಬ್ಧಾನುಸಾರವಾಗಿ ಅವನ್ನು ಉಪಭೋಗಿಸುತ್ತಾ, ಸಂಗ್ರಹಿಸದೆ, ಹಿಂದೆ ಹೇಳಿದ ಸಾಧುಸೇವೆ ಮುಂತಾದ ಕಾರ್ಯಗಳಲ್ಲಿ ತೊಡಗಿಸಬೇಕು. ॥ ೭ ॥ ಮನುಷ್ಯರಿಗೆ ಎಷ್ಟರಿಂದ ಅವರ ಹಸಿವು ಇಂಗಿಬಿಡುವುದೋ ಅಷ್ಟೇ ಧನದ ಮೇಲೆ ಅವನಿಗೆ ಅಧಿಕಾರವಿರುವುದು. ಇದಕ್ಕಿಂತ ಹೆಚ್ಚಿನ ಸಂಪತ್ತನ್ನು ತನ್ನದೆಂದು ತಿಳಿಯುವವನು ಕಳ್ಳನೇ ಸರಿ. ಅವನು ದಂಡಾರ್ಹನು. ॥ ೮ ॥ ಜಿಂಕೆ, ಒಂಟೆ, ಕತ್ತೆ, ಕಪಿ, ಇಲಿ, ಸರ್ಪವೇ ಮುಂತಾದ ಹರಿದಾಡುವ ಪ್ರಾಣಿ, ಪಕ್ಷಿ ಮತ್ತು ಸೊಳ್ಳೆ ಮುಂತಾದವುಗಳನ್ನು ತನ್ನ ಪುತ್ರರಂತೇ ಭಾವಿಸಬೇಕು. ಅವುಗಳಿಗೂ ಮತ್ತು ತನ್ನ ಪುತ್ರರಿಗೂ ಏನು ಮಹಾ ವ್ಯತ್ಯಾಸ? ॥ ೯ ॥ ಗೃಹಸ್ಥನಾದ ಮನುಷ್ಯನೂ ಕೂಡ ಧರ್ಮ, ಅರ್ಥ ಮತ್ತು ಕಾಮ ಇವುಗಳಿಗಾಗಿ ಮಿತಿಮೀರಿ ಕಷ್ಟಪಡಬಾರದು. ದೇಶ, ಕಾಲ, ಅದೃಷ್ಟಗಳಿಗೆ ತಕ್ಕಂತೆ ದೊರಕುವುದರಲ್ಲೇ ಸಂತೋಷಪಟ್ಟುಕೊಳ್ಳಬೇಕು. ॥ ೧೦ ॥ ತನ್ನ ಸಮಸ್ತ ಭೋಗ-ಸಾಮಗ್ರಿಗಳನ್ನು ನಾಯಿ, ಪತಿತ ಮತ್ತು ಚಾಂಡಾಲರವರೆಗೆ ಎಲ್ಲ ಪ್ರಾಣಿಗಳಿಗೆ ಯಥಾಯೋಗ್ಯವಾಗಿ ಹಂಚಿಯೇ ತಾನು ಉಪಯೋಗಿಸಬೇಕು. ಹೆಚ್ಚೇನು ತನ್ನವಳೇ ಎಂದು ತಿಳಿದುಕೊಂಡಿರುವ ಪತ್ನಿಯನ್ನೂ ಕೂಡ ದೋಷವಿಲ್ಲದೇ ಇರುವ ರೀತಿಯಲ್ಲಿ ಅತಿಥಿಗಳ ಸೇವೆಯಲ್ಲಿ ನಿಯೋಜಿಸಬೇಕು. ॥ ೧೧ ॥ ಜನರು ಹೆಂಡತಿಗಾಗಿ ತನ್ನ ಪ್ರಾಣಗಳನ್ನಾದರೂ ಕೊಟ್ಟಾರು. ಅವಳಿಗಾಗಿ ತಂದೆ-ತಾಯಿಗಳನ್ನು ಮತ್ತು ಗುರುಗಳನ್ನು ಕೊಂದು ಹಾಕುವರು. ಅಂತಹ ಪತ್ನಿಯಲ್ಲಿರುವ ಮಮತೆಯನ್ನು ಗೆದ್ದವನು ಸರ್ವವಿಜಯಿಯಾದ ಭಗವಂತನನ್ನೂ ಕೂಡ ಗೆದ್ದುಕೊಂಡಂತೆ. ॥ ೧೨ ॥ ಈ ಶರೀರವು ಕೊನೆಗೆ ಕ್ರಿಮಿ, ಕೀಟ, ಮಲ ಅಥವಾ ಬೂದಿಯ ರಾಶಿಯಾಗಿಬಿಡುವುದು. ಇಂತಹ ತುಚ್ಛವಾದ ಶರೀರ ಮತ್ತು ಅದರ ರತಿಗೆ ಕಾರಣಳಾದ ಆ ಸ್ತ್ರೀಯೆಲ್ಲಿ? ಮತ್ತು ತನ್ನ ಮಹಿಮೆಯಿಂದ ಆಕಾಶವನ್ನೂ ಆವರಿಸಿಕೊಂಡಿರುವ ಅನಂತನಾದ ಆತ್ಮನೆಲ್ಲಿ? ॥ ೧೩ ॥

ಗೃಹಸ್ಥನು ಪ್ರಾರಬ್ಧದಿಂದ ದೊರೆತ ಮತ್ತು ಪಂಚ ಮಹಾಯಜ್ಞಗಳಿಂದ ಮಿಗಿದ ಅನ್ನದಿಂದಲೇ ತನ್ನ ಜೀವನ ನಿರ್ವಹಿಸಬೇಕು. ಇದಲ್ಲದೆ ಬೇರೆ ಯಾವುದೇ ವಸ್ತುವನ್ನು ತನ್ನ ಸ್ವತ್ತೆನ್ನಾಗಿ ಭಾವಿಸದಿರುವ ಬುದ್ಧಿವಂತರಾದ ಮನುಷ್ಯರು ಸಂತರಿಗೆ ದೊರೆಯುವ ಉತ್ತಮಗತಿಯನ್ನು ಪಡೆಯುವರು. ॥ ೧೪ ॥ ತನ್ನ ವರ್ಣಾಶ್ರಮವಿಹಿತ ವೃತ್ತಿಯಿಂದ ದೊರೆತ ಸಾಮಗ್ರಿಗಳಿಂದ ಪ್ರತಿದಿನವೂ ದೇವತೆಗಳಿಗೂ, ಋಷಿಗಳಿಗೂ, ಮನುಷ್ಯರಿಗೂ, ಭೂತಗಣಗಳಿಗೂ, ಪಿತೃಗಳಿಗೂ ಮತ್ತು ತನ್ನ ಆತ್ಮಕ್ಕೂ ಪೂಜೆಯನ್ನು ಸಲ್ಲಿಸಬೇಕು. ಇದು ಪರಮೇಶ್ವರನೊಬ್ಬನದೇ ಬೇರೆ-ಬೇರೆ ರೂಪಗಳಲ್ಲಿ ಮಾಡುವ ಆರಾಧನೆಯಾಗಿದೆ. ॥ ೧೫ ॥ ತನಗೆ ಅಧಿಕಾರವಿದ್ದರೆ ಯಜ್ಞಕ್ಕಾಗಿ ಆವಶ್ಯಕವಾದ ಎಲ್ಲ ವಸ್ತುಗಳು ದೊರಕಿದ್ದರೆ ದೊಡ್ಡ-ದೊಡ್ಡ ಯಜ್ಞಗಳು ಅಥವಾ ಅಗ್ನಿಹೋತ್ರ ಮುಂತಾದವುಗಳ ಮೂಲಕ ಭಗವಂತನನ್ನು ಆರಾಧಿಸಬೇಕು. ॥ ೧೬ ॥

ಯುಧಿಷ್ಠಿರನೇ! ಸಮಸ್ತ ಯಜ್ಞಗಳ ಭೋಕ್ತಾ ಭಗವಂತನೇ ಆಗಿದ್ದಾನೆ. ಆದರೂ ಬ್ರಾಹ್ಮಣನ ಮುಖದಲ್ಲಿ ಅರ್ಪಿಸಲ್ಪಟ್ಟ ಹವಿಷ್ಯಾನ್ನದಿಂದ ಅವನಿಗೆ ತೃಪ್ತಿಯುಂಟಾಗುವಷ್ಟು ಅಗ್ನಿಮುಖದಲ್ಲಿ ಹವನ ಮಾಡುವುದರಿಂದ ಉಂಟಾಗುವುದಿಲ್ಲ. ॥ ೧೭ ॥

ತಸ್ಮಾದ್ಬ್ರಾಹ್ಮಣದೇವೇಷು ಮರ್ತ್ಯಾದಿಷು ಯಥಾರ್ಹತಃ ।
ತೈಸ್ತೈಃ ಕಾಮೈರ್ಯಜಸ್ವೈನಂ ಕ್ಷೇತ್ರಜ್ಞಂ ಬ್ರಾಹ್ಮಣಾನನು ॥ ೧೮ ॥

ಕುರ್ಯಾದಾಪರಪಕ್ಷೀಯಂ ಮಾಸಿ ಪ್ರೌಷ್ಠಪದೇ ದ್ವಿಜಃ ।
ಶ್ರಾದ್ಧಂ ಪಿತ್ರೋರ್ಯಥಾವಿತ್ತಂ ತದ್ಬಂಧೂನಾಂ ಚ ವಿತ್ತವಾನ್ ॥ ೧೯ ॥

ಅಯನೇ ವಿಷುವೇ ಕುರ್ಯಾದ್ವ್ಯತೀಪಾತೇ ದಿನಕ್ಷಯೇ ।
ಚಂದ್ರಾದಿತ್ಯೋಪರಾಗೇ ಚ ದ್ವಾದಶೀಶ್ರವಣೇಷು ಚ ॥ ೨೦ ॥

ತೃತೀಯಾಯಾಂ ಶುಕ್ಲಪಕ್ಷೇ ನವಮ್ಯಾಮಥ ಕಾರ್ತಿಕೇ ।
ಚತಸೃಷ್ವಪ್ಯಷ್ಟಕಾಸು ಹೇಮಂತೇ ಶಿಶಿರೇ ತಥಾ ॥ ೨೧ ॥

ಮಾಘೇ ಚ ಸಿತಸಪ್ತಮ್ಯಾಂ ಮಘಾರಾಕಾಸಮಾಗಮೇ ।
ರಾಕಯಾ ಚಾನುಮತ್ಯಾ ವಾ ಮಾಸರ್ಕ್ಷಾಣಿ ಯುತಾನ್ಯಪಿ ॥ ೨೨ ॥

ದ್ವಾದಶ್ಯಾಮನುರಾಧಾ ಸ್ಯಾಚ್ಛ್ರವಣಸ್ತಿಸ್ರ ಉತ್ತರಾಃ ।
ತಿಸೃಷ್ವೇಕಾದಶೀ ವಾಽಽಸು ಜನ್ಮರ್ಕ್ಷಶ್ರೋಣಯೋಗಯುಕ್ ॥ ೨೩ ॥

ತ ಏತೇ ಶ್ರೇಯಸಃ ಕಾಲಾ ನೃಣಾಂ ಶ್ರೇಯೋವಿವರ್ಧನಾಃ ।
ಕುರ್ಯಾತ್ಸರ್ವಾತ್ಮನೈತೇಷು ಶ್ರೇಯೋಽಮೋಘಂ ತದಾಯುಷಃ ॥ ೨೪ ॥

ಏಷು ಸ್ನಾನಂ ಜಪೋ ಹೋಮೋ ವ್ರತಂ ದೇವದ್ವಿಜಾರ್ಚನಮ್ ।
ಪಿತೃದೇವನೃಭೂತೇಭ್ಯೋ ಯದ್ದತ್ತಂ ತದ್ಧ್ಯನಶ್ವರಮ್ ॥ ೨೫ ॥

ಸಂಸ್ಕಾರಕಾಲೋ ಜಾಯಾಯಾ ಅಪತ್ಯಸ್ಯಾತ್ಮನಸ್ತಥಾ ।
ಪ್ರೇತಸಂಸ್ಥಾ ಮೃತಾಹಶ್ಚ ಕರ್ಮಣ್ಯಭ್ಯುದಯೇ ನೃಪ ॥ ೨೬ ॥

ಅಥ ದೇಶಾನ್ಪ್ರವಕ್ಷ್ಯಾಮಿ ಧರ್ಮಾದಿಶ್ರೇಯಆವಹಾನ್ ।
ಸ ವೈ ಪುಣ್ಯತಮೋ ದೇಶಃ ಸತ್ಪಾತ್ರಂ ಯತ್ರ ಲಭ್ಯತೇ ॥ ೨೭ ॥

ಅದಕ್ಕಾಗಿ ಬ್ರಾಹ್ಮಣ, ದೇವತೆ, ಮನುಷ್ಯ ಮುಂತಾದ ಎಲ್ಲ ಪ್ರಾಣಿಗಳಿಗೆ ಯಥಾಯೋಗ್ಯ ಅವರಿಗೆ ಉಪಯುಕ್ತ ಸಾಮಗ್ರಿಗಳಿಂದ ಅವರೆಲ್ಲರ ಹೃದಯದಲ್ಲಿ ಅಂತರ್ಯಾಮಿರೂಪದಿಂದ ವಿರಾಜಮಾನನಾದ ಭಗವಂತನನ್ನು ಪೂಜಿಸಬೇಕು. ಇವುಗಳಲ್ಲಿ ಪ್ರಧಾನತೆ ಬ್ರಾಹ್ಮಣನದೇ ಆಗಿರಬೇಕು. ॥ ೧೮ ॥

ಶ್ರೀಮಂತನಾದ ದ್ವಿಜನು ತನ್ನ ಧನಕ್ಕೆ ಅನುಸಾರವಾಗಿ ಭಾದ್ರಪದಮಾಸದ ಕೃಷ್ಣಪಕ್ಷದಲ್ಲಿ ತನ್ನ ಮಾತಾ-ಪಿತಾ ಹಾಗೂ ಅವರ ಬಂಧುಗಳನ್ನು ಉದ್ದೇಶಿಸಿ ಮಹಾಲಯ ಶ್ರಾದ್ಧವನ್ನು ಮಾಡಬೇಕು. ॥ ೧೯ ॥ ಇದಲ್ಲದೆ ಅಯನ (ಮಕರಸಂಕ್ರಾಂತಿ ಮತ್ತು ಕರ್ಕಾಟಕ ಸಂಕ್ರಾಂತಿ)ಗಳಲ್ಲಿ, ವಿಷುವ (ತುಲಾ ಮತ್ತು ಮೇಷ ಸಂಕ್ರಾಂತಿ)ಗಳಲ್ಲಿ, ವ್ಯತೀಪಾತ, ದಿನಕ್ಷಯ, ಚಂದ್ರಗ್ರಹಣ, ಸೂರ್ಯಗ್ರಹಣಗಳ ಸಮಯದಲ್ಲಿ, ದ್ವಾದಶಿ, ಶ್ರವಣ, ಧನಿಷ್ಠಾ, ಅನುರಾಧಾ ನಕ್ಷತ್ರಗಳಲ್ಲಿ, ವೈಶಾಖ ಶುಕ್ಲ ತೃತೀಯ (ಅಕ್ಷಯತದಿಗೆ)ಯಲ್ಲಿ, ಕಾರ್ತಿಕ ಶುಕ್ಲ ನವಮೀ (ಅಕ್ಷಯನವಮಿ)ಯಲ್ಲಿ, ಮಾರ್ಗಶಿರ, ಪುಷ್ಯ, ಮಾಘ, ಫಾಲ್ಗುಣ ಈ ನಾಲ್ಕು ಮಾಸಗಳ ಕೃಷ್ಣ ಅಷ್ಟಮಿಗಳಲ್ಲಿ, ಮಾಘ ಶುಕ್ಲ ಸಪ್ತಮಿ, ಮಾಘಮಾಸದ ಮಘಾನಕ್ಷತ್ರ ಯುಕ್ತ ಪೌರ್ಣಮಿಯಲ್ಲಿ ಮತ್ತು ಮಾಸ ನಕ್ಷತ್ರ ಚಿತ್ರಾ, ವಿಶಾಖಾ, ಜ್ಯೇಷ್ಠ ಮುಂತಾದ ನಕ್ಷತ್ರಗಳಿಂದ ಕೂಡಿದ ಪೌರ್ಣಿಮೆಗಳಲ್ಲಿ, ದ್ವಾದಶೀ ತಿಥಿಗೆ ಅನುರಾಧಾ, ಶ್ರವಣ, ಉತ್ತರಾಫಲ್ಗುಣೀ, ಉತ್ತರಾಷಾಢಾ, ಉತ್ತರಾಭಾದ್ರಪದಾ ನಕ್ಷತ್ರಗಳ ಯೋಗವು ಇರುವ ಸಮಯದಲ್ಲಿ, ಏಕಾದಶೀ ತಿಥಿಗೆ ಮೂರು ಉತ್ತರಾ ನಕ್ಷತ್ರಗಳೊಡನೆಯೂ ಅಥವಾ ಜನ್ಮನಕ್ಷತ್ರ, ಇಲ್ಲದೇ ಶ್ರವಣಾನಕ್ಷತ್ರದೊಡನೆ ಯೋಗವಿರುವ ಸಮಯದಲ್ಲಿ ಪಿತೃಗಣಗಳನ್ನು ಉದ್ದೇಶಿಸಿ ಶ್ರಾದ್ಧಮಾಡುವುದು ಯೋಗ್ಯವೂ ಶ್ರೇಷ್ಠವೂ ಆಗಿದೆ. ಈ ಯೋಗಗಳು ಕೇವಲ ಶ್ರಾದ್ಧಕ್ಕೆ ಮಾತ್ರ ಯೋಗ್ಯವಲ್ಲದೆ ಎಲ್ಲ ಪುಣ್ಯಕರ್ಮಗಳ ಆಚರಣೆಗೂ ಉಪಯೋಗಿಯಾಗಿವೆ. ಇವು ಶ್ರೇಯಸ್ಸಿನ ಸಾಧನೆಗೆ ಉಪಯುಕ್ತವು ಮತ್ತು ಶುಭವನ್ನು ವೃದ್ಧಿಪಡಿಸುವುವು. ಈ ಸಮಯಗಳಲ್ಲಿ ತನ್ನ ಸಂಪೂರ್ಣಶಕ್ತಿಯನ್ನು ತೊಡಗಿಸಿ ಶುಭಕರ್ಮಗಳನ್ನು ಮಾಡಬೇಕು. ಇದರಲ್ಲೇ ಜೀವನದ ಸಫಲತೆ ಇದೆ. ॥ ೨೦-೨೪ ॥ ಈ ಪರ್ವಕಾಲಗಳಲ್ಲಿ ಮಾಡಲಾಗುವ ಸ್ನಾನ, ಜಪ, ಹೋಮ, ವ್ರತ ಹಾಗೂ ದೇವ-ಬ್ರಾಹ್ಮಣರ ಪೂಜೆ ಇವುಗಳಿಂದ ಮತ್ತು ದೇವತೆಗಳಿಗೆ, ಪಿತೃಗಳಿಗೆ, ಮನುಷ್ಯರಿಗೆ ಮತ್ತು ಪ್ರಾಣಿಗಳಿಗೆ ಅರ್ಪಿಸಲ್ಪಡುವ ಪದಾರ್ಥಗಳಿಂದ ಅಕ್ಷಯವಾದ ಫಲವು ದೊರೆಯುತ್ತದೆ. ॥ ೨೫ ॥ ಯುಧಿಷ್ಠಿರನೇ! ಇದೇ ಪ್ರಕಾರ ಪತ್ನಿಯ ಪುಂಸವನ ಮುಂತಾದ, ಸಂತಾನದ ಜಾತಕರ್ಮ ಮುಂತಾದ, ತನ್ನ ಯಜ್ಞದೀಕ್ಷೆ ಮುಂತಾದ ಸಂಸ್ಕಾರಗಳ ಸಮಯದಲ್ಲಿ, ಪ್ರೇತಕರ್ಮಗಳಲ್ಲಿ, ವಾರ್ಷಿಕ ಪಿತೃಶ್ರಾದ್ಧದ ದಿನ, ಅಥವಾ ಇತರ ಮಾಂಗಲಿಕ ಕರ್ಮಗಳಲ್ಲಿ ದಾನ-ಧರ್ಮಗಳನ್ನು ವಿಶೇಷವಾಗಿ ಮಾಡಬೇಕು. ॥ ೨೬ ॥

ಧರ್ಮರಾಯಾ! ಈಗ ನಾನು ಧರ್ಮವೇ ಮುಂತಾದ ಶ್ರೇಯಸ್ಸನ್ನುಂಟುಮಾಡುವಂತಹ ಸ್ಥಾನಗಳನ್ನು ವರ್ಣಿಸುತ್ತೇನೆ. ಸತ್ಪಾತ್ರರು ಎಲ್ಲಿ ಸಿಗುತ್ತಾರೋ ಅದು ಎಲ್ಲಕ್ಕಿಂತ ಪವಿತ್ರವಾದ ದೇಶವು. ॥ ೨೭ ॥

ಬಿಂಬಂ ಭಗವತೋ ಯತ್ರ ಸರ್ವಮೇತಚ್ಚರಾಚರಮ್ ।
ಯತ್ರ ಹ ಬ್ರಾಹ್ಮಣಕುಲಂ ತಪೋವಿದ್ಯಾದಯಾನ್ವಿತಮ್ ॥ ೨೮ ॥

ಯತ್ರ ಯತ್ರ ಹರೇರರ್ಚಾ ಸ ದೇಶಃ ಶ್ರೇಯಸಾಂ ಪದಮ್ ।
ಯತ್ರ ಗಂಗಾದಯೋ ನದ್ಯಃ ಪುರಾಣೇಷು ಚ ವಿಶ್ರುತಾಃ ॥ ೨೯ ॥

ಸರಾಂಸಿ ಪುಷ್ಕರಾದೀನಿ ಕ್ಷೇತ್ರಾಣ್ಯರ್ಹಾಶ್ರಿತಾನ್ಯುತ ।
ಕುರುಕ್ಷೇತ್ರಂ ಗಯಶಿರಃ ಪ್ರಯಾಗಃ ಪುಲಹಾಶ್ರಮಃ ॥ ೩೦ ॥

ನೈಮಿಷಂ ಫಾಲ್ಗುನಂ ಸೇತುಃ ಪ್ರಭಾಸೋಽಥ ಕುಶಸ್ಥಲೀ ।
ವಾರಾಣಸೀ ಮಧುಪುರೀ ಪಂಪಾ ಬಿಂದುಸರಸ್ತಥಾ ॥ ೩೧ ॥

ನಾರಾಯಣಾಶ್ರಮೋ ನಂದಾ ಸೀತಾರಾಮಾಶ್ರಮಾದಯಃ ।
ಸರ್ವೇ ಕುಲಾಚಲಾ ರಾಜನ್ಮಹೇಂದ್ರಮಲಯಾದಯಃ ॥ ೩೨ ॥

ಏತೇ ಪುಣ್ಯತಮಾ ದೇಶಾ ಹರೇರರ್ಚಾಶ್ರಿತಾಶ್ಚ ಯೇ ।
ಏತಾನ್‌ದೇಶಾನ್ನಿಷೇವೇತ ಶ್ರೇಯಸ್ಕಾಮೋ ಹ್ಯಭೀಕ್ಷ್ಣಶಃ ।
ಧರ್ಮೋ ಹ್ಯತ್ರೇಹಿತಃ ಪುಂಸಾಂ ಸಹಸ್ರಾಧಿಫಲೋದಯಃ ॥ ೩೩ ॥

ಪಾತ್ರಂ ತ್ವತ್ರ ನಿರುಕ್ತಂ ವೈ ಕವಿಭಿಃ ಪಾತ್ರವಿತ್ತಮೈಃ ।
ಹರಿರೇವೈಕ ಉರ್ವೀಶ ಯನ್ಮಯಂ ವೈ ಚರಾಚರಮ್ ॥ ೩೪ ॥

ದೇವರ್ಷ್ಯರ್ಹತ್ಸು ವೈ ಸತ್ಸು ತತ್ರ ಬ್ರಹ್ಮಾತ್ಮಜಾದಿಷು ।
ರಾಜನ್ಯದಗ್ರಪೂಜಾಯಾಂ ಮತಃ ಪಾತ್ರತಯಾಚ್ಯುತಃ ॥ ೩೫ ॥

ಜೀವರಾಶಿಭಿರಾಕೀರ್ಣ ಅಂಡಕೋಶಾಂಘ್ರಿಪೋ ಮಹಾನ್ ।
ತನ್ಮೂಲತ್ವಾದಚ್ಯುತೇಜ್ಯಾ ಸರ್ವಜೀವಾತ್ಮತರ್ಪಣಮ್ ॥ ೩೬ ॥

ಪುರಾಣ್ಯನೇನ ಸೃಷ್ಟಾನಿ ನೃತಿರ್ಯಗೃಷಿದೇವತಾಃ ।
ಶೇತೇ ಜೀವೇನ ರೂಪೇಣ ಪುರೇಷು ಪುರುಷೋ ಹ್ಯಸೌ ॥ ೩೭ ॥

ತೇಷ್ವೇವ ಭಗವಾನ್ರಾಜಂಸ್ತಾರತಮ್ಯೇನ ವರ್ತತೇ ।
ತಸ್ಮಾತ್ಪಾತ್ರಂ ಹಿ ಪುರುಷೋ ಯಾವಾನಾತ್ಮಾ ಯಥೇಯತೇ ॥ ೩೮ ॥

ದೃಷ್ಟ್ವಾ ತೇಷಾಂ ಮಿಥೋ ನೃಣಾಮವಜ್ಞಾನಾತ್ಮತಾಂ ನೃಪ ।
ತ್ರೇತಾದಿಷು ಹರೇರರ್ಚಾ ಕ್ರಿಯಾಯೈ ಕವಿಭಿಃ ಕೃತಾ ॥ ೩೯ ॥

ಈ ಚರಾಚರ ಜಗತ್ತಿಗೆ ಆಶ್ರಯನಾಗಿರುವ ಭಗವಂತನ ಅರ್ಚಾಮೂರ್ತಿ ಇರುವ ದೇಶವು, ತಪಸ್ಸು, ವಿದ್ಯೆ, ದಯೆ ಮುಂತಾದ ಗುಣಗಳಿಂದ ಕೂಡಿದ ಬ್ರಾಹ್ಮಣರ ಪರಿವಾರಗಳು ನೆಲೆಸಿರುವ ಸ್ಥಳಗಳು, ಪುರಾಣಗಳಲ್ಲಿ ಪ್ರಸಿದ್ಧವಾದ ಗಂಗಾದಿ ನದಿಗಳಿರುವ ಜಾಗಗಳು – ಇವೆಲ್ಲವುಗಳೂ ಪರಮ ಶ್ರೇಯಸ್ಕರ ವಾದುವುಗಳು. ॥ ೨೮-೨೯ ॥ ಪುಷ್ಕರವೇ ಮುಂತಾದ ಸರೋವರ ಗಳು, ಸಿದ್ಧಪುರುಷರಿಂದ ಸೇವಿತವಾದ ಕ್ಷೇತ್ರಗಳು, ಕುರುಕ್ಷೇತ್ರ, ಗಯಾ, ಪ್ರಯಾಗ, ಪುಲಹಾಶ್ರಮ (ಸಾಲಿಗ್ರಾಮ ಕ್ಷೇತ್ರ), ನೈಮಿಷಾರಣ್ಯ, ಫಾಲ್ಗುಣಕ್ಷೇತ್ರ, ಸೇತುಬಂಧ ರಾಮೇಶ್ವರ, ಪ್ರಭಾಸ, ದ್ವಾರಕೆ, ಕಾಶೀ, ಮಥುರೆ, ಪಂಪಾಸರೋವರ, ಬಿಂದುಸರೋವರ, ಬದರಿಕಾಶ್ರಮ, ಅಲಕನಂದಾ – ಇವೇ ಪುಣ್ಯಕ್ಷೇತ್ರಗಳು : ಅಯೋಧ್ಯೆ, ಚಿತ್ರಕೂಟ, ಮುಂತಾದ ಸೀತಾರಾಮಾಶ್ರಮ ಕ್ಷೇತ್ರ ಗಳು, ಮಹೇಂದ್ರ, ಮಲಯವೇ ಮುಂತಾದ ಸಮಸ್ತ ಕುಲ ಪರ್ವತಗಳು, ಭಗವಂತನ ಅರ್ಚಾವತಾರಗಳಿರುವ ಜಾಗಗಳು – ಇವೆಲ್ಲವುಗಳೂ ಅತ್ಯಂತ ಪವಿತ್ರವಾದ ದೇಶಗಳು. ॥ ೩೦-೩೩ ॥

ಯುಧಿಷ್ಠಿರನೇ! ಸತ್ಪಾತ್ರರು ಯಾರು ? ಎಂದು ನಿರ್ಣಯಿಸುವ ಸಂದರ್ಭದಲ್ಲಿ ಶ್ರೇಷ್ಠರಾದ ತಜ್ಞರು 'ಶ್ರೀಹರಿಯೊಬ್ಬನೇ ಸತ್ಪಾತ್ರನು' ಎಂದು ಸಾರುತ್ತಾರೆ. ಈ ಚರಾಚರ ಜಗತ್ತೆಲ್ಲವೂ ಆ ಹರಿಮಯವೇ ಆಗಿದೆ. ॥ ೩೪ ॥ ಈಗ ನಿನ್ನ ಯಜ್ಞದ ವಿಷಯವನ್ನೇ ನೋಡು. ಆ ಯಜ್ಞದಲ್ಲಿ ದೇವತೆಗಳು, ಋಷಿಗಳು, ಸಿದ್ಧರು, ಸನಕಾದಿಗಳು ಉಪಸ್ಥಿತರಾಗಿದ್ದರೂ ಅಗ್ರಪೂಜೆಗಾಗಿ ಭಗವಾನ್ ಶ್ರೀಕೃಷ್ಣನನ್ನೇ ಸತ್ಪಾತ್ರನೆಂದು ತಿಳಿಯಲಾಯಿತು. ॥ ೩೫ ॥ ಅಸಂಖ್ಯ ಜೀವಿಗಳಿಂದ ತುಂಬಿರುವ ಈ ಬ್ರಹ್ಮಾಂಡವೆಂಬ ಮಹಾವೃಕ್ಷಕ್ಕೆ ಭಗವಾನ್ ಶ್ರೀಕೃಷ್ಣನೊಬ್ಬನೇ ಮೂಲ (ಬೇರು) ವಾಗಿದ್ದಾನೆ. ಆದರಿಂದ ಅವನ ಪೂಜೆಯಿಂದ ಸಮಸ್ತ ಜೀವಿಗಳ ಆತ್ಮವು ತೃಪ್ತನಾಗುತ್ತಾನೆ. ॥ ೩೬ ॥ ಅವನೇ ಮನುಷ್ಯ, ಪಶು-ಪಕ್ಷಿ, ಋಷಿ, ದೇವತೆಗಳು ಮುಂತಾದವುಗಳ ಶರೀರವೆಂಬ ಪುರಗಳನ್ನು ರಚಿಸಿ, ಅವನೇ ಈ ಪುರಗಳಲ್ಲಿ ಜೀವರೂಪದಿಂದ ಶಯನ ಮಾಡಿರುವನು. ಆದರಿಂದಲೇ ಅವನಿಗೆ 'ಪುರುಷ' ಎಂಬ ಒಂದು ಹೆಸರೂ ಇದೆ. ॥ ೩೭ ॥ ಯುಧಿಷ್ಠಿರನೇ! ಭಗವಂತನು ಏಕರಸನಾಗಿದ್ದರೂ ಈ ಮನುಷ್ಯಾದಿ ಶರೀರಗಳಲ್ಲಿ ಅವುಗಳ ಭಿನ್ನತೆಯಿಂದಾಗಿ ತಾರತಮ್ಯದಿಂದ ಕೂಡಿರುವವನಂತೆ ಕಾಣುತ್ತಾನೆ. ಅದಕ್ಕಾಗಿ ಪಶು-ಪಕ್ಷಿ ಮುಂತಾದ ಶರೀರಗಳಿಗಿಂತ ಮನುಷ್ಯನೇ ಶ್ರೇಷ್ಠ ಪಾತ್ರನಾಗಿದ್ದಾನೆ. ಮನುಷ್ಯರಲ್ಲಿಯೂ ಯಾರಲ್ಲಿ ಭಗವಂತನ ಅಂಶವು ತಪಸ್ಸು-ಯೋಗಾದಿ ಎಷ್ಟು ಹೆಚ್ಚು ಕಂಡು ಬರುತ್ತದೋ ಅವನು ಅಷ್ಟೇ ಶ್ರೇಷ್ಠನಾಗಿದ್ದಾನೆ. ॥ ೩೮ ॥

ಧರ್ಮರಾಯಾ! ತ್ರೇತಾಯುಗವೇ ಮುಂತಾದ ಯುಗಗಳಲ್ಲಿ ಮನುಷ್ಯರು ಪರಸ್ಪರ ಒಬ್ಬರನ್ನೊಬ್ಬರು ಅಪಮಾನ ಮಾಡುವುದನ್ನು ನೋಡಿ ವಿದ್ವಾಂಸರು ಆ ಜನರಿಗೆ ಉಪಾಸನೆಯ ಸಿದ್ಧಿಗಾಗಿ ಭಗವಂತನ ಪ್ರತಿಮೆಗಳನ್ನು ಪ್ರತಿಷ್ಠಾಪಿಸಿದರು. ॥ ೩೯ ॥

ತತೋಽರ್ಚಾಯಾಂ ಹರಿಂ ಕೇಚಿತ್ಸಂಶ್ರದ್ಧಾಯ ಸಪರ್ಯಯಾ ।
ಉಪಾಸತ ಉಪಾಸ್ತಾಪಿ ನಾರ್ಥದಾ ಪುರುಷದ್ವಿಷಾಮ್ ॥ ೪೦ ॥

ಪುರುಷೇಷ್ವಪಿ ರಾಜೇಂದ್ರ ಸುಪಾತ್ರಂ ಬ್ರಾಹ್ಮಣಂ ವಿದುಃ ।
ತಪಸಾ ವಿದ್ಯಯಾ ತುಷ್ಟ್ಯಾ ಧತ್ತೇ ವೇದಂ ಹರೇಸ್ತನುಮ್ ॥ ೪೧ ॥

ನನ್ವಸ್ಯ ಬ್ರಾಹ್ಮಣಾ ರಾಜನ್ಕೃಷ್ಣಸ್ಯ ಜಗದಾತ್ಮನಃ ।
ಪುನಂತಃ ಪಾದರಜಸಾ ತ್ರಿಲೋಕೀಂ ದೈವತಂ ಮಹತ್ ॥ ೪೨ ॥

ಅಂದಿನಿಂದ ಎಷ್ಟೋ ಜನರು ಅತ್ಯಂತ ಶ್ರದ್ಧೆ ಮತ್ತು ಸಾಮಗ್ರಿಗಳಿಂದ ಪ್ರತಿಮೆಯಲ್ಲೇ ಭಗವಂತನನ್ನು ಪೂಜಿಸುತ್ತಾರೆ. ಆದರೆ ಮನುಷ್ಯರೊಂದಿಗೆ ದ್ವೇಷಮಾಡುವವನಿಗೆ ಪ್ರತಿಮೆಯ ಉಪಾಸನೆ ಮಾಡಿದರೂ ಸಿದ್ಧಿ ಸಿಗಲಾರದು. ॥ ೪೦ ॥

ಯುಧಿಷ್ಠಿರನೇ! ಮನುಷ್ಯರಲ್ಲಿಯೂ ಬ್ರಾಹ್ಮಣನೇ ವಿಶೇಷ ಸತ್ಪಾತ್ರನೆಂದು ತಿಳಿಯಲಾಗಿದೆ. ಏಕೆಂದರೆ, ಅವನು ತನ್ನ ತಪಸ್ಸು, ವಿದ್ಯೆ, ಸಂತೋಷವೇ ಮುಂತಾದ ಗುಣಗಳಿಂದ ಭಗವಂತನ ವೇದರೂಪೀ ಶರೀರವನ್ನು ಧರಿಸಿರುತ್ತಾನೆ. ॥ ೪೧ ॥ ಮಹಾರಾಜ! ನಮ್ಮ-ನಿಮ್ಮ ಮಾತಿರಲಿ, ಈ ಸರ್ವಾತ್ಮನಾದ ಭಗವಾನ್ ಶ್ರೀಕೃಷ್ಣನಿಗೂ ಕೂಡ ಬ್ರಾಹ್ಮಣರೇ ಇಷ್ಟದೇವರಾಗಿದ್ದಾರೆ. ಏಕೆಂದರೆ, ಅವರ ಚರಣಧೂಳಿಯಿಂದ ಮೂರುಲೋಕಗಳೂ ಪವಿತ್ರವಾಗುತ್ತವೆ. ॥ ೪೨ ॥

ಹದಿನಾಲ್ಕನೆಯ ಅಧ್ಯಾಯವು ಮುಗಿಯಿತು. ॥ ೧೪ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಸಪ್ತಮ ಸ್ಕಂಧೇ
ಸದಾಚಾರನಿರ್ಣಯೋ ನಾಮ ಚತುರ್ದಶೋಽಧ್ಯಾಯಃ ॥ ೧೪ ॥

ಹದಿನೈದನೆಯ ಅಧ್ಯಾಯ

ಗೃಹಸ್ಥರಿಗಾಗಿ ಮೋಕ್ಷಧರ್ಮದ ವರ್ಣನೆ

ನಾರದ ಉವಾಚ

ಕರ್ಮನಿಷ್ಠಾ ದ್ವಿಜಾಃ ಕೇಚಿತ್ತಪೋನಿಷ್ಠಾ ನೃಪಾಪರೇ ।
ಸ್ವಾಧ್ಯಾಯೇಽನ್ಯೇ ಪ್ರವಚನೇ ಯೇ ಕೇಚಿಜ್ಜ್ಞಾನಯೋಗಯೋಃ ॥ ೧ ॥

ಜ್ಞಾನನಿಷ್ಠಾಯ ದೇಯಾನಿ ಕವ್ಯಾನ್ಯಾನಂತ್ಯಮಿಚ್ಛತಾ ।
ದೈವೇ ಚ ತದಭಾವೇ ಸ್ಯಾದಿತರೇಭ್ಯೋ ಯಥಾರ್ಹತಃ ॥ ೨ ॥

ದ್ವೌದೈವೇ ಪಿತೃಕಾರ್ಯೇ ತ್ರೀನೇಕೈಕಮುಭಯತ್ರ ವಾ ।
ಭೋಜಯೇತ್ಸುಸಮೃದ್ಧೋಽಪಿ ಶ್ರಾದ್ಧೇ ಕುರ್ಯಾನ್ನ ವಿಸ್ತರಮ್ ॥ ೩ ॥

ದೇಶಕಾಲೋಚಿತಶ್ರದ್ಧಾದ್ರವ್ಯಪಾತ್ರಾರ್ಹಣಾನಿ ಚ ।
ಸಮ್ಯಗ್ಭವಂತಿ ನೈತಾನಿ ವಿಸ್ತರಾತ್ಸ್ವಜನಾರ್ಪಣಾತ್ ॥ ೪ ॥

ದೇಶೇ ಕಾಲೇ ಚ ಸಂಪ್ರಾಪ್ತೇ ಮುನ್ಯನ್ನಂ ಹರಿದೈವತಮ್ ।
ಶ್ರದ್ಧಯಾ ವಿಧಿವತ್ಪಾತ್ರೇ ನ್ಯಸ್ತಂ ಕಾಮಧುಗಕ್ಷಯಮ್ ॥ ೫ ॥

ನಾರದರು ಹೇಳುತ್ತಾರೆ – ಯುಧಿಷ್ಠಿರನೇ! ಕೆಲವು ದ್ವಿಜರ ನಿಷ್ಠೆ ಕರ್ಮದಲ್ಲಾದರೆ, ಕೆಲವರಲ್ಲಿ ತಪಸ್ಸಿನಲ್ಲಿ, ಕೆಲವರಲ್ಲಿ ವೇದಗಳ ಅಧ್ಯಯನ-ಪ್ರವಚನಗಳಲ್ಲಿ, ಕೆಲವರಲ್ಲಿ ಆತ್ಮಜ್ಞಾನ ಸಂಪಾದನೆಯಲ್ಲಿ, ಕೆಲವರಲ್ಲಿ ಯೋಗದಲ್ಲಿ ನಿಷ್ಠೆ ಇರುತ್ತದೆ. ॥ ೧ ॥ ಶ್ರಾದ್ಧ ಅಥವಾ ದೇವರ ಪೂಜೆಗಳೇ ಮುಂತಾದ ಕರ್ಮಗಳ ಅಕ್ಷಯ ಫಲವನ್ನು ಬಯಸುವ ಗೃಹಸ್ಥನಾದವನು ಜ್ಞಾನನಿಷ್ಠ ದ್ವಿಜನಿಗೆ ಹವ್ಯ-ಕವ್ಯಗಳನ್ನು ಸಮರ್ಪಿಸಬೇಕು. ಅವರು ಸಿಗದಿದ್ದಾಗ ಯೋಗೀ, ಪ್ರವಚನಕಾರ ಮುಂತಾದವರಿಗೆ ಯಥಾಯೋಗ್ಯ, ಯಥಾಕ್ರಮದಲ್ಲಿ ದಾನಮಾಡಬೇಕು. ॥ ೨ ॥ ದೇವತಾಕಾರ್ಯದಲ್ಲಿ ಇಬ್ಬರು ಮತ್ತು ಪಿತೃಕಾರ್ಯದಲ್ಲಿ ಮೂರು ಅಥವಾ ಎರಡರಲ್ಲಿಯೂ ಒಂದೊಂದು ಬ್ರಾಹ್ಮಣರಿಗೆ ಭೋಜನ ಮಾಡಿಸಬೇಕು. ತುಂಬಾ ಶ್ರೀಮಂತನಾಗಿದ್ದರೂ ಶ್ರಾದ್ಧಕರ್ಮದಲ್ಲಿ ಹೆಚ್ಚು ವಿಸ್ತಾರವನ್ನು ಮಾಡಬಾರದು. ॥ ೩ ॥ ಏಕೆಂದರೆ, ನೆಂಟರಿಗೆ, ಸ್ವಜನರಿಗೆ ಕೊಡುವುದರಿಂದ, ಶ್ರಾದ್ಧವಿಸ್ತಾರ ಮಾಡುವುದರಿಂದ ದೇಶ-ಕಾಲೋಚಿತ ಶ್ರದ್ಧೆ, ಪದಾರ್ಥ, ಪಾತ್ರ ಮತ್ತು ಪೂಜೆ ಸರಿಯಾಗಿ ನಡೆಯುವುದಿಲ್ಲ. ॥ ೪ ॥ ಸರಿಯಾದ ದೇಶ-ಕಾಲಗಳು ಕೂಡಿಬಂದಾಗ ಋಷಿ-ಮುನಿಗಳಿಗೆ ಭೋಜನಯೋಗ್ಯವಾದ ಹವಿಷ್ಯಾನ್ನವನ್ನು ಭಗವಂತನಿಗೆ ನಿವೇದನೆಮಾಡಿ, ಶ್ರದ್ಧೆಯಿಂದ ವಿಧಿವತ್ತಾಗಿ ಸತ್ಪಾತ್ರರಿಗೆ ಕೊಡಬೇಕು. ಅದು ಸಮಸ್ತ ಕಾಮನೆಗಳನ್ನು ಪೂರ್ಣಗೊಳಿಸುವಂತಹುದು ಮತ್ತು ಅಕ್ಷಯವಾಗುತ್ತದೆ. ॥ ೫ ॥ ದೇವತೆಗಳಿಗೆ, ಋಷಿಗಳಿಗೆ, ಪಿತೃಗಳಿಗೆ, ಬೇರೆ ಪ್ರಾಣಿಗಳಿಗೆ, ಸ್ವಜನರಿಗೆ ಅನ್ನವನ್ನು ನೀಡುವಾಗ ಮತ್ತು ತನಗಾಗಿ

ದೇವರ್ಷಿಪಿತೃಭೂತೇಭ್ಯ ಆತ್ಮನೇ ಸ್ವಜನಾಯ ಚ ।
ಅನ್ನಂ ಸಂವಿಭಜನ್ಪಶ್ಯೇತ್ಸರ್ವಂ ತತ್ಪುರುಷಾತ್ಮಕಮ್ ॥ ೬ ॥

ನ ದದ್ಯಾದಾಮಿಷಂ ಶ್ರಾದ್ಧೇ ನ ಚಾದ್ಯಾದ್ಧರ್ಮತತ್ತ್ವವಿತ್ ।
ಮುನ್ಯನ್ನೈಃ ಸ್ಯಾತ್ಪರಾ ಪ್ರೀತಿರ್ಯಥಾ ನ ಪಶುಹಿಂಸಯಾ ॥ ೭ ॥

ನೈತಾದೃಶಃ ಪರೋ ಧರ್ಮೋ ನೃಣಾಂ ಸದ್ಧರ್ಮಮಿಚ್ಛತಾಮ್ ।
ನ್ಯಾಸೋ ದಂಡಸ್ಯ ಭೂತೇಷು ಮನೋವಾಕ್ಕಾಯಜಸ್ಯ ಯಃ ॥ ೮ ॥

ಏಕೇ ಕರ್ಮಮಯಾನ್ ಯಜ್ಞಾನ್ ಜ್ಞಾನಿನೋ ಯಜ್ಞವಿತ್ತಮಾಃ ।
ಆತ್ಮಸಂಯಮನೇಽನೀಹಾ ಜುಹ್ವತಿ ಜ್ಞಾನದೀಪಿತೇ ॥ ೯ ॥

ದ್ರವ್ಯಯಜ್ಞೈರ್ಯಕ್ಷ್ಯಮಾಣಂ ದೃಷ್ಟ್ವಾ ಭೂತಾನಿ ಬಿಭ್ಯತಿ ।
ಏಷ ಮಾಕರುಣೋ ಹನ್ಯಾದತಜ್ಞೋ ಹ್ಯಸುತೃಬ್ಧ್ರುವಮ್ ॥ ೧೦ ॥

ತಸ್ಮಾದ್ದೈವೋಪಪನ್ನೇನ ಮುನ್ಯನ್ನೇನಾಪಿ ಧರ್ಮವಿತ್ ।
ಸಂತುಷ್ಟೋಽಹರಹಃ ಕುರ್ಯಾನ್ನಿತ್ಯನೈಮಿತ್ತಿಕೀಃ ಕ್ರಿಯಾಃ ॥ ೧೧ ॥

ವಿಧರ್ಮಃ ಪರಧರ್ಮಶ್ಚ ಆಭಾಸ ಉಪಮಾ ಛಲಃ ।
ಅಧರ್ಮಶಾಖಾಃ ಪಂಚೇಮಾ ಧರ್ಮಜ್ಞೋಽಧರ್ಮವತ್ತ್ಯಜೇತ್ ॥ ೧೨ ॥

ಧರ್ಮಬಾಧೋ ವಿಧರ್ಮಃ ಸ್ಯಾತ್ಪರಧರ್ಮೋಽನ್ಯಚೋದಿತಃ ।
ಉಪಧರ್ಮಸ್ತು ಪಾಖಂಡೋ ದಂಭೋ ವಾ ಶಬ್ದಭಿಚ್ಛಲಃ ॥ ೧೩ ॥

ಯಸ್ತ್ವಿಚ್ಛಯಾ ಕೃತಃ ಪುಂಭಿರಾಭಾಸೋ ಹ್ಯಾಶ್ರಮಾತ್ಪೃಥಕ್ ।
ಸ್ವಭಾವವಿಹಿತೋ ಧರ್ಮಃ ಕಸ್ಯ ನೇಷ್ಟಃ ಪ್ರಶಾಂತಯೇ ॥ ೧೪ ॥

ಧರ್ಮಾರ್ಥಮಪಿ ನೇಹೇತ ಯಾತ್ರಾರ್ಥಂ ವಾಧನೋ ಧನಮ್ ।
ಅನೀಹಾನೀಹಮಾನಸ್ಯ ಮಹಾಹೇರಿವ ವೃತ್ತಿದಾ ॥ ೧೫ ॥

ತೆಗೆದಿರಿಸಿದಾಗಲೂ ಅವರೆಲ್ಲರನ್ನೂ ಪರಮಾತ್ಮಸ್ವರೂಪರೆಂದೇ ನೋಡಬೇಕು. ॥ ೬ ॥

ಧರ್ಮದ ಮರ್ಮವನ್ನು ಅರಿತಿರುವವರು ಶ್ರಾದ್ಧದಲ್ಲಿ ಮಾಂಸವನ್ನು ಅರ್ಪಿಸಬಾರದು ಮತ್ತು ಸ್ವತಃ ತಾನು ಕೂಡ ತಿನ್ನಬಾರದು. ಏಕೆಂದರೆ ಪಿತೃಗಳಿಗೆ, ಋಷಿ-ಮುನಿಗಳಿಗೆ ಯೋಗ್ಯವಾದ ಹವಿಷ್ಯಾನ್ನದಿಂದ ಪ್ರಸನ್ನತೆ ಉಂಟಾಗುವಂತೆ ಪಶು-ಹಿಂಸೆಯಿಂದ ಆಗುವುದಿಲ್ಲ. ॥ ೭ ॥ ಸದ್ಧರ್ಮವನ್ನು ಪಾಲಿಸಬೇಕೆಂದು ಬಯಸುವ ಜನರಿಗೆ ಯಾವುದೇ ಪ್ರಾಣಿಗೂ ಮನಸ್ಸಿನಿಂದ, ಮಾತಿನಿಂದ, ಶರೀರದಿಂದ ಯಾವ ವಿಧದಿಂದಲೂ ಕಷ್ಟ ಕೊಡಬಾರದು. ಇದರಿಂದ ಮಿಗಿಲಾದ ಬೇರೆ ಯಾವ ಧರ್ಮವು ಇಲ್ಲ. ॥ ೮ ॥ ಇದರಿಂದಲೇ ಕೆಲ-ಕೆಲವರು ಯಜ್ಞತತ್ತ್ವವನ್ನು ಬಲ್ಲಜ್ಞಾನಿಗಳು ಜ್ಞಾನದ ಮೂಲಕ ಪ್ರಜ್ವಲಿತ ಆತ್ಮಸಂಯಮವೆಂಬ ಅಗ್ನಿಯಲ್ಲಿ ಈ ಕರ್ಮಮಯ ಯಜ್ಞಗಳನ್ನು ಹೋಮಮಾಡಿಬಿಡುತ್ತಾರೆ ಮತ್ತು ಬಾಹ್ಯ ಕರ್ಮಕಲಾಪಗಳಿಂದ ಉಪರತರಾಗುತ್ತಾರೆ. ॥ ೯ ॥ ಯಾರಾದರೂ ಪಶುಬಲಿ ಇತ್ಯಾದಿ ಸಾಮಗ್ರಿಗಳಿಂದ ಯಜ್ಞ ಮಾಡಲು ಬಯಸಿದಾಗ ಎಲ್ಲ ಪ್ರಾಣಿಗಳು ಹೆದರಿಹೋಗುತ್ತವೆ. ಅವುಗಳು ಯೋಚಿಸುತ್ತವೆ – ಇವನು ತನ್ನ ಪ್ರಾಣಗಳನ್ನು ಪೋಷಿಸುವ ನಿರ್ದಯೀ ಮೂರ್ಖನು ನಮ್ಮನ್ನು ಖಂಡಿತವಾಗಿ ಕೊಂದುಬಿಡ್ವಾನು ಎಂದುಕೊಳ್ಳುವವು. ॥ ೧೦ ॥ ಅದಕ್ಕಾಗಿ ಧರ್ಮಜ್ಞನಾದವನು – ಪ್ರತಿದಿನವು ಪ್ರಾರಬ್ಧದ ಮೂಲಕ ದೊರೆತ ಮುನಿಜನೋಚಿತವಾದ ಹವಿಷ್ಯಾನ್ನದಿಂದಲೇ ತನ್ನ ನಿತ್ಯ-ನೈಮಿತ್ತಿಕ ಕರ್ಮಗಳನ್ನು ಮಾಡಿ, ಅದರಿಂದಲೇ ಸಂತುಷ್ಟನಾಗಿರುವುದೇ ಉಚಿತವಾಗಿದೆ. ॥ ೧೧ ॥

ವಿಧರ್ಮ, ಪರಧರ್ಮ, ಆಭಾಸ, ಉಪಮೆ ಮತ್ತು ಛಲ – ಎಂಬ ಈ ಐದು ಅಧರ್ಮದ ಶಾಖೆಗಳು. ಧರ್ಮಜ್ಞನಾದ ಮನುಷ್ಯನು ಅಧರ್ಮದಂತೆ ಇವುಗಳನ್ನು ತ್ಯಜಿಸಿಬಿಡಬೇಕು. ॥ ೧೨ ॥ ಯಾವ ಕಾರ್ಯವನ್ನು ಧರ್ಮಬುದ್ಧಿಯಿಂದ ಮಾಡಿದರೂ ತನ್ನ ಧರ್ಮದಲ್ಲಿ ಬಾಧೆ ಉಂಟಾದರೆ ಅದು 'ವಿಧರ್ಮ'ವಾಗಿದೆ. ಯಾರೋ ಬೇರೆಯವರಿಂದ ಇತರರಿಗೆ ಉಪದೇಶಿಸಲ್ಪಟ್ಟ ಧರ್ಮವು 'ಪರಧರ್ಮ'ವಾಗಿದೆ. ಪಾಷಂಡ ಮತ್ತು ದಾಂಭಿಕತೆ ಯನ್ನು 'ಉಪಧರ್ಮ' ಅಥವಾ 'ಉಪಮಾ' ಎಂದು ಹೇಳುತ್ತಾರೆ. ಶಾಸ್ತ್ರವಚನಗಳನ್ನು ಬೇರೆ ಪ್ರಕಾರದಿಂದ ಅರ್ಥೈಸುವುದು 'ಛಲ'ವಾಗಿದೆ. ॥ ೧೩ ॥ ಮನುಷ್ಯನು ತನ್ನ ಆಶ್ರಮಕ್ಕೆ ವಿಪರೀತವಾಗಿ ಸ್ವೇಚ್ಛೆಯಿಂದ ಯಾವುದನ್ನು ಧರ್ಮವೆಂದು ತಿಳಿಯುತ್ತಾನೋ ಅದು 'ಆಭಾಸ'ವಾಗಿದೆ. ತಮ್ಮ-ತಮ್ಮ ಸ್ವಭಾವಕ್ಕನುಕೂಲವಾದ ವರ್ಣಾಶ್ರಮೋಚಿತ ಧರ್ಮಗಳು ಯಾರಿಗೆ ತಾನೇ ಶಾಂತಿಯನ್ನು ಉಂಟು ಮಾಡುವುದಿಲ್ಲ? ॥ ೧೪ ॥

ಧರ್ಮಾತ್ಮ ಮನುಷ್ಯನು ನಿರ್ಧನನಾಗಿದ್ದರೂ ಧರ್ಮಕ್ಕಾಗಿ ಅಥವಾ ಶರೀರನಿರ್ವಾಹಕ್ಕಾಗಿ, ಹಣವನ್ನು ಗಳಿಸುವ ಪ್ರಯತ್ನ ಮಾಡಬಾರದು. ಏಕೆಂದರೆ, ಯಾವುದೇ ರೀತಿಯ ಪ್ರಯತ್ನ ಮಾಡದೆಯೇ ಹೆಬ್ಬಾವಿನ ಜೀವನ ನಡೆಯುವಂತೆಯೇ ನಿವೃತ್ತಿಪರಾಯಣ ಮನುಷ್ಯನ ನಿವೃತ್ತಿಯೇ ಅವನ ಜೀವನ ನಿರ್ವಹಣೆ ಮಾಡುತ್ತದೆ. ॥ ೧೫ ॥

ಸಂತುಷ್ಟಸ್ಯ ನಿರೀಹಸ್ಯ ಸ್ವಾತ್ಮಾರಾಮಸ್ಯ ಯತ್ಸುಖಮ್ ।
ಕುತಸ್ತತ್ಕಾಮಲೋಭೇನ ಧಾವತೋಽರ್ಥೇಹಯಾ ದಿಶಃ ॥ ೧೬ ॥

ಸದಾ ಸಂತುಷ್ಟಮನಸಃ ಸರ್ವಾಃ ಸುಖಮಯಾ ದಿಶಃ ।
ಶರ್ಕರಾಕಂಟಕಾದಿಭ್ಯೋ ಯಥೋಪಾನತ್ಪದಃ ಶಿವಮ್ ॥ ೧೭ ॥

ಸಂತುಷ್ಟಃ ಕೇನ ವಾ ರಾಜನ್ನ ವರ್ತೇತಾಪಿ ವಾರಿಣಾ ।
ಔಪಸ್ಥ್ಯಜೈಹ್ವ್ಯಕಾರ್ಪಣ್ಯಾದ್ಗೃಹಪಾಲಾಯತೇ ಜನಃ ॥ ೧೮ ॥

ಅಸಂತುಷ್ಟಸ್ಯ ವಿಪ್ರಸ್ಯ ತೇಜೋ ವಿದ್ಯಾ ತಪೋ ಯಶಃ ।
ಸ್ರವಂತೀಂದ್ರಿಯಲೌಲ್ಯೇನ ಜ್ಞಾನಂ ಚೈವಾವಕೀರ್ಯತೇ ॥ ೧೯ ॥

ಕಾಮಸ್ಯಾಂತಂ ಚ ಕ್ಷುತ್ತೃಡ್ಭ್ಯಾಂ ಕ್ರೋಧಸ್ಯೈತತ್ಫಲೋದಯಾತ್ ।
ಜನೋ ಯಾತಿ ನ ಲೋಭಸ್ಯ ಜಿತ್ವಾ ಭುಕ್ತ್ವಾ ದಿಶೋ ಭುವಃ ॥ ೨೦ ॥

ಪಂಡಿತಾ ಬಹವೋ ರಾಜನ್ಬಹುಜ್ಞಾಃ ಸಂಶಯಚ್ಛಿದಃ ।
ಸದಸಸ್ಪತಯೋಽಪ್ಯೇಕೇ ಅಸಂತೋಷಾತ್ಪತಂತ್ಯಧಃ ॥ ೨೧ ॥

ಅಸಂಕಲ್ಪಾಜ್ಜಯೇತ್ಕಾಮಂ ಕ್ರೋಧಂ ಕಾಮವಿವರ್ಜನಾತ್ ।
ಅರ್ಥಾನರ್ಥೇಕ್ಷಯಾ ಲೋಭಂ ಭಯಂ ತತ್ತ್ವಾವಮರ್ಶನಾತ್ ॥ ೨೨ ॥

ಆನ್ವೀಕ್ಷಿಕ್ಯಾ ಶೋಕಮೋಹೌ ದಂಭಂ ಮಹದುಪಾಸಯಾ ।
ಯೋಗಾಂತರಾಯಾನ್ಮೌನೇನ ಹಿಂಸಾಂ ಕಾಯಾದ್ಯನೀಹಯಾ ॥ ೨೩ ॥

ಕೃಪಯಾ ಭೂತಜಂ ದುಃಖಂ ದೈವಂ ಜಹ್ಯಾತ್ಸಮಾಧಿನಾ ।
ಆತ್ಮಜಂ ಯೋಗವೀರ್ಯೇಣ ನಿದ್ರಾಂ ಸತ್ತ್ವನಿಷೇವಯಾ ॥ ೨೪ ॥

ರಜಸ್ತಮಶ್ಚ ಸತ್ತ್ವೇನ ಸತ್ತ್ವಂ ಚೋಪಶಮೇನ ಚ ।
ಏತತ್ಸರ್ವಂ ಗುರೌ ಭಕ್ತ್ಯಾ ಪುರುಷೋ ಹ್ಯಂಜಸಾ ಜಯೇತ್ ॥ ೨೫ ॥

ತನ್ನ ಆತ್ಮನಲ್ಲೇ ರಮಿಸುತ್ತಾ ಕರ್ಮರಹಿತನಾಗಿ ಸಂತುಷ್ಟನಾಗಿರುವ ಮನುಷ್ಯನಿಗೆ ಸಿಗುವ ಸುಖವು, ಕಾಮನೆಗಳಿಂದಲೂ, ಲೋಭದಿಂದಲೂ ಹಣಕ್ಕಾಗಿ ಹಂಬಲಿಸುತ್ತಾ ಅಲ್ಲಿ-ಇಲ್ಲಿ ಎಲ್ಲೆಡೆ ಅಲೆಯುತ್ತಿರುವ ಮನುಷ್ಯನಿಗೆ ಹೇಗೆ ತಾನೇ ಸಿಗಬಲ್ಲದು? ॥ ೧೬ ॥ ಕಾಲಿಗೆ ಎಕ್ಕಡಗಳನ್ನು ಧರಿಸಿಕೊಂಡು ನಡೆಯುವವನಿಗೆ ಕಲ್ಲು-ಮುಳ್ಳುಗಳ ಯಾವುದೇ ಭಯವು ಇರುವುದಿಲ್ಲ. ಅಂತೆಯೇ ಮನಸ್ಸಿನಲ್ಲಿ ಸಂತೋಷವಿರುವವನಿಗೆ ಎಂದೆಂದಿಗೂ ಮತ್ತು ಎಲ್ಲೆಡೆಗಳಲ್ಲಿಯೂ ಸುಖವೇ ಸುಖವಿದೆ; ದುಃಖವು ಇಲ್ಲವೇ ಇಲ್ಲ. ॥ ೧೭ ॥ ಯುಧಿಷ್ಠಿರನೇ! ಮನುಷ್ಯನು ಕೇವಲ ನೀರಿನಿಂದಲೇ ಸಂತುಷ್ಟನಾಗಿದ್ದು ತನ್ನ ಜೀವನ ನಿರ್ವಾಹ ಏಕೆ ಮಾಡಿಕೊಳ್ಳುವುದಿಲ್ಲವೋ ತಿಳಿಯದು. ಆದರೆ ರಸನೇಂದ್ರಿಯ ಮತ್ತು ಜನನೇಂದ್ರಿಯಗಳ ಆಸೆಗಳನ್ನು ತೀರಿಸುವ ಅಲ್ಪ ಸುಖಕ್ಕೆ ಒಳಗಾಗಿ ಮನೆಕಾಯುವ ನಾಯಿಯಂತೆ ಆಗುವನು. ॥ ೧೮ ॥ ಸಂತೋಷಿಯಲ್ಲದ ಬ್ರಾಹ್ಮಣನು ಇಂದ್ರಿಯಗಳ ಲೋಲುಪತೆಯಿಂದ ಅವನ ತೇಜ, ವಿದ್ಯೆ, ತಪಸ್ಸು, ಕೀರ್ತಿ ಇವುಗಳು ಕ್ಷೀಣಿಸಿಬಿಡುವುವು ಮತ್ತು ವಿವೇಕವನ್ನು ಕಳೆದುಕೊಳ್ಳುವನು. ॥ ೧೯ ॥ ಹಸಿವು, ಬಾಯಾರಿಕೆ ಇಂಗಿಹೋದ ಬಳಿಕ ತಿನ್ನುವ-ಕುಡಿಯುವ ಕಾಮನೆ ಮುಗಿದುಹೋಗುತ್ತದೆ. ಕ್ರೋಧವೂ ತನ್ನ ಕೆಲಸವನ್ನು ಪೂರ್ಣಗೊಳಿಸಿ ಶಾಂತವಾಗುವುದು. ಆದರೆ ಮನುಷ್ಯನು ಪೃಥಿವಿಯ ಎಲ್ಲ ದಿಕ್ಕುಗಳನ್ನು ಗೆದ್ದುಕೊಂಡು, ಭೋಗಿಸಿದರೂ ಅವನ ಲೋಭವು ಕೊನೆಗೊಳ್ಳುವುದಿಲ್ಲ. ॥ ೨೦ ॥ ಅನೇಕ ವಿಷಯಗಳನ್ನು ಬಲ್ಲವನಾಗಿ, ಸಂಶಯಗಳನ್ನು ಸಮಾಧಾನಪಡಿಸಿಕೊಂಡು ಮನಸ್ಸಿನಲ್ಲಿ ಶಾಸ್ತ್ರೋಕ್ತವಾದ ಅರ್ಥವನ್ನು ನಿಶ್ಚಯಿಸಿಕೊಂಡಿರುವವರು, ವಿದ್ವತ್ಸಭೆಗಳ ಅಧ್ಯಕ್ಷರಾದ ದೊಡ್ಡ-ದೊಡ್ಡ ವಿದ್ವಾಂಸರೂ ಕೂಡ ಅಸಂತೋಷದ ಕಾರಣ ಪತನಹೊಂದುವರು. ॥ ೨೧ ॥

ಧರ್ಮನಂದನಾ! ಸಂಕಲ್ಪಗಳ ಪರಿತ್ಯಾಗದಿಂದ ಕಾಮವನ್ನೂ, ಕಾಮನೆಗಳ ತ್ಯಾಗದಿಂದ ಕ್ರೋಧವನ್ನೂ, ಸಂಸಾರಿಗಳು ಹೇಳುವ 'ಅರ್ಥ'ವನ್ನು ಅನರ್ಥವೆಂದು ತಿಳಿದುಕೊಂಡು ಲೋಭವನ್ನೂ ಮತ್ತು ತತ್ತ್ವದ ವಿಚಾರದಿಂದ ಭಯವನ್ನೂ ಗೆದ್ದುಕೊಳ್ಳಬೇಕು. ॥ ೨೨ ॥ ಅಧ್ಯಾತ್ಮವಿದ್ಯೆಯಿಂದ ಶೋಕ-ಮೋಹಗಳನ್ನೂ, ಸಂತರ ಉಪಾಸನೆಯಿಂದ ದಂಭವನ್ನೂ, ಮೌನದಿಂದ ಯೋಗದ ವಿಘ್ನಗಳನ್ನೂ ಮತ್ತು ಶರೀರ-ಪ್ರಾಣ ಮುಂತಾದವುಗಳನ್ನು ನಿಶ್ಚೇಷ್ಟಗೊಳಿಸಿ ಹಿಂಸೆಯನ್ನು ಜಯಿಸಿಕೊಳ್ಳಬೇಕು. ॥ ೨೩ ॥ ಆಧಿಭೌತಿಕ ದುಃಖವನ್ನು ದಯೆಯ ಮೂಲಕ, ಆಧಿದೈವಿಕ ವೇದನೆಯನ್ನು ಸಮಾಧಿಯಿಂದ, ಆಧ್ಯಾತ್ಮಿಕ ದುಃಖವನ್ನು ಯೋಗಬಲದಿಂದ ಹಾಗೂ ನಿದ್ರೆಯನ್ನು ಸಾತ್ತ್ವಿಕ ಭೋಜನ, ಸ್ನಾನ, ಸಂಗ ಮುಂತಾದವುಗಳ ಸೇವನೆಯಿಂದ ಗೆದ್ದುಕೊಳ್ಳಬೇಕು. ॥ ೨೪ ॥ ಸತ್ತ್ವಗುಣದಿಂದ ರಜೋಗುಣ-ತಮೋಗುಣಗಳನ್ನು ಮತ್ತು ಉಪಶಾಂತಿಯ ಮೂಲಕ ಸತ್ತ್ವಗುಣದ ಮೇಲೆ ವಿಜಯವನ್ನು ಪಡೆಯಬೇಕು. ಶ್ರೀಗುರುಗಳಲ್ಲಿರುವ ಭಕ್ತಿಯಿಂದ ಸಾಧಕನು ಇವೆಲ್ಲ ದೋಷಗಳ ಮೇಲೆ ಸುಲಭವಾಗಿ ವಿಜಯವನ್ನು ಪಡೆಯಬಲ್ಲನು. ॥ ೨೫ ॥

ಯಸ್ಯ ಸಾಕ್ಷಾದ್ಭಗವತಿ ಜ್ಞಾನದೀಪಪ್ರದೇ ಗುರೌ ।
ಮರ್ತ್ಯಾಸದ್ಧೀಃ ಶ್ರುತಂ ತಸ್ಯ ಸರ್ವಂ ಕುಂಜರಶೌಚವತ್ ॥ ೨೬ ॥

ಏಷ ವೈ ಭಗವಾನ್ಸಾಕ್ಷಾತ್
ಪ್ರಧಾನಪುರುಷೇಶ್ವರಃ ।
ಯೋಗೇಶ್ವರೈರ್ವಿಮೃಗ್ಯಾಂಘ್ರಿ-
ರ್ಲೋಕೋ ಯಂ ಮನ್ಯತೇ ನರಮ್ ॥ ೨೭ ॥

ಷಡ್ವರ್ಗಸಂಯಮೈಕಾಂತಾಃ ಸರ್ವಾ ನಿಯಮಚೋದನಾಃ ।
ತದಂತಾ ಯದಿ ನೋ ಯೋಗಾನಾವಹೇಯುಃ ಶ್ರಮಾವಹಾಃ ॥ ೨೮ ॥

ಯಥಾ ವಾರ್ತಾದಯೋ ಹ್ಯರ್ಥಾ ಯೋಗಸ್ಯಾರ್ಥಂ ನ ಬಿಭ್ರತಿ ।
ಅನರ್ಥಾಯ ಭವೇಯುಸ್ತೇ ಪೂರ್ತಮಿಷ್ಟಂ ತಥಾಸತಃ ॥ ೨೯ ॥

ಯಶ್ಚಿತ್ತವಿಜಯೇ ಯತ್ತಃ ಸ್ಯಾನ್ನಿಃಸಂಗೋಽಪರಿಗ್ರಹಃ ।
ಏಕೋ ವಿವಿಕ್ತಶರಣೋ ಭಿಕ್ಷುರ್ಭಿಕ್ಷಾಮಿತಾಶನಃ ॥ ೩೦ ॥

ದೇಶೇ ಶುಚೌ ಸಮೇ ರಾಜನ್ಸಂಸ್ಥಾಪ್ಯಾಸನಮಾತ್ಮನಃ ।
ಸ್ಥಿರಂ ಸಮಂ ಸುಖಂ ತಸ್ಮಿನ್ನಾಸೀತರ್ಜ್ವಂಗಓಮಿತಿ ॥ ೩೧ ॥

ಪ್ರಾಣಾಪಾನೌ ಸನ್ನಿರುಂಧ್ಯಾತ್ಪೂರಕುಂಭಕರೇಚಕೈಃ ।
ಯಾವನ್ಮನಸ್ತ್ಯಜೇತ್ಕಾಮಾನ್ಸ್ವನಾಸಾಗ್ರನಿರೀಕ್ಷಣಃ ॥ ೩೨ ॥

ಯತೋ ಯತೋ ನಿಸರತಿ ಮನಃ ಕಾಮಹತಂ ಭ್ರಮತ್ ।
ತತಸ್ತತ ಉಪಾಹೃತ್ಯ ಹೃದಿ ರುಂಧ್ಯಾಚ್ಛನೈರ್ಬುಧಃ ॥ ೩೩ ॥

ಏವಮಭ್ಯಸತಶ್ಚಿತ್ತಂ ಕಾಲೇನಾಲ್ಪೀಯಸಾ ಯತೇಃ ।
ಅನಿಶಂ ತಸ್ಯ ನಿರ್ವಾಣಂ ಯಾತ್ಯನಿಂಧನವಹ್ನಿವತ್ ॥ ೩೪ ॥

ಕಾಮಾದಿಭಿರನಾವಿದ್ಧಂ ಪ್ರಶಾಂತಾಖಿಲವೃತ್ತಿ ಯತ್ ।
ಚಿತ್ತಂ ಬ್ರಹ್ಮಸುಖಸ್ಪೃಷ್ಟಂ ನೈವೋತ್ತಿಷ್ಠೇತ ಕರ್ಹಿಚಿತ್ ॥ ೩೫ ॥

ಹೃದಯದಲ್ಲಿ ಜ್ಞಾನದ ದೀಪವನ್ನು ಹಚ್ಚುವ ಗುರುದೇವನು ಸಾಕ್ಷಾತ್ ಭಗವಂತನೇ ಆಗಿರುವನು. ಅವರನ್ನು ಮನುಷ್ಯನೆಂದು ತಿಳಿಯುವ ದುರ್ಬುದ್ಧಿಯುಳ್ಳ ಮನುಷ್ಯನ ಸಮಸ್ತ ಶಾಸ್ತ್ರಶ್ರವಣವು ಗಜಸ್ನಾನದಂತೆ ವ್ಯರ್ಥವೇ ಆಗುವುದು. ॥ ೨೬ ॥ ದೊಡ್ಡ-ದೊಡ್ಡ ಯೋಗೇಶ್ವರರು ಯಾರ ಚರಣಕಮಲಗಳನ್ನು ಅನುಸಂಧಾನ ಮಾಡುವರೋ, ಪ್ರಕೃತಿ-ಪುರುಷರ ಅಧೀಶ್ವರನೋ ಅಂತಹ ಭಗವಂತನೇ ಗುರುದೇವರ ರೂಪದಲ್ಲಿ ಪ್ರಕಟನಾಗಿರುವನು. ಇವನನ್ನು ಜನರು ಭ್ರಮೆಯಿಂದ ಮನುಷ್ಯನೆಂದು ಭಾವಿಸುವರು. ॥ ೨೭ ॥

ಶಾಸ್ತ್ರಗಳಲ್ಲಿ ಎಷ್ಟು ನಿಯಮಸಂಬಂಧೀ ಆದೇಶಗಳಿವೆಯೋ ಅವುಗಳ ಏಕಮಾತ್ರ ತಾತ್ಪರ್ಯವು – ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರ – ಈ ಆರು ಶತ್ರುಗಳನ್ನು ಗೆದ್ದುಕೊಳ್ಳುವುದು ಅಥವಾ ಐದು ಇಂದ್ರಿಯಗಳು, ಒಂದು ಮನಸ್ಸು – ಹೀಗೆ ಆರನ್ನು ವಶಪಡಿಸಿಕೊಳ್ಳುವುದೇ ಆಗಿದೆ. ಹೀಗಾದ ಬಳಿಕವೂ ಆ ನಿಯಮಗಳ ಮೂಲಕ ಭಗವಂತನ ಧ್ಯಾನ-ಚಿಂತನೆಗಳು ಪ್ರಾಪ್ತವಾಗದಿದ್ದರೆ, ಅವುಗಳನ್ನು ಕೇವಲ ಶ್ರಮವೆಂದೇ ತಿಳಿಯಬೇಕು. ॥ ೨೮ ॥ ಕೃಷಿ, ವ್ಯಾಪಾರ ಮುಂತಾದವುಗಳು ಮತ್ತು ಅದರ ಫಲಗಳೂ ಕೂಡ ಯೋಗಸಾಧನೆಯ ಫಲವಾದ ಭಗವತ್ಪ್ರಾಪ್ತಿ ಅಥವಾ ಮುಕ್ತಿಯನ್ನು ಕೊಡಲಾರವೋ, ಅಂತೆಯೇ ದುಷ್ಟ ಮನುಷ್ಯನ ಶ್ರೌತ-ಸ್ಮಾರ್ತ ಕರ್ಮಗಳೂ ಕೂಡ ಶ್ರೇಯಸ್ಕರವಾಗುವುದಿಲ್ಲ, ಬದಲಿಗೆ ವಿರುದ್ಧ ಫಲವನ್ನೇ ಕೊಡುವುವು. ॥ ೨೯ ॥

ತನ್ನ ಮನಸ್ಸಿನ ಮೇಲೆ ವಿಜಯವನ್ನು ಪಡೆದುಕೊಳ್ಳಲಿಕ್ಕಾಗಿ ಹೊರಟಿರುವ ಮನುಷ್ಯನು ಆಸಕ್ತಿ ಮತ್ತು ಪರಿಗ್ರಹವನ್ನು ತ್ಯಜಿಸಿ ಸಂನ್ಯಾಸವನ್ನು ಸ್ವೀಕರಿಸಬೇಕು. ಏಕಾಂತದಲ್ಲಿ ಒಬ್ಬಂಟಿಗನಾಗಿ ಇದ್ದು, ಭಿಕ್ಷೆ ಎತ್ತಿ ಶರೀರನಿರ್ವಾಹ ಮಾತ್ರಕ್ಕೆ ಸ್ವಲ್ಪ ಮತ್ತು ಪರಿಮಿತ ಭೋಜನವನ್ನು ಸೇವಿಸಬೇಕು. ॥ ೩೦ ॥ ಯುಧಿಷ್ಠಿರನೇ ! ಶುಚಿಯಾಗಿ ಸಮತಟ್ಟಾಗಿರುವ ಭೂಮಿಯಲ್ಲಿ ತನ್ನ ಆಸನವನ್ನು ಹಾಸಿಕೊಂಡು, ಅದರ ಮೇಲೆ ನೇರವಾಗಿ, ಸ್ಥಿರವಾಗಿ, ಸಮವಾಗಿ , ಸುಖಕರವಾದ ಯೋಗಾಸನದಲ್ಲಿ ಕುಳಿತುಕೊಂಡು ಓಂಕಾರವನ್ನು ಜಪಿಸಬೇಕು. ॥ ೩೧ ॥ ಮನಸ್ಸು ಸಂಕಲ್ಪ-ವಿಕಲ್ಪಗಳನ್ನು ಬಿಟ್ಟುಬಿಡುವ ತನಕ ದೃಷ್ಟಿಯನ್ನು ನಾಸಿಕಾಗ್ರದಲ್ಲಿ ನೆಟ್ಟು ಪೂರಕ, ಕುಂಭಕ ಮತ್ತು ರೇಚಕದ ಮೂಲಕ ಪ್ರಾಣ ಹಾಗೂ ಅಪಾನದ ಗತಿಯನ್ನು ತಡೆಗಟ್ಟಬೇಕು. ॥ ೩೨ ॥ ಕಾಮದ ಆಘಾತದಿಂದ ಗಾಯಗೊಂಡ ಮನಸ್ಸು ಎಲ್ಲೆಲ್ಲಿ ಸುತ್ತಾಡುತ್ತಾ ಅಲೆಯುವುದೋ, ಅಲ್ಲಲ್ಲಿಂದ ಅದನ್ನು ಹಿಂದಿರುಗಿಸಿ ಮೆಲ್ಲ-ಮೆಲ್ಲನೆ ಹೃದಯದಲ್ಲಿ ನೆಲೆಗೊಳಿಸಬೇಕು. ॥ ೩೩ ॥ ಸಾಧಕನು ನಿರಂತರವಾಗಿ ಹೀಗೆ ಅಭ್ಯಾಸ ಮಾಡುವಾಗ ಕಟ್ಟಿಗೆ ಇಲ್ಲದೆ ಬೆಂಕಿಯು ಆರಿಹೋಗುವಂತೆಯೇ ಸ್ವಲ್ಪ ಸಮಯದಲ್ಲೇ ಅವನ ಚಿತ್ತವು ಶಾಂತವಾಗಿ ಹೋಗುತ್ತದೆ. ॥ ೩೪ ॥ ಹೀಗೆ ಕಾಮವಾಸನೆಗಳು ಏಟುಕೊಡುವುದನ್ನು ನಿಲ್ಲಿಸಿದಾಗ ಮತ್ತು ಸಮಸ್ತ ವೃತ್ತಿಗಳು ಅತ್ಯಂತ ಶಾಂತವಾಗಿ ಹೋದಾಗ ಚಿತ್ತವು ಬ್ರಹ್ಮಾನಂದದ ಸ್ಪರ್ಶದಲ್ಲಿ ಮುಳುಗಿಹೋಗುವುದು, ಮತ್ತೆ ಅದು ಎಂದಿಗೂ ಅಲ್ಲಿಂದ ಎದ್ದು ಬರುವುದಿಲ್ಲ. ॥ ೩೫ ॥

ಯಃ ಪ್ರವ್ರಜ್ಯ ಗೃಹಾತ್ಪೂರ್ವಂ ತ್ರಿವರ್ಗಾವಪನಾತ್ಪುನಃ ।
ಯದಿ ಸೇವೇತ ತಾನ್ಭಿಕ್ಷುಃ ಸ ವೈ ವಾಂತಾಶ್ಯಪತ್ರಪಃ ॥ ೩೬ ॥

ಯೈಃ ಸ್ವದೇಹಃ ಸ್ಮೃತೋ ನಾತ್ಮಾ ಮರ್ತ್ಯೋ ವಿಟ್ಕೃಮಿಭಸ್ಮಸಾತ್ ।
ತ ಏನಮಾತ್ಮಸಾತ್ಕೃತ್ವಾ ಶ್ಲಾಘಯಂತಿ ಹ್ಯಸತ್ತಮಾಃ ॥ ೩೭ ॥

ಗೃಹಸ್ಥಸ್ಯ ಕ್ರಿಯಾತ್ಯಾಗೋ ವ್ರತತ್ಯಾಗೋ ವಟೋರಪಿ ।
ತಪಸ್ವಿನೋ ಗ್ರಾಮಸೇವಾ ಭಿಕ್ಷೋರಿಂದ್ರಿಯಲೋಲತಾ ॥ ೩೮ ॥

ಆಶ್ರಮಾಪಸದಾ ಹ್ಯೇತೇ ಖಲ್ವಾಶ್ರಮವಿಡಂಬಕಾಃ ।
ದೇವಮಾಯಾವಿಮೂಢಾಂಸ್ತಾನುಪೇಕ್ಷೇತಾನುಕಂಪಯಾ ॥ ೩೯ ॥

ಆತ್ಮಾನಂ ಚೇದ್ವಿಜಾನೀಯಾತ್ಪರಂ ಜ್ಞಾನಧುತಾಶಯಃ ।
ಕಿಮಿಚ್ಛನ್ಕಸ್ಯ ವಾ ಹೇತೋರ್ದೇಹಂ ಪುಷ್ಣಾತಿ ಲಂಪಟಃ ॥ ೪೦ ॥

ಆಹುಃ ಶರೀರಂ ರಥಮಿಂದ್ರಿಯಾಣಿ
ಹಯಾನಭೀಷೂನ್ಮನ ಇಂದ್ರಿಯೇಶಮ್ ।
ವರ್ತ್ಮಾನಿ ಮಾತ್ರಾ ಧಿಷಣಾಂ ಚ ಸೂತಂ
ಸತ್ತ್ವಂ ಬೃಹದ್ಬಂಧುರಮೀಶಸೃಷ್ಟಮ್ ॥ ೪೧ ॥

ಅಕ್ಷಂ ದಶಪ್ರಾಣಮಧರ್ಮಧರ್ಮೌ
ಚಕ್ರೇಽಭಿಮಾನಂ ರಥಿನಂ ಚ ಜೀವಮ್ ।
ಧನುರ್ಹಿ ತಸ್ಯ ಪ್ರಣವಂ ಪಠಂತಿ
ಶರಂ ತು ಜೀವಂ ಪರಮೇವ ಲಕ್ಷ್ಯಮ್ ॥ ೪೨ ॥

ರಾಗೋ ದ್ವೇಷಶ್ಚ ಲೋಭಶ್ಚ
ಶೋಕಮೋಹೌ ಭಯಂ ಮದಃ ।
ಮಾನೋಽವಮಾನೋಽಸೂಯಾ ಚ
ಮಾಯಾ ಹಿಂಸಾ ಚ ಮತ್ಸರಃ ॥ ೪೩ ॥

ರಜಃ ಪ್ರಮಾದಃ ಕ್ಷುನ್ನಿದ್ರಾ ಶತ್ರವಸ್ತ್ವೇವಮಾದಯಃ ।
ರಜಸ್ತಮಃ ಪ್ರಕೃತಯಃ ಸತ್ತ್ವಪ್ರಕೃತಯಃ ಕ್ವಚಿತ್ ॥ ೪೪ ॥

ಯಾವ ಸಂನ್ಯಾಸಿಯು ಮೊದಲಿಗೆ ಧರ್ಮ, ಅರ್ಥ ಮತ್ತು ಕಾಮ ಇವುಗಳ ಮೂಲ ಕಾರಣವಾದ ಗೃಹಸ್ಥಾಶ್ರಮವನ್ನು ತ್ಯಜಿಸಿ, ಪುನಃ ಅದನ್ನೇ ಸೇವಿಸತೊಡಗಿದರೆ, ನಿರ್ಲಜ್ಜನಾದ ಅವನು ತಾನು ಉಗುಳಿದುದನ್ನೇ ತಿನ್ನುವ ನಾಯಿಯೇ ಆಗಿದ್ದಾನೆ. ॥ ೩೬ ॥ ಯಾರು ತನ್ನ ಶರೀರವನ್ನು ಅನಾತ್ಮಾ, ಮೃತ್ಯುಗ್ರಸ್ತ ಮತ್ತು ಮಲ, ಕ್ರಿಮಿಗಳು, ಬೂದಿ ಎಂದು ತಿಳಿದಿದ್ದನೋ, ಅದನ್ನು ಮತ್ತೆ ಆತ್ಮಾ ಎಂದು ತಿಳಿದು ಪ್ರಶಂಸೆ ಮಾಡತೊಡಗಿದರೆ ಅವನು ಮೂಢನೇ ಸರಿ. ॥ ೩೭ ॥ ಕರ್ಮತ್ಯಾಗಿಯಾದ ಗೃಹಸ್ಥನು, ವ್ರತತ್ಯಾಗಿಯಾದ ಬ್ರಹ್ಮಚಾರಿ, ಊರಿನಲ್ಲಿ ವಾಸಿಸುವ ತಪಸ್ವೀ (ವಾನಪ್ರಸ್ಥ) ಮತ್ತು ಇಂದ್ರಿಯಲೋಲುಪನಾದ ಸಂನ್ಯಾಸಿ ಇವರು ನಾಲ್ವರೂ ಆಶ್ರಮಗಳಿಗೆ ಕಲಂಕಪ್ರಾಯರಾಗಿದ್ದಾರೆ. ವ್ಯರ್ಥವಾಗಿಯೇ ಆಶ್ರಮಗಳ ವೇಷವನ್ನು ಧರಿಸಿದವರು. ಭಗವಂತನ ಮಾಯೆಯಿಂದ ಮೋಹಿತರಾದ ಆ ಮೂಢರಲ್ಲಿ ಕನಿಕರಗೊಂಡು ಅವರ ವಿಷಯದಲ್ಲಿ ಉದಾಸೀನನಾಗಿರಬೇಕು. ॥ ೩೮-೩೯ ॥ ಆತ್ಮಜ್ಞಾನದಿಂದ ಎಲ್ಲ ವಾಸನೆಗಳನ್ನು ನಿರ್ಮೂಲನಗೊಳಿಸಿಕೊಂಡು ಪರಮಾತ್ಮ ಸಾಕ್ಷಾತ್ಕಾರರೂಪದ ಅನುಭವವನ್ನು ಪಡೆದ ಯಾವನೂ ಇಂದ್ರಿಯ ಲಂಪಟನಾಗುವುದಿಲ್ಲ. ಆತನು ಯಾವ ವಿಷಯದ ಬಯಕೆಯಿಂದ ಮತ್ತು ಯಾವ ಭೋಕ್ತೃವಿನ ತೃಪ್ತಿಗಾಗಿ ಇಂದ್ರಿಯ ಲಂಪಟನಾಗಿ ತನ್ನ ಶರೀರವನ್ನು ಪೋಷಿಸಿಯಾನು ? ॥ ೪೦ ॥

ಪರಮಾತ್ಮನ ಸಿದ್ಧಿಗಾಗಿ ಮಾಡುವ ಸಾಧನೆಯಲ್ಲಿ ಈ ಶರೀರವೇ ರಥವು-ಇಂದ್ರಿಯಗಳೇ ಕುದುರೆಗಳು, ಇಂದ್ರಿಯಗಳ ಒಡೆಯ ಮನಸ್ಸು ಲಗಾಮು. ಶಬ್ದಾದಿ ವಿಷಯಗಳೇ ಮಾರ್ಗವು. ಬುದ್ಧಿಯೇ ಸಾರಥಿ, ಚಿತ್ತವೇ ಭಗವಂತನಿಂದ ನಿರ್ಮಿತವಾದ ಕಟ್ಟುವ ವಿಶಾಲ ವಾದ ಹಗ್ಗ, ಹತ್ತು ಪ್ರಾಣಗಳೇ ಅಚ್ಚುಮರ. ಧರ್ಮ-ಅಧರ್ಮ ಗಳೇ ಚಕ್ರಗಳು. ಇದರ ಅಭಿಮಾನೀ ಜೀವನೇ ರಥಿಯೆಂದು ಹೇಳ ಲಾಗಿದೆ. ಓಂಕಾರವೇ ಆ ರಥಿಯ ಧನುಸ್ಸು, ಶುದ್ಧ ಜೀವಾತ್ಮನೇ ಬಾಣ ಮತ್ತು ಪರಮಾತ್ಮನೇ ಗುರಿಯಾಗಿದೆ ಎಂದು ಉಪನಿಷತ್ತು ಗಳು ಹೇಳುತ್ತವೆ. (ಈ ಓಂಕಾರದ ಮೂಲಕ ಅಂತರಾತ್ಮನನ್ನು ಪರ ಮಾತ್ಮನಲ್ಲಿ ಲೀನಗೊಳಿಸಬೇಕು.) ॥ ೪೧-೪೨ ॥ ರಾಗ, ದ್ವೇಷ, ಲೋಭ, ಶೋಕ, ಮೋಹ, ಭಯ, ಮದ, ಮಾನ, ಅವಮಾನ, ಬೇರೆಯವರ ಗುಣಗಳಲ್ಲಿ ದೋಷ ನೋಡುವುದು ಛಲ, ಹಿಂಸೆ, ಇತರರ ಉನ್ನತಿಯನ್ನು ಕಂಡು ಹೊಟ್ಟೆಯುರಿ, ತೃಷ್ಣೆ ಪ್ರಮಾದ, ಹಸಿವು, ನಿದ್ದೆ – ಇವೆಲ್ಲವೂ ಜೀವಿಯ ಶತ್ರುಗಳು. ಇವುಗಳಲ್ಲದೆ ಇನ್ನೂ ಅನೇಕ ಶತ್ರುಗಳು ಅವನಿಗಿವೆ. ಅವುಗಳಲ್ಲಿ ರಜೋಗುಣ, ತಮೋಗುಣವೃತ್ತಿಗಳೇ ಹೆಚ್ಚಾಗಿವೆ. ಕೆಲ-ಕೆಲವು ಸತ್ತ್ವಗುಣ ಪ್ರಧಾನವೂ ಆಗಿರುತ್ತವೆ. ॥ ೪೩-೪೪ ॥ ಈ ಮನುಷ್ಯಶರೀರವೆಂಬ ರಥವು ತನ್ನ ವಶದಲ್ಲಿದ್ದು, ಇಂದ್ರಿಯ, ಮನಸ್ಸು – ಮುಂತಾದ ಎಲ್ಲ ಸಾಧನೆಗಳು ಚೆನ್ನಾಗಿರುವಷ್ಟರೊಳಗೆ ಶ್ರೀಗುರುದೇವರ ಚರಣ ಕಮಲಗಳ ಸೇವೆ-ಪೂಜೆಗಳಿಂದ ಹರಿತವಾಗಿ ಮಾಡಲ್ಪಟ್ಟ ಜ್ಞಾನ ವೆಂಬ ತೀಕ್ಷ್ಣವಾದ ಖಡ್ಗವನ್ನು ಎತ್ತಿಕೊಂಡು ಶ್ರೀಭಗವಂತನ ಬಲ ದಿಂದ ಈ ಎಲ್ಲ ಶತ್ರುಗಳನ್ನು ನಾಶಪಡಿಸಿ, ತನ್ನ ಸ್ವಾರಾಜ್ಯವೆಂಬ ಸಿಂಹಾಸನದಲ್ಲಿ

ಯಾವನ್ನೃಕಾಯರಥಮಾತ್ಮವಶೋಪಕಲ್ಪಂ
ಧತ್ತೇ ಗರಿಷ್ಠಚರಣಾರ್ಚನಯಾ ನಿಶಾತಮ್ ।
ಜ್ಞಾನಾಸಿಮಚ್ಯುತಬಲೋ ದಧದಸ್ತಶತ್ರುಃ
ಸ್ವಾನಂದತುಷ್ಟ ಉಪಶಾಂತ ಇದಂ ವಿಜಹ್ಯಾತ್ ॥ ೪೫ ॥

ನೋ ಚೇತ್ಪ್ರಮತ್ತಮಸದಿಂದ್ರಿಯವಾಹಸೂತಾ
ನೀತ್ವೋತ್ಪಥಂ ವಿಷಯದಸ್ಯುಷು ನಿಕ್ಷಿಪಂತಿ ।
ತೇ ದಸ್ಯವಃ ಸಹಯಸೂತಮಮುಂ ತಮೋಽಂಧೇ
ಸಂಸಾರಕೂಪ ಉರುಮೃತ್ಯುಭಯೇ ಕ್ಷಿಪಂತಿ ॥ ೪೬ ॥

ಪ್ರವೃತ್ತಂ ಚ ನಿವೃತ್ತಂ ಚ ದ್ವಿವಿಧಂ ಕರ್ಮ ವೈದಿಕಮ್ ।
ಆವರ್ತೇತ ಪ್ರವೃತ್ತೇನ ನಿವೃತ್ತೇನಾಶ್ನುತೇಽಮೃತಮ್ ॥ ೪೭ ॥

ಹಿಂಸ್ರಂ ದ್ರವ್ಯಮಯಂ ಕಾಮ್ಯಮಗ್ನಿಹೋತ್ರಾದ್ಯಶಾಂತಿದಮ್ ।
ದರ್ಶಶ್ಚ ಪೂರ್ಣಮಾಸಶ್ಚ ಚಾತುರ್ಮಾಸ್ಯಂ ಪಶುಃ ಸುತಃ ॥ ೪೮ ॥

ಏತದಿಷ್ಟಂ ಪ್ರವೃತ್ತಾಖ್ಯಂ ಹುತಂ ಪ್ರಹುತಮೇವ ಚ ।
ಪೂರ್ತಂ ಸುರಾಲಯಾರಾಮಕೂಪಾಜೀವ್ಯಾದಿಲಕ್ಷಣಮ್ ॥ ೪೯ ॥

ದ್ರವ್ಯಸೂಕ್ಷ್ಮವಿಪಾಕಶ್ಚ ಧೂಮೋ ರಾತ್ರಿರಪಕ್ಷಯಃ ।
ಅಯನಂ ದಕ್ಷಿಣಂ ಸೋಮೋ ದರ್ಶ ಓಷಧಿವೀರುಧಃ ॥ ೫೦ ॥

ಅನ್ನಂ ರೇತ ಇತಿ ಕ್ಷ್ಮೇಶ ಪಿತೃಯಾನಂ ಪುನರ್ಭವಃ ।
ಏಕೈಕಶ್ಯೇನಾನುಪೂರ್ವಂ ಭೂತ್ವಾ ಭೂತ್ವೇಹ ಜಾಯತೇ ॥ ೫೧ ॥

ನಿಷೇಕಾದಿಶ್ಮಶಾನಾಂತೈಃ ಸಂಸ್ಕಾರೈಃ ಸಂಸ್ಕೃತೋ ದ್ವಿಜಃ ।
ಇಂದ್ರಿಯೇಷು ಕ್ರಿಯಾಯಜ್ಞಾನ್ ಜ್ಞಾನದೀಪೇಷು ಜುಹ್ವತಿ ॥ ೫೨ ॥

ವಿರಾಜಮಾನನಾಗಬೇಕು. ಮತ್ತೆ ಪುನಃ ಅತ್ಯಂತ ಶಾಂತಭಾವದಿಂದ ಈ ಶರೀರವನ್ನು ಪರಿತ್ಯಾಗಮಾಡ ಬೇಕು. ॥ ೪೫ ॥ ಇಲ್ಲದಿದ್ದರೆ ಸ್ವಲ್ಪವೇ ಪ್ರಮಾದ ಉಂಟಾದರೂ ಈ ಇಂದ್ರಿಯಗಳೆಂಬ ದುಷ್ಟ ಕುದುರೆಗಳು ಮತ್ತು ಅವುಗಳೊಂದಿಗೆ ಮಿತ್ರತೆಯುಳ್ಳ ಬುದ್ಧಿ ರೂಪೀ ಸಾರಥಿಯು ರಥದ ಒಡೆಯ ಜೀವನನ್ನು ವಿರುದ್ಧವಾದ ದಾರಿಯಲ್ಲಿ ಕೊಂಡೊಯ್ದು ವಿಷಯ ರೂಪೀ ದರೋಡೆಗಾರರ ಕೈಗೊಪ್ಪಿಸುವರು. ಆ ಕಳ್ಳರು ಸಾರಥಿ ಮತ್ತು ಕುದುರೆಗಳೊಂದಿಗೆ ಈ ಜೀವನನ್ನು ಮೃತ್ಯುವಿಗಿಂತಲೂ ಅತ್ಯಂತ ಭಯಂಕರವಾದ ಸಂಸಾರವೆಂಬ ಕತ್ತಲೆಯ ಬಾವಿಯೊಳಗೆ ತಳ್ಳಿಬಿಡುವರು. ॥ ೪೬ ॥

ವೈದಿಕ ಕರ್ಮಗಳಲ್ಲಿ ಎರಡು ವಿಧಗಳಿವೆ. ಒಂದು ಪ್ರವೃತ್ತಿಪರ ವಾದುದು. ಇದು ವೃತ್ತಿಗಳನ್ನು ಅವುಗಳ ವಿಷಯಗಳ ಕಡೆಗೆ ಕೊಂಡೊಯ್ಯುವುದು. ಇನ್ನೊಂದು ನಿವೃತ್ತಿಪರವಾದುದು ಇದು ವೃತ್ತಿಗಳನ್ನು ಅವುಗಳ ವಿಷಯಗಳಿಂದ ಹಿಂದಿರುಗಿಸಿ ಶಾಂತ ಹಾಗೂ ಆತ್ಮಸಾಕ್ಷಾತ್ಕಾರಕ್ಕೆ ಯೋಗ್ಯವಾಗಿಸುತ್ತದೆ. ಪ್ರವೃತ್ತಿಪರ ಕರ್ಮಮಾರ್ಗದಿಂದ ಮತ್ತೆ-ಮತ್ತೆ ಹುಟ್ಟು-ಸಾವುಗಳು ಒದಗು ತ್ತವೆ ಮತ್ತು ನಿವೃತ್ತಿಪರ ಭಕ್ತಿಮಾರ್ಗ ಅಥವಾ ಜ್ಞಾನಮಾರ್ಗದಿಂದ ಪರಮಾತ್ಮನ ಪ್ರಾಪ್ತಿಯುಂಟಾಗುತ್ತದೆ. ॥ ೪೭ ॥ ಶ್ಯೇನಯಾಗಾದಿ ಹಿಂಸಾಮಯ ಕರ್ಮ, ಅಗ್ನಿಹೋತ್ರ, ದರ್ಶ, ಪೂರ್ಣಮಾಸ, ಚಾತುರ್ಮಾಸ್ಯ, ಪಶುಯಾಗ, ಸೋಮಯಾಗ, ವೈಶ್ವದೇವ, ಬಲಿಹರಣ ಮುಂತಾದ ದ್ರವ್ಯಮಯ ಕರ್ಮಗಳನ್ನು 'ಇಷ್ಟ'ವೆಂದು ಹೇಳುತ್ತಾರೆ. ದೇವಾಲಯ, ಹೂದೋಟ, ಕೆರೆ- ಕಟ್ಟೆ ಮುಂತಾದವು ಗಳನ್ನು ನಿರ್ಮಿಸುವುದು, ಅರವಟ್ಟಿಗೆ ಇರಿಸುವುದು ಮುಂತಾದವು ಗಳು 'ಪೂರ್ತ' ಕರ್ಮಗಳಾಗಿವೆ. ಇವೆಲ್ಲವೂ ಪ್ರವೃತ್ತಿಪರವಾದ ಕರ್ಮಗಳಾಗಿವೆ. ಸಕಾಮಭಾವದಿಂದ ಇವುಗಳನ್ನು ಆಚರಿಸಿದರೆ ಇವು ಅಶಾಂತಿಗೆ ಕಾರಣವಾಗುತ್ತವೆ. ॥ ೪೮-೪೯ ॥ ಪ್ರವೃತ್ತಿ ಪರಾಯಣನಾದ ಮನುಷ್ಯನು ಸತ್ತಮೇಲೆ ಚರು-ಪುರೋಡಾಶ ಮುಂತಾದ ಯಜ್ಞಸಂಬಂಧೀ ದ್ರವ್ಯಗಳ ಸೂಕ್ಷ್ಮವಾದ ಭಾಗದಿಂದ ಉಂಟಾದ ಶರೀರವನ್ನು ಧರಿಸಿ ಧೂಮಾಭಿಮಾನಿದೇವತೆಗಳ ಬಳಿಗೆ ಹೋಗುತ್ತಾನೆ. ಮತ್ತೆ ಕ್ರಮವಾಗಿ ರಾತ್ರಿ, ಕೃಷ್ಣಪಕ್ಷ, ದಕ್ಷಿಣಾ ಯನ – ಇವುಗಳ ಅಭಿಮಾನಿದೇವತೆಗಳ ಬಳಿಗೆ ಹೋಗಿ ಚಂದ್ರ ಲೋಕಕ್ಕೆ ತಲುಪುತ್ತಾನೆ. ಅಲ್ಲಿಯ ಭೋಗಗಳು ಮುಗಿದಾಗ ಅಮಾ ವಾಸ್ಯೆಯ ಚಂದ್ರನಂತೆ ಕ್ಷೀಣನಾಗಿ ಮಳೆಯ ಮೂಲಕ ಕ್ರಮವಾಗಿ ಓಷಧಿ, ಲತೆಗಳು, ಅನ್ನ ಮತ್ತು ವೀರ್ಯರೂಪದಲ್ಲಿ ಪರಿಣಾಮ ಹೊಂದಿ ಪಿತೃಯಾನದಿಂದ ಪುನಃ ಸಂಸಾರದಲ್ಲಿ ಹುಟ್ಟುವನು. ॥ ೫೦-೫೧ ॥ ಯುಧಿಷ್ಠಿರನೇ! ಗರ್ಭಾಧಾನದಿಂದ ಹಿಡಿದು ಅಂತ್ಯೇಷ್ಟಿವರೆಗೆ ಎಲ್ಲ ಸಂಸ್ಕಾರಗಳು ಯಾರಿಗೆ ಆಗುತ್ತವೋ ಅವನಿಗೆ 'ದ್ವಿಜ' ಎಂದು ಹೇಳುತ್ತಾರೆ. ಅವರಲ್ಲಿ ಕೆಲವರು ಹಿಂದೆ ಹೇಳಿದ ಪ್ರವೃತ್ತಿಮಾರ್ಗವನ್ನು ಅನುಷ್ಠಾನಮಾಡಿದರೆ, ಕೆಲವರು ಮುಂದೆ ಹೇಳಲಿರುವ ನಿವೃತ್ತಿಮಾರ್ಗವನ್ನು ಅನುಸರಿಸುತ್ತಾರೆ. ನಿವೃತ್ತಿ ಪರಾಯಣ ಮನುಷ್ಯನು ಇಷ್ಟ-ಪೂರ್ತ ಮುಂತಾದ ಕರ್ಮ ಗಳಿಂದ ಉಂಟಾಗುವ ಸಮಸ್ತ ಯಜ್ಞಗಳನ್ನು ವಿಷಯಗಳ ಜ್ಞಾನ ಮಾಡಿಸುವ ಇಂದ್ರಿಯಗಳಲ್ಲಿ ಹವನ ಮಾಡುತ್ತಾನೆ. ॥ ೫೨ ॥

ಇಂದ್ರಿಯಾಣಿ ಮನಸ್ಯೂರ್ಮೌ ವಾಚಿ ವೈಕಾರಿಕಂ ಮನಃ ।
ವಾಚಂ ವರ್ಣಸಮಾಮ್ನಾಯೇ ತಮೋಂಕಾರೇ ಸ್ವರೇ ನ್ಯಸೇತ್ ।
ಓಂಕಾರಂ ಬಿಂದೌ ನಾದೇ ತಂ ತಂ ತು ಪ್ರಾಣೇ ಮಹತ್ಯಮುಮ್ ॥ ೫೩ ॥

ಅಗ್ನಿಃ ಸೂರ್ಯೋ ದಿವಾ ಪ್ರಾಹ್ಣಃ
ಶುಕ್ಲೋ ರಾಕೋತ್ತರಂ ಸ್ವರಾಟ್ ।
ವಿಶ್ವೋಽಥ ತೈಜಸಃ ಪ್ರಾಜ್ಞ-
ಸ್ತುರ್ಯ ಆತ್ಮಾ ಸಮನ್ವಯಾತ್ ॥ ೫೪ ॥

ದೇವಯಾನಮಿದಂ ಪ್ರಾಹುರ್ಭೂತ್ವಾ ಭೂತ್ವಾನುಪೂರ್ವಶಃ ।
ಆತ್ಮಯಾಜ್ಯುಪಶಾಂತಾತ್ಮಾ ಹ್ಯಾತ್ಮಸ್ಥೋ ನ ನಿವರ್ತತೇ ॥ ೫೫ ॥

ಯ ಏತೇ ಪಿತೃದೇವಾನಾಮಯನೇ ವೇದನಿರ್ಮಿತೇ ।
ಶಾಸ್ತ್ರೇಣ ಚಕ್ಷುಷಾ ವೇದ ಜನಸ್ಥೋಽಪಿ ನ ಮುಹ್ಯತಿ ॥ ೫೬ ॥

ಆದಾವಂತೇ ಜನಾನಾಂ ಸದ್-
ಬಹಿರಂತಃ ಪರಾವರಮ್ ।
ಜ್ಞಾನಂ ಜ್ಞೇಯಂ ವಚೋ ವಾಚ್ಯಂ
ತಮೋ ಜ್ಯೋತಿಸ್ತ್ವಯಂ ಸ್ವಯಮ್ ॥ ೫೭ ॥

ಆಬಾಧಿತೋಽಪಿ ಹ್ಯಾಭಾಸೋ ಯಥಾ ವಸ್ತುತಯಾ ಸ್ಮೃತಃ ।
ದುರ್ಘಟತ್ವಾದೈಂದ್ರಿಯಕಂ ತದ್ವದರ್ಥವಿಕಲ್ಪಿತಮ್ ॥ ೫೮ ॥

ಇಂದ್ರಿಯಗಳನ್ನು ದರ್ಶನಾದಿ ಸಂಕಲ್ಪರೂಪೀ ಮನಸ್ಸಿನಲ್ಲಿ, ವೈಕಾರಿಕ ಮನಸ್ಸನ್ನು ಪರಾವಾಣಿಯಲ್ಲೂ ಮತ್ತು ಪರಾವಾಣಿಯನ್ನು ವರ್ಣಸಮುದಾಯದಲ್ಲಿ, ವರ್ಣಸಮುದಾಯವನ್ನು 'ಅ-ಉ-ಮ್' ಈ ಮೂರು ಸ್ವರಗಳ ರೂಪದಲ್ಲಿರುವ ಓಂಕಾರದಲ್ಲಿ, ಓಂಕಾರವನ್ನು ಬಿಂದುವಿನಲ್ಲಿ ಬಿಂದುವನ್ನು ನಾದದಲ್ಲಿ ನಾದವನ್ನು ಸೂತ್ರಾತ್ಮ ಪ್ರಾಣದಲ್ಲಿ ಹಾಗೂ ಪ್ರಾಣವನ್ನು ಬ್ರಹ್ಮನಲ್ಲಿ ಲೀನಗೊಳಿಸುತ್ತಾನೆ. ॥ ೫೩ ॥ ಆ ನಿವೃತ್ತಿನಿಷ್ಠ ಜ್ಞಾನಿಯು ಕ್ರಮವಾಗಿ ಅಗ್ನಿ, ಸೂರ್ಯ, ಹಗಲು, ಸಾಯಂಕಾಲ, ಶುಕ್ಲಪಕ್ಷ, ಪೌರ್ಣಮಿ ಮತ್ತು ಉತ್ತರಾಯಣದ ಅಭಿಮಾನಿದೇವತೆಗಳ ಬಳಿಗೆ ಹೋಗಿ ಬ್ರಹ್ಮಲೋಕಕ್ಕೆ ತಲುಪುತ್ತಾನೆ. ಅಲ್ಲಿಯ ಭೋಗಗಳು ಮುಗಿದಾಗ ಅವನು ಸ್ಥೂಲೋಪಾಧಿಕ 'ವಿಶ್ವ' ವೆಂಬ ತನ್ನ ಸ್ಥೂಲ ಉಪಾಧಿಯನ್ನು ಸೂಕ್ಷ್ಮದಲ್ಲಿ ಲೀನಗೊಳಿಸಿ, ಸೂಕ್ಷ್ಮೋಪಾಧಿಕ 'ತೈಜಸ'ನಾಗುತ್ತಾನೆ. ಮತ್ತೆ ಸೂಕ್ಷ್ಮ ಉಪಾಧಿಯನ್ನು ಕಾರಣದಲ್ಲಿ ಲಯಗೊಳಿಸಿ, ಕಾರಣೋಪಾಧಿಕ 'ಪ್ರಾಜ್ಞ' ರೂಪದಿಂದ ಸ್ಥಿತನಾಗುತ್ತಾನೆ. ಮತ್ತೆ ಎಲ್ಲರ ಸಾಕ್ಷಿರೂಪದಿಂದ ಸರ್ವತ್ರ ತುಂಬಿಹೋದ ಕಾರಣ ಸಾಕ್ಷಿಯ ಸ್ವರೂಪದಲ್ಲೇ ಕಾರಣೋಪಾಧಿಯನ್ನು ಲಯಗೊಳಿಸಿ ತುರೀಯ ರೂಪದಲ್ಲಿ ಸ್ಥಿತನಾಗುತ್ತಾನೆ. ಹೀಗೆ ದೃಶ್ಯಗಳು ಲಯವಾಗಿ ಹೋದಮೇಲೆ ಅವನು ಶುದ್ಧ ಆತ್ಮನಾಗಿ ಉಳಿಯುವನು. ಇದೇ ಮೋಕ್ಷಪದವಾಗಿದೆ. ॥ ೫೪ ॥ ಇದನ್ನು ದೇವಯಾನ ಮಾರ್ಗವೆಂದು ಹೇಳುತ್ತಾರೆ. ಈ ಮಾರ್ಗದಿಂದ ಹೋಗುವವರು ಆತ್ಮೋಪಾಸಕ ಸಂಸಾರದಿಂದ ನಿವೃತ್ತರಾಗಿ ಕ್ರಮವಾಗಿ ಒಬ್ಬರಿಂದ ಮತ್ತೊಬ್ಬ ದೇವತೆಯ ಬಳಿಗೆ ಹೋಗುತ್ತಾ , ಬ್ರಹ್ಮಲೋಕಕ್ಕೆ ಹೋಗಿ ನೆಲೆಗೊಳ್ಳುವನು. ಅವನು ಪ್ರವೃತ್ತಿಮಾರ್ಗಿಯಂತೆ ಮತ್ತೆ ಹುಟ್ಟು-ಸಾವುಗಳ ಚಕ್ರದಲ್ಲಿ ಬೀಳುವುದಿಲ್ಲ. ॥ ೫೫ ॥

ಈ ಪಿತೃಯಾನ ಮತ್ತು ದೇವಯಾನ ಮಾರ್ಗಗಳೆರಡೂ ವೇದೋಕ್ತವೇ ಆಗಿವೆ. ಶಾಸ್ತ್ರೀಯ ದೃಷ್ಟಿಯಿಂದ ಇವನ್ನು ತತ್ತ್ವತಃ ಅರಿತುಕೊಳ್ಳುವವನು ಶರೀರದಲ್ಲೇ ಸ್ಥಿತನಾಗಿದ್ದರೂ ಮೋಹಿತನಾಗುವುದಿಲ್ಲ. ॥ ೫೬ ॥ ಶರೀರಗಳು ಹುಟ್ಟುವ ಮೊದಲೂ ಕೂಡ ಕಾರಣರೂಪದಿಂದ ಮತ್ತು ಅವುಗಳು ಅಂತ್ಯವಾದ ಬಳಿಕವೂ ಅವುಗಳ ಅವಧಿರೂಪದಿಂದ ಯಾವುದು ಸ್ವಯಂ ಇರುತ್ತದೋ, ಯಾವುದು ಭೋಗರೂಪದಿಂದ ಹೊರಗೆ ಮತ್ತು ಭೋಕ್ತಾರೂಪದಿಂದ ಒಳಗಡೆ ಹಾಗೂ ಉಚ್ಚ-ನೀಚ, ತಿಳಿಯುವುದು-ತಿಳಿಯುವ ವಿಷಯ, ವಾಣಿ-ವಾಣಿಯ ವಿಷಯ, ಅಂಧಕಾರ-ಪ್ರಕಾಶ ಮುಂತಾದ ವಸ್ತುಗಳ ರೂಪದಲ್ಲಿ ಏನೆಲ್ಲ ದೊರೆಯುತ್ತದೋ ಅವೆಲ್ಲ ಸ್ವಯಂ ಪರಮಾತ್ಮನೇ ಆಗಿದ್ದಾನೆ. ॥ ೫೭ ॥ ಕನ್ನಡಿಯೇ ಮುಂತಾದವುಗಳಲ್ಲಿ ಕಾಣುವ ಪ್ರತಿಬಿಂಬವು ವಿಚಾರ ಮತ್ತು ಯುಕ್ತಿಯಿಂದ ಬಾಧಿತವಾಗುತ್ತದೆ. ಅದರಲ್ಲಿ ಅವರ ಅಸ್ತಿತ್ವವೇ ಇಲ್ಲ. ಆದರೂ ಅದು ವಸ್ತುವಿನ ರೂಪದಲ್ಲಿ ಕಂಡು ಬರುತ್ತದೆ. ಹಾಗೆಯೇ ಇಂದ್ರಿಯಗಳ ಮೂಲಕ ಕಂಡುಬರುವ ವಸ್ತುಗಳ ಭೇದ-ಭಾವಗಳೂ ವಿಚಾರ, ಯುಕ್ತಿ ಮತ್ತು ಆತ್ಮಾನುಭವದಿಂದ ಅಸಂಭವವಾಗಿರುವ ಕಾರಣ ವಾಸ್ತವವಾಗಿ ಇಲ್ಲದಿದ್ದರೂ ಸತ್ಯದಂತೆ ಕಂಡುಬರುತ್ತದೆ. ॥ ೫೮ ॥

ಕ್ಷಿತ್ಯಾದೀನಾಮಿಹಾರ್ಥಾನಾಂ ಛಾಯಾ ನ ಕತಮಾಪಿ ಹಿ ।
ನ ಸಂಘಾತೋ ವಿಕಾರೋಽಪಿ ನ ಪೃಥಙ್ನಾನ್ವಿತೋ ಮೃಷಾ ॥ ೫೯ ॥

ಪೃಥಿವಿಯೇ ಮುಂತಾದ ಪಂಚಭೂತಗಳಿಂದ ಈ ಶರೀರದ ನಿರ್ಮಾಣವಾಗಲಿಲ್ಲ. ವಾಸ್ತವಿಕ ದೃಷ್ಟಿಯಿಂದ ನೋಡಿದರೆ ಅದು ಈ ಪಂಚಭೂತಗಳ ಸಮುದಾಯವೂ ಅಲ್ಲ ಮತ್ತು ವಿಕಾರ ಅಥವಾ ಪರಿಣಾಮವೂ ಅಲ್ಲ. ಏಕೆಂದರೆ, ಇದು ತನ್ನ ಅವಯವಗಳಿಂದ ಬೇರೆಯಾಗಿಲ್ಲ ಮತ್ತು ಅವುಗಳಲ್ಲಿ ಸೇರಿಕೊಂಡೂ ಇಲ್ಲ. ಆದ್ದರಿಂದ ಮಿಥ್ಯೆಯಾಗಿದೆ. ॥ ೫೯ ॥ ಹೀಗೆಯೇ ಶರೀರದ ಕಾರಣರೂಪೀ ಪಂಚಭೂತಗಳೂ ಕೂಡ ಅವಯವಿಯಾದ್ದರಿಂದ ತನ್ನ ಅವಯವಗಳಿಂದ – ಸೂಕ್ಷ್ಮ ಭೂತಗಳಿಂದ ಭಿನ್ನವಾಗಿಲ್ಲ, ಅವಯವರೂಪವೇ ಆಗಿವೆ. ಎಷ್ಟೇ ಹುಡುಕಿದರೂ ಅವಯವಗಳಲ್ಲದೆ ಅವಯವಿಯ ಅಸ್ತಿತ್ವವು ದೊರೆಯುವುದಿಲ್ಲ. ಅದು ಅಸತ್ತೆಂದೇ ಸಿದ್ಧವಾಗುತ್ತದೆ. ಆಗ ಈ ಅವಯವಗಳೂ ಅಸತ್ಯವೆಂದು ತಾನಾಗಿಯೇ ಸಿದ್ಧವಾಗುತ್ತದೆ. ॥ ೬೦ ॥

ಧಾತವೋಽವಯವಿತ್ವಾಚ್ಚ ತನ್ಮಾತ್ರಾವಯವೈರ್ವಿನಾ ।
ನ ಸ್ಯುರ್ಹ್ಯಸತ್ಯವಯವಿನ್ಯಸನ್ನವಯವೋಽಂತತಃ ॥ ೬೦ ॥

ಸ್ಯಾತ್ಸಾದೃಶ್ಯಭ್ರಮಸ್ತಾವದ್ ವಿಕಲ್ಪೇ ಸತಿ ವಸ್ತುನಃ ।
ಜಾಗ್ರತ್ಸ್ವಾಪೌ ಯಥಾ ಸ್ವಪ್ನೇ ತಥಾ ವಿಧಿನಿಷೇಧತಾ ॥ ೬೧ ॥

ಅಜ್ಞಾನದ ಕಾರಣ ಒಂದೇ ಪರಮತತ್ತ್ವದಲ್ಲಿ ಅನೇಕ ವಸ್ತುಗಳ ಭೇದಗಳು ಕಂಡುಬರುತ್ತಾ ಇರುವ ತನಕ ಯಾವ ವಸ್ತುವು ಮೊದಲಿಗೆ ಇತ್ತೋ ಅದು ಈಗಲೂ ಇದೆ ಎಂಬ ಭ್ರಮೆಯೂ ಇರಬಲ್ಲದು ಮತ್ತು ಸ್ವಪ್ನದಲ್ಲಿಯೂ ಹೇಗೆ ಜಾಗ್ರತ್, ಸ್ವಪ್ನ ಮುಂತಾದ ಅವಸ್ಥೆಗಳ ಬೇರೆ-ಬೇರೆ ಅನುಭವಗಳು ಆಗಿಯೇ ಆಗುತ್ತದೆ ಹಾಗೂ ಅವುಗಳಲ್ಲಿಯೂ ವಿಧಿನಿಷೇಧದ ಶಾಸ್ತ್ರ ಇರುತ್ತದೆ – ಹಾಗೆಯೇ ಈ ಭಿನ್ನತೆಗಳ ಅಸ್ತಿತ್ವದ ಮೋಹ ಇರುವ ತನಕ ಇಲ್ಲಿಯೂ ವಿಧಿನಿಷೇಧದ ಶಾಸ್ತ್ರವು ಇದ್ದೇ ಇರುತ್ತದೆ. ॥ ೬೧ ॥

ಭಾವಾದ್ವೈತಂ ಕ್ರಿಯಾದ್ವೈತಂ ದ್ರವ್ಯಾದ್ವೈತಂ ತಥಾಽಽತ್ಮನಃ ।
ವರ್ತಯನ್ಸ್ವಾನುಭೂತ್ಯೇಹ ತ್ರೀನ್ಸ್ವಪ್ನಾನ್ಧುನುತೇ ಮುನಿಃ ॥ ೬೨ ॥

ಯಾವ ವಿಚಾರಶೀಲನಾದ ಮನುಷ್ಯನು ಸ್ವಾನುಭೂತಿಯಿಂದ ಆತ್ಮನ ತ್ರಿವಿಧ ಅದ್ವೈತಗಳ ಸಾಕ್ಷಾತ್ಕಾರ ಮಾಡಿಕೊಳ್ಳುತ್ತಾನೋ – ಅದು ಜಾಗ್ರತ್, ಸ್ವಪ್ನ, ಸುಷುಪ್ತಿ ಮತ್ತು ದ್ರಷ್ಟಾ, ದರ್ಶನ ಮತ್ತು ದೃಶ್ಯದ ಭೇದರೂಪೀ ಸ್ವಪ್ನವನ್ನು ಕೊಡೆದುಹಾಕುತ್ತದೆ. ಭಾವಾದ್ವೈತ, ಕ್ರಿಯಾದ್ವೈತ ಮತ್ತು ದ್ರವ್ಯಾದ್ವೈತ – ಎಂಬ ಮೂರು ಪ್ರಕಾರದ ಅದ್ವೈತಗಳಿವೆ. ॥ ೬೨ ॥ ವಸ್ತ್ರವು ಸೂತ್ರರೂಪವೇ ಆಗಿರುವಂತೆಯೇ ಕಾರ್ಯವು ಕಾರಣಮಾತ್ರವೇ ಆಗಿದೆ. ಏಕೆಂದರೆ, ಭೇದವಾದರೋ ವಾಸ್ತವವಾಗಿ ಇಲ್ಲವೇ ಇಲ್ಲ. ಹೀಗೆ ಎಲ್ಲದರ ಏಕತೆಯ ವಿಚಾರವೇ 'ಭಾವಾದ್ವೈತ'ವಾಗಿದೆ. ॥ ೬೩ ॥ ಯುಧಿಷ್ಠಿರನೇ! ಮನಸ್ಸು, ಮಾತು ಮತ್ತು ಶರೀರಗಳಿಂದಾಗುವ ಎಲ್ಲ ಕರ್ಮಗಳು ಸ್ವಯಂ ಪರಬ್ರಹ್ಮ ಪರಮಾತ್ಮನಲ್ಲೇ ಆಗುತ್ತಾ ಇವೆ. ಅದರಲ್ಲೇ ಅಧ್ಯಸ್ತವಾಗಿದೆ – ಈ ಭಾವದಿಂದ ಸಮಸ್ತ ಕರ್ಮಗಳನ್ನು ಸಮರ್ಪಿಸುವುದು 'ಕ್ರಿಯಾದ್ವೈತ'ವಾಗಿದೆ. ॥ ೬೪ ॥ ಪತ್ನೀ-ಪುತ್ರಾದಿ ನೆಂಟರಿಷ್ಟರು ಹಾಗೂ ಪ್ರಪಂಚದ ಬೇರೆ ಸಮಸ್ತ ಪ್ರಾಣಿಗಳ ಹಾಗೂ ತನ್ನ ಸ್ವಾರ್ಥ ಮತ್ತು ಭೋಗಗಳು ಒಂದೇ ಆಗಿವೆ. ಅವುಗಳಲ್ಲಿ ತನ್ನದು ಹಾಗೂ ಪರರದು ಎಂಬ ಭೇದವೇ ಇಲ್ಲ – ಈ ವಿಧದ ವಿಚಾರ 'ದ್ರವ್ಯಾದ್ವೈತ'ವಾಗಿದೆ. ॥ ೬೫ ॥

ಕಾರ್ಯಕಾರಣವಸ್ತ್ವೈಕ್ಯಮರ್ಶನಂ ಪಟತಂತುವತ್ ।
ಅವಸ್ತುತ್ವಾದ್ವಿಕಲ್ಪಸ್ಯ ಭಾವಾದ್ವೈತಂ ತದುಚ್ಯತೇ ॥ ೬೩ ॥

ಯದ್ಬ್ರಹ್ಮಣಿ ಪರೇ ಸಾಕ್ಷಾತ್ಸರ್ವಕರ್ಮಸಮರ್ಪಣಮ್ ।
ಮನೋವಾಕ್ತನುಭಿಃ ಪಾರ್ಥ ಕ್ರಿಯಾದ್ವೈತಂ ತದುಚ್ಯತೇ ॥ ೬೪ ॥

ಆತ್ಮಜಾಯಾಸುತಾದೀನಾಮನ್ಯೇಷಾಂ ಸರ್ವದೇಹಿನಾಮ್ ।
ಯತ್ಸ್ವಾರ್ಥಕಾಮಯೋರೈಕ್ಯಂ ದ್ರವ್ಯಾದ್ವೈತಂ ತದುಚ್ಯತೇ ॥ ೬೫ ॥

ಯದ್ಯಸ್ಯ ವಾನಿಷಿದ್ಧಂ ಸ್ಯಾದ್ಯೇನ ಯತ್ರ ಯತೋ ನೃಪ ।
ಸ ತೇನೇಹೇತ ಕರ್ಮಾಣಿ ನರೋ ನಾನ್ಯೈರನಾಪದಿ ॥ ೬೬ ॥

ಯುಧಿಷ್ಠಿರನೇ! ಯಾವ ಮನುಷ್ಯನಿಗೆ ಯಾವ ದ್ರವ್ಯವನ್ನು ಯಾವ ಸಮಯದಲ್ಲಿ ಯಾವ ಉಪಾಯದಿಂದ ಯಾರಿಂದ ಸ್ವೀಕರಿಸುವುದು ಶಾಸ್ತ್ರದ ಆಜ್ಞೆಗೆ ವಿರುದ್ಧವಲ್ಲವೋ ಅವನು ಅದರಿಂದಲೇ ಎಲ್ಲ ಕಾರ್ಯಗಳನ್ನು ನೆರವೇರಿಸಿಕೊಳ್ಳಬೇಕು. ಆಪತ್ಕಾಲವನ್ನು ಬಿಟ್ಟು ಇದರಿಂದ ಬೇರೆಯದನ್ನು ಮಾಡಬಾರದು. ॥ ೬೬ ॥

ಏತೈರನ್ಯೈಶ್ಚ ವೇದೋಕ್ತೈರ್ವರ್ತಮಾನಃ ಸ್ವಕರ್ಮಭಿಃ ।
ಗೃಹೇऽಪ್ಯಸ್ಯ ಗತಿಂ ಯಾಯಾದ್ರಾಜಂಸ್ತದ್ಭಕ್ತಿಭಾಙ್ನರಃ ॥ ೬೭ ॥

ಯಥಾ ಹಿ ಯೂಯಂ ನೃಪದೇವ ದುಸ್ತ್ಯಜಾ-
ದಾಪದ್ಗಣಾದುತ್ತರತಾತ್ಮನಃ ಪ್ರಭೋಃ ।
ಯತ್ಪಾದಪಂಕೇರುಹಸೇವಯಾ ಭವಾ-
ನಹಾರ್ಷೀನ್ನಿರ್ಜಿತದಿಗ್ಗಜಃ ಕ್ರತೂನ್ ॥ ೬೮ ॥

ಅಹಂ ಪುರಾಭವಂ ಕಶ್ಚಿದ್ಗಂಧರ್ವ ಉಪಬರ್ಹಣಃ ।
ನಾಮ್ನಾತೀತೇ ಮಹಾಕಲ್ಪೇ ಗಂಧರ್ವಾಣಾಂ ಸುಸಮ್ಮತಃ ॥ ೬೯ ॥

ರೂಪಪೇಶಲಮಾಧುರ್ಯಸೌಗಂಧ್ಯಪ್ರಿಯದರ್ಶನಃ ।
ಸ್ತ್ರೀಣಾಂ ಪ್ರಿಯತಮೋ ನಿತ್ಯಂ ಮತ್ತಸ್ತು ಪುರಲಂಪಟಃ ॥ ೭೦ ॥

ಏಕದಾ ದೇವಸತ್ರೇ ತು ಗಂಧರ್ವಾಪ್ಸರಸಾಂ ಗಣಾಃ ।
ಉಪಹೂತಾ ವಿಶ್ವಸೃಗ್ಭಿರ್ಹರಿಗಾಥೋಪಗಾಯನೇ ॥ ೭೦ ॥

ಅಹಂ ಚ ಗಾಯಂಸ್ತದ್ವಿದ್ವಾನ್ ಸ್ತ್ರೀಭಿಃ ಪರಿವೃತೋ ಗತಃ ।
ಜ್ಞಾತ್ವಾ ವಿಶ್ವಸೃಜಸ್ತನ್ಮೇ ಹೇಲನಂ ಶೇಪುರೋಜಸಾ ।
ಯಾಹಿ ತ್ವಂ ಶೂದ್ರತಾಮಾಶು ನಷ್ಟಶ್ರೀಃ ಕೃತಹೇಲನಃ ॥ ೭೨ ॥

ತಾವದ್ದಾಸ್ಯಾಮಹಂ ಜಜ್ಞೇ ತತ್ರಾಪಿ ಬ್ರಹ್ಮವಾದಿನಾಮ್ ।
ಶುಶ್ರೂಷಯಾನುಷಂಗೇಣ ಪ್ರಾಪ್ತೋऽಹಂ ಬ್ರಹ್ಮಪುತ್ರತಾಮ್ ॥ ೭೩ ॥

ಧರ್ಮಸ್ತೇ ಗೃಹಮೇಧೀಯೋ ವರ್ಣಿತಃ ಪಾಪನಾಶನಃ ।
ಗೃಹಸ್ಥೋ ಯೇನ ಪದವೀಮಂಜಸಾ ನ್ಯಾಸಿನಾಮಿಯಾತ್ ॥ ೭೪ ॥

ಮಹಾರಾಜಾ! ಭಗವದ್ಭಕ್ತ ಮನುಷ್ಯನು ವೇದದಲ್ಲಿ ಹೇಳಲ್ಪಟ್ಟ ಈ ಕರ್ಮಗಳನ್ನು ಹಾಗೂ ಬೇರೆ-ಬೇರೆ ಸ್ವಕರ್ಮಗಳನ್ನು ಅನುಷ್ಠಾನ ಮಾಡುತ್ತಾ ಮನೆಯಲ್ಲಿ ಇದ್ದರೂ ಕೂಡ ಶ್ರೀಕೃಷ್ಣನ ಗತಿಯನ್ನು ಪಡೆದುಕೊಳ್ಳುವನು. ॥ ೬೭ ॥ ಯುಧಿಷ್ಠಿರನೇ! ನೀನು ನಿನ್ನ ಸ್ವಾಮಿಯಾದ ಭಗವಾನ್ ಶ್ರೀಕೃಷ್ಣನ ಕೃಪೆ ಮತ್ತು ಸಹಾಯದಿಂದ ದೊಡ್ಡ-ದೊಡ್ಡ ಕಠಿಣ ವಿಪತ್ತುಗಳನ್ನೂ ದಾಟಿಹೋಗಿರುವೆ ಮತ್ತು ಅವನ ಚರಣಕಮಲಗಳ ಸೇವೆಯಿಂದ ಸಮಸ್ತ ಭೂಮಂಡಲವನ್ನು ಗೆದ್ದು ನೀನು ದೊಡ್ಡ ದೊಡ್ಡ ರಾಜಸೂಯವೇ ಮುಂತಾದ ಯಜ್ಞಗಳನ್ನು ಮಾಡಿರುವೆ. ॥ ೬೮ ॥

ಹಿಂದಿನ ಜನ್ಮದಲ್ಲಿ ಇದಕ್ಕೆ ಮೊದಲಿನ ಕಲ್ಪದಲ್ಲಿ ನಾನು ಓರ್ವ ಗಂಧರ್ವನಾಗಿದ್ದೆ. ನನ್ನ ಹೆಸರು 'ಉಪಬರ್ಹಣ' ಎಂದಿತ್ತು ಮತ್ತು ಗಂಧರ್ವರಲ್ಲಿ ನನಗೆ ತುಂಬಾ ಸಮ್ಮಾನವಿತ್ತು. ॥ ೬೯ ॥ ನಾನು ಅಪೂರ್ವವಾದ ಸೌಂದರ್ಯ, ಸೌಕುಮಾರ್ಯ ಮತ್ತು ಮಾಧುರ್ಯಗಳಿಂದ ಸಂಪನ್ನನಾಗಿದ್ದೆನು. ನನ್ನ ಶರೀರದಿಂದ ಸುಗಂಧವು ಸೂಸುತ್ತಿತ್ತು ಮತ್ತು ನೋಡಲು ನಾನು ತುಂಬಾ ಸುಂದರನಾಗಿದ್ದೆ. ಸ್ತ್ರೀಯರು ನನ್ನಲ್ಲಿ ಬಹಳ ಪ್ರೇಮವಿಟ್ಟಿದ್ದರು ಮತ್ತು ನಾನೂ ಸದಾಕಾಲ ಪ್ರಮಾದದಲ್ಲೇ ಇರುತ್ತಿದ್ದು ಅತ್ಯಂತ ವಿಲಾಸಿಯಾಗಿದ್ದೆ. ॥ ೭೦ ॥ ಒಮ್ಮೆ ದೇವತೆಗಳು ಒಂದು ಜ್ಞಾನ ಸತ್ರವನ್ನು ಆಚರಿಸಿದರು. ದೊಡ್ಡ-ದೊಡ್ಡ ಪ್ರಜಾಪತಿಗಳು ಅಲ್ಲಿಗೆ ಬಂದಿದ್ದರು. ಭಗವಂತನ ಲೀಲೆಯನ್ನು ಹಾಡುವುದಕ್ಕಾಗಿ ಗಂಧರ್ವರನ್ನೂ ಅಪ್ಸರೆಯರನ್ನೂ ಕರೆಸಿದರು. ॥ ೭೧ ॥ ಅದು ಸಂತರ ಸಭೆ ಮತ್ತು ಅಲ್ಲಿ ಭಗವಂತನ ಲೀಲೆಗಳೇ ಹಾಡಲ್ಪಡುತ್ತವೆ ಎಂದು ನಾನು ತಿಳಿದಿದ್ದೆ. ಆದರೂ ನಾನು ಸ್ತ್ರೀಯರೊಂದಿಗೆ ಲೌಕಿಕ ಗೀತೆಗಳನ್ನು ಹಾಡುತ್ತಾ ಉನ್ಮತ್ತನಂತೆ ಅಲ್ಲಿಗೆ ತಲುಪಿದೆ. ಇವನಾದರೋ ನಮ್ಮುಗಳ ಅನಾದರವನ್ನು ಮಾಡುತ್ತಿದ್ದಾನೆ ಎಂದು ದೇವತೆಗಳು ನೋಡಿದರು. ಅವರು ತಮ್ಮ ಶಕ್ತಿಯಿಂದ – ನೀನು ನಮ್ಮನ್ನು ಅವಹೇಳನ ಮಾಡಿರುವೆ. ಆದರಿಂದ ನಿನ್ನ ಎಲ್ಲ ಸೌಂದರ್ಯ ಸಂಪತ್ತು ನಾಶವಾಗಿ, ನೀನು ಬೇಗನೇ ಶೂದ್ರನಾಗು ಎಂದು ಶಾಪವನ್ನು ಕೊಟ್ಟರು. ॥ ೭೨ ॥ ಅವರ ಶಾಪದಿಂದ ನಾನು ದಾಸೀಪುತ್ರನಾಗಿ ಹುಟ್ಟಿದೆ. ಆದರೆ ಆ ಶೂದ್ರಜೀವನದಲ್ಲಿ ಮಾಡಿದ ಮಹಾತ್ಮರ ಸತ್ಸಂಗ ಮತ್ತು ಸೇವೆ-ಶುಶ್ರೂಷೆಯ ಪ್ರಭಾವದಿಂದ ನಾನು ಮರುಜನ್ಮದಲ್ಲಿ ಬ್ರಹ್ಮದೇವರ ಪುತ್ರನಾದೆ. ॥ ೭೩ ॥ ಸಂತರ ಅವಹೇಳನ ಮತ್ತು ಸೇವೆಯ ಪ್ರತ್ಯಕ್ಷವಾದ ನನ್ನ ಅನುಭವವಾಗಿದೆ ಇದು. ಸಂತರ ಸೇವೆಯಿಂದಲೇ ಭಗವಂತನು ಪ್ರಸನ್ನನಾಗುತ್ತಾನೆ. ನಾನು ನಿನಗೆ ಗೃಹಸ್ಥರ ಪಾಪನಾಶಕ ಧರ್ಮವನ್ನು ಹೇಳಿದೆ. ಈ ಧರ್ಮದ ಆಚರಣೆಯಿಂದ ಗೃಹಸ್ಥರೂ ಕೂಡ ಆಯಾಸವಿಲ್ಲದೆ ಸಂನ್ಯಾಸಿಗಳಿಗೆ ಸಿಗುವಂತಹ ಪರಮಪದವನ್ನು ಪಡೆದುಕೊಳ್ಳುವರು. ॥ ೭೪ ॥

ಯುಧಿಷ್ಠಿರನೇ! ಈ ಮನುಷ್ಯಲೋಕದಲ್ಲಿ ನೀವೇ ಅತ್ಯಂತ ಭಾಗ್ಯಶಾಲಿಗಳು. ಏಕೆಂದರೆ, ನಿಮ್ಮ ಮನೆಯಲ್ಲಿ ಸಾಕ್ಷಾತ್ ಪರಬ್ರಹ್ಮ ಪರಮಾತ್ಮನು ಮನುಷ್ಯರೂಪವನ್ನು ಧರಿಸಿ ಗುಪ್ತರೂಪದಿಂದ ವಾಸಿಸುತ್ತಿರುವನು. ಇದರಿಂದ ಇಡೀ ಜಗತ್ತನ್ನು ಪವಿತ್ರ

ಯೂಯಂ ನೃಲೋಕೇ ಬತ ಭೂರಿಭಾಗಾ
ಲೋಕಂ ಪುನಾನಾ ಮುನಯೋಽಭಿಯಂತಿ ।
ಯೇಷಾಂ ಗೃಹಾನಾವಸತೀತಿ ಸಾಕ್ಷಾ-
ದ್ಗೂಢಂ ಪರಂ ಬ್ರಹ್ಮ ಮನುಷ್ಯಲಿಂಗಮ್ ॥ ೭೫ ॥

ಸ ವಾ ಅಯಂ ಬ್ರಹ್ಮ ಮಹದ್ವಿಮೃಗ್ಯಂ
ಕೈವಲ್ಯ ನಿರ್ವಾಣಸುಖಾನುಭೂತಿಃ ।
ಪ್ರಿಯಃ ಸುಹೃದ್ವಃ ಖಲು ಮಾತುಲೇಯ
ಆತ್ಮಾರ್ಹಣೀಯೋ ವಿಧಿಕೃದ್ಗುರುಶ್ಚ ॥ ೭೬ ॥

ನ ಯಸ್ಯ ಸಾಕ್ಷಾದ್ಭವಪದ್ಮಜಾದಿಭೀ
ರೂಪಂ ಧಿಯಾ ವಸ್ತುತಯೋಪವರ್ಣಿತಮ್ ।
ಮೌನೇನ ಭಕ್ತ್ಯೋಪಶಮೇನ ಪೂಜಿತಃ
ಪ್ರಸೀದತಾಮೇಷ ಸ ಸಾತ್ವತಾಂ ಪತಿಃ ॥ ೭೭ ॥

ಶ್ರೀಶುಕ ಉವಾಚ

ಇತಿ ದೇವರ್ಷಿಣಾ ಪ್ರೋಕ್ತಂ ನಿಶಮ್ಯ ಭರತರ್ಷಭಃ ।
ಪೂಜಯಾಮಾಸ ಸುಪ್ರೀತಃ ಕೃಷ್ಣಂ ಚ ಪ್ರೇಮವಿಹ್ವಲಃ ॥ ೭೮ ॥

ಕೃಷ್ಣಪಾರ್ಥಾವುಪಾಮಂತ್ರ್ಯ ಪೂಜಿತಃ ಪ್ರಯಯೌ ಮುನಿಃ ।
ಶ್ರುತ್ವಾ ಕೃಷ್ಣಂ ಪರಂ ಬ್ರಹ್ಮ ಪಾರ್ಥಃ ಪರಮವಿಸ್ಮಿತಃ ॥ ೭೯ ॥

ಇತಿ ದಾಕ್ಷಾಯಣೀನಾಂ ತೇ ಪೃಥಗ್ವಂಶಾಃ ಪ್ರಕೀರ್ತಿತಾಃ ।
ದೇವಾಸುರಮನುಷ್ಯಾದ್ಯಾ ಲೋಕಾ ಯತ್ರ ಚರಾಚರಾಃ ॥ ೮೦ ॥

ವಾಗಿರುವ ಋಷಿ-ಮುನಿಗಳು ಮತ್ತೆ-ಮತ್ತೆ ಅವನ ದರ್ಶನ ಪಡೆಯಲು ನಾಲ್ಕೂ ಕಡೆಗಳಿಂದ ನಿಮ್ಮ ಬಳಿಗೆ ಬರುತ್ತಾ ಇರುತ್ತಾರೆ. ॥ ೭೫ ॥ ದೊಡ್ಡ-ದೊಡ್ಡ ಮಹಾಪುರುಷರು ನಿರಂತರವಾಗಿ ಯಾರನ್ನು ಹುಡುಕುತ್ತಾ ಇರುತ್ತಾರೋ, ಯಾರು ಮಾಯಾಲೇಶದಿಂದ ರಹಿತನಾಗಿ ಪರಮಶಾಂತ ಪರಮಾನಂದಾನುಭವಸ್ವರೂಪ ಪರಬ್ರಹ್ಮ ಪರಮಾತ್ಮನಾಗಿದ್ದಾನೋ ಅವನೇ ನಿಮ್ಮ ಹಿತೈಷಿಯೂ, ಪ್ರಿಯನೂ, ಸೋದರತ್ತೆಯ ಮಗನೂ, ಪೂಜ್ಯನೂ, ಆಜ್ಞಾಕಾರಿಯೂ, ಗುರುವೂ ಮತ್ತು ಸ್ವಯಂ ಆತ್ಮಾ ಶ್ರೀಕೃಷ್ಣನಾಗಿದ್ದಾನೆ. ॥ ೭೬ ॥ ರುದ್ರದೇವರು, ಬ್ರಹ್ಮದೇವರು ಮುಂತಾದ ವರೂ ಕೂಡ ತಮ್ಮ ಬುದ್ಧಿಯಿಂದ 'ಅವನು ಹೀಗೆಯೇ ಇದ್ದಾನೆ' ಈ ರೂಪದಿಂದ ಅವನನ್ನು ವರ್ಣಿಸಲಾರದೆ ಹೋದರು. ಹಾಗಿರುವಾಗ ನಾವು ಹೇಗೆ ವರ್ಣಿಸಬಲ್ಲೆವು? ನಾವಾದರೋ ಮೌನ, ಭಕ್ತಿ ಮತ್ತು ಸಂಯಮದ ಮೂಲಕವೇ ಅವನ ಪೂಜೆಯನ್ನು ಮಾಡುತ್ತೇವೆ. ಕೃಪೆಗೈದು ನಮ್ಮ ಈ ಪೂಜೆಯನ್ನು ಸ್ವೀಕರಿಸಿ ಭಕ್ತವತ್ಸಲ ಭಗವಂತನು ನಮ್ಮ ಮೇಲೆ ಕೃಪೆದೋರಲಿ. ॥ ೭೭ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ! ದೇವರ್ಷಿ ನಾರದರ ಈ ಪ್ರವಚನವನ್ನು ಕೇಳಿ ರಾಜಾ ಯುಧಿಷ್ಠಿರನಿಗೆ ಅತ್ಯಂತ ಆನಂದವಾಯಿತು. ಅವನು ಪ್ರೇಮವಿಹ್ವಲನಾಗಿ ದೇವರ್ಷಿ ನಾರದರನ್ನು ಮತ್ತು ಭಗವಾನ್ ಶ್ರೀಕೃಷ್ಣನನ್ನು ಪೂಜಿಸಿದನು. ॥ ೭೮ ॥ ದೇವರ್ಷಿ ನಾರದರು ಭಗವಾನ್ ಕೃಷ್ಣನಿಂದ ಮತ್ತು ಯುಧಿಷ್ಠಿರನಿಂದ ಬೀಳ್ಕೊಂಡು, ಅವನಿಂದ ಸತ್ಕಾರಪಡೆದು ಹೊರಟುಹೋದರು. ಭಗವಾನ್ ಶ್ರೀಕೃಷ್ಣನೇ ಪರಬ್ರಹ್ಮನಾಗಿದ್ದಾನೆ ಎಂದು ಕೇಳಿ ಯುಧಿಷ್ಠಿರನಿಗೆ ಪರಮಾಶ್ಚರ್ಯವಾಯಿತು. ॥ ೭೯ ॥ ಪರೀಕ್ಷಿತನೇ! ಹೀಗೆ ನಾನು ನಿನಗೆ ದಕ್ಷಪುತ್ರಿಯರ ವಂಶಗಳ ಬೇರೆ- ಬೇರೆಯಾಗಿ ವರ್ಣನೆ ಮಾಡಿದೆನು. ಅವರ ವಂಶದಲ್ಲೇ ದೇವತೆಗಳು ಅಸುರರು, ಮನುಷ್ಯರೇ ಮುಂತಾದವರು ಮತ್ತು ಸಮಸ್ತ ಚರಾಚರದ ಸೃಷ್ಟಿಯಾಯಿತು. ॥ ೮೦ ॥

ಹದಿನೈದನೆಯ ಅಧ್ಯಾಯವು ಮುಗಿಯಿತು. ॥ ೧೫ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಸಪ್ತಮಸ್ಕಂಧೇ
ಪ್ರಹ್ಲಾದಾನುಚರಿತೇ ಯುಧಿಷ್ಠಿರ-ನಾರದಸಂವಾದೇ ಸದಾಚಾರನಿರ್ಣಯೋ ನಾಮ ಪಂಚದಶೋಽಧ್ಯಾಯಃ ॥ ೧೫ ॥

ಏಳನೆಯ ಸ್ಕಂಧವು ಸಂಪೂರ್ಣವಾಯಿತು.

॥ ಓಂ ನಮೋ ಭಗವತೇ ವಾಸುದೇವಾಯ ॥

ಶ್ರೀಮದ್ಭಾಗವತಮಹಾಪುರಾಣಮ್

ಅಷ್ಟಮಃ ಸ್ಕಂಧಃ

ಮೊದಲನೆಯ ಅಧ್ಯಾಯ

ಮನ್ವಂತರಗಳ ವರ್ಣನೆ

ರಾಜೋವಾಚ

ಸ್ವಾಯಂಭುವಸ್ಯೇಹ ಗುರೋ ವಂಶೋಽಯಂ ವಿಸ್ತರಾಚ್ಛ್ರುತಃ ।
ಯತ್ರ ವಿಶ್ವಸೃಜಾಂ ಸರ್ಗೋ ಮನೂನನ್ಯಾನ್ವದಸ್ವ ನಃ
॥ ೧ ॥

ಯತ್ರ ಯತ್ರ ಹರೇರ್ಜನ್ಮ ಕರ್ಮಾಣಿ ಚ ಮಹೀಯಸಃ ।
ಗೃಣಂತಿ ಕವಯೋ ಬ್ರಹ್ಮಂಸ್ತಾನಿ ನೋ ವದ ಶೃಣ್ವತಾಮ್
॥ ೨ ॥

ಯದ್ಯಸ್ಮಿನ್ನಂತರೇ ಬ್ರಹ್ಮನ್ಭಗವಾನ್ವಿಶ್ವಭಾವನಃ ।
ಕೃತವಾನ್ಕುರುತೇ ಕರ್ತಾ ಹ್ಯತೀತೇಽನಾಗತೇಽದ್ಯ ವಾ
॥ ೩ ॥

ಋಷಿರುವಾಚ

ಮನವೋಽಸ್ಮಿನ್ವ್ಯತೀತಾಃ ಷಟ್ಕಲ್ಪೇ ಸ್ವಾಯಂಭುವಾದಯಃ ।
ಆದ್ಯಸ್ತೇ ಕಥಿತೋ ಯತ್ರ ದೇವಾದೀನಾಂ ಚ ಸಂಭವಃ
॥ ೪ ॥

ಆಕೂತ್ಯಾಂ ದೇವಹೂತ್ಯಾಂ ಚ ದುಹಿತ್ರೋಸ್ತಸ್ಯ ವೈ ಮನೋಃ ।
ಧರ್ಮಜ್ಞಾನೋಪದೇಶಾರ್ಥಂ ಭಗವಾನ್ಪುತ್ರತಾಂ ಗತಃ
॥ ೫ ॥

ಕೃತಂ ಪುರಾ ಭಗವತಃ ಕಪಿಲಸ್ಯಾನುವರ್ಣಿತಮ್ ।
ಆಖ್ಯಾಸ್ಯೇ ಭಗವಾನ್ಯಜ್ಞೋ ಯಚ್ಚಕಾರ ಕುರೂದ್ವಹ
॥ ೬ ॥

ವಿರಕ್ತಃ ಕಾಮಭೋಗೇಷು ಶತರೂಪಾಪತಿಃ ಪ್ರಭುಃ ।
ವಿಸೃಜ್ಯ ರಾಜ್ಯಂ ತಪಸೇ ಸಭಾರ್ಯೋ ವನಮಾವಿಶತ್
॥ ೭ ॥

ಪರೀಕ್ಷಿದ್ರಾಜನು ಕೇಳಿದನು – ಗುರುದೇವರೇ! ತಮ್ಮ ಈ ಕಥಾ-ಕೀರ್ತನೆಯಲ್ಲಿ ಸ್ವಾಯಂಭುವ ಮನುವಿನ ವಂಶವಿಸ್ತಾರವನ್ನು ನಾನು ಕೇಳಿದೆ. ಇದೇ ವಂಶದಲ್ಲಿ ಅವನ ಪುತ್ರಿಯರಿಂದ ಮರೀಚಿಯೇ ಮುಂತಾದ ಪ್ರಜಾಪತಿಗಳು ತಮ್ಮ ವಂಶವನ್ನು ನಡೆಸಿದರು. ಈಗ ನೀವು ಇತರ ಮನುಗಳ ವಿಷಯವನ್ನು ವರ್ಣಿಸುವ ಕೃಪೆಮಾಡಿರಿ. ॥ ೧ ॥ ಬ್ರಾಹ್ಮಣೋತ್ತಮರೇ! ಮಹಾತ್ಮರಾದ ಜ್ಞಾನಿಗಳು ಯಾವ-ಯಾವ ಮನ್ವಂತರದಲ್ಲಿ ಮಹಾಮಹಿಮನಾದ ಶ್ರೀಹರಿಯ ಅವತಾರಗಳನ್ನೂ, ಲೀಲೆಗಳನ್ನೂ ವರ್ಣನೆ ಮಾಡಿದ್ದಾರೆ ಅವೆಲ್ಲವನ್ನು ಶ್ರವಣಮಾಡಲು ಬಯಸುವ ನಮಗೆ ತಿಳಿಸಿರಿ. ॥ ೨ ॥ ಪೂಜ್ಯರೇ! ವಿಶ್ವಭಾವನನಾದ ಭಗವಂತನು ಕಳೆದ ಮನ್ವಂತರಗಳಲ್ಲಿ ಯಾವ-ಯಾವ ಲೀಲೆಗಳನ್ನು ನಡೆಸಿದನು? ಈ ಮನ್ವಂತರದಲ್ಲಿ ಮಾಡುತ್ತಿರುವ ಲೀಲೆಗಳನ್ನೂ, ಮುಂದಿನ ಮನ್ವಂತರಗಳಲ್ಲಿ ಎಸಗಲಿರುವ ಲೀಲೆಗಳನ್ನೂ ಎಲ್ಲವನ್ನೂ ನಮಗೆ ಹೇಳಿರಿ. ॥ ೩ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ರಾಜನೇ! ಈ ಕಲ್ಪದಲ್ಲಿ ಸ್ವಾಯಂಭುವ ಮುಂತಾದ ಆರು ಮನ್ವಂತರಗಳು ಕಳೆದುಹೋಗಿವೆ. ಅವುಗಳಲ್ಲಿ ದೇವತೆಗಳೇ ಮುಂತಾದವರ ಉತ್ಪತ್ತಿಯು ಆಗಿರುವ ಮೊದಲನೆಯ ಮನ್ವಂತರವನ್ನು ನಿನಗೆ ವರ್ಣಿಸಿಯಾಗಿದೆ. ॥ ೪ ॥ ಸ್ವಾಯಂಭುವ ಮನುವಿನ ಪುತ್ರಿಯಾದ ಆಕೂತಿಯಲ್ಲಿ ಯಜ್ಞಪುರುಷನಾಗಿ ಧರ್ಮವನ್ನು ಉಪದೇಶ ಮಾಡಲಿಕ್ಕಾಗಿ ಹಾಗೂ ದೇವಹೂತಿಯಲ್ಲಿ ಕಪಿಲಾವತಾರವನ್ನು ಎತ್ತಿ ಜ್ಞಾನವನ್ನು ಉಪದೇಶಿಸಲಿಕ್ಕಾಗಿ ಭಗವಂತನು ಆವಿರ್ಭವಿಸಿದ್ದನು. ॥ ೫ ॥ ಪರೀಕ್ಷಿತನೇ! ಭಗವಾನ್ ಕಪಿಲಾವತಾರದ ವರ್ಣನೆಯನ್ನು ನಾನು ಮೊದಲೇ (ಮೂರನೆಯ ಸ್ಕಂಧದಲ್ಲಿ) ಮಾಡಿಯಾಗಿದೆ. ಈಗ ಭಗವಾನ್ ಯಜ್ಞಪುರುಷನು ಆಕೂತಿಯ ಗರ್ಭದಲ್ಲಿ ಅವತರಿಸಿ ಮಾಡಿದ ಲೀಲೆಗಳನ್ನು ವರ್ಣಿಸುತ್ತೇನೆ, ಕೇಳು. ॥ ೬ ॥

ಪರೀಕ್ಷಿದ್ರಾಜನೇ! ಪ್ರಭುವಾದ ಸ್ವಾಯಂಭುವ ಮನುವು ಸಮಸ್ತ ಕಾಮನೆಗಳಿಂದ ಮತ್ತು ಭೋಗಗಳಿಂದ ವಿರಕ್ತನಾಗಿ ರಾಜ್ಯವನ್ನು ತ್ಯಜಿಸಿ ಪತ್ನಿಯಾದ ಶತರೂಪಾಳೊಂದಿಗೆ ತಪಸ್ಸಿಗಾಗಿ ವನಕ್ಕೆ ತೆರಳಿದನು. ॥ ೭ ॥ ಅಲ್ಲಿ ಅವನು ಸುನಂದಾನದಿಯ ತೀರದಲ್ಲಿ

ಸುನಂದಾಯಾಂ ವರ್ಷಶತಂ ಪದೈಕೇನ ಭುವಂ ಸ್ಪೃಶನ್ ।
ತಪ್ಯಮಾನಸ್ತಪೋ ಘೋರಮಿದಮನ್ವಾಹ ಭಾರತ ॥ ೮ ॥

ಮನುರುವಾಚ

ಯೇನ ಚೇತಯತೇ ವಿಶ್ವಂ ವಿಶ್ವಂ ಚೇತಯತೇ ನ ಯಮ್ ।
ಯೋ ಜಾಗರ್ತಿ ಶಯಾನೇಽಸ್ಮಿನ್ನಾಯಂ ತಂ ವೇದ ವೇದ ಸಃ ॥ ೯ ॥

ಆತ್ಮಾವಾಸ್ಯಮಿದಂ ವಿಶ್ವಂ ಯತ್ಕಿಂಚಿಜ್ಜಗತ್ಯಾಂ ಜಗತ್ ।
ತೇನ ತ್ಯಕ್ತೇನ ಭುಂಜೀಥಾ ಮಾ ಗೃಧಃ ಕಸ್ಯಸ್ವಿದ್ಧನಮ್ ॥ ೧೦ ॥

ಯಂ ನ ಪಶ್ಯತಿ ಪಶ್ಯಂತಂ ಚಕ್ಷುರ್ಯಸ್ಯ ನ ರಿಷ್ಯತಿ ।
ತಂ ಭೂತನಿಲಯಂ ದೇವಂ ಸುಪರ್ಣಮುಪಧಾವತ ॥ ೧೧ ॥

ನ ಯಸ್ಯಾದ್ಯಂತೌ ಮಧ್ಯಂ ಚ ಸ್ವಃ ಪರೋ ನಾಂತರಂ ಬಹಿಃ ।
ವಿಶ್ವಸ್ಯಾಮೂನಿ ಯದ್ಯಸ್ಮಾದ್ವಿಶ್ವಂ ಚ ತದೃತಂ ಮಹತ್ ॥ ೧೨ ॥

ಸ ವಿಶ್ವಕಾಯಃ ಪುರುಹೂತ ಈಶಃ
ಸತ್ಯಃ ಸ್ವಯಂಜ್ಯೋತಿರಜಃ ಪುರಾಣಃ ।
ಧತ್ತೇಽಸ್ಯ ಜನ್ಮಾದ್ಯಜಯಾಽಽತ್ಮಶಕ್ತ್ಯಾ
ತಾಂ ವಿದ್ಯಯೋದಸ್ಯ ನಿರೀಹ ಆಸ್ತೇ ॥ ೧೩ ॥

ಅಥಾಗ್ರೇ ಋಷಯಃ ಕರ್ಮಾಣೀಹಂತೇಽಕರ್ಮಹೇತವೇ ।
ಈಹಮಾನೋ ಹಿ ಪುರುಷಃ ಪ್ರಾಯೋಽನೀಹಾಂ ಪ್ರಪದ್ಯತೇ ॥ ೧೪ ॥

ಈಹತೇ ಭಗವಾನೀಶೋ ನ ಹಿ ತತ್ರ ವಿಸಜ್ಜತೇ ।
ಆತ್ಮಲಾಭೇನ ಪೂರ್ಣಾರ್ಥೋ ನಾವಸೀದಂತಿ ಯೇಽನು ತಮ್ ॥ ೧೫ ॥

ಭೂಮಿಯಲ್ಲಿ ಒಂಟಿಕಾಲಿನಲ್ಲಿ ನಿಂತು ನೂರುವರ್ಷಗಳವರೆಗೆ ತೀವ್ರವಾದ ತಪಸ್ಸನ್ನು ಮಾಡಿದನು. ತಪಸ್ಸು ಮಾಡುವಾಗ ಅವನು ಪರಮಾತ್ಮನನ್ನು ಹೀಗೆ ಸ್ತುತಿಸಿದನು. ॥ ೮ ॥

ಸ್ವಾಯಂಭುವ ಮನುವು ಹೇಳುತ್ತಿದ್ದ – ವಿಶ್ವಕ್ಕೆಲ್ಲ ಚೈತನ್ಯವನ್ನು ತುಂಬಿದ ಪರಮ ಚೇತನನಿವನು. ಆದರೆ ವಿಶ್ವವು ಇವನಿಗೆ ಚೈತನ್ಯವನ್ನು ನೀಡಲಾರದು. ವಿಶ್ವವೆಲ್ಲವೂ ನಿದ್ರಿಸುತ್ತಿರುವ ಪ್ರಳಯಕಾಲದಲ್ಲಿಯೂ ಇವನು ಎಚ್ಚರವಾಗಿರುತ್ತಾನೆ. ವಿಶ್ವವು ಈತನನ್ನು ತಿಳಿಯಲಾರದು. ಆದರೆ ಇವನು ಅದನ್ನು ಪೂರ್ಣವಾಗಿ ತಿಳಿದಿರುವನು. ॥ ೯ ॥ ಈ ಇಡೀ ವಿಶ್ವದಲ್ಲಿ ಮತ್ತು ಈ ವಿಶ್ವದಲ್ಲಿ ಇರುವ ಎಲ್ಲ ಚರಾಚರ ಪ್ರಾಣಿಗಳಲ್ಲಿ ಆ ಪರಮಾತ್ಮನೇ ಹಾಸುಹೊಕ್ಕಾಗಿ ತುಂಬಿದ್ದಾನೆ. ಆದರಿಂದ ಈ ಪ್ರಪಂಚದ ಯಾವ ವಸ್ತುವಿನಲ್ಲಿಯೂ ಮೋಹವನ್ನಿಡದೆ, ಅದನ್ನು ತ್ಯಾಗಬುದ್ಧಿಯಿಂದ ಜೀವನ-ನಿರ್ವಾಹಕ್ಕಷ್ಟೇ ಅದನ್ನು ಭೋಗಿಸಬೇಕು. ಆಸೆಯನ್ನು ತೊರೆಯಬೇಕು. ಯಾರ ಸಂಪತ್ತಿಗೂ ಆಸೆಪಡಬಾರದು. ॥ ೧೦ ॥ ಭಗವಂತನು ಎಲ್ಲರ ಸಾಕ್ಷಿಯಾಗಿದ್ದಾನೆ. ಅವನನ್ನು ಬುದ್ಧಿಯ ವೃತ್ತಿಗಳಾಗಲೀ, ಕಣ್ಣು ಮುಂತಾದ ಇಂದ್ರಿಯಗಳಾಗಲೀ ನೋಡಲಾರವು. ಆದರೂ ಅವನ ಜ್ಞಾನಶಕ್ತಿಯು ಅಖಂಡವಾಗಿದೆ. ಸಮಸ್ತ ಪ್ರಾಣಿಗಳ ಹೃದಯದಲ್ಲಿ ನೆಲೆಸಿರುವ ಆ ಸ್ವಯಂಪ್ರಕಾಶನಾದ, ಅಸಂಗನಾದ ಪರಮಾತ್ಮನಲ್ಲಿ ಶರಣಾಗಬೇಕು. ॥ ೧೧ ॥ ಆದಿ-ಅಂತ್ಯಗಳೇ ಇಲ್ಲದವನು ಮಧ್ಯದಲ್ಲಿ ಹೇಗೆ ಇರಬಲ್ಲನು ? ಸ್ವಕೀಯನಾಗಲೀ, ಪರಕೀಯನಾಗಲೀ ಯಾರೂ ಇಲ್ಲ. ಹೊರಗಿನದಾಗಲೀ, ಒಳಗಿನದಾಗಲೀ ಯಾವುದೂ ಇಲ್ಲ. ಆದರೆ ವಿಶ್ವದಲ್ಲಿ ಎಲ್ಲಕ್ಕೂ ಆದಿ, ಅಂತ್ಯ, ಮಧ್ಯವೂ ಆಗಿ, ಸ್ವಕೀಯ, ಪರಕೀಯ, ಹೊರಗಿನ, ಒಳಗಿನ ಎಲ್ಲವೂ ಅವನೇ ಆಗಿದ್ದಾನೆ. ಎಲ್ಲಕ್ಕೂ ಕಾರಣವಾಗಿರುವ ಮಹಾಸತ್ಯಸ್ವರೂಪನು ಇವನೇ. ॥ ೧೨ ॥ ಆ ಪರಮಾತ್ಮನೇ ವಿಶ್ವರೂಪನು. ಅವನಿಗೆ ಅನಂತನಾಮಗಳಿವೆ. ಅವನು ಸರ್ವೇಶ್ವರನೂ, ಸತ್ಯಸ್ವರೂಪಿಯೂ, ಸ್ವಯಂಪ್ರಕಾಶನೂ, ಅಜನೂ, ಪುರಾಣಪುರುಷನೂ ಆಗಿರುವನು. ಅವನೇ ತನ್ನ ಮಾಯಾಶಕ್ತಿಯಿಂದಲೇ ವಿಶ್ವಸೃಷ್ಟಿಯ ಜನ್ಮಾದಿಗಳನ್ನು ಸ್ವೀಕರಿಸುತ್ತಾನೆ ಮತ್ತು ತನ್ನ ವಿದ್ಯಾಶಕ್ತಿಯಿಂದ ಅದನ್ನು ತ್ಯಾಗಮಾಡಿ ನಿಷ್ಕ್ರಿಯನಾಗಿ ಸ್ವಸ್ವರೂಪಮಾತ್ರನಾಗಿ ಇರುತ್ತಾನೆ. ॥ ೧೩ ॥ ಇದರಿಂದಲೇ ಋಷಿ-ಮುನಿಗಳು ನೈಷ್ಕರ್ಮ್ಯಸ್ಥಿತಿಯನ್ನು ಅಂದರೆ ಬ್ರಹ್ಮನಲ್ಲಿ ಏಕತ್ವವನ್ನೇ ಹೊಂದಲು ಮೊದಲಿಗೆ ಕರ್ಮಯೋಗವನ್ನು ಅನುಷ್ಠಾನ ಮಾಡುತ್ತಾರೆ. ಸಾಮಾನ್ಯವಾಗಿ ಕರ್ಮಮಾಡುವವನೇ ಕೊನೆಗೆ ನಿಷ್ಕ್ರಿಯರಾಗಿ ಕರ್ಮಗಳಿಂದ ಬಿಡುಗಡೆಹೊಂದುವನು. ॥ ೧೪ ॥ ಸರ್ವಶಕ್ತನಾದ ಭಗವಂತನೂ ಕೂಡ ಕರ್ಮಗಳನ್ನು ಮಾಡುತ್ತಾನೆ. ಆದರೆ ಅವನು ಆತ್ಮಲಾಭದಿಂದ ಪೂರ್ಣಕಾಮನಾದ್ದರಿಂದ ಆ ಕರ್ಮಗಳಲ್ಲಿ ಆಸಕ್ತನಾಗಿರುವುದಿಲ್ಲ. ಆದ್ದರಿಂದ ಅವನನ್ನೇ ಅನುಸರಿಸುತ್ತಾ ಅನಾಸಕ್ತರಾಗಿ ಕರ್ಮಮಾಡುವವರೇ ಕರ್ಮಬಂಧನದಿಂದ ಮುಕ್ತರಾಗಿಯೇ ಇರುತ್ತಾರೆ. ॥ ೧೫ ॥ ಭಗವಂತನು ಜ್ಞಾನಸ್ವರೂಪನಾದ್ದರಿಂದ ಅವನಲ್ಲಿ ಅಹಂಕಾರ ಲವಲೇಶವೂ ಇಲ್ಲ. ಅವನು ಪರಿಪೂರ್ಣನಾದ್ದರಿಂದ ಅವನಿಗೆ

ತಮೀಹಮಾನಂ ನಿರಹಂಕೃತಂ ಬುಧಂ
ನಿರಾಶಿಷಂ ಪೂರ್ಣಮನನ್ಯಚೋದಿತಮ್ ।
ನೄನ್ ಶಿಕ್ಷಯಂತಂ ನಿಜವರ್ತ್ಮಸಂಸ್ಥಿತಂ
ಪ್ರಭುಂ ಪ್ರಪದ್ಯೇಽಖಿಲಧರ್ಮಭಾವನಮ್ ॥ ೧೬ ॥

ಶ್ರೀಶುಕ ಉವಾಚ

ಇತಿ ಮಂತ್ರೋಪನಿಷದಂ ವ್ಯಾಹರಂತಂ ಸಮಾಹಿತಮ್ ।
ದೃಷ್ಟ್ವಾಸುರಾ ಯಾತುಧಾನಾ ಜಗ್ಧುಮಭ್ಯದ್ರವನ್ ಕ್ಷುಧಾ ॥ ೧೭ ॥

ತಾಂಸ್ತಥಾವಸಿತಾನ್ವೀಕ್ಷ್ಯ ಯಜ್ಞಃ ಸರ್ವಗತೋ ಹರಿಃ ।
ಯಾಮೈಃ ಪರಿವೃತೋ ದೇವೈರ್ಹತ್ವಾಶಾಸತ್ತ್ರಿವಿಷ್ಟಪಮ್ ॥ ೧೮ ॥

ಸ್ವಾರೋಚಿಷೋ ದ್ವಿತೀಯಸ್ತು ಮನುರಗ್ನೇಃ ಸುತೋಽಭವತ್ ।
ದ್ಯುಮತ್ಸುಷೇಣರೋಚಿಷ್ಮತ್ಪ್ರಮುಖಾಸ್ತಸ್ಯ ಚಾತ್ಮಜಾಃ ॥ ೧೯ ॥

ತತ್ರೇಂದ್ರೋ ರೋಚನಸ್ತ್ವಾಸೀದ್ದೇವಾಶ್ಚ ತುಷಿತಾದಯಃ ।
ಊರ್ಜಸ್ತಂಭಾದಯಃ ಸಪ್ತ ಋಷಯೋ ಬ್ರಹ್ಮವಾದಿನಃ ॥ ೨೦ ॥

ಋಷೇಸ್ತು ವೇದಶಿರಸಸ್ತುಷಿತಾ ನಾಮ ಪತ್ನ್ಯಭೂತ್ ।
ತಸ್ಯಾಂ ಜಜ್ಞೇ ತತೋ ದೇವೋ ವಿಭುರಿತ್ಯಭಿವಿಶ್ರುತಃ ॥ ೨೧ ॥

ಅಷ್ಟಾಶೀತಿಸಹಸ್ರಾಣಿ ಮುನಯೋ ಯೇ ಧೃತವ್ರತಾಃ ।
ಅನ್ವಶಿಕ್ಷನ್ವ್ರತಂ ತಸ್ಯ ಕೌಮಾರಬ್ರಹ್ಮಚಾರಿಣಃ ॥ ೨೨ ॥

ತೃತೀಯ ಉತ್ತಮೋ ನಾಮ ಪ್ರಿಯವ್ರತಸುತೋ ಮನುಃ ।
ಪವನಃ ಸೃಂಜಯೋ ಯಜ್ಞಹೋತ್ರಾದ್ಯಾಸ್ತತ್ಸುತಾ ನೃಪ ॥ ೨೩ ॥

ವಸಿಷ್ಠ ತನಯಾಃ ಸಪ್ತ ಋಷಯಃ ಪ್ರಮದಾದಯಃ ।
ಸತ್ಯಾ ವೇದಶ್ರುತಾ ಭದ್ರಾ ದೇವಾ ಇಂದ್ರಸ್ತು ಸತ್ಯಜಿತ್ ॥ ೨೪ ॥

ಧರ್ಮಸ್ಯ ಸೂನೃತಾಯಾಂ ತು ಭಗವಾನ್ಪುರುಷೋತ್ತಮಃ ।
ಸತ್ಯಸೇನ ಇತಿ ಖ್ಯಾತೋ ಜಾತಃ ಸತ್ಯವ್ರತೈಃ ಸಹ ॥ ೨೫ ॥

ಸೋಽನೃತವ್ರತದುಃಶೀಲಾನಸತೋ ಯಕ್ಷರಾಕ್ಷಸಾನ್ ।
ಭೂತದ್ರುಹೋ ಭೂತಗಣಾಂಸ್ತ್ವವಧೀತ್ಸತ್ಯಜಿತ್ಸಖಃ ॥ ೨೬ ॥

ಯಾವುದೇ ವಸ್ತುವಿನ ಕಾಮನೆಯಿಲ್ಲ. ಅವನು ಯಾರ ಪ್ರೇರಣೆಯೂ ಇಲ್ಲದೆ ಸ್ವೇಚ್ಛೆಯಿಂದ ಕರ್ಮಮಾಡುತ್ತಾನೆ. ಅವನು ತಾನೇ ನಿರ್ಮಿಸಿದ ಮರ್ಯಾದೆಯಲ್ಲಿ ನೆಲೆಸಿ ತನ್ನ ಕರ್ಮಗಳ ಮೂಲಕ ಮನುಷ್ಯರಿಗೆ ಶಿಕ್ಷಣವನ್ನು ನೀಡುತ್ತಿರುವನು. ಅವನೇ ಸಮಸ್ತ ಧರ್ಮಗಳ ಪ್ರವರ್ತಕನೂ, ಅವುಗಳಿಗೆ ಜೀವನದಾತೃವೂ ಆಗಿದ್ದಾನೆ. ಅಂತಹ ಪ್ರಭುವಿಗೆ ನಾನು ಶರಣು ಹೊಂದುತ್ತೇನೆ. ॥ ೧೬ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿದ್ರಾಜನೇ! ಒಮ್ಮೆ ಸ್ವಾಯಂಭುವಮನುವು ಏಕಾಗ್ರತೆಯಿಂದ ಈ ಮಂತ್ರಮಯ ಉಪನಿಷತ್ ಸ್ವರೂಪವಾದ ಶ್ರುತಿಯನ್ನು ಪಾರಾಯಣೆ ಮಾಡುತ್ತಾ ಸಮಾಧಿಯಲ್ಲಿ ಇದ್ದುದನ್ನು ಕಂಡು ಅಸುರರೂ ಮತ್ತು ರಾಕ್ಷಸರು ಅವನನ್ನು ತಿಂದುಹಾಕುವುದಕ್ಕಾಗಿ ಆಕ್ರಮಿಸಿದರು. ॥ ೧೭ ॥ ಇದನ್ನು ನೋಡಿದ ಅಂತರ್ಯಾಮಿ ಭಗವಾನ್ ಯಜ್ಞಪುರುಷನು ತನ್ನ ಪುತ್ರರಾದ ಯಾಮನೆಂಬ ದೇವತೆಗಳೊಂದಿಗೆ ಅಲ್ಲಿಗೆ ಆಗಮಿಸಿದನು. ಅವನು ತಿಂದುಹಾಕಲು ಹವಣಿಸುತ್ತಿರುವ ಅಸುರರನ್ನು ಸಂಹರಿಸಿದನು. ಮತ್ತೆ ಅವನು ಇಂದ್ರಪದದಲ್ಲಿ ನೆಲೆಗೊಂಡು ಸ್ವರ್ಗವನ್ನು ಆಳತೊಡಗಿದನು. ॥ ೧೮ ॥

ಪರೀಕ್ಷಿತನೇ! ಸ್ವಾರೋಚಿಷನೆಂಬುವನು ಎರಡನೆಯ ಮನುವು. ಅವನು ಅಗ್ನಿಯ ಪುತ್ರನಾಗಿದ್ದನು. ಅವನಿಗೆ ದ್ಯುಮಾನ್, ಸುಷೇಣ ಮತ್ತು ರೋಚಿಷ್ಮಾನ್ ಮುಂತಾದ ಪುತ್ರರಿದ್ದರು. ॥ ೧೯ ॥ ಆ ಮನ್ವಂತರದಲ್ಲಿ ರೋಚನನೆಂಬ ಇಂದ್ರನು ಇದ್ದನು. ತುಷಿತ ಮುಂತಾದ ದೇವತಾಗಣವು ಪ್ರಧಾನರಾಗಿದ್ದರು. ಊರ್ಜಸ್ತಂಭ ಮುಂತಾದವರು ವೇದವಾದಿಗಳಾದ ಸಪ್ತರ್ಷಿಗಳಾಗಿದ್ದರು. ॥ ೨೦ ॥ ಆ ಮನ್ವಂತರದಲ್ಲಿ ವೇದಶಿರಾ ಎಂಬ ಋಷಿಯ ಪತ್ನಿ ತುಷಿತೆ ಎಂಬುವಳಾಗಿದ್ದಳು. ಅವಳ ಗರ್ಭದಲ್ಲಿ ಭಗವಂತನು ಅವತರಿಸಿ ವಿಭು ಎಂಬ ನಾಮದಿಂದ ಪ್ರಸಿದ್ಧನಾದನು. ॥ ೨೧ ॥ ಅವನು ನೈಷ್ಠಿಕ ಬ್ರಹ್ಮಚಾರಿಯಾಗಿದ್ದನು. ಅವನ ಆಚರಣೆಯಿಂದಲೇ ಶಿಕ್ಷಣಪಡೆದು ಎಂಭತ್ತೆಂಟುಸಾವಿರ ಮಂದಿ ವ್ರತನಿಷ್ಠ ಋಷಿಗಳೂ ಬ್ರಹ್ಮಚರ್ಯವನ್ನು ಪಾಲಿಸಿದರು. ॥ ೨೨ ॥

ಉತ್ತಮನೆಂಬುವನು ಮೂರನೆಯ ಮನುವಾಗಿದ್ದಾನೆ. ಅವನು ಪ್ರಿಯವ್ರತನ ಪುತ್ರನಾಗಿದ್ದನು. ಅವನಿಗೆ ಪವನ, ಸೃಂಜಯ, ಯಜ್ಞಹೋತ್ರ ಮುಂತಾದ ಪುತ್ರರಿದ್ದರು. ॥ ೨೩ ॥ ಆ ಮನ್ವಂತರದಲ್ಲಿ ವಸಿಷ್ಠರ ಪುತ್ರರಾದ ಪ್ರಮದರೇ ಮುಂತಾದ ಏಳುಮಂದಿ ಸಪ್ತರ್ಷಿಗಳಾಗಿದ್ದರು. ಸತ್ಯ, ವೇದಶ್ರುತ ಮತ್ತು ಭದ್ರ ಎಂಬ ದೇವತೆಗಳ ಗಣಗಳು ಮುಖ್ಯರಾಗಿದ್ದರು ಹಾಗೂ ಸತ್ಯಜಿತ್‌ನೆಂಬ ಇಂದ್ರನಿದ್ದನು. ॥ ೨೪ ॥ ಆಗ ಧರ್ಮನ ಪತ್ನಿಯಾದ ಸೂನೃತಾ ದೇವಿಯಲ್ಲಿ ಭಗವಾನ್ ಪುರುಷೋತ್ತಮನು ಸತ್ಯಸೇನ ಎಂಬ ಹೆಸರಿನಿಂದ ಅವತರಿಸಿದ್ದನು. ಅವನೊಂದಿಗೆ ಸತ್ಯವ್ರತರೆಂಬ ದೇವಗಣಗಳೂ ಇದ್ದವು. ॥ ೨೫ ॥ ಆ ಸಮಯದ ಸತ್ಯಜಿತ ಇಂದ್ರನ ಸಖನಾಗಿ ಭಗವಂತನು ಅಸತ್ಯಪರಾಯಣರೂ, ದುಃಶೀಲರೂ, ದುಷ್ಟರೂ ಆದ ಯಕ್ಷ-ರಾಕ್ಷಸರನ್ನು ಮತ್ತು ಜೀವಿಗಳ ದ್ರೋಹಿಗಳಾದ ಭೂತಗಣಗಳನ್ನು ಸಂಹಾರಮಾಡಿದನು. ॥ ೨೬ ॥

ತಾಮಸ ಮನುವೇ ನಾಲ್ಕನೆಯವನು. ಈತನು ಮೂರನೆಯ ಮನು ಉತ್ತಮನ ಸ್ವಂತ ಸೋದರನು. ಇವನಿಗೆ ಪೃಥು, ಖ್ಯಾತಿ,

ಚತುರ್ಥ ಉತ್ತಮಭ್ರಾತಾ ಮನುರ್ನಾಮ್ನಾ ಚ ತಾಮಸಃ ।
ಪೃಥುಃ ಖ್ಯಾತಿರ್ನರಃ ಕೇತುರಿತ್ಯಾದ್ಯಾ ದಶ ತತ್ಸುತಾಃ ॥ ೨೭ ॥

ಸತ್ಯಕಾ ಹರಯೋ ವೀರಾ ದೇವಾಸ್ತ್ರಿಶಿಖ ಈಶ್ವರಃ ।
ಜ್ಯೋತಿರ್ಧಾಮಾದಯಃ ಸಪ್ತ ಋಷಯಸ್ತಾಮಸೇಽಂತರೇ ॥ ೨೮ ॥

ದೇವಾ ವೈಧೃತಯೋ ನಾಮ ವಿಧೃತೇಸ್ತನಯಾ ನೃಪ ।
ನಷ್ಟಾಃ ಕಾಲೇನ ಯೈರ್ವೇದಾ ವಿಧೃತಾಃ ಸ್ವೇನ ತೇಜಸಾ ॥ ೨೯ ॥

ತತ್ರಾಪಿ ಜಜ್ಞೇ ಭಗವಾನ್ಹರಿಣ್ಯಾಂ ಹರಿಮೇಧಸಃ ।
ಹರಿರಿತ್ಯಾಹೃತೋ ಯೇನ ಗಜೇಂದ್ರೋ ಮೋಚಿತೋ ಗ್ರಹಾತ್ ॥ ೩೦ ॥

ರಾಜೋವಾಚ

ಬಾದರಾಯಣ ಏತತ್ತೇ ಶ್ರೋತುಮಿಚ್ಛಾಮಹೇ ವಯಮ್ ।
ಹರಿರ್ಯಥಾ ಗಜಪತಿಂ ಗ್ರಾಹಗ್ರಸ್ತಮಮೂಮುಚತ್ ॥ ೩೧ ॥

ತತ್ಕಥಾಸು ಮಹತ್ಪುಣ್ಯಂ ಧನ್ಯಂ ಸ್ವಸ್ತ್ಯಯನಂ ಶುಭಮ್ ।
ಯತ್ರ ಯತ್ರೋತ್ತಮಶ್ಲೋಕೋ ಭಗವಾನ್ಗೀಯತೇ ಹರಿಃ ॥ ೩೨ ॥

ಸೂತ ಉವಾಚ

ಪರೀಕ್ಷಿತೈವಂ ಸ ತು ಬಾದರಾಯಣಿಃ
ಪ್ರಾಯೋಪವಿಷ್ಟೇನ ಕಥಾಸು ಚೋದಿತಃ ।
ಉವಾಚ ವಿಪ್ರಾಃ ಪ್ರತಿನಂದ್ಯ ಪಾರ್ಥಿವಂ
ಮುದಾ ಮುನೀನಾಂ ಸದಸಿ ಸ್ಮ ಶೃಣ್ವತಾಮ್ ॥ ೩೩ ॥

ನರ, ಕೇತು ಮುಂತಾದ ಹತ್ತು ಪುತ್ರರಿದ್ದರು. ॥ ೨೭ ॥ ಸತ್ಯಕ, ಹರಿ ಮತ್ತು ವೀರರೆಂಬ ದೇವತೆಗಳ ಪ್ರಧಾನಗಣಗಳಿದ್ದವು. ಇಂದ್ರನ ಹೆಸರು ತ್ರಿಶಿಖ ಎಂದಿತ್ತು. ಆ ಮನ್ವಂತರದಲ್ಲಿ ಜ್ಯೋತಿರ್ಧಾಮರೆಂಬ ಸಪ್ತರ್ಷಿಗಳಿದ್ದರು. ॥ ೨೮ ॥ ಪರೀಕ್ಷಿತನೇ! ಆ ತಾಮಸವೆಂಬ ಮನ್ವಂತರದಲ್ಲಿ ವಿಧೃತಿಯ ಪುತ್ರ, ವೈಧೃತಿ ಎಂಬ ಇತರ ಇನ್ನೂ ಕೆಲವರು ದೇವತೆಗಳಾದರು. ಇವರು ಕಾಲಗತಿಯಿಂದ ನಷ್ಟಪ್ರಾಯವಾದ ವೇದಗಳನ್ನು ತಮ್ಮ ಶಕ್ತಿಯಿಂದ ಕಾಪಾಡಿದ್ದರು. ಅದಕ್ಕಾಗಿ ಇವರು ವೈಧೃತಿ ಎನಿಸಿದರು. ॥ ೨೯ ॥ ಈ ಮನ್ವಂತರದಲ್ಲಿ ಹರಿಮೇಧಾ ಋಷಿಯ ಹರಿಣಿ ಎಂಬ ಹೆಸರಿನ ಪತ್ನಿಯಲ್ಲಿ ಹರಿಯಾಗಿ ಭಗವಂತನು ಅವತರಿಸಿದನು. ಇದೇ ಮನ್ವಂತರದಲ್ಲಿ ಅವನು ಗಜೇಂದ್ರನನ್ನು ಮೊಸಳೆಯಿಂದ ರಕ್ಷಿಸಿದ್ದನು. ॥ ೩೦ ॥

ಪರೀಕ್ಷಿದ್ರಾಜನು ಕೇಳಿದನು – ಮುನಿವರ್ಯರೇ! ಭಗವಂತನು ಮೊಸಳೆಯ ಹಿಡಿತದಿಂದ ಗಜೇಂದ್ರನನ್ನು ಹೇಗೆ ಕಾಪಾಡಿದನು? ಇದನ್ನು ನಿಮ್ಮಿಂದ ಕೇಳಲು ನಾವು ಬಯಸುತ್ತೇವೆ. ॥ ೩೧ ॥ ಎಲ್ಲ ಕಥೆಗಳಲ್ಲಿ ಮಹಾತ್ಮರ ಮೂಲಕ ಹಾಡಲ್ಪಟ್ಟ ಭಗವಾನ್ ಶ್ರೀಹರಿಯ ಪವಿತ್ರಕೀರ್ತಿಯ ವರ್ಣನೆಗಳೇ ಪರಮ ಪುಣ್ಯ ಮಯವೂ, ಪ್ರಶಂಸನೀಯವೂ, ಮಂಗಳಕರವೂ, ಶುಭವೂ ಆಗಿವೆ. ॥ ೩೨ ॥

ಸೂತಪುರಾಣಿಕರು ಹೇಳುತ್ತಾರೆ – ಶೌನಕಾದಿ ಋಷಿಗಳೇ! ಪರೀಕ್ಷಿದ್ರಾಜನು ಆಮರಣ ಉಪವಾಸಕ್ಕಾಗಿ ಕುಳಿತಿದ್ದನಲ್ಲ, ಅವನು ಶ್ರೀಶುಕಮಹಾಮುನಿಗಳನ್ನು ಹೀಗೆ ಕಥೆಹೇಳಲು ಪ್ರೇರೇಪಿಸಿದಾಗ ಅವರು ತುಂಬಾ ಆನಂದಿತರಾಗಿ, ಪ್ರೇಮದಿಂದ ರಾಜನನ್ನು ಅಭಿನಂದಿಸಿ ಮುನಿಗಳ ಆ ತುಂಬಿದ ಸಭೆಯಲ್ಲಿ ಹೀಗೆ ಹೇಳತೊಡಗಿದರು. ॥ ೩೩ ॥

ಮೊದಲನೆಯ ಅಧ್ಯಾಯವು ಮುಗಿಯಿತು. ॥ ೧ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಅಷ್ಟಮ ಸ್ಕಂಧೇ
ಮನ್ವಂತರಾನುವರ್ಣನೇ ಪ್ರಥಮೋಽಧ್ಯಾಯಃ ॥ ೧ ॥

ಎರಡನೆಯ ಅಧ್ಯಾಯ

ಗಜೇಂದ್ರನು ಮೊಸಳೆಯ ಹಿಡಿತಕ್ಕೆ ಸಿಕ್ಕಿಹಾಕಿಕೊಳ್ಳುವುದು

ಶ್ರೀಶುಕ ಉವಾಚ

ಆಸೀದ್ಗಿರಿವರೋ ರಾಜಂಸ್ತ್ರಿಕೂಟ ಇತಿ ವಿಶ್ರುತಃ ।
ಕ್ಷೀರೋದೇನಾವೃತಃ ಶ್ರೀಮಾನ್ಯೋಜನಾಯುತಮುಚ್ಛ್ರಿತಃ ॥ ೧ ॥

ತಾವತಾ ವಿಸ್ತೃತಃ ಪರ್ಯಕ್ತ್ರಿಭಿಃ ಶೃಂಗೈಃ ಪಯೋನಿಧಿಮ್ ।
ದಿಶಃ ಖಂ ರೋಚಯನ್ನಾಸ್ತೇ ರೌಪ್ಯಾಯಸಹಿರಣ್ಮಯೈಃ ॥ ೨ ॥

ಶ್ರೀಶುಕಮಹಾಮುನಿಗಳು ಹೇಳಿದರು – ಪರೀಕ್ಷಿದ್ರಾಜನೇ! ಕ್ಷೀರಸಾಗರದಿಂದ ಆವೃತವಾದ ತ್ರಿಕೂಟವೆಂಬ ಪ್ರಸಿದ್ಧವಾದ ಸುಂದರವಾದ ಹಾಗೂ ಶ್ರೇಷ್ಠವಾದ ಒಂದು ಪರ್ವತವಿತ್ತು. ಅದು ಹತ್ತುಸಾವಿರ ಯೋಜನ ಎತ್ತರವಾಗಿತ್ತು. ॥ ೧ ॥ ಅದರ ಉದ್ದ-ಅಗಲವೂ ಸುತ್ತಲೂ ಅಷ್ಟೇ ಇತ್ತು. ಅದರ ಬೆಳ್ಳಿ, ಕಬ್ಬಿಣ ಮತ್ತು ಚಿನ್ನದ ಮೂರು ಶಿಖರಗಳ ಕಾಂತಿಯಿಂದ ಸಮುದ್ರ, ದಿಕ್ಕುಗಳು ಮತ್ತು ಆಕಾಶವು ಝಗ-ಝಗಿಸುತ್ತಿದ್ದವು. ॥ ೨ ॥

ಅನ್ಯೈಶ್ಚ ಕಕುಭಃ ಸರ್ವಾ
ರತ್ನಧಾತುವಿಚಿತ್ರಿತೈಃ ।
ನಾನಾದ್ರುಮಲತಾಗುಲ್ಮೈರ್ನಿರ್ಘೋಷೈರ್-
ನಿರ್ಝರಾಂಭಸಾಮ್ ॥ ೩ ॥

ಸ ಚಾವನಿಜ್ಯಮಾನಾಂಘ್ರಿಃ ಸಮಂತಾತ್ಪಯಊರ್ಮಿಭಿಃ ।
ಕರೋತಿ ಶ್ಯಾಮಲಾಂ ಭೂಮಿಂ ಹರಿನ್ಮರಕತಾಶ್ಮಭಿಃ ॥ ೪ ॥

ಸಿದ್ಧಚಾರಣಗಂಧರ್ವವಿದ್ಯಾಧರಮಹೋರಗೈಃ ।
ಕಿನ್ನರೈರಪ್ಸರೋಭಿಶ್ಚ ಕ್ರೀಡದ್ಭಿರ್ಜುಷ್ಟಕಂದರಃ ॥ ೫ ॥

ಯತ್ರ ಸಂಗೀತಸನ್ನಾದೈರ್ನದದ್ಗುಹಮಮರ್ಷಯಾ ।
ಅಭಿಗರ್ಜಂತಿ ಹರಯಃ ಶ್ಲಾಘಿನಃ ಪರಶಂಕಯಾ ॥ ೬ ॥

ನಾನಾರಣ್ಯಪಶುವ್ರಾತಸಂಕುಲದ್ರೋಣ್ಯಲಂಕೃತಃ ।
ಚಿತ್ರದ್ರುಮಸುರೋದ್ಯಾನಕಲಕಂಠವಿಹಂಗಮಃ ॥ ೭ ॥

ಸರಿತ್ಸರೋಭಿರಚ್ಛೋದೈಃ ಪುಲಿನೈರ್ಮಣಿವಾಲುಕೈಃ ।
ದೇವಸ್ತ್ರೀಮಜ್ಜನಾಮೋದಸೌರಭಾಂಬ್ವನಿಲೈರ್ಯುತಃ ॥ ೮ ॥

ತಸ್ಯ ದ್ರೋಣ್ಯಾಂ ಭಗವತೋ ವರುಣಸ್ಯ ಮಹಾತ್ಮನಃ ।
ಉದ್ಯಾನಮೃತುಮನ್ನಾಮ ಆಕ್ರೀಡಂ ಸುರಯೋಷಿತಾಮ್ ॥ ೯ ॥

ಸರ್ವತೋಽಲಂಕೃತಂ ದಿವ್ಯೈರ್ನಿತ್ಯಂ ಪುಷ್ಪಫಲದ್ರುಮೈಃ ।
ಮಂದಾರೈಃ ಪಾರಿಜಾತೈಶ್ಚ ಪಾಟಲಾಶೋಕಚಂಪಕೈಃ ॥ ೧೦ ॥

ಚೂತೈಃ ಪ್ರಿಯಾಲೈಃ ಪನಸೈರಾಮ್ರೈರಾಮ್ರಾತಕೈರಪಿ ।
ಕ್ರಮುಕೈರ್ನಾಲಿಕೇರೈಶ್ಚ ಖರ್ಜೂರೈರ್ಬೀಜಪೂರಕೈಃ ॥ ೧೧ ॥

ಮಧೂಕೈಃ ಸಾಲತಾಲೈಶ್ಚ ತಮಾಲೈರಸನಾರ್ಜುನೈಃ ।
ಅರಿಷ್ಟೋದುಂಬರಪ್ಲಕ್ಷೈರ್ವಟೈಃ ಕಿಂಶುಕಚಂದನೈಃ ॥ ೧೨ ॥

ಪಿಚುಮಂದೈಃ ಕೋವಿದಾರೈಃ ಸರಲೈಃ ಸುರದಾರುಭಿಃ ।
ದ್ರಾಕ್ಷೇಕ್ಷುರಂಭಾಜಂಬೂಭಿರ್ಬದರ್ಯಕ್ಷಾಭಯಾಮಲೈಃ ॥ ೧೩ ॥

ಬಿಲ್ವೈಃ ಕಪಿತ್ಥೈರ್ಜಂಬೀರೈರ್ವೃತೋ ಭಲ್ಲಾತಕಾದಿಭಿಃ ।
ತಸ್ಮಿನ್ಸರಃ ಸುವಿಪುಲಂ ಲಸತ್ಕಾಂಚನಪಂಕಜಮ್ ॥ ೧೪ ॥

ಇವಲ್ಲದೆ ಇನ್ನೂ ಅನೇಕ ಶಿಖರಗಳು ರತ್ನಗಳ ಮತ್ತು ಧಾತುಗಳ ಬಣ್ಣ-ಬಣ್ಣದ ಪ್ರಭೆಯನ್ನು ಪಸರಿಸುತ್ತಾ ಎಲ್ಲ ದಿಕ್ಕುಗಳನ್ನು ಬೆಳಗುತ್ತಿದ್ದುವು. ಅವುಗಳಲ್ಲಿ ವಿವಿಧ ಜಾತಿಯ ಲತಾ-ವೃಕ್ಷಗಳು ಮತ್ತು ಪೊದೆಗಳಿದ್ದುವು. ಜುಳು-ಜುಳನೆ ಹರಿಯುತ್ತಿದ್ದ ನದಿಗಳು. ಜಲಪಾತದ ಗಂಭೀರಧ್ವನಿಯು ಎಲ್ಲೆಡೆ ಕೇಳಿಬರುತ್ತಿದ್ದವು. ॥ ೩ ॥ ಸುತ್ತಲಿಂದಲೂ ಕ್ಷೀರಸಾಗರದ ಅಲೆಗಳು ಬಂದು ಅಪ್ಪಳಿಸುವಾಗ ಅವು ಪರ್ವತರಾಜನ ಕಾಲುಗಳನ್ನು ತೊಳೆಯುತ್ತಿವೆಯೋ ಎಂದು ಅನಿಸುತ್ತಿತ್ತು. ಆ ಪರ್ವತದ ಇಂದ್ರನೀಲಮಣಿಗಳಿಂದಲೂ, ಪಚ್ಚೆಯ ಕಲ್ಲುಗಳಿಂದ ಎಲ್ಲೆಡೆ ಹುರಾದ ಗರಿಕೆಯೇ ತುಂಬಿರುವಂತೆ ಶ್ಯಾಮಲ ಭೂಮಿಯು ಕಂಗೊಳಿಸುತ್ತಿತ್ತು. ॥ ೪ ॥ ಅದರ ಗುಹೆಗಳಲ್ಲಿ ಸಿದ್ಧರೂ, ಚಾರಣರೂ, ಗಂಧರ್ವರೂ, ವಿದ್ಯಾಧರರೂ, ನಾಗರೂ, ಕಿನ್ನರರೂ, ಅಪ್ಸರೆಯರು ಮುಂತಾದವರೆಲ್ಲರೂ ವಿಹರಿಸಲು ಸಾಮಾನ್ಯವಾಗಿ ನೆರೆಯುತ್ತಿದ್ದರು. ॥ ೫ ॥ ಅಲ್ಲಿನ ಸಂಗೀತ ಧ್ವನಿಯು ಗುಹೆಯೊಳಗೆ ಪ್ರತಿಧ್ವನಿಸುತ್ತಿದ್ದಾಗ ಅದನ್ನು ಕೇಳಿದ ಸಿಂಹಗಳು ಅದು ಬೇರೆ ಸಿಂಹದ ಗರ್ಜನೆಯೆಂದು ಭ್ರಮಿಸಿ ಅದನ್ನು ಸಹಿಸಲಾರದೆ ಪ್ರತಿಗರ್ಜನೆ ಮಾಡುತ್ತಿದ್ದವು. ॥ ೬ ॥

ಆ ಪರ್ವತದ ತಪ್ಪಲು ಪ್ರದೇಶಗಳು ಬಗೆ-ಬಗೆಯ ಕಾಡು ಮೃಗಗಳ ಹಿಂಡುಗಳಿಂದ ಅಲಂಕೃತವಾಗಿತ್ತು. ಅನೇಕ ಪ್ರಕಾರದ ವೃಕ್ಷಗಳಿಂದ ತುಂಬಿದ ದೇವತೋದ್ಯಾನಗಳಲ್ಲಿ ಸುಂದರವಾದ ಪಕ್ಷಿಗಳು ಮಧುರವಾಗಿ ಧ್ವನಿಮಾಡುತ್ತಿದ್ದವು. ॥ ೭ ॥ ಅದರಲ್ಲಿ ಅನೇಕ ನದಿಗಳೂ, ಸರೋವರಗಳೂ ನಿರ್ಮಲವಾದ ನೀರಿನಲ್ಲಿ ತುಂಬಿ ಹರಿಯುತ್ತಿದ್ದವು. ಅವುಗಳ ದಡಗಳಲ್ಲಿ ಮಣಿಮಯ ಮಳಲು ಹೊಳೆಯುತ್ತಿತ್ತು. ದೇವಾಂಗನೆಯರು ನದಿ-ಸರೋವರಗಳಲ್ಲಿ ಸ್ನಾನಮಾಡುತ್ತಿದ್ದುದರಿಂದ ಅವುಗಳ ನೀರು ಅತ್ಯಂತ ಸುಗಂಧಿತವಾಗಿತ್ತು. ಅದರ ಸುವಾಸನೆಯನ್ನು ಹೊತ್ತ ತಂಗಾಳಿಯು ಅಲ್ಲಿ ಬೀಸುತ್ತಿತ್ತು. ॥ ೮ ॥

ಪರ್ವತರಾಜ ತ್ರಿಕೂಟದ ತಪ್ಪಲಿನಲ್ಲಿ ಭಗವತ್ಪ್ರೇಮಿ ಮಹಾತ್ಮಾ ಭಗವಾನ್ ವರುಣನ ಒಂದು ಉದ್ಯಾನವನವಿತ್ತು. ಋತುಮಾನ್ ಎಂದು ಪ್ರಸಿದ್ಧವಾದ ಆ ಉದ್ಯಾನವನದಲ್ಲಿ ದೇವಾಂಗನೆಯರು ಕ್ರೀಡಿಸುತ್ತಿದ್ದರು. ॥ ೯ ॥ ಅದರ ಎಲ್ಲ ಕಡೆಗಳಲ್ಲಿಯೂ ಸದಾ ಹೂವು-ಹಣ್ಣುಗಳಿಂದ ತುಂಬಿ ಕಳಕಳಿಸುತ್ತಿದ್ದ ದಿವ್ಯ ವೃಕ್ಷಗಳು ಶೋಭಿಸುತ್ತಿದ್ದವು. ಮಂದಾರ, ಪಾರಿಜಾತ, ಪಾಟಲ, ಅಶೋಕ, ಸಂಪಿಗೆ, ಬಗೆ-ಬಗೆಯ ಹೂವುಗಳು, ಅಮಟೆ, ಮೊರಟೆ, ಮಾವು, ಹಲಸು, ಅಡಿಕೆ, ತೆಂಗು, ಖರ್ಜೂರ, ಮಾದಳ, ಹಿಪ್ಪೆ, ಸಾಲ, ತಾಳೆ, ಹೊಂಗೆ, ಹೊನ್ನೆಮರ, ಕೆಂಪುಮುತ್ತಿಮರ, ಅತ್ತಿಮರ, ಬಸರಿಮರ, ಆಲದಮರ, ಮುಳ್ಳುಮುತ್ತುಗ, ಶ್ರೀಗಂಧದ ಮರ, ಬೇವಿನಮರ, ಕೆಂಗಾಂಚಾಲ, ಸರಳ, ದೇವದಾರು, ದ್ರಾಕ್ಷಿ, ಕಬ್ಬು, ಬಾಳೆ, ನೇರಳೆ, ಎಲಚೀಮರ, ತಾಳಿಯಮರ, ರುದ್ರಾಕ್ಷಿಮರ, ಅಳಲೇಮರ, ನೆಲ್ಲಿ, ಬಿಲ್ವಪತ್ರೆ, ಬೇಲ, ನಿಂಬೆ, ಗೇರು ಮುಂತಾದ ಮರಗಳು ಸುತ್ತಲೂ ಕಳಕಳಿಸುತ್ತಿದ್ದವು. ಆ ಉದ್ಯಾನವನದಲ್ಲಿ ಒಂದು ಸುಂದರವಾದ ಮತ್ತು ವಿಸ್ತಾರವಾದ ಸರೋವರವು ಕಂಗೊಳಿಸುತ್ತಿತ್ತು. ಅದರಲ್ಲಿ ಚಿನ್ನದ ಬಣ್ಣದ ಕಮಲಗಳು ಅರಳಿ ಶೋಭಿಸುತ್ತಿದ್ದವು. ॥ ೧೦-೧೪ ॥ ಹಾಗೆಯೇ

ಕುಮುದೋತ್ಪಲಕಲ್ಹಾರಶತಪತ್ರಶ್ರಿಯೋರ್ಜಿತಮ್ ।
ಮತ್ತಷಟ್ಪದನಿರ್ಘುಷ್ಟಂ ಶಕುಂತೈಶ್ಚ ಕಲಸ್ವನೈಃ ॥ ೧೫ ॥

ಹಂಸಕಾರಂಡವಾಕೀರ್ಣಂ ಚಕ್ರಾಹ್ವೈಃ ಸಾರಸೈರಪಿ ।
ಜಲಕುಕ್ಕುಟಕೋಯಷ್ಟಿದಾತ್ಯೂಹಕುಲಕೂಜಿತಮ್ ॥ ೧೬ ॥

ಮತ್ಸ್ಯಕಚ್ಛಪಸಂಚಾರಚಲತ್ಪದ್ಮರಜಃಪಯಃ ।
ಕದಂಬವೇತಸನಲನೀಪವಂಜುಲಕೈರ್ವೃತಮ್ ॥ ೧೭ ॥

ಕುಂದೈಃ ಕುರಬಕಾಶೋಕೈಃ ಶಿರೀಷೈಃ ಕುಟಜೇಂಗುದೈಃ ।
ಕುಬ್ಜಕೈಃ ಸ್ವರ್ಣಯೂಥೀಭಿರ್ನಾಗಪುನ್ನಾಗಜಾತಿಭಿಃ ॥ ೧೮ ॥

ಮಲ್ಲಿಕಾಶತಪತ್ರೈಶ್ಚ ಮಾಧವೀಜಾಲಕಾದಿಭಿಃ ।
ಶೋಭಿತಂ ತೀರಜೈಶ್ಚಾನ್ಯೈರ್ನಿತ್ಯರ್ತುಭಿರಲಂ ದ್ರುಮೈಃ ॥ ೧೯ ॥

ತತ್ರೈಕದಾ ತದ್ಗಿರಿಕಾನನಾಶ್ರಯಃ
ಕರೇಣುಭಿರ್ವಾರಣಯೂಥಪಶ್ಚರನ್ ।
ಸಕಂಟಕಾನ್ಕೀಚಕವೇಣುವೇತ್ರವದ್
ವಿಶಾಲಗುಲ್ಮಂ ಪ್ರರುಜನ್ವನಸ್ಪತೀನ್ ॥ ೨೦ ॥

ಯದ್ಗಂಧಮಾತ್ರಾದ್ಧರಯೋ ಗಜೇಂದ್ರಾ
ವ್ಯಾಘ್ರಾದಯೋ ವ್ಯಾಲಮೃಗಾಃ ಸಖಡ್ಗಾಃ ।
ಮಹೋರಗಾಶ್ಚಾಪಿ ಭಯಾದ್ದ್ರವಂತಿ
ಸಗೌರಕೃಷ್ಣಾಃ ಶರಭಾಶ್ಚಮರ್ಯಃ ॥ ೨೧ ॥

ವೃಕಾ ವರಾಹಾ ಮಹಿಷರ್ಕ್ಷಶಲ್ಯಾ
ಗೋಪುಚ್ಛಸಾಲಾವೃಕಮರ್ಕಟಾಶ್ಚ ।
ಅನ್ಯತ್ರ ಕ್ಷುದ್ರಾ ಹರಿಣಾಃ ಶಶಾದಯ-
ಶ್ಚರಂತ್ಯಭೀತಾ ಯದನುಗ್ರಹೇಣ ॥ ೨೨ ॥

ಸ ಘರ್ಮತಪ್ತಃ ಕರಿಭಿಃ ಕರೇಣುಭಿ-
ರ್ವೃತೋ ಮದಚ್ಯುತ್ಕಲಭೈರನುದ್ರುತಃ ।
ಗಿರಿಂ ಗರಿಮ್ಣಾ ಪರಿತಃ ಪ್ರಕಂಪಯನ್
ನಿಷೇವ್ಯಮಾಣೋಽಲಿಕುಲೈರ್ಮದಾಶನೈಃ ॥ ೨೩ ॥

ಸರೋಽನಿಲಂ ಪಂಕಜರೇಣುರೂಷಿತಂ
ಜಿಘ್ರನ್ವಿದೂರಾನ್ಮದವಿಹ್ವಲೇಕ್ಷಣಃ ।
ವೃತಃ ಸ್ವಯೂಥೇನ ತೃಷಾರ್ದಿತೇನ ತತ್
ಸರೋವರಾಭ್ಯಾಶಮಥಾಗಮದ್ದ್ರುತಮ್ ॥ ೨೪ ॥

ಬೇರೆ-ಬೇರೆ ಜಾತಿಯ ಕುಮುದ, ಉತ್ಪಲ, ಕಲ್ಹಾರ, ಶತದಲ ಮುಂತಾದ ಕಮಲಗಳ ಕಾಂತಿಯು ಹರಡಿತ್ತು. ಮತ್ತೇರಿದ ದುಂಬಿಗಳು ಝೇಂಕರಿಸುತ್ತಿದ್ದವು. ಮನೋಹರ ಪಕ್ಷಿಗಳ ಕೂಜನವು ಎಲ್ಲೆಡೆ ಕೇಳಬರುತ್ತಿತ್ತು. ಹಂಸ, ನೀರುಹಕ್ಕಿ, ಚಕ್ರವಾಕ, ತಾವರೆಹಕ್ಕಿ, ನೀರುಕೋಳಿ, ಕೋಯಷ್ಟಿ, ನೀರುಕಾಗೆ ಮುಂತಾದವುಗಳು ಇಂಪಾಗಿ ಕಲ-ಕಲ ಧ್ವನಿಮಾಡುತ್ತಿದ್ದವು. ಮೀನು, ಆಮೆ ಮುಂತಾದ ಜಲಚರಪ್ರಾಣಿಗಳು ಓಡಾಡುವಾಗ ತಾವರೆಹೂಗಳು ಅಲುಗಾಡುತ್ತಾ ನೀರಿನಲ್ಲಿ ಪರಾಗವನ್ನು ಚೆಲ್ಲುತ್ತಿದ್ದವು. ಈಚಲ, ಬೆತ್ತ, ಜೊಂಡುಗಳು, ನೀರುಕಾರಂಜೀಮರ, ಹಬ್ಬೆಗಿಡ ಮುಂತಾದವು ಅದರ ಸುತ್ತಲೂ ಕಂಗೊಳಿಸುತ್ತಿದ್ದವು. ॥ ೧೫-೧೭ ॥ ಮಾಘದ ಮೊಲ್ಲೆ, ಮುಳ್ಳುಗೋರಂಟೆ, ಅಶೋಕವೃಕ್ಷ, ಬಾಗೆ, ಬೆಟ್ಟದಮಲ್ಲಿಗೆ ಹಿಪ್ಪೆ, ಕುಬ್ಜಕ, ಸ್ವರ್ಣಯೂಥಿ, ನಾಗ, ಪುನ್ನಾಗ, ಜಾಜಿ, ಮಲ್ಲಿಗೆ, ಮಾಧವೀ ಮುಂತಾದ ಹೂವುಗಳು ಎಲ್ಲ ಋತುಗಳಲ್ಲಿ ಅರಳಿ ತುಂಬಿದ ಸೊಂಪಾಗಿ ಹೂಮರಗಳಿಂದ ಆ ಸರೋವರವು ಶೋಭಾಯಮಾನವಾಗಿತ್ತು. ॥ ೧೮-೧೯ ॥

ಆ ಪರ್ವತದ ಘೋರಾರಣ್ಯದಲ್ಲಿ ಹಲವಾರು ಹೆಣ್ಣಾನೆಗಳೊಡನೆ ಒಂದು ಗಜೇಂದ್ರವು ವಾಸವಾಗಿತ್ತು. ಅದು ದೊಡ್ಡ-ದೊಡ್ಡ ಶಕ್ತಿಶಾಲಿ ಆನೆಗಳೆಲ್ಲ ನಾಯಕವಾಗಿತ್ತು. ಒಂದುದಿನ ಅದೇ ಪರ್ವತದಲ್ಲಿ ತನ್ನ ಸಂಗಾತಿಗಳಾದ ಹೆಣ್ಣಾನೆಗಳಿಂದ ಕೂಡಿಕೊಂಡು ಅರಣ್ಯದಲ್ಲಿದ್ದ ಮುಳ್ಳುಗಳಿಂದ ಕೂಡಿದ್ದ ಹಬ್ಬಿದಿರುಗಳನ್ನೂ, ಕಿರುಬಿದಿರುಗಳನ್ನೂ, ಬೆತ್ತಗಳನ್ನೂ, ದೊಡ್ಡ-ದೊಡ್ಡ ಪೊದರುಗಳನ್ನು ಧ್ವಂಸಮಾಡುತ್ತಾ ಸಂಚರಿಸುತ್ತಿತ್ತು. । ೨೦ ॥ ಅದರ ವಾಸನೆಯಿಂದಲೇ ಸಿಂಹ-ಆನೆ-ಹುಲಿ-ಚಿರತೆ ಮುಂತಾದ ಹಿಂಸ್ರಪ್ರಾಣಿಗಳು, ಸರ್ಪಗಳು, ಖಡ್ಗಮೃಗಗಳು, ಗೌರಮೃಗಗಳು, ಕೃಷ್ಣಸಾರ, ಶರಭಗಳು, ಚಮರೀಮೃಗಗಳು ಇನ್ನೂ ಅನೇಕ ದುಷ್ಟಮೃಗಗಳು ಓಡಿಹೋಗುತ್ತಿದ್ದವು. ॥ ೨೧ ॥ ತೋಳಗಳು, ಕಾಡುಹಂದಿ, ಕಾಡುಕೋಣಗಳು, ಕರಡಿಗಳು, ಮುಳ್ಳುಹಂದಿಗಳು, ಗೋಪುಚ್ಛಗಳು, ನಾಯಿಗಳು, ಕೋತಿಗಳು, ಹುಲ್ಲೆಗಳು, ಮೊಲಗಳು, ಇವೇ ಮುಂತಾದ ದುರ್ಬಲ ಪ್ರಾಣಿಗಳು ಗಜರಾಜನ ಕೃಪೆಯಿಂದ ನಿರ್ಭಯವಾಗಿ ಸಂಚರಿಸುತ್ತಿದ್ದವು. ॥ ೨೨ ॥ ಗಜರಾಜನ ಹಿಂದೆ-ಹಿಂದೆ ಸಣ್ಣ ಸಣ್ಣ ಆನೆಮರಿಗಳು ಓಡುತ್ತಿದ್ದವು. ದೊಡ್ಡ-ದೊಡ್ಡ ಗಂಡಾನೆಗಳೂ, ಹೆಣ್ಣಾನೆಗಳೂ, ಅವನನ್ನು ಸುತ್ತುವರಿದು ನಡೆಯುತ್ತಿದ್ದವು. ಅದರ ಭಾರವಾದ ಹೆಜ್ಜೆಗಳಿಂದ ಆ ಪರ್ವತವೇ ನಡುಗುತ್ತಿತ್ತು. ಅದರ ಗಂಡಸ್ಥಲದಿಂದ ಒಸರುತ್ತಿದ್ದ ಮದೋದಕವನ್ನು ಪಾನಮಾಡಲು ದುಂಬಿಗಳು ಜೊತೆ-ಜೊತೆಯಾಗಿಯೇ ಹಾರಾಡುತ್ತಿದ್ದವು. ಮದದಿಂದ ಅದರ ಕಣ್ಣುಗಳು ವಿಹ್ವಲವಾಗಿದ್ದುವು. ಬಿಸಿಲು ಭಾರೀ ಸುಡುತ್ತಿತ್ತು. ಆದರಿಂದ ಗಜರಾಜನು ವ್ಯಾಕುಲನಾಗಿದ್ದನು. ಅವನಿಗೆ ಮತ್ತು ಸಂಗಡಿಗರಿಗೆ ಬಾಯಾರಿಕೆ ಪೀಡಿಸುತ್ತಿತ್ತು. ಆಗ ದೂರದಿಂದಲೇ ಕಮಲ ಪರಾಗದಿಂದ ಸುವಾಸಿತವಾದ ವಾಯುವನ್ನು ಮೂಸುತ್ತಾ, ಶೀತಲವಾದ ಸುಗಂಧವನ್ನು ಹೊತ್ತುತರುತ್ತಿದ್ದ ವಾಯುವಿನ ಜಾಡನ್ನು ಹಿಡಿದು ಆ ಸರೋವರದ ಕಡೆಗೆ ಹೊರಟು, ವೇಗವಾಗಿ ನಡೆಯುತ್ತಾ ಕ್ಷಣದಲ್ಲೇ ಆ ಸರೋವರದ ಬಳಿಗೆ ಬಂದನು. ॥ ೨೩-೨೪ ॥

ವಿಗಾಹ್ಯ ತಸ್ಮಿನ್ನಮೃತಾಂಬು ನಿರ್ಮಲಂ
ಹೇಮಾರವಿಂದೋತ್ಪಲರೇಣುವಾಸಿತಮ್ ।
ಪಪೌ ನಿಕಾಮಂ ನಿಜಪುಷ್ಕರೋದ್ಧೃತ-
ಮಾತ್ಮಾನಮದ್ಭಿಃ ಸ್ನಪಯನ್ಗತಕ್ಲಮಃ ॥ ೨೫ ॥

ಸ್ವಪುಷ್ಕರೇಣೋದ್ಧೃತಶೀಕರಾಂಬುಭಿ-
ರ್ನಿಪಾಯಯನ್ಸಂಸ್ನಪಯನ್ಯಥಾ ಗೃಹೀ ।
ಘೃಣೀ ಕರೇಣೂಃ ಕಲಭಾಂಶ್ಚ ದುರ್ಮದೋ
ನಾಚಷ್ಟ ಕೃಚ್ಛ್ರಂ ಕೃಪಣೋಽಜಮಾಯಯಾ ॥ ೨೬ ॥

ತಂ ತತ್ರ ಕಶ್ಚಿನ್ನೃಪ ದೈವಚೋದಿತೋ-
ಗ್ರಾಹೋ ಬಲೀಯಾಂಶ್ಚರಣೇ ರುಷಾಗ್ರಹೀತ್ ।
ಯದೃಚ್ಛಯೈವಂ ವ್ಯಸನಂ ಗತೋ ಗಜೋ
ಯಥಾಬಲಂ ಸೋಽತಿಬಲೋ ವಿಚಕ್ರಮೇ ॥ ೨೭ ॥

ತಥಾಽಽತುರಂ ಯೂಥಪತಿಂ ಕರೇಣವೋ
ವಿಕೃಷ್ಯಮಾಣಂ ತರಸಾ ಬಲೀಯಸಾ ।
ವಿಚುಕ್ರುಶುರ್ದೀನಧಿಯೋಽಪರೇ ಗಜಾಃ
ಪಾರ್ಷ್ಣಿಗ್ರಹಾಸ್ತಾರಯಿತುಂ ನ ಚಾಶಕನ್ ॥ ೨೮ ॥

ನಿಯುಧ್ಯತೋರೇವಮಿಭೇಂದ್ರನಕ್ರಯೋ-
ರ್ವಿಕರ್ಷತೋರಂತರತೋ ಬಹಿರ್ಮಿಥಃ ।
ಸಮಾಃ ಸಹಸ್ರಂ ವ್ಯಗಮನ್ಮಹೀಪತೇ
ಸಪ್ರಾಣಯೋಶ್ಚಿತ್ರಮಮಂಸತಾಮರಾಃ ॥ ೨೯ ॥

ತತೋ ಗಜೇಂದ್ರಸ್ಯ ಮನೋಬಲೌಜಸಾಂ
ಕಾಲೇನ ದೀರ್ಘೇಣ ಮಹಾನಭೂದ್ವ್ಯಯಃ ।
ವಿಕೃಷ್ಯಮಾಣಸ್ಯ ಜಲೇಽವಸೀದತೋ
ವಿಪರ್ಯಯೋಽಭೂತ್ಸಕಲಂ ಜಲೌಕಸಃ ॥ ೩೦ ॥

ಆ ಸರೋವರದ ನೀರು ಅತ್ಯಂತ ನಿರ್ಮಲವೂ, ಅಮೃತದಂತೆಯೂ ಮಧುರವಾಗಿತ್ತು. ಚಿನ್ನದ ಕಮಲದ ಮತ್ತು ಕನ್ನೈದಿಲೆಯ ಪರಾಗದಿಂದ ಸುಗಂಧಿತವಾಗಿತ್ತು. ಗಜೇಂದ್ರನು ಮೊದಲಿಗೆ ಆ ಸರೋವರದಲ್ಲಿ ಇಳಿದು ತನ್ನ ಸೊಂಡಿಲಿನಿಂದ ನೀರನ್ನು ಎತ್ತಿ-ಎತ್ತಿ ಯಥೇಚ್ಛವಾಗಿ ಕುಡಿದನು. ಮತ್ತೆ ಆ ನೀರಿನಲ್ಲಿ ಸ್ನಾನಮಾಡಿ ತನ್ನ ದಣಿವನ್ನು ಇಂಗಿಸಿಕೊಂಡನು. ॥ ೨೫ ॥ ಗಜೇಂದ್ರನು ಗೃಹಸ್ಥ ಮನುಷ್ಯನಂತೆ ಮೋಹಗ್ರಸ್ತನಾಗಿ ತನ್ನ ಸೊಂಡಿಲಿನಿಂದ ನೀರನ್ನೆತ್ತಿ ಚೆಲ್ಲುತ್ತಾ ಸಂಗಡಿಗರಾದ ಹೆಣ್ಣಾನೆಗಳನ್ನು, ಮರಿಗಳನ್ನು ಸ್ನಾನಮಾಡಿಸತೊಡಗಿದನು. ಹಾಗೂ ಅವರ ಸೊಂಡಿಲಿನೊಳಗೆ ತನ್ನ ಸೊಂಡಿಲನ್ನು ಹಾಕಿ ನೀರು ಕುಡಿಸಿದನು. ಭಗವಂತನ ಮಾಯೆಯಿಂದ ಮೋಹಿತನಾದ ಗಜೇಂದ್ರನು ಉನ್ಮತ್ತನಾಗಿದ್ದನು. ತನ್ನ ತಲೆಯಮೇಲೆ ದೊಡ್ಡ ಆಪತ್ತು ಹೊಂಚು ಹಾಕುತ್ತಿದೆ ಎಂಬುದೂ ಆ ಬಡಪಾಯಿಗೆ ತಿಳಿದಿರಲಿಲ್ಲ. ॥ ೨೬ ॥

ಪರೀಕ್ಷಿತನೇ! ಗಜೇಂದ್ರನು ಇಷ್ಟೊಂದು ಉನ್ಮತ್ತನಾಗಿದ್ದಾಗ ಪ್ರಾರಬ್ಧದ ಪ್ರೇರಣೆಯಿಂದ ಒಂದು ಬಲಿಷ್ಠವಾದ ಮೊಸಳೆಯು, ಆನೆಗಳ ತುಳಿತದಿಂದ ಕ್ರೋಧಗೊಂಡು ಗಜೇಂದ್ರನ ಕಾಲನ್ನು ಬಲವಾಗಿ ಹಿಡಿದುಬಿಟ್ಟಿತು. ಈ ವಿಧವಾಗಿ ಅಕಸ್ಮಾತ್ತಾಗಿ ವಿಪತ್ತಿಗೆ ಸಿಲುಕಿದ ಆ ಬಲಶಾಲಿಯಾದ ಗಜೇಂದ್ರನು ತನ್ನನ್ನು ಬಿಡಿಸಿಕೊಳ್ಳಲು ಬಹಳವಾಗಿ ಪ್ರಯತ್ನಿಸಿದನು. ಆದರೆ ಬಿಡಿಸಿಕೊಳ್ಳದಾದನು. ॥ ೨೭ ॥ ಬೇರೆ ಗಂಡಾನೆಗಳು, ಹೆಣ್ಣಾನೆಗಳು, ಮರಿಗಳು – ತಮ್ಮ ಒಡೆಯನನ್ನು ಬಲಿಷ್ಠವಾದ ಒಂದು ಮೊಸಳೆಯು ಹಿಡಿದು ವೇಗವಾಗಿ ಸೆಳೆಯುತ್ತಿದೆ ಮತ್ತು ಅವನು ಬಹಳ ಸಂಕಟಕ್ಕೊಳಗಾಗಿದ್ದಾನೆಂದು ನೋಡಿ ಅವುಗಳಿಗೆ ತುಂಬಾ ದುಃಖವಾಯಿತು. ಅವುಗಳೆಲ್ಲವೂ ಆರ್ತರಾಗಿ ಘೀಳಿಟ್ಟವು. ಅನೇಕರು ಅವನಿಗೆ ಸಹಾಯಮಾಡಿ ನೀರಿನಿಂದ ಹೊರಗೆ ತೆಗೆಯಲು ಬಯಸಿದರು, ಆದರೆ ಅವರೆಲ್ಲರೂ ಅಸಮರ್ಥರೇ ಆದರು. ॥ ೨೮ ॥ ಗಜೇಂದ್ರ ಮತ್ತು ಮೊಸಳೆಯು ತಮ್ಮ-ತಮ್ಮ ಪೂರ್ಣ ಶಕ್ತಿಯಿಂದ ಸೆಣಸಾಡುತ್ತಿದ್ದರು. ಕೆಲವೊಮ್ಮೆ ಗಜೇಂದ್ರನು ಮೊಸಳೆಯನ್ನು ಹೊರಗೆ ಎಳೆದರೆ, ಕೆಲವೊಮ್ಮೆ ಮೊಸಳೆಯು ನೀರಿನೊಳಗೆ ಸೆಳೆದುಬಿಡುತ್ತಿತ್ತು. ಪರೀಕ್ಷಿತನೇ! ಹೀಗೆ ಕಾದಾಡುತ್ತಾ-ಕಾದಾಡುತ್ತಾ ಒಂದು ಸಾವಿರ ವರ್ಷಗಳು ಕಳೆದವು ಮತ್ತು ಇಬ್ಬರು ಸೋಲುತ್ತಾ-ಗೆಲ್ಲುತ್ತಾ ಇದ್ದರು. ಈ ಘಟನೆಯನ್ನು ನೋಡಿದ ದೇವತೆಗಳೂ ಆಶ್ಚರ್ಯಚಕಿತರಾದರು. ॥ ೨೯ ॥

ಕೊನೆಗೆ ಬಹಳ ದಿನಗಳವರೆಗೆ ಮತ್ತೆ-ಮತ್ತೆ ನೀರಿಗೆ ಸೆಳೆಯಲ್ಪಟ್ಟದ್ದರಿಂದ ಗಜೇಂದ್ರನ ಶರೀರವು ಶಿಥಿಲವಾಗ ತೊಡಗಿತು. ಅವನ ಮನಸ್ಸಿನಲ್ಲಿ ಉತ್ಸಾಹವೂ, ದೇಹದಲ್ಲಿ ಬಲವು ಉಳಿಯಲಿಲ್ಲ, ಶಕ್ತಿಯೂ ಕ್ಷೀಣವಾಯಿತು. ಇತ್ತ ಮೊಸಳೆಯಾದರೋ ಹೇಳಿ-ಕೇಳಿ ಜಲಚರನಾಗಿದ್ದ. ಆದರ ಶಕ್ತಿಯು ಕುಗ್ಗುವ ಬದಲು ಹೆಚ್ಚುತ್ತಾಹೋಯಿತು. ಅದು ಅತೀವ ಉತ್ಸಾಹದಿಂದ ಇನ್ನೂ ಬಲವನ್ನು ಹಾಕಿ ಗಜೇಂದ್ರನನ್ನು ಸೆಳೆಯತೊಡಗಿತು. ॥ ೩೦ ॥ ಹೀಗೆ ದೇಹಾಭಿಮಾನಿಯಾದ ಗಜೇಂದ್ರನು ಅಕಸ್ಮಾತ್ತಾಗಿ ಸಂಕಟದಲ್ಲಿ ಬಿದ್ದು ತನ್ನನ್ನು ಬಿಡಿಸಿಕೊಳ್ಳುವುದರಲ್ಲಿ ಪೂರ್ಣವಾಗಿ ಅಸಮರ್ಥನಾದನು. ಬಹಳ ಹೊತ್ತಿನವರೆಗೆ ತನ್ನ ಬಿಡುಗಡೆಯ

ಇತ್ಥಂ ಗಜೇಂದ್ರಃ ಸ ಯದಾಽಽಪ ಸಂಕಟಂ
ಪ್ರಾಣಸ್ಯ ದೇಹೀ ವಿವಶೋ ಯದೃಚ್ಛಯಾ ।
ಅಪಾರಯನ್ನಾತ್ಮವಿಮೋಕ್ಷಣೇ ಚಿರಂ
ದಧ್ಯಾವಿಮಾಂ ಬುದ್ಧಿಮಥಾಭ್ಯಪದ್ಯತ ॥ ೩೧ ॥

ನ ಮಾಮಿಮೇ ಜ್ಞಾತಯ ಆತುರಂ ಗಜಾಃ
ಕುತಃ ಕರಿಣ್ಯಃ ಪ್ರಭವಂತಿ ಮೋಚಿತುಮ್ ।
ಗ್ರಾಹೇಣ ಪಾಶೇನ ವಿಧಾತುರಾವೃತೋಽ-
ಪ್ಯಹಂ ಚ ತಂ ಯಾಮಿ ಪರಂ ಪರಾಯಣಮ್ ॥ ೩೨ ॥

ಯಃ ಕಶ್ಚನೇಶೋ ಬಲಿನೋಽಂತಕೋರಗಾತ್
ಪ್ರಚಂಡವೇಗಾದಭಿಧಾವತೋ ಭೃಶಮ್ ।
ಭೀತಂ ಪ್ರಪನ್ನಂ ಪರಿಪಾತಿ ಯದ್ಭಯಾ-
ನ್ಮೃತ್ಯುಃ ಪ್ರಧಾವತ್ಯರಣಂ ತಮೀಮಹಿ ॥ ೩೩ ॥

ಬಗ್ಗೆ ಯೋಚಿಸಿ, ಕೊನೆಗೆ ಅವನು ಈ ನಿಶ್ಚಯಕ್ಕೆ ತಲುಪಿದನು. ॥ ೩೧॥ ಈ ನಕ್ರ (ಮೊಸಳೆ)ವು ವಿಧಾತನ ಉರುಳೇ ಆಗಿದೆ. ಇದರಲ್ಲಿ ಸಿಕ್ಕಿಕೊಂಡು ಸಂಕಟಕ್ಕೊಳಗಾದ ನನ್ನನ್ನು ನನ್ನ ಜೊತೆಯವರಾದ ಆನೆಗಳೇ ಈ ವಿಪತ್ತಿನಿಂದ ಎತ್ತಲಾರದೆ ಹೋದಾಗ ಬಡಪಾಯಿಗಳಾದ ಹೆಣ್ಣಾನೆಗಳೂ ಹೇಗೆ ತಾನೇ ಬಿಡಿಸಬಲ್ಲರು ? ಅದಕ್ಕಾಗಿ ನಾನು ಈಗ ಸಮಸ್ತ ವಿಶ್ವದ ಏಕೈಕ ಆಶ್ರಯನಾದ ಭಗವಂತನನ್ನೇ ಶರಣು ಹೊಂದುವೆನು. ॥ ೩೨ ॥ ಕಾಲವು ಭಾರೀ ಬಲಿಷ್ಠವಾಗಿದೆ. ಇದು ಸರ್ಪದಂತೆ ಅತ್ಯಂತ ಪ್ರಚಂಡ ವೇಗದಿಂದ ಎಲ್ಲರನ್ನೂ ನುಂಗಲು ಓಡುತ್ತಾ ಇರುತ್ತದೆ. ಇದಕ್ಕೆ ಭಯಗೊಂಡು ಯಾರಾದರೂ ಭಗವಂತನಲ್ಲಿ ಶರಣಾದರೆ ಅವನನ್ನು ಆ ಪ್ರಭುವು ಖಂಡಿತವಾಗಿ ಮೃತ್ಯುವಿನಿಂದ ಕಾಪಾಡುತ್ತಾನೆ. ಅವನ ಭಯದಿಂದಲೇ ಹೆದರಿ ಕಾಲವೂ ಕೂಡ ಓಡಿಹೋಗುತ್ತದೆ. ಆ ಪ್ರಭುವೇ ಎಲ್ಲರ ಆಶ್ರಯನಾಗಿದ್ದಾನೆ. ನಾನು ಅವನನ್ನೇ ಶರಣು ಹೊಂದುತ್ತೇನೆ. ॥ ೩೩ ॥

ಎರಡನೆಯ ಅಧ್ಯಾಯವು ಮುಗಿಯಿತು. ॥ ೨ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಅಷ್ಟಮಸ್ಕಂಧೇ ಮನ್ವಂತರಾನುವರ್ಣನೇ ಗಜೇಂದ್ರೋಪಾಖ್ಯಾನೇ ದ್ವಿತೀಯೋಽಧ್ಯಾಯಃ ॥ ೨ ॥

ಮೂರನೆಯ ಅಧ್ಯಾಯ

ಗಜೇಂದ್ರನು ಮಾಡಿದ ಪರಮಾತ್ಮನ ಸ್ತೋತ್ರ – ಗಜೇಂದ್ರಮೋಕ್ಷ

ಶ್ರೀಶುಕ ಉವಾಚ

ಏವಂ ವ್ಯವಸಿತೋ ಬುದ್ಧ್ಯಾ ಸಮಾಧಾಯ ಮನೋ ಹೃದಿ ।
ಜಜಾಪ ಪರಮಂ ಜಾಪ್ಯಂ ಪ್ರಾಗ್ಜನ್ಮನ್ಯನುಶಿಕ್ಷಿತಮ್ ॥ ೧ ॥

ಗಜೇಂದ್ರ ಉವಾಚ

ಓಂ ನಮೋ ಭಗವತೇ ತಸ್ಮೈ ಯತ ಏತಚ್ಚಿದಾತ್ಮಕಮ್ ।
ಪುರುಷಾಯಾದಿಬೀಜಾಯ ಪರೇಶಾಯಾಭಿಧೀಮಹಿ ॥ ೨ ॥

ಯಸ್ಮಿನ್ನಿದಂ ಯತಶ್ಚೇದಂ ಯೇನೇದಂ ಯ ಇದಂ ಸ್ವಯಮ್ ।
ಯೋಽಸ್ಮಾತ್ಪರಸ್ಮಾಚ್ಚ ಪರಸ್ತಂ ಪ್ರಪದ್ಯೇ ಸ್ವಯಂಭುವಮ್ ॥ ೩ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಎಲೈ ಪರೀಕ್ಷಿತನೇ ! ಗಜೇಂದ್ರನು ಹೀಗೆ ದಯಾಮಯನಾದ ಭಗವಂತನನ್ನೇ ಶರಣುಹೊಂದಲು ನಿಶ್ಚಯಿಸಿ, ತನ್ನ ಮನಸ್ಸನ್ನು ಹೃದಯದಲ್ಲಿ ಏಕಾಗ್ರಗೊಳಿಸಿ, ಹಿಂದಿನ ಜನ್ಮದಲ್ಲಿ ಉಪದಿಷ್ಟನಾಗಿದ್ದ ಶ್ರೇಷ್ಠವಾದ ಸ್ತೋತ್ರದ ಮೂಲಕ ಭಗವಂತನನ್ನು ಸ್ತುತಿಸತೊಡಗಿದನು. ॥ ೧ ॥

ಗಜೇಂದ್ರನು ಹೇಳುತ್ತಾನೆ – ಯಾರು ಜಗತ್ತಿಗೆ ಮೂಲ ಕಾರಣನೋ, ಎಲ್ಲರ ಹೃದಯದಲ್ಲಿ ಪರಮಪುರುಷನ ರೂಪದಲ್ಲಿ ವಿರಾಜಮಾನನಾಗಿರುವನೋ, ಯಾರು ಸಮಸ್ತ ಜಗತ್ತಿನ ಏಕಮಾತ್ರ ಸ್ವಾಮಿಯಾಗಿರುವನೋ, ಯಾರ ಕಾರಣದಿಂದ ಈ ಪ್ರಪಂಚದಲ್ಲಿ ಚೈತನ್ಯದ ವಿಸ್ತಾರವಾಗುತ್ತದೋ, ಅಂತಹ ಸಚ್ಚಿದಾನಂದ ಸ್ವರೂಪೀ ಪರಮಾತ್ಮನಿಗೆ ನಾನು ನಮಸ್ಕರಿಸುತ್ತೇನೆ , ಪ್ರೇಮದಿಂದ ಅವನನ್ನು ಧ್ಯಾನಿಸುತ್ತೇನೆ. ॥ ೨ ॥ ಈ ಸಮಸ್ತ ಜಗತ್ತು ಅವನಲ್ಲೇ ನೆಲೆಸಿದೆ. ಅವನ ಅಸ್ತಿತ್ವದಿಂದಲೇ ಗೋಚರಿಸುತ್ತಾ ಇದೆ. ಅವನೇ ಇದರಲ್ಲಿ ವ್ಯಾಪಿಸಿಕೊಂಡಿರುವನು ಮತ್ತು ಸ್ವತಃ ಅವನೇ ಇದರ ರೂಪದಲ್ಲಿ ಪ್ರಕಟನಾಗಿರುವನು. ಹೀಗಿದ್ದರೂ ಅವನು ಈ ಜಗತ್ತಿನಿಂದಲೂ, ಇದರ ಕಾರಣ – ಪ್ರಕೃತಿಯಿಂದ ಬೇರೆಯೇ ಆಗಿರುವನು. ಅಂತಹ ಸ್ವಯಂಪ್ರಕಾಶನೂ, ಸ್ವಯಂಸಿದ್ಧನೂ, ಸರ್ವಾತ್ಮಕನೂ ಆದ ಪರಮಾತ್ಮನಲ್ಲಿ ನಾನು ಶರಣಾಗುತ್ತೇನೆ. ಮೊರೆಹೋಗುತ್ತೇನೆ. ॥ ೩ ॥

ಯಃ ಸ್ವಾತ್ಮನೀದಂ ನಿಜಮಾಯಯಾರ್ಪಿತಂ
ಕ್ವಚಿದ್ವಿಭಾತಂ ಕ್ವ ಚ ತತ್ತಿರೋಹಿತಮ್ ।
ಅವಿದ್ಧದೃಕ್ಸಾಕ್ಷ್ಯುಭಯಂ ತದೀಕ್ಷತೇ
ಸ ಆತ್ಮಮೂಲೋಽವತು ಮಾಂ ಪರಾತ್ಪರಃ ॥ ೪ ॥

ಕಾಲೇನ ಪಂಚತ್ವಮಿತೇಷು ಕೃತ್ಸ್ನಶೋ
ಲೋಕೇಷು ಪಾಲೇಷು ಚ ಸರ್ವಹೇತುಷು ।
ತಮಸ್ತದಾಽಽಸೀದ್ಗಹನಂ ಗಭೀರಂ
ಯಸ್ತಸ್ಯ ಪಾರೇಽಭಿವಿರಾಜತೇ ವಿಭುಃ ॥ ೫ ॥

ನ ಯಸ್ಯ ದೇವಾ ಋಷಯಃ ಪದಂ ವಿದು-
ರ್ಜಂತುಃ ಪುನಃ ಕೋಽರ್ಹತಿ ಗಂತುಮೀರಿತುಮ್ ।
ಯಥಾ ನಟಸ್ಯಾಕೃತಿಭಿರ್ವಿಚೇಷ್ಟತೋ
ದುರತ್ಯಯಾನುಕ್ರಮಣಃ ಸ ಮಾವತು ॥ ೬ ॥

ದಿದೃಕ್ಷವೋ ಯಸ್ಯ ಪದಂ ಸುಮಂಗಲಂ
ವಿಮುಕ್ತಸಂಗಾ ಮುನಯಃ ಸುಸಾಧವಃ ।
ಚರಂತ್ಯಲೋಕವ್ರತಮವ್ರಣಂ ವನೇ
ಭೂತಾತ್ಮಭೂತಾಃ ಸುಹೃದಃ ಸ ಮೇ ಗತಿಃ ॥ ೭ ॥

ನ ವಿದ್ಯತೇ ಯಸ್ಯ ಚ ಜನ್ಮ ಕರ್ಮ ವಾ
ನ ನಾಮರೂಪೇ ಗುಣದೋಷ ಏವ ವಾ ।
ತಥಾಪಿ ಲೋಕಾಪ್ಯಯಸಂಭವಾಯ ಯಃ
ಸ್ವಮಾಯಯಾ ತಾನ್ಯನುಕಾಲಮೃಚ್ಛತಿ ॥ ೮ ॥

ತಸ್ಮೈ ನಮಃ ಪರೇಶಾಯ ಬ್ರಹ್ಮಣೇಽನಂತಶಕ್ತಯೇ ।
ಅರೂಪಾಯೋರುರೂಪಾಯ ನಮ ಆಶ್ಚರ್ಯಕರ್ಮಣೇ ॥ ೯ ॥

ನಮ ಆತ್ಮಪ್ರದೀಪಾಯ ಸಾಕ್ಷಿಣೇ ಪರಮಾತ್ಮನೇ ।
ನಮೋ ಗಿರಾಂ ವಿದೂರಾಯ ಮನಸಶ್ಚೇತಸಾಮಪಿ ॥ ೧೦ ॥

ಈ ಪ್ರಪಂಚವು ಅವನ ಮಾಯೆಯಿಂದ ಅವನಲ್ಲಿಯೇ ಇಡಲ್ಪಟ್ಟಿದೆ. ಆದರೆ ಕೆಲವು ವೇಳೆ (ಸೃಷ್ಟಿಯ ಕಾಲದಲ್ಲಿ) ಕಾಣಿಸಿಕೊಳ್ಳುತ್ತದೆ. ಕೆಲವು ವೇಳೆ (ಪ್ರಳಯಕಾಲದಲ್ಲಿ) ಅದೃಶ್ಯವಾಗಿರುತ್ತದೆ. ಆದರೆ ಅವನ ದೃಷ್ಟಿಯು ಲೋಪವಾಗುವುದಿಲ್ಲ. ಸಾಕ್ಷಿಭೂತನಾಗಿ ಪ್ರಪಂಚದ ಸೃಷ್ಟಿಯನ್ನೂ, ಲಯವನ್ನೂ ನೋಡುತ್ತಲೇ ಇರುತ್ತಾನೆ. ಅಂತಹ ಆತ್ಮನೇ ಮೂಲವಾಗಿ ಉಳ್ಳ, ಎಲ್ಲದರಲ್ಲಿಯೂ ಆತ್ಮಸ್ವರೂಪದಿಂದ ಇರುವ ಸ್ವಯಂಪ್ರಕಾಶನಾದ ಪರಾತ್ಪರನಾದ ಪರಮಾತ್ಮನು ನನ್ನನ್ನು ರಕ್ಷಿಸಲಿ. ॥ ೪ ॥ ಎರಡು ಪರಾರ್ಧಗಳು ಕಳೆದೊಡನೆಯೇ ಎಲ್ಲ ಲೋಕಗಳು – ಲೋಕಪಾಲರು ಮತ್ತು ಇವೆಲ್ಲದರ ಕಾರಣವು ಸಂಪೂರ್ಣವಾಗಿ ಲಯ ಹೊಂದುವುದು. ಆಗ ಕೇವಲ ಅತ್ಯಂತ ಗಾಢವಾದ ಗಹನವಾದ ಅಂಧಕಾರವೇ ಎಲ್ಲೆಡೆ ಹರಡಿಕೊಂಡಿರುತ್ತದೆ. ಆದರೆ ಅನಂತವಾದ ಪರಮಾತ್ಮನು ಅದರಿಂದ ತೀರಾ ಬೇರೆಯೇ ಆಗಿದ್ದು ಪ್ರಕಾಶಿಸುತ್ತಿರುವನು. ಅಂತಹ ಆದಿತ್ಯವರ್ಣನಾದ ಪ್ರಭುವು ನನ್ನನ್ನು ರಕ್ಷಿಸಲಿ. ॥ ೫ ॥ ಅವನ ಸ್ಥಾನವನ್ನು ದೇವತೆಗಳಾಗಲೀ, ಋಷಿಗಳಾಗಲೀ ತಿಳಿಯಲಾರರು. ಅಂತಹವರ ಪದವನ್ನು ಸಾಮಾನ್ಯರಾದವರು ಹೊಂದಲು ಮತ್ತು ಅದು ಹೀಗೆಯೇ ಇದೆ ಎಂದು ಹೇಳಲು ಹೇಗೆ ಸಮರ್ಥರಾಗುವರು? ನಿಜರೂಪವನ್ನು ಮರೆಸಿ ನಾನಾ ವೇಷಗಳನ್ನು ಹಾಕಿಕೊಂಡು ಕುಣಿಯುವ ನಟನಂತೆ ತಿಳಿಯಲು ಅಸಾಧ್ಯವಾದ ಲೀಲೆಗಳಿಂದ ಕೂಡಿದವನಾಗಿ, ನಾನಾ ಅವತಾರಗಳನ್ನು ಹೊಂದುವ ಆ ಪರಮಾತ್ಮನು ನನ್ನನ್ನು ರಕ್ಷಿಸಲಿ. ॥ ೬ ॥ ಯಾವನ ಪರಮ ಮಂಗಲಮಯ ಸ್ವರೂಪವನ್ನು ಸಂದರ್ಶಿಸಲು ಮಹರ್ಷಿಗಳು ಸಂಸಾರದ ಸಮಸ್ತ ಆಸಕ್ತಿಗಳನ್ನು ಪರಿತ್ಯಜಿಸಿ ಅರಣ್ಯಕ್ಕೆ ಹೋಗಿ ನಿರಂತರವಾಗಿ ಬ್ರಹ್ಮಚರ್ಯವೇ ಮುಂತಾದ ಅಲೌಕಿಕ ವ್ರತಗಳನ್ನು ಪಾಲಿಸುವರೋ, ತಮ್ಮ ಆತ್ಮನನ್ನು ಎಲ್ಲರ ಹೃದಯದಲ್ಲಿ ವಿರಾಜಿಸುತ್ತಿರುವುದನ್ನು ನೋಡಿ ಸ್ವಾಭಾವಿಕವಾಗಿಯೇ ಎಲ್ಲರಿಗೂ ಒಳ್ಳೆಯದನ್ನು ಮಾಡುವರೋ, ಆ ಮುನಿಗಳ ಸರ್ವಸ್ವನಾದ ಭಗವಂತನು ನನಗೆ ಸಹಾಯಕನಾಗಿರುವನು. ಅವನೇ ನನಗೆ ಪರಮ ಗತಿಯು. ॥ ೭ ॥ ಯಾವನಿಗೆ ಜನ್ಮ-ಕರ್ಮಗಳಾಗಲೀ, ನಾಮ-ರೂಪಗಳಾಗಲೀ, ಇಲ್ಲವೋ, ಅವನ ಸಂಬಂಧವಾಗಿ ಗುಣ-ದೋಷಗಳನ್ನು ಹೇಗೆ ತಾನೇ ಕಲ್ಪಿಸಬಹುದು? ಹೀಗಿದ್ದರೂ ವಿಶ್ವದ ಸೃಷ್ಟಿ ಮತ್ತು ಸಂಹಾರಮಾಡಲಿಕ್ಕಾಗಿ ಆಯಾ-ಕಾಲಕ್ಕೆ ಅವನು ತನ್ನ ಮಾಯೆಯನ್ನು ಸ್ವೀಕರಿಸಿ ಅವತರಿಸುವನು. ಅಂತಹ ಸಚ್ಚಿದಾನಂದ ಪರಮಾತ್ಮನು ನನ್ನನ್ನು ರಕ್ಷಿಸಲಿ. ॥ ೮ ॥ ಬ್ರಹ್ಮನೇ ಮೊದಲಾದವರಿಗೆ ಈಶನಾದ, ಅನಂತಶಕ್ತಿಯಾದ, ಸರ್ವೈಶ್ವರ್ಯ ಸಂಪನ್ನನಾದ ಪರಬ್ರಹ್ಮಪರಮಾತ್ಮನಿಗೆ ನಾನು ನಮಸ್ಕರಿಸುತ್ತೇನೆ. ಅವನು ಅರೂಪನಾಗಿದ್ದರೂ ಬಹುರೂಪಿಯಾಗಿದ್ದಾನೆ. ಅವನ ಕರ್ಮಗಳು ಅತ್ಯಂತ ಆಶ್ಚರ್ಯಮಯವಾಗಿವೆ. ಅಂತಹವನ ಚರಣಗಳಿಗೆ ನಾನು ನಮಸ್ಕರಿಸುತ್ತೇನೆ. ॥ ೯ ॥ ಸ್ವಯಂ ಪ್ರಕಾಶನೂ, ಎಲ್ಲರ ಸಾಕ್ಷಿಯೂ ಆದ ಪರಮಾತ್ಮನಿಗೆ ನಾನು ನಮಸ್ಕರಿಸುತ್ತೇನೆ. ಮಾತು, ಮನಸ್ಸು ಮತ್ತು ಬುದ್ಧಿಗಳಿಗಿಂತ ಅತ್ಯಂತ ದೂರನಾದ ಆ ಪರಮಾತ್ಮನಿಗೆ ನಾನು ನಮಸ್ಕರಿಸುತ್ತೇನೆ. ॥ ೧೦ ॥

ಸತ್ತ್ವೇನ ಪ್ರತಿಲಭ್ಯಾಯ ನೈಷ್ಕರ್ಮ್ಯೇಣ ವಿಪಶ್ಚಿತಾ ।
ನಮಃ ಕೈವಲ್ಯನಾಥಾಯ ನಿರ್ವಾಣಸುಖಸಂವಿದೇ ॥ ೧೧ ॥

ನಮಃ ಶಾಂತಾಯ ಘೋರಾಯ ಮೂಢಾಯ ಗುಣಧರ್ಮಿಣೇ ।
ನಿರ್ವಿಶೇಷಾಯ ಸಾಮ್ಯಾಯ ನಮೋ ಜ್ಞಾನಘನಾಯ ಚ ॥ ೧೨ ॥

ಕ್ಷೇತ್ರಜ್ಞಾಯ ನಮಸ್ತುಭ್ಯಂ ಸರ್ವಾಧ್ಯಕ್ಷಾಯ ಸಾಕ್ಷಿಣೇ ।
ಪುರುಷಾಯಾತ್ಮಮೂಲಾಯ ಮೂಲಪ್ರಕೃತಯೇ ನಮಃ ॥ ೧೩ ॥

ಸರ್ವೇಂದ್ರಿಯಗುಣದ್ರಷ್ಟ್ರೇ ಸರ್ವಪ್ರತ್ಯಯಹೇತವೇ ।
ಅಸತಾ ಚ್ಛಾಯಯೋಕ್ತಾಯ ಸದಾಭಾಸಾಯ ತೇ ನಮಃ ॥ ೧೪ ॥

ನಮೋ ನಮಸ್ತೇಽಖಿಲಕಾರಣಾಯ
ನಿಷ್ಕಾರಣಾಯಾದ್ಭುತಕಾರಣಾಯ ।
ಸರ್ವಾಗಮಾಮ್ನಾಯಮಹಾರ್ಣವಾಯ
ನಮೋಽಪವರ್ಗಾಯ ಪರಾಯಣಾಯ ॥ ೧೫ ॥

ಗುಣಾರಣಿಚ್ಛನ್ನಚಿದೂಷ್ಮಪಾಯ
ತತ್ಕ್ಷೋಭವಿಸ್ಫೂರ್ಜಿತಮಾನಸಾಯ ।
ನೈಷ್ಕರ್ಮ್ಯಭಾವೇನ ವಿವರ್ಜಿತಾಗಮ-
ಸ್ವಯಂಪ್ರಕಾಶಾಯ ನಮಸ್ಕರೋಮಿ ॥ ೧೬ ॥

ಮಾದೃಕ್ಪ್ರಪನ್ನಪಶುಪಾಶವಿಮೋಕ್ಷಣಾಯ
ಮುಕ್ತಾಯ ಭೂರಿಕರುಣಾಯ ನಮೋಽಲಯಾಯ ।
ಸ್ವಾಂಶೇನ ಸರ್ವತನುಭೃನ್ಮನಸಿ ಪ್ರತೀತ-
ಪ್ರತ್ಯಗ್ದೃಶೇ ಭಗವತೇ ಬೃಹತೇ ನಮಸ್ತೇ ॥ ೧೭ ॥

ವಿವೇಕಿಗಳಾದವರು ಕರ್ಮಸಂನ್ಯಾಸದಿಂದ ಅಥವಾ ಕರ್ಮ-ಸಮರ್ಪಣೆಯ ಮೂಲಕ ತಮ್ಮ ಅಂತಃಕರಣವನ್ನು ಶುದ್ಧಗೊಳಿಸಿಕೊಂಡು ಯಾರನ್ನು ಪಡೆದುಕೊಳ್ಳುವರೋ ಹಾಗೂ ಸ್ವಯಂ ನಿತ್ಯಮುಕ್ತನೂ ಪರಮಾನಂದಮಯನೂ, ಜ್ಞಾನಸ್ವರೂಪನೂ ಆಗಿದ್ದು ಬೇರೆಯಾವರಿಗೆ ಕೈವಲ್ಯಮುಕ್ತಿಯನ್ನು ಕೊಡುವ ಸಾಮರ್ಥ್ಯವು ಕೇವಲ ಅವನೊಬ್ಬನಲ್ಲೇ ಇರುವುದೋ ಅಂತಹ ಸ್ವಾಮಿಗೆ ನಾನು ನಮಸ್ಕರಿಸುತ್ತೇನೆ. ॥ ೧೧ ॥ ಯಾರು ಸತ್ತ್ವ-ರಜ-ತಮ ಈ ತ್ರಿಗುಣಗಳನ್ನು ಸ್ವೀಕರಿಸಿ, ಕ್ರಮವಾಗಿ ಶಾಂತ, ಘೋರ ಮತ್ತು ಮೂಢ ಅವಸ್ಥೆಗಳನ್ನು ಹೊಂದುವನೋ ಆ ಭೇದರಹಿತವೂ, ಸಮಭಾವದಿಂದ ಇರುವವನೂ, ಅದ ಜ್ಞಾನಘನಸ್ವರೂಪನಾದ ಪರಮಾತ್ಮನಿಗೆ ನಾನು ಮತ್ತೆ-ಮತ್ತೆ ನಮಸ್ಕರಿಸುತ್ತೇನೆ. ॥ ೧೨ ॥ ನೀನು ಎಲ್ಲರ ಸ್ವಾಮಿಯೂ, ಕ್ಷೇತ್ರಜ್ಞನೂ, ಸಮಸ್ತ ಕ್ಷೇತ್ರಗಳಲ್ಲಿ ಏಕಮಾತ್ರ ಸರ್ವಸಾಕ್ಷಿಯೂ ಆಗಿರುವೆ. ಅಂತಹ ನಿನಗೆ ವಂದಿಸುತ್ತೇನೆ. ನೀನೇ ಸ್ವಯಂ ಮೂಲಕಾರಣನಾಗಿರುವೆ. ಪುರುಷ ಮತ್ತು ಮೂಲಪ್ರಕೃತಿಯ ರೂಪದಲ್ಲಿಯೂ ನೀನೇ ಇರುವೆ. ಅಂತಹ ನಿನಗೆ ಪದೇ-ಪದೇ ನಮಸ್ಕಾರಗಳು. ॥ ೧೩ ॥ ನೀನು ಸಮಸ್ತ ಇಂದ್ರಿಯಗಳು ಮತ್ತು ಅವುಗಳ ವಿಷಯಗಳ ದ್ರಷ್ಟಾ ಆಗಿದ್ದು, ಸಮಸ್ತ ಪ್ರತೀತಿಗಳಿಗೆ ಆಧಾರನಾಗಿರುವೆ. ಅಹಂಕಾರಾದಿ ಛಾಯಾರೂಪವಾದ ಅಸತ್ ವಸ್ತುಗಳ ಮೂಲಕ ನಿನ್ನ ಅಸ್ತಿತ್ವವೇ ಪ್ರಕಟವಾಗುತ್ತದೆ. ಸಮಸ್ತ ವಸ್ತುಗಳ ಅಸ್ತಿತ್ವದ ರೂಪದಲ್ಲಿಯೂ ಕೇವಲ ನೀನೇ ಕಂಡುಬರುತ್ತಿರುವೆ. ಅಂತಹ ನಿನಗೆ ನಾನು ನಮಸ್ಕರಿಸುತ್ತೇನೆ. ॥ ೧೪ ॥ ನೀನು ಎಲ್ಲರ ಮೂಲ ಕಾರಣನಾಗಿರುವೆ. ನಿನಗೆ ಯಾವ ಕಾರಣವೂ ಇಲ್ಲ. ನೀನು ಜಗತ್ತಿನ ಸೃಷ್ಟಿಗೆ ಕಾರಣನಾದರೂ ನಿನ್ನಲ್ಲಿ ವಿಕಾರವಾಗಲೀ, ಪರಿಣಾಮವಾಗಲೀ ಉಂಟಾಗುವುದಿಲ್ಲ. ಆದುದರಿಂದ ನೀನು ಅದ್ಭುತಕಾರಣನಾಗಿರುವೆ. ನಿನಗೆ ಬಾರಿ-ಬಾರಿಗೂ ನಮಸ್ಕಾರವು. ನದೀನದಗಳಿಗೆಲ್ಲ ಪರಮಾಶ್ರಯವು ಸಮುದ್ರವಿರುವಂತೆ ಸಮಸ್ತ ವೇದಶಾಸ್ತ್ರಗಳಿಗೆ ನೀನೇ ಪರಮ ತಾತ್ಪರ್ಯನಾಗಿರುವೆ. ನೀನು ಮೋಕ್ಷಸ್ವರೂಪನೂ, ಸಾಧು-ಸತ್ಪುರುಷರಿಗೆ ಪರಮಾಶ್ರಯನೂ ಆಗಿರುವೆ ಅಂತಹ ನಿನಗೆ ನಮಸ್ಕಾರವು. ॥ ೧೫ ॥ ಯಜ್ಞದ ಅರಣಿಯಲ್ಲಿ ಅಗ್ನಿಯು ಗುಪ್ತವಾಗಿರುವಂತೆಯೇ ನೀನು ನಿನ್ನ ಜ್ಞಾನವನ್ನು ಗುಣಮಯ ಮಾಯೆಯಿಂದ ಮುಚ್ಚಿಟ್ಟಿರುವೆ. ಗುಣಗಳಲ್ಲಿ ಕ್ಷೋಭೆ ಉಂಟಾದಾಗ ಅವುಗಳ ಮೂಲಕ ವಿವಿಧ ಪ್ರಕಾರದ ಸೃಷ್ಟಿರಚನೆಯ ಸಂಕಲ್ಪವನ್ನು ನೀನು ಮಾಡುವೆ. ಸರ್ವಕರ್ಮ ಸಂನ್ಯಾಸ ಅಥವಾ ಕರ್ಮ ಸಮರ್ಪಣಮಾಡಿ ವಿಧಿನಿಷೇಧಗಳಿಗೆ ಒಳಪಡದಿರುವ ಜ್ಞಾನಿಗಳ ಹೃದಯದಲ್ಲಿ ನೀನು ಸ್ವಯಂಪ್ರಕಾಶನಾಗಿರುವೆ. ಇಂತಹ ನಿನಗೆ ನಮಸ್ಕಾರವು. ॥ ೧೬ ॥ ದಯಾಳುವಾದ ಮನುಷ್ಯನು ಬಂಧನಕ್ಕೆ ಸಿಕ್ಕಿಹಾಕಿಕೊಂಡಿರುವ ಪಶುವನ್ನು ಬಿಡಿಸುವಂತೆ ಸಂಸಾರಬಂಧನದಿಂದ ಬಂಧಿಸಲ್ಪಟ್ಟಿರುವ ಶರಣಾಗತನಾಗಿರುವ ನನ್ನನ್ನೂ ವಿಮುಕ್ತಗೊಳಿಸುವೆ. ನೀನು ನಿತ್ಯಮುಕ್ತನಾಗಿದ್ದು ಕರುಣಾಮಯನಾಗಿರುವೆ. ಭಕ್ತರಿಗೆ ಕಲ್ಯಾಣವನ್ನುಂಟುಮಾಡಲು ನಿನಗೆ ಎಂದಿಗೂ ಆಲಸ್ಯವೆಂಬುದೇ ಇಲ್ಲ. ಅಂತಹ ಪರಮಕಾರುಣಿಕನಾದ ನಿನಗೆ

ಆತ್ಮಾತ್ಮಜಾಪ್ತಗೃಹವಿತ್ತಜನೇಷು ಸಕ್ತೈ-
ರ್ದುಷ್ಪ್ರಾಪಣಾಯ ಗುಣಸಂಗವಿವರ್ಜಿತಾಯ ।
ಮುಕ್ತಾತ್ಮಭಿಃ ಸ್ವಹೃದಯೇ ಪರಿಭಾವಿತಾಯ
ಜ್ಞಾನಾತ್ಮನೇ ಭಗವತೇ ನಮ ಈಶ್ವರಾಯ ॥ ೧೮ ॥

ಯಂ ಧರ್ಮಕಾಮಾರ್ಥವಿಮುಕ್ತಿಕಾಮಾ
ಭಜಂತ ಇಷ್ಟಾಂ ಗತಿಮಾಪ್ನುವಂತಿ ।
ಕಿಂ ತ್ವಾಶಿಷೋ ರಾತ್ಯಪಿ ದೇಹಮವ್ಯಯಂ
ಕರೋತು ಮೇಽದಭ್ರದಯೋ ವಿಮೋಕ್ಷಣಮ್ ॥ ೧೯ ॥

ಏಕಾಂತಿನೋ ಯಸ್ಯ ನ ಕಂಚನಾರ್ಥಂ
ವಾಂಛಂತಿ ಯೇ ವೈ ಭಗವತ್ಪ್ರಪನ್ನಾಃ ।
ಅತ್ಯದ್ಭುತಂ ತಚ್ಚರಿತಂ ಸುಮಂಗಲಂ
ಗಾಯಂತ ಆನಂದ ಸಮುದ್ರಮಗ್ನಾಃ ॥ ೨೦ ॥

ತಮಕ್ಷರಂ ಬ್ರಹ್ಮ ಪರಂ ಪರೇಶ-
ಮವ್ಯಕ್ತಮಾಧ್ಯಾತ್ಮಿಕಯೋಗಗಮ್ಯಮ್ ।
ಅತೀಂದ್ರಿಯಂ ಸೂಕ್ಷ್ಮಮಿವಾತಿದೂರ-
ಮನಂತಮಾದ್ಯಂ ಪರಿಪೂರ್ಣಮೀಡೇ ॥ ೨೧ ॥

ಯಸ್ಯ ಬ್ರಹ್ಮಾದಯೋ ದೇವಾ ವೇದಾ ಲೋಕಾಶ್ಚರಾಚರಾಃ ।
ನಾಮರೂಪವಿಭೇದೇನ ಫಲ್ಗ್ವ್ಯಾ ಚ ಕಲಯಾ ಕೃತಾಃ ॥ ೨೨ ॥

ಯಥಾರ್ಚಿಷೋಽಗ್ನೇಃ ಸವಿತುರ್ಗಭಸ್ತಯೋ
ನಿರ್ಯಾಂತಿ ಸಂಯಾಂತ್ಯಸಕೃತ್ಸ್ವರೋಚಿಷಃ ।
ತಥಾ ಯತೋಽಯಂ ಗುಣಸಂಪ್ರವಾಹೋ
ಬುದ್ಧಿರ್ಮನಃ ಖಾನಿ ಶರೀರಸರ್ಗಾಃ ॥ ೨೩ ॥

ಸ ವೈ ನ ದೇವಾಸುರಮರ್ತ್ಯತಿರ್ಯಙ್
ನ ಸ್ತ್ರೀ ನ ಷಂಢೋ ನ ಪುಮಾನ್ನ ಜಂತುಃ ।
ನಾಯಂ ಗುಣಃ ಕರ್ಮ ನ ಸನ್ನ ಚಾಸನ್
ನಿಷೇಧಶೇಷೋ ಜಯತಾದಶೇಷಃ ॥ ೨೪ ॥

ನಮಸ್ಕರಿಸುತ್ತೇನೆ. ಸಮಸ್ತ ಪ್ರಾಣಿಗಳ ಹೃದಯದಲ್ಲಿಯೂ ನಿನ್ನ ಅಂಶದ ಮೂಲಕ ಅಂತರಾತ್ಮನಾಗಿ ನೀನು ಸರ್ವೈಶ್ವರ್ಯಪೂರ್ಣನೂ, ಅಪರಿಚ್ಛಿನ್ನನೂ ಆಗಿರುವೆ. ಇಂತಹ ನಿನಗೆ ನಮಸ್ಕಾರ ಮಾಡುತ್ತೇನೆ. ॥ ೧೭ ॥ ಶರೀರ, ಪುತ್ರರು, ಆಪ್ತರು, ಮನೆ, ಸಂಪತ್ತು, ಸ್ವಜನರು – ಹೀಗೆ ಇವರಲ್ಲಿ ಆಸಕ್ತರಾದ ಜನರಿಗೆ ನಿನ್ನ ಪ್ರಾಪ್ತಿಯು ಅತ್ಯಂತ ಕಠಿಣವಾಗಿದೆ. ಏಕೆಂದರೆ ನೀನು ಸ್ವತಃ ಗುಣಗಳ ಆಸಕ್ತಿಯಿಂದ ರಹಿತನಾಗಿರುವೆ. ಜೀವನ್ಮುಕ್ತರಾದವರು ತಮ್ಮ ಹೃದಯದಲ್ಲಿ ನಿರಂತರವಾಗಿ ನಿನ್ನನ್ನು ಚಿಂತಿಸುತ್ತಾ ಇರುತ್ತಾರೆ. ಆ ಸರ್ವೈಶ್ವರ್ಯಸಂಪನ್ನ ಜ್ಞಾನಸ್ವರೂಪನಾದ ಭಗವಂತನಿಗೆ ನಾನು ನಮಸ್ಕರಿಸುತ್ತೇನೆ. ॥ ೧೮ ॥ ಧರ್ಮ, ಅರ್ಥ, ಕಾಮ, ಮೋಕ್ಷಗಳೆಂಬ ಈ ಪುರುಷಾರ್ಥಗಳ ಕಾಮನೆಯಿಂದ ಮನುಷ್ಯರು ಭಗವಂತನನ್ನು ಭಜಿಸಿ ತಮ್ಮ ಇಷ್ಟಾರ್ಥಗಳನ್ನು ಪಡೆದುಕೊಳ್ಳುತ್ತಾರೆ. ಇಷ್ಟು ಮಾತ್ರವಲ್ಲ ಪ್ರಸನ್ನನಾದ ಶ್ರೀಭಗವಂತನು ಭಕ್ತರಿಗೆ ಇತರ ಅನೇಕ ವಿಧವಾದ ಸುಖಗಳನ್ನೂ, ನಾಶರಹಿತವಾದ ದಿವ್ಯಶರೀರವನ್ನೂ ದಯಪಾಲಿಸುತ್ತಾನೆ. ಅಂತಹ ಪರಮ ದಯಾಳುವಾದ ಪರಮಾತ್ಮನು ಈ ಮೊಸಳೆಯಿಂದ ನನ್ನನ್ನು ಬಿಡುಗಡೆಮಾಡಲಿ. ॥ ೧೯ ॥ ಭಗವಂತನಿಗೆ ಶರಣಾಗತರಾದ ಅವನ ಅನನ್ಯ ಭಕ್ತರು ಯಾವುದೇ ಪ್ರಯೋಜನವನ್ನು ಅಪೇಕ್ಷಿಸುವುದಿಲ್ಲ. ಸರ್ವಾಪೇಕ್ಷಿತವಾದ ಮೋಕ್ಷವನ್ನೂ ಬಯಸುವುದಿಲ್ಲ. ಮಂಗಳಕರವಾದ ಅತ್ಯದ್ಭುತವಾದ ಪರಮಾತ್ಮನ ಚರಿತ್ರೆಗಳನ್ನು ಹಾಡುತ್ತಾ, ನಲಿಯುತ್ತಾ ಆನಂದಸಮುದ್ರದಲ್ಲಿ ಮುಳುಗಿರುತ್ತಾರೆ. ॥ ೨೦ ॥ ಅವಿನಾಶಿಯೂ ಸರ್ವಶಕ್ತಿ ಸಂಪನ್ನನೂ, ಅವ್ಯಕ್ತನೂ, ಇಂದ್ರಿಯಾತೀತನೂ, ಅತ್ಯಂತ ಸೂಕ್ಷ್ಮನೂ ಆದವನು ಅತ್ಯಂತ ಹತ್ತಿರವಿದ್ದರೂ ಬಹಳ ದೂರನೆಂದು ಭಾಸವಾಗುವವನೂ, ಅಧ್ಯಾತ್ಮಿಕಯೋಗ ಅರ್ಥಾತ್ ಜ್ಞಾನಯೋಗ-ಭಕ್ತಿಯೋಗದಿಂದ ದೊರೆಯುವಂತಹವನೂ ಆದ ಆ ಆದಿಪುರುಷ ಅನಂತ, ಪರಿಪೂರ್ಣ ಪರಬ್ರಹ್ಮ ಪರಮಾತ್ಮನನ್ನು ನಾನು ಸ್ತುತಿಸುತ್ತೇನೆ. ॥ ೨೧ ॥

ಯಾರ ಅತ್ಯಲ್ಪವಾದ ಅಂಶದಿಂದ ನಾನಾರೂಪಗಳ ಮತ್ತು ನಾಮಗಳ ಭೇದದಿಂದ ಕೂಡಿದ ಬ್ರಹ್ಮಾದಿದೇವತೆಗಳೂ, ವೇದಗಳೂ, ಚರಾಚರಗಳೂ, ಲೋಕಗಳೂ ರಚಿತವಾದುವೋ, ಹೇಗೆ ಧಗ-ಧಗನೆ ಉರಿಯುವ ಅಗ್ನಿಯಿಂದ ಜ್ವಾಲೆಗಳು ಮತ್ತು ಸೂರ್ಯನಿಂದ ಅವನ ಕಿರಣಗಳು ಹಲವು ಬಾರಿ ಹೊರಹೊಮ್ಮಿ ಲೀನವಾಗುವುವೋ, ಹಾಗೆಯೇ ಯಾವ ಸ್ವಯಂಪ್ರಕಾಶ ಪರಮಾತ್ಮನಿಂದ ಗುಣಗಳ ಪ್ರವಾಹರೂಪವಾದ ಬುದ್ಧಿ, ಮನಸ್ಸು, ಇಂದ್ರಿಯಗಳು ಮತ್ತು ಶರೀರಗಳು ಮತ್ತೆ-ಮತ್ತೆ ಪ್ರಕಟವಾಗಿ, ಲೀನವಾಗಿ ಹೋಗುತ್ತವೆ. ಆ ಭಗವಂತನು ದೇವತೆಯಲ್ಲ, ರಾಕ್ಷಸನಲ್ಲ, ಮನುಷ್ಯನಲ್ಲ, ಪಶು-ಪಕ್ಷಿಯೂ ಅಲ್ಲ. ಅವನು ಸ್ತ್ರೀಯಲ್ಲ, ಪುರುಷನಲ್ಲ, ನಪುಂಸಕನಲ್ಲ. ಅವನು ಯಾವುದೇ ಸಾಧಾರಣ ಅಥವಾ ಅಸಾಧಾರಣ ಪ್ರಾಣಿಯೂ ಅಲ್ಲ. ಅವನು ಗುಣವಲ್ಲ, ಕರ್ಮವಲ್ಲ, ಕಾರ್ಯವೂ ಅಲ್ಲ, ಕಾರಣವೂ ಅಲ್ಲ. ಎಲ್ಲವೂ ನಿಷೇಧವಾದ ಬಳಿಕ ಉಳಿಯುವುದೇ ಅವನ ಸ್ವರೂಪವಾಗಿದೆ ಹಾಗೂ ಅವನೇ ಎಲ್ಲವೂ ಆಗಿದ್ದಾನೆ. ಆ ಪರಮಾತ್ಮನೇ ನನ್ನ ಉದ್ಧಾರಕ್ಕಾಗಿ ಪ್ರಕಟನಾಗಲೀ. ॥ ೨೨-೨೪ ॥

ಜಿಜೀವಿಷೇ ನಾಹಮಿಹಾಮುಯಾ ಕಿ-
ಮಂತರ್ಬಹಿಶ್ಚಾವೃತಯೇಭಯೋನ್ಯಾ ।
ಇಚ್ಛಾಮಿ ಕಾಲೇನ ನ ಯಸ್ಯ ವಿಪ್ಲವ-
ಸ್ತಸ್ಯಾತ್ಮಲೋಕಾವರಣಸ್ಯ ಮೋಕ್ಷಮ್ ॥ ೨೫ ॥

ಸೋಽಹಂ ವಿಶ್ವಸೃಜಂ ವಿಶ್ವಮವಿಶ್ವಂ ವಿಶ್ವವೇದಸಮ್ ।
ವಿಶ್ವಾತ್ಮಾನಮಜಂ ಬ್ರಹ್ಮ ಪ್ರಣತೋಽಸ್ಮಿ ಪರಂ ಪದಮ್ ॥ ೨೬ ॥

ಯೋಗರಂಧಿತಕರ್ಮಾಣೋ
ಹೃದಿ ಯೋಗವಿಭಾವಿತೇ ।
ಯೋಗಿನೋ ಯಂ ಪ್ರಪಶ್ಯಂತಿ
ಯೋಗೇಶಂ ತಂ ನತೋಽಸ್ಮ್ಯಹಮ್ ॥ ೨೭ ॥

ನಮೋ ನಮಸ್ತುಭ್ಯಮಸಹ್ಯವೇಗ-
ಶಕ್ತಿತ್ರಯಾಯಾಖಿಲಧೀಗುಣಾಯ ।
ಪ್ರಪನ್ನಪಾಲಾಯ ದುರಂತಶಕ್ತಯೇ
ಕದಿಂದ್ರಿಯಾಣಾಮನವಾಪ್ಯವರ್ತ್ಮನೇ ॥ ೨೮ ॥

ನಾಯಂ ವೇದ ಸ್ವಮಾತ್ಮಾನಂ
ಯಚ್ಛಕ್ತ್ಯಾಹಂಧಿಯಾಹತಮ್ ।
ತಂ ದುರತ್ಯಯಮಾಹಾತ್ಮ್ಯಂ
ಭಗವಂತಮಿತೋಽಸ್ಮ್ಯಹಮ್ ॥ ೨೯ ॥

ಶ್ರೀಶುಕ ಉವಾಚ

ಏವಂ ಗಜೇಂದ್ರಮುಪವರ್ಣಿತನಿರ್ವಿಶೇಷಂ
ಬ್ರಹ್ಮಾದಯೋ ವಿವಿಧಲಿಂಗಭಿದಾಭಿಮಾನಾಃ ।
ನೈತೇ ಯದೋಪಸಸೃಪುರ್ನಿಖಿಲಾತ್ಮಕತ್ವಾ-
ತ್ತತ್ರಾಖಿಲಾಮರಮಯೋ ಹರಿರಾವಿರಾಸೀತ್ ॥ ೩೦ ॥

ತಂ ತದ್ವದಾರ್ತಮುಪಲಭ್ಯ ಜಗನ್ನಿವಾಸಃ
ಸ್ತೋತ್ರಂ ನಿಶಮ್ಯ ದಿವಿಜೈಃ ಸಹ ಸಂಸ್ತುವದ್ಭಿಃ ।
ಛಂದೋಮಯೇನ ಗರುಡೇನ ಸಮುಹ್ಯಮಾನ-
ಶ್ಚಕ್ರಾಯುಧೋಽಭ್ಯಗಮದಾಶು ಯತೋ ಗಜೇಂದ್ರಃ ॥ ೩೦ ॥

ನಾನು ಬದುಕಿರಲು ಬಯಸುವುದಿಲ್ಲ. ಈ ಆನೆಯ ಶರೀರವು ಒಳಗೆ-ಹೊರಗೆ ಎಲ್ಲ ಕಡೆಯಿಂದ ಅಜ್ಞಾನರೂಪೀ ಆವರಣದಿಂದ ಮುಚ್ಚಿ ಹೋಗಿದೆ. ಇದನ್ನು ಇರಿಸಿಕೊಂಡು ಏನು ಮಾಡಲಿ? ನಾನಾದರೋ ಆತ್ಮಪ್ರಕಾಶವನ್ನು ಮುಚ್ಚಿರುವ ಆ ಅಜ್ಞಾನರೂಪವಾದ ಆವರಣದಿಂದ ಬಿಡುಗಡೆಯನ್ನು ಬಯಸುತ್ತಿದ್ದೇನೆ. ಅದು ಕಾಲ ಕ್ರಮದಿಂದ ತಾನಾಗಿ ಬಿಟ್ಟುಹೋಗದು. ಅದು ಕೇವಲ ಭಗವತ್ಕೃಪೆಯಿಂದ ಅಥವಾ ತತ್ತ್ವಜ್ಞಾನದಿಂದಲೇ ನಾಶವಾಗುತ್ತದೆ. ॥ ೨೫ ॥ ಅದಕ್ಕಾಗಿ ನಾನು ಆ ಪರಬ್ರಹ್ಮ ಪರಮಾತ್ಮನಲ್ಲಿ ಶರಣಾಗಿದ್ದೇನೆ. ಅವನು ವಿಶ್ವರಹಿತನಾಗಿದ್ದರೂ ವಿಶ್ವವನ್ನೂ ರಚಿಸುವವನು. ವಿಶ್ವರೂಪನೂ ಆಗಿದ್ದಾನೆ. ಜೊತೆಗೆ ಅವನು ವಿಶ್ವದ ಅಂತರಾತ್ಮನ ರೂಪದಲ್ಲಿ ವಿಶ್ವರೂಪೀ ಸಾಮಗ್ರಿಗಳಿಂದ ಕ್ರೀಡಿಸುತ್ತಲೂ ಇರುವವನು. ಅಂತಹ ಜನ್ಮರಹಿತ, ಪರಮಪದ ಸ್ವರೂಪನಾದ ಪರಬ್ರಹ್ಮನಿಗೆ ನಾನು ನಮಸ್ಕರಿಸುತ್ತೇನೆ. ॥ ೨೬ ॥ ಯೋಗಿಗಳು ಯೋಗದಿಂದ ಕರ್ಮಗಳು, ಕರ್ಮವಾಸನೆ ಮತ್ತು ಕರ್ಮಫಲಗಳನ್ನು ಭಸ್ಮಮಾಡಿ ತಮ್ಮ ಯೋಗಶುದ್ಧ ಹೃದಯದಲ್ಲಿ ಯೋಗೇಶ್ವರ ಭಗವಂತನ ಸಾಕ್ಷಾತ್ಕಾರ ಮಾಡಿಕೊಳ್ಳುವರು. ಅಂತಹ ಸ್ವಾಮಿಯನ್ನು ನಾನು ನಮಸ್ಕರಿಸುತ್ತೇನೆ. ॥ ೨೭ ॥ ಪ್ರಭುವೇ! ನಿನ್ನ ಮೂರು ಶಕ್ತಿಗಳಾದ ಸತ್ತ್ವ, ರಜ, ತಮಗಳ ರಾಗಾದಿ ವೇಗಗಳು ಅಸಹ್ಯವಾಗಿವೆ. ಸಮಸ್ತ ಇಂದ್ರಿಯಗಳು ಮತ್ತು ಮನಸ್ಸಿನ ವಿಷಯಗಳ ರೂಪದಲ್ಲಿಯೂ ನೀನೇ ಕಂಡುಬರುತ್ತೀಯೆ. ಅದಕ್ಕಾಗಿ ಇಂದ್ರಿಯಗಳು ವಶದಲ್ಲಿ ಇರದೇ ಇರುವವರಾದರೋ ನಿನ್ನ ಪ್ರಾಪ್ತಿಯ ಮಾರ್ಗವನ್ನೂ ತಿಳಿಯಲಾರರು. ನಿನ್ನ ಶಕ್ತಿಯು ಅನಂತವಾಗಿದೆ. ನೀನು ಶರಣಾಗತ ವತ್ಸಲನಾಗಿರುವೆ. ನಿನಗೆ ನಾನು ಮತ್ತೆ-ಮತ್ತೆ ನಮಸ್ಕರಿಸುತ್ತೇನೆ. ॥ ೨೮ ॥ ನಿನ್ನ ಮಾಯೆಯ ಅಹಂಬುದ್ಧಿಯಿಂದ ಆತ್ಮನ ಸ್ವರೂಪವು ಮುಚ್ಚಿ ಹೋಗಿದೆ. ಇದರಿಂದ ಈ ಜೀವನು ತನ್ನ ಸ್ವರೂಪವನ್ನು ತಿಳಿಯಲಾರನು. ನಿನ್ನ ಮಹಿಮೆ ಅಪಾರವಾಗಿದೆ. ಅಂತಹ ಸರ್ವಶಕ್ತಿಸಂಪನ್ನನಿಗೆ ಹಾಗೂ ಮಾಧುರ್ಯನಿಧಿ ಭಗವಂತನಲ್ಲಿ ನಾನು ಶರಣಾಗಿದ್ದೇನೆ. ॥ ೨೯ ॥

ಶ್ರೀಶುಕದೇವರು ಹೇಳುತ್ತಾರೆ – ಪರೀಕ್ಷಿತನೇ! ಗಜೇಂದ್ರನು ಯಾವುದೇ ಭೇದಭಾವವಿಲ್ಲದೆ ನಿರ್ವಿಶೇಷರೂಪದಿಂದ ಭಗವಂತನ ಸ್ತುತಿಯನ್ನು ಮಾಡಿದ್ದನು. ಅದಕ್ಕಾಗಿ ಭಿನ್ನ-ಭಿನ್ನ ನಾಮ-ರೂಪಗಳನ್ನು ತಮ್ಮ ಸ್ವರೂಪವೆಂದು ತಿಳಿದಿರುವ ಬ್ರಹ್ಮಾದಿದೇವತೆಗಳು ಅವನ ರಕ್ಷಣೆಗೆ ಬರಲಿಲ್ಲ. ಏಕೆಂದರೆ, ಅವರ ನಾಮಗಳನ್ನು ನಿರ್ದೇಶಿಸಿ ಅವರನ್ನು ಪ್ರಾರ್ಥಿಸಿರಲಿಲ್ಲ. ಆ ಸಮಯದಲ್ಲಿ ಸರ್ವಾತ್ಮನಾದ ಕಾರಣ ಸರ್ವದೇವಸ್ವರೂಪನಾದ ಸ್ವತಃ ಭಗವಾನ್ ಶ್ರೀಹರಿಯು ಪ್ರಕಟನಾದನು. ॥ ೩೦ ॥ ವಿಶ್ವದ ಏಕಮಾತ್ರ ಆಧಾರನಾದ ಭಗವಂತನು – ಗಜೇಂದ್ರನು ಅತ್ಯಂತ ಪೀಡಿತನಾಗಿದ್ದಾನೆಂದು ನೋಡಿದನು. ಅದ್ದರಿಂದ ಅವನ ಸ್ತುತಿಯನ್ನು ಕೇಳಿ ಚಕ್ರಧಾರಿಯಾದ ಶ್ರೀಹರಿಯು ವೇದಮಯ, ಗರುಡನಮೇಲೆ ಏರಿ, ಅತೀವ ಶೀಘ್ರವಾಗಿ ಗಜೇಂದ್ರನು ಭಾರೀ ಸಂಕಟದಲ್ಲಿ ಬಿದ್ದಲ್ಲಿಗೆ ಆಗಮಿಸಿದನು. ಅವನೊಡನೆ ಭಗವಂತನನ್ನು ಸ್ತುತಿಮಾಡುತ್ತಾ ಎಲ್ಲ ದೇವತೆಗಳೂ ಬಂದರು. ॥ ೩೦ ॥

ಸೋಽನ್ತಸ್ಸರಸ್ಯುರುಬಲೇನ ಗೃಹೀತ ಆರ್ತೋ
ದೃಷ್ಟ್ವಾ ಗರುತ್ಮತಿ ಹರಿಂ ಖ ಉಪಾತ್ತಚಕ್ರಮ್ ।
ಉತ್ಕ್ಷಿಪ್ಯ ಸಾಂಬುಜಕರಂ ಗಿರಮಾಹ ಕೃಚ್ಛ್ರಾ-
ನ್ನಾರಾಯಣಾಖಿಲಗುರೋ ಭಗವನ್ನಮಸ್ತೇ ॥ ೩೨ ॥

ಸರೋವರದೊಳಗೆ ಬಲಿಷ್ಠವಾದ ಮೊಸಳೆಯು ಗಜೇಂದ್ರನನ್ನು ಹಿಡಿದುಕೊಂಡಿತ್ತು. ಗಜೇಂದ್ರನು ಅತ್ಯಂತ ವ್ಯಾಕುಲನಾಗಿದ್ದನು. ಆಕಾಶದಲ್ಲಿ ಗರುಡನ ಹೆಗಲೇರಿ, ಕೈಯಲ್ಲಿ ಸುದರ್ಶನ ಚಕ್ರವನ್ನು ಧರಿಸಿರುವ ಶ್ರೀಹರಿಯು ಬರುತ್ತಿರುವುದನ್ನು ಕಂಡು ಗಜೇಂದ್ರನು ತನ್ನ ಸೊಂಡಿಲಿನಿಂದ ಒಂದು ಸುಂದರ ಕಮಲ ಪುಷ್ಪವನ್ನು ಮೇಲೆತ್ತಿಕೊಂಡು ಅತೀವ ಕಷ್ಟದಿಂದ 'ನಾರಾಯಣಾ! ಜಗದ್ಗುರುವೇ! ಭಗವಂತಾ! ನಿನಗೆ ನಮಸ್ಕಾರವು' ಎಂದು ಸ್ತುತಿಸಿದನು. ॥ ೩೨ ॥ ಗಜೇಂದ್ರನು ಮೊಸಳೆಯಿಂದ ಪೀಡಿಸಲ್ಪಡುತ್ತಿರುವುದನ್ನು ನೋಡಿದೊಡನೆಯೇ ದಯಾಮಯನಾದ ನಾರಾಯಣನು ಗರುಡನಿಂದ ಥಟ್ಟನೆ ಕೆಳಗಿಳಿದು ಗಜೇಂದ್ರನೊಡನೆ ಅವನ ಕಾಲನ್ನು ಹಿಡಿದಿದ್ದ ಮೊಸಳೆಯನ್ನು ಅತಿಶೀಘ್ರವಾಗಿ ಸರೋವರದಿಂದ ಹೊರಗೆ ಎಳೆದುಕೊಂಡನು. ಮರುಕ್ಷಣದಲ್ಲೇ ಎಲ್ಲ ದೇವತೆಗಳು ನೋಡುತ್ತಿದ್ದಂತೆಯೇ ಶ್ರೀಹರಿಯು ಚಕ್ರಾಯುಧದಿಂದ ಮೊಸಳೆಯ ಬಾಯನ್ನು ಸೀಳಿಹಾಕಿ ಗಜೇಂದ್ರನನ್ನು ಬಿಡಿಸಿದನು. ॥ ೩೩ ॥

ತಂ ವೀಕ್ಷ್ಯ ಪೀಡಿತಮಜಃ ಸಹಸಾವತೀರ್ಯ
ಸಗ್ರಾಹಮಾಶು ಸರಸಃ ಕೃಪಯೋಜ್ಜಹಾರ ।
ಗ್ರಾಹಾದ್ವಿಪಾಟಿತಮುಖಾದರಿಣಾ ಗಜೇಂದ್ರಂ
ಸಂಪಶ್ಯತಾಂ ಹರಿರಮೂಮುಚದುಚ್ಛ್ರಿಯಾಣಾಮ್ ॥ ೩೩ ॥

ಮೂರನೆಯ ಅಧ್ಯಾಯವು ಮುಗಿಯಿತು. ॥ ೩ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಅಷ್ಟಮ ಸ್ಕಂಧೇ ಗಜೇಂದ್ರಮೋಕ್ಷಣೇ
ತೃತೀಯೋಽಧ್ಯಾಯಃ ॥ ೩ ॥

ನಾಲ್ಕನೆಯ ಅಧ್ಯಾಯ

ಗಜೇಂದ್ರ ಮತ್ತು ಮೊಸಳೆಯ ಪೂರ್ವಚರಿತ್ರೆ ಹಾಗೂ ಅವರ ಉದ್ಧಾರ

ಶ್ರೀಶುಕ ಉವಾಚ

ತದಾ ದೇವರ್ಷಿಗಂಧರ್ವಾ ಬ್ರಹ್ಮೇಶಾನಪುರೋಗಮಾಃ ।
ಮುಮುಚುಃ ಕುಸುಮಾಸಾರಂ ಶಂಸಂತಃ ಕರ್ಮ ತದ್ಧರೇಃ ॥ ೧ ॥

ನೇದುರ್ದುಂದುಭಯೋ ದಿವ್ಯಾ ಗಂಧರ್ವಾ ನನೃತುರ್ಜಗುಃ ।
ಋಷಯಶ್ಚಾರಣಾಃ ಸಿದ್ಧಾಸ್ತುಷ್ಟುವುಃ ಪುರುಷೋತ್ತಮಮ್ ॥ ೨ ॥

ಯೋಽಸೌ ಗ್ರಾಹಃ ಸ ವೈ ಸದ್ಯಃ ಪರಮಾಶ್ಚರ್ಯರೂಪಧೃಕ್ ।
ಮುಕ್ತೋ ದೇವಲಶಾಪೇನ ಹೂಹೂರ್ಗಂಧರ್ವಸತ್ತಮಃ ॥ ೩ ॥

ಪ್ರಣಮ್ಯ ಶಿರಸಾಧೀಶಮುತ್ತಮಶ್ಲೋಕಮವ್ಯಯಮ್ ।
ಅಗಾಯತ ಯಶೋಧಾಮ ಕೀರ್ತನ್ಯಗುಣಸತ್ಕಥಮ್ ॥ ೪ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿದ್ರಾಜನೇ! ಆ ಸಮಯದಲ್ಲಿ ಬ್ರಹ್ಮ-ರುದ್ರರೇ ಮುಂತಾದ ದೇವತೆಗಳೂ, ಗಂಧರ್ವರೂ, ಋಷಿಗಳೂ ಶ್ರೀಹರಿಯ ಈ ಅದ್ಭುತ ಕಾರ್ಯವನ್ನು ಪ್ರಶಂಸಿಸುತ್ತಾ ಹೂಮಳೆಯನ್ನು ಸುರಿಸತೊಡಗಿದರು. ॥ ೧ ॥ ಸ್ವರ್ಗದಲ್ಲಿ ದೇವದುಂದುಭಿಗಳು ಮೊಳಗಿದವು. ಗಂಧರ್ವಾಪ್ಸರೆಯರು ನೃತ್ಯಗಾನವನ್ನು ಮಾಡತೊಡಗಿದರು. ಋಷಿ-ಚಾರಣ-ಸಿದ್ಧರು ಭಗವಾನ್ ಶ್ರೀಪುರುಷೋತ್ತಮನನ್ನು ಸ್ತುತಿಸತೊಡಗಿದರು. ॥ ೨ ॥ ಗಜೇಂದ್ರನ ಕಾಲನ್ನು ಹಿಡಿದುಕೊಂಡಿದ್ದ ಆ ಮೊಸಳೆಯು ಭಗವಂತನ ಚಕ್ರಸ್ಪರ್ಶದಿಂದ ಪರಮ ಆಶ್ಚರ್ಯಮಯ ದಿವ್ಯ ಶರೀರವನ್ನು ಹೊಂದಿತು. ಇವನು ಮೊದಲು ದೇವಲರ ಶಾಪದಿಂದ ಮೊಸಳೆಯಾಗಿದ್ದ ಹೂಹೂ ಎಂಬ ಗಂಧರ್ವನು. ಈಗ ಭಗವಂತನ ಕೃಪೆಯಿಂದ ಅವನು ಮುಕ್ತನಾದನು. ॥ ೩ ॥ ಅವನು ಸರ್ವೇಶ್ವರನಾದ ಶ್ರೀಭಗವಂತನ ಚರಣಗಳಲ್ಲಿ ಶಿರಸ್ಸಿಟ್ಟು ಪ್ರಣಾಮಗೈದು, ಅವನ ಸತ್ಕೀರ್ತಿಯನ್ನು ಗಾನಮಾಡತೊಡಗಿದನು. ವಾಸ್ತವಿಕವಾಗಿ ಅವಿನಾಶೀ ಭಗವಂತನೇ ಸರ್ವಶ್ರೇಷ್ಠ ಕೀರ್ತಿಯಿಂದ ಸಂಪನ್ನನಾಗಿರುವನು. ಅವನ ಗುಣಗಳು ಮತ್ತು ಮನೋಹರ ಲೀಲೆಗಳೇ ಗಾನಮಾಡಲು ಯೋಗ್ಯವಾದುವುಗಳು. ॥ ೪ ॥

ಸೋಽನುಕಂಪಿತ ಈಶೇನ ಪರಿಕ್ರಮ್ಯ ಪ್ರಣಮ್ಯ ತಮ್ ।
ಲೋಕಸ್ಯ ಪಶ್ಯತೋ ಲೋಕಂ ಸ್ವಮಗಾನ್ಮುಕ್ತಕಿಲ್ಬಿಷಃ ॥ ೫ ॥

ಗಜೇಂದ್ರೋ ಭಗವತ್ಸ್ಪರ್ಶಾದ್ವಿಮುಕ್ತೋಽಜ್ಞಾನಬಂಧನಾತ್ ।
ಪ್ರಾಪ್ತೋ ಭಗವತೋ ರೂಪಂ ಪೀತವಾಸಾಶ್ಚತುರ್ಭುಜಃ ॥ ೬ ॥

ಸ ವೈ ಪೂರ್ವಮಭೂದ್ರಾಜಾ ಪಾಂಡ್ಯೋ ದ್ರವಿಡಸತ್ತಮಃ ।
ಇಂದ್ರದ್ಯುಮ್ನ ಇತಿ ಖ್ಯಾತೋ ವಿಷ್ಣುವ್ರತಪರಾಯಣಃ ॥ ೭ ॥

ಸ ಏಕದಾಽಽರಾಧನಕಾಲ ಆತ್ಮವಾನ್
ಗೃಹೀತಮೌನವ್ರತ ಈಶ್ವರಂ ಹರಿಮ್ ।
ಜಟಾಧರಸ್ತಾಪಸ ಆಪ್ಲುತೋಽಚ್ಯುತಂ
ಸಮರ್ಚಯಾಮಾಸ ಕುಲಾಚಲಾಶ್ರಮಃ ॥ ೮ ॥

ಯದೃಚ್ಛಯಾ ತತ್ರ ಮಹಾಯಶಾ ಮುನಿಃ
ಸಮಾಗಮಚ್ಛಿಷ್ಯಗಣೈಃ ಪರಿಶ್ರಿತಃ ।
ತಂ ವೀಕ್ಷ್ಯ ತೂಷ್ಣೀಮಕೃತಾರ್ಹಣಾದಿಕಂ
ರಹಸ್ಯುಪಾಸೀನಮೃಷಿಶ್ಚುಕೋಪ ಹ ॥ ೯ ॥

ತಸ್ಮಾ ಇಮಂ ಶಾಪಮದಾದಸಾಧು-
ರಯಂ ದುರಾತ್ಮಾಕೃತಬುದ್ಧಿರದ್ಯ ।
ವಿಪ್ರಾವಮಂತಾ ವಿಶತಾಂ ತಮೋಽಂಧಂ
ಯಥಾ ಗಜಃ ಸ್ತಬ್ಧಮತಿಃ ಸ ಏವ ॥ ೧೦ ॥

ಶ್ರೀಶುಕ ಉವಾಚ

ಏವಂ ಶಪ್ತ್ವಾ ಗತೋಽಗಸ್ತ್ಯೋ ಭಗವಾನ್ನೃಪ ಸಾನುಗಃ ।
ಇಂದ್ರದ್ಯುಮ್ನೋಽಪಿ ರಾಜರ್ಷಿರ್ದಿಷ್ಟಂ ತದುಪಧಾರಯನ್ ॥ ೧೧ ॥

ಆಪನ್ನಃ ಕೌಂಜರೀಂ ಯೋನಿಮಾತ್ಮಸ್ಮೃತಿವಿನಾಶಿನೀಮ್ ।
ಹರ್ಯರ್ಚನಾನುಭಾವೇನ ಯದ್ಗಜತ್ವೇಽಪ್ಯನುಸ್ಮೃತಿಃ ॥ ೧೨ ॥

ಏವಂ ವಿಮೋಕ್ಷ್ಯ ಗಜಯೂಥಪಮಬ್ಜನಾಭ-
ಸ್ತೇನಾಪಿ ಪಾರ್ಷದಗತಿಂ ಗಮಿತೇನ ಯುಕ್ತಃ ।
ಗಂಧರ್ವಸಿದ್ಧವಿಬುಧೈರುಪಗೀಯಮಾನ-
ಕರ್ಮಾದ್ಭುತಂ ಸ್ವಭವನಂ ಗರುಡಾಸನೋಽಗಾತ್ ॥ ೧೩ ॥

ಏತನ್ಮಹಾರಾಜ ತವೇರಿತೋ ಮಯಾ
ಕೃಷ್ಣಾನುಭಾವೋ ಗಜರಾಜಮೋಕ್ಷಣಮ್ ।
ಸ್ವರ್ಗ್ಯಂ ಯಶಸ್ಯಂ ಕಲಿಕಲ್ಮಷಾಪಹಂ
ದುಃಸ್ವಪ್ನನಾಶಂ ಕುರುವರ್ಯ ಶೃಣ್ವತಾಮ್ ॥ ೧೪ ॥

ಭಗವಂತನ ಕೃಪಾಪೂರ್ಣ ಸ್ಪರ್ಶದಿಂದ ಅವನ ಪಾಪಗಳೆಲ್ಲ ನಾಶವಾಗಿ ಹೋದುವು. ಅವನು ಭಗವಂತನಿಗೆ ಪ್ರದಕ್ಷಿಣೆ ಬಂದು ಅವನ ಚರಣಗಳಲ್ಲಿ ವಂದಿಸಿಕೊಂಡು ಎಲ್ಲರೂ ನೋಡು-ನೋಡುತ್ತಿರುವಂತೆ ತನ್ನ ಲೋಕಕ್ಕೆ ತೆರಳಿದನು. ॥ ೫ ॥

ಗಜೇಂದ್ರನೂ ಭಗವಂತನ ಸ್ಪರ್ಶಮಾತ್ರದಿಂದಲೇ ಅಜ್ಞಾನದ ಬಂಧನದಿಂದ ಮುಕ್ತನಾದನು. ಅವನಿಗೆ ಭಗವಂತನ ಸಾರೂಪ್ಯವು ಪ್ರಾಪ್ತವಾಯಿತು. ಅವನು ಪೀತಾಂಬರಧಾರಿಯಾಗಿ ಚತುರ್ಭುಜ ದಿಂದ ಕಂಗೊಳಿಸಿದನು. ॥ ೬ ॥ ಗಜೇಂದ್ರನು ಹಿಂದಿನ ಜನ್ಮದಲ್ಲಿ ದ್ರವಿಡದೇಶದ ಪಾಂಡ್ಯವಂಶೀಯ ರಾಜನಾಗಿದ್ದನು. ಅವನಿಗೆ ಇಂದ್ರದ್ಯುಮ್ನ ಎಂಬ ಹೆಸರಿತ್ತು. ಅವನು ಭಗವಂತನ ಶ್ರೇಷ್ಠ ಉಪಾಸಕನಾಗಿದ್ದು ಖ್ಯಾತನಾಗಿದ್ದನು. ॥ ೭ ॥ ಒಮ್ಮೆ ಇಂದ್ರ ದ್ಯುಮ್ನ ಮಹಾರಾಜನು ರಾಜ್ಯವೈಭವಗಳನ್ನು ಬಿಟ್ಟು ಮಲಯ ಪರ್ವತದಲ್ಲಿ ಇರುತ್ತಿದ್ದನು. ಅವನು ಜಟೆಗಳನ್ನು ಬೆಳೆಸಿ, ತಪಸ್ವಿಯ ವೇಷವನ್ನು ಧರಿಸಿದ್ದನು. ಒಂದು ದಿನ ಸ್ನಾನಾನಂತರ ಪೂಜೆಯ ಸಮಯ ಮನಸ್ಸನ್ನು ಏಕಾಗ್ರಗೊಳಿಸಿ, ಮೌನವ್ರತವನ್ನಾಂತು ಅವನು ಸರ್ವಶಕ್ತಿಸಂಪನ್ನ ಭಗವಂತನನ್ನು ಆರಾಧಿಸತೊಡ ಗಿದ್ದನು. ॥ ೮ ॥ ಅದೇ ಸಮಯಕ್ಕೆ ದೈವಯೋಗದಿಂದ ಪರಮ ತಪಸ್ವಿಗಳಾದ ಅಗಸ್ತ್ಯಮುನಿಗಳು ತನ್ನ ಶಿಷ್ಯಸಂದೋಹದೊಂದಿಗೆ ಅಲ್ಲಿಗೆ ಆಗಮಿಸಿದರು. ಇಂದ್ರದ್ಯುಮ್ನನು ಪ್ರಜಾಪಾಲನೆ, ಗೃಹ ಸ್ಥರಿಗೆ ಉಚಿತವಾದ ಅತಿಥಿಸೇವೆ ಮುಂತಾದ ಧರ್ಮಗಳನ್ನು ತ್ಯಜಿಸಿ, ತಪಸ್ವಿಗಳಂತೆ ಏಕಾಂತದಲ್ಲಿ ಮೌನವಾಗಿ ಕುಳಿತು ಉಪಾ ಸನೆ ಮಾಡುವುದನ್ನು ಕಂಡ ಅವರು ರಾಜನ ಮೇಲೆ ಕ್ರೋಧ ಗೊಂಡರು. ॥ ೯ ॥ "ಈ ರಾಜನು ಗುರುಹಿರಿಯರಿಂದ ಶಿಕ್ಷಣ ವನ್ನು ಗ್ರಹಿಸಲಿಲ್ಲ. ಅಭಿಮಾನಕ್ಕೆ ವಶನಾಗಿ ಪರೋಪಕಾರದಿಂದ ನಿವೃತ್ತನಾಗಿ ಮನಬಂದಂತೆ ಮಾಡುತ್ತಿದ್ದಾನೆ. ಬ್ರಾಹ್ಮಣರಿಗೆ ಅಪ ಮಾನಮಾಡುವ ಇವನು ಆನೆಯಂತೆ ಜಡಬುದ್ಧಿಯವನಾಗಿದ್ದಾನೆ. ಆದರಿಂದ ಇವನಿಗೆ ಘೋರ ಅಜ್ಞಾನಮಯ ಆನೆಯ ಜನ್ಮವು ದೊರೆಯಲಿ" ಎಂದು ಶಾಪವನ್ನು ಕೊಟ್ಟರು. ॥ ೧೦ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ! ಶಾಪಾನುಗ್ರಹ ಸಮರ್ಥರಾದ ಅಗಸ್ತ್ಯಋಷಿಗಳು ಇಂದ್ರದ್ಯುಮ್ನ ನಿಗೆ ಹೀಗೆ ಶಾಪವನ್ನು ಕೊಟ್ಟು ಶಿಷ್ಯರೊಡನೆ ಅಲ್ಲಿಂದ ಹೊರಟು ಹೋದರು. ಇದು ನನ್ನ ಪ್ರಾರಬ್ಧವೇ ಹೀಗಿತ್ತು ಎಂದು ರಾಜ ರ್ಷಿಯು ಸಂತೋಷವಾಗಿ ಶಾಪವನ್ನು ಸ್ವೀಕರಿಸಿದನು. ॥ ೧೧ ॥ ಇದಾದ ಬಳಿಕ ಆತ್ಮವಿಸ್ಮೃತಿಯನ್ನು ಗೊಳಿಸುವ ಆನೆಯ ಯೋನಿಯು ರಾಜನಿಗೆ ಪ್ರಾಪ್ತವಾಯಿತು. ಆದರೆ ಅವನು ಆನೆ ಯಾಗಿದ್ದರೂ ಭಗವಂತನ ಆರಾಧನೆಯ ಪ್ರಭಾವದಿಂದ ಅವನಿಗೆ ಭಗವಂತನ ಸ್ಮೃತಿಯು ಹಿಂದಿನಂತೆಯೇ ಇತ್ತು. ॥ ೧೨ ॥ ಭಗ ವಾನ್ ಶ್ರೀಹರಿಯು ಹೀಗೆ ಗಜೇಂದ್ರನ ಉದ್ಧಾರಮಾಡಿ ಅವನನ್ನು ತನ್ನ ಪಾರ್ಷದನನ್ನಾಗಿಸಿಕೊಂಡನು. ಗಂಧರ್ವರು, ಸಿದ್ಧರು, ದೇವತೆ ಗಳು ಶ್ರೀಹರಿಯ ಈ ಲೀಲೆಯನ್ನು ಹಾಡತೊಡಗಿದರು ಮತ್ತು ಅವನು ಪಾರ್ಷದರೂಪೀ ಗಜೇಂದ್ರನೊಂದಿಗೆ ಗರುಡವಾಹನ ನಾಗಿ ಅಲೌಕಿಕವಾದ ತನ್ನ ಲೋಕಕ್ಕೆ ಹೊರಟುಹೋದನು. ॥ ೧೩ ॥ ಕುರುವಂಶಶಿರೋಮಣಿ ಪರೀಕ್ಷಿತನೇ! ನಾನು ನಿನಗೆ ಭಗವಾನ್ ಶ್ರೀಕೃಷ್ಣನ ಮಹಿಮೆಯನ್ನು ಹಾಗೂ ಗಜೇಂದ್ರನ ಉದ್ಧಾರದ

ಯಥಾನುಕೀರ್ತಯಂತ್ಯೇತಚ್ಛ್ರೇಯಸ್ಕಾಮಾ ದ್ವಿಜಾತಯಃ ।
ಶುಚಯಃ ಪ್ರಾತರುತ್ಥಾಯ ದುಃಸ್ವಪ್ನಾದ್ಯುಪಶಾಂತಯೇ ॥ ೧೫ ॥

ಇದಮಾಹ ಹರಿಃ ಪ್ರೀತೋ ಗಜೇಂದ್ರಂ ಕುರುಸತ್ತಮ ।
ಶೃಣ್ವತಾಂ ಸರ್ವಭೂತಾನಾಂ ಸರ್ವಭೂತಮಯೋ ವಿಭುಃ ॥ ೧೬ ॥

ಶ್ರೀಭಗವಾನುವಾಚ

ಯೇ ಮಾಂ ತ್ವಾಂ ಚ ಸರಶ್ಚೇದಂ ಗಿರಿಕಂದರಕಾನನಮ್ ।
ವೇತ್ರ ಕೀಚಕವೇಣೂನಾಂ ಗುಲ್ಮಾನಿ ಸುರಪಾದಪಾನ್ ॥ ೧೭ ॥

ಶೃಂಗಾಣೀಮಾನಿ ಧಿಷ್ಣ್ಯಾನಿ ಬ್ರಹ್ಮಣೋ ಮೇ ಶಿವಸ್ಯ ಚ ।
ಕ್ಷೀರೋದಂ ಮೇ ಪ್ರಿಯಂ ಧಾಮ ಶ್ವೇತದ್ವೀಪಂ ಚ ಭಾಸ್ವರಮ್ ॥ ೧೮ ॥

ಶ್ರೀವತ್ಸಂ ಕೌಸ್ತುಭಂ ಮಾಲಾಂ ಗದಾಂ ಕೌಮೋದಕೀಂ ಮಮ ।
ಸುದರ್ಶನಂ ಪಾಂಚಜನ್ಯಂ ಸುಪರ್ಣಂ ಪತಗೇಶ್ವರಮ್ ॥ ೧೯ ॥

ಶೇಷಂ ಚ ಮತ್ಕಲಾಂ ಸೂಕ್ಷ್ಮಾಂ ಶ್ರಿಯಂ ದೇವೀಂ ಮದಾಶ್ರಯಾಮ್ ।
ಬ್ರಹ್ಮಾಣಂ ನಾರದಮೃಷಿಂ ಭವಂ ಪ್ರಹ್ಲಾದಮೇವ ಚ ॥ ೨೦ ॥

ಮತ್ಸ್ಯಕೂರ್ಮವರಾಹಾದ್ಯೈರವತಾರೈಃ ಕೃತಾನಿ ಮೇ ।
ಕರ್ಮಾಣ್ಯನಂತಪುಣ್ಯಾನಿ ಸೂರ್ಯಂ ಸೋಮಂ ಹುತಾಶನಮ್ ॥ ೨೧ ॥

ಪ್ರಣವಂ ಸತ್ಯಮವ್ಯಕ್ತಂ ಗೋವಿಪ್ರಾನ್ ಧರ್ಮಮವ್ಯಯಮ್ ।
ದಾಕ್ಷಾಯಣೀರ್ಧರ್ಮಪತ್ನೀಃ ಸೋಮಕಶ್ಯಪಯೋರಪಿ ॥ ೨೨ ॥

ಗಂಗಾಂ ಸರಸ್ವತೀಂ ನಂದಾಂ ಕಾಲಿಂದೀಂ ಸಿತವಾರಣಮ್ ।
ಧ್ರುವಂ ಬ್ರಹ್ಮಋಷೀನ್ಸಪ್ತ ಪುಣ್ಯಶ್ಲೋಕಾಂಶ್ಚ ಮಾನವಾನ್ ॥ ೨೩ ॥

ಉತ್ಥಾಯಾಪರರಾತ್ರ್ಯಂತೇ ಪ್ರಯತಾಃ ಸುಸಮಾಹಿತಾಃ ।
ಸ್ಮರಂತಿ ಮಮ ರೂಪಾಣಿ ಮುಚ್ಯಂತೇ ಹ್ಯೇನಸೋಽಖಿಲಾತ್ ॥ ೨೪ ॥

ಯೇ ಮಾಂ ಸ್ತುವಂತ್ಯನೇನಾಂಗ ಪ್ರತಿಬುಧ್ಯ ನಿಶಾತ್ಯಯೇ ।
ತೇಷಾಂ ಪ್ರಾಣಾತ್ಯಯೇ ಚಾಹಂ ದದಾಮಿ ವಿಮಲಾಂ ಮತಿಮ್ ॥ ೨೫ ॥

ಶ್ರೀಶುಕ ಉವಾಚ

ಇತ್ಯಾದಿಶ್ಯ ಹೃಷೀಕೇಶಃ ಪ್ರಧ್ಮಾಯ ಜಲಜೋತ್ತಮಮ್ ।
ಹರ್ಷಯನ್ವಿಬುಧಾನೀಕಮಾರುರೋಹ ಖಗಾಧಿಪಮ್ ॥ ೨೬ ॥

ಕಥೆಯನ್ನು ಹೇಳಿದೆನು. ಈ ಕಥಾಪ್ರಸಂಗವು ಕೇಳುವವರ ಕಲಿಮಲ ಮತ್ತು ದುಃಸ್ವಪ್ನವನ್ನು ಇಲ್ಲವಾಗಿಸಿ, ಅವರಿಗೆ ಯಶಸ್ಸು, ಉನ್ನತಿ ಹಾಗೂ ಸ್ವರ್ಗವನ್ನು ಕೊಡುವಂತಹುದು ॥ ೧೪ ॥ ಆದಕ್ಕಾಗಿ ಶ್ರೇಯಸ್ಸನ್ನು ಬಯಸುವ ದ್ವಿಜರು ದುಃಸ್ವಪ್ನಾದಿಗಳ ಶಾಂತಿಗಾಗಿ ಪ್ರಾತಃಕಾಲ ಎದ್ದೊಡನೆಯೇ ಪವಿತ್ರರಾಗಿ ಇದನ್ನು ಪಾರಾಯಣ ಮಾಡುತ್ತಾರೆ. ॥ ೧೫ ॥ ಪರೀಕ್ಷಿತನೇ! ಗಜೇಂದ್ರನ ಸ್ತುತಿಯಿಂದ ಪ್ರಸನ್ನನಾದ ಸರ್ವವ್ಯಾಪಕನೂ, ಸರ್ವಸ್ವರೂಪನೂ ಆದ ಭಗವಾನ್ ಶ್ರೀಹರಿಯು ಎಲ್ಲ ಜನರು ಕೇಳುವಂತೆ ಈ ಮಾತನ್ನು ಹೇಳಿದ್ದನು. ॥ ೧೬ ॥

ಶ್ರೀಭಗವಂತನು ಹೇಳಿದನು – ಗಜೇಂದ್ರನೇ! ಯಾವ ಜನರು ಬ್ರಾಹ್ಮೀಮುಹೂರ್ತದಲ್ಲೆದ್ದು ಇಂದ್ರಿಯನಿಗ್ರಹಪೂರ್ವಕವಾಗಿ, ಏಕಾಗ್ರಮನಸ್ಸಿನಿಂದ ನನ್ನನ್ನೂ-ನಿನ್ನನ್ನು ಹಾಗೂ ಈ ಸರೋವರ, ಪರ್ವತ ಮತ್ತು ಗುಹೆಗಳನ್ನು, ವನವನ್ನೂ, ಬೆತ್ತ-ಬಿದಿರುಗಳ ಪೊದರುಗಳನ್ನು, ಇಲ್ಲಿಯ ದಿವ್ಯ ವೃಕ್ಷಗಳನ್ನೂ, ಪರ್ವತ ಶಿಖರಗಳನ್ನೂ, ನನ್ನ-ಬ್ರಹ್ಮದೇವರ-ಶಿವನ ನಿವಾಸಸ್ಥಾನಗಳನ್ನು, ನನಗೆ ಪ್ರಿಯವಾದ ಕ್ಷೀರಸಾಗರ, ಪ್ರಕಾಶಮಯ ಶ್ವೇತದ್ವೀಪವನ್ನು, ಶ್ರೀವತ್ಸ, ಕೌಸ್ತುಭಮಣಿ, ವನಮಾಲೆ, ನನ್ನ ಕೌಮೋದಕೀ ಗದೆ, ಸುದರ್ಶನ ಚಕ್ರ, ಪಾಂಚಜನ್ಯ ಶಂಖ ಇವುಗಳನ್ನೂ, ಪಕ್ಷಿರಾಜ ಗರುಡ, ನನ್ನ ಸೂಕ್ಷ್ಮವಾದ ಕಲಾಸ್ವರೂಪವಾದ ಆದಿಶೇಷನನ್ನು, ನನ್ನಲ್ಲೇ ಆಶ್ರಿತಳಾಗಿರುವ ಲಕ್ಷ್ಮೀದೇವಿಯನ್ನು, ಬ್ರಹ್ಮದೇವರನ್ನು, ದೇವರ್ಷಿನಾರದರನ್ನೂ, ಶಂಕರನನ್ನು ಹಾಗೂ ಭಕ್ತರಾಜ ಪ್ರಹ್ಲಾದನನ್ನು, ಮತ್ಸ್ಯ, ಕೂರ್ಮ, ವರಾಹ ಮುಂತಾದ ಅವತಾರಗಳಲ್ಲಿ ನನ್ನಿಂದ ಮಾಡಲ್ಪಟ್ಟ ಅನಂತ ಪುಣ್ಯಮಯ ಚರಿತ್ರೆಗಳನ್ನು, ಸೂರ್ಯ, ಚಂದ್ರ, ಅಗ್ನಿ ಓಂಕಾರ, ಸತ್ಯ, ಮೂಲಪ್ರಕೃತಿ, ಗೋವು, ಬ್ರಾಹ್ಮಣರು, ಅವಿನಾಶೀ ಸನಾತನಧರ್ಮವನ್ನು, ಸೋಮ, ಕಶ್ಯಪ ಇವರನ್ನು ಮತ್ತು ಧರ್ಮನ ಪತ್ನೀ ದಕ್ಷಕನ್ಯೆಯರನ್ನು, ಗಂಗಾ, ಸರಸ್ವತೀ, ಅಲಕನಂದಾ, ಯಮುನಾ, ಗಜರಾಜ, ಐರಾವತ, ಭಕ್ತಶಿರೋಮಣಿ ಧ್ರುವ, ಏಳು ಸಪ್ತರ್ಷಿಗಳನ್ನು, ಪುಣ್ಯಕೀರ್ತಿ (ನಳ, ಯುಧಿಷ್ಠಿರ, ಜನಕ ಮುಂತಾದ) ಮಹಾಪುರುಷರನ್ನು ಹೀಗೆ ಇವರೆಲ್ಲರನ್ನು ಸ್ಮರಿಸುತ್ತಾರೋ, ಅವರು ಸಮಸ್ತ ಪಾಪಗಳಿಂದ ಬಿಡುಗಡೆ ಹೊಂದುವರು. ಏಕೆಂದರೆ, ಇವೆಲ್ಲವೂ ನನ್ನ ಸ್ವರೂಪಗಳೇ ಆಗಿವೆ. ॥ ೧೭-೨೪ ॥ ಪ್ರಿಯ ಗಜೇಂದ್ರನೇ! ಬ್ರಾಹ್ಮೀ ಮುಹೂರ್ತದಲ್ಲಿ ಎಚ್ಚರಗೊಂಡು ನೀನು ಮಾಡಿದ ಸ್ತೋತ್ರದಿಂದ ನನ್ನನ್ನು ಸ್ತುತಿಸುವವರ ಮೃತ್ಯುವಿನ ಸಮಯದಲ್ಲಿ ಅವರಿಗೆ ನಾನು ನಿರ್ಮಲ ಬುದ್ಧಿಯನ್ನು ಕರುಣಿಸುವೆನು. ॥ ೨೫ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ! ಭಗವಾನ್ ಶ್ರೀಕೃಷ್ಣನು ಹೀಗೆ ಹೇಳಿ, ದೇವತೆಗಳನ್ನು ಆನಂದಪಡಿಸುತ್ತಾ ತನ್ನ ಶ್ರೇಷ್ಠವಾದ ಶಂಖವನ್ನು ಊದಿದನು ಹಾಗೂ ಗರುಡನನ್ನು ಏರಿದನು. ॥ ೨೬ ॥

ನಾಲ್ಕನೆಯ ಅಧ್ಯಾಯವು ಮುಗಿಯಿತು. ॥ ೪ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಅಷ್ಟಮ ಸ್ಕಂಧೇ ಗಜೇಂದ್ರಮೋಕ್ಷಣಂ ನಾಮ ಚತುರ್ಥೋಽಧ್ಯಾಯಃ ॥ ೪ ॥

ಐದನೆಯ ಅಧ್ಯಾಯ

ದೇವತೆಗಳೆಲ್ಲರೂ ಬ್ರಹ್ಮನ ಬಳಿಗೆ ಹೋದುದು, ಬ್ರಹ್ಮದೇವರು ಭಗವಂತನನ್ನು ಸ್ತುತಿಸಿದುದು

ಶ್ರೀಶುಕ ಉವಾಚ

ರಾಜನ್ನುದಿತಮೇತತ್ತೇ ಹರೇಃ ಕರ್ಮಾಘನಾಶನಮ್ ।
ಗಜೇಂದ್ರಮೋಕ್ಷಣಂ ಪುಣ್ಯಂ ರೈವತಂ ತ್ವಂತರಂ ಶೃಣು ॥ ೧ ॥

ಪಂಚಮೋ ರೈವತೋ ನಾಮ ಮನುಸ್ತಾಮಸಸೋದರಃ ।
ಬಲಿವಿಂಧ್ಯಾದಯಸ್ತಸ್ಯ ಸುತಾ ಅರ್ಜುನಪೂರ್ವಕಾಃ ॥ ೨ ॥

ವಿಭುರಿಂದ್ರಃ ಸುರಗಣಾ ರಾಜನ್ ಭೂತರಯಾದಯಃ ।
ಹಿರಣ್ಯರೋಮಾ ವೇದಶಿರಾ ಊರ್ಧ್ವಬಾಹ್ವಾದಯೋ ದ್ವಿಜಾಃ ॥ ೩ ॥

ಪತ್ನೀ ವಿಕುಂಠಾ ಶುಭ್ರಸ್ಯ ವೈಕುಂಠೈಃ ಸುರಸತ್ತಮೈಃ ।
ತಯೋಃ ಸ್ವಕಲಯಾ ಜಜ್ಞೇ ವೈಕುಂಠೋ ಭಗವಾನ್ ಸ್ವಯಮ್ ॥ ೪ ॥

ವೈಕುಂಠಃ ಕಲ್ಪಿತೋ ಯೇನ ಲೋಕೋ ಲೋಕನಮಸ್ಕೃತಃ ।
ರಮಯಾ ಪ್ರಾರ್ಥ್ಯಮಾನೇನ ದೇವ್ಯಾ ತತ್ಪ್ರಿಯಕಾಮ್ಯಯಾ ॥ ೫ ॥

ತಸ್ಯಾನುಭಾವಃ ಕಥಿತೋ ಗುಣಾಶ್ಚ ಪರಮೋದಯಾಃ ।
ಭೌಮಾನ್ ರೇಣೂನ್ ಸ ವಿಮಮೇ ಯೋ ವಿಷ್ಣೋರ್ವರ್ಣಯೇದ್ಗುಣಾನ್ ॥ ೬ ॥

ಷಷ್ಠಶ್ಚ ಚಕ್ಷುಷಃ ಪುತ್ರಶ್ಚಾಕ್ಷುಷೋ ನಾಮ ವೈ ಮನುಃ ।
ಪೂರುಪೂರುಷಸುದ್ಯುಮ್ನಪ್ರಮುಖಾಶ್ಚಾಕ್ಷುಷಾತ್ಮಜಾಃ ॥ ೭ ॥

ಇಂದ್ರೋ ಮಂತ್ರದ್ರುಮಸ್ತತ್ರ ದೇವಾ ಆಪ್ಯಾದಯೋ ಗಣಾಃ ।
ಮುನಯಸ್ತತ್ರ ವೈ ರಾಜನ್ ಹವಿಷ್ಮದ್ವೀರಕಾದಯಃ ॥ ೮ ॥

ತತ್ರಾಪಿ ದೇವಃ ಸಂಭೂತ್ಯಾಂ ವೈರಾಜಸ್ಯಾಭವತ್ಸುತಃ ।
ಅಜಿತೋ ನಾಮ ಭಗವಾನಂಶೇನ ಜಗತಃ ಪತಿಃ ॥ ೯ ॥

ಪಯೋಧಿಂ ಯೇನ ನಿರ್ಮಥ್ಯ ಸುರಾಣಾಂ ಸಾಧಿತಾ ಸುಧಾ ।
ಭ್ರಮಮಾಣೋಽಂಭಸಿ ಧೃತಃ ಕೂರ್ಮರೂಪೇಣ ಮಂದರಃ ॥ ೧೦ ॥

ರಾಜೋವಾಚ

ಯಥಾ ಭಗವತಾ ಬ್ರಹ್ಮನ್ ಮಥಿತಃ ಕ್ಷೀರಸಾಗರಃ ।
ಯದರ್ಥಂ ವಾ ಯತಶ್ಚಾದ್ರಿಂ ದಧಾರಾಂಬುಚರಾತ್ಮನಾ ॥ ೧೧ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ! ಭಗವಂತನ ಈ ಗಜೇಂದ್ರಮೋಕ್ಷದ ಪವಿತ್ರ ಲೀಲೆಯು ಸಮಸ್ತ ಪಾಪಗಳನ್ನು ನಾಶಮಾಡುವಂತಹುದು. ಅದನ್ನು ನಾನು ನಿನಗೆ ಹೇಳಿದೆನು. ಈಗ ರೈವತ ಮನ್ವಂತರದ ಕಥೆಯನ್ನು ಕೇಳು. ॥ ೧ ॥ ಐದನೆಯ ಮನುವಿನ ಹೆಸರು ರೈವತ. ಇವನು ನಾಲ್ಕನೆಯ ಮನುವಾದ ತಾಮಸನ ತಮ್ಮನು. ಅವನಿಗೆ ಅರ್ಜುನ, ಬಲಿ, ವಿಂಧ್ಯ ಮುಂತಾದವರು ಮಕ್ಕಳಿದ್ದರು. ॥ ೨ ॥ ಆ ಮನ್ವಂತರದಲ್ಲಿ ವಿಭು ಎಂಬುವನು ಇಂದ್ರನಾಗಿದ್ದನು. ಭೂತರಯ ಮುಂತಾದ ದೇವತೆಗಳು ಮುಖ್ಯರಾಗಿದ್ದರು. ಪರೀಕ್ಷಿತನೇ! ಆಗ ಹಿರಣ್ಯರೋಮಾ, ವೇದಶಿರಾ, ಊರ್ಧ್ವಬಾಹು ಮುಂತಾದವರು ಸಪ್ತರ್ಷಿಗಳಿದ್ದರು. ॥ ೩ ॥ ಅವರಲ್ಲಿ ಶುಭ್ರ ಎಂಬ ಋಷಿಯ ಪತ್ನಿಯ ಹೆಸರು ವಿಕುಂಠಾ. ಅವಳ ಗರ್ಭದಲ್ಲಿ ವೈಕುಂಠರೆಂಬ ಶ್ರೇಷ್ಠದೇವತೆಗಳೊಡನೆ ತನ್ನ ಅಂಶದಿಂದ ಸ್ವಯಂ ಭಗವಂತನು ವೈಕುಂಠನೆಂಬ ಹೆಸರಿನಿಂದ ಅವತರಿಸಿದನು. ॥ ೪ ॥ ಅವನು ಲಕ್ಷ್ಮೀದೇವಿಯ ಪ್ರಾರ್ಥನೆಯಂತೆ ಅವಳನ್ನು ಸಂತೋಷಪಡಿಸಲು ವೈಕುಂಠಧಾಮವನ್ನು ರಚಿಸಿದನು. ಆ ಲೋಕವು ಇತರ ಎಲ್ಲ ಲೋಕಗಳಿಗಿಂತ ಶ್ರೇಷ್ಠವಾದುದು. ॥ ೫ ॥ ಆ ವೈಕುಂಠನಾಥನ ಕಲ್ಯಾಣಗುಣಗಳನ್ನು ಮತ್ತು ಮಹಿಮೆಯನ್ನು ನಾನು ಸಂಕ್ಷೇಪವಾಗಿ (ಮೂರನೆಯ ಸ್ಕಂಧದಲ್ಲಿ) ಹಿಂದೆಯೇ ವರ್ಣಿಸಿದ್ದೇನೆ. ಭಗವಾನ್ ವಿಷ್ಣುವಿನ ಸಂಪೂರ್ಣಗುಣಗಳನ್ನಾದರೋ ಪೃಥಿವಿಯಲ್ಲಿರುವ ಧೂಳಿನ ಕಣಗಳನ್ನು ಎಣಿಸಬಲ್ಲವನೇ ವರ್ಣಿಸಬಲ್ಲನು. ಅಂದರೆ ವರ್ಣನಾತೀತವಾದವುಗಳು. ॥ ೬ ॥

ಆರನೆಯ ಮನುವು ಚಕ್ಷುವಿನ ಪುತ್ರ ಚಾಕ್ಷುಷನಾಗಿದ್ದನು. ಅವನಿಗೆ ಪೂರು, ಪುರುಷ, ಸುದ್ಯುಮ್ನ ಮುಂತಾದ ಅನೇಕ ಪುತ್ರರಿದ್ದರು. ॥ ೭ ॥ ಅವರಲ್ಲಿ ಮಂತ್ರದ್ರುಮನೆಂಬ ಇಂದ್ರನಿದ್ದನು ಮತ್ತು ಆಪ್ಯ ಮುಂತಾದ ಪ್ರಧಾನ ದೇವತೆಗಳಿದ್ದರು. ಆ ಮನ್ವಂತರದಲ್ಲಿ ಹವಿಷ್ಮಾನ್, ವೀರಕ ಮುಂತಾದವರು ಸಪ್ತರ್ಷಿಗಳಾಗಿದ್ದರು. ॥ ೮ ॥ ಜಗತ್ಪತಿಯಾದ ಭಗವಂತನು ಆ ಸಮಯದಲ್ಲಿಯೂ ವೈರಾಜನ ಪತ್ನಿಯಾದ ಸಂಭೂತಿಯಲ್ಲಿ ಅಜಿತನೆಂಬ ಹೆಸರಿನಿಂದ ಅಂಶಾವತಾರವನ್ನು ತಾಳಿದನು. ॥ ೯ ॥ ಅವನೇ ಸಮುದ್ರಮಂಥನ ಮಾಡಿ ದೇವತೆಗಳಿಗೆ ಅಮೃತವನ್ನು ಕುಡಿಸಿದ್ದನು ಮತ್ತು ಕೂರ್ಮರೂಪವನ್ನು ಧರಿಸಿ ಗಿರ-ಗಿರನೆ ತಿರುಗುತ್ತಿದ್ದ ಮಂದರಾಚಲವನ್ನು ತನ್ನ ಬೆನ್ನಲ್ಲಿ ಹೊತ್ತನು. ॥ ೧೦ ॥

ಪರೀಕ್ಷಿದ್ರಾಜನು ಕೇಳಿದನು – ಬ್ರಾಹ್ಮಣಶ್ರೇಷ್ಠರೇ! ಭಗವಂತನು ಕ್ಷೀರಸಾಗರ ಮಂಥನವನ್ನು ಹೇಗೆ ಮಾಡಿದನು? ಅವನು ಕೂರ್ಮರೂಪವನ್ನು ಧರಿಸಿ ಯಾವ ಕಾರಣದಿಂದ ಮತ್ತು ಯಾವ ಉದ್ದೇಶದಿಂದ ಮಂದರಪರ್ವತವನ್ನು ಬೆನ್ನಿನ ಮೇಲೆ ಹೊತ್ತುಕೊಂಡನು? ॥ ೧೧ ॥ ದೇವತೆಗಳಿಗೆ ಆ ಸಮಯದಲ್ಲಿ ಅಮೃತವು ಹೇಗೆ ದೊರೆಯಿತು? ಇನ್ನೂ ಯಾವ-ಯಾವ

ಯಥಾಮೃತಂ ಸುರೈಃ ಪ್ರಾಪ್ತಂ ಕಿಂಚಾನ್ಯದಭವತ್ತತಃ ।
ಏತದ್ಭಗವತಃ ಕರ್ಮ ವದಸ್ವ ಪರಮಾದ್ಭುತಮ್ ॥ ೧೨ ॥

ತ್ವಯಾ ಸಂಕಥ್ಯಮಾನೇನ ಮಹಿಮ್ನಾ ಸಾತ್ವತಾಂ ಪತೇಃ ।
ನಾತಿತೃಪ್ಯತಿ ಮೇ ಚಿತ್ತಂ ಸುಚಿರಂ ತಾಪತಾಪಿತಮ್ ॥ ೧೩ ॥

ಸೂತ ಉವಾಚ

ಸಂಪೃಷ್ಟೋ ಭಗವಾನೇವಂ ದ್ವೈಪಾಯನಸುತೋ ದ್ವಿಜಾಃ ।
ಅಭಿನಂದ್ಯ ಹರೇರ್ವೀರ್ಯಮಭ್ಯಾಚಷ್ಟುಂ ಪ್ರಚಕ್ರಮೇ ॥ ೧೪ ॥

ಶ್ರೀಶುಕ ಉವಾಚ

ಯದಾ ಯುದ್ಧೇಽಸುರೈರ್ದೇವಾ ಬಾಧ್ಯಮಾನಾಃ ಶಿತಾಯುಧೈಃ ।
ಗತಾಸವೋ ನಿಪತಿತಾ ನೋತ್ತಿಷ್ಠೇರನ್ ಸ್ಮ ಭೂಯಶಃ ॥ ೧೫ ॥

ಯದಾ ದುರ್ವಾಸಸಃ ಶಾಪಾತ್ಸೇಂದ್ರಾ ಲೋಕಾಸ್ತ್ರಯೋ ನೃಪ ।
ನಿಃಶ್ರೀಕಾಶ್ಚಾಭವಂಸ್ತತ್ರ ನೇಶುರಿಜ್ಯಾದಯಃ ಕ್ರಿಯಾಃ ॥ ೧೬ ॥

ನಿಶಾಮ್ಯೈತತ್ಸುರಗಣಾ ಮಹೇಂದ್ರವರುಣಾದಯಃ ।
ನಾಧ್ಯಗಚ್ಛನ್ ಸ್ವಯಂ ಮಂತ್ರೈರ್ಮಂತ್ರಯಂತೋ ವಿನಿಶ್ಚಯಮ್ ॥ ೧೭ ॥

ತತೋ ಬ್ರಹ್ಮಸಭಾಂ ಜಗ್ಮುರ್ಮೇರೋರ್ಮೂರ್ಧನಿ ಸರ್ವಶಃ ।
ಸರ್ವಂ ವಿಜ್ಞಾಪಯಾಂಚಕ್ರುಃ ಪ್ರಣತಾಃ ಪರಮೇಷ್ಠಿನೇ ॥ ೧೮ ॥

ಸ ವಿಲೋಕ್ಯೇಂದ್ರವಾಯ್ವಾದೀನ್ನಿಃಸತ್ತ್ವಾನ್ ವಿಗತಪ್ರಭಾನ್ ।
ಲೋಕಾನಮಂಗಲಪ್ರಾಯಾನಸುರಾನಯಥಾ ವಿಭುಃ ॥ ೧೯ ॥

ಸಮಾಹಿತೇನ ಮನಸಾ ಸಂಸ್ಮರನ್ಪುರುಷಂ ಪರಮ್ ।
ಉವಾಚೋತ್ಫುಲ್ಲವದನೋ ದೇವಾನ್ಸ ಭಗವಾನ್ಪರಃ ॥ ೨೦ ॥

ಅಹಂ ಭವೋ ಯೂಯಮಥೋಽಸುರಾದಯೋ
ಮನುಷ್ಯತಿರ್ಯಗ್ದ್ರುಮಘರ್ಮಜಾತಯಃ ।
ಯಸ್ಯಾವತಾರಾಂಶಕಲಾವಿಸರ್ಜಿತಾ
ವ್ರಜಾಮ ಸರ್ವೇ ಶರಣಂ ತಮವ್ಯಯಮ್ ॥ ೨೧ ॥

ವಸ್ತುಗಳು ಸಮುದ್ರಮಂಥನದಿಂದ ದೊರೆತವು ? ಭಗವಂತನ ಈ ಲೀಲೆಯು ನಿಶ್ಚಯವಾಗಿಯೂ ಪರಮಾದ್ಭುತವಾಗಿದೆ. ಕೃಪೆಯಿಟ್ಟು ತಾವು ಇದೆಲ್ಲವನ್ನೂ ವಿಶದವಾಗಿ ವರ್ಣಿಸಿರಿ. ॥ ೧೨ ॥ ಭಕ್ತವತ್ಸಲನಾದ ಭಗವಂತನ ಮಹಿಮೆಗಳನ್ನು ನೀವು ವರ್ಣಿಸಿದಂತೆಯೇ ನನ್ನ ಹೃದಯವು ಅವನ್ನು ಕೇಳಲು ಅಷ್ಟೇ ಉತ್ಸುಕವಾಗುತ್ತಾ ಹೋಗುತ್ತದೆ. ಬೇಸರಪಡುವ ಮಾತೇ ಇಲ್ಲ. ಸಂಸಾರತಾಪದಿಂದ ಬೇಯುತ್ತಿರುವ ನನ್ನ ಮನಸ್ಸು ಶಾಂತಿಪಡುತ್ತದೆ. ॥ ೧೩ ॥

ಸೂತಪುರಾಣಿಕರು ಹೇಳಿದರು – ಶೌನಕಾದಿ ಋಷಿಗಳಿರಾ ! ಪೂಜ್ಯರಾದ ಶ್ರೀಶುಕಮಹಾಮುನಿಗಳು ಪರೀಕ್ಷಿದ್ರಾಜನ ಈ ಪ್ರಶ್ನೆಯನ್ನು ಕೇಳಿ, ಅವನನ್ನು ಅಭಿನಂದಿಸುತ್ತಾ ಭಗವಂತನ ಸಮುದ್ರಮಂಥನ ಲೀಲೆಯನ್ನು ವರ್ಣಿಸತೊಡಗಿದರು. ॥ ೧೪ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತ ರಾಜನೇ ! ಹಿಂದೊಮ್ಮೆ ಅಸುರರು ತಮ್ಮ ನಿಶಿತವಾದ ಶಸ್ತ್ರಾಸ್ತ್ರಗಳಿಂದ ದೇವತೆಗಳನ್ನು ಪರಾಜಿತಗೊಳಿಸಿದರು. ಆ ದೇವಾಸುರರ ಯುದ್ಧದಲ್ಲಿ ಹಲವಾರು ದೇವತೆಗಳೂ ಅಸುನೀಗಿದ್ದರು. ಕೆಳಕ್ಕೆ ಬಿದ್ದವರು ಮೇಲೇಳಲೇ ಇಲ್ಲ. ॥ ೧೫ ॥ ದುರ್ವಾಸರ ಶಾಪದಿಂದ * ಮೂರು ಲೋಕಗಳು ಸೇರಿ ಸ್ವತಃ ಇಂದ್ರನೂ ಕೂಡ ಶ್ರೀಹೀನನಾದನು. ಇದರಿಂದ ಯಜ್ಞ-ಯಾಗಾದಿ ಧರ್ಮ-ಕರ್ಮಗಳೂ ನಿಂತುಹೋದುವು. ॥ ೧೬ ॥ ಈ ದುರ್ದಶೆಯನ್ನು ಕಂಡು ಇಂದ್ರ, ವರುಣರೇ ಮುಂತಾದ ದೇವತೆಗಳು ಪರಸ್ಪರ ಅನೇಕ ವಿಧದಿಂದ ವಿಚಾರಮಾಡಿದರೂ ತಮ್ಮ ವಿಚಾರಗಳಿಂದ ಯಾವುದೇ ಇತ್ಯರ್ಥಕ್ಕೆ ಬರಲಾಗಲಿಲ್ಲ. ॥ ೧೭ ॥ ಆಗ ಅವರೆಲ್ಲರೂ ಸುಮೇರುಪರ್ವತದ ಶಿಖರದಲ್ಲಿದ್ದ ಬ್ರಹ್ಮದೇವರ ಸಭೆಗೆ ಹೋದರು. ಅಲ್ಲಿ ಅವರು ಅತಿನಮ್ರರಾಗಿ ಬ್ರಹ್ಮದೇವರ ಸೇವೆಯಲ್ಲಿ ತೊಡಗಿ ತಮ್ಮ ಪರಿಸ್ಥಿತಿಯನ್ನು ವಿಶದವಾಗಿ ತಿಳಿಸಿದರು. ॥ ೧೮ ॥ ಬ್ರಹ್ಮದೇವರು ನೋಡಿದರು – ಇಂದ್ರ, ವಾಯು ಮುಂತಾದ ದೇವತೆಗಳು ಶ್ರೀಹೀನ ಮತ್ತು ಶಕ್ತಿಹೀನರಾಗಿರುವರು. ಜನರ ಪರಿಸ್ಥಿತಿಯು ಬಲು ವಿಕಟ, ಸಂಕಟಗ್ರಸ್ತವಾಗಿದೆ. ಅಸುರರಾದರೋ ಇದಕ್ಕೆ ವಿಪರೀತವಾಗಿ ಉನ್ನತಿಯನ್ನು ಪಡೆಯುತ್ತಿದ್ದಾರೆ. ॥ ೧೯ ॥ ಆಗ ಸರ್ವಸಮರ್ಥರಾದ ಬ್ರಹ್ಮದೇವರು ತಮ್ಮ ಮನಸ್ಸನ್ನು ಏಕಾಗ್ರಗೊಳಿಸಿ ಪರಮ ಪುರುಷ ಭಗವಂತನನ್ನು ಸ್ಮರಿಸಿದರು. ಮತ್ತೆ ಸ್ವಲ್ಪಹೊತ್ತು ತಡೆದು, ಪ್ರಫುಲ್ಲಿತ ವದನಾರವಿಂದದಿಂದ ದೇವತೆಗಳನ್ನು ಸಂಬೋಧಿಸಿ ಹೇಳಿದರು – ॥ ೨೦ ॥ ದೇವತೆಗಳಿರಾ ! ನಾನು, ಶಂಕರನು, ನೀವುಗಳು ಹಾಗೂ ಅಸುರರು, ದೈತ್ಯರು, ಮನುಷ್ಯರು, ಪಶು-ಪಕ್ಷಿಗಳು, ವೃಕ್ಷಗಳು, ಸ್ವೇದಜ ಮುಂತಾದ ಸಮಸ್ತ ಪ್ರಾಣಿಗಳು ಯಾರ ವಿರಾಟ್ ರೂಪದ ಒಂದು ಅತ್ಯಂತ ಸ್ವಲ್ಪಾತಿಸ್ವಲ್ಪ ಅಂಶದಿಂದ ರಚಿತವಾಗಿವೆಯೋ, ಆ ಅವಿನಾಶೀ ಪ್ರಭುವಿಗೆ ನಾವುಗಳು ಶರಣಾಗಬೇಕು. ॥ ೨೧ ॥

* ಈ ಪ್ರಸಂಗವು ವಿಷ್ಣುಪುರಾಣದಲ್ಲಿ ಹೀಗೆ ಬಂದಿದೆ – ಒಮ್ಮೆ ದುರ್ವಾಸರು ವೈಕುಂಠದಿಂದ ಬರುತ್ತಿದ್ದರು. ದಾರಿಯಲ್ಲಿ ಐರಾವತವನ್ನೇರಿದ ದೇವೇಂದ್ರನು ಸಿಕ್ಕಿದನು. ಅವನನ್ನು ತ್ರಿಲೋಕಾಧಿಪತಿ ಎಂದರಿತು ದುರ್ವಾಸರು ಭಗವಂತನ ಪ್ರಸಾದದ ಮಾಲೆಯನ್ನು ಕೊಟ್ಟರು. ಆದರೆ ಇಂದ್ರನು ಐಶ್ವರ್ಯದ ಮದದಿಂದ ಅದನ್ನು ಸ್ವಲ್ಪವೂ ಆದರಿಸದೆ ಐರಾವತದ ತಲೆಯಮೇಲಿಟ್ಟನು. ಐರಾವತವು ಅದನ್ನು ಸೊಂಡಿಲಿನಿಂದ ಎತ್ತಿಕೊಂಡು ಕಾಲಿನಿಂದ ತುಳಿದುಬಿಟ್ಟಿತು. ಇದರಿಂದ ದುರ್ವಾಸರು ಕ್ರೋಧಗೊಂಡು – ನೀನು ಮೂರು ಲೋಕಗಳಸಹಿತ ಶ್ರೀಹೀನನಾಗು. ಅಂದರೆ ಸಂಪತ್ತುರಹಿತನಾಗು ಎಂದು ಶಪಿಸಿದರು. ಇದರಿಂದ ಇಂದ್ರನು ಶ್ರೀಯನ್ನು ಕಳಕೊಂಡನು.

ನ ಯಸ್ಯ ವಧ್ಯೋ ನ ಚ ರಕ್ಷಣೀಯೋ
ನೋಪೇಕ್ಷಣೀಯಾದರಣೀಯಪಕ್ಷಃ ।
ಅಥಾಪಿ ಸರ್ಗಸ್ಥಿತಿಸಂಯಮಾರ್ಥಂ
ಧತ್ತೇ ರಜಃಸತ್ತ್ವತಮಾಂಸಿ ಕಾಲೇ ॥ ೨೨ ॥

ಅಯಂ ಚ ತಸ್ಯ ಸ್ಥಿತಿಪಾಲನಕ್ಷಣಃ
ಸತ್ತ್ವಂ ಜುಷಾಣಸ್ಯ ಭವಾಯ ದೇಹಿನಾಮ್ ।
ತಸ್ಮಾದ್ವ್ರಜಾಮಃ ಶರಣಂ ಜಗದ್ಗುರುಂ
ಸ್ವಾನಾಂ ಸ ನೋ ಧಾಸ್ಯತಿ ಶಂ ಸುರಪ್ರಿಯಃ ॥ ೨೩ ॥

ಅವನ ದೃಷ್ಟಿಯಲ್ಲಿ ವಧಾರ್ಹನಾಗಲೀ, ರಕ್ಷಿಸಲ್ಪಡತಕ್ಕವನಾಗಲೀ, ಯಾರೂ ಇಲ್ಲದಿದ್ದರೂ, ಅವನಿಗೆ ಉಪೇಕ್ಷಣೀಯರು ಹಾಗೂ ಆದರಣೀಯರು ಯಾರೂ ಇಲ್ಲದಿದ್ದರೂ ಸೃಷ್ಟಿ ಸ್ಥಿತಿ ಪ್ರಳಯಕ್ಕಾಗಿ ಆಗಾಗ ಅವನು ರಜೋಗುಣವನ್ನೂ, ಸತ್ತ್ವಗುಣವನ್ನೂ, ತಮೋಗುಣವನ್ನು ಸ್ವೀಕರಿಸುತ್ತಾನೆ. ॥ ೨೨ ॥ ಅವನು ಈ ಸಮಯದಲ್ಲಿ ಪ್ರಾಣಿಗಳ ಕಲ್ಯಾಣಕ್ಕಾಗಿ ಸತ್ತ್ವಗುಣವನ್ನು ಸ್ವೀಕರಿಸಿರುವನು. ಅದಕ್ಕಾಗಿ ಇದು ಜಗತ್ತಿನ ಸ್ಥಿತಿ ಮತ್ತು ರಕ್ಷಣೆಯ ಸಮಯವಾಗಿದೆ. ಆದ್ದರಿಂದ ನಾವೆಲ್ಲರೂ ಆ ಜಗದ್ಗುರು ಪರಮಾತ್ಮನನ್ನೇ ಶರಣು ಹೊಂದೋಣ. ಅವನಿಗೆ ದೇವತೆಗಳು ಪ್ರಿಯರು, ದೇವತೆಗಳಿಗೆ ಅವನೂ ಪ್ರಿಯನಾಗಿರುವನು. ಆದರಿಂದ ತನ್ನವರಾದ ನಮ್ಮನ್ನು ಅವನು ಖಂಡಿತವಾಗಿ ರಕ್ಷಿಸುವನು. ॥ ೨೩ ॥

ಶ್ರೀಶುಕ ಉವಾಚ

ಇತ್ಯಾಭಾಷ್ಯ ಸುರಾನ್ವೇಧಾಃ ಸಹ ದೇವೈರರಿಂದಮ ।
ಅಜಿತಸ್ಯ ಪದಂ ಸಾಕ್ಷಾಜ್ಜಗಾಮ ತಮಸಃ ಪರಮ್ ॥ ೨೪ ॥

ತತ್ರಾದೃಷ್ಟಸ್ವರೂಪಾಯ ಶ್ರುತಪೂರ್ವಾಯ ವೈ ವಿಭೋ ।
ಸ್ತುತಿಮಬ್ರೂತ ದೈವೀಭಿರ್ಗೀರ್ಭಿಸ್ತ್ವವಹಿತೇಂದ್ರಿಯಃ ॥ ೨೫ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ! ಬ್ರಹ್ಮದೇವರು ದೇವತೆಗಳಿಗೆ ಹೀಗೆ ಹೇಳಿ ಅವರನ್ನೊಳಗೊಂಡು ಭಗವಾನ್ ಅಜಿತನ ನಿಜಧಾಮವಾದ ವೈಕುಂಠಕ್ಕೆ ಹೋದರು. ಆ ಧಾಮವು ತಮೋಮಯ ಪ್ರಕೃತಿಯಿಂದ ಹೊರತಾಗಿದೆ. ॥ ೨೪ ॥ ಇವರೆಲ್ಲರೂ ಭಗವಂತನ ಸ್ವರೂಪ ಮತ್ತು ಧಾಮದ ಸಂಬಂಧವಾಗಿ ಮೊದಲಿನಿಂದಲೇ ಬಹಳಷ್ಟು ಕೇಳಿದ್ದರು. ಆದರೆ ಅಲ್ಲಿಗೆ ಹೋದಮೇಲೆ ಅವರಿಗೆ ಏನೂ ಕಂಡುಬಂದಿಲ್ಲ. ಅದಕ್ಕಾಗಿ ಬ್ರಹ್ಮದೇವರು ಏಕಾಗ್ರ ಮನಸ್ಸಿನಿಂದ ವೇದವಾಣಿಯ ಮೂಲಕ ವೇದಗಮ್ಯನಾದ ಭಗವಂತನನ್ನು ಸ್ತುತಿಸತೊಡಗಿದರು. ॥ ೨೫ ॥

ಬ್ರಹ್ಮೋವಾಚ

ಅವಿಕ್ರಿಯಂ ಸತ್ಯಮನಂತಮಾದ್ಯಂ
ಗುಹಾಶಯಂ ನಿಷ್ಕಲಮಪ್ರತರ್ಕ್ಯಮ್ ।
ಮನೋಽಗ್ರಯಾನಂ ವಚಸಾನಿರುಕ್ತಂ
ನಮಾಮಹೇ ದೇವವರಂ ವರೇಣ್ಯಮ್ ॥ ೨೬ ॥

ವಿಪಶ್ಚಿತಂ ಪ್ರಾಣಮನೋಧಿಯಾತ್ಮನಾ-
ಮರ್ಥೇಂದ್ರಿಯಾಭಾಸಮನಿದ್ರಮವ್ರಣಮ್ ।
ಛಾಯಾತಪೌ ಯತ್ರ ನ ಗೃಧ್ರಪಕ್ಷೌ
ತಮಕ್ಷರಂ ಖಂ ತ್ರಿಯುಗಂ ವ್ರಜಾಮಹೇ ॥ ೨೭ ॥

ಅಜಸ್ಯ ಚಕ್ರಂ ತ್ವಜಯೇರ್ಯಮಾಣಂ
ಮನೋಮಯಂ ಪಂಚದಶಾರಮಾಶು ।
ತ್ರಿನಾಭಿ ವಿದ್ಯುಚ್ಚಲಮಷ್ಟನೇಮಿ
ಯದಕ್ಷಮಾಹುಸ್ತಮೃತಂ ಪ್ರಪದ್ಯೇ ॥ ೨೮ ॥

ಬ್ರಹ್ಮದೇವರು ಹೇಳಿದರು – ನೀನು ನಿರ್ವಿಕಾರನೂ, ಸತ್ಯಸ್ವರೂಪನೂ, ಅನಂತನೂ, ಆದಿಪುರುಷನೂ, ಎಲ್ಲರ ಹೃದಯದಲ್ಲಿ ಅಂತರ್ಯಾಮಿಯ ರೂಪದಲ್ಲಿ ವಿರಾಜಿಸುತ್ತಿರುವವನೂ, ಉಪಾಧಿರಹಿತನೂ, ಊಹಿಸಲು ಅಸಾಧ್ಯನಾದವನೂ, ಮನಸ್ಸಿಗಿಂತಲೂ ವೇಗವಾದ ಗಮನವುಳ್ಳವನೂ, ಮಾತಿನಿಂದ ವಿವರಿಸಲು ಅಶಕ್ಯನಾದವನೂ, ದೇವತೆಗಳಲ್ಲಿ ಶ್ರೇಷ್ಠನೂ, ಸರ್ವೋತ್ತಮನೂ ಆಗಿರುವೆ. ಅಂತಹ ಭಗವಂತನಾದ ನಿನಗೆ ನಮಸ್ಕರಿಸುತ್ತೇವೆ. ॥ ೨೬ ॥ ನೀನು ಪ್ರಾಣ, ಮನಸ್ಸು, ಬುದ್ಧಿ, ಅಹಂಕಾರಗಳನ್ನು ತಿಳಿದವನಾಗಿರುವೆ. ಇಂದ್ರಿಯಗಳು ಮತ್ತು ಅವುಗಳ ವಿಷಯಗಳು ಎರಡೂ ನಿನ್ನಿಂದಲೇ ಪ್ರಕಾಶಿತವಾಗುತ್ತವೆ. ಅಜ್ಞಾನವು ನಿನ್ನನ್ನು ಸ್ಪರ್ಶಿಸಲಾರದು. ಪ್ರಕೃತಿಯ ವಿಕಾರವಾದ ಜನ್ಮ-ಮರಣಗಳಿಂದ ಕೂಡಿದ ಶರೀರದಿಂದಲೂ ನೀನು ರಹಿತನಾಗಿರುವೆ. ಜೀವಿಯ ಎರಡು ರೆಕ್ಕೆಗಳಾದ ವಿದ್ಯೆ-ಅವಿದ್ಯೆಗಳು ನಿನ್ನಲ್ಲಿರುವುದಿಲ್ಲ. ನೀನು ಅವಿನಾಶಿಯೂ, ಸೂಕ್ಷ್ಮರೂಪನೂ ಆಗಿರುವೆ. ಕೃತ, ತ್ರೇತಾ, ದ್ವಾಪರ ಯುಗಗಳಲ್ಲಿ ನೀನು ಅವತರಿಸುವೆ. ಅಂತಹ ನಿನ್ನನ್ನು ನಾವೆಲ್ಲರೂ ಶರಣುಹೊಂದುತ್ತೇವೆ. ॥ ೨೭ ॥ ಈ ಶರೀರವು ಜೀವಿಯ ಒಂದು ಮನೋಮಯ ಚಕ್ರವಾಗಿದೆ. ಹತ್ತು ಇಂದ್ರಿಯಗಳು ಮತ್ತು ಐದು ಪ್ರಾಣಗಳು – ಹೀಗೆ ಹದಿನೈದು ಅದರ ಅರೆಕಾಲುಗಳು. ಸತ್ತ್ವ, ರಜ, ತಮಗಳೆಂಬ ಮೂರು ಗುಣಗಳು ಆ ಚಕ್ರದ ನಾಭಿಯಾಗಿದೆ. ಪೃಥಿವಿ, ಜಲ, ತೇಜ, ವಾಯು, ಆಕಾಶ, ಮನ, ಬುದ್ಧಿ, ಅಹಂಕಾರ ಇವು ಎಂಟು ಚಕ್ರದ ಅಂಚಾಗಿದೆ. ಮಾಯೆಯೇ ಈ ಚಕ್ರವನ್ನು ನಡೆಸುತ್ತದೆ. ಇದು ಮಿಂಚಿಗಿಂತಲೂ ಹೆಚ್ಚು ಶೀಘ್ರಗಾಮಿಯಾಗಿದೆ. ಈ ಚಕ್ರಕ್ಕೆ ಸ್ವಯಂ ಪರಮಾತ್ಮನೇ ಅಚ್ಚುಮರವಾಗಿದ್ದಾನೆ. ಏಕಮಾತ್ರ ಸತ್ಯಸ್ವರೂಪನಾದ ಅವನಿಗೆ ನಾವು ಶರಣಾಗಿದ್ದೇವೆ. ॥ ೨೮ ॥

ಯ ಏಕವರ್ಣಂ ತಮಸಃ ಪರಂ ತತ್
ಅಲೋಕಮವ್ಯಕ್ತಮನಂತಪಾರಮ್ ।
ಆಸಾಂಚಕಾರೋಪಸುಪರ್ಣಮೇನ-
ಮುಪಾಸತೇ ಯೋಗರಥೇನ ಧೀರಾಃ ॥ ೨೯ ॥

ನ ಯಸ್ಯ ಕಶ್ಚಾತಿತಿತರ್ತಿ ಮಾಯಾಂ
ಯಯಾ ಜನೋ ಮುಹ್ಯತಿ ವೇದ ನಾರ್ಥಮ್ ।
ತಂ ನಿರ್ಜಿತಾತ್ಮಾತ್ಮಗುಣಂ ಪರೇಶಂ
ನಮಾಮ ಭೂತೇಷು ಸಮಂ ಚರಂತಮ್ ॥ ೩೦ ॥

ಇಮೇ ವಯಂ ಯತ್ಪ್ರಿಯಯೈವ ತನ್ವಾ
ಸತ್ತ್ವೇನ ಸೃಷ್ಟಾ ಬಹಿರಂತರಾವಿಃ ।
ಗತಿಂ ನ ಸೂಕ್ಷ್ಮಾಮೃಷಯಶ್ಚ ವಿದ್ಮಹೇ
ಕುತೋಽಸುರಾದ್ಯಾ ಇತರಪ್ರಧಾನಾಃ ॥ ೩೧ ॥

ಪಾದೌ ಮಹೀಯಂ ಸ್ವಕೃತೈವ ಯಸ್ಯ
ಚತುರ್ವಿಧೋ ಯತ್ರ ಹಿ ಭೂತಸರ್ಗಃ ।
ಸ ವೈ ಮಹಾಪೂರುಷ ಆತ್ಮತಂತ್ರಃ
ಪ್ರಸೀದತಾಂ ಬ್ರಹ್ಮ ಮಹಾವಿಭೂತಿಃ ॥ ೩೨ ॥

ಅಂಭಸ್ತು ಯದ್ರೇತ ಉದಾರವೀರ್ಯಂ
ಸಿಧ್ಯಂತಿ ಜೀವಂತ್ಯುತ ವರ್ಧಮಾನಾಃ ।
ಲೋಕಾಸ್ತ್ರಯೋಽಥಾಖಿಲಲೋಕಪಾಲಾಃ
ಪ್ರಸೀದತಾಂ ಬ್ರಹ್ಮ ಮಹಾವಿಭೂತಿಃ ॥ ೩೩ ॥

ಸೋಮಂ ಮನೋ ಯಸ್ಯ ಸಮಾಮನಂತಿ
ದಿವೌಕಸಾಂ ವೈ ಬಲಮಂಧ ಆಯುಃ ।
ಈಶೋ ನಗಾನಾಂ ಪ್ರಜನಃ ಪ್ರಜಾನಾಂ
ಪ್ರಸೀದತಾಂ ನಃ ಸ ಮಹಾವಿಭೂತಿಃ ॥ ೩೪ ॥

ಅಗ್ನಿರ್ಮುಖಂ ಯಸ್ಯ ತು ಜಾತವೇದಾ
ಜಾತಃ ಕ್ರಿಯಾಕಾಂಡನಿಮಿತ್ತಜನ್ಮಾ ।
ಅಂತಃಸಮುದ್ರೇಽನುಪಚನ್ಸ್ವಧಾತೂನ್
ಪ್ರಸೀದತಾಂ ನಃ ಸ ಮಹಾವಿಭೂತಿಃ ॥ ೩೫ ॥

ಯಾರು ಏಕಮಾತ್ರ ಜ್ಞಾನಸ್ವರೂಪನೂ, ಪ್ರಕೃತಿಗೆ ಅತೀತನೂ, ಅದೃಶ್ಯನೂ ಆಗಿರುವನೋ, ಯಾರು ಸಮಸ್ತ ವಸ್ತುಗಳ ಮೂಲದಲ್ಲಿ ಅವ್ಯಕ್ತನಾಗಿರುವನೋ, ದೇಶ, ಕಾಲಗಳಿಗೆ ಒಳಪಡದವನೋ, ಆ ಪ್ರಭುವೇ ಈ ಜೀವಿಯ ಹೃದಯದಲ್ಲಿ ಅಂತರ್ಯಾಮಿರೂಪದಿಂದ ವಿರಾಜಿಸುತ್ತಿರುವನು. ಧೀರರಾದ ಮನುಷ್ಯರು ಭಕ್ತಿಯೋಗದ ಮೂಲಕ ಅವನನ್ನೇ ಆರಾಧಿಸುತ್ತಾರೆ. ॥ ೨೯ ॥ ಯಾವ ಮಾಯೆಯಿಂದ ಮೋಹಿತನಾದ ಈ ಜೀವನು ತನ್ನ ವಾಸ್ತವಿಕ ಲಕ್ಷ್ಯವನ್ನು ಅಥವಾ ಸ್ವರೂಪವನ್ನು ಮರೆತಿರುವನೋ, ಅಂತಹ ಮಾಯೆಯು ಅವನದೇ ಆಗಿದೆ. ಬೇರೆ ಯಾರೂ ಅದನ್ನು ದಾಟಲಾರರು. ಆದರೆ ಸರ್ವಶಕ್ತಿಸಂಪನ್ನ ಪ್ರಭುವು ತನ್ನ ಆ ಮಾಯೆಯನ್ನು ಹಾಗೂ ಅದರ ಗುಣಗಳನ್ನು ತನ್ನ ವಶದಲ್ಲಿರಿಸಿಕೊಂಡು ಸಮಸ್ತ ಪ್ರಾಣಿಗಳ ಹೃದಯದಲ್ಲಿ ಸಮಭಾವದಿಂದ ಸಂಚರಿಸುತ್ತಿರುವನು. ಜೀವನು ತನ್ನ ಪುರುಷಾರ್ಥದಿಂದ ಅವನನ್ನು ಪಡೆಯಲಾರನು; ಅವನ ಕೃಪೆಯಿಂದಲೇ ಪಡೆದುಕೊಳ್ಳಬಲ್ಲನು. ನಾವು ಅವನ ಚರಣಗಳಲ್ಲಿ ನಮಸ್ಕರಿಸುತ್ತೇವೆ. ॥ ೩೦ ॥ ದೇವತೆಗಳಾದ ನಾವು, ಋಷಿಗಳು ಅವನ ಪರಮಪ್ರಿಯ ಸತ್ತ್ವಮಯ ಶರೀರದಿಂದಲೇ ಉತ್ಪನ್ನರಾದವರು. ಹೀಗಿದ್ದರೂ ಅವನ ಒಳ-ಹೊರ ಏಕರಸವಾಗಿ ಪ್ರಾಕಟ್ಯವಾದ ವಾಸ್ತವಿಕ ಸ್ವರೂಪವನ್ನು ನಾವು ತಿಳಿಯಲಾರೆವು. ಹಾಗಿರುವಾಗ ರಜೋಗುಣ-ತಮೋಗುಣ ಪ್ರಧಾನರಾದ ಅಸುರರೇ ಮುಂತಾದವರು ಅವನನ್ನು ಹೇಗೆ ತಿಳಿಯಬಲ್ಲರು? ಅಂತಹ ಪ್ರಭುವಿನ ಚರಣಗಳಲ್ಲಿ ನಾವು ನಮಸ್ಕರಿಸುತ್ತೇವೆ. ॥ ೩೧ ॥

ಅವನಿಂದಲೇ ರಚಿತವಾದ ಈ ಪೃಥಿವಿಯು ಅವನ ಚರಣವಾಗಿದೆ. ಈ ಪೃಥಿವಿಯಲ್ಲೇ ಜರಾಯುಜ, ಅಂಡಜ, ಸ್ವೇದಜ ಮತ್ತು ಉದ್ಭಿಜ್ಜ – ಈ ನಾಲ್ಕು ಪ್ರಕಾರದ ಪ್ರಾಣಿಗಳು ವಾಸಿಸುತ್ತವೆ. ಆ ಪರಮ ಸ್ವತಂತ್ರ, ಪರಮ ಐಶ್ವರ್ಯಶಾಲಿಯಾದ ಪುರುಷೋತ್ತಮ ಪರಬ್ರಹ್ಮನು ನಮ್ಮ ಮೇಲೆ ಪ್ರಸನ್ನನಾಗಿರಲಿ. ॥ ೩೨ ॥ ಈ ಪರಮಶಕ್ತಿಶಾಲಿಯಾದ ಜಲವು ಅವನ ವೀರ್ಯವಾಗಿದೆ. ಇದರಿಂದಲೇ ಮೂರು ಲೋಕಗಳೂ ಮತ್ತು ಸಮಸ್ತ ಲೋಕಗಳ ಲೋಕಪಾಲರು ಉತ್ಪನ್ನರಾಗುತ್ತಾರೆ, ಬೆಳೆಯುತ್ತಾರೆ, ಜೀವಿಸಿ ಇರುತ್ತಾರೆ. ಆ ಪರಮ ಐಶ್ವರ್ಯಶಾಲಿಯಾದ ಪರಬ್ರಹ್ಮನು ನಮ್ಮ ಮೇಲೆ ಪ್ರಸನ್ನನಾಗಲೀ. ॥ ೩೩ ॥ ಚಂದ್ರನು ಆ ಪ್ರಭುವಿನ ಮನಸ್ಸು ಆಗಿದ್ದಾನೆ ಎಂದು ಶ್ರುತಿಗಳು ಹೇಳುತ್ತವೆ. ಈ ಚಂದ್ರನೇ ಸಮಸ್ತ ದೇವತೆಗಳ ಅನ್ನ, ಬಲ, ಆಯುಸ್ಸು ಆಗಿದ್ದಾನೆ. ಅವನೇ ವೃಕ್ಷಗಳ ಒಡೆಯನೂ, ಪ್ರಜೆಯನ್ನು ವೃದ್ಧಿಪಡಿಸುವವನೂ ಆಗಿದ್ದಾನೆ. ಅಂತಹ ಮನಸ್ಸನ್ನು ಸ್ವೀಕರಿಸುವ ಪರಮ ಐಶ್ವರ್ಯಶಾಲಿಯಾದ ಪ್ರಭುವು ನಮ್ಮ ಮೇಲೆ ಪ್ರಸನ್ನನಾಗಲಿ. ॥ ೩೪ ॥ ಅಗ್ನಿಯು ಪ್ರಭುವಿನ ಮುಖವಾಗಿದೆ. ಅದರ ಉತ್ಪತ್ತಿಯೂ – ವೇದದ ಯಜ್ಞ-ಯಾಗಾದಿ ಕರ್ಮಕಾಂಡವನ್ನು ಸಾಂಗವಾಗಿ ನೆರವೇರಲೆಂದೇ ಆಗಿದೆ. ಈ ಅಗ್ನಿಯೇ ಶರೀರದೊಳಗೆ ಜಠರಾಗ್ನಿಯ ರೂಪದಿಂದ ಮತ್ತು ಸಮುದ್ರದೊಳಗೆ ಬಡವಾನಲ ರೂಪದಿಂದ ಇದ್ದು ಅವುಗಳಲ್ಲಿರುವ ಅನ್ನ, ಜಲ ಮುಂತಾದ ಧಾತುಗಳನ್ನು ಜೀರ್ಣ ಮಾಡುತ್ತಾನೆ. ಸಮಸ್ತ ದ್ರವ್ಯಗಳ ಉತ್ಪತ್ತಿಯೂ ಅದರಿಂದಲೇ ಆಗಿದೆ. ಅಂತಹ ಪರಮೈಶ್ವರ್ಯ ಸಂಪನ್ನನಾದ ಭಗವಂತನು ನಮ್ಮಮೇಲೆ ಪ್ರಸನ್ನನಾಗಲೀ. ॥ ೩೫ ॥

ಯಚ್ಚಕ್ಷುರಾಸೀತ್ತರಣಿರ್ದೇವಯಾನಂ
ತ್ರಯೀಮಯೋ ಬ್ರಹ್ಮಣ ಏಷ ಧಿಷ್ಣ್ಯಮ್ ।
ದ್ವಾರಂ ಚ ಮುಕ್ತೇರಮೃತಂ ಚ ಮೃತ್ಯುಃ
ಪ್ರಸೀದತಾಂ ನಃ ಸ ಮಹಾವಿಭೂತಿಃ ॥ ೩೬ ॥

ಪ್ರಾಣಾದಭೂದ್ಯಸ್ಯ ಚರಾಚರಾಣಾಂ
ಪ್ರಾಣಃ ಸಹೋ ಬಲಮೋಜಶ್ಚ ವಾಯುಃ ।
ಅನ್ವಾಸ್ಮ ಸಮ್ರಾಜಮಿವಾನುಗಾ ವಯಂ
ಪ್ರಸೀದತಾಂ ನಃ ಸ ಮಹಾವಿಭೂತಿಃ ॥ ೩೭ ॥

ಶ್ರೋತ್ರಾದ್ದಿಶೋ ಯಸ್ಯ ಹೃದಶ್ಚ ಖಾನಿ
ಪ್ರಜಜ್ಞಿರೇ ಖಂ ಪುರುಷಸ್ಯ ನಾಭ್ಯಾಃ ।
ಪ್ರಾಣೇಂದ್ರಿಯಾತ್ಮಾಸುಶರೀರಕೇತಃ
ಪ್ರಸೀದತಾಂ ನಃ ಸ ಮಹಾವಿಭೂತಿಃ ॥ ೩೮ ॥

ಬಲಾನ್ಮಹೇಂದ್ರಸ್ತ್ರಿದಶಾಃ ಪ್ರಸಾದಾನ್
ಮನ್ಯೋರ್ಗಿರೀಶೋ ಧಿಷಣಾದ್ವಿರಿಂಚಃ ।
ಖೇಭ್ಯಸ್ತು ಛಂದಾಂಸ್ಯೃಷಯೋ ಮೇಢ್ರತಃ ಕಃ
ಪ್ರಸೀದತಾಂ ನಃ ಸ ಮಹಾವಿಭೂತಿಃ ॥ ೩೯ ॥

ಶ್ರೀರ್ವಕ್ಷಸಃ ಪಿತರಶ್ಛಾಯಯಾಽಽಸನ್
ಧರ್ಮಃ ಸ್ತನಾದಿತರಃ ಪೃಷ್ಠತೋಽಭೂತ್ ।
ದ್ಯೌರ್ಯಸ್ಯ ಶೀರ್ಷ್ಣೋಽಪ್ಸರಸೋ ವಿಹಾರಾತ್
ಪ್ರಸೀದತಾಂ ನಃ ಸ ಮಹಾವಿಭೂತಿಃ ॥ ೪೦ ॥

ವಿಪ್ರೋ ಮುಖಂ ಬ್ರಹ್ಮ ಚ ಯಸ್ಯ ಗುಹ್ಯಂ
ರಾಜನ್ಯ ಆಸೀದ್ಭುಜಯೋರ್ಬಲಂ ಚ ।
ಊರ್ವೋರ್ವಿಡೋಜೋಽಂಘ್ರಿರವೇದಶೂದ್ರೌ
ಪ್ರಸೀದತಾಂ ನಃ ಸ ಮಹಾವಿಭೂತಿಃ ॥ ೪೧ ॥

ಲೋಭೋಽಧರಾತ್ಪ್ರೀತಿರುಪರ್ಯಭೂದ್ದ್ಯುತಿ-
ರ್ನಸ್ತಃ ಪಶವ್ಯಃ ಸ್ಪರ್ಶೇನ ಕಾಮಃ ।
ಭ್ರುವೋರ್ಯಮಃ ಪಕ್ಷ್ಮಭವಸ್ತು ಕಾಲಃ
ಪ್ರಸೀದತಾಂ ನಃ ಸ ಮಹಾವಿಭೂತಿಃ ॥ ೪೨ ॥

ಯಾರ ಮೂಲಕ ಜೀವ ಭಾವ ತೊರೆದ ನಿಷ್ಕಾಮ ಕರ್ಮಯೋಗಿಗಳು ದೇವಯಾನಮಾರ್ಗದಿಂದ ಬ್ರಹ್ಮಲೋಕವನ್ನು ಸೇರುವರೋ, ಯಾರು ವೇದಗಳ ಸಾಕ್ಷಾತ್ ಮೂರ್ತಿಯಾಗಿದ್ದು, ಭಗವಂತನ ಧ್ಯಾನಮಾಡಲು ಯೋಗ್ಯವಾದ ಧಾಮನಾಗಿರುವನೋ, ಯಾರು ಪುಣ್ಯಲೋಕ ಸ್ವರೂಪನಾದ ಕಾರಣ ಮುಕ್ತಿಯ ದ್ವಾರ ಹಾಗೂ ಅಮೃತಮಯನಾಗಿರುವನೋ ಮತ್ತು ಕಾಲರೂಪನಾದ್ದರಿಂದ ಮೃತ್ಯುವೂ ಕೂಡ ಆಗಿರುವನೋ ಸೂರ್ಯನು ಯಾರ ಕಣ್ಣು ಆಗಿರುವನೋ ಆ ಪರಮೈಶ್ವರ್ಯಸಂಪನ್ನ ಭಗವಂತನು ನಮ್ಮ ಮೇಲೆ ಪ್ರಸನ್ನನಾಗಲೀ. ॥ ೩೬ ॥ ಪ್ರಭುವಿನ ಪ್ರಾಣದಿಂದಲೇ ಚರಾಚರದ ಪ್ರಾಣ ಹಾಗೂ ಅವುಗಳಿಗೆ ಮಾನಸಿಕ, ಶಾರೀರಿಕ, ಇಂದ್ರಿಯ ಸಂಬಂಧೀ ಬಲವನ್ನು ಕೊಡುವಂತಹ ವಾಯುವು ಪ್ರಕಟವಾಯಿತು. ಅವನು ಚಕ್ರವರ್ತಿ ಸಾಮ್ರಾಟನಾದರೆ ಇಂದ್ರಿಯಗಳ ಅಧಿಷ್ಠಾತೃದೇವತೆಗಳಾದ ನಾವೆಲ್ಲರೂ ಸೇವಕರಂತೆ ಅವನನ್ನು ಹಿಂಬಾಲಿಸುವವರು. ಅಂತಹ ಪರಮೈಶ್ವರ್ಯ ಸಂಪನ್ನನಾದ ಭಗವಂತನು ನಮ್ಮ ಮೇಲೆ ಪ್ರಸನ್ನನಾಗಲಿ. ॥ ೩೭ ॥ ಪರಮಾತ್ಮನ ಕಿವಿಗಳಿಂದ ದಿಕ್ಕುಗಳು, ಹೃದಯದಿಂದ ಇಂದ್ರಿಯಗೋಲಕಗಳು, ನಾಭಿಯಿಂದ ಆಕಾಶವು ಉಂಟಾಯಿತು. ಐದು ಪ್ರಾಣಗಳಿಗೂ, ಐದು ಉಪ ಪ್ರಾಣಗಳಿಗೂ ಹತ್ತು ಇಂದ್ರಿಯಗಳಿಗೂ, ಮನಸ್ಸಿಗೂ, ಶರೀರಗಳಿಗೂ ಆಶ್ರಯನು ಅವನೇ. ಅಂತಹ ಮಹದೈಶ್ವರ್ಯಸಂಪನ್ನನಾದ ಭಗವಂತನು ನಮ್ಮ ಮೇಲೆ ಪ್ರಸನ್ನನಾಗಲೀ. ॥ ೩೮ ॥ ಯಾರ ಬಲದಿಂದ ಇಂದ್ರನೂ, ಪ್ರಸನ್ನತೆಯಿಂದ ದೇವತೆಗಳೂ, ಕ್ರೋಧದಿಂದ ಶಂಕರನೂ, ಬುದ್ಧಿಯಿಂದ ಬ್ರಹ್ಮನೂ (ನಾನು), ಇಂದ್ರಿಯಗಳಿಂದ ಋಷಿಗಳೂ ಮತ್ತು ವೇದಗಳೂ, ಲಿಂಗದಿಂದ ಪ್ರಜಾಪತಿಯೂ ಉತ್ಪನ್ನರಾದರೋ, ಅಂತಹ ಪರಮೈಶ್ವರ್ಯಸಂಪನ್ನನಾದ ಭಗವಂತನು ನಮ್ಮ ಮೇಲೆ ಪ್ರಸನ್ನನಾಗಲೀ. ॥ ೩೯ ॥ ಯಾರ ವಕ್ಷಸ್ಥಳದಿಂದ ಲಕ್ಷ್ಮಿಯೂ, ನೆರಳಿನಿಂದ ಪಿತೃಗಳೂ, ಸ್ತನದಿಂದ ಧರ್ಮವೂ, ಬೆನ್ನಿನಿಂದ ಅಧರ್ಮವೂ, ತಲೆಯಿಂದ ಆಕಾಶವೂ, ವಿಹಾರದಿಂದ ಅಪ್ಸರೆಯರೂ ಹುಟ್ಟಿದರೋ ಆ ಪರಮ ಐಶ್ವರ್ಯಸಂಪನ್ನನಾದ ಪರಮಾತ್ಮನು ನಮ್ಮ ಮೇಲೆ ಪ್ರಸನ್ನನಾಗಲೀ. ॥ ೪೦ ॥ ಯಾರ ಮುಖದಿಂದ ಬ್ರಾಹ್ಮಣರು ಮತ್ತು ಅತ್ಯಂತ ರಹಸ್ಯಮಯ ವೇದಗಳು, ಭುಜಗಳಿಂದ ಕ್ಷತ್ರಿಯರೂ ಮತ್ತು ಬಲವೂ, ತೊಡೆಗಳಿಂದ ವೈಶ್ಯರೂ ಮತ್ತು ಅವರ ವೃತ್ತಿ- ವ್ಯಾಪಾರ ಕುಶಲತೆಯೂ, ಚರಣಗಳಿಂದ ಶೂದ್ರರೂ ಮತ್ತು ಅವರ ಸೇವಾವೃತ್ತಿಯೂ ಪ್ರಕಟವಾಗಿರುವುದೋ, ಆ ಪರಮೈಶ್ವರ್ಯಸಂಪನ್ನ ಭಗವಂತನು ನಮ್ಮ ಮೇಲೆ ಪ್ರಸನ್ನನಾಗಲೀ. ॥ ೪೧ ॥ ಯಾರ ಕೆಳದುಟಿಯಿಂದ ಲೋಭವೂ, ಮೇಲ್ದುಟಿಯಿಂದ ಪ್ರೀತಿಯೂ, ಮೂಗಿನಿಂದ ಕಾಂತಿಯೂ, ಸ್ಪರ್ಶದಿಂದ ಪಶುಗಳಿಗೆ ಪ್ರಿಯವಾದ ಕಾಮವೂ, ಹುಬ್ಬುಗಳಿಂದ ಯಮನೂ, ರೆಪ್ಪೆಗಳಿಂದ ಕಾಲವೂ ಹುಟ್ಟಿರುವರೋ ಅಂತಹ ಪರಮೈಶ್ವರ್ಯಸಂಪನ್ನ ಭಗವಂತನು ನಮ್ಮ ಮೇಲೆ ಪ್ರಸನ್ನನಾಗಲೀ. ॥ ೪೨ ॥

ದ್ರವ್ಯಂ ವಯಃ ಕರ್ಮ ಗುಣಾನ್ವಿಶೇಷಂ
ಯದ್ಯೋಗಮಾಯಾವಿಹಿತಾನ್ವದಂತಿ ।
ಯದ್ದುರ್ವಿಭಾವ್ಯಂ ಪ್ರಬುಧಾಪಬಾಧಂ
ಪ್ರಸೀದತಾಂ ನಃ ಸ ಮಹಾವಿಭೂತಿಃ ॥ ೪೩ ॥

ನಮೋಽಸ್ತು ತಸ್ಮಾ ಉಪಶಾಂತಶಕ್ತಯೇ
ಸ್ವಾರಾಜ್ಯಲಾಭಪ್ರತಿಪೂರಿತಾತ್ಮನೇ ।
ಗುಣೇಷು ಮಾಯಾರಚಿತೇಷು ವೃತ್ತಿಭಿ-
ರ್ನ ಸಜ್ಜಮಾನಾಯ ನಭಸ್ವದೂತಯೇ ॥ ೪೪ ॥

ಸ ತ್ವಂ ನೋ ದರ್ಶಯಾತ್ಮಾನಮಸ್ಮತ್ಕರಣಗೋಚರಮ್ ।
ಪ್ರಪನ್ನಾನಾಂ ದಿದೃಕ್ಷೂಣಾಂ ಸಸ್ಮಿತಂ ತೇ ಮುಖಾಂಬುಜಮ್ ॥ ೪೫ ॥

ತೈಸ್ತೈಃ ಸ್ವೇಚ್ಛಾಧೃತೈ ರೂಪೈಃ ಕಾಲೇ ಕಾಲೇ ಸ್ವಯಂ ವಿಭೋ ।
ಕರ್ಮ ದುರ್ವಿಷಹಂ ಯನ್ನೋ ಭಗವಾಂಸ್ತತ್ಕರೋತಿ ಹಿ ॥ ೪೬ ॥

ಕ್ಲೇಶಭೂರ್ಯಲ್ಪಸಾರಾಣಿ ಕರ್ಮಾಣಿ ವಿಫಲಾನಿ ವಾ ।
ದೇಹಿನಾಂ ವಿಷಯಾರ್ತಾನಾಂ ನ ತಥೈವಾರ್ಪಿತಂ ತ್ವಯಿ ॥ ೪೭ ॥

ನಾವಮಃ ಕರ್ಮಕಲ್ಪೋಽಪಿ ವಿಫಲಾಯೇಶ್ವರಾರ್ಪಿತಃ ।
ಕಲ್ಪತೇ ಪುರುಷಸ್ಯೈವ ಸ ಹ್ಯಾತ್ಮಾ ದಯಿತೋ ಹಿತಃ ॥ ೪೮ ॥

ಯಥಾ ಹಿ ಸ್ಕಂಧಶಾಖಾನಾಂ ತರೋರ್ಮೂಲಾವಸೇಚನಮ್ ।
ಏವಮಾರಾಧನಂ ವಿಷ್ಣೋಃ ಸರ್ವೇಷಾಮಾತ್ಮನಶ್ಚ ಹಿ ॥ ೪೯ ॥

ನಮಸ್ತುಭ್ಯಮನಂತಾಯ ದುರ್ವಿತರ್ಕ್ಯಾತ್ಮಕರ್ಮಣೇ ।
ನಿರ್ಗುಣಾಯ ಗುಣೇಶಾಯ ಸತ್ತ್ವಸ್ಥಾಯ ಚ ಸಾಂಪ್ರತಮ್ ॥ ೫೦ ॥

ಪಂಚಭೂತಗಳೂ, ಕಾಲ, ಕರ್ಮ ಸತ್ತ್ವಾದಿಗುಣಗಳು ಮತ್ತು ವಿವೇಕ ಪುರುಷರಿಂದ ನಿರಾಕರಿಸಲ್ಪಡುವ ನಿರ್ವಚನೀಯ ಅಥವಾ ಅನಿರ್ವಚನೀಯ ವಿಶೇಷ ಪದಾರ್ಥಗಳು – ಇವೆಲ್ಲವೂ ಭಗವಂತನ ಯೋಗಮಾಯೆಯಿಂದಲೇ ಉಂಟಾಗಿವೆ ಎಂದು ಶಾಸ್ತ್ರಗಳು ಹೇಳುತ್ತವೆ. ಅಂತಹ ಪರಮೈಶ್ವರ್ಯಸಂಪನ್ನ ಭಗವಂತನು ನಮ್ಮ ಮೇಲೆ ಪ್ರಸನ್ನನಾಗಲೀ. ॥ ೪೩ ॥ ಯಾರು ಮಾಯಾ ನಿರ್ಮಿತ ಗುಣಗಳಲ್ಲಿ ದರ್ಶನಾದಿವೃತ್ತಿಗಳ ಮೂಲಕ ಆಸಕ್ತ ನಾಗುವುದಿಲ್ಲವೋ, ಯಾರು ವಾಯುವಿನಂತೆ ಸದಾಕಾಲ ಅಸಂಗ ನಾಗಿರುವನೋ, ಯಾರಲ್ಲಿ ಸಮಸ್ತ ಶಕ್ತಿಗಳು ಶಾಂತವಾಗಿವೆಯೋ, ಆ ತನ್ನ ಆತ್ಮಾನಂದದ ಲಾಭದಿಂದ ಪರಿಪೂರ್ಣನೂ, ಆತ್ಮ ಸ್ವರೂಪನೂ ಆದ ಭಗವಂತನಿಗೆ ನಮ್ಮ ನಮಸ್ಕಾರಗಳು. ॥ ೪೪ ॥

ಪ್ರಭುವೇ! ನಾವು ನಿನ್ನಲ್ಲಿ ಶರಣಾಗತರಾಗಿದ್ದೇವೆ ಮತ್ತು ಮಂದ–ಮಂದ ಮುಗುಳ್ನಗೆಯಿಂದ ಕೂಡಿದ ನಿನ್ನ ಮುಖಕಮಲವನ್ನು ನಮ್ಮ ಕಣ್ಣುಗಳು ನೋಡಲಿ ಎಂದೇ ಬಯಸುತ್ತೇವೆ. ಕೃಪೆದೋರಿ ನೀನು ನಮಗೆ ಅದರ ದರ್ಶನಮಾಡಿಸು. ॥ ೪೫ ॥ ಪ್ರಭೋ! ನೀನು ಆಗಾಗ ಸ್ವತಃ ತನ್ನ ಇಚ್ಛೆಯಿಂದ ಅನೇಕ ರೂಪಗಳನ್ನು ಧರಿಸಿ, ನಮಗೆ ಅತ್ಯಂತ ಕಠಿಣವಾಗಿ ತೋರುವ ಕಾರ್ಯವನ್ನು ನೀನು ಸಹಜವಾಗಿ ಮಾಡಿಬಿಡುತ್ತೀಯೆ. ನೀನು ಸರ್ವಶಕ್ತಿಸಂಪನ್ನನಾಗಿರುವೆ. ನಿನಗೆ ಇದರಲ್ಲಿ ಯಾವ ಕಷ್ಟವಿದೆ? ॥ ೪೬ ॥ ವಿಷಯಗಳ ಲೋಭದಲ್ಲಿ ಬಿದ್ದು ದುಃಖವನ್ನು ಭೋಗಿಸುತ್ತಿರುವ ದೇಹಾಭಿಮಾನಿಗಳಿಗೆ ಕರ್ಮಮಾಡಲು ಪರಿಶ್ರಮ, ಕ್ಲೇಶಗಳು ಬಹಳ ಹೆಚ್ಚಾಗಿರುತ್ತವೆ. ಆದರೆ ಫಲವು ಬಹಳ ಕಮ್ಮಿ ಸಿಗುತ್ತದೆ. ಹೆಚ್ಚಾಗಿ ಅದರಲ್ಲಿ ವಿಫಲತೆಯೇ ಕೈಗೆ ಬರುತ್ತದೆ. ಆದರೆ ನಿನಗೆ ಸಮರ್ಪಿಸಲ್ಪಡುವ ಕರ್ಮಗಳನ್ನು ಮಾಡುವಾಗಲೂ ಪರಮ ಸುಖವುಂಟಾಗುತ್ತದೆ. ಅವು ಸ್ವಯಂ ಫಲರೂಪವೇ ಆಗಿರುತ್ತವೆ. ॥ ೪೭ ॥ ಭಗವಂತನಿಗೆ ಅರ್ಪಿಸಲ್ಪಟ್ಟ ಅತಿ ಚಿಕ್ಕ ಕರ್ಮವೂ ಕೂಡ ಎಂದೂ ವಿಫಲವಾಗುವುದಿಲ್ಲ, ಏಕೆಂದರೆ ಭಗವಂತನು ಜೀವರ ಪರಮ ಹಿತೈಷಿಯೂ, ಪರಮ ಪ್ರಿಯತಮನೂ, ಆತ್ಮನೂ ಆಗಿರುವನು. ॥ ೪೮ ॥ ಮರದ ಬೇರಿಗೆ ನೀರೆರೆದರೆ ಅದರ ಶಾಖೋಪಶಾಖೆಗಳು ತಣಿಯುವಂತೆಯೇ ಸರ್ವಾತ್ಮಾ ಭಗವಂತನ ಆರಾಧನೆಯಿಂದ ಸಮಸ್ತ ಪ್ರಾಣಿಗಳ ಮತ್ತು ತನ್ನದೂ ಕೂಡ ಆರಾಧನೆ ಆದಂತಾಗುತ್ತದೆ. ॥ ೪೯ ॥ ಯಾರು ಮೂರೂ ಕಾಲಗಳಲ್ಲಿಯೂ ಮತ್ತು ಅದರಿಂದ ಆಚೆಗೂ ಏಕರಸನಾಗಿ ಸ್ಥಿತನಾಗಿರುವನೋ, ಯಾರ ಲೀಲೆಗಳ ರಹಸ್ಯವು ತರ್ಕ–ವಿತರ್ಕಗಳಿಂದ ದೂರವಾಗಿದೆಯೋ, ಯಾರು ಸ್ವಯಂ ಗುಣಗಳಿಂದ ಅತೀತನಾಗಿದ್ದರೂ ಎಲ್ಲ ಗುಣಗಳ ಸ್ವಾಮಿಯಾಗಿರುವನೋ, ಈಗ ಸತ್ತ್ವ ಗುಣದಲ್ಲಿ ನೆಲೆಸಿರುವನೋ, ಅಂತಹ ನಿನಗೆ ಮತ್ತೆ-ಮತ್ತೆ ನಮಸ್ಕರಿಸುತ್ತೇನೆ. ೫೦ ॥

ಐದನೆಯ ಅಧ್ಯಾಯವು ಮುಗಿಯಿತು. ॥ ೫ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಅಷ್ಟಮ ಸ್ಕಂಧೇ
ಅಮೃತಮಥನೇ ಪಂಚಮೋಽಧ್ಯಾಯಃ ॥ ೫ ॥

ಆರನೆಯ ಅಧ್ಯಾಯ

ದೇವ-ದಾನವರು ಸೇರಿ ಸಮುದ್ರವನ್ನು ಕಡೆದುದು

ಶ್ರೀಶುಕ ಉವಾಚ

ಏವಂ ಸ್ತುತಃ ಸುರಗಣೈರ್ಭಗವಾನ್ಹರಿರೀಶ್ವರಃ ।
ತೇಷಾಮಾವಿರಭೂದ್ರಾಜನ್ಸಹಸ್ರಾರ್ಕೋದಯದ್ಯುತಿಃ ॥ ೧ ॥

ತೇನೈವ ಮಹಸಾ ಸರ್ವೇ ದೇವಾಃ ಪ್ರತಿಹತೇಕ್ಷಣಾಃ ।
ನಾಪಶ್ಯನ್ ಖಂ ದಿಶಃ ಕ್ಷೋಣೀಮಾತ್ಮಾನಂ ಚ ಕುತೋ ವಿಭುಮ್ ॥ ೨ ॥

ವಿರಿಂಚೋ ಭಗವಾನ್ ದೃಷ್ಟ್ವಾ ಸಹ ಶರ್ವೇಣ ತಾಂ ತನುಮ್ ।
ಸ್ವಚ್ಛಾಂ ಮರಕತಶ್ಯಾಮಾಂ ಕಂಜಗರ್ಭಾರುಣೇಕ್ಷಣಾಮ್ ॥ ೩ ॥

ತಪ್ತಹೇಮಾವದಾತೇನ ಲಸತ್ಕೌಶೇಯವಾಸಸಾ ।
ಪ್ರಸನ್ನಚಾರುಸರ್ವಾಂಗೀಂ ಸುಮುಖೀಂ ಸುಂದರಭ್ರುವಮ್ ॥ ೪ ॥

ಮಹಾಮಣಿಕಿರೀಟೇನ ಕೇಯೂರಾಭ್ಯಾಂ ಚ ಭೂಷಿತಾಮ್ ।
ಕರ್ಣಾಭರಣನಿರ್ಭಾತಕಪೋಲಶ್ರೀಮುಖಾಂಬುಜಾಮ್ ॥ ೫ ॥

ಕಾಂಚೀಕಲಾಪವಲಯಹಾರನೂಪುರಶೋಭಿತಾಮ್ ।
ಕೌಸ್ತುಭಾಭರಣಾಂ ಲಕ್ಷ್ಮೀಂ ಬಿಭ್ರತೀಂ ವನಮಾಲಿನೀಮ್ ॥ ೬ ॥

ಸುದರ್ಶನಾದಿಭಿಃ ಸ್ವಾಸ್ತ್ರೈರ್ಮೂರ್ತಿಮದ್ಭಿರುಪಾಸಿತಾಮ್ ।
ತುಷ್ಟಾವ ದೇವಪ್ರವರಃ ಸಶರ್ವಃ ಪುರುಷಂ ಪರಮ್ ।
ಸರ್ವಾಮರಗಣೈಃ ಸಾಕಂ ಸರ್ವಾಂಗೈರವನಿಂ ಗತೈಃ ॥ ೭ ॥

ಬ್ರಹ್ಮೋವಾಚ

ಅಜಾತಜನ್ಮಸ್ಥಿತಿಸಂಯಮಾಯಾ-
ಗುಣಾಯ ನಿರ್ವಾಣಸುಖಾರ್ಣವಾಯ ।
ಅಣೋರಣಿಮ್ನೇಽಪರಿಗಣ್ಯಧಾಮ್ನೇ
ಮಹಾನುಭಾವಾಯ ನಮೋ ನಮಸ್ತೇ ॥ ೮ ॥

ರೂಪಂ ತವೈತತ್ಪುರುಷರ್ಷಭೇಜ್ಯಂ
ಶ್ರೇಯೋಽರ್ಥಿಭಿರ್ವೈದಿಕತಾಂತ್ರಿಕೇಣ ।
ಯೋಗೇನ ಧಾತಃ ಸಹ ನಸ್ತ್ರಿಲೋಕಾನ್
ಪಶ್ಯಾಮ್ಯಮುಷ್ಮಿನ್ನು ಹ ವಿಶ್ವಮೂರ್ತೌ ॥ ೯ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ! ದೇವತೆಗಳು ಸರ್ವೇಶ್ವರನಾದ ಭಗವಾನ್ ಶ್ರೀಹರಿಯನ್ನು ಹೀಗೆ ಸ್ತುತಿಸಿದಾಗ ಅವನು ಅವರ ನಡುವೆಯೇ ಪ್ರಕಟನಾದನು. ಅವನ ಶರೀರದ ಪ್ರಭೆಯು ಸಾವಿರಾರು ಸೂರ್ಯರು ಒಮ್ಮೆಲೇ ಉದಯಿಸಿದಂತೆ ಇತ್ತು. ॥ ೧ ॥ ಭಗವಂತನ ಉಜ್ವಲವಾದ ಪ್ರಭೆಯಿಂದಾಗಿ ದೇವತೆಗಳ ಕಣ್ಣುಗಳು ಕೋರೈಸಿ ಅವನನ್ನು ನೋಡುವುದಿರಲಿ, ಪೃಥಿವ್ಯಾಕಾಶಗಳನ್ನಾಗಲೀ, ದಿಕ್ಕುಗಳನ್ನಾಗಲೀ ನೋಡಲು ಅವರಿಂದ ಸಾಧ್ಯವಾಗಲಿಲ್ಲ, ಕಡೆಗೆ ತಮ್ಮ ಶರೀರಗಳನ್ನೂ ನೋಡಿಕೊಳ್ಳಲಾಗಲಿಲ್ಲ। ೨ ॥ ಕೇವಲ, ಭಗವಾನ್ ಶಂಕರನು ಮತ್ತು ಬ್ರಹ್ಮದೇವರು ಅವನ ದರ್ಶನ ಮಾಡಿದರು. ಅವನ ಸ್ವರೂಪವು ತುಂಬಾ ಸುಂದರವಾಗಿತ್ತು. ನಿರ್ಮಲವೂ, ಸ್ವಚ್ಛವೂ ಆದ ಅವನ ಅಂಗಕಾಂತಿಯು ಮರಕತಮಣಿಯಂತೆ ಶ್ಯಾಮಲವರ್ಣದಿಂದ ಶೋಭಿಸುತ್ತಿತ್ತು. ಕಮಲದ ಒಳಭಾಗದಲ್ಲಿರುವ ಕೆಂಪಾದ ಪರಾಗದಂತಹ ಎಸಳುಗಣ್ಣಿನ ಕಣ್ಣುಗಳು, ಪುಟಕ್ಕಿಟ್ಟ ಚಿನ್ನದಂತೆ ಥಳ-ಥಳಿಸುವ ರೇಷ್ಮೆಯ ಪೀತಾಂಬರ, ಸರ್ವಾಂಗಸುಂದರ ಶರೀರದ ರೋಮ-ರೋಮಗಳಲ್ಲಿ ಪ್ರಸನ್ನತೆ ಉಕ್ಕುತ್ತಿತ್ತು. ಧನುಸ್ಸಿನಂತೆ ಬಾಗಿದ ಹುಬ್ಬುಗಳು, ಅತ್ಯಂತ ಸುಂದರವಾದ ಮುಖ-ತಲೆಯ ಮೇಲೆ ಮಹಾಮಣಿಮಯ ದಿವ್ಯಕಿರೀಟ, ಭುಜಗಳಲ್ಲಿ ಕನಕಾಂಗದ - ಕೇಯೂರಗಳು. ಕಿವಿಗಳಲ್ಲಿ ಓಲಾಡುತ್ತಿದ್ದ ಮಕರಕುಂಡಲಗಳ ಪ್ರಭೆಯಿಂದ ಕಂಗೊಳಿಸುವ ಕಪೋಲಗಳು ಇನ್ನೂ ಸುಂದರವಾಗಿದ್ದುವು. ಅದರಿಂದ ಮುಖವು ಮತ್ತಷ್ಟು ಶೋಭಿಸುತ್ತಿತ್ತು. ಒಡ್ಯಾಣ, ಕೈಕಡಗ, ಕಾಲಂದುಗೆ, ಕೊರಳಲ್ಲಿ ಮುತ್ತಿನಹಾರ ಇವುಗಳಿಂದ ಶೋಭಾಯಮಾನನಾಗಿದ್ದನು. ವಕ್ಷಃಸ್ಥಳದಲ್ಲಿ ಲಕ್ಷ್ಮೀ ಮತ್ತು ಕೊರಳಲ್ಲಿ ಕೌಸ್ತುಭಮಣಿ. ವನಮಾಲೆ ಸುಶೋಭಿಸುತ್ತಿತ್ತು ॥ ೩-೬ ॥ ಭಗವಂತನ ಸುದರ್ಶನವೇ ಮುಂತಾದ ದಿವ್ಯಾಯುಧಗಳು ಮೂರ್ತಿಮತ್ತಾಗಿ ನಿಂತು ಪ್ರಭುವಿನ ಸೇವೆ ಮಾಡುತ್ತಿದ್ದುವು. ಎಲ್ಲ ದೇವತೆಗಳು ಸಾಷ್ಟಾಂಗ ನಮಸ್ಕಾರಮಾಡಿ ಮತ್ತೆ ದೇವತೆಗಳೆಲ್ಲರೊಡನೆ ಸೇರಿ ಪರಶಿವನು ಮತ್ತು ಬ್ರಹ್ಮದೇವರು ಪರಮಪುರುಷನನ್ನು ಸ್ತುತಿಸತೊಡಗಿದರು. ॥ ೭ ॥

ಬ್ರಹ್ಮದೇವರು ಹೇಳಿದರು – ಯಾರು ಜನ್ಮ, ಸ್ಥಿತಿ, ಪ್ರಳಯಗಳೊಂದಿಗೆ ಯಾವುದೇ ಸಂಬಂಧವಿರಿಸಿಕೊಳ್ಳುವುದಿಲ್ಲವೋ, ಯಾರು ಪ್ರಾಕೃತ ಗುಣಗಳಿಂದ ರಹಿತನೂ, ಮೋಕ್ಷಸ್ವರೂಪನಾದ ಪರಮಾನಂದದ ಮಹಾಸಮುದ್ರನಾಗಿರುವನೋ, ಯಾರು ಸೂಕ್ಷ್ಮಕ್ಕೂ ಸೂಕ್ಷ್ಮನೋ, ಯಾರ ಸ್ವರೂಪವು ಅನಂತವಾಗಿದೆಯೋ ಆ ಪರಮೈಶ್ವರ್ಯಸಂಪನ್ನ ಪ್ರಭುವಿಗೆ ನಾವು ಮತ್ತೆ-ಮತ್ತೆ ನಮಸ್ಕರಿಸುತ್ತೇವೆ ॥ ೮ ॥ ಪುರುಷೋತ್ತಮನೇ! ತಮ್ಮ ಶ್ರೇಯಸ್ಸನ್ನು ಬಯಸುವ ಸಾಧಕರು ವೇದೋಕ್ತ ಹಾಗೂ ಪಾಂಚರಾತ್ರೋಕ್ತ ವಿಧಿಯಿಂದ ನಿನ್ನ ಇದೇ ಸ್ವರೂಪವನ್ನು ಉಪಾಸನೆ

ತ್ವಯ್ಯಗ್ರ ಆಸೀತ್ತ್ವಯಿ ಮಧ್ಯ ಆಸೀ-
ತ್ತ್ವಯ್ಯಂತ ಆಸೀದಿದಮಾತ್ಮತಂತ್ರೇ ।
ತ್ವಮಾದಿರಂತೋ ಜಗತೋಽಸ್ಯ ಮಧ್ಯಂ
ಘಟಸ್ಯ ಮೃತ್ಸ್ನೇವ ಪರಃ ಪರಸ್ಮಾತ್ ॥ ೧೦ ॥

ತ್ವಂ ಮಾಯಯಾಽಽತ್ಮಾಶ್ರಯಯಾ ಸ್ವಯೇದಂ
ನಿರ್ಮಾಯ ವಿಶ್ವಂ ತದನುಪ್ರವಿಷ್ಟಃ ।
ಪಶ್ಯಂತಿ ಯುಕ್ತಾ ಮನಸಾ ಮನೀಷಿಣೋ
ಗುಣವ್ಯವಾಯೇಽಪ್ಯಗುಣಂ ವಿಪಶ್ಚಿತಃ ॥ ೧೧ ॥

ಯಥಾಗ್ನಿಮೇಧಸ್ಯಮೃತಂ ಚ ಗೋಷು
ಭುವ್ಯನ್ನಮಂಬೂದ್ಯಮನೇ ಚ ವೃತ್ತಿಮ್ ।
ಯೋಗೈರ್ಮನುಷ್ಯಾ ಅಧಿಯಂತಿ ಹಿ ತ್ವಾಂ
ಗುಣೇಷು ಬುದ್ಧ್ಯಾ ಕವಯೋ ವದಂತಿ ॥ ೧೨ ॥

ತಂ ತ್ವಾಂ ವಯಂ ನಾಥ ಸಮುಜ್ಜಿಹಾನಂ
ಸರೋಜನಾಭಾತಿಚಿರೇಪ್ಸಿತಾರ್ಥಮ್ ।
ದೃಷ್ಟ್ವಾ ಗತಾ ನಿರ್ವೃತಿಮದ್ಯ ಸರ್ವೇ
ಗಜಾ ದವಾರ್ತಾ ಇವ ಗಾಂಗಮಂಭಃ ॥ ೧೩ ॥

ಸ ತ್ವಂ ವಿಧತ್ಸ್ವಾಖಿಲಲೋಕಪಾಲಾ
ವಯಂ ಯದರ್ಥಾಸ್ತವ ಪಾದಮೂಲಮ್ ।
ಸಮಾಗತಾಸ್ತೇ ಬಹಿರಂತರಾತ್ಮನ್
ಕಿಂ ವಾನ್ಯವಿಜ್ಞಾಪ್ಯಮಶೇಷಸಾಕ್ಷಿಣಃ ॥ ೧೪ ॥

ಅಹಂ ಗಿರಿತ್ರಶ್ಚ ಸುರಾದಯೋ ಯೇ
ದಕ್ಷಾದಯೋಽಗ್ನೇರಿವ ಕೇತವಸ್ತೇ ।
ಕಿಂ ವಾ ವಿದಾಮೇಶ ಪೃಥಗ್ವಿಭಾತಾ
ವಿಧತ್ಸ್ವ ಶಂ ನೋ ದ್ವಿಜದೇವಮಂತ್ರಮ್ ॥ ೧೫ ॥

ಶ್ರೀಶುಕ ಉವಾಚ

ಏವಂ ವಿರಿಂಚಾದಿಭಿರೀಡಿತಸ್ತದ್
ವಿಜ್ಞಾಯ ತೇಷಾಂ ಹೃದಯಂ ತಥೈವ ।
ಜಗಾದ ಜೀಮೂತಗಭೀರಯಾ ಗಿರಾ
ಬದ್ಧಾಂಜಲೀನ್ಸಂವೃತಸರ್ವಕಾರಕಾನ್ ॥ ೧೬ ॥

ನೋಡುತ್ತಾರೆ. ನನ್ನನ್ನೂ ಸೃಷ್ಟಿಸಿದ ಪ್ರಭೋ! ನಿನ್ನ ಈ ವಿಶ್ವಮಯ ಸ್ವರೂಪದಲ್ಲಿ ನನಗೆ ಸಮಸ್ತ ದೇವತೆಗಳ ಸಹಿತ ಮೂರು ಲೋಕಗಳು ಕಂಡುಬರುತ್ತಿವೆ. ॥ ೯ ॥ ನಿನ್ನಲ್ಲೇ ಮೊದಲು ಈ ಜಗತ್ತು ಲೀನವಾಗಿತ್ತು, ನಡುವೆಯೂ ಇದು ನಿನ್ನಲ್ಲೇ ನೆಲೆಸಿತ್ತು, ಕೊನೆಗೆ ಇದು ಪುನಃ ನಿನ್ನಲ್ಲೇ ಲೀನವಾಗಿ ಹೋದೀತು. ನೀನು ಸ್ವತಃ ಕಾರ್ಯ-ಕಾರಣಗಳಿಂದ ಅತೀತ ಪರಮ ಸ್ವತಂತ್ರನಾಗಿರುವೆ. ಗಡಿಗೆಯಲ್ಲಿ ಆದಿ, ಮಧ್ಯ, ಅಂತ್ಯದಲ್ಲಿ ಮಣ್ಣೇ ಇರುವಂತೆ ಈ ಜಗತ್ತಿನ ಆದಿ, ಅಂತ್ಯ ಮತ್ತು ಮಧ್ಯದಲ್ಲಿ ನೀನೇ ಆಗಿರುವೆ. ॥ ೧೦ ॥ ನೀನು ನಿನ್ನಲ್ಲೇ ಆಶ್ರಿತನಾಗಿರುವ ನಿನ್ನ ಮಾಯೆಯಿಂದ ಈ ಪ್ರಪಂಚವನ್ನು ರಚಿಸುತ್ತೀಯೆ ಮತ್ತು ಇದರಲ್ಲಿ ಪುನಃ ಪ್ರವೇಶಿಸಿ, ಅಂತರ್ಯಾಮಿಯ ರೂಪದಲ್ಲಿ ವಿರಾಜಿಸುತ್ತಿರುವೆ. ಅದಕ್ಕಾಗಿ ವಿವೇಕಿಗಳೂ, ಶಾಸ್ತ್ರಜ್ಞರೂ ಆದ ಜನರು ಹೆಚ್ಚು ಎಚ್ಚರಿಕೆಯಿಂದ ತಮ್ಮ ಮನಸ್ಸನ್ನು ಏಕಾಗ್ರಗೊಳಿಸಿ ಈ ಗುಣಗಳ, ವಿಷಯಗಳ ಗದ್ದಲದಲ್ಲಿಯೂ ನಿನ್ನ ನಿರ್ಗುಣ ಸ್ವರೂಪವನ್ನೇ ಸಾಕ್ಷಾತ್ಕರಿಸಿಕೊಳ್ಳುವರು. ॥ ೧೧ ॥ ಮನುಷ್ಯನು ಯುಕ್ತಿಯಿಂದ ಕಟ್ಟಿಗೆಯಿಂದ ಬೆಂಕಿಯನ್ನೂ, ಹಸುವಿನಿಂದ ಅಮೃತದಂತಿರುವ ಹಾಲನ್ನೂ, ಪೃಥಿವಿಯಿಂದ ನೀರು ಹಾಗೂ ಅನ್ನವನ್ನೂ ಮತ್ತು ವ್ಯಾಪಾರದಿಂದ ತನ್ನ ಜೀವನ ನಿರ್ವಹಣೆಯನ್ನು ಪಡೆದುಕೊಳ್ಳುವನೋ ಹಾಗೆಯೇ ವಿವೇಕಿ ಮನುಷ್ಯನೂ ಕೂಡ ತನ್ನ ಶುದ್ಧಬುದ್ಧಿಯಿಂದ, ಭಕ್ತಿಯೋಗ-ಜ್ಞಾನಯೋಗ ಮುಂತಾದವುಗಳ ಮೂಲಕ ನಿನ್ನನ್ನು ಈ ವಿಷಯಗಳಲ್ಲೇ ಪಡೆದುಕೊಳ್ಳುವರು ಹಾಗೂ ತಮ್ಮ ಅನುಭವಕ್ಕನುಸಾರವಾಗಿ ನಿನ್ನನ್ನೂ ವರ್ಣಿಸುವರು. ॥ ೧೨ ॥ ಪದ್ಮನಾಭಾ! ಕಾಡುಗಿಚ್ಚಿನಿಂದ ಬೆಂದು ನೊಂದಿರುವ ಆನೆಯು ಗಂಗಾನದಿಯಲ್ಲಿ ಮುಳುಗಿ ಸುಖ-ಸಂತೋಷಪಡುವಂತೆಯೇ, ನಿನ್ನ ಆವಿರ್ಭಾವದಿಂದ ನಾವುಗಳು ಪರಮಸುಖಿಗಳು ಮತ್ತು ಶಾಂತಿಯನ್ನು ಹೊಂದಿರುವೆವು. ಸ್ವಾಮಿ! ನಾವುಗಳು ಅನೇಕ ದಿನಗಳಿಂದ ನಿನ್ನ ದರ್ಶನಕ್ಕಾಗಿ ಅತ್ಯಂತ ಕಾತರರಾಗಿದ್ದೇವೆ. ॥ ೧೩ ॥ ನೀನೇ ನಮ್ಮ ಹೊರಗಿನ-ಒಳಗಿನ ಆತ್ಮನಾಗಿರುವೆ. ನಾವೆಲ್ಲ ಲೋಕಪಾಲರು ಯಾವ ಉದ್ದೇಶದಿಂದ ನಿನ್ನ ಚರಣಗಳಲ್ಲಿ ಶರಣಾಗಿದ್ದೇವೋ ಅದನ್ನು ನೀನು ಕೃಪೆಮಾಡಿ ಪೂರ್ಣಮಾಡು. ನೀನು ಎಲ್ಲರ ಸಾಕ್ಷಿಯಾಗಿರುವೆ. ಆದ್ದರಿಂದ ಈ ವಿಷಯದಲ್ಲಿ ನಾವುಗಳು ನಿನ್ನಲ್ಲಿ ಇನ್ನೇನು ನಿವೇದಿಸಿಕೊಳ್ಳಲಿ? ॥ ೧೪ ॥ ಪ್ರಭೋ! ನಾನೂ, ಶಂಕರನೂ, ಬೇರೆ ದೇವತೆಗಳೂ, ಋಷಿಗಳೂ, ದಕ್ಷರೇ ಮುಂತಾದ ಪ್ರಜಾಪತಿಗಳೆಲ್ಲರೂ ಬೆಂಕಿಯಿಂದ ಸಿಡಿದ ಕಿಡಿಯಂತೆ ನಿನ್ನ ಅಂಶರೇ ಆಗಿದ್ದೇವೆ. ಇಂತಹ ಸ್ಥಿತಿಯಲ್ಲಿ ಪ್ರಭೋ! ನಾವೇನು ಬಲ್ಲೆವು? ಬ್ರಾಹ್ಮಣರ ಮತ್ತು ದೇವತೆಗಳ ಕಲ್ಯಾಣಕ್ಕಾಗಿ ಏನು ಮಾಡುವ ಆವಶ್ಯಕತೆ ಇದೆಯೋ ಅದನ್ನು ನೀನೇ ಅಪ್ಪಣೆ ಮಾಡಬೇಕು ಹಾಗೂ ನೀನೂ ಸ್ವತಃ ಹಾಗೆಯೇ ಮಾಡು. ॥ ೧೫ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಹೀಗೆ ಬ್ರಹ್ಮಾದಿ ದೇವತೆಗಳು ಸ್ತುತಿಮಾಡಿದಾಗ ಶ್ರೀಹರಿಯು ಅವರ ಮನಸ್ಸಿನ ಆಶಯವನ್ನು ತಿಳಿದವನಾಗಿ ಜಿತೇಂದ್ರಿಯರಾಗಿದ್ದು ಕೈಜೋಡಿಸಿಕೊಂಡಿದ್ದ ಬ್ರಹ್ಮನೇ ಮುಂತಾದ ದೇವತೆಗಳನ್ನು ಕುರಿತು ಮೇಘದಂತೆ ಗಂಭೀರವಾದ ಮಾತಿನಿಂದ ಇಂತೆಂದನು – ॥ ೧೬ ॥

ಏಕ ಏವೇಶ್ವರಸ್ತಸ್ಮಿನ್ಸುರಕಾರ್ಯೇ ಸುರೇಶ್ವರಃ ।
ವಿಹರ್ತುಕಾಮಸ್ತಾನಾಹ ಸಮುದ್ರೋನ್ಮಥನಾದಿಭಿಃ ॥ ೧೭ ॥

ಪರೀಕ್ಷಿದ್ರಾಜನೇ! ಸಮಸ್ತ ದೇವತೆಗಳಿಗೂ ಹಾಗೂ ಜಗತ್ತಿಗೂ ಏಕಮಾತ್ರ ಸ್ವಾಮಿಯಾದ ಭಗವಂತನೊಬ್ಬನೇ ಅವರ ಕಾರ್ಯಗಳನ್ನು ಮಾಡಿಕೊಡಲು ಸಮರ್ಥನಾಗಿದ್ದರೂ ಸಮುದ್ರ ಮಂಥನವೇ ಮುಂತಾದ ಲೀಲೆಗಳನ್ನು ತೋರಿಸಲಿಚ್ಛಿಸಿ ದೇವತೆಗಳಿಗೆ ಹೀಗೆ ಹೇಳತೊಡಗಿದನು. ॥ ೧೭ ॥

ಶ್ರೀಭಗವಾನುವಾಚ

ಹಂತ ಬ್ರಹ್ಮನ್ನಹೋ ಶಂಭೋ ಹೇ ದೇವಾ ಮಮ ಭಾಷಿತಮ್ ।
ಶೃಣುತಾವಹಿತಾಃ ಸರ್ವೇ ಶ್ರೇಯೋ ವಃ ಸ್ಯಾದ್ಯಥಾ ಸುರಾಃ ॥ ೧೮ ॥

ಯಾತ ದಾನವದೈತೇಯೈಸ್ತಾವತ್ಸಂಧಿರ್ವಿಧೀಯತಾಮ್ ।
ಕಾಲೇನಾನುಗೃಹೀತೈಸ್ತೈರ್ಯಾವದ್ವೋ ಭವ ಆತ್ಮನಃ ॥ ೧೯ ॥

ಅರಯೋಽಪಿ ಹಿ ಸಂಧೇಯಾಃ ಸತಿ ಕಾರ್ಯಾರ್ಥಗೌರವೇ ।
ಅಹಿಮೂಷಕವದ್ದೇವಾ ಹ್ಯರ್ಥಸ್ಯ ಪದವೀಂ ಗತೈಃ ॥ ೨೦ ॥

ಅಮೃತೋತ್ಪಾದನೇ ಯತ್ನಃ ಕ್ರಿಯತಾಮವಿಲಂಬಿತಮ್ ।
ಯಸ್ಯ ಪೀತಸ್ಯ ವೈ ಜಂತುರ್ಮೃತ್ಯುಗ್ರಸ್ತೋಽಮರೋ ಭವೇತ್ ॥ ೨೧ ॥

ಕ್ಷಿಪ್ತ್ವಾ ಕ್ಷೀರೋದಧೌ ಸರ್ವಾ ವೀರುತ್ತೃಣಲತೌಷಧೀಃ ।
ಮಂಥಾನಂ ಮಂದರಂ ಕೃತ್ವಾ ನೇತ್ರಂ ಕೃತ್ವಾ ತು ವಾಸುಕಿಮ್ ॥ ೨೨ ॥

ಸಹಾಯೇನ ಮಯಾ ದೇವಾ ನಿರ್ಮಂಥಧ್ವಮತಂದ್ರಿತಾಃ ।
ಕ್ಲೇಶಭಾಜೋ ಭವಿಷ್ಯಂತಿ ದೈತ್ಯಾ ಯೂಯಂ ಫಲಗ್ರಹಾಃ ॥ ೨೩ ॥

ಯೂಯಂ ತದನುಮೋದಧ್ವಂ ಯದಿಚ್ಛಂತ್ಯಸುರಾಃ ಸುರಾಃ ।
ನ ಸಂರಂಭೇಣ ಸಿಧ್ಯಂತಿ ಸರ್ವೇಽರ್ಥಾಃ ಸಾಂತ್ವಯಾ ಯಥಾ ॥ ೨೪ ॥

ನ ಭೇತವ್ಯಂ ಕಾಲಕೂಟಾದ್ವಿಷಾಜ್ಜಲಧಿಸಂಭವಾತ್ ।
ಲೋಭಃ ಕಾರ್ಯೋ ನ ವೋ ಜಾತು ರೋಷಃ ಕಾಮಸ್ತು ವಸ್ತುಷು ॥ ೨೫ ॥

ಶ್ರೀಭಗವಂತನು ಹೇಳಿದನು – ಚತುರ್ಮುಖನೇ! ಶಂಕರನೇ! ದೇವತೆಗಳೇ! ನೀವು ಸಾವಧಾನರಾಗಿ ನನ್ನ ಸಲಹೆಯನ್ನು ಕೇಳಿರಿ. ನಿಮ್ಮ ಶ್ರೇಯಸ್ಸಿನ ಉಪಾಯವು ಇದೇ ಆಗಿದೆ. ॥ ೧೮ ॥ ಈಗ ಅಸುರರಿಗೆ ಒಳ್ಳೆಯ ಕಾಲವಾಗಿದೆ. ಅದಕ್ಕಾಗಿ ನಿಮ್ಮ ಅಭ್ಯುದಯ ಮತ್ತು ಉನ್ನತಿಯ ಸಮಯವು ಬರುವವರೆಗೆ ನೀವು ದೈತ್ಯ-ದಾನವರ ಬಳಿಗೆ ಹೋಗಿ ಅವರೊಂದಿಗೆ ಸಂಧಿಯನ್ನು ಮಾಡಿಕೊಳ್ಳಿರಿ. ॥ ೧೯ ॥ ದೇವತೆಗಳಿರಾ! ಯಾವುದಾದರೂ ದೊಡ್ಡ ಕಾರ್ಯವನ್ನು ಸಾಧಿಸಬೇಕಾದರೆ ಶತ್ರುಗಳೊಂದಿಗೆ ಸಂಧಾನ ಮಾಡಿಕೊಳ್ಳಬೇಕು. ಕೆಲಸವು ಸಿದ್ಧಿಸಿದ ಬಳಿಕ ಅವರೊಂದಿಗೆ ಹಾವು–ಇಲಿಯಂತೆ* ವರ್ತಿಸುವುದು ಅವಶ್ಯಕವಾಗಿದೆ. ॥ ೨೦ ॥ ನೀವು ದಾನವರೊಡನೆ ಸೇರಿ ತಡಮಾಡದೆ ಅಮೃತದ ಪ್ರಾಪ್ತಿಗಾಗಿ ಪ್ರಯತ್ನಿಸಿರಿ. ಅದನ್ನು ಕುಡಿದರೆ ಮರಣ ಧರ್ಮವಿರುವ ಪ್ರಾಣಿಯೂ ಅಮರನಾಗುತ್ತಾನೆ. ॥ ೨೧ ॥ ನೀವು ಮೊಟ್ಟಮೊದಲಿಗೆ ಕ್ಷೀರ ಸಾಗರದಲ್ಲಿ ಎಲ್ಲ ಪ್ರಕಾರದ ಹುಲ್ಲು, ಬಳ್ಳಿಗಳು, ನಾರು–ಬೇರು, ಔಷಧಿಗಳನ್ನು ಹಾಕಿರಿ. ಮತ್ತೆ ಮಂದರಪರ್ವತವನ್ನು ಕಡೆಗೋಲಾಗಿಯೂ, ವಾಸುಕಿಯನ್ನು ಕಡೆಯುವ ಹಗ್ಗವನ್ನಾಗಿಯೂ ಮಾಡಿಕೊಂಡು, ನನ್ನ ಸಹಾಯದಿಂದ ದಾನವರೊಡಗೂಡಿ ಸಮುದ್ರವನ್ನು ಕಡೆಯಿರಿ. ಈಗ ಆಲಸ್ಯ ಮತ್ತು ಪ್ರಮಾದದ ಸಮಯವಲ್ಲ, ದೇವತೆಗಳಿರಾ! ದೈತ್ಯರಿಗೆ ಕೇವಲ ಶ್ರಮ, ಕ್ಲೇಶವೇ ದೊರೆಯುವುದು. ಆದರೆ ನಿಮಗೆ ಸತ್ಫಲ ದೊರೆಯುವುದರಲ್ಲಿ ವಿಶ್ವಾಸವಿಡಿರಿ. ॥ ೨೨–೨೩ ॥ ದೇವತೆಗಳಿರಾ! ಅಸುರರು ಬಯಸುವುದೆಲ್ಲವನ್ನು ಸ್ವೀಕರಿಸಿರಿ. ಶಾಂತಿಯಿಂದ ಎಲ್ಲ ಕೆಲಸಗಳು ಕೈಗೂಡುವುವು. ಕ್ರೋಧದಿಂದ ಏನೂ ಆಗುವುದಿಲ್ಲ. ॥ ೨೪ ॥ ಮೊದಲಿಗೆ ಸಮುದ್ರದಿಂದ ಕಾಲಕೂಟವಿಷವು ಹೊರಡುವುದು. ಅದಕ್ಕೆ ಭಯಪಡಬೇಡಿರಿ. ಯಾವುದೇ ವಸ್ತುಗಾಗಿಯೂ ಲೋಭವಿಲ್ಲದಿರಲಿ. ಮೊದಲಿಗೆ ಯಾವುದೇ ವಸ್ತುವಿನ ಕಾಮನೆಯೇ ಇಲ್ಲದಿರಲಿ. ಆದರೆ ಕಾಮನೆ ಇದ್ದು ಅದು ಪೂರ್ಣವಾಗದಿದ್ದರೂ ಕ್ರೋಧವನ್ನಂತೂ ಮಾಡಬಾರದು. ॥ ೨೫ ॥

ಶ್ರೀಶುಕ ಉವಾಚ

ಇತಿ ದೇವಾನ್ಸಮಾದಿಶ್ಯ ಭಗವಾನ್ಪುರುಷೋತ್ತಮಃ ।
ತೇಷಾಮಂತರ್ದಧೇ ರಾಜನ್ಸ್ವಚ್ಛಂದಗತಿರೀಶ್ವರಃ ॥ ೨೬ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ! ದೇವತೆಗಳಿಗೆ ಹೀಗೆ ಆದೇಶಿಸಿ ಭಗವಾನ್ ಪುರುಷೋತ್ತಮನು ಅವರು ನೋಡುತ್ತಿರುವಂತೆ ತನ್ನ ಇಚ್ಛಾನುಸಾರವಾಗಿ ಅಂತರ್ಧಾನನಾದನು. ಅವನ ಲೀಲಾರಹಸ್ಯವನ್ನು ಯಾರು ಬಲ್ಲರು? ॥ ೨೬ ॥

* 'ಅಹಿಮೂಷಕನ್ಯಾಯ' – ಹಾವಾಡಿಗನ ಬುಟ್ಟಿಯಲ್ಲಿ ಹಾವೊಂದು ಮೊದಲಿನಿಂದಲೇ ಇತ್ತು. ಆಕಸ್ಮಾತ್ತಾಗಿ ಒಂದು ಇಲಿಯು ಅದರೊಳಗೆ ಬಂದು ಸೇರಿತು. ಇಲಿಯು ಭಯಗೊಂಡಿದ್ದರೂ ಹಾವು ಅದಕ್ಕೆ ಪ್ರೇಮದಿಂದ ಹೇಳಿತು. ಇಲಿರಾಯಾ! ನೀನು ಈ ಬುಟ್ಟಿಯನ್ನು ಕಡಿದು ತೂತುಮಾಡು. ಇದರಿಂದ ನಾವಿಬ್ಬರೂ ಇಲ್ಲಿಂದ ಹೊರಗೆ ಹೋಗಬಹುದು. ಮೊದಲಿಗೆ ಇಲಿಗೆ ಹಾವಿನ ಮಾತಿನಲ್ಲಿ ವಿಶ್ವಾಸ ಮೂಡಲಿಲ್ಲ. ಆದರೆ ಕೊನೆಗೆ, ಅದು ಬುಟ್ಟಿಯನ್ನು ಕೊರೆದು ರಂಧ್ರವನ್ನು ಮಾಡಿತು. ಹೀಗೆ ತನ್ನ ಕೆಲಸ ಸಾಧಿಸಿದಾಗ ಹಾವು ಇಲಿಯನ್ನು ನುಂಗಿಹಾಕಿ ಬುಟ್ಟಿಯಿಂದ ಹೊರಗೆ ಹೊರಟುಹೋಯಿತು.

ಅಥ ತಸ್ಮೈ ಭಗವತೇ ನಮಸ್ಕೃತ್ಯ ಪಿತಾಮಹಃ ।
ಭವಶ್ಚ ಜಗ್ಮತುಃ ಸ್ವಂ ಸ್ವಂ ಧಾಮೋಪೇಯುರ್ಬಲಿಂ ಸುರಾಃ ॥ ೨೭ ॥

ದೃಷ್ಟ್ವಾರೀನಪ್ಯಸಂಯತ್ತಾನ್ ಜಾತಕ್ಷೋಭಾನ್ಸ್ವನಾಯಕಾನ್ ।
ನ್ಯಷೇಧದ್ದೈತ್ಯರಾಟ್ ಶ್ಲೋಕ್ಯಃ ಸಂಧಿವಿಗ್ರಹಕಾಲವಿತ್ ॥ ೨೮ ॥

ತೇ ವೈರೋಚನಿಮಾಸೀನಂ ಗುಪ್ತಂ ಚಾಸುರಯೂಥಪೈಃ ।
ಶ್ರಿಯಾ ಪರಮಯಾ ಜುಷ್ಟಂ ಜಿತಾಶೇಷಮುಪಾಗಮನ್ ॥ ೨೯ ॥

ಮಹೇಂದ್ರಃ ಶ್ಲಕ್ಷ್ಣಯಾ ವಾಚಾ ಸಾಂತ್ವಯಿತ್ವಾ ಮಹಾಮತಿಃ ।
ಅಭ್ಯಭಾಷತ ತತ್ಸರ್ವಂ ಶಿಕ್ಷಿತಂ ಪುರುಷೋತ್ತಮಾತ್ ॥ ೩೦ ॥

ತದರೋಚತ ದೈತ್ಯಸ್ಯ ತತ್ರಾನ್ಯೇ ಯೇಽಸುರಾಧಿಪಾಃ ।
ಶಂಬರೋಽರಿಷ್ಟನೇಮಿಶ್ಚ ಯೇ ಚ ತ್ರಿಪುರವಾಸಿನಃ ॥ ೩೧ ॥

ತತೋ ದೇವಾಸುರಾಃ ಕೃತ್ವಾ ಸಂವಿದಂ ಕೃತಸೌಹೃದಾಃ ।
ಉದ್ಯಮಂ ಪರಮಂ ಚಕ್ರುರಮೃತಾರ್ಥೇ ಪರಂತಪ ॥ ೩೨ ॥

ತತಸ್ತೇ ಮಂದರಗಿರಿಮೋಜಸೋತ್ಪಾಟ್ಯ ದುರ್ಮದಾಃ ।
ನದಂತ ಉದಧಿಂ ನಿನ್ಯುಃ ಶಕ್ತಾಃ ಪರಿಘಬಾಹವಃ ॥ ೩೩ ॥

ದೂರಭಾರೋದ್ವಹಶ್ರಾಂತಾಃ ಶಕ್ರವೈರೋಚನಾದಯಃ ।
ಅಪಾರಯಂತಸ್ತಂ ವೋಢುಂ ವಿವಶಾ ವಿಜಹುಃ ಪಥಿ ॥ ೩೪ ॥

ನಿಪತನ್ಸ ಗಿರಿಸ್ತತ್ರ ಬಹೂನಮರದಾನವಾನ್ ।
ಚೂರ್ಣಯಾಮಾಸ ಮಹತಾ ಭಾರೇಣ ಕನಕಾಚಲಃ ॥ ೩೫ ॥

ತಾಂಸ್ತಥಾ ಭಗ್ನಮನಸೋ ಭಗ್ನಬಾಹೂರುಕಂಧರಾನ್ ।
ವಿಜ್ಞಾಯ ಭಗವಾಂಸ್ತತ್ರ ಬಭೂವ ಗರುಡಧ್ವಜಃ ॥ ೩೬ ॥

ಗಿರಿಪಾತವಿನಿಷ್ಪಿಷ್ಟಾನ್ವಿಲೋಕ್ಯಾಮರದಾನವಾನ್ ।
ಈಕ್ಷಯಾ ಜೀವಯಾಮಾಸ ನಿರ್ಜರಾನ್ನಿರ್ವ್ರಣಾನ್ಯಥಾ ॥ ೩೭ ॥

ಅನಂತರ ಬ್ರಹ್ಮ-ಶಂಕರರು ಶ್ರೀಭಗವಂತನಿಗೆ ಪುನಃ ನಮಸ್ಕರಿಸಿ ತಮ್ಮ-ತಮ್ಮ ಲೋಕಗಳಿಗೆ ಹೊರಟು ಹೋದರು. ಬಳಿಕ ಇಂದ್ರಾದಿ ದೇವತೆಗಳು ಬಲಿರಾಜನ ಬಳಿಗೆ ಹೋದರು. ॥ ೨೭ ॥ ದೇವತೆಗಳು ಶಸ್ತ್ರಾಸ್ತ್ರರಹಿತರಾಗಿ ತಮ್ಮ ಬಳಿಗೆ ಬಂದುದನ್ನು ನೋಡಿ ದೈತ್ಯ ಸೇನಾಪತಿಗಳ ಮನಸ್ಸಿನಲ್ಲಿ ತಳಮಳವುಂಟಾಯಿತು. ಅವರು ದೇವತೆಗಳನ್ನು ಬಂಧಿಸಲು ಬಯಸಿದರು. ಆದರೆ ಪವಿತ್ರಕೀರ್ತಿಯುಳ್ಳ ದೈತ್ಯರಾಜ ಬಲಿಯು ಸಂಧಿ-ವಿಗ್ರಹಗಳ ಕಾಲವನ್ನು ತಿಳಿದಿದ್ದನಾದ ಕಾರಣ ದೇವತೆಗಳನ್ನು ಬಂಧಿಸದಂತೆ ದೈತ್ಯರನ್ನು ತಡೆದನು. ॥ ೨೮ ॥ ಮೂರು ಲೋಕಗಳನ್ನೂ ಜಯಿಸಿದ್ದ, ಸಮಸ್ತ ಸಂಪತ್ತುಗಳಿಂದ ಸಂಪನ್ನನಾಗಿದ್ದು ಅಸುರಸೇನಾನಾಯಕರಿಂದ ರಕ್ಷಿಸಲ್ಪಡುತ್ತಿದ್ದ ರಾಜಸಿಂಹಾಸನಾರೂಢನಾದ ಬಲಿಚಕ್ರವರ್ತಿಯನ್ನು ಇಂದ್ರಾದಿ ದೇವತೆಗಳು ಸಂಧಿಸಿದರು. ॥ ೨೯ ॥ ಮಹಾಮತಿಯಾದ ಇಂದ್ರನು ಬಲಿಚಕ್ರವರ್ತಿಯನ್ನು ಮೃದು-ಮಧುರವಾದ ಮಾತುಗಳಿಂದ ಸಂತೈಸುತ್ತಾ ಭಗವಂತನು ಹೇಳಿ ಕಳುಹಿಸಿದ್ದಂತೆ ಎಲ್ಲ ವಿಷಯಗಳನ್ನು ಅವನಲ್ಲಿ ಹೇಳಿದನು. ॥ ೩೦ ॥ ಇಂದ್ರನು ಹೇಳಿದ ಮಾತು ಬಲಿಚಕ್ರವರ್ತಿಗೂ, ಅಲ್ಲಿ ಕುಳಿತಿದ್ದ ಶಂಬರ, ಅರಿಷ್ಟನೇಮಿ, ತ್ರಿಪುರಾಸುರ ಮುಂತಾದ ದೈತ್ಯನಾಯಕರಿಗೂ ಸಮ್ಮತವಾಯಿತು. ॥ ೩೧ ॥ ಬಳಿಕ ದೇವಾಸುರರು ಪರಸ್ಪರ ಶಾಂತಿ-ಸಂಧಾನವನ್ನು ಮಾಡಿಕೊಂಡು ಮಿತ್ರರಾದರು. ಪರೀಕ್ಷಿತನೇ! ಅವರೆಲ್ಲರೂ ಸೇರಿ ಅಮೃತದ ಪ್ರಾಪ್ತಿಗಾಗಿ ಸಮುದ್ರ ಮಂಥನಕ್ಕಾಗಿ ಅಗಾಧವಾದ ಪ್ರಯತ್ನಕ್ಕೆ ತೊಡಗಿದರು. ॥ ೩೨ ॥ ಪರಿಘಾಯುಧದಂತೆ ತೋಳುಗಳನ್ನು ಹೊಂದಿದ್ದ ಮಹಾಶಕ್ತಿವಂತರಾದ, ಬಲದಿಂದ ಕೊಬ್ಬಿಹೋಗಿದ್ದ ದೇವ-ದಾನವರು ತಮ್ಮ ಬಲ-ಪರಾಕ್ರಮದಿಂದ ಮಂದರಪರ್ವತವನ್ನು ಕಿತ್ತು ಅದನ್ನೆತ್ತಿಕೊಂಡು ನಾಲ್ಕು ದಿಕ್ಕುಗಳೂ ಪ್ರತಿಧ್ವನಿಸುವಂತೆ ಗರ್ಜನೆ ಮಾಡುತ್ತಾ ಕ್ಷೀರಸಮುದ್ರದ ಕಡೆಗೆ ಹೊರಟರು. ॥ ೩೩ ॥ ಆದರೆ ಆ ಮಂದರಪರ್ವತವು ಭಾರೀ ಭಾರವಾಗಿತ್ತು ಮತ್ತು ಕೊಂಡು ಹೋಗಲೂ ಬಹಳ ದೂರವಿತ್ತು. ಇದರಿಂದ ಇಂದ್ರ, ಬಲಿ ಮುಂತಾದವರೆಲ್ಲರೂ ಸೋತುಹೋದರು. ಯಾವರೀತಿಯಿಂದಲೂ ಮಂದರಾಚಲವನ್ನು ಮುಂದಕ್ಕೆ ಸಾಗಿಸದಾದಾಗ ವಿವಶರಾಗಿ ಅವರು ದಾರಿಯಲ್ಲೇ ಇಳಿಸಿದರು. ॥ ೩೪ ॥ ಮಹಾಭಾರದಿಂದ ಕೂಡಿದ್ದ ಆ ಸ್ವರ್ಣಪರ್ವತವು ಕೆಳಕ್ಕೆ ಬೀಳುವಾಗ ಅದರ ಬುಡದಲ್ಲಿ ಹಲವಾರು ದೇವತೆಗಳು, ದಾನವರು ನುಚ್ಚುನೂರಾದರು. ॥ ೩೫ ॥

ಆ ದೇವತೆಗಳ-ದೈತ್ಯರ ಕೈ, ಸೊಂಟ, ಭುಜಗಳು ಮುರಿದೇ ಹೋಗಿದ್ದವು. ಅವರ ಮನಸ್ಸೂ ಮುರಿದುಹೋಗಿತ್ತು. ಅವರ ಉತ್ಸಾಹಭಂಗಗೊಂಡಿರುವುದನ್ನು ಕಂಡ ಭಗವಂತನು ಗರುಡನನ್ನೇರಿ ಬಂದು ಅಲ್ಲಿ ಕಾಣಿಸಿಕೊಂಡನು. ॥ ೩೬ ॥ ದೇವತೆಗಳು, ಅಸುರರು ಪರ್ವತವು ಬೀಳುವುದರಿಂದ ಪುಡಿ-ಪುಡಿಯಾಗಿರುವುದನ್ನು ನೋಡಿ ಅವನು ತನ್ನ ಅಮೃತಮಯ ದೃಷ್ಟಿಯಿಂದ ಅವರನ್ನು ನೋಡಿ ಅವರ ಗಾಯಗಳು ವಾಸಿಯಾಗಿ, ಸಂಕಟರಹಿತರಾಗಿಸಿದನು. ॥ ೩೭ ॥ ಬಳಿಕ ಶ್ರೀಹರಿಯು ಲೀಲಾಜಾಲವಾಗಿ ಒಂದೇ

ಗಿರಿಂ ಚಾರೋಪ್ಯ ಗರುಡೇ ಹಸ್ತೇನೈಕೇನ ಲೀಲಯಾ ।
ಆರುಹ್ಯ ಪ್ರಯಯಾವಬ್ಧಿಂ ಸುರಾಸುರಗಣೈರ್ವೃತಃ ॥ ೩೮ ॥

ಅವರೋಪ್ಯ ಗಿರಿಂ ಸ್ಕಂಧಾತ್ಸುಪರ್ಣಃ ಪತತಾಂ ವರಃ ।
ಯಯೌ ಜಲಾಂತ ಉತ್ಸೃಜ್ಯ ಹರಿಣಾ ಸ ವಿಸರ್ಜಿತಃ ॥ ೩೯ ॥

ಕೈಯಿಂದ ಆ ಪರ್ವತವನ್ನು ಎತ್ತಿ ಗರುಡನ ಹೆಗಲಮೇಲಿಟ್ಟುಕೊಂಡು ತಾನು ಹತ್ತಿಕೊಂಡು ಮತ್ತೆ ದೇವತೆಗಳು ಹಾಗೂ ಅಸುರರೊಂದಿಗೆ ಸಮುದ್ರದ ತಟಕ್ಕೆ ಸೇರಿದನು. ॥ ೩೮ ॥ ಪಕ್ಷಿರಾಜ ಗರುಡನು ಸಮುದ್ರತೀರದಲ್ಲಿ ಆ ಪರ್ವತವನ್ನು ಇಳಿಸಿ, ಸಮುದ್ರದ ಮಧ್ಯದಲ್ಲಿ ಅದನ್ನು ಇರಿಸಿ, ಭಗವಂತನಿಂದ ಬೀಳ್ಕೊಂಡು ಅಲ್ಲಿಂದ ಹೊರಟುಹೋದನು. ॥ ೩೯ ॥

ಆರನೆಯ ಅಧ್ಯಾಯವು ಮುಗಿಯಿತು. ॥ ೬ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಅಷ್ಟಮ ಸ್ಕಂಧೇ
ಅಮೃತಮಥನೇ ಮಂದರಾಚಲಾನಯನಂ ನಾಮ ಷಷ್ಠೋಽಧ್ಯಾಯಃ ॥ ೬ ॥

ಏಳನೆಯ ಅಧ್ಯಾಯ

ಸಮುದ್ರಮಂಥನದ ಪ್ರಾರಂಭ– ಪರಶಿವನು ವಿಷವನ್ನು ಪಾನಮಾಡಿದುದು

ಶ್ರೀಶುಕ ಉವಾಚ

ತೇ ನಾಗರಾಜಮಾಮಂತ್ರ್ಯ ಫಲಭಾಗೇನ ವಾಸುಕಿಮ್ ।
ಪರಿವೀಯ ಗಿರೌ ತಸ್ಮಿನ್ನೇತ್ರಮಬ್ಧಿಂ ಮುದಾನ್ವಿತಾಃ ॥ ೧ ॥

ಆರೇಭಿರೇ ಸುಸಂಯತ್ತಾ ಅಮೃತಾರ್ಥಂ ಕುರೂದ್ವಹ ।
ಹರಿಃ ಪುರಸ್ತಾಜ್ಜಗೃಹೇ ಪೂರ್ವಂ ದೇವಾಸ್ತತೋಽಭವನ್ ॥ ೨ ॥

ತನ್ನೈಚ್ಛನ್ ದೈತ್ಯಪತಯೋ ಮಹಾಪುರುಷಚೇಷ್ಟಿತಮ್ ।
ನ ಗೃಹ್ಣೀಮೋ ವಯಂ ಪುಚ್ಛಮಹೇರಂಗಮಮಂಗಲಮ್ ॥ ೩ ॥

ಸ್ವಾಧ್ಯಾಯಶ್ರುತಸಂಪನ್ನಾಃ ಪ್ರಖ್ಯಾತಾ ಜನ್ಮಕರ್ಮಭಿಃ ।
ಇತಿ ತೂಷ್ಣೀಂ ಸ್ಥಿತಾನ್ ದೈತ್ಯಾನ್ವಿಲೋಕ್ಯ ಪುರುಷೋತ್ತಮಃ ।
ಸ್ಮಯಮಾನೋ ವಿಸೃಜ್ಯಾಗ್ರಂ ಪುಚ್ಛಂ ಜಗ್ರಾಹ ಸಾಮರಃ ॥ ೪ ॥

ಕೃತಸ್ಥಾನವಿಭಾಗಾಸ್ತ ಏವಂ ಕಶ್ಯಪನಂದನಾಃ ।
ಮಮಂಥುಃ ಪರಮಾಯತ್ತಾ ಅಮೃತಾರ್ಥಂ ಪಯೋನಿಧಿಮ್ ॥ ೫ ॥

ಮಥ್ಯಮಾನೇಽರ್ಣವೇ ಸೋಽದ್ರಿರನಾಧಾರೋ ಹ್ಯಪೋಽವಿಶತ್ ।
ಧ್ರಿಯಮಾಣೋಽಪಿ ಬಲಿಭಿರ್ಗೌರವಾತ್ಪಾಂಡುನಂದನ ॥ ೬ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿದ್ರಾಜನೇ! ದೇವ-ದಾನವರು ವಾಸುಕಿಯ ಬಳಿಗೆ ಹೋಗಿ ನೀನು ಮಂದರ ಪರ್ವತವೆಂಬ ಕಡೆಗೋಲಿಗೆ ಹಗ್ಗವಾಗಬೇಕು. ಅಮೃತವನ್ನು ಕಡೆದ ನಂತರ ಅಮೃತದಲ್ಲಿ ನಿನಗೂ ಭಾಗವನ್ನು ಕೊಡುವೆವು ಎಂದು ಹೇಳಿ ಅವನನ್ನು ಒಪ್ಪಿಸಿದರು. ಸಂತೋಷಭರಿತರಾಗಿ ವಾಸುಕಿಯನ್ನು ಕಡೆಹಗ್ಗವಾಗಿ ಮಂದರಪರ್ವತಕ್ಕೆ ಸುತ್ತಿದರು. ಅಮೃತವನ್ನು ಪಡೆಯಲಿಕ್ಕಾಗಿ ದೇವ-ದಾನವರು ಒಟ್ಟಾಗಿ ಸೇರಿ ಪ್ರಯತ್ನಪೂರ್ವಕ ಸಮುದ್ರವನ್ನು ಕಡೆಯಲು ಪ್ರಾರಂಭಿಸಿದರು. ಆಗ ಮೊಟ್ಟಮೊದಲಿಗೆ ಶ್ರೀಹರಿಯು ವಾಸುಕಿಯ ತಲೆಯಕಡೆ ಹಿಡಿದುಕೊಂಡನು. ಅದರಿಂದ ದೇವತೆಗಳೂ ಅವನನ್ನೇ ಅನುಸರಿಸಿ ಅತ್ತಕಡೆಗೆ ಸೇರಿದರು. ॥ ೧-೨ ॥ ಆದರೆ ಭಗವಂತನ ಈ ವ್ಯವಸ್ಥೆ ದೈತ್ಯಸೇನಾಪತಿಗಳಿಗೆ ಮೆಚ್ಚುಗೆಯಾಗಲಿಲ್ಲ. ಅವರೆಂದರು – ಬಾಲವಾದರೋ ಹಾವಿನ ಅಶುಭ ಅಂಗವಾಗಿದೆ. ನಾವು ಅದನ್ನು ಹಿಡಿಯುವುದಿಲ್ಲ. ॥ ೩ ॥ ನಾವು ವಿಧಿವತ್ತಾಗಿ ವೇದ-ಶಾಸ್ತ್ರಗಳನ್ನು ಅಧ್ಯಯನ ಮಾಡಿದ್ದೇವೆ, ಹಿರಿದಾದ ವಂಶದಲ್ಲಿ ನಾವು ಹುಟ್ಟಿದ್ದೇವೆ ಮತ್ತು ಪರಾಕ್ರಮದಿಂದ ದೊಡ್ಡ-ದೊಡ್ಡ ಕಾರ್ಯಗಳನ್ನು ಮಾಡಿದ್ದೇವೆ. ನಾವು ದೇವತೆಗಳಿಗಿಂತ ಯಾವುದರಲ್ಲಿ ಕಮ್ಮಿಯಾಗಿದ್ದೇವೆ. ಹೀಗೆ ಹೇಳಿ ಅವರು ಸುಮ್ಮನೆ ಒಂದೆಡೆ ನಿಂತುಕೊಂಡಿರಲು, ಭಗವಂತನು ಅವರ ಮನೋವೃತ್ತಿಯನ್ನು ಅರಿತು ಮುಗುಳ್ನಕ್ಕು ವಾಸುಕಿಯ ತಲೆಯನ್ನು ಬಿಟ್ಟು ದೇವತೆಗಳೊಂದಿಗೆ ಅದರ ಬಾಲವನ್ನು ಹಿಡಿದುಕೊಂಡನು. ॥ ೪ ॥ ಹೀಗೆ ತಮ್ಮ-ತಮ್ಮ ಸ್ಥಾನಗಳನ್ನು ನಿಶ್ಚಯಿಸಿಕೊಂಡು ದೇವತೆಗಳು ಮತ್ತು ಅಸುರರು ಅಮೃತದ ಪ್ರಾಪ್ತಿಗಾಗಿ ಪೂರ್ಣತೆಯಾದಾಗಿ ಸಮುದ್ರವನ್ನು ಕಡೆಯಲು ಪ್ರಾರಂಭಿಸಿದರು. ॥ ೫ ॥

ಪರೀಕ್ಷಿತನೇ! ಸಮುದ್ರಮಂಥನವು ಪ್ರಾರಂಭವಾಗುತ್ತಲೇ ಮಹಾಬಲಿಷ್ಠರಾದ ದೇವ-ದಾನವರು ಕಡೆಗೋಲನ್ನು ವಾಸುಕಿಯ

ತೇ ಸುನಿರ್ವಿಣ್ಣಮನಸಃ ಪರಿಮ್ಲಾನಮುಖಶ್ರಿಯಃ ।
ಆಸನ್ಸ್ವಪೌರುಷೇ ನಷ್ಟೇ ದೈವೇನಾತಿಬಲೀಯಸಾ ॥ ೭ ॥

ವಿಲೋಕ್ಯ ವಿಘ್ನೇಶವಿಧಿಂ ತದೇಶ್ವರೋ
ದುರಂತವೀರ್ಯೋಽವಿತಥಾಭಿಸಂಧಿಃ ।
ಕೃತ್ವಾ ವಪುಃ ಕಾಚ್ಛಪಮದ್ಭುತಂ ಮಹ-
ತ್ಪ್ರವಿಶ್ಯ ತೋಯಂ ಗಿರಿಮುಜ್ಜಹಾರ ॥ ೮ ॥

ತಮುತ್ಥಿತಂ ವೀಕ್ಷ್ಯ ಕುಲಾಚಲಂ ಪುನಃ
ಸಮುತ್ಥಿತಾ ನಿರ್ಮಥಿತುಂ ಸುರಾಸುರಾಃ ।
ದಧಾರ ಪೃಷ್ಠೇನ ಸ ಲಕ್ಷಯೋಜನ-
ಪ್ರಸ್ತಾರಿಣಾ ದ್ವೀಪ ಇವಾಪರೋ ಮಹಾನ್ ॥ ೯ ॥

ಸುರಾಸುರೇಂದ್ರೈರ್ಭುಜವೀರ್ಯವೇಪಿತಂ
ಪರಿಭ್ರಮಂತಂ ಗಿರಿಮಂಗ ಪೃಷ್ಠತಃ ।
ಬಿಭ್ರತ್ತದಾವರ್ತನಮಾದಿಕಚ್ಛಪೋ
ಮೇನೇಽಂಗಕಂಡೂಯನಮಪ್ರಮೇಯಃ ॥ ೧೦ ॥

ತಥಾಸುರಾನಾವಿಶದಾಸುರೇಣ
ರೂಪೇಣ ತೇಷಾಂ ಬಲವೀರ್ಯಮೀರಯನ್ ।
ಉದ್ದೀಪಯನ್ ದೇವಗಣಾಂಶ್ಚ ವಿಷ್ಣು-
ರ್ದೈವೇನ ನಾಗೇಂದ್ರಮಬೋಧರೂಪಃ ॥ ೧೧ ॥

ಉಪರ್ಯಗೇಂದ್ರಂ ಗಿರಿರಾಡಿವಾನ್ಯ
ಆಕ್ರಮ್ಯ ಹಸ್ತೇನ ಸಹಸ್ರಬಾಹುಃ ।
ತಸ್ಥೌ ದಿವಿ ಬ್ರಹ್ಮಭವೇಂದ್ರಮುಖ್ಯೈ-
ರಭಿಷ್ಟುವದ್ಭಿಃ ಸುಮನೋಽಭಿವೃಷ್ಟಃ ॥ ೧೨ ॥

ಉಪರ್ಯಧಶ್ಚಾತ್ಮನಿ ಗೋತ್ರನೇತ್ರಯೋಃ
ಪರೇಣ ತೇ ಪ್ರಾವಿಶತಾ ಸಮೇಧಿತಾಃ ।
ಮಮಂಥುರಬ್ಧಿಂ ತರಸಾ ಮದೋತ್ಕಟಾ
ಮಹಾದ್ರಿಣಾ ಕ್ಷೋಭಿತನಕ್ರಚಕ್ರಮ್ ॥ ೧೩ ॥

ಮೂಲಕ ಭದ್ರವಾಗಿ ಹಿಡಿದುಕೊಂಡಿದ್ದರೂ ಪರ್ವತವು ಮಹಾ ಭಾರವಾದ್ದರಿಂದ ಹಾಗೂ ಅದಕ್ಕೆ ಕೆಳಗಡೆಯಲ್ಲಿ ಯಾವುದೇ ಆಧಾರವಿಲ್ಲದೇ ಇರುವುದರಿಂದ ಮಂದರಾಚಲವು ಸಮುದ್ರದಲ್ಲಿ ಮುಳುಗತೊಡಗಿತು. ॥ ೬ ॥ ಹೀಗೆ ಅತ್ಯಂತ ಬಲಿಷ್ಠವಾದ ದೈವದಿಂದ ತಮ್ಮ ಪುರುಷಪ್ರಯತ್ನವೆಲ್ಲವೂ ನಷ್ಟವಾದುದನ್ನು ನೋಡಿ ಖೇದಗೊಂಡು ದೇವ-ದಾನವರ ಮುಖವು ಕಳೆಗುಂದಿತು. ॥ ೭ ॥ ಇದಾದರೋ ವಿಘ್ನೇಶ್ವರನ ಕಾರ್ಯರೂಪವಾದ ವಿಘ್ನವನ್ನು ನೋಡಿದ ಭಗವಂತನು ಅದನ್ನು ನಿವಾರಿಸುವ ಉಪಾಯವನ್ನು ಯೋಚಿಸಿ ಆಗ ಅತ್ಯಂತ ವಿಶಾಲವೂ, ವಿಚಿತ್ರವೂ ಆದ ಕೂರ್ಮ(ಆಮೆ)ರೂಪವನ್ನು ಧರಿಸಿ ಸಮುದ್ರಜಲದಲ್ಲಿ ಮುಳುಗಿ ಮಂದರಾಚಲವನ್ನು ಮೇಲಕ್ಕೆತ್ತಿದನು. ಭಗವಂತನ ಶಕ್ತಿ ಅನಂತವಾಗಿದೆ. ಅವನು ಸತ್ಯಸಂಕಲ್ಪನಾಗಿರುವವನು. ಅವನಿಗೆ ಇದು ಯಾವ ಮಹಾದೊಡ್ಡ ಕೆಲಸ? ॥ ೮ ॥ ಮಂದರ ಪರ್ವತವು ಮೇಲಕ್ಕೆ ಬಂದುದನ್ನು ನೋಡಿ ದೇವಾಸುರರು ಪುನಃ ಸಮುದ್ರ ಮಂಥನಕ್ಕಾಗಿ ಸಿದ್ಧರಾದರು. ಆಗ ಭಗವಂತನು ಜಂಬೂದ್ವೀಪದಂತೆ ಒಂದು ಲಕ್ಷಯೋಜನ ವಿಸ್ತಾರವಾದ ತನ್ನ ಬೆನ್ನಮೇಲೆ ಮಂದರಾಚಲವನ್ನು ಧರಿಸಿಕೊಂಡಿದ್ದನು. ॥ ೯ ॥ ರಾಜೇಂದ್ರ! ಮಹಾಪರಾಕ್ರಮಿಗಳಾದ ದೇವ-ದಾನವರು ತಮ್ಮ ಭುಜಬಲದಿಂದ ಮಂದರಾಚಲವನ್ನು ಕಡೆದಾಗ ಅದು ಭಗವಂತನ ಬೆನ್ನಿನ ಮೇಲೆ ತಿರುಗತೊಡಗಿತು. ಅಪ್ರಮೇಯ ಆದಿಕಚ್ಛಪ ಭಗವಂತನಿಗೆ ಆ ಪರ್ವತವು ಗಿರ-ಗಿರನೆ ತಿರುಗುತ್ತಿರುವಾಗ ಯಾರೋ ತನ್ನ ಬೆನ್ನನ್ನು ತುರಿಸುತ್ತಿರುವವರೋ ಎಂದೆನಿಸಿತು. ॥ ೧೦ ॥ ಜೊತೆಗೆ ಸಮುದ್ರಮಂಥನವನ್ನು ಸಂಪನ್ನವಾಗಿಸಲು ಭಗವಂತನು ಅಸುರರಲ್ಲಿ ಅವರ ಶಕ್ತಿ-ಬಲಗಳನ್ನು ಹೆಚ್ಚಿಸಲೋಸುಗ ಅಸುರರೂಪದಿಂದ ಪ್ರವೇಶಿಸಿದನು. ಹಾಗೆಯೇ ದೇವತೆಗಳನ್ನು ಪ್ರೋತ್ಸಾಹಿಸಲಿಕ್ಕಾಗಿ ಅವರಲ್ಲಿ ದೇವರೂಪದಿಂದ ಪ್ರವೇಶಿಸಿದನು ಹಾಗೂ ವಾಸುಕಿಯಲ್ಲಿ ನಿದ್ರಾರೂಪದಿಂದ ಪ್ರವೇಶಿಸಿದನು. ॥ ೧೧ ॥ ಇತ್ತ ಮಂದರಪರ್ವತದ ತುದಿಯಲ್ಲಿ ಇನ್ನೊಂದು ಪರ್ವತದಂತೆ ಸಹಸ್ರಬಾಹುವಾದ ಭಗವಂತನು ತನ್ನ ಕೈಗಳಿಂದ ಅದನ್ನು ಒತ್ತಿಹಿಡಿದು ಸ್ಥಿತನಾದನು. ಆ ಸಮಯದಲ್ಲಿ ಬ್ರಹ್ಮ-ರುದ್ರ-ಇಂದ್ರರೇ ಮುಂತಾದವರು ಅವನನ್ನು ಸ್ತುತಿಸುತ್ತಾ ಅವನ ಮೇಲೆ ಹೂಮಳೆಯನ್ನು ಸುರಿಸಿದರು. ॥ ೧೨ ॥ ಹೀಗೆ ಭಗವಂತನು ಪರ್ವತದ ಮೇಲ್ಗಡೆಯಿಂದ ಅದನ್ನು ಒತ್ತಿಹಿಡಿದ ರೂಪದಿಂದ, ಕೆಳಗಡೆಯಿಂದ ಅದಕ್ಕೆ ಆಧಾರವಾಗಿ ಕೂರ್ಮರೂಪದಿಂದ, ದೇವತೆಗಳ ಮತ್ತು ಅಸುರರ ಶರೀರಗಳಲ್ಲಿ ಅವರ ಶಕ್ತಿರೂಪದಿಂದ, ಪರ್ವತದಲ್ಲಿ ದೃಢತೆಯ ರೂಪದಿಂದ, ಕಡೆಯುವ ಹಗ್ಗವಾದ ವಾಸುಕಿಯಲ್ಲಿ ಅವನಿಗೆ ಕಷ್ಟವಾಗದಿರಲೆಂದು ನಿದ್ರೆಯ ರೂಪದಿಂದ ಪ್ರವೇಶಮಾಡಿ ಎಲ್ಲ ಕಡೆಯಿಂದ, ಎಲ್ಲರನ್ನು ಶಕ್ತಿಸಂಪನ್ನವಾಗಿಸಿದನು. ಆಗ ಅವರು ತಮ್ಮ ಬಲದಿಂದ ಉನ್ಮತ್ತರಾಗಿ ಮಂದರಾಚಲದಿಂದ ಅತ್ಯಂತ ವೇಗದಿಂದ ಸಮುದ್ರವನ್ನು ಕಡೆಯತೊಡಗಿದರು. ಇದರ ಪರಿಣಾಮವಾಗಿ ಸಮುದ್ರದಲ್ಲಿ ವಾಸಿಸುತ್ತಿದ್ದ ಮೀನು ಮೊಸಳೆಯೇ ಮುಂತಾದವುಗಳು ಕಳವಳಗೊಂಡವು. ॥ ೧೩ ॥

ಅಹೀಂದ್ರಸಾಹಸ್ರಕಠೋರದೃಙ್ಮುಖ-
ಶ್ವಾಸಾಗ್ನಿಧೂಮಾಹತವರ್ಚಸೋಽಸುರಾಃ ।
ಪೌಲೋಮಕಾಲೇಯಬಲೀಲ್ವಲಾದಯೋ
ದವಾಗ್ನಿದಗ್ಧಾಃ ಸರಲಾ ಇವಾಭವನ್ ॥ ೧೪ ॥

ದೇವಾಂಶ್ಚ ತಚ್ಛ್ವಾಸಶಿಖಾಹತಪ್ರಭಾನ್
ಧೂಮ್ರಾಂಬರಸ್ರಗ್ವರಕಂಚುಕಾನನಾನ್ ।
ಸಮಭ್ಯವರ್ಷನ್ಭಗವದ್ವಶಾ ಘನಾ
ವವುಃ ಸಮುದ್ರೋರ್ಮ್ಯುಪಗೂಢವಾಯವಃ ॥ ೧೫ ॥

ಮಥ್ಯಮಾನಾತ್ತಥಾ ಸಿಂಧೋರ್ದೇವಾಸುರವರೂಥಪೈಃ ।
ಯದಾ ಸುಧಾ ನ ಜಾಯೇತ ನಿರ್ಮಮಂಥಾಜಿತಃ ಸ್ವಯಮ್
॥ ೧೬ ॥

ಮೇಘಶ್ಯಾಮಃ ಕನಕಪರಿಧಿಃ ಕರ್ಣವಿದ್ಯೋತವಿದ್ಯು-
ನ್ಮೂರ್ಧ್ನಿ ಭ್ರಾಜದ್ವಿಲುಲಿತಕಚಃ ಸ್ರಗ್ಧರೋ ರಕ್ತನೇತ್ರಃ ।
ಜೈತ್ರೈರ್ದೋರ್ಭಿರ್ಜಗದಭಯದೈರ್ದಂದಶೂಕಂ ಗೃಹೀತ್ವಾ
ಮಥ್ನನ್ಮಥ್ನಾ ಪ್ರತಿಗಿರಿರಿವಾಶೋಭತಾಥೋ ಧೃತಾದ್ರಿಃ
॥ ೧೭ ॥

ನಿರ್ಮಥ್ಯಮಾನಾದುದಧೇರಭೂದ್ವಿಷಂ
ಮಹೋಲ್ಬಣಂ ಹಾಲಹಲಾಹ್ವಮಗ್ರತಃ ।
ಸಂಭ್ರಾಂತ ಮೀನೋನ್ಮಕರಾಹಿಕಚ್ಛಪಾತ್
ತಿಮಿದ್ವಿಪಗ್ರಾಹತಿಮಿಂಗಿಲಾಕುಲಾತ್ ॥ ೧೮ ॥

ತದುಗ್ರವೇಗಂ ದಿಶಿ ದಿಶ್ಯುಪರ್ಯಧೋ
ವಿಸರ್ಪದುತ್ಸರ್ಪದಸಹ್ಯಮಪ್ರತಿ ।
ಭೀತಾಃ ಪ್ರಜಾ ದುದ್ರುವುರಂಗ ಸೇಶ್ವರಾ
ಅರಕ್ಷ್ಯಮಾಣಾಃ ಶರಣಂ ಸದಾಶಿವಮ್ ॥ ೧೯ ॥

ಆಗ ನಾಗರಾಜನಾದ ವಾಸುಕಿಯ ಕಠೋರವಾದ ಸಾವಿರಾರು ಕಣ್ಣುಗಳಿಂದಲೂ, ಮುಖಗಳಿಂದಲೂ, ನಿಟ್ಟುಸಿರಿನಿಂದಲೂ ವಿಷದ ಜ್ವಾಲೆಗಳು ಹೊರಹೊಮ್ಮತೊಡಗಿದವು. ಇದರ ಹೊಗೆಯಿಂದ ಮುಖದ ಭಾಗವನ್ನೇ ಹಿಡಿದುಕೊಂಡಿದ್ದ ಪೌಲೋಮ, ಕಾಲೇಯ, ಬಲಿ, ಇಲ್ವಲ ಮುಂತಾದ ಅಸುರರು ನಿಸ್ತೇಜರಾದರು. ಆಗ ಅವರು ಕಾಡುಗಿಚ್ಚಿನಿಂದ ಬೆಂದುಹೋದ ಸಾಲವೃಕ್ಷಗಳಂತೆ ಕಂಡುಬರುತ್ತಿದ್ದರು. ॥ ೧೪॥ ದೇವತೆಗಳೂ ಕೂಡ ಅದರಿಂದ ತಪ್ಪಿಸಿಕೊಳ್ಳಲಾರದೆ ಹೋದರು. ವಾಸುಕಿಯ ಶ್ವಾಸದ ವಿಷಜ್ವಾಲೆಗಳಿಂದ ಅವರ ತೇಜವೂ ಕಳೆಗುಂದಿತು. ವಸ್ತ್ರಗಳು, ಮಾಲೆಗಳು, ಕವಚಗಳು ಹಾಗೂ ಮುಖಗಳೂ ಹೊಗೆಯಿಂದ ಕಪ್ಪಿಟ್ಟವು. ಅವರ ಈ ದುಸ್ಥಿತಿಯನ್ನು ಕಂಡು ಭಗವಂತನ ಪ್ರೇರಣೆಯಿಂದ ಮೋಡಗಳು ದೇವತೆಗಳ ಮೇಲೆ ಮಳೆಗರೆಯತೊಡಗಿದವು. ವಾಯುವು ಸಮುದ್ರದ ತರಂಗಗಳ ಮೇಲಿಂದ ಬೀಸುತ್ತಾ ತಂಪನ್ನೂ ಸುಗಂಧವನ್ನೂ ನೀಡಿದನು. ॥ ೧೫ ॥

ಹೀಗೆ ದೇವಾಸುರರು ಸಮುದ್ರಮಥನವನ್ನು ಮುಂದುವರಿಸಿದರೂ ಅಮೃತವು ಬಾರದಿರಲು ಭಗವಂತನಾದ ಅಜಿತನೇ ಸಮುದ್ರವನ್ನು ಕಡೆಯಲು ಪ್ರಾರಂಭಿಸಿದನು. ॥ ೧೬ ॥ ಆಗ ಮೇಘಶ್ಯಾಮನಾದ ಭಗವಂತನು ಚಿನ್ನದ ಬಣ್ಣದ ಪೀತಾಂಬರವನ್ನು ಉಟ್ಟಿದ್ದನು. ಅವನ ಕಿವಿಗಳಲ್ಲಿ ಮಿಂಚಿನಂತೆ ಹೊಳೆಯುವ ಕುಂಡಲಗಳಿದ್ದವು. ತಲೆಯಲ್ಲಿ ಹೊಳೆಯುತ್ತಿದ್ದು ಹಾರಾಡುವ ಗುಂಗುರುಕೂದಲುಗಳಿದ್ದವು. ಕಮನೀಯ ಕಣ್ಣುಗಳು ಕೆಂಬಣ್ಣದಿಂದ ಕೂಡಿದ್ದವು. ಕೊರಳಲ್ಲಿ ವನಮಾಲೆಯು ಶೋಭಿಸುತ್ತಿತ್ತು. ಸಮಸ್ತ ಜಗತ್ತಿಗೆ ಅಭಯದಾನವನ್ನೀಯುವ ಭುಜದಂಡಗಳು ವಾಸುಕಿಯನ್ನು ಹಿಡಿದುಕೊಂಡು, ಕೂರ್ಮರೂಪದಿಂದ ಪರ್ವತವನ್ನು ಹೊತ್ತುಕೊಂಡು, ಭಗವಂತನು ಮಂದರಾಚಲವೆಂಬ ಕಡೆಗೋಲಿನಿಂದ ಸಮುದ್ರವನ್ನು ಕಡೆಯುತ್ತಿರುವಾಗ ಅವನು ಇನ್ನೊಂದು ಪರ್ವತದಂತೆ ಅತ್ಯಂತ ಸುಂದರವಾಗಿ ಕಾಣುತ್ತಿದ್ದನು. ॥ ೧೭ ॥ ಅಜಿತ ಭಗವಂತನು ಹೀಗೆ ಸಮುದ್ರವನ್ನು ಕಡೆಯುವಾಗ ಸಮುದ್ರದಲ್ಲಿ ಕೋಲಾಹಲವುಂಟಾಗಿ, ಮೀನು, ಮೊಸಳೆ, ಹಾವುಗಳು, ಆಮೆಗಳು ಭಯಗೊಂಡು ಮೇಲಕ್ಕೆ ಬಂದು ಅತ್ತ-ಇತ್ತ ಓಡತೊಡಗಿದವು. ತಿಮಿ-ತಿಮಿಂಗಿಲಗಳು ಮುಂತಾದ ಮೀನುಗಳೂ, ನೀರಾನೆಗಳೂ, ಮೊಸಳೆಗಳೂ ತಳಮಳಗೊಂಡವು. ಅದೇ ಸಮಯಕ್ಕೆ ಆ ಕ್ಷೀರಸಾಗರದಿಂದ ಮೊಟ್ಟಮೊದಲು ಹಾಲಾಹಲವೆಂಬ ಅತ್ಯಂತ ಉಗ್ರವಾದ ವಿಷವು ಹೊರಟಿತು. ॥ ೧೮॥ ಮಹಾಘೋರವಾದ ಆ ಹಾಲಾಹಲ ಮಹಾವಿಷವು ದಿಕ್ಕುಗಳಲ್ಲಿಯೂ, ಉಪದಿಕ್ಕುಗಳಲ್ಲಿಯೂ, ಭೂಮ್ಯಂತರಿಕ್ಷಗಳಲ್ಲಿಯೂ ಸರ್ವತ್ರ ವ್ಯಾಪಿಸತೊಡಗಿತು. ಸಹಿಸಲು ಅಶಕ್ಯವಾದ ಆ ವಿಷದ ಜ್ವಾಲೆಯಿಂದ ಭಯಗೊಂಡ ಪ್ರಜೆಗಳೂ, ಪ್ರಜಾಪತಿಗಳೂ ಬೇರೆ ಯಾರೂ ರಕ್ಷಕರಿಲ್ಲದಿರಲು ಭಗವಾನ್ ಸದಾಶಿವನಿಗೆ ಶರಣುಹೋದರು. ॥ ೧೯ ॥ ಭಗವಾನ್ ಸದಾಶಿವನು ಪಾರ್ವತೀದೇವಿಯೊಡನೆ ಕೈಲಾಸದಲ್ಲಿ ವಿರಾಜಮಾನನಾಗಿದ್ದನು. ದೊಡ್ಡ-ದೊಡ್ಡ ಋಷಿ-ಮುನಿಗಳು ಅವನನ್ನು ಸೇವಿಸು

ವಿಲೋಕ್ಯ ತಂ ದೇವವರಂ ತ್ರಿಲೋಕ್ಯಾ
ಭವಾಯ ದೇವ್ಯಾಭಿಮತಂ ಮುನೀನಾಮ್ ।
ಆಸೀನಮದ್ರಾವಪವರ್ಗಹೇತೋ-
ಸ್ತಪೋ ಜುಷಾಣಂ ಸ್ತುತಿಭಿಃ ಪ್ರಣೇಮುಃ ॥ ೨೦ ॥

ಪ್ರಜಾಪತಯ ಊಚುಃ

ದೇವದೇವ ಮಹಾದೇವ ಭೂತಾತ್ಮನ್ ಭೂತಭಾವನ ।
ತ್ರಾಹಿ ನಃ ಶರಣಾಪನ್ನಾಂಸ್ತ್ರೈಲೋಕ್ಯದಹನಾದ್ವಿಷಾತ್ ॥ ೨೧ ॥

ತ್ವಮೇಕಃ ಸರ್ವಜಗತ ಈಶ್ವರೋ ಬಂಧಮೋಕ್ಷಯೋಃ ।
ತಂ ತ್ವಾಮರ್ಚಂತಿ ಕುಶಲಾಃ ಪ್ರಪನ್ನಾರ್ತಿಹರಂ ಗುರುಮ್ ॥ ೨೨ ॥

ಗುಣಮಯ್ಯಾ ಸ್ವಶಕ್ತ್ಯಾಸ್ಯ ಸರ್ಗಸ್ಥಿತ್ಯಪ್ಯಯಾನ್ವಿಭೋ ।
ಧತ್ಸೇ ಯದಾ ಸ್ವದೃಗ್ಭೂಮನ್ಬ್ರಹ್ಮವಿಷ್ಣುಶಿವಾಭಿಧಾಮ್ ॥ ೨೩ ॥

ತ್ವಂ ಬ್ರಹ್ಮ ಪರಮಂ ಗುಹ್ಯಂ ಸದಸದ್ಭಾವಭಾವನಃ ।
ನಾನಾಶಕ್ತಿಭಿರಾಭಾತಸ್ತ್ವಮಾತ್ಮಾ ಜಗದೀಶ್ವರಃ ॥ ೨೪ ॥

ತ್ವಂ ಶಬ್ದಯೋನಿರ್ಜಗದಾದಿರಾತ್ಮಾ
ಪ್ರಾಣೇಂದ್ರಿಯದ್ರವ್ಯಗುಣಸ್ವಭಾವಃ ।
ಕಾಲಃ ಕ್ರತುಃ ಸತ್ಯಮೃತಂ ಚ ಧರ್ಮ-
ಸ್ತ್ವಯ್ಯಕ್ಷರಂ ಯತ್ತ್ರಿವೃದಾಮನಂತಿ ॥ ೨೫ ॥

ಅಗ್ನಿರ್ಮುಖಂ ತೇಽಖಿಲದೇವತಾತ್ಮಾ
ಕ್ಷಿತಿಂ ವಿದುರ್ಲೋಕಭವಾಂಘ್ರಿಪಂಕಜಮ್ ।
ಕಾಲಂ ಗತಿಂ ತೇಽಖಿಲದೇವತಾತ್ಮನೋ
ದಿಶಶ್ಚ ಕರ್ಣೌ ರಸನಂ ಜಲೇಶಮ್ ॥ ೨೬ ॥

ನಾಭಿರ್ನಭಸ್ತೇ ಶ್ವಸನಂ ನಭಸ್ವಾ-
ನ್ಸೂರ್ಯಶ್ಚ ಚಕ್ಷೂಂಷಿ ಜಲಂ ಸ್ಮ ರೇತಃ ।
ಪರಾವರಾತ್ಮಾಶ್ರಯಣಂ ತವಾತ್ಮಾ
ಸೋಮೋ ಮನೋ ದ್ಯೌರ್ಭಗವನ್ ಶಿರಸ್ತೇ ॥ ೨೭ ॥

ತ್ತಿದ್ದನು. ಅವನು ಅಲ್ಲಿ ಮೂರುಲೋಕಗಳ ಅಭ್ಯುದಯಕ್ಕಾಗಿ ಹಾಗೂ ಮೋಕ್ಷಕ್ಕಾಗಿ ತಪಸ್ಸು ಮಾಡುತ್ತಿದ್ದನು. ಅಂತಹ ಪರಮೇಶ್ವರನನ್ನು ಪ್ರಜಾಪತಿಗಳು ದರ್ಶಿಸುತ್ತಾ, ಸ್ತುತಿಸುತ್ತಾ ಸಾಷ್ಟಾಂಗ ಪ್ರಣಾಮಮಾಡಿದರು. ॥ ೨೦ ॥

ಪ್ರಜಾಪತಿಗಳು ಭಗವಾನ್ ಶಂಕರನನ್ನು ಸ್ತುತಿಸುತ್ತಿದ್ದಾರೆ – ಓ ದೇವದೇವನೇ! ಮಹಾದೇವನೇ! ಸಕಲ ಪ್ರಾಣಿಗಳಲ್ಲಿಯೂ ಆತ್ಮರೂಪದಲ್ಲಿರುವವನೇ! ಪ್ರಾಣಿಗಳನ್ನು ಸೃಷ್ಟಿಸುವವನೇ! ಮೂರು ಲೋಕಗಳನ್ನೂ ಸುಡುತ್ತಿರುವ ಈ ಮಹಾವಿಷದಿಂದ ಶರಣಾಗತರಾಗಿರುವ ನಮ್ಮನ್ನು ರಕ್ಷಿಸು. ॥ ೨೧ ॥ ಪರಮೇಶ್ವರನೇ! ಸಮಸ್ತ ಲೋಕಗಳ, ಪ್ರಾಣಿಗಳ ಬಂಧನ ಮತ್ತು ಮೋಕ್ಷಕ್ಕೆ ನೀನೊಬ್ಬನೇ ಒಡೆಯನು. ಆದ್ದರಿಂದ ಕುಶಲಮತಿಗಳಾದರೂ ಶರಣಾಗತರ ಕಷ್ಟಗಳನ್ನು ಪರಿಹರಿಸುವ ಲೋಕಗುರುವಾದ ನಿನ್ನನ್ನೇ ಆರಾಧಿಸುತ್ತಾರೆ. ॥ ೨೨ ॥ ಪ್ರಭೋ! ನಿನ್ನ ಗುಣಮಯ ಶಕ್ತಿಯಿಂದ ಈ ಜಗತ್ತಿನ ಸೃಷ್ಟಿ, ಸ್ಥಿತಿ, ಸಂಹಾರಗಳನ್ನು ಮಾಡುವುದಕ್ಕಾಗಿ ನೀನು ಅನಂತನೂ, ಏಕರಸನೂ ಆಗಿದ್ದರೂ ಬ್ರಹ್ಮಾ, ವಿಷ್ಣು, ಶಿವ ಮುಂತಾದ ನಾಮಗಳನ್ನು ಧರಿಸಿಕೊಂಡಿರುವೆ. ॥ ೨೩ ॥ ದೇವ ದೇವನೇ! ನೀನು ಅತಿಗುಹ್ಯವಾದ ಬ್ರಹ್ಮತತ್ತ್ವವೇ ಆಗಿರುವೆ. ಕಾರ್ಯ-ಕಾರಣರೂಪದಿಂದ ದೇವತೆಗಳನ್ನೂ, ಮನುಷ್ಯರನ್ನೂ, ಪಶುಪಕ್ಷಿಗಳನ್ನೂ ಸೃಷ್ಟಿಸಿ ಪೋಷಿಸುವವನೂ ನೀನೇ ಆಗಿರುವೆ. ಅನೇಕ ಶಕ್ತಿಗಳ ರೂಪದಲ್ಲಿಯೂ ಕಾಣಿಸಿಕೊಳ್ಳುವೆ. ಸಕಲ ಪ್ರಾಣಿಗಳ ಆತ್ಮಸ್ವರೂಪನೂ ಆಗಿರುವ ನೀನು ಜಗದೀಶ್ವರನೂ ಆಗಿರುವೆ. ॥ ೨೪ ॥ ಮಹಾದೇವನೇ! ಸಮಸ್ತ ವೇದಗಳು ನಿನ್ನಿಂದಲೇ ಪ್ರಕಟವಾಗಿವೆ. ಆದರಿಂದ ನೀನು ಸಮಸ್ತ ಜ್ಞಾನಗಳಿಗೂ ಮೂಲಸ್ರೋತನಾಗಿ ಜ್ಞಾನಸ್ವರೂಪನೇ ಆಗಿರುವೆ. ಜಗತ್ತಿನ ಆದಿಕಾರಣ ಮಹತ್ತತ್ತ್ವ ಮತ್ತು ತ್ರಿವಿಧ ಅಹಂಕಾರವೂ ನೀನೇ ಆಗಿರುವೆ. ಪ್ರಾಣ, ಇಂದ್ರಿಯಗಳು, ಪಂಚಭೂತಗಳು ಹಾಗೂ ಶಬ್ದಾದಿ ವಿಷಯಗಳ ಬೇರೆ-ಬೇರೆ ಸ್ವಭಾವಗಳೂ, ಮೂಲಕಾರಣವೂ ನೀನೇ ಆಗಿರುವೆ. ಪ್ರಾಣಿಗಳನ್ನು ವೃದ್ಧಿಗೊಳಿಸುವ ಮತ್ತು ವಿನಾಶಗೊಳಿಸುವ ಕಾಲನೂ ನೀನೇ ಆಗಿರುವೆ. ಪ್ರಾಣಿಗಳಿಗೆ ಕಲ್ಯಾಣವನ್ನುಂಟುಮಾಡುವ ಯಜ್ಞಸ್ವರೂಪನೂ ನೀನೇ. ಸತ್ಯ ಮತ್ತು ಋತಗಳೂ ನೀನೇ. ಧರ್ಮವೆಂಬುದು ನಿನ್ನ ಸ್ವರೂಪವೇ ಆಗಿದೆ. ಅ-ಉ-ಮ-ಈ ಮೂರು ಅಕ್ಷರಗಳಿಂದ ಯುಕ್ತವಾದ ಓಂಕಾರಸ್ವರೂಪನೂ ನೀನೇ. ತ್ರಿಗುಣಾತ್ಮಕವಾದ ಪ್ರಕೃತಿಯೂ ನೀನೇ. ಹೀಗೆ ವೇದವಾದಿಗಳಾದ ಮಹಾತ್ಮರು ನಿನ್ನ ಗುಣಗಾನ ಮಾಡುತ್ತಾರೆ. ॥ ೨೫ ॥ ಮೂರು ಲೋಕಗಳಿಗೂ ಅಭ್ಯುದಯವನ್ನು ಮಾಡುವ ಶಂಕರನೇ! ಸರ್ವದೇವ ಸ್ವರೂಪನಾದ ಅಗ್ನಿಯು ನಿನಗೆ ಮುಖವಾಗಿದ್ದಾನೆ. ಈ ಭೂಮಂಡಲವು ನಿನ್ನ ಚರಣಕಮಲವಾಗಿದೆ. ನೀನು ಸಕಲ ದೇವತಾಸ್ವರೂಪನಾಗಿರುವೆ. ಈ ಕಾಲವೇ ನಿನ್ನ ಗತಿಯಾಗಿದೆ. ದಿಕ್ಕುಗಳೇ ನಿನ್ನ ಕಿವಿಗಳಾಗಿವೆ. ವರುಣನೇ ನಿನ್ನ ರಸನೇಂದ್ರಿಯನಾಗಿದ್ದಾನೆ. ॥ ೨೬ ॥ ಭಗವಂತನೇ! ಆಕಾಶವೇ ನಿನ್ನ ನಾಭಿಯು. ವಾಯುವು ಉಸಿರಾಗಿದೆ. ಸೂರ್ಯನು ಕಣ್ಣುಗಳಾಗಿದ್ದಾನೆ. ಜಲವೇ ನಿನ್ನ ರೇತಸ್ಸು, ನಿನ್ನ ಅಹಂಕಾರವೇ ಉಚ್ಚ-ನೀಚ ಸಮಸ್ತ ಪ್ರಾಣಿಗಳಿಗೂ ಪರಮಾಶ್ರಯವಾಗಿದೆ. ಚಂದ್ರನೇ ನಿನ್ನ ಮನಸ್ಸು, ಸ್ವರ್ಗವೇ ನಿನ್ನ ತಲೆಯಾಗಿದೆ. ॥ ೨೭ ॥

ಕುಕ್ಷಿಃ ಸಮುದ್ರಾ ಗಿರಯೋಽಸ್ಥಿ ಸಂಘಾ
ರೋಮಾಣಿ ಸರ್ವೌಷಧಿವೀರುಧಸ್ತೇ ।
ಛಂದಾಂಸಿ ಸಾಕ್ಷಾತ್ತವ ಸಪ್ತ ಧಾತವ-
ಸ್ತ್ರಯೀಮಯಾತ್ಮನ್ ಹೃದಯಂ ಸರ್ವಧರ್ಮಃ ॥ ೨೮ ॥

ಮುಖಾನಿ ಪಂಚೋಪನಿಷದಸ್ತವೇಶ
ಯೈಸ್ತ್ರಿಂಶದಷ್ಟೋತ್ತರಮಂತ್ರವರ್ಗಃ ।
ಯತ್ತಚ್ಛಿವಾಖ್ಯಂ ಪರಮಾರ್ಥತತ್ತ್ವಂ
ದೇವ ಸ್ವಯಂಜ್ಯೋತಿರವಸ್ಥಿತಿಸ್ತೇ ॥ ೨೯ ॥

ಛಾಯಾ ತ್ವಧರ್ಮೋರ್ಮಿಷು ಯೈರ್ವಿಸರ್ಗೋ
ನೇತ್ರತ್ರಯಂ ಸತ್ತ್ವರಜಸ್ತಮಾಂಸಿ ।
ಸಾಂಖ್ಯಾತ್ಮನಃ ಶಾಸ್ತ್ರಕೃತಸ್ತವೇಕ್ಷಾ
ಛಂದೋಮಯೋ ದೇವ ಋಷಿಃ ಪುರಾಣಃ ॥ ೩೦ ॥

ನ ತೇ ಗಿರಿತ್ರಾಖಿಲಲೋಕಪಾಲ-
ವಿರಿಂಚವೈಕುಂಠಸುರೇಂದ್ರಗಮ್ಯಮ್ ।
ಜ್ಯೋತಿಃ ಪರಂ ಯತ್ರ ರಜಸ್ತಮಶ್ಚ
ಸತ್ತ್ವಂ ನ ಯದ್ಬ್ರಹ್ಮ ನಿರಸ್ತಭೇದಮ್ ॥ ೩೧ ॥

ಕಾಮಾಧ್ವರತ್ರಿಪುರಕಾಲಗರಾದ್ಯನೇಕ-
ಭೂತದ್ರುಹಃ ಕ್ಷಪಯತಃ ಸ್ತುತಯೇ ನ ತತ್ತೇ ।
ಯಸ್ತ್ವಂತಕಾಲ ಇದಮಾತ್ಮಕೃತಂ ಸ್ವನೇತ್ರ-
ವಹ್ನಿಸ್ಫುಲಿಂಗಶಿಖಯಾ ಭಸಿತಂ ನ ವೇದ ॥ ೩೨ ॥

ಯೇ ತ್ವಾತ್ಮರಾಮಗುರುಭಿರ್ಹೃದಿ ಚಿಂತಿತಾಂಘ್ರಿ-
ದ್ವಂದ್ವಂ ಚರಂತಮುಮಯಾ ತಪಸಾಭಿತಪ್ತಮ್ ।
ಕತ್ಥಂತ ಉಗ್ರಪರುಷಂ ನಿರತಂ ಶ್ಮಶಾನೇ
ತೇ ನೂನಮೂತಿಮವಿದಂಸ್ತವ ಹಾತಲಜ್ಜಾಃ ॥ ೩೩ ॥

ವೇದಸ್ವರೂಪನಾದ ಭಗವಂತನೇ! ಸಮುದ್ರಗಳೇ ನಿನಗೆ ಹೊಟ್ಟೆಯಾಗಿದೆ. ಪರ್ವತಗಳೇ ಮೂಳೆಯಾಗಿವೆ. ಎಲ್ಲ ಪ್ರಕಾರದ ಔಷಧಿಗಳೂ, ಹುಲ್ಲುಗಳೂ ನಿನ್ನ ರೋಮವಾಗಿವೆ. ಗಾಯತ್ರಿಯೇ ಮೊದಲಾದ ಛಂದಸ್ಸುಗಳೇ ನಿನ್ನ ಸಪ್ತಧಾತುಗಳು. ಸಮಸ್ತ ಧರ್ಮಗಳೂ ನಿನ್ನ ಹೃದಯವೇ ಆಗಿದೆ. ॥ ೨೮ ॥ ಸರ್ವೇಶನೇ! ಸದ್ಯೋಜಾತಾದಿ ಐದು ಉಪನಿಷತ್ತು ಮಂತ್ರಗಳೇ ನಿನ್ನ ತತ್ಪುರುಷ, ಅಘೋರ, ಸದ್ಯೋಜಾತ, ವಾಮದೇವ ಮತ್ತು ಈಶಾನವೆಂಬ ಐದು ಮುಖಗಳಾಗಿವೆ. ಅವುಗಳ ಪದಚ್ಛೇದದಿಂದಲೇ ಮೂವತ್ತೆಂಟು ಕಲಾತ್ಮಕ ಮಂತ್ರಗಳು ಉಂಟಾಗುತ್ತವೆ. ನೀನು ಸಮಸ್ತ ಪ್ರಪಂಚದಿಂದ ಉಪರತನಾಗಿ ನಿನ್ನ ಸ್ವರೂಪದಲ್ಲಿ ನೆಲೆಸಿದಾಗ ಅದೇ ಸ್ಥಿತಿಯ ಹೆಸರು 'ಶಿವ' ಎಂದಾಗಿದೆ. ವಾಸ್ತವವಾಗಿ ಅದೇ ಸ್ವಯಂ ಪ್ರಕಾಶ ಪರಮಾರ್ಥತತ್ತ್ವವಾಗಿದೆ. ॥ ೨೯ ॥ ಅಧರ್ಮಕ್ಕೆ ಮೂಲವಾದ ದಂಭಾಭಿಮಾನ ಅಹಂಕಾರಗಳೆಂಬ ತರಂಗಗಳೇ ನಿನ್ನ ನೆರಳಾಗಿದೆ. ವಿಧ-ವಿಧವಾದ ಸೃಷ್ಟಿಗೆ ಕಾರಣವಾಗಿರುವಂತಹ ಸತ್ತ್ವ-ರಜಸ್ತಮೋಗುಣಗಳೇ ನಿನ್ನ ಮೂರು ಕಣ್ಣುಗಳಾಗಿವೆ. ಪ್ರಭುವೇ! ಗಾಯತ್ರಿಯೇ ಮುಂತಾದ ಛಂದೋರೂಪವಾದ ಸನಾತನ ವೇದಗಳು ನಿನ್ನ ಸ್ವರೂಪವನ್ನೇ ಪ್ರತಿಪಾದಿಸುತ್ತವೆ. ಏಕೆಂದರೆ ನೀನೇ ಸಾಂಖ್ಯ ಮುಂತಾದ ಸಮಸ್ತ ಶಾಸ್ತ್ರಗಳ ರೂಪದಲ್ಲಿ ಸ್ಥಿತನಾಗಿದ್ದು ಅವುಗಳ ಕರ್ತೃವೂ ನೀನೇ ಆಗಿರುವೆ. ॥ ೩೦ ॥ ಗಿರಿತ್ರನೇ! ಪರಮೇಶ್ವರನೇ! ನೀನು ಪರಂಜ್ಯೋತಿ ಸ್ವರೂಪನು. ಪರಬ್ರಹ್ಮ ಪರಾತ್ಪರ ತತ್ತ್ವವೇ ಆಗಿರುವೆ. ಸಚ್ಚಿದಾನಂದ ಸ್ವರೂಪನೂ ನೀನೇ. ಪರಂಜ್ಯೋತಿ ಸ್ವರೂಪನಾದ ನಿನ್ನಲ್ಲಿ ಸತ್ತ್ವರಜಸ್ತಮೋಗುಣಗಳಾಗಲೀ, ಯಾವುದೇ ಭೇದಭಾವವಾಗಲೀ ಇಲ್ಲ. ಅಂತಹ ನಿನ್ನ ಚಿದಾನಂದಘನ ಸ್ವರೂಪವನ್ನು ಲೋಕಪಾಲಕರಾಗಲೀ, ಬ್ರಹ್ಮೇಂದ್ರವಿಷ್ಣುಗಳಾಗಲೀ ಅರಿಯರು. ॥ ೩೧ ॥ ಕಾಮದಹನ, ದಕ್ಷಯಜ್ಞ ವಿಧ್ವಂಸ, ತ್ರಿಪುರಾಸುರಸಂಹಾರ, (ಈಗ ನಮ್ಮ ಪ್ರಾರ್ಥನೆಯಂತೆ ನಡೆಯಲಿರುವ) ಕಾಲಕೂಟವಿಷಭಕ್ಷಣ, ಜೀವದ್ರೋಹಿ ಅನೇಕ ರಾಕ್ಷಸರ ಸಂಹಾರ ಮುಂತಾದ ಪ್ರಪಂಚಕ್ಕೆ ಹಿತವಾದ ಕಾರ್ಯಗಳನ್ನು ನೀನು ಮಾಡಿರುವೆ. ಇದು ನಿನ್ನನ್ನು ಸ್ತುತಿಮಾಡುವುದಕ್ಕಾಗಿ ಹೇಳುತ್ತಿರುವ ಮಾತಲ್ಲ. ಏಕೆಂದರೆ, ಪ್ರಳಯಕಾಲದಲ್ಲಿ ನೀನೇ ಸೃಷ್ಟಿಸಿದ ಈ ಜಗತ್ತು ನಿನ್ನ ಕಣ್ಣಿಂದ ಹೊರಡುವ ಅಗ್ನಿಯ ಕಿಡಿಯ ಜ್ವಾಲೆಗಳಿಂದ ಕ್ಷಣಮಾತ್ರದಲ್ಲಿ ಭಸ್ಮವಾಗಿ ಹೋಗುತ್ತದೆ. ಸದಾ ಧ್ಯಾನಮಗ್ನನಾಗಿರುವ ನೀನು ಈ ಕಾರ್ಯಗಳ ಸಾಧನೆಯ ಬಗ್ಗೆ ಯೋಚಿಸುವುದೇ ಇಲ್ಲ. ನಿನ್ನ ಪರಮಾದ್ಭುತವಾದ ಶಕ್ತಿಯಿಂದ ತಾನೇ ತಾನಾಗಿ ಎಲ್ಲವೂ ನಡೆದುಹೋಗುತ್ತದೆ. ॥ ೩೨ ॥ ಜೀವನ್ಮುಕ್ತರೂ, ಆತ್ಮಾರಾಮರೂ ಆದ ಗುರುಜನರು ತಮ್ಮ ಹೃದಯಕಮಲದಲ್ಲಿ ನಿನ್ನ ದಿವ್ಯವಾದ ಪಾದದ್ವಯಗಳನ್ನು ಧ್ಯಾನಮಾಡುತ್ತಿರುತ್ತಾರೆ. ನೀನೂ ಕೂಡ ನಿರಂತರ ಜ್ಞಾನ, ತಪಸ್ಸಿನಲ್ಲೇ ಲೀನನಾಗಿರುವೆ. ಅಂತಹ ನಿನ್ನನ್ನು ಕೆಲವರು ಕಾಮಾಸಕ್ತನೆಂದೂ ಸದಾ ಉಮೆಯೊಡನೆ ತಿರುಗುತ್ತಿರುವವನೆಂದೂ ಹೇಳುತ್ತಾರೆ. ಯಾವಾಗಲೂ ಸ್ಮಶಾನದಲ್ಲೇ ವಾಸಮಾಡುವ ನಿನ್ನನ್ನು ಉಗ್ರಪುರುಷನೆಂದೂ ತೆಗಳುತ್ತಾರೆ. ನಾಚಿಕೆಗೆಟ್ಟು ಹೀಗೆ ಹೇಳುವ ಅವರಿಗೆ ನಿನ್ನ ಮಹಿಮೆಯೇನಾದರೂ ತಿಳಿದಿರುವುದೇ? ॥ ೩೩ ॥

ತತ್ತಸ್ಯ ತೇ ಸದಸತೋಃ ಪರತಃ ಪರಸ್ಯ
ನಾಂಜಃ ಸ್ವರೂಪಗಮನೇ ಪ್ರಭವಂತಿ ಭೂಮ್ನಃ ।
ಬ್ರಹ್ಮಾದಯಃ ಕಿಮುತ ಸಂಸ್ತವನೇ ವಯಂ ತು
ತತ್ಸರ್ಗಸರ್ಗವಿಷಯಾ ಅಪಿ ಶಕ್ತಿಮಾತ್ರಮ್ ॥ ೩೪ ॥

ಏತತ್ಪರಂ ಪ್ರಪಶ್ಯಾಮೋ ನ ಪರಂ ತೇ ಮಹೇಶ್ವರ ।
ಮೃಡನಾಯ ಹಿ ಲೋಕಸ್ಯ ವ್ಯಕ್ತಿಸ್ತೇಽವ್ಯಕ್ತಕರ್ಮಣಃ ॥ ೩೫ ॥

ಶ್ರೀಶುಕ ಉವಾಚ

ತದ್ವೀಕ್ಷ್ಯ ವ್ಯಸನಂ ತಾಸಾಂ ಕೃಪಯಾ ಭೃಶಪೀಡಿತಃ ।
ಸರ್ವಭೂತಸುಹೃದ್ದೇವ ಇದಮಾಹ ಸತೀಂ ಪ್ರಿಯಾಮ್ ॥ ೩೬ ॥

ಶ್ರೀಶಿವ ಉವಾಚ

ಅಹೋ ಬತ ಭವಾನ್ಯೇತತ್ಪ್ರಜಾನಾಂ ಪಶ್ಯ ವೈಶಸಮ್ ।
ಕ್ಷೀರೋದಮಥನೋದ್ಭೂತಾತ್ಕಾಲಕೂಟಾದುಪಸ್ಥಿತಮ್ ॥ ೩೭ ॥

ಆಸಾಂ ಪ್ರಾಣಪರೀಪ್ಸೂನಾಂ ವಿಧೇಯಮಭಯಂ ಹಿ ಮೇ ।
ಏತಾವಾನ್ಹಿ ಪ್ರಭೋರರ್ಥೋ ಯದ್ದೀನಪರಿಪಾಲನಮ್ ॥ ೩೮ ॥

ಪ್ರಾಣೈಃ ಸ್ವೈಃ ಪ್ರಾಣಿನಃ ಪಾಂತಿ ಸಾಧವಃ ಕ್ಷಣಭಂಗುರೈಃ ।
ಬದ್ಧವೈರೇಷು ಭೂತೇಷು ಮೋಹಿತೇಷ್ವಾತ್ಮಮಾಯಯಾ ॥ ೩೯ ॥

ಪುಂಸಃ ಕೃಪಯತೋ ಭದ್ರೇ ಸರ್ವಾತ್ಮಾ ಪ್ರೀಯತೇ ಹರಿಃ ।
ಪ್ರೀತೇ ಹರೌ ಭಗವತಿ ಪ್ರೀಯೇಽಹಂ ಸಚರಾಚರಃ ।
ತಸ್ಮಾದಿದಂ ಗರಂ ಭುಂಜೇ ಪ್ರಜಾನಾಂ ಸ್ವಸ್ತಿರಸ್ತು ಮೇ ॥ ೪೦ ॥

ಶ್ರೀಶುಕ ಉವಾಚ

ಏವಮಾಮಂತ್ರ್ಯ ಭಗವಾನ್ಭವಾನೀಂ ವಿಶ್ವಭಾವನಃ ।
ತದ್ವಿಷಂ ಜಗ್ಧುಮಾರೇಭೇ ಪ್ರಭಾವಜ್ಞಾನ್ವಮೋದತ ॥ ೪೧ ॥

ಪ್ರಭುವೇ! ಕಾರ್ಯ-ಕಾರಣವಾದ ಈ ಜಗತ್ತಿನ ಆಚೆ ಮಾಯೆ ಇದೆ. ಆ ಮಾಯೆಗೂ ಅತೀತನಾಗಿ ನೀನಿರುವೆ. ನಿನ್ನ ಅನಂತಸ್ವರೂಪದ ಸಾಕ್ಷಾತ್ಕಾರ ಮಾಡಿಕೊಳ್ಳಲು ಬ್ರಹ್ಮಾದಿಗಳೂ ಅಸಮರ್ಥರೇ ಸರಿ. ನಿನ್ನ ಸ್ವರೂಪವೇ ತಿಳಿಯದಿದ್ದರೆ ಸ್ತುತಿಮಾಡುವುದಾದರೂ ಹೇಗೆ ಸಾಧ್ಯ? ಹೀಗಿರುವಾಗ ಬ್ರಹ್ಮನ ಅಂಶಾಂಶಸಂಭೂತರಾಗಿರುವ ನಾವೇನು ಮಾಡಬಲ್ಲೆವು? ಆದರೂ ನಮ್ಮ ಶಕ್ತಿಗನುಸಾರವಾಗಿ ನಿನ್ನ ಗುಣಗಾನವನ್ನು ಮಾಡುತ್ತಿದ್ದೇವೆ. ಇದರಿಂದಲೇ ತೃಪ್ತನಾಗಿ ವರದಾನವನ್ನು ಮಾಡು. ॥ ೩೪ ॥ ನಾವಾದರೋ ಕೇವಲ ನಿನ್ನ ಈ ಲೀಲಾವಿಹಾರೀ ಸ್ವರೂಪವನ್ನೇ ನೋಡುತ್ತಿದ್ದೇವೆ. ನಿನ್ನ ಪರಮಸ್ವರೂಪವನ್ನು ನಾವು ತಿಳಿಯಲಾರೆವು. ಮಹೇಶ್ವರಾ! ನಿನ್ನ ಲೀಲೆಗಳು ಅವ್ಯಕ್ತವಾಗಿದ್ದರೂ ಜಗತ್ತಿನ ಕಲ್ಯಾಣಕ್ಕಾಗಿಯೇ ನೀನು ವ್ಯಕ್ತರೂಪದಿಂದಲೂ ಇರುತ್ತೀಯೆ ॥ ೩೫ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿದ್ರಾಜನೇ! ಪ್ರಜೆಗಳ ಈ ಸಂಕಟವನ್ನು ನೋಡಿ ಸಮಸ್ತ ಪ್ರಾಣಿಗಳ ಹಿತೈಷಿಯೂ, ದೇವಾಧಿದೇವನೂ, ಕರುಣಾಮಯನೂ ಆದ ಭಗವಾನ್ ಶಂಕರನು ಹೃದಯದಲ್ಲಿ ವ್ಯಥೆಗೊಂಡು ಪ್ರೇಯಸಿಯಾದ ಪಾರ್ವತಿಯೊಡನೆ ಹೀಗೆಂದನು. ॥ ೩೬ ॥

ಶ್ರೀಶಿವನು ಹೇಳಿದನು – ದೇವಿ! ಅಯ್ಯೋ ಪಾಪ! ಕ್ಷೀರಸಮುದ್ರವನ್ನು ಕಡೆಯುವಿಕೆಯಿಂದ ಹುಟ್ಟಿದ ಮಹಾಘೋರವಾದ ಕಾಲಕೂಟವಿಷದಿಂದ ಪ್ರಜೆಗಳಿಗುಂಟಾದ ದುಃಖವನ್ನಾದರೂ ನೋಡು. ॥ ೩೭ ॥ ಈ ಬಡಪಾಯಿಗಳು ಹೇಗಾದರೂ ತಮ್ಮ ಪ್ರಾಣಗಳನ್ನು ಉಳಿಸಿಕೊಳ್ಳಲು ಬಯಸುತ್ತಾರೆ. ಇವರನ್ನು ನಿರ್ಭಯರನ್ನಾಗಿಸುವುದೇ ಈಗ ನನ್ನ ಕರ್ತವ್ಯವಾಗಿದೆ. ಸಮರ್ಥನಾದ ಪ್ರಭುವಿಗೆ ದೀನರಾದವರ ಸಂಕಟವನ್ನು ಪರಿಹರಿಸುವುದೇ ಜೀವನದ ಮುಖ್ಯ ಪ್ರಯೋಜನವಾಗಿದೆ. ॥ ೩೮ ॥ ಸಜ್ಜನರಾದವರು ತಮ್ಮ ಕ್ಷಣಭಂಗುರವಾದ ಪ್ರಾಣಗಳನ್ನು ಬಲಿಕೊಟ್ಟಾದರೂ ಬೇರೆಯವರ ಪ್ರಾಣಗಳನ್ನು ರಕ್ಷಿಸುತ್ತಾರೆ. ಕಲ್ಯಾಣೀ! ತಮ್ಮದೇ ಆದ ಮೋಹದ ಮಾಯೆಯಲ್ಲಿ ಸಿಕ್ಕಿಹಾಕಿಕೊಂಡು ಪ್ರಪಂಚದ ಪ್ರಾಣಿಗಳು ಮೋಹಿತರಾಗಿ ಪರಸ್ಪರವಾಗಿ ವೈರಕಟ್ಟಿಕೊಳ್ಳುವರು. ॥ ೩೯ ॥ ಸರ್ವಮಂಗಳೇ! ಇಂತಹವರ ಮೇಲೆ ಕೃಪೆ ಮಾಡುವವನ ಮೇಲೆ ಸರ್ವಾತ್ಮನಾದ ಶ್ರೀಹರಿಯು ಪ್ರಸನ್ನನಾಗುವನು. ಭಗವಂತನು ಪ್ರಸನ್ನನಾದಾಗ ಚರಾಚರ ಜಗತ್ತಿನೊಂದಿಗೆ ನಾನೂ ಪ್ರಸನ್ನನಾಗುತ್ತೇನೆ. ಅದಕ್ಕಾಗಿ ಈಗಿಂದೀಗಲೇ ನಾನು ಈ ವಿಷವನ್ನು ಕುಡಿಯುತ್ತೇನೆ. ಇದರಿಂದ ನನ್ನ ಪ್ರಜೆಗಳಿಗೆ ಕಲ್ಯಾಣವುಂಟಾಗಲೀ; ಲೋಕಕ್ಕೆ ಕ್ಷೇಮವಾಗಲೀ. ॥ ೪೦ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ವಿಶ್ವದ ಜೀವನದಾತನಾದ ಭಗವಾನ್ ಶಂಕರನು ಹೀಗೆ ಪಾರ್ವತಿಗೆ ಹೇಳಿ, ಅವಳ ಸಮ್ಮತಿಯನ್ನು ಪಡೆದು ಆ ಹಾಲಾಹಲವಿಷವನ್ನು ಕುಡಿಯಲು ಸಿದ್ಧನಾದನು. ಶಿವನ ಪ್ರಭಾವವನ್ನು ಚೆನ್ನಾಗಿ ಅರಿತಿದ್ದ ಪಾರ್ವತಿಯು ಹೃತ್ಪೂರ್ವಕವಾಗಿ ಅದಕ್ಕೆ ಸಮ್ಮತಿಸಿದಳು. ॥ ೪೧ ॥

ತತಃ ಕರತಲೀಕೃತ್ಯ ವ್ಯಾಪಿ ಹಾಲಾಹಲಂ ವಿಷಮ್ ।
ಅಭಕ್ಷಯನ್ಮಹಾದೇವಃ ಕೃಪಯಾ ಭೂತಭಾವನಃ ॥ ೪೨ ॥

ತಸ್ಯಾಪಿ ದರ್ಶಯಾಮಾಸ ಸ್ವವೀರ್ಯಂ ಜಲಕಲ್ಮಷಃ ।
ಯಚ್ಚಕಾರ ಗಲೇ ನೀಲಂ ತಚ್ಚ ಸಾಧೋರ್ವಿಭೂಷಣಮ್ ॥ ೪೩ ॥

ತಪ್ಯಂತೇ ಲೋಕತಾಪೇನ ಸಾಧವಃ ಪ್ರಾಯಶೋ ಜನಾಃ ।
ಪರಮಾರಾಧನಂ ತದ್ಧಿ ಪುರುಷಸ್ಯಾಖಿಲಾತ್ಮನಃ ॥ ೪೪ ॥

ನಿಶಮ್ಯ ಕರ್ಮ ತಚ್ಛಂಭೋರ್ದೇವದೇವಸ್ಯ ಮೀಢುಷಃ ।
ಪ್ರಜಾ ದಾಕ್ಷಾಯಣೀ ಬ್ರಹ್ಮಾ ವೈಕುಂಠಶ್ಚ ಶಶಂಸಿರೇ ॥ ೪೫ ॥

ಪ್ರಸ್ಕನ್ನಂ ಪಿಬತಃ ಪಾಣೇರ್ಯತ್ಕಿಂಚಿಜ್ಜಗೃಹುಃ ಸ್ಮ ತತ್ ।
ವೃಶ್ಚಿಕಾಹಿವಿಷೌಷಧ್ಯೋ ದಂದಶೂಕಾಶ್ಚ ಯೇಽಪರೇ ॥ ೪೬ ॥

ಪ್ರಾಣಿಗಳ ಹಿತೈಷಿಯಾದ ಭಗವಾನ್ ಶಂಕರನ ಶಕ್ತಿಯಿಂದಲೇ ಸಮಸ್ತ ಪ್ರಾಣಿಗಳು ಜೀವಿಸಿರುತ್ತಾರೆ. ಅವನು ಆ ತೀಕ್ಷ್ಣವಾದ ಹಾಲಾಹಲವಿಷವನ್ನು ತನ್ನ ಅಂಗೈಯಲ್ಲಿ ಎತ್ತಿಕೊಂಡು ಕುಡಿದುಬಿಟ್ಟನು. ॥ ೪೨ ॥ ಜಲಕ್ಕೆ ಕಲ್ಮಷಪ್ರಾಯವಾಗಿದ್ದ ಆ ವಿಷವು ಪರಶಿವನ ಕೊರಳಲ್ಲಿ ಕಪ್ಪನ್ನುಂಟುಮಾಡಿ ತನ್ನ ಶಕ್ತಿಯನ್ನು ಪ್ರದರ್ಶಿಸಿತು. ಆದರೆ ಆ ನೀಲಚ್ಛಾಯೆಯೂ ಜಗದ್ರಕ್ಷಕನಾದ ಪರಮೇಶ್ವರನಿಗೆ ಅಲಂಕಾರವೇ ಆಯಿತು. ॥ ೪೩ ॥ ಪರೋಪಕಾರೀ ಸಜ್ಜನರು ಪ್ರಾಯಶಃ ಪ್ರಜೆಗಳ ದುಃಖವನ್ನು ನಿವಾರಿಸಲಿಕ್ಕಾಗಿ ಸ್ವತಃ ದುಃಖವನ್ನು ಸ್ವೀಕರಿಸುತ್ತಾರೆ. ಆದರೆ ಅಂತಹ ಸೇವಾಕಾರ್ಯವು ಸರ್ವಾತ್ಮನಾದ ಪರಮಪುರುಷನ ಆರಾಧನೆಯೇ ಆಗುತ್ತದೆ. ॥ ೪೪ ॥

ದೇವಾಧಿದೇವನಾದ ಭಗವಾನ್ ಶಂಕರನು ಎಲ್ಲರ ಕಾಮನೆಗಳನ್ನು ಪೂರ್ಣಮಾಡುವವನಾಗಿದ್ದಾನೆ. ಅವನ ಈ ಕಲ್ಯಾಣಕಾರೀ ಅದ್ಭುತ ಕರ್ಮವನ್ನು ಕೇಳಿ ಸಮಸ್ತ ಪ್ರಜೆ, ದಾಕ್ಷಾಯಿಣೀ, ಬ್ರಹ್ಮದೇವರು ಹಾಗೂ ಸ್ವಯಂ ಭಗವಾನ್ ವಿಷ್ಣುವೂ ಕೂಡ ಅವನನ್ನು ಪ್ರಶಂಸಿಸಿದರು. ॥ ೪೫ ॥ ಭಗವಾನ್ ಶಂಕರನು ವಿಷಪಾನ ಮಾಡುವಾಗ ಅವನ ಕೈಯಿಂದ ಸ್ವಲ್ಪ ವಿಷವು ಕೆಳಗೆ ಚೆಲ್ಲಿತ್ತು. ಅದನ್ನು ಚೇಳುಗಳೂ, ಹಾವುಗಳೂ ಹಾಗೂ ಇತರ ವಿಷಜಂತುಗಳೂ, ಕೆಲವು ವಿಷೌಷಧಿಗಳೂ ಅದನ್ನು ಸ್ವೀಕರಿಸಿದವು. ॥ ೪೬ ॥

ಏಳನೆಯ ಅಧ್ಯಾಯವು ಮುಗಿಯಿತು. ॥ ೭ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಅಷ್ಟಮಸ್ಕಂಧೇ
ಅಮೃತಮಥನೇ ಸಪ್ತಮೋಽಧ್ಯಾಯಃ ॥ ೭ ॥

ಎಂಟನೆಯ ಅಧ್ಯಾಯ

ಕ್ಷೀರಸಮುದ್ರದಲ್ಲಿ ಅಮೃತವು ಪ್ರಕಟವಾದುದು – ಭಗವಂತನ ಮೋಹಿನೀ ಅವತಾರವು

ಶ್ರೀಶುಕ ಉವಾಚ

ಪೀತೇ ಗರೇ ವೃಷಾಂಕೇಣ ಪ್ರೀತಾಸ್ತೇಽಮರದಾನವಾಃ ।
ಮಮಂಥುಸ್ತರಸಾ ಸಿಂಧುಂ ಹವಿರ್ಧಾನೀ ತತೋಽಭವತ್ ॥ ೧ ॥

ತಾಮಗ್ನಿಹೋತ್ರೀಮೃಷಯೋ ಜಗೃಹುರ್ಬ್ರಹ್ಮವಾದಿನಃ ।
ಯಜ್ಞಸ್ಯ ದೇವಯಾನಸ್ಯ ಮೇಧ್ಯಾಯ ಹವಿಷೇ ನೃಪ ॥ ೨ ॥

ತತ ಉಚ್ಚೈಃಶ್ರವಾ ನಾಮ ಹಯೋಽಭೂಚ್ಚಂದ್ರಪಾಂಡುರಃ ।
ತಸ್ಮಿನ್ಬಲಿಃ ಸ್ಪೃಹಾಂ ಚಕ್ರೇ ನೇಂದ್ರ ಈಶ್ವರಶಿಕ್ಷಯಾ ॥ ೩ ॥

ತತ ಐರಾವತೋ ನಾಮ ವಾರಣೇಂದ್ರೋ ವಿನಿರ್ಗತಃ ।
ದಂತೈಶ್ಚತುರ್ಭಿಃ ಶ್ವೇತಾದ್ರೇರ್ಹರನ್ಭಗವತೋ ಮಹಿಮ್ ॥ ೪ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ವೃಷಾಂಕನಾದ ಪರಶಿವನು ಹಾಲಾಹಲವಿಷವನ್ನು ಕುಡಿಯಲಾಗಿ ದೇವ-ದಾನವರು ಸಂತೋಷಗೊಂಡರು. ಮತ್ತೆ ಅವರು ಹೊಸದಾದ ಉತ್ಸಾಹದಿಂದ ಸಮುದ್ರವನ್ನು ಕಡೆಯಲು ತೊಡಗಿದರು. ಆಗ ಕ್ಷೀರಸಾಗರದಿಂದ ಕಾಮಧೇನುವು ಪ್ರಕಟವಾದಳು. ॥ ೧ ॥ ಅವಳು ಅಗ್ನಿಹೋತ್ರದ ಸಾಮಗ್ರಿಗಳನ್ನು ಉತ್ಪನ್ನಮಾಡುವವಳಾಗಿದ್ದಳು. ಅದಕ್ಕಾಗಿ ಬ್ರಹ್ಮಲೋಕದವರೆಗೆ ತಲುಪಿಸುವ ಯಜ್ಞಗಳಿಗಾಗಿ ಉಪಯೋಗಿಸುವ ಪವಿತ್ರ ಹಾಲು, ತುಪ್ಪ ಮುಂತಾದವುಗಳನ್ನು ಪಡೆಯಲಿಕ್ಕಾಗಿ ಬ್ರಹ್ಮವಾದಿಗಳಾದ ಋಷಿಗಳು ಆಕೆಯನ್ನು ಸ್ವೀಕರಿಸಿದರು. ॥ ೨ ॥ ಬಳಿಕ ಚಂದ್ರನಂತೆ ಬಿಳುಪಾದ ಉಚ್ಚೈಶ್ರವಸ್ಸೆಂಬ ಕುದುರೆಯು ಹೊರಟಿತು. ಅದನ್ನು ಪಡೆಯಲು ಬಲಿಯು ಇಚ್ಛಿಸಿದನು. ಇಂದ್ರನು ಅದನ್ನು ಬಯಸಲಿಲ್ಲ. ಏಕೆಂದರೆ, ಭಗವಂತನು ಮೊದಲೇ ಅವನಿಗೆ ಆದೇಶಿಸಿದ್ದನು. ॥ ೩ ॥ ಬಳಿಕ ನಾಲ್ಕು ದಂತಗಳುಳ್ಳ ಶ್ರೇಷ್ಠವಾದ ಐರಾವತವೆಂಬ ಆನೆಯು ಹುಟ್ಟಿತು. ಅದರ ಉಜ್ವಲಶೋಭೆಯು ರುದ್ರನ ಉಜ್ವಲವಾದ ಕಾಂತಿಯಿಂದ ಕೂಡಿದ್ದ ಕೈಲಾಸವನ್ನೂ ಮೀರಿಸುವಂತಿತ್ತು. ॥ ೪ ॥

ಕೌಸ್ತುಭಾಖ್ಯಮಭೂದ್ರತ್ನಂ ಪದ್ಮರಾಗೋ ಮಹೋದಧೇಃ ।
ತಸ್ಮಿನ್ಹರಿಃ ಸ್ಪೃಹಾಂ ಚಕ್ರೇ ವಕ್ಷೋಽಲಂಕರಣೇ ಮಣೌ ॥ ೫ ॥

ತತೋಽಭವತ್ಪಾರಿಜಾತಃ ಸುರಲೋಕವಿಭೂಷಣಮ್ ।
ಪೂರಯತ್ಯರ್ಥಿನೋ ಯೋಽರ್ಥೈಃ ಶಶ್ವದ್ಭುವಿ ಯಥಾ ಭವಾನ್ ॥ ೬ ॥

ತತಶ್ಚಾಪ್ಸರಸೋ ಜಾತಾ ನಿಷ್ಕಕಂಠ್ಯಃ ಸುವಾಸಸಃ ।
ರಮಣ್ಯಃ ಸ್ವರ್ಗಿಣಾಂ ವಲ್ಗುಗತಿಲೀಲಾವಲೋಕನೈಃ ॥ ೭ ॥

ತತಶ್ಚಾವಿರಭೂತ್ಸಾಕ್ಷಾಚ್ಛ್ರೀ ರಮಾ ಭಗವತ್ಪರಾ ।
ರಂಜಯಂತೀ ದಿಶಃ ಕಾಂತ್ಯಾ ವಿದ್ಯುತ್ಸೌದಾಮನೀ ಯಥಾ ॥ ೮ ॥

ತಸ್ಯಾಂ ಚಕ್ರುಃ ಸ್ಪೃಹಾಂ ಸರ್ವೇ ಸಸುರಾಸುರಮಾನವಾಃ ।
ರೂಪೌದಾರ್ಯವಯೋವರ್ಣಮಹಿಮಾಕ್ಷಿಪ್ತಚೇತಸಃ ॥ ೯ ॥

ತಸ್ಯಾ ಆಸನಮಾನಿನ್ಯೇ ಮಹೇಂದ್ರೋ ಮಹದದ್ಭುತಮ್ ।
ಮೂರ್ತಿಮತ್ಯಃ ಸರಿಚ್ಛ್ರೇಷ್ಠಾ ಹೇಮಕುಂಭೈರ್ಜಲಂ ಶುಚಿ ॥ ೧೦ ॥

ಆಭಿಷೇಚನಿಕಾ ಭೂಮಿರಾಹರತ್ಸ ಕಲೌಷಧೀಃ ।
ಗಾವಃ ಪಂಚ ಪವಿತ್ರಾಣಿ ವಸಂತೋ ಮಧುಮಾಧವೌ ॥ ೧೧ ॥

ಋಷಯಃ ಕಲ್ಪಯಾಂಚಕ್ರುರಭಿಷೇಕಂ ಯಥಾವಿಧಿ ।
ಜಗುರ್ಭದ್ರಾಣಿ ಗಂಧರ್ವಾ ನಟ್ಯಶ್ಚ ನನೃತುರ್ಜಗುಃ ॥ ೧೨ ॥

ಮೇಘಾ ಮೃದಂಗಪಣವಮುರಜಾನಕಗೋಮುಖಾನ್ ।
ವ್ಯನಾದಯನ್ ಶಂಖವೇಣುವೀಣಾಸ್ತುಮುಲನಿಸ್ವನಾನ್ ॥ ೧೩ ॥

ತತೋಽಭಿಷಿಷಿಚುರ್ದೇವೀಂ ಶ್ರಿಯಂ ಪದ್ಮಕರಾಂ ಸತೀಮ್ ।
ದಿಗಿಭಾಃ ಪೂರ್ಣಕಲಶೈಃ ಸೂಕ್ತವಾಕ್ಯೈರ್ದ್ವಿಜೇರಿತೈಃ ॥ ೧೪ ॥

ಸಮುದ್ರಃ ಪೀತಕೌಶೇಯವಾಸಸೀ ಸಮುಪಾಹರತ್ ।
ವರುಣಃ ಸ್ರಜಂ ವೈಜಯಂತೀಂ ಮಧುನಾ ಮತ್ತಷಟ್ಪದಾಮ್ ॥ ೧೫ ॥

ಭೂಷಣಾನಿ ವಿಚಿತ್ರಾಣಿ ವಿಶ್ವಕರ್ಮಾ ಪ್ರಜಾಪತಿಃ ।
ಹಾರಂ ಸರಸ್ವತೀ ಪದ್ಮಮಜೋ ನಾಗಾಶ್ಚ ಕುಂಡಲೇ ॥ ೧೬ ॥

ಬಳಿಕ ಕ್ಷೀರಸಮುದ್ರದಿಂದ ಕೌಸ್ತುಭವೆಂಬ ಪದ್ಮರಾಗ ಮಣಿಯು ಹೊರಟಿತು. ಆ ಮಣಿಯನ್ನು ತನ್ನ ವಕ್ಷಸ್ಥಳದಲ್ಲಿ ಅಲಂಕರಿಸಿಕೊಳ್ಳಲು ಅಜಿತನಾದ ಭಗವಾನ್ ಮಹಾವಿಷ್ಣುವು ಸ್ವೀಕರಿಸಿದನು. ॥ ೫ ॥ ಬಳಿಕ ಸ್ವರ್ಗಲೋಕದ ಶೋಭೆಯನ್ನು ಹೆಚ್ಚಿಸುವ ಪಾರಿಜಾತ ಹುಟ್ಟಿತು. ಪರೀಕ್ಷಿತನೇ! ಭೂಮಂಡಲದಲ್ಲಿ ನೀನು ಸಕಲರ ಇಷ್ಟಗಳನ್ನು ಈಡೇರಿಸುವಂತೆಯೇ ಆ ಕಲ್ಪವೃಕ್ಷವು ಬೇಡಿದವರ ಇಷ್ಟಾರ್ಥಗಳೆಲ್ಲವನ್ನೂ ಪೂರ್ಣಗೊಳಿಸುತ್ತದೆ. ॥ ೬ ॥ ಅನಂತರ ಸುವರ್ಣದ ಹಾರಗಳಿಂದ ಸಮಲಂಕೃತರಾದ, ದಿವ್ಯವಸ್ತ್ರಗಳನ್ನುಟ್ಟಿದ್ದ ನಡೆ-ಬೆಡಗು ನೋಟಗಳಿಂದ ದೇವತೆಗಳನ್ನು ಸಂತೋಷ ಪಡಿಸುವ ಕಮನೀಯರಾದ ಅಪ್ಸರೆಯರು ಹುಟ್ಟಿದರು. ॥ ೭ ॥ ಅನಂತರ ಭಗವಂತನ ನಿತ್ಯಶಕ್ತಿಯಾದ ಸೌಂದರ್ಯವೇ ಮೂರ್ತಿಭವಿಸಿದಂತೆ ಭಗವತಿ ಶ್ರೀಲಕ್ಷ್ಮೀದೇವಿಯು ಪ್ರಕಟಳಾದಳು. ಅವಳ ಮಿಂಚಿನಂತಹ ದಿವ್ಯವಾದ ಕಾಂತಿಯಿಂದ ದಶದಿಕ್ಕುಗಳು ಬೆಳಗುತ್ತಿದ್ದುವು. ॥ ೮ ॥ ಆ ಶ್ರೀದೇವಿಯ ರೂಪ, ಔದಾರ್ಯ, ಯೌವನ, ನಯನಮನೋಹರವಾದ ಶರೀರಕಾಂತಿ ಹಾಗೂ ಮಹಿಮೆಗಳಿಗೆ ಎಲ್ಲರ ಚಿತ್ತವೂ ಆಕರ್ಷಿಸಿತು. ದೇವತೆಗಳು, ಅಸುರರು, ಮನುಷ್ಯರು ಹೀಗೆ ಎಲ್ಲರೂ ಇವಳು ನಮಗೆ ದೊರೆಯಲಿ ಎಂದು ಬಯಸಿದರು. ॥ ೯ ॥ ಸ್ವತಃ ದೇವೇಂದ್ರನೇ ತನ್ನ ಕೈಗಳಿಂದ ಅವಳಿಗೆ ಕುಳಿತುಕೊಳ್ಳಲು ಅದ್ಭುತವಾದ ದಿವ್ಯ ಆಸನವನ್ನು ತಂದಿರಿಸಿದನು. ಶ್ರೇಷ್ಠನದಿಗಳೆಲ್ಲವೂ ಮೂರ್ತಿವತ್ತಾಗಿ ಬಂದು ಅವಳ ಅಭಿಷೇಕಕ್ಕಾಗಿ ಚಿನ್ನದ ಬಿಂದಿಗೆಗಳಲ್ಲಿ ಪರಿಶುದ್ಧವಾದ ನೀರನ್ನು ತಂದರು. ॥ ೧೦ ॥ ಭೂದೇವಿಯು ಅಭಿಷೇಕಕ್ಕಾಗಿ ಬೇಕಾದ ಗಿಡಮೂಲಿಕೆಗಳನ್ನು ಸಿದ್ಧಪಡಿಸಿದಳು. ಗೋವುಗಳು ಪವಿತ್ರವಾದ ಪಂಚಗವ್ಯವನ್ನೂ, ವಸಂತನು ಚೈತ್ರ-ವೈಶಾಖದಲ್ಲಿ ದೊರೆಯುವ ಬಗೆ-ಬಗೆಯ ಫಲ-ಪುಷ್ಪಗಳನ್ನು ಕಾಣಿಕೆಯಾಗಿ ಅರ್ಪಿಸಿದನು. ॥ ೧೧ ॥ ಇವೆಲ್ಲ ಸಾಮಗ್ರಿಗಳಿಂದ ಋಷಿಗಳು ಲಕ್ಷ್ಮೀದೇವಿಗೆ ಶಾಸ್ತ್ರೋಕ್ತವಾಗಿ ಶುದ್ಧ ಜಲದಿಂದ ಅಭಿಷೇಕ ಮಾಡಿದರು. ಗಂಧರ್ವರು ಮಂಗಳಗೀತೆಗಳನ್ನು ಹಾಡಿದರು. ನರ್ತಕಿಯರು ಹಾಡುತ್ತಾ, ನರ್ತಿಸುತ್ತಾ ಸೇವೆ ಸಲ್ಲಿಸಿದರು. ॥ ೧೨ ॥ ಮೇಘಗಳು ಮೂರ್ತಿವತ್ತಾಗಿ ಬಂದು ಮೃದಂಗ, ಪಣವ, ಆನಕ, ಗೋಮುಖ, ಶಂಖ, ಕೊಳಲು, ವೀಣೆ ಮುಂತಾದ ವಾದ್ಯಗಳನ್ನು ಇಂಪಾಗಿ ನುಡಿಸಿತು. ॥ ೧೩ ॥ ಆಗ ಭಗವತೀ ಲಕ್ಷ್ಮೀ ದೇವಿಯು ಕೈಯಲ್ಲಿ ಕಮಲವನ್ನು ಹಿಡಿದುಕೊಂಡ ದಿವ್ಯ ಸಿಂಹಾಸನದಲ್ಲಿ ವಿರಾಜಮಾನಳಾದಳು. ಬ್ರಾಹ್ಮಣೋತ್ತಮರು ವೇದ ಮಂತ್ರಗಳನ್ನು ಪಠಿಸುತ್ತಿರುವಂತೆ. ದಿಗ್ಗಜಗಳು ಪೂರ್ಣ ಕುಂಭ ಗಳಿಂದ ಅವಳಿಗೆ ಅಭಿಷೇಕಮಾಡಿದುವು. ॥ ೧೪ ॥ ಸಮುದ್ರ ರಾಜನು ಆಕೆಗೆ ಎರಡು ರೇಷ್ಮೆಯ ಪೀತಾಂಬರಗಳನ್ನು ಉಡಲು ಕೊಟ್ಟನು. ವರುಣನು ಮಧುಪಾನದಿಂದ ಮತ್ತವಾದ ದುಂಬಿಗಳಿಂದ ಕೂಡಿದ್ದ ವೈಜಯಂತೀ ಮಾಲೆಯನ್ನು ಸಮರ್ಪಿಸಿದನು. ॥ ೧೫ ॥ ವಿಶ್ವಕರ್ಮ ಪ್ರಜಾಪತಿಯು ನಾನಾವಿಧವಾದ ವಿಚಿತ್ರವಾದ ಆಭರಣಗಳನ್ನೂ, ಸರಸ್ವತೀ ದೇವಿಯು ಮುತ್ತಿನ ಹಾರವನ್ನೂ, ಬ್ರಹ್ಮನು ದಿವ್ಯವಾದ ಕಮಲವನ್ನೂ, ನಾಗಶ್ರೇಷ್ಠರು ನಯನ ಮನೋಹರವಾದ ಕುಂಡಲಗಳನ್ನೂ ಲಕ್ಷ್ಮೀದೇವಿಗೆ ಅರ್ಪಿಸಿದರು. ॥೧೬॥

ತತಃ ಕೃತಸ್ವಸ್ತ್ಯಯನೋತ್ಪಲಸ್ರಜಂ
ನದದ್ದ್ವಿರೇಫಾಂ ಪರಿಗೃಹ್ಯ ಪಾಣಿನಾ ।
ಚಚಾಲ ವಕ್ತ್ರಂ ಸುಕಪೋಲಕುಂಡಲಂ
ಸವ್ರೀಡಹಾಸಂ ದಧತೀ ಸುಶೋಭನಮ್ ॥ ೧೭ ॥

ಇದಾದ ನಂತರ ವಿಪ್ರೋತ್ತಮರು ಸ್ವಸ್ತಿಮಂತ್ರಗಳನ್ನು ಪಠಿಸಿದ ಬಳಿಕ ಶ್ರೀರಮಾದೇವಿಯು ಝೇಂಕರಿಸುತ್ತಿದ್ದ ದುಂಬಿಗಳಿಂದ ವ್ಯಾಪ್ತವಾಗಿದ್ದ ಕನ್ನೈದಿಲೆಯ ಮಾಲೆಯನ್ನು ಕೈಯಲ್ಲಿ ಹಿಡಿದುಕೊಂಡಳು. ಕುಂಡಲಗಳ ಕಾಂತಿಯಿಂದ ಶ್ರೀಲಕ್ಷ್ಮೀದೇವಿಯ ಮುಖದ ಸೌಂದರ್ಯ ಅವರ್ಣನೀಯವಾಗಿತ್ತು. ಅವಳು ನಾಚಿಕೆಯಿಂದೊಡಗೂಡಿ ಕಿರುನಗೆಯಿಂದ ಕೂಡಿ ಮೆಲ್ಲನೆ ಹೊರಟಳು. ॥ ೧೭ ॥

ಸ್ತನದ್ವಯಂ ಚಾತಿಕೃಶೋದರೀ ಸಮಂ
ನಿರಂತರಂ ಚಂದನಕುಂಕುಮೋಕ್ಷಿತಮ್ ।
ತತಸ್ತತೋ ನೂಪುರವಲ್ಗುಶಿಂಜಿತೈ-
ರ್ವಿಸರ್ಪತೀ ಹೇಮಲತೇವ ಸಾ ಬಭೌ ॥ ೧೮ ॥

ಲಕ್ಷ್ಮೀದೇವಿಯ ಸೊಂಟವು ಬಹಳ ಸೂಕ್ಷ್ಮವಾಗಿತ್ತು. ಸುಂದರವಾದ ಆಕೆಯ ಸ್ತನಗಳು ಒಂದಕ್ಕೊಂದು ಸೇರಿಕೊಂಡು ತುಂಬಿಕೊಂಡಿದ್ದು ಕುಂಕುಮಕೇಸರಿಯ ಗಂಧದಿಂದ ಲೇಪಿಸಲ್ಪಟ್ಟಿದ್ದವು. ಕಾಲ್ಗೆಜ್ಜೆಗಳ ಝಣ-ಝಣ ಶಬ್ದದೊಡನೆ ಅತ್ತಿಂದಿತ್ತ ಸುಳಿದಾಡುತ್ತಿದ್ದ ರಮಾದೇವಿಯು ಚಿನ್ನದ ಬಳ್ಳಿಯಂತೆಯೇ ಕಾಣುತ್ತಿದ್ದಳು. ॥ ೧೮ ॥

ವಿಲೋಕಯಂತೀ ನಿರವದ್ಯಮಾತ್ಮನಃ
ಪದಂ ಧ್ರುವಂ ಚಾವ್ಯಭಿಚಾರಿಸದ್ಗುಣಮ್ ।
ಗಂಧರ್ವಯಕ್ಷಾಸುರಸಿದ್ಧಚಾರಣ-
ತ್ರೈವಿಷ್ಟಪೇಯಾದಿಷು ನಾನ್ವವಿಂದತ ॥ ೧೯ ॥

ದೋಷರಹಿತನಾದ, ಸಮಸ್ತ ಉತ್ತಮವಾದ ಗುಣಗಳಿಂದ ಸಂಪನ್ನನಾದ, ಅವಿನಾಶಿಯಾದ ಪುರುಷನ ಆಶ್ರಯವನ್ನು ಬಯಸಿ ಆಕೆಯು ಹೊರಟಿದ್ದಳು. ಆದರೆ ಗಂಧರ್ವ, ಯಕ್ಷ, ರಾಕ್ಷಸ, ಸಿದ್ಧ, ಚಾರಣ, ದೇವತೆಗಳೇ ಮೊದಲಾದವರಲ್ಲಿ ಅಂತಹ ಪುರುಷನು ಅವಳಿಗೆ ಸಿಗಲೇ ಇಲ್ಲ. ॥ ೧೯ ॥

ನೂನಂ ತಪೋ ಯಸ್ಯ ನ ಮನ್ಯುನಿರ್ಜಯೋ
ಜ್ಞಾನಂ ಕ್ವಚಿತ್ತಚ್ಚ ನ ಸಂಗವರ್ಜಿತಮ್ ।
ಕಶ್ಚಿನ್ಮಹಾಂಸ್ತಸ್ಯ ನ ಕಾಮನಿರ್ಜಯಃ
ಸ ಈಶ್ವರಃ ಕಿಂ ಪರತೋವ್ಯಪಾಶ್ರಯಃ ॥ ೨೦ ॥

ಆಗ ಅವಳು ತನ್ನಲ್ಲೇ ಹೀಗೆ ಯೋಚಿಸಿದಳು – ಕೆಲವರು ತಪಸ್ವಿಗಳೇನೋ ಹೌದು, ಆದರೆ ಕ್ರೋಧವನ್ನು ಗೆದ್ದುಕೊಂಡಿಲ್ಲ. (ದುರ್ವಾಸರು ತಪಸ್ವಿಗಳು, ಆದರೆ ಕೋಪವನ್ನು ಜಯಿಸಿದವರಲ್ಲ) ಕೆಲವರಲ್ಲಿ ಜ್ಞಾನವೇನೋ ಇದೆ, ಆದರೆ ಅವರು ಪೂರ್ಣ ಅನಾಸಕ್ತರಲ್ಲ. (ಗುರು-ಶುಕ್ರರಲ್ಲಿ ಜ್ಞಾನ, ತಪಸ್ಸೂ ಇದೆ. ಆದರೆ ಪ್ರಾಣಿಗಳಿಗೆ ಒಳ್ಳೆಯ ಕೆಟ್ಟ ಫಲಗಳನ್ನು ಕೊಡುವುದರಲ್ಲೇ ಆಸಕ್ತರಾದ್ದರಿಂದ ಸಂಗವರ್ಜಿತರಲ್ಲ.) ಕೆಲವರು ಮಹಾತ್ಮರಿರುತ್ತಾರೆ. ಆದರೆ ಕಾಮವನ್ನು ಗೆಲ್ಲಲಿಲ್ಲ. (ಚಂದ್ರನು ಮಹಾತ್ಮನೇ ಸರಿ. ಆದರೆ ದೇವಗುರುವಿನ ಪತ್ನಿಯಲ್ಲಿ ಆಸಕ್ತನಾದನು.) ಕೆಲವರಲ್ಲಿ ಐಶ್ವರ್ಯವೂ ಬಹಳವಿದೆ, ಆದರೆ ಅವರು ಬೇರೆಯವರ ಆಶ್ರಯ ಪಡೆಯಬೇಕಾಗುತ್ತದೆ. (ಇತರರ ಆಶ್ರಯದಿಂದಲೇ ತ್ರೈಲೋಕ್ಯಾಧಿಪತ್ಯವನ್ನು ಗಳಿಸಿದ ಇಂದ್ರನನ್ನು ಪ್ರಭು ಎಂದು ಎನ್ನಲಾದೀತೇ?) ॥ ೨೦ ॥

ಧರ್ಮಃ ಕ್ವಚಿತ್ತತ್ರ ನ ಭೂತಸೌಹೃದಂ
ತ್ಯಾಗಃ ಕ್ವಚಿತ್ತತ್ರ ನ ಮುಕ್ತಿಕಾರಣಮ್ ।
ವೀರ್ಯಂ ನ ಪುಂಸೋಽಸ್ತ್ಯಜವೇಗನಿಷ್ಕೃತಂ
ನ ಹಿ ದ್ವಿತೀಯೋ ಗುಣಸಂಗವರ್ಜಿತಃ ॥ ೨೧ ॥

ಕೆಲವರಲ್ಲಿ ಧರ್ಮವಿದೆ. ಆದರೆ ಭೂತದಯೆಯಿಲ್ಲ. (ಧರ್ಮಾತ್ಮರಿಗೆ ಮುಖ್ಯವಾಗಿ ಭೂತದಯೆ ಇರಬೇಕು. ಯಮಧರ್ಮನು ಧರ್ಮಾತ್ಮನೇ ಸರಿ. ಆದರೆ ಅವನಲ್ಲಿ ಭೂತದಯೆ ಇಲ್ಲ. ನಿಷ್ಕರುಣೆಯಿಂದ ಪ್ರಾಣಿಗಳನ್ನು ಸಂಹರಿಸುವನು.) ಕೆಲವರಲ್ಲಿ ತ್ಯಾಗವಿದೆ, ಆದರೆ ಆ ತ್ಯಾಗ ಮುಕ್ತಿಗೆ ಕಾರಣವಾಗುವುದಿಲ್ಲ. (ಮೋಕ್ಷಾಪೇಕ್ಷೆಯಿಂದಲೇ ತ್ಯಾಗ ಮಾಡಬೇಕು. ಶಿಬಿ ಮೊದಲಾದವರಲ್ಲಿ ತ್ಯಾಗವಿದೆ, ಆದರೆ ಅದು ನಿಷ್ಕಾಮಬುದ್ಧಿಯಿಂದ ಮಾಡಿದ ತ್ಯಾಗವಲ್ಲ.) ಕೆಲ-ಕೆಲವರಲ್ಲಿ ವೀರ್ಯ-ಪರಾಕ್ರಮಗಳಿವೆ. ಆದರೆ ಅವರು ಕಾಲನ ಹಿಡಿತದಿಂದ ಹೊರಗಾದವರಲ್ಲ. (ಕಾರ್ತವೀರ್ಯನೇ ಮೊದಲಾದವರಲ್ಲಿ ಶೌರ್ಯ-ಪರಾಕ್ರಮಗಳಿದ್ದರೂ ಕಾಲಚಕ್ರವನ್ನು ಗೆಲ್ಲಲಾಗಲಿಲ್ಲ.) ಕೆಲವು ಮಹಾತ್ಮರಲ್ಲಿ ವಿಷಯಾಸಕ್ತಿಯೂ ಕಿಂಚಿತ್ತಾಗಿ ಇಲ್ಲ. ಆದರೆ ಅವರು ನಿರಂತರ ಅದ್ವೈತ-ಸಮಾಧಿಯಲ್ಲೇ ತಲ್ಲೀನರಾಗಿರುತ್ತಾರೆ. (ಪ್ರಕೃತಿಯ ಸಂಗವನ್ನೇ ತೊರೆದಿರುವ ಸನಕಾದಿಗಳು ವಿರಕ್ತರಾದ್ದರಿಂದ ನನಗೆ ತಕ್ಕವರಲ್ಲ.) ॥ ೨೧ ॥

ಕ್ವಚಿಚ್ಚಿರಾಯುರ್ನ ಹಿ ಶೀಲಮಂಗಲಂ
ಕ್ವಚಿತ್ತದಪ್ಯಸ್ತಿ ನ ವೇದ್ಯಮಾಯುಷಃ ।
ಯತ್ರೋಭಯಂ ಕುತ್ರ ಚ ಸೋಽಪ್ಯಮಂಗಲಃ
ಸುಮಂಗಲಃ ಕಶ್ಚ ನ ಕಾಂಕ್ಷತೇ ಹಿ ಮಾಮ್ ॥ ೨೨ ॥

ಯಾರೋ ಋಷಿಯು ಚಿರಾಯುವಾಗಿರುತ್ತಾನೆ, ಆದರೆ ಅವನಲ್ಲಿ ಶುಭಕರವಾದ ನಡತೆಯಿರುವುದಿಲ್ಲ. (ಮಾರ್ಕಂಡೇಯನೇ ಮೊದಲಾದವರು ಚಿರಂಜೀವಿಗಳೇ ಸರಿ. ಆದರೆ ಅವರು ನಿರಂತರ ಇಂದ್ರಿಯಗಳನ್ನು ನಿಗ್ರಹಿಸಿಯೇ ಇರುವುದರಿಂದ ಗೃಹಸ್ಥಾಶ್ರಮೋಚಿತವಾದ ಒಳ್ಳೆಯ ನಡವಳಿಕೆ ಅವರಲ್ಲಿರುವುದಿಲ್ಲ.) ಕೆಲವರಲ್ಲಿ ಶುಭಕರವಾದ ನಡವಳಿಕೆಯಿರುತ್ತದೆ, ಆದರೆ ಅವರು ಚಿರಾಯುಗಳಾಗಿರುವುದಿಲ್ಲ. (ಹಿರಣ್ಯಕಶಿಪು ಮುಂತಾದವರಲ್ಲಿ ಒಳ್ಳೆಯ ನಡತೆಯಿದ್ದರೂ ಆಯುಸ್ಸಿನ ಭರವಸೆ ಇಲ್ಲ.) ಕೆಲವರಲ್ಲಿ ದೀರ್ಘಾಯುಷ್ಯ ಮತ್ತು ಶೀಲ ಎರಡೂ ಇರುತ್ತವೆ. ಆದರೆ ಅವರು ಅಮಂಗಳ ವೇಷದಲ್ಲೇ ಇರುತ್ತಾರೆ. ಇನ್ನು ಉಳಿದವನೆಂದರೆ ಸಕಲ ಕಲ್ಯಾಣಗುಣಗಳಿಂದ ಕೂಡಿದ, ನಿರ್ದೋಷನಾದವನು ಭಗವಾನ್ ಮಹಾವಿಷ್ಣು ಒಬ್ಬನೇ. ಆದರೆ ಅವನು ನನ್ನನ್ನು ಬಯಸುವುದಿಲ್ಲ. ಅವನು ಆತ್ಮಾರಾಮನಾಗಿರುವುದೇ ಇದಕ್ಕೆ ಕಾರಣ. ॥ ೨೨ ॥

ಏವಂ ವಿಮೃಶ್ಯಾವ್ಯಭಿಚಾರಿಸದ್ಗುಣೈ-
ರ್ವರಂ ನಿಜೈಕಾಶ್ರಯತಾಽಗುಣಾಶ್ರಯಮ್ ।
ವವ್ರೇ ವರಂ ಸರ್ವಗುಣೈರಪೇಕ್ಷಿತಂ
ರಮಾ ಮುಕುಂದಂ ನಿರಪೇಕ್ಷಮೀಪ್ಸಿತಮ್ ॥ ೨೩ ॥

ತಸ್ಯಾಂಸದೇಶ ಉಶತೀಂ ನವಕಂಜಮಾಲಾಂ
ಮಾದ್ಯನ್ಮಧುವ್ರತವರೂಥಗಿರೋಪಘುಷ್ಟಾಮ್ ।
ತಸ್ಥೌ ನಿಧಾಯ ನಿಕಟೇ ತದುರಃ ಸ್ವಧಾಮ
ಸವ್ರೀಡಹಾಸವಿಕಸನ್ನಯನೇನ ಯಾತಾ ॥ ೨೪ ॥

ಪರೀಕ್ಷಿತನೇ! ಹೀಗೆ ಮಹಾಲಕ್ಷ್ಮಿಯು ಬಹಳವಾಗಿ ಯೋಚಿಸಿ ಕಡೆಗೆ ತನಗೆ ಇಷ್ಟವಾಗಿದ್ದ ಭಗವಾನ್ ಮುಕುಂದನನ್ನೇ ಪತಿಯನ್ನಾಗಿ ವರಿಸಿದಳು. ಏಕೆಂದರೆ, ಅವನಲ್ಲಿ ಸಮಸ್ತ ಸದ್ಗುಣಗಳು ಯಾವಾಗಲೂ ವಾಸಮಾಡುತ್ತಿದ್ದವು. ಪ್ರಾಕೃತಗುಣಗಳು ಅವನನ್ನು ಎಂದೂ ಸ್ಪರ್ಶಿಸಲಾರವು. ಅಣಿಮಾದಿ ಅಷ್ಟಸಿದ್ಧಿಗಳೂ ಅವನನ್ನೇ ಅಪೇಕ್ಷಿಸುತ್ತಿದ್ದವು. ಆದರೆ ಅವನು ಮಾತ್ರ ಯಾವುದನ್ನೂ ಅಪೇಕ್ಷಿಸುತ್ತಿರಲಿಲ್ಲ. ವಾಸ್ತವವಾಗಿ ಮಹಾಲಕ್ಷ್ಮಿಗೆ ಪರಮಾಶ್ರಯನು ಭಗವಂತನಾದ ಶ್ರೀಹರಿಯೇ ಆಗಿದ್ದನು. ಇದರಿಂದ ಅವಳು ಅವನನ್ನೇ ವರಿಸಿದಳು. ॥ ೨೩ ॥ ಹೀಗೆ ರಮಾದೇವಿಯು ತನ್ನ ಕೈಯಲ್ಲಿ ಹಿಡಿದಿದ್ದ ಸುಂದರವಾದ, ಮದಿಸಿದ ದುಂಬಿಗಳ ಝೇಂಕಾರದಿಂದ ಕೂಡಿದ, ನೂತನವಾದ ಕಮಲದ ಹಾರವನ್ನು ಶ್ರೀಮುಕುಂದನ ಕೊರಳಲ್ಲಿ ಹಾಕಿದಳು. ನಾಚಿಕೆಯಿಂದ ಕೂಡಿದ ಕಿರುನಗೆಯ ನೋಟದಿಂದ ತನ್ನ ವಾಸಸ್ಥಳವಾದ ಶ್ರೀಹರಿಯ ವಕ್ಷಸ್ಥಳವನ್ನೇ ವೀಕ್ಷಿಸುತ್ತಾ ಅವನ ಬಳಿಗೆ ಹೋಗಿ ನಿಂತಳು. ॥ ೨೪ ॥

ತಸ್ಯಾಃ ಶ್ರಿಯಸ್ತ್ರಿಜಗತೋ ಜನಕೋ ಜನನ್ಯಾ
ವಕ್ಷೋನಿವಾಸಮಕರೋತ್ಪರಮಂ ವಿಭೂತೇಃ ।
ಶ್ರೀಃ ಸ್ವಾಃ ಪ್ರಜಾಃ ಸಕರುಣೇನ ನಿರೀಕ್ಷಣೇನ
ಯತ್ರ ಸ್ಥಿತೈಧಯತ ಸಾಧಿಪತೀಂಸ್ತ್ರಿಲೋಕಾನ್ ॥ ೨೫ ॥

ಜಗತ್ಪತಿಯಾದ ಭಗವಂತನು ಜಗಜ್ಜನನಿಯಾದ ಸಮಸ್ತ ಸಂಪತ್ತುಗಳ ಅಧಿಷ್ಠಾತೃದೇವತೆಯಾದ ಲಕ್ಷ್ಮೀದೇವಿಗೆ ತನ್ನ ವಕ್ಷಸ್ಥಳದಲ್ಲೇ ನಿರಂತರವಾಗಿ ವಾಸಮಾಡಿಕೊಂಡಿರಲು ಸ್ಥಾನವನ್ನು ಕಲ್ಪಿಸಿಕೊಟ್ಟನು. ರಮಾದೇವಿಯು ವಿಷ್ಣುವಿನ ವಕ್ಷಃಸ್ಥಳದಲ್ಲಿಯೇ ವಿರಾಜಮಾನಳಾಗಿರುತ್ತಾ ದಯಾಪೂರ್ಣವಾದ ನೋಟದಿಂದ ಮೂರು ಲೋಕಗಳನ್ನೂ, ಲೋಕಪತಿಗಳನ್ನೂ, ಅವರ ಪ್ರಜೆಗಳನ್ನೂ ಅಭಿವೃದ್ಧಿಪಡಿಸಿದಳು. ॥ ೨೫ ॥ ಲಕ್ಷ್ಮೀನಾರಾಯಣರ ಮಂಗಳಮಯ ಈ ಕಲ್ಯಾಣೋತ್ಸವದಲ್ಲಿ ಯಕ್ಷ-ಗಂಧರ್ವ-ಕಿನ್ನರರೇ ಮೊದಲಾದವರು ಶಂಖ, ಮೃದಂಗ, ಭೇರಿ ಮೊದಲಾದ ವಾದ್ಯಗಳನ್ನು ನುಡಿಸುತ್ತಾ ಅಪ್ಸರೆಯರೊಂದಿಗೆ ನರ್ತನಮಾಡಿದರು. ಇದರಿಂದಾದ ಭಾರೀ ಶಬ್ದವು ಎಲ್ಲೆಡೆ ವ್ಯಾಪಿಸಿತು. ॥ ೨೬ ॥

ಶಂಖತೂರ್ಯಮೃದಂಗಾನಾಂ
ವಾದಿತ್ರಾಣಾಂ ಪೃಥುಃ ಸ್ವನಃ ।
ದೇವಾನುಗಾನಾಂ ಸಸ್ತ್ರೀಣಾಂ
ನೃತ್ಯತಾಂ ಗಾಯತಾಮಭೂತ್ ॥ ೨೬ ॥

ಬ್ರಹ್ಮರುದ್ರಾಂಗಿರೋಮುಖ್ಯಾಃ ಸರ್ವೇ ವಿಶ್ವಸೃಜೋ ವಿಭುಮ್ ।
ಈಡಿರೇಽವಿತಥೈರ್ಮಂತ್ರೈಸ್ತಲ್ಲಿಂಗೈಃ ಪುಷ್ಪವರ್ಷಿಣಃ
॥ ೨೭ ॥

ಬ್ರಹ್ಮ-ರುದ್ರ-ಅಂಗಿರಸ ಮೊದಲಾದ ಸಮಸ್ತ ಪ್ರಜಾಪತಿಗಳು ಪುಷ್ಪವೃಷ್ಟಿಯನ್ನು ಮಾಡುತ್ತಾ ಭಗವಂತನ ಗುಣ, ಸ್ವರೂಪ, ಲೀಲೆಗಳೇ ಮುಂತಾದವುಗಳನ್ನು ಯಥಾರ್ಥವಾಗಿ ವರ್ಣಿಸುತ್ತಿರುವ ಮಂತ್ರಗಳಿಂದ ಅವನನ್ನು ಸ್ತುತಿಸತೊಡಗಿದರು. ॥ ೨೭ ॥

ಶ್ರಿಯಾ ವಿಲೋಕಿತಾ ದೇವಾಃ ಸಪ್ರಜಾಪತಯಃ ಪ್ರಜಾಃ ।
ಶೀಲಾದಿಗುಣಸಂಪನ್ನಾ ಲೇಭಿರೇ ನಿರ್ವೃತಿಂ ಪರಾಮ್
॥ ೨೮ ॥

ನಿಃಸತ್ತ್ವಾ ಲೋಲುಪಾ ರಾಜನ್ನಿರುದ್ಯೋಗಾ ಗತತ್ರಪಾಃ ।
ಯದಾ ಚೋಪೇಕ್ಷಿತಾ ಲಕ್ಷ್ಮ್ಯಾ ಬಭೂವುರ್ದೈತ್ಯದಾನವಾಃ
॥ ೨೯ ॥

ಅಥಾಸೀದ್ವಾರುಣೀ ದೇವೀ ಕನ್ಯಾ ಕಮಲಲೋಚನಾ ।
ಅಸುರಾ ಜಗೃಹುಸ್ತಾಂ ವೈ ಹರೇರನುಮತೇನ ತೇ
॥ ೩೦ ॥

ಅಥೋದಧೇರ್ಮಥ್ಯಮಾನಾತ್ಕಾಶ್ಯಪೈರಮೃತಾರ್ಥಿಭಿಃ ।
ಉದತಿಷ್ಠನ್ಮಹಾರಾಜ ಪುರುಷಃ ಪರಮಾದ್ಭುತಃ
॥ ೩೧ ॥

ದೀರ್ಘಪೀವರದೋರ್ದಂಡಃ ಕಂಬುಗ್ರೀವೋಽರುಣೇಕ್ಷಣಃ ।
ಶ್ಯಾಮಲಸ್ತರುಣಃ ಸ್ರಗ್ವೀ ಸರ್ವಾಭರಣಭೂಷಿತಃ
॥ ೩೨ ॥

ಪೀತವಾಸಾ ಮಹೋರಸ್ಕಃ ಸುಮೃಷ್ಟಮಣಿಕುಂಡಲಃ ।
ಸ್ನಿಗ್ಧಕುಂಚಿತಕೇಶಾಂತಃ ಸುಭಗಃ ಸಿಂಹವಿಕ್ರಮಃ
॥ ೩೩ ॥

ಅಮೃತಾಪೂರ್ಣಕಲಶಂ ಬಿಭ್ರದ್ವಲಯಭೂಷಿತಃ ।
ಸ ವೈ ಭಗವತಃ ಸಾಕ್ಷಾದ್ವಿಷ್ಣೋರಂಶಾಂಶಸಂಭವಃ
॥ ೩೪ ॥

ಧನ್ವಂತರಿರಿತಿ ಖ್ಯಾತ ಆಯುರ್ವೇದದೃಗಿಜ್ಯಭಾಕ್ ।
ತಮಾಲೋಕ್ಯಾಸುರಾಃ ಸರ್ವೇ ಕಲಶಂ ಚಾಮೃತಾಭೃತಮ್
॥ ೩೫ ॥

ಲಿಪ್ಸಂತಃ ಸರ್ವವಸ್ತೂನಿ ಕಲಶಂ ತರಸಾಹರನ್ ।
ನೀಯಮಾನೇಽಸುರೈಸ್ತಸ್ಮಿನ್ಕಲಶೇಽಮೃತಭಾಜನೇ
॥ ೩೬ ॥

ವಿಷಣ್ಣಮನಸೋ ದೇವಾ ಹರಿಂ ಶರಣಮಾಯಯುಃ ।
ಇತಿ ತದ್ದೈನ್ಯಮಾಲೋಕ್ಯ ಭಗವಾನ್ಭೃತ್ಯಕಾಮಕೃತ್ ।
ಮಾ ಖಿದ್ಯತ ಮಿಥೋಽರ್ಥಂ ವಃ ಸಾಧಯಿಷ್ಯೇ ಸ್ವಮಾಯಯಾ
॥ ೩೭ ॥

ಸಮಸ್ತ ದೇವತೆಗಳೂ, ಪ್ರಜಾಪತಿಗಳೂ, ಪ್ರಜೆಗಳೂ ಶ್ರೀಲಕ್ಷ್ಮೀದೇವಿಯ ಕೃಪಾಕಟಾಕ್ಷದಿಂದ ಸೌಶೀಲ್ಯವೇ ಮುಂತಾದ ಶ್ರೇಷ್ಠ ಸದ್ಗುಣಗಳಿಂದ ಸಂಪನ್ನರಾಗಿ ಪರಮಾನಂದವನ್ನು ಹೊಂದಿದರು. ॥ ೨೮ ॥ ಮಹಾರಾಜಾ! ಇತ್ತ ಲಕ್ಷ್ಮೀದೇವಿಯು ದೈತ್ಯ-ದಾನವರನ್ನು ಉಪೇಕ್ಷಿಸಿದಾಗ ಅವರೆಲ್ಲರೂ ನಿರ್ಬಲರೂ, ನಿಸ್ಸತ್ವರೂ, ನಿರುದ್ಯೋಗಿಗಳೂ, ನಿರ್ಲಜ್ಜರೂ, ಕಡುಲೋಭಿಗಳೂ ಆದರು. ॥ ೨೯ ॥

ಇದಾದ ಬಳಿಕ ಸಮುದ್ರಮಂಥನವನ್ನು ಮುಂದುವರಿಸಿದಾಗ ಕಮಲಲೋಚನೆಯಾದ ಕನ್ಯೆಯ ರೂಪದಲ್ಲಿ ವಾರುಣೀದೇವಿಯು ಪ್ರಕಟಳಾದಳು. ಭಗವಂತನ ಅನುಮತಿಯಂತೆ ದೈತ್ಯರು ಆಕೆಯನ್ನು ಪಡೆದುಕೊಂಡರು. ॥ ೩೦ ॥ ಅನಂತರ ಮಹಾರಾಜಾ! ಕಶ್ಯಪನ ಮಕ್ಕಳಾದ ದೇವ-ದಾನವರು ಅಮೃತವನ್ನು ಬಯಸಿ ಸಮುದ್ರಮಂಥನವನ್ನು ಮುಂದುವರಿಸಿದಾಗ ಅದರಿಂದ ಪರಮಾದ್ಭುತನಾದ ಪುರುಷನೊಬ್ಬನು ಪ್ರಕಟನಾದನು. ॥ ೩೧ ॥ ಅವನ ತೋಳುಗಳು ನೀಳವಾಗಿಯೂ, ದಪ್ಪವಾಗಿಯೂ ಇದ್ದುವು. ಅವನ ಕುತ್ತಿಗೆಯು ಶಂಖವನ್ನು ಹೋಲುತ್ತಿತ್ತು. ಕಡೆಗಣ್ಣುಗಳು ಕೆಂಪಾಗಿದ್ದುವು. ಅವನು ಶ್ಯಾಮಲವರ್ಣದ ಅಂಗಕಾಂತಿಯಿಂದ ಸುಂದರನಾಗಿದ್ದನು. ಕೊರಳಲ್ಲಿ ಮಾಲೆ, ಅಂಗಾಂಗಗಳಲ್ಲಿ ಸಮಸ್ತ ಆಭರಣಗಳಿಂದ ಸಮಲಂಕೃತನಾಗಿದ್ದನು. ಪೀತಾಂಬರವನ್ನು ಉಟ್ಟಿದ್ದನು. ಕಿವಿಗಳಲ್ಲಿ ಹೊಳೆಯುತ್ತಿರುವ ಕುಂಡಲಗಳಿದ್ದುವು. ಅಗಲವಾದ ವಕ್ಷಸ್ಥಳವಿದ್ದು ಯುವಕನಾಗಿದ್ದನು. ಸಿಂಹದಂತಹ ಪರಾಕ್ರಮ, ಅನುಪಮ ಸೌಂದರ್ಯ, ನುಣುಪಾದ ಗುಂಗುರು ಕೂದಲುಗಳು ಹಾರಾಡುತ್ತಾ ಅವನ ಸ್ವರೂಪವು ಅದ್ವಿತೀಯವಾಗಿತ್ತು. ॥ ೩೨-೩೩ ॥ ಅವನ ಕೈಗಳಲ್ಲಿ ಕಂಕಣಗಳಿದ್ದು, ಅಮೃತದಿಂದ ತುಂಬಿದ ಕಲಶವನ್ನು ಹಿಡಿದುಕೊಂಡಿದ್ದನು. ಅವನು ಸಾಕ್ಷಾತ್ ಭಗವಾನ್ ವಿಷ್ಣುವಿನ ಅಂಶಾಂಶ ಅವತಾರನಾಗಿದ್ದನು. ॥ ೩೪ ॥ ಅವನು ಆಯುರ್ವೇದ ಪ್ರವರ್ತಕನೂ, ಯಜ್ಞಭೋಕ್ತೃವೂ ಆದ ಧನ್ವಂತರೀ ಎಂಬ ಹೆಸರಿನಿಂದ ಪ್ರಸಿದ್ಧನಾಗಿದ್ದನು. ಅವನ ಮೇಲೆ ಮತ್ತು ಅವನ ಕೈಯಲ್ಲಿದ್ದ ಅಮೃತಕಲಶದ ಮೇಲೆ ದೈತ್ಯರ ದೃಷ್ಟಿಬೀಳುತ್ತಲೇ ಅವರು ಶೀಘ್ರವಾಗಿ, ಬಲವಂತವಾಗಿ ಆ ಅಮೃತಕಲಶವನ್ನು ಕಸಿದುಕೊಂಡರು. ಅವರಾದರೋ ಮೊದಲಿನಿಂದಲೇ ಯಾವುದೇ ರೀತಿಯಿಂದ ಸಮುದ್ರಮಂಥನದಿಂದ ದೊರೆತ ಎಲ್ಲ ವಸ್ತುಗಳು ತಮಗೇ ಸೇರಬೇಕೆಂದು ಹೊಂಚು ಹಾಕುತ್ತಿದ್ದರು. ಅಸುರರು ಆ ಅಮೃತದಿಂದ ತುಂಬಿದ ಕಲಶವನ್ನು ಕಸಿದುಕೊಂಡಾಗ ದೇವತೆಗಳ ಮನಸ್ಸು ವಿಷಾದದಿಂದ ತುಂಬಿಹೋಯಿತು. ಅನ್ಯಮಾರ್ಗವನ್ನು ಕಾಣದೆ ಅವರು ಶ್ರೀಹರಿಯಲ್ಲಿ ಶರಣಾದರು. ದೇವತೆಗಳ ಆ ದೈನ್ಯಾವಸ್ಥೆಯನ್ನು ಕಂಡು ಭಕ್ತರ ಕಲ್ಪತರುವಾದ ಭಗವಂತನು ಹೇಳಿದನು - ದೇವತೆಗಳಿರಾ! ನೀವು ದುಃಖಿಸಬೇಡಿರಿ. ನಾನು ನನ್ನ ಮಾಯೆಯಿಂದ ಅವರಲ್ಲಿ ಪರಸ್ಪರ ಕಲಹ ಉಂಟಾಗುವಂತೆ ಮಾಡಿ ಈಗಲೇ ನಿಮ್ಮ ಕಾರ್ಯವನ್ನು ಸಾಧಿಸಿಕೊಡುವೆನು. ॥ ೩೫-೩೭ ॥

ಮಿಥಃ ಕಲಿರಭೂತ್ತೇಷಾಂ ತದರ್ಥೇ ತರ್ಷಚೇತಸಾಮ್ ।
ಅಹಂ ಪೂರ್ವಮಹಂ ಪೂರ್ವಂ ನ ತ್ವಂ ನ ತ್ವಮಿತಿ ಪ್ರಭೋ ॥ ೩೮ ॥

ದೇವಾಃ ಸ್ವಂ ಭಾಗಮರ್ಹಂತಿ ಯೇ ತುಲ್ಯಾಯಾಸಹೇತವಃ ।
ಸತ್ರಯಾಗ ಇವೈತಸ್ಮಿನ್ನೇಷ ಧರ್ಮಃ ಸನಾತನಃ ॥ ೩೯ ॥

ಇತಿ ಸ್ವಾನ್ಪ್ರತ್ಯಷೇಧನ್ವೈ ದೈತೇಯಾ ಜಾತಮತ್ಸರಾಃ ।
ದುರ್ಬಲಾಃ ಪ್ರಬಲಾನ್ರಾಜನ್ಗೃಹೀತಕಲಶಾನ್ಮುಹುಃ ॥ ೪೦ ॥

ಏತಸ್ಮಿನ್ನಂತರೇ ವಿಷ್ಣುಃ ಸರ್ವೋಪಾಯವಿದೀಶ್ವರಃ ।
ಯೋಷಿದ್ರೂಪಮನಿರ್ದೇಶ್ಯಂ ದಧಾರ ಪರಮಾದ್ಭುತಮ್ ॥ ೪೧ ॥

ಪ್ರೇಕ್ಷಣೀಯೋತ್ಪಲಶ್ಯಾಮಂ ಸರ್ವಾವಯವಸುಂದರಮ್ ।
ಸಮಾನಕರ್ಣಾಭರಣಂ ಸುಕಪೋಲೋನ್ನಸಾನನಮ್ ॥ ೪೨ ॥

ನವಯೌವನನಿರ್ವೃತ್ತಸ್ತನಭಾರಕೃಶೋದರಮ್ ।
ಮುಖಾಮೋದಾನುರಕ್ತಾಲಿಝಂಕಾರೋದ್ವಿಗ್ನಲೋಚನಮ್ ॥ ೪೩ ॥

ಬಿಭ್ರತ್ಸುಕೇಶಭಾರೇಣ ಮಾಲಾಮುತ್ಫುಲ್ಲಮಲ್ಲಿಕಾಮ್ ।
ಸುಗ್ರೀವಕಂಠಾಭರಣಂ ಸುಭುಜಾಂಗದಭೂಷಿತಮ್ ॥ ೪೪ ॥

ವಿರಜಾಂಬರಸಂವೀತನಿತಂಬದ್ವೀಪಶೋಭಯಾ ।
ಕಾಂಚ್ಯಾ ಪ್ರವಿಲಸದ್ವಲ್ಗುಚಲಚ್ಚರಣನೂಪುರಮ್ ॥ ೪೫ ॥

ಸವ್ರೀಡಸ್ಮಿತವಿಕ್ಷಿಪ್ತಭ್ರೂವಿಲಾಸಾವಲೋಕನೈಃ ।
ದೈತ್ಯಯೂಥಪಚೇತಃಸು ಕಾಮಮುದ್ದೀಪಯನ್ಮುಹುಃ ॥ ೪೬ ॥

ಪರೀಕ್ಷಿತನೇ! ಅಮೃತಲೋಲುಪರಾದ ದೈತ್ಯರಲ್ಲಿ ಅದರ ಕುರಿತು ಪರಸ್ಪರ ಜಗಳ ಪ್ರಾರಂಭವಾಯಿತು. ನಾನು ಮೊದಲು ಕುಡಿಯುವೆ – ನಾನು ಮೊದಲು ಕುಡಿಯುವೆ, ನೀನಲ್ಲವೆಂದು ಎಲ್ಲರೂ ಹೇಳತೊಡಗಿದರು. ॥ ೩೮ ॥ ಅವರಲ್ಲಿ ದುರ್ಬಲರಾದವರು ಬಲಿಷ್ಠರಾದ ದೈತ್ಯರೊಡನೆ ವಿರೋಧಮಾಡತೊಡಗಿದರು. ಕಲಶವನ್ನು ಕಿತ್ತುಕೊಂಡು ಕೈವಶಪಡಿಸಿಕೊಂಡಿರುವವರು ಈರ್ಷೆಯಿಂದ ಧರ್ಮದ ನೆಪವನ್ನೊಡ್ಡಿ ಅವರನ್ನು ತಡೆಯುತ್ತಾ ಪದೇ-ಪದೇ ಹೇಳತೊಡಗಿದರು – ಅಯ್ಯಾ! ದೇವತೆಗಳೂ ನಮ್ಮಂತೆಯೇ ಪರಿಶ್ರಮಪಟ್ಟಿರುವರು. ಅವರಿಗೂ ಯಜ್ಞಭಾಗದಂತೆ ಸಮಾನವಾಗಿ ಇದರ ಭಾಗ ಸಿಗಬೇಕಲ್ಲ! ಇದೇ ಸನಾತನ ಧರ್ಮವಾಗಿದೆ. ॥ ೩೯-೪೦ ॥ ಇತ್ತ ಹೀಗೆ ದೈತ್ಯರು ನಾನು-ನಾನು ಎಂದು ಕಚ್ಚಾಡುತ್ತಿದ್ದಾಗ ಆ ಕಡೆ ಸಮಸ್ತ ಉಪಾಯಗಳನ್ನು ಬಲ್ಲಿದನಾದ ಲೋಕೇಶ್ವರನು, ಚತುರಶಿರೋಮಣಿ ಭಗವಂತನು ಅತ್ಯಂತ ಅದ್ಭುತವಾದ, ಅವರ್ಣನೀಯವಾದ ಮೋಹಿನಿಯ ರೂಪವನ್ನು ಧರಿಸಿದನು. ॥ ೪೧ ॥ ಪ್ರೇಕ್ಷಣೀಯವಾದ ಆ ಸುಂದರಿಯ ಶರೀರವು ನೈದಿಲೆಯಂತೆ ಶ್ಯಾಮಲವರ್ಣದಿಂದ ಶೋಭಿಸುತ್ತಿತ್ತು. ಅವಳ ಎಲ್ಲ ಅಂಗಾಂಗಗಳು ಆಕರ್ಷಣೀಯವಾಗಿದ್ದವು. ಎರಡೂ ಕಿವಿಗಳಲ್ಲಿ ಸಮಾನವಾದ ಕರ್ಣಾಭರಣಗಳು ಶೋಭಿಸುತ್ತಿದ್ದವು. ಸುಂದರವಾದ ಕಪೋಲಗಳು, ಎತ್ತರವೂ ನೀಳವೂ ಆದ ಮೂಗಿನಿಂದ ಕೂಡಿದ ಮುಖವು ರಮಣೀಯವಾಗಿತ್ತು. ॥ ೪೨ ॥ ಹೊಸ ಜವ್ವನೆಯಾದ್ದರಿಂದ ದುಂಡಾಗಿ ಹೊರಹೊಮ್ಮುತ್ತಿದ್ದ ಸ್ತನಗಳ ಭಾರದಿಂದ ಸೊಂಟವು ಕೃಶವಾಗಿ ಬಳುಕುತ್ತಿರುವಂತೆ ಕಾಣುತ್ತಿದ್ದಿತು. ಮುಖದ ಸುವಾಸನೆಯಿಂದ ಪುಷ್ಪವೆಂದು ಭ್ರಮಿಸಿ ಮುತ್ತಿಡುತ್ತಿದ್ದ ದುಂಬಿಗಳ ಝೇಂಕಾರದಿಂದ ಕಣ್ಣಾಲಿಗಳು ಉದ್ವಿಗ್ನವಾಗಿದ್ದವು. ॥ ೪೩ ॥ ಜೋಲುಬಿದ್ದಿದ್ದ ತುರುಬಿನಲ್ಲಿ ಅರಳಿದ ಮಲ್ಲಿಗೆಯ ಹಾರವು ಕಂಗೊಳಿಸುತ್ತಿದ್ದಿತು. ಕಂಠಾಭರಣದಿಂದ ಕುತ್ತಿಗೆಯೂ ಅಂಗದ ಕೇಯೂರಗಳಿಂದ ತೋಳುಗಳು ಸುಂದರವಾಗಿ ಶೋಭಿಸುತ್ತಿದ್ದವು. ॥ ೪೪ ॥ ದ್ವೀಪಗಳಂತಿದ್ದ ಎರಡು ನಿತಂಬಗಳು ಸ್ವಚ್ಛವಾದ ವಸ್ತ್ರದಿಂದಲೂ, ಡಾಬಿನಿಂದಲೂ ಸಮಲಂಕೃತವಾಗಿ ಮನೋಹರವಾಗಿ ಕಾಣುತ್ತಿದ್ದವು. ಅವಳ ಕಾಲಂದುಗೆಗಳು ಸುಮಧುರವಾಗಿ ಝುಣ-ಝುಣ ಶಬ್ದಮಾಡುತ್ತಿದ್ದವು. ॥ ೪೫ ॥ ಸರ್ವಾಂಗ ಸುಂದರಿಯಾದ ಆ ಮೋಹಿನಿಯು ನಾಚಿಕೆಯಿಂದ ಕೂಡಿದ ಕಿರುನಗೆಯಿಂದಲೂ, ಹಾರಿಸಲ್ಪಡುತ್ತಿದ್ದ ಹುಬ್ಬುಗಳಿಂದಲೂ, ವೈಯಾರದ ನೋಟದಿಂದಲೂ ದೈತ್ಯನಾಯಕರ ಮನಸ್ಸಿನಲ್ಲಿದ್ದ ಕಾಮವನ್ನು ಉದ್ದೀಪನಗೊಳಿಸಿದಳು. ॥ ೪೬ ॥

ಎಂಟನೆಯ ಅಧ್ಯಾಯವು ಮುಗಿಯಿತು. ॥ ೮ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಅಷ್ಟಮ ಸ್ಕಂಧೇ
ಭಗವನ್ಮಾಯೋಪಲಂಭನಂ ನಾಮಾಷ್ಟಮೋಽಧ್ಯಾಯಃ ॥ ೮ ॥

ಒಂಭತ್ತನೆಯ ಅಧ್ಯಾಯ

ಭಗವಂತನು ಮೋಹಿನಿಯ ರೂಪದಲ್ಲಿ ಅಮೃತವನ್ನು ಹಂಚಿದುದು

ಶ್ರೀಶುಕ ಉವಾಚ

ತೇಽನ್ಯೋನ್ಯತೋಽಸುರಾಃ ಪಾತ್ರಂ ಹರಂತಸ್ತ್ಯಕ್ತಸೌಹೃದಾಃ ।
ಕ್ಷಿಪಂತೋ ದಸ್ಯುಧರ್ಮಾಣ ಆಯಾಂತೀಂ ದದೃಶುಃ ಸ್ತ್ರಿಯಮ್ ॥ ೧ ॥

ಅಹೋ ರೂಪಮಹೋ ಧಾಮ ಅಹೋ ಅಸ್ಯಾ ನವಂ ವಯಃ ।
ಇತಿ ತೇ ತಾಮಭಿದ್ರುತ್ಯ ಪಪ್ರಚ್ಛುರ್ಜಾತಹೃಚ್ಛಯಾಃ ॥ ೨ ॥

ಕಾ ತ್ವಂ ಕಂಜಪಲಾಶಾಕ್ಷಿ ಕುತೋ ವಾ ಕಿಂ ಚಿಕೀರ್ಷಸಿ ।
ಕಸ್ಯಾಸಿ ವದ ವಾಮೋರು ಮಥ್ನಂತೀವ ಮನಾಂಸಿ ನಃ ॥ ೩ ॥

ನ ವಯಂ ತ್ವಾಮರೈರ್ದೈತ್ಯೈಃ ಸಿದ್ಧಗಂಧರ್ವಚಾರಣೈಃ ।
ನಾಸ್ಪೃಷ್ಟಪೂರ್ವಾಂ ಜಾನೀಮೋ ಲೋಕೇಶೈಶ್ಚ ಕುತೋ ನೃಭಿಃ ॥ ೪ ॥

ನೂನಂ ತ್ವಂ ವಿಧಿನಾ ಸುಭ್ರೂಃ ಪ್ರೇಷಿತಾಸಿ ಶರೀರಿಣಾಮ್ ।
ಸರ್ವೇಂದ್ರಿಯಮನಃಪ್ರೀತಿಂ ವಿಧಾತುಂ ಸಘೃಣೇನ ಕಿಮ್ ॥ ೫ ॥

ಸಾ ತ್ವಂ ನಃ ಸ್ಪರ್ಧಮಾನಾನಾಮೇಕವಸ್ತುನಿ ಮಾನಿನಿ ।
ಜ್ಞಾತೀನಾಂ ಬದ್ಧವೈರಾಣಾಂ ಶಂ ವಿಧತ್ಸ್ವ ಸುಮಧ್ಯಮೇ ॥ ೬ ॥

ವಯಂ ಕಶ್ಯಪದಾಯಾದಾ ಭ್ರಾತರಃ ಕೃತಪೌರುಷಾಃ ।
ವಿಭಜಸ್ವ ಯಥಾನ್ಯಾಯಂ ನೈವ ಭೇದೋ ಯಥಾ ಭವೇತ್ ॥ ೭ ॥

ಇತ್ಯುಪಾಮಂತ್ರಿತೋ ದೈತ್ಯೈರ್ಮಾಯಾಯೋಷಿದ್ವಪುರ್ಹರಿಃ ।
ಪ್ರಹಸ್ಯ ರುಚಿರಾಪಾಂಗೈರ್ನಿರೀಕ್ಷನ್ನಿದಮಬ್ರವೀತ್ ॥ ೮ ॥

ಶ್ರೀಭಗವಾನುವಾಚ

ಕಥಂ ಕಶ್ಯಪದಾಯಾದಾಃ ಪುಂಶ್ಚಲ್ಯಾಂ ಮಯಿ ಸಂಗತಾಃ ।
ವಿಶ್ವಾಸಂ ಪಂಡಿತೋ ಜಾತು ಕಾಮಿನೀಷು ನ ಯಾತಿ ಹಿ ॥ ೯ ॥

ಸಾಲಾವೃಕಾಣಾಂ ಸ್ತ್ರೀಣಾಂ ಚ ಸ್ವೈರಿಣೀನಾಂ ಸುರದ್ವಿಷಃ ।
ಸಖ್ಯಾನ್ಯಾಹುರನಿತ್ಯಾನಿ ನೂತ್ನಂ ನೂತ್ನಂ ವಿಚಿನ್ವತಾಮ್ ॥ ೧೦ ॥

ಶ್ರೀಶುಕಮುನಿಗಳು ಹೇಳುತ್ತಾರೆ – ಎಲೈ ಪರೀಕ್ಷಿತನೇ! ಅಸುರರು ತಮ್ಮ-ತಮ್ಮಲ್ಲಿಯೇ ಸದ್ಭಾವವನ್ನೂ, ವಿಶ್ವಾಸ ವನ್ನೂ ಕಳಕೊಂಡು ಒಬ್ಬರು ಮತ್ತೊಬ್ಬರನ್ನು ನಿಂದಿಸುತ್ತಾ, ಕಳ್ಳರಂತೆ ಒಬ್ಬರಿಂದ ಮತ್ತೊಬ್ಬರು ಅಮೃತಕಲಶವನ್ನು ಕಸಿದುಕೊಳ್ಳುತ್ತಾ ಇದ್ದರು. ಅದೇ ಸಮಯಕ್ಕೆ ಸರಿಯಾಗಿ ಸುಂದರಿಯಾದ ಓರ್ವ ಸ್ತ್ರೀಯು ತಮ್ಮ ಕಡೆಗೆ ಬರುತ್ತಿರುವುದನ್ನು ನೋಡಿದರು. ॥ ೧ ॥ ಆಹಾ! ಎಂತಹ ರೂಪು! ಎಂತಹ ತೇಜಸ್ಸು! ಎಂತಹ ನವ ಯೌವನ! ಎಂದು ಉದ್ಗರಿಸುತ್ತಾ ಕಾಮೋದ್ದೀಪ್ತರಾದ ಆ ದಾನವರು ಅವಳ ಬಳಿಗೆ ಓಡಿಬಂದು ಬೆಸಗೊಂಡರು. ॥ ೨ ॥ ಪದ್ಮ ಪತ್ರಾಕ್ಷಿಯೇ! ಸುಂದರಿಯೇ! ನೀನು ಯಾರು? ಎಲ್ಲಿಂದ ಬಂದಿರುವೆ? ಏನು ಮಾಡಲು ಬಯಸಿ ಇಲ್ಲಿಗೆ ಬಂದಿರುವೆ? ನೀನು ಯಾರ ಮಗಳಾಗಿರುವೆ? ನಿನ್ನನ್ನು ನೋಡಿ ನಮ್ಮ ಮನಸ್ಸು ಕಲಕಿಹೋಗಿದೆ. ॥ ೩ ॥ ಸುಂದರಿಯೇ! ನಮಗೆ ತಿಳಿದಿರುವಂತೆ ದೇವತೆಗಳಾಗಲೀ ದೈತ್ಯರಾಗಲೀ, ಸಿದ್ಧ-ಗಂಧರ್ವ-ಚಾರಣ ರಾಗಲೀ ನಿನ್ನನ್ನು ಸ್ಪರ್ಶಿಸಿರುವುದಿಲ್ಲ. ಹೀಗಿರುವಾಗ ಮನುಷ್ಯರು ನಿನ್ನನ್ನು ಹೇಗೆ ಸ್ಪರ್ಶಿಸಬಲ್ಲರು? ॥ ೪ ॥ ಸುಂದರೀ! ಖಂಡಿತ ವಾಗಿ ವಿಧಾತನೇ ದಯೆಗೈದು ಶರೀರಧಾರಿಗಳ ಸಮಸ್ತ ಇಂದ್ರಿಯ ಗಳನ್ನೂ, ಮನಸ್ಸನ್ನೂ ತೃಪ್ತಿಪಡಿಸಲಿಕ್ಕಾಗಿಯೇ ನಿನ್ನನ್ನು ಇಲ್ಲಿಗೆ ಕಳಿಸಿರಬಹುದೇ? ನಿಜ! ಹಾಗೆಯೇ ಆಗಿರಬೇಕು. ॥ ೫ ॥ ಮಾನಿನೀ! ಹಾಗಂತ ನಾವುಗಳೆಲ್ಲ ಒಂದೇ ಜಾತಿಯವರು. ಹಾಗೂ ನಾವೆಲ್ಲ ಒಂದೇ ವಸ್ತುವನ್ನು ಬಯಸುತ್ತಿದ್ದೇವೆ. ಆದರಿಂದ ನಮ್ಮಲ್ಲಿ ಅಸೂಯೆ, ಬದ್ಧವೈರ ಉಂಟಾಗಿದೆ. ಸುಂದರೀ! ನೀನು ನಮ್ಮ ಜಗಳವನ್ನು ಕೊನೆಗಾಣಿಸು. ॥ ೬ ॥ ನಾವೆಲ್ಲರೂ ಕಶ್ಯಪನ ಮಕ್ಕಳು. ಅಣ್ಣ-ತಮ್ಮಂದಿರು. ನಾವುಗಳು ಅಮೃತಕ್ಕಾಗಿ ಭಾರೀ ಪುರುಷಾರ್ಥವನ್ನು ಮಾಡಿರುವೆವು. ನೀನು ನ್ಯಾಯವಾಗಿ ನಿಷ್ಪಕ್ಷ ಭಾವದಿಂದ ಇದನ್ನು ಹಂಚಿಬಿಡು. ಇದರಿಂದ ಮತ್ತೆ ನಮ್ಮಲ್ಲಿ ಯಾವುದೇ ಜಗಳ ಆಗದಿರಲಿ. ॥ ೭ ॥ ಅಸುರರು ಹೀಗೆ ಪ್ರಾರ್ಥಿಸಿದಾಗ ಮಾಯೆಯಿಂದ ಸ್ತ್ರೀವೇಷವನ್ನು ಧರಿಸಿದ್ದ ಶ್ರೀಹರಿಯು ನಗುತ್ತಾ ಸುಂದರವಾದ ಕಟಾಕ್ಷವೀಕ್ಷಣದಿಂದ ಅವರ ಕಡೆಗೆ ನೋಡುತ್ತಾ ಇಂತೆಂದನು. ॥ ೮ ॥

ಶ್ರೀಭಗವಂತನು ಹೇಳಿದನು – ದೈತ್ಯರೇ! ಮಹರ್ಷಿಗಳಾದ ಕಶ್ಯಪರ ಮಕ್ಕಳಾದ ನೀವು, ಸ್ವೇಚ್ಛೆಯಿಂದ ಮನೆ-ಮನೆ ತಿರುಗುವ ಕುಲಟೆಯಾದ ನನ್ನ ಮೇಲೆ ನ್ಯಾಯದ ಭಾರವನ್ನು ಏಕೆ ಹಾಕುತ್ತಿದ್ದೀರಿ? ಪಂಡಿತರಾದವರು ಯಾವಾಗಲೂ ಕಾಮಿನಿಯರಲ್ಲಿ ವಿಶ್ವಾಸ ವನ್ನಿಡುವುದಿಲ್ಲ. ॥ ೯ ॥ ದೈತ್ಯರೇ! ನಾಯಿಯಲ್ಲಿ ಮತ್ತು ಜಾರಿಣಿಯಾದ ಸ್ತ್ರೀಯರ ವಿಷಯದಲ್ಲಿ ಸ್ನೇಹವು ಅನಿತ್ಯವಾದುದು ಎಂದು ವಿದ್ವಾಂಸರು ಹೇಳುತ್ತಾರೆ. ಅವರಿಬ್ಬರೂ ಸದಾಕಾಲ ಹೊಸ-ಹೊಸ ಬೇಟೆಯನ್ನು ಹುಡುಕುತ್ತಾ ಇರುತ್ತಾರೆ. ॥ ೧೦ ॥

ಶ್ರೀಶುಕ ಉವಾಚ

ಇತಿ ತೇ ಕ್ಷ್ವೇಲಿತೈಸ್ತಸ್ಯಾ ಆಶ್ವಸ್ತಮನಸೋಽಸುರಾಃ ।
ಜಹಸುರ್ಭಾವಗಂಭೀರಂ ದದುಶ್ಚಾಮೃತಭಾಜನಮ್ ॥ ೧೧ ॥

ತತೋ ಗೃಹೀತ್ವಾಮೃತಭಾಜನಂ ಹರಿ-
ರ್ಬಭಾಷ ಈಷತ್ಸ್ಮಿತಶೋಭಯಾ ಗಿರಾ ।
ಯದ್ಯಭ್ಯುಪೇತಂ ಕ್ವ ಚ ಸಾಧ್ವಸಾಧು ವಾ
ಕೃತಂ ಮಯಾ ವೋ ವಿಭಜೇ ಸುಧಾಮಿಮಾಮ್ ॥ ೧೨ ॥

ಇತ್ಯಭಿವ್ಯಾಹೃತಂ ತಸ್ಯಾ ಆಕರ್ಣ್ಯಾಸುರಪುಂಗವಾಃ ।
ಅಪ್ರಮಾಣವಿದಸ್ತಸ್ಯಾಸ್ತತ್ತಥೇತ್ಯನ್ವಮಂಸತ ॥ ೧೩ ॥

ಅಥೋಪೋಷ್ಯ ಕೃತಸ್ನಾನಾ ಹುತ್ವಾ ಚ ಹವಿಷಾನಲಮ್ ।
ದತ್ತ್ವಾ ಗೋವಿಪ್ರಭೂತೇಭ್ಯಃ ಕೃತಸ್ವಸ್ತ್ಯಯನಾ ದ್ವಿಜೈಃ ॥ ೧೪ ॥

ಯಥೋಪಜೋಷಂ ವಾಸಾಂಸಿ ಪರಿಧಾಯಾಹತಾನಿ ತೇ ।
ಕುಶೇಷು ಪ್ರಾವಿಶನ್ಸರ್ವೇ ಪ್ರಾಗಗ್ರೇಷ್ವಭಿಭೂಷಿತಾಃ ॥ ೧೫ ॥

ಪ್ರಾಙ್ಮುಖೇಷೂಪವಿಷ್ಟೇಷು ಸುರೇಷು ದಿತಿಜೇಷು ಚ ।
ಧೂಪಾಮೋದಿತಶಾಲಾಯಾಂ ಜುಷ್ಟಾಯಾಂ ಮಾಲ್ಯದೀಪಕೈಃ ॥ ೧೬ ॥

ತಸ್ಯಾಂ ನರೇಂದ್ರ ಕರಭೋರುರುಶದ್ದುಕೂಲ-
ಶ್ರೋಣೀತಟಾಲಸಗತಿರ್ಮದವಿಹ್ವಲಾಕ್ಷೀ ।
ಸಾ ಕೂಜತೀ ಕನಕನೂಪುರಶಿಂಜಿತೇನ
ಕುಂಭಸ್ತನೀ ಕಲಶಪಾಣಿರಥಾವಿವೇಶ ॥ ೧೭ ॥

ತಾಂ ಶ್ರೀಸಖೀಂ ಕನಕಕುಂಡಲಚಾರುಕರ್ಣ-
ನಾಸಾಕಪೋಲವದನಾಂ ಪರದೇವತಾಖ್ಯಾಮ್ ।
ಸಂವೀಕ್ಷ್ಯ ಸಂಮುಮುಹುರುತ್ಸ್ಮಿತವೀಕ್ಷಣೇನ
ದೇವಾಸುರಾ ವಿಗಲಿತಸ್ತನಪಟ್ಟಿಕಾಂತಾಮ್ ॥ ೧೮ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿದ್ರಾಜನೇ! ಮೋಹಿನಿಯ ಇಂತಹ ಹುಡುಗಾಟದ ಮಾತುಗಳಿಂದ ದೈತ್ಯರ ಮನಸ್ಸಿನಲ್ಲಿ ಅವಳ ಮೇಲೆ ವಿಶ್ವಾಸವು ಹುಟ್ಟಿತು. ಅವರೆಲ್ಲರೂ ಗಂಭೀರವಾಗಿ ನಕ್ಕು ಅಮೃತಕಲಶವನ್ನು ಆಕೆಯ ಕೈಗಿತ್ತರು. ॥ ೧೧ ॥ ಭಗವಂತನು ಅಮೃತದ ಕಲಶವನ್ನು ತನ್ನ ಕೈಯಲ್ಲಿ ಪಡೆದು ಕೊಂಚ ನಸುನಗುತ್ತಾ ಸವಿನುಡಿಗಳಿಂದ ಇಂತೆಂದನು – ದೈತ್ಯಶಿರೋಮಣಿಗಳೇ! ನಾನು ಮಾಡುವ ವಿಭಾಗ ಸರಿಯಾಗಿರಲಿ, ಸರಿಯಿಲ್ಲದಿರಲಿ ನೀವು ಅದನ್ನು ಸಮ್ಮತಿಸುವುದಾದರೆ, ನಿಮ್ಮ ಪ್ರಾರ್ಥನೆಯಂತೆ ಈ ಕಲಶದಲ್ಲಿರುವ ಅಮೃತವನ್ನು ನಾನು ಹಂಚುತ್ತೇನೆ. ॥ ೧೨ ॥ ಹೀಗೆ ಆಕೆಯ ಸವಿಮಾತುಗಳನ್ನು ಕೇಳಿ, ಅವಳ ಮಾತಿನಲ್ಲಿದ್ದ ಅಪ್ರಾಮಾಣ್ಯವನ್ನು ತಿಳಿಯದೆ ದೊಡ್ಡ-ದೊಡ್ಡ ದೈತ್ಯರೆಲ್ಲರೂ ಏಕಕಂಠದಿಂದ 'ನಮಗೆ ಸಮ್ಮತವಿದೆ' ಎಂದು ನುಡಿದರು. ಅವರಿಗೆ ಮೋಹಿನಿಯ ವಾಸ್ತವಿಕ ಸ್ವರೂಪದ ಅರಿವು ಇರಲಿಲ್ಲ. ॥ ೧೩ ॥

ಇದಾದ ಬಳಿಕ ಮೋಹಿನಿಯ ನಿರ್ದೇಶದಂತೆ ದೇವ-ದಾನವರು ಒಂದು ದಿನದ ಉಪವಾಸಮಾಡಿ ಎಲ್ಲರೂ ಸ್ನಾನಮಾಡಿದರು. ಹವಿಸ್ಸಿನಿಂದ ಯಜ್ಞೇಶ್ವರನಲ್ಲಿ ಹೋಮಮಾಡಿ, ಗೋ-ಬ್ರಾಹ್ಮಣರಿಗೂ, ಪ್ರಾಣಿಗಳಿಗೂ ಯಥಾಯೋಗ್ಯವಾದ ಉಪಹಾರಗಳನ್ನು ಕೊಟ್ಟು, ಬ್ರಾಹ್ಮಣರಿಂದ ಸ್ವಸ್ತಿವಾಚನ ಮಾಡಿಸಿದರು. ॥ ೧೪ ॥ ತಮ್ಮ ಇಷ್ಟಾನುಸಾರವಾಗಿ ನೂತನವಾದ ವಸ್ತ್ರಗಳನ್ನು ಧರಿಸಿ, ಗಂಧ-ಮಾಲ್ಯಾದಿಗಳಿಂದ ಅಲಂಕರಿಸಿಕೊಂಡು ಪೂರ್ವಾಗ್ರವಾಗಿದ್ದ ದರ್ಭಾಸನಗಳಲ್ಲಿ ಕುಳಿತು ಕೊಂಡರು. ॥ ೧೫ ॥ ದೇವ-ದಾನವರೆಲ್ಲರೂ ಧೂಪದಿಂದ ಸುಗಂಧಿತವಾದ, ಮಾಲೆಗಳಿಂದ, ದೀಪಗಳಿಂದ ಅಲಂಕೃತವಾದ ಭವ್ಯಭವನದಲ್ಲಿ ಪೂರ್ವಾಗ್ರಗಳುಳ್ಳ ದರ್ಭಾಸನದಲ್ಲಿ ಕುಳಿತಿರುವಾಗ ಮೋಹಿನಿಯು ಅಮೃತದ ಕಲಶವನ್ನೆತ್ತಿಕೊಂಡು ಆ ಸಭಾಭವನಕ್ಕೆ ಆಗಮಿಸಿದಳು. ಆಗ ಅವಳು ಕಮನೀಯವಾದ ಪೀತಾಂಬರವನ್ನು ಉಟ್ಟಿದ್ದಳು. ಮೃದುವಾದ ನಿತಂಬಗಳ ಭಾರದಿಂದಾಗಿ ಮೆಲ್ಲ-ಮೆಲ್ಲನೆ ನಡೆಯುತ್ತಿದ್ದಳು. ಕಣ್ಣುಗಳು ಮದದಿಂದ ವಿಹ್ವಲವಾಗಿದ್ದವು. ಕಲಶಗಳಂತಿದ್ದ ಸ್ತನಗಳೂ ಉನ್ನತವಾಗಿದ್ದವು. ಆನೆಮರಿಯ ಸೊಂಡಿಲಿನಂತೆ ತೊಡೆಗಳು ದುಂಡಾಗಿದ್ದವು. ಚಿನ್ನದ ಕಾಲಂದುಗೆಗಳಿಂದ ಝಣ-ಝಣನೆ ಶಬ್ದಮಾಡುತ್ತಾ ಅಮೃತಹಸ್ತಳಾಗಿ ಸಭಾಭವನವನ್ನು ಬೆಳಗುತ್ತಾ ಪ್ರವೇಶಿಸಿದಳು. ॥ ೧೬-೧೭ ॥ ಅವಳ ಸುಂದರವಾದ ಕಿವಿಗಳಲ್ಲಿ ಸ್ವರ್ಣಕುಂಡಲಗಳು ಶೋಭಿಸುತ್ತಿದ್ದವು. ಮೂಗೂ, ಕಪೋಲಗಳು, ಮುಖವು ಬಹು ಅಂದವಾಗಿದ್ದವು. ಸ್ವಯಂ ಪರದೇವತೆಯಾದ ಭಗವಂತನು ಆ ಮೋಹಿನಿಯ ರೂಪದಲ್ಲಿ ಸಾಕ್ಷಾತ್ ಲಕ್ಷ್ಮೀದೇವಿಯ ಯಾರೋ ಶ್ರೇಷ್ಠ ಸಖಿಯೇ ಬಂದಂತೆ ಕಾಣುತ್ತಿದ್ದನು. ಮೋಹಿನಿಯು ತನ್ನ ಮಂದಹಾಸದಿಂದ ಕೂಡಿದ ಓರೆನೋಟದಿಂದ ದೇವ-ದಾನವರನ್ನು ನೋಡಿದಾಗ ಅವರೆಲ್ಲರೂ ಮೋಹಿತರಾಗಿ ಬಿಟ್ಟರು. ಆಗ ಅವಳ ಸೆರಗು ಸ್ತನಗಳಿಂದ ಸ್ವಲ್ಪ ಜಾರಿತ್ತು. ॥ ೧೮ ॥ ಭಗವಂತನು ಮೋಹಿನೀರೂಪದಲ್ಲಿರುವಾಗ ಅಸುರರಾದರೋ ಜನ್ಮತಃ ಕ್ರೂರ ಸ್ವಭಾವದವರು,

ಅಸುರಾಣಾಂ ಸುಧಾದಾನಂ ಸರ್ಪಾಣಾಮಿವ ದುರ್ನಯಮ್ ।
ಮತ್ವಾ ಜಾತಿನೃಶಂಸಾನಾಂ ನ ತಾಂ ವ್ಯಭಜದಚ್ಯುತಃ ॥ ೧೯ ॥

ಕಲ್ಪಯಿತ್ವಾ ಪೃಥಕ್ಪಂಕ್ತೀರುಭಯೇಷಾಂ ಜಗತ್ಪತಿಃ ।
ತಾಂಶ್ಚೋಪವೇಶಯಾಮಾಸ ಸ್ವೇಷು ಸ್ವೇಷು ಚ ಪಂಕ್ತಿಷು ॥ ೨೦ ॥

ದೈತ್ಯಾನ್ಗೃಹೀತಕಲಶೋ ವಂಚಯನ್ನುಪಸಂಚರೈಃ ।
ದೂರಸ್ಥಾನ್ಪಾಯಯಾಮಾಸ ಜರಾಮೃತ್ಯುಹರಾಂ ಸುಧಾಮ್ ॥ ೨೧ ॥

ತೇ ಪಾಲಯಂತಃ ಸಮಯಮಸುರಾಃ ಸ್ವಕೃತಂ ನೃಪ ।
ತೂಷ್ಣೀಮಾಸನ್ಕೃತಸ್ನೇಹಾಃ ಸ್ತ್ರೀವಿವಾದಜುಗುಪ್ಸಯಾ ॥ ೨೨ ॥

ತಸ್ಯಾಂ ಕೃತಾತಿಪ್ರಣಯಾಃ ಪ್ರಣಯಾಪಾಯಕಾತರಾಃ ।
ಬಹುಮಾನೇನ ಚಾಬದ್ಧಾ ನೋಚುಃ ಕಿಂಚನ ವಿಪ್ರಿಯಮ್ ॥ ೨೩ ॥

ದೇವಲಿಂಗಪ್ರತಿಚ್ಛನ್ನಃ ಸ್ವರ್ಭಾನುರ್ದೇವಸಂಸದಿ ।
ಪ್ರವಿಷ್ಟಃ ಸೋಮಮಪಿಬಚ್ಚಂದ್ರಾರ್ಕಾಭ್ಯಾಂ ಚ ಸೂಚಿತಃ ॥ ೨೪ ॥

ಚಕ್ರೇಣ ಕ್ಷುರಧಾರೇಣ ಜಹಾರ ಪಿಬತಃ ಶಿರಃ ।
ಹರಿಸ್ತಸ್ಯ ಕಬಂಧಸ್ತು ಸುಧಯಾಪ್ಲಾವಿತೋಽಪತತ್ ॥ ೨೫ ॥

ಶಿರಸ್ತ್ವಮರತಾಂ ನೀತಮಜೋ ಗ್ರಹಮಚೀಕ್ಲೃಪತ್ ।
ಯಸ್ತು ಪರ್ವಣಿ ಚಂದ್ರಾರ್ಕಾವಭಿಧಾವತಿ ವೈರಧೀಃ ॥ ೨೬ ॥

ಪೀತಪ್ರಾಯೇಽಮೃತೇ ದೇವೈರ್ಭಗವಾಲ್ಲೋಕಭಾವನಃ ।
ಪಶ್ಯತಾಮಸುರೇಂದ್ರಾಣಾಂ ಸ್ವಂ ರೂಪಂ ಜಗೃಹೇ ಹರಿಃ ॥ ೨೭ ॥

ಇವರಿಗೆ ಅಮೃತ ಕುಡಿಸಿದರೆ ಹಾವಿಗೆ ಹಾಲೆರೆದಂತೆ ಅನ್ಯಾಯವೇ ಆದೀತು ಎಂದು ವಿಚಾರಮಾಡಿ, ಅವನು ಅಸುರರಿಗೆ ಅಮೃತವನ್ನು ಹಂಚಿಕೊಡಲಿಲ್ಲ. ॥ ೧೯ ॥ ಭಗವಂತನು ದೇವತೆಗಳನ್ನು ಮತ್ತು ದಾನವರನ್ನು ಬೇರೆ-ಬೇರೆ ಪಂಕ್ತಿಗಳನ್ನಾಗಿಸಿದನು. ಅವರೆಲ್ಲರೂ ತಮ್ಮ-ತಮ್ಮವರೊಂದಿಗೆ ಎರಡುಸಾಲು ಹಿಡಿದು ಕುಳಿತುಬಿಟ್ಟರು. ॥ ೨೦ ॥ ಇದಾದ ಬಳಿಕ ಅಮೃತಕಲಶವನ್ನೆತ್ತಿಕೊಂಡು ಭಗವಂತನು ದೈತ್ಯರ ಬಳಿಗೆ ಬಂದನು. ಅವರನ್ನು ಹಾವ-ಭಾವ ಕಟಾಕ್ಷ-ವೀಕ್ಷಣಗಳಿಂದ ಮೋಹಿತರನ್ನಾಗಿಸಿ, ದೂರದಲ್ಲಿ ಕುಳಿತಿದ್ದ ದೇವತೆಗಳ ಬಳಿಗೆಬಂದು, ಯಾವುದನ್ನು ಕುಡಿಯುವುದರಿಂದ ಮುಪ್ಪು-ಸಾವುಗಳು ತೊಲಗುವುದೋ ಅಂತಹ ಅಮೃತವನ್ನು ದೇವತೆಗಳಿಗೆ ಕುಡಿಸಿದನು. ॥ ೨೧ ॥ ಪರೀಕ್ಷಿತನೇ! ಅಸುರರು ತಾವು ಮಾಡಿದ ಪ್ರತಿಜ್ಞೆಯನ್ನು ಪಾಲಿಸುತ್ತಿದ್ದರು. ಅವರಿಗೆ ಮೋಹಿನಿಯಲ್ಲಿ ಅಪಾರ ಸ್ನೇಹವೂ ಇತ್ತು ಹಾಗೂ ಸ್ತ್ರೀಯೊಡನೆ ಜಗಳಾಡುವುದು ತಮಗೆ ನಿಂದನೀಯವೆಂದೇ ತಿಳಿಯುತ್ತಿದ್ದರು. ಅದಕ್ಕಾಗಿ ಅವರು ಸುಮ್ಮನೆ ಕುಳಿತುಬಿಟ್ಟರು. ॥ ೨೨ ॥ ಮೋಹಿನಿಯಲ್ಲಿ ಅವರಿಗೆ ಅತ್ಯಂತ ಪ್ರೇಮ ಉಂಟಾಗಿತ್ತು. ಆಕೆಯೊಂದಿಗಿನ ನಮ್ಮ ಪ್ರೇಮದ ಸಂಬಂಧ ಕಡಿದುಹೋದೀತೆಂದು ಅವರು ಭಯಪಡುತ್ತಿದ್ದರು. ಮೋಹಿನಿಯೂ ಮೊದಲಿಗೆ ಅವರಿಗೆ ಬಹಳ ಸಮ್ಮಾನ ಮಾಡಿದ್ದಳು. ಇದರಿಂದ ಅವರು ಮತ್ತೂ ಬಂಧಿತರಾಗಿದ್ದರು. ಈ ಕಾರಣದಿಂದಲೇ ಅವರು ಮೋಹಿನಿಗೆ ಯಾವುದೇ ಅಪ್ರಿಯ ಮಾತನ್ನೂ ಆಡಲಿಲ್ಲ. ॥ ೨೩ ॥

ಭಗವಂತನು ದೇವತೆಗಳಿಗೆ ಅಮೃತವನ್ನು ಕುಡಿಸುತ್ತಿರುವಾಗ ಸ್ವರ್ಭಾನು (ರಾಹು) ಎಂಬ ದಾನವನು ದೇವತೆಗಳ ವೇಷವನ್ನು ತೊಟ್ಟು ಅವರ ಸಾಲಿನಲ್ಲಿ ಬಂದು ಕುಳಿತಿದ್ದನು. ದೇವತೆಗಳೊಂದಿಗೆ ಅವನೂ ಅಮೃತವನ್ನು ಕುಡಿದುಬಿಟ್ಟನು. ಆದರೆ ಒಡನೆಯೇ ಸೂರ್ಯ-ಚಂದ್ರರು ಅವನ ಕಪಟವನ್ನು ಬಯಲುಗೊಳಿಸಿದರು. ॥ ೨೪ ॥ ಅಮೃತವನ್ನು ಕುಡಿಸುತ್ತಿರುವಾಗಲೇ ಭಗವಂತನು ತನ್ನ ತೀಕ್ಷ್ಣವಾದ ಸುದರ್ಶನ ಚಕ್ರದಿಂದ ಅವನ ತಲೆಯನ್ನು ತರಿದನು. ಆ ವೇಳೆಗೆ ಅಮೃತವು ಗಂಟಲಿನಿಂದ ಕೆಳಗೆ ಹೋಗದಿರುವುದರಿಂದ ಕಬಂಧವು (ತಲೆಯಿಲ್ಲದ ಶರೀರವು) ಬಿದ್ದುಹೋಯಿತು. ॥ ೨೫ ॥ ಆದರೆ ತಲೆಯು ಅಮರವಾಯಿತು. ಬ್ರಹ್ಮದೇವರು ಅವನನ್ನು ಗ್ರಹವನ್ನಾಗಿಸಿದರು. ಅದೇ ರಾಹುವು ಪರ್ವದಿನಗಳಲ್ಲಿ (ಗ್ರಹಣಗಳಲ್ಲಿ) ದ್ವೇಷಬುದ್ಧಿಯುಳ್ಳವನಾಗಿ ಸೂರ್ಯ-ಚಂದ್ರರನ್ನು ನುಂಗಲು ಹೋಗುತ್ತದೆ. ॥ ೨೬ ॥ ದೇವತೆಗಳು ಅಮೃತ ಪಾನಮಾಡಿದ ಬಳಿಕ ಸಮಸ್ತ ಲೋಕಗಳಿಗೆ ಜೀವನದಾನ ಮಾಡುವಂತಹ ಭಗವಂತನು ದೊಡ್ಡ-ದೊಡ್ಡ ದೈತ್ಯರ ಇದಿರಿನಲ್ಲೇ ಮೋಹಿನೀ ರೂಪವನ್ನು ತ್ಯಜಿಸಿ ನಿಜರೂಪವನ್ನು ತಾಳಿದನು. ॥ ೨೭ ॥ ಪರೀಕ್ಷಿತನೇ! ಹೀಗೆ ದೇವ-ದಾನವರು ಒಂದೇ ಕಡೆಯಲ್ಲಿ, ಒಂದೇ ಕಾಲದಲ್ಲಿ, ಅಮೃತರೂಪವಾದ ಒಂದೇ ಪ್ರಯೋಜನಕ್ಕಾಗಿ, ಒಂದೇ ವಸ್ತುವಿಗಾಗಿ, ಒಂದೇ ವಿಚಾರದಿಂದ, ಒಂದೇ ಕರ್ಮವನ್ನು ಮಾಡಿದ್ದರು; ಆದರೆ ಫಲದಲ್ಲಿ ದೊಡ್ಡ ಭೇದವೇ ಉಂಟಾಯಿತು. ಅವರಲ್ಲಿ

ಏವಂ ಸುರಾಸುರಗಣಾಃ ಸಮದೇಶಕಾಲ-
ಹೇತ್ವರ್ಥಕರ್ಮಮತಯೋಽಪಿ ಫಲೇ ವಿಕಲ್ಪಾಃ ।
ತತ್ರಾಮೃತಂ ಸುರಗಣಾಃ ಫಲಮಂಜಸಾಽಽಪು-
ರ್ಯತ್ಪಾದಪಂಕಜರಜಶ್ರಯಣಾನ್ನ ದೈತ್ಯಾಃ ॥ ೨೮ ॥

ದೇವತೆಗಳು ತುಂಬಾ ಸುಲಭವಾಗಿ ತಮ್ಮ ಪರಿಶ್ರಮದ ಫಲ-ಅಮೃತವನ್ನು ಪಡೆದುಕೊಂಡರು. ಏಕೆಂದರೆ, ಅವರು ಭಗವಂತನ ಚರಣರಜವನ್ನು ಆಶ್ರಯಿಸಿದ್ದರು. ಆದರೆ ದೈತ್ಯರು ಭಗವಂತನನ್ನು ವಿರೋಧಿಸುವುದರಿಂದ ಅಮೃತದಿಂದ ವಂಚಿತರಾದರು. ॥ ೨೮ ॥ ಮನುಷ್ಯನು ತನ್ನ ಪ್ರಾಣ, ಧನ, ಕರ್ಮ, ಮನಸ್ಸು, ಮಾತು ಮುಂತಾದವುಗಳಿಂದ ಶರೀರ ಮತ್ತು ಪುತ್ರಾದಿಗಳಿಗಾಗಿ ಮಾಡುವುದೆಲ್ಲವೂ ವ್ಯರ್ಥವೇ ಸರಿ. ಏಕೆಂದರೆ, ಅದರ ಮೂಲದಲ್ಲಿ ಭೇದಬುದ್ಧಿ ಇರುತ್ತದೆ. ಆದರೆ ಅದೇ ಪ್ರಾಣ ಮುಂತಾದ ವಸ್ತುಗಳಿಂದ ಭಗವಂತನಿಗಾಗಿ ಮಾಡಲಾಗುವುದೆಲ್ಲವೂ ಭೇದಭಾವದಿಂದ ರಹಿತವಾಗಿರುವದರಿಂದ ತನ್ನ ಶರೀರ, ಪುತ್ರ ಮತ್ತು ಸಮಸ್ತ ಜಗತ್ತಿಗಾಗಿ ಸಫಲವಾಗಿ ಹೋಗುತ್ತದೆ. ವೃಕ್ಷದ ಬೇರುಗಳಿಗೆ ನೀರುಣಿಸಿದರೆ ಅದರ ಶಾಖೋಪಶಾಖೆಗಳಿಗೆ ನೀರು ಸಿಗುವಂತೆ ಭಗವಂತನಿಗಾಗಿ ಕರ್ಮಮಾಡುವುದರಿಂದ ಅವು ಎಲ್ಲರಿಗಾಗಿ ಆಗಿಹೋಗುತ್ತವೆ. ॥ ೨೯ ॥

ಯದ್ಯುಜ್ಯತೇಽಸುವಸುಕರ್ಮಮನೋವಚೋಭಿ-
ರ್ದೇಹಾತ್ಮಜಾದಿಷು ನೃಭಿಸ್ತದಸತ್ಪೃಥಕ್ತ್ವಾತ್ ।
ತೈರೇವ ಸದ್ಭವತಿ ಯತ್ಕ್ರಿಯತೇಽಪೃಥಕ್ತ್ವಾತ್
ಸರ್ವಸ್ಯ ತದ್ಭವತಿ ಮೂಲನಿಷೇಚನಂ ಯತ್ ॥ ೨೯ ॥

ಒಂಭತ್ತನೆಯ ಅಧ್ಯಾಯವು ಮುಗಿಯಿತು. ॥ ೯ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಅಷ್ಟಮ ಸ್ಕಂಧೇ
ಅಮೃತಮಥನೇ ನವಮೋಽಧ್ಯಾಯಃ ॥ ೯ ॥

ಹತ್ತನೆಯ ಅಧ್ಯಾಯ

ದೇವಾಸುರರ ಸಂಗ್ರಾಮ

ಶ್ರೀಶುಕ ಉವಾಚ

ಇತಿ ದಾನವದೈತೇಯಾ ನಾವಿಂದನ್ನಮೃತಂ ನೃಪ ।
ಯುಕ್ತಾಃ ಕರ್ಮಣಿ ಯತ್ತಾಶ್ಚ ವಾಸುದೇವಪರಾಙ್ಮುಖಾಃ ॥ ೧ ॥

ಸಾಧಯಿತ್ವಾಮೃತಂ ರಾಜನ್ಪಾಯಯಿತ್ವಾ ಸ್ವಕಾನ್ಸುರಾನ್ ।
ಪಶ್ಯತಾಂ ಸರ್ವಭೂತಾನಾಂ ಯಯೌ ಗರುಡವಾಹನಃ ॥ ೨ ॥

ಸಪತ್ನಾನಾಂ ಪರಾಮೃದ್ಧಿಂ ದೃಷ್ಟ್ವಾ ತೇ ದಿತಿನಂದನಾಃ ।
ಅಮೃಷ್ಯಮಾಣಾ ಉತ್ಪೇತುರ್ದೇವಾನ್ಪ್ರತ್ಯುದ್ಯತಾಯುಧಾಃ ॥ ೩ ॥

ತತಃ ಸುರಗಣಾಃ ಸರ್ವೇ ಸುಧಯಾ ಪೀತಯೈಧಿತಾಃ ।
ಪ್ರತಿಸಂಯುಯುಧುಃ ಶಸ್ತ್ರೈರ್ನಾರಾಯಣಪದಾಶ್ರಯಾಃ ॥ ೪ ॥

ತತ್ರ ದೈವಾಸುರೋ ನಾಮ ರಣಃ ಪರಮದಾರುಣಃ ।
ರೋಧಸ್ಯುದನ್ವತೋ ರಾಜಂಸ್ತುಮುಲೋ ರೋಮಹರ್ಷಣಃ ॥ ೫ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಓ ಪರೀಕ್ಷಿತನೇ! ದೈತ್ಯ-ದಾನವರು ಅಧಿಕ ಪ್ರಯಾಸದಿಂದಲೂ, ಅತ್ಯಂತ ಸಾಹಸದಿಂದಲೂ ಸಮುದ್ರಮಂಥನದ ಕೆಲಸದಲ್ಲಿ ಪಾಲ್ಗೊಂಡಿದ್ದರೂ, ಅವರು ಭಗವಂತನಿಂದ ವಿಮುಖರಾಗಿದ್ದರಿಂದ ಅವರಿಗೆ ಅಮೃತ ದೊರೆಯಲಿಲ್ಲ. ॥ ೧ ॥ ರಾಜನೇ! ಭಗವಂತನು ಕ್ಷೀರ ಸಮುದ್ರವನ್ನು ಕಡೆದು ಅಮೃತವನ್ನು ಪಡೆದು, ತನ್ನವರಾದ ದೇವತೆಗಳಿಗೆ ಪಾನಮಾಡಿಸಿ, ಎಲ್ಲರೂ ನೋಡುತ್ತಿರುವಂತೆ ಗರುಡಾರೂಢನಾಗಿ ಅಲ್ಲಿಂದ ಹೊರಟುಹೋದನು. ॥ ೨ ॥ ತಮ್ಮ ಶತ್ರುಗಳಿಗೆ ಅಮೃತಪಾನದಂತಹ ಸಫಲತೆ ದೊರೆತುದನ್ನು ಕಂಡು ದೈತ್ಯರು ಅವರ ಹಿರಿಮೆಯನ್ನು ಸಹಿಸದಾದರು. ಅವರು ಒಡನೆಯೇ ಆಯುಧಗಳನ್ನೆತ್ತಿಕೊಂಡು ದೇವತೆಗಳನ್ನು ಆಕ್ರಮಿಸಿದರು. ॥ ೩ ॥ ಇತ್ತ ದೇವತೆಗಳು ಅಮೃತವನ್ನು ಕುಡಿದು ವಿಶೇಷವಾದ ಶಕ್ತಿಯನ್ನು ಪಡೆದಿದ್ದರು; ಜೊತೆಗೆ ಭಗವಂತನ ಚರಣಕಮಲಗಳ ಆಶ್ರಯವೂ ಇತ್ತು. ಸರಿ, ಅವರೂ ಶಸ್ತ್ರಾಸ್ತ್ರಗಳಿಂದ ಸಜ್ಜಾಗಿ ದೈತ್ಯರೊಡನೆ ಹೋರಾಡತೊಡಗಿದರು. ॥ ೪ ॥ ಪರೀಕ್ಷಿತನೇ! ಕ್ಷೀರಸಾಗರದ ತೀರದಲ್ಲಿ ದೇವತೆಗಳಿಗೂ, ದಾನವರಿಗೂ 'ದೇವಾಸುರಸಂಗ್ರಾಮ'ವೆಂಬ ಪರಮ ದಾರುಣವಾದ, ರೋಮಾಂಚಕರವಾದ, ಭೀಕರವಾದ ಯುದ್ಧವು ಪ್ರಾರಂಭವಾಯಿತು. ॥ ೫ ॥ ದೇವ-ದಾನವರಿಬ್ಬರೂ ಪರಸ್ಪರ ಪರಮ ಶತ್ರುಗಳಾಗಿದ್ದರು. ಉಭಯ ಪಕ್ಷದವರು

ತತ್ರಾನ್ಯೋನ್ಯಂ ಸಪತ್ನಾಸ್ತೇ ಸಂರಬ್ಧಮನಸೋ ರಣೇ ।
ಸಮಾಸಾದ್ಯಾಸಿಭಿರ್ಬಾಣೈರ್ನಿಜಘ್ನುರ್ವಿವಿಧಾಯುಧೈಃ ॥ ೬ ॥

ಶಂಖತೂರ್ಯಮೃದಂಗಾನಾಂ ಭೇರೀಡಮರಿಣಾಂ ಮಹಾನ್ ।
ಹಸ್ತ್ಯಶ್ವರಥಪತ್ತೀನಾಂ ನದತಾಂ ನಿಸ್ವನೋಽಭವತ್ ॥ ೭ ॥

ರಥಿನೋ ರಥಿಭಿಸ್ತತ್ರ ಪತ್ತಿಭಿಃ ಸಹ ಪತ್ತಯಃ ।
ಹಯಾ ಹಯೈರಿಭಾಶ್ಚೇಭೈಃ ಸಮಸಜ್ಜಂತ ಸಂಯುಗೇ ॥ ೮ ॥

ಉಷ್ಟ್ರೈಃ ಕೇಚಿದಿಭೈಃ ಕೇಚಿದಪರೇ ಯುಯುಧುಃ ಖರೈಃ ।
ಕೇಚಿದ್ಗೌರಮೃಗೈರೃಕ್ಷೈರ್ದ್ವೀಪಿಭಿರ್ಹರಿಭಿರ್ಭಟಾಃ ॥ ೯ ॥

ಗೃಧ್ರೈಃ ಕಂಕೈರ್ಬಕೈರನ್ಯೇ ಶ್ಯೇನಭಾಸೈಸ್ತಿಮಿಂಗಿಲೈಃ ।
ಶರಭೈರ್ಮಹಿಷೈಃ ಖಡ್ಗೈರ್ಗೋವೃಷೈರ್ಗವಯಾರುಣೈಃ ॥ ೧೦ ॥

ಶಿವಾಭಿರಾಖುಭಿಃ ಕೇಚಿತ್ಕೃಕಲಾಸೈಃ ಶಶೈರ್ನರೈಃ ।
ಬಸ್ತೈರೇಕೇ ಕೃಷ್ಣಸಾರೈರ್ಹಂಸೈರನ್ಯೇ ಚ ಸೂಕರೈಃ ॥ ೧೧ ॥

ಅನ್ಯೇ ಜಲಸ್ಥಲಖಗೈಃ ಸತ್ತ್ವೈರ್ವಿಕೃತವಿಗ್ರಹೈಃ ।
ಸೇನಯೋರುಭಯೋ ರಾಜನ್ವಿವಿಶುಸ್ತೇಽಗ್ರತೋಽಗ್ರತಃ ॥ ೧೨ ॥

ಚಿತ್ರಧ್ವಜಪಟೈ ರಾಜನ್ನಾತಪತ್ರೈಃ ಸಿತಾಮಲೈಃ ।
ಮಹಾಧನೈರ್ವಜ್ರದಂಡೈರ್ವ್ಯಜನೈರ್ಬಾರ್ಹಚಾಮರೈಃ ॥ ೧೩ ॥

ವಾತೋದ್ಧೂತೋತ್ತರೋಷ್ಣೀಷೈರರ್ಚಿರ್ಭಿರ್ವರ್ಮಭೂಷಣೈಃ ।
ಸ್ಫುರದ್ಭಿರ್ವಿಶದೈಃ ಶಸ್ತ್ರೈಃ ಸುತರಾಂ ಸೂರ್ಯರಶ್ಮಿಭಿಃ ॥ ೧೪ ॥

ದೇವದಾನವವೀರಾಣಾಂ ಧ್ವಜಿನ್ಯೌ ಪಾಂಡುನಂದನ ।
ರೇಜತುರ್ವೀರಮಾಲಾಭಿರ್ಯಾದಸಾಮಿವ ಸಾಗರೌ ॥ ೧೫ ॥

ವೈರೋಚನೋ ಬಲಿಃ ಸಂಖ್ಯೇ ಸೋಽಸುರಾಣಾಂ ಚಮೂಪತಿಃ ।
ಯಾನಂ ವೈಹಾಯಸಂ ನಾಮ ಕಾಮಗಂ ಮಯನಿರ್ಮಿತಮ್ ॥ ೧೬ ॥

ಸರ್ವಸಾಂಗ್ರಾಮಿಕೋಪೇತಂ ಸರ್ವಾಶ್ಚರ್ಯಮಯಂ ಪ್ರಭೋ ।
ಅಪ್ರತರ್ಕ್ಯಮನಿರ್ದೇಶ್ಯಂ ದೃಶ್ಯಮಾನಮದರ್ಶನಮ್ ॥ ೧೭ ॥

ಕ್ರೋಧಾಭಿಭೂತರಾಗಿದ್ದರು. ಒಬ್ಬರಿಗೊಬ್ಬರು ಇದಿರು-ಬದುರು ನಿಂತು ಬಾಣ-ಖಡ್ಗ ಮುಂತಾದ ಅನೇಕಾನೇಕ ಅಸ್ತ್ರ-ಶಸ್ತ್ರಗಳಿಂದ ಪರಸ್ಪರ ಹೊಡೆದಾಡತೊಡಗಿದರು. ॥ ೬ ॥ ಆಗ ರಣರಂಗದಲ್ಲಿ ಶಂಖ, ತೂರ್ಯ, ಮೃದಂಗ, ಭೇರಿ, ಡಮರು ಮುಂತಾದ ವಾದ್ಯಗಳು ಜೋರಾಗಿ ಮೊಳಗಿದವು. ಆನೆಗಳ ಘೀಂಕಾರ, ಕುದುರೆಗಳ ಹೇಷಾರವ, ರಥಗಳ ಚೀತ್ಕಾರ, ಪದಾತಿಗಳ ಸಿಂಹನಾದ ಇವುಗಳಿಂದ ಭಾರೀ ಕೋಲಾಹಲವುಂಟಾಯಿತು. ॥ ೭॥ ಆ ಮಹಾಯುದ್ಧದಲ್ಲಿ ರಥಿಕರು-ರಥಿಕರೊಡನೆಯೂ, ಪದಾತಿಗಳು- ಕಾಲಾಳುಗಳೊಡನೆಯೂ, ಕುದುರೆಸವಾರರು-ಅಶ್ವಾರೋಹಿಗಳೊಡನೆಯೂ, ಗಜಸೈನಿಕರು- ಗಜಸೈನಿಕರೊಡನೆಯೂ ಕಾದಾಡುತ್ತಿದ್ದರು. ॥ ೮ ॥ ಅವರಲ್ಲಿ ಕೆಲವರು ಒಂಟೆಗಳ ಮೇಲೂ, ಕೆಲವರು ಆನೆಗಳ ಮೇಲೂ, ಕತ್ತೆಗಳ ಮೇಲೂ, ಕೆಲವರು ಗೌರಮೃಗಗಳ ಮೇಲೂ, ಕೆಲವರು ಕರಡಿ, ಹುಲಿ, ಸಿಂಹಗಳ ಮೇಲೂ ಹತ್ತಿಕೊಂಡು ಯುದ್ಧ ಮಾಡುತ್ತಿದ್ದರು. ॥ ೯ ॥ ಕೆಲ-ಕೆಲವು ಸೈನಿಕರು ಹದ್ದುಗಳ ಮೇಲೂ, ಬಕಗಳ ಮೇಲೆಯೂ, ಗಿಡುಗ, ತಿಮಿಂಗಿಲ, ಮೊಸಳೆ, ಶರಭ, ಎಮ್ಮೆ, ಖಡ್ಗಮೃಗ, ಎತ್ತು, ಗವಯ ಮುಂತಾದವುಗಳ ಮೇಲೆ ಕುಳಿತು ಯುದ್ಧ ಮಾಡುತ್ತಿದ್ದರು. ॥ ೧೦ ॥ ಕೆಲವರು ರುಣಗಳೆಂಬ ಪ್ರಾಣಿಗಳ ಮೇಲೂ, ನರಿಗಳು, ಇಲಿಗಳು, ಓತಿಕೇತ, ಇಲಿ, ಮೊಲ, ಮನುಷ್ಯ, ಟಗರು, ಜಿಂಕೆ, ಹಂಸ, ಹಂದಿಗಳು ಮುಂತಾದ ಪ್ರಾಣಿಗಳ ಮೇಲೆ ಕುಳಿತುಕೊಂಡು ಕಾದಾಡುತ್ತಿದ್ದರು. ॥ ೧೧ ॥ ಹೀಗೆ ನೆಲ-ಜಲ-ನಭಗಳಲ್ಲಿ ವಾಸಿಸುವ, ನೋಡಲು ಭಯಂಕರವಾದ ಶರೀರಗಳುಳ್ಳ ಅನೇಕ ಪ್ರಾಣಿಗಳ ಮೇಲೆ ಹತ್ತಿಕೊಂಡು ದೇವ-ದಾನವರು ಮುಂದೆ ನುಗ್ಗುತ್ತಾ ಹೋರಾಡುತ್ತಿದ್ದರು. ॥ ೧೨ ॥

ಪರೀಕ್ಷಿತನೇ! ಚಿತ್ರ-ವಿಚಿತ್ರವಾದ ಧ್ವಜ-ಪತಾಕೆಗಳಿಂದಲೂ, ಸ್ಫಟಿಕದಂತೆ ನಿರ್ಮಲವಾದ ಶುಭ್ರ ಛತ್ರಗಳಿಂದಲೂ, ವಜ್ರಖಚಿತವಾದ ದಂಡಗಳಿಂದಲೂ, ಬಹುಮೂಲ್ಯ ಬೀಸಣಿಗೆಗಳಿಂದಲೂ, ನವಿಲುಗರಿಗಳೂ, ಚಾಮರಗಳಿಂದಲೂ, ಗಾಳಿಗೆ ಹಾರಾಡುತ್ತಿದ್ದ ಉತ್ತರೀಯಗಳಿಂದಲೂ, ಪೇಟಗಳಿಂದಲೂ, ಸೈನಿಕರು ಧರಿಸಿದ್ದ ವಸ್ತ್ರಾಭರಣಗಳಿಂದಲೂ, ಸೂರ್ಯಕಿರಣಗಳಂತೆ ಹೊಳೆಯುವ ಖಡ್ಗವೇ ಮುಂತಾದ ಆಯುಧಗಳಿಂದಲೂ, ವೀರಮಾಲೆಗಳನ್ನು ಧರಿಸಿದ್ದ ದೇವತೆಗಳ ಸಾಲುಗಳಿಂದಲೂ, ಅಸುರರ ಸೈನ್ಯದಿಂದ ತುಂಬಿದ ಆ ರಣರಂಗವು ಜಲ-ಜಂತುಗಳಿಂದ ತುಂಬಿದ ಎರಡನೆಯ ಸಮುದ್ರದಂತೆ ಕಂಗೊಳಿಸುತ್ತಿತ್ತು. ॥ ೧೩-೧೫ ॥ ಪರೀಕ್ಷಿತನೇ! ರಣಾಂಗಣದಲ್ಲಿ ದೈತ್ಯರ ಸೇನಾಪತಿಯಾದ ವಿರೋಚನಪುತ್ರ ಬಲಿಯು ಮಯದಾನವನಿಂದ ನಿರ್ಮಿತವಾದ ವೈಹಾಯಸವೆಂಬ ವಿಮಾನದಲ್ಲಿ ಕುಳಿತಿದ್ದನು. ಆ ವಿಮಾನವು ಕುಳಿತಿದ್ದವರು ಇಚ್ಛಿಸಿದೆಡೆಗೆ ಹೋಗುವುದಾಗಿತ್ತು. ॥ ೧೬ ॥ ಅದರಲ್ಲಿ ಯುದ್ಧದ ಸಮಸ್ತ ಸಾಮಗ್ರಿಗಳು ಸುಸಜ್ಜಿತವಾಗಿದ್ದವು. ಮಹಾರಾಜಾ! ಆ ವಿಮಾನವು ಅತ್ಯಂತ ಆಶ್ಚರ್ಯಕರವಾಗಿದ್ದು ಕೆಲವು ವೇಳೆ ಕಾಣಿಸಿಕೊಳ್ಳುತ್ತಾ, ಕೆಲವು ಸಲ ಅದೃಶ್ಯವಾಗಿರುತ್ತಿತ್ತು. ಅದು ಎಲ್ಲಿದೆ ಎಂದು ಯಾರಿಂದಲೂ ಹೇಳಲಾಗುತ್ತಿರಲಿಲ್ಲ; ಊಹಿಸಲಾಗುತ್ತಿರಲಿಲ್ಲ. ॥ ೧೭ ॥

ಆಸ್ಥಿತಸ್ತದ್ವಿಮಾನಾಗ್ರ್ಯಂ ಸರ್ವಾನೀಕಾಧಿಪೈರ್ವೃತಃ ।
ಬಾಲವ್ಯಜನಛತ್ರಾಗ್ರ್ಯೈ ರೇಜೇ ಚಂದ್ರ ಇವೋದಯೇ ॥ ೧೮ ॥

ತಸ್ಯಾಸನ್ಸರ್ವತೋ ಯಾನೈರ್ಯೂಥಾನಾಂ ಪತಯೋಽಸುರಾಃ ।
ನಮುಚಿಃ ಶಂಬರೋ ಬಾಣೋ ವಿಪ್ರಚಿತ್ತಿರಯೋಮುಖಃ ॥ ೧೯ ॥

ದ್ವಿಮೂರ್ಧಾ ಕಾಲನಾಭೋಽಥ ಪ್ರಹೇತಿರ್ಹೇತಿರಿಲ್ವಲಃ ।
ಶಕುನಿರ್ಭೂತಸಂತಾಪೋ ವಜ್ರದಂಷ್ಟ್ರೋ ವಿರೋಚನಃ ॥ ೨೦ ॥

ಹಯಗ್ರೀವಃ ಶಂಕುಶಿರಾಃ ಕಪಿಲೋ ಮೇಘದುಂದುಭಿಃ ।
ತಾರಕಶ್ಚಕ್ರದೃಕ್ಶುಂಭೋ ನಿಶುಂಭೋ ಜಂಭ ಉತ್ಕಲಃ ॥ ೨೧ ॥

ಅರಿಷ್ಟೋಽರಿಷ್ಟನೇಮಿಶ್ಚ ಮಯಶ್ಚ ತ್ರಿಪುರಾಧಿಪಃ ।
ಅನ್ಯೇ ಪೌಲೋಮಕಾಲೇಯಾ ನಿವಾತಕವಚಾದಯಃ ॥ ೨೨ ॥

ಅಲಬ್ಧಭಾಗಾಃ ಸೋಮಸ್ಯ ಕೇವಲಂ ಕ್ಲೇಶಭಾಗಿನಃ ।
ಸರ್ವ ಏತೇ ರಣಮುಖೇ ಬಹುಶೋ ನಿರ್ಜಿತಾಮರಾಃ ॥ ೨೩ ॥

ಸಿಂಹನಾದಾನ್ವಿಮುಂಚಂತಃ ಶಂಖಾನ್ದಧ್ಮುರ್ಮಹಾರವಾನ್ ।
ದೃಷ್ಟ್ವಾ ಸಪತ್ನಾನುತ್ಸಿಕ್ತಾನ್ಬಲಭಿತ್ಕುಪಿತೋ ಭೃಶಮ್ ॥ ೨೪ ॥

ಐರಾವತಂ ದಿಕ್ಕರಿಣಮಾರೂಢಃ ಶುಶುಭೇ ಸ್ವರಾಟ್ ।
ಯಥಾ ಸ್ರವತ್ಪ್ರಸ್ರವಣಮುದಯಾದ್ರಿಮಹರ್ಪತಿಃ ॥ ೨೫ ॥

ತಸ್ಯಾಸನ್ಸರ್ವತೋ ದೇವಾ ನಾನಾವಾಹಧ್ವಜಾಯುಧಾಃ ।
ಲೋಕಪಾಲಾಃ ಸಹ ಗಣೈರ್ವಾಯ್ವಗ್ನಿವರುಣಾದಯಃ ॥ ೨೬ ॥

ತೇಽನ್ಯೋಽನ್ಯಮಭಿಸಂಸೃತ್ಯ ಕ್ಷಿಪಂತೋ ಮರ್ಮಭಿರ್ಮಿಥಃ ।
ಆಹ್ವಯಂತೋ ವಿಶಂತೋಽಗ್ರೇ ಯುಯುಧುರ್ದ್ವಂದ್ವಯೋಧಿನಃ ॥ ೨೭ ॥

ಯುಯೋಧ ಬಲಿರಿಂದ್ರೇಣ ತಾರಕೇಣ ಗುಹೋಽಸ್ಯತ ।
ವರುಣೋ ಹೇತಿನಾಯುಧ್ಯನ್ಮಿತ್ರೋ ರಾಜನ್ಪ್ರಹೇತಿನಾ ॥ ೨೮ ॥

ಯಮಸ್ತು ಕಾಲನಾಭೇನ ವಿಶ್ವಕರ್ಮಾ ಮಯೇನ ವೈ ।
ಶಂಬರೋ ಯುಯುಧೇ ತ್ವಷ್ಟ್ರಾ ಸವಿತ್ರಾ ತು ವಿರೋಚನಃ ॥ ೨೯ ॥

ಅಪರಾಜಿತೇನ ನಮುಚಿರಶ್ವಿನೌ ವೃಷಪರ್ವಣಾ ।
ಸೂರ್ಯೋ ಬಲಿಸುತೈರ್ದೇವೋ ಬಾಣಜ್ಯೇಷ್ಠೈಃ ಶತೇನ ಚ ॥ ೩೦ ॥

ಅಂತಹ ಶ್ರೇಷ್ಠವಿಮಾನದಲ್ಲಿ ಬಲಿಯು ಕುಳಿತಿದ್ದನು. ದೊಡ್ಡ-ದೊಡ್ಡ ಸೇನಾಪತಿಗಳು ಅವನನ್ನು ಸುತ್ತುವರಿಯಲ್ಪಟ್ಟಿದ್ದರು. ಚಾಮರ, ಬೀಸಣಿಗೆ, ಬೆಳ್ಕೊಡೆ ಮುಂತಾದವುಗಳಿಂದ ಕೂಡಿದ ಬಲಿಯು ಆಗತಾನೇ ಉದಯಿಸಿದ ಚಂದ್ರನಂತೆ ಪ್ರಕಾಶಿಸುತ್ತಿದ್ದನು. ॥ ೧೮ ॥ ಅವನ ಸುತ್ತಲೂ ವಿಮಾನಾರೂಢ ಯೂಥಪತಿಗಳಾದ ನಮುಚಿ, ಶಂಬರ, ಬಾಣ, ವಿಪ್ರಚಿತ್ತಿ, ಅಯೋಮುಖ, ದ್ವಿಮೂರ್ಧಾ, ಕಾಲನಾಭ, ಪ್ರಹೇತಿ, ಹೇತಿ, ಇಲ್ವಲ, ಶಕುನಿ, ಭೂತಸಂತಾಪ, ವಜ್ರದಂಷ್ಟ್ರ, ವಿರೋಚನ, ಹಯಗ್ರೀವ, ಶಂಕುಶಿರ, ಕಪಿಲ, ಮೇಘದುಂದುಭಿ, ತಾರಕ, ಚಕ್ರಾಕ್ಷ, ಶುಂಭ, ನಿಶುಂಭ, ಜಂಭ, ಉತ್ಕಲ, ಅರಿಷ್ಟ, ಅರಿಷ್ಟನೇಮಿ, ತ್ರಿಪುರಾಧಿಪತಿಯಾದ ಮಯ, ಪೌಲೋಮ, ಕಾಲೇಯ, ನಿವಾತಕವಚ ಮೊದಲಾದವರು ತಮ್ಮ ತುಕಡಿಗಳಿಂದ ಯುದ್ಧ ಸನ್ನದ್ಧರಾಗಿದ್ದರು. ॥ ೧೯-೨೨ ॥ ಇವರೆಲ್ಲರೂ ಸಮುದ್ರ ಮಂಥನದಲ್ಲಿ ಪಾಲ್ಗೊಂಡವರೇ ಆಗಿದ್ದರು. ಆದರೆ ಇವರಿಗೆ ಅಮೃತದ ಪಾಲು ಸಿಗದೆ ಕೇವಲ ಕ್ಲೇಶವೇ ಕೈಹತ್ತಿತ್ತು. ಇವೆಲ್ಲ ಅಸುರರು ಒಮ್ಮೆಯಲ್ಲ, ಅನೇಕ ಬಾರಿ ಯುದ್ಧದಲ್ಲಿ ದೇವತೆಗಳನ್ನು ಸೋಲಿಸಿದ್ದರು. ॥ ೨೩ ॥ ಇದರಿಂದಾಗಿ ಅವರು ಭಾರೀ ಉತ್ಸಾಹದಿಂದ ಸಿಂಹನಾದವನ್ನು ಮಾಡುತ್ತಾ ತಮ್ಮ ಘೋರವಾದ ಶಬ್ದವುಳ್ಳ ಶಂಖಗಳನ್ನು ಊದುತ್ತಿದ್ದರು. ಸ್ವರ್ಗಾಧಿಪತಿಯಾದ ಇಂದ್ರನು - ಗರ್ವದಿಂದ ಬೀಗುತ್ತಿದ್ದ ಯುದ್ಧೋದ್ಯುಕ್ತರಾದ ಶತ್ರುಗಳನ್ನು ಕಂಡು ಭಾರೀ ಕುಪಿತನಾದನು. ॥ ೨೪ ॥ ಗಿರಿ-ನದಿಗಳಿಂದ ಕೂಡಿದ ಉದಯಾಚಲವನ್ನೇರಿ ಪ್ರಕಾಶಿಸುವ ಸೂರ್ಯನಂತೆ ಇಂದ್ರನು ಮದೋದಕವನ್ನು ಸುರಿಸುತ್ತಿದ್ದ ಐರಾವತವೆಂಬ ದಿಗ್ಗಜದ ಮೇಲೆ ಕುಳಿತು ಬಹಳವಾಗಿ ಪ್ರಕಾಶಿಸಿದನು. ॥ ೨೫ ॥ ದೇವೇಂದ್ರನ ಸುತ್ತಲೂ ಅನೇಕ ವಿಧವಾದ ವಾಹನಗಳಿಂದಲೂ, ಧ್ವಜಗಳಿಂದಲೂ, ಆಯುಧಗಳಿಂದಲೂ ಯುಕ್ತರಾದ ವಾಯು, ಅಗ್ನಿ, ವರುಣ ಮುಂತಾದ ಲೋಕಪಾಲರು ತಮ್ಮ-ತಮ್ಮ ಗಣಗಳೊಂದಿಗೆ ಯುದ್ಧಸನ್ನದ್ಧರಾಗಿ ನಿಂತಿದ್ದರು. ॥ ೨೬ ॥

ದೇವ-ದಾನವರ ಸೈನ್ಯಗಳು ಎದುರು-ಬದುರಾಗಿ ನಿಂತವು. ಇಬ್ಬಿಬ್ಬರೇ ನಿಂತು ಮಾಡುವ ದ್ವಂದ್ವಯುದ್ಧವನ್ನು ಪ್ರಾರಂಭಿಸಿದರು. ಕೆಲವರು ಮುಂದೆ ಬಂದು ತಮ್ಮ ಎದುರಾಳಿಯನ್ನು ಹೆಸರುಹಿಡಿದು ಕರೆಯುತ್ತಿದ್ದರೆ, ಕೆಲವರು ಮರ್ಮಭೇದಕ ಚುಚ್ಚುಮಾತುಗಳಿಂದ ನಿಂದಿಸುತ್ತಿದ್ದರು. ॥ ೨೭ ॥ ರಾಜೇಂದ್ರನೇ! ಬಲಿಯು ಇಂದ್ರನೊಡನೆಯೂ, ತಾರಕನು ಕುಮಾರಸ್ವಾಮಿಯೊಂದಿಗೂ, ಹೇತಿಯು ವರುಣನೊಡನೆಯೂ, ಪ್ರಹೇತಿಯು ಸೂರ್ಯನೊಡನೆಯೂ ದ್ವಂದ್ವಯುದ್ಧವನ್ನು ಪ್ರಾರಂಭಿಸಿದರು. ॥ ೨೮ ॥ ಯಮನು ಕಾಲನಾಭನೊಡನೆಯೂ, ವಿಶ್ವಕರ್ಮನು ಮಯನೊಡನೆಯೂ, ಶಂಬರಾಸುರನು ತ್ವಷ್ಟೃವಿನೊಡನೆಯೂ, ಸವಿತೃವು ವಿರೋಚನನೊಡನೆಯೂ ದ್ವಂದ್ವಯುದ್ಧವನ್ನು ಪ್ರಾರಂಭಿಸಿದರು. ॥ ೨೯ ॥ ನಮುಚಿಯು ಅಪರಾಜಿತನೊಡನೆಯೂ, ಅಶ್ವಿನೀಕುಮಾರರು ವೃಷಪರ್ವನೊಡನೆಯೂ, ಸೂರ್ಯನು ಬಾಣನೇ ಮೊದಲಾದ ಬಲಿಯ ನೂರು ಮಕ್ಕಳೊಂದಿಗೂ ಯುದ್ಧ ಮಾಡತೊಡಗಿದರು. ॥ ೩೦ ॥

ರಾಹುಣಾ ಚ ತಥಾ ಸೋಮಃ ಪುಲೋಮ್ನಾ ಯುಯುಧೇಽನಿಲಃ ।
ನಿಶುಂಭಶುಂಭಯೋರ್ದೇವೀ ಭದ್ರಕಾಲೀ ತರಸ್ವಿನೀ ॥ ೩೧ ॥

ವೃಷಾಕಪಿಸ್ತು ಜಂಭೇನ ಮಹಿಷೇಣ ವಿಭಾವಸುಃ ।
ಇಲ್ವಲಃ ಸಹ ವಾತಾಪಿರ್ಬ್ರಹ್ಮಪುತ್ರೈರರಿಂದಮ ॥ ೩೨ ॥

ಕಾಮದೇವೇನ ದುರ್ಮರ್ಷ ಉತ್ಕಲೋ ಮಾತೃಭಿಃ ಸಹ ।
ಬೃಹಸ್ಪತಿಶ್ಚೋಶನಸಾ ನರಕೇಣ ಶನೈಶ್ಚರಃ ॥ ೩೩ ॥

ಮರುತೋ ನಿವಾತಕವಚೈಃ ಕಾಲೇಯೈರ್ವಸವೋಽಮರಾಃ ।
ವಿಶ್ವೇದೇವಾಸ್ತು ಪೌಲೋಮೈ ರುದ್ರಾಃ ಕ್ರೋಧವಶೈಃ ಸಹ ॥ ೩೪ ॥

ತ ಏವಮಾಜಾವಸುರಾಃ ಸುರೇಂದ್ರಾ
ದ್ವಂದ್ವೇನ ಸಂಹತ್ಯ ಚ ಯುಧ್ಯಮಾನಾಃ ।
ಅನ್ಯೋನ್ಯಮಾಸಾದ್ಯ ನಿಜಘ್ನುರೋಜಸಾ
ಜಿಗೀಷವಸ್ತೀಕ್ಷ್ಣಶರಾಸಿತೋಮರೈಃ ॥ ೩೫ ॥

ಭುಶುಂಡಿಭಿಶ್ಚಕ್ರಗದರ್ಷ್ಟಿಪಟ್ಟಿಶೈಃ
ಶಕ್ತ್ಯುಲ್ಮುಕೈಃ ಪ್ರಾಸಪರಶ್ವಧೈರಪಿ ।
ನಿಸ್ತ್ರಿಂಶಭಲ್ಲೈಃ ಪರಿಘೈಃ ಸಮುದ್ಗರೈಃ
ಸಭಿಂದಿಪಾಲೈಶ್ಚ ಶಿರಾಂಸಿ ಚಿಚ್ಛಿದುಃ ॥ ೩೬ ॥

ಗಜಾಸ್ತುರಂಗಾಃ ಸರಥಾಃ ಪದಾತಯಃ
ಸಾರೋಹವಾಹಾ ವಿವಿಧಾ ವಿಖಂಡಿತಾಃ ।
ನಿಕೃತ್ತಬಾಹೂರುಶಿರೋಧರಾಂಘ್ರಯ-
ಶ್ಛಿನ್ನಧ್ವಜೇಷ್ವಾಸತನುತ್ರಭೂಷಣಾಃ ॥ ೩೭ ॥

ತೇಷಾಂ ಪದಾಘಾತರಥಾಂಗಚೂರ್ಣಿತಾ-
ದಾಯೋಧನಾದುಲ್ಬಣ ಉತ್ಥಿತಸ್ತದಾ ।
ರೇಣುರ್ದಿಶಃ ಖಂ ದ್ಯುಮಣಿಂ ಚ ಛಾದಯನ್
ನ್ಯವರ್ತತಾಸೃಕ್ಸ್ರುತಿಭಿಃ ಪರಿಪ್ಲುತಾತ್ ॥ ೩೮ ॥

ಶಿರೋಭಿರುದ್ಧೂತಕಿರೀಟಕುಂಡಲೈಃ
ಸಂರಂಭದೃಗ್ಭಿಃ ಪರಿದಷ್ಟದಚ್ಛದೈಃ ।
ಮಹಾಭುಜೈಃ ಸಾಭರಣೈಃ ಸಹಾಯುಧೈಃ
ಸಾ ಪ್ರಾಸ್ತೃತಾ ಭೂಃ ಕರಭೋರುಭಿರ್ಬಭೌ ॥ ೩೯ ॥

ಕಬಂಧಾಸ್ತತ್ರ ಚೋತ್ಪೇತುಃ ಪತಿತಸ್ವಶಿರೋಽಕ್ಷಿಭಿಃ ।
ಉದ್ಯತಾಯುಧದೋರ್ದಂಡೈರಾಧಾವಂತೋ ಭಟಾನ್ಮೃಧೇ ॥ ೪೦ ॥

ಚಂದ್ರನು ರಾಹುವಿನೊಂದಿಗೂ, ವಾಯುವು ಪುಲೋಮನೊಂದಿಗೂ ಕಾದಾಡಿದರು. ಭದ್ರಕಾಳಿಯು ಶುಂಭ, ನಿಶುಂಭ ರೊಡನೆ ಹೋರಾಡಿದಳು. ॥ ೩೧ ॥ ಪರೀಕ್ಷಿತನೇ! ಜಂಭಾಸುರ ನೊಡನೆ ಮಹಾದೇವನೂ, ಮಹಿಷಾಸುರನೊಡನೆ ಅಗ್ನಿದೇವನೂ, ವಾತಾಪಿ-ಇಲ್ವಲರೊಡನೆ ಬ್ರಹ್ಮನ ಮಕ್ಕಳಾದ ಮರೀಚಿಯೇ ಮೊದಲಾದವರು ಯುದ್ಧಮಾಡಿದರು ॥ ೩೨ ॥ ದುರ್ಮರ್ಷಣ ನೊಡನೆ ಕಾಮದೇವನೂ, ಉತ್ಕಲನೊಡನೆ ಮಾತೃದೇವತೆಗಳೂ, ಶುಕ್ರಾಚಾರ್ಯನೊಡನೆ ಬೃಹಸ್ಪತ್ಯಾಚಾರ್ಯರೂ, ನರಕಾಸುರ ನೊಡನೆ ಶನೈಶ್ಚರನೂ ಯುದ್ಧಮಾಡತೊಡಗಿದರು. ॥ ೩೩ ॥ ನಿವಾತಕವಚ ರೊಡನೆ ಮರುದ್ಗಣರೂ, ಕಾಲೇಯರೊಡನೆ ವಸುಗಣ ಗಳೂ, ಪೌಲೋಮರೊಡನೆ ವಿಶ್ವೇದೇವಗಣಗಳೂ, ಕ್ರೋಧವಶ ರೊಡನೆ ರುದ್ರಗಣಗಳೂ ದ್ವಂದ್ವಯುದ್ಧದಲ್ಲಿ ತೊಡಗಿದರು. ॥ ೩೪ ॥

ಹೀಗೆ ದೇವತೆಗಳೂ, ಅಸುರರೂ ರಣಭೂಮಿಯಲ್ಲಿ ದ್ವಂದ್ವ ಯುದ್ಧದ ಮೂಲಕವೂ, ಸಾಮೂಹಿಕಯುದ್ಧದ ಮೂಲಕವೂ ಒಂದು ಪಕ್ಷದವರು ಇನ್ನೊಂದು ಪಕ್ಷದವರೊಡನೆ ಕಾದಾಡುತ್ತಾ ವಿಜಯದ ಇಚ್ಛೆಯಿಂದ ಉತ್ಸಾಹದಿಂದ ತೀಕ್ಷ್ಣವಾದ ಖಡ್ಗಗಳಿಂದಲೂ, ಭಲ್ಲೆಗಳಿಂದಲೂ, ಬಾಣಗಳಿಂದಲೂ, ಪರಸ್ಪರ ಪ್ರಹಾರಮಾಡುತ್ತಾ ನಾನಾರೀತಿಯಿಂದ ಯುದ್ಧಮಾಡುತ್ತಿದ್ದಾರೆ. ॥ ೩೫ ॥ ಭುಶುಂಡಿ, ಚಕ್ರ, ಗದೆ, ಋಷ್ಟಿ, ಪಟ್ಟಿಶ, ಶಕ್ತಿ, ಉಲ್ಮುಕ, ಪ್ರಾಸ, ಗಂಡುಕೊಡಲಿ, ಕತ್ತಿ, ಭಲ್ಲೆ ಮುದ್ಗರ, ಪರಿಘ, ಭಿಂದಿಪಾಲ ಮುಂತಾದ ಆಯುಧಗಳಿಂದ ಒಬ್ಬರು ಮತ್ತೊಬ್ಬರ ತಲೆಯನ್ನು ತರಿಯತೊಡಗಿದರು. ॥ ೩೬ ॥ ಭಯಂಕರವಾದ ಆ ಮಹಾ ಯುದ್ಧದಲ್ಲಿ ಗಜಾಶ್ವ, ಸೈನಿಕರ, ರಥಿಕರ, ಪದಾತಿಗಳ, ಸೇನಾ ಪತಿಗಳ ತೋಳು, ತೊಡೆ, ತಲೆ, ಕಾಲುಗಳೂ, ಅವರು ಧರಿಸಿದ್ದ ಧ್ವಜ, ಧನುಷ್ಯ, ಕವಚ, ಆಭೂಷಣಗಳೂ ಭಿನ್ನ-ಭಿನ್ನವಾದುವು. ॥ ೩೭ ॥ ಸೈನಿಕರ ಕಾಲುಗಳ ಸಂಘಟ್ಟನೆಯಿಂದಲೂ, ರಥಚಕ್ರಗಳ ಹರಿದಾಟದಿಂದಲೂ, ರಣರಂಗದಲ್ಲಿ ಎದ್ದಿರುವ ಧೂಳಿಯು ಎಲ್ಲ ದಿಕ್ಕುಗಳನ್ನೂ, ಅಂತರಿಕ್ಷವನ್ನೂ, ಸೂರ್ಯನನ್ನೂ ಮುಸುಕಿ ಬಿಟ್ಟಿತು. ಆದರೆ ಮರುಕ್ಷಣದಲ್ಲೇ ಪ್ರವಾಹರೂಪದಿಂದ ಹರಿದ ರಕ್ತದಿಂದ ನೆನೆದು ಆ ಧೂಳಿಯು ಉಡುಗಿಹೋಯಿತು. ॥ ೩೮ ॥ ಅನಂತರ ರಣರಂಗವು ಕತ್ತರಿಸಲ್ಪಟ್ಟ ಶಿರಸ್ಸುಗಳಿಂದ ತುಂಬಿ ಹೋಯಿತು. ಸೈನಿಕರ ಕಿರೀಟಗಳೂ, ಕುಂಡಲಗಳೂ ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದವು. ಕೆಲವರ ಕಣ್ಣುಗಳಿಂದ ಕ್ರೋಧದ ಚಿಹ್ನೆಯು ಕಾಣುತ್ತಿದ್ದಿತು. ಕೆಲವರು ಹಲ್ಲುಗಳಿಂದ ತುಟಿಗಳನ್ನು ಕಚ್ಚಿದ್ದರು. ಅನೇಕರ ಆಭೂಷಣಗಳಿಂದ, ಶಸ್ತ್ರಗಳಿಂದ ಸುಸಜ್ಜಿತವಾಗಿದ್ದ ಉದ್ದುದ್ದ ಬಾಹುಗಳು ತುಂಡಾಗಿ ಬಿದ್ದಿದ್ದವು. ಅನೇಕರ ದುಂಡಾದ ತೊಡೆಗಳು ಕತ್ತರಿಸಲ್ಪಟ್ಟು ಬಿದ್ದಿದ್ದವು. ಹೀಗೆ ಆ ರಣಭೂಮಿಯು ಬಹಳ ಭಯಂಕರವಾಗಿ ಕಾಣುತ್ತಿತ್ತು. ॥ ೩೯ ॥ ಆ ರಣರಂಗದ ಕೆಲವುಕಡೆ ತಲೆಯಿಲ್ಲದ ಮುಂಡಗಳು ಬಿದ್ದಿರುವ ತಲೆಗಳ ಕಣ್ಣುಗಳಿಂದ ನೋಡುತ್ತಾ ಕೈಗಳಲ್ಲಿ ಆಯುಧಗಳನ್ನೆತ್ತಿಕೊಂಡು ವೀರರತ್ತ ಓಡುತ್ತಾ ನೆಗೆಯುತ್ತಿದ್ದವು. ॥ ೪೦ ॥

ಬಲಿರ್ಮಹೇಂದ್ರಂ ದಶಭಿಸ್ತ್ರಿಭಿರೈರಾವತಂ ಶರೈಃ ।
ಚತುರ್ಭಿಶ್ಚತುರೋ ವಾಹಾನೇಕೇನಾರೋಹಮಾರ್ಚ್ಛಯತ್
॥ ೪೧ ॥

ಸ ತಾನಾಪತತಃ ಶಕ್ರಸ್ತಾವದ್ಭಿಃ ಶೀಘ್ರವಿಕ್ರಮಃ ।
ಚಿಚ್ಛೇದ ನಿಶಿತೈರ್ಭಲ್ಲೈರಸಂಪ್ರಾಪ್ತಾನ್ಹಸನ್ನಿವ
॥ ೪೨ ॥

ತಸ್ಯ ಕರ್ಮೋತ್ತಮಂ ವೀಕ್ಷ್ಯ ದುರ್ಮರ್ಷಃ ಶಕ್ತಿಮಾದದೇ ।
ತಾಂ ಜ್ವಲಂತೀಂ ಮಹೋಲ್ಕಾಭಾಂ ಹಸ್ತಸ್ಥಾಮಚ್ಛಿನದ್ಧರಿಃ
॥ ೪೩ ॥

ತತಃ ಶೂಲಂ ತತಃ ಪ್ರಾಸಂ ತತಸ್ತೋಮರಮೃಷ್ಟಯಃ ।
ಯದ್ಯಚ್ಛಸ್ತ್ರಂ ಸಮಾದದ್ಯಾತ್ಸರ್ವಂ ತದಚ್ಛಿನದ್ವಿಭುಃ
॥ ೪೪ ॥

ಸಸರ್ಜಾಥಾಸುರೀಂ ಮಾಯಾಮಂತರ್ಧಾನಗತೋಽಸುರಃ ।
ತತಃ ಪ್ರಾದುರಭೂಚ್ಛೈಲಃ ಸುರಾನೀಕೋಪರಿ ಪ್ರಭೋ
॥ ೪೫ ॥

ತತೋ ನಿಪೇತುಸ್ತರವೋ ದಹ್ಯಮಾನಾ ದವಾಗ್ನಿನಾ ।
ಶಿಲಾಃ ಸಟಂಕಶಿಖರಾಶ್ಚೂರ್ಣಯಂತ್ಯೋ ದ್ವಿಷದ್ಬಲಮ್
॥ ೪೬ ॥

ಮಹೋರಗಾಃ ಸಮುತ್ಪೇತುರ್ದಂದಶೂಕಾಃ ಸವೃಶ್ಚಿಕಾಃ ।
ಸಿಂಹವ್ಯಾಘ್ರವರಾಹಾಶ್ಚ ಮರ್ದಯಂತೋ ಮಹಾಗಜಾನ್
॥ ೪೭ ॥

ಯಾತುಧಾನ್ಯಶ್ಚ ಶತಶಃ ಶೂಲಹಸ್ತಾ ವಿವಾಸಸಃ ।
ಛಿಂಧಿ ಭಿಂಧೀತಿ ವಾದಿನ್ಯಸ್ತಥಾ ರಕ್ಷೋಗಣಾಃ ಪ್ರಭೋ
॥ ೪೮ ॥

ತತೋ ಮಹಾಘನಾ ವ್ಯೋಮ್ನಿ ಗಂಭೀರಪರುಷಸ್ವನಾಃ ।
ಅಂಗಾರಾನ್ಮುಮುಚುರ್ವಾತೈರಾಹತಾಃ ಸ್ತನಯಿತ್ನವಃ
॥ ೪೯ ॥

ಸೃಷ್ಟೋ ದೈತ್ಯೇನ ಸುಮಹಾನ್ವಹ್ನಿಃ ಶ್ವಸನಸಾರಥಿಃ ।
ಸಾಂವರ್ತಕ ಇವಾತ್ಯುಗ್ರೋ ವಿಬುಧಧ್ವಜಿನೀಮಧಾಕ್
॥ ೫೦ ॥

ತತಃ ಸಮುದ್ರ ಉದ್ವೇಲಃ ಸರ್ವತಃ ಪ್ರತ್ಯದೃಶ್ಯತ ।
ಪ್ರಚಂಡವಾತೈರುದ್ಧೂತತರಂಗಾವರ್ತಭೀಷಣಃ
॥ ೫೧ ॥

ಬಲಿಚಕ್ರವರ್ತಿಯು ಹತ್ತು ಬಾಣಗಳನ್ನು ಇಂದ್ರನ ಮೇಲೆಯೂ, ಮೂರು ಅವನ ವಾಹನವಾದ ಐರಾವತಕ್ಕೂ, ನಾಲ್ಕು ಅವನ ಅಂಗರಕ್ಷಕರಿಗೂ, ಒಂದು ಬಾಣವನ್ನು ಮಾವಟಿಗನ ಮೇಲೆಯೂ ಒಟ್ಟಿಗೆ ಹದಿನೆಂಟು ಬಾಣಗಳನ್ನು ಪ್ರಯೋಗಿಸಿದನು. ॥ ೪೧ ॥ ಬಲಿಯ ಬಾಣಗಳಾದರೋ ನಮ್ಮನ್ನು ಘಾಸಿಪಡಿಸುವುವು ಎಂದು ನೋಡಿದ ಶೀಘ್ರಪರಾಕ್ರಮಿಯಾದ ಇಂದ್ರನು ಆ ಬಾಣಗಳು ತನ್ನ ಬಳಿಗೆ ಬರುವುದರೊಳಗಾಗಿಯೇ ಅಷ್ಟೇ ಸಂಖ್ಯೆಯ ಭಲ್ಲವೆಂಬ ಬಾಣಗಳಿಂದ ನಗು-ನಗುತ್ತಲೇ ಕತ್ತರಿಸಿಹಾಕಿದನು. ॥ ೪೨ ॥ ಇಂದ್ರನ ಈ ಶ್ರೇಷ್ಠವಾದ ಧನುರ್ವಿದ್ಯಾ ಪಾಂಡಿತ್ಯವನ್ನು ಕಂಡು ಕೆರಳಿದ ಬಲಿಯು ಇಂದ್ರನ ಮೇಲೆ ಪ್ರಯೋಗಿಸಲು ಪಂಜಿನಂತೆ ಪ್ರಜ್ವಲಿಸುತ್ತಿದ್ದ ಒಂದು ಭಾರೀ ಶಕ್ತ್ಯಾಯುಧವನ್ನು ಎತ್ತಿಕೊಂಡನು. ಅದನ್ನು ಅವನು ಪ್ರಯೋಗಿಸುವ ಮೊದಲೇ, ಅವನ ಕೈಯಲ್ಲಿರುವಾಗಲೇ ಇಂದ್ರನು ಅದನ್ನೂ ಕತ್ತರಿಸಿಬಿಟ್ಟನು. ॥ ೪೩ ॥ ಬಳಿಕ ಬಲಿಯು ರೋಷಾವೇಶದಿಂದ ಕೈಗೆತ್ತಿಕೊಂಡ ಶೂಲ, ಪ್ರಾಸ, ತೋಮರ, ಋಷ್ಟಿ ಮುಂತಾದ ಆಯುಧಗಳನ್ನು ಒಂದಾದ ಮೇಲೆ ಮತ್ತೊಂದರಂತೆ ಇಂದ್ರನು ಕತ್ತರಿಸಿ ಹಾಕಿದನು. ಇಂತಹ ಕೈಚಳಕದಿಂದ ಇಂದ್ರನ ಐಶ್ವರ್ಯವು ಇನ್ನೂ ಬೆಳಗಿತು. ॥ ೪೪ ॥

ಪರೀಕ್ಷಿತನೇ! ಇಂದ್ರನ ಪರಾಕ್ರಮದಿಂದ ಗಾಬರಿಗೊಂಡ ಬಲಿಯು ಅಂತರ್ಧಾನನಾಗಿ ಮತ್ತೆ ಅವನು ಆಸುರೀ ಮಾಯೆಯನ್ನು ಸೃಷ್ಟಿಸಿದನು. ಮರುಕ್ಷಣದಲ್ಲೇ ದೊಡ್ಡ ಪರ್ವತವೊಂದು ದೇವಸೈನ್ಯದ ಮೇಲೆ ಬಿತ್ತು. ॥ ೪೫ ॥ ಅದನ್ನನುಸರಿಸಿ ಕಾಡುಗಿಚ್ಚಿನಿಂದ ಸುಡುತ್ತಿದ್ದ ವೃಕ್ಷಗಳು ಬೀಳತೊಡಗಿದವು. ಬಳಿಕ ಕಲ್ಲುಳಿಗಳಂತೆ ಹರಿತವಾದ ಶಿಖರಗಳಿಂದ ಕೂಡಿದ್ದ ಬಂಡೆಗಳು ದೇವಸೈನ್ಯವನ್ನು ನುಚ್ಚುನೂರಾಗಿಸುತ್ತಾ ಬೀಳತೊಡಗಿದವು. ॥ ೪೬ ॥ ಅನಂತರ ಹೆಬ್ಬಾವುಗಳೂ, ಚೇಳುಗಳೂ, ವಿಷಸರ್ಪಗಳೂ ಹಾಗೂ ಇತರ ವಿಷಜಂತುಗಳೂ ನೆಗೆ-ನೆಗೆಯುತ್ತಾ ದೇವಸೈನ್ಯವನ್ನು ಕಡಿಯತೊಡಗಿದವು. ಸಿಂಹ, ಹುಲಿ, ಕಾಡುಹಂದಿಗಳು ಸೈನ್ಯದ ದೊಡ್ಡ-ದೊಡ್ಡ ಆನೆಗಳನ್ನೂ ಹರಿದು ನುಂಗತೊಡಗಿದವು. ॥ ೪೭ ॥ ರಾಜೇಂದ್ರಾ! ಕೈಯಲ್ಲಿ ಶೂಲಾಯುಧವನ್ನು ಹಿಡಿದುಕೊಂಡಿದ್ದ ಬೆತ್ತಲೆಯಾದ ರಾಕ್ಷಸಿಯರು ಮತ್ತು ರಾಕ್ಷಸರು 'ಕಡಿ-ಬಡಿ-ಹಿಡಿ' ಎಂದು ಅರಚಿಕೊಳ್ಳುತ್ತಾ ಸಮರಾಂಗಣಕ್ಕೆ ನುಗ್ಗಿದವು. ॥ ೪೮ ॥ ಕೆಲವೇ ಕ್ಷಣದಲ್ಲಿ ಆಕಾಶದಲ್ಲಿ ಘನಘೋರವಾದ ಕಾರ್ಮೋಡಗಳು ದಟ್ಟವಾಗಿ ವ್ಯಾಪಿಸಿದುವು. ಅವುಗಳು ಪರಸ್ಪರ ಅಪ್ಪಳಿಸಿದಾಗ ಭಯಂಕರ ಕಠೋರವಾದ ಶಬ್ದವಾಗತೊಡಗಿತು. ಮಿಂಚುಗಳು ಬೀಳತೊಡಗಿದವು. ಚಂಡಮಾರುತದೊಂದಿಗೆ ಬೆಂಕಿಯ ಮಳೆಯೇ ಬೀಳತೊಡಗಿತು. ॥ ೪೯ ॥ ದೈತ್ಯರಾಜ ಬಲಿಯು ಪ್ರಳಯಾಗ್ನಿಯಂತಹ ಭಯಾನಕ ಬೆಂಕಿಯನ್ನು ಸೃಷ್ಟಿಸಿದನು. ಅದು ನೋಡು-ನೋಡುತ್ತಲೇ ಗಾಳಿಯ ಸಹಾಯದಿಂದ ದೇವತೆಗಳ ಸೈನ್ಯವನ್ನು ಸುಡಲುತೊಡಗಿತು. ॥ ೫೦ ॥ ಬಳಿಕ ಚಂಡಮಾರುತದಿಂದ ಎಬ್ಬಿಸಲ್ಪಟ್ಟ ಅಲೆಗಳಿಂದಲೂ, ಸುಳಿಗಳಿಂದಲೂ ಕೂಡಿದ್ದ ಸಮುದ್ರವು ಎಲ್ಲ ಕಡೆಗಳಿಂದ ತನ್ನೆಲ್ಲೆಯನ್ನು ಮೀರಿ ಮುನ್ನುಗ್ಗಿ ಬರುತ್ತಿರುವಂತೆ ಎನಿಸಿತು. ॥ ೫೧ ॥

ಏವಂ ದೈತ್ಯೈರ್ಮಹಾಮಾಯೈರಲಕ್ಷ್ಯಗತಿಭೀಷಣೈಃ ।
ಸೃಜ್ಯಮಾನಾಸು ಮಾಯಾಸು ವಿಷೇದುಃ ಸುರಸೈನಿಕಾಃ ॥ ೫೨ ॥

ನ ತತ್ಪ್ರತಿವಿಧಿಂ ಯತ್ರ ವಿದುರಿಂದ್ರಾದಯೋ ನೃಪ ।
ಧ್ಯಾತಃ ಪ್ರಾದುರಭೂತ್ತತ್ರ ಭಗವಾನ್ವಿಶ್ವಭಾವನಃ ॥ ೫೩ ॥

ತತಃ ಸುಪರ್ಣಾಂಸಕೃತಾಂಘ್ರಿಪಲ್ಲವಃ
ಪಿಶಂಗವಾಸಾ ನವಕಂಜಲೋಚನಃ ।
ಅದೃಶ್ಯತಾಷ್ಟಾಯುಧಬಾಹುರುಲ್ಲಸ-
ಚ್ಛ್ರೀಕೌಸ್ತುಭಾನರ್ಘ್ಯಕಿರೀಟಕುಂಡಲಃ ॥ ೫೪ ॥

ತಸ್ಮಿನ್ಪ್ರವಿಷ್ಟೇಽಸುರಕೂಟಕರ್ಮಜಾ
ಮಾಯಾ ವಿನೇಶುರ್ಮಹಿನಾ ಮಹೀಯಸಃ ।
ಸ್ವಪ್ನೋ ಯಥಾ ಹಿ ಪ್ರತಿಬೋಧ ಆಗತೇ
ಹರಿಸ್ಮೃತಿಃ ಸರ್ವವಿಪದ್ವಿಮೋಕ್ಷಣಮ್ ॥ ೫೫ ॥

ದೃಷ್ಟ್ವಾ ಮೃಧೇ ಗರುಡವಾಹಮಿಭಾರಿವಾಹ
ಆವಿಧ್ಯಶೂಲಮಹಿನೋದಥ ಕಾಲನೇಮಿಃ ।
ತಲ್ಲೀಲಯಾ ಗರುಡಮೂರ್ಧ್ನಿ ಪತದ್ಗೃಹೀತ್ವಾ
ತೇನಾಹನನ್ನೃಪ ಸವಾಹಮರಿಂ ತ್ರ್ಯಧೀಶಃ ॥ ೫೬ ॥

ಮಾಲೀ ಸುಮಾಲ್ಯತಿಬಲೌ ಯುಧಿ ಪೇತತುರ್ಯ-
ಚ್ಚಕ್ರೇಣ ಕೃತ್ತಶಿರಸಾವಥ ಮಾಲ್ಯವಾಂಸ್ತಮ್ ।
ಆಹತ್ಯ ತಿಗ್ಮಗದಯಾಹನದಂಡಜೇಂದ್ರಂ
ತಾವಚ್ಛಿರೋಽಚ್ಛಿನದರೇರ್ನದತೋಽರಿಣಾಽಽದ್ಯಃ ॥ ೫೭ ॥

ಹೀಗೆ ಭಯಂಕರರಾದ ಅಸುರರು ಅದೃಶ್ಯರಾಗಿ ಚಿತ್ರ-ವಿಚಿತ್ರವಾದ ಮಾಯೆಯನ್ನು ಸೃಷ್ಟಿಮಾಡಿ ದೇವತೆಗಳ ಸೈನ್ಯವನ್ನು ಪೀಡಿಸುತ್ತಿದ್ದರು. ಅವರು ಅದೃಶ್ಯರಾಗಿದ್ದುದರಿಂದ ಅವರ ಮೇಲೆ ಶಸ್ತ್ರಾಸ್ತ್ರಗಳನ್ನು ಪ್ರಯೋಗಿಸಲೂ ಸಾಧ್ಯವಾಗುತ್ತಿರಲಿಲ್ಲ. ಇದರಿಂದಾಗಿ ದೇವತೆಗಳು ಬಹಳ ಖಿನ್ನರಾದರು. ॥ ೫೨ ॥ ಪರೀಕ್ಷಿತನೇ! ಅಸುರರು ಕಲ್ಪಿಸಿದ ಮಾಯೆಗೆ ಪ್ರತೀಕಾರವನ್ನು ಮಾಡಲು ಇಂದ್ರಾದಿ ದೇವತೆಗಳು ಬಹಳವಾಗಿ ಯೋಚಿಸಿದರು. ಆದರೆ ಅವರಿಗೆ ಏನೂ ತೋಚಲಿಲ್ಲ. ಕೊನೆಗೆ ಅವರೆಲ್ಲರೂ ಜಗದ್ರಕ್ಷಕನಾದ ಭಗವಂತನನ್ನು ಅನನ್ಯ ಭಕ್ತಿಯಿಂದ ಧ್ಯಾನಮಾಡಿದರು. ಒಡನೆಯೇ ಭಕ್ತಪರಾಧೀನನಾದ ಶ್ರೀಹರಿಯು ಅಲ್ಲಿ ಪ್ರಕಟಗೊಂಡನು. ॥ ೫೩ ॥ ಅವನ ದರ್ಶನವು ಬಹು ಸುಂದರವಾಗಿತ್ತು. ಗರುಡನ ಹೆಗಲಿನಲ್ಲಿ ಭಗವಂತನ ಚರಣಕಮಲಗಳು ವಿರಾಜಮಾನವಾಗಿದ್ದವು. ನವಕಮಲದಂತೆ ವಿಶಾಲ ನೇತ್ರಗಳಿದ್ದವು. ದೇವದೇವನು ಪೀತಾಂಬರವನ್ನು ಧರಿಸಿದ್ದನು. ಎಂಟು ಕೈಗಳಿಂದ ಎಂಟು ಆಯುಧಗಳನ್ನು ಧರಿಸಿದ್ದನು. ಕೊರಳಲ್ಲಿ ಕೌಸ್ತುಭ ಮಣಿಯೂ, ಶಿರದಲ್ಲಿ ಅಮೂಲ್ಯವಾದ ಕಿರೀಟವೂ, ಕಿವಿಗಳಲ್ಲಿ ದಿವ್ಯಕುಂಡಲಗಳೂ ರಾರಾಜಿಸುತ್ತಿದ್ದವು. ಇಂತಹ ದಿವ್ಯವಾದ ಕಾಂತಿಯಿಂದ ಭಗವಂತನು ದೇವತೆಗಳಿಗೆ ಕಾಣಿಸಿಕೊಂಡನು. ॥ ೫೪ ॥ ಪರಮಪುರುಷ ಪರಮಾತ್ಮನು ಪ್ರಕಟವಾದೊಡನೆಯೇ ಅವನ ಪ್ರಭಾವದಿಂದ ಅಸುರರ ಆ ಕಪಟ ಮಾಯೆಯು – ಎಚ್ಚರವಾದಾಗ ಸ್ವಪ್ನವು ಇಲ್ಲವಾಗುವಂತೆ ವಿಲೀನವಾಗಿ ಹೋಯಿತು. 'ಹರಿಸ್ಮೃತಿಃ ಸರ್ವವಿಪದ್ವಿಮೋಕ್ಷಣಮ್' ಶ್ರೀಹರಿಯ ಸ್ಮರಣೆಯು ಸಮಸ್ತ ವಿಪತ್ತುಗಳನ್ನು ಪರಿಹರಿಸುತ್ತದೆ. ॥ ೫೫ ॥ ಇದಾದ ಬಳಿಕ ಯುದ್ಧರಂಗದಲ್ಲಿ ಗರುಡವಾಹನ ಭಗವಂತನು ಬಂದಿರುವುದನ್ನು ನೋಡಿದ ಕಾಲನೇಮಿ ಎಂಬ ದೈತ್ಯನು ತನ್ನ ಸಿಂಹದ ಮೇಲೆ ಕುಳಿತಿದ್ದೇ ಭಯಂಕರವಾದ ಶೂಲಾಯುಧವನ್ನು ಗರಗರನೇ ತಿರುಗಿಸುತ್ತಾ ಶ್ರೀಹರಿಯ ಮೇಲೆ ಪ್ರಯೋಗಿಸಿದನು. ಶ್ರೀಹರಿಯಾದರೋ ಗರುಡನ ತಲೆಯಮೇಲೆ ಬೀಳಲಿದ್ದ ಆ ಶೂಲಾಯುಧವನ್ನು ಲೀಲಾಜಾಲವಾಗಿ ಹಿಡಿದು ಅದೇ ಶೂಲಾಯುಧದಿಂದ ಸಿಂಹದ ಮೇಲೆ ಕುಳಿತಿದ್ದ ಕಾಲನೇಮಿಯನ್ನು ವಾಹನಸಹಿತನಾಗಿ ಸಂಹಾರಮಾಡಿದನು. ॥ ೫೬ ॥ ಬಳಿಕ ಮಾಲಿ ಮತ್ತು ಸುಮಾಲಿ ಎಂಬ ಮಹಾಬಲಿಷ್ಠರಾದ ರಾಕ್ಷಸರಿಬ್ಬರೂ ಶ್ರೀಹರಿಯನ್ನು ಆಕ್ರಮಿಸಿದರು. ಭಗವಂತನು ಕ್ಷಣಮಾತ್ರದಲ್ಲಿ ಅವರ ತಲೆಗಳನ್ನು ಚಕ್ರಾಯುಧದಿಂದ ತುಂಡರಿಸಿಬಿಟ್ಟನು. ಮತ್ತೆ ಮಾಲ್ಯವಂತನೆಂಬ ಮಹಾದೈತ್ಯನು ಭಾರೀ ಗರ್ಜಿಸುತ್ತಾ ಪ್ರಚಂಡ ವೇಗದಿಂದ ಗದೆಯನ್ನು ಗರುಡನ ಮೇಲೆ ಎಸೆದಾಗ ಅದು ಗರುಡನನ್ನು ಮುಟ್ಟುವ ಮೊದಲೇ ಭಗವಂತನು ಅದನ್ನು ನಿವಾರಿಸಿ ಮಾಲ್ಯವಂತನ ಶಿರಸ್ಸನ್ನು ಚಕ್ರದಿಂದ ಕತ್ತರಿಸಿಬಿಟ್ಟನು. ॥ ೫೭ ॥

ಹತ್ತನೆಯ ಅಧ್ಯಾಯವು ಮುಗಿಯಿತು. ॥ ೧೦ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಅಷ್ಟಮ ಸ್ಕಂಧೇ
ದೇವಾಸುರಸಂಗ್ರಾಮೇ ದಶಮೋಽಧ್ಯಾಯಃ ॥ ೧೦ ॥

ಹನ್ನೊಂದನೆಯ ಅಧ್ಯಾಯ

ದೇವಾಸುರರ ಸಂಗ್ರಾಮದ ಸಮಾಪ್ತಿ

ಶ್ರೀಶುಕ ಉವಾಚ

ಅಥೋ ಸುರಾಃ ಪ್ರತ್ಯುಪಲಬ್ಧಚೇತಸಃ
ಪರಸ್ಯ ಪುಂಸಃ ಪರಯಾನುಕಂಪಯಾ ।
ಜಘ್ನುರ್ಭೃಶಂ ಶಕ್ರಸಮೀರಣಾದಯ-
ಸ್ತಾಂಸ್ತಾನ್ರಣೇ ಯೈರಭಿಸಂಹತಾಃ ಪುರಾ ॥ ೧ ॥

ವೈರೋಚನಾಯ ಸಂರಬ್ಧೋ ಭಗವಾನ್ಪಾಕಶಾಸನಃ ।
ಉದಯಚ್ಛದ್ಯದಾ ವಜ್ರಂ ಪ್ರಜಾ ಹಾ ಹೇತಿ ಚುಕ್ರುಶುಃ ॥ ೨ ॥

ವಜ್ರಪಾಣಿಸ್ತಮಾಹೇದಂ ತಿರಸ್ಕೃತ್ಯ ಪುರಃಸ್ಥಿತಮ್ ।
ಮನಸ್ವಿನಂ ಸುಸಂಪನ್ನಂ ವಿಚರಂತಂ ಮಹಾಮೃಧೇ ॥ ೩ ॥

ನಟವನ್ಮೂಢ ಮಾಯಾಭಿರ್ಮಾಯೇಶಾನ್ನೋ ಜಿಗೀಷಸಿ ।
ಜಿತ್ವಾ ಬಾಲಾನ್ನಿಬದ್ಧಾಕ್ಷಾನ್ನಟೋ ಹರತಿ ತದ್ಧನಮ್ ॥ ೪ ॥

ಆರುರುಕ್ಷಂತಿ ಮಾಯಾಭಿರುತ್ಸಿಸೃಪ್ಸಂತಿ ಯೇ ದಿವಮ್ ।
ತಾಂದಸ್ಯೂನ್ವಿಧುನೋಮ್ಯಜ್ಞಾನ್ಪೂರ್ವಸ್ಮಾಚ್ಚ ಪದಾದಧಃ ॥ ೫ ॥

ಸೋಽಹಂ ದುರ್ಮಾಯಿನಸ್ತೇಽದ್ಯ ವಜ್ರೇಣ ಶತಪರ್ವಣಾ ।
ಶಿರೋ ಹರಿಷ್ಯೇ ಮಂದಾತ್ಮನ್ಘಟಸ್ವ ಜ್ಞಾತಿಭಿಃ ಸಹ ॥ ೬ ॥

ಬಲಿರುವಾಚ

ಸಂಗ್ರಾಮೇ ವರ್ತಮಾನಾನಾಂ
ಕಾಲಚೋದಿತಕರ್ಮಣಾಮ್ ।
ಕೀರ್ತಿರ್ಜಯೋಽಜಯೋ ಮೃತ್ಯುಃ
ಸರ್ವೇಷಾಂ ಸ್ಯುರನುಕ್ರಮಾತ್ ॥ ೭ ॥

ತದಿದಂ ಕಾಲರಶನಂ ಜನಾಃ ಪಶ್ಯಂತಿ ಸೂರಯಃ ।
ನ ಹೃಷ್ಯಂತಿ ನ ಶೋಚಂತಿ ತತ್ರ ಯೂಯಮಪಂಡಿತಾಃ ॥ ೮ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಎಲೈ ಪರೀಕ್ಷಿತನೇ! ಪರಮ ಪುರುಷನಾದ ಭಗವಂತನ ನಿರತಿಶಯವಾದ ಕೃಪೆಯಿಂದ ದೇವತೆಗಳ ಭಯವು ದೂರವಾಗಿ ಅವರಲ್ಲಿ ನವಚೈತನ್ಯವುಂಟಾಯಿತು. ಈ ಹಿಂದೆ ಇಂದ್ರ, ವಾಯುಗಳೇ ಮೊದಲಾದ ದೇವತೆಗಳು ಯಾವ-ಯಾವ ದೈತ್ಯರೊಡನೆ ಹೋರಾಡುತ್ತಿದ್ದರೋ ಪುನಃ ಅದೇ ದೈತ್ಯರನ್ನೆದುರಿಸಿ ಶೌರ್ಯದಿಂದ ಯುದ್ಧಮಾಡತೊಡಗಿದರು. ॥ ೧ ॥ ಮಹಾ ಮಹಿಮನಾದ ಇಂದ್ರನು ಅತ್ಯಂತ ಕ್ರುದ್ಧನಾಗಿ ಬಲಿಯನ್ನು ಸಂಹರಿಸಬೇಕೆಂಬ ಆಶಯದಿಂದ ವಜ್ರಾಯುಧವನ್ನೆತ್ತಿದನು. ಆಗ ಸಮಸ್ತ ಪ್ರಜೆಗಳಲ್ಲಿ ಹಾಹಾಕಾರವೆದ್ದಿತು. ॥ ೨ ॥ ಬಲಿಯು ಅಸ್ತ್ರ-ಶಸ್ತ್ರಗಳಿಂದ ಸುಸಜ್ಜಿತನಾಗಿ, ನಿರ್ಭಯನಾಗಿ ಪರಮೋತ್ಸಾಹದಿಂದ ಯುದ್ಧಭೂಮಿಯಲ್ಲಿ ಸಂಚರಿಸುತ್ತಿದ್ದನು. ತನ್ನ ಎದುರಿಗೆ ಬಂದ ಅವನನ್ನು ತಿರಸ್ಕರಿಸುತ್ತಾ ವಜ್ರಪಾಣಿಯಾದ ಇಂದ್ರನು ಇಂತೆಂದನು – ॥ ೩ ॥ ಎಲೈ ಮೂರ್ಖ! ನಟನು (ಐಂದ್ರಜಾಲಿಕನು) ಮಕ್ಕಳ ಕಣ್ಣುಕಟ್ಟಿ ತನ್ನ ಮಾಯಾಜಾಲದಿಂದ ಅವರಲ್ಲಿದ್ದ ಹಣವನ್ನು ದೋಚುವಂತೆಯೇ ನೀನು ಮಾಯಾಜಾಲದಿಂದ ನಮ್ಮ ಮೇಲೆ ವಿಜಯ ಪಡೆಯಬಹುದೆಂದು ಬಯಸಿದ್ದೆ. ಆದರೆ ನಾವುಗಳು ಮಾಯೆಯ ಅಧಿಪತಿಗಳೆಂದು ನೀನು ಅರಿಯೆ. ಅದು ನಮ್ಮನ್ನು ಏನೂ ಮಾಡಲಾರದು. ॥ ೪ ॥ ಮಾಯೆಯ ಮೂಲಕ ಸ್ವರ್ಗದ ಮೇಲೆ ಅಧಿಕಾರವನ್ನು ನಡೆಸಲು ಬಯಸುವವನು ಹಾಗೂ ಅದನ್ನು ದಾಟಿ ಮೇಲಿನ ಲೋಕಗಳಲ್ಲಿಯೂ ಅಧಿಕಾರ ಸ್ಥಾಪಿಸಲು ಬಯಸುವಂತಹ ಮೂರ್ಖ ದರೋಡೆಕೋರರನ್ನು ನಾನು ಅವನು ಮೊದಲಿದ್ದ ಸ್ಥಾನದಿಂದಲೂ ಕೆಳಗೆ ತಳ್ಳಿಬಿಡುತ್ತೇನೆ. ॥ ೫ ॥ ಎಲವೋ ಮಂದಮತಿಯೇ! ನೀನು ಭಾರೀ ದೊಡ್ಡ ಮಾಯಾಜಾಲವನ್ನು ರಚಿಸಿದ್ದೆ ನೋಡು. ಇಂದು ನಾನು ನನ್ನ ನೂರು ಗಿಣ್ಣುಗಳಿಂದ ಕೂಡಿದ ಅಜೇಯ ವಜ್ರಾಯುಧದಿಂದ ನಿನ್ನ ರುಂಡ-ಮುಂಡಗಳನ್ನು ಬೇರ್ಪಡಿಸಿಬಿಡುತ್ತೇನೆ. ನೀನು ನಿನ್ನ ಜ್ಞಾತಿಗಳೊಡನೆ ಸೇರಿ ಏನು ಮಾಡಬಹುದೋ ಅದನ್ನು ಮಾಡು. ॥ ೬ ॥

ಬಲಿಯು ಹೇಳಿದನು – ಮಹೇಂದ್ರ! ಕಾಲಶಕ್ತಿಯ ಪ್ರೇರಣೆಯಿಂದ ತನ್ನ ಕರ್ಮಕ್ಕನುಸಾರ ಯುದ್ಧಮಾಡುವವರಿಗೆ ಜಯಾಪಜಯಗಳು ಅಥವಾ ಕೀರ್ತಿ-ಅಪಕೀರ್ತಿ, ಅಥವಾ ಮೃತ್ಯು ಇವುಗಳು ಅನುಕ್ರಮವಾಗಿ ಆಗುತ್ತಲೇ ಇರುತ್ತವೆ. ॥ ೭ ॥ ಆದುದರಿಂದ ಪಂಡಿತರಾದವರು ಈ ಜಗತ್ತನ್ನು ಕಾಲಕ್ಕೆ ಅಧೀನವೆಂದು ತಿಳಿದು ವಿಜಯಿಯಾದಾಗ ಹರ್ಷಪಡುವುದಿಲ್ಲ. ಅಪಕೀರ್ತಿ, ಸೋಲು, ಮೃತ್ಯು ಸಂಭವಿಸಿದಾಗ ಶೋಕಕ್ಕೆ ವಶರಾಗುವುದಿಲ್ಲ. ನೀವೆಲ್ಲರೂ ಈ ತತ್ತ್ವವನ್ನು ತಿಳಿದವರಲ್ಲ. ॥ ೮ ॥ ನೀವುಗಳು ತಮ್ಮನ್ನು ಜಯ-ಪರಾಜಯಗಳ ಕರ್ತೃಗಳೆಂದು ತಿಳಿಯುತ್ತಿರುವಿರಿ. ಅದಕ್ಕಾಗಿ ಮಹಾತ್ಮರ ದೃಷ್ಟಿಯಲ್ಲಿ ನೀವುಗಳು ಶೋಚನೀಯರಾಗಿರುವಿರಿ.

ನ ವಯಂ ಮನ್ಯಮಾನಾನಾಮಾತ್ಮಾನಂ ತತ್ರ ಸಾಧನಮ್ ।
ಗಿರೋ ವಃ ಸಾಧುಶೋಚ್ಯಾನಾಂ ಗೃಹ್ಣೀಮೋ ಮರ್ಮತಾಡನಾಃ ॥ ೯ ॥

ಶ್ರೀಶುಕ ಉವಾಚ

ಇತ್ಯಾಕ್ಷಿಪ್ಯ ವಿಭುಂ ವೀರೋ ನಾರಾಚೈರ್ವೀರಮರ್ದನಃ ।
ಆಕರ್ಣಪೂರ್ಣೈರಹನದಾಕ್ಷೇಪೈರಾಹತಂ ಪುನಃ ॥ ೧೦ ॥

ಏವಂ ನಿರಾಕೃತೋ ದೇವೋ ವೈರಿಣಾ ತಥ್ಯವಾದಿನಾ ।
ನಾಮೃಷ್ಯತ್ತದಧಿಕ್ಷೇಪಂ ತೋತ್ತ್ರಾಹತ ಇವ ದ್ವಿಪಃ ॥ ೧೧ ॥

ಪ್ರಾಹರತ್ಕುಲಿಶಂ ತಸ್ಮಾ ಅಮೋಘಂ ಪರಮರ್ದನಃ ।
ಸಯಾನೋ ನ್ಯಪತದ್ಭೂಮೌ ಛಿನ್ನಪಕ್ಷ ಇವಾಚಲಃ ॥ ೧೨ ॥

ಸಖಾಯಂ ಪತಿತಂ ದೃಷ್ಟ್ವಾ ಜಂಭೋ ಬಲಿಸಖಃ ಸುಹೃತ್ ।
ಅಭ್ಯಯಾತ್ಸೌಹೃದಂ ಸಖ್ಯುರ್ಹತಸ್ಯಾಪಿ ಸಮಾಚರನ್ ॥ ೧೩ ॥

ಸ ಸಿಂಹವಾಹ ಆಸಾದ್ಯ ಗದಾಮುದ್ಯಮ್ಯ ರಂಹಸಾ ।
ಜತ್ರಾವತಾಡಯಚ್ಛಕ್ರಂ ಗಜಂ ಚ ಸುಮಹಾಬಲಃ ॥ ೧೪ ॥

ಗದಾಪ್ರಹಾರವ್ಯಥಿತೋ ಭೃಶಂ ವಿಹ್ವಲಿತೋ ಗಜಃ ।
ಜಾನುಭ್ಯಾಂ ಧರಣೀಂ ಸ್ಪೃಷ್ಟ್ವಾ ಕಶ್ಮಲಂ ಪರಮಂ ಯಯೌ ॥ ೧೫ ॥

ತತೋ ರಥೋ ಮಾತಲಿನಾ ಹರಿಭಿರ್ದಶಶತೈರ್ವೃತಃ ।
ಆನೀತೋ ದ್ವಿಪಮುತ್ಸೃಜ್ಯ ರಥಮಾರುರುಹೇ ವಿಭುಃ ॥ ೧೬ ॥

ತಸ್ಯ ತತ್ಪೂಜಯನ್ಕರ್ಮ ಯಂತುರ್ದಾನವಸತ್ತಮಃ ।
ಶೂಲೇನ ಜ್ವಲತಾ ತಂ ತು ಸ್ಮಯಮಾನೋಽಹನನ್ಮೃಧೇ ॥ ೧೭ ॥

ಸೇಹೇ ರುಜಂ ಸುದುರ್ಮರ್ಷಾಂ ಸತ್ತ್ವಮಾಲಂಬ್ಯ ಮಾತಲಿಃ ।
ಇಂದ್ರೋ ಜಂಭಸ್ಯ ಸಂಕ್ರುದ್ಧೋ ವಜ್ರೇಣಾಪಾಹರಚ್ಛಿರಃ ॥ ೧೮ ॥

ಜಂಭಂ ಶ್ರುತ್ವಾ ಹತಂ ತಸ್ಯ ಜ್ಞಾತಯೋ ನಾರದಾದೃಷೇಃ ।
ನಮುಚಿಶ್ಚ ಬಲಃ ಪಾಕಸ್ತತ್ರಾಪೇತುಸ್ತ್ವರಾನ್ವಿತಾಃ ॥ ೧೯ ॥

ವಚೋಭಿಃ ಪರುಷೈರಿಂದ್ರಮರ್ದಯಂತೋಽಸ್ಯ ಮರ್ಮಸು ।
ಶರೈರವಾಕಿರನ್ಮೇಘಾ ಧಾರಾಭಿರಿವ ಪರ್ವತಮ್ ॥ ೨೦ ॥

ಹರೀನ್ ದಶಶತಾನ್ಯಾಜೌ ಹರ್ಯಶ್ವಸ್ಯ ಬಲಃ ಶರೈಃ ।
ತಾವದ್ಭಿರರ್ದಯಾಮಾಸ ಯುಗಪಲ್ಲಘುಹಸ್ತವಾನ್ ॥ ೨೧ ॥

ಆದುದರಿಂದ ನಿನ್ನ ಮರ್ಮಭೇದಿಗಳಾದ ಮಾತನ್ನು ನಾವು ಲೆಕ್ಕಿಸುವುದೇ ಇಲ್ಲ. ॥ ೯ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ವೀರನಾದ ಬಲಿಯು ಇಂದ್ರನನ್ನು ಹೀಗೆ ನಿಂದಿಸಿದನು. ಬಲಿಯ ನಿಂದನೆಯಿಂದ ಇಂದ್ರನು ಸ್ವಲ್ಪನಾಚಿಕೊಂಡನು. ಅಷ್ಟರಲ್ಲಿ ಶತ್ರುಸೂದನನಾದ ಬಲಿಯು ತನ್ನ ಧನುಸ್ಸನ್ನು ಆಕರ್ಣಾಂತವಾಗಿ ಸೆಳೆದು ಅನೇಕ ಬಾಣಗಳನ್ನು ಪ್ರಯೋಗಿಸಿದನು. ॥ ೧೦ ॥ ಹೀಗೆ ಸತ್ಯವಾದಿಯಾದ ದೇವಶತ್ರು ಬಲಿಯಿಂದ ತಿರಸ್ಕರಿಸಲ್ಪಟ್ಟ ದೇವೇಂದ್ರನು ಅಂಕುಶದಿಂದ ತಿವಿಯಲ್ಪಟ್ಟ ಆನೆಯಂತೆ ಕೆರಳಿ ಆ ಬಲಿಯ ಮಾತುಗಳನ್ನು ಸಹಿಸಿಕೊಳ್ಳಲಿಲ್ಲ. ॥ ೧೧ ॥ ಅರಿಮರ್ದನನಾದ ಇಂದ್ರನು ಬಲಿಯನ್ನು ತನ್ನ ಅಮೋಘವಾದ ವಜ್ರಾಯುಧದಿಂದ ಪ್ರಹರಿಸಿದನು. ಆ ಏಟಿನಿಂದ ಬಲಿಯು ರೆಕ್ಕೆ ತುಂಡಾದ ಪರ್ವತದಂತೆ ವಿಮಾನದೊಂದಿಗೆ ನೆಲಕ್ಕೆ ಉರುಳಿದನು. ॥ ೧೨ ॥ ಬಲಿಯ ಮಿತ್ರನೂ, ಆಪ್ತನೂ ಆದ ಜಂಭಾಸುರನೆಂಬ ರಾಕ್ಷಸನು ತನ್ನ ಮಿತ್ರನಾದ ಬಲಿಯು ಕೆಳಕ್ಕೆ ಬಿದ್ದುದನ್ನು ನೋಡಿ ಅವನು ಸತ್ತುಹೋಗಿದ್ದರೂ ಅವನ ಸ್ನೇಹವನ್ನು ನೆನೆಯುತ್ತಾ ಅದರ ಪ್ರತೀಕಾರದಿಂದ ಇಂದ್ರನ ಮುಂದೆ ಯುದ್ಧಕ್ಕೆ ಬಂದುನಿಂತನು. ॥ ೧೩ ॥ ಸಿಂಹವನ್ನೇರಿ ಇಂದ್ರನ ಬಳಿಗೆ ಬಂದು ಭಾರೀ ವೇಗದಿಂದ ತನ್ನ ಗದೆಯನ್ನು ಎತ್ತಿ ಇಂದ್ರನ ಕೊರಳ ಪ್ರದೇಶದಲ್ಲಿ ಪ್ರಹರಿಸಿದನು. ಜೊತೆಗೆ ಆ ಬಲಶಾಲಿಯು ಐರಾವತವನ್ನೂ ಗದೆಯಿಂದ ಪ್ರಹರಿಸಿದನು. ॥ ೧೪ ॥ ಗದಾಪ್ರಹಾರದಿಂದ ಐರಾವತವು ಬಹಳ ವ್ಯಥೆಗೊಂಡು ಮೊಣಕಾಲೂರಿ ನೆಲಕ್ಕೆ ಬಾಗಿ ಮೂರ್ಛಿತವಾಯಿತು. ॥ ೧೫ ॥ ಆಗಲೇ ಇಂದ್ರನ ಸಾರಥಿಯಾದ ಮಾತಲಿಯು ಸಾವಿರ ಕುದುರೆಗಳನ್ನು ಹೂಡಿದ್ದ ದಿವ್ಯವಾದ ರಥವನ್ನು ತಂದನು. ಶಕ್ತಿಶಾಲಿಯಾದ ಇಂದ್ರನು ಐರಾವತವನ್ನು ಬಿಟ್ಟು ಶೀಘ್ರವಾಗಿ ರಥಾರೂಢನಾದನು. ॥ ೧೬ ॥ ದಾನವೇಂದ್ರನಾದ ಜಂಭಾಸುರನು ಮಾತಲಿಯ ಈ ಕಾರ್ಯವನ್ನು ಪ್ರಶಂಸಿಸಿ ಮುಗುಳ್ನಗುತ್ತಾ ಹೊಳೆಯುತ್ತಿರುವ ತ್ರಿಶೂಲವೊಂದನ್ನು ಅವನ ಮೇಲೆ ಪ್ರಯೋಗಿಸಿದನು. ॥ ೧೭ ॥ ಮಾತಲಿಯು ಧೈರ್ಯದಿಂದ ಆ ಸಹಿಸಲಸಾಧ್ಯವಾದ ಸಂಕಟವನ್ನು ಸಹಿಸಿಕೊಂಡನು. ಇದನ್ನು ನೋಡಿದ ಇಂದ್ರನು ಕ್ರೋಧಗೊಂಡು ತನ್ನ ವಜ್ರಾಯುಧದಿಂದ ಜಂಭನ ತಲೆಯನ್ನು ತುಂಡರಿಸಿಬಿಟ್ಟನು. ॥ ೧೮ ॥

ಜಂಭಾಸುರನು ಹತನಾದುದನ್ನು ನಾರದ ಮಹರ್ಷಿಗಳಿಂದ ಕೇಳಿದ ಅವನ ಬಂಧುಗಳಾದ ನಮುಚಿ, ಬಲ, ಪಾಕ ಮುಂತಾದವರು ತ್ವರಿತವಾಗಿ ಯುದ್ಧಭೂಮಿಗೆ ಆಗಮಿಸಿದರು. ॥ ೧೯ ॥ ನಮುಚಿಯೇ ಮುಂತಾದ ರಾಕ್ಷಸರು ಇಂದ್ರನ ಕುರಿತು ಅತಿ ಕಠೋರವಾದ ಮರ್ಮಸ್ಪರ್ಶಿ ಮಾತುಗಳನ್ನಾಡಿ, ಮೇಘಗಳು ಜಲಧಾರೆಯಿಂದ ಪರ್ವತವನ್ನು ಮುಚ್ಚಿಬಿಡುವಂತೆ ಶರವರ್ಷಗಳಿಂದ ಇಂದ್ರನನ್ನು ಮುಚ್ಚಿಬಿಟ್ಟರು. ॥ ೨೦ ॥ ಬಲಾಸುರನು ತನ್ನ ಕೈಚಳಕದಿಂದ ಒಂದೇ ಬಾರಿಗೆ ಒಂದುಸಾವಿರ ಬಾಣಗಳನ್ನು ಪ್ರಯೋಗಿಸಿ ಇಂದ್ರನ ಒಂದುಸಾವಿರ ಕುದುರೆಗಳನ್ನು ಘಾಸಿಗೊಳಿಸಿದನು. ॥ ೨೧ ॥ ಪಾಕನು ನೂರು ಬಾಣಗಳಿಂದ ಮಾತಲಿಯನ್ನೂ, ನೂರು ಬಾಣಗಳಿಂದ ರಥದ ಅವಯವಗಳನ್ನೂ ಭೇದಿ

ಶತಾಭ್ಯಾಂ ಮಾತಲಿಂ ಪಾಕೋ ರಥಂ ಸಾವಯವಂ ಪೃಥಕ್ ।
ಸಕೃತ್ಸಂಧಾನಮೋಕ್ಷೇಣ ತದದ್ಭುತಮಭೂದ್ರಣೇ ॥ ೨೨ ॥

ನಮುಚಿಃ ಪಂಚದಶಭಿಃ ಸ್ವರ್ಣಪುಂಖೈರ್ಮಹೇಷುಭಿಃ ।
ಆಹತ್ಯ ವ್ಯನದತ್ಸಂಖ್ಯೇ ಸತೋಯ ಇವ ತೋಯದಃ ॥ ೨೩ ॥

ಸರ್ವತಃ ಶರಕೂಟೇನ ಶಕ್ರಂ ಸರಥಸಾರಥಿಮ್ ।
ಛಾದಯಾಮಾಸುರಸುರಾಃ ಪ್ರಾವೃಟ್ಸೂರ್ಯಮಿವಾಂಬುದಾಃ ॥ ೨೪ ॥

ಅಲಕ್ಷಯಂತಸ್ತಮತೀವ ವಿಹ್ವಲಾ
ವಿಚುಕ್ರುಶುರ್ದೇವಗಣಾಃ ಸಹಾನುಗಾಃ ।
ಅನಾಯಕಾಃ ಶತ್ರುಬಲೇನ ನಿರ್ಜಿತಾ
ವಣಿಕ್ಪಥಾ ಭಿನ್ನನವೋ ಯಥಾರ್ಣವೇ ॥ ೨೫ ॥

ತತಸ್ತುರಾಷಾಡಿಷುಬದ್ಧಪಂಜರಾದ್-
ವಿನಿರ್ಗತಃ ಸಾಶ್ವರಥಧ್ವಜಾಗ್ರಣೀಃ ।
ಬಭೌ ದಿಶಃ ಖಂ ಪೃಥಿವೀಂ ಚ ರೋಚಯನ್
ಸ್ವತೇಜಸಾ ಸೂರ್ಯ ಇವ ಕ್ಷಪಾತ್ಯಯೇ ॥ ೨೬ ॥

ನಿರೀಕ್ಷ್ಯ ಪೃತನಾಂ ದೇವಃ ಪರೈರಭ್ಯರ್ದಿತಾಂ ರಣೇ ।
ಉದಯಚ್ಛದ್ರಿಪುಂ ಹಂತುಂ ವಜ್ರಂ ವಜ್ರಧರೋ ರುಷಾ ॥ ೨೭ ॥

ಸ ತೇನೈವಾಷ್ಟಧಾರೇಣ ಶಿರಸೀ ಬಲಪಾಕಯೋಃ ।
ಜ್ಞಾತೀನಾಂ ಪಶ್ಯತಾಂ ರಾಜನ್ ಜಹಾರ ಜನಯನ್ಭಯಮ್ ॥ ೨೮ ॥

ನಮುಚಿಸ್ತದ್ವಧಂ ದೃಷ್ಟ್ವಾ ಶೋಕಾಮರ್ಷರುಷಾನ್ವಿತಃ ।
ಜಿಘಾಂಸುರಿಂದ್ರಂ ನೃಪತೇ ಚಕಾರ ಪರಮೋದ್ಯಮಮ್ ॥ ೨೯ ॥

ಅಶ್ಮಸಾರಮಯಂ ಶೂಲಂ ಘಂಟಾವದ್ಧೇಮಭೂಷಣಮ್ ।
ಪ್ರಗೃಹ್ಯಾಭ್ಯದ್ರವತ್ಕ್ರುದ್ಧೋ ಹತೋಽಸೀತಿ ವಿತರ್ಜಯನ್ ।
ಪ್ರಾಹಿಣೋದ್ದೇವರಾಜಾಯ ನಿನದನ್ಮೃಗರಾಡಿವ ॥ ೩೦ ॥

ತದಾಪತದ್ ಗಗನತಲೇ ಮಹಾಜವಂ
ವಿಚಿಚ್ಛಿದೇ ಹರಿರಿಷುಭಿಃ ಸಹಸ್ರಧಾ ।
ತಮಾಹನನ್ನೃಪ ಕುಲಿಶೇನ ಕಂಧರೇ
ರುಷಾನ್ವಿತಸ್ತ್ರಿದಶಪತಿಃ ಶಿರೋ ಹರನ್ ॥ ೩೧ ॥

ಸಿದನು. ಯುದ್ಧಭೂಮಿಯಲ್ಲಿ ಒಂದೇ ಬಾರಿಗೆ ಇಷ್ಟೊಂದು ಬಾಣಗಳನ್ನು ಹೂಡಿ, ಪ್ರಯೋಗಿಸಿದುದು ಪರಮಾದ್ಭುತವಾದ ಘಟನೆಯಾಗಿತ್ತು. ॥ ೨೨ ॥ ನಮೂಚಿಯು ಚಿನ್ನದ ಗರಿಕಟ್ಟಿದ ಭಾರೀ ಹದಿನೈದು ಬಾಣಗಳಿಂದ ಇಂದ್ರನನ್ನು ಪ್ರಹರಿಸಿ- ನೀರುತುಂಬಿದ ಮೇಘಗಳಂತೆ ಯುದ್ಧರಂಗದಲ್ಲಿ ಅವನು ಗರ್ಜಿಸಿದನು. ॥ ೨೩ ॥ ವರ್ಷಾಕಾಲದಲ್ಲಿ ಮೋಡಗಳು ಸೂರ್ಯನನ್ನು ಮುಚ್ಚಿಬಿಡುವಂತೆಯೇ ಅಸುರರು ಬಾಣಗಳ ಮಳೆಯಿಂದ ಇಂದ್ರನನ್ನೂ ಅವನ ರಥ-ಸಾರಥಿಯನ್ನೂ ಎಲ್ಲೆಡೆಗಳಿಂದ ಮುಚ್ಚಿಬಿಟ್ಟರು. ॥ ೨೪ ॥ ತಮ್ಮ ನಾಯಕನಾದ ಇಂದ್ರನನ್ನು ಕಾಣದೆ ದೇವತೆಗಳೂ, ಅವನ ಅನುಚರರೂ ವಿಹ್ವಲರಾಗಿ ಅಳತೊಡಗಿದರು. ಒಂದು ಶತ್ರುಗಳಿಂದ ಜಯಿಸಲ್ಪಟ್ಟವರಾಗಿದ್ದರು, ಇನ್ನೊಂದು ಅವರಿಗೆ ಯಾರೂ ಸೇನಾಪತಿಯು ಇರಲಿಲ್ಲ. ಆಗ ಸಮುದ್ರಮಧ್ಯದಲ್ಲಿ ಒಡೆದುಹೋದ ನಾವೆಯಲ್ಲಿದ್ದ ವರ್ತಕರಂತೆ ಅವರ ಸ್ಥಿತಿಯಾಗಿತ್ತು. ॥ ೨೫ ॥ ಅಷ್ಟರಲ್ಲೇ ರಥಾಶ್ವ-ಧ್ವಜಗಳಿಂದ ಕೂಡಿದ ಇಂದ್ರನು ಬಾಣಗಳ ಪಂಜರದಿಂದ ಹೊರಬಂದು ಬೆಳಗಾದಕೂಡಲೇ ತನ್ನ ತೇಜಸ್ಸಿನಿಂದ ದಿಕ್ಕುಗಳನ್ನೂ, ಆಕಾಶವನ್ನೂ ಭೂಮಿಯನ್ನೂ ಪ್ರಕಾಶಗೊಳಿಸುವ ಸೂರ್ಯನಂತೆ ಇಂದ್ರನು ಬೆಳಗಿದನು. ॥ ೨೬ ॥ ಯುದ್ಧದಲ್ಲಿ ಶತ್ರುಗಳಿಂದ ಸತತವಾಗಿ ಪೀಡಿಸಲ್ಪಡುತ್ತಿದ್ದ ತನ್ನ ಸೈನ್ಯವನ್ನು ನೋಡಿ ವಜ್ರಧರನಾದ ಇಂದ್ರನು ಪರಮ ಕ್ರುದ್ಧನಾಗಿ ಶತ್ರುಗಳನ್ನು ನಿರ್ಮೂಲನ ಮಾಡುವುದಕ್ಕಾಗಿ ವಜ್ರಾಯುಧದಿಂದ ಆಕ್ರಮಣ ಮಾಡಿದನು. ॥ ೨೭ ॥ ಪರೀಕ್ಷಿತನೇ! ಎಂಟು ಮೂಲೆಗಳುಳ್ಳ ವಜ್ರದಿಂದ ಆ ದೈತ್ಯರ ಬಂಧುಗಳಿಗೆ ಭಯವನ್ನುಂಟುಮಾಡುತ್ತಾ ಇಂದ್ರನು ಬಲ ಮತ್ತು ಪಾಕ ಇವರ ತಲೆಗಳನ್ನು ಹಾರಿಸಿಬಿಟ್ಟನು. ॥ ೨೮ ॥

ಪರೀಕ್ಷಿತನೇ! ಬಲ-ಪಾಕರಿಬ್ಬರೂ ಇಂದ್ರನಿಂದ ಹತರಾದುದನ್ನು ನೋಡಿ ನಮೂಚಿಗೆ ಭಾರೀ ಶೋಕವುಂಟಾಯಿತು. ಅವನು ಅಸಹನೆಯಿಂದಲೂ, ಕೋಪದಿಂದಲೂ ಕೆಂಪೇರಿ ಅಸುರಶತ್ರುವಾದ ಇಂದ್ರನನ್ನು ಸಂಹರಿಸಲು ಬಹಳವಾಗಿ ಪ್ರಯತ್ನಿಸಿದನು. ॥ ೨೯ ॥ ಕಿರುಗಂಟೆಗಳಿಂದ ಝಣ-ಝಣಿಸುತ್ತಾ, ಸುವರ್ಣ ಭೂಷಿತವಾಗಿದ್ದ ಒಂದು ಶೂಲವನ್ನೆತ್ತಿಕೊಂಡು ಅತ್ಯಂತ ಕ್ರುದ್ಧನಾಗಿ – ಇಂದ್ರನೇ! 'ಈಗ ನೀನು ಬದುಕುಳಿಯಲಾರೆ' ಎಂದು ಗರ್ಜಿಸುತ್ತಾ, ಸಿಂಹನಾದವನ್ನು ಮಾಡುತ್ತಾ ದೇವೇಂದ್ರನ ಮೇಲೆ ಆ ನಮೂಚಿಯು ಶೂಲವನ್ನು ರಭಸದಿಂದ ಎಸೆದನು. ॥ ೩೦ ॥ ರಾಜೇಂದ್ರನೇ! ನಮೂಚಿಯಿಂದ ಬಿಡಲ್ಪಟ್ಟ ತ್ರಿಶೂಲವು ತನ್ನ ಕಡೆಗೆ ಬರುತ್ತಿರುವುದನ್ನು ನೋಡಿದ ಇಂದ್ರನು ತನ್ನ ನಿಶಿತವಾದ ಬಾಣಗಳಿಂದ ಆಕಾಶದಲ್ಲೇ ಸಾವಿರಾರು ತುಂಡುಗಳಾಗಿ ಕತ್ತರಿಸಿಬಿಟ್ಟನು. ಇದಾದ ಬಳಿಕ ದೇವೇಂದ್ರನು ಅತ್ಯಂತ ಕ್ರುದ್ಧನಾಗಿ ಅವನ ಶಿರವನ್ನು ತುಂಡರಿಸಲಿಕ್ಕಾಗಿ ವಜ್ರಾಯುಧವನ್ನು ರಾಕ್ಷಸನ ಕತ್ತಿನ ಮೇಲೆ ಪ್ರಯೋಗಿಸಿದನು. ॥ ೩೧ ॥ ಇಂದ್ರನು ಭಾರೀ ವೇಗದಿಂದ ಆ ವಜ್ರವನ್ನು ಪ್ರಯೋಗಿಸಿದ್ದರೂ, ಆ ಯಶಸ್ವೀ ವಜ್ರದಿಂದ ಅವನ ಚರ್ಮದ ಮೇಲೆ ಗುರುತುಕೂಡ ಮಾಡದೆ ಹೋಯಿತು. ಯಾವ ವಜ್ರವು ಮಹಾಬಲಶಾಲಿಯಾದ ವೃತ್ರಾಸುರನ ಶರೀರವನ್ನು

ನ ತಸ್ಯ ಹಿ ತ್ವಚಮಪಿ ವಜ್ರ ಊರ್ಜಿತೋ
ಬಿಭೇದ ಯಃ ಸುರಪತಿನೌಜಸೇರಿತಃ ।
ತದದ್ಭುತಂ ಪರಮತಿವೀರ್ಯವೃತ್ರಭಿತ್
ತಿರಸ್ಕೃತೋ ನಮುಚಿಶಿರೋಧರತ್ವಚಾ ॥ ೩೨ ॥

ತಸ್ಮಾದಿಂದ್ರೋಽಬಿಭೇಚ್ಛತ್ರೋರ್ವಜ್ರಃ ಪ್ರತಿಹತೋ ಯತಃ ।
ಕಿಮಿದಂ ದೈವಯೋಗೇನ ಭೂತಂ ಲೋಕವಿಮೋಹನಮ್ ॥ ೩೩ ॥

ಯೇನ ಮೇ ಪೂರ್ವಮದ್ರೀಣಾಂ ಪಕ್ಷಚ್ಛೇದಃ ಪ್ರಜಾತ್ಯಯೇ ।
ಕೃತೋ ನಿವಿಶತಾಂ ಭಾರೈಃ ಪತತ್ತ್ರೈಃ ಪತತಾಂ ಭುವಿ ॥ ೩೪ ॥

ತಪಃಸಾರಮಯಂ ತ್ವಾಷ್ಟ್ರಂ ವೃತ್ರೋ ಯೇನ ವಿಪಾಟಿತಃ ।
ಅನ್ಯೇ ಚಾಪಿ ಬಲೋಪೇತಾಃ ಸರ್ವಾಸ್ತ್ರೈರಕ್ಷತತ್ವಚಃ ॥ ೩೫ ॥

ಸೋಽಯಂ ಪ್ರತಿಹತೋ ವಜ್ರೋ
ಮಯಾ ಮುಕ್ತೋಽಸುರೇಽಲ್ಪಕೇ ।
ನಾಹಂ ತದಾದದೇ ದಂಡಂ
ಬ್ರಹ್ಮತೇಜೋಽಪ್ಯಕಾರಣಮ್ ॥ ೩೬ ॥

ಇತಿ ಶಕ್ರಂ ವಿಷೀದಂತಮಾಹ ವಾಗಶರೀರಿಣೀ ।
ನಾಯಂ ಶುಷ್ಕೈರಥೋ ನಾರ್ದ್ರೈರ್ವಧಮರ್ಹತಿ ದಾನವಃ ॥ ೩೭ ॥

ಮಯಾಸ್ಮೈ ಯದ್ವರೋ ದತ್ತೋ
ಮೃತ್ಯುರ್ನೈವಾರ್ದ್ರಶುಷ್ಕಯೋಃ ।
ಅತೋಽನ್ಯಶ್ಚಿಂತನೀಯಸ್ತೇ
ಉಪಾಯೋ ಮಘವನ್ರಿಪೋಃ ॥ ೩೮ ॥

ತಾಂ ದೈವೀಂ ಗಿರಮಾಕರ್ಣ್ಯ ಮಘವಾನ್ಸುಸಮಾಹಿತಃ ।
ಧ್ಯಾಯನ್ ಫೇನಮಥಾಪಶ್ಯದುಪಾಯಮುಭಯಾತ್ಮಕಮ್ ॥ ೩೯ ॥

ನ ಶುಷ್ಕೇಣ ನ ಚಾರ್ದ್ರೇಣ ಜಹಾರ ನಮುಚೇಃ ಶಿರಃ ।
ತಂ ತುಷ್ಟುವುರ್ಮುನಿಗಣಾ ಮಾಲ್ಯೈಶ್ಚಾವಾಕಿರನ್ವಿಭುಮ್ ॥ ೪೦ ॥

ಗಂಧರ್ವಮುಖ್ಯೌ ಜಗತುರ್ವಿಶ್ವಾವಸುಪರಾವಸೂ ।
ದೇವದುಂದುಭಯೋ ನೇದುರ್ನರ್ತಕ್ಯೋ ನನೃತುರ್ಮುದಾ ॥ ೪೧ ॥

ಅನ್ಯೇಽಪ್ಯೇವಂ ಪ್ರತಿದ್ವಂದ್ವಾನ್ವಾಯ್ವಗ್ನಿವರುಣಾದಯಃ ।
ಸೂದಯಾಮಾಸುರಸ್ತ್ರೌಘೈರ್ಮೃಗಾನ್ಕೇಸರಿಣೋ ಯಥಾ ॥ ೪೨ ॥

ತುಂಡು-ತುಂಡುಮಾಡಿತ್ತೋ ಅದನ್ನು ನಮೂಚಿಯ ಕತ್ತಿನ ತ್ವಚೆಯು ತಿರಸ್ಕರಿಸಿತ್ತು. ಇದೊಂದು ಪರಮಾಶ್ಚರ್ಯಕರ ಘಟನೆ ನಡೆಯಿತು. ॥ ೩೨ ॥ ವಜ್ರಾಯುಧವು ನಮೂಚಿಯ ವಿಷಯದಲ್ಲಿ ಬಲಹೀನವಾಗಿರುವುದನ್ನು ಕಂಡು ಇಂದ್ರನು ಭಯಗೊಂಡನು. 'ಲೋಕಗಳನ್ನು ವಿಮೋಹಗೊಳಿಸುವ ರಾಕ್ಷಸ ರೂಪದ ಈ ಪ್ರಾಣಿಯು ದೈವಯೋಗದಿಂದಲೇ ಹುಟ್ಟಿರಬಹುದೇ ?' ಎಂದು ಇಂದ್ರನು ಯೋಚಿಸತೊಡಗಿದನು. ॥ ೩೩ ॥ ಹಿಂದಿನ ಯುಗದಲ್ಲಿ ಈ ಪರ್ವತಗಳು ರೆಕ್ಕೆಗಳಿಂದ ಹಾರಾಡುತ್ತಾ, ತಿರುಗುತ್ತಿರುವಾಗ ಭೂಮಿಯಲ್ಲಿ ಬಿದ್ದು ಪ್ರಜೆಗಳನ್ನು ನಾಶಮಾಡುತ್ತಿದ್ದವು. ಇದನ್ನು ಕಂಡ ನಾನು ನನ್ನ ಈ ವಜ್ರಾಯುಧದಿಂದಲೇ ಪರ್ವತಗಳ ರೆಕ್ಕೆಗಳನ್ನು ಕತ್ತರಿಸಿಹಾಕಿದ್ದೆ. ಈಗ ವಜ್ರಾಯುಧವು ನಮೂಚಿಯ ವಿಷಯದಲ್ಲಿ ವ್ಯರ್ಥವಾಗಿ ಬಿಟ್ಟಿದೆಯಲ್ಲ! ॥ ೩೪ ॥ ತ್ವಷ್ಟೃ ಪ್ರಜಾಪತಿಯ ತಪಸ್ಸಿನ ಸಾರವೇ ವೃತ್ರಾಸುರನ ರೂಪದಲ್ಲಿ ಪ್ರಕಟವಾಗಿತ್ತು. ಅಂತಹವನನ್ನೇ ನಾನು ಈ ವಜ್ರದಿಂದ ಸಂಹರಿಸಿಬಿಟ್ಟಿದ್ದೆ. ಇನ್ನೂ ಅನೇಕ ಬಲಿಷ್ಠರಾಗಿದ್ದ ಮತ್ತು ಯಾವುದೇ ಶಸ್ತ್ರಗಳಿಂದ ಕಿಂಚಿತ್ತಾದರೂ ಗಾಯಗೊಳ್ಳದಿದ್ದ ಮಹಾಸುರರನ್ನು ಈ ವಜ್ರಾಯುಧದಿಂದಲೇ ನಾನು ಸಂಹರಿಸಿದ್ದೆ. ॥ ೩೫ ॥ ಅಂತಹ ಶ್ರೇಷ್ಠವಾದ ನನ್ನ ವಜ್ರಾಯುಧವು ಅತ್ಯಲ್ಪನಾದ ಈ ನಮೂಚಿರಾಕ್ಷಸನ ವಿಷಯದಲ್ಲಿ ಪರಾಭವವನ್ನು ಹೊಂದಿತು. ಈ ವಜ್ರಾಯುಧವು ಮಹಾಮಹಿಮನಾದ ದಧೀಚಿ ಮಹರ್ಷಿಯ ಬ್ರಹ್ಮತೇಜದಿಂದ ರೂಪಿತವಾಗಿದ್ದರೂ ನಿಷ್ಕಾರಣವಾಗಿ ಬಲಗುಂದಿದ ಇದನ್ನು ನಾನು ಇನ್ನು ಮುಂದೆ ಹಿಡಿಯುವುದಿಲ್ಲ. ॥ ೩೬ ॥ ಹೀಗೆ ಇಂದ್ರನು ವಿಷಾದಿಸುತ್ತಿರುವಾಗ ಆಕಾಶವಾಣಿಯು ಹೀಗೆಂದು ನುಡಿಯಿತು – 'ವಾಸವನೇ ! ಈ ರಾಕ್ಷಸನನ್ನು ಒಣಗಿರುವ ವಸ್ತುವಿನಿಂದಾಗಲೀ, ಹಸಿಯಾಗಿರುವ ವಸ್ತುವಿನಿಂದಾಗಲೀ ವಧಿಸಲು ಸಾಧ್ಯವಿಲ್ಲ. ಅವನಿಗೆ ಇಂತಹ ವರಬಲವಿದೆ. ಈಗ ನೀನು ಇವನನ್ನು ಕೊಲ್ಲುವ ಬೇರೆ ಉಪಾಯವನ್ನು ಯೋಚಿಸು'. ॥ ೩೭-೩೮ ॥ ಮಹೇಂದ್ರನು ಆ ದೇವವಾಣಿಯನ್ನು ಕೇಳಿ ಏಕಾಗ್ರಚಿತ್ತನಾಗಿ ಯೋಚಿಸುತ್ತಾ- ಯೋಚಿಸುತ್ತಾ ಕೊನೆಗೆ ಅವನಿಗೆ ಹೊಳೆಯಿತು – ಸಮುದ್ರದ ನೊರೆಯು ಒಣಗಿದ್ದೂ ಅಲ್ಲ, ಹಸಿಯೂ ಅಲ್ಲ. ॥ ೩೯ ॥ ಆದ್ದರಿಂದ ಅದನ್ನು ಹಸಿ ಎಂದೂ ಹೇಳುವ ಹಾಗಿಲ್ಲ, ಒಣಗಿದ್ದು ಎಂದೂ ಹೇಳುವ ಹಾಗಿಲ್ಲ. ಆದ್ದರಿಂದ ಇಂದ್ರನು ಆ ನೊರೆಯಿಂದಲೇ ನಮೂಚಿಯ ಶಿರವನ್ನು ತುಂಡರಿಸಿದನು. ಆಗ ಋಷಿ-ಮುನಿಗಳು ಒಡೆಯನಾದ ಇಂದ್ರನನ್ನು ಸ್ತುತಿಸಿ ಅವನ ಮೇಲೆ ಹೂಮಾಲೆಗಳನ್ನು ಮಳೆಗರೆದರು. ॥ ೪೦ ॥ ಗಂಧರ್ವ ಶಿರೋಮಣಿ ವಿಶ್ವಾವಸು ಹಾಗೂ ಪರಾವಸುಗಳು ಹಾಡತೊಡಗಿದರು. ದೇವತೆಗಳು ದುಂದುಭಿಗಳನ್ನು ನುಡಿಸತೊಡಗಿದರು. ನರ್ತಕಿಯರು ಕುಣಿಯತೊಡಗಿದರು. ॥ ೪೧ ॥ ಹೀಗೆಯೇ ವಾಯು, ಅಗ್ನಿ, ವರುಣ ಮುಂತಾದ ಇತರ ದೇವತೆಗಳೂ ಕೂಡ ತಮ್ಮ ಅಸ್ತ್ರ-ಶಸ್ತ್ರಗಳಿಂದ ಸಿಂಹವು ಜಿಂಕೆಗಳನ್ನು ಕೊಂದುಹಾಕುವಂತೆ ಎದುರಾಳಿ ರಾಕ್ಷಸರನ್ನು ಧ್ವಂಸಮಾಡಿದರು. ॥ ೪೨ ॥ ಪರೀಕ್ಷಿತನೇ ! ದಾನವರದ್ದಾದರೋ ಪೂರ್ಣನಾಶವಾಗಿದೆ ಎಂದು ನೋಡಿದ ಬ್ರಹ್ಮದೇವರು ದೇವರ್ಷಿಗಳಾದ

ಬ್ರಹ್ಮಣಾ ಪ್ರೇಷಿತೋ ದೇವಾನ್ ದೇವರ್ಷಿರ್ನಾರದೋ ನೃಪ ।
ವಾರಯಾಮಾಸ ವಿಬುಧಾನ್ದೃಷ್ಟ್ವಾ ದಾನವಸಂಕ್ಷಯಮ್ ॥ ೪೩ ॥

ನಾರದ ಉವಾಚ

ಭವದ್ಭಿರಮೃತಂ ಪ್ರಾಪ್ತಂ ನಾರಾಯಣಭುಜಾಶ್ರಯೈಃ ।
ಶ್ರಿಯಾ ಸಮೇಧಿತಾಃ ಸರ್ವ ಉಪಾರಮತ ವಿಗ್ರಹಾತ್ ॥ ೪೪ ॥

ಶ್ರೀಶುಕ ಉವಾಚ

ಸಂಯಮ್ಯ ಮನ್ಯುಸಂರಂಭಂ ಮಾನಯಂತೋ ಮುನೇರ್ವಚಃ ।
ಉಪಗೀಯಮಾನಾನುಚರೈರ್ಯಯುಃ ಸರ್ವೇ ತ್ರಿವಿಷ್ಟಪಮ್ ॥ ೪೫ ॥

ಯೇಽವಶಿಷ್ಟಾ ರಣೇ ತಸ್ಮಿನ್ನಾರದಾನುಮತೇನ ತೇ ।
ಬಲಿಂ ವಿಪನ್ನಮಾದಾಯ ಅಸ್ತಂ ಗಿರಿಮುಪಾಗಮನ್ ॥ ೪೬ ॥

ತತ್ರಾವಿನಷ್ಟಾವಯವಾನ್ವಿದ್ಯಮಾನಶಿರೋಧರಾನ್ ।
ಉಶನಾ ಜೀವಯಾಮಾಸ ಸಂಜೀವಿನ್ಯಾ ಸ್ವವಿದ್ಯಯಾ ॥ ೪೭ ॥

ಬಲಿಶ್ಚೋಶನಸಾ ಸ್ಪೃಷ್ಟಃ ಪ್ರತ್ಯಾಪನ್ನೇಂದ್ರಿಯಸ್ಮೃತಿಃ ।
ಪರಾಜಿತೋಽಪಿ ನಾಖಿದ್ಯಲ್ಲೋಕತತ್ತ್ವವಿಚಕ್ಷಣಃ ॥ ೪೮ ॥

ನಾರದರನ್ನು ದೇವತೆಗಳ ಬಳಿಗೆ ಕಳಿಸಿದರು. ನಾರದರು ಅಲ್ಲಿಗೆ ಹೋಗಿ ಮುಂದೆ ಯುದ್ಧ ಮಾಡದಂತೆ ದೇವತೆಗಳನ್ನು ತಡೆದರು. ॥ ೪೩ ॥

ನಾರದರು ಹೇಳಿದರು – ದೇವತೆಗಳಿರಾ ! ಶ್ರೀನಾರಾಯಣನ ಭುಜಬಲವನ್ನು ಆಶ್ರಯಿಸಿ ನೀವು ಅಮೃತವನ್ನು ಪಡೆದಿರಿ. ಶ್ರೀಲಕ್ಷ್ಮೀದೇವಿಯ ಕೃಪಾಕಟಾಕ್ಷದಿಂದ ಅಭಿವೃದ್ಧಿಯನ್ನು ಹೊಂದಿರುವಿರಿ. ನೀವು ಯುದ್ಧವನ್ನು ನಿಲ್ಲಿಸಿಬಿಡಿರಿ. ॥ ೪೪ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ರಾಜೇಂದ್ರ ! ದೇವರ್ಷಿ ನಾರದರ ಮಾತನ್ನು ಅನುಮೋದಿಸಿ ದೇವತೆಗಳು ಕೋಪವನ್ನು ತೊರೆದು ಶಾಂತರಾದರು. ಮತ್ತೆ ಗಂಧರ್ವಾಪ್ಸರೆಯರು ಸ್ತುತಿಸುತ್ತಾ ಇರುವಾಗ ಅವರು ತಮ್ಮ ಸ್ವರ್ಗಲೋಕಕ್ಕೆ ಹಿಂದಿರುಗಿದರು. ॥ ೪೫ ॥ ಯುದ್ಧದಲ್ಲಿ ಉಳಿದುಳಿದಿದ್ದ ದೈತ್ಯರು ನಾರದ ಮಹರ್ಷಿಗಳ ಸಮ್ಮತಿಯಿಂದ ವಜ್ರಾಯುಧದಿಂದ ಸತ್ತುಬಿದ್ದಿದ್ದ ಬಲಿಯನ್ನು ಎತ್ತಿಕೊಂಡು ಅಸ್ತಾಚಲಕ್ಕೆ ತೆರಳಿದರು. । ೪೬ । ಅಲ್ಲಿ ಶುಕ್ರಾಚಾರ್ಯರು ತಮ್ಮ ಸಂಜೀವನೀ ವಿದ್ಯೆಯಿಂದ ಅಂಗಾಂಗಗಳು ಪೂರ್ಣವಾಗಿ ತುಂಡಾಗದಿದ್ದವರನ್ನು, ಗಾಯಗೊಂಡವರನ್ನು ಬದುಕಿಸಿದರು. ॥ ೪೭ ॥ ಶುಕ್ರಾಚಾರ್ಯರು ಸ್ಪರ್ಶಿಸಿದೊಡನೆ ಬಲಿಯ ಇಂದ್ರಿಯಗಳಲ್ಲಿ ಚೈತನ್ಯವೂ, ಮನಸ್ಸಿನಲ್ಲಿ ಸ್ಮೃತಿಯೂ ಮರುಕಳಿಸಿ ಜೀವಂತನಾದನು. ಪ್ರಪಂಚದಲ್ಲಿ ಜಯಾಪಜಯಗಳು, ಜೀವನ–ಮೃತ್ಯುಗಳು ಕಾಲನ ಪ್ರೇರಣೆಯಿಂದ ನಡೆಯುತ್ತಿವೆ ಎಂದು ತಿಳಿದಿದ್ದ ಬಲಿಯು ತಾನು ಪರಾಜಿತನಾದುದಕ್ಕೆ ಸ್ವಲ್ಪವಾದರೂ ದುಃಖಿಸಲಿಲ್ಲ. ॥ ೪೮ ॥

ಹನ್ನೊಂದನೆಯ ಅಧ್ಯಾಯವು ಮುಗಿಯಿತು. ॥ ೧೧ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಅಷ್ಟಮ ಸ್ಕಂಧೇ
ದೇವಾಸುರಸಂಗ್ರಾಮೇ ಏಕಾದಶೋಽಧ್ಯಾಯಃ ॥ ೧೧ ॥

ಹನ್ನೆರಡನೆಯ ಅಧ್ಯಾಯ

ಮೋಹಿನೀರೂಪವನ್ನು ನೋಡಿ ಮಹಾದೇವನು ಮೋಹಿತನಾದುದು

ಶ್ರೀಬಾದರಾಯಣಿರುವಾಚ

ವೃಷಧ್ವಜೋ ನಿಶಮ್ಯೇದಂ ಯೋಷಿದ್ರೂಪೇಣ ದಾನವಾನ್ ।
ಮೋಹಯಿತ್ವಾ ಸುರಗಣಾನ್ಹರಿಃ ಸೋಮಮಪಾಯಯತ್ ॥ ೧ ॥

ವೃಷಮಾರುಹ್ಯ ಗಿರಿಶಃ ಸರ್ವಭೂತಗಣೈರ್ವೃತಃ ।
ಸಹ ದೇವ್ಯಾ ಯಯೌ ದ್ರಷ್ಟುಂ ಯತ್ರಾಸ್ತೇ ಮಧುಸೂದನಃ ॥ ೨ ॥

ಸಭಾಜಿತೋ ಭಗವತಾ ಸಾದರಂ ಸೋಮಯಾ ಭವಃ ।
ಸೂಪವಿಷ್ಟ ಉವಾಚೇದಂ ಪ್ರತಿಪೂಜ್ಯ ಸ್ಮಯನ್ಹರಿಮ್ ॥ ೩ ॥

ಶ್ರೀಶುಕಮುನಿಗಳು ಹೇಳುತ್ತಾರೆ – ಎಲೈ ಪರೀಕ್ಷಿತನೇ ! ಶ್ರೀಹರಿಯು ಸ್ತ್ರೀರೂಪವನ್ನು ಧರಿಸಿ ಅಸುರರಿಗೆ ಮೋಹವನ್ನುಂಟುಮಾಡಿ, ದೇವತೆಗಳಿಗೆ ಅಮೃತವನ್ನು ಕುಡಿಸಿದನು ಎಂದು ಕೇಳಿ ವೃಷಭಧ್ವಜನಾದ ಪರಮೇಶ್ವರನು ಪಾರ್ವತಿಯೊಡನೆ ವೃಷಭವನ್ನೇರಿ ಸಮಸ್ತ ಭೂತಗಣಗಳನ್ನು ಕರೆಸಿಕೊಂಡು ಭಗವಾನ್ ಮಧುಸೂದನನು ಇದ್ದಲ್ಲಿಗೆ ಆಗಮಿಸಿದನು. ॥ ೧-೨ ॥ ಭಗವಾನ್ ಶ್ರೀಹರಿಯು ಪ್ರೇಮದಿಂದ ಭಗವಂತನಾದ ಪಾರ್ವತೀ ಪರಮೇಶ್ವರರನ್ನು ಸ್ವಾಗತಿಸಿ ಸತ್ಕಾರಮಾಡಿದನು. ಶಿವನು ಸುಖಾಸೀನನಾಗಿ ಭಗವಂತನನ್ನು ಸಮ್ಮಾನಿಸುತ್ತಾ ನಸುನಗುತ್ತಾ ಇಂತೆಂದನು. ॥ ೩ ॥

ಶ್ರೀಮಹಾದೇವ ಉವಾಚ

ದೇವದೇವ ಜಗದ್ವ್ಯಾಪಿನ್‌ಜಗದೀಶ ಜಗನ್ಮಯ ।
ಸರ್ವೇಷಾಮಪಿ ಭಾವಾನಾಂ ತ್ವಮಾತ್ಮಾ ಹೇತುರೀಶ್ವರಃ ॥ ೪ ॥

ಆದ್ಯಂತಾವಸ್ಯ ಯನ್ಮಧ್ಯಮಿದಮನ್ಯದಹಂ ಬಹಿಃ ।
ಯತೋಽವ್ಯಯಸ್ಯ ನೈತಾನಿ ತತ್ಸತ್ಯಂ ಬ್ರಹ್ಮ ಚಿದ್ಭವಾನ್ ॥ ೫ ॥

ತವೈವ ಚರಣಾಂಭೋಜಂ ಶ್ರೇಯಸ್ಕಾಮಾ ನಿರಾಶಿಷಃ ।
ವಿಸೃಜ್ಯೋಭಯತಃ ಸಂಗಂ ಮುನಯಃ ಸಮುಪಾಸತೇ ॥ ೬ ॥

ತ್ವಂ ಬ್ರಹ್ಮ ಪೂರ್ಣಮಮೃತಂ ವಿಗುಣಂ ವಿಶೋಕ-
ಮಾನಂದಮಾತ್ರಮವಿಕಾರಮನನ್ಯದನ್ಯತ್ ।
ವಿಶ್ವಸ್ಯ ಹೇತುರುದಯಸ್ಥಿತಿಸಂಯಮಾನಾ-
ಮಾತ್ಮೇಶ್ವರಶ್ಚ ತದಪೇಕ್ಷತಯಾನಪೇಕ್ಷಃ ॥ ೭ ॥

ಏಕಸ್ತ್ವಮೇವ ಸದಸದ್ದ್ವಯಮದ್ವಯಂ ಚ
ಸ್ವರ್ಣಂ ಕೃತಾಕೃತಮಿವೇಹ ನ ವಸ್ತುಭೇದಃ ।
ಅಜ್ಞಾನತಸ್ತ್ವಯಿ ಜನೈರ್ವಿಹಿತೋ ವಿಕಲ್ಪೋ
ಯಸ್ಮಾದ್ಗುಣವ್ಯತಿಕರೋ ನಿರುಪಾಧಿಕಸ್ಯ ॥ ೮ ॥

ತ್ವಾಂ ಬ್ರಹ್ಮ ಕೇಚಿದವಯಂತ್ಯುತ ಧರ್ಮಮೇಕೇ
ಏಕೇ ಪರಂ ಸದಸತೋಃ ಪುರುಷಂ ಪರೇಶಮ್ ।
ಅನ್ಯೇಽವಯಂತಿ ನವಶಕ್ತಿಯುತಂ ಪರಂ ತ್ವಾಂ
ಕೇಚಿನ್ಮಹಾಪುರುಷಮವ್ಯಯಮಾತ್ಮತಂತ್ರಮ್ ॥ ೯ ॥

ನಾಹಂ ಪರಾಯುರ್ಋಷಯೋ ನ ಮರೀಚಿಮುಖ್ಯಾ
ಜಾನಂತಿ ಯದ್ವಿರಚಿತಂ ಖಲು ಸತ್ತ್ವಸರ್ಗಾಃ ।
ಯನ್ಮಾಯಯಾ ಮುಷಿತಚೇತಸ ಈಶ ದೈತ್ಯ-
ಮರ್ತ್ಯಾದಯಃ ಕಿಮುತ ಶಶ್ವದಭದ್ರವೃತ್ತಾಃ ॥ ೧೦ ॥

ಶ್ರೀಮಹಾದೇವನು ಹೇಳಿದನು – ದೇವದೇವನೇ! ಪ್ರಪಂಚವೆಲ್ಲವನ್ನು ವ್ಯಾಪಿಸಿಕೊಂಡಿರುವವನೇ! ಮೂಜಗದೊಡೆಯನೇ! ಜಗತ್ಸ್ವರೂಪನೇ! ಸಮಸ್ತ ಚರಾಚರ ಪದಾರ್ಥಗಳ ಮೂಲಕಾರಣನೂ, ಈಶ್ವರನೂ, ಆತ್ಮನೂ ನೀನೇ ಆಗಿರುವೆ. ॥ ೪ ॥ ಈ ಜಗತ್ತಿಗೆ ಆದಿ-ಮಧ್ಯ-ಅಂತ್ಯವೂ ನೀನೇ ಆಗಿರುವೆ. ಆದರೆ ನಿನಗೆ ಆದಿ-ಮಧ್ಯಾಂತಗಳಾವುವೂ ಇಲ್ಲ. ನಿನ್ನ ಅವಿನಾಶೀ ಸ್ವರೂಪದಲ್ಲಿ ದ್ರಷ್ಟಾ, ದೃಶ್ಯ, ಭೋಕ್ತಾ, ಭೋಗ್ಯ ಮುಂತಾದ ಭೇದಗಳಾವುವೂ ಇಲ್ಲ. ವಾಸ್ತವವಾಗಿ ನೀನು ಸತ್ಯ, ಚಿನ್ಮಾತ್ರ ಬ್ರಹ್ಮನೇ ಆಗಿರುವೆ. ॥ ೫ ॥ ಶ್ರೇಯಸ್ಕಾಮರಾದ ಮಹಾತ್ಮರು ಇಹ-ಪರಲೋಕಗಳ ಆಸಕ್ತಿಯನ್ನು ತೊರೆದು, ಸಮಸ್ತ ಕಾಮನೆಗಳನ್ನು ಪರಿತ್ಯಾಗಮಾಡಿ ನಿನ್ನ ಚರಣಕಮಲಗಳ ಆರಾಧನೆಯಲ್ಲೇ ಸದಾಕಾಲ ಆಸಕ್ತರಾಗಿರುತ್ತಾರೆ. ॥ ೬ ॥. ಪರಂಜ್ಯೋತಿಯೇ! ಪರಮಾತ್ಮನೇ! ನೀನು ಅಮೃತಸ್ವರೂಪನು. ಸಮಸ್ತ ಪ್ರಾಕೃತಗುಣಗಳಿಂದ ರಹಿತನಾದವನು. ಶೋಕದ ನೆರಳೂ ಕೂಡ ಇಲ್ಲದವನು. ನೀನು ಪರಿಪೂರ್ಣ ಬ್ರಹ್ಮಸ್ವರೂಪನಾಗಿರುವೆ. ಕೇವಲ ಆನಂದಸ್ವರೂಪನಾಗಿದ್ದು ನಿರ್ವಿಕಾರನಾಗಿರುವೆ. ನಿನ್ನಿಂದ ಭಿನ್ನವಾದುದು ಏನೂ ಇಲ್ಲ. ಆದರೆ ನೀನು ಎಲ್ಲಕ್ಕಿಂತ ಭಿನ್ನನಾಗಿರುವೆ. ನೀನು ವಿಶ್ವದ ಉತ್ಪತ್ತಿ-ಸ್ಥಿತಿ-ಪ್ರಳಯಗಳಿಗೆ ಪರಮ ಕಾರಣನಾಗಿರುವೆ. ಸಮಸ್ತ ಜೀವರಿಗೆ ಶುಭಾಶುಭ ಕರ್ಮಫಲಗಳನ್ನು ಕೊಡುವ ಸ್ವಾಮಿಯೂ ನೀನೇ ಆಗಿರುವೆ. ಆದರೆ ಇವೆಲ್ಲ ಮಾತುಗಳು ಜೀವಿಗಳ ಅಪೇಕ್ಷೆಯಿಂದಲೇ ಹೇಳಲಾಗುತ್ತವೆ. ವಾಸ್ತವವಾಗಿ ನೀನು ಎಲ್ಲದರ ಅಪೇಕ್ಷೆಯಿಂದ ರಹಿತ – ಅನಪೇಕ್ಷನಾಗಿರುವೆ. ॥ ೭ ॥ ಸ್ವಾಮಿಯೇ! ಆಭರಣದ ರೂಪದಲ್ಲಿರುವ ಚಿನ್ನಕ್ಕೂ, ಮೂಲರೂಪದಲ್ಲಿರುವ ಚಿನ್ನಕ್ಕೂ ಯಾವ ವ್ಯತ್ಯಾಸವೂ ಇರದೆ ಎರಡೂ ಒಂದೇ ವಸ್ತುವಾಗಿದೆ. ಹಾಗೆಯೇ ಇಲ್ಲಿ ಇರುವ ಕಾರ್ಯ-ಕಾರಣ, ದ್ವೈತ-ಅದ್ವೈತ ಇವೆಲ್ಲವೂ ಏಕಮಾತ್ರ ನೀನೇ ಆಗಿರುವೆ. ನಿನ್ನ ವಾಸ್ತವಿಕ ಸ್ವರೂಪವನ್ನು ತಿಳಿಯದ ಕಾರಣ ಜನರು ನಿನ್ನಲ್ಲಿ ನಾನಾರೀತಿಯ ಭೇದಭಾವಗಳನ್ನು ಮತ್ತು ವಿಕಲ್ಪಗಳನ್ನು ಮಾಡುತ್ತಾರೆ. ನಿನ್ನಲ್ಲಿ ಯಾವುದೇ ಪ್ರಕಾರದ ಉಪಾಧಿಯೂ ಇಲ್ಲದಿದ್ದರೂ ಗುಣಗಳಿಂದಾಗಿ ಭೇದದ ಪ್ರತೀತಿಯಾಗುವುದೇ ಇದಕ್ಕೆ ಕಾರಣವಾಗಿದೆ. ॥ ೮ ॥ ಪ್ರಭುವೇ! ನಿನ್ನನ್ನು ಕೆಲವರು ಬ್ರಹ್ಮನೆಂದು ತಿಳಿಯುತ್ತಾರೆ. ಬೇರೆ ಕೆಲವರು ನಿನ್ನನ್ನು ಧರ್ಮನೆಂದು ತಿಳಿದು ವರ್ಣಿಸುತ್ತಾರೆ. ಹೀಗೆಯೇ ಇನ್ನೂ ಕೆಲವರು ನಿನ್ನನ್ನು ಪ್ರಕೃತಿ ಮತ್ತು ಪುರುಷರಿಗಿಂತಲೂ ಅತೀತನಾದ ಪರಮೇಶ್ವರನೆಂದು ಅರಿಯುತ್ತಾರೆ. ಕೆಲವರು ನಿನ್ನನ್ನು ವಿಮಲಾ, ಉತ್ಕರ್ಷಿಣೀ, ಜ್ಞಾನಾ, ಕ್ರಿಯಾ, ಯೋಗಾ, ಪ್ರಹ್ವೀ, ಸತ್ಯಾ, ಈಶಾನಾ ಮತ್ತು ಅನುಗ್ರಹಾ ಎಂಬ ಒಂಭತ್ತು ಶಕ್ತಿಗಳಿಂದ ಯುಕ್ತನಾದ ಮಹಾಪುರುಷನೆಂದು ಹೇಳುತ್ತಾರೆ. ಕೆಲವರು ಕ್ಲೇಶ-ಕರ್ಮ ಮುಂತಾದ ಬಂಧನಗಳಿಂದ ರಹಿತನಾದವನೆಂದೂ, ಪೂರ್ವಜರಿಗೂ ಪೂರ್ವಜನೆಂದೂ, ಅವಿನಾಶಿಯೆಂದೂ, ಸರ್ವತಂತ್ರಸ್ವತಂತ್ರನಾದ ಮಹಾಪುರುಷನೆಂದೂ ತಿಳಿಯುತ್ತಾರೆ. ॥ ೯ ॥ ಪ್ರಭೋ! ಸತ್ತ್ವಗುಣದ ಸೃಷ್ಟಿಯ ಅಂತರ್ಗತರಾಗಿರುವ ನಾನು ಬ್ರಹ್ಮಾ, ಮರೀಚಿಯೇ ಮೊದಲಾದ ಮಹರ್ಷಿಗಳೂ ಕೂಡ ನಿನ್ನ ಸೃಷ್ಟಿಯ ರಹಸ್ಯವನ್ನು ಅರಿಯುವು

ಸ ತ್ವಂ ಸಮೀಹಿತಮದಃ ಸ್ಥಿತಿಜನ್ಮನಾಶಂ
ಭೂತೇಹಿತಂ ಚ ಜಗತೋ ಭವಬಂಧಮೋಕ್ಷೌ ।
ವಾಯುರ್ಯಥಾ ವಿಶತಿ ಖಂ ಚ ಚರಾಚರಾಖ್ಯಂ
ಸರ್ವಂ ತದಾತ್ಮಕತಯಾವಗಮೋಽವರುಂತ್ಸೇ ॥ ೧೧ ॥

ಅವತಾರಾ ಮಯಾ ದೃಷ್ಟಾ
ರಮಮಾಣಸ್ಯ ತೇ ಗುಣೈಃ ।
ಸೋಽಹಂ ತದ್ದ್ರಷ್ಟುಮಿಚ್ಛಾಮಿ
ಯತ್ತೇ ಯೋಷಿದ್ವಪುರ್ಧೃತಮ್ ॥ ೧೨ ॥

ಯೇನ ಸಮ್ಮೋಹಿತಾ ದೈತ್ಯಾಃ ಪಾಯಿತಾಶ್ಚಾಮೃತಂ ಸುರಾಃ ।
ತದ್ದಿದೃಕ್ಷವ ಆಯಾತಾಃ ಪರಂ ಕೌತೂಹಲಂ ಹಿ ನಃ ॥ ೧೩ ॥

ಶ್ರೀಶುಕ ಉವಾಚ

ಏವಮಭ್ಯರ್ಥಿತೋ ವಿಷ್ಣುರ್ಭಗವಾನ್ ಶೂಲಪಾಣಿನಾ ।
ಪ್ರಹಸ್ಯ ಭಾವಗಂಭೀರಂ ಗಿರಿಶಂ ಪ್ರತ್ಯಭಾಷತ ॥ ೧೪ ॥

ಶ್ರೀಭಗವಾನುವಾಚ

ಕೌತೂಹಲಾಯ ದೈತ್ಯಾನಾಂ ಯೋಷಿದ್ವೇಷೋ ಮಯಾ ಕೃತಃ ।
ಪಶ್ಯತಾ ಸುರಕಾರ್ಯಾಣಿ ಗತೇ ಪೀಯೂಷಭಾಜನೇ ॥ ೧೫ ॥

ತತ್ತೇಽಹಂ ದರ್ಶಯಿಷ್ಯಾಮಿ ದಿದೃಕ್ಷೋಃ ಸುರಸತ್ತಮ ।
ಕಾಮಿನಾಂ ಬಹು ಮಂತವ್ಯಂ ಸಂಕಲ್ಪಪ್ರಭವೋದಯಮ್ ॥ ೧೬ ॥

ಶ್ರೀಶುಕ ಉವಾಚ

ಇತಿ ಬ್ರುವಾಣೋ ಭಗವಾಂಸ್ತತ್ರೈವಾಂತರಧೀಯತ ।
ಸರ್ವತಶ್ಚಾರಯಂಶ್ಚಕ್ಷುರ್ಭವ ಆಸ್ತೇ ಸಹೋಮಯಾ ॥ ೧೭ ॥

ತತೋ ದದರ್ಶೋಪವನೇ ವರಸ್ತ್ರಿಯಂ
ವಿಚಿತ್ರಪುಷ್ಪಾರುಣಪಲ್ಲವದ್ರುಮೇ ।
ವಿಕ್ರೀಡತೀಂ ಕಂದುಕಲೀಲಯಾ ಲಸದ್
ದುಕೂಲಪರ್ಯಸ್ತನಿತಂಬ ಮೇಖಲಾಮ್ ॥ ೧೮ ॥

ಹಾಗಿರುವಾಗ ನಿನ್ನನ್ನು ತಿಳಿಯುವುದಾದರೂ ಹೇಗೆ? ಮತ್ತೆ ಮಾಯೆಯಿಂದ ಅಪಹೃತವಾದ ಚಿತ್ತವುಳ್ಳ, ರಜಸ್ತಮೋಗುಣ ಪ್ರಧಾನವಾದ ಕರ್ಮಗಳಲ್ಲೇ ಆಸಕ್ತರಾದ ಅಸುರರು, ಮನುಷ್ಯರು ನಿನ್ನ ಸೃಷ್ಟಿಯ ರಹಸ್ಯವನ್ನು ಹೇಗೆ ತಾನೇ ತಿಳಿದಾರು? ॥ ೧೦ ॥ ಸ್ವಾಮಿಯೇ! ನೀನು ಸರ್ವಾತ್ಮನೂ, ಜ್ಞಾನಸ್ವರೂಪನೂ ಆಗಿರುವೆ. ಆದರಿಂದ ವಾಯುವಿನಂತೆ ಆಕಾಶದಲ್ಲಿ ಅದೃಶ್ಯನಾಗಿದ್ದರೂ ಸಂಪೂರ್ಣ ಚರಾಚರ ಜಗತ್ತಿನಲ್ಲಿಯೂ ನೀನು ಸದಾ-ಸರ್ವದಾ ಉಪಸ್ಥಿತನಾಗಿರುವೆ. ಈ ಜಗತ್ತಿನ ಸ್ಥಿತಿ, ಉತ್ಪತ್ತಿ, ನಾಶ, ಪ್ರಾಣಿಗಳ ಕರ್ಮಗಳು, ಸಂಸಾರದ ಬಂಧನ-ಮೋಕ್ಷ ಇವೆಲ್ಲವನ್ನೂ ನೀನು ತಿಳಿದವನಾಗಿರುವೆ. ॥ ೧೧ ॥ ಪ್ರಭುವೇ! ನೀನು ಗುಣಗಳನ್ನು ಸ್ವೀಕರಿಸಿ ಲೀಲೆಮಾಡಲೋಸುಗ ಅನೇಕ ಅವತಾರಗಳನ್ನು ಮಾಡಿದಾಗ ನಾನು ಅವುಗಳ ದರ್ಶನವನ್ನು ಮಾಡಿಯೇ ಮಾಡುತ್ತೇನೆ. ಈಗ ನೀನು ಸ್ತ್ರೀರೂಪವನ್ನು ಧರಿಸಿ ಮೋಹಿನಿಯ ಅವತಾರವನ್ನು ಮಾಡಿರುವೆಯೋ ಆ ಅವತಾರವನ್ನೂ ದರ್ಶಿಸಲು ನಾನು ಬಯಸುತ್ತೇನೆ. ॥ ೧೨ ॥ ಆದರಿಂದ ದೈತ್ಯರನ್ನು ಮೋಹಗೊಳಿಸಿ ನೀನು ದೇವತೆಗಳಿಗೆ ಅಮೃತವನ್ನು ಕುಡಿಸಿದ್ದೆ ಸ್ವಾಮಿ! ಅದನ್ನು ನೋಡಲೆಂದೇ ನಾವೆಲ್ಲರೂ ಬಂದಿರುವೆವು. ನಮ್ಮ ಮನಸ್ಸಿನಲ್ಲಿ ಅದನ್ನು ನೋಡಲು ಬಹಳ ಕುತೂಹಲವಿದೆ. ॥ ೧೩ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಭಗವಾನ್ ಶಂಕರನು ಮಹಾವಿಷ್ಣುವಿನಲ್ಲಿ ಹೀಗೆ ಪ್ರಾರ್ಥಿಸಿದಾಗ ಗಂಭೀರಭಾವದಿಂದ ನಗುತ್ತಾ ಶಿವನಲ್ಲಿ ಇಂತೆಂದನು – ॥ ೧೪ ॥

ಶ್ರೀಭಗವಾನ್ ವಿಷ್ಣುವು ಹೇಳಿದನು – ಶಂಕರನೇ! ಆ ಸಮಯದಲ್ಲಿ ಅಮೃತಕಲಶವು ದೈತ್ಯರ ಕೈಸೇರಿ ಹೋಗಿತ್ತು. ಅದ್ದರಿಂದ ದೇವತೆಗಳ ಕಾರ್ಯವನ್ನು ನೆರವೇರಿಸಲೋಸುಗ ಹಾಗೂ ದೈತ್ಯರ ಮನಸ್ಸಿಗೆ ಹೊಸದೊಂದು ಕುತೂಹಲವನ್ನು ತೋರಲೋಸುಗ ನಾನೇ ಆ ಸ್ತ್ರೀರೂಪವನ್ನು ಧರಿಸಿದ್ದೆ. ॥ ೧೫ ॥ ದೇವಶಿರೋಮಣಿಯೇ! ಈಗ ನೀವೆಲ್ಲರೂ ಆ ರೂಪವನ್ನು ನೋಡಲು ಬಯಸುತ್ತಿರುವುದರಿಂದ ನಾನು ನಿಮಗೆ ತೋರಿಸುತ್ತೇನೆ. ಆದರೆ ಆ ನನ್ನ ರೂಪವು ಕಾಮಿಗಳಾದ ಪುರುಷರಿಗೆ ಆದರಣೀಯವಾದುದು. ಏಕೆಂದರೆ, ಅದು ಕಾಮಭಾವವನ್ನು ಉತ್ತೇಜಿತಗೊಳಿಸುವಂತಹುದು. ॥ ೧೬ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ! ಭಗವಂತನು ಶಿವನಲ್ಲಿ ಹೀಗೆ ಹೇಳಿ ಅಲ್ಲಿಯೇ ಅಂತರ್ಧಾನನಾದನು. ಭಗವಾನ್ ಶಂಕರನು ಉಮೆಯೊಡನೆ ನಾಲ್ಕೂ ದಿಕ್ಕುಗಳನ್ನು ನೋಡುತ್ತಾ ಅಲ್ಲಿಯೇ ಕುಳಿತಿದ್ದನು. ॥ ೧೭ ॥ ಅಷ್ಟರಲ್ಲಿ ಇದಿರ್ಗಡೆಯೇ ಒಂದು ಸುಂದರವಾದ ಉಪವನವನ್ನು ನೋಡಿದನು. ಅದರಲ್ಲಿ ಹಲವು ಬಗೆಯ ವೃಕ್ಷಗಳಿದ್ದು ಅವುಗಳು ಬಣ್ಣ-ಬಣ್ಣದ ಹೂವುಗಳಿಂದಲೂ ಚಿಗುರುಗಳಿಂದಲೂ ತುಂಬಿ-ತುಳುಕುತ್ತಿದ್ದವು. ಆ ಉದ್ಯಾನವನದಲ್ಲಿ ಪ್ರಕಾಶಮಾನವಾದ ಪೀತಾಂಬರವನ್ನು ಉಟ್ಟುಕೊಂಡು, ಸೊಂಟದಲ್ಲಿ ಒಡ್ಯಾಣ ಧರಿಸಿದ್ದು ಚೆಂಡಾಟವಾಡುತ್ತಿದ್ದ ಅತಿ ಚೆಲುವೆಯಾದ ಸ್ತ್ರೀಯನ್ನು ನೋಡಿದನು. ॥ ೧೮ ॥

ಆವರ್ತನೋದ್ವರ್ತನಕಂಪಿತಸ್ತನ-
ಪ್ರಕೃಷ್ಟಹಾರೋರುಭರೈಃ ಪದೇ ಪದೇ ।
ಪ್ರಭಜ್ಯಮಾನಾಮಿವ ಮಧ್ಯತಶ್ಚಲತ್
ಪದಪ್ರವಾಲಂ ನಯತೀಂ ತತಸ್ತತಃ ॥ ೧೯ ॥

ದಿಕ್ಷು ಭ್ರಮತ್ಕಂದುಕಚಾಪಲೈರ್ಭೃಶಂ
ಪ್ರೋದ್ವಿಗ್ನತಾರಾಯತಲೋಲಲೋಚನಾಮ್ ।
ಸ್ವಕರ್ಣವಿಭ್ರಾಜಿತಕುಂಡಲೋಲ್ಲಸತ್
ಕಪೋಲನೀಲಾಲಕಮಂಡಿತಾನನಾಮ್ ॥ ೨೦ ॥

ಶ್ಲಥದ್ದುಕೂಲಂ ಕಬರೀಂ ಚ ವಿಚ್ಯುತಾಂ
ಸನ್ನಹ್ಯತೀಂ ವಾಮಕರೇಣ ವಲ್ಗುನಾ ।
ವಿನಿಘ್ನತೀಮನ್ಯಕರೇಣ ಕಂದುಕಂ
ವಿಮೋಹಯಂತೀಂ ಜಗದಾತ್ಮಮಾಯಯಾ ॥ ೨೧ ॥

ತಾಂ ವೀಕ್ಷ್ಯ ದೇವ ಇತಿ ಕಂದುಕಲೀಲಯೇಷದ್
ವ್ರೀಡಾಸ್ಫುಟಸ್ಮಿತವಿಸೃಷ್ಟಕಟಾಕ್ಷಮುಷ್ಟಃ ।
ಸ್ತ್ರೀಪ್ರೇಕ್ಷಣಪ್ರತಿಸಮೀಕ್ಷಣವಿಹ್ವಲಾತ್ಮಾ
ನಾತ್ಮಾನಮಂತಿಕ ಉಮಾಂ ಸ್ವಗಣಾಂಶ್ಚ ವೇದ ॥ ೨೨ ॥

ತಸ್ಯಾಃ ಕರಾಗ್ರಾತ್ಸ ತು ಕಂದುಕೋ ಯದಾ
ಗತೋ ವಿದೂರಂ ತಮನುವ್ರಜತ್ಸ್ತ್ರಿಯಾಃ ।
ವಾಸಃ ಸಸೂತ್ರಂ ಲಘು ಮಾರುತೋಽಹರದ್
ಭವಸ್ಯ ದೇವಸ್ಯ ಕಿಲಾನುಪಶ್ಯತಃ ॥ ೨೩ ॥

ಏವಂ ತಾಂ ರುಚಿರಾಪಾಂಗೀಂ
ದರ್ಶನೀಯಾಂ ಮನೋರಮಾಮ್ ।
ದೃಷ್ಟ್ವಾ ತಸ್ಯಾಂ ಮನಶ್ಚಕ್ರೇ
ವಿಷಜ್ಜಂತ್ಯಾಂ ಭವಃ ಕಿಲ ॥ ೨೪ ॥

ತಯಾಪಹೃತವಿಜ್ಞಾನಸ್ತತ್ಕೃತಸ್ಮರವಿಹ್ವಲಃ ।
ಭವಾನ್ಯಾ ಅಪಿ ಪಶ್ಯಂತ್ಯಾ ಗತಹ್ರೀಸ್ತತ್ಪದಂ ಯಯೌ ॥ ೨೫ ॥

ಸಾ ತಮಾಯಾಂತಮಾಲೋಕ್ಯ ವಿವಸ್ತ್ರಾ ವ್ರೀಡಿತಾ ಭೃಶಮ್ ।
ನಿಲೀಯಮಾನಾ ವೃಕ್ಷೇಷು ಹಸಂತೀ ನಾನ್ವತಿಷ್ಠತ ॥ ೨೬ ॥

ತಾಮನ್ವಗಚ್ಛದ್ಭಗವಾನ್ಭವಃ ಪ್ರಮುಷಿತೇಂದ್ರಿಯಃ ।
ಕಾಮಸ್ಯ ಚ ವಶಂ ನೀತಃ ಕರೇಣುಮಿವ ಯೂಥಪಃ ॥ ೨೭ ॥

ಸೋಽನುವ್ರಜ್ಯಾತಿವೇಗೇನ ಗೃಹೀತ್ವಾನಿಚ್ಛತೀಂ ಸ್ತ್ರಿಯಮ್ ।
ಕೇಶಬಂಧ ಉಪಾನೀಯ ಬಾಹುಭ್ಯಾಂ ಪರಿಷಸ್ವಜೇ ॥ ೨೮ ॥

ಆಕೆಯು ಚೆಂಡಿನೊಡನೆ ಆಡುತ್ತಿದ್ದಾಗ ಅವಳ ಸ್ತನಗಳೂ, ಹಾರಗಳೂ ಕುಣಿದಾಡುತ್ತಿದ್ದವು. ಸ್ತನಗಳ ಭಾರದಿಂದ ಆಕೆಯ ತೆಳುವಾದ ಕಟಿಯು ಮುರಿದುಬೀಳುವುದೋ ಎಂದು ಅನಿಸುತ್ತಿತ್ತು. ನಲುಗಿ ಹೋಗಬಹುದೆಂಬ ಭಯದಿಂದ ಆ ಲಲನಾಮಣಿಯು ಚಿಗುರಿನಂತೆ ಸುಕೋಮಲವಾದ ಕೆಂಪು-ಕೆಂಪಾದ ತನ್ನ ಹೆಜ್ಜೆಗಳನ್ನು ಮೆಲ್ಲ-ಮೆಲ್ಲನೆ ಇಡುತ್ತಿದ್ದಳು. ॥ ೧೯ ॥ ನೆಗೆಯುತ್ತಿರುವ ಚೆಂಡನ್ನು ಹಾರಿ ಅದನ್ನು ಹಿಡಿದುಕೊಳ್ಳುತ್ತಿದ್ದಳು. ಇದರಿಂದ ಆ ಸುಂದರಿಯ ವಿಶಾಲವಾದ ಕಣ್ಣುಗಳು ಉದ್ವಿಗ್ನವಾಗಿರುವಂತೆ ಕಾಣುತ್ತಿತ್ತು. ಹೊಳೆಯುತ್ತಿರುವ ಕರ್ಣಕುಂಡಲ ಕಾಂತಿಯಿಂದ ಬೆಳಗುವ ಕಪೋಲಗಳಿಂದಲೂ, ಕಪ್ಪಾದ ಮುಂಗುರುಳುಗಳಿಂದಲೂ ಆಕೆಯ ಸುಂದರವಾದ ಮುಖಾರವಿಂದವು ಇನ್ನೂ ಅರಳಿದಂತಿತ್ತು. ॥ ೨೦ ॥ ಯಾವಾಗಲಾದರೂ ಸೆರಗು ಜಾರಿ ಹೋದರೆ, ಕಬರಿಯು ಬಿಚ್ಚಿಹೋದರೆ, ಆಗಲೂ ಚೆಂಡಾಟವನ್ನು ನಿಲ್ಲಿಸದೆ ಬಲಗೈಯಿಂದ ಆಡುತ್ತಾ, ಎಡಗೈಯಿಂದ ಸೆರಗನ್ನೂ ಕೂದಲನ್ನೂ ಸರಿಪಡಿಸಿಕೊಳ್ಳುತ್ತಾ, ಇಡೀ ಜಗತ್ತನ್ನು ತನ್ನ ಮಾಯೆಯಿಂದ ಮರುಳುಗೊಳಿಸುತ್ತಿದ್ದಳು. ॥ ೨೧ ॥ ಹೀಗೆ ಚೆಂಡಾಟವನ್ನು ಆಡುತ್ತಾ-ಆಡುತ್ತಾ ಆಕೆಯು ಸ್ವಲ್ಪ ಲಜ್ಜೆಯ ಭಾವದಿಂದ ಮುಗುಳ್ನಕ್ಕು ಓರನೋಟದಿಂದ ಶಂಕರನ ಕಡೆಗೆ ನೋಡಿದಳು. ಆ ಸ್ತ್ರೀಯ ಕಟಾಕ್ಷವೀಕ್ಷಣೆಯಿಂದಲೂ, ಪ್ರೇಮಭಾವದ ಸೂಚನೆಯಿಂದಲೂ ಕಾಮಪರವಶನಾದ ಶಂಕರನು ತನ್ನನ್ನು ತಾನೇ ಮರೆತನು. ಹೀಗಿರುವಾಗ ಹತ್ತಿರದಲ್ಲೇ ಕುಳಿತಿದ್ದ ಉಮೆ ಮತ್ತು ಗಣಗಳ ನೆನಪಾದರೂ ಹೇಗೆ ಇರಬಲ್ಲದು? ॥ ೨೨ ॥ ಒಮ್ಮೆ ಚೆಂಡು ಮೋಹಿನಿಯ ಕೈಯಿಂದ ಜಾರಿ ದೂರಕ್ಕೆ ಹೋಯಿತು. ಆಕೆಯು ಅದರ ಹಿಂದೆಯೇ ಓಡಿದಳು. ಆ ಸಮಯದಲ್ಲಿ ಶಿವನು ನೋಡುತ್ತಿರುವಂತೆಯೇ ವಾಯುವು ಆಕೆಯು ಉಟ್ಟಿದ್ದ ತೆಳ್ಳಗಿನ ಸೀರೆಯನ್ನು ಒಡ್ಯಾಣಸಹಿತವಾಗಿ ಹಾರಿಸಿಬಿಟ್ಟನು. ॥ ೨೩ ॥ ಮೋಹಿನಿಯ ಪ್ರತಿಯೊಂದು ಅಂಗಾಂಗವೂ ಮನೋಹರವಾಗಿತ್ತು. ಒಮ್ಮೆ ಕಣ್ಣು ನೆಟ್ಟರೆ ಕೀಳಲು ಸಾಧ್ಯವಾಗುತ್ತಿರಲಿಲ್ಲ. ಅಷ್ಟೇ ಅಲ್ಲ, ಮನಸ್ಸೂ ಅಲ್ಲೇ ರಮಮಾಣವಾಗುತ್ತಿತ್ತು. ಈ ಸ್ಥಿತಿಯಲ್ಲಿ ಆಕೆಯನ್ನು ನೋಡಿದ ಭಗವಾನ್ ಶಂಕರನು ಅವಳ ಕಡೆಗೆ ಅತ್ಯಂತ ಆಕರ್ಷಿತನಾದನು. ಮೋಹಿನಿಯೂ ತನ್ನ ಕುರಿತು ಆಸಕ್ತಳಾಗಿರುವಂತೇ ಅವನಿಗೆ ಕಂಡಿತು. ॥ ೨೪ ॥ ಆಕೆಯು ಶಂಕರನ ವಿವೇಕವನ್ನು ಅಪಹರಿಸಿದಳು. ಆಕೆಯ ಹಾವ-ಭಾವಗಳಿಂದ ಶಿವನು ಕಾಮಾತುರನಾದನು ಮತ್ತು ಭವಾನಿಯ ಇದಿರಿನಲ್ಲೇ ಲಜ್ಜೆ ಬಿಟ್ಟು ಅವಳ ಕಡೆಗೆ ಓಡಿದನು. ॥ ೨೫ ॥ ಆ ಮೋಹಿನಿಯು ತನ್ನ ಕಡೆಗೆ ಶಿವನು ಬರುತ್ತಿರುವುದನ್ನು ನೋಡಿ ಬಹಳ ನಾಚಿಕೆಯಿಂದ ಕಿಲ-ಕಿಲನೆ ನಗುತ್ತಾ ಅಲ್ಲಿ ನಿಲ್ಲದೆ ವೃಕ್ಷದ ಹಿಂದೆ ಅವಿತುಕೊಂಡಳು. ॥ ೨೬ ॥ ಭಗವಾನ್ ಶಂಕರನ ಇಂದ್ರಿಯಗಳು ಅವನ ಕೈಯಿಂದ ಜಾರಿ ಹೋದುವು. ಅವನು ಕಾಮಪರವಶನಾಗಿದ್ದನು. ಆದ್ದರಿಂದ ಹೆಣ್ಣಾನೆಯ ಹಿಂದೆ ಓಡುವ ಗಂಡಾನೆಯಂತೆ ಆಕೆಯ ಹಿಂದೆ-ಹಿಂದೆ ಓಡತೊಡಗಿದನು. ॥ ೨೭ ॥ ಅವನು ಅತ್ಯಂತ ವೇಗದಿಂದ ಆಕೆಯನ್ನು ಹಿಂಬಾಲಿಸಿ ಹಿಂದಿನಿಂದ ಆಕೆಯ ಮುಡಿಯನ್ನು ಹಿಡಿದುಕೊಂಡನು. ಆಕೆ ಬಯಸದೇ ಇದ್ದರೂ ಶಿವನು ಅವಳನ್ನು ಎರಡೂ ಭುಜಗಳಿಂದ ಬಾಚಿ ತಬ್ಬಿಕೊಂಡನು. ॥ ೨೮ ॥

ಸೋಪಗೂಢಾ ಭಗವತಾ ಕರಿಣಾ ಕರಿಣೀ ಯಥಾ ।
ಇತಸ್ತತಃ ಪ್ರಸರ್ಪಂತೀ ವಿಪ್ರಕೀರ್ಣಶಿರೋರುಹಾ ॥ ೨೯ ॥

ಆತ್ಮಾನಂ ಮೋಚಯಿತ್ವಾಂಗ ಸುರರ್ಷಭಭುಜಾಂತರಾತ್ ।
ಪ್ರಾದ್ರವತ್ಸಾಪೃಥುಶ್ರೋಣೀ ಮಾಯಾ ದೇವವಿನಿರ್ಮಿತಾ ॥ ೩೦ ॥

ತಸ್ಯಾಸೌ ಪದವೀಂ ರುದ್ರೋ ವಿಷ್ಣೋರದ್ಭುತಕರ್ಮಣಃ ।
ಪ್ರತ್ಯಪದ್ಯತ ಕಾಮೇನ ವೈರಿಣೇವ ವಿನಿರ್ಜಿತಃ ॥ ೩೧ ॥

ತಸ್ಯಾನುಧಾವತೋ ರೇತಃ ಚಸ್ಕಂದಾಮೋಘರೇತಸಃ ।
ಶುಷ್ಮಿಣೋ ಯೂಥಪಸ್ಯೇವ ವಾಸಿತಾಮನು ಧಾವತಃ ॥ ೩೨ ॥

ಯತ್ರ ಯತ್ರಾಪತನ್ಮಹ್ಯಾಂ ರೇತಸ್ತಸ್ಯ ಮಹಾತ್ಮನಃ ।
ತಾನಿ ರೂಪ್ಯಸ್ಯ ಹೇಮ್ನಶ್ಚ ಕ್ಷೇತ್ರಾಣ್ಯಾಸನ್ಮಹೀಪತೇ ॥ ೩೩ ॥

ಸರಿತ್ಸರಸ್ಸು ಶೈಲೇಷು ವನೇಷೂಪವನೇಷು ಚ ।
ಯತ್ರ ಕ್ವ ಚಾಸನ್ನೃಷಯಸ್ತತ್ರ ಸಂನಿಹಿತೋ ಹರಃ ॥ ೩೪ ॥

ಸ್ಕನ್ನೇ ರೇತಸಿ ಸೋಽಪಶ್ಯದಾತ್ಮಾನಂ ದೇವಮಾಯಯಾ ।
ಜಡೀಕೃತಂ ನೃಪಶ್ರೇಷ್ಠ ಸಂನ್ಯವರ್ತತ ಕಶ್ಮಲಾತ್ ॥ ೩೫ ॥

ಅಥಾವಗತಮಾಹಾತ್ಮ್ಯ ಆತ್ಮನೋ ಜಗದಾತ್ಮನಃ ।
ಅಪರಿಜ್ಞೇಯವೀರ್ಯಸ್ಯ ನ ಮೇನೇ ತದು ಹಾದ್ಭುತಮ್ ॥ ೩೬ ॥

ತಮವಿಕ್ಲವಮವ್ರೀಡಮಾಲಕ್ಷ್ಯ ಮಧುಸೂದನಃ ।
ಉವಾಚ ಪರಮಪ್ರೀತೋ ಬಿಭ್ರತ್ಸ್ವಾಂ ಪೌರುಷೀಂ ತನುಮ್ ॥ ೩೭ ॥

ಶ್ರೀಭಗವಾನುವಾಚ

ದಿಷ್ಟ್ಯಾ ತ್ವಂ ವಿಬುಧಶ್ರೇಷ್ಠ
ಸ್ವಾಂ ನಿಷ್ಠಾಮಾತ್ಮನಾ ಸ್ಥಿತಃ ।
ಯನ್ಮೇ ಸ್ತ್ರೀರೂಪಯಾ ಸ್ವೈರಂ
ಮೋಹಿತೋಽಪ್ಯಂಗ ಮಾಯಯಾ ॥ ೩೮ ॥

ಕೋ ನು ಮೇಽತಿತರೇನ್ಮಾಯಾಂ ವಿಷಕ್ತಸ್ತ್ವದೃತೇ ಪುಮಾನ್ ।
ತಾಂಸ್ತಾನ್ವಿಸೃಜತೀಂ ಭಾವಾನ್ ದುಸ್ತರಾಮಕೃತಾತ್ಮಭಿಃ ॥ ೩೯ ॥

ಸೇಯಂ ಗುಣಮಯೀ ಮಾಯಾ ನ ತ್ವಾಮಭಿಭವಿಷ್ಯತಿ ।
ಮಯಾ ಸಮೇತಾ ಕಾಲೇನ ಕಾಲರೂಪೇಣ ಭಾಗಶಃ ॥ ೪೦ ॥

ಗಂಡಾನೆಯು ಹೆಣ್ಣಾನೆಯನ್ನು ಆಲಿಂಗಿಸಿಕೊಳ್ಳುವಂತೆ ಭಗವಾನ್ ಶಂಕರನು ಆಕೆಯನ್ನು ಆಲಿಂಗಿಸಿಕೊಂಡನು. ಆಕೆಯು ಕೊಸರಾಡಿಕೊಂಡು ಅವನಿಂದ ಬಿಡಿಸಿಕೊಳ್ಳಲು ಪ್ರಯತ್ನಿಸುತ್ತಿದ್ದಾಗ ಆಕೆಯ ಮುಡಿಯು ಬಿಚ್ಚಿಹೋಯಿತು. ॥ ೨೯ ॥ ವಾಸ್ತವವಾಗಿ ಆ ಸುಂದರಿಯು ಭಗವಂತನಿಂದ ರಚಿತವಾದ ಮಾಯೆಯೇ ಆಗಿತ್ತು. ಇದರಿಂದ ಆಕೆಯು ಹೇಗೋ ಶಂಕರನ ಬಾಹುಪಾಶದಿಂದ ತನ್ನನ್ನು ಬಿಡಿಸಿಕೊಂಡು ವೇಗವಾಗಿ ಓಡಿಹೋದಳು. ॥ ೩೦ ॥ ಭಗವಾನ್ ಶಂಕರನೂ ಕೂಡ ಆ ಮೋಹಿನೀವೇಷಧಾರಿಯಾದ ಅದ್ಭುತಕರ್ಮಿಯಾದ ಭಗವಾನ್ ವಿಷ್ಣುವಿನ ಹಿಂದೆ-ಹಿಂದೆ ಓಡತೊಡಗಿದನು. ಆಗ ಅವನ ಶತ್ರುವಾದ ಕಾಮದೇವನು ಈಗ ಅವನ ಮೇಲೆ ವಿಜಯವನ್ನು ಸಾಧಿಸಿದಂತೆ ಕಂಡುಬರುತ್ತಿತ್ತು. ॥ ೩೧ ॥ ಕಾಮುಕವಾದ ಹೆಣ್ಣಾನೆಯ ಹಿಂದೆ ಓಡುವ ಮದಭರಿತವಾದ ಗಂಡಾನೆಯಂತೆ ಮೋಹಿನಿಯ ಹಿಂದೆ-ಹಿಂದೆ ಶಂಕರನು ಓಡುತ್ತಿದ್ದನು. ಭಗವಾನ್ ಶಂಕರನ ವೀರ್ಯವು ಅಮೋಘವಾಗಿದ್ದರೂ ಮೋಹಿನಿಯ ಮಾಯೆಯಿಂದ ಅದು ಸ್ಖಲಿತವಾಯಿತು. ॥ ೩೨ ॥ ಮಹೀಪತಿಯೇ! ಭಗವಾನ್ ಶಂಕರನ ವೀರ್ಯವು ಭೂಮಿಯಲ್ಲಿ ಬಿದ್ದಲ್ಲೆಲ್ಲ ಚಿನ್ನದ, ಬೆಳ್ಳಿಯ ಗಣಿಗಳಾದುವು. ॥ ೩೩ ॥ ಹೀಗೆ ಮೋಹಿನಿಯನ್ನು ಹಿಂಬಾಲಿಸುತ್ತಾ ಪರಶಿವನು ನದೀ-ನದ-ಸರೋವರ, ಪರ್ವತ, ವನ-ಉಪವನ ಹೀಗೆ ಋಷಿ-ಮುನಿಗಳು ವಾಸವಾಗಿದ್ದ ಆಶ್ರಮದಲ್ಲೆಲ್ಲ ಅಡ್ಡಾಡಿದನು. ॥ ೩೪ ॥

ಪರೀಕ್ಷಿತನೇ! ರೇತಸ್ಖಲನವಾದನಂತರ ಮಹರ್ಷಿಗಳ ಆಶ್ರಮಕ್ಕೆ ಬಂದ ಶಿವನು ವಿಷ್ಣುಮಾಯೆಯಿಂದ ವಿವೇಕಶೂನ್ಯನಾದೆನೆಂದು ಭಾವಿಸಿ ಕಾಮವಿಕಾರದಿಂದ ಮನಸ್ಸನ್ನು ಹಿಂದೆಗೆದುಕೊಂಡನು. ॥ ೩೫ ॥ ಇದಾದ ಬಳಿಕ ಆತ್ಮಸ್ವರೂಪನಾದ ಸರ್ವಾತ್ಮಾ ಭಗವಂತನ ಈ ಮಹಿಮೆಯನ್ನು ಅರಿತುಕೊಂಡು ಅವನಿಗೆ ಆಶ್ಚರ್ಯವಾಗಲಿಲ್ಲ. ಭಗವಂತನ ಶಕ್ತಿಗಳ ಅಂತವನ್ನು ಯಾರು ತಾನೇ ತಿಳಿಯಬಲ್ಲನು? ॥ ೩೬ ॥ ಭಗವಾನ್ ಶಂಕರನಿಗೆ ಇದರಿಂದ ವಿಷಾದ ಅಥವಾ ನಾಚಿಕೆಯಾಗಲಿಲ್ಲವೆಂದು ತಿಳಿದ ಭಗವಂತನು ಪುರುಷಶರೀರವನ್ನು ಧರಿಸಿಕೊಂಡು ಪ್ರಕಟನಾದನು ಹಾಗೂ ಪರಮಪ್ರೀತಿಯಿಂದ ಶಿವನಲ್ಲಿ ಇಂತೆಂದನು - ॥ ೩೭ ॥

ಶ್ರೀಭಗವಂತನು ಹೇಳಿದನು - ದೇವಶಿರೋಮಣಿಯೇ! ನನ್ನ ಸ್ತ್ರೀರೂಪವಾದ ಮಾಯೆಯಿಂದ ವಿಮೋಹಿತನಾದರೂ ನೀನು ಸ್ವಯಂ ನಿನ್ನ ನಿಷ್ಠೆಯಲ್ಲಿ ಸ್ಥಿತನಾಗಿರುವೆ. ಇದು ತುಂಬಾ ಆನಂದದ ಮಾತಾಗಿದೆ. ॥ ೩೮ ॥ ನನ್ನ ಮಾಯೆಯು ಅಪಾರವಾದುದು. ಅಜಿತೇಂದ್ರಿಯರಾದವರು ಯಾವ ವಿಧದಿಂದಲೂ ಅದರಿಂದ ಬಿಡಿಸಿಕೊಳ್ಳಲಾರದಂತಹ ಹಾವ-ಭಾವಗಳನ್ನು ರಚಿಸುತ್ತದೆ. ನೀನಲ್ಲದೆ ಬೇರೆ ಯಾರು ತಾನೇ ಒಮ್ಮೆ ನನ್ನ ಮಾಯಾಜಾಲದಲ್ಲಿ ಸಿಕ್ಕಿಹಾಕಿಕೊಂಡು ಸ್ವತಃ ಹೊರಬರಬಲ್ಲನು? ॥ ೩೯ ॥ ನನ್ನ ಈ ಗುಣಮಯ ಮಾಯೆಯು ದೊಡ್ಡ-ದೊಡ್ಡವರಿಗೂ ಮೋಹಿಸಿಬಿಡುತ್ತಿದ್ದರೂ ಇನ್ನು ಇದು ನಿನ್ನನ್ನು ಎಂದಿಗೂ ಮೋಹಿತಗೊಳಿಸಲಾರದು. ಏಕೆಂದರೆ, ಸೃಷ್ಟ್ಯಾದಿಗಳಿಗೆ ಆಯಾ ಸಮಯಗಳಲ್ಲಿ ಅದನ್ನು ಕ್ಷೋಭಿಸುತ್ತಿರುವ ಕಾಲನು ನಾನೇ ಆಗಿರುವೆನು. ಆದ್ದರಿಂದ ನನ್ನ ಇಚ್ಛೆಗೆ ವಿರುದ್ಧವಾಗಿ ಅದು ರಜೋಗುಣಾದಿ ಸೃಷ್ಟಿಯನ್ನು ಮಾಡಲಾರದು. ॥ ೪೦ ॥

ಶ್ರೀಶುಕ ಉವಾಚ

ಏವಂ ಭಗವತಾ ರಾಜನ್ ಶ್ರೀವತ್ಸಾಂಕೇನ ಸತ್ಕೃತಃ ।
ಆಮಂತ್ರ್ಯ ತಂ ಪರಿಕ್ರಮ್ಯ ಸಗಣಃ ಸ್ವಾಲಯಂ ಯಯೌ ॥ ೪೦ ॥

ಆತ್ಮಾಂಶಭೂತಾಂ ತಾಂ ಮಾಯಾಂ ಭವಾನೀಂ ಭಗವಾನ್ಭವಃ ।
ಶಂಸತಾಮೃಷಿಮುಖ್ಯಾನಾಂ ಪ್ರೀತ್ಯಾಽಽಚಷ್ಟಾಥ ಭಾರತ ॥ ೪೨ ॥

ಅಪಿ ವ್ಯಪಶ್ಯಸ್ತ್ವಮಜಸ್ಯ ಮಾಯಾಂ
ಪರಸ್ಯ ಪುಂಸಃ ಪರದೇವತಾಯಾಃ ।
ಅಹಂ ಕಲಾನಾಮೃಷಭೋ ವಿಮುಹ್ಯೇ
ಯಯಾವಶೋಽನ್ಯೇ ಕಿಮುತಾಸ್ವತಂತ್ರಾಃ ॥ ೪೩ ॥

ಯಂ ಮಾಮಪೃಚ್ಛಸ್ತ್ವಮುಪೇತ್ಯ ಯೋಗಾ-
ತ್ಸಮಾಸಹಸ್ರಾಂತ ಉಪಾರತಂ ವೈ ।
ಸ ಏವ ಸಾಕ್ಷಾತ್ಪುರುಷಃ ಪುರಾಣೋ
ನ ಯತ್ರ ಕಾಲೋ ವಿಶತೇ ನ ವೇದಃ ॥ ೪೪ ॥

ಶ್ರೀಶುಕ ಉವಾಚ

ಇತಿ ತೇಽಭಿಹಿತಸ್ತಾತ ವಿಕ್ರಮಃ ಶಾರ್ಙ್ಗಧನ್ವನಃ ।
ಸಿಂಧೋರ್ನಿರ್ಮಥನೇ ಯೇನ ಧೃತಃ ಪೃಷ್ಠೇ ಮಹಾಚಲಃ ॥ ೪೫ ॥

ಏತನ್ಮುಹುಃ ಕೀರ್ತಯತೋಽನುಶೃಣ್ವತೋ
ನ ರಿಷ್ಯತೇ ಜಾತು ಸಮುದ್ಯಮಃ ಕ್ವಚಿತ್ ।
ಯದುತ್ತಮಶ್ಲೋಕಗುಣಾನುವರ್ಣನಂ
ಸಮಸ್ತ ಸಂಸಾರಪರಿಶ್ರಮಾಪಹಮ್ ॥ ೪೬ ॥

ಅಸದವಿಷಯಮಂಘ್ರಿಂ ಭಾವಗಮ್ಯಂ ಪ್ರಪನ್ನಾ-
ನಮೃತಮಮರವರ್ಯಾನಾಶಯತ್ಸಿಂಧುಮಥ್ಯಮ್ ।
ಕಪಟಯುವತಿವೇಷೋ ಮೋಹಯನ್ಯಃ ಸುರಾರೀಂ-
ಸ್ತಮಹಮುಪಸೃತಾನಾಂ ಕಾಮಪೂರಂ ನತೋಽಸ್ಮಿ ॥ ೪೭ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ! ಭಗವಾನ್ ಮಹಾವಿಷ್ಣುವು ಹೀಗೆ ಶಂಕರನನ್ನು ಸತ್ಕರಿಸಿದನು. ಆಗ ಪರಶಿವನು ಅವನಿಂದ ಬೀಳ್ಕೊಂಡು, ಅವನಿಗೆ ಪ್ರದಕ್ಷಿಣೆ ಬಂದು ತನ್ನ ಗಣಗಳೊಂದಿಗೆ ಕೈಲಾಸಕ್ಕೆ ಹೊರಟುಹೋದನು. ॥ ೪೦ ॥ ಎಲೈ ಭರತವಂಶಶಿರೋಮಣಿಯೇ! ಭಗವಾನ್ ಶಂಕರನು ದೊಡ್ಡ-ದೊಡ್ಡ ಋಷಿಗಳ ಸಭೆಯಲ್ಲಿ ತನ್ನ ಅರ್ಧಾಂಗಿನಿಯಾದ ಪಾರ್ವತಿದೇವಿಗೆ ತನ್ನ ವಿಷ್ಣುಸ್ವರೂಪದ ಅಂಶಸಂಭೂತ ಮಾಯಾಮಯ ಮೋಹಿನಿಯನ್ನು ಈ ವಿಧವಾಗಿ ಪ್ರೇಮದಿಂದ ವರ್ಣಿಸಿದನು. ॥ ೪೨ ॥ ದೇವೀ! ಪರಮಪುರುಷ ಪರಮೇಶ್ವರನಾದ ಭಗವಾನ್ ವಿಷ್ಣುವಿನ ಮಾಯೆಯನ್ನು ನೀನು ನೋಡಿದೆಯಲ್ಲ! ಸಮಸ್ತ ಕಲಾವಲ್ಲಭನಾದ ನಾನೇ ಕಾಮವಶನಾಗಿ ವಿಮೋಹಗೊಂಡೆನು. ಹೀಗಿರುವಾಗ ಅಸ್ವತಂತ್ರವಾದ (ರಾಗ-ದ್ವೇಷಾದಿಗಳಿಗೆ ವಶರಾದ) ಇತರರ ವಿಷಯದಲ್ಲಿ ಹೇಳುವುದೇನಿದೆ? ॥ ೪೩ ॥ ಹಿಂದೆ ನಾನು ಒಂದುಸಾವಿರ ವರ್ಷಗಳ ಕಾಲದ ಸಮಾಧಿಯಿಂದ ಎಚ್ಚೆತ್ತಿರುವಾಗ ನೀನು ಬಳಿಗೆ ಬಂದು 'ಸ್ವಾಮಿ! ನೀವು ಯಾರ ಉಪಾಸನೆ ಮಾಡುತ್ತಿದ್ದೀರಿ?' ಎಂದು ಕೇಳಿದ್ದೆ. ಅವನು ಇದೇ ಸಾಕ್ಷಾತ್ ಸನಾತನ ಪುರುಷನಾಗಿದ್ದಾನೆ. ಕಾಲನೂ ಇವನನ್ನು ತನ್ನ ಸೀಮೆಯಲ್ಲಿ ಬಂಧಿಸಲಾರನು. ವೇದಗಳು ಇವನನ್ನು ಪೂರ್ಣವಾಗಿ ವರ್ಣಿಸಲಾರವು. ಇವನ ವಾಸ್ತವಿಕ ಸ್ವರೂಪವು ಅನಂತವೂ, ಅನಿರ್ವಚನೀಯವೂ ಆಗಿದೆ. ॥ ೪೪ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪ್ರಿಯ ಪರೀಕ್ಷಿತನೇ! ಸಮುದ್ರಮಂಥನ ಕಾಲದಲ್ಲಿ ದೊಡ್ಡದಾದ ಮಂದರ ಪರ್ವತವನ್ನು ಬೆನ್ನಮೇಲೆ ಧರಿಸಿದ ಕೂರ್ಮರೂಪಿಯಾದ ಶಾರ್ಙ್ಗಧನ್ವನಾದ ಮಹಾವಿಷ್ಣುವಿನ ಮಹಿಮೆಯನ್ನು ನಿನಗೆ ವರ್ಣಿಸಿ ಹೇಳಿರುವೆನು. ॥ ೪೫ ॥ ಈ ಪ್ರಸಂಗವನ್ನು ಪದೇ-ಪದೇ ಕೀರ್ತಿಸುವವನ ಹಾಗೂ ಶ್ರವಣಿಸುವವನ ಪ್ರಯತ್ನವು ಎಂದಿಗೂ, ಎಲ್ಲಿಯೂ ನಿಷ್ಫಲವಾಗುವುದಿಲ್ಲ. ಏಕೆಂದರೆ ಪವಿತ್ರಕೀರ್ತಿಯಾದ ಭಗವಂತನ ಗುಣ-ಲೀಲೆಗಳ ಸಂಕೀರ್ತನವು ಪ್ರಪಂಚದ ಸಮಸ್ತ ಕ್ಲೇಶಗಳನ್ನೂ, ಪರಿಶ್ರಮಗಳನ್ನೂ ಹೋಗಲಾಡಿಸುತ್ತದೆ. ॥ ೪೬ ॥ ದುಷ್ಟ ಜನರಿಗೆ ಶ್ರೀಭಗವಂತನ ದಿವ್ಯ ಚರಣಕಮಲಗಳು ಎಂದಿಗೂ ದೊರಕುವುದಿಲ್ಲ. ಅವುಗಳು ಭಕ್ತಿಭಾವದಿಂದ ಕೂಡಿರುವ ಮನುಷ್ಯರಿಗೇ ಮಾತ್ರ ಲಭ್ಯವಾಗುತ್ತವೆ. ಇದರಿಂದಲೇ ಅವನು ಮಾಯಾಮಯವಾದ ಹೆಂಗುವರೂಪವನ್ನು ಧರಿಸಿ ದೈತ್ಯರನ್ನು ಮೋಹಪರವಶರನ್ನಾಗಿ ಮಾಡಿದನು. ತನ್ನ ಚರಣಕಮಲಗಳಿಗೆ ಶರಣಾಗಿ ಬಂದಿರುವ ದೇವತೆಗಳಿಗೆ ಸಮುದ್ರಮಂಥನದಿಂದ ದೊರಕಿದ ಅಮೃತವನ್ನು ಕುಡಿಸಿದನು. ಕೇವಲ ದೇವತೆಗಳಿಗೆ ಮಾತ್ರವಲ್ಲ – ಅವನ ದಿವ್ಯ ಚರಣಕಮಲಗಳಿಗೆ ಯಾರೇ ಶರಣಾಗಲೀ, ಅವರ ಸಮಸ್ತ ಕಾಮನೆಗಳನ್ನು ಪೂರ್ಣಗೊಳಿಸುವನು. ಅಂತಹ ಪ್ರಭುವಿನ ಚರಣಕಮಲಗಳಿಗೆ ನಾನು ನಮಸ್ಕರಿಸುತ್ತೇನೆ. ॥ ೪೭ ॥

ಹನ್ನೆರಡನೆಯ ಅಧ್ಯಾಯವು ಮುಗಿಯಿತು. ॥ ೧೨ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಅಷ್ಟಮಸ್ಕಂಧೇ ಶಂಕರಮೋಹನಂ ನಾಮ ದ್ವಾದಶೋಽಧ್ಯಾಯಃ ॥ ೧೨ ॥

ಹದಿಮೂರನೆಯ ಅಧ್ಯಾಯ

ಮುಂದಿನ ಏಳು ಮನ್ವಂತರಗಳ ವರ್ಣನೆ

ಶ್ರೀಶುಕ ಉವಾಚ

ಮನುರ್ವಿವಸ್ವತಃ ಪುತ್ರಃ ಶ್ರಾದ್ಧದೇವ ಇತಿ ಶ್ರುತಃ ।
ಸಪ್ತಮೋ ವರ್ತಮಾನೋ ಯಸ್ತದಪತ್ಯಾನಿ ಮೇ ಶೃಣು ॥ ೧ ॥

ಇಕ್ಷ್ವಾಕುರ್ನಭಗಶ್ಚೈವ ಧೃಷ್ಟಃ ಶರ್ಯಾತಿರೇವ ಚ ।
ನರಿಷ್ಯಂತೋಽಥ ನಾಭಾಗಃ ಸಪ್ತಮೋ ದಿಷ್ಟ ಉಚ್ಯತೇ ॥ ೨ ॥

ಕರೂಷಶ್ಚ ಪೃಷಧ್ರಶ್ಚ ದಶಮೋ ವಸುಮಾನ್ ಸ್ಮೃತಃ ।
ಮನೋರ್ವೈವಸ್ವತಸ್ಯೈತೇ ದಶ ಪುತ್ರಾಃ ಪರಂತಪ ॥ ೩ ॥

ಆದಿತ್ಯಾ ವಸವೋ ರುದ್ರಾ ವಿಶ್ವೇದೇವಾ ಮರುದ್ಗಣಾಃ ।
ಅಶ್ವಿನಾವೃಭವೋ ರಾಜನ್ನಿಂದ್ರಸ್ತೇಷಾಂ ಪುರಂದರಃ ॥ ೪ ॥

ಕಶ್ಯಪೋಽತ್ರಿರ್ವಸಿಷ್ಠಶ್ಚ ವಿಶ್ವಾಮಿತ್ರೋಽಥ ಗೌತಮಃ ।
ಜಮದಗ್ನಿರ್ಭರದ್ವಾಜ ಇತಿ ಸಪ್ತರ್ಷಯಃ ಸ್ಮೃತಾಃ ॥ ೫ ॥

ಅತ್ರಾಪಿ ಭಗವಜ್ಜನ್ಮ ಕಶ್ಯಪಾದದಿತೇರಭೂತ್ ।
ಆದಿತ್ಯಾನಾಮವರಜೋ ವಿಷ್ಣುರ್ವಾಮನರೂಪಧೃಕ್ ॥ ೬ ॥

ಸಂಕ್ಷೇಪತೋ ಮಯೋಕ್ತಾನಿ ಸಪ್ತ ಮನ್ವಂತರಾಣಿ ತೇ ।
ಭವಿಷ್ಯಾಣ್ಯಥ ವಕ್ಷ್ಯಾಮಿ ವಿಷ್ಣೋಃ ಶಕ್ತ್ಯಾನ್ವಿತಾನಿ ಚ ॥ ೭ ॥

ವಿವಸ್ವತಶ್ಚ ದ್ವೇ ಜಾಯೇ ವಿಶ್ವಕರ್ಮಸುತೇ ಉಭೇ ।
ಸಂಜ್ಞಾ ಛಾಯಾ ಚ ರಾಜೇಂದ್ರ ಯೇ ಪ್ರಾಗಭಿಹಿತೇ ತವ ॥ ೮ ॥

ತೃತೀಯಾಂ ವಡವಾಮೇಕೇ ತಾಸಾಂ ಸಂಜ್ಞಾಸುತಾಸ್ತ್ರಯಃ ।
ಯಮೋ ಯಮೀ ಶ್ರಾದ್ಧದೇವಶ್ಛಾಯಾಯಾಶ್ಚ ಸುತಾನ್ ಶೃಣು ॥ ೯ ॥

ಸಾವರ್ಣಿಸ್ತಪತೀ ಕನ್ಯಾ ಭಾರ್ಯಾ ಸಂವರಣಸ್ಯ ಯಾ ।
ಶನೈಶ್ಚರಸ್ತೃತೀಯೋಽಭೂದಶ್ವಿನೌ ವಡವಾತ್ಮಜೌ ॥ ೧೦ ॥

ಅಷ್ಟಮೇಽಂತರ ಆಯಾತೇ ಸಾವರ್ಣಿರ್ಭವಿತಾ ಮನುಃ ।
ನಿರ್ಮೋಕವಿರಜಸ್ಕಾದ್ಯಾಃ ಸಾವರ್ಣಿತನಯಾ ನೃಪ ॥ ೧೧ ॥

ತತ್ರ ದೇವಾಃ ಸುತಪಸೋ ವಿರಜಾ ಅಮೃತಪ್ರಭಾಃ ।
ತೇಷಾಂ ವಿರೋಚನಸುತೋ ಬಲಿರಿಂದ್ರೋ ಭವಿಷ್ಯತಿ ॥ ೧೨ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಎಲೈ ಪರೀಕ್ಷಿತನೇ! ಈಗ ನಡೆಯುತ್ತಿರುವ ಏಳನೆಯ ಮನ್ವಂತರದ ಮನುವು ವಿವಸ್ವಂತನ ಮಗನೇ ಯಶೋವಂತನಾದ ಶ್ರಾದ್ಧದೇವ (ವೈವಸ್ವತ) ನೆಂಬುವನು. ಅವನ ಸಂತಾನವನ್ನು ನಾನು ವರ್ಣಿಸುತ್ತೇನೆ, ಕೇಳು. ॥ ೧ ॥ ವೈವಸ್ವತ ಮನುವಿಗೆ ಇಕ್ಷ್ವಾಕು, ನಭಗ, ಧೃಷ್ಟ, ಶರ್ಯಾತಿ, ನರಿಷ್ಯಂತ, ನಾಭಾಗ, ದಿಷ್ಟ, ಕರೂಷ, ಪೃಷಧ್ರ ಮತ್ತು ವಸುಮಾನರೆಂಬ ಹತ್ತು ಪುತ್ರರಿದ್ದಾರೆ. ॥ ೨-೩ ॥ ಪರೀಕ್ಷಿದ್ರಾಜಾ! ಈ ಮನ್ವಂತರದಲ್ಲಿ ಆದಿತ್ಯ, ವಸು, ರುದ್ರ, ವಿಶ್ವೇದೇವ, ಮರುದ್ಗಣ, ಅಶ್ವಿನೀಕುಮಾರರು ಮತ್ತು ಋಭು ಇವರುಗಳು ಪ್ರಧಾನ ದೇವತೆಗಳು. ಇವರಿಗೆ ಪುರಂದರನೆಂಬ ಇಂದ್ರನು ಇದ್ದಾನೆ. ॥ ೪ ॥ ಕಶ್ಯಪ, ಅತ್ರಿ, ವಸಿಷ್ಠ, ವಿಶ್ವಾಮಿತ್ರ, ಗೌತಮ, ಜಮದಗ್ನಿ ಮತ್ತು ಭಾರದ್ವಾಜ ಇವರು ಸಪ್ತರ್ಷಿಗಳು. ॥ ೫ ॥ ಈ ಮನ್ವಂತರದಲ್ಲಿಯೂ ಕಶ್ಯಪರ ಪತ್ನಿಯಾದ ಅದಿತಿಯ ಗರ್ಭದಿಂದ ಆದಿತ್ಯರ ಕಡೆಯ ತಮ್ಮನಾಗಿ ವಾಮನ ರೂಪದಲ್ಲಿ ಭಗವಂತನು ಅವತರಿಸಿದ್ದನು. ॥ ೬ ॥

ಪರೀಕ್ಷಿತನೇ! ಹೀಗೆ ನಾನು ನಿನಗೆ ಸಂಕ್ಷೇಪವಾಗಿ ಏಳು ಮನ್ವಂತರಗಳ ವರ್ಣನೆಯನ್ನು ಮಾಡಿದ್ದೇನೆ. ಇನ್ನು ಭಗವಂತನ ಶಕ್ತಿಯಿಂದ ಕೂಡಿದ ಮುಂದೆ ಬರುವ ಏಳು ಮನ್ವಂತರಗಳನ್ನು ವರ್ಣಿಸುತ್ತೇನೆ. ॥ ೭ ॥

ರಾಜೇಂದ್ರಾ! ನಾನು ಈ ಹಿಂದೆ ಆರನೆಯ ಸ್ಕಂಧದಲ್ಲಿ ವಿವಸ್ವಾನ್ (ಸೂರ್ಯದೇವನು) ಎಂಬುವನಿಗೆ ಸಂಜ್ಞಾ ಮತ್ತು ಛಾಯಾ ಎಂಬಿಬ್ಬರು ಮಡದಿಯರಿದ್ದ ವಿಷಯವನ್ನು ಹೇಳಿದ್ದೆ. ಇವರಿಬ್ಬರೂ ವಿಶ್ವಕರ್ಮನ ಪುತ್ರಿಯರಾಗಿದ್ದರು. ॥ ೮ ॥ ಸೂರ್ಯನಿಗೆ ವಡವಾ ಎಂಬ ಮೂರನೆಯ ಪತ್ನಿಯೂ ಇದ್ದಳೆಂದು ಕೆಲವರು ಹೇಳುತ್ತಾರೆ. (ನನ್ನ ವಿಚಾರದಲ್ಲಿ ಸಂಜ್ಞಾದೇವಿಗೆ ವಡವಾ ಎಂಬ ಹೆಸರಿತ್ತು.) ಆ ಸೂರ್ಯನ ಪತ್ನಿಯರಲ್ಲಿ ಸಂಜ್ಞಾದೇವಿಗೆ ಯಮ, ಯಮೀ ಮತ್ತು ಶ್ರಾದ್ಧದೇವರೆಂಬ ಮೂರು ಮಕ್ಕಳಾದರು. ಛಾಯೆಯಲ್ಲಿಯೂ ಸಾವರ್ಣಿ, ಶನೈಶ್ಚರ ಮತ್ತು ತಪತೀ ಎಂಬ ಮೂವರು ಮಕ್ಕಳು ಹುಟ್ಟಿದ್ದರು. ತಪತೀ ಎಂಬ ಕನ್ಯೆಯು ಸಂವರಣನ ಪತ್ನಿಯಾದಳು. ಸಂಜ್ಞೆಯು ವಡವಾ ಎಂಬ ರೂಪವನ್ನು ತಾಳಿದಾಗ ಅವಳಿಂದ ಅಶ್ವಿನೀಕುಮಾರರಿಬ್ಬರು ಜನಿಸಿದರು. ॥ ೯-೧೦ ॥ ಎಂಟನೆಯ ಮನ್ವಂತರದಲ್ಲಿ ಸಾವರ್ಣಿ ಎಂಬುವನು ಮನುವಾಗುವನು. ಅವನಿಗೆ ನಿರ್ಮೋಕ, ವಿರಜಸ್ಕ ಮೊದಲಾದ ಪುತ್ರರು ಹುಟ್ಟುವರು. ॥ ೧೧ ॥ ಪರೀಕ್ಷಿತನೇ! ಆ ಸಮಯದಲ್ಲಿ ಸುತಪಾ, ವಿರಜಾ ಮತ್ತು ಅಮೃತಪ್ರಭರೆಂಬ ದೇವತಾಗಣರಿರುವರು. ಈ ದೇವತೆಗಳಿಗೆ ವಿರೋಚನಪುತ್ರ ಬಲಿಯೇ ಇಂದ್ರನಾಗುವನು. ॥ ೧೨ ॥

ದತ್ತ್ವೇಮಾಂ ಯಾಚಮಾನಾಯ ವಿಷ್ಣವೇ ಯಃ ಪದತ್ರಯಮ್ ।
ರಾದ್ಧಮಿಂದ್ರಪದಂ ಹಿತ್ವಾ ತತಃ ಸಿದ್ಧಿಮವಾಪ್ಸ್ಯತಿ ॥ ೧೩ ॥

ಯೋಽಸೌ ಭಗವತಾ ಬದ್ಧಃ ಪ್ರೀತೇನ ಸುತಲೇ ಪುನಃ ।
ನಿವೇಶಿತೋಽಧಿಕೇ ಸ್ವರ್ಗಾದಧುನಾಽಽಸ್ತೇ ಸ್ವರಾಡಿವ ॥ ೧೪ ॥

ಗಾಲವೋ ದೀಪ್ತಿಮಾನ್ರಾಮೋ ದ್ರೋಣಪುತ್ರಃ ಕೃಪಸ್ತಥಾ ।
ಋಷ್ಯಶೃಂಗಃ ಪಿತಾಸ್ಮಾಕಂ ಭಗವಾನ್ಬಾದರಾಯಣಃ ॥ ೧೫ ॥

ಇಮೇ ಸಪ್ತರ್ಷಯಸ್ತತ್ರ ಭವಿಷ್ಯಂತಿ ಸ್ವಯೋಗತಃ ।
ಇದಾನೀಮಾಸತೇ ರಾಜನ್ಸ್ವೇ ಸ್ವ ಆಶ್ರಮಮಂಡಲೇ ॥ ೧೬ ॥

ದೇವಗುಹ್ಯಾತ್ಸರಸ್ವತ್ಯಾಂ ಸಾರ್ವಭೌಮ ಇತಿ ಪ್ರಭುಃ ।
ಸ್ಥಾನಂ ಪುರಂದರಾದ್ಧೃತ್ವಾ ಬಲಯೇ ದಾಸ್ಯತೀಶ್ವರಃ ॥ ೧೭ ॥

ನವಮೋ ದಕ್ಷಸಾವರ್ಣಿರ್ಮನುರ್ವರುಣಸಂಭವಃ ।
ಭೂತಕೇತುರ್ದೀಪ್ತಕೇತುರಿತ್ಯಾದ್ಯಾಸ್ತತ್ಸುತಾ ನೃಪ ॥ ೧೮ ॥

ಪಾರಾ ಮರೀಚಿಗರ್ಭಾದ್ಯಾ ದೇವಾ ಇಂದ್ರೋಽದ್ಭುತಃ ಸ್ಮೃತಃ ।
ದ್ಯುತಿಮತ್ಪ್ರಮುಖಾಸ್ತತ್ರ ಭವಿಷ್ಯಂತ್ಯೃಷಯಸ್ತತಃ ॥ ೧೯ ॥

ಆಯುಷ್ಮತೋಽಂಬುಧಾರಾಯಾಮೃಷಭೋ ಭಗವತ್ಕಲಾ ।
ಭವಿತಾ ಯೇನ ಸಂರಾದ್ಧಾಂ ತ್ರಿಲೋಕೀಂ ಭೋಕ್ಷ್ಯತೇಽದ್ಭುತಃ ॥ ೨೦ ॥

ದಶಮೋ ಬ್ರಹ್ಮಸಾವರ್ಣಿರುಪಶ್ಲೋಕಸುತೋ ಮಹಾನ್ ।
ತತ್ಸುತಾ ಭೂರಿಷೇಣಾದ್ಯಾ ಹವಿಷ್ಮತ್ಪ್ರಮುಖಾ ದ್ವಿಜಾಃ ॥ ೨೧ ॥

ಹವಿಷ್ಮಾನ್ಸುಕೃತಿಃ ಸತ್ಯೋ ಜಯೋ ಮೂರ್ತಿಸ್ತದಾ ದ್ವಿಜಾಃ ।
ಸುವಾಸನವಿರುದ್ಧಾದ್ಯಾ ದೇವಾಃ ಶಂಭುಃ ಸುರೇಶ್ವರಃ ॥ ೨೨ ॥

ವಿಷ್ವಕ್ಸೇನೋ ವಿಷೂಚ್ಯಾಂ ತು ಶಂಭೋಃ ಸಖ್ಯಂ ಕರಿಷ್ಯತಿ ।
ಜಾತಃ ಸ್ವಾಂಶೇನ ಭಗವಾನ್ಗೃಹೇ ವಿಶ್ವಸೃಜೋ ವಿಭುಃ ॥ ೨೩ ॥

ಮನುರ್ವೈ ಧರ್ಮಸಾವರ್ಣಿರೇಕಾದಶಮ ಆತ್ಮವಾನ್ ।
ಅನಾಗತಾಸ್ತತ್ಸುತಾಶ್ಚ ಸತ್ಯಧರ್ಮಾದಯೋ ದಶ ॥ ೨೪ ॥

ವಿಹಂಗಮಾಃ ಕಾಮಗಮಾ ನಿರ್ವಾಣರುಚಯಃ ಸುರಾಃ ।
ಇಂದ್ರಶ್ಚ ವೈಧೃತಸ್ತೇಷಾಮೃಷಯಶ್ಚಾರುಣಾದಯಃ ॥ ೨೫ ॥

ಭಗವಂತನಾದ ಮಹಾವಿಷ್ಣುವು ವಾಮನಾವತಾರವನ್ನು ತಾಳಿ ಈ ಬಲಿಯಿಂದಲೇ ಮೂರು ಹೆಜ್ಜೆ ಭೂಮಿಯನ್ನು ಕೇಳಿದ್ದನು. ಆದರೆ ಇವನು ಭಗವಂತನಿಗೆ ಮೂರು ಲೋಕಗಳನ್ನೇ ಅರ್ಪಿಸಿಬಿಟ್ಟನು. ಭಗವಂತನು ಒಮ್ಮೆ ಬಲಿಯನ್ನು ಬಂಧಿಸಿದ್ದನು. ಆದರೆ ಮತ್ತೆ ಪ್ರಸನ್ನನಾಗಿ ಅವನು ಇವನಿಗೆ ಸ್ವರ್ಗಕ್ಕಿಂತಲೂ ಶ್ರೇಷ್ಠವಾದ ಸುತಲ ಲೋಕದ ರಾಜ್ಯವನ್ನು ಕೊಟ್ಟನು. ಅವನು ಈಗಲೂ ಇಂದ್ರನಂತೆ ವಿರಾಜಮಾನನಾಗಿದ್ದಾನೆ. ಮುಂದೆ ಇವನೇ ಇಂದ್ರನಾಗುವನು ಮತ್ತು ಸಮಸ್ತ ಐಶ್ವರ್ಯದಿಂದ ಕೂಡಿದ ಇಂದ್ರಪದವಿಯನ್ನೂ ಪರಿತ್ಯಜಿಸಿ ಪರಮ ಸಿದ್ಧಿಯನ್ನು ಹೊಂದುವನು. ॥ ೧೩-೧೪॥ ಗಾಲವ, ದೀಪ್ತಿಮಾನ್, ಪರಶುರಾಮ, ಅಶ್ವತ್ಥಾಮಾ, ಕೃಪಾಚಾರ್ಯರು, ಋಷ್ಯಶೃಂಗ ಮತ್ತು ನನ್ನ ತಂದೆ ಭಗವಾನ್ ವೇದವ್ಯಾಸರು ಈ ಎಂಟನೆಯ ಮನ್ವಂತರದಲ್ಲಿ ಸಪ್ತರ್ಷಿಗಳಾಗುವರು. ಈ ಸಮಯದಲ್ಲಿವರು ಯೋಗಬಲದಿಂದ ತಮ್ಮ-ತಮ್ಮ ಆಶ್ರಮಗಳಲ್ಲಿ ನೆಲೆಸಿದ್ದಾರೆ. ॥ ೧೫-೧೬ ॥ ದೇವಗುಹ್ಯನ ಪತ್ನಿಯಾದ ಸರಸ್ವತೀ ಎಂಬುವಳ ಗರ್ಭದಲ್ಲಿ ಸಾರ್ವಭೌಮನೆಂಬ ಹೆಸರಿನಿಂದ ಭಗವಂತನು ಅವತರಿಸುವನು. ಇವನೇ ಒಡೆಯನಾದ ಇಂದ್ರನಿಂದ ಸ್ವರ್ಗದ ರಾಜ್ಯವನ್ನು ಕಿತ್ತುಕೊಂಡು ಬಲಿರಾಜನಿಗೆ ಕೊಡುವನು. ॥ ೧೭ ॥

ಪರೀಕ್ಷಿತನೇ! ವರುಣನ ಪುತ್ರನಾದ ದಕ್ಷಸಾವರ್ಣಿಯು ಒಂಭತ್ತನೆಯ ಮನು ಆಗುವನು. ಇವನಿಗೆ ಭೂತಕೇತು, ದೀಪ್ತಕೇತು ಮೊದಲಾದ ಅನೇಕ ಪುತ್ರರು ಹುಟ್ಟುವರು. ॥ ೧೮ ॥ ಪಾರ, ಮರೀಚಿಗರ್ಭ, ಮೊದಲಾದ ದೇವತಾಗಣಗಳು ಇರುವರು ಮತ್ತು ಅದ್ಭುತನೆಂಬ ಹೆಸರಿನ ಇಂದ್ರನಾಗುವನು. ಆ ಮನ್ವಂತರದಲ್ಲಿ ದ್ಯುತಿಮಾನ್ ಮೊದಲಾದವರು ಸಪ್ತರ್ಷಿಗಳಾಗುವರು. ॥ ೧೯ ॥ ಆಯುಷ್ಮಂತನ ಪತ್ನಿಯಾದ ಅಂಬುಧಾರಾ ಎಂಬುವಳ ಗರ್ಭದಿಂದ ಋಷಭನ ರೂಪದಲ್ಲಿ ಭಗವಂತನ ಕಲಾವತಾರವಾಗುವುದು. ಅದ್ಭುತನೆಂಬ ಇಂದ್ರನು ಇವನು ಕೊಟ್ಟಿರುವ ತ್ರೈಲೋಕ್ಯದ ರಾಜ್ಯವನ್ನು ಅನುಭವಿಸುವನು. ॥ ೨೦ ॥

ಉಪಶ್ಲೋಕನ ಪುತ್ರ ಬ್ರಹ್ಮಸಾವರ್ಣಿಯು ಹತ್ತನೆಯ ಮನುವಾಗುವನು. ಅವನಲ್ಲಿ ಸಮಸ್ತ ಸದ್ಗುಣಗಳು ವಾಸವಾಗಿರುವುವು. ಭೂರಿಷೇಣನೇ ಮುಂತಾದವರು ಅವನಿಗೆ ಪುತ್ರರಾಗುವರು. ಹವಿಷ್ಮಾನ್, ಸುಕೃತಿ, ಸತ್ಯ, ಜಯ, ಮೂರ್ತಿ ಮೊದಲಾದವರು ಸಪ್ತರ್ಷಿಗಳಾಗುವರು. ಸುವಾಸನ, ವಿರುದ್ಧ ಮೊದಲಾದವರು ದೇವತೆಗಳಾಗಿದ್ದು, ಶಂಭು ಎಂಬುವನು ಇಂದ್ರನಾಗುವನು. ॥ ೨೧-೨೨ ॥ ವಿಶ್ವಸೃಜನ ಪತ್ನಿ ವಿಷೂಚಿಯ ಗರ್ಭದಲ್ಲಿ ಭಗವಂತನು ವಿಷ್ವಕ್ಸೇನನ ರೂಪದಲ್ಲಿ ಅಂಶಾವತಾರವನ್ನು ಎತ್ತಿ ಶಂಭುವೆಂಬ ಇಂದ್ರನೊಡನೆ ಸಖ್ಯ ಬೆಳೆಸುವನು. ॥ ೨೩ ॥

ಅತ್ಯಂತ ಸಂಯಮಿಯಾದ ಧರ್ಮಸಾವರ್ಣಿಯು ಹನ್ನೊಂದನೆಯ ಮನು ಆಗುವನು. ಅವನಿಗೆ ಸತ್ಯ, ಧರ್ಮ ಮೊದಲಾದ ಹತ್ತು ಪುತ್ರರಾಗುವರು. ॥ ೨೪ ॥ ವಿಹಂಗಮ, ಕಾಮಗಮ, ನಿರ್ವಾಣರುಚಿ ಮೊದಲಾದವರು ದೇವತೆಗಳಾಗುವರು. ಅರುಣಾದಿ ಸಪ್ತರ್ಷಿಗಳಿದ್ದು, ವೈಧೃತನೆಂಬುವನು ಇಂದ್ರನಾಗುವನು. ॥ ೨೫ ॥

ಆರ್ಯಕಸ್ಯ ಸುತಸ್ತತ್ರ ಧರ್ಮಸೇತುರಿತಿ ಸ್ಮೃತಃ ।
ವೈಧೃತಾಯಾಂ ಹರೇರಂಶಸ್ತ್ರಿಲೋಕೀಂ ಧಾರಯಿಷ್ಯತಿ ॥ ೨೬ ॥

ಭವಿತಾ ರುದ್ರಸಾವರ್ಣೀ ರಾಜನ್ ದ್ವಾದಶಮೋ ಮನುಃ ।
ದೇವವಾನುಪದೇವಶ್ಚ ದೇವಶ್ರೇಷ್ಠಾದಯಃ ಸುತಾಃ ॥ ೨೭ ॥

ಋತಧಾಮಾ ಚ ತತ್ರೇಂದ್ರೋ ದೇವಾಶ್ಚ ಹರಿತಾದಯಃ ।
ಋಷಯಶ್ಚ ತಪೋಮೂರ್ತಿಸ್ತಪಸ್ವ್ಯಾಗ್ನೀಧ್ರಕಾದಯಃ ॥ ೨೮ ॥

ಸ್ವಧಾಮಾಖ್ಯೋ ಹರೇರಂಶಃ ಸಾಧಯಿಷ್ಯತಿ ತನ್ಮನೋಃ ।
ಅಂತರಂ ಸತ್ಯಸಹಸಃ ಸೂನೃತಾಯಾಃ ಸುತೋ ವಿಭುಃ ॥ ೨೯ ॥

ಮನುಸ್ತ್ರಯೋದಶೋ ಭಾವ್ಯೋ ದೇವಸಾವರ್ಣಿರಾತ್ಮವಾನ್ ।
ಚಿತ್ರಸೇನವಿಚಿತ್ರಾದ್ಯಾ ದೇವಸಾವರ್ಣಿದೇಹಜಾಃ ॥ ೩೦ ॥

ದೇವಾಃ ಸುಕರ್ಮಸುತ್ರಾಮಸಂಜ್ಞಾ ಇಂದ್ರೋ ದಿವಸ್ಪತಿಃ ।
ನಿರ್ಮೋಕತತ್ತ್ವದರ್ಶಾದ್ಯಾ ಭವಿಷ್ಯಂತ್ಯೃಷಯಸ್ತದಾ ॥ ೩೧ ॥

ದೇವಹೋತ್ರಸ್ಯ ತನಯ ಉಪಹರ್ತಾ ದಿವಸ್ಪತೇಃ ।
ಯೋಗೇಶ್ವರೋ ಹರೇರಂಶೋ ಬೃಹತ್ಯಾಂ ಸಂಭವಿಷ್ಯತಿ ॥ ೩೨ ॥

ಮನುರ್ವಾ ಇಂದ್ರಸಾವರ್ಣಿಶ್ಚತುರ್ದಶಮ ಏಷ್ಯತಿ ।
ಉರುಗಂಭೀರಬುದ್ಧ್ಯಾದ್ಯಾ ಇಂದ್ರಸಾವರ್ಣಿವೀರ್ಯಜಾಃ ॥ ೩೩ ॥

ಪವಿತ್ರಾಶ್ಚಾಕ್ಷುಷಾ ದೇವಾಃ ಶುಚಿರಿಂದ್ರೋ ಭವಿಷ್ಯತಿ ।
ಅಗ್ನಿರ್ಬಾಹುಃ ಶುಚಿಃ ಶುದ್ಧೋ ಮಾಗಧಾದ್ಯಾಸ್ತಪಸ್ವಿನಃ ॥ ೩೪ ॥

ಸತ್ರಾಯಣಸ್ಯ ತನಯೋ ಬೃಹದ್ಭಾನುಸ್ತದಾ ಹರಿಃ ।
ವಿತಾನಾಯಾಂ ಮಹಾರಾಜ ಕ್ರಿಯಾತಂತೂನ್ವಿತಾಯಿತಾ ॥ ೩೫ ॥

ರಾಜಂಶ್ಚತುರ್ದಶೈತಾನಿ ತ್ರಿಕಾಲಾನುಗತಾನಿ ತೇ ।
ಪ್ರೋಕ್ತಾನ್ಯೇಭಿರ್ಮಿತಃ ಕಲ್ಪೋ ಯುಗಸಾಹಸ್ರಪರ್ಯಯಃ ॥ ೩೬ ॥

ಆರ್ಯಕನೆಂಬುವನ ಪತ್ನೀ ವೈಧೃತಿಯ ಗರ್ಭದಿಂದ ಧರ್ಮಸೇತುವಿನ ರೂಪದಲ್ಲಿ ಭಗವಂತನ ಅಂಶಾವತಾರವಾಗುವುದು ಮತ್ತು ಅದೇ ರೂಪದಲ್ಲಿ ಅವನು ತ್ರೈಲೋಕ್ಯವನ್ನು ರಕ್ಷಿಸುವನು. ॥ ೨೬ ॥

ಪರೀಕ್ಷಿತನೇ! ಹನ್ನೆರಡನೆಯ ಮನುವು ರುದ್ರಸಾವರ್ಣಿಯಾಗುವನು. ಅವನಿಗೆ ದೇವವಾನ್, ಉಪದೇವ, ದೇವಶ್ರೇಷ್ಠ ಮುಂತಾದವರು ಪುತ್ರರು ಹುಟ್ಟುವರು. ॥ ೨೭ ॥ ಆ ಮನ್ವಂತರದಲ್ಲಿ ಋತಧಾಮನೆಂಬುವನು ಇಂದ್ರನಾಗುವನು. ಹರಿತರೇ ಮುಂತಾದವರು ದೇವತೆಗಳಿರುವರು. ತಪೋಮೂರ್ತಿ, ತಪಸ್ವೀ, ಅಗ್ನೀಧ್ರಕ ಮೊದಲಾದವರು ಸಪ್ತರ್ಷಿಗಳಾಗುವರು. ॥ ೨೮ ॥ ಸತ್ಯಸಹಾಯನ ಪತ್ನೀ ಸೂನೃತಾಳ ಗರ್ಭದಿಂದ ಸ್ವಧಾಮನೆಂಬ ರೂಪದಲ್ಲಿ ಭಗವಂತನ ಅಂಶಾವತಾರವಾಗುವುದು ಹಾಗೂ ಅದೇ ರೂಪದಲ್ಲಿ ಭಗವಂತನು ಆ ಮನ್ವಂತರವನ್ನು ಪಾಲಿಸುವನು. ॥ ೨೯ ॥

ಪರಮ ಜಿತೇಂದ್ರಿಯನಾದ ದೇವಸಾವರ್ಣಿಯು ಹದಿಮೂರನೆಯ ಮನುವಾಗುವನು. ಚಿತ್ರಸೇನ, ವಿಚಿತ್ರ ಮುಂತಾದವರು ಅವನಿಗೆ ಪುತ್ರರಾಗಿ ಜನಿಸುವರು. ॥ ೩೦ ॥ ಸುಕರ್ಮ, ಸುತ್ರಾಮ ಮೊದಲಾದವರು ದೇವತೆಗಳಿರುವರು. ದಿವಸ್ಪತಿ ಎಂಬುವನು ಇಂದ್ರನಾಗುವನು. ನಿರ್ಮೋಕ ಮತ್ತು ತತ್ತ್ವದರ್ಶ ಮೊದಲಾದವರು ಸಪ್ತರ್ಷಿಗಳಾಗುವರು. ॥ ೩೧ ॥ ದೇವಹೋತ್ರನ ಪತ್ನೀ ಬೃಹತಿಯ ಗರ್ಭದಿಂದ ಯೋಗೇಶ್ವರನ ರೂಪದಲ್ಲಿ ಭಗವಂತನ ಅಂಶಾವತಾರವಾಗುವುದು. ಅದೇ ರೂಪದಲ್ಲಿ ದಿವಸ್ಪತಿಗೆ ಇಂದ್ರಪದವಿಯನ್ನು ಕರುಣಿಸುವನು. ॥ ೩೨ ॥

ರಾಜೇಂದ್ರ! ಇಂದ್ರಸಾವರ್ಣಿಯು ಹದಿನಾಲ್ಕನೆಯ ಮನು ಆಗುವನು. ಉರು, ಗಂಭೀರಬುದ್ಧಿ ಮುಂತಾದವರು ಅವನಿಗೆ ಪುತ್ರರಾಗುವರು. ॥ ೩೩ ॥ ಆಗ ಪವಿತ್ರ, ಚಾಕ್ಷುಷ ಮುಂತಾದವರು ದೇವತೆಗಳಾಗುವರು. ಶುಚಿಯೆಂಬುವನು ಇಂದ್ರನಾಗುವನು. ಅಗ್ನಿ ಬಾಹು, ಶುಚಿ, ಶುದ್ಧ, ಮಾಗಧ ಮುಂತಾದವರು ಸಪ್ತರ್ಷಿಗಳಾಗುವರು. ॥ ೩೪ ॥ ಆ ಸಮಯದಲ್ಲಿ ಸತ್ರಾಯಣನ ಪತ್ನೀ ವಿತಾನಾಳ ಗರ್ಭದಿಂದ ಬೃಹದ್ಭಾನುರೂಪನಾಗಿ ಭಗವಂತನು ಅವತರಿಸಿ ಕರ್ಮಕಾಂಡವನ್ನು ವಿಸ್ತರಿಸುವನು. ॥ ೩೫ ॥

ಪರೀಕ್ಷಿತನೇ! ಈ ಹದಿನಾಲ್ಕು ಮನ್ವಂತರಗಳು ಭೂತ, ವರ್ತಮಾನ, ಭವಿಷ್ಯ – ಮೂರೂ ಕಾಲಗಳಲ್ಲಿ ನಡೆಯುತ್ತಾ ಇರುತ್ತವೆ. ಇವುಗಳ ಮೂಲಕವೇ ಒಂದುಸಾವಿರ ಚತುರ್ಯುಗಗಳುಳ್ಳ ಕಲ್ಪದ ಗಣನೆ ಮಾಡಲಾಗುತ್ತದೆ. ॥ ೩೬ ॥

ಹದಿಮೂರನೆಯ ಅಧ್ಯಾಯವು ಮುಗಿಯಿತು. ॥ ೧೩ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಅಷ್ಟಮಸ್ಕಂಧೇ
ಮನ್ವಂತರಾನುವರ್ಣನಂ ನಾಮ ತ್ರಯೋದಶೋಽಧ್ಯಾಯಃ ॥ ೧೩ ॥

ಹದಿನಾಲ್ಕನೆಯ ಅಧ್ಯಾಯ

ಮನುವೇ ಮೊದಲಾದವರ ಕರ್ತವ್ಯ ನಿರೂಪಣೆ

ರಾಜೋವಾಚ

ಮನ್ವಂತರೇಷು ಭಗವನ್ಯಥಾ ಮನ್ವಾದಯಸ್ತ್ವಿಮೇ ।
ಯಸ್ಮಿನ್ಕರ್ಮಣಿ ಯೇ ಯೇನ ನಿಯುಕ್ತಾಸ್ತದ್ವದಸ್ವ ಮೇ ॥ ೧ ॥

ಋಷಿರುವಾಚ

ಮನವೋ ಮನುಪುತ್ರಾಶ್ಚ ಮುನಯಶ್ಚ ಮಹೀಪತೇ ।
ಇಂದ್ರಾಃ ಸುರಗಣಾಶ್ಚೈವ ಸರ್ವೇ ಪುರುಷಶಾಸನಾಃ ॥ ೨ ॥

ಯಜ್ಞಾದಯೋ ಯಾಃ ಕಥಿತಾಃ ಪೌರುಷ್ಯಸ್ತನವೋ ನೃಪ ।
ಮನ್ವಾದಯೋ ಜಗದ್ಯಾತ್ರಾಂ ನಯಂತ್ಯಾಭಿಃ ಪ್ರಚೋದಿತಾಃ ॥ ೩ ॥

ಚತುರ್ಯುಗಾಂತೇ ಕಾಲೇನ ಗ್ರಸ್ತಾನ್ಛ್ರುತಿಗಣಾನ್ಯಥಾ ।
ತಪಸಾ ಋಷಯೋಽಪಶ್ಯನ್ಯತೋ ಧರ್ಮಃ ಸನಾತನಃ ॥ ೪ ॥

ತತೋ ಧರ್ಮಂ ಚತುಷ್ಪಾದಂ ಮನವೋ ಹರಿಣೋದಿತಾಃ ।
ಯುಕ್ತಾಃ ಸಂಚಾರಯಂತ್ಯದ್ಧಾ ಸ್ವೇ ಸ್ವೇ ಕಾಲೇ ಮಹೀಂ ನೃಪ ॥ ೫ ॥

ಪಾಲಯಂತಿ ಪ್ರಜಾಪಾಲಾ ಯಾವದಂತಂ ವಿಭಾಗಶಃ ।
ಯಜ್ಞಭಾಗಭುಜೋ ದೇವಾ ಯೇ ಚ ತತ್ರಾನ್ವಿತಾಶ್ಚ ತೈಃ ॥ ೬ ॥

ಇಂದ್ರೋ ಭಗವತಾ ದತ್ತಾಂ
ತ್ರೈಲೋಕ್ಯಶ್ರಿಯಮೂರ್ಜಿತಾಮ್ ।
ಭುಂಜಾನಃ ಪಾತಿ ಲೋಕಾಂ-
ಸ್ತ್ರೀನ್ಕಾಮಂ ಲೋಕೇ ಪ್ರವರ್ಷತಿ ॥ ೭ ॥

ಜ್ಞಾನಂ ಚಾನುಯುಗಂ ಬ್ರೂತೇ ಹರಿಃ ಸಿದ್ಧಸ್ವರೂಪಧೃಕ್ ।
ಋಷಿರೂಪಧರಃ ಕರ್ಮ ಯೋಗಂ ಯೋಗೇಶರೂಪಧೃಕ್ ॥ ೮ ॥

ಸರ್ಗಂ ಪ್ರಜೇಶರೂಪೇಣ ದಸ್ಯೂನ್ಹನ್ಯಾತ್ಸ್ವರಾಡ್ವಪುಃ ।
ಕಾಲರೂಪೇಣ ಸರ್ವೇಷಾಮಭಾವಾಯ ಪೃಥಗ್ಗುಣಃ ॥ ೯ ॥

ಪರೀಕ್ಷಿದ್ರಾಜನು ಕೇಳಿದನು – ಪೂಜ್ಯರೇ! ತಾವು ವರ್ಣಿಸಿದ ಈ ಮನುಗಳು, ಮನುಪುತ್ರರು, ಸಪ್ತರ್ಷಿಗಳು ತಮ್ಮ-ತಮ್ಮ ಮನ್ವಂತರಗಳಲ್ಲಿ ಯಾರಿಂದ ನಿಯುಕ್ತರಾಗುತ್ತಾರೆ? ಯಾವ-ಯಾವ ಕರ್ಮಗಳನ್ನು ಹೇಗೇಗೆ ಮಾಡುತ್ತಾರೆ? ಇದನ್ನು ತಾವು ದಯಮಾಡಿ ನನಗೆ ಹೇಳುವವರಾಗಿರಿ. ॥ ೧ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಎಲೈ ಪರೀಕ್ಷಿತನೇ! ಮನುಗಳನ್ನು, ಮನುಪುತ್ರರನ್ನು, ಸಪ್ತರ್ಷಿಗಳನ್ನು, ದೇವತೆಗಳನ್ನು, ಇಂದ್ರನನ್ನು ನಿಯುಕ್ತಗೊಳಿಸುವವನು ಸ್ವತಃ ಭಗವಂತನೇ ಆಗಿರುವನು. ॥ ೨ ॥ ರಾಜನೇ! ಯಜ್ಞಪುರುಷನೇ ಮೊದಲಾದ ಭಗವಂತನ ಅಂಶಾವತಾರಗಳನ್ನು ನಾನು ಹೇಳಿರುವೆನಲ್ಲ, ಅವುಗಳ ಪ್ರೇರಣೆಯಿಂದಲೇ ಮನುವೇ ಮೊದಲಾದವರು ಲೋಕದ ರಕ್ಷಣೆಯ ಕಾರ್ಯವನ್ನು ನಿರ್ವಹಿಸುತ್ತಾರೆ. ॥ ೩ ॥ ಕೃತ, ತ್ರೇತಾ, ದ್ವಾಪರ, ಕಲಿಗಳೆಂಬ ಚತುರ್ಯುಗಗಳ ಅಂತ್ಯದಲ್ಲಿ ಕಾಲಾನುಗುಣವಾಗಿ ನಷ್ಟವಾದ ವೇದಗಳನ್ನು ಸಪ್ತರ್ಷಿಗಳು ತಮ್ಮ ತಪಸ್ಸಿನಿಂದ ಪುನಃ ಕಂಡುಕೊಳ್ಳುವರು. ಆ ವೇದಗಳ ಸಮೂಹದಿಂದಲೇ ಸನಾತನ ಧರ್ಮದ ರಕ್ಷಣೆಯಾಗುತ್ತದೆ. ॥ ೪ ॥ ರಾಜೇಂದ್ರಾ! ಭಗವಂತನ ಪ್ರೇರಣೆಯಿಂದ ತಮ್ಮ-ತಮ್ಮ ಮನ್ವಂತರಗಳಲ್ಲಿ ಪ್ರಯತ್ನಪೂರ್ವಕ ಎಲ್ಲ ಮನುಗಳು ಪೃಥಿವಿಯಲ್ಲಿ ನಾಲ್ಕು ಚರಣಗಳಿಂದಲೂ ಪರಿಪೂರ್ಣವಾದ ಧರ್ಮದ ಅನುಷ್ಠಾನವನ್ನು ಮಾಡಿಸುತ್ತಾರೆ. ॥ ೫ ॥ ಮನುಪುತ್ರರು ಆಯಾ ಮನ್ವಂತರದ ಕಡೆಯವರೆಗೂ ಕಾಲ-ದೇಶಗಳನ್ನು ವಿಭಾಗಿಸಿಕೊಂಡು ಪ್ರಜಾಪಾಲನೆಯನ್ನೂ ಧರ್ಮದ ರಕ್ಷಣೆಯನ್ನೂ ಮಾಡುತ್ತಿರುತ್ತಾರೆ. ಪಂಚಮಹಾಯಜ್ಞಗಳಲ್ಲಿ ಭೋಕ್ತೃಗಳಾದ ಋಷಿಗಳೂ, ಪಿತೃಗಳೂ, ಭೂತಗಳೂ, ಮನುಷ್ಯರೂ ಇವರೊಡನೆ ದೇವತೆಗಳೂ ಆಯಾ ಮನ್ವಂತರದಲ್ಲಿ ನಡೆಯುವ ಯಜ್ಞಗಳ ಹವಿರ್ಭಾಗಗಳನ್ನು ಸ್ವೀಕರಿಸುತ್ತಾರೆ. ॥ ೬ ॥ ಇಂದ್ರನು ಭಗವಂತನಿಂದ ಕೊಡಲ್ಪಟ್ಟ ಸಂಪತ್ಸಮೃದ್ಧವಾದ ಮೂರು ಲೋಕಗಳ ಐಶ್ವರ್ಯವನ್ನೂ ಉಪಭೋಗಿಸುತ್ತಾ ಪ್ರಜೆಯ ಪಾಲನೆಯನ್ನು ಮಾಡುತ್ತಾನೆ. ಪ್ರಪಂಚದಲ್ಲಿ ಯಥೇಷ್ಟವಾಗಿ ಮಳೆಗರೆಯುವ ಅಧಿಕಾರವು ಇಂದ್ರನಿಗೇ ಇದೆ. ॥ ೭ ॥ ಭಗವಂತನು ಪ್ರತಿ ಯುಗ-ಯುಗಗಳಲ್ಲಿ ಸನಕಾದಿ ಸಿದ್ಧರ ರೂಪಗಳನ್ನು ಧರಿಸಿ ಜ್ಞಾನವನ್ನೂ, ಯಾಜ್ಞವಲ್ಕ್ಯಾದಿ ಋಷಿಗಳ ರೂಪದಿಂದ ಕರ್ತವ್ಯವನ್ನೂ, ದತ್ತಾತ್ರೇಯಾದಿ ಯೋಗೇಶ್ವರರ ರೂಪದಿಂದ ಯೋಗವನ್ನೂ ಉಪದೇಶಮಾಡುತ್ತಾನೆ. ॥ ೮ ॥ ಆತನು ಮರೀಚಿಯೇ ಮುಂತಾದ ಪ್ರಜಾಪತಿಗಳ ರೂಪದಿಂದ ಸೃಷ್ಟಿಯ ವಿಸ್ತಾರವನ್ನು ಮಾಡುತ್ತಾನೆ. ಸಾಮ್ರಾಟನ ರೂಪದಿಂದ ದುಷ್ಟರನ್ನು ಸಂಹರಿಸುತ್ತಾನೆ. ಶೀತೋಷ್ಣವೇ ಮೊದಲಾದ ವಿಭಿನ್ನ ಗುಣಗಳನ್ನು ಧರಿಸಿ ಕಾಲರೂಪದಿಂದ ಎಲ್ಲರನ್ನು ಸಂಹಾರದ ಕಡೆಗೆ ಒಯ್ಯುವನು. ॥ ೯ ॥ ನಾಮ ಮತ್ತು ರೂಪಗಳ ಮಾಯೆಯಿಂದ ಪ್ರಾಣಿಗಳ

ಸ್ತೂಯಮಾನೋ ಜನೈರೇಭಿ-
ರ್ಮಾಯಯಾ ನಾಮರೂಪಯಾ ।
ವಿಮೋಹಿತಾತ್ಮಭಿರ್ನಾನಾ-
ದರ್ಶನೈರ್ನ ಚ ದೃಶ್ಯತೇ ॥ ೧೦ ॥

ಏತತ್ಕಲ್ಪವಿಕಲ್ಪಸ್ಯ ಪ್ರಮಾಣಂ ಪರಿಕೀರ್ತಿತಮ್ ।
ಯತ್ರ ಮನ್ವಂತರಾಣ್ಯಾಹುಶ್ಚತುರ್ದಶ ಪುರಾವಿದಃ ॥ ೧೧ ॥

ಬುದ್ಧಿಯು ವಿಮೂಢವಾಗಿಬಿಟ್ಟಿದೆ. ಈ ಕಾರಣದಿಂದಲೇ ಅನೇಕ ಪ್ರಕಾರದ ದರ್ಶನ ಶಾಸ್ತ್ರಗಳ ಮೂಲಕ ಭಗವಂತನ ಮಹಿಮೆಯನ್ನೇ ಕೀರ್ತಿಸುತ್ತಿದ್ದರೂ ಅವನ ವಾಸ್ತವಿಕ ಸ್ವರೂಪವನ್ನು ತಿಳಿಯದೇ ಹೋಗುವರು. ॥ ೧೦ ॥

ಪರೀಕ್ಷಿತನೇ! ಹೀಗೆ ನಾನು ನಿನಗೆ ಮಹಾಕಲ್ಪ ಮತ್ತು ಅವಾಂತರ ಕಲ್ಪದ ಪರಿಮಾಣವನ್ನು ಹೇಳಿದೆ. ಪುರಾಣತತ್ತ್ವವನ್ನು ಬಲ್ಲ ವಿದ್ವಾಂಸರು ಪ್ರತಿಯೊಂದು ಅವಾಂತರ ಕಲ್ಪದಲ್ಲಿ ಹದಿನಾಲ್ಕು ಮನ್ವಂತರಗಳನ್ನು ಹೇಳಿರುವರು. ॥ ೧೧ ॥

ಹದಿನಾಲ್ಕನೆಯ ಅಧ್ಯಾಯವು ಮುಗಿಯಿತು. ॥ ೧೪ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಅಷ್ಟಮ ಸ್ಕಂಧೇ
ಚತುರ್ದಶೋಽಧ್ಯಾಯಃ ॥ ೧೪ ॥

ಹದಿನೈದನೆಯ ಅಧ್ಯಾಯ

ಬಲಿಚಕ್ರವರ್ತಿಯು ಸ್ವರ್ಗವನ್ನು ಜಯಿಸಿದುದು – ವಾಮನಾವತಾರದ ಕಥೆ

ರಾಜೋವಾಚ

ಬಲೇಃ ಪದತ್ರಯಂ ಭೂಮೇಃ ಕಸ್ಮಾದ್ಧರಿರಯಾಚತ ।
ಭೂತೇಶ್ವರಃ ಕೃಪಣವಲ್ಲಬ್ಧಾರ್ಥೋಽಪಿ ಬಬಂಧ ತಮ್ ॥ ೧ ॥

ಏತದ್ವೇದಿತುಮಿಚ್ಛಾಮೋ ಮಹತ್ಕೌತೂಹಲಂ ಹಿ ನಃ ।
ಯಜ್ಞೇಶ್ವರಸ್ಯ ಪೂರ್ಣಸ್ಯ ಬಂಧನಂ ಚಾಪ್ಯನಾಗಸಃ ॥ ೨ ॥

ಶ್ರೀಶುಕ ಉವಾಚ

ಪರಾಜಿತಶ್ರೀರಸುಭಿಶ್ಚ ಹಾಪಿತೋ
ಹೀಂದ್ರೇಣ ರಾಜನ್ಭೃಗುಭಿಃ ಸ ಜೀವಿತಃ ।
ಸರ್ವಾತ್ಮನಾ ತಾನಭಜದ್ಭೃಗೂನ್ಬಲಿಃ
ಶಿಷ್ಯೋ ಮಹಾತ್ಮಾರ್ಥನಿವೇದನೇನ ॥ ೩ ॥

ತಂ ಬ್ರಾಹ್ಮಣಾ ಭೃಗವಃ ಪ್ರೀಯಮಾಣಾ
ಅಯಾಜಯನ್ವಿಶ್ವಜಿತಾ ತ್ರಿಣಾಕಮ್ ।
ಜಿಗೀಷಮಾಣಂ ವಿಧಿನಾಭಿಷಿಚ್ಯ
ಮಹಾಭಿಷೇಕೇಣ ಮಹಾನುಭಾವಾಃ ॥ ೪ ॥

ಪರೀಕ್ಷಿದ್ರಾಜನು ಕೇಳಿದನು – ಪೂಜ್ಯರೇ! ಶ್ರೀಹರಿಯು ಸ್ವಯಂ ಎಲ್ಲರಿಗೂ ಸ್ವಾಮಿಯಾಗಿದ್ದಾನೆ. ಹೀಗಿರುವಾಗ ಅವನು ದೀನನಂತೆ ಬಲಿಚಕ್ರವರ್ತಿಯ ಬಳಿ ಮೂರು ಹೆಜ್ಜೆ ಭೂಮಿಯನ್ನು ಏಕೆ ಬೇಡಿದನು? ಬೇಡಿದುದನ್ನು ಪಡೆದುಕೊಂಡ ಮೇಲೆ ಶ್ರೀಹರಿಯು ಬಲಿಯನ್ನು ಏಕೆ ಬಂಧಿಸಿದನು? ॥ ೧ ॥ ಪರಿಪೂರ್ಣಸ್ವರೂಪನೂ, ಯಜ್ಞೇಶ್ವರನೂ ಆದ ಭಗವಂತನು ಯಾಚಿಸಿದ್ದು ಮತ್ತು ನಿರಪರಾಧಿಯಾದ ಬಲಿಯನ್ನು ಬಂಧಿಸಿದ್ದು ಇವೆರಡೂ ನನಗೆ ಬಹಳ ಆಶ್ಚರ್ಯವುಂಟುಮಾಡಿದೆ. ಇದು ಹೇಗೆ ಸಂಭವಿಸಿತು? ಇವೆಲ್ಲವನ್ನು ನಾವು ಕೇಳಲು ಬಯಸುತ್ತೇವೆ. ॥ ೨ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಎಲೈ ಪರೀಕ್ಷಿತನೇ! ಇಂದ್ರನು ಬಲಿಯನ್ನು ಪರಾಭವಗೊಳಿಸಿ ಅವನ ಸಂಪತ್ತನ್ನೂ ಕಸಿದುಕೊಂಡನಲ್ಲದೆ ಅವನ ಪ್ರಾಣಗಳನ್ನೂ ಕಿತ್ತುಕೊಂಡಾಗ ಭೃಗುನಂದನ ಶುಕ್ರಾಚಾರ್ಯರು ಅವನನ್ನು ಸಂಜೀವನೀ ವಿದ್ಯೆಯಿಂದ ಬದುಕಿಸಿದರು. ಇದರಿಂದ ಶುಕ್ರಾಚಾರ್ಯರ ಶಿಷ್ಯನಾದ ಮಹಾತ್ಮ ಬಲಿಯು ತನ್ನ ಸರ್ವಸ್ವವನ್ನು ಅವರ ಚರಣಗಳಲ್ಲಿ ಅರ್ಪಿಸಿದನು ಹಾಗೂ ಅವನು ತನು-ಮನದಿಂದ ಗುರುಗಳೊಂದಿಗೆ ಸಮಸ್ತ ಭೃಗುವಂಶೀಯರಾದ ಬ್ರಾಹ್ಮಣರ ಸೇವೆ ಮಾಡತೊಡಗಿದನು. ॥ ೩ ॥ ಇದರಿಂದ ಪ್ರಭಾವಶಾಲಿಗಳಾದ ಭೃಗುವಂಶೀ ಬ್ರಾಹ್ಮಣರು ಅವನ ಮೇಲೆ ಬಹಳ ಪ್ರಸನ್ನರಾದರು. ಸ್ವರ್ಗವನ್ನು ಜಯಿಸಬೇಕೆಂಬ ಇಚ್ಛೆಯುಳ್ಳ ಬಲಿಚಕ್ರವರ್ತಿಗೆ ಮಹಾನುಭಾವರಾದ ಅವರು ಮಹಾಭಿಷೇಕದ ವಿಧಿಯಿಂದ ಅಭಿಷೇಕಮಾಡಿ ಅವನಿಂದ ವಿಶ್ವಜಿತ್ ಎಂಬ ಯಜ್ಞವನ್ನು ಮಾಡಿಸಿದರು. ॥ ೪ ॥ ಯಜ್ಞದ ವಿಧಿಯಿಂದ ಹವಿಸ್ಸುಗಳ ಮೂಲಕ ಯಜ್ಞೇಶ್ವರನನ್ನು ಪೂಜಿಸಿದಾಗ ಅಗ್ನಿಕುಂಡದಿಂದ ಇಂದ್ರನ

ತತೋ ರಥಃ ಕಾಂಚನಪಟ್ಟನದ್ಧೋ
ಹಯಾಶ್ಚ ಹರ್ಯಶ್ವತುರಂಗವರ್ಣಾಃ ।
ಧ್ವಜಶ್ಚ ಸಿಂಹೇನ ವಿರಾಜಮಾನೋ
ಹುತಾಶನಾದಾಸ ಹವಿರ್ಭಿರಿಷ್ಟಾತ್ ॥ ೫ ॥

ಧನುಶ್ಚ ದಿವ್ಯಂ ಪುರಟೋಪನದ್ಧಂ
ತೂಣಾವರಿಕ್ತೌ ಕವಚಂ ಚ ದಿವ್ಯಮ್ ।
ಪಿತಾಮಹಸ್ತಸ್ಯ ದದೌ ಚ ಮಾಲಾ-
ಮಮ್ಲಾನಪುಷ್ಪಾಂ ಜಲಜಂ ಚ ಶುಕ್ರಃ ॥ ೬ ॥

ಏವಂ ಸ ವಿಪ್ರಾರ್ಜಿತಯೋಧನಾರ್ಥ-
ಸ್ತೈಃ ಕಲ್ಪಿತಸ್ವಸ್ತ್ಯಯನೋಽಥ ವಿಪ್ರಾನ್ ।
ಪ್ರದಕ್ಷಿಣೀಕೃತ್ಯ ಕೃತಪ್ರಣಾಮಃ
ಪ್ರಹ್ಲಾದಮಾಮಂತ್ರ್ಯ ನಮಶ್ಚಕಾರ ॥ ೭ ॥

ಅಥಾರುಹ್ಯ ರಥಂ ದಿವ್ಯಂ ಭೃಗುದತ್ತಂ ಮಹಾರಥಃ ।
ಸುಸ್ರಗ್ಧರೋಽಥ ಸಂನಹ್ಯ ಧನ್ವೀ ಖಡ್ಗೀ ಧೃತೇಷುಧಿಃ ॥ ೮ ॥

ಹೇಮಾಂಗದಲಸದ್ಬಾಹುಃ ಸ್ಫುರನ್ಮಕರಕುಂಡಲಃ ।
ರರಾಜ ರಥಮಾರೂಢೋ ಧಿಷ್ಣ್ಯಸ್ಥ ಇವ ಹವ್ಯವಾಟ್ ॥ ೯ ॥

ತುಲ್ಯೈಶ್ವರ್ಯಬಲಶ್ರೀಭಿಃ ಸ್ವಯೂಥೈರ್ದೈತ್ಯಯೂಥಪೈಃ ।
ಪಿಬದ್ಭಿರಿವ ಖಂ ದೃಗ್ಭಿರ್ದಹದ್ಭಿಃ ಪರಿಧೀನಿವ ॥ ೧೦ ॥

ವೃತೋ ವಿಕರ್ಷನ್ಮಹತೀಮಾಸುರೀಂ ಧ್ವಜಿನೀಂ ವಿಭುಃ ।
ಯಯಾವಿಂದ್ರಪುರೀಂ ಸ್ವೃದ್ಧಾಂ ಕಂಪಯನ್ನಿವ ರೋದಸೀ ॥ ೧೧ ॥

ರಮ್ಯಾಮುಪವನೋದ್ಯಾನೈಃ ಶ್ರೀಮದ್ಭಿರ್ನಂದನಾದಿಭಿಃ ।
ಕೂಜದ್ವಿಹಂಗಮಿಥುನೈರ್ಗಾಯನ್ಮತ್ತಮಧುವ್ರತೈಃ ॥ ೧೨ ॥

ಪ್ರವಾಲಫಲಪುಷ್ಪೋರುಭಾರಶಾಖಾಮರದ್ರುಮೈಃ ।
ಹಂಸಸಾರಸಚಕ್ರಾಹ್ವಕಾರಂಡವಕುಲಾಕುಲಾಃ ।
ನಲಿನ್ಯೋ ಯತ್ರ ಕ್ರೀಡಂತಿ ಪ್ರಮದಾಃ ಸುರಸೇವಿತಾಃ ॥ ೧೩ ॥

ಆಕಾಶಗಂಗಯಾ ದೇವ್ಯಾ ವೃತಾಂ ಪರಿಖಭೂತಯಾ ।
ಪ್ರಾಕಾರೇಣಾಗ್ನಿವರ್ಣೇನ ಸಾಟ್ಟಾಲೇನೋನ್ನತೇನ ಚ ॥ ೧೪ ॥

ಕುದುರೆಗಳಂತಿರುವ ಹಸಿರುಬಣ್ಣದ್ದುಳ್ಳ ಕುದುರೆಗಳಿಂದಲೂ, ಸಿಂಹದ ಚಿಹ್ನೆಯಿಂದ ವಿರಾಜಿಸುತ್ತಿದ್ದ ಧ್ವಜದಿಂದಲೂ ಕೂಡಿದ ಚಿನ್ನದ ಪಟ್ಟಿಗಳಿಂದ ಸಮಲಂಕೃತವಾದ ರಥವೊಂದು ಹೊರಬಂದಿತು. ॥ ೫ ॥ ಜೊತೆಗೆ ಸ್ವರ್ಣಭೂಷಿತ ದಿವ್ಯ ಧನುಸ್ಸೂ, ಅಕ್ಷಯವಾದ ಬತ್ತಳಿಕೆಯೂ, ದಿವ್ಯವಾದ ಅಭೇದ್ಯಕವಚವೂ ಪ್ರಕಟಗೊಂಡವು. ಬಳಿಕ ಬ್ರಹ್ಮದೇವರು ಬಾಡದೇ ಇರುವ ಕಮಲದ ಮಾಲೆಯನ್ನೂ, ಶುಕ್ರಾಚಾರ್ಯರೂ ಒಂದು ಶಂಖವನ್ನು ಅವನಿಗೆ ಅನುಗ್ರಹಿಸಿದರು. ॥ ೬ ॥ ಹೀಗೆ ಬ್ರಾಹ್ಮಣರ ಕೃಪೆಯಿಂದ ಯುದ್ಧದ ಸಾಮಗ್ರಿಯನ್ನು ಪಡೆದುಕೊಂಡು, ಅವರಿಂದ ಸ್ವಸ್ತಿವಾಚನವನ್ನು ಮಾಡಿಸಿ ಬಲಿಚಕ್ರವರ್ತಿಯು ಆ ಬ್ರಾಹ್ಮಣರಿಗೆ ಪ್ರದಕ್ಷಿಣೆಮಾಡಿ ನಮಸ್ಕರಿಸಿದನು. ಬಳಿಕ ಅಜ್ಜನಾದ ಪ್ರಹ್ಲಾದನಿಂದಲೂ ದಿಗ್ವಿಜಯಕ್ಕೆ ಅನುಮತಿಯನ್ನು ಪಡೆದು ಅವನಿಗೂ ನಮಸ್ಕರಿಸಿದನು. ॥ ೭ ॥ ಮತ್ತೆ ಬ್ರಹ್ಮನು ಅನುಗ್ರಹಿಸಿದ ಬಾಡದಿರುವ ಕಮಲದ ಮಾಲೆಯನ್ನು ಧರಿಸಿ, ಭೃಗುವಂಶೀಯ ಬ್ರಾಹ್ಮಣರು ಕೊಟ್ಟಿರುವ ದಿವ್ಯವಾದ ರಥವನ್ನೇರಿ, ಧನುಸ್ಸನ್ನು ಹಿಡಿದುಕೊಂಡು, ಕತ್ತಿಯನ್ನು ಸೊಂಟಕ್ಕೆ ಬಿಗಿದು, ಬಾಣದಿಂದ ಬತ್ತಳಿಕೆಯನ್ನು ಬೆನ್ನಿಗೇರಿಸಿದನು. ॥ ೮ ॥ ಸುವರ್ಣಮಯ ಭುಜಕೀರ್ತಿಗಳಿಂದಲೂ, ಹೊಳೆಯುತ್ತಿರುವ ಮಕರಾಕಾರದ ಕುಂಡಲಗಳಿಂದಲೂ ಶೋಭಿಸುತ್ತಿದ್ದನು. ರಥಾರೂಢನಾಗಿ ಕುಳಿತಿರುವ ಬಲಿಚಕ್ರವರ್ತಿಯು ಅಗ್ನಿಕುಂಡದಲ್ಲಿ ಪ್ರಜ್ವಲಿಸುವ ಅಗ್ನಿಯಂತೆ ಕಂಗೊಳಿಸುತ್ತಿದ್ದನು. ॥ ೯ ॥ ಅವನ ಜೊತೆಗೆ ಅವನಂತೆ ಐಶ್ವರ್ಯ, ಬಲ, ಪರಾಕ್ರಮಗಳಿಂದ ಕೂಡಿದ ದೈತ್ಯಸೇನಾಪತಿಗಳು ತಮ್ಮ-ತಮ್ಮ ಸೈನ್ಯದೊಂದಿಗೆ ಹೊರಟರು. ಬಲಿಚಕ್ರವರ್ತಿಯು ಕ್ರೋಧತುಂಬಿದ ಕಣ್ಣುಗಳಿಂದಲೇ ಆಕಾಶವನ್ನು ಕುಡಿಯುತ್ತಿರುವನೋ, ಎಂಬಂತೆಯೂ ದಿಕ್ಕುಗಳನ್ನು ಸುಟ್ಟುಬಿಡುತ್ತಿರುವನೋ ಎಂದು ಕಾಣುತ್ತಿತ್ತು । ೧೦ । ರಾಕ್ಷಸರ ದೊಡ್ಡದಾದ ಸೈನ್ಯದೊಡನೆ ಪ್ರಭುವಾದ ಬಲಿಯು ಭೂಮ್ಯಾಕಾಶಗಳನ್ನು ನಡುಗಿಸುತ್ತಿರುವನೋ ಎಂಬಂತೆ ಗರ್ಜಿಸುತ್ತಾ ಸಂಪತ್ಸಮೃದ್ಧವಾದ ಅಮರಾವತಿಗೆ ಧಾಳಿಯಿಟ್ಟನು. ॥ ೧೧ ॥

ದೇವತೆಗಳ ಆ ರಾಜಧಾನೀ ಅಮರಾವತಿಯು ಭಾರೀ ಸುಂದರವಾದ ನಂದನವನವೇ ಮೊದಲಾದ ಉದ್ಯಾನವನಗಳಿಂದಲೂ, ಉಪವನಗಳಿಂದಲೂ ಪರಿಶೋಭಿಸುತ್ತಿತ್ತು. ಆ ಉದ್ಯಾನ-ಉಪವನಗಳಲ್ಲಿ ಪಕ್ಷಿಗಳ ಜೋಡಿಗಳೂ, ಮಧುಪಾನದಿಂದ ಮತ್ತೇರಿದ ದುಂಬಿಗಳು ಉಲಿಯುತ್ತಿದ್ದವು. ॥ ೧೨ ॥ ನವಪಲ್ಲವಗಳಿಂದಲೂ, ಫಲ-ಪುಷ್ಪಗಳಿಂದಲೂ, ಕಲ್ಪವೃಕ್ಷದ ಕೊಂಬೆಗಳು ಶೋಭಿಸುತ್ತಿದ್ದವು. ಅಲ್ಲಿಯ ಸರೋವರಗಳು ಹಂಸ, ಸಾರಸ, ಚಕ್ರವಾಕ, ಕಾರಂಡವ ಮೊದಲಾದ ಪಕ್ಷಿಗಳಿಂದ ತುಂಬಿದ್ದವು. ಆ ಸರೋವರಗಳಲ್ಲೇ ದೇವತೆಗಳಿಂದ ಸಮ್ಮಾನಿತರಾದ ದೇವಾಂಗನೆಯರು ಜಲಕ್ರೀಡೆಯಾಡುತ್ತಿದ್ದರು. ॥ ೧೩ ॥ ಜ್ಯೋತಿರ್ಮಯ ಆಕಾಶಗಂಗೆಯು ಕಂದಕದಂತೆ ಅಮರಾವತಿಯನ್ನು ಸುತ್ತಲೂ ಆವರಿಸಿಕೊಂಡಿತ್ತು. ಅಮರಾವತಿಯ ಸುತ್ತಲೂ ಎತ್ತರವಾದ ಬೆಂಕಿಯಂತೆ ಜಾಜ್ವಲ್ಯಮಾನವಾಗಿದ್ದ, ಉಪ್ಪರಿಗೆಯಿಂದ ಕೂಡಿದ ಸುವರ್ಣಮಯವಾದ ಪ್ರಾಕಾರವಿದ್ದಿತು. ॥ ೧೪ ॥ ಆ ಪ್ರಾಕಾರದ ಸುತ್ತಲೂ

ರುಕ್ಮಪಟ್ಟಕಪಾಟೈಶ್ಚ ದ್ವಾರೈಃ ಸ್ಫಟಿಕಗೋಪುರೈಃ ।
ಜುಷ್ಟಾಂ ವಿಭಕ್ತಪ್ರಪಥಾಂ ವಿಶ್ವಕರ್ಮವಿನಿರ್ಮಿತಾಮ್ ॥ ೧೫ ॥

ಸಭಾಚತ್ವರರಥ್ಯಾಢ್ಯಾಂ ವಿಮಾನೈರ್ನ್ಯರ್ಬುದೈರ್ಯುತಾಮ್ ।
ಶೃಂಗಾಟಕೈರ್ಮಣಿಮಯೈರ್ವಜ್ರವಿದ್ರುಮವೇದಿಭಿಃ ॥ ೧೬ ॥

ಯತ್ರ ನಿತ್ಯವಯೋರೂಪಾಃ ಶ್ಯಾಮಾ ವಿರಜವಾಸಸಃ ।
ಭ್ರಾಜಂತೇ ರೂಪವನ್ನಾರ್ಯೋ ಹ್ಯರ್ಚಿರ್ಭಿರಿವ ವಹ್ನಯಃ ॥ ೧೭ ॥

ಸುರಸ್ತ್ರೀಕೇಶವಿಭ್ರಷ್ಟನವಸೌಗಂಧಿಕಸ್ರಜಾಮ್ ।
ಯತ್ರಾಮೋದಮುಪಾದಾಯ ಮಾರ್ಗ ಆವಾತಿ ಮಾರುತಃ ॥ ೧೮ ॥

ಹೇಮಜಾಲಾಕ್ಷನಿರ್ಗಚ್ಛದ್ಧೂಮೇನಾಗುರುಗಂಧಿನಾ ।
ಪಾಂಡುರೇಣ ಪ್ರತಿಚ್ಛನ್ನಮಾರ್ಗೇ ಯಾಂತಿ ಸುರಪ್ರಿಯಾಃ ॥ ೧೯ ॥

ಮುಕ್ತಾವಿತಾನೈರ್ಮಣಿಹೇಮಕೇತುಭಿ-
ರ್ನಾನಾಪತಾಕಾವಲಭೀಭಿರಾವೃತಾಮ್ ।
ಶಿಖಂಡಿಪಾರಾವತಭೃಂಗನಾದಿತಾಂ
ವೈಮಾನಿಕಸ್ತ್ರೀಕಲಗೀತಮಂಗಲಾಮ್ ॥ ೨೦ ॥

ಮೃದಂಗಶಂಖಾನಕದುಂದುಭಿಸ್ವನೈಃ
ಸತಾಲವೀಣಾಮುರಜರ್ಷ್ಟಿವೇಣುಭಿಃ ।
ನೃತ್ಯೈಃ ಸವಾದ್ಯೈರುಪದೇವಗೀತಕೈ-
ರ್ಮನೋರಮಾಂ ಸ್ವಪ್ರಭಯಾ ಜಿತಪ್ರಭಾಮ್ ॥ ೨೧ ॥

ಯಾಂ ನ ವ್ರಜಂತ್ಯಧರ್ಮಿಷ್ಠಾಃ ಖಲಾ ಭೂತದ್ರುಹಃ ಶಠಾಃ ।
ಮಾನಿನಃ ಕಾಮಿನೋ ಲುಬ್ಧಾ ಏಭಿರ್ಹೀನಾ ವ್ರಜಂತಿ ಯತ್ ॥ ೨೨ ॥

ತಾಂ ದೇವಧಾನೀಂ ಸ ವರೂಥಿನೀಪತಿ-
ರ್ಬಹಿಃ ಸಮಂತಾದ್ರುರುಧೇ ಪೃತನ್ಯಯಾ ।
ಆಚಾರ್ಯದತ್ತಂ ಜಲಜಂ ಮಹಾಸ್ವನಂ
ದಧ್ಮೌ ಪ್ರಯುಂಜನ್ಭಯಮಿಂದ್ರಯೋಷಿತಾಮ್ ॥ ೨೩ ॥

ಚಿನ್ನದ ಕವಾಟಗಳಿಂದ ಕೂಡಿದ ಮಹಾದ್ವಾರಗಳೂ, ಸ್ಫಟಿಕಮಯವಾದ ಗೋಪುರಗಳಿದ್ದವು. ಅಲ್ಲಿ ಬೇರೆ-ಬೇರೆಯಾದ ದೊಡ್ಡ-ದೊಡ್ಡ ರಾಜಮಾರ್ಗಗಳಿದ್ದು, ಸ್ವತಃ ವಿಶ್ವಕರ್ಮನೇ ಆ ನಗರವನ್ನು ನಿರ್ಮಿಸಿದ್ದನು. ॥ ೧೫ ॥ ಸಭಾಭವನಗಳಿಂದಲೂ, ಚೌಕಗಳಿಂದಲೂ, ಅಗಲವಾದ ರಥಬೀದಿಗಳಿಂದಲೂ ಅದು ಶೋಭಾಯಮಾನವಾಗಿತ್ತು. ಹತ್ತುಕೋಟಿ ವಿಮಾನಗಳು ಅಮರಾವತಿಯನ್ನು ಅಲಂಕರಿಸಿದ್ದವು. ರತ್ನಖಚಿತವಾದ ವಜ್ರ, ಹವಳಗಳಿಂದ ಚೆಂದವಾಗಿ ನಿರ್ಮಿಸಲ್ಪಟ್ಟ ಜಗುಲಿಗಳು ಅಮರಾವತಿಯ ನಾಲ್ಕು ಮಾರ್ಗಗಳು ಕೂಡುವ ಚೌಕಗಳಲ್ಲಿ ಶೋಭಿಸುತ್ತಿದ್ದವು. ॥ ೧೬ ॥ ಅಲ್ಲಿಯ ಸ್ತ್ರೀಯರು ಯಾವಾಗಲೂ ಹದಿನಾರು ವರ್ಷದವರಂತೆ ಇರುತ್ತಾರೆ. ಅವರ ಯೌವನ ಮತ್ತು ಸೌಂದರ್ಯವು ಸ್ಥಿರವಾಗಿರುತ್ತದೆ. ಅವರು ನಿರ್ಮಲವಾದ ವಸ್ತ್ರಗಳನ್ನುಟ್ಟುಕೊಂಡು ಆ ನಾರಿಯರು ಜ್ವಾಲೆಗಳಿಂದ ಕೂಡಿದ ಅಗ್ನಿಯೋಪಾದಿಯಲ್ಲಿ ರಾರಾಜಿಸುತ್ತಿದ್ದರು. ॥ ೧೭ ॥

ದೇವಾಂಗನೆಯರ ಮುಡಿಯಿಂದ ಜಾರಿಬಿದ್ದ ನೂತನ ಸೌಗಂಧಿಕಾಪುಷ್ಪಗಳ ಸುರಭಿಯನ್ನು ಹೊತ್ತು ವಾಯುದೇವನು ಅಲ್ಲಿಯ ಮಾರ್ಗಗಳಲ್ಲಿ ಮಂದ-ಮಂದವಾಗಿ ಬೀಸುತ್ತಿದ್ದನು. ॥ ೧೮ ॥ ಮಹಾಸೌಧಗಳ ಸ್ವರ್ಣಮಯ ಕಿಟಕಿಗಳಿಂದ ಹೊರಸೂಸುತ್ತಿದ್ದ ಅಗರುವಾಸನೆಯಿಂದ ಕೂಡಿದ ಬಿಳಿಯ ಹೊಗೆಯಿಂದ ಸಮಾವೃತವಾದ ಮಾರ್ಗಗಳಲ್ಲಿ ದೇವಾಂಗನೆಯರು ಸಂಚರಿಸುತ್ತಿದ್ದರು. ॥ ೧೯ ॥ ಅಲ್ಲಲ್ಲಿ ಮುತ್ತುಗಳ ಝಲ್ಲರಿಗಳಿಂದ ಅಲಂಕೃತವಾದ ಮಂಟಪಗಳಿಂದಲೂ, ರತ್ನಖಚಿತವಾದ ಚಿನ್ನದ ಧ್ವಜಗಳಿಂದಲೂ, ಸೌಧಗಳ ಮೇಲೆ ಹಾರಾಡುತ್ತಿದ್ದ ನಾನಾ ವಿಧವಾದ ಪತಾಕೆಗಳಿಂದಲೂ ಸಮಾವೃತವಾಗಿದ್ದು, ನವಿಲು, ಪಾರಿವಾಳ, ದುಂಬಿಗಳ ಧ್ವನಿಗಳಿಂದಲೂ, ದೇವತೆಗಳ ಇಂಪಾದ ಸಂಗೀತದಿಂದಲೂ ಅಲ್ಲಿ ಮಂಗಳಮಯ ವಾತಾವರಣ ನಿರ್ಮಾಣವಾಗಿತ್ತು. ॥ ೨೦ ॥ ಮೃದಂಗ, ಶಂಖ, ಆನಕ, ಡೋಲು, ವೀಣಾ-ವೇಣು ಮೊದಲಾದ ವಾದ್ಯಗಳು ನುಡಿಸಲ್ಪಡುತ್ತಿದ್ದವು. ಗಂಧರ್ವರು ವಾದ್ಯಗಳ ಜೊತೆಗೆ ಹಾಡುತ್ತಿದ್ದರೆ, ಅಪ್ಸರೆಯರು ನರ್ತನ ಮಾಡುತ್ತಿದ್ದರು. ಆ ಅಮರಾವತಿಯು ತನ್ನ ಕಾಂತಿಯಿಂದ ಕಾಂತಿಯ ಅಧಿದೇವತೆಯನ್ನೂ ಧಿಕ್ಕರಿಸುತ್ತಿದೆಯೋ ಎಂಬಂತೆ ಕಾಣುತ್ತಿದ್ದಿತು. ಅಂತಹ ಅಮರಾವತಿಯನ್ನು ಬಲಿಯು ನೋಡಿದನು. ॥ ೨೧ ॥ ಆ ಪುರಿಯಲ್ಲಿ ಅಧರ್ಮಿಗಳು, ದುಷ್ಟರು, ಜೀವದ್ರೋಹಿಗಳು, ಮೋಸಗಾರರು, ದುರಭಿಮಾನಿಗಳು, ಕಾಮುಕರು, ಲೋಭಿಗಳು ಹೋಗಲಾರರು. ಇಂತಹ ದೋಷಗಳಿಂದ ರಹಿತರಾದವರು ಮಾತ್ರ ಅಲ್ಲಿಗೆ ಹೋಗಬಲ್ಲರು. । ೨೨ ॥ ಅಸುರರ ಸೇನೆಯ ಒಡೆಯನಾದ ಬಲಿಚಕ್ರವರ್ತಿಯು ತನ್ನ ಭಾರೀ ದೊಡ್ಡ ಸೈನ್ಯದಿಂದ ಅಮರಾವತಿಯನ್ನು ಹೊರಗಿನಿಂದ ಮುತ್ತಿಗೆ ಹಾಕಿದನು. ಅವನು ಶುಕ್ರಾಚಾರ್ಯರು ಇತ್ತ ಮಹಾಶಂಖವನ್ನು ಊದಿದನು. ಇದರಿಂದ ಇಂದ್ರಪತ್ನಿಯರ ಹೃದಯದಲ್ಲಿ ಭಯವನ್ನು ಹುಟ್ಟಿಸುತ್ತಾ ಆ ಶಂಖಧ್ವನಿಯು ಎಲ್ಲೆಡೆ ಹರಡಿಕೊಂಡಿತು. ॥೨೩॥

ಮಘವಾಂಸ್ತಮಭಿಪ್ರೇತ್ಯ ಬಲೇಃ ಪರಮಮುದ್ಯಮಮ್ ।
ಸರ್ವದೇವಗಣೋಪೇತೋ ಗುರುಮೇತದುವಾಚ ಹ
॥ ೨೪ ॥

ಭಗವನ್ನುದ್ಯಮೋ ಭೂಯಾನ್ಬಲೇರ್ನಃ ಪೂರ್ವವೈರಿಣಃ ।
ಅವಿಷಹ್ಯಮಿಮಂ ಮನ್ಯೇ ಕೇನಾಸೀತ್ತೇಜಸೋರ್ಜಿತಃ
॥ ೨೫ ॥

ನೈನಂ ಕಶ್ಚಿತ್ಕುತೋ ವಾಪಿ ಪ್ರತಿವ್ಯೋಢುಮಧೀಶ್ವರಃ ।
ಪಿಬನ್ನಿವ ಮುಖೇನೇದಂ ಲಿಹನ್ನಿವ ದಿಶೋ ದಶ ।
ದಹನ್ನಿವ ದಿಶೋ ದೃಗ್ಭಿಃ ಸಂವರ್ತಾಗ್ನಿರಿವೋತ್ಥಿತಃ
॥ ೨೬ ॥

ಬ್ರೂಹಿ ಕಾರಣಮೇತಸ್ಯ ದುರ್ಧರ್ಷತ್ವಸ್ಯ ಮದ್ವಿಷಃ ।
ಓಜಃ ಸಹೋ ಬಲಂ ತೇಜೋ ಯತ ಏತತ್ಸಮುದ್ಯಮಃ
॥ ೨೭ ॥

ಗುರುರುವಾಚ

ಜಾನಾಮಿ ಮಘವನ್ ಶತ್ರೋರುನ್ನತೇರಸ್ಯ ಕಾರಣಮ್ ।
ಶಿಷ್ಯಾಯೋಪಭೃತಂ ತೇಜೋ ಭೃಗುಭಿರ್ಬ್ರಹ್ಮವಾದಿಭಿಃ
॥ ೨೮ ॥

ಭವದ್ವಿಧೋ ಭವಾನ್ವಾಪಿ ವರ್ಜಯಿತ್ವೇಶ್ವರಂ ಹರಿಮ್ ।
ನಾಸ್ಯ ಶಕ್ತಃ ಪುರಃ ಸ್ಥಾತುಂ ಕೃತಾಂತಸ್ಯ ಯಥಾ ಜನಾಃ
॥ ೨೯ ॥

ತಸ್ಮಾನ್ನಿಲಯಮುತ್ಸೃಜ್ಯ ಯೂಯಂ ಸರ್ವೇ ತ್ರಿವಿಷ್ಟಪಮ್ ।
ಯಾತ ಕಾಲಂ ಪ್ರತೀಕ್ಷಂತೋ ಯತಃ ಶತ್ರೋರ್ವಿಪರ್ಯಯಃ
॥ ೩೦ ॥

ಏಷ ವಿಪ್ರಬಲೋದರ್ಕಃ ಸಂಪ್ರತ್ಯೂರ್ಜಿತವಿಕ್ರಮಃ ।
ತೇಷಾಮೇವಾಪಮಾನೇನ ಸಾನುಬಂಧೋ ವಿನಂಕ್ಷ್ಯತಿ
॥ ೩೧ ॥

ಏವಂ ಸುಮಂತ್ರಿತಾರ್ಥಾಸ್ತೇ ಗುರುಣಾರ್ಥಾನುದರ್ಶಿನಾ ।
ಹಿತ್ವಾ ತ್ರಿವಿಷ್ಟಪಂ ಜಗ್ಮುರ್ಗೀರ್ವಾಣಾಃ ಕಾಮರೂಪಿಣಃ
॥ ೩೨ ॥

ದೇವೇಷ್ವಥ ನಿಲೀನೇಷು ಬಲಿರ್ವೈರೋಚನಃ ಪುರೀಮ್ ।
ದೇವಧಾನೀಮಧಿಷ್ಠಾಯ ವಶಂ ನಿನ್ಯೇ ಜಗತ್ತ್ರಯಮ್
॥ ೩೩ ॥

ತಂ ವಿಶ್ವಜಯಿನಂ ಶಿಷ್ಯಂ ಭೃಗವಃ ಶಿಷ್ಯವತ್ಸಲಾಃ ।
ಶತೇನ ಹಯಮೇಧಾನಾಮನುವ್ರತಮಯಾಜಯನ್
॥ ೩೪ ॥

ಬಲಿಯು ಯುದ್ಧಕ್ಕಾಗಿ ಭಾರೀ ಸಿದ್ಧತೆಯನ್ನು ಮಾಡಿರುವನು ಎಂದು ನೋಡಿದ ಇಂದ್ರನು ಎಲ್ಲ ದೇವತೆಗಳೊಂದಿಗೆ ತಮ್ಮ ಗುರುಗಳಾದ ಬೃಹಸ್ಪತ್ಯಾಚಾರ್ಯರ ಬಳಿಗೆ ಹೋಗಿ ಇಂತೆಂದನು – ॥ ೨೪ ॥ ಪೂಜ್ಯರೇ! ಹಿಂದಿನ ನಮ್ಮ ಶತ್ರುವಾದ ಬಲಿಯು ಈ ಬಾರಿ ಯುದ್ಧಕ್ಕಾಗಿ ಭಾರೀ ಸಿದ್ಧತೆ ಮಾಡಿರುವನು. ನಮ್ಮಿಂದ ಅವನನ್ನು ಇದಿರಿಸಲು ಸಾಧ್ಯವಾಗದೆಂದೇ ನನಗೆ ಅನಿಸುತ್ತಿದೆ. ಇವನು ಯಾವ ಶಕ್ತಿಯಿಂದ ನಮ್ಮನ್ನು ಎದುರಿಸುವಷ್ಟು ಬಲಶಾಲಿಯಾಗಿದ್ದಾನೆ, ತಿಳಿಯದು. ॥ ೨೫ ॥ ಈ ಸಮಯದಲ್ಲಿ ಬಲಿಯನ್ನು ಯಾರೂ ಕೂಡ ಯಾವ ರೀತಿಯಿಂದಲೂ ತಡೆಯಲಾರರು ಎಂದು ನನಗೆ ಭಾಸವಾಗುತ್ತಿದೆ. ಅವನು ಪ್ರಳಯಾಗ್ನಿಯಂತೆ ಬೆಳೆದಿರುವನು ಮತ್ತು ಈ ವಿಶ್ವವನ್ನೇ ಬಾಯಿಂದ ಕುಡಿದುಬಿಡುವನೋ ಎಂದೆನಿಸುತ್ತದೆ. ಹತ್ತು ದಿಕ್ಕುಗಳನ್ನೂ ನಾಲಿಗೆಯಿಂದ ನೆಕ್ಕಿಬಿಡುವನೋ ಮತ್ತು ಕಣ್ಣುಗಳ ಜ್ವಾಲೆಗಳಿಂದ ದಶದಿಕ್ಕುಗಳನ್ನೂ ಸುಟ್ಟುಬಿಡುವನೋ ಎಂಬಂತಿದೆ. ॥ ೨೬ ॥ ನನ್ನ ಶತ್ರುವಾದ ಬಲಿಗೆ ನಾನೂ ಕೂಡ ಎದುರಿಸಲಾರದಷ್ಟು ಪರಾಕ್ರಮವು ಎಲ್ಲಿಂದ ಬಂತು? ಯಾವುದರಿಂದ ಇವನಿಗೆ ಇಂದ್ರಿಯ ಶಕ್ತಿಯೂ, ಮನಶ್ಶಕ್ತಿಯೂ, ದೇಹಶಕ್ತಿಯೂ, ತೇಜಸ್ಸು ಮತ್ತು ಈ ಸಮುದ್ಯಮಕ್ಕೆ ಪ್ರೇರಣೆಯೂ ಲಭಿಸಿತು? ಎಂಬುದನ್ನು ದಯಮಾಡಿ ಹೇಳಿರಿ. ॥ ೨೭ ॥

ದೇವಗುರು ಬೃಹಸ್ಪತ್ಯಾಚಾರ್ಯರು ಹೇಳಿದರು – ಇಂದ್ರನೇ! ನಿನ್ನ ಈ ಶತ್ರುವಿನ ಉನ್ನತಿಯ ಕಾರಣವನ್ನು ಬಲ್ಲೆನು. ಬ್ರಹ್ಮವಾದಿಗಳಾದ ಭೃಗುವಂಶೀಯರು ತಮ್ಮ ಶಿಷ್ಯ ಬಲಿಯಲ್ಲಿ ಮಹಾನ್ ತೇಜ–ಬಲಗಳ ಭಂಡಾರವನ್ನೇ ತುಂಬಿರುವರು. ॥ ೨೮ ॥ ಸರ್ವೇಶ್ವರನಾದ ಶ್ರೀಹರಿಯನ್ನು ಬಿಟ್ಟು ನೀನಾಗಲೀ, ನಿನ್ನಂತಹವರು ಯಾರೂ ಬಲಿಯ ಮುಂದೆ – ಕಾಲನ ಮುಂದೆ ಪ್ರಾಣಿಗಳು ಹೇಗೆ ನಿಲ್ಲಲಾರರೋ ಹಾಗೇ ನಿಲ್ಲಲಾರಿರಿ. ॥ ೨೯ ॥ ಅದಕ್ಕಾಗಿ ನೀವೆಲ್ಲ ಸ್ವರ್ಗವನ್ನು ಬಿಟ್ಟು ಅಡಗಿಕೊಂಡಿರಿ. ಶತ್ರುವಿನ ಭಾಗ್ಯಚಕ್ರವು ವಿಪರೀತವಾಗುವವರೆಗೆ ನೀವು ಪ್ರತೀಕ್ಷೆಮಾಡುತ್ತಾ ಇರಿ. ॥ ೩೦ ॥ ಈ ಸಮಯದಲ್ಲಿ ಭೃಗುವಂಶೀ ಬ್ರಾಹ್ಮಣರ ತೇಜದಿಂದಲೇ ಬಲಿಯ ಅಭಿವೃದ್ಧಿ ಉತ್ತರೋತ್ತರವಾಗಿ ಬೆಳೆಯುತ್ತಾ ಇದೆ. ಅವನು ಬ್ರಾಹ್ಮಣರನ್ನು ತಿರಸ್ಕರಿಸಿದಾಗ, ಅವಮಾನಗೊಳಿಸಿದಾಗ ಅವನು ತನ್ನ ಪರಿವಾರದೊಂದಿಗೆ ವಿನಾಶಹೊಂದುವನು. ॥ ೩೧ ॥ ದೇವಗುರು ಬೃಹಸ್ಪತ್ಯಾಚಾರ್ಯರು ದೇವತೆಗಳ ಸ್ವಾರ್ಥ ಮತ್ತು ಪರಮಾರ್ಥವೆಲ್ಲವನ್ನು ಬಲ್ಲವರಾಗಿದ್ದರು. ಗುರುಗಳು ಹೀಗೆ ದೇವತೆಗಳಿಗೆ ಸಲಹೆ ನೀಡಿದಾಗ ಅವರೆಲ್ಲರೂ ಇಷ್ಟಾನುಸಾರವಾದ ರೂಪಗಳನ್ನು ಧರಿಸಿ ಸ್ವರ್ಗವನ್ನು ಬಿಟ್ಟು ಹೊರಟು ಹೋದರು. ॥ ೩೨ ॥ ದೇವತೆಗಳು ಅಡಗಿಕೊಂಡಾಗ ವಿರೋಚನನಂದನ ಬಲಿಯು ಅಮರಾವತಿಯ ಮೇಲೆ ತನ್ನ ಅಧಿಕಾರವನ್ನು ಸ್ಥಾಪಿಸಿ, ಮೂರುಲೋಕಗಳನ್ನು ವಶಪಡಿಸಿಕೊಂಡು ಆಳತೊಡಗಿದನು. ॥ ೩೩ ॥ ಬಲಿಚಕ್ರವರ್ತಿಯು ವಿಶ್ವವಿಜಯಿಯಾದಾಗ ಶಿಷ್ಯಪ್ರೇಮಿ ಶುಕ್ರಾಚಾರ್ಯರೇ ಮೊದಲಾದ ಭೃಗುವಂಶೀಯರು ತಮ್ಮ ಶಿಷ್ಯನಾದ ಬಲಿಯಿಂದ ನೂರು ಅಶ್ವಮೇಧ ಯಜ್ಞಗಳನ್ನು ಮಾಡಿಸಿದರು. ॥ ೩೪ ॥

ತತಸ್ತದನುಭಾವೇನ ಭುವನತ್ರಯವಿಶ್ರುತಾಮ್ ।
ಕೀರ್ತಿಂ ದಿಕ್ಷು ವಿತನ್ವಾನಃ ಸ ರೇಜ ಉಡುರಾಡಿವ ॥ ೩೫ ॥

ಬುಭುಜೇ ಚ ಶ್ರಿಯಂ ಸ್ವೃದ್ಧಾಂ ದ್ವಿಜದೇವೋಪಲಂಭಿತಾಮ್ ।
ಕೃತಕೃತ್ಯಮಿವಾತ್ಮಾನಂ ಮನ್ಯಮಾನೋ ಮಹಾಮನಾಃ ॥ ೩೬ ॥

ಆ ಯಜ್ಞಗಳ ಮೂಲಕ ಬಲಿಯ ಕೀರ್ತಿ ಕೌಮುದಿಯು ಮೂರು ಲೋಕಗಳನ್ನೂ ಆಕ್ರಮಿಸಿ ದಶದಿಕ್ಕುಗಳಲ್ಲಿಯೂ ಪಸರಿಸಿತು ಹಾಗೂ ಅವನು ನಕ್ಷತ್ರಗಳ ರಾಜನಾದ ಚಂದ್ರನಂತೆ ಶೋಭಾಯಮಾನನಾದನು. ॥ ೩೫ ॥ ದೇವತಾ ಸ್ವರೂಪರಾದ ಬ್ರಾಹ್ಮಣರ ಕೃಪಾಶ್ರಯದಿಂದ ಲಭಿಸಿದ ಸಂಪತ್ಸಮೃದ್ಧವಾದ ರಾಜ್ಯಲಕ್ಷ್ಮಿಯನ್ನು ಮಹಾತ್ಮನಾದ ಬಲಿಯು ಉಪಭೋಗಿಸುತ್ತಾ ತನ್ನನ್ನು ಕೃತಕೃತ್ಯನೆಂದು ಭಾವಿಸಿಕೊಂಡನು. ॥ ೩೬ ॥

ಹದಿನೈದನೆಯ ಅಧ್ಯಾಯವು ಮುಗಿಯಿತು. ॥ ೧೫ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಅಷ್ಟಮ ಸ್ಕಂಧೇ ಪಂಚದಶೋಽಧ್ಯಾಯಃ ॥ ೧೫ ॥

ಹದಿನಾರನೆಯ ಅಧ್ಯಾಯ

ಕಶ್ಯಪರು ಅದಿತಿಗೆ ಪಯೋವ್ರತವನ್ನು ಉಪದೇಶಿಸಿದುದು

ಶ್ರೀಶುಕ ಉವಾಚ

ಏವಂ ಪುತ್ರೇಷು ನಷ್ಟೇಷು ದೇವಮಾತಾದಿತಿಸ್ತದಾ ।
ಹೃತೇ ತ್ರಿವಿಷ್ಟಪೇ ದೈತ್ಯೈಃ ಪರ್ಯತಪ್ಯದನಾಥವತ್ ॥ ೧ ॥

ಏಕದಾ ಕಶ್ಯಪಸ್ತಸ್ಯಾ ಆಶ್ರಮಂ ಭಗವಾನಗಾತ್ ।
ನಿರುತ್ಸವಂ ನಿರಾನಂದಂ ಸಮಾಧೇರ್ವಿರತಶ್ಚಿರಾತ್ ॥ ೨ ॥

ಸ ಪತ್ನೀಂ ದೀನವದನಾಂ ಕೃತಾಸನಪರಿಗ್ರಹಃ ।
ಸಭಾಜಿತೋ ಯಥಾನ್ಯಾಯಮಿದಮಾಹ ಕುರೂದ್ವಹ ॥ ೩ ॥

ಅಪ್ಯಭದ್ರಂ ನ ವಿಪ್ರಾಣಾಂ ಭದ್ರೇ ಲೋಕೇಽಧುನಾಽಽಗತಮ್ ।
ನ ಧರ್ಮಸ್ಯ ನ ಲೋಕಸ್ಯ ಮೃತ್ಯೋಶ್ಛಂದಾನುವರ್ತಿನಃ ॥ ೪ ॥

ಅಪಿ ವಾಕುಶಲಂ ಕಿಂಚಿದ್
ಗೃಹೇಷು ಗೃಹಮೇಧಿನಿ ।
ಧರ್ಮಸ್ಯಾರ್ಥಸ್ಯ ಕಾಮಸ್ಯ
ಯತ್ರ ಯೋಗೋ ಹ್ಯಯೋಗಿನಾಮ್ ॥ ೫ ॥

ಅಪಿ ವಾತಿಥಯೋಽಭ್ಯೇತ್ಯ ಕುಟುಂಬಾಸಕ್ತಯಾ ತ್ವಯಾ ।
ಗೃಹಾದಪೂಜಿತಾ ಯಾತಾಃ ಪ್ರತ್ಯುತ್ಥಾನೇನ ವಾ ಕ್ವಚಿತ್ ॥ ೬ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತ ಮಹಾರಾಜಾ! ದೇವತೆಗಳು ಹೀಗೆ ಸ್ವರ್ಗದಿಂದ ಪಲಾಯನಮಾಡಿ ಅಡಗಿಕೊಂಡರು ಮತ್ತು ದೈತ್ಯರು ಅಮರಾವತಿಯ ಮೇಲೆ ಅಧಿಕಾರವನ್ನು ಸ್ಥಾಪಿಸಿದಾಗ ದೇವಮಾತೆಯಾದ ಅದಿತಿಯು ದಿಕ್ಕಿಲ್ಲದವಳಂತೆ ಬಹಳವಾಗಿ ಸಂಕಟಪಟ್ಟಳು. ॥ ೧ ॥ ಬಹಳ ಕಾಲದ ಬಳಿಕ ಒಂದುದಿನ ಪರಮಪ್ರಭಾವಶಾಲಿಗಳಾದ ಕಶ್ಯಪ ಮಹಾಮುನಿಗಳು ಸಮಾಧಿಯಿಂದ ಬಹಿರ್ಮುಖರಾಗಿ ಅದಿತಿಯ ಆಶ್ರಮಕ್ಕೆ ಆಗಮಿಸಿದರು. ಅಲ್ಲಿ ಸುಖವಾಗಲೀ, ಶಾಂತಿಯಾಗಲೀ, ಉತ್ಸಾಹವಾಗಲೀ, ಅಲಂಕಾರವಾಗಲೀ ಏನೂ ಅವರಿಗೆ ಕಂಡುಬರಲಿಲ್ಲ. ॥ ೨ ॥ ಪರೀಕ್ಷಿತನೇ! ಅವರು ಅಲ್ಲಿಗೆ ಹೋಗಿ ಆಸನದಲ್ಲಿ ಕುಳಿತಾಗ ಅದಿತಿಯು ವಿಧಿವತ್ತಾಗಿ ಅವರನ್ನು ಪೂಜಿಸಿ-ಸತ್ಕರಿಸಿದಳು. ಬಾಡಿದ ಮುಖಭಾವದಿಂದ ಕೂಡಿದ ಪತ್ನಿಯನ್ನು ನೋಡಿ ಕಶ್ಯಪರು ಕೇಳಿದರು – ॥ ೩ ॥ ಕಲ್ಯಾಣೀ! ಈ ಸಮಯದಲ್ಲಿ ಜಗತ್ತಿನಲ್ಲಿ ಬ್ರಾಹ್ಮಣರ ಮೇಲೆ ಯಾವುದೇ ವಿಪತ್ತುಗಳು ಬಂದಿಲ್ಲವಲ್ಲ! ಧರ್ಮಪಾಲನೆಯು ಸರಿಯಾಗಿ ನಡೆಯುತ್ತಾ ಇದೆಯಲ್ಲ! ಮೃತ್ಯುವಿನ ವಶವರ್ತಿಗಳಾದ ಜನರಿಗೂ ಯಾವುದೇ ತೊಂದರೆಯೂ ಆಗಿಲ್ಲವಲ್ಲ? ॥ ೪ ॥ ಪ್ರಿಯೇ! ಗೃಹಸ್ಥಾಶ್ರಮವಾದರೋ ಯೋಗಾಭ್ಯಾಸವನ್ನು ಮಾಡದಿರುವವರಿಗೂ ಕೂಡ ಯೋಗದ ಫಲವನ್ನು ಕೊಡುವಂತಹುದು. ಇಂತಹ ಗೃಹಸ್ಥಾಶ್ರಮದಲ್ಲಿದ್ದು ಧರ್ಮ, ಅರ್ಥ, ಕಾಮ ಇವುಗಳ ಸೇವನೆಯಲ್ಲಿ ಯಾವುದೇ ವಿಘ್ನಗಳಾದರೋ ಇಲ್ಲವಲ್ಲ! ॥ ೫ ॥ ನೀನು ಯಾವಾಗಲಾದರೋ ಮನೆಕೆಲಸದಲ್ಲಿ ತೊಡಗಿದ್ದ ಸಮಯದಲ್ಲಿ ಯಾರಾದರೂ ಅತಿಥಿಗಳು ಬಂದು, ಅವರನ್ನು ನೀನು ಎದ್ದುಹೋಗಿ ಸತ್ಕರಿಸದೇ ಅವರು ನಿರಾಶರಾಗಿ ನಮ್ಮ ಮನೆಯಿಂದ ಹೊರಟುಹೋದರೇ? ಅದರಿಂದೇನಾದರೂ ಖಿನ್ನಮನಸ್ಕಳಾಗಿರುವೆಯಾ? ॥ ೬ ॥

ಗೃಹೇಷು ಯೇಷ್ವತಿಥಯೋ ನಾರ್ಚಿತಾಃ ಸಲಿಲೈರಪಿ ।
ಯದಿ ನಿರ್ಯಾಂತಿ ತೇ ನೂನಂ ಫೇರುರಾಜಗೃಹೋಪಮಾಃ ॥ ೭ ॥

ಅಪ್ಯಗ್ನಯಸ್ತು ವೇಲಾಯಾಂ ನ ಹುತಾ ಹವಿಷಾ ಸತಿ ।
ತ್ವಯೋದ್ವಿಗ್ನಧಿಯಾ ಭದ್ರೇ ಪ್ರೋಷಿತೇ ಮಯಿ ಕರ್ಹಿಚಿತ್ ॥ ೮ ॥

ಯತ್ಪೂಜಯಾ ಕಾಮದುಘಾನ್ಯಾತಿ ಲೋಕಾನ್ಗೃಹಾನ್ವಿತಃ ।
ಬ್ರಾಹ್ಮಣೋಽಗ್ನಿಶ್ಚ ವೈ ವಿಷ್ಣೋಃ ಸರ್ವದೇವಾತ್ಮನೋ ಮುಖಮ್ ॥ ೯ ॥

ಅಪಿ ಸರ್ವೇ ಕುಶಲಿನಸ್ತವ ಪುತ್ರಾ ಮನಸ್ವಿನಿ ।
ಲಕ್ಷಯೇಽಸ್ವಸ್ಥಮಾತ್ಮಾನಂ ಭವತ್ಯಾ ಲಕ್ಷಣೈರಹಮ್ ॥ ೧೦ ॥

ಅದಿತಿರುವಾಚ

ಭದ್ರಂ ದ್ವಿಜಗವಾಂ ಬ್ರಹ್ಮನ್‌ಧರ್ಮಸ್ಯಾಸ್ಯ ಜನಸ್ಯ ಚ ।
ತ್ರಿವರ್ಗಸ್ಯ ಪರಂ ಕ್ಷೇತ್ರಂ ಗೃಹಮೇಧಿನ್ಗೃಹಾ ಇಮೇ ॥ ೧೧ ॥

ಅಗ್ನಯೋಽತಿಥಯೋ ಭೃತ್ಯಾ ಭಿಕ್ಷವೋ ಯೇ ಚ ಲಿಪ್ಸವಃ ।
ಸರ್ವಂ ಭಗವತೋ ಬ್ರಹ್ಮನ್ನನುಧ್ಯಾನಾನ್ನ ರಿಷ್ಯತಿ ॥ ೧೨ ॥

ಕೋ ನು ಮೇ ಭಗವನ್ಕಾಮೋ ನ ಸಂಪದ್ಯೇತ ಮಾನಸಃ ।
ಯಸ್ಯಾ ಭವಾನ್ಪ್ರಜಾಧ್ಯಕ್ಷ ಏವಂ ಧರ್ಮಾನ್ಪ್ರಭಾಷತೇ ॥ ೧೩ ॥

ತವೈವ ಮಾರೀಚ ಮನಃಶರೀರಜಾಃ
ಪ್ರಜಾ ಇಮಾಃ ಸತ್ತ್ವರಜಸ್ತಮೋಜುಷಃ ।
ಸಮೋ ಭವಾಂಸ್ತಾಸ್ವಸುರಾದಿಷು ಪ್ರಭೋ
ತಥಾಪಿ ಭಕ್ತಂ ಭಜತೇ ಮಹೇಶ್ವರಃ ॥ ೧೪ ॥

ತಸ್ಮಾದೀಶ ಭಜಂತ್ಯಾ ಮೇ ಶ್ರೇಯಶ್ಚಿಂತಯ ಸುವ್ರತ ।
ಹೃತಶ್ರಿಯೋ ಹೃತಸ್ಥಾನಾನ್ಸಪತ್ನೈಃ ಪಾಹಿ ನಃ ಪ್ರಭೋ ॥ ೧೫ ॥

ಪರೈರ್ವಿವಾಸಿತಾ ಸಾಹಂ ಮಗ್ನಾ ವ್ಯಸನಸಾಗರೇ ।
ಐಶ್ವರ್ಯಂ ಶ್ರೀರ್ಯಶಃ ಸ್ಥಾನಂ ಹೃತಾನಿ ಪ್ರಬಲೈರ್ಮಮ ॥ ೧೬ ॥

ಯಥಾ ತಾನಿ ಪುನಃ ಸಾಧೋ ಪ್ರಪದ್ಯೇರನ್ಮಮಾತ್ಮಜಾಃ ।
ತಥಾ ವಿಧೇಹಿ ಕಲ್ಯಾಣಂ ಧಿಯಾ ಕಲ್ಯಾಣಕೃತ್ತಮ ॥ ೧೭ ॥

ಯಾವ ಮನೆಗಳಲ್ಲಿ ಬಂದಿರುವ ಅತಿಥಿಗಳಿಗೆ ನೀರಿನಿಂದಾದರೂ ಸತ್ಕರಿಸಲಾಗುವುದಿಲ್ಲವೋ, ಬಂದವರು ನಿರಾಶರಾಗಿ ಹಿಂತಿರುಗುವರೋ ಆ ಮನೆಯು ನರಿಗಳ ಮನೆಯಂತೆ ಆಗಿದೆ. ॥ ೭ ॥ ಪ್ರಿಯೇ! ನಾನು ತಪಸ್ಸಿಗೆ ಹೊರಟುಹೋಗಿರಲು ಕಳವಳಗೊಂಡ ಮನಸ್ಸಿನಿಂದ ಕೂಡಿದ ನೀನು ಆಯಾ ಕಾಲಗಳಲ್ಲಿ ಅಗ್ನಿಪರಿಚರ್ಯೆಯನ್ನು ಮಾಡದೇ ಹೋದೆಯಾ? ॥ ೮ ॥ ಸರ್ವದೇವಮಯನಾದ ಭಗವಂತನಿಗೆ ಬ್ರಾಹ್ಮಣರು ಮತ್ತು ಅಗ್ನಿಯು ಮುಖಪ್ರಾಯರಾಗಿದ್ದಾರೆ. ಗೃಹಸ್ಥನಾದ ಪುರುಷನು ಬ್ರಾಹ್ಮಣರನ್ನೂ, ಅಗ್ನಿಯನ್ನೂ ಆರಾಧಿಸಿದ್ದೇ ಆದರೆ ಸಮಸ್ತ ಕಾಮನೆಗಳನ್ನು ಪೂರ್ಣಗೊಳಿಸುವಂತಹ ಪುಣ್ಯಲೋಕಗಳಿಗೆ ಹೋಗುತ್ತಾನೆ. ॥ ೯ ॥ ಮನಸ್ವಿನಿಯೇ! ನಿನ್ನ ಮಕ್ಕಳೆಲ್ಲರೂ ಕುಶಲಿಗಳಾಗಿರುವರೇ? ನಿನ್ನ ಮುಖಲಕ್ಷಣಗಳಿಂದ ನೀನು ಸ್ವಲ್ಪ ಅಸ್ವಸ್ಥಳಾಗಿರುವೆಯೆಂದು ನಾನು ಗಮನಿಸುತ್ತಿದ್ದೇನೆ. ॥ ೧೦ ॥

ಅದಿತಿಯು ಹೇಳಿದಳು – ಪೂಜ್ಯರಾದ ಬ್ರಾಹ್ಮಣಶ್ರೇಷ್ಠರೇ! ಬ್ರಾಹ್ಮಣರು, ಗೋವುಗಳು, ಧರ್ಮವೂ ಹಾಗೂ ನಿಮ್ಮ ಸೇವಕಿಯಾದ ನಾನೂ – ಎಲ್ಲರೂ ಕುಶಲಿಗಳಾಗಿದ್ದೇವೆ. ಸ್ವಾಮಿಯೇ! ಈ ಗೃಹಸ್ಥಾಶ್ರಮವು ಧರ್ಮ, ಅರ್ಥ, ಕಾಮ ಇವುಗಳ ಸಾಧನೆಯಲ್ಲಿ ಪರಮ ಸಹಾಯಕವಾಗಿದೆ. ॥ ೧೧ ॥ ಪ್ರಭೋ! ನಿಮ್ಮ ನಿರಂತರ ಸ್ಮರಣೆ ಮತ್ತು ಶುಭಕಾಮನೆಯಿಂದಲೂ ಅಗ್ನಿ, ಅತಿಥಿ, ಸೇವಕ, ಭಿಕ್ಷುಕರು ಹಾಗೂ ಇತರ ಯಾಚಕರನ್ನೂ ತಿರಸ್ಕಾರಭಾವದಿಂದ ಕಂಡಿಲ್ಲ. ಎಲ್ಲರನ್ನೂ ಯಥಾಯೋಗ್ಯವಾಗಿ ಸತ್ಕರಿಸಿದ್ದೇನೆ. ॥ ೧೨ ॥ ಪೂಜ್ಯರೇ! ನಿಮ್ಮಂತಹ ಪ್ರಜಾಧ್ಯಕ್ಷರು ನನಗೆ ಧರ್ಮೋಪದೇಶ ಮಾಡುತ್ತಿರುವಾಗ ನನ್ನ ಮನಸ್ಸಿನ ಯಾವ ಕಾಮನೆಗಳು ತಾನೇ ಈಡೇರಲಾರವು? ॥ ೧೩ ॥ ಆರ್ಯಪುತ್ರ! ಸಮಸ್ತ ಪ್ರಜೆಯು ಸತ್ತ್ವಗುಣಿಯಾಗಿರಲೀ, ರಜೋಗುಣಿಯಾಗಿರಲೀ, ತಮೋಗುಣಿಯಾಗಿರಲೀ ನಿಮ್ಮ ಸಂತಾನವೇ ಆಗಿದೆಯಲ್ಲ? ಕೆಲವರು ಸಂಕಲ್ಪದಿಂದಲಾದರೆ, ಕೆಲವು ಶರೀರದಿಂದ ಉತ್ಪನ್ನರಾಗಿದ್ದಾರೆ. ಭಗವಂತನೇ! ಅಸುರರಾಗಿರಲೀ, ದೇವತೆಗಳಾಗಿರಲೀ ತಾವು ತಮ್ಮ ಸಂತಾನದ ಕುರಿತು ಒಂದೇ ರೀತಿಯ ಸಮಭಾವವನ್ನೇ ಇರಿಸಿರುವಿರಿ. ಆದರೂ ಸ್ವತಃ ಪರಮೇಶ್ವರನೂ ಕೂಡ ತನ್ನ ಭಕ್ತರ ಅಭಿಲಾಷೆಯನ್ನು ಪೂರ್ಣಗೊಳಿಸುತ್ತಾ ಇರುವನಲ್ಲ! ॥ ೧೪ ॥ ನನ್ನ ಸ್ವಾಮಿಯೇ! ನಾನು ನಿಮ್ಮ ದಾಸಿಯಾಗಿರುವೆನು. ನೀವು ನನ್ನ ಒಳಿತಿಗಾಗಿ ವಿಚಾರಮಾಡಿರಿ. ಮಾನಧನನೇ! ಪ್ರಭುವೇ! ಶತ್ರುಗಳು ನಮ್ಮ ಸಂಪತ್ತನ್ನೂ ರಾಜ್ಯವನ್ನೂ ಅಪಹರಿಸಿ ಬಿಟ್ಟಿರುವರು. ತಾವು ನಮ್ಮನ್ನು ರಕ್ಷಿಸಿರಿ. ॥ ೧೫ ॥ ಬಲಿಷ್ಠರಾದ ದೈತ್ಯರು ನಮ್ಮ ಐಶ್ವರ್ಯ, ಧನ, ಯಶಸ್ಸು, ಪದವಿ ಎಲ್ಲವನ್ನೂ ಕಸಿದುಕೊಂಡು, ನಮ್ಮನ್ನು ರಾಜ್ಯದಿಂದ ಹೊರಗೆ ಹಾಕಿರುವರು. ಹೀಗೆ ನಾನು ದುಃಖದ ಸಮುದ್ರದಲ್ಲಿ ಮುಳುಗಿಹೋಗಿದ್ದೇನೆ. ॥ ೧೬ ॥ ನಿಮ್ಮನ್ನು ಬಿಟ್ಟು ನಮ್ಮಗಳ ಒಳಿತನ್ನು ಮಾಡುವವರು ಬೇರೆ ಯಾರೂ ಇಲ್ಲ. ಅದಕ್ಕಾಗಿ ನನ್ನ ಹಿತೈಷಿಗಳಾದ ಸ್ವಾಮಿಯೇ! ನೀವು ಚೆನ್ನಾಗಿ ವಿಚಾರಮಾಡಿ ನನ್ನ ಮಕ್ಕಳಿಗೆ ಕಳೆದುಹೋದ ವಸ್ತುಗಳು ಪುನಃ ದೊರಕುವಂತೆ ತಮ್ಮ ಸಂಕಲ್ಪದಿಂದಲೇ ನನ್ನ ಕಲ್ಯಾಣವಾಗುವಂತಹ ಯಾವುದಾದರೂ ಉಪಾಯವನ್ನು ಮಾಡಿರಿ. ॥ ೧೭ ॥

ಶ್ರೀಶುಕ ಉವಾಚ

ಏವಮಭ್ಯರ್ಥಿತೋಽದಿತ್ಯಾ ಕಸ್ತಾಮಾಹ ಸ್ಮಯನ್ನಿವ ।
ಅಹೋ ಮಾಯಾಬಲಂ ವಿಷ್ಣೋಃ ಸ್ನೇಹಬದ್ಧಮಿದಂ ಜಗತ್ ॥ ೧೮ ॥

ಕ್ವ ದೇಹೋ ಭೌತಿಕೋಽನಾತ್ಮಾ ಕ್ವ ಚಾತ್ಮಾ ಪ್ರಕೃತೇಃ ಪರಃ ।
ಕಸ್ಯ ಕೇ ಪತಿಪುತ್ರಾದ್ಯಾ ಮೋಹ ಏವ ಹಿ ಕಾರಣಮ್ ॥ ೧೯ ॥

ಉಪತಿಷ್ಠಸ್ವ ಪುರುಷಂ ಭಗವಂತಂ ಜನಾರ್ದನಮ್ ।
ಸರ್ವಭೂತಗುಹಾವಾಸಂ ವಾಸುದೇವಂ ಜಗದ್ಗುರುಮ್ ॥ ೨೦ ॥

ಸ ವಿಧಾಸ್ಯತಿ ತೇ ಕಾಮಾನ್ ಹರಿರ್ದೀನಾನುಕಂಪನಃ ।
ಅಮೋಘಾ ಭಗವದ್ಭಕ್ತಿರ್ನೇತರೇತಿ ಮತಿರ್ಮಮ ॥ ೨೧ ॥

ಅದಿತಿರುವಾಚ

ಕೇನಾಹಂ ವಿಧಿನಾ ಬ್ರಹ್ಮನ್ನುಪಸ್ಥಾಸ್ಯೇ ಜಗತ್ಪತಿಮ್ ।
ಯಥಾ ಮೇ ಸತ್ಯಸಂಕಲ್ಪೋ ವಿದಧ್ಯಾತ್ಸ ಮನೋರಥಮ್ ॥ ೨೨ ॥

ಆದಿಶ ತ್ವಂ ದ್ವಿಜಶ್ರೇಷ್ಠ ವಿಧಿಂ ತದುಪಧಾವನಮ್ ।
ಆಶು ತುಷ್ಯತಿ ಮೇ ದೇವಃ ಸೀದಂತ್ಯಾಃ ಸಹ ಪುತ್ರಕೈಃ ॥ ೨೩ ॥

ಕಶ್ಯಪ ಉವಾಚ

ಏತನ್ಮೇ ಭಗವಾನ್ಪೃಷ್ಟಃ ಪ್ರಜಾಕಾಮಸ್ಯ ಪದ್ಮಜಃ ।
ಯದಾಹ ತೇ ಪ್ರವಕ್ಷ್ಯಾಮಿ ವ್ರತಂ ಕೇಶವತೋಷಣಮ್ ॥ ೨೪ ॥

ಫಾಲ್ಗುನಸ್ಯಾಮಲೇ ಪಕ್ಷೇ ದ್ವಾದಶಾಹಂ ಪಯೋವ್ರತಃ ।
ಅರ್ಚಯೇದರವಿಂದಾಕ್ಷಂ ಭಕ್ತ್ಯಾ ಪರಮಯಾನ್ವಿತಃ ॥ ೨೫ ॥

ಸಿನೀವಾಲ್ಯಾಂ ಮೃದಾಽಽಲಿಪ್ಯ ಸ್ನಾಯಾತ್ಕ್ರೋಡವಿದೀರ್ಣಯಾ ।
ಯದಿ ಲಭ್ಯೇತ ವೈ ಸ್ರೋತಸ್ಯೇತಂ ಮಂತ್ರಮುದೀರಯೇತ್ ॥ ೨೬ ॥

ತ್ವಂ ದೇವ್ಯಾದಿವರಾಹೇಣ ರಸಾಯಾಃ ಸ್ಥಾನಮಿಚ್ಛತಾ ।
ಉದ್ಧೃತಾಸಿ ನಮಸ್ತುಭ್ಯಂ ಪಾಪ್ಮಾನಂ ಮೇ ಪ್ರಣಾಶಯ ॥ ೨೭ ॥

ನಿರ್ವರ್ತಿತಾತ್ಮನಿಯಮೋ ದೇವಮರ್ಚೇತ್ಸಮಾಹಿತಃ ।
ಅರ್ಚಾಯಾಂ ಸ್ಥಂಡಿಲೇ ಸೂರ್ಯೇ ಜಲೇ ವಹ್ನೌ ಗುರಾವಪಿ ॥ ೨೮ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಹೀಗೆ ಅದಿತಿಯು ಕಶ್ಯಪರಲ್ಲಿ ಪ್ರಾರ್ಥಿಸಿದಾಗ ಅವರು ಕೊಂಚ ವಿಸ್ಮಿತರಾಗಿ ನುಡಿದರು – ದೇವೀ! ಇದೆಂತಹ ಆಶ್ಚರ್ಯದ ಮಾತಾಗಿದೆ? ಭಗವಂತನ ಮಾಯೆಯು ಎಷ್ಟು ಪ್ರಬಲವಾಗಿದೆ! ಈ ಇಡೀ ಪ್ರಪಂಚವು ಸ್ನೇಹವೆಂಬ ಹಗ್ಗದಿಂದ ಕಟ್ಟಲ್ಪಟ್ಟಿದೆ. ॥ ೧೮ ॥ ಪಂಚಭೂತಗಳಿಂದ ಸೃಷ್ಟಿಯಾಗಿರುವ ಅನಾತ್ಮವಾದ ಶರೀರವೆಲ್ಲಿ? ಪ್ರಕೃತಿಗಿಂತಲೂ ಆಚೆ ಇರುವ ಆತ್ಮನೆಲ್ಲಿ? ಯಾರಿಗೆ ಯಾರೂ ಪತಿಯೂ ಇಲ್ಲ, ಪುತ್ರನೂ ಇಲ್ಲ, ಸಂಬಂಧಿಯೂ ಇಲ್ಲ. ಮೋಹವೇ ಎಲ್ಲ ಮನುಷ್ಯರನ್ನು ಕುಣಿಸುತ್ತಾ ಇದೆ. ॥ ೧೯ ॥ ಪ್ರಿಯೇ! ನೀನು ಸಮಸ್ತ ಪ್ರಾಣಿಗಳ ಹೃದಯದಲ್ಲಿ ವಿರಾಜಮಾನನಾಗಿರುವ ತನ್ನ ಭಕ್ತರ ದುಃಖಗಳನ್ನು ಕಳೆಯುವಂತಹ ಜಗದ್ಗುರು ಭಗವಾನ್ ವಾಸುದೇವನನ್ನು ಆರಾಧಿಸು. ॥ ೨೦ ॥ ಅವನು ಅತ್ಯಂತ ದಯಾಳುವಾಗಿದ್ದಾನೆ. ಆ ಶ್ರೀಹರಿಯು ಅವಶ್ಯವಾಗಿಯೇ ನಿನ್ನ ಕಾಮನೆಯನ್ನು ಪೂರ್ಣಗೊಳಿಸುವನು. ಭಗವಂತನ ಭಕ್ತಿಯು ಎಂದಿಗೂ ವ್ಯರ್ಥವಾಗುವುದಿಲ್ಲ ಎಂಬ ದೃಢವಾದ ವಿಶ್ವಾಸವು ನನಗಿದೆ. ಇದು ಬಿಟ್ಟರೆ ಬೇರೆ ಯಾವ ಉಪಾಯವೂ ಇಲ್ಲ. ॥ ೨೧ ॥

ಅದಿತಿಯು ಕೇಳಿದಳು – ಪೂಜ್ಯರೇ! ಸತ್ಯಸಂಕಲ್ಪನಾದ ಭಗವಾನ್ ಜಗದೀಶ್ವರನು ನನ್ನ ಮನೋರಥವನ್ನು ಪೂರ್ಣಗೊಳಿಸುವಂತೆ ಅವನನ್ನು ನಾನು ಹೇಗೆ ಆರಾಧಿಸಬೇಕು? ನನಗೆ ತಿಳಿಸಿರಿ. ॥ ೨೨ ॥ ಪತಿದೇವಾ! ನಾನು ನನ್ನ ಮಕ್ಕಳೊಡನೆ ಬಹಳವಾದ ದುಃಖವನ್ನು ಅನುಭವಿಸುತ್ತಿರುವೆನು. ಪರಬ್ರಹ್ಮ ಪರಮಾತ್ಮನು ಶೀಘ್ರವಾಗಿ ಪ್ರಸನ್ನನಾಗುವಂತಹ ಆರಾಧನಾ ವಿಧಿಯನ್ನು ನನಗೆ ತಿಳಿಸಿಕೊಡುವವರಾಗಿರಿ ಎಂದು ಪ್ರಾರ್ಥಿಸಿದಳು. ॥ ೨೩ ॥

ಕಶ್ಯಪರು ಹೇಳಿದರು – ಸಾಧ್ವಿಯೇ! ಹಿಂದೊಮ್ಮೆ ನಾನು ಸಂತಾನದ ಅಪೇಕ್ಷೆಯಿಂದ ಬ್ರಹ್ಮದೇವರ ಬಳಿಯಲ್ಲಿ ಪ್ರಾರ್ಥಿಸಿದ್ದೆ. ನನ್ನ ಪ್ರಾರ್ಥನೆಯಂತೆ ಅವರು ಭಗವಂತನನ್ನು ಪ್ರಸನ್ನಗೊಳಿಸುವಂತಹ (ಸಂತಾನವನ್ನು ಪಡೆಯುವಂತಹ) ವ್ರತವನ್ನು ಉಪದೇಶಿಸಿದ್ದರು. ಅದನ್ನು ನಾನು ನಿನಗೆ ಹೇಳುತ್ತೇನೆ. ॥ ೨೪ ॥ ಫಾಲ್ಗುನ ಮಾಸದ ಶುಕ್ಲಪಕ್ಷದಲ್ಲಿ ಪ್ರತಿಪದೆಯಿಂದ ದ್ವಾದಶಿಯವರೆಗೆ ಹನ್ನೆರಡು ದಿನಗಳು ಕೇವಲ ಹಾಲನ್ನು ಕುಡಿದುಕೊಂಡು ಅನನ್ಯ ಭಕ್ತಿಯಿಂದ ಭಗವಾನ್ ಕಮಲಾಕ್ಷನನ್ನು ಪೂಜಿಸಬೇಕು. ॥ ೨೫ ॥ ಹಿಂದಿನ ಮಾಘಮಾಸದ ಅಮಾವಾಸ್ಯೆಯ ದಿನ ಕಾಡುಹಂದಿಯು ಅಗೆದು ಹಾಕಿರುವ ಮೃತ್ತಿಕೆಯನ್ನು ಮೈಗೆ ಹಚ್ಚಿಕೊಂಡು ನದಿಯಲ್ಲಿ ಸ್ನಾನಮಾಡಬೇಕು. 'ತ್ವಂ ದೇವ್ಯಾದಿವರಾಹೇಣ......' ಈ ಮಂತ್ರವನ್ನು ಜಪಿಸಬೇಕು. ॥ ೨೬ ॥ ಹೇ ಭಗವತಿ ಭೂದೇವಿಯೇ! ಪ್ರಾಣಿಗಳಿಗೆ ಜೀವಿಸಲು ಸ್ಥಾನವನ್ನು ಕಲ್ಪಿಸಿಕೊಡುವ ಸಲುವಾಗಿ ಭಗವಾನ್ ವರಾಹಸ್ವಾಮಿಯು ರಸಾತಳದಿಂದ ನಿನ್ನನ್ನು ತಂದು ಉದ್ಧರಿಸಿದ್ದನು. ನಿನಗೆ ನನ್ನ ನಮಸ್ಕಾರವು. ನೀನು ನನ್ನ ಪಾಪಗಳನ್ನು ನಾಶಮಾಡಿಬಿಡು. ॥ ೨೭ ॥ ಸ್ನಾನಾದಿಗಳ ಬಳಿಕ ನಿನ್ನ ನಿತ್ಯಕರ್ಮಗಳನ್ನು ಮುಗಿಸಿಕೊಂಡು ಏಕಾಗ್ರಚಿತ್ತದಿಂದ ಮೂರ್ತಿ, ವೇದಿ, ಸೂರ್ಯ, ಜಲ, ಅಗ್ನಿ ಮತ್ತು ಗುರುದೇವರು – ಹೀಗೆ ಇವರ ರೂಪದಲ್ಲಿ ಭಗವಂತನನ್ನು ಪೂಜಿಸಬೇಕು. ॥ ೨೮ ॥ (ಹಾಗೂ ಈ

ನಮಸ್ತುಭ್ಯಂ ಭಗವತೇ ಪುರುಷಾಯ ಮಹೀಯಸೇ ।
ಸರ್ವಭೂತನಿವಾಸಾಯ ವಾಸುದೇವಾಯ ಸಾಕ್ಷಿಣೇ ॥ ೨೯ ॥

ನಮೋಽವ್ಯಕ್ತಾಯ ಸೂಕ್ಷ್ಮಾಯ ಪ್ರಧಾನಪುರುಷಾಯ ಚ ।
ಚತುರ್ವಿಂಶದ್ಗುಣಜ್ಞಾಯ ಗುಣಸಂಖ್ಯಾನಹೇತವೇ ॥ ೩೦ ॥

ನಮೋ ದ್ವಿಶೀರ್ಷ್ಣೇ ತ್ರಿಪದೇ ಚತುಃಶೃಂಗಾಯ ತಂತವೇ ।
ಸಪ್ತಹಸ್ತಾಯ ಯಜ್ಞಾಯ ತ್ರಯೀವಿದ್ಯಾತ್ಮನೇ ನಮಃ ॥ ೩೧ ॥

ನಮಃ ಶಿವಾಯ ರುದ್ರಾಯ ನಮಃ ಶಕ್ತಿಧರಾಯ ಚ ।
ಸರ್ವವಿದ್ಯಾಧಿಪತಯೇ ಭೂತಾನಾಂ ಪತಯೇ ನಮಃ ॥ ೩೨ ॥

ನಮೋ ಹಿರಣ್ಯಗರ್ಭಾಯ ಪ್ರಾಣಾಯ ಜಗದಾತ್ಮನೇ ।
ಯೋಗೈಶ್ವರ್ಯಶರೀರಾಯ ನಮಸ್ತೇ ಯೋಗಹೇತವೇ ॥ ೩೩ ॥

ನಮಸ್ತ ಆದಿದೇವಾಯ ಸಾಕ್ಷಿಭೂತಾಯ ತೇ ನಮಃ ।
ನಾರಾಯಣಾಯ ಋಷಯೇ ನರಾಯ ಹರಯೇ ನಮಃ ॥ ೩೪ ॥

ನಮೋ ಮರಕತಶ್ಯಾಮವಪುಷೇಽಧಿಗತಶ್ರಿಯೇ ।
ಕೇಶವಾಯ ನಮಸ್ತುಭ್ಯಂ ನಮಸ್ತೇ ಪೀತವಾಸಸೇ ॥ ೩೫ ॥

ತ್ವಂ ಸರ್ವವರದಃ ಪುಂಸಾಂ ವರೇಣ್ಯ ವರದರ್ಷಭ ।
ಅತಸ್ತೇ ಶ್ರೇಯಸೇ ಧೀರಾಃ ಪಾದರೇಣುಮುಪಾಸತೇ ॥ ೩೬ ॥

ಅನ್ವವರ್ತಂತ ಯಂ ದೇವಾಃ ಶ್ರೀಶ್ಚ ತತ್ಪಾದಪದ್ಮಯೋಃ ।
ಸ್ಪೃಹಯಂತ ಇವಾಮೋದಂ ಭಗವಾನ್ಮೇ ಪ್ರಸೀದತಾಮ್ ॥ ೩೭ ॥

ಏತೈರ್ಮಂತ್ರೈರ್ಹೃಷೀಕೇಶಮಾವಾಹನಪುರಸ್ಕೃತಮ್ ।
ಅರ್ಚಯೇಚ್ಛ್ರದ್ಧಯಾ ಯುಕ್ತಃ ಪಾದ್ಯೋಪಸ್ಪರ್ಶನಾದಿಭಿಃ ॥ ೩೮ ॥

ಪ್ರಕಾರವಾಗಿ ಸ್ತುತಿಸಬೇಕು) ಷಡ್ಗುಣಸಂಪನ್ನನೂ, ಸಮಸ್ತ ಪ್ರಾಣಿಗಳಲ್ಲಿ ವಾಸಮಾಡುವವನೂ, ಸರ್ವಶ್ರೇಷ್ಠನೂ, ಸಮಸ್ತ ಪ್ರಾಣಿಗಳನ್ನು ತನ್ನಲ್ಲಿಯೇ ಧರಿಸುವವನೂ, ಸಮಸ್ತ ಚರಾಚರ ಜಗತ್ತಿಗೂ, ಅದರ ಕಾರಣಕ್ಕೂ ಸಾಕ್ಷಿಭೂತನಾಗಿರುವವನೂ, ವಾಸುದೇವನೂ ಆದ ನಿನಗೆ ನಮಸ್ಕರಿಸುತ್ತೇನೆ. ॥ ೨೯ ॥ ನೀನು ಅವ್ಯಕ್ತನೂ, ಸೂಕ್ಷ್ಮನೂ ಆಗಿರುವೆ. ಪ್ರಕೃತಿ ಮತ್ತು ಪುರುಷರ ರೂಪದಲ್ಲಿ ನೀನೇ ನೆಲೆಸಿರುವೆ. ನೀನು ಇಪ್ಪತ್ತನಾಲ್ಕು ಗುಣಗಳನ್ನು ತಿಳಿದವನೂ, ಗುಣಗಳನ್ನೂ ಎಣಿಸುವಂತಹ ಸಾಂಖ್ಯಶಾಸ್ತ್ರದ ಪ್ರವರ್ತಕನೂ ಆಗಿರುವೆ. ಅಂತಹ ನಿನಗೆ ನಮಸ್ಕಾರವು. ॥ ೩೦ ॥ ನೀನು ಯಜ್ಞಸ್ವರೂಪನಾಗಿರುವೆ. ಪ್ರಾಯಣೀಯ ಮತ್ತು ಉದಯನೀಯಗಳೆಂಬ ಎರಡು ಯಜ್ಞಕರ್ಮಗಳು ನಿನ್ನ ಶಿರಸ್ಸು ಆಗಿದೆ. ಪ್ರಾತಃಸವನ, ಮಾಧ್ಯಂದಿನಸವನ ಮತ್ತು ಸಾಯಂಸವನ ಎಂಬ ಮೂರು ಸವನಗಳೇ ನಿನ್ನ ಪಾದಗಳು. ನಾಲ್ಕು ವೇದಗಳೇ ನಿನ್ನ ನಾಲ್ಕು ಕೊಂಬುಗಳು. ಗಾಯತ್ರಿಯೇ ಮುಂತಾದ ಏಳು ಛಂದಸ್ಸುಗಳೇ ನಿನ್ನ ಏಳು ಕೈಗಳು. ಧರ್ಮಮಯವಾದ ವೃಷಭರೂಪವಾದ ಈ ಯಜ್ಞವು ವೇದಗಳಿಂದ ಪ್ರತಿಪಾದಿತವಾಗಿದೆ. ಇದರ ಆತ್ಮಾ ನೀನೇ ಆಗಿರುವೆ. ಇಂತಹ ಯಜ್ಞಸ್ವರೂಪನಾದ ನಿನಗೆ ನಮಸ್ಕರಿಸುತ್ತೇನೆ. ॥ ೩೧ ॥ ಭಗವಂತಾ! ಲೋಕಕ್ಕೆ ಕಲ್ಯಾಣವನ್ನುಂಟು ಮಾಡುವ ಶಿವನೂ ನೀನೇ ಆಗಿರುವೆ. ಪ್ರಳಯಕಾರೀ ರುದ್ರನೂ ನೀನೇ. ಸಮಸ್ತ ಶಕ್ತಿಗಳನ್ನು ಧರಿಸುವವನೂ ನೀನೇ. ನಿನಗೆ ಮತ್ತೆ-ಮತ್ತೆ ನಮಸ್ಕಾರಗಳು. ಸಮಸ್ತ ವಿದ್ಯೆಗಳ ಅಧಿಪತಿಯೂ, ಸರ್ವಭೂತರ ಸ್ವಾಮಿಯೂ ನೀನೇ ಆಗಿರುವೆ. ಅಂತಹ ನಿನಗೆ ನಮಸ್ಕರಿಸುತ್ತೇನೆ. ॥ ೩೨ ॥ ನೀನೇ ಎಲ್ಲರ ಪ್ರಾಣನೂ, ಜಗತ್ತಿಗೆ ಆತ್ಮಸ್ವರೂಪನೂ ಆಗಿರುವೆ. ಯೋಗಸ್ವರೂಪನೂ ಮತ್ತು ಯೋಗದಿಂದ ಪ್ರಾಪ್ತನಾಗುವ ಐಶ್ವರ್ಯಸ್ವರೂಪನೂ ನೀನೇ ಆಗಿರುವೆ. ಓ ಹಿರಣ್ಯಗರ್ಭನೇ! ನಿನಗೆ ನನ್ನ ನಮಸ್ಕಾರಗಳು. ॥ ೩೩ ॥ ಆದಿದೇವನಾಗಿರುವ ನಿನಗೆ ನಮಸ್ಕಾರವು. ಎಲ್ಲರ ಸಾಕ್ಷಿಭೂತನಾಗಿರುವ ನಿನಗೆ ನಮಸ್ಕಾರ. ನರ-ನಾರಾಯಣರ ರೂಪದಲ್ಲಿ ಪ್ರಕಟನಾದ ಶ್ರೀಹರಿಗೆ ನಮಸ್ಕಾರವು. ॥ ೩೪ ॥ ಮರಕತಮಣಿಯಂತೆ ಶ್ಯಾಮಲ ಶರೀರವುಳ್ಳ ನಿನಗೆ ನಮಸ್ಕಾರ. ಸಮಸ್ತವಾದ ಸಂಪತ್ತನ್ನೂ, ಸಂಪತ್ತುಗಳಿಗೆ ಅಧಿದೇವತೆಯಾದ ಮಹಾಲಕ್ಷ್ಮಿಯನ್ನು ಹೊಂದಿರುವ ನಿನಗೆ ನಮಸ್ಕಾರವು. ಪೀತಾಂಬರಧರನಾದ ಕೇಶವನೇ ನಿನಗೆ ನಮಸ್ಕಾರವು. ॥ ೩೫ ॥ ನೀನು ಎಲ್ಲ ವಿಧದ ವರಗಳನ್ನು ಕೊಡುವವನಾಗಿರುವೆ. ಭಕ್ತರಿಗೆ ವರಗಳನ್ನು ಕೊಡುವವರಲ್ಲಿ ನೀನು ಶ್ರೇಷ್ಠನಾಗಿರುವೆ. ಆದುದರಿಂದಲೇ ಭಕ್ತರಿಗೆ ನೀನು ಇಷ್ಟನಾಗಿರುವೆ. ಅದಕ್ಕಾಗಿಯೇ ಧೀರರಾದವರು, ವಿವೇಕಿಗಳು ತಮ್ಮ ಶ್ರೇಯಸ್ಸಿಗಾಗಿ ನಿನ್ನ ಚರಣರಜವನ್ನು ಉಪಾಸನೆ ಮಾಡುತ್ತಾರೆ. ॥ ೩೬ ॥ ಯಾರ ಚರಣಕಮಲಗಳ ಸುಗಂಧವನ್ನು ಪಡೆಯುವ ಆಸೆಯಿಂದ ಸಮಸ್ತ ದೇವತೆಗಳೂ, ಮಹಾಲಕ್ಷ್ಮಿಯೂ ನಿರಂತರವಾಗಿ ಆಶ್ರಯಿಸಿಕೊಂಡಿರುವರೋ ಅಂತಹ ಭಗವಂತನು ನನ್ನ ಮೇಲೆ ಪ್ರಸನ್ನನಾಗಲೀ. ॥ ೩೭ ॥

ಪ್ರಿಯೇ! ಅದಿತಿಯೇ! ಈ ಮಂತ್ರಗಳಿಂದ ಹೃಷೀಕೇಶನನ್ನು ಮೊದಲಿಗೆ ಆವಾಹಿಸಬೇಕು. ಬಳಿಕ ವಿಷ್ಣುವನ್ನು ಶ್ರದ್ಧಾಪೂರ್ವಕ

ಅರ್ಚಿತ್ವಾ ಗಂಧಮಾಲ್ಯಾದ್ಯೈಃ ಪಯಸಾ ಸ್ನಪಯೇದ್ವಿಭುಮ್ ।
ವಸ್ತ್ರೋಪವೀತಾಭರಣಪಾದ್ಯೋಪಸ್ಪರ್ಶನೈಸ್ತತಃ ।
ಗಂಧಧೂಪಾದಿಭಿಶ್ಚಾರ್ಚೇದ್ದ್ವಾದಶಾಕ್ಷರವಿದ್ಯಯಾ ॥ ೩೯ ॥

ಶೃತಂ ಪಯಸಿ ನೈವೇದ್ಯಂ ಶಾಲ್ಯನ್ನಂ ವಿಭವೇ ಸತಿ ।
ಸಸರ್ಪಿಃ ಸಗುಡಂ ದತ್ತ್ವಾ ಜುಹುಯಾನ್ಮೂಲವಿದ್ಯಯಾ ॥ ೪೦ ॥

ನಿವೇದಿತಂ ತದ್ಭಕ್ತಾಯ ದದ್ಯಾದ್ಭುಂಜೀತ ವಾ ಸ್ವಯಮ್ ।
ದತ್ತ್ವಾಽಽಚಮನಮರ್ಚಿತ್ವಾ ತಾಂಬೂಲಂ ಚ ನಿವೇದಯೇತ್ ॥ ೪೧ ॥

ಜಪೇದಷ್ಟೋತ್ತರಶತಂ ಸ್ತುವೀತ ಸ್ತುತಿಭಿಃ ಪ್ರಭುಮ್ ।
ಕೃತ್ವಾ ಪ್ರದಕ್ಷಿಣಂ ಭೂಮೌ ಪ್ರಣಮೇದ್ದಂಡವನ್ಮುದಾ ॥ ೪೨ ॥

ಕೃತ್ವಾ ಶಿರಸಿ ತಚ್ಛೇಷಾಂ ದೇವಮುದ್ವಾಸಯೇತ್ತತಃ ।
ದ್ವ್ಯವರಾನ್ಭೋಜಯೇದ್ವಿಪ್ರಾನ್ಪಾಯಸೇನ ಯಥೋಚಿತಮ್ ॥ ೪೩ ॥

ಭುಂಜೀತ ತೈರನುಜ್ಞಾತಃ ಶೇಷಂ ಸೇಷ್ಟಃ ಸಭಾಜಿತೈಃ ।
ಬ್ರಹ್ಮಚಾರ್ಯಥ ತದ್ರಾತ್ರ್ಯಾಂ ಶ್ವೋಭೂತೇ ಪ್ರಥಮೇಽಹನಿ ॥ ೪೪ ॥

ಸ್ನಾತಃ ಶುಚಿರ್ಯಥೋಕ್ತೇನ ವಿಧಿನಾ ಸುಸಮಾಹಿತಃ ।
ಪಯಸಾ ಸ್ನಾಪಯಿತ್ವಾರ್ಚೇದ್ಯಾವದ್ವ್ರತಸಮಾಪನಮ್ ॥ ೪೫ ॥

ಪಯೋಭಕ್ಷೋ ವ್ರತಮಿದಂ ಚರೇದ್ವಿಷ್ಣ್ವರ್ಚನಾದೃತಃ ।
ಪೂರ್ವವಜ್ಜುಹುಯಾದಗ್ನಿಂ ಬ್ರಾಹ್ಮಣಾಂಶ್ಚಾಪಿ ಭೋಜಯೇತ್ ॥ ೪೬ ॥

ಏವಂ ತ್ವಹರಹಃ ಕುರ್ಯಾದ್ದ್ವಾದಶಾಹಂ ಪಯೋವ್ರತಃ ।
ಹರೇರಾರಾಧನಂ ಹೋಮಮರ್ಹಣಂ ದ್ವಿಜತರ್ಪಣಮ್ ॥ ೪೭ ॥

ಪ್ರತಿಪದ್ದಿನಮಾರಭ್ಯ ಯಾವಚ್ಛುಕ್ಲತ್ರಯೋದಶೀ ।
ಬ್ರಹ್ಮಚರ್ಯಮಧಃಸ್ವಪ್ನಂ ಸ್ನಾನಂ ತ್ರಿಷವಣಂ ಚರೇತ್ ॥ ೪೮ ॥

ವರ್ಜಯೇದಸದಾಲಾಪಂ ಭೋಗಾನುಚ್ಚಾವಚಾಂಸ್ತಥಾ ।
ಅಹಿಂಸ್ರಃ ಸರ್ವಭೂತಾನಾಂ ವಾಸುದೇವಪರಾಯಣಃ ॥ ೪೯ ॥

ತ್ರಯೋದಶ್ಯಾಮಥೋ ವಿಷ್ಣೋಃ ಸ್ನಪನಂ ಪಂಚಕೈರ್ವಿಭೋಃ ।
ಕಾರಯೇಚ್ಛಾಸ್ತ್ರದೃಷ್ಟೇನ ವಿಧಿನಾ ವಿಧಿಕೋವಿದೈಃ ॥ ೫೦ ॥

ವಾಗಿ ಅರ್ಘ್ಯ, ಪಾದ್ಯ, ಆಚಮನಾದಿಗಳಿಂದ ಅರ್ಚನೆ ಮಾಡಬೇಕು. ॥ ೩೮ ॥ ಮತ್ತೆ ಶ್ರೀಹರಿಯನ್ನು ಹಾಲಿನಿಂದ ಅಭಿಷೇಕ ಮಾಡಿ, ಗಂಧಮಾಲ್ಯಾದಿಗಳಿಂದ ಅರ್ಚಿಸಿ, ವಸ್ತ್ರೋಪವೀತಗಳಿಂದಲೂ, ಆಭರಣಾದಿಗಳಿಂದಲೂ ಪರಮಾತ್ಮನನ್ನು ಅಲಂಕರಿಸಿ, ಪಾದ್ಯಾಚಮನೀಯಗಳಿಂದಲೂ, '**ಓಂ ನಮೋ ಭಗವತೇ ವಾಸುದೇವಾಯ**' ಈ ದ್ವಾದಶಾಕ್ಷರ ಮಂತ್ರವನ್ನು ಹೇಳಿಕೊಂಡು ಗಂಧ-ಅಕ್ಷತೆ-ಪುಷ್ಪ-ಧೂಪ-ದೀಪಾದಿಗಳನ್ನು ಶ್ರೀಹರಿಗೆ ಅರ್ಪಿಸಬೇಕು. ॥ ೩೯ ॥ ಸಾಮರ್ಥ್ಯವಿದ್ದರೆ ಹಾಲಿನಲ್ಲಿ ಪಕ್ವವಾದ ಹಾಗೂ ತುಪ್ಪ-ಬೆಲ್ಲ ಇವುಗಳಿಂದ ಕೂಡಿದ ಶಾಲ್ಯನ್ನವನ್ನು ನೈವೇದ್ಯ ಮಾಡಬೇಕು ಹಾಗೂ ಅದೇ ಪಾಯಸದಿಂದ ದ್ವಾದಶಾಕ್ಷರ ಮಂತ್ರದಿಂದ ಹೋಮಮಾಡಬೇಕು. ॥ ೪೦ ॥ ಆ ನೈವೇದ್ಯವನ್ನು ಭಗವದ್ಭಕ್ತರಿಗೆ ಹಂಚಿ ತಾನು ಸ್ವೀಕರಿಸಬೇಕು. ಬಳಿಕ ಭಗವಂತನಿಗೆ ಆಚಮನವನ್ನು ಅರ್ಪಿಸಿ ತಾಂಬೂಲವನ್ನು ನಿವೇದಿಸಬೇಕು. ॥ ೪೧ ॥ ಅನಂತರ ನೂರೆಂಟು ಬಾರಿ ದ್ವಾದಶಾಕ್ಷರ ಮಂತ್ರವನ್ನು ಜಪಿಸಿ ಭಗವಂತನನ್ನು ಸ್ತುತಿಗಳಿಂದ ಕೊಂಡಾಡಬೇಕು. ಪ್ರದಕ್ಷಿಣೆ ಮಾಡಿ ದೀರ್ಘದಂಡ ನಮಸ್ಕಾರವನ್ನು ಮಾಡಬೇಕು. ॥ ೪೨ ॥ ನಿರ್ಮಾಲ್ಯವನ್ನು ತಲೆಯಲ್ಲಿ ಧರಿಸಿಕೊಂಡು ಸ್ವಾಮಿಯನ್ನು ಉದ್ವಾಸನೆ ಮಾಡಬೇಕು. ಕನಿಷ್ಠ ಇಬ್ಬರು ಬ್ರಾಹ್ಮಣರಿಗೆ ಯಥೋಚಿತವಾಗಿ ಪಾಯಸಾನ್ನದಿಂದ ಭೋಜನ ಮಾಡಿಸಬೇಕು. ॥ ೪೩ ॥ ದಕ್ಷಿಣಾದಿಗಳಿಂದ ಅವರನ್ನು ಸತ್ಕರಿಸಿ, ಅವರಿಂದ ಅನುಜ್ಞೆಯನ್ನು ಪಡೆದು ತನ್ನ ಇಷ್ಟ-ಮಿತ್ರರೊಡನೆ ಪ್ರಸಾದಶೇಷವನ್ನು ಸ್ವೀಕರಿಸಬೇಕು. ಅಂದು ಬ್ರಹ್ಮಚರ್ಯದಿಂದ ಇದ್ದು, ಮರುದಿನ ಪ್ರಾತಃಕಾಲದಲ್ಲೇ ಸ್ನಾನಾದಿಗಳನ್ನು ಮಾಡಿ ಪವಿತ್ರತೆಯಿಂದ ಹಿಂದೆ ಹೇಳಿದ ವಿಧಿಯಿಂದ ಏಕಾಗ್ರತೆಯಿಂದ ಭಗವಂತನನ್ನು ಪೂಜಿಸಬೇಕು. ಹೀಗೆ ವ್ರತ ಸಮಾಪ್ತವಾಗುವತನಕ ಹಾಲಿನಿಂದ ಅಭಿಷೇಕ ಮಾಡಿ ಪ್ರತಿದಿನವೂ ಭಗವಂತನನ್ನು ಪೂಜಿಸಬೇಕು. ॥ ೪೪-೪೫ ॥

ಭಗವಂತನ ಪೂಜೆಯಲ್ಲಿ ಆದರ ಬುದ್ಧಿಯನ್ನಿರಿಸುತ್ತಾ ಕೇವಲ ಪಯೋವ್ರತಿಯಾಗಿದ್ದು ಈ ವ್ರತವನ್ನು ಮಾಡಬೇಕು. ಹಿಂದಿನಂತೆಯೇ ಪ್ರತಿದಿನವೂ ಹೋಮ ಮತ್ತು ಬ್ರಾಹ್ಮಣ ಭೋಜನವನ್ನು ಮಾಡಿಸಬೇಕು. ॥ ೪೬ ॥ ಹೀಗೆ ಪಯೋವ್ರತಿಯಾಗಿದ್ದು ಹನ್ನೆರಡು ದಿನಗಳವರೆಗೆ ಪ್ರತಿದಿನವೂ ಭಗವಂತನ ಆರಾಧನೆ, ಹೋಮ, ಪೂಜೆ, ಬ್ರಾಹ್ಮಣಭೋಜನ ಮಾಡಿಸುತ್ತಾ ಇರಬೇಕು. ॥ ೪೭ ॥

ಫಾಲ್ಗುಣ ಶುದ್ಧ ಪ್ರತಿಪದೆಯಿಂದ ಹಿಡಿದು ತ್ರಯೋದಶಿವರೆಗೆ ಬ್ರಹ್ಮಚರ್ಯದಿಂದ ಇದ್ದು, ನೆಲದ ಮೇಲೆ ಮಲಗಬೇಕು. ಮೂರು ಹೊತ್ತು ಸ್ನಾನಮಾಡಬೇಕು. ॥ ೪೮ ॥ ಸುಳ್ಳು ಹೇಳಬಾರದು. ಪಾಪಿಗಳೊಡನೆ ಮಾತನಾಡಬಾರದು. ಕೆಟ್ಟಮಾತುಗಳನ್ನು ಆಡಬಾರದು. ಎಲ್ಲ ರೀತಿಯ ಭೋಗಗಳನ್ನು ತ್ಯಜಿಸಬೇಕು. ಯಾವುದೇ ಪ್ರಾಣಿಗಳಿಗೆ ಹಿಂಸೆ ಮಾಡಬಾರದು. ಭಗವಂತನ ಆರಾಧನೆಯಲ್ಲೇ ತೊಡಗಿರಬೇಕು. ॥ ೪೯ ॥ ತ್ರಯೋದಶಿಯ ದಿನ ಪೂಜಾವಿಧಿ-ವಿಧಾನಗಳನ್ನು ಬಲ್ಲ ಬ್ರಾಹ್ಮಣರ ಮೂಲಕ ಶಾಸ್ತ್ರೋಕ್ತ ವಿಧಿಯಿಂದ ಭಗವಾನ್ ಮಹಾವಿಷ್ಣುವಿಗೆ ಪಂಚಾಮೃತ ಅಭಿಷೇಕವನ್ನು ಮಾಡಿಸಬೇಕು. ॥ ೫೦ ॥ ಅಂದು ವಿತ್ತಶಾಠ್ಯಮಾಡದೆ (ಜಿಪುಣತನವನ್ನು ಬಿಟ್ಟು) ಭಗವಂತನ ಮಹಾಪೂಜೆಯನ್ನು ಮಾಡಬೇಕು. ಹಾಲಿನಲ್ಲಿ ಬೇಯಿಸಿದ ಪಾಯಸವನ್ನು ಮಹಾ

ಪೂಜಾಂ ಚ ಮಹತೀಂ ಕುರ್ಯಾದ್ವಿತ್ತಶಾಠ್ಯವಿವರ್ಜಿತಃ ।
ಚರುಂ ನಿರೂಪ್ಯ ಪಯಸಿ ಶಿಪಿವಿಷ್ಟಾಯ ವಿಷ್ಣವೇ ॥ ೫೧ ॥

ಶೃತೇನ ತೇನ ಪುರುಷಂ ಯಜೇತ ಸುಸಮಾಹಿತಃ ।
ನೈವೇದ್ಯಂ ಚಾತಿಗುಣವದ್ದದ್ಯಾತ್ಪುರುಷತುಷ್ಟಿದಮ್ ॥ ೫೨ ॥

ಆಚಾರ್ಯಂ ಜ್ಞಾನಸಂಪನ್ನಂ ವಸ್ತ್ರಾಭರಣಧೇನುಭಿಃ ।
ತೋಷಯೇದೃತ್ವಿಜಶ್ಚೈವ ತದ್ವಿದ್ಧ್ಯಾರಾಧನಂ ಹರೇಃ ॥ ೫೩ ॥

ಭೋಜಯೇತ್ತಾನ್ಗುಣವತಾ ಸದನ್ನೇನ ಶುಚಿಸ್ಮಿತೇ ।
ಅನ್ಯಾಂಶ್ಚ ಬ್ರಾಹ್ಮಣಾನ್ ಶಕ್ತ್ಯಾ ಯೇ ಚ ತತ್ರ ಸಮಾಗತಾಃ ॥ ೫೪ ॥

ದಕ್ಷಿಣಾಂ ಗುರವೇ ದದ್ಯಾದೃತ್ವಿಗ್ಭ್ಯಶ್ಚ ಯಥಾರ್ಹತಃ ।
ಅನ್ನಾದ್ಯೇನಾಶ್ವಪಾಕಾಂಶ್ಚ ಪ್ರೀಣಯೇತ್ಸಮುಪಾಗತಾನ್ ॥ ೫೫ ॥

ಭುಕ್ತವತ್ಸು ಚ ಸರ್ವೇಷು ದೀನಾಂಧಕೃಪಣೇಷು ಚ ।
ವಿಷ್ಣೋಸ್ತತ್ಪ್ರೀಣನಂ ವಿದ್ವಾನ್ಭುಂಜೀತ ಸಹ ಬಂಧುಭಿಃ ॥ ೫೬ ॥

ನೃತ್ಯವಾದಿತ್ರಗೀತೈಶ್ಚ ಸ್ತುತಿಭಿಃ ಸ್ವಸ್ತಿವಾಚಕೈಃ ।
ಕಾರಯೇತ್ತತ್ಕಥಾಭಿಶ್ಚ ಪೂಜಾಂ ಭಗವತೋಽನ್ವಹಮ್ ॥ ೫೭ ॥

ಏತತ್ಪಯೋವ್ರತಂ ನಾಮ ಪುರುಷಾರಾಧನಂ ಪರಮ್ ।
ಪಿತಾಮಹೇನಾಭಿಹಿತಂ ಮಯಾ ತೇ ಸಮುದಾಹೃತಮ್ ॥ ೫೮ ॥

ತ್ವಂ ಚಾನೇನ ಮಹಾಭಾಗೇ ಸಮ್ಯಕ್ಚೀರ್ಣೇನ ಕೇಶವಮ್ ।
ಆತ್ಮನಾ ಶುದ್ಧಭಾವೇನ ನಿಯತಾತ್ಮಾ ಭಜಾವ್ಯಯಮ್ ॥ ೫೯ ॥

ಅಯಂ ವೈ ಸರ್ವಯಜ್ಞಾಖ್ಯಃ ಸರ್ವವ್ರತಮಿತಿ ಸ್ಮೃತಮ್ ।
ತಪಃಸಾರಮಿದಂ ಭದ್ರೇ ದಾನಂ ಚೇಶ್ವರತರ್ಪಣಮ್ ॥ ೬೦ ॥

ತ ಏವ ನಿಯಮಾಃ ಸಾಕ್ಷಾತ್ತ ಏವ ಚ ಯಮೋತ್ತಮಾಃ ।
ತಪೋ ದಾನಂ ವ್ರತಂ ಯಜ್ಞೋ ಯೇನ ತುಷ್ಯತ್ಯಧೋಕ್ಷಜಃ ॥ ೬೧ ॥

ತಸ್ಮಾದೇತದ್ವ್ರತಂ ಭದ್ರೇ ಪ್ರಯತಾ ಶ್ರದ್ಧಯಾ ಚರ ।
ಭಗವಾನ್ಪರಿತುಷ್ಟಸ್ತೇ ವರಾನಾಶು ವಿಧಾಸ್ಯತಿ ॥ ೬೨ ॥

ವಿಷ್ಣುವಿಗೆ ಅರ್ಪಿಸಬೇಕು. ॥ ೫೧ ॥ ಅತ್ಯಂತ ಏಕಾಗ್ರವಾದ ಮನಸ್ಸಿನಿಂದ ಪುರುಷಸೂಕ್ತಮಂತ್ರಗಳಿಂದ ಹಾಲಿನಿಂದ ಬೇಯಿಸಿದ ಪಾಯಸವನ್ನು ಅಗ್ನಿಯಲ್ಲಿ ಹೋಮಮಾಡಬೇಕು. ಬಳಿಕ ಶ್ರೀಭಗವಂತನಿಗೆ ತೃಪ್ತಿಯಾಗುವ ರೀತಿಯಲ್ಲಿ ಷಡ್ರಸೋಪೇತವಾದ ನೈವೇದ್ಯವನ್ನು ಅರ್ಪಿಸಬೇಕು. ॥ ೫೨ ॥ ಇದಾದ ಬಳಿಕ ಜ್ಞಾನಸಂಪನ್ನ ಆಚಾರ್ಯ ಮತ್ತು ಋತ್ವಿಜರಿಗೆ ವಸ್ತ್ರ, ಆಭೂಷಣ, ಗೋವು ಮುಂತಾದವುಗಳನ್ನು ಕೊಟ್ಟು ಸಂತುಷ್ಟಪಡಿಸಬೇಕು. ಬ್ರಾಹ್ಮಣರನ್ನು ಪೂಜಿಸಿ ತೃಪ್ತಿಪಡಿಸುವುದು ಶ್ರೀಹರಿಯ ಆರಾಧನೆಯೇ ಆಗಿದೆ. ॥ ೫೩ ॥ ಪ್ರಿಯೇ! ರುಚಿ-ಶುಚಿಯಾದ ಭಕ್ಷ್ಯ-ಭೋಜ್ಯಾದಿಗಳಿಂದ ಕೂಡಿದ ಮೃಷ್ಟಾನ್ನದಿಂದ ಆಚಾರ್ಯ-ಋತ್ವಿಜರಿಗೂ, ಪೂಜಾ ಸಮಾರಂಭಕ್ಕೆ ಆಗಮಿಸಿರುವ ಇತರ ಬ್ರಾಹ್ಮಣರಿಗೂ ಶಕ್ತ್ಯಾನುಸಾರವಾಗಿ ಭೋಜನಮಾಡಿಸಬೇಕು. ॥ ೫೪ ॥ ಗುರುವಿಗೂ, ಋತ್ವಿಜರಿಗೂ ಯಥಾಯೋಗ್ಯವಾದ ದಕ್ಷಿಣೆಯನ್ನು ಕೊಡಬೇಕು. ಪೂಜೆಯ ಸಮಯಕ್ಕೆ ಆಗಮಿಸಿದ ಚಂಡಾಲರೇ ಮೊದಲಾದವರನ್ನೂ ಅನ್ನ-ವಸ್ತ್ರಗಳಿಂದ ತೃಪ್ತಿಗೊಳಿಸಬೇಕು. ದೀನರು, ಬಡವರು, ಕುಂಟರು, ಕುರುಡರು, ಕೈಲಾಗದವರೂ – ಇವರೆಲ್ಲರೂ ಊಟಮಾಡಿದನಂತರ ಮಹಾವಿಷ್ಣುವು ಸುಪ್ರೀತನಾದನೆಂದು ಭಾವಿಸಿ, ತಮ್ಮ ಬಂಧು-ಬಳಗದವರೊಡನೆ ಕುಳಿತು ಶಿಷ್ಟಾನ್ನವನ್ನು ಊಟಮಾಡಬೇಕು. । ೫೫-೫೬ । ಪಾಡ್ಯದಿಂದ ಹಿಡಿದು ತ್ರಯೋದಶಿವರೆವಿಗೂ ವಿರಾಮಕಾಲದಲ್ಲಿ ಪ್ರತಿದಿನವೂ ಗೀತ-ನೃತ್ಯ, ಸಂಗೀತ, ಸ್ವಸ್ತಿವಾಚನ, ಹರಿಕಥೆಗಳಿಂದ ಭಗವಂತನ ಆರಾಧನೆಯನ್ನೂ, ಸೇವೆಯನ್ನೂ ಮಾಡಬೇಕು. ॥ ೫೭ ॥

ಪ್ರಿಯಳೇ! ಇದು ಭಗವಂತನ ಶ್ರೇಷ್ಠವಾದ ಆರಾಧನೆಯಾಗಿದೆ. ಬ್ರಹ್ಮದೇವರು ನನಗೆ ಉಪದೇಶಿಸಿದ ಈ ಪಯೋವ್ರತವನ್ನು ನಿನಗೆ ಯಥಾವತ್ತಾಗಿ ತಿಳಿಸಿರುವೆನು. ॥ ೫೮ ॥ ದೇವಿ! ಭಾಗ್ಯವತಿಯೇ! ನಿನ್ನ ಇಂದ್ರಿಯಗಳನ್ನು ವಶಪಡಿಸಿಕೊಂಡು, ಶುದ್ಧವಾದ ಭಾವ-ಶ್ರದ್ಧಾಪೂರ್ಣ ಚಿತ್ತದಿಂದ ನೀನೂ ಈ ವ್ರತವನ್ನು ಚೆನ್ನಾಗಿ ಅನುಷ್ಠಾನ ಮಾಡು ಹಾಗೂ ಇದರ ಮೂಲಕ ಅವಿನಾಶಿಯಾದ ಭಗವಂತನನ್ನು ಆರಾಧಿಸು. ॥ ೫೯ ॥ ಕಲ್ಯಾಣೀ! ಈ ವ್ರತವು ಭಗವಂತನನ್ನು ಸಂತುಷ್ಟಗೊಳಿಸುವಂತಹುದು. ಅದಕ್ಕಾಗಿ ಇದನ್ನು 'ಸರ್ವಯಜ್ಞ', 'ಸರ್ವವ್ರತ' ಎಂದು ಹೇಳುತ್ತಾರೆ. ಇದು ಸಮಸ್ತ ತಪಸ್ಸುಗಳ ಸಾರವೂ, ಮುಖ್ಯವಾದ ದಾನವೂ ಆಗಿದೆ. ॥ ೬೦ । ವಾಸ್ತವವಾಗಿ ಭಗವಂತನು ಪ್ರಸನ್ನನಾಗುವಂತಹ ನಿಯಮ, ಯಮ, ತಪಸ್ಸು, ದಾನ, ವ್ರತ, ಯಜ್ಞ ಇವುಗಳೇ ಶ್ರೇಷ್ಠವಾದವುಗಳು. ॥೬೧॥ ಅದಕ್ಕಾಗಿ ಅದಿತಿದೇವಿಯೇ! ಸಂಯಮದಿಂದಲೂ, ಶ್ರದ್ಧೆಯಿಂದಲೂ ನೀನು ಈ ವ್ರತದ ಅನುಷ್ಠಾನವನ್ನು ಆಚರಿಸು. ಭಗವಂತನು ಶೀಘ್ರವಾಗಿಯೇ ನಿನಗೆ ಪ್ರಸನ್ನನಾಗುವನು ಮತ್ತು ನಿನ್ನ ಅಭಿಲಾಷೆಯನ್ನು ಪೂರ್ಣಗೊಳಿಸುವನು.॥೬೨॥

ಹದಿನಾರನೆಯ ಅಧ್ಯಾಯವು ಮುಗಿಯಿತು. ॥ ೧೬ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಅಷ್ಟಮ ಸ್ಕಂಧೇ
ಅದಿತಿಪಯೋವ್ರತಕಥನಂ ನಾಮ ಷೋಡಶೋಽಧ್ಯಾಯಃ ॥ ೧೬ ॥

ಹದಿನೇಳನೆಯ ಅಧ್ಯಾಯ

ಭಗವಂತನು ಪ್ರತ್ಯಕ್ಷನಾಗಿ ಅದಿತಿಗೆ ವರವನ್ನು ಕೊಡುವುದು

ಶ್ರೀಶುಕ ಉವಾಚ

ಇತ್ಯುಕ್ತಾ ಸಾದಿತೀ ರಾಜನ್ಸ್ವಭರ್ತ್ರಾ ಕಶ್ಯಪೇನ ವೈ ।
ಅನ್ವತಿಷ್ಠದ್ವ್ರತಮಿದಂ ದ್ವಾದಶಾಹಮತಂದ್ರಿತಾ ॥ ೧ ॥

ಚಿಂತಯಂತ್ಯೇಕಯಾ ಬುದ್ಧ್ಯಾ ಮಹಾಪುರುಷಮೀಶ್ವರಮ್ ।
ಪ್ರಗೃಹ್ಯೇಂದ್ರಿಯದುಷ್ಟಾಶ್ವಾನ್ಮನಸಾ ಬುದ್ಧಿಸಾರಥಿಃ ॥ ೨ ॥

ಮನಶ್ಚೈಕಾಗ್ರಯಾ ಬುದ್ಧ್ಯಾ ಭಗವತ್ಯಖಿಲಾತ್ಮನಿ ।
ವಾಸುದೇವೇ ಸಮಾಧಾಯ ಚಚಾರ ಹ ಪಯೋವ್ರತಮ್ ॥ ೩ ॥

ತಸ್ಯಾಃ ಪ್ರಾದುರಭೂತ್ತಾತ ಭಗವಾನಾದಿಪೂರುಷಃ ।
ಪೀತವಾಸಾಶ್ಚತುರ್ಬಾಹುಃ ಶಂಖಚಕ್ರಗದಾಧರಃ ॥ ೪ ॥

ತಂ ನೇತ್ರಗೋಚರಂ ವೀಕ್ಷ್ಯ ಸಹಸೋತ್ಥಾಯ ಸಾದರಮ್ ।
ನನಾಮ ಭುವಿ ಕಾಯೇನ ದಂಡವತ್ಪ್ರೀತಿವಿಹ್ವಲಾ ॥ ೫ ॥

ಸೋತ್ಥಾಯ ಬದ್ಧಾಂಜಲಿರೀಡಿತುಂ ಸ್ಥಿತಾ
 ನೋತ್ಸೇಹ ಆನಂದಜಲಾಕುಲೇಕ್ಷಣಾ ।
ಬಭೂವ ತೂಷ್ಣೀಂ ಪುಲಕಾಕುಲಾಕೃತಿ-
 ಸ್ತದ್ದರ್ಶನಾತ್ಯುತ್ಸವಗಾತ್ರವೇಪಥುಃ ॥ ೬ ॥

ಪ್ರೀತ್ಯಾ ಶನೈರ್ಗದ್ಗದಯಾ ಗಿರಾ ಹರಿಂ
 ತುಷ್ಟಾವ ಸಾ ದೇವ್ಯದಿತಿಃ ಕುರೂದ್ವಹ ।
ಉದ್ವೀಕ್ಷತೀ ಸಾ ಪಿಬತೀವ ಚಕ್ಷುಷಾ
 ರಮಾಪತಿಂ ಯಜ್ಞಪತಿಂ ಜಗತ್ಪತಿಮ್ ॥ ೭ ॥

ಅದಿತಿರುವಾಚ

ಯಜ್ಞೇಶ ಯಜ್ಞಪುರುಷಾಚ್ಯುತ ತೀರ್ಥಪಾದ
 ತೀರ್ಥಶ್ರವಃ ಶ್ರವಣಮಂಗಲನಾಮಧೇಯ ।
ಆಪನ್ನಲೋಕವೃಜಿನೋಪಶಮೋದಯಾದ್ಯ
 ಶಂ ನಃ ಕೃಧೀಶ ಭಗವನ್ನಸಿ ದೀನನಾಥಃ ॥ ೮ ॥

ವಿಶ್ವಾಯ ವಿಶ್ವಭವನಸ್ಥಿತಿಸಂಯಮಾಯ
 ಸ್ವೈರಂ ಗೃಹೀತಪುರುಶಕ್ತಿಗುಣಾಯ ಭೂಮ್ನೇ ।
ಸ್ವಸ್ಥಾಯ ಶಶ್ವದುಪಬೃಂಹಿತಪೂರ್ಣಬೋಧ-
 ವ್ಯಾಪಾದಿತಾತ್ಮತಮಸೇ ಹರಯೇ ನಮಸ್ತೇ ॥ ೯ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಎಲೈ ಪರೀಕ್ಷಿತನೇ! ತನ್ನ ಪತಿಯಾದ ಮಹರ್ಷಿ ಕಶ್ಯಪರ ಉಪದೇಶವನ್ನು ಪಡೆದ ಅದಿತಿದೇವಿಯು ಬಹಳ ಎಚ್ಚರಿಕೆಯಿಂದ ಹನ್ನೆರಡು ದಿನಗಳವರೆಗೆ ಪಯೋವ್ರತವನ್ನು ಆಚರಿಸಿದಳು. ॥ ೧ ॥ ಆಕೆಯು ಬುದ್ಧಿಯನ್ನು ಸಾರಥಿಯನ್ನಾಗಿಸಿಕೊಂಡು, ಮನಸ್ಸೆಂಬ ಲಗಾಮಿನಿಂದ ಇಂದ್ರಿಯ ರೂಪವಾದ ದುಷ್ಟಕುದುರೆಗಳನ್ನು ತನ್ನ ವಶಪಡಿಸಿಕೊಂಡು, ಏಕಾಗ್ರಬುದ್ಧಿಯಿಂದ ಪುರುಷೋತ್ತಮನಾದ ಭಗವಂತನನ್ನು ಧ್ಯಾನಿಸುತ್ತಿದ್ದಳು. ॥ ೨ ॥ ಅದಿತಿಯು ಏಕಾಗ್ರವಾದ ಬುದ್ಧಿಯಿಂದ ತನ್ನ ಮನಸ್ಸನ್ನು ಸರ್ವಾತ್ಮನಾದ ಭಗವಾನ್ ವಾಸುದೇವನಲ್ಲಿ ಸಂಪೂರ್ಣವಾಗಿ ತೊಡಗಿಸಿ ಪಯೋವ್ರತದ ಅನುಷ್ಠಾನವನ್ನು ಮಾಡಿದಳು. ॥ ೩ ॥ ಆಗ ಭಗವಾನ್ ಪುರುಷೋತ್ತಮನು ಅವಳ ಮುಂದೆ ಪ್ರಕಟನಾದನು. ಪರೀಕ್ಷಿತನೇ! ಆ ಭಗವಂತನು ಪೀತಾಂಬರವನ್ನು ಉಟ್ಟಿದ್ದನು. ಚತುರ್ಭುಜನಾಗಿದ್ದು, ಶಂಖ, ಚಕ್ರ, ಗದೆಗಳನ್ನು ಧರಿಸಿದ್ದನು. ॥ ೪ ॥ ತನ್ನ ಕಣ್ಮುಂದೆ ನಿಂತಿದ್ದ ಭಗವಂತನನ್ನು ಸಾಕ್ಷಾತ್ತಾಗಿ ನೋಡಿದ ಅದಿತಿದೇವಿಯು ಒಡನೆಯೇ ಆದರದಿಂದ ಎದ್ದು ನಿಂತು, ಪ್ರೇಮಪರವಶಳಾಗಿ ಭೂಮಿಯ ಮೇಲೆ ದೀರ್ಘದಂಡ ನಮಸ್ಕಾರವನ್ನು ಮಾಡಿದಳು. ॥ ೫ ॥ ಮತ್ತೆ ಮೇಲೆದ್ದು ಕೈಜೋಡಿಸಿಕೊಂಡು ಭಗವಂತನನ್ನು ಸ್ತುತಿಸಲು ಪ್ರಯತ್ನಿಸಿದಳು. ಆದರೆ ಕಣ್ಣುಗಳಲ್ಲಿ ಆನಂದ ಬಾಷ್ಪಗಳು ಉಕ್ಕಿಹರಿಯುತ್ತಿದ್ದುದರಿಂದ, ಕಂಠ ತುಂಬಿಬಂತು. ಮಾತನಾಡಲಾಗಲಿಲ್ಲ. ಶರೀರವಿಡೀ ಪುಳಕಿತವಾಗಿತ್ತು. ದರ್ಶನದ ಆನಂದೋಲ್ಲಾಸದಿಂದ ಅವಳ ಶರೀರವು ನಡುಗುತ್ತಿತ್ತು. ಸ್ತುತಿಸಲಾರದೆ ಅವಳು ಸುಮ್ಮನೆ ನಿಂತಿದ್ದಳು. ॥ ೬ ॥ ಪರೀಕ್ಷಿತನೇ! ಲಕ್ಷ್ಮೀಪತಿಯೂ, ಜಗತ್ಪತಿಯೂ, ಯಜ್ಞಪತಿಯೂ ಆದ ಭಗವಂತನನ್ನು ಕಣ್ಣುಗಳಿಂದಲೇ ಕುಡಿದುಬಿಡುವಳೋ ಎಂಬಂತೆ ಅದಿತಿಯು ತನ್ನ ಕಣ್ಣುಗಳಿಂದ ಪ್ರೇಮಪೂರ್ಣವಾಗಿ ನೋಡುತ್ತಿದ್ದಳು. ಅನಂತರ ಪ್ರೀತಿಯಿಂದ ಗದ್ಗದವಾದ ಮಾತುಗಳಿಂದ ಮೆಲ್ಲ-ಮೆಲ್ಲನೆ ಶ್ರೀಭಗವಂತನನ್ನು ಸ್ತುತಿಸಿದಳು. ॥ ೭ ॥

ಅದಿತಿದೇವಿಯು ಹೇಳಿದಳು – ಓ ಯಜ್ಞೇಶ್ವರನೇ! ಯಜ್ಞಪುರುಷನೇ! ಅಚ್ಯುತನೇ! ತೀರ್ಥಶ್ರೇಷ್ಠವಾದ ಗಂಗಾನದಿಯನ್ನು ಪಾದಗಳಲ್ಲಿ ಧರಿಸಿರುವವನೇ! ಪುಣ್ಯಕೀರ್ತಿಯೇ! ಶ್ರವಣಮಾತ್ರದಿಂದಲೇ ಮಂಗಳವನ್ನುಂಟು ಮಾಡುವ ನಾಮಾವಳಿಗಳುಳ್ಳವನೇ! ಶರಣಾಗತರ ಪಾಪಗಳನ್ನು ಹೋಗಲಾಡಿಸುವುದಕ್ಕಾಗಿಯೇ ಅವತರಿಸಿರುವವನೇ! ಆದಿಪುರುಷನೇ! ನೀನು ದೀನರಿಗೆ ನಾಥನಾಗಿರುವೆ. ನೀನು ನಮಗೆ ಮಂಗಳವನ್ನುಂಟು ಮಾಡು. ॥ ೮ ॥ ನೀನು ವಿಶ್ವದ ಉತ್ಪತ್ತಿ, ಸ್ಥಿತಿ ಮತ್ತು ಪ್ರಳಯಗಳಿಗೆ ಕಾರಣನಾಗಿರುವೆ. ವಿಶ್ವರೂಪನೂ ನೀನೇ ಆಗಿರುವೆ. ಅನಂತನಾಗಿದ್ದರೂ ಸ್ವೇಚ್ಛೆಯಿಂದ ನೀನು ಅನೇಕ ಶಕ್ತಿಗಳನ್ನು ಮತ್ತು ಗುಣಗಳನ್ನು ಸ್ವೀಕರಿಸುತ್ತೀಯೆ. ನೀನು ಸದಾ ನಿನ್ನ ಸ್ವರೂಪದಲ್ಲೇ

ಆಯುಃ ಪರಂ ವಪುರಭೀಷ್ಟಮತುಲ್ಯಲಕ್ಷ್ಮೀ-
ರ್ದ್ಯೋಭೂರಸಾಃ ಸಕಲಯೋಗಗುಣಾಸ್ತ್ರಿವರ್ಗಃ ।
ಜ್ಞಾನಂ ಚ ಕೇವಲಮನಂತ ಭವಂತಿ ತುಷ್ಟಾ-
ತ್ತ್ವತ್ತೋ ನೃಣಾಂ ಕಿಮು ಸಪತ್ನಜಯಾದಿರಾಶೀಃ ॥ ೧೦ ॥

ಶ್ರೀಶುಕ ಉವಾಚ

ಅದಿತ್ಯೈವಂ ಸ್ತುತೋ ರಾಜನ್ಭಗವಾನ್ಪುಷ್ಕರೇಕ್ಷಣಃ ।
ಕ್ಷೇತ್ರಜ್ಞಃ ಸರ್ವಭೂತಾನಾಮಿತಿ ಹೋವಾಚ ಭಾರತ ॥ ೧೧ ॥

ಶ್ರೀಭಗವಾನುವಾಚ

ದೇವಮಾತರ್ಭವತ್ಯಾ ಮೇ ವಿಜ್ಞಾತಂ ಚಿರಕಾಂಕ್ಷಿತಮ್ ।
ಯತ್ಸಪತ್ನೈರ್ಹೃತಶ್ರೀಣಾಂ ಚ್ಯಾವಿತಾನಾಂ ಸ್ವಧಾಮತಃ ॥ ೧೨ ॥

ತಾನ್ವಿನಿರ್ಜಿತ್ಯ ಸಮರೇ ದುರ್ಮದಾನಸುರರ್ಷಭಾನ್ ।
ಪ್ರತಿಲಬ್ಧಜಯಶ್ರೀಭಿಃ ಪುತ್ರೈರಿಚ್ಛಸ್ಯುಪಾಸಿತುಮ್ ॥ ೧೩ ॥

ಇಂದ್ರಜ್ಯೇಷ್ಠೈಃ ಸ್ವತನಯೈರ್ಹತಾನಾಂ ಯುಧಿ ವಿದ್ವಿಷಾಮ್ ।
ಸ್ತ್ರಿಯೋ ರುದಂತೀರಾಸಾದ್ಯ ದ್ರಷ್ಟುಮಿಚ್ಛಸಿ ದುಃಖಿತಾಃ ॥ ೧೪ ॥

ಆತ್ಮಜಾನ್ಸುಸಮೃದ್ಧಾಂಸ್ತ್ವಂ ಪ್ರತ್ಯಾಹೃತಯಶಃಶ್ರಿಯಃ ।
ನಾಕಪೃಷ್ಠಮಧಿಷ್ಠಾಯ ಕ್ರೀಡತೋ ದ್ರಷ್ಟುಮಿಚ್ಛಸಿ ॥ ೧೫ ॥

ಪ್ರಾಯೋಽಧುನಾ ತೇಽಸುರಯೂಥನಾಥಾ
ಅಪಾರಣೀಯಾ ಇತಿ ದೇವಿ ಮೇ ಮತಿಃ ।
ಯತ್ತೇಽನುಕೂಲೇಶ್ವರವಿಪ್ರಗುಪ್ತಾ
ನ ವಿಕ್ರಮಸ್ತತ್ರ ಸುಖಂ ದದಾತಿ ॥ ೧೬ ॥

ಅಥಾಪ್ಯುಪಾಯೋ ಮಮ ದೇವಿ ಚಿಂತ್ಯಃ
ಸಂತೋಷಿತಸ್ಯ ವ್ರತಚರ್ಯಯಾ ತೇ ।
ಮಮಾರ್ಚನಂ ನಾರ್ಹತಿ ಗಂತುಮನ್ಯಥಾ
ಶ್ರದ್ಧಾನುರೂಪಂ ಫಲಹೇತುಕತ್ವಾತ್ ॥ ೧೭ ॥

ತ್ವಯಾರ್ಚಿತಶ್ಚಾಹಮಪತ್ಯಗುಪ್ತಯೇ
ಪಯೋವ್ರತೇನಾನುಗುಣಂ ಸಮೀಡಿತಃ ।
ಸ್ವಾಂಶೇನ ಪುತ್ರತ್ವಮುಪೇತ್ಯ ತೇ ಸುತಾನ್
ಗೋಪ್ತಾಸ್ಮಿ ಮಾರೀಚತಪಸ್ಯಧಿಷ್ಠಿತಃ ॥ ೧೮ ॥

ಉಪಧಾವ ಪತಿಂ ಭದ್ರೇ ಪ್ರಜಾಪತಿಮಕಲ್ಮಷಮ್ ।
ಮಾಂ ಚ ಭಾವಯತೀ ಪತ್ಯಾವೇವಂರೂಪಮವಸ್ಥಿತಮ್ ॥ ೧೯ ॥

ನೆಲೆಸಿರುತ್ತೀಯೆ. ನಿತ್ಯ-ನಿರಂತರ ಬೆಳೆಯುತ್ತಿರುವ ಪೂರ್ಣ ಬೋಧದಿಂದ ನೀನು ಹೃದಯದ ಅಂಧಕಾರವನ್ನು ನಾಶಮಾಡಿ ಬಿಡುತ್ತೀಯೆ. ಭಗವಂತಾ! ನಾನು ನಿನಗೆ ನಮಸ್ಕರಿಸುತ್ತೇನೆ. ॥ ೯ ॥ ಪ್ರಭೋ! ಅನಂತನೇ! ನೀನು ಸಂತುಷ್ಟನಾದಲ್ಲಿ ದೀರ್ಘಾಯುಸ್ಸೂ, ಇಷ್ಟವಾದ ಶರೀರವೂ, ಅಸದೃಶವಾದ ಐಶ್ವರ್ಯವೂ, ಸ್ವರ್ಗ, ಮರ್ತ್ಯ, ಪಾತಾಳಲೋಕಗಳು, ಯೋಗದ ಸಮಸ್ತ ಸಿದ್ಧಿಗಳೂ, ಧರ್ಮಾರ್ಥಕಾಮಗಳೂ, ಇವೆಲ್ಲಕ್ಕಿಂತಲೂ ಮಿಗಿಲಾದ ಅಪರೋಕ್ಷಜ್ಞಾನವೂ ಮನುಷ್ಯರಿಗೆ ಪ್ರಾಪ್ತವಾಗುತ್ತದೆ. ಹೀಗಿರುವಾಗ ಶತ್ರುಜಯವೇ ಮೊದಲಾದ ಸಣ್ಣ-ಪುಟ್ಟ ಕೋರಿಕೆಗಳ ವಿಷಯದಲ್ಲಿ ಹೇಳುವುದೇನಿದೆ? ॥ ೧೦ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿದ್ರಾಜನೇ! ಅದಿತಿಯು ಕಮಲನಯನ ಭಗವಂತನನ್ನು ಹೀಗೆ ಸ್ತುತಿಸಿದಾಗ ಸಮಸ್ತ ಪ್ರಾಣಿಗಳ ಹೃದಯದಲ್ಲಿ ಅಂತರ್ಯಾಮಿ ಯಾಗಿರುವ ಭಗವಂತನು ಇಂತೆಂದನು – ॥ ೧೧ ॥

ಶ್ರೀಭಗವಂತನು ಹೇಳಿದನು – ಎಲೈ ದೇವಮಾತೆಯಾದ ಅದಿತಿಯೇ! ನಿನ್ನ ಮನಸ್ಸಿನಲ್ಲಿ ಬಹಳ ಕಾಲದಿಂದಿರುವ ಆಶಯವನ್ನು ನಾನು ಬಲ್ಲೆನು. ಶತ್ರುಗಳು ನಿನ್ನ ಮಕ್ಕಳ ಸಂಪತ್ತನ್ನು ಅಪಹರಿಸಿರುವುದಲ್ಲದೆ ಅವರನ್ನು ಅವರ ಲೋಕ(ಸ್ವರ್ಗ)ದಿಂದ ಓಡಿಸಿಬಿಟ್ಟಿದ್ದಾರೆ. ॥ ೧೨ ॥ ಯುದ್ಧದಲ್ಲಿ ನಿನ್ನ ಮಕ್ಕಳು ಆ ಕೊಬ್ಬಿರುವ ಅಸುರರನ್ನು, ಬಲಿಯನ್ನು ಗೆದ್ದು ವಿಜಯಲಕ್ಷ್ಮಿಯನ್ನು ಪಡೆದುಕೊಂಡಾಗ ನೀನು ಅವರೊಂದಿಗೆ ಭಗವಂತನ ಉಪಾಸನೆ ಮಾಡಬೇಕೆಂದು ಬಯಸುತ್ತಿರುವೆ. ॥ ೧೩ ॥ ಇಂದ್ರನೇ ಮೊದಲಾದ ನಿನ್ನ ಪುತ್ರರು ಶತ್ರುಗಳನ್ನು ಕೊಂದುಹಾಕಿದಾಗ ನೀನು ಆ ದೈತ್ಯಸ್ತ್ರೀಯರು ದುಃಖದಿಂದ ಅಳುವುದನ್ನು ಕಣ್ಣಾರೆ ಕಾಣಬೇಕೆಂಬುದೂ ನಿನ್ನ ಬಯಕೆಯಾಗಿದೆ. ॥ ೧೪ ॥ ಅದಿತಿಯೇ! ಯುದ್ಧದಲ್ಲಿ ದೈತ್ಯರನ್ನು ಗೆದ್ದು ಕಳೆದುಹೋಗಿದ್ದ ಕೀರ್ತಿ, ಐಶ್ವರ್ಯವನ್ನು ಪುನಃ ಪಡೆದುಕೊಂಡು ಸಕಲೈಶ್ವರ್ಯ ಸಂಪನ್ನರಾಗಿ ಸ್ವರ್ಗಲೋಕದಲ್ಲಿ ಪುನಃ ನೆಲೆಸಿ ಹಿಂದಿನಂತೆ ವಿಹರಿಸಬೇಕೆಂಬುದನ್ನೂ ಬಯಸುತ್ತಿರುವೆಯಲ್ಲ! ॥ ೧೫ ॥ ಆದರೆ ದೇವೀ! ಆ ಅಸುರ ಸೇನಾಪತಿಗಳನ್ನು ಈ ಸಮಯದಲ್ಲಿ ಜಯಿಸಲು ಸಾಧ್ಯವಾಗದೆಂದು ನನಗೆ ಅನಿಸುತ್ತದೆ. ಏಕೆಂದರೆ, ಈಶ್ವರನು ಮತ್ತು ಬ್ರಾಹ್ಮಣರು ಈಗ ಅವರಿಗೆ ಅನುಕೂಲರಾಗಿದ್ದಾರೆ. ಈಗಲಂತೂ ಅವರೊಂದಿಗೆ ಯುದ್ಧಮಾಡಿದರೆ ಅವರಿಂದ ಸುಖ ಸಿಗುವ ಆಸೆ ಇಲ್ಲ. ॥ ೧೬ ॥ ಹೀಗಿದ್ದರೂ ದೇವಿ! ನಿನ್ನ ಈ ವ್ರತಾನುಷ್ಠಾನದಿಂದ ನಾನು ಬಹಳ ಪ್ರಸನ್ನನಾಗಿರುವೆನು. ಆದಕ್ಕಾಗಿ ಈ ಸಂಬಂಧವಾಗಿ ನನಗೆ ಏನಾದರೂ ಉಪಾಯ ಮಾಡಲೇಬೇಕಾಗಿದೆ. ಏಕೆಂದರೆ, ನನ್ನ ಆರಾಧನೆಯು ವ್ಯರ್ಥವಾಗಬಾರದು. ಅದರಿಂದ ಶ್ರದ್ಧೆಗನುಸಾರವಾಗಿ ಫಲವು ಅವಶ್ಯವಾಗಿ ಸಿಗುತ್ತದೆ. ॥ ೧೭ ॥ ನೀನು ನಿನ್ನ ಪುತ್ರರ ರಕ್ಷಣೆಗಾಗಿಯೇ ವಿಧಿವತ್ತಾಗಿ ಪಯೋವ್ರತದಿಂದ ನನ್ನ ಪೂಜೆ-ಸ್ತುತಿ ಮಾಡಿರುವೆ. ಆದ್ದರಿಂದ ನಾನು ಅಂಶರೂಪದಿಂದ ಕಶ್ಯಪರ ತಪಸ್ಸಿನಲ್ಲಿ ನೆಲೆಸಿ ನಿನ್ನ ಪುತ್ರನಾಗಿ ಅವತರಿಸಿ ನಿನ್ನ ಸಂತಾನವನ್ನು ರಕ್ಷಿಸುವೆನು. ॥ ೧೮ ॥ ಕಲ್ಯಾಣೀ! ನೀನು ನಿನ್ನ ಪತಿಯಾದ ಕಶ್ಯಪರಲ್ಲಿ ನನ್ನನ್ನು ಇದೇ ರೂಪದಿಂದ ನೆಲೆಸಿರುವನೆಂದು ತಿಳಿದು, ಪಾಪರಹಿತರಾದ ಪ್ರಜಾಪತಿಯ ಸೇವೆಯನ್ನು ಮಾಡು. ॥ ೧೯ ॥

ನೈತತ್ಪರಸ್ಮಾ ಆಖ್ಯೇಯಂ ಪೃಷ್ಟಯಾಪಿ ಕಥಂಚನ ।
ಸರ್ವಂ ಸಂಪದ್ಯತೇ ದೇವಿ ದೇವಗುಹ್ಯಂ ಸುಸಂವೃತಮ್ ॥ ೨೦ ॥

ಶ್ರೀಶುಕ ಉವಾಚ

ಏತಾವದುಕ್ತ್ವಾ ಭಗವಾಂಸ್ತತ್ರೈವಾಂತರಧೀಯತ ।
ಅದಿತಿರ್ದುರ್ಲಭಂ ಲಬ್ಧ್ವಾ ಹರೇರ್ಜನ್ಮಾತ್ಮನಿ ಪ್ರಭೋಃ ॥ ೨೧ ॥

ಉಪಾಧಾವತ್ಪತಿಂ ಭಕ್ತ್ಯಾ ಪರಯಾ ಕೃತಕೃತ್ಯವತ್ ।
ಸ ವೈ ಸಮಾಧಿಯೋಗೇನ ಕಶ್ಯಪಸ್ತದಬುಧ್ಯತ ॥ ೨೨ ॥

ಪ್ರವಿಷ್ಟಮಾತ್ಮನಿ ಹರೇರಂಶಂ ಹ್ಯವಿತಥೇಕ್ಷಣಃ ।
ಸೋಽದಿತ್ಯಾಂ ವೀರ್ಯಮಾಧತ್ತ ತಪಸಾ ಚಿರಸಂಭೃತಮ್ ।
ಸಮಾಹಿತಮನಾ ರಾಜನ್ ದಾರುಣ್ಯಗ್ನಿಂ ಯಥಾನಿಲಃ ॥ ೨೩ ॥

ಅದಿತೇರ್ಧಿಷ್ಠಿತಂ ಗರ್ಭಂ ಭಗವಂತಂ ಸನಾತನಮ್ ।
ಹಿರಣ್ಯಗರ್ಭೋ ವಿಜ್ಞಾಯ ಸಮೀಡೇ ಗುಹ್ಯನಾಮಭಿಃ ॥ ೨೪ ॥

ಬ್ರಹ್ಮೋವಾಚ

ಜಯೋರುಗಾಯ ಭಗವನ್ನುರುಕ್ರಮ ನಮೋಸ್ತು ತೇ ।
ನಮೋ ಬ್ರಹ್ಮಣ್ಯದೇವಾಯ ತ್ರಿಗುಣಾಯ ನಮೋ ನಮಃ ॥ ೨೫ ॥

ನಮಸ್ತೇ ಪೃಶ್ನಿಗರ್ಭಾಯ ವೇದಗರ್ಭಾಯ ವೇಧಸೇ ।
ತ್ರಿನಾಭಾಯ ತ್ರಿಪೃಷ್ಠಾಯ ಶಿಪಿವಿಷ್ಟಾಯ ವಿಷ್ಣವೇ ॥ ೨೬ ॥

ತ್ವಮಾದಿರಂತೋ ಭುವನಸ್ಯ ಮಧ್ಯ-
ಮನಂತಶಕ್ತಿಂ ಪುರುಷಂ ಯಮಾಹುಃ ।
ಕಾಲೋ ಭವಾನಾಕ್ಷಿಪತೀಶ ವಿಶ್ವಂ
ಸ್ರೋತೋ ಯಥಾಂತಃ ಪತಿತಂ ಗಭೀರಮ್ ॥ ೨೭ ॥

ತ್ವಂ ವೈ ಪ್ರಜಾನಾಂ ಸ್ಥಿರಜಂಗಮಾನಾಂ
ಪ್ರಜಾಪತೀನಾಮಸಿ ಸಂಭವಿಷ್ಣುಃ ।
ದಿವೌಕಸಾಂ ದೇವ ದಿವಶ್ಚ್ಯುತಾನಾಂ
ಪರಾಯಣಂ ನೌರಿವ ಮಜ್ಜತೋಽಪ್ಸು ॥ ೨೮ ॥

ದೇವೀ! ನೋಡು, ಯಾರು ಕೇಳಿದರೂ ಈ ಮಾತನ್ನು ಇತರರಿಗೆ ಹೇಳಬೇಡ. ದೇವತೆಗಳ ರಹಸ್ಯ ಗುಪ್ತವಾದಷ್ಟು ಸಫಲವಾಗುತ್ತದೆ. ॥ ೨೦ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಭಗವಂತನು ಹೀಗೆ ಹೇಳಿ ಅಲ್ಲಿಯೇ ಅಂತರ್ಧಾನನಾದನು. ಆ ಸಮಯದಲ್ಲಿ ಸ್ವಯಂ ಭಗವಂತನೇ ನನ್ನ ಗರ್ಭದಿಂದ ಅವತರಿಸುವನು ಎಂದು ತಿಳಿದು, ತಾನು ಕೃತಕೃತ್ಯಳಾದೆನೆಂದು ಭಾವಿಸಿದಳು. ಇದೆಂತಹ ದುರ್ಲಭವಾದ ಮಾತು. ಅವಳು ಬಹಳ ಪ್ರೀತಿಯಿಂದ ಪತಿಯಾದ ಕಶ್ಯಪರನ್ನು ಸೇವೆ ಮಾಡತೊಡಗಿದಳು. ಕಶ್ಯಪರು ಸತ್ಯದರ್ಶಿಗಳಾಗಿದ್ದರು. ಅವರಿಂದ ಮರೆಯಾದ ಯಾವ ಮಾತೂ ಇರಲಿಲ್ಲ. ಭಗವಂತನು ತನ್ನ ಅಂಶದಿಂದ ನನ್ನೊಳಗೆ ಪ್ರವೇಶಿಸಿರುವನೆಂದು ಅವರು ಸಮಾಧಿಯೋಗದಿಂದ ತಿಳಿದುಕೊಂಡರು. ವಾಯುವು ಪ್ರಚಂಡವಾಗಿ ಬೀಸುತ್ತಾ ಬಿದಿರುಗಳ ಘರ್ಷಣೆಯಿಂದ ಅಗ್ನಿಯನ್ನು ಹುಟ್ಟಿಸುವಂತೆಯೇ ಕಶ್ಯಪರು ತಪಸ್ಸು ಮಾಡುತ್ತಾ ಬಹಳ ಕಾಲದಿಂದ ಧರಿಸಿದ್ದ ರೇತಸ್ಸನ್ನು ಅದಿತಿ ದೇವಿಯ ಗರ್ಭದಲ್ಲಿರಿಸಿದರು. ॥ ೨೧-೨೩ ॥ ಅದಿತಿಯ ಗರ್ಭದಲ್ಲಿ ಅವಿನಾಶಿಯಾದ ಭಗವಂತನು ನೆಲೆಸಿರುವನೆಂದು ತಿಳಿದ ಬ್ರಹ್ಮದೇವರು ಬ್ರಹ್ಮಪ್ರತಿಪಾದಕವಾದ ಸ್ತೋತ್ರಗಳಿಂದ ಆ ಶ್ರೀಹರಿಯನ್ನು ಹೊಗಳತೊಡಗಿದರು. । ೨೪ ।

ಬ್ರಹ್ಮದೇವರು ಹೇಳಿದರು – ಸಮಗ್ರ ಕೀರ್ತಿಗೂ ಆಶ್ರಯನಾಗಿರುವ ಭಗವಂತನೇ! ನಿನಗೆ ಜಯವಾಗಲೀ. ಅನಂತ ಶಕ್ತಿಗಳಿಗೆ ಅಧಿಷ್ಠಾನನಾಗಿರುವವನೇ! ನಿನ್ನ ಚರಣಕಮಲಗಳಿಗೆ ನಮಸ್ಕರಿಸುತ್ತೇನೆ. ಬ್ರಾಹ್ಮಣರಿಗೆ ಹಿತವಾಗಿರುವವನೇ! ತ್ರಿಗುಣಗಳ ನಿಯಾಮಕನೇ! ನಿನ್ನ ಅಡಿದಾವರೆಗಳಲ್ಲಿ ಬಾರಿ-ಬಾರಿಗೂ ನಮಸ್ಕರಿಸುತ್ತೇನೆ. ॥ ೨೫ ॥ ಪೃಶ್ನಿ ಎಂಬುವಳಿಗೆ ಪುತ್ರರೂಪದಲ್ಲಿ ಹುಟ್ಟಿರುವವನೇ! ವೇದಗಳ ಸಮಸ್ತ ಜ್ಞಾನವನ್ನು ನಿನ್ನೊಳಗೆ ಇರಿಸಿಕೊಂಡಿರುವ ಸ್ವಾಮಿಯೇ! ವಾಸ್ತವವಾಗಿ ನೀನೇ ಎಲ್ಲರ ವಿಧಾತೃವಾಗಿರುವೆ. ನಿನಗೆ ನಾನು ಮತ್ತೆ-ಮತ್ತೆ ನಮಸ್ಕರಿಸುತ್ತೇನೆ. ಮೂರೂ ಲೋಕಗಳೂ ನಿನ್ನ ನಾಭಿಯಲ್ಲಿ ನೆಲೆಸಿವೆ. ಮೂರೂ ಲೋಕಗಳಿಗೂ ಅತೀತವಾದ ವೈಕುಂಠದಲ್ಲಿ ನೀನು ಸದಾ ವಿರಾಜಮಾನನಾಗಿರುವೆ. ಸಕಲ ಜೀವರ ಅಂತಃಕರಣದಲ್ಲಿ ಅಂತರ್ಯಾಮಿಯಾಗಿ ನೆಲೆಸಿರುವೆ. ಇಂತಹ ಸರ್ವವ್ಯಾಪಕ ವಿಷ್ಣುವಿಗೆ ನಾನು ನಮಸ್ಕರಿಸುತ್ತೇನೆ. ॥ ೨೬ ॥ ಪ್ರಭೋ! ನೀನೇ ಜಗತ್ತಿನ ಆದಿಯೂ, ಅಂತ್ಯನೂ ಆಗಿರುವುದರಿಂದ ಮಧ್ಯದಲ್ಲಿಯೂ ನೀನೇ ಇರುವೆ. ಇದರಿಂದಲೇ ವೇದಗಳು ನಿನ್ನನ್ನು ಅನಂತ ಶಕ್ತಿಯುಳ್ಳ ಪುರುಷನೆಂದು ಕೊಂಡಾಡುತ್ತವೆ. ಆಳವಾದ ನೀರಿನ ಸೆಳೆಯು ಅದರಲ್ಲಿ ಬಿದ್ದ ಪದಾರ್ಥವನ್ನು ಒಳಗೆ ಸೆಳೆದುಕೊಳ್ಳುವಂತೆಯೇ ನೀನು ಕಾಲರೂಪದಿಂದ ಈ ಜಗತ್ತನ್ನು ಪ್ರಳಯಕಾಲದಲ್ಲಿ ಒಳಕ್ಕೆ ಸೆಳೆದು ಕೊಳ್ಳುವೆ. ॥ ೨೭ ॥ ಚರಾಚರ ಪ್ರಜೆಗಳನ್ನೂ, ಪ್ರಜಾಪತಿಗಳನ್ನೂ ಉಂಟುಮಾಡುವ ಮೂಲ ಕಾರಣನು ನೀನೇ ಆಗಿರುವೆ. ದೇವಾಧಿದೇವಾ! ನೀರಿನಲ್ಲಿ ಮುಳುಗುವವನಿಗೆ ದೋಣಿಯು ಆಸರೆಯಾಗಿರುವಂತೆ, ಸ್ವರ್ಗದಿಂದ ಓಡಿಹೋದ ದೇವತೆಗಳಿಗೆ ಏಕಮಾತ್ರ ಆಶ್ರಯವು ನೀನೇ ಆಗಿರುವೆ. ॥ ೨೮ ॥

ಹದಿನೇಳನೆಯ ಅಧ್ಯಾಯವು ಮುಗಿಯಿತು. ॥ ೧೭ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಅಷ್ಟಮ ಸ್ಕಂಧೇ
ವಾಮನಪ್ರಾದುರ್ಭಾವೇ ಸಪ್ತದಶೋಽಧ್ಯಾಯಃ ॥ ೧೭ ॥

ಹದಿನೆಂಟನೆಯ ಅಧ್ಯಾಯ

ಭಗವಾನ್ ವಾಮನನ ಪ್ರಾಕಟ್ಯ ಮತ್ತು ಬಲಿಚಕ್ರವರ್ತಿಯ ಯಜ್ಞಶಾಲೆಯನ್ನು ಪ್ರವೇಶಿಸಿದುದು

ಶ್ರೀಶುಕ ಉವಾಚ

ಇತ್ಥಂ ವಿರಿಂಚಸ್ತುತಕರ್ಮವೀರ್ಯಃ
ಪ್ರಾದುರ್ಬಭೂವಾಮೃತಭೂರದಿತ್ಯಾಮ್ ।
ಚತುರ್ಭುಜಃ ಶಂಖಗದಾಬ್ಜಚಕ್ರಃ
ಪಿಶಂಗವಾಸಾ ನಲಿನಾಯತೇಕ್ಷಣಃ ॥ ೧ ॥

ಶ್ಯಾಮಾವದಾತೋ ಝಷರಾಜಕುಂಡಲ-
ತ್ವಿಷೋಲ್ಲಸಚ್ಛ್ರೀವದನಾಂಬುಜಃ ಪುಮಾನ್ ।
ಶ್ರೀವತ್ಸವಕ್ಷಾ ವಲಯಾಂಗದೋಲ್ಲಸ-
ತ್ಕಿರೀಟಕಾಂಚೀಗುಣಚಾರುನೂಪುರಃ ॥ ೨ ॥

ಮಧುವ್ರತವ್ರಾತವಿಘುಷ್ಟಯಾ ಸ್ವಯಾ
ವಿರಾಜಿತಃ ಶ್ರೀವನಮಾಲಯಾ ಹರಿಃ ।
ಪ್ರಜಾಪತೇರ್ವೇಶ್ಮತಮಃ ಸ್ವರೋಚಿಷಾ
ವಿನಾಶಯನ್ಕಂಠನಿವಿಷ್ಟಕೌಸ್ತುಭಃ ॥ ೩ ॥

ದಿಶಃ ಪ್ರಸೇದುಃ ಸಲಿಲಾಶಯಾಸ್ತದಾ
ಪ್ರಜಾಃ ಪ್ರಹೃಷ್ಟಾ ಋತವೋ ಗುಣಾನ್ವಿತಾಃ ।
ದ್ಯೌರಂತರಿಕ್ಷಂ ಕ್ಷಿತಿರಗ್ನಿಜಿಹ್ವಾ
ಗಾವೋ ದ್ವಿಜಾಃ ಸಂಜಹೃಷುರ್ನಗಾಶ್ಚ ॥ ೪ ॥

ಶ್ರೋಣಾಯಾಂ ಶ್ರವಣದ್ವಾದಶ್ಯಾಂ
ಮುಹೂರ್ತೇಽಭಿಜಿತಿ ಪ್ರಭುಃ ।
ಸರ್ವೇ ನಕ್ಷತ್ರತಾರಾದ್ಯಾ-
ಶ್ಚಕ್ರುಸ್ತಜ್ಜನ್ಮ ದಕ್ಷಿಣಮ್ ॥ ೫ ॥

ದ್ವಾದಶ್ಯಾಂ ಸವಿತಾ ತಿಷ್ಠನ್ಮಧ್ಯಂದಿನಗತೋ ನೃಪ ।
ವಿಜಯಾ ನಾಮ ಸಾ ಪ್ರೋಕ್ತಾ ಯಸ್ಯಾಂ ಜನ್ಮ ವಿದುರ್ಹರೇಃ
॥ ೬ ॥

ಶಂಖದುಂದುಭಯೋ ನೇದುರ್ಮೃದಂಗಪಣವಾನಕಾಃ ।
ಚಿತ್ರವಾದಿತ್ರತೂರ್ಯಾಣಾಂ ನಿರ್ಘೋಷಸ್ತುಮುಲೋಽಭವತ್
॥ ೭ ॥

ಪ್ರೀತಾಶ್ಚಾಪ್ಸರಸೋಽನೃತ್ಯನ್ಗಂಧರ್ವಪ್ರವರಾ ಜಗುಃ ।
ತುಷ್ಟುವುರ್ಮುನಯೋ ದೇವಾ ಮನವಃ ಪಿತರೋಽಗ್ನಯಃ
॥ ೮ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಎಲೈ ಪರೀಕ್ಷಿತನೇ! ಹೀಗೆ ಬ್ರಹ್ಮದೇವರು ಭಗವಂತನ ಅಪಾರವಾದ ಶಕ್ತಿಯನ್ನೂ, ಲೀಲೆಗಳನ್ನೂ ಸ್ತೋತ್ರಮಾಡಿದ ನಂತರ ಅದ್ಭುತರೂಪನಾದ ಶ್ರೀಹರಿಯು ಅದಿತಿಯ ಮುಂದೆ ಪ್ರಕಟನಾದನು. ಭಗವಂತನಿಗೆ ನಾಲ್ಕು ಭುಜಗಳಿದ್ದು, ಶಂಖ, ಚಕ್ರ, ಗದಾ, ಪದ್ಮಗಳನ್ನು ಧರಿಸಿದ್ದನು. ಕಮಲದಂತೆ ಕೋಮಲ-ವಿಶಾಲವಾದ ನೇತ್ರಗಳಿದ್ದು, ದಿವ್ಯ ಪೀತಾಂಬರವನ್ನು ಧರಿಸಿದ್ದನು. ॥ ೧ ॥ ಭಗವಂತನ ಶರೀರವು ಶ್ಯಾಮಲ ವರ್ಣದಿಂದ ಕೂಡಿತ್ತು. ಮಕರಾಕೃತಿಯ ಕುಂಡಲಗಳ ಕಾಂತಿಯಿಂದ ಅವನ ಮುಖಕಮಲದ ಶೋಭೆಯು ಇನ್ನೂ ಹೆಚ್ಚಿತ್ತು. ವಕ್ಷಸ್ಥಳವು ಶ್ರೀವತ್ಸ ಚಿಹ್ನೆಯಿಂದ ಸಮಲಂಕೃತವಾಗಿತ್ತು. ಕರಗಳಲ್ಲಿ ಕಂಕಣಗಳೂ, ತೋಳುಗಳಲ್ಲಿ ಬಾಜುಬಂದಿಗಳೂ, ಶಿರದಲ್ಲಿ ಕಿರೀಟವೂ, ನಡುವಿನಲ್ಲಿ ಒಡ್ಯಾಣವೂ, ಚರಣಗಳಲ್ಲಿ ಸುಂದರವಾದ ನೂಪುರಗಳು ಶೋಭಿಸುತ್ತಿದ್ದವು. ॥ ೨ ॥ ಭಗವಂತನ ಕಂಠದಲ್ಲಿ ರತ್ನಹಾರಗಳೂ, ಸ್ವಚ್ಛವಾದ ವನಮಾಲೆಯನ್ನೂ ಧರಿಸಿದ್ದನು. ಅದರ ಸುತ್ತಲೂ ಮತ್ತಭೃಂಗಗಳು ಹಿಂಡುಹಿಂಡಾಗಿ ಝೇಂಕರಿಸುತ್ತಿದ್ದವು. ಕೌಸ್ತುಭಮಣಿಯ ಶೋಭೆಯು ಕಂಠದಲ್ಲಿ ವಿರಾಜಿಸುತ್ತಿತ್ತು. ಭಗವಂತನ ಅಂಗಕಾಂತಿಯಿಂದ ಪ್ರಜಾಪತಿ ಕಶ್ಯಪರ ಆಶ್ರಮದ ಕತ್ತಲೆಯು ಕಳೆದುಹೋಗಿತ್ತು. ॥ ೩ ॥ ಭಗವಂತನು ಅವತರಿಸಿದಾಗ ದಿಕ್ಕುಗಳು ನಿರ್ಮಲವಾದುವು. ನದೀ-ಸರೋವರಗಳ ನೀರು ಸ್ವಚ್ಛವಾಯಿತು. ಪ್ರಜೆಗಳ ಹೃದಯದಲ್ಲಿ ಆನಂದದ ನೆರೆಯೇ ಬಂದಂತಾಯಿತು. ಎಲ್ಲ ಋತುಗಳು ಒಟ್ಟಿಗೆ ತಮ್ಮ-ತಮ್ಮ ಗುಣಗಳನ್ನು ಪ್ರಕಟಿಸಿದುವು. ಸ್ವರ್ಗಲೋಕ, ಅಂತರಿಕ್ಷ, ಪೃಥಿವಿ, ದೇವತೆಗಳು, ಗೋವುಗಳು, ದ್ವಿಜರು, ಪರ್ವತಗಳು ಹೀಗೆ ಎಲ್ಲವೂ ಹರ್ಷಗೊಂಡವು. ॥ ೪ ॥

ಪರೀಕ್ಷಿತನೇ! ಭಗವಂತನು ಅವತರಿಸಿದಾಗ ಚಂದ್ರನು ಶ್ರವಣಾನಕ್ಷತ್ರದಲ್ಲಿದ್ದನು. ಭಾದ್ರಪದ ಮಾಸದ ಶುಕ್ಲ ದ್ವಾದಶೀ ಶ್ರವಣನಕ್ಷತ್ರದ ಅಭಿಜಿನ್ಮುಹೂರ್ತದಲ್ಲಿ ಭಗವಂತನು ಪ್ರಾದುರ್ಭವಿಸಿದನು. ಎಲ್ಲ ಗ್ರಹ-ನಕ್ಷತ್ರಗಳೂ ಜನ್ಮ ಮುಹೂರ್ತವನ್ನು ಮಂಗಲಮಯವಾಗಿಸಿದುವು. ॥ ೫ ॥ ರಾಜೇಂದ್ರಾ! ಭಗವಂತನು ಜನ್ಮತಾಳಿದ ತಿಥಿಯನ್ನು 'ವಿಜಯದ್ವಾದಶೀ' ಎಂದು ಹೇಳುತ್ತಾರೆ. ಆ ಸಮಯದಲ್ಲಿ ಸೂರ್ಯನು ಆಗಸದ ಮಧ್ಯಭಾಗದಲ್ಲಿದ್ದನು. ॥ ೬ ॥ ಭಗವಂತನ ಅವತಾರದ ಸಮಯದಲ್ಲಿ ಶಂಖ, ಡೋಲು, ಮೃದಂಗ, ದುಂದುಭಿ, ಪಣವ, ಆನಕ ಮುಂತಾದ ವಾದ್ಯಗಳು ಮೊಳಗಿದವು. ಹೀಗೆ ನಾನಾರೀತಿಯ ವಾದ್ಯಗಳು, ಕೊಂಬು, ಕಹಳೆ ಮುಂತಾದವುಗಳ ತುಮುಲಧ್ವನಿಯು ಉಂಟಾಯಿತು. ॥ ೭ ॥ ಅಪ್ಸರೆಯರು ಕುಣಿಯತೊಡಗಿದರು, ಗಂಧರ್ವರು ಹಾಡತೊಡಗಿದರು. ಮುನಿಗಳು, ದೇವತೆಗಳು, ಮನುಗಳು, ಪಿತೃಗಳು ಅಗ್ನಿ- ಹೀಗೆ ಎಲ್ಲರೂ ಸ್ತುತಿಸತೊಡಗಿದರು. ॥ ೮ ॥ ಸಿದ್ಧರು, ವಿದ್ಯಾಧ

ಸಿದ್ಧವಿದ್ಯಾಧರಗಣಾಃ ಸಕಿಂಪುರುಷಕಿನ್ನರಾಃ ।
ಚಾರಣಾ ಯಕ್ಷರಕ್ಷಾಂಸಿ ಸುಪರ್ಣಾ ಭುಜಗೋತ್ತಮಾಃ ॥ ೯ ॥

ಗಾಯಂತೋಽತಿಪ್ರಶಂಸಂತೋ ನೃತ್ಯಂತೋ ವಿಬುಧಾನುಗಾಃ ।
ಅದಿತ್ಯಾ ಆಶ್ರಮಪದಂ ಕುಸುಮೈಃ ಸಮವಾಕಿರನ್ ॥ ೧೦ ॥

ದೃಷ್ಟ್ವಾದಿತಿಸ್ತಂ ನಿಜಗರ್ಭಸಂಭವಂ
ಪರಂ ಪುಮಾಂಸಂ ಮುದಮಾಪ ವಿಸ್ಮಿತಾ ।
ಗೃಹೀತದೇಹಂ ನಿಜಯೋಗಮಾಯಯಾ
ಪ್ರಜಾಪತಿಶ್ಚಾಹ ಜಯೇತಿ ವಿಸ್ಮಿತಃ ॥ ೧೧ ॥

ಯತ್ತದ್ವಪುರ್ಭಾತಿ ವಿಭೂಷಣಾಯುಧೈ-
ರವ್ಯಕ್ತಚಿದ್ವ್ಯಕ್ತಮಧಾರಯದ್ಧರಿಃ ।
ಬಭೂವ ತೇನೈವ ಸ ವಾಮನೋ ವಟುಃ
ಸಂಪಶ್ಯತೋರ್ದಿವ್ಯಗತಿರ್ಯಥಾ ನಟಃ ॥ ೧೨ ॥

ತಂ ವಟುಂ ವಾಮನಂ ದೃಷ್ಟ್ವಾ ಮೋದಮಾನಾ ಮಹರ್ಷಯಃ ।
ಕರ್ಮಾಣಿ ಕಾರಯಾಮಾಸುಃ ಪುರಸ್ಕೃತ್ಯ ಪ್ರಜಾಪತಿಮ್ ॥ ೧೩ ॥

ತಸ್ಯೋಪನೀಯಮಾನಸ್ಯ ಸಾವಿತ್ರೀಂ ಸವಿತಾಬ್ರವೀತ್ ।
ಬೃಹಸ್ಪತಿರ್ಬ್ರಹ್ಮಸೂತ್ರಂ ಮೇಖಲಾಂ ಕಶ್ಯಪೋಽದದಾತ್ ॥ ೧೪ ॥

ದದೌ ಕೃಷ್ಣಾಜಿನಂ ಭೂಮಿರ್ದಂಡಂ ಸೋಮೋ ವನಸ್ಪತಿಃ ।
ಕೌಪೀನಾಚ್ಛಾದನಂ ಮಾತಾ ದ್ಯೌಶ್ಛತ್ರಂ ಜಗತಃ ಪತೇಃ ॥ ೧೫ ॥

ಕಮಂಡಲುಂ ವೇದಗರ್ಭಃ ಕುಶಾನ್ಸಪ್ತರ್ಷಯೋ ದದುಃ ।
ಅಕ್ಷಮಾಲಾಂ ಮಹಾರಾಜ ಸರಸ್ವತ್ಯವ್ಯಯಾತ್ಮನಃ ॥ ೧೬ ॥

ತಸ್ಮಾ ಇತ್ಯುಪನೀತಾಯ ಯಕ್ಷರಾಟ್ಪಾತ್ರಿಕಾಮದಾತ್ ।
ಭಿಕ್ಷಾಂ ಭಗವತೀ ಸಾಕ್ಷಾದುಮಾದಾದಂಬಿಕಾ ಸತೀ ॥ ೧೭ ॥

ಸ ಬ್ರಹ್ಮವರ್ಚಸೇನೈವಂ ಸಭಾಂ ಸಂಭಾವಿತೋ ವಟುಃ ।
ಬ್ರಹ್ಮರ್ಷಿಗಣಸಂಜುಷ್ಟಾಮತ್ಯರೋಚತ ಮಾರಿಷಃ ॥ ೧೮ ॥

ಸಮಿದ್ಧಮಾಹಿತಂ ವಹ್ನಿಂ ಕೃತ್ವಾ ಪರಿಸಮೂಹನಮ್ ।
ಪರಿಸ್ತೀರ್ಯ ಸಮಭ್ಯರ್ಚ್ಯ ಸಮಿದ್ಭಿರಜುಹೋದ್ದ್ವಿಜಃ ॥ ೧೯ ॥

ರರು, ಕಿಂಪುರುಷರು, ಕಿನ್ನರರು, ಚಾರಣರು, ಯಕ್ಷರು, ರಾಕ್ಷಸರು, ಪಕ್ಷಿಗಳು, ಮುಖ್ಯ-ಮುಖ್ಯನಾಗರು ಮತ್ತು ದೇವತೆಗಳ ಅನುಚರರು ಹಾಡುತ್ತಾ-ಕುಣಿಯುತ್ತಾ ಭಗವಂತನ ಅಪಾರ ಗುಣಗಳನ್ನೂ, ಸತ್ಕರ್ಮಗಳನ್ನೂ ಸಂಕೀರ್ತನೆ ಮಾಡುತ್ತಾ ಅದಿತಿಯ ಆಶ್ರಮವನ್ನು ಪುಷ್ಪವೃಷ್ಟಿಯಿಂದ ಮುಚ್ಚಿಬಿಟ್ಟರು. । ೯-೧೦

ಅದಿತಿಯು ತನ್ನ ಗರ್ಭದಿಂದ ಪ್ರಕಟಗೊಂಡ ಪರಮಪುರುಷ ಪರಮಾತ್ಮನನ್ನು ನೋಡಿದಾಗ ಅವಳು ಅತ್ಯಂತ ಆಶ್ಚರ್ಯಚಕಿತಳಾಗಿ, ಪರಮಾನಂದಭರಿತಳಾದಳು. ಕಶ್ಯಪ ಪ್ರಜಾಪತಿಯೂ ಭಗವಂತನು ತನ್ನ ಯೋಗಮಾಯೆಯಿಂದ ಶರೀರವನ್ನು ಧರಿಸಿರುವುದನ್ನು ನೋಡಿ ವಿಸ್ಮಿತರಾಗಿ 'ಜಯವಾಗಲೀ! ಭಗವಂತನಿಗೆ ಜಯವಾಗಲೀ' ಎಂದು ಉದ್ಗಾರವೆತ್ತಿದರು. ೧೧ ॥ ಪರೀಕ್ಷಿತನೇ! ಭಗವಂತನು ಸ್ವಯಂ ಅವ್ಯಕ್ತನೂ, ಚಿತ್ಸ್ವರೂಪನು. ಅಂತಹವನು ಪರಮಕಾಂತಿಮಯ ಆಭರಣ ಮತ್ತು ಆಯುಧಗಳಿಂದ ಕೂಡಿದ ಆ ಶರೀರವನ್ನು ಧರಿಸಿ ಆವಿರ್ಭವಿಸಿದ್ದನು. ಆ ದಿವ್ಯಶರೀರವನ್ನು ಅದಿತಿ-ಕಶ್ಯಪರು ನೋಡು-ನೋಡುತ್ತಿರುವಂತೆ ನಟನು ತನ್ನ ವೇಷವನ್ನು ಬದಲಿಸುವಂತೆ ಭಗವಂತನು ಕುಳ್ಳ ಬ್ರಹ್ಮಚಾರಿಯ ರೂಪವನ್ನು ತಾಳಿದನು. ನಿಶ್ಚಯವಾಗಿಯೂ ಪರಮಾತ್ಮನ ಲೀಲೆಯು ಪರಮಾದ್ಭುತವಾದುದು. ॥ ೧೨ ॥

ಭಗವಂತನನ್ನು ವಾಮನ ಬ್ರಹ್ಮಚಾರಿಯ ರೂಪದಲ್ಲಿ ನೋಡಿ ಮಹರ್ಷಿಗಳಿಗೆ ಮಹದಾನಂದವಾಯಿತು. ಅವರೆಲ್ಲರೂ ಕಶ್ಯಪ ಪ್ರಜಾಪತಿಯನ್ನು ಮುಂದೆಮಾಡಿ ಉಪೇಂದ್ರನ ಜಾತಕರ್ಮವೇ ಮೊದಲಾದ ಸಂಸ್ಕಾರಗಳನ್ನು ಮಾಡಿಸಿದರು. ॥ ೧೩ ॥ ಅವನ ಉಪನಯನ ಸಂಸ್ಕಾರವು ಪ್ರಾರಂಭವಾದಾಗ ಗಾಯತ್ರಿಯ ಅಧಿಷ್ಠಾತೃ ದೇವತೆಯಾದ ಸವಿತೃವೇ ವಾಮನನಿಗೆ ಗಾಯತ್ರಿಯನ್ನು ಉಪದೇಶಿಸಿದನು. ದೇವಗುರು ಬೃಹಸ್ಪತಿಯು ಯಜ್ಞೋಪವೀತವನ್ನೂ, ಕಶ್ಯಪರು ಮೇಖಲೆ (ಮೌಂಜಿ)ಯನ್ನು ಕೊಟ್ಟರು. ॥ ೧೪ ॥ ಪೃಥಿವೀದೇವಿಯು ಕೃಷ್ಣಾಜಿನವನ್ನೂ, ವನಸ್ಪತಿಗಳ ಒಡೆಯನಾದ ಚಂದ್ರನು ದಂಡವನ್ನೂ, ಮಾತಾ ಅದಿತಿಯು ಕೌಪೀನವನ್ನೂ ಮತ್ತು ಕಟಿವಸ್ತ್ರವನ್ನೂ, ಆಕಾಶಾಭಿಮಾನಿದೇವತೆಗಳು ವಾಮನವೇಷಧಾರಿಯಾದ ಭಗವಂತನಿಗೆ ಛತ್ರವನ್ನೂ ಅರ್ಪಿಸಿದರು. ॥ ೧೫ ॥ ಪರೀಕ್ಷಿತನೇ! ಅವಿನಾಶಿಯಾದ ವಾಮನಪ್ರಭುವಿಗೆ ಬ್ರಹ್ಮದೇವರು ಕಮಂಡಲುವನ್ನೂ, ಸಪ್ತರ್ಷಿಗಳು ಕುಶಗಳನ್ನೂ, ಸರಸ್ವತಿದೇವಿಯು ರುದ್ರಾಕ್ಷಮಾಲೆಯನ್ನೂ ಅರ್ಪಿಸಿದರು. ॥ ೧೬ ॥ ಹೀಗೆ ಭಗವಾನ್ ವಾಮನನ ಉಪನಯನ ಸಂಸ್ಕಾರವಾದಾಗ ಯಕ್ಷಪತಿ ಕುಬೇರನು ಅವನಿಗೆ ಭಿಕ್ಷಾಪಾತ್ರೆಯನ್ನು ಕೊಟ್ಟನು. ಸತೀಶಿರೋಮಣಿ ಜಗಜ್ಜನನಿಯಾದ ಭಗವತಿ ಉಮಾದೇವಿಯು ಪ್ರಥಮ ಭಿಕ್ಷೆಯನ್ನು ನೀಡಿದಳು. ॥ ೧೭ ॥ ಹೀಗೆ ಋಷಿ-ಮುನಿ-ದೇವತೆಗಳಾದಿಯಾಗಿ ಎಲ್ಲರೂ ವಟುವೇಷಧರನಾದ ಶ್ರೀಭಗವಂತನನ್ನು ಸಮ್ಮಾನಿಸಿದರು. ಬ್ರಹ್ಮರ್ಷಿಗಳಿಂದ ತುಂಬಿದ ಆ ಮಹಾಸಭೆಯಲ್ಲಿ ವಾಮನನು ತನ್ನ ಬ್ರಹ್ಮತೇಜದಿಂದ ಅತ್ಯಂತ ಪ್ರಕಾಶಮಾನನಾದನು. ॥ ೧೮ ।

ಬಳಿಕ ಭಗವಾನ್ ವಾಮನನು ಸ್ಥಾಪಿಸಲ್ಪಟ್ಟು ಪ್ರಜ್ವಲಿತ ಅಗ್ನಿಯನ್ನು ಕುಶಗಳಿಂದ ಪರಿಸಮೂಹನ ಮತ್ತು ಪರಿಸ್ತರಣಗೈದು, ಅಗ್ನಿಪೂಜೆ ಮಾಡಿ ಸಮಿಧೆಗಳಿಂದ ಹೋಮವನ್ನು ಮಾಡಿದನು. ॥ ೧೯ ॥

ಶ್ರುತ್ವಾಶ್ವಮೇಧೈರ್ಯಜಮಾನಮೂರ್ಜಿತಂ
ಬಲಿಂ ಭೃಗೂಣಾಮುಪಕಲ್ಪಿತೈಸ್ತತಃ ।
ಜಗಾಮ ತತ್ರಾಖಿಲಸಾರಸಂಭೃತೋ
ಭಾರೇಣ ಗಾಂ ಸನ್ನಮಯನ್ಪದೇ ಪದೇ ॥ ೨೦ ॥

ತಂ ನರ್ಮದಾಯಾಸ್ತಟ ಉತ್ತರೇ ಬಲೇ-
ರ್ಯ ಋತ್ವಿಜಸ್ತೇ ಭೃಗುಕಚ್ಛಸಂಜ್ಞಕೇ ।
ಪ್ರವರ್ತಯಂತೋ ಭೃಗವಃ ಕ್ರತೂತ್ತಮಂ
ವ್ಯಚಕ್ಷತಾರಾದುದಿತಂ ಯಥಾ ರವಿಮ್ ॥ ೨೧ ॥

ತ ಋತ್ವಿಜೋ ಯಜಮಾನಃ ಸದಸ್ಯಾ
ಹತತ್ವಿಷೋ ವಾಮನತೇಜಸಾ ನೃಪ ।
ಸೂರ್ಯಃ ಕಿಲಾಯಾತ್ಯುತ ವಾ ವಿಭಾವಸುಃ
ಸನತ್ಕುಮಾರೋಽಥ ದಿದೃಕ್ಷಯಾ ಕ್ರತೋಃ ॥ ೨೨ ॥

ಇತ್ಥಂ ಸಶಿಷ್ಯೇಷು ಭೃಗುಷ್ವನೇಕಧಾ
ವಿತರ್ಕ್ಯಮಾಣೋ ಭಗವಾನ್ಸ ವಾಮನಃ ।
ಛತ್ರಂ ಸದಂಡಂ ಸಜಲಂ ಕಮಂಡಲುಂ
ವಿವೇಶ ಬಿಭ್ರದ್ಧಯಮೇಧವಾಟಮ್ ॥ ೨೩ ॥

ಮೌಂಜ್ಯಾ ಮೇಖಲಯಾ ವೀತಮುಪವೀತಾಜಿನೋತ್ತರಮ್ ।
ಜಟಿಲಂ ವಾಮನಂ ವಿಪ್ರಂ ಮಾಯಾಮಾಣವಕಂ ಹರಿಮ್
॥ ೨೪ ॥

ಪ್ರವಿಷ್ಟಂ ವೀಕ್ಷ್ಯ ಭೃಗವಃ ಸಶಿಷ್ಯಾಸ್ತೇ ಸಹಾಗ್ನಿಭಿಃ ।
ಪ್ರತ್ಯಗೃಹ್ಣನ್ಸಮುತ್ಥಾಯ ಸಂಕ್ಷಿಪ್ತಾಸ್ತಸ್ಯ ತೇಜಸಾ
॥ ೨೫ ॥

ಯಜಮಾನಃ ಪ್ರಮುದಿತೋ
ದರ್ಶನೀಯಂ ಮನೋರಮಮ್ ।
ರೂಪಾನುರೂಪಾವಯವಂ
ತಸ್ಮಾ ಆಸನಮಾಹರತ್ ॥ ೨೬ ॥

ಸ್ವಾಗತೇನಾಭಿನಂದ್ಯಾಥ ಪಾದೌ ಭಗವತೋ ಬಲಿಃ ।
ಅವನಿಜ್ಯಾರ್ಚಯಾಮಾಸ ಮುಕ್ತಸಂಗಮನೋರಮಮ್
॥ ೨೭ ॥

ಪರೀಕ್ಷಿತನೇ! ಆ ಸಮಯದಲ್ಲಿ ಸಮಸ್ತ ವಿಧವಾದ ಯಜ್ಞ ಸಾಮಗ್ರಿಗಳಿಂದಲೂ ಸಂಪನ್ನನಾದ ಯಶಸ್ವೀ ಬಲಿಚಕ್ರವರ್ತಿಯು ಭೃಗುವಂಶೀಯ ಬ್ರಾಹ್ಮಣರ ಆದೇಶಾನುಸಾರವಾಗಿ ಹಲವಾರು ಅಶ್ವಮೇಧಗಳನ್ನು ಮಾಡುತ್ತಿರುವನೆಂಬ ವಿಷಯವು ಭಗವಂತನಾದ ವಾಮನಮೂರ್ತಿಗೆ ತಿಳಿಯಿತು. ಆಗ ಸಮಸ್ತ ಶಕ್ತಿಗಳಿಂದಲೂ ಯುಕ್ತನಾಗಿ ಅವನು ನಡೆಯುವಾಗ ಅತ್ಯಂತ ಭಾರವಾದ ಹೆಜ್ಜೆಯನ್ನಿಡುತ್ತಿರುವಾಗ ಭೂಮಿಯನ್ನೇ ಬಗ್ಗಿಸುತ್ತಾ ಬಲಿಚಕ್ರವರ್ತಿಯ ಯಜ್ಞಶಾಲೆಗೆ ಹೊರಟನು. ॥ ೨೦॥ ನರ್ಮದಾ ನದಿಯ ಉತ್ತರದ ತೀರದಲ್ಲಿ 'ಭೃಗುಕಚ್ಛ'ವೆಂಬ ಸುಂದರವಾದ ಮತ್ತು ಪವಿತ್ರವಾದ ಸ್ಥಳವಿದೆ. ಅಲ್ಲಿಯೇ ಭೃಗುವಂಶೀಯ ಋತ್ವಿಜರು ಬಲಿಚಕ್ರವರ್ತಿಯಿಂದ ಯಜ್ಞಗಳನ್ನು ಮಾಡಿಸುತ್ತಿದ್ದರು. ಅವರು ದೂರದಿಂದಲೇ ವಾಮನ ಭಗವಂತನನ್ನು ನೋಡಿ ಸಾಕ್ಷಾತ್ ಸೂರ್ಯನಾರಾಯಣನೇ ಉದಯಿಸಿ ಬರುತ್ತಿರುವಂತೆ ಭಾವಿಸಿದರು. ॥ ೨೧ ॥ ಪರೀಕ್ಷಿತನೇ! ಭಗವಾನ್ ಶ್ರೀವಾಮನನ ದಿವ್ಯ ತೇಜಸ್ಸಿನ ಮುಂದೆ ಋತ್ವಿಜರು, ಯಜಮಾನ, ಸದಸ್ಯರು ಇವರೆಲ್ಲರೂ ನಿಸ್ತೇಜರಾದರು. ಯಜ್ಞವನ್ನು ನೋಡುವ ಸಲುವಾಗಿ ಸೂರ್ಯನೋ, ಅಗ್ನಿಯೋ ಅಥವಾ ಸನತ್ಕುಮಾರನೋ ಅವಶ್ಯವಾಗಿ ಬರುತ್ತಿರಬಹುದೆಂದು ಊಹಿಸಿದರು. ॥ ೨೨ ॥ ಭೃಗುಪುತ್ರ ಶುಕ್ರಾಚಾರ್ಯರೇ ಮೊದಲಾದವರು ತಮ್ಮ ಶಿಷ್ಯರೊಂದಿಗೆ ಹೀಗೆ ಅನೇಕ ಕಲ್ಪನೆಗಳನ್ನು ಮಾಡುತ್ತಿದ್ದರು. ಅದೇ ಸಮಯಕ್ಕೆ ಸರಿಯಾಗಿ ಕೈಯಲ್ಲಿ ಛತ್ರವನ್ನು, ದಂಡವನ್ನು, ನೀರಿನಿಂದ ತುಂಬಿದ ಕಮಂಡಲುವನ್ನು ಹಿಡಿದುಕೊಂಡು ವಾಮನ ಭಗವಂತನು ಅಶ್ವಮೇಧ ಯಜ್ಞದ ಮಂಡಪವನ್ನು ಪ್ರವೇಶಿಸಿದನು. ॥ ೨೩ ॥ ಅವನು ಸೊಂಟದಲ್ಲಿ ಮೌಂಜ (ಮೆಖಲೆ) ಯನ್ನೂ, ಕತ್ತಿನಲ್ಲಿ ಯಜ್ಞೋಪವೀತವನ್ನು ಧರಿಸಿದ್ದನು. ಕಂಕುಳಲ್ಲಿ ಮೃಗಚರ್ಮವಿತ್ತು. ತಲೆಯ ಮೇಲೆ ಜಟೆಯಿತ್ತು. ಈ ಪ್ರಕಾರ ಕುಳ್ಳ ಬ್ರಾಹ್ಮಣನ ವೇಷದಲ್ಲಿ ತನ್ನ ಮಾಯೆಯಿಂದ ಬ್ರಹ್ಮಚಾರಿಯಾದ ಭಗವಂತನು ಆ ಯಜ್ಞಶಾಲೆಯನ್ನು ಪ್ರವೇಶಿಸಿದಾಗ ಭೃಗುವಂಶೀ ಬ್ರಾಹ್ಮಣರು ಅವನನ್ನು ನೋಡಿ ತಮ್ಮ ಶಿಷ್ಯರೊಂದಿಗೆ ಅವನ ದಿವ್ಯತೇಜಸ್ಸಿನಿಂದ ನಿಸ್ತೇಜರಾಗಿ ಏನು ಮಾಡಬೇಕೆಂದು ಅರಿಯದೆ ಥಟ್ಟನೆ ಎದ್ದುನಿಂತರು. ತಮ್ಮ ಶಿಷ್ಯನಾದ ಬಲಿಚಕ್ರವರ್ತಿಯೊಡನೆ ಯಜ್ಞೇಶ್ವರನನ್ನು ಮುಂದುಮಾಡಿಕೊಂಡು ಭೃಗುವಂಶೀಯ ಬ್ರಾಹ್ಮಣರು ಶ್ರೀವಾಮನ ಮೂರ್ತಿಯನ್ನು ಸ್ವಾಗತಿಸಿದರು. ॥ ೨೪-೨೫ ॥ ಭಗವಂತನ ಪುಟ್ಟ ರೂಪಕ್ಕನುಸಾರವಾಗಿ ಎಲ್ಲ ಅವಯವಗಳು ಸಣ್ಣ-ಸಣ್ಣದಾಗಿದ್ದು ಬಹಳ ಮನೋಹರ ಹಾಗೂ ದರ್ಶನೀಯವಾಗಿದ್ದವು. ಅವನನ್ನು ನೋಡಿ ಬಲಿಚಕ್ರವರ್ತಿಗೆ ಪರಮಾನಂದವಾಗಿ ಭಗವಾನ್ ವಾಮನನಿಗೆ ಒಂದು ಉತ್ತಮಾಸನವನ್ನು ನೀಡಿದನು. ॥ ೨೬ ॥ ಬಳಿಕ ಬಲಿಯು ಕುಶಲಪ್ರಶ್ನೆಗಳ ಮೂಲಕವಾಗಿ ವಟುವನ್ನು ನಮಸ್ಕರಿಸಿ, ಅವನ ದಿವ್ಯಪಾದಗಳನ್ನು ತೊಳೆದು, ನಿಸ್ಸಂಗರಾದ ಯೋಗಿಗಳ ಮನಸ್ಸಿನಲ್ಲಿ ಸದಾ ರಮಿಸುವ ಆ ವಾಮನ ಮೂರ್ತಿಯನ್ನು ಯಥಾವಿಧಿಯಾಗಿ ಪ್ರೇಮಾದರಗಳಿಂದ ಪೂಜಿಸಿದನು. ॥ ೨೭ ॥ ಭಗವಂತನ ಚರಣಕಮಲಗಳ ಪಾದತೀರ್ಥವು ಪರಮ ಮಂಗಳಕರವಾದುದು. ಅದರಿಂದ ಜೀವಿಗಳ ಎಲ್ಲ ಪಾಪ-ತಾಪಗಳು ತೊಳೆದುಹೋಗುತ್ತವೆ. ಸ್ವತಃ ದೇವಾಧಿ

ತತ್ಪಾದಶೌಚಂ ಜನಕಲ್ಮಷಾಪಹಂ
ಸ ಧರ್ಮವಿನ್ಮೂರ್ಧ್ನ್ಯದಧಾತ್ಸುಮಂಗಲಮ್ ।
ಯದ್ದೇವದೇವೋ ಗಿರಿಶಶ್ಚಂದ್ರಮೌಲಿ-
ರ್ದಧಾರ ಮೂರ್ಧ್ನಾ ಪರಯಾ ಚ ಭಕ್ತ್ಯಾ ॥ ೨೮ ॥

ದೇವನಾದ ಚಂದ್ರಮೌಳಿ ಭಗವಾನ್ ಶಂಕರನು ಅತ್ಯಂತ ಭಕ್ತಿಭಾವದಿಂದ ಅದನ್ನು ತನ್ನ ತಲೆಯಲ್ಲಿ ಧರಿಸಿದ್ದನು. ಇಂದು ಅದೇ ಚರಣಾಮೃತವು ಧರ್ಮದ ಮರ್ಮಜ್ಞನಾದ ರಾಜಾಬಲಿಗೆ ಪ್ರಾಪ್ತವಾಯಿತು. ಅವನು ಬಹಳ ಭಕ್ತಿಯಿಂದ ಅದನ್ನು ತನ್ನ ತಲೆಯಮೇಲೆ ಇರಿಸಿಕೊಂಡನು. ॥ ೨೮ ॥

ಬಲಿರುವಾಚ

ಸ್ವಾಗತಂ ತೇ ನಮಸ್ತುಭ್ಯಂ ಬ್ರಹ್ಮನ್ಕಿಂ ಕರವಾಮ ತೇ ।
ಬ್ರಹ್ಮರ್ಷೀಣಾಂ ತಪಃಸಾಕ್ಷಾನ್ಮನ್ಯೇ ತ್ವಾಽಽರ್ಯ ವಪುರ್ಧರಮ್ ॥ ೨೯ ॥

ಅದ್ಯ ನಃ ಪಿತರಸ್ತೃಪ್ತಾ ಅದ್ಯ ನಃ ಪಾವಿತಂ ಕುಲಮ್ ।
ಅದ್ಯ ಸ್ವಿಷ್ಟಃ ಕ್ರತುರಯಂ ಯದ್ಭವಾನಾಗತೋ ಗೃಹಾನ್ ॥ ೩೦ ॥

ಅದ್ಯಾಗ್ನಯೋ ಮೇ ಸುಹುತಾ ಯಥಾವಿಧಿ
ದ್ವಿಜಾತ್ಮಜ ತ್ವಚ್ಚರಣಾವನೇಜನೈಃ ।
ಹತಾಂಹಸೋ ವಾರ್ಭಿರಿಯಂ ಚ ಭೂರಹೋ
ತಥಾ ಪುನೀತಾ ತನುಭಿಃ ಪದೈಸ್ತವ ॥ ೩೧ ॥

ಯದ್ಯದ್ವಟೋ ವಾಂಛಸಿ ತತ್ಪ್ರತೀಚ್ಛ ಮೇ
ತ್ವಾಮರ್ಥಿನಂ ವಿಪ್ರಸುತಾನುತರ್ಕಯೇ ।
ಗಾಂ ಕಾಂಚನಂ ಗುಣವದ್ಧಾಮ ಮೃಷ್ಟಂ
ತಥಾನ್ನಪೇಯಮುತ ವಾ ವಿಪ್ರಕನ್ಯಾಮ್ ।
ಗ್ರಾಮಾನ್ಸಮೃದ್ಧಾಂಸ್ತುರಗಾಂಗಜಾನ್ವಾ
ರಥಾಂಸ್ತಥಾರ್ಹತ್ತಮ ಸಂಪ್ರತೀಚ್ಛ ॥ ೩೨ ॥

ಬಲಿಯು ಹೇಳಿದನು – ಬ್ರಾಹ್ಮಣವಟುವೇ! ನಿನ್ನನ್ನು ಆದರದಿಂದ ಸ್ವಾಗತಿಸುತ್ತೇನೆ ಮತ್ತು ನಿನಗೆ ನಮಸ್ಕಾರ ಮಾಡುತ್ತೇನೆ. ನಾನು ನಿನಗೆ ಯಾವ ಕಾರ್ಯವನ್ನು ಮಾಡಿ ಕೊಡಲಿ! ನಿನ್ನನ್ನು ನೋಡಿದರೆ ಬ್ರಹ್ಮರ್ಷಿಗಳು ಮಾಡಿದ ತಪಸ್ಸೆಲ್ಲವೂ ಒಂದಾಗಿ ಮೂರ್ತಿಗೊಂಡು ನನ್ನ ಮುಂದೆ ಬಂದಂತಿದೆ. ॥ ೨೯ ॥ ಮಹಾನುಭಾವನೇ! ಇಂದು ನೀನು ನಮ್ಮ ಮನೆಗೆ ಆಗಮಿಸಿದ್ದರಿಂದ ನಮ್ಮ ಪಿತೃದೇವತೆಗಳು ತೃಪ್ತರಾದರು. ನಮ್ಮ ಕುಲವು ಪವಿತ್ರವಾಯಿತು. ಇಂದಿಗೆ ನಾನು ಮಾಡಿದ ಯಜ್ಞವು ಸಫಲವಾಯಿತು. ॥ ೩೦ ॥ ಬ್ರಾಹ್ಮಣಕುಮಾರನೇ! ನಿನ್ನ ಪಾದಪ್ರಕ್ಷಾಳನದಿಂದ ನನ್ನ ಪಾಪಗಳೆಲ್ಲವೂ ತೊಳೆದುಹೋದುವು. ವಿಧಿವತ್ತಾಗಿ ಯಜ್ಞಮಾಡುವುದರಿಂದ, ಅಗ್ನಿಯಲ್ಲಿ ಆಹುತಿಗಳನ್ನು ಅರ್ಪಿಸುವುದರಿಂದ ದೊರೆಯಬಹುದಾದ ಫಲವು ಆಯಾಸವಿಲ್ಲದೆ ನನಗೆ ದೊರೆಯಿತು. ನಿನ್ನ ಈ ಕೋಮಲವಾದ ಮುದ್ದು ಚರಣಗಳಿಂದ ಮತ್ತು ಅವುಗಳನ್ನು ತೊಳೆದುದರಿಂದ ಪೃಥಿವಿಯು ಪವಿತ್ರಳಾದಳು. ॥ ೩೧ ॥ ಬ್ರಾಹ್ಮಣವಟುವೇ! ನೀನು ಏನೋ ಬಯಸುತ್ತಿರುವೆ ಎಂದು ನನಗೆ ಅನಿಸುತ್ತದೆ. ಪರಮಪೂಜ್ಯ ಬ್ರಹ್ಮಚಾರಿಯೇ! ನೀನು ಬಯಸುವ – ಗೋವುಗಳು, ಚಿನ್ನ, ಸಕಲ ಸಾಮಗ್ರಿಗಳಿಂದ ಸುಸಜ್ಜಿತಮನೆ, ಪವಿತ್ರವಾದ ಅನ್ನ, ಕುಡಿಯುವ ವಸ್ತು, ವಿವಾಹಕ್ಕಾಗಿ ಬ್ರಾಹ್ಮಣ ಕನ್ಯೆ, ಸಂಪತ್ಸಮೃದ್ಧವಾದ ಊರು, ಕುದುರೆ, ಆನೆ, ರಥ – ಇವೆಲ್ಲವನ್ನು ನನ್ನಿಂದ ಕೇಳಿಕೋ. ನಿನಗೆ ಇಷ್ಟವಾದುದನ್ನು ಅವಶ್ಯವಾಗಿ ಕೇಳಿ ಪಡೆದುಕೋ. ॥ ೩೨ ॥

ಹದಿನೆಂಟನೆಯ ಅಧ್ಯಾಯವು ಮುಗಿಯಿತು. ॥ ೧೮ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಅಷ್ಟಮ ಸ್ಕಂಧೇ
ವಾಮನಪ್ರಾದುರ್ಭಾವೇ ಬಲಿವಾಮನಸಂವಾದೇಽಷ್ಟಾದಶೋಽಧ್ಯಾಯಃ ॥ ೧೮ ॥

ಹತ್ತೊಂಭತ್ತನೆಯ ಅಧ್ಯಾಯ

ಭಗವಾನ್ ವಾಮನನು ಬಲಿಯಲ್ಲಿ ಮೂರು ಹೆಜ್ಜೆ ಭೂಮಿಯನ್ನು ಬೇಡಿದುದು, ಬಲಿಯ ಸಮ್ಮತಿ, ಶುಕ್ರಾಚಾರ್ಯರು ತಡೆದುದು

ಶ್ರೀಶುಕ ಉವಾಚ

ಇತಿ ವೈರೋಚನೇರ್ವಾಕ್ಯಂ ಧರ್ಮಯುಕ್ತಂ ಸಸೂನೃತಮ್ ।
ನಿಶಮ್ಯ ಭಗವಾನ್ಪ್ರೀತಃ ಪ್ರತಿನಂದ್ಯೇದಮಬ್ರವೀತ್ ॥ ೧ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ! ಬಲಿಯು ಹೇಳಿದ ಮಾತುಗಳು ಧರ್ಮಯುಕ್ತವಾಗಿಯೂ, ಸತ್ಯವಾಗಿಯೂ, ಪ್ರಿಯವಾಗಿಯೂ ಇದ್ದವು. ಅದನ್ನು ಕೇಳಿದ ಭಗವಾನ್ ವಾಮನನು ಅತ್ಯಂತ ಸಂತೋಷದಿಂದ ಬಲಿಯನ್ನು ಅಭಿನಂದಿಸುತ್ತಾ ಇಂತೆಂದನು – ॥ ೧ ॥

ಶ್ರೀಭಗವಾನುವಾಚ

ವಚಸ್ತವೈತಜ್ಜನದೇವ ಸೂನೃತಂ
ಕುಲೋಚಿತಂ ಧರ್ಮಯುತಂ ಯಶಸ್ಕರಮ್ ।
ಯಸ್ಯ ಪ್ರಮಾಣಂ ಭೃಗವಃ ಸಾಂಪರಾಯೇ
ಪಿತಾಮಹಃ ಕುಲವೃದ್ಧಃ ಪ್ರಶಾಂತಃ ॥ ೨ ॥

ಶ್ರೀಭಗವಂತನು ಹೇಳಿದನು – ಮಹಾರಾಜಾ! ನೀನು ಆಡಿದ ಮಾತುಗಳು ನಿನ್ನ ಕುಲಪರಂಪರೆಗೆ ಅನುರೂಪವಾಗಿವೆ. ಧರ್ಮಭಾವದಿಂದ ಪರಿಪೂರ್ಣವಾಗಿವೆ. ಯಶಸ್ಕರವೂ, ಸತ್ಯವೂ, ಪ್ರಿಯವೂ ಆಗಿವೆ. ಇದಕ್ಕೆ ಕಾರಣ – ಪರಲೋಕಹಿತಕಾರಿಯಾದ ಧರ್ಮದ ಸಂಬಂಧದಲ್ಲಿ ನೀನು ಭೃಗುವಂಶೀಯರಾದ ಶುಕ್ರಾಚಾರ್ಯರನ್ನೇ ಪರಮಪ್ರಮಾಣವೆಂದು ತಿಳಿದಿರುವೆ. ಜೊತೆಗೆ ಕುಲವೃದ್ಧರಾದ ಪಿತಾಮಹ ಪರಮ ಶಾಂತಸ್ವಭಾವದ ಪ್ರಹ್ಲಾದನ ಆಜ್ಞೆಯನ್ನೂ ಪರಮಪ್ರಮಾಣವೆಂದೂ ಪಾಲಿಸುತ್ತಿರುವೆ. ॥ ೨ ॥

ನ ಹ್ಯೇತಸ್ಮಿನ್ಕುಲೇ ಕಶ್ಚಿನ್ನಿಃಸತ್ತ್ವಃ ಕೃಪಣಃ ಪುಮಾನ್ ।
ಪ್ರತ್ಯಾಖ್ಯಾತಾ ಪ್ರತಿಶ್ರುತ್ಯ ಯೋ ವಾದಾತಾ ದ್ವಿಜಾತಯೇ ॥ ೩ ॥

ನಿನ್ನ ವಂಶಪರಂಪರೆಯಲ್ಲಿ ಇಂದಿನವರೆಗೆ ಧೈರ್ಯಹೀನರೂ, ಕೃಪಣರೂ ಯಾರೂ ಹುಟ್ಟಲಿಲ್ಲ. ಬ್ರಾಹ್ಮಣನಿಗೆ ದಾನವನ್ನು ಕೊಡದವನಾಗಲೀ, ಇಂತಹ ವಸ್ತುವನ್ನು ಕೊಡುವೆನೆಂದು ಪ್ರತಿಜ್ಞೆಮಾಡಿ ಅದನ್ನು ಭಂಗಪಡಿಸಿದವನಾಗಲೀ ನಿನ್ನ ವಂಶದಲ್ಲಿ ಹುಟ್ಟಲಿಲ್ಲ. ॥ ೩ ॥

ನ ಸಂತಿ ತೀರ್ಥೇ ಯುಧಿ ಚಾರ್ಥಿನಾರ್ಥಿತಾಃ
ಪರಾಙ್ಮುಖಾ ಯೇ ತ್ವಮನಸ್ವಿನೋ ನೃಪ ।
ಯುಷ್ಮತ್ಕುಲೇ ಯದ್ಯಶಸಾಮಲೇನ
ಪ್ರಹ್ಲಾದ ಉದ್ಭಾತಿ ಯಥೋಡುಪಃ ಖೇ ॥ ೪ ॥

ದಾನಕೊಡಬೇಕಾದ ಸಮಯದಲ್ಲಿ ಯಾಚಕರ ಯಾಚನೆಯನ್ನು ಕೇಳಿ ಮುಖತಿರುಗಿಸಿದವನಾಗಲೀ, ಯುದ್ಧದ ಸಂದರ್ಭದಲ್ಲಿ ಶತ್ರುವು ಯುದ್ಧಕ್ಕಾಗಿ ಆಹ್ವಾನಿಸಿದಾಗ ಬೆನ್ನುತೋರುವ ಹೇಡಿಯಾಗಲೀ ನಿನ್ನ ವಂಶದಲ್ಲಿ ಯಾರೂ ಹುಟ್ಟಲಿಲ್ಲ. ನಿಮ್ಮ ಕುಲಪರಂಪರೆಯಲ್ಲಿ ಪ್ರಹ್ಲಾದನು ಈಗಲೂ ಆಕಾಶದಲ್ಲಿರುವ ಚಂದ್ರನಂತೆ ನಿರ್ಮಲವಾದ ಯಶಸ್ಸಿನಿಂದ ಬೆಳಗುತ್ತಿರುವನು. ॥ ೪ ॥

ಯತೋ ಜಾತೋ ಹಿರಣ್ಯಾಕ್ಷಶ್ಚರನ್ನೇಕ ಇಮಾಂ ಮಹೀಮ್ ।
ಪ್ರತಿವೀರಂ ದಿಗ್ವಿಜಯೇ ನಾವಿಂದತ ಗದಾಯುಧಃ ॥ ೫ ॥

ನಿನ್ನ ಕುಲದಲ್ಲೇ ಹಿರಣ್ಯಾಕ್ಷನಂತಹ ವೀರರ ಜನ್ಮವಾಗಿತ್ತು. ಆ ವೀರನು ಕೈಯಲ್ಲಿ ಗದೆಯನ್ನು ಹಿಡಿದುಕೊಂಡು ಒಬ್ಬಂಟಿಗನಾಗಿ ದಿಗ್ವಿಜಯಕ್ಕಾಗಿ ಹೋದಾಗ ಇಡೀ ಪೃಥಿವಿಯಲ್ಲಿ ತಿರುಗಿದರೂ ಅವನಿಗೆ ತನಗೆ ಸಮಾನನಾದ ವೀರನು ದೊರೆಯಲೇ ಇಲ್ಲ. ॥ ೫ ॥

ಯಂ ವಿನಿರ್ಜಿತ್ಯ ಕೃಚ್ಛ್ರೇಣ ವಿಷ್ಣುಃ ಕ್ಷ್ಮೋದ್ಧಾರ ಆಗತಮ್ ।
ಆತ್ಮಾನಂ ಜಯಿನಂ ಮೇನೇ ತದ್ವೀರ್ಯಂ ಭೂರ್ಯನುಸ್ಮರನ್ ॥ ೬ ॥

ಭಗವಾನ್ ವಿಷ್ಣುವು ನೀರಿನಿಂದ ಪೃಥಿವಿಯನ್ನು ಉದ್ಧರಿಸುತ್ತಿದ್ದಾಗ ಅವನು ಅವನ ಮುಂದೆ ಬಂದನು ಮತ್ತು ಭಾರೀ ಕಷ್ಟದಿಂದ ಅವನನ್ನು ಗೆದ್ದುಕೊಂಡನು. ಆದರೂ ಇದಾದ ಬಹಳ ದಿನಗಳವರೆಗೂ ವಿಷ್ಣುವಿಗೆ ಪದೇ-ಪದೇ ಹಿರಣ್ಯಾಕ್ಷನ ಶಕ್ತಿ ಮತ್ತು ಬಲದ ಸ್ಮರಣೆಯಾಗುತ್ತಿತ್ತು. ಅವನನ್ನು ಗೆದ್ದುಕೊಂಡಿದ್ದರೂ ಅವನು ತನ್ನನ್ನು ವಿಜಯಿ ಎಂದು ತಿಳಿಯುತ್ತಿರಲಿಲ್ಲ. ॥ ೬ ॥

ನಿಶಮ್ಯ ತದ್ವಧಂ ಭ್ರಾತಾ ಹಿರಣ್ಯಕಶಿಪುಃ ಪುರಾ ।
ಹಂತುಂ ಭ್ರಾತೃಹಣಂ ಕ್ರುದ್ಧೋ ಜಗಾಮ ನಿಲಯಂ ಹರೇಃ ॥ ೭ ॥

ಹಿರಣ್ಯಾಕ್ಷನ ಸಹೋದರ ಹಿರಣ್ಯಕಶಿಪುವಿಗೆ ತನ್ನ ತಮ್ಮನ ವಧೆಯ ವೃತ್ತಾಂತ ತಿಳಿದಾಗ ಅವನು ತನ್ನ ತಮ್ಮನನ್ನು ವಧಿಸಿದವನನ್ನು ಕೊಂದುಹಾಕಲಿಕ್ಕಾಗಿ ಕ್ರೋಧಗೊಂಡು ಭಗವಂತನ ನಿವಾಸಸ್ಥಾನವಾದ ವೈಕುಂಠಕ್ಕೆ ಹೋದನು. ॥ ೭ ॥

ತಮಾಯಾಂತಂ ಸಮಾಲೋಕ್ಯ
ಶೂಲಪಾಣಿಂ ಕೃತಾಂತವತ್ ।
ಚಿಂತಯಾಮಾಸ ಕಾಲಜ್ಞೋ
ವಿಷ್ಣುರ್ಮಾಯಾವಿನಾಂ ವರಃ ॥ ೮ ॥

ಮಾಯಾವಿಗಳಲ್ಲಿ ಶ್ರೇಷ್ಠನಾದ, ಕಾಲಜ್ಞನಾದ, ಯಾವ ಕಾಲದಲ್ಲಿ ಹೇಗೆ ವರ್ತಿಸಬೇಕೆಂದು ತಿಳಿದಿದ್ದ ವಿಷ್ಣುವು ಯಮನಂತೆ ಶೂಲವನ್ನು ಕೈಯಲ್ಲಿ ಹಿಡಿದುಕೊಂಡು ಹಿರಣ್ಯಕಶಿಪು ತನ್ನನ್ನು ಆಕ್ರಮಿಸುತ್ತಿರುವನೆಂದು ತಿಳಿದು ಹೀಗೆ ಯೋಚಿಸಿದನು. ॥ ೮ ॥

ಯತೋ ಯತೋಽಹಂ ತತ್ರಾಸೌ ಮೃತ್ಯುಃ ಪ್ರಾಣಭೃತಾಮಿವ ।
ಅತೋಽಹಮಸ್ಯ ಹೃದಯಂ ಪ್ರವೇಕ್ಷ್ಯಾಮಿ ಪರಾಗ್ದೃಶಃ ॥ ೯ ॥

ಯಾವಾಗಲೂ ಮೃತ್ಯುವು ಪ್ರಾಣಿಗಳ ಬೆನ್ನುಬಿಡದೆ ಇರುವಂತೆ ಈ ರಾಕ್ಷಸನು ನಾನು ಹೋದಲ್ಲೆಲ್ಲ ಹಿಂಬಾಲಿಸುವನು. ಅದಕ್ಕಾಗಿ ನಾನು ಇವನ ಹೃದಯದಲ್ಲಿ ಪ್ರವೇಶಿಸುವೆನು. ಆದರಿಂದ ಇವನು ನನ್ನನ್ನು ನೋಡಲಾರನು. ಏಕೆಂದರೆ, ಇವನಾದರೋ ಬಹಿರ್ಮುಖನಾಗಿದ್ದಾನೆ. ಹೊರಗಿನ ವಸ್ತುಗಳನ್ನು ಮಾತ್ರ ನೋಡಬಲ್ಲನು. ॥ ೯ ॥

ಏವಂ ಸ ನಿಶ್ಚಿತ್ಯ ರಿಪೋಃ ಶರೀರ-
ಮಾಧಾವತೋ ನಿರ್ವಿವಿಶೇಽಸುರೇಂದ್ರ ।
ಶ್ವಾಸಾನಿಲಾಂತರ್ಹಿತಸೂಕ್ಷ್ಮದೇಹ-
ಸ್ತತ್ಪ್ರಾಣರಂಧ್ರೇಣ ವಿವಿಗ್ನಚೇತಾಃ ॥ ೧೦ ॥

ಸ ತನ್ನಿಕೇತಂ ಪರಿಮೃಶ್ಯ ಶೂನ್ಯ-
ಮಪಶ್ಯಮಾನಃ ಕುಪಿತೋ ನನಾದ ।
ಕ್ಷ್ಮಾಂ ದ್ಯಾಂ ದಿಶಃ ಖಂ ವಿವರಾನ್ಸಮುದ್ರಾನ್
ವಿಷ್ಣುಂ ವಿಚಿನ್ವನ್ನ ದದರ್ಶ ವೀರಃ ॥ ೧೧ ॥

ಅಪಶ್ಯನ್ನಿತಿ ಹೋವಾಚ ಮಯಾನ್ವಿಷ್ಟಮಿದಂ ಜಗತ್ ।
ಭ್ರಾತೃಹಾ ಮೇ ಗತೋ ನೂನಂ ಯತೋ ನಾವರ್ತತೇ ಪುಮಾನ್ ॥ ೧೨ ॥

ವೈರಾನುಬಂಧ ಏತಾವಾನಾಮೃತ್ಯೋರಿಹ ದೇಹಿನಾಮ್ ।
ಅಜ್ಞಾನಪ್ರಭವೋ ಮನ್ಯುರಹಂಮಾನೋಪಬೃಂಹಿತಃ ॥ ೧೩ ॥

ಪಿತಾ ಪ್ರಹ್ರಾದಪುತ್ರಸ್ತೇ ತದ್ವಿದ್ವಾನ್ ದ್ವಿಜವತ್ಸಲಃ ।
ಸ್ವಮಾಯುರ್ದ್ವಿಜಲಿಂಗೇಭ್ಯೋ ದೇವೇಭ್ಯೋಽದಾತ್ಸ ಯಾಚಿತಃ ॥ ೧೪ ॥

ಭವಾನಾಚರಿತಾನ್ ಧರ್ಮಾನಾಸ್ಥಿತೋ ಗೃಹಮೇಧಿಭಿಃ ।
ಬ್ರಾಹ್ಮಣೈಃ ಪೂರ್ವಜೈಃ ಶೂರೈರನ್ಯೈಶ್ಚೋದ್ದಾಮಕೀರ್ತಿಭಿಃ ॥ ೧೫ ॥

ತಸ್ಮಾತ್ತ್ವತ್ತೋ ಮಹೀಮೀಷದ್ವೃಣೇಽಹಂ ವರದರ್ಷಭಾತ್ ।
ಪದಾನಿ ತ್ರೀಣಿ ದೈತ್ಯೇಂದ್ರ ಸಂಮಿತಾನಿ ಪದಾ ಮಮ ॥ ೧೬ ॥

ನಾನ್ಯತ್ತೇ ಕಾಮಯೇ ರಾಜನ್ವದಾನ್ಯಾಜ್ಜಗದೀಶ್ವರಾತ್ ।
ನೈನಃ ಪ್ರಾಪ್ನೋತಿ ವೈ ವಿದ್ವಾನ್ಯಾವದರ್ಥಪ್ರತಿಗ್ರಹಃ ॥ ೧೭ ॥

ಬಲಿರುವಾಚ

ಅಹೋ ಬ್ರಾಹ್ಮಣದಾಯಾದ ವಾಚಸ್ತೇ ವೃದ್ಧಸಮ್ಮತಾಃ ।
ತ್ವಂ ಬಾಲೋ ಬಾಲಿಶಮತಿಃ ಸ್ವಾರ್ಥಂ ಪ್ರತ್ಯಬುಧೋ ಯಥಾ ॥ ೧೮ ॥

ಮಾಂ ವಚೋಭಿಃ ಸಮಾರಾಧ್ಯ
ಲೋಕಾನಾಮೇಕಮೀಶ್ವರಮ್ ।
ಪದತ್ರಯಂ ವೃಣೀತೇ ಯೋಽ-
ಬುದ್ಧಿಮಾನ್ ದ್ವೀಪದಾಶುಷಮ್ ॥ ೧೯ ॥

ಅಸುರಶಿರೋಮಣಿಯೇ! ಹಿರಣ್ಯಕಶಿಪು ಅವನ ಮೇಲೆ ಆಕ್ರಮಿಸಿದಾಗ ಹೀಗೆ ಯೋಚಿಸಿ ಭಯದಿಂದ ನಡುಗುತ್ತಾ ಭಗವಾನ್ ವಿಷ್ಣುವು ತನ್ನ ಶರೀರವನ್ನು ಸೂಕ್ಷ್ಮವಾಗಿಸಿಕೊಂಡು ಅವನ ಪ್ರಾಣಗಳೊಂದಿಗೆ ಮೂಗಿನ ಮೂಲಕ ಹೃದಯದಲ್ಲಿ ಹೋಗಿ ಕುಳಿತನು. ॥ ೧೦ ॥ ಹಿರಣ್ಯಕಶಿಪು ಅವನ ಲೋಕವನ್ನು ಚೆನ್ನಾಗಿ ಜಾಲಾಡಿದನು. ಆದರೆ ಅವನು ಎಲ್ಲಿಯೂ ಕಾಣಲಿಲ್ಲ. ಇದರಿಂದ ಕ್ರೋಧಿತನಾಗಿ ಸಿಂಹನಾದವನ್ನು ಮಾಡತೊಡಗಿದನು. ಆ ವೀರನು ಪೃಥಿವಿ, ಸ್ವರ್ಗ, ದಿಕ್ಕುಗಳು, ಆಕಾಶ, ಪಾತಾಳ, ಸಮುದ್ರ – ಹೀಗೆ ಎಲ್ಲೆಡೆ ಮಹಾವಿಷ್ಣುವನ್ನು ಹುಡುಕಿದನು. ಆದರೆ ಅವನು ಎಲ್ಲಿಯೂ ಅವನಿಗೆ ಕಂಡುಬರಲಿಲ್ಲ. ॥ ೧೧ ॥ ಅವನನ್ನು ಎಲ್ಲಿಯೂ ಕಾಣದೆ – 'ನಾನು ಇಡೀ ಜಗತ್ತನ್ನು ಹುಡುಕಿಬಿಟ್ಟೆ. ಆದರೆ ಅವನು ಸಿಗಲೇ ಇಲ್ಲ. ಆ ಭ್ರಾತೃಘಾತಿಯು ಜೀವಿಗಳು ಹೋದಬಳಿಕ ಮರಳಿ ಬರದಿರುವ ಲೋಕಕ್ಕೆ (ಯಮಲೋಕಕ್ಕೆ) ಹೋಗಿರಬೇಕು' ಎಂದು ಯೋಚಿಸಿದನು. ॥ ೧೨ ॥ ಮೃತ್ಯುವಶನಾದವನಲ್ಲಿ ವೈರಭಾವವನ್ನು ಇರಿಸಿಕೊಳ್ಳುವ ಆವಶ್ಯಕತೆ ಇಲ್ಲ. ಏಕೆಂದರೆ, ವೈರವಾದರೋ ದೇಹದೊಂದಿಗೆ ಮುಗಿದುಹೋಗುತ್ತದೆ. ಕ್ರೋಧದ ಕಾರಣ ಅಜ್ಞಾನ ಮತ್ತು ಅಹಂಕಾರದಿಂದ ಅದು ಬೆಳೆಯುತ್ತದೆ. ॥ ೧೩ ॥ ರಾಜನೇ! ನಿನ್ನ ತಂದೆಯಾದ ಪ್ರಹ್ಲಾದನಂದನ ವಿರೋಚನನೂ ಬ್ರಾಹ್ಮಣಭಕ್ತನಾಗಿದ್ದನು. ಅವನ ಶತ್ರುಗಳಾದ ದೇವತೆಗಳು ಬ್ರಾಹ್ಮಣರ ವೇಷವನ್ನು ತಳೆದು ಅವನಲ್ಲಿ ಅವನ ಆಯುಷ್ಯವನ್ನು ದಾನವಾಗಿ ಬೇಡಿದರು. ಅವನು ಬ್ರಾಹ್ಮಣರ ಕಪಟವನ್ನು ಅರಿತಿದ್ದರೂ ತನ್ನ ಆಯುಸ್ಸನ್ನು ದಾನ ಮಾಡಿಬಿಟ್ಟನು. ॥ ೧೪ ॥ ನಿನ್ನ ಪೂರ್ವಜರಂತೆ ನೀನೂ ಕೂಡ ಶುಕ್ರಾಚಾರ್ಯರೇ ಮೊದಲಾದ ಗೃಹಸ್ಥ ಬ್ರಾಹ್ಮಣರು ಆಚರಿಸುವ ಧರ್ಮಗಳನ್ನೂ, ನಿನ್ನ ಪೂರ್ವಜರಾದ ಪ್ರಹ್ಲಾದನೇ ಮೊದಲಾದ ಇತರ ಯಶಸ್ವೀ ವೀರರು ಆಚರಿಸಿದ ಧರ್ಮವನ್ನೇ ಆಚರಿಸುತ್ತಿರುವೆ. ॥ ೧೫ ॥ ದೈತ್ಯೇಂದ್ರನೇ! ನೀನು ಕೇಳಿದ ವಸ್ತುವನ್ನು ಕೊಡುವವರಲ್ಲಿ ಶ್ರೇಷ್ಠನಾಗಿರುವೆ. ಇದರಿಂದಲೇ ನಾನು ನಿನ್ನಲ್ಲಿ ಕೇವಲ ನನ್ನ ಮೂರು ಹೆಜ್ಜೆಗಳಷ್ಟು ಭೂಮಿಯನ್ನು ಬೇಡುತ್ತೇನೆ. ॥ ೧೬ ॥ ಮಹಾರಾಜಾ! ನೀನು ಇಡೀ ಜಗತ್ತಿನ ಒಡೆಯನಾಗಿರುವೆ. ಉದಾರನಾಗಿರುವೆ. ಹೀಗಿದ್ದರೂ ನಾನು ನಿನ್ನಲ್ಲಿ ಇದಕ್ಕಿಂತ ಹೆಚ್ಚಿನದನ್ನು ಬಯಸುವುದಿಲ್ಲ. ವಿದ್ವಾಂಸನಾದವನು ಕೇವಲ ತನ್ನ ಆವಶ್ಯಕತೆಗನುಸಾರವಾಗಿಯೇ ದಾನವನ್ನು ಸ್ವೀಕರಿಸಬೇಕು. ಇದರಿಂದ ಅವನು ಪ್ರತಿಗ್ರಹಜನ್ಯ ದೋಷದಿಂದ ಮುಕ್ತನಾಗುತ್ತಾನೆ. ॥ ೧೭ ॥

ಬಲಿರಾಜನು ಹೇಳಿದನು – ಬ್ರಾಹ್ಮಣಕುಮಾರ! ನಿನ್ನ ಮಾತುಗಳಾದರೋ ವೃದ್ಧರ ಮಾತುಗಳಂತೆ ಇವೆ. ಆದರೆ ನಿನ್ನ ಬುದ್ಧಿಯು ಇನ್ನೂ ಬಾಲಕರಂತೆಯೇ ಇದೆಯಲ್ಲ! ಈಗ ನೀನು ಎಷ್ಟಾದರೂ ಹುಡುಗನೇ ಅಲ್ಲವೇ! ಇದರಿಂದ ನಿನ್ನ ಲಾಭ-ಹಾನಿ ತಿಳಿಯುತ್ತಿಲ್ಲ. ॥ ೧೮ ॥ ನಾನು ಮೂರು ಲೋಕಗಳಿಗೂ ಏಕಮಾತ್ರ ಅಧಿಪತಿಯಾಗಿರುವೆನು. ಬೇಕಾದರೆ ಒಂದು ದ್ವೀಪವನ್ನೇ ಕೊಡಬಲ್ಲೆನು. ನನ್ನನ್ನು ಸುಮಧುರ ಮಾತುಗಳಿಂದ ಸಂತೋಷಗೊಳಿಸಿ, ಕೇವಲ ಮೂರು ಹೆಜ್ಜೆಗಳಷ್ಟು ಭೂಮಿಯನ್ನು ಬಯಸಿದರೆ ಅವನನ್ನು ಬುದ್ಧಿವಂತನೆಂದು ಹೇಳಬಹುದೇ? ॥ ೧೯ ॥

ನ ಪುಮಾನ್ಮಾಮುಪವ್ರಜ್ಯ ಭೂಯೋ ಯಾಚಿತುಮರ್ಹತಿ ।
ತಸ್ಮಾದ್ವೃತ್ತಿಕರೀಂ ಭೂಮಿಂ ವಟೋ ಕಾಮಂ ಪ್ರತೀಚ್ಛ ಮೇ ॥ ೨೦ ॥

ಶ್ರೀಭಗವಾನುವಾಚ

ಯಾವಂತೋ ವಿಷಯಾಃ ಪ್ರೇಷ್ಠಾಸ್ತ್ರಿಲೋಕ್ಯಾಮಜಿತೇಂದ್ರಿಯಮ್ ।
ನ ಶಕ್ನುವಂತಿ ತೇ ಸರ್ವೇ ಪ್ರತಿಪೂರಯಿತುಂ ನೃಪ ॥ ೨೧ ॥

ತ್ರಿಭಿಃ ಕ್ರಮೈರಸಂತುಷ್ಟೋ ದ್ವೀಪೇನಾಪಿ ನ ಪೂರ್ಯತೇ ।
ನವವರ್ಷಸಮೇತೇನ ಸಪ್ತದ್ವೀಪವರೇಚ್ಛಯಾ ॥ ೨೨ ॥

ಸಪ್ತದ್ವೀಪಾಧಿಪತಯೋ ನೃಪಾ ವೈನ್ಯಗಯಾದಯಃ ।
ಅರ್ಥೈಃ ಕಾಮೈರ್ಗತಾ ನಾಂತಂ ತೃಷ್ಣಾಯಾ ಇತಿ ನಃ ಶ್ರುತಮ್ ॥ ೨೩ ॥

ಯದೃಚ್ಛಯೋಪಪನ್ನೇನ ಸಂತುಷ್ಟೋ ವರ್ತತೇ ಸುಖಮ್ ।
ನಾಸಂತುಷ್ಟಸ್ತ್ರಿಭಿರ್ಲೋಕೈರಜಿತಾತ್ಮೋಪಸಾದಿತೈಃ ॥ ೨೪ ॥

ಪುಂಸೋಽಯಂ ಸಂಸೃತೇರ್ಹೇತು-
ರಸಂತೋಷೋಽರ್ಥಕಾಮಯೋಃ ।
ಯದೃಚ್ಛಯೋಪಪನ್ನೇನ
ಸಂತೋಷೋ ಮುಕ್ತಯೇ ಸ್ಮೃತಃ ॥ ೨೫ ॥

ಯದೃಚ್ಛಾಲಾಭತುಷ್ಟಸ್ಯ ತೇಜೋ ವಿಪ್ರಸ್ಯ ವರ್ಧತೇ ।
ತತ್ಪ್ರಶಾಮ್ಯತ್ಯಸಂತೋಷಾದಂಭಸೇವಾಶುಶುಕ್ಷಣಿಃ ॥ ೨೬ ॥

ತಸ್ಮಾತ್ತ್ರೀಣಿ ಪದಾನ್ಯೇವ ವೃಣೇ ತ್ವದ್ವರದರ್ಷಭಾತ್ ।
ಏತಾವತೈವ ಸಿದ್ಧೋಽಹಂ ವಿತ್ತಂ ಯಾವತ್ಪ್ರಯೋಜನಮ್ ॥ ೨೭ ॥

ಶ್ರೀಶುಕ ಉವಾಚ

ಇತ್ಯುಕ್ತಃ ಸ ಹಸನ್ನಾಹ ವಾಂಛಾತಃ ಪ್ರತಿಗೃಹ್ಯತಾಮ್ ।
ವಾಮನಾಯ ಮಹೀಂ ದಾತುಂ ಜಗ್ರಾಹ ಜಲಭಾಜನಮ್ ॥ ೨೮ ॥

ವಿಷ್ಣವೇ ಕ್ಷ್ಮಾಂ ಪ್ರದಾಸ್ಯಂತಮುಶನಾ ಅಸುರೇಶ್ವರಮ್ ।
ಜಾನಂಶ್ಚಿಕೀರ್ಷಿತಂ ವಿಷ್ಣೋಃ ಶಿಷ್ಯಂ ಪ್ರಾಹ ವಿದಾಂ ವರಃ ॥ ೨೯ ॥

ಶುಕ್ರ ಉವಾಚ

ಏಷ ವೈರೋಚನೇ ಸಾಕ್ಷಾದ್ಭಗವಾನ್ವಿಷ್ಣುರವ್ಯಯಃ ।
ಕಶ್ಯಪಾದದಿತೇರ್ಜಾತೋ ದೇವಾನಾಂ ಕಾರ್ಯಸಾಧಕಃ ॥ ೩೦ ॥

ಬ್ರಹ್ಮಚಾರಿಯೇ! ಯಾರೇ ಆಗಲೀ, ನನ್ನ ಬಳಿಯಲ್ಲಿ ಯಾಚಿಸಲು ಒಮ್ಮೆ ಬಂದವನು ಮತ್ತೆಂದಿಗೂ ಯಾರಲ್ಲಿಯೂ ಪುನಃ ಬೇಡಲು ಹೋಗಬಾರದು. ಇದು ನನ್ನ ಅಭಿಮತವಾಗಿದೆ. ಆದುದರಿಂದ ನಿನ್ನ ಜೀವನನಿರ್ವಾಹಕ್ಕೆ ಬೇಕಾದಷ್ಟು ಫಲವತ್ತಾದ ಭೂಮಿಯನ್ನು ಕೇಳಿಕೋ. ॥ ೨೦ ॥

ಶ್ರೀಭಗವಂತನು ಹೇಳಿದನು – ರಾಜನೇ! ಪ್ರಪಂಚದ ಎಲ್ಲ ಪ್ರಿಯವಾದ ವಿಷಯಗಳು ದೊರೆತರೂ ಜಿತೇಂದ್ರಿಯನಲ್ಲದ, ಸಂತೋಷಿಯಲ್ಲದ ಓರ್ವ ಮನುಷ್ಯನ ಕಾಮನೆಗಳನ್ನೂ ಕೂಡ ಪೂರ್ಣಗೊಳಿಸಲು ಸಮರ್ಥವಾಗಿಲ್ಲ. ॥ ೨೧ ॥ ಮೂರು ಹೆಜ್ಜೆ ಭೂಮಿಯಿಂದ ಸಂತೋಷಪಡದವನಿಗೆ ಒಂದು ದ್ವೀಪವನ್ನೇ ಕೊಟ್ಟರೂ ಅವನು ಸಂತುಷ್ಟನಾಗಲಾರನು. ಏಕೆಂದರೆ, ಅವನ ಮನಸ್ಸಿನಲ್ಲಿ ಏಳೂ ದ್ವೀಪಗಳನ್ನೂ ಪಡೆಯುವ ಇಚ್ಛೆ ಇದ್ದೇ ಇರುತ್ತದೆ. ॥ ೨೨ ॥ ಪೃಥು, ಗಯ, ಮೊದಲಾದ ರಾಜರು ಏಳು ದ್ವೀಪಗಳ ಅಧಿಪತಿಗಳಾಗಿದ್ದರು. ಅವರೂ ಅಷ್ಟು ಧನ, ಭೋಗ ಸಾಮಗ್ರಿಗಳು ದೊರೆತರೂ ಅವರು ತೃಷ್ಣೆಯ ಪಾರವನ್ನು ಕಾಣಲು ಸಾಧ್ಯವಾಗಲಿಲ್ಲವೆಂದು ನಾನು ಕೇಳಿದ್ದೇನೆ. ॥ ೨೩ ॥ ಪ್ರಾರಬ್ಧದಿಂದ ದೊರೆತುದರಲ್ಲಿ ಸಂತುಷ್ಟನಾಗಿರುವವನು ತನ್ನ ಜೀವನವನ್ನು ಸುಖವಾಗಿ ಕಳೆಯುತ್ತಾನೆ. ಆದರೆ ಜಿತೇಂದ್ರಿಯನಲ್ಲದವನು ಮೂರುಲೋಕದ ರಾಜ್ಯ ಸಿಕ್ಕಿದರೂ ದುಃಖಿಯಾಗಿಯೇ ಇರುತ್ತಾನೆ. ಏಕೆಂದರೆ, ಅವನ ಹೃದಯದಲ್ಲಿ ಅಸಂತೋಷದ ಅಗ್ನಿಯು ಧಗ-ಧಗಿಸುತ್ತಿರುತ್ತದೆ. ॥ ೨೪ ॥ ಧನ ಮತ್ತು ಭೋಗಗಳಿಂದ ಸಂತೋಷಪಡದಿರುವುದೇ ಜೀವಿಯು ಜನ್ಮ-ಮರಣದ ಚಕ್ರದಲ್ಲಿ ಬೀಳುವುದಾಗಿದೆ. ದೈವೇಚ್ಛೆಯಿಂದ ದೊರಕುದರಲ್ಲಿ ಸಂತೋಷ ಪಡುವುದೇ ಮುಕ್ತಿಗೆ ಕಾರಣವಾಗುತ್ತದೆ. ॥ ೨೫ ॥ ತಾನಾಗಿ ದೊರೆತ ವಸ್ತುವಿನಿಂದಲೇ ಸಂತುಷ್ಟನಾಗುವ ಬ್ರಾಹ್ಮಣನ ತೇಜವು ವೃದ್ಧಿಯಾಗುತ್ತದೆ. ಅವನು ಅತೃಪ್ತನಾದರೆ ಅವನ ತೇಜವು – ನೀರಿನಿಂದ ಅಗ್ನಿಯು ಶಾಂತವಾಗುವಂತೆ ಇಲ್ಲವಾಗುತ್ತದೆ. ॥ ೨೬ ॥ ಕೇಳಿದ ವಸ್ತುವನ್ನು ಕೊಡುವುದರಲ್ಲಿ ನೀನು ಶಿರೋಮಣಿಯಾಗಿರುವೆ. ಇದರಲ್ಲಿ ಸಂದೇಹವೇ ಇಲ್ಲ. ಅದಕ್ಕಾಗಿ ನಾನು ನಿನ್ನಲ್ಲಿ ಕೇವಲ ಮೂರು ಹೆಜ್ಜೆ ಭೂಮಿಯನ್ನು ಬೇಡುತ್ತಿದ್ದೇನೆ. ಇಷ್ಟರಿಂದಲೇ ನನ್ನ ಕೆಲಸ ಆಗಿಹೋದೀತು. ಅವಶ್ಯಕತೆ ಇದ್ದಷ್ಟೇ ಧನವನ್ನು ಸಂಗ್ರಹಿಸಬೇಕು. ॥ ೨೭ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಭಗವಂತನು ಹೀಗೆ ಹೇಳಿದಾಗ ಬಲಿಯು ನಗುತ್ತಾ – 'ಒಳ್ಳೆಯದು, ನಿನಗೆ ಇಷ್ಟವಿರುವಷ್ಟೇ ಪಡೆದುಕೋ.' ಹೀಗೆ ಹೇಳಿ ಭಗವಾನ್ ವಾಮನನಿಗೆ ಮೂರು ಹೆಜ್ಜೆ ಭೂಮಿಯನ್ನು ದಾನಮಾಡುವ ಸಂಕಲ್ಪಕ್ಕಾಗಿ ನೀರಿನ ಪಾತ್ರೆಯನ್ನು ಎತ್ತಿಕೊಂಡನು. ॥ ೨೮ ॥ ಶುಕ್ರಾಚಾರ್ಯರು ಎಲ್ಲವನ್ನೂ ಬಲ್ಲವರಾಗಿದ್ದರು. ಭಗವಂತನ ಈ ಲೀಲೆಯೂ ಕೂಡ ಅವರಿಗೆ ತಿಳಿದಿತ್ತು. ಅವರು ರಾಜಾಬಲಿಗೆ ಭೂಮಿಯನ್ನು ಕೊಡಲು ಉದ್ಯುಕ್ತನಾದುದನ್ನು ಕಂಡು ಅವನಲ್ಲಿ ಹೇಳಿದರು – ॥ ೨೯ ॥

ಶುಕ್ರಾಚಾರ್ಯರು ಹೇಳುತ್ತಾರೆ – ವಿರೋಚನಪುತ್ರನಾದ ಬಲಿಯೇ! ಇವನು ಸ್ವತಃ ಅವಿನಾಶಿ ಭಗವಂತನಾಗಿದ್ದಾನೆ. ದೇವತೆಗಳ ಕಾರ್ಯವನ್ನು ಸಾಧಿಸಿಕೊಡಲಿಕ್ಕಾಗಿ ಕಶ್ಯಪರ ಪತ್ನೀ ಅದಿತಿಯ ಗರ್ಭದಿಂದ ಅವತರಿಸಿರುವನು. ॥ ೩೦ ॥

ಪ್ರತಿಶ್ರುತಂ ತ್ವಯೈತಸ್ಮೈ ಯದನರ್ಥಮಜಾನತಾ ।
ನ ಸಾಧು ಮನ್ಯೇ ದೈತ್ಯಾನಾಂ ಮಹಾನುಪಗತೋಽನಯಃ ॥ ೩೦ ॥

ಏಷ ತೇ ಸ್ಥಾನಮೈಶ್ವರ್ಯಂ ಶ್ರಿಯಂ ತೇಜೋ ಯಶಃ ಶ್ರುತಮ್ ।
ದಾಸ್ಯತ್ಯಾಚ್ಛಿದ್ಯ ಶಕ್ರಾಯ ಮಾಯಾಮಾಣವಕೋ ಹರಿಃ ॥ ೩೧ ॥

ತ್ರಿಭಿಃ ಕ್ರಮೈರಿಮಾಂಲ್ಲೋಕಾನ್ವಿಶ್ವಕಾಯಃ ಕ್ರಮಿಷ್ಯತಿ ।
ಸರ್ವಸ್ವಂ ವಿಷ್ಣವೇ ದತ್ತ್ವಾ ಮೂಢ ವರ್ತಿಷ್ಯಸೇ ಕಥಮ್ ॥ ೩೨ ॥

ಕ್ರಮತೋ ಗಾಂ ಪದೈಕೇನ ದ್ವಿತೀಯೇನ ದಿವಂ ವಿಭೋಃ ।
ಖಂ ಚ ಕಾಯೇನ ಮಹತಾ ತಾರ್ತೀಯಸ್ಯ ಕುತೋ ಗತಿಃ ॥ ೩೩ ॥

ನಿಷ್ಠಾಂ ತೇ ನರಕೇ ಮನ್ಯೇ ಹ್ಯಪ್ರದಾತುಃ ಪ್ರತಿಶ್ರುತಮ್ ।
ಪ್ರತಿಶ್ರುತಸ್ಯ ಯೋಽನೀಶಃ ಪ್ರತಿಪಾದಯಿತುಂ ಭವಾನ್ ॥ ೩೪ ॥

ನ ತದ್ದಾನಂ ಪ್ರಶಂಸಂತಿ ಯೇನ ವೃತ್ತಿರ್ವಿಪದ್ಯತೇ ।
ದಾನಂ ಯಜ್ಞಸ್ತಪಃ ಕರ್ಮ ಲೋಕೇ ವೃತ್ತಿಮತೋ ಯತಃ ॥ ೩೫ ॥

ಧರ್ಮಾಯ ಯಶಸೇಽರ್ಥಾಯ ಕಾಮಾಯ ಸ್ವಜನಾಯ ಚ ।
ಪಂಚಧಾ ವಿಭಜನ್ವಿತ್ತಮಿಹಾಮುತ್ರ ಚ ಮೋದತೇ ॥ ೩೬ ॥

ಅತ್ರಾಪಿ ಬಹ್ವೃಚೈರ್ಗೀತಂ ಶೃಣು ಮೇಽಸುರಸತ್ತಮ ।
ಸತ್ಯಮೋಮಿತಿ ಯತ್ಪ್ರೋಕ್ತಂ ಯನ್ನೇತ್ಯಾಹಾನೃತಂ ಹಿ ತತ್ ॥ ೩೭ ॥

ಸತ್ಯಂ ಪುಷ್ಪಫಲಂ ವಿದ್ಯಾದಾತ್ಮವೃಕ್ಷಸ್ಯ ಗೀಯತೇ ।
ವೃಕ್ಷೇಽಜೀವತಿ ತನ್ನ ಸ್ಯಾದನೃತಂ ಮೂಲಮಾತ್ಮನಃ ॥ ೩೮ ॥

ಇವನು ತನ್ನೆಲ್ಲವನ್ನು ಕಸಿದುಕೊಳ್ಳುವನು ಎಂಬುದನ್ನು ನೀನು ತಿಳಿಯೆ. ಇವನಿಗೆ ದಾನವನ್ನು ಕೊಡುವ ಪ್ರತಿಜ್ಞೆಯನ್ನು ಮಾಡಿರುವೆಯಲ್ಲ, ಇದರಿಂದ ಭಾರೀ ಅನರ್ಥವಾದೀತು. ಇದರಿಂದ ಸಕಲ ದೈತ್ಯರಿಗೆ ಅಪಾರ ವಿಪತ್ತು ಸಂಭವಿಸುತ್ತದೆ. ಇದು ಸರಿಯೆಂದು ನನಗೆ ಅನಿಸುವುದಿಲ್ಲ. ॥ ೩೦ ॥ ಸ್ವಯಂ ಭಗವಂತನೇ ತನ್ನ ಯೋಗಮಾಯೆಯಿಂದ ಹೀಗೆ ಬ್ರಹ್ಮಚಾರಿಯಾಗಿ ನಿನ್ನ ಮುಂದೆ ಕುಳಿತಿರುವನು. ಇವನು ನಿನ್ನ ರಾಜ್ಯ, ಐಶ್ವರ್ಯ, ಲಕ್ಷ್ಮೀ, ತೇಜ ಮತ್ತು ವಿಶ್ವವಿಖ್ಯಾತ ಕೀರ್ತಿ – ಇವೆಲ್ಲವನ್ನೂ ನಿನ್ನಿಂದ ಕಸಿದುಕೊಂಡು ಒಪ್ಪಿಸುವನು. ॥ ೩೧ ॥ ಇವನು ವಿಶ್ವರೂಪನಾಗಿದ್ದಾನೆ. ಮೂರು ಹೆಜ್ಜೆಗಳಿಂದ ಇವನು ಎಲ್ಲ ಲೋಕಗಳನ್ನು ಅಳೆದುಕೊಂಡಾನು. ಮೂರ್ಖ! ತನ್ನೆಲ್ಲವನ್ನೂ ನೀನು ವಿಷ್ಣುವಿಗೆ ಕೊಟ್ಟುಬಿಟ್ಟರೆ ನಿನ್ನ ಜೀವನ ನಿರ್ವಾಹ ಹೇಗೆ ತಾನೇ ನಡೆದೀತು? ॥ ೩೨ ॥ ಈ ವಿಶ್ವವ್ಯಾಪಕ ಭಗವಂತನು ಒಂದು ಹೆಜ್ಜೆಯಿಂದ ಪೃಥಿವಿಯನ್ನೂ, ಎರಡನೆ ಹೆಜ್ಜೆಯಿಂದ ಸ್ವರ್ಗವನ್ನೂ ಅಳೆದುಕೊಂಡಾನು. ಇವನ ವಿಶಾಲ ಶರೀರದಿಂದ ಆಕಾಶ ತುಂಬಿಹೋದೀತು. ಆಗ ಇವನು ಮೂರನೆಯ ಹೆಜ್ಜೆಯನ್ನು ಎಲ್ಲಿಡುವನು? ॥ ೩೩ ॥ ನೀನು ಅದನ್ನು ಪೂರ್ಣಗೊಳಿಸಲಾರೆ. ಇಂತಹ ಸ್ಥಿತಿಯಲ್ಲಿ ಪ್ರತಿಜ್ಞೆಮಾಡಿ ಪೂರ್ಣಗೊಳಿಸದೇ ಇರುವುದರಿಂದ ನಿನಗೆ ನರಕಕ್ಕೆ ಹೋಗಬೇಕಾದೀತು ಎಂದು ನಾನು ತಿಳಿಯುತ್ತೇನೆ. ಏಕೆಂದರೆ ನೀನು ಮಾಡಿರುವ ಪ್ರತಿಜ್ಞೆಯನ್ನು ಪೂರ್ಣಗೊಳಿಸಲು ಸರ್ವಥಾ ಅಸಮರ್ಥನಾಗುವೆ. ॥ ೩೪ ॥ ಯಾವ ದಾನಮಾಡಿದ ನಂತರ ಜೀವನ ನಿರ್ವಹಣೆಗೂ ಏನೂ ಉಳಿಯುವುದಿಲ್ಲವೋ, ಆ ದಾನವನ್ನು ವಿದ್ವಾಂಸರು ಪ್ರಶಂಸಿಸುವುದಿಲ್ಲ. ಜೀವನನಿರ್ವಾಹವು ಸರಿಯಾಗಿ ನಡೆಸುವವನೇ ಜಗತ್ತಿನಲ್ಲಿ ದಾನ, ಯಜ್ಞ, ತಪಸ್ಸು, ಪರೋಪಕಾರದ ಕರ್ಮ ಇವುಗಳನ್ನು ಮಾಡಬಲ್ಲನು. ॥ ೩೫ ॥ ತನ್ನ ಧನದಲ್ಲಿ ಸ್ವಲ್ಪ ಧರ್ಮಕ್ಕಾಗಿ, ಸ್ವಲ್ಪ ಕೀರ್ತಿಗಾಗಿ, ಸ್ವಲ್ಪ ಧನದ ಅಭಿವೃದ್ಧಿಗಾಗಿ, ಸ್ವಲ್ಪ ಭೋಗಗಳಿಗಾಗಿ, ಸ್ವಲ್ಪ ಸ್ವಜನರಿಗಾಗಿ ಹೀಗೆ ಐದು ಭಾಗಗಳಲ್ಲಿ ಹಂಚುವ ಮನುಷ್ಯನೇ ಈ ಲೋಕ ಮತ್ತು ಪರಲೋಕದಲ್ಲಿ ಸುಖವಾಗಿರುತ್ತಾನೆ. ॥ ೩೬ ॥ ಅಸುರಶಿರೋಮಣಿಯೇ! ತನ್ನ ಪ್ರತಿಜ್ಞೆಯು ಭಂಗವಾದೀತೆಂಬ ಚಿಂತೆ ನಿನಗಿದ್ದರೆ ನಾನು ಈ ವಿಷಯದಲ್ಲಿ ನಿನಗೆ ಸತ್ಯಾಸತ್ಯಗಳ ಕುರಿತು ಋಗ್ವೇದದಲ್ಲಿ ಹೇಳಿರುವುದನ್ನು ತಿಳಿಸುವೆನು ಕೇಳು. ಯಾರಿಗಾದರೂ ಏನಾದರೂ ಕೊಡುತ್ತೇನೆ ಎಂದು ಹೇಳುವುದು ಸತ್ಯವಾಗಿದೆ ಮತ್ತು ಅಸ್ವೀಕಾರ ಮಾಡುವುದು – ಕೊಡುವುದಿಲ್ಲವೆಂದು ಹೇಳುವುದು ಅಸತ್ಯವಾಗಿದೆ. ॥ ೩೭ ॥ ಈ ಶರೀರವು ಒಂದು ವೃಕ್ಷವಾಗಿದೆ. ಸತ್ಯವು ಇದರ ಫಲ-ಪುಷ್ಪವಾಗಿದೆ. ಆದರೆ ವೃಕ್ಷವೇ ಇಲ್ಲದಿದ್ದರೆ (ದೇಹವೇ ಇಲ್ಲದಿದ್ದರೆ) ಫಲ-ಪುಷ್ಪಗಳು ಹೇಗೆ ಇರಬಲ್ಲವು? ಏಕೆಂದರೆ, ಇಲ್ಲವೆಂದು ಹೇಳುವುದು, ತನ್ನ ವಸ್ತುವನ್ನು ಬೇರೆಯವರಿಗೆ ಕೊಡದಿರುವುದು, ಇನ್ನೊಂದು ಅರ್ಥದಲ್ಲಿ ತನ್ನ ಸಂಗ್ರಹವನ್ನು ಉಳಿಸಿಕೊಳ್ಳುವುದು – ಇದೇ ಶರೀರ ವೃಕ್ಷದ ಮೂಲವಾಗಿದೆ. ॥ ೩೮ ॥ ಬೇರುಗಳು ಕತ್ತರಿಸಿದಾಗ ಮರವು ಒಣಗಿಹೋಗಿ ಕೆಲವೇ ದಿನಗಳಲ್ಲಿ ಬಿದ್ದುಹೋಗುವಂತೆಯೇ ಧನವನ್ನು ಕೊಡಲು ಸ್ವೀಕರಿಸಿದರೆ ಈ ಜೀವನವು

ತದ್ಯಥಾ ವೃಕ್ಷ ಉನ್ಮೂಲಃ ಶುಷ್ಯತ್ಯುದ್ವರ್ತತೇಽಚಿರಾತ್ ।
ಏವಂ ನಷ್ಟಾನೃತಃ ಸದ್ಯ ಆತ್ಮಾ ಶುಷ್ಯೇನ್ನ ಸಂಶಯಃ ॥ ೪೦ ॥

ಪರಾಗ್ರಿಕ್ತಮಪೂರ್ಣಂ ವಾ ಅಕ್ಷರಂ ಯತ್ತದೋಮಿತಿ ।
ಯತ್ಕಿಂಚಿದೋಮಿತಿ ಬ್ರೂಯಾತ್ತೇನ ರಿಚ್ಯೇತ ವೈ ಪುಮಾನ್ ।
ಭಿಕ್ಷವೇ ಸರ್ವಮೋಂಕುರ್ವನ್ನಾಲಂ ಕಾಮೇನ ಚಾತ್ಮನೇ ॥ ೪೧ ॥

ಅಥೈತತ್ಪೂರ್ಣಮಭ್ಯಾತ್ಮಂ ಯಚ್ಚ ನೇತ್ಯನೃತಂ ವಚಃ ।
ಸರ್ವಂ ನೇತ್ಯನೃತಂ ಬ್ರೂಯಾತ್ಸ ದುಷ್ಕೀರ್ತಿಃ ಶ್ವಸನ್ಮೃತಃ ॥ ೪೨ ॥

ಸ್ತ್ರೀಷು ನರ್ಮವಿವಾಹೇ ಚ ವೃತ್ತ್ಯರ್ಥೇ ಪ್ರಾಣಸಂಕಟೇ ।
ಗೋಬ್ರಾಹ್ಮಣಾರ್ಥೇ ಹಿಂಸಾಯಾಂ ನಾನೃತಂ ಸ್ಯಾಜ್ಜುಗುಪ್ಸಿತಮ್ ॥ ೪೩ ॥

ಒಣಗಿ ಹೋಗುವುದರಲ್ಲಿ ಸಂದೇಹವೇ ಇಲ್ಲ ॥ ೪೦ ॥ 'ನಾನು ಕೊಡುವೆನು' ಈ ವಾಕ್ಯವೇ ಧನವನ್ನು ದೂರಕಳುಹುತ್ತದೆ. ಅದಕ್ಕಾಗಿ ಇದನ್ನು ಉಚ್ಚರಿಸುವುದೇ ಅಪೂರ್ಣ ಅರ್ಥಾತ್ – ಧನವನ್ನು ಖಾಲಿಯಾಗಿಸುವುದಾಗಿದೆ. 'ನಾನು ಕೊಡುತ್ತೇನೆ' ಎಂದು ಹೇಳುವುದೇ ಧನದಿಂದ ಬರಿದಾಗುವ ಕಾರಣವಾಗಿದೆ. ಯಾರು ಯಾಚಕನಿಗೆ ಎಲ್ಲವನ್ನು ಕೊಡಲು ಸ್ವೀಕರಿಸುವನೋ ಅವನು ತನಗಾಗಿ ಭೋಗದ ಯಾವ ಸಾಮಗ್ರಿಯನ್ನು ಇರಿಸಲಾರನು. ॥ ೪೧ ॥ ಇದಕ್ಕೆ ವಿರುದ್ಧವಾಗಿ 'ನಾನು ಕೊಡುವುದಿಲ್ಲ' ಈ ಅಸ್ವೀಕಾರಾತ್ಮಕ ಅಸತ್ಯವು ತನ್ನ ಧನವನ್ನು ಸುರಕ್ಷಿತವಾಗಿಡುವುದು ಹಾಗೂ ಪೂರ್ಣಗೊಳಿಸುವುದಾಗಿದೆ. ಆದರೆ ಎಲ್ಲ ಸಮಯದಲ್ಲಿ ಹೀಗೆ ಮಾಡಬಾರದು. ಇದನ್ನು ಎಲ್ಲರೊಂದಿಗೆ, ಎಲ್ಲ ವಸ್ತುಗಳಿಗಾಗಿ ಹೇಳಬಾರದು. ಇದರಿಂದ ಅಪಕೀರ್ತಿಯು ಉಂಟಾಗುತ್ತದೆ. ಅವನು ಜೀವಿಸಿದ್ದರೂ ಸತ್ತಂತೆಯೇ ಆಗಿದ್ದಾನೆ. ॥ ೪೨ ॥ ಸ್ತ್ರೀಯರನ್ನು ಪ್ರಸನ್ನಗೊಳಿಸಲು, ಪರಿಹಾಸ್ಯಮಾಡುವಾಗ, ಮದುವೆಯ ವಿಷಯದಲ್ಲಿ, ತನ್ನ ಜೀವನದ ರಕ್ಷಣೆಗಾಗಿ, ಪ್ರಾಣಸಂಕಟವು ಸನ್ನಿಹಿತವಾಗಿರುವಾಗ, ಗೋ, ಬ್ರಾಹ್ಮಣರ ಹಿತಾರ್ಥವಾಗಿ ಅಥವಾ ಯಾರನ್ನಾದರೂ ಬದುಕಿಸಲಿಕ್ಕಾಗಿ ಸುಳ್ಳನ್ನೂ ಹೇಳಬೇಕಾಗಿ ಬಂದರೂ ಅದು ನಿಂದನೀಯವಲ್ಲ ॥ ೪೩ ॥

ಹತ್ತೊಂಬತ್ತನೆಯ ಅಧ್ಯಾಯವು ಮುಗಿಯಿತು. ॥ ೧೯ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಅಷ್ಟಮ ಸ್ಕಂಧೇ
ವಾಮನಪ್ರಾದುರ್ಭಾವೇ ಏಕೋನವಿಂಶೋಽಧ್ಯಾಯಃ ॥ ೧೯ ॥

ಇಪ್ಪತ್ತನೆಯ ಅಧ್ಯಾಯ

ಭಗವಾನ್ ವಾಮನನು ವಿರಾಟ್‌ಸ್ವರೂಪನಾಗಿ ಎರಡೇ ಹೆಜ್ಜೆಗಳಿಂದ ಪೃಥಿವೀ ಮತ್ತು ಸ್ವರ್ಗವನ್ನು ಅಳೆದುದು

ಶ್ರೀಶುಕ ಉವಾಚ

ಬಲಿರೇವಂ ಗೃಹಪತಿಃ ಕುಲಾಚಾರ್ಯೇಣ ಭಾಷಿತಃ ।
ತೂಷ್ಣೀಂ ಭೂತ್ವಾ ಕ್ಷಣಂ ರಾಜನ್ನುವಾಚಾವಹಿತೋ ಗುರುಮ್ ॥ ೧ ॥

ಬಲಿರುವಾಚ

ಸತ್ಯಂ ಭಗವತಾ ಪ್ರೋಕ್ತಂ ಧರ್ಮೋಽಯಂ ಗೃಹಮೇಧಿನಾಮ್ ।
ಅರ್ಥಂ ಕಾಮಂ ಯಶೋ ವೃತ್ತಿಂ ಯೋ ನ ಬಾಧೇತ ಕರ್ಹಿಚಿತ್ ॥ ೨ ॥

ಸ ಚಾಹಂ ವಿತ್ತಲೋಭೇನ ಪ್ರತ್ಯಾಚಕ್ಷೇ ಕಥಂ ದ್ವಿಜಮ್ ।
ಪ್ರತಿಶ್ರುತ್ಯ ದದಾಮೀತಿ ಪ್ರಾಹ್ಲಾದಿಃ ಕಿತವೋ ಯಥಾ ॥ ೩ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಎಲೈ ರಾಜೇಂದ್ರಾ! ಕುಲಗುರುಗಳಾದ ಶುಕ್ರಾಚಾರ್ಯರು ಹೀಗೆ ಹೇಳಲು ಆದರ್ಶ ಗೃಹಸ್ಥನಾದ ಬಲಿಯು ಸ್ವಲ್ಪಹೊತ್ತು ಸುಮ್ಮನಿದ್ದು, ಅನಂತರ ವಿನಮ್ರನಾಗಿ ಶುಕ್ರಾಚಾರ್ಯರ ಬಳಿಯಲ್ಲಿ ಹೀಗೆಂದನು– ॥ ೧ ॥

ಬಲಿರಾಜನು ಹೇಳುತ್ತಾನೆ – ಪೂಜ್ಯರೇ! ಗೃಹಸ್ಥಾಶ್ರಮದಲ್ಲಿ ಇರುವವರಿಗೆ ಅರ್ಥ, ಕಾಮ, ಯಶಸ್ಸು ಮತ್ತು ಜೀವನನಿರ್ವಹಣೆಯಲ್ಲಿ ಯಾವುದೇ ಬಾಧೆ ಉಂಟಾಗದಿರುವುದೇ ಧರ್ಮವಾಗಿದೆ ಎಂದು ನೀವು ಹೇಳಿರುವುದು ಸತ್ಯವಾಗಿದೆ. ॥ ೨ ॥ ಆದರೆ ಗುರುಗಳೇ! ನಾನು ಪ್ರಹ್ಲಾದನ ಮೊಮ್ಮಗನಾಗಿದ್ದೇನೆ. ಒಮ್ಮೆ ಕೊಡುವೆನೆಂದು ಪ್ರತಿಜ್ಞೆಮಾಡಿಬಿಟ್ಟಿರುವೆನು. ಆದ್ದರಿಂದ ಈಗ ನಾನು ಧನಲೋಭದಿಂದ ಮೋಸಗಾರನಂತೆ 'ನಾನು ಕೊಡುವುದಿಲ್ಲ' ಎಂದು ಬ್ರಾಹ್ಮಣನಲ್ಲಿ ಹೇಗೆ ಹೇಳಲಿ? ॥ ೩ ॥

ನ ಹ್ಯಸತ್ಯಾತ್ಪರೋಽಧರ್ಮ ಇತಿ ಹೋವಾಚ ಭೂರಿಯಮ್ ।
ಸರ್ವಂ ಸೋಢುಮಲಂ ಮನ್ಯೇ ಋತೇಽಲೀಕಪರಂ ನರಮ್ ॥ ೪ ॥

ನಾಹಂ ಬಿಭೇಮಿ ನಿರಯಾನ್ನಾಧನ್ಯಾದಸುಖಾರ್ಣವಾತ್ ।
ನ ಸ್ಥಾನಚ್ಯವನಾನ್ಮೃತ್ಯೋರ್ಯಥಾ ವಿಪ್ರಪ್ರಲಂಭನಾತ್ ॥ ೫ ॥

ಯದ್ಯದ್ಧಾಸ್ಯತಿ ಲೋಕೇಽಸ್ಮಿನ್ಸಂಪರೇತಂ ಧನಾದಿಕಮ್ ।
ತಸ್ಯ ತ್ಯಾಗೇ ನಿಮಿತ್ತಂ ಕಿಂ ವಿಪ್ರಸ್ತುಷ್ಯೇನ್ನ ತೇನ ಚೇತ್ ॥ ೬ ॥

ಶ್ರೇಯಃ ಕುರ್ವಂತಿ ಭೂತಾನಾಂ ಸಾಧವೋ ದುಸ್ತ್ಯಜಾಸುಭಿಃ ।
ದಧ್ಯಙ್‌ಶಿಬಿಪ್ರಭೃತಯಃ ಕೋ ವಿಕಲ್ಪೋ ಧರಾದಿಷು ॥ ೭ ॥

ಯೈರಿಯಂ ಬುಭುಜೇ ಬ್ರಹ್ಮನ್‌ದೈತ್ಯೇಂದ್ರೈರನಿವರ್ತಿಭಿಃ ।
ತೇಷಾಂ ಕಾಲೋಽಗ್ರಸೀಲ್ಲೋಕಾನ್ನ ಯಶೋಽಧಿಗತಂ ಭುವಿ ॥ ೮ ॥

ಸುಲಭಾ ಯುಧಿ ವಿಪ್ರರ್ಷೇ ಹ್ಯನಿವೃತ್ತಾಸ್ತನುತ್ಯಜಃ ।
ನ ತಥಾ ತೀರ್ಥ ಆಯಾತೇ ಶ್ರದ್ಧಯಾ ಯೇ ಧನತ್ಯಜಃ ॥ ೯ ॥

ಮನಸ್ವಿನಃ ಕಾರುಣಿಕಸ್ಯ ಶೋಭನಂ
ಯದರ್ಥಿಕಾಮೋಪನಯೇನ ದುರ್ಗತಿಃ ।
ಕುತಃ ಪುನರ್ಬ್ರಹ್ಮವಿದಾಂ ಭವಾದೃಶಾಂ
ತತೋ ವಟೋರಸ್ಯ ದದಾಮಿ ವಾಂಛಿತಮ್ ॥ ೧೦ ॥

ಯಜಂತಿ ಯಜ್ಞಕ್ರತುಭಿರ್ಯಮಾದೃತಾ
ಭವಂತ ಆಮ್ನಾಯವಿಧಾನಕೋವಿದಾಃ ।
ಸ ಏವ ವಿಷ್ಣುರ್ವರದೋಽಸ್ತು ವಾ ಪರೋ
ದಾಸ್ಯಾಮ್ಯಮುಷ್ಮೈ ಕ್ಷಿತಿಮೀಪ್ಸಿತಾಂ ಮುನೇ ॥ ೧೧ ॥

ಯದ್ಯಪ್ಯಸಾವಧರ್ಮೇಣ ಮಾಂ ಬಧ್ನೀಯಾದನಾಗಸಮ್ ।
ತಥಾಪ್ಯೇನಂ ನ ಹಿಂಸಿಷ್ಯೇ ಭೀತಂ ಬ್ರಹ್ಮತನುಂ ರಿಪುಮ್ ॥ ೧೨ ॥

ಏಷ ವಾ ಉತ್ತಮಶ್ಲೋಕೋ ನ ಜಿಹಾಸತಿ ಯದ್ಯಶಃ ।
ಹತ್ವಾ ಮೈನಾಂ ಹರೇದ್ಯುದ್ಧೇ ಶಯೀತ ನಿಹತೋ ಮಯಾ ॥ ೧೩ ॥

'ಅಸತ್ಯಕ್ಕಿಂತ ಮಿಗಿಲಾದ ಅಧರ್ಮವಿಲ್ಲ. ನಾನು ಎಲ್ಲವನ್ನೂ ಸಹಿಸುವುದರಲ್ಲಿ ಸಮರ್ಥಳಿದ್ದೇನೆ. ಆದರೆ ಸುಳ್ಳುಗಾರನ ಭಾರವನ್ನು ನನ್ನಿಂದ ಸಹಿಸಲಾಗುವುದಿಲ್ಲ' ಎಂದು ಭೂದೇವಿಯು ಹೇಳಿರುವಳು. ॥ ೪ ॥ ಬ್ರಾಹ್ಮಣನಲ್ಲಿ ಪ್ರತಿಜ್ಞೆಮಾಡಿ ಅವನಿಗೆ ಮೋಸ ಮಾಡುವುದಕ್ಕೆ ಹೆದರುವಷ್ಟು ನಾನು ನರಕದಿಂದ, ದರಿದ್ರತೆಯಿಂದ, ದುಃಖದ ಸಮುದ್ರದಿಂದ, ತನ್ನ ರಾಜ್ಯ ನಾಶದಿಂದ ಮತ್ತು ಸಾವಿನಿಂದಲೂ ಹೆದರುವುದಿಲ್ಲ. ॥ ೫ ॥ ಈ ಜಗತ್ತಿನಲ್ಲಿ ಸತ್ತಬಳಿಕ ಧನ-ಕನಕ ಮೊದಲಾದ ವಸ್ತುಗಳು ಇಲ್ಲೇ ಬಿಟ್ಟುಹೋಗುವುವು. ಅವುಗಳ ಮೂಲಕ ಬ್ರಾಹ್ಮಣರನ್ನು ದಾನಾದಿಗಳಿಂದ ಸಂತೋಷಪಡಿಸದಿದ್ದರೆ ಅದರ ತ್ಯಾಗದಿಂದ ಏನು ಲಾಭ? ಅದೆಂತಹ ಸಂಪತ್ತು? ॥ ೬ ॥ ದಧೀಚಿ, ಶಿಬಿ ಮೊದಲಾದ ಮಹಾಪುರುಷರು ತಮ್ಮ ಪರಮಪ್ರಿಯ ಪ್ರಾಣಗಳನ್ನೂ ತ್ಯಜಿಸಲು ಅತಿಕಷ್ಟಕರವಾದ ಪ್ರಾಣಗಳನ್ನೂ ದಾನಮಾಡಿ ಪ್ರಾಣಿಗಳ ಒಳಿತನ್ನು ಮಾಡಿರುವರು. ಹಾಗಿರುವಾಗ ಭೂಮಿಯೇ ಮುಂತಾದ ವಸ್ತುಗಳನ್ನು ಕೊಡುವುದರಲ್ಲಿ ಯೋಚಿಸುವ ಆವಶ್ಯಕತೆ ಏನಿದೆ? ॥ ೭ ॥ ಬ್ರಾಹ್ಮಣೋತ್ತಮರೇ! ಹಿಂದಿನ ಯುಗದಲ್ಲಿ ದೊಡ್ಡ-ದೊಡ್ಡ ದೈತ್ಯರಾಜರು ಈ ಪೃಥಿವಿಯನ್ನು ಉಪಭೋಗಿಸಿದರು. ಭೂಮಿಯಲ್ಲಿ ಅವರನ್ನು ಎದುರಿಸುವವರು ಯಾರೂ ಇರಲಿಲ್ಲ. ಅವರ ಲೋಕ-ಪರಲೋಕಗಳನ್ನು ಕಾಲವು ನುಂಗಿಹಾಕಿತು. ಆದರೆ ಅವರ ಕೀರ್ತಿಯು ಈಗಲೂ ಭೂಮಂಡಲದಲ್ಲಿ ಹಾಗೆಯೇ ಇದೆ. ॥ ೮ ॥ ಗುರುಗಳೇ! ಯುದ್ಧದಲ್ಲಿ ಬೆನ್ನುತೋರದೆ ತಮ್ಮ ಪ್ರಾಣಗಳನ್ನು ಬಲಿದಾನ ಮಾಡಿದ ಅನೇಕ ಜನರು ಈ ಜಗತ್ತಿನಲ್ಲಿ ಇದ್ದರು. ಆದರೆ ಸತ್ಪಾತ್ರನು ದೊರಕಿದಾಗ ಶ್ರದ್ಧೆಯಿಂದ ಧನವನ್ನು ದಾನಮಾಡುವವರು ದುರ್ಲಭರಾಗಿದ್ದಾರೆ. ॥ ೯ ॥ ಗುರುದೇವಾ! ಉದಾರವೂ, ಕರುಣಾಶೀಲನೂ ಆದ ಮನುಷ್ಯನು - ಸಾಮಾನ್ಯ ಯಾಚಕನ ಕಾಮನೆಯನ್ನು ಪೂರ್ಣಗೊಳಿಸಿ ದುರ್ಗತಿಯನ್ನು ಅನುಭವಿಸಿದರೂ, ಆ ದುರ್ಗತಿಯೂ ಕೂಡ ಅವನಿಗೆ ಶೋಭನೀಯವಾಗಿದೆ. ಹಾಗಿರುವಾಗ ನಿಮ್ಮಂತಹ ಬ್ರಹ್ಮವಿದ್ ಪುರುಷರಿಗೆ ದಾನಮಾಡುವುದರಿಂದ ದುಃಖವು ಪ್ರಾಪ್ತವಾದರೆ ಅದಕ್ಕೆ ಏನು ಹೇಳಬೇಕು. ಅದಕ್ಕಾಗಿ ನಾನು ಈ ಬ್ರಹ್ಮಚಾರಿಯು ತಮ್ಮಂತೆಯೇ ಬ್ರಹ್ಮವೇತ್ತಾ ಆಗಿದ್ದಾನೆ. ಆದ್ದರಿಂದ ಇವನ ಇಷ್ಟಾರ್ಥವನ್ನು ಖಂಡಿತವಾಗಿ ಪೂರ್ಣಗೊಳಿಸುವೆನು. ॥ ೧೦ ॥ ಗುರುಗಳೇ! ವೇದವಿಧಿಗಳನ್ನು ತಿಳಿದವರಾದ ನೀವು ಆತ್ಮಾದರದಿಂದ ಯಾವನನ್ನು ಯಜ್ಞ-ಯಾಗಾದಿಗಳ ಮೂಲಕ ಆರಾಧಿಸುವಿರೋ, ಅಂತಹ ವರದನಾದ ಮಹಾವಿಷ್ಣುವೇ ಈ ರೂಪದಿಂದ ಬಂದಿರಲೀ ಅಥವಾ ಬೇರೆ ಯಾರೇ ಆಗಿರಲೀ ಇವನ ಇಚ್ಛೆಗನುಸಾರವಾಗಿ ನಾನು ಇವನಿಗೆ ಭೂಮಿಯನ್ನು ದಾನ ಮಾಡುವೆನು. ॥ ೧೧ ॥

ನಿರಪರಾಧಿಯಾದ ನನ್ನನ್ನು ಇವನು ಅಧರ್ಮದಿಂದ ಬಂಧಿಸಿದರೂ ನಾನು ಇವನ ಅನಿಷ್ಟವನ್ನು ಬಯಸುವುದಿಲ್ಲ, ಏಕೆಂದರೆ, ನನ್ನ ಶತ್ರುವಾಗಿದ್ದರೂ ಇವನು ಭಯಗೊಂಡು ಬ್ರಾಹ್ಮಣ ಶರೀರವನ್ನು ಧರಿಸಿರುವನು. ॥ ೧೨ ॥ ಇವನು ಪವಿತ್ರಕೀರ್ತಿಯಾದ ಭಗವಾನ್ ವಿಷ್ಣುವೇ ಆಗಿದ್ದರೆ ತನ್ನ ಕೀರ್ತಿಯನ್ನು ಕಳೆದು

ಶ್ರೀಶುಕ ಉವಾಚ

ಏವಮಶ್ರದ್ಧಿತಂ ಶಿಷ್ಯಮನಾದೇಶಕರಂ ಗುರುಃ ।
ಶಶಾಪ ದೈವಪ್ರಹಿತಃ ಸತ್ಯಸಂಧಂ ಮನಸ್ವಿನಮ್ ॥ ೧೪ ॥

ದೃಢಂ ಪಂಡಿತಮಾನ್ಯಜ್ಞಃ ಸ್ತಬ್ಧೋಽಸ್ಯಸ್ಮದುಪೇಕ್ಷಯಾ ।
ಮಚ್ಛಾಸನಾತಿಗೋ ಯಸ್ತ್ವಮಚಿರಾದ್ಭ್ರಶ್ಯಸೇ ಶ್ರಿಯಃ ॥ ೧೫ ॥

ಏವಂ ಶಪ್ತಃ ಸ್ವಗುರುಣಾ ಸತ್ಯಾನ್ನ ಚಲಿತೋ ಮಹಾನ್ ।
ವಾಮನಾಯ ದದಾವೇನಾಮರ್ಚಿತ್ವೋದಕಪೂರ್ವಕಮ್ ॥ ೧೬ ॥

ವಿಂಧ್ಯಾವಲಿಸ್ತದಾಽಽಗತ್ಯ ಪತ್ನೀ ಜಾಲಕಮಾಲಿನೀ ।
ಆನಿನ್ಯೇ ಕಲಶಂ ಹೈಮಮವನೇಜನ್ಯಪಾಂ ಭೃತಮ್ ॥ ೧೭ ॥

ಯಜಮಾನಃ ಸ್ವಯಂ ತಸ್ಯ ಶ್ರೀಮತ್ಪಾದಯುಗಂ ಮುದಾ ।
ಅವನಿಜ್ಯಾವಹನ್ಮೂರ್ಧ್ನಿ ತದಪೋ ವಿಶ್ವಪಾವನೀಃ ॥ ೧೮ ॥

ತದಾಽಸುರೇಂದ್ರಂ ದಿವಿ ದೇವತಾಗಣಾ
ಗಂಧರ್ವವಿದ್ಯಾಧರಸಿದ್ಧಚಾರಣಾಃ ।
ತತ್ಕರ್ಮ ಸರ್ವೇಽಪಿ ಗೃಣಂತ ಆರ್ಜವಂ
ಪ್ರಸೂನವರ್ಷೈರ್ವವೃಷುರ್ಮುದಾನ್ವಿತಾಃ ॥ ೧೯ ॥

ನೇದುರ್ಮುಹುರ್ದುಂದುಭಯಃ ಸಹಸ್ರಶೋ
ಗಂಧರ್ವಕಿಂಪೂರುಷಕಿನ್ನರಾ ಜಗುಃ ।
ಮನಸ್ವಿನಾನೇನ ಕೃತಂ ಸುದುಷ್ಕರಂ
ವಿದ್ವಾನದಾದ್ಯದ್ರಿಪವೇ ಜಗತ್ತ್ರಯಮ್ ॥ ೨೦ ॥

ತದ್ವಾಮನಂ ರೂಪಮವರ್ಧತಾದ್ಭುತಂ
ಹರೇರನಂತಸ್ಯ ಗುಣತ್ರಯಾತ್ಮಕಮ್ ।
ಭೂಃ ಖಂ ದಿಶೋ ದ್ಯೌರ್ವಿವರಾಃ ಪಯೋಧಯ-
ಸ್ತಿರ್ಯಙ್ನೃದೇವಾ ಋಷಯೋ ಯದಾಸತ ॥ ೨೧ ॥

ಕಾಯೇ ಬಲಿಸ್ತಸ್ಯ ಮಹಾವಿಭೂತೇಃ
ಸಹರ್ತ್ವಿಗಾಚಾರ್ಯಸದಸ್ಯ ಏತತ್ ।
ದದರ್ಶ ವಿಶ್ವಂ ತ್ರಿಗುಣಂ ಗುಣಾತ್ಮಕೇ
ಭೂತೇಂದ್ರಿಯಾರ್ಥಾಶಯಜೀವಯುಕ್ತಮ್ ॥ ೨೨ ॥

ಕೊಳ್ಳುವುದಿಲ್ಲ (ತಾನು ಬೇಡಿದ ವಸ್ತುವನ್ನು ಪಡೆದೇ ತೀರುವನು) ನನ್ನನ್ನು ಯುದ್ಧದಲ್ಲಿ ಕೊಂದಾದರೂ ಪೃಥ್ವಿಯನ್ನು ಪಡೆದುಕೊಳ್ಳಬಲ್ಲನು. ಒಂದೊಮ್ಮೆ ಇವನು ಬೇರೆ ಯಾರಾಗಿದ್ದರೆ ನನ್ನ ಬಾಣಗಳ ಹತಿಯಿಂದ ರಣದಲ್ಲಿ ಧರಾಶಾಯಿಯಾಗುವನು. ॥ ೧೩ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ! ಬಲಿಯ ಗುರುಗಳಾದ ಶುಕ್ರಾಚಾರ್ಯರು – ತನ್ನ ಶಿಷ್ಯನು ತನ್ನನ್ನು ಆದರಿಸದೆ ತನ್ನ ಆಜ್ಞೆಯನ್ನು ಉಲ್ಲಂಘಿಸಿರುವನೆಂದು ತಿಳಿದು ದೈವಪ್ರೇರಣೆಯಿಂದ ಸತ್ಯಸಂಧನಾದ, ಸ್ಥಿರಚಿತ್ತನಾದ ರಾಜಾ ಬಲಿಯನ್ನು ಶಪಿಸಿದರು. ॥ ೧೪ ॥ ಎಲೈ ಮೂರ್ಖ! ನೀನು ಅಜ್ಞಾನಿಯಾಗಿದ್ದರೂ ನಿನ್ನನ್ನು ಮಹಾಪಂಡಿತನೆಂದು ತಿಳಿಯುತ್ತೀಯೆ. ಮಹಾಗರ್ವಿಷ್ಠನಾಗಿ ನನ್ನನ್ನು ಉಪೇಕ್ಷಿಸುತ್ತಿರುವೆ. ನನ್ನ ಆಜ್ಞೆಯನ್ನು ಮೀರಿ ನಡೆಯುತ್ತಿರುವೆ. ಆದರಿಂದ ನೀನು ಬಹು ಬೇಗನೇ ನಿನ್ನ ಸಂಪತ್ತನ್ನು ಕಳೆದುಕೊಳ್ಳುವೆ. ॥ ೧೫ ॥ ಬಲಿ ಚಕ್ರವರ್ತಿಯು ಶ್ರೇಷ್ಠಮಹಾತ್ಮನಾಗಿದ್ದನು. ಗುರುಗಳು ಶಾಪವಿತ್ತರೂ ಸತ್ಯದಿಂದ ವಿಚಲಿತನಾಗಲಿಲ್ಲ. ಅವನು ಭಗವಾನ್ ವಾಮನನನ್ನು ವಿಧಿಪೂರ್ವಕವಾಗಿ ಪೂಜಿಸಿ ಕೈಯಲ್ಲಿ ನೀರನ್ನೆತ್ತಿಕೊಂಡು ಮೂರುಹೆಜ್ಜೆ ಭೂದಾನದ ಸಂಕಲ್ಪವನ್ನು ಮಾಡಿದನು. ॥ ೧೬ ॥ ಅದೇ ಸಮಯದಲ್ಲಿ ಮುಕ್ತಾಹಾರಗಳಿಂದ ಅಲಂಕೃತಳಾದ ಬಲಿಯ ಪತ್ನಿಯಾದ ವಿಂಧ್ಯಾವಳಿಯು ಭಗವಾನ್ ವಾಮನನ ದಿವ್ಯಪಾದಗಳನ್ನು ತೊಳೆಯಲು ಸ್ವರ್ಣಕಲಶದಲ್ಲಿ ನೀರನ್ನು ತುಂಬಿ ತಂದಿತ್ತಳು. ॥ ೧೭ ॥ ಬಲಿಚಕ್ರವರ್ತಿಯು ತಾನೇ ಶ್ರೀವಾಮನಮೂರ್ತಿಯ ಸುಂದರವಾದ ಪಾದಪದ್ಮಗಳನ್ನು ತೊಳೆದು ಆನಂದಭರಿತನಾಗಿ ಗಂಗೆಗೆ ಸಮಾನವಾದ ವಿಶ್ವಪಾವನವಾದ ಆ ಚರಣಾಮೃತವನ್ನು ಭಕ್ತಿಯಿಂದ ತನ್ನ ತಲೆಯಲ್ಲಿ ಧರಿಸಿಕೊಂಡನು. ॥ ೧೮ ॥ ಆಗ ಅಂತರಿಕ್ಷದಲ್ಲಿ ಉಪಸ್ಥಿತರಾದ ದೇವ, ಗಂಧರ್ವ, ವಿದ್ಯಾಧರ, ಸಿದ್ಧ, ಚಾರಣ, ಋಷಿ-ಮುನಿ ಹೀಗೆ ಎಲ್ಲರೂ ಬಲಿರಾಜನ ಈ ಅಲೌಕಿಕವಾದ ಕಾರ್ಯವನ್ನೂ, ಸರಳತೆಯನ್ನೂ ಸತ್ಯನಿಷ್ಠೆಯನ್ನು ಪ್ರಶಂಸಿಸುತ್ತಾ ಅತೀವ ಆನಂದದಿಂದ ಅವನ ಮೇಲೆ ದಿವ್ಯಪುಷ್ಪಗಳ ಮಳೆಯನ್ನೇ ಸುರಿಸಿದರು. ॥ ೧೯ ॥ ದೇವದುಂದುಭಿಗಳು ಅಡಿಗಡಿಗೆ ಮೊಳಗುತ್ತಲೇ ಇದ್ದವು. ಗಂಧರ್ವರು, ಕಿಂಪುರುಷರು, ಕಿನ್ನರರು ಹಾಡತೊಡಗಿದರು. ಆಹಾ! ಧನ್ಯ! ಧನ್ಯ! ಉದಾರಶಿರೋಮಣಿಯಾದ ಬಲಿಚಕ್ರವರ್ತಿಯು ಇತರರಿಗೆ ಮಾಡಲು ಅತ್ಯಂತ ದುಷ್ಕರವಾದ ಕಾರ್ಯವನ್ನೇ ಮಾಡಿತೋರಿರುವನು. ತಿಳಿದೂ-ತಿಳಿದೂ ತನ್ನ ಶತ್ರುವಿಗೆ ಮೂರು ಲೋಕಗಳನ್ನು ದಾನಮಾಡಿಬಿಟ್ಟಿರುವನು. ॥ ೨೦ ॥

ಪರೀಕ್ಷಿತನೇ! ಆಗಲೇ ಅಲ್ಲಿ ಒಂದು ಅದ್ಭುತವಾದ ಘಟನೆಯು ನಡೆಯಿತು. ಅನಂತವಾದ ಭಗವಂತನ ಆ ತ್ರಿಗುಣಾತ್ಮಕವಾದ ವಾಮನರೂಪವು ಇದ್ದಕ್ಕಿದ್ದಂತೆ ಬೆಳೆಯತೊಡಗಿತು. ಅದು ಬೆಳೆಯುತ್ತಾ-ಬೆಳೆಯುತ್ತಾ ಭೂಮಿ, ಆಕಾಶ, ದಿಕ್ಕುಗಳು, ಸ್ವರ್ಗ, ಪಾತಾಳ, ಸಮುದ್ರ, ಪಶು-ಪಕ್ಷಿ, ಮನುಷ್ಯರು, ದೇವತೆಗಳು, ಋಷಿಗಳು ಹೀಗೆ ಎಲ್ಲವೂ ಅವನೊಳಗೆ ಸೇರಿಹೋಗುವಷ್ಟು ಬೃಹದಾಕಾರವಾಯಿತು. ॥ ೨೧ ॥ ಋತ್ವಿಜರಿಂದಲೂ, ಆಚಾರ್ಯರಿಂದಲೂ, ಸಭಾಸದರಿಂದಲೂ ಕೂಡಿದ್ದ ಆ ಬಲಿಯು ಸಮಸ್ತ

ರಸಾಮಚಷ್ಟಾಂಘ್ರಿತಲೇಽಥ ಪಾದಯೋ-
ರ್ಮಹೀಂ ಮಹೀಧ್ರಾನ್ಪುರುಷಸ್ಯ ಜಂಘಯೋಃ ।
ಪತತ್ತ್ರಿಣೋ ಜಾನುನಿ ವಿಶ್ವಮೂರ್ತೇ-
ರೂರ್ವೋರ್ಗಣಂ ಮಾರುತಮಿಂದ್ರಸೇನಃ ॥ ೨೩ ॥

ಸಂಧ್ಯಾಂ ವಿಭೋರ್ವಾಸಸಿ ಗುಹ್ಯ ಐಕ್ಷತ್
ಪ್ರಜಾಪತೀನ್ಜಘನೇ ಆತ್ಮಮುಖ್ಯಾನ್ ।
ನಾಭ್ಯಾಂ ನಭಃ ಕುಕ್ಷಿಷು ಸಪ್ತಸಿಂಧೂ-
ನುರುಕ್ರಮಸ್ಯೋರಸಿ ಚರ್ಕ್ಷಮಾಲಾಮ್ ॥ ೨೪ ॥

ಹೃದ್ಯಂಗ ಧರ್ಮಂ ಸ್ತನಯೋರ್ಮುರಾರೇಃ
ಋತಂ ಚ ಸತ್ಯಂ ಚ ಮನಸ್ಯಥೇಂದುಮ್ ।
ಶ್ರಿಯಂ ಚ ವಕ್ಷಸ್ಯರವಿಂದಹಸ್ತಾಂ
ಕಂಠೇ ಚ ಸಾಮಾನಿ ಸಮಸ್ತರೇಫಾನ್ ॥ ೨೫ ॥

ಇಂದ್ರಪ್ರಧಾನಾನಮರಾನ್ಭುಜೇಷು
ತತ್ಕರ್ಣಯೋಃ ಕಕುಭೋ ದ್ಯೌಶ್ಚ ಮೂರ್ಧ್ನಿ ।
ಕೇಶೇಷು ಮೇಘಾನ್ಛ್ವಸನಂ ನಾಸಿಕಾಯಾ-
ಮಕ್ಷ್ಣೋಶ್ಚ ಸೂರ್ಯಂ ವದನೇ ಚ ವಹ್ನಿಮ್ ॥ ೨೬ ॥

ವಾಣ್ಯಾಂ ಚ ಛಂದಾಂಸಿ ರಸೇ ಜಲೇಶಂ
ಭ್ರುವೋರ್ನಿಷೇಧಂ ಚ ವಿಧಿಂ ಚ ಪಕ್ಷ್ಮಸು ।
ಅಹಶ್ಚ ರಾತ್ರಿಂ ಚ ಪರಸ್ಯ ಪುಂಸೋ
ಮನ್ಯುಂ ಲಲಾಟೇಽಧರ ಏವ ಲೋಭಮ್ ॥ ೨೭ ॥

ಸ್ಪರ್ಶೇ ಚ ಕಾಮಂ ನೃಪ ರೇತಸೋಽಂಭಃ
ಪೃಷ್ಠೇ ತ್ವಧರ್ಮಂ ಕ್ರಮಣೇಷು ಯಜ್ಞಮ್ ।
ಛಾಯಾಸು ಮೃತ್ಯುಂ ಹಸಿತೇ ಚ ಮಾಯಾಂ
ತನೂರುಹೇಷ್ವೋಷಧಿಜಾತಯಶ್ಚ ॥ ೨೮ ॥

ನದೀಶ್ಚ ನಾಡೀಷು ಶಿಲಾ ನಖೇಷು
ಬುದ್ಧಾವಜಂ ದೇವಗಣಾನೃಷೀಂಶ್ಚ ।
ಪ್ರಾಣೇಷು ಗಾತ್ರೇ ಸ್ಥಿರಜಂಗಮಾನಿ
ಸರ್ವಾಣಿ ಭೂತಾನಿ ದದರ್ಶ ವೀರಃ ॥ ೨೯ ॥

ಸರ್ವಾತ್ಮನೀದಂ ಭುವನಂ ನಿರೀಕ್ಷ್ಯ
ಸರ್ವೇಽಸುರಾಃ ಕಶ್ಮಲಮಾಪುರಂಗ ।
ಸುದರ್ಶನಂ ಚಕ್ರಮಸಹ್ಯತೇಜೋ
ಧನುಶ್ಚ ಶಾರ್ಙ್ಗಂ ಸ್ತನಯಿತ್ನುಘೋಷಮ್ ॥ ೩೦ ॥

ಐಶ್ವರ್ಯಗಳ ಸ್ವಾಮಿಯಾದ ಭಗವಂತನ ಆ ತ್ರಿಗುಣಾತ್ಮಕವಾದ ಶರೀರದಲ್ಲಿ ಪಂಚಭೂತಗಳನ್ನೂ, ಇಂದ್ರಿಯಗಳನ್ನು ಅವುಗಳ ವಿಷಯಗಳನ್ನೂ, ಅಂತಃಕರಣ ಮತ್ತು ಜೀವಿಗಳೊಂದಿಗೆ ಸಮಸ್ತ ತ್ರಿಗುಣಮಯವಾದ ಜಗತ್ತನ್ನೂ ನೋಡಿದನು. ॥ ೨೨ ॥. ಬಲಿಚಕ್ರವರ್ತಿಯು ವಿಶ್ವರೂಪನಾದ ಭಗವಂತನ ಚರಣಗಳ ತಲದಲ್ಲಿ ರಸಾತಲವನ್ನೂ, ಹಜ್ಜೆಗಳಲ್ಲಿ ಪೃಥ್ವಿಯನ್ನೂ, ಕಣಕಾಲುಗಳಲ್ಲಿ ಪರ್ವತಗಳನ್ನೂ, ಮೊಣಕಾಲುಗಳಲ್ಲಿ ಪಕ್ಷಿಗಳನ್ನೂ, ತೊಡೆಗಳಲ್ಲಿ ಮರುದ್ಗಣಗಳನ್ನೂ, ನೋಡಿದನು. ॥ ೨೩ ॥ ಹೀಗೆಯೇ ಭಗವಂತನ ವಸ್ತ್ರಗಳಲ್ಲಿ ಸಂಧ್ಯೆಯನ್ನೂ, ಮೇಢ್ರದಲ್ಲಿ ನವಪ್ರಜಾಪತಿಗಳನ್ನೂ, ಜಘನದಲ್ಲಿ ತನ್ನ ಮುಂದಾಳುತನದಲ್ಲಿರುವ ಅಸುರರನ್ನೂ, ನಾಭಿಯಲ್ಲಿ ಆಕಾಶವನ್ನೂ, ಹೊಟ್ಟೆಯಲ್ಲಿ ಸಪ್ತಸಮುದ್ರಗಳನ್ನೂ, ವಕ್ಷಸ್ಥಳದಲ್ಲಿ ನಕ್ಷತ್ರಮಂಡಲವನ್ನೂ ನೋಡಿದನು. ॥ ೨೪ ॥ ಭಗವಂತನ ಹೃದಯದಲ್ಲಿ ಧರ್ಮವನ್ನೂ, ಸ್ತನಗಳಲ್ಲಿ ಋತ ಮತ್ತು ಸತ್ಯಗಳನ್ನೂ, ಮನಸ್ಸಿನಲ್ಲಿ ಚಂದ್ರನನ್ನೂ, ಎದೆಯಲ್ಲಿ ಕಮಲಹಸ್ತಳಾದ ಮಹಾಲಕ್ಷ್ಮಿಯನ್ನೂ, ಕೊರಳಿನಲ್ಲಿ ಸಾಮವೇದವೇ ಮುಂತಾದ ಸಮಸ್ತ ವೇದಗಳನ್ನೂ, ಶಬ್ದಸಮೂಹವನ್ನೂ ನೋಡಿದನು. ॥ ೨೫ ॥ ಬಾಹುಗಳಲ್ಲಿ ಇಂದ್ರಾದಿ ಸಮಸ್ತ ದೇವತೆಗಳನ್ನೂ, ಕಿವಿಗಳಲ್ಲಿ ದಿಕ್ಕುಗಳನ್ನೂ, ತಲೆಯಲ್ಲಿ ಸ್ವರ್ಗವನ್ನೂ, ಕೂದಲುಗಳಲ್ಲಿ ಮೇಘಗಳನ್ನೂ, ಮೂಗಿನಲ್ಲಿ ವಾಯುವನ್ನೂ, ಕಣ್ಣುಗಳಲ್ಲಿ ಸೂರ್ಯನನ್ನೂ ಮುಖದಲ್ಲಿ ಅಗ್ನಿಯನ್ನೂ ನೋಡಿದನು. ॥ ೨೬ ॥ ದೇವದೇವನ ವಾಣಿಯಲ್ಲಿ ವೇದಗಳನ್ನೂ, ನಾಲಿಗೆಯಲ್ಲಿ ವರುಣನನ್ನೂ, ಹುಬ್ಬುಗಳಲ್ಲಿ ವಿಧಿ-ನಿಷೇಧಗಳನ್ನೂ, ರೆಪ್ಪೆಗಳಲ್ಲಿ ಅಹೋರಾತ್ರಿಗಳನ್ನೂ, ಆ ವಿಶ್ವರೂಪನ ಹಣೆಯಲ್ಲಿ ಕ್ರೋಧವನ್ನೂ, ಕೆಳತುಟಿಯಲ್ಲಿ ಲೋಭವನ್ನೂ ದರ್ಶಿಸಿದನು ॥ ೨೭ ॥ ಪರೀಕ್ಷಿತನೇ! ಅವನ ಸ್ಪರ್ಶದಲ್ಲಿ ಕಾಮವನ್ನೂ, ವೀರ್ಯದಲ್ಲಿ ಜಲವನ್ನೂ, ಬೆನ್ನಿನಲ್ಲಿ ಅಧರ್ಮವನ್ನೂ ನಡೆಯಲ್ಲಿ ಯಜ್ಞಗಳನ್ನೂ, ನೆರಳಿನಲ್ಲಿ ಮೃತ್ಯುವನ್ನೂ, ನಗುವಿನಲ್ಲಿ ಮಾಯೆಯನ್ನೂ, ಮೈಗೂದಲುಗಳಲ್ಲಿ ಎಲ್ಲ ವಿಧದ ಸಸ್ಯ-ಔಷಧಿಗಳನ್ನೂ ನೋಡಿದರು. ॥ ೨೮ ॥ ಅವನ ನಾಡಿಗಳಲ್ಲಿ ನದಿಗಳನ್ನೂ, ಉಗುರುಗಳಲ್ಲಿ ಕಲ್ಲುಗಳನ್ನೂ, ಬುದ್ಧಿಯಲ್ಲಿ ಬ್ರಹ್ಮನನ್ನೂ ದೇವತೆಗಳನ್ನೂ, ಋಷಿಗಳನ್ನೂ, ಇಂದ್ರಿಯಗಳನ್ನೂ ಮತ್ತು ಶರೀರದಲ್ಲಿ ಎಲ್ಲ ಸಚರಾಚರ ಪ್ರಾಣಿಗಳನ್ನೂ ಆ ಭಗವಂತನ ಭವ್ಯ ವಿಶ್ವರೂಪದಲ್ಲಿ ಬಲಿಚಕ್ರವರ್ತಿಯು ದರ್ಶಿಸಿದನು. ॥ ೨೯ ॥

ಪರೀಕ್ಷಿತಮಹಾರಾಜನೇ! ಸರ್ವಾತ್ಮನಾದ ಭಗವಂತನಲ್ಲಿ ಈ ಸಮಸ್ತ ಜಗತ್ತನ್ನು ಕಂಡು ಬಲಿಪ್ರಮುಖರಾದ ಎಲ್ಲ ಅಸುರರು ಅತ್ಯಂತ ಭಯಭ್ರಾಂತರಾದರು. ಅದೇ ಸಮಯದಲ್ಲಿ ಸಹಿಸಲಾಗದ ಮಹಾತೇಜಸ್ಸಿನಿಂದ ಕೂಡಿದ ಸುದರ್ಶನ ಚಕ್ರವೂ, ಮೇಘದಂತೆ ಭಯಂಕರ ಟೇಂಕಾರ ಶಬ್ದವಿದ್ದ ಶಾರ್ಙ್ಗವೆಂಬ ಮಹಾ ಧನುಸ್ಸೂ ಮೇಘದಂತೆ ಗಂಭೀರವಾಗಿ ಶಬ್ದಮಾಡುವ ಪಾಂಚಜನ್ಯ ವೆಂಬ ಶಂಖವೂ, ಅತ್ಯಂತ ವೇಗವುಳ್ಳ ಕೌಮೋದಕೀ ಗದೆಯೂ, ಶತಚಂದ್ರಗಳ ಚಿಹ್ನೆಗಳಿದ್ದ ಗುರಾಣಿಯೂ, ವಿದ್ಯಾಧರವೆಂಬ ಖಡ್ಗವೂ, ಎರಡು ಅಕ್ಷಯ ಬತ್ತಳಿಕೆಗಳೂ,

ಪರ್ಜನ್ಯಘೋಷೋ ಜಲಜಃ ಪಾಂಚಜನ್ಯಃ
ಕೌಮೋದಕೀ ವಿಷ್ಣುಗದಾ ತರಸ್ವಿನೀ ।
ವಿದ್ಯಾಧರೋಽಸಿಃ ಶತಚಂದ್ರಯುಕ್ತ-
ಸ್ತೂಣೋತ್ತಮಾವಕ್ಷಯಸಾಯಕೌ ಚ ॥ ೩೧ ॥

ಸುನಂದಮುಖ್ಯಾ ಉಪತಸ್ಥುರೀಶಂ
ಪಾರ್ಷದಮುಖ್ಯಾಃ ಸಹಲೋಕಪಾಲಾಃ ।
ಸ್ಫುರತ್ಕಿರೀಟಾಂಗದಮೀನಕುಂಡಲ-
ಶ್ರೀವತ್ಸರತ್ನೋತ್ತಮಮೇಖಲಾಂಬರೈಃ ॥ ೩೨ ॥

ಮಧುವ್ರತಸ್ರಗ್ವನಮಾಲಯಾ ವೃತೋ
ರರಾಜ ರಾಜನ್ಭಗವಾನುರುಕ್ರಮಃ ।
ಕ್ಷಿತಿಂ ಪದೈಕೇನ ಬಲೇರ್ವಿಚಕ್ರಮೇ
ನಭಃ ಶರೀರೇಣ ದಿಶಶ್ಚ ಬಾಹುಭಿಃ ॥ ೩೩ ॥

ಪದಂ ದ್ವಿತೀಯಂ ಕ್ರಮತಸ್ತ್ರಿವಿಷ್ಟಪಂ
ನ ವೈ ತೃತೀಯಾಯ ತದೀಯಮಣ್ವಪಿ ।
ಉರುಕ್ರಮಸ್ಯಾಂಘ್ರಿರುಪರ್ಯುಪರ್ಯಥೋ
ಮಹರ್ಜನಾಭ್ಯಾಂ ತಪಸಃ ಪರಂ ಗತಃ ॥ ೩೪ ॥

ಭಗವಂತನ ಬಳಿ ಮೂರ್ತಿಮತ್ತಾಗಿ ನಿಂತಿದ್ದವು. ಸಮಸ್ತ ಲೋಕಪಾಲಕರೊಂದಿಗೆ ಭಗವಂತನ ಸುನಂದರೇ ಮುಂತಾದ ಪಾರ್ಷದರು ಅವನನ್ನು ಸೇವಿಸಲು ಉಪಸ್ಥಿತರಾದರು. ಆ ಸಮಯದಲ್ಲಿ ಉರುಕ್ರಮ ಭಗವಂತನು ತಲೆಯಲ್ಲಿ ಕಿರೀಟವನ್ನೂ, ತೋಳುಗಳಲ್ಲಿ ಅಂಗದ ಕೇಯೂರಗಳನ್ನೂ, ಕಿವಿಗಳಲ್ಲಿ ಮಕರಾಕೃತಿಯ ಕುಂಡಲಗಳನ್ನೂ, ವಕ್ಷಸ್ಥಳದಲ್ಲಿ ಶ್ರೀವತ್ಸಚಿಹ್ನೆಯನ್ನೂ, ಕುತ್ತಿಗೆಯಲ್ಲಿ ಕೌಸ್ತುಭಮಣಿಯನ್ನು ಧರಿಸಿ, ಸೊಂಟದಲ್ಲಿ ಪೀತಾಂಬರ ವನ್ನುಟ್ಟು ಸ್ವರ್ಣಮೇಖಲೆಯನ್ನೂ, ಹೆಗಲಿನಲ್ಲಿ ಉತ್ತರೀಯವನ್ನು ಧರಿಸಿಕೊಂಡು ಅತ್ಯಂತ ಶೋಭಾಯಮಾನವಾಗಿ ಕಾಣುತ್ತಿದ್ದನು. ॥ ೩೧-೩೨ ॥ ದುಂಬಿಗಳ ಸಮೂಹಗಳಿಂದ ಕೂಡಿದ್ದ ವನಮಾಲೆಯನ್ನೂ ಅವನು ಧರಿಸಿದ್ದನು. ಪರೀಕ್ಷಿತನೇ! ಆ ಉರುಕ್ರಮನು (ತ್ರಿವಿಕ್ರಮನು) ತನ್ನ ಒಂದು ಹೆಜ್ಜೆಯಿಂದ ಬಲಿಗೆ ಸೇರಿದ ಭೂ ಮಂಡಲವನ್ನೂ, ಶರೀರದಿಂದ ಅಂತರಿಕ್ಷವನ್ನೂ, ಭುಜಗಳಿಂದ ದಿಕ್ಕುಗಳನ್ನೂ ಆಕ್ರಮಿಸಿದನು. ಎರಡನೆಯ ಹೆಜ್ಜೆಯಿಂದ ಸ್ವರ್ಗವನ್ನೂ ಆಕ್ರಮಿಸಿದನು. ಮೂರನೆಯ ಹೆಜ್ಜೆಯನ್ನಿಡಲು ಬಲಿಯ ಯಾವ ವಸ್ತುವೂ ಉಳಿಯಲಿಲ್ಲ. ಭಗವಂತನಾದ ತ್ರಿವಿಕ್ರಮನ ಆ ಎರಡನೆಯ ಹೆಜ್ಜೆಯು ಮೇಲೆ-ಮೇಲೆ ಬೆಳೆಯುತ್ತಾ ಮಹರ್ಲೋಕ, ಜನೋಲೋಕ, ತಪೋಲೋಕಗಳನ್ನು ದಾಟಿ ಎಲ್ಲಕ್ಕಿಂತ ಮೇಲ್ಭಾಗದಲ್ಲಿರುವ ಸತ್ಯಲೋಕವನ್ನು ಸೇರಿತು. ॥ ೩೩-೩೪ ॥

ಇಪ್ಪತ್ತನೆಯ ಅಧ್ಯಾಯವು ಮುಗಿಯಿತು. ॥ ೨೦ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಅಷ್ಟಮ ಸ್ಕಂಧೇ
ವಿಶ್ವರೂಪದರ್ಶನಂ ನಾಮ ವಿಂಶೋಽಧ್ಯಾಯಃ ॥ ೨೦ ॥

ಇಪ್ಪತ್ತೊಂದನೆಯ ಅಧ್ಯಾಯ

ಬಲಿಬಂಧನ

ಶ್ರೀಶುಕ ಉವಾಚ

ಸತ್ಯಂ ಸಮೀಕ್ಷ್ಯಾಬ್ಜಭವೋ ನಖೇಂದುಭಿ-
ರ್ಹತಸ್ವಧಾಮದ್ಯುತಿರಾವೃತೋಽಭ್ಯಗಾತ್ ।
ಮರೀಚಿಮಿಶ್ರಾ ಋಷಯೋ ಬೃಹದ್ವ್ರತಾಃ
ಸನಂದನಾದ್ಯಾ ನರದೇವ ಯೋಗಿನಃ ॥ ೧ ॥

ವೇದೋಪವೇದಾ ನಿಯಮಾನ್ವಿತಾ ಯಮಾ-
ಸ್ತರ್ಕೇತಿಹಾಸಾಂಗ ಪುರಾಣಸಂಹಿತಾಃ ।
ಯೇ ಚಾಪರೇ ಯೋಗಸಮೀರದೀಪಿತ-
ಜ್ಞಾನಾಗ್ನಿನಾ ರಂಧಿತಕರ್ಮಕಲ್ಮಷಾಃ ।
ವವಂದಿರೇ ಯತ್ಸ್ಮರಣಾನುಭಾವತಃ
ಸ್ವಾಯಂಭುವಂ ಧಾಮ ಗತಾ ಅಕರ್ಮಕಮ್ ॥ ೨ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ - ಪರೀಕ್ಷಿದ್ರಾಜನೇ! ಭಗವಂತನ ಚರಣಕಮಲವು ಸತ್ಯಲೋಕವನ್ನು ವ್ಯಾಪಿಸಿತು. ಅವನ ದಿವ್ಯವಾದ ನಖಚಂದ್ರಿಕೆಯಿಂದ ಸತ್ಯಲೋಕದ ಕಾಂತಿಯು ಮಸುಕಾಗಿ ಹೋಯಿತು. ಸ್ವಯಂ ಬ್ರಹ್ಮನೂ ಕೂಡ ಆ ಪ್ರಕಾಶದಲ್ಲಿ ಮುಳುಗಿಹೋದನು. ಮರೀಚಿಯೇ ಮೊದಲಾದ ಋಷಿಗಳೂ, ಸನಂದನಾದಿ ನೈಷ್ಠಿಕ ಬ್ರಹ್ಮಚಾರಿಗಳೂ, ಇತರ ಮಹಾಮಹಾ ಯೋಗಿಗಳೂ ಕೂಡ ಭಗವಂತನ ಚರಣಕಮಲವನ್ನು ಭಕ್ತಿಭಾವದಿಂದ ಸ್ವಾಗತಿಸಿದರು. ॥ ೧ ॥ ಬ್ರಹ್ಮಲೋಕದಲ್ಲಿ ಮೂರ್ತಿವತ್ತಾಗಿ ನೆಲೆಸಿರುವ ವೇದಗಳೂ, ಉಪವೇದಗಳೂ, ನಿಯಮ-ಯಮಗಳೂ, ತರ್ಕ-ಇತಿಹಾಸಗಳೂ, ವೇದಾಂಗಗಳೂ, ಪುರಾಣ-ಸಂಹಿತೆಗಳೂ ಎಲ್ಲವೂ ಪರಮಪುರುಷನ ಚರಣಾರವಿಂದವನ್ನು ಸ್ವಾಗತಿಸಲು ಸಿದ್ಧರಾದರು. ಯೋಗರೂಪವಾದ ವಾಯುವಿನಿಂದ ಜ್ಞಾನಾಗ್ನಿಯನ್ನು ಪ್ರಜ್ವಲಿತಗೊಳಿಸಿ ಕರ್ಮಮಲವನ್ನು ಭಸ್ಮಗೊಳಿಸಿದ್ದ ಮಹಾತ್ಮರೆಲ್ಲರೂ ಭಗವಂತನ ಚರಣವನ್ನು ವಂದಿಸಿದರು. ಇದೇ ಚರಣಕಮಲದ ಸ್ಮರಣೆಯ ಮಹಿಮೆಯಿಂದ ಇವರೆಲ್ಲರೂ

ಅಥಾಂಘ್ರಯೇ ಪ್ರೋನ್ನಮಿತಾಯ ವಿಷ್ಣೋ-
ರುಪಾಹರತ್ಪದ್ಮಭವೋಽರ್ಹಣೋದಕಮ್ ।
ಸಮರ್ಚ್ಯ ಭಕ್ತ್ಯಾಭ್ಯಗೃಣಾಚ್ಛುಚಿಶ್ರವಾ
ಯನ್ನಾಭಿಪಂಕೇರುಹಸಂಭವಃ ಸ್ವಯಮ್ ॥ ೩ ॥

ಧಾತುಃ ಕಮಂಡಲುಜಲಂ ತದುರುಕ್ರಮಸ್ಯ
ಪಾದಾವನೇಜನಪವಿತ್ರತಯಾ ನರೇಂದ್ರ ।
ಸ್ವರ್ಧುನ್ಯಭೂನ್ನಭಸಿ ಸಾ ಪತತೀ ನಿಮಾರ್ಷ್ಟಿ
ಲೋಕತ್ರಯಂ ಭಗವತೋ ವಿಶದೇವ ಕೀರ್ತಿಃ ॥ ೪ ॥

ಬ್ರಹ್ಮಾದಯೋ ಲೋಕನಾಥಾಃ ಸ್ವನಾಥಾಯ ಸಮಾದೃತಾಃ ।
ಸಾನುಗಾ ಬಲಿಮಾಜಹ್ರುಃ ಸಂಕ್ಷಿಪ್ತಾತ್ಮವಿಭೂತಯೇ ॥ ೫ ॥

ತೋಯೈಃ ಸಮರ್ಹಣೈಃ ಸ್ರಗ್ಭಿರ್ದಿವ್ಯಗಂಧಾನುಲೇಪನೈಃ ।
ಧೂಪೈರ್ದೀಪೈಃ ಸುರಭಿಭಿರ್ಲಾಜಾಕ್ಷತಫಲಾಂಕುರೈಃ ॥ ೬ ॥

ಸ್ತವನೈರ್ಜಯಶಬ್ದೈಶ್ಚ ತದ್ವೀರ್ಯಮಹಿಮಾಂಕಿತೈಃ ।
ನೃತ್ಯವಾದಿತ್ರಗೀತೈಶ್ಚ ಶಂಖದುಂದುಭಿನಿಃಸ್ವನೈಃ ॥ ೭ ॥

ಜಾಂಬವಾನೃಕ್ಷರಾಜಸ್ತು ಭೇರೀಶಬ್ದೈರ್ಮನೋಜವಃ ।
ವಿಜಯಂ ದಿಕ್ಷು ಸರ್ವಾಸು ಮಹೋತ್ಸವಮಘೋಷಯತ್ ॥ ೮ ॥

ಮಹೀಂ ಸರ್ವಾಂ ಹೃತಾಂ ದೃಷ್ಟ್ವಾ ತ್ರಿಪದವ್ಯಾಜಯಾಚ್ಞಯಾ ।
ಊಚುಃ ಸ್ವಭರ್ತುರಸುರಾ ದೀಕ್ಷಿತಸ್ಯಾತ್ಯಮರ್ಷಿತಾಃ ॥ ೯ ॥

ನ ವಾ ಅಯಂ ಬ್ರಹ್ಮಬಂಧುರ್ವಿಷ್ಣುರ್ಮಾಯಾವಿನಾಂ ವರಃ ।
ದ್ವಿಜರೂಪಪ್ರತಿಚ್ಛನ್ನೋ ದೇವಕಾರ್ಯಂ ಚಿಕೀರ್ಷತಿ ॥ ೧೦ ॥

ಅನೇನ ಯಾಚಮಾನೇನ ಶತ್ರುಣಾ ವಟುರೂಪಿಣಾ ।
ಸರ್ವಸ್ವಂ ನೋ ಹೃತಂ ಭರ್ತುರ್ನ್ಯಸ್ತದಂಡಸ್ಯ ಬರ್ಹಿಷಿ ॥ ೧೧ ॥

ಕರ್ಮದಿಂದ ದೊರೆಯದಿರುವ ಬ್ರಹ್ಮದೇವರ ಧಾಮವನ್ನು ಹೊಂದಿದ್ದರು. ॥ ೨ ॥ ಭಗವಾನ್ ಬ್ರಹ್ಮದೇವರ ಕೀರ್ತಿಯು ಪರಿಶುದ್ಧವಾದುದು. ಅವರು ಮಹಾವಿಷ್ಣುವಿನ ನಾಭಿಕಮಲದಿಂದ ಉತ್ಪನ್ನರಾಗಿದ್ದರು. ಅವರು ತಮ್ಮ ಲೋಕಕ್ಕೆ ಆಗಮಿಸಿದ್ದ ವಿಶ್ವ ರೂಪನಾದ ಭಗವಂತನ ಅಡಿದಾವರೆಗೆ ಸ್ವಾಗತವಿತ್ತ ಬಳಿಕ ಅರ್ಘ್ಯ-ಪಾದ್ಯಗಳಿಂದ ಸಂಪೂಜಿಸಿ ಆ ದಿವ್ಯ ಪಾದ-ಪದ್ಮವನ್ನು ತೊಳೆದರು. ಹೀಗೆ ತುಂಬುಭಕ್ತಿಯಿಂದಲೂ ಅರ್ಚಿಸಿದ ಬಳಿಕ ಪ್ರೇಮಭಾವದಿಂದ ಅವನನ್ನು ಸ್ತುತಿಸಿದರು. ॥ ೩ ॥

ಪರೀಕ್ಷಿತನೇ! ಬ್ರಹ್ಮನ ಕಮಂಡಲುವಿನಲ್ಲಿದ್ದ ಆ ತೀರ್ಥವು ಭಗವಾನ್ ತ್ರಿವಿಕ್ರಮನ ಪಾದವನ್ನು ತೊಳೆದುದರಿಂದ ಪವಿತ್ರವಾದ ಗಂಗೆಯಾಗಿ ಪರಿಣಮಿಸಿತು. ಅದು ಆಕಾಶದಿಂದ ಭೂಮಿಗೆ ಬಂದು ಮೂರು ಲೋಕಗಳನ್ನು ಪವಿತ್ರಗೊಳಿಸುತ್ತಿದೆ. ವಿಷ್ಣು ಪಾದೋದ್ಭವೆಯಾದ ಈ ಗಂಗೆಯು ಭಗವಂತನ ಮೂರ್ತಿಮಂತ ಉಜ್ವಲ ಕೀರ್ತಿಯಾಗಿದೆ. ॥ ೪ ॥ ಭಕ್ತರ ಅನುಕೂಲಕ್ಕಾಗಿ ಭಗವಂತನು ತನ್ನ ರೂಪವನ್ನು ಸಣ್ಣದಾಗಿಸಿಕೊಂಡು ತನ್ನ ವಿಭೂತಿಗಳನ್ನು ಸಂಕೋಚಗೊಳಿಸಿಕೊಂಡಾಗ ಬ್ರಹ್ಮಾದಿ ಲೋಕಪಾಲರು ತಮ್ಮ ಅನುಯಾಯಿಗಳೊಂದಿಗೆ ಅತ್ಯಂತ ಆದರಭಾವದಿಂದ ತಮ್ಮ ಸ್ವಾಮಿಯಾದ ಭಗವಂತನಿಗೆ ಪೂಜೆಯನ್ನು ಸಮರ್ಪಿಸಿದರು. ॥ ೫ ॥ ಅವರು ಅರ್ಘ್ಯ ಪಾದ್ಯಾಚಮನೀಯ ಮಧುಪರ್ಕಗಳಿಂದಲೂ, ಪುಷ್ಪಗಳಿಂದಲೂ, ದಿವ್ಯವಾದ ಗಂಧ-ಅಂಗರಾಗಗಳಿಂದಲೂ, ಸುವಾಸನೆಯುಳ್ಳ ಧೂಪ-ದೀಪ, ಅರಳು-ಅಕ್ಷತೆಗಳಿಂದಲೂ ಫಲ-ಅಂಕುರಗಳಿಂದಲೂ, ಭಗವಂತನ ಪರಾಕ್ರಮ-ಮಹಿಮೆಗಳಿಂದೊಡಗೂಡಿದ ಸ್ತೋತ್ರಗಳಿಂದಲೂ, ಜಯ-ಜಯ ಘೋಷಗಳಿಂದಲೂ, ನೃತ್ಯ-ಗೀತ-ವಾದ್ಯಗಳಿಂದಲೂ, ಶಂಖ-ದುಂದುಭಿಗಳ ಧ್ವನಿಯಿಂದಲೂ ಆ ತ್ರಿವಿಕ್ರಮ ಭಗವಂತನನ್ನು ಆರಾಧಿಸಿದರು. ॥ ೬-೭ ॥ ಆ ಸಮಯದಲ್ಲಿ ಕರಡಿಗಳ ರಾಜನಾದ ಜಾಂಬವಂತನು ಮನೋವೇಗಕ್ಕೆ ಸಮಾನವಾಗಿ ವೇಗದಿಂದ ಎಲ್ಲ ದಿಕ್ಕುಗಳಲ್ಲಿಯೂ ಓಡಾಡುತ್ತಾ ಭೇರಿಯ ಶಬ್ದದೊಡನೆ ಭಗವಂತನ ಮಂಗಲಮಯ ವಿಜಯೋತ್ಸವ ವಾರ್ತೆಯನ್ನು ಸಾರಿದನು. ॥ ೮ ॥

ಈ ವಾಮನ ಮೂರ್ತಿಯು ಮೂರಡಿಷ್ಟು ಭೂಮಿಯನ್ನು ಬೇಡುವ ನೆಪದಿಂದ ಇಡೀ ಭೂಮಿಯನ್ನೇ ಮೂರು ಲೋಕಗಳನ್ನೇ ತಮ್ಮಿಂದ ಕಿತ್ತುಕೊಂಡಿರುವುದನ್ನು ನೋಡಿ ಅಸುರರು ಅತ್ಯಂತ ಕ್ರುದ್ಧರಾದರು. ಅವರು ತಮ್ಮ-ತಮ್ಮಲ್ಲೇ ಯೋಚಿಸತೊಡಗಿದರು – 'ನಮ್ಮ ಒಡೆಯನು ಈ ಸಮಯದಲ್ಲಿ ಯಜ್ಞದೀಕ್ಷಿತನಾಗಿರುವನು. ಆದರಿಂದ ಅವನು ಏನನ್ನೂ ಮಾತನಾಡುವುದಿಲ್ಲ. ॥ ೯ ॥ ಎಲಾ! ಇವನು ಸಾಮಾನ್ಯ ಬ್ರಾಹ್ಮಣನಲ್ಲ! ಇವನು ಮಹಾಮಾಯಾವಿಯಾದ ವಿಷ್ಣುವೇ ಆಗಿದ್ದಾನೆ. ಬ್ರಾಹ್ಮಣ ರೂಪವನ್ನು ಧರಿಸಿ ಇವನು ದೇವತೆಗಳ ಕಾರ್ಯವನ್ನು ಸಾಧಿಸಿಕೊಡಲು ಬಯಸುತ್ತಿರುವನು. ॥ ೧೦ ॥ ನಮ್ಮ ಒಡೆಯನು ಯಜ್ಞದ ದೀಕ್ಷಿತನಾಗಿರುವಾಗ ಯಾರಿಗೂ ಯಾವ ವಿಧವಾದ ಶಿಕ್ಷೆಯನ್ನೂ ಕೊಡಲಾರನು. ಇಂತಹ ಸಮಯದಲ್ಲೇ ಈ ನಮ್ಮ ಶತ್ರುವು ಬ್ರಹ್ಮಚಾರಿಯ ವೇಷವನ್ನು ಧರಿಸಿ ಮೊದಲು ಮೂರಡಿ ಭೂಮಿಯನ್ನು ಯಾಚಿಸಿ ಅನಂತರದಲ್ಲಿ ನಮ್ಮ ಸರ್ವಸ್ವವನ್ನು ಅಪಹರಿಸಿಬಿಟ್ಟನಲ್ಲ! ॥ ೧೧ ॥

ಸತ್ಯವ್ರತಸ್ಯ ಸತತಂ ದೀಕ್ಷಿತಸ್ಯ ವಿಶೇಷತಃ ।
ನಾನೃತಂ ಭಾಷಿತುಂ ಶಕ್ಯಂ ಬ್ರಹ್ಮಣ್ಯಸ್ಯ ದಯಾವತಃ
॥ ೧೨ ॥

ತಸ್ಮಾದಸ್ಯ ವಧೋ ಧರ್ಮೋ ಭರ್ತುಃ ಶುಶ್ರೂಷಣಂ ಚ ನಃ ।
ಇತ್ಯಾಯುಧಾನಿ ಜಗೃಹುರ್ಬಲೇರನುಚರಾಸುರಾಃ
॥ ೧೩ ॥

ತೇ ಸರ್ವೇ ವಾಮನಂ ಹಂತುಂ ಶೂಲಪಟ್ಟಿಶಪಾಣಯಃ ।
ಅನಿಚ್ಛತೋ ಬಲೇ ರಾಜನ್ಪ್ರಾದ್ರವನ್ ಜಾತಮನ್ಯವಃ
॥ ೧೪ ॥

ತಾನಭಿದ್ರವತೋ ದೃಷ್ಟ್ವಾ ದಿತಿಜಾನೀಕಪಾನ್ನೃಪ ।
ಪ್ರಹಸ್ಯಾನುಚರಾ ವಿಷ್ಣೋಃ ಪ್ರತ್ಯಷೇಧನ್ನುದಾಯುಧಾಃ
॥ ೧೫ ॥

ನಂದಃ ಸುನಂದೋಽಥ ಜಯೋ ವಿಜಯಃ ಪ್ರಬಲೋ ಬಲಃ ।
ಕುಮುದಃ ಕುಮುದಾಕ್ಷಶ್ಚ ವಿಷ್ವಕ್ಸೇನಃ ಪತತ್ತ್ರಿರಾಟ್
॥ ೧೬ ॥

ಜಯಂತಃ ಶ್ರುತದೇವಶ್ಚ ಪುಷ್ಪದಂತೋಽಥ ಸಾತ್ವತಃ ।
ಸರ್ವೇ ನಾಗಾಯುತಪ್ರಾಣಾಶ್ಚಮೂಂ ತೇ ಜಘ್ನುರಾಸುರೀಮ್
॥ ೧೭ ॥

ಹನ್ಯಮಾನಾನ್ಸ್ವಕಾನ್ ದೃಷ್ಟ್ವಾ ಪುರುಷಾನುಚರೈರ್ಬಲಿಃ ।
ವಾರಯಾಮಾಸ ಸಂರಬ್ಧಾನ್ಕಾವ್ಯಶಾಪಮನುಸ್ಮರನ್
॥ ೧೮ ॥

ಹೇ ವಿಪ್ರಚಿತ್ತೇ ಹೇ ರಾಹೋ ಹೇ ನೇಮೇ ಶ್ರೂಯತಾಂ ವಚಃ ।
ಮಾ ಯುಧ್ಯತ ನಿವರ್ತಧ್ವಂ ನ ನಃ ಕಾಲೋಽಯಮರ್ಥಕೃತ್
॥ ೧೯ ॥

ಯಃ ಪ್ರಭುಃ ಸರ್ವಭೂತಾನಾಂ ಸುಖದುಃಖೋಪಪತ್ತಯೇ ।
ತಂ ನಾತಿವರ್ತಿತುಂ ದೈತ್ಯಾಃ ಪೌರುಷೈರೀಶ್ವರಃ ಪುಮಾನ್
॥ ೨೦ ॥

ಯೋ ನೋ ಭವಾಯ ಪ್ರಾಗಾಸೀದಭವಾಯ ದಿವೌಕಸಾಮ್ ।
ಸ ಏವ ಭಗವಾನದ್ಯ ವರ್ತತೇ ತದ್ವಿಪರ್ಯಯಮ್
॥ ೨೦ ॥

ಬಲೇನ ಸಚಿವೈರ್ಬುದ್ಧ್ಯಾ ದುರ್ಗೈರ್ಮಂತ್ರೌಷಧಾದಿಭಿಃ ।
ಸಾಮಾದಿಭಿರುಪಾಯೈಶ್ಚ ಕಾಲಂ ನಾತ್ಯೇತಿ ವೈ ಜನಃ
॥ ೨೨ ॥

ಭವದ್ಭಿರ್ನಿರ್ಜಿತಾ ಹ್ಯೇತೇ ಬಹುಶೋಽನುಚರಾ ಹರೇಃ ।
ದೈವೇನರ್ದ್ಧೈಸ್ತ ಏವಾದ್ಯ ಯುಧಿ ಜಿತ್ವಾ ನದಂತಿ ನಃ
॥ ೨೩ ॥

ಏತಾನ್ವಯಂ ವಿಜೇಷ್ಯಾಮೋ ಯದಿ ದೈವಂ ಪ್ರಸೀದತಿ ।
ತಸ್ಮಾತ್ಕಾಲಂ ಪ್ರತೀಕ್ಷಧ್ವಂ ಯೋ ನೋಽರ್ಥತ್ವಾಯ ಕಲ್ಪತೇ
॥ ೨೪ ॥

ನಮ್ಮ ಸ್ವಾಮಿಯಾದರೋ ಸತತವಾಗಿ ಸತ್ಯದಲ್ಲಿಯೇ ಪರಮ ನಿಷ್ಠೆಯುಳ್ಳವನು. ಅದರಲ್ಲಿಯೂ ವಿಶೇಷವಾಗಿ ಯಜ್ಞದ ದೀಕ್ಷಿತನಾಗಿರುವನು. ಅವನು ಬ್ರಾಹ್ಮಣ ಭಕ್ತನೂ, ದಯಾಳುವೂ ಆಗಿರುವುದರಿಂದ ಸುಳ್ಳುಹೇಳಲು ಸಾಧ್ಯವಾಗುವುದಿಲ್ಲ. ॥ ೧೨ ॥ ಇಂತಹ ಸಂದರ್ಭದಲ್ಲಿ ನಮ್ಮ ಶತ್ರುವನ್ನು ವಧಿಸುವುದೇ ನಮ್ಮ ಧರ್ಮವೂ, ಕರ್ತವ್ಯವೂ ಆಗಿದೆ. ಇದರಿಂದ ನಮ್ಮ ಒಡೆಯನ ಸೇವೆಯೂ ಆಗುವುದು' ಎಂದು ನಿರ್ಧರಿಸಿ ಬಲಿ ಚಕ್ರವರ್ತಿಯ ಅನುಚರರು ತಮ್ಮ-ತಮ್ಮ ಆಯುಧಗಳಿಂದ ಸಜ್ಜಾದರು. ॥ ೧೩ ॥ ಪರೀಕ್ಷಿತನೇ! ರಾಜನಾದ ಬಲಿಯು ಬಯಸದಿದ್ದರೂ, ಅವನ ಅನುಮತಿಯನ್ನೂ ಪಡೆಯದೆಯೇ ಎಲ್ಲರೂ ಅತ್ಯಂತ ಕ್ರೋಧಗೊಂಡು ಶೂಲ, ಪಟ್ಟಿಶ ಮುಂತಾದ ಆಯುಧಗಳನ್ನು ಹಿಡಿದುಕೊಂಡು ಭಗವಾನ್ ವಾಮನನನ್ನು ಕೊಲ್ಲಲು ಮುಗಿಬಿದ್ದರು. ॥ ೧೪ ॥ ರಾಜೇಂದ್ರಾ! ದೈತ್ಯ ಸೇನಾಪತಿಗಳು ಆಕ್ರಮಣಕ್ಕಾಗಿ ಓಡಿಬರುವುದನ್ನು ಮಹಾವಿಷ್ಣುವಿನ ಪಾರ್ಷದರು ನೋಡಿದಾಗ ಗಹಗಹಿಸಿ ನಗುತ್ತಾ ತಮ್ಮ-ತಮ್ಮ ಶಸ್ತ್ರಾಸ್ತ್ರಗಳನ್ನು ಎತ್ತಿಕೊಂಡು ದೈತ್ಯಸೈನಿಕರನ್ನು ತಡೆದು ನಿಲ್ಲಿಸಿದರು. ॥ ೧೫ ॥ ನಂದ, ಸುನಂದ, ಜಯ, ವಿಜಯ, ಪ್ರಬಲ, ಬಲ, ಕುಮುದ, ಕುಮುದಾಕ್ಷ, ವಿಷ್ವಕ್ಸೇನ, ಗರುಡ, ಜಯಂತ, ಶ್ರುತದೇವ, ಪುಷ್ಪದಂತ, ಸಾತ್ವತ ಮುಂತಾದ ಭಗವಂತನ ಪಾರ್ಷದರೆಲ್ಲರೂ ಹತ್ತು-ಹತ್ತುಸಾವಿರ ಆನೆಗಳ ಬಲವುಳ್ಳವರು. ಇವರೆಲ್ಲರೂ ಅಸುರರ ಸೇನೆಯನ್ನು ಸಂಹರಿಸತೊಡಗಿದರು. ॥ ೧೬-೧೭ ॥ ಭಗವಂತನ ಪಾರ್ಷದರು ತನ್ನ ಸೈನಿಕರನ್ನು ಕೊಲ್ಲುತ್ತಿರುವುದನ್ನು ಬಲಿಯು ನೋಡಿದನು. ನಮ್ಮ ಸೈನಿಕರು ಕ್ರೋಧಗೊಂಡು ಅವರೊಂದಿಗೆ ಯುದ್ಧಮಾಡಲು ಸಿದ್ಧರಾಗಿದ್ದಾರೆ. ಅವನು ಶುಕ್ರಾಚಾರ್ಯರ ಶಾಪವನ್ನು ನೆನೆದು ವಿಪ್ರಚಿತ್ತಿ, ರಾಹು, ನೇಮಿ ಮೊದಲಾದ ದೈತ್ಯರನ್ನು ಸಂಬೋಧಿಸುತ್ತಾ - ಸಹೋದರರೇ! ನನ್ನ ಮಾತನ್ನು ಕೇಳಿರಿ. ಯುದ್ಧಮಾಡದೆ ಹಿಂದೆ ಸರಿಯಿರಿ. ಈ ಸಮಯವು ನಮಗೆ ಅನುಕೂಲವಾಗಿಲ್ಲ ಎಂದು ನುಡಿದನು. ॥ ೧೮-೧೯ ॥ ಸಮಸ್ತ ಪ್ರಾಣಿಗಳಿಗೆ ಸುಖ ಮತ್ತು ದುಃಖವನ್ನು ಕೊಡಲು ಸಮರ್ಥವಾದ ಕಾಲವನ್ನು ಯಾರಾದರೂ ತನ್ನ ಪ್ರಯತ್ನದಿಂದ ಅತಿಕ್ರಮಿಸಲು ಬಯಸಿದರೆ ಅದು ಅವನ ಶಕ್ತಿಗೆ ಮೀರಿದುದು. ॥ ೨೦ ॥ ಯಾವ ಕಾಲ ಪುರುಷನು ಈ ಹಿಂದೆ ನಮ್ಮ ಉನ್ನತಿಗೂ, ದೇವತೆಗಳ ಅವನತಿಗೂ ಕಾರಣನಾಗಿದ್ದನೋ ಆ ಕಾಲಪುರುಷನೇ ಇಂದು ನಮ್ಮ ಅವನತಿಗೂ, ದೇವತೆಗಳ ಉನ್ನತಿಗೂ ಕಾರಣವಾಗಿದೆ. ॥ ೨೦ ॥ ಮನುಷ್ಯರು – ಬಲ, ಮಂತ್ರಿ, ಬುದ್ಧಿ, ದುರ್ಗ, ಮಂತ್ರ, ಔಷಧಿ ಹಾಗೂ ಸಾಮ-ದಾನ ಮೊದಲಾದ ಉಪಾಯಗಳು – ಇವುಗಳಲ್ಲಿ ಯಾವ ಉಪಾಯದಿಂದಾಗಲೀ, ಅಥವಾ ಎಲ್ಲದರ ಮೂಲಕವಾಗಲೀ ಕಾಲಪುರುಷನನ್ನು ಗೆಲ್ಲಲಾಗುವುದಿಲ್ಲ. ॥ ೨೨ ॥ ದೈವವು ನಿಮಗೆ ಅನುಕೂಲವಾಗಿದ್ದಾಗ ನೀವು ದೇವತೆಗಳನ್ನು ಅನೇಕಬಾರಿ ಗೆದ್ದಿರುವಿರಿ. ಆದರೆ ಇಂದು ಅವರೇ ಯುದ್ಧದಲ್ಲಿ ನಮ್ಮನ್ನು ಗೆದ್ದು ಸಿಂಹನಾದ ಮಾಡುತ್ತಿದ್ದಾರೆ. ॥ ೨೩ ॥ ಮುಂದೆ ದೈವಾನುಕೂಲವು ನಮಗೆ ಒದಗಿ ಬಂದಾಗ ನಾವೂ ಅವರನ್ನು ಗೆದ್ದೇ ಗೆಲ್ಲುತ್ತೇವೆ. ಆದುದರಿಂದ ನೀವೆಲ್ಲ ಈಗ ಯುದ್ಧವನ್ನು ನಿಲ್ಲಿಸಿ, ಕಾರ್ಯಸಿದ್ಧಿಯಾಗುವಂತಹ ಕಾಲವನ್ನು ಪ್ರತೀಕ್ಷೆ ಮಾಡುತ್ತಿರಿ. ॥ ೨೪ ॥

ಶ್ರೀಶುಕ ಉವಾಚ

ಪತ್ಯುರ್ನಿಗದಿತಂ ಶ್ರುತ್ವಾ ದೈತ್ಯದಾನವಯೂಥಪಾಃ ।
ರಸಾಂ ನಿರ್ವಿವಿಶೂ ರಾಜನ್ವಿಷ್ಣುಪಾರ್ಷದತಾಡಿತಾಃ ॥ ೨೫ ॥

ಅಥ ತಾರ್ಕ್ಷ್ಯಸುತೋ ಜ್ಞಾತ್ವಾ ವಿರಾಟ್ಪ್ರಭುಚಿಕೀರ್ಷಿತಮ್ ।
ಬಬಂಧ ವಾರುಣೈಃ ಪಾಶೈರ್ಬಲಿಂ ಸೌತ್ಯೇಽಹನಿ ಕ್ರತೌ ॥ ೨೬ ॥

ಹಾಹಾಕಾರೋ ಮಹಾನಾಸೀ-
ದ್ರೋದಸ್ಯೋಃ ಸರ್ವತೋದಿಶಮ್ ।
ಗೃಹ್ಯಮಾಣೇಽಸುರಪತೌ
ವಿಷ್ಣುನಾ ಪ್ರಭವಿಷ್ಣುನಾ ॥ ೨೭ ॥

ತಂ ಬದ್ಧಂ ವಾರುಣೈಃ ಪಾಶೈರ್ಭಗವಾನಾಹ ವಾಮನಃ ।
ನಷ್ಟಶ್ರಿಯಂ ಸ್ಥಿರಪ್ರಜ್ಞಮುದಾರಯಶಸಂ ನೃಪ ॥ ೨೮ ॥

ಪದಾನಿ ತ್ರೀಣಿ ದತ್ತಾನಿ ಭೂಮೇರ್ಮಹ್ಯಂ ತ್ವಯಾಸುರ ।
ದ್ವಾಭ್ಯಾಂ ಕ್ರಾಂತಾ ಮಹೀ ಸರ್ವಾ ತೃತೀಯಮುಪಕಲ್ಪಯ ॥ ೨೯ ॥

ಯಾವತ್ತಪತ್ಯಸೌ ಗೋಭಿರ್ಯಾವದಿಂದುಃ ಸಹೋಡುಭಿಃ ।
ಯಾವದ್ವರ್ಷತಿ ಪರ್ಜನ್ಯಸ್ತಾವತೀ ಭೂರಿಯಂ ತವ ॥ ೩೦ ॥

ಪದೈಕೇನ ಮಯಾ ಕ್ರಾಂತೋ ಭೂರ್ಲೋಕಃ ಖಂ ದಿಶಸ್ತನೋಃ ।
ಸ್ವರ್ಲೋಕಸ್ತೇ ದ್ವಿತೀಯೇನ ಪಶ್ಯತಸ್ತೇ ಸ್ವಮಾತ್ಮನಾ ॥ ೩೧ ॥

ಪ್ರತಿಶ್ರುತಮದಾತುಸ್ತೇ ನಿರಯೇ ವಾಸ ಇಷ್ಯತೇ ।
ವಿಶ ತ್ವಂ ನಿರಯಂ ತಸ್ಮಾದ್ಗುರುಣಾ ಚಾನುಮೋದಿತಃ ॥ ೩೨ ॥

ವೃಥಾ ಮನೋರಥಸ್ತಸ್ಯ ದೂರೇ ಸ್ವರ್ಗಃ ಪತತ್ಯಧಃ ।
ಪ್ರತಿಶ್ರುತಸ್ಯಾದಾನೇನ ಯೋಽರ್ಥಿನಂ ವಿಪ್ರಲಂಭತೇ ॥ ೩೩ ॥

ವಿಪ್ರಲಬ್ಧೋ ದದಾಮೀತಿ ತ್ವಯಾಹಂ ಚಾಢ್ಯಮಾನಿನಾ ।
ತದ್ವ್ಯಲೀಕಫಲಂ ಭುಂಕ್ಷ್ವ ನಿರಯಂ ಕತಿಚಿತ್ಸಮಾಃ ॥ ೩೪ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿದ್ರಾಜನೇ! ಹೀಗೆ ದೈತ್ಯಸೇನಾನಾಯಕರು ತಮ್ಮ ಒಡೆಯನಾದ ಬಲಿಯ ಮಾತನ್ನು ಕೇಳಿ ಭಗವಂತನ ಪಾರ್ಷದರಿಂದ ಪರಾಜಿತರಾದ ದಾನವರೂ, ದೈತ್ಯಸೇನಾಪತಿಗಳೂ ರಸಾತಳಕ್ಕೆ ಹೊರಟು ಹೋದರು. ॥ ೨೫ ॥ ಅವರು ಹೊರಟುಹೋದ ಬಳಿಕ ಪಕ್ಷಿಶ್ರೇಷ್ಠನಾದ ಗರುಡನು ಭಗವಾನ್ ಶ್ರೀವಾಮನನ ಮನಸ್ಸಿನ ಇಂಗಿತವನ್ನು ಅರಿತು, ಬಲಿಯ ಆ ಅಶ್ವಮೇಧ ಯಜ್ಞದಲ್ಲಿ ಸೋಮಪಾನವಾಗಬೇಕಿದ್ದ ಆ ದಿನದಲ್ಲಿ ವರುಣನ ಪಾಶಗಳಿಂದ ಬಲಿಯನ್ನು ಬಂಧಿಸಿದನು. ॥ ೨೬ ॥ ಸರ್ವಶಕ್ತನಾದ ಭಗವಾನ್ ಮಹಾವಿಷ್ಣುವು ಬಲಿಯನ್ನು ಹೀಗೆ ಬಂಧಿಸಿದಾಗ ಭೂಮ್ಯಂತರಿಕ್ಷಗಳಲ್ಲಿಯೂ, ಸಮಸ್ತ ದಿಕ್ಕುಗಳಲ್ಲಿ ಭಾರೀ ಹಾಹಾಕಾರವೇ ಉಂಟಾಯಿತು. ॥ ೨೭ ॥ ಬಲಿಚಕ್ರವರ್ತಿಯು ವರುಣಪಾಶಗಳಿಂದ ಬಂಧಿಸಲ್ಪಟ್ಟಿದ್ದರೂ, ಅವನ ಸಮಸ್ತ ಸಂಪತ್ತು ನಷ್ಟವಾಗಿ ಹೋಗಿದ್ದರೂ ಅವನು ಮಾತ್ರ ಸ್ಥಿರಪ್ರಜ್ಞನಾಗಿದ್ದನು. ಎಲ್ಲರೂ ಅವನ ಶ್ರೇಷ್ಠವಾದ ಯಶಸ್ಸನ್ನು ಕೊಂಡಾಡುತ್ತಿದ್ದರು. ಪರೀಕ್ಷಿತನೇ! ಆಗ ಭಗವಂತನು ಬಲಿಯ ಬಳಿ ಇಂತೆಂದನು – ॥ ೨೮ ॥ ಅಸುರಶ್ರೇಷ್ಠನೇ! ನೀನು ನನಗೆ ಮೂರುಹೆಜ್ಜೆ ಭೂಮಿಯನ್ನು ದಾನವಾಗಿ ಕೊಟ್ಟಿದ್ದೆ. ಎರಡು ಹೆಜ್ಜೆಗಳಿಂದ ನಾನು ಸಮಸ್ತ ಭೂಮಂಡಲವನ್ನೂ, ಸ್ವರ್ಗಪಾತಾಳ ಹೀಗೆ ಎಲ್ಲವನ್ನೂ ಅಳೆದುಕೊಂಡುಬಿಟ್ಟೆ. ಈಗ ನನಗೆ ಕೊಡಬೇಕಾದ ಮೂರನೆಯ ಹೆಜ್ಜೆಗೆ ಸ್ಥಳಾವಕಾಶವನ್ನು ಮಾಡಿಕೊಡು. ॥ ೨೯ ॥ ಸೂರ್ಯನ ಕಿರಣಗಳು ಎಲ್ಲಿಯವರೆಗೆ ಪ್ರಸರಿಸುವವೆಯೋ, ಚಂದ್ರ ಮತ್ತು ನಕ್ಷತ್ರಗಳ ಕಿರಣಗಳು ಎಲ್ಲಿಯವರೆಗೆ ಪ್ರಸರಿಸುವವೆಯೋ, ಮೋಡಗಳು ಎಲ್ಲಿಯವರೆಗೆ ಮಳೆಗರೆಯುತ್ತವೆಯೋ ಅಲ್ಲಿಯವರೆಗಿನ ಇಡೀ ಪೃಥಿವಿಯು ನಿನ್ನ ಅಧಿಕಾರದಲ್ಲಿತ್ತು. ॥ ೩೦ ॥ ನೀನು ನೋಡು-ನೋಡುತ್ತಿರುವಂತೆ ನಾನು ಒಂದೇ ಹೆಜ್ಜೆಯಿಂದ ಭೂರ್ಲೋಕವನ್ನೂ, ಶರೀರದಿಂದ ಆಕಾಶ ಮತ್ತು ದಿಕ್ಕುಗಳನ್ನು ಅಳೆದುಬಿಟ್ಟೆ. ಎರಡನೆಯ ಹೆಜ್ಜೆಯಿಂದ ಸ್ವರ್ಗವನ್ನು ಅಳೆದುಬಿಟ್ಟೆ. ಹೀಗೆ ನಿನ್ನದೆಲ್ಲವೂ ಈಗ ನನ್ನದಾಗಿದೆ. ॥ ೩೧ ॥ ನೀನು ಮಾಡಿದ ಪ್ರತಿಜ್ಞೆಗನುಸಾರವಾಗಿ ನಿನ್ನಿಂದ ನಡೆಯಲು ಸಾಧ್ಯವಾಗದೆ ಇರುವುದರಿಂದ ನೀನೀಗ ನರಕಕ್ಕೆ ಹೋಗಬೇಕಾಗಿದೆ. ನಿನ್ನ ಗುರುವಿನ ಅನುಮತಿಯು ಇದಕ್ಕೆ ಇದ್ದೇ ಇದೆ. ಈಗ ನೀನು ನರಕವನ್ನು ಪ್ರವೇಶಿಸು. ॥ ೩೨ ॥ ಯಾಚಕನಿಗೆ ದಾನಕೊಡುವ ಪ್ರತಿಜ್ಞೆಮಾಡಿ ಅದನ್ನು ಈಡೇರಿಸದವನು, ಅವನಿಗೆ ಮೋಸ ಮಾಡುವವನ ಎಲ್ಲ ಮನೋರಥಗಳು ವ್ಯರ್ಥವಾಗಿಹೋಗುತ್ತವೆ. ಸ್ವರ್ಗದ ಮಾತಿರಲಿ ಅವನಿಗೆ ನರಕಕ್ಕೆ ಹೋಗಬೇಕಾಗುತ್ತದೆ. ॥ ೩೩ ॥ ನಾನು ಆಢ್ಯನೆಂಬ ಅಭಿಮಾನ ನಿನ್ನಲ್ಲಿತ್ತು. ನಿನಗೆ ಕೊಡುತ್ತೇನೆ ಎಂದು ನೀನು ನನ್ನಲ್ಲಿ ಪ್ರತಿಜ್ಞೆಮಾಡಿ ತಪ್ಪಿರುವೆ. ಈಗ ನೀನು ಕೆಲವು ವರ್ಷಗಳವರೆಗೆ ಈ ಪಾಪದ ಫಲವನ್ನು ಅನುಭವಿಸಬೇಕಾಗುವುದು. ॥ ೩೪ ॥

ಇಪ್ಪತ್ತೊಂದನೆಯ ಅಧ್ಯಾಯವು ಮುಗಿಯಿತು. ॥ ೨೧ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಅಷ್ಟಮ ಸ್ಕಂಧೇ
ವಾಮನಪ್ರಾದುರ್ಭಾವೇ ಬಲಿನಿಗ್ರಹೋ ನಾಮೈಕವಿಂಶೋಽಧ್ಯಾಯಃ ॥ ೨೧ ॥

ಇಪ್ಪತ್ತೆರಡನೆಯ ಅಧ್ಯಾಯ

ಬಲಿಯು ಭಗವಂತನನ್ನು ಸ್ತುತಿಸಿದುದು – ಭಗವಂತನು ಬಲಿಗೆ ಪ್ರಸನ್ನನಾದುದು

ಶ್ರೀಶುಕ ಉವಾಚ

ಏವಂ ವಿಪ್ರಕೃತೋ ರಾಜನ್ಬಲಿರ್ಭಗವತಾಸುರಃ ।
ಭಿದ್ಯಮಾನೋಽಪ್ಯಭಿನ್ನಾತ್ಮಾ ಪ್ರತ್ಯಾಹಾವಿಕ್ಲವಂ ವಚಃ
॥ ೧ ॥

ಬಲಿರುವಾಚ

ಯದ್ಯುತ್ತಮಶ್ಲೋಕ ಭವಾನ್ಮಮೇರಿತಂ
ವಚೋ ವ್ಯಲೀಕಂ ಸುರವರ್ಯ ಮನ್ಯತೇ ।
ಕರೋಮ್ಯೃತಂ ತನ್ನ ಭವೇತ್ಪ್ರಲಂಭನಂ
ಪದಂ ತೃತೀಯಂ ಕುರು ಶೀರ್ಷ್ಣಿ ಮೇ ನಿಜಮ್ ॥ ೨ ॥

ಬಿಭೇಮಿ ನಾಹಂ ನಿರಯಾತ್ಪದಚ್ಯುತೋ
ನ ಪಾಶಬಂಧಾದ್ವ್ಯಸನಾದ್ದುರತ್ಯಯಾತ್ ।
ನೈವಾರ್ಥಕೃಚ್ಛ್ರಾದ್ಭವತೋ ವಿನಿಗ್ರಹಾ-
ದಸಾಧುವಾದಾದ್ಭೃಶಮುದ್ವಿಜೇ ಯಥಾ ॥ ೩ ॥

ಪುಂಸಾಂ ಶ್ಲಾಘ್ಯತಮಂ ಮನ್ಯೇ ದಂಡಮರ್ಹತ್ತಮಾರ್ಪಿತಮ್ ।
ಯಂ ನ ಮಾತಾ ಪಿತಾ ಭ್ರಾತಾ ಸುಹೃದಶ್ಚಾದಿಶಂತಿ ಹಿ
॥ ೪ ॥

ತ್ವಂ ನೂನಮಸುರಾಣಾಂ ನಃ ಪಾರೋಕ್ಷ್ಯಃ ಪರಮೋ ಗುರುಃ ।
ಯೋ ನೋಽನೇಕಮದಾಂಧಾನಾಂ ವಿಭ್ರಂಶಂ ಚಕ್ಷುರಾದಿಶತ್
॥ ೫ ॥

ಯಸ್ಮಿನ್ವೈರಾನುಬಂಧೇನ ರೂಢೇನ ವಿಬುಧೇತರಾಃ ।
ಬಹವೋ ಲೇಭಿರೇ ಸಿದ್ಧಿಂ ಯಾಮು ಹೈಕಾಂತಯೋಗಿನಃ
॥ ೬ ॥

ತೇನಾಹಂ ನಿಗೃಹೀತೋಽಸ್ಮಿ ಭವತಾ ಭೂರಿಕರ್ಮಣಾ ।
ಬದ್ಧಶ್ಚ ವಾರುಣೈಃ ಪಾಶೈರ್ನಾತಿವ್ರೀಡೇ ನ ಚ ವ್ಯಥೇ
॥ ೭ ॥

ಪಿತಾಮಹೋ ಮೇ ಭವದೀಯಸಂಮತಃ
ಪ್ರಹ್ಲಾದ ಆವಿಷ್ಕೃತಸಾಧುವಾದಃ ।
ಭವದ್ವಿಪಕ್ಷೇಣ ವಿಚಿತ್ರವೈಶಸಂ
ಸಂಪ್ರಾಪಿತಸ್ತ್ವತ್ಪರಮಃ ಸ್ವಪಿತ್ರಾ ॥ ೮ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಎಲೈ ಪರೀಕ್ಷಿತನೇ! ಹೀಗೆ ಭಗವಂತನು ಬಲಿಯನ್ನು ಬಹಳವಾಗಿ ತಿರಸ್ಕರಿಸಿ ಮಾತಾಡಿದರೂ ಬಲಿಯು ಧೈರ್ಯದಿಂದ ಕದಲಲಿಲ್ಲ. ಸ್ವಲ್ಪವಾದರೂ ಎದೆಗುಂದದೆ ನಿರ್ಭಯನಾಗಿ ಇಂತೆಂದನು – ॥ ೧ ॥

ದೈತ್ಯರಾಜ ಬಲಿಯು ಹೇಳಿದನು – ಸುರಶ್ರೇಷ್ಠನೇ! ಪುಣ್ಯಶ್ಲೋಕನೇ! ನಾನು ಕೊಟ್ಟ ಮಾತನ್ನು ಅಸತ್ಯವೆಂದು ಭಾವಿಸುವೆಯಾ? ಹಾಗೆಂದಿಗೂ ಆಗಲಾರದು. ನಾನು ಅದನ್ನು ಸತ್ಯವಾಗಿಸಿ ತೋರುವೆನು. ನಿನ್ನನ್ನು ಎಂದಿಗೂ ವಂಚಿಸುವುದಿಲ್ಲ. ನೀನು ಕೃಪೆದೋರಿ ನಿನ್ನ ಮೂರನೆಯ ಹೆಜ್ಜೆಯನ್ನು ನನ್ನ ತಲೆಯ ಮೇಲಿರಿಸು. ॥ ೨ ॥ ನನಗೆ ನರಕಕ್ಕೆ ಹೋಗಲು ಅಥವಾ ರಾಜ್ಯಭ್ರಷ್ಟನಾದ ಬಗ್ಗೆ ದುಃಖವಿಲ್ಲ. ನಾನು ಪಾಶಗಳಿಂದ ಬಂಧಿತನಾಗಿ, ಅಪಾರವಾದ ದುಃಖಸಾಗರದಲ್ಲಿ ಮುಳುಗಿದರೂ ನನಗೆ ಭಯವಿಲ್ಲ. ಅರ್ಥವೆಲ್ಲವೂ ಹೋಗಿ ದಾರಿದ್ರ್ಯ ಬಂತೆಂದೂ, ನೀನು ನನ್ನನ್ನು ಶಿಕ್ಷಿಸುವೆಯೆಂದೂ ನಾನು ಅಂಜುವುದಿಲ್ಲ. ನಾನು ಭಯಪಡುವುದು ಕೇವಲ ಅಪಯಶಸ್ಸಿಗೆ ಮಾತ್ರ. ॥ ೩ ॥ ಪೂಜ್ಯತಮನಾದ ಭಗವಂತನು ಕೊಡುವ ಶಿಕ್ಷೆಯು ಪುರುಷರಿಗೆ ಶ್ರೇಯಸ್ಕರವೆಂದೇ ನಾನು ಭಾವಿಸುತ್ತೇನೆ. ಏಕೆಂದರೆ, ಅಂತಹ ಶಿಕ್ಷೆಯನ್ನು ಮೋಹಪರವಶರಾದ ಮಾತಾ–ಪಿತೃಗಳಾಗಲೀ, ಸಹೋದರ-ಸುಹೃದಯರಾಗಲೀ ಕೊಡಲಾರರು. ॥ ೪ ॥ ನೀನು ಅಡಗಿಕೊಂಡೇ ಅಸುರರಾದ ನಮಗೆ ಉತ್ತಮವಾದ ಶಿಕ್ಷಣವನ್ನು ಕೊಡುತ್ತಾ ಇರುವೆ. ಆದ್ದರಿಂದ ನೀನು ನಮಗೆ ಪರಮ ಗುರುವಾಗಿರುವೆ. ನಾವುಗಳು ಧನ–ಕುಲ–ಬಲ ಮುಂತಾದ ಮದಗಳಿಂದ ಕುರುಡರಾದಾಗ ನೀನು ಆ ಮದಗಳನ್ನು ನಮ್ಮಿಂದ ಕಸಿದುಕೊಂಡು ಜ್ಞಾನದೃಷ್ಟಿಯನ್ನು ಕೊಡುವೆ. ॥ ೫ ॥ ಅಸುರರಾದ ನಮಗೆ ನಿನ್ನಿಂದ ಆಗುವ ಉಪಕಾರವನ್ನು ನಾನು ಎಷ್ಟೆಂದು ಹೇಳಲಿ? ಅನನ್ಯ ಭಾವದಿಂದ ಯೋಗವನ್ನಾಚರಿಸಿ ಯೋಗಿಗಳು ಪಡೆಯುವ ಸಿದ್ಧಿಯನ್ನೇ ಅನೇಕ ಅಸುರರು ನಿನ್ನೊಡನೆ ದೃಢಮೂಲವಾದ ವೈರಭಾವದಿಂದಲೇ ಪಡೆದುಕೊಂಡಿಲ್ಲವೇ? ॥ ೬ ॥ ಇಂತಹ ಅಪಾರ ಮಹಿಮೆಯೂ, ಅನಂತವಾದ ಲೀಲೆಗಳುಳ್ಳ ಪರಮಪುರುಷ ಪರಮಾತ್ಮನಾದ ನಿನ್ನಿಂದ ನಾನು ಶಿಕ್ಷಿಸಲ್ಪಟ್ಟು ವರುಣಪಾಶಗಳಿಂದ ಬಂಧಿತನಾಗಿದ್ದೇನೆ. ಇದರಿಂದ ನನಗೆ ಯಾವ ವಿಧವಾದ ನಾಚಿಕೆಯೂ, ವ್ಯಥೆಯೂ ಇಲ್ಲ. ॥ ೭ ॥ ಪ್ರಭುವೇ! ನನ್ನ ಪಿತಾಮಹನಾದ ಪ್ರಹ್ಲಾದನ ಕೀರ್ತಿಯು ಜಗತ್ಪ್ರಸಿದ್ಧವಾಗಿದೆ. ಅವನನ್ನು ನಿನ್ನ ಭಕ್ತರಲ್ಲಿ ಶ್ರೇಷ್ಠನೆಂದು ಪರಿಗಣಿಸಲ್ಪಟ್ಟಿದೆ. ಅವನ ತಂದೆಯಾದ ಹಿರಣ್ಯಕಶಿಪುವಿಗೆ ನಿನ್ನಲ್ಲಿ ವೈರವಿದ್ದ ಕಾರಣ ಅವನು ಮಗುವಿಗೆ ಅನೇಕ ಪ್ರಕಾರದ ದುಃಖವನ್ನು ಕೊಟ್ಟನು. ಆದರೂ ಪ್ರಹ್ಲಾದನು ನಿನ್ನನ್ನೇ ಪರಮಾಶ್ರಯವನ್ನಾಗಿ ಭಾವಿಸಿದನು. ತನ್ನ ಜೀವನವನ್ನೇ ಅವನು ಸಂಪೂರ್ಣವಾಗಿ ನಿನಗೆ ಒಪ್ಪಿಸಿಬಿಟ್ಟನು. ॥ ೮ ॥ ನಮ್ಮ ತಾತನಾದ ಪ್ರಹ್ಲಾದನ ಅಭಿಪ್ರಾಯ

ಕಿಮಾತ್ಮನಾನೇನ ಜಹಾತಿ ಯೋಽಂತತಃ
ಕಿಂ ರಿಕ್ಥಹಾರೈಃ ಸ್ವಜನಾಖ್ಯದಸ್ಯುಭಿಃ ।
ಕಿಂ ಜಾಯಯಾ ಸಂಸೃತಿಹೇತುಭೂತಯಾ
ಮರ್ತ್ಯಸ್ಯ ಗೇಹೈಃ ಕಿಮಿಹಾಯುಷೋ ವ್ಯಯಃ ॥ ೯ ॥

ಇತ್ಥಂ ಸ ನಿಶ್ಚಿತ್ಯ ಪಿತಾಮಹೋ ಮಹಾ-
ನಗಾಧಬೋಧೋ ಭವತಃ ಪಾದಪದ್ಮಮ್ ।
ಧ್ರುವಂ ಪ್ರಪೇದೇ ಹ್ಯಕುತೋಭಯಂ ಜನಾದ್
ಭೀತಃ ಸ್ವಪಕ್ಷಕ್ಷಪಣಸ್ಯ ಸತ್ತಮಃ ॥ ೧೦ ॥

ಅಥಾಹಮಪ್ಯಾತ್ಮರಿಪೋಸ್ತವಾಂತಿಕಂ
ದೈವೇನ ನೀತಃ ಪ್ರಸಭಂ ತ್ಯಾಜಿತಶ್ರೀಃ ।
ಇದಂ ಕೃತಾಂತಾಂತಿಕವರ್ತಿ ಜೀವಿತಂ
ಯಯಾಧ್ರುವಂ ಸ್ತಬ್ಧಮತಿರ್ನ ಬುಧ್ಯತೇ ॥ ೧೧ ॥

ಶ್ರೀಶುಕ ಉವಾಚ

ತಸ್ಯೇತ್ಥಂ ಭಾಷಮಾಣಸ್ಯ ಪ್ರಹ್ಲಾದೋ ಭಗವತ್ಪ್ರಿಯಃ ।
ಆಜಗಾಮ ಕುರುಶ್ರೇಷ್ಠ ರಾಕಾಪತಿರಿವೋತ್ಥಿತಃ ॥ ೧೨ ॥

ತಮಿಂದ್ರಸೇನಃ ಸ್ವಪಿತಾಮಹಂ ಶ್ರಿಯಾ
ವಿರಾಜಮಾನಂ ನಲಿನಾಯತೇಕ್ಷಣಮ್ ।
ಪ್ರಾಂಶುಂ ಪಿಶಂಗಾಂಬರಮಂಜನತ್ವಿಷಂ
ಪ್ರಲಂಬಬಾಹುಂ ಸುಭಗಂ ಸಮೈಕ್ಷತ ॥ ೧೩ ॥

ತಸ್ಮೈ ಬಲಿರ್ವಾರುಣಪಾಶಯಂತ್ರಿತಃ
ಸಮರ್ಹಣಂ ನೋಪಜಹಾರ ಪೂರ್ವವತ್ ।
ನನಾಮ ಮೂರ್ಧ್ನಾಶ್ರುವಿಲೋಲಲೋಚನಃ
ಸವ್ರೀಡನೀಚೀನಮುಖೋ ಬಭೂವ ಹ ॥ ೧೪ ॥

ಸ ತತ್ರ ಹಾಸೀನಮುದೀಕ್ಷ್ಯ ಸತ್ಪತಿಂ
ಸುನಂದನಂದಾದ್ಯನುಗೈರುಪಾಸಿತಮ್ ।
ಉಪೇತ್ಯ ಭೂಮೌ ಶಿರಸಾ ಮಹಾಮನಾ
ನನಾಮ ಮೂರ್ಧ್ನಾ ಪುಲಕಾಶ್ರುವಿಕ್ಲವಃ ॥ ೧೫ ॥

ಪ್ರಹ್ಲಾದ ಉವಾಚ

ತ್ವಯೈವ ದತ್ತಂ ಪದಮೈಂದ್ರಮೂರ್ಜಿತಂ
ಹೃತಂ ತದೇವಾದ್ಯ ತಥೈವ ಶೋಭನಮ್ ।
ಮನ್ಯೇ ಮಹಾನಸ್ಯ ಕೃತೋ ಹ್ಯನುಗ್ರಹೋ
ವಿಭ್ರಂಶಿತೋ ಯಚ್ಛ್ರಿಯ ಆತ್ಮಮೋಹನಾತ್ ॥ ೧೬ ॥

ಹೀಗಿದ್ದು – ಎಂದಾದರೊಂದು ದಿನ ಕಳಚಿ ಬಿದ್ದುಹೋಗುವ ಶರೀರದಿಂದ ಏನು ಪ್ರಯೋಜನವಿದೆ? ಧನ-ಸಂಪತ್ತನ್ನು ದೋಚುವ ಸ್ವಜನರಂತೆ ಕಂಡುಬರುವ ಕಳ್ಳರಿಂದ ತನಗೆ ಏನಾಗಬೇಕಾಗಿದೆ? ಜನ್ಮ-ಮರಣ ಚಕ್ರದಲ್ಲಿ ಕೆಡಹುವಂತಹ ಹೆಂಡತಿಯಿಂದಲಾದರೂ ಏನು ಲಾಭವಿದೆ? ಒಂದಲ್ಲ ಒಂದುದಿನ ಸಾಯಲೇಬೇಕಾಗಿರುವಾಗ ಮನೆಯ ಕುರಿತು ಮೋಹವಿಡುವುದರಲ್ಲಿ ಯಾವ ಸ್ವಾರ್ಥವಿದೆ? ಇವೆಲ್ಲ ವಸ್ತುಗಳಲ್ಲಿ ಮೈಮರೆಯುವುದು ಕೇವಲ ತನ್ನ ಆಯುಸ್ಸನ್ನು ಹಾಳುಮಾಡುವುದು ಮಾತ್ರವಾಗಿದೆ. ॥ ೯ ॥ ಹೀಗೆ ನಿಶ್ಚಯಮಾಡಿದ ನನ್ನ ಪಿತಾಮಹ ಪ್ರಹ್ಲಾದನು ಲೌಕಿಕ ದೃಷ್ಟಿಯಿಂದ ಅವನ ಬಂಧು-ಬಾಂಧವರನ್ನು ನಾಶಮಾಡುವ ಶತ್ರುವು ನೀನೇ ಎಂದು ತಿಳಿದಿದ್ದರೂ ಭಯ ರಹಿತವಾದ, ಅವಿನಾಶಿಯಾದ ನಿನ್ನ ಚರಣ ಕಮಲಗಳಲ್ಲೇ ಶರಣಾಗಿದ್ದನು. ಏನೇ ಇರಲಿ, ಅವನು ಸಂಸಾರದಿಂದ ಪರಮ ವಿರಕ್ತನೂ, ಅಗಾಧಬೋಧಸಂಪನ್ನನೂ, ಉದಾರ ಹೃದಯನೂ, ಸಂತ ಶಿರೋಮಣಿಯೂ ಆಗಿದ್ದನು. ॥ ೧೦ ॥ ಹಾಗೆ ನೋಡಿದರೆ ನೀನೂ ನನ್ನ ಶತ್ರುವೇ ಆಗಿರುವೆ. ಹಾಗಿದ್ದರೂ ವಿಧಿಯು ನನ್ನನ್ನು ಬಲವಂತವಾಗಿ ಸಕಲ ಸಂಪತ್ತಿನಿಂದ ಬೇರ್ಪಡಿಸಿ ನಿನ್ನ ಬಳಿಗೆ ತಂದುಬಿಟ್ಟಿದೆ. ಇದೂ ಒಳ್ಳೆಯದೇ ಆಯಿತು. ಏಕೆಂದರೆ, ಸಂಪತ್ತು-ಐಶ್ವರ್ಯದಿಂದ ಜೀವಿಯ ಬುದ್ಧಿಯು ಜಡವಾಗಿ – ನನ್ನ ಈ ಜೀವನ ಮೃತ್ಯುವಿನ ಹಿಡಿತದಲ್ಲಿದೆ, ಇದು ಅನಿತ್ಯವಾಗಿದೆ ಎಂಬುದೂ ತಿಳಿಯದೇ ಹೋಗುತ್ತಾನೆ. ॥ ೧೧ ।

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ! ಬಲಿಚಕ್ರವರ್ತಿಯು ಹೀಗೆ ಹೇಳುತ್ತಿದ್ದಂತೆ ಭಗವಂತನ ಪ್ರೇಮ ಪಾತ್ರನಾದ ಪ್ರಹ್ಲಾದನು ಚಂದ್ರನು ಉದಯಿಸಿಬಂದಂತೆ ಅಲ್ಲಿಗೆ ಆಗಮಿಸಿದನು. ॥ ೧೨ ॥ ಶ್ರೀಸಂಪನ್ನನಾಗಿದ್ದ (ಸೌಂದರ್ಯದಿಂದ ಕೂಡಿದ) ಕಾಂತಿಯಿಂದ ವಿರಾಜಿಸುತ್ತಿದ್ದ, ಕಮಲದಂತೆ ವಿಶಾಲಕಣ್ಣುಗಳುಳ್ಳ, ಆಜಾನುಬಾಹುವಾಗಿದ್ದು ಉನ್ನತವಾಗಿದ್ದ ಶ್ಯಾಮಲ ಶರೀರದಲ್ಲಿ ಪೀತಾಂಬರವನ್ನು ಧರಿಸಿದ್ದ ಪಿತಾಮಹನಾದ ಪ್ರಹ್ಲಾದನನ್ನು ಬಲಿಯು ನೋಡಿದನು. ॥ ೧೩ ॥ ಆ ಸಮಯದಲ್ಲಿ ಬಲಿಯು ವರುಣಪಾಶದಲ್ಲಿ ಬಂಧಿತನಾದ್ದರಿಂದ ಪ್ರಹ್ಲಾದನು ಬಂದಾಗ ಮೊದಲಿನಂತೆ ಪೂಜಿಸದೇ ಹೋದನು. ಕಂಬನಿ ತುಂಬಿದ ಕಣ್ಣುಗಳಿಂದ ಕೂಡಿ ಕೇವಲ ತಲೆಯನ್ನು ತಗ್ಗಿಸುವುದರಿಂದಲೇ ಪ್ರಹ್ಲಾದನನ್ನು ವಂದಿಸಿ ಪುನಃ ನಾಚಿಕೆಯಿಂದ ತಲೆತಗ್ಗಿಸಿ ಕುಳಿತನು. ॥ ೧೪ ॥ ಮಹಾತ್ಮನಾದ ಸುನಂದರೇ ಮೊದಲಾದ ಭಕ್ತರಿಂದ ಸೇವಿಸಲ್ಪಡುತ್ತಿದ್ದ, ಸತ್ಪುರುಷರಿಗೆ ಒಡೆಯನಾದ ಭಕ್ತವತ್ಸಲ ಶ್ರೀಹರಿಯು ಅಲ್ಲೇ ನಿಂತಿರುವುದನ್ನು ನೋಡಿ ಪುಳಕಿತನಾಗಿ, ಆನಂದಬಾಷ್ಪಗಳನ್ನು ಸುರಿಸುತ್ತಾ ಭಗವಂತನ ಬಳಿಗೆ ಹೋಗಿ ದೀರ್ಘದಂಡ ನಮಸ್ಕಾರವನ್ನು ಮಾಡಿ, ಕೈಜೋಡಿಸಿಕೊಂಡು ಇಂತೆಂದನು – ॥ ೧೫ ॥

ಪ್ರಹ್ಲಾದನು ಹೇಳಿದನು – ಭಗವಂತಾ! ಈ ಬಲಿಗೆ ಐಶ್ವರ್ಯ ಪೂರ್ಣವಾದ ಇಂದ್ರಪದವಿಯನ್ನು ಕೊಟ್ಟವನೂ ನೀನೇ,. ಈಗ ಅದೇ ಸಾರ್ವಭೌಮತ್ವವನ್ನು ಅಪಹರಿಸಿದವನೂ ನೀನೇ. ನೀನು ಕೊಡುವುದು ಎಷ್ಟು ಸುಂದರವೋ ಪಡೆಯುವುದೂ ಅಷ್ಟೇ

ಯಯಾ ಹಿ ವಿದ್ವಾನಪಿ ಮುಹ್ಯತೇ ಯತಃ
ತತ್ಕೋ ವಿಚಷ್ಟೇ ಗತಿಮಾತ್ಮನೋ ಯಥಾ ।
ತಸ್ಮೈ ನಮಸ್ತೇ ಜಗದೀಶ್ವರಾಯ ವೈ
ನಾರಾಯಣಾಯಾಖಿಲಲೋಕಸಾಕ್ಷಿಣೇ ॥ ೧೭ ॥

ಶ್ರೀಶುಕ ಉವಾಚ

ತಸ್ಯಾನುಶೃಣ್ವತೋ ರಾಜನ್ ಪ್ರಹ್ಲಾದಸ್ಯ ಕೃತಾಂಜಲೇಃ ।
ಹಿರಣ್ಯಗರ್ಭೋ ಭಗವಾನುವಾಚ ಮಧುಸೂದನಮ್ ॥ ೧೮ ॥

ಬದ್ಧಂ ವೀಕ್ಷ್ಯ ಪತಿಂ ಸಾಧ್ವೀ ತತ್ಪತ್ನೀ ಭಯವಿಹ್ವಲಾ ।
ಪ್ರಾಂಜಲಿಃ ಪ್ರಣತೋಪೇಂದ್ರಂ ಬಭಾಷೇಽವಾಙ್ಮುಖೀ ನೃಪ ॥ ೧೯ ॥

ವಿಂಧ್ಯಾವಲಿರುವಾಚ

ಕ್ರೀಡಾರ್ಥಮಾತ್ಮನ ಇದಂ ತ್ರಿಜಗತ್ಕೃತಂ ತೇ
ಸ್ವಾಮ್ಯಂ ತು ತತ್ರ ಕುಧಿಯೋಽಪರ ಈಶ ಕುರ್ಯುಃ ।
ಕರ್ತುಃ ಪ್ರಭೋಸ್ತವ ಕಿಮಸ್ಯತ ಆವಹಂತಿ
ತ್ಯಕ್ತಹ್ರಿಯಸ್ತ್ವದವರೋಪಿತಕರ್ತೃವಾದಾಃ ॥ ೨೦ ॥

ಬ್ರಹ್ಮೋವಾಚ

ಭೂತಭಾವನ ಭೂತೇಶ ದೇವದೇವ ಜಗನ್ಮಯ ।
ಮುಂಚೈನಂ ಹೃತಸರ್ವಸ್ವಂ ನಾಯಮರ್ಹತಿ ನಿಗ್ರಹಮ್ ॥ ೨೧ ॥

ಕೃತ್ಸ್ನಾ ತೇಽನೇನ ದತ್ತಾ ಭೂರ್ಲೋಕಾಃ ಕರ್ಮಾರ್ಜಿತಾಶ್ಚ ಯೇ ।
ನಿವೇದಿತಂ ಚ ಸರ್ವಸ್ವಮಾತ್ಮಾವಿಕ್ಲವಯಾ ಧಿಯಾ ॥ ೨೨ ॥

ಯತ್ಪಾದಯೋರಶಠಧೀಃ ಸಲಿಲಂ ಪ್ರದಾಯ
ದೂರ್ವಾಂಕುರೈರಪಿ ವಿಧಾಯ ಸತೀಂ ಸಪರ್ಯಾಮ್ ।
ಅಪ್ಯುತ್ತಮಾಂ ಗತಿಮಸೌ ಭಜತೇ ತ್ರಿಲೋಕೀಂ
ದಾಶ್ವಾನವಿಕ್ಲವಮನಾಃ ಕಥಮಾರ್ತಿಮೃಚ್ಛೇತ್ ॥ ೨೩ ॥

ಸುಂದರವು. ಮನಸ್ಸನ್ನು ಮರಳುಗೊಳಿಸುವ ರಾಜ್ಯಲಕ್ಷ್ಮಿಯಿಂದ ಇವನನ್ನು ದೂರಗೊಳಿಸಿದುದು ನೀನು ಇವನ ಮೇಲೆ ತೋರಿದ ಪರಮಾನುಗ್ರಹವೆಂದೇ ನಾನು ಭಾವಿಸುತ್ತೇನೆ. ॥ ೧೬ ॥ ಐಶ್ವರ್ಯ ಮದವು ವಿದ್ವಾಂಸನನ್ನೂ ಕೂಡ ಮರಳುಗೊಳಿಸುತ್ತದೆ. ಧನಮದವಿರುವಾಗ ಯಾರಿಗೆ ತಾನೇ ನಿಜವಾದ ಸ್ವ-ಸ್ವರೂಪವನ್ನು ಕಂಡುಕೊಳ್ಳಲು ಸಾಧ್ಯವಾಗುತ್ತದೆ? ಆದ್ದರಿಂದ ಆತ್ಮೋದ್ಧಾರಕ್ಕೆ ತಡೆಯನ್ನುಂಟು ಮಾಡುವಂತಹ ಐಶ್ವರ್ಯ ಕಸಿದುಕೊಂಡು ಮಹೋಪಕಾರ ಮಾಡಿದ ಸಮಸ್ತ ಜಗತ್ತಿಗೆ ಈಶ್ವರನಾದ, ಎಲ್ಲರ ಹೃದಯದಲ್ಲಿ ವಿರಾಜಮಾನನಾದ, ಎಲ್ಲರ ಸಾಕ್ಷಿಭೂತನಾಗಿರುವ ಶ್ರೀಮನ್ನಾರಾಯಣನಾದ ನಿನಗೆ ನಾನು ನಮಸ್ಕರಿಸುತ್ತೇನೆ. ॥ ೧೭ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ! ಶ್ರೀವಾಮನಮೂರ್ತಿಯ ಮುಂದೆ ಪ್ರಹ್ಲಾದನು ಕೈಮುಗಿದುಕೊಂಡು ನಿಂತಿದ್ದನು. ಅವನಿಗೆ ಕೇಳಿಸುವಂತೆ ಪೂಜ್ಯರಾದ ಬ್ರಹ್ಮದೇವರು ಭಗವಾನ್ ವಾಮನನ ಬಳಿ ಏನೋ ಹೇಳಬೇಕೆಂದಿದ್ದರು. ॥ ೧೮ ॥ ಆದರೆ ಅಷ್ಟರಲ್ಲಿ ಬಲಿಯಪತ್ನಿಯಾದ ಪರಮಸಾಧ್ವಿಯಾದ ವಿಂಧ್ಯಾವಲಿಯು ವರುಣಪಾಶಗಳಿಂದ ಬಂಧಿಸಲ್ಪಟ್ಟ ತನ್ನ ಪತಿಯನ್ನು ನೋಡಿ ಭಯದಿಂದ ಗಾಬರಿಗೊಂಡು ಭಗವಂತನ ಪಾದಗಳಲ್ಲಿ ನಮಸ್ಕರಿಸಿ, ಕೈಜೋಡಿಸಿಕೊಂಡು, ತಲೆಯನ್ನು ತಗ್ಗಿಸಿಕೊಂಡು ಪ್ರಾರ್ಥಿಸಿದಳು. ॥ ೧೯ ॥

ವಿಂಧ್ಯಾವಲಿಯು ಹೇಳಿದಳು – ಸ್ವಾಮಿಯೇ! ನೀನು ನಿನ್ನ ಕ್ರೀಡೆಗಾಗಿಯೇ ಈ ಮೂರು ಲೋಕಗಳನ್ನು ಸೃಷ್ಟಿಸಿರುವೆ. ಬುದ್ಧಿಹೀನರಾದವರೇ ತಮ್ಮನ್ನು ಇದರ ಒಡೆಯರೆಂದು ಭಾವಿಸುತ್ತಾರೆ. ಆದರೆ ನೀನೇ ಇದರ ಸೃಷ್ಟಿ, ಸ್ಥಿತಿ, ಲಯಗಳಿಗೆ ಕಾರಣನಾಗಿರುವೆ. ನಿನ್ನ ಮಾಯೆಯಿಂದ ಮೋಹಿತರಾಗಿ ತಮ್ಮನ್ನು ಸುಳ್ಳು-ಸುಳ್ಳೇ ಕರ್ತೃವೆಂದು ತಿಳಿಯುವ ನಿರ್ಲಜ್ಜರಾದವರು ನಿನಗೇನು ಅರ್ಪಿಸಬಲ್ಲರು? ॥ ೨೦ ॥

ಬ್ರಹ್ಮದೇವರು ಹೇಳಿದರು – ಸಕಲ ಪ್ರಾಣಿಗಳನ್ನೂ ಸಲಹತಕ್ಕವನೇ! ಎಲ್ಲ ಪ್ರಾಣಿಗಳಿಗೂ ಒಡೆಯನೇ! ಜಗತ್ಸ್ವರೂಪನಾದ ದೇವಶ್ರೇಷ್ಠನೇ! ಈಗ ನೀನು ಇವನನ್ನು ಬಿಟ್ಟುಬಿಡು. ನೀನು ಇವನ ಸರ್ವಸ್ವವನ್ನು ಪಡೆದುಕೊಂಡಿರುವೆ. ಆದ್ದರಿಂದ ಈಗ ಇವನು ಶಿಕ್ಷೆಗೆ ಅರ್ಹನಲ್ಲ. ॥ ೨೧ ॥ ಇವನು ತನ್ನ ಸಮಗ್ರವಾದ ಭೂಮಂಡಲವನ್ನು ಹಾಗೂ ಸತ್ಕರ್ಮಗಳಿಂದ ಸಂಪಾದಿಸಿದ ಸ್ವರ್ಗಾದಿ ಪುಣ್ಯಲೋಕಗಳನ್ನೂ, ತನ್ನ ಸರ್ವಸ್ವವನ್ನೂ ಹಾಗೂ ಆತ್ಮವನ್ನೇ (ಶರೀರವನ್ನೇ) ನಿನಗೆ ಸಮರ್ಪಿಸಿಬಿಟ್ಟಿರುವನು. ಹೀಗೆ ಮಾಡುವಾಗಲೂ ಇವನ ಬುದ್ಧಿಯು ಸ್ಥಿರವಾಗಿದೆ, ಧೈರ್ಯದಿಂದ ಚ್ಯುತನಾಗಲಿಲ್ಲ. ॥ ೨೨ ॥ ಓ ಕರುಣಾಳುವಾದ ಪ್ರಭುವೇ! ಶುದ್ಧ ಹೃದಯದಿಂದ ಲೋಭವನ್ನು ಬಿಟ್ಟು ನಿನ್ನ ಚರಣಕಮಲಗಳಲ್ಲಿ ಅರ್ಘ್ಯಪಾದ್ಯಾದಿಗಳನ್ನು ಸಮರ್ಪಿಸಿ ಕೇವಲ ದೂರ್ವಾದಲ (ತುಲಸೀದಳ)ದಿಂದ ನಿನ್ನನ್ನು ಪೂಜಿಸುವವನೂ ಕೂಡ ಉತ್ತಮಗತಿಯನ್ನು ಹೊಂದುತ್ತಾನೆ. ಹೀಗಿರುವಾಗ ಆದರಪೂರ್ವಕವಾಗಿ ಧೈರ್ಯ ಮತ್ತು ಸ್ಥಿರತೆಯಿಂದ ತನ್ನ ಮೂರುಲೋಕಗಳನ್ನೇ ನಿನಗೆ ದಾನವಾಗಿ ನಿನ್ನ ಪಾದಾರವಿಂದಗಳಲ್ಲಿ ಸಮರ್ಪಿಸಿರುವ ಈ ಬಲಿಯು ಹೇಗೆ ತಾನೇ ದುಃಖಕ್ಕೆ ಭಾಗಿಯಾಗುವನು? ॥ ೨೩ ॥

ಶ್ರೀಭಗವಾನುವಾಚ

ಬ್ರಹ್ಮನ್ಯಮನುಗೃಹ್ಣಾಮಿ ತದ್ವಿಶೋ ವಿಧುನೋಮ್ಯಹಮ್ ।
ಯನ್ಮದಃ ಪುರುಷಃ ಸ್ತಬ್ಧೋ ಲೋಕಂ ಮಾಂ ಚಾವಮನ್ಯತೇ ॥ ೨೪ ॥

ಯದಾ ಕದಾಚಿಜ್ಜೀವಾತ್ಮಾ ಸಂಸರನ್ನಿಜಕರ್ಮಭಿಃ ।
ನಾನಾಯೋನಿಷ್ವನೀಶೋಽಯಂ ಪೌರುಷೀಂ ಗತಿಮಾವ್ರಜೇತ್ ॥ ೨೫ ॥

ಜನ್ಮಕರ್ಮವಯೋರೂಪವಿದ್ಯೈಶ್ವರ್ಯಧನಾದಿಭಿಃ ।
ಯದ್ಯಸ್ಯ ನ ಭವೇತ್ಸ್ತಂಭಸ್ತತ್ರಾಯಂ ಮದನುಗ್ರಹಃ ॥ ೨೬ ॥

ಮಾನಸ್ತಂಭನಿಮಿತ್ತಾನಾಂ ಜನ್ಮಾದೀನಾಂ ಸಮಂತತಃ ।
ಸರ್ವಶ್ರೇಯಃಪ್ರತೀಪಾನಾಂ ಹಂತ ಮುಹ್ಯೇನ್ನ ಮತ್ಪರಃ ॥ ೨೭ ॥

ಏಷ ದಾನವದೈತ್ಯಾನಾಮಗ್ರಣೀಃ ಕೀರ್ತಿವರ್ಧನಃ ।
ಅಜೈಷೀದಜಯಾಂ ಮಾಯಾಂ ಸೀದನ್ನಪಿ ನ ಮುಹ್ಯತಿ ॥ ೨೮ ॥

ಕ್ಷೀಣರಿಕ್ಥಶ್ಚ್ಯುತಃ ಸ್ಥಾನಾತ್ ಕ್ಷಿಪ್ತೋ ಬದ್ಧಶ್ಚ ಶತ್ರುಭಿಃ ।
ಜ್ಞಾತಿಭಿಶ್ಚ ಪರಿತ್ಯಕ್ತೋ ಯಾತನಾಮನುಯಾಪಿತಃ ॥ ೨೯ ॥

ಗುರುಣಾ ಭರ್ತ್ಸಿತಃ ಶಪ್ತೋ ಜಹೌ ಸತ್ಯಂ ನ ಸುವ್ರತಃ ।
ಛಲೈರುಕ್ತೋ ಮಯಾ ಧರ್ಮೋ ನಾಯಂ ತ್ಯಜತಿ ಸತ್ಯವಾಕ್ ॥ ೩೦ ॥

ಏಷ ಮೇ ಪ್ರಾಪಿತಃ ಸ್ಥಾನಂ ದುಷ್ಪ್ರಾಪಮಮರೈರಪಿ ।
ಸಾವರ್ಣೇರಂತರಸ್ಯಾಯಂ ಭವಿತೇಂದ್ರೋ ಮದಾಶ್ರಯಃ ॥ ೩೧ ॥

ತಾವತ್ಸುತಲಮಧ್ಯಾಸ್ತಾಂ ವಿಶ್ವಕರ್ಮವಿನಿರ್ಮಿತಮ್ ।
ಯನ್ನಾಧಯೋ ವ್ಯಾಧಯಶ್ಚ ಕ್ಲಮಸ್ತಂದ್ರಾ ಪರಾಭವಃ ।
ನೋಪಸರ್ಗಾ ನಿವಸತಾಂ ಸಂಭವಂತಿ ಮಮೇಕ್ಷಯಾ ॥ ೩೨ ॥

ಇಂದ್ರಸೇನ ಮಹಾರಾಜ ಯಾಹಿ ಭೋ ಭದ್ರಮಸ್ತು ತೇ ।
ಸುತಲಂ ಸ್ವರ್ಗಿಭಿಃ ಪ್ರಾರ್ಥ್ಯಂ ಜ್ಞಾತಿಭಿಃ ಪರಿವಾರಿತಃ ॥ ೩೩ ॥

ನ ತ್ವಾಮಭಿಭವಿಷ್ಯಂತಿ ಲೋಕೇಶಾಃ ಕಿಮುತಾಪರೇ ।
ತ್ವಚ್ಛಾಸನಾತಿಗಾನ್ ದೈತ್ಯಾಂಶ್ಚಕ್ರಂ ಮೇ ಸೂದಯಿಷ್ಯತಿ ॥ ೩೪ ॥

ಶ್ರೀಭಗವಂತನು ಹೇಳಿದನು – ಬ್ರಹ್ಮನೇ ನಾನು ಯಾರಮೇಲೆ ಕೃಪೆದೋರುವೆನೋ ಅವನ ಧನವನ್ನು ಮೊದಲಿಗೆ ಕಿತ್ತುಕೊಳ್ಳುವೆನು. ಏಕೆಂದರೆ, ಮನುಷ್ಯನು ಧನಮದದಿಂದ ಉನ್ಮತ್ತನಾದಾಗ ನನ್ನನ್ನೂ, ಲೋಕವನ್ನೂ (ಜನರನ್ನು) ತಿರಸ್ಕಾರಬುದ್ಧಿಯಿಂದ ಕಾಣುತ್ತಾನೆ. ॥ ೨೪ ॥ ಈ ಜೀವಿಯು ತಾನು ಮಾಡಿದ ಶುಭಾ ಶುಭ ಕರ್ಮಗಳಿಂದ ವಿವಶನಾಗಿ ಅನೇಕ ಯೋನಿಗಳಲ್ಲಿ ಅಲೆಯುತ್ತಾ ಇರುತ್ತಾನೆ. ಎಂದಾದರೊಮ್ಮೆ ನನ್ನ ಹಿರಿದಾದ ಕೃಪೆಯಿಂದ ಮನುಷ್ಯ ಶರೀರವನ್ನು ಪಡೆಯುತ್ತಾನೆ. ॥ ೨೫ ॥ ಮನುಷ್ಯನಾಗಿ ಹುಟ್ಟಿದ ಬಳಿಕ ಕುಲೀನತೆ, ಕರ್ಮ, ವಯಸ್ಸು, ರೂಪ, ವಿದ್ಯೆ, ಐಶ್ವರ್ಯ, ಸಂಪತ್ತು ಇತ್ಯಾದಿಗಳಿಂದ ಅಹಂಕಾರ ಬಾರದಿದ್ದರೆ ನನ್ನ ಅನುಗ್ರಹಕ್ಕೆ ಪಾತ್ರನಾಗಿದ್ದಾನೆ ಎಂದು ತಿಳಿಯಬೇಕು. ॥ ೨೬ ॥ ಕುಲೀನತೆ, ವಿದ್ಯೆ, ಸಂಪತ್ತು ಮುಂತಾದವುಗಳು ಅಹಂಕಾರ, ಜಡತೆಗಳನ್ನುಂಟು ಮಾಡುವುದಾದರೂ, ಮನುಷ್ಯನ ಶ್ರೇಯಸ್ಸಿಗೆ ಪ್ರತಿಬಂಧಕಗಳಾಗಿದ್ದರೂ, ನನಗೆ ಶರಣಾಗತರಾದವರು ಇವುಗಳಿಂದ ಮೋಹಿತರಾಗುವುದಿಲ್ಲ. ॥ ೨೭ ॥ ದೈತ್ಯ-ದಾನವ ವಂಶಗಳೆರಡರಲ್ಲೂ ಅಗ್ರಗಣ್ಯನಾಗಿರುವ ಈ ಬಲಿಯು ಆ ವಂಶಗಳ ಕೀರ್ತಿಯನ್ನು ಹೆಚ್ಚಿಸುವವನಾಗಿದ್ದಾನೆ. ಈತನು ಜಯಿಸಲು ಅಸಾಧ್ಯವಾದ ನನ್ನ ಮಾಯೆಯನ್ನು ಗೆದ್ದಿರುವನು. ನೀನೇ ನೋಡುತ್ತಿರುವಂತೆ ಇಷ್ಟು ಕಷ್ಟಪಡುತ್ತಿದ್ದರೂ ಇವನು ಮೋಹಿತನಾಗಲಿಲ್ಲ. ॥ ೨೮ ॥ ಇವನ ಧನ-ಐಶ್ವರ್ಯ ಕಸಿದುಕೊಂಡೆ. ರಾಜ್ಯಪದವಿ ಕೈಬಿಟ್ಟುಹೋಯಿತು. ಅನೇಕ ವಿಧದಿಂದ ಆಕ್ಷೇಪಿಸಿದೆ. ಶತ್ರುಗಳಿಂದ ಬಂಧಿಸಲ್ಪಟ್ಟನು. ಬಂಧು-ಬಾಂಧವರು ತೊರೆದು ಹೋದರು. ಇಷ್ಟೇ ಅಲ್ಲ, ಇವನ ಗುರುಗಳಾದ ಶುಕ್ರಾಚಾರ್ಯರು ಗದರಿಸಿದರು. ಕಡೆಗೆ ಶಾಪವನ್ನೂ ಕೊಟ್ಟರು. ನಾನೂ ಕೂಡ ವಂಚಿಸಲೆಂದೇ ಧರ್ಮೋಪದೇಶ ಮಾಡಿದೆ. ಆದರೆ ಈ ಸತ್ಯವಾದಿಯೂ, ದೃಢವ್ರತಿಯೂ ಆದ ಬಲಿಯು ತನ್ನ ಧರ್ಮವನ್ನು ಬಿಡಲಿಲ್ಲ. ॥ ೨೯-೩೦ ॥ ಆದ್ದರಿಂದ ಶ್ರೇಷ್ಠ ದೇವತೆಗಳಿಗೂ ಅತಿಕಷ್ಟದಿಂದ ದೊರೆಯಬಹುದಾದ ಸ್ಥಾನವನ್ನು ನಾನು ಇವನಿಗೆ ಕೊಟ್ಟಿರುವೆನು. ಇವನು ಸಾವರ್ಣಿ ಮನ್ವಂತರದಲ್ಲಿ ನನ್ನ ಆಶ್ರಯವನ್ನು ಪಡೆದು ಇಂದ್ರನಾಗುವನು. ॥ ೩೧ ॥ ಅಲ್ಲಿಯವರೆಗೆ ಇವನು ವಿಶ್ವಕರ್ಮನಿಂದ ನಿರ್ಮಿತವಾದ ಸುತಲಲೋಕದಲ್ಲಿ ವಾಸಿಸುವನು. ಅಲ್ಲಿ ಇರುವವರಿಗೆ ನನ್ನ ಕೃಪಾದೃಷ್ಟಿಯಿಂದ ಮಾನಸಿಕರೋಗವಾಗಲೀ, ಬಳಲಿಕೆಯಾಗಲೀ, ಸೋಮಾರಿತನವಾಗಲೀ, ಅಂತರ್ಬಾಹ್ಯ ಶತ್ರುಗಳಿಂದ ಪರಾಜಯವಾಗಲೀ ಉಂಟಾಗುವುದಿಲ್ಲ. ॥ ೩೨ ॥ ಹೀಗೆ ಬ್ರಹ್ಮದೇವರಿಗೆ ಹೇಳಿ ಬಲಿಯನ್ನು ಸಂಬೋಧಿಸುತ್ತಾ – ಮಹಾರಾಜ ಇಂದ್ರಸೇನನೇ ! ನಿನಗೆ ಮಂಗಳವಾಗಲಿ. ಈಗ ನೀನು ಸ್ವರ್ಗದ ದೇವತೆಗಳೂ ಕೂಡ ಬಯಸುವಂತಹ ಸುತಲ ಲೋಕಕ್ಕೆ ಹೋಗಿ ನಿನ್ನ ಪರಿವಾರದೊಂದಿಗೆ ಇರು. ॥ ೩೩ ॥ ಅಲ್ಲಿ ವಾಸವಾಗಿರುವ ನಿನ್ನನ್ನು ಲೋಕಪಾಲರೂ ಕೂಡ ಸೋಲಿಸಲಾರರು. ಇತರರ ಮಾತಿರಲಿ, ನಿನ್ನ ಅಪ್ಪಣೆಯನ್ನು ಮೀರಿ ನಡೆಯುವ ದೈತ್ಯರನ್ನು ನನ್ನ ಸುದರ್ಶನಚಕ್ರವೇ ನಾಶಗೊಳಿಸುತ್ತದೆ. ॥ ೩೪ ॥ ವೀರವರೇಣ್ಯನೇ ! ನಿನ್ನನ್ನು, ನಿನ್ನ ಅನುಯಾಯಿಗಳನ್ನು, ನಿನ್ನ ಭೋಗ

ರಕ್ಷಿಷ್ಯೇ ಸರ್ವತೋಽಹಂ ತ್ವಾಂ ಸಾನುಗಂ ಸಪರಿಚ್ಛದಮ್ ।
ಸದಾ ಸನ್ನಿಹಿತಂ ವೀರ ತತ್ರ ಮಾಂ ದ್ರಕ್ಷ್ಯತೇ ಭವಾನ್ ॥ ೩೫ ॥

ತತ್ರ ದಾನವದೈತ್ಯಾನಾಂ ಸಂಗಾತ್ತೇ ಭಾವ ಆಸುರಃ ।
ದೃಷ್ಟ್ವಾ ಮದನುಭಾವಂ ವೈ ಸದ್ಯಃ ಕುಂಠೋ ವಿನಂಕ್ಷ್ಯತಿ ॥ ೩೬ ॥

ಸಾಮಗ್ರಿಗಳನ್ನು ನಾನು ಎಲ್ಲ ವಿಧದಿಂದ ರಕ್ಷಿಸುವೆನು. ಅಲ್ಲಿ ನೀನು ಯಾವಾಗಲೂ ನನ್ನನ್ನು ನಿನ್ನ ಬಳಿಯಲ್ಲೇ ನೋಡುತ್ತಾ ಇರುವೆ. ॥ ೩೫ ॥ ದೈತ್ಯ-ದಾನವರ ಸಂಬಂಧದಿಂದ ಉಂಟಾದ ನಿನ್ನ ಅಸುರಭಾವವು ನನ್ನ ಮಹಿಮೆಯಿಂದಾಗಿ, ನನ್ನ ಸಾನ್ನಿಧ್ಯವಿರುವುದರಿಂದ ಕುಗ್ಗಿಹೋಗಿ ನಾಶಹೊಂದುವುದು. ॥ ೩೬ ॥

ಇಪ್ಪತ್ತೆರಡನೆಯ ಅಧ್ಯಾಯವು ಮುಗಿಯಿತು. ॥ ೨೨ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಅಷ್ಟಮ ಸ್ಕಂಧೇ
ವಾಮನಪ್ರಾದುರ್ಭಾವೇ ಬಲಿವಾಮನಸಂವಾದೋ ನಾಮ ದ್ವಾವಿಂಶೋಽಧ್ಯಾಯಃ ॥ ೨೨ ॥

ಇಪ್ಪತ್ತಮೂರನೆಯ ಅಧ್ಯಾಯ

ಬಲಿಯು ಬಂಧನದಿಂದ ಬಿಡುಗಡೆಹೊಂದಿ ಸುತಲಲೋಕಕ್ಕೆ ಹೋದುದು

ಶ್ರೀಶುಕ ಉವಾಚ

ಇತ್ಯುಕ್ತವಂತಂ ಪುರುಷಂ ಪುರಾತನಂ
ಮಹಾನುಭಾವೋಽಖಿಲಸಾಧುಸಂಮತಃ ।
ಬದ್ಧಾಂಜಲಿರ್ಬಾಷ್ಪಕಲಾಕುಲೇಕ್ಷಣೋ
ಭಕ್ತ್ಯುದ್ಗಲೋ ಗದ್ಗದಯಾ ಗಿರಾಬ್ರವೀತ್ ॥ ೧ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಎಲೈ ಪರೀಕ್ಷಿತನೇ! ಪುರಾಣಪುರುಷನಾದ ಭಗವಂತನು ಹೀಗೆ ಹೇಳುತ್ತಲೇ ಸಾಧುಗಳ ಆದರಣೀಯನಾದ ಮಹಾನುಭಾವನಾದ ದೈತ್ಯರಾಜನ ಕಣ್ಣುಗಳಿಂದ ಆನಂದಬಾಷ್ಪಗಳು ಸುರಿಯತೊಡಗಿದವು. ಪ್ರೇಮೋದ್ರೇಕದಿಂದ ಅವನ ಕಂಠವು ಬಿಗಿಯಿತು. ಕೈಮುಗಿದುಕೊಂಡು ಗದ್ಗದಧ್ವನಿಯಿಂದ ಬಲಿಯು ಭಗವಂತನಲ್ಲಿ ಇಂತೆಂದನು – ॥ ೧ ॥

ಬಲಿರುವಾಚ

ಅಹೋ ಪ್ರಣಾಮಾಯ ಕೃತಃ ಸಮುದ್ಯಮಃ
ಪ್ರಪನ್ನಭಕ್ತಾರ್ಥವಿಧೌ ಸಮಾಹಿತಃ ।
ಯಲ್ಲೋಕಪಾಲೈಸ್ತ್ವದನುಗ್ರಹೋಽಮರೈ-
ರಲಬ್ಧಪೂರ್ವೋಽಪಸದೇಽಸುರೇಽರ್ಪಿತಃ ॥ ೨ ॥

ಬಲಿಯು ಹೇಳಿದನು – ಪ್ರಭುವೇ! ನಾನಾದರೋ ನಿನಗೆ ಪೂರ್ಣವಾಗಿ ಪ್ರಣಾಮವನ್ನೂ ಮಾಡಲಿಲ್ಲ. ಪ್ರಣಾಮಮಾಡಲು ಪ್ರಯತ್ನಿಸಿದೆ ಅಷ್ಟೆ. ಇಷ್ಟರಿಂದಲೇ ನಿನ್ನ ಚರಣಕಮಲಗಳಲ್ಲಿ ಶರಣಾಗತರಾದ ಭಕ್ತರಿಗೆ ದೊರೆಯುವಂತಹ ಫಲವು ನನಗೆ ಸಿಕ್ಕಿಬಿಟ್ಟಿತು. ಲೋಕಪಾಲಕರಿಗಾಗಲೀ, ದೇವತೆಗಳಿಗಾಗಲೀ ಅಲಭ್ಯವಾದ ಅನುಗ್ರಹವನ್ನು ನೀಚ ಅಸುರನಾದ ನನ್ನ ಮೇಲೆ ತೋರಿರುವೆ. ಪರಮ ಕರುಣಾಶಾಲಿಯಾದ ನಿನಗೆ ನಮೋ ನಮಃ ॥ ೨ ॥

ಶ್ರೀಶುಕ ಉವಾಚ

ಇತ್ಯುಕ್ತ್ವಾ ಹರಿಮಾನಮ್ಯ ಬ್ರಹ್ಮಾಣಂ ಸಭವಂ ತತಃ ।
ವಿವೇಶ ಸುತಲಂ ಪ್ರೀತೋ ಬಲಿರ್ಮುಕ್ತಃ ಸಹಾಸುರೈಃ ॥ ೩ ॥

ಏವಮಿಂದ್ರಾಯ ಭಗವಾನ್ಪ್ರತ್ಯಾನೀಯ ತ್ರಿವಿಷ್ಟಪಮ್ ।
ಪೂರಯಿತ್ವಾದಿತೇಃ ಕಾಮಮಶಾಸತ್ಸಕಲಂ ಜಗತ್ ॥ ೪ ॥

ಲಬ್ಧಪ್ರಸಾದಂ ನಿರ್ಮುಕ್ತಂ ಪೌತ್ರಂ ವಂಶಧರಂ ಬಲಿಮ್ ।
ನಿಶಾಮ್ಯ ಭಕ್ತಿಪ್ರವಣಃ ಪ್ರಹ್ರಾದ ಇದಮಬ್ರವೀತ್ ॥ ೫ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿದ್ರಾಜನೇ! ಹೀಗೆ ಹೇಳುವಂತೆಯೇ ಬಲಿಯು ವರುಣಪಾಶಗಳಿಂದ ಬಿಡುಗಡೆಹೊಂದಿದನು. ಆಗ ಅವನು ಭಗವಾನ್ ಶ್ರೀಹರಿಯನ್ನೂ, ಬ್ರಹ್ಮದೇವನನ್ನೂ, ರುದ್ರದೇವರನ್ನೂ, ನಮಸ್ಕರಿಸಿ, ಪರಮ ಸಂತುಷ್ಟನಾಗಿ ತನ್ನ ಪರಿವಾರದೊಡನೆ ಸುತಲಲೋಕವನ್ನು ಪ್ರವೇಶಿಸಿದನು. ॥ ೩ ॥ ಈ ವಿಧವಾಗಿ ಭಗವಂತನು ಬಲಿಯಿಂದ ಸ್ವರ್ಗವನ್ನು ಕಿತ್ತುಕೊಂಡು ಇಂದ್ರನಿಗೆ ಕೊಟ್ಟನು. ಅದಿತಿಯ ಆಶಯವನ್ನು ಪೂರ್ಣಗೊಳಿಸಿದನು. ತಾನು ಉಪೇಂದ್ರನಾಗಿ (ಇಂದ್ರನ ತಮ್ಮನಾಗಿ) ಸಮಸ್ತ ಜಗತ್ತನ್ನು ಶಾಸನಮಾಡತೊಡಗಿದನು. ॥ ೪ ॥ ತನ್ನ ಮೊಮ್ಮಗನಾದ ಬಲಿಯು ವರುಣನ ಪಾಶಗಳಿಂದ ಮುಕ್ತನಾದುದನ್ನು ಮತ್ತು ಭಗವಂತನ ಪೂರ್ಣಾನುಗ್ರಹವನ್ನು ಪಡೆದುಕೊಂಡುದನ್ನು ಭಕ್ತಾಗ್ರೇಸರನಾದ ಪ್ರಹ್ಲಾದನು ನೋಡಿ ಸಂತೋಷಭರಿತನಾಗಿ ಭಕ್ತಿಭಾವದಿಂದ ಭಗವಂತನನ್ನು ಇಂತು ಸ್ತುತಿಸಿದನು. ॥ ೫ ॥

ಪ್ರಹ್ಲಾದ ಉವಾಚ

ನೇಮಂ ವಿರಿಂಚೋ ಲಭತೇ ಪ್ರಸಾದಂ
 ನ ಶ್ರೀರ್ನ ಶರ್ವಃ ಕಿಮುತಾಪರೇ ತೇ ।
ಯನ್ನೋಽಸುರಾಣಾಮಸಿ ದುರ್ಗಪಾಲೋ
 ವಿಶ್ವಾಭಿವಂದ್ಯೈರಪಿ ವಂದಿತಾಂಘ್ರಿಃ ॥ ೬ ॥

ಯತ್ಪಾದಪದ್ಮಮಕರಂದನಿಷೇವಣೇನ
 ಬ್ರಹ್ಮಾದಯಃ ಶರಣದಾಶ್ನುವತೇ ವಿಭೂತೀಃ ।
ಕಸ್ಮಾದ್ವಯಂ ಕುಸೃತಯಃ ಖಲಯೋನಯಸ್ತೇ
 ದಾಕ್ಷಿಣ್ಯದೃಷ್ಟಿಪದವೀಂ ಭವತಃ ಪ್ರಣೀತಾಃ ॥ ೭ ॥

ಚಿತ್ರಂ ತವೇಹಿತಮಹೋಽಮಿತಯೋಗಮಾಯಾ-
 ಲೀಲಾವಿಸೃಷ್ಟಭುವನಸ್ಯ ವಿಶಾರದಸ್ಯ ।
ಸರ್ವಾತ್ಮನಃ ಸಮದೃಶೋಽವಿಷಮಃ ಸ್ವಭಾವೋ
 ಭಕ್ತಪ್ರಿಯೋ ಯದಸಿ ಕಲ್ಪತರುಸ್ವಭಾವಃ ॥ ೮ ॥

ಶ್ರೀಭಗವಾನುವಾಚ

ವತ್ಸ ಪ್ರಹ್ಲಾದ ಭದ್ರಂ ತೇ ಪ್ರಯಾಹಿ ಸುತಲಾಲಯಮ್ ।
ಮೋದಮಾನಃ ಸ್ವಪೌತ್ರೇಣ ಜ್ಞಾತೀನಾಂ ಸುಖಮಾವಹ
 ॥ ೯ ॥

ನಿತ್ಯಂ ದ್ರಷ್ಟಾಸಿ ಮಾಂ ತತ್ರ ಗದಾಪಾಣಿಮವಸ್ಥಿತಮ್ ।
ಮದ್ದರ್ಶನಮಹಾಹ್ಲಾದಧ್ವಸ್ತಕರ್ಮನಿಬಂಧನಃ
 ॥ ೧೦ ॥

ಶ್ರೀಶುಕ ಉವಾಚ

ಆಜ್ಞಾಂ ಭಗವತೋ ರಾಜನ್ಪ್ರಹ್ಲಾದೋ ಬಲಿನಾ ಸಹ ।
ಬಾಢಮಿತ್ಯಮಲಪ್ರಜ್ಞೋ ಮೂರ್ಧ್ನ್ಯಾಧಾಯ ಕೃತಾಂಜಲಿಃ
 ॥ ೧೧ ॥

ಪರಿಕ್ರಮ್ಯಾದಿಪುರುಷಂ ಸರ್ವಾಸುರಚಮೂಪತಿಃ ।
ಪ್ರಣತಸ್ತದನುಜ್ಞಾತಃ ಪ್ರವಿವೇಶ ಮಹಾಬಿಲಮ್
 ॥ ೧೨ ॥

ಅಥಾಹೋಶನಸಂ ರಾಜನ್ಹರಿರ್ನಾರಾಯಣೋಽಂತಿಕೇ ।
ಆಸೀನಮೃತ್ವಿಜಾಂ ಮಧ್ಯೇ ಸದಸಿ ಬ್ರಹ್ಮವಾದಿನಾಮ್
 ॥ ೧೩ ॥

ಶ್ರೀಭಗವಾನುವಾಚ

ಬ್ರಹ್ಮನ್ಸಂತನು ಶಿಷ್ಯಸ್ಯ ಕರ್ಮಚ್ಛಿದ್ರಂ ವಿತನ್ವತಃ ।
ಯತ್ತತ್ಕರ್ಮಸು ವೈಷಮ್ಯಂ ಬ್ರಹ್ಮದೃಷ್ಟಂ ಸಮಂ ಭವೇತ್
 ॥ ೧೪ ॥

ಪ್ರಹ್ಲಾದನು ಹೇಳಿದನು ಪ್ರಭುವೇ! ಬ್ರಹ್ಮದೇವರಿಗಾಗಲೀ, ಲಕ್ಷ್ಮೀದೇವಿಗಾಗಲೀ, ರುದ್ರದೇವರಿಗಾಗಲೀ ಇಂತಹ ಕೃಪಾ ಪ್ರಸಾದವು ದೊರೆಯಲಿಲ್ಲ, ಹಾಗಿರುವಾಗ ಇತರರ ಮಾತೇನು? ವಿಶ್ವವಂದ್ಯರಾದ ಬ್ರಹ್ಮಾದಿಗಳು ಯಾರ ಚರಣಾರವಿಂದಗಳಿಗೆ ನಮಸ್ಕರಿಸುವರೋ ಅಂತಹ ಪರಮದಯಾಳುವಾದ ನೀನು ನಮ್ಮಂತಹ ಅಸುರರ ಬಾಗಿಲುಕಾಯುವವನಾದೆ. ಇದೆಂತಹ ಆಶ್ಚರ್ಯದ ಮಾತು! ॥ ೬ ॥ ಓ ಶರಣಾಗತವತ್ಸಲನಾದ ಪ್ರಭುವೇ! ಬ್ರಹ್ಮಾದಿ ಲೋಕಪಾಲರು ನಿನ್ನ ಚರಣಾರವಿಂದಗಳ ಮಕರಂದ ವನ್ನು ಪಾನಮಾಡುವುದರಿಂದ ಸೃಷ್ಟಿರಚನಾದಿ ಅನೇಕ ಶಕ್ತಿ ಗಳನ್ನೂ, ವಿಭೂತಿಗಳನ್ನೂ ಪಡೆದುಕೊಳ್ಳುವರು. ನಾವಾದರೋ ಜನ್ಮದಿಂದಲೇ ಖಲರೂ, ಕುಮಾರ್ಗಿಗಳು. ಇಂತಹ ನಮ್ಮ ಮೇಲೆ ನಿನ್ನ ದಾಕ್ಷಿಣ್ಯದಿಂದ ಕೂಡಿದ ಅನುಗ್ರಹ ದೃಷ್ಟಿಯು ಹೇಗೆ ತಾನೇ ಬಿದ್ದಿತು? ಇಂತಹ ಪರಮಾನುಗ್ರಹದಿಂದ ನೀನು ನಮ್ಮ ಮನೆಯ ದ್ವಾರಪಾಲಕನೇ ಆಗಿಬಿಟ್ಟೆಯಲ್ಲ? ॥ ೭ ॥ ನೀನು ನಿನ್ನ ಯೋಗ ಮಾಯೆಯಿಂದ ಲೀಲಾಮಾತ್ರದಿಂದ ತ್ರಿಭುವನಗಳನ್ನು ರಚಿಸಿ ಬಿಟ್ಟಿರುವೆ. ನೀನು ಸರ್ವಜ್ಞನೂ, ಸರ್ವಾತ್ಮನೂ, ಸಮದರ್ಶಿಯೂ ಆಗಿರುವೆ. ಹೀಗಿದ್ದರೂ ನಿನ್ನ ಲೀಲಾವಿಲಾಸವು ತುಂಬಾ ವಿಚಿತ್ರ ವಾಗಿದೆ. ನಿನ್ನ ಸ್ವಭಾವವು ಕಲ್ಪವೃಕ್ಷದಂತೆ ಇದೆ. ಏಕೆಂದರೆ, ನೀನು ನಿನ್ನ ಭಕ್ತರಲ್ಲಿ ಅತ್ಯಂತ ಪ್ರೀತಿಯನ್ನು ತೋರುತ್ತಿರುವೆ. ಇದರಿಂದಲೇ ಕೆಲವೊಮ್ಮೆ ಉಪಾಸಕರ ಕುರಿತು ಪಕ್ಷಪಾತ ಮತ್ತು ನಿನಗೆ ವಿಮುಖ ರಾದವರಲ್ಲಿ ನಿರ್ದಯಕತೆಯೂ ಕಂಡುಬರುತ್ತದೆ. ॥ ೮ ॥

ಶ್ರೀಭಗವಂತನು ಹೇಳಿದನು – ವತ್ಸ! ಪ್ರಹ್ಲಾದನೇ! ನಿನಗೆ ಮಂಗಳವಾಗಲಿ. ಈಗ ನೀನು ಕೂಡ ಸುತಲಲೋಕಕ್ಕೆ ಹೋಗು. ಅಲ್ಲಿ ನಿನ್ನ ಮೊಮ್ಮಗನೊಂದಿಗೆ ಆನಂದವಾಗಿ ಇರುತ್ತಾ ನಿನ್ನ ಜ್ಞಾತಿ-ಬಾಂಧವರಿಗೆ ಸುಖದಾಯಕನಾಗು. ॥ ೯ ॥ ಅಲ್ಲಿ ನೀನು ನಿತ್ಯವೂ ಗದಾಪಾಣಿಯಾಗಿ ನಿಂತಿರುವ ನನ್ನನ್ನು ನೋಡುವೆ. ನನ್ನ ದರ್ಶನದ ಪರಮಾನಂದದಲ್ಲಿ ಮುಳುಗಿ ಇರುವ ನಿನ್ನ ಸರ್ವ ಕರ್ಮಬಂಧನಗಳು ನಾಶವಾಗಿಹೋಗುವುವು. ॥ ೧೦॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ! ಸಮಸ್ತ ದೈತ್ಯಸೈನ್ಯಗಳಿಗೂ ಸ್ವಾಮಿಯಾಗಿದ್ದ ವಿಶುದ್ಧ ಬುದ್ಧಿಯುಳ್ಳ ಪ್ರಹ್ಲಾದನು 'ಹಾಗೆಯೇ ಆಗಲಿ' ಎಂದು ಹೇಳಿ ಭಗವಂತನ ಆಜ್ಞೆ ಯನ್ನು ಶಿರಸಾವಹಿಸಿ, ಕೈಜೋಡಿಸಿಕೊಂಡು ಅವನಿಗೆ ನಮಸ್ಕರಿಸಿ, ಬಲಿಯೊಂದಿಗೆ ಆದಿಪುರುಷನಾದ ಭಗವಂತನಿಗೆ ಪ್ರದಕ್ಷಿಣೆ ಬಂದು ವಂದಿಸಿ, ಅವನ ಅನುಜ್ಞೆಯನ್ನು ಪಡೆದುಕೊಂಡು ಸುತಲಲೋಕಕ್ಕೆ ಹೊರಟುಹೋದನು. ॥ ೧೧–೧೨ ॥ ರಾಜೇಂದ್ರನೇ! ಆಗ ಭಗವಾನ್ ಶ್ರೀಹರಿಯು ಬ್ರಹ್ಮವಾದಿಗಳಾದ ಋತ್ವಿಜರ ಸಭೆಯಲ್ಲಿ ತನ್ನ ಬಳಿಯಲ್ಲೇ ಕುಳಿತಿರುವ ಶುಕ್ರಾಚಾರ್ಯರನ್ನು ಕುರಿತು ಇಂತೆಂದನು – ॥ ೧೩ ॥

ಶ್ರೀಭಗವಂತನು ಹೇಳಿದನು – 'ಬ್ರಾಹ್ಮಣಶ್ರೇಷ್ಠನೇ! ನಿಮ್ಮ ಶಿಷ್ಯನು ಯಜ್ಞವನ್ನು ಮಾಡುತ್ತಿದ್ದನು. ಅದರಲ್ಲಿ ಇರುವ ಕೊರತೆ ಯನ್ನು ನೀವು ಪೂರ್ಣಗೊಳಿಸಿರಿ. ಏಕೆಂದರೆ, ಕರ್ಮಗಳಲ್ಲೇನಾದರೂ ನ್ಯೂನಾತಿರೇಕಗಳು ಉಂಟಾದರೆ, ಅವೆಲ್ಲವೂ ಬ್ರಾಹ್ಮಣರ ಕೃಪಾ ದೃಷ್ಟಿಯಿಂದಲೇ ಪರಿಹಾರವಾಗಿ ಬಿಡುತ್ತವೆ.' ॥ ೧೪ ॥

ಶುಕ್ರ ಉವಾಚ

ಕುತಸ್ತತ್ಕರ್ಮವೈಷಮ್ಯಂ ಯಸ್ಯ ಕರ್ಮೇಶ್ವರೋ ಭವಾನ್ ।
ಯಜ್ಞೇಶೋ ಯಜ್ಞಪುರುಷಃ ಸರ್ವಭಾವೇನ ಪೂಜಿತಃ ॥ ೧೫ ॥

ಮಂತ್ರತಸ್ತಂತ್ರತಶ್ಛಿದ್ರಂ ದೇಶಕಾಲಾರ್ಹವಸ್ತುತಃ ।
ಸರ್ವಂ ಕರೋತಿ ನಿಶ್ಛಿದ್ರಂ ನಾಮಸಂಕೀರ್ತನಂ ತವ ॥ ೧೬ ॥

ತಥಾಪಿ ವದತೋ ಭೂಮನ್ಕರಿಷ್ಯಾಮ್ಯನುಶಾಸನಮ್ ।
ಏತಚ್ಛ್ರೇಯಃ ಪರಂ ಪುಂಸಾಂ ಯತ್ತವಾಜ್ಞಾನುಪಾಲನಮ್ ॥ ೧೭ ॥

ಶ್ರೀಶುಕ ಉವಾಚ

ಅಭಿನಂದ್ಯ ಹರೇರಾಜ್ಞಾಮುಶನಾ ಭಗವಾನಿತಿ ।
ಯಜ್ಞಚ್ಛಿದ್ರಂ ಸಮಾಧತ್ತ ಬಲೇರ್ವಿಪ್ರರ್ಷಿಭಿಃ ಸಹ ॥ ೧೮ ॥

ಏವಂ ಬಲೇರ್ಮಹೀಂ ರಾಜನ್ಭಿಕ್ಷಿತ್ವಾ ವಾಮನೋ ಹರಿಃ ।
ದದೌ ಭ್ರಾತ್ರೇ ಮಹೇಂದ್ರಾಯ ತ್ರಿದಿವಂ ಯತ್ಪರೈರ್ಹೃತಮ್ ॥ ೧೯ ॥

ಪ್ರಜಾಪತಿಪತಿರ್ಬ್ರಹ್ಮಾ ದೇವರ್ಷಿ ಪಿತೃಭೂಮಿಪೈಃ ।
ದಕ್ಷಭೃಗ್ವಂಗಿರೋಮುಖ್ಯೈಃ ಕುಮಾರೇಣ ಭವೇನ ಚ ॥ ೨೦ ॥

ಕಶ್ಯಪಸ್ಯಾದಿತೇಃ ಪ್ರೀತ್ಯೈ ಸರ್ವಭೂತಭವಾಯ ಚ ।
ಲೋಕಾನಾಂ ಲೋಕಪಾಲಾನಾಮಕರೋದ್ವಾಮನಂ ಪತಿಮ್ ॥ ೨೧ ॥

ವೇದಾನಾಂ ಸರ್ವದೇವಾನಾಂ ಧರ್ಮಸ್ಯ ಯಶಸಃ ಶ್ರಿಯಃ ।
ಮಂಗಲಾನಾಂ ವ್ರತಾನಾಂ ಚ ಕಲ್ಪಂ ಸ್ವರ್ಗಾಪವರ್ಗಯೋಃ ॥ ೨೨ ॥

ಉಪೇಂದ್ರಂ ಕಲ್ಪಯಾಂಚಕ್ರೇ ಪತಿಂ ಸರ್ವವಿಭೂತಯೇ ।
ತದಾ ಸರ್ವಾಣಿ ಭೂತಾನಿ ಭೃಶಂ ಮುಮುದಿರೇ ನೃಪ ॥ ೨೩ ॥

ತತಸ್ತ್ವಿಂದ್ರಃ ಪುರಸ್ಕೃತ್ಯ ದೇವಯಾನೇನ ವಾಮನಮ್ ।
ಲೋಕಪಾಲೈರ್ದಿವಂ ನಿನ್ಯೇ ಬ್ರಹ್ಮಣಾ ಚಾನುಮೋದಿತಃ ॥ ೨೪ ॥

ಪ್ರಾಪ್ಯ ತ್ರಿಭುವನಂ ಚೇಂದ್ರ ಉಪೇಂದ್ರಭುಜಪಾಲಿತಃ ।
ಶ್ರಿಯಾ ಪರಮಯಾ ಜುಷ್ಟೋ ಮುಮುದೇ ಗತಸಾಧ್ವಸಃ ॥ ೨೫ ॥

ಶುಕ್ರಾಚಾರ್ಯರು ಹೇಳಿದರು – ಭಗವಂತನೇ! ಯಾರು ತನ್ನ ಸಮಸ್ತ ಕರ್ಮಗಳನ್ನು ಕರ್ಮೇಶ್ವರನಾದ ನಿನಗೆ ಅರ್ಪಿಸಿ, ಯಜ್ಞೇಶ್ವರನೂ, ಯಜ್ಞಪುರುಷನೂ ಆದ ನಿನ್ನನ್ನು ಆರಾಧಿಸಿರುವನೋ, ಅವನ ಕರ್ಮದಲ್ಲಿ ಕೊರತೆ, ವಿಷಮತೆ ಹೇಗೆ ಉಳಿಯಬಲ್ಲದು? ॥ ೧೫ ॥ ಏಕೆಂದರೆ, ಮಂತ್ರಗಳ, ಅನುಷ್ಠಾನ ಪದ್ಧತಿಯ, ದೇಶ, ಕಾಲ, ಪಾತ್ರ, ವಸ್ತು ಇವೆಲ್ಲವುಗಳ ಲೋಪ ದೋಷಗಳು ಅಚ್ಯುತಾನಂತಗೋವಿಂದ ಎಂಬ ನಿನ್ನ ನಾಮಸಂಕೀರ್ತನೆಯಿಂದಲೇ ಪರಿಹಾರವಾಗುವುವು. ನಿನ್ನ ನಾಮವು ಎಲ್ಲ ಕೊರತೆಗಳನ್ನೂ ಪೂರ್ಣಗೊಳಿಸುವುದು. ॥ ೧೬ ॥ ಆದರೂ ಅನಂತನೇ! ನೀನು ಸ್ವತಃ ಹೇಳುತ್ತಿರುವೆ. ಆದ್ದರಿಂದ ನಿನ್ನ ಆಜ್ಞೆಯನ್ನು ಅವಶ್ಯವಾಗಿ ಪಾಲಿಸುತ್ತೇನೆ. ನಿನ್ನ ಆಜ್ಞೆಯನ್ನು ಪಾಲಿಸುವುದೇ ಮನುಷ್ಯನಿಗೆ ಶ್ರೇಯಸ್ಸಿನ ದೊಡ್ಡ ಸಾಧನೆಯಾಗಿದೆ. ॥ ೧೭ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ರಾಜಾ! ಪೂಜ್ಯರಾದ ಶುಕ್ರಾಚಾರ್ಯರು ಭಗವಾನ್ ಶ್ರೀಹರಿಯ ಈ ಆಜ್ಞೆಯನ್ನು ಶಿರಸಾವಹಿಸಿ ಇತರ ಬ್ರಹ್ಮರ್ಷಿಗಳೊಡನೆ ಬಲಿಯ ಯಜ್ಞದಲ್ಲಿ ಉಳಿದಿರುವ ಕರ್ಮಾಂಗಗಳನ್ನು ವಿಧಿವತ್ತಾಗಿ ಪೂರ್ಣಗೊಳಿಸಿದರು. ॥ ೧೮ ॥ ಪರೀಕ್ಷಿತನೇ! ಹೀಗೆ ಭಗವಾನ್ ವಾಮನನು ಬಲಿಯಿಂದ ಮೂರು ಹೆಜ್ಜೆಗಳಷ್ಟು ಭೂಮಿಯನ್ನು ದಾನವಾಗಿ ಕೇಳಿ, ಶತ್ರುಗಳು ಅಪಹರಿಸಿಕೊಂಡಿದ್ದ ಸ್ವರ್ಗದ ರಾಜ್ಯವನ್ನು ತನ್ನ ಅಣ್ಣನಾದ ಇಂದ್ರನಿಗೆ ಕೊಡಿಸಿದನು. ॥ ೧೯ ॥ ಇದಾದ ಬಳಿಕ ಪ್ರಜಾಪತಿಗಳಿಗೆ ಒಡೆಯರಾದ ಬ್ರಹ್ಮದೇವರು ದೇವತೆಗಳು, ಋಷಿಗಳು, ಪಿತೃಗಳು, ಮನು, ದಕ್ಷ, ಭೃಗು, ಅಂಗಿರಾ, ಸನತ್ಕುಮಾರರು ಮತ್ತು ರುದ್ರದೇವರು ಇವರುಗಳೊಡನೆ ಕಶ್ಯಪ-ಅದಿತಿಯರಿಗೆ ಸಂತೋಷಗೊಳಿಸಲು ಹಾಗೂ ಸಮಸ್ತ ಪ್ರಾಣಿಗಳ ಅಭ್ಯುದಯಕ್ಕಾಗಿ, ಎಲ್ಲ ಲೋಕಗಳಿಗೂ, ಲೋಕಪಾಲಕರಿಗೂ ಒಡೆಯನನ್ನಾಗಿ ಶ್ರೀವಾಮನಮೂರ್ತಿಯನ್ನು ಅಭಿಷೇಕ ಮಾಡಿದರು. ॥ ೨೦-೨೧ ॥

ಪರೀಕ್ಷಿತನೇ! ವೇದಗಳು, ಸಮಸ್ತ ದೇವತೆಗಳು, ಧರ್ಮ, ಯಶಸ್ಸು ಲಕ್ಷ್ಮೀ, ಮಂಗಳ, ವ್ರತ, ಸ್ವರ್ಗ, ಅಪವರ್ಗ ಇವೆಲ್ಲದರ ರಕ್ಷಕನ ರೂಪದಲ್ಲಿ ಸಮಸ್ತರ ಪರಮ ಕಲ್ಯಾಣಕ್ಕಾಗಿ ಸರ್ವಶಕ್ತಿವಂತನಾದ ಭಗವಾನ್ ವಾಮನನನ್ನು ಬ್ರಹ್ಮದೇವರು ಉಪೇಂದ್ರನ ಪದವಿಯಲ್ಲಿ ಕುಳ್ಳಿರಿಸಿ ಪಟ್ಟಾಭಿಷೇಕ ಮಾಡಿದರು. ಇದನ್ನು ನೋಡಿ ಎಲ್ಲ ಪ್ರಾಣಿಗಳಿಗೂ ಮಹದಾನಂದವಾಯಿತು. ॥ ೨೨-೨೩ ॥ ಬಳಿಕ ದೇವೇಂದ್ರನು ಬ್ರಹ್ಮದೇವರ ಅಪ್ಪಣೆಯಂತೆ ಲೋಕಪಾಲಕರೊಂದಿಗೆ ವಾಮನ ಭಗವಂತನನ್ನು ಮುಂದೆಮಾಡಿಕೊಂಡು ವಿಮಾನದಲ್ಲಿ ಕುಳ್ಳಿರಿಸಿಕೊಂಡು ತನ್ನೊಂದಿಗೆ ಸ್ವರ್ಗಕ್ಕೆ ಕೊಂಡುಹೋದನು. ॥ ೨೪ ॥ ದೇವೇಂದ್ರನಿಗಾದರೋ ಮೂರು ಲೋಕದ ರಾಜ್ಯ ದೊರೆಯಿತು. ಅದಕ್ಕಿಂತಲೂ ಮಿಗಿಲಾಗಿ ಭಗವಾನ್ ವಾಮನನ ಕರಕಮಲಗಳ ಛತ್ರಛಾಯೆ ದೊರೆಯಿತು. ಸರ್ವಶ್ರೇಷ್ಠ ಐಶ್ವರ್ಯಲಕ್ಷ್ಮಿಯಿಂದ ಸೇವಿತನಾಗಿ ಅವನು ನಿರ್ಭಯನಾಗಿ ಆನಂದೋತ್ಸವವನ್ನು ಆಚರಿಸಿದನು. ॥ ೨೫ ॥

ಬ್ರಹ್ಮಾ ಶರ್ವಃ ಕುಮಾರಶ್ಚ ಭೃಗ್ವಾದ್ಯಾ ಮುನಯೋ ನೃಪ ।
ಪಿತರಃ ಸರ್ವಭೂತಾನಿ ಸಿದ್ಧಾ ವೈಮಾನಿಕಾಶ್ಚ ಯೇ ॥ ೨೬ ॥

ಸುಮಹತ್ಕರ್ಮ ತದ್ವಿಷ್ಣೋರ್ಗಾಯಂತಃ ಪರಮಾದ್ಭುತಮ್ ।
ಧಿಷ್ಣ್ಯಾನಿ ಸ್ವಾನಿ ತೇ ಜಗ್ಮುರದಿತಿಂ ಚ ಶಶಂಸಿರೇ ॥ ೨೭ ॥

ಸರ್ವಮೇತನ್ಮಯಾಽಽಖ್ಯಾತಂ ಭವತಃ ಕುಲನಂದನ ।
ಉರುಕ್ರಮಸ್ಯ ಚರಿತಂ ಶ್ರೋತೄಣಾಮಘಮೋಚನಮ್ ॥ ೨೮ ॥

ಪಾರಂ ಮಹಿಮ್ನ ಉರು ವಿಕ್ರಮತೋ ಗೃಣಾನೋ
ಯಃ ಪಾರ್ಥಿವಾನಿ ವಿಮಮೇ ಸ ರಜಾಂಸಿ ಮರ್ತ್ಯಃ ।
ಕಿಂ ಜಾಯಮಾನ ಉತ ಜಾತ ಉಪೈತಿ ಮರ್ತ್ಯ
ಇತ್ಯಾಹ ಮಂತ್ರದೃಗೃಷಿಃ ಪುರುಷಸ್ಯ ಯಸ್ಯ॥ ೨೯ ॥

ಯ ಇದಂ ದೇವದೇವಸ್ಯ ಹರೇರದ್ಭುತಕರ್ಮಣಃ ।
ಅವತಾರಾನುಚರಿತಂ ಶೃಣ್ವನ್ಯಾತಿ ಪರಾಂ ಗತಿಮ್ ॥ ೩೦ ॥

ಕ್ರಿಯಮಾಣೇ ಕರ್ಮಣೀದಂ ದೈವೇ ಪಿತ್ರ್ಯೇಽಥ ಮಾನುಷೇ ।
ಯತ್ರ ಯತ್ರಾನುಕೀರ್ತ್ಯೇತ ತತ್ತೇಷಾಂ ಸುಕೃತಂ ವಿದುಃ ॥ ೩೧ ॥

ಶಿವ, ವಿರಿಂಚಿ, ಸನತ್ಕುಮಾರರು, ಭೃಗುವೇ ಮುಂತಾದ ಮುನಿಗಳು, ಪಿತೃಗಳು, ಸಮಸ್ತ ಪ್ರಾಣಿಗಳು, ಸಿದ್ಧರೂ, ವಿಮಾನಾರೂಢರಾದ ದೇವತೆಗಳು ಭಗವಂತನ ಈ ಪರಮ ಅದ್ಭುತವಾದ ಹಾಗೂ ಅತ್ಯಂತ ಮಹತ್ಕರ್ಮವನ್ನು ಹೇಳುತ್ತಾ ಅದಿತಿದೇವಿಯನ್ನು ಪ್ರಶಂಸಿಸುತ್ತಾ ತಮ್ಮ-ತಮ್ಮ ಲೋಕಗಳಿಗೆ ತೆರಳಿದರು. ॥ ೨೬-೨೭ ॥

ಕುರುನಂದನನೇ! ಕೇಳಿದವರ ಸಮಸ್ತ ಪಾಪಗಳನ್ನು ಪರಿಹರಿಸುವ ಭಗವಾನ್ ತ್ರಿವಿಕ್ರಮನ ಅದ್ಭುತವಾದ ಈ ಚರಿತ್ರೆಯನ್ನು ನಾನು ನಿನಗೆ ಹೇಳಿರುತ್ತೇನೆ. ॥ ೨೮ ॥ ಭಗವಂತನ ಲೀಲೆಗಳು ಅನಂತ. ಅವನ ಮಹಿಮೆ ಅಪಾರ. ಅವನ ಮಹಿಮೆಯ ಪಾರವನ್ನು ಕಾಣಲಿಚ್ಛಿಸುವವನು ಪೃಥಿವಿಯ ಪರಮಾಣುಗಳನ್ನು ಎಣಿಸಲು ಹೊರಟಿರುವಂತೆ ಇದೆ. ಭಗವಂತನ ಸಂಬಂಧದಲ್ಲಿ ಮಂತ್ರದ್ರಷ್ಟಾರರಾದ ಮಹರ್ಷಿ ವಸಿಷ್ಠರು ವೇದದಲ್ಲಿ – 'ಭಗವಂತನ ಮಹಿಮೆಯ ಪಾರವನ್ನು ಕಾಣಬಲ್ಲ ಪುರುಷನು ಈ ಹಿಂದೆ ಯಾರೂ ಇರಲಿಲ್ಲ, ಈಗಲೂ ಇಲ್ಲ, ಮುಂದೆಯೂ ಇರಲಾರರು' ಎಂದು ಹೇಳಿರುವರು. ॥ ೨೯ ॥ ದೇವತೆಗಳ ಆರಾಧ್ಯದೇವನಾದ ಅದ್ಭುತಲೀಲಾಧಾರೀ ವಾಮನ ಭಗವಂತನ ಈ ಅವತಾರ ಚರಿತ್ರವನ್ನು ಶ್ರವಣಿಸುವವನಿಗೆ ಪರಮಗತಿಯು ಪ್ರಾಪ್ತವಾಗುವುದು. ॥ ೩೦ ॥ ದೇವಯಜ್ಞ, ಪಿತೃಯಜ್ಞ, ಮನುಷ್ಯಯಜ್ಞ (ಅತಿಥಿಸೇವೆ) ಮುಂತಾದ ಯಾವುದೇ ಕರ್ಮಗಳ ಅನುಷ್ಠಾನ ನಡೆಯುವಲ್ಲಿ ಭಗವಂತನ ಈ ಲೀಲೆಯ ಕೀರ್ತನೆಯು ಆ ಕರ್ಮವನ್ನು ಸಫಲಗೊಳಿಸುತ್ತದೆ ಎಂದು ಮಹಾ-ಮಹಾ ವಿದ್ವಾಂಸರು ಹೇಳುತ್ತಾರೆ. ॥ ೩೧ ॥

ಇಪ್ಪತ್ತಮೂರನೆಯ ಅಧ್ಯಾಯವು ಮುಗಿಯಿತು. ॥ ೨೩ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಅಷ್ಟಮ ಸ್ಕಂಧೇ
ವಾಮನಾವತಾರಚರಿತೇ ತ್ರಯೋವಿಂಶೋಽಧ್ಯಾಯಃ ॥ ೨೩ ॥

ಇಪ್ಪತ್ತನಾಲ್ಕನೆಯ ಅಧ್ಯಾಯ

ಭಗವಂತನ ಮತ್ಸ್ಯಾವತಾರದ ಕಥೆ

ರಾಜೋವಾಚ

ಭಗವನ್ ಶ್ರೋತುಮಿಚ್ಛಾಮಿ ಹರೇರದ್ಭುತಕರ್ಮಣಃ ।
ಅವತಾರಕಥಾಮಾದ್ಯಾಂ ಮಾಯಾಮತ್ಸ್ಯವಿಡಂಬನಮ್ ॥ ೧ ॥

ಯದರ್ಥಮದಧಾದ್ರೂಪಂ ಮಾತ್ಸ್ಯಂ ಲೋಕಜುಗುಪ್ಸಿತಮ್ ।
ತಮಃಪ್ರಕೃತಿ ದುರ್ಮರ್ಷಂ ಕರ್ಮಗ್ರಸ್ತ ಇವೇಶ್ವರಃ ॥ ೨ ॥

ಪರೀಕ್ಷಿದ್ರಾಜನು ಕೇಳಿದನು – ಪೂಜ್ಯರೇ! ಭಗವಂತನ ಕರ್ಮಗಳು ಪರಮಾದ್ಭುತವಾದವುಗಳು. ಅವನೊಮ್ಮೆ ತನ್ನ ಯೋಗಮಾಯೆಯಿಂದ ಮತ್ಸ್ಯಾವತಾರವನ್ನು ತಾಳಿ ಸುಂದರವಾದ ಲೀಲೆಗಳನ್ನು ತೋರಿಸಿದನು. ನಾನು ಭಗವಂತನ ಆ ಆದಿ ಅವತಾರದ ಕಥೆಯನ್ನು ಕೇಳಲು ಇಚ್ಛಿಸುತ್ತೇನೆ. ॥ ೧ ॥ ಪೂಜ್ಯರೇ! ಮತ್ಸ್ಯಯೋನಿಯಾದರೋ ಲೋಕನಿಂದಿತವಾಗಿದೆ. ಇನ್ನೊಂದು ತಮೋಗುಣೀ ಮತ್ತು ಅಸಹ್ಯ ಪರತಂತ್ರತೆಯಿಂದಲೂ ಕೂಡಿದೆ. ಸರ್ವಶಕ್ತನಾಗಿದ್ದರೂ ಭಗವಂತನು ಕರ್ಮಬಂಧನದಲ್ಲಿ ಬಂಧಿತರಾದ ಜೀವಿಗಳಂತೆ ಈ ಮತ್ಸ್ಯರೂಪವನ್ನು ಏಕೆ ಧರಿಸಿದನು? ॥ ೨ ॥ ಮಹಾತ್ಮರೇ! ಮಹಾತ್ಮರಿಂದ ಕೀರ್ತಿಸಲ್ಪಡುವ

ಏತನ್ನೋ ಭಗವನ್ಸರ್ವಂ ಯಥಾವದ್ವಕ್ತುಮರ್ಹಸಿ ।
ಉತ್ತಮಶ್ಲೋಕಚರಿತಂ ಸರ್ವಲೋಕಸುಖಾವಹಮ್
॥ ೩ ॥

ಸೂತ ಉವಾಚ

ಇತ್ಯುಕ್ತೋ ವಿಷ್ಣುರಾತೇನ ಭಗವಾನ್ಬಾದರಾಯಣಿಃ ।
ಉವಾಚ ಚರಿತಂ ವಿಷ್ಣೋರ್ಮತ್ಸ್ಯರೂಪೇಣ ಯತ್ಕೃತಮ್
॥ ೪ ॥

ಶ್ರೀಶುಕ ಉವಾಚ

ಗೋವಿಪ್ರಸುರಸಾಧೂನಾಂ ಛಂದಸಾಮಪಿ ಚೇಶ್ವರಃ ।
ರಕ್ಷಾಮಿಚ್ಛಂಸ್ತನೂರ್ಧತ್ತೇ ಧರ್ಮಸ್ಯಾರ್ಥಸ್ಯ ಚೈವ ಹಿ
॥ ೫ ॥

ಉಚ್ಚಾವಚೇಷು ಭೂತೇಷು ಚರನ್ವಾಯುರಿವೇಶ್ವರಃ ।
ನೋಚ್ಚಾವಚತ್ವಂ ಭಜತೇ ನಿರ್ಗುಣತ್ವಾದ್ಧಿಯೋ ಗುಣೈಃ
॥ ೬ ॥

ಆಸೀದತೀತಕಲ್ಪಾಂತೇ ಬ್ರಾಹ್ಮೋ ನೈಮಿತ್ತಿಕೋ ಲಯಃ ।
ಸಮುದ್ರೋಪಪ್ಲುತಾಸ್ತತ್ರ ಲೋಕಾ ಭೂರಾದಯೋ ನೃಪ
॥ ೭ ॥

ಕಾಲೇನಾಗತನಿದ್ರಸ್ಯ ಧಾತುಃ ಶಿಶಯಿಷೋರ್ಬಲೀ ।
ಮುಖತೋ ನಿಃಸೃತಾನ್ವೇದಾನ್ಹಯಗ್ರೀವೋಽಂತಿಕೇಽಹರತ್
॥ ೮ ॥

ಜ್ಞಾತ್ವಾ ತದ್ದಾನವೇಂದ್ರಸ್ಯ ಹಯಗ್ರೀವಸ್ಯ ಚೇಷ್ಟಿತಮ್ ।
ದಧಾರ ಶಫರೀರೂಪಂ ಭಗವಾನ್ಹರಿರೀಶ್ವರಃ
॥ ೯ ॥

ತತ್ರ ರಾಜಋಷಿಃ ಕಶ್ಚಿನ್ನಾಮ್ನಾ ಸತ್ಯವ್ರತೋ ಮಹಾನ್ ।
ನಾರಾಯಣಪರೋಽತಪ್ಯತ್ತಪಃ ಸ ಸಲಿಲಾಶನಃ
॥ ೧೦ ॥

ಯೋಽಸಾವಸ್ಮಿನ್ಮಹಾಕಲ್ಪೇ ತನಯಃ ಸ ವಿವಸ್ವತಃ ।
ಶ್ರಾದ್ಧದೇವ ಇತಿ ಖ್ಯಾತೋ ಮನುತ್ವೇ ಹರಿಣಾರ್ಪಿತಃ
॥ ೧೧ ॥

ಏಕದಾ ಕೃತಮಾಲಾಯಾಂ ಕುರ್ವತೋ ಜಲತರ್ಪಣಮ್ ।
ತಸ್ಯಾಂಜಲ್ಯುದಕೇ ಕಾಚಿಚ್ಛಫರ್ಯೇಕಾಭ್ಯಪದ್ಯತ
॥ ೧೨ ॥

ಸತ್ಯವ್ರತೋಽಂಜಲಿಗತಾಂ ಸಹ ತೋಯೇನ ಭಾರತ ।
ಉತ್ಸಸರ್ಜ ನದೀತೋಯೇ ಶಫರೀಂ ದ್ರವಿಡೇಶ್ವರಃ
॥ ೧೩ ॥

ಭಗವಂತನ ಚರಿತ್ರೆಯು ಸಮಸ್ತ ಪ್ರಾಣಿಗಳಿಗೆ ಸುಖವನ್ನು ಕೊಡುವಂತಹುದಾಗಿದೆ. ತಾವು ದಯಮಾಡಿ ಅವನ ಆ ಎಲ್ಲ ಲೀಲೆಗಳನ್ನು ಪೂರ್ಣರೂಪದಿಂದ ವರ್ಣಿಸಿರಿ. ॥ ೩ ॥

ಸೂತಪುರಾಣಿಕರು ಹೇಳುತ್ತಾರೆ – ಶೌನಕಾದಿ ಋಷಿಗಳಿರಾ! ಪರೀಕ್ಷಿದ್ರಾಜನು ಶ್ರೀಶುಕಮಹಾಮುನಿಗಳಲ್ಲಿ ಹೀಗೆ ಪ್ರಶ್ನಿಸಿದಾಗ ಅವರು ಮತ್ಸ್ಯಾವತಾರವನ್ನೆತ್ತಿ ಮಹಾವಿಷ್ಣುವು ಮಾಡಿದ ಕರ್ಮಗಳನ್ನು ವರ್ಣಿಸಲು ಪ್ರಾರಂಭಿಸಿದರು – ॥ ೪ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಎಲೈ ಪರೀಕ್ಷಿತನೇ! ಭಗವಂತನಾದರೋ ಎಲ್ಲರ ಏಕಮಾತ್ರ ಸ್ವಾಮಿಯಾಗಿದ್ದಾನೆ. ಹೀಗಿದ್ದರೂ ಅವನು ಗೋವು, ಬ್ರಾಹ್ಮಣರು, ದೇವತೆಗಳು, ಸಾಧುಗಳು, ವೇದ, ಧರ್ಮಾರ್ಥಗಳು ಹೀಗೆ ಇವುಗಳ ರಕ್ಷಣೆಗಾಗಿ ನಾನಾ ವಿಧವಾದ ಶರೀರಗಳನ್ನು ಧರಿಸಿ ಅವತರಿಸುತ್ತಾನೆ. ॥ ೫ ॥ ಆ ಸರ್ವಶಕ್ತನಾದ ಪ್ರಭುವು ವಾಯುವಿನಂತೆ ಮೇಲೆ ಕೆಳಗೆ, ಸಣ್ಣ ದೊಡ್ಡ ಎಲ್ಲ ಪ್ರಾಣಿಗಳಲ್ಲಿ ಅಂತರ್ಯಾಮಿರೂಪದಿಂದ ಲೀಲೆ ಮಾಡುತ್ತಾನೆ. ಆದರೆ ಆಯಾ ಪ್ರಾಣಿಗಳ ಬುದ್ಧಿಗತ ಗುಣಗಳಿಂದ ಅವನು ಸಣ್ಣವನು-ದೊಡ್ಡವನು, ಎತ್ತರ-ತಗ್ಗು ಆಗುವುದಿಲ್ಲ. ಏಕೆಂದರೆ, ಅವನು ವಾಸ್ತವವಾಗಿ ಸಮಸ್ತ ಪ್ರಾಕೃತಗುಣಗಳಿಂದ ರಹಿತನಾಗಿದ್ದು ನಿರ್ಗುಣನೇ ಆಗಿದ್ದಾನೆ. ॥ ೬ ॥ ರಾಜೇಂದ್ರ! ಹಿಂದಿನ ಕಲ್ಪದ ಅಂತ್ಯದಲ್ಲಿ ಬ್ರಹ್ಮದೇವರು ನಿದ್ರಿಸಿದ್ದರಿಂದ ಬ್ರಾಹ್ಮವೆಂಬ ನೈಮಿತ್ತಿಕ ಪ್ರಳಯವಾಗಿತ್ತು. ಆಗ ಭೂರ್ಲೋಕ ಮೊದಲಾದ ಎಲ್ಲ ಲೋಕಗಳು ಸಮುದ್ರದಲ್ಲಿ ಮುಳುಗಿಹೋಗಿದ್ದವು. ॥ ೭ ॥ ಹಗಲು ಕಳೆದುಹೋಗಿ ರಾತ್ರಿಯು ಪ್ರಾರಂಭವಾದ ಕಾರಣ ಬ್ರಹ್ಮನು ನಿದ್ರಾಪರವಶನಾದನು. ಆ ಸಮಯದಲ್ಲಿ ವೇದಗಳು ಅವನ ಮುಖದಿಂದ ಹೊರಬಂದವು. ಆಗ ಸಮೀಪದಲ್ಲಿಯೇ ಇದ್ದ ಹಯಗ್ರೀವನೆಂಬ ಬಲಾಢ್ಯನಾದ ದೈತ್ಯನು ವೇದಗಳನ್ನು ಯೋಗಬಲದಿಂದ ಅಪಹರಿಸಿಬಿಟ್ಟನು. ॥ ೮ ॥ ಸರ್ವಶಕ್ತನಾದ ಭಗವಾನ್ ಶ್ರೀಹರಿಗೆ ದಾನವರಾಜನಾದ ಹಯಗ್ರೀವನ ಈ ಕಾರ್ಯವು ತಿಳಿದುಹೋಯಿತು. ವೇದಗಳನ್ನು ಉದ್ಧರಿಸುವುದಕ್ಕಾಗಿಯೇ ಅವನು ಮತ್ಸ್ಯಾವತಾರವನ್ನು ತಾಳಿದನು. ॥ ೯ ॥

ಪರೀಕ್ಷಿದ್ರಾಜನೇ! ಆ ಸಮಯದಲ್ಲಿ ಸತ್ಯವ್ರತನೆಂಬ ಉದಾರಿಯೂ, ನಾರಾಯಣಪರಾಯಣನೂ ಆದ ರಾಜರ್ಷಿಯು ಕೇವಲ ನೀರನ್ನು ಮಾತ್ರ ಕುಡಿದು ತಪಸ್ಸನ್ನಾಚರಿಸುತ್ತಿದ್ದನು. ॥ ೧೦ ॥ ಆ ಸತ್ಯವ್ರತನೇ ವರ್ತಮಾನ ಶ್ವೇತವರಾಹ ಮಹಾಕಲ್ಪದಲ್ಲಿ ಸೂರ್ಯದೇವನ ಮಗನಾಗಿ ಶ್ರಾದ್ಧದೇವನೆಂಬ ಹೆಸರಿನಿಂದ ವಿಖ್ಯಾತನಾಗಿದ್ದಾನೆ. ಅವನನ್ನು ಭಗವಂತನು ವೈವಸ್ವತಮನುವನ್ನಾಗಿ ಮಾಡಿರುವನು. ॥ ೧೧ ॥ ಒಂದು ದಿನ ಆ ರಾಜರ್ಷಿಯು ಕೃತಮಾಲಾ ನದಿಯಲ್ಲಿ ನೀರಿನಿಂದ ತರ್ಪಣಗಳನ್ನು ಕೊಡುತ್ತಿದ್ದನು. ಆಗಲೇ ಅವನ ಬೊಗಸೆಯ ನೀರಿನಲ್ಲಿ ಒಂದು ಸಣ್ಣ ಮೀನು ಬಂದುಬಿಟ್ಟಿತು. ॥ ೧೨ ॥ ಪರೀಕ್ಷಿತನೇ! ದ್ರವಿಡದೇಶದ ಸತ್ಯವ್ರತರಾಜನು ತನ್ನ ಬೊಗಸೆಯಲ್ಲಿ ಬಂದಿರುವ ಮೀನನ್ನು ನೀರಿನೊಂದಿಗೆ ಪುನಃ ನದಿಯಲ್ಲಿ ಬಿಟ್ಟುಬಿಟ್ಟನು. ॥ ೧೩ ॥ ನೀರಿಗೆ ಬಿಟ್ಟೊಡನೆ ಆ ಮೀನು ಕರುಣಾಜನಕ ರೀತಿಯಿಂದ ಪರಮದ

ತಮಾಹ ಸಾತಿಕರುಣಂ ಮಹಾಕಾರುಣಿಕಂ ನೃಪಮ್ ।
ಯಾದೋಭ್ಯೋ ಜ್ಞಾತಿಘಾತಿಭ್ಯೋ ದೀನಾಂ ಮಾಂ ದೀನವತ್ಸಲ ।
ಕಥಂ ವಿಸೃಜಸೇ ರಾಜನ್ಭೀತಾಮಸ್ಮಿನ್ಸರಿಜ್ಜಲೇ ॥ ೧೪ ॥

ತಮಾತ್ಮನೋಽನುಗ್ರಹಾರ್ಥಂ ಪ್ರೀತ್ಯಾ ಮತ್ಸ್ಯವಪುರ್ಧರಮ್ ।
ಅಜಾನನ್ರಕ್ಷಣಾರ್ಥಾಯ ಶಫರ್ಯಾಃ ಸ ಮನೋ ದಧೇ ॥ ೧೫ ॥

ತಸ್ಯಾ ದೀನತರಂ ವಾಕ್ಯಮಾಶ್ರುತ್ಯ ಸ ಮಹೀಪತಿಃ ।
ಕಲಶಾಪ್ಸು ನಿಧಾಯೈನಾಂ ದಯಾಲುರ್ನಿನ್ಯ ಆಶ್ರಮಮ್ ॥ ೧೬ ॥

ಸಾ ತು ತತ್ರೈಕರಾತ್ರೇಣ ವರ್ಧಮಾನಾ ಕಮಂಡಲೌ ।
ಅಲಬ್ಧ್ವಾಽಽತ್ಮಾವಕಾಶಂ ವಾ ಇದಮಾಹ ಮಹೀಪತಿಮ್ ॥ ೧೭ ॥

ನಾಹಂ ಕಮಂಡಲಾವಸ್ಮಿನ್ ಕೃಚ್ಛ್ರಂ ವಸ್ತುಮಿಹೋತ್ಸಹೇ ।
ಕಲ್ಪಯೌಕಃ ಸುವಿಪುಲಂ ಯತ್ರಾಹಂ ನಿವಸೇ ಸುಖಮ್ ॥ ೧೮ ॥

ಸ ಏನಾಂ ತತ ಆದಾಯ ನ್ಯಧಾದೌದಂಚನೋದಕೇ ।
ತತ್ರ ಕ್ಷಿಪ್ತಾ ಮುಹೂರ್ತೇನ ಹಸ್ತತ್ರಯಮವರ್ಧತ ॥ ೧೯ ॥

ನ ಮ ಏತದಲಂ ರಾಜನ್ಸುಖಂ ವಸ್ತುಮುದಂಚನಮ್ ।
ಪೃಥು ದೇಹಿ ಪದಂ ಮಹ್ಯಂ ಯತ್ತ್ವಾಹಂ ಶರಣಂ ಗತಾ ॥ ೨೦ ॥

ತತ ಆದಾಯ ಸಾ ರಾಜ್ಞಾ ಕ್ಷಿಪ್ತಾ ರಾಜನ್ಸರೋವರೇ ।
ತದಾವೃತ್ಯಾತ್ಮನಾ ಸೋಽಯಂ ಮಹಾಮೀನೋಽನ್ವವರ್ಧತ ॥ ೨೧ ॥

ನೈತನ್ಮೇ ಸ್ವಸ್ತಯೇ ರಾಜನ್ನುದಕಂ ಸಲಿಲೌಕಸಃ ।
ನಿಧೇಹಿ ರಕ್ಷಾಯೋಗೇನ ಹ್ರದೇ ಮಾಮವಿದಾಸಿನಿ ॥ ೨೨ ॥

ಇತ್ಯುಕ್ತಃ ಸೋಽನಯನ್ಮತ್ಸ್ಯಂ ತತ್ರ ತತ್ರಾವಿದಾಸಿನಿ ।
ಜಲಾಶಯೇ ಸಮ್ಮಿತಂ ತಂ ಸಮುದ್ರೇ ಪ್ರಾಕ್ಷಿಪಜ್ಝಷಮ್ ॥ ೨೩ ॥

ಕ್ಷಿಪ್ಯಮಾಣಸ್ತಮಾಹೇದಮಿಹ ಮಾಂ ಮಕರಾದಯಃ ।
ಅದಂತ್ಯತಿಬಲಾ ವೀರ ಮಾಂ ನೇಹೋತ್ಸ್ರಷ್ಟುಮರ್ಹಸಿ ॥ ೨೪ ॥

ಯಾಳುವಾದ ರಾಜನಲ್ಲಿ ಹೇಳಿತು – ಮಹಾರಾಜನೇ! ನೀನು ದೀನವತ್ಸಲನಾಗಿರುವೆ. ನೀರಿನಲ್ಲಿರುವ ಜಂತುಗಳು ತಮ್ಮ ಜಾತಿಗೆ ಸೇರಿದವರನ್ನೇ ತಿಂದುಹಾಕುತ್ತವೆ. ಚಿಕ್ಕಮೀನನ್ನು ದೊಡ್ಡಮೀನುಗಳು ನುಂಗಿಹಾಕುತ್ತವೆ. ನಾನು ಅವುಗಳ ಭಯದಿಂದ ಅತ್ಯಂತ ವ್ಯಾಕುಲಳಾಗಿದ್ದೇನೆ. ನೀನು ನನ್ನನ್ನು ಪುನಃ ಈ ನದಿಯ ನೀರಿನಲ್ಲಿ ಏಕೆ ಬಿಡುತ್ತಿರುವೆ? ॥ ೧೪ ॥ ಸತ್ಯವ್ರತಮಹಾರಾಜನಿಗೆ ಭಗವಂತನೇ ಸ್ವತಃ ನನ್ನ ಮೇಲೆ ಪ್ರಸನ್ನನಾಗಿ ಕರುಣೆದೋರಲು ಮತ್ಸ್ಯ ರೂಪದಿಂದ ಆಗಮಿಸಿದ್ದಾನೆ ಎಂಬುದು ತಿಳಿಯದು. ಅದಕ್ಕಾಗಿ ಅವನು ಆ ಮೀನನ್ನು ರಕ್ಷಿಸಬೇಕೆಂದು ಮನಸ್ಸಿನಲ್ಲೇ ಸಂಕಲ್ಪಿಸಿದನು. ॥ ೧೫ ॥

ಆ ಮೀನಿನ ಅತ್ಯಂತ ದೈನ್ಯದ ಮಾತನ್ನು ಕೇಳಿದ ರಾಜಾ ಸತ್ಯವ್ರತನು ದಯಾರ್ದ್ರಹೃದಯನಾಗಿ ತನ್ನ ಕಮಂಡಲುವಿನ ನೀರಿನಲ್ಲಿ ಇಟ್ಟುಕೊಂಡು ಆಶ್ರಮಕ್ಕೆ ತಂದನು. ॥ ೧೬ ॥ ಆಶ್ರಮಕ್ಕೆ ತಂದಬಳಿಕ ಒಂದೇ ರಾತ್ರಿಯಲ್ಲಿ ಆ ಮೀನು ಆ ಕಮಂಡಲುವಿನಲ್ಲಿ ಹಿಡಿಸಲಾರದಷ್ಟು ದೊಡ್ಡದಾಯಿತು. ಆಗ ಆ ಮೀನು ರಾಜನಲ್ಲಿ ಹೇಳಿತು – ॥ ೧೭ ॥ ಮಹಾರಾಜಾ! ಈ ಕಮಂಡಲುವಿನಲ್ಲಿ ನಾನು ಕಷ್ಟಪಟ್ಟಾದರೂ ಇರಲು ಸಾಧ್ಯವಾಗದು. ಆದ್ದರಿಂದ ನಾನು ಸುಖವಾಗಿ ಇರಬಹುದಾದ ಒಂದು ದೊಡ್ಡದಾದ ಸ್ಥಾನವನ್ನು ನನಗಾಗಿ ಕಲ್ಪಿಸಿಕೊಡು. ॥ ೧೮ ॥ ಸತ್ಯವ್ರತರಾಜನು ಆ ಮೀನಿನ ಮಾತನ್ನು ಕೇಳಿ ಒಂದು ದೊಡ್ಡದಾದ ನೀರಿನ ಮಡಕೆಯಲ್ಲಿ (ಹರಿಯಲ್ಲಿ) ಇರಿಸಿದನು. ಆದರೆ ಅದರಲ್ಲಿ ಇರಿಸುತ್ತಲೇ ಎರಡೇ ಗಳಿಗೆಯಲ್ಲಿ ಮೂರು ಮೊಳದಷ್ಟು ದೊಡ್ಡದಾಯಿತು. ॥ ೧೯ ॥ ಪುನಃ ಅದು ರಾಜನಿಗೆ ಹೇಳಿತು – ಸತ್ಯವ್ರತನೇ! ಈಗ ಈ ಮಡಕೆಯೂ ನನಗೆ ಸುಖವಾಗಿ ಇರಲು ಸಾಲದಾಗಿದೆ. ನಾನು ನಿನ್ನನ್ನೇ ಮರೆಹೊಕ್ಕಿದ್ದೇನೆ. ಅದಕ್ಕಾಗಿ ನನಗೆ ಇರಲು ಯಾವುದಾದರೊಂದು ಯೋಗ್ಯವಾದ ದೊಡ್ಡ ಸ್ಥಾನವನ್ನು ಕಲ್ಪಿಸಿಕೊಡು. ॥ ೨೦ ॥

ಪರೀಕ್ಷಿತನೇ! ಸತ್ಯವ್ರತಮಹಾರಾಜನು ಆ ಮೀನನ್ನು ಅಲ್ಲಿಂದ ಎತ್ತಿಕೊಂಡುಹೋಗಿ ಒಂದು ದೊಡ್ಡ ಸರೋವರದಲ್ಲಿ ಇರಿಸಿದನು. ಆದರೆ ಅದು ಸ್ವಲ್ಪಹೊತ್ತಿನಲ್ಲೇ ಒಂದು ಮಹಾಮತ್ಸ್ಯವಾಗಿ ಬೆಳೆದು ತನ್ನ ಶರೀರದಿಂದ ಆ ಸರೋವರವನ್ನೆಲ್ಲಾ ವ್ಯಾಪಿಸಿಬಿಟ್ಟಿತು. ॥ ೨೧ ॥ ಮತ್ತೆ ಪುನಃ ಹೇಳಿತು – ರಾಜನೇ! ನಾನು ಜಲಚರ ಪ್ರಾಣಿಯಾಗಿದ್ದೇನೆ. ಈ ಸರೋವರದ ನೀರೂ ಕೂಡ ನನಗೆ ಸುಖವಾಗಿ ವಾಸಿಸಲು ಸಾಲದಾಗಿದೆ. ಅದಕ್ಕಾಗಿ ನೀನು ನನ್ನನ್ನು ರಕ್ಷಿಸಿ ನನಗೆ ಯಾವುದಾದರೂ ಆಳವಾದ ದೊಡ್ಡ ಸರೋವರದಲ್ಲಿ ಇರಿಸು. ॥ ೨೨ ॥ ಅದರಂತೆ ರಾಜನು ಅದಕ್ಕಿಂತ ದೊಡ್ಡ ಸರೋವರದಲ್ಲಿ ಇರಿಸಿದಾಗ ಆ ಮೀನು ಬೆಳೆಯುತ್ತಲೇ ಹೋಯಿತು. ಮತ್ತೊಂದು ಸರೋವರ ಅದು ಸಾಲದಾದಾಗ ಇನ್ನೊಂದು ಸರೋವರ ಹೀಗೆ ಕಡೆಗೆ ರಾಜನು ಆ ಲೀಲಾ ಮತ್ಸ್ಯವನ್ನು ಸಮುದ್ರಕ್ಕೆ ತಂದುಬಿಟ್ಟನು. ॥ ೨೩ ॥ ಸಮುದ್ರಕ್ಕೆ ಹಾಕುವ ಸಮಯದಲ್ಲಿ ಮತ್ಸ್ಯರೂಪೀ ಭಗವಂತನು ಸತ್ಯವ್ರತನಿಗೆ ಹೇಳಿದನು – 'ವೀರಾಧಿವೀರನೇ! ಸಮುದ್ರದಲ್ಲಿ ದೊಡ್ಡ-ದೊಡ್ಡ ತಿಮಿಂಗಿಲಗಳಿವೆ. ಅವು ನನ್ನನ್ನು ತಿಂದುಬಿಟ್ಟಾವು. ಅದಕ್ಕಾಗಿ ನೀನು ನನ್ನನ್ನು ಸಮುದ್ರದಲ್ಲಿ ಬಿಡಬೇಡ.' ॥ ೨೪ ॥

ಏವಂ ವಿಮೋಹಿತಸ್ತೇನ ವದತಾ ವಲ್ಗುಭಾರತೀಮ್ ।
ತಮಾಹ ಕೋ ಭವಾನಸ್ಮಾನ್ಮತ್ಸ್ಯರೂಪೇಣ ಮೋಹಯನ್ ॥ ೨೫ ॥

ನೈವಂವೀರ್ಯೋ ಜಲಚರೋ ದೃಷ್ಟೋಽಸ್ಮಾಭಿಃ ಶ್ರುತೋಽಪಿ ಚ ।
ಯೋ ಭವಾನ್ಯೋಜನಶತಮಹ್ನಾಭಿವ್ಯಾನಶೇ ಸರಃ ॥ ೨೬ ॥

ನೂನಂ ತ್ವಂ ಭಗವಾನ್ಸಾಕ್ಷಾದ್ಧರಿರ್ನಾರಾಯಣೋಽವ್ಯಯಃ ।
ಅನುಗ್ರಹಾಯ ಭೂತಾನಾಂ ಧತ್ಸೇ ರೂಪಂ ಜಲೌಕಸಾಮ್ ॥ ೨೭ ॥

ನಮಸ್ತೇ ಪುರುಷಶ್ರೇಷ್ಠ ಸ್ಥಿತ್ಯುತ್ಪತ್ತ್ಯಪ್ಯಯೇಶ್ವರ ।
ಭಕ್ತಾನಾಂ ನಃ ಪ್ರಪನ್ನಾನಾಂ ಮುಖ್ಯೋ ಹ್ಯಾತ್ಮಗತಿರ್ವಿಭೋ ॥ ೨೮ ॥

ಸರ್ವೇ ಲೀಲಾವತಾರಾಸ್ತೇ ಭೂತಾನಾಂ ಭೂತಿಹೇತವಃ ।
ಜ್ಞಾತುಮಿಚ್ಛಾಮ್ಯದೋ ರೂಪಂ ಯದರ್ಥಂ ಭವತಾ ಧೃತಮ್ ॥ ೨೯ ॥

ನ ತೇಽರವಿಂದಾಕ್ಷ ಪದೋಪಸರ್ಪಣಂ
ಮೃಷಾ ಭವೇತ್ಸರ್ವಸುಹೃತ್ಪ್ರಿಯಾತ್ಮನಃ ।
ಯಥೇತರೇಷಾಂ ಪೃಥಗಾತ್ಮನಾಂ ಸತಾ-
ಮದೀದೃಶೋ ಯದ್ವಪುರದ್ಭುತಂ ಹಿ ನಃ ॥ ೩೦ ॥

ಶ್ರೀಶುಕ ಉವಾಚ

ಇತಿ ಬ್ರುವಾಣಂ ನೃಪತಿಂ ಜಗತ್ಪತಿಃ
ಸತ್ಯವ್ರತಂ ಮತ್ಸ್ಯವಪುರ್ಯುಗಕ್ಷಯೇ ।
ವಿಹರ್ತುಕಾಮಃ ಪ್ರಲಯಾರ್ಣವೇಽಬ್ರವೀ-
ಚ್ಚಿಕೀರ್ಷುರೇಕಾಂತಜನಪ್ರಿಯಃ ಪ್ರಿಯಮ್ ॥ ೩೧ ॥

ಶ್ರೀಭಗವಾನುವಾಚ

ಸಪ್ತಮೇಽದ್ಯತನಾದೂರ್ಧ್ವಮಹನ್ಯೇತದರಿಂದಮ ।
ನಿಮಂಕ್ಷ್ಯತ್ಯಪ್ಯಯಾಂಭೋಧೌ ತ್ರೈಲೋಕ್ಯಂ ಭೂರ್ಭುವಾದಿಕಮ್ ॥ ೩೨ ॥

ತ್ರಿಲೋಕ್ಯಾಂ ಲೀಯಮಾನಾಯಾಂ ಸಂವರ್ತಾಂಭಸಿ ವೈ ತದಾ ।
ಉಪಸ್ಥಾಸ್ಯತಿ ನೌಃ ಕಾಚಿದ್ವಿಶಾಲಾ ತ್ವಾಂ ಮಯೇರಿತಾ ॥ ೩೩ ॥

ತ್ವಂ ತಾವದೋಷಧೀಃ ಸರ್ವಾ ಬೀಜಾನ್ಯುಚ್ಚಾವಚಾನಿ ಚ ।
ಸಪ್ತರ್ಷಿಭಿಃ ಪರಿವೃತಃ ಸರ್ವಸತ್ತ್ವೋಪಬೃಂಹಿತಃ ॥ ೩೪ ॥

ಭಗವಾನ್ ಮತ್ಸ್ಯಮೂರ್ತಿಯ ಈ ಸುಮಧುರ ವಾಣಿಯನ್ನು ಕೇಳಿ ಸತ್ಯವ್ರತರಾಜನು ಮೋಹಮುಗ್ಧನಾಗಿ ಹೇಳಿದನು – ಮತ್ಸ್ಯ ರೂಪವನ್ನು ಧರಿಸಿ ನನ್ನನ್ನು ವಿಮೋಹಗೊಳಿಸುತ್ತಿರುವ ನೀನು ಯಾರು ? ॥ ೨೫ ॥ ಮಹಾನುಭಾವನೇ ! ನೀನು ಒಂದೇ ದಿನದಲ್ಲಿ ನೂರುಯೋಜನ ವಿಸ್ತಾರವುಳ್ಳ ಸರೋವರವನ್ನು ವ್ಯಾಪಿಸಿ ಬಿಟ್ಟಿರುವೆ. ಇಂತಹ ಅಮೋಘಶಕ್ತಿಯುಳ್ಳ ಜಲಚರವನ್ನು ನಾವು ಇಂದಿನವರೆಗೆ ಕಂಡಿಲ್ಲ, ಕೇಳಿಲ್ಲ. ॥ ೨೬ ॥ ನಿಶ್ಚಯವಾಗಿಯೂ ನೀನು ಸರ್ವಶಕ್ತಿಯುಳ್ಳ, ಸರ್ವಾಂತರ್ಯಾಮಿ, ಅವಿನಾಶಿ ಸಾಕ್ಷಾತ್ ಭಗವಾನ್ ಶ್ರೀಹರಿಯೇ ಆಗಿರುವೆ. ಜೀವಿಗಳ ಮೇಲೆ ಅನುಗ್ರಹ ತೋರಲೆಂದೇ ನೀನು ಜಲಚರದ ರೂಪವನ್ನು ಧರಿಸಿರುವೆ. ॥ ೨೭ ॥ ಪುರುಷೋತ್ತಮನೇ ! ನೀನೇ ಜಗತ್ತಿನ ಉತ್ಪತ್ತಿ, ಸ್ಥಿತಿ, ಸಂಹಾರಮಾಡುವ ಸ್ವಾಮಿಯಾಗಿರುವೆ. ನಿನಗೆ ನಾನು ನಮಸ್ಕರಿಸುತ್ತೇನೆ. ವಿಭುವೇ ! ಶರಣಾಗತ ಭಕ್ತರಾದ ನಮ್ಮಂತಹವರಿಗೆ ನೀನೇ ಪರಮಾತ್ಮನೂ, ಪರಮಾಶ್ರಯನೂ ಆಗಿರುವೆ. ॥ ೨೮ ॥ ನಿನ್ನ ಎಲ್ಲ ಲೀಲಾವತಾರಗಳು ಪ್ರಾಣಿಗಳ ಶ್ರೇಯಸ್ಸಿಗಾಗಿಯೇ ಇದ್ದರೂ ನೀನು ಈ ರೂಪವನ್ನು ಯಾವ ಉದ್ದೇಶಕ್ಕಾಗಿ ಧರಿಸಿರುವೆ ? ಇದನ್ನು ತಿಳಿಯಲು ನಾನು ಇಚ್ಛಿಸುತ್ತೇನೆ. ॥ ೨೯ ॥ ಅರವಿಂದನೇ ! ದೇಹಾದಿ ಅನಾತ್ಮ ಪದಾರ್ಥಗಳಲ್ಲಿ ಆತ್ಮಬುದ್ಧಿಯ ಅಭಿಮಾನಪಡುವ ಸಂಸಾರೀ ಜನರ ಆಶ್ರಯವು ವ್ಯರ್ಥವಾಗಿ ಹೋಗುವಂತೆ ನಿನ್ನ ಚರಣಕಮಲಗಳ ಶರಣಾಗತಿಯು ವ್ಯರ್ಥವಾಗಲಾರದು. ಏಕೆಂದರೆ, ನೀನು ಎಲ್ಲರ ಅಹೈತುಕ ಪ್ರೇಮಿಯಾಗಿರುವೆ. ಪರಮ ಪ್ರಿಯತಮನಾಗಿರುವೆ, ಆತ್ಮನಾಗಿರುವೆ. ಈಗ ನಮಗೆ ದರ್ಶನ ಕೊಡುತ್ತಿರುವ ಈ ರೂಪವು ಅದ್ಭುತವಾಗಿದೆ. ॥ ೩೦ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ ! ಭಕ್ತಪ್ರಿಯನಾದ, ಜಗತ್ಪತಿಯಾದ ಭಗವಂತನು ಮತ್ಸ್ಯರೂಪವನ್ನು ಧರಿಸಿ ಪ್ರಳಯಕಾಲದಲ್ಲಿ ಸಮುದ್ರದಲ್ಲಿ ವಿಹರಿಸಬೇಕೆಂಬ ಇಚ್ಛೆಯಿಂದ ಕೂಡಿದ್ದನು. ತನ್ನನ್ನು ನಾನಾ ಪ್ರಕಾರವಾಗಿ ಸ್ತೋತ್ರ ಮಾಡುತ್ತಿದ್ದ ಸತ್ಯವ್ರತನಿಗೆ ಪ್ರಿಯವನ್ನುಂಟುಮಾಡಬೇಕೆಂದು ಬಯಸಿ ಇಂತೆಂದನು – ॥ ೩೧ ॥

ಶ್ರೀಭಗವಂತನು ಹೇಳಿದನು – ಸತ್ಯವ್ರತಮಹಾರಾಜನೇ ! ಇಂದಿನಿಂದ ಏಳನೆಯ ದಿನ ಭೂಲೋಕವೇ ಮೊದಲಾದ ಮೂರೂ ಲೋಕಗಳೂ ಪ್ರಳಯಸಮುದ್ರದಲ್ಲಿ ಮುಳುಗಿಹೋಗುವುವು. ॥ ೩೨ ॥ ಮೂರೂ ಲೋಕಗಳು ಪ್ರಳಯಜಲದಲ್ಲಿ ಮುಳುಗಿಹೋದಾಗ ನನ್ನ ಪ್ರೇರಣೆಯಂತೆ ನಿನ್ನ ಬಳಿಗೆ ವಿಶಾಲವಾದೊಂದು ನೌಕೆಯು ಬರುವುದು. ॥ ೩೩ ॥ ಆಗ ನೀನು ಸಮಸ್ತ ಪ್ರಾಣಿಗಳ ಸೂಕ್ಷ್ಮಶರೀರಗಳನ್ನು ತೆಗೆದುಕೊಂಡು ಸಪ್ತರ್ಷಿಗಳೊಡನೆ ಆ ನೌಕೆಯನ್ನು ಹತ್ತಬೇಕು. ಸಮಸ್ತ ಮೂಲಿಕೆಗಳನ್ನು, ಬಗೆ-ಬಗೆಯ ಬೀಜಗಳನ್ನು ನೀನು ಜೊತೆಯಲ್ಲಿರಿಸಿಕೊಳ್ಳಬೇಕು. ॥ ೩೪ ॥ ಆ ಸಮಯದಲ್ಲಿ ಎಲ್ಲ ಕಡೆಯಲ್ಲಿಯೂ ಮಹಾಸಾಗರವೇ ಕಂಡು ಬಂದೀತು. ಬೆಳಕೂ ಇರುವುದಿಲ್ಲ, ಕೇವಲ ಸಪ್ತರ್ಷಿಗಳ ದಿವ್ಯ ಪ್ರಕಾಶವನ್ನೇ ನೀನು ಕಾಣುವೆ. ಅದರಿಂದಾಗಿ ಯಾವುದೇ ಭಯ

ಆರುಹ್ಯ ಬೃಹತೀಂ ನಾವಂ ವಿಚರಿಷ್ಯಸ್ಯವಿಕ್ಲವಃ ।
ಏಕಾರ್ಣವೇ ನಿರಾಲೋಕೇ ಋಷೀಣಾಮೇವ ವರ್ಚಸಾ
॥ ೩೫ ॥

ದೋಧೂಯಮಾನಾಂ ತಾಂ ನಾವಂ ಸಮೀರೇಣ ಬಲೀಯಸಾ ।
ಉಪಸ್ಥಿತಸ್ಯ ಮೇ ಶೃಂಗೇ ನಿಬಧ್ನೀಹಿ ಮಹಾಹಿನಾ
॥ ೩೬ ॥

ಅಹಂ ತ್ವಾಮೃಷಿಭಿಃ ಸಾಕಂ ಸಹನಾವಮುದನ್ವತಿ ।
ವಿಕರ್ಷನ್ವಿಚರಿಷ್ಯಾಮಿ ಯಾವದ್ಬ್ರಾಹ್ಮೀ ನಿಶಾ ಪ್ರಭೋ
॥ ೩೭ ॥

ಮದೀಯಂ ಮಹಿಮಾನಂ ಚ ಪರಂ ಬ್ರಹ್ಮೇತಿ ಶಬ್ದಿತಮ್ ।
ವೇತ್ಸ್ಯಸ್ಯನುಗೃಹೀತಂ ಮೇ ಸಂಪ್ರಶ್ನೈರ್ವಿವೃತಂ ಹೃದಿ
॥ ೩೮ ॥

ಇತ್ಥಮಾದಿಶ್ಯ ರಾಜಾನಂ ಹರಿರಂತರಧೀಯತ ।
ಸೋಽನ್ವವೈಕ್ಷತ ತಂ ಕಾಲಂ ಯಂ ಹೃಷೀಕೇಶ ಆದಿಶತ್
॥ ೩೯ ॥

ಆಸ್ತೀರ್ಯ ದರ್ಭಾನ್ಪ್ರಾಕ್ಕೂಲಾನ್ರಾಜರ್ಷಿಃ ಪ್ರಾಗುದಙ್ಮುಖಃ ।
ನಿಷಸಾದ ಹರೇಃ ಪಾದೌ ಚಿಂತಯನ್ಮತ್ಸ್ಯರೂಪಿಣಃ
॥ ೪೦ ॥

ತತಃ ಸಮುದ್ರ ಉದ್ವೇಲಃ ಸರ್ವತಃ ಪ್ಲಾವಯನ್ಮಹೀಮ್ ।
ವರ್ಧಮಾನೋ ಮಹಾಮೇಘೈರ್ವರ್ಷದ್ಭಿಃ ಸಮದೃಶ್ಯತ
॥ ೪೧ ॥

ಧ್ಯಾಯನ್ಭಗವದಾದೇಶಂ ದದೃಶೇ ನಾವಮಾಗತಾಮ್ ।
ತಾಮಾರುರೋಹ ವಿಪ್ರೇಂದ್ರೈರಾದಾಯೌಷಧಿವೀರುಧಃ
॥ ೪೨ ॥

ತಮೂಚುರ್ಮುನಯಃ ಪ್ರೀತಾ ರಾಜನ್ ಧ್ಯಾಯಸ್ವ ಕೇಶವಮ್ ।
ಸ ವೈ ನಃ ಸಂಕಟಾದಸ್ಮಾದವಿತಾ ಶಂ ವಿಧಾಸ್ಯತಿ
॥ ೪೩ ॥

ಸೋಽನುಧ್ಯಾತಸ್ತತೋ ರಾಜ್ಞಾ ಪ್ರಾದುರಾಸೀನ್ಮಹಾರ್ಣವೇ ।
ಏಕಶೃಂಗಧರೋ ಮತ್ಸ್ಯೋ ಹೈಮೋ ನಿಯುತಯೋಜನಃ
॥ ೪೪ ॥

ನಿಬಧ್ಯ ನಾವಂ ತಚ್ಛೃಂಗೇ ಯಥೋಕ್ತೋ ಹರಿಣಾ ಪುರಾ ।
ವರತ್ರೇಣಾಹಿನಾ ತುಷ್ಟಸ್ತುಷ್ಟಾವ ಮಧುಸೂದನಮ್
॥ ೪೫ ॥

ರಾಜೋವಾಚ

ಅನಾದ್ಯವಿದ್ಯೋಪಹತಾತ್ಮಸಂವಿದ-
ಸ್ತನ್ಮೂಲಸಂಸಾರಪರಿಶ್ರಮಾತುರಾಃ ।
ಯದೃಚ್ಛಯೇಹೋಪಸೃತಾ ಯಮಾಪ್ನುಯು-
ರ್ವಿಮುಕ್ತಿದೋ ನಃ ಪರಮೋ ಗುರುರ್ಭವಾನ್ ॥ ೪೬ ॥

ವಿಲ್ಲದೆ ನೀನು ಆ ವಿಶಾಲವಾದ ನೌಕೆಯಲ್ಲಿ ಕುಳಿತುಕೊಂಡು ಎಲ್ಲೆಡೆ ಸಂಚರಿಸುತ್ತಿರು. ॥ ೩೫ ॥ ಪ್ರಚಂಡವಾದ ಚಂಡಮಾರುತದಿಂದ ನೌಕೆಯು ಅಲ್ಲೋಲ ಕಲ್ಲೋಲವಾದಾಗ ನಾನು ಇದೇ ರೂಪದಿಂದ ಅಲ್ಲಿಗೆ ಬರುವೆನು. ಆಗ ನೀವುಗಳು ಸರ್ಪರಾಜನಾದ ವಾಸುಕಿಯನ್ನು ಹಗ್ಗವನ್ನಾಗಿಸಿ ಆ ನೌಕೆಯನ್ನು ನನ್ನ ಕೊಂಬಿಗೆ ಕಟ್ಟಿಹಾಕಿ. ॥ ೩೬ ॥ ಸತ್ಯವ್ರತನೇ ! ಬಳಿಕ ಬ್ರಹ್ಮದೇವರ ರಾತ್ರಿಯು ಇರುವತನಕ ನಾನು ಸಪ್ತರ್ಷಿಗಳೊಡನೆ ನಿನ್ನನ್ನು ಆ ನೌಕೆಯಲ್ಲಿ ಕುಳ್ಳಿರಿಸಿಕೊಂಡು ಅದನ್ನು ಎಳೆದುಕೊಂಡು ಹೋಗುತ್ತಾ ಸಮುದ್ರದಲ್ಲಿ ಸಂಚರಿಸುವೆನು. ॥ ೩೭ ॥

ಆಗ ನೀನು ಪ್ರಶ್ನಿಸಿದುದಕ್ಕೆಲ್ಲ ನಾನು ಉತ್ತರಿಸುತ್ತಾ ಇರುವೆನು. ನನ್ನ ವಾಸ್ತವಿಕ ಪರಬ್ರಹ್ಮ ಮಹಿಮೆಯು ನನ್ನ ಅನುಗ್ರಹದಿಂದ ನಿನ್ನ ಹೃದಯದಲ್ಲಿ ಪ್ರಕಟವಾದೀತು. ಅದರಿಂದ ನೀನು ಸರಿಯಾಗಿ ಅರಿತುಕೊಳ್ಳುವೆ. ॥ ೩೮ ॥ ಸತ್ಯವ್ರತರಾಜನಿಗೆ ಹೀಗೆ ಆದೇಶವನ್ನಿತ್ತು ಭಗವಂತನು ಅಂತರ್ಧಾನನಾದನು. ಆದ್ದರಿಂದ ಭಗವಂತನು ನಿರ್ದೇಶಿಸಿದ್ದ ಆ ಕಾಲವನ್ನು ರಾಜನು ನಿರೀಕ್ಷಿಸುತ್ತಾ ಇದ್ದನು. ॥ ೩೯ ॥ ಬಳಿಕ ರಾಜರ್ಷಿಯಾದ ಸತ್ಯವ್ರತನು ಪೂರ್ವಾಗ್ರವಾಗಿ ದರ್ಭೆಗಳನ್ನು ಹಾಸಿ ಈಶಾನ್ಯದಿಕ್ಕಿಗೆ ಅಭಿಮುಖನಾಗಿ ಕುಳಿತು, ಮತ್ಸ್ಯರೂಪಿಯಾದ ಭಗವಂತನ ಚರಣಕಮಲಗಳನ್ನು ಧ್ಯಾನಿಸುತ್ತಿದ್ದನು. ॥ ೪೦ ॥ ಅಷ್ಟರಲ್ಲೇ ಭಗವಂತನು ಹೇಳಿದ ಆ ಸಮಯ ಸನ್ನಿಹಿತವಾಯಿತು. ರಾಜನು ನೋಡುತ್ತಾನೆ – ಸಮುದ್ರವು ತನ್ನ ಮೇರೆಗಳನ್ನು ಮೀರಿ ಉಕ್ಕುತ್ತಾ ಇದೆ. ಪ್ರಳಯಕಾಲದ ಭಯಂಕರ ಮೇಘಗಳು ಮಳೆಗರೆಯುತ್ತಾ ಇದೆ. ನೋಡುನೋಡುತ್ತಿರುವಂತೆ ಇಡೀ ಪೃಥಿವಿಯು ನೀರಿನಲ್ಲಿ ಮುಳುಗ ತೊಡಗಿತು. ॥ ೪೧ ॥ ಆಗ ರಾಜನು ಭಗವಂತನ ಆದೇಶವನ್ನು ನೆನೆದಾಗ ಒಂದು ನೌಕೆಯು ಬಳಿಗೆ ಬಂದಿರುವುದನ್ನು ನೋಡಿದನು. ಸತ್ಯವ್ರತನು ಸಕಲ ಔಷಧಿ-ವನಸ್ಪತಿ-ಧಾನ್ಯಬೀಜಗಳನ್ನು ಎತ್ತಿಕೊಂಡು ಸಪ್ತರ್ಷಿಗಳೊಡನೆ ನಾವೆಯನ್ನು ಹತ್ತಿದನು. ॥ ೪೨ ॥ ಸಪ್ತರ್ಷಿಗಳು ತುಂಬುಪ್ರೇಮದಿಂದ ಸತ್ಯವ್ರತರಾಜನಲ್ಲಿ ಹೇಳಿದರು – ರಾಜನೇ ! ನೀನು ಭಗವಂತನನ್ನು ಧ್ಯಾನಿಸು. ಅವನೇ ನಮ್ಮನ್ನು ಈ ಸಂಕಟದಿಂದ ಪಾರುಗೊಳಿಸುವನು ಹಾಗೂ ಪರಮಸುಖವನ್ನು ಅನುಗ್ರಹಿಸುವನು. ॥ ೪೩ ॥ ಅವರ ಆದೇಶದಂತೆ ರಾಜನು ಭಗವಂತನ ಧ್ಯಾನ ಮಾಡಿದನು. ಆಗಲೇ ಆ ಮಹಾಸಮುದ್ರದಲ್ಲಿ ಮತ್ಸ್ಯರೂಪದಿಂದ ಭಗವಂತನು ಪ್ರಕಟನಾದನು. ಮತ್ಸ್ಯಭಗವಂತನ ಶರೀರವು ಬಂಗಾರದಂತೆ ಹೊಳೆಯುತ್ತಿತ್ತು. ಅವನ ಶರೀರವು ಒಂದುಲಕ್ಷ ಯೋಜನ ವಿಸ್ತಾರವಾಗಿತ್ತು. ತಲೆಯಲ್ಲಿ ಭಾರೀ ದೊಡ್ಡ ಒಂದು ಕೊಂಬೂ ಇತ್ತು. ॥ ೪೪ ॥ ಭಗವಂತನು ಹಿಂದೆ ಹೇಳಿದಂತೆ ಆ ನೌಕೆಯನ್ನು ನಾಗರಾಜ ವಾಸುಕಿಯನ್ನು ಹಗ್ಗವಾಗಿಸಿ ಭಗವಂತನ ಕೊಂಬಿಗೆ ಕಟ್ಟಲಾಯಿತು. ಬಳಿಕ ಸತ್ಯವ್ರತರಾಜನು ಪರಮ ಸಂತುಷ್ಟನಾಗಿ ಭಗವಂತನನ್ನು ಸ್ತುತಿಸತೊಡಗಿದನು. ॥ ೪೫ ॥

ಸತ್ಯವ್ರತರಾಜನು ಹೇಳಿದನು – ಪ್ರಭುವೇ ! ಪ್ರಪಂಚದಲ್ಲಿರುವ ಜೀವಿಗಳ ಆತ್ಮಜ್ಞಾನವು ಅನಾದಿಯಾದ ಅವಿದ್ಯೆಯಿಂದ

ಜನೋಽಬುಧೋಽಯಂ ನಿಜಕರ್ಮಬಂಧನಃ
ಸುಖೇಚ್ಛಯಾ ಕರ್ಮ ಸಮೀಹತೇಽಸುಖಮ್ ।
ಯತ್ಸೇವಯಾ ತಾಂ ವಿಧುನೋತ್ಯಸನ್ಮತಿಂ
ಗ್ರಂಥಿಂ ಸ ಭಿಂದ್ಯಾದ್ಧೃದಯಂ ಸ ನೋ ಗುರುಃ ॥ ೪೭ ॥

ಯತ್ಸೇವಯಾಗ್ನೇರಿವ ರುದ್ರರೋದನಂ
ಪುಮಾನ್ವಿಜಹ್ಯಾನ್ಮಲಮಾತ್ಮನಸ್ತಮಃ ।
ಭಜೇತ ವರ್ಣಂ ನಿಜಮೇಷ ಸೋಽವ್ಯಯೋ
ಭೂಯಾತ್ಸ ಈಶಃ ಪರಮೋ ಗುರೋರ್ಗುರುಃ ॥ ೪೮ ॥

ನ ಯತ್ಪ್ರಸಾದಾಯುತಭಾಗಲೇಶ-
ಮನ್ಯೇ ಚ ದೇವಾ ಗುರವೋ ಜನಾಃ ಸ್ವಯಮ್ ।
ಕರ್ತುಂ ಸಮೇತಾಃ ಪ್ರಭವಂತಿ ಪುಂಸ-
ಸ್ತಮೀಶ್ವರಂ ತ್ವಾಂ ಶರಣಂ ಪ್ರಪದ್ಯೇ ॥ ೪೯ ॥

ಅಚಕ್ಷುರಂಧಸ್ಯ ಯಥಾಗ್ರಣೀಽ ಕೃತ-
ಸ್ತಥಾ ಜನಸ್ಯಾವಿದುಷೋಽಬುಧೋ ಗುರುಃ ।
ತ್ವಮರ್ಕದೃಕ್ಸರ್ವದೃಶಾಂ ಸಮೀಕ್ಷಣೋ
ಕೃತೋ ಗುರುರ್ನಃ ಸ್ವಗತಿಂ ಬುಭುತ್ಸತಾಮ್ ॥ ೫೦ ॥

ಜನೋ ಜನಸ್ಯಾದಿಶತೇಽಸತೀಂ ಮತಿಂ
ಯಯಾ ಪ್ರಪದ್ಯೇತ ದುರತ್ಯಯಂ ತಮಃ ।
ತ್ವಂ ತ್ವವ್ಯಯಂ ಜ್ಞಾನಮಮೋಘಮಂಜಸಾ
ಪ್ರಪದ್ಯತೇ ಯೇನ ಜನೋ ನಿಜಂ ಪದಮ್ ॥ ೫೧ ॥

ತ್ವಂ ಸರ್ವಲೋಕಸ್ಯ ಸುಹೃತ್ಪ್ರಿಯೇಶ್ವರೋ
ಹ್ಯಾತ್ಮಾ ಗುರುರ್ಜ್ಞಾನಮಭೀಷ್ಟಸಿದ್ಧಿಃ ।
ತಥಾಪಿ ಲೋಕೋ ನ ಭವಂತಮಂಧಧೀ-
ರ್ಜಾನಾತಿ ಸಂತಂ ಹೃದಿ ಬದ್ಧಕಾಮಃ ॥ ೫೨ ॥

ತಂ ತ್ವಾಮಹಂ ದೇವವರಂ ವರೇಣ್ಯಂ
ಪ್ರಪದ್ಯ ಈಶಂ ಪ್ರತಿಬೋಧನಾಯ ।
ಛಿಂದ್ಯರ್ಥದೀಪೈರ್ಭಗವನ್ವಚೋಭಿ-
ರ್ಗ್ರಂಥೀನ್ ಹೃದಯ್ಯಾನ್ವಿವೃಣು ಸ್ವಮೋಕಃ ॥ ೫೩ ॥

ಮುಚ್ಚಿಹೋಗಿದೆ. ಇದರಿಂದಲೇ ಅವರು ಅನೇಕಾನೇಕ ಪ್ರಾಪಂಚಿಕ ಕ್ಲೇಶಗಳಿಂದ ಪೀಡಿತರಾಗಿ ಅನಾಯಾಸವಾಗಿಯೇ ನಿನ್ನ ಅನುಗ್ರಹದಿಂದ ಅವರು ನಿನಗೆ ಶರಣಾದಾಗ ನಿನ್ನನ್ನು ಪಡೆದುಕೊಳ್ಳುವರು. ಆದಕ್ಕಾಗಿ ನಮ್ಮನ್ನು ಬಂಧನದಿಂದ ಬಿಡಿಸಿ ನಿಜವಾದ ಮುಕ್ತಿಯನ್ನು ದಯಪಾಲಿಸುವ ಪರಮಗುರು ನೀನೇ ಆಗಿರುವೆ. ॥ ೪೬ ॥ ಅಜ್ಞಾನಿಯಾದ ಈ ಜೀವನು ತನ್ನ ಕರ್ಮಗಳಿಂದ ಬಂಧಿತನಾಗಿದ್ದಾನೆ. ಅವನು ವಿಷಯಸುಖಗಳ ಇಚ್ಛೆಯಿಂದ ಕಷ್ಟಕರವಾದ ಕರ್ಮಾನುಷ್ಠಾನಗಳನ್ನು ಮಾಡುತ್ತಾನೆ. ಯಾವನ ಸೇವೆಯಿಂದ ಅವನ ಈ ಅಜ್ಞಾನವು ನಷ್ಟವಾಗುತ್ತದೋ, ಆ ಪರಮಗುರುವಾದ ನೀನು ನನ್ನ ಹೃದಯಗ್ರಂಥಿಯನ್ನು ಕತ್ತರಿಸಿಬಿಡು. ॥ ೪೭ ॥ ಬೆಂಕಿಯಲ್ಲಿ ಕಾಯಿಸಿದ ಚಿನ್ನ-ಬೆಳ್ಳಿಗಳು ಕೊಳೆಯನ್ನು ನೀಗಿ ತನ್ನ ನಿಜವಾದ ಹೊಳಪನ್ನು ಪಡೆಯುವಂತೆಯೇ, ನಿನ್ನ ಸೇವೆಯಿಂದ ಜೀವನು ತನ್ನ ಅಂತಃಕರಣದ ಅಜ್ಞಾನವೆಂಬ ಕೊಳೆಯನ್ನು ತೊಳೆದುಕೊಂಡು ತನ್ನ ನಿಜವಾದ ಸ್ವರೂಪ ಸ್ಥಿತಿಯಲ್ಲಿ ನೆಲೆಸುವನು. ಸರ್ವಶಕ್ತನೂ, ಅವಿನಾಶಿಯೂ, ಪ್ರಭುವೂ ಆದ ನೀನೇ ನಮ್ಮ ಗುರುಜನರಿಗೂ ಪರಮಗುರುವಾಗಿರುವೆ. ಆದ್ದರಿಂದ ಈಶನಾದ ನೀನೇ ನನಗೂ ಗುರು ಆಗಿರುವೆ. ॥ ೪೮ ॥ ಪ್ರಪಂಚದಲ್ಲಿ ಎಷ್ಟು ದೇವತೆಗಳಿರುವರೋ, ಎಷ್ಟು ಗುರುಗಳು-ಸಾಧು-ಸತ್ಪುರುಷರಿರುವರೋ, ಅವರೆಲ್ಲರೂ ಒಟ್ಟಾಗಿ ಸೇರಿ ಕೃಪೆದೋರಿದರೂ ಅವರೆಲ್ಲರ ಕೃಪೆಯೂ ಕೃಪಾಸಾಗರನಾದ ನಿನ್ನ ಕೃಪೆಯ ಹತ್ತುಸಾವಿರದಲ್ಲಿ ಒಂದು ಅಂಶಕ್ಕೂ ಸರಿದೂಗಲಾರದು. ಪ್ರಭುವೇ! ನೀನು ಸರ್ವಶಕ್ತನಾಗಿರುವೆ. ನಾನು ನಿನ್ನನ್ನೇ ಶರಣು ಹೋಗುತ್ತೇನೆ. ॥ ೪೯ ॥ ಕುರುಡನಿಗೆ ಕುರುಡನೇ ದಾರಿನಡೆಸುವವನಾಗುವಂತೆಯೇ ಅಜ್ಞಾನಿಯಾದ ಜೀವನು ಅಜ್ಞಾನಿಯನ್ನೇ ತನ್ನ ಗುರುವನ್ನಾಗಿಸಿಕೊಳ್ಳುವನು. ನೀನು ಸೂರ್ಯನಂತೆ ಸ್ವಯಂ ಪ್ರಕಾಶನೂ, ಸಮಸ್ತ ಇಂದ್ರಿಯಗಳ ಪ್ರೇರಕನೂ ಆಗಿರುವೆ. ಆತ್ಮತತ್ತ್ವದ ಜಿಜ್ಞಾಸುಗಳಾದ ನಾವು ನಿನ್ನನ್ನೇ ಗುರುವಾಗಿ ಪರಿಗ್ರಹಿಸಿದ್ದೇವೆ. ॥ ೫೦ ॥ ಅಜ್ಞಾನಿಯಾದ ಮನುಷ್ಯನು ಮಾಡುವ ಉಪದೇಶವು ಅಜ್ಞಾನವಾಗಿಯೇ ಇರುತ್ತದೆ. ಅದರಿಂದ ಸಂಸಾರರೂಪವಾದ ಅಂಧಕಾರವೇ ಹೆಚ್ಚೆಚ್ಚು ದೊರೆಯುತ್ತದೆ. ಆದರೆ ನೀನಾದರೋ ಅವಿನಾಶಿಯಾದ, ಅಮೋಘವಾದ ಜ್ಞಾನವನ್ನೇ ಉಪದೇಶಿಸುವೆ. ಇದರಿಂದ ಮನುಷ್ಯನು ಸುಲಭವಾಗಿ ಸ್ವಸ್ವರೂಪವನ್ನು ಪಡೆದುಕೊಳ್ಳುವನು. ॥ ೫೧ ॥ ಮಹಾನುಭಾವನೇ! ನೀನು ಸಮಸ್ತ ಜನರಿಗೂ ಹಿತೈಷಿಯೂ, ಪ್ರಿಯತಮನೂ, ಒಡೆಯನೂ, ಆತ್ಮನೂ ಆಗಿರುವೆ. ಗುರುವಿನ ಮೂಲಕ ದೊರೆಯುವ ಜ್ಞಾನವೂ, ಅಭೀಷ್ಟವಾದ ಸಿದ್ಧಿಯೂ ನಿನ್ನ ಸ್ವರೂಪವೇ ಆಗಿದೆ. ಹೀಗಿದ್ದರೂ ಕಾಮನೆಗಳಲ್ಲಿ ಬಂಧಿತರಾದ ಜನರು ಕುರುಡರಾಗಿದ್ದಾರೆ. ಅವರಿಗೆ ನೀನೇ ಅವರ ಹೃದಯದಲ್ಲಿ ವಿರಾಜಿಸುತ್ತಿರುವೆ ಎಂಬುದೂ ತಿಳಿಯದು. ॥ ೫೨ ॥ ನೀನು ದೇವತೆಗಳಿಗೂ ಪರಮಾರಾಧ್ಯ, ಪರಮ ಪೂಜನೀಯ ಪರಮೇಶ್ವರನಾಗಿರುವೆ. ನಾನು ನಿನ್ನಿಂದ ಜ್ಞಾನವನ್ನು ಪಡೆಯಲಿಕ್ಕಾಗಿ ನಿನಗೆ ಶರಣು ಬಂದಿರುವೆನು. ಭಗವಂತಾ! ಪರಮಾರ್ಥವನ್ನು ಪ್ರಕಾಶಗೊಳಿಸುವಂತಹ ನಿನ್ನ ವಾಣಿಯ ಮೂಲಕ ನನ್ನ ಹೃದಯಗ್ರಂಥಿಯನ್ನು ಛೇದಿಸಿಬಿಡು ಹಾಗೂ ನಿನ್ನ ನಿಜಸ್ವರೂಪವನ್ನು ಪ್ರಕಾಶಗೊಳಿಸು. ॥ ೫೩ ॥

ಶ್ರೀಶುಕ ಉವಾಚ

ಇತ್ಯುಕ್ತವಂತಂ ನೃಪತಿಂ ಭಗವಾನಾದಿಪೂರುಷಃ ।
ಮತ್ಸ್ಯರೂಪೀ ಮಹಾಂಭೋಧೌ ವಿಹರನ್ ತತ್ತ್ವಮಬ್ರವೀತ್ ॥ ೫೪ ॥

ಪುರಾಣಸಂಹಿತಾಂ ದಿವ್ಯಾಂ ಸಾಂಖ್ಯಯೋಗಕ್ರಿಯಾವತೀಮ್ ।
ಸತ್ಯವ್ರತಸ್ಯ ರಾಜರ್ಷೇರಾತ್ಮಗುಹ್ಯಮಶೇಷತಃ ॥ ೫೫ ॥

ಅಶ್ರೌಷೀದೃಷಿಭಿಃ ಸಾಕಮಾತ್ಮತತ್ತ್ವಮಸಂಶಯಮ್ ।
ನಾವ್ಯಾಸೀನೋ ಭಗವತಾ ಪ್ರೋಕ್ತಂ ಬ್ರಹ್ಮ ಸನಾತನಮ್ ॥ ೫೬ ॥

ಅತೀತಪ್ರಲಯಾಪಾಯ ಉತ್ಥಿತಾಯ ಸ ವೇಧಸೇ ।
ಹತ್ವಾಸುರಂ ಹಯಗ್ರೀವಂ ವೇದಾನ್ ಪ್ರತ್ಯಾಹರದ್ಧರಿಃ ॥ ೫೭ ॥

ಸ ತು ಸತ್ಯವ್ರತೋ ರಾಜಾ ಜ್ಞಾನವಿಜ್ಞಾನಸಂಯುತಃ ।
ವಿಷ್ಣೋಃ ಪ್ರಸಾದಾತ್ಕಲ್ಪೇಽಸ್ಮಿನ್ನಾಸೀದ್ವೈವಸ್ವತೋ ಮನುಃ ॥ ೫೮ ॥

ಸತ್ಯವ್ರತಸ್ಯ ರಾಜರ್ಷೇರ್ಮಾಯಾಮತ್ಸ್ಯಸ್ಯ ಶಾರ್ಙ್ಗಿಣಃ ।
ಸಂವಾದಂ ಮಹದಾಖ್ಯಾನಂ ಶ್ರುತ್ವಾ ಮುಚ್ಯೇತ ಕಿಲ್ಬಿಷಾತ್ ॥ ೫೯ ॥

ಅವತಾರೋ ಹರೇರ್ಯೋಽಯಂ ಕೀರ್ತಯೇದನ್ವಹಂ ನರಃ ।
ಸಂಕಲ್ಪಾಸ್ತಸ್ಯ ಸಿಧ್ಯಂತಿ ಸ ಯಾತಿ ಪರಮಾಂ ಗತಿಮ್ ॥ ೬೦ ॥

ಪ್ರಲಯಪಯಸಿ ಧಾತುಃ ಸುಪ್ತಶಕ್ತೇರ್ಮುಖೇಭ್ಯಃ
ಶ್ರುತಿಗಣಮಪನೀತಂ ಪ್ರತ್ಯುಪಾದತ್ತ ಹತ್ವಾ ।
ದಿತಿಜಮಕಥಯದ್ಯೋ ಬ್ರಹ್ಮ ಸತ್ಯವ್ರತಾನಾಂ
ತಮಹಮಖಿಲಹೇತುಂ ಜಿಹ್ಮಮೀನಂ ನತೋಽಸ್ಮಿ ॥ ೬೧ ॥

ಶ್ರೀಶುಕಮಹಾಮುನಿಗಳು ಹೇಳುತ್ತಾರೆ – ಪರೀಕ್ಷಿತನೇ! ಸತ್ಯವ್ರತರಾಜನು ಹೀಗೆ ಪ್ರಾರ್ಥಿಸಿದಾಗ ಮತ್ಸ್ಯರೂಪಧಾರೀ ಭಗವಾನ್ ಪುರುಷೋತ್ತಮನು ಪ್ರಳಯಸಮುದ್ರದಲ್ಲಿ ವಿಹರಿಸುತ್ತಿರುವಂತೆಯೇ ಅವನಿಗೆ ಆತ್ಮತತ್ತ್ವವನ್ನು ಉಪದೇಶಿಸಿದನು. ॥ ೫೪ ॥ ರಾಜರ್ಷಿ ಸತ್ಯವ್ರತನಿಗೆ ಭಗವಂತನು ತನ್ನ ಸ್ವರೂಪದ ಸಮಗ್ರ ರಹಸ್ಯವನ್ನು ವರ್ಣಿಸುತ್ತಾ ಜ್ಞಾನ, ಭಕ್ತಿ, ಕರ್ಮಯೋಗಗಳಿಂದ ಪರಿಪೂರ್ಣವಾದ ಜ್ಞಾನವನ್ನು ಉಪದೇಶಿಸಿದನು. ಅದನ್ನೇ 'ಮತ್ಸ್ಯಪುರಾಣ'ವೆಂದು ಹೇಳುತ್ತಾರೆ. ॥ ೫೫ ॥ ಸತ್ಯವ್ರತನು ಸಪ್ತರ್ಷಿಗಳೊಂದಿಗೆ ನೌಕೆಯಲ್ಲಿ ಕುಳಿತುಕೊಂಡೇ ಭಗವಂತನಿಂದ ಹೇಳಲ್ಪಟ್ಟ ಸನಾತನ ಬ್ರಹ್ಮಸ್ವರೂಪ ಆತ್ಮತತ್ತ್ವವನ್ನು ಸ್ವಲ್ಪವೂ ಸಂದೇಹಕ್ಕೆ ಎಡೆಯಿಲ್ಲದೆ ಶ್ರವಣಿಸಿದನು. ॥ ೫೬ ॥ ಇದಾದ ಬಳಿಕ ಹಿಂದಿನ ಪ್ರಳಯವು ಅಂತ್ಯವಾಗಿ ಬ್ರಹ್ಮದೇವರು ಎಚ್ಚರಗೊಂಡಾಗ ಭಗವಂತನು ಹಯಗ್ರೀವ ಅಸುರನನ್ನು ಕೊಂದು ಅವನು ಕದ್ದೊಯ್ದ ವೇದಗಳನ್ನು ತಂದು ಬ್ರಹ್ಮದೇವರಿಗೆ ಹಿಂದಿರುಗಿಸಿದನು. ॥ ೫೭ ॥ ಭಗವಂತನ ಕೃಪೆಯಿಂದ ಸತ್ಯವ್ರತರಾಜನೇ ಜ್ಞಾನ ಮತ್ತು ವಿಜ್ಞಾನದಿಂದ ಕೂಡಿಕೊಂಡು ಈ ಕಲ್ಪದಲ್ಲಿ ವೈವಸ್ವತಮನು ಆದನು. ॥ ೫೮ ॥ ತನ್ನ ಯೋಗಮಾಯೆಯಿಂದ ಮತ್ಸ್ಯರೂಪವನ್ನು ಧರಿಸಿದ ಭಗವಾನ್ ಮಹಾವಿಷ್ಣುವಿನ ಮತ್ತು ರಾಜರ್ಷಿ ಸತ್ಯವ್ರತರ ಈ ಸಂವಾದರೂಪವಾದ ಶ್ರೇಷ್ಠವಾದ ಆಖ್ಯಾನವನ್ನು ಶ್ರವಣಿಸಿ ಮನುಷ್ಯನು ಎಲ್ಲ ವಿಧವಾದ ಪಾಪಗಳಿಂದ ಬಿಡುಗಡೆ ಹೊಂದುವನು. ॥ ೫೯ ॥ ಭಗವಂತನ ಈ ಅವತಾರವನ್ನು ಪ್ರತಿದಿನವೂ ಕೀರ್ತಿಸುವವನ ಎಲ್ಲ ಸಂಕಲ್ಪಗಳು ಸಿದ್ಧಿಯಾಗುತ್ತವೆ ಮತ್ತು ಅವನಿಗೆ ಪರಮಗತಿಯು ಪ್ರಾಪ್ತವಾಗುತ್ತದೆ. ॥ ೬೦ ॥

ಪ್ರಳಯಕಾಲದ ಸಮುದ್ರದಲ್ಲಿ, ಬ್ರಹ್ಮದೇವರು ಮಲಗಿದ್ದಾಗ, ಅವರ ಸೃಷ್ಟಿಶಕ್ತಿಯು ಲುಪ್ತವಾಗಿದ್ದಾಗ, ಅವರ ಬಾಯಿಂದ ಹೊರಟ ವೇದಗಳನ್ನು ಕದ್ದು ಹಯಗ್ರೀವನೆಂಬ ದೈತ್ಯನು ಪಾತಾಳಕ್ಕೆ ಕೊಂಡುಹೋಗಿದ್ದನು. ಭಗವಂತನು ಅವನನ್ನು ಸಂಹರಿಸಿ ಆ ವೇದಗಳನ್ನು ಬ್ರಹ್ಮದೇವರಿಗೆ ಹಿಂದಿರುಗಿಸಿದನು ಹಾಗೂ ಸತ್ಯವ್ರತ ಮತ್ತು ಸಪ್ತರ್ಷಿಗಳಿಗೆ ಬ್ರಹ್ಮತತ್ತ್ವವನ್ನು ಉಪದೇಶಿಸಿದನು. ಅಂತಹ ಸಮಸ್ತ ಜಗತ್ತಿನ ಪರಮಕಾರಣನಾದ ಮಾಯಾಮತ್ಸ್ಯ ಭಗವಂತನಿಗೆ ನಾನು ನಮಸ್ಕಾರಮಾಡುತ್ತೇನೆ. ॥ ೬೧ ॥

ಇಪ್ಪತ್ತನಾಲ್ಕನೆಯ ಅಧ್ಯಾಯವು ಮುಗಿಯಿತು. ॥ ೨೪ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಪಾರಮಹಂಸ್ಯಾಂ ಸಂಹಿತಾಯಾಂ ಅಷ್ಟಮ ಸ್ಕಂಧೇ
ಮತ್ಸ್ಯಾವತಾರಚರಿತಾನುವರ್ಣನಂ ನಾಮ ಚತುರ್ವಿಂಶೋಽಧ್ಯಾಯಃ ॥ ೨೪ ॥

ಎಂಟನೆಯ ಸ್ಕಂಧವು ಸಂಪೂರ್ಣವಾಯಿತು.